START

MICROFILMED
BY
NATIONAL ARCHIVES
OF INDIA

at the Karnataka
State Archives
BANGALORE
1974

REEL NO
8

VRITTANTAPATRIKE

(IN KANNADA)

Vol-6
7-6-1906.
30-5-1907

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ | ಮೈಸೂರು—ಸರ್ ೧೯೦೭ ನೇ ಇಸವಿ ಜೂನ್ ತಾರೀಖು ೬ ನೇ ಗುರುವಾರ. | ಸಂಚಿಕೆ ೧

೫,೦೦೦ ಪರ್ಲ್ ಫುಲರ್ ದಾರ ಮಾತ್ರ ಇದೆ

40-16

೧ ಚೇಟಿಯುಳ್ಳ ಪರ್ಲ್ ಪರ್ಲ್ ೧ ಕ್ಕೆ		೧—೧೦—೦
೨ ಪರ್ಲ್ ಸೂಪ್ರರ	,, ,, ,,	೧—೧೪—೦
೩ ಸುಪೀರಿಯರ್	,, ,, ,,	೨—೦—೦
೪ ಸೋಮರಸಟ್	,, ,, ,,	೩—೪—೦

ಪರ್ಲ್ ಟೋಪಿ ದರ್ಜ ೧ ಕ್ಕೆ ೬—೦—೦. ಒಂಗೇ ದಫಾ ೧೦ ಪರ್ಜ ತರಿಸಿಕೊಳ್ಳುವವರಿಗೆ ೬—೧೨—೦.

ಹೊಸ ನಮೂನೆ ದೊಡ್ಡ ಸ್ಪೈಡು ಪೋಸ್ಟು ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೬. ೧೦೦೦. ೧-೪-೦

೨ ಡಬಲ್ ಕಲರ್ ೧೦೦ ಕ್ಕೆ ೦-೩-೦. ೧೦೦೦. ೧-೧೦-೦

ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಚಿತವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸಲಾರೆವು.

ಯೆಲ್, ಯಿ. ಪೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೋ ಮೋ ಸಿ ಯಾ.

ಪಕ್ಷವಾತ ಪರಿಹಾರ

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಜೋಟ್ಸ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೇಪಡಾಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೋರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಹುತ್ತು ಚೇಳು ಕಡಿದದ್ದು, ಚಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ಼ಿ ಬಿಡುತ್ತಾರೆ. ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ರೂ. ೨—೮ ಆ ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫ಼ಿ ಬಿಡುತ್ತೆ.

✦✦✦✦✦✦✦✦✦

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಾಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ಼ಿ. ಎಲ್ಲಾ ಔಷಧಿಗಳ [illegible] ದೊರೆಯುವದು.

[illegible] ಔಷಧಗಳ ವಿವರಣೆಯೂ, ಸರ್ಟಫಿಕೇಟುಗಳೂ ಉಳ್ಳ [illegible] ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, [illegible] ಸ್ಟ್ರೀಟ್, [illegible]

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ತಯಾರಾದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 17

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಫಿರ್ಸ್ ಕಾಫಿ ವರ್ಕ್ಸ್, ಮೈಸೂರು.

ಜ್ವ ರ ಹ ರಿ.

71-6



ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಕ್ಕೆಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ಼ಿ ಬಿಡಲಾಗುವದು.

✦✦✦✦✦✦✦✦✦

ಓ ಮಂ ಕ ಪೂ ರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಿಗೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವ ದರವು ಸ್ಯರಪಲ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಕಾರ್ಯೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎಂತ ಬರೆದಿದ್ದಾನೆ.

ಈ ವಾಲ್ಕ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅಲ್ಲದೆ ಕೆಳಗಣ ವಿಳಾಸದಾರರಲ್ಲಿ ವಿಶೇಷ:—

ಪೆಪ್ಪಿಸುವದ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

[illegible] ಸ್ಟ್ರೀಟ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ. ೧—೮—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-21



ಬ್ರೈಡ್ ಮತ್ತು ಈಸ್ಟ್ಲೆಂಡ್,

೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರಿಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಲ್ಲವೆಯಾ ಪೋಸ್ಟು ಕಾರ್ಡುಗಳನ್ನು ಬರೆಯಬಹುದು. ಈ ಕಂಪೆನಿಯವರು ಪೇಟೆಂಟ್ ಔಷಧಿಗಳನ್ನೂ, ಆಳಕ ರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ. ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟೂ ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ನಂಬಿಕೆ ಪ್ಪಾಲಿನಲ್ಲೇ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73 -6

ನಿಯಮಕ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೨೪ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಅವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಬಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ದೇವಾಂಗ ವಂಶಸ್ಥರಿಗೆ ಅಗತ್ಯ ಬೇಕಾದದ್ದು.

ದೇವಾಂಗಮತ ಪ್ರಕಾಶಿಕೆ.	ದೇವಾಂಗಮತ ಮೂಲಸ್ತಂಭ.

16 25

ಸ್ವಲ್ಪ ಪ್ರತಿಗಳಿವೆ. ಪಾಗ್ರತೆಪಟ್ಟರೆ ಸಿಕ್ಕುತ್ತವೆ. ನಂತರ ಖಂಡಿತ ಸಿಕ್ಕುವದಿಲ್ಲ. ಸ್ವಕುಲಗುರುಗಳು ಮುದ್ದುಸಂಗ ಮುನಿಸ್ವಾಮಿಗಳು ರಚಿಸಿದ್ದು ಅರ್ಥಸಹಿತ ದೇವಾಂಗಮತಪ್ರಕಾಶಿಕೆ ನಮ್ಮಾನಕಾರಕ್ಕೂ ಸುಂದರವಾದ ೧೪ ಚಿತ್ರಗಳಿವೆ. ಕ್ರಯ ಸುಲಭವಾಗಿದೆ. ೧೪ ಚಿತ್ರಗಳಿರುವ ಪ್ರತಿ ೧ಕ್ಕೆ ವಿ. ಪಿ. ಖರ್ಚು ಸೇರಿ ರೂ ೨—೪. ಚಿತ್ರಗಳಿಲ್ಲದ ಇದೇ ಪ್ರತಿ ೧ಕ್ಕೆ ವಿ ಪಿ. ಖರ್ಚು ಸೇರಿ ರೂ ೧—೪. ವೇದ ಉಪನಿಷತ್ತುಗಳ ಅರ್ಥಸಹಿತ ಮೂಲಸ್ತಂಭ ೧ಕ್ಕೆ ರೂ ೧—೪ ಆರ್ಡರ್‌ಗಳಿಗೂ ವಿ ಪಿ. ಮೂಲಕ ಕಳುಹಿಸುತ್ತೇವೆ. ವಿಳಾಸ—ಮೈಸೂರು ಚಾಮರ ಅಂಗಡಿ ಬ್ರಹ್ಮಶ್ರೀ ಯಜಮಾನ ಪುಟ್ಟಮಲ್ಲಯ್ಯ

ಅನುಭವಿಸುವವರ ಹಿತಕಾರಿ.

86 2

"ಕ್ಲಿಮೆಂಟ್‌ಯವರ ಮ್ಯಾಜಿಕ್ ಬಾಂ"

ಸಕಲ ರೋಗಗಳ ಚಿಕಿತ್ಸೆಗೋಸ್ಕರ ಮಾತ್ರ

ಎಲ್ಲಾತರದ ವಾಯುನೋವು, ಅರತಲೆನೋವು, ನರಗಳನೋವು, ತಲೇನೋವು, ತಲೆಭಾರ, ಕೆಮ್ಮು, ಗಂಟಲು ಕಡಿತ, ಹಲ್ಲುನೋವು, ಗಂಟಲು ಕಟ್ಟುವುದು, ಕೀಲುಗಳನ್ನು ಎದೆಗಳ ನೋವು, ಆಸ್ತ್ಮಾ, ಚೇಳು ಮುಂತಾದ್ದುಗಳು ಕಚ್ಚಿದನೋವು, ಇನ್ನೂ ಅನೇಕತರದ ನೋವುಬಾಧೆಗಳಿಗೆ ಕ್ಲಿಮೆಂಟ್ಸ್ ಮ್ಯಾಜಿಕ್ ಬಾಂ ಎಂಬ ಔಷಧವನ್ನು ಹಚ್ಚಿದಲ್ಲಿ ಸುಖವಾಗಿಯೂ ಖಂಡಿತವಾಗಿಯೂ ಗುಣವಾಗುತ್ತದೆ. ಇದರ ಕ್ರಯ — ೧ ಬುಟ್ಟಿಗೆ ೧೨ ಆಣೆ, ೩ಕ್ಕೆ ೨ ರೂಪಾಯಿ; ೬ಕ್ಕೆ ರೂ ೩॥, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಸೇರಿ.

ಇದಲ್ಲದೆ ನಮ್ಮಲ್ಲಿ ಸರ್ವೋತ್ಕೃಷ್ಟವಾದ ಇನ್ನೂ ಅನೇಕತರದ ಔಷಧಗಳು ಸಾರಾಟವಾಗುತ್ತಿವೆ. ಪ್ರತಿ ಒಂದೂ ಖಂಡಿತವಾಗಿ ಗುಣ ಕೊಡತಕ್ಕದ್ದು. ಒಂದಾವರ್ತಿ ಅವನ್ನು ತರಿಸಿ ಉಪಯೋಗಿಸಿದಲ್ಲಿ ಗುಣ ನಿಮ್ಮಗೇ ತಾನೇ ಗೊತ್ತಾಗುತ್ತೆ. ಮತ್ತು ಅವನ್ನು ಸರ್ವದಾ ಮನೆಯಲ್ಲಿ ಇಟ್ಟುಕೊಂಡಿರಬೇಕೆಂದು ಎಲ್ಲರಿಗೂ ದೃಷ್ಟಾಂತಕ್ಕೆ ಬಂದಿರುವ. ವಿಳಾಸ —ಏಜಂಟ್, ಎಫ್. ಡಬ್ಲ್ಯು ಆರ್ಡರ್, ಸಿವೆಂತ್ರಿ ರೋಡ್, ವೇಪೇರಿ ಮದರಾಸ್.

ಇಮಿಟೇಷನ್ ವಜ್ರದ ಹರಳಿನಲ್ಲಿ ತಯಾರಿಸಿದ ಷರಟು ಗುಂಡಿ.

84 2

ಇದೇ ಒಂದು ಅತ್ಯಾಶ್ಚರ್ಯಕರವಾದ ನಿನತ್ವಮಾದ ಷರಟು ಗುಂಡಿ ಕ್ರಯ ಸೆಟ್ ೧ಕ್ಕೆ ರೂಪಾಯಿ ೧—೦—೦



ನವರತ್ನಗಳೊಳಗೆ ಶ್ರೇಷ್ಠವಾದ ವಜ್ರದ ಆಭರಣಗಳು ಸಕಲರಿಗೂ ಸಾಧ್ಯವಿಲ್ಲದೇ ಇದ್ದಾಗ್ಯೂ ಅಮೇರಿಕಾ ದೇಶದವರು ಇಂದ ವಜ್ರಕ್ಕೆ ಸಮಾನವಾದ ಪ್ರತಿರೂಪ ವಜ್ರವನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಾಂಡ್) ಎಂಬ ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಷರಟು ಗುಂಡಿಗಳನ್ನು ತಯಾರಿಸಲ್ಪಟ್ಟಿರುತ್ತವೆ. ಇದರ ಪ್ರಭಾವವು ದೀಪದ ಬೆಳಕಿಗೆ ಮಿಂಚಿಯಂತೆ ಥಳಥಳಿಸುವುದಲ್ಲದೆ ವಜ್ರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇವನ್ನು ಒಂದು ಸೆಟ್ಟು ತರಿಸಿ ಪರೀಕ್ಷಿಸಿದರೆ ಇದರ ನಿಜಸ್ಥಿತಿ ಗೊತ್ತಾಗುತ್ತೆ.

ಭಂಗಾರದ ಗಿಲೀಟಿನ ಥಳಕೀ ಗುಂಡು.



ಇದು ಕೈಗೆ ಅಲಂಕರಿಸುವ ಬಂಗಾರದ ಗಿಲೀಟಿನ ಥಳಕೀಗುಂಡು ಮತ್ತು ಹಿಮೆ ಪವಳ ಇವುಗಳನ್ನು ಕಟಿಯಲ್ಲಿ ಪೋಣಿಸಿ ಕಟ್ಟಲ್ಪಟ್ಟಿರುತ್ತೆ. ಈ ಪವಳದ ಬಣ್ಣವು ಎಂದಿಗೂ ಕೆಡಲಾರದು. ಜೊತೆ ಒಂದಕ್ಕೆ ದೊಡ್ಡವರಿಗೆ

ಕ್ರಯ ರೂಪಾಯಿ		೨—೭—೦
ಚಿಕ್ಕವರಿಗೆ	ಕ್ರಯ	,, ೨—೦—೦
ಮಕ್ಕಳಿಗೆ	ಕ್ರಯ	,, ೧—೧೨—೦

ಮೈಸೂರು ದೇಶದ ಕೈಕಪ್ಪ. ಬೆಲೆ ರೂಪಾಯಿ ೧—೦—೦



ಇದನ್ನು ಗಂಡಸರು ಕೈಗೆ ಹಾಕಿಕೊಳ್ಳುವ ಭಂಗಾರದ ಗಿಲೀಟಿನ ಕಂಬಿಯಲ್ಲಿ ಬಿಳಿ ಹರಳುಗಳಿರುವ ನವಿಲುಗಳನ್ನು ಹಾಕಿ ನೇಯಲ್ಪಟ್ಟ ಅತಿ ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇದರ ಬಣ್ಣ ಬಹಳ ಕಾಲದವರೆಗೆ ನಿಲ್ಲುತ್ತೆ. ಹೊಸ ನಮೂನೆಯ ರೀತಿಯಿಂದ ತಯಾರಿಸಿ ಭಂಗಾರದ ಗಿಲೀಟ್ ಮಾಡಲ್ಪಟ್ಟಿರುತ್ತೆ. ಇವನ್ನು ನೋಡಿದವರು ನಿಜವಾದ ಭಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲಿನ್ ಯವರ ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-22



ಶೀತ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ರಕ್ತಭೇದಿ ಉಬ್ಬರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತಿನ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಲ್ಪಡಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು.	ಸಣ್ಣ ಶೀಸೆಗೆ ೧ ರೂಪಾಯಿ.	ದೊಡ್ಡ ಶೀಸೆಗೆ ೨ ರೂಪಾಯಿ

ಒಳ್ಳೇ ಸಮಯ

83 2

ಈ ಕ್ರಯಕ್ಕೆ ಎಂದಿಗೂ ಸಿಕ್ಕತಕ್ಕದಲ್ಲ.

ಈ ಕೆಳಗೆ ನಮೂದಿಸಿ ಇರುವ ೭ ರೂಪಾಯಿಗಳ ಗಡಿಯಾರವನ್ನು ಬರುವ ಜುಲೈ ಆಖೈರು ವರೆಗೆ ರೂ ೩—೧೪—೦ ಗೆ ಕೊಡಲ್ಪಡುತ್ತೆ.



ಶ್ರೀವಿಕ್ಟೋರಿಯಮುಖ, ಸ್ಟಾರ್ ವರ್ಣ, ಸಾಮಾನ್ಯ ಪ್ರಮಾಣ, ಸಂಕಾಚಿತವರಿವರ್ತನವುಳ್ಳ ಗಡಿಯಾರವು, ೩೦ ಗಂಟೆಗಳ ಕಾಲಕ್ಕೆ ಬೀಗ ಕೊಡುವುದು, ೨೦ ವರುಷಗಳವರೆಗೆ ಚೆನ್ನಾಗಿ ನಡೆದು ಬರುವುದು, ಗಟ್ಟಿಯಾಗಿ ಕೆಲಸ ಮಾಡಿರುವ ತಿರುವುಳ್ಳ ಸ್ಪ್ರಿಂಗ್, ಮುಳ್ಳುಗಳುಳ್ಳದ್ದು, ಬೀಗದ ಕೈಯಿಲ್ಲದೆ ಮಾಡುವ ನೂತನವಾದ ಹೊಸ ನಮೂನೆ ಮುಳ್ಳುಗಳು, ಮುಳ್ಳು ಸಹಿತ ಸವಾಲ್ಯಂತ್ರ(ಪಕರಣವು) ಸರಿಕೆಟ್ಟು ಹದಗೊಟ್ಟ ಉಕ್ಕಿನ ಭಾಗಗಳುಳ್ಳ ಫ್ರೆಂಚ್ ಸೇರದ್ದು. ಸರಿಯಾದ ಕಾಲವನ್ನು ತೋರಿಸುವುದು, ಸುಲಭವಾಗಿ ಸರಿಮಾಡಿ ಕೊಳ್ಳತಕ್ಕದ್ದು. ಸರಪಣಿ, ಪೆಟ್ಟಿಗೆ, ಗ್ಲಾಸ್, ಮೇನ್ ಸ್ಪ್ರಿಂಗ್ ಸಹಿತ ಮೊದಲಿನ ಕ್ರಯ ರೂ ೭. ಈಗಿನ ಕ್ರಯ ರೂ ೩—೧೪—೦

ಅಲಾರಂ ಟೈಂಪೀಸು.



ಇದು ಬಹಳ ಮೇಲಾದ ಸಾಮಾನು ಗಳಿಂದ ತಯಾರಿಸಲ್ಪಟ್ಟದ್ದು (೩೦)ಗಂಟೆಗೊಂದು ಸಾರಿ ಬೀಗ ಕೊಡತಕ್ಕದ್ದು ಸ್ವಲ್ಪವು ವ್ಯತ್ಯಾಸವಿಲ್ಲದಂತೆ ಕಾಲವನ್ನು ತೋರಿಸತಕ್ಕದ್ದು. ವಿದ್ಯಾರ್ಥಿಗಳಿಗೂ ಮತ್ತು ಆಫೀಸು ಉದ್ಯೋಗಸ್ಥರುಗಳಿಗೂ ವರ್ತಕರುಗಳಿಗೂ ಬಹಳ ಉಪಯೋಗವಾದದ್ದು. ಎರಡುನಿಮಿಷಗಳ ಬರಿ ಯಂತರ ಗಾಢನಿದ್ರೆಯಲ್ಲಿ ಇದ್ದವನನ್ನು ಎಚ್ಚರಿಸುವಷ್ಟು ಅಲಾರಂ ಧ್ವನಿ ಕೊಡತಕ್ಕದ್ದು. ಇದಕ್ಕೆ ನಾವು ೫ ವರುಷಗಳ ವರೆಗೆ ಗ್ಯಾರಂಟಿ. ಇದರ ಕ್ರಯ ರೂಪಾಯಿ ೨—೭—೦

ಸಾದಾ ಟೈಂಪೀಸು.



ಇದು ಆಫೀಸುಗಳಿಗೂ, ಸ್ಕೂಲ್‌ಗಳಿಗೂ, ದೊಡ್ಡ ಮನುಷ್ಯರ ಮನೆಗಳಿಗೂ ಇರಬೇಕಾದದ್ದು. ೩೦ ಗಂಟೆಗೆ ಒಂದು ಸಾರಿ ಬೀಗ ಕೊಡತಕ್ಕದ್ದು. ಅನೇಕ ಕಾಲಗಳ ವರೆಗೆ ಒಂದು ಸೆಕೆಂಡು ಸಹ ವ್ಯತ್ಯಾಸವಿಲ್ಲದೇ ನಡೆಯತಕ್ಕದ್ದು. ಇದಕ್ಕೆ ನಾವು ೫ ವರುಷಗಳವರೆಗೆ ಗ್ಯಾರಂಟಿ. ಕ್ರಯ ರೂಪಾಯಿ ೧—೪—೦

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ—ನಮ್ಮ ಕಂಪನಿಯಲ್ಲಿ ಎಲ್ಲಾ ತರದ ವಾಚುಗಳು ಟೈಂಪೀಸುಗಳು ಮೊದಲಾದವುಗಳನ್ನು ಬಹಳ ಸುಲಭ ಚಾರ್ಜಿನಲ್ಲಿ ರಿಪೇರಿಮಾಡಿ ಕಳುಹಿಸುತ್ತೇವೆ. ಹೊರಗಿನ ದೇಶದಿಂದ ಬಂದ ವಾಚುಗಳನ್ನು ಮೂರು ದಿವಸಗಳ ಒಳಗಾಗಿ ರಿಪೇರಿಮಾಡಿ ಆಯಾಯ ವಾಚಿಗೆ ತಕ್ಕ ಹಾಗೆ ಗ್ಯಾರಂಟಿ ಪತ್ರ ದೊಡನೆ ಕಳುಹಿಸುತ್ತೇವೆ. ವಾಚುಗಳನ್ನು ರಿಪೇರಿ ಬಗ್ಗೆ ಕಳುಹಿಸುವವರು ಅನವರತ ವಿಳಾಸವನ್ನು ಬರದು ವಾಚಿನ ಭಾಗಯಲ್ಲಿ ಇಟ್ಟು ಕಳುಹಿಸಬೇಕು. ಮತ್ತು ವಾಚಿಗೆ ಉಪಯೋಗಿಸುವ ಎಲ್ಲಾ ತರದ ಸಾಮಾನುಗಳೂ ಸುಲಭಕ್ರಯಕ್ಕೆ ನಮ್ಮಲ್ಲಿ ದೊರೆಯುತ್ತೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಳಾಸ—ಧಾರ್ಜ ವಾಚು ಕಂಪನಿ ಮ್ಯಾನೇಜರ್, ಪಾರ್ಕ್ ಟೌನ್, ಮದ್ರಾಸ್.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬೇಕು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವಾಗಿರುವುದರಿಂದ ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ.

SCOTT'S EMULSION. 57-12

(ಸ್ಕಾಟ್ಸ್ ಇಮಲ್ ಷನ್)

ಈ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು. ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರೆಯುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಪ್ರಶ್ನೋತ್ತರ ಲೇಖ್ಯಬೋಧಿನಿ.

75-5

೨ನೇ ಛಾಪು. ಮಾರಾಟಕ್ಕೆ ಸಿದ್ಧವಾಗಿರುತ್ತೆ. ದಪ್ಪವಾದ ಕಾಗದ, ಭದ್ರವಾದ ಬೈಂಡುಳ್ಳದ್ದು, ಪುಸ್ತಕದಲ್ಲಿರುವ ಸಂಗತಿಯನ್ನು ಪಡುವಿಟ್ಟು ಓದಿನೋಡಿ —ಕ್ರಯ ೧—೮—೦.

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮಿಲ್ಟಿ, ಇಂಜನಿಯರ್, ಫಾರಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೆನಲ್ ಕೋಡು ಲಾ, ಮನುಧರ್ಮಶಾಸ್ತ್ರ ಲಾ, ಕಂಟ್ರಾಕ್ಟು ಡಾಮೇಜು, ವಾರಸು, ವ್ಯವಹಾರ, ಲಿಮಿಟೇಷನ್, ಸ್ಟಾಂಪು, ಕೋರ್ಟ್ ಫೀಜು, ಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಆಕ್ವಿಜಿಷನ್, ಪೋಸ್ಟು, ಆರಂಭ, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು ಲೇವಾದೇವಿ, ರವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವುದು, ಮುಂತಾದ ವ್ಯವಹಾರಿಕೆಯ ಬಗೆ ಬಗೆ ಸಂಗತಿಗಳು, ರೋಜು ವರ್ಗ, ದೊಡಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ನಟ್ಟಿಗೆ ಓದುಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನು ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ.

ವೋಚೆಣಿ ಕಲಿಸತಕ್ಕ ಪುಸ್ತಕ ಕ್ರಯ್ಯಕ್ಕೆ ೧ ರೂಪಾಯಿ ಮಾತ್ರ, ಭೂಮಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ.

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಜಾಗತೆ ತರಿಸಿಕೊಳ್ಳಿ. ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ. ವಿಳಾಸ—ಬಿ. ಮೂರ್ತಿ ಕಂಪೆನಿ, ಲಕ್ಕೂರು ಪೋಸ್ಟು, ಕೋಲಾರ್ ಡಿಸ್ಟ್ರಿಕ್ಟ್

ಪರಿಮಳ ನಶ್ಯದಪುಡಿ

88-1

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ ..... 0—9—0
ಭಾಂಗಿ ಖರ್ಚು ..... 0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ ..... 0—6—0
ಭಾಂಗಿ ಖರ್ಚು ..... 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಬಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನು ಆನಂದವನ್ನು ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಓಡಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿಟ್ಟು ಕಳ್ಳಿಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ.—ಮಾನೇಜರ್, ಧರ್ಮ ವೈದ್ಯಶಾಲಾ,
69 ಚೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದರಾಸು

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಜೂನ್ ತಾ|| ೭ ನೇ ಗುರುವಾರ

ಮಹಾರಾಜಾ ಶ್ರೀಕೃಷ್ಣರಾಜ ಒಡೆಯರವರು

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರ ಇಪ್ಪತ್ತೆರಡನೆಯ ವರುಷವರ್ಧಂತಿಯು ಮೊನ್ನೆ ೩ ನೆ ತಾರೀಖು ಭಾನುವಾರ ರಾಜಧಾನಿಯಲ್ಲಿ ಅತ್ಯಂತ ಕೋಲಾಹಲದೊಡನೆ ನೆರವೇರಿಸಲ್ಪಟ್ಟಿತು. ಆ ದಿನ ಬೆಳಗ್ಗೆ ೧೦|| ಗಂಟೆಗೆ ಶ್ರೀಮನ್ಮಹಾರಾಜರವರು ಅರಮನೆಯ ಕಲ್ಯಾಣತೊಟ್ಟಿಯಲ್ಲಿ ದರ್ಬಾರ್ ನಡಿಸಿದರು. ವೈದಿಕ ಮಂಡಲಿಯವರು, ರಾಜಬಂಧುಗಳು, ದಿವಾನ್ ಮ|| ಮಾಧವರಾಯರು, ಕೌನ್ಸಿಲ್ ಮೆಂಬರುಗಳು, ಛೀಫ್ ಕೋರ್ಟ್ ಜಡ್ಜಿಯವರು, ರೆವಿನ್ಯೂ ಕಮಿಷನರವರು, ಮ|| ಗಳವರ ಜಸ್ಟಿಸ್ ಚಂದಾವರ್ಕರವರು ತೆಂಬೂಚೆಟ್ಟಿರು, ಶ್ರೀನಿವಾಸೈಯ್ಯಂಗಾರ್ರು, ಇಲಾಖಾ ಮುಖ್ಯಾಧಿಕಾರಿಗಳು, ಸೆಕ್ರಟರಿಗಳು, ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರುಗಳು, ಇನ್ನೂ ಅನೇಕ ದೊಡ್ಡ ಮನುಷ್ಯರು ದರ್ಬಾರಿನಲ್ಲಿ ಹಾಜರಾಗಿದ್ದರು. ಶ್ರೀಮನ್ಮಹಾರಾಜರವರು ಆಯುಷ್ಯಹೋಮ ದಾನಾದಿ ಶಾಸ್ತ್ರೋಕ್ತ ಕಾರ್ಯಗಳನ್ನು ನಡಿಸಿ, ಬೇರೆ ಬೇರೆ ಮಠಗಳ ಪ್ರತಿನಿಧಿಗಳೂ ವೈದಿಕ ಮಂಡಲಿಯವರೂ ಒಪ್ಪಿಸಿದ ಆಶೀರ್ವಚನಪೂರ್ವಕವಾದ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಅಧಿಕಾರಿಗಳೂ ದೊಡ್ಡಮನುಷ್ಯರೂ ಮಿಲ್ಟೇರಿ ಹುದ್ದೇದಾರರೂ ಮುಜರೆಮಾಡಿದರು. ಬ್ಯಾಂಡು ವಾದ್ಯಗಳೂ ಓಲಗ ತಾಳಮೇಳಗಳೂ ಸಂತೋಷಸಂಭ್ರಮಗಳನ್ನುಂಟುಮಾಡಿದವು. ಗೌರವಾರ್ಥವಾದ ತೋಪು ಸುರುಟುಗಳೂ ಹಾರಿಸಲ್ಪಟ್ಟವು. ದರ್ಬಾರಿಗಳಿಗೆ ಪುಷ್ಪಹಾರ ತಾಂಬೂಲಗಳು ವಿನಿಯೋಗವಾದ ನಂತರ ದರ್ಬಾರು ಮುಕ್ತಾಯವಾಯಿತು. ಸಾಯಂಕಾಲ ಶ್ರೀಮನ್ಮಹಾರಾಜರವರು ದಿವ್ಯಾಭರಣಭೂಷಿತರಾಗಿ ಕುದುರೆಯ ಮೇಲೆ ಕುಳಿತು ಚತುರಂಗಬಲ ಸಮೇತರಾಗಿ ಬಿರುದಾವಳಿ ಸಹಿತ ರಾಜಬೀದಿಗಳಲ್ಲಿ ಮೆರವಣಿಗೆ ದಯಮಾಡಿ, ರೆಸಿಡೆಂಸಿ ಬಂಗಲೆಯನ್ನು ತಲಪಿ, ಯೂರೋಪ್ಯನ್ ಸರ್ದಾರರುಗಳಿಂದ ಸನ್ಮಾನಿತರಾಗಿ, ಮೈದಾನಿನಲ್ಲಿ ನಡೆದ ಸೈನ್ಯದ ಕಸರತ್ತುಗಳನ್ನು ಪರಾಂಬರಿಸಿ ವಾಪಸು ಮೆರವಣಿಗೆಯಲ್ಲಿ ದಯಮಾಡಿ ಅರಮನೆಯನ್ನು ಸೇರಿದರು. ಈಚೆಗೆ ಪ್ರತಿ ದಿನವೂ ರಾತ್ರಿ ಹೊತ್ತು ಕಲ್ಯಾಣತೊಟ್ಟಿಯಲ್ಲಿ ನಡೆದ ದರ್ಬಾರು ಈ ದಿನಕ್ಕೆ ಮುಕ್ತಾಯವಾಗುವುದು. ಯೂರೋಪ್ಯನ್ ಸರ್ದಾರರು ಈ ಸಲ ೧೦೦ ಮಂದಿಯವರೆಗೆ ವರ್ಧಂತಿ ಉತ್ಸವಕ್ಕಾಗಿ ಬಂದಿರುತ್ತಾರೆ. ಇವರಿಗೆ ಕುದುರೆ ಜೂಜು, ಪೋಲೋ ಪಂದ್ಯವೇ ಮೊದಲಾದ ಹಲವು ವಿನೋದಗಳನ್ನು ಕಲ್ಪಿಸಿರುವರು. ನಾಳೆ ಶನಿವಾರ ರಾತ್ರಿ ಅವರಿಗೆಲ್ಲಾ ನಮ್ಮ ಮಹಾರಾಜರವರು ವಿಶೇಷವಾದ ಔತನವನ್ನು ಮಾಡಿಸುವರು. ಈ ರೀತಿ ಈ ವರ್ಷದ ವರ್ಧಂತಿ ಮಹೋತ್ಸವವು ಅತ್ಯಂತ ವಿಲಕ್ಷಣವಾಗಿಯೂ ವೈಭವಯುಕ್ತವಾಗಿಯೂ ನೆರವೇರಿಸಲ್ಪಟ್ಟಿತು. ಇಂಥಾ ಉತ್ಸವಗಳು ನಮ್ಮ ಮಹಾರಾಜರವರಿಗೆ ಇದೇ ರೀತಿ ಅನೇಕವಾಗಿ ನಡೆಯುವಂತೆ ದೇವರು ಅವರಿಗೆ ದೀರ್ಘಾಯುಸ್ಸನ್ನೂ ಆರೋಗ್ಯಾದಿ ಸಂಪತ್ತನ್ನೂ ದಯಪಾಲಿಸಲೆಂದು ಹಾರೈಸುತ್ತೇವೆ.

ರಾಜವಿವಾಹವೂ ಪ್ರಾಣಾಪಾಯವೂ.

ಕಳೆದ ವಾರ ಫಿಲಾಯುಕ್ತ ರಾಜ್ಯದ ದೊರೆಯಾದ ಸೋದರ ಸೊಸೆ ಪ್ರಿನ್ಸೆಸ್ ಈನಾ ಎಂಬ ರಾಜಪುತ್ರಿಯನ್ನು ಸ್ಪೈಯಿನ್ ರಾಜ್ಯದ ದೊರೆಯಾದ ಅಲ್ಫೋನ್ಸೋ ಪ್ರಭುವಿಗೆ ಕೊಟ್ಟು ವಿವಾಹವಾಯಿತು. ಅದನ್ನು ಆ ಉತ್ಸವ ಕಾಲದಲ್ಲಿ ನಡೆದ ಅನಾಹುತವನ್ನೂ ವೃತ್ತಾಂತಸಂಗ್ರಹದಲ್ಲಿ ವಿವರಿಸಿರುತ್ತೇವೆ. ನೂತನ ರಾಜದಂಪತಿಗಳು ದೇವಸ್ಥಾನದಿಂದ ಮೆರವಣಿಗೆಮಾಡಿಕೊಂಡು ಅರಮನೆಗೆ ವಾಪಸು ಬರುತ್ತಿರುವಾಗ್ಗೆ ರಾಜಬೀದಿಗಳ ಉಪ್ಪರಿಗೆ ಗವಾಕ್ಷಿಗಳಿಂದ ನೋಡುತ್ತಿದ್ದ ಪ್ರಜೆಗಳ ಪೈಕಿ ಮೋಟ ಟೋಮೊರಲ್ ಎಂಬೊಬ್ಬ ದುರಾತ್ಮನು ರಾಜದಂಪತಿಗಳನ್ನು ಕೊಲಬೇಕೆಂದುದ್ದೇಶಿಸಿ ಅವರು ಕುಳಿತಿದ್ದ ಸಾರೋಟಿನ ಮೇಲಕ್ಕೆ ಮದ್ದಿನ ಗುಂಡಿಟ್ಟು ಕಟ್ಟಿದ ಹೂವಿನ ಚಂಡನ್ನು ಎಸೆದನು. ಅದು ಸಾರೋಟಿನ ಸಮೀಪದಲ್ಲೇ ಒಡೆದು, ಕುದುರೆಗಳನ್ನು ಕೊಂದುಬಿಟ್ಟಿತು. ದೇವರ ದಯದಿಂದ ರಾಜದಂಪತಿಗಳಿಗೆ ಯಾವ ಅಪಾಯವೂ ಸಂಭವಿಸದೆ ತಪ್ಪಿಸಿಕೊಂಡರು. ಈ ಅನಾಹುತದಲ್ಲಿ ೩ ಮಂದಿ ಸೈನ್ಯಾಧಿಪತಿಗಳೂ, ೬ ಜನ ಸೋಲಜರುಗಳೂ, ೫ ಮಂದಿ ನೋಟಕರೂ ಮೃತಪಟ್ಟರು. ೧೦೦ ಮಂದಿಗೆ ಗಾಯಗಳಾದವು. ಇವರಲ್ಲಿ ೧೫ ಜನರು ಈಚೆಗೆ ಕಾಲವಾದರು. ಸಂತೋಷಕಾಲದಲ್ಲಿ ರಾಜದಂಪತಿಗಳಿಗೆ ಉಂಟಾದ ವ್ಯಸನವು ಅಷ್ಟಿಷ್ಟೆಂದು ವಿವರಿಸಲಾಗದು. ಪರರಾಜ್ಯಗಳವರೆಲ್ಲಾ ಈ ಸುದ್ದಿಯನ್ನು ಕೇಳಿ ತುಂಬಾ ಸಂತಾಪಪಟ್ಟಿದ್ದಾರೆ. ಸ್ಪೈಯಿನ್ ಪ್ರಜೆಗಳು ದೊರೆಯನ್ನೂ ರಾಣಿಯನ್ನೂ ನೋಡಿ ಸಂಭ್ರಮಪಡುತ್ತಾ ಜಯಘೋಷಗಳನ್ನು ಮಾಡುತ್ತಾ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸುತ್ತಿದ್ದಾರೆ. ಆ ದುಷ್ಟನನ್ನು ಹಿಡಿಯಬೇಕೆಂದು ಅಧಿಕಾರಿಗಳು ವಿಶೇಷವಾಗಿ ಪ್ರಯತ್ನಪಟ್ಟು ಕಡೆಗೆ ಹಿಡಿದರು. ಅವನು ತನ್ನ ಬಿಸ್ತೂಲಿನಿಂದ ಪೋಲೀಸಿನವನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ, ಕೂಡಲೇ ತಾನೂ ಆತ್ಮಹತ್ಯಮಾಡಿಕೊಂಡನು. ಅವನ ಶವವನ್ನು ನೋಡಿದ ಮೇಲ್ಕಂಡ ಉಪ್ಪರಿಗೆ ಮನೆಯವರು ಇವನೇ ಬಂದಿದ್ದವನೆಂದು ಗುರುತು ಹಿಡಿದರು. ಸರ್ಕಾರದವರು ಸುಮಾರು ೨೫ ಜನರನ್ನು ಹಿಡಿದು ಠಾಣೆಯಲ್ಲಿಟ್ಟಿದ್ದಾರೆ. ಹ್ಯಾಗೂ ನೂತನ ರಾಜದಂಪತಿಗಳಿಗೆ ಪ್ರಾಪ್ತವಾಗುತ್ತಿದ್ದ ಘೋರವಾದ ಗಂಡಾಂತರ ನಿವಾರಣೆಯಾಯಿತೆಂದು ಸಕಲರೂ ದೇವರನ್ನು ಸ್ತುತಿಸುತ್ತಿರುವರು.

ರಾಮಯ್ಯನ ಪ್ರಲಾಪ.

ರಾಮಯ್ಯನೆಂಬೊಬ್ಬ ದೊಡ್ಡ ಮನುಷ್ಯನು ತನ್ನ ಮನೆಯ ಜಗಲಿಯ ಮೇಲೆ ಕುಳಿತಿದ್ದನು. ಆತನ ಮುಖವನ್ನು ನೋಡಿದರೆ ಬಹಳ ಚಿಂತಾಕ್ರಾಂತನಾಗಿದ್ದಂತೆ ಕಾಣುತ್ತಿರ ತಪ್ಪದು. ಆತನ ವಸ್ತ್ರಾಭರಣಾದಿಗಳನ್ನೂ ಒಳಗಿನ ಕಿವಿಗಳಲ್ಲಿಯೂ ಕೊರಳಿನಲ್ಲಿಯೂ ಇರುವ ರತ್ನಾಭರಣಗಳನ್ನೂ ನೋಡಿದರೆ ಆತನ ಚಿಂತೆಗೆ ದಾರಿದ್ರ್ಯವು ಕಾರಣವಲ್ಲವೆಂದು ಸ್ಪಷ್ಟವಾಗಿ ತಿಳಿಯುವದು. ಆತನಿಗೆ ದೇಹಾರೋಗ್ಯವು ತಪ್ಪಿದ್ದಿರಬಹುದೇ ಎಂದು ಕೇಳಿದರೆ ಅದೂ ಆತನ ಚಿಂತೆಗೆ ಕಾರಣವಲ್ಲವು. ಮನೆ ತುಂಬಾ ಮಕ್ಕಳೂ ಪೆಟ್ಟಿಗೆ ತುಂಬಾ ಹಣವೂ ಒಳ್ಳೆಯ ತುಂಬಾ ಬುದ್ಧಿಯೂ ದೇಹಾರೋಗ್ಯವೂ ಆ ರಾಮಯ್ಯನಿಗೆ ಇದ್ದುದಲ್ಲದೆ ಆತನು ಊರಿನ ಜನರಲ್ಲಿ ಕೇವಲ ಗೌರವವನ್ನು ಸಂಪಾದಿಸಿದ ಶ್ರೀಮಂತನೂ ಆಗಿರಲಾಗಿ ಆತನ ಮನೋವ್ಯಥೆಗೆ ಕಾರಣವು ಯಾವುದೆಂದು ಕಂಡುಹಿಡಿಯುವುದು ಬಹು ಪ್ರಯಾಸವಾಗಿದ್ದಿತು. ಆತನ ಮನೆಯ ಹಾದಿಯಲ್ಲಿ ಕುತೂಹಲ ವ್ಯಾಪಿಸುತ್ತಿರಲಾಗಿ ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಸ್ನೇಹಿತನು ಆತನನ್ನು ನೋಡಿ—ಈತನ ಮುಖವು ಕಳೆಗುಂದಿರುವುದಕ್ಕೆ ಕಾರಣವೇನೆಂದು ತಿಳಿಯಬೇಕೆಂಬ ಅಪೇಕ್ಷೆಯಿಂದ ಸಮೀಪಕ್ಕೆ ಬಂದು ಕುಳಿತು—ಸ್ವಾಮಿ, ಇದೇನು ಇಷ್ಟು ದುಗುಡದಿಂದ ಕೂತಿದ್ದೀರಿ ಎಂದು ಪ್ರಶ್ನೆಸಿದನು. ಆ ರಾಮಯ್ಯನವರು ಸ್ನೇಹಿತನ ಧ್ವನಿಯನ್ನು ಕೇಳಿ ಮುಖದಲ್ಲಿ ಕಳೆಯೇರಿದರೂ ಪುನಃ ದುಃಖವು ಮನಸ್ಸನ್ನು ಬಾಧಿಸಲು, ಅದನ್ನು ತಡೆಯಲಾರದೆ—ಅಯ್ಯೋ ಸನ್ಮಿತ್ರನೇ—ನನಗೆ ಭಗವಂತನು ಏನೂ ಕೊರತೆ ಮಾಡಿಲ್ಲ. ಒಳ್ಳೇ ಮನೆ ಇದೆ. ಉತ್ಕೃಷ್ಟವಾದ ಭೂಮಿಕಾಣಿಗಳು ಇವೆ. ಮನೆಯ ತುಂಬಾ ಮಕ್ಕಳಿದ್ದಾರೆ. ಬೇಕಾಬೇಕಾದ ಪದಾರ್ಥಗಳಿವೆ. ಮೇಲುಮೇಲಾದ ವಸ್ತ್ರಾಭರಣಗಳಿವೆ. ಮಕ್ಕಳೂ ವಿದ್ಯಾವಂತರಾಗಿ ಯಶಸ್ವಿಗಳಾಗುತ್ತಾ ಬರುತ್ತಿದ್ದಾರೆ. ನನಗಿನ್ನೇನುಬೇಕು? ನನ್ನ ಮನಸ್ಸನ್ನು ಬಾಧಿಸುತ್ತಿರುವ ಚಿಂತೆಯು ಬೇರೆ. ಅದೇನೆಂದರೆ, ಅನಾದಿಯಿಂದ ಬಂದಿರುವ ನಮ್ಮ ಹಿಂದೂ ಮತವು ಕ್ಷೀಣವಾಗುತ್ತಾ ಬರುತ್ತಿದೆ. ಈ ನಮ್ಮ ಪುಣ್ಯಭೂಮಿಯು ಅನ್ಯಮತಗಳಿಗೆ ಆಕರವಾಗುತ್ತಾ ಬರುತ್ತಿದೆ. ಅನ್ಯಮತಗಳೆಂದು ಹೇಳಿದೆನೇ? ಈ ಕ್ರೈಸ್ತಮತ ಒಂದೇ ಸಾಲದೇ? ಮೊನ್ನೆ ರಾವ್ ಒಬ್ಬ ವಿದ್ಯಾವಂತನಾದ ಯೌವನಸ್ಥನು ಆ ಮತವನ್ನವಲಂಬಿಸಿ ಜಾತಿಭ್ರಷ್ಟನಾದನೆಂದು ವರ್ತಮಾನವನ್ನು ಕೇಳಿದೆನು. ಎಷ್ಟೋ ಪುಣ್ಯಮಾಡಿ ಬ್ರಾಹ್ಮಣಜಾತಿಯಲ್ಲಿ ಹುಟ್ಟಬೇಕು. ಅಂಥಾದ್ದರಲ್ಲಿ ಬ್ರಾಹ್ಮಣನಾದವನೇ ಹೊಲೆಮಾದಿಗರಿಗೆ ಯೋಗ್ಯವಾದ ಮತವನ್ನು ಸೇರುವ ಕೆಟ್ಟಕಾಲವು ಬಂದಿತಲ್ಲಾ ಎಂದು ನನಗೆ ಬಹು ವ್ಯಸನವಾಗುತ್ತಿದೆ!

ಸ್ನೇ—ರಾಮಯ್ಯನವರೇ, ನಾನೂ ಬಹು ದಿನಗಳಿಂದ ಹೀಗೆಯೇ ಯೋಚಿಸುತ್ತಿದ್ದೆ. ಆದರೆ ಪರ್ಯಾಲೋಚನೆ ಮಾಡಲಾಗಿ ಹೀಗೆ ವಿಚಾರಿಸುವುದಕ್ಕೆ ಆಧಾರವೇನೂ ಇಲ್ಲವೆಂದು ನನಗೆ ಗೊತ್ತಾಯಿತು.

ರಾ—ಒಳ್ಳೇ ಮಾತು ಹೇಳಿದಿರಿ! ಆಧಾರವೇನೂ ಇಲ್ಲವೇ? ನಮ್ಮ ಜನಕ್ಕೆ ಸೇರಿದವನೊಬ್ಬನು ಪರಮತಕ್ಕೆ ಅಂದರೆ ಅನ್ಯಜನಾಂಗಕ್ಕೆ ಸೇರಿ ಬಿಟ್ಟರೆ ನಮಗೆ ಬಲವು ಕಡಮೆಯಾಗಲಿಲ್ಲವೇ? ಒಂದು ಮತಸ್ಥನು ಅನ್ಯಮತವನ್ನು ಅವಲಂಬಿಸಬಾರದೆಂಬುವದಕ್ಕೆ ಇದೊಂದೇ ಕಾರಣವು ಸಾಲದೇ? ಇಷ್ಟೇ ಅಲ್ಲ. ಇಷ್ಟು ದಿನ ನಮ್ಮಲ್ಲಿ ಒಬ್ಬನಾಗಿದ್ದು ಆಟಪಾಟಗಳಲ್ಲಿಯೂ ಊಟ ಉಪಚಾರಗಳಲ್ಲಿಯೂ ಭಾಗಿಯಾಗಿದ್ದವನು ಈಗ ಇಂಥ ಉಪಚಾರಗಳಿಗೆ ಪರನಾದನಲ್ಲ! ಇದನ್ನೆಲ್ಲಾ ನೋಡಿದರೆ ಯಾರಿಗಾಗಲಿ ವ್ಯಸನವಾಗದೆ ಇದ್ದೀತೇ?

ಸ್ನೇ—ಒಳ್ಳೇ ಚನ್ನಾಗಿ ಹೇಳಿದಿರಲ್ಲಾ ಎಂದು ನಾನೇ ಹೇಳಬೇಕಾಯಿತು! ಅಲ್ಲಾ ಸ್ವಾಮಿ, ನಮ್ಮ ಜನ ಬೇರೆ, ಅನ್ಯಜನರೆಂಬುವರು ಬೇರೆಯೇ? ಯಾವ ಮತಸ್ಥನಾದರೆ ತಾನೆ ಏನು? ಅವರು ಬೇರೆ, ನಾವು ಬೇರೆ ಎಂದು ಹೇಳದೆ ಯಾವ ಕಾರ್ಯವನ್ನಾದರೂ ಸಮ್ಮತವಾಗಿ ಅನ್ಯೋನ್ಯದಿಂದ ಮಾಡುವದಕ್ಕಾಗದೇ? ಇದಕ್ಕೆ ದೃಷ್ಟಾಂತವಾಗಿ ಈಗ ಅನೇಕ ಕಾರ್ಯಗಳಲ್ಲಿ ಹಿಂದೂಗಳೂ ಮುಸಲ್ಮಾನರೂ ಏಕೀಭವಿಸಿ ನಡೆದುಕೊಳ್ಳುವದಿಲ್ಲವೇ? ಗೋಮಾಂಸ ಭಕ್ಷಕರೆಂದು ತಿಳಿದಿರುವ ಮುಸಲ್ಮಾನರು ಸಹಾ ಗೋಸಂರಕ್ಷಣಾರ್ಥವಾಗಿ ಒಂದು ಸಮಾಜವು ಸ್ಥಾಪಿತವಾದಾಗ್ಗೆ ಹಿಂದೂಗಳೊಡನೆ ಕೂಡಿ ಸಹಾಯ ಮಾಡಿದಲ್ಲವೇ? ಕ್ರೈಸ್ತಮತವನ್ನು ಸೇರಿದಾಕ್ಷಣವೇ ಒಬ್ಬನು ಅನ್ಯನಾದನೇ? ಅವನಲ್ಲಿ ದೇಶಾಭಿಮಾನವೂ ಸ್ವಜನಾಭಿಮಾನವೂ ಮತ್ತೆ ಹೆಚ್ಚಾಗುತ್ತದೆಂದು ಸಂಶಯವಿಲ್ಲದೆ ಹೇಳಬಲ್ಲೆನು. ಊಟ ಉಪಚಾರಗಳಲ್ಲಿ ಅವನು ನಿಮ್ಮೊಡನೆ ಸೇರದೆ ಇರುವುದಕ್ಕೆ ನೀವು ಕಾರಣರೇ ಹೊರತು ಅವನು ಕಾರಣನಲ್ಲ. ಕ್ರೈಸ್ತಮತಾವಲಂಬಿಯು ಇತರರೊಡನೆ ಊಟ ಮಾಡಲೇಬೇಕೆಂದಾಗಲಿ ಮಾಡಲಾಗದೆಂದಾಗಲಿ ಆ ಮತಸ್ಥರು ಯಾರೂ ಒಲಿತ್ತಸುವದಿಲ್ಲ. ಇಷ್ಟವಿಲ್ಲದ ಪದಾರ್ಥಗಳನ್ನು ಸೇವನೆ ಮಾಡಬೇಕೆಂಬ ನಿರ್ಬಂಧವೂ ಇರುವದಿಲ್ಲ. ಜಾತಿಯಲ್ಲಿದ್ದುಕೊಂಡಿದ್ದರೂ ಜಾತಿಭ್ರಷ್ಟರೆಂಬುವರು ಮಾಡುವಂಥ ಕಾರ್ಯಗಳನ್ನು ಮಾಡುತ್ತಾ ಬರುವವರು ನಿಮ್ಮಲ್ಲೇ ಇಲ್ಲವೇ? ಅಂಥವರನ್ನು ನೀವು ಅಗ್ರಸ್ಥಾನದಲ್ಲಿ ಕುಳ್ಳಿರಿಸಿಕೊಂಡು ಅವರು ಮಹಾ ದೇಶಾಭಿಮಾನಿಗಳೆಂದೂ ಸ್ವಜನಾಭಿಮಾನಿಗಳೆಂದೂ ಧರ್ಮಿಷ್ಠರೆಂದೂ ಹೊಗಳುವದಿಲ್ಲವೇ? ಹೀಗಿರುವಲ್ಲಿ ಕ್ರೈಸ್ತಮತಾವಲಂಬನೆಯನ್ನು ಮಾಡಿದಾಕ್ಷಣ ಒಬ್ಬನನ್ನು ಜಾತಿಭ್ರಷ್ಟನಾದನೆಂದು ಹೀನೈಸುವದು ನ್ಯಾಯವೇ? ನೀವೇ ಯೋಚನೆ ಮಾಡಿರಿ. ನಿಜವಾದ ಪ್ರೀತಿಯಿದ್ದ ಪಕ್ಷದಲ್ಲಿ ಯಾರು ಯಾವ ಮತಸ್ಥನಾಗಲಿ, ಸ್ವಮತಪರಿತ್ಯಾಗವನ್ನು ಮಾಡಿದವನೇ ಆಗಲಿ ಅವನು ಯಾವ ಅಕೃತ್ಯವನ್ನೂ ಮಾಡದೆಯೂ ಗುಣಸಂಪನ್ನನಾಗಿಯೂ ಇದ್ದರೆ ಅವನನ್ನು ನೀವು ಹೀನೈಸುವಿರಾ? ಒಂದು ವೇಳೆ ನಿಮ್ಮ ಜಾತಿಯಲ್ಲಿ ಯಾರಾದರೊಬ್ಬನು ಮಾಡಬಾರದ ಅಕೃತ್ಯವನ್ನು ಮಾಡಿದನೆಂದು ಕೇಳಿದರೆ ಅವನನ್ನು ನೀವು ಹೀನೈಸುತ್ತೀರಾ? ಏನೋ ಹುಡುಗ, ಮಾಡಿಬಿಟ್ಟ, ಬುದ್ಧಿಯಿಲ್ಲದೆ ಮಾಡಿದ, ಅದನ್ನು ಇತರರಿಗೆ ತಿಳಿಯದ ಹಾಗೆ ರಹಸ್ಯವಾಗಿಟ್ಟುಕೊಳ್ಳಬೇಕು ಎಂದು ಹೇಳುತ್ತೀರಿ. ಒಂದು ವೇಳೆ ಅವನು ಸ್ವಮತದಲ್ಲಿರುವದಕ್ಕೆ ಅಪೇಕ್ಷೆಯಿಲ್ಲದೆ ಯಾವ ಕಾರಣದಿಂದಾಗಲಿ ಅನ್ಯಮತವನ್ನು ಸೇರಿದರೆ ಅವನನ್ನು ಬಹು ವಿಧದಲ್ಲಿ ಹೀನೈಸುವಿರಿ. ಇದು ಧರ್ಮವೂ ಅಲ್ಲ, ನಿಜವಾದ ಪ್ರೀತಿಯೂ ಅಲ್ಲ. ಒಬ್ಬನ ವಿಷಯದಲ್ಲಿ ನ್ಯಾಯ ವಿಚಾರ ಮಾಡುವದಕ್ಕೆ ತಕ್ಕ ಕಾರಣವೊಂದೇ ಬಂದಿರುತ್ತದೆ. ಅದು ಯಾವದೆಂದರೆ—ಅವನು ಸ್ವಮತಸ್ಥನೇ ಆಗಲಿ ಅನ್ಯಮತಸ್ಥನೇ ಆಗಲಿ ಒಳ್ಳೆಯದನ್ನು ಮಾಡದೆಯೂ ಅಲ್ಲದ್ದನ್ನು ಮಾಡುತ್ತಲೂ ಇರುತ್ತಿದ್ದರೆ ಅದೇ ಸಕಲರೂ ಚಿಂತಿಸುವದಕ್ಕೆ ಕಾರಣವು.

ಒಳದೇಶದ ವೃತ್ತಾಂತಗಳು.

ಲಿಂಗಾಯತ ಸಂಘದ ಪ್ರತಿನಿಧಿಗಳು ನಾಳೆ ಮಧ್ಯಾಹ್ನ ಅರಮನೆ ಕಲ್ಯಾಣತೊಟ್ಟಿಯಲ್ಲಿ ಶ್ರೀಮನ್ಮಹಾರಾಜರವರಿಗೆ ಅರ್ಜಿಯನ್ನು ಓದಿ ಒಪ್ಪಿಸುವವರಾಗಿದ್ದಾರೆ.

****

ಗವರ್ನಮೆಂಟ್ ರೆವಿನ್ಯೂ ಜನರಲ್ ಸೆಕ್ರೆಟರಿ ಮ|| ಬಿ ಕೆ ವೆಂಕಟವರದೈಯ್ಯಂಗಾರ್ರಿಗೆ ಪೆನ್ಷನ್ ಆಯಿತು. ಅವರ ಕೆಲಸಕ್ಕೆ ಮ|| ಚಂದ್ರಶೇಖರೈಯ್ಯರವರು ನೇಮಿಸಲ್ಪಟ್ಟಿದ್ದಾರೆ.

****

ಅಮಲ್ದಾರರಾಗಿರುವ ಮ|| ರಾ|| ಅಹಮದ್ ಜೆರಾರ್, ಮ|| ವಿಶ್ವನಾಥರಾವ್, ಮ|| ಎಂ ನಾರಾಯಣರಾವ್, ಇವರನ್ನು ಸರ್ಕಾರದವರು ಪೋಲೀಸ್ ಸೂಪರ್‍ಇಂಟೆಂಡೆಂಟ್ ಕೆಲಸಕ್ಕೆ ಬದಲಿ ಮಾಡಿರುತ್ತಾರೆ.

****

ನೆನ್ನೆ ಸಾಯಂಕಾಲ ರಾಜಧಾನಿಯ ಮಿಷನ್ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಮ|| ಜಸ್ಟಿಸ್ ಎಚ್ ವಿ ನಂಜುಂಡೈಯ್ಯನವರು ದೊಡ್ಡ ಸಭೆಯಲ್ಲಿ ಉಪನ್ಯಾಸವನ್ನು ಮಾಡಿ ಬಹುಮಾನವಿನಿಯೋಗಮಾಡಿದರು.

****

ಕಳೆದವಾರ ಬೆಂಗಳೂರಿನಲ್ಲಿ ಡೆಪ್ಯುಟಿ ಕಮಿಷನರ್ ಮ|| ಎ ದೇವರಾಜೇ ಅರಸಿನವರು ಸಾರೋಟಿನಲ್ಲಿ ಹೋಗುತ್ತಿದ್ದಾಗ್ಗೆ ದಾರಿಯಲ್ಲಿ ಸ್ಮೃತಿ ತಪ್ಪಿ ಬಿದಿದ್ದ ಒಬ್ಬ ಬ್ರಾಹ್ಮಣನನ್ನು ನೋಡಿ, ತುಂಬಾ ಕನಿಕರಗೊಂಡು, ಗಾಡಿಯಿಂದಿಳಿದು ಅವನಿಗೆ ಶೈತ್ಯೋಪಚಾರ ಮಾಡಿ, ಜವಾನರ ಸಂಗಡ ಅವನನ್ನು ಮನೆಗೆ ಕಳುಹಿಸಿಕೊಟ್ಟರೆಂದು ಪ್ರಕಟವಾಗಿದೆ.

****

ಮೈಸೂರು ಗವರ್ನಮೆಂಟಿನವರು ಕಳೆದ ವರುಷದ ಪ್ರತಿನಿಧಿಸಭೆ ನಡೆಯುತ್ತಿದ್ದಾಗ್ಗೆ "ಮೈಸೂರ್ ಸ್ಟಾಂಡರ್ಡ್" ಎಂಬ ಇಂಗ್ಲಿಷ್ ವರ್ತಮಾನಪತ್ರಿಕೆಯ ಪ್ರತಿನಿಧಿಯನ್ನು ಸಭೆಯೊಳಕ್ಕೆ ಕಳುಹಿಸಿ, ಆ ಪತ್ರಿಕೆಗೆ ಸರ್ಕಾರಿ ಜಾಹೀರು ಮುಂತಾದ್ದನ್ನು ಕೊಡಕೂಡದೆಂತಲೂ ಸರ್ಕಾರಿ ಪ್ರಕಟನೆಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಕೂಡದೆಂತಲೂ ಅಪ್ಪಣೆ ಕೊಡಿಸಿದ್ದರಷ್ಟೆ. ಈಗ ಈ ನಿರ್ಬಂಧಗಳನ್ನೆಲ್ಲಾ ನಿವಾರಣೆಮಾಡಿಸಿದ್ದಾರೆಂದು ತಿಳಿಯಬಂದಿತು.

ಇಂಡಿಯಾ ದೇಶದ ವೃತ್ತಾಂತಗಳು.

ದಿನದಿನಕ್ಕೆ ಕರ್ಪೂರದ ಬೆಲೆಯು ಹೆಚ್ಚುತ್ತಿರುವುದನ್ನು ನೋಡಿ ಸಿಲೋನ್ (ಲಂಕಾ) ದ್ವೀಪದ ಪ್ಲಾಂಟರುಗಳು ಅಲ್ಲಿ ತಮ್ಮ ತೋಟಗಳೊಳಗೆ ಕರ್ಪೂರದ ಗಿಡಗಳನ್ನು ಹಾಕಿ ಬೆಳಸಿ ಕರ್ಪೂರವನ್ನು ತಯಾರ್ಮಾಡಬೇಕೆಂದು ಪ್ರಯತ್ನಪಟ್ಟಿದ್ದಾರೆ

❖❖❖❖

ಕಲ್ಕತ್ತಾ ಪಟ್ಟಣದಲ್ಲಿರುವ ಇಂಡಿಯಾ ಗವರ್ನಮೆಂಟಿನ ಸರ್ವೆಯರ್ ಜನರಲ್ ಆಫೀಸಿನಲ್ಲಿ ಕಳೆದ ವಾರ ೪೦,೦೦೦ ರೂಪಾಯಿ ಕ್ರಯದ ನಕ್ಷೆಗಳು ಕಳುವಾಗಿರುತ್ತವೆ ಅದನ್ನು ಪತ್ತೆಮಾಡುವವರಿಗೆ ೧೦೦ ರೂಪಾಯಿ ಇನಾಮು ಕೊಡುತ್ತೇವೆಂದು ಪೋಲೀಸ್ ಕಮೀಷನರು ಪ್ರಕಟಿಸಿದ್ದಾರೆ

❖❖❖❖

ರಂಗೂನ್ ಪಟ್ಟಣದಲ್ಲಿ ಕಳೆದ ಶನಿವಾರ ಭಯಂಕರವಾದ ಸುಂಟರಗಾಳಿಯೂ ಅಪಾರವಾದ ಮಳೆಯೂ ಪ್ರಾಪ್ತವಾದವು ನಾಲ್ಕಾರು ಸಲ ಸಿಡಿಲು ಬಿದ್ದಿತು ೬೭ ಜನರು ಸತ್ತುಹೋದರು; ಮೂರು ಮಂದಿಗೆ ಗಾಯಗಳಾಗಿವೆ ಟೆಲಿಗ್ರಾಫ್ ಆಫೀಸೂ ಕಾಲೇಜೆಂಬ ವಿದ್ಯಾಶಾಲೆಯೂ ಮುರಿದುಬಿದ್ದವು

❖❖❖❖

ಕೋಟ ಬೀಹಾರ್ ಮಹಾರಾಜರೂ ಬಿಕಾನೀರ್ ಮಹಾರಾಜರೂ ಮೂರು ಮಂದಿ ಸಾಹೇಬರೂ ಸೇರಿ ಅಲ್ಲಿನ ಕಾಡುಗಳಿಗೆ ಹೋಗಿ ಶಿಕಾರಿ ಮಾಡಿಕೊಂಡು ಬಂದರು ಅವರಿಗೆ ೧೪ ಹುಲಿಗಳೂ ಒಂದು ಕಾಡುಕೋಣವೂ ಒಂದು ಕರಡಿಯೂ ಸಿಕ್ಕಿಬಿದ್ದವು ಕೆಲವು ಸಂದರ್ಭಗಳಲ್ಲಿ ಅವರಿಗೆ ಒಂದೇ ದಿನದಲ್ಲಿ ಎರಡು ಹುಲಿಗಳು ಸಿಕ್ಕಿದ್ದೂ ಉಂಟು

❖❖❖❖

ಪೂರ್ವಬಂಗಾಳ ಮತ್ತು ಆಸಾಂ ಎಂಬ ಹೊಸ ಆಧಿಪತ್ಯದಲ್ಲಿ ಇನ್ನು ಮುಂದೆ ಸರ್ಕಾರಿ ಸ್ಕೂಲ್ ಪುಸ್ತಕಗಳನ್ನು ಹಿಂದೂಸ್ಥಾನದಲ್ಲೇ ಅಚ್ಚು ಹಾಕಿಸಬೇಕೆಂತಲೂ ಹಿಂದೂಸ್ಥಾನದ ಕಾರ್ಖಾನೆಗಳಲ್ಲಿ ತಯಾರಾಗುವ ಕಾಗದಗಳನ್ನೇ ಉಪಯೋಗಿಸಬೇಕೆಂತಲೂ ಗವರ್ನ್ಮೆಂಟ್ ಚೀಫ್ ಸೆಕ್ರೆಟರಿಯವರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಿಗೆ ಹುಕುಂ ಕೊಟ್ಟಿದ್ದಾರೆ ಇದು ಸ್ವದೇಶೀ ಏರ್ಪಾಡಿಗೆ ಸಹಾಯಕಾರಿಯಾದದ್ದು

❖❖❖❖

ಟಿಪ್ಪೆರಾ ಸಂಸ್ಥಾನದ ಮಹಾರಾಜರವರು ತಮ್ಮ ಮೊಮ್ಮಗಳನ್ನು ನೇಪಾಳ ಸಂಸ್ಥಾನದ ಜನರಲ್ ರಾಣಾ ಪದ್ಮಜಂಗ್‌ರವರ ಕುಮಾರನಿಗೆ ಕೊಟ್ಟು ಕಳೆದ ೧೯ ನೆ ತಾರೀಖಿನಲ್ಲಿ ವಿವಾಹವನ್ನು ಬೆಳಸಿದರು ಆವೆರಡು ಸಂಸ್ಥಾನಗಳಿಗೂ ಈ ರೀತಿ ಸಂಬಂಧ ಬೆಳೆದಿರುವುದು ಇದೂ ಸೇರಿ ಮೂರುಸಲವಾಗಿದೆ ಲಕ್ಷಾಂತರ ರೂಪಾಯಿನ ಜವಾಹಿರಿಗಳನ್ನೂ ಬಿಳ್ಳತ್ತುಗಳನ್ನೂ ವಧೂವರರಿಗೆ ಬಹುಮಾನ ಮಾಡಿದರು ಈ ವಿವಾಹೋತ್ಸವವು ಬಹಳ ಆಟ್ಟಹಾಸದಿಂದ ನಡೆಸಲ್ಪಟ್ಟಿತು ಸಾವಿರಾರು ಜನರಿಗೆ ದಾನ ಧರ್ಮಗಳು ನಡೆದವು

❖❖❖❖

ಅಹಮದಾಬಾದ್ ಪಟ್ಟಣದ ಒಂದು ನೇಯ್ಗೆ ಕಾರ್ಖಾನೆಗೆ ಒಬ್ಬ ಇನ್‌ಸ್ಪೆಕ್ಟರು ಒಂದು ದಿನ ರಾತ್ರಿ ಹೋಗಿ ನೋಡುವಾಗ್ಗೆ ಅದರ ಮುಖ್ಯಸ್ಥನು ೫೦ ಜನ ಹೆಂಗಸರನ್ನು ಕೆಲಸಕ್ಕೆ ನೇಮಿಸಿಕೊಂಡು, ಆ ರಾತ್ರಿ ೧೦ ಗಂಟೆ ಹೊತ್ತಿನಲ್ಲಿ ಅವರಿಂದ ಕೆಲಸ ಮಾಡಿಸುತ್ತಿದ್ದನು. ಇದು ಕಾರ್ಖಾನೆಗಳ ಕಾನೂನಿಗೆ ವಿರೋಧವಾದದ್ದು ಮಾರನೆದಿನ ಇನ್‌ಸ್ಪೆಕ್ಟರು ಆ ಮುಖ್ಯಸ್ಥನ ಮೇಲೆ ಫಿರ್ಯಾದು ತಂದನು ಮ್ಯಾಜಿಸ್ಟ್ರೇಟರು ಅವನಿಗೆ ೫೦ ರೂಪಾಯಿ ಜುಲ್ಮಾನೆ ವಿಧಿಸಿ, ಒಬ್ಬೊಬ್ಬ ಹೆಂಗಸಿನಿಂದ ಕೆಲಸಮಾಡಿಸಿಕೊಂಡದ್ದಕ್ಕೆ ೨೦೦ ರೂಪಾಯಿನಂತೆ ಒಟ್ಟು ನಿನಗೆ ೧೦,೦೦೦ ರೂಪಾಯಿ ಜುಲ್ಮಾನೆ ಹಾಕಬೇಕಾಗಿತ್ತೆಂದು ಹೇಳಿದರು.

❖❖❖❖

ರಾಜಪುಟಾನಾದಲ್ಲಿರುವ ಸಾಂಭಾರ್ ಕೆರೆಯೊಳಗೆ ಇಂಡಿಯಾ ಗವರ್ನಮೆಂಟಿನವರು ಕಳೆದ ೩೪ ವರುಷಗಳಿಂದಲೂ ಉಪ್ಪು ತಯಾರುಮಾಡುತ್ತಿದ್ದಾರೆ ಪ್ರತಿ ವರುಷವೂ ೧,೭೭,೦೦೦ ಟನ್ ತೂಕದಷ್ಟು ಉಪ್ಪನ್ನು ಅಲ್ಲಿ ಮಾಡುತ್ತಿದ್ದಾಗ್ಯೂ ೬೯ ಚದರ ಮೈಲಿ ವಿಸ್ತಾರವುಳ್ಳ ಈ ಕೆರೆಯಲ್ಲಿ ಉಪ್ಪು ಮುಗಿದುಹೋದೀತೆಂಬ ಭೀತಿಯು ಸ್ವಲ್ಪಮಾತ್ರವೂ ಉಂಟಾಗುವುದಿಲ್ಲ ಈ ಕೆರೆಯಲ್ಲಿರುವ ೪ ಅಡಿ ಆಳದಷ್ಟು ಕೆಸರನ್ನು ತೆಗೆದು ಉಪ್ಪುಮಾಡಿದಾಗ್ಯೂ ಇನ್ನೂ ೧ ಕೋಟಿ ೯೭ ಲಕ್ಷ ಟನ್ ಉಪ್ಪು ದೊರಕುತ್ತದೆ ಎಂದು ಸರ್ಕಾರಿ ಅಧಿಕಾರಿಯು ಪರೀಕ್ಷೆಯಿಂದ ತಿಳಿಸಿರುತ್ತಾನೆ.

❖❖❖❖

ರಂಗೂನ್ ಪಟ್ಟಣದಲ್ಲಿ ಕಳೆದ ಏಪ್ರಿಲ್ ೧೪ ನೆ ತಾ ಒಬ್ಬ ಹೆಂಗಸಿನ ಮನೆಯಲ್ಲಿ ಸಿಡುಬುತಗಲಿ ಒಂದು ಮಗು ತೀರಿಹೋಯಿತು ಆ ಮನೆಯನ್ನು ಅಂಟುಜಾಡ್ಯಗಳ ಕಾನೂನ್ ಪ್ರಕಾರ ಕೆಡಹಬೇಕೆಂದು ಮ್ಯುನಿಸಿಪಾಲಿಟಿಯವರು ತೀರ್ಮಾನ ಮಾಡಿದರು. ಆದರೆ ಇನ್‌ಸ್ಪೆಕ್ಟರಾದ ಮೆ॥ ಹಾರಿಸನ್ ಎಂಬೊಬ್ಬ ಯೂರೋಪ್ಯಯನು ಅವಳಿಂದ ೧೫ ರೂಪಾಯಿ ಲಂಚತಿಂದು, ಆ ಮನೆಯನ್ನು ಕೆಡವದೆ ಬಿಟ್ಟುಬಿಟ್ಟನು ಇದು ಪ್ರಕಟವಾಯಿತು. ಸೆಷನ್ ವಿಚಾರಣೆಯಲ್ಲಿ ಅವನು ಲಂಚ ತಿಂದದ್ದುಂಟೆಂದು ಒಪ್ಪಿಕೊಂಡು, ಹೆಚ್ಚು ಶಿಕ್ಷೆ ಮಾಡಕೂಡದೆಂದು ಅರ್ಜಿಯನ್ನು ಬೇಡಿಕೊಂಡನು ಅದರ ಮೇಲೆ ಸೆಷನ್ಸ್ ಜಡ್ಜರು ಅವನಿಗೆ ನಾಲ್ಕು ತಿಂಗಳ ಕಠಿಣಸಜಾ ವಿಧಿಸಿದರು.

❖❖❖❖

ಕಲ್ಕತ್ತಾ ಪಟ್ಟಣದ ಬಳಿ ಹಂತಂ ಊರಿನಲ್ಲಿ ಗೋಪೀನಾಥನೆಂಬೊಬ್ಬ ವ[illegible]ನು ತನ್ನ [illegible]ಗೆ ಮದುವೆಮಾಡಿದನು ಬೀಗರು ಗಂಡನ್ನು ಮೆರವಣಿಗೆ [illegible]ದು ಹೆಣ್ಣಿನ ಮನೆಗೆ ಬರುತ್ತಿರುವಲ್ಲಿ ಸೋಲಕರಾಂ ಎಂಬೊಬ್ಬ ಪೋಲೀಸ್ ಹೆಡ್ ಕಾನ್‌ಸ್ಟೇಬಲು ಅವರನ್ನು ತಡೆದು ಹತ್ತುರೂಪಾಯಿ ತನಗೆ ಕೊಡದಿದ್ದರೆ ಮೆರವಣಿಗೆಯನ್ನು ಮುಂದಕ್ಕೆ ಬಿಡುವುದಿಲ್ಲವೆಂದು ಹೇಳಿದನು ಆಗ ಹೆಣ್ಣಿನ ತಂದೆಯು ಹೋಗಿ ರೂಪಾಯಿ ಕೊಡುವುದಿಲ್ಲವೆಂದು ತಿರಸ್ಕರಿಸಿದನು ಕೂಡಲೇ ಆ ಪೋಲೀಸಿನವನು ಠಾಣ್ಯಕ್ಕೆ ಹೋಗಿ ಇನ್ನು ಕೆಲವು ಪೋಲೀಸಿನವರನ್ನು ಕಟ್ಟಿಕೊಂಡು ಬಂದು, ಮೆರವಣಿಗೆಯವರ ಮೇಲೆ ಬಿದ್ದು ಎಲ್ಲರನ್ನೂ ಹೊಡೆದು ಕೆಲವರಿಗೆ ಪೂರಾ ಗಾಯಮಾಡಿ ಪಂಜುಗಳನ್ನು ಆರಿಸಿ ಬಾಣಬಿರುಸುಗಳನ್ನು ಹಾಳುಮಾಡಿ, ಎಲ್ಲರನ್ನೂ ಚದರಿಸಿಬಿಟ್ಟನು ಈಗ ಹೆಣ್ಣಿನ ತಂದೆಯು ಆ ಪೋಲೀಸಿನವರ ಮೇಲೆ ಫಿರ್ಯಾದು ತಂದಿದ್ದಾನೆ

❖❖❖❖

ಪಂಜಾಬ್ ಆಧಿಪತ್ಯದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರ್ ಮೆ॥ ಬೆಲ್‌ರವರು ಕಳೆದವಾರ ರಾವಲ್‌ಪಿಂಡಿ ಪಟ್ಟಣದ ಗವರ್ನ್‌ಮೆಂಟ್ ಹಿಂದೂಸ್ಥಾನಿ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟರು ಆಗ್ಗೆ ಅವರು ತಿಳಿಸಿದ ಸಂಗತಿಯು ಬಹು ವಿಶೇಷವಾಗಿರುವುದು ಅದೇನೆಂದರೆ—ಬಹು ಅಲ್ಪಬೆಲೆಯುಳ್ಳ ಅನೇಕ ಬಹುಮಾನಗಳನ್ನೂ, ಪೋಟೋಪೋಟಿ ಇಲ್ಲದ ವಿಷಯಗಳಿಗೂ ಬಹುಮಾನಗಳನ್ನೂ ಕೊಡುವುದು ಯೋಗ್ಯವೆನಿಸಲಾರದು ಮತ್ತು ಸ್ವತಂತ್ರ ಸದಾಚಾರ ಸನ್ನಡತೆಯವರೆಂದು ಕೇಳಿ ಹುಡುಗರಿಗೆ ಬಹುಮಾನಕೊಡುವುದು ಸುಲಭವಾದದ್ದಲ್ಲ ಯಾಕೆಂದರೆ ಒಂದು ಪಾಠಶಾಲೆಯಲ್ಲಿ ಓದುವ ನೂರಾರುಮಂದಿ ವಿದ್ಯಾರ್ಥಿಗಳಲ್ಲಿ ಒಬ್ಬಿಬ್ಬರಿಗೆ ಅವರು ಸದ್ವರ್ತನೆಯವರೆಂದಾಗಲಿ ಹೇಳಿ ಬಹುಮಾನಕೊಟ್ಟರೆ ಆ ಸ್ಕೂಲಿನಲ್ಲಿ ಓದುವವರೆಲ್ಲಾ ಕೆಟ್ಟಹುಡುಗರೆಂದು ಸ್ಕೂಲಿಗೇ ಅಪಯಶಸ್ಸು ಬರುವುದು ಇನ್ನು ಮುಂದೆ ಇಂಥಾ ಬಹುಮಾನಗಳನ್ನು ಕೊಡದಿರುವುದೇ ಲೇಸು ಎಂಬುದೇ

❖❖❖❖

ಬೊಂಬಾಯಿನ ವರ್ತಕ ಮಂಡಲಿಯವರು ಸಿಂಧು ದೇಶದಿಂದ ಬೊಂಬಾಯಿಗೆ ರೈಲ್ ರಸ್ತೆ ಹಾಕಬೇಕೆಂದು ಪ್ರಯತ್ನಪಟ್ಟಿದ್ದಾರೆ. ಈ ರೈಲ್ ರಸ್ತೆಯು ಕಚ್ ಸಂಸ್ಥಾನದ ರಾಜಧಾನಿಯಾದ ಭೂಜ್ ಪಟ್ಟಣದ ಮೇಲೆ ಹಾಸಿ ಬಂದರೆ ಸುತ್ತಾಗುವುದಿಲ್ಲ ರಸ್ತೆ ನೇರವಾಗ ಬರುವುದು ಬೊಂಬಾಯಿ ಗವರ್ನಮೆಂಟಿನವರೂ ಇಂಡಿಯಾ ಸರ್ಕಾರದವರೂ ಕಚ್ ಮಹಾರಾಜರನ್ನು ಅವರ ರಾಜಧಾನಿಯ ಮೂಲಕ ರೈಲ್ ರಸ್ತೆ ಹಾಕುವ ವಿಚಾರವಾಗಿ ಬರೆದು ಕೇಳಿದ್ದಕ್ಕೆ ಮಹಾರಾಜರು ಅದಕ್ಕೆ ಒಪ್ಪಲಿಲ್ಲ ತಮ್ಮ ಸಂಸ್ಥಾನಕ್ಕೆ ರೈಲು ಬರಬೇಕಾದ ಅಗತ್ಯವಿಲ್ಲವೆಂದು ತಿರಸ್ಕರಿಸಿರುತ್ತಾರೆ ಈ ಕಾಲದಲ್ಲೂ ಈ ಮಹಾರಾಜರು ಹಳೇ ಕಂದಾಚಾರದ ಅಭಿಪ್ರಾಯವನ್ನಿಟ್ಟುಕೊಂಡಿರುವುದು ಪರಮಾಶ್ಚರ್ಯವಾಗಿದೆ ಗವರ್ನಮೆಂಟಿನವರು ಈ ವಿಷಯವಾಗಿ ಮಹಾರಾಜರನ್ನು ಬಲಾತ್ಕಾರ ಮಾಡಕೂಡದು ರೈಲಿನ ಸಾಧಕಬಾಧಕಗಳನ್ನು ಅವರಿಗೆ ಇನ್ನೊಂದು ಸಲ ತಿಳಿಸಿ, ಅವರ ಸಮ್ಮತಿಯನ್ನು ಪಡೆಯುವುದು ಯುಕ್ತವಾಗಿದೆ. ರೈಲಿದ್ದರೆ ಅಲ್ಲಿ ಕ್ಷಾಮ ಪ್ರಾಪ್ತವಾದಾಗ್ಗೆ ದವಸ ಧಾನ್ಯಗಳನ್ನು ಬೇಗ ಅಲ್ಲಿಗೆ ಸಾಗಿಸಿಕೊಂಡು ಹೋಗುವುದಕ್ಕೆ ಎಷ್ಟೋ ಸಹಾಯವಾಗುವುದಿಲ್ಲವೇ?

❖❖❖❖

ಮದ್ರಾಸ್ ಆಧಿಪತ್ಯದಲ್ಲಿ ಸರ್ಕಾರದವರು ಗ್ರಾಮಮುನ್ಸಿಫ್ ಕೋರ್ಟುಗಳನ್ನು ಏರ್ಪಡಿಸಿರುತ್ತಾರಷ್ಟೆ ೧೮೯೯ ರಿಂದ ೧೯೦೦ ರವರೆಗೆ ಈ ಕೋರ್ಟುಗಳಲ್ಲಿ ಪ್ರತಿ ವರುಷವೂ ೩೩ ೭೩೩ ಮೊಕದ್ದಮೆಗಳು ಹಿಡಿದು ೧೮೩,೫೦೪ ಮೊಕದ್ದಮೆಗಳ ತನಕ ದಾಖಲಾಗಿ ಫೈಸಲಾಗುತ್ತಿದ್ದವು. ಅಲ್ಲಿಂದೀಚೆಗೆ ಮೊಕದ್ದಮೆಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದು, ೧೯೦೩ ರಲ್ಲಿ ೭೯,೯೬೬ ಮಾತ್ರ ಇತ್ಯರ್ಥವಾದವು ಇಂಥಾ ಗ್ರಾಮಮುನ್ಸಿಫ್ ಕೋರ್ಟುಗಳು ಇರೋಣದರಿಂದ ಇತರ ಸರ್ಕಾರಿ ಸಿವಿಲ್ ಕೋರ್ಟುಗಳಲ್ಲಿ ಕೆಲಸಗಳು ಜಾಗ್ರತೆಯಾಗಿ ನಡಿಯಲು ತುಂಬಾ ಸಹಾಯವಾಯಿತು ಗ್ರಾಮಾಂತರಗಳಲ್ಲಿರುವ ಪ್ರಜೆಗಳು ಈ ಮುನ್ಸಿಫ್ ಕೋರ್ಟುಗಳಿಂದ ತಮ್ಮ ಸಣ್ಣಪುಟ್ಟ ವ್ಯಾಜ್ಯಗಳನ್ನು ಫೈಸಲ್ ಮಾಡಿಕೊಳ್ಳುವುದಕ್ಕೆ ಎಷ್ಟೋ ಅನುಕೂಲವಾಗಿದೆ ಅವು ಇಲ್ಲದಿದ್ದಲ್ಲಿ ಪ್ರಜೆಗಳು ಕೋರ್ಟುಗಳಿಗೆ ಅಲೆಯುವುದರಿಂದ ಅವರಿಗೆ ಕಷ್ಟನಷ್ಟಗಳು ಅಪಾರವಾಗುತ್ತಿದ್ದವು ಸರ್ಕಾರಿ ಅಧಿಕಾರಿಗಳು ಸರ್ಕೀಟು ಮಾಡುವಾಗ್ಗೆ ಈ ಗ್ರಾಮಮುನ್ಸಿಫ್ ಕೋರ್ಟುಗಳ ಕಾರುಕರ್ದಿಗಳನ್ನು ಮುತುವರ್ಜಿ ವಹಿಸಿ ತನಿಖೆಯನ್ನು ಮಾಡಿ, ಪ್ರಜೆಗಳಿಗೆ ಅವುಗಳ ಅನುಕೂಲ ಉಪಯೋಗ ಮುಂತಾದ್ದನ್ನು ತಿಳಿಯಪಡಿಸುತ್ತಾ ಬರಬೇಕೆಂದು ಮದರಾಸ್ ಗವರ್ನಮೆಂಟಿನವರು ಹುಕುಂ ಮಾಡಿದ್ದಾರೆ.

❖❖❖❖

ಬರ್ಮಾ ಆಧಿಪತ್ಯಕ್ಕೆ ಸೇರಿದ ಟಂಗೂ ಡಿಸ್ಟ್ರಿಕ್ಟಿನಲ್ಲಿ ಪಪೂಂಗಿ ಎಂಬೊಬ್ಬ ಮುಖಂಡನು ಬುದ್ಧಿಹೀನರಾದ ಅನೇಕ ಜನರನ್ನು ತನ್ನ ಹಿಂಬಾಲಕರನ್ನಾಗಿ ಮಾಡಿಕೊಂಡು, ಅವರನ್ನೆಲ್ಲಾ ಆಗಾಗ್ಗೆ ತನ್ನ ಮಠಕ್ಕೆ ಕರೆಸಿಕೊಂಡು ಅವರನ್ನು ಕುರಿತು—ನಿಮ್ಮ ದೇಹಕ್ಕೆ ಒಂದು ವಿಧ ರಸವನ್ನು ಬಳಿಯುತ್ತೇನೆ ಗುಂಡು ತಗಲಿದರೂ ನಿಮಗೇನೂ ಅಪಾಯವಾಗುವುದಿಲ್ಲ ಔಷಧಾದಿಗಳನ್ನೂ, ಯಂತ್ರ ಮಂತ್ರಗಳನ್ನೂ ಸಿದ್ಧಪಡಿಸಿಕೊಂಡಿದ್ದೇನೆ ಇವುಗಳ ಸಹಾಯದಿಂದ ನಾವು ಏಕವಾಗಿ ಇಂಗ್ಲೀಷರ ಮೇಲೆ ಯುದ್ಧಮಾಡಿ ಅವರನ್ನು ಓಡಿಸಿ, ಟಂಗೂ ಪಟ್ಟಣದಲ್ಲಿ ನಾವೇ ರಾಜ್ಯಭಾರ ಮಾಡಿಕೊಂಡಿರೋಣ ಎಂಬೀ ರೀತಿಯಾಗಿ ದುರ್ಬೋಧನೆ ಮಾಡಿದನು. ಅವರಿಗೆಲ್ಲಾ ಬಣ್ಣ ಬಳಿಸಿದನು. ಎಲ್ಲರೂ ಏಕವಾಗಿ ಅಲ್ಲಿನ ಟಂಗೂ ಪಟ್ಟಣಕ್ಕೆ ಮುತ್ತಿಗೆ ಹಾಕಬೇಕೆಂದು ಹೊರಟರು ಪೋಲೀಸಿನವರಿಗೆ ಈ ಸಂಗತಿ ತಿಳಿದು ಬಂದು, ಅವರು ಗುಂಪುಕೂಡಿ ಹೋಗಿ ಆ ಮುಖಂಡನನ್ನೂ ಅವನ ಹಿಂಬಾಲಕರಲ್ಲಿ ಎಂಟು ಮಂದಿಯನ್ನೂ ಹಿಡಿದು ಲಾಕಪ್ಪಿನಲ್ಲಿ ಹಾಕಿದರು ಅವನ ಮನೆ ಮಠಗಳನ್ನು ಶೋಧನೆಮಾಡಿ ನೋಡಿದಾಗ ನಾನಾತರಯುದ್ಧಸಾಮಗ್ರಿಗಳೂ ಯಂತ್ರಗಳೂ ಒಂದು ದೊಡ್ಡ ಪಟ್ಟಿಯೂ ಸಿಕ್ಕಿದವು ಈ ಪಟ್ಟಿಯಲ್ಲಿ ಅವನ ಹಿಂಬಾಲಕರ ಹೆಸರುಗಳೆಲ್ಲಾ ಬರೆಯಲ್ಪಟ್ಟಿವೆ ಆ ಪಪೂಂಗಿ ಎಂಬ ಮುಖಂಡನ ಏರ್ಪಾಡೇನಾಗಿತ್ತೆಂದರೆ—ಇಂಗ್ಲೀಷರನ್ನು ಟಂಗೂ ಪಟ್ಟಣದಿಂದ ಓಡಿಸಿ ತಾನೇ ದೊರೆಯಾಗಬೇಕು. ತನ್ನ ದಳಪತಿಗಳಿಗೆಲ್ಲಾ ಮುಖ್ಯ ಮುಖ್ಯ ಅಧಿಕಾರಗಳನ್ನು ಕೊಡಬೇಕು ತನ್ನ ಮಠದಲ್ಲಿದ್ದ ಇಬ್ಬರು ಹೆಂಗಸರೂ ತನ್ನ ರಾಣಿಯರಾಗಿರಬೇಕು ಎಂಬುದೇ ಇಂಥಾ ವಿವೇಕಶೂನ್ಯ ಪುರುಷನ ಮಾತನ್ನು ಆ ಮೂಢರು ನಂಬಿ, ಎಲ್ಲರೂ ಸರ್ಕಾರದವರ ಸೆರೆಮನೆಯಲ್ಲಿ ಬೀಳುವ ಹಾಗಾಯಿತೆಂದು ವಿಷಾದಿಸಬೇಕಾಗಿದೆ

❖❖❖❖

ಹಿಂದೂಸ್ಥಾನಕ್ಕೆ ಪ್ಲೇಗ್ ಉಪದ್ರವ ದೆಸೆಯಿಂದ ಎಷ್ಟು ಕಷ್ಟನಷ್ಟಗಳುಂಟಾಗಿವೆ ಎಂಬುದು ಮುಂದಿನ ಸಂಖ್ಯೆಗಳಿಂದ ಗೊತ್ತಾಗುತ್ತದೆ. ೧೮೯೬ನೆ ಇಸವಿಯಲ್ಲೇ ಪ್ಲೇಗ್ ಉಪದ್ರವು ಹಿಂದೂಸ್ಥಾನದಲ್ಲಿ ಇತ್ತೆಂಬುದರಲ್ಲಿ ಸಂಶಯವಿಲ್ಲವಾದಾಗ್ಯೂ ಆ ವರುಷ ಎಷ್ಟು ಜನರಿಗೆ ತಗಲಿತೋ ಎಷ್ಟು ಮರಣಗಳಾದವೋ ಪ್ರಕಟವಾಗಲಿಲ್ಲ ೧೮೯೬ರಲ್ಲಿ ಪ್ಲೇಗಿನಿಂದ ಮೃತಪಟ್ಟವರ ಸಂಖ್ಯೆ ೧,೭೦೪ ಎಂದು ಗೊತ್ತುಮಾಡಲ್ಪಟ್ಟಿತು ಆದರೆ ೧೮೯೭ನೆ ಇಸವಿಯಲ್ಲಿ ೫೬,೦೫೧ ಜನರೂ, ೧೮೯೮ ರಲ್ಲಿ ೧೧೮,೦೭೩ ಜನರೂ, ೧೮೯೯ ರಲ್ಲಿ ೧,೩೪,೭೯೯ ಜನರೂ ಆ ಉಪದ್ರದಲ್ಲಿ ಮೃತಪಟ್ಟರು ಆದರಿಂದೀಚೆಗೆ ಪ್ಲೇಗ್ ಉಪದ್ರವಿಂದಾಗುವ ಮರಣಸಂಖ್ಯೆಯು ಕಡಿಮೆಯಾಯಿತು ೧೯೦೦ನೆ ವರುಷದಲ್ಲಿ ೯೩,೧೫೦ ಜನರು ಮಾತ್ರ ಕಾಲವಾದರು ಇದನ್ನು ನೋಡಿ ಈ ಉಪದ್ರವು ಇನ್ನು ಮುಂದೆ ಹೀಗೆಯೇ ಕಡಿಮೆಯಾದೀತೆಂದು ಸರ್ಕಾರದವರಿಗೂ ಪ್ರಜೆಗಳಿಗೂ ಧೈರ್ಯ ಉಂಟಾಯಿತು ಆದರೆ ಈ ಧೈರ್ಯವು ಕ್ಷಣಿಕವಾದದ್ದಾಯಿತು ಹ್ಯಾಗೆಂದರೆ ಮಾರನೆ ಅಂದರೆ ೧೯೦೧ನೆ ಇಸವಿಯಲ್ಲಿ ಪ್ಲೇಗಿನಿಂದ ಮೃತಪಟ್ಟವರ ಸಂಖ್ಯೆಯು ೨,೭೩,೬೭೯ ಕ್ಕೆ ಏರಿತು ಅಲ್ಲಿಂದ ೧೯೦೨ ರಲ್ಲಿ ೫,೭೭,೨೭೭ ಕ್ಕೂ, ೧೯೦೩ ರಲ್ಲಿ ೮,೫೧,೨೬೩ ಕ್ಕೂ, ೧೯೦೪ನೆ ಇಸವಿಯಲ್ಲಿ ೧೦,೨೨,೨೯೯ ಕ್ಕೂ ಮರಣಸಂಖ್ಯೆಯು ಹೆಚ್ಚಿಹೋಯಿತು ಆದರೆ ೧೯೦೫ ರಲ್ಲಿ ಈ ಸಂಖ್ಯೆಯು ಸ್ವಲ್ಪ ಕಡಿಮೆಯಾಗುತ್ತೆಂದು ಹೇಳಬಹುದಾದರೂ ಒಟ್ಟು ೯ ೫೦ ೯೬೩ ಜನರು ಈ ಉಪದ್ರಕ್ಕೆ ತುತ್ತಾದರು ಈಗಲೂ ಅಂದರೆ ೧೯೦೬ ನೆ ಜನವರಿಯಿಂದ ಏಪ್ರಿಲ್ ಕಡೆಯ ವರೆಗೆ ೨,೫೦,೦೦೦ ಜನರಿಗಿಂತ ಕಮ್ಮಿ ಇಲ್ಲದೆ ಪ್ಲೇಗಿನಲ್ಲಿ ಕಾಲವಾಗಿದ್ದಾರೆಂದು ತಿಳಿದುಬರುವುದು ಅಂತೂ ಪ್ರಾರಂಭದಿಂದ ಈ ಉಪದ್ರವು ಹಿಂದೂಸ್ಥಾನದ ಪ್ರಜೆಗಳಲ್ಲಿ ೪೨,೮೯,೦೦೦ ಪ್ರಜೆಗಳನ್ನು ಕೊಂದುಹಾಕಿದೆ ಎಂದು ಹೇಳಬಹುದು

ವಿದೇಶ ವರ್ತಮಾನಗಳು.

ಸಯಾಂ ರಾಜ್ಯದಲ್ಲಿ ಬೆಳ್ಳಿ ನಾಣ್ಯಗಳನ್ನು ತೆಗೆದುಹಾಕಿ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತರಬೇಕೆಂದು ಅಲ್ಲಿನ ಚಕ್ರವರ್ತಿಯವರು ಪ್ರಯತ್ನಪಟ್ಟಿದ್ದಾರೆ.

❖❖❖❖

ವಿಲಾಯತಿಯ ಸಮಸ್ತ ಪಾಠಶಾಲೆಗಳಲ್ಲೂ ೧೨ ವರುಷಕ್ಕೆ ಮೇಲ್ಪಟ್ಟ ಬಾಲಕರಿಗೆಲ್ಲಾ ಸಣ್ಣ ಸಣ್ಣ ಬಂದೂಕುಗಳನ್ನು ಕೊಟ್ಟು ಅವರ ಪ್ರಯೋಗ ಮುಂತಾದ್ದನ್ನು ಕಲಿಸಿಕೊಡಬೇಕೆಂದು ಅಲ್ಲಿನ ಯುದ್ಧದ ಇಲಾಖೆಯವರು ತೀರ್ಮಾನಮಾಡಿದ್ದಾರೆ

❖❖❖❖

ರಷ್ಯಾ ರಾಜ್ಯದಲ್ಲಿ ಸರ್ಕಾರದವರು ಪ್ರಜಾನೆಮ್ಮದಿಯನ್ನು ಕಾಪಾಡಬೇಕೆಂಬ ಉದ್ದೇಶದಿಂದ ೩೩ ೦೦೦ ದೊಡ್ಡ ಮನುಷ್ಯರನ್ನೂ ಪ್ರಜೆಗಳ ಮುಖಂಡರನ್ನೂ ಹಿಡಿದು ಆರ್ಕೇಂಜಲ್ ಮತ್ತು ಒಲೋನೆಟ್ಸ್ ಎಂಬ ಪ್ರಾಂತ್ಯಗಳಿಗೆ ಗಡೀಪಾರು ಮಾಡಿರುತ್ತಾರೆ

❖❖❖❖

ದಕ್ಷಿಣ ಆಫ್ರಿಕದಲ್ಲಿ ಪೋರ್ಚುಗೀಸರಿಗೆ ಸೇರಿದ ನಲಿಯಾ, ಮೊಜಾಂಬಿಕ್ಸ್ ಎಂಬ ಪ್ರಾಂತ್ಯಗಳಲ್ಲಿ ಬೋಅರರು ಪೋರ್ಚುಗೀಸರನ್ನು ಅಲ್ಲಿಂದ ಓಡಿಸಿ ತಾವೇ ಅಲ್ಲಿ ರಾಜ್ಯವನ್ನೇರ್ಪಡಿಸಿಕೊಳ್ಳಬೇಕೆಂದು ಫಿತೂರಿ ಮಾಡುತ್ತಿರುವುದಾಗಿಯೂ, ಈ ಫಿತೂರಿಗೆ ಬೋಅರ್ ದಳಪತಿಯೊಬ್ಬನು ಮುಖಂಡನಾಗಿ ನಿಂತಿದ್ದಾನೆಂತಲೂ ತಿಳಿದು ಬಂದಿದೆ

❖❖❖❖

ಫ್ರಾನ್ಸ್ ರಾಜ್ಯದಲ್ಲಿ ಕೊರಿಯರೀಸ್ ಎಂಬ ಕಲ್ಲಿದ್ದಲ ಗಣಿಯ ಅನಾಹುತದಲ್ಲಿ ತಮ್ಮ ಪ್ರಾಣದ ಮೇಲೂ ಆಸೆ ಇಡದೆ ಕಷ್ಟಪಟ್ಟು ಆ ಕೂಲಿಕಾರರನ್ನೂ ಹೆಣಗಳನ್ನೂ ಒಳಗಿನಿಂದ ಹೊರಗೆ ಸಾಗಿಸಿಕೊಂಡು ಬಂದಂಥಾ ೧೭ ಮಂದಿ ಜರ್ಮನಿಯವರಿಗೆ ಫ್ರಾನ್ಸ್ ಸರ್ಕಾರದವರು ಬಹು ಉತ್ಕೃಷ್ಟವಾದ ಚಿನ್ನದ ಮೆಡಲ್ ಎಂಬ ಬಿಲ್ಲೆಗಳನ್ನು ಬಹುಮಾನ ಮಾಡುವುದಾಗಿ ತಿಳಿಸಿದ್ದಾರೆ.

❖❖❖❖❖

ಜರ್ಮನಿಯವರಿಗೆ ಸೇರಿದ ಪೂರ್ವ ಆಫ್ರಿಕದಲ್ಲಿ ಜರ್ಮನಿ ಸೈನಿಕರಿಗೆ ಎರಡು ತಿಂಗಳಿಂದ ಅಲ್ಲಿನ ದೇಶೀಯ ಪ್ರಜೆಗಳ ದಂಗೆಯನ್ನು ಅಡಗಿಸುವುದೇ ಉದ್ಯೋಗವಾಗಿದೆ. ಕಳೆದ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಅನೇಕ ಯುದ್ಧಗಳು ನಡೆದು, ಸೈನಿಕರು ಸುಮಾರು ೬೦೦ ಪ್ರಜೆಗಳನ್ನು ಕೊಂದು ಹಾಕಿ, ನೂರಾರು ಜನರನ್ನು ಹಿಡಿದು ಸೆರೆಮನೆಯಲ್ಲಿ ಹಾಕಿಕೊಂಡಿದ್ದಾರೆ. ಈಗೀಗ ದೇಶವು ತಹಬಂದಿಗೆ ಬರುತ್ತಿದೆ.

❖❖❖❖

ದಕ್ಷಿಣ ಆಫ್ರಿಕದಲ್ಲಿ ಬೊಂಬಾಟಾ ಎಂಬ ದೇಶೀಯ ಮುಖಂಡನು ಇಂಗ್ಲಿಷ್ ಗವರ್ನಮೆಂಟಿನ ಮೇಲೆ ತಿರುಗಿ ಬಿದ್ದಿದ್ದಾನೆಂತಲೂ ಸಾವಿರಾರುಮಂದಿ ಅವನ ಹಿಂಬಾಲಕರಾಗಿ ಸೇರಿದ್ದಾರೆಂತಲೂ, ಇವರೆಲ್ಲಾ

...ರ್ಗಮವಾದ ಕಾಡುಗಳಲ್ಲಿ ಹೋಗಿ ಸೇರಿಕೊಂಡು, ಫಿತೂರಿ ಮಾಡುತ್ತಿದ್ದಾರೆಂತಲೂ ತಿಳಿಸಿದ್ದೇವಷ್ಟೆ. ಈಚೆಗೆ ಇಂಗ್ಲಿಷ್ ಸೈನಿಕರಿಗೂ ಈ ದಂಗೇಕೋರರಿಗೂ ೨–೩ ಯುದ್ಧಗಳಾದವು. ದಂಗೇಕೋರರಲ್ಲಿ ಸುಮಾರು ೨೫೦ ಜನರು ಹತರಾದರು. ಇನ್ನೂ ಅವರ ಸಮ್ಮುಖಗಳಲ್ಲಿ ಯುದ್ಧಕಾರ್ಯಗಳು ನಡೆಯುತ್ತಿವೆ

****

ವಿಲಾಯಿತಿಗೆ ಸೇರಿದ ಆಕ್ಸ್‌ಫರ್ಡ್ ವಿದ್ಯಾಶಾಲೆಯಲ್ಲಿ ಸಂಸ್ಕೃತ ವಿದ್ಯಾಬೋಧಕ ಕೆಲಸಕ್ಕೆ ಹಿಂದುಸ್ಥಾನದಿಂದ ಅಲ್ಲಿಗೆ ಹೋಗಿರುವ ರಾ|| ಮಾಧವ ಶಂಕರ ರಾವ್ ಎಂಬ ಪಂಡಿತರನ್ನು ನೇಮಕಮಾಡಿರುತ್ತಾರೆ.

****

ಲಂಡನ್ ಪಟ್ಟಣದಲ್ಲಿ ಹೊಸದಾಗಿ ಒಂದು ಕಂಪನಿ ಏರ್ಪಾಡಾಗಿದೆ. ಷೇರುಗಳ ಮೂಲಕ ೨೧ ಲಕ್ಷ ರೂಪಾಯಿ ಕೂಡಿಸಿದಾರೆ. ಈ ಕಂಪನಿಯವರು ಯಂತ್ರ ಮೊದಲಾದ ಸಲಕರಣೆಗಳನ್ನು ಒದಗಿಸಿಕೊಂಡು ಬಂದು ದೇಹಲಿ ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಯನ್ನಿಟ್ಟು, ಆ ಶಕ್ತಿಯಿಂದ ಪಟ್ಟಣಕ್ಕೆಲ್ಲಾ ರಾತ್ರಿ ಹೊತ್ತು ದೀಪ ಹಚ್ಚುವುದಾಗಿಯೂ ಟ್ರಾಂಗಾಡಿಗಳನ್ನು ಮೊದಲೆಯಿಂದ ಮೊದಲಿಗೆ ನಡಿಸುವುದಾಗಿಯೂ ಸರ್ಕಾರದಿಂದ ಕಂಟ್ರಾಕ್ಟು ವಹಿಸಿದಾರೆ. ಇದರಲ್ಲಿ ಅವರಿಗೆ ತುಂಬಾ ಲಾಭ ಬರುತ್ತೆನ್ನುವುದಕ್ಕೆ ಸಂಶಯವಿಲ್ಲ.

****

ಲಂಡನ್ ಪಟ್ಟಣದಲ್ಲಿ ಪುರಾಧ್ಯಕ್ಷರು ಪ್ರಜೆಗಳ ಉಪಯೋಗಕ್ಕಾಗಿ ನಾಲ್ಕು ಭಾರೀ ಮಾರ್ಕೆಟ್ಟುಗಳನ್ನು ಮೂರು ಕೋಟಿ ರೂಪಾಯಿ ವೆಚ್ಚಿಸಿ ಕಟ್ಟಿಸಿದಾರೆ. ಅವುಗಳಲ್ಲಿ ೧೦ ಸಹಸ್ರ ಜನರು ನೌಕರರಾಗಿರುವರು. ಈ ಮಾರ್ಕೆಟ್ಟುಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ದೊಡ್ಡ ಮನುಷ್ಯರ ಮೂರು ಸಂಘಗಳಿರುವವು. ಈ ಪೈಕಿ ದೊಡ್ಡ ಮಾರ್ಕೆಟ್ಟಿನಲ್ಲಿ ಬಿಕರಿಗೆ ಇಟ್ಟಿರತಕ್ಕ ಪದಾರ್ಥಗಳೊಳಗೆ ಶೇಕಡಾ ೭೫ ರಷ್ಟು ಅಮೇರಿಕದಿಂದಲೂ ಅರ್ಜೆಂಟೈನಿಂದಲೂ, ೨೩ ರಷ್ಟು ಆಸ್ಟ್ರೇಲಿಯಾದಿಂದಲೂ, ೧೪ ರಷ್ಟು ಇತರ ಪರದೇಶಗಳಿಂದಲೂ ಬರುವವು. ವಿಲಾಯಿತಿಯ ಪದಾರ್ಥಗಳು ಶೇಕಡಾ ೨೧ ರಷ್ಟು ಮಾತ್ರ ಅಲ್ಲಿ ಬಂದು ಬಿಕರಿ ಆಗುತ್ತಿವೆ

****

ಲಂಡನ್ ಪಟ್ಟಣವು ಪ್ರಪಂಚದಲ್ಲೆಲ್ಲಾ ಮೊದಲನೇ ನಗರವೆಂದು ಕೀರ್ತಿ ಪಡೆದಿರುವುದು. ಈ ಹೆಸರಿಗೆ ತಕ್ಕ ಹಾಗೆ ಆ ಪಟ್ಟಣದ ಜಮಾಖರ್ಚು ಇರುವುದು. ೧೯೦೪—೦೫ ನೇ ಸಾಲಿನಲ್ಲಿ ೧೮ ಕೋಟಿಯ ೩೭ ಲಕ್ಷ ರೂಪಾಯಿ ಉತ್ಪತ್ತಿಯಾಯಿತು; ೧೯ ಕೋಟಿ ೦೫ ಲಕ್ಷ ರೂಪಾಯಿ ಖರ್ಚಾಯಿತು. ಆದ್ದರಿಂದ ಖರ್ಚಿಗೆ ಸಾಲದೇ ಬಂದ ಹಣವನ್ನು ಹಿಂದಣ ವರುಷಗಳ ಶಿಲ್ಕಿನಲ್ಲಿ ಕೊಡುವರು. ಆ ಸ್ಥಿತಿ ಪ್ರಜೆಗಳ ಮಕ್ಕಳ ವಿದ್ಯಾಭ್ಯಾಸ ಒಂದಕ್ಕೇ ಕಳೆದ ವರುಷ ೩ ಕೋಟಿ ರೂಪಾಯಿ ಖರ್ಚು ಮಾಡಿದಾರೆ. ಬರುವ ವರುಷ ಪಿಕ್ಕಾಡಿಲಿ ಎಂಬ ಭಾಗದ ರಸ್ತೆಯನ್ನು ವಿಸ್ತಾರ ಮಾಡುವುದಕ್ಕೆ ೬|| ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ತೀರ್ಮಾನಿಸಿರುತ್ತಾರೆ

****

ದಕ್ಷಿಣ ಆಫ್ರಿಕದ ಗಣಿಗಳಲ್ಲಿ ಕೂಲಿಮಾಡುತ್ತಿರುವ ಚೀನೀಯವರ ಪೈಕಿ ಇಷ್ಟಪಡುವವರನ್ನು ವಾಪಸು ಚೀಣಾಕ್ಕೆ ಕಳುಹಿಸಬಹುದೆಂದು ಇಂಗ್ಲಿಷ್ ಗವರ್ನಮೆಂಟಿನವರು ನೋಟೀಸುಗಳನ್ನು ಬರೆಸಿ ಬಹಿರಂಗ ಸ್ಥಳಗಳಲ್ಲೆಲ್ಲಾ ಅಂಟಿಸಿದರು. ಇದನ್ನು ನೋಡಿ ಅಲ್ಲಿನ ಗಣಿಗಳ ಕಂಪನಿಯವರು ಸರ್ಕಾರದವರ ಮೇಲೆ ಸಿಟ್ಟುಗೊಂಡು, ಚೀನೀಯವರನ್ನು ವಾಪಸು ಕಳುಹಿಸುವುದರಿಂದ ಸುಮಾರು ೩ ೪ ಸಾವಿರ ಯೂರೋಪ್ಯರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಹೋಗುವುದೆಂದು ಅಲ್ಲಿನ ವೈಸ್‌ರಾಯಿಯವರಲ್ಲಿ ಅರಿಕೆಮಾಡಿಕೊಂಡರು. ಇದಲ್ಲದೆ ಸರ್ಕಾರದವರು ಪ್ರಕಟಿಸಿದ ನೋಟೀಸಿನಿಂದ ಕಂಪನಿಯವರಿಗೆ ನಷ್ಟವಾಗುತ್ತೆಂದು ಒಂದು ಮೊಕದ್ದಮೆಯನ್ನು ಹೂಡಿದರು. ಜಡ್ಜಿಗಳು ಈ ಮೊಕದ್ದಮೆಯನ್ನು ದರ್ಯಾಫ್ತುಮಾಡಿ, ಸರ್ಕಾರದವರಿಗೆ ಅಂಥಾ ಅಪ್ಪಣೆಕೊಡುವುದಕ್ಕೆ ಅಧಿಕಾರವಿರುವುದಾಗಿ ತೀರ್ಮಾನಿಸಿರುತ್ತಾರೆ.

****

ಇಂಗ್ಲೆಂಡಿಗೆ ಸೇರಿದ ಉತ್ತರಭಾಗದ ಕೊಲಂಬಿಯಾದಲ್ಲಿ ಇಂಡಿಯರೆಂಬ ಸ್ವದೇಶಿಗಳು ತಮ್ಮ ಜನರಲ್ಲಿ ಬೆಳ್ಳಗಿರುವಂಥಾ ಹೆಣ್ಣುಮಕ್ಕಳನ್ನೂ ಇತರ ಬಂಧುವರ್ಗದವರನ್ನೂ ಕ್ರಯಕ್ಕೆ ಮಾರುತ್ತಾ ಇದಾರೆ. ಇಂಥಾ ಗುಲಾಮರ ವ್ಯಾಪಾರವನ್ನು ನಿಲ್ಲಿಸಬೇಕೆಂದು ಕೆನಡಾ ಸರ್ಕಾರದವರು ಗೊತ್ತುಮಾಡಿಕೊಂಡಿರುವರು. ಆಲ್ಬರ್ಟ್‌ಕೊಲ್ಲಿಯ ಏಜಂಟನು—ಈ ಇಂಡಿಯನ್ ಜನರು ತಮ್ಮ ಹೆಣ್ಣುಮಕ್ಕಳನ್ನೂ ಅಕ್ಕತಂಗಿಯರನ್ನೂ ದಾಯಾದಿಗಳನ್ನೂ ಗುಲಾಮಗೆಲಸಕ್ಕೆ ಮಾರಿಬಿಡುತ್ತಾರೆಂತಲೂ ಒಂದು ಸಂದರ್ಭದಲ್ಲಿ ಮಗನಾದವನು ತನ್ನ ಮುದಿತಾಯಿಯನ್ನೇ ಸ್ವಪ್ರವೃತ್ತಿಗಾಗಿ ಕ್ರಯಕ್ಕೆ ಮಾರಿರುತ್ತಾನೆಂತಲೂ ಹೇಳಿದನು. ಇದುವರೆಗೆ ಈ ಸಂಗತಿಯು ಪ್ರಕಾಶಕ್ಕೆ ಬಂದಿರಲಿಲ್ಲ. ಇಂಗ್ಲಿಷ್ ಸರ್ಕಾರದವರು ಅದನ್ನು ನಿಲ್ಲಿಸುವ ಪ್ರಯತ್ನ ಮಾಡಿ, ಅವಶ್ಯವಿದ್ದಲ್ಲಿ ಕಠಿಣತರವಾದ ನಿರ್ಬಂಧವನ್ನಾದರೂ ಕಲ್ಪಿಸಿ ಆ ದುಷ್ಟ ಪದ್ಧತಿಯನ್ನು ತಪ್ಪಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

****

ರಷ್ಯಾ ರಾಜ್ಯದಲ್ಲಿ ಫಾದರ್ ಗೇಪನ್ ಎಂಬುವನು ಅಂತರಂಗದಲ್ಲೇ ಪೋಲೀಸಿನವರ ಸಂಗಡ ಮಾತನಾಡಿಕೊಂಡು ಬಂದು, ತಾನು ಪ್ರಜೆಗಳ ಪಕ್ಷಪಾತಿ ಎಂಬುದಾಗಿ ಹೊಗಳಿಸಿಕೊಳ್ಳುತ್ತಾ, ಸಾಮಾನ್ಯಜನರನ್ನು ಮರುಳುಮಾಡಿ, ಸರ್ಕಾರದವರಿಗೆ ವಿರೋಧವಾದ ಕಾರ್ಯಗಳನ್ನು ನಡಿಸುತ್ತಾ, ಪ್ರಜೆಗಳ ಪೈಕಿ ಅಧಿಕಾರಿಗಳನ್ನು ಕೊಲ್ಲಬೇಕೆಂದು ಫಿತೂರಿ ಮಾಡುತ್ತಿದ್ದವರನ್ನು ಪೋಲೀಸಿನವರಿಗೆ ತೋರಿಸಿಕೊಡುತ್ತಿದ್ದನು. ಅಂಥಾ ಕೊಲೆಗಾರರ ಗುಂಪಿಗೆ ಹೋಗಿ—ನಿಮಗೆ ಲಕ್ಷಾಂತರ ದ್ರವ್ಯ ಸಿಕ್ಕುವಂತೆ ಮಾಡುತ್ತೇನೆ. ನಿಮ್ಮಲ್ಲಿ ದುಷ್ಟರಾದವರು ಪೋಲೀಸಿನವರ ವಶಕ್ಕೆ ಸಿಕ್ಕಿಬಿಡುವುದು ಮೇಲು. ಇಲ್ಲವಾದರೆ ಅವರು ಕೊಲೆಗಾರರನ್ನು ಹಿಡಿಯುವುದಕ್ಕಾಗದೆ ನಿರಪರಾಧಿಗಳನ್ನು ಹಿಡಿದು ಘೋರವಾಗಿ ಶಿಕ್ಷಿಸುತ್ತಾರೆ. ಅದಕ್ಕಿಂತಲೂ ದುಷ್ಟರನ್ನು ಪೋಲೀಸಿನವರಿಗೆ ಒಪ್ಪಿಸಿಬಿಡುವುದೇ ಲೇಸೆಂದು ಒಂದು ಸಂದರ್ಭದಲ್ಲಿ ಹೇಳಿದನು. ಈ ಕೂಡಲೇ ನಾಲ್ಕಾರು ಮಂದಿ ಈ ಗೋಮುಖವ್ಯಾಘ್ರನನ್ನು ಸಂಹರಿಸಬೇಕೆಂದು ಅವನನ್ನು ಹಿಡಿದು ಕೆಡವಿಕೊಂಡು ಚಿತ್ರಹಿಂಸೆಗೆ ಗುರಿ ಮಾಡಿ, ಅವನ ಬಾಯಿಂದಲೇ ಅವನ ಮೋಸಕೃತ್ಯವನ್ನು ಹೇಳಿಸಿ, ಕತ್ತು ಹಿಸುಕಿ ಪ್ರಾಣ ತೆಗೆದುಬಿಟ್ಟರು.

****

ಸ್ಪೇಯಿನ್ ರಾಜ್ಯದ ದೊರೆಯಾದ ಅಲ್‌ಫೋನ್ಸೋರವರು ವಿಲಾಯಿತಿಯ ದೊರೆಯವರ ಸೋದರಸೊಸೆಯಾದ ಪ್ರಿನ್‌ಸೆಸ್ ಈನಾರವರನ್ನು ವರಿಸಿ, ಮೊನ್ನೆ ಗುರುವಾರ ವಿವಾಹ ಮಾಡಿಕೊಂಡರು. ಈ ವಿವಾಹಕ್ಕೆ ವಿಲಾಯಿತಿ ರಾಜ್ಯದ ಯುವರಾಜರವರು ಪತ್ನಿಸಹಿತ ದಯಮಾಡಿದಾರೆ. ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ನೂತನರಾಜದಂಪತಿಗಳು ದೇವಸ್ಥಾನಕ್ಕೆ ಹೋಗಿ ವಿವಾಹಮಾಡಿಕೊಂಡು, ದಿವ್ಯವಾದ ಸಾರೋಟುಗಳಲ್ಲಿ ಕುಳಿತು, ಸಮಸ್ತ ಪರಿವಾರ ಸಹಿತ ಮೆರವಣಿಗೆ ಮಾಡಿಕೊಂಡು, ಅರಮನೆಗೆ ದಯಮಾಡುತ್ತಿದ್ದಾಗ ಎರಡು ಫರ್ಲಾಂಗ್ ದೂರದಲ್ಲಿ ಒಂದು ಮನೆಯ ಮಾಳಿಗೆಯಿಂದ ದುಷ್ಟರ್ಯಾರೋ ಮರಣಕರವಾದ ಮದ್ದಿನ ಗುಂಡನ್ನು ಹೂದಾಣಿಯಲ್ಲಿಟ್ಟು ಸುತ್ತಿ, ರಾಜದಂಪತಿಗಳನ್ನು ಕೊಲ್ಲಬೇಕೆಂದು ಅವರ ಸಾರೋಟಿನ ಮೇಲೆ ಎಸೆದರು. ಗ್ರಹವಶಾತ್ತು ಅದು ಗಾಡಿಗೂ ಗಾಡಿ ಕುದುರೆಗಳಿಗೂ ನಡುವೆ ಬಿದ್ದು ಒಡೆದು ಅನಾಹುತವಾಯಿತು. ಕುದುರೆಗಳೂ ಗಾಡಿಯೂ ನಾಶವಾದವು. ರಾಜದಂಪತಿಗಳಿಗೆ ಯಾವ ಅಪಾಯವೂ ಸಂಭವಿಸಲಿಲ್ಲ. ಅವರ ಗಂಡವು ಪಾರಾಯಿತು. ಈ ಅನಾಹುತಕ್ಕೆ ಸಿಕ್ಕಿದ್ದ ಒಂಬತ್ತು ಜನರು ಅಲ್ಲೇ ಮೃತಪಟ್ಟರು. ಒಬ್ಬ ದೊಡ್ಡ ಮನುಷ್ಯನಿಗೆ ಗಾಯಗಳಾದವು. ರಾಜದಂಪತಿಗಳನ್ನು ಗಾಡಿಯಲ್ಲಿ ಕೂರಿಸಿ ಸವಾರನೇ ಗಾಡಿಯನ್ನು ಎಳೆದುಕೊಂಡು ಹೋಗಿ ಅರಮನೆಯನ್ನು ತಲಪಿದರು. ಅಪರಿಚಿತರು ರಾಜವರ್ಗದವರೊಡನೆ ಕೂಡಿ, ಕಣ್ಣೀರು ಹಾಕುತ್ತಾ ಅರಮನೆಯ ಅಂತಃಪುರವನ್ನು ಹತ್ತಿ ಹೋದರೆಂದು ತಂತೀವರ್ತಮಾನ ಬಂದಿದೆ.

****

ರಷ್ಯಾ ರಾಜ್ಯದ ಜಾರ್ ಚಕ್ರವರ್ತಿಯವರು ಪ್ರಜೆಗಳ ಇಷ್ಟಾನುಸಾರ ರಾಜ್ಯಭಾರ ಮಾಡಬೇಕೆಂದು ಈಚೆಗೆ ತೀರ್ಮಾನ ಮಾಡಿ, ಅದಕ್ಕಾಗಿ ಡ್ಯೂಮಾ ಎಂಬೋದು ಪ್ರಜಾಪ್ರತಿನಿಧಿ ಸಮಾಜವನ್ನು ಸ್ಥಾಪಿಸಿಕೊಂಡಿದಾರಷ್ಟೆ. ಈ ಪ್ರತಿನಿಧಿ ಸಭೆಯಲ್ಲಿ ಪ್ರಜೆಗಳು ಚುನಾಯಿಸಿದ ೫೦೦ ಮೆಂಬರುಗಳು ಇರತಕ್ಕದ್ದೆಂದು ಗೊತ್ತಾದ ಪ್ರಕಾರ ಪ್ರಜೆಗಳು ತಮ್ಮಲ್ಲಿ ಮುಖಂಡರಾದವರನ್ನು ಮೆಂಬರಾಗಿ ಚುನಾಯಿಸಿ ಸಭೆಗೆ ಕಳುಹಿಸಿದರು. ಕಳೆದ ತಿಂಗಳ ೧೦ ನೆ ತಾರೀಖಿನ ದಿನ ಚಕ್ರವರ್ತಿಯವರೇ ಸ್ವತಃ ದಯಮಾಡಿ ಸಭೆಯನ್ನು ಸ್ಥಾಪಿಸಿ, ಪ್ರಾರಂಭ ಮಾಡಿದರು. ಆಗ್ಗೆ ಅವರು ಪ್ರಜಾಪ್ರತಿನಿಧಿಗಳನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ—ಹಿರಿಯರಿಂದ ಪಾರಂಪರ್ಯವಾಗಿ ಬಂದ ಈ ರಾಜ್ಯಭಾರನಿರ್ವಾಹಕಾರ್ಯವನ್ನು ದಯಾಪೂರಿತನಾದ ಭಗವಂತನು ನನಗೆ ವಹಿಸಿ, ಪ್ರಜಾಪರಿಪಾಲನೆಯನ್ನೂ ಕಟ್ಟಳೆ ಆಚಾರ ಕಾನೂನುಗಳ ನಿರೂಪಣವನ್ನೂ ಮಾಡುವುದರಲ್ಲಿ ಪ್ರಜಾಪ್ರತಿನಿಧಿಸಮಾಜವನ್ನು ಏರ್ಪಡಿಸಬೇಕೆಂದು ನನ್ನಲ್ಲಿ ಪ್ರೇರೇಪಣೆಯನ್ನುಂಟು ಮಾಡಿರುವನು. ಇನ್ನು ಮುಂದೆ ರಷ್ಯಾ ರಾಜ್ಯವು ಶ್ರೇಯೋಭಿವೃದ್ಧಿಯನ್ನೈದುವುದೆಂಬ ಭಕ್ತಿ ಪ್ರೀತಿ ಉತ್ಸಾಹಪೂರಿತನಾಗಿ, ನನ್ನ ಪ್ರಜೆಗಳಲ್ಲಿ ಉತ್ತಮೋತ್ತಮರೆನಿಸಿಕೊಂಡಂಥಾ ನಿಮ್ಮಗಳನ್ನು ಈ ದಿನ ಸಂಧಿಸಿ, ನಿಮಗೆ ಒಳ್ಳೇದಾಗಲೆಂದು ಹಾರೈಸುತ್ತೇನೆ. ಇನ್ನು ಮುಂದೆ ನೀವು ಮಾಡತಕ್ಕ ಕಾರ್ಯಗಳು ಬಹಳ ಕಠಿನವಾದವು, ತುಂಬಾ ತೊಡಕಾಗಿರುವವು. ಆದರೂ ಪ್ರಜಾಪ್ರೀತಿ ವಾತ್ಸಲ್ಯಪೂರಿತರಾಗಿ ನೀವುಗಳೆಲ್ಲಾ ಏಕೀಭವಿಸಿ ಕಾರ್ಯಗಳನ್ನು ಮಾಡುತ್ತೀರೆಂದು ನಿರೀಕ್ಷಿಸುತ್ತೇನೆ. ನಾನು ನಿಮ್ಮ ಸಭೆಗೆ ವಹಿಸಿರುವ ಅಧಿಕಾರಗಳನ್ನೂ ಹಕ್ಕುಬಾಧ್ಯತೆಗಳನ್ನೂ ಸ್ವಲ್ಪವೂ ತಪ್ಪದಂತೆ ಕಾಪಾಡಿಕೊಂಡು ಬರುವೆನು. ಅದೇ ಪ್ರಕಾರ ನೀವುಗಳು ನಿಮ್ಮ ಹದ್ದು ಮೀರದಂತೆ, ನಿಮ್ಮ ಸರ್ವಸ್ವವನ್ನೂ ಪ್ರಜಾ ಏಳಿಗೆಗೆ ವಿನಿಯೋಗಿಸುತ್ತಾ, ರೈತಪ್ರಜೆಗಳ ಕಷ್ಟಗಳನ್ನು ನ್ಯಾಯವಾದ ರೀತಿಯಲ್ಲಿ ನಿವಾರಣೆಮಾಡುವುದಕ್ಕೆ ನನಗೆ ಯೋಗ್ಯವಾದ ಸಲಹೆಗಳನ್ನು ಕೊಡುತ್ತಾ ಬರಬೇಕು. ರಾಜ್ಯದಲ್ಲಿ ಕ್ಷೇಮಾಭಿವೃದ್ಧಿಗಳು ನೆಲೆಗೊಳ್ಳುವುದಕ್ಕೆ ಪ್ರಜೆಗಳಿಗೆ ಸಂಪೂರ್ಣಸ್ವಾತಂತ್ರ್ಯವೂ ಶ್ರೇಷ್ಠವಾದ ಕಾನೂನುಗಳೂ ಅವಶ್ಯವಾದವುಗಳೆಂದು ನೀವು ತಿಳಿಯಬೇಕು. ನನ್ನ ಪ್ರಜೆಗಳು ಸುಖಸಂತೋಷಗಳಿಂದ ಕೂಡಿದವರಾಗಿರಬೇಕೆಂಬುವುದೇ ನನ್ನ ಮುಖ್ಯ ಉದ್ದೇಶವಾಗಿದೆ. ದೇವರು ನಮ್ಮ ಈ ಉದ್ದೇಶವನ್ನು ಸಾರ್ಥಕಪಡಿಸಿ, ನನ್ನನ್ನೂ ನಿಮ್ಮ ಈ ಸಭೆಯನ್ನೂ ಈ ಚಕ್ರಾಧಿಪತ್ಯವನ್ನೂ ಚನ್ನಾಗಿ ಆಶೀರ್ವದಿಸಿ ಕಾಪಾಡಲಿ ಎಂಬುದೇ.

ಒಕ್ಕಲಿಗರ ಸಂಘವು.

[ಬರೆದು ಬಂದದ್ದು.]

ನಮ್ಮ ದೇಶದಲ್ಲಿ ಒಕ್ಕಲಿಗರು ಇತರ ವರ್ಣಾಶ್ರಮದವರಿಗಿಂತಲೂ ಅಧಿಕ ಸಂಖ್ಯೆಯುಳ್ಳವರಾಗಿದ್ದರೂ ವಿದ್ಯಾವಿಹೀನತೆಯಿಂದ ಏಳಿಗೆಗೆ ಬಾರದಿರುವದನ್ನು ನೋಡಿ, ಬೆಂಗಳೂರಿನ ಮೆ|| ಕಂಟ್ರಾಕ್ಟರ್ ಪಿ. ಪೈಯಣ್ಣನವರು, ಕಂಟ್ರಾಕ್ಟರ್ ಮೆ|| ತಾತಪ್ಪ ಮೇಸ್ತ್ರಿಗಳು, ಕೋಲಾರ್ ಚಿನ್ನದಗಣಿ ಕಂಟ್ರಾಕ್ಟರ್ ಮೆ|| ಮಾರಪ್ಪನವರು, ಬ್ಯಾರಿಸ್ಟರ್ ನಾಗಪ್ಪನವರು, ಡಾಕ್ಟರ್ ಸಿ. ನಂಜಪ್ಪ, ಎಂ. ಬಿ., ಸಿ. ಎಂ., ಯವರು, ಮೆ|| ಎಂ. ಸುಬ್ಬಯ್ಯ, ಬಿ. ಎ. ಯವರು, ಅಮಲ್ದಾರ್ ಮೆ|| ಚನ್ನಿಗಪ್ಪ, ಬಿ. ಎ. ಯವರು, ಮೆ|| ಕ್ಯಾಮೇಗೌಡರು, ಮೆ|| ಸಿ. ಲಕ್ಷ್ಮಣಗೌಡ, ಬಿ. ಎ., ಬಿ. ಎಲ್. ಯವರು, ಮೆ|| ಬಿ. ಕೆ. ರಾಮೈಯ್ಯ, ಬಿ. ಎ. ಯವರು, ರೆಸಿಡೆಂಟ್ ಕೋರ್ಟು ರಿಜಿಸ್ಟ್ರಾರ್ ಮೆ|| ಚನ್ನಯ್ಯನವರು, ಮೆ|| ಬಿ. ಹನುಮಂತಪ್ಪನವರು, ಈ ಮುಂತಾದ ಕೆಲವು ದೊಡ್ಡ ಮನುಷ್ಯರು ಈ ಅವಸ್ಥೆಯನ್ನು ಹೋಗಲಾಡಿಸಲು ಬೆಂಗಳೂರು ಮತ್ತು ಅಜೂಬಾಜೂ ಗ್ರಾಮಗಳ ದೊಡ್ಡ ಮನುಷ್ಯರನ್ನು ಸೇರಿಸಿ, ಏಪ್ರಿಲ್ ೨೯ ನೇ ತಾ. ಒಂದು ಸಭೆ ಸೇರಿಸಿದರು. ಆಗ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ ಒಕ್ಕಲಿಗರ ವಿದ್ಯಾಭಿವೃದ್ಧಿಯೇ ಮುಖ್ಯ ಏಳಿಗೆಗೆ ಕಾರಣವೆಂದು ಚರ್ಚಿಸಿ, ಅದಕ್ಕೋಸ್ಕರ ಬೆಂಗಳೂರಿನಲ್ಲಿ ಒಂದು ವಿದ್ಯಾರ್ಥಿನಿಲಯವನ್ನು (ಸ್ಟೂಡೆಂಟ್ಸ್ ಹೋಂ) ಒಕ್ಕಲಿಗರ ಹುಡುಗರಿಗೆ ಮಾತ್ರವೇ ಕಟ್ಟಿಸಬೇಕೆಂದನ್ನೂ, ಅದಕ್ಕೆ ಬೇಕಾದ ಫಂಡಿಗೋಸ್ಕರ ಅಕ್ಟೋಬರ್ ತಿಂಗಳಿನಲ್ಲಿ ಮೈಸೂರು ದೇಶದ ಮತ್ತು ಇತರ ಅಜೂಬಾಜೂ ದೇಶಗಳ ಒಕ್ಕಲಿಗರ ದೊಡ್ಡ ಮನುಷ್ಯರನ್ನು ಬರಮಾಡಿಸಿಕೊಂಡು ಒಂದು ದೊಡ್ಡ ಸಮಾಜ ಕೂಡಬೇಕೆಂದನ್ನೂ ತೀರ್ಮಾನಿಸಿದರು. ಆ ದೊಡ್ಡ ಸಭೆಗೆ ಬೇಕಾಗುವ ಖರ್ಚುಗಳಿಗೋಸ್ಕರ ಆಗಲೇ ಚಂದಾಪಟ್ಟಿ ಹಾಕಿ, ಹಾಜರಿದ್ದ ದೊಡ್ಡ ಮನುಷ್ಯರೆಲ್ಲರೂ ೨,೦೦೦ ರೂಪಾಯಿ ಚಂದಾ ಹಾಕಿದರು. ಆ ಸಮಾಜಕ್ಕೋಸ್ಕರ ಬೇಕಾದ ಏರ್ಪಾಡುಗಳನ್ನು ಮಾಡಲೋಸುಗ ಈ ಕೆಳಗೆ ಕಂಡ ದೊಡ್ಡ ಮನುಷ್ಯರನ್ನು ಕಮಿಟಿ ಮೆಂಬರುಗಳನ್ನಾಗಿ ಚುನಾಯಿಸಿರುತ್ತಾರೆ— ಮೆ|| ಗಳಾದ ಚನ್ನೈಯ್ಯನವರು, ಬಿ. ನಾಗಪ್ಪನವರು, ತಾತಪ್ಪ ಮೇಸ್ತ್ರಿಗಳು, ಡಾಕ್ಟರ್ ಸಿ. ನಂಜಪ್ಪನವರು, ಸಿ. ಲಕ್ಷ್ಮಣಗೌಡರು, ಬಿ. ಕೆಂಪಣ್ಣನವರು, ಮಾರಪ್ಪನವರು, ಪಟೇಲ್ ಪುಟ್ಟಯ್ಯನವರು, ಚಿಕ್ಕಗುರುವಾರೆಡ್ಡಿಯವರು, ರಾಮನಾಯಕರು, ಜಮೀನ್ದಾರ್ ನಾಗಪ್ಪನವರು, ಜಮೀನ್ದಾರ್ ವೀರಪ್ಪನವರು, ಬಿ. ಹನುಮಂತಪ್ಪನವರು, ಚಿಕ್ಕವೀರಪ್ಪನವರು, ಪಟೇಲ್ ನಂಜುಂಡಪ್ಪನವರು. ಈ ಮೆಂಬರುಗಳು ಪ್ರತಿವಾರವೂ ಸಭೆಸೇರಿ ದೊಡ್ಡ ಸಮಾಜಕ್ಕೋಸ್ಕರ ಏರ್ಪಾಡುಗಳನ್ನು ಮಾಡುತ್ತಿದಾರೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ೨೬ ನೆ ತಾ. ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಗಟ್ಲೆಯ ಮೀಟಿಂಗನ್ನು ನಡಿಸಿದರು. ಏಪ್ರಿಲ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂಪಾಯಿ ೧೨,೩೧೮—೦—೦ ಜಮಾ ಆಯಿತು; ರೂ ೧೦,೫೧೬—೧—೧ ಖರ್ಚಾಯಿತು. ಆ ತಿಂಗಳಲ್ಲಿ ಜನನ ೧೧೧, ಮರಣ—ಸಿಡುಬು ೩, ಜ್ವರ ೧೧, ಇತರ ಕಾರಣಗಳು ೧೦೩, ಒಟ್ಟು ೧೨೬. ಮ್ಯುನಿಸಿಪಲ್ ಜಮಾ ಖರ್ಚನ್ನು ಆಡಿಟ್ ಮಾಡಿದ ಆಡಿಟರುಗಳು—ಆಕ್ಟ್ರಾಯಿ ಉತ್ಪತ್ತಿಯಲ್ಲಿ ಪ್ರತಿ ಒಂದು ಬಾಬಿನ ಉತ್ಪತ್ತಿಯೂ ಕಡಿಮೆಯಾಗುತ್ತಾ ಬಂದಿದೆ ಎಂದು ರಿಪೋರ್ಟು ಬರೆದಿದ್ದರು. ಇದಕ್ಕೆ ಆಕ್ಟ್ರಾಯಿ ದರೋಗರು—ಜನರು ಸುಂಕದ ಸಾಮಾನುಗಳನ್ನು ಊರೊಳಕ್ಕೆ ತರದೆ ಸುತ್ತುಮುತ್ತಲೂ ಗ್ರಾಮಾಂತರಗಳಲ್ಲಿಟ್ಟುಕೊಳ್ಳುತ್ತಾರೆ. ಇದರಿಂದ ಆಕ್ಟ್ರಾಯಿ ಉತ್ಪತ್ತಿ ಕಡಿಮೆಯಾಗಿದೆ. ಇಂಥಾ ಪದ್ಧತಿಯನ್ನು ತಪ್ಪಿಸಿ ಪೂರ್ವದಲ್ಲಿದ್ದಂತೆ ವ್ಯಾಪಾರರು ಸಮಸ್ತ ಸರಕನ್ನೂ ಆಕ್ಟ್ರಾಯಿ ಆಫೀಸಿಗೇ ಸೀದಾ ತಂದಿಡುವಂತೆಯೂ ಗ್ರಾಮಾಂತರಗಳಲ್ಲಿ ಇಡದಂತೆಯೂ ಮಾಡಿದರೆ ಒಳ್ಳೇದು ಎಂದು ಸಮಾಧಾನ ಬರೆದಿದ್ದರು. ಮೆಂಬರುಗಳು ಈ ಕಾರಣವು ಸಮರ್ಪಕವಾದದ್ದೆಂದು ಒಪ್ಪಿ ದರೋಗರು ಹೇಳುವಂತೆ ಪೂರ್ವಪದ್ಧತಿಯನ್ನೇ ಜಾರಿಗೆ ತರಬೇಕೆಂದು ಗೊತ್ತು ಮಾಡಿದರು.

ಮೈಸೂರು ಪಟ್ಟಣದ ಯಾವ ಮೊಹಲ್ಲೆಯಲ್ಲಾಗಲಿ ಸಿಡುಬಿನ ಅವಾಂತ್ರ ಹೆಚ್ಚಾದ ಪಕ್ಷದಲ್ಲಿ ಅಂಥಾ ಮೊಹಲ್ಲೆಯಲ್ಲಿರುವ ಮಕ್ಕಳಿಗೆಲ್ಲಾ ಕ್ರಮವಾಗಿಯೂ ಬಲವಂತವಾಗಿಯೂ ಸರ್ಕಾರದಿಂದ ಸಿಡುಬು ಹಾಕಿಸುವ ಏರ್ಪಾಡು ಮಾಡಬಾರದೇ ಎಂದು ಸರ್ಕಾರದವರು ಬೋರ್ಡಿನವರನ್ನು ಕೇಳಿದ್ದರು. ಮೆಂಬರುಗಳು ಇದು ಅವಶ್ಯವಾಗಿ ಮಾಡತಕ್ಕದ್ದೆಂದು ತೀರ್ಮಾನಮಾಡಿದಾರೆ

ಟವುನ್ ಉತ್ತರಪಾರ್ಶ್ವದಲ್ಲಿರುವ ಪೂರ್ಣಯ್ಯನವರ ನಾಲೆಯನ್ನು ಮುಚ್ಚಿಸುವುದು ಅವಶ್ಯವೆಂತಲೂ ಈ ಕೆಲಸವನ್ನು ಮಾಡಿಸಿದರೆ ಬಡಬಗ್ಗರಿಗೆ ಜೀವನಕ್ಕೂ ಮಾರ್ಗವಾಗುತ್ತೆಂತಲೂ ಬೋರ್ಡಿನವರು ಹಿಂದೆಯೇ ಬರೆದಿದ್ದರು. ಸರ್ಕಾರದವರು ಈ ವಿಚಾರವನ್ನು ಟ್ರಸ್ಟ್ ಬೋರ್ಡಿನವರು ಮುಂದಿನ ವರುಷ ಮಾಡಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ

ರಾಜಧಾನಿಯ ದಕ್ಷಿಣಭಾಗದಲ್ಲಿರುವ ವಾಣೀವಿಲಾಸ್ ರೋಡ್ ಎಂಬ ನೂರಡಿ ರಸ್ತೆಯ ದಕ್ಷಿಣಪಾರ್ಶ್ವವೆಲ್ಲಾ ನಿರ್ಮಲವಾಗಿದೆ ಎಂತಲೂ, ಉತ್ತರಪಾರ್ಶ್ವದಲ್ಲಿ ಚಿಕ್ಕ ಹೊಲಗೇರಿ ಎಂಬ ಭಾಗವನ್ನು ತೆಗೆದು, ದೊಡ್ಡ ಹೊಲಗೇರಿ ಹತ್ತಿರ ಹಾಕಿದರೆ ತುಂಬಾ ಅನುಕೂಲವೆಂತಲೂ, ಇದಕ್ಕೆ ಸುಮಾರು ೩೫ ಸಣ್ಣ ಜೋಪಡಿಗಳನ್ನು ಪ್ರತಿಫಲ ಕೊಟ್ಟು ಕೆಡವಬೇಕಾಗಿದೆ ಎಂತಲೂ ವೈಸ್ ಪ್ರೆಸಿಡೆಂಟರು ಸೂಚಿಸಿದರು. ಮೆಂಬರುಗಳು ಸ್ವಲ್ಪಹೊತ್ತು ಚರ್ಚೆಮಾಡಿ, ಆ ಮನೆಗಳನ್ನು ತೆಗೆದುಬಿಡುವುದೇ ಕ್ಷೇಮಕರವೆಂದು ತೀರ್ಮಾನಿಸಿದರು.

ರಾಜಧಾನಿಯಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ಈದ್ಗಾ ಬಡಾವಣೆಯಲ್ಲಿ ಕಟ್ಟಿರುವ ಹೆಂಗಸರ ಆಸ್ಪತ್ರೆಗಾಗಿ ಸರ್ಕಾರದವರು ೨೫,೦೦೦ ರೂಪಾಯಿಯನ್ನು ಕೊಟ್ಟಿದ್ದೇವೆಂದು ತಿಳಿಸಿದರು. ಈ ಪತ್ರವನ್ನು ಮೆಂಬರುಗಳು ಓದಿ ರೆಕಾರ್ಡು ಮಾಡಿಕೊಂಡರು

ಮ್ಯುನಿಸಿಪಲ್ ತೆರಿಗೆಗಳಲ್ಲಿ, ಸತ್ತು ಕೆಟ್ಟುಹೋದವರ ಮನೆಗಳಿಂದ ತೆರಿಗೆ ವಸೂಲಾಗುವುದಿಲ್ಲವೆಂದು ಮೊಹಲಾ ಕಮಿಷನರುಗಳೇ ಶಿಫಾರಸು ಮಾಡಿದ್ದರ ಮೇರೆ ಮೆಂಬರುಗಳೆಲ್ಲಾ ೧,೫೮೮ ಚಿಲ್ಲರೆ ರೂಪಾಯಿನ ಕಂದಾಯಗಳನ್ನು ರಿಮಿಷನ್ ಮಾಡಬಹುದೆಂದು ಒಪ್ಪಿಕೊಂಡಿದಾರೆ.

ಮಂಡಿ ಮೊಹಲ್ಲೆಯಲ್ಲಿ ಯುನಾನಿ ವೈದ್ಯಶಾಲೆಯನ್ನಿಟ್ಟಿರುವ ಮೆ|| ಮಹಮೂದ್ ಗೌಸ್ ಎಂಬ ಹಕೀಮರಿಗೆ ಈಗ ಮ್ಯುನಿಸಿಪಾಲಿಟಿಯಿಂದ ೨೫ ರೂಪಾಯಿ ಮಾಹೆಯಾನಾ ಗ್ರಾಂಟು ಸಲ್ಲುತ್ತಿದೆ. ಆ ಹಕೀಮರು ಅದು ಸಾಲದೆಂತಲೂ ಇನ್ನೂ ಸ್ವಲ್ಪ ಹೆಚ್ಚಾಗಿ ದ್ರವ್ಯಸಹಾಯ ಮಾಡಬೇಕೆಂತಲೂ ಅರ್ಜಿ ಬರೆದುಕೊಂಡಿದ್ದರು. ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಆ ಮೊಹಲ್ಲೆಯ ಮೆಂಬರೂ ಆ ವೈದ್ಯಶಾಲೆಯನ್ನು ನೋಡಿ ಬಂದಿದಾರೆ. ಜಾಸ್ತಿ ಮಾಡಿಕೊಡಬೇಕಾದದ್ದು ಅವಶ್ಯ.

ಏದು ಶಿಫಾರಸೂ ಮಾಡಿದರು ಮೆಂಬರುಗಳು ಈಗ ಮ್ಯುನಿಸಿಪಾಲಿಟಿಯಲ್ಲಿ ಹಣವಿಲ್ಲವಾದ್ದರಿಂದ ಸದ್ಯಕ್ಕೆ ಈ ವಿಷಯವನ್ನು ಚರ್ಚಿಸಬೇಕಾದದ್ದಿಲ್ಲವೆಂದು ತೀರ್ಮಾನಮಾಡಿದರು

ಮ್ಯುನಿಸಿಪಲ್ ಆಫೀಸಿನ ನೌಕರಮಾರ್ನೇರ ಪೈಕಿ ಒಬ್ಬರು ಇನೊಬ್ಬರ ಮೇಲೆ ದೂರುಹೇಳುವ ಸಂದರ್ಭದಲ್ಲಿ ಪ್ರಸಿಡೆಂಟರೂ ವೈಸ್ ಪ್ರಸಿಡೆಂಟರೂ ಅದನ್ನು ಯಾವರೀತಿ ತನಿಖೆಮಾಡಿ ತೀರ್ಮಾನಮಾಡುತ್ತರೋ, ಆ ದೂರು ಏನಾದ್ದೋ ಇದನ್ನೆಲ್ಲಾ ಮ್ಯುನಿಸಿಪಲ್ ಕಮಿಷನರು ತಿಳಿಯಬೇಕೆಂದು ಅಪೇಕ್ಷಿಸಿದರೆ ಪ್ರಸಿಡೆಂಟರು ಅವರಿಗೆ ತಿಳಿಸಬೇಕು, ಇದಕ್ಕೆ ಮ್ಯುನಿಸಿಪಲ್ ಕಾನೂನಿನ ಪ್ರಕಾರ ಮೆಂಬರಿಗೆ ಅಧಿಕಾರ ಉಂಟು ಎಂಬೀ ವಿಷಯವನ್ನು ಮೆ॥ ರಂಗೈಯ್ಯಂಗಾರ್ರೇ ಮುಂತಾದ ಮ್ಯುನಿಸಿಪಲ್ ಕಮಿಷನರು ಸೂಚಿಸಿದರು ಈ ಸಂಗತಿಯನ್ನು ವಿವರಿಸುವಾಗ್ಗೆ ಮೆ॥ ರಂಗೈಯ್ಯಂಗಾರು ಹೇಳಿದ್ದೇನೆಂದರೆ— ಮ್ಯುನಿಸಿಪಲ್ ಓವರ್ಸಿಯರವರು ಮ್ಯುನಿಸಿಪಲ್ ಇಂಜನಿಯರ ಮೇಲೆ ಏನೇನೋ ದೋಷಾರೋಪಣೆ ಮಾಡಿದರೆಂತಲೂ, ಮ್ಯುನಿಸಿಪಲ್ ನಿಗಾವಣೆ ಚನ್ನಾಗಿಲ್ಲವೆಂತಲೂ ಪತ್ರಿಕೆಗಳ ಮೂಲಕವೂ ಜನರ ಆಡಿಕೆಯಿಂದಲೂ ಗೊತ್ತಾಯಿತು ಆ ದೋಷಾರೋಪಣೆಯನ್ನು ಪ್ರೆಸಿಡೆಂಟರು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಬಹಿರಂಗವಾಗಿ ತನಿಖೆ ಮಾಡುವುದಾಗಿ ಮೊದಲು ವರ್ತಮಾನವಿತ್ತು ಅನಂತರ ಅಂತರಂಗದಲ್ಲೇ ವಿಚಾರಣೆಮಾಡಿ ತೀರ್ಮಾನಮಾಡಿದರೆಂದು ತಿಳಿಯಿತು ಕಳೆದ ಜನರಲ್ ಮೀಟಿಂಗಿನಲ್ಲಿ ಮೆಂಬರುಗಳು ಈ ವಿಚಾರವೇನು, ಅದರ ತೀರ್ಮಾನವೇನು ಎಂದು ಪ್ರಶ್ನೆ ಮಾಡಿದ್ದಕ್ಕೆ ಪ್ರಸಿಡೆಂಟರು—ಆ ಸಂಗತಿ ತನಿಖೆಯಲ್ಲಿದೆ, ಇನ್ನೂ ಇತ್ಯರ್ಥವಾಗಲಿಲ್ಲವೆಂದು ತಿಳಿಸಿದರು ಇತ್ಯರ್ಥವಾದ ಮೇಲೆ ಕೇಳಿದ್ದಕ್ಕೆ ಅವರು—ಈ ವಿಷಯವನ್ನು ನಿಮಗೆ ತಿಳಿಸಬೇಕಾದ ಅವಶ್ಯವಿಲ್ಲವೆಂತಲೂ ಕೇಳುವುದಕ್ಕೆ ನಿಮಗೆ ಹಕ್ಕಿಲ್ಲವೆಂತಲೂ ಹೇಳಿದರು, ಕಾನೂನಿನ ಪ್ರಕಾರ ಪ್ರಸಿಡೆಂಟರೂ ವೈಸ್ ಪ್ರಸಿಡೆಂಟರೂ ಒಬ್ಬೊಬ್ಬ ಮೆಂಬರಾಗಿರುತ್ತಾರಲ್ಲದೆ ಇತರ ಮೆಂಬರುಗಳಿಗಿಂತ ಅವರಿಗೆ ಹೆಚ್ಚಾದ ಅಧಿಕಾರವೇನೂ ಇರುವುದಿಲ್ಲ ಮತ್ತು ಅವರು ಸ್ವತಂತ್ರಿಸಿ ಮಾಡಿದ ಕೆಲಸ ಕಾರ್ಯಗಳನ್ನು ಕುರಿತು ಬೋರ್ಡಿನಲ್ಲಿ ಮೆಂಬರುಗಳು ಚರ್ಚಿಸಿ ಅವಶ್ಯವಿದ್ದರೆ ಪುನರ್ವಿಮರ್ಶೆ ಮಾಡುವುದಕ್ಕೂ ಬದಲಾಯಿಸುವುದಕ್ಕೂ ಅವರಿಗೆ ಅಧಿಕಾರ ಉಂಟು ಅಷ್ಟೇ ಅಲ್ಲ ಮ್ಯುನಿಸಿಪಲ್ ಆಫೀಸಿನ ಕ್ರಮಗಳನ್ನು, ನೌಕರಮಾರ್ನೇರ, ಬಹಲಿ ಬರತರಫು, ಜಮಾಖರ್ಚು, ಆದಾಯದ ಏರ್ಪಾಡು, ಲೆಕ್ಕಕ್ಕೆ ಖರ್ಚು, ಈ ಮೊದಲಾದವುಗಳನ್ನೆಲ್ಲಾ ಮ್ಯುನಿಸಿಪಲ್ ಕಮಿಷನರು ಬೋರ್ಡಿನಲ್ಲಿ ಚರ್ಚಿಸಿ ಇತ್ಯರ್ಥ ಮಾಡಬೇಕಾಗಿದೆ ಕೆಲಸ ಕಾರ್ಯಗಳ ಚಲಾವಣೆಗೆ ಅಡಚಣೆ ಇಲ್ಲದಂತೆ ನೋಡಿಕೊಳ್ಳುವದಕ್ಕಾಗಿ ಕಮಿಷನರ ಪೈಕಿ ಒಬ್ಬರು ಪ್ರಸಿಡೆಂಟೆಂತಲೂ ವೈಸ್ ಪ್ರಸಿಡೆಂಟೆಂತಲೂ ನೇಮಿಸಲ್ಪಟ್ಟದ್ದಾರಲ್ಲದೆ ಸಾಧಾರಣ ಕಮಿಷನರಿಗಿಂತ ಅವರಿಗೆ ಪ್ರತ್ಯೇಕವಾದ ಹೆಚ್ಚಿನ ಅಧಿಕಾರವೇನೂ ಇರುವುದಿಲ್ಲ ಮ್ಯುನಿಸಿಪಲ್ ಆಫೀಸಿನಲ್ಲಿ ನಡೆಯತಕ್ಕ ಕಾರುಬಾರುಗಳು ಸರಿಯಾಗಿ ತಿಳಿಯದೆ ಹೋದರೆ ಮೆಂಬರುಗಳು ಉಚಿತವಾದ ಸಲಹೆಗಳನ್ನು ಹ್ಯಾಗೆ ಸೂಚಿಸಬಹುದು ? ಜನರಾಡಿಕೊಳ್ಳುವ ಮಾತಿನಂತೆ ಮೆಂಬರುಗಳು ಬೋರ್ಡಿನಲ್ಲಿ ಚರ್ಚಿಸುವುದಕ್ಕಾಗದೇ ? ಈಗ ಇಂಜನಿಯರ್ ಮತ್ತು ಓವರ್ಸಿಯರ ವಿಚಾರವಾಗಿ ನಡೆದಿರುವ ರಿಕಾರ್ಡು ಏನು ? ಅದನ್ನು ತಿಳಿಯಬೇಕೆಂದು ಅಪೇಕ್ಷಿಸುತ್ತೇನೆ ಇಷ್ಟೇ ಅಲ್ಲದೆ ಮತ್ತೇನೂ ಇಲ್ಲ ಈ ವಿಚಾರವಾಗಿ ಬರೆದಿರುವ ಕಾಗದದಲ್ಲಿ "ವಿಚಾರ" ಮಾತ್ರ ಬೇಕು ಎನ್ನುವ ಮಾತಿಗೆ ಬದಲಾಗಿ ಕೈತಪ್ಪಿನಿಂದ "ವಿಚಾರಣೆ" ಎಂಬ ಮಾತು ಬಿದ್ದಿದೆ ಇದು ತಪ್ಪು ಇದನ್ನು ನಾನೇ ಒಪ್ಪಿಕೊಳ್ಳುತ್ತೇನೆ ಎಂಬೀ ರೀತಿಯಾಗಿ ಮಾತನಾಡಿದರು ಅದಕ್ಕೆ ವೈಸ್ ಪ್ರಸಿಡೆಂಟರು—ನೀವು "ವಿಚಾರಣೆ" ಎಂಬ ಮಾತನ್ನು ಪ್ರಯೋಗಿಸಿ ಕಾಗದ ಬರೆದಿದ್ದದರಿಂದ ಅದಕ್ಕೆ ನಿಮಗೆ ಅಧಿಕಾರವಿಲ್ಲವೆಂದು ಜವಾಬು ಕೊಡಲಾಯಿತು ಈಗ ನೀವು ಹೇಳುವಂತೆ ಬರೆದಿದ್ದರೆ ಈ ಚರ್ಚೆಗೆ ಅವಕಾಶವಾಗುತ್ತಿರಲಿಲ್ಲ ಎಂಬರ್ಥದಲ್ಲಿ ಜವಾಬು ಹೇಳಿದರು ತರುವಾಯ ಮೆಂಬರು ಕೇಳುವಂಥಾ ರಿಕಾರ್ಡು ಕಾಗದ ಪತ್ರಗಳನ್ನು ಅವರಿಗೆ ಕೊಡಬಹುದು, ಅವರು ನೋಡಿಕೊಳ್ಳಬಹುದು ಎಂದು ತೀರ್ಮಾನಿಸಿ ಮೀಟಿಂಗನ್ನು ಮುಗಿಸಿದರು

ಒಕ್ಕಲಿಗರ ಮಂಡಲಿಯೂ ದಿವಾನರವರೂ

ಬೆಂಗಳೂರು ಒಕ್ಕಲಿಗರ ಮಂಡಲಿಯ ವಿಜ್ಞಾಪನಾ ಪತ್ರಿಕೆ

ಮೈಸೂರು ಸಂಸ್ಥಾನದ ದಿವಾನ್‍ಸಾಹೇಬರವರಾದ ಮಹಾರಾಜಮಾನ್ಯ ರಾಜಶ್ರೀ ವಿ ಪಿ ಮಾಧವರಾಯರಾವ್, ಸಿ ಐ ಇ , ಯವರ ಸನ್ನಿಧಾನಕ್ಕೆ

ಮಹಾಸ್ವಾಮಿ,

ಬೆಂಗಳೂರು ಒಕ್ಕಲಿಗರ ಮಂಡಲಿಗೆ ಸೇರಿದ ನಾವುಗಳು ನಮಗೆ ಲಭಿಸಿರುವ ಈ ಸಂದರ್ಭದಲ್ಲಿ ತಮ್ಮಂಥಾ ಉದಾರ ಸ್ವಭಾವವುಳ್ಳ ದಯಾಶಾಲಿಗಳಾದ ರಾಜಕಾರ್ಯಧುರಂಧರನ್ನು ಈ ಸಂಸ್ಥಾನದ ಅಮಾತ್ಯಸ್ಥಾನಕ್ಕೆ ಭಕ್ತಿ ವಿಶ್ವಾಸ ಪೂರ್ವಕವಾಗಿ ಸುಸ್ವಾಗತವನ್ನು ಬಯಸಲು ಅಪ್ಪಣೆ ದಯಪಾಲಿಸಬೇಕೆಂದು ಬೇಡುತ್ತೇವೆ ನಮ್ಮ ಒಕ್ಕಲಿಗರು ಇತರ ಜನಾಂಗದವರಿಗಿಂತಲೂ ಮೀರಿದ ಸಂಖ್ಯೆಯುಳ್ಳವರಾಗಿ ಸಂಸ್ಥಾನದ ಪ್ರಜಾಸಮೂಹಕ್ಕೆ ಆಧಾರಭೂತರಾಗಿದ್ದಾಗ್ಯೂ ವಿದ್ಯಾವಿಹೀನತೆಯಿಂದ ಏಳಿಗೆಗೆ ಬಾರದೆ ಇರುವವರಿಂದ ಈ ನ್ಯೂನತೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರಲು ತಮ್ಮ ಆಗಮನಕಾಲದಲ್ಲಿಯೇ ಈ ಸಂಘವನ್ನು ಸ್ಥಾಪಿಸಿರುತ್ತೇವೆ ಪ್ರಜೆಗಳ ವಿದ್ಯಾಭಿವೃದ್ಧಿ ಮಾಡಬೇಕೆಂಬುವುದು ಯಾವಾಗಲೂ ತಮ್ಮ ಉದಾರ ಚಿತ್ತವೃತ್ತಿಯಾಗಿದೆ ಇದಕ್ಕನುಗುಣವಾದ ಈ ನಮ್ಮ ಸಂಘವನ್ನು ಆದರದಿಂದ ಕಟಾಕ್ಷಿಸಿ, ನಮ್ಮವರ ಸ್ವಸಹಾಯ ಸಾಧಕಾಭ್ಯುದಯಗಳ ಶ್ರೇಯಸ್ಕರ ನಡೆಸಿರುವ ಈ ನಮ್ಮ ಪ್ರಥಮ ಪ್ರಯತ್ನದಲ್ಲಿ ತಮ್ಮ ಸಹಾಯವನ್ನು ನೀಡುವಿರೆಂದು ಪ್ರಾರ್ಥಿಸುತ್ತೇವೆ ತಮ್ಮಂಥಾ ಮಹನೀಯರನ್ನು ದಿವಾನ್ ಪದವಿಗೆ ನೇಮಿಸಿದ್ದಕ್ಕಾಗಿ ನಮ್ಮ ಪ್ರೇಮ ಪ್ರಭುಗಳಾದ ಶ್ರೀಮನ್ಮಹಾರಾಜರವರಿಗೆ ನಮ್ಮ ವಂದನೆಗಳನ್ನು ವಿನಯಪೂರ್ವಕವಾಗಿ ಸಮರ್ಪಿಸುವದಲ್ಲದೆ, ಚಿರಕಾಲ ಈ ಪದವಿಯಲ್ಲಿ ತಮ್ಮನ್ನು ನೆಲೆಗೊಳಿಸಿರಲೆಂದು ಜಗದಂತನನ್ನು ಪ್ರಾರ್ಥಿಸುತ್ತೇವೆ

ಒಕ್ಕಲಿಗರ ಸಂಘದವರು ಕೊಟ್ಟ ಮೇಲ್ಕಂಡ ಅಡ್ರಸ್ಸಿಗೆ ದಿವಾನ್ ಸಾಹೇಬರವರ ಉತ್ತರವೇನಂದರೆ—

ದೊಡ್ಡ ಮನುಷ್ಯರೇ,

ನಿಮ್ಮಗಳನ್ನು ನೋಡಿ ನನಗೆ ಬಹಳ ಸಂತೋಷವಾಯಿತು ನಿಮ್ಮ ಸ್ವಂತ ಪ್ರಯೋಜನಕ್ಕಾಗಿ ಒಂದು ಸಂಘವನ್ನು ಏರ್ಪಡಿಸಿದ್ದನ್ನು ನೋಡಿ ನನಗೆ ದರ್ಷವುಂಟಾಯಿತು ನೀವು ಕಾಣಿಸಿದ ಉತ್ತಮವಾದ ಮೇಲ್ಪಂಕ್ತಿಯನ್ನು ಇತರ ವರ್ಣಾಶ್ರಮದವರು ಹಿಂಬಾಲಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ ನಾನು ಈ ಸಂಸ್ಥಾನದ ದಿವಾನ್ ಕೆಲಸಕ್ಕೆ ಬಂದ ಸಂದರ್ಭದಲ್ಲಿ ನೀವು ಈ ಸಂಘವನ್ನು ಏರ್ಪಡಿಸಿದ್ದನ್ನು ನೋಡಿ, ಬಹಳ ಸಂತೋಷಪಡುತ್ತೇನೆ ಈ ಸಂಸ್ಥಾನಕ್ಕೆ ನಿಮ್ಮ ಜನಗಳೇ ಮುಖ್ಯ ಬೆಂಬಲವೆಂಬುದನ್ನು ನಾನು ಬಲ್ಲೆನು ನಿಮ್ಮ ಉದ್ದೇಶದಲ್ಲಿ ನನಗೆ ಸಂಪೂರ್ಣ ಅನುರಾಗವಿರುತ್ತೆ ನನ್ನ ಕೈಲಾದಮಟ್ಟಿಗೂ ನಿಮಗೆ ಸಹಾಯಮಾಡಿ ಪ್ರೋತ್ಸಾಹ ಪಡಿಸಲು ನಾನು ಇಷ್ಟಪಡುವವನಾಗಿರುತ್ತೇನೆ ಇಂಥಾ ದೊಡ್ಡದಾದ ಮತ್ತು ಪ್ರಯೋಜನಕರವಾದ ಪ್ರಯತ್ನವನ್ನು ನೀವು ಪ್ರಾರಂಭಿಸಿದ್ದು ತುಂಬಾ ಶ್ಲಾಘನೀಯವಾಗಿದೆ ಇದರಿಂದ ನಿಮ್ಮ ಜನಗಳ ಅಭಿವೃದ್ಧಿಗೆ ಅತ್ಯಂತ ಅನುಕೂಲವುಂಟಾಗುವುದಲ್ಲದೆ, ಇತರರಿಗೂ ಪರೋಕ್ಷವಾಗಿ ಪ್ರಯೋಜನ ಉಂಟಾಗದೇ ಇರಲಾರದು ನಿಮ್ಮ ಸಂಘದ ಅಭಿವೃದ್ಧಿಯನ್ನು ಅತ್ಯಂತ ಆಸಕ್ತಿಯಿಂದ ನೋಡುತ್ತಿರುತ್ತೇನೆ ಎಲ್ಲಾ ವಿಷಯದಲ್ಲೂ ನಿಮಗೆ ಜಯವುಂಟಾಗಲಿ ಎಂಬುದೇ

ತರುವಾಯ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ ಜನಗಳ ಕೋರಿಕೆ ಮೇರೆ ಒಕ್ಕಲಿಗರ ಸಂಘಕ್ಕೆ ಪೋಷಕರಾಗಿರಲು ದಿವಾನ್ ಸಾಹೇಬರವರು ಒಪ್ಪಿದ್ದಲ್ಲದೆ ಆಂದಿನ ಸಂಘದ ಪೋಷಕರುಗಳು ಕೇಳಿಕೊಳ್ಳೋಣವು ತಮಗೆ ತಂಬಾ ಮರ್ಯಾದೆ ಕೊಟ್ಟಂತಾಯಿತೆಂತ ಹೇಳಿದರು ಪ್ರಸ್ತುತಪ್ಪೇನ ಸಂಸ್ಥಾನದ ಸಮಸ್ತ ಜನಗಳಿಗೂ ವಿದ್ಯಾದ ಅನುಕೂಲತೆಯನ್ನು ಉಂಟುಮಾಡುವದು ತಮ್ಮ ಮುಖ್ಯೋದ್ದೇಶವೆಂದು ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದರು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕಳೆದ ೨೭ನೆ ತಾ॥ ಗುರುವಾರ ನಡೆದ "ಯಂಪೈರ್ ಡೇ" ಎಂಬ ಉತ್ಸವದ ವಿಷಯವನ್ನು ಕುರಿತು ನಮ್ಮಲ್ಲಿಗೆ ಬಂದಿದ್ದ ಬಾತ್ಮಿಗಳ ಪೈಕಿ ಸಾಧ್ಯವಾದಷ್ಟನ್ನು ಕಳೆದ ವಾರ ಪ್ರಕಟಿಸಿರುತ್ತೇವೆ ಹಾಸನ, ಹೊಸಕೋಟೆ ಚಿಕಬಳ್ಳಾಪುರ, ಆನೇಕಲ್ಲು, ಶಿಡ್ಲಘಟ್ಟ, ದೊಡ್ಡಬೆಲೆ, ದೊಡ್ಡಬಳ್ಳಾಪುರ, ಶಿಗಲೂರು, ಈ ಮೊದಲಾದ ಅನೇಕ ಸ್ಥಳಗಳಲ್ಲಿ ನಡೆದ ಉತ್ಸವಗಳ ವೃತ್ತಾಂತಗಳನ್ನು ಸ್ಥಳಸಂಕೋಚವಾದ್ದರಿಂದ ಪ್ರಕಟಿಸಲಿಲ್ಲವಾಗಿ ಈ ಮೂಲಕ ಕೃತಜ್ಞತೆ ಪಡಿಸುವೆವು —ಎಡಿಟರ್

ಕರೆಸ್ಪಾಂಡೆನ್ಸ್

ಹಾಸನದ ಪೊಲೀಸ್ ವಿಚಾರ

ಅಯ್ಯಾ,

ಕಳೆದವಾರ ಇಪ್ಪತ್ತು ದಿವಸಗಳ ಮಧ್ಯದಲ್ಲಿ ಕಳ್ಳತನಗಳಾದಂತೆ ಈ ವಿಷಯ ಪೋಲೀಸ್ ರಿಪೋರ್ಟ್ ಮಾಡಿದಾಗ ಅವರು ಕಳ್ಳರು ಯಾರೋ ಗುಮಾನಿ ಆಸಾಮಿಗಳು ಯಾರೋ ಎಂದು ತುಂಬಾ ತನಿಖೆಯಿಂದಲೂ ಯುಕ್ತಿಯಿಂದಲೂ ಪತ್ತೆ ಹಚ್ಚದೆ ಮಾಡದೆ ಮಾನಸ್ಥರ ಮತ್ತು ಸರ್ಕಾರಿ ನೌಕರ ಮೇಲೆ ಅವರಿಗಾಗದ ಜನರ ಮಾತು ಕೇಳಿ ಜಪ್ತಿ ವಗೈರೆ ಮಾಡುತ್ತಾರೆ ಈ ಊರಲ್ಲಿ ಬಹಳ ಕಾಲಗಳಿಂದಲೂ ಇಂಥಾ ಭಾರಿ ಭಾರಿ ಕಳುವುಗಳು, ಕನ್ನ ಚೋರಿ ವಗೈರೆ ನಡೆಯುತ್ತಾ ಇದೆ ಪೋಲೀಸಿನವರ ಎಚ್ಚರಿಕೆಯೂ, ರಾತ್ರಿ ಬೀಟ್ ವಗೈರೆಗಳೂ, ಸಣ್ಣ ಸಣ್ಣ ಮೊಹಲ್ಲಾಗಳಲ್ಲಿ ಇಲ್ಲವೆಂದು ಹೇಳಬೇಕಾಗಿದೆ ಕದಿಯತಕ್ಕಂಥ ಕಳ್ಳರನ್ನು ಹಿಡಿಯದೆ ಮಾನಿಷ್ಠರ ಮೇಲೆ ಗುಮಾನಿಪಡುತ್ತಾರೆ ಆದದರಿಂದ ಈ ವಿಷಯಗಳನ್ನೆಲ್ಲಾ ಸರ್ಕಾರದವರು ತುಂಬಾ ಮುತುವರ್ಜಿಯಿಂದ ತನಿಖೆಮಾಡಿ ಮೇಲ್ಕಂಡ ಕೊರತೆಗಳನ್ನು ತಪ್ಪಿಸಿ, ಕಳ್ಳತನಗಳಿಗೂ ಇತರ ಫಂಡಾಟಗಳಿಗೂ ಆಸ್ಪದವಿಲ್ಲದಂತೆ ಪೋಲೀಸ್ ಏರ್ಪಾಡುಗಳನ್ನು ಕ್ರಮಪಡಿಸಿ, ಬಡವರನ್ನು ಉದ್ಧಾರಮಾಡ್ಬೇಕೆಂದು ಬೇಡುತ್ತೇವೆ

ಒಬ್ಬ ಪುರನಿವಾಸಿ

ಕುಡಿಯುವ ನೀರು ಇಲ್ಲದ್ದರ ಕಷ್ಟ

ಅಯ್ಯಾ,

ಚಿತ್ರದುರ್ಗದ ತಾಲ್ಲೂಕು ತುರುವನೂರು ಸಮ್ಮತು ಬೆಳ್ಳಗಟ್ಟ ಗ್ರಾಮದಲ್ಲಿ ಜನಜಾನುವಾರುಗಳ ಗೋಳು ವಿವರಿಸಲು ಅಸಾಧ್ಯವಾಗಿರುತ್ತೆ ಈಗ ಸುಮಾರು ನಾಲ್ಕು ತಿಂಗಳು ಆಗುಯಿತು ನೀರಿನ ಅವಸ್ಥೆಯಂ ನೋಡಲು ತುಂಬಾ ದುಃಖವಾಗಿರುತ್ತೆ ಗ್ರಾಮದ ಕಪಿಲೆ ಭಾವಿಗಳು ನೀರು ಭಾವಿ ಸಹ ಜಲ ಬತ್ತಿ ಹೋಗಿರುತ್ತೆ ನೀರು ಇಲ್ಲದೆ ಇರುಳೂ ಹಗಲೂ ನೀರಿನ ಅವಸ್ಥೆಯಲ್ಲೇ ಕಾಲಹರಣೆ ಮಾಡಿದಾಗ್ಯೂ ಜೀವಪೋಷಣೆಗಳು ನಿಲ್ಲಲಾರದೆ ತುಂಬಾ ಸಂಕಟಕ್ಕೆ ಕಾರಣರಾಗಿರುತ್ತೇವೆ ಚಿತ್ರದುರ್ಗದ ತಾಲ್ಲೋಕು ಅಮಲ್ದಾರರು ಮಹತ್ಸರ್ಕೀಟು ದಯಮಾಡಿ ಒಂದು ಭಾವಿ ತೋಡಿಸಿಕೊಡು ಹೋರಟು ಹೋದರು ಗ್ರಾಮದ ಆ ಜನರಾದರೂ ಒಬ್ಬನಾದರೂ ದರ್ಪ ಘೋಷಣೆಗೆ ಮುಖ ಕೊಡಲೇ ಇಲ್ಲ ಜಾನುವಾರುಗಳಿಗೆ ಹುಲ್ಲು ಇಲ್ಲ ಇಲ್ಲಿಗೆ ೬—೭ ಮೈಲು ಹೋದಾಗ್ಯೂ ಸಿಕ್ಕುವದಿಲ್ಲ ಗ್ರಾಮದಲ್ಲಿ ಜರಾಯತಿ ಕೆಲಸ ಮಾಡುವದೇ ಆಗಲಿ ವ್ಯಾಪಾರದ ವರ್ತಕರೇ ಆಗಲಿ ಬಡ ಜನಗಳನ್ನು ಕೂಲಿಗೆ ಕರೆಯುವದು ಇಲ್ಲ ಜಣ ಕೊಡುವವರೂ ಇಲ್ಲದೆ ಬಹಳ ಹೀನಸ್ಥಿತಿಯಲ್ಲಿ ಗೋಳಾಡ ತ್ತಾ ಇರುವೆ ಎಂಥಾ ದುರ್ಭಿಕ್ಷಕಾಲವು ಬಿರುತ್ತೋ. ಮಳೆ ಆದರೂ ಪ್ರತಿವರ್ಷವು ಯುಗಾದಿ ಹಿಂದೆ ಮುಂದೆ ಬರುತ್ತಾ ಇತ್ತು ಈ ವರ್ಷ ಮಾತ್ರ ಮಳೆ ಎನ್ನುವ ಹೆಸರೇ ಇಲ್ಲ ಜನಗಳು ಗಗನವನ್ನು ನೋಡುತ್ತಾ, ನೇತ್ರಗಳು ಕೆಂಪಗೆ ಆದವು ಅನ್ನಬಟ್ಟೆಗೆ ಇಲ್ಲದೆ ಕಳ್ಳರ ಅವಾಂತ್ರ ವಿಶೇಷವಾಗಿದೆ

ಪ್ರಜಾ ಹಿತೈಷಿ

ಧರ್ಮಾಸ್ಪತ್ರೆಗೆ ಇದೇ ಸಮಯ

ಅಯ್ಯಾ,

ಮೈಸೂರು ಪಟ್ಟಣದಲ್ಲಿಂದೂ ಈ ದೇಶದಲ್ಲಿಯೂ ಇರುವಂಥ ಧನಿಕರೂ ಪರೋಪಕಾರಿಗಳೂ ಆದ ಮಹನೀಯರಿಗೆ ಗ್ರತಪಡಿಸುವದೇನೆಂದರೆ—

ನಾವು ಮೈಸೂರು ಪಟ್ಟಣದಲ್ಲಿಯೂ ಈ ಡಿಸ್ಟ್ರಿಕ್ಟಿನಲ್ಲಿಯೂ ರೋಗಾದಿ ಉಪದ್ರವಗಳಿಂದ ಪ್ರಮೇಹದಿಂದ ಬಳಲುತ್ತಿರುವ ಎಲ್ಲಾ ಜನರಿಗೂ ಹೆಂಗಸರಿಗೂ ಮಕ್ಕಳಿಗೂ ಪ್ರಯೋಜನವಾಗಿರುವ ಹಾಗೆ ಒಂದು ಚಾರಿಆಸ್ಪತ್ರೆಯನ್ನು ಕಟ್ಟಿಸುತ್ತಲಿದ್ದೇವೆ ಸಮಸ್ತರಿಗೂ ತಿಳಿದಿರುವಷ್ಟೆ ಈ ದೊಡ್ಡ ಕಟ್ಟಡಕ್ಕಾಗಿ ಒಂದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ಬೇಕಾಗಿದೆ ಈ ಹಣದಲ್ಲಿ ಧನವನ್ನು ಹೊಂದಿದ ನಮ್ಮ ಮಹಾರಾಜಾ ಸಾಹೇಬರವರ ಸರ್ಕಾರದವರು ನಾಲ್ಕರಲ್ಲಿ ಒಂದು ಭಾಗವನ್ನು ಕೊಡುವದಾಗಿ ವಾಗ್ದಾನಮಾಡಿದಾರೆ ಬಾಕಿ ಮೂರು ಭಾಗದ ಮೊಬಲಗನ್ನು ಧರ್ಮಿಷ್ಠರೂ ಪರೋಪಕಾರಿಗಳೂ ಆಗಿರುವ ನಮ್ಮ ಸ್ನೇಹಿತರಿಂದ ವಸೂಲ್ ಮಾಡಬೇಕಾಗಿದೆ ಅಲ್ಲದೆ ಆಸ್ಪತ್ರೆಯಲ್ಲಿ ಔಷಧ ವಗೈರೆಗಳಿಗಾಗಿ ಪ್ರತಿ ತಿಂಗಳು ಬೇಕಾಗುವ ಖರ್ಚು ಎಂಟು ನೂರು ರೂಪಾಯಿಗಿಂತಲೂ ಕಡಿಮೆಯಾಗಲಾಗದು ದೇಶದಲ್ಲಿ ಪ್ರಮೇಹದವರ ಕಷ್ಟಗಳನ್ನು ಪರಿಹರಿಸುವದಕ್ಕಿಂತ ಶ್ರೇಷ್ಠವಾದ ಧರ್ಮಕ್ರಿಯೆ ಮತ್ತಾವುದೂ ಇಲ್ಲವೆಂಬುವದನ್ನು ಸರ್ವರೂ ಒಪ್ಪಿಕೊಳ್ಳುವರು ಆದದರಿಂದ ಈ ಘನವಾದ ಕೆಲಸಕ್ಕಾಗಿ ಧರ್ಮಿಷ್ಠರು ಕೊಡುವಂಥ ಹಣವು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವದು ಮತ್ತು ಆಸ್ಪತ್ರೆಯ ಔಷಧ ವಗೈರೆ ಖರ್ಚುಗಳಿಗಾಗಿ ತಿಂಗಳು ತಿಂಗಳಿಗೂ ಕ್ರಮವಾಗಿ ಕೊಡಲ್ಪಡುವ ಕಾಣಿಕೆಗಳು ಅತ್ಯಾದರದಿಂದ ವಂದನಾಪೂರ್ವಕವಾಗಿ ಸ್ವೀಕರಿಸಲ್ಪಡುವವು

ನಿಮ್ಮ ವಿಧೇಯ

ಮೈಸೂರು ಜೆ ಡಬ್ಲ್ಯು ಸಾಹೆ

ಕಲರಾ ಎಂಬ ಮಾರಿ

ಅಯ್ಯಾ

ರಾಯಚೂರುಪಟ್ಟಣಕ್ಕೆ ಸೇರಿದ ಸುಗೂರು ಎಂಬ ಗ್ರಾಮದಲ್ಲಿ ಕಲರಾ ಎಂಬ ಮಹಾಮಾರಿ ಭಯಕ್ಕೆ ೮ ದಿವಸದಲ್ಲಿ ನೂರಾರು ಮಂದಿ ಮಡಿದರು ಈ ಗ್ರಾಮವನ್ನು ನಾಶಮಾಡಿದ ಬಳಿಕ, ರಾಯಚೂರುಪಟ್ಟಣಕ್ಕೆ ಬಂದಳು ಈ ಮಹಾಮಾರಿ ಈ ಪಟ್ಟಣಕ್ಕೆ ವಿಜಯಮಾಡಿ, ಸುಮಾರು ೨೫ ದಿವಸ ಆಯಿತು ಕಳೆದ ೩ ವಾರದವರೆಗೆ ಇಷ್ಟುಮಾತ್ರವು ಸ್ವಲ್ಪ ಗದ್ದಲ ಇರಲಿಲ್ಲವು ಈಗ ಪಟ್ಟಣದಲ್ಲಿ ನಡೆಯುವ ಗಲಭೆ ಹೇಳಲಸಾಧ್ಯವು ಯಾಕೆಂದರೆ ಒಂದು ದಿವಸ ೧೫ ೧೬ ಅಧಿಕವಾಗಿ ಸಾಯುವ ಮನುಷ್ಯರನ್ನು ನೋಡಿದರೆ ಅಸ್ಥೆಯವು ಹುಟ್ಟುವದು ಈ ಸಣ್ಣ ಊರಿಗೆ ಇಬ್ಬರು ಆಸ್ಪತ್ರೆಯವರು ಬಿದಿದಾರಂತಲೂ ಒಬ್ಬರಿಗೆ ಒಬ್ಬರು ಬಂಧಿಸಲೂ ಹಾದಿಲೋ ಬೀದಿಗಳಲ್ಲಿ ಬೀಳುವರಂತೆ ಈ ಇಬ್ಬರು ಅಕ್ಕತಂಗಿಯರು ಸಮಯ ಉತ್ಪತ್ತಿ ಹೆಚ್ಚಾದ ಜನರು ಸಹಿಸಲಾರದೇ ರಾತ್ರಿ ಹಗಲು ಶೇವರು ರಾಮಭಜನವನ್ನು ಮಾಡುತ್ತಾ, ಪಟ್ಟಣದೊಳಗಿರ ಮಂದಿರಗಳಿಗೆ ಒಂದೊಂದು ತೆಂಗಿನಕಾಯಿಯನ್ನು ಒಡೆಯುತ್ತಾ ಪಟ್ಟಣವಲ ತಿರುಗುವರು ತುರುಕರು ಕೂಡ ಪಡಗಳನ್ನು ಹಾಡಿ ದೀನರ ಸೇವೆ ಮಾಡುವರು ಇದು ಗಡಿಬಿಡಿ ಕಾಲದೊಳಗೆ ಅನೇಕ ಮುದುಕರು ಆದವು ತಾ ೨೦ ರಲ್ಲಿ ಮಹಾಮಾರಿ ಮಹಾಮಾರಿಯ ನಾಮಧ್ಯಾನವನ್ನು ಘೋಷಿಸಿದರು ಸೋಮವಾರ, ದಿವಸ ೨೪—೨೫ ರಂತೆ ಜನ ನಾಶವು ಪ್ರಜ್ವಲಿಸಿತ್ತು ಈ ಅಮ್ಮನವನ್ನು ಒಂದು ಮಾರ್ಗದಲ್ಲಿ ಕಳಿಸಬೇಕೆಂದು ಒಂದು ಯೋಗ್ಯವಾದ ರಥವು ಮಾಡಿ, ನಾಲ್ಕು ದಿವಸ ಎಡೆಬಿಡದೆ ಪೂಜೆಮಾಡಿ, ೨೬ ರಲ್ಲಿ ಅಮ್ಮನವನ್ನು ಪ್ರಯಾಣ ಮಾಡಿ, ಮಡ್ಡಿಪೇಟೆ ಎಂಬ ಗ್ರಾಮದಲ್ಲಿ ಬಿಟ್ಟು ಬಂದರು ಪಟ್ಟಣದ ಬೀದಿಯೊಳಗೆ ನೋಡಿದರೂ ಮೋರೆಯ ಧ್ವನಿಯೇ ಕೇಳುತ್ತದೆ ಪಟ್ಟಣದ ಗಡಿಬಿಡಿಯನ್ನು ಕಂಡು ಹಳ್ಳಿಹಳ್ಳಿ ಬಿಡಾರಗಳಿಗೆ ಹೋಗುವ ಜನರ ಹಾದಿ ಹತ್ತಿ ಸೇರಿ ಶೇಕಡ ಮಾಡುವ ಬಡಜನಗಳು ಸಾಯುತ್ತೇವೆಂದು ಹೆಂಡ ಕಂಡ ಸಾರಾಯಿ ಕುಡಿದು ಮಲಗಿಸಿದ ತಾಡಿವಾಲರು ಒಂದು ದಿನಕ್ಕೆ ೬೦೦-೭೦೦ ಸಾವಿರ ರೂಪಾಯಿ ಮಾರಾಟ ಮಾಡುವರು ಹಳ್ಳಿಹಳ್ಳಿ ಜನ ಹೆಂಗಸರು ಬಹಳ ಕಷ್ಟದೊಳು ಕಾಲವಂ ಕಳೆಯುತ್ತಾರೆ ಮಹಾಮಾರಿ ಪೂಜೆಮಾಡಿ ಗರಡಿ ಸಾಧು ಆದಮೇಲಾಗಿ ಅಮ್ಮನವರನ್ನು ಬಿಟ್ಟು ಬಂದಿದ್ದಾಗ್ಯೂ ಅಮ್ಮನವರಿಗೆ ಇನ್ನೂ ಸಮಾಧಾನ ಆಗಲಿಲ್ಲವೆಂತಲೂ, ಹತ್ತಿಬಿಟ್ಟು ನಾನು ಹೋಗಲಾರೆನೆಂದು ಹೇಳುತ್ತಾಳೆಂತಲೂ ಜನರ ಮಾತುಕತೆಯಾಗಿದೆ ಈಗ ಇನ್ನೂ ದಿನಾ ೧೦—೧೨ ರಂತೆ ಸಾಯುತ್ತಾರೆ ಮಾತಂಗಿಮಾತೆದಮವೇ ತಿಳಿಯ

ದಲು ಬಿಟ್ಟುಕೊಂಡು, ನನಗೆ ಮಾರಿ ಬಂದಳು, ನನಗೆ ಮಾರಿ ಬಂದಳು ಎಂದು ಒಡಿ ಒಡಿ ತಿರುಗಿ ಕೂಗುತ್ತಾ, ಕೇಕೆಹಾಕುತ್ತಾ, ನಡಿಯುತ್ತಾ, ಎಳು ಳುತ್ತಾ ಇರುತ್ತಾರೆ. ಈ ಅವಿವೇಕವನ್ನು ನೋಡಿದಿರಾ!

ಬಾತ್ಮಿದಾರ.

ಮಲೆನಾಡಿನ ಬ್ರಾಹ್ಮಣರ ಕಾಟ

ಅಯ್ಯಾ,

ತಮ್ಮ ತಾ. ೨೭ ನೆ ಪತ್ರಿಕೆ ೬ ನೆ ಪುಟದಲ್ಲಿ ಮೇಲ್ಕಂಡ ವಿಷಯದಲ್ಲಿ ಅನೇಕ ಲಿಖಿತ ಬರಿಸಿರುವದನ್ನು ನೋಡಿ ವ್ಯಸನಪಡುತ್ತೇನೆ. ಯಾಕೆಂದರೆ ಅನೇಕ ದೂರದೇಶದಿಂದ ಬಹು ಬಡವರಾಗಿರತಕ್ಕ ಬ್ರಾಹ್ಮಣರು ರೈತರಲ್ಲಿ ದೇಹಿ ಎಂದು ಕೇಳತಕ್ಕ ಪದ್ಧತಿ. ಅವರಿಗೆ ರೈತರ ಶಕ್ತ್ಯಾನುಸಾರ ಧರ್ಮ ಕೊಡತಕ್ಕ ಪದ್ಧತಿ ಹಿಂದಿನಿಂದಲೂ ಇರುತ್ತೆ. ಧರ್ಮ ಕೊಡದೆ ಇರತಕ್ಕ ರೈತರಿಗೆ ಬ್ರಾಹ್ಮಣರು ಯಾವ ಬಲತ್ಕಾರ ಮಾಡುವದಿಲ್ಲ. ನಾವು ಕಷ್ಟಮಾಡಿದ ಆದಿಕೆಯಲ್ಲಿ ಧರ್ಮ ಕೊಡತಕ್ಕದ್ದು ಪರಲೋಕಕ್ಕೆ ಮುಖ್ಯಗತಿಗೆ ಸಾಧನೆಯಾಗಿರುತ್ತೆ. ಈ ಧರ್ಮ ಮಾಡುವದರಿಂದ ಸಂಸಾರಕ್ಕೆ ಲೋಪ ಬರಲಾರದು. ಲಗ್ನ, ಉಪನಯನ, ಪ್ರಸ್ತ ಮುತ್ತಾದದ್ದು ಮಾಡುವದರಿಂದ ಬ್ರಾಹ್ಮಣದಕ್ಷಿಣೆ ಬಹಳ ಮುಂತಾದದ್ದು ಮಾಡಬೇಕಾಗುತ್ತೆ. ಆದ್ದರಿಂದ ಲಗ್ನ ಮುಂತಾದ್ದು ಮಾಡದೆ ಘಟೀರರ ಹಾಗೆ ಇರತಕ್ಕವರಿಗೆ ಈ ಲೇಖನ ವಿರೋಧವಾಗಿದೆ. ತಮ್ಮಲ್ಲಿಗೆ ಪತ್ರಿಕೆಗೆ ಪ್ರಿಂಟ್ ಮಾಡುವದಕ್ಕೆ ತಿಳಿಸಿದವನನ್ನು ಪ್ರಪಂಚದಲ್ಲಿ ಇರತಕ್ಕ ಸಮಸ್ತವನ್ನೂ ತೊರೆದವನು ಎಂದೂ ಕಪಟಲೋಭಿ ಎಂದೂ ನಾನು ಭಾವಿಸುತ್ತೇನೆ.

ಸತ್ಯವಾದಿ

ಛತ್ರಗಳೂ ಪ್ರಯಾಣಸ್ಥರೂ.

ಅಯ್ಯಾ,

ತಮ್ಮ ಪತ್ರಿಕೆಯ ಮುಖಾಂತ್ರ ನನ್ನದೊಂದು ಸಂಶಯ ಪರಿಹರಿಸಿಕೊಳ್ಳಬೇಕೆಂದಿರುತ್ತೇನೆ. ಎಷ್ಟೋ ಕಡೆಗಳಲ್ಲಿ ಛತ್ರಗಳು ಧರ್ಮಾರ್ಥವಾಗಿ ಜನಗಳ ಉಪಯುಕ್ತ ಕಟ್ಟೋಣವಾಗಿವೆ. ಇವೆಲ್ಲಾ ಪರೋಪಕಾರಕ್ಕಾಗಿ ಕಟ್ಟಲ್ಪಟ್ಟವುಗಳಲ್ಲವೇ? ಪರೋಪಕಾರವೆಂದರೇನು? ಇನ್ನೊಬ್ಬರಿಗೆ ಉಪಕಾರ ಮಾಡುವದು, ಒಬ್ಬನು ಯಾವ ಜಾತಿಯವನಿರಲಿ, ಮತದವನಿರಲಿ, ಸ್ಥಿತಿಯವನಿರಲಿ, ಕಟ್ಟೋಣದ ಛತ್ರಗಳಿಂದಾಗಲೀ ಬೇರೆ ಯಾವ ಕಾರ್ಯದಿಂದಲಾದರೂ ಉಪಕಾರ ಹೊಂದುವದು. ಆದರೆ ಎಷ್ಟೋ ಕಡೆಗಳಲ್ಲಿ ಅವರವರು ಕಟ್ಟಿಸಿರುವ ಛತ್ರಗಳನ್ನು, ಅವುಗಳಲ್ಲಿರುವ ಕ್ರಮಗಳನ್ನು, ಛತ್ರ ತಿಂಡಿ ಮುಂತಾದ್ದನ್ನೆಲ್ಲಾ ನೋಡಿದರೆ ಬರೇ ಬ್ರಾಹ್ಮಣನಿಗೆ ಇಲ್ಲವೇ ಕೇವಲ ದ್ವಿಜನಿಗೆ ಎಂಬಿತ್ಯಾದಿ ಮಾತುಗಳು ನನ್ನ ಕಿವಿಯಲ್ಲಿ ಬಿದ್ದವು. ಉಪಕಾರ ಹೊಂದಲು ಬ್ರಾಹ್ಮಣನೇ ಯೋಗ್ಯನೋ? ದಾರಿಯಲ್ಲಿ ನಡೆಯುವ ಪ್ರಯಾಣಸ್ಥರಲ್ಲಿ ಎಲ್ಲಾ ಬಗೆಯವರೂ ಇರುತ್ತಾರೆ. ಬ್ರಾಹ್ಮಣನಿಗೆ ಮಾತ್ರವೇ ಹಸಿವೆ, ತೃಷೆ, ಆಯಾಸ ಇವು ಸಂಭವಿಸುವಂತೆ ಇತರ ಜಾತಿಯವರಿಗೆ ಆಗುವದಿಲ್ಲವೆಂತ ಯಾವ ಪ್ರಮಾಣ ಸ್ಥಾಪಿಸಬಹುದು? ಆದರೆ ನಾನು ನೋಡಿದ ಎಷ್ಟೋ ಕಡೆಯ ಛತ್ರಗಳಲ್ಲಿ ಸರಿಯಾದ ಪರೋಪಕಾರದ ಧರ್ಮವು ಪಕ್ಷಪಾತವಿಲ್ಲದೆ ಪರಜಾತಿಯವನಾದ ಯಾವನೋ ಒಬ್ಬನು ದಾರಿಯ ಪ್ರಯಾಸ, ಹಸಿವೆ, ತೃಷೆ ಆಯಾಸಗಳಿಂದ ಬಳಲುತ್ತಾ, ಧರ್ಮಛತ್ರವೆಂಬ ಹೆಸರ ಕೇಳಿ, ಆ ಸ್ಥಳಕ್ಕೆ ಬಂದರೆ ಛತ್ರದೊಳಗಿನ ಸಾರುಪತ್ತೇಗಾರನು—ಇದು ಕೇವಲ ಬ್ರಾಹ್ಮಣರಿಗೆ ನಿನ್ನಂಥವರಿಗಲ್ಲವೆಂತೆಂದು, ಸ್ವಲ್ಪ ಆಯಾಸ ಪರಿಹರಿಸುವ ಮಾತುಗಳಾದರೂ ಇಲ್ಲದೇ ಕಳುಹಿಸುತ್ತಾನೆ. ಅಯ್ಯಾ ಛತ್ರ ಕಟ್ಟಿಸಿದ ಪುಣ್ಯಾತ್ಮರುಗಳಿರಾ! ನಿಮ್ಮ ಹಣದಿಂದ ಕಟ್ಟುವ ಛತ್ರದಲ್ಲಿ ಹ್ಯಾಗೂ ಉತ್ತಮ ಜಾತಿಯವನನ್ನೇ ಅದಿಗೆ ಮುಂತಾದಕ್ಕೆಲ್ಲಾ ಸಂಬಳ ಕೊಟ್ಟು ಇಡಗಿರುತ್ತೀರಿ. ಇದರಿಂದಲೇ ಮಾರ್ಗಾಯಾಸದಿಂದ ಬಂದವನು ಯಾವ ಬಗೆಯವನೇ ಇರಲಿ, ಅಂಥವನು ಬೇಡದೆ ಒಂದು ತುತ್ತು ಅನ್ನ ನಾಶಿದಿ ಎಂಬ ಅಪ್ಪಣೆ ಯಾಕೆ ಕೊಡಬಾರದು? ಬ್ರಾಹ್ಮಣನು ಉಂಡು ನಿಮ್ಮನ್ನು ಹೊಗಳುವ ಹೊಗಳಿಕೆ ಸಂಸ್ಕೃತದ್ದಾಗಿ ಘನತೆಯನ್ನುಂಟು ಮಾಡುವದೂ, ಬೇರೆ ಬಗೆಯವನಿಂದಾದ ಹೊಗಳಿಕೆಯು ಮಾನಕ್ಕೆ ಹೀನವಾದದ್ದು ಎಂತ ನೆನಸುತ್ತೀರಾ! ನಿಮ್ಮ ಛತ್ರಕ್ಕೆ ಕಷ್ಟ ಆಯಾಸಗಳಿಂದ ಬಂದಿರುವ ಬ್ರಾಹ್ಮಣನು ಬ್ರಾಹ್ಮಣರಿಗಾಗಿ ಕಟ್ಟಿಸಿದ ಛತ್ರ ಎಂತ ಕೇಳಿ ಆ ಸಂದರ್ಭದಲ್ಲಿ ಅದೇ ಆಯಾಸದಿಂದ ಬಳಲುವ ಪರಜಾತಿಯ ಪ್ರಯಾಣಿಕನು ಕೇವಲ ಬ್ರಾಹ್ಮಣರಿಗೆ ಅಂತ ಕೇಳಿ ನಿಮ್ಮ ಛತ್ರವನ್ನು ನಂಬಿಕೊಂಡು ದಿನಗಳೆದು ಅನ್ನವನು. ಎಲ್ಲರಿಗೂ ಪರೋಪಕಾರಿಯಾಗಿರುವ ಸರ್ವೇಶ್ವರನು ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ತನ್ನ ಕೃಪೆ ದಯೆ ಮಳೆ ಸೂರ್ಯರನ್ನು ಕೊಡುತ್ತಾ ಇದ್ದಾನೆ. ಹಾಗೆಯೇ ಛತ್ರಗಳನ್ನು ಕಟ್ಟಿಸಿದ ಮಹಾನುಭಾವರ ಪರೋಪಕಾರ ಧರ್ಮವೂ ಇದ್ದರೆ ಎಷ್ಟೋ ಉತ್ತಮ. ಬರೀ ಬ್ರಾಹ್ಮಣರಿಗೆ ಅಥವಾ ಬರೀ ಲಿಂಗಾಯತರಿಗೆ ಎಂಬಿದರಲ್ಲಿ ಪರೋಪಕಾರ ಅಷ್ಟು ಕಂಡು ಬರುವದಿಲ್ಲ. ಜಾತಿ, ಸ್ವಾಭಿಮಾನ ಮುಂದಕ್ಕೆ ಬಂದು ಧರ್ಮದಲ್ಲಿ ಪಕ್ಷಪಾತವಿದೆ ಎಂತ ತೋರುವಂತಾಯಿತು ಸ್ವಾಮಿ, ಇದಕ್ಕೆ ಧರ್ಮ ಅನ್ನುವ ಹಾಗಿಲ್ಲ.

ಆರ್. ಎಲ್.

ವ್ಯಾಕ್ಸಿನೇಟರೂ ಅವರು ಮಾಡಬೇಕಾದ ಕೆಲಸವೂ.

ಅಯ್ಯಾ,

ಕಳೆದ ಸಂಚಿಕೆಯಲ್ಲಿ ದೊಡ್ಡಬಳ್ಳಾಪುರದ ವ್ಯಾಕ್ಸಿನೇಟರ್ ರವರು ಬರೆದ ಸಂಗತಿಯನ್ನು ಓದಿ ಸಂತೋಷಿಸಿದೆನು. ಇವರಂತೆಯೇ ಮೈಸೂರು ಶ್ರೀಮನ್ ಮಹಾರಾಜರವರ ಸಾಕೇಬ್ಬದರ್ರ್ ಯವರ ಪರಿಪಾಲನೆಯಲ್ಲಿರುವ ಸಮಸ್ತ ವ್ಯಾಕ್ಸಿನೇಟರುಗಳೂ ತಮಗೆ ತಿಳಿದಮಟ್ಟಿಗೂ ಅಂಥಾ ವಿಷಯಗಳನ್ನು ಅಂದರೆ, ಪ್ರಜಾನುಕೂಲವಾಗಿಯೂ, ಪ್ರಕಟನೆಗೆ ಅರ್ಹವಾಗಿಯೂ ಇರುವವುಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಲೂ ತಮ್ಮ ತಮ್ಮ ತಾಲ್ಲೂಕುಗಳಲ್ಲಿರುವ ಗ್ರಾಮಾಂತ್ರಗಳಿಗೆ ವ್ಯಾಕ್ಸಿನೇಷನ್ ಕೆಲಸಕ್ಕಾಗಿ ಸಂಚಾರ ಹೋದಾಗ ಗ್ರಾಮಸ್ಥರನ್ನೆಲ್ಲಾ ಒಂದು ಕಡೆ ಸೇರಿಸಿ ವ್ಯಾಕ್ಸಿನೇಷನ್ ವಿಷಯವಾಗಿಯೂ, ಸಿಡುಬು ಯಾವ ರೀತಿಯಲ್ಲಿ ಬರುತ್ತೆ, ಬಂದವರನ್ನು ಉಪಚಾರ ಮಾಡುವ ವಿಧಾನ, ಇತ್ಯಾದಿ ವಿಷಯಗಳನ್ನೂ, ಮನೆಗಳನ್ನು ಶುಚಿಮಾಡುವ ರೀತಿ, ಅವುಗಳನ್ನಿಡಬೇಕಾದ ರೀತಿ, ನೀರಿನ ವಿಷಯ, ಮುಂತಾದ ವಿಷಯಗಳನ್ನೂ ಕುರಿತು ಉಪನ್ಯಾಸ ಮಾಡುತ್ತಾ ಬಂದಲ್ಲಿ ನಮ್ಮ ದೇಶೀಯರಿಗೆ ಅನೇಕ ಸಂಗತಿಗಳು ತಿಳಿಯಬರುತ್ತವೆಂಬುವುದರಲ್ಲಿ ಸಂದೇಹವೇ ಇಲ್ಲ. ವ್ಯಾಕ್ಸಿನೇಟರುಗಳು ತಮಗೆ ನಿಯಾಮಕವಾಗಿರುವ ಕೆಲಸದ ಜೊತೆಯಲ್ಲಿ ಈ ಕೆಲಸಗಳನ್ನೂ ಆತಂಕವಿಲ್ಲದೇ ನೆರವೇರಿಸಬಹುದಾಗಿರುತ್ತೆ. ಈ ವಿಷಯದಲ್ಲಿ ಕೆಲವು ವ್ಯಾಕ್ಸಿನೇಟರುಗಳು—ಸರ್ಕಾರದವರು ನಮಗೆ ನಿಯಮಿಸಿದ ಕೆಲಸವೇನು? ಅದೇ ಸಾಕಾಗಿದೆ. ಈ ಕೆಲಸಗಳನ್ನೆಲ್ಲಾ ಯಾತಕ್ಕೆ ಮಾಡಬೇಕು? ಮಾಡಿದರೆ ತಾನೇ ಬಂದ ಕಿರೀಟವೇನು? ಮಾಡದಿದ್ದರೆ ನಮ್ಮನ್ನು ಕೇಳುವವರ್ಯಾರು? ಎಂಬದಾಗಿ ಆಕ್ಷೇಪಣೆಮಾಡಬಹುದು. ಇವರು ನಮ್ಮ ಪೂರ್ವಿಕರಾದ ಹಿಂದುಗಳ ಮೌಢ್ಯ ಸಂಪ್ರದಾಯಕ್ಕೆ ಸೇರಿದವರು. ಇವರಿಗೆ ಪೂರ್ವದಲ್ಲಿ ಗ್ರೀಕರಲ್ಲಿ ದೇಶೋನ್ನತಿಗಾಗಿ ಪ್ರಸಿದ್ಧಿ ಹೊಂದಿದ್ದ ಸೋಲನ್ ಎಂಬ ಪ್ರಾಜ್ಞನ ಚರಿತ್ರೆ, ಸ್ವದೇಶ ರಕ್ಷಣೆಗೋಸ್ಕರವೂ, ಸ್ವದೇಶವನ್ನೆಲ್ಲಾ ಕಾಪಾಡಿ ತಾನೊಬ್ಬನೇ ತನ್ನ ದೇಶದಿಂದ ಬಹಿಷ್ಕೃತನಾದ ಅರಿಸ್ಟೈಡೀಸ್ ಎಂಬ ನೀತಿವಂತನ ಚರಿತ್ರೆ, ಈ ಮುಂತಾದವರ ಚರಿತ್ರೆಗಳು ತಿಳಿದಿರಲಾರದು. ಈ ಕಾಲದಲ್ಲಿ ಹಿಂದೂ ದೇಶೋನ್ನತಿಗಾಗಿ ಕಂಕಣಬದ್ಧರಾಗಿರುವ (ಲೇಟ್) ಮಹದೇವಗೋವಿಂದರಾನಡೆ, ಮಿ॥ ಗೋಖಲೆ, ರಾಜಾ ಸರ್ ಟಿ. ಮಾಧವರಾವ್, ಆನರಬಲ್ ಜಸ್ಟಿಸ್ ಚಂದ್ರಾವರ್ಕರ್, ಬಾಬುಸುರೇಂದ್ರನಾಥ ಬ್ಯಾನರ್ಜಿ, ಮುಂತಾದ ಮಹನೀಯರ ಚರಿತ್ರೆಗಳೂ ತಿಳಿದಿರಲಾರದು. ಪಾಶ್ಚಿಮಾತ್ಯರಾಗಿಯೂ ಹಿಂದುಸ್ಥಾನದ ಏಳಿಗೆಯ ವಿಷಯದಲ್ಲಿ ಸದಾ ನಿರತರಾಗಿಯೂ ಇರುವ ಸರ್ ಹೆನ್ರಿ ಕಾಟನ್‌ರವರ ವಿಷಯವನ್ನು ವಾಚಕರೆಲ್ಲರೂ ತಿಳಿದಿರಬಹುದು. ಇಂಥಾ ಮಹನೀಯರೇ ಈ ರೀತಿ ಶ್ರಮಪಟ್ಟು ಸ್ವದೇಶದ ಹಿತಕ್ಕೋಸ್ಕರ ಒದ್ದಾಡುತ್ತಿರುವಲ್ಲಿ ಅಲ್ಪರಾದ ನಮ್ಮನ್ನು ಕೇಳುವವರೇ ಇಲ್ಲ. ಆದರೆ ನಾವು ಮಾಡುವ ಕೆಲಸವೇನು? ವ್ಯಾಕ್ಸಿನೇಟರ್ ಕೆಲಸ ತಾನೇ. ನಾವು ಅನೇಕ ಗ್ರಾಮಗಳಿಗೆ ಸುತ್ತಬೇಕಾಗಿದೆ. ಅನೇಕ ವೇಳೆ ಸಮಯವಿದೆ. ಒಂದು ಗ್ರಾಮದಲ್ಲಿ ನನ್ನ ಕೆಲಸ ಪೂರೈಸಿದ ನಂತರ ಒಂದು ಗಂಟೆ ಹೊತ್ತು ಈ ಮೇಲ್ಕಂಡ ವಿಷಯಗಳಿಗೆ ವಿನಿಯೋಗಿಸಿದರೆ ಎಷ್ಟೋ ಅನುಕೂಲವಾದೀತು. ಅಯ್ಯಾ, ಪ್ರಿಯಮಿತ್ರ ಸಹೋದರರಾದ ವ್ಯಾಕ್ಸಿನೇಟರುಗಳಿರಾ! ತಮಗೆ ನಾನು ಅತ್ಯಂತ ವಿನಯದೊಡನೆ ಬೇಡಿಕೊಳ್ಳುವದೇನೆಂದರೆ ನೀವುಗಳು ಮೇಲ್ಕಂಡ ವಿಷಯಗಳಿಗೆ ಸ್ವಲ್ಪವಾದರೂ ಗಮನಕೊಟ್ಟು, ಅದರಂತೆ ನಡಿಯುತ್ತಾ ಬರುವದರಾಗಿ ನಮ್ಮ ದೇಶೀಯರಿಗೆ ಸ್ವಲ್ಪವಾದರೂ ಜ್ಞಾನೋದಯವಾಗಲಿ ಎಂಬುವದೇ ನನ್ನ ಕೋರಿಕೆಯಾಗಿದೆ.

ಬೆಂಗಳೂರು ಯಲ್ಹಂಕ ನಾಡ ತಾಲ್ಲೂಕು, ತಾ. ೨೬—೫—೦೬. | ಡಿ. ಆರ್. ಗೋವಿಂದರಾಜು, ವ್ಯಾಕ್ಸಿನೇಟರ್.

ತಾಲ್ಲೂಕು ವರ್ತಮಾನಗಳು

ಹುಣಸೂರು—ಇದೇ ತಿಂಗಳು ೩ ನೇ ತಾ ನಮ್ಮ ಶ್ರೀಮನ್ ಮಹಾರಾಜರವರ ವರ್ಧಂತಿಯ ದಿವಸವಾದ್ದರಿಂದ ಈ ದಿವಸವನ್ನು ಬಹು ಸಂತೋಷದಿಂದ ಕಳೆಯಬೇಕೆಂದು ನಮ್ಮ ಅಮಲ್ದಾರ್ರವರೂ, ಇಲ್ಲಿನ ದೊಡ್ಡಮನುಷ್ಯರೂ, ಸ್ಕೂಲ್ ಮಾಸ್ಟರುಗಳೂ ಯೋಚಿಸಿ, ಸ್ಕೂಲ್ ಹುಡುಗರನ್ನೆಲ್ಲಾ ಓಡಿಸುವದು, ಹಗ್ಗ ಎಳೆಯುವದು ಮೊದಲಾದ ಆಟಗಳನ್ನು ಆಡಿಸಿ, ಬಹುಮಾನ ಕೊಟ್ಟರು. ಒಂದನೆಯ್ಯನಿ ಸ್ಕೂಲಿನಿಂದ ಒಂದು ಉಪನ್ಯಾಸವೂ ಎ ವಿ ಸ್ಕೂಲಿನಿಂದ ಒಂದು ಉಪನ್ಯಾಸವೂ ಆಯಿತು. ಮಿಷನ್ ಸ್ಕೂಲ್ ಬಾಲಕಿಯರು ಮಹಾರಾಜರವರ ಮೇಲೆ ಒಂದು ಸಂಗೀತವನ್ನು ಹಾಡಿ ಸಭಿಕರನ್ನು ಸಂತೋಷಪಡಿಸಿದರು. ಎಲ್ಲರಿಗೂ ಕಾಫಿ ತಿಂಡಿ ಮೊದಲಾದ ಪದಾರ್ಥಗಳು ಸರಬರಾಯಿ ಆಯಿತು.—ಇದೇ ತಿಂಗಳು ೨ ನೇ ತಾ ಇಲ್ಲಿ ಬಹುಕಾಲದಿಂದಲೂ ವಾಸಮಾಡುತ್ತಿರುವ ಮಿ॥ ಹೇ ಸಾಹೇಬರವರ ಕುಮಾರ್ತೆಯವರನ್ನು ಕಾಫಿತೋಟದಲ್ಲಿರುವ ಮಿ॥ ಫರ್ಗುಸನ್‌ರಿಗೆ ಕೊಟ್ಟು ಇಲ್ಲಿನ ವೆಸ್ಲಿಯನ್ ಮಿಷನ್ ದೇವಾಲಯದಲ್ಲಿ ಮಧ್ಯಾಹ್ನ ೨ ಘಂಟೆಯಲ್ಲಿ ಮದುವೆಯ ಕಾರ್ಯವು ಜರುಗಿಸಲ್ಪಟ್ಟಿತು. ಆ ಕಾಲದಲ್ಲಿ ಅನೇಕ ಕಾಫಿಪ್ಲಾಂಟರುಗಳೂ ಧೊರೆಸಾನಿಗಳೂ ಮಿಸ್ಸಿಗಳೂ ಬಂದಿದ್ದರು. ಸಾಹೇಬ್ ಜನರ ಬ್ಯಾಂಡು ಬಹು ಜೋರಾಗಿತ್ತು. ಅದೇ ದಿನ ಸಾಯಂಕಾಲವೇ ನೂತನ ಗಂಡಹೆಂಡರಿಬ್ಬರೂ ಟಾಂಗಾದಲ್ಲಿ ಕುಳಿತುಕೊಂಡು, ಬೆಂಗಳೂರು ಕಡೆ ಪ್ರಯಾಣ ಬೆಳಸಿದರು.—ಮಳೆ ಇಲ್ಲದೆ ಜನರೆಲ್ಲಾ ತುಂಬಾ ಸದಾ ಚಿಂತೆಯಲ್ಲಿಯೂ, ವ್ಯಸನದಲ್ಲಿಯೂ ಮುಳುಗಿ ಹೋಗಿದ್ದರು. ಬಿತ್ತಿದಂಥದಾಗಿಯೆಲ್ಲಾ ವ್ಯರ್ಥವಾಯಿತಲ್ಲಾ ಎಂಬದಾಗಿ ಹಂಬಲಿಸುತ್ತಿದ್ದರು. ಆದರೆ ದೇವರ ಕೃಪೆಯಿಂದ ಮೊನ್ನೆ ಶನಿವಾರ ಸಾಯಂಕಾಲ ಒಳ್ಳೇ ಮಳೆಯಾಯಿತು.

ತಿಪಟೂರು—ಮಳೆ ಇಲ್ಲ. ಬಿಸಲಿನ ತಾಪ ಯಥಾಪ್ರಕಾರವೇ ಇದೆ. ಈ ಪ್ರಾಂತ್ಯ ಕೆಲವು ವರ್ಷಗಳಿಂದ ಮಳೆಗಾಲ ಸರಿಯಾಗಿ ಇಲ್ಲದಿರುವದರಿಂದ ತೆಂಗಿನ ಫಸಲು ಸುತರಾಂ ಕಡಮೆಯಾಗಿದೆ.—ಹೊಸದಾಗಿ ಅರಸೀಕೆರೆಯಿಂದ ಇಲ್ಲಿಗೆ ವರ್ಗವಾಗಿ ಬಂದಿರುವ ಸಬ್ ರಿಜಿಸ್ಟ್ರಾರ್ ಮಿ॥ ಲಕ್ಷ್ಮೀಕಾಂತಯ್ಯಂಗಾರ್ರು ತುಂಬಾ ಜವಾನರಾಗಿಗಳೆಂದು ತೋರುತ್ತೆ.—ಈ ತಾಲ್ಲೂಕು ಕಚೇರಿಯಲ್ಲಿ ಕೊಂಚ ದಿವಸಗಳಿಂದ ಘಂಟೆ ಹೊಡೆಯುವುದನ್ನು ಯಾಕೋ ನಿಲ್ಲಿಸಿ ಬಿಟ್ಟಿರುವದರಿಂದ ಬಡಬಗ್ಗರಿಗೆ ಟೈಂ ತಿಳಿಯುವುದಿಲ್ಲ.—ಮ್ಯುನಿಸಿಪಲ್ ಕೆಲಸಗಳು ಮಾತುಮಾತ್ರವಾಗಿದೆ. ಪೇಟೆ ಬೀದಿಯಲ್ಲಿ ಕೊಳೆನೀರು ಸ್ವಲ್ಪವೂ ಎಲ್ಲದೆ, ಸಾಗಿಹೋಗಿ ಬಿಡುತ್ತೆ. ಟವನ್ನಲ್ಲಿ ಕಟ್ಟಿದ್ದ ಹೊಸಚರಂಡಿ ಮಗ್ಗುಲಿನ ಸೇತುವೆಯೊಂದು ಬಿದ್ದುಹೋಗಿತ್ತು. ಪುನಃ ಕಟ್ಟಿಬಿಟ್ಟರು.—ನಮ್ಮ ಅಮಲ್ದಾರರಿಗೆ ವರ್ಗವಾಗುತ್ತೆಂಬ ವರ್ತಮಾನ ಹಬ್ಬಿದೆ. ಇದು ಎಷ್ಟರ ಮಟ್ಟಿಗೆ ನಿಜವೋ ಗೊತ್ತಿಲ್ಲ.—ಕೇದಿಗೆ ಪರಿಷೆ ನಡೆಯಿತು, ಹೋದ ವರುಷಕ್ಕಿಂತ ಉತ್ಪತ್ತಿ ಜಾಸ್ತಿಯಾಯಿತು.—ಕೆರೆ ಅಂಗಳದಲ್ಲಿ ಕೆಡಿಸುವುದು ಇನ್ನೂ ತಪ್ಪಿಲ್ಲ. ಅಮಲ್ದಾರ್ ಮಿ॥ ಸಿ. ವಿ. ನಾರಾಯಣಾಚಾರ್ಯರು ಮ್ಯುನಿಸಿಪಲ್ ಕೇಸುಗಳ ವಿಷಯದಲ್ಲಿ ಇನ್ನೂ ಒಳ್ಳೆ ಏರ್ಪಾಡು ಮಾಡಿ, ಯಶಸ್ಸಂಪಾದಿಸಲೆಂದು ಕೋರಿದೆ.—ಇಲ್ಲಿನ ಮ್ಯುನಿಸಿಪಲ್ ಮೆಂಬರಾದ ಸಾಹುಕಾರ್ ಗ್ರಂಧಿಗೆ ನಂಜುಂಡಪ್ಪನವರು ಮಾಳೆಕಲ್ಲು ತಿರುಪತಿಯಲ್ಲಿ ಕಟ್ಟಿಸುವ ಛತ್ರವು ಪ್ರಯಾಣಿಕರಿಗೆ ಅನುಕೂಲವಾಗಿದೆ. ಸಾಹುಕಾರ್ ಸಿದ್ದಪ್ಪನವರು ಇಲ್ಲಿದ್ದ ಆಂಜನೇಯನ ದೇವಸ್ಥಾನವನ್ನು ಹೊಸದಾಗಿ ಕಟ್ಟಿಸುತ್ತಾ ಇದ್ದಾರೆ. ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿ ಏಜಂಟರು ಇಲ್ಲಿಗೆ ಬಂದು ಸಭೆ ಸೇರಿಸಿ, ಅದರ ವಿಷಯಗಳನ್ನು ವಿಶದವಾಗಿ ಜನಗಳಿಗೆ ತಿಳಿಯಪಡಿಸಿ, ಷೇರುಗಳನ್ನು ಬಿಕರಿ ಮಾಡುತ್ತಾ ಇದ್ದಾರೆ.

ಹೊಸಕೋಟೆ.—ಇಲ್ಲಿ ಒಂದೆರಡು ದಿನಗಳಿಂದ ಮೇಘರಾಜನು ಒಂದೆರಡು ಹನಿಗಳನ್ನು ಉದುರಿಸಿದನು. ಅದಕ್ಕೆ ಮಳೆಬಂತು ಎಂದು ಯಾರೂ ಅನ್ನಲಾರರು. ಈ ಊರಲ್ಲಿ ಛಳಿಜ್ವರದ ಉಪದ್ರದಿಂದ ೩–೩ ದಿನ ಖಾಲಿಯಾದರು, ಊರಲ್ಲಿ ಇನ್ನೂ ಅನೇಕರು ಕಾಯಿಲೆಯಲ್ಲಿರುತ್ತಾರೆ. ಇಲ್ಲಿಯ ಆಸ್ಪಿಟಲ್ ಅಸಿಸ್ಟೆಂಟರು ಜನಗಳ ಕಡೆಗೆ ಬಹು ದಯಾಳುಗಳಾಗಿರುವದರಿಂದ ಆಸ್ಪತ್ರೆಯು ಜನಗಳಿಂದ ತುಂಬಿರುತ್ತೆ. ಯಾಕೆಂದರೆ ಬಂದ ರೋಗಿಗಳನ್ನೆಲ್ಲಾ ಬಹಳ ಮಮತೆಯಿಂದ ಪರಾಮರ್ಶಿಸಿ, ತಕ್ಕ ಮದ್ದು ಕೊಡುತ್ತಾರೆ. ಸ್ವಾಮಿ ದಯದಿಂದ ಅನೇಕ ಕಠಿಣ ಕಾಯಿಲೆಗಳನ್ನೂ ಇವರು ವಾಸಿಮಾಡಿದರು. ಸಮೀಪದ ಊರಿನ ಗ್ರಾಮಸ್ಥರೂ ಕೂಡ ನಂಬಿಕೆಯಿಂದ ಬಂದು ಮದ್ದುಸೇವಿಸಿ ಗುಣಹೊಂದುತ್ತಲಿದ್ದಾರೆ.—ಊರು ಪಾಕೀಜಿನ ಸಂಬಂಧ ನಮ್ಮ ಅಮಲ್ದಾರರ ಸವಾರಿ ಆಗಾಗ್ಗೆ ಊರೊಳಗೆ ಪರ್ಯಟನೆ ಮಾಡುತ್ತಾ ಇದ್ದು ಕೆಲಸಕ್ಕೆ ನಿಗಾ ಕೊಟ್ಟಿರುವದರಿಂದ ಊರು ಬಹು ಚೆನ್ನಾಗಿ ಪಾಕೀಜಿನ ಸ್ಥಿತಿಯಲ್ಲಿದೆ.—ನಮ್ಮಲ್ಲಿರುವ ಬಾಲಕಿಯರ ಪಾಠಶಾಲೆಯನ್ನು ಸ್ಕೂಲ್ ಇನ್ಸ್‌ಪೆಕ್ಟರವರು ಪರೀಕ್ಷಿಸಿದರು. ಆದರೆ ಅದರಲ್ಲಿ ಗಾಯನ ಮುಂತಾದ್ದೆಲ್ಲಾ ಇಟ್ಟರೂ, ಬಾಲಕಿಯರಿಗೆ ಅವಶ್ಯಕವಾದ ಹೊಲಿಗೇ ಪಾಠವೇ ಇಲ್ಲ. ಇದರ ವಿಷಯ ಏರ್ಪಾಟಾಗಿದೆಯಂತೆ. ಆದರೆ ಯಾವಾಗ ಬಳಕೆಗೆ ಬರುತ್ತದೋ ನೋಡಬೇಕು.—ನಮ್ಮಲ್ಲಿರುವ ಎ ವಿ ಸ್ಕೂಲಿನ ಸಂಬಂಧಗಳು ತಮ್ಮ ಕರಕರೆಯನ್ನು ಎಷ್ಟು ಹೇಳಿದರೂ ತೀರದು. ತಾಲ್ಲೂಕು ಎಂಬ ಹೆಸರಿನ ಗೌರವಕ್ಕೆ ಸರಿಯಾದರೂ ಇಂಗ್ಲಿಷ್ ವಿದ್ಯೆಯಲ್ಲಿ ವಿದ್ಯಾ ಇಲಾಖೆಯವರಿಗೆ ನಮ್ಮ ತಾಲ್ಲೂಕಿನ ಈ ಸ್ಕೂಲಿನ ಮೇಲೆ ಯಾವಾಗ ಅಂತಃಕರಣದ ಕಣ್ಣುಗಳು ತೆರೆಯುತ್ತವೋ ಗೊತ್ತಿಲ್ಲ. ತಾಲ್ಲೂಕಿಗೆ ಬೇಕಾದಷ್ಟು ವಿದ್ಯೆ ಕೊಡುವ ಮಾಸ್ತರರು ಯಾವಾಗ ಬಂದಾರೆಂಬದನ್ನು ಮಳೆ ಬರುವದನ್ನು ಕಾಯುವ ಹಾಗೆ ನಾವೆಲ್ಲ ಕಾಯುತ್ತಲಿರುತ್ತೇವೆ.—ಪೋಲೀಸಿನವರು ಬಹು ಚೆನ್ನಾಗಿ ಬೀಟ್ ತಿರುಗುತ್ತಲಿದ್ದಾರೆ. ಒಟ್ಟು ಈ ಕಸಬಾದ ಎಲ್ಲಾ ಕಾರ್ಯಗಳು ಈಗಿನ ನಮ್ಮ ಅಮಲ್ದಾರರ ಪ್ರೀತಿ, ನೀತಿಗಳ ಆಳುವಿಕೆಯಿಂದ ಶಕ್ಯ ಮಟ್ಟಿಗೆ ಚೆನ್ನಾಗಿ ನಡಿಯುತ್ತಲಿವೆ.

ಹೊಳೆನರಸೀಪುರ.—ಈಚೆಗೆ ೩—೪ ರದ ಒಳ್ಳೇ ಮಳೆಯಾದ್ದರಿಂದ ಜನಗಳಿಗೂ ಜಾನುವಾರುಗಳಿಗೂ ಸಮೃದ್ಧಿಯಾಗಿ ನೀರು ದೊರಕುವದಕ್ಕೆ ಮಾರ್ಗವಾಯಿತು. ರೈತರು ಹೊಲಗಳಿಗೆ ರಾಗಿ ಮತ್ತೆ ಬಿತ್ತುವರು.—ತಾ॥ ೨೪ ನೇ ಗುರುವಾರ "ಎಂಪೈರ್ ಡೆ" ಎಂಬ ಉತ್ಸವವು ಎ ವಿ ಸ್ಕೂಲಿನಲ್ಲಿ ಬಹು ವಿಜೃಂಭಣೆಯಿಂದ ನಡೆಸಲಾಯಿತು. ಸರ್ಕಲ್ ಇನ್ಸ್‌ಪೆಕ್ಟರೂ, ಅಮಲ್ದಾರರೂ, ಸಬ್ ಡಿವಿಜನ್ ಆಫೀಸರೂ ಪಾರ್ಟರೂ, ಅನೇಕ ಜನ ಪ್ಲೀಡರುಗಳೂ, ಸ್ಕೂಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರೂ ಸಹ ಸೇರಿದ್ದರು. ಸರ್ಕಲ್ ಇನ್ಸ್‌ಪೆಕ್ಟರು ಅಗ್ರಾಸನವನ್ನು ವಹಿಸಿದ್ದರು. ಮಿ॥ ಕೃಷ್ಣಪ್ಪನವರು ಒಂದು ಉಪನ್ಯಾಸ ಮಾಡಿ, ಇಂಗ್ಲೀಷ್ ರಾಜ್ಯಭಾರದಲ್ಲಿ ಜನಗಳಿಗಿರುವ ಸೌಕರ್ಯಗಳೂ, ಜವಾಬ್ದಾರಿಗಳೂ, ಇವುಗಳನ್ನು ಕುರಿತು ತಿಳಿಸಿದರು. ನಂತರ ಮಿ॥ ಭೀಮಸೇನಾಚಾರ್ಯರು ಮೇಲಿನ ಸಂಗತಿಗಳನ್ನು ಕುರಿತು ವಿಸ್ತಾರವಾಗಿ ಉಪನ್ಯಾಸ ಮಾಡಿದರು. ಪ್ಲೀಡರ್ ಮಿ॥ ರಾಮಣ್ಣನವರು ಅಧಿಕಾರಿಗಳಿಂದ ಜನಗಳು ರಾಜರುಗಳನ್ನು ಯಾಕೆ ಕಟ್ಟಬೇಕೆಂದು ಭಾವಿಸುವರು ಎಂಬುವದರ ಮೇಲೆ ಒಂದು ಉಪನ್ಯಾಸ ಮಾಡಿದರು. ನಂತರ ಅಮಲ್ದಾರರು ಒಂದು ಉಪನ್ಯಾಸ ಮಾಡಿದರು. ಆ ವೇಳೆ ಸ್ಕೂಲ್ ಬಾಲಕಿಯರು ಮಂಗಳಕೀರ್ತನೆಗಳನ್ನು ಹಾಡಿದರು. ನಂತರ ಇಬ್ಬರು ಬಾಲಕರು ಭಗವಂತನನ್ನು ಮಾನಸೆಂಬ ಹೆಸರಿನಿಂದ ಒಂದು ಪದ್ಯವನ್ನು ಹಾಡಿದರು. ಬಾಲಕರಿಂದ ಆಟಪಾಟಗಳು ಆಡಿಸಲ್ಪಟ್ಟವು. ಬಾಲಕಬಾಲಕಿಯರಿಗೆ ಸಕ್ಕರೆ ಹಂಚಲ್ಪಟ್ಟಿತು. ಸಾರ್ವಭೌಮರ ಶ್ರೇಯಸ್ಸನ್ನು ಕೊಂಡಾಡಿ ಸಭಿಕರೆಲ್ಲಾ ಸಕ್ಕರೆ ತಾಂಬೂಲಾದಿಗಳನ್ನು ಹಂಚಿ, ಸಭೆಯು ಮುಕ್ತಾಯವಾಯಿತು.—ಇನ್ಸ್‌ಪೆಕ್ಟರು ಇಲ್ಲಿನ ಹೆಣ್ಣು ಸ್ಕೂಲುಗಳನ್ನೆಲ್ಲಾ ಪರೀಕ್ಷೆ ಮಾಡಿದರು.—ಊರು ಪಾಕೀಜು ವಿಷಯ ನಮ್ಮ ಅಮಲ್ದಾರರು ತುಂಬಾ ಮುತುವರ್ಜಿ ವಹಿಸಿರುವದರಿಂದ ಬಹು ಶುಚಿಯಾಗಿದೆ. ಈ ಊರು ಚಿಕ್ಕಮಾದಿಗ್ಗೇರಿಯ ಹಿಂಭಾಗದ ತೋಟದಲ್ಲಿ ಯಾವಾಗಲೂ ಹಲದಿನ ಪ್ರತಿ ಗಂಟೆಯಲ್ಲೂ ಯಥೇಚ್ಛವಾದ ಜೂಜಾಟವು ನಡೆಯುವದು. ದಿನಕ್ಕೆ ನೂರು, ನೂರೈವತ್ತು ರೂಪಾಯಿಗಳ ವರಿಗೂ ಓಡಾಡುತ್ತೆ. ಮುಂದೆ ಇವರುಗಳೆಲ್ಲಾ ಸರಕಾರದಿಂದ ಲೈಸೆನ್ಸ್ ಪಡೆದು ಪಬ್ಲಿಕ್ಕಾಗಿ ಆಡಲಿಚ್ಛಿಸಿದಾರೆ. ಇವರ ಧೈರ್ಯಕ್ಕೆ ಕೆಲವು ಪೋಲೀಸಿನವರು ಕಾರಣರಾಗಿರಬಹುದೋ! ಮುಂದೆ ಹೀಗೆ ಇದ್ದಲ್ಲಿ ಆ ಪೋಲೀಸಿನವರ ಹೆಸರು ನಂಬರುಗಳನ್ನು ಸೂಚಿಸುವೆನು.—ಈ ಸಾರಿ ಅನೇಕ ಮದುವೆಗಳು ಬಹು ವಿಜೃಂಭಣೆಯಿಂದ ನಡೆದವು.—ನಮ್ಮ ಪೋಸ್ಟ್‌ಮಾಸ್ಟರು ಅರ್ಜಿ ಕಾಗದ, ಸ್ಟಾಂಪು ವಗೈರೆ ಮಾರುವದರಿಂದ ಜನಗಳಿಗೆ ಯಾವ ಕಾಲದಲ್ಲಾದರೂ ಕೊಂಡುಕೊಳ್ಳುವದಕ್ಕೆ ಅನುಕೂಲವಾಗಿದೆ.

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-2

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ವಿಷಯಗಳುಳ್ಳ ಕನ್ನಡ ಪುಸ್ತಕ—ಕ್ರಯ ೧೧ ಆಣೆ. ವಿ. ಪಿ. ಯಿಂದ ಕಳಿಸಬೇಕಾದರೆ ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಜಲ್ದಿ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

87 2

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಪಣವ್ಯಯ ಮಾಡಿ ಹಿಂದೂ ದೇಶವನ್ನೆಲ್ಲಾ ನೋಡುವದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಬಹು ಪರಿಷ್ಕಾರವಾಗಿ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ ತಾಜ ಮಹಲ್, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾ ನಗರ, ಕಲ್ಕತ್ತಾ ಹೈಕೋರ್ಟು, ಕಾಳಿಕಾದೇವತೆ, ಚಂದ್ರನಗರ ಬಂಗಾಳಿಯರ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥದ ರಥೋತ್ಸವ, ಕೆನಡಾಕ್ ದೇವಸ್ಥಾನ, ಎವರೆಸ್ಟ್ ಶಿಖರ, ಬೃಂದಾವನಗರದ ಬೀದಿ, ಬೃಂದಾವನಗರದ ದೇವಸ್ಥಾನಗಳು, ಜಹಜುಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಗಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದಿನಲ್ಲಿರುವ ಖುಸ್ರುಬಾಗ್ ಅರಮನೆ, ಯಮುನಾನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನಪುರದಲ್ಲಿರುವ ಶಿಲಾಶಾಸನ, ಕಾನಪುರದ ಹತ್ತಿರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋನಗರದ ರೆಸಿಡೆನ್ಸಿ ಬಂಗಲೆ, ಲಕ್ನೋಪಟ್ಟಣದ ಬಾಗಿಲು, ಸರ್ ಹೆನ್ರಿ ಹ್ಯಾವಲಾಕನು, ಗೋಮತಿ ನದಿಯ ಮೇಲಿರುವ ಅರಮನೆ, ಪ್ಲಾಮದಲ್ಲಿ ಜನಸ್ಥಿತಿ, ಹರಿದ್ವಾರ ಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯ ದಡದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯು, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾಪಟ್ಟಣದ ಮುತ್ತಿನ ಮಸೀತಿ, ಫತ್ತೆಪುರ್ ಸಿಕ್ರಿಯಲ್ಲಿರುವ ಪಾಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್‌ಸಿಂಗರ ಗೋರಿ, ಅಲೆಕ್ಸಾಂದರನೂ ಪೋರಸನೂ, ದೇಹಲಿ ನಗರದ ದೊಡ್ಡ ಮಸೀತಿ, ಪುರಾತನ ದೇಹಲಿಯ ಬಾಗಿಲು, ರಾಜಪುತ್ರನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್‌ಷಹಾನು ದೇಹಲಿ ನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು, ದೆಹಲಿಯ ಬಳಿಯಲ್ಲಿರುವ ಕುಟುಬ್‌ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ, ಸಿಮ್ಲಾ, ಅಮೃತಸರದ ಸುವರ್ಣಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುತ್ತದೆ. ಹಿಂದೂ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಪನ್ನೆರಡು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ. ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ಪ್ರಯೋಗಿಸಿರುತ್ತೇವೆ. ಪುಸ್ತಕದ ಅಚ್ಚು ಮತ್ತು ಪೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ಹನ್ನೊಂದು ಆಣೆಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿರುವದರಿಂದ ಕಾವ್ಯಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗ ಬರೆದು ತರಿಸಿಕೊಳ್ಳಬೇಕು.

ನಮ್ಮ ವಿಳಾಸ:—ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-30

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಶ್ರೇಷ್ಠ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆ ೧ಕ್ಕೆ ರೂ. ೨ ವಿ. ಪಿ. ಛಾರ್ಜಿ ೭ ಆಣೆ

೨ ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಇಲ್ಲದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ಕ್ಕೆ ೮ ಆಣೆ ವಿ. ಪಿ ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜಿ ೫ ಆಣೆ.

೩. ಲಕ್ಷ್ಮೀಕರ ಕಸ್ತೂರಿಮಾತ್ರೆ—ಇದು ತಾಂಬೂಲಕ್ಕೆ ಪ್ರಾಣಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುವು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವುವು. ಇದರಲ್ಲಿ ಅಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಬರಿಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸದಾ ನೋಡಿಕೊಳ್ಳುವದು. ಜ್ವರ, ಶೀತ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ. ೧ ರಿಂದ ೧೨ ಸೀಸೆಗೆ ವಿ. ಪಿ ಛಾಂಗಿ ಛಾರ್ಜಿ ೫ ಆಣೆ.

೪. ವೇದನಾಪರಿಹಾರಕ ತೈಲವು —ಇದನ್ನು ಮೈಲ್ಯಾಗದಲ್ಲಿ ಮಾಲಿಶ್ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವದು ವಾತರೋಗ, ಪಾರ್ಶ್ವವಾಯು, ನರಗಳ ಸೆಳೆತ, ಮೊಣಕಾಲು ಸೊಂಟ ಮತ್ತು ಎದೆ ಇವುಗಳ ನೋವು, ತೋಳು ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ೧ ರೂ ೩ ಬಾಟ್ಲಿ ವರೆಗೆ ವಿ ಪಿ. ಛಾಂಗಿ ಛಾರ್ಜಿ ೫ ಆಣೆ.

೫ ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು —ಹೇನುತಲೆ, ಹುಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಬೆಲೆ ಸೀಸೆ ೧ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ. ಪಿ ಛಾರ್ಜಿ ೫ ಆಣೆ

೬. ನೇತ್ರಬಿಂದು.—ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬೀಳುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ೧ಕ್ಕೆ ೮ ಆಣೆ. ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೭ ಶ್ರೋತ್ರಬಿಂದು —ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನೂ ಕೀವು ಸುರಿಯುವುದು, ಕಿವಿಯ ಮಾಂದ್ಯವೂ, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು, ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ ಪಿ ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೮. ಹುಳಕಡ್ಡಿಗೆ ಔಷಧಿ.—ಚರ್ಮ ರೋಗಕ್ಕೂ, ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವದಿಲ್ಲ. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ ಆಣೆ.

೯. ಸುಖಭೇದಿ —ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ಥ ಜ್ವರ, ಇವುಗಳನ್ನು ವಾಸಿಮಾಡುವುದು ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜಿ ೬ ಸೀಸೆ ವರೆಗೂ ೫ [illegible].

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to :—P. SUBBAROY,
Porto Novo, South Arcot.

ವಿಳಾಸ:—ಪಿ. ಸುಬ್ಬರಾಯನ್,
ಪೋರ್ಟನೋವೋ, ದಕ್ಷಿಣ ಅರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

18—5—1906 ರಿಂದ 25—5—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದ ವರ್ಷ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	0	0	1	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	4	3
ಮೈಸೂರು ,,	0	0	0	1
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	2	2
ಹಾಸನ (ಹೊರಗಿನದು)	1	0	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	0	0	3	6
ಜುಮ್ಲಾ.	1	0	20	12

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಜ್ಯೇಷ್ಠ ಬಹುಳ ಪಾಡ್ಯಮಿ ಗುರುವಾರದಿಂದ ಜ್ಯೇಷ್ಠ ಬಹುಳ ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಜೂನ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ದನು ಮಾಸ
7	ಗುರು	ಪಾಡ್ಯ	47-40	ಜ್ಯೇ	24 4	25
8	ಶುಕ್ರ	ಬಿದಿಗೆ	42-3	ಮೂಲ	20-1	26
9	ಶನಿವಾ	ತದಿಗೆ	37-10	ಪೂಷಾ	17-22	27
10	ರವಿವಾ ಕ್ಷ	ಚೌತಿ	33 2	ಉತ್ತಾಷಾ	14-10	28
11	ಚಂದ್ರ	ಪಂಚಮಿ	29 54	ಶ್ರ	13-10	29
12	ಕುಜ	ಷಷ್ಠಿ	27-56	ಧ	12-38	30
13	ಬುಧ	ಸಪ್ತಮಿ	27-2	ಶ	13-10	31

. [illegible] ಸಂಕಷ್ಟಚತುರ್ಥಿ. [illegible]
,, ಉತ್ತರಾಯೋಗ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು.
ಕಳ್ಳೀ ಅಕ್ಕಿ ಪಲ್ಲ ೧ಕ್ಕೆ	ರೂ. ೧೩-೮-೦	೧[illegible]-೦-೦
ಕೆಂಬೂತಿ ಅಕ್ಕಿ ಅವಲ್ ..	೧೩-[illegible]-೦	೧೩-೮-೦
,, ದುಯ್ಯಂ ..	೧೩-೪-೦	೧೩-೦-೦
ಜಂಬ್ರಾಳ ಅಕ್ಕಿ ..	೧೭-೦-೦	೧೨-೧೨-೦
ಸಣ್ಣಕ್ಕಿ ಅವಲ್ ..	೧೫-೦-೦	೧೭-೮-೦
,, ದುಯ್ಯಂ ..	೧೬-೦-೦	೧೫-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ ..	೧೧-೬-೦	೧೧-೦-೦
,, ದುಯ್ಯಂ ..	೧೦-೮-೦	೧೦-೮-೦
ಹೈರ್ ರಾಗಿ ಪಲ್ಲ ೧ಕ್ಕೆ ..	೮-೨-೦	೬-೪-೦
ಕಾರಾಗಿ ..	೭-೮-೦	೬-೦-೦
ಜೋಳ ..	೯-೬-೦	೯-೦-೦
ಹಲಸಂದೆ ಪಲ್ಲ ೧ಕ್ಕೆ ..	೯-೮-೦	೧೦-೦-೦
ಬಿಳೀ ಅವರೆ ..	೮-೬-೦	೯-೦-೦
ಹೆಸರು ..	೧೨-೮-೦	೧೦-೪-೦
ಉದ್ದು ..	೧೨-೪-೦	೧೦-೧೨-೦
ಕಡಲೆ ..	೧೧-೬-೦	೧೦-೦-೦
ಎಳ್ಳು ಸೆ ೧೨೭ ಕ್ಕೆ ..	೨೧-೮-೦	೨೦-೮-೦
ಹುರುಳಿ ..	೮-೮-೦	೯-೦-೦
ಹರಳು ೧೨೭ ಸೇರಿಗೆ ..	೧೫-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ ..	೩-೦-೦	೩-೦-೦
ಮೆಣಸಿನಕಾಯಿ ..	೪-೦-೦	೩-೮-೦
,, ದುಯ್ಯಂ ..	೩-೬-೦	೩-೪-೦
ಬೆಲ್ಲ ದೊಡ್ಡ ಅಚ್ಚು ..	೪-೬-೦	ಮ ೧-೯-೦
ಬಳ್ಳೊಳ್ಳಿ ಮಣ ೧ಕ್ಕೆ ..	೫-೪-೦	೫-೬-೦
ಈರುಳ್ಳಿ ,, ..	೫-೮-೦	೭-೦-೦
ಕೊತ್ತುಂಬರಿ ಪಲ್ಲ ೧ಕ್ಕೆ ..	೧೦-೮-೦	೧೦-೮-೦
ಉಪ್ಪು ,, ..	೭-೧೧-೦	೬-೮-೦
ಹುಣಸೇ ಹಣ್ಣು ..	೦-೧೨-೦	೦-೧೨-೦
,, ಹಳೇದು ..	೦-೮-೦	೦-೧೦-೦
ತುಪ್ಪ ಮಣ ೧ಕ್ಕೆ ..	೧೬-೧೨-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	೫-೪-೦	೪-೨-೦
ತೆಂಗಿನಕಾಯಿ ೧೦೦ ಕ್ಕೆ ..	೫-೭-೦	೪-೪-೦
ಅಳಲೇಕಾಯಿ ಮಣ ೧ಕ್ಕೆ ..	೧-೧-೦	೦-೧೧-೦
ಅಂಟ್ವಾಳದ ಕಾಯಿ ಮಣ ೧ಕ್ಕೆ ..	೦-೧೨-೦	೦-೧೩-೦
ಚಿನ (ಪ್ಲೌನ್) ಕೆಂಪು ..	೧೫-೪-೦	೧೫-೪-೦
,, ,, ಹಸಿರು ..	೧೫-೧೦-೦	೧೬-೩-೦
,, ,, ಗಟ್ಟಿ ತೊಲ ೧ಕ್ಕೆ ..	೨೩-೧೨-೦	೨೪-೫-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	೮೫-೦-೦	೮೩-೦-೦

Printed and Published by the Rev. E. W. THOMPSON, M.A. the Proprietor and Manager, Wesleyan Mission Press Mysore. 7/6/1906.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಜೂನ್ ತಾರೀಖು ೧೪ ನೇ ಗುರುವಾರ. ಸಂಚಿಕೆ ೨

೫,೦೦೦ ಪವುಂಡ್ ಪ್ರೈಜ್ ದಾರ ಮಾತ್ರ ಇದೆ.

40-17

೧ ಬೇಬಿಯಾನ್ ವುಲ್ ಪವುಂಡ್ ೧ ಕ್ಕೆ ೧—೧೦—೦
೨ ಪರ್ಸ ಸಿಲ್ಕ್ ,, ,, ,, ೧—೧೪—೦
೩ ಸ್ಕಾಚ್ ಫಿಂಗರಿಂಗ್ ,, ,, ೨—೦—೦
೪ ಸ್ಲೋಮಂಡಸ್ಟ ,, ,, ,, ೩—೪—೦

ಪೋಲ್ ಬೇಬಿ ಡಜನ್ ೧ ಕ್ಕೆ ೩—೦—೦, ಒಂದೇ ದಫಾ ೧೦ ಡಜನ್ ತರಿಸಿಕೊಳ್ಳುವವರಿಗೆ ೨—೧೨—೦.

ಹೊಸ ನಮೂನೆ ದೊಡ್ಡ ಸ್ಟಿಚು ಪೋಸ್ಟ್ ಕಾರ್ಡುಗಳು.

೧ ಸಿಂಗಲ್ ಕಲರ್ ೧೦೦ ಕ್ಕೆ ೦-೨-೦. ೧೦೦೦. ೧-೪-೦
೨ ಡಬಲ್ ಕಲರ್ ೧೦೦ ಕ್ಕೆ ೦ ೩ ೦ ೧೦೦೦ ೧-೧೦-೦

ವಿ. ಪಿ. ಮೂಲಕ ತರಿಸಿಕೊಳ್ಳುವವರು ಮಾತ್ರ ೧೦೦ ಕ್ಕೆ ೨೫ ರಂತೆ ಮುಂಗಡವಾಗಿ ಕಳುಹಿಸದ ಹೊರತು ವಿ. ಪಿ. ಮೂಲಕ ಕಳುಹಿಸಲಾರೆವು.

ಪೌಲ್, ಯೆ. ಪೋರವಾಲ್ ಕಂಪನಿ, ಬೆಂಗಳೂರು ಸಿಟಿ.

ಹೋ ಮಿ ಯೋ ಸಿ ಯಾ.

ಈ ಔಷಧಿಯು ಮನೆ, ಜನಾನ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣೆ, ವಿದ್ಯಾಶಾಲೆ, ಹೋಟೆಲ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಾತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಪ್ಪುಲಿಯುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಟ್ಲು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಸಿಯಾ ಕಂಪೆನಿ, ೨೩, ಸೆಂಟು ಜೇಮ್ಸ್ ಸ್ಟ್ರೀಟ್, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಶನಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35-16

ವ್ಯಾಪಾರದ ಹೆಗ್ಗುರುತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರುತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 71-7



ಇದು ಸಾಧಾರಣ ಜ್ವರ, ಚಳಿಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ವೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಪೇ ಯಿಂ ಕ್ಯೂ ರ ರ್.

Pain Curer.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆನ್ರಿಯು ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಅಗಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಂಟ್ ಜೇಮ್ಸ್ ಸ್ಟ್ರೀಟ್, ಮದ್ರಾಸ್.

“ವೃತ್ತಾಂತ ಪತ್ರಿಕೆ” ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-22



ಬ್ರೈಡ್ ಮತ್ತು ಈಸ್ಟ್ಲೆಂಡ್,
೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂಡಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಂಗಡಿಗೂ ಮನೆಗೂ ಬೇಕಾದಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಭರಣಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ವಿಕರಿ ಮಾಡುತ್ತಾರೆ. ಇವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಳಿ ಟಪ್ಪಾಲಿಗೇನೇ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—7

ನಿಯಮಕ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರುವದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ವಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಬಾಬಿಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಡ್ಮಿಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಪರಿಮಳ ನಶ್ಯದಪುಡಿ

88-2

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—9—0
ಛಾಂಗಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ........	0—6—0
ಛಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳ್ಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—ಮಾನೇಜರ್, ಧರ್ಮ ವೈದ್ಯಶಾಲಾ,

69 ಟ್ಯಾಂಕ್‌ಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಅನುಭವಿಸುವವರ ಹಿತಕಾರಿ.

86-3

"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ."

ಹೊರಗಡೆ ಹಚ್ಚುವುದಕ್ಕೆ ಮಾತ್ರ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳನೋವು, ತಲೇನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು ಗಂಟಲುಬ್ಬು, ಕೀಲುಬೆನ್ನು ಎಲುಗಳನೋವು, ಆಸ್ತ್ಮ, ಚೇಳು ಮುಂತಾದವುಗಳು ಕಡಿದನೋವು, ಇನ್ನೂ ಅನೇಕತರದ ದೇಹಬಾಧೆಗಳಿಗೆ ಕ್ಲೆಮೆಂಟ್ ಮ್ಯಾಜಿಕ್ ಬಾಂ ಎಂಬ ಔಷಧವನ್ನು ಹಚ್ಚಿದಲ್ಲಿ ಸುಖವಾಗಿಯೂ ಖಂಡಿತವಾಗಿಯೂ ಗುಣವಾಗುತ್ತವೆ. ಇದರ ಕ್ರಯ.— ೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ; ೬ಕ್ಕೆ ರೂ ೩||; ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ಬೇರೆ.

ಇದಲ್ಲದೆ ನಮ್ಮಲ್ಲಿ ಸಪ್ರಯೋಗ್ಯವಾದ ಇನ್ನೂ ಅನೇಕತರದ ಔಷಧಗಳು ಮಾರಾಟವಾಗುತ್ತಿವೆ, ಪ್ರತಿ ಒಂದೂ ಖಂಡಿತವಾಗಿ ಗುಣಕೊಡತಕ್ಕದ್ದು ಒಂದಾವರ್ತಿ ಅವನ್ನು ತರಿಸಿ ಉಪಯೋಗಿಸಿದಲ್ಲಿ ಗುಣ ತಪ್ಪದ್ದಕ್ಕೆ ತಾನೇ ಗೊತ್ತಾಗುತ್ತೆ, ಮತ್ತು ಅವನ್ನು ಸದಾ ಮನೆಯಲ್ಲಿ ಇಟ್ಟುಕೊಂಡಿರಬೇಕೆಂದು ಎಲ್ಲರಿಗೂ ವ್ಯಕ್ತವಂತಕ್ಕೆ ಬಂದೀತು. ವಿಳಾಸ.—ಏಜೆಂಟ್, ಎಸ್. ಪಬ್ಲಿಯ. ಆರ್, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಇಮಿಟೇಷನ್ ವಜ್ರದ ಹರಳಿನಲ್ಲಿ ತಯಾರಿಸಿದ ಷರಟು ಗುಂಡಿ.

84-3

ಇದು ಒಂದು ಅತ್ಯುತ್ಕೃಷ್ಟಕರವಾದ ನಿವರ್ಣದ ಷರಟು ಗುಂಡಿ.

ಕ್ರಯ ಸೆಟ್ ೧ಕ್ಕೆ ರೂಪಾಯಿ ೧—೦—೦



ನವರತ್ನಗಳೊಳಗೆ ಶ್ರೇಷ್ಠವಾದ ವಜ್ರದ ಆಭರಣವು ಸಕಲರಿಗೂ ಸಾಧ್ಯವಿಲ್ಲದೇ ಇದ್ದಾಗ್ಯೂ ಅಮೇರಿಕಾ ದೇಶದವರು ವಜ್ರಕ್ಕೆ ಸಮಾನವಾದ ಪ್ರತಿರೂಪ ವಜ್ರವನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಾಂಡ್) ಎಂಬ ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಷರಟು ಗುಂಡಿಗಳನ್ನು ತಯಾರಿಸಲ್ಪಟ್ಟಿರುತ್ತೇವೆ ಇದರ ಪ್ರಭಾವವು ದೀಪದ ಬೆಳಕಿಗೆ ಮಿಂಚಿನಂತೆ ಥಳಥಳಿಸುವದಲ್ಲದೆ ವಜ್ರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇದನ್ನು ಒಂದು ಸೆಟ್ಟು ತರಿಸಿ ಪರೀಕ್ಷಿಸಿದರೆ ಇದರ ನಿಜಸ್ಥಿತಿ ಗೊತ್ತಾಗುತ್ತೆ

ಭಂಗಾರದ ಗಿಲೀಟಿನ ಛಳಕೀ ಗುಂಡು.



ಇದು ಕೈಗ್ಗೆ ಅಲಂಕರಿಸುವ ಬಂಗಾರದ ಗಿಲೀಟಿನ ಛಳಕೀಗುಂಡು ಮತ್ತು ಕೆಂಪು ಹವಳ ಇವುಗಳನ್ನು ಕಂಬಿಯಲ್ಲಿ ಪೋಣಿಸಿ ಕಟ್ಟಲ್ಪಟ್ಟಿರುತ್ತೆ ಈ ಹವಳದ ಬಣ್ಣವು ಎಂದಿಗೂ ಕೆಡಲಾರದು ಜೊತೆ ಒಂದಕ್ಕೆ ದೊಡ್ಡವರಿಗೆ

	ಕ್ರಯ ರೂಪಾಯಿ		೨—೩—೦
ಚಿಕ್ಕವರಿಗೆ	ಕ್ರಯ	"	೨—೦—೦
ಮಕ್ಕಳಿಗೆ	ಕ್ರಯ	"	೧—೧೨—೦

ಮೈಸೂರು ದೇಶದ ಕೈಕಪ್ಪ. ಬೆಲೆ ರೂಪಾಯಿ ೧—೦—೦



ಇದನ್ನು ಗಂಡಸರು ಕೈಗೆ ಹಾಕಿಕೊಳ್ಳುವ ಭಂಗಾರದ ಗಿಲೀಟಿನ ಕಂಬಿಯಲ್ಲಿ ಬಹು ಸೊಗಸಾದ ಮಲಿಗೆಯನ್ನು ಹಾಕಿ ನೋಟಕ್ಕೆ ಅತಿ ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇದರ ಬಣ್ಣ ಬಹಳ ಕಾಲದವರಿಗೆ ನಿಲ್ಲುವಂತೆ ಹೊಸ ನಮೂನೆಯ ಲೋಹದಿಂದ ತಯಾರಿಸಿ ಭಂಗಾರದ ಗಿಲೀಟ್ ಹಾಕಲ್ಪಟ್ಟಿರುತ್ತೆ. ಇದನ್ನು ನೋಡಿದವರು ನಿಜವಾದ ಭಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



15-23

ಶೀತದ ಕೆಮ್ಮು, ಗಂಟಲು ಗೂರೆನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮಕಟ್ಟುವುದನ್ನೂ ಶ್ಲೇಷ್ಮಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣಸೀಸೆಗೆ ೧ ರೂಪಾಯಿ. ದೊಡ್ಡಸೀಸೆಗೆ ೨ ರೂಪಾಯಿ.

ಒಳ್ಳೇ ಸಮಯ

83-3

ಈ ಕ್ರಯಕ್ಕೆ ಎಂದಿಗೂ ಸಿಕ್ಕತಕ್ಕದಲ್ಲ.

ಈ ಕೆಳಗೆ ನಮೂದಿಸಿ ಇರುವ ೬ ರೂಪಾಯಿಗಳ ಗಡಿಯಾರವನ್ನು ಬರುವ ಜುಲೈ ಆಖೈರು ವರೆಗೆ ರೂ ೩—೧೪—೦ ಗೆ ಕೊಡಲ್ಪಡುತ್ತೆ.



ಶ್ರೀವಿಕಟೋರಿಯಾ ಸ್ಟಾರ್ ಪ್ರತಿಮೆ, ಸ್ವಯಮಾರ್ಪಣ, ಸಂಕೋಚವಿಸ್ತಾರತಕ್ಕ ಗಡಿಯಾರವು, ೩೦ ಗಂಟೆಗಳ ಕಾಲಕ್ಕೆ ಬೀಗ ಕೊಡುವುದು. ೨೦ ವರುಷಗಳ ವರೆಗೆ ಚನ್ನಾಗಿ ನಡೆಯುತ್ತಿರುವದು ... ನಮೂನೆ ... ಸಹಿತ ಮೊದಲಿನ ಕ್ರಯ ರೂ ೬. ಈಗಿನ ಕ್ರಯ ರೂ ೩—೧೪—೦

ಅಲಾರಂ ಟಯಂಪೀಸು.



ಇದು ಬಹಳ ಮೇಲಾದ ಸಾಮಾನುಗಳಿಂದ ತಯಾರಿಸಲ್ಪಟ್ಟದು (೩೦)ಗಂಟೆಗೊಂದು ಸಾರಿ ಬೀಗ ಕೊಡತಕ್ಕದ್ದು ಸ್ವಲ್ಪವು ವ್ಯತ್ಯಾಸವಿಲ್ಲದಂತೆ ಕಾಲವನ್ನು ತೋರಿಸತಕ್ಕದ್ದು. ವಿದ್ಯಾರ್ಥಿಗಳಿಗೂ ಮತ್ತು ಆಫೀಸು ಉದ್ಯೋಗಸ್ಥರುಗಳಿಗೂ ವರ್ತಕರುಗಳಿಗೂ ಬಹಳ ಉಪಯೋಗವಾದದ್ದು. ಎರಡುನಿಮಿಷಗಳ ವರಿಯಂತರ ಗಾಢನಿದ್ರೆಯಲ್ಲಿ ಇದ್ದವರನ್ನು ಎಚ್ಚರಿಸುವಷ್ಟು ಅಲಾರಂ ಧ್ವನಿ ಕೊಡತಕ್ಕದ್ದು ಇದಕ್ಕೆ ನಾವು ೫ ವರುಷಗಳ ವರಿಗೆ ಗ್ಯಾರಂಟಿ. ಇದರ ಕ್ರಯ ರೂಪಾಯಿ ೨—೮—೦

ಸಾದಾ ಟಯಂಪೀಸು.



ಇದು ಆಫೀಸಗಳಿಗೂ, ಸ್ಕೂಲ್‌ಗಳಿಗೂ, ದೊಡ್ಡ ಮನುಷ್ಯರ ಮನೆಗಳಲ್ಲೂ ಇರುವದಕ್ಕೆ ಲಾಯಖಾದದ್ದು ೩೦ ಗಂಟೆಗೆ ಒಂದು ಸಾರಿ ಬೀಗ ಕೊಡತಕ್ಕದ್ದು. ಅನೇಕ ಕಾಲಗಳ ವರಿಗೆ ಒಂದು ಸೆಕಂಡು ಸಹ ವ್ಯತ್ಯಾಸವಿಲ್ಲದೇ ನಡಿಯತಕ್ಕದ್ದು. ಇದಕ್ಕೆ ನಾವು ೫ ವರುಷಗಳವರಿಗೆ ಗ್ಯಾರಂಟಿ. ಕ್ರಯ ರೂಪಾಯಿ ೧—೮—೦

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ನಮ್ಮ ಕಂಪನಿಯಲ್ಲಿ ಎಲ್ಲಾ ತರಹದ ವಾಚುಗಳು ಟೈಂಪೀಸುಗಳು ಮೊದಲಾದವುಗಳನ್ನು ಬಹಳ ಸುಲಭ ಚಾರ್ಜಿನಲ್ಲಿ ರಿಪೇರಿಮಾಡಿ ಕಳುಹಿಸುತ್ತೇವೆ ಹೊರಗಿನ ದೇಶದಿಂದ ಬಂದ ವಾಚುಗಳನ್ನು ಮೂರು ದಿವಸಗಳ ಒಳಗಾಗಿ ರಿಪೇರಿಮಾಡಿ ಆಯಾಯ ವಾಚಿಗೆ ತಕ್ಕ ಹಾಗೆ ಗ್ಯಾರಂಟಿ ಪತ್ರ ದೊಡನೆ ಕಳುಹಿಸುತ್ತೇವೆ ವಾಚುಗಳನ್ನು ರಿಪೇರಿ ಬಗ್ಗೆ ಕಳುಹಿಸುವವರು ಅವರವರ ವಿಳಾಸವನ್ನು ಬರದು ವಾಚಿನ ಛಾಂಗಿಯಲ್ಲಿ ಇಟ್ಟು ಕಳುಹಿಸಬೇಕು. ಮತ್ತು ವಾಚಿಗೆ ಉಪಯೋಗಿಸುವ ಎಲ್ಲಾ ತರದ ಸಾಮಾನುಗಳೂ ಸುಲಭಕ್ರಯಕ್ಕೆ ನಮ್ಮಲ್ಲಿ ದೊರೆಯುತ್ತೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ವಿಳಾಸ—ಫಾರಿನ್ ವಾಚು ಕಂಪನಿ ಮ್ಯಾನೇಜರ್,

ಪಾರ್ಕು ಟವ್ನ್, ಮದ್ರಾಸ್.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣಪ್ರಾಬಲ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 57-13

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಪಕ್ವವಾದ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಿಸಿದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಇಂಥಾ ಮೀನುಹಿಡಿಯುವವನೇ ಈ ಔಷಧದ ಗುರುತು

ನಮ್ಮ ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ಹೊಸ ವರುಷವು ಪ್ರಾರಂಭವಾಗಿರುವುದರಿಂದ ನಮ್ಮ ಏಜಂಟರ ಮೂಲಕ ಪತ್ರಿಕೆಗಳನ್ನು ಪಡೆಯತಕ್ಕವರೆಲ್ಲಾ ದಯವಿಟ್ಟು ಮುಂಗಡವಾಗಿ ಏಜಂಟರಿಗೆ ಚಂದಾ ಪಾವತಿಮಾಡಬೇಕಾಗಿದೆ ಎಂತಲೂ ಅವರಿಂದ ಸರಿಯಾದ ರಶೀತಿ ಪಡೆಯದಿದ್ದವರಿಗೆ ಪತ್ರಿಕೆ ಕೊಡಲು ನಮ್ಮ ಏಜಂಟರಿಗೆ ಅಧಿಕಾರವಿಲ್ಲವಾಗಿದೆ ಎಂತಲೂ ಈ ಮೂಲಕ ಶೃತಪಡಿಸುತ್ತೇವೆ

ಮ್ಯಾನೆಜರ್.

ವೃತ್ತಾಂತ ಪತ್ರಿಕೆ.

ಸನ್ ೧೯೦೭ ನೇ ಇಸವಿ ಜೂನ್ ತಾ|| ೧೩ ನೇ ಗುರುವಾರ.

ನಮ್ಮ ಪತ್ರಿಕಾ ವರ್ಷಾರಂಭವು. ಬಹುಮಾನದ ಮೇಲಾಟವು.

ನಮ್ಮ ಈ ಪತ್ರಿಕೆಗೆ ಕಳೆದ ವಾರದಿಂದ ನೂತನವರ್ಷವು ಆರಂಭವಾಗಿರುತ್ತದಷ್ಟೆ. ಪತ್ರಿಕೆಯು ಮಾರಾಟಕ್ಕೆ ಅಭಿವೃದ್ಧಿಮುಖವಾಗಿಯೇ ಇರುವದರಿಂದ ಸಂತೋಷಿಸುವದಲ್ಲದೆ ಈ ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಸಕಲ ಪ್ರಜೆಗಳ ಸದ್ಗುಣಾಭಿವೃದ್ಧಿಗೂ ಬುದ್ಧ್ಯಭಿವೃದ್ಧಿಗೂ ಇದೊಂದು ಉಪಕರಣವಾಗಿರಬೇಕೆಂಬುದೇ ನಮ್ಮ ಉದ್ದೇಶವು. ಅಸತ್ಯವನ್ನೂ ಪಕ್ಷಪಾತೆಯನ್ನೂ ದೂರೀಕರಿಸಿ ಸಮಸ್ತರ ಶ್ರೇಯಸ್ಸನ್ನೂ ಕೋರುವದೇ ನಮ್ಮ ಕರ್ತವ್ಯವಾಗಿದೆ. ಇದುವರೆಗೂ ಈ ಪತ್ರಿಕೆಯು ಜನರಂಜಿವಾಗಿರುದ್ದಕ್ಕಿಂತಲೂ ಇನ್ನು ಮೇಲೆ ಹೆಚ್ಚಾಗಬೇಕೆಂಬ ಅಭಿಪ್ರಾಯದಿಂದ ನಾವು ಮುಂದೆ ವಾರವಾರವೂ ನಮಲ್ಲಿಗೆ ಬರುವಂಥ ಅತ್ಯುತ್ತಮವಾದ ವರ್ತಮಾನಸಂಗ್ರಹ

ಎರಡೆರಡು ರೂಪಾಯಿಗಳ ಬಹುಮಾನವನ್ನು ಹಂಚಬೇಕೆಂದಿದ್ದೇವೆ. ಈ ಮೊದಲನೇ ಬಹುಮಾನವು ಈ ತಿಂಗಳ್ಲಿ ಮುಂದಣ ವಾರದ (೨೧ನೇ ಜೂನ್) ಸಂಚಿಕೆಯಲ್ಲಿ ಕೊಡಲ್ಪಡುವದು. ಇದರ ವಿಷಯವಾದ ನಿಬಂಧನೆಗಳು ಯಾವವೆಂದರೆ—

೧. ಪ್ರತಿಯೊಂದು ಲೇಖನದ ಮೇಲೆ "ವೃತ್ತಾಂತ ಬಹುಮಾನದ ಮೇಲಾಟ" ವೆಂದು ಬರೆಯತಕ್ಕದ್ದು. ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ಬರೆಯಬೇಕು.

೨. ಲೇಖನವು ಚಾತ್ರಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟುಹತ್ತು ದಿನಗಳೊಳಗಾಗಿ ನಡೆದ ವಿಷಯವಾಗಿರಬೇಕು. ಲೇಖನವು ಅರ್ಧಕಾಲಮಿಗಿಂತ ಕಡಮೆಯಾಗಿಯಾದರೂ ಒಂದು ಕಾಲಮಿಗಿಂತ ಹೆಚ್ಚಾಗಿಯಾದರೂ ಇರಲಾಗದು.

೩. ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿ ವಾರವೂ ಸೋಮವಾರ ಪ್ರಾತಃಕಾಲವೇ ತಲುಪಿರಬೇಕು.

೪ ಬಹುಮಾನವನ್ನು ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವದಲ್ಲದೆ ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು.

೫ ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದು ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರಕಲಾರದು.

ಅನ್ಯದೇಶ ವಾರ್ತೆಗಳು

[ಹಿಂದುಸ್ಥಾನದಲ್ಲಿರುವ ಪ್ರಜೆಗಳು ಪರದೇಶಗಳಲ್ಲಿ ನಡೆಯತಕ್ಕ ವಿಶೇಷ ವರ್ತಮಾನಗಳನ್ನು ತಿಳಿದುಕೊಳ್ಳಬೇಕಾದದ್ದು ಅವಶ್ಯವಾದ್ದರಿಂದ ಆಗಾಗ ಅನ್ಯದೇಶವಾರ್ತೆಗಳನ್ನು ಈ ಕಾಲಮಿನಲ್ಲಿ ಪ್ರಕಟಿಸುತ್ತಾ ಬರುವೆವು. ಇಂಥಾ ವರ್ತಮಾನಗಳನ್ನು ಹಿಂದುಸ್ಥಾನದಲ್ಲಿ ಪ್ರಕಟವಾಗುವ ಇಂಗ್ಲಿಷ್ ಪತ್ರಿಕೆಗಳಿಂದ ತಾರಿಸುತ್ತಾರೆ. ಆದರೆ ಯೂರೋಪ್ ಅಮೇರಿಕಗಳಲ್ಲಿ ಸಂಚರಿಸದೇನೂ ಆಯಾ ದೇಶಗಳ ಚರಿತ್ರೆಗಳನ್ನೂ ನಕ್ಷೆಗಳನ್ನೂ ತಿಳಿಯದೇನೂ ಇರುವಂಥಾವರಿಗೆ ಆ ವರ್ತಮಾನಗಳು ಅಷ್ಟು [illegible] ವುದಿಲ್ಲ. ನಾವು ಅಂಥಾ ವರ್ತಮಾನಗಳನ್ನು [illegible] ಗಳಲ್ಲಿ ಸೇರಿಕೊಂಡಿರುವಂಥಾ ಪ್ರಜೆಗಳಿಗೂ ಚನ್ನಾಗಿ [illegible] ವಹಾಗೆ ಈ ಕಾಲಮಿನಲ್ಲಿ ಪ್ರಕಟಿಸಬೇಕೆಂದಿದ್ದೇವೆ. ಆದರೂ ನಮ್ಮ ವಾಚಕರಲ್ಲಿ ಯಾರಿಗಾದರೂ ಅಂಥಾ ಯಾವ ವರ್ತಮಾನದ ವಿಷಯದಲ್ಲಾದರೂ ಅನುಮಾನ ತೋರಿಬಂದಲ್ಲಿ ನಮಗೆ ಬರೆದು ಕಳುಹಿಸಿದರೆ ಅವರ ಅನುಮಾನವನ್ನು ಪರಿಹರಿಸಿಕೊಡುವೆವೆಂತಲೂ ಸೂಚಿಸುತ್ತೇವೆ.]

ರಷ್ಯಾಚಕ್ರಾಧಿಪತ್ಯದಲ್ಲಿ ಈಗ ಒಂದು ದೊಡ್ಡ ರಾಜಕೀಯ ಬದಲಾವಣೆಯು ನಡೆಯುತ್ತಿದೆ. ಕಳೆದ ವರುಷ ಮಧ್ಯದ ತನಕ ಚಕ್ರವರ್ತಿ ಜಾರ್ ಯವರೇ ಸರ್ವಸ್ವಾತಂತ್ರ್ಯವನ್ನೂ ವಹಿಸಿದ್ದರು. ಪ್ರಜೆಗಳ ಪ್ರಾಣವೇ ಅವರ ವಶದಲ್ಲಿತ್ತು. ರಾಜ್ಯದ ಹುಟ್ಟುವಳಿಯನ್ನು ಅವರ ಇಷ್ಟಾನುಸಾರ ವಿನಿಯೋಗಿಸುತ್ತಿದ್ದರು. ಅವರು ಯುದ್ಧಮಾಡಬೇಕೆನ್ನುವದನ್ನು ಬಿಡಿಸಿ ಕರಾರು ನಡೆಯಲೆನ್ನುವದನ್ನು ಸರ್ವಾಧಿಕಾರಿಯಾಗಿದ್ದರು. ಈಚೆಗೆ ಆ ಚಕ್ರಾಧಿಪತ್ಯದಲ್ಲಿ ವಿದ್ಯೆಯೂ ನಾಗರಿಕತ್ವವೂ ಹರಡುತ್ತಾ ಬಂದವು. ಇವು ಹೆಚ್ಚಿದ ಹಾಗೆಲ್ಲಾ ಪ್ರಜೆಗಳಲ್ಲಿ—ವಿಶೇಷವಾಗಿ ವಿದ್ಯಾವಂತರಲ್ಲೂ ಪಂಡಿತರಲ್ಲೂ ವಿದ್ಯಾಶಾಲೆಗಳಲ್ಲಿ ಶಿಕ್ಷಣ ಹೊಂದುವವರಲ್ಲೂ, ಇನ್ನು ಮೇಲೆ ಸರ್ಕಾರದ ಕಾರುಬಾರುಗಳಲ್ಲಿ ಪ್ರಜೆಗಳೂ ಕೆಲವು ಭಾಗವನ್ನು ವಹಿಸಿಕೊಳ್ಳಬೇಕಾಗಿದೆ. ಇದಕ್ಕೆ ಪ್ರಜೆಗಳು ಯೋಗ್ಯತೆಯನ್ನು ಪಡೆದಿದ್ದಾರೆ ಎಂಬೀ ಅಭಿಪ್ರಾಯವೂ ಹುಟ್ಟಿ ಹೆಚ್ಚುತ್ತಾ ಬಂದಿತು. ಇದರ ಮೇಲೆ ಆಧಾರವಾದ ದೈತ್ಯಪ್ರಜೆಗಳು ಅಧಿಕಾರಿಗಳ ಹಿಂಸೆಯನ್ನೂ ಅವರ ದುರ್ವ್ಯವಸ್ಥೆಯನ್ನೂ ನೋಡಿ, ಅಸಮಾಧಾನಪಡುತ್ತಲೂ ಗುಣುಗುಟ್ಟುತ್ತಲೂ ಬಂದರು. ತರುವಾಯ ರಷ್ಯಾ ಗವರ್ನಮೆಂಟಿನವರು ಜಪಾನಿನವರ ಮೇಲೆ ಯುದ್ಧಮಾಡಿ ಜಯಾಪಜಯ ಹೊಂದದೆ ಸೋತು ಬಂದದ್ದು ಪ್ರಜೆಗಳ ಅಸಮಾಧಾನವನ್ನೂ ಆಗ್ರಹವನ್ನೂ ಇನ್ನಷ್ಟು ಹೆಚ್ಚಿಸಿತು. ಕಡೆಗೆ ಚಕ್ರವರ್ತಿ ಜಾರ್ ಯವರು ಪ್ರಜೆಗಳ ಇಂಗಿತವನ್ನು ಗ್ರಹಿಸಿದವರಾಗಿ, ಡೂಮಾ ಎಂಬೊಂದು ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪಿಸುವುದಾಗಿಯೂ ಈ ಪ್ರತಿನಿಧಿ ಸಭೆಯವರ ಸಹಾಯದಿಂದ ಅಂದರ ಅವರ ಅಭಿಪ್ರಾಯಾನುಸಾರ ಕಾನೂನುಗಳನ್ನು ಮಾಡುವುದಾಗಿಯೂ ರಾಜಕಾರ್ಯಗಳನ್ನು ನಡೆಸುವುದಾಗಿಯೂ ಹೋದ ವರುಷದ ಪ್ರಾರಂಭದಲ್ಲಿ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿದರು.

ಚಕ್ರವರ್ತಿ ಜಾರ್ ಯವರ ಇಸ್ತಿಹಾರಿನಂತೆ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಡೂಮಾ ಸಭೆಗೆ ಚುನಾಯಿಸಿ ಕಳುಹಿಸಿದರು. ಈ ಸಭೆಯವರು ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಸೇರಿ, ರಾಜ್ಯಭಾರವಿಚಾರಗಳನ್ನು ಚರ್ಚೆಮಾಡುತ್ತಿದಾರೆ. ಪೋಲೀಸಿನವರೂ ಸರ್ಕಾರದ ಕೆಲವು ದುಷ್ಟಾಧಿಕಾರಿಗಳೂ ಸರಿಯಾದ ಪ್ರತಿನಿಧಿಗಳನ್ನು ಪ್ರಜೆಗಳು ಚುನಾಯಿಸದಂತೆ ನಾನಾ ಅಡ್ಡಿ ಆತಂಕಗಳನ್ನು ಒಡ್ಡುತ್ತಿದ್ದರು. ಆದಾಗ್ಯೂ ಪ್ರಜಾ ಪಕ್ಷಕ್ಕೆ ತೃಪ್ತಿಕರವಾದ ಚುನಾವಣೆ ನಡೆದು, ಪ್ರಜಾಪ್ರತಿನಿಧಿಗಳಾದವರೇ ಬಹುಮಂದಿ ಮೆಂಬರುಗಳಾಗಿ ಬಂದಿರುತ್ತಾರೆ. ರಾಜ್ಯಭಾರಕ್ರಮಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಬೇಕೆಂದು ಪ್ರಜೆಗಳ ಮುಖಂಡರು ಗಲಭೆ ಎಬ್ಬಿಸಿ ಪತ್ರಿಕೆಗಳ ಮೂಲಕವೂ ಇತರ ವಿಧವಾಗಿಯೂ ತಮ್ಮ ಅಭಿಪ್ರಾಯಗಳನ್ನು ಪ್ರಕಾಶಪಡಿಸಿದರು. ಇದಕ್ಕಾಗಿ ಅಂಥಾ ಮುಖಂಡರನ್ನೆಲ್ಲಾ ಸರ್ಕಾರದವರು ಹಿಡಿದು, ಸೈಬೀರಿಯಾದಲ್ಲಿ ಹಾಕಿಕೊಂಡಿದಾರೆ. ಈಗ ಡೂಮಾ ಪಾರ್ಲಿಮೆಂಟ್ ಮೆಂಬರುಗಳು ಚಕ್ರವರ್ತಿಯವರನ್ನು ಕೇಳಿರುವುದೇನೆಂದರೆ—ಸೆರೆಯಲ್ಲಿರುವ ದೊಡ್ಡ ಮನುಷ್ಯರನ್ನೆಲ್ಲಾ ಬಿಟ್ಟುಬಿಡಬೇಕು. ರಾಜ್ಯದ ಮಂತ್ರಿಗಳು ಚಕ್ರವರ್ತಿಗಳಿಗಲ್ಲ, ಪ್ರತಿನಿಧಿ ಸಭೆಯವರ ಕೈಕೆಳಗಿರಬೇಕು. ಬಹುಮಂದಿ ಪ್ರತಿನಿಧಿಗಳು ಒಪ್ಪಿದರೆ ಅವರು ಮಂತ್ರಿಗಳನ್ನು ವಜಾಮಾಡುವಂತಾಗಬೇಕು. ಹೊಸ ಕಂದಾಯ ಕಾಯಿದೆಗಳನ್ನು ಹಾಕಬೇಕಾದರೂ ಸರ್ಕಾರಿ ಹಣವನ್ನು ಖರ್ಚುಮಾಡಬೇಕಾದರೂ ಈ ಸಭೆಯವರಿಗೇ ಅಧಿಕಾರವಿರಬೇಕು. ಈ ಏರ್ಪಾಡುಗಳೆಲ್ಲಾ, ಪ್ರಜಾಪ್ರತಿನಿಧಿಗಳಿಂದಲೇ ಆಳಲ್ಪಡುವ ವಿಲಾಯಿತಿಯೇ ಮೊದಲಾದ ರಾಜ್ಯಗಳಲ್ಲಿ ಈಗ ಜಾರಿಯಲ್ಲಿರುತ್ತವೆ. ರಷ್ಯಾ ಪಾರ್ಲಿಮೆಂಟಿನವರು ಈಗ ತಮಗೂ ಅಂಥಾ ಅಧಿಕಾರಗಳಿರಬೇಕೆಂದು ಕೇಳಿರುತ್ತಾರೆ. ಚಕ್ರವರ್ತಿಯವರು ಅವರ ಅಭಿಪ್ರಾಯದಂತೆ ನಡಿಸಿಕೊಡುವುದೂ ಇಲ್ಲದ್ದೂ ಮುಂದೆ ತಿಳಿಯಬೇಕಾಗಿದೆ. ಅವರ ಬಳಿ ಹಳಬರಾದ ಅನೇಕ ಅಧಿಕಾರಿಗಳು ಇದ್ದುಕೊಂಡು ಈ ಸಭೆಯನ್ನೇ ವಜಾಮಾಡಬೇಕೆಂತಲೂ, ಸಭಿಕರಿಗೆ ಅಷ್ಟು ಹೆಚ್ಚಿನ ಅಧಿಕಾರ ಕೊಡಕೂಡದೆಂತಲೂ, ಅವರ ಅಭಿಪ್ರಾಯವನ್ನು ಪರಿಗಣಿಸಬಾರದೆಂತಲೂ ಪ್ರೇರೇಪಿಸುವವರಾಗಿದಾರೆ.

ಬಹು ಅಪೂರ್ವವೂ ಪ್ರಖ್ಯಾತವೂ ಆದ ಒಂದು ಭಾರೀ ಕಾಮಗಾರಿಯು ಯೂರೋಪಿನಲ್ಲಿ ಈಚೆಗೆ ನಡೆದಿದೆ. ಇದರಲ್ಲಿ ಇಂಜನಿಯರುಗಳ ಆಧಾರವಾದ ಶಕ್ತಿ ಸಾಹಸ ಚಮತ್ಕಾರಗಳು ಪ್ರಕಾಶವಾಗುವವು. ಫ್ರಾನ್ಸ್, ಇಟಲಿ, ಸ್ವಿಟ್ಸರ್ಲಂಡ್, ಈ ಮೂರು ರಾಜ್ಯಗಳಿಗೂ ನಡುವೆ ಆಲ್ಪ್ಸ್ ಎಂಬ ಅಗಾಧವಾದ ಪರ್ವತಪಙ್ಕ್ತಿ ಇರುವುದು. ಹಿಂದೆಯೇ ಈ ಪರ್ವತದ ಉದ್ದಕ್ಕೂ ದೊಡ್ಡ ದೊಡ್ಡ ಮೂರು ಮಾರ್ಗಗಳನ್ನು ಕೊರೆದಿರುತ್ತಾರೆ. ಅವುಗಳ ಮೂಲಕ ರೈಲ್ ಗಾಡಿಗಳು ಹೋಗಿ ಬರುತ್ತಿರುವವು. ಈ ಮೂರು ಗುಹಾ ಮಾರ್ಗಗಳಿಗಿಂತಲೂ ಉದ್ದವಾದಂಥಾ ನಾಲ್ಕನೇ ರಸ್ತೆಯನ್ನು ಅದೇ ಪರ್ವತದಲ್ಲಿ ಹೊಸದಾಗಿ ಕೊರೆದು ತಯಾರುಮಾಡಿ, ಅದಕ್ಕೆ "ಸಿಂಪ್ಲಾನ್ ಗುಹಾ ಮಾರ್ಗ" ವೆಂಬ ಹೆಸರಿಟ್ಟಿರುವರು. ಅದು ೧೩ ಮೈಲಿಗಿಂತಲೂ ಹೆಚ್ಚು ಉದ್ದವಾಗಿರುತ್ತೆ. ಇದಕ್ಕಿಂತ ಉದ್ದವಾದ ಗುಹಾ ಮಾರ್ಗವು ಪ್ರಪಂಚದ ಇನ್ನಾವ ಕಡೆಯಲ್ಲೂ ಇರುವುದಿಲ್ಲ. ಇಂಥಾ ಗುಹೆಯನ್ನು ಕೊರೆಯುವಾಗ್ಗೆ ನಾನಾ ಕಷ್ಟಗಳೂ ಅಗಾಧವಾದ ಅಪಾಯಗಳೂ ಪ್ರಾಪ್ತವಾದವು. ಸಾಮಾನ್ಯವಾಗಿ ಗುಹಾಮಾರ್ಗಗಳನ್ನು ಭೂಮಟ್ಟದಿಂದ ಎಷ್ಟು ಕೆಳಗೆ ಎಷ್ಟು ಆಳವಾಗಿಯೂ ಕೊರೆಯುತ್ತಾ ಹೋಗುವೆವೋ, ಹೋಗುತ್ತಾ ಹೋಗುತ್ತಾ ಆ ಒಳಪ್ರದೇಶದಲ್ಲಿ ಸೆಕೆಯು ಕಾವು ಅಷ್ಟು ಅಷ್ಟು ಸ[illegible] ಸಲಕ್ಷ್ಯವಾಗುವುದು. ಈ ನಾಲ್ಕನೇ ಗುಹಾಮಾರ್ಗವನ್ನು ಕೊರೆದುಕೊಂಡು ಹೋದಾಗ ಅದರ ಮಧ್ಯಭಾಗದೊಳಗೆ ಅನೇಕ ವೇಳೆ ಕೂಲಿಯವರು ವೇಗ ಸುಸ್ತಾಗಿ ಬಿದ್ದುಕೊಳ್ಳುತ್ತಿದ್ದರು. ಅವರ ದಣುವನ್ನೂ ದಾಹವನ್ನೂ ಆರಿಸುವುದಕ್ಕಾಗಿ ಆ ಒಳಪ್ರದೇಶಕ್ಕೆ ನಳ್ಳಿಗಳ ಮೂಲಕ ತಂಗಾಳಿಯನ್ನೂ ತಣ್ಣೀರನ್ನೂ ನಾಗಿಸಿಕೊಂಡು ಹೋಗಿ ಒದಗಿಸುತ್ತಿದ್ದರು. ಅದೇ ಗುಹಾಮಾರ್ಗದೊಳಗೆ ಒರತೆಯು ಜಲ ಹುಟ್ಟಿ ಬಂದು ಗುಹೆಯನ್ನು ತುಂಬಿಕೊಂಡಿತು. ಇಂಥಾ ಕಷ್ಟಗಳೆಲ್ಲಾ ಒದಗಿದರೂ ಹಿಂತೆಗೆಯದೆ ಆ ಮಾರ್ಗವನ್ನು ಕೊನೆಮುಟ್ಟಿಸಿ ಪೂರೈಸಿರುತ್ತಾರೆ. ಮತ್ತು ಈ ಗುಹಾ ಮಾರ್ಗದಲ್ಲಿ ಇಟಲಿ ದೇಶದ ರೈಲಿನ ಮೇಲೆ ಮೊದಲು ಹೋಗಿ ಬಂದಿರುವರು. ಇದರ ಕಾಮಗಾರಿಯನ್ನು ಆ ಪರ್ವತದ ಎರಡು ಕಡೆಗಳಿಂದಲೂ ಏಕಕಾಲದಲ್ಲಿ ಪ್ರಾರಂಭಿಸಿ, ಕೊರೆದು ಪೂರೈಸಿದ್ದಾರೆ. ಎರಡು ಕಡೆಗಳಿಂದಲೂ ಕೊರೆದುಕೊಂಡುಹೋಗುತ್ತಾ ಹೋಗುತ್ತಾ ಇರುವಾಗ್ಗೆ ಆ ಎರಡು ಗುಂಪಿನವರೂ ಒಳಗಡೆ ಒಂದೇ ಸ್ಥಳದಲ್ಲಿ ಒಬ್ಬರನ್ನೊಬ್ಬರು ಸಂಧಿಸಬೇಕಾಗಿದ್ದರೆ ಪ್ಲಾನ್ ಮಾಡುತ್ತಾಮಾಡಿದ ಇಂಜನಿಯರುಗಳ ಸಾಮರ್ಥ್ಯವೂ ಚತುರತೆಯೂ ಯಂತ್ರಗಳ ನಿರ್ಣಯವೂ ಎಷ್ಟು ಮಟ್ಟಿನವೋ ವಿವರಿಸಿ ತೀರದು!

ಒಳದೇಶದ ವೃತ್ತಾಂತಗಳು.

ಬೆಂಗಳೂರು ಬಸವನ ಗುಡಿಯ ಪ್ರಜೆಗಳು ದಿವಾನರವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸುವವರಾಗಿದಾರೆಂದು ತಿಳಿದು ಬಂದಿದೆ.

❦❦❦❦

ಮೈಸೂರು ಸರ್ಕಾರದವರು ಹುಣಸೂರು ತಾಲ್ಲೂಕು ಪಂಚವಳ್ಳಿಯಲ್ಲಿಟ್ಟಿದ್ದ ಟೋಲ್ ಗೇಟನ್ನು ಜುಲೈ ೧ರಿಂದ ಆಳ್ವಾರು ಕಟ್ಟೆಗೆ ವರ್ಗಮಾಡುವವರಾಗಿದಾರೆ.

❦❦❦❦

ಬೆಂಗಳೂರಿನಲ್ಲಿ ಕಳೆದ ಗುರುವಾರ ಒಬ್ಬ ಗಂಡಸು, ಒಬ್ಬ ಹೆಂಗಸು, ಒಬ್ಬ ಹುಡುಗ, ಈ ಮೂವರೂ ಮೂರು ಕಡೆ ಕೆರೆ ಕೊಳ ಬಾವಿಗಳಲ್ಲಿ ಬಿದ್ದು ಕಾಲವಾದರು.

❦❦❦❦

ನಾಳೆ ಸಾಯಂಕಾಲ ಬೆಂಗಳೂರು ವೆಸ್ಲಿಯನ್ ಹೈಸ್ಕೂಲಿನಲ್ಲಿ ಬ್ರಿಟಿಷ್ ರೆಸಿಡೆಂಟರು ಅಗ್ರಾಸನವನ್ನು ವಹಿಸಿ, ಬಾಲಕರಿಗೆ ಬಹುಮಾನಗಳನ್ನು ಕೊಡುವವರಾಗಿದಾರೆ.

❦❦❦❦

ಮೈಸೂರು ಸೆಂಟ್ರಲ್ ನಾಜರು ನಗನಾಣ್ಯಗಳನ್ನು ದುರುಪಯೋಗ ಪಡಿಸಿಕೊಂಡರೆಂದು ಬಂದಿದ್ದ ಮೊಕದ್ದಮೆಯನ್ನು ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ, ಅಪರಾಧ ರುಜುವಾತಾಗಲಿಲ್ಲವೆಂದು ಹೇಳಿ, ವಜಾ ಮಾಡಿರುತ್ತಾರೆ.

ವೇ॥ ದ್ವಿವೇದಿ ಸುಬ್ರಹ್ಮಣ್ಯಶಾಸ್ತ್ರಿಗಳು ಶ್ರೀ ಶೃಂಗೇರಿಗೆ ಹೋಗಿ "ಗರುಡಚಯನ" ಎಂಬ ಒಂದು ಯಾಗವನ್ನು ಮಾಡಿದರೆಂತಲೂ ಸ್ವಾಮಿಗಳವರು ಅವರ ಯೋಗ್ಯತಾಪರಿಶೀಲನೆಯಿಂದ ಅವರಿಗೆ ಕಳೆದ ವಾರ ಒಂದು ಬಂಗಾರದ ತೋಡಾವನ್ನು ಬಹುಮಾನ ಮಾಡಿದರೆಂತಲೂ ಕೇಳುತ್ತೇವೆ.

❦❦❦❦

ಕಳೆದ ವಾರ ದಿವಾನ್ ಮೆ॥ ವಿ. ಪಿ. ಮಾಧವರಾಯರು ಮಹಾರಾಣಿಯವರ ಕಾಲೇಜ್ಜಿಗೆ ದಯಮಾಡಿ, ಅಲ್ಲಿ ನಡೆಯುವ ಕಾರ್ಯಗಳನ್ನು ತನಿಖೆಮಾಡಿಕೊಂಡು ಬಂದರು. ನೆನ್ನೆ ಬೆಳಿಗ್ಗೆ ಹಿಂದೂ ಅನಾಥಾಲಯದಲ್ಲಿ ದಿವಾನರವರನ್ನು ಸತ್ಕರಿಸಿ, ಅಲ್ಲಿನ ವಿದ್ಯಮಾನಗಳನ್ನು ಅವರಿಗೆ ತಿಳಿಯಪಡಿಸಿದರು.

❦❦❦❦

ರಾಜಧಾನಿಗೆ ಬಂದಿರುವ ಪಟೇಲ್ ಸರ್ಕಸ್ ಕಂಪನಿಯವರು ಜಗನ್ಮೋಹನ ಬಂಗಲೆಯ ಮೈದಾನಿನಲ್ಲಿ ಡೇರಾ ಹೊಡೆದು, ಶ್ರೀಮನ್ಮಹಾರಾಜರವರಿಗೂ ರಾಜವರ್ಗದವರಿಗೂ ಅಧಿಕಾರಿಗಳಿಗೂ ತಮ್ಮ ಜನರ ಮತ್ತು ಮೃಗಾದಿಗಳ ಆಟಪಾಟಗಳನ್ನೂ ಸಾಹಸ ಚಮತ್ಕಾರ ಕಾರ್ಯಗಳನ್ನೂ ತೋರಿಸಿದರು.

❦❦❦❦

ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್. ಎಂ. ಫ್ರೇಸರ್ ಯವರೂ ಅವರ ಪತ್ನಿಯವರೂ ಅವರ ಅಸಿಸ್ಟೆಂಟರಾದ ಮೇ॥ ಮಾಸ್ ಕಿಂಗ್ ಯವರೂ ಪರಿವಾರ ಸಹಿತ ಮೊನ್ನೆ ಭಾನುವಾರ ಬೆಂಗಳೂರಿಗೆ ಪ್ರಯಾಣ ಮಾಡಿದರು. ಉಳಿದ ಯೂರೋಪಿಯನ್ ಸರದಾರರು ಸೋಮವಾರ ಸ್ಪೆಷಲ್ ರೈಲ್ ಹತ್ತಿ ತಮ್ಮ ತಮ್ಮ ಸ್ಥಳಗಳಿಗೆ ದಯಮಾಡಿರುತ್ತಾರೆ.

❦❦❦❦

ದಿವಾನರೂ ಕೌನ್ಸಿಲ್ ಮೆಂಬರುಗಳೂ ಸೆಕ್ರೆಟರಿಗಳೂ ಈ ವಾರವೆಲ್ಲಾ ರಾಜಧಾನಿಯಲ್ಲೇ ಇರುವದಾಗಿ ಕೇಳುತ್ತೇವೆ. ಅವರು ಈಗ ಸಂಸ್ಥಾನದ ಅಧಿಕಾರಿಗಳ ವರ್ಗಾವರ್ಗಿ ಮುಂತಾದ್ದನ್ನು ಕುರಿತು ಚರ್ಚೆಮಾಡುತ್ತಿರುವರು. ಈ ಬದಲಾವಣೆಗಳೆಲ್ಲಾ ಇನ್ನೊಂದು ವಾರದಲ್ಲಿ ಪ್ರಕಟವಾಗುವವೆಂತಲೂ ಜುಲೈ ೧ ರಿಂದ ಜಾರಿಗೆ ಬರುವವೆಂತಲೂ ತಿಳಿದುಬಂದಿದೆ.

❦❦❦❦

ಕಳೆದ ಗುರುವಾರಕ್ಕೆ ಶ್ರೀಮನ್ಮಹಾರಾಜರವರ ೨೨ನೇ ವರುಷದ ವರ್ಧಂತಿ ಕಳ್ಳಿಯ ಆರತಕ್ಷತೆ ಮುಂತಾದ ಶಾಸ್ತ್ರೋಕ್ತ ಕಾರ್ಯಗಳು ಮುಕ್ತಾಯವಾದವು. ಆ ದಿನ ರಾತ್ರಿಯೇ ದಿವಾನರೇ ಮೊದಲಾದ ದೊಡ್ಡ ದೊಡ್ಡ ದೇಶೀಯ ಉದ್ಯೋಗಸ್ಥರಿಗೆಲ್ಲಾ ಅರಮನೆಯಲ್ಲಿ ಔತಣವಾಯಿತು. ಡೆಪ್ಯುಟಿ ಕಮಿಷನರುಗಳೇ ಮುಂತಾದವರು ಅವರವರ ಸ್ಥಳಗಳಿಗೆ ವಾಪಸು ಪ್ರಯಾಣಮಾಡಿದರು.

❦❦❦❦

ಪ್ರಿನ್ಸ್ ಆಫ್ ವೇಲ್ಸ್‌ರವರು ನಮ್ಮ ಸಂಸ್ಥಾನಕ್ಕೆ ದಯಮಾಡಿದ್ದಾಗ ಅವರನ್ನು ಸತ್ಕರಿಸಿದ ವಿಷಯದಲ್ಲಿ ಬಹಳ ಕಷ್ಟಪಟ್ಟ ಅಧಿಕಾರಿಗಳಿಗೂ ಮುಖ್ಯಸ್ಥರಿಗೂ ಶ್ರೀಮನ್ಮಹಾರಾಜರವರು ಬೆಳ್ಳಿ ತಟ್ಟೆಗಳನ್ನು ದಯಪಾಲಿಸಿದರು. ನೌಕರರುಗಳಿಗೆ ಇನಾಂ ಕೊಡಿಸಿದರು. ಬೇರೆ ಉದ್ಯೋಗಾರರಾದ ದೊಡ್ಡ ಮನುಷ್ಯರ ಕಾರ್ಯಗಳನ್ನು ಮೆಚ್ಚಿಕೊಂಡು ಅಂಥವರನ್ನೆಲ್ಲಾ ವಂದಿಸಿರುತ್ತಾರೆ.

❦❦❦❦

ಮೊನ್ನೆ ಶನಿವಾರ ರಾತ್ರಿ ಶ್ರೀಮನ್ಮಹಾರಾಜರವರು ತಮ್ಮ ವರ್ಧಂತಿ ಮಹೋತ್ಸವಕ್ಕಾಗಿ ಕರೆಸಿಕೊಂಡಿದ್ದ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಸರದಾರರಿಗೂ ದೊರೆಸಾನಿಗಳಿಗೂ ಭಾರೀ ಔತಣವನ್ನು ಮಾಡಿಸಿದರು. ಸುಮಾರು ೧೫೦ ಮಂದಿ ಆ ರಾತ್ರಿ ಭೋಜನ ಮಾಡಿ, ಶ್ರೀಮನ್ಮಹಾರಾಜರವರ ಸದ್ಗುಣ ಸಾಮರ್ಥ್ಯ ಸತ್ಕಾರಗಳ ಪ್ರಶಂಸೆಯನ್ನು ಮಾಡಿ, ಅವರ ಮತ್ತು ರಾಜವರ್ಗದವರ ಶ್ರೇಯೋಭಿವೃದ್ಧಿಯನ್ನು ಬಯಸಿದರು.

❦❦❦❦

ಬಾಲಕರ ಸಾಧಾರಣ ವಿದ್ಯಾಭಿವೃದ್ಧಿಕ್ರಮವೂ ಅವರಿಗೆ ಕಸಬು ಕಲಿಸತಕ್ಕ ವಿಧಾನಗಳೂ ಯೂರೋಪಿನ ರಾಜ್ಯಗಳಲ್ಲಿ ಯಾವ ರೀತಿ ರೂಢಿಯಲ್ಲಿವೆ ಎಂಬುದನ್ನು ಕಣ್ಣಾರ ನೋಡಿ ಬಂದು ನಮ್ಮ ಸಂಸ್ಥಾನದಲ್ಲಿ ಅದರಂತೆ ರೂಢಿಸಬೇಕೆಂಬ ಉದ್ದೇಶದಿಂದ ಗವರ್ನಮೆಂಟಿನವರು ಮೆ॥ ಭಾಭಾ ಯವರನ್ನು ಯೂರೋಪಿಗೆ ಕಳುಹಿಸಿದಾರೆ. ಅವರು ಮೊನ್ನೆ ಸೋಮವಾರ ಪ್ರಯಾಣ ಮಾಡಿದರು. ಅವರು ವಾಪಸು ಬರುವ ತನಕ ಅಂದರೆ ಆರ್ನಾಲ್ಕು ತಿಂಗಳ ವರೆಗೆ ಮೈಸೂರು ಕಾಲೇಜ್ಜಿನ ಪ್ರಿನ್ಸಿಪಲ್ ಮೆ॥ ವಿಯರ್ ಯವರು ಅವರ ಕೆಲಸವನ್ನು ಜವಾಬು ನೋಡುತ್ತಾರೆ.

❦❦❦❦

ಚಿತ್ರದುರ್ಗದಲ್ಲಿ ಲೇಡಿ ಆಸ್ಪತ್ರೆಯಾಗಿದ್ದ ಮಿಸ್ ಹಾಲ್‌ವರ್ಡ್ ಎಂಬಾಕೆಯು ಅಲ್ಲಿನ ಹೆಂಗಸರು ಮಕ್ಕಳ ಕಾಯಿಲೆ ವಿಷಯದಲ್ಲಿ ಹುಂಬ ಮಮತೆಯಿಂದಲೂ ಪ್ರೀತಿಪೂರ್ವಕವಾಗಿಯೂ ಔಷಧಗಳನ್ನು ಕೊಟ್ಟು ಉಪಚರಿಸುತ್ತಾ ಬಂದದ್ದರಿಂದ ಆಕೆಗೆ ಬೆಂಗಳೂರಿಗೆ ವರ್ಗವಾಯಿತೆಂಬ ಸುದ್ದಿಯನ್ನು ಕೇಳಿ ಚಿತ್ರದುರ್ಗದ ನೂರಾರು ಮಂದಿ ಸ್ತ್ರೀಯರು ಸಭೆಸೇರಿ, ಆಕೆಯನ್ನು ಕರೆಸಿಕೊಂಡು, ಆಕೆಯ ಗುಣಾತಿಶಯಗಳನ್ನು ಹೊಗಳಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು. ಆಕೆಗೆ ಒಂದು ಚಿನ್ನದ ಸರವನ್ನು ಜ್ಞಾಪಕಾರ್ಥವಾಗಿ ಕೊಡುವಂತೆ ಗೊತ್ತುಮಾಡಿದಾರೆ. ಲೇಡಿ ಡಾಕ್ಟರುಗಳಲ್ಲಿ ಇಷ್ಟುಮಟ್ಟಿಗೆ ಸ್ತ್ರೀಸಂಘದಿಂದಲೇ ಹೊಗಳಿಸಿಕೊಂಡವರಾಗಲಿ ಸ್ತ್ರೀಯರೇ ಸಭೆಸೇರಿ ತಾವು ಹೊಂದಿದ ಉಪಕಾರವನ್ನು ಈ ರೀತಿ ಪ್ರಕಾಶಪಡಿಸಿದ್ದಾಗಲಿ ಇದುವರೆಗೆ ನಮ್ಮ ಸಂಸ್ಥಾನದಲ್ಲಿ ಇಲ್ಲ.

ಮೈಸೂರು ಸರ್ಕಾರಿ ಹುಕುಮು.

ಶ್ರೀಮನ್ಮಹಾರಾಜಾ ಸರ್ಕಾರದವರು ಕೆಲವು ಅಧಿಕಾರಿಗಳ ವಿಷಯದಲ್ಲಿ ಮುಂದೆ ಹೇಳುವಂತೆ ಹುಕುಂ ದಯಪಾಲಿಸಿರುತ್ತಾರೆ—

(೧) ರೆವಿನ್ಯೂ ಕಮೀಷನರ್ ಮೆ॥ ಎ. ರಂಗಸ್ವಾಮಿಅಯ್ಯಂಗಾರ್ರು ಇನ್ನು ಮೂರು ವರುಷಗಳ ವರೆಗೆ ಅಂದರೆ ೧೯೦೬ ನೆ ಜುಲೈ ೧ ರ ತನಕ ನೌಕರಿಯಲ್ಲಿರಬೇಕು.

(೨) ಕೆಳಗೆ ಹೇಳುವ ಅಧಿಕಾರಿಗಳು ಇನ್ನೊಂದು ವರುಷ ಅಂದರೆ ೧೯೦೪ ನೆ ಜುಲೈ ೧ ರ ತನಕ ಕೆಲಸದ ಮೇಲಿರತಕ್ಕದ್ದು.—

ಮೆ॥ ಗಳಾದ ಎಕ್ಸೈಸ್ ಕಮೀಷನರ್ ಪಿ. ಎನ್. ಪೂರ್ಣಯ್ಯನವರು, ಸೀನಿಯರ್ ಅ॥ ಕಮೀಷನರ್ ಸಯ್ಯದ್ ಅಮೀರ್ ಹಸನ್, ಅಮಲ್ದಾರ್ ವಿ. ಕೃಷ್ಣರಾಯರು, ಅಮಲ್ದಾರ್ ಎಸ್. ಕೃಷ್ಣಪ್ಪನವರು, ಸರ್ವೆ ಅ॥ ಸೂಪರಿಂಟೆಂಡೆಂಟ್ ಜೆ. ಎಲ್ ನ್ಯಾಕ್, ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಜೆ. ಜೆ. ಮಾಂಟೇರೊ, ಚೀಫ್ ಸೆಕ್ರೆಟರಿ ಅ॥ ಸೆಕ್ರೆಟರಿ ಮೆ॥ ಎಚ್. ಪಾರ್, ಅ॥ ಅ॥ ಸರ್ಜನ್ ಪಿ. ಚಂಗಲ್ರಾಯ ಮೊದಲಿಯಾರ್, ಅ॥ ಸಬ್ ಅ॥ ಸರ್ಜನ್ ಎನ್. ಆರ್. ಪೊನ್ನುಸ್ವಾಮಿಪಿಳ್ಳೆಯವರು, ಹಾರ್ಡ್ವಿಕ್ ಸ್ಕೂಲ್ ಹೆಡ್ ಮಾಸ್ಟರ್ ಎಸ್. ಕೈಸ್, ಸ್ಕೂಲುಗಳ ಡಿಪ್ಟಿ ಇನ್ಸ್ಪೆಕ್ಟರ್ ಎಸ್. ರಂಗಾಚಾರ್ಲು, ಕಂಟ್ರೋಲರದ ಚೀಫ್ ಅಸಿಸ್ಟೆಂಟ್ ಟಿ. ಎ ವೈದ್ಯನಾಥಶೆಟ್ಟಿ, ಡಿಸ್ಟ್ರಿಕ್ಟ್ ಜಡ್ಜ್ ಎಸ್ ವೆಂಕಟವರದ ಅಯ್ಯಂಗಾರ್, ಸಬ್ ಜಡ್ಜ್ ಸಿ. ಬಿ. ಶೇಷಗಿರಿರಾವ್, ಇವರೇ.

(೩) ಮುಂದೆ ಹೇಳುವ ಅಧಿಕಾರಿಗಳು ೧೯೦೪ ನೆ ಜನವರಿ ೧ ರಿಂದ ಪೆನ್ಷನ್ ಪಡೆದು ಕೆಲಸದಿಂದ ನಿವೃತ್ತರಾಗತಕ್ಕದ್ದು (ಅವರಿಗೆ ಕೊಡಬೇಕಾಗುವ ಪ್ರಿವಿಲೆಜ್ ರಜವನ್ನು ಆ ತಾರೀಖಿನಿಂದ ಅವರು ಉಪಯೋಗಿಸಿಕೊಳ್ಳ ಬಹುದು).—

ಮೆ॥ ಗಳಾದ ಡೆಪ್ಟಿ ಕಮೀಷನರ್ ಮೆ॥ ಹೆಚ್ ರಾಮಾನುಜೈಯ್ಯಂಗಾರ್ರು, ಗವರ್ನಮೆಂಟ್ ಅ॥ ಸೆಕ್ರೆಟರಿ ಎಚ್. ರಾಮಯ್ಯನವರು, ಅಮಲ್ದಾರರುಗಳಾದ ವಿ. ಶಂಕರರಾಯರು, ಟಿ. ವೆಂಕಟರಾಮಯ್ಯನವರು, ಪಾರ್ಥಸಾರಥಿ ಅಯ್ಯಂಗಾರ್ರು, ಇವರೇ.

೪. ಕೆಳಗೆ ಹೇಳುವ ಅಧಿಕಾರಿಗಳು ಇದೇ ೧೯೦೩ನೆ ಜುಲೈ ೧ ರಿಂದ ಕೆಲಸಬಿಟ್ಟು ಪೆನ್ಷನ್ ಪಡೆಯತಕ್ಕದ್ದು —

ಮೆ॥ ಗಳಾದ ಗವರ್ನಮೆಂಟ್ ರೆವಿನ್ಯೂ ಮತ್ತು ಜನರಲ್ ಸೆಕ್ರೆಟರಿ ಬಿ. ಕೆ ವೆಂಕಟವರದ ಅಯ್ಯಂಗಾರ್ರು, ಪ್ರಾಚೀನ ಲಿಪ್ಯನ್ವೇಷಣ ಇಲಾಖಾ ಡೈರೆಕ್ಟರ್ ಬಿ. ಎಲ್. ರೈಸ್, ಮುನಿಸಿಫ್ ಜೆ. ಇ. ಕೋಲ್ಟ್, ಡೆಪ್ಟಿ ಕಮೀಷನರ್ ಎಂ. ಎಸ್. ನಾರಾಯಣರಾಯರು, ಎಕ್ಸ್ಟ್ರಾ ಅ॥ ಕಮೀಷನರ್ ಸಿ. ಕೃಷ್ಣರಾಯರು ಮತ್ತು ಸಿ. ಶೇಷಾದ್ರಿ ಅಯ್ಯಂಗಾರ್ರು, ಅಮಲ್ದಾರ್ ಜೆ. ಡಿ. ಚಿನ್ನಪ್ಪ ಪಿಳ್ಳೆಯವರು ಮತ್ತು ಆರ್ ರಾಘವೇಂದ್ರರಾಯರು, ಡೆಪ್ಟಿ ಅಮಲ್ದಾರ್ ನರಸಿಂಹಲುನಾಯುಡುಯವರು, ಎಕ್ಸೈಸ್ ಇಲಾಖಾ ಎಕ್ಸ್ಟ್ರಾ ಅ॥ ಕಮೀಷನರ್ ಎನ್. ಗೋಪಾಲೈಯ್ಯಂಗಾರ್ರು, ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಮಹಮದ್ ಜಾಫರ್‌ಯವರು ಮತ್ತು ಗುಲಾಂ ಮೆಹದೀ ಬೇಗ್‌ಯವರು, ಅ॥ ಸರ್ಜನ್ ಎಸ್. ಜೆ ಪೆಸ್ಲಿಯವರು, ಡಿಸ್ಟ್ರಿಕ್ಟ್ ಜಡ್ಜ್ ಎಸ್ ಆರ್ ಸುಬ್ರಾಯ ಅಯ್ಯರವರು ಮತ್ತು ಎಂ. ರಾಮಸ್ವಾಮಿ ಅಯ್ಯರವರು, ಸಬ್ ಜಡ್ಜ್ ಪಿ. ರಂಗಾಚಾರ್ರು ಮತ್ತು ಎಸ್. ವರದರಾಜ ಅಯ್ಯಂಗಾರ್ರು, ಮುನಿಸಿಫ್ ಎಸ್. ಶೇಷಗಿರಿರಾಯರು, ಇವರೇ.

ವೀರಶೈವಸಂಘದ ವಿಜ್ಞಾಪನಾ ಪತ್ರಿಕೆಯು.

ಕಳೆದ ೮ ನೆ ತಾರೀಖು ಶುಕ್ರವಾರ ಮಧ್ಯಾಹ್ನ ವೀರಶೈವ ಮತದವರು ಶ್ರೀಮನ್ಮಹಾರಾಜರವರಿಗೆ ಅರಮನೆಯ ಕರೀಕಲ್ಲು ತೊಟ್ಟಿಯ ಉಪ್ಪರಿಗೆಯಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು ಮೈಸೂರು ಸಂಸ್ಥಾನದಲ್ಲೂ ಇತರ ಕಡೆಗಳಲ್ಲೂ ಇರುವ ಸುಮಾರು ೬೦ ಮಂದಿ ವೀರಶೈವ ಪ್ರತಿನಿಧಿಗಳು ಬಂದಿದ್ದರು. ವಿಜ್ಞಾಪನಾ ಪತ್ರಿಕೆಯನ್ನು ಇಂಗ್ಲಿಷಿನಲ್ಲಿ ಮೆ॥ ಆರ್ ಪುಟ್ಟಣ್ಣನವರು ಪ್ರತಿನಿಧಿಗಳ ಪರವಾಗಿ ಓದಿದರು. ಮೆ॥ ಟಿ. ಎಸ್. ನಂಜಪ್ಪನವರು ಅದನ್ನು ಸುಂದರವಾದ ಕೈಪೆಟ್ಟಿಗೆಯಲ್ಲಿಟ್ಟು ಸಮರ್ಪಿಸಿದರು. ಈ ಪತ್ರಿಕೆಯ ಮೂಲಕ ಅವರು ಮಹಾರಾಜರವರಿಗೆ ಅರಿಕೆಮಾಡಿಕೊಂಡದ್ದೇನೆಂದರೆ—

ಶ್ರೀಮನ್ಮಹೀಶೂರ ಪುರವರಾಧೀಶ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಮಹಾಸನ್ನಿಧಾನದಲ್ಲಿ—

ಮೈಸೂರು ಸಂಸ್ಥಾನದ ಮತ್ತು ಭರತಖಂಡದ ಇತರ ಭಾಗದ ವೀರಶೈವ ಮತಸ್ಥರ ಪ್ರತಿನಿಧಿಗಳಾಗಿಯೂ, ಪ್ರಜಾಸುರಾಗಭಾಗಿಗಳಾಗಿಯೂ ಇರುವ ಮೆ॥ ಕೆ. ಪಿ. ಪುಟ್ಟಣ್ಣ ಶೆಟ್ಟರಿಗೆ ಈ ಸಂಸ್ಥಾನದೊಳಗೆ ಗಣ್ಯವಾದ ಉಪಮಂತ್ರಿ ಪದವಿಯನ್ನು ಮಹಾಸ್ವಾಮಿಯವರು ದಯಪಾಲಿಸಿದುದರಿಂದ ನಮ್ಮ ಜನಾಂಗಕ್ಕೆಲ್ಲಾ ಉಂಟಾಗಿರುವ ಅಪಾರವಾದ ಸಂತೋಷವನ್ನು ಈ ವರ್ಧಂತಿ ಮಹೋತ್ಸವ ಸಮಯದಲ್ಲಿ ಈ ಮೂಲಕವಾಗಿ ಕೃತಜ್ಞತೆಪಡಿಸಿಕೊಳ್ಳುವುದಕ್ಕೆ ಅಪ್ಪಣೆಯನ್ನು ಬೇಡುತ್ತೇವೆ ಮಹಾಸ್ವಾಮಿ.

ಹಿಂದುಳಿದಿರುವ ಜನಾಂಗದವರ ಮೇಲೆ ಈ ವಿಧವಾದ ಪೂರ್ಣಾಭಿಮಾನವಿಟ್ಟು ಮಹಾಸ್ವಾಮಿಯವರು ತೋರಿಸಿದ ಕೃಪಾತಿಶಯಕ್ಕಾಗಿ ನಾವುಗಳೆಲ್ಲರೂ ಕೃತಜ್ಞರಾಗಿರುವೆವಲ್ಲದೆ ಮಹಾಸ್ವಾಮಿಯವರ ಪೂರ್ಣಾನುಗ್ರಹವು ನಮ್ಮಗಳ ಮೇಲೆ ಮುಂದೆಯೂ ಹೀಗೆಯೇ ನಿರಂತರವಾಗಿ ನೆಲಸಿ, ಈ ಮತದವರ ಸಕಲ ಪುರೋಭಿವೃದ್ಧಿಗೂ ಪ್ರೋತ್ಸಾಹಕವಾಗುವಂತೆ ಪರಿಣಮಿಸುವುದೆಂದು ದೃಢವಾಗಿ ನಂಬಿರುತ್ತೇವೆ ಮಹಾಸ್ವಾಮಿ.

ಶ್ರೀ ಮಹಾಸ್ವಾಮಿಯವರ ಸತ್ಪರಿಪಾಲನೆಗೆ ಒಳಪಟ್ಟಿರುವ ಈ ಸಂಸ್ಥಾನದ ಪ್ರಜೆಗಳೊಳಗೆ ಗಮನೀಯವಾದ ಜನಸಂಖ್ಯೆಯುಳ್ಳವರಾಗಿರುವ ವೀರಶೈವ ಮತಸ್ಥರು ಬಹುಕಾಲದಿಂದಲೂ ಅಕುಟಿಲವಾದ ರಾಜಭಕ್ತಿಯಿಂದ ಪರಿಪೂರ್ಣರಾಗಿ ಕೃಷಿ ವಾಣಿಜ್ಯ ವೃತ್ತಿಗಳಲ್ಲಿ ನಿರತರಾಗಿರುತ್ತಿರುವರು. ಆದರೂ ಪ್ರಕೃತ ಕಾಲೋಚಿತವಾದ ರಾಜಕೀಯ ವಿದ್ಯಾವೈದುಷ್ಯವೂ ತನ್ಮೂಲಕವಾದ ಕೃಷಿ ವಾಣಿಜ್ಯ ಕೌಶಲ್ಯಾದಿಗಳೂ ಇವರಲ್ಲಿ ತಕ್ಕಷ್ಟು ಇಲ್ಲದಿರುವ ಕಾರಣದಿಂದ ಯಾವ ವಿಧವಾದ ಮಹೋಚ್ಚ್ರಾಯವನ್ನು ಪಡೆಯುವುದಕ್ಕೂ ಅವಕಾಶವಿಲ್ಲದೆ ಹೀನಸ್ಥಿತಿಯಲ್ಲಿರುತ್ತಾರೆ ಮಹಾಸ್ವಾಮಿ.

ಇಂಥವರನ್ನು ಉದ್ಧರಿಸುವ ವಿಷಯದಲ್ಲಿ ಅತ್ಯಂತ ಪ್ರೋತ್ಸಾಹಕವಾದ ಅನುಗ್ರಹವನ್ನು ಮೇಲೆ ಕಂಡ ರೀತಿಯಲ್ಲಿ ದಯೆಪಾಲಿಸಿರುವ ಮಹಾಸನ್ನಿಧಾನವು ಉದಾರಚಿತ್ತರಾದ ಮಂತ್ರಿವರ್ಯರ ಸಹಾಯದೊಡನೆ ಈ ನಮ್ಮ ಜನಾಂಗಕ್ಕೆ ಸಕಲ ವಿಗ್ರಹಕರವಾದ ಆಂಗ್ಲೇಯ ವಿದ್ಯಾಭ್ಯಾಸದ ಸೌಲಭ್ಯಗಳೂ, ರಾಜಕೀಯೋದ್ಯೋಗ ವಿನಿಯೋಗ ಪ್ರೋತ್ಸಾಹಗಳೂ, ಕೃಷಿ ವಾಣಿಜ್ಯ ಕೌಶಲ್ಯಾಭಿವೃದ್ಧಿಯ ಸಹಾಯಗಳೂ ದೊರೆಯುವಂತೆ ಅನುಗ್ರಹಿಸಿ, ಈ ಜನಾಂಗವನ್ನು ಉನ್ನತಸ್ಥಿತಿಗೆ ತಂದು ಕಾಪಾಡಬೇಕೆಂದು ಅತ್ಯಂತ ವಿನಯ ಭಕ್ತಿ ವಿಶ್ವಾಸಗಳೊಡನೆ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ.

ಶ್ರೀಮನ್ಮಹಾರಾಜರವರು ಮೇಲ್ಕಂಡ ವಿಜ್ಞಾಪನಾ ಪತ್ರಿಕೆಯನ್ನು ಆದರಪೂರ್ವಕವಾಗಿ ಅಂಗೀಕರಿಸಿ, ಪ್ರತಿನಿಧಿಗಳನ್ನು ಕುರಿತು ಅಪ್ಪಣೆಕೊಡಿಸಿದ ಅಭಿಪ್ರಾಯವೇನೆಂದರೆ—

ದೊಡ್ಡಮನುಷ್ಯರುಗಳಿರಾ,

ನಿಮ್ಮ ಅಡ್ರೆಸ್ಸನ್ನು ಸಂತೋಷಪೂರ್ವಕವಾಗಿ ಅಂಗೀಕರಿಸುತ್ತೇನೆ. ಯಾಕೆಂದರೆ ನಿಮ್ಮ ಜನರಲ್ಲಿ ನನಗೆ ತುಂಬಾ ಪ್ರೀತಿ ಇರುವುದಕ್ಕೆ ಕಾರಣವಿರುವದು. ನಿಮ್ಮ ಜನರಲ್ಲಿ ಒಬ್ಬರನ್ನು ದೊಡ್ಡ ಹುದ್ದೆಗೆ ಬಡ್ತಿ ಮಾಡಿರುವುದು ನಿಮಗೆಲ್ಲಾ ತುಂಬಾ ತೃಪ್ತಿಕರವಾಗಿದೆ ಎಂದು ತಿಳಿದು ಸಂತೋಷಪಡುವೆನು ಸರ್ಕಾರದ ಅಧಿಕಾರಿಗಳಿಗೆ ನಿಮ್ಮ ಜನರನ್ನು ಪ್ರತ್ಯೇಕವೆಂದು ನೀವು ಕಂಡುಕೊಳ್ಳುತ್ತಿರುವುದು ಸಂತೋಷಕರವಾಗಿದೆ. ಆದರೆ ಅಂಥಾ ನಿಮ್ಮ ಕುತೂಹಲವು ಸಾರ್ಥಕವಾಗಬೇಕಾದರೆ ಆ ಪ್ರಯತ್ನವು ನಿಮ್ಮನ್ನೇ ವಿಶೇಷವಾಗಿ ಅವಲಂಬಿಸಿರುತ್ತದೆ ವಿದ್ಯಾಸಂಪಾದನೆಯ ವಿಷಯದಲ್ಲೂ ಅಧಿಕಾರವಿನಿಯೋಗದ ವಿಷಯದಲ್ಲೂ ಯಾವ ಸಂಗಡದವರಿಗೂ ಪಕ್ಷಪಾತವೆ ಏನೂ ಇರುವದಿಲ್ಲ. ಸಕಲ ಜಾತಿಯವರೂ ಏಕಪ್ರಕಾರವಾಗಿ ವಿದ್ಯಾದಿಸಾಮರ್ಥ್ಯಗಳನ್ನು ಸಂಪಾದಿಸಿಕೊಂಡು, ಸರ್ಕಾರಿ ಉದ್ಯೋಗಗಳಿಗೆ ಅರ್ಹರಾಗಬಹುದಾಗಿರುತ್ತದೆ ನಿಮ್ಮ ಜನರಲ್ಲಿ ಅಂಥಾ ಯೋಗ್ಯತೆಗಳು ಕಂಡುಬಂದಲ್ಲಿ ಅಂಥವರನ್ನು ನಾನಾಗಲಿ ನನ್ನ ಸರ್ಕಾರದವರಾಗಲಿ ಮರೆಯುವುದಿಲ್ಲ. ಇದು ತಮ್ಮಾಪಲ್ಲಿ ನೀವು ಒಪ್ಪಿಸಿರುವ ವಿಜ್ಞಾಪನೆಯಿಂದಲೇ ವ್ಯಕ್ತಪಡುವದು. ಇಂಥಾ ರಾಜಭಕ್ತಿಪೂರ್ವಕವಾದ ವಿಜ್ಞಾಪನಾ ಪತ್ರಿಕೆಯನ್ನು ನೀವುಗಳು ಒಪ್ಪಿಸಿರುವುದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಮುಖ್ಯವಾಗಿ ಹಿಂದುಸ್ಥಾನದಲ್ಲೂ ಈ ಸಂಸ್ಥಾನದಲ್ಲೂ ಅಭಿವೃದ್ಧಿಗೆ ಬಂದು ಸರ್ಕಾರಿ ನೌಕರಿಗಳನ್ನು ಪಡೆಯಬೇಕೆಂಬ ಕುತೂಹಲಪೂರ್ವಕವಾದ ನಿಮ್ಮ ಸಂಘದ ಪ್ರಯತ್ನವು ಫಲದಾಯಕವಾಗಲೆಂದು ಹಾರೈಸುತ್ತೇನೆ ಎಂಬುದೇ.

ತರುವಾಯ ಅರಮನೆ ಇಲಾಖೆಯವರು ಪ್ರತಿನಿಧಿಗಳನ್ನೆಲ್ಲಾ ಪುಷ್ಪ ಹಾರ ತಾಂಬೂಲಾದಿಗಳಿಂದ ಸನ್ಮಾನಮಾಡಿದರು. ಸಕಲರೂ ಶ್ರೀಮನ್ಮಹಾರಾಜರವರ ಉದಾರಮನಸ್ಸನ್ನು ಕೊಂಡಾಡಿ, ಅವರಿಂದ ಬೀಳ್ಕೊಂಡು ಹೊರಟುಬಂದರು.

ಕುರುಡರ ಮತ್ತು ಕಿವುಡುಮೂಗರ ಪಾಠಶಾಲೆ.

ದಿವಾನರವರು ದಯಮಾಡಿದ್ದರು.

ಮೊನ್ನೆ ೧೦ ನೆ ತಾ ಸೋಮವಾರ ಬೆಳಿಗ್ಗೆ ರಾಜಧಾನಿಯಲ್ಲಿರುವ ಕಿವುಡು ಮೂಗರ ಮತ್ತು ಕುರುಡರ ಪಾಠಶಾಲೆಯು ನಾನಾ ಪ್ರಕಾರವಾಗಿ ಅಲಂಕರಿಸಲ್ಪಟ್ಟು ಕಳಕಳಿಸುತ್ತಿತ್ತು ದಿವಾನ್ ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ಅಲ್ಲಿಗೆ ದಯಮಾಡಿ ಅಗ್ರಾಸನವನ್ನು ವಹಿಸಿದರು ರಾವ್ ರಾಜಾ ಸಾಹೇಬರವರು, ಮೆ॥ ಗಳಾದ ಬಿ. ಸೀತಾರಾಮರಾಯರು, ಎಚ್ ನಂಜುಂಡರಾಜೇ ಅರಸಿನವರು, ಇ ಮೆಕಾನಕಿ ಯವರು, ಎಚ್. ಎಚ್. ಸ್ಪಾರ್ಕ್ಸ್ ಯವರು, ಸಿ. ವೆಂಕಟರಾಯರು, ಎಂ. ನರಸಿಂಹಸ್ವಾಮಿಗಳು, ಮಾದಪ್ಪನವರು, ಎಂ. ಅನಂತರಾಜೈಯ್ಯನವರು, ಎಂ. ವೆಂಕಟಕೃಷ್ಣಯ್ಯನವರು, ಎ ಸುಬ್ಬಣ್ಣನವರು, ಒಬ್ಬಣ್ಣನವರು, ಬಿ ರಾಮಕೃಷ್ಣರಾಯರು, ಪಿ. ಎಸ್. ಅಚ್ಯುತರಾಯರು, ಟಿ. ವೆಂಕಟರಾಮೈಯ್ಯನವರು, ಅಂಬಳೆಪಂಡಿತರು, ಪಿ. ರಾಘವಾಚಾರ್ರು ಈ ಮೊದಲಾದ ದೊಡ್ಡ ಮನುಷ್ಯರು ಸಭಾಸದರಾಗಿದ್ದರು.

ಮೊದಲು ಕುರುಡು ವಿದ್ಯಾರ್ಥಿಗಳು ಪದ್ಯಗಳನ್ನು ರಾಗವೆತ್ತಿ ಓದಿದರು, ಪಾಠ ಪುಸ್ತಕಗಳನ್ನು ಓದಿದರು, ಇಂಗ್ಲಿಷ್ ಮಾತುಗಳನ್ನು ಪುಸ್ತಕದಿಂದ ಓದಿದರು, ಲೆಕ್ಕಮಾಡಿದರು. ಕುರುಡರಲ್ಲಿ ಇಬ್ಬರು ಸಂಗೀತ ಹಾಡಿದರು, ಒಬ್ಬ ಪಿಟೀಲ್ ಬಾರಿಸಿದನು ಇನ್ನೊಬ್ಬ ತಂಬೂರಿ ಮೀಟಿದನು ಮತ್ತೊಬ್ಬ ತಬಲ ಹೊಡೆದನು. ಇದಾದ ಮೇಲೆ ಕಿವುಡು ಮೂಗರನ್ನು ಕರೆತಂದು ಪಾಠಗಳನ್ನು ಓದಿಸಿದರು. ಹೆಡ್ ಮಾಸ್ಟರು—ಮೂಗರಿಗೆ ಮಾತುಗಳನ್ನು ಕಲಿಸುವ ವಿಧಾನವನ್ನು ಬಹು ಸ್ಪಷ್ಟವಾಗಿ ವಿವರಿಸಿ, ದೃಷ್ಟಾಂತಪಡಿಸಿದರು.

ಅನಂತರ ಮೆ॥ ಎಂ. ಶ್ರೀನಿವಾಸರಾಯರು ಈ ಅಪೂರ್ವವಾದ ವಿದ್ಯಾಶಾಲೆಯಲ್ಲಿ ಪ್ರಾರಂಭದಿಂದ ಇದುವರೆಗೆ ನಡೆದಿರುವ ವೃತ್ತಮಾನಗಳನ್ನೆಲ್ಲಾ ಅದರ ಜಮಾ ಖರ್ಚು ಸಹಿತವಾಗಿ ರಿಪೋರ್ಟು ಓದಿ ಹೇಳಿದರು. ಅದರಲ್ಲಿ ಕಂಡ ಮುಖ್ಯ ವಿಷಯಗಳ್ಯಾವುವೆಂದರೆ—

ಈ ಪಾಠಶಾಲೆಯನ್ನು ೧೯೦೧ ನೇ ಅಕ್ಟೋಬರ್ ೨೩ ನೇ ತಾರೀಖಿಗೆ ಸರಿಯಾದ ಪ್ಲವಸಂವತ್ಸರದ ಆಶ್ವೀಜ ಶುದ್ಧ ವಿಜಯದಶಮಿ ದಿನ ಪ್ರಾರಂಭಿಸಿದರು ಆಗ್ಗೆ ನಾಲ್ವರು ವಿದ್ಯಾರ್ಥಿಗಳಿದ್ದರು ಕಿವುಡು ಮೂಗರಿಗೂ ಕುರುಡರಿಗೂ ವಿದ್ಯೆಯನ್ನೂ ಸಂಗೀತವನ್ನೂ ಜೀವನೋಪಾಯಕ್ಕೆ ಅನುಕೂಲವಾದ ಕಸಬುಗಳನ್ನೂ ಕಲಿಸಬೇಕೆಂಬುವುದೇ ಈ ಪಾಠಶಾಲೆಯ ಉದ್ದೇಶ. ಮೆ॥ ಭಾಭಾಯವರು ಇಂಥಾ ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಮೆ॥ ಶಂಕರನಾರಣಪ್ಪನವರನ್ನು ಮುಂಬಿ ಸ್ಕೂಲಿನಿಂದ ಈ ಸ್ಕೂಲಿಗೆ ನೇಮಿಸಿ ಕೊಟ್ಟರು. ಇವರು ಈ ಬಾಲಕರಿಗೆ ವಿದ್ಯೆ ಕಲಿಸುವುದರಲ್ಲಿ ಸುಪ್ರಸಿದ್ಧರಾಗಿದಾರೆ. ಮೆ॥ ಗಳಾದ ಬಿ ತಿರುಮಲಾಚಾರ್ರು, ಪಿ. ಎಸ್ ಅಚ್ಯುತರಾಯರು, ಸರ್ ಪಿ ಎನ್. ಕೃಷ್ಣಮೂರ್ತಿಯವರು, ಮೆ॥ ಗಳಾದ ಸಿ. ಶ್ರೀನಿವಾಸೈಯ್ಯಂಗಾರ್ರು, ಎ. ರಂಗಸ್ವಾಮಿಅಯ್ಯಂಗಾರ್ರು, ಟಿ ಆರ್ ಎ ತಂಬುಚೆಟ್ಟಿಯವರು, ಎಂ. ರಾಮಸ್ವಾಮಿ ಅಯ್ಯರವರೇ ಮೊದಲಾದ ಮಹನೀಯರು ಈ ಪಾಠಶಾಲೆಗೆ ಪ್ರೀತಿ ಪೂರ್ವಕವಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡುತ್ತಾ ಬಂದಿದಾರೆ ಮೆ॥ ಇ ಮೆಕಾನಕಿಯವರು ಈ ಪಾಠಶಾಲೆಯನ್ನು ದಯಮಾಡಿ ನೋಡಿ ತುಂಬಾ ಸಂತೋಷಪಟ್ಟುದರಿಂದ ಶ್ರೀಮನ್ಮಹಾರಾಜರವರು ಮೆ॥ ಟಿ ವೆಂಕಟರಾವ್, ಬಿ ಎ ಯವರನ್ನು ಕಲ್ಕತ್ತೆಗೂ ಬೊಂಬಾಯಿಗೂ ವೇತನಕೊಟ್ಟು ಕಳುಹಿಸಿದರು. ಅಲ್ಲಿ ಇಂಥಾ ಸ್ಕೂಲುಗಳವರು ಬಾಲಕರಿಗೆ ವಿದ್ಯೆ ಕಲಿಸುವ ವಿಧಾನಗಳನ್ನೆಲ್ಲಾ ಇವರು ಕಲಿತು ಬಂದು ಇಲ್ಲಿನ ಬಾಲಕರನ್ನು ತರಪೇತು ಮಾಡುತ್ತಿದಾರೆ ಸದ್ಯ ಈ ಪಾಠಶಾಲೆಯಲ್ಲಿ ೨೧ ಮಂದಿ ಕುರುಡರೂ ೧೦ ಜನ ಕಿವುಡು ಮೂಗರೂ ಇರುತ್ತಾರೆ ಈ ಪೈಕಿ ಇಬ್ಬರು ಮಾತ್ರ ಮದರಾಸ್ ಆಧಿಪತ್ಯಕ್ಕೆ ಸೇರಿದವರು. ಉಳಿದವರೆಲ್ಲ ಮೈಸೂರು ಸಂಸ್ಥಾನದಲ್ಲೇ ಹುಟ್ಟಿದವರು ಈ ಸಂಸ್ಥಾನದ ಸೆನಸಸ್ ಗಣತಿಯ ಪ್ರಕಾರ ೩,೦೫೮ ಮಂದಿ ಕಿವುಡುಮೂಗರೂ ೪,೯೦೦ ಜನ ಕುರುಡರೂ ಇದಾರೆಂದು ಗೊತ್ತಾಗುವದರಿಂದ ಈ ಪಾಠಶಾಲೆಯು ಅವರ ಕಷ್ಟನಿವಾರಣೆಗೆ ತುಂಬಾ ಸಹಾಯವಾದೀತೆಂದು ನಿರೀಕ್ಷಿಸಬಹುದಾಗಿದೆ

ಈ ಪಾಠಶಾಲೆಯಲ್ಲಿ ಬಾಲಕರಿಂದ ತಯಾರಿಸಲ್ಪಟ್ಟ ನಾನಾ ತರದ ನೂಲಿನ ಮತ್ತು ಕಂಬಳಿಯ ಜಮಖಾನ ಮೊದಲಾದ ಪದಾರ್ಥಗಳನ್ನು ಅನೇಕರು ಬಹು ಬೇಗನೆ ಕೊಂಡುಕೊಳ್ಳುತ್ತಿದಾರೆ. ಇದಲ್ಲದೆ ಈ ಪದಾರ್ಥಗಳನ್ನು ಬೆಂಗಳೂರಿನಲ್ಲೂ ಮದರಾಸಿನಲ್ಲೂ ನಡೆದ ಪ್ರದರ್ಶನಶಾಲೆಗಳಿಗೆ ಕಳುಹಿಸಿರುತ್ತೆ ನೋಡಿದವರೆಲ್ಲಾ ಒಳ್ಳೆದನ್ನಾಗಿವೆ ಎಂದು ಹೇಳಿ ಮೆಚ್ಚಿಕೊಂಡಿದಾರೆ ಬಹುಮಾನಗಳೂ ದೊರೆತವೆ. ಮೊನ್ನೆ ರಾಜಧಾನಿಯಲ್ಲಿ ನಡೆದ ಪ್ರದರ್ಶನೋತ್ಸವದಲ್ಲಿ ಈ ಪಾಠಶಾಲೆಯ ಬಾಲಕರು ಅದರ ಒಂದು ಕೊಠಡಿಯಲ್ಲಿದ್ದುಕೊಂಡು, ನೋಟಕರಿಗೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರಕಾಶಪಡಿಸಿದರು ನೋಡಿದವರೆಲ್ಲಾ ತುಂಬಾ ಸಂತೋಷಪಟ್ಟರು.

ಈ ಬಾಲಕರಿಗೆ ೧೯೦೩ ನೆ ಫೆಬ್ರವರಿ ಆಗಾಯಿತು ಪಾಠಶಾಲೆಯಲ್ಲಿ ಅನೇಕ ಪದಕಗಳನ್ನು ಬಹುಮಾನವಾಗಿ ಬಟ್ಟೆಗಳನ್ನು ಕೊಡುವಂತೆಯೂ ಏರ್ಪಾಡು ಮಾಡಲಾಗಿದೆ ಇದಕ್ಕೆ ಸರಿಯಾದ ಸ್ಥಳ ಇನ್ನೂ ದೊರೆತಿಲ್ಲ. ಪಬ್ಲಿಕ್ ಜನರು ತಿಂಗಳಿಗೆ ೬೬ ಚಿಲ್ಲರೆ ರೂಪಾಯಿ ಚಂದಾ ಕೊಡುತ್ತಾರೆ. ಗವರ್ನಮೆಂಟಿನಿಂದ ೭೫ ರೂಪಾಯಿಯೂ, ಮ್ಯುನಿಸಿಪಾಲಿಟಿಯಿಂದ ೩೦ ರೂಪಾಯಿಯೂ ಗ್ರಾಂಟು ದೊರಕುತ್ತಿದೆ. ವಿದ್ಯಾರ್ಥಿಗಳು ತಯಾರುಮಾಡಿದ ಪದಾರ್ಥಗಳ ವಿಕ್ರಯದ ಸ್ವಲ್ಪ ಉತ್ಪತ್ತಿಯಾಗುವುದು ಅಂತು ತಿಂಗಳಿಗೆ ಸುಮಾರು ೧೬೦ ರೂಪಾಯಿ ಉಟ್ಪನ್ನವಳಿಯೂ, ೨೦೦ ಚಿಲ್ಲರ ರೂಪಾಯಿ ಖರ್ಚು ಆಗುತ್ತಿದೆ ಪಬ್ಲಿಕ್ ಜನರಿಂದ ಚಂದಾ ವಸೂಲಾಗುವುದೇನೂ ಸುಲಭವೆಂದು ಹೇಳಲಾಗದು ಅನೇಕರು ಚಂದಾ ಕೊಡದೆ ನಿಲ್ಲಿಸಿ ಬಿಟ್ಟರು, ಇದನ್ನು ನೋಡಿ ಮೆ॥ ಸ್ಪಾರ್ಕ್ಸ್ ಯವರು ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಫಂಡುಗಳಿಂದಲೂ ಮ್ಯುನಿಸಿಪಲ್ ಫಂಡುಗಳಿಂದಲೂ ಈ ಸ್ಕೂಲಿಗೆ ಗ್ರಾಂಟು ಕಳುಹಿಸುವಂತೆ ಹೇಳಿಕೊಂಡಿದಾರೆ, ಅವರ ಮೇಲ್ವಿಚಾರಣೆಯಿಂದ ಈ ಪಾಠಶಾಲೆಯು ತುಂಬಾ ಅಭಿವೃದ್ಧಿಗೆ ಬಂತೆಂದು ಸಂಶಯವಿಲ್ಲದೆ ಹೇಳಬಹುದು

ಈ ಪಾಠಶಾಲೆಯ ಕೊರತೆಗಳೇನೆಂದರೆ—ಅನುಕೂಲವೂ ಪ್ರತ್ಯೇಕವೂ ವಿಸ್ತಾರವೂ ಆದ ಕಟ್ಟಡಬೇಕು, ಉಪಾಧ್ಯಾಯರು ಬೇಕು, ಖರ್ಚಿಗೆ ತಿಂಗಳಿಗೆ ಇನ್ನೂ ೧೦೦ ರೂಪಾಯಿ ಬೇಕು ಇಷ್ಟೆಲ್ಲಾ ಅನುಕೂಲವಾದರೆ ಇನ್ನೂ ಬಹುಮಂದಿ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಂಡು ಇದನ್ನು ವಿಶೇಷ ಅಭಿವೃದ್ಧಿಗೆ ತರಬಹುದಾಗಿದೆ

ಇದೇ ಮೊದಲಾದ ಅನೇಕ ಸಂಗತಿಗಳನ್ನು ಕುರಿತು ಮೆ॥ ಶ್ರೀನಿವಾಸರಾಯರು ಒಂದು ರಿಪೋರ್ಟನ್ನು ಓದಿದರು ತರುವಾಯ ಕಿವುಡು ಬಾಲಕರು ಮನೋಹರವಾಗಿ ಹಾಡಿದರು ಸಭಾನಾಯಕರಿಗೂ ಸಭಿಕರಿಗೂ ಹಾರ ಹಾಕಿ ಅಡಿಕೆಲೆಯನ್ನು ಕೊಟ್ಟರು ಅನಂತರ ದಿವಾನ್ ಮೆ॥ ಮಾಧವರಾಯರು ಎದ್ದು ಸಭಿಕರನ್ನು ಕುರಿತು ಹೇಳಿದ ಅಭಿಪ್ರಾಯವೇನೆಂದರೆ—

ನನಗೆ ಈ ದಿನ ಈ ಪಾಠಶಾಲೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ. ಸುಮಾರು ಮೂರು ವರುಷಗಳ ಕೆಳಗೆ ಈ ಪಾಠಶಾಲೆಯನ್ನು ನಾನು ನೋಡಿದ್ದೆನು. ಅಂದಿನಿಂದ ಇದು ಇಷ್ಟು ಚನ್ನಾಗಿ ಅಭಿವೃದ್ಧಿಗೆ ಬಂದಿದೆ ಎಂದು ಕೇಳಿ ನನಗೆ ಆಶ್ಚರ್ಯವೂ ಆನಂದವೂ ಉಂಟಾಗಿದೆ. ಶ್ರೀಮನ್ಮಹಾರಾಜರವರು ಕೃಪೆಯಿಟ್ಟು, ಉಪಾಧ್ಯಾಯನನ್ನು ಕಲ್ಕತ್ತೆ ಬೊಂಬಾಯಿ ಪಟ್ಟಣಗಳಿಗೆ ಕಳುಹಿಸಿ, ವಿದ್ಯೆ ಕಲಿಸುವ ವಿಧವನ್ನೆಲ್ಲಾ ಕಲಿಸಿ ಕರೆಸಿದ್ದಕ್ಕಾಗಿ ನಾವುಗಳೆಲ್ಲಾ ಅವರ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ಕೊಂಡಾಡುವೆವು. ಈ ಸ್ಕೂಲಿನ ಮೇಲ್ವಿಚಾರಣಾ ಕಮಿಟಿ ಮೆಂಬರುಗಳು ಎಷ್ಟು ಪ್ರೀತಿಯಿಂದಲೂ ಶ್ರದ್ಧಾಪೂರ್ವಕವಾಗಿಯೂ ಕಾರ್ಯಭಾಗ ನಡಸುತ್ತಿದ್ದಾರೆಂಬುವುದು ಈಗ ಓದಿದ ರಿಪೋರ್ಟಿನಿಂದ ಸ್ಪಷ್ಟಪಡುತ್ತೆ. ಈ ಶಾಲೆಗೆ ಅಂಕುರಾರ್ಪಣವನ್ನು ಮಾ

ಮೊದಲಿಂದಲೂ ಅವಿಚ್ಛಿನ್ನವಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಂಡು, ಇದನ್ನು ಇಷ್ಟು ಅಭಿವೃದ್ಧಿ ಸ್ಥಿತಿಗೆ ತಂದಿರುವ ಮೆ॥ ಶ್ರೀನಿವಾಸರಾಯರ ಶ್ರಮವೂ ಅದಕ್ಕೆ ಮೆ॥ ಭಾಭಾ ಯವರು ಮಾಡುತ್ತಿರುವ ಸಹಾಯವೂ ಸ್ತೋತ್ರಾರ್ಹಗಳಾಗಿರುತ್ತವೆ. ಮೆ॥ ವೆಂಕಾನಕಿಯವರೂ ಮೆ॥ ಸ್ಪಾರ್ಕ್ಸ್ ಯವರೂ ಈ ಸ್ಕೂಲನ್ನು ಮುಂದಕ್ಕೆ ತರಬೇಕೆಂದು ತಮ್ಮ ಕೈಲಾಗ ಮಟ್ಟಿಗೆ ಸಾಹಸ ಪಡುತ್ತಿರುವುದಕ್ಕಾಗಿ ನಾವೆಲ್ಲಾ ಸಂತೋಷಪಡತಕ್ಕವು. ಮೆ॥ ಸ್ಪಾರ್ಕ್ಸ್ ಯವರು ಇಷ್ಟರಲ್ಲೇ ಬೇರೆ ಕಡೆ ಹೋಗುವವರಾಗಿರುವದರಿಂದ ಅವರ ಸ್ಥಾನಕ್ಕೆ ಬರತಕ್ಕವರು ಕೂಡ ಅವರಂತೆಯೇ ಈ ಪಾಠಶಾಲೆಯ ಮೇಲೆ ಪ್ರೀತಿ ವಿಶ್ವಾಸಗಳನ್ನಿಟ್ಟು, ಇದನ್ನು ಇನ್ನೂ ಅಭಿವೃದ್ಧಿ ಸ್ಥಿತಿಗೆ ತರಲು ಸಹಾಯ ಮಾಡುವರೆಂದು ನಿರೀಕ್ಷಿಸುತ್ತೇವೆ. ಡಾಕ್ಟರ್ ಅಚ್ಯುತರಾಯರು ಯಾವಾಗಲೂ ಬಡಬಗ್ಗರ ಆಪ್ತರೆಂಬ ಹೆಸರು ಪಡೆದಿರುವರು. ಇವರು ಈ ಪಾಠಶಾಲೆಯ ಬಾಲಕರ ಆರೋಗ್ಯ ವಿಚಾರವನ್ನು ವಿಶೇಷ ಮಾತೃವರ್ಜಿತರಾಗಿಯೂ ಪ್ರೀತಿಯಿಂದಲೂ ನೋಡಿಕೊಳ್ಳುತ್ತಿರುವುದು ಅವರಲ್ಲಿ ಸ್ವಭಾವಜನ್ಯವಾದ ಗುಣವಾಗಿರುತ್ತೆ. ಆದ್ದರಿಂದ ಅವರನ್ನು ಹೊಗಳಬೇಕಾದ ಅಗತ್ಯ ಕಂಡುಬರುವುದಿಲ್ಲ. ಸ್ಕೂಲ್ ನಡಿಸುವುದಕ್ಕೆ ಹಣಕಾಸು ಸಾಲದೆಂದು ತಿಳಿಯುತ್ತೇವಷ್ಟೆ. ಈ ಪಾಠಶಾಲೆಯು ಅಪೂರ್ವವಾದದ್ದು. ಅಂಗಹೀನರಿಗೆ ಅವರಿಂದ ಮಹೋಪಕಾರವಾಗಿದೆ. ಇಂಥದ್ದನ್ನು ಸರ್ಕಾರದವರು ವಹಿಸಿಕೊಂಡು ನಡಿಸುವದು ಯೋಗ್ಯವೆನಿಸಲಾರದು. ಪ್ರಜೆಗಳ ಧರ್ಮದಿಂದ ಇಂಥಾ ಪಾಠಶಾಲೆ ನಡೆಯುವದೆ ಶ್ರೇಯಸ್ಕರ. ಹಿಂದುಗಳ ೧ ಮಹಮ್ಮದೀಯರೂ ಧರ್ಮಪ ವಿಷಯದಲ್ಲಿ ಕೀರ್ತಿವಂತರಾಗಿದ್ದಾರೆ. ಸರ್ಕಾರದವರು ವಹಿಸಿಕೊಳ್ಳುವುದರಿಂದ ಈ ಆರ್ಹೇಯವಾದ ಕೀರ್ತಿಗೆ ಲೋಪವುಂಟಾದೀತು. ಅದ್ದರಿಂದ ಈ ಪಾಠಶಾಲೆಯನ್ನು ಧನವಂತರಾದ ಪ್ರಜೆಗಳು ಬಹಳ ಶ್ರಮಪಟ್ಟು ಸಹಾಯ ಮಾಡಿ ಅಭಿವೃದ್ಧಿಗೆ ತರುವುದು ಒಳ್ಳೇದೆಂದು ನಾನು ಹೇಳಬೇಕಾಗಿಲ್ಲ. ನಾನಾದರೋ ಈ ಪಾಠಶಾಲೆಯ ವಿಷಯದಲ್ಲಿ ಇದುವರೆಗೆ ವಾಚಕರ ಪರಿಚಿತನಾಗಿದ್ದೇನೆ. ಈಗ ನನ್ನ ಪ್ರೀತಿವಿಶ್ವಾಸಗಳನ್ನು ೧೦೦ ರೂಪಾಯಿ ಧರ್ಮಕೊಟ್ಟು ಕಾರ್ಯರೂಪಕ್ಕೆ ತರುವೆನು ಎಂಬೀ ರೀತಿಯಾಗಿ ಹೇಳಿ ಸಭೆಯನ್ನು ವಿಸರ್ಜನೆ ಮಾಡಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತೆಯಲ್ಲಿ ಸ್ವದೇಶೀ ಸರಕುಗಳ ಪ್ರದರ್ಶನಾಲಯವನ್ನು ಸ್ಥಾಪಿಸಬೇಕೆಂದು ಅಲ್ಲಿನವರು ಪ್ರಯತ್ನ ಪಡುತ್ತಿದ್ದಾರೆ.

****

ಬರ್ದ್ವಾನ್ ಮಹಾರಾಜರವರು ಯೂರೋಪಿನ ರಾಜ್ಯಗಳಲ್ಲಿ ಸಂಚಾರಮಾಡಿಕೊಂಡು ಲಂಡನ್ ಪಟ್ಟಣವನ್ನು ಸೇರಿದ್ದಾರೆ.

****

ಹಿಂದಿನ ಶನಿವಾರ ಬೊಂಬಾಯಿ ಪಟ್ಟಣದ ಕೊಲಾಬಾ ಮೊಹಲ್ಲೆಯಲ್ಲಿ ಒಂದು ಹತ್ತಿ ಕಾರ್ಖಾನೆಗೆ ಬೆಂಕಿ ಬಿದ್ದು, ಸಾಹುಕಾರರಿಗೆ ೧೪ ಲಕ್ಷ ರೂಪಾಯಿ ನಷ್ಟವಾಯಿತು.

****

ಬೆಜ್ವಾಡದ ಹತ್ತಿರ ಬಿಸಿಲು ಸಹಿಸಲಶಕ್ಯವಾದಷ್ಟು ತೀಕ್ಷ್ಣವಾಗಿದ್ದುದರಿಂದ ಮೂವರು ಬೀದಿಯಲ್ಲಿ ಹೋಗುತ್ತಿದ್ದ ಹಾಗೆ ಬಿದ್ದು ಮೃತರಾದರೆಂದು ತಿಳಿದುಬಂದಿದೆ.

****

ಮದರಾಸ್ ಪಟ್ಟಣದಲ್ಲಿರುವ ಪ್ರೆಸಿಡೆನ್ಸಿ ಕಾಲೇಜ್ ಎಂಬ ಸರ್ಕಾರಿ ವಿದ್ಯಾಲಯದ ಸ್ವ ಭವನವನ್ನು ಮಾಡಬೇಕೆಂದು ಗವರ್ನಮೆಂಟಿನವರು ೬೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ಅಫ್ಘಾನಿಸ್ಥಾನದ ಅಮೀರರು ಪರಿವಾರ ಸಹಿತ ನ್ಯಸ್ತರಾಯಿಯವರನ್ನು ಕಾಣಲು ಹೋಗುವುದಕ್ಕೆ ಈ ವರುಷ ನವಂಬರ್ ತಿಂಗಳಲ್ಲಿ ಹಿಂದೂಸ್ಥಾನಕ್ಕೆ ದಯ ಮಾಡಬಹುದೆಂದು ವದಂತಿ ಹುಟ್ಟಿದೆ.

****

ಹಿಂದೂಸ್ಥಾನದಲ್ಲಿ ಹೋದ ವಾರ ೩,೪೯೩ ಜನರಿಗೆ ಪ್ಲೇಗ್ ತಗಲಿತು. ಅವರಲ್ಲಿ ೩,೦೩೩ ಜನರು ಕಾಲವಾದರು. ಈ ಪೈಕಿ ಪಂಜಾಬ್ ಆಧಿಪತ್ಯದಲ್ಲೇ ೬,೧೪೨ ಮರಣಗಳಾಗಿರುತ್ತವೆ. ಬೊಂಬಾಯಿಯಲ್ಲಿ ೬೩೩ ಮಂದಿಯೂ, ಸಂಯುಕ್ತ ಆಧಿಪತ್ಯಗಳಲ್ಲಿ ೧೬೪ ಜನರೂ ಕಾಲವಾಗಿದ್ದಾರೆ.

****

ಕಳೆದವಾರ ಕಲ್ಕತ್ತಾ ಪಟ್ಟಣದಲ್ಲಿ ಬಂಗಾಳಿಗಳು ಸೇರಿ ಶಿವಾಜಿ ಜನ್ಮೋತ್ಸವವನ್ನು ನೆರವೇರಿಸಿದರು. ಈ ಉತ್ಸವಕ್ಕೆ ಪೂನಾ ಪಟ್ಟಣದಿಂದ ಮೆ॥ ಬಾಲಗಂಗಾಧರ ತಿಲಕರವರೂ ಮೆ॥ ಖಾಪರ್ಡೆಯವರೂ ಹೋಗಿ ಸಭೆಯಲ್ಲಿ ಶಿವಾಜಿಯ ಜೀವಚರಿತ್ರೆ ಮುಂತಾದ್ದನ್ನು ಕುರಿತು ಉಪನ್ಯಾಸ ಮಾಡಿದರು.

****

ಮದರಾಸ್ ಪಟ್ಟಣದಲ್ಲಿರುವ ನೇಪಿಯರ್ ಸೇತುವೆಯು ಶಿಥಿಲವಾಗಿದೆ ಎಂದು ತಿಳಿದುಬಂದಿರುವುದರಿಂದ ಬೇರೊಂದು ಸೇತುವೆಯನ್ನು ಹೊಸದಾಗಿ ಕಟ್ಟಬೇಕೆಂದು ಗವರ್ನಮೆಂಟಿನವರು ತೀರ್ಮಾನಮಾಡಿದವರಾಗಿದ್ದಾರೆ. ಈ ಹೊಸ ಸೇತುವೆಗೆ ೧,೯೦,೦೦೦ ರೂಪಾಯಿ ಖರ್ಚಾಗುವುದು.

****

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಹಿಂದೂ ಸ್ತ್ರೀಯು ತನ್ನ ಇಬ್ಬರು ಸ್ತ್ರೀಮಕ್ಕಳನ್ನು ಹತ್ತಿರ ಇಟ್ಟುಕೊಂಡು, ಉರಿಯುತ್ತಿದ್ದ ದೀಪದ ಬುಡ್ಡಿಗೆ ಸೀಮೆಯೆಣ್ಣೆಯನ್ನು ಸುರಿಯುತ್ತಿದ್ದಾಗ್ಗೆ ಆಕಸ್ಮಾತ್ತಾಗಿ ದೀಪವು ಎಣ್ಣೆಗೆ ತಗಲಿ ಹತ್ತಿಕೊಂಡು ಅನಾಹುತವಾಯಿತು. ಆ ಹೆಂಗಸೂ ಒಂದು ಮಗುವೂ ಸತ್ತುಹೋದರು. ಇನ್ನೊಂದು ಮಗು ಗಾಯಪಟ್ಟು ನರಳುತ್ತಿದೆ.

ಬೊಂಬಾಯಿ ಆಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್‌ಟನ್ ರವರು ಮಹಾಬಲೇಶ್ವರದಿಂದ ಪೂನಾ ಪಟ್ಟಣಕ್ಕೆ ೭೪ ಮೈಲಿ ದೂರ ಬೈಸಿಕಲ್ ಮೇಲೆಯೂ ಕಾಲು ನಡಿಗೆಯಿಂದಲೂ ಸರ್ಕೀಟು ಮಾಡಿಕೊಂಡು, ಅಲ್ಲಲ್ಲಿ ಪ್ರಜೆಗಳ ಅಹವಾಲನ್ನು ಕೇಳಿ ತಿಳಿಕೊಳ್ಳುತ್ತಾ ಬಂದು ತಲಪಿದರು. ಅವರ ಸಂಗಡ ಕ್ಯಾಪ್ಟನ್ ನೋವೆಲ್ ಎಂಬೊಬ್ಬ ಹುದ್ದೇದಾರ ಮಾತ್ರ ಇದ್ದನು.

****

ಕೊಚ್ಚಿ ಸಂಸ್ಥಾನದ ದಿವಾನರಾದ ಮೆ॥ ಪಟ್ಟಾಭಿ ರಾಮರಾಯರು ಆ ಸಂಸ್ಥಾನದ ವಾರ್ಷಿಕ ರಿಪೋರ್ಟನ್ನು ಪ್ರಕಟಿಸಿದ್ದಾರೆ. ಆ ಸಂಸ್ಥಾನದಲ್ಲಿ ಪ್ರತಿ ಒಂದು ಇಲಾಖೆಯೂ ಬಹಳ ತೃಪ್ತಿಕರವಾದ ಸ್ಥಿತಿಯಲ್ಲಿದೆ ಎಂತಲೂ ಹೋದವರ್ಷ ಖರ್ಚು ಕಳೆದು ೩,೯೭,೯೧೯ ರೂಪಾಯಿ ಶಿಲ್ಕು ಉಳಿಯಿತೆಂತಲೂ, ಪ್ರಾರಂಭ ಇಲಾಖೆಯಲ್ಲೇ ೩,೩೦,೯೦೦ ರೂಪಾಯಿ ತನಕ ಉತ್ಪತ್ತಿಯಾಯಿತೆಂತಲೂ ತಿಳಿದುಬರುವುದು.

****

ಮದರಾಸ್ ಪಟ್ಟಣದ ಮ್ಯುನಿಸಿಪಲ್ ಅಧಿಕಾರಿಗಳು ಪಟ್ಟಣದ ಸೈಲ್ಲಾ ಬೇಗ ಸುತ್ತಿ ಆಡಳಿತವನ್ನು ಮಾಡಿಕೊಂಡು ಬರುವುದಕ್ಕೆ ಸಹಾಯವಾಗ ಮೆ॥ ಮ್ಯುನಿಸಿಪಲ್ ಹಣದಿಂದ ೩,೦೦೦ ರೂಪಾಯಿಗೆ ಒಂದು ಮೋಟಾರ್ ಕಾರ್ ಎಂಬ ಸ್ವತಂತ್ರವಾಗಿ ಓಡುವ ಗಾಡಿಯನ್ನು ಕೊಂಡು ಆಫೀಸಿನಲ್ಲಿ ಇಟ್ಟುಕೊಂಡು ಅದರ ಡ್ರೈವರ ಮುಂತಾದ್ದಕ್ಕೆ ತಿಂಗಳಿಗೆ ೧೩೮ ರೂಪಾಯಿ ಖರ್ಚು ಮಾಡಬಹುದೆಂತಲೂ ಮೆಂಬರುಗಳು ಒಪ್ಪಿ ಸ್ಯಾಂಕ್ಷನ್ ಮಾಡಿದ್ದಾರೆ.

****

ಫಿಜಿ ದ್ವೀಪಗಳಲ್ಲಿ ಕೂಲಿನಾಲಿ ಮಾಡುತ್ತಿದ್ದು ಐದು ವರುಷಗಳ ಪಡಿ ಮಾರ ಕಲ್ಕತ್ತೆಗೆ ಬಂದಿಳಿದ ೩೫೦ ಮಂದಿ ಹಿಂದೂಸ್ಥಾನದ ಪ್ರಜೆಗಳಲ್ಲಿ ೧೦೦ ಮಂದಿ ಹೆಂಗಸರೂ ಮಕ್ಕಳೂ ಇದ್ದರು. ಇವರೆಲ್ಲಾ ಒಟ್ಟು ೯,೫೦೦ ರೂಪಾಯನ್ನು ಅಲ್ಲಿಂದ ಸಂಪಾದನೆಮಾಡಿಕೊಂಡು ಬಂದಿದ್ದಾರೆ. ಆ ಪೈಕಿ ಒಬ್ಬನಲ್ಲೇ ೧೦,೦೦೦ ರೂಪಾಯಿ ಇತ್ತು. ನಮ್ಮ ದೇಶದವರು ಇತರ ಕಡೆಗಳಿಗೆ ಹೋಗಿ ಹೀಗೆ ಸಂಪಾದಿಸಿಕೊಂಡು ಬಂದಿರುವುದು ಸಂತೋಷಕರವಾಗಿದೆ.

****

ಬಿಹಾರ್ ಆಧಿಪತ್ಯಕ್ಕೆ ಸೇರಿದ ಪಾಟ್ನಾ ಪಟ್ಟಣದಲ್ಲಿ ಸರ್ಕಾರಿ ಪ್ಲೇಗ್ ಇಲಾಖೆಯವರು ಮನೆ ಮನೆಗಳನ್ನ ಶೋಧನೆ ಮಾಡುವದಕ್ಕೆ ಹೋದಾಗ್ಗೆ ಅಲ್ಲಿನ ಜನರು ಬೊಂಬೆ ಮಾಡಿ ಅವರನ್ನು ಹೊಡೆದು ಗುಲ್ಲೆಬ್ಬಿಸಿದರು. ಪೊಲೀಸಿನವರು ಆ ದಂಗೆಕೋರರಲ್ಲಿ ಮೂವತ್ತು ಜನರನ್ನು ಹಿಡಿದು, ಸೆಷನ್ ವಿಚಾರಣೆಗೆ ಗುರಿಮಾಡಿದರು. ಮ್ಯಾಜಿಸ್ಟ್ರೇಟರು ಅಪರಾಧಿಗಳಲ್ಲಿ ೧೩ ಜನರಿಗೆ ತಲಾ ೬೦ ತಿಂಗಳಿಂದ ೬ ತಿಂಗಳ ತನಕ ಸಜಾ ಶಿಕ್ಷೆಗಳನ್ನು ವಿಧಿಸಿ, ಉಳಿದವರನ್ನು ಖುಲಾಸ್ ಮಾಡಿದ್ದಾರೆ.

****

ದಕ್ಷಿಣ ದೇಶದ ಒಬ್ಬ ನೊಬ್ಬ ಜೋಯಿಸನು ಮಳೆ ಬರುವ ವಿಚಾರವಾಗಿ ಉತ್ತರದೇಶದ ಪತ್ರಿಕೆಗೆ ಬರೆದು ತಿಳಿಸುವುದೇನೆಂದರೆ— ಮೇ ತಿಂಗಳ ೨೫ ರಿಂದ ಹಿಡಿದು ೩೦ ದಿನಗಳ ತನಕ ಆಕಾಶದ ಮಳೆ ಸುರಿಯುತ್ತದೆಂದು ಹೇಳಿದ್ದೆನಷ್ಟೆ. ಈಚೆಗೆ ಇನ್ನೂ ಗ್ರಹಗತಿಗಳನ್ನು ಪರಿಶೋಧನೆ ಮಾಡಿದ್ದರಲ್ಲಿ ಜೂನ್ ತಿಂಗಳ ೧೦—೧೧ ನೆ ತಾರೀ ಆ ಮಳೆಗಳು ಪ್ರಾರಂಭವಾಗಲಿವೆಂದು ಗೊತ್ತಾಗಿದೆ. ಅಗ್ಗಿ ಮಳೆ ತಪ್ಪುವುದಿಲ್ಲವೆಂಬುದೇ. ಇಂಥಾ ಜೋಯಿಸರಿಗೆ ಮಾತನ್ನು ರೈತರು ನೆಚ್ಚಿಕೊಂಡಿರಬಾರದೆಂದು ಹೇಳಬೇಕೇ?

****

ಮೆ॥ ಪಿ ಸುಂದರರಾಯರು ತಿರುವಾಂಕೂರು (ಅನಂತಶಯನ) ಸಂಸ್ಥಾನದ ದಿವಾನಗಿರಿಯನ್ನು ಬಿಟ್ಟು ಬಂದು ಎಂಟು ವಾರಗಳಿಗಿಂತಲೂ ಹೆಚ್ಚಾಗಿದ್ದರೂ ಅವರ ಸ್ಥಾನಕ್ಕೆ ಇನ್ನೂ ಯಾರೂ ನೇಮಕವಾಗಿಲ್ಲವೆಂದು ತಿಳಿದು ಬರುತ್ತೆ. ಅನಂತಶಯನದ ಮಹಾರಾಜರವರು ಯಾರನ್ನು ನೇಮಕ ಮಾಡಿಕೊಳ್ಳುವರೋ ಗೊತ್ತಾಗಿಲ್ಲ. ಅಲ್ಲಿನ ಪ್ರಜೆಗಳು ಅಲ್ಲಿರುವ ಅನುಭವಶಾಲಿಗಳಾದ ಅಧಿಕಾರಿಗಳಿಗೆ ದಿವಾನಗಿರಿ ಆಗಬೇಕೆಂದೂ ಹೊರಗಿನಿಂದ ಯಾರನ್ನೂ ಕರೆದು ತಂದು ನೇಮಿಸುವುದು ಸರಿಯಲ್ಲವೆಂದೂ ಹೇಳುತ್ತಿದ್ದಾರೆ.

****

ಗಂಜಾಂ ಡಿಸ್ಟ್ರಿಕ್ಟಿನಲ್ಲಿ ಚತ್ರಪುರದ ಹತ್ತಿರ ಬೊನೊಬಲಿಬಲ್ಲಿ ಎಂಬ ಹಳ್ಳಿಯಲ್ಲಿ ಗೊಲ್ಲ ಜಾತಿಯವರೂ ರೆಡ್ಡಿಕ ಜಾತಿಯವರೂ ವಿಶೇಷವಾಗಿ ವಾಸಮಾಡುತ್ತಾರೆ. ಆ ಗ್ರಾಮದಲ್ಲಿ ವಾಂತಿ ಭೇದಿ ಉಪದ್ರ ಪ್ರಾಪ್ತಮಾಯಿತು. ಅನೇಕರು ಸಾಯುತ್ತಾ ಬಂದರು. ಯಾವನೋ ಒಬ್ಬ ಮಾಟಗಾರನಿಂದ ಈ ರೋಗ ಪ್ರಾಪ್ತವಾಯಿತೆಂದು ಕೆಲವು ಜನರು ಊಹಿಸಿ, ತಮಗೆ ಅನುಮಾನವಿದ್ದ ಮನುಷ್ಯನನ್ನು ಹಿಡಿದು ಕಟ್ಟಿ ತಂದು ತುಂಡಾಗಿ ಕತ್ತರಿಸಿ ಕೊಂದು ಹಾಕಿದರು. ಈಗ ಈ ಮೊಕದ್ದಮೆಯನ್ನು ಬರ್ಹಾಂಪುರದ ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡುತ್ತಿದ್ದಾರೆ.

****

ಹಿಂದೂಸ್ಥಾನದ ರೈಲ್ವೆ ಇಲಾಖೆಯವರು ೧೯೦೫ ನೆಯ ವರುಷದ ರಿಪೋರ್ಟನ್ನು ಪ್ರಕಟಿಸಿದ್ದಾರೆ. ಆ ವರುಷ ೧೯೯೯ ಮೈಲಿ ರೈಲ್ ರಸ್ತೆ ತಯಾರಾಯಿತು. ಈಗ ಹಿಂದೂಸ್ಥಾನದಲ್ಲಿ ಒಟ್ಟು ೨೮,೨೯೫ ಮೈಲಿ ರೈಲ್ ರಸ್ತೆ ಇರುತ್ತದೆ. ಇದಲ್ಲದೆ ಇನ್ನೂ ೩,೬೫೦ ಮೈಲಿ ರೈಲ್ ರಸ್ತೆಯನ್ನು ಕಾಮಗಾರಿ ಮಾಡಿಸುತ್ತಿದ್ದಾರೆ. ಗವರ್ನಮೆಂಟಿನವರು ಈ ಕಾಮಗಾರಿ ಮುಂತಾದ್ದಕ್ಕೆ ಆ ವರುಷದಲ್ಲಿ ೩೩ ಕೋಟಿಯೂ ೬೬ ಲಕ್ಷ ರೂಪಾಯಿ ಖರ್ಚು ಮಾಡಿದರು. ಖರ್ಚು ಜಾತಾ ಆ ವರುಷದಲ್ಲಿ ಸರ್ಕಾರಕ್ಕೆ ಈ ರೈಲ್ವೆ ಬಾಬಿನಲ್ಲಿ ೩೩೦ ಲಕ್ಷ ರೂಪಾಯಿ ಆದಾಯವಾಯಿತು.

****

ಲಾಹೋರ್ ಪಟ್ಟಣದ ವೈದ್ಯವಿದ್ಯಾಶಾಲೆಯಲ್ಲಿ ಓದತಕ್ಕ ನೂರಾರು ಮಂದಿ ಯೌವನಸ್ಥರಿಗೂ ಉಪಾಧ್ಯಾಯರಿಗೂ ಮನಸ್ತಾಪ ಉಂ

ಟಾಗಿ ಅವರೆಲ್ಲಾ ಏಕಕಾಲದಲ್ಲಿ ಪಾಠಶಾಲೆಯನ್ನು ಬಿಟ್ಟು, ತಮ್ಮ ಕಷ್ಟ ಮನೋವ್ಯಥೆಗಳನ್ನು ಲೆಫ್ಟಿನೆಂಟ್ ಗವರ್ನರವರಿಗೆ ಅರಿಕೆಮಾಡಿಕೊಂಡಿದ್ದಾರೆ. ಈಚೆಗೆ ಆ ಪಟ್ಟಣದ ಪ್ರಜೆಗಳು ಸುಮಾರು ೩,೦೦೦ ಮಂದಿ ಸಭೆಸೇರಿ, ಮೇಲ್ಕಂಡ ಹುಡುಗರ ಪಕ್ಷವನ್ನು ವಹಿಸಿ, ಅವರ ಕಷ್ಟಗಳನ್ನು ಕುರಿತು ಚರ್ಚೆಮಾಡಿ, ಈ ವಿಷಯದಲ್ಲಿ ತಾವೂ ಗವರ್ನಮೆಂಟಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಬೇಕೆಂದು ಗೊತ್ತು ಮಾಡಿದರು.

****

ಸೂರತ್ ಪಟ್ಟಣದಲ್ಲಿ ಕೆಲವು ದೊಡ್ಡ ಮನುಷ್ಯರು ಸೇರಿ ಒಂದು ಹಿಂದೂ ಅನಾಥಶಾಲೆಯನ್ನಿಟ್ಟು ನಾಲ್ಕಾರು ವರುಷಗಳಿಂದ ನಡೆಸುತ್ತಿದ್ದಾರೆ. ಕಳೆದವಾರ ಸುಮಾರು ೫,೦೦೦ ಜನರು ಸೇರಿ ಆ ಅನಾಥಶಾಲೆಯ ವಾರ್ಷಿಕೋತ್ಸವವನ್ನು ನಡಿಸಿದರು. ಮೆ॥ ವಿದ್ಯಾರಾಂ ಮೋತೀರಾಂ ಎಂಬ ಪುಣ್ಯಾತ್ಮನು ಅಲ್ಲಿನ ಮಕ್ಕಳಿಗಾಗಿ ಒಂದು ಪ್ರತ್ಯೇಕವಾದ ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದು ೫೦೦೦ ೧೫,೦೦೦ ರೂಪಾಯನ್ನು ಬರೋಡಾ ಸಂಸ್ಥಾನದ ನಾಯಬ್ ದಿವಾನ್ ಮೆ॥ ಮಣಿಭಾಯಿ ನಂದಶಂಕರರಾಯರು ೫,೦೦೦ ರೂಪಾಯನ್ನು ಚಂದಾ ಕೊಡುವುದಾಗಿ ಹೇಳಿದರು.

****

ಉತ್ತರ ದೇಶದಲ್ಲಿ ಕ್ಷಾಮಪೀಡೆಯು ದಿನೇ ದಿನೇ ಕಡಿಮೆಯಾಗುತ್ತಿದೆ. ಸಂಯುಕ್ತ ಆಧಿಪತ್ಯಗಳಲ್ಲಿ ೧೧,೦೦೦ ಜನರು ಕಡಿಮೆಯಾದರು. ಇನ್ನೂ ೧,೬೫,೦೦೦ ಜನ ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿರುತ್ತಾರೆ. ಬೊಂಬಾಯಿ ಪ್ರಾಂತ್ಯದಲ್ಲಿ ಕ್ಷಾಮ ಪೀಡಿತರ ಸಂಖ್ಯೆಯು ೩,೦೦೦ ಹೆಚ್ಚಿತು. ಮಧ್ಯ ಇಂಡಿಯಾದಲ್ಲೂ ೩,೦೦೦ ಜನರು ಕ್ಷಾಮಪೀಡಿತರ ಜೊತೆಗೆ ಬಂದು ಸೇರಿದರು. ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ದೇಶೀಯ ಸಂಸ್ಥಾನಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಇನ್ನೂ ೬,೦೦೦ ಜಾಸ್ತಿಯಾಯಿತು. ಅಜ್ಮೀರದಲ್ಲೂ ಕ್ಷಾಮದಲ್ಲೂ ವಾಂತಿಭೇದಿ ಉಪದ್ರವ ಪ್ರಬಲವಾಗಿ ಜನರನ್ನು ಕೊಲ್ಲುತ್ತಿದೆ.

****

ಲಾಹೋರ್ ಪಟ್ಟಣದಲ್ಲಿ ಮಹಮ್ಮದೀಯ ಪ್ರಜೆಗಳು ಸಭೆ ದೊಡ್ಡ ಸಭೆ ನಡಿಸಿದರು. ಆನರೆಬಲ್ ಫತ್ತೆ ಅಲಿಖಾನ್ ಬಹದೂರ್ ಸಿ ಐ ಇ ಯವರು ಸಭಾನಾಯಕರಾಗಿದ್ದರು. ಹಿಂದೂಸ್ಥಾನದಲ್ಲಿರುವ ಮಹಮ್ಮದೀಯ ಪ್ರಜೆಗಳು ತಮ್ಮ ಪುಣ್ಯಭೂಮಿಯಾದ ಮಕ್ಕಾ ಮದೀನಾಕ್ಕೆ ಹೋಗಬೇಕಾದರೆ ಸರ್ಕಾರದವರು ಅವರನ್ನು ಬೊಂಬಾಯಿನಲ್ಲಿ ಪತ್ತಾರು ದಿನ ತಡೆದಿಟ್ಟುಕೊಂಡಿದ್ದು ನಂತರಕ್ಕೆ ಬಿಡುತ್ತಾರೆ. ಇದರಿಂದ ಆ ಯಾತ್ರಾರ್ಥಿಗಳಿಗೆ ನಾನಾ ಕಷ್ಟನಷ್ಟಗಳುಂಟಾಗುವುವೆಂತಲೂ, ಬೊಂಬಾಯಿನಲ್ಲಿ ತಡೆಯದಂತೆ ಹುಕುಂ ಕೊಡತಕ್ಕದ್ದು ತಲೂ ಆ ವಿನ ಸಭಿಕರು ಗವರ್ನಮೆಂಟಿಗೆ ಅರಿಕೆಮಾಡಿಕೊಳ್ಳಬೇಕೆಂದು ತೀರ್ಮಾನಿಸಿದರು.

****

ಪೂರ್ವಬಂಗಾಳ ಮತ್ತು ಆಸ್ಸಾಂ ಆಧಿಪತ್ಯಕ್ಕೆ ಸೇರಿದ ಸಿಲ್ಹೆಟ್ ಪಟ್ಟಣದಲ್ಲಿ ಒಬ್ಬ ಕೈದಿಗೆ ಮರಣದಂಡನೆಯಾಯಿತು. ಅವನು ಲೆಫ್ಟಿನೆಂಟ್ ಗವರ್ನರವರಿಗೆ ಅರ್ಜಿ ಬರೆದು, ತನ್ನ ಶಿಕ್ಷೆಯನ್ನು ಕ್ಷಮಾಪಣೆ ಮಾಡಬೇಕೆಂತಲೂ, ಇಲ್ಲವಾದರೆ ಅರ್ಜಿಯನ್ನು ವೈಸರಾಯಿ ಪ್ರಭುಗಳಿಗೆ ಕಳುಹಿಸಬೇಕೆಂತಲೂ ಬೇಡಿಕೊಂಡರು. ಲೆಫ್ಟಿನೆಂಟ್ ಗವರ್ನರವರು ಅವನ ಶಿಕ್ಷೆಯನ್ನು ಮಾಫ್ ಮಾಡದೆ, ಆ ಅರ್ಜಿಯನ್ನು ವೈಸರಾಯಿ ಯವರಿಗೆ ಕಳುಹಿಸಿ, ಇತ್ತಲಾಗಿ ಜೈಲ್ ಅಧಿಕಾರಿಗಳಿಗೆ ವೈಸರಾಯರಿಂದ ೨೦ ನೆ ತಾರೀಖಿನೊಳಗಾಗಿ ಜವಾಬು ಬಾರದಿದ್ದರೆ ಅವನನ್ನು ಗಲ್ಲಿಗೆ ಹಾಕಬಿಡಿ ಎಂದು ಹುಕುಂಕೊಟ್ಟರು. ಅದೇ ಪ್ರಕಾರ ಜೈಲ್ ಅಧಿಕಾರಿಗಳು ಆ ದಿನದ ತನಕ ಕಾದಿದ್ದು ಅವನನ್ನು ಗಲ್ಲಿಗೆ ಎತ್ತಿಬಿಟ್ಟರು. ಮಾರನೇ ದಿನವೇ ವೈಸರಾಯರಿಂದ ಆತನನ್ನು ಗಲ್ಲಿಗೆ ಹಾಕದೆ ಸ್ವಲ್ಪ ಸಾವಕಾಶ ಮಾಡಿ ಎಂದು ತಂತಿ ಮೂಲಕ ಜೈಲ್ ಅಧಿಕಾರಿಗೆ ಹುಕುಂ ಬಂದಿತು.

****

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಬಿಜಾಪುರ, ಅಹಮದ್‌ನಗರ, ಶೋಲಾಪುರ, ನಾಸಿಕ್, ಪೂನಾ, ಸಾತಾರ, ಬೆಳ್ಗಾವಿ, ಧಾರವಾಡ, ಈ ಪ್ರಾಂತ್ಯಗಳಲ್ಲಿ ಮಳೆಯಿಲ್ಲದೆ ಬೆಳೆಗಳಿಲ್ಲದೆ ಕೆಟ್ಟು, ಜನರಿಗೂ ಗೋ ಕಾಲುಗಳಿಗೂ ಕುಡಿಯುವುದಕ್ಕೆ ನೀರಿಲ್ಲದೆ ತುಂಬಾ ಕಷ್ಟವಾಗಿರುವುದು. ಅನೇಕರು ಜೀವನಕ್ಕಾಗಿ ಮನೆ ಮಠಗಳನ್ನು ಬಿಟ್ಟು ಖಾಂಡೇಷ್, ಬೀರಾರ್, ಹೈದರಾಬಾದ್, ಗೋಲ್ಕೊಂಡ ಮೊದಲಾದ ಪಟ್ಟಣಗಳಿಗೆ ಹೊರಟುಹೋದರು. ಅತ್ತಲಾಗಿ ಸರ್ಕಾರದವರು ಉಳಿದಿರುವ ಪ್ರಜೆಗಳಿಗೆ ರಿಲೀಫ್ ಕಾಮಗಾರಿ ಮುಂತಾದ್ದನ್ನು ಏರ್ಪಡಿಸುತ್ತಿದ್ದಾರೆ. ಇದಲ್ಲದೆ ತಕ್ಕಾವಿ ಅಡ್ವಾನ್ಸಿಗಾಗಿ ಎಂಟೂ ಮುಕ್ಕಾಲು ಲಕ್ಷ ರೂಪಾಯನ್ನು ಕೆರೆ ಕಟ್ಟೆ ಬಾವಿಗಳ ರಿಪೇರಿಗೆ ೧,೬೫,೦೦೦ ರೂಪಾಯನ್ನೂ ಕೊಟ್ಟು, ಕಂದಾಯದ ವಸೂಲಿಯನ್ನು ಮುಂದಕ್ಕೆ ಹಾಕಿರುವರು. ಅಂತು ಗವರ್ನಮೆಂಟಿನವರು ಈ ಕ್ಷಾಮನಿವಾರಣೆಗೆ ಚಾಲ್ತಿ ಸಾಲಿನಲ್ಲಿ ೬೦ ಲಕ್ಷ ರೂಪಾಯಿ ಖರ್ಚುಮಾಡಬೇಕಾಗುವುದು.

****

ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜಾ ಸಯ್ಯಾಜಿರಾವ್ ಯವರು ಪತ್ನಿ ಪರಿವಾರ ಸಹಿತ ಅಮೇರಿಕದ ಮುಖ್ಯನಗರವಾದ ನ್ಯೂಯಾರ್ಕ್ ಪಟ್ಟಣವನ್ನು ತಲಪಿದರು. ಹಿಂದೂಸ್ಥಾನದ ಮಹಾರಾಜರನ್ನು ನೋಡಬೇಕೆಂಬ ಕುತೂಹಲದಿಂದ ಸಾವಿರಾರು ಪ್ರಜೆಗಳೂ ದೊಡ್ಡ ಮನುಷ್ಯರೂ ಸಮುದ್ರ ತೀರದಲ್ಲಿ ಕಾದಿದ್ದು, ಅವರನ್ನು ಬಹು ಪ್ರೀತಿಸನ್ಮಾನಪೂರ್ವಕವಾಗಿ ಎದುರುಗೊಂಡರು. ಮಹಾರಾಜರವರು ಅವರೆಲ್ಲರನ್ನೂ ವಂದಿಸಿ, ವಿಮ್ಮ ದೇಶವನ್ನು ಕಣ್ಣಾರ ನೋಡಬೇಕೆಂತಲೂ ಇಲ್ಲಿನ ಕಸುಬು ವೊದಲಾದ್ದುಗಳನ್ನು ತಿಳಿದುಕೊಳ್ಳಬೇಕೆಂತಲೂ ಬಂದಿರುತ್ತೇನೆ ಎಂಬುದಾಗಿ ಹೇಳಿದರು. ಅಲ್ಲಿನ ಅನೇಕ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳು ಹೋಗಿ, ರಾಜಕೀಯ ವಿಷಯ

ಕರನ್ನು ಕುರಿತು ನಾನಾ ಪ್ರಶ್ನೆಗಳನ್ನು ಕೇಳಿದರು. ಮ. ಹಾದಾಧರವರು ಈ ವಿಚಾರವಾಗಿ ತಾವು ಏನೂ ಹೇಳುವುದಿಲ್ಲವೆಂದು ತಿಳಿಸಿರುತ್ತಾರೆ. ಇವರು ಇಂಗ್ಲೀಷ್ ಭಾಷೆಯನ್ನು ಸ್ವಲ್ಪವೂ ತಪ್ಪಿಲ್ಲದೆ ಬಹಳ ಸರಳವಾಗಿ ಆಡುತ್ತಿರುವುದನ್ನು ನೋಡಿ ಅಮೇರಿಕದವರು ತುಂಬಾ ಸಂತೋಷಪಟ್ಟರು

ಮೈಸೂರು ಪ್ರಜಾಪ್ರತಿನಿಧಿ ಸಭೆಯು.

ಹೊಸ ಮೆಂಬರುಗಳ ಚುನಾವಣೆ—ಸರ್ಕಾರಿ ಹುಕುಮು

೧೯೦೬ ನೆ ಇಸವಿಯಲ್ಲಿ ನಡೆಯಬೇಕಾಗಿರುವ ಪ್ರಜಾಪ್ರತಿನಿಧಿ ಸಭೆಯ ವಿಷಯದಲ್ಲಿ ಮೈಸೂರು ಸರ್ಕಾರದವರು ಈಗತಾನೆ ಒಂದು ಹುಕುಮನ್ನು ಪ್ರಕಟಿಸಿದಾರೆ ಅದರಲ್ಲಿ ಕಂಡುಬರುವ ಮುಖ್ಯ ವಿಷಯಗಳೇನೆಂದರೆ—

ಐದನೇ ಸಲ ಪ್ರತಿನಿಧಿ ಸಭೆಗೆ ಮೆಂಬರುಗಳ ಚುನಾವಣೆಯು ಈ ವರುಷ ನಡೆಯಬೇಕಾಗಿದೆ (೧) ತಾಲ್ಲೂಕ್ ಮೆಂಬರುಗಳನ್ನು ಚುನಾಯಿಸುವಂಥಾ ಹಕ್ಕುಳ್ಳವರ ಮತ್ತು ಮೆಂಬರುಗಳಾಗತಕ್ಕ ಯೋಗ್ಯತೆಯುಳ್ಳವರ ಹೆಸರುಗಳ ಪಟ್ಟಿಗಳನ್ನು ರೆವಿನ್ಯೂ ಜನರಲ್ ಸೆಕ್ರೆಟರಿಯವರಿಗೆ ಜುಲೈ ೨೧ ರೊಳಗಾಗಿ ಕಳುಹಿಸಬೇಕು (೨) ಆಷಾಢಮಾಸದಲ್ಲಿ ಅಂದರೆ ಜುಲೈ ೨೧ ರೊಳಗಾಗಿ ಒಂದು ತಿಂಗಳ ಗಡುವಿಟ್ಟು ನೋಟೀಸನ್ನು ಹಂಚಿ ಚುನಾವಣೆ ಮಾಡುವಂಥಾ ಯೋಗ್ಯತೆಯುಳ್ಳವರನ್ನೆಲ್ಲಾ ತಾಲ್ಲೂಕ್ ಹೆಡ್ ಕ್ವಾರ್ಟರಿಗೆ ಕರೆಸಿಕೊಳ್ಳಬೇಕು. ಮುಂದಿನ ಮೂರು ವರುಷಗಳ ತನಕ ಪ್ರತಿನಿಧಿಗಳಾಗಿರುವಂತೆ ಮೇಲ್ಕಂಡ ಪಟ್ಟಿಯಲ್ಲಿ ಕಂಡ ಗೊತ್ತಾದ ಸಂಖ್ಯೆಯ ಮೆಂಬರುಗಳನ್ನು ಅಂಥಾ ತಾಲ್ಲೂಕ್ ಮೀಟಿಂಗಿನಲ್ಲಿ ಚುನಾಯಿಸಬೇಕು. (೩) ಆಗಸ್ಟು ೪ ರೊಳಗಾಗಿ ಲೋಕಲ್ ಫಂಡು, ಮ್ಯುನಿಸಿಪಲ್ ಬೋರ್ಡುಗಳಿಂದಲೂ ಸರ್ಕಾರದವರ ಪರಿಗಣನೆಗೆ ಬಂದಿರುವ ಸಂಘಗಳಿಂದಲೂ ಯಾವ ಯಾವ ಮೆಂಬರುಗಳನ್ನು ಚುನಾಯಿಸಿ ಕಳುಹಿಸಲಪೇಕ್ಷಿಸುವರೋ ಅಂಥವರ ಹೆಸರುಗಳನ್ನು ಡೆಪ್ಟಿ ಕಮಿಷನರಿಗೆ ತಿಳಿಸತಕ್ಕದ್ದು (೪) ಮೇಲ್ಕಂಡ ಮೆಂಬರುಗಳೆಲ್ಲಾ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಇಷ್ಟಪಡುವಂಥಾ ವಿಷಯಗಳನ್ನು ಆಗಸ್ಟು ೪ ರೊಳಗಾಗಿ ಆಯಾ ಡೆಪ್ಟಿ ಕಮಿಷನರಿಗೆ ತಿಳಿಸಬೇಕು (೫) ಹಾಗೆ ಚುನಾಯಿಸಲ್ಪಟ್ಟಿರುವ ಮೆಂಬರುಗಳ ಪಟ್ಟಿಗಳನ್ನೆಲ್ಲಾ ಆಗಸ್ಟು ೨೦ ರೊಳಗಾಗಿ ಗವರ್ನಮೆಂಟ್ ಸೆಕ್ರೆಟರಿಯವರಿಗೆ ಕಳಿಸತಕ್ಕದ್ದು. (೬) ಡೆಪ್ಟಿ ಕಮಿಷನರುಗಳು ತಮ್ಮಲ್ಲಿಗೆ ಮೆಂಬರುಗಳಿಂದ ಬಂದಿರುವ ವಿಷಯ (ಸಬ್ಜೆಕ್ಟು)ಗಳನ್ನು ಕ್ರೋಡೀಕರಿಸಿ, ಆಗಸ್ಟು ೨೧ ರೊಳಗಾಗಿ ಗವರ್ನಮೆಂಟ್ ಸೆಕ್ರೆಟರಿಯವರಿಗೆ ರವಾನಿಸತಕ್ಕದ್ದು. (೭) ಸೆಪ್ಟೆಂಬರ್ ೨೭ ರೊಳಗಾಗಿ ಎಲ್ಲಾ ಡಿಸ್ಟ್ರಿಕ್ಟುಗಳ ಮೆಂಬರುಗಳೂ ರಾಜಧಾನಿಯಲ್ಲಿ ಸೇರಿ ಸಭೆಗಳನ್ನು ನಡಿಸತಕ್ಕದ್ದು. (೮) ಹೆಚ್ಚು ವಿಷಯಗಳನ್ನು ಸಭೆಯಲ್ಲಿ ಚರ್ಚೆಗೆ ತರಬೇಕಾಗಿದ್ದರೆ ಅವುಗಳನ್ನೆಲ್ಲಾ ಸೆಪ್ಟೆಂಬರ್ ೨೮ ರೊಳಗಾಗಿ ಗವರ್ನಮೆಂಟ್ ಸೆಕ್ರೆಟರಿಯವರಿಗೆ ತಿಳಿಸತಕ್ಕದು (೯) ಅಕ್ಟೋಬರ್ ೧ನೇ ಸೋಮವಾರ ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗುವುದು

ದೊಡ್ಡಬಳ್ಳಾಪುರದ ಪಾಠಶಾಲಾ ವಿದ್ಯಾರ್ಥಿಗಳ ವಿನೋದ.

ಈ ಊರಲ್ಲಿ ಈಚೀಚಿಗೆ ಅನೇಕ ವಿನೋದಕರವಾದ ಸಂಗತಿಗಳು ನಡೆಯುತ್ತಿವೆ. ಕಳೆದ ತಿಂಗಳ ೨೪ ನೆಯ ತಾರೀಖು ಗುರುವಾರ ಬ್ರಿಟಿಷ್ ಸಾರ್ವಭೌಮ ಭಕ್ತಿ ಪ್ರದರ್ಶನದಲ್ಲಿ ಇಲ್ಲಿಯ ವಿದ್ಯಾರ್ಥಿಗಳು ಉತ್ಸಾಹದೊಡನೆ ಭಾಗಿಗಳಾಗಿದ್ದರು ಬೆಂಗಳೂರಲ್ಲಿ ಉಚಿತ ವಿದ್ಯಾಲಯವೊಂದನ್ನು ಪ್ರತಿಷ್ಠಿಸಿ ವಿದ್ಯಾ ಪಕ್ಷಪಾತಿಗಳೂ ಪರೋಪಕಾರಿಗಳೂ ಎಂದು ಪ್ರಸಿದ್ಧಿಗೊಂಡಿರುವ ಸಾಹುಕಾರ್ ದೊಡ್ಡಣ್ಣನವರು ಇಲ್ಲಿಗೆ ದಯಮಾಡಿಸಿದ್ದರಿಂದ ಈ ತಿಂಗಳ ೯ ರಲ್ಲಿ ಇಲ್ಲಿಯ ಬಾಲಕರಿಗೆ ಮತ್ತೊಂದು ವಿನೋದ ಸಮಯವು ದೊರೆಯಿತು ಈ ಮಹನೀಯರು ಈ ತಿಂಗಳ ೮ ನೆಯ ತಾರೀಖು ಶುಕ್ರವಾರ ಬೆಂಗಳೂರಿಂದ ಇಲ್ಲಿಗೆ ದಯಮಾಡಿಸಿದರು ಇವರು ವಿದ್ಯಾಭಿಮಾನಿಗಳೆಂದು ಪ್ರಖ್ಯಾತರಾದುದರಿಂದ ಇಲ್ಲಿಯ ಇಂಡಸ್ಟ್ರಿಯಲ್ ಸ್ಕೂಲ್, ಎ ವಿ ಸ್ಕೂಲ್, ಗರ್ಲ್ಸ್ ಸ್ಕೂಲ್, ಮಾದಿಗರ ಸ್ಕೂಲ್, ಹೊಲೆಯರ ಸ್ಕೂಲ್ ಎಂಬೀ ಎಲ್ಲಾ ಸ್ಕೂಲುಗಳ ಶಿಕ್ಷಣವನ್ನೂ ಪರಾಮರಿಸಿ ಎಲ್ಲಾ ವಿಷಯಗಳಲ್ಲಿಯೂ ಸಂತೋಷಪಟ್ಟುದಲ್ಲದೆ ಬಹು ಸಣ್ಣವಯಸ್ಸಿನ ಮಕ್ಕಳು ಕಿಂಡರ್‌ಗಾರ್ಟೆನ್, ಅಭಿನಯಗೀತ ಇವುಗಳಲ್ಲಿ ತೋರ್ಪಡಿಸಿದ ಪರಿಶ್ರಮವನ್ನು ನೋಡಿ ಬಹಳ ತೃಪ್ತಿಯನ್ನು ಹೊಂದಿದರು ಮೈಸೂರ್ ದೇಶದ ವಿದ್ಯಾಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಮ॥ ಹೆಚ್. ಜೆ. ಭಾಭಾ, ಎಂ. ಎ ಯವರು ಏರ್ಪಡಿಸಿರುವ ನೂತನ ಪದ್ಧತಿಗಳನುಸಾರವಾಗಿ ಅಕ್ಷರಗಳನ್ನೂ ಪ್ರಾರಂಭಿಕ ವಿದ್ಯೆಯನ್ನೂ ಚಿಕ್ಕಚಿಕ್ಕ ಮಕ್ಕಳು ಆಟವಾಡುತ್ತಿರುವವರಂತೆ ಅಭ್ಯಾಸಮಾಡುತ್ತಾ ಇರುವುದನ್ನು ನೋಡುವುದರಲ್ಲಿ ಬಹಳ ಆಸಕ್ತಿಯನ್ನು ವಹಿಸಿದ್ದರು ಸಾಹುಕಾರ್ ದೊಡ್ಡಣ್ಣನವರು ವಿದ್ಯಾಪ್ರೋತ್ಸಾಹಸೂಚಕವಾಗಿ ಇಲ್ಲಿಯ ವಿದ್ಯಾರ್ಥಿಗಳಿಗೆ ಮಧುರವಾದ ತಿಂಡಿಯನ್ನು ಹಂಚಲಿಕ್ಕೆಂತ ಹತ್ತು ರೂಪಾಯಿಗಳನ್ನು ಅನುಗ್ರಹಿಸಿದುದೇ ಇವರು ಚಿಕ್ಕಮಕ್ಕಳ ಕ್ಷೇಮಚಿಂತನೆ, ವಿದ್ಯಾಭ್ಯಾಸ ಇವುಗಳಲ್ಲಿ ನೈಜವಾದ ಆಸಕ್ತಿಯನ್ನು ವಹಿಸಿರುವುದಕ್ಕೆ ನಿದರ್ಶನವು.

ಇವರ ಆಶಯವನ್ನು ಸಫಲಗೊಳಿಸುವುದಕ್ಕಾಗಿ ಈ ತಿಂಗಳ ೯ ನೆಯ ತಾರೀಖು ಶನಿವಾರ ಕಳೆದ ತಾಲ್ಲೂಕ್ ಕಚೇರಿಯ ಸ್ಕೂಲ್ ಕಟ್ಟಡದ ಹಾಲ್‌ನಲ್ಲಿ ಸಮಸ್ತ ಪಾಠಶಾಲೆಗಳ ವಿದ್ಯಾರ್ಥಿಗಳನ್ನೂ ಸೇರಿಸಿದ್ದರು. ಎಲ್ಲಾ ಉಪಾಧ್ಯಾಯರುಗಳೂ ಊರಿನ ಕೆಲವು ಪ್ರಮುಖ ನಿವಾಸಿಗಳೂ ದಯಮಾಡಿಸಿದ್ದರು ಗ್ರಾಮಪಾಠಶಾಲೆಗಳ ಪರೀಕ್ಷಾರ್ಥ ಈ ಪ್ರಾಂತ್ಯ ಸರ್ಕ್ಯೂಟ್ ದಯಮಾಡಿಸಿದ್ದ ಮ॥ ರಾ॥ ಕೆ. ರಾಮಯ್ಯನವರು ಸರ್ವರ ಪ್ರಾರ್ಥನೆಯಂತೆ ಅಗ್ರಾಸನಾಧಿಪತ್ಯವನ್ನು ವಹಿಸಿ ಸಾಹುಕಾರ್ ದೊಡ್ಡಣ್ಣನವರ ಗುಣಕಥನವನ್ನು ಮಾಡಿ ಇವರ ಉಚಿತ ವಿದ್ಯಾಶಾಲೆಯ ಮತ್ತು ಇತರ ಪರೋಪಕಾರಗಳ ವಿಷಯವನ್ನು ಸಮಯೋಚಿತವಾದ ಗಂಭೀರವಾಕ್ಯಗಳಿಂದ ಸೂಕ್ಷ್ಮವಾಗಿ ಸಭಿಕರಿಗೂ ವಿದ್ಯಾರ್ಥಿಗಳಿಗೂ ವಿವರಿಸಿ ತಿಳಿಯಹೇಳಿದರು. ಮ॥ ರಾ॥ ದೊಡ್ಡಣ್ಣನವರು ಉಚಿತವಾದ ಪ್ರತ್ಯುತ್ತರವನ್ನು ಕೆಲವೇ ಮಾತುಗಳಲ್ಲಿ ತಿಳಿಸಿ ಇಲ್ಲಿಯ ಎಲ್ಲಾ ಪಾಠಶಾಲೆಗಳ ಉಪಾಧ್ಯಾಯರುಗಳೂ ಈಗಿನಂತೆ ಮುಂದೆಯೂ ಶ್ರದ್ಧಾಸಕ್ತಿಗಳನ್ನು ತೋರ್ಪಡಿಸುತ್ತಾ ವಿದ್ಯಾಭಿವೃದ್ಧಿಗೆ ಕಾರಣರಾಗಬೇಕೆಂತ ಸೂಚಿಸಿದರು. ನಂತರ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಲಾಡುಉಂಡೆಗಳನ್ನೂ, ಸಭಿಕರಿಗೆ ಗಂಧಪುಷ್ಪ ತಾಂಬೂಲಗಳನ್ನೂ ಹಂಚಿದರು. ಆಮೇಲೆ ಸಾಹುಕಾರ್ ದೊಡ್ಡಣ್ಣನವರ ಶ್ರೇಯಃಪ್ರಾರ್ಥನಾ ಸೂಚಕವಾದ ಹಾಡುಗಳನ್ನು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಹಾಡಿದರು. ನಂತರ ಮ॥ ರಾ॥ ಡಿ. ಸಿ. ಸುಬ್ಬರಾಯಪ್ಪ, ಬಿ. ಎ. ಯವರು ವಿದ್ಯಾರ್ಥಿಗಳ ಪರವಾಗಿ ಸಾಹುಕಾರ್ ದೊಡ್ಡಣ್ಣನವರನ್ನು ಅವರ ಔದಾರ್ಯಕ್ಕಾಗಿ ವಂದಿಸಿ ಅವರು ಪ್ರತಿಷ್ಠಿಸಿರುವ ಶಾಶ್ವತ ಧರ್ಮಕಾರ್ಯಗಳು ಫಲಪ್ರದವಾಗುವ ವರೆಗೂ ಭಗವಂತನು ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂತ ಪ್ರಾರ್ಥಿಸಿ ಅವರನ್ನುದ್ದೇಶಿಸಿ

ಪರಹಿತಕೆ ತನ್ನ ಕಜ್ಜಂ।
ತೊರೆವರ್ ಸೊತ್ತಮರಿನುತ್ತೆ ಪಿರಿಯರ್ ನುಡಿಗುಂ।
ಏರಿದಿಹ ಸಾಮ್ಯಂಗೆಯ್ದಯ್।
ಕರೆದೀಯುತೆ ಬಾಲಗೆ ಲಾಡುವನಧಿಕಂ ॥೧॥
ಸ್ಮರಣೀಯಮೆನಿಸಿ ನಿನ್ನಯ।
ಚಿರಮೀ ಉಪಕಾರವಿಸ್ಮರ್ಣದೆಯ್ ಮೆರೆಯುತ್ತುಂ॥
ಪರಿಕ್ಯಮೆಯುಂಪಂ ನಿರ್ಕ್ಷೇಮ।
ಪರಹಿತಮಂ ನಾಳ್ಪಬುದಿ ನಿನ್ನಂ ಸತತಂ ॥೨॥

ಎಂಬೀ ಕಂದಪದ್ಯಗಳನ್ನು ಹೇಳಿದರು ಚಕ್ರವರ್ತಿ ಸಾರ್ವಭೌಮರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಆಶೀರ್ಥಕ ಸಂಗೀತಗಳನ್ನು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಹಾಡಿದನಂತರ ಸಭೆಯು ಉಪಸಂಹರಿಸಲ್ಪಟ್ಟಿತು ಶ್ರೀಮಂತರಲ್ಲಿ ಉದಾರಮನಸ್ಕರೂ ಪರೋಪಕಾರಬುದ್ಧಿಯುಳ್ಳವರೂ ಅತಿವಿರಳ ಸಾಹುಕಾರ್ ದೊಡ್ಡಣ್ಣನವರ ಮೇಲ್ಪಂಕ್ತಿಯನ್ನು ಸಂಸ್ಥಾನದಲ್ಲಿ ಇತರ ಧನಿಕರೂ ಅನುವರ್ತಿಸಿದರೆ ದೇಶಾಭಿವೃದ್ಧಿಗೆ ಬಹುಮಟ್ಟಿಗೆ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ದೊಡ್ಡಬಳ್ಳಾಪುರ   ಡಿ ಸಿ ಸುಬ್ಬರಾಯಪ್ಪ, ಬಿ. ಎ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಹಿತಚಿಂತಕ, ಕುಣಿಗಲು— ನಿಮ್ಮ ಸರಿಯಾದ ಹೆಸರು ವಿಳಾಸಗಳನ್ನು ತಿಳಿಸಿಲ್ಲ

ಪರೋಪಕಾರಿ, ತೀರ್ಥಹಳ್ಳಿ, ಕನಕಪಾಳ್ಯದ ಸ್ಕೂಲಿನ ಕರೆಸ್ಪಾಂಡೆಂಟ್, ನ ಬಾಲಕೃಷ್ಣ, ಮೈಸೂರು, ಬ್ರಾಹ್ಮಣಾಭಿಮಾನಿ, ಪ್ರಜಾಹಿತೈಷಿ ಶ್ರೀರಂಗಪಟ್ಟಣ ನಂಜನಗೂಡಿನ ಬಾತ್ಮಿ — ಈ ಬಾತ್ಮಿಗಳನ್ನು ಪ್ರಕಟಿಸಲಾರೆವು.

ಕರೆಸ್ಪಾಂಡೆನ್ಸ್.

ಹುಲಿಯನ್ನು ಹೊಡೆದದ್ದು.

ಅಯ್ಯಾ,

ಹಾಸನದ ಡಿಸ್ಟ್ರಿಕ್ಟು ಬಾಣಾವರಕ್ಕೆ ಸೇರಿದ ನೇರ್ಲಿಗೆ ಗ್ರಾಮದಲ್ಲಿರುವ ದೇವಾಂಗದ ಜಾತಿ ತಿಮ್ಮನೆಂಬುವನು ಮೇ ತಾ. ೨೪ ರಲ್ಲಿ ಹಳ್ಳಕ್ಕೆ ಆಡುಗಳನ್ನು ಮೇಯಿಸುವದಕ್ಕೆ ಹೋಗಿದ್ದನು ಆಗ್ಗೆ ಮೆಳೆಯಲ್ಲಿ ಇದ್ದ ಒಂದು ಹುಲಿಯು ಆಡುಗಳ ಮೇಲೆ ನುಗ್ಗಿಕೊಂಡು ಬರಲು ಅವನು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಆ ಹುಲಿಯನ್ನು ಹೊಡೆದು ಕೊಂದನು ಅವನ ಸಾಮರ್ಥ್ಯವನ್ನು ಬರೆಯಲು ಶಕ್ಯವಿಲ್ಲ. ಹುಲಿಗೆ ಹಿಂದೆ ಯಾವಾಗಲೋ ಯಾರೋ ಗುಂಡಿನಿಂದ ಹೊಡೆದಿದ್ದದ್ದರಿಂದ ಅದರ ಸೊಂಟ ಮುರಿದು ತಿರುಗಾಡುವದೇ ಬಹಳ ಪ್ರಯಾಸವಾಗಿತ್ತು. ಗಾತ್ರವಾದರೋ ಒಂದು ರಟ್ಟೆ ದಪ್ಪಕ್ಕಿಂತಲೂ ಜಾಸ್ತಿಯಾಗಿತ್ತು. ಇದನ್ನು ಈಗ ಇನಾಂ ಪಡೆಯಲು ಹಾಸನಕ್ಕೆ ತೆಗೆದುಕೊಂಡು ಹೋಗಿರುತ್ತಾನೆ

ಬಾತ್ಮಿದಾರ್.

ನಾಗಮಂಗಲದಲ್ಲಿ ದುರ್ಮರಣ.

ಅಯ್ಯಾ,

ಮೇ ತಾ. ೨೪ ನೇ ಶುಕ್ರವಾರ ಮಧ್ಯಾಹ್ನ ಸುಮಾರು ೧೨ ಘಂಟೆಯಲ್ಲಿ ಪಟ್ಟಣ ಶಾನಭೋಗ ಸುಬ್ಬಯ್ಯನವರ ಮಗಳು ಸುಮಾರು ಹದಿನಾರು ವರ್ಷಪ್ರಾಯದ ರಂಗಮ್ಮನೆಂಬಾಕೆಯು ಇಲ್ಲಿ ಶೃಂಗಾರತೋಟದಲ್ಲಿರುವ ಉಪ್ಪುಕೊಳಕ್ಕೆ ಹೋಗಿ ಹಿಂತಿರುಗಿ ಬರಲಿಲ್ಲ. ತಾ. ೨೬ ನೇ ಭಾನುವಾರ ಪ್ರಾತಃಕಾಲ ಈಕೆಯ ಶವವು ಕೊಳದ ಒಂದು ಮೂಲೆಯಲ್ಲಿ ತೇಲುತ್ತಿತ್ತು. ಇದನ್ನು ಗ್ರಾಮಸ್ಥರು ನೋಡಿ, ಈಕೆಯ ನಾಪಂದಿರು ಮೂಳೆಹಟ್ಟಿ ವೆಂಕಟರಮಣಯ್ಯನವರಿಗೆ ತಿಳಿಸಿದರು ನಂತರ ಗ್ರಾಮಸ್ಥರ ಅಭಿಪ್ರಾಯದಂತೆ ವೈದ್ಯರ ಪರೀಕ್ಷೆಗೆ ಶವವು ಪೋಲೀಸಿನವರಿಂದ ಕಳುಹಿಸಲ್ಪಟ್ಟಿತು ಈಕೆಗೆ ಅತ್ತೆಮಾವಂದಿರ್ಮೊದಲಾದವರು ಕೊಡುತ್ತಿದ್ದ ಶ್ರಮೆಯನ್ನು ತೆರೆಹೊರೆಯವರು ಪೋಲೀಸಿಗೂ ಡಿಸ್ಟ್ರಿಕ್ಟು ಡಿಪ್ಟಿ ಕಮಿಷನರ್ ಸಾಹೇಬರವರಿಗೂ ತಿಳಿಸಿರುತ್ತಾರೆ. ಈಕೆಗೆ ಇಂಥಾ ದುರ್ಮರಣ ಬಂದದ್ದಕ್ಕಾಗಿ ಬಹು ಜನರು ವಿಷಾದಪಡುತ್ತಿದಾರೆ

ಪ್ರಜಾಹಿತಚಿಂತಕ.

ಹೊಳೆನರಸೀಪುರದ ದೇಶದ ಯಜಮಾನರೂ ದೇಶದ ಕೋಮಿನವರೂ.

ಅಯ್ಯಾ,

ಮೇಲ್ಕಂಡ ಕೋಮಿಗೆ ಸೇರಿದ ಅಗಸರು, ಹಜಾಮರು, ಈ ಎರಡು ಜಾತಿಯವರಿಗೂ ಈಗ್ಗೆ ಸುಮಾರು ಎರಡು ವರುಷಗಳಿಂದ ಕಸಬುಗಳಿಂದ ಜಗಳಗಳು ನಡೆದು, ಅಗಸರು ಹಜಾಮರ ಬಟ್ಟೆಗಳನ್ನು ಒಗೆಯುವದಿಲ್ಲವೆಂದೂ ಹಜಾಮರು ಅಗಸರಿಗೆ ಕ್ಷೌರಮಾಡುವದಿಲ್ಲವೆಂದೂ ಉಭಯತ್ರರೂ ಹಟಹಿಡಿದಿರುವರು

ಹೊಲೆಯರಲ್ಲಿಯೂ ಎರಡು ಪಂಗಡಗಳು ಆಗಿ, ಈಗ್ಗೆ ಮೂರು ವರುಷಗಳಿಂದಲೂ ಹಿಂದಿನಿಂದ ಕಾಲದಲ್ಲಿ ದೊಡ್ಡ ದೊಡ್ಡ ಜಗಳಗಳು ನಡೆಯುತ್ತಾ ಇವೆ. ಇದರ ಪ್ರಯುಕ್ತ ಇವರಲ್ಲಿ ಅನೇಕ ಕೋಲಗಳು ನಡೆಯುವವರಲ್ಲಿ ಏನೂ ಸಂದೇಹವೇ ಇಲ್ಲವೆಂದು ಕಾಣುತ್ತಿದೆ ಆದ್ದರಿಂದ ದೇಶದ ಯಜಮಾನರು ಈ ಮೂರು ಜಾತಿಯವರ ಮೇಲೂ ಏಕರೀತಿ ಅಂತಃಕರಣವಿಟ್ಟು, ನ್ಯಾಯವಾದ ರೀತಿಯಲ್ಲಿ ಇವರ ವ್ಯಾಜ್ಯಗಳನ್ನು ಫೈಸಲ್‌ಮಾಡಿ, ಆಯಾ ಕೋಮಿನವರಲ್ಲಿ ಅನ್ಯೋನ್ಯವನ್ನುಂಟುಮಾಡುವರೆಂದು ನಿರೀಕ್ಷಿಸುತ್ತೇವೆ ಇದಕ್ಕೆ ಒಪ್ಪದವರಿಗೆ ಕೋಮಿನ ರೀತಿ ದಂಡಗಳನ್ನು ನಿಬಂಧಿಸಿದರೆ ತಮ್ಮ ಪಕ್ಷಕ್ಕೆ ತಾವೇ ದಾರಿಗೆ ಬರುವರು. ಹೀಗಿಲ್ಲದೆ ಅವರ ಇಷ್ಟಾನುಸಾರ ಬಿಟ್ಟರೆ ಕೋಮಿನವರೇ ದೇಶವನ್ನು ಆಳುವರಲ್ಲದೆ, ಇದರಿಂದ ಮೇಲ್ಕಂಡ ಕೋಮಿಗೆ ಮತ್ತು ಯಜಮಾನರಿಗೆ ಅಪಕೀರ್ತಿಯೂ ಉಂಟಾಗುವದರಲ್ಲಿ ಏನೂ ಸಂದೇಹವಿಲ್ಲವಾಗಿದೆ

ಬಾತ್ಮಿದಾರ

ಅಪಾರ ಶೋಕ

ಅಯ್ಯಾ,

ಚನ್ನಪಟ್ಟಣದ ಕೋಟೆಯಲ್ಲಿ ಕೊಮಾಟಿ ಚೆಟ್ಟಿಗಳ ಮಗ ೧೮ ವರುಷದ ಅನಂತರಾಮನೆಂಬುವನು ಶನಿವಾರ ೨ನೇ ತಾ. ಸುಮಾರು ೭ ಘಂಟೆ ಸಮಯದಲ್ಲಿ ಮನೆ ಬಿಟ್ಟು ಹೋದನು ೫ ಘಂಟೆ ವರೆಗೆ ಪೇಟೆಯಲ್ಲಿ ಇದ್ದರು ಮರು ದಿನ ಹುಡುಗರ ಜೊತೆಯಲ್ಲಿ ಸೇರಿ, ತಿಪ್ಪೇಕೆರೆ ಬಳಿಯಲ್ಲಿರುವ ಮಂಡಿ ಸಾಹುಕಾರರ ಕೆರೆಯಲ್ಲಿ ಈಜುವುದಕ್ಕೋಸ್ಕರ ಹೋಗಿ ಮುಳುಗಿಹೋದನಂತೆ ಎಲ್ಲರೂ ಹಲಾಯಸಮಾಡಿದರು. ಈ ಹುಡುಗನು ಸ್ವಲ್ಪ ಹೊತ್ತಾದರೂ ವ್ಯರ್ಥವಾಗದೆ ವಿದ್ಯಾಭ್ಯಾಸಂಗದಲ್ಲೇ ಕಾಲಕಳೆಯುತ್ತಾ ತಂದೆ ತಾಯಿಗಳಿಗೆ ವಿಧೇಯನಾಗಿ ಒಳ್ಳೇ ಮಾತುಗಳಿಂದ ಎಲ್ಲರನ್ನೂ ಸಂತೋಷಪಡಿಸುತ್ತಾ ಇದ್ದನು ಜೊತೆಯಲ್ಲಿದ್ದ ಹುಡುಗರು ಸ್ವಲ್ಪ ಕೂಗಿಕೊಂಡಿದ್ದಲ್ಲಿ ಹತ್ತಿರದಲ್ಲಿದ್ದ ಮಂಡಿಯವರಾದರೂ ಬಂದು ಮೇಲಕ್ಕೆ ಎತ್ತುತ್ತಿದ್ದರು ಇಂಥಾ ಅಲ್ಪ ವಿಷಯಕ್ಕೆ ಹಿಂತೆಗೆದು ಓಡಿಬಂದವರ ಬುದ್ಧಿ ಏನೆಂದು ಹೇಳೋಣ ! ಇಂಥಾ ಅಪಾರವಾದ ಪುತ್ರಶೋಕವನ್ನು ಅವರ ತಂದೆ ತಾಯಿಗಳು ಹೇಗೆತಾನೇ ಸಹಿಸಾರು !

ಈ ಊರಿನಲ್ಲಿ ಕೆಲವು ಹುಡುಗರು ಮನೆಯಲ್ಲಿ ಹೇಳದೆ ಕೇಳದೆ ಬೆಳಗ್ಗೆ ಸಾಯಂಕಾಲ ಅಥವಾ ಅವರಿಗೆ ಅನುಕೂಲಿಸಿದ ಕಾಲದಲ್ಲಿ ಮನೆಬಿಟ್ಟು ಹೋಗಿ ಸಿಕ್ಕಿದ ಹಾಗೆ ಆಡುವುದು, ಹಿರಿಯಸ್ಥರನ್ನು ಕಂಡಲ್ಲಿ ಓಡಿಹೋಗುವುದು. ಈ ರೀತಿ ಮಾಡುತ್ತಾರೆ ಇಂಥಾವರ ಸಹವಾಸದಲ್ಲಿ ಇರುವವರ ಕೆಲವು ದಿನದಲ್ಲಿ ಕೆಟ್ಟ ಕೆಲಸಗಳು ಪ್ರವರ್ತಿಸುವುದರಲ್ಲಿ ಏನು ಸಂದೇಹ ? ಅಥವಾ ಈಗಲೇ ಆಗಿದ್ದರೋ ಏನೋ. ಇವನ್ನೆಲ್ಲಾ ತಂದೆತಾಯಿಗಳಾದವರು ಗಮನಿಸದೆ ಇರುವದನ್ನು ನೋಡಿದಲ್ಲಿ ಇದೂ ಒಂದು ಮಾರ್ಗವೇ ಸರಿಯಾಗಿದೆ ಯಾಕೆಂದರೆ ಲೋಕದಲ್ಲಿ ಪುತ್ರರು ಒಳ್ಳೇ ಮಾರ್ಗದಲ್ಲಿ ಪ್ರವರ್ತಿಸುವದೊಂದು ವಿಧ, ತಪ್ಪಿದರೆ ಎರಡನೇದನ್ನಾದರೂ ಯಾತಕ್ಕೆ ಸಹಿಸಬಾರದು ? ಸಾಧಾರಣವಾಗಿ ತಂದೆತಾಯಿಗಳು ಹುಡುಗರನ್ನು ಪಾಠಶಾಲೆಗೆ ಕಳುಹಿಸಿದ ಮಾತ್ರಕ್ಕೇ ತಾವುಗಳು ಧನ್ಯರಾದವೆಂಬರ್ಥದಿಂದ ಅವರನ್ನು ಮನೆಯಲ್ಲಿ ವಿಚಾರಿಸಿಕೊಳ್ಳದೇ ಇರುವುದು ಕೂಡ ನೋಡಲ್ಲಿ ಹುಡುಗರನ್ನು ಅವರವರ ತಂದೆತಾಯಿಗಳೇ ಕೊಂದಿದ್ದಾರೆ ತಲ್ಲಾ ! ಹೀಗೆ ಮಕ್ಕಳನ್ನು ಶಿಕ್ಷಿಸುವುದೂ ಕೂಡ ಒಂದು ವಿಧವಾ ಲೋಕರೂಢಿಯಾದಂತಾಯಿತು. ಆದ್ದರಿಂದ ಹುಡುಗರನ್ನು ಪಾಠಶಾಲೆಗೆ ಕಳುಹಿಸುವುದೇ ಪ್ರಾಧಾನ್ಯವೆಂದು ಆಲೋಚಿಸದೆ ಅವರವರ ದುರ್ಮಾರ್ಗತನಕ್ಕೂ, ದುಸ್ಸಹವಾಸಕ್ಕೂ ಅವಕಾಶ ಕೊಡದಂತೆ ತಂದೆತಾಯಿಗಳಾದವರು ಅವರಿಗೆ ಒಳ್ಳೇ ಬುದ್ಧಿ ಹೇಳಿ ಸನ್ಮಾರ್ಗಕ್ಕೆ ತರುತ್ತಾರೆಂದು ನಂಬಿದ್ದೇನೆ

ಪಿ ಎಸ್ ವಿ

ತಾಲ್ಲೋಕು ವರ್ತಮಾನಗಳು.

ಹೊಳೆನರಸೀಪುರ —ಈಚಿಗೆ ಬಂದೆರಡು ಹದ ಮಳೆಯಾದ್ದರಿಂದ ರೈತರು ತಮ್ಮ ಹೊಲಗಳಿಗೆ ನಾಟ ಪೈರುಗಳನ್ನು ನೆಟ್ಟು ಇದ್ದಾರೆ. ಸದ್ಯದಲ್ಲಿ ತಿರಿಗಿ ಮಳೆಯಾದಲ್ಲಿ ತುಂಬಾ ಅನುಕೂಲವಾಗುವದು ೩ ತಾ. ಭಾನುವಾರ ಸಾಯಂಕಾಲ ಶ್ರೀಮಹಾರಾಜರವರ ವರ್ಧಂತಿ ಮಹೋತ್ಸವವು ಎ ವಿ ಸ್ಕೂಲಿನ ಬಳಿ ಬಹು ಆಡಂಬರದೊಡನೆ ಜರುಗಿಸಲ್ಪಟ್ಟಿತು ಆ ದಿನ ಒಂದು ಸಭೆ ಸೇರಿ ಕಮಿಷನರ್ ರಾಮಸ್ವಾಮಯ್ಯನವರು ಅಗ್ರಾಸನವನ್ನು ವಹಿಸಿದ್ದರು ಊರಿನ ಎಲ್ಲಾ ದೊಡ್ಡ ಉದ್ಯೋಗಸ್ಥರೂ ಆಫೀಸರೂ ವರ್ತಕ ಮಂಡಲಿಯವರೂ ಮೊದಲಾಗಿ ಬಹು ಜನ ಸೇರಿದ್ದರು. ಹುಡುಗರ ಆಟ ಪಾಟ ತಮಾಷೆಗಳೂ, ಸಿಪಾಯಿಗಳ ಮತ್ತು ಪೋಲೀಸಿನವರ ಡ್ರಿಲ್ ಕವಾಯಿತುಗಳೂ, ವಾದ್ಯಗಳ ಜಯಘೋಷಗಳೂ, ಬಾಲಕಿಯರ ಇಂಪಾದ ಗಾನವೂ ನಡೆದವು. ಉತ್ಸವದ ಮಧ್ಯೆ ಮಳೆ ಬಂದದ್ದರಿಂದ ಸಾಂಗವಾಗಿ ನಡೆಯುವದಕ್ಕೆ ಅಡಚಣೆಯಾದರೂ ೧೪ ದಿನಗಳಿಂದ ಮ

ಲ್ಲದೆ, ಆ ಶುಭದಿನವುಳ್ಳ ಬಂದವಷ್ಟು ಜನಗಳ ಹರ್ಷವನ್ನು ಇನ್ನೂ ಕ್ಕ ಮಾಡಿತೆಂದು ಹೇಳಬಹುದು. ಮೇಲ್ಕಂಡ ಉತ್ಸವಕ್ಕಾಗಿ ಕ್ಲಬ್ ಬರುಗಳೂ ಅನೇಕ ಆಫೀಸರುಗಳೂ ಚಂದಾ ಮೂಲಕ ಹಣವ ಒದಗಿಸಿ, ತಮ್ಮ ರಾಜಭಕ್ತಿ ಪ್ರೀತಿ ಮರ್ಯಾದೆಗಳನ್ನು ವ್ಯಕ್ತಸಿದರು ಕಡೆಯಲ್ಲಿ ಎಲ್ಲರಿಗೂ ವಿಳ್ಯದೆಲೆ ಹಂಚಲ್ಪಟ್ಟು, ಆಶೀರ್ವಚನಗಳಿಂದ ಸಭೆಯು ಬರಖಾಸ್ತಾಯಿತು.

ಬೂದಿಕೋಟೆ—ನಮ್ಮ ಮೈಸೂರು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ೨೩ನೇ ವರ್ಷ ವರ್ಧಂತಿ ಮಹೋತ್ಸವವು ಈ ಊರಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಸಲ್ಪ ಟ್ಟಿತು. ಪ್ರಭುಭಕ್ತಿ ಪ್ರದರ್ಶನ ಮಾಡತಕ್ಕ ಬಗ್ಗೆ ಶ್ರೀಯುತ ಹಸ್ತ [illegible]ನೆ ಮಾಡುವುದಕ್ಕೋಸ್ಕರ ಈ ಮಾಹೆ ೩ನೇ ತಾ. ಭಾನುವಾರ ಸಾಯಂಕಾಲ ಇಲ್ಲಿನ ಯೂನಿಯನ್ ಮೆಂಬರುಗಳು, ಸ್ಕೂಲ್ ಕಮಿಟಿ ಮೆಂಬರುಗಳು, ಪೋಲೀಸ್ ಉದ್ಯೋಗಸ್ಥರು ವೈದಿಕ ಲೌಕಿಕ ವರೇಣ್ಯರು, [illegible] ಸ್ಕೂಲ್ ಮಾಸ್ತರುಗಳು, ಬಾಲಕ ಬಾಲ ಯರೂ ಸಹ ಶಿಕ್ಷಣ[illegible]ವಂತೆ ಸೇರಿದ್ದರು. ವಿದ್ಯಾರ್ಥಿಗಳು [illegible] ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯು ಬಹುಸಿ ಗಾನಗಳನ್ನು ಹಾಡಿ ಕಾರ್ಯಾರಂಭ ಮಾಡಿದರು ಸಬ್ ಇನ್ಸ್ಪೆಕ್ಟರ್ ಸ್ಕೂಲ್ ಮಾಸ್ಟರ್ ಮೆ॥ ಕೆ ಪಿ [illegible] [illegible] ಸಮಯೋಚಿತವಾದ ಕೆಲವು ಗಂಭೀರ ವಾಕ್ಯಗಳಿಂದ [illegible], ಶ್ರೀಮನ್ಮಹಾರಾಜರವರ ಕರುಣೆಯನ್ನು [illegible]ಯಿಂದ ಉಪನ್ಯಾಸ ಮಾಡಿದರು ಅನಂತರ ಸರ್ವ [illegible] ಮಹಾರಾಜರವರಿಗೆ ಭಕ್ತಿಪುರಸ್ಸರವಾಗಿ ವಂದನೆಗಳನ್ನು ಅರ್ಪಿಸಿದರು. [illegible] ಇಲ್ಲಿನ ಮೆ॥ ಬಸವೇಗೌಡರವರ ಏರ್ಪಾಟಿನಂತೆ [illegible] ಕಾರ ಸರ್ಬತ್ತು ಗಂಧ ಪುಷ್ಪ, ತಾಂಬೂಲ [illegible] ಸಕ್ಕರೆ [illegible] ತಿಂಡಿ ಪದಾರ್ಥಗಳು [illegible] [illegible] ಸಭೆಯು ಮುಕ್ತಾಯವಾಯಿತು.

ಹೆಗ್ಗಡದೇವನಕೋಟೆ—[illegible] [illegible] [illegible] [illegible] [illegible] [illegible] [illegible] [illegible] [illegible] [illegible] ವರ್ತಮಾನವಾಗಿದೆ ಪೋಲೀಸ [illegible] [illegible] ಕಳ್ಳರು ಮರಸು ಕಳವುಮಾಡುತ್ತಿದ್ದಾರ [illegible] ಪತ್ತೆ [illegible] [illegible] ಜನಗಳ ಮಾನ ಧನ ಪ್ರಾಣಗಳನ್ನು ಕಾಪಾಡತಕ್ಕ ಪೋಲೀಸಿನವರು ಉದಾಸೀನವಾಗಿರುವ [illegible] [illegible] [illegible] ಕೈಲಿ ಸಂಚಿಕೆ ಮೇಲೆ ೨೦೦ ರೂಪಾಯಿ [illegible], ನಗದು ೨೦೦ ರೂಪಾಯಿ ಅವರಣ [illegible] ಮಾಲ್ ಕಳ [illegible] [illegible] [illegible] [illegible] ಈ ಪ್ರಾಂತ್ಯ ಮೇಲ್ ರೇಂಜಿನಲ್ಲಿ ಸರ್ಕಾರದವರು ದಯಮಾಡಿ ಕೆಲವು ಕಾಲ [illegible] ಸಹಾಯವನ್ನು ಇಟ್ಟಿದರೆ ಜನಗಳೂ ಸರ್ಕಾರ ಒಮೆಲ್ ಜನಗಳೂ ನಿರ್ಭಯರಾಗಿ ತಿರುಗಾಡು ತ್ತಾರೆ ಕಳ್ಳರ ಪತ್ತೆ ಮತ್ತೇನು [illegible] ಎಲ್ಲಾ ಪರಾ ಕ್ರಮಗಳನ್ನೂ ಪೋಲೀಸಿನವರು ಮಾಡುತ್ತಾರೆಂದು ಜನಗಳು ನಂಬಿದ್ದಾರೆ—ಈ ತಾಲ್ಲೂಕಿನಲ್ಲಿದ್ದ ಅಮಲ್ದಾರ್ ಮೆ॥ [illegible] ಸ್ಪೆಷಲ್ ಪೋಲೀಸ್ ಆಫೀಸರಾಗಿ ಈ ಪ್ರಾಂತ್ಯ ಇಟ್ಟರೆ ಎಲ್ಲಾ ಕಳವುಗಳನ್ನೂ ಪತ್ತೆ ಮಾಡುತ್ತಾರೆ ಗುಂಡೇರಿ ಬಳಿ ನಡೆ [illegible] ವರ್ತಕನ ರೂಪಾಯಿ ಕಳುವುಗಳನ್ನು [illegible] ಪತ್ತೆಮಾಡಿದರು ಈಗ ಮಾಲ್ ಕಳಕಿ [illegible] ಇದಾರೆ

ಚಿಕ್ಕಮಗಳೂರು—ಇದೇ ತಿಂಗಳು ೨ನೇ ತಾರೀಖಿನಿಂದ ೫ನೇ ತಾರೀಖಿನ ವರೆಗೆ ಇಲ್ಲಿ ಸುಮಾರು ಮೂರು ಇಂಚು ಮಳೆಯಾಯಿತು [illegible] ಭೂಮಿಯು ಹಸುರಾಯಿತು ರೈತರೆಲ್ಲಾ ತಮ್ಮ ಹೊಲ ಗದ್ದೆಗಳನ್ನು ಉಳುತ್ತಾ ಬಿತ್ತುತ್ತಲಿದ್ದಾರೆ. ಬಸವನಹಳ್ಳಿ ಕೆರೆಗೆ ಎಲ್ಲೋ ಸಲ್ಪ ನೀರು ಬಂದು ದನಕರುಗಳಿಗೆ ಕುಡಿಯುವದಕ್ಕೆ ಒಂದುರಡು [illegible] ನೀರು ನಿಲ್ಲುವದೆಂದು ಯೋಚಿಸಿದಾಗ್ಯೂ [illegible] ರಿಪೇರಿ ಇಲ್ಲದೆ ಇರುವದರಿಂದಲೇ ಏನೇ ಇರುವ ನೀರೆಲ್ಲಾ ತೂಬಿನ ದ್ವಾರ ಹೋಗುತ್ತಲಿದೆ ಮುಂದೆ ಕೆರೆ ತುಂಬುವದಕ್ಕೆ ಮೊದಲೇ ತೂಬನ್ನು ರಿಪೇರಿ ಮಾಡುವದು ಒಳ್ಳೇದಲ್ಲವೇ?—ಈಗ ಜನ ಬಿಸಲಾಗಿ ಮೊದಲಿದ್ದ ಬಿಸಲಿನ ಧಗೆಯೆಲ್ಲಾ ಕಮ್ಮಿಯಾಗಿ ಪಶ್ಚಿಮ ಗಾಳಿ ಜೋರಾಗಿ ಬೀಸೋಣದರಿಂದ ಸ್ವಲ್ಪ ತಂಪಾಗಿದೆ—ಮೂಡಿಗೆರೆಯಲ್ಲಿ ಕೂಸನ್ನು ನೂಲಗಿಸಿಹೋಗಿದ್ದವಳು ಸಿಕ್ಕಿದಳು ಆ ಕೂಸಿನ ಅಜ್ಜಿಯು ಕೂಸಿನ ತಾಯಿ ಕಿಡುಬಿನಿಂದ ಕಷ್ಟಪಡುತ್ತಿರುವಾಗ ಕಷ್ಟಪಡುವ ತಾಯಿಯನ್ನೂ ಹಾಲಿಲ್ಲದೆ ನರಳುತ್ತಿದ್ದ ಕೂಸನ್ನೂ ನೋಡಿ ಇಬ್ಬರನ್ನೂ ಉಪಚರಿಸುವದು ತನಗೆ ತುಂಬಾ ಕಷ್ಟವಾಗಿ ತೋರಿಬಂದದ್ದರಿಂದ ರಮ್ಮ ಹೊಲಗೇರಿಯಲ್ಲಿ ಯಾರಾದರೂ ಆ ಕೂಸನ್ನು ತೆಗೆದುಕೊಂಡು ಹೋಗಿ ಸಾಕಿಕೊಳ್ಳಲಿ ಎಂದು ಹೇಳಿದಾಗ್ಯೂ ಯಾರೂ ತೆಗೆದುಕೊಳ್ಳದೆ ಹೋದಕಾರಣ ಅದನ್ನು ಊರ ಮುಂದೆ ಮಲಗಿಸಿಹೋದಳೆಂದು ಹೇಳುತ್ತೇನೆ ಆ ಕೂಸು ಈಚೆಗೆ ಆಸ್ಪತ್ರೆಯಲ್ಲಿ ಸತ್ತುಹೋಯಿತು—ಈ ಊರಿನಲ್ಲಿ ಒಂದೆರಡು ತಿಂಗಳಿಂದ ಇಲಿಗಳು ಸಾಯುತ್ತಾ ಇದ್ದು ಈಗ ಪ್ಲೇಗ್ ರೋಗವು ಶುರುವಾಗಿ ಒಂದು ವಾರದಿಂದೀಚೆಗೆ ೩ ಪ್ಲೇಗ್ ಮರಣಗಳಾದವೆಂದು ವರ್ತಮಾನ ಇನ್ನೂ ಅನೇಕ ಮನೆಗಳಲ್ಲಿ ಇಲಿಗಳು ಬೀಳುತ್ತಲಿವೆ ಜನರು ಗಾಬರಿಪಟ್ಟು ತೋಂಟ ಹೊಲದ ಕಡೆಗಳಲ್ಲಿ ಮನೆಗಳನ್ನು [illegible] ಸೇರಿಕೊಳ್ಳುತ್ತಿದ್ದಾರೆ ಈ ಕಾಲದಲ್ಲಿ ಮುನಿಸಿಪಾಲಿಟಿಯವರು ಜಾಗರೂಕತೆಯಿಂದಿದ್ದು ಊರಿನಲ್ಲಿ ಅನಾರೋಗ್ಯಕರವಾದ ಗಲೀಜಾದ ಸ್ಥಳಗಳನ್ನು ಶುಚಿಮಾಡಿಸಿ, ಊರು ಶುದ್ಧವಾಗಿರುವಂತೆ ಏರ್ಪಾಡು ಮಾಡುವದು ಉತ್ತಮವಲ್ಲವೇ?—ಈಗ ಊರಿಗೆ ಸಪ್ಲೈ ಆಗುವ ನಾಲಾ ನೀರನ್ನು ಜನರು ಗಲೀಜು ಮಾಡದಂತೆಯೂ ಆ ನೀರು ನಲ್ಲಿಯ ಮೂಲಕ ಇಳಿಯುವ ಜಾಗದಲ್ಲಿ ಜನರು ಪಾತ್ರೆ ಪದಾರ್ಥಗಳನ್ನು ತೊಳೆಯದಂತೆಯೂ ಅಡ್ಡಿಮಾಡುವದು ಮುನಿಸಿಪಾಲಿಟಿಗೆ ಸೇರಿದ್ದಾಗಿದೆ ಅಲ್ಲದೆ ಕೆಲವು ಕಡೆ ಇರುವ ಜನರಿಗೋಸ್ಕರ ಇಟ್ಟಿರುವ ನಲ್ಲಿಗಳಲ್ಲಿ ಸರಿಯಾಗಿ ನೀರು ಬಾರದೆ ಜನರು ಒಂದು ನಲ್ಲಿಯಿಂದ ಇನ್ನೊಂದು ನಲ್ಲಿಗೆ ಓಡಾಡುತ್ತಿರುವರು. ನಲ್ಲಿಗಳ ಸಂಖ್ಯೆ ಹೆಚ್ಚಿದ ಹಾಗೆಲ್ಲಾ ನೀರಿನ ತೊಂದರೆಯೂ ಇನ್ನೂ ಹೆಚ್ಚಿತು

ತುಂಕೂರು.—ಇಲ್ಲಿ ಬಿಸಲು ಕಾಯುವದೂ, ಮೋಡವಾಡುವದೂ, ತಂಗಾಳಿ ಬೀಸುವದೂ ವಿಶೇಷವಾಗಿದೆ ಕಳೆದ ಸೋಮವಾರ ಮಂಗಳವಾರಗಳಲ್ಲಿ ಇಲ್ಲಿ ಒಂದು ಹದ ಮಳೆಯಾಯಿತು ಅದಕ್ಕಾಗಿ ಜನರು ತುಂಬಾ ಕಳೆಯುಳ್ಳವರಾಗಿದ್ದರು ಆದರೆ ಈಚೆಗೆ ಅದರ ಸುಳಿವೇ ಇಲ್ಲದಿರುವದರಿಂದ ಯಥಾ ಪ್ರಕಾರವೇ ಇರುವದಾಗಿದೆ ಊರಿನಲ್ಲಿ ಸಿಡುಬಿನ ರೋಗದಿಂದ ಮಕ್ಕಳ ಮರಣವು ಒಂದೊಂದು ಆಗುತ್ತಲಿದೆ ರಾಗಿಬೆಳೆಗಳು ಚಾಳಿನ ತೊಂದರೆಯಂತೆ ಇವೆ ಮುಂದೆ ಅನಾವೃಷ್ಟಿ ಗಾಳಿ [illegible] ಬೀಸುವದರಿಂದ ಸಾಮಾನ್ಯವಾಗಿ ಪರ್ಯಾಪ್ತವಾಗುತ್ತದೆ. ಈ ಸಲ ಬಿತ್ತನೆಗೆ ಕೂಡಾ ಸಿದ್ಧಪಡಿಸುವಷ್ಟು ಉಕ್ಕೆಗೆ ಸಾಕಾಗುವಷ್ಟು ಮಳೆ ಬೀಳುತ್ತೋ ಇಲ್ಲವೋ ಎಂದು ಜನರಲ್ಲಿ ಸಂಶಯ ಉಂಟಾಗಿದೆ ನಮ್ಮ ಡೆಪ್ಟಿ ಕಮೀಷನರ್ ಸಾಹೇಬರವರು ಈ ಡಿಸ್ಟ್ರಿಕ್ಟಿನಲ್ಲಿ ಉಂಟಾಗಿರುವ ಅನಿವಾರ್ಯವಾದ [illegible] ಗಳನ್ನು ಗವರ್ನಮೆಂಟಿನವರಿಗೆ ಅರಿಕೆ ಮಾಡಿ [illegible] ಕಂದಾಯವನ್ನು [illegible] ನುಸ್ತಿಯಾಗಿ ವಸೂಲ್ ಮಾಡುವಂತೆ, ಅರ್ಧ ಪಟ್ಟಿಗೆ ರಿಮಿಷನ್ ಮಾಡುವಂತೆ ಶಿಪಾರಸ್ ಮಾಡಿ, ಅದರಂತೆ ಸ್ಯಾಂಕ್ಷನ್ ಮಾಡಿದ್ದಕ್ಕಾಗಿ ಎಲ್ಲಾ ರೈತರು ಕೃತಜ್ಞರಾಪೂರ್ವಕವಾಗಿ ವಂದಿಸುತ್ತಾರೆ ಹಾಲಿ ಬಾಗಾಯತು ಫಸಲು ಕೂಡಾ ಹಿಂಸ್ಥಿತಿಯಲ್ಲಿರುವದರಿಂದ ಮೇಲ್ಕಂಡಂತೆ ಅರ್ಧ ಕಂದಾಯವನ್ನು ಮನ್ನಾ [illegible] ಮಾಡಬೇಕೆಂತ ರೈತರು ಅರ್ಜಿ ಒದಗಿಸಿಕೊಂಡಿರುತ್ತಾರೆ [illegible] ದಯಮಾಡಿ ಅಪ್ಪಣೆಯು ಕೊಡಲ್ಪಟ್ಟಲ್ಲಿ ಪ್ರಕೃತ ಪ್ಲೇಗ್ ಕ್ರಿಮಿಗಳ ಪಾಲಿವಿಯನ್ನು ಸೇವೆ ಮಾಡುವರೆಂಬ ಭರವಸೆಯುಳ್ಳವರಾಗಿರುತ್ತೇವೆ—ನಮ್ಮ ಸಂಸ್ಥಾನದಲ್ಲಿ ಕಳೆದ ವಾರ ಅತಿ ವೈಭವದೊಡನೆ ನೆರವೇರಿಸಲ್ಪಟ್ಟ "ಎಂಪೈರ್ ಡೇ" ಎಂಬ ಉತ್ಸವವು ಇಲ್ಲಿಯೂ ಬಹಳ ಲಕ್ಷಣವಾಗಿ ಹೈಸ್ಕೂಲ್ ಮೈದಾನದಲ್ಲಿ ನೆರವೇರಿತು—ನಮ್ಮ ಕೇಂಗೆ ಸ್ಟೇಷನ್ ಪ್ರೆಸಿಡೆಂಟರು ಟವರ್‌ನಲ್ಲಿ ಆಗಾಗ್ಗೆ ಸಂಚಾರ ಹೊರಟು ಜನರ ಮತ್ತು ಮೋಹಲ್ಲಾಗಳ ಪರಿಚಿತಿ ಮಾಡಿಕೊಳ್ಳುತ್ತಿದ್ದಾರೆ ಹೊಸ ಪಟ್ಟಣದ ಇನ್ನೂ ಯಾವದೂ ಹೊರಡಿಟ್ಟಿಲ್ಲ ಮುಂದೆ [illegible] ಬೇಕಾಗಿದೆ ಟೌನ್ ಗೇಟಿನ ಅಪಘಾತವು ಪ್ರತ್ಯೇಕವಾದ್ದರಿಂದ ಪ್ರತಿ [illegible] ನಡೆಯುವ ಕಂಟ್ರಾಕ್ಟಿಗಾಗಿ ಈ ತಿಂಗಳ [illegible] ನೇ ತಾ [illegible] ಮಾಡಿದೆ ಆದರಲ್ಲಿ ಹೋದವರುಷಕ್ಕಿಂತ [illegible] ಕಮ್ಮಿಯಾಗುವದಾಗಿ ಅನೇಕರು ಹೇಳುತ್ತಾರೆ ಇದಕ್ಕೆ ಕಾರಣ ವಾಗ್ಯತೆಗಳು ಸಮೃದ್ಧಿಯಾಗದಿರುವದರಿಂದ ಅವುಗಳ [illegible] ಗಳಿಗೆ ಪಟ್ಟ ಅವಕಾಶವಿಲ್ಲ—ಇಲ್ಲಿನ ಸಂತೆಯಲ್ಲಿ ವಿವಿಧ ಅಂಗಡಿಯು [illegible] ಸರಕಾರಿ ಅಂಗಡಿಯೂ ಒಂದೇ ಸ್ಥಳದಲ್ಲಿರುವದರಿಂದ ಕಾಯಿಪಲ್ಯಗಳನ್ನು ತಗೆದುಕೊಳ್ಳುವದಕ್ಕೆ ಹೋಗುವವರಿಗೆ ವಿಶಾನದ ದುರ್ಗಂಧವೇ ತುಂಬಾ ಅಸಹ್ಯವನ್ನುಂಟುಮಾಡುತ್ತಿದೆ ಅದ್ದರಿಂದ ಮ್ಯುನಿಸಿಪಾಲಿಟಿಯವರು ಇದಕ್ಕೆ ತಕ್ಕವರಿಗೇನೇ ಪ್ರತ್ಯೇಕವಾದ [illegible] ಅನುಕೂಲ ಮಾಡಿಕೊಡುವದು ಒಳ್ಳೆದಲ್ಲವೇ?—ಟವರ್ ಕ್ಲಾಕಿನ ಬಳಿ ಗೌಡನ ಪಾಳ್ಯದಲ್ಲಿ ಕುರುಬರ ಜಸುಮಕ್ಕ ಎಂಬುವಳು ಕಳೆದ ವಾರ ಕೋಲಾರದ ಚಿನ್ನದ ಗಣಿ ರಾಬರ್ಟ್‌ಸನ್ ಪೇಟೆಗೆ ನೆಂಟರ ಮನೆಗೆ ಹೋಗಿದ್ದವಳು ವಾಪಸ್ ಬರುತ್ತಿರುವಾಗ ರೈಲಿನಲ್ಲಿ ಮಾಲೂರಿನ ಒಬ್ಬ ಬ್ರಾಹ್ಮಣ ಹುಡುಗನು ಈಕೆಯ ಪರಿಚಯ ಮಾಡಿಕೊಂಡು ಸಿಂಗಲೇ ತುಮಕೂರಿಗೆ ಆಕೆಯ ಮನೆಗೆ ಬಂದು, ಆಕೆಯು ಮನೆಯಿಂದ ಬಿಂದಿಗೆ ತೆಗೆದುಕೊಂಡು ಸಮೀಪದಲ್ಲಿರುವ ಭಾವಿಯಲ್ಲಿ ನೀರು ಸೇದಿ ತಂದು, ಪುನಃ ಮನೆಗೆ ಬಂದಾಗ, ಆಕೆಯ ಸಂಗಡ ನಾವು ಊರೊಳಕ್ಕೆ ಹೋಗಿ ನೆಂಟರ ಮನೆಯಲ್ಲಿ ಊಟ ಮಾಡಿಕೊಂಡು ಬರುತ್ತೇನೆ ಅದುವರಿಗೂ ನನ್ನ ಹತ್ತ ಇರುವ ಈ ಎರಡು ಸವರನ್ ತೂಕದ ಮಕ್ಕಳ ಕಾಪನ್ನು ನಿನ್ನ ಹತ್ತರ ಇಟ್ಟುಕೊಂಡಿರು ಎಂದು ಹೇಳಿ ಕೊಟ್ಟು ಊರೊಳಕ್ಕೆ ಬಂದು, ಒಂದು ಚಿನ್ನದ ನಗವನ್ನು ಬಿಕರಿ ಮಾಡುತ್ತಿರುವಾಗ ಪೋಲೀಸಿನವರು ಅವನನ್ನು ಅನುಮಾನದ ಮೇಲೆ ಹಿಡಿದರು ಅನಂತರ ಈತನು ಬೆಂಗಳೂರು ತಾಲ್ಲೂಕು ಹೊಸಕೋಟೆಯಲ್ಲಿ ಸುಬ್ಬರಾಯರೆಂಬುವರ ಮನೆಯಲ್ಲಿ ಕಳುವು ಮಾಡಿರುತ್ತಾನೆಂಬುದಾಗಿ ತಿಳಿದು ಬಂದು ಆ ಮೇಲೆ ಆ ಹುಡುಗನನ್ನು ವಿಚಾರಣೆ ಬಗ್ಗೆ ಹೊಸಕೋಟೆ ತಾಲ್ಲೋಕು ಅಮಲ್ದಾರರ ಕೋರ್ಟಿಗೆ ಕಳುಹಿಸಿದ್ದಾರೆ ಕಾಪು ತೆಗೆದುಕೊಂಡ ಹೆಂಗಸನ್ನೂ ಸಹ ವಿಚಾರಣೆ ಬಗ್ಗೆ ಅಲ್ಲಿಗೇನೇ ಕರೆದುಕೊಂಡು ಹೋಗಿರುತ್ತಾರೆ. ಇದರ ಇತ್ಯರ್ಥ ಮುಂದೆ ತಿಳಿಯಬೇಕಾಗಿದೆ—ಮೇಲೆ ಕಂಡ ಬಾಳೇಗೌಡನ ಪಾಳ್ಯದ ಸಮೀಪದಲ್ಲಿ ಮ್ಯುನಿಸಿಪಾಲಿಟಿಯವರು ನೀರಿಗಾಗಿ ಒಂದು ಬಾವಿ ಕಟ್ಟಿಸಿರುತ್ತಾರೆ. ಅಲ್ಲಿಗೆ ಬಹು ಜನರು ನೀರಿಗೆ ರಾತ್ರಿ ಕಾಲದಲ್ಲೂ ಬರುವದರಿಂದ ಆ ಬಳಿ ಲಾಂದ್ರವೇ ಇಲ್ಲದೆ ಬಹಳ ಕಷ್ಟಕ್ಕೆ ಕಾರಣವಾಗಿದೆ. ಮ್ಯುನಿಸಿಪಾಲಿಟಿಯವರು ಕ್ಷಿಪ್ರವಾಗಿ ಬೆಳಕಿಗೆ ಅನುಕೂಲ ಮಾಡಿಕೊಡುವದಕ್ಕಾಗಿ ಕೋರುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ.

ಪೋಲೀಸ್ ಪ್ರೊ॥ ಅ॥ ಸೂಪರಿಂಟೆಂಡೆಂಟ್ ಮೆ॥ ಟಪ್ಪ್ಲೆಕ್ರಾಫ್ಟ್ ಅಲ್ಲಿಖಾನ್ ರವರಿಗೆ ಕೊಟ್ಟಿದ್ದ ಒಂದು ತಿಂಗಳು ಇಪ್ಪತ್ತು ದಿವಸಗಳ ಪ್ರಿವಿಲೆಜ್ ರಜವನ್ನು ರದ್ದು ಮಾಡಿದೆ

ಗವರ್ನಮೆಂಟಿನ ರೆವಿನ್ಯೂ ಜನರಲ್ ಸೆಕ್ರಿಟರಿ ಮೆ॥ ಬಿ. ಕೆ. ವೆಂಕಟವರದ ಐಯ್ಯಂಗಾರ್ರಿಗೆ ಎರಡು ತಿಂಗಳು ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಜೂನ್ ೪ ರಿಂದ ಮಂಜೂರಾಗಿದೆ. ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಅ॥ ಸರ್ಜನ್ ಮೆ॥ ಸಿ ಅಪ್ಪಾದುರೈ ಮೊದಲಿಯಾರ್ರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ.

ಸಬ್ ಅ॥ ಸರ್ಜನ್ ಮೆ॥ ಟಿ. ಎಸ್. ಸಿದ್ದಪ್ಪನವರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೪ ದಿನಗಳಿಗೆ ಜಾಸ್ತಿ ಮಾಡಿದೆ

ಸೊರಬ್ ತಾಲ್ಲೂಕಿನ ಅಮಲ್ದಾರ್ ಮೆ॥ ಎಸ್. ಕೃಷ್ಣಪ್ಪನವರಿಗೆ ಕೊಟ್ಟಿದ್ದ ಮೂರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಪರಿಕರದ ಡೆಪ್ಟಿ ಅಮಲ್ದಾರ್ ಮಹಮದ್ ಪೀರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟಿನ ಪೋಲೀಸ್ ಹೆಡ್ ಕ್ವಾರ್ಟರ್ ಅಸಿಸ್ಟೆಂಟ್ ಬಾಲಿಗ ಕೃಷ್ಣರಾಯರು ಡೆಪ್ಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಡೆಪ್ಟಿ ಕಮಿಷನರ್ ಮೆ॥ ಎಂ ನಾರಾಯಣಾಚಾರ್ಯರಿಗೆ ಕೊಟ್ಟಿದ್ದ ಕಾಯಿಲೆ ರಜವನ್ನು ಇನ್ನೊಂದು ತಿಂಗಳಿಗೆ ಜಾಸ್ತಿ ಮಾಡಿದೆ

ಪೋಲೀಸ್ ಪೇಟಿ ಸಬ್ ಡಿವಿಜನ್ ಅ॥ ಕಮಿಷನರ್ ಮೆ॥ ಆನಂದರಾವ್ ಸಿರ್ಸಿ[illegible]ಯವರಿಗೆ ಅವರು ದರ್ಯಾಪ್ತು ಮಾಡುವ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಬರದುಕೊಳ್ಳತಕ್ಕದ್ದೆಂಬ ಅಧಿಕಾರ ಕೊಟ್ಟಿದೆ

ಮೈಸೂರು ಗವರ್ನಮೆಂಟ್ ಸೆಕ್ರಿಟರಿ ಆಫೀಸಿನ ಖಜಾನ್ಚಿ ಮೆ॥ ಕೆ ಎಸ್ ಚಂದ್ರಶೇಖರ ಐಯ್ಯರವರು ಮೆ॥ ಬಿ ಕೆ ವೆಂಕಟವರದ ಐಯ್ಯಂಗಾರ್ರಿಂದ ಜೂನ್ ೩ ನೆ ತಾರೀಖಿನ ಚಾರ್ಜನ್ನು ವಹಿಸಿಕೊಂಡಿರುತ್ತಾರೆ

ವಿದೇಶ ವರ್ತಮಾನಗಳು.

ಲಂಡನ್ ಪಟ್ಟಣದಲ್ಲಿ ಸರ್ಕಾರದವರು ಹಡಗುಗಳ ಸಾಮಾನು ಶೇಖರ ಮಾಡುವ ಉಗ್ರಾಣಗಳಲ್ಲಿ ಇಲಿ ಹೆಗ್ಗಣಗಳನ್ನು ಕೊಲ್ಲಿಸುತ್ತಾ ಬಂದಿದ್ದಾರೆ. ಇದುವರೆಗೆ ೪,೯೦,೦೦೦ ಪ್ರಾಣಿಗಳು ಕೊಲ್ಲಲ್ಪಟ್ಟವು

****

ಹಿಂದುಸ್ಥಾನದ ಫಿರಂಗಿ ಸೈನಿಕರಲ್ಲಿ ಉದ್ಯೋಗದಾರನಾಗಿರುವ ಲೆಫ್ಟಿನೆಂಟ್ ಜಿ ಎಂ ರೂತ್ ಎಂಬುವನು ಬೈಸಿಕಲ್ ಎಂಬ ಗಾಡಿಯ ಮೇಲೇರಿ ಹಿಂದುಸ್ಥಾನದಿಂದ ಮಧ್ಯ ಏಷ್ಯ ಯೂರೋಪ್ ಪ್ರಾಂತ್ಯಗಳಲ್ಲಿ ಪ್ರಯಾಣ ಮಾಡಿ, ಹೋವರ್ ಪಟ್ಟಣದಲ್ಲಿಳಿದನು ಒಂದು ಚಕ್ಕಳದ ಚೀಲದಲ್ಲಿ ನೀರು, ಒಂದು ಸಣ್ಣ ಡೇರಾ, ಇತರ ಸಾಮಾನುಗಳು, ಇವನ್ನೆಲ್ಲಾ ಬೈಸಿಕಲ್ ಗಾಡಿಗೆ ಕಟ್ಟಿಕೊಂಡು ಊರಿಂದೂರಿಗೆ ಹೋಗಿರುತ್ತಾನೆ ಅವನ ಸಾಮಾನೂ ಬೈಸಿಕಲ್ ಗಾಡಿಯೂ ೭೦ ಪೌಣ ಭಾರವಾಗಿತ್ತು ಇಷ್ಟು ಭಾರವನ್ನು ಅವನು ಸಹಿಸಿಕೊಂಡು ೬೦೦೦ ಮೈಲಿ ದೂರ ಸವಾರಿಯಾಗಿ ಹೋಗಿ ಸೇರಿದ್ದು ಆಶ್ಚರ್ಯಕರಗಿದೆ

****

ಬರ್ಮ ರಾಜ್ಯದ ಮಿಕ್ಕಾಡೋ ಚಕ್ರವರ್ತಿಯ ಪರು ಪಳ ಸಂಪ್ರದಾಯಗಳ ಕೆಳಗೆ ಒಂದು ಸಭೆಯನ್ನು ಏರ್ಪಡಿಸಿ, ಅವರಿಂದ ಪ್ರಪಂಚದ ಬೇರೆ ಬೇರೆ ಜನರ ಆಚರಣೆಯಲ್ಲಿರುವ ಮತತತ್ವಗಳನ್ನೆಲ್ಲಾ ವಿಮರ್ಶನೆ ಮಾಡಿಸಿ, ಯಥಾರ್ಥವಾದ ಮತವನ್ನು ಅವರಿಂದ ಗೊತ್ತು ಮಾಡಿಸಬೇಕೆಂದು ಪ್ರಯತ್ನ ಪಟ್ಟರು. ಈ ಸಭಿಕರು ಕಳೆದ ೧ನೆ ತಾರೀಖಿನಿಂದ ಸೇರಿ ಚರ್ಚ ಮಾಡುತ್ತಿದ್ದಾರೆ ಈ ಸಭೆಗೆ ಎಲ್ಲಾ ಮತಗಳ ಪ್ರತಿನಿಧಿಗಳೂ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಕರೆಸಲ್ಪಟ್ಟಿದ್ದಾರೆ ಇವರು ಗೊತ್ತು ಮಾಡುವ ಮತವನ್ನು ಚಕ್ರವರ್ತಿಗಳವರು ಅಂಗೀಕರಿಸಿ, ಅದರಂತೆ ಆಚರಣೆಯಲ್ಲಿ ತರುತ್ತಾರೆಂದು ತಿಳಿದು ಬಂದಿದೆ

****

ಸ್ಪೈನ್ ರಾಜ್ಯದ ನೂತನ ರಾಜದಂಪತಿಗಳನ್ನು ಕೊಲ್ಲಬೇಕೆಂದು ಪ್ರಯತ್ನಪಟ್ಟ ಮಾತಿಯೋ ಮೋರಲ್ ಎಂಬುವನು ಸಿಕ್ಕಿಬಿದ್ದು ಆತ್ಮಹತ್ಯ ಮಾಡಿಕೊಂಡನಷ್ಟೆ ಇವನು ಎಸೆದ ಮದ್ದಿನ ಗುಂಡು ವಿಷ ಬೆರಿತವಾಗಿತ್ತೆಂತಲೂ ಅದರಿಂದಲೇ ೨೪ ಮಂದಿಯು ತಮ್ಮ ಪ್ರಾಣಬಿಟ್ಟರೆಂತಲೂ, ಇನ್ನೂ ಗಾಯಪಟ್ಟವರಲ್ಲಿ ಕೆಲವರು ಬದುಕುವ ಹಾಗಿಲ್ಲವೆಂತಲೂ ಕೇಳಿ ಬರುತ್ತದೆ ಬಾರ್ಸಿಲೋನಾ ಪಟ್ಟಣದ ಮಾಡರ್ನ್ ಸ್ಕೂಲ್ ಎಂಬ ವಿದ್ಯಾಶಾಲೆಯ ಡೈರೆಕ್ಟರನ್ನು ಕೆಲವು ಪ್ರಾಮುಖ್ಯಸ್ಥರ ಸಹಿತವಾಗಿ ಹಿಡಿದು ಸೆರೆಯಲ್ಲಿ ಇಟ್ಟಿದ್ದಾರೆ [illegible] ಸಂಘಕ್ಕೆ ಇವರೆಲ್ಲಾ ಸೇರಿದವರೆಂದು ಗೊತ್ತಾಯಿತು ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ಆ ದುಷ್ಟನು ಗುಂಡನ್ನು ಎಸೆದು ಅನಾಹುತವನ್ನುಂಟು ಮಾಡಿದ ಮೇಲೆ ನೇರ್ಕಸ್ ಎಂಬೊಬ್ಬ ವರ್ತಮಾನ ಪತ್ರಿಕಾ ಎಡಿಟರ ಮನೆಗೆ ಹೋಗಿದ್ದನು ಅವನನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ ಇವನು—ಆ ಮನುಷ್ಯನಿಗೆ ನಾನು ಆಶ್ರಯ ಕೊಟ್ಟಿದ್ದೆನು ಎಂದು ಹೇಳಿ ಒಪ್ಪಿಕೊಳ್ಳುತ್ತಾನೆ ಆತ್ತಲಾಗಿ ರಾಜಧಾನಿಯಲ್ಲಿ ವಿವಾಹ ಮಹೋತ್ಸವಗಳೆಲ್ಲಾ ಪೂರೈಸಿದ್ದರಿಂದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಪರಿವಾರ ಸಮೇತ ಲಂಡನ್ ಪಟ್ಟಣಕ್ಕೆ ವಾಪಸು ತೆರಳಿದರು.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85 3

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ್ ಅಳತೆ ಮತ್ತು ಮಾಲಿನ ವರ್ಣನೆ ಹಾಗು ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ — ಕ್ರಯ ೧೦ ಆಣೆ ವಿ. ಪಿ. ಯಿಂದ ಕಳಿಸುವೆವು ಟಪಾಲು ಖರ್ಚು ಬೇರೆ ಬುಕ್ಸೆಲ್ಲರರಿಗೆ ಯೋಗ್ಯ ಕಮೀಶನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿಂಶೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ — ನಾಲ್ಕು ಆಣೆ. ಬಾಲಬೋಧ ಅಕ್ಷರದಿಂದ ಬರಿಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ನಾರದ, ಪೋಷ್ಟ ಮಾಂಡ್ವಿ, ಮುಂಬಯಿ.

ಇದಕ್ಕೆ ಸಮಾನವಾದ ಪುಸ್ತಕ ಉಂಟೋ?

87 3

ಕನ್ನಡ ಭಾಷೆಯಲ್ಲಿ ಇದುವರಿವಿಗೂ ಇಂಥಾ ಸೊಗಸಾದ ಪುಸ್ತಕವು ಪ್ರಚುರವಾಗಲಿಲ್ಲ. ಸ್ವಲ್ಪ ನೋಡಿ.

"ಹಿಂದೂದೇಶ ಪ್ರದಕ್ಷಿಣ"

ಎಂದು ಕರೆಯಲ್ಪಡುವ ಈ ನೂತನ ಪುಸ್ತಕದಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಹಣವ್ಯಯಮಾಡಿಕೊಂಡು ದೇಶವನ್ನೆಲ್ಲಾ ನೋಡುವದಕ್ಕೆ ಬದಲಾಗಿ ಈ ಪುಸ್ತಕವನ್ನು ಕೊಂಡು ಓದಿದರೆ ಎಲ್ಲಾ ಸ್ಥಳಗಳೂ, ಜನರ ಸ್ಥಿತಿಗತಿಗಳೂ ಬಹು ಪುಷ್ಕಾರವಾಗಿ ಕಂಡುಬರುವವು. ಇದರಲ್ಲಿರುವ ಚಿತ್ರಗಳನ್ನು ಸ್ವಲ್ಪ ನೋಡಿ. ಆಗ್ರಾಪಟ್ಟಣದ ಬಳಿಯಲ್ಲಿರುವ ಜಗತ್ಪ್ರಸಿದ್ಧವಾದ ತಾಜಮಹಲ್, ಹುಮಾಯೂನನ ಗೋರಿ, ಹುಗ್ಲಿ ನದಿ, ಕಲ್ಕತ್ತಾನಗರ, ಕಲ್ಕತ್ತಾ ಸ್ಟಿಕೋರ್ಟು, ಕಾಳಿಕಾದೇವತೆ, ಚಂದ್ರನಗರ, ಬಂಗಾಳಿಯವರ ಮನೆಗಳು, ಜಗನ್ನಾಥಸ್ವಾಮಿ, ಭುವನೇಶ್ವರವೆಂಬ ದೇವಸ್ಥಾನ, ಜಗನ್ನಾಥನ ರಥೋತ್ಸವ, ಕನರಾಕ್ ದೇವಸ್ಥಾನ, ಎವರಸ್ಟ್ ಶಿಖರ, ಬಿಟ್ಮಂಡುನಗರದ ಬೀದಿ, ಖಟ್ಮಂಡುನಗರದ ದೇವಸ್ಥಾನಗಳು, ಜಹಜುಗಳು, ಅಂಬಿಗರು ದೋಣಿಯನ್ನು ಎಳಕೊಂಡು ಹೋಗುವದು, ಬಯಾದಲ್ಲಿರುವ ಬುದ್ಧನ ದೇವಸ್ಥಾನ, ಔರಂಗಜೇಬನು ಕಟ್ಟಿಸಿದ ಮಸೀತಿ, ಕಾಶೀಪುಣ್ಯಕ್ಷೇತ್ರದಲ್ಲಿರುವ ದಶಾಶ್ವಮೇಧಘಟ್ಟ, ಕಪಿಗಳಿಗೆ ತಿಂಡಿ ಹಾಕುವದು, ಕಾಶೀಕ್ಷೇತ್ರದ ದೇವಸ್ಥಾನಗಳು, ಅಲಹಾಬಾದ್ ನಗರ ಮತ್ತು ಅದರ ಕೋಟೆ, ಅಲಹಾಬಾದಿನಲ್ಲಿರುವ ಖುಸ್ರುಬಾಗ್ ಗೋರಿ, ಯಮುನಾನದಿಯಲ್ಲಿ ಯಾತ್ರಿಕರು ಮುಳುಗುವದು, ಕಾನ್ಪುರದಲ್ಲಿರುವ ಶಿಲಾಶಾಸನ, ಕಾನ್ಪುರದ ಹತ್ತಿರ ಗಂಗಾನದಿಯ ಮೇಲೆ ಕಟ್ಟಿರುವ ಸೇತುವೆ, ಲಕ್ನೋನಗರದ ರೆಸಿಡೆನ್ಸಿ ಬಂಗಲೆ, ಲಕ್ನೋಪಟ್ಟಣದ ಬಾಗಿಲು, ಸರ್ ಹೆನ್ರಿ ಲ್ಯಾವ್ರೆನ್ಸನು, ಗೋಮತಿ ನದಿಯ ಮೇಲಿರುವ ಅರಮನೆ, ಸ್ನಾನದಲ್ಲಿ ಜನರಸ್ಥಿತಿ, ಹರಿದ್ವಾರ ಘಟ್ಟ, ಗಂಗೋತ್ರಿ ದೇವಸ್ಥಾನ, ಹಿಮವತ್ಪರ್ವತಗಳ ಮೇಲಿರುವ ಪಟ್ಟಣ, ಹಿಮಪ್ರವಾಹಗಳು, ಆಗ್ರಾಪಟ್ಟಣದ ಕೋಟೆ, ಯಮುನಾನದಿಯ ದಡದಲ್ಲಿ ತೋರುತ್ತಿರುವ ತಾಜ್‌ಮಹಲ್ ಗೋರಿಯು, ತಾಜ್‌ಮಹಲಿನ ಕಲ್ಲಿನಲ್ಲಿ ಕೆತ್ತಿರುವ ಪರದೆ, ಅಕ್ಬರನ ಅರಮನೆ, ಆಗ್ರಾಪಟ್ಟಣದ ಮುತ್ತಿನ ಮಸೀತಿ, ಫತೆಪುರ್ ಸಿಕ್ರಿಯಲ್ಲಿರುವ ಪಾಂಚ್‌ಮಹಲ್ ಅರಮನೆ, ರಾಜಪುತ್ರರು, ಭರತಪುರದ ಕೋಟೆ, ಅಲ್ವಾರಿನಲ್ಲಿ ಮಹಾರಾಜ ಭಕ್ತಾವರ್‌ಸಿಂಗರ ಗೋರಿ, ಅಲೆಕ್ಸಾಂದರನೂ ಪೋರಸನೂ, ದೇಹಲಿ ನಗರದ ದೊಡ್ಡ ಮಸೀತಿ, ಪುರಾತನ ದೇಹಲಿಯ ಬಾಗಿಲು, ರಾಜದೇವನು ಸ್ಥಾಪಿಸಿದ ಕಬ್ಬಿಣದ ಸ್ತಂಭ, ನಾದರ್‌ಷಹಾನು ದೇಹಲಿ ನಗರದಲ್ಲಿ ಪ್ರಜಾಸಂಹಾರವನ್ನು ನೋಡುತ್ತಿರುವದು, ದೇಹಲಿಯ ಬಳಿಯಲ್ಲಿರುವ ಕುತುಬ್‌ಮಿನಾರ್, ಚಾಂದ್ನಿ ಚೌಕವೆಂಬ ಬೀದಿ, ಸಿಮ್ಲಾಕ್ಕೆ ಹೋಗುವ ದಾರಿ, ಸಿಮ್ಲಾ ಅಮೃತಸಾರದ ಸುವರ್ಣಾಲಯ, ಲಾಹೋರಿನಲ್ಲಿರುವ ರಣಜಿತಸಿಂಗನ ಗೋರಿ, ಲಾಹೋರ್ ಪಟ್ಟಣ, ಇವೇ ಮುಂತಾದ ಅನೇಕ ರಮಣೀಯ ಸ್ಥಳಗಳ ಚಿತ್ರಗಳು ಈ ಪುಸ್ತಕದಲ್ಲಿ ಅಡಗಿವೆ. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕೆ ಸ್ಥಳ ಸಾಲದು.

ಪ್ರತಿಯೊಂದು ಅಂಶದ ವಿವರಣೆಯೂ ಬಹು ಪರಿಷ್ಕಾರವಾಗಿರುತ್ತದೆ. ದಕ್ಷಿಣ ದೇಶದಲ್ಲಿರುವ ಅನೇಕ ಪ್ರಸಿದ್ಧವಾದ ಸ್ಥಳಗಳ ಚಿತ್ರಗಳೂ, ಅವುಗಳ ವಿವರಣೆಗಳೂ ಇದರಲ್ಲಿವೆ. ಪುಸ್ತಕವು ಹನ್ನೊಂದು ಅಂಗುಲ ಉದ್ದವಾಗಿಯೂ ಒಂಬತ್ತು ಅಂಗುಲ ಅಗಲವಾಗಿಯೂ ಇರುತ್ತದೆ. ಪುಸ್ತಕವು ಭಾರಿಯಾಗಿದೆ. ಇಂಥಾ ಪುಸ್ತಕವನ್ನು ಪ್ರಚುರಪಡಿಸುವದಕ್ಕೆ ಬಹಳ ಸಮಯವನ್ನೂ ಹಣವನ್ನೂ ಪ್ರಯಮಾಡಿದ್ದೇವೆ. ಪುಸ್ತಕದ ಅಚ್ಚು ಮತ್ತು ಬೈಂಡು ಬಹು ಸುಂದರವಾಗಿವೆ. ಇದರ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ಹನ್ನೊಂದು ಆಣೆಗಳಾಗುವವು. ಪುಸ್ತಕವು ಜಾಗ್ರತೆಯಲ್ಲಿ ಮಾರಾಟವಾಗುತ್ತಿದೆಯಾದ್ದರಿಂದ ಕಾವ್ಯಗಳೆಲ್ಲರೂ ಕೆಳಗೆ ಕಂಡ ವಿಳಾಸದಾರರಿಗೆ ಬೇಗ ಬರೆದು ತರಿಸಿಕೊಳ್ಳಬೇಕು.

ನಮ್ಮ ವಿಳಾಸ:—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-31

೧೦ ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ಎರಡು ದಿನ, ಚಳಿ, ಇನ್‌ಫ್ಲುಯೆಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧ ಕೂದಲು ಉದರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿಹೋಗುವದು. ಸೀಸೆ ೧ ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರಿವಿಗೂ ೫ ಆಣೆ.

೧೨. ಸುಗಂಧಕದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೩ ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟರೆ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ಕ್ಕೆ ೪ ಆಣೆ ವಿ ಪಿ ಛಾರ್ಜು ೧೨ ಸೀಸೆ ವರೆಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೇರೆ ೨-೯-೦ ರೂ ವಿ ಪಿ ಛಾರ್ಜು ಆಲಾಯಿದ ಸಿಲೋನಿಗೆ ೨ ಆಣೆ

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೫ ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಸ್ತ್ರೀಯರ ಗಂಡಸರೂ ಹೆಂಗಸರೂ, ಮುದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿರುಗುವಂತೆ ಹೊಳಪುಕೊಟ್ಟು ತಂಪನ್ನುಂಟುಮಾಡುವದು ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತ ಉಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ ಡಬ್ಬಿ ೧ಕ್ಕೆ ೮ ಆಣೆ. ವಿ. ಪಿ. ಹಾಸಲು ೩ ಆಣೆ.

೧೬ ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ ನರಗಳಸೆಳೆತ, ನಿದ್ರೆಬಾರದಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇವನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೭. ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು ಮಲೇರಿಯಾ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಎದೆಯು ಶ್ವಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರೋಣ, ಹೆಚ್ಚಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೮ ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ಕುರಿ, ಜುರುಕಾಲು, ಕಜ್ಜಿ, ಅನೇಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ ವಿ ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ.

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರ ಉಪಯೋಗದಿಂದ ಕೂದಲು, ಮೀಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮೆದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅದಕ್ಕೆ ಮೆಚ್ಚಿನದಾಗಿರುತ್ತದೆ. ಬೆಲೆ ರೂ. ೧ ವಿ. ಪಿ. ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

25—5—1906 ರಿಂದ 1—6—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೊರದೇಶದಿಂದ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ	1	0	4	3
ಮೈಸೂರು ,,	3	2	0	0
ಕೋಲಾರ ,,	0	0	0	0
ಕೋಲಾರ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ	0	0	0	0
ಹಾಸನ (ಹೊರಗಿನದು)	3	3	0	0
ಚಿತ್ರದುರ್ಗ ,,	0	0	0	0
ಕಡೂರ್ ,,	4	4	0	0
ಶಿವಮೊಗ್ಗ ,,	0	[illegible]	2	2
ಜುಮ್ಲಾ	12	9	6	5

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಜ್ಯೇಷ್ಠ ಬಹುಳ ಅಷ್ಟಮಿ ಗುರುವಾರದಿಂದ ಜ್ಯೇಷ್ಠ ಬಹುಳ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜೂನ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ತೇದಿ ದಿನ ಮಾಸ
14	ಗುರು ✠	ಅಷ್ಟಮಿ	27 25	ಪೂಭಾ	15 10	1
15	ಶುಕ್ರ	ನವಮಿ	28 54	ಉ॥ಭಾ	18 16	2
16	ಶನಿ	ದಶಮಿ	31-48	ರೇ	22-30	3
17	ರವಿ †	ಏಕಾದಶಿ	35-10	ಅ	27-50	4
18	ಚಂದ್ರ	ದ್ವಾದಶಿ	40-2	ಭ	33 53	5
19	ಕುಜ ¶	ತ್ರಯೋದಶಿ	45-2	ಕೃ	40-20	6
20	ಬುಧ *	ಚತುರ್ದಶಿ	49-58	ರೋ	46 51	7

✠ ಷಡಶೀತಿ ಪುಣ್ಯಕಾಲ | ಲಿಂಗಾಯತ ವ್ರತ.
† ಸರ್ವತ್ರ ಏಕಾದಶೀ. ¶ ಪ್ರದೋಷ.
* ಮಾಸಶಿವರಾತ್ರಿ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು.
ಕಳ್ಳೇ ಅಕ್ಕಿ ಪಲ್ಲ ೧ಕ್ಕೆ	ರೂ ೧೭-೮-೦	೧೭-೦-೦
ಕೆಂಪೋತಿ ಅಕ್ಕಿ ಅವಲ್	೧೩-೮-೦	೧೩-೮-೦
,, ದುಯಂ	೧೩-೭-೦	೧೩-೦-೦
ಜಾಪಾಳಿ ಅಕ್ಕಿ	೧೩-೦-೦	೧೨-೧೨-೦
ಸಣ್ಣಕ್ಕಿ ಅವಲ್	೧೫-೦-೦	೧೫-೭-೦
,, ದುಯಂ	೧೪-೦-೦	೧೪-೦-೦
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೬-೦	೧೧-೦-೦
,, ದುಯಂ	೧೦-೮-೦	೧೦-೮-೦
ಹೈರ ರಾಗಿ ಪಲ್ಲ ೧ಕ್ಕೆ	೮-೧-೦	೬-೬-೦
ಕಾರಾಗಿ	೮-೦-೦	೬-೦-೦
ಜೋಳ	೯-೦-೦	೮-೮-೦
ಹಲಸಂದೆ ಪಲ್ಲ ೧ಕ್ಕೆ	೯-೮-೦	೧೦-೦-೦
ಬಿಳೇ ಅವರೆ	೮-೦-೦	೯-೦-೦
ಹೆಸರು	೧೦-೮-೦	೧೧-೦-೦
ಉದ್ದು	೧೨-೭-೦	೧೧-೮-೦
ಕಡಲೆ	೧೧-೦-೦	೧೦-೭-೦
ಎಳ್ಳು ಖ ೧೨ ಕ್ಕೆ	೨೧-೮-೦	೨೦-೮-೦
ಹುರುಳಿ	೮-೮-೦	೯-೭-೦
ಹರಳು ೧೨ ಸೇರಿಗೆ	೧೪-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೩-೦-೦	೨-೧೨-೦
ಮೆಣಸಿನಕಾಯಿ	೪-೦-೦	೩-೮-೦
,, ದುಯಂ	೩-೭-೦	೩-೭-೦
ಬೆಲ್ಲ ದೊಡ್ಡ ಅಚ್ಚು	೪-೬-೦	ಮ ೧-೮-೦
ಒಳ್ಳೆಣ್ಣೆ ಮಣ ೧ಕ್ಕೆ	೫-೪-೦	೫-೦-೦
ಹರಳೆಣ್ಣೆ ,,	೫-೮-೦	೫-೬-೦
ಕೊತ್ತುಂಬರಿ ಪಲ್ಲ ೧ಕ್ಕೆ	೧೧-೮-೦	೧೦-೮-೦
ಉಪ್ಪು ,,	೫-೧೦-೦	೬-೦-೦
ಹುಣಸೇ ಹಣ್ಣು	೦-೧೨-೦	೦-೧೧-೦
,, ಹಳೇದು	೦-೮-೦	೦-೧೦-೦
ತುಪ್ಪ ಮಣ ೧ಕ್ಕೆ	೧೬-೧೨-೦	೧೫-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	೪-೦-೦
ತೆಂಗಿನಕಾಯಿ ೧೦೦ ಕ್ಕೆ	೫-೭-೦	೪-೪-೦
ಆಲೇಕಾಯಿ ಮಣ ೧ಕ್ಕೆ	೧-೦-೦	೦-೧೧-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	೦-೧೩-೦
ಚೀನ (ಶುಗರ್) ಕೆಂಪು	೧೫-೪-೦	೧೫-೪-೦
,, ,, ಬಿಳುಪು	೧೫-೧೦-೦	೧೬-೦-೦
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೩-೦-೦

Printed and Published by the Rev. E. W THOMPSON, M.A., the Proprietor and Manager, Wesleyan Mission Press, Mysore. 14/6/1906.

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨ — ಮೈಸೂರು—ಸರ್ ೧೯೦೬ ನೇ ಇಸವಿ ಜೂನ್ ತಾರೀಖು ೨೧ ನೇ ಗುರುವಾರ. — ಸಂಚಿಕೆ ೩

ಈಗತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲುಗಳ ಕೇಶರಂಜನ ತೈಲ.

45-18

ನಮ್ಮಲ್ಲಿ ವ್ಯಾಪಾರ ಕೂಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ಬಿಕರಿಮಾಡಿದ್ದಿಲ್ಲ. ನಗದು ಕ್ರಯ ಮಾತ್ರ:—

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨—೧೨—೦
ಸಣ್ಣ ಬಾಟ್ಲಿ ಒಂದಕ್ಕೆ ರೂ. ೦—೧೧—೬
ಒಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮-೪-೦
" ೩ " " " ರೂ. ೮—೦—೧

ಅಪೇಕ್ಷೆ ಪಡುವವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ:—ಎಲ್. ಎ ಪೊರವಾಲ್ ಕಂಪನಿ,
ಜನರಲ್ ಮತ್ತು ಕಮಿಷನ್ ಏಜಂಟರು,
ತಾಲ್ಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೋಮೋಸಿಯಾ.

ಅಜೀರ್ಣ ಇದಾರ

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ಯಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರೋಗಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖಶೋಕ, ಊತಗಳು, ಗಡ್ಡೆಗಳು, ರಣಗಳು, ಜಳಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು ಚುಚ್ಚುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಹುಟ್ಟದಾಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಬ್ತು ಡಬ್ಬದಲ್ಲಿ ೧ ರೂ. ಡಬ್ಬದಲ್ಲಿರುವದಕ್ಕಿಂತ ೫ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ ಈ ಡಬ್ಬವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

✤✤✤✤✤✤✤✤✤

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ರೋಗಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೬ ಸೆಕೆಂಡು ಬೀಚ್ ಲೈನ್, ಮದರಾಸ್.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.
ಶರವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 19

ವ್ಯಾಪಾರದ

ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮವಲ್ಲ. ಏಜಂಟರುಗಳು ಬೇಕು, ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 71-8

ಇದು ಸಾಧಾರಣ ಜ್ವರ, ಚಳೀಜ್ವರ, ಮೋಲೀಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ದಿನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ರೂ. ೨—೧೨ ಆ. ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

✤✤✤✤✤✤✤✤✤

ಅಮೃತ ಕರ್ಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ತೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕೋಲಾರದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕರ್ಪೂರ ಔಷಧವನ್ನು ನಾನೂ ನನ್ನ ಹಾಸ್ಪಿಟಲಾರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ಸಂದರ್ಭಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಕೆಂಡ್ ಬೀಚ್ ಲೈನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್
ಸೇರಿ .. .. ರೂ. ೦—೧೪—೦
" " " " ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನು ದಯೆ ತರಿಸಿಕೊಳ್ಳಬೇಕಾಗಿದ್ದರೆ 19-23

ಬ್ರೈಡ್ ಮತ್ತು ಈಸ್ಟ್‌ಲೆಂಡ್,

೨೯—೩೪, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ೧೫ ಕಳಿಸಿ, ಕಾಗದ ಬರಿಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂಡಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು. ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅಕಸ್ತ್ರಿಗೂ ಮಕ್ಕಳಿಗೂ ಕೊಡತಕ್ಕಂಥಾ, ಯಂತ್ರ ದಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಅವರು ಬಹು ವಿಶೇಷವಾದ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಟಿ ಪ್ಯಾಕಿನಲ್ಲೇ ಕಳುಹಿಸಿಕೊಡುವರು

ಕಾಗದಗಳನ್ನು ಇಂಗ್ಲೀಷಿನಲ್ಲೇ ಬರೆಯಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—8

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ ನಿಂದ ಈ ಲೈನಿನ ವರಮಾನ ಶೇಕಡ ೭ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಈ ಕಂಪೆನಿಯ ಷೇರುಗಳನ್ನು ಕಂಪನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು ಸದರಿ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಡ್ಮಿಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಿಗಿನಲ್ಲಿ ಮುಜರೆ ಹಾಕಲ್ಪಡುವದು.

(ಸ್ಹಿ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ,
ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ.

ನಮ್ಮ ಚಂದಾದಾರರಿಗೆ.

"ವೃತ್ತಾಂತ ಪತ್ರಿಕೆ"ಯ ಹೊಸ ವರುಷವು ಪ್ರಾರಂಭವಾಗಿರುವುದರಿಂದ ನಮ್ಮ ಏಜಂಟರ ಮೂಲಕ ಪತ್ರಿಕೆಗಳನ್ನು ಪಡೆಯತಕ್ಕವರೆಲ್ಲಾ ದಯವಿಟ್ಟು ಮುಂಗಡವಾಗಿ ಏಜಂಟರಿಗೆ ಚಂದಾ ಪಾವತಿಮಾಡಬೇಕಾಗಿದೆ. ಎಂತಲೂ ಅವರಿಂದ ಸರಿಯಾದ ರಶೀತಿ ಪಡೆಯದಿದ್ದವರಿಗೆ ಪತ್ರಿಕೆ ಕೊಡಲು ನಮ್ಮ ಏಜಂಟರಿಗೆ ಅಧಿಕಾರವಿಲ್ಲವಾಗಿದೆ ಎಂತಲೂ ಈ ಮೂಲಕ ತೃತಪಡಿಸುತ್ತೇವೆ.

ಮ್ಯಾನೇಜರ್

ಪರಿಮಳ ನಶ್ಯಪುಡಿ

88-3

ಪರಿಮಳ ನಶ್ಯದಪುಡಿ ಡಬ್ಬಿ ೧ ಕೆ.	0—9—0
ಭಾಂಗಿ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ೧ಕ್ಕೆ.	0—6—0
ಭಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ದಂತರೋಗ, ಶಿರೋವ್ಯಾಧಿ ಇವುಗಳನ್ನು ತಪ್ಪನೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ. ಪ್ರತಿ ೧ ಡಬ್ಬಿಯಲ್ಲಿ ೯ ತೊಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳ್ಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ

ವಿಳಾಸ:—ಮಾನೇಜರ್, ಧರ್ಮ ವೈದ್ಯಶಾಲಾ,

69 ಬ್ರಾಡ್‌ವೇ ಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಇಮಿಟೇಷನ್ ವಜ್ರದ ಹರಳನ್ನು ತಯಾರಿಸಿದ ಹರಳು ಗುಂಡಿ

84 4

ಇದೊಂದು ಆಶ್ಚರ್ಯಕರವಾದ ನಿರ್ಮಾಣದ ಹರಳು ಗುಂಡಿ

ಕ್ರಯ ಸೆಟ್ ೧ಕ್ಕೆ ರೂಪಾಯಿ ೧—೦—೦



ನವರತ್ನಗಳೊಳಗೆ ಶ್ರೇಷ್ಠವಾದ ವಜ್ರದ ಆಭರಣವು ಸಕಲರಿಗೂ ಸಾಧ್ಯವಿಲ್ಲದ್ದೇ ಇದ್ದಾಗ್ಯೂ ಅಮೇರಿಕಾ ದೇಶದವರು ಬಂದ ವಜ್ರಕ್ಕೆ ಸಮಾನವಾದ ಪ್ರತಿರೂಪ ವಜ್ರವನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಂಡ್) ಎಂಬ ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಹರಳು ಗುಂಡಿಗಳನ್ನು ತಯಾರಿಸಲ್ಪಟ್ಟಿರುತ್ತವೆ. ಇದರ ಪ್ರಭಾವವು ದೀಪದ ಬೆಳಕಿಗೆ ಬೆಂಕಿಯಂತೆ ಥಳಥಳಿಸುವದಲ್ಲದೆ ವಜ್ರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇದನ್ನು ಒಂದು ಸೆಟ್ಟು ತರಿಸಿ ಪರೀಕ್ಷಿಸಿದರೆ ಇದರ ನಿಜಸ್ಥಿತಿ ಗೊತ್ತಾಗುತ್ತೆ.

ಜರಮನ್ ಸಿಲವರ್ ಘುಟ್ಟಿ ಕಾಲಕಡಗ.

ಅನೇಕರು ಸುಲಭಕ್ರಯದಲ್ಲಿ ತಯಾರಿಸಿ ಕಳಿಸಬೇಕೆಂದು ಕೋರಿದ್ದ ಸಕಲರಿಗೂ ಉಪಯೋಗವಾಗುವ ಹಾಗೆ ಇರಬೇಕೆಂಬುವ ಅಭಿಪ್ರಾಯದಿಂದ ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ಕಂಬಿ ಮತ್ತು ತಗಡುಗಳನ್ನು ತರಿಸಿ ಅವುಗಳಿಂದ ಸಕಲ ಆಭರಣಗಳನ್ನು ತಯಾರಿಸುತ್ತಲಿದ್ದೇವೆ. ಇವುಗಳ



ಬೆಲ್ಲಾ ರಂಗು ಎಷ್ಟು ವರುಷಗಳಾದರು ಕೆಡಲಾರದು. ಕೆಳಗೆ ನಮೂದಿಸಿದ ಮೇರಿಗೆ ಈ ಕಾಲ ಕಡಗಗಳನ್ನು ನಾಲ್ಕು ತರಹಗಳಾಗಿ ತಯಾರಿಸಲ್ಪಟ್ಟಿರುತ್ತವೆ ಮತ್ತು ಇವುಗಳ ರಂಗು ಇತರ ಕಮ್ಮಿ ಕ್ರಯದ ಜರ್ಮನ್ ಸಿಲವರ್ ಬೆಳ್ಳಿಯ ಹಾಗೆ ಅರಿಶಿನ ಬಣ್ಣಕ್ಕೆ ತಿರಗದೆ ಸ್ವಯಂವಾದ ಬೆಳ್ಳಿಗೆ ಸಮಾನವಾಗಿ ಇರುತ್ತೆ. ಎಲ್ಲರು ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯವನ್ನೇ ಇಟ್ಟಿದ್ದೇವೆ

ನಂ	೧. ದೊಡ್ಡವರಿಗೆ	ರೂ.	೧—೧೨—೦
,,	೨. ಚಿಕ್ಕವರಿಗೆ	,,	೧—೪—೦
,,	೩. ಹುಡಿಗಿಯರಿಗೆ	,,	೦—೧೨—೦
,,	೪. ಮಕ್ಕಳಿಗೆ	,,	೦—೬—೦

ಮೈಸೂರು ದೇಶದ ಕೈಕಪ್ಪ ಬೆಲೆ ರೂಪಾಯಿ ೧—೦—೦



ಇದನ್ನು ಗಂಡಸರು ಕೈಗೆ ಹಾಕಿಕೊಳ್ಳುವ ಭಂಗಾರದ ಗಿಲೀಟಿನ ಕಂಬಿಯಲ್ಲಿ ಬಹು ಸೊಗಸಾದ ಹುರಿಗೆಂಪನ್ನು ಹಾಕಿ ನೋಟಕ್ಕೆ ಅತಿ ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇದರ ಬಣ್ಣ ಬಹಳ ಕಾಲದವರಿಗೆ ಸಲ್ಲುವಂತೆ ಹೊಸ ನಮೂನೆಯ ಲೋಹದಿಂದ ತಯಾರಿಸಿ ಭಂಗಾರದ ಗಿಲೀಟ್ ಹಾಕಲ್ಪಟ್ಟಿರುತ್ತೆ. ಇದನ್ನು ನೋಡಿದವರು ನಿಜವಾದ ಭಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುವೆಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

15 24

ಬೆನ್ನು ಒಳಗಿನಲ್ಲಿನ ನೋವು, ಕಣ್ಣುಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅವನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸುಟ್ಟದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಟಪಾಲು ಖರ್ಚು ಪ್ರಕಟ! ಟಪಾಲು ಖರ್ಚು ಪ್ರಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್
ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 1



ವಿಲಾಯತೀ ಮಸೀಗೆ ಬದಲಾಗಿ ನೂತನ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೇ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಉಪಯೋಗಿಸಿ ನೋಡಿರಿ. ೧೦೦ ಪುಡಿಕೆಗಳಿಗೆ ೧ ರೂಪಾಯಿ ಟಪಾಲು ಖರ್ಚು ಪ್ರಕಟ

ಎಸ್. ನಾಯಕ್ ಜಿ ದೀಕ್ಷಿತ, ಸ್ಟೇಶನರ, ಫೋರ್ಟ ಸಿಟಿ

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು

35 1

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಸೂಕ್ಷ್ಮ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬಿಕ್ಕಟ್ಟು ಸೇಲರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ಕ್ಷೇತ್ರೋತ್ಪತ್ತಿ, ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಬರೆಯ ಬೇಕಾದ ವಿಳಾಸ ಪತ್ತಾ ಚನ್ನಬಸಪ್ಪ ಸಣ್ಣಕ್ಕಪ್ಪ ವಾರದ, ಫೋರ್ಟು ಬ್ರಾಂಚ್ ಮುಂಬಯಿ

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

(ಸ್ಕಾಟ್ಸ್ ಇಮಲ್‌ಷನ್)

ಎ ಬೇ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕೈತ್ಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ 57 11

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಜೂನ್ ತಾ॥ ೨೧ ನೇ ಗುರುವಾರ

ವರ್ತಮಾನಪತ್ರಿಕೆಗಳಲ್ಲಿ ವ್ಯಾಪಾರಸರಕುಗಳನ್ನು ಪ್ರಕಟಿಸುವುದು

ನಮ್ಮ ಪತ್ರಿಕೆಯಲ್ಲಿ ಬೇರೆ ಬೇರೆ ಕಡೆಗಳ ವರ್ತಕರು ತಮ್ಮ ವ್ಯಾಪಾರ ಸರಕುಗಳ ಮಾರಾಟವನ್ನು ಕುರಿತು ನೋಟೀಸುಗಳೇ ಮುಂತಾದ ಪ್ರಕಟನೆಗಳನ್ನು ಛಾರ್ಜು ಕೊಟ್ಟು ಪ್ರಕಟಮಾಡುತ್ತಾರಷ್ಟೆ. ವಾಚಕರೂ ಚಂದಾದಾರರೂ ಅಂಥಾ ಸರಕುಗಳ ಯೋಗ್ಯತಾ ಅಯೋಗ್ಯತೆಗಳ ವಿಚಾರದಲ್ಲಿ ನಮ್ಮ ಮೇಲೆ ಜವಾಬ್ದಾರಿ ಮಾಡುತ್ತಾರೆ. ನಾವೇನೋ ಮೋಸಕರವಾಗಿ ಕಂಡುಬರುವಂಥಾ ಸರಕುಗಳ ಪ್ರಕಟನೆಗಳು ಈ ಪತ್ರಿಕೆಯಲ್ಲಿ ಬೀಳದಂತೆ ನಮ್ಮ ಶಕ್ತ್ಯಾನುಸಾರ ಪರಿಶೋಧನೆ ಮಾಡುತ್ತೇವೆ ಮತ್ತು ಅಂಥಾ ಅನೇಕ ಪ್ರಕಟನೆಗಳನ್ನು ನಮ್ಮ ಪತ್ರಿಕೆಯಲ್ಲಿ ಹಾಕುವುದಿಲ್ಲವೆಂದು ತಿರಸ್ಕರಿಸಿಯೂ ಇರುತ್ತೇವೆ. ಆದರೆ ಪ್ರತಿಸಂದರ್ಭದಲ್ಲೂ ಸರಕುಗಳು ವಿವರಣೆಯಲ್ಲಿ ಕಂಡಂತೆಯೇ ಒಳ್ಳೆಯವಾಗಿರುವವನ್ನು ವುದಕ್ಕೆ ನಾವು ಜವಾಬ್ದಾರರಾಗಲಾರೆವು

ಆದಾಗ್ಯೂ ಅಂಥಾ ಪದಾರ್ಥಗಳನ್ನು ತರಿಸಿಕೊಂಡು, ಆಕ್ಷೇಪಣೆ ಮಾಡಿದಲ್ಲಿ ನಾವು ಅಂಥಾ ಆಕ್ಷೇಪಣೆಗಳನ್ನು ಅಂಗಡಿ ವರ್ತಕರಿಗೆ ಕಳುಹಿಸಿ, ಅವರಿಂದ ತೃಪ್ತಿಕರವಾದ ಜವಾಬು ಬಾರದಿದ್ದಲ್ಲಿ ಅಂಥವರ ಪ್ರಕಟನೆಗಳನ್ನು ನಿಲ್ಲಿಸಿಬಿಡುತ್ತಾ ಬಂದಿದ್ದೇವೆ. ಇದಕ್ಕಿಂತಲೂ ನಾವು ಹೆಚ್ಚೇನು ಮಾಡಬಹುದೋ ಕಾಣೆವು. ಹೀಗೆ ಮಾಡುವುದರಿಂದ ಅನೇಕ ಮೋಸಕರವಾದ ಪ್ರಕಟನೆಗಳು ಈ ಪತ್ರಿಕೆಯಲ್ಲಿ ಬೀಳದಂತೆ ಅಡ್ಡಿಯಾಗಿರುವುದು

ಇದಲ್ಲದೆ ನಮ್ಮ ವಾಚಕರು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುವ ಮುಖ್ಯ ಸಂಗತಿ ಏನೆಂದರೆ—ಸರ್ವಸಾಮಾನ್ಯವಾಗಿ ಒಳ್ಳೇ ಗಡಿಯಾರ ಕೊಳ್ಳಬೇಕಾದರೆ ಅದಕ್ಕೆ ಸರಿಯಾದ ಹೆಚ್ಚು ಕ್ರಯವನ್ನೇ ಕೊಡಬೇಕು. ಎರಡು ಮೂರು ರೂಪಾಯಿಗೆ ಬರತಕ್ಕ ಚಿಕ್ಕ ಗಡಿಯಾರವಾಗಲಿ ದೊಡ್ಡ ಗಡಿಯಾರವಾಗಲಿ ಅನೇಕ ವರುಷಗಳ ತನಕ ಸರಿಯಾಗಿ ನಡೆಯುವುದೆಂದು ಹೇಳುವುದು ಸಾಧ್ಯವಲ್ಲ. ಅಗ್ಗ ಬಾಸಿಗೆ ಗೋಬರ ಕೊಂಡಂತೆಯೇ ಆದೀತು

ಅನ್ಯದೇಶ ವಾರ್ತೆಯು.

ಪ್ರಪಂಚದ ಉತ್ತರಧ್ರುವ ಪ್ರಾಂತ್ಯವನ್ನು ಹೋಗಿ ನೋಡಿಕೊಂಡು ಬರಬೇಕೆಂದು ಇದುವರೆಗೆ ಅನೇಕ ಶಾಸ್ತ್ರಜ್ಞರು ಪ್ರಯತ್ನಪಟ್ಟಿರುತ್ತಾರಾದಾಗ್ಯೂ ಅಲ್ಲಿನ ಅಪಾರವಾದ ಚಳಿಯ ದೆಸೆಯಿಂದ ಯಾರೊಬ್ಬರ ಪ್ರಯತ್ನವೂ ಸಾರ್ಥಕವಾಗದೆ ಇದೆ, ಇದಲ್ಲದೆ ಆ ಉತ್ತರ ಪ್ರಾಂತ್ಯದಲ್ಲಿ ಕಗ್ಗತ್ತಲು ಕವಿದಿರುವುದು ಮತ್ತು ರಸ್ತೆ ಮುಂತಾದ್ದೇನೂ ಇಲ್ಲ. ಮಂಜು ಗಡ್ಡೆಗಳೇ ವಿಸ್ತಾರವಾಗಿರೋಣದರಿಂದ ಅದನ್ನು ದಾಟಿಕೊಂಡು ಹೋಗುವದು ದುಸ್ಸಾಧ್ಯ. ಮತ್ತು ಇದುವರೆಗೆ ಆ ಪ್ರಾಂತ್ಯ ಹೋಗಿಬಂದವರಲ್ಲಾ ಸಾಧ್ಯವಾಗುವಷ್ಟು ದೂರವು ಹಡಗುಗಳಲ್ಲಿ ಹೋಗಿ, ಹಡಗುಗಳನ್ನು ಬಿಟ್ಟು, ನಾಯಿಗಳಿಂದ ಎಳೆಯಲ್ಪಡುವ ಗಾಡಿಗಳ ಮೇಲೆ ತಮ್ಮ ಆಹಾರಸಾಮಗ್ರಿಗಳನ್ನು ಹೇರಿ ತಾವೂ ಕುಳಿತು, ಮಂಜು ಗಡ್ಡೆಗಳ ಮೇಲೆ ಮುಂದು ಮುಂದಕ್ಕೆ ಪ್ರಯಾಣ ಮಾಡಿದರು. ಆ ಸೈಕಿ ಸಮರ್ಥರಾದ ಕೆಲವರು ಒಂದು ಗಡ್ಡೆಗಳ ಮೇಲೆ ಕಾಲ್ನಡಿಗೆಯಲ್ಲೇ ಹೋದದ್ದೂ ಉಂಟು

ಈಗ ಮಿ॥ ವೆಲ್ಲಿಂಡ್ ಎಂಬಾತನು ಅಮೇರಿಕದಿಂದ ಉತ್ತರಧ್ರುವದ ಕಡೆಗೆ ಹೋಗಿಬರಬೇಕೆಂದು ಪ್ರಯತ್ನಪಟ್ಟಿದ್ದಾನೆ. ಈತನು ಅದಕ್ಕಾಗಿ ಮಾಡಿಕೊಂಡಿರುವ ಏರ್ಪಾಡುಗಳೂ ಉಪಾಯಗಳೂ ನವೀನವಾಗಿರುತ್ತವೆ. ಈತ ಹೇಳುವುದೇನೆಂದರೆ—ನಾಯಿಗಳನ್ನು ಕರೆದುಕೊಂಡು ಹೋಗುವುದೇನೋ ನಿಷ್ಪ್ರಯೋಜನವೆಂದು ಸಿದ್ಧಾಂತವಾಗಿರುವುದು. ಆ ಪ್ರಾಂತ್ಯದ ಅಪಾರವಾದ ಚಳಿಯಲ್ಲಿ ಅವು ಕಷ್ಟಪಟ್ಟು ಸಹಿಸಲಾರದೆ ಸತ್ತುಹೋಗುವವು. ಇದಕ್ಕೋಸ್ಕರ ಆತನು ಎರಡು ಭಾಗಗಳುಳ್ಳ ದೊಡ್ಡದಾದ ಒಂದು ವಿಮಾನವನ್ನು (ಆಕಾಶಬುಟ್ಟಿ) ಕಟ್ಟುತ್ತಿರುವನು. ಅದರಲ್ಲಿ ಬುಟ್ಟಿ ಎಂಬ ಮೊದಲನೆ ಭಾಗವು ಒಂದು ತರಹಾ ಚಟ್ಟದೋಪಾದಿಯಲ್ಲಿ ಎರಡು ಕೊನೆಗಳಲ್ಲೂ ಚೂಪಾಗಿ ಮೊನೆಯಾಗಿರುವುದು. ಅದರ ಉದ್ದ ೧೬೦ ಅಡಿ, ಅಗಲ ೫೦ ಅಡಿ. ಇಂಥಾ

ಬುಟ್ಟಿಯ ಕೆಳಗಡೆ ಎರಡನೇ ಭಾಗವಾದ ತೊಟ್ಟಿಲು ನೇತು ಹಾಕಿದಂತೆ ಕಟ್ಟಲ್ಪಡುತ್ತದೆ ಇದರಲ್ಲಿ ಇಂಜನ್ (ಯಂತ್ರ) ಇರುವುದು. ಪೆಟ್ರೋಲ್ ಎಂಬ ತೈಲವನ್ನು ಶಾಖ ಉಪಯೋಗಿಸುವುದರಿಂದ ಯಂತ್ರವು ಕೆಲಸ ಮಾಡಲಾರಂಭಿಸಿ, ಅದಕ್ಕೆ ಜಂಟಿಸಿರುವಂಥಾ ಬೀಸಣಿಗೆಗಳೋಪಾದಿಯಲ್ಲಿರುವ ದೊಡ್ಡ ದೊಡ್ಡ ಚಕ್ರಗಳನ್ನು ಕ್ರಮವಾಗಿ ಗರಗರನೆ ಸುತ್ತುವಂತೆ ಮಾಡುತ್ತವೆ ಹೀಗೆ ಚಕ್ರಗಳು ಸುತ್ತೋಣದಿಂದ ವಿಮಾನವು ಅಂತರಿಕ್ಷದಲ್ಲಿ ಮುಂದು ಮುಂದಕ್ಕೆ ಚಲಿಸಿದ ನುಗ್ಗಿ ಹೋಗುವುದು. ಈ ವಿಮಾನದಲ್ಲಿ ಕುಳಿತು ಪ್ರಯಾಣ ಮಾಡತಕ್ಕ ನಾಲ್ಕು ಮಂದಿಯು ಕ್ಷಣ ಇಬ್ಬಿಬ್ಬರು ಒಂದೊಂದು ಸಲ ಪಾಳಿಗೆ ಕೆಲಸ ಮಾಡುವುದಕ್ಕೆ ಅನುಕೂಲಿಸುವಂತೆ ಅದರಲ್ಲಿ ಎರಡು ಮಂಚಗಳನ್ನು ಹಾಕಿಕೊಳ್ಳುವರು ಒಂದು ವೇಳೆ ಈ ವಿಮಾನದಲ್ಲಿ ಏನಾದರೂ ಹೆಚ್ಚು ಕಡಿಮೆ ಉಂಟಾಗಿ ಅದು ನಡೆಯದೆ ಅಸ್ಥಿರವಾಗುವುದಾದರೆ ಈ ಪ್ರಯಾಣವು ನಿಂತು ಹೋಗದಂತೆ ಅವರು ತಮ್ಮ ಸಂಗಡ ಮಂಜು ಗಡ್ಡೆಗಳ ಮೇಲೆ ಹೋಗುವಂಥಾ ಎರಡು ಗಾಡಿಗಳನ್ನೂ ತೆಗೆದುಕೊಂಡು ಹೋಗುತ್ತಾರೆ ಈ ಗಾಡಿಗಳಾದರೋ ನಾಯಿಗಳು ಎಳೆಯ ತಕ್ಕವುಗಳಲ್ಲ, ಮೇಲ್ಕಂಡ ಪೆಟ್ರೋಲ್ ಎಂಬ ತೈಲಯನ್ನು ಶಾಖ ಉಪಯೋಗದಿಂದಲೇ ಅವು ಓಡುವಂತೆ ಅವುಗಳಲ್ಲಿ ಯಂತ್ರಗಳನ್ನಿಟ್ಟು ತಯಾರು ಮಾಡುವರು

ಮಿ॥ ವೆಲ್ಮೆಂಡ್ ಎಂಬಾತನು ಈ ಪ್ರಕಾರ ಸನ್ನಾಹ ಮಾಡಿಕೊಂಡು ಉತ್ತರಧ್ರುವದ ಕಡೆ ಪ್ರಯಾಣ ಹೊರಡುವವನಾಗಿದ್ದಾನೆ ಆದರೆ ಇದಕ್ಕೆ ಮೊದಲೇ ಆಂಡ್ರೆ ಎಂಬಾತನು ಆಕಾಶಬುಟ್ಟಿಯಲ್ಲಿ ಆ ಪ್ರಾಂತ್ಯಕ್ಕೆ ಪ್ರಯಾಣಮಾಡಿಕೊಂಡು ಹೋದನು ಎರಡು ಮೂರು ವರುಷಗಳ ತನಕ ಆತನೇನಾದನೆಂಬುದೇ ತಿಳಿಯದೆ ಕಡೆಗೆ ಆತನ ಆಕಾಶ ಬುಟ್ಟಿಯ ಚೂರುಗಳು ಸಿಕ್ಕಿದ್ದರಿಂದ ಆತನು ಎಲ್ಲೋ ಮೃತಪಟ್ಟನೆಂದು ಗೊತ್ತಾಯಿತು ಈಗ ಪ್ರಯಾಣ ಮಾಡುವಂಥಾ ಮಿ॥ ವೆಲ್ಮೆಂಡನಿಗೂ ಅಂಥಾ ಗತಿಯೇ ಎಲ್ಲಿ ಪ್ರಾಪ್ತವಾಗುವುದೋ ಎಂಬ ಸಂಶಯ ಉಂಟಾಗಿದೆ ಆದರೂ ಈತನು ತನ್ನ ಉದ್ದೇಶವನ್ನು ನೆರವೇರಿಸಿಕೊಂಡು ಸುಖದಿಂದ ವಾಪಸು ಬರಲೆಂದು ಹಾರೈಸುತ್ತೇವೆ

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ನಾಳೆ ಸೋಮವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವರೆಂದು ವರ್ತಮಾನವಿದೆ.

****

ದಿವಾನರವರೂ, ಕೌನ್ಸಿಲ್ ಮೆಂಬರುಗಳೂ ಸೆಕ್ರೆಟರಿಗಳ ಸಮೇತ ಕಳೆದ ವಾರ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು.

****

ಛೀಫ್ ಕೋರ್ಟ್ ಜಡ್ಜರಾದ ಮಿ॥ ಎ ಇ ಸ್ಟೀಲಿಯವರು ವಾಪಸು ಬೆಂಗಳೂರಿಗೆ ಬಂದು ಕೋರ್ಟಿನಲ್ಲಿ ಮೊನ್ನೆ ಸೋಮವಾರದಿಂದ ಮೊಕದ್ದಮೆಗಳನ್ನು ಫೈಸಲ್ ಮಾಡುತ್ತಿದ್ದಾರೆ.

****

ಇಲ್ಲಿನ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಮೊನ್ನೆ ಶನಿವಾರ ದಿವಾನರವರನ್ನು ತಮ್ಮ ಕ್ಲಬ್ಬಿಗೆ ಕರೆದು, ಸಂಗೀತ ಮೊದಲಾದ್ದನ್ನು ಏರ್ಪಡಿಸಿ, ಅವರನ್ನು ಸಂತೋಷ ಪಡಿಸಿದರು

****

ಕಳೆದ ವಾರ ಹೆಗ್ಗಡದೇವನ ಕೋಟೆ ಕಡೆ ಶಿಕಾರಿ ಮಾಡುವುದಕ್ಕಾಗಿ ದಯಮಾಡಿದ್ದ ಶ್ರೀಮನ್ ಯುವರಾಜರವರು ನೆನ್ನೆ ತಮ್ಮ ವಿದ್ಯಾಗುರುಗಳ ಸಮೇತ ವಾಪಸು ರಾಜಧಾನಿಗೆ ಬಂದು ಸೇರಿದರು.

****

ದಿವಾನ್ ಮಿ॥ ಮಾಧವರಾಯರು ಮೊನ್ನೆ ಶುಕ್ರವಾರದ ದಿನ ಚಾಮುಂಡಿ ಬೆಟ್ಟಕ್ಕೆ ಹೋಗಿದ್ದು, ದೇವಸ್ಥಾನದಲ್ಲಿ ಪೂಜೆ ಅಭಿಷೇಕ ಉತ್ಸವಾದಿಗಳನ್ನೂ ಸಂತರ್ಪಣೆಯನ್ನೂ ಮಾಡಿಸಿದರು ಅವರ ಸಂಗಡ ಬಹಳ ಮಂದಿ ಅಧಿಕಾರಿಗಳು ಹೋಗಿ ಬಂದರು.

****

ಬೆಂಗಳೂರು ದಂಡಿನಲ್ಲಿ ಡಿಸ್ಟ್ರಿಕ್ಟ್ ಜಡ್ಜಿಯಾಗಿರುವ ಮಿ॥ ಪಿ. ಎಸ್. ಕೃಷ್ಣರಾಯರನ್ನು ಮೈಸೂರು ಸರ್ಕಾರದವರು ಬೆಂಗಳೂರು ಛೀಫ್ ಕೋರ್ಟ್ ಜಡ್ಜಿಯ ಕೆಲಸಕ್ಕೆ ನೇಮಕಮಾಡಿಕೊಳ್ಳಬಹುದೆಂದು ಇಂಡಿಯಾ ಗವರ್ನಮೆಂಟಿನವರು ಸಮ್ಮತಿಪಟ್ಟಿದ್ದಾರೆ

****

ಕೊಡಗಿನ ಸಬ್ ಜಡ್ಜರಾದ ಮಿ॥ ರಾಮೈಯ್ಯ ಪುಂಜರವರನ್ನು ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಜಡ್ಜಿ ಕೆಲಸಕ್ಕೂ, ರೆಸಿಡೆಂಟರ ಕೋರ್ಟಿನ ಜುಡಿಷಲ್ ರಿಜಿಸ್ಟ್ರಾರ್ ಮಿ॥ ಎಚ್. ಚಿಕ್ಕಯ್ಯನವರನ್ನು ಕೊಡಗಿನ ಸಬ್ ಜಡ್ಜಿ ಕೆಲಸಕ್ಕೂ ಇಂಡಿಯಾ ಗವರ್ನಮೆಂಟಿನವರು ನೇಮಿಸಿರುತ್ತಾರೆ.

****

ರಾಜಧಾನಿಯ ಸಿವಿಲ್ ಸರ್ಜನರಾದ ಡಾಕ್ಟರ್ ಪಿ. ಎಸ್. ಅಚ್ಯುತರಾಯರನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಕೆಲಸಕ್ಕೂ, ಡಾಕ್ಟರ್ ಟಿ ಎಸ್ ನಂಜಪ್ಪನವರನ್ನು ಮೈಸೂರು ಸಿವಿಲ್ ಸರ್ಜನ್ ಕೆಲಸಕ್ಕೂ ಸರ್ಕಾರದವರು ಬದಲಿ ಜೊತೆ ವರ್ಗ ಮಾಡಿದ್ದಾರೆ

****

ಇತರ ಕಡೆಗಳಿಂದ ರಾಜಧಾನಿಗೆ ಬಂದು ಮಹಾರಾಣಿಯವರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವಂಥ ಹುಡುಗಿಯರಿಗೂ ಸ್ತ್ರೀಯರಿಗೂ ಅನುಕೂಲವಾಗುವಂತೆ ಸರ್ಕಾರದವರು ಒಂದು ಸ್ಟೂಡೆಂಟ್ಸ್ ಹೋಮನ್ನು (ವಿದ್ಯಾರ್ಥಿನಿಯರ ನಿಲಯವನ್ನು) ಕಟ್ಟಿಸುವವರಾಗಿದ್ದಾರೆ. ಈ ಕಟ್ಟಡವು ಬರುವ ವರುಷ ಸಿದ್ಧವಾಗಬಹುದೆಂದು ಕಾಣುವುದು

ಮೊದಲನೇ ಅ॥ ರೆಸಿಡೆಂಟರಾದ ಮೇ॥ ಆರ್ ಸಿ. ಮಾಸ್‌ಕಿಂಗ್ ಯವರು ರಜಾ ಪಡೆದು ೬ ತಿಂಗಳಲ್ಲಿಯೇ ಶೀಮೆಗೆ ಪ್ರಯಾಣ ಮಾಡುವರೆಂತಲೂ, ಅವರ ಕೆಲಸಕ್ಕೆ ಇಂಡಿಯಾ ಗವರ್ನಮೆಂಟಿನ ಫಾರಿನ್ ಇಲಾಖಾ ಅ॥ ಸೆಕ್ರೆಟರಿ ಮಿ॥ ಇ ಎಚ್ ಕೀಲೀ, ಎಂ ಎ, ಐ. ಸಿ. ಎಸ್. ಯವರು ನೇಮಕವಾಗಿ ಬೆಂಗಳೂರಿಗೆ ಬರುತ್ತಾರೆಂತಲೂ ತಿಳಿಯುವುದು.

****

ಮಿ॥ ಎಂ. ಸಂಜರಾಜೇ ಅರಸಿನವರ ಕುಮಾರನಿಗೆ ಮಿ॥ ಪಳವಾಯ ದೇವರಾಜೇ ಅರಸಿನವರ ಕುಮಾರ್ತೆಯನ್ನು ಕೊಟ್ಟು ವಿವಾಹವಾಯಿತಷ್ಟೆ. ಈ ಉತ್ಸವದ ನಿಮಿತ್ತ ಮಿ॥ ಕಾಂತರಾಜೇ ಅರಸಿನವರು ಶ್ರೀಮನ್ಮಹಾರಾಜರವರನ್ನೂ ರಾಜವರ್ಗದವರನ್ನೂ ತಮ್ಮ ಭವನಕ್ಕೆ ಕರೆದು, ನೆನ್ನೆ ಪಾದಪೂಜೆ ಬಿತ್ತರ ಆರತಕ್ಷತೆಗಳನ್ನು ಬೆಳಸಿದರು

****

ರಾಜಧಾನಿಯ ಪೋಲೀಸ್ ಹೆಡ್ ಕ್ವಾರ್ಟರ್ಸ್ ಇನ್ಸ್ಪೆಕ್ಟರ್ ಮೇ॥ ವಿ. ರಾಜಗೋಪಾಲಾಚಾರ್ಯರಿಗೆ ಹೊಳಲ್ಕೆರೆ ತಾಲ್ಲೂಕಿನ ಅಮಲ್ದಾರಿ ಕೆಲಸ ನೇಮಕವಾಯಿತೆಂದು ತಿಳಿದು ಬಂದಿದೆ ಆ ತಾಲ್ಲೂಕಿನ ಪ್ರಜೆಗಳೂ ಇವರೇ ತಮ್ಮ ಅಮಲ್ದಾರರಾಗಿ ಬರಬೇಕೆಂದು ಕುತೂಹಲಪಡುತ್ತಿದ್ದರು ಅವರ ನಿರೀಕ್ಷೆಯು ನೆರವೇರುವಂತಿದೆ ಎಂದು ಕೇಳಿ ಸಂತೋಷ ಪಡುತ್ತೇವೆ

****

ರಾಜಧಾನಿಯಲ್ಲಿ ನೀರಿನ ಕಷ್ಟ ತಪ್ಪಲಿಲ್ಲ. ಬಟ್ಟೆಬರೆಗಳನ್ನು ಒಗೆದುಕೊಳ್ಳುವುದಕ್ಕೆ ಮಳೆ ಇಲ್ಲದೆ ಕೆರೆಗಳಿಗೆ ನೀರು ಬರಲಿಲ್ಲ. ಸ್ನಾನಪಾನ ಆದಿಗೆ ಪಮುಂತಾದ್ದಕ್ಕೆ ಬೇಕಾಗುವಷ್ಟು ನೀರು ದೊರಕುವುದಿಲ್ಲ. ಪ್ರಜೆಗಳು ನೈರ್ಮಲ್ಯವನ್ನು ಹ್ಯಾಗೆ ಕಾಪಾಡಿಕೊಳ್ಳಬಹುದೋ ನಾವು ಕಾಣೆವು. ಇಂಥಾದ್ದರಲ್ಲಿ ಸಾಂಕ್ರಾಮಿಕ ರೋಗಗಳು ಹುಟ್ಟದೆ ಇರುವುದು ಆಶ್ಚರ್ಯವಾಗಿದೆ

****

ಪ್ರಿನ್ಸ್ ಆಫ್ ವೇಲ್ಸ್‌ರವರು ದಯಮಾಡಿದ್ದಾಗ್ಗೆ ಆನೆಗಳನ್ನು ಹಿಡಿದ ಸಂದರ್ಭದಲ್ಲಿ ಫೀಲ್ಡ್ ಇನ್ಸ್ಪೆಕ್ಟರ್ ಊನೂ ವಿಜಯಾ ಯವರು ಬಹಳ ಮೊಹನತ್ತು ಮಾಡಿದ್ದರಿಂದ ಅವರ ನೌಕರಿ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಬಹಳ ಸಂತೋಷ ಪಟ್ಟು, ಅವರಿಗೆ ಇದ್ದ ೩೦ ರೂಪಾಯಿ ತಲಬನ್ನು ೧೦೦ ರೂಪಾಯಿಗೆ ಬಡ್ತಿ ಮಾಡಿದ್ದಲ್ಲದೆ ೧,೦೦೦ ರೂಪಾಯಿ ಬಹುಮಾನವನ್ನು ದಯಪಾಲಿಸುವಂತೆ ಸ್ಯಾಂಕ್ಷನ್ ಮಾಡಿದಾರೆ.

****

ಮೈಸೂರು ಸಂಸ್ಥಾನಾವಳಿ ಪ್ರತಿಒಂದು ಗ್ರಾಮದ ಪಟೇಲಿ ಕೆಲಸ ನೋಡುವ ಗ್ರಾಮ ನೌಕರನೂ ಲೈಸೆನ್ಸ್ ಇಲ್ಲದೇನೇ ಒಂದೊಂದು ಬಂದೂಕನ್ನು ಇಟ್ಟುಕೊಂಡಿರಬಹುದೆಂತಲೂ, ಹೆಚ್ಚಾಗಿ ಬಂದೂಕುಗಳನ್ನಿಟ್ಟುಕೊಳ್ಳಬೇಕಾದ ಸಂದರ್ಭವಿದ್ದರೆ ಅಂಥಾ ಪ್ರತಿ ಒಂದಕ್ಕೂ ಇತರ ಪ್ರಜೆಗಳಂತೆ ಅರ್ಜಿಕೊಟ್ಟು ಲೈಸೆನ್ಸು ಪಡೆದುಕೊಳ್ಳಬಹುದೆಂತಲೂ ಗವರ್ನಮೆಂಟಿನವರು ಇಶ್ತಿಹಾರವನ್ನು ಈ ವಾರದ ಗೆಜೆಟ್ಟಿನ ಮೂಲಕ ಪ್ರಕಟಿಸಿರುತ್ತಾರೆ.

****

ಮೈಸೂರಿಗೂ ಬೆಂಗಳೂರಿಗೂ ಹೋಗಿ ಬರುತ್ತಿರುವ ರೈಲ್ ಗಾಡಿಗಳು ಕಾಲಕ್ಕೆ ಸರಿಯಾಗಿ ಬಂದು ಊಟವದು ಅಪರೂಪವಾಗುತ್ತಿದೆ ಇದರಿಂದ ರೈಲ್ ಕಂಪನಿಯವರು ಗಾಡಿ ಬಂದು ಹೋಗುವ ಕಾಲಗಳನ್ನು ಗೊತ್ತು ಮಾಡಿರುವದು ನಿಷ್ಪ್ರಯೋಜನವಾಗಿದೆ ಎಂತಲೂ ಪ್ರಯಾಣಿಕರಿಗೂ ಅಂಚೆಗೂ ತುಂಬಾ ಅನಾನುಕೂಲವಾಗಿದೆ ಎಂತಲೂ ಜನರು ಗೊಣಗುಟ್ಟುತ್ತಿದ್ದಾರೆ ಆದಕಾರಣ ಈ ವಿಷಯಕ್ಕೆ ರೈಲ್ವೆಯವರು ಗಮನಕೊಟ್ಟು ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇವೆ.

****

ಕಳೆದ ಶನಿವಾರ ಅರಮನೆ ಆಫೀಸರ್ ಮಿ॥ ಬಿ ರಾಮಕೃಷ್ಣರಾಯರು ರಾಮಾಯಣದಲ್ಲಿ ಕಂಡ ಸ್ತ್ರೀಯರ ಸ್ಥಿತಿಗತಿ ಅವರ ಗುಣ ನಡತೆ ಮುಂತಾದ್ದನ್ನು ಕುರಿತು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಉಪನ್ಯಾಸ ಮಾಡಿದರು ದಿವಾನ್ ಮಿ॥ ಮಾಧವರಾಯರು ಸಭೆಯಲ್ಲಿ ಅಗ್ರಾಸನವನ್ನು ವಹಿಸಿ, ಉಪನ್ಯಾಸಕರು ತಿಳಿಸಿದ ವಿಷಯಗಳು ಬಹು ಸ್ವಾರಸ್ಯವಾದವುಗಳೆಂದು ಹೇಳಿ ಅವರನ್ನು ವಂದಿಸಿದರು ಅರಸುಗಳೂ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಬಹು ಮಂದಿ ಹಾಜರಾಗಿದ್ದರು

****

ಮೈಸೂರು ಗೌವರ್ನಮೆಂಟಿನವರು ಮಳೆ ಕಡಿಮೆಯಾಗಿ ನೀರಿಗೆ ತುಂಬಾ ಕಷ್ಟವಾಗಿರುವುದನ್ನು ನೋಡಿ, ಚಿತ್ರದುರ್ಗದ ಡಿಸ್ಟ್ರಿಕ್ಟಿಗೆಲ್ಲಾ ೧೯೦೫—೦೬ ನೆ ಸಾಲಿನ ಹುಲ್ಬನ್ನಿ ಹೊಬಳಗನ್ನು ಸಂಪೂರ್ಣವಾಗಿ ರಿಮಿಷನ್ ಮಾಡಿದ್ದಾರೆ. ಇದಲ್ಲದೆ ಚಿತ್ರದುರ್ಗ, ಚಳ್ಳಕೆರೆ, ಹೊಸದುರ್ಗ, ದಾವಣಗೆರೆ, ಜಗಲೂರು, ಹರಿಹರ, ಈ ತಾಲ್ಲೂಕುಗಳಲ್ಲಿ ೧೯೦೫—೦೬ ನೆ ಸಾಲಿನ ಬುಷ್ಕಿ ಜಮೀನುಗಳ ಕಂದಾಯಗಳನ್ನು ಮೇ ಗುಪ್ತಿ ಲಾಗಾಯಿತು ನಾಲ್ಕು ಕಿಸ್ತುಗಳಲ್ಲಿ ವಸೂಲ್ಮಾಡತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ. ಈ ಹುಕುಮು ಅನ್ವಯವಾಗುವ ಹೋಬಳಿಗಳ್ಯಾವುವೆಂದರೆ—ಚಿತ್ರದುರ್ಗ, ಹಿರೇಗುಂಟನೂರು, ಭರಮಸಾಗರ, ತುರುವನೂರು, ಚಳ್ಳಕೆರೆ, ನಾಯಕನ ಹಟ್ಟಿ, ಬೊಡಿಹಾಳ, ದಾವಣಗೆರೆ, ಆದವಿ, ಜಗಲೂರು, ಹರಿಹರ, ಮಲೇಬೆನ್ನೂರು.

****

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರು ವೆಸ್ಲಿಯನ್ ಹೈಸ್ಕೂಲಿನಲ್ಲಿ ನಡೆದ ಬಹುಮಾನ ಸಭೆಯಲ್ಲಿ ಬ್ರಿಟಿಷ್ ರೆಸಿಡೆಂಟ್ ಮಿ॥ ಪ್ರೇಸರ್ ಯವರು ಅಗ್ರಾಸನವನ್ನು ವಹಿಸಿ, ತೇರ್ಗಡೆ ಹೊಂದಿದ ಬಾಲಕರಿಗೆ ಬಹುಮಾನಗಳನ್ನು ಕೊಟ್ಟು, ಸಭಿಕರನ್ನು ಕುರಿತು ಹೇಳಿದ ಮುಖ್ಯಾಭಿಪ್ರಾಯವೇನೆಂದರೆ—ತಂದೆತಾಯಿಗಳೂ ಪೋಷಕರೂ ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದ ಮಾತ್ರಕ್ಕೇ ಕೃತಕೃತ್ಯರಾದೆವೆಂದು ಈ ದೇಶದಲ್ಲಿ ಊಹಿಸುತ್ತಾರೆ. ವಿಲಾಯತಿಯಲ್ಲಿ ಅಂಥಾ ಪೋಷಕರೂ ವಿದ್ಯಾಬೋಧಕರೂ ಆಗಾಗ್ಗೆ ಕಲೆತು ಮಕ್ಕಳ ಅಭಿವೃದ್ಧಿಯ ವಿಚಾರದಲ್ಲಿ ಚರ್ಚೆಮಾಡುವುದುಂಟು. ಈ ಕಡೆ ಅಂಥಾ ಪದ್ಧತಿಯೇ ಕಾಣುವುದಿಲ್ಲ ಇನ್ನು ಮುಂದಾದರೂ ಇಲ್ಲಿನವರೂ ಅದೇ ಪದ್ಧತಿಯನ್ನು ರೂಢಿಯಲ್ಲಿಟ್ಟುಕೊಂಡರೆ ಉಭಯರ ಉದ್ದೇಶಗಳೂ ಸಾರ್ಥಕವಾಗಿ ನೆರವೇರಲು ಅಡ್ಡಿಯಿಲ್ಲ ಎಂಬುದೇ

ಬಹುಮಾನದ ಮೇಲಾಟವು.

ನಮ್ಮ ಪತ್ರಿಕೆಯ ಪುರಾಟವು ಅಭಿವೃದ್ಧಿಮುಖವಾಗಿಯೇ ಇರುವುದರಿಂದ ಸಂತೋಷಿಸುವುದಲ್ಲದೆ ಈ ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಸಕಲ ಪ್ರಜೆಗಳ ಸದ್ಗುಣಾಭಿವೃದ್ಧಿಗೂ ಬುದ್ಧ್ಯಭಿವೃದ್ಧಿಗೂ ಇದೊಂದು ಉಪಕರಣವಾಗಿರಬೇಕೆಂಬುದೇ ನಮ್ಮ ಉದ್ದೇಶವು. ಅಸತ್ಯವನ್ನೂ ಪಕ್ಷಪಾತತೆಯನ್ನೂ ದೂರೀಕರಿಸಿ ಸಮಸ್ತರ ಶ್ರೇಯಸ್ಸನ್ನು ಕೋರುವುದೇ ನಮ್ಮ ಕರ್ತವ್ಯವು. ಇದುವರೆಗೂ ಈ ಪತ್ರಿಕೆಯು ಜನರಂಜಿತವಾಗಿದ್ದುದಕ್ಕಿಂತಲೂ ಇನ್ನು ಮೇಲೆ ಹೆಚ್ಚಾಗಬೇಕೆಂಬ ಅಭಿಪ್ರಾಯದಿಂದ ನಾವು ಮುಂದೆ ವಾರವಾರವೂ ನಮ್ಮಲ್ಲಿಗೆ ಬರುವಂಥ ಅತ್ಯುತ್ತಮವಾದ ವರ್ತಮಾನಸಂಗ್ರಹಕ್ಕೆ ಎರಡು ರೂಪಾಯಿ ಬಹುಮಾನವನ್ನು ಕೊಡುವೆವು ಇದರ ನಿಬಂಧನೆಗಳೇನೆಂದರೆ—

(೧) ಪ್ರತಿ ಮೇಲಾಟದ ಲೇಖನದ ಮೇಲೂ "ಬಹುಮಾನದ ಮೇಲಾಟ' ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟುಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧಕಾಲಮಿಗಿಂತ ಕಡಿಮೆಯಾಗಾದರೂ ಒಂದು ಕಾಲಮಿಗಿಂತ ಹೆಚ್ಚಾಗಾದರೂ ಇರಲಾಗದು. (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲಪಿರಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ ಹಣವನ್ನು ಮಣಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು.

"ವೃತ್ತಾಂತ ಬಹುಮಾನದ ಮೇಲಾಟವು"

[ಈ ಬಾತ್ಮಿಯನ್ನು ಕಳುಹಿಸಿದ ತುಮಕೂರು ವೆಸ್ಲಿಯನ್ ಮಿಷನ್ ಕೋಟೆ ಬಾಯ್ಸ್ ಸ್ಕೂಲ್ ಅ॥ ಮಾ॥ ಮ॥ ರಾ॥ ಎ. ನಾಗಯ್ಯನವರಿಗೆ ೨ ರೂ. ಬಹುಮಾನವನ್ನು ಮಣಿಯಾರ್ಡರ್ ಮೂಲಕ ಕಳುಹಿಸಿದ್ದೇವೆ]

ತುಮಕೂರು ಟವನಿಗೆ ಸೇರಿದ ದಿಬ್ಬೂರು ಗ್ರಾಮದ ಬಳಿ ಭಾವಿಯ ಅನಾಹುತವು.

ಈ ದಿಬ್ಬೂರುಗ್ರಾಮದ ಸಮೀಪದಲ್ಲಿ ಅಲ್ಲಿನ ಪಟೇಲನು ತನ್ನ ಕಬ್ಬಿನ ತೋಟದ ಜಲವಸತಿಗಾಗಿ ಒಂದು ದೊಡ್ಡ ಭಾವಿ ತೆಗೆಸುತ್ತಿರುವಾಗ ಕಳೆದ ತಾ. ೧೧ ನೇ ಸೋಮವಾರ ಒಂದು ಅನಾಹುತ ಉಂಟಾಯಿತು ಏನೆಂದರೆ, ಭಾವಿಯು ಮೂರು ನಾಲ್ಕು ಆಳುದ್ದ ಇಳಿಯುವಾಗಲೇ ಹೆಚ್ಚು ನೀರು ಸಿಕ್ಕಿದ್ದರಿಂದ ಕಲ್ಲು ಕಟ್ಟುವದಕ್ಕೆ ಅನುಕೂಲಿಸುವಂತೆ ಕಪಿಲೆ ಮೂಲಕ ನೀರನ್ನು ಮೇಲಕ್ಕೆ ಸಾಗಿಸುತ್ತಿದ್ದರು. ನೀರು ಕಮ್ಮಿಯಾದಾಗ ಎರಡು ಮೂರು ಬರಿಸೆ ಅದಿಯಿಂದ ಕಲ್ಲನ್ನು ಕಟ್ಟಿ ಇಳಿಸಿದ್ದರು ಹೀಗೆಯೇ ಮೆಲ್ಲಗೆ ಕಪಿಲೆಯನ್ನು ಇಬ್ಬರು ಹೊಡಿಯುತ್ತಿರುವಾಗ ಹೊರ್ಜೆಯು ಗಾಲಿಯನ್ನು ಬಿಟ್ಟು ಅದರ ಅಂಚಿನ ಮೇಲೆ ಬಿತ್ತು ಆಗ ತುಂಬಿದ ಬಾನಿ ಅರ್ಧಭಾವಿಯೊಳಗೆ ನಿಂತದ್ದರಿಂದ ಎತ್ತುಗಳಿಗೆ ತೊಂದರೆಯಾಗುತ್ತದೆಂದು ತಿಳಿದು ಕೆಲಸಮಾಡುತ್ತಿದ್ದ ಆ ಇಬ್ಬರೂ ಗಾಲಿಯ ಸಮೀಪಕ್ಕೆ ಬಂದು ಹೊರ್ಜೆ ಹಗ್ಗವನ್ನು ಎತ್ತಿ ಗಾಲಿಯ ಮೇಲಕ್ಕೆ ಹಾಕುತ್ತಿರುವಾಗ ತುಂಬಿದ ಬಾನಿಯು ಮತ್ತು ಇವರ ಭಾರವನ್ನು ತಡೆಯಲಾರದೆ, ಕಪಿಲೆ ಅಡಿಭಾಗದ ಮೂಕಿ ಮಣ್ಣೆಯ ಮೇಲೆ ಮಣ್ಣನ್ನು ಹೆಳ್ಳಗೆ ಹಾಕಿದ್ದರಿಂದಲೂ (ಆ ದಿನ ಬೆಳಗಿನ ಮಟ್ಟಿಗೆ ಮಳೆಯಾಗಿ ಮಣ್ಣು ನೆನದಿತ್ತು) ಆ ಎರಡು ಅಡಿಭಾಗದ ತುಂಡುಗಳು ಮೇಲೆ ನಿಂತಿದ್ದ ಇಬ್ಬರ ಸಮೇತವಾಗಿ ಹಾರಿ ಭಾವಿಯೊಳಕ್ಕೆ ಬಿದ್ದವು ಹೀಗೆ ಬಿದ್ದವರ ಪೈಕಿ ಮೊದಲು ಬಿದ್ದ ತಿಗಳರ ನರಸೈಯ ಎಂಬುವನಿಗೆ ಅದಿಯಲ್ಲಿದ್ದ ಕಲ್ಲುಗಳ ಪೆಟ್ಟು ತಗಲಿ ಶರೀರದ ನಾನಾ ಭಾಗದ ಎಲುಬುಗಳು ಮುರಿದು, ಹೊರಕ್ಕೆ ತೆಗೆದ ಎರಡು ಗಂಟೆಯೊಳಗಾಗಿ ಮೃತಹೊಂದಿದನು ಇನ್ನೊಬ್ಬನು ಪಟೇಲ ಬಂಡೆಯವನ ಮೇಲೆ ಬಿದ್ದದ್ದರಿಂದ ಕೆಲವು ಕಡೆ ಪೆಟ್ಟುಗಳು ಬಿದ್ದು ನರಳುತ್ತಿದ್ದರೂ ಪ್ರಾಣಾಪಾಯ ಉಂಟಾಗುವ ಹಾಗಿಲ್ಲ ನಾಡನೇ ದಿನ ಸರ್ಕಾರದವರು ಅಡಿಪಾಯ್ಷಿ ಮಾಡಿಕೊಂಡು ಹೋದರು. ಮೇಲ್ಕಂಡ ಅನಾಹುತವು ನಡೆದ ಅರ್ಧ ಗಂಟೆಯಲ್ಲಿ ಆ ಭಾವಿಯ ಇಕ್ಕಡೆಗಳಲ್ಲೂ ದಡವು ಕುಸಿದು ಬಹಳವಾಗಿ ಮಣ್ಣು ಬಿತ್ತು. ಆಗ ಮೊದಲಿನಂತೆಯೇ ಜನರು ಕೆಲಸ ಮಾಡುತ್ತಿದ್ದರೆ ಸುಮಾರು ಐವತ್ತು ಜನರವರಿಗೂ ಅಪಾಯವಾಗುತ್ತಿದ್ದರು. ಅಷ್ಟರೊಳಗಾಗಿ ಜನರೆಲ್ಲಾ ಮೇಲಕ್ಕೆ ಬಂದಿದ್ದರು. ಮೃತಪಟ್ಟ ನರಸೈಯ್ಯನೆಂಬುವನು ಭಾರಿ ಸಂಸಾರಿಯಾಗಿ ಸಣ್ಣಪುಟ್ಟ ಮಕ್ಕಳುಳ್ಳವನಾಗಿದ್ದನು. ಆತನ ಹೆಂಡತಿಯ ಮತ್ತು ಮಕ್ಕಳ ಆಹಾರಶೋಕವನ್ನು ಸ್ವಾಮಿಯು ನೀಗಿಸುವನಾಗಲಿ! ಅಂತು ಈ ಪ್ರಾಂತ್ಯ ಈ ವಿಧವಾದ ಅನಾಹುತವು ಜನರಲ್ಲಿ ತುಂಬಾ ದುಃಖವನ್ನೂ ವಿಸ್ಮಯವನ್ನೂ ಉಂಟುಮಾಡಿದೆ.

ಮೈಸೂರು ಹಿಂದೂ ಅನಾಥಾಲಯವು.

ದಿವಾನರವರು ದಯಮಾಡಿದ್ದು

ಕಳೆದ ಬುಧವಾರ ಬೆಳಿಗ್ಗೆ ದಿವಾನ್ ಮೆ॥ ವಿ. ಪಿ. ಮಾಧವರಾವ್, ಸಿ. ಐ. ಇ. ಯವರು ರಾಜಧಾನಿಯಲ್ಲಿರುವ ಹಿಂದೂ ಅನಾಥಾಲಯಕ್ಕೆ ದಯಮಾಡಿದರು. ಅವರ ಸಂಗಡ ಮೊದಲನೇ ಕೌನ್ಸಿಲರ್ ಮೆ॥ ಟಿ. ಆನಂದರಾಯರು, ಡೆಪ್ಯುಟಿ ಕಮೀಷನರ್ ಮೆ॥ ಎಚ್. ಎಚ್. ಸ್ವಾಕ್ನ್ಯಯವರು, ಮುಜರಾಯಿ ಸೆಕ್ರಿಟರಿ ಮೆ॥ ಎಲ್. ಅನಂತಸ್ವಾಮಿರಾಯರು, ಅರಮನೆಗೆ ಆಫೀಸರ್ ಮೆ॥ ಟಿ. ರಾಮಕೃಷ್ಣರಾಯರು, ಸರ್ಕಲ್ ಇನ್ಸ್ಪೆಕ್ಟರ್ ಮೆ॥ ಎಂ. ಶ್ರೀನಿವಾಸರಾಯರು, ಈ ಮೊದಲಾದ ಬಹು ಮಂದಿ ದೊಡ್ಡಮನುಷ್ಯರು ಹಾಜರಾಗಿದ್ದರು. ಮೆ॥ ಮಾಧವರಾಯರೇ ಮುಂತಾದವರನ್ನೆಲ್ಲಾ ಅನಾಥಾಲಯದ ಮೇಲ್ವಿಚಾರಣಾ ಕಮಿಟಿಯವರು ಎದುರುಗೊಂಡು, ಒಳಕ್ಕೆ ಕರೆದುಕೊಂಡು ಹೋಗಿ ಎಲ್ಲಾ ಭಾಗಗಳನ್ನೂ ತೋರಿಸಿ ವಿವರಿಸಿದರು. ಅನಾಥಾಲಯದಲ್ಲೇ ಇದ್ದುಕೊಂಡು ಊಟ ವಿದ್ಯಾಭ್ಯಾಸಗಳನ್ನು ಪಡೆಯುತ್ತಿರುವ ತಂದೆ ತಾಯಿಗಳೂ ಬಂಧು ಬಳಗಗಳೂ ಇಲ್ಲದ ಹುಡುಗರನ್ನು ದಿವಾನರವರು ನೋಡಿ, ಅವರ ಸ್ಥಳ ಊರು ವಿದ್ಯೆ ಮೊದಲಾದದ್ದನ್ನು ಕೇಳಿ ತಿಳಿದುಕೊಂಡು, ಸಭಾಮನೆಗೆ ದಯಮಾಡಿ ಕುಳಿತುಕೊಂಡರು. ಆಲಯದ ಸೆಕ್ರೆಟರಿ ಮೆ॥ ಕೆ. ಚಂದ್ರಶೇಖರಯ್ಯನವರು ಕಳೆದ ೧೮೯೬ ಇಸವಿಯಲ್ಲಿ ಈ ಹಿಂದೂ ಅನಾಥಾಲಯವು ಸ್ಥಾಪನೆಯಾಗಿ ಅಂದಿನಿಂದ ಇದುವರೆಗೆ ಅದರ ಅಭಿವೃದ್ಧಿಗಾಗಿ ನಡೆಸಿರುವ ವಿದ್ಯಮಾನಗಳನ್ನೆಲ್ಲಾ ದಿವಾನರಿಗೆ ಅರಿಕೆ ಮಾಡಿದರು. ಈ ಆಲಯವು ಧರ್ಮಿಷ್ಠರಾದ ಪ್ರಜೆಗಳಿಂದಲೂ ವರ್ತಕರಿಂದಲೂ ಚಂದಾ ಮೂಲಕ ನಡೆಸಲ್ಪಡುತ್ತಿದೆ ಎಂತಲೂ, ೧೯೦೪ ನೆ ಇಸವಿಯಲ್ಲಿ ಇದಕ್ಕೆ ತಿಂಗಳಿಗೆ ೫೦ ರೂಪಾಯಿನಂತೆ ಗ್ರಾಂಟು ಸ್ಯಾಂಕ್ಷನ್ ಆಗಿ ಬರುತ್ತಿದೆ ಎಂತಲೂ, ಆದರೂ ಖರ್ಚಿಗೆ ತಕ್ಕಷ್ಟು ದ್ರವ್ಯ ಒದಗದೆ ಇರೋಣದರಿಂದ ಅನೇಕ ಅನಾಥ ಹುಡುಗರನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಿಲ್ಲವಾಗಿದೆ ಎಂತಲೂ, ಹೊಸ ಕಟ್ಟಡವನ್ನು ಕಟ್ಟಿಸಿದ್ದಕ್ಕೆ ಇದುವರೆಗೆ ೧,೬೫೦ ರೂಪಾಯಿ ತನಕ ಖರ್ಚಾಗಿದ್ದರೂ ಅದನ್ನು ಪೂರೈಸುವುದಕ್ಕೆ ಇನ್ನೂ ೩೦೦ ರೂಪಾಯಿ ಬೇಕಾಗುವುದೆಂತಲೂ ತಿಳಿಸಿದರು.

ತರುವಾಯ ದಿವಾನರವರು ಎದ್ದು ಅನಾಥಾಲಯದ ಮ್ಯಾನೇಜರುಗಳನ್ನೂ ಸೆಕ್ರೆಟರಿಗಳನ್ನೂ ವಂದಿಸಿ, ಅಪ್ಪಣೆ ಕೊಡಿಸಿದ್ದೇನೆಂದರೆ- ಅನಾಥರಾದ ಮಕ್ಕಳನ್ನು ಸಾಕಿ ಅವರಿಗೆ ವಿದ್ಯೆ ಕಸಬುಗಳನ್ನು ಕಲಿಸಿ, ಸತ್ಪ್ರಜೆಗಳನ್ನಾಗಿ ಮಾಡಿ ನಿಲ್ಲಿಸುವುದು ಧರ್ಮಕಾರ್ಯಗಳಲ್ಲಿ ಪ್ರಧಾನವಾದದ್ದಾಗಿರುತ್ತದೆ. ಈ ಭಾಗವನ್ನು ಮ್ಯಾನೇಜರುಗಳು ಪುಣ್ಯವಂತರಾದ ಪ್ರಜೆಗಳ ಗಮನಕ್ಕೆ ತರಬೇಕಾದದ್ದು ಆವಶ್ಯ. ಇಂಥಾ ಧರ್ಮಕ್ಕೆ ಯಾರು ತಾನೇ ಭಾಗಿಗಳಾಗುವದಿಲ್ಲವೆನ್ನುವರು. ಇದಲ್ಲದೆ ಈ ಅನಾಥ ಮಕ್ಕಳಿಗೆ ಪ್ರೌಢವಿದ್ಯೆಯನ್ನು ಕಲಿಸುವುದು ಸಾಧ್ಯವಲ್ಲ, ಮತ್ತು ಅದು ಅಪೇಕ್ಷಣೀಯವಾದದ್ದೂ ಅಲ್ಲ. ಬಹಳ ಚುರುಕು ಬುದ್ಧಿಯುಳ್ಳಂಥಾ ಹುಡುಗರಿಗೆ ಪ್ರೌಢವಿದ್ಯೆ ಕಲಿಸಿದರೂ ಕಲಿಸಬಹುದು. ಆದರೆ ಸಾಮಾನ್ಯವಾಗಿ ಇಂಥಾ ಹುಡುಗರಿಗೆ ಸುಮಾರು ಲೋವರ್ ಸೆಕಂಡರಿ ಆಗುವ ತನಕ ವಿದ್ಯೆ ಕಲಿಸಿ, ತರುವಾಯ ಅವರನ್ನು ಯಾವುದಾದರೂ ಉಪಯುಕ್ತವಾದ ಕಸಬು ಕಲಿಯುವಂತೆ ಏರ್ಪಾಡು ಮಾಡಿ ಕಲಿಸಿಬಿಟ್ಟರೆ, ಅವರು ಸುಖವಾಗಿ ಜೀವನ ಮಾಡಿಕೊಳ್ಳುವುದಕ್ಕೆ ಸಹಾಯವಾಗುವುದು. ಅನಾಥಾಲಯದ ಉದ್ದೇಶವೂ ಮ್ಯಾನೇಜರುಗಳ ಶ್ರಮವೂ ಸಾರ್ಥಕವೂ ಆಗುವುದರಲ್ಲಿ ಸಂಶಯವಿಲ್ಲ ಎಂಬುದೇ.

ಸೆಕ್ರೆಟರಿಗಳೂ ಮ್ಯಾನೇಜರುಗಳೂ ದಿವಾನರವರು ಹೇಳಿದ ವಿವೇಕಪೂರ್ವಕವಾದ ಮಾತುಗಳನ್ನು ಕೇಳಿ, ಅವರನ್ನು ಬಹಳವಾಗಿ ವಂದಿಸಿ, ಇನ್ನು ಮುಂದೆ ಅದೇ ರೀತಿ ಮಾಡುವುದಾಗಿ ಅರಿಕೆಮಾಡಿದರು. ಕೂಡಲೇ ದಿವಾನರವರೇ ಮೊದಲಾದವರಿಗೆಲ್ಲಾ ಹಾರ ತುರಾಯಿಗಳು ಒಪ್ಪಿಸಲ್ಪಟ್ಟವು. ಸಭೆಯು ಅಲ್ಲಿಗೆ ಮುಕ್ತಾಯವಾಯಿತು.

ವೇದಗಳು ಯಜ್ಞದ ವಿಷಯ ಏನು ಬೋಧಿಸುತ್ತವೆ?

ವೇದಗಳನ್ನು ಮೂಲಭಾಷೆಯಲ್ಲಿ ಓದಿ ಗ್ರಹಿಸುವದಕ್ಕೆ ಬಹಳ ವಿದ್ಯೆಯೂ ಸಮಯವೂ ಬೇಕು. ಇದಕ್ಕೆ ತಕ್ಕಷ್ಟು ದ್ರವ್ಯ ಸಮಯಗಳನ್ನು ವೆಚ್ಚಮಾಡುವದು ಎಲ್ಲರಿಗೂ ಸಾಧ್ಯವಾದದ್ದಲ್ಲ. ಅಪರೂಪವಾಗಿ ಕೆಲವರು ಮಾತ್ರ ತಮ್ಮ ಜೀವಮಾನವ್ಯಾವತ್ತನ್ನೂ ವ್ಯಯಮಾಡಿ ಸಾಮಾನ್ಯ ಜನಗಳಿಗೆ ಅಸಾಧ್ಯವಾದ ಈ ಮಹಾ ಕೆಲಸವನ್ನು ಸಾಧಿಸಿದ್ದಾರೆ. ಇತರರು ಇಂತಹ ಮಹನೀಯರ ಅಭಿಪ್ರಾಯವನ್ನು ತಿಳಿಕೊಂಡು ತೃಪ್ತಿಪಡಬೇಕಾಗಿದೆ. ಆದರೆ ಈ ವಿದ್ವಾಂಸರು ಕೇವಲ ಸತ್ಯವಂತರೂ ನಿಷ್ಪಕ್ಷಪಾತಿಗಳೂ ಆಗಿದ್ದಾರೆಂದು ನಂಬುವದಕ್ಕೆ ನಮಗೆ ಆಧಾರವಿದ್ದರೆ ಅಂಥವರ ಅಭಿಪ್ರಾಯಗಳನ್ನು ನಾವು ಪೂರ್ಣಕೃತಜ್ಞರಾಗಿ ಸ್ವೀಕರಿಸುವೆವು. ಬೆಂಗಳೂರಿಂದ ಮೈಸೂರಿಗೆ ಕಟ್ಟಿರುವ ತಂತಿಗಳು ರೆಪ್ಪೆ ಬಡಿಯುವದರೊಳಗೆ ವರ್ತಮಾನವನ್ನು ಒಯ್ಯುವವು. ಆದರೆ ಇದು ಹ್ಯಾಗೆ ಸಾಧ್ಯವಾಗಿದೆ ಎಂದು ಅನುಭವಗ್ರಾಹ್ಯವಾಗಿ ತಿಳಿದಿರುವವರು ನೂರಕ್ಕೆ ಹತ್ತು ಮಂದಿ ಇರಬಹುದೇ? ಆದರೂ ಶಾಸ್ತ್ರಜ್ಞರು ಪರಿಶ್ರಮೆಯಿಂದ ಕಂಡುಹಿಡಿದಿರುವ ಈ ಉಪಕರಣವು ನಮಗೆ ಬಹಳ ಅನುಕೂಲವಾಗಿರುವದರಿಂದ ಅದರ ರಚನೆ ಹ್ಯಾಗೆಂದು ಚಿಂತಿಸದೆ ನಂಬುತ್ತೇವಷ್ಟೆ.

ಕಲ್ಕತ್ತನಗರದ ಯೂನಿವರ್ಸಿಟಿ ಎಂಬ ಮಹಾ ವಿದ್ಯಾನಿಲಯದಲ್ಲಿ ಗೀರ್ವಾಣಭಾಷಾ ಪರೀಕ್ಷಕರಾಗಿಯೂ ವಿದ್ವನ್ಮಂಡಲಿಯಲ್ಲಿ ಪ್ರಖ್ಯಾತರಾಗಿಯೂ ಇದ್ದ ಡಾಕ್ಟರ್ ಕಾಳಿ ಮೋಹನ್ ಬಾನರ್ಜಿ ಯವರು ವೇದಗಳನ್ನು ಶೋಧಿಸಿ ಅದರಲ್ಲಿ ಯಜ್ಞವನ್ನು ಕುರಿತು ಪ್ರಾಚೀನ ಋಷಿಗಳು ಏನು ಹೇಳಿದ್ದಾರೆಂದು ಪ್ರಕಟಿಸಿದ್ದಾರೆ. ಇವರ ಅಭಿಪ್ರಾಯವೇನೆಂದು ಸ್ವಲ್ಪ ಪರೀಕ್ಷಿಸೋಣ. ಹಿಂದೂ ಆರ್ಯರು ಜೀವಮಾನದಲ್ಲಿ ಸಂಭವಿಸಾಗುವ ದುರ್ದೆಸೆಗಳಿಂದ ಬಿಡುಗಡೆಯಾಗುವದಕ್ಕೂ ಕಾಮಿತಫಲಗಳನ್ನು ಪಡೆಯುವದಕ್ಕೂ ಯಜ್ಞವೇ ಪ್ರಾಮುಖ್ಯವಾದ ಸಂಸ್ಕಾರಸಾಧನವೆಂದು ಭಾವಿಸಿದರು. ತಕ್ಕ ರೀತಿಯಿಂದ ನೆರವೇರಿಸುವ ಯಜ್ಞವು ಲೋಕಸಾಗರದಲ್ಲಿ ಯಾನಮಾಡುತ್ತಿರುವ ಮನುಷ್ಯನನ್ನು ಪಾತಕವೆಂಬ ಸುಳಿಗುಂಡಿಗೆ ಸಿಕ್ಕದ ಹಾಗೆ ಕಾಪಾಡುವ ಭದ್ರವಾದ ದೋಣಿಯ ಹಾಗಿದೆ. ಪಾಪಪರಿಹಾರಕ್ಕೆ ಇದೇ ನಿಯಮಿತ ಮಾರ್ಗವೆಂದು ಋಗ್, ಯಜುರ್, ಸಾಮವೇದಗಳಲ್ಲಿ ಹೇಳಿದೆ. ತೈತ್ತಿರೀಯ ಬ್ರಾಹ್ಮಣದಲ್ಲಿ—ಯಜ್ಞಪಶು, ಯಜ್ಞವನ್ನರ್ಪಿಸುವವನಿಗೆ ಬದಲಾಗಿ ಅರ್ಪಿತವಾಗುತ್ತದೆ ಎಂತಲೂ, ಋಗ್ವೇದದಲ್ಲಿ ಯಜ್ಞದ ಮುಖಾಂತರವಾಗಿ ನಮ್ಮನ್ನು ಪಾಪಗಳಿಂದ ತೊಲಗಿಸಿ ಸುರಕ್ಷಿತವಾಗಿ ನಡಿಸು ಎಂಬ ಪ್ರಾರ್ಥನೆಯೂ, ಸಾಮವೇದದಲ್ಲಿ-ನಾವು ದಿವಾರಾತ್ರಿಗಳಲ್ಲಿ ಮಾಡಿದ ಪಾಪಗಳಿಗೆ ನೀನೇ ಪರಿಹಾರವಾಗಿದ್ದಿ. ನಾವು ತಿಳಿದೂ ತಿಳಿಯದೆಯೂ ಮಾಡಿದ ಪಾಪಗಳನ್ನು ಪರಿಹರಿಸೆಂದೂ ಯಜ್ಞವನ್ನು ಕುರಿತು ಹೇಳಿದೆ.

ಮತ್ತು ಯಜ್ಞವು ಮರಣವನ್ನು ನಾಶಮಾಡುವದೆಂದು ಭಾವಿಸಲ್ಪಟ್ಟಿತ್ತು. ತೈತ್ತಿರೀಯ ಆರಣ್ಯಕದಲ್ಲಿ-ಓ ಮೃತ್ಯುವೇ! ಮರಣಾಧೀನರಾದ ನಮ್ಮನ್ನು ನಾಶಗೊಳಿಸುವ ನಿನ್ನ ಅಸಂಖ್ಯೇಯವಾದ ಪಾಶಗಳನ್ನು ಯಜ್ಞದ ಅಗೋಚರವಾದ ಶಕ್ತಿಯಿಂದ ನಾವು ಬಿಡಿಸಿಕೊಳ್ಳುತ್ತೇವೆ ಎಂದು ಹೇಳಿದೆ.

ಇದಲ್ಲದೆ ಯಜ್ಞವು ಪರಲೋಕದ ಮಾರ್ಗವನ್ನು ತೆರೆಯುತ್ತದೆ, ಹ್ಯಾಗೆಂದರೆ ಪರಲೋಕದ ಭಾಗ್ಯವನ್ನು ಯಾರು ಅಪೇಕ್ಷಿಸುತ್ತಾರೋ ಅವರು ಸರಿಯಾದ ರೀತಿಯಲ್ಲಿ ಯಜ್ಞವನ್ನು ನೆರವೇರಿಸಲಿ ಎಂದು ಹೇಳಿದೆ. ಇದರಂಥಾ ಇನ್ನೂ ಅನೇಕ ಶ್ಲೋಕಗಳನ್ನು ಉದಹರಿಸಬಹುದು. ಆದರೆ ಪ್ರಕೃತಕ್ಕೆ ಇವು ಸಾಕಾಗಿವೆ.

ಆದರೆ ಯಜ್ಞವು ಪಾಪಪರಿಹಾರವನ್ನೂ ಮರಣಜಯವನ್ನೂ ನಿತ್ಯತನವಾದ ಪರಲೋಕ ಭಾಗ್ಯವನ್ನು ಉಂಟುಮಾಡುವದಕ್ಕೆ ಅಮೂಲ್ಯದ್ರವ್ಯವೆಂದು ಭಾವಿಸುವದಕ್ಕೇನು ಕಾರಣ? ಯಜ್ಞಕ್ಕೂ ಈ ಪಾರಮಾರ್ಥಿಕ ವಿಷಯಗಳಿಗೂ ಏನು ಸಂಬಂಧ? ಎಂದು ವಿಚಾರಿಸಿದರೆ—ದೈವಪುರುಷನು ಮರಣಾಧೀನರಾದ ಮನುಷ್ಯರನ್ನು ಪಾಪದಿಂದಲೂ ಮರಣದಿಂದಲೂ ಬಿಡಿಸಿಕೊಳ್ಳುವದಕ್ಕೋಸ್ಕರ ತನ್ನನ್ನು ತಾನೇ ಯಜ್ಞವಾಗಿ ಅರ್ಪಿಸುವನು. ಈ ದೈವಪುರುಷನು ಪ್ರಜೆಗಳ ಕರ್ತನಾಗಿಯೂ ಆಧಾರಕನಾಗಿಯೂ ಇರುವ ಪ್ರಜಾಪತಿಯೇ. ಈತನು ಜಗತ್ತಿಗೆ ಮುಂಚೆ ಇದ್ದನು, ಮತ್ತು ವಿಶ್ವಕ್ಕೆ ಕರ್ತನಾದ್ದರಿಂದ ವಿಶ್ವಕರ್ಮನೆಂದು ವರ್ಣಿತನಾಗಿದ್ದಾನೆ. ಈತನು ಯಜ್ಞಾರ್ಥವಾದ ಮರ್ತ್ಯದೇಹವನ್ನು ಧರಿಸಿಕೊಂಡು ಬರುವನು ಎಂಬೀ ಅಭಿಪ್ರಾಯವು ಮುಖ್ಯವಾದ ನಾಲ್ಕು ವೇದಗಳಲ್ಲಿಯೂ ದೊರೆಯುತ್ತೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಹರಿಸಬಹುದು. ತನ್ನನ್ನು ತಾನೇ ಬಲಿ ಅರ್ಪಿಸಿದ ಯಜ್ಞಕರ್ತನಾದ ದೇವರು ಯಜುರ್ವೇದದಲ್ಲಿ—ಎಲ್ಲಾ ಪ್ರಾಣಿಗಳಿಗಾಗಿಯೂ ನನ್ನನ್ನು ನಾನೇ ಅರ್ಪಿಸುತ್ತೇನೆಂದು ಹೇಳಿದನೆಂತ ಬರೆದಿದೆ. ಶತಪಥ ಬ್ರಾಹ್ಮಣದಲ್ಲಿ—ಪ್ರಜಾಪತಿಯು ಅವರಿಗೆ ಬದಲಾಗಿ ತನ್ನನ್ನೇ ಬಲಿಯಾಗಿ ಅರ್ಪಿಸಿಕೊಟ್ಟನೆಂದು ಹೇಳಿದೆ. ತೈತ್ತಿರೀಯ ಆರಣ್ಯಕದಲ್ಲಿ—ಆದಿಯಿಂದಲೂ ಇದ್ದ ಪುರುಷನನ್ನು ಅವರು ತಮ್ಮ ಯಜ್ಞಪಶುವೆಂತ ವಿಧಿಸಿದರು ಎಂತಲೂ, ಋಗ್ವೇದವು ಆತನನ್ನು ಕುರಿತು—ಆತನನ್ನು ತಾನೆ ಅರ್ಪಿಸಿದವನು ಶಕ್ತಿಯನ್ನು ಕೊಡುವವನೂ ಅಮೃತವೂ ಆಗಿದ್ದಾನೆ ಎಂತಲೂ ಹೇಳಿದೆ.

ಆದರೆ ವೇದಗಳಲ್ಲಿ ಆದರೂ ಅವುಗಳಿಂದ ಈಚೆಗೆ ಹುಟ್ಟಿರುವ ಆಗಮ ಶಾಸ್ತ್ರ ಪುರಾಣಗಳಲ್ಲಿಯಾದರೂ ದೈವಪುರುಷನು ಮಾನವರನ್ನು ರಕ್ಷಿಸುವದಕ್ಕೋಸ್ಕರ ಪ್ರಾಕೃತ ದೇಹವನ್ನು ಧರಿಸಿಕೊಂಡು ತನ್ನನ್ನು ತಾನೇ ಯಜ್ಞವಾಗಿ ಅರ್ಪಿಸಿದ್ದು ಕಾರ್ಯತಃ ಲೋಕದಲ್ಲಿ ನೆರವೇರಿತೆಂದು ತೋರಿ ಬರುವದಿಲ್ಲ. ಆದ್ದರಿಂದ ವೇದಗಳನ್ನು ಬರೆದ ಋಷಿಗಳು ಪಾಪ ಪರಿಹಾರವನ್ನೂ ಪರಲೋಕವನ್ನೂ ಬಯಸಿದ್ದು ನೆರವೇರದೆ ವ್ಯರ್ಥವಾಯಿತೇ? ಅವರ ಆಶೆಯು ಭಂಗವಾಯಿತೇ? ಈ ಪ್ರಶ್ನೆಗೆ ಉತ್ತರ ಹೇಳುವದಕ್ಕೆ ಮುಂಚೆ ಇನ್ನೊಂದು ಪ್ರಾಚೀನ ಜನಾಂಗದವರು ಸಹ ಇದೇ ನಿರೀಕ್ಷೆಯಿಂದ ದೈವ ಪುರುಷನ ಆಗಮನಕ್ಕಾಗಿ ಎದುರುನೋಡುತ್ತಿದ್ದಾರೆಂದು ನಾವು ಜ್ಞಾಪಿಸಿಕೊಳ್ಳಬೇಕು. ಆಸಿಯಾ ಖಂಡದ ತುರ್ಕಿಸ್ಥಾನದಲ್ಲಿ ಪಾಲಸ್ತೀನ್ ಎಂಬುದೊಂದು ಚಿಕ್ಕದೇಶ ಇದೆ. ಅದರಲ್ಲಿ ವಾಸವಾಗಿದ್ದ ಇಬ್ರಿಯರೆಂಬ ಜನಗಳು ಹಿಂದೂ ಆರ್ಯರ ಹಾಗೆ ಬಹು ಪ್ರಾಚೀನ ಜನರಾಗಿಯೂ ಆದಿಯಿಂದಲೂ ತಮ್ಮ ಜನಾಂಗದ ಮತ ಧರ್ಮವನ್ನೂ ಚರಿತ್ರೆಯನ್ನೂ ಸಾಂಗವಾಗಿ ಬರೆಯುತ್ತ ಬಂದವರಾಗಿಯೂ ಇದ್ದರು. ಇವರ ಚರಿತ್ರೆಯನ್ನೂ ಮತಗ್ರಂಥಗಳನ್ನೂ ನಾವು ಪರೀಕ್ಷಿಸಿದರೆ ಇವರು ಸಹ ಅನಿತ್ಯವಾದ ಇಹಲೋಕದಲ್ಲಿ ತೃಪ್ತರಾಗದೆ ಪಾಪಪರಿಹಾರವನ್ನೂ ಪರಲೋಕ ಸುಖವನ್ನು ಬಯಸಿದರು. ಪ್ರಾಚೀನಾರ್ಯರಂತೆ ಇವರು ಸಹ ದೈವಪುರುಷನು ಪ್ರಾಕೃತ ರೂಪವನ್ನು ಧರಿಸಿ ನರಮನುಷ್ಯರಿಗೋಸ್ಕರ ತಾನೇ ಯಜ್ಞವಾಗುವನೆಂದು ನಿರೀಕ್ಷಿಸಿ ಆತನು ಬಂದು ನೆರವೇರಿಸುವ ಕಾರ್ಯಸೂಚಕಗಳಾದ ಯಜ್ಞಗಳನ್ನು ಅರ್ಪಿಸಿ ಪಾಪ ಪರಿಹಾರವನ್ನು ಬೇಡುತ್ತಿದ್ದರು. ಮುಖ್ಯವಾಗಿ ಶತ್ರುಗಳ ಕಾಟ, ಜಾಡ್ಯದ ಹಾವಳಿ, ಕ್ಷಾಮಗಳು ಜನಗಳನ್ನು ಬಾಧಿಸುತ್ತಿರುವಾಗ ಅವರ ಮತೋಪದೇಶಕರು ದಿವ್ಯಪ್ರೇರಣೆಯಿಂದ ಪ್ರೇರಿತರಾಗಿ ಮುಂದೆ ಬರಲಿಕ್ಕಿರುವ ಮಹಾ ಪುರುಷನನ್ನು ಕುರಿತು ಉಪದೇಶಿಸಿ ಅವರ ನಿರೀಕ್ಷೆಯನ್ನು ಆಧಿಕ್ಯಪಡಿಸುತ್ತಿದ್ದರು. ಹ್ಯಾಗೆಂದರೆ ಅರಸು ಅಶಕ್ತನಾಗಿ ಸೋತಾಗ ಅವರು ಬರಲಿಕ್ಕಿರುವ ಮಹಾ ಪುರುಷನನ್ನು ಕುರಿತು—ಸರ್ವೇಶ್ವರನ ಆತ್ಮವು ಜ್ಞಾನ ಗ್ರಹಿಕೆ ಆಲೋಚನೆ ಬಲಗಳ ಆತ್ಮವು ಆತನ ಮೇಲೆ ನಿಲ್ಲುವದು. ಈತನು ಬಡವರಿಗೆ ನೀತಿಯಿಂದ ನ್ಯಾಯತೀರಿಸುವನು. ದೀನರಿಗೆ ಯಥಾರ್ಥವಾಗಿ ತೀರ್ಪು ಕೊಡುವನು. ಆತನ ರಾಜ್ಯಾಧಿಕಾರದ ಅಭಿವೃದ್ಧಿಗೂ ಸಮಾಧಾನಕ್ಕೂ ಅಂತ್ಯವೇ ಇರುವದಿಲ್ಲವೆಂದೂ ಅವರು ಜ್ಞಾನವನ್ನು ಕಾಂಕ್ಷಿಸಿದಾಗ "ಕತ್ತಲಲ್ಲಿ ನಡಿಯುವ ಜನಗಳು ದೊಡ್ಡ ಬೆಳಕನ್ನು ನೋಡುತ್ತಾರೆ, ಮರಣದ ನೆಂಳಿನ ದೇಶದಲ್ಲಿ ವಾಸಿಸುವವರ ಮೇಲೆ ಬೆಳಕು ಪ್ರಕಾಶಿಸುವದು" ಎಂತಲೂ ಹೇಳಿದರು. ಮುಖ್ಯವಾಗಿ ಅವರು ಪಾಪಪರಿಹಾರನ್ನು ಹುಡುಕಿದಾಗ—ನಿಶ್ಚಯವಾಗಿ ಅವನು ನಮ್ಮ ಕಷ್ಟಗಳನ್ನು ಹೊತ್ತುಕೊಂಡನು ನಮ್ಮ ವ್ಯಸನಗಳನ್ನು ತಾಳಿಕೊಂಡನು. ನಮ್ಮ ದ್ರೋಹಗಳ ನಿಮಿತ್ತ ಗಾಯವಾದನು ನಮ್ಮ ಅಕ್ರಮಗಳ ನಿಮಿತ್ತ ಜಜ್ಜಲ್ಪಟ್ಟನು ನಮ್ಮ ಸಮಾಧಾನಕ್ಕೆ ಕಾರಣವಾದ ಶಿಕ್ಷೆ ಅವನ ಮೇಲೆ ಬಿದ್ದಿತು ಎಂತ ಘೋಷಿಸಿದರು.

ಇದರಿಂದ ಪ್ರಾಚೀನಾರ್ಯರ ಮತ್ತು ಇಬ್ರಿಯರ ನಿರೀಕ್ಷೆ ಏಕರೀತಿಯಾದದ್ದೆಂದು ತಿಳಿಯಬಹುದು. ಇದೇ ವಿಧವಾದ ಆಶೆಯು ಎಲ್ಲಾ ಜನಾಂಗದವರಲ್ಲಿಯೂ ಒಂದೊಂದು ವಿಧವಾಗಿ ಆಗಾಗ್ಗೆ ತಲೆದೋರುತ್ತಲೇ ಇತ್ತು. ಆದರೆ ಯಾವ ಜನಾಂಗದವರಲ್ಲಿಯೂ ಈ ದೈವಪುರುಷನ ಆಗಮನವು ಕಾರ್ಯತಃ ಲೋಕದಲ್ಲಿ ಸಂಭವಿಸಿತೆಂದು ತೋರುವದಿಲ್ಲ. ಈ ಕೋರಿಕೆಯು ಯಾರಲ್ಲಿ ಬಹಳ ಉತ್ತೇಜನವಾಗಿತ್ತೋ ಆ ಹಿಂದೂ ಆರ್ಯರಲ್ಲಿ ಸಹ ದೇವರು ಮನುಷ್ಯರೂಪವನ್ನು ಧರಿಸಿ ಪಾಪಗಳ ಪರಿಹಾರಕ್ಕಾಗಿ ತನ್ನನ್ನು ಆಹುತಿಯಾಗಿ ಬಲಿ ಅರ್ಪಿಸಿ ಮಾನವರ ಸರ್ವೋತ್ಕೃಷ್ಟವಾದ ಈ ಆಶೆಯನ್ನು ನೆರವೇರಿಸಲಿಲ್ಲ. ಆದರೆ ದೇವರು ಮನುಷ್ಯರ ಕೋರಿಕೆಯನ್ನು ನೆರವೇರಿಸದೆ ಅವರನ್ನು ಭಂಗಪಡಿಸುವನೇ? ಎಂದು ನಾವು ಸಂದೇಹ ಪಡುತ್ತಿರುವಲ್ಲಿ ಮೇಲೆ ಹೇಳಿದ ಇಬ್ರಿಯ ಜನಾಂಗದವರಲ್ಲಿ ದೈವಪುರುಷನು ಯೇಸು ಎಂಬ ಹೆಸರಿನಿಂದ ಪ್ರಾಕೃತ ದೇಹವನ್ನು ಧರಿಸಿ ಈ ಮಹಾ ಕಾರ್ಯನಿರ್ವಾಹಕ್ಕೆ ಅಭಿಷೇಕ ಹೊಂದಿದವನೆಂದು ಅಭಿಪ್ರಾಯವಾಗಲು ಕ್ರಿಸ್ತನೆಂಬ ಅಭಿಧಾನವನ್ನು ಹೊಂದಿದವನೆಂತ ಚರಿತ್ರೆಯು ತಿಳಿಸುತ್ತೆ. ಆತನು ಅವತರಿಸಿ ಬಂದಾಗ ಇದ್ದ ಆ ಜನಗಳ ಮತೋಪದೇಶಕರು ದಿವ್ಯ ದೃಷ್ಟಿಯಿಂದ ಆತನು ಯಾರೆಂದು ತಿಳಿದು— ಆದಿಯಲ್ಲಿ ವಾಕ್ಯವೆಂಬವನು ಇದ್ದನು. ಆ ವಾಕ್ಯನು ದೇವರ ಬಳಿಯಲ್ಲಿದ್ದು ದೇವರೇ ಆಗಿದ್ದನು. ಆತನ ಮೂಲಕವಾಗಿ ಎಲ್ಲಾ ಉಂಟಾಯಿತು. ಆ ವಾಕ್ಯವೆಂಬವನು ನರಾವತಾರವೆತ್ತಿದನು. ಕೃಪೆಯಿಂದಲೂ ಸತ್ಯದಿಂದಲೂ ತುಂಬಿ ನಮ್ಮಲ್ಲಿ ವಾಸಮಾಡಿದನು, ಆಗೋ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಯಜ್ಞಪಶು ಎಂತ ಆತನನ್ನು ಸಾಮಾನ್ಯ ಜನಗಳಿಗೆ ಕುರುಹು ಕೊಟ್ಟರು. ಆತನು ತಾನೇ ತನ್ನನ್ನು ಕುರಿತು—ಮನುಷ್ಯಕುಮಾರನು ತನ್ನ ಪ್ರಾಣವನ್ನು ಅನೇಕರಿಗೋಸ್ಕರ ಪಾಪವಿಮೋಚನೆ ಬಲಿಯಾಗಿ ಕೊಡುವದಕ್ಕೂ ಬಂದನೆಂದು ಹೇಳಿದನು. ಮತ್ತು ಆತನು ನಿಯಮಿತ ಕಾಲದಲ್ಲಿ ಯಜ್ಞಪಶುವಿನ ಹಾಗೆ ತನ್ನ ಪ್ರಾಣವನ್ನು ಯಜ್ಞವಾಗಿ ಅರ್ಪಿಸಿದನು. ಈಗ ಯಾರು ಭಕ್ತಿಯಿಂದ ಆತನ ಯಜ್ಞವನ್ನು ಆಶ್ರಯಿಸಿಕೊಳ್ಳುವರೋ ಅವರಿಗೆ ಪಾಪ ಪರಿಹಾರವೂ ನಿತ್ಯ ಸುಖವೂ ದೊರಕುವದು. ಪ್ರಪಂಚ ಸಾಗರದಲ್ಲಿ ಪಾಪದ ಸುಳಿಗುಂಡಿಗಳಿಂದ ತಪ್ಪಿಸಿ ಮೋಕ್ಷದ ಗಡ್ಡೆಗೆ ಯಾನಮಾಡಿಸುವ ದೋಣಿಯು ಈ ಬಲಿಯೇ ಅಲ್ಲವೇ? ಋಷಿಗಳು ವೇದಗಳಲ್ಲಿ ನಿರೀಕ್ಷಿಸಿದ ಪ್ರಜಾಪತಿ ಈತನೇ ಅಲ್ಲವೇ?

ಇಂಡಿಯಾ ದೇಶದ ವೃತ್ತಾಂತಗಳು.

ಆಗ್ರಾ ಪಟ್ಟಣದ ಬಳಿ ಜಾಗೀರೆಂಬ ಸ್ಥಳದಲ್ಲಿ ದಕಾಯಿತಿ ಕಳವು ನಡಸಿದ ೯ ಮಂದಿ ಅಪರಾಧಿಗಳಿಗೆ ಸೆಷನ್ ಜಡ್ಜರು ಟಾಪ್ ಸಜಾ ವಿಧಿಸಿರುತ್ತಾರೆ.

****

ಹಿಂದೂಸ್ಥಾನದೊಳಗೆ ವೈನ್ ಬ್ರಾಂದಿ ಮೊದಲಾದ ಮದ್ಯಗಳನ್ನು ವಿಕರಿ ಮಾಡತಕ್ಕ ಅಂಗಡಿಗಳು ೧೯೦೩ನೆ ಇಸವಿಯಲ್ಲಿ ೭,೦೯,೬೬೩ ಇದ್ದವು. ೧೯೦೪ ರಲ್ಲಿ ೧,೨೦,೯೭೬ಕ್ಕೆ ಹೆಚ್ಚಿದವು.

****

ಹಿಂದೂಸ್ಥಾನದಿಂದ ಬಹುಬಿಗ್ಗರು ಅನೇಕವಾಗಿ ಹೋಗಿ ರಂಗೂನ್ ಪಟ್ಟಣದಲ್ಲಿ ಭಿಕ್ಷೆ ಬೇಡಲಾರಂಭಿಸಿದಾರೆ. ಪೊಲೀಸಿನವರು ಈ ಭಿಕ್ಷುಕರ ಕಾಟವನ್ನು ತಪ್ಪಿಸುವುದಕ್ಕೆ ಈಗೀಗ ಅವರನ್ನು ಹಿಡಿದು ೭—೬—೮ ದಿನಗಳ ತನಕ ಕಠಿಣ ಸಜಾ ಅನುಭವಿಸುವಂತೆ ಶಿಕ್ಷೆ ಮಾಡಿಸುವರು.

****

ಲಾಹೋರ್ ಪಟ್ಟಣದ ವೈದ್ಯವಿದ್ಯಾಶಾಲೆಯಲ್ಲಿ ಓದುತ್ತಿದ್ದ ೪ ಉಪಾಧ್ಯಾಯರ ಮೇಲೆ ಸಿಟ್ಟುಗೊಂಡು ಒಟ್ಟಾಗಿ ಬಿಟ್ಟುಹೋಗಿದ್ದ ಯವನಸ್ಥರ ಪೈಕಿ ಕಳೆದವಾರ ನೂರು ಮಂದಿಗಿಂತ ಸ್ವಲ್ಪ ಜಾಸ್ತಿಯಾಗಿ ಬಂದು ಮತ್ತೆ ದಾಖಲಾದರು. ಇನ್ನೂ ೧೬೦ ಮಂದಿ ಹುಡುಗರೂ ಅವರ ಮುಖಂಡರೂ ಬಂದು ಸೇರಲಿಲ್ಲ.

****

ಬೊಂಬಾಯಿ ಪಟ್ಟಣದಲ್ಲಿ ಕಳೆದ ವಾರ ಒಂದೇ ದಿನ ರಾತ್ರಿ ಐದು ಕಡೆ ಬೆಂಕಿಬಿದ್ದು ಮನೆ ಮಠಗಳೂ ಕಾರ್ಖಾನೆಗಳೂ ಸುಟ್ಟುಹೋದವು. ಕೋಲಾಬಾ ಹತ್ತಿ ಕಾರ್ಖಾನೆ ಸುಟ್ಟುಹೋದ ವಿಚಾರದಲ್ಲಿ ಬೆಂಕಿ ಹಾಕಿದ ದುಷ್ಟರನ್ನು ಹಿಡಿದುಕೊಡುವವರಿಗೆ ೧೦,೦೦೦ ರೂಪಾಯಿ ಬಹುಮಾನ ದೊರಕುವುದೆಂದು ಇಸ್ತಿಹಾರು ಹಾಕಿಸಿದಾರೆ.

****

ಹೂಗ್ಲೀ ಪಟ್ಟಣದಲ್ಲಿ ಮಹಮದ್ ಮೊಹಿಸಿನ್ ಎಂಬೊಬ್ಬ ಧರ್ಮಾತ್ಮನು ಸುಮಾರು ೯೦ ವರುಷಗಳ ಕೆಳಗೆ ತನ್ನ ಆಸ್ತಿಯನ್ನೆಲ್ಲಾ ವಿದ್ಯಾಭಿವೃದ್ಧಿಗೆ ವಿನಿಯೋಗಿಸಬೇಕೆಂದು ಕೊಟ್ಟು, ಕಾಲವಾದನು. ಇದಲ್ಲದೆ ಈತನು ಜಗತ್ಪ್ರಖ್ಯಾತವಾದ ಇಮಾಂಬಾರಾ ಎಂಬ ಕಟ್ಟಡವನ್ನು ಕಟ್ಟಿಸಿರುತ್ತಾನೆ. ಆತ ಬಿಟ್ಟಿರುವ ಆಸ್ತಿಯಿಂದ ವರುಷ ಒಂದಕ್ಕೆ ೧,೪೬,೦೦೦ ರೂಪಾಯಿನಂತೆ ಉತ್ಪತ್ತಿಯಾಗುತ್ತಿದೆ.

****

ಅಫ್ಘಾನಿಸ್ಥಾನದ ಅಮೀರರವರು ತಮ್ಮ ರಾಜಧಾನಿಯಾದ ಕಾಬೂಲ್ ಪಟ್ಟಣಕ್ಕೆಲ್ಲಾ ವಿದ್ಯುಚ್ಛಕ್ತಿಯ ದೀಪವನ್ನು ಇಡಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟಿದಾರೆ. ಮಿ॥ ಡೊನೊವನ್ ಎಂಬಾತನು ಅದಕ್ಕೆ ಬೇಕಾಗುವ ಯಂತ್ರ ಮೊದಲಾದ ಸಾಮಗ್ರಿಗಳನ್ನು ಯೂರೋ

ನಿಂದ ತರಿಸಿದ್ದು ಆಯಿತು. ಕಾಬೂಲ್ ನದಿಯ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಾಗಿ ವರ್ತಮಾನವಿದೆ

****

ಸಿಲೋನ್ (ಲಂಕಾ) ದ್ವೀಪದ ಮುಖ್ಯಪಟ್ಟಣವಾದ ಕೊಲಂಬೋದಲ್ಲಿ ಒಬ್ಬ ಸೆಟ್ಟಿಯು ೧೦,೦೦೦ ರೂಪಾಯಿನ ಕರೆನ್ಸಿ ನೋಟುಗಳನ್ನು ತನ್ನ ಅಂಗವಸ್ತ್ರದಲ್ಲಿ ಕಟ್ಟಿ, ಬ್ಯಾಂಕಿಗೆ ಕೊಡುವುದಕ್ಕಾಗಿ ತೆಗೆದುಕೊಂಡು ಹೋದನು. ಬ್ಯಾಂಕಿನೊಳಗೆ ನೋಡಿಕೊಳ್ಳುವಾಗ್ಗೆ ಅಂಗವಸ್ತ್ರ ಮಾತ್ರ ಇತ್ತಲ್ಲದೆ ಅದರ ಕೊನೆಯಲ್ಲಿ ಕಟ್ಟಿದ್ದ ನೋಟುಗಳಿರಲಿಲ್ಲ. ಪೊಲೀಸಿನವರು ಕಳ್ಳನನ್ನು ಹುಡುಕುತ್ತಿದ್ದಾರೆ.

****

ಪೋರ್ಟ್ ಬ್ಲೇರ್ ದ್ವೀಪದಲ್ಲಿ ಒಂದು ಟೀ ತೋಟದ ಮ್ಯಾನೇಜರ್ ಕೆಲಸವನ್ನು ನೋಡುತ್ತಿದ್ದ ೫೦೦ ರೂಪಾಯಿ ಸಂಬಳಗಾರನಾದ ಮಿ॥ ಕಿಂಗ್ ಎಂಬುವ ೨೨ ವರುಷದ ಸರ್ವೀಸ್‌ದಾರನನ್ನು ಗವರ್ನಮೆಂಟಿನವರು ಹೋದ ವರುಷ ಕೆಲಸದಿಂದ ವಜಾ ಮಾಡಿದರು. ಇದು ಅನ್ಯಾಯವೆಂತಲೂ, ತನಗೆ ಇದಕ್ಕಾಗಿ ೧೦,೦೦೦ ರೂಪಾಯಿ ನಷ್ಟದ್ರವ್ಯ ಬರಬೇಕೆಂತಲೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ದಾವಾ ಮಾಡಿರುತ್ತಾನೆ.

****

ಸಿಂಧು ದೇಶದಲ್ಲಿರುವ ಮಹಮದೀಯರು ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ತುಂಬಾ ಮುತುವರ್ಜಿಯಾಗಿ ಏರ್ಪಾಡು ಮಾಡುತ್ತಿರುವರು. ಕರಾಚಿ ಪಟ್ಟಣದೊಳಗೆ ಒಂದು ಮಹಮದೀಯ ವಿದ್ಯಾಶಾಲೆಯನ್ನೂ ಒಂದು ವಿದ್ಯಾರ್ಥಿನಿಲಯವನ್ನೂ ಕಟ್ಟಿಸಿ ನಡಿಸಬೇಕೆಂದು ಚಂದಾ ವಸೂಲ್ಮಾಡಲಾರಂಭಿಸಿದ್ದಾರೆ. ಖೈರಪೂರ ಸಂಸ್ಥಾನದ ಪತಿಯವರು ಇವಕ್ಕೆ ಮುಂದಾಳುಗಳಾಗಿ ನಿಂತು, ಆಗಲೇ ೧೫,೦೦೦ ರೂಪಾಯಿ ತನಕ ವಸೂಲ್ಮಾಡಿದರೆಂದು ಪ್ರಕಟವಾಗಿದೆ.

****

ಹಿಂದುಗಳಲ್ಲಿ ವಿಧವಾ ಪುನರ್ವಿವಾಹವು ಆಗಬೇಕೋ ಬೇಡವೋ ಎಂಬುವದನ್ನು ಕ್ರಮವಾಗಿ ಚರ್ಚೆ ಮಾಡಿ ಗೊತ್ತು ಮಾಡುವುದಕ್ಕೆ ಇಷ್ಟರಲ್ಲೇ ಕೃಷ್ಣಾ ಡಿಸ್ಟ್ರಿಕ್ಟಿಗೆ ಸೇರಿದ ಬೆಜವಾಡ ಪಟ್ಟಣದಲ್ಲಿ ಒಂದು ದೊಡ್ಡ ಮಂಡಲಿಯು ಕೂಡುವುದು. ಈ ಮಂಡಲಿಗೆ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ವೈದಿಕ ಮತ್ತು ಲೌಕಿಕ ಪ್ರತಿನಿಧಿಗಳು ಕರೆಸಲ್ಪಡುತ್ತಾರೆ. ಪಂಡಿತ ವೆಂಕಟೇಶ್ವರರಾವ್ ಪಂತುಲು ಎಂಬ ದೊಡ್ಡ ಮನುಷ್ಯರು ಈ ಸಭೆಯನ್ನು ನಡಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಮಿ॥ ಜೋಗೀಂದ್ರನಾಥಸೇನನೆಂಬೊಬ್ಬ ಪ್ಲೀಡರನು ಟ್ರಾಂ ಗಾಡಿಯಿಂದಿಳಿದು ರಸ್ತೆಗೆ ಅಡ್ಡಲಾಗಿ ಹೋಗುತ್ತಿದ್ದನು. ಮಿ॥ ಬರ್ಕೆಟ್ ಎಂಬೊಬ್ಬ ಯೂರೋಪ್ಯನು ಮೋಟಾರ್ ಗಾಡಿಯನ್ನು ಬಹು ವೇಗವಾಗಿ ಬಿಟ್ಟುಕೊಂಡು ಬರುತ್ತಿದ್ದನಾದ್ದರಿಂದ ಆ ಮೋಟಾರ್ ಗಾಡಿಯ ಕೆಳಕ್ಕೆ ಆ ಪ್ಲೀಡರು ಸಿಕ್ಕಿ ಸ್ವಲ್ಪ ಹೊತ್ತಿನೊಳಗಾಗಿ ಮೃತಪಟ್ಟನು. ಪೊಲೀಸಿನವರು ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಿದ್ದಾರೆ. ಅಪರಾಧಿಯನ್ನು ಸದ್ಯಕ್ಕೆ ೧೦೦೦ ರೂಪಾಯಿ ಜಾಮೀನಿನ ಮೇಲೆ ಬಿಟ್ಟಿರುವರು.

****

ಉತ್ತರ ದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಹಿಂದಿನ ವಾರಕ್ಕಿಂತ ಕಳೆದ ವಾರ ೧೦,೫೬೮ ಹೆಚ್ಚಿತು. ಅಂದರೆ ಹೋದವಾರ ಒಟ್ಟು ೩,೬೯,೫೬೩ ಜನರು ಸರ್ಕಾರದವರ ಪೋಷಣೆಯಲ್ಲಿದ್ದರು. ಈ ಪೈಕಿ ಸಂಯುಕ್ತ ಅಧಿಪತ್ಯದಲ್ಲಿ ೧,೬೮,೦೦೦ ಜನರು, ರಾಜಪುತಾನಾ ೬೨,೨೧೩; ಮಧ್ಯ ಇಂಡಿಯಾ ೮೩,೩೦೦; ಆಜ್ಮೀರ ೧೬,೧೩೧, ಬೊಂಬಾಯಿ ೯೮,೫೦೮, ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ದೇಶೀಯ ಸಂಸ್ಥಾನಗಳು ೯,೯೨೩, ಹೈದರಾಬಾದ್ ಸಂಸ್ಥಾನ ೩,೬೧೦ ಈ ರೀತಿ ಜನರು ಕ್ಷಾಮಪೀಡಿತರಾಗಿದ್ದಾರೆ.

****

ಬೊಂಬಾಯಿ ಗವರ್ನಮೆಂಟ್ ಅಬ್ಕಾರಿ ಕಾನೂನಿನ ಪ್ರಕಾರ ಆ ಅಧಿಪತ್ಯದ ಶೇಂದಿ ಅಂಗಡಿಯವರು ಪ್ರತಿ ನೂರು ಈಚಲ ಮರಗಳಿಗೂ ೩೦೦ ರೂಪಾಯಿಯನ್ನೂ, ಅಂಗಡಿ ಇಟ್ಟದ್ದಕ್ಕೆ ಜರಾಬಿನ ಹಣವನ್ನು, ಪ್ರತಿ ನೂರು ಮರಗಳಿಗೂ ಎರಡನೇ ಸಲ ೮೦ ರೂಪಾಯಿಯನ್ನೂ ಸರ್ಕಾರಕ್ಕೆ ಕೊಡಬೇಕಾಗಿದೆ. ಇದು ಬಹಳ ದುಬಾರಿ ಎಂತಲೂ ಅನ್ಯಾಯವೆಂತಲೂ ಈ ಮೊದಲನೆ ಬಾಬನ್ನು ವಜಾಮಾಡಿ, ಉಳಿದ ಎರಡು ಬಾಬುಗಳನ್ನೂ ಕಮ್ಮಿಮಾಡಿಕೊಡಬೇಕೆಂತಲೂ ಸೂರತ್ತಿನ ವರ್ತಕಮಂಡಲಿಯವರು ಬೊಂಬಾಯಿ ಗವರ್ನಮೆಂಟಿಗೆ ಅರಿಕೆಮಾಡಿಕೊಂಡಿದ್ದಾರೆ.

****

ಮದರಾಸ್ ಪಟ್ಟಣದಲ್ಲಿ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ತಂದು ಒದಗಿಸುತ್ತಿದ್ದಾರಷ್ಟೆ. ಈ ನೀರಿನ ಸರಬರಾಯಿ ತೃಪ್ತಿಕರವಾಗಿಲ್ಲ. ಅದನ್ನು ತೃಪ್ತಿಕರವಾಗಿ ಕ್ರಮಪಡಿಸುವುದಕ್ಕೆ ಮ್ಯುನಿಸಿಪಾಲಿಟಿಯವರು ೩೫ ಲಕ್ಷ ರೂಪಾಯಿ ಖರ್ಚುಮಾಡುವವರಾಗಿದ್ದಾರೆ. ಮದರಾಸ್ ಗವರ್ನಮೆಂಟಿನವರು ಅದಕ್ಕಾಗಿ ೧೭ ಲಕ್ಷ ರೂಪಾಯಿ ಗ್ರಾಂಟು ಕೊಡುವುದಾಗಿ ಮಾತುಕೊಟ್ಟಿದ್ದಾರೆ. ಆ ಪಟ್ಟಣದಲ್ಲಿ ಇನ್ನು ಮುಂದೆ ನೀರಿನ ತೆರಿಗೆಯನ್ನೂ ಬೆಳ್ಕುಲತೆರಿಗೆಯನ್ನೂ ಮ್ಯುನಿಸಿಪಾಲಿಟಿಯವರು ಹೆಚ್ಚು ಮಾಡಿ, ಬರುವ ಹುಟ್ಟುವಳಿಯನ್ನು ಈ ನೀರಿನ ಕಾಮಗಾರಿಗೆ ಹಾಕುವರು

****

ಕಳೆದ ಜನವರಿ ೧ನೆ ತಾರೀಖಿನ ದಿನ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೩,೫೭,೧೫೮ ಜನರು ರೈಲ್ವೆ ಇಲಾಖೆಗಳಲ್ಲಿ ನೌಕರನಾದೆಯರಾಗಿದ್ದು ಈ ಪೈಕಿ ೧೫,೬೦೦ ಮಂದಿ ಮಾತ್ರ ಯೂರೋಪ್ಯರೂ ಯುರೇಷಿಯರೂ ಆಗಿರುವರು. ಉಳಿದವರೆಲ್ಲಾ ಹಿಂದುಸ್ಥಾನದವರೆ. ೧೯೦೫ನೆ ವರುಷದಲ್ಲಿ ಹಿಂದುಸ್ಥಾನದ ರೈಲ್ ಗಾಡಿಗಳಲ್ಲಿ ಒಟ್ಟು ೨೩ ಕೋಟಿಯೂ ೮೦ ಲಕ್ಷ ಪ್ರಜೆಗಳು ಪ್ರಯಾಣಮಾಡಿದರು ಆ ವರುಷ ನಡೆದ ಅನಾಹುತಗಳಲ್ಲಿ ೯೧೩ ಜನರು ಪ್ರಾಣಕಳೆದುಕೊಂಡರು; ೬೬೯ ಜನರಿಗೆ ಗಾಯಗಳಾದವು. ೧೩೭ ಜನರು ರೈಲ್ ಕಂಬಿಗಳ ಮೇಲೆ ಬೇಕೆಂದು ಮಲಗಿ ಆತ್ಮಹತ್ಯಮಾಡಿಕೊಂಡರು

****

ಹಿಂದುಸ್ಥಾನದ ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರ ಜನ್ಮ ದಿನವನ್ನು ಜೂನ್ ೨೬ ಕ್ಕೆ ಆಚರಿಸಬೇಕೆಂದು ಗವರ್ನಮೆಂಟಿನವರು ಈ ವರುಷದ ಪ್ರಾರಂಭದಲ್ಲೇ ಪ್ರಕಟಿಸಿ, ಆ ದಿನವನ್ನು ರಜಾ ದಿನವಾಗಿ ಗೊತ್ತುಮಾಡಿದ್ದರಷ್ಟೆ. ಈಚೆಗೆ ಈ ರಜಾ ದಿನದ ವಿಷಯದಲ್ಲಿ ಇಂಡಿಯಾ ಗವರ್ನಮೆಂಟಿನವರಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ ಕೆಲವು ತಂತೀವರ್ತಮಾನಗಳು ನಡೆದು, ಆ ಉತ್ಸವವನ್ನು ಜೂನ್ ೨೬ ತಾರೀಖು ತಪ್ಪಿಸಿ ಜೂನ್ ೨೯ ಕ್ಕೆ ಬದಲಾವಣೆ ಮಾಡಿದರು. ಆದ್ದರಿಂದ ಚಕ್ರವರ್ತಿಯವರ ಜನ್ಮೋತ್ಸವವನ್ನು ತಾ ೨೯ ನೆ ಶುಕ್ರವಾರದ ದಿನ ಹಿಂದುಸ್ಥಾನದವರೆಲ್ಲಾ ಆಚರಿಸುವವರಾಗಿದ್ದಾರೆ.

****

ಕೃಷ್ಣಾನದಿಯ ಮುಖದಲ್ಲಿ ದಿವಿ ಎಂಬ ಸಣ್ಣ ದ್ವೀಪವಿರುವುದು. ಅಲ್ಲಿ ೧೬೦ ಕುದುರೆಗಳ ಬಲವುಳ್ಳ ೮ ಇಂಜಿನ್‌ಗಳನ್ನು ಇಟ್ಟು, ೩೯ ಅಂಗುಲ ಗಾತ್ರವಿರುವ ನಲ್ಲಿಗಳ ಮೂಲಕ ನದಿಯ ನೀರನ್ನು ಎತ್ತಿ, ಆ ನೀರಿನಿಂದ ೫೦,೦೦೦ ಎಕರೆ ಜಮೀನನ್ನು ತರೀ ಸಾಗುವಳಿ ತರಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ. ಇದಕ್ಕೆ ಸುಮಾರಾಗಿ ೧೮—೨೦ ಲಕ್ಷ ರೂಪಾಯಿ ಖರ್ಚಾಗುವುದು. ಒಂದು ಎಕರೆಗೆ ಬೇಕಾಗುವಷ್ಟು ನೀರನ್ನು ಎತ್ತಿ ಕಳುಹಿಸುವುದಕ್ಕೆ ೧೨ ತಿಂಗಳಿಗೆ ೨ ರೂಪಾಯಿ ಖರ್ಚು ಬೀಳುವುದೆಂತಲೂ, ಅದರೆ ಪ್ರತಿ ಎಕರೆ ಜಮೀನಿನಿಂದಲೂ ೫ ರೂಪಾಯಿ ಕಂದಾಯ ಹುಟ್ಟುವಳಿ ಆಗುವುದರಿಂದ ೩ ರೂಪಾಯಿ ಲಾಭ ಬರುವುದೆಂತಲೂ ಮಿ॥ ಎ ಛಾಟರ್ಟನರು ಅಂದಾಜು ಕಟ್ಟಿದ್ದಾರೆ.

****

ಬೊಂಬಾಯಿ ಪಟ್ಟಣದಲ್ಲಿರುವ ಸರ್ ಕೊವಾಸ್‌ಜಿ ಜಹಾಂಗೀರ್ ಯವರ ಕಣ್ಣಾಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಆ ಕಟ್ಟಡವನ್ನು ಬಿಸ್ತಾರ ಮಾಡಬೇಕೆಂದು ಆಸ್ಪತ್ರೆಯ ಮೇಲ್ವಿಚಾರಕರು ಗೊತ್ತುಮಾಡಿದರು. ಸರ್ ಕವಾಸ್‌ಜಿ ಯವರು ಈ ಕಾಮಗಾರಿಗೆ ಮೊದಲು ೨೫,೦೦೦ ರೂಪಾಯಿ ಕೊಡುತ್ತೇವೆಂದು ತಿಳಿಸಿದರು. ಆದರೆ ಹೊಸ ಕಟ್ಟಡಕ್ಕೆ ೫೮,೦೦೦ ರೂಪಾಯಿ ಬೇಕಾಗುವುದೆಂದು ತಿಳಿದ ಮೇಲೆ ಇನ್ನೂ ೩೩,೦೦೦ ಕೊಡುವುದಾಗಿ ವಾಗ್ದಾನ ಮಾಡಿದ್ದಲ್ಲದೆ ಕೂಡಲೇ ಆ ೩೦,೦೦೦ ರೂಪಾಯಿಯನ್ನು ಖಜಾನೆಗೆ ಕಳುಹಿಸಿದರು. ಬೊಂಬಾಯಿ ಗವರ್ನರವರು ಇದನ್ನು ನೋಡಿ ಪರಮ ಸಂತೋಷಪಟ್ಟು ಅವರನ್ನು ಬಹಳವಾಗಿ ವಂದಿಸಿ, ತಕ್ಷಣವೇ ಕಾಮಗಾರಿಯನ್ನು ಪ್ರಾರಂಭಿಸುವಂತೆ ಅಪ್ಪಣೆ ಕೊಟ್ಟರು.

****

ಕಳೆದ ೧೯೦೫ ನೆ ವರುಷದಲ್ಲಿ ಮದರಾಸ್ ಪಟ್ಟಣದಿಂದ ಪರದೇಶಗಳಿಗೆ ಜೀವನಾರ್ಥವಾಗಿ ಹೋಗಿ ಬಂದವರ ಲೆಕ್ಕಗಳು ಪ್ರಕಟವಾಗಿವೆ. ಮದರಾಸ್ ಅಧಿಪತ್ಯದಿಂದ ಆ ವರುಷ ೬,೩೯೮ ಜನರು ನಟಾಲಿಗೆ ಹೋದರು. ಪಾಂತಿಭೇದಿ ಉಪದ್ರ ಹುಟ್ಟದಿದ್ದರೆ ಇನ್ನೂ ಅನೇಕರು ಅವರ ಸಂಗಡ ಹೋಗುವುದಕ್ಕೆ ಸಿದ್ಧರಾಗಿದ್ದರು. ಅಲ್ಲದೆ ಅದೇ ಪಟ್ಟಣದಿಂದ ಜಹಜು ಹತ್ತಿ ೨,೧೧೮ ಜನರು ಸ್ಟ್ರೇಟ್ಸ್ ದ್ವೀಪಗಳಿಗೂ, ೧,೩೮೭ ಜನರು ಟ್ರಿನಿಡಾಡಿಗೂ ಪ್ರಯಾಣ ಮಾಡಿರುತ್ತಾರೆ. ಈ ಪೈಕಿ ಯಾರೂ ಆ ವರುಷ ಹಿಂತಿರುಗಿ ಬರಲಿಲ್ಲ. ನಟಾಲಿನಿಂದ ೧,೫೮೯ ಜನರು ೨,೦೧,೮೬೭ ರೂಪಾಯಿಯನ್ನೂ, ಮಾರಿಷಸ್ಸಿನಿಂದ ೧೮೬ ಜನರು ೧,೬೮೦ ರೂಪಾಯಿಯನ್ನೂ, ರಿಯೂನಿಯನ್ನಿಂದ ೧೯೬ ಜನರು ೮೨೭ ರೂಪಾಯಿಯನ್ನೂ ಸಂಪಾದನೆ ಮಾಡಿ ಕೂಡಿಟ್ಟು ತಮ್ಮ ಸಂಗಡ ತಂದಿರುತ್ತಾರೆ

****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಮುರ್ಷಿದಾಬಾದ್ ಪಟ್ಟಣವು ಪೂರ್ವಕಾಲದಿಂದಲೂ ರೇಷ್ಮೆ ತಯಾರಾಗುವ ಸ್ಥಳವೆಂದು ಪ್ರಸಿದ್ಧವಾಗಿದೆ. ಕಳೆದ ೧೮೬೯—೭೦ ನೆ ಸಾಲಿನಲ್ಲಿ ಆ ಪಟ್ಟಣದಿಂದ ೨೩,೧೫,೦೧೫ ಪೌಂಡು ತೂಕದಷ್ಟು ರೇಷ್ಮೆ ತಯಾರಾಗಿ ಇತರ ಕಡೆಗಳಿಗೆ ರಫ್ತು ಮಾಡಿದ್ದಾರೆ. ಕಳೆದ ೧೯೦೩—೦೪ ನೆ ಸಾಲಿನಲ್ಲಿ ಅಲ್ಲಿಂದ ೬,೬೩,೧೦೫ ಪೌಂಡಿನ ರೇಷ್ಮೆ ಮಾತ್ರವೇ ರಫ್ತಾಯಿತು. ಹೀಗೆ ರೇಷ್ಮೆ ಉತ್ಪತ್ತಿಯು ಕಡಿಮೆಯಾಗುತ್ತಾ ಬಂದಿರೋಣದರಿಂದ ಸಾವಿರಾರು ಜನರು ಜೀವನ ತಪ್ಪಿ ಹೊಟ್ಟೆಗಿಲ್ಲದೆ ಕೆಟ್ಟು ಹೋದರು. ರೇಷ್ಮೆಹುಳನ್ನು ಕೊಲ್ಲುವ ಹುಳುಹುಪ್ಪಟೆಗಳು ಹೆಚ್ಚಿದ್ದರಿಂದಲೇ ಈ ಕಸಬು ಹಾಳಾಯಿತಲ್ಲದೆ ಮತ್ಯಾವ ಕಾರಣವೂ ಕಂಡು ಬರುವುದಿಲ್ಲ. ಸರ್ಕಾರದವರು ಈ ಸಂಗತಿಯನ್ನು ತಿಳಿದು, ಆ ಹುಳು ಹುಪ್ಪಟೆಗಳನ್ನು ನಾಶನ ಮಾಡುವುದೇ ಮೊದಲಾದ ಪರಿಹಾರ ಕಾರ್ಯಗಳನ್ನು ನಡಸಬೇಕೆಂದು ಪ್ರಯತ್ನ ಪಡುತ್ತಿದ್ದಾರೆ

****

ಕಲ್ಕತ್ತೆಯಲ್ಲಿ ಅಣ್ಣತಮ್ಮಂದಿರಾದ ಇಬ್ಬರು ಬಂಗಾಳಿಗಳು ತಮ್ಮ ಚಿಕ್ಕಪ್ಪ ಕಾಲವಾದ ಕೂಡಲೆ ಅವನ ಮನೆಗೆ ಹೋಗಿ ಚಿಕ್ಕಮ್ಮನನ್ನು ಬಹಳವಾಗಿ ಸಂತೈಸಿ, ಅವಳ ಸಂಗಡ ತಾವೂ ಅಪಾರವಾಗಿ ಅತ್ತು ಕರೆದು, ಅವನ ಉತ್ತರಕ್ರಿಯಾದಿಗಳನ್ನು ತಾವೇ ಮಾಡುವುದಾಗಿ ಹೇಳಿ, ಚಿಕ್ಕಮ್ಮನನ್ನು ತಮ್ಮ ಮನೆಗೆ ಕರೆತಂದರು. 'ಆಕೆಯ ಮನೆಯಲ್ಲಿದ್ದ ನಗನಾಣ್ಯಗಳನ್ನೆಲ್ಲಾ ಎತ್ತಿಹಾಕಬೇಕೆಂದು ಅವರಿಬ್ಬರೂ ಮಸಲತ್ತುಮಾಡಿಕೊಂಡು, ಕ್ರಿಯಾದಿಗಳು ನಡೆಯುತ್ತಿದ್ದ ಹಾಗೇ ಒಂದು ದಿನ ರಾತ್ರಿ ಆಕೆಗೆ ತಿಳಿಯದಂತೆ ಆ ಮನೆಗೆ ಹೋಗಿ ಕೊಠಡಿ, ಪೆಟ್ಟಿಗೆಗಳ ಬಾಗಿಲು ಒಡೆದು ಜಿಂದಗಾನಿಯನ್ನೆಲ್ಲಾ ತೆಗೆದುಕೊಂಡು ಹೋಗುತ್ತಿರುವಾಗ ನೆರೆಮನೆಯವರು ಎದ್ದು ಬಂದು ಅಪರಾಧಿಗಳನ್ನು ಮಾಲ್ ಸಹಿತ ಹಿಡಿದು ಪೊಲೀಸಿಗೆ ಒಪ್ಪಿಸಿದರು. ಆ ಚಿಕ್ಕಮ್ಮನು ಗಂಡನನ್ನು ಕಳೆದುಕೊಂಡದ್ದಲ್ಲದ ಆಸ್ತಿಯನ್ನೂ ಈ ಒಳಶತ್ರುಗಳ ಮೂಲಕ ಕಳೆದುಕೊಳ್ಳುವಂತಾಯಿತೆಂದು, ಕೋರ್ಟಿಗೆ ಹೋಗಿ ಕೈಫಿಯತ್ತು ಕೊಟ್ಟಳು. ಮೊಕದ್ದಮೆ ಇನ್ನೂ ಇತ್ಯರ್ಥವಾಗಿಲ್ಲ.

****

ಪೂನಾ ಪಟ್ಟಣದ ರವಿವಾರ ಪೇಟೆಯಲ್ಲಿ ಸ್ವದೇಶೀ ಸರಕುಗಳನ್ನು ಇಟ್ಟು ಪ್ರದರ್ಶನಮಾಡಿದ್ದಾರೆ. ರಾವ್ ಬಹದೂರ್ ಸಿ. ಎಚ್. ವೈದ್ಯ ಎಂಬ ದೊಡ್ಡಮನುಷ್ಯರು ಅದನ್ನು ಪ್ರತಿಷ್ಠೆಮಾಡಿದಾಗ ಹೇಳಿದ್ದೇನೆಂದರೆ—ಪ್ರಾಚೀನ ಕಾಲದಲ್ಲಿ ಹಿಂದುಸ್ಥಾನದ ಕೈಗಾರಿಕೆ ಪದಾರ್ಥಗಳು ಬಹಳ ಹೆಸರುವಾಸಿಯನ್ನು ಪಡೆದಿದ್ದವು. ಮೊಗಲಾಯಿ ಚಕ್ರವರ್ತಿಗಳೂ ಅಂಥಾ ಕೈಗಾರಿಕೆಗಳನ್ನು ಪ್ರೋತ್ಸಾಹಪಡಿಸಿ, ಕಾರೇಗಾರರಿಗೆ ಬೇಕಾದ ಸಹಾಯಸಂಪತ್ತುಗಳನ್ನು ಒದಗಿಸಿಕೊಡುತ್ತಿದ್ದರು. ಈಗ ನಮ್ಮನ್ನಾಳುವ ಇಂಗ್ಲಿಷ್ ಸರ್ಕಾರದವರೂ ಪ್ರೋತ್ಸಾಹಪಡಿಸಲಾರಂಭಿಸಿದಾರೆ. ಹೆಚ್ಚು ಸಹಾಯವಿಲ್ಲದ್ದರಿಂದ ಅನೇಕ ಕೈಗಾರಿಕೆಗಳು ಬಿಲನಾಗುತ್ತಿರುವವು ಎಂಬುದೇ. ಈ ಪ್ರದರ್ಶನಶಾಲೆಯಲ್ಲಿ ಹಿಂದುಸ್ಥಾನದ ಕಾರೇಗಾರರು ಮಾಡಿದಂಥಾ ವಸ್ತುವಿಶೇಷಗಳನ್ನು ಮಾತ್ರ ಕ್ರಮವಾಗಿ ವಿಂಗಡಿಸಿ ಇಟ್ಟಿದೆ. ಚಿತ್ರಪಟಗಳು, ಟೋಪಿ, ಪೂನಾದಲ್ಲಿ ತಯಾರಾಗುವ ಸಾಬೂನು, ಶೋಲಾಪುರದ ಬಟ್ಟೆ, ನೋಟ್ ಕಾಗದ, ಶಾಯಿ, ಔಷಧಗಳು, ಚಕ್ಕಳದ ಚೀಲಗಳು, ಇತರ ಕಡೆಗಳಲ್ಲಿ ತಯಾರಾಗುವ ಕಂಚಿನ ಪದಾರ್ಥಗಳು, ಕೈಬಳೆಗಳು, ಈ ಮೊದಲಾದ ಅನೇಕ ಸರಕುಗಳನ್ನು ೫೦ ಕೊಠಡಿಗಳಲ್ಲಿ ಇಡಿಸಿರುತ್ತಾರೆ

****

ಅಂಬಾಲಾಪಟ್ಟಣದಲ್ಲಿ ಒಬ್ಬ ಸಾಹುಕಾರನ ಹೆಂಡತಿ ಹೆತ್ತ ಮಕ್ಕಳೆಲ್ಲಾ ಸತ್ತು ಹೋಗುತ್ತಿದ್ದದರಿಂದ ಒಬ್ಬ ಬೈರಾಗಿಯು ಸಾಹುಕಾರನಿಗೆ ಪರಿಹಾರವನ್ನು ಹೇಳಿಕೊಟ್ಟನು. ಅವನ ಹೆಂಡತಿ ಬಸುರಾದಳು. ಬೈರಾಗಿ ಹೇಳಿದಂತೆ ಸಾಹುಕಾರನು ನೆರಮನೆಯ ಒಬ್ಬ ಹುಡುಗನನ್ನು ಹಿಡಿದು ತಂದು ತುಂಡು ತುಂಡಾಗಿ ಕತ್ತರಿಸಿ ರಕ್ತದಲ್ಲಿ ಆ ಗರ್ಭಿಣಿಗೆ ಸ್ನಾನ ಮಾಡಿಸಿದನು. ಸರ್ಕಾರದವರು ಇಂಥಾ ದುಷ್ಟ ಕಾರ್ಯ ನಡಿಸಿದವರನ್ನೆಲ್ಲಾ ಹಿಡಿದು ದರ್ಯಾಪ್ತಿ ಮಾಡಿಸಿದರು. ಸೆಷನ್ಸ್ ಜಡ್ಜರು ಅಪರಾಧಿಗಳಲ್ಲಿ ಮೂರು ಮಂದಿಗೆ ಮರಣದಂಡನೆಯನ್ನೂ ಇಬ್ಬರಿಗೆ ಟಾಪ್ ಸಜೆಯನ್ನೂ ವಿಧಿಸಿದರು. ಅದರ ಮೇಲೆ ಅಪರಾಧಿಗಳು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಾಗ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯ ಕಟ್ಟನ್ನೆಲ್ಲಾ ನೋಡಿ ಬಾಯಂಗಳು ತೋರಿಸಿದ ಕಾರಣಗಳು ಸಹಜವಾಗಿ ಕಾಣಬಂದದ್ದರಿಂದ ಕೆಳಕೋರ್ಟಿನ ತೀರ್ಮಾನವನ್ನು ರದ್ದು ಪಡಿಸಿ, ಅಪರಾಧಿಗಳನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ. ಲಾಪ್ಪಂಟುಗಳಂತೆ ಅವರನ್ನು ಬಿಟ್ಟುಬಿಟ್ಟದ್ದೇನೋ ನ್ಯಾಯವೇ ಸರಿ. ಇನ್ಯಾವ ರೀತಿಯಲ್ಲಾದರೂ ಅವರನ್ನು ಮತ್ತೆ ವಿಚಾರಣೆಗೆ ಗುರಿ ಮಾಡುವುದು ಅವಶ್ಯ. ಇಲ್ಲವಾದರೆ ಬುದ್ಧಿಹೀನರಾದ ಜನರು ಈ ಕ್ರೂರಕೃತ್ಯವನ್ನು ಸಹಜವಾದದ್ದೆಂತಲೇ ಊಹಿಸುವುದಕ್ಕೆ ಆಸ್ಪದವಾಗುವುದು

****

ಕೃಷ್ಣಾ ಜಿಲ್ಲೆಯಲ್ಲಿ ಸೆಲ್ಟ್ ಸೂಪರಿಂಟೆಂಡೆಂಟ್ ಮಿ॥ ಅರುಣಾಚಲಶಾಸ್ತ್ರಿಗಳ ಮಗ ಎ. ತ್ಯಾಗರಾಜ ಎಂಬಾತನು ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದಿ ಬಿ ಎ. ಪರೀಕ್ಷೆಯನ್ನು ಮೊದಲನೆ ತರಗತಿಯಲ್ಲಿ ಪ್ಯಾಸ್ ಮಾಡಿ, ತರುವಾಯ ಅದೇ ವಿದ್ಯಾಶಾಲೆಯಲ್ಲಿ ಓದುತ್ತಿದ್ದು ೧೯೦೩ ರಲ್ಲಿ ಎಂ ಎ ಪರೀಕ್ಷೆಯಲ್ಲೂ ಒಂದನೇ ಕ್ಲಾಸಿನಲ್ಲೇ ಪ್ಯಾಸಾದನು. ಇಪ್ಪತ್ತು ವರುಷಗಳಿಂದ ಈಚೆಗೆ ಎಂ. ಎ. ಪರೀಕ್ಷೆಯಲ್ಲಿ ಇಷ್ಟು ಪ್ರಶಸ್ತವಾಗಿ ಯಾರೂ ತೇರ್ಗಡೆ ಹೊಂದಲಿಲ್ಲ. ಇಂಥಾ ಬುದ್ಧಿವಂತನಾದ ಹುಡುಗನಿಗೆ ಮದರಾಸ್ ಸರ್ಕಾರದವರು ವೇತನ ಕೊಟ್ಟು, ವಿಲಾಯತಿಗೆ ಸೇರಿದ ಕೇಂಬ್ರಿಡ್ಜ್ ಪಟ್ಟಣಕ್ಕೆ ಕಳುಹಿಸಿದರು. ಆತನು ಅಲ್ಲಿನ ಪ್ರಸಿದ್ಧ ವಿದ್ಯಾಶಾಲೆಯಲ್ಲಿ ಶಿಕ್ಷೆ ಹೊಂದಿ, ಗಣಿತ ವಿದ್ಯೆಯಲ್ಲಿ ಪರೀಕ್ಷಿಸಲ್ಪಟ್ಟ ವಿದ್ಯಾರ್ಥಿಗಳೆಲ್ಲರಿಗಿಂತಲೂ ಹೆಚ್ಚು ನಂಬರುಗಳನ್ನು ತೆಗೆದುಕೊಂಡು, ಸೀನಿಯರ್ ರ್‍ಯಾಂಗ್ಲರ್ ಎಂಬ ಬಹು ಪ್ರಶಸ್ತವಾದ ಬಿರುದನ್ನು ಸಂಪಾದಿಸಿರುತ್ತಾನೆಂದು ಕಳೆದ ವಾರ ತಂತೀ ವರ್ತಮಾನ ಬಂದಿದೆ. ಆ ಪರೀಕ್ಷೆಯಲ್ಲಿ ಆತನಿಗೆ ಬಂದಿರುವಷ್ಟು ನಂಬರುಗಳು ಇನ್ನೊಬ್ಬ ವಿದ್ಯಾರ್ಥಿಗೆ ಬಂದಿರುವುದರಿಂದ ಇವರಿಬ್ಬರೂ ಮೊದಲನೆಯವರಾಗಿ ತೇರ್ಗಡೆಯಾಗಿರುವಂತೆ ಭಾವಿಸಲ್ಪಟ್ಟಿದ್ದಾರೆ. ಈ ಸುದ್ದಿಯು ಆತನ ತಂದೆತಾಯಿಗಳಲ್ಲಿ ಮಾತ್ರವೇ ಅಲ್ಲ, ದಕ್ಷಿಣದೇಶದವರಲ್ಲೆಲ್ಲಾ ಪರಮ ಸಂತೋಷವನ್ನುಂಟು ಮಾಡಿರುವುದು.

ವಿದೇಶ ವರ್ತಮಾನಗಳು.

ಇಂಗ್ಲಿಷ್ ಗವರ್ನಮೆಂಟಿನವರು ಸೈನ್ಯದ ಇಲಾಖೆಯಲ್ಲಿ ನಿಷ್ಪ್ರಯೋಜಕರಾದ ೬೦,೦೦೦ ಸಿಪಾಯಿಗಳನ್ನೂ ೨೮೯ ಪಿರಂಗಿ ಸೈನ್ಯವನ್ನು ಕೆಲಸದಿಂದ ತೆಗೆದುಬಿಡುವುದಾಗಿ ಗೊತ್ತುಮಾಡಿದ್ದಾರೆ

****

ರಷ್ಯಾ ಜಪಾನ್ ಯುದ್ಧದಲ್ಲಿ ಜಪಾನಿನವರ ಕಡೆ ಯುದ್ಧಮಾಡಿ ಜಯಪ್ರದ ಹೊಂದಿದ ಜಪಾನ್ ಸೈನಿಕರಿಗೆ ಬಹುಮಾನ ಕೊಡಬೇಕೆಂದು ಜಪಾನ್ ಚಕ್ರವರ್ತಿಯವರು ೧೦ ಲಕ್ಷ ಮೆಡಲ್ ಎಂಬ ಬಿರುದಿನ ಬಿಲ್ಲೆಗಳನ್ನು ತಯಾರುಮಾಡಿಸುತ್ತಿದ್ದಾರೆ.

****

ಟಿಬೆಟ್ ರಾಜ್ಯಕ್ಕೆ ಹೋಗಿ ಬಂದ ರಾಯಲ್ ಫ್ಯುಸಿಲಿಯರ್ಸ್ ಎಂಬ ಇಂಗ್ಲಿಷ್ ಸೈನಿಕರಿಗೆ ಮಹಾರಾಜಾ ಚಕ್ರವರ್ತಿಯವರು ವಿಂಡ್ಸರ್ ಎಂಬ ರಾಜಭವನದಲ್ಲಿ ಮೆಡಲ್ ಎಂಬ ಬಿರುದಿನ ಬಿಲ್ಲೆಗಳನ್ನು ಕೊಟ್ಟು, ಅವರ ಶೌರ್ಯಸಾಹಸಗಳನ್ನು ಕೊಂಡಾಡಿದರು.

****

ಲಾರ್ಡ್ ಕರ್ಜನರವರ ಪತ್ನಿಯವರ ಸಹೋದರನಾದ ಮಿ॥ ಲೀಟರ್ ಎಂಬಾತನು ಅಮೇರಿಕದಲ್ಲಿ ಭಾರೀ ಸಾಹುಕಾರನಾಗಿರುತ್ತಾನೆ.

ಈತನ ಮನೆಗೆ ಕಳ್ಳರು ಬಿದ್ದು, ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ಮೂರು ಲಕ್ಷ ರೂಪಾಯಿನ ಆಸ್ತಿಯನ್ನು ಎತ್ತಿಕೊಂಡು ಹೋಗಿದ್ದಾರೆ.

●●●●

ವಿಲಾಯತಿಯಲ್ಲಿ ಕಾಲವಾದ ವಿಲ್ಲಿಯಂ ಮಿಲ್ಲಿಗನ್ ಎಂಬಾತನು ೧೧ ಲಕ್ಷ ರೂಪಾಯಿಯನ್ನೂ, ಡಾಕ್ಟರ್ ಥಾಮಸ್ ಗಾರ್ನೆಟ್ ಎಂಬಾತನು ೧೭ ಲಕ್ಷ ರೂಪಾಯಿಯನ್ನೂ, ಎಲ್ಲಿಂಗ್ಟನ್ ಎಂಬಾತನು ೬೫ ಸಾವಿರ ರೂಪಾಯಿಯನ್ನೂ ತಮ್ಮ ತಮ್ಮ ಆಸ್ತಿಗಳಿಂದ ಧರ್ಮ ಕಾರ್ಯಗಳಿಗೆ ವಿನಿಯೋಗಿಸುವಂತೆ ಉಯಿಲು ಬರೆದಿಟ್ಟಿರುತ್ತಾರೆ.

●●●●

ಬೆಲ್ಜಿಯಂ ರಾಜ್ಯದ ದೊರೆಯವರು ವಿಲಾಯತಿಗೆ ಸೇರಿದ ಲಿವರ್‌ಪೂಲ್ ಪಟ್ಟಣದ ವೈದ್ಯಪರಿಶೋಧನಾ ನಿಲಯಕ್ಕೆ ೩೯,೦೦೦ ರೂಪಾಯಿ ಚಂದಾ ಕೊಟ್ಟಿದ್ದಾರೆ. ಆ ವೈದ್ಯಶಾಲೆಯಲ್ಲಿ ಡಾಕ್ಟರುಗಳು ಸೇರಿ, ಉಷ್ಣದೇಶಗಳಲ್ಲಿ ಪ್ರಬಲವಾಗಿರುವ ರೋಗಗಳ ಲಕ್ಷಣ ಪರಿಹಾರ ಮೊದಲಾದ ವಿಷಯಗಳನ್ನು ಕುರಿತು ಪರಿಶೋಧನೆ ಮಾಡುವರು.

●●●●

ಆಫ್ರಿಕಕ್ಕೆ ಸೇರಿದ ಸೌಡಾನ್ ಪ್ರಾಂತ್ಯದಲ್ಲಿ ತಾಲೋದಿ ಎಂಬ ಸ್ಥಳದಲ್ಲಿ ದೇಶೀಯ ಪ್ರಜೆಗಳಿಗೂ ಈಜಿಪ್ಟ್ ಸರ್ಕಾರದ ಸೈನಿಕರಿಗೂ ಯುದ್ಧವಾಯಿತು. ೩೦ ಜನ ಸರ್ಕಾರಿ ಸೈನಿಕರೂ ಇಬ್ಬರು ಉದ್ಯೋಗಸ್ಥರೂ ಮಡಿದು ಹೋದರು. ಈಗ ಆ ದಂಗೆಯನ್ನು ಅಡಗಿಸುವುದಕ್ಕೆ ೨೫೦ ಮಂದಿ ಕಾಲದಳ ಸೈನಿಕರನ್ನು ಅಲ್ಲಿಗೆ ಕಳುಹಿಸಿದಾರೆ.

●●●●

ಜರ್ಮನಿ ಸೈನಿಕರು ಪಶ್ಚಿಮ ಆಫ್ರಿಕದಲ್ಲಿ ಸ್ವದೇಶಿಗಳ ದಂಗೆಯನ್ನು ಅಡಗಿಸುವುದಕ್ಕೆ ಪ್ರಯತ್ನಪಟ್ಟಾಗ ಅವರ ಮೇಲೆ ಯುದ್ಧವೇ ಮಾಡಬೇಕಾಯಿತು. ಈ ಯುದ್ಧದಲ್ಲಿ ೨೫೦ ಮಂದಿ ಸ್ವದೇಶಿಗಳನ್ನು ಕೊಂದು ಮಲಗಿಸಿದರು. ಸೈನಿಕರಲ್ಲಿ ೧೦ ಮಂದಿ ಕೊಲ್ಲಲ್ಪಟ್ಟರು; ೧೦ ಮಂದಿಗೆ ಗಾಯಗಳಾಗಿವೆ. ಆದರೂ ದಂಗೆ ಇನ್ನೂ ಶಮನವಾದಂತೆ ಕಾಣುತ್ತಿಲ್ಲ.

●●●●

ಫಾದರ್ ಗೇಪನ್ ಎಂಬಾತನು ರಷ್ಯಾ ರಾಜ್ಯದಲ್ಲಿ ಪೋಲೀಸಿನವರೊಡನೆ ಒಳಸಂಚು ಮಾಡಿಕೊಂಡು, ಪ್ರಜೆಗಳ ಮುಖಂಡರನ್ನು ಸರ್ಕಾರದವರಿಗೆ ಹಿಡಿದು ಕೊಟ್ಟದ್ದರಿಂದ ಜನರು ಅವನನ್ನು ಕೊಂದು ಹಾಕಿದರೆಂದು ತಿಳಿಸಿದೆವಷ್ಟೆ. ಈಚೆಗೆ ಈತನು ಪೋಲೀಸಿನವರಿಂದ ಎರಡು ಲಕ್ಷ ರೂಪಾಯಿ ಸಂಪಾದಿಸಿ ಮಾಡಿಕೊಂಡು, ಲಂಡನ್ ಪಟ್ಟಣದಲ್ಲಿ ಸುಖವಾಗಿದ್ದಾನೆಂದು ಒಂದು ಪತ್ರಿಕೆಯು ಹೇಳುವುದು.

●●●●

"ಎಂಪೈರ್ ಡೇ" ಎಂಬ ಚಕ್ರಾಧಿಪತ್ಯದ ದಿನ ವಿಲಾಯತಿಯಲ್ಲಿ ೭,೦೦೦ ಪಾಠಶಾಲೆಗಳ ಮಕ್ಕಳೂ, ಇಂಗ್ಲಿಷ್ ಪ್ರಭುತ್ವಕ್ಕೊಳಪಟ್ಟ ಸಂಸ್ಥಾನಗಳಲ್ಲಿ ೩೭,೦೦೦ ಪಾಠಶಾಲೆಗಳ ಮಕ್ಕಳೂ ಸೇರಿ ಸಂತೋಷೋತ್ಸವಗಳಲ್ಲಿ ಬೆರೆದು ದಿನವನ್ನು ಆನಂದವಾಗಿ ಕಳೆದರು. ಪ್ರತಿ ಪಾಠಶಾಲೆಯಲ್ಲಿ ೧೦೦ ಹುಡುಗರಿದ್ದಾರೆಂದು ಸರಾಸರಿ ಹಿಡಿದರೂ ಆ ದಿನ ೪೦ ಲಕ್ಷ ಮಕ್ಕಳು ಸೇರಿ ಸಂತೋಷಪಟ್ಟರೆಂದು ಧಾರಾಳವಾಗಿ ಹೇಳಬಹುದು.

●●●●

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್, ಆರೆಂಜ್ ನದೀ ಸ್ವಾಸ್ಥ್ಯ, ನಟಾಲ್, ಈ ಆಧಿಪತ್ಯಗಳನ್ನು ಆಳಿ ರಾಜ್ಯವನ್ನು ವಿಸ್ತರಿಸಿ ಹಿಂತಿರುಗಿ ವಿಲಾಯತಿಗೆ ಬಂದಿರುವ ಲಾರ್ಡ್ ಮಿಲ್ನರ್ ಯವರಿಗೆ ವಿಲಾಯತಿಯ ಪ್ರಜೆಗಳೆಲ್ಲಾ ಸೇರಿ ಬಹಿರಂಗವಾಗಿ ಅಡ್ರೆಸ್ ಒಪ್ಪಿಸಿ ಸನ್ಮಾನ ಮಾಡಬೇಕೆಂದು ತೀರ್ಮಾನವಾಗಿದೆ. ಈ ಅಡ್ರೆಸ್ಸಿಗೆ ಪ್ರತಿ ಒಂದು ದೊಡ್ಡ ಊರಿನಲ್ಲೂ ಇರುವ ಮುಖ್ಯ ಮುಖ್ಯ ಪ್ರಜೆಗಳು ರುಜು ಹಾಕುತ್ತಿದ್ದಾರೆ. ಎಲ್ಲಾ ಒಟ್ಟು ಹತ್ತು ಲಕ್ಷ ರುಜುಗಳು ಬೀಳುವುದಕ್ಕೆ ಅಡ್ಡಿಯಿಲ್ಲ.

●●●●

ಇಂಗ್ಲಿಷ್ ಪ್ರಭುತ್ವಕ್ಕೆ ಸೇರಿದ ನ್ಯೂಜೀಲಾಂಡೆಂಬ ಸಂಸ್ಥಾನದಲ್ಲಿ ಅನೇಕ ರಾಜಕೀಯ ಬದಲಾವಣೆಗಳನ್ನು ಮಾಡಿ ತುಂಬಾ ಪ್ರಖ್ಯಾತಿಗೆ ಬಂದಿದ್ದ ಪ್ರಧಾನ ಮಂತ್ರಿ ರೈಟ್ ಆನರೇಬಲ್ ರಿಚರ್ಡ್ ಜಾನ್ ಸೆಡ್ಡನ್ ರವರು ಕಳೆದ ವಾರ ಅಕಸ್ಮಾತ್ತಾಗಿ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಇವರ ಅಕಾಲಮರಣದಿಂದ ರಾಜ್ಯಕ್ಕೇ ದೊಡ್ಡನಷ್ಟವಾಗಿದೆ ಎಂದು ವಿಲಾಯತಿಯವರು ಹೇಳುತ್ತಿದ್ದಾರೆ. ಚಕ್ರವರ್ತಿ ಸಾರ್ವಭೌಮರವರೂ ಇಂಗ್ಲಿಷ್ ಗವರ್ನಮೆಂಟಿನ ಮಂತ್ರಿಗಳೂ ತಮ್ಮ ಸಂತಾಪವನ್ನು ತಂತೀ ವರ್ತಮಾನಗಳ ಮೂಲಕ ತಿಳಿಯಪಡಿಸಿರುವರು.

●●●●

ರಷ್ಯಾ ಜಪಾನ್ ಯುದ್ಧದಲ್ಲಿ ಜಪಾನಿನವರ ಕಡೆ ೪೭,೩೮೭ ಜನ ಸೈನಿಕರು ಕೊಲ್ಲಲ್ಪಟ್ಟರು; ೧೯,೪೨೭ ಮಂದಿ ಗಾಯಗಳಿಂದಲೂ, ೨೧,೮೦೨ ಜನರು ಕಾಯಿಲೆಯಲ್ಲೂ ನರಳಿ ಸತ್ತರು. ಅಂತು ಒಟ್ಟು ೮೦,೩೭೮ ಜನರು ಜಪಾನಿನ ಕಡೆ ಕಾಲವಾದರು. ೬೫,೦೦೦ ಸೈನಿಕರಿಗಿಂತಲೂ ಹೆಚ್ಚಾಗಿ ಗಾಯಪಟ್ಟಾಗ್ಯೂ ಅಷ್ಟು ಸ್ವಲ್ಪ ಜನರು ಮಾತ್ರ ಸತ್ತುಹೋದದ್ದು ಅಲ್ಲಿನ ಡಾಕ್ಟರುಗಳ ಸಾಮರ್ಥ್ಯವನ್ನು ಪ್ರಕಾಶಪಡಿಸುತ್ತಿದೆ. ಅವರು ಗಾಯಪಟ್ಟ ಸೈನಿಕರಲ್ಲಿ ಶೇಕಡಾ ೯೦ ರಷ್ಟು ಜನರನ್ನು ಬದುಕಿಸಿರುತ್ತಾರೆ. ಇದು ಅಪೂರ್ವವಾಗಿರುತ್ತದೆ.

●●●●

ವಿಲಾಯತಿಯಲ್ಲಿ ಕಾಲವಾದ ಮಿಸ್ ಕ್ಲಾಡಿಯಾ ಗ್ರಿಫಿತ್ಸ್ ಎಂಬಾಕೆಯು ತನ್ನ ಆಸ್ತಿಯಲ್ಲಿ ಆರು ಲಕ್ಷ ರೂಪಾಯಿಯನ್ನೂ, ಲಾರ್ಡ್ ಇವರ್‌ಕ್ಲೈವ್ ಎಂಬಾತನು ಮೂರು ಲಕ್ಷ ರೂಪಾಯಿಯನ್ನೂ, ಮಿಸ್ ಎಲಿಸಾ ಬಾರ್ಬರ್ ಎಂಬಾಕೆಯು ೨ ಲಕ್ಷವೂ ೪೦ ಸಾವಿರ ರೂಪಾಯಿಯನ್ನೂ, ರಂಗೂನ್ ಪಟ್ಟಣದಲ್ಲಿ ಕ್ರೈಸ್ತಗುರುಪೀಠವನ್ನು ಪಡೆದಿದ್ದ ಮಿಸ್ಟರ್ ಸ್ಟ್ರಾಚನ್ ಎಂಬಾತನು ೬೦ ಸಾವಿರ ರೂಪಾಯಿಯನ್ನೂ, ರಾಬರ್ಟ್ ಪಾರ್ಕ್ ಎಂಬಾತನು ೧೦೫ ಸಾವಿರ ರೂಪಾಯಿಯನ್ನೂ, ವಿಲ್ಯಂ ಅಲೆಕ್ಸಾಂಡರ್ ಮ್ಯಾಥಿಸನ್ ಎಂಬಾತನು ೨೨,೫೦೦ ರೂಪಾಯಿಯನ್ನೂ ನಾನಾ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟಿದ್ದಾರೆ.

ಗತಿಸಿದ ವಿದ್ವಾನ್ ಅಳಸಿಂಗರಾಯಾಚಾರ್ಯರು.

[ಬರೆದು ಬಂದದ್ದು]

ಇವರು ಶ್ರೀಮನ್ಮಹಾರಾಜರವರ ಆಸ್ಥಾನದ ವಿದ್ವಾಂಸರಾಗಿಯೂ ಕನ್ನಡ ಸಂಸ್ಕೃತ ಮಹಾರಾಷ್ಟ್ರ ಭಾಷೆಗಳಲ್ಲಿ ಕವಿತಾ ಮಾಡತಕ್ಕವರಾಗಿಯೂ, ಮಹಾರಾಣಿ ಕಾಲೇಜು ಕನ್ನಡಪಂಡಿತರಾಗಿಯೂ, ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಟೆಕ್ಸ್ಟ್ ಬುಕ್ಕು ಕಮಿಟಿಗೆ ಮೆಂಬರಾಗಿಯೂ, ಗ್ರಂಥಕರ್ತರುಗಳಾಗಿಯೂ, ಅನೇಕ ದೊಡ್ಡ ಮನುಷ್ಯರಿಗೂ ವಿದ್ವಜ್ಜನರಿಗೂ ಬೇಕಾದವರಾಗಿಯೂ ಸದಾಕಾಲದಲ್ಲಿಯೂ ಗ್ರಂಥಾವಲೋಕನ ಗ್ರಂಥರಚನೆಯಲ್ಲೇ ಆಸಕ್ತರಾಗಿಯೂ ಇದ್ದು ಈ ಮಾಹೆ ತಾ. ೧೫ ನೆಯ ಶುಕ್ರವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇನೆ. ಇವರು ಮಾಡಿದ ಅಷ್ಟಭಾಷಾ ಚಿತ್ರಬಂಧದ ಕವಿತೆಯು ಸಹ ಪ್ರಿನ್ಸ್ ಆಫ್ ವೇಲ್ಸ್ ಮಹಾ ಪ್ರಭುಗಳು ಈ ಸಂಸ್ಥಾನಕ್ಕೆ ದಯಮಾಡಿಸಿದ್ದ ವೇಳೆ ನಡೆದ ಯಗ್ಜಿಬಿಷನ್ ಶಾಲೆಯಲ್ಲಿ ಈ ಪ್ರಭುಗಳ ಮತ್ತು ಶ್ರೀಮನ್ಮಹಾರಾಜರವರ ಘನವಾದ ಚಿತ್ತಕ್ಕೆ ಸಹ ಸಂತೋಷಕರವಾಗಿ ಆಗಿರುತ್ತೆ. ಈ ವಿದ್ವಾಂಸರು ಖಾಯಿಲೆ ಆಗಿದ್ದ ವೇಳೆ ನಮ್ಮ ಶ್ರೀಮನ್ಮಹಾರಾಜರವರು ಗುಣಮಾಡಿಕೊಳ್ಳುವ ಬಗ್ಗೆ ಸಹ ಇನಾಂ ಅಪ್ಪಣೆಕೊಡಿಸಿದ್ದರು. ಇವರ ಖಾಯಿಲೆ ದುರಸ್ತು ಆಗಲಿಲ್ಲ. ಇವರು ಕರ್ನಾಟಕ ಭಾಷಾಕರ, ಪಾಕಶಾಸ್ತ್ರ, ಪರಿಕಥೆಗಳು, ಅಲಂಕಾರಗ್ರಂಥ, ವೈದ್ಯಗ್ರಂಥ, ನಾಟಕಗಳನ್ನೂ, ಷೇಕ್ಸ್‌ಪಿಯರ್ ಮಹಾಕವಿ ರಚಿತವಾದ ನಾಟಕಗಳನ್ನೂ ರಚಿಸಿರುತ್ತಾರೆ. ಇಂಥಾ ಪಂಡಿತರನ್ನು ಕಳೆದುಕೊಂಡದ್ದಕ್ಕಾಗಿ ಕರ್ನಾಟಕಭಾಷಾಭಿಮಾನಿಗಳೆಲ್ಲಾ ವಿಷಾದಪಡುವರು.

ಸರ್ಕಾರಿ ಅಧಿಕಾರಿಗಳ ಬದಲಾವಣೆಗಳು.

ಮೈಸೂರು ಗವರ್ನಮೆಂಟಿನವರು ಮುಂದಿನ ಅಂದರೆ ಜುಲೈ ತಿಂಗಳ ಪ್ರಾರಂಭವಾದ ಸಂಸ್ಥಾನಾಮಳೆ ಅಧಿಕಾರಿಗಳ ವರ್ಗಾವರ್ಗಿ ಬದಲಾವಣೆಗಳನ್ನು ಜಾರಿಗೆ ತರುವವರಾಗಿದ್ದಾರೆ. ಈ ಹೊಸ ಬದಲಾವಣೆಗಳೆಲ್ಲಾ ಮುಂದಿನ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗುವವೆಂತಲೂ ಹೇಳುವರು. ಅವು ಯಾವವೆಂದರೆ—

ಮ॥ ಚಂದ್ರಶೇಖರ ಐಯ್ಯರವರು— ರೆವಿನ್ಯೂ ಜನರಲ್ ಸೆಕ್ರೆಟರಿ; ಮ॥ ಎಲ್. ಅನಂತಸ್ವಾಮಿರಾಯರು—ಮುಜರಾಯಿ ಸೆಕ್ರೆಟರಿ.

ಮ॥ ಗಳಾದ ಬಾಲಸುಂದರಂ ಐಯ್ಯರವರೂ, ಕೆ. ಮತ್ತೂರಣರವರೂ, ಪಿ. ಜಿ. ಡಿಸೌಜಾಯವರೂ ಸೆಕ್ರೆಟರಿಯಟ್ಟಿನಲ್ಲಿ ಅಂಡರ್ ಸೆಕ್ರೆಟರಿಗಳಾಗುವರು. ಈ ಸ್ಕೀ ಮೊದಲನೆಯವರು ದಿವಾನರವರ ಹೋಂ ಆಫೀಸ್ ಅಂಡರ್ ಸೆಕ್ರೆಟರಿ ಕೆಲಸ ನೋಡುವರು.

ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರ್ ಮ॥ ಆ॥ ಕೆ. ಸಿ. ರಾಮಲಿಂಗಯ್ಯರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿಯೂ, ರೆವಿನ್ಯೂ ಕಮಿಷನರ ಪರ್ಸನಲ್ ಅಸಿಸ್ಟೆಂಟರಾದ ಮ॥ ಅರವಾಮುದು ಐಯ್ಯಂಗಾರ್ರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರಾಗಿಯೂ, ಕೋಲಾರ್ ಸಬ್ ಡಿವಿಜನ್ ಆ॥ ಕಮಿಷನರ್ ಮ॥ ತ್ಯಾಗರಾಜ ಐಯ್ಯರವರೂ ರೆವಿನ್ಯೂ ಕಮಿಷನರ ಆಫೀಸ್ ಮ್ಯಾನೇಜರ್ ಮ॥ ಕೆ. ಸುಬ್ಬರಾಯರೂ ರೆವಿನ್ಯೂ ಕಮಿಷನರವರ ಅಸಿಸ್ಟೆಂಟರುಗಳಾಗಿಯೂ ನೇಮಕವಾಗುವರು.

ಕೋಲಾರದ ಅಮಲ್ದಾರ್ ಮ॥ ವ್ಯಾತ್ಯಂಜಯ ಐಯರವರನ್ನು ಎಕ್ಸ್‌ಟ್ರಾ ಆ॥ ಕಮಿಷನರಾಗಿ ಬಡ್ತಿ ಮಾಡಿ, ಎಕ್ಸೈಸ್ ಕಮಿಷನರವರ ಅಸಿಸ್ಟೆಂಟರಾಗಿ ನೇಮಿಸುವರು.

ಬೆಂಗಳೂರು ಅಮಲ್ದಾರ್ ಮ॥ ಎಂ. ಜಿ. ಕೃಷ್ಣಸ್ವಾಮಿರಾಯರಿಗೆ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ವೈಸ್ ಪ್ರಸಿಡೆಂಟ್ ಕೆಲಸವೂ, ಶಿವಮೊಗ್ಗ ಆ॥ ಕಮಿಷನರ್ ಮ॥ ಕೆ. ಚಾಂಡಿಯವರಿಗೆ ದಾವಣಗೆರೆ ಸಬ್ ಡಿವಿಜನಿಗೆ ವರ್ಗವೂ, ಮೈಸೂರು ಮ್ಯುನಿಸಿಪಾಲಿಟಿ ವೈಸ್ ಪ್ರಸಿಡೆಂಟ್ ಮ॥ ಸಿ. ವೆಂಕಟರಾಯರಿಗೆ ಶಿವಮೊಗ್ಗ ಡಿವಿಜನಿಗೆ ವರ್ಗವೂ, ಮ॥ ಜಿ. ಹನುಮಂತರಾಯರಿಗೆ ಮೈಸೂರು ಮ್ಯುನಿಸಿಪಲ್ ವೈಸ್ ಪ್ರಸಿಡೆಂಟ್ ಕೆಲಸವೂ ಆಗುವದಾಗಿದೆ.

ಸರ್ಕಾರದವರು ಮೈಸೂರು ಸಬ್ ಜಡ್ಜ್ ಮ॥ ಟಿ. ಪರಮಶಿವ ಐಯ್ಯರವರನ್ನೂ ಕೋಲಾರ್ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮ॥ ಆರ್. ಬಿ. ಪ್ರಮರ್ ಯವರನ್ನೂ ಡಿಸ್ಟ್ರಿಕ್ಟ್ ಜಡ್ಜಿಗಳ ಕೆಲಸಕ್ಕೆ ಬಡ್ತಿ ಮಾಡುವರು.

ಸೆಕ್ರೆಟರಿಯಟ್ ರಿಜಿಸ್ಟ್ರಾರ್ ಮ॥ ಡಿ. ಎಂ. ನರಸಿಂಗರಾಯರನ್ನು ಸಬ್ ಜಡ್ಜ್ ಕೆಲಸಕ್ಕೆ ನೇಮಿಸುವರು. ಮತ್ತು ಮೈಸೂರು ಮುನ್ಸಿಫರಾದ ಮ॥ ಕೃಷ್ಣಸ್ವಾಮಿ ಐಯ್ಯಂಗಾರರಿಗೆ ಸಬ್ ಜಡ್ಜ್ ಕೆಲಸಕ್ಕೆ ಬಡ್ತಿ ಆಗುವುದು.

ಮ॥ ಬೌರಿಂಗ್ ಯವರನ್ನು ಕೋಲಾರ್ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ವರ್ಗ ಮಾಡುವರು ಎಂಬದಾಗಿ ತಿಳಿದು ಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಆ॥ ಕೆಮಿಸ್ಟ್ ಮ॥ ಬಿ. ವೆಂಕಟರಾಯರಿಗೆ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆ॥ ಕಮಿಷನರ್ ಮ॥ ಕೆ. ಕೃಷ್ಣ ಐಯರವರು ರಜದಿಂದ ವಾಪಸು ಬಂದಿರುವದರಿಂದ ಅವರು ಬೆಂಗಳೂರು ದಿವಾನ್ ಖಜಾನಾ ಛಾರ್ಜನ್ನು ವಹಿಸತಕ್ಕದ್ದು.

ಮ॥ ಸಿ. ಹೆಚ್. ಯೇಟ್ಸ್‌ಯವರು ಸರ್ಕಾರಿ ಕೆಲಸದ ಮೇಲೆ ಮೂರು ತಿಂಗಳ ವರೆಗೆ ವಿಲಾಯತಿಗೆ ಹೋಗಬೇಕಾದದರಿಂದ ಅವರ ಗೈರ್‌ಹಾಜರಿಯಲ್ಲಿ ಗವರ್ನಮೆಂಟ್ ಆ॥ ಸೆಕ್ರೆಟರಿ ಮ॥ ಹೆಚ್. ರಾಮಯ್ಯನವರು ತಮ್ಮ ಕೆಲಸಗಳೊಂದಿಗೆ ಗವರ್ನಮೆಂಟ್ ಪ್ರೆಸ್ ಮೊದಲಾದ್ದರ ಛಾರ್ಜನ್ನೂ ವಹಿಸಿರತಕ್ಕದ್ದು.

ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮ॥ ಎಚ್. ಜೆ. ಭಾಭಾ ಯವರಿಗೆ ಜೂನ್ ೧೧ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ನಾಲ್ಕು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ.

ಮೈಸೂರು ಮಹಾರಾಜರವರ ಕಾಲೇಜಿನ ಪ್ರಿನ್ಸಿಪಲ್ ಮ॥ ವೀಯರ್ ಯವರು ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ಲಾಗಿ ಬದಲಿ ನೋಡತಕ್ಕದ್ದು.

ಮೈಸೂರು ಮಹಾರಾಜರವರ ಕಾಲೇಜಿನ ಪ್ರೊಫೆಸರ್ ಮ॥ ಟೇಟ್ ಹಂ ಯವರು ಅದೇ ಕಾಲೇಜಿನ ಪ್ರಿನ್ಸಿಪಲ್ಲಾಗಿ ಬದಲಿ ನೋಡತಕ್ಕದ್ದು.

ಹುಂಕೂರು ತಾಲ್ಲೂಕ್ ಅಮಲ್ದಾರ್ ಮ॥ ವಿ. ಕಂಠೀರವಾಚಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ರಜಾ ಕೊಟ್ಟಿದೆ.

ಅಮಲ್ದಾರ್ ಮ॥ ಜೆ. ಬಾಲ್‌ಯವರನ್ನು ಗುಬ್ಬಿಯಿಂದ ತುಮಕೂರಿಗೆ ವರ್ಗ ಮಾಡಿದೆ.

ಪೋಲೀಸ್ ಹೆಡ್ ಕ್ವಾರ್ಟರ್ ಇನ್ಸ್‌ಪೆಕ್ಟರ್ ಮತ್ತು ಟಿ. ನರಸೀಪುರದ ತಾಲ್ಲೂಕ್ ಅಮಲ್ದಾರ್ ಮ॥ ಟಿ. ನಾರಾಯಣರಾಯರು ಗುಬ್ಬಿ ತಾಲ್ಲೂಕಿನ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಆ॥ ಕಮಿಷನರ್ ಮ॥ ಕೆ. ಮತ್ತೂರಯ್ಯನವರಿಗೆ ಕೊಟ್ಟಿದ್ದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳದಿಲ್ಲವಾಗಿ ರದ್ದು ಮಾಡಿದೆ.

ಮುಂದೆ ಹೇಳುವ ವೈದ್ಯ ಇಲಾಖೆಯ ಆಫಿಸರುಗಳ ವರ್ಗಾವರ್ಗಿ ಹುಕುಂ ಮಾಡಿದೆ:—

ಮ॥ ಕೆ. ಅಪ್ಪಯ್ಯನವರನ್ನು ಬೆಂಗಳೂರಿನಿಂದ ಕಡೂರಿಗೆ ಮ॥ ಕುಪ್ಪುಸ್ವಾಮಿ ಮೊದಲಿಯಾರ್ರನ್ನು ಕಡೂರಿನಿಂದ ಕೋಲಾರ್ ಚಿನ್ನದ ಗಣಿಗಳಿಗೆ, ಮ॥ ಕೃಷ್ಣಸ್ವಾಮಿ ಐಯ್ಯರವರನ್ನು ಕೋಲಾರ್ ಚಿನ್ನದ ಗಣಿಯಿಂದ ಬೆಂಗಳೂರಿಗೆ.

ಮುಂದೆ ಹೇಳುವ ಏರ್ಪಾಡುಗಳು ಹುಕುಂ ಮಾಡಲ್ಪಟ್ಟಿವೆ.— ಕಾಲಿ(ಸ್)ಪೇಟೆ ಡೆಪ್ಯುಟಿ ಅಮಲ್ದಾರ್ ಮ॥ ಗುಲಾಂ ಮಹಮದ್ ಯವರು ದೊಡ್ಡ ಬಳ್ಳಾಪುರದ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು. ಜಗ್ಗರ್ದೇವನ ಕೋಟೆ ತಾಲ್ಲೂಕ್ ಶಿರಸ್ತೆದಾರ್ ಎನ್. ನಂಗಣ್ಣನವರು ಕಾಲೇಸ್ ಪೇಟೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಹಾಸನ ಡಿಸ್ಟ್ರಿಕ್ಟ್ ಎಕ್ಸ್‌ಟ್ರಾ ಆ॥ ಕಮಿಷನರ್ ಮ॥ ನರ್ಸ್‌ರಾಜ ಚೆಟ್ಟಿಯವರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮ॥ ಪಿ. ಬಿ. ಥಾಮಸ್ ಯವರು ರಜದ ಮೇಲಿರುವ ಕಾಲದ ಮ॥ ಆರ್. ಟಿ. ಎಂ. ಮೋರ್ಯ ಯವರನ್ನು ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬದಲಿ ನೋಡುವಂತೆ ನೇಮಕ ಮಾಡಿದೆ.

ಮ॥ ಜಾರ್ಜ್ ಲಾವೆಲ್ ಯವರು ಕಾಲವಾದ ಸಬಬು ಮ॥ ಎಲ್. ಎಚ್. ಬೆಕ್ವಿತ್ ಯವರನ್ನು ಗಣಿಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ನೇಮಕ ಮಾಡಲ್ಪಟ್ಟಿದೆ.

ಚಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಚಾತ್ರಿಗಳಿಗೆ ನಾವು ಬೆಲೆ ಕೊಡಲಾರೆವು. ಆದಕಾರಣ ಚಾತ್ರಿದಾರರು ನಮ್ಮ ತಿಳುವಳಿಕೆಗೆ ಸ್ವರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಚಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಚಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಕರೆಸ್‌ಪಾಂಡೆನ್ಸ್

ಅರಸೀಕೆರೆ ಸಂಗತಿಗಳು

ಅಯ್ಯಾ,

ಬೆಂಗಳೂರಿಂದ ಡಾಕ್ಟರ್ ಮ॥ ಪಲ್ಪು ಸಾಹೇಬರು ಬಂದು ಪ್ರಾಂತ್ಯ ಪಾಂತಿಭೇದಿ, ಪ್ಲೇಗ್ ವಿಷಯವಾಗಿ ತಾಲ್ಲೂಕು ಕಚೇರಿಯಲ್ಲಿ ಉಪನ್ಯಾಸಮಾಡಿದರು. ಮತ್ತು ಊರನ್ನೆಲ್ಲಾ ಜಪಮಾಡಿ ಎಲ್ಲಾ ಭಾವಿಗಳಲ್ಲಿಯೂ ನೀರನ್ನು ಪರೀಕ್ಷೆ ಮಾಡಿಸಿದರು. ಈಗೆ ಯಾವ ಉಪದ್ರವೂ ಇಲ್ಲ. ಈ ದಿವಸ ಸಂತೆಯೂ ವಿಶೇಷವಾಗಿ ಗಳು ಕೂಡಿ ಬಂದಿರಲಿಲ್ಲ. ಗೌರ್ನಮೆಂಟ್ ರೂಲ್ಸಿನ ಪ್ರಕಾರ ಆಸ್ಪತ್ರೆಯ ಬಾಗಲು ತೆಗೆಯುವದಿಲ್ಲ. ಈಗಿರುವ ಆಸ್ಪಿಟಲ್ ಅಸಿಸ್ಟೆಂಟ್—೧೧ ಘಂಟೆಯಾದರೂ ಔಷಧಕೊಡುವದಿಲ್ಲ. ಮಧ್ಯಾಹ್ನ ೩ ಘಂಟೆಯಾದರೂ ಬಾಗಲೇ ಹಾಕಿರುತ್ತೆ. ರೋಗಿಗಳಿಗೆ ಸಕಾಲಕ್ಕೆ ಔಷಧ ದೊರೆಯುವದಿಲ್ಲ. ಇಲ್ಲಿಗೆ ಹಾಸನದಿಂದ ಆ॥ ಸರ್ಜನ್ ಮ॥ ರಾಜಮರಾಯರು ಮತ್ತು ಆ॥ ಕಮಿಷನರ್ ಮ॥ ರಾಮಸ್ವಾಮಿಯವರು ಅಂಟುಜಾಡ್ಯಗಳ ಇನ್ಸ್‌ಪೆಕ್ಷನ್‌ಗೆ ಬಂದಿದ್ದರು. ಆಗ್ಗೆ ಆ॥ ಸರ್ಜನರು ಆಸ್ಪತ್ರೆಯನ್ನು ಜಪಮಾಯಿಷಿ ಮಾಡಿದ್ದರಲ್ಲಿ ಆಸ್ಪತ್ರೆಯಲ್ಲಿಯೇ ಇರತಕ್ಕ ಕೆಲವು ಸಾಮಾನುಗಳು ಆಸ್ಪತ್ರೆ ಮನೆಯಲ್ಲಿ ಇತ್ತು. ಅದನ್ನು ತರಿಸಿ ಆಸ್ಪತ್ರೆಯಲ್ಲಿಯೇ ಇಡಿಸಿದರು. ಯಾಕೆ ಸಕಾಲಕ್ಕೆ ಆಸ್ಪತ್ರೆ ಬಾಗಲು ತೆಗೆಯುವದಿಲ್ಲ, ರೋಗಿಗಳಿಗೆ ಯಾಕೆ ಔಷಧ ಕೊಡುವದು ಎಂದು ಕೇಳುವಲ್ಲಿ ಜವಾಬು ಏನೂ ಇಲ್ಲ. ಈಗಲಾದರೂ ನಮ್ಮ ಆ॥ ಸರ್ಜನ್ ಮ॥ ರಾಜರಾಮರಾಯರು ಬಡಜನಗಳಿಗೆ ಸಕಾಲಕ್ಕೆ ಔಷಧ ಕೊಡುವ ಹಾಗೆ ಏರ್ಪಾಡು ಮಾಡುತ್ತಾರೆಂದು ನಂಬಿರುತ್ತೇನೆ.

ಪ್ರಜಾ ಹಿತಚಿಂತಕ.

ಸ್ಯ

ಇಲ್ಲಿ ಶುಕ್ರವಾರ ಸಂತೆ ಆಗುತ್ತದೆ. ಈ ಸಂತೆಯಲ್ಲಿ ಕಳ್ಳರ ಕಾಟ, ಗಬ್ಬಗರ ಕಾಟ, ಸರ್ಕಾರಿ ಸಣ್ಣ ನೌಕರರ ಕಾಟ ಹೆಚ್ಚಾಗಿರುವುದು. ಕಳೆದ ಸಂತೆಯಲ್ಲಿ ಬೆಟ್ಟದ ಪುರದಿಂದ ಈ ಸಂತೆಗೆ ಒಬ್ಬ ಗಂಡಸು ಒಬ್ಬ ಹೆಂಗಸು ಗುಟು ಕಳ್ಳರ ಪೈಕಿ ಇಬ್ಬರು ಕೆಲ್ಕೆಂಚರಾಯ ಒಬ್ಬ ಸಿಪಾಯಿಗಳ ಬೀದಿಯಲ್ಲಿ ಇದ್ದ ಹಣವನ್ನು ಅವರ ಬಳಿ ಇದ್ದ ಒಡವೆ ಸಹಿತವಾಗಿ ಕಳೆದು ಕೊಂಡು ಹೋಗುವಷ್ಟು ಅವರುಗಳು ಜನಗಳು ಕಂಡು ಹೇಳಿದ್ದರ ಮೇಲೆ ಅವರನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು. ನೆನ್ನೆ ಶುಕ್ರವಾರ ಜುಲೈ ೧೩ನೆ ತಾರೀಖಿನ ಸಂತೆಯಲ್ಲಿ ಮಂಡಿಯವರಿಂದ ತರಕಾರಿ ಬಾಚಿಕೊಂಡದ್ದರಿಂದ ಫಿರ್ಯಾದು ಮಾಡಿದ್ದರ ಮೇಲೆ ಅಮಲ್ದಾರರು ಆ ದಿವಸ ವಿಗಳಿಸಿದರು. ಒಬ್ಬ ಸರ್ಕಾರಿ ನೌಕರನು ಸಂತೆಯಲ್ಲಿ ಜನಗಳಿಗೆ ಹಣ ಕೊಡುತ್ತಾ, ಹಸಿಕೆ ರವನೆಂದೆಂತಲೂ ಸುಬೇದಾರ ನೆಂದೆಂತಲೂ ಎರಡು ಹಸಿಗೆ ಲೂಟಿ ಮಾಡುತ್ತಾನೆ. ಇದನ್ನು ಹಿಡಿಯದೆ ಅಧಿಕಾರಿಗಳ ಅಬರೂಟು ಕಳೆಯುತ್ತಾನೆ. ಈ ಸಂಗತಿ ಅಮಲ್ದಾರರು ಇದಕ್ಕೆ ಇದ ವಿದು ಅವರ ತಿಳುವಳಿಕೆಗೆ ಬರಲಿಲ್ಲವಾಗಿದೆ.

ಒಬ್ಬ ವಾರ್

ತಾಲ್ಲೂಕು ವರ್ತಮಾನಗಳು.

ತಿಪಟೂರು.—ಜುಲೈ ೧೦ ನಾಳೆಯೇ ಇಲ್ಲ. ಮಳೆ ಮೋಡಗಳು ಬೀಸುತ್ತಿವೆ. ಗಾಳಿ ಬೀಸುತ್ತದೆ. ಊರಲ್ಲಿ ಆರೋಗ್ಯವಿದೆ. ಪಟ್ಟಣದ ಕೆಲವು ಕಡೆಗಳಲ್ಲಿ ನಾಲ್ಕೈದು ಜನರು ಕಾಲರಾ ರೋಗದಿಂದ ಸತ್ತರು. [illegible] ತಲೆನೋವು, ಜ್ವರ, ಕೆಮ್ಮು, ಕೈಕಾಲು ನೋವು [illegible] ಈ ರೋಗದ ಲಕ್ಷಣಗಳು. [illegible] ವ್ಯಾಪಾರಸ್ಥರ ಭಾವಿಯಲ್ಲಿ ಕೈಪಟ್ಟಿ ಬಳಸುವ ನೀರು [illegible] ಈ ವ್ಯಾಪಾರಸ್ಥರ ಹಳ್ಳಿಗಳಿಗೆ [illegible] ಜನರು [illegible] ಪೋಲೀಸ್ ಇನ್ಸ್‌ಪೆಕ್ಟರ್ ರವರು [illegible] ಬಡತನವಾಗಿ [illegible] ಇಲ್ಲಿ ಕೆಲವರು [illegible] ನಮ್ಮ ಅಮಲ್ದಾರರು [illegible] ಪೋಲೀಸ್ ಇನ್ಸ್‌ಪೆಕ್ಟರ್ ರವರು [illegible] ವರ್ತಮಾನವನ್ನು ಯಾರೂ ತಿಳಿಸಲಿಲ್ಲ. [illegible] ಆ ಹೋಗಿ ಬಿಸಿಲೇ ಇಲ್ಲದಂತಾಗಬೇಕೆಂದು ಪ್ರಾರ್ಥಿಸುತ್ತಾರೆ.

ಬೇಲೂರು.—ಕೆಲವು ದಿವಸಗಳ ಹಿಂದೆ ಹಾವು ಕಡಿದು ಒಬ್ಬ ಹುಡುಗನು ಸತ್ತನು. ಅನೇಕರು ಹಳ್ಳಿಯಲ್ಲಿ ಹಾವುಗಳನ್ನು ಕೊಂದು [illegible] ಗುಡಿಯಲ್ಲಿ [illegible] ತಲೆಗೆ ೧೦ ರೂಪಾಯಿ [illegible] ಬಹುಮಾನವನ್ನು ಕೊಡುವುದೆಂದು [illegible] ಕೆಲವು ವಿಷಯಗಳನ್ನು ಕೇಳಿದ್ದು ಅದನ್ನು [illegible] ಅಷ್ಟರೊಳಗೆ [illegible] ಪ್ರಾಣವನ್ನು [illegible] ಹೋಗಿರುವುದು ಅಷ್ಟರಿಂದ ನಮ್ಮ ಜನಗಳ [illegible] ನಿಶ್ಚಯವಾಗಿ ತಿಳಿದು ಕೊಳ್ಳದೆ [illegible] ಈ ತಾಲ್ಲೂಕಿನ ಪ್ರಜೆಗಳೆಲ್ಲಾ ಮುಖ್ಯವಾಗಿ [illegible] ಉಪ್ಪಿನಕಾಯಿ [illegible] ರೈತರೆಲ್ಲರೂ ಜಟಪಟಕ್ಕೆ [illegible] ಜನಗಳು ತಮ್ಮ [illegible] ಈ ತಿಂಗಳ ೧೯ ರಲ್ಲಿ ಒಬ್ಬ ಸಿಪಾಯಿಯು [illegible] ಈ ಊರು [illegible] ಹೋಗಿ ಕಾಲು [illegible] ನೋಡಿ [illegible] ಕೆರೆಯ ಕಾವಲುಗಾರನು [illegible] ಕೆರೆಯ ನೀರು ವಿನಹಾ [illegible] ಜನಗಳು [illegible] ಬೇಡುತ್ತಿದ್ದಾರೆ.

ಅರಸೀಕೆರೆ.—ಈ ಪ್ರಾಂತ್ಯ ಮಳೆಯಿಲ್ಲದೆ ಜನಕರುಗಳು ಸಾಯುತ್ತಲಿವೆ. ದನಗಳ ಮೇವಿಗೋಸ್ಕರ ಕಾವಲುಗಳನ್ನು ಕೊಡಬೇಕೆಂದು ಗ್ರಾಮಸ್ಥರು ಅರ್ಜಿ ಬರೆದುಕೊಳ್ಳುತ್ತಲಿದ್ದಾರೆ. ಚೆನ್ನಾಗಿ ಮಳೆ ಬಂದ ಮೇಲೆ ಅಕ್ರಮ [illegible] ನಿರೀಕ್ಷಿಸುತ್ತಿರುವ ಪಾಗ ಕಾಣುತ್ತೆ. ಕೇವಲ ಯತ್ನವಿಲ್ಲದೆ ಇರುವ ಸಂದರ್ಭದಲ್ಲಿ ನೆಂದಿ ಇತಾರಿಗೆ ಬೆಂಬಾ ನಾಲಾಯಕಾದ ಮರಗಳಲ್ಲಿ ಒಂದೆರಡು ಗುರುಗಳನ್ನು ಕೊಯ್ದುಕೊಂಡರೂ ಯಜಮಾನ ಇಲಾಖೆ ನೌಕರರು ಕ್ರಿಮಿನಲ್ ಕೇಸು ತರುತ್ತಾರೆ. ಮನುಷ್ಯರಿಗೂ ಯಾವ ವಿಧದಲ್ಲಾದರೂ ಜೀವಿಸಬಾರದು ಪಶುಗಳಿಗೆ ಅನ್ಯಾಯವಾಗಿ ಮೇವು ತಾಕದ ಕಟಾಕ್ಷ ರಂತೆ ನಾವು ಕ್ಷಾಮದ ಕಾಲ ಪ್ರಾಪ್ತವಾಗುತಲ್ಲ!—[illegible] ಟರ್ನಲ್ಲಿ ಕೊಳ್ಳಾ ಕೆಂಚಡಾಯಿಕಟ್ಟರುಂಟುಮಾಡುವ ಧರ್ಮಾರ್ಥವಾಗಿ ಬ್ರಾಹ್ಮಣರು ವೈಶ್ಯರು ಇಳಿದುಕೊಳ್ಳುವದಕ್ಕೆ ಮಜಬೂತಾದ ಒಂದು ಛತ್ರವು, ಅದಕ್ಕೆ ಸೇರಿದ ಹಾಗೆ ಒಂದು ಬಂಡಿಮೇಟು ಮತ್ತು ಅದರಲ್ಲಿ ಇತರ ಜನಗಳಿಗೆ ಇಳಿದುಕೊಳ್ಳಲು ಕೆಲವು ಕೊಠಡಿಗಳು ಸುಮಾರು ಹತ್ತು ಸಾವಿರ ರೂಪಾಯಿಗಳ ವರಿಗೂ ಖರ್ಚುಮಾಡಿ ತಯಾರುಮಾಡುತ್ತಲಿದ್ದಾರೆ. ಹಾಲಿ ಅರಸೀಕೆರೆಯಲ್ಲಿ ಈಗ್ಗೆ ಇವೇ ಛತ್ರ ಕಟ್ಟಡ ಇಷ್ಟು ದುಡ್ಡು ಪ್ರಯತ್ನವಾದ ಈ ಸಾಹುಕಾರರು ಈ ಕಟ್ಟಡದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಕೆಲವು ಬಡ ವಿದ್ಯಾರ್ಥಿಗಳಿಗೆ ಭೋಜನಕ್ಕೆ ಅನುಕೂಲವಾಗುವಂತೆ ಏರ್ಪಾಡು ಮಾಡಿದರೆ ಕಟ್ಟಡ ಕಟ್ಟಿದ್ದಕ್ಕೆ ಸಾರ್ಥಕವಾಗುತ್ತೆ.—ಈ ಊರಿನ ಹೊಲಗೇರಿಯಲ್ಲೂ ಒಂದು ಪಟ್ಟಿಯಲ್ಲಿ ದೂರದಲ್ಲಿರುವ ಎರಡು ಬಾವಿಯಲ್ಲೂ ಸಾಂಕ್ರಾಮಿಕ ಪ್ಲೇಗು ಆಗಿ ೧೭-೧೬ ಜನಗಳ ವರಿಗೂ ಮೃತಪಟ್ಟರು. ನಮ್ಮ ಅಮಲ್ದಾರರೂ ಡಿಸ್ಟ್ರಿಕ್ಟ್ ಡಾಕ್ಟರೂ ಬಹಳ ಮುತುವರ್ಜಿ ವಹಿಸಿ ಪೂರ್ಣ ಸ್ಥಳದಿಂದ ಔಷಧಗಳನ್ನು ತರಿಸಿ ಬಾಯಿಲೆಯವರಿಗೆ ಕೊಡುತ್ತಲಿದ್ದಾರೆ. ಇದರಿಂದ ಬಡ ಜನಗಳ ವರಿಗೂ ಗುಣವಾಗಿ ಸೌಖ್ಯದಲ್ಲಿದ್ದಾರೆ. ಇದೂ ಅಲ್ಲದೆ ತಾಲ್ಲೂಕು ನೌಕರರುಗಳಿಗೆ ಬೀದಿಗಳನ್ನು ಬಂಚಿಕೊಟ್ಟು ಕಚೇರಿ ಜಾಗೆಗಳನ್ನು ಖಾಲಿಮಾಡಿಸಿ ಬೇರೆ ಏರ್ಪಾಡು ಮಾಡಿದ್ದಾರೆ. ಆಯಾ ಮನೆ ಮಾಲೀಕರುಗಳ ಮನೆಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವ ಬಾಗಿಲಲ್ಲೂ ಕಂಡಿಯಲ್ಲೂ ನೀರನ್ನು ಚೆನ್ನಾಗಿ ಕಾಯಿಸಿ ಆರಿಸಿ ಕುಡಿಯುವುದರೊಳೂ ಕಾಲರಾ ಸಂಬಂಧವಾದ ಕಾಯಿಲೆ ಸ್ಥಿತಿ ವಿಚಾರದಲ್ಲಿ ಕಂಡುಬಂದಲ್ಲಿ ಒಡನೆಯೇ ತಮ್ಮಲ್ಲಿ ಬಂದು ತಿಳಿಸಿ, ಸದರಿ ಔಷಧಿಯನ್ನು ಕೊಡಿಸಬೇಕೆಂತಲೂ ನೌಕರರುಗಳಿಗೆ ಹುಕುಂ ಕೊಟ್ಟಿದ್ದಾರೆ. ಇವರುಗಳು ಈ ತರದ ಜಾಗ್ರತೆಯಿಂದ ಊರೊಳಗೆ ಇದ್ದರೆ ಈ ಜಾಡ್ಯ ವ್ಯಾಪಿಸಲು ಅವಕಾಶವಿಲ್ಲದೆ ಇರುತ್ತೆ. ಬ್ರಾಹ್ಮಣರು ವೈಶ್ಯರು ಮುಸಲ್ಮಾನರು ವಿಶ್ವಮೂ ಬೀದಿಗಳಲ್ಲಿ ದೇವರ ಭಜನೆಮಾಡುವುದೂ, ಪ್ರಾರ್ಥನೆ ಮಾಡುವುದೂ, ವಿನಾಯಕ [illegible] ದೂ ಈ ತಿಂಗಳ ವರಿಗೂ ನಡೆಯುತ್ತಲಿರುವುದರಿಂದ ದೇವರು ಇವರ ಪ್ರಾರ್ಥನೆಯನ್ನು ಒಂದಿಗೆ ಕರುಣಿಸಿ ಈ ಜಾಡ್ಯದ ವ್ಯಾಪನಗೆ ಅವಕಾಶ ಕೊಡದೆ ಕಾಪಾಡುತ್ತಾನೆಂತ ಪ್ರಾರ್ಥನೆ.

ಹೊಳೆನರಸೀಪುರ.—೨–೩ ದಿವಸಗಳಿಂದ ಮಳೆ ಒಂದು ಹದವಾಯಿತು. ಜೋಳಗಳು ಕೆಲವು.—ಬಗಳು ಕೀಟಾ ಚಿಕ್ಕದಾದಕ್ಕೆ ಮರುಳಾಗುತ್ತಿವೆ. ಸದ್ಯಕ್ಕೆ ಮಳೆಯ ಇಳಿಯುವಂತೆ ಕಾಣುವುದಿಲ್ಲ. ಹಿಂದಿನ ದಿನಗಳು ಅತಿ ಕ್ಷಾಮವಾಗಿ ಸಾಯುತ್ತವೆ. ಈ ವರ್ಷ ಜನವರಿಯಲ್ಲಿ ಇದ್ದಾಪ್ಪರಲ್ಲಿಂದ ಎತ್ತುಗಳ ಬೆಲೆ ಕಟ್ಟಿದೆ. ೧೦ ರ ರೂಪಾಯಿ ಎತ್ತಿಗೆ ೨೦-೩೦ ರೂಪಾಯಿ ಕೊಟ್ಟರೂ ಬಿಕರಿಯಾಗುತ್ತಿವೆ. ದನಕರುಗಳಿಗೆ ಆಹಾರಕ್ಕೆ ಬೆಳೆದ ಹುಲ್ಲು ಸಿಕ್ಕುವುದೇ ಪ್ರಯಾಸವಾಗಿದೆ. ಈ ಮುನಿಸಿಪಾಲಿಟಿ ಕಾನೂನುಗಾರಿಯವರ ಸಭೆಯು ನಡೆಸಿತು. ಹುಲ್ಲೆ ಸರ್ಕಾರು ಆಗುತ್ತಿರುವ ಹಳೆಕೆರೆಯ ನಾಲಾ ಪ್ರಾಜೆಕ್ಟು ಕಾಮಗಾರಿ ಬಗ್ಗೆ ದಯಾಶೀಲರಾದ ಚೀಫ್ ಇಂಜನಿಯರ್ ಸಾಹೇಬರವರ ಕೃಪೆ ದಯಮಾಡಿ ಖುದ್ದು ಪರಾಂಬರಿಸಿ ಜಾಗ್ರತೆ ಪ್ರಾರಂಭ ಮಾಡಿಸಿದರೆ ಕೂಲಿ ಮಾಡುವ ಬಡ ಜನಗಳಿಗೆ ಜೀವನವಾಗುತ್ತೆ. ವ್ಯಾಪಾರಗಳು ನಡೆಯುತ್ತಿವೆ. ಕೃಷಿ ಮಾಡತಕ್ಕವರಿಗೆ ಅನುಕೂಲವಿಲ್ಲ. ಧೈರ್ಯ ಹೆಚ್ಚುತ್ತಿ ಜನಗಳಿಗೆ ವ್ಯವಸಾಯ ಕೆಲಸಕ್ಕೆ ತಕರಾರು ಪಯಣಿಸಿದರೂ, ಸಾಲಿಸುವದಕ್ಕೆಂತಲೂ ಇಂಥಾ ಭಾರಿ ಕೆಲಸಕ್ಕೆ ಮಂಜೂರಾದ ಪಣವು ವಿನಿಯೋಗಿಸಿ ಜನಗಳ ಜೀವನ ಉಳಿಯುತ್ತೆ.—ಜನಗಳ ಜೀವನೋಪಾಯಕ್ಕೆ ವಿದ್ಯಾಭ್ಯಾಸ, ಕಸುಬುಗಾರಿ ಅಭ್ಯಾಸ ಮುಂತಾದ್ದು ಮಾಡಿಸುವುದಕ್ಕೆ ಕೃಪಾಳುಗಳಾದ ಸರ್ಕಾರದವರು ಸಕಲ ಸಹಾಯವೂ ಮಾಡುತ್ತಾ ಇದ್ದಾರೆ. ಆದರೆ ಸಂಪಾದಿಸಿದ ಸ್ವತನ್ನು ಕಾಪಾಡುವ ವಿಷ್ಯ ಪಾಲಕರು ಕಲಿತುಕೊಳ್ಳದೆ ಇರುವದರಿಂದಲೂ ೫೦೦ ಜನ ಇರತಕ್ಕ ಹಳ್ಳಿಗೆ ೨ ಕಾಲದಲ್ಲಿ ೫೦ ಜನ ಕಳ್ಳರು ಆಯುಧಪಾಣಿಗಳಾಗಿ ಬಂದರೆ ಕೆಡುವ ಸ್ವತ್ತೆಲ್ಲಾ ಹಾಳು ಮಾಡಿಕೊಳ್ಳುತ್ತಾರೆ. ಅಷ್ಟರಿಂದ ಎಲ್ಲಾ ಆರಿಸಿ ಸಭೆಯಲ್ಲಿಯೂ ಆತ್ಮಸಂರಕ್ಷಣೆ ವಿಷ್ಯ ಸ್ವತ್ತಿನ ಸಂರಕ್ಷಣೆ ಸಹಾ, ವಿಷ್ಯದ ಮಟ್ಟಿಗೆ ಇದೇ ಎಂಬುದನ್ನು ಅರಿಯದೆ ಅಭ್ಯಾಸ ಮಾಡುವುದು ನೀತಿಗಿಸುವಂತೆಯೂ ಪ್ರತಿ ಒಬ್ಬರೂ ಪೋಲೀಸ್ ಹಿಡಿಯುವ ಸಾಧನೆ ಬಂದುಕು ಹಿಡಿಯುವ ಭಾಧನೆ ಕಲಿಸಿ ಕೊಳ್ಳುವಂತೆಯೂ ಪ್ರತಿ ಒಬ್ಬನೂ ತನ್ನ ಆತ್ಮಸಂರಕ್ಷಣೆ ಒಗ್ಗೆ ಒಂದೊಂದು ಒಳ್ಳೆ ಜಾತಿ ನಾಯನ್ನು ಸಾಕುವಂತೆಯೂ ಅಪ್ಪಣೆ ಆದರೆ ಜನಗಳು ಕಳ್ಳರಿಗೆ ಹೆದರಿ ಸ್ವತ್ತುಗಳನ್ನು ಕಳೆಕೊಳ್ಳದಂತೆ ಆಗುತ್ತೆ.—ಚಿತ್ರದುರ್ಗದ ಪ್ರಾಂತ್ಯದಲ್ಲಿ ಮಹಾಲ್ ದರ್ಶೋಡೆ ನಡೆದ ಕಾಲದಲ್ಲಿ ಜನಗಳೆಲ್ಲಾ ಹೆದರಿ ಮಾಲ್ ಹೋಗ ಎದಲ್ಲೆ ಅವಕಾಶ ಕೊಟ್ಟರಂತೆ. ಕೆಲ್ಲರೆಲ್ಲರೆ ಸೈನ್ಯದಿಂದ ಬಂದ ಜನಗಳು ಹೆಚ್ಚಾಗಿದ್ದರೂ ಬಂದವರು ಜನ ಕಳ್ಳರಿಗೆ ಹೆದರಿ ಮಾಲ್ ಕೊಟ್ಟರಂತೆ. ಇದರಿಂದ ಅನ್ಯರ ಕೈವಶ ತಪ್ಪಲಿಲ್ಲ. ಪ್ರಯಾಣಿಕರು ಆತ್ಮಸಂರಕ್ಷಣೆ ಬಗ್ಗೆ ತಕ್ಕ ಸಾಧನಗಳು ಇಟ್ಟುಕೊಳ್ಳದಿದ್ದರೆ ಅಂಥವರ ಪ್ರಯಾಣವನ್ನು ಏನಿಲ್ಲಿಸುವಂತೆ ಕೆಲವು ಕಾಲ ಹುಕುಂ ಆದರೆ ದಾರಿಗಳು ಪೂರಾ ಕಳೆಕೊಳ್ಳುವದು ತಪ್ಪುತ್ತೆ. ಆವಾಗ ಕಳ್ಳರು ಸಿಕ್ಕಿ ಬೀಳುತ್ತಾರೆ. ಸಾಹಸವಂತರಾದ ಪೋಲೀಸಿನವರು ಜನಗಳಿಗೆ ಈ ಉಪಾಯವನ್ನು ಬೋಧಿಸಿ ಕಾಪಾಡ ಕೊಡುತ್ತಾರೆಂತ ಜನಗಳು ನಂಬುತ್ತಾರೆ.

ಕುಣಿಗಲ್ ಪೇಟೆ.—ಯುವರಾಜರವರು ಈ ನೀರಿಗೆ ದಯಮಾಡಿಸಿದ್ದ ಕಾಲದಲ್ಲಿ ಮೈಸೂರು ರಾಜಧಾನಿಯಲ್ಲಿ ಏರ್ಪಡಿಸಿದ್ದ ವಿದ್ಯಾಭಿವೃದ್ಧಿಗೆ ಈ ತಾಲ್ಲೂಕಿನಿಂದ ಕಳುಹಿಸಿದ ಅನೇಕ ಪದಾರ್ಥಗಳಿಗೆ ಬಹುಮಾನ ೧೫ ಬಂದಿದ್ದವು. ಅವನ್ನು ಮಾಲೀಕರಿಗೆ ಹಂಚತಕ್ಕದ್ದು ೧೭-೬-೦೬ ರಲ್ಲಿ ಒಂದು ದೊಡ್ಡ ಸಭೆಯು ಕೂಡಿದ್ದಿತು. ಈ ಸಭೆಯು ಸುಂದರವಾದ ಪ್ರತಿಕೆ ಬಾವಿಗಳಿಂದಲಂಕೃತವಾದ ಟ್ರಾವಲರ್ಸ್ ಬಂಗ್ಲೆಯ ಮುಂಭಾಗದ ಮೈದಾನದಲ್ಲಿ ನೆರೆದಿದ್ದರು. ವಿಧವಿಧ ಪುಷ್ಪಗುಚ್ಛಗಳಿಂದಲಂಕರಿಸಿದ್ದ ಡೇರೆಯಲ್ಲಿ ಇಲ್ಲಿನ ಡಿವಿಜನ್ ಆಫೀಸರ್ ವೆ! ಸಿರಸ ಅನಂದರಾಯರವರ ಅಧ್ಯಕ್ಷತೆಯಿಂದ ಜನಸಂದಣಿಯು ಕಿಕ್ಕಿರಿಯುವಂತೆ ನೆರೆದಿದ್ದಿತು. ರೆವಿನ್ಯೂ, ಫಾರಸ್ಟ್, ಎಕ್ಸೈಜ್, ಪೋಲೀಸ್ ಮೊದಲಾದ ಇಲಾಖೆಯ ಉದ್ಯೋಗಸ್ಥರೂ, ಆಸ್ಪಿಟಲ್ ಆಸಿಸ್ಟೆಂಟರೂ ಸಬ್ ರಿಜಿಸ್ಟ್ರಾರರವರೂ ಸ್ಕೂಲ್ ಮಾಸ್ಟರುಗಳೂ, ವಿದ್ಯಾರ್ಥಿಗಳೂ, ಇತರ ಅನೇಕ ಸರ್ಕಾರಿ ನೌಕರರೂ, ಲಾಯರುಗಳೂ ವರ್ತಕರೂ, ಎಲ್ಲರೂ ಬಂದು ನೆರದ ಮೇಲೆ ಡೆಪ್ಯುಟಿ ಅಮಲ್ದಾರರು ಪುರಸ್ಕೃತ ಕಾರ್ಯವನ್ನು ಸೂಚಿಸಿದರು. ಅನಂತರ ಅಧ್ಯಕ್ಷರು ೪ ಕಂಚಿನ ಮೆಡಲ್ ಗಳನ್ನೂ ರೂಪಾಯಿಗಳನ್ನೂ ಎಳ್ಳು, ನಾರು, ತಂಬಾಕು, ರೇಷ್ಮೆ, ಚಕ್ಕೆ, ಬೀಗ, [illegible], ಮುತ್ತಿನ ಸಾಮಾನು, ಹಣಾಸೆ ಹಣ್ಣು ಮುಂತಾದವುಗಳನ್ನು ಪ್ರದರ್ಶಿಸಿದವರಿಗೆ ಸ್ವಹಸ್ತದಿಂದ ಮಂದಹಾಸ ಪೂರ್ವಕವಾಗಿ ದಯಪಾಲಿಸಿದರು. ಬಹುಮಾನಗಳನ್ನು ಕೊಡುವಾಗ ಇವರು ಉಪದೇಶಿಸಿದುದು ಅತ್ಯಂತ ಹೃದಯಂಗಮವಾಗಿದ್ದಿತು. "ನಿಮ್ಮ ವಸ್ತುಗಳಿಗೆ ಈಗ ಬಹುಮಾನವು ಇದೇ ಎಂದು ಭಾವಿಸಲಾಗದು. ಇದಕ್ಕಿಂತಲೂ ಅತ್ಯುತ್ಕೃಷ್ಟವಾಗಿಯೂ ಸರ್ವಸಾಮಾನ್ಯವಾಗಿಯೂ ಇರುವಂತೆ ಮುಂದೆ ಅಭಿವೃದ್ಧಿ ಪಡಿಸಲು ಇದೊಂದು ಅವಕಾಶವೆಂದು ತಿಳಿಯಬೇಕು. ಈ ಮೆಡಲುಗಳಿಗೆ ಬೆಲೆಯೇ ಇಲ್ಲ. ಅಂದರೆ ವಂಶಪಾರಂಪರ್ಯವಾಗಿ ಅದನ್ನು ಭದ್ರಪಡಿಸಿ, ಉತ್ಕೃಷ್ಟ ಕೈಗಾರಿಕೆಗಳು ಪುತ್ರಪೌತ್ರರಲ್ಲಿ ವಿವಿಧವಾಗಿ ಪ್ರಸರಿಸುವಂತೆ ಪ್ರೋತ್ಸಾಹಿಸುವ ಅನರ್ಘ್ಯವಾದ ಬಹುಮಾನವೆಂದು ತಿಳಿಯಬೇಕು." ಎಂದು ಹೇಳಿದ ಮೇಲೆ ಮ್ಯ ಸಂತಾನಂ ಐಯ್ಯಂಗಾರ್ಯರು ಎಕ್ಸಿಬಿಷನ್ ಅಂದರೇನು? ಅದರ ಪ್ರಯೋಜನವೇನು? ಎಂಬ ದನ್ನು ವಿವರಿಸಿದರು. ಅಧ್ಯಕ್ಷರು ಎಕ್ಸಿಬಿಷನ್ನಿಂದ ರಾಜ್ಯದ ಐಶ್ವರ್ಯಾಭಿವೃದ್ಧಿಯು ಹೆಚ್ಚುವ ರೀತಿಯನ್ನೂ ಕೈಗಾರಿಕೆಗಳು, ನಾಗರಿಕ ಕಲಾಸ್ತೋತ್ರವಾಗಿ ಲಯವಾಗದೆ ಪುನರುಜ್ಜೀವನವನ್ನು ಹೊಂದುವ ಕ್ರಮವನ್ನೂ ಇದಕ್ಕೋಸ್ಕರ ಜನರು ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನೂ, ನಮ್ಮ ಮಹಾರಾಜರು ದೇಶದಲ್ಲಿ ಇಂತಹ ಅಭಿವೃದ್ಧಿಯನ್ನು ಜನರಲ್ಲಿ ನೆಲೆಗೊಳಿಸಲು ಪ್ರಯತ್ನಿಸಿದ ನಮ್ಮ ಗವರ್ನಮೆಂಟಿನವರ ಪ್ರಜಾರಂಜನೆಯನ್ನೂ, ಬ್ರಿಟಿಷ್ ಅಡಳಿತದ ರಾಜ್ಯಸುಖವನ್ನೂ ವಿವರಿಸಿ, ಕೃತಜ್ಞತಾಪೂರ್ವಕವಾದ ವಂದನೆಯನ್ನು ಹೇಳಿದೊಡನೆ ಬಾಲಿಕೆಯರುಗಳೂ ಇಂಗ್ಲೀಷ್ ತರಹ ಇಂಪಾದ ಗಾನವೂ ಮೊಳಗಿದುವು.

ದೊಡ್ಡಬಳ್ಳಾಪುರ.—ತಾಲ್ಲೂಕಿನ ಬಹಳ ದಿನಗಳಿಂದ ಜನರು ಪರಿತಾಪದೊಡನೆ ನಿರೀಕ್ಷಿಸುತ್ತಾ ಇದ್ದ ಮುಂಗಾರಿನ ಮಳೆಯು ಪಾಕ್ಕದ ದಿನಗಳ ಹಿಂದೆ ಪ್ರಾರಂಭವಾಯಿತು. ೬-೭ ದಿವಸ ಮಳೆ ಆಗಿ ಜಲಾಶಯಗಳಿಗೆಲ್ಲಾ ನೀರು ಬಂದು ಸಕಲರಿಗೂ ಆನಂದವನ್ನುಂಟುಮಾಡಿತು. ಒಣಗಿ ಬಿರಿಯುತ್ತಿದ್ದ ನೆಲವು ಈಗ ತೇವವಾಗಿ ಎಲ್ಲಿ ನೋಡಿದರೂ ಅಧಿಕವಾದ ಹಸುರು ಮಯವಾಗಿ ರಮಣೀಯವಾಗಿ ಕಾಣಿಸುತ್ತಿದೆ. ರೈತರು ಜನಸ್ಸು ಬೀಗಾಗಿ ಉಳುವ, ಬಿತ್ತನೆ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಧಿನಸಿ ಧಾರಣೆ ತಗ್ಗಿ ಬಡವರಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ.—ಈ ವಾರ ಕಟ್ಟಿದ ಇಲ್ಲಿಯ ಪಾಠಶಾಲೆಗಳನ್ನು ನೋಡಿದರು. ತಾ ೧೨ ರಲ್ಲಿ ಕೃಷ್ಣಸ್ವಾಮಿ ಸಜ್ಜನರ ವ್ಯವಸ್ಥಾ ಪಕರಾದ ಸರ್ವೆ ಇ. ದರ್ಬರಿ ಲಾಂಗ್ ಕೇಯ ಇಲ್ಲಿನ ಕೈಗಾರಿಕೆ ಪಾಠಶಾಲೆಯನ್ನು ನೋಡಿ ಸಂತೋಷಿಸಿದರು. ೧೪ ದಿವಸ ಬೆಂಗಳೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಮಿ ಕೆ ಎಸ್ ಅಪ್ಪಯ್ಯನವರು ಇಲ್ಲಿಯ ಎ ವಿ ಸ್ಕೂಲನ್ನು ಪರೀಕ್ಷಿಸಿ ನಮ್ಮಲ್ಲ ಒಳಗೂ ಹೊರಗೂ ಸ್ವಚ್ಛತೆಯಾಗಿಟ್ಟಿರುವುದನ್ನು ನೋಡಿ ಸಂತೋಷಿಸಿ ಬಾಲಕರ ಆರೋಗ್ಯಕ್ಕೆ ಸಹಕಾರಿಗಳಾದ ಕೆಲವು ಸಲಹೆಗಳನ್ನು ಅಪ್ಪಣೆ ಕೊಡಿಸಿ ದಯಮಾಡಿಸಿದರು.—ಇಲ್ಲಿಯ ದೇವಾಂಗದವರಲ್ಲಿ ಎರಡು ಪಕ್ಷಗಳಿರುವುವು. ಇವರ ಕುಲದೇವತೆಯಾದ ಚೌಡೇಶ್ವರಿ ದೇವಸ್ಥಾನದ ವಿಚಾರದಲ್ಲಿ ಕಳೆದ ೧೩ ವರ್ಷಗಳಿಂದ ವಿವಾದ ನಡೆಯುತ್ತಲೇ ಇದೆ. ವಿವಾದಿಗಳು ಮಾತ್ರವಲ್ಲ ಪಾದರೂ ತಮ್ಮ ಹಟವನ್ನೇ ಗೆಲ್ಲಬೇಕೆಂದು ಒಂದು ಪಕ್ಷದವರು ಅದೇ ರೀತಿಯೇ ಇನ್ನೊಂದು ಪಕ್ಷದವರೂ ನಿರ್ಧರವಾಗಿ ಕೋರ್ಟು ನ್ಯಾಯಸ್ಥಾನಗಳಿಗೆ ತಿರುಗುತ್ತಾ ಇರುತ್ತಾರೆ. ಇದುವರೆಗೆ ಉಭಯ ಪಕ್ಷದವರೂ ಸೇರಿ ಒಟ್ಟಾರೆ ಸಾವಿರ ರೂಪಾಯಿ ಖರ್ಚುಮಾಡಿದಾರೆ. ಇಷ್ಟು ಹಣವನ್ನೂ ತಮ್ಮ ಪರಲ್ಲಿ ವಿದ್ಯಾಭಿವೃದ್ಧಿಗಾಗಲೀ, ಕಸುಬಿನ ಅಭಿವೃದ್ಧಿಗಾಗಲೀ ವಿನಿಯೋಗಿಸಿದ್ದರೆ ಅತ್ಯಂತ ಹಿತವಾಗಿರುತ್ತಿತ್ತು. ಆದಾಗ್ಯೂ ಇರುವ ಈ ಜನರ ಅಭಿವೃದ್ಧಿಗೆ ಬಂಡುಹೋಗಿತ್ತು. ದಾದಿಯಾಗಲಿಂತ ಹಟವನ್ನು ಸಾವಕಾಶವಾಗಿಯಾದರೂ ವರ್ತಮಾನ ಉಭಯ ಪಕ್ಷದವರೂ ತಂತಮ್ಮ ಶ್ರೇಯೋಭಿವೃದ್ಧಿಯನ್ನು ಮನಸ್ಸಿಗೆ ತಂದುಕೊಂಡು ಹಟ ಬಿಟ್ಟು ರಾಜಿಯಾಗಿರದು ವಿನ ಪೂರ್ವಕವಾಗಿ ಕೋರಿಸುತ್ತೇನೆ. ಈ ಸಂಸ್ಥಾನದಲ್ಲಿ ವಿಶೇಷ ಅಭಿವೃದ್ಧಿಸ್ಥಿತಿಗೆ ಇನ್ನೂ ಬಾರದಿರುವ ವರ್ಣಾಶ್ರಮಗಳ ಪೈಕಿ ಲಿಂಗಾಯಿತರು, ಒಕ್ಕಲಿಗರೂ ತಂತಮ್ಮ ಶ್ರೇಯೋಭಿವೃದ್ಧಿಗಾಗಿ ಧನವನ್ನು ಕೂಡಿಸಿ ವೃದ್ಧಿ ಹೊಂದುವ ಪ್ರಯತ್ನವನ್ನು ಕೈಗೊಂಡು ಮುಂದಕ್ಕೆ ಬರುತ್ತಿರುವರು. ಇಂತಹ ಸುಬುದ್ಧಿಯು ನಮ್ಮ ದೇವಾಂಗದವರಿಗೂ ಶೀಘ್ರದಲ್ಲಿಯೇ ಉಂಟಾಗಿ ಇತರ ವರ್ಣಾಶ್ರಮದವರಂತೆ ಇವರೂ ವೃದ್ಧಿಗೆ ಬರಲೆಂಬ ಕೋರಿಕೆಯು ನನ್ನ ಮನಸ್ಸಿನಲ್ಲಿ ತುಂಬಿರುವುದು. ಈ ಸಂಸ್ಥಾನದಲ್ಲಿ ದೇವಾಂಗದವರ ೮ ಇತರ ನೇಯಿಗೆಯವರ ೮ ಸೇರಿ ೧೯೦೦ ನೆಯ ಜನಸಂಖ್ಯೆ ಮೇರೆಗೆ [illegible] ಜನರಿರುತ್ತಾರೆ. ಈ ಪೈಕಿ ಅತ್ಯಲ್ಪ ಸಂಖ್ಯೆ ಎಂದರೆ ೨೦೦ ಕ್ಕೆ ೮ ಜನರು ಮಾತ್ರ ಅಕ್ಷರಸ್ಥರು. ಇಂಗ್ಲೀಷ್ ಬಲ್ಲವರಂತೂ ನಿರವು ಸಾವಿರಕ್ಕೆ ಮೂವರಂತೆ ಇರುವರು. ಇವರಲ್ಲಿ ಬಿ. ಎ. ವರೆಗೆ ಗೌರವವಿದ್ಯಾಭ್ಯಾಸ ಮಾಡಿರುವವರಾದರೋ ನಮ್ಮ ಕೈ ಬೆರಳುಗಳ ಸಂಖ್ಯೆಯಷ್ಟೂ ಇರಲಾರರು. ಇಂತಹ ತಮ್ಮ ಶೋಚನೀಯ ಸ್ಥಿತಿಯನ್ನು ರಾಗರಾದರೂ ಅವಗಾಹನೆಗೆ ತಂದುಕೊಂಡು, ಪಕ್ಷದ ವ್ಯಾಜ್ಯಗಳನ್ನು ಬಿಟ್ಟು ಒಗ್ಗಟ್ಟಾಗಿ ಸೇರಿ, ಮುಂದಾಳುಗಳಾಗಿರುವ ಇತರ ವರ್ಣಾಶ್ರಮದವರ ಮೇಲ್ಪಂಕ್ತಿಯನ್ನು ನಮ್ಮ ದೇವಾಂಗದವರೂ ಅನುಸರಿಸಿದರೆ ಶೀಘ್ರದಲ್ಲಿಯೇ ಅವರು ಏಳಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ.

ಅನುಭವಿಸುವವರ ಹಿತಕಾರಿ.

86 1

"ಕ್ಲೆಮೆಂಟ್‌ಯವರ ಮ್ಯಾಜಿಕ್ ಬಾಂ"

ಹೊರಗಡೆ ಹಚ್ಚುವುದಕ್ಕೆ ಮಾತ್ರ

ಎಲ್ಲಾತರದ ವಾಯುನೋವು, ಜಂತಲೆನೋವು, ನರಗಳನೋವು, ತಲೇನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು ಗಂಟ್ಲುತುರಿಕೆ, ಕೀಲುಬೇನೆ ಎದೆಗಳನೋವು, ಅಸ್ತ್ರ, ಜೇಳು ಮುಂ ತಾದವುಗಳು ಕಡಿದನೋವು, ಇನ್ನೂ ಅನೇಕತರದ ದೇಹಬಾಧೆಗಳಿಗೆ ಮೇಲ್ಕಂಡ ಮ್ಯಾಜಿಕ್ ಬಾಂ ಎಂಬ ಔಷಧವನ್ನು ಹಚ್ಚಿದಲ್ಲಿ ಸುಖವಾ ಗಿಯೂ ಖಂಡಿತವಾಗಿಯೂ ಗುಣವಾಗುತ್ತದೆ. ಇದರ ಕ್ರಯ— ೧ ಬಾಟ್ಲಿಗೆ ೧೨ ಆಣೆ, ೩ಕ್ಕೆ ೨ ರೂಪಾಯಿ; ೬ಕ್ಕೆ ರೂ. ೩॥, ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ಬೇರೆ.

ಇದಲ್ಲದೆ ನಮ್ಮಲ್ಲಿ ಸರ್ವೋತ್ತಮವಾದ ಇನ್ನೂ ಅನೇಕತರದ ಔಷಧಗಳು ಮಾರಾಟವಾಗುತ್ತಿವೆ ಪ್ರತಿ ಒಂದೂ ಖಂಡಿತವಾಗಿ ಗುಣ ಕೊಡುವಂಥಾದ್ದು ಒಂದಾವರ್ತಿ ಅವನ್ನು ತರಿಸಿ ಉಪಯೋಗಿಸಿದಲ್ಲಿ ಗುಣ ತನ್ನಷ್ಟಕ್ಕೆ ತಾನೇ ಗೊತ್ತಾಗುತ್ತೆ. ಮತ್ತು ಅವನ್ನು ಸರ್ವದಾ ಮನೆಯಲ್ಲಿ ಇಟ್ಟುಕೊಂಡಿರಬೇಕೆಂದು ಎಲ್ಲರಿಗೂ ದೃಷ್ಟಾಂತಕ್ಕೆ ಬಂದೀತು ವಿಳಾಸ:—ಏಜಂಟ್, ಎಸ್. ಡಬ್ಲ್ಯು ಆರ್ಮ, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಮುದ್ರಾಮಂಜೂಷವು—೨ನೆಯ ಮುದ್ರಣ.

ಕ್ರಯ—ರೂ. ೧—೮—೦

90-1

ವಿದ್ಯಾರ್ಥಿಗಳೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಾದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ 'ಮುದ್ರಾಮಂಜೂಷ" ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ವ್ಯಾಕರಣಿಗೆ ಸರಿಯಾಗಿ ತಿದ್ದಿ ಬಹು ದೊಡ್ಡದಾಗ ಹೊಸ ಅಕ್ಷರದಿಂದ ಒಳ್ಳೇ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. "ಡೆಮ್ಮಿ ಅಷ್ಟ ಪತ್ರ, ಸೆಕ್ಷನ್ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ "ಚಾಣಕ್ಯರ ನೀತಿ," 'ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಪಾರ್ಥಿಸುತ್ತೇವೆ. ಕ್ರಯ ೧ ಪ್ರತಿಗೆ ರೂ. ೧—೮—೦, ಪೋಸ್ಟೇಜು ೨ ಆಣೆ ವಿ ಪಿ ಪಿ ತರಿಸಿಕೊಂಡರೆ ರೂ. ೧—೧೧—೦ ಬೀಳುವುದು. ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿನಂತೆ ಡಿಸ್ಕೌಂಟು ಕೊಡಲಾಗುತ್ತದೆ ಬೇಗ ಈ ವಿಳಾಸಕ್ಕೇನೇ ಬರೆಯಿರಿ:—

ವಿಳಾಸ—ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

ಪ್ರಶ್ನೋತ್ತರ ಲೇಖ್ಯಬೋಧಿನಿ.

92-1

೨ ನೇ ಬಾರಿ ಮಾರಾಟಕ್ಕೆ ಸಿದ್ಧವಾಗಿರುತ್ತೆ ದಪ್ಪವಾದ ಕಾಗದ, ಛಪ್ಪನಾದ ಬೈಂಡುಳ್ಳದ್ದು. ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿನೋಡಿ —ಕ್ರಯ ೧—೪—೦.

ಕ್ಷೇಮಸಮಾಚಾರ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ರೆವಿನ್ಯೂ, ಮುಲ್ಕಿ, ಇಂಜನಿಯರ್, ಫಾರೆಸ್ಟು, ಎಕ್ಸೈಜು, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್, ಮತ್ತು ಇತರ ಎಲ್ಲಾ ಇಲಾಖೆಗಳ ಬಗೆ ಬಗೆ ಸಂಗತಿಗಳು, ಸಿವಿಲ್ ಪ್ರೊಸೀಜರ್ ಕೋಡು, ಕ್ರಿಮಿನಲ್ ಪ್ರೊಸೀಜರ್ ಕೋಡು, ಪೀನಲ್, ಹಿಂದೂ ಲಾ, ಮಹಮದಿ ಲಾ, ಕಂಟ್ರಾಕ್ಟು ಜಾಮೀನು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟ್ ಫೀಜು, ಪೊಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ರೆವಿನ್ಯೂ ಕೋಡು, ರೂಲ್ಸು, ಲ್ಯಾಂಡ್ ಇಂಪ್ರೂವ್, ಲ್ಯಾಂಡ್ ಅಕ್ವಿಜಿಷನ್, ದೊಡ್ಡಿ, ಆರಂಸು, ಮೊದಲಾದ ಎಲ್ಲಾ ಆಕ್ಟುಗಳ ಸಾರಾಂಶಗಳು ಲೇವಾದೇವಿ, ರೆವಿನ್ಯೂ ರೂಲ್ಸು ಪ್ರಕಾರ ಗ್ರಾಮದ ಲೆಕ್ಕಗಳನ್ನು ಬರೆಯುವದು, ಮಹಂತಾದ ವ್ಯವಹಾರಿಕೆಯ ಬಗೆ ಬಗೆ ಸಂಗತಿಗಳು, ನೋಟು ವರ್ಗ, ಮೊದಲಾದ ವರ್ತಕರ ಲೆಕ್ಕಗಳನ್ನು ಬರೆಯುವ ರೀತಿ, ಮೊದಲಾದ ಅನೇಕ ಸಂಗತಿಗಳು ಸ್ವಲ್ಪ ಮಟ್ಟಿಗೆ ಓದುಬರಹ ಬಂದವರು ಕೂಡಾ ಸುಲಭವಾಗಿ ತಿಳಿಯುವಂತೆ ಪ್ರಶ್ನೋತ್ತರ ರೀತಿಯಾಗಿ ಬರೆದಿದೆ. ಪುಸ್ತಕದಲ್ಲಿರುವ ಎಲ್ಲಾ ಸಂಗತಿಗಳನ್ನೂ ವಿವರಿಸುವದು ಸಾಧ್ಯವಲ್ಲವಾಗಿ ಸೂಕ್ಷ್ಮದಿಂದ ತಿಳಿಸಿರುತ್ತೆ

ಮೋಜಣಿ ಕಲಿಯತಕ್ಕ ಪುಸ್ತಕ ಕ್ರಯ, ಒಕ್ಕೆ ೧ ರೂಪಾಯಿ ಮಾತ್ರ, ಭೂಮಿ ಅಳೆಯುವ ರೀತಿಯನ್ನು ಸುಲಭವಾಗಿ ತಿಳಿಸುತ್ತದೆ

ಸ್ವಲ್ಪ ಪ್ರತಿಗಳೇ ಉಳಿದಿವೆಯಾದ್ದರಿಂದ ಜಾಗ್ರತೆ ತರಿಸಿಕೊಳ್ಳಿ

ಮವಧಾಸು ನಶ್ಯದಪುಡಿ' ಈ ನಶ್ಯವು ಉತ್ಕೃಷ್ಟವಾಗಿಯೂ ಚಟಕೆಯನ್ನು ೧ ತೊಲೆಗೆ ಹಾಕಿದಾಗ್ಯೂ ಸುವಾಸನೆಯಿರುವದಾಗಿಯೂ ಘಾಟಾಯಾಗಿಯೂ ಇರುತ್ತೆ. ೬ ತೊಲೆ ಇರುವ ೧ ಡಬ್ಬಿಗೆ ೪ ಆಣೆ. ಬೇಗ ಬರೆಯಿರಿ. ವಿಳಾಸ ಬದಲಾಯಿಸಿದೆ ವಿಳಾಸ.—ಬಿ. ಕೆ ಮೂರ್ತಿ ಕಂಪೆನಿ, ಲಕ್ಕೂರು ಪೋಸ್ಟು, ಕೋಲಾರ್ ಡಿಸ್ಟ್ರಿಕ್ಟು.

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯಿಯವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-32

೧ ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೆ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿ ೧ಕ್ಕೆ ರೂ. ೨ ವಿ ಪಿ. ಛಾರ್ಜಿ ೬ ಆಣೆ

೨೦. ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು ಅತ್ಯುತ್ತಮವಾದದ್ದು. ಮತ್ತು ಒಂಗೇ ರಖಂ ಇರತಕ್ಕದ್ದು. ತೋಲಾ ೧ಕ್ಕೆ ರೂ ೪೮ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಚಾರ್ಜ ಅಲಾಯಿದ.

೨೧. ಸುಗಂಧ ನಶ್ಯಪುಡಿ.—ಈ ನಶ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು ನೀವು ದಿನವಹಿ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚುಟುಕಿಯಷ್ಟನ್ನು ಬೆರಸಬೇಕು ಹೀಗೆ ಬೆರಕೆಮಾಡಿದಮೇಲೆ ನಶ್ಯವು ಬಹು ಸುವಾಸನೆಯದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಶ್ಯಹಾಕಿಕೊಳ್ಳುವವರ ಬಳಿ ಬಡಿಯುವ ಕಟುವಾದ ಕೆಟ್ಟವಾಸನೆ ಇರುವುದೇ ಇಲ್ಲ ಸುವಾಸನೆಯು ಬಹಳಹೊತ್ತು ಇರುತ್ತದೆ ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು ಇದರಲ್ಲಿ ನಮಾಸಾಗರ ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ ಕ್ರಯ ಒಂದು ಡಬ್ಬಿಗೆ ೪ ಆಣೆ ೧ ರಿಂದ ೩ ಡಬ್ಬಿ ತನಕ ವಿ ಪಿ ಚಾರ್ಜ ೩ ಆಣೆ ಹೆಚ್ಚು ವಿ ಪಿ ಛಾರ್ಜಿ ೪ ರಿಂದ ೫ ಡಬ್ಬಿ ತನಕ ೫ ಆಣೆ. ೬ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜಿ ೭ ಆಣೆ.

೨೨ ರಕ್ಷಾಮೃತ.—ನಿಸರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ತೇಯಿಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರಾಗಲ್ಪಟ್ಟಿರುತ್ತದೆ. ಕಾಫಿ, ತೇಯಿಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ,

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀವೆಯೋ ಆ ಕ್ರಮದಲ್ಲಿಯೇ ಇದನ್ನೂ ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನವಾಗುವುದು ಶಿಶುಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ಸನ್ನಿ ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು. ಪಿತ್ತವಾಯುವು, ಗೂರ್ಲು ಉಬ್ಬಸವು. ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ ಪ್ರಾತಃಕಾಲಆಹಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರ ರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ. ತೇಯಿಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೬ ಆಣೆ. ವಿ. ಪಿ. ಛಾರ್ಜಿ ೩ ಆಣೆ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪಟ್ಟು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

1—6—1906 ರಿಂದ 8—6—1906 ರ ವರೆಗೆ

ಸ್ಥಳ.	ಪ್ಲೇಗ್ ಹಗಲಿದ್ದ್ದು.	ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	0	0	.	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	3	1
ಮೈಸೂರು ,,	0	0	7	4
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	10	[illegible]
ಹಾಸನ (ಹೊರಗಿನದು)	3	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	1	1	0	0
ಶಿವಮೊಗ್ಗ ,,	0	0	1	1
ಜುಮ್ಲಾ	4	3	22	1[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಜ್ಯೇಷ್ಠ ಬಹುಳ ಅಮಾವಾಸ್ಯ ಗುರುವಾರದಿಂದ ಆಷಾಢ ಶುದ್ಧ ಪಂಚಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜೂನ್.

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ಶ್ರೀ ಧನು ಮಾ
21	ಗುರು ☾	ಅಮಾ	50 22	ಮೃ	52 36	8
22	ಶುಕ್ರ	ಪಾಡ್ಯ	58-12	ದ್ರಾ	58-20	9
23	ಶನಿ ¦	ಬಿದಿಗೆ	60 0	ಪುನ	60 0	10
24	ರವಿ †	ಬಿದಿಗೆ	1-12	ಪುನ	2 46	11
25	ಸೋಮ	ತದಿಗೆ	2-49	ಪುಷ್ಯ	5-46	12
26	ಮಂಗಳ ☛	ಚೌತಿ	2-46	ಶ್ಲೇ	7-50	13
27	ಬುಧ	ಪಂಚಮಿ	1-43	ಮಖ	57-30	14

☾ ಸರ್ವತ್ರ ಅಮಾವಾಸ್ಯ, ಮಿಥುನ ಚಾತುರ್ಗ್ರಹಯೋಗ

¦ ಕಟಕಾಯನಗತೋ ರವಿ, ಚಂದ್ರೋದಯ.

† ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ.

☛ ದೇವಾಂಬುಧೀಶ್ವರರಥ.

ಪೇಟೇ ಧಾರಣೆ.

ದಿನಸು.	ಮೈಸೂರು.	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೩-೮-೦	೧೪-೨-
ಕೆಂಬೂತಿ ಅಕ್ಕಿ ಅಸಲ್ ..	.. ೧೩-೮-೦	೧೩-೮-
,, ದುಯಂ	.. ೧೩-೪-೦	೧೩-೦-
ಜೀರಿಗೆಸಾಲೆ ಅಕ್ಕಿ	. ೧೩-೦-೦	೧೨-೧೨-
ಸಣ್ಣಕ್ಕಿ ಅವಲ್ ..	.. ೧೫-೦-೦	೧೬-೪-
,, ದುಯಂ ..	.. ೧೪-೦-೦	೧೫-೦-
ತೊಗರೀ ಬೇಳೆ ಪಲ್ಲಾ ೧ಕ್ಕೆ	.. ೧೧ ೬-೦	೧೧-೦-
,, ದುಯಂ ..	. ೧೦-೮ ೦	೧೦-೮-
ಹೈದ್ರಾಗಿ ಪಲ್ಲಾ ೧ಕ್ಕೆ ..	.. ೮-೩-೦	೬-೩-
ಕಾದ್ರಾಗಿ . ..	.. ೭-೨-೦	೬-೦-
ಜೋಳ	.. ೯-೦-೦	೮-೮-
ಹಲಸಂದೆ ಪಲ್ಲಾ ೧ಕ್ಕೆ ..	.. ೯-೮-೦	೧೦-೦-
ಬಿಳೀ ಅವರೆ .	.. ೮-೦-೦	೯-೦-
ಹೆಸರು .. .	.. ೧೦-೮-೦	೧೬-೦-
ಉದ್ದು	.. ೧೨-೩-೦	೧೧-೮-
ಕಡಲೆ	.. ೧೭-೦-೦	೧೭ ೪-
ಎಳ್ಳು ಸೆ ೧೨೩ ಕ್ಕೆ	.. ೨೧-೮-೦	೨೧-೦-
ಹುರುಳಿ . .	.. ೮-೮-೦	೯-೮-
ಹರಳು ೧೨೩ ಸೇರಿಗೆ ..	.. ೧೫-೮-೦	೧೫-೧-
ಸೀಗೇಕಾಯಿ ಮಣ ೧ಕ್ಕೆ	.. ೩-೦-೦	೨-೦-೨-
ಮೆಣಸಿನಕಾಯಿ ..	.. ೪-೦-೦	೩-೮-
,, ದುಯಂ ..	.. ೩-೪-೦	೩-೪-
ಬೆಲ್ಲ ದೊಡ್ಡ ಅಚ್ಚು ..	.. ೪-೪-೦	ಮ ೧-೯-
ಒಳ್ಳೆಣ್ಣೆ ಮಣ ೧ಕ್ಕೆ ..	.. ೫-೪-೦	೫-೪-
ಹರಳೆಣ್ಣೆ ,, ..	.. ೫-೮-೦	೫-೬-
ಕೊತ್ತುಂಬರಿ ಪಲ್ಲಾ ೧ಕ್ಕೆ ..	.. ೧೦-೮-೦	೧೦-೮-
ಉಪ್ಪು ,, ..	.. ೫-೧೦-೦	೬-೦-
ಹುಣಸೇ ಹಣ್ಣು ..	. ೦-೧೨-೦	೦-೧೧-
,, ಹಳೇದು ..	.. ೦-೮-೦	೦-೧೨-
ತುಪ್ಪ ಮಣ ೧ಕ್ಕೆ ..	.. ೧೬-೧೨-೦	೧೬-೦-
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ ..	.. ೫-೪-೦	೪-೦-
ತೆಂಗಿನಕಾಯಿ ೧೦೦ ಕ್ಕೆ ..	.. ೫-೪-೦	೪-೪-
ಅಳಲೇಕಾಯಿ ಮಣ ೧ಕ್ಕೆ ..	.. ೧-೦-೦	೧ ೧೦-
ಅಂಟುವಾಳದ ಕಾಯಿ ಮಣ ೧ಕ್ಕೆ ..	.. ೦-೧೨-೦	೦-೧೩-
ಚಿನ (ಪೌನ್) ಕೆಂಪು ..	.. ೧೫-೪-೦	೧೫-೫-
,, ,, ಹಸುರು ..	.. ೧೫-೧೦-೦	೧೫-೧೨-
,, ,, ಗಟ್ಟಿ ತೊಲ ೧ಕ್ಕೆ ..	.. ೨೩-೧೨-೦	೨೪-೫-
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..	.. ೮೫-೦-೦	೮೦-೦-

Printed and Published by the Rev. E. W. Thompson, M.A. the Proprietor and Manager, Wesleyan Mission Press Mysore 21/6/1906.

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸರ್ ೧೯೦೬ ನೇ ಇಸವಿ ಜೂನ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೪

ಈಗತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲುಗಳ ಕೇಶರಂಜನ ತೈಲ.

40-19

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ [illegible]ಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ಬಿಕರಿಮಾಡಿದ್ದಿಲ್ಲ. [illegible]ದು ಕ್ರಯ ಮಾತ್ರ:—

ದೊಡ್ಡ ಬಾಟ್ಲು ಒಂದಕ್ಕೆ ರೂ. ೨—೧೨—೦

ಸಣ್ಣ - ಬಾಟ್ಲು ಒಂದಕ್ಕೆ ರೂ. ೦—೧೧—೬

ಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮—೪—೦

„ ೩ „ „ „ ರೂ. ೮—೦—೦

ದೇಶ್ಷ ಪಡುವವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ; - ಎಲ್ ಎ ಪ್ರೋಸವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹ ಕ ೀ ಮ ೋ ೀ ಸಿ ಯಾ



[illegible] ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಬಟಫಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿ[illegible]

ಈ ತೈಲವು ಶಕ್ಕಾಲದಲ್ಲಿ ಜೇಬಿನಾಗಿಳಿಗೆ ಮುಖ್ಯವಾಗಿ ಸಿಕ್ಕ[illegible] ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಕುರಿತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದರ ಪಟ್ಟನಕ್ಕೂಡಲೇ [illegible]ಸಿಯಾಗುವದು.

ಈ ತೈಲವು ಅತಿ ತಲೆನೋವು, ಸೊಂಟದ ನೋವು, ಪಾರ್ಶ್ವವಾ[illegible], ಮೂಲವ್ಯಾಧಿ, ಉಬ್ಬಸ, ವಾಯುಗಳು, ರಕ್ತ ಕ್ರೋಧಗಳುವದು, [illegible], ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ [illegible]ವು, ಊದುಗಳು, ಗಡ್ಡೆಗಳು, ರಣಗಳು, ಸುಳುಕಿಸ್ಸು, ಸೊಳ್ಳೆ [illegible] ಚೇಳು ಕಡಿದದ್ದು ಚುಪ್ಪಿಲಾದದು [illegible]ಲ್ಲಿ ಸುಟ್ಟ[illegible]ದ್ದು, ಹೊಸ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು [illegible]ಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ [illegible]ರುವದಿಲ್ಲ.

ಕ್ರಯ — ಸಣ್ಣ ಬುಡ್ಡಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ., ಒಂದೇ ಸಲ ೧೨ ಬುಡ್ಡಿ ತರಿಸಿಕೊಂಡರೆ ಟಪ್ಪಾಲ್ ಖರ್ಚು [illegible] ವಹಿಸುತ್ತಾರೆ. ರೂ ೨—೮ ಆಣೆ ಬಾಟ್ಲು ಬುಡ್ಡಿಯಲ್ಲಿ ೧ [illegible] ಬುಡ್ಡಿಯಲ್ಲಿರುವದಕ್ಕಿಂತ ೪ ರಷ್ಟು [illegible] ಔಷಧವಿರುತ್ತೆ [illegible] ಈ ಬುಡ್ಡಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ನಾವು ವಹಿಸುತ್ತೇವೆ.

❋❋❋❋❋❋❋❋❋

ಹೋಮಿಯೋಪಿಯಾ [illegible]

ಈ ತೈಲವು ಇತರ ರೋಗಗಳಿಗೆ ಉಪಯೋಗಿಸತಕ್ಕದ್ದು [illegible] ಬರೆದ ಕಡೆ ಇದನ್ನು ಹಚ್ಚಕೂಡದು. ಇವರಲ್ಲಿ ಹೋಮಿಯೋಪಥಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅನಿಕ್ಕಿಂತಲೂ [illegible]ದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಬಾಗಿರುತ್ತವೆ. ಇದನ್ನು [illegible] ಬಹು ವೇಗನೆ ಸೇರಿಸಿಕೊಳ್ಳಬಲ್ಲವು. ಪಟ್ಟಣಗಳಲ್ಲಿ ತಂಟಿ [illegible], ೧ ರೂ ೧೬ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ [illegible] ತರಿಸಿಕೊಂಡರೆ ಟಪ್ಪಾಲ್ ಖರ್ಚು ನಾವು ಎಲ್ಲಾ ಸಾಧುಗಳ [illegible] ಕೊಡಲ್ಪಡುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ [illegible]ಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು

ವಿಳಾಸ:—ಹೋಮಿಯೋಪಿಯಾ ಕಂಪೆನಿ, [illegible] ಬೀದಿ, ಮದರಾಸ್

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಗಿರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು.

ತಯಾರುಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85 20

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮವಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರಿ. 74-9



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಟೀಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಟೀಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ[illegible]ರೆ

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೬—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❋❋❋❋❋❋❋❋❋

ನಿ ರ್ವಾ ಣ ಕ ರ್ಪೂ ರ

ಈ ಔಷಧವು ಅಜೀರ್ಣ, ಕೀಲುಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ[illegible]ಗಳೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು[illegible] ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ [illegible] ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ [illegible] ದರವು ದ್ವಾ[illegible] ಎಂಬ ಔಷಧವಂತೆಯೇ. ಸೀಸೆಗಳಲ್ಲಿ [illegible]ಲ್ಪಡುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿಯ[illegible] ಕರ್ಪೂರವನ್ನು ನಾನೂ ನನ್ನ ಕಾರೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಸ್ತರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಲ್ಲಿ ವಿಶೇಷ:—

ಹೆಪ್ರಿಯಂವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೇಂಟ್ ಬೀಚ್ [illegible], ಮದ್ರಾಸ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) . . . . . . ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್
ಸೇರಿ . . . . . . ರೂ ೧—೧೪—೦
„ „ ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-24

ಬ್ರೈಟ್ ಮತ್ತು ಈಸ್ಟ್‌ಲೆಂಡ್,

೬೯—೪೫, ಸಿಟಿ ರೋಡ್, ಲಂಡನ್, ಇ. ಸಿ.

ಎಂಬೀ ವಿಳಾಸಕ್ಕೆ ಹಣ ಕಳಿಸಿ, ಕಾಗದ ಬರೆಯಿರಿ. ಕಾಗದಗಳಿಗೆ ೧ ಆಣೆ ಸ್ಟಾಂಪು ಹಚ್ಚಬೇಕು, ಇಂಡಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ, ಅರಕ್ತರಿಗೂ ಮಕ್ಕಳಿಗೂ ಕೊಡುವಂಥಾ, ಯಂತ್ರಗಳಿಂದಲೇ ತಯಾರಾದಂಥಾ ಆಹಾರಗಳನ್ನೂ, ಇನ್ನೂ ನಾನಾತರದ ಪದಾರ್ಥಗಳನ್ನೂ ಇಟ್ಟು ಬಿಕರಿಮಾಡುತ್ತಾರೆ ಅವರು ಬಹು ಪರೀಕ್ಷಿಸಿ ಗಮನಕೊಟ್ಟು, ಸಾಧ್ಯವಿದ್ದಷ್ಟು ಅಗ್ಗವಾಗಿ, ಬೇಕಾದ ಸಾಮಾನುಗಳನ್ನೇ ಆರಿಸಿ, ಮರಟ ಪ್ಯಾಲಿಗ್ನೇ ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—9

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಪ್ರೈಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕವರು ಈ ಕೆಳಗೆ ಬರುವ ಸ್ಥಳಗಳವರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜೆಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸಹದಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜೆಂಟಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜೆಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಹಾಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಮಂಜೂರು ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಮಾಡಲ್ಪಡುವದು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ

ಅದ್ಭುತದ ಮೇಲೆ ಅದ್ಭುತ.

86 5

ಸಂಸಾರದಲ್ಲಿ ಯಾರಾದರೂ ಒಬ್ಬರು ಮಲಗಿದ್ದರೆ ಆ ಸಂಸಾರಕ್ಕೆ ಸೇರಿದವರಲ್ಲಿ ಯಾರಿಗಾದರೂ ಮನಸ್ಸಂತೋಷವಾಗಲಿ ಸಮಾಧಾನವಾಗಲಿ ಇರುವುದಿಲ್ಲ. ಹಾಗೆ ಮಲಗಿರುವವರ ಕಾಯಿಲೆಯು ಎಷ್ಟೇ ಸಾಮಾನ್ಯವಾಗಿದ್ದರೂ ಅದೇ ಪಾಡು. ಎಲ್ಲಾತರದ ವಾಯು ನೋವು, ಅರತಲೆನೋವು, ನರಗಳ ಇರಿತ, ತಲೆನೋವು, ತಲೆಬಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಗಂಟಲಹುಣ್ಣು, ತೋಲು ಬೆನ್ನು ಎದೆಗಳ ನೋವು, ಆಸ್ತ್ಮ, ಈ ಪ್ರತಿ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯ ಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ತೆಗೆದು ನೋವಿರುವ ಸ್ಥಳದ ಮೇಲೆ ಮಾತ್ರ ಹಚ್ಚಿದರೆ, ಅದು ಕೂಡಲೆ ಒಳಕ್ಕೆ ವ್ಯಾಪಿಸಿ, ನೋವು ಹುಟ್ಟಿದ ಸ್ಥಾನವನ್ನು ಸೇರಿ, ಒಂದಾನತರ ಉಜ್ಜೋಣದಿಂದಲೇ ನೋವನ್ನು ಎರಡು ನಿಮಿಷಗಳಲ್ಲೇ ವಾಸಿ ಮಾಡುತ್ತದೆ. ನೋವು ಖಂಡಿತವಾಗಿಯೂ ನಿವಾರಣೆಯಾಗುವುದು. ಈ ಔಷಧವನ್ನು ಹ್ಯಾಗೆ ಉಪಯೋಗಿಸಬೇಕೆಂಬ ವಿಧಾನ ಮುಂತಾದ್ದನ್ನೆಲ್ಲಾ ಪ್ರತಿ ಬಾಟ್ಲಿ ಜೊತೆಯಲ್ಲೂ ಅಚ್ಚಾದ ಪಟ್ಟಗಳನ್ನು ಇಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇನೇ ದುಃಖಕರವಾದ ಮತ್ತು ರೋಗದ ಮುಖವು ತೊಲಗಿ ಸುಖಸಂತೋಷಗಳುಂಟಾಗುವವು. ನೀವು ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಈಗ್ಲೆ ಬರೆದು ಈ ಔಷಧದ ಒಂದು ಬಾಟ್ಲನ್ನು ತರಿಸಿಕೊಳ್ಳಿ. ತರಿಸಿದಲ್ಲಿ ಎಂದೂ ನೀವು ಎಂದಿಗೂ ವ್ಯಸನ ಪಡುವುದೇ ಇಲ್ಲ. ಈ ಔಷಧದ ಗುಣವು ಅನುಭವ ಉಳ್ಳದ್ದಾಗಿದೆ. ಇದರ ಕ್ರಯ ೨ ಬಾಟ್ಲಿಗೆ ೧೨ ಆಣೆ, ೩ಕ್ಕೆ ೨ ರೂಪಾಯಿ, ೬ಕ್ಕೆ ರೂ ೩॥ ರೂಪಾಯಿ, ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ೧ ರಿಂದ ೩ ಬಾಟ್ಲಿವರಿಗೆ ೩ ಆಣೆ.

ನಮ್ಮ ವಿಳಾಸ—ಎಸ್. ಪಿಲ್ಲೆಯು ಆರ್ ಸಿವೆ ಪ್ರಿಂಟರ್,
ವೇಪೇರಿ ಮದರಾಸ್.

ಇಮಿಟೇಷನ್ ವಜ್ರದ ಹರಳಿನಲ್ಲಿ ತಯಾರಿಸಿದ ಪದಕದ ಗುಂಡಿ.

89 2

ಇದರಂದು ಆಶ್ಚರ್ಯಕರವಾದ ನಿರ್ಮಾಣದ ಷರಟು ಗುಂಡಿ
ಕ್ರಯ ಸೆಟ್ ೧ಕ್ಕೆ ರೂಪಾಯಿ ೧—೦—೦



ನವರತ್ನಗಳೊಳಗೆ ಶ್ರೇಷ್ಠವಾದ ವಜ್ರದ ಆಭರಣವು ಸಕಲರಿಗೂ ಸಾಧ್ಯವಿಲ್ಲದೇ ಇದ್ದಾಗ್ಯೂ ಅಮೇರಿಕಾ ದೇಶದವರು ವಜ್ರಕ್ಕೆ ಸಮಾನವಾದ ಪ್ರತಿರೂಪ ವಜ್ರವನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಂಡ್) ಎಂಬ ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಷರಟು ಗುಂಡಿಗಳನ್ನು ತಯಾರಿಸಲ್ಪಟ್ಟಿರುತ್ತೇವೆ. ಇದರ ಪ್ರಭಾವವು ದೀಪದ ಬೆಳಕಿಗೆ ಬೆಂಕಿಯಂತೆ ಥಳಥಳಿಸುವದಲ್ಲದೆ ವಜ್ರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇದನ್ನು ಒಂದು ಸೆಟ್ಟು ತರಿಸಿ ಪರೀಕ್ಷಿಸಿದರೆ ಇದರ ನಿಜಸ್ಥಿತಿ ಗೊತ್ತಾಗುತ್ತೆ.

ಜರ್ಮನ್ ಸಿಲ್ವರ್ ಘುಟ್ಟೆ ಕಾಲುಕಡಗ.

ಅನೇಕರು ಸುಲಭಕ್ರಯದಲ್ಲಿ ತಯಾರಿಸಿ ಕಳಿಸಬೇಕೆಂದು ಕೋರಿದ್ದ ಸಕಲರಿಗು ಉಪಯೋಗವಾಗುವ ಹಾಗೆ ಇರಬೇಕೆಂಬುವ ಅಭಿಪ್ರಾಯದಿಂದ ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ಕಂಬಿ ಮತ್ತು ತಗಡುಗಳನ್ನು ತರಿಸಿ ಅವುಗಳಿಂದ ಸಕಲ ಆಭರಣಗಳನ್ನು ತಯಾರಿಸುತ್ತಲಿದ್ದೇವೆ. ಇವುಗಳ ಬೆಳ್ಳಿ ರಂಗು ಎಷ್ಟು ವರುಷಗಳಾದರು ಕೆಡಲಾರದು. ಕೆಳಗೆ ನಮೂದಿಸಿದ ಮೇರಿಗೆ ಈ ಕಾಲ ಕಡಗಗಳನ್ನು ನಾಲ್ಕು ತರಹಾಗಳಾಗಿ ತಯಾರಿಸಲ್ಪಟ್ಟಿರುತ್ತವೆ ಮತ್ತು ಇವುಗಳ ರಂಗು ಇತರ ಕಮ್ಮಿ ಕ್ರಯದ ಜರ್ಮನ್ ಸಿಲ್ವರ್ ಬೆಳ್ಳಿಯ ಹಾಗೆ ಅರಿಶಿನ ಬಣ್ಣಕ್ಕೆ ತಿರುಗದೆ ಸ್ವಯವಾದ ಬೆಳ್ಳಿಗೆ ಸಮಾನವಾಗಿ ಇರುತ್ತೆ. ಎಲ್ಲರು ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯವನ್ನೇ ಇಟ್ಟಿದ್ದೇವೆ.

ನಂ.	೧. ದೊಡ್ಡವರಿಗೆ	ರೂ.	೧—೧೨—೦
,,	೨. ಚಿಕ್ಕವರಿಗೆ	,,	೧—೪—೦
,,	೩. ಹುಡುಗಿಯರಿಗೆ	,,	೦—೧೨—೦
,,	೪. ಮಕ್ಕಳಿಗೆ	,,	೦—೬—೦

ಮೈಸೂರು ದೇಶದ ಕೈಕಪ್ಪ. ಬೆಲೆ ರೂಪಾಯಿ ೧—೦—೦



ಇದನ್ನು ಗಂಡಸರು ಕೈಗೆ ಹಾಕಿಕೊಳ್ಳುವ ಥಂಗಾಂದ ಗಿಲೀಟಿನ ಕಂಬಿಯಲ್ಲಿ ಬಹು ಸೊಗಸಾದ ನುಲಿಗೆಯನ್ನು ಹಾಕಿ ನೋಟಕ್ಕೆ ಅತಿ ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇದರ ಬಣ್ಣ ಬಹಳ ಕಾಲದವರೆಗೆ ನಿಲ್ಲುವಂತೆ ಹೊಸ ನಮೂನೆಯ ಉಪಾಯದಿಂದ ತಯಾರಿಸಿ ಬಂಗಾರದ ಗಿಲೀಟ್ ಹಾಕಲ್ಪಟ್ಟಿರುತ್ತೆ. ಇದನ್ನು ನೋಡಿದವರು ನಿಜವಾದ ಭಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ,
ಸಾಹುಕಾರ್ ಪೇಟೆ, ಮದರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

15-25



ಕರುಳು ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ತೀವ್ರನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯಾದರೂ ಕೂಡ ಮೂರೇ ಹೊತ್ತಿನ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ರಬ್ಬರ್ ಸ್ಟ್ಯಾಂಪುಗಳು.



ನಮ್ಮ ಕಂಪನಿಯಲ್ಲಿ ಯಾವ ಭಾಷೆಯಲ್ಲಾದರೂ ಇಂಗ್ಲೀಷ್ ಟೈಪ್ ರಬ್ಬರ್ ಸ್ಟ್ಯಾಂಪುಗಳಿಗೆ ದರಖಾಸ್ತು ಕಳುಹಿಸಿದ್ದವರಿಗೆ ಆರ್ಡರ್ ಪ್ರಕಾರ ತಯಾರಿಸಿ ಕಳುಹಿಸುತ್ತೇವೆ. ಬಾದಾಮಿ ರವುಂಡು, ಚೌಕ ಯಾವ ಆಕಾರವಾದರೂ ಅದರಲ್ಲಿ ಬೇಕಾದ ಅಕ್ಷರಗಳನ್ನು ಹಾಕಿ ಸುಂದರವಾದ ರಬ್ಬರ್ ಸ್ಟ್ಯಾಂಪು ೧, ಇಂಕಿ ಸೀಸಾ ೧, ರಬ್ಬರ್ ಸ್ಟ್ಯಾಂಪು ಇರಿಸುವ ಪೆಟ್ಟಿಗೆ ೧, ಬ್ರಷ್ ೧ ಪ್ಯಾಡ್ ೧, ಇವುಗಳ ಸಹಿತ ಕ್ರಯ ರೂ. ೧—೮—೦ ಪೋಸ್ಟೇಜು ೩ ಆಣೆ 93-1

ವಿಳಾಸ.—ಮ್ಯಾನೇಜರ್, ರಬ್ಬರ್ ಸ್ಟ್ಯಾಂಪ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಪಾರ್ಕ್ ಟೌನ್, ಮದ್ರಾಸ್.

ಮಕ್ಕಳ ಹಿತಕಾರಿ

ಎಂದರೆ

(ಸ್ಕಾಟ್ಸ್ ಎಮಲ್ ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತಿಂಡಿ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ. 57-15

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆರೋಗ್ಯವಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ವೃತ್ತಾಂತ ಪತ್ರಿಕೆ

—:o:—

೧೯೦೬ ನೇ ಇಸವಿ ಜೂನ್ ತಾ॥ ೨೮ ನೇ ಗುರುವಾರ.

ರಷ್ಯಾ ರಾಜ್ಯವೂ ರೈತಪ್ರಜೆಗಳೂ.

ರಷ್ಯಾ ರಾಜ್ಯವು ಹಿಂದುಸ್ಥಾನದಂತಿದೆ ಎಂದು ಹೇಳಬಹುದು. ರಷ್ಯಾ ಚಕ್ರಾಧಿಪತ್ಯದ ಅಸಂಖ್ಯಾತವಾದ ಪ್ರಜಾಕೋಟಿಗಳು ಜಮೀನ್ ವ್ಯವಸಾಯದಿಂದಲೇ ಜೀವಿಸತಕ್ಕವರಾಗಿರುತ್ತಾರೆ. ಅಲ್ಲಿನ ದೊಡ್ಡಮನುಷ್ಯರಿಗೇ ಅಪಾರವಾದ ಜಮೀನುಗಳಿರುತ್ತವೆ. ಅವರು ರೈತರನ್ನು ಇಟ್ಟು ಅವರಿಂದ ವ್ಯವಸಾಯ ಮಾಡಿಸುವರು. ೧೮೬೧ನೆ ಇಸವಿಯ ತನಕ ಆ ವ್ಯವಸಾಯಗಾರರೆಲ್ಲಾ ಜಮೀನ್ದಾರರ ಜೀತಗಾರರಾಗಿಯೇ ಪರಿಣಮಿಸಿದ್ದರು. ಆಗಿನ ಚಕ್ರವರ್ತಿಯವರು ಜೀತಪದ್ಧತಿಯನ್ನು ನಿರ್ನಾಮಮಾಡಿ, ರೈತರು ತಮಗೆ ಬೇಕಾದ ಕಡೆ ಇದ್ದು ಇಷ್ಟಬಂದ ಜಮೀನು ಮಾಡಬಹುದೆಂತಲೂ, ಈ ಭಾಗದಲ್ಲಿ ದೊಡ್ಡಮನುಷ್ಯರು ವ್ಯವಸಾಯಗಾರರನ್ನು ಯಾವ ನಿರ್ಬಂಧಕ್ಕೂ ಒಳಪಡಿಸಕೂಡದೆಂತಲೂ ರೈತಪ್ರಜೆಗಳಿಗೆ ಸೌಲಭ್ಯಗಳನ್ನುಂಟುಮಾಡಿದರು. ಆದಾಗ್ಯೂ ಅನೇಕ ಸಹಸ್ರ ಜೀತಗಾರರಿಗೆ ಸರ್ಕಾರದಿಂದ ಸ್ವಂತ ಜಮೀನುಗಳನ್ನು ಹಂಚಿಕೊಡಲಿಲ್ಲದರು. ಅದರೇನು? ಪ್ರಜಾಬಾಹುಳ್ಯಕ್ಕೆ ಜಮೀನು ಕೊಟ್ಟದ್ದು ಸಾಕಾಗಲಿಲ್ಲ. ಸ್ವತಂತ್ರವಾಗಿ ಜೀವನಮಾಡಿಕೊಳ್ಳುವುದಕ್ಕೆ ಕಂದಾಯದ ಜಮೀನು ಬೇಕು ಎಂಬುದೇ ಈಗಿನ ರಷ್ಯಾ ಪ್ರಜೆಗಳ ದೊಡ್ಡ ಮೊರೆಯಾಗಿದೆ. ಈಗಲೂ ಸಾವಿರಾರು ಎಕರೆಗಳನ್ನು ಪಡೆದಿರುವ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಇವರು ಜೀತಗಾರರಿಗೆ ಕೊಡುವ ಹಿಂಸೆ ಅಷ್ಟಿಷ್ಟಲ್ಲ. ಗವರ್ನಮೆಂಟಿನವರು ಅವರಿಂದ ಜಮೀನನ್ನು ಕಿತ್ತು, ಜೀವನಕ್ಕೆ ಮಾರ್ಗವಿಲ್ಲದೆ ಕೊಳೆಯುತ್ತಿರುವ ರೈತಪ್ರಜೆಗಳಿಗೆ ಕಂದಾಯಕ್ಕೆ ಕೊಡಬೇಕಾದದ್ದು ಗವರ್ನಮೆಂಟಿನವರ ಪ್ರಥಮ ಕರ್ತವ್ಯವೆಂಬುದಾಗಿ ಡೂಮಾ ಎಂಬ ಹೊಸ ಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಬಹು ಕಠಿಣವಾಗಿ ಹೊಡೆದಾಡುತ್ತಿದ್ದಾರೆ. ಹೀಗೆ ಕೊಟ್ಟರೆ ರೈತರು ತಮ್ಮ ಕೈಬಿಟ್ಟು ಹೋಗುವರೆಂದು ದೊಡ್ಡಮನುಷ್ಯರು ಸಾಹಸಪಟ್ಟು ತಮ್ಮ ದುರ್ಬೋಧೆಗಳಿಂದ ಚಕ್ರವರ್ತಿಯವರ ತಲೆಕೆಗೆ ಅಪಯಶಸ್ಸು ತಂದಿರುತ್ತಾರೆ. ಸರ್ಕಾರದ ಮಂತ್ರಿಗಳಾದರೋ ಜಮೀನ್ ಬೇಕಾದವರು ಸರ್ಕಾರಿ ವ್ಯವಸಾಯದ ಬ್ಯಾಂಕುಗಳಿಂದ ಸಾಲ ಪಡೆದು ಜಮೀನ್ ಕೊಂಡುಕೊಳ್ಳಲಿ ಎಂದು ಹೇಳುವರು. ಇದನ್ನು ಪ್ರತಿನಿಧಿ ಸಭೆಯವರು ಒಪ್ಪುವುದಿಲ್ಲ. ಇದನ್ನೆಲ್ಲಾ ನೋಡಲಾಗಿ ಗವರ್ನಮೆಂಟಿನವರು ಪ್ರಜೆಗಳ ಕೋರಿಕೆಯನ್ನು ನೆರವೇರಿಸಿಕೊಡದೆ ಹೋದಲ್ಲಿ ಆ ರಾಜ್ಯಕ್ಕೆ ಇನ್ನೂ ಹೆಚ್ಚಾದ ಕಷ್ಟನಷ್ಟಗಳು ಪ್ರಾಪ್ತವಾಗುವವೆಂದು ಖಂಡಿತವಾಗಿ ಹೇಳಬಹುದಾಗಿದೆ. ಆಗಲೇ ಅನೇಕ ಕಡೆಗಳಲ್ಲಿ ರೈತಪ್ರಜೆಗಳು ದೊಡ್ಡಮನುಷ್ಯರ ಮನೆ ಮಠಗಳನ್ನು ಸುಟ್ಟುಹಾಕಿದರು. ಜಮೀನನ್ನು ಬಲಾತ್ಕಾರವಾಗಿ ಕಿತ್ತು ಸ್ವಾಧೀನಪಡಿಸಿಕೊಂಡದ್ದಲ್ಲದೆ ಸರ್ಕಾರಿ ಕಾಡನ್ನು ಆಕ್ರಮಿಸಿಕೊಳ್ಳುತ್ತಾ ಬಂದಿದ್ದಾರೆ.

ಒಳದೇಶದ ವೃತ್ತಾಂತಗಳು.

ಚಿಕ್ಕಮಗಳೂರಿಗೆ ಸೇರಿದ ಹಿರೇಮಗಳೂರಲ್ಲಿ ಹೊಸ ಮ. ವೆಂಕಟಯ್ಯಂಗಾರ್ರ ಮನೆಗೆ ಕಳೆದ ಬುಧವಾರ ರಾತ್ರಿ ಕಳ್ಳರು ಬಿದ್ದು ರಾಮಸ್ವಾಮಯ್ಯಂಗಾರ್ರನ್ನು ಹೊಡೆದು ಗಾಯಮಾಡಿರೆಂದು ತಿಳಿದುಬಂದಿದೆ.

****

ಹಿಂದುಸ್ಥಾನದಲ್ಲಿರುವ ಪ್ರಜೆಗಳೆಲ್ಲಾ ನಾಳೆಯ ದಿನ ಚಕ್ರವರ್ತಿಯವರ ಜನ್ಮೋತ್ಸವವನ್ನು ಆಚರಿಸತಕ್ಕದ್ದೆಂದು ಗೊತ್ತಾಗಿರುವುದರಿಂದ ಮೈಸೂರು ಸಂಸ್ಥಾನದ ಎಲ್ಲಾ ಕೋರ್ಟು ಕಚೇರಿ ಸ್ಕೂಲುಗಳಿಗೂ ಸರ್ಕಾರದವರು ನಾಳೆ ರಜಾ ದಯಪಾಲಿಸಿರುತ್ತಾರೆ.

****

ಚನ್ನಪಟ್ಟಣದ ಹೈಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮೆ॥ ಕೃಷ್ಣಯ್ಯಂಗಾರ್ರಿಗೆ ಚಿಕ್ಕಬಳ್ಳಾಪುರಕ್ಕೆ ವರ್ಗವಾದ್ದನ್ನು ಕೇಳಿ ಚನ್ನಪಟ್ಟಣದ ಪ್ರಜೆಗಳೂ ವಿದ್ಯಾರ್ಥಿಗಳೂ ಅವರನ್ನು ಸಭಾಪೂರ್ವಕವಾಗಿ ಸನ್ಮಾನಮಾಡಿ, ಅವರ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಟಿಸಿ, ಬಹು ವ್ಯಸನದಿಂದ ಅವರನ್ನು ಸಾಗಕಳುಹಿಸಿದರು.

ಮೊನ್ನೆ ಭಾನುವಾರ ಡಾಕ್ಟರ್ ರಾಮಸ್ವಾಮಿಯ್ಯಂಗಾರ್ರು ಬೆಂಗಳೂರಿನಲ್ಲಿ ಸವಾರಿ ಹೋಗುತ್ತಿದ್ದಾಗ ಒಂದು ಕುದುರೆ ಅವರ ಗಾಡಿಗೆ ಸಿಕ್ಕಿ ಒಂದು ಕ್ಷಣವೂ ಬದುಕದೆ ಬಿದ್ದಿತಂತೆ.

◆◆◆◆

ಮಂಡ್ಯದ ಹತ್ತಿರ ಒಂದು ಗ್ರಾಮದಲ್ಲಿ ಕೆಲವು ಹೆಣ್ಣಾಳುಗಳು ಒಡ್ಡಿನಿಂದ ಸುಣ್ಣಕಲ್ಲು ಎತ್ತುತ್ತಿದ್ದಾಗ ಅದರ ದಡ ಕುಸಿದುದ್ದು, ಹೆಣ್ಣುಮಕ್ಕಳಿಬ್ಬರು ಕೆಳಗೆ ಸಿಕ್ಕಿದರೆಂತಲೂ, ಒಬ್ಬ ಹುಡುಗಿ ಸತ್ತುಹೋದಳೆಂತಲೂ, ಇನ್ನೊಬ್ಬ ಸ್ತ್ರೀ ಹುಡುಗಿ ಗಾಯಪಟ್ಟು ಚಿಕಿತ್ಸೆ ಹೊಂದುತ್ತಿದ್ದರೂ ಬದುಕುವುದು ಕಷ್ಟವೆಂತಲೂ ತಿಳಿದುಬಂದಿದೆ.

◆◆◆◆

ಆನೇಕಲ್ ತಾಲ್ಲೂಕಿಗೆ ಸೇರಿದ ದೊಮ್ಮಸಂದ್ರದ ಬಳಿ ಬೆಳತೂರಿನಲ್ಲಿ ಒಬ್ಬ ಅಕ್ಕಸಾಲಿಯು, ವಿಧವೆಯಾದ ತನ್ನ ತಮ್ಮನ ಹೆಂಡತಿಗೆ ನೆಗಳನ್ನು ಕಾಸಿ ಭಯಂಕರವಾದ ಗಾಯಗಳನ್ನು ಮಾಡಿದ್ದಾನೆಂಲೂ, ಈ ವಿಷಯವನ್ನು ಸರ್ಕಾರದವರು ವಿಚಾರಣೆ ಮಾಡುತ್ತಿದ್ದಾರೆಂತಲೂ, ಆ ಹೆಂಗಸು ಚಿಕಿತ್ಸೆ ಹೊಂದುತ್ತಿರುವುದಾಗಿಯೂ ಒಬ್ಬ ವರ್ತಮಾನದಾರರು ತಿಳಿಸುತ್ತಾರೆ.

◆◆◆◆

ಮೊನ್ನೆ ಶನಿವಾರ ಸಾಯಂಕಾಲ ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿರುವ ಪ್ರಜೆಗಳು ದಿವಾನ್ ಮೆ|| ಮಾಧವರಾಯರನ್ನು ಕರೆದು ನಾನಾ ವಿಧ ಸಂತೋಷೋತ್ಸವಗಳನ್ನು ಮಾಡಿ, ವಿಜ್ಞಾಪನಾಪತ್ರಿಕೆಗಳನ್ನೊಪ್ಪಿಸಿದರು. ನೂರಾರು ಮಂದಿ ಹುದ್ದೇದಾರರೂ ಯೂರೋಪಿಯನ್ ಸರ್ದಾರರೂ ಜಾದರಾಗಿದ್ದು ಆ ಸಾಯಂಕಾಲ ನಡೆದ ಕಾರ್ಯಗಳಲ್ಲಿ ಬೆರೆದು ಸಂತೋಷಪಟ್ಟರು.

◆◆◆◆

ರೈತನು ತನ್ನ ಜಮೀನಿನ ಸಾಗುವಳಿಗಾಗಿ ಭಾವಿ ತೋಡಿಕೊಳ್ಳುವುದಕ್ಕೆ ಸರ್ಕಾರದಿಂದ ಸಾಲವನ್ನು ತೆಗೆದುಕೊಳ್ಳುವಾಗ್ಗೆ ಯಾವ ಜಮೀನಿನಲ್ಲಿ ಆ ಭಾವಿ ತೆಗೆದು ವ್ಯವಸಾಯ ಮಾಡಬೇಕೋ ಅಂಥಾ ಜಮೀನನ್ನು ಮಾತ್ರ ಸರ್ಕಾರಕ್ಕೆ ಆಧಾರ ಮಾಡಬೇಕೆಂತಲೂ ಅವನ ಖಾತೆಗೆ ಸೇರಿದ ಇತರ ಜಮೀನುಗಳನ್ನು ಆಧಾರಮಾಡಬೇಕಾದದ್ದಿಲ್ಲವೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

◆◆◆◆

ಮೊನ್ನೆ ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ರಾಜಧಾನಿಯಿಂದ ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಕುಳಿತು ಬೆಂಗಳೂರಿಗೆ ದಯಮಾಡಿದರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಇನ್ನೊಂದು ವಾರಹೊತ್ತಿಗಾಗಿ ವಾಪಸು ರಾಜಧಾನಿಗೆ ಚಿತ್ತೈಸುವರೆಂದು ವರ್ತಮಾನವಿದೆ ಇವರ ಸಂಗಡ ಮೆ|| ಮೆಕಾನಕಿಯವರು, ಕ್ಯಾಪ್ಟನ್ ಹೀಲ್ ಯವರು, ಪ್ರಿನ್ಸ್ ಗೋಪಾಲರಾಜೇ ಅರಸಿನವರು ಹೋಗಿಂತ್ತಾರೆ

◆◆◆◆

ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಹೊನ್ನಾಳಿ, ಶಿವಮೊಗ್ಗಾ, ಸೊರಬ, ಶಿಕಾರಿಪುರ, ಈ ನಾಲ್ಕು ತಾಲ್ಲೂಕುಗಳಲ್ಲೂ ವರ್ಷ ಫಸಲು ಸಾಲ್ಮಾಕೆಗಿಂತ ಕಡಿಮೆಯಾಗಿರುವ ಜಮೀನುಗಳಿಗೆಲ್ಲಾ ಅರ್ಧ ತರೀ ಕಂದಾಯವನ್ನು ರಿಮಿಷನ್ ಮಾಡಿದೆ ಎಂತಲೂ, ಹೊನ್ನಾಳಿ ತಾಲ್ಲೂಕಿಗೆ ಸೇರಿದ ಸೊರತೂರು ಮೊದಲಾದ ಇಪ್ಪತ್ತೊಂದು ಗ್ರಾಮಗಳಲ್ಲಿ ಖುಷ್ಕಿ ಜಮೀನುಗಳ ಕಂದಾಯವನ್ನು ಪೂರ್ತಿ ಗುರ್ರೇ ಲಾಗಾಯಿತು ನಾಲ್ಕು ಅಥವಾ ಆರು ಖಸ್ತುಗಳಲ್ಲಿ ವಸೂಲ್ಮಾಡಬೇಕೆಂತಲೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

◆◆◆◆

ಇದುವರೆಗೆ ರಾಜಧಾನಿಯಲ್ಲಿದ್ದು ಇತರ ಕಡೆಗಳಿಗೆ ವರ್ಗಪಟ್ಟಿರುವ ಡಾಕ್ಟರ್ ಪಿ. ಎಸ್. ಅಚ್ಯುತರಾಯರು, ಸಬ್ ಜಡ್ಜಿ ಮೆ|| ಟಿ ಪರಮಶಿವ ಐಯ್ಯರವರು, ಮರ್ಚಿಫ್ ಮೆ|| ಬಿ. ಎಸ್. ಕೃಷ್ಣಸಾಮೈಯ್ಯಂಗಾರ್ರು, ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಮೆ|| ವಿ. ಎಸ್. ರಾಜಗೋಪಾಲಾಚಾರ್ರು, ಅಡ್ವೋಕೇಟ್ ಮೆ|| ಬಿ ರಂಗೈಯಂಗಾರ್ರು, ಇವರುಗಳನ್ನು ಪ್ರಜೆಗಳೂ ಬೇರೆ ಬೇರೆ ಸಂಘಗಳವರೂ ಔತಣಾದಿ ಸಂತೋಷೋತ್ಸವಗಳಿಂದ ತೃಪ್ತಿಪಡಿಸುವುದರ ಮೂಲಕ ತಮ್ಮ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸುತ್ತಿದ್ದಾರೆ.

◆◆◆◆

ಕೋಲಾರ್ ಟವನ್ ಮೆ|| ಗಿರಿಮಾಜಿರಾಯರ ಪತ್ನಿ ಸೌ|| ಪದ್ಮಾವತಿ ಬಾಯಮ್ಮನವರು ತಿಳಿಸುವುದೇನೆಂದರೆ—"೧೯೦೩ ನೆ ಇಸವಿ ಜುಲೈ ಆಖೈರಿನ ಒಳಗಾಗಿ ಬಾಲಕಿಯಾಗ್ಯಾದರೂ ಇಂಡಿಯಾ ಚಕ್ರವರ್ತಿನಿಯಾಗಿದ್ದ ಮಹಾರಾಣಿ 'ವಿಕ್ಟೋರಿಯಾ ಯವರ ಚರಿತ್ರೆಯನ್ನು ಸುಲಭವಾದ ಕನ್ನಡದಲ್ಲಿ ಬರೆದು ಕಳುಹಿಸಿದರೆ ಅಂಥಾವರಲ್ಲಿ ಉತ್ತಮವಾಗಿ ಬರೆದವರಿಗೆ ಐದು ರೂಪಾಯಿ ಇನಾಂ ಕೊಡುವುದಕ್ಕೆ ನಾನು ಇಷ್ಟಪಟ್ಟಿದ್ದೇನೆ" ಎಂಬುದೇ. ಬಹು ಮಂದಿ ಬಾಲಕಿಯರು ಇದಕ್ಕೆ ಪ್ರಯತ್ನಪಡುವರೆಂದು ನಿರೀಕ್ಷಿಸುತ್ತೇವೆ.

◆◆◆◆

ಸರ್ಕಾರಿ ಹುದ್ದೇದಾರರಿಗೆಲ್ಲಾ ಕೆಲಸಬಿಟ್ಟು ಪೆನ್ಷನ್ ಪಡೆಯುವಾಗ್ಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಡುವುದೂ ಆ ಮೂರು ತಿಂಗಳಲ್ಲೂ ಅವರಿಗೆ ಪೂರಾ ತಲಬನ್ನು ಕೊಡುವುದೂ ರೂಢಿಯಾಗಿತ್ತು. ಇದು ಅನಾವಶ್ಯವೆಂದು ಕಂಟ್ರೋಲರವರು ಬರೆದದ್ದರ ಮೇಲೆ ಸರ್ಕಾರದವರು ಒಪ್ಪಿ ಆ ರೂಲಸನ್ನು ಬದಲಾವಣೆಮಾಡಬೇಕೆಂತಲೂ ಇನ್ನು ಮುಂದೆ ಹಾಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಡಲಾಗುವುದಿಲ್ಲವೆಂತಲೂ, ಸಧ್ಯಕ್ಕೆ ಈ ಜುಲೈ ಗುರ್ರೆಯಿಂದ ಕೆಲಸಬಿಡುವವರಿಗೆ ಮಾತ್ರ ಕೊಡಬಹುದೆಂತಲೂ ಹುಕುಂ ಮಾಡಿರುತ್ತಾರೆ.

ನಂಜನಗೂಡಿನಲ್ಲಿ ಕಪಿಲಾ ನದಿಯ ಬಳಿ ಶಿವಾಚಾರಸ್ವಾಮಿಗಳು ಚಾಮುಂಡೇಶ್ವರಿ ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠೆಮಾಡಿ, ತಮ್ಮ ಸಂಪಾದನೆಯಿಂದ ನಡೆಸುತ್ತಾ ಬಂದರು ಅದಕ್ಕೆ ಕೆಲವು ಒಡವೆಗಳನ್ನೂ ೬೦೦ ರೂಪಾಯಿ ಪ್ರಾಮಿಸರಿ ನೋಟನ್ನೂ ಹಾಕಿದ್ದಾರೆ. ಸರ್ಕಾರದವರು ಈ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಂಡು, ಅದರ ಖರ್ಚಿಗೆ ತಿಂಗಳಿಗೆ ೫೦ ರೂಪಾಯಿಯಂತೆ ಮಾಸಾಶನವನ್ನು ಸ್ಯಾಂಕ್ಷನ್ಮಾಡಿ, ನಂಜನಗೂಡು ದೇವಸ್ಥಾನದ ಪೇಷ್ಕಾರರೇ ಅದರ ಮೇಲ್ವಿಚಾರಣೆ ಮುಂತಾದ್ದನ್ನು ನೋಡಿಕೊಳ್ಳತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ.

◆◆◆◆

ಮೈಸೂರು ಮ್ಯುನಿಸಿಪಾಲಿಟಿ ಯವರು ಸರ್ಕಾರದಿಂದ ಸ್ಯಾಂಕ್ಷನ್ ಪಡೆಯದೇನೇ ೫,೨೬೭ ಚಿಲ್ಲರೆ ರೂಪಾಯನ್ನು ೧೯೦೧—೦೨ ನೆ ಸಾಲಿನಲ್ಲಿ ಖರ್ಚುಮಾಡಿಬಿಟ್ಟರು. ಗವರ್ನಮೆಂಟಿನವರು ಈ ಭಾಗದಲ್ಲಿ ತುಂಬಾ ಅಗ್ರಹಪಟ್ಟು, ಮ್ಯುನಿಸಿಪಾಲಿಟಿಯವರು ಹೀಗೆ ಇನ್ನು ಮುಂದೆ ಮಾಡಲೇ ಕೂಡದೆಂತಲೂ, ಗವರ್ನಮೆಂಟಿನವರು ಅಂಥಾದ್ದನ್ನು ಒಪ್ಪಲಾರರೆಂತಲೂ, ಸ್ಯಾಂಕ್ಷನ್ ಪಡೆಯದೆ ಹಣ ಖರ್ಚುಮಾಡಿದ ಪಕ್ಷದಲ್ಲಿ ಅವರ ಕೈಯಿಂದಲೇ ತೆರಿಸಬೇಕಾದೀತೆಂತಲೂ ತಿಳಿಸಿ, ಸಧ್ಯಕ್ಕೆ ಮೇಲ್ಕಂಡ ಖರ್ಚನ್ನು ಸ್ಯಾಂಕ್ಷನ್ಮಾಡಿದ್ದಾರೆ. ಮ್ಯುನಿಸಿಪಾಲಿಟಿಯವರು ಮೊದಲೇ ಗವರ್ನಮೆಂಟಿನವರಿಂದ ಸ್ಯಾಂಕ್ಷನ್ ಪಡೆಯದೆ ಯಾಕೆ ಹೆಚ್ಚು ಖರ್ಚು ಮಾಡಿದರೋ ಎಂದು ವ್ಯಸನಪಡಬೇಕಾಗಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕಾಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಚಳ್ಳಕೆರೆ ತಾಲ್ಲೂಕು ಕಲ್ಲತ್ತಿ ಕಣಿವೆ ಪೋಲೀಸಿನವರ ವಿಷಯ "ಸಾಕ್ಷಿಯಿಂದ ರುಜುವಾತು ಮಾಡುವುದು ಅಸಾಧ್ಯ" ವೆಂದು ಒಬ್ಬರು ಬಾತ್ಮಿಯನ್ನು ಬರೆದು ಇರುತ್ತಾರೆ ಹೀಗೆ ರುಜುವಾತು ಮಾಡಲಿಕ್ಕಾಗದ ಸಂಗತಿಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಕರೆಸ್ಪಾಂಡೆನ್ಸ್

ಕಷ್ಟನಿಷ್ಠೂರಗಳು

ಅಯ್ಯಾ,

ಚಳ್ಳಕೆರೆ ತಾಲ್ಲೂಕು ಚನ್ನಮ್ಮನಾಗತಿಹಳ್ಳಿ ಗ್ರಾಮವು ಊರೊಳಗೆ ಕೋಟೆ ಊರಹೊರಗೆ ಎಂದು ಎರಡು ಭಾಗವಾಗಿದೆ. ಊರೊಳಗೆ ಸಜ್ಜನರಿವಾಚಾರದವರೇ ವಿಶೇಷ. ಈ ಗ್ರಾಮದಲ್ಲಿ ಸಾಯಂಕಾಲವಾದ ಕೂಡಲೆ ಅಂದರೆ ಸುಮಾರು ೭—೮ ಗಂಟೆ ಹೊತ್ತಿನಲ್ಲಿ ಕಲ್ಲುಗಳು ಬೀಳುತ್ತವೆ. ಈ ಕಲ್ಲುಗಳು ಎಲ್ಲಿಂದ ಬೀಳುತ್ತವೆಯೋ ಗೊತ್ತಾಗುವುದಿಲ್ಲ ಪಟೇಲ, ಶಾನುಭೋಗರು ಈ ವಿಷಯದಲ್ಲಿ ತುಂಬಾ ನಿಗಾ ಇಟ್ಟಿರುತ್ತಾರೆ ಆದರೆ ಸಾಯಂಕಾಲವಾದ ಕೂಡಲೆ ಬಾಗಿಲುಗಳನ್ನು ಭದ್ರ ಮಾಡಿಕೊಂಡು ಪ್ರಾಣಗಳನ್ನು ಕಾಪಾಡಿಕೊಳ್ಳುವದೇ ಮುಖ್ಯ ಕರ್ತವ್ಯವಾಗಿದೆ. ಈ ಅಪಾಯವು ಯಾವ ಸಾಧನೀಯದಿಂದ ತಪ್ಪುವದೋ ನೋಡಬೇಕಾಗಿದೆ ಬಾತ್ಮಿದಾರ್.

ಜೋಳದಾಳು ಸಂತೆಕಟ್ಟುವ ಸ್ಥಳ.

ಅಯ್ಯಾ,

ಈ ಗ್ರಾಮದಲ್ಲಿ ಪ್ರತಿ ಗುರುವಾರವೂ ಸಂತೆ ನಡೆಯುತ್ತೆ. ಸುತ್ತುಮುತ್ತು ಅನೇಕ ಕಾಫಿ ತೋಟಗಳಿರುವದರಿಂದ ಅಲ್ಲಿನ ಕೂಲಿ ಆಳುಗಳಿಂದಲೆ ಅರೆವಾಸಿ ವ್ಯಾಪಾರ ನಡೆಯುತ್ತದೆ. ಈ ಮಳೆಗಾಲದಲ್ಲಿ ಸಂತೆ ನಡಿಯತಕ್ಕ ಜಾಗಾ ನೋಡಲು ಬಹು ಶೋಚನೀಯವಾಗಿದೆ. ಕೆಸರು ಒಂದೊಂದು ಗಜದವರೆಗೆ ಹೂಳಿಕೊಳ್ಳುತ್ತದೆ. ವ್ಯಾಪಾರಸ್ಥರ ಮತ್ತು ಅಂಗಡಿಯವರ ಗೋಳಂತು ಹೇಳತೀರದು. ಈ ವಿಷಯದಲ್ಲಿ ಕಳೆದ ವರುಷ ಜಲ್ಲಿ ಕಲ್ಲು ಮಗ್ಗೆರೆ ಹಾಕಿಸಿ, ಈ ಕೆಸರು ತಪ್ಪಿಸಿಕೊಡಬೇಕಾಗಿ ಮೇಲ್ಪಟ್ಟ ಅಫೀಸರವರ ಗಮನಕ್ಕೆ ತರಲು ತಮ್ಮ ಪತ್ರಿಕೆಯಲ್ಲಿ ಮೊರೆಯಿಟ್ಟುಕೊಂಡೆ. ಅದನ್ನು ಯಾರೂ ಕೇಳಲಿಲ್ಲ. ಈ ಸಾರಿಯಾದರೂ ಯಾರಾದರು ಧರ್ಮಪ್ರಭುಗಳು ಕೇಳುತ್ತಾರೋ ಇಲ್ಲವೋ ನೋಡೋಣ. ಈ ಸಂತೆಯಲ್ಲಿ ಪಣಿಗೆ ಎತ್ತುವ ಫಕೀರರ ಕಾಟವಂತು ಹೇಳತೀರದು. ಇವರನ್ನು ಕೇಳುವವರೆ ಇಲ್ಲ. ತೂಕದ ಬಟ್ಟು ಅಳತೆ ಸೇರು ಮಗ್ಗೆರೆ ಅಜಮಾಯಿಷಿ ಮಾಡುವವರೇ ದಿಕ್ಕಿಲ್ಲ. ಇವನ್ನೆಲ್ಲಾ ಸರ್ಕಾರದವರು ಅಜಮಾಯಿಷಿಯ ಕ್ರಮಕ್ಕೆ ತಂದಾರೆಂತ ನಿರೀಕ್ಷಿಸುತ್ತೇನೆ. ಪ್ರಜಾ ಹಿತಚಿಂತಕ.

ಸ್ಕೂಲ್ ಮಾಸ್ಟರುಗಳ ಸಂಬಳ.

ಅಯ್ಯಾ,

ಸ್ಕೂಲ್ ಮಾಸ್ಟರುಗಳಿಗೆ ಮಾಹೆಯಾನಾ ಬರುವ ೭ ರೂಪಾಯಿ ತಲಬು ಅವರ ಜೀವನಕ್ಕೆ ಎಷ್ಟುಮಾತ್ರವೂ ಸಾಲದೆ ಪಡುತ್ತಾ ಇರುವ ಶ್ರಮೆಯನ್ನು ಹೇಳಲು ಮತ್ತು ಬರಿಯಲು ಅಸಾಧ್ಯವಾಗಿದೆ. ಈ ಅಲ್ಪ ತಲಬಿನಿಂದ ಈ ಕ್ಷಾಮಕಾಲದಲ್ಲಿ ೪—೬ ಜನಗಳುಳ್ಳ ತಮ್ಮ ಸಂಸಾರವನ್ನು ಸುಧಾರಿಸಿಕೊಂಡು ಹ್ಯಾಗೆ ಜೀವನ ಮಾಡುತ್ತಾರೆಯೋ ಅವರಿಗೇ ಗೋಚರವಾಗಿದೆ ಮೈಸೂರು ಸೀಮೆಯಲ್ಲಿ ೭ ರೂಪಾಯಿ ತಲಬು ತೆಗೆಯುವ ಸ್ಕೂಲ್ ಮಾಸ್ಟರುಗಳೆಲ್ಲಾ ಇದೇ ರೀತಿಯಾಗಿಯೇ ಈ ಸ್ವಲ್ಪ ಸಂಬಳದಿಂದ ತಮ್ಮ ಜೀವನಕ್ಕೆ ಸಾಲದೆ ತಮ್ಮ ಹಿರಿಯರು ಸಂಪಾದಿಸಿಇರುವ ಸೊತ್ತುಗಳೆಲ್ಲಾ ಖರ್ಚುಮಾಡಿಕೊಂಡು ಮತ್ತು ಸಾಲ ಮಾಡಿ ಜೀವನ ಮಾಡುತ್ತಾ ಇರಬಹುದೆಂದು ನನಗೆ ತೋರುತ್ತೆ. ಇತರ ಇಲಾಖೆಗಳಲ್ಲಿರುವ ನೌಕರರಿಗೆ ಅವರವರ ಯೋಗ್ಯತಾನುಸಾರ ಮೇಲಿನ ಸಂಪಾದನೆ ಇರುತ್ತೆ. ಹೀನ ಅದೃಷ್ಟರಾದ ಈ ಬಡಮಾಸ್ಟರುಗಳಿಗೆ ಯಾವ ಬಾಬಿನಲ್ಲಿಯೂ ಒಂದು ಕಾಸಾದರೂ ಸಂಪಾದನೆ ಇರುವದಿಲ್ಲ. ಆದ್ದರಿಂದ ಇಂಡಿಯಾ ದೇಶದಲ್ಲಿ ಘನವನ್ನು ಹೊಂದಿದ ಈ ಮೈಸೂರು ಸಂಸ್ಥಾನದಲ್ಲಿ ನ್ಯಾಯವಾದ ಬಡನೌಕರರನ್ನು ರಕ್ಷಿಸುವದಕ್ಕೆ ದಯಮಾಡಿಸಿರುವ ರಾಜತಂತ್ರಪ್ರವೀಣ ಸಕಲ ಸುಕಾರ್ಯ ಸ್ವತಂತ್ರ ಮಂತ್ರಿವರ್ಯೋತ್ತಮರಾದ ಮೆ|| ಮಾಧವರಾಯರು ಈ ಮೈಸೂರು ಸಂಸ್ಥಾನದಲ್ಲಿ ೭ ರೂಪಾಯಿ ತಲಬು ತೆಗೆಯುವ ಬಡಮಾಸ್ಟರುಗಳಿಗೆಲ್ಲಾ ಪ್ರಮೋಷನ್ ಕೊಟ್ಟು, ಅವರಿಗೆ ಬರುವ ರೋದನ ಸಂಖ್ಯೆಯ ತಲಬನ್ನು ನಿವೃತ್ತಿ ಮಾಡಿ, ಅವರಿಗೆ ಬಂದಿರುವ ಮಹಾಪಾತಕವನ್ನು ಪರಿಹರಿಸಿ ಜೀವನೋದ್ಧಾರಮಾಡಿ ಕೀರ್ತಿ ವಹಿಸಿ ರಕ್ಷಿಸಬೇಕೆಂದು ಅನೇಕ ವಿಧವಾಗಿ ಪ್ರಾರ್ಥಿಸುತ್ತೇನೆ.

ಟಿ. ವಿ. ಚೆಟ್ಟಿ.

ತುಮಕೂರು ಟವನ್ ಟೋಲ್ ಗೇಟ್ ಕಂಟ್ರಾಕ್ಟು.

ಅಯ್ಯಾ,

ಹೋದ ವರುಷದಂತೆ ಈಗಲೂ ಕಳೆದ ೧೨ ನೇ ತಾ. ಟೋಲ್ ಗೇಟಿನ ಹರಾಜು ಮಾಡಲ್ಪಟ್ಟಿತು ಸರ್ಕಾರಿ ಇಸ್ತಿಹಾರಿನಂತೆ ಅನೇಕರು ಟೆಂಡರುಗಳನ್ನು ಕೊಟ್ಟಿದ್ದರು ಆ ದಿನ ಮ್ಯುನಿಸಿಪಲ್ ಅಧಿಕಾರಿಗಳೂ ಮೆಂಬರುಗಳೂ ಸೇರಿ ಟೆಂಡರುಗಳನ್ನು ಪರಾಂಬರಿಸಿ, ಅದರಲ್ಲಿ ಹಿಂದಿನ ವರುಷ ಕಂಟ್ರಾಕ್ಟುಮಾಡಿದ್ದವರಿಗೆ ಲುಕ್ಸಾನಾದ್ದರಿಂದ ಈ ವರುಷವೂ ಮುಂಜೂರುಮಾಡಿದೆ ಎಂಬದಾಗಿ ಅಪ್ಪಣೆ ಮಾಡಿದರು. ಈ ಕಂಟ್ರಾಕ್ಟರು ೬,೨೬೦ ರೂ. ಗೆ ಈ ಸಲ ಟೆಂಡರು ಕೊಟ್ಟಿದ್ದರು. ಹೋದ ವರುಷ ಐದು ಸಾವಿರ ಚಿಲ್ಲರೆಗೆ ಕೊಟ್ಟಿದ್ದರು. ಈ ಸಂದರ್ಭದಲ್ಲಿ ಲುಕ್ಸಾನ್ ಹೊಂದಿದ ಇವರು ಈಗ ಜಾಸ್ತಿ ಒಂದು ಸಾವಿರ ರೂಪಾಯಿನ ಮೇಲೆ ಒಪ್ಪಿಕೊಳ್ಳಲು ಕಾರಣವೇನಿರುವದೋ ? ಇವರಿಗಿಂತ ಜಾಸ್ತಿಯಾಗಿ ಮೆ|| ಚಪರ್ಚಿಯ್ಯಾರವರು ೭,೩೮೦ ಕ್ಕೂ ಮೆ|| ಯಂ. ಚೌಡಯ್ಯನವರು ೬,೭೬೦ ಕ್ಕೂ, ಮೆ|| ಬಿ. ಚನ್ನಬಸಪ್ಪನವರು ೬,೫೮೫ ಕ್ಕೂ ಟೆಂಡರು ಕೊಟ್ಟಿದ್ದರು. ಈ ಸಂಗತಿಯಲ್ಲಿ ನಮ್ಮ ಮ್ಯುನಿಸಿಪಾಲಿಟಿಯವರು ಸರ್ಕಾರಕ್ಕೆ ಹೆಚ್ಚು ಫಾಯಿದೆ ಕೊಡತಕ್ಕವರಾಗಿಯೂ ಸ್ವಕೀಯರಾಗಿಯೂ ಇರುವ ಮೇಲ್ಕಂಡ ಟೆಂಡರುಗಳನ್ನು ಯಾಕೆ ಮಂಜೂರು ಮಾಡಲಿಲ್ಲವೋ ಎಂದು ಬಹು ಜನರು ಪಶ್ಚಾತ್ತಾಪಪಡುತ್ತಾರೆ ಒಬ್ಬ ಪ್ರೇಕ್ಷಕ.

ಮಲೆನಾಡಿನ ಭಿಕ್ಷುಕರ ಕಾಟ.

ಅಯ್ಯಾ,

ತಮ್ಮ ಜೂನ್ ೯ ನೇ ತಾರೀಖಿನ ಪತ್ರಿಕೆಯ ೭ ಪುಟದಲ್ಲಿ ಸತ್ಯವಾದಿಯು ಭಿಕ್ಷುಕರಾದ ಬ್ರಾಹ್ಮಣರ ವಿಷಯದಲ್ಲಿ ಶಿಫಾರಸು ಮಾಡಿ ಬರೆದಿರತಕ್ಕ ಬಾತ್ಮಿಯನ್ನು ನೋಡಿ ಬಹಳ ವ್ಯಸನಪಡುತ್ತೇನೆ. ಪೂರ್ವದಿಂದಲೂ ರೈತನು ತನ್ನ ಶಕ್ತ್ಯಾನುಸಾರ ದ್ವಿಜರಿಗೆ ಧರ್ಮ ಮಾಡುತ್ತಿದ್ದದ್ದು ನಿಜ ಹಿಂದಿನವರು ಧರ್ಮವನ್ನು ಯಾವ ರೀತಿಯಲ್ಲಿ ಹ್ಯಾಗೆ ಮಾಡಬೇಕೆಂಬ ಅಂಶಗಳನ್ನು ಚನ್ನಾಗಿ ತಿಳಿದಿರಲಿಲ್ಲವೆಂದು ನನ್ನ ಬುದ್ಧಿಗೆ ಗೋಚರವಾಗುತ್ತೆ. ಈಗಿನವರಿಗೂ ಅನೇಕರಿಗೆ ಇದರ ವಿಷಯ ಸ್ಪಷ್ಟವಾಗಿ ಗೊತ್ತಿಲ್ಲ. ಆದ್ದರಿಂದ ಅನೇಕರು ಕೊಡುತ್ತಾರೆ. ಅದು ನನ್ನ ಮನಸ್ಸಿಗೆ ಚನ್ನಾಗಿ ಕಾಣುವದಿಲ್ಲ

ನಾನು ಹೇಳುವುದೇನಂದರೆ—ಕುಂಟರಿಗೂ, ಕುರುಡರಿಗೂ, ಕೆಳವರಿಗೂ ಕೆಲಸ ಮಾಡುವದಕ್ಕೆ ಕೈಲಾಗದವರಿಗೂ ಭಿಕ್ಷವನ್ನು ಕೊಟ್ಟರೆ ಎಷ್ಟೋ ಒಳ್ಳೇದು. ಯಾಕಂದರೆ ನಾವು ಮಾಡಿದಂಥ ಧರ್ಮದಿಂದ ಸಾರ್ಥಕವಾಗುವದು. ದೇವರು ಸರ್ವರಿಗೂ ಕೈ, ಕಾಲು, ಬುದ್ಧಿ, ಜ್ಞಾನ, ತಿಳುವಳಿಕೆ ಮುಂತಾದವುಗಳನ್ನು ಕೊಟ್ಟಿರುವ ಪ್ರಕಾರ ಈ ಭಿಕ್ಷುಕರಾದ ಬ್ರಾಹ್ಮಣರಿಗೂ ಕೊಟ್ಟಿರುವಾಗ್ಗೆ ಇಂಥವರು ಕೆಲಸ ಮಾಡುವದಕ್ಕೆ ಕೈಲಾಗದವರ ಹಾಗೆ ಭಿಕ್ಷವನ್ನು ಕೇಳುವದು ಯೋಗ್ಯವೇ ? ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದು ಬುದ್ಧಿವಂತರು ಹೇಳುವದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಸಂಪತ್ತು ಸಮೃದ್ಧಿಯಾದಂಥ ಈ ನಮ್ಮ ಇಂಡಿಯಾ ದೇಶವು ದರಿದ್ರಾವಸ್ಥೆಗೆ ಬರುವುದಕ್ಕೆ ಯೋಗ್ಯವರಿತು ಭಿಕ್ಷಕೊಡದಿರುವದೂ ಒಂದು ಕಾರಣವಾಗಿದೆ. ಈ ದೇಶದಲ್ಲಿ ಬಂದವರಿಗೆಲ್ಲಾ ಭಿಕ್ಷವನ್ನು ಕೊಡುವುದರಿಂದಲೇ ಎಲ್ಲಿ ನೋಡಿದರೂ ಅನೇಕರು ಸೋಮಾರಿಗಳಾಗಿಯೂ ಸೋಮಾರಿಗಳಾಗಿಯೂ ತಿರುಗುವುದಕ್ಕೆ ಆಸ್ಪದವಾಯಿತು. ಇಂಥಾ ನೀಚಪದ್ಧತಿಯು ಸಂಪೂರ್ಣವಾಗಿ ತೊಲಗಿ ಹೋಗಿ, ಎಲ್ಲರೂ ದೇಶಾಭಿವೃದ್ಧಿಗಾಗಿ ಯಾವಾಗ ಕೆಲಸ ಮಾಡುತ್ತಾರೋ ಆಗ ಈ ನಮ್ಮ ಇಂಡಿಯಾ ದೇಶವು ಉತ್ತಮಸ್ಥಿತಿಗೆ ಬರುವುದರಲ್ಲಿ ಸಂಶಯವಿಲ್ಲ.

ಸತ್ಯವಾದಿಯು ಹೇಳುವದೇನಂದರೆ, ನಾವು ಕಷ್ಟಪಟ್ಟು ಮಾಡಿದ ಅಡಿಕೆಯಲ್ಲಿ ದ್ವಿಜರಿಗೆ ಧರ್ಮಕೊಡತಕ್ಕದ್ದು ಪರಲೋಕದ ಮುಖ್ಯಗತಿಗೆ ಸಾಧನವಾಗಿರುತ್ತೆ ಎಂಬುವದೇ. ಆಹಾ, ಈ ಸಂಗತಿಯು ನನ್ನಲ್ಲಿ ಅತ್ಯಾಶ್ಚರ್ಯವನ್ನು ಉಂಟುಮಾಡುವಂಥಾದ್ದಾಗಿದೆ। ಗವಾರಿ ಸುಂಗಿ ಶುಂಠಿ ಕಷಾಯ ಕುಡಿದರೆ ಜೀರ್ಣವಾಗುತ್ತೋ ? ಎಷ್ಟು ಮಾತ್ರಕ್ಕೂ ಇಲ್ಲವಲ್ಲಾ ! ಹಾಗಾದರೆ ಮನಸ್ಸಿಗೆ ಬಂದಂಥ ಪಾಪಗಳನ್ನು ಮಾಡಿ ನಮ್ಮ ಹಾಗೇ ಇರತಕ್ಕ ಬ್ರಾಹ್ಮಣರಿಗೆ ಒಂದು ಸೇರು ಅಥವ ಅರ್ಧ ಸೇರು ಅಡಿಕೆ ಕೊಡುವದರಿಂದ ಪಾಪಪರಿಹಾರವಾಗಿ ಪರಲೋಕ ಸಿಕ್ಕುತ್ತೋ ? ಎಷ್ಟು ಮಾತ್ರಕ್ಕೂ ಇಲ್ಲ. ಅಡಿಕೆ ದಾನ ಮಾಡುವದರಿಂದ ನಮ್ಮ ಪಾಪಗಳು ನಿವೃತ್ತಿಯಾಗಿ ಮುಕ್ತಿ ಸಿಕ್ಕುತ್ತೆ ಎಂದು ತಿಳಿದಿರುವವರಿಗೆ ಬುದ್ಧಿ ಸ್ವಾಧೀನವಿಲ್ಲವೆಂದು ಹೇಳಬೇಕಾಗುತ್ತೆ. ಇಂಥಾ ಅಜ್ಞಾನವು ಅಂಥವರಿಂದ ತೊಲಗುವ ಹಾಗೆ ದೇವರು ಅಂಥವರಿಗೆ ಜ್ಞಾನವನ್ನು ದಯಪಾಲಿಸಲಿ. ನನ್ನನ್ನು ಕಡುಲೋಭಿಯೆಂದು ಹೇಳುವವರು ಶುದ್ಧ ಮೂಢರೇ ಎಂದು ನಾನು ಖಂಡಿತವಾಗಿ ತಿಳಿದಿದ್ದೇನೆ.

ಖಂಡಿತವಾದಿ.

ನೇಗೆಯುವವರೂ ಸರ್ಕಾರಿ ಸುಂಕವೂ.

[ಒಬ್ಬ ಓತ್ತಿದಾರರಿಂದ]

ಕಳೆದ ಜನವರಿ ತಿಂಗಳಿಂದ ಕೋಲಟಗೆರೆ ಸಬ್ ತಾಲ್ಲೂಕು ಟೌನ್ನಲ್ಲಿ ಜವಳಿಗೆ ಸುಂಕ ವಸೂಲ್ಮಾಡಲು ಮೇಲಿನಿಂದ ಬಂದ ಅಪ್ಪಣೆಯಂತೆ ಜಾರಿಗೆ ಬಂತು. ಆ ಬಗ್ಗೆ ಈ ಊರು ದೇವಾಂಗದವರ ಸಂಕಟವೂ ಜವಳಿ ಅಂಗಡಿಯವರ ಅವಸ್ಥೆಯೂ ಹೇಳಲೋದು.

ದೇವಾಂಗದವರು ಈ ಟವನ್ನಲ್ಲಿ ದಿನವೂ ತಯಾರ್ಮಾಡುವ ಜವಳಿಗೆ ಮುದ್ರೆ ಹಾಕಿಸಿಕೊಂಡೇ ವಿಕ್ರಯಮಾಡಬೇಕಂತೆ. ಬಿಟ್ಟ ಅಮಲ್ದಾರರು ಗ್ರಾಮಾಂತ್ರ ಸರ್ಕೀಟು ಹೋಗಿದ್ದಾಗ ಇವರುಗಳು ಯಾರ ಕೈಲಿ ಮೊಹರು ಮಾಡಿಸಿಕೊಳ್ಳಬೇಕು? ಮೊಹರು ಅಮಲ್ದಾರರಲ್ಲಿ ವಿನಾ ಮತ್ಯಾರಲ್ಲಿಯೂ ಇವರು ಕೊಡುವದಿಲ್ಲ. ಊರಲ್ಲಿ ಅಮಲ್ದಾರರು ಇದ್ದಾಗ್ಯೂ ಮನೆ ಬಳಿಗೆ ಹೋಗಕೂಡದು. ಕಚೇರಿಗೆ ಹೋದರೆ ಸಲೀಸು ಭೇಟಿ ಆಗುವದಿಲ್ಲ. ಗುಮಾಸ್ತೆಗಂತು ಯಾವ ಸ್ವತಂತ್ರವೂ ಇಲ್ಲ. ಇಷ್ಟು ಹಿಂಸೆಯಾದರೆ ದಿನವೂ ತಯಾರ್ಮಾಡುವ ಸನಗು ಆಗಾಗ್ಗೆ ವಿಕರಿಮಾಡಿಕೊಂಡು ಜೀವನಮಾಡುತ್ತಿರುವ ಈ ಬಡವರ ಗಳು ಪಡುತ್ತಿರುವ ಸಂಕಟ ನೋಡುವದಕ್ಕೆ ಆಗುವದಿಲ್ಲ. ಗುಮಾಸ್ತರನ್ನು ನಂಬಿ ಮೊಹರು ಕೊಡಬೇಕು. ತಾವು ತಯಾರ್ಮಾಡಿದ ಸನಗು ತಮಗೆ ಬಿಕರಿಗೆ ಸ್ವತಂತ್ರವಿಲ್ಲದಂತೆ ಬಿಟ್ಟ ಅಮಲ್ದಾರರನ್ನೇ ಕೇಳಿ ಮೊಹರು ಮಾಡಿಸಿಕೊಳ್ಳಬೇಕಾದರೆ ಪ್ರತಿ ದಿನ ತಯಾರಾಗುವ ಜವಳಿಗೆ ಆಯಾ ದಿವಸವೇ ಮೊಹರು ಮಾಡಿಕೊಡುವದಕ್ಕೆ ಎಲ್ಲ ಏರ್ಪಾಡಾದರೂ ಮಾಡಿಲ್ಲವಲ್ಲ! ಬೇರೆಗಳೂರು ಮೈಸೂರು ಮುಂತಾದ ಕಡೆ ದೇವಾಂಗದವರು ಮೊಹರು ವಗೈರೆ ಇಲ್ಲದೆ ಸ್ವತಂತ್ರವಾಗಿ ವಿಕರಿಮಾಡಿಕೊಳ್ಳುತ್ತಾರಲ್ಲ! ಮೈಸೂರು ಪ್ರೊವಿನ್ಸಿನಲ್ಲಿ ಒಂದೇ ರೂಲ್ಸೇ, ಅಥವಾ ಇವರಿಗೆ ಮಾತ್ರ ಬೇರೆ ರೂಲುಸು ಉಂಟೇ?

ಜವಳಿ ಅಂಗಡಿಯವರು ಪರಊರಿನ ಜವಳಿ ಬಂದಾಗ ಅಮಲ್ದಾರರು ಸರ್ಕೀಟಿನಲ್ಲಿ ಇದ್ದರಾಗಲಿ, ರಜಾ ಹೊಂದಿದ್ದಾಗಲಿ ೨–೩ ದಿನ ಗಳಾದಾಗ್ಯೂ ಮೊಹರಿಗೆ ಅವಕಾಶವಿಲ್ಲದೆ, ಅಮಲ್ದಾರರು ಕಚೇರಿಗೆ ಬರುವ ಸಮಯವೇ ಕಾದಿದ್ದು ಮತ್ತೂ ರಾತ್ರಿಯ ವರೆಗೆ ಕಚೇರಿಗೆ ಹೋಗಿ ಸಂಜೆವರೆಗೂ ಅನುಸರಣೆಯಾಗಿ ಮೊಹರು ಮಾಡಿಸಿಕೊಂಡು ಬರಬೇಕಾದರೆ ಆ ದಿನದ ವ್ಯಾಪಾರವೇ ಅವರಿಗೆ ನಷ್ಟವಾಗುತ್ತಾ ಇದೆ.

ಇದಲ್ಲದೆ ಮೈಸೂರು ಸೀಮೆಯ ಇತರ ತಾಲ್ಲೂಕುಗಳಲ್ಲಿ ತಯಾರಾಗಿ ಬರುವ ಜವಳಿಗೂ ಸುಂಕ ಕೊಡಬೇಕಂತೆ. ಮತ್ತೂ ಈ ಸಬ್ ತಾಲ್ಲೂಕಿಗೆ ಸೇರಿದ ಇತರ ಗ್ರಾಮಗಳಲ್ಲಿ ತಯಾರಾಗಿ ಬರುವ ಜವಳಿಗೆ ಸಹಾ ಸುಂಕ ವಸೂಲ್ಮಾಡುತ್ತಾರೆ. ಇದ್ಯಾವ ನ್ಯಾಯ? ಟವನ್ ದೇವಾಂಗದವರು ಮಾಡುವ ಜವಳಿಗೆ ಮಾತ್ರ ಸುಂಕವಿಲ್ಲವಂತೆ. ಇವರು ಮಾಡಿದ ಪುಣ್ಯವೇನು? ಹಳ್ಳಿಗಳವರು ಮಾಡಿದ ಪಾಪವೇನು? ಎಲ್ಲರಿಗೂ ಸುಗ್ರೀವದ ಕಾಯದೆ ಪಜಾ ಆಗಿದೆಯಲ್ಲ! ಸುಂಕದ ರೂಲುಸು ಎಲ್ಲರಿಗೂ ಒಂದೇ ಅಲ್ಲವೇ? ಈ ಹಿಂಸೆಯಿಂದ ಹಳ್ಳಿಗಳ ಸನಗು ಈ ಟವನ್ನಿಗೆ ಬಾರದಂತೆಯೇ ಆಗುತ್ತೆ. ತುಂಕೂರು ವಗೈರೆ ಕಡೆ ಮೈಸೂರು ಸೀಮೆಯ ಗ್ರಾಮಾಂತ್ರಗಳ ಜವಳಿ ತೆಗೆದುಕೊಂಡು ಹೋದರೆ ಮೊಹರು ವಗೈರೆ ಯಾವವೂ ಇಲ್ಲದೆಯೂ ಹಾಸಲೂ ಇಲ್ಲದೆಯೂ ಸಲೀಸಾಗಿ ಅಂಗಡಿಯವರು ತೆಗೆದುಕೊಳ್ಳುತ್ತಾ ಇದಾರೆ. ಆದ್ದರಿಂದ ಮಾಮೂಲಾಗಿ ಇಲ್ಲಿನ ಜವಳಿ ಅಂಗಡಿಯವರಿಗೆ ಕಸಬಾ ದೇವಾಂಗದವರಿಂದಲೂ ಹಳ್ಳಿಗಳ ದೇವಾಂಗದವರಿಂದಲೂ ಬರುತ್ತಾ ಇದ್ದ ಜವಳಿಯು ಈಚೆಗೆ ಬರುವದೇ ನಿಂತು, ಅಂಗಡಿಯವರಿಗೂ ದೇವಾಂಗದವರಿಗೂ ಸಹ ತೊಂದರೆ ಮತ್ತು ನಷ್ಟವಾಗುತ್ತಾ ಇದೆ. ಇದನ್ನೆಲ್ಲಾ ಮೇಲಿನವರ ಅವಗಾಹನೆಗೆ ತಂದರೆ ಅವಿವಾದಿತ. ಈ ತೊಂದರೆ ವಿಚಾರಣೆ ಮಾಡ್ಯಾರಾಗಿ ನಂಬಿ ವಿಜ್ಞಾಪಿಸಿದೇನೆ.

ಹಿಂದುಸ್ಥಾನದ ಅಮಿತಪ್ರಜಾಸಂಖ್ಯೆಯು.

ಸ್ವಾಮಿರಾಮತೀರ್ಥ ಎಂಬೊಬ್ಬ ಸನ್ಯಾಸಿಯು ಹಿಂದುಸ್ಥಾನದ ಪ್ರಜಾಸಂಖ್ಯೆಯು ಅಪಾರವಾಗುತ್ತಿರುವ ವಿಚಾರವನ್ನು ಕುರಿತು ಪ್ರಜೆಗಳಿಗೆ ಕೆಲವು ಹಿತೋಕ್ತಿಗಳನ್ನು ಹೇಳಿದ್ದಾರೆ. ಅವರ ಅಭಿಪ್ರಾಯವೇನೆಂದರೆ—

ಪ್ರಪಂಚದಲ್ಲಿ ಹಿಂದುಸ್ಥಾನದಷ್ಟು ದರಿದ್ರವುಳ್ಳ ಮತ್ತು ಪ್ರಜಾಸಂಖ್ಯೆಯುಳ್ಳ ದೇಶವು ಯಾವುದೂ ಅಲ್ಲ. ಇಲ್ಲಿನ ಪ್ರತಿ ಒಂದು ಸಂಸಾರವೂ ದರಿದ್ರಾವಸ್ಥೆಯಲ್ಲಿದೆ, ಮಕ್ಕಳುಮರಿಗಳಿಂದ ತುಂಬಿದೆ, ಪ್ರತಿ ವರುಷವೂ ಮಕ್ಕಳು ಹುಟ್ಟುತ್ತಲೇ ಇದ್ದಾರೆ, ಅರ್ಥವಿಲ್ಲದ ಮತ್ತು ಕ್ರೂರತರವಾದ ಅನೇಕ ಆಚಾರವ್ಯವಹಾರಗಳಿಗೆ ಜನರು ಗುಲಾಮರಾಗಿ ಅಮಿತವಾದ ಖರ್ಚುಗಳನ್ನು ಮಾಡುತ್ತಾರೆ.

ಈಗ ಮೊದಲನೆಯದಾಗಿ ದೇಶವತ್ಸಲರು ಈ ಪ್ರಜಾಭಿವೃದ್ಧಿಯಾಗುತ್ತಿರುವುದನ್ನು ಕಡಿಮೆ ಮಾಡುವುದಕ್ಕೆ ವಿಶೇಷವಾದ ಗಮನವನ್ನು ಕೊಡಬೇಕಾಗಿದೆ. ಇದನ್ನು ಮೊದಲು ಮಾಡದೆ ಇತರ ವಿಷಯಗಳಿಗೆ ಗಮನಕೊಡುವುದರಿಂದ ಎಳ್ಳಷ್ಟೂ ಪ್ರಯೋಜನವಾಗುವುದಿಲ್ಲ. ಸಂಸಾರತಾಪತ್ರಯವು ವಿವರಿಸಲಶಕ್ಯವಾಗುತ್ತಿರುವುದು. ಪ್ರಾಚೀನಕಾಲದಲ್ಲಿ ಆರ್ಯರು ಹಿಂದುಸ್ಥಾನಕ್ಕೆ ಬಂದಾಗ್ಗೆ ಈ ರಾಷ್ಟ್ರವು ನಿರ್ಜನವಾಗಿತ್ತೆಂತಲೇ ಹೇಳಬಹುದು. ಪ್ರಜಾವೃದ್ಧಿಯಾಗಬೇಕಾದದ್ದು ಆಗ್ಗೆ ಅವಶ್ಯಕವಾಗಿತ್ತು. ಈಗ ಅದು ಟಲಕೆಳಗಾಗಿದೆ. ದೊಡ್ಡ ಸಂಸಾರವೆಂಬುವುದು ಈಗಿನ ಕಾಲದಲ್ಲಿ ದೊಡ್ಡ ಪಾಪವೆಂತಲೇ ಪರಿಣಮಿಸಿದೆ. ಈ ಜನ್ಮದಲ್ಲೇ ಜೀವನ್ಮುಕ್ತಿಯನ್ನು ಪಡೆಯಬಹುದಾದ ಹಿಂದುವು ಯೋಚನಾರಹಿತನಾಗಿ ಸತ್ತ ಮೇಲೆ ಮುಕ್ತಿ ಬರಲೆಂದೂ ಅದಕ್ಕೆ ಮಕ್ಕಳೊ ಮೊಮ್ಮಕ್ಕಳೊ ಮರಿಮಕ್ಕಳೊ ಕಾರಣರೆಂದೂ ಊಹಿಸಿ ಪ್ರಜಾವೃದ್ಧಿ ಮಾಡುತ್ತಿದ್ದಾನೆ. ಇದರಿಂದ ಇಹಲೋಕದಲ್ಲಿ ಅವನಿಗೆ ಸುಖಸಂತೋಷಗಳಿಗೆ ಪ್ರತಿಯಾಗಿ ನರಕದ ಕಷ್ಟಗಳೂ ಯಾತನೆಗಳೂ ಪ್ರಾಪ್ತವಾಗಿ ಮಹಾ ಘೋರವಾಗಿ ನರಳುತ್ತಿರುವನು. ಮದುವೆಮಾಡಿಕೊಳ್ಳುವುದು, ಪ್ರಜಾವೃದ್ಧಿ ಮಾಡುವುದು, ವಿದ್ಯಾಬುದ್ಧಿ ಹೀನರಾಗಿಯೂ ಸೇವಾವೃತ್ತಿಗೆ ಅಧೀನರಾಗಿಯೂ ಸ್ವಾತಿ ಬೆಳೆಸುವುದು, ಸ್ವಾತಂತ್ರ್ಯದ ಸುಖಸಂತೋಷಗಳಿಗೆ ದೂರದವರಾಗಿಯೇ ಪ್ರಾಣಬಿಡುವದು,— ಇಂಥಾ ಪದ್ಧತಿಯೇ ಈಗ ಈ ರಾಷ್ಟ್ರವನ್ನೆಲ್ಲಾ ಆವರಿಸಿಕೊಂಡಿದೆ. ಈ ಅಭಿಪ್ರಾಯವನ್ನು ದೇಶವತ್ಸಲರು ಮೊದಲು ಈ ದೇಶದಿಂದ ಸಂಪೂರ್ಣವಾಗಿ ತೊಡೆದುಬಿಡಬೇಕು. ಇಂಥಾ ನೀಚವಾದ ಅಭಿಪ್ರಾಯವೂ ದುಷ್ಟಪದ್ಧತಿಯೂ ಬೇರೊಂದಿರುವುದಿಲ್ಲ. ಹಿಂದುಸ್ಥಾನವನ್ನು ಹಿಂದೆ ಆಳಿದ ಮುಸಲ್ಮಾನರೂ ಈಗಾಳುವ ಇಂಗ್ಲಿಷ್ ಪ್ರಭುಗಳೂ ಇಲ್ಲಿನ ಪ್ರಜೆಗಳನ್ನು ನಾನಾ ಕಷ್ಟನಷ್ಟಗಳಿಗೆ ಗುರಿಮಾಡಿದರೆಂದಾಗಲಿ ಮಾಡುತ್ತಿದ್ದಾರೆಂದಾಗಲಿ ಹಿಂದುಗಳು ದೂರುವುದು ಸರ್ವಥಾ ಯೋಗ್ಯವಲ್ಲವು. ಮದುವೆಯ ವಿಷಯದಲ್ಲಿ ಇಷ್ಟು ನೀಚವಾದ ಅಭಿಪ್ರಾಯವನ್ನಿಟ್ಟುಕೊಂಡು ಕ್ಷೀಣಗತಿಗೆ ಬರುತ್ತಿರುವಂಥಾ ಹಿಂದುಗಳೇ ಆ ದುರ್ಗತಿಗೆ ಗುರಿಯಾಗಿದ್ದಾರೆ. ವಿವಾಹವೆಂಬ ಸರ್ವಶ್ರೇಷ್ಠವಾದ ಪವಿತ್ರಸಂಸ್ಕಾರವನ್ನು ಅತ್ಯಂತ ಹೇಯವೂ ಮಹಾ ತುಚ್ಛವೂ ಆದ ಹಾಸ್ಯಾಸ್ಪದಕಟಿಯಾಗಿ ಮಾಡಿಕೊಂಡಿರುವರು. ತನ್ನ ಜೀವನವನ್ನೇ ತಾನು ಹುಟ್ಟಿಸಿಕೊಳ್ಳಲಾರದ ಹೇಡಿಗೆ ಮದುವೆ ಏಕೆ? ಅವನ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳ ಗತಿ ಏನು? ಇಂಥಾ ವಿವಾಹವನ್ನು ನೋಡುತ್ತಿದ್ದ್ಯೆಂದು ಪ್ರತಿಭಟಿಸಬಹುದೇ? ಹೊಟ್ಟೆಗಿಲ್ಲದೆ ಅಲೆಯುವುದಾಗಿ ಸ್ತ್ರೀಯನ್ನು ಕರೆಯುವುದಕ್ಕೇ ಈ ವಿವಾಹವು ಕಾರಣವಾಗುವದಲ್ಲದೆ ಮತ್ತೇನಿದೆ? ಅಲ್ಲದೆ ಅಂಥಾ ಮಕ್ಕಳು ಬೀಜ ಬಿಡುವುದಕ್ಕೂ ಯೋಗ್ಯರಾಗಿರುವುದಿಲ್ಲವಲ್ಲ! ಹಿಂದುಸ್ಥಾನದಲ್ಲಿ ವಿದ್ಯಾರ್ಥಿಗಳಾಗಿರುವ ಯುವಕರು ಈ ವಿಷಯಗಳನ್ನು ಈ ರೀತಿ ಯೋಚಿಸಿ ನೋಡುವುದು. ಹಿಂದುಸ್ಥಾನದ ಜನಗಳ ಅಧಮ ಕ್ಷೀಣಗತಿಗೆ ಅನೇಕ ಮುಖ್ಯಕಾರಣಗಳಿರುವವು. ಇದ್ದಾಗ್ಯೂ ಹಿಂದುಸ್ಥಾನಕ್ಕೆ ಬರುತ್ತಿರುವ ಈ ಆಪತ್ತುಗಳನ್ನು ತಪ್ಪಿಸಲು ಮೊದಲು ಹೇಳಿದ ಅಮಿತವಾದ, ಅಕಾಲಿಕವಾದ ಕಾರಣವಾದ ಬಾಲ್ಯವಿವಾಹವೆಂಬ ಪಿಶಾಚಿಯನ್ನು ಸಂಪೂರ್ಣವಾಗಿ ತೊಲಗಿಸಬೇಕು ಎಂಬುದೇ.

ಕರ್ನಾಟಕ ವಿದ್ಯಾವರ್ಧಕಸಂಘ, ಧಾರವಾಡ

[ಬರೆದು ಕಳುಹಿದ್ದು.]

ಈ ವರುಷ ಈ ಸಂಘದ ವಾರ್ಷಿಕ ಪರೀಕ್ಷೆಗಳು ಮೇ ತಿಂಗಳಲ್ಲಿ ನಡೆದವು. ಈ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ನಾನಾ ಕಡೆಗಳಿಂದ ಬಂದಿದ್ದರು. ಪರೀಕ್ಷೆಯಲ್ಲಿ ನಿಯಮಿತ ವರ್ಗಗಳಲ್ಲಿ ಪೂರ್ವಪದ್ಧತಿ ಪಂಪರಾಮಾಯಣ, ಅದ್ಭುತ ಜಾತಕ, ಕನ್ನಡ ಭಾರತ, ಪಂಪ ಇವುಗಳು, ಶಬ್ದಮಣಿದರ್ಪಣ, ಮುಂತಾದ ಗ್ರಂಥಗಳಲ್ಲಿ ಬರೆಯುವ ಪರೀಕ್ಷೆಯು ನಡೆಯಿತು. ಸ್ತ್ರೀಯರಿಗೆ ಎಲ್ಲ ಸ್ವಾತಂತ್ರ್ಯವೇ ಬೇಕಾದದ್ದು ಎಂಬ ವಿಷಯದಲ್ಲೂ ಪ್ರಭುಲಿಂಗಲೀಲೆಯೊಳು ವೇದಾಂತ ಗ್ರಂಥದ ವಿಷಯದಲ್ಲೂ ಉಪನ್ಯಾಸ ಪರೀಕ್ಷೆಗಳು ನಡೆದವು. ಇವುಗಳನ್ನು ನಡೆಸಲು ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರು ಇಲ್ಲಿಂದ ನಾರ್ಮಲ್ ಸ್ಕೂಲು ಅಸಿಸ್ಟೆಂಟ್ ಮಾಸ್ಟರ್ ಮಿ॥ ವೆಂಕಟಸುಬ್ಬಯ್ಯನವರನ್ನೂ ಅದೇ ಸ್ಕೂಲು ಕನ್ನಡ ಪಂಡಿತರಾದ ಮಿ॥ ತಿಮ್ಮಪ್ಪಯ್ಯ ಶಾಸ್ತ್ರಿಗಳನ್ನೂ ಕಳುಹಿಸಿದ್ದರು. ಇವರು ಮೇಲೆ ಹೇಳಿರುವ ಪರೀಕ್ಷೆಗಳನ್ನೆಲ್ಲಾ ನಡೆಸಿ ಅವುಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನ ಕೊಡಲು ನೆರೆದಿದ್ದ ಸಭೆಯಲ್ಲಿ ಕನ್ನಡ ಭಾಷಾಭಿವೃದ್ಧಿಯ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು.

ಮಿ॥ ವೆಂಕಟಸುಬ್ಬಯ್ಯನವರು ತಮ್ಮ ಉಪನ್ಯಾಸದಲ್ಲಿ ಕನ್ನಡದ ಹೀನಸ್ಥಿತಿಗೆ ಕಾರಣಗಳೇನೆಂಬುದನ್ನು ಚರ್ಚೆ ಮಾಡಿದರು. ಕನ್ನಡ ವನ್ನಾಡುವ ಜನರು ಒಂದು ಕೋಟಿಗಿಂತಲೂ ಹೆಚ್ಚಾಗಿರುವದರಿಂದಲೂ ಒಂದು ಲಕ್ಷಕ್ಕಿಂತಲೂ ಹೆಚ್ಚು ವಿಸ್ತೀರ್ಣವುಳ್ಳ ಪ್ರದೇಶದಲ್ಲಿ ಕನ್ನಡವು ದೇಶಭಾಷೆಯಾಗಿರುವದರಿಂದಲೂ, ಈ ಅಂಶಗಳಲ್ಲಿ ಕೊರತೆಗಳಿರುವುದರಿಂದ ಕನ್ನಡವು ಹೀನಸ್ಥಿತಿಗೆ ಬಂದಿತೆಂದು ಹೇಳಲಾಗುವುದಿಲ್ಲವೆಂತಲೂ, ಅಥವಾ ಉತ್ತಮವಾದ ಗ್ರಂಥಗಳಿಲ್ಲದೆ ಕನ್ನಡವೇನಾದರೂ ಹೀನಸ್ಥಿತಿಗೆ ಬಂದಿರುವುದೇ ಎಂದು ಯೋಚಿಸಿದರೆ ಕವಿರಾಜಮಾರ್ಗ, ಕನ್ನಡಭಾರತ, ಜೈಮಿನಿಭಾರತ, ಪಂಪರಾಮಾಯಣ, ಕಾದಂಬರಿ, ಕಾವ್ಯಾವಲೋಕನ, ಶಬ್ದಾನುಶಾಸನ, ಶಬ್ದಮಣಿದರ್ಪಣ ಮುಂತಾದ ಪದ್ಯಗ್ರಂಥಗಳೂ, ಛಂದೋಗ್ರಂಥಗಳೂ, ಲಕ್ಷಣಗ್ರಂಥಗಳೂ, ವ್ಯಾಕರಣಗಳೂ ಇರುವಲ್ಲಿ ಈ ಕಾರಣದಿಂದ ಕನ್ನಡವು ಹೀನಸ್ಥಿತಿಗೆ ಬಂದಿತೆಂದು ಹೇಳಲಾಗುವುದಿಲ್ಲವೆಂತಲೂ ತಿಳಿಸಿದರು. ಆದರೆ ಕನ್ನಡಗ್ರಂಥಗಳನ್ನು ಅಭ್ಯಾಸ ಮಾಡುವವರು ವಿಶೇಷವಾಗಿಲ್ಲದಿರುವುದರಿಂದಲೂ, ಮತ್ತು ಈ ಗ್ರಂಥಗಳನ್ನು ಅಚ್ಚುಹಾಕಿಸಿ ಪ್ರಚಾರಪಡಿಸುವವರು ಇನ್ನೂ ಕಡಿಮೆಯಾಗಿರುವುದರಿಂದಲೂ ಕನ್ನಡವು ಹೀನಸ್ಥಿತಿಗೆ ಬರಲು ಕಾರಣವಾಗಿರುವುದೆಂದು ತಿಳಿಸಿ, ಈ ಕೊರತೆಗಳನ್ನು ಹೋಗಲಾಡಿಸುವುದಕ್ಕೆ ನಡೆಯುತ್ತಿರುವ ಪ್ರಯತ್ನಗಳನ್ನು ಸೂಚಿಸಿದರು. ಇದಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದವರು ಕನ್ನಡ ಗ್ರಂಥಗಳನ್ನು ಓದಿ ಪರೀಕ್ಷೆ ಕೊಡುವವರಿಗೆ ಬಹುಮಾನವನ್ನು ಕೊಟ್ಟು ಪ್ರೋತ್ಸಾಹ ಪಡಿಸುವದು ಮತ್ತು ವಾಗ್ಭೂಷಣವೆಂಬ ಮಾಸಪತ್ರದಲ್ಲಿ ಅನೇಕ ಕನ್ನಡ ಗ್ರಂಥಗಳನ್ನು ಅಚ್ಚುಹಾಕಿ ಪ್ರಚಾರಪಡಿಸುತ್ತಿರುವುದು, ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರು ನಾರ್ಮಲ್ ಸ್ಕೂಲಿನಲ್ಲಿ ಕನ್ನಡದಲ್ಲಿ ಪ್ರೌಢವಿದ್ಯಾಭ್ಯಾಸಕ್ಕೆ ಅವಕಾಶವನ್ನು ಕಲ್ಪಿಸಿರುವುದು ಮತ್ತು ಅನೇಕ ಕನ್ನಡಗ್ರಂಥಗಳನ್ನು ಓರಿಯಂಟಲ್ ಲೈಬ್ರೆರಿ ಮೂಲಕ ಅಚ್ಚುಹಾಕಿಸಿ ಪ್ರಚಾರಪಡಿಸುತ್ತಿರುವುದು, ಈ ವಿಧವಾದ ಪ್ರಯತ್ನಗಳು ನಡೆಯುತ್ತಿರುವುದನ್ನು ಸೂಚಿಸಿದರು.

ಆದರೆ ಕನ್ನಡಿಗರೆಲ್ಲರೂ ದೂರದೂರವಾಗಿದ್ದು ಬೇರೆಬೇರೆ ಭಾಷೆಯಲ್ಲಿ ವ್ಯವಹರಿಸುವ ಬೇರೆಬೇರೆ ಸರ್ಕಾರಕ್ಕೆ ಸೇರಿ ಎಲ್ಲರೂ ಒಟ್ಟಾಗಿ ಸೇರಲು ಅವಕಾಶಗಳು ಕಡಿಮೆಯಾಗಿರುವುದು ಕನ್ನಡದ ಹೀನಸ್ಥಿತಿಗೆ ಮುಖ್ಯಕಾರಣವೆಂದು ತಿಳಿಸಿದರು. ಮೇಲಾಗಿ ಕನ್ನಡಿಗರು ಹೀಗೆ ದೂರದೂರವಾಗಿರುವುದರಿಂದ ಅವರ ಭಾಷೆಯಲ್ಲೂ, ನಡೆನುಡಿಗಳಲ್ಲೂ ಪರಸ್ಪರ ವ್ಯತ್ಯಾಸವಾಗಿರುವುದನ್ನು ಸೂಚಿಸಿದರು. ಉತ್ತರದ ಕನ್ನಡಿಗರು ಮಹಾರಾಷ್ಟ್ರ ದೇಶದವರ ಪದ್ಧತಿಯನ್ನು ಅನುಸರಿಸಿರುವುದಲ್ಲದೆ ತಮ್ಮ ಭಾಷೆಯಲ್ಲಿ ಆ (ಮಹಾರಾಷ್ಟ್ರ) ಶಬ್ದಗಳನ್ನು ಸೇರಿಸಿಕೊಂಡಿರುವರೆಂತಲೂ, ಪೂರ್ವಭಾಗದ ಕನ್ನಡಿಗರು ತಮಿಳು ದೇಶದವರ ಪದ್ಧತಿಯನ್ನು ಅನುಸರಿಸಿರುವುದಲ್ಲದೆ ತಮ್ಮ ಕನ್ನಡದಲ್ಲಿ ಅನೇಕ ತಮಿಳು ತೆಲುಗು ಶಬ್ದಗಳನ್ನು ಸೇರಿಸಿಕೊಂಡಿರುವರೆಂತಲೂ ತಿಳಿಸಿದರು. ಹೀಗಿರುವುದರಿಂದ ಕನ್ನಡಿಗರಲ್ಲಿ ನಾವೆಲ್ಲರೂ ಒಂದೇ ಭಾಷೆಯನ್ನಾಡುವ ಒಂದೇ ವಿಧವಾದ ಜನಗಳು, ನಾವೆಲ್ಲರೂ ಏಕೀಭವಿಸಿ ಕನ್ನಡದ ಏಳಿಗೆಗೆ ಪ್ರಯತ್ನಪಡಬೇಕು ಈ ವಿಧವಾದ ಅಭಿಪ್ರಾಯಗಳು ಕನ್ನಡಿಗರಲ್ಲಿ ವಿಶೇಷವಾಗಿಲ್ಲವೆಂತಲೂ, ಮತ್ತು ಭಾಷೆಯು ಒಂದೊಂದು ಭಾಗದಲ್ಲಿ ಒಂದೊಂದು ವಿಧವಾಗಿರುವುದರಿಂದ ಕನ್ನಡಿಗರು ಪರಸ್ಪರ ಅಭಿಪ್ರಾಯಗಳನ್ನು ತಿಳಿಸಿ ತಿಳಿದುಕೊಳ್ಳಲು ವಿಶೇಷ ತೊಂದರೆಗಳುಂಟಾಗಿರುವವೆಂತಲೂ ಸೂಚಿಸಿದರು. ಮುಖ್ಯವಾಗಿ ಅಲ್ಲಿನವರು ರಚಿಸಿದ ಪುಸ್ತಕವನ್ನು ಇಲ್ಲಿನವರು ಓದುವುದಕ್ಕೂ ಇಲ್ಲಿನವರು ಬರೆದ ಪುಸ್ತಕವನ್ನು ಅಲ್ಲಿನವರು ಓದಿ ತಿಳಿಯುವುದಕ್ಕೂ ಪ್ರತಿಬಂಧಕಗಳುಂಟಾಗಿವೆಯೆಂದು ತಿಳಿಸಿದರು.

ಕನ್ನಡ ರಾಜ್ಯದ ಎಲ್ಲಾ ಭಾಗದಲ್ಲಿ ಬಳಕೆಯಲ್ಲಿರುವ ಭಾಷೆಯನ್ನು ಒಂದೇ ರೀತಿಯಾಗಿ ಮಾಡುವದೇ ಈ ಪ್ರತಿಬಂಧಕಗಳನ್ನು ನಿವಾರಿಸಲು ಉಪಾಯವೆಂದು ಸೂಚಿಸಿದರು. ಕನ್ನಡಿಗರೆಲ್ಲರೂ ಒಂದೇ ಸರ್ಕಾರದ ವಶದಲ್ಲಿದ್ದ ಹೊರತು ಈ ಕಾರ್ಯವು ಅಸಾಧ್ಯವೆಂದು ಅನೇಕರು ತಿಳಿಯಬಹುದು. ಆದರೆ ಕನ್ನಡಿಗರೆಲ್ಲರೂ ಒಂದೇ ಸರ್ಕಾರಕ್ಕೆ ಸೇರದಿದ್ದರೂ ಅವರೆಲ್ಲರೂ ಒಂದು ಸ್ಥಳದಲ್ಲಿ ಕೂಡುವ ಸಂದರ್ಭಗಳನ್ನು ಕಲ್ಪಿಸಿದರೆ ಭಾಷೆಯ ಏಕೀಕರಣವು ಸುಲಭಸಾಧ್ಯವಾದೀತು. ಎಲ್ಲರೂ ಒಂದೇ ಸರ್ಕಾರಕ್ಕೆ ಸೇರಿದ್ದರೆ ಈ ಕಾರ್ಯವು ಸುಲಭವಾಗಿ ನೆರವೇರುವುದಲ್ಲದೆ ತೊಂದರೆಯಿಲ್ಲವೆಂತಲೂ ತಿಳಿಸಿದರು. ಒಂದೇ ಸರ್ಕಾರಕ್ಕೆ ಸೇರದಿದ್ದರೂ ಒಂದು ಸ್ಥಳದಲ್ಲಿ ಕೂಡುವ ಸಂಘಗಳು ಇರಬೇಕು. ಇಂಥ ಸಂದರ್ಭಗಳ ಮೂಲಕ ಅಂಥ ಸಂಘಗಳನ್ನು ಸ್ಥಾಪಿಸಬೇಕೆಂದು ಹೇಳಿದರು. ಆ ವಿಧಾನ ನಡೆದಿದ್ದರೆ ಸರ್ವ ಕನ್ನಡಿಗರು ಸೇರುವುದೇ ಇದಕ್ಕೆ ಉಪಾಯವೆಂದು ತಿಳಿಸಿದರು. ಇಂಥ ಸಂಘಗಳ ಕನ್ನಡ ರಾಜ್ಯದ ಎಲ್ಲ ಭಾಗಗಳಿಂದ ಜನರು ಬರುವ ಹಾಗೆ ಮಾಡಬೇಕು. ಒಂದು ಭಾಗದಲ್ಲಿ ಬಳಕೆಯಲ್ಲಿರುವ ಆಡುಮಾತಾಗಿರುವ ಅಂಶಗಳನ್ನು ಬಿಟ್ಟು ಸರ್ವಸಮ್ಮತವಾಗಿರುವ ಕನ್ನಡದಲ್ಲೇ ಪಠ್ಯಪುಸ್ತಕಗಳನ್ನು ಮಾಡಿಸಿ ಎಲ್ಲ ಶಾಲೆಗಳಲ್ಲಿಯೂ ಸ್ಕೂಲುಗಳಲ್ಲಿಯೂ ಬಾಲಕರಿಗೆ ಅಭ್ಯಾಸಮಾಡಿಸುತ್ತ ಒಂದು ಕೆಲವು ವರ್ಷಗಳಲ್ಲಿ ಬರೆಯುವ ಎಲ್ಲ ಕಡೆಗಳಲ್ಲೂ ಒಂದೇ ವಿಧವಾಗಿ ಉಪಯೋಗಿಸುವವರಲ್ಲಿ ಸಂಶಯವಿಲ್ಲವೆಂದು ತಿಳಿಸಿದರು. ಈ ಕೆಲಸ ಅಸಾಧ್ಯವೆಂದು ಅನೇಕರಿಗೆ ತೋರಬಹುದು, ಎಲ್ಲ ಕಷ್ಟ ಕೆಲಸಗಳೂ ಆರಂಭದಲ್ಲಿ ಹೀಗೆಯೇ ಕಾಣಿಸುವವು. ಮನಸ್ಸಿಟ್ಟು ಕೆಲಸಕ್ಕೆ ಕೈಹಚ್ಚಿದರೆ ಎಂಥ ಕಷ್ಟವಾದುದಾದರೂ ಕೆಲಸವು ಕೈಗೂಡುವುದರಲ್ಲಿ ಸಂಶಯವಿಲ್ಲವೆಂದು ಹೇಳಿ ಉಪನ್ಯಾಸವನ್ನು ಮುಗಿಸಿದರು.

ಮಿ॥ ತಿಮ್ಮಪ್ಪಯ್ಯ ಶಾಸ್ತ್ರಿಗಳು ಮೇಲಿನ ಅಂಶವನ್ನು ಅನುಮೋದಿಸಿ ಉಪನ್ಯಾಸ ಮಾಡುವುದರಲ್ಲಿ ಧಾರವಾಡದ ಕನ್ನಡಕ್ಕೂ ಮೈಸೂರು ಕನ್ನಡಕ್ಕೂ ಇರುವ ಅನೇಕ ವಿಧವಾದ ವ್ಯತ್ಯಾಸಗಳನ್ನು ವಿಶದಪಡಿಸಿ, ಈ ವಿಧವಾದ ವ್ಯತ್ಯಾಸಗಳನ್ನು ಹೋಗಲಾಡಿಸಿದರೆ ಮಿ॥ ವೆಂಕಟಸುಬ್ಬಯ್ಯನವರ ಉದ್ದೇಶವು ನೆರವೇರುವುದೆಂದು ತಿಳಿಸಿದರು.

ಇದೇ ವಿಷಯದಲ್ಲಿ ಇನ್ನೂ ಕೆಲವರು ಉಪನ್ಯಾಸ ಮಾಡಿದ ತರುವಾಯ ಎಲ್ಲರಿಗೂ ಪುಷ್ಪ ತಾಂಬೂಲಾದಿ ಮರ್ಯಾದೆಗಳು ನಡೆದು ಆ ದಿವಸದ ಸಭೆಯು ಮುಗಿಯಿತು.

ಮೈಸೂರು ಗೆಜೆಟ್ ಸಂಗ್ರಹ

ಸಬ್ ಅ॥ ಸರ್ಜನ್ ಮಿ॥ ಎ. ಕೋದಂಡಪಾಣಿ ಮೊದಲಿಯಾರ್ರಿಗೆ ಕೊಟ್ಟಿದ್ದ ರಜವನ್ನು ಇನ್ನೊಂದು ವರುಷದ ತನಕ ಜಾಸ್ತಿ ಮಾಡಿದೆ.

ಕಡೂರಿನ ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಪೀರ್ ಅವರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೫ ದಿನಗಳಿಗೆ ಜಾಸ್ತಿ ಮಾಡಿದೆ.

ಸೊರಬದ ಅಮಲ್ದಾರ್ ಮಿ॥ ಎಸ್ ಕೃಷ್ಣಪ್ಪನವರಿಗೆ ಕೊಟ್ಟಿದ್ದ ೩೦ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೧೫ ದಿನಗಳಿಗೆ ಜಾಸ್ತಿ ಮಾಡಿದೆ.

ಎಕ್ಸೈಸ್ ಇಲಾಖೆ ಎಕ್ಸ್ಟ್ರಾ ಅ॥ ಕಮಿಷನರ್ ಮಿ॥ ಜಿ ಹಸ್ಟಿಂಗ್ಸ್‌ಯವರಿಗೆ ಕೊಟ್ಟಿದ್ದ ಆರು ತಿಂಗಳ ರಜವನ್ನು ಇನ್ನೂ ಮೂರು ತಿಂಗಳಿಗೆ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮಿ॥ ಬಿ ಎಸ್ ಗೋವಿಂದರಾಯರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ೭ ದಿನಗಳಿಗೆ ಜಾಸ್ತಿ ಮಾಡಿದೆ.

ಬೆಂಗಳೂರ್ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟು ಮಿ॥ ಜೆ ಹ್ಯೂಂ ಫ್ಲೆಟ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೩ ತಿಂಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ೩ ತಿಂಗಳ ಕಾಯಿಲೆ ರಜವನ್ನೂ ಕೊಟ್ಟಿದೆ.

ಮೈಸೂರ್ ಸಿವಿಲ್ ಸರ್ಜನ್ ಮತ್ತು ಜೈಲ್ ಸೂಪರಿಂಟೆಂಡೆಂಟ್ ಮಿ॥ ಬಿ ಎಸ್ ಅಚ್ಯುತರಾಯರನ್ನು ಬೆಂಗಳೂರ್ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಕೆಲಸ ಬದಲಿ ನೋಡುವಂತೆ ನೇಮಿಸಿದೆ.

ಸೀನಿಯರ್ ಸರ್ಜನ್‌ರವರ ಪರ್ಸನಲ್ ಅಸಿಸ್ಟೆಂಟ್ ಮಿ॥ ಟಿ ಎಸ್ ನಂಜಪ್ಪನವರನ್ನು ಮೈಸೂರು ಸಿವಿಲ್ ಸರ್ಜನರಾಗಿಯೂ ಜೈಲ್ ಸೂಪರಿಂಟೆಂಡೆಂಟರಾಗಿಯೂ ಬದಲಿ ನೋಡುವಂತೆ ನೇಮಕ ಮಾಡಿದೆ.

ನೇತ್ರವೈದ್ಯರಾದ ಡಾ॥ ಎಸ್. ವಿ. ರಾಮಸ್ವಾಮಯ್ಯಂಗಾರ್ರು ತಮ್ಮ ಇತರ ಕೆಲಸಗಳೊಂದಿಗೆ ಸೀನಿಯರ್ ಸರ್ಜನ್‌ರವರ ಪರ್ಸನಲ್ ಅಸಿಸ್ಟೆಂಟರಾಗಿಯೂ ಬದಲಿ ನೋಡತಕ್ಕದ್ದು.

ಡೆಪ್ಯುಟಿ ಕಮಿಷನರ್ ಮಿ॥ ಬಿ ದೇವರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ರಾವ್ ಬಹದೂರ್ ಪಿ ಎಸ್ ಕೃಷ್ಣರಾಯರು ಚೀಫ್ ಕೋರ್ಟಿನ ಡೆಪ್ಯುಟಿ ಕೆಲಸದ ಭಾರ್ಜನ್ನು ವಹಿಸಿಕೊಳ್ಳುವ ತನಕ ಮೆ॥ ಎ ರಂಗಸ್ವಾಮಿಯ್ಯಂಗಾರ್ರು ತಮ್ಮ ಇತರ ಕೆಲಸಗಳೊಂದಿಗೆ ಚೀಫ್ ಕೋರ್ಟಿನಲ್ಲಿ ಡೆಪ್ಯುಟಿಯ ಕೆಲಸವನ್ನು ನೋಡುವಂತೆ ನೇಮಿಸಲ್ಪಟ್ಟಿದಾರೆ

ಮುಂದೆ ಹೇಳುವ ಅಮಲ್ದಾರರನ್ನು ಪೋಲೀಸ್ ಅ॥ ಸೂಪರಿಂಟೆಂಡೆಂಟರಾಗಿ ನೇಮಕನಾಡಿದೆ —ಮೆ॥ ಗಳಾದ ಬಿ ಎಸ್ ರಾಮೋಜಿರಾಯರು, ಎಸ್ ನಾರಾಯಣ ರಾಯರು, ಪಿ ವಿಶ್ವನಾಥ ರಾಯರು

ಶ್ರೀಮನ್ಮಹಾರಾಜರವರು ರಾವ್ ಬಹದೂರ್ ಬಿ ಎಸ್ ಕೃಷ್ಣರಾಯರನ್ನು ಜೂನ್ ೧೮ ರಿಂದ ಚೀಫ್ ಕೋರ್ಟಿನ ಜಡ್ಜರನ್ನಾಗಿ ನೇಮಿಸಿರುತ್ತಾರೆ

ಶ್ರೀಮನ್ಮಹಾರಾಜರವರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನಲ್ಲಿ ಮುಂದೆ ಹೇಳುವ ರೀತಿಯಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿರುತ್ತಾರೆ —

ಮೆ॥ ಕೆ ಎಸ್ ಚಂದ್ರಶೇಖರಯ್ಯರವರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿರತಕ್ಕದ್ದು, ಮೆ॥ ಎಸ್ ಬಾಲಸುಂದರಂ ಐಯ್ಯರವರೂ, ಮೆ॥ ಕೆ ಮತ್ತೂರವರೂ, ಮೆ॥ ಪಿ ಜಿ ವಿಶ್ವನಾಥಯ್ಯನವರೂ ಗವರ್ನಮೆಂಟಿನ ಅಂಡರ್ ಸೆಕ್ರೆಟರಿಗಳಾಗಿರತಕ್ಕದ್ದು

ಬೆಂಗಳೂರು ಮ್ಯುನಿಸಿಪಾಲಿಟಿಗೆ ಪ್ರತ್ಯೇಕವಾದ ಪ್ರೆಸಿಡೆಂಟರನ್ನು ನೇಮಕಮಾಡುವುದು ಅವಶ್ಯವಿಲ್ಲವೆಂದು ತೀರ್ಮಾನವಾಗಿದೆ ಈ ವಿಷಯದಲ್ಲಿ ಮುಂದೆ ಹೇಳುವ ಬದಲಾವಣೆಗಳು ಜಾರಿಯಾಗುತ್ತವೆ —(೧) ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರೇ ಮ್ಯುನಿಸಿಪಾಲ್ ಪ್ರೆಸಿಡೆಂಟಾಗಿಯೂ ಇರತಕ್ಕದ್ದು (೨) ಮೆ॥ [illegible] ಜಿ ಕೃಷ್ಣಸ್ವಾಮಿರಾಯರನ್ನು ಬೆಂಗಳೂರು ಮ್ಯುನಿಸಿಪಾಲಿಟಿಯ [illegible] ಆಗಿ ನೇಮಿಸಿರುತ್ತೆ

[illegible] ಹೇಳುವ [illegible] ಕ್ಲಾಸ್ [illegible] ಮೆ॥ [illegible] ರಾಯರು [illegible]

[illegible]

ಮೆ॥ [illegible] ರಾಮಸ್ವಾಮಿಯ್ಯಂಗಾರ್ರನ್ನು [illegible] ಕಮಿಷನರ [illegible] ದರ್ಜೆಯಲ್ಲಿ [illegible] ಕ್ಲಾಸಿಗೆ [illegible]

[illegible] ಎಕ್ಸ್ಟ್ರಾ ಅ॥ ಕಮಿಷನರಾಗಿ [illegible] ಕೆಲಸ [illegible] ರತಕ್ಕದ್ದು

ಮುಂದೆ ಹೇಳುವ [illegible] ವರ್ಗ [illegible] ಹುಕುಂ [illegible] ಆಗಿದೆ

(೧) ಅಮಲ್ದಾರರಾಗಿರತಕ್ಕದ್ದು —ಮೆ॥ ಗಳಾದ [illegible] ರಾಯರು [illegible] ವೆಂಕಟಸ್ವಾಮಿಯವರು, ಎಲ್ ರಾಮಸ್ವಾಮಿಯ್ಯಂಗಾರ್ರು, [illegible] ಬಿ ಎಸ್ [illegible] ಕೆ [illegible] ರಾಮಯ್ಯನವರು, ಕೆ [illegible] ಗುಲಾಂ [illegible] ಬಿ [illegible] ಜಿ [illegible] ಎಸ್ ಅಬ್ದುಲ್ಲಾ [illegible] ಅಲ್ಲಾ [illegible] ಕೃಷ್ಣಯ್ಯಂಗಾರ್ರು [illegible]

(೨) ಡೆಪ್ಯುಟಿ ಅಮಲ್ದಾರರಾಗಿರತಕ್ಕದ್ದು—ಎಸ್ ಶ್ರೀನಿವಾಸಯ್ಯಂಗಾರ್ರು, ಜಿ ಮುರುಡಪ್ಪನವರು, ಎಸ್ ಅನಂತಸ್ವಾಮಿಯ್ಯಂಗಾರ್ರು, ಎಚ್ ಬಸವರಾಜೇ ಅರಸಿನವರು, ಕೆ ಎ ರಂಗಣ್ಣನವರು, ಮಹಮದ್ ಪೀರ್ ಯವರು

ಮುಂದೆ ಹೇಳೆ ವವರನ್ನು ಎಕ್ಸ್ಟ್ರಾ ಅ॥ ಕಮಿಷನರಾಗಿ ಖಾಯಂ ಮಾಡಿದೆ —ಮೆ॥ ಗಳಾದ ಎ ವೇದಾಂತ ದೇಶಿಗ ಐಯ್ಯಂಗಾರ್ರು, ಆರ್ ಟಿ ಮಾಧವರಾಯರು, ಟಿ ಕೆ ಸುಂದರರಾಜೈಯ್ಯಂಗಾರ್ರು ಕೆ ವೈಲಾರಿರಾಯರು, ಆನಂದರಾವ್ ಸಿರ್ಸಿಯವರು, ಎಚ್ ಸೀತಾರಾಮೈಯ್ಯನವರು

ಮುಂದೆ ಹೇಳುವ ಅಮಲ್ದಾರರನ್ನು ಎಕ್ಸ್ಟ್ರಾ ಅ॥ ಕಮಿಷನರಾಗಿ ಬದಲಿ ನೇಮಕಮಾಡಿದೆ —ಮೆ॥ ಗಳಾದ ನಾಗಪ್ಪ ರಾಜೇ ಅರಸಿನವರು, ಜಿ ಹನುಮಂತರಾಯರು ಎಂ ಜಿ ಕೃಷ್ಣಸ್ವಾಮಿರಾಯರು

ಮುಂದೆ ಹೇಳುವ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ —ಮೆ॥ ವಿ ಆರ್ ತ್ಯಾಗರಾಜ ಐಯ್ಯರವರನ್ನು ಕೋಲಾರದಿಂದ ಬೆಂಗಳೂರಿಗೆ, ರೆವಿನ್ಯೂ ಕಮಿಷನರವರ ಅಸಿಸ್ಟೆಂಟಾಗಿರತಕ್ಕದ್ದು, ಮೆ॥ ಜಿ ಆರಾವಮುದೈಯ್ಯಂಗಾರ್ರನ್ನು ರೆವಿನ್ಯೂ ಕಮಿಷನರ ಆಫೀಸಿನಿಂದ ಚಿಕ್ಕಬಳ್ಳಾಪುರದ ಡಿವಿಜನಿಗೆ, ಮೆ॥ ಸಿ ರಾಮರಾಯರನ್ನು ಚಿಕ್ಕಬಳ್ಳಾಪುರದ ಡಿವಿಜನಿನಿಂದ ಬೆಂಗಳೂರಿಗೆ, ಸಿಟಿ ಮಾಜಿಸ್ಟ್ರೇಟಾಗಿರತಕ್ಕದ್ದು, ಮೆ॥ ಕೆ ಶ್ರೀನಿವಾಸರಾಯರನ್ನು ಫ್ರೆಂಚ್ ರಾಕ್ಸಿನಿಂದ ಕೋಲಾರಕ್ಕೆ, ಮೆ॥ ಜಿ ಹನುಮಂತರಾಯರು ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟಾಗಿರತಕ್ಕದ್ದು, ಮೆ॥ ಸಿ ದೇವರಾಜೇ ಅರಸಿನವರನ್ನು ಹುಣಸೂರಿನಿಂದ ಕುಣಿಗಲಿಗೆ, ಮೆ॥ ಎ ಸ ಬ್ರಹ್ಮಣ್ಯ ಐಯ್ಯರವರನ್ನು ಕೃಷ್ಣರಾಜಪೇಟೆಯಿಂದ ಹುಣಸೂರಿಗೆ, ಮೆ॥ ಬಾದಾಮಿ ಕೃಷ್ಣರಾಯರನ್ನು ಸಾಗರದಿಂದ ಕೃಷ್ಣರಾಜಪೇಟೆಗೆ, ಮೆ॥ ನಗರ ಸುಬ್ಬರಾಯರನ್ನು ಸಾಗರಕ್ಕೆ, ಮೆ॥ ಟಿ ಕೆ ಸುಂದರರಾಜೈಯ್ಯಂಗಾರ್ರನ್ನು ದಾವಣಗೆರೆಯಿಂದ ಮೈಸೂರಿಗೆ, ಡಿಸ್ಟ್ರಿಕ್ಟ್ ಖಜಾನೆಯ ಭಾರ್ಜಿನಲ್ಲಿರತಕ್ಕದ್ದು, ಮೆ॥ ಕೆ ಚಾಂಡಿಯವರನ್ನು ಶಿವಮೊಗ್ಗೆಯಿಂದ ದಾವಣಗೆರೆಗೆ, ಮೆ॥ ಮಹಮದ್ ರಜಾ ಯವರು ಶಿವಮೊಗ್ಗೆಗೆ, ಮೆ॥ ಸಿ ವೆಂಕಟರಾಯರನ್ನು ಮೈಸೂರಿನಿಂದ ಹೊನ್ನಾಳಿ ಡಿವಿಜನಿಗೆ, ಮೆ॥ ಟಿ ವೆಂಕೋಬರಾಯರನ್ನು ಬೆಂಗಳೂರಿನಿಂದ ಫ್ರೆಂಚ್ ರಾಕ್ಸಿಗೆ, ಮೆ॥ ಪಿ ಶ್ರೀನಿವಾಸರಾಯರನ್ನು ಗುಬ್ಬಿಯಿಂದ ಬೆಂಗಳೂರಿಗೆ, ಮೆ॥ ಆನಂದರಾವ್ ಸಿರ್ಸಿ ಯವರನ್ನು ಚಾಲೀಸ್‌ಪೇಟೆಯಿಂದ ಗುಬ್ಬಿಗೆ, ಮೆ॥ ಹಸನ್ ಅಲಿ ಯವರನ್ನು ಶಿವಮೊಗ್ಗೆಯಿಂದ ಕೋಲಾರಕ್ಕೆ, ಡಿಸ್ಟ್ರಿಕ್ಟ್ ಖಜಾನೆಯ ಭಾರ್ಜಿನಲ್ಲಿರತಕ್ಕದ್ದು, ಮೆ॥ ವೇದಾಂತದೇಶಿಗ ಐಯ್ಯಂಗಾರ್ರನ್ನು ಪೋಲೀಸ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ, ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು

ಜುಡಿಷಲ್ ಇಲಾಖೆಯಲ್ಲಿ ಮುಂದೆ ಹೇಳುವ ಬದಲಾವಣೆಗಳನ್ನು ಹುಕುಂ ಮಾಡಿದೆ —

ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಗಳು—ಮೆ॥ ಎಸ್ ವೆಂಕಟವರದ ಐಯ್ಯರವರನ್ನು ೨ ನೆ ಕ್ಲಾಸಿಗೆ ಬಡ್ತಿ ಮಾಡಿದೆ, ಸಬ್ ಜಡ್ಜ್ ಮೆ॥ ಟಿ ಪರಮಶಿವ ಐಯ್ಯರವರೂ ಕೋಲಾರ್ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮೆ॥ ಆರ್ ಬಿ ಪ್ರಮಾಣ್ ಯವರೂ ೩ ನೆ ಕ್ಲಾಸಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿದಾರೆ

ಸಬ್ ಜಡ್ಜಗಳು—ಮೆ॥ ಸಿ ಬಿ ಶೇಷಗಿರಿರಾಯರನ್ನು ೧ ನೆ ದರ್ಜೆಗೆ ಬಡ್ತಿ ಮಾಡಿದೆ ಮೆ॥ ಪೀರ್ ಹಂಜಾ ಹುಸ್ಸೇನಿಯವರನ್ನು ೨ ನೆ ದರ್ಜೆಗೆ ಬಿಟ್ಟುಕೊಟ್ಟು ಮೈಸೂರಿಗೆ ವರ್ಗಮಾಡಿದೆ ಮೆ॥ ಟಿ ಎಂ ನರಸಿಂಗರಾಯರನ್ನು ೩ ನೆ ದರ್ಜೆಯ ಸಬ್ ಜಡ್ಜಿಯನ್ನಾಗಿ ನೇಮಿಸಿ, ಚಿಕ್ಕಮಗಳೂರಿಗೆ ವರ್ಗಮಾಡಿದೆ ಮುನ್ಸಿಫ್ ಮೆ॥ ಬಿ ಎಸ್ ಕೃಷ್ಣಸ್ವಾಮಿಯ್ಯಂಗಾರ್ರನ್ನು ೩ ನೆ ದರ್ಜೆಯ ಸಬ್ ಜಡ್ಜಿಯನ್ನಾಗಿ ನೇಮಿಸಿ ಶಿವಮೊಗ್ಗೆಗೂ, ಮೆ॥ ಜಹಂಗೀರ್ ಎಚ್ ಬಾಬಾಯವರನ್ನು ಸಬ್ ಜಡ್ಜಿಯನ್ನಾಗಿ ನೇಮಿಸಿ ಬೆಂಗಳೂರಿಗೂ ವರ್ಗಮಾಡಿದೆ

ಮುನ್ಸಿಫರುಗಳು—ಮೆ॥ ಗಳಾದ ಎಂ ನರಸಪ್ಪಯ್ಯನವರನ್ನೂ, ಡಿ ಕೆ ರಾಮರಾಯರನ್ನೂ, ಜಿ ಸತ್ಯನಾರಾಯಣರನ್ನೂ, ಜಿ ಕೆ ಶ್ರೀನಿವಾಸ ಐಯ್ಯರವರನ್ನೂ, ವೆಂಕಟಕೃಷ್ಣಯ್ಯನವರನ್ನೂ ಹಿಡೇ ದರ್ಜೆಯ ಖಾಯಂ ಮುನ್ಸಿಫರನ್ನಾಗಿ ನೇಮಕಮಾಡಿದೆ

ಮೆ॥ ಗಳಾದ ಮಹದೇವಯ್ಯನವರು, ಬಿ ರಂಗಯ್ಯಂಗಾರ್ರೂ ಎ ಕೆ ಶ್ರೀನಿವಾಸರಾಘವಾಚಾರ್ರೂ ಮುನ್ಸಿಫರಾಗಿ ಬದಲಿ ನೇಮಿಸಲ್ಪಟ್ಟಿದಾರೆ

[illegible] ಡಿಸ್ಟ್ರಿಕ್ಟ್ ಖಜಾನೆಯ [illegible] ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ [illegible] ಶ್ರೀನಿವಾಸ [illegible] ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಪ್ರೊಬೇಷನ್ [illegible] ಮುಂದೆ ಹೇಳುವ ವರ್ಗಾವರ್ಗಿ ಹು [illegible] ಮೆ॥ ಬಿ ಎಸ್ ರಾಮೋಜಿರಾಯರನ್ನು [illegible] ನಾರಾಯಣ [illegible] ಯರು [illegible] ಮೆ॥ [illegible] ಮೈಸೂರಿಗೆ

ಮೆ॥ ಟಿ ಎಸ್ [illegible] ಯವರು ರಜದಿಂದ [illegible] ಚನ್ನ [illegible] ಕಮಿಷನರಾಗಿಯೂ ೧ ನೆ ಕ್ಲಾಸ್ ಮ್ಯಾಜಿಸ್ಟ್ರೇಟಾಗಿಯೂ ಇರತಕ್ಕದ್ದು

ಮುಂದೆ ಹೇಳುವ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ ಅ॥ [illegible] ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ ಮೆ॥ ಎಂ [illegible] ರಾಜೇ ಅರಸಿನವರು ಮೈಸೂರಿಗೆ [illegible] ಮೆ॥ [illegible] ಬೆಂಗಳೂರಿಗೆ ಮೆ॥ ಎಂ [illegible]

[illegible] ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ [illegible] ೨ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಮುಂದೆ ಹೇಳುವ ಮುನ್ಸಿಫರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ —ಮೆ॥ ಗಳಾದ ಶಿವಲಿಂಗಶಾಸ್ತ್ರಿಗಳು ಚಳ್ಳಕೆರೆಯವರು—ಮೈಸೂರಿನಿಂದ ಚೆನ್ನಪಟ್ಟಣ, [illegible] ವರು [illegible] ಚಿತ್ರದುರ್ಗದಿಂದ [illegible] ಎನ್ ರಂಗಪ್ಪ [illegible] ದೊಡ್ಡಬಳ್ಳಾಪುರ [illegible] ಕೋಲಾರ, [illegible] ಟಿ ಗುರುಮೂರ್ತಿಯವರು—ಹೊಳಲ್ಕೆರೆಯಿಂದ ಮೈಸೂರು [illegible] ಎಂ [illegible] ಎಸ್ [illegible] ಎಂ ನರಸಪ್ಪಯ್ಯನವರು—ಸಾಗರ [illegible] ಹೊಳೆನರಸೀಪುರ, ಎಸ್ ವೆಂಕಟಕೃಷ್ಣಯ್ಯನವರು—ಮೈಸೂರಿನಿಂದ ಸಾಗರ ಮೆ॥ ಗಳಾದ ಮಹದೇವಯ್ಯನವರು—ಮೈಸೂರಿಗೆ ಬಿ ರಂಗಯ್ಯಂಗಾರ್ರು—ಬೆಂಗಳೂರಿಗೆ ಎ ಕೆ ಶ್ರೀನಿವಾಸರಾಘವಾಚಾರ್ರು—ದೊಡ್ಡಬಳ್ಳಾಪುರಕ್ಕೆ

ಮುಂದೆ ಹೇಳುವ ಅಮಲ್ದಾರ್ ಮತ್ತು ಡೆಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಲ್ಪಟ್ಟಿದೆ —ಮೆ॥ ಗಳಾದ ಎಂ ರಂಗಾಚಾರ್ಯರು—ಕೃಷ್ಣರಾಜಪೇಟೆಯಿಂದ ಕುಣಿಗಲಿಗೆ ವಿ ಎಸ್ ರಾಜಗೋಪಾಲಾಚಾರ್ರು—ಕೃಷ್ಣರಾಜಪೇಟೆಗೆ ಕೆ ಎ ರಂಗಣ್ಣನವರು ಕೋರಟಗೆರೆ ಕೆ ಕೇಶವಾಚಾರ್ರು—ಮಾಗಡಿಗೆ ಟಿ ವೆಂಕಟಪ್ಪಯ್ಯನವರು—ನಗ್ಗದೇವನಕೋಟೆಯಿಂದ ಶಿವಮೊಗ್ಗ ಸಿ ಆರ್ ಕೃಷ್ಣರಾಯರು ತರೀಕೆರೆಯಿಂದ ಟೌರಿಂಗ್‌ಪೇಟೆಗೆ, ಷೇಕ್ ಅಬ್ದುಲ್ಲಾ ಯವರು ಚನ್ನಗಿರಿಯಿಂದ ತರೀಕೆರೆಗೆ ಎ ಕೃಷ್ಣಸ್ವಾಮೈಯ್ಯಂಗಾರ್ರು ಸಂಜನಗೂಡಿನಿಂದ ಬೆಂಗಳೂರಿಗೆ, ಬಿ ಕೇಶವಯ್ಯನವರು ಮೊಳಕಾಲ್ಮೂರಿನಿಂದ ನಂಜನಗೂಡಿಗೆ ಎ ರಂಗನಾಥರಾಯರು ಚಿಕ್ಕಬಳ್ಳಾಪುರದಿಂದ ಮೊಳಕಾಲ್ಮೂರಿಗೆ, ಜಿ ನಾರಾಯಣರಾಯರು ಚಿಕ್ಕಬಳ್ಳಾಪುರಕ್ಕೆ, ಎಸ್ ಅನಂತರಾಮೈಯ್ಯಂಗಾರ್ರು ಗುಡಿಬಂಡೆಗೆ ಎಸ್ ಎ ಅಪ್ಪಣ್ಣಯ್ಯಂಗಾರ್ರು ದೇವನಹಳ್ಳಿಯಿಂದ ಚನ್ನರಾಯಪಟ್ಟಣಕ್ಕೆ, ಗುಲಾಂ ಮಹಮದ್ ಮೆಹ್ದಿಯವರು ಶಿಕಾರಿಪುರಕ್ಕೆ ವೆಂಕಟಗಿರಿ ವರದಪ್ಪನವರು ಆಲೂರಿನಿಂದ ಚಾಲೀಸ್‌ಪೇಟೆಗೆ, ಸಿ ವಿ ನಾರಾಯಣರಾಯರು ತಿಪ್ಟೂರಿನಿಂದ ಕೋಲಾರಕ್ಕೆ, ಸಿ ಗೋಪಾಲಾಚಾರ್ರು ಮದ್ದಗಿರಿಯಿಂದ ತಿಪ್ಟೂರಿಗೆ, ಎ ಕೃಷ್ಣರಾಯರು ಮದ್ದಗಿರಿಗೆ ಬಿ ಕೃಷ್ಣಶಾಸ್ತ್ರಿಗಳು ಹೊಸಕೋಟೆಯಿಂದ ಗೌರಿಬಿದನೂರಿಗೆ, ಸಿ ಪಿ ಕೃಷ್ಣಸ್ವಾಮಿ ಐಯರು ಮಂಡ್ಯದಿಂದ ಹೊಳಲ್ಕೆರೆ, ಬಿ ಟಿ ಸೀತಾರಾಮಯ್ಯನವರು ಹೊಳೆನರಸೀಪುರದಿಂದ ಮಂಡ್ಯ, ಎಸ್ ಕೃಷ್ಣಐಯ್ಯರವರು ಬೇಲೂರಿನಿಂದ ಹೊಳೆನರಸೀಪುರ, ಬಿ ಕೃಷ್ಣಶೀಗರವರು ನಂಜನಗೂಡಿನಿಂದ ಬೇಲೂರು, ಎ ರಾಮಸ್ವಾಮೈಯ್ಯಂಗಾರ್ರು ನಂಜನಗೂಡಿಗೆ, ಜಿ ಮುರಡಪ್ಪನವರು ಕುಣಿಗಲ

ಮುಂದೆ ಹೇಳುವ ಅಮಲ್ದಾರ್ ಬದಲಿ ಕೆಲಸಗಳನ್ನು ಹುಕುಂ ಮಾಡಲ್ಪಟ್ಟಿದೆ —ಎಚ್ ಬಸವರಾಜೇ ಅರಸಿನವರು ಹೊಸಕೋಟೆಯಲ್ಲೂ, ಪಿ ಸುಬ್ಬರಾಯರು ಆನೆಕಲ್ಲಿನಲ್ಲೂ, ಧರ್ಮರಾಯರು ಹೆಗ್ಗಡದೇವನಕೋಟೆಯಲ್ಲೂ, ಬಿಳಿಗಿ ಕೃಷ್ಣರಾಯರು ಚನ್ನಗಿರಿಯಲ್ಲೂ ಅಮಲ್ದಾರರಾಗಿ ಬದಲಿ ನೋಡತಕ್ಕದ್ದು.

ಎಂ ಜಪ್ಟಿ (ಬಿಲಿಶಾಸ್ತ್ರಿ)ಗಳನ್ನು ಹುಣಸೇಕಟ್ಟೆಗೂ, ಮೊಹಿದೀನ್ ಸೈಯ್ಯದ್ ಷರೀಫ್ ಯವರನ್ನು ಆಲೂರಿಗೂ ಡಿಪ್ಟಿ ಅಮಲ್ದಾರರಾಗಿ ಬದಲಿ ನೋಡುವಂತೆ ನೇಮಕಮಾಡಿದೆ

ಶ್ರೀಮನ್ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವೀಸ್ ರೆಜಿಮೆಂಟಿನ ಕಮಿಷನ್ ದರ್ಜೆಯಲ್ಲಿ ಮುಂದೆ ಹೇಳುವ ಬಡ್ತಿಗಳನ್ನು ಏಪ್ರಿಲ್ ೧ ರಿಂದ ಸ್ಯಾಂಕ್ಷನ್ ಮಾಡಿದಾರೆ —

ಜಮಾದಾರ್ ಕೃಷ್ಣರಾವ್ ಸಿ ಧೆಯವರನ್ನು ೩ ನೆ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿಯೂ ಜಮಾದಾರ್ ಹನುಮಂತರಾವ್ ಪೊವಾರ್ ಯವರನ್ನು ೪ ನೆ ಗ್ರೇಡ್ ಟ್ರೂಪ್ ಕಮ್ಯಾಂಡರಾಗಿಯೂ ಬಡ್ತಿ ಮಾಡಿದೆ

ಇಂಡಿಯಾ ದೇಶದ ವರ್ತಮಾನಗಳು.

ದಕ್ಷಿಣ ಇಂಡಿಯಾ ರೈಲ್ವೆ ಕಂಪನಿಯವರು ತಿರ್ನವೆಲ್ಲಿಯಿಂದ ತಿರುಚನೂರಿಗೆ ರೈಲ್ ರಸ್ತೆಯನ್ನು ಹಾಕುವುದಕ್ಕೆ ಕಾವ ಗಾರಿ ಮಾಡುವರು ಈ ಕಾಮಗಾರಿಗೆ ಇಂಡಿಯಾ ಗವರ್ನಮೆಂಟಿನವರು ೨೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

●●●●

ಕಳೆದ ವಾರ ಹಿಂದುಸ್ಥಾನದಲ್ಲಿ ೩,೬೪೬ ಜನರು ಮಾತ್ರ ಪ್ಲೇಗಿನಲ್ಲಿ ಸತ್ತಿದಾರೆ ಈ ಪೈಕಿ ಪಂಜಾಬಿನವರು ೨,೮೧೧, ಬೊಂಬಾಯಿ ಆಧಿಪತ್ಯದವರು ೩೧೩, ಬಂಗಾಳ ೮೪, ಸಂಯುಕ್ತ ಆಧಿಪತ್ಯ ೮೩, ಬಹಾರ್ ೧೧೩, ಈ ರೀತಿ ಮೃತಪಟ್ಟಿದ್ದಾರೆ

●●●●

ಅವೇಲ್ [illegible] ಇನ್ಸ್‌ಪೆಕ್ಟರನು ಸೇರಿಕೊಂಡು ಕಳ್ಳ ತ್ತಾ ಪಟ್ಟಣದ [illegible] ದೇಶ [illegible] ಅಂಗಡಿಯಲ್ಲಿ ೨೦ ಲಕ್ಷ ರೂಪಾಯಿ [illegible] ಹಿಡಿದ ಪ್ರಕರಣ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಗಿ ಈಗ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತ [illegible]

●●●●

[illegible] ಸಂಸ್ಥಾನದ ಮಹಾರಾಜಾ ಠಾಕೂರ್ ಸಾಹೆಬ್ ಯವರು [illegible] ಪುರದ ಬಳಿ ಬಹದೂರ್ ನದಿಗೆ ಸೇತುವೆ ಕಟ್ಟುವುದಕ್ಕೆ [illegible] ಲಕ್ಷ ರೂಪಾಯಿ [illegible] ತಮ್ಮ [illegible] ಸ್ಥಳದಲ್ಲಿ [illegible] ಸೇತುವೆ ಕಟ್ಟುವುದಕ್ಕೆ ೬೦ ಸಾವಿರ ರೂಪಾಯಿ [illegible] ಕೊಡುತ್ತಾರೆ

●●●●

ಬರ್ಮ [illegible] ದಲ್ಲಿ ಅಫೀಮು ಬಿಕರಿ ಮಾಡುತ್ತಿರುವರು ಅದಕ್ಕೆ ಇನ್ನೇನೋ [illegible] ಪ್ರಯತ್ನಮಾಡುತ್ತಾರೆಂತಲೂ, ಅದನ್ನು ಹಿಂದೆ ಅಮಲ್ದಾರ ನಡೇ ಇಲ್ಲದೇ [illegible] ಅಲ್ಲಿನ ಅಫೀಮು ತಿನ್ನುವವರು ರೆವಿನ್ಯೂ ಕಮಿಷನರಿಗೆ ಅರ್ಜಿ ಬರೆದು, ಬೇರೆ ಕಡೆ ಇಲ್ಲದ ಅಫೀಮನ್ನು ಬಿಕರಿ ಮಾಡಿಸ ಬೇಕೆಂದು ಕೇಳಿಕೊಂಡಿದಾರೆ

●●●●

ಬ್ರಿಟಿಷ್ ಸಂಸ್ಥಾನದಲ್ಲಿ ಸರ್ಕಾರದವರು ಗ್ರಾಮಗಳಲ್ಲಿ ಪಂಚಾಯತ ರನ್ನ [illegible] ಮಾಡಿ, ಆಯಾ ಗ್ರಾಮದ ಸಮಸ್ತ ವ್ಯವಹಾರಗಳನ್ನೂ ಅವರಿಂದಲೇ ಇತ್ಯರ್ಥ ಮಾಡಿಸಬೇಕೆಂದಿದಾರೆ ಜನರು ಈ ಪಂಚಾಯತ [illegible] ಮಾನದಂತೆ ಒಪ್ಪಿಕೊಳ್ಳುತ್ತಿದ್ದಾರೆ ಇದರಿಂದ ಸರ್ಕಾರ [illegible] ಕೋರ್ಟುಗಳಲ್ಲಿ ಮೊಕದ್ದಮೆಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿದೆ

●●●●

ಹಿಂದೆ ಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಅಕ್ಟೋಬರ್ ತಿಂಗಳಲ್ಲಿ ಸಂಚಾರ ಹೊರಡುತ್ತಾರೆಂತಲೂ ಮೊದಲು ಕಾಶ್ಮೀರ ಸಂಸ್ಥಾನಕ್ಕೆ ಹೋಗುತ್ತಾರೆಂತಲೂ ತಿಳಿದು ಬಂದಿದೆ ಆ ಮೈಸೂರಿಗೆ ಕಾಲಿಟಲಿನಿಂದ ಆಫ್ಘಾನಿಸ್ಥಾನದ ಅಮೀರರವರು ಹಿಂದುಸ್ಥಾನಕ್ಕೆ ಬಾರದೆ ಹೋದಲ್ಲಿ ವೈಸ್‌ರಾಯರ ಇತರ ಕಡೆಗಳಿಗೆ ದಯ ಮಾಡುವವರಾಗಿದ್ದಾರೆ

●●●●

ಟಿಟಿಕೋರಿನ್ (ತಟ್ಟುಗುಡಿ) ಯಲ್ಲಿ ದೇಶೀಯ ವರ್ತಕರು ಅಲ್ಲಿಂದ ಸಿಲೋನ್ (ಲಂಕಾ) ದ್ವೀಪಕ್ಕೆ ಸಾಮಾನು ಸಾಗಿಸುವ ಹಡಗಿನ ಟಪಾಲ್ ಇಟ್ಟಿದಾರೆ. ತಟ್ಟುಗುಡಿಯಿಂದ ಈ ಹಡಗಿನಲ್ಲಿ ಕೊಲಂಬೊಗೆ ಹೋಗಬೇಕಾದರೆ ಹಡಗಿನ ಛಾರ್ಜು ಕೊಡತಕ್ಕದ್ದೆಂದರೆ—೧ ನೆ ಕ್ಲಾಸ್ ೬೦ ರೂಪಾಯಿ, ೨ ನೆ ಕ್ಲಾಸ್ ೭ ರೂಪಾಯಿ, ೩ ನೆ ಕ್ಲಾಸ್ ೩ ರೂಪಾಯಿ

●●●●

ಕಳೆದ ೭ ನೆ ತಾರೀಖಿನಿಂದ ೨೦ ರ ವರೆಗೆ ಮದರಾಸ್ ಪಟ್ಟಣದಲ್ಲಿ ೧೧ ಜನರು ಮಾತ್ರ ಏದಿ ತಗಲಿ ಮೃತಪಟ್ಟರು ಸುತ್ತಮುತ್ತಲೂ ಇರುವ ಚೆಂಗಲ್‌ಪಟ್ಟ್, ಕಂಚಿ, ಮಧುರಾಂತಕಂ, ತಿರುವಳ್ಳೂರ್, ಈ ಮುಂತಾದ ಕಡೆಗಳಲ್ಲಿ ಉಪದ್ರವಿರುವುದರಿಂದ ಅಲ್ಲಿಂದ ಪಟ್ಟಣಕ್ಕೆ ಬರುವವರು ಉಪದ್ರವದ ಸೋಂಕನ್ನು ತೆಗೆದುಕೊಂಡು ಹೋಗಿ ಬಿಟ್ಟರೆಂದು ಹೇಳುವರು

●●●●

ಆ ವಾರ ಹಿಂದುಸ್ಥಾನದಲ್ಲಿ ೬೨೦೦೦ ಜನರು ಪ್ಲಾನಿಡುತ್ತಿದ್ದರು. ಕಳೆದ ವಾರ ಈ ಸಂಖ್ಯೆಯು ೩೬,೩೩,೦೦೦ ಕ್ಕೆ ಬೆಳ್ಳಿ ರುತ್ತದೆ ಈ ಪೈಕಿ ಸಂಯುಕ್ತ ಆಧಿಪತ್ಯದಲ್ಲಿ ೧,೫೮೦,೦೦೦ ಬೊಂಬಾಯಿ ಆಧಿಪತ್ಯದಲ್ಲಿ ೧,೦೬,೫೦೦, ಮಧ್ಯ ಇಂಡಿಯಾದಲ್ಲಿ ೪೦,೦೦೦, ಅಜ್ಮೀರ, ಮೇವಾರ್, ರಾಜಪುತಾನಗಳಲ್ಲಿ ೯೪,೩೦೦ ಈ ರೀತಿ ಪ್ರಜೆಗಳ ಸರ್ಕಾರದವರ ಪೋಷಣೆಯಲ್ಲಿದಾರೆ

●●●●

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸಿನವರೇ ಸೇರಿಕೊಂಡು ಪ್ರಜೆಗಳ ಹೆಣ್ಣು ಮಕ್ಕಳನ್ನು ಎತ್ತಿಕೊಂಡು ಹೋಗಿ ದುಷ್ಕಾರ್ಯಕ್ಕೆ ಬಿಕರಿ ಮಾಡುತ್ತಿದ್ದರು ಇಂಥಾ ಇಬ್ಬರು ಪೋಲೀಸಿನವರು ಸಿಕ್ಕಿಬಿದ್ದು ಸರ್ಕಾರ ವಿಚಾರಣೆ ಆ ಏಳೆಳು ವರುಷಗಳ ಕಠಿಣ ಸಜಾ ವಿಧಿಸಲ್ಪಟ್ಟರು ಅವರಿಗೆ ಸಹಾಯಕರಾಗಿದ್ದ ಒಬ್ಬ ಹೆಂಗಸಿಗೂ ಮೂರು ತಿಂಗಳ ಕಠಿಣ ಸಜಾ ಆಯಿತು ಇಂಥಾ ದುಷ್ಟ ಪೋಲೀಸಿನವರು ಇನ್ನೂ ಕೆಲವರಿದ್ದಾರೆ ಅವರನ್ನು ಇನ್ನಲ್ಲರೂ ಹಿಡಿಯುವಂತೆ ತಡದೂ ಮಾಡಿರುವರು

ಮುಲ್ತಾನ್‌ಪಟ್ಟಣದಲ್ಲಿ ಖೈದಿಗಳನ್ನು ಪೋಲೀಸಿನವರು ರೈಲ್ವೆ ಸ್ಟೇಷನಿಗೆ ಕರೆದುಕೊಂಡುಹೋಗಿ ನಿಲ್ಲಿಸಿಕೊಂಡಿದ್ದರು. ಗಾಡಿ ಬಂದು ಜನರೆಲ್ಲಾ ಇಳಿದ ಕೂಡಲೆ ಒಬ್ಬ ಖೈದಿಯು ಒಬ್ಬ ಪ್ರಯಾಣಿಕನ ಜೇಬಿಗೆ ಕೈಹಾಕಿ ೧೧ ರೂಪಾಯಿ ಕದ್ದುಬಿಟ್ಟನು. ಪೋಲೀಸಿನವರು ಅವನನ್ನು ಹಿಡಿಯುವಷ್ಟರಲ್ಲೇ ಅವನು ಆ ರೂಪಾಯಿಗಳನ್ನೆಲ್ಲಾ ಬಾಯಿಗೆ ಹಾಕಿಕೊಂಡು ಒಂದೇ ಸಲ ನುಂಗಿಬಿಟ್ಟನು.

****

ಹೈದರಾಬಾದಿನ ಸೆಷನ್ಸ್ ಜಡ್ಜಿ ಮಿ॥ ಆಲ್ಡರ್ ಯವರಿಗೂ ಅಲ್ಲಿನ ಲಾಯರುಗಳಿಗೂ ಮೊಕದ್ದಮೆಗಳನ್ನು ನಡಸುವ ವಿಚಾರದಲ್ಲಿ ಚರ್ಚೆ ನಡೆದು ಮನಸ್ತಾಪ ಉಂಟಾದದ್ದರಿಂದ ಲಾಯರುಗಳೆಲ್ಲಾ ಒಗ್ಗಟ್ಟಾಗಿ ತಮ್ಮ ಪೈಕಿ ಯಾರೂ ಅವರ ಕೋರ್ಟಿಗೆ ಹೋಗಿ ಮೊಕದ್ದಮೆ ನಡಸಕೂಡದೆಂದು ತೀರ್ಮಾನ ಮಾಡಿಕೊಂಡು, ಈ ತೀರ್ಮಾನವನ್ನು ಡಿಸ್ಟ್ರಿಕ್ಟ್ ಜಡ್ಜಿಯವರಿಗೂ ಜುಡಿಷಲ್ ಕಮಿಷನರವರಿಗೂ ತಿಳಿಸಿರುತ್ತಾರೆ.

****

ಬಂಗಾಳ್ ಆಧಿಪತ್ಯಕ್ಕೆ ಸೇರಿದ ರಜಷಾಹ್ ನಗರದಲ್ಲಿ ಆಯುಧಧಾರಿಗಳಾದ ೧೦೦ ಮಂದಿ ದರೋಡೆ ಕಳ್ಳರು ಒಬ್ಬ ಸಾಹುಕಾರನ ಮನೆಗೆ ನುಗ್ಗಿ ೧೫,೦೦೦ ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋದರು. ಪೋಲೀಸಿನವರು ಒಂಬತ್ತು ಜನರನ್ನು ಹಿಡಿದು ವಿಚಾರಣೆಗೆ ಗುರಿ ಮಾಡಿದ್ದರಲ್ಲಿ ಏಳು ಜನರಿಗೆ ಬಿಡುಗಡೆಯಾಯಿತು. ಉಳಿದ ಇಬ್ಬರ ಪೈಕಿ ಒಬ್ಬನಿಗೆ ೪ ವರುಷವೂ ಇನ್ನೊಬ್ಬನಿಗೆ ೧೦ ವರುಷವೂ ಸಜಾ ಆಗಿದೆ.

****

ಹಿಂದೂಪುರದಲ್ಲಿ ಒಬ್ಬ ಲಿಂಗಾಯತರ ಹುಡುಗನು ಅನಾಥನಾಗಿಯೂ ನಿರ್ಗತಿಕನಾಗಿಯೂ ಅಲ್ಲಿನ ಮಿಷನ್ ಪಾದ್ರಿಗಳ ಬಳಿಗೆ ಹೋಗಿ ಕ್ರೈಸ್ತನಾಗುತ್ತೇನೆಂದು ಅವರಿಗೆ ಹೇಳಿ ಕೆಲವು ಕಾಲ ಅವರ ಪೋಷಣೆಯಲ್ಲಿದ್ದು ಒಂದು ದಿನ ಒಂದು ಗಡಿಯಾರವನ್ನು ಕದ್ದುಕೊಂಡು ಹೋದನು. ತರುವಾಯ ಅವನಾಗಿಯೇ ಕದ್ದದ್ದುಂಟೆಂದು ಒಪ್ಪಿಕೊಂಡನು. ಆದರೂ ಪಾದ್ರಿಗಳು ಅವನ ಮೇಲೆ ಮೊಕದ್ದಮೆ ಮಾಡದೆ ಬುದ್ಧಿ ಹೇಳಿ ಅವನನ್ನು ಒಳ್ಳೇಮಾರ್ಗಕ್ಕೆ ತರಬೇಕೆಂದು ಪ್ರಯತ್ನಪಟ್ಟರು. ಇದರಿಂದ ತಮ್ಮ ಉದ್ದೇಶಕ್ಕೆ ಕುಂದಕವಾಗಬಹುದೆಂದು ಅವರಿಗೆ ಅನುಮಾನವಾಯಿತು. ಸ್ವಲ್ಪ ಲಕ್ಷ್ಯಮಾಡಿಸುವುದು ಅವಶ್ಯವಾಗಿ ಕಂಡುಬಂದದ್ದರಿಂದ ಪಾದ್ರಿಗಳು ಅವನ ಮೇಲೆ ಫಿರ್ಯಾದುಮಾಡಿದರು. ಅಷ್ಟರಲ್ಲೇ ಅಲ್ಲಿನ ಕೆಲವು ಲಿಂಗಾಯತರು ಅವನ ಸಹಾಯಕರಾಗಿ ನಿಂತರು. ಆ ಹುಡುಗನು—ಪಾದ್ರಿಗಳು ತನ್ನನ್ನು ಕ್ರೈಸ್ತಮತಕ್ಕೆ ಸೇರಬೇಕೆಂದು ಬಲಾತ್ಕರಿಸಿದ ಹಾಗೂ ತಾನು ಒಪ್ಪದೆಹೋದ್ದರಿಂದ ತನ್ನ ಮೇಲೆ ಆ ಕಳುವಿನ ಮೊಕದ್ದಮೆ ತಂದ ಹಾಗೂ ಇಜಾಹಾರು ಹೇಳಿದನು. ಇದನ್ನೇ ನಿಜವೆಂದು ನಂಬಿ ಮ್ಯಾಜಿಸ್ಟ್ರೇಟರು ಆ ಹುಡುಗನನ್ನು ಬಿಟ್ಟುಬಿಟ್ಟರು. ಆದರ ಮೇಲೆ ಪಾದ್ರಿಗಳು ಅವನನ್ನು ಅಕ್ರಮವಾಗಿ ಮನೆಯಲ್ಲಿಟ್ಟುಕೊಂಡಿದ್ದರೆಂದು ಮೊಕದ್ದಮೆ ಆಯಿತು. ಸೆಷನ್ಸ್ ಜಡ್ಜರು ತನಿಖೆ ಮಾಡಿದಾಗ ಲಿಂಗಾಯತರು ಪಾದ್ರಿಗಳ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದೂ ಮೊಕದ್ದಮೆಯನ್ನು ವಜಾ ಮಾಡಬೇಕೆಂದೂ ಖಂಡಿತವಾಗಿ ಹೇಳಿದಾಗ್ಯೂ ಜಡ್ಜರು ಹಾಗೆ ಮಾಡದೆ, ಆ ಇಬ್ಬರು ಪಾದ್ರಿಗಳಲ್ಲೂ ದುರ್ನಡತೆಯೇನೂ ಕಂಡುಬರುವುದಿಲ್ಲವಾದರೂ ಅವರು ಆ ಹುಡುಗನನ್ನು ತಡೆದಿಟ್ಟುಕೊಂಡದ್ದು ಕಾನೂನಿಗೆ ವಿರೋಧವೆಂದು ಹೇಳಿ ಅವರಿಬ್ಬರಿಗೂ ತಲಾ ಐದೈದು ರೂಪಾಯಿನಂತೆ ಜುಲ್ಮಾನೆ ವಿಧಿಸಿರುತ್ತಾರೆ.

ಬಹುಮಾನಪಡೆದ ವರ್ತಮಾನ.

[ಈ ಟಿಪ್ಪಣಿಯನ್ನು ಕಳುಹಿಸಿದ ಬೆಂಗಳೂರು ಚಾಮರಾಜಪೇಟೆ ೩ ನೆ ರೋಡಿನಲ್ಲಿರುವ ಮಿ॥ ಎಂ ಸುಬ್ಬಣ್ಣನವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿರುತ್ತೇವೆ.]

ಬೆಂಗಳೂರಿನಲ್ಲಿ ಸುರಂಗದ ಅಪಾಯ

ಬೆಂಗಳೂರು ಸಿಟಿ ಚಾಮರಾಜಪೇಟೆ ೩ ನೆ ಬೀದಿಯಲ್ಲಿ ಅಂದರೆ ರೋಡು ಕೊನೆಯಲಿ ನಾನು ವಾಸವಾಗಿರುವ ಮನೆಗೆ ಎದುರು ರೋಡಿಗೆ ಉಭಯಕಡೆ ಕೋಣಾಕೃತಿಯುಳ್ಳ ಬಚ್ಚಲು ಸ್ಯಾನಿಟರಿ ಇಂಜನಿಯರ್ ಇಲಾಖೆ ಮಾರ್ಫತ್ತು ಕಾಮಗಾರಿ ಆಗುತ್ತಿದೆ. ಈ ಬಚ್ಚಲಿಗೆ ಎದುರು ಸಿಕ್ಕತಕ್ಕ ಕಲ್ಲು ಗುಂಡುಗಳನ್ನು ಸುರಂಗ ಹಾಕಿ ಒಡೆದು ತೆಗೆಯುವಂತೆ ಕಂಟ್ರಾಕ್ಟರಿಗೆ ಹುಕುಂ ಮಾಡಿರುವ ಪ್ರಕಾರ ೧೫ ದಿವಸದಿಂದ ತೆಗೆಯುತ್ತಿದ್ದಾರೆ. ನೆನ್ನೆ ಎಂಬ ೨೩ ನೆ ತಾ॥ ಹಗಲು ೨ ಘಂಟೆ ವೇಳೆ ಕೂಲಿಗಳು ಗುಂಡುಗಳಿಗೆ ಸುರಂಗ ಹಾಕಿ ಬ್ಲಾಸ್ಟ್ ಮಾಡಿದರು. ಆಗ್ಗೆ ಅಕ್ಕಬಾಜು ಮನೆಗಳವರಿಗೆ ಹೇಳಲಿಲ್ಲ. ಬ್ಲಾಸ್ಟ್ ಆದ ಕಲ್ಲು ಬಾಜು ಇರುವ ಸುಬ್ಬಯ್ಯನವರ ಮನೆಯ ಮೇಲೆ ಬಿದ್ದು, ಹೆಂಚು ಒಡೆದು ಒಳಗೆ ಊಟಮಾಡುತ್ತಿದ್ದ ಸದರಿ ಸುಬ್ಬಯ್ಯನವರ ಕುಟುಂಬ ೨ ತಿಂಗಳ ಮಗುವನ್ನು ಪಕ್ಕದಲ್ಲಿ ಮಲಗಿಸಿಕೊಂಡು ಇದ್ದರು. ಆ ಮಗು ಕಾಲಿಗೆ ಒಂದು ಅಂಗುಲ ದೂರದಲ್ಲಿ ಬಿತ್ತು. ಆ ತಾಯಿತಂದೆಗಳು ಘಾಬರಿಬಿದ್ದು ಊಟಬಿಟ್ಟು ಮಗುವನ್ನು ಎತ್ತಿಕೊಂಡು ಓಡಿಬಂದರು. ಅಷ್ಟರಲ್ಲಿ ಇನ್ನೂ ೧—೨ ಸುರಂಗ ಶಬ್ದದೊಡನೆ ಹಾರಿತು. ನಂತರ ನೆರೆಹೊರೆಯವರು ಕೂಗಿಕೊಳ್ಳುತ್ತಲೇ ಬಾಜು ಮನೆಯವರಾದ ನಾವೆಲ್ಲ ಹೋಗಿ ನೋಡಿದೆವು. ಕಲ್ಲು ಬಿಸಿಯಾಗಿತ್ತು. ಎಲೆಲಿ ಬಡಿಸಿದ ಅನ್ನ ಹಾಗೇ ಬಿಟ್ಟಿದ್ದರು. ಮಗುವು ಅಳುತ್ತಾ ಇತ್ತು. ನೋಡಿದರೆ ಬಿಸಿ ಕಲ್ಲಿನ ಹವಾ ತಗಲಿರಬಹುದೆಂದು ಯೋಚಿಸಿದೆವು. ಆದರೆ ದೇವರ ದಯದಿಂದ ಮಗುವಿಗೇ ಆಗಲಿ ತಾಯಿತಂದೆಗಳಿಗೇ ಆಗಲಿ ಏನೂ ಅಪಾಯವಾಗಲಿಲ್ಲ. ಅರ್ಧ ಅಂಗುಲ ಮುಂದಕ್ಕೆ ಆ ಕಲ್ಲು ಬಿದ್ದಿದ್ದರೆ ಮಗು ಉಳಿಯುತ್ತಿರಲಿಲ್ಲ. ಬ್ಲಾಸ್ಟ್ ಮಾಡುವಾಗ್ಗೆ ಕಂಟ್ರಾಕ್ಟರು ಮತ್ತು ಯಾರಾದರೂ ಒಬ್ಬ ಅಧಿಕಾರಿ ಹಾಜರ್ ಇದ್ದು ಬಾಜು ಮನೆಗಳಿಗೆ ಖಬರ್ ಕೊಟ್ಟರೆ ಒಳ್ಳೇದೆಂದು ಕೋರಿಕೆ.

ಅನ್ಯದೇಶ ವಾರ್ತೆಗಳು.

೮೩ ವರುಷ ಬದುಕಿದ್ದು ವಿಲಾಯತಿಯಲ್ಲಿ ಈಗತಾನೇ ಕಾಲವಾದ ಸರ್ ಛಾರ್ಲ್ಸ್ ಟೆನ್ನೆಂಟ್ ಎಂಬ ಪುರುಷನು ಪ್ರಖ್ಯಾತಿವಂತನೇ ಹೌದು. ಇವನ ಕಾರ್ಯಸಾಧನಾ ಶಕ್ತಿಯೂ ಜೀವನಸರಣಿಯೂ ಸಾಮಾನ್ಯವಾದವುಗಳಾಗಿರಲಿಲ್ಲ. ಒಂದು ಉಪ್ಪಿನ ಕಾರ್ಖಾನೆಯನ್ನು ನಡಿಸುತ್ತಾ, ಸ್ಪೇಯಿನ್ ರಾಜ್ಯದಲ್ಲಿ ತಾಂಬ್ರ ತೆಗೆಯುವ ಗಣಿ ಕಂಪನಿಯ ಮುಖ್ಯಸ್ಥನಾಗಿಯೂ ಇದ್ದನು. ಮೈಸೂರು ಸಂಸ್ಥಾನಕ್ಕೂ ಇವನ ಸಂಬಂಧವಿತ್ತು. ಕೋಲಾರದ ಗಣಿ ಕಂಪನಿಗಳ ಪೈಕಿ ಮೈಸೂರ್ ಮೈನ್ ಎಂಬ ಗಣಿ ಕಂಪನಿಗೆ ಈತನೇ ಅಧ್ಯಕ್ಷನಾಗಿದ್ದನು. ಆ ಗಣಿಯಲ್ಲಿ ಚಿನ್ನ ಸಿಕ್ಕುವುದಿಲ್ಲವೆಂದು ಹೇಳಿ ಆ ಕಂಪನಿಯವರು ಕಾರ್ಯವನ್ನೇ ನಿಲ್ಲಿಸಿ ಬಿಟ್ಟಾಗ್ಗೆ ಈತನ ಧೈರ್ಯಸಾಮರ್ಥ್ಯಾದಿಗಳೇ ಆ ಕಂಪನಿಯನ್ನು ಉಳಿಸಿ, ಲೋಕಕ್ಕೆಲ್ಲಾ ಒಳ್ಳೇ ಹೆಸರು ಕೊಟ್ಟವು. ದ್ರವ್ಯಸಂಪಾದನೆಯೇ ಆತನ ಮುಖ್ಯ ಉದ್ದೇಶವಾಗಿರಲಿಲ್ಲ. ಒಳ್ಳೊಳ್ಳೇ ಪುಸ್ತಕಗಳನ್ನು ಅನೇಕವಾಗಿ ಓದಿ ಜ್ಞಾನಸಂಪಾದನೆ ಮಾಡಿಕೊಂಡಿದ್ದನಲ್ಲದೆ ತನ್ನ ಸುಂದರವಾದ ಭವನದಲ್ಲಿ ಬಹು ನೇತ್ರಾನಂದಕರಗಳಾದ ನಾನಾ ಚಿತ್ರಗಳನ್ನು ಕಟ್ಟಿ ಅವುಗಳನ್ನು ನೋಡುವುದರಲ್ಲಿ ಸಂತೋಷಪಡುತ್ತಿದ್ದನು. ಟೆನ್ನೆಂಟನು ತಾನು ಸಂಪಾದಿಸಿದ ಮಹದೈಶ್ವರ್ಯವನ್ನು ಸತ್ಕಾರ್ಯಗಳಿಗೂ ಬಡಬಗ್ಗರ ಸಂರಕ್ಷಣೆಯೇ ಮೊದಲಾದ ನಾನಾ ಧರ್ಮಕಾರ್ಯಗಳಿಗೂ ಹಂಚಿ ಕೊಡುವುದರಲ್ಲಿ ವಿಶೇಷ ಸಂತೋಷಪಡುವವನಾಗಿಯೂ ಇದ್ದನು. ಈ ಪುಣ್ಯಪುರುಷನಿಗೆ ಮೊದಲನೆಯ ಹೆಂಡತಿಯಲ್ಲಿ ೧೨ ಮಂದಿ ಮಕ್ಕಳೂ ಎರಡನೆಯ ಹೆಂಡತಿಯಲ್ಲಿ ನಾಲ್ವರು ಮಕ್ಕಳೂ ಜನಿಸಿದರು. ಈತನ ಮಗಳೇ ವಿಲಾಯತಿ ರಾಜ್ಯದ ಖಜಾನೆ ಅಧ್ಯಕ್ಷರಾದ ಮಿ॥ ಆಸ್ಕ್ವಿತ್ ಎಂಬ ದೊಡ್ಡ ಅಧಿಕಾರಿಯ ಹೆಂಡತಿ. ಅವನ ಅಂತ್ಯಕಾಲದಲ್ಲಿ ಹಿರೀ ಮಗನಿಗೆ ೫೫ ವರುಷ, ಕಿರೀ ಮಗನಿಗೆ ೨ ವರುಷ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಮೊರ್ರಲ್ ಎಂಬುವನು ಸ್ಪೇಯಿನ್ ರಾಜ್ಯದ ರಾಜಧಾನಿಯಲ್ಲಿ ನೂತನ ರಾಜದಂಪತಿಗಳನ್ನು ಕೊಲ್ಲಬೇಕೆಂದು ಅವರು ಉತ್ಸವದಿಂದ ಬರುತ್ತಿದ್ದಾಗ ಅವರ ಸಾರೋಟಿಗೆ ಗುರಿಯಿಟ್ಟು ಒಂದು ಮದ್ದಿನ ಗುಂಡನ್ನು ಎಸೆದದ್ದೂ ದೈವಕೃಪೆಯಿಂದ ರಾಜದಂಪತಿಗಳು ಅಪಾಯವಿಲ್ಲದೆ ತಪ್ಪಿಸಿಕೊಂಡದ್ದೂ, ಆ ಗುಂಡು ಒಡೆದು ಇಪ್ಪತ್ತಾರುಮಂದಿ ಅಧಿಕಾರಿಗಳೂ ಪ್ರಜೆಗಳೂ ನಷ್ಟವಾದದ್ದೂ, ಕಡೆಯಲ್ಲಿ ಅವನು ತನ್ನನ್ನು ಹಿಡಿಯುವುದಕ್ಕೆ ಬಂದ ಪೋಲೀಸಿನವರನ್ನು ಕೊಂದು ತಾನೂ ಆತ್ಮಹತ್ಯ ಮಾಡಿಕೊಂಡದ್ದೂ ನಮ್ಮ ವಾಚಕರಿಗೆ ತಿಳಿದಿದೆಯಷ್ಟೆ. ಆ ರಾಜಕಂಟಕನ ಪೂರ್ವೋತ್ತರವನ್ನು ಸ್ವಲ್ಪ ವಿವರಿಸುವೆವು. ಅವನು ಅನಾರ್ಕಿಸ್ಟ್ ಎಂಬ ಗೋಪ್ಯ ಸಂಘಕ್ಕೆ ಸೇರಿದ್ದನು. ಈ ಗೋಪ್ಯಸಂಘದವರ ಉದ್ದೇಶವೂ ಕಾರ್ಯಗಳೂ ಯಾವುವೆಂದು ವಾಚಕರು ತಿಳಿದುಕೊಳ್ಳಬೇಕಾಗಿದೆ.

ಈ ಸಂಘದ ಶಾಖೆಗಳು ಯೂರೋಪಿನ ಎಲ್ಲಾ ರಾಜ್ಯಗಳಲ್ಲೂ ಅಮೇರಿಕದಲ್ಲೂ ಇರುತ್ತವೆ. ಈಗಿನ ರಾಜ್ಯಭಾರಕ್ರಮಗಳೆಲ್ಲಾ ಬಹಳ ಕೆಟ್ಟುಹೋಗಿರುವ ಕಾರಣ ಅಂಥಾ ಕ್ರಮಗಳಿಗೆ ಕಾರಣರಾದ ರಾಜರುಗಳನ್ನೂ ರಾಜ್ಯಾಧಿಕಾರಿಗಳನ್ನೂ ಕೊಂದುಹಾಕಿ ನಿರ್ಮೂಲ ಮಾಡಿ, ನ್ಯಾಯವೂ ನಿಷ್ಪಕ್ಷಪಾತತೆಯೂ ಉಳ್ಳ ಧರ್ಮರಾಜ್ಯವನ್ನು ಸ್ಥಾಪನೆಮಾಡಬೇಕೆಂಬುವುದೇ ಈ ಗೂಢಸಂಘದವರ ಉದ್ದೇಶವಾಗಿರುತ್ತದೆ. ಐಶ್ವರ್ಯವಂತರ ದೆಸೆಯಿಂದ ಬಡಬಗ್ಗರ ಕಷ್ಟನಷ್ಟಗಳು ಅಪಾರವಾಗಿವೆ ಎಂತಲೂ, ಬಲಿಷ್ಟರು ಬಲಹೀನರನ್ನು ತುಳಿಯುತ್ತಿದ್ದಾರೆಂತಲೂ, ದೊರೆಗಳೂ ಮ್ಯಾಜಿಸ್ಟ್ರೇಟರೂ ಈಗಿನ ಅನ್ಯಾಯಗಳನ್ನು ತಮ್ಮ ಕ್ರೂರತನದಿಂದ ಪೋಷಿಸಿ ವೃದ್ಧಿಪಡಿಸುತ್ತಿದ್ದಾರೆಂತಲೂ ಆದುದರಿಂದಲೇ ಅವರನ್ನೆಲ್ಲಾ ನಾಶಪಡಿಸಬೇಕೆಂತಲೂ ಈ ಸಂಘದವರು ಹೇಳುತ್ತಾರೆ. ಈ ಕ್ರೂರ ಸಂಘಕ್ಕೆ ಸೇರಿದವರೇನೂ ಅವಿದ್ಯಾವಂತರಲ್ಲ. ಅವರಲ್ಲಿ ಅನೇಕಮಂದಿ ಚೆನ್ನಾಗಿ ಓದಿದವರು, ಬಹಳ ಐಶ್ವರ್ಯವಂತರಾಗಿಯೂ ಇರುತ್ತಾರೆ. ಗಂಡಸರು ಮಾತ್ರ ಈ ಸಂಘಕ್ಕೆ ಸೇರಿರುತ್ತಾರೆಂದು ತಿಳಿಯಬಾರದು, ಬಹುಮಂದಿ ಸ್ತ್ರೀಯರೂ ಮೆಂಬರುಗಳಾಗಿರುವರು. ಆದರೇನು? ಪ್ರಪಂಚದಲ್ಲಿ ನಡೆಯುತ್ತಿರುವ ಅನ್ಯಾಯಗಳೂ ಕಷ್ಟನಿಷ್ಠುರಗಳೂ ಈ ಸಂಘದವರ ಘೋರ ಕೃತ್ಯಗಳಿಂದ ಎಂದಿಗೂ ನಿವಾರಣೆಯಾಗಲಾರವು. ತಾಳ್ಮೆ, ಸಹನಗುಣ, ದಯೆ, ಪ್ರೀತಿ, ಸತ್ಯತೆ, ಇವುಗಳ ದೆಸೆಯಿಂದಲೇ ನಮ್ಮ ಮಾನುಷವರ್ಗವನ್ನು ಉತ್ತಮಸ್ಥಿತಿಗೆ ತರಬೇಕಾಗಿರುವುದು.

ನಮ್ಮ ಪ್ರಕೃತ ಸ್ಥಿತಿಯೇನು?

ಕೆಲವು ದಿನಗಳ ಕೆಳಗೆ ಬೊಂಬಾಯಿ ಹೈ ಕೋರ್ಟಿನ ಜಡ್ಜಿಗಳಾದ ಮಿ॥ ಚಂದಾವರ್ಕರ್‌ಯವರು ಬೆಂಗಳೂರಿಗೆ ಬಂದಿರುವಾಗ್ಯೆ ಮಿ॥ ರಾ॥ ಸಾಹುಕಾರ್ ದೊಡ್ಡಣ್ಣನವರು ಕಟ್ಟಿಸಿರುವ ವಿಸ್ತಾರವಾದ ಉಪನ್ಯಾಸಮಂದಿರದಲ್ಲಿ ಪಟ್ಟಣವಾಸಿಗಳಿಗೆ ಉಪನ್ಯಸಿಸಿದರು. ಅವರು ಹೇಳಿದ ಮಾತುಗಳಲ್ಲಿ ಒಂದನ್ನು ಬೆಂಗಳೂರಿನ ವಿದ್ಯಾವಂತರಲ್ಲಿ ಒಬ್ಬರಾದ ಮಿ॥ ಕೆ ಶ್ರೀನಿವಾಸರಾವ್ ಎಂಬುವರು ವಿಷಯೀಕರಿಸಿ ಕಳೆದ ೨೧ ನೇ ತಾರೀಕಿನಲ್ಲಿ ಅದೇ ಮಂದಿರದಲ್ಲಿ ಮನೋಗತವಾಗುವಂತೆ ಬಹು ಪ್ರೌಢಿಮೆಯಿಂದ ಉಪನ್ಯಾಸ ಮಾಡಿದರು. "ನಮ್ಮ ಪ್ರಕೃತ ಸ್ಥಿತಿಯೇನು" ಎಂಬ ಪ್ರಶ್ನೆಗೆ ಸದುತ್ತರವನ್ನು ಪಡೆಯಬೇಕಾದರೆ "ನಮ್ಮ ಗುರಿಯೇನು" ಎಂಬ ಮತ್ತೊಂದು ಪ್ರಶ್ನೆಯನ್ನು ಮೊದಲು ವಿಚಾರಿಸತಕ್ಕದ್ದು ಎಂದು ಉಪನ್ಯಾಸಕರು ಹೇಳಿದರು. ಅವರ ಮುಖ್ಯಾಭಿಪ್ರಾಯವೇನಂದರೆ—ಸಮಾಜವು ಅತ್ಯುತ್ಕೃಷ್ಟ ಸ್ಥಿತಿಯನ್ನು ಪಡೆಯಬೇಕೆಂಬುದೇ ಸರ್ವರ ಅಭಿಮತವು. ಹಾಗೆಂದರೆ ಸಮಾಜದಲ್ಲಿ ಈಗ ಕಾಣುತ್ತಿರುವ ದೋಷಗಳೆಲ್ಲಾ ನಿರ್ನಾಮವಾಗಬೇಕು. ಸರ್ವರೂ ದೇವರನ್ನು ಸಕಲರ ತಂದೆಯೆಂದೂ ಆತನ ಮಕ್ಕಳಾದ ಸಕಲ ಮನುಷ್ಯರೂ ಸಹೋದರರೆಂದೂ ತಿಳಿಯಬೇಕು. ಮನುಷ್ಯರು ಕಲ್ಪಿಸಿ ಮಾಡಿರುವ ಜಾತಿ ಮತಭೇದಗಳೆಲ್ಲಾ ಕಡಿದು ಹೋಗಿ ಸರ್ವ ಮನುಷ್ಯರೂ ಸೋದರಭಾವದಲ್ಲಿ ಅನ್ಯೋನ್ಯರಾಗಬೇಕು. ಲೋಕವ್ಯವಹಾರವನ್ನು ತ್ಯಜಿಸಿ ಧ್ಯಾನಾಸಕ್ತರಾದವರು ಈ ಮಹೋದ್ದೇಶವು ನೆರವೇರುವದಕ್ಕೆ ಸಹಾಯವಾದ ಉಪಕರಣಗಳಾಗಿದ್ದಾರೆ. ತಪಸ್ವಿಗಳಿಂದ ಗುಣವರ್ಧನೆಯುಂಟಾಗುತ್ತದೆ. ಸೂರ್ಯನು ಸಮುದ್ರದಿಂದ ನೀರನ್ನು ಆವಿಯ ರೂಪವಾಗಿ ತೆಗೆದುಕೊಂಡು ಪುನಃ ಮಳೆಯ ರೂಪವಾಗಿ ಅದನ್ನು ಭೂಲೋಕಕ್ಕೆ ಸುರಿಸುವಂತೆಯೇ ತಪೋಧನರು ಆರ್ಜಿಸಿದ ದೇವಜ್ಞಾನವೆಂಬ ಪುಣ್ಯವನ್ನು ಮಾನವರಿಗೆ ದಾನಮಾಡಿ ಉತ್ತಮಾಭಿಪ್ರಾಯಗಳನ್ನು ನೆಲೆಗೊಳಿಸುತ್ತಾರೆ. ಸಮಾಜಸ್ಥಿತಿಯು ಉತ್ಕೃಷ್ಟವಾಗಬೇಕಾದರೆ ಸಮಾಜದಲ್ಲಿರುವ ಪ್ರತಿಯೊಬ್ಬರೂ ಉತ್ಕೃಷ್ಟಸ್ಥಿತಿಯನ್ನು ಪಡೆಯಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳಲ್ಲಿ ತಾವು ನಿಜವೆಂದೂ ಯೋಗ್ಯವೆಂದೂ ನಿಶ್ಚಯಪೂರ್ವಕವಾಗಿ ತಿಳಿದಿರುವ ಕಾರ್ಯಗಳನ್ನು ನಡಸುವದರಲ್ಲಿ ಯಾವ ನಿರ್ಬಂಧಕ್ಕಾದರೂ ಭಯಪಡದಂಥ ಸ್ವತಂತ್ರರಾಗುವ ಕಾಲಕ್ಕೆ ಸಾಮಾಜಿಕ ಕಾರ್ಯವನ್ನು ನಿರ್ವಹಿಸತಕ್ಕ ಸ್ವಾತಂತ್ರ್ಯವನ್ನು ಪಡೆಯಲು ಯೋಗ್ಯರಾಗಿರುತ್ತಾರೆ. ಸಮಾಜಸಂಸ್ಕರಣ ಸ್ಥಿತಿಯು ಲಕ್ಷ್ಯದಲ್ಲಿ ಸೇರಿಲ್ಲದ ನದಿಯಂತಿರುತ್ತದೆ. ಯಾವ ಸ್ಥಳದಲ್ಲಿ ನೋಡಿದರೂ ವಿದ್ಯಾವಂತರಿದ್ದಾರೆ. ಅವರು ಸಮಾಜಸಂಸ್ಕರಣವನ್ನು ಮನಮುಟ್ಟಿ ನಡಸತಕ್ಕಂಥ ಆಸಕ್ತರು ಮಾತ್ರ ದೊರಕುವುದಿಲ್ಲ. ದೇಶದಲ್ಲಿ ವೃದ್ಧಿಯು ಸ್ವಲ್ಪ ಕಂಗೊಳಿಸುತ್ತಿದೆ. ಆದರೆ ವಿದ್ಯಾದಾನದಿಂದ ಯಾವ ಫಲವು ಆಗಬೇಕೋ ಅದು ಮಾತ್ರ ಇಲ್ಲ. ವಿದ್ಯೆಯು ಒಂದು ವ್ಯವಸಾಯವು ಒಳ್ಳೆಯದುಂಟು. ಪ್ರಜಾಭಿವೃದ್ಧಿಗೆ ಅವಶ್ಯಕವಾದ ಕಾರ್ಯಸಾಧನಾಸಕ್ತಿಯೂ ದೃಢಚಿತ್ತವೂ ಮಾತ್ರ ಕಾಣಬರುವುದಿಲ್ಲ. ಇದು ಸ್ವಭಾವಕ್ಕೆ ಏರುಪೇರಾದ ಸ್ಥಿತಿಯಾದದರಿಂದ ನಮ್ಮ ದೇಶೀಯರ ಪ್ರಕೃತಸ್ಥಿತಿಯು ವೃದ್ಧಿಯಾಗಲಿಲ್ಲ. ಇದ್ದಲ್ಲಿಯೇ ಇರುತ್ತದೆ. ಅವರು ತಮ್ಮ ಮುಂದೆ ಇಟ್ಟುಕೊಂಡು ನಡೆಯಬೇಕಾದ ಗುರಿಯನ್ನು ಮುಟ್ಟುವದಕ್ಕೆ ಇನ್ನೆಷ್ಟು ದೂರವಿರುವದೋ ಅದನ್ನು ಗೊತ್ತಾಗಿ ಹೇಳುವದಕ್ಕಾಗದು. ವೃದ್ಧಿಸ್ಥಿತಿಯನ್ನು ಹೊಂದುವದರಲ್ಲಿ ಇವರು ಪ್ರಕಟಿಸುತ್ತಿರುವ ಆಲಸ್ಯಭಾವವೇ ಇವರ ಬಲವನ್ನು ಕುಂದಿಸುವದಾಗಿದೆಯೋ ಏನೋ ಹೇಳಲಾಗದು. ಹೀಗೆಂದು ಉಪನ್ಯಾಸಕರು ಅತಿ ಗಾಂಭೀರ್ಯಭಾವದಿಂದ ಪ್ರಸಂಗಿಸಿದ ಬಳಿಕ ಅಗ್ರಾಸನರಾಗಿದ್ದ ಮಿ॥ ಎನ್ ಮಾಧವರಾಯರವರು ನಿಂತು ಸಭಿಕರ ಪಕ್ಷವಾಗಿ ಉಪನ್ಯಾಸಕರನ್ನು ವಂದಿಸಿ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದರು. ಅದರ ಸಾರಾಂಶವೇನಂದರೆ—ಉಪನ್ಯಾಸಕರಂಥ ಆಸಕ್ತರು ಆಗಾಗ್ಗೆ ಇಂಥ ಉಪನ್ಯಾಸಗಳನ್ನು ಮಾಡಿ ಜನರಲ್ಲಿರುವ ಆಲಸ್ಯಭಾವವನ್ನು ತೊಲಗಿಸಿ ಆಸಕ್ತಿಯನ್ನು ಹುಟ್ಟಿಸುವದು ಅವಶ್ಯಕವಾಗಿದೆ. ಉಪನ್ಯಾಸಕರು ಹೇಳಿದ ಹಾಗೆ ಸ್ವಂತ ಮನೆಯಲ್ಲಿ ಸಾಮಾಜಿಕವಾದ ಮತ್ತು ಧರ್ಮವಿಚಾರವಾದ ಕಾರ್ಯಗಳನ್ನು ನಡಸುವದರಲ್ಲಿ ಸಂಸ್ಕರಣ ಮಾಡಿಕೊಳ್ಳದೆ ಹೋದರೆ ಅತಿ ವಿಸ್ತಾರವಾದ ರಾಜ್ಯಭಾರದ ಕರ್ತವ್ಯಗಳನ್ನು ನಡಸುವ ಸಾಮರ್ಥ್ಯವು ಬರಲಾರದು. ಸಮಾಜ ಸಂಸ್ಕರಣವನ್ನು ಮಾಡಿಕೊಳ್ಳುವದಕ್ಕೆ ನಮ್ಮ ಜನಗಳಲ್ಲಿ ತಕ್ಕಷ್ಟು ಆಸಕ್ತಿಯಿಲ್ಲವೆಂದು ಹೇಳಿದುದನ್ನು ಒಪ್ಪುವದಕ್ಕೆ ಅಡ್ಡಿಯಿಲ್ಲ. ನಮ್ಮ ಸಾಮಾಜಿಕ ವಿದ್ಯಮಾನಗಳಲ್ಲಿ ಬಹಳ ದೋಷಗಳುಂಟಾಗಿವೆಯೆಂದು ಸಕಲರೂ ಒಪ್ಪಿಕೊಳ್ಳುತ್ತಾರೆ. ಹೀಗಿರುವದರಿಂದ ದೋಷಾಪನಯನವೆಂಬ ಮಹಾಕಾರ್ಯವನ್ನು ಸಾಧಿಸುವದಕ್ಕೆ ಒಂದುಪಕರಣವು ದೊರಕಿದಂತಾಯಿತು. ಈಗ ಮಾಡಬೇಕಾಗಿ ಉಳಿದಿರುವ ಕಾರ್ಯವು ಯಾವದೆಂದರೆ, ಸರ್ವಸಾಮಾನ್ಯವಾಗಿ ಎಲ್ಲರನ್ನೂ ವಿದ್ಯಾವಂತರನ್ನಾಗ ಮಾಡತಕ್ಕದ್ದೇ. ಮುಖ್ಯವಾಗಿ ನಮ್ಮ ಸ್ತ್ರೀಯರು ವಿದ್ಯಾವತಿಯರಾಗುವಂತೆ ಮಾಡಬೇಕು. ಈ ಕಾರ್ಯಗಳನ್ನು ನೆರವೇರಿಸುವದಕ್ಕೆ ನಮ್ಮಲ್ಲಿ ಯಾರು ಎಷ್ಟು ಕಾಲವನ್ನು ವಿನಿಯೋಗಿಸಿದರೂ ಸಾಲದು. ಪಾಶ್ಚಾತ್ಯರೂ ಈ ದೇಶೀಯರೂ ಪರಸ್ಪರಾನುಬಂಧವನ್ನು ಹೆಚ್ಚುಹೆಚ್ಚಾಗಿ ದೃಢಪಡಿಸಿಕೊಳ್ಳುವ ಕಾರ್ಯವನ್ನು ಕುರಿತು ಉಪನ್ಯಾಸಕರು ಹೇಳಿದ್ದನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ಈ ಪರಸ್ಪರಾನುರಾಗವನ್ನು ದೊರಕಿಸಿಕೊಡುವದಕ್ಕೆ ಯಾವಾತನು ಸಹಾಯಕನಾಗುವನೋ ಅವನು ಈ ದೇಶೀಯನಾಗಲಿ ಪರದೇಶೀಯನಾಗಲಿ ಇಂಡಿಯಾಕ್ಕೂ ಇಂಗ್ಲಾಂಡಿಗೂ ಸಹ ಮಹೋಪಕಾರಿಯಾಗಿದ್ದಾನೆಂದು ನಾನು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಬಾಲವಿತಂತುಗಳಾಗಿ ಕಷ್ಟಪಡುತ್ತಿರುವ ಸ್ತ್ರೀಜನರ ಕಷ್ಟಪರಿಹಾರಾರ್ಥವಾಗಿ ಯಾವ ಏರ್ಪಾಡನ್ನು ಮಾಡಿದರೂ ಅದು ನಮ್ಮೆಲ್ಲರ ಕೃತಜ್ಞತಾಪೂರ್ವಕವಾದ ಮೆಚ್ಚುಗೆಗೆ ಯೋಗ್ಯವಾಗಿರುತ್ತದೆಂದು ನಾನು ಹೇಳಬೇಕಾದುದಿಲ್ಲ.

ಮೇಲೆ ಕಂಡ ವಿಷಯವನ್ನು ಅದನ್ನು ಕುರಿತು ಮಿ॥ ಶ್ರೀನಿವಾಸರಾಯರವರು ಉಪನ್ಯಸಿಸಿ ಮುಗಿಸಿದ ರೀತಿಯನ್ನೂ ನೋಡಿದಲ್ಲಿ ನಮಗೆ ವಿಷಾದವುಂಟಾಗುತ್ತದೆ. ನಮ್ಮ ದೇಶೀಯರ ಪ್ರಕೃತಸ್ಥಿತಿಯು ಶೋಚನೀಯವಾದದ್ದೆಂದು ದೇಶಬಾಂಧವರು ಒಪ್ಪಿಕೊಳ್ಳುವದು ನ್ಯಾಯವಷ್ಟೆ. ಅದನ್ನು ಸರಿಪಡಿಸಿಕೊಳ್ಳುವ ಮಹಾ ಕಾರ್ಯದಲ್ಲಿ ನಮ್ಮವರು ಆಲಸ್ಯವನ್ನು ತಾಳಿರುವದೂ ವಿಷಾದಕರವಾದದ್ದೇ. ವಾಗಾಡಂಬರವನ್ನು ಬಿಟ್ಟು ಕಾರ್ಯತಃ ಸತ್ಯಾರ್ಥಿಗಳೆಂದು ಜನರು ವರ್ತಿಸುವ ಕಾಲವು ಯಾವಾಗ ಬಂದೀತೋ ಎಂದು ದೇಶಹಿತವನ್ನು ಬಯಸುವವರೆಲ್ಲರೂ ಪರಿತಪಿಸುವರು. ಮಾನುಷಕಲ್ಪನೆಗಳಿಂದುಂಟಾಗಿರುವ ಜಾತಿ ಭೇದವು ಕೆಟ್ಟದ್ದಾದರೆ ಅದನ್ನು ವರ್ಜಿಸುವಷ್ಟು ಸಾಮರ್ಥ್ಯವಿಲ್ಲದೆ ಸಂಕಟಪಡಬೇಕಾದ ಕಾರಣವೇನು? ತಾನಾಡಿದ ಹಾಗೆಯೂ ತಾನು ನಿಜವೆಂದು ನಂಬಿದ ಹಾಗೆಯೂ ಹೃದಯಪೂರ್ವಕವಾಗಿ ನಡೆಯುವದಕ್ಕೆ ಆಗುವದೇ ಇಲ್ಲವೆಂದು ಹೇಳೋಣವೋ? ಎಷ್ಟುಮಾತ್ರಕ್ಕೂ ಇಲ್ಲ. ಇಂಥಿಂಥಾದ್ದು ದೋಷವೆಂದು ತಿಳಿಯತಕ್ಕ ಜ್ಞಾನವನ್ನು ಯಾವ ಭಗವಂತನು ಕೊಟ್ಟನೋ ಆತನೇ ಆ ದೋಷವನ್ನು ಕಳೆದುಕೊಳ್ಳತಕ್ಕ ಸಾಮರ್ಥ್ಯವನ್ನೂ ಕೊಡನೇ? ಆ ಸಾಮರ್ಥ್ಯವನ್ನು ಕೊಡೆಂದು ಮನಃಪೂರ್ವಕವಾಗಿ ಭಗವಂತನನ್ನು ಎಂ

ವರೂ ನೇಡಿಕೊಂಡದ್ದುಂಟೇ ? 'ಬೇಡಿಕೊಳ್ಳಿರಿ ಹೊಂದುವಿರಿ' ಎಂದು ಯೇಸುಸ್ವಾಮಿಯು ವಾಗ್ದಾನ ಮಾಡಿದ್ದನ್ನು ದೇಶಹಿತಾರ್ಥಿಗಳೆಲ್ಲರೂ ಜ್ಞಾಪಿಸಿ ಫಲವನ್ನು ಪಡೆಯುವರೆಂದು ನಾವು ಹಾರೈಸುತ್ತೇವೆ. ಫಲವನ್ನು ಪಡೆಯುವದಕ್ಕೆ ಇದೊಂದೇ ಮಾರ್ಗವೆಂದು ನಾವು ದೃಢವಾಗಿ ತಿಳಿದಿದ್ದೇವೆ

ತಾಲ್ಲೋಕು ವರ್ತಮಾನಗಳು.

ಹರಿಹರ.—ಈ ಟವ್ವನಲ್ಲಿ ಕಾಲರಾ ತಲೆದೋರಿ ಈಚೆಗೆ ಸಮಾಧಾನವಾಗಿದೆ. ಕೆಲವು ಗ್ರಾಮಗಳಲ್ಲಿ ಬೀಜ ಬಿತ್ತಲಾರಂಭವಾಗಿದೆ ಕೆಲವು ಕಡೆ ಮಳೆಯೇ ಇಲ್ಲ. ಧಾನ್ಯಗಳ ಧಾರಣೆ ಈಗಲೇ ಕ್ಷಾಮ ತಲೆದೋರುವಂತೆ ಇದೆ —ಇಲ್ಲಿ ಕೆಲವು ಕಂಭಗಳು ಮಾತ್ರ ರಾತ್ರಿ ಕಾಲದಲ್ಲಿ ದೀಪ ಹೊತ್ತುಕೊಂಡು ಇರುತ್ತವೆ. ಉಳಿದ ಕಂಭಗಳು ಹಗಲೂ ರಾತ್ರಿ ಬರೇ ಲಾಂದ್ರಗಳನ್ನು ಹೊತ್ತಿರುವವು —ಇಲ್ಲಿನ ಸಂತೆಯಲ್ಲಿ ವರ್ತಕರ ಅಳತೆ ಸೇರುಗಳನ್ನು ಬಲಾತ್ಕಾರವಾಗಿ ಕಿತ್ತುಕೊಂಡು ವ್ಯಾಪಾರವನ್ನು ನಿಲ್ಲಿಸಿ ಪುನಃ ಸಾಯಂಕಾಲ ಯಾಕೋ ವಾಪಸ್ ಕೊಟ್ಟಂತೆ ಕಾಣುತ್ತೆ ಇದು ಬಡಬಗ್ಗರಿಗೆ ತುಂಬಾ ಕಷ್ಟ ಮತ್ತು ನಷ್ಟ. ನಿರಕ್ ಸೇರು ಮಾಡಿಸಿ ತರಿಸುವದಾಗಿ ಸರ್ಕಾರದವರು ವರ್ತಕರಿಂದ ಈ ಮೊದಲೆ ಹಣ ಬಲವಾಡಿಕೊಂಡು ಸರಿಯಾದ ಅಳತೆ ಸೇರು ಕೊಡದ ಬಟ್ಟಗಳಿಗೆ ಮೇಲಕ್ಕೆ ಬರೆದಿರುವಂತೆ ಖಂಡಿತ ವರ್ತಮಾನವಿರುತ್ತೆ. ಪದೇ ಪದೇ ಈ ರೀತಿ ವ್ಯಾಪಾರಕ್ಕೆ ತೊಂದರೆ ಬರುವದು. ಬಡವರಿಗೆ ಕಷ್ಟವೆಂದು ಪ್ರಭುಗಳು ಊಹಿಸಿ ಕ್ರಮಪಡಿಸಿದರೆ ಉತ್ತಮ. ಪರ್ವ ೧೯ ನೇ ಸೋಮವಾರಾಗಿ ಕಾಲ್ನಡೆ ಇಲ್ಲದಂತೆ ಬರುತ್ತಿದ್ದ ತುಂಗಭದ್ರಾ ಪ್ರವಾಹವು ತಾ ೨೪ ಅಪರೂ ನದಿಯಲ್ಲಿ ನೀರು ಕ್ಷೀಣಿಸಿ [illegible] ನಡೆಯುವಷ್ಟು ಇಳಿದಂತೆ ತೋರುತ್ತೆ

ದೊಡ್ಡಬಳ್ಳಾಪುರ —ಇಲ್ಲಿ ಕೆಲ ದಿನಗಳಿಂದ ಮಳೆ ಇಲ್ಲ. ಧೂಳಿ [illegible] ಸರ್ಕಾರ [illegible] ವರ್ಗವಾಗಿದೆ. [illegible] ಇಲ್ಲಿಗೆ ಬರುವುದಿತ್ತು. ಅವರಿಗೂ ಪ್ರಿಂಟ್ [illegible] ವರ್ಗವಾಯಿತು. ಇವರು ನಮ್ಮ ಅಮಲ್ದಾರರೂ ಈ ತಾಲ್ಲೋಕಿನ [illegible] ಕಂಡಾಯ ರೆವಿನ್ಯೂ [illegible] ಸರ್ಕಾರದವ [illegible] ಬಡ ಜನಗಳಿಗೆ ತುಂಬಾ ಉಪಕಾರವಾಗುತ್ತೆ —ಇಲ್ಲಿ [illegible] ಪ್ಲೇಗ್ ರೋ [illegible] ಬರುತ್ತಲಿವೆ ದೊಡ್ಡ ದೊಡ್ಡ [illegible] ತಮ್ಮ ಗುರುತ್ವವನ್ನು ಅಲ್ಲಿಯೂ ತೋರಿಸುತ್ತಿರುವ [illegible] ಅಷ್ಟು ಅಲ್ಲಿಗೆ [illegible] ಇದು ಬಾರಿ [illegible] ಈಗ ೭—೮ ವರ್ಷಗಳಿಂದ ಹಳ್ಳಿಹಳ್ಳಿಗಳ ಸಂತೆಗಳಲ್ಲೂ [illegible] ಬಂದಿದೆ ಇದರ ಕಾರಣ ಪ್ಲೇಗು ಬಂದ ದಿನದಿಂದ [illegible] ಕೆಲವರೂ, ಸುಂಕ ತೆಗೆಯುವದರಿಂದ ಹೀಗಾಯಿತು ಎಂತ ಕೆಲವರೂ ಹೇಳುತ್ತಾರೆ ಇದರ ನಿಜಸ್ಥಿತಿಯನ್ನು ಸರ್ಕಾರದವರು ವಿಚಾರಿಸಿ ಅದನ್ನು ಮುಂಚಿನ ಅಭಿವೃದ್ಧಿಸ್ಥಿತಿಗೆ ತಂದರೆ ಬಡವರಿಗೆ [illegible] ಅನುಕೂಲವಾಗುತ್ತೆ

ಯಲವಂಕ.—ಈ ಗ್ರಾಮದಲ್ಲಿ ಕೆಲವು ದಿನಗಳ ಕೆಳಗೆ ಮಳೆ ಬಿತ್ತು ಆದಾಗ್ಯೂ ಕೆರೆ ಕುಂಟೆಗಳಿಗೆ ನೀರು ಇಲ್ಲ ಭೂಮಿ ಉಳುವದಕ್ಕೆ ಸಹಾ [illegible] ದನಕರುಗಳಿಗೂ ಜನಗಳಿಗೂ ಕುಡಿಯುವದಕ್ಕೆ ನೀರು ಸಿಕ್ಕುವದೇ ಎಂಬೊ ಪ್ರಯಾಸ ಭಾರಿಯಾಗಿ ಇರುತ್ತಾ ಇದೆ ಕೆಲವು ದಿನಗಳ ಕೆಳಗೆ ಹಗಲಿನಲ್ಲೇ ಬೀದಿಯಲ್ಲಿ ಮನೆಗೆ ಬೆಂಕಿಬಿದ್ದು ೩—೪ ಮನೆಗಳು ನಾಶವಾದವು ಇದೇ ರೀತಿ ಪ್ರತಿ ವರುಷವೂ ತಪ್ಪದೆ ಬೆಂಕಿಬಿದ್ದು ಮನೆಗೇ ಬೀಳುತ್ತಾ ಇರಲು ಕಾರಣವೇನೋ ತಿಳಿಯಲಿಲ್ಲ ಅಲ್ಲದೆ ಕಳ್ಳರ ಕಾಟ ಹೇರಳವಾಗಿರುವದು ಪ್ರತಿದಿನದ ರಾತ್ರಿಯೂ ತಪ್ಪದೆ ೨—೩ ಮನೆಗಳಿಗೆ ಕನ್ನಾ ಹಾಕುವದು, ಒಡವೆವಸ್ತುಗಳನ್ನು ಕದಿಯುವದು, ಹೊಂಚುಹಾಕುವದು, ನಡೆಯುತ್ತಾ ಇದೆ ಪುರೋಹಿತ ನಾರಣಪ್ಪನವರು, ವೆಂಕಟೇಶಯ್ಯನವರು ಇನ್ನೂ ಕೆಲವರು ತಮ್ಮಲ್ಲಿದ್ದ ನಗನಾಣ್ಯಗಳನ್ನು ಅವರಿಗೆ ಒಪ್ಪಿಸಿಬಿಟ್ಟರು ಪೋಲೀಸಿನವರು ಸಂದಿ ಜನಗಳು ಉಸ್ತುವಾರಿ ಮಾಡುತ್ತಲೂ ಜನಗಳಿಗೆ ಎಚ್ಚರಿಸುತ್ತಲೂ ಕೂಗುತ್ತಲೂ ಈ ಮಾರ್ಗ ತಿರುಗಿದರೆ ಕಳ್ಳರು ಮತ್ತೊಂದು ಮಾರ್ಗದಲ್ಲಿ ಕನ್ನ ಕೊರೆಯುತ್ತಲೂ ದೋಚುತ್ತಲೂ ಹೋಗುತ್ತಾರೆ. ಆದ್ದರಿಂದ ಪೋಲೀಸ್ ಮತ್ತು ಸಂದಿ ಜನಗಳು ಕೂಗದೆ ಗೂಢವಾಗಿದ್ದು ಪ್ರತಿ ಸ್ಥಳಕ್ಕೂ ಯಾವಾಗಬರುತ್ತಾರೋ ಎಂಬ ಭಯವನ್ನು ಜನಗಳಿಗೆ ಉಂಟುಮಾಡುತ್ತಾ ಕಳ್ಳರನ್ನು ಪತ್ತೆ ಮಾಡಿದಲ್ಲಿ ಈ ಗ್ರಾಮದ ಜನಗಳಿಗೆ ಸೌಖ್ಯವಾದೀತು.

ತೀರ್ಥಹಳ್ಳಿ —ಪೋಸ್ಟ್ ಆಫೀಸಿನವರು ಊರುಮಧ್ಯೆ ಇದ್ದ ಆಫೀಸನ್ನು ಹೊರಗೆ ಬಂಗ್ಲೆಕೇರಿಯ ಬಳಿಗೆ ಇಟ್ಟಿರುವದರಿಂದ ಜನಗಳಿಗೆ ತೊಂದರೆಯಾಗಿದೆ. ಇವಲ್ಲದೆ ಕೊಪ್ಪದ ಲೈನನ್ನು ಡಾಲ್ಸಿ ಗುಪ್ತ [illegible] ಮಾಡುತ್ತಾರಂತೆ. ಹಾಗಿದ್ದರೆ ಇನ್ನು ಮೇಲೆ ಜನಗಳಿಗೆ ಕಷ್ಟವಾಗುವದರಲ್ಲಿ [illegible] —ಮಳೆ ಧೂಳಿ ಬಹಳ ಹಳ್ಳಿ [illegible] ಮರಗಳು ಬೀಳುತ್ತಾ ಇವೆ ಆದರೂ ಭತ್ತದ ಧಾರಣೆ ಇಳಿಯಲಿಲ್ಲ ಇಷ್ಟು ತಗ್ಗಾಗಿ ಭತ್ತ [illegible] ಇದೇ ಮೊದಲೆಂದು ತೋರುತ್ತೆ —ಅನೇಕ ಟ್ರಂಕ ರಸ್ತೆಗಳನ್ನು ದುರಸ್ತಾಗಿಟ್ಟಿಲ್ಲ ಕೆಲವು ರಸ್ತೆಗಳು ಮಳೆ ಬಂದದ್ದರಿಂದ ಕೆಟ್ಟುಹೋದವೆಂದು ಕೇಳಲಾಗಿದೆ ಹೊಸ ಡೆಪ್ಯುಟಿ ಕಮಿಷನರ್ ರವರು ಮಲ್ನಾಡಿನ ಕಷ್ಟಗಳನ್ನು ವಿಚಾರಿಸಿ ಸ್ವಾಮಿಗೆ ಅನೇಕ ಕೆರೆಗಳನ್ನು ಕಟ್ಟಿಸಿ ಕೀರ್ತಿ ಪಡೆದಾರು —ಆರಗದಲ್ಲಿರುವ ಸ್ಕೂಲಿನಲ್ಲಿ ಈಚೆಗೆ ಕೆಲವು ವಿದ್ಯಾರ್ಥಿಗಳು ಸ್ಕೂಲ್ ಬಿಟ್ಟದ್ದಾರೆಂದೂ ಹುಡುಗರು ಪ್ಯಾಸ್ ಆಗುವದು ಕಡಿಮೆ ಎಂದೂ ಹೇಳುತ್ತಾರೆ —ಗೋಪ್ಲಾಪುರದ ನಿವಾಸಿಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಕುತೂಹಲಪಟ್ಟು ಸ್ಕೂಲ್ ಕಟ್ಟಿಸಿದಾರೆ. ಇವರಲ್ಲಿ ಅನೇಕರು ಹಿಂತೆಗೆದಾಗ್ಯೂ ಬೋಡೆಗೌಡನೆಂಬ ಯೌವನಸ್ಥರು ಕಟ್ಟಡ ಕಟ್ಟುವದಕ್ಕೆ ಮುಂದಾಳುಗಳಾಗಿ ನಿಂತು ಎಲ್ಲಾ ಪೂರೈಸಿದಾರೆ. ಈಗ ಬಾಲಕರು ಬಹು ಸಂತೋಷದಿಂದ ವಿದ್ಯಾಭ್ಯಾಸಮಾಡುತ್ತಾರೆ. ಪರಸ್ಥಳದಿಂದಲೂ ವಿದ್ಯಾರ್ಥಿಗಳು ಬಂದು ಓದುತ್ತಾರೆ. ಈ ಬೋಡೆಗೌಡರ ಸಹಾಯಕ್ಕಾಗಿ ಎಲ್ಲರೂ ಅವರನ್ನು ವಂದಿಸಬೇಕಾಗಿದೆ.—ಮಾಳೂರು ಇನ್ನು ಕೆಲವು ಕಡೆ ಶಿಶುಹತ್ಯ ಮಾಡುವದು ಈಚೆಗೆ ಹೆಚ್ಚುತ್ತಾ ಬಂದಿದೆ ಎಂದು ಹೇಳುತ್ತಾರಲ್ಲದೆ ಇದರಿಂದ ಅನೇಕರು ಸಂಪಾದನೆ ಮಾಡಲು ಮಾರ್ಗವಾಗಿದೆ ಇದನ್ನು ನಿಲ್ಲಿಸಲು ಯೋಗ್ಯರು ಪ್ರಯತ್ನಿಸಬೇಕು.—ಆಗುಂಬೆ ರಸ್ತೆಯಲ್ಲಿ ಕೆಲವು ಸೇತುವೆಗಳು ಅಪಾಯವಾಗಿವೆ. ಇಂಜನಿಯರ್ ಇಲಾಖೆಯವರು ವಿಗಾ ಇಡಬೇಕಾಗಿದೆ.

ಚಿಕ್ಕಮಗಳೂರು.—ಇಲ್ಲಿ ಸುಮಾರು ೧೫ ದಿನಗಳಿಂದ ಜಡಿ ಮಳೆ ಗಾಳಿ ಹೆಚ್ಚಿ ತಂಡಿಯಾಗಿದೆ. ಸುಮಾರು ೨ ವಾರದಲ್ಲಿ ೨೦ ಇಂಚು ಮಳೆ ಆಯಿತು. ಪ್ಲೇಗ್ ರೋಗವೇನೋ ಕಮ್ಮಿಯಾದಂತೆ ಕಾಣುತ್ತಿದೆ ಅಲ್ಲಲ್ಲಿ ಶೀತಬಿನ ಉಪದ್ರ ಉಂಟು.—ಇಲ್ಲಿನ ಸ್ಕೂಲುಗಳಲ್ಲಿ ಮಕ್ಕಳಿಗೆ ಮಿ॥ ಕೃಷ್ಣಸ್ವಾಮಿ ಅಯ್ಯಂಗಾರ್ರು ವಸ್ತುಪಾಠಕ್ಕೆ ಸಂಬಂಧವಾದ ನಕ್ಷೆಗಳನ್ನು ಮ್ಯಾಜಿಕ್ ಲ್ಯಾಂಟ್ರ್ನ ಮೂಲಕ ತೋರಿಸಿದರು ಅವನ್ನು ಓಟ್ಸ್ ಇನ್ಸ್ಪೆಕ್ಟರು ಚನ್ನಾಗಿ ವಿವರಿಸಿದರು. ಆದರೆ ಪ್ರತಿ ಸ್ಕೂಲಿನ ಹುಡುಗರಿಂದ ಒಂದಾಣೆ ಅರ್ಧಾಣೆಯಂತೆ ವಸೂಲು ಮಾಡಿ ಮಿ॥ ಕೃಷ್ಣಸ್ವಾಮಿ ಐಯ್ಯಂಗಾರ್ರಿಗೆ ಕೊಡುವದು ತುಂಬಾ ಪ್ರಯಾಸ. ಗವರ್ನಮೆಂಟಿನವರು ಇತರರಿಗೆ ಕೊಡುವಂತೆ ಇವರಿಗೂ ಭತ್ಯ ಮೈಲೇಜು ಕೊಟ್ಟು ಹುಡುಗರಿಂದ ದುಡ್ಡು ವಸೂಲು ಮಾಡುವದರಲ್ಲಿ ಮೇಷ್ಟರುಗಳಿಗಾಗುವ ತೊಂದರೆಯನ್ನು ತಪ್ಪಿಸುವದು ಒಳ್ಳೇದು —ನಮ್ಮ ಡಾಕ್ಟರ್ ಮಿ॥ ಕುಪ್ಪುಸ್ವಾಮಿಯವರಿಗೆ ಕೋಲಾರಕ್ಕೆ ವರ್ಗವಾದ ಸಂಗತಿ ತಿಳಿದು, ಅನೇಕರಿಗೆ ವ್ಯಸನವಾಯಿತು. ಅವರು ಇಲ್ಲಿಗೆ ಬಂದು ಬಹು ಕೊಂಚಕಾಲವೇ ಆಗಿದೆ ಇವರು ದೊಡ್ಡ ಮನುಷ್ಯರೂ ಸ್ನೇಹಪರರೂ ಪರೋಪಕಾರಿಗಳೂ ದೊಡ್ಡ ಸಂಸಾರಿಗಳೂ ಆಗಿದ್ದಾರೆ ಇಂಥವರನ್ನು ಇಲ್ಲಿಂದ ಕಳುಹಿಕೊಳ್ಳುವದು ಇಲ್ಲಿನವರಿಗೆ ವ್ಯಸನವೇ —ಕಿಷ್ಕರ್ ಜ್ಞಾನಯುಳ್ಳ ೨೧ ಕ್ಕೆ ಬಂದು, ಮೊಕದ್ದಮೆ ವಿಚಾರಣೆ ನಡೆಯುತ್ತಾದಾಗ ನ್ಯಾಯಸಭೆಯಲ್ಲಿ ನಗುವನ್ನು ಬಿಸಾಡಿದ ಮೊಕದ್ದಮೆಯಲ್ಲಿ ಆ ನಗುವಿನ ಅಜ್ಜಿಗೆ ಒಂದು ತಿಂಗಳ ಸಾದಾ ಕೈದಾಯಿತು.—ಇಲ್ಲಿನ ಬುಚರ್ ಮಾರ್ಕೆಟ್ಟಿನಲ್ಲಿ ಕೆಲವು ದಿನಗಳಿಂದ ಸಂತೆ ದಿನವಲ್ಲದೆ ಬೇರೆ ದಿನಗಳಲ್ಲಿ ಒಬ್ಬೊಬ್ಬನೇ ಅಂಗಡಿ ಇಟ್ಟುಕೊಂಡಿರುತ್ತಾನೆ ಅವನಾದರೂ ಒಳ್ಳೆ ಮಾಂಸ ಮಾರುವದಿಲ್ಲ ಕೇಳಿದರೆ ಬಾರದ ಮಾಂಸಕ್ಕೆ ಅವನು ಹೇಳಿದ ಬೆಲೆ ಕೊಡಬೇಕು. ೨—೩ ಜನರು ಲೈಸೆನ್ಸ್ದಾರರಿದ್ದಾಗ್ಯೂ ಒಬ್ಬನೇ ಮಾರುವದಕ್ಕೂ ಸೇರಿಗೆ ೩—೪ ಆಣೆಗೆ ಬಿಕರಿ ಮಾಡುವದಕ್ಕೂ ಕಾರಣವೇನೆಂದು ಮ್ಯುನಿಸಿಪಾಲಿಟಿಯವರು ಕೇಳಕೂಡದೇ ?—ಪೇಟೆಯಲ್ಲಿ ಸಾಕಾದಷ್ಟು ನಲ್ಲಿಗಳುಂಟು ಆದರೂ ಕೆಲವು ಸಮಯಗಳಲ್ಲಿ ನೀರು ನಿಲ್ಲುವದಕ್ಕೆ ಕಾರಣವೇನೋ ತಿಳಿಯದು ಹೊಸ ಮನೆಯವರಿಗಂತೂ ಯಾವಾಗಲೂ ನೀರಿನ ತೊಂದರೆ ತಪ್ಪಲಿಲ್ಲ. ಅಲ್ಲಿನ ನಲ್ಲಿಯ ಪ್ರಮಾಣವನ್ನು ಸ್ವಲ್ಪ ಹೆಚ್ಚಿಸಿದರೆ ಉತ್ತಮ

ಕೃಷ್ಣರಾಜಪಟ್ಟಣ.—ಈ ಊರಿನಲ್ಲಿ ಜನಗಳಿಗೂ ಜಾನ್ವಾರುಗಳಿಗೂ ಕುಡಿಯುವದಕ್ಕೆ ನೀರಿಲ್ಲದೆ ತೋಟದ ಬಾವಿಗಳಿಂದ ಬಹಳ ಪ್ರಯಾಸಪಟ್ಟು ನೀರು ತಂದು ಜೀವಿಸುತ್ತಿದ್ದಾರೆ ಕಳೆದ ೨ ವರ್ಷಗಳಿಂದ ಮಳೆ ಬೀಳದೆ ಇಲ್ಲಿನ ಭಾರಿ ಕೆರೆಯೂ ಊರೊಳಗಿನ ಕಲ್ಯಾಣಿಯೂ ಬತ್ತಿ ಬತ್ತಿ ಹೋಗಿವೆ. ಈ ತೊಂದರೆಯನ್ನು ಕಂಡು ನಮ್ಮ ಅಮಲ್ದಾರಾದ ಮಿ॥ ಚನ್ನಪ್ಪನವ ಪಿಳ್ಳೆಯವರು ಸುಮಾರು ೨೦—೩೦ ವರ್ಷಗಳ ಲಾಗಾಯ್ತು ಕೋಟೆ ಮಣ್ಣು ಮಸ್ಸೆ ಬಿದ್ದು ಹೂತುಹೋಗಿದ್ದ ಕಲ್ಯಾಣಿಯನ್ನು ಕೆರೆಯಿಂದ ಈ ಕಲ್ಯಾಣಿಗೆ ನೀರು ಬರತಕ್ಕ ಕಾಲುವೆಯನ್ನೂ ದಿನಕ್ಕೆ ೪೦ ಆಳಿಗೆ ಕಡಿಮೆ ಇಲ್ಲದೆ ಬಿಟ್ಟು ಈ ಭಾರಿ ಕಲ್ಯಾಣಿ ಹೂಳನ್ನು ಬಹು ಶೀಘ್ರವಾಗಿ ಶೋಧಿಸಿ, ತೆಗಿಸಿದ ಗೋಡೆಗಳನ್ನೆಲ್ಲಾ [illegible] ಮಾಡಿಸಿ ಸರ್ಕಾರಕ್ಕೂ ಫಾಯಿದೆ ಉಂಟುಮಾಡುತ್ತಾರೆ ಇದರ ಇವರ ಪ್ರಯತ್ನಕ್ಕೂ ಧಾರಾಳ ಮನಸ್ಸಿಗೂ ತಕ್ಕಂತೆ ದೇವರು ಮಳೆ ದಯಪಾಲಿಸದೆ ಇರುವದಕ್ಕೂ ಬರುವ ಜುಲೈ ಗುರ್ರು ಲಾಗಾಯ್ತು ಆದರಿಗೆ ಪಿಂಚನ್ ಆಗಿದೆ ಎಂದು ಈ ಪತ್ರಿಕೆಯಲ್ಲಿ ಪ್ರಕಟಿಸಿರುವದಕ್ಕೂ ಕೇಳಿ ನೋಡಿದ ಜನರೆಲ್ಲ ತುಂಬಾ ವಿಷಾದಪಡುತ್ತಿದ್ದಾರೆ ಈ ಪರ್ಮಪ್ರವರ್ತಕರಿಗೆ ದೇವರು ಆಯುರಾರೋಗ್ಯಕೊಟ್ಟು ಕಾಪಾಡಲೆಂದು ಕೋರುತ್ತೇವೆ.—ಮುಂದೆ ಬರತಕ್ಕ ಅಧಿಕಾರಿಗಳು ಮನೋರಂಜಕವಾದ ನೀರಿನ ಮತ್ತು ಲಾಂದ್ರಗಳ ವಿಷಯದಲ್ಲೂ ಸಂತೆಯಲ್ಲಿ ವರ್ತಕರು ಅಳೆಯುವ ಕಮ್ಮಿ ಸೇರು ತೂಕದ ಬಟ್ಟು ಇವುಗಳಿಗೆಲ್ಲಾ ನಿಗಾಕೊಟ್ಟು ಕ್ರಮಪಡಿಸಿ ಪ್ರಜಾನುರಾಗಕ್ಕೆ ಪಾತ್ರರಾದಾರೆಂದು ನಂಬಿದೇವೆ —ಈ ಊರಿಗೆ ಸೇರಿದ ದೇವಸ್ಥಾನದ ಕಾಳೇನಹಳ್ಳಿಯಲ್ಲಿ ಜನಗಳಿಗೂ ಗೋಕರುಗಳಿಗೂ ಕುಡಿಯುವದಕ್ಕೆ ನೀರಿಲ್ಲದೆ ಸುಮಾರು ನೂರು ಮನೆಯವರು ತೊಂದರೆಪಡುತ್ತಿದ್ದದ್ದನ್ನು ನೋಡಿ ಇದೇ ಊರಿನ ನರಸಮ್ಮನ ಕಾಳೇಗೌಡನ ಮಕ್ಕಳಾದ ಏರಿಗೌಡ, ಲಕ್ಕೇಗೌಡ, ಶಿವನಂಜೇಗೌಡ, ಜವರೇಗೌಡ, ಈ ನಾಲ್ಕು ಸಹೋದರರೂ ಸೇರಿ ಆ ಊರಿನಲ್ಲಿ ಮೈಸೂರಿನಿಂದ ಕಾಲ್ದಾರಿಯಲ್ಲಿ ಬರತಕ್ಕ ಜನಗಳಿಗೂ ಆ ಊರಿನವರಿಗೂ ಕುಡಿಯುವ ನೀರಿಗೆ ಅನುಕೂಲವಾಗುವಂತೆ ತಲಾ ನೂರು ರೂಪಾಯಿನಂತೆ ನಾಲ್ಕು ಜನವೂ ನಾನೂರು ರೂಪಾಯಿ ಮುಟ್ಟಿಕೆ ಶ್ರಮಪಟ್ಟುಕೊಳ್ಳುವದಲ್ಲದೆ, ದರಖಾಸ್ತು ಕೊಟ್ಟು ಕೊಂಡುತಂದ ಕೋಟೆ ಕಲ್ಲುಗಳಿಂದಲೂ ವಿಸ್ತಾರವಾದ ಒಂದು ಕೊಳವನ್ನು ತೆಗಿಸುತ್ತಾರೆ ಇವರ ಧರ್ಮಬುದ್ಧಿಗೂ ಉದಾರ ಮನಸ್ಸಿಗೂ ತಕ್ಕಂತೆ ಕಾಣಿಯುವವಕ್ಕೆ ಒಳ್ಳೆ ಸಿಹಿ ನೀರು ಬಂದು, ಜನಗಳಿಗೆ ನೀರಿನ ಕ್ಷೋಭೆ ತಪ್ಪಿ ಸುಖವಾಗಿರುತ್ತಾರೆ.—ಈಗ್ಗೆ ಒಂದು ವಾರದಿಂದ ಮೋಡ ಕಟ್ಟಿ ಹಾಗೇ ಕರಗಿಹೋಗುತ್ತಿದೆ ಮಳೆ ಮಾತ್ರ ಸುಕರಾಂ ಬಂದಿಲ್ಲ. ಗಾಳಿ ಜೋರಾಗಿ ಸುಮಾರಾಗಿ ಬೀಸುತ್ತಿರುತ್ತೆ. ರೈತರೆಲ್ಲ ಹೊಲಗಳನ್ನು ಉತ್ತು ಬಿತ್ತನೇ ಮುಂತಾದ ಕೆಲಸಗಳಲ್ಲಿರುತ್ತಾರೆ. ಕೂಡಲೆ ವೃಷ್ಟಿಯಾಗಿ ಸುಭಿಕ್ಷವಾದೀತೆಂದು ಹಾರೈಸುತ್ತೇವೆ

ವಿದೇಶ ವರ್ತಮಾನಗಳು.

ಚೀನಾ ರಾಜ್ಯಕ್ಕೆ ಸೇರಿದ ಚೆಹಲಿ ದಕ್ಷಿಣ ಭಾಗದಲ್ಲಿ ಅಪಾರವಾದ ಪ್ರವಾಹಗಳು ಬಂದು ನಾಲ್ವತ್ತು ಮೈಲಿ ದೂರ ರೈಲ್ ರಸ್ತೆಯನ್ನು ಕಿತ್ತು ಹೊಡೆದುಕೊಂಡು ಹೋಯಿತು. ನೂರಾರು ಮನೆಗಳು ಕೊಚ್ಚಿ ಹೋಗಿರುತ್ತವೆ.

ಜಪಾನವರಿಗೆ ಸೇರಿದ ತಾಯೋಕೋ ಮಾರೂ ಎಂಬೊಂದು ಹಡಗು ಕೋರಿಯಾ ಸಮುದ್ರದಲ್ಲಿ ಒಂದು ಮದ್ದಿನ ಗುಂಡಿಗೆ ತಗಲಿ ಒಡೆದುಹೋಯಿತೆಂತಲೂ ಐವತ್ತು ಮಂದಿ ಸಮುದ್ರದ ಪಾಲಾದರೆಂತಲೂ ತಂತೀ ವರ್ತಮಾನ ಬಂದಿದೆ.

ನಾರ್ವೆ ರಾಜ್ಯದಲ್ಲಿ ಹೇಕ ದೊರೆಯವರಿಗೆ ಕಿರೀಟಧಾರಣೆಯ ಮಹೋತ್ಸವವಾಯಿತು. ಆ ಕಾಲದಲ್ಲಿ ಹಾಜರಾಗಿರುವುದಕ್ಕಾಗಿ ವಿಲಾಯತಿ ರಾಜ್ಯದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಪರಿವಾರ ಸಹಿತ ಅಲ್ಲಿಗೆ ಪ್ರಯಾಣ ಬೆಳಸಿದಾರೆ.

ಅಮೇರಿಕದ ಪಶ್ಚಿಮತೀರದಲ್ಲಿರುವ ಸ್ಯಾನ್ ಫ್ರಾನ್ಸಿಸ್ಕೊ ಪಟ್ಟಣದಲ್ಲಿ ಭೂಕಂಪದಿಂದ ಅಪಾರವಾದ ಅಪಾಯುತವಾಯಿತಷ್ಟೆ. ಈ ಭೂಕಂಪದಿಂದಲೇ ಅಲ್ಬರ್ಟಾ ಎಂಬ ಡಿಸ್ಟ್ರಿಕ್ಟಿನಲ್ಲಿ ಒಂದು ಕಡೆ ಒಂದು ನೂತನವಾದ ಭಾರೀ ಕೆರೆಯು ಉದ್ಭವವಾಗಿದೆ ಎಂದು ಪ್ರಕಟವಾಗಿರುವದು

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಒಂದು ದೊಡ್ಡ ಹೋಟೇಲನ್ನು ಈಗತಾನೇ ಕಟ್ಟಿ ಪೂರೈಸಿದರು. ಇದಕ್ಕೆ ಒಟ್ಟು ಎರಡೂವರ ಕೋಟಿ ರೂಪಾಯಿ ಖರ್ಚಾಯಿತು. ಅದರಲ್ಲಿ ೧,೫೦೦ ಜನರು ಏಕಕಾಲದಲ್ಲಿ ವಾಸ ಮಾಡುವುದಕ್ಕೆ ಸೌಕರ್ಯಗಳನ್ನು ಕಲ್ಪಿಸಿರುತ್ತಾರೆ. ಇದರಷ್ಟು ಭಾರಿಯಾದ ಹೋಟೇಲು ಪ್ರಪಂಚದ ಇನ್ಯಾವ ಪಟ್ಟಣದಲ್ಲೂ ಇಲ್ಲವೆಂದು ತಿಳಿದುಬಂದಿದೆ. ಇದರಲ್ಲಿ ಇಪ್ಪತ್ತು ಸುಂದರವಾದ ಉಪ್ಪರಿಗೆಗಳಿರುವವು.

ವಿಲಾಯತಿಯಲ್ಲಿ ವರ್ತಮಾನ ಪತ್ರಿಕೆಗಳನ್ನು ನಡಸುವವರು ಒಂದು ಸಂಘವನ್ನು ಮಾಡಿಕೊಂಡಿದ್ದಾರೆ ಈ ಸಂಘದವರು ಜರ್ಮನಿ ರಾಜ್ಯದಲ್ಲಿ ವರ್ತಮಾನ ಪತ್ರಿಕೆಗಳನ್ನು ನಡಸತಕ್ಕ ಎಡಿಟರುಗಳನ್ನು ವಿಲಾಯತಿಗೆ ಕರೆಸಿಕೊಂಡು ಅವರಿಗೆಲ್ಲಾ ತಮ್ಮ ದೇಶದ ವಿಶೇಷ ಸಂಗತಿಗಳನ್ನು ತೋರಿಸಿ ಔತನಗಳನ್ನು ಮಾಡಿ ಕಳುಹಿಸಬೇಕೆಂದು ಗೊತ್ತು ಮಾಡಿ, ಅವರಿಗೆಲ್ಲಾ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದರು. ಮೂವತ್ತು ಮಂದಿ ಎಡಿಟರುಗಳು ವಿಲಾಯತಿಗೆ ಬರುತ್ತೇವೆಂದು ಒಪ್ಪಿದ್ದಾರೆ.

ಜಪಾನ್ ಜನರು ತಮ್ಮ ಕಾಯಪುಷ್ಟಿಯನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಜು ಜಿಟ್ಸು ಎಂಬ ಹೆಸರಿನ ಗರಡೀ ಸಾಧನೆಯನ್ನು ಮಾಡುತ್ತಾರೆ. ಇದರಿಂದ ಅವರು ಆಕಾರದಲ್ಲಿ ಚಿಕ್ಕವರಾಗಿ ಕಂಡರೂ ಕಷ್ಟ ಕೆಲಸ ಮಾಡುವುದರಲ್ಲಿ ಅಪ್ರತಿಮರೆನಿಸಿಕೊಂಡಿದ್ದಾರೆ. ಎಷ್ಟು ದಣುವನ್ನಾದರೂ ಅವರು ಸಹಿಸಿಕೊಳ್ಳಬಲ್ಲರು. ಇವರು ಮಾಡುವಂಥಾ ಸಾಧನೆಯನ್ನೇ ಆಸ್ಟ್ರೇಲಿಯಾದವರೂ ತಮ್ಮ ಪೋಲೀಸ್ ನೌಕರರಿಗೂ ಶಿಪಾಯಿಗಳಿಗೂ ಹೇಳಿಕೊಟ್ಟು ಅಭ್ಯಾಸ ಮಾಡಿಸಬೇಕೆಂದು ಗೊತ್ತು ಮಾಡಿದಾರೆ ಇದನ್ನು ಕಲಿತವರಿಗೆ ಕಾದಾಡುವುದಕ್ಕೆ ಕತ್ತಿ ದೊಣ್ಣೆ ಮೊದಲಾದ ಆಯುಧಗಳ ಸಹಾಯ ಬೇಕಾಗುವುದೇ ಇಲ್ಲ. ಕೈಕಾಲುಗಳಿಂದಲೇ ಆಯುಧಗಳ ಕೆಲಸವನ್ನು ನಡಿಸಬಹುದಾಗಿದೆ

ರಷ್ಯಾ ರಾಜ್ಯಕ್ಕೆ ಸೇರಿದ ಪೋಲೆಂಡಿನಲ್ಲಿ ಪ್ರಜೆಗಳು ನೆಮ್ಮದಿಯಾಗಿಲ್ಲ. ಸರ್ಕಾರಿ ಅಧಿಕಾರಿಗಳ ಕ್ರೂರತನವನ್ನು ಸಹಿಸಲಾರದೆ ಜನರು ದೊಡ್ಡ ದೊಡ್ಡ ಉದ್ಯೋಗಸ್ಥರನ್ನೇ ಕೊಂದುಹಾಕಿದರು. ಪೋಲ್ಯಾಂಡ್ ಪಟ್ಟಣದಲ್ಲಿ ಒಂದು ರಿಜಿಮೆಂಟಿನ ಸೈನಿಕರು ಜುದ್ದೇದಾರರ ಮೇಲೆ ತಿರುಗಿ ಬಿದ್ದು ನಾನಾ ದಾಂಧಳೆಯನ್ನು ನಡಿಸಿದರು ಜುದ್ದೇದಾರರು ಅವರು ಕೇಳಿದ ಸೌಲಭ್ಯವನ್ನು ಕೊಟ್ಟು, ಅವರನ್ನೆಲ್ಲಾ ಸಮಾಧಾನಗೊಳಿಸಬೇಕಾಯಿತು. ವಾರ್ಸಾ ಪಟ್ಟಣದಲ್ಲಿ ಸರ್ಕಾರಕ್ಕೆ ಸೇರಿದ ೨೩ ಮದ್ಯಪ್ರಪಂಚಗಳ ಉಗ್ರಾಣಗಳನ್ನು ಪ್ರಜೆಗಳು ನುಗ್ಗಿ ಲೂಟಿಮಾಡಿ, ಐದು ಜನರನ್ನು ಜೀವಸಹಿತ ಸುಟ್ಟುಹಾಕಿದರು. ಸೈನಿಕರು ನುಗ್ಗಿ ಗಲಭೆಯನ್ನು ಶಮನಮಾಡುವಾಗ್ಗೆ ೧೬ ಮಂದಿ ಮೃತಪಟ್ಟರು, ಅನೇಕರಿಗೆ ಗಾಯಗಳಾದವು.

ಅಮೇರಿಕದಲ್ಲಿ ಚದುರಂಗದ ಆಟದಲ್ಲಿ ಪ್ರಖ್ಯಾತಿ ಪಡೆದಿದ್ದ ಮಿ॥ ಎಚ್. ಎನ್. ಪಿಲ್ಸ್‌ಬರಿ ಎಂಬಾತನು ಕಾಲವಾದನೆಂದು ತಂತೀವರ್ತಮಾನ ಬಂದಿದೆ ಕಳೆದ ೧೮೯೫ ರಲ್ಲಿ ಹೇಸ್ಟಿಂಗ್ಸ್ ಪಟ್ಟಣದಲ್ಲಿ ಪ್ರಪಂಚದ ಎಲ್ಲಾ ಕಡೆಗಳಿಂದಲೂ ಚದುರಂಗವನ್ನಾಡತಕ್ಕ ಮಹಾ ಪಂಡಿತರೇ ಸೇರಿ, ಸ್ಪರ್ಧಿಸಿಟ್ಟು ಆಡಿದರು ಆಗ್ಗೆ ಈ ಮಿ॥ ಪಿಲ್ಸ್‌ಬರಿ ಎಂಬಾತನು ಎಲ್ಲರನ್ನೂ ಸೋಲಿಸಿ ಬಿರುದು ಸಂಪಾದಿಸಿಕೊಂಡನು. ಈಚೆಗೆ ೧೮೯೮ ರಲ್ಲಿ ವಿಯನ್ನಾ ಪಟ್ಟಣದಲ್ಲಿ ನಡೆದ ಸಂದರ್ಭದಲ್ಲಿ ಈತನಿಗೆ ಎಂಟನೇ ಬಹುಮಾನ ದೊರಕಿತು ಈತನು ಕೆಲವು ಕಾಲದಿಂದ ಕಾಯಿಲೆ ಬಿದ್ದಿದ್ದನೆಂತಲೂ ಚದುರಂಗದ ಆಟದಲ್ಲಿ ಈತನ ತಲೆಯ ಮೆದುಳು ಬಹಳ ಹೆಚ್ಚಾಗಿ ಕೆಲಸ ಮಾಡಿಮಾಡಿ, ಅದರಲ್ಲಿ ಏನೋ ಗಲಿಬಿಲಿಯುಂಟಾಗಿ ಬಹಳ ಕಷ್ಟಪಟ್ಟನೆಂತಲೂ ತಿಳಿಯುವುದು

ಮುಂಬಯಿ ಪ್ರಾಚೀನವಾದಲಿಬ್ರೈರಿ ಸುವನರು

85 5

ಮುಂಬಯಿಯಲ್ಲಿ ಪತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಗಳ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೇವೇಂದ್ರ ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಆಕೃತಿ ಅಕ್ಷರದಿಂದ ಬರೆಯಿರಿ ಸತ್ಯಾ ಚನ್ನಬಸಪ್ಪ ಮುಳಸ್ವ ಪಾರದ, ಪೋಷ್ಟು ಮಾಂಡ್ವಿ ಮುಂಬಯಿ

ಟಪಾಲ ಖರ್ಚ ಪುಕಟ! ಟಪಾಲ ಖರ್ಚ ಪುಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 2



ವಿಲಾಯತೀ ಮಸಿಗೆ ಟಕ್ಕರಕೊಡ ವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೇ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ ಒಮ್ಮೆ ಅನುಭವ ತಕ್ಕೊಳ್ಳಿರಿ ೧೦೦ ಪುಡಿಕೆಗಳಿಗೆ ೮ ರೂಪಾಯಿ ಟಪಾಲ ಖರ್ಚ ಪುಕಟ

ವಿಳಾಸ —ಸಾಂತ ಜಿ ದೀಕ್ಷಿತ, ಸ್ಟೇಶನ ಪುಣೇ ಸಿಟಿ

ಪರಿಮಳ ನಶ್ಯ ಪುಡಿ

88 4

ಪರಿಮಳ ನಶ್ಯದ ಡಬ್ಬಿ ೧ ಕ್ಕೆ	0—9—0
ಭಾಂಗಿ ಖರ್ಚು	0—3—0
ಸಾದಾ ನಶ್ಯದ ಡಬ್ಬಿ ೧ ಕ್ಕೆ	0—6—0
ಭಾಂಗಿ ಖರ್ಚು	0—3—0

ಈ ಪುಡಿಯನ್ನು ನೀಲಾದ ಹೊಗೆಸೊಪ್ಪಿನಿಂದ ಸ ವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ ಇದರ ಸುವಾಸನೆ ಬಂದಾಗ ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ

ತಲೆನೋವು ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ ಮಾಡಿರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ ಪ್ರತಿ ೧ ಡಬ್ಬಿಯಲ್ಲಿಯೂ ತೋಲ ನಶ್ಯದಪುಡಿ ಇರುತ್ತೆ ನಾವಿರಿ ನಶ್ಯವನ್ನು ಕೆಲ್ಲರುವವರು ಅಧಿಕ ಕಮೀಷನ್ನು ಕೊಡಲಾಗುವುದು ಹೆಚ್ಚು ಸಾಮಾನು ಮಾಡುವರಿಗೆ ಪುಡಿಯನ್ನು ಕಳುಹಿಸುತ್ತೇವೆ

ವಿಳಾಸ —ಮಾನೇಜರ್, ಧರ್ಮ ವೈದ್ಯಶಾಲಾ, 69 ಚಿನ್ನಾಬಜಾರು ಸ್ಟ್ರೀಟ್, ಸಾಹುಕಾರ್‌ಪೇಟೆ, ಮದರಾಸು

ಮುದ್ರಾಮಂಜೂಷ ಯೆಂಬ—೨ನೆಯ ಮುದ್ರಣ

ಕ್ರಯ—ರೂ ೧—೮—೦

90 2

ವಿದ್ವಾಂಸರಿಗೂ ವಿದ್ಯಾವಂತರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರದಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ ವೆಂಬೀ ನವರಸಯುಕ್ತವಾದ ಕನ್ನಡ ಗ್ರಂಥವು ಈಗಿನ ನಾಟಕ ರಚನೆಗೆ ಸರಿಯಾಗಿ ತಿದ್ದಿ ಬಹು ದೊಡ್ಡದಾದ ಹೊಸ ಅಕ್ಷರದಿಂದ ಬಿಳ್ಳೀ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ ಪ್ರಕಟಿಸಲ್ಪಟ್ಟಿದೆ "ತಿಮ್ಮಿ ಅಪ್ಪ ಪತ್ರ ಸೆಕ್ಕ ಹಾಳಿ" ಸುಂದರವಾದ ಕ್ಯಾಲಿಕೋ ಬೈಂಡು ಬಹು ಶುದ್ಧವಾದ ಪ್ರತಿ ಇದಕ್ಕೆ 'ಚಾಣಕ್ಯರ ನೀತಿ,' "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿಟ್ಟು, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ ಕ್ರಯ ೧ ಪ್ರತಿಗೆ ರೂ ೧—೮—೦, ಪೋಸ್ಟೇಜು ೨ ಆಣೆ ವಿ ಪಿ ಪಿ ತರಿಸಿಕೊಂಡರೆ ರೂ. ೧—೧೧—೦ ಬೀಳುವುದು ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ಕೊಳ್ಳುವ ಪುಸ್ತಕ ವ್ಯಾಪಾರಿಗಳಿಗೆ ಕೇಕಡಾ ೨೫ ರೂದಾಯಿಸಂತೆ ಡಿಸ್ಕೌಂಟು ಕೊಡಲಾಗುತ್ತದೆ ಬೇಗ ಈ ವಿಳಾಸಕ್ಕೇನೇ ಬರೆಯಿರಿ—

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ಈ ಪುಸ್ತಕವು ಲೋಕಪ್ರಸಿದ್ಧವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ ಬೈಂಡು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದವರೇ ಅದನ್ನು ಪುನಃ ಪುನಃ ಓದಬೇಕೆಂದು ಆಶಿಸುವನ್ನು ಆಕರ್ಷಿಸುವುದು ಇದರ ಕ್ರಯ ಎರಡೇ ರೂಪಾಯಿ ವಿ ಪಿ ಮೂಲಕ ೨—೩—೦ ಪತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಐದು ರೂಪಾಯಿ ಎಂದು ಅನೇಕರಿಗೆ ಗೊತ್ತು ಇದನ್ನು ಬಡವರೂ, ಐಶ್ವರ್ಯವಂತರೂ ಓದಬೇಕೆಂದು ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ

ವಿಳಾಸ—ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

P. SUBBROYA'S

World Renowned and most Efficacious Ayurvedic Medicines

ಪಿ ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

11 33

೧ ಪುಷ್ಟಿರಸಾಯನ —ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಯೊಂದುವುದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೆ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವು, ಆಲಸ್ಯ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು ಪೆಟ್ಟಿಗೆ ಒಂದಕ್ಕೆ ರೂ ೨ ವಿ ಪಿ ಛಾಂಗಿ ೬ ಆಣೆ

೨ ಅಜೀರ್ಣಗುಳಿಗೆ — ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವುದು ಪಿತ್ತ ಬಾಯಿಯ ದುರ್ಗಂಧ ಹೊಟ್ಟೆಕೂಳೆ, ನಿದ್ರೆ ಇಲ್ಲದಿರುವಿಕೆ, ತಲೆತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು ಪೆಟ್ಟಿಗೆ ಒಂದಕ್ಕೆ ೮ ಆಣೆ ವಿ ಪಿ ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜು ೫ ಆಣೆ

೩ ಲಕ್ಷ್ಮೀವಿಲಾಸ ಕಸ್ತೂರಿ ಮಾತ್ರೆ—ಇದು ತಾಂಬೂಲಕ್ಕೆ ಪ್ರಾಣವಿದ್ದಂತೆ ಇದರಿಂದ ಬಾಯಿಯ ದುರ್ಗಂಧವು ಹೋಗುವುದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಶೀಘ್ರವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಿಗ್ಗೆ ಗುಟಿಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದ ಹಲ್ಲುನೋವು, ಹೊಟ್ಟೆಯುರಿ, ಇವುಗಳು ವಾಸಿಯಾಗುವುವು ಇದರಲ್ಲಿ ಅತ್ಯುತ್ತಮವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕ ಮುಂತಾದ ಅಮೂಲ್ಯ ವಸ್ತುಗಳು ಸೇರಿರುವುದರಿಂದಲೂ ಎಲ್ಲಾ ಮುಕ್ಕಾಲಿಂದ ಮುದುಕರವರೆಗೆ ಎಲ್ಲರೂ ತಾಂಬೂಲದೊಂದಿಗೆ ಅಥವಾ ಒಬ್ಬೊಬ್ಬರೇ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವವರು ದೇಹದಲ್ಲಿ ರೋಗಕ್ಕೆ ಆಸ್ಪದ ಕೊಡದೆ ಸುಖ ಹೊಂದಿಕೊಳ್ಳುವರು ಜ್ವರ, ಕೆಮ್ಮು, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಿಂದ ಕೊಟ್ಟರೆ ಗುಣ ಕಾಣುವುದು ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ ಕ್ಕೆ ೪ ಆಣೆ ೧ ರಿಂದ ೨ ಸೀಸೆ ವಿ ಪಿ ಛಾಂಗಿ ಛಾರ್ಜು ೫ ಆಣೆ

೪ ವೇದನಾಪರಿಹಾರಕ ತೈಲವು —ಇದನ್ನು ರೋಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವ ವಾತರೋಗ ಪಾರ್ಶ್ವವಾಯು, ನರಗಳ ಸೆಳತ, ಮೊಣಕಾಲು ನೋವು ಮತ್ತು ಎದೆ ಇವುಗಳ ನೋವು, ತೊಳೆ ಮುಂತಾದ ಅಂಗಗಳ ಕೀಲಿನ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ನಿಂತುಹೋಗಿ ವಾಸಿಯಾಗುವವು ಸೀಸೆ ೧ ಕ್ಕೆ ೧ ರೂ ೪ ಬಾಟ್ಲಿ ವರೆಗೆ ವಿ ಪಿ ಛಾಂಗಿ ಛಾರ್ಜು ೫ ಆಣೆ

೫ ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು —ಬೋಳುತಲೆ, ಹುಂಡು ಅಥವಾ ಹೊಟ್ಟು ಉದುರುವಿಕೆ ಇವು ನಿರ್ಮೂಲವಾಗಿ ಒಂದು ಹಾಗುವುದಲ್ಲದೆ, ತಲೆಯನ್ನೂ ಮೆದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಬೆಳೆಸುವುದು ಕೇಶ ಸಂಬಂಧವಾದ ರೋಗಗಳನ್ನೆಲ್ಲಾ ಹೋಗಲಾಡಿಸುವುದು ಬಹಳ ಮನೋರಂಜಕವಾಗಿ ಪರಿಮಳಿಸುವುದು ಬೆಲೆ ಸೀಸೆ ೧ ಕ್ಕೆ ೮ ಆಣೆ ೨ ಸೀಸೆ ವರೆಗೆ ವಿ ಪಿ ಛಾರ್ಜು ೫ ಆಣೆ

೬ ನೇತ್ರಬಿಂದು —ಸುಮಾಪ್ಪಪ್ಪಿ, ಕಣ್ಣಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬೆಳೆಯುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವುವು ಸೀಸೆ ೧ ಕ್ಕೆ ೮ ಆಣೆ ೧ ವಿ ಪಿ ಛಾರ್ಜು ೯ ೬ ಸೀಸೆ ವರೆಗೂ ೫ ಆಣೆ

೭ ಕರ್ಣಬಿಂದು —ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಅದನ್ನು ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನೂ ಇದು ಪರಿಹರಿಸುವುದು, ಬೆಲೆ ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೬ ಸೀಸೆ ವರೆಗೂ ೫ ಆಣೆ

೮ ಜಂತುಕಜ್ಜಿಗೆ ಔಷಧಿ —ಚರ್ಮರೋಗಕ್ಕೆ ಇದು ಗಣನಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರ ಪಡಿಲ್ಲ ಸೀಸೆ ೧ ಕ್ಕೆ ೬ ಆಣೆ ವಿ ಪಿ ಛಾರ್ಜು ೯ ೬ ಸೀಸೆ ವರೆಗೂ ೫ ಆಣೆ

೯ ಸುಖಭೇದಿ —ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ, ಜ್ವರ, ಇವುಗಳನ್ನು ವಾಸಿಮಾಡುವುದು ಸೀಸೆ ೧ ಕ್ಕೆ ೮ ಆಣೆ ವಿ ಪಿ ಛಾರ್ಜು ೯ ೬ ಸೀಸೆ ವರೆಗೂ ೫ ಆಣೆ

ಕಾಗದವನ್ನು ಇಂಗ್ಲೀಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —P SUBBAROY,
Porto Novo, South Arcot

ವಿಳಾಸ—ಪಿ. ಸುಬ್ಬರಾಯ್,
ಪೋರ್ಟೊನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

8 6 - 1906 ರಿಂದ 15—6—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದ	ಪ್ಲೇಗ್ ಸತ್ತದ್ದ	ಹೋದ ವಾರ	ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	7	7
ಮೈಸೂರು ,,	0	0	0	0
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	0	0
ಹಾಸನ (ಹೊರಗಿನದು)	2	2	0	0
ಚಿತ್ರದುರ್ಗ ,,	0	0	0	0
ಕಡೂರ್ ,,	0	0	0	0
ಶಿವಮೊಗ್ಗ ,,	1	0	1	1
ಮೊತ್ತ	3	3	8	8

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಆಷಾಢ ಶುದ್ಧ ಸಪ್ತಮಿ ಗುರುವಾರದಿಂದ ಆಷಾಢ ಶುದ್ಧ ತ್ರಯೋದಶೀ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜೂನ್ ಮತ್ತು ಜುಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತದಿ ದಸು ಮಾಸ
28	ಗುರು	ಸಪ್ತಮಿ	50 05	ಪುಬ್ಬ	7 03	15
29	ಶುಕ್ರ §	ಅಷ್ಟಮಿ	51 30	ಉತ್ತ	6-16	16
30	ಶನಿ †	ನವಮಿ	46 35	ಹಸ್ತ	3 00	17
1	ರವಿ	ದಶಮಿ	40 05	ಚಿತ್ತ	0 36	18
2	ಚಂದ್ರ ‡	ಏಕಾದಶಿ	30 2	ವಿ	2 19	19
3	ಕುಜ	ದ್ವಾದಶಿ	29 3	ಸ್ವಾತಿ	58 36	20
4	ಬುಧ	ತ್ರಯೋದಶಿ	23 1	ಜ್ಯೇ	14 16	21

§ ದಗ್ಧಯೋಗ † ದಗ್ಧಯೋಗ ವ್ಯತೀಪಾತ ‡ ಸರ್ವತ್ರ ಪ್ರಥಮ ಏಕಾದಶಿ, ಶಯನೈಕಾದಶಿ ಗೋಪದ್ಮವ್ರತಾರಂಭ ¶ ವಾಸುದೇವದ್ವಾದಶಿ, ಶಾಕವ್ರತಾರಂಭ ಪ್ರದೋಷ ಅಭಿಜಿದ್ಯೋಗ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕೈಕುಟ್ಟು ಅಕ್ಕಿ ಪಲ್ಲ ೧ ಕ್ಕೆ	ರೂ ೧೩-೮-೦	೧೦ ೦-
ಕೆಂಪುಮೂತಿ ಅಕ್ಕಿ ಅವಲ್	೧೩-೮-೦	೧೩-೮-
,, ದಪ್ಪ	೧೩-೬-೦	೧೩-೦-
ಜೀರಾಸಾಲೆ ಅಕ್ಕಿ	೧೩-೦-೦	೧೨-೦-೦
ಸಣ್ಣಕ್ಕಿ ಅವಲ್	೧೫-೦-೦	೧೫-೮-
,, ದಪ್ಪ	೧೬-೦-೦	೧೫-೦
ತೊಗರಿ ಬೇಳೆ ಪಲ್ಲ ೧ ಕ್ಕೆ	೧೧-೬-೦	೧೦-೪
,, ದುಂಡು	೧೧-೬-೦	೧೧-೮
ಹುರಳಿ ಕಾಳು ಪಲ್ಲ ೧ ಕ್ಕೆ	೮-೬-೦	೬-೮
ರಾಗಿ	೭-೨-೦	೬-೪
ಜೋಳ	೯-೬-೦	೮-೮-
ಹಲಸಂದೆ ಪಲ್ಲ ೧ ಕ್ಕೆ	೯-೮-೦	೧೦-೦
ಬಿಳೀ ಅವರೆ	೮-೦-೦	೯-೦
ಹೆಸರು	೧೦-೮-೦	೧೧-೮-
ಉದ್ದು	೧೨-೪-೦	೧೧-೦-೨
ಕಡಲೆ	೧೧-೦-೦	೧೦-೦-
ಎಳ್ಳು ಸೆ ೧ ಒ೬ ಕ್ಕೆ	೨೦-೮-೦	೨೦-೦
ಹುರುಳಿ	೮-೮-೦	೯-೮-
ಹರಳು ೧ ಒ೬ ಸೇರಿಗೆ	೧೫-೮-೦	೧೫-೦
ಸೀಗೇಕಾಯಿ ಮಣ ೧ ಕ್ಕೆ	೩-೦-೦	೨-೦-೨
ಮೆಣಸಿನಕಾಯಿ	೪-೦-೦	೩-೦-೨
,, ದುಂಡು	೩-೪-೦	೩-೪
ಬೆಲ್ಲ ದೊಡ್ಡ ಅಚ್ಚು	೪-೪-೦	೩-೦-೧೦
ಬೆಳ್ಳುಳ್ಳಿ ಮಣ ೧ ಕ್ಕೆ	೫-೪-೦	೫-೪
ಹರಳೆಣ್ಣೆ ,,	೫-೮-೦	೫-೮
ಕೊತ್ತುಂಬರಿ ಪಲ್ಲ ೧ ಕ್ಕೆ	೧೧-೮-೦	೧೬-೮
ಉಪ್ಪು ,,	೫-೧೦-೦	೬-೨
ಹುಣಸೇ ಹಣ್ಣು	೦-೧೨-೦	೦-೧೦
,, ಹಳೇದು	೦-೮-೦	೦-೧೦
ತುಪ್ಪ ಮಣ ೧ ಕ್ಕೆ	೧೬-೧೨-೦	೧೬-೦
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	೫-೪-೦	೪-೦
ತೆಂಗಿನಕಾಯಿ ೧೦೦ ಕ್ಕೆ	೫-೪-೦	೪-೬
ಅಡಿಕೇಕಾಯಿ ಮಣ ೧ ಕ್ಕೆ	೦-೦-೦	೦-೧೧
ಅಂಟುವಾಳದ ಕಾಯಿ ಮಣ ೧ ಕ್ಕೆ	೦-೧೨-೦	೦-೧೩
ಚಿನ (ಪೌನ್) ಕೆಂಪು	೧೫-೪-೦	೧೫-೬
,, ,, ಪಸಿಮೆ	೧೫-೧೦-೦	೧೫-೦-೨
,, ,, ಗಟ್ಟಿ ತೊಲ ೧ ಕ್ಕೆ	೨೩-೦-೦	೨೩-೫
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೦-೦

Printed and Published by the Rev E W Thompson, M A the Proprietor and Manager, Wesleyan Mission Press Mysore 28/6/1906

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದು ಡ್ಡು ಕ್ರ ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ | ಮೈಸೂರು—ಸನ್ ೧೯೦೬ ನೇ ಇಸವಿ ಜುಲೈ ತಾರೀಖು ೫ ನೇ ಗುರುವಾರ. | ಸಂಚಿಕೆ ೫

ಈಗತಾನೇ ಕಟ್ಟು ಬಿಚ್ಚಿದೆ.

೩,೦೦೦ ಬಾಟ್ಲುಗಳ ಕೇಶರಂಜನ ತೈಲ.

40-20

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ...ದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗ...ರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ವಿಕರಿಮಾಡಿದ್ದಿಲ್ಲ. ...ದು ಕ್ರಯ ಮಾತ್ರ:—

ದೊಡ್ಡ ಬಾಟ್ಲು ಒಂದಕ್ಕೆ ರೂ. ೨—೧೨—೦

ಸಣ್ಣ ಬಾಟ್ಲು ಒಂದಕ್ಕೆ ರೂ. ೦—೧೧—೬

...ಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮—೪—೦

" ೩ " " " ರೂ. ೭—೦—೦

...ಕ್ಷ ಪಡುವವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ:—ಎಚ್. ಎ. ಫ್ಲೋರವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೇ ೭ ಮೋ ೯ ಸಿ ಯಾ.



ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಜೋಲ್ಟರ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ಪತ್ನಾಲಪಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಎದೆ ಹೊರಳುವದು, ...ಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ...ತ್ತು ಚೇಳು ಕಚ್ಚಿದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಹೋದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನಿಟ್ಟಿಸಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ

ಕ್ರಯ ೧ ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨—೮ ಆಣೆ ಬಾಪ್ತು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ ...೨—೮ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯುಂಬ್ರೋಕೇಷನ್

ಈ ತೈಲವು ದನೇ ನೋವುಗಳಿಗೆ ಉಪಯೋಗಿಸತಕ್ಕದ್ದು ...ಸರ್ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋ...ಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಆದಕ್ಕಿಂತಲೂ ...ದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ, ಇದನ್ನು ...ವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ... ಆಣೆಗೂ, ೧ ರೂ ಗೂ ಒಂದರಂತೆ ವಿಕರಿ ಮಾಡಲ್ಪಡುವದು ೧೨ ...ಟ್ಟಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಪಾತ್ರಗಳ...ಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ...ಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪನಿ, ೨೩ ಸೆಕಂಡು ಲೈನ್ ...ಚ್, ಮದರಾಸ್

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು. ತಯಮಾಡಿದ್ದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

65-21

ವ್ಯಾಪಾರದ C C E C ಹೆಗ್ಗುರ್ತು

ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವರ ಹರಿ. 71-10



ಇದು ಸಾಧಾರಣ ಜ್ವರ, ಚಳಿಜ್ವರ, ಮೋರೆಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ. ಚಳಿ ಹಿಡಿಯುವದು, ಎಂಬ ಕಾಲವಿಶೇಷಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಡ್ಜಿಕಚೇರಿಯಲ್ಲಿರುವ ಮುನಿಷಿಯ ಅಲಾಸ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ಗ್ರೂ, ೧—೮ ರೂ.: ೪೫. ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓ ಮು ಂ ಕ ರ್ಪೂ ರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆ ಹುವದು, ವಾಂತಿಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಪೆನ್ನಿಯು ಓಮುಂ ಕರ್ಪೂರವನ್ನು ನಾನೂ ನನ್ನ ಹಾಸ್ಪೇಟಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆವು ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾತ್ರಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ, ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಹನ್ನಿರುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ,

ಸೆಕೆಂಡ್ ಲೇನ್ ಲೈನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲು ಇತರ ಕಡೆಗಳಲ್ಲು ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸಹಿತ . ರೂ. ೧—೧೪—೦

" " " —೧೫—೦

ಚಂದಾದಾರರಾಗ ಬಯಸುವವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ನೀವು ವಿಲಾಯತಿಯಿಂದ ಯಾವ ಸಾಮಾನುಗಳನ್ನಾದರೂ ತರಿಸಿಕೊಳ್ಳಬೇಕಾಗಿದ್ದರೆ 19-25

ಜ್ಯೆಟ್ ಮತ್ತು ಫೋಸ್ಟ್ ಲೆಂಡ್,

೭೯—೩೫, ಸಿಟಿ ರೋಡ್, ಲಂಡನ್, ಇ. ಸಿ.

ವಿಂಟರ್ ವಿಳಾಸಕ್ಕೆ ಬರೆಯಿರಿ, ಕಾಗದ ಬರೆಯುವ ಕಾಗದಗಳಿಗೆ ... ಇಂಡಿಯಾ ಪೋಸ್ಟ್ ಕಾರ್ಡುಗಳನ್ನು ಬರೆಯಬಾರದು

ಈ ಕಂಪನಿಯವರು ಪೇಟೆಂಟ್ ಔಷಧಿಗಳನ್ನೂ ಆಲಂಕಾರ... ಸಾಮಾನು ... ಸಂಬಂಧ... ಅವರು ... ಕಳುಹಿಸಿಕೊಡುವರು.

ಕಾಗದಗಳನ್ನು ಇಂಗ್ಲಿಷಿನಲ್ಲೇ ಬರೆಯಬೇಕು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—10

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೧೮ ಸಾವಿರ ಷೇರುಗಳಿಂದಾಗುವ ೪೫ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೨೫ ಕಂತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೬ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬರುವದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ೩ ರವು ನಾಲ್ಕರಂತೆ ಬಡ್ಡಿ ಕೊಡುವ ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ಬರುವ ಮಹಾಶಯರುಗಳಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಂಪನಿಗೆ ಸಬ್ ಏಜಂಟರಾಗಿ ವಿಕರಿಮಾಡಲು ಇಷ್ಟವುಳ್ಳ ಜವಾಬ್ದಾರಿಯಾದ ಜನರು ನಮ್ಮ ಹೆಸರಿಗೆ ಅರ್ಜಿ ...

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಆದರೆ, ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ಅದ್ಭುತದ ಮೇಲೆ ಅದ್ಭುತ.

86 6

ಸಂಸಾರದಲ್ಲಿ ಯಾರಾದರೂ ಒಬ್ಬರು ಮಲಗಿದ್ದರೆ ಆ ಸಂಸಾರಕ್ಕೆ ಸೇರಿದವರಲ್ಲಿ ಯಾರಿಗೂ ಸಂತೋಷವಾಗಲಿ ಸಮಾಧಾನವಾಗಲಿ ಇರುವುದಿಲ್ಲ. ಹೀಗೆ ಮಲಗಿರುವವರ ಕಾಯಿಲೆಯು ಎಷ್ಟೇ ಸಾಮಾನ್ಯವಾಗಿದ್ದರೂ ಅದೇ ಮಾತು. ಎಲ್ಲಾ ತರದ ಮೈಯುನೋವು, ಆರವಲೆ ನೋವು, ನರಗಳ ಇರಿತ, ತಲೆನೋವು, ತಲೆಭಾರ, ಕೆಮ್ಮುಗಳು, ಎದೆಯ ನೋವು ಶೀತ, ಉಳುಕು, ಗಂಟಲು ಕಟ್ಟು, ಕೀಲು ಬೆನ್ನು ಎದೆಗಳ ನೋವು, ಅಸ್ತ್ರ, ಈ ಸ್ಥಿತಿ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಚಿಂತೆಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಯೂರೆಟಿವ್ ಕಂಪನಿಯವರ ಮ್ಯಾಜಿಕ್ ಬಾಂಬ್ ಎಂಬ ಔಷಧವನ್ನು ತೆಗೆದು ನೋವಿರುವ ಸ್ಥಳದ ಮೇಲೆ ಮಾತ್ರ ಹಚ್ಚಿದರೆ, ಅದು ಕೂಡಲೆ ಒಳಕ್ಕೆ ವ್ಯಾಪಿಸಿ, ನೋವು ಹುಟ್ಟಿದ ಸ್ಥಾನವನ್ನು ಸೇರಿ, ಒಂದಾವರ್ತಿ ಉಜ್ಜುವುದರಿಂದಲೇ ನೋವನ್ನು ಎರಡು ನಿಮಿಷಗಳಲ್ಲೇ ವಾಸಿ ಮಾಡುತ್ತದೆ. ನೋವು ಖಂಡಿತವಾಗಿ ನಿವಾರಣೆಯಾಗುವುದು. ಈ ಔಷಧವನ್ನು ಹ್ಯಾಗೆ ಉಪಯೋಗಿಸಬೇಕೆಂಬ ವಿಧಾನವುಳ್ಳ ... ಬುಡ್ಡಿಯ ಜೊತೆಯಲ್ಲೇ ... ಇಟ್ಟು ಕಳುಹಿಸುತ್ತೇವೆ. ಇದನ್ನು ... ಈ ಔಷಧದ ಒಂದು ಬುಡ್ಡಿಯನ್ನು ತರಿಸಿಕೊಳ್ಳಿ ...

ನಮ್ಮ ... ಅಡ್ರೆಸ್, ಕ್ಯೂರೆಟಿವ್ ... ಮದರಾಸ್.

ಇಮಿಟೇಷನ್ ವಜ್ರದ ಹರಳಿನಲ್ಲಿ ತಯಾರಿಸಿದ ಹರಳು ಗುಂಡು

99 3



ಸವರನ್ನಗಳಿಗೂ ... ಕಡಿಮೆ ... ಆದ ವಜ್ರದ ... ಇದ್ದಾಗ್ಯೂ ... ಆದ ವಜ್ರಕ್ಕೆ ಸಮಾನವಾದ ಪ್ರತಿರೂಪ ವಜ್ರವನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಂಡ್) ಎಂಬ ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಹರಳು ಗುಂಡುಗಳನ್ನು ತಯಾರಿಸಲ್ಪಟ್ಟಿರುತ್ತೇವೆ. ಇದರ ಪ್ರಕಾಶವು ದೀಪದ ಬೆಳಕಿಗೆ ... ವಜ್ರಕ್ಕೆ ಸ್ವಲ್ಪವಾದರೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇದನ್ನು ಒಂದು ಸೆಟ್ಟು ತರಿಸಿ ಪರೀಕ್ಷಿಸಿದರೆ ಇದರ ನಿಜಸ್ಥಿತಿ ಗೊತ್ತಾಗುತ್ತೆ.

ಜರ್ಮನ್ ಸಿಲ್ವರ್ ಘಟ್ಟಿ ಕಾಲಕಡಗ

ಅನೇಕರು ಸುಲಭಕ್ರಯದಲ್ಲಿ ತಯಾರಿಸಿ ಕಳಿಸಬೇಕೆಂದು ಕೋರಿದ್ದು ಸಕಲರಿಗೂ ಉಪಯೋಗವಾಗುವ ಹಾಗೆ ಇರಬೇಕೆಂಬುವ ಅಭಿಪ್ರಾಯದಿಂದ ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ಕಂಟಿ ಮತ್ತು ತಗಡುಗಳನ್ನು ತರಿಸಿ ಅವುಗಳಿಂದ ಸಕಲ ಆಭರಣಗಳನ್ನು ತಯಾರಿಸುತ್ತಲಿದ್ದೇವೆ. ಇವುಗಳ



ಬೆಳ್ಳಿ ರಂಗು ಎಷ್ಟು ವರುಷಗಳಾದರೂ ಕೆಡದು ... ನಮೂನೆಯ ಮೇರಿಗೆ ಈ ಕಾಲ ಕಡಗಗಳನ್ನು ನಾಲ್ಕು ತರವಾಗಿ ತಯಾರಿಸಲ್ಪಟ್ಟಿರುತ್ತವೆ. ಇವುಗಳ ರಂಗು ಇತರ ... ಜರ್ಮನ್ ಸಿಲ್ವರ್ ... ಹಾಗೆ ಅರಿಶಿನ ಬಣ್ಣಕ್ಕೆ ತಿರಗದೆ ಸ್ವಚ್ಛವಾದ ಬೆಳ್ಳಿಗೆ ಸಮಾನವಾಗಿ ಇರುತ್ತೆ. ಎಲ್ಲರು ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯವನ್ನೇ ಇಟ್ಟಿದ್ದೇವೆ.

ನಂ ೧	ದೊಡ್ಡವರಿಗೆ	ರೂ.	೧-೦-೦
,, ೨	ಚಿಕ್ಕವರಿಗೆ	,,	೦-೪-೦
,, ೩	ಹುಡುಗಿಯರಿಗೆ	,,	೦-೧೨-೦
,, ೪	ಮಕ್ಕಳಿಗೆ	,,	೦-೭-೦

ಮೈಸೂರು ದೇಶದ ಕೈಕಪ್ಪ ಬೆಲೆ ರೂಪಾಯಿ ೧-೦-೦

ಇದನ್ನು ... ಹೊಸರು ಕೈಗೆ ... ಗಾರದ ಗಿಲೀಟಿನ ... ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇದರ ಬಣ್ಣ ... ಗಾರದ ಗಿಲೀಟ್ ... ಇದನ್ನು ... ಡ ಭಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ—ಮ್ಯಾನೇಜರ್, ... ಜ್ಯುಯಲ್ ... ಸಾಹುಕಾರ್ ಪೇಟೆ, ಮದರಾಸು.

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು

15 26

... ಕೆಮ್ಮು, ಗಂಟಲು ... ಹುಡುಗರ ... ಎಲ್ಲಾ ... ವ್ಯಾಧಿಗಳೂ—ಇವುಗಳಿಗೆಲ್ಲಾ ಈ ಔಷಧವು ಬಹಳವಾಗಿ ... ಕೆಮ್ಮನ್ನು ಅಲಕ್ಷ್ಯಮಾಡಬಾರದು ... ಕೆಮ್ಮಿನ ಔಷಧವು ... ಕೆಮ್ಮನ್ನು ...

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ... ಇಲ್ಲ.

ಈ ಔಷಧವು ಸಮಸ್ತ ... ತಯಾರಿ ...

ತ್ವರೆ ಮಾಡಿರಿ ... ಬಿಡಬೇಡಿರಿ !

ಇಂಥಾ ... ರಾಸ್‌ಕಾಫ್ ಸಿಸ್ಟಂ ವಿಚ್ಛರ್ ವಾಚು



ಇದರ ... ಕೊಂಡರೆ ... ಯಾಂತ್ರ ೦-೯-೦ ... ೦-೯-೦ ವಿ ಪಿ ಇಂದಲೂ ರವಾನಿಸುತ್ತೇವೆ.

ವಿಳಾಸ—ಜೆಂ ಯಲ್ ಜೋಶಿ ಅಂಡ್ ಕೋ,

ಪೋಸ್ಟ್ ಶಿರ್ಸಿ, ಜಿಲ್ಲಾ ಉತ್ತರ ಕನಡಾ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION 57-16

(ಸ್ಕೋಟ್ಸ್ ಇಮಲ್ಶನ್)

ಘಟ್ಟಿ ಶರೀರವುಳ್ಳವರಿಗೆ ಪ್ಲೇಗ್ ಮಹಾಮಾರಿರೋಗ ನಾಂತಿ ಬೇಧಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ಪಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಿಗಳಿಂದಲ್ಲೂ ದೊರೆಯುತ್ತದೆ.

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್

ರಸಾಯನಿಕರು ... ಲಂಡನ್ ಇಂಗ್ಲೆಂಡ್

ಈ ಮೀನನ್ನು ... ಇರುವ ಔಷಧ ... ಕೊಳ್ಳಿ

ರಬ್ಬರ್ ಸ್ಟಾಂಪುಗಳು



ನಮ್ಮ ಕಂಪನಿಯಲ್ಲಿ ... ಇಂಗ್ಲಿಷ್ ... ರಬ್ಬರ್ ಸ್ಟಾಂಪುಗಳನ್ನು ... ಸುಂದರವಾದ ರಬ್ಬರ್ ಸ್ಟಾಂಪು ... ರೂ ೧-೪-೦ ... 93 2

ವಿಳಾಸ—ಮ್ಯಾನೇಜರ್, ರಬ್ಬರ್ ಸ್ಟಾಂಪ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ಪಾರ್ಕ್ ಟೌನ್, ಮದ್ರಾಸ್

ವೃತ್ತಾಂತ ಪತ್ರಿಕೆ

ಸರ್ ... ೫ನೇ ಜುಲೈ ... ೧೯೦೩

ಮೈಸೂರು ಪಟ್ಟಣವೂ ಕುಡಿಯುವ ನೀರೂ

ಮೈಸೂರು ಸಂಸ್ಥಾನಕ್ಕೆ ರಾಜಧಾನಿಯಾಗಿರುವ ಪಟ್ಟಣದಲ್ಲಿ ಪ್ರಜೆಗಳಿಗೆ ಆರೋಗ್ಯಕರವಾದ ಕುಡಿಯುವ ನೀರು ಸಾಕಾದಷ್ಟು ಸಿಕ್ಕದೆ ಬಹಳ ಕಷ್ಟನಷ್ಟಗಳುಂಟಾಗುತ್ತಿವೆ ಎಂದೂ ಕೂಡಲೇ ಅದಕ್ಕೆ ಸಮರ್ಪಕವಾದ ಏರ್ಪಾಡು ಮಾಡಬೇಕೆಂದೂ ನಾವು ಗವರ್ನಮೆಂಟಿನವರಿಗೆ ತಿರಿಗಿ ತಿಳಿಸಿ ಎಚ್ಚರಿಕೆ ಹೇಳಬೇಕಾಗಿದೆಯೆಂದು ವಿಷಾದಪಡುತ್ತೇವೆ. ಸುಮಾರು ಐದು ತಿಂಗಳಿಂದಲೂ ಪ್ರಜೆಗಳು ನೀರಿಗೆ ತುಂಬಾ ಪಾಡುಪಡುತ್ತಿದ್ದಾರೆ. ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀಮನ್ಮಹಾರಾಜರವರು ಇಂಜನಿಯರುಗಳ ಸಮೇತ ಬಳಗೊಳಕ್ಕೆ ದಯಮಾಡಿ ನೀರು ಎತ್ತುವ ಏರ್ಪಾಡನ್ನು ಪರಿಶೀಲಿಸಿಕೊಂಡು ... ಮಾಡಿಸಿದರೆಂತಲೂ, ಇಂಜನಿಯರುಗಳ ಸಲಹೆಯ ಪ್ರಕಾರ ಅಲ್ಲಿ ದೊಡ್ಡದಾದ ನೀರು ಎತ್ತುವ ಹಬೆ ಯಂತ್ರಗಳನ್ನು ಇಡಿಸುತ್ತಾರೆಂತಲೂ ಪ್ರಕಟವಾಯಿತು. ಇದಕ್ಕೆ ತುಂಬಾ ಹಣ ಖರ್ಚಾಗಬೇಕಾದದ್ದಿಲ್ಲ. ಈಗಲಾದರೋ ಹಬೆ ಯಂತ್ರಗಳನ್ನಿಡುವುದಕ್ಕೆ ಬದಲಾಗಿ ಶಿವಸಮುದ್ರದ ಶಾಖೆಯಿಂದ ವಿದ್ಯುಚ್ಛಕ್ತಿಯನ್ನು ತಂತಿಗಳ ಮೂಲಕ ... ಗೊಳಕ್ಕೆ ತಂದು ಬಿಟ್ಟು ಅದರ ಸಹಾಯದಿಂದ ನೀರು ಎತ್ತುವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರು ಆಲೋಚಿಸುತ್ತಿರುವುದಾಗಿ ವರ್ತಮಾನ ಹುಟ್ಟಿದೆ. ... ಕ್ಕಾಗಿ ಹೊಸ ಇರ್ಜಗಳನ್ನು ತಂದಿಡಬೇಕಾಗುವುದರಿಂದ ಎಷ್ಟು ಆತುರಪಟ್ಟು ಕೆಲಸಮಾಡಿಸಿದಾಗ್ಯೂ ವಿದ್ಯುಚ್ಛಕ್ತಿಯನ್ನು ತರುವುದಕ್ಕೆ ಒಂದು ವರುಷವಾದರೂ ಬೇಕಾಗುವುದು. ಅದುವರೆಗೆ ಪ್ರಜೆಗಳ ಗತಿಯೇನು ? ಸಾವಕಾಶವಾದಷ್ಟೂ ಕಷ್ಟನಷ್ಟಗಳು ಅಪಾರವಾಗುವವೆಂದು ನಾವು ಹೇಳಬೇಕಾಗಿಲ್ಲ. ಸದ್ಯದಲ್ಲಿ ಹಬೆಯ ಸಹಾಯದಿಂದ ... ಗಳು ನೀರು ಎತ್ತುವಂತೆ ಬೇಗನೆ ಏರ್ಪಾಡು ಮಾಡಿದರೆ ಎಷ್ಟೋ ಉಪಕಾರವಾದೀತು.

ಎರಡು ವಾರಗಳಿಂದ ಕುಕ್ಕರಹಳ್ಳಿ ಕೆರೆಯು ಬಗ್ಗಡದ ನ್ನು ಪ್ರಜೆಗಳು ಉಪಯೋಗಿಸುತ್ತಿದ್ದಾರೆ; ಬಹಳ ದಿನ ನ ಸೇದದೆ ಬಿಟ್ಟಿದ್ದ ಭಾವೀ ನೀರನ್ನು ಉಪಯೋಗಿ ತು. ಇದರ ಪರಿಣಾಮವೇನೆಂಬುದನ್ನು ವಿವರಿಸಲು ಪಡುವೆವು ನಾವು ಮೊದಲೇ ಸರ್ಕಾರದವರನ್ನು ರಿಸಿದ್ದಂತೆ ರಾಜಧಾನಿಯಲ್ಲಿ ವಾಂತಿಭೇದಿ ಉಪದ್ರವು ಸಂಭವವಾಯಿತು. ಇದುವರೆಗೆ ಸುಮಾರು ೬೫ ಜನರಿ ಉಪದ್ರುತಗಳಿದ್ದರ ಪೈಕಿ ೧೫—೧೬ ಜನರು ಕಾಲವಾ ತ್ತಾರೆ. ಈ ಭಯಂಕರವಾದ ಅಂಟುಜಾಡ್ಯವು ರಾಜ ಯಲ್ಲಿ ಅನೇಕ ವರುಷಗಳಿಂದ ನಿರ್ನಾಮವಾಗಿದ್ದಿತು. ರ್ನಮೆಂಟಿನವರು ಇನ್ನಾದರೂ ಈ ವಿಷಯಕ್ಕೆ ನ ಕೊಟ್ಟು ಪ್ರಜೆಗಳು ಅನ್ಯಾಯವಾಗಿ ಅಕಾಲಮೃ ವಶವಾಗದಂತೆ ಬಹು ಆತುರದಿಂದ ಅವಶ್ಯವಾದ ಏರ್ಪಾ ಮಾಡಬೇಕಾಗಿದೆ. ಈಗ ಸರಬರಾಯಿ ಆಗುತ್ತಿ ನೀರು ಪ್ರಜೆಗಳಿಗೆ ಸಾಲದು; ಬಹಳ ಅನಾರೋಗ್ಯ ವಾಗಿಯೂ ಅತೃಪ್ತಿಕರವಾಗಿಯೂ ಇರುತ್ತದೆ.

ಒಳದೇಶದ ವೃತ್ತಾಂತಗಳು.

ಉಂಡ ಪ್ರಿನ್ಸ್ (ಪ್ಲೇಗಿನಲ್ಲಿ ಕೆಲವು) ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಗವರ್ನಮೆಂಟಿನವರು ೪೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

◆◆◆◆

ಶಿವಮೊಗ್ಗೆಯಲ್ಲಿ ಕಟ್ಟುವ ಚಾಮರಾಜ ಮೆಮೋರಿಯಲ್ ಹಾಲ್ ಗಳಿಗಾಗಿ ಸರ್ಕಾರದವರು ಮತ್ತೆ ೩,೫೦೦ ರೂಪಾಯಿ ಸಹಾಯ ವನ್ನು ಸ್ಯಾಂಕ್ಷನ್ ಮಾಡಿದ್ದಾರೆ

◆◆◆◆

ಬೆಂಗಳೂರು ಕ್ರೈಸ್ತ ಮಂಡಲಿಯವರು ಅಲ್ಲಿನ ಲಂಡನ್ ಮಿಷನ್ ಸ್ಕೂಲಿನಲ್ಲಿ ಎರ್ನೆ ಮೆ॥ ರಾಘವರಾಯರಿಗೆ ನೆನ್ನೆ ಸಾಯಂಕಾಲ ದ ಅರ್ಪಿಸ್ನನ್ನು ಒಪ್ಪಿಸುವರಾಗಿದ್ದರು

◆◆◆◆

ನರಸೀಪುರದ ಬಳಿ ಹಳ್ಳಿಯಲ್ಲಿ ಎಂಬ ಎಸ್ಟೇಟನ್ನು ಪ್ರಸಿದ್ಧ ವ ರ್ತಕರಾದ ರೈ ಸಾಹೇಬರವರು ಪಡೆದುಕೊಂಡು, ಆ ತೋಟದಲ್ಲಿ ೫,೦೦೦ ಹತ್ತಿ ಗಿಡಗಳನ್ನು ಹಾಕಿಸುತ್ತಾರೆ

◆◆◆◆

ತುಮಕೂರು ತಾಲ್ಲೂಕು ಗೊಳಹರವಿ ಗ್ರಾಮದಲ್ಲಿ ಮೊನ್ನೆ ಶನಿ ದ ಸಾಯಂಕಾಲ ಜಸಮಕ್ಕನೆಂಬುವಳು ನಾಗರಹಾವು ಕಚ್ಚಿದು ಲ್ಪ ಹೊತ್ತಿನೊಳಗಾಗಿ ಕಾಲವಾದಳೆಂದು ಕೇಳುತ್ತೇವೆ.

◆◆◆◆

ಎಕ್ಸೈಜ್ ಕಮೀಷನರ್ ಮೆ॥ ಪಿ. ಎನ್. ಪ್ರಾಸ್ಪರ್ ಯವರು ಅಪ್ರಿಂಟೆಂಡೆಂಟರ ಕೆಲಸಕ್ಕೆ ಮೆ॥ ಸ್ಪಾರ್ಕ್ಸ್ ವರು ನೇಮಕವಾಗಬಹುದೆಂಬ ವರ್ತಮಾನವಿದೆ

◆◆◆◆

ಸೊರಬಕ್ಕೆ ಆನವಟ್ಟಿಗೆ ರಸ್ತೆ ಮಾಡುವುದಕ್ಕೆ ೨೩,೪೦೦ ರೂಪಾಯಿ ಬೇಕಾಗುವದೆಂದು ಅಂದಾಜು ಪಟ್ಟಿ ತಯಾರಾಗಿದೆ ಈ ರ್ಚನ್ನು ಇನ್ನೂ ಸ್ವಲ್ಪ ಕಡಿಮೆ ಮಾಡುವ ವಿಷಯದಲ್ಲಿ ಚರ್ಚೆ ಯಾಗುತ್ತಿರುವುದು

◆◆◆◆

ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಜಡ್ಜಿಯಾಗಿದ್ದ ಮೆ॥ ಪಿ. ಎಸ್ ಕೃಷ್ಣರಾಯರಿಗೆ ಮೈಸೂರು ಚೀಫ್ ಕೋರ್ಟ್ ಜಡ್ಜಿಯ ಕೆಲಸವಾ ಯಿತು. ಇವರು ಕಳೆದ ವಾರ ಚೀಫ್ ಕೋರ್ಟಿಗೆ ಬಂದು ಕೆಲಸದ ಚಾರ್ಜನ್ನು ವಹಿಸಿಕೊಂಡಿರುತ್ತಾರೆ

◆◆◆◆

ಬೆಂಗಳೂರು ಸೆಂಟ್ರಲ್ ಜೈಲ್ ಸುಪರಿಂಟೆಂಡೆಂಟರಾಗಿದ್ದ ಮೆ॥ ಹ್ಯಾಂ ರೈಟ್ ಯವರು ರಜಾ ಪಡೆದು ಮೊನ್ನೆ ಭಾನುವಾರ ಸೀಮೆಗೆ ಪ್ರಯಾಣ ಮಾಡಿದರು. ಅವರ ಕೆಲಸಕ್ಕೆ ರಾಜಧಾನಿಯಲ್ಲಿದ್ದ ಸಿವಿಲ್ ಸರ್ಜನ್ ಮೆ॥ ಅಚ್ಯುತರಾಯರು ನೇಮಿಸಲ್ಪಟ್ಟಿದ್ದಾರೆ

◆◆◆◆

ಕೋಲಾರ್ ಚಿನ್ನದ ಗಣಿಗಳಲ್ಲಿ ಕಳೆದ ವಾರ ಕೂಲಿಯವರು ಕೆಲಸ ಮಾಡುತ್ತಿರುವಲ್ಲಿ ಭೂಮಿಯು ಸ್ವಲ್ಪ ಅದುರಿತು. ಅಷ್ಟಕ್ಕೇ ಮೇಲಿನಿಂದ ಭಾರಿ ಭಾರಿ ಕಲ್ಲುಗಳು ಬಿದ್ದು ನಾಲ್ವರು ಮೃತಪಟ್ಟರೆಂ, ಉಳಿದ ಕೆಲವರಿಗೆ ಗಾಯಗಳಾದವೆಂತಲೂ ತಿಳಿದುಬಂದಿದೆ

◆◆◆◆

ಶಿವಮೊಗ್ಗಾ ತಾಲೂಕು ಕುಂಸಿ ಹೋಬಳಿಯಲ್ಲೂ ಹೊನ್ನಾಳಿ ತಾಲ್ಲೂಕು ರಾಂಪುರದಲ್ಲೂ ವರುಷ ಬಿಟ್ಟು ವರುಷ ಗೋಕಾಯಿಗಳ ಪ್ರದ ರ್ಶನವನ್ನು ನಡಿಸಿ, ಉತ್ತಮ ತರದ ರಾಸುಗಳಿಗೆ ಬಹುಮಾನಗಳನ್ನು ಕೊಡುತ್ತಾ ಬರಬೇಕೆಂದು ೨೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

◆◆◆◆

ರಾಜಧಾನಿಯಲ್ಲಿರುವ ಸರ್ಕಾರಿ ಇಂಜನಿಯರಿಂಗ್ ಸ್ಕೂಲಿನಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರುಗಳಿಗೂ ಕೇಡ್ದಾರರಿಗೂ ಅವರ ಕೆಲಸಕ್ಕೆ ಅವ ಶ್ಯವಾದ ವಿಷಯಗಳನ್ನು ಕಲಿಸಿಕೊಟ್ಟು ತರಬೇತು ಮಾಡುವುದಕ್ಕಾಗಿ ೫೦ ರೂಪಾಯಿ ಸಂಬಳದ ಒಬ್ಬ ಉಪಾಧ್ಯಾಯನನ್ನೂ ಇತರ ಖರ್ಚು ಗಳಿಗೆ ೨,೪೫೦ ರೂಪಾಯಿಯನ್ನೂ ಸ್ಯಾಂಕ್ಷನ್ ಮಾಡಬೇಕೆಂದು ಸ್ಕೂಲ್ ಮ್ಯಾನೇಜಿಂಗ್ ಕಮಿಟಿಯವರು ಬರೆದದ್ದನ್ನು ವಿದ್ಯಾಭ್ಯಾಸ ಇಲಾ ಖೆ ಇನ್ಸ್‌ಪೆಕ್ಟರ್ ಜನರಲ್‌ರವರು ಗವರ್ನಮೆಂಟಿಗೆ ಕಳುಹಿಸಿದರು. ಸರ್ಕಾರದವರು ಸದ್ಯ ಉಪಾಧ್ಯಾಯನ ಸಂಬಳಕ್ಕೆ ೫೦ ರೂಪಾಯಿ ಇತರ ಖರ್ಚುಗಳಿಗೆ ೨,೬೧೦ ರೂಪಾಯಿ ಸಾಕೆಂದು ಹೇಳಿ ಸ್ಯಾಂಕ್ಷನ್ ಮಾಡಿರುತ್ತಾರೆ

ಮೂಡಿಗೆರೆಯಿಂದ ಮಂಗಳೂರಿಗೆ ಹೋಗಿ ಬರುವ ಮೇಯಿಲ್ ಟಾಂಗಾ ಗಾಡಿಯು ಸೋಮವಾರ್‌ಪೇಟೆ ಎಂಬಲ್ಲಿ ಇಳಿಜಾರಿನಲ್ಲಿ ಬಿದ್ದು ಮಗುಚಿಕೊಂಡಿತು ಗಾಡಿ ಸಂಪೂರ್ಣವಾಗಿ ಮುರಿದು ಹೋಯಿ ತು. ಕುದುರೆಗಳು ಸತ್ತು ಹೋದವು ನಡಿಸುವವನಿಗೆ ಸ್ವಲ್ಪ ಗಾಯ ಮಾತ್ರ ಆಗಿ ಬದುಕಿಕೊಂಡನು.

◆◆◆◆

ಕುಲೀನ್ ಪೇಟೆಯ ಹಿಂದೂ ಮುಸಲ್ಮಾನರ ಪ್ರಜೆಗಳು ಅಲ್ಲಿಂದ ವರ್ಗಾವಣೆ ಆ॥ ಕಮೀಷನರ್ ಮೆ॥ ಆನಂದರಾವ್ ಸಿರ್ಸಿಯವರಿಗೂ ಡೆಪ್ಯುಟಿ ಅಸಿಸ್ಟೆಂಟ್ ಮೆ॥ ಗುಲಾಂ ಮಹಮದ್ ಮೊಕ್ಕೆಯವರಿಗೂ ಬಹು ಉತ್ಸಾಹಪೂರ್ವಕವಾಗಿ ಕಳೆದ ಶನಿವಾರ ಔತನಗಳನ್ನು ಮಾಡಿ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರೆಂದು ತಿಳಿದು ಬಂದಿದೆ

◆◆◆◆

ಬೆಂಗಳೂರು ಚೀಫ್ ಕೋರ್ಟಿನ ಕೆಳಗಡೆ ಒಂದು ದೊಡ್ಡ ಕೊಠಡಿಗೆ ಸರ್ಕಾರದವರು ಪ್ರೆಸ್ ರೂಂ ಎಂಬ ಹೆಸರಿಟ್ಟು, ವರ್ತಮಾನ ಪತ್ರಿಕೆಗಳ ಛಾಪ್ತಿದಾರರಿಗೆ ಮೈಸೂರು ಸರ್ಕಾರಿ ಕಚೇರಿಗಳೂ ರಿಪೋರ್ಟರುಗಳೂ ಸಿಕ್ಕುವಂತೆ ಏರ್ಪಾಡು ಮಾಡಿದ್ದಾರೆ ದಿವಾನರವರೇ ಆ ಕೊಠಡಿಯನ್ನು ಈ ದಿನ ಪ್ರಾರಂಭಿಸುವರೆಂದು ತಿಳಿಯುವುದು

◆◆◆◆

ರಾಜಧಾನಿಯಲ್ಲಿ ಕುಡಿಯುವ ನೀರಿಗೆ ಪರದಾಟವಾಗಿ ಜನರು ಕೆಟ್ಟ ನೀರನ್ನು ಕುಡಿದುದರಿಂದ ಜೂನ್ ೨೫ ರ ಲಾಗಾಯಿತು ವಾಂತಿ ಭೇದಿ ಉಪದ್ರ ಕಾಣಿಸಿಕೊಂಡಿದೆ ಕಳೆದ ೧೦ ದಿನಗಳಲ್ಲಿ ೬೫ ಜನ ರಿಗೆ ಆ ಉಪದ್ರ ತಗಲಿ ೧೫—೧೬ ಜನರು ಕಾಲವಾದರೆಂದು ತಿಳಿದು ಬಂದಿದೆ. ನೀರನ್ನು ಕಾಯಿಸದೆ ಯಾರೂ ಕುಡಿಯಬಾರದೆಂದು ಸರ್ಕಾರ ದವರು ಪ್ರಕಟಿಸಿದ್ದಾರೆ

◆◆◆◆

ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದು ಈಗತಾನೇ ಪೆನ್ಷನ್ ಪಡೆದು ಕೆಲಸ ಬಿಟ್ಟ ಮೆ॥ ಮಹಮದ್ ಜಾಫರ್ ಯವರಿಗೆ ಇಲ್ಲಿನ ಪೋಲೀಸ್ ಇಲಾಖೆಯವರೆಲ್ಲಾ ಸೇರಿ ನೆನ್ನೆ ಸಾಯಂ ಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಬಹು ಆದರಪೂರ್ವಕವಾದ ಔತನವನ್ನು ಮಾಡ ಪಡಗಿದ್ದರು ಪೋಲೀಸ್ ಆಟ ಪಾಟಗಳು, ಸಂ ಗೀತ, ಫಲಾಹಾರಾದಿಗಳು ನಡೆಯುವಂತೆ ಗೊತ್ತು ಮಾಡಿದ್ದರು

◆◆◆◆

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು "ಈವಿನಿಂಗ್ ಮೆಯಿಲ್" ಎಂಬ ಇಂಗ್ಲಿಷ್ ವರ್ತಮಾನ ಪತ್ರಿಕೆಯ ಆಫೀಸನ್ನು ಸೆಷನ್ ಕೋರ್ಟ್ ಆಜ್ಞೆಯ ಪ್ರಕಾರ ಜಪ್ತಿಗೆ ಇಟ್ಟರು ೭,೦೧೦ ರೂಪಾಯಿ ಒಂದು ಮೊದಲು ಕೊಡಬೇಕಾಗಿದ್ದಾಗ ಯಾರೂ ದರಖಾಸ್ತು ಮಾಡಲಿಲ್ಲ ಆದ್ದರಿಂದ ಜಪ್ತಿಯನ್ನು ನಿಲ್ಲಿಸಿರುತ್ತಾರೆ. ಆದರೆ ಆ ಪತ್ರಿಕೆಯು ಏನೋ ಎಂದಿನಂತೆ ಪ್ರಕಟವಾಗುತ್ತಿರುವುದು

◆◆◆◆

ಕಳೆದ ಸೋಮವಾರ ಬೆಳಗ್ಗೆ ಬ್ರಿಟಿಷ್ ರೆಸಿಡೆಂಟರೂ ದಿವಾನರವರೂ ಬೆಂಗಳೂರು ಪಟ್ಟಣದಲ್ಲಿರುವ ಪ್ರಸಿದ್ಧ ಕಾರಖಾನೆಗಳ ರೇಷ್ಮೆ ಕಾರ್ಖಾನೆಗೆ ಹೋಗಿದ್ದರು ಅಲ್ಲಿನ ಅಧಿಕಾರಿಯಾದ ಮೆ॥ ಒಡ್ಡೆಯವರು ಅವರನ್ನು ಎದುರುಗೊಂಡು ಕಾರ್ಖಾನೆಯ ಎಲ್ಲಾ ಭಾಗಗಳನ್ನೂ ತೋರಿಸಿ ವಿವರಿಸಿದರು ಅವರು ನೋಡಿ ಬಹಳ ಸಂತೋಷಪಟ್ಟು ತಮ್ಮ ಅಭಿಪ್ರಾಯವನ್ನು ಪುಸ್ತಕದಲ್ಲಿ ಬರೆದಿಟ್ಟು ಬಂದಿರುತ್ತಾರೆ.

◆◆◆◆

ಮೈಸೂರು ಸೆಷನ್ಸ್ ಕೋರ್ಟಿನ ನಾಜರ್ ಅನಂತರಾಮಯ್ಯ ನವರು ಕೋರ್ಟಿನ ಹಣವನ್ನು ದುರ್ವಿನಿಯೋಗ ಮಾಡಿದ್ದಾನೆಂಬ ಅನುಮಾನದಿಂದ ಜಡ್ಜಿಯವರು ತನಿಖೆ ಮಾಡುತ್ತಿರುವಲ್ಲಿ ನಾಜರು ೩—೪ ದಿನ ತಲೆ ತಪ್ಪಿಸಿಕೊಂಡು ಹೋಗಿದ್ದರು ಇವರ ಹೆಣ ಮೊನ್ನೆ ಸೋಮವಾರ ಅವರ ಶವವು ಇಲ್ಲಿನ ದೊಡ್ಡಕೆರೆ ಕೊಳದಲ್ಲಿ ತೇಲುತ್ತಿತ್ತು. ಸಿಟಿ ಮ್ಯಾಜಿಸ್ಟ್ರೇಟರು ಅಪ್ಪಣೆಯಿಂದ ಶವವನ್ನು ದಹನ ಮಾಡು ವುದಕ್ಕೆ ಒಪ್ಪಿದರು

◆◆◆◆

ಸಂಸ್ಥಾನದಲ್ಲಿ ತಾಲ್ಲೂಕ್ ಕನ್ನಡ ಸ್ಕೂಲು, ತಾಲ್ಲೂಕ್ ಬ್ರಾಂಚ್ ಸ್ಕೂಲು, ಗ್ರಾಮಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಹೊಲೆಯ, ಮಾದಿಗ, ಲಂಬಾಣಿ, ಕೊರಚ, ಕೊರಮ, ವಾಯಿಂದ, ಈ ಜಾತಿಗಳ ಹುಡುಗರಿಂದ ಸ್ಕೂಲ್ ಫೀಜನ್ನು ವಸೂಲ್ಮಾಡದೆ ವಿದ್ಯೆ ಕಲಿಸಬೇಕೆಂದು ಗವರ್ನಮೆಂಟಿನವರು ಕಳೆದ ೨೭ ನೆ ತಾರೀಖಿನಲ್ಲಿ ಹುಕುಂ ದಯಪಾಲಿಸಿರುತ್ತಾರೆ

◆◆◆◆

ಹೊಳಲ್ಕೆರೆಯಲ್ಲಿರುವ ಮಲ್ಲಮ್ಮನೆಂಬ ಹೆಣ್ಣುಮಗಳು ಕಳೆದ ಗುರುವಾರ ಬೈರಪ್ಪನ ಭಾವಿಗೆ ನೀರುತರುವುದಕ್ಕೆ ಹೋಗಿ ಭಾವಿ ಯೊಳಗೆ ಬಿದ್ದುಕೊಂಡಳೆಂತಲೂ ಹೊಸೂರಪ್ಪನು ಕಂಡು ಬಾಂತವೀರಪ್ಪನನ್ನು ಕರೆದುತಂದು, ತಳ ಕಚ್ಚಿದ್ದ ಮಲ್ಲಮ್ಮನನ್ನು ಮೇಲಕ್ಕೆ ಎತ್ತಿಸಿದನೆಂತಲೂ, ಆಕೆಗೆ ಉಪಚಾರ ಮಾಡಿದ್ದರಿಂದ ಬದುಕಿಕೊಂಡಳೆಂತಲೂ ತಿಳಿದು ಬಂದಿದೆ. ಆಕೆಯನ್ನು ಭಾವಿಯಿಂದೆತ್ತಿ ಬದುಕಿಸಿದವರನ್ನು ಅಲ್ಲಿನವರೆಲ್ಲಾ ಕೊಂಡಾಡುತ್ತಿದ್ದಾರೆ

◆◆◆◆

ಶಿವಮೊಗ್ಗಾದಲ್ಲಿ ಮೆ॥ ಎಸ್ ವರದರಾಜೈಯ್ಯಂಗಾರ್ರು ಸ್ವಂತ ಖರ್ಚಿನಿಂದ ಒಂದು ಪಾಠಶಾಲೆಯನ್ನಿಡಿಸಿ ನಡಸುತ್ತಿದ್ದಾರೆ ವ್ಯವಸಾಯ ಮತ್ತು ಇತರ ಕೆಲಸಗಳಲ್ಲಿರತಕ್ಕ ವಯಸ್ಸಾದ ಸುಮಾರು ೭೫ ಮಂದಿ ರಾತ್ರಿ ಹೊತ್ತು ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡು ವರು ಮೆ॥ ಎಸ್. ವರದರಾಜೈಯ್ಯಂಗಾರ್ರು ಕಳೆದ ವಾರ ಈ ಸ್ಕೂಲಿ ನಲ್ಲಿ ಓದುವವರನ್ನೆಲ್ಲಾ ಕೂಡಿಸಿ ಅವರಿಗೆ ಜೂಜು, ನಶ್ಯ, ಹುಟ್ಟು ಬೀಡಿ, ಅಮಲೇರುವ ಪದಾರ್ಥ, ಇಂಥಾ ದುರಭ್ಯಾಸಗಳಲ್ಲಿ ಯಾರೂ ಬೀಳಬಾರದೆಂತಲೂ ಅದರಿಂದ ಮಹದಾಪತ್ತುಗಳು ಪ್ರಾಪ್ತವಾಗುವವೆಂತಲೂ ವಿವೇಕ ಹೇಳಿದ ಹಾಗೂ ಎಲ್ಲರೂ ಅದರಂತೆ ಒಪ್ಪಿಕೊಂಡರೆಂದು ಕಾಗೂ ತಿಳಿಯಬಂದಿದೆ

ಬಹುಮಾನಪಡೆದ ವರ್ತಮಾನ.

[ಈ ವಾರ್ತೆಯನ್ನು ಕಳುಹಿಸಿದ ದೇವನಹಳ್ಳಿ ತಾಲ್ಲೂಕು ದೊಡ್ಡಸಣ್ಣೆಯಲ್ಲಿರುವ ತಿಮ್ಮಪ್ಪನವರಿಗೆ ಈ ವಾರದ ಬಹುಮಾನವನ್ನು ಕಳುಹಿಸುತ್ತೇವೆ.]

ದೊಡ್ಡಸಣ್ಣೆಯಲ್ಲಿ ನಡೆದ ಹಂದಿಗಳ ಹಿಂಸೆ.

ತಾ. ೨೮—೬—೧೯೦೬ ಬೆಳಗ್ಗೆ ೬ ಗಂಟೆಗೆ ಎಲ್ಲಿಂದಲೋ ಎರಡು ಹಂದಿಗಳು ಈ ಊರು ಕೆರೆಕಟ್ಟೆಯ ಮೇಲೆ ಹೊರಟು ಊರಿನ ಸಮೀಪಕ್ಕೆ ಬಂದವು ಯಾರೋ ಹುಡುಗರು ಬಂದ ಹಂದಿಗಳನ್ನು ಬೆದರಿಸಿದರು. ಅವು ಸಮೀಪದಲ್ಲಿದ್ದ ಸೊ. ಮುನಿಯಪ್ಪನ ಮೆಣಸೀ ತೋಟಕ್ಕೆ ಹೋಗಿ ನೆಲವನ್ನು ಮೂತಿಯಿಂದ ಕೆರೆದು ಗುಣಿಗಳನ್ನು ಮಾಡಿ ಬೆಳೆಯನ್ನು ಹಾಳುಮಾಡುತ್ತಿದ್ದವು ಅಷ್ಟುಹೊತ್ತಿಗೆ ತೋಟದ ಮಾಲೀಕನಾದ ಮುನಿಯಪ್ಪನು ಬಂದು ಸದರಿ ಹಂದಿಗಳನ್ನು ತೋಟದಿಂದ ಆಚೆಗೆ ಹೊರಡಿಸಿದನು. ಈ ಹಂದಿಗಳು ಎಲ್ಲಿಂದಲೋ ಬಂದಿವೆ. ಇವನ್ನು ಹಿಡಿದು ಕೊಯ್ಯಬೇಕೆಂದು ಇದೇ ಊರಿನ ಜನರು ಸುಮಾರು ಇಪ್ಪತ್ತು ಜನರು ಗುಂಪಾಗಿ ಸೇರಿ ಆ ಹಂದಿಗಳನ್ನು ಈ ಊರಿನ ಎಲ್ಲಾ ಕಟ್ಟೆಯನ್ನೆಲ್ಲಾ ತಿರಿಗಿಸಿ ನಂತರ ಚಿಕ್ಕಸಣ್ಣೆ ಬಳಿ ಇರುವ ಸರ್ವೆ ತೋಪಿನಲ್ಲಿ ಆ ಪೈಕಿ ಒಂದನ್ನು ಕೊಂದು ಊರಿಗೆ ಸಾಗಿಸಿ ಮತ್ತೊಂದರ ಹಿಂದೆ ಬಿದ್ದು ಈ ಚಿಕ್ಕಸಣ್ಣೆ ಎಲ್ಲಾ ಕಟ್ಟೆಲ್ಲಾ ಹಿಂದಟ್ಟಿ ಓಡಿ ಆ ಮೇಲೆ ಸಣ್ಣೆ ಅಮಾನಿಕೆರೆ ಕೆಳಗೆ ಎಲೇ ತೋಟದಲ್ಲಿ ಬಳಸಿದರು ಅಲ್ಲಿ ಹಂದಿಯು ತಟ್ಟುಬಿದ್ದು ರಾಚಪ್ಪನ ಕಬ್ಬಿನಲ್ಲಿ ಹೋಗಿ ಅಡಗಿಕೊಂಡಿತು ಅಲ್ಲಿಗೂ ಅವರ ಬೆನ್ನುಬಿಡದೆ ಮುಳ್ಳುಗಳಲ್ಲಿ ಬಿದ್ದು ಆ ಹಂದಿಯನ್ನು ಆಚೆಗೆ ಹೊರಡಿಸಿ ಸಮೀಪದಲ್ಲಿದ್ದ ಬಂಬಿನ ಭಾವಿಗೆ ತಳ್ಳಿ ಬಹಳವಾಗಿ ಹಿಂಸಿಸಿ ಕೊಂದು, ಊರಿಗೆ ತೆಗೆದುಕೊಂಡು ಬಂದು, ಗುಜ್ಜಪ್ಪನ ಮನೆಯಲ್ಲಿ ಆ ಹಂದಿಗಳನ್ನು ಕುಯಿದು ಐವತ್ತು ಪಾಲುಗಳು ಹಾಕಿ ಹೊಡಿಯಲು ಹೋಗಿದ್ದವರೆಲ್ಲರೂ ತೆಗೆದುಕೊಂಡರು ಅಲ್ಲಿ ಸೇರಿದ್ದವರ ಪೈಕಿ ದೊಡ್ಡಗೌಡನು ಪಾಲಿಗೆ ಒಂದಾಣೆ ಕೊಡಬೇಕೆಂದು ನಿರ್ಧಾರ ಮಾಡಿದರು. ಈ ದುಡ್ಡನ್ನು ವಸೂಲು ಮಾಡಿ ನಾವೆಲ್ಲರೂ ಸೇರಿ ದೇವರಿಗೆ ಪೂಜೆ ಮಾಡಿಸೋಣ ವೆಂದು ಗೊತ್ತು ಮಾಡಿಕೊಂಡಿರುತ್ತಾರೆ ಇದು ಯಾವ ಧರ್ಮ? ಗೋವನ್ನು ಕೊಂದು ಕೆರವನ್ನು ದಾನ ಮಾಡಿದರೆಂಬ ಗಾದೆಗೆ ಸರಿಯಾಗಿ, ಅನ್ಯಾಯವಾಗಿ ಮೂಗು ಪ್ರಾಣಿಗಳನ್ನು ಹಿಂಸಿಸಿ ಪ್ರಾಣ ತೆಗೆದರಲ್ಲಾ ಎಂದು ನಾನು ಬಹಳವಾಗಿ ವ್ಯಸನ ಪಡುತ್ತೇನೆ

ಬಹುಮಾನದ ಮೇಲಾ ಕ್ಯಾ ಬಂದ ಇತ್ಯಾದಿ

ಮಂತ್ರದ ಆಶ್ಚರ್ಯ

ಮೈಸೂರು ನಗರದ ಗುತ್ತಲು ಬಳಿ ಕಾರ್ಖಾನೆ ಒಂದು ಸಿಂಗಳ ಕೆಳಗೆ ಕಾಕನಕೋಟೆಯಿಂದ ೨—೩ ಭಾರಿ ತೋಳಗಳನ್ನು ಹಿಡಿದವರು ತಂದರು. ಅವನ್ನು ೧—೨ ದಿನಗಳ ಕೆಳಗೆ ಸುಮಾರು ಸುಮಾರು ನಗರದ ಮಂತ್ರವಾದಿ ಗರಡಿಯಲ್ಲಿ ಅರ್ಧರಾತ್ರಿ ಮಂತ್ರ ಹಾಕುತ್ತಿರುವಲ್ಲಿ ಆ ಮರದ ಬುಡದಿಂದ ಹೊರಟಿತು ಬಹಳ ಆಶ್ಚರ್ಯವನ್ನು ಹುಟ್ಟಿಸಿತು ಸ್ವಲ್ಪ ಹೊತ್ತಿನ ಮೇಲೆ ಆ ಮೃಗವು ಸಿಕ್ಕಿಬಿತ್ತು ಮಂತ್ರವಾದಿಯು ಅದನ್ನು ಹಿಡಿದು ಪಂಜರದಲ್ಲಿ ಕೂಡಿದಾನೆ ಇದು ಯಾವ ಪದಾರ್ಥವನ್ನು ತಿನ್ನುವದೋ ಗೊತ್ತಿಲ್ಲ ಏನು ಹಾಕಿದಾಗ್ಯೂ ತಿನ್ನುವುದಿಲ್ಲ ಇದರ ಆಕಾರ ಕಪ್ಪುಬಣ್ಣ, ಮುಖ ಬಾಯಿ ಹಾಗೂ ಬಾಲವು ಆನೆ ಮೊಂಡಿನಂತೆ ಮೇಲಿನಂತೆ ಕೆಳಕ್ಕೆ ಇರುತ್ತೆ ಇದರ ಮೈ ಕೂದಲು ಮರದಂತೆ ದ ಪರಿಮಾಣವೂ ಇರುತ್ತೆ. ಇಂಥಾ ಮೃಗವನ್ನು ಇದುವರೆಗೆ ಇಲ್ಲಿ ಯಾರೂ ನೋಡಿಲ್ಲವೆಂದು ಹೇಳುತ್ತಾರೆ ಇದು ಎಲ್ಲಿ ವಾಸಮಾಡುವದೋ ಏನು ತಿನ್ನುವದೋ ಯಾರಿಗೂ ತಿಳಿಯದು ಇದನ್ನು ಈ ಊರು ನಂತರ ನೋಡುವುದಕ್ಕೆ ಬಂದು ತಲೆಗೆ ೧ ಕಾಸಿನಂತೆ ಟಿಕೆಟ್ ಹಾಕಿದ್ದಕ್ಕೆ — ೩ ರೂಪಾಯಿ ಸಂಪಾದನೆ ಆಯಿತು ಇಂಥಾ ಮೃಗವನ್ನು ಬೆಂಗಳೂರು ಲಾಲ್‌ಬಾಗಿನ ಮೃಗಾಲಯದಲ್ಲಿ ಇಡಿಸಿದರೆ ಬಹಳ ಆಶ್ಚರ್ಯವಾಗುವುದು

[ಈ ಬಹುಮಾನದ ಮೇಲಾಟಕ್ಕೆ ಈ ವಾರ ನಮ್ಮಲ್ಲಿಗೆ ಅನೇಕ ವಾರ್ತೆಗಳು ಬಂದಿರುವವು ಸ್ವಭಾವವಿರುದ್ಧವಾದಂಥಾ ಜನನಗಳನ್ನು ಕುರಿತ ವಾರ್ತೆಗಳಿಗಾಗಲಿ ಬೇರೆ ಬೇರೆ ವರ್ತಮಾನಗಳಲ್ಲಿ ಕಂಡಿದ್ದ ವಾರ್ತೆಗಳಿಗಾಗಲಿ ನಾವು ಬಹುಮಾನ ಕೊಡಲಾರೆವು ಈ ಸಂಗತಿಯನ್ನು ವಾರ್ತೆ ದಾರರು ಚೆನ್ನಾಗಿ ಗ್ರಹಿಸಿಕೊಂಡು, ತಮ್ಮ ಊರಿನಲ್ಲಾಗಲಿ ಅದರ ಸುತ್ತು ಮುತ್ತಿನಲ್ಲಾಗಲಿ ನಡೆದಂಥಾ, ಓದುವವರಿಗೆ ಉತ್ಸಾಹವನ್ನುಂಟುಮಾಡುವಂಥಾ ಯಾವುದಾದ ರೂ ಒಂದು ವಿಶೇಷ ವರ್ತಮಾನವನ್ನು ವಿವರಿಸಿ ವಾರ್ತೆಯನ್ನು ಬರೆದು ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ — ಎಡಿಟರ್.]

(೧) ಪ್ರತಿ ವಾರದ ಲೇಖನದ ಮೇಲೆ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಸ್ಪಷ್ಟವಾಗಿ ತಿಳಿಸಬೇಕು. (೨) ಲೇಖನವು ವಾರ್ತೆದಾರರು ವಾಸಿಸುವ ಸ್ಥಳದ ಒಳಗೆಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧಕಾಲಮಿಗಿಂತ ಹೆಚ್ಚಾಗಿರಬಾರದು ಒಂದು ಕಾಲಮಿಗಿಂತ ಹೆಚ್ಚಾಗಬಾರದು ಇತರರಿಂದ ಬರೆಯಲ್ಪಡಬಾರದು (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು (೪) ಬಹುಮಾನ ಪಡೆದವರ ಹೆಸರನ್ನು ಆಯಾ ವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು.

ಸಂಘಪರಿಷ್ಕರಣ ಕಾರ್ಯಗಳು.

ತಿನ್ನವೆಲ್ಲಿಯಲ್ಲಿ ಮದರಾಸ್ ಪ್ರಾಂತಿಕ್ ಸಾಮಾಜಿಕ ಸಭೆಯು ಹಿಂದಿನ ವಾರ ನಡೆಯಿತು. ಅದಕ್ಕೆ ಸೇರಿದಂತೆಯೇ ಮೆಂಬರುಗಳೆಲ್ಲಾ ಕೂಡಿ, ಹಿಂದೂ ಸಂಘಪರಿಷ್ಕರಣ ಕಾರ್ಯಗಳನ್ನು ಕುರಿತು ಚರ್ಚೆ ಮಾಡಿದರು. ಈ ಸಮಾಜಕ್ಕೆ ರಾವ್ ಬಹದೂರ್ ಎಂ ಆದಿನಾರಾಯಣಯ್ಯನವರು ಅಧ್ಯಕ್ಷರಾಗಿದ್ದರು. ಈ ಸಮಾಜದಲ್ಲಿ ಮೆಂಬರುಗಳು ತೀರ್ಮಾನ ಮಾಡಿರುವ ವಿಷಯಗಳ್ಯಾವವೆಂದರೆ :—

(೧) ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರದವರೂ ದೇಶೀಯ ದೊಡ್ಡಮನುಷ್ಯರೂ ಬಹಳ ಶ್ರಮಪಡುತ್ತಲೂ ಅದನ್ನು ತಕ್ಕ ಮಟ್ಟಿಗೆ ಪ್ರೋತ್ಸಾಹಪಡಿಸುತ್ತಲೂ ಇದ್ದಾರೆ. ಆದರೂ ಸಮಸ್ತ ಹಿಂದೂ ಪ್ರಜೆಗಳೂ ಈ ವಿಷಯಕ್ಕೆ ಇನ್ನೂ ವಿಶೇಷ ಗಮನವನ್ನು ಕೊಡಬೇಕಾಗಿದೆ. ಇದರಿಂದಲೇ ಪ್ರಜಾ ಏಳಿಗೆಗೂ ಸಕಲವಾದ ಸಂಘಪರಿಷ್ಕರಣ ಕಾರ್ಯಗಳಿಗೂ ತುಂಬಾ ಸಹಾಯವಾಗುವುದೆಂದು ತಿಳಿಯಬೇಕು. ಈ ಸಂದರ್ಭದಲ್ಲಿ ಮೈಸೂರಿನ ಶ್ರೀ. ರುಕ್ಮಿಣಮ್ಮನವರೂ ಶ್ರೀ. ಶ್ರೀರಂಗಮ್ಮನವರೂ ಬಿ ಎ. ಪರೀಕ್ಷೆಯಲ್ಲೂ, ಕಲ್ಯಾಣಮ್ಮನವರು ಎಫ್. ಎ ಪರೀಕ್ಷೆಯಲ್ಲೂ, ಆರ್ ವಿ ಸುಬ್ರಹ್ಮಣ್ಯ ಐಯ್ಯರವರ ಕುಮಾರ್ತೆಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿರುವುದನ್ನು ಕೇಳಿ ಹಿಂದೂಗಳೆಲ್ಲರೂ ಸಂತೋಷಪಡುತ್ತಿದ್ದಾರೆ.

(೨) ಬಾಲಕಿಯರನ್ನು ಬೇಗನೆ ಸ್ಕೂಲುಗಳಿಂದ ಬಿಡಿಸದಂತೆ ದೀರ್ಘಕಾಲ ಸ್ಕೂಲಿಗೆ ಕಳುಹಿಸಿ ಚನ್ನಾಗಿ ವಿದ್ಯೆ ಕಲಿಸುವುದಕ್ಕೋಸ್ಕರಲೂ, ಅವರ ಶರೀರಪುಷ್ಟಿಯು ಚನ್ನಾಗಿ, ಘಟ್ಟಿಮುಟ್ಟಾದ ಮತ್ತು ಆಜಾನುಬಾಹುಗಳಾದ ಮಕ್ಕಳನ್ನು ಹೆತ್ತು ಸಾಕಿ ಬೆಳೆಸುವುದಕ್ಕೆ ಸಹಾಯವಾಗುವಂತೆಯೂ ಹೆಣ್ಣುಮಕ್ಕಳಿಗೆ ಚಿಕ್ಕಂದಿನಲ್ಲಿ ಅಂದರೆ ಅವರು ಋತುಮತಿಯರಾಗುವುದಕ್ಕೆ ಮುಂಚೆ ವಿವಾಹಮಾಡುವ ಪದ್ಧತಿಯನ್ನು ಬಿಟ್ಟುಬಿಡಬೇಕು. ಹೀಗೆ ಒಂದೇ ಸಲ ಇಂಥಾ ಬದಲಾವಣೆ ಮಾಡುವುದು ಸಾಧ್ಯವಿಲ್ಲದಿದ್ದರೆ ಹೆಣ್ಣುಮಕ್ಕಳಿಗೆ ೧೬ ವರುಷಕ್ಕೆ ಮುಂಚೆಯೂ ಗಂಡುಮಕ್ಕಳಿಗೆ ೧೮ ವರುಷಕ್ಕೆ ಮುಂಚೆಯೂ ಮದುವೆ ಮಾಡದಿಂತಾದರೂ ಹಿಂದೂಗಳೆಲ್ಲಾ ಕಟ್ಟುಮಾಡಿಕೊಳ್ಳಬೇಕು. ಇದರಿಂದ ಯಾರಿಗೂ ಯಾವ ವಿಧವಾದ ಕಷ್ಟನಷ್ಟಗಳೂ ಉಂಟಾಗುವುದಿಲ್ಲ.

(೩) ಐಶ್ವರ್ಯವಂತರೂ ವಿದ್ಯಾವಂತರೂ ವಿಶೇಷವಾಗಿ ಮದುವೆ ಮುಂತಾದ ಉತ್ಸವಗಳಿಗೆ ತುಂಬಾ ಹಣ ಖರ್ಚುಮಾಡಿ ದುಂದುಮಾಡುವರು. ಇದು ಬಹಳ ವಿಷಾದಕರವಾಗಿರುತ್ತದೆ ಮತ್ತು ಅವರೇ ವಿಶೇಷ ವರದಕ್ಷಿಣೆ ಮುಂತಾದ್ದನ್ನು ಪಡೆಯುತ್ತಾರೆ. ಇದು ಬಹಳ ಲಜ್ಜಾಸ್ಪದವಾದದ್ದು. ವಿದ್ಯಾವಂತರನ್ನೂ ಐಶ್ವರ್ಯವಂತರನ್ನೂ ನೋಡಿ ಕೀಳು ದರ್ಜೆಯಲ್ಲಿರುವ ಪ್ರಜೆಗಳು ಸಾಲಸೋಲ ಮಾಡಿಯೋ ಪಿತ್ರಾರ್ಜಿತವನ್ನು ಹಾಳುಮಾಡಿಯೋ ದುಂದುಖರ್ಚು ಮಾಡುವರು. ಈ ಭಾಗದಲ್ಲಿ ದೊಡ್ಡವರು ಕೀಳು ದರ್ಜೆಯವರಿಗೆ ತಮ್ಮ ನಡತೆಯಿಂದ ಒಳ್ಳೇ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು.

(೪) ವಿಧವೆಯರ ದುಃಖಕರವಾದ ಸ್ಥಿತಿಯನ್ನು ತಪ್ಪಿಸುವುದಕ್ಕೆ ಸಕಲರೂ ಸಾಹಸಪಡಬೇಕು. ಅವರು ವಿದ್ಯಾವತಿಯರಾಗಿಯೂ ಸಂಸಾರ ಕಷ್ಟಗಳನ್ನು ನೀಗುವುದರಲ್ಲಿ ಒಳ್ಳೇ ಸಹಾಯಕರಾಗಿಯೂ ಆಗುವಂತೆ ಅವರಿಗೋಸ್ಕರ ಅಲ್ಲಲ್ಲಿ ವಿಧವಾ ಸದನಗಳನ್ನು ಏರ್ಪಡಿಸಬೇಕು. ಪ್ರೊಫೆಸರ್ ಕಾರ್ವೆಯವರು ಅಂಥಾ ಒಂದು ಸದನವನ್ನು ಇಟ್ಟು ನಡಸುತ್ತಿದ್ದಾರೆ. ಇದಲ್ಲದೆ ವಿಧವೆಯರಲ್ಲಿ ಯಾರಾದರೂ ಇಷ್ಟಪಟ್ಟು ಪುನರ್ವಿವಾಹ ಮಾಡಿಕೊಳ್ಳುವುದಾದರೆ ಅಂಥವರನ್ನಾಗಲಿ ಅವರ ಪ್ರೋತ್ಸಾಹಕರನ್ನಾಗಲಿ ಯಾವವಿಧವಾದ ಕಷ್ಟನಷ್ಟ ಪರಿಹಾಸಗಳಿಗೂ ಗುರಿಮಾಡದಂತೆ ಹಿಂದೂಗಳು ಸರ್ವತ್ರ ಸಮದೃಷ್ಟಿಯುಳ್ಳವರಾಗಬೇಕು.

(೫) ಈ ದಾಸ್ಯ(?)ದ ಗುಪ್ತಧನವನ್ನು ಹೊರಕ್ಕೆ ತೆಗೆದು ಅಭಿವೃದ್ಧಿಗೆ ತರುವುದಕ್ಕೋಸ್ಕರ ನಮ್ಮ ದೇಶದ ಯೌವನಸ್ಥರು ಸಮುದ್ರಯಾನಮಾಡಿಕೊಂಡು ಪರರಾಜ್ಯಗಳಿಗೆ ಹೋಗಿಬರಬೇಕಾದದ್ದೂ, ಕಸಬು ಮುಂತಾದ್ದನ್ನು ಆ ಪ್ರದೇಶಗಳಿಂದ ಕಲಿತು ಬರಬೇಕಾದದ್ದೂ ಬಹು ಅವಶ್ಯವಾಗಿರೋಣದರಿಂದ ಅಂಥಾ ದೇಶಾಭಿವೃದ್ಧಿ ಕಾರ್ಯಾರ್ಥವಾಗಿ ಸಮುದ್ರಯಾನಮಾಡಿ ಬರತಕ್ಕವರನ್ನು ಜಾತಿಯಿಂದ ಹೊರಗೆ ಹಾಕುವುದೇ ಮೊದಲಾದ ನಿರ್ಬಂಧಗಳಿಗೆ ಗುರಿಪಡಿಸದೆ ಸುಲಭವಾಗಿ ಮತ್ತೆ ಜಾತಿಯೊಳಕ್ಕೆ ಸೇರಿಸಿಕೊಳ್ಳುತ್ತಾ ಬರಬೇಕಾಗಿದೆ.

(೬) ಈಗ ಹಿಂದೂ ಜಾತಿಗಳಲ್ಲಿ ಅನೇಕ ಒಳಪಂಗಡಗಳಿರುತ್ತವೆ. ಒಂದು ಪಂಗಡದವರು ಸಹಪಂಕ್ತಿ ಭೋಜನಮಾಡುವುದಿಲ್ಲ; ಹೆಣ್ಣುಕೊಟ್ಟು ತಂದು ಸಂಬಂಧಬೆಳಸುವುದಿಲ್ಲ. ಈ ವಿಷಯದಲ್ಲಿ ಅನೇಕ ನಿರ್ಬಂಧಗಳಿರುತ್ತವೆ. ಇವುಗಳನ್ನೆಲ್ಲಾ ನಿರ್ಮೂಲಮಾಡಬೇಕು. ಈ ಒಳಭೇದಗಳು ಪ್ರಜೆಗಳ ಐಕಮತ್ಯಕ್ಕೂ ಏಳಿಗೆಗೂ ಪ್ರತಿಬಂಧಕಗಳಾಗಿರುವವು.

(೭) ಸಮಸ್ತ ಹಿಂದೂಗಳೂ ವಿಶೇಷ ಸಾಹಸಪಟ್ಟು ಕೀಳುದರ್ಜೆಯಲ್ಲಿರುವ ಪ್ರಜೆಗಳನ್ನು ವಿದ್ಯಾಬುದ್ಧಿ ಕಲಿಸಿ ಉತ್ತಮಸ್ಥಿತಿಗೆ ತರಬೇಕು. ಈ ವಿಷಯದಲ್ಲಿ ಅವರು ಎಷ್ಟು ಸಾಹಸಪಟ್ಟರೂ ನಿಂಥರ್ಕವಾಗುವುದಿಲ್ಲ.

(೮) ಸಂಘಪರಿಷ್ಕರಣ ಕಾರ್ಯವು ಈಗೀಗ ಸರ್ವತ್ರ ವ್ಯಾಪನೆಯಾಗುತ್ತಾ ಬಂದಿದೆ. ಅದರ ಆವಶ್ಯಕತೆಯನ್ನು ಎಲ್ಲಾ ಪಂಗಡದವರೂ ಒಪ್ಪಿಕೊಂಡು, ಕಾರ್ಯಸಾಧನೆಗಾಗಿ ಅಲ್ಲಲ್ಲಿ ಸಾಹಸಪಡುತ್ತಿದ್ದಾರೆ. ಈ ಅಭಿಪ್ರಾಯವು ಇನ್ನೂ ವೃದ್ಧಿಹೊಂದಿ ಜಯವುಂಟಾಗಬೇಕೆಂದು ಹಾರೈಸುವೆವು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಲೆಯ ಮೀಟಿಂಗನ್ನು ನಡಿಸಿದರು. ಆಡಿಟರುಗಳ ರಿಪೋರ್ಟನಿಂದ ಕೆಲವು ಬಾಬುಗಳ ಆದಾಯ ಉತ್ಪತ್ತಿಯು ೧೫೦ ರೂಪಾಯಿ ತನಕ ಕಡಿಮೆಯಾಯಿತೆಂತಲೂ, ಮೇ ತಿಂಗಳಲ್ಲಿ ೩,೨೦೦ ಚಿಲ್ಲರೆ ರೂಪಾಯಿ ಮೊಹತರ್ಫಾ ಬಾಕಿ ವಸೂಲಾಯಿತೆಂತಲೂ, ಇನ್ನೂ ಈ ಬಾಬಿನಲ್ಲಿ ೩೦,೭೦೦ ರೂಪಾಯಿ ತನಕ ಬಾಕಿ ಉಳಿದಿದೆ ಎಂತಲೂ, ಈ ಸ್ವಕಿ ೧೦,೦೦೦ ವರೆಗೆ ರಿಮಿಷನ್ ಆಗತಕ್ಕದ್ದಾಗಿದೆ ಎಂತಲೂ ತಿಳಿಯಲಾಯಿತು.

ರಾಜಧಾನಿಗೆ ನೀರು ಸರಬರಾಯಿ ಆಗುವ ಬಗೆಗೊಳದ ಕಾರ್ಖಾನೆಗೂ ಅದರ ಶಿಬ್ಬಂದಿಗೂ, ಮತ್ತು ಕುಕ್ಕರಹಳ್ಳಿ ಕೆರೆಯ ಶಿಬ್ಬಂದಿಗೂ ಮ್ಯುನಿಸಿಪಾಲಿಟಿಯವರು ವರುಷಕ್ಕೆ ೧೧,೦೦೦ ರೂಪಾಯಿನಷ್ಟು ಖರ್ಚುಮಾಡುತ್ತಿದ್ದಾರೆ. ಈ ನೀರಿನ ಕಾರ್ಖಾನೆಯನ್ನೂ ಶಿಬ್ಬಂದಿಗಳನ್ನೂ ಇಂಜಿನಿಯರ್ ಇಲಾಖೆಯವರು ವಹಿಸಿಕೊಳ್ಳುತ್ತೇವೆಂತಲೂ, ಇದಕ್ಕೆ ಮ್ಯುನಿಸಿಪಾಲಿಟಿಯವರು ಪ್ರತಿ ವರುಷವೂ ೧೩,೦೦೦ ರೂಪಾಯಿ ಕೊಡುತ್ತಾ ಬರಬೇಕೆಂತಲೂ ಛೀಫ್ ಇಂಜಿನಿಯರವರು ಕೇಳಿದರು. ಆದರಂತೆ ನೀರಿನ ಶಿಬ್ಬಂದಿ ಮೊದಲಾದ್ದನ್ನೆಲ್ಲಾ ಇಂಜಿನಿಯರ್ ಇಲಾಖೆಗೆ ವಹಿಸುವುದಾಗಿಯೂ, ಅದಕ್ಕೆ ಸದ್ಯ ವರುಷ ೧ಕ್ಕೆ ೧೨,೦೦೦ ರೂಪಾಯಿನಂತೆ ಕೊಡುತ್ತಾ ಬರುತ್ತೇವೆಂತಲೂ, ನೀರನ್ನು ವಿದ್ಯುಚ್ಛಕ್ತಿಯಿಂದಲೋ ಇಂಜಿನ್ ಸಹಾಯದಿಂದಲೋ, ಚಿಕ್ಕ ದೇವರಾಜ ನಾಲೆಯನ್ನು ಬಂಡ್ ಮಾಡೋಣದಿಂದಲೋ ಹೆಚ್ಚಾಗಿ ರಾಜಧಾನಿಗೆ ಸರಬರಾಯಿ ಮಾಡುವ ಏರ್ಪಾಟನ್ನು ಅತಿ ತ್ವರೆಯಾಗಿ ಮಾಡಿಸಬೇಕೆಂತಲೂ ಮೆಂಬರುಗಳೆಲ್ಲಾ ಒಪ್ಪಿ ಛೀಫ್ ಇಂಜಿನಿಯರಿಗೆ ತಿಳಿಸುವಂತೆ ತೀರ್ಮಾನ ಮಾಡಿದರು.

ಎ. ಬಿ. ರಾಮಣ್ಣನವರು ಆದಾಯ ಕಟ್ಟೆಯಲ್ಲಿ ಇಟ್ಟಿರುವ ಸುಂಕ ತೀರ್ವೆ ಆಗದ ದಿನಸುಗಳಿಗೆ ಮ್ಯುನಿಸಿಪಾಲಿಟಿಗೆ ಸ್ಥಳ ಬಾಡಿಗೆ ಕೊಡುತ್ತಿದ್ದಾರೆ. ಈ ಬಾಡಿಗೆ ದರವನ್ನು ಕಮ್ಮಿ ಹಾಕಿ ಕೊಡಬೇಕೆಂದು ಕೇಳಿಕೊಂಡಿದ್ದರು. ಈ ವಿಷಯದಲ್ಲಿ ಆದಾಯ ಕಟ್ಟೆಯನ್ನು ಈಗಿರುವ ಸ್ಥಳ ತಪ್ಪಿಸಿ ಬೇರೆ ಕಡೆ ಮಾಡಬೇಕೆಂದಿರುವುದರಿಂದ ಇದನ್ನು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡುವ ತನಕ ಈ ಬಾಡಿಗೆ ದರವನ್ನು ಬದಲಾಯಿಸುವುದು ಸರಿಯಲ್ಲವೆಂದು ಮೆಂಬರುಗಳು ತೀರ್ಮಾನ ಮಾಡಿದರು.

ಚಾಮರಾಜ ಪೇಟೆಯಲ್ಲಿ ಮೆ॥ ಲಿಂಗರಾಜ್ ಅರಸಿನವರ ಬಂಗಲಿಯ ಬಳಿ ಇರುವ ೪೦×೬೦ ಗಜ ಪ್ರಮಾಣದ ಖಾಲಿ ನಿವೇಶನವನ್ನು ಬಂಗಲಿ ಕಟ್ಟುವುದಕ್ಕೆ ಬೇಕೆಂದು ಮೆ॥ ಎಂ ಶ್ರೀನಿವಾಸಯ್ಯಂಗಾರ್ರು ಅರ್ಜಿ ಬರೆದಿದ್ದರು. ಆ ಸ್ಥಳವನ್ನು ಅವರಿಗೆ ಗಜಕ್ಕೆ ೧ ಆಣೆಯಂತೆ ಬಿಕರಿಮಾಡಬಹುದೆಂತಲೂ, ಒಂದು ವರುಷದೊಳಗಾಗಿ ಅವರು ಬಂಗಲಿ ಕಟ್ಟಿ ಪೂರೈಸುವಂತೆ ಮುಚ್ಚಳಿಕೆ ಬರೆದುಕೊಡಬೇಕೆಂತಲೂ, ಚಾಮರಾಜ ಪೇಟೆಯಲ್ಲಿ ಖಾಲಿ ನಿವೇಶನಗಳನ್ನು ಬಹುಕಾಲದಿಂದಲೂ ಕಟ್ಟದೆ ಬಿಟ್ಟುಕೊಂಡಿರುವವರಿಗೆಲ್ಲಾ ಕೂಡಲೆ ಮನೆಗಳನ್ನು ಕಟ್ಟುವಂತೆ ನೋಟೀಸ್ ಕೊಡಬೇಕೆಂತಲೂ ಮೆಂಬರುಗಳು ಇತ್ಯರ್ಥ ಮಾಡಿದರು.

ಡಿಸ್ಟ್ರಿಕ್ಟ್ ಜಡ್ಜ್ ಮೆ॥ ಎಸ್. ವೆಂಕಟವರದೈಯ್ಯಂಗಾರ್ರು ಪರವಾಗಿ ಮೆ॥ ಎಂ. ಶ್ರೀನಿವಾಸೈಯ್ಯಂಗಾರ್ರು ಸುಬ್ರಾಯನ ಕೆರೆ ಬಳಿ ಅವರ ಮನೆಯ ಎದುರು ಪಾರ್ಶ್ವದಲ್ಲಿರುವ ಖಾಲಿ ನಿವೇಶನವನ್ನು ಕೊಡಬೇಕೆಂದು ಕೇಳಿಕೊಂಡರು. ಮೆಂಬರುಗಳು ಈ ನಿವೇಶನವನ್ನು ಅವರಿಗೆ ಕೊಡಬಹುದು; ಅವರು ಸುತ್ತಾ ಗೋಡೆ ಹಾಕಿ ಗಿಡ ಮುಂತಾದ್ದು ಬೆಳಸಿ ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡಿರಬೇಕು; ಅಲ್ಲಿ ಕಟ್ಟಡವನ್ನು ಕಟ್ಟಕೂಡದು; ಮ್ಯುನಿಸಿಪಾಲಿಟಿಯವರು ಅಪೇಕ್ಷಿಸುವಾಗ್ಗೆ ಅಥವಾ ಮನೆಯವರಿಗೆ ಬೇಡವಾದಾಗ್ಗೆ ಅವರು ಗೋಡೆ ಹಾಕಿದ ಮಜೂರಿಯನ್ನು ಮಾತ್ರ ತೆಗೆದುಕೊಂಡು ಆ ಸ್ಥಳವನ್ನು ಮ್ಯುನಿಸಿಪಾಲಿಟಿಗೆ ಬಿಟ್ಟುಕೊಡಬೇಕು ಎಂಬದಾಗಿ ಗೊತ್ತುಮಾಡಿದಾರೆ.

ಈ ವರುಷದ ಪ್ರಜಾಪ್ರತಿನಿಧಿ ಸಭೆಗೆ ಮ್ಯುನಿಸಿಪಾಲಿಟಿಯ ಪರವಾಗಿ ಮೆ॥ ಗಳಾದ ಎಂ. ವೆಂಕಟಕೃಷ್ಣಯ್ಯನವರು, ಮಾದಪ್ಪನವರು, ನರ್ಸ ಅಲಿ ಬೇಗ್ ಯವರು, ರಹಿಮತ್ ಉಲ್ಲಾ ಅಹಮದ್ ಸೇಟ್ ಯವರು, ಈ ನಾಲ್ವರು ಪ್ರತಿನಿಧಿಗಳಾಗಿ ಹೋಗತಕ್ಕದ್ದೆಂದು ಮೆಂಬರುಗಳು ಸಮ್ಮತಿ ಹಾಕಿ ಚುನಾಯಿಸಿದಾರೆ.

ರಾಜಧಾನಿಯಲ್ಲಿ ಕಸರೂ ಮುಂತಾದ್ದನ್ನು ಸಾಗಿಸುವುದಕ್ಕೆ ಕನ್ಸರ್ವೆನ್ಸಿ ಬಮಾನರೂ ಗಾಡಿಗಳೂ ಸಾಕಾದಷ್ಟು ಇಲ್ಲವೆಂದು ಹೆಲ್ತ್ ಆಫೀಸರವರು ತಿಳಿಸಿದರು. ಪ್ರತಿ ಒಂದು ಮೊಹಲೆಯ ಒಬ್ಬ ಕಮಿಷನರೂ ವೈಸ್ ಪ್ರೆಸಿಡೆಂಟರೂ ಹೆಲ್ತ್ ಆಫೀಸರೂ ಸೇರಿ ಈ ವಿಷಯವನ್ನು ಚರ್ಚಿಸಿ ಬೋರ್ಡಿಗೆ ರಿಪೋರ್ಟು ಮಾಡಬೇಕೆಂದು ಗೊತ್ತುಮಾಡಿದಾರೆ.

ಮ್ಯುನಿಸಿಪಲ್ ಓವರ್ಸೀಯರ್ ಕೆಲಸವನ್ನು ವಜಾ ಮಾಡಿ ಕಲೆಕ್ಟರನ್ನು ನೇಮಿಸುವ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು ಗವರ್ನಮೆಂಟಿನವರು ಕೇಳಿದ್ದರು. ಮ್ಯುನಿಸಿಪಲ್ ಇಂಜಿನಿಯರ್ ಮೆ॥ ಲಕ್ಷ್ಮಣರಾಯರು ತಮ್ಮ ಆಲೋಚನೆಯನ್ನು ಬಿಚ್ಚಿಮಾಡಿ ಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಈ ವಿಷಯಗಳನ್ನು ಮುಂದಿನ ಮೀಟಿಂಗಿನಲ್ಲಿ ತೀರ್ಮಾನ ಮಾಡಬೇಕೆಂದು ಅಭಿಪ್ರಾಯ ಪಟ್ಟರು.

ಕೃಷ್ಣವಿಲಾಸ್ ಅಗ್ರಹಾರದಲ್ಲಿ ವೆಂಕಟ್ರಮಣ ಸ್ವಾಮಿ ದೇವಸ್ಥಾನದ ವೆಂಕಟರಾಘವೇಂದ್ರ ದಾಸರು ವಾಸಿರುವ ಮನೆ ದೇವಸ್ಥಾನಕ್ಕೆ ಸೇರಿದ್ದಾದ್ದರಿಂದ ಅದಕ್ಕೆ ಮ್ಯುನಿಸಿಪಲ್ ತೆರಿಗೆಯನ್ನು ವಜಾ ಮಾಡಿ ಕೊಡಬೇಕೆಂದು ಅರ್ಜಿ ಬರೆದಿದ್ದರು. ಮೆಂಬರುಗಳು ಈ ವಿಷಯವನ್ನು ಯೋಚಿಸಿ ನ್ಯಾಯವಾಗಿ ದೇವಸ್ಥಾನಕ್ಕೆ ಸೇರಿರುವ ಅದಿಗೆ ಮನೆ ಮುಂತಾದ್ದಕ್ಕೆ ಕಂದಾಯ ವಜಾ ಮಾಡಬಹುದೆಂದು ಮೆ॥ ರಂಗೈಯ್ಯಂಗಾರ್ರೂ ವೈಸ್ ಪ್ರೆಸಿಡೆಂಟರೂ ಅಭಿಪ್ರಾಯಪಟ್ಟು ಈ ಬಾಬ್ತಿನ ಇತ್ಯರ್ಥವಡಿಸಬೇಕೆಂತಲೂ ಗೊತ್ತುಮಾಡಿದರು.

ಬಿರಯ್ಯಸ್ವಾಮಿ ಎಂಬುವರು ಮಾರಕಟ್ಟೆಯಲ್ಲಿನ ಯಾತ್ರೆ ಬಿಟ್ಟುಕೊಂಡು ಮರದ ಸಾಮಾನು ತಯಾರುಮಾಡಿ ಬಿಕರಿ ಮಾಡುತ್ತಿದ್ದಾರೆ. ಇವರು ತಮ್ಮ ಕೋಣೆಯಲ್ಲಿ ಬಿಕರಿ ಆಗುವಷ್ಟಕ್ಕೆ ಮಾತ್ರ ಮ್ಯುನಿಸಿಪಲ್ ಅದಾಯ ತೆರಿಗೆ ತೆಗೆದುಕೊಳ್ಳಬೇಕೆಂದು ಅರ್ಜಿ ಬರೆದಿದ್ದರು. ಮೆಂಬರುಗಳು ಈ ವಿಚಾರದಲ್ಲಿ ಬಹಳ ಚರ್ಚೆ ಮಾಡಿ, ಕಾರ್ಖಾನೆಯಲ್ಲಿ ತೊಲೆಗಳನ್ನು ಕೊಯ್ಯುವುದಕ್ಕೆ ತರುತ್ತಾರೆಯೋ ಕೊಯ್ಯುವ ಮೊದಲೇ ಅವುಗಳ ಸುಂಕವನ್ನು ತೀರಿಸಬೇಕೆಂತಲೂ, ಈ ... ಇನ್ನು ಇಡಬೇಕಾಗುವದರಿಂದ ಇದರ ಶಿಬ್ಬಂದಿ ಖರ್ಚನ್ನು ವಹಿಸಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿದರು.

ಮ್ಯುನಿಸಿಪಲ್ ಎಲ್ಲೆಯೊಳಕ್ಕೆ ಬಂದು ಪಟ್ಟಣದ ರಸ್ತೆ ಹಾಸಿ ಹೋಗುವ ಸರ್ಕಾರಿ ತೆಪ್ಪದ ಗಾಡಿಗಳಿಗೆ ಟೋಲ್ ಗೇಟ್ ಸುಂಕ ವಸೂಲುಮಾಡಕೂಡದೆಂದು ಗವರ್ನಮೆಂಟಿನವರು ... ಹುಕುಮಿನಿಂದ ಮ್ಯುನಿಸಿಪಾಲಿಟಿಗೆ ಹೆಚ್ಚು ನಷ್ಟವಾಗುವುದು ತೊಲೆಗಳ ಬಿಕರಿಯಿಂದ ಸರ್ಕಾರಕ್ಕೆ ... ರಿಂದ ಗಾಡಿ ಸುಂಕವನ್ನು ಮ್ಯುನಿಸಿಪಾಲಿಟಿಗೆ ಬರುವಂತೆ ... ವಡಬೇಕೆಂತಲೂ ಮೆಂಬರುಗಳು ಗವರ್ನಮೆಂಟಿನವರನ್ನು ಕೋಳ್ಳಬೇಕೆಂದು ತೀರ್ಮಾನ ಮಾಡಿದಾರೆ.

ಕೃಷ್ಣರಾಜ ಮೊಹಲ್ಲೆಯ ನಿವಾಸಿಗಳು ಪಂಚಾಂಗ ... ಲಕ್ಷ್ಮಣಸಿಂಗರಿಗೆ ಮ್ಯುನಿಸಿಪಾಲಿಟಿಯಿಂದ ಗ್ರಾಂಟು ಕೊಡಬೇಕೆಂದು ಅರ್ಜಿ ಬರೆದುಕೊಂಡಿದ್ದರು. ಈ ಅರ್ಜಿಯನ್ನು ವೈಸ್ ಪ್ರೆಸಿಡೆಂಟರು ಸಿವಿಲ್ ಸರ್ಜನರವರ ಬಳಿಗೆ ಅವರ ಅಭಿಪ್ರಾಯದ ಬಗ್ಗೆ ಕಳುಹಿಸಿದೆ ಎಂತಲೂ ಅವರಿಂದ ಜವಾಬು ಬರಲಿಲ್ಲವೆಂತಲೂ ...

ವಿಕ್ಟೋರಿಯ ರಸ್ತೆಯಲ್ಲಿರುವ ಬಸ್ತೀ ದೇವಸ್ಥಾನದ ... ಖಾಲಿ ನಿವೇಶನವನ್ನು ದೇವಸ್ಥಾನದ ... ಕೊಡಬೇಕೆಂದು ... ಅರ್ಜಿ ಬರೆದಿದ್ದರು. ಮೆಂಬರುಗಳು ... ಯನ್ನು ಟ್ರಸ್ಟಿ ... ತ್ಯರ್ಥ ಮಾಡಿದರು.

ರಾಜಧಾನಿಯಲ್ಲಿ ಅನೇಕರು ಹೊಸ ನಲ್ಲಿಗಳನ್ನು ... ಗಳಿಗೆ ಇಟ್ಟುಕೊಂಡಿದ್ದಾರೆ. ಅವರಲ್ಲಿ ಕೆಲವರಿಗೆ ಕೂಲ್ದಾರ ... ನ್ನು ಕೆಲವರಿಗೆ ಕಾರ್ಪೊರೇಷನನ್ನು ಕೊಡುವರು. ಕಾವೇರಿ ... ಸುಮಾರು ನಾಲ್ಕು ದಿನಗಳಿಂದ ನೀರು ಬಾರದೆ ಅನುಕೂಲವಿಲ್ಲ ... ಈ ಸಲ ಅಂಥಾ ಮನೆಗಳವರಿಗೆ ನೀರಿನ ತೆರಿಗೆಯಲ್ಲಿ ... ಮಂತವನ್ನು ವಜಾ ಮಾಡಬೇಕೆಂದು ಮೆಂಬರುಗಳು ಒಪ್ಪಿದರು.

ಮ್ಯುನಿಸಿಪಲ್ ಬಜಾರು ಬರ್ನ ಲಕ್ಷಗಳನ್ನು ... ಮಾರು ೧೦—೧೨ ವರುಷಗಳಾದವೆಂತಲೂ, ಸರ್ಕಾರದ್ದಾ ... ಲೇ ಒಪ್ಪಿ ಅಧಿಕಾರಿಯನ್ನು ಕಳುಹಿಸಿಕೊಟ್ಟು ಲೆಕ್ಕ ... ಬೇಕೆಂತಲೂ ಇನ್ನು ಮುಂದೆ ಮೂರು ವರುಷಕ್ಕೊಂದ ... ಅಧಿಕಾರಿಯನ್ನು ಇದಕ್ಕೋಸ್ಕರ ಕಳುಹಿಸಿ ಲೆಕ್ಕ ... ಯತ್ನ ಮಾಡುವಂತೆ ಏರ್ಪಾಡಾಗಬೇಕೆಂತಲೂ ಮೆ॥ ... ರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಇದು ಅನ್ ... ಆ ರೀತಿ ತೀರ್ಮಾನ ಮಾಡಿದರು.

ಮಂಡಿ ಮೊಹಲ್ಲಾ ವೆಂಕಟರಮಣ ಬೀದಿಯಲ್ಲಿ ... ಟದ ಮನೆಗೆ ಹಾಕಿರುವ ಕಂದಾಯವನ್ನು ವಜಾಮಾಡ ... ಮಾದಪ್ಪನವರು ಸೂಚಿಸಿದರು. ಆದರಂತೆ ಮೆಂಬರುಗಳು ... ಮಾಡಬಹುದೆಂದು ಅಭಿಪ್ರಾಯ ಪಟ್ಟರು.

ಇಂಡಿಯಾ ದೇಶದ ವೃತ್ತಾಂತಗಳು.

ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ ಯೆಲ್ಲಿಪುರದಲ್ಲಿ ... ವಾದ ಚಿನ್ನದ ಗಣಿ ಸಿಕ್ಕಿರುತ್ತದೆ.

* * * *

ನೀಲಗಿರಿಯ ಪತ್ತರ ಕೂನೂರಿನಲ್ಲಿ ಸರ್ಕಾರದವರು ... ನರಿಗಳಿಂದ ಕಚ್ಚಿಸಿಕೊಂಡ ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ... ತ್ರೆಯನ್ನು ಕಟ್ಟುತ್ತಿದ್ದಾರಷ್ಟೆ. ಇದಕ್ಕೆ ೧,೮೫,೦೦೦ ರೂ ... ಸ್ಯಾಂಕ್ಷನ್ ಆಗಿದೆ.

* * * *

ಕಳೆದ ವರುಷ ಹಿಂದುಸ್ಥಾನಕ್ಕೆ ಬಂದ ಹವಳವು ಬಹಳ ... ಅದರೆ ನಿಜವಾದ ಹವಳಕ್ಕಿಂತಲೂ ಕೃತ್ರಿಮವಾದ ಹವಳವೇ ಹೆಚ್ಚಾಗಿ ... ರಿಯಾಗುತ್ತಿದೆ. ಜನಗಳ ಮಾರಾಟವೆಲ್ಲಾ ನೇಪಾಳದಲ್ಲೂ ... ಲ್ಲೂ ಬಹಳ ವಿಶೇಷವೆಂದು ತಿಳಿಯುವುದು.

* * * *

ಬಿಜಾಪುರದಲ್ಲಿ ಸ್ವದೇಶೀ ವ್ಯಾಪಾರದ ಕಂಪನಿಯವರು ಒಂದು ನೆಯ್ಗೆ ಕಾರ್ಖಾನೆಯನ್ನು ಕಳೆದ ವಾರ ಪ್ರಾರಂಭಿಸಿದರು. ಮಂ ... ಜಮೀನ್ದಾರರೇ ಅದಕ್ಕೆ ತುಂಬಾ ಪ್ರೋತ್ಸಾಹ ಕೊಟ್ಟು ಸ್ವ ... ಕಾರ್ಯವನ್ನು ಅಭಿವೃದ್ಧಿಗೆ ತಂದರು.

* * * *

ಡಾ॥ ಕಾಲ್ಮೆಟ್ಟಿಯವರ ಆಂಟಿವೆನಿನ ಮತ್ತು ಪರ್ಮಾಂಗನೇಟ್ ಆಫ್ ಪೊಟಾಷ್ ಎಂಬ ಔಷಧಗಳ ಪ್ರಯೋಗದಿಂದ ಸರ್ಪದ ... ಕಳೆದ ೬೩ ಜನರಿಗೆ ವಾಸಿಯಾಗಿದೆ ಎಂದೂ ಇದನ್ನೇ ಎಲ್ಲರೂ ಉಪಯೋಗಿಸಬೇಕೆಂದೂ ಪ್ರಯಾಗದ ಡಾಕ್ಟರು ತಿಳಿಸುತ್ತಾರೆ.

* * * *

ಅಯೋಧ್ಯೆಯ ಮುಖ್ಯಸ್ಥಳವಾದ ಫೈಜಾಬಾದಿನಲ್ಲಿ ಮ್ಯುನಿಸಿಪಾಲಿಟಿಯವರು ಅಲ್ಲಿಗೆ ಹೋಗುವ ಯಾತ್ರಿಕರ ಮೇಲೆ ಕರ ... ಹಾಕಿ ವಸೂಲುಮಾಡುವರು. ಇದರಿಂದ ಸುಮಾರು ೧೯,೦೦೦ ರೂ ... ಹುಟ್ಟುವಳಿ ಆದಾಗ್ಯೂ ಆ ತೆರಿಗೆಯು ಯೋಗ್ಯವಾದದ್ದಲ್ಲ. ಅದನ್ನು ವಜಾ ಮಾಡಬೇಕೆಂದೂ ಕೆಲವರು ಹೋರಾಡುತ್ತಿ...

ಅಫ್ಘಾನಿಸ್ಥಾನದಲ್ಲಿ ವ್ಯಾಪಾರ ಮಾಡುವ ಪ್ರಜೆಗಳಿಗೆಲ್ಲಾ ಅಮೀರರು ಖಜಾನೆಯಿಂದ ಬಡ್ಡಿ ಇಲ್ಲದೆ ಸಾಲಕೊಡುತ್ತಿದ್ದಾರೆ ವರ್ತಕರು ಕರಾರಿನಂತೆ ಪ್ರತಿವರುಷವೂ ಬಿಸ್ತು ಕೊಟ್ಟು ಆ ಸಾಲವನ್ನು ತೀರಿಸುವರು ಇದರಿಂದ ವ್ಯಾಪಾರ ವೃದ್ಧಿಯಾಗಲೆಂಬುದೇ ಅಮೀರರ ಉದ್ದೇಶವಾಗಿದೆ

••••

ಬೊಂಬಾಯಿ ಪಟ್ಟಣದಲ್ಲಿ ಕಳೆದ ೧೬ನೇ ತಾರೀಖಿನಿಂದ ೨೭ರ ವರೆಗೆ ೩೧ ಕಡೆ ಬೆಂಕಿಯು ಅನಾಹುತವಾಯಿತು. ಇದರಿಂದ ಎಷ್ಟು ಕಾರ್ಖಾನೆಗಳೂ ಎಷ್ಟು ವಸ್ತುಗಳೂ ಯಂತ್ರ ಮೊದಲಾದವೂ ಹಾಳಾದವೋ ವಿವರಿಸ ತೀರದು. ಪ್ರತಿ ಒಂದು ಅನಾಹುತದಲ್ಲೂ ಸರಾಸರಿ ಎರಡು ಲಕ್ಷ ರೂಪಾಯಿ ಸಾಮಾನು ಕಟ್ಟಡವೂ ಹಾಳಾಯಿತೆಂದು ಇಟ್ಟುಕೊಂಡರೂ ಆ ಎರಡು ವಾರದೊಳಗೆ ೬೦ ಲಕ್ಷ ರೂಪಾಯಿಗೆ ಕಡಿಮೆ ಇಲ್ಲದೆ ನಷ್ಟವಾಗಿರುವುದು

••••

ಬೊಂಬಾಯಿ ಪಟ್ಟಣದ ಮೆ॥ ಭಗವಾನ್‌ದಾಸರ ವಿತಂತು ವಿವಾಹ ಮಂದಿರದಲ್ಲಿ ಕಳೆದ ವಾರ ೨೨ ವಯಸ್ಸಿನ ವಿಶ್ವನಾಥ ಬಾಲಕೃಷ್ಣನೆಂಬ ಯೌವನಸ್ಥನು ನಾಗಪುರದ ಮೆ॥ ಅಮೃತರಾವ್ ಮಲ್ಹಾರ್ ಗುಪ್ತರ ಕುಮಾರ್ತಿ ಇಂದಿರಾಬಾಯಿ ಎಂಬ ವಿಧವೆಯನ್ನು ವರಿಸಿ ವಿವಾಹ ಮಾಡಿಕೊಂಡನು ನೂರಾರು ಮಂದಿ ಹಿಂದೂ ದೊಡ್ಡಮನುಷ್ಯರು ಹಾಜರಾಗಿದ್ದು ನೂತನ ವಧೂವರರಿಗೆ ಉಡುಗೆರೆ ಮುಂತಾದ್ದನ್ನು ಕೊಟ್ಟು, ಆಶೀರ್ವಾದ ಮಾಡಿದರು

••••

ತ್ರವಾಂಕೋರಿನ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯು ಕಳೆದ ವಾರ ಪ್ರಾರಂಭವಾಗಿ ಮೂರು ದಿನಗಳ ವರೆಗೆ ನಡೆಯಿತು ದಿವಾನ್ ಮೆ॥ ನಾರಾಯಣ ಸ್ವಾಮಿ ಅಯ್ಯರವರು ಸಭೆಯಲ್ಲಿ ಮೆಂಬರುಗಳನ್ನು ಕುರಿತು—ಮುಂದಿನ ವರುಷದಿಂದ ಇನ್ನೂ ಹೆಚ್ಚಾಗಿ ಪ್ರಜೆಗಳ [illegible]ನಿಧಿಗಳನ್ನು ಚುನಾಯಿಸಿ ಈ ಸಭೆಗೆ ಕಳುಹಿಸುವಂತೆ ಏರ್ಪಾಡು [illegible]ವನರಾಗಿದ್ದೇವೆ ಎಂಬದಾಗಿ ಅಪ್ಪಣೆ ಕೊಟ್ಟು, ಸಭೆಯನ್ನು [illegible]ಯ ಮಾಡಿದರು

••••

ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ ಪ್ಪೂರ್ ಎಂಬಲ್ಲಿ ಇಂಗ್ಲಿಷ್ [illegible]ನ್ನು ಇಟ್ಟಿದ್ದಾರೆ ಅಲ್ಲಿ ಈಚೆಗೆ ಒಂದು ಚಿಲುಮೆ ಉದ್ಭವವಾಗಿ [illegible]ದನು. ಈ ನೀರು ಬಣ್ಣದಲ್ಲೂ ರುಚಿಯಲ್ಲೂ ವಿಚಾರ[illegible]ವಾಗಿದೆ ಇದನ್ನು ನೋಡಿ ಹಿಂದುಗಳು ಕಾಶೀ ಗಂಗೆಯು ಅಲ್ಲಿ [illegible]ತ್ಪನ್ನವಾಯಿತೆಂದು ಹೇಳುತ್ತಾ ಗುಂಪು ಗುಂಪಾಗಿ ಹೋಗಿ ಸ್ನಾನ[illegible]ಗಳನ್ನು ಮಾಡುತ್ತಾ ಬಂದಿದ್ದಾರೆ. ಗ್ವಾಲಿಯರ್ ಮಹಾರಾಜರವರೂ [illegible]ವಾರಸಹಿತ ಅಲ್ಲಿಗೆ ಬಂದರು

••••

[illegible]ಬೊಂಬಾಯಿ ಪಟ್ಟಣದಲ್ಲಿ ಪ್ರಜೆಗಳ ಆರೋಗ್ಯಾಭಿವೃದ್ಧಿಗೆ ಆ[illegible]ಸ ರಸ್ತೆಗಳನ್ನು ಹಾಕಿ ಪುರಾಭಿವೃದ್ಧಿ ಕಾರ್ಯಗಳನ್ನು [illegible]ವಲ್ಲದೆ ಖೇತವಾಡಿ, ಇವಾಂ ವಾಡಾ ಎಂಬ ಪೇಟೆಲ್ಲಾ [illegible]ಬಡವರೂ ಕೂಲಿ ಜನರೂ ವಾಸ ಮಾಡುವುದಕ್ಕೆ ಆರೋ[illegible]ವಾದ ಬಾಡಿಗೆ ಮನೆಗಳನ್ನು ಕಟ್ಟಿಸಬೇಕೆಂದು ಮ್ಯುನಿಸಿಪಾ[illegible]ರು ಕಾರ್ಯವನ್ನು ಪ್ರಾರಂಭಿಸಿದ್ದಾರೆ ಇದಕ್ಕೆಲ್ಲಾ ಒಂದು [illegible]ಂಟು ಲಕ್ಷ ರೂಪಾಯಿ ಖರ್ಚಾಗುವ್ರದು.

••••

[illegible]ತ್ತಾ ಪಟ್ಟಣದಲ್ಲಿ ಕಳೆದವಾರ ಮೆ॥ ಜಸ್ಟಿಸ್ ಚಂದ್ರನಾಥ [illegible] ಎಂಬ ದೊಡ್ಡ ಮನುಷ್ಯರು ತಮ್ಮ ಮನೆಯಲ್ಲಿ ದೊಡ್ಡ [illegible]ಮಾಡಿದರು ೩೦೦ ಮಂದಿ ಕಾಯಸ್ಥಬ್ರಾಹ್ಮಣರು ಸೇರಿ ಜಾತಿ [illegible]ದಗಳಿಲ್ಲದೆ ಭೋಜನಮಾಡಿ, ಒಳಪಂಗಡಗಳನ್ನೆಲ್ಲಾ ನಿರ್ಮೂಲ[illegible]ತ್ತಾರೆ. ಈ ಒಳಪಂಗಡದವರು ಇದುವರೆಗೆ ಸಹಪಙ್ಕ್ತಿ ಭೋಜನ [illegible]ತ್ತಿಲ್ಲವು. ಇದರಿಂದ ಕಾಯಸ್ಥರೆಲ್ಲಾ ಒಂದಾದರೆಂದು ತಿಳಿ[illegible]ದು.

••••

[illegible]ಬರ್ಮಾ ಆಧಿಪತ್ಯದಲ್ಲಿ ಮಾಂಡಲೇ ರೈಲ್ ಗಾಡಿಯನ್ನು [illegible] ಅನಾಹುತವನ್ನುಂಟುಮಾಡಬೇಕೆಂದು ಓಕ್‌ಟ್ವಿನ್ ಎಂಬ ಸ್ಟೇ[illegible] ಬಳಿ ಒಂದು ಡಿನ್ಮಿಟನ್ನು ಕತ್ತರಿಸಿ ಹಾಕಿದ್ದರು ಮ್ಯಾಂಡಲೇ [illegible]ಣದಿಂದ ಬಂದ ಮೇಯಿಲ್ ಗಾಡಿ ಆ ಸ್ಥಳದಲ್ಲಿ ಬಿದ್ದು ಕೆಲವರಿಗೆ [illegible]ಯಗಳಾಗಿವೆ ಈ ಅಪಾಯವನ್ನು ಕಲ್ಪಿಸಿದಂಥಾ ದುಷ್ಟರನ್ನು [illegible]ತ್ತೆ ಮಾಡುವವರಿಗೆ ಸರ್ಕಾರದವರು ೧,೦೦೦ ರೂಪಾಯಿ ಇನಾಂ [illegible]ಯಪಾಲಿಸುವಂತೆ ತಿಳಿಸಿದ್ದಾರೆ

••••

ಬೊಂಬಾಯಿನ ತಾತಾ ಕಂಪನಿಯವರು ಗುರುವು ಸ್ವನಿ ಎಂಬ [illegible]ಟ್ಟದಲ್ಲಿ ಉಕ್ಕಿನ ಕಾರ್ಖಾನೆಯನ್ನು ಇಡಬೇಕೆಂದು ತೀರ್ಮಾನಿಸಿ ಅದಕ್ಕಾಗಿ ೧೦ ಕೋಟಿ ಸಲಾರಂಭಿಸಿರುತ್ತಾರಷ್ಟೆ ಈ ಕಾರ್ಖಾನೆಯಿಂ[illegible] ಎರಡು ಕಡೆ ರೈಲ್ ರಸ್ತೆ ಹಾಕುವುದಕ್ಕೆ ಗವರ್ನಮೆಂಟಿನವರು [illegible]ಪ್ಪಿ ಕಾಮಗಾರಿ ಪ್ರಾರಂಭಿಸುವಂತೆ ಅಪ್ಪಣೆ ಕೊಡಿಸಿದ್ದಾರೆ ಕಾರ್ಖಾ[illegible]ನೆಯಲ್ಲಿ ತಯಾರಾಗುವ ಸಾಮಾನುಗಳನ್ನು ರೈಲಿನ ಮೇಲೆ ಸಾಗಿಸು[illegible]ವುದಕ್ಕೆ ಬಹಳ ಸಹಾಯವಾಯಿತು

••••

ಅಂಬಾಲಾ ಪಟ್ಟಣದಲ್ಲಿ ಗಾಜಿನ ವಸ್ತುಗಳನ್ನು ತಯಾರುಮಾಡುವ ಕಾರ್ಖಾನೆಯನ್ನಿಕ್ಕಿದ್ದಾನೆ. ಪಂಜಾಬಿನ ವಿದ್ಯಾಭ್ಯಾಸದ ಇಲಾಖೆಯ [illegible]ಸ್ಪೆಕ್ಟರವರು ಆ ಕಾರ್ಖಾನೆಯನ್ನು ಹೋಗಿ ನೋಡಿಕೊಂಡು [illegible]ಬಂದು, ಆ ಆಧಿಪತ್ಯಕ್ಕೆ ಸಂಬಂಧಪಟ್ಟ ಸ್ಕೂಲಿನ ಅಧಿಕಾರಿಗಳಿಗೆ [illegible]ವನ್ನು ಮುಂದೆ ಗಾಜಿನ ಸಾಮಾನು ಏನು ಬೇಕಾದರೂ ಈ ಕಾರ್ಖಾ[illegible]ಇಗೆ ಬರೆದು ತರಿಸಿಕೊಳ್ಳಬೇಕೆಂತಲೂ, ಹೀಗೆ ಬರೆಯೋಣದರಿಂದ [illegible]ಷ್ಟು ದುಡ್ಡು ಖರ್ಚಾಗುವುದೆಂತಲೂ ಬಹಳ ಕಾಲಬಾಳುವುದೆಂತಲೂ [illegible]ರ ಸಿದ್ದಾರೆ ಈ ಕಾರ್ಖಾನೆಯಲ್ಲಿ ಅಸ್ಟ್ರಿಯಾದವರು ಇಬ್ಬರೂ [illegible]ರ್ಡಿನನವರು ನಾಲ್ವರೂ ಇದ್ದುಕೊಂಡು ಗಾಜಿನ ಸಾಮಾನ್ ತಯಾ[illegible]ಡುತ್ತಿರುವರು.

ಪೊಷ್ಟಿಹಾರ್ ಪುರದ ಡಿಸ್ಟ್ರಿಕ್ಟಿಗೆ ಸೇರಿದ ಅಂಬಾಲಾ ಎಂಬ ದೊಡ್ಡ ಪಟ್ಟಣದಲ್ಲಿ ಈಚೆಗೆ ಬಹು ದೊಡ್ಡ ಬೆಂಕಿಯು ಅನಾಹುತವಾಯಿತು ೩ ಮುನ್ನೂರು ಮನೆಗಳಿಗಿಂತಲೂ ಹೆಚ್ಚಾಗಿಯೇ ಈ ಅನಾಹುತಕ್ಕೆ ಸಿಕ್ಕಿ ಅಪಾರವಾದ ಬೆಂದಗಿ ಹಾತ್ತಿ ಪದಾರ್ಥಗಳ ಸಹಿತವಾಗಿ ನಾಶವಾದವು ೩ ನಾಲ್ಕೈದು ಜನರು ಕೂಡ ಪ್ರಾಣಕಳೆದುಕೊಂಡರು; ಅನೇಕರಿಗೆ ಕಠಿಣವಾದ ಸುಟ್ಟಗಾಯಗಳಾಗಿವೆ. ಇವರಲ್ಲೂ ಕೆಲವರು ಬದುಕುವ ಹಾಗಿಲ್ಲವೆಂದು ಹೇಳುತ್ತಾರೆ.

••••

ಮೆ॥ ಮಾಧವರಾಯರು ತಿರುವಾಂಕೂರು ಸಂಸ್ಥಾನದ ದಿವಾನಗಿರಿಯನ್ನು ಬಿಟ್ಟು ಮೂರು ತಿಂಗಳಾದರೂ ಅಲ್ಲಿನ ಮಹಾರಾಜರವರು ಹೊಸ ದಿವಾನರನ್ನು ನೇಮಿಸಿಕೊಂಡಿರಲಿಲ್ಲ. ಈಗ ತಿನ್ನವೆಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾಗಿರುವ ಮೆ॥ ಟಿ ಗೋಪಾಲಾಚಾರ್ಯರೆಂಬುವರನ್ನು ದಿವಾನಗಿರಿಗೆ ನೇಮಿಸಿಕೊಂಡರೆಂದು ತಿಳಿದು ಬಂದಿದೆ ಇವರು ಮೊದಲಿಂದಲೂ ಜಡ್ಜಿಯಾಗಿಯೇ ಇದ್ದರು, ರೆವಿನ್ಯೂ ವಿಚಾರವೇ ಅವರಿಗೆ ಗೊತ್ತಿಲ್ಲ. ಆದಾಗ್ಯೂ ಕೆಲವು ಕಾಲದೊಳಗಾಗಿ ಅನುಭವವನ್ನು ಪಡೆಯುವರೆಂದು ಹೇಳಬಹುದಾಗಿದೆ.

••••

ರಂಗೂನ್ ಪಟ್ಟಣದಲ್ಲಿರುವ ಬಂಗಾಳಾ ಬ್ಯಾಂಕಿನಲ್ಲಿ ಹೋದ ವರುಷ ಹತ್ತು ಸಾವಿರ ರೂಪಾಯಿನ ನೋಟುಗಳು ಕಳವಾಗಿದ್ದದ್ದಕ್ಕೆ ಸರ್ಕಾರದವರು ೭ ಒಂದು ಸಾವಿರ ರೂ. ನ ನೋಟುಗಳನ್ನು ಪತ್ತೆಮಾಡಿ, ನಾಲ್ವರಿಗೆ ಸಜಾ ಹಾಕಿದ್ದರು. ಸಾವಿರ ರೂಪಾಯಿನ ಬಾಬತು ಇನ್ನೂ ೬ ನೋಟುಗಳು ಸಿಕ್ಕದೆ ಇದ್ದಿತು. ಕಳೆದ ಶನಿವಾರ ಚೊಕ್ಕಲಿಂಗ ಚಟ್ಟಿ ಎಂಬೊಬ್ಬ ವರ್ತಕನು ಆ ಪೈಕಿ ಎರಡು ನೋಟುಗಳನ್ನು ಅದೇ ಬ್ಯಾಂಕಿಗೆ ಕೊಟ್ಟು ತನ್ನ ಲೆಕ್ಕಕ್ಕೆ ಜಮಾ ಬರೆದುಕೊಳ್ಳಬೇಕೆಂತೆ ಹೇಳಿದನು ಇದರ ಪೂರ್ವೋತ್ತರವನ್ನು ಸರ್ಕಾರದವರು ತನಿಖೆ ಮಾಡುತ್ತಿದ್ದಾರೆ

••••

ನಾಯಿ ನರಿ ಕಚ್ಚಿದ ರೋಗಿಗಳು ವಾಸಿಮಾಡಿಕೊಳ್ಳುವುದಕ್ಕೆ ಸಿಮ್ಲಾ ಪಟ್ಟಣದ ಬಳಿ ಇಟ್ಟಿರುವ ಕಸೌಲಿಯ ಆಸ್ಪತ್ರೆಗೆ ಹೋಗಿ ಬರಬೇಕಾಗಿದೆಯಷ್ಟೆ ಕೂನೂರಿನಲ್ಲಿ (ನೀಲಗಿರಿ ಬೆಟ್ಟದ ಹತ್ತಿರ) ಅಂಥಾದ್ದೇ ಇನ್ನೊಂದು ವೈದ್ಯಶಾಲೆಯನ್ನು ಇಡಿಸುವರು. ಆಸ್ಪತ್ರೆಗಾಗಿ ಕಟ್ಟಡಗಳೆಲ್ಲಾ ಸಿದ್ಧವಾಗಿವೆ ಮುಂದಿನ ಸೆಪ್ಟಂಬರ್ ತಿಂಗಳಲ್ಲಿ ಈ ಆಸ್ಪತ್ರೆಯು ಪ್ರಾರಂಭವಾಗುವಂತಿದೆ ಮೇಜರ್ ಜೆ ಡಬ್ಲ್ಯು ಕಾರ್ನ್‌ವಾಲ್ ಅವರು ಅಲ್ಲಿಗೆ ವೈದ್ಯರಾಗುವರು. ಇದರಿಂದ ದಕ್ಷಿಣ ದೇಶದ ರೋಗಿಗಳು ಉತ್ತರ ದೇಶಕ್ಕೆ ಪ್ರತ್ಯೇಕವಾದ ಕಷ್ಟವೂ ಅನಾನುಕೂಲಗಳೂ ತಪ್ಪಿದವು

••••

ಸಿಮ್ಲಾ ಡಿಸ್ಟ್ರಿಕ್ಟಿಗೆ ಸೇರಿದ ಬಘಾಟವೆಂಬ ಸಂಸ್ಥಾನದಲ್ಲಿ ಜೋದ್ಪನೆಂಬ ಗ್ರಾಮದ ರೈತಪ್ರಜೆಗಳಿಗೂ ಕಂದಾಯ ಎತ್ತುವವರಿಗೂ ವಾಗ್ವಾದಗಳೂ ಜಗಳ ಕದನಗಳೂ ನಡೆದು ನೂರಾರು ಆಯಿತು. ರೈತರು ಕಂದಾಯ ಕೊಡುವುದೇ ಇಲ್ಲವೆಂದು ಹಟಹಿಡಿದರು ಸರ್ಕಾರದ ಕೆಲವು ನೌಕರರನ್ನು ಹೊಡೆದು ಗಾಯಮಾಡಿ ಓಡಿಸಿಬಿಟ್ಟರು ಈ ಸುದ್ದಿಯನ್ನು ಕೇಳಿ ಸಿಮ್ಲಾದಿಂದ ಪೋಲೀಸ್ ಸೂಪರಿಂಟೆಂಡೆಂಟರು ಸೈನ್ಯ ಸಹಿತ ಅಲ್ಲಿಗೆ ಹೋದರು ಆ ಗ್ರಾಮದವರು ಸೈನಿಕರ ಹಿಂಸೆಯನ್ನು ನೋಡಿ ಮನೆಮಠಗಳನ್ನೆಲ್ಲಾ ಬಿಟ್ಟು, ಕಾಡಿಗೆ ಹೋಗಿ ಸೇರಿಕೊಂಡರು ಗ್ರಾಮಕ್ಕೆ ಗ್ರಾಮವೇ ಹಾಳುಬಿದ್ದಿರುತ್ತಿದೆ.

••••

ಪ್ಯಾರ್‌ಸಿಂಗಿನ ಸೆಷನ್ಸ್ ಜಡ್ಜರು ಒಂದು ಡಕಾಯಿತಿ ಮೊಕದ್ದಮೆಯನ್ನು ಎರಡು ತಿಂಗಳಿಂದ ದರ್ಯಾಫ್ತು ಮಾಡಿದರು ಈ ಮೊಕದ್ದಮೆಯಲ್ಲಿ ಅಪರಾಧಿಗಳು ೩೧ ಮಂದಿ; ಸಾಕ್ಷಿಗಳು ೬೦೦ ಮಂದಿ ಅವರು ಪ್ಯಾರ್‌ಸಿಂಗ್, ಪಠಾಣ, ಕೋವಿಲಾ, ಸಿಲ್‌ಹಟ್ ಈ ಮೊದಲಾದ ಪ್ರಾಂತ್ಯದಲ್ಲಿ ಅನೇಕ ಡಕಾಯಿತಿಗಳನ್ನು ಮಾಡಿದ್ದರು. ದರ್ಯಾಫ್ತು ನಡೆಯುತ್ತಿದ್ದ ಹಾಗೇ ಒಬ್ಬ ಅಪರಾಧಿ ಮೃತಪಟ್ಟನು ಜಡ್ಜರು ಒಬ್ಬನನ್ನು ಖುಲಾಸ್ ಮಾಡಿ, ಉಳಿದವರಿಗೆಲ್ಲಾ ಸಜಾ ವಿಧಿಸಿದ್ದಾರೆ ಈ ಪೈಕಿ ಇಪ್ಪತ್ತು ಮಂದಿಗೆ ಟ್ರಾನ್ಸ್ ಸಜಾ ವಿಧಿಸಲಾಯಿತು. ಸರ್ಕಾರದವರು ಈ ಮೊಕದ್ದಮೆಗೋಸ್ಕರ ೭೨,೦೦೦ ರೂ. ಖರ್ಚು ಮಾಡಿದರು.

••••

ಬಾಕರ್‌ಗಂಜಿನ ಬಳಿ ಒಂದು ಗ್ರಾಮದಲ್ಲಿ ಜಮೀನ್ದಾರರಿಗೂ ರೈತರಿಗೂ ವಾಗ್ವಾದ ನಡೆದು ಜಗಳವಾಯಿತು ಮೆ॥ ಜಾಕ್ ಎಂಬೊಬ್ಬ ಮ್ಯಾಜಿಸ್ಟ್ರೇಟರು ಅಲ್ಲಿಗೆ ಹೋಗಿ ವೈಕುಂಠಚಂದ್ರಗುಪ್ತನನ್ನೂ ೨೩ ಜನರನ್ನೂ ದಸ್ತಗಿರಿಮಾಡಿಸಿದರು ಇವರೆಲ್ಲಾ ಆ ಮೆ॥ ಜಾಕ್ ಎಂಬಾತನ ಮೇಲೆ ಫಿರ್ಯಾದುಮಾಡಿದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನು ಆ ಮೊಕದ್ದಮೆಯನ್ನು ವಜಾಮಾಡಿ, ಎರಡು ದಿನಗಳ ಮೇಲೆ ತಾನಾಗಿಯೇ ಮತ್ತೆ ಆ ಅರ್ಜಿಯನ್ನು ಹಿಡಿದು ದರ್ಯಾಫ್ತು ಮಾಡ ತೊಡಗಿದರು ಚಂದ್ರಗುಪ್ತನೇ ಮೊದಲಾದ ಫಿರ್ಯಾದಿಗಳು ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್‌ಮಾಡಿ, ಈ ಮೊಕದ್ದಮೆಯನ್ನು ಬೇರೆ ಕಡೆ ದರ್ಯಾಫ್ತು ಆಗಬೇಕೆಂದು ಕೇಳಿಕೊಂಡಿದ್ದಾರೆ.

••••

ಪಾಟ್ನಾ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ, ಜರ್ಮನ್ ರಾಜ್ಯಕ್ಕೆ ಹೋಗಿ ಅಲ್ಲಿನ ಕಣಬುದಾರಿ ಕಾರ್ಖಾನೆಗಳಲ್ಲಿ ದೀಪದ ಕಡ್ಡಿ ತಯಾರು ಮಾಡುವ ವಿಧಾನವನ್ನೆಲ್ಲಾ ಕಲಿತುಕೊಂಡು ಬಂದಿರುವ ಮೆ॥ ಎ. ಪಿ. ಘೋಷ್ ಎಂಬಾತನೂ ಆವನಂತೆಯೇ ಅದೇ ಕಸುಬನ್ನು ಕಲಿತು ಬಂದಿರುವ ಮೆ॥ ಪಿ ಸಿ ರಾಯ್ ಎಂಬಾತನೂ ಕಲ್ಕತ್ತಾ ಪಟ್ಟಣದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಯತ್ನ ಮಾಡುತ್ತಿದ್ದಾರೆ. ದೀಪದ ಕಡ್ಡಿಗಳ ತಯಾರಿಗೆ ಬೇಕಾಗುವ ಯಂತ್ರ ಮೊದಲಾದ ಸಾಧನಗಳನ್ನು ಜರ್ಮನಿಂದ ತರಿಸುವರು ಈ ಕಂಪನಿಯನ್ನು

ಕಲ್ಕತ್ತೆಯ ದೇಶಾಭಿವೃದ್ಧಿ ಸಂಘದವರು ಪೋಷಿಸಿ, ಅದಕ್ಕೆ ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸಲಾರಂಭಿಸಿದ್ದಾರೆ.

••••

ಮದರಾಸ್ ಆಧಿಪತ್ಯದ ಪ್ರಾಂತಿಕ ದೇಶೀಯ ಸಭೆಯು ಈ ಸಲ ತಿನ್ನವೆಲ್ಲಿ ಪಟ್ಟಣದಲ್ಲಿ ನಡೆಯಿತು. ಆ ಆಧಿಪತ್ಯದ ಎಲ್ಲಾ ಜಿಲ್ಲೆಗಳಿಂದಲೂ ೭೫೦ ಮಂದಿ ದೇಶೀಯ ಪ್ರತಿನಿಧಿಗಳೂ ೫೦೦ ಮಂದಿ ಪ್ರೇಕ್ಷಕರೂ ಹೋಗಿದ್ದರು. ಸಿಂಗಪಟ್ಟಿಯ ಜಮೀನ್ದಾರರು ಸಭೆಯ ಉದ್ದೇಶಗಳನ್ನು ಕುರಿತು ಬಹು ಸರಸವಾಗಿ ಉಪನ್ಯಾಸ ಮಾಡಿ ಸಭಿಕರಿಗೆಲ್ಲಾ ಸುಸ್ವಾಗತವನ್ನು ಬಯಸಿದರು ಸಭಾಸದರ ಅಭಿಪ್ರಾಯಾನುಸಾರ ಮೆ॥ ವಿ ಕೃಷ್ಣಸ್ವಾಮಿ ಐಯ್ಯರವರು ಅಗ್ರಾಸನವನ್ನು ವಹಿಸಿ, ರಾಜಕೀಯ ವಿಷಯಗಳನ್ನು ಕುರಿತು ಬಹು ಗಂಭೀರವಾಗಿಯೂ ಅರ್ಥಗರ್ಭಿತವಾಗಿಯೂ ದೀರ್ಘವಾದ ಉಪನ್ಯಾಸ ಮಾಡಿದರು. ಈ ಸಭಿಕರು ಒಪ್ಪಿ ತೀರ್ಮಾನಿಸಿದ ರಾಜಕೀಯ ಬದಲಾವಣೆಗಳನ್ನೆಲ್ಲಾ ಗವರ್ನಮೆಂಟಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ ಅರಿಕೆ ಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

••••

ಸಂಕೇಶ್ವರಮಠದ ಶ್ರೀ ಶಂಕರಾಚಾರ್ಯರೆಂಬ ಸ್ವಾಮಿಗಳು ಕೆಲವು ದಿನಗಳ ಕೆಳಗೆ ಮರಾಠರುವರೂ ಕೊಲ್ಹಾಪುರದ ಮಹಾರಾಜರವರೂ ನಿಜಕ್ಷತ್ರಿಯರಲ್ಲವೆಂದು ಹೇಳಿದರು ಅದನ್ನು ಪ್ರತಿಭಟಿಸುವುದಕ್ಕಾಗಿ ಬೊಂಬಾಯಿನ ಬೈಕಲ್ಲಾದಲ್ಲಿ ಕಳೆದ ವಾರ ಮರಾಠೆಯವರು ಒಂದು ದೊಡ್ಡ ಸಭೆ ನಡಿಸಿದರು. ಮೆ॥ ವಿ ಟಿ. ರಾಜೇಶ್ವರ ಎಂಬುವರು ಸಭಾಧ್ಯಕ್ಷರಾಗಿದ್ದರು. ಈ ಸಭೆಯವರು ತೀರ್ಮಾನ ಮಾಡಿದ್ದೇನೆಂದರೆ—ಸಂಕೇಶ್ವರ ಮಠದ ಶಂಕರಾಚಾರ್ಯರು ಹೇಳಿದ ಅಭಿಪ್ರಾಯವು ನ್ಯಾಯವಾದದ್ದೇ ಅಲ್ಲವೇ ಎಂಬ ವಿಷಯದಲ್ಲಿ ಒಂದು ಅರ್ಜಿಯನ್ನು ಬರೆದು ರತ್ನಗಿರಿ, ಕೊಲಾಬಾ, ಠಾಣಾ, ಪೂನಾ, ಸಾತಾರೆ, ಷೋಲಾಪುರ, ಬೆಳ್ಗಾವ, ಅಹಮದ್‌ನಗರ, ನಾಶಿಕ, ಖಾಂದೇಷ್, ಈ ಪ್ರಾಂತ್ಯಗಳ ಮರಾಠೆ ಜನರು ರುಜುಮಾಡಿ, ಬದ್ರಿನಾಥ, ಜಗನ್ನಾಥ, ದ್ವಾರಕಾ, ಶ್ರಿಂಗೇರಿಗಳಲ್ಲಿರುವ ಶಂಕರಾಚಾರ್ಯ ಗುರುಗಳಿಗೆ ಕಳುಹಿಸಿ, ಅವರ ಅಪ್ಪಣೆಯನ್ನು ತರಿಸಬೇಕು ಎಂಬುದೇ.

••••

ಕಲ್ಕತ್ತೆಯಲ್ಲಿ ನಾರಾಯಣಚಂದ್ರ ಮುಖರ್ಜಿ ಎಂಬೊಬ್ಬ ಪ್ರಾಯದವನು ಕಳೆದ ಗುರುವಾರ ಕಾಯಿಲೆಯಾಗಿ ಮೃತಪಟ್ಟನು ಆವನ ಹೆಂಡತಿಯು ನಾಳನೆಯ ದಿನ ನೀರು ತರುವುದಕ್ಕೆಂದು ಬೀದಿಗೆ ಸಹಿತ ಕೊಳಕ್ಕೆ ಹೋಗಿ, ಕೊಳದಲ್ಲಿ ಬಿದ್ದು ಆತ್ಮಹತ್ಯಮಾಡಿಕೊಂಡಳು. ಇವಳು ಗಂಡನ ವಿಯೋಗದುಃಖವನ್ನು ಸಹಿಸಲಾರದೆ, ಸಹಗಮನ ಮಾಡಿಕೊಳ್ಳುವುದಕ್ಕೆ ಸರ್ಕಾರದವರ ತಡೆಯನ್ನು ನೋಡಿ, ಹೀಗೆ ಆತ್ಮಹತ್ಯ ಮಾಡಿಕೊಂಡಳೆಂತಲೂ ಇದೂ ಸಹಗಮನವೇ ಆಯಿತೆಂದೂ ತಿಳಿದದ್ದರಿಂದ ಸರ್ಕಾರದವರು ಇದರ ಪೂರ್ವೋತ್ತರವನ್ನು ತನಿಖೆ ಮಾಡಲಾರಂಭಿಸಿದ್ದಾರೆ ಅವಳು ನೀರಿಗೆ ಹೋಗುವುದನ್ನು ನೋಡಿ ನೆರೆಹೊರೆಯವರು ಅವಳ ಮನೋನಿಶ್ಚಯವನ್ನು ಊಹಿಸಿ, ಅವಳನ್ನು ಬಹಳವಾಗಿ ತಡೆದರೆಂತಲೂ ಆದರೂ ಅವಳು ಹೋಗಿ ಆತ್ಮಹತ್ಯಮಾಡಿಕೊಂಡಳೆಂತಲೂ ಪ್ರಕಟವಾಗಿದೆ.

••••

ಬೊಂಬಾಯಿ ಪಟ್ಟಣದಲ್ಲಿ ಪಾರ್ಸಿ ಜನರಲ್ಲಿ ಪ್ರಸಿದ್ಧನಾದ ಗುರುವು ತನ್ನ ಮನೆಯೊಳಗೆ ಗುಟ್ಟಾಗಿ ವೈನ್ ಬ್ರಾಂದಿ ಮೊದಲಾದ ಮದ್ಯಗಳನ್ನು ಇಟ್ಟು ಬಿಕರಿ ಮಾಡುತ್ತಿದ್ದನು. ಪೋಲೀಸಿನವರಿಗೆ ಈ ವಿಚಾರ ತಿಳಿದು, ಅವರು ಅಬ್ಕಾರಿ ಇನ್‌ಸ್ಪೆಕ್ಟರಿಗೆ ವರ್ತಮಾನ ಕೊಟ್ಟದ್ದರ ಮೇಲೆ ಆ ಇನ್‌ಸ್ಪೆಕ್ಟರು ಒಂದು ದಿನ ರಾತ್ರಿ ಅಕಸ್ಮಾತ್ತಾಗಿ ಆ ಗುರುವಿನ ಮನೆಯೊಳಕ್ಕೆ ನುಗ್ಗಿ ಶೋಧನೆ ಮಾಡಿದನು. ಒಳಗೆ ಗುರುವು ಒಂದು ದೊಡ್ಡ ಅಂಗಡಿಯನ್ನೇ ಇಟ್ಟು, ಧಾರಾಳವಾಗಿ ಬಿಕರಿ ಮಾಡುತ್ತಿದ್ದನು ಕೂಡಲೇ ಅವನನ್ನೂ ಆ ಮದ್ಯಗಳನ್ನು ದಸ್ತಗಿರಿ ಮಾಡಿ, ಅವನ ಮೇಲೆ ಮೊಕದ್ದಮೆ ತಂದನು ಆ ಪಟ್ಟಣಕ್ಕೆ ಪಟ್ಟಣವೇ ಇದನ್ನು ಕೇಳಿ ಗಲ್ಲಿದ್ದಿತು. ಪಾರ್ಸಿ ಜನರು ತಮ್ಮ ಗುರು ಇಂಥಾ ದುಷ್ಟ ಕಾರ್ಯವನ್ನು ಮಾಡಲಾರನೆಂದು ಹೇಳಲಾರಂಭಿಸಿದರು ಆದರೆ ದರ್ಯಾಫ್ತಿಯಲ್ಲಿ ಆ ಗುರುವು ತಾನು ಗುಟ್ಟಾಗಿ ಅಂಗಡಿ ಇಟ್ಟಿದ್ದದ್ದುಂಟೆಂದು ಹೇಳಿ ಒಪ್ಪಿಕೊಂಡನು. ಮ್ಯಾಜಿಸ್ಟ್ರೇಟರು ಅವನ ಮನೆಯಲ್ಲಿ ಸಿಕ್ಕಿದ ಮದ್ಯಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಂಡು, ಅವನಿಗೆ ೧೦೦ ರೂಪಾಯಿ ಜುಲ್ಮಾನೆ ಹಾಕಿದರು

••••

ದೆಹಲಿಪಟ್ಟಣದಲ್ಲಿ ಕಳೆದ ೧೮೯೩ ರಲ್ಲಿ ಕೆಲವು ಜನರು ಸೇರಿ ಒಂದು ಕಂಪನಿ ಅಂಗಡಿಯನ್ನು ಹಾಕಿದರು ಈ ಕಂಪನಿಗೆ ರಾಂ ಕಿಶೋರ, ಬಿಹಾರಿಲಾಲ್, ಶಿವದಯಾಳ್ ಸಿಂಗ್, ಗೋವಿಂದಪ್ರಸಾದ್, ಚಂದೂಲಾಲ್ ಎಂಬೀ ಐದು ಮಂದಿ ಡೈರೆಕ್ಟರುಗಳಾದರು ಇವರಲ್ಲಿ ಮೊದಲನೇ ಮೂರು ಮಂದಿ ಷೇರುಗಳನ್ನೇ ಕೊಂಡುಕೊಳ್ಳಲಿಲ್ಲ ನಾಲ್ಕನೆಯವನಿಗೆ ಏನೇನೂ ಆಸ್ತಿ ಇಲ್ಲ. ಇವರೆಲ್ಲಾ ಸೇರಿ ಷೇರುಗಳ ಬಿಕರಿಯಿಂದ ಬಂದಂಥಾ ಹಣದಲ್ಲಿ ಹೆಚ್ಚು ಲಾಭ ಬಂತೆಂದು ಸುಳ್ಳು ಲೆಕ್ಕ ಬರೆದು ಷೇರುದಾರರಿಗೆ ಬಡ್ಡಿ ಬಟವಾಡೆಮಾಡಿ ತಾವೂ ನುಂಗಿಕೊಂಡರು ಇದೇ ರೀತಿ ಅವರು ೧೮೯೯ ರಿಂದ ೧೯೦೨ ನೆ ಇಸವಿವರೆಗೆ ಸುಳ್ಳಾದ ಲೆಕ್ಕಗಳನ್ನೇ ಬರೆದು, ಬ್ಯಾಲೆನ್ಸ್ ಷೀಟಿನಲ್ಲಿ ಪ್ರತಿ ಸಲವೂ ಲಾಭ ಬಂತೆಂದು ಬರೆದಿಟ್ಟು ಮೋಸಪಡಿಸುತ್ತಾ ಬಂದರು. ಇದಲ್ಲದೆ ತಾವುಗಳ್ಯಾರೂ ಒಂದು ಷೇರಾದರೂ ಕೊಂಡುಕೊಳ್ಳದೆ ಹೋದರೂ ತಮ್ಮ ತಮ್ಮ ಹೆಸರಿಗೆ ಮಾಡಲಾದಷ್ಟು ಷೇರುಗಳ ಬಡ್ಡಿ ಹಣವನ್ನೇನೋ ತೆಗೆದುಕೊಳ್ಳುತ್ತಿದ್ದರು ಸರ್ಕಾರ ಗುಮಾಸ್ತೆಯು ಹೋಗಿ ಈಗ ಈ ಕಂಪನಿಯ ಲೆಕ್ಕಗಳನ್ನೆಲ್ಲಾ ತನಿಖೆಮಾಡಿದಾಗ ೫೦,೦೦೦ ರೂಪಾಯಿ ಕಡಿಮೆ ಬಂದಿದೆ ಆ ಐದು ಜನ ಡೈರೆಕ್ಟರುಗಳೂ ಈ ಹಣವನ್ನು ಹಂಚಿಕೊಂಡು ತಿಂದುಬಿಟ್ಟಿದ್ದಾರೆಂದು ಆ ಆಫೀಸರ ಲೆಕ್ಕ ಗುಮಾಸ್ತನು ಗುರ್ತಿಸಿದ್ದಾನೆ.

ಕಲ್ಕತ್ತೆಯ ಪತ್ತರ ಮನೆಗಂ ಎಂಬಲ್ಲಿ ಹತ್ತು ಮಂದಿ ಸೇರಿ ದರೋಡೆ ಮಾಡಿದರು. ಗವರ್ನಮೆಂಟಿನವರು ಆ ವ್ಯಕ್ತಿ ಒಬ್ಬ ಅಪರಾಧಿಗೆ ಕ್ಷಮಾಪಣೆಯನ್ನು ಮಾಡಿ, ಅವನ ಹೇಳಿಕೆಯ ಪ್ರಕಾರ ಇತರರನ್ನು ದಸ್ತಗಿರಿಮಾಡಿ, ಮೊಕದ್ದಮೆಯನ್ನು ತಂದರು. ಈ ವಿಷಯದಲ್ಲಿ ಕಲ್ಕತ್ತಾ ಹೈ ಕೋರ್ಟಿನ ಜಡ್ಜಿಗಳು ಹೇಳಿದ್ದೇನೆಂದರೆ, ಅಪರಾಧಿಗಳನ್ನು ಕ್ಷಮಿಸುವ ಅಧಿಕಾರ ಗವರ್ನಮೆಂಟಿಗೆ ಇರುವುದಿಲ್ಲ. ಇದರಿಂದ ಒಬ್ಬ ಅಪರಾಧಿಯು ತನ್ನ ಸಹಪಾಟಿಗಳ ಮೇಲೆ ದೂರು ಹೇಳುವುದೂ ಅದರಂತೆ ಅವರನ್ನೆಲ್ಲಾ ಶಿಕ್ಷಿಸುವುದೂ ನ್ಯಾಯವಲ್ಲ. ಈಗ ಅವನ ಸಹಪಾಟಿಗಳಿಗೆ ಸಜಾ ಶಿಕ್ಷೆ ವಿಧಿಸಿರುವುದನ್ನು ರದ್ದುಮಾಡಿದ್ದೇವೆ. ಸೆಷನ್ಸ್ ಜಡ್ಜರು ಪುನಃ ಈ ಮೊಕದ್ದಮೆಯನ್ನು ದಾಖಲ್‌ಮಾಡಿಕೊಂಡು, ಎಲ್ಲರನ್ನೂ ಸೇರಿಸಿ ವಿಚಾರಣೆ ನಡಸಬೇಕು ಎಂಬುದೇ.

ವಾಗೀಶ್ವರಭಟ್ಟರು ಕಂಡ ಕನಸು.

ವಾಗೀಶ್ವರಭಟ್ಟರು ಬಹು ದೊಡ್ಡ ಮನೆತನಕ್ಕೆ ಸೇರಿದವರು. ಇವರ ಪೂರ್ವಿಕರು ಸರ್ಕಾರದಲ್ಲಿ ಒಳ್ಳೆ ಹೆಸರುವಾಸಿಯನ್ನು ಪಡೆದರು. ಪ್ರಾಚೀನ ರಾಜರು ಕೊಟ್ಟ ಸರ್ವಮಾನ್ಯದಿಂದ ಜೀವಿಸುತ್ತಾ ಗೀರ್ವಾಣ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿ ತುಂಬಾ ಯಶಸ್ವಿಗಳಾಗಿದ್ದರು. ಇದಲ್ಲದೆ ಕುಲದೇವತೆಯಾದ ನಾರಾಯಣಸ್ವಾಮಿಯನ್ನು ಅತ್ಯಂತ ಭಕ್ತಿಯಿಂದ ಪೂಜಿಸಿ ಸ್ವಗ್ರಾಮದಲ್ಲಿ ಒಂದು ದೇವಸ್ಥಾನವನ್ನು ಕಟ್ಟಿಸಿ ನಿತ್ಯ ಪೂಜೆಯ ಕಟ್ಟಳೆಯನ್ನೆಲ್ಲಾ ಸ್ವಂತ ಖರ್ಚಿನಿಂದಲೇ ನಡಸುವಂಥವರಾಗಿದ್ದರು. ಇವರಿಗೆ ಕುಶಲಮತಿವಂತನಾದ ಒಬ್ಬ ಕುಮಾರನೂ ಇರುವನು. ಇವನು ತಂದೆಯೋಪಾದಿಯಲ್ಲಿ ವೈದಿಕವೃತ್ತಿಯನ್ನನುಸರಿಸದೆ ಸರ್ಕಾರದ ಉದ್ಯೋಗವನ್ನು ಸಂಪಾದಿಸಿ ಬಹಳ ಐಶ್ವರ್ಯವಂತನೂ ಖ್ಯಾತಿವಂತನೂ ಆಗಬೇಕೆಂದು ಭಟ್ಟರು ಆಲೋಚಿಸಿ ಮಗನನ್ನು ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಹಚ್ಚಿದರು.

ಹೀಗಿರುವಲ್ಲಿ ಒಂದು ದಿನ ವಾಗೀಶ್ವರಭಟ್ಟರು ಜಾತ್ರೆಗೆ ಹೋಗಿರಲಾಗಿ ಕ್ರೈಸ್ತಮತೋಪದೇಶಕರು ಕೆಲವರು ಪದ್ಧತಿಯ ಪ್ರಕಾರ ಒಂದೆಡೆಯಲ್ಲಿ ನಿಂತುಕೊಂಡು—ಸರ್ವರೂ ತಮ್ಮ ಪಾಪಗಳ ನಿಮಿತ್ತವಾಗಿ ಪಶ್ಚಾತ್ತಾಪಪಟ್ಟು ಗುರುವಾದ ಯೇಸುಸ್ವಾಮಿಯನ್ನು ನಂಬತಕ್ಕದ್ದು ಎಂದು ಪ್ರಸಂಗಿಸುತ್ತಿದ್ದುದನ್ನು ಕಂಡರು. ಈ ವಿಧವಾಗಿ ಇವರು ಪ್ರಸಂಗಿಸುವದನ್ನು ವಾಗೀಶ್ವರಭಟ್ಟರು ಅನೇಕ ಸ್ಥಳಗಳಲ್ಲಿ ಚೆನ್ನಾಗಿ ಕೇಳಿ ತಿಳಿದಿದ್ದುದರಿಂದ ಬೇಸರಪಟ್ಟವರಾಗಿ ಆ ಉಪದೇಶಕರು ತಮ್ಮ ಕೆಲಸವನ್ನು ತೀರಿಸಿಕೊಂಡು ತಾವಿಳಿದಿದ್ದ ಸ್ಥಳಕ್ಕೆ ಹೋಗುವಾಗ ತಾವೂ ಅವರೊಡನೆ ಹೋಗಿ—ಅಯ್ಯಾ, ನೀವು ಮತೋಪದೇಶಕರೆಂತಲೂ ಮೋಕ್ಷಮಾರ್ಗವನ್ನು ಕುರಿತು ಬೋಧಿಸುವವರೆಂತಲೂ ಹೇಳಿಕೊಳ್ಳುತ್ತೀರಷ್ಟೆ. ಉತ್ಕ್ರಮಣಕಾಲದಲ್ಲಿ ಆತ್ಮನು ಯಾವ ಮಾರ್ಗವಾಗಿ ದೇಹವನ್ನು ಬಿಟ್ಟು ಹೋಗುತ್ತಾನೆಂದು ಹೇಳಿ ನೋಡೋಣ ಎಂದು ಕೇಳಿದರು. ಭಟ್ಟರು ತಮ್ಮ ಪಾಂಡಿತ್ಯವನ್ನು ಪ್ರಕಾಶಪಡಿಸಿ ತರ್ಕದಲ್ಲಿ ಕ್ರೈಸ್ತ ಉಪದೇಶಕರನ್ನು ಸೋಲಿಸಬೇಕೆಂತಲೇ ಹೀಗೆ ಕೇಳಿದರು.

ಉ—ಸ್ವಾಮಿ, ಕ್ಷಮಿಸಬೇಕು, ನಾನು ತಮ್ಮಷ್ಟು ವಿದ್ಯಾವಂತನಲ್ಲ. ತಮ್ಮ ಸಂಗಡ ತರ್ಕಮಾಡಲಾರೆನು. ಆತ್ಮನು ದೇಹವನ್ನು ಬಿಟ್ಟು ಯಾವ ಮಾರ್ಗವಾಗಿ ಹೋಗುತ್ತಾನೋ ನಾನು ಹೇಳಲಾರೆನು. ನನಗೆ ನಿಸ್ಸಂದೇಹವಾಗಿ ತಿಳಿದಿರುವದು ಒಂದುಂಟು. ಅದೇನೆಂದರೆ—ಪಾಪಗಳ ನಿಮಿತ್ತ ನಿಜವಾಗಿ ಪಶ್ಚಾತ್ತಾಪಪಟ್ಟು ಯೇಸುಕ್ರಿಸ್ತನನ್ನು ನಂಬತಕ್ಕವನ ಆತ್ಮವು ಉತ್ಕ್ರಮಣಕಾಲದಲ್ಲಿ ದೇವರ ಸನ್ನಿಧಾನವನ್ನು ಸೇರುತ್ತದೆ. ಉಳಿದ ವಿಚಾರವನ್ನು ತರ್ಕಿಸುವದರಲ್ಲಿ ಫಲವಿಲ್ಲವೆಂದು ನನಗೆ ತೋರುತ್ತದೆ. ನಾಯಿಯು ತನ್ನ ಬಾಲವನ್ನು ತಾನು ಕಚ್ಚುವದಕ್ಕಾಗಿ ಸುತ್ತಿ ಸುತ್ತಿ ಬಳಲುವಷ್ಟರಿಂದ ತತ್ವಶಾಸ್ತ್ರಗಳ ವಾಗ್ವಾದಗಳಲ್ಲಿ ಪ್ರಯೋಜನವು ಕಡಮೆಯೆಂದು ತಿಳಿದಿದ್ದೇನೆ.

ವಾ ಭ—ದೇವರನ್ನೂ ಆತ್ಮನನ್ನೂ ಕುರಿತು ತರ್ಕಿಸುವದಕ್ಕಿಂತ ಲಾಭಕರವಾದ ವಿಷಯವು ಮತ್ತೇನಿರುವದು? ತಪ್ಪಿಲ್ಲದೆ ಮಾತನ್ನಾಡಿ ತಿಳಿಯಪಡಿಸುವ ಜ್ಞಾನದ ಮುಖಾಂತರವಾಗಿಯೇ ಮುಕ್ತಿಯು ದೊರಕುತ್ತದೆ.

ಉ—ತರ್ಕವನ್ನು ಮಾಡುವದರಿಂದ ಮುಕ್ತಿಯು ದೊರಕದೆ ಅಜ್ಞಿಯಾಗುವದೂ ಉಂಟು. ತರ್ಕ ಮಾಡುವವರು ತಾವು ಪಾಪಿಷ್ಠರೆಂದೂ ದೇವರಿಂದ ಮನ್ನಣೆಯನ್ನು ಹೊಂದಬೇಕಾಗಿದೆಯೆಂದೂ ತಮ್ಮಲ್ಲಿ ಹುಟ್ಟುವ ದುರಾಶೆಗಳನ್ನು ಜಯಿಸುವಂಥ ಸಾಮರ್ಥ್ಯವನ್ನು ಹೊಂದತಕ್ಕ ವಿಷಯವು ಮೊದಲನೆಯದಾಗಿದೆಯೆಂದೂ ತಿಳಿಯುವದನ್ನು ಬಿಟ್ಟು ಶುಷ್ಕವಾದದಲ್ಲಿ ಕಾಲಹರಣವನ್ನು ಮಾಡುವರು. ರೋಗಿಯಾದವನು ವೈದ್ಯನ ಬಳಿಗೆ ಹೋದರೆ ಅವನು ರೋಗಿಯ ಮೈಯನ್ನೆಲ್ಲಾ ಬೆರಳಿನಿಂದ ತಿವಿತಿವಿದು ಪರೀಕ್ಷಿಸುತ್ತಾನೆ. ಯಾವ ಸ್ಥಳದಲ್ಲಿ ನೋವುಂಟೋ ಅಲ್ಲಿ ಬೆರಳನ್ನಿಟ್ಟ ಕೂಡಲೆ ರೋಗಿಯು—ಅಯ್ಯೋ, ಅಪ್ಪಾ! ಅಲ್ಲಿ ಮುಟ್ಟಬೇಡಿರಿ ಎಂದು ಕಿರಿಚಿಕೊಳ್ಳುತ್ತಾನೆ. ಈ ಪ್ರಕಾರ ಬೋಧಕನಾದವನು ಒಬ್ಬ ಮನುಷ್ಯನ ಪಾಪವನ್ನು ಅವನಿಗೆ ಎತ್ತಿ ತೋರಿಸಿದರೆ—ಅಯ್ಯೋ, ಅದರ ವಿಚಾರ ಹಾಗಿರಲಿ ಸ್ವಾಮಿ! ಜಗತ್ಸೃಷ್ಟಿಯ ವಿಷಯದಲ್ಲಿಯೂ ಇಂದ್ರಿಯಗಳಿಗೆ ವಿಷಯವಾದ ವಸ್ತುಗಳು ಯಾವ ಮೂಲದಿಂದ ಉಂಟಾದವೆಂಬ ವಿಷಯದಲ್ಲಿಯೂ ಮಾತಾಡೋಣ ಎಂದು ಹೇಳುವನು.

ಒಂದಾನೊಂದು ದಿನ ಯೇಸುಸ್ವಾಮಿಯು ಸಮಾರ್ಯದವಳಾದ ಒಬ್ಬ ಹೆಂಗಸಿನ ಬಳಿಯಲ್ಲಿ ಮಾತಾಡುತ್ತಾ ಆಕೆಯ ದುಷ್ಟಜೀವನವನ್ನು ಕುರಿತು ತಿಳಿಯಹೇಳಲಾಗಿ ಅವಳು ಕೂಡಲೆ ಆ ಮಾತನ್ನು ಮರೆಮಾಸಿ—ಅಯ್ಯಾ, ದೇವಾರಾಧನೆಯನ್ನು ನಡಸತಕ್ಕ ಸ್ಥಳದ ವಿಷಯದಲ್ಲಿ ಸಮಾರ್ಯದವರಾದ ನಮ್ಮ ಪೂರ್ವಿಕರಿಗೂ ಯೆಹೂದ್ಯರಾದ ನಿಮ್ಮ ಪೂರ್ವಿಕರಿಗೂ ವಾಗ್ವಾದವುಂಟಷ್ಟೆ. ಇದರಲ್ಲಿ ಯಾರ ಅಭಿಪ್ರಾಯವು ಸರಿಯೋ ಅದನ್ನು ನಿರ್ಣಯಿಸಿ ಹೇಳಿರಿ ಎಂದಳು.

ವಾಗೀಶ್ವರ ಭಟ್ಟರು ಇದನ್ನು ಕೇಳಿ ಕೋಪಗೊಂಡು—ಏನಯ್ಯ, ನನ್ನನ್ನು ಆ ದುಷ್ಟಸ್ತ್ರೀಗೆ ಹೋಲಿಸುತ್ತೀರಾ? ನಾನು ಪಶ್ಚಾತ್ತಾಪಪಡತಕ್ಕ ಅವಶ್ಯಕವೇನಿದೆ? ಎಂದು ಹೇಳಿಬಿಟ್ಟು ನೆಟ್ಟಗೆ ತಾವಿಳಿದಿದ್ದ ಸತ್ರಕ್ಕೆ ಹೋದರು. ಆ ರಾತ್ರಿ ಅವರು ಊಟವನ್ನು ತೀರಿಸಿಕೊಂಡು ಮಲಗಿರುವಾಗ ಅಪೂರ್ವವಾದ ಕನಸು ಕಂಡರು. ಆ ಕನಸಿನಲ್ಲಿ ಒಬ್ಬ ಪರಮಗುರುವು ಕಾಣಿಸಿಕೊಂಡನು. ಆತನು ತನ್ನ ಕೈ ಚಾಚಲು ಅದರಲ್ಲಿ ಮೊಳೆಗಳು ಜಡಿದಿದ್ದ ಗಾಯದ ಗುರುತು ಕಾಣುತ್ತಲಿತ್ತು. ಇದನ್ನು ಕಂಡು ಆ ಗುರುವು ಯೇಸುಸ್ವಾಮಿಯೇ ಎಂದು ಭಟ್ಟರು ತಿಳಿದರು. ಬಳಿಕ ಆ ಗುರುವು ಕೇವಲ ಪ್ರೀತಿಯುಕ್ತವಾದ ದುಃಖದಿಂದ ಭಟ್ಟರನ್ನು ನೋಡಿ—ಓ ಭಟ್ಟರೇ, ನೀವು ನಿಮ್ಮ ಆತ್ಮಕ್ಕೆ ರಕ್ಷಣೆಯನ್ನೂ ಸಮಾಧಾನವನ್ನೂ ಹೊಂದಬೇಕಾಗಿದೆಯೇನು? ನೀವು ಆ ಗೋವಿಂದನೆಂಬ ಶೂದ್ರನ ಹೊಲವನ್ನು ಮೋಸವಾಗಿ ಕೋರ್ಟಿನಲ್ಲಿ ಸುಳ್ಳು ಪ್ರಮಾಣ ಮಾಡಿ ಅಪಹರಿಸಲಿಲ್ಲವೇ? ಸುಳ್ಳನ್ನು ನುಡಿಯುವವನೂ ಅದನ್ನು ಮೆಚ್ಚುವವನೂ ದೇವರ ರಾಜ್ಯದಲ್ಲಿ ಸೇರಲಾರನೆಂದರಿಯಿರಾ? ನೀವು ಹೀಗೆ ಅನ್ಯಾಯ ಮಾಡಿದ ಪಾಪವನ್ನು ದೇವರ ಮುಂದೆ ಹೇಳಿ ಒಪ್ಪಿಕೊಳ್ಳುವದಿಲ್ಲವೇ? ಆ ಬಡವ ಮನುಷ್ಯನಿಂದ ಅಪಹರಿಸಿದ್ದನ್ನು ಅವನಿಗೆ ತಿರುಗಿ ಕೊಟ್ಟುಬಿಡುವದಿಲ್ಲವೇ? ಎಂದು ಹೇಳಿ ಅಂತರ್ಧಾನನಾದನು. ಆಗಲಾ ವಾಗೀಶ್ವರಭಟ್ಟರಿಗೆ ಮಹಾ ಭಯವುಂಟಾಗಿ ಎಚ್ಚತ್ತು ನೋಡಲು ಮುಖವೆಲ್ಲಾ ಬೆವರಿತ್ತು. ಹೊರಗೆ ಪ್ರಕಾಶಿಸುತ್ತಿದ್ದ ಬೆಳದಿಂಗಳ ಕಿರಣವು ಬಾಗಿಲ ಸಂದಿನಲ್ಲಿ ಕಾಣಿಸುತ್ತಿತ್ತು. ತನ್ನ ಸಂಗಾತ ಮಕ್ಕಳೆಲ್ಲರೂ ನಿದ್ರಿಸುತ್ತಿದ್ದರು. ತಾನು ಕಂಡದ್ದೆಲ್ಲಾ ಕನಸೆಂದು ಭಟ್ಟರು ತಿಳಿದರು. ಆದರೆ ಆ ಕನಸಿನಲ್ಲಿ ಕಂಡ ಹಾಗೇ ತಾವು ಮಾಡಬೇಕೆಂದು ಭಟ್ಟರು ತಿಳಿದುಕೊಂಡರು.

ಔತಣಗಳು.

ರಾಜಧಾನಿಯಲ್ಲಿ ಇದುವರೆಗೆ ಅಧಿಕಾರಿಗಳಾಗಿದ್ದ ಡೆಪ್ಯುಟಿ ಕಮಿಷನರ್ ಮೆ॥ ಎಚ್ ಎಚ್. ಸ್ಪಾರ್ಕ್ಸ್‌ಯವರು, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ॥ ಸಿ ವೆಂಕಟರಾಯರು, ಸಿವಿಲ್ ಸರ್ಜನ್ ಮೆ॥ ಪಿ. ಎಸ್ ಅಚ್ಯುತರಾಯರು, ಸಬ್ ಜಡ್ಜಿ ಮೆ॥ ಟಿ ಪರಮಶಿವ ಐಯ್ಯರವರು, ಮುನ್ಸಿಫ್ ಮೆ॥ ಬಿ ಎಸ್ ಕೃಷ್ಣಸ್ವಾಮಯ್ಯಂಗಾರರು, ಮುನ್ಸಿಫ್ ಮೆ॥ ಎಸ್ ವೆಂಕಟಕೃಷ್ಣಯ್ಯನವರು, ಅಡ್ವೊಕೇಟ್ ಮೆ॥ ಬಿ ರಂಗಸ್ವಾಮಯ್ಯಂಗಾರರು (ಇದೀಗ ಮುನ್ಸಿಫ್ ಕೆಲಸವಾಯಿತು), ಈ ಮೇಸ್ತ್ರಿ ಮನುಷ್ಯರಿಗೆಲ್ಲಾ ಇತರ ಕಡೆಗಳಿಗೆ ವರ್ಗವಾದದ್ದರಿಂದ ಕೆಳಗಿನವರ ಪುರಜನರೂ ಬೇರೆ ಬೇರೆ ಸ್ಥಳಗಳಲ್ಲಿ ಅವರನ್ನು ಕರೆಸಿಕೊಂಡು ನಾನಾ ಪ್ರಕಾರವಾಗಿ ಔತಣಾದಿಗಳನ್ನು ಮಾಡಿ ಸಂತೋಷಪಡಿಸಿ, ತಮ್ಮ ಸ್ನೇಹಪೂರ್ವಕವಾದ ವಿಶ್ವಾಸಗಳನ್ನೂ ಕೃತಜ್ಞತೆಯನ್ನೂ ಪ್ರಕಾಶಪಡಿಸಿದರು.

ಇಲ್ಲಿನ ಕಾಸ್ಮೊಪಾಲಿಟನ್ ಕ್ಲಬ್ಬಿನ ಮೆಂಬರುಗಳು, ಬದ್ಲಿ ಹೊಂದಿ ವರ್ಗಪಟ್ಟ ಮೇಲ್ಕಂಡ ಜಡ್ಜಿಗಳನ್ನೂ ಮೆ॥ ಅಚ್ಯುತರಾಯರನ್ನೂ ಕರೆಸಿಕೊಂಡು, ಫಲಾಹಾರಾದಿಗಳನ್ನೂ ಸಂಗೀತ ಮೊದಲಾದದ್ದನ್ನೂ, ಆಟಪಾಟ ವಿನೋದಗಳನ್ನೂ ಕಲ್ಪಿಸಿ ಸಂತೋಷಪಡಿಸಿದರು.

ಇಲ್ಲಿನ ಲಾಯರುಗಳೂ ಅಡ್ವೊಕೇಟರೂ ಸೇರಿ ಮೇಲ್ಕಂಡ ಜಡ್ಜಿಗಳನ್ನು ಮರಿಮಲ್ಲಪ್ಪನವರ ಸ್ಕೂಲಿಗೆ ಬರಮಾಡಿಕೊಂಡು, ಇಷ್ಟ ಮಿಠಾಯಿ ಮೊದಲಾದ ಹೊಸ ತಿಂಡಿ ಪದಾರ್ಥಗಳನ್ನು ಸ್ವೀಕರಿಸಿ, ಮನೋಹರವಾದ ಒಳಗ ವೀಣಾಗಾನ ಹಾಡುಗಾರಿಕೆ ಗ್ರಾಮೊಫೋನ್ ಈ ಮೊದಲಾದದ್ದನ್ನು ಕೇಳುತ್ತಾ ಸ್ವಲ್ಪ ಹೊತ್ತು ಸಂತೋಷ ಸಂಭ್ರಮಗಳಿಂದ ಕಾಲಕಳೆದರು. ಕಡೆಗೆ ಪಬ್ಲಿಕ್ ಪ್ರಾಸಿಕ್ಯೂಟರ್ ಮೆ॥ ಎಂ. ಎ. ಕೃಷ್ಣಯ್ಯಂಗಾರರು ಎದ್ದು ಲಾಯರುಗಳ ಪರವಾಗಿ ಜಡ್ಜಿಗಳ ಗುಣಕಥನವನ್ನು ಮಾಡಿದರು. ಅವರೆಲ್ಲಾ ಅದಕ್ಕೆ ಪ್ರತಿಯಾಗಿ ಸಮಯೋಚಿತವಾದ ಉತ್ತರಗಳನ್ನು ಹೇಳಿ, ಇಷ್ಟು ಪ್ರೀತಿಪೂರ್ವಕವಾದ ಮತ್ತು ವಿಸ್ತರಣೆಯಾದ ಔತಣ ಮಾಡಿದ್ದಕ್ಕಾಗಿ ತಾವು ತುಂಬಾ ಕೃತಜ್ಞರಾಗಿದ್ದು ಚಿರಕಾಲ ನೆನಸಿಕೊಳ್ಳುತ್ತೇವೆಂದು ತಿಳಿಸಿ, ಎಲ್ಲರನ್ನೂ ಆದರದಿಂದ ವಂದಿಸಿದರು.

ಇಲ್ಲಿನ ಚಾಮರಾಜ ರಸ್ತೆಯಲ್ಲಿರುವ ಪ್ಲೇಗ್ ಅ॥ ಕಮಿಷನರ್ ಮೆ॥ ಟಿ ಎ ಮಿರ್ ಸೈಜಾಮುದ್ದೀನ್ ಅಲ್ಲಿ ಖಾನರವರು ಮೆ॥ ಗಳಾದ ಪರಮಶಿವ ಐಯ್ಯರವರನ್ನೂ ಕೃಷ್ಣಸ್ವಾಮಯ್ಯಂಗಾರರನ್ನೂ ತಮ್ಮ ಮಂದಿರಕ್ಕೆ ಕರೆಸಿಕೊಂಡು ಸಂಗೀತ ಮೊದಲಾದದ್ದನ್ನು ಕಲ್ಪಿಸಿ ಅವರಿಗೆ ಔತಣ ಮಾಡಿದರು. ಬಹು ಮಂದಿ ದೊಡ್ಡ ಮನುಷ್ಯರು ಹಾಜರಾಗಿದ್ದು ಸಂತೋಷಪಟ್ಟರು.

ಡಾಕ್ಟರ್ ಪಿ. ಎಸ್ ಅಚ್ಯುತರಾಯರಿಗೆ ರಾಜಧಾನಿಯ ಪ್ರಜೆಗಳ ಪರವಾಗಿ ಟೌನ್ ಹಾಲ್ ಬಂಗಲೆಯಲ್ಲಿ ಔತಣವಾಯಿತು. ಅರಸುಗಳೂ ದೊಡ್ಡ ಮನುಷ್ಯರೂ ಅಧಿಕಾರಿಗಳೂ ವರ್ತಕಮಂಡಲಿಯವರೂ ಹಾಜರಾಗಿದ್ದರು. ಮೆ॥ ಶೇಷಣ್ಣನವರ ಸಂಗೀತವೂ, ಮೆ॥ ಬಿಡಾರದ ಕೃಷ್ಣಪ್ಪನವರ ಹಾಡುಗಾರಿಕೆಯೂ, ರತ್ನಾವಳಿ ಕಂಪನಿಯವರ ನಾಟಕಾಂಶವೂ ಸಭಾಸದರ ಕರ್ಣಗಳನ್ನು ಸಂತೋಷಪಡಿಸಿದವು. ಮೆ॥ ಆಂಬಳೆ ಅಣ್ಣಯ್ಯ ಪಂಡಿತರೂ ಮೆ॥ ಗುಂಡಶಾಸ್ತ್ರಿಗಳೂ, ವೆಸ್ಲಿ ಮಿಷನ್ ಪ್ರೆಸ್‌ಯವರೂ ಡಾಕ್ಟರ್ ಅಚ್ಯುತರಾಯರ ಪರೋಪಕಾರ ಕಾರ್ಯಗಳನ್ನೂ ಅವರ ಪ್ರಜಾಪ್ರೀತಿ ವಾತ್ಸಲ್ಯಗಳನ್ನೂ ಅವರ ಹಸ್ತಗುಣ ವೈದ್ಯಸಾಮರ್ಥ್ಯಾದಿಗಳನ್ನೂ ವರ್ಣನೆ ಮಾಡಿ, ಇಂಥವರು ರಾಜಧಾನಿಯನ್ನು ಬಿಟ್ಟು ಹೋಗುವದು ಸಕಲ ಪ್ರಜೆಗಳಲ್ಲೂ ಅಪಾರವಾದ ದುಃಖವನ್ನುಂಟುಮಾಡಿದೆ ಎಂಬುದಾಗಿ ಹೇಳಿದರು. ಡಾಕ್ಟರ್ ಅಚ್ಯುತರಾಯರು ಎದ್ದು ಪ್ರಜೆಗಳನ್ನು ಅವರು ಮಾಡಿದ ಔತಣಕ್ಕಾಗಿ ಮನಃಪೂರ್ವಕವಾಗಿ ವಂದಿಸಿ, ಕಿಂಚಿತ್ತಾದರೂ ಭೂತದಯೆ ಪಶ್ಚಾತ್ತಾಪಗಳನ್ನುಳ್ಳವರು ತಾವು ಮಾಡಿದ ಕಾರ್ಯಗಳನ್ನೇ ಮಾಡುತ್ತಿದ್ದರೆಂತಲೂ, ಇವುಗಳಿಗಾಗಿ ತಾವು ಯಾವ ವಿಧವಾದ ಸ್ತೋತ್ರಕ್ಕೂ ಅರ್ಹರಲ್ಲವೆಂತಲೂ, ಪ್ಲೇಗಿನ ಕಾಲದಲ್ಲಿ ಮಹಾಮಾತೃಶ್ರೀ ಲೇಟ್ ರೀಜೆಂಟರವರೂ ಪ್ಲೇಗ್ ಕಮಿಷನರಾಗಿದ್ದ ಮೆ॥ ಮಾಧವರಾಯರೂ ಪ್ರಜೆಗಳನ್ನು ಸ್ವಲ್ಪವೂ ನೋಯಿಸದಂತೆ ಕಾಪಾಡಬೇಕೆಂದು ಅಪ್ಪಣೆ ಕೊಡಿಸಿ, ಬೇಕಾದ ಸಹಾಯಸಂಪತ್ತುಗಳನ್ನು ಒದಗಿಸಿಕೊಟ್ಟರೆಂತಲೂ, ರಾಜಧಾನಿಯಲ್ಲಿ ಮಹಮದೀಯರು ಮತ್ತು ಬ್ರಾಹ್ಮಣರ ದಾರಿದ್ರ್ಯವು ವಿವರಿಸಲಶಕ್ಯವಾಗಿದೆ ಎಂತಲೂ, ಇಷ್ಟು ನಿರ್ಗತಿಕರಾದ ಪ್ರಜೆಗಳು ಈ ಸಂಸ್ಥಾನದ ಇನ್ಯಾವ ಭಾಗದಲ್ಲೂ ಇರುವುದಿಲ್ಲವೆಂದು ಮೊದಲಾಗಿ ಪ್ರತ್ಯುತ್ತರ ಹೇಳಿದರು. ತರುವಾಯ ಹಾರಾ ತುರಾಯಿಗಳನ್ನೂ ಅಡಿಕೆಎಲೆಯನ್ನೂ ಪಾರಕರನರಿಗೆ ಒಪ್ಪಿಸಿ ಜಯಘೋಷಗಳೊಡನೆ ಸಭೆಯನ್ನು ಮುಕ್ತಾಯ ಮಾಡಿದರು.

ಡೆಪ್ಯುಟಿ ಕಮಿಷನರ್ ಮೆ॥ ಎಚ್ ಎಚ್ ಸ್ಪಾರ್ಕ್ಸ್‌ಯವರಿಗೂ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮೆ॥ ಸಿ. ವೆಂಕಟರಾಯರಿಗೂ ಪುರನಿವಾಸಿಗಳು ಟೌನ್ ಹಾಲ್ ಬಂಗಲೆಯಲ್ಲಿ ದೊಡ್ಡ ಔತಣ ಮಾಡಿದರು. ಅರಸುಗಳು, ಸಾಹುಕಾರರು, ದೊರೆಸಾನಿಗಳು, ಅಧಿಕಾರಿಗಳು, ಪ್ರಜೆಗಳ ಮುಖಂಡರು, ವರ್ತಕರು, ಗೌಡ ಮನುಷ್ಯರು ಎಲ್ಲಾ ಬಂಗಲೆಯು ತುಂಬಾ ಕಿಕ್ಕಿರಿಯುವಂತೆ ಸೇರಿದ್ದರು. ಸಾಹೇಬ ಜನರಿಗೆ ಹಿತವಾದ ಹಾಡುಗಾರಿಕೆ ದೇಶೀಯ ಸಂಗೀತ, ಜಲತರಂಗ್, ನಕಲಿ, ರತ್ನಾವಳಿ ಕಂಪನಿಯವರ ನಾಟಕ, ಈ ಮೊದಲಾದವು ನಡೆದವು. ಮೆ॥ ಎಸ್ ವೆಂಕಟಕೃಷ್ಣಯ್ಯನವರು ಮೆ॥ ಸ್ಪಾರ್ಕ್ಸ್‌ಯವರ ಚಟುವಟಿಕೆ ಸಾಹಸ ಕಾರ್ಯಗಳನ್ನೂ ಪ್ರಜಾಪ್ರೀತಿಯನ್ನೂ ಕೆಲಸದ ಮುತುವರ್ಜಿಯನ್ನೂ ಕುರಿತು ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿದರು. ಮೆ॥ ವೆಂಕಟರಾಯರ ಕಾಲದಲ್ಲಿ ನಡೆದ ಮ್ಯುನಿಸಿಪಲ್ ಪದಾರ್ಥಗಳನ್ನು ವರ್ಣಿಸಿದರು. ವೆಸ್ಲಿ ಮಿಷನ್ ಪ್ರೆಸ್‌ಯವರ, ಮೆ॥ ಡಿಕ್ರೂಸ್‌ಯವರೂ ಮೆ॥ ಸ್ಪಾರ್ಕ್ಸ್‌ಯವರಿಂದ ಮಹಮದೀಯರಿಗೂ ಸಾಹುಕಾರ ಜನರಿಗೂ ಉಂಟಾದ ಸಹಾಯ ಸಂಪತ್ತುಗಳನ್ನು ಅವರ ಗುಣಾತಿಶಯವನ್ನೂ ವಿವರಿಸಿ, ಇವರಿಬ್ಬರಿಗೂ ವರ್ಗವಾದ ವಿಷಯದಲ್ಲಿ ಸಕಲ ಪ್ರಜೆಗಳಿಗೂ ತುಂಬಾ ವ್ಯಸನವಾಗಿದೆ ಎಂದು ಹೇಳಿದರು. ಅನಂತರ ಮೆ॥ ಸ್ಪಾರ್ಕ್ಸ್‌ಯವರು ಎದ್ದು ಸಭಿಕರನ್ನೆಲ್ಲಾ ವಂದಿಸಿ, ಸರ್ಕಾರಿ ಕೆಲಸಗಳನ್ನು ನ್ಯಾಯವಾಗಿ ತಾವು ಮಾಡಿದ್ದಲ್ಲದೆ ವಿಶೇಷವೇನೂ ಮಾಡಲಿಲ್ಲವೆಂತಲೂ ಪ್ರಜೆಗಳ ಮುಖಂಡರು ತಮಗೆ ತುಂಬಾ ಸಹಾಯ ಮಾಡಿದ್ದಕ್ಕಾಗಿ ಬಹಳ ಕೃತಜ್ಞರಾಗಿದ್ದೇನೆಂತಲೂ, ಮುಂದೆ ತಮ್ಮ ಸ್ಥಾನಕ್ಕೆ ಬರುವವರು ತಮಗಿಂತಲೂ ಹೆಚ್ಚಾಗಿ ಪ್ರಜಾಪ್ರೀತಿಯನ್ನು ಸಂಪಾದಿಸಿಕೊಳ್ಳುವರೆಂತಲೂ ಪ್ರತ್ಯುತ್ತರ ಕೊಟ್ಟರು. ಮೆ॥ ವೆಂಕಟರಾಯರು ಎದ್ದು ಸಭಿಕರು ತಮ್ಮ ವಿಷಯದಲ್ಲಿ ಹೇಳಿದ ಒಳ್ಳೇ ಮಾತುಗಳಿಗಾಗಿ ಅವರನ್ನೆಲ್ಲಾ ವಂದಿಸಿದರು. ತಾಂಬೂಲಾದಿಗಳು ಒಪ್ಪಿಸಲ್ಪಟ್ಟವು. ಸಭಿಕರೆಲ್ಲಾ ಅತಿಥಿಗಳ ಶ್ರೇಯಃಪ್ರಾರ್ಥನೆ ಮಾಡಿ ಸಭೆಯನ್ನು ಮುಕ್ತಾಯಮಾಡಿದರು.

ತಾಲ್ಲೂಕು ವರ್ತಮಾನಗಳು.

ಆನೇಕಲ್ —ಇಲ್ಲಿ ಪ್ಲೇಗ್ ಜಾಡ್ಯದ ಹೆಸರೇ ಎರಡು ವರುಷಗಳಿಂದ ಮರೆತು ಹೋಯಿತು. ಎರಡು ವರುಷಗಳಿಂದಲೂ ಮುಚ್ಚಲ್ಪಟ್ಟಿದ್ದ ಅಂಗಡಿಗಳ ಮತ್ತು ಹಾಳು ಬಿದ್ದಿದ್ದ ಮನೆಗಳ ಬಾಗಿಲುಗಳು ಈಗ ತೆರೆಯಲ್ಪಡುತ್ತಾ ಇವೆ. ಮಳೆ ಈಗ ೪—೫ ದಿನಗಳಿಂದಲೂ ಇಲ್ಲ. ಹೊಲಗಳು ಬಿತ್ತನೆಗೆ ಕಾದಿರುತ್ತವೆ. ಇಲ್ಲಿನ ಅಮಲ್ದಾರ್ ಮೆ॥ ಮಹಮದ್ ಸಾಹೇಬರಿಗೆ ರೆವಿನ್ಯೂ ಕಮಿಷನರ್ ದರ್ಜೆಗೆ ಬದ್ಲಿ ಆಯಿತು. ಇದಕ್ಕಾಗಿ ಪ್ರಜೆಗಳು ತುಂಬಾ ಸಂತೋಷಪಡುತ್ತಾರೆ. ಇವರು ಇಲ್ಲಿಗೆ ಬಂದನಂತರ ಆನೇಕಲ್ಲಿನ ಅಭಿವೃದ್ಧಿಯೇ ಇವರ ಒಳ್ಳೇ ಕೆಲಸಕ್ಕೆ ಸಾಕ್ಷಿಯಾಗಿದೆ. ಎಲ್ಲಾ ಒಳ್ಳೇ ಕೆಲಸಕ್ಕೆ ಇವರು ತಮ್ಮ ಆಲೋಚನೆಯನ್ನೂ ಹಣವನ್ನೂ ಸಮಯವನ್ನೂ ಧಾರಾಳವಾಗಿ ಕೊಟ್ಟರು. ಇವರು ಇಲ್ಲಿಂದ ವರ್ಗವಾದ್ದರಿಂದ ನಾವು ಒಳ್ಳೇ ಸ್ನೇಹಿತನನ್ನು ಕಳಕೊಂಡಂತೆ ಭಾವಿಸಬೇಕಾಗಿದೆ. ಈ ಹೊತ್ತು (ಜೂನ್ ೨೭ ನೇ ತಾ.) ಇವರು ಹೊರಟು ಹೋಗುವದರಿಂದ ತಾಲ್ಲೋಕ್ ಉದ್ಯೋಗಸ್ಥರು ಸೇರಿ ಒಂದು ಟೀಪಾರ್ಟಿಯನ್ನು ಇಲ್ಲಿನ ಮ್ಯುನಿಸಿಪಲ್ ಪಾರ್ಕಿನಲ್ಲಿ ಕೊಟ್ಟರು. ಈ ಸಂದರ್ಭದಲ್ಲಿ ಒಂದೆರಡು ಉಪನ್ಯಾಸಗಳು ನಡೆದ ತರುವಾಯ ಸ್ಕೂಲ್ ಬಾಲಕರು ಮಂಗಳವನ್ನು ಹಾಡಿದರು. ಅನಂತರ ಅಮಲ್ದಾರ್ ಸಾಹೇಬರು ತಕ್ಕ ಉತ್ತರವನ್ನು ಕೊಟ್ಟರು. ಇವರು ಮಾತಾಡುವ ಸಮಯದಲ್ಲಿ ಅನೇಕರು ಕಣ್ಣೀರು ಸುರಿಸುತ್ತಿದ್ದರು. ಇಲ್ಲಿಗೆ ಎಷ್ಟೋ ಮಂದಿ ಅಮಲ್ದಾರರುಗಳು ಬಂದು ಹೋದರು. ಆದರೆ ಯಾರಿಗೂ ಇಂಥಾ ಪ್ರೀತಿಪೂರ್ವಕವಾದ ಮರ್ಯಾದೆ ನಡೆಯಲಿಲ್ಲವೆಂದು ಹೇಳುತ್ತಾರೆ. ಇವರು ಹೊರಟು ಹೋಗುವದರ ವಿಷಯದಲ್ಲಿ ಊರೆಲ್ಲಾ ಒಂದೇ ಮನಸ್ಸಿನಿಂದ ಪ್ರಲಾಪಿಸುತ್ತದೆ. ಇವರನ್ನು ಜನರು ಯಾತಕ್ಕೆ ಇಷ್ಟು ಪ್ರೀತಿ ಮಾಡಿದರೆಂಬ ಪ್ರಶ್ನೆಗೆ ಇವರು ಪ್ರೀತಿಯನ್ನು ಕೊಟ್ಟು ಪ್ರೀತಿಯನ್ನು ಸಂಪಾದಿಸಿದರೆಂದು ಉತ್ತರ ಕೊಡಬೇಕಾಗಿದೆ.—ಕಳೆದ ವರುಷ ಇಲ್ಲಿಂದ ಗುಬ್ಬಿಗೆ ವರ್ಗವಾದ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ಎಚ್ ಹನುಮಂತನಾಯಡುರವರಿಗೆ ಆನೇಕಲ್ಲಿನ ಪ್ರಜೆಗಳು ಬಹುಮಾನವನ್ನು ಕೊಡಬೇಕೆಂದು ಗವರ್ನಮೆಂಟಿಗೆ ವಿಜ್ಞಾಪನೆ ಮಾಡಿದ್ದಾರೆಂದು ಕೆಲವು ತಿಂಗಳ ಮುಂಚೆ ತಿಳಿಸಿದ್ದೆನಷ್ಟೆ. ಇಂಥಾ ಬಹುಮಾನವನ್ನು ಪ್ರಜೆಗಳು ಕೊಡಬಹುದೆಂತಲೂ ನಾಯಡುರವರು ಇದನ್ನು ಅಂಗೀಕರಿಸಬಹುದೆಂತಲೂ ಮೈಸೂರು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದರು. ಇದರಂತೆ ಕಳೆದ ಡಿಸೆಂಬರ್ ೧೫ ರಲ್ಲಿ ಒಂದು ದೊಡ್ಡ ಸಭೆಯನ್ನು ಇಲ್ಲಿ ಕೂಡಿಸಿ ಮೆ॥ ನಾಯಡುರವರಿಗೆ ಸುಮಾರು ೪೦ ರೂಪಾಯಿ ಬಾಳತಕ್ಕ ಭಂಗಾರದ ಸರಿಗೆಯನ್ನು ಬಹುಮಾನ ಕೊಟ್ಟರು. ಈ ಸಂದರ್ಭದಲ್ಲಿ ಬೆಂಗಳೂರ್ ಸಬ್ ಡಿವಿಜನ್ ರೇಂಜ್ ಆಫೀಸರ್ ಮೆ॥ ವೆಂಕೋಬರಾಯರು ಅಗ್ರಾಸನವನ್ನು ವಹಿಸಿ, ಆ ಸಮಯಕ್ಕೆ ಅನುಸಾರವಾದ ಉಪನ್ಯಾಸ ಮಾಡಿ ಈ ಸರಿಗೆಯನ್ನು ಅವರಿಗೆ ಕೊಟ್ಟರು. ಈ ವರ್ತಮಾನವನ್ನು ಮೊದಲೇ ಕೃತಪಡಿಸದೆ ಇದ್ದದಕ್ಕಾಗಿ ಆನೇಕಲ್ ಪ್ರಜೆಗಳ ನಾತು ಮೆ॥ ನಾಯಡುರವರ ಕ್ಷಮಾಪಣೆಯನ್ನು ಬೇಡುತ್ತೇನೆ.

ಸಂತೆಸಗೂರು.—ಈ ಪ್ರಾಂತ್ಯ ಮಳೆ ಇಲ್ಲ. ರೈತರು ಬಿತ್ತಿರುವ ಜೋಳ ಬಾಡುತ್ತಾ ಇದೆ. ದನಕರುಗಳಿಗೆ ಹುಲ್ಲು ಇಲ್ಲದೆ ಅನೇಕ ದನಗಳು ಸಾಯುತ್ತಾ ಇವೆ. ಸಾಯಂಕಾಲದಲ್ಲಿ ಮೋಡಗಳು ಕಾ

ಸಿ, ಸಹಾಯವಾಗುವವು ಬಡವರಿಗೆ ಅನೇಕ ಬಿಕ್ಕಟ್ಟು ಆಹಾರ ಪದಾರ್ಥಗಳ ಕಷ್ಟ ಪೇಟೆಯಲ್ಲಿ ರೂಪಾಯಿಗೆ ೧೦ ಸೇರು ರಾಗಿ, ೭ ಸೇರು ಅಕ್ಕಿ ಮಾರುತ್ತಾರೆ. ಮಿಕ್ಕ ದಿನಸಿಗಳ ಧಾರಣೆ ಸಹ ಹೆಚ್ಚಾಗಿದೆ ಇದು ಕ್ಷಾಮವೇ ಎಂದು ಜನರು ಪ್ರಲಾಪಿಸುತ್ತಾರೆ.—ಇಲ್ಲಿ ರೆವಿನ್ಯೂ ಕಮೀಷನರಾಗಿ ಬಹಳ ಹೆಸರು ಪಡೆದಿದ್ದ ಮಿ॥ ಎಸ್ ಕೇಶವಗಿರಿಯವರಿಗೆ ಪೆನ್ಷನ್ ಆದಕಾರಣ ಬಹುಜನರು ವಿಷಾದಿಸುತ್ತಾರೆ. ಹೊಸದಾಗಿ ಮಿ॥ ಶ್ರೀಕಂಠೇಶಗೌಡರು ರೆವಿನ್ಯೂ ಕಮೀಷನರಾಗಿ ಬಂದಿದ್ದಾರೆ ಇಲ್ಲಿನ ದೊಡ್ಡ ಮನುಷ್ಯರು ಸೇರಿ ಇವರಿಬ್ಬರನ್ನೂ ಒಂದು ಸ್ಥಳದಲ್ಲಿ ಕರೆಸಿ ತಮ್ಮ ಪ್ರೀತಿಯನ್ನು ಮರ್ಯಾದೆಯ ಮೂಲಕ ಪ್ರಕಾಶಪಡಿಸಿದರು ಇಲ್ಲಿನ ಅಮಲ್ದಾರರಿಗೂ ಬೆಂಗಳೂರಿಗೆ ವರ್ಗವಾಯಿತು ಅವರಿಗೆ ಬದಲಾಗಿ ಕೋಲಾರದಿಂದ ಒಬ್ಬರು ಬಂದಿರುತ್ತಾರೆ ಹೊಸ ಉದ್ಯೋಗಸ್ಥರು ಬಹಳ ಹೆಸರನ್ನು ಹೊಂದಿ ಇಲ್ಲಿನ ಜನರ ಕಷ್ಟಗಳನ್ನು ಪರಿಹರಿಸಿ ವಿಶ್ವಾಸಪಾತ್ರರಾಗಿಯೂ ಜನೋಪಕಾರಿಗಳಾಗಿಯೂ ಆದಾರೆಂದು ನಿರೀಕ್ಷಿಸುತ್ತೇವೆ.—ಇಲ್ಲಿಗೆ ೨ ತಿಂಗಳ ಹಿಂದೆ ಮೈಸೂರಿಂದ ೧೦—೩೦ ಆನೆಗಳು ಬಂದು ಆ ಲಾಗಾಯತು ಈ ತಾಲೂಕು ವರಿಗೂ ಅರಮನೆಗೆ ಸೇರಿದ ತೋಪಿನಲ್ಲಿಯೇ ಕಟ್ಟಿ ಹಾಕಿರುತ್ತಾರೆ. ಆ ಆನೆಗಳನ್ನು ನೋಡಿಕೊಳ್ಳುವವರು ಸಾಕ್ಷಿ ನೀಚರೆಯು, ಆಂಬೆನಲ್ಲಿಯೇ ವಾಸಮಾಡುತ್ತಾ ಇದ್ದಾರೆ ತಾ ೩೦ನೇ ಶನಿವಾರ ಆನೆಗಳನ್ನು ನೋಡಿಕೊಳ್ಳುವವರಲ್ಲಿ ಒಬ್ಬ ಯೌವನಸ್ಥನು ತೋಪಿನಲ್ಲಿರುವ ಒಂದು ದೊಡ್ಡ ಮರಕ್ಕೆ ಹತ್ತಿ ಆನೆಗಳಿಗೆ ಕೊಂಬೆಗಳನ್ನು ಕಡಿದು ಹಾಕುತ್ತಾ ಇರುವಲ್ಲಿ ಕೈಜಾರಿ ಕೆಳಕ್ಕೆ ಬಿದ್ದನು. ಕೂಡಲೆ ಮೂಗು ಬಾಯಿಗಳಲ್ಲಿ ತುಂಬಾ ರಕ್ತ ಸುರಿದು ಪ್ರಾಣವೇ ಹೋಯಿತು. ಸಮೀಪದಲ್ಲಿದ್ದ ಇಬ್ಬರು ಹೆಂಗಸರು ಸೊಪ್ಪನ್ನು ಕೀಳುತ್ತಾ ನೋಡಿ ಮಾವುತರಿಗೆ ತಿಳಿಸಿದರು ಅವರು ಬಂದು ಬಹಳ ಗೋಳಾಡಿ ಶವವನ್ನು ಸಾಗಿಸಿ ಸಂಸ್ಕಾರ ಮಾಡಿದರು.—ಗುರುವಾರ ಒಂದು ಬೀದಿಕಡೆ ನಾಯಿ ಹತ್ತು ನಾಲ್ಕು ಇಲ್ಲಿನ ಪಟೇದಾರರು ಬಲಗೆರೆ ಚನ್ನಪ್ಪ ದೇವಗೌಡರು ಸಂಜೆ ಕಾಲ ಅಲ್ಲಿನ ಕೋಟೆ ಪ್ರಾಕಾರದ ಮನೆಯ ಸಮೀಪ ಹೋಗಲು ಆ ನಾಯಿ ಅವರ ಕಾಲು ಕಚ್ಚಿತು ಅವರು ಆ ರಾತ್ರಿ ಸರ್ಕಾರಿ ಚಿಕಿತ್ಸೆ ಮಾಡಿಕೊಂಡು ಬೆಳಿಗ್ಗೆ ಆಸ್ಪತ್ರೆಗೆ ಒಂದು ವಾಕ್ಯವನ್ನು ಹೇಳಿದರು ಅವರು ಒಂದೆರಡು ದಿವಸಗಳನ್ನು ಕಾದು, ಕಸೌಲಿ ಆಸ್ಪತ್ರೆಗೆ ಹೋದರೆ ಗಾಯದ ವಳಗಿನ ವಿಷ ಹೋಗುತ್ತದೆ ಇಲ್ಲಿ ಅಂಥಾ ಔಷಧವಿಲ್ಲವೆಂದು ಹೇಳಿ ಕಳುಹಿಸಿದರು. ಮೊನ್ನೆ ಬುಧವಾರ ಸಹ ಒಂದು ಹುಚ್ಚುನಾಯಿ ಒಬ್ಬನನ್ನು ಕಚ್ಚಬೇಕೆಂದು ಬಾಯಿ ತೆರೆಯಿತು. ಅಷ್ಟರಲ್ಲಿ ಜನರು ಕಲ್ಲು ಹೊಡೆದು ಅದನ್ನು ಕೊಂದು ಹಾಕಿದರು ಸರ್ಕಾರದವರು ಇಂಥಾ ನಾಯಿಗಳನ್ನು ಕೊಲ್ಲಿಸುವ ಪ್ರಯತ್ನ ಮಾಡುವುದು ಒಳ್ಳೇದು.—ಬಲಗೆರೆಯ ಚನ್ನಪ್ಪಗೌಡರ ಮನೆಗೆ ಶನಿವಾರ ರಾತ್ರಿ ಎರಡು ಎತ್ತುಗಳನ್ನು ಕಟ್ಟಿ ಹಾಕಿ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋದರು. ಅಲ್ಲಿನ ಕಾವಲಿನವನೊಬ್ಬನೇ ಒಂದ ಕೊಠಡಿಯಲ್ಲಿ ಮಲಗಿರಲು ಮಧ್ಯರಾತ್ರಿಯಲ್ಲಿ ಚಿರತೆ ಬಂದು ದನಗಳ ಮೇಲೆ ಬೀಳಲು ಯತ್ನಿಸಿತು ಅಷ್ಟರಲ್ಲಿ ನಾಯಿ ಬೊಗಳಿತು ಒಳಗಿದ್ದ ಕಾವಲುಗಾರನು ಬಂದು ನೋಡಲು ಸ್ವಲ್ಪ ದೂರದಲ್ಲಿ ಚಿರತೆ ಕುಳಿತುಕೊಂಡಿತ್ತು ಅದರ ಆಕಾರವನ್ನು ಕಣ್ಣುಗಳನ್ನು ನೋಡಿ ಅವನಿಗೆ ಬಹು ಗಾಬರಿಯಾಯಿತು ಸಮೀಪದ ದಾರಿ ಇರಲಿಲ್ಲ ತನ್ನಲ್ಲಿದ್ದ ಲಾಂದ್ರ ಹಚ್ಚಿ ಕೆಲವು ಆಯುಧಗಳಿಂದ ಶಬ್ದಮಾಡಲು ಚಿರತೆ ಹೊರಟು ಹೋಯಿತು ಅವನು ಈಚೆ ಬಂದು ಗಲಾಟೆ ಮಾಡದೆ ಹೋಗಿದ್ದರೆ ಗಣಿಯು ಎರಡು ಎತ್ತುಗಳೂ ಸಾಯುತ್ತಿದ್ದವು

ಪರಕು—ಮುರಕು

ಜರ್ಮನ್ ದೇಶೀಯರು ಪಾಶ್ಚಾತ್ಯರ (ಯೂರೋಪ್ಪಿಯನ್ನರ) ನಾಗರೀಕತೆಯನ್ನು ಹೊಂದಿಕೊಂಡಾರಂಭ್ಯ ಜರ್ಮನ್ ದೇಶದಲ್ಲಿ ಪ್ರಕಟವಾಗುವ ವರ್ತಮಾನ ಪತ್ರಿಕೆಗಳ ಸಂಖ್ಯೆಯು ಪ್ರತಿ ವರ್ಷವೂ ಹೆಚ್ಚುತ್ತಲಿದೆ. ಜರ್ಮನ್ ದೇಶದಲ್ಲಿ ಮೊದಲನೆ ವರ್ತಮಾನ ಪತ್ರಿಕೆಯು ೧೬೧೫ನೇ ವರುಷದಲ್ಲಿ ಪ್ರಕಟವಾಯಿತು ಆ ವರುಷದಿಂದೀಚೆಗೆ ಆ ದೇಶದಲ್ಲಿ ನಾಲ್ಕುಸಾವಿರ ವರ್ತಮಾನ ಪತ್ರಿಕೆಗಳು ಪ್ರಕಟವಾಗುವವು ಜರ್ಮನ್ ದೇಶೀಯರು ವರ್ತಮಾನ ಪತ್ರಿಕೆಗಳನ್ನು ಓದುವದರಲ್ಲಿ ವಿಶೇಷವಾದ ಅಭಿರುಚಿಯನ್ನು ತೋರಿಸುತ್ತಿರುವರೆಂದು ಇದರಿಂದ ಪರಿಷ್ಕಾರವಾಗಿ ಕಂಡುಬರುತ್ತದೆ. ಜರ್ಮನ್ ಚಕ್ರಾಧಿಪತ್ಯದ ಮುಖ್ಯಪಟ್ಟಣವಾದ ಬೋಳಿನ್ ಒಂದರಲ್ಲೇ ನೂರ ಇಪ್ಪತ್ತು ವರ್ತಮಾನ ಪತ್ರಿಕೆಗಳು ಪ್ರಕಟವಾಗುತ್ತವೆ ಇವುಗಳಲ್ಲಿ ಪ್ರಖ್ಯಾತಿಯನ್ನು ಹೊಂದಿರುವ ವಿಸ್ಸೇಸ್ಟಿಂಪೊ ಎಂಬ ಪತ್ರಿಕೆಗೆ ನಾಲ್ಕುಲಕ್ಷ ಚಂದಾದಾರರಿರುತ್ತಾರೆ

ಪ್ರಪಂಚದಲ್ಲೆಲ್ಲಾ ಅತ್ಯಂತ ಭಾರಿ ಸಂಬಳವನ್ನು ಪಡೆಯುತ್ತಿರುವ ಸ್ವಾಬ್ ಎಂಬುವನು ಅಮೇರಿಕ ದೇಶದಲ್ಲಿರುತ್ತಾನೆ ಇವನು ಆ ದೇಶದ ಪ್ರಸಿದ್ಧವಾದ ಒಂದು ಕಬ್ಬಿಣದ ಕಾರ್ಖಾನೆಯಲ್ಲಿ ಮ್ಯಾನೇಜರಾಗಿರುವನು ಇವನಿಗೆ ಕಾರ್ಖಾನೆಯ ಸ್ವಂತಗಾರರು ಅಂಗಳೊಂದಕ್ಕೆ ಎರಡು ಲಕ್ಷ ರೂಪಾಯಿ ಸಂಬಳವನ್ನು ಕೊಡುತ್ತಾರೆ (ಹಿಂದೂ ದೇಶದ ವೈಸ್‌ರಾಯರಿಗೆ ತಿಂಗಳೊಂದಕ್ಕೆ ಸುಮಾರು ಇಪ್ಪತ್ತೈದುಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿ ಸಂಬಳ ದೊರೆಯುವದಿಲ್ಲ) ಇಂಥಾ ಅಗಾಧವಾದ ಸಂಬಳವನ್ನು ಪಡೆಯುವ ಈ ಮನುಷ್ಯನ ಬುದ್ಧಿಕೌಶಲತೆಯು ಅಸಾಧಾರಣವಾಗಿರುವದು ಇವನು ಪ್ರಾರಂಭದಲ್ಲಿ ಪಟಕಾಗಾಡಿ ಹೊಡೆಯುತ್ತಿದ್ದು ಸ್ವಪ್ರಯಾಸದಿಂದ ಕಷ್ಟತರವಾದ ಕೆಲಸಗಳನ್ನು ಮಾಡಿ ಈಗಿನ ಉನ್ನತಸ್ಥಾನಕ್ಕೆ ಬಂದಿರುವನು ಇವನ ಅಭಿಪ್ರಾಯಗಳು ಕೆಲವು ವಿಷಯಗಳಲ್ಲಿ ಬಹು ವಿಚಿತ್ರವಾಗಿವೆ ಯೌವನಸ್ಥರು ಲೋಕದಲ್ಲಿ ಪ್ರವೃದ್ಧಿಮಾನಕ್ಕೆ ಬರಬೇಕಾದರೆ ಖಂಡಿತವಾಗಿ ಮದುವೆಮಾಡಿಕೊಳ್ಳಬೇಕು ಇಲ್ಲವಾದರೆ ಅವರು ತಮ್ಮ ಕೆಲಸಗಳ ಮೇಲೆ ವಿಶೇಷವಾದ ಗಮನವನ್ನು ಕೊಡಲಾರರೆಂದು ಇವನು ಅಭಿಪ್ರಾಯಪಡುತ್ತಾನೆ

ಜರ್ಮನ್ ದೇಶದಲ್ಲಿಬ್ಬರು ಒಂದು ಬೀದಿಯಲ್ಲಿ ಎದುರುಬದರಾಗಿ ಬೈಸಿಕಲ್ ಗಾಡಿಗಳ ಮೇಲೆ ಸವಾರಿ ಮಾಡಿಕೊಂಡು ಬರುತ್ತಿದ್ದರು ಹ್ಯಾಗೋ ಆಕಸ್ಮಾತ್ತಾಗಿ ಎರಡು ಬೈಸಿಕಲ್ ಗಾಡಿಗಳು ಢಿಕ್ಕಾಮುಕ್ಕಿ ಬಡಿದು ಮೇಲಿದ್ದ ಇಬ್ಬರೂ ಕೆಳಕ್ಕೆ ಬಿದ್ದರು. ಬಜ್ಜಿಯೆಲ್ಲಾ ಮಣ್ಣು ಮಯಿತು ಆದರೆ ಅವರು ರೋಷದಿಂದ ಒಬ್ಬರ ಮೇಲೊಬ್ಬರು ಬಿದ್ದು ಜಗಳವಾಡದೆ ಶಾಂತವಾಗಿ ತಮ್ಮ ಜೇಬಿನಲ್ಲಿದ್ದ ಕರವಸ್ತ್ರಗಳನ್ನು ತೆಗೆದು, ಒಬ್ಬರು ಮತ್ತೊಬ್ಬರ ಬಟ್ಟೆಯ ಮೇಲಿದ್ದ ದೂಳನ್ನೊರಸಿ ನಗುತ್ತಾ ತಮ್ಮ ತಮ್ಮ ಗಾಡಿಗಳನ್ನು ಹತ್ತಿ ಮೇಲೆ ಹೊರಟುಹೋದರು

ಸ್ಕಾಂಡಿನೇವಿಯ ರಾಜ್ಯಗಳಲ್ಲಿ ಪ್ರಯಾಣಸ್ಥರು ಓದುವದಕ್ಕೋಸ್ಕರ ಅಲ್ಲಿನ ರೈಲ್ ಗಾಡಿಗಳಲ್ಲಿ ಪುಸ್ತಕಭಂಡಾರಗಳನ್ನು ಸ್ಥಾಪಿಸಿರುವರು ಇವುಗಳಲ್ಲಿ ಪ್ರಯಾಣಸ್ಥರು ಅಪ್ಪಣೆ ಇಲ್ಲದೆ ಪುಸ್ತಕಗಳನ್ನು ತೆಗೆದು ಓದುವರು. ಇದುವರಿವಿಗೂ ಇಂಥಾ ರೈಲ್ ಗಾಡಿಗಳಲ್ಲಿರತಕ್ಕ ಪುಸ್ತಕಗಳನ್ನು ಯಾರಾದರು ಕೆಡಿಸಿದ್ದೇಯಾಗಲಿ ಕದ್ದುಕೊಂಡು ಹೋದದ್ದೇ ಆಗಲಿ ಇಲ್ಲವೆಂದು ಅಲ್ಲಿನವರು ತಿಳಿಸುತ್ತಾರೆ

ಇಂಗ್ಲಂಡಿನಲ್ಲಿ ಕೇಂಬ್ರಿಡ್ಜ್ ಎಂಬೂರಿನಿಂದ ಕಾಸ್ಲೆ ಎಂಬೂರಿಗೆ ರೈಲ್ವೆ ಟಿಕೇಟಿನ ದರವು ಒಂದಾಣೆಯಾಗುವದು ಇಷ್ಟು ಅಲ್ಪ ಹಣವನ್ನು ಕೊಟ್ಟು ಟಿಕೇಟು ಕೊಂಡು ಪ್ರಯಾಣ ಮಾಡುವದಕ್ಕೆ ಬದಲಾಗಿ ಒಬ್ಬನು ಕಂಪನಿಯವರಿಗೆ ಮೋಸ ಮಾಡಿಬಿಟ್ಟು ಪ್ರಯಾಣ ಮಾಡಬೇಕೆಂದು ಪ್ರಯತ್ನ ಮಾಡಿ ಸಿಕ್ಕಿ ಬಿದ್ದು ಮ್ಯಾಜಿಸ್ಟ್ರೇಟರಿಂದ ೭೫ ರೂಪಾಯಿನ ದುಲ್ಮಾನೆಯನ್ನು ಹೊಂದಿದನು ಇದೂ ಅಲ್ಲದೆ ಕೋರ್ಟಿನ ಖರ್ಚನ್ನೆಲ್ಲಾ ಅವನ ತಲೆಯ ಮೇಲ್ಹಾಕಿದರು.

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದ ಸಾಹುಕಾರನೊಬ್ಬನು ಒಂದು ವಿಚಿತ್ರವಾದ ನಾಟಕಶಾಲೆಯನ್ನು ಕಾಲೋನ್ ದೇಶದಲ್ಲಿ ಕಟ್ಟಿಸುತ್ತಿರುವನು ಇದು ಒಂದು ಹಡಗಿನಂತೆ ನೀರಿನ ಮೇಲೆ ತೇಲಾಡಬಲ್ಲದು ಈ ನೂತನ ನಾಟಕಶಾಲೆಯನ್ನು ಆ ಜರ್ಮನ್ ಸಾಹುಕಾರನು ರೈನ್ ನದಿಯ ಮೇಲೆ ಉಪಯೋಗಿಸುವದಕ್ಕೆ ಉದ್ದೇಶಪಟ್ಟಿರುವನು ಇದರಲ್ಲಿ ಸುಮಾರು ಎರಡು ಸಾವಿರದ ಮನೂರು ಜನರು ಕುಳಿತುಕೊಳ್ಳುವದಕ್ಕೆ ಸ್ಥಳವಿದೆ ಮತ್ತು ಇದರಲ್ಲಿ ಯಾವಾಗಲೂ ನಾಟಕಮಾಡುವದಕ್ಕೆ ಒಂದು ಇಟಾಲಿಯನ್ ಕಂಪನಿಯವರು ಒಪ್ಪಿರುವರು ಇದನ್ನು ರೈನ್ ನದಿಯ ತೀರಪಟ್ಟಣಗಳಿಗೆಲ್ಲಾ ಸಾಗಿಸಿಕೊಂಡು ಹೋಗಿ ಜನರಿಗೆ ನಾಟ್ಯವಾಡಿ ಸಂತೋಷಪಡಿಸುವರು

ಅಮೇರಿಕ ದೇಶದ ಸಂಯುಕ್ತ ಸಂಸ್ಥಾನದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಲ್ಲಿ ಆರು ಅಡಿ ಎತ್ತರವುಳ್ಳ ಒಂದು ಬಾರಿ ಕಟ್ಟಡವನ್ನು ಕಟ್ಟುತ್ತಿರುವರು ಇದಕ್ಕಿಂತಲೂ ಎತ್ತರವಾದ ಕಟ್ಟಡವು ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ ಇದರಲ್ಲಿ ನಾಲ್ವತ್ತು ಅಂತಸ್ತುಗಳಿರುವವು ಇವುಗಳಲ್ಲದೆ ಈ ಕಟ್ಟಡಕ್ಕೆ ಭೂಮಿಯ ಕೆಳಗೂ ಸಹ ಮೂರು ಅಂತಸ್ತುಗಳಿರುವವು ಇಂಥಾ ಬಾರಿ ಕಟ್ಟಡದಲ್ಲಿ ಆ ಊರಿನ ಕೆಲವು ದಳ್ಳಾಳಿಗಳೂ ಸಾಹುಕಾರರೂ ವಾಸಮಾಡುವರಂತೆ.

ವಿದೇಶ ವರ್ತಮಾನಗಳು.

ಲಂಡನ್ ಪಟ್ಟಣದಲ್ಲಿ ಹಿಂದಿನ ವಾರ ಒಂದು ಹೊಸ ಸೇತುವೆಯನ್ನು ಪೂರೈಸಿ ಪ್ರತಿಷ್ಠೆ ಮಾಡಿದರು ಅದು ಐದು ಕಮಾನುಗಳುಳ್ಳದ್ದು, ಅದಕ್ಕೆ ೬೫ ಲಕ್ಷ ರೂಪಾಯಿ ಖರ್ಚಾಗಿದೆ

●●●●

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ಬಂಬಾತಾ ಎಂಬ ದೇಶೀಯ ಮುಖಂಡನು ಇಂಗ್ಲೀಷರ ಮೇಲೆ ದಂಡೆತ್ತಿ ಕಾದುತ್ತಿದ್ದಾನೆ ಇಂಗ್ಲೀಷರ ಕಡೆಯಲ್ಲೂ ಆ ಮುಖಂಡನ ಕಡೆಯಲ್ಲೂ ಇದುವರೆಗೆ ನೂರಾರುಮಂದಿ ಸತ್ತಿದ್ದಾರೆ ಈ ದಂಗೆ ಇನ್ನೂ ಶಮನವಾಗಿಲ್ಲ

●●●●

ರಷ್ಯಾ ರಾಜ್ಯಕ್ಕೆ ಸೇರಿದ ಸಮಾರಾ, ಸಾರಟಾಫ್ ಸಿಂಬಿರೆಕ್, ನಿಜಿನಿ ನೌಗರಾಡ್, ಕಾಂನ್ಸ್ಕ, ಈ ಮೊದಲಾದ ಡಿಸ್ಟ್ರಿಕ್ಟುಗಳಲ್ಲಿ ಬೆಳೆಗಳೆಲ್ಲಾ ಮಳೆಯಿಲ್ಲದೆ ಹಾಳಾದವು ಬಹು ಕಠಿಣವಾದ ಕ್ಷಾಮ ಪ್ರಾಪ್ತವಾಗಿದೆ ಸರ್ಕಾರದವರು ಪ್ರಜೆಗಳನ್ನು ಸಂರಕ್ಷಣೆ ಮಾಡುವುದಕ್ಕೆ ೧೫ ಕೋಟಿ ರೂಪಾಯಿ ಖರ್ಚುಮಾಡುವವರಾಗಿದ್ದಾರೆ

●●●●

ಈಜಿಪ್ಟ್ (ಐಗುಪ್ತ) ರಾಜ್ಯದ ಮಾಜಿ ಖಿಡೈವ್(ದೊರೆ) ಯವರ ಸಂತತಿಯ ಷಹಜಾದಾಗಳು ಆ ದೊರೆಯವರ ಆಳಿಕೆಯ ಅಂತ್ಯದಲ್ಲಿ ಖಜಾನೆಯಲ್ಲಿ ಉಳಿದಂಥಾ ಮೂರು ಕೋಟಿ ರೂಪಾಯಿ ತಮಗೆ ಬರಬೇಕೆಂತಲೂ, ಆ ದೊರೆಯ ಆಸ್ತಿಗೆ ತಾವೇ ಹಕ್ಕುದಾರರೆಂತಲೂ ಕೈರೋ ಪಟ್ಟಣದ ನ್ಯಾಯಸ್ಥಾನದಲ್ಲಿ ದಾವಾ ತಂದರು. ನ್ಯಾಯಾಧಿಪತಿಗಳು ಅವರ ಪಕ್ಷದ ಬಾಧ್ಯತೆಗಳನ್ನು ತನಿಖೆ ಮಾಡಿ, ದಾವೆಯನ್ನು ವಜಾ ಮಾಡಿರುತ್ತಾರೆ

●●●●

ಆಫ್ರಿಕಕ್ಕೆ ಸೇರಿದ ಯೂಗಾಂಡಾ ಸೀಮೆಯಲ್ಲಿ ನಿದ್ರಾರೋಗದ ಲಕ್ಷಣ ಪರಿಹಾರ ಮುಂತಾದ್ದನ್ನು ಪರೀಕ್ಷೆ ಮಾಡುತ್ತಿದ್ದ ಟಲ್ಲಕ್ ಎಂಬ ವೈದ್ಯನು ಆ ರೋಗ ತಗಲಿ ಕಾಲವಾದನೆಂದು ತಿಳಿಯಬರುತ್ತದೆ. ಹೀಗೆ ಆಗಾಗ್ಗೆ ವೈದ್ಯರು ಪ್ರಾಣಕೊಡುತ್ತಿದ್ದಾಗ್ಯೂ ಇತರರು ಆದೈರ್ಯಪಡದೆ ಅಲ್ಲಿಗೆ ಹೋಗಿ ಪರಿಶೋಧನೆ ಮಾಡುವುದನ್ನು ಬಿಟ್ಟಿಲ್ಲ ಇದರಿಂದ ಆ ಮಹಾನುಭಾವರಲ್ಲಿರುವ ಪ್ರಜಾಹಿತವನ್ನು ಬಯಸುವಂಥ ಉದ್ದೇಶಕ್ಕಾಗಿ ಅವರನ್ನು ಎಷ್ಟು ಕೊಂಡಾಡಿದರೂ ಸಾಲದ್ದಾಗಿದೆ

●●●●

ಕಳೆದ ವಾರ ವೇಲ್ಸಿನ ದಕ್ಷಿಣಪ್ರಾಂತ್ಯದಲ್ಲಿ ಕಠಿಣವಾದ ಭೂಕಂಪವಾಯಿತು ಮನೆಗಳು ಅದುರಿದವು ಪ್ರಜೆಗಳು ತುಂಬಾ ಗಾಬರಿಬಿಟ್ಟರು. ಸ್ವಾನ್ಸಿ, ನ್ಯೂಪೋರ್ಟ್, ಕಾರ್ಡಿಫ್ ಎಂಬೀ ಕಡೆಗಳಲ್ಲೂ ಗ್ರಾಮಾಂತರಗಳಲ್ಲೂ ಕೆಲವು ಕಟ್ಟಡಗಳು ಉರುಳಿಹೋದವು ಅನೇಕರಿಗೆ ಗಾಯಗಳಾಗಿವೆ ಆಸ್ತಿ ಬಹಳ ಹಾಳಾಯಿತು ಒಂದು ಗಣಿಯೊಳಗೆ ೬ ಜನರು ಹೂತುಹೋದರು ಈ ಭೂಕಂಪವನ್ನು ಡೆವನ್, ಕಾರ್ನವಾಲ್, ಬ್ರಿಸ್ಟಲ್, ಬರ್ಮಿಂಗ್ಹ್ಯಾಂ, ಈ ಡಿಸ್ಟ್ರಿಕ್ಟುಗಳಲ್ಲೂ ಜನರು ಅನುಭವಿಸಿದರು.

●●●●

ಈಜಿಪ್ಟ್ (ಐಗುಪ್ತ) ರಾಜ್ಯಕ್ಕೆ ಸೇರಿದ ತಾಂಟಾ ಎಂಬ ಗ್ರಾಮದಲ್ಲಿ ಕೆಲವು ಜನರು ಸೇರಿ ಇಂಗ್ಲೀಷ್ ಸೈನಿಕರ ಮೇಲೆ ಬಿದ್ದು ಅವರನ್ನು ಹೊಡೆದು ಗಲಭೆ ಮಾಡಿದರು ಇದಕ್ಕಾಗಿ ಆ ಜನರೆಲ್ಲಾ ಹಿಡಿದು ದರ್ಯಾಪ್ತಿ ಮಾಡಿ, ೩೦ ಜನವನ್ನು ಬಿಟ್ಟುಬಿಟ್ಟರು ೪ ಜನರಿಗೆ ಮರಣದಂಡನೆ, ೪ ಜನರಿಗೆ ಯಾವಜ್ಜೀವವೂ ಸಜಾ, ೧೦ ಜನರಿಗೆ ಸ್ವಲ್ಪ ಸಜಾ, ಕೆಲವರಿಗೆ ೫೦ ಛಡಿಏಟು, ಈ ರೀತಿ ಶಿಕ್ಷೆವಿಧಿಸಿದ್ದಾರೆ ಈ ವರ್ತಮಾನವು ವಿಲಾಯತಿ ಸರ್ಕಾರಕ್ಕೆ ತಿಳಿಯಿತು. ಅವರು ಈ ವಿಚಾರವನ್ನು ತನಿಖೆ ಮಾಡುವುದಾಗಿ ಹೇಳಿದ್ದಾರೆ

●●●●

ಜರ್ಮನಿ ಚಕ್ರವರ್ತಿಯವರು ಪ್ರಷ್ಯಾದಲ್ಲಿ ಒಂದು ದೊಡ್ಡ ನಾಲೆಯನ್ನು ಪ್ರತಿಷ್ಠೆ ಮಾಡಿದರು ಅದು ೬೫ ಮೈಲಿ ಉದ್ದವಾಗಿಯೂ, ೩೪ ಅಡಿ ಅಗಲವಾಗಿಯೂ ಅನೇಕ ಸೇತುವೆಗಳುಳ್ಳದ್ದಾಗಿಯೂ ಕಟ್ಟಲ್ಪಟ್ಟಿದೆ ಅದರ ಕಾಮಗಾರಿ ಪ್ರಾರಂಭವಾಗಿ ಆರು ಸಂವತ್ಸರಗಳಾದವು ಮೂರು ಕೋಟಿ ರೂಪಾಯಿ ಖರ್ಚಾಯಿತು ಈ ಕಾಲುವೆಯಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಉದ್ದಕ್ಕೂ ದೋಣಿಗಳು ಅತಿ ಶೀಘ್ರವಾಗಿ ಹೋಗಿ ಬರುವಂತೆಯೂ ಭಾರೀ ಜಹಜುಗಳು ಕೂಡ ಸಂಚಾರ ಮಾಡುವಂತೆಯೂ ಏರ್ಪಾಡು ಮಾಡಿದ್ದಾರೆ

●●●●

ಸರ್ವಿಯಾ ರಾಜ್ಯದಲ್ಲಿ ದೊರೆಯನ್ನೂ ರಾಣಿಯನ್ನೂ ಕೊಂದು ಹಾಕಿ ಪೀಟರ್ ಎಂಬ ಈಗಿನ ದೊರೆಗೆ ಪಟ್ಟ ಕಟ್ಟುವುದರಲ್ಲಿ ಮುಖಂಡರಾಗಿದ್ದ ಹಳೆ ಮಂದಿ ಸೈನ್ಯದ ಉದ್ಯೋಗಸ್ಥರಿಗೆ ಈಗಿನ ದೊರೆಯು ಅಧಿಕಾರ ಕೊಟ್ಟು ತನ್ನ ಸಮೀಪದಲ್ಲೇ ಇಟ್ಟುಕೊಂಡಿದ್ದನು ಈಚೆಗೆ ಇವರನ್ನೆಲ್ಲಾ ದೊರೆಯು ಕೆಲಸದಿಂದ ತೆಗೆದು ಬಿಟ್ಟನೆಂದು ವರ್ತಮಾನ ಬಂದಿತ್ತು ಈಗ ತಿಳಿದು ಬಂದಿರುವುದೇನೆಂದರೆ, ಆ ಸೈನ್ಯದ ಐದು ಮಂದಿ ತಾವಾಗಿಯೇ ಇಷ್ಟಪಟ್ಟು ಕೆಲಸದಿಂದ ನಿವೃತ್ತರಾದರು ಅಧಿಕಾರದಲ್ಲಿದ್ದಾಗ ಇವರ ಸಂಬಳವೆಷ್ಟಿತ್ತೋ ಅಷ್ಟನ್ನೂ ಅವರಿಗೆ ವರ್ಷಾಶನ ಕೊಡುತ್ತಾ ಇರಬೇಕೆಂದು ಹುಕುಂ ಮಾಡಿದ್ದಾನೆ ಇದಲ್ಲದೆ ಇನ್ನಿಬ್ಬರನ್ನು ತನ್ನ ಬಳಿಯಲ್ಲೇ ಏಡಿಕಾಂಗರಾಗಿ ನೇಮಿಸಿಕೊಂಡು, ಅವರು ಇನ್ನೂ ಎರಡು ವರುಷಗಳ ತನಕ ನೌಕರಿಯಲ್ಲಿರತಕ್ಕದ್ದೆಂದು ರಿಯಾಯಿತಿ ತೋರಿಸಿರುವನು.

●●●●

ಮಿ॥ ಅಲ್‌ಫ್ರೆಡ್ ಮೊಸ್ಲಿ ಎಂಬಾತನು ಸ್ವಂತ ಖರ್ಚನ್ನಿಟ್ಟು ವಿಲಾಯತಿಯಿಂದ ಕೆಲವು ದೊಡ್ಡ ಮನುಷ್ಯರನ್ನು ಅಮೇರಿಕಕ್ಕೆ ಕಳುಹಿಸಿ, ಅಲ್ಲಿ ಕಸಬುದಾರಿ ವಿದ್ಯೆಗಳನ್ನು ಯಾವ ರೀತಿಯಲ್ಲಿ ಕಲಿಸುತ್ತಿದ್ದಾರೆಂದು ತನಿಖೆ ಮಾಡಿಸಿದನು ಅವರು ವಿಲಾಯತಿಗೆ ವಾಪಸು ಬಂದು ಅಮೇರಿಕದಲ್ಲಿ ತಾವು ನೋಡಿದ ಪ್ರಸಂಗಗಳನ್ನು ಕಸಬುದಾರರಿಗೆ ತಿಳಿಯಪಡಿಸಿದರು ಈಗ ಅದೇ ದೊಡ್ಡ ಮನುಷ್ಯನು ವಿಲಾಯತಿಯ ನಾನಾ ಊರುಗಳಿಂದ ೫೦೦ ಮಂದಿ ಉಪಾಧ್ಯಾಯರುಗಳನ್ನು ಆರಿಸಿ, ಅಮೇರಿಕಕ್ಕೆ ಕಳುಹಿಸಬೇಕೆಂದು ತೀರ್ಮಾನಿಸಿರುತ್ತಾನೆ. ಅಮೇರಿಕದಲ್ಲಿ ಮಕ್ಕಳಿಗೂ ದೊಡ್ಡವರಿಗೂ ಪಾಠಶಾಲೆಗಳಲ್ಲಿ ಯಾವ ಯಾವ ಕಸಬನ್ನು ಹ್ಯಾಗೆ ಕಲಿಸುತ್ತಾರೆ ವಿದ್ಯೆ ಹೇಳಿಕೊಡುವ ಕ್ರಮಗಳೇನು, ಬಾಲಕರ ಸ್ಥಿತಿಗತಿ ಎಂಥಾದ್ದು, ಈ ಮೊದಲಾದ ಸಂಗತಿಗಳನ್ನೆಲ್ಲಾ ಮೇಲ್ಕಂಡ ೫೦೦ ಮಂದಿ ಉಪಾಧ್ಯಾಯರೂ ಅಲ್ಲಿಗೆ ಹೋಗಿ ನೋಡಿ ಬಂದರೆ ವಿಲಾಯತಿಯಲ್ಲಿ ಮಕ್ಕಳ ವಿದ್ಯಾಭ್ಯಾಸವನ್ನು ಇನ್ನೂ ತೃಪ್ತಿಕರವಾಗಿಯೂ ಸಾರ್ಥಕವಾಗಿಯೂ ಮಾಡಿಸುವಿಕೆ ಅನುಕೂಲವಾಗುತ್ತದೆ.

●●●●

ಚೀಣಾ ರಾಜ್ಯದಲ್ಲಿ ಪ್ರವಾಹಗಳ ಅನಾಹುತ ನಡೆಯುವುದು ಸಾಮಾನ್ಯವೇ ಸರಿ ಆದರೆ ಈ ಸಲ ಹೊನಾನ್ ಆಧಿಪತ್ಯದಲ್ಲಿ ಆದ ಅನಾಹುತವು ಅಪೂರ್ವವಾದದ್ದೆಂದು ಹೇಳಬೇಕು ಆ ಅಧಿಪತ್ಯವು ಬಹಳ ಫಲವತ್ತಾದದ್ದು, ಬಹಳ ಐಶ್ವರ್ಯಯುಕ್ತವಾದದ್ದು ಸುಮಾರು ಒಂದು ತಿಂಗಳು ಏಕಪ್ರಕಾರವಾಗಿ ಮಳೆ ಸುರಿಯಿತು ಅದರ ಮೇಲೆ ಪ್ರವಾಹಗಳು ಹುಟ್ಟಿ ಉದ್ದಕ್ಕೂ ಹಳ್ಳಿ ಗ್ರಾಮ ಭೂಮಿ ಬೆಳೆ ಜನಗಳನ್ನೆಲ್ಲಾ ಸಂಪೂರ್ಣವಾಗಿ ಕೊಚ್ಚಿ ಬಿಟ್ಟವು ಸೈಯಾಂಗ್ ಎಂಬ ನದಿಯೂ ಅದರ ಶಾಖೆಗಳೂ ಈ ಅನಾಹುತಕ್ಕೆ ಕಾರಣವಾದವು. *ಈ ನದಿಯೂ ಅದರ ಹೊಳೆಗಳೂ ಆ ಅಧಿಪತ್ಯದ ದಕ್ಷಿಣ ಮತ್ತು* ಪೂರ್ವ ದಿಗ್ಭಾಗಗಳಲ್ಲಿ ಹರಿಯುತ್ತವೆ ಈ ನದಿಯಲ್ಲಿ ಏಪ್ರಿಲ್ ೨೦ರಿಂದ ನೀರು ಹೆಚ್ಚುವುದಕ್ಕಾರಂಭವಾಗಿ ಎರಡು ವಾರಗಳೊಳಗೆ ೩೦ ಅಡಿ ಪ್ರಮಾಣಕ್ಕೆ ಏರಿತು. ಅದು ಹರಿಯುವ ಪ್ರದೇಶದಲ್ಲಿ ೨೦೦ ಮೈಲಿ ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ಗ್ರಾಮಗಳೂ ಫಲಭರಿತವಾದ ಜಮೀನುಗಳೂ ಅನೇಕವಾಗಿರುತ್ತವೆ ಪ್ರಜೆಗಳು ಉದ್ದಕ್ಕೂ ದಡವನ್ನು ಕಟ್ಟಿಕೊಂಡಿದ್ದಾರೆ ಹೊಳೆಯಲ್ಲಿ ಸಾಮಾನ್ಯವಾಗಿ ಬರತಕ್ಕ ಪ್ರವಾಹಗಳು ಈ ದಡವನ್ನು ಮೀರಿ ಹೋಗುವುದಿಲ್ಲ ಆದರೆ ಈ ಸಲ ಬಂದ ಅಪಾರವಾದ ಪ್ರವಾಹವು ದಡವನ್ನೆಲ್ಲಾ ಕೊಚ್ಚಿಬಿಟ್ಟಿತು ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ೨೦ ಅಡಿಗಳಷ್ಟು ನೀರು ಹೊರಳಿ ಎದುರಿಗೆ ಸಿಕ್ಕಿದ್ದೆಲ್ಲವನ್ನೂ ನಾಶಮಾಡಿರುತ್ತಿದೆ ಮೊದಲು ಜನರು ಎತ್ತರವಾದ ಕಟ್ಟಡಗಳ ಮೇಲೆ ಹೋಗಿ ಕೆಲವು ಕಾಲ ವಾಸ ಮಾಡಿದರು ಆ ಕಟ್ಟಡಗಳೂ ಕೊನೆಗೆ ಕೊಚ್ಚಿ ಹೋದವು ಅನೇಕ ಗ್ರಾಮಗಳೂ ಪ್ರಜೆಗಳೂ ನಾಶವಾದರು ಹೊಳೆಯ ನೀರಿನಲ್ಲಿ ಪ್ರಜೆಗಳ ಮತ್ತು ಗೋವುಗಳ ಶವಗಳೂ ಮನೆಗಳ ಸಾಮಾನುಗಳೂ ಪಾತ್ರೆಪದಾರ್ಥಗಳೂ ಅಪಾರವಾಗಿ ತೇಲುತ್ತಿವೆ

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-6

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳಿಸುವ ದೆ. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕ ಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರ ಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಟಪಾಲು ಖರ್ಚಿಂದ ಬರಿಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಕೋಟೆ ಮಾರ್ಕೆಟ್ಟು ಮುಂಬಯಿ.

ಟಪಾಲ ಖರ್ಚ ಫುಕಟ! ಟಪಾಲ ಖರ್ಚ ಫುಕಟ!

ಇಂಡಿಯನ್ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91-3



ವಿಲಾಯತೀ ಮಸೀಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೇ ಹಿಂದು ಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ. ೧೦೦ ಪುಡಿಕೆಗಳಿಗೆ ೯ ರೂಪಾಯಿ. ಟಪಾಲ ಖರ್ಚ ಫುಕಟ.

ವಿಳಾಸ—ವಾಯ್. ಜಿ. ದಿಕ್ಷಿತ, ಸ್ಟೇಶನರ, ಪೂನೇ ಸಿಟಿ.

ಪರಿಮಳ ನಶ್ಯದಪುಡಿ

86-5

ಪರಿಮಳ ನಶ್ಯದಪುಡಿ ಡಬ್ಬಿ ೧ ಕ್ಕೆ	0—0—0
ಅಂಚೆ ಖರ್ಚು	0—3—0
ಸಾದಾ ನಶ್ಯದಪುಡಿ ಡಬ್ಬಿ ಒಂದಕ್ಕೆ	0—6—0
ಅಂಚೆ ಖರ್ಚು	0—3—0

ಈ ಪುಡಿಯನ್ನು ನೇಪಾಲದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನು ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಗುಣಪಡಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿ. ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ. ಮಾದರಿ ನಶ್ಯವನ್ನು ಕೊಂಡುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳ್ಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—**ಮಾನೇಜರ್, ಧರ್ಮ ವೈದ್ಯಶಾಲಾ,**

89 ಚಿನ್ನಬಜಾರು ರೋಡ್, ಸಾಹುಕಾರ್‌ಪೇಟೆ, ಮದರಾಸು.

ಮುದ್ರಾಮಂಜೂಷವು—೨ನೆಯ ಮುದ್ರಣ.

ಕ್ರಯ—ರೂ. ೧—೮—೦

90-3

ವಿದ್ಯಾರ್ಥಿಗಳೂ ವಿದ್ವಾಂಸರೂ ಸಾಮಾನ್ಯ ಪ್ರಜೆಗಳೂ ಅಧಿಕಾರಸ್ಥರೂ ಲೋಕವ್ಯವಹಾರಿಗಳನ್ನು ಪರಿಷ್ಕಾರವಾಗಿ ಕಲಿತುಕೊಳ್ಳುವುದಕ್ಕೆ ವಿಶೇಷ ಸಹಕಾರಿಯಾದ "ಮುದ್ರಾಮಂಜೂಷ" ವೆಂಬೀ ನವರಸಯುಕ್ತ ವಾದ ಕನ್ನಡ ಗ್ರಂಥವು ಈಗಿನ ವ್ಯಾಕ್ಸರಣೆಗೆ ಸರಿಯಾಗಿ ತಿದ್ದಿ, ಬಹು ದೊಡ್ಡದಾದ ಹೊಸ ಅಕ್ಷರದಿಂದ ಬಿಳೀ ಗ್ಲೇಜು ಕಾಗದದ ಮೇಲೆ ಅಚ್ಚು ಹಾಕಿ, ಪ್ರಕಟಿಸಲ್ಪಟ್ಟಿದೆ. "ಹೆಮ್ಮೆ ಆಪ್ತ ಪತ್ರ, ಸೆಕ್ಷನ್ ಹೊಲಿಗೆ, ಸುಂದರವಾದ ಕ್ಯಾಲಿಕೋ ಬೈಂಡು. ಬಹು ಶುದ್ಧವಾದ ಪ್ರತಿ. ಇದಕ್ಕೆ "ಚಾಣಕ್ಯರ ನೀತಿ," "ಚಂದ್ರಗುಪ್ತ ಚಾಣಕ್ಯರ ಕಥೆ" ಎಂಬೀ ಹೆಸರುಗಳೂ ಉಂಟು. ಇಂಥಾ ಸರ್ವೋತ್ತಮವಾದ ಪುಸ್ತಕವನ್ನು ಕನ್ನಡಿಗರೆಲ್ಲಾ ತರಿಸಿ ಓದಿ, ಪ್ರಯೋಜನವನ್ನು ಪಡೆಯುವರೆಂದು ಹಾರೈಸುತ್ತೇವೆ. ಕ್ರಯ ೧ ಪ್ರತಿಗೆ ರೂ. ೧—೮—೦, ಪೋಸ್ಟೇಜು ೩ ಆಣೆ. ವಿ. ಪಿ. ಪಿ. ತರಿಸಿಕೊಂಡರೆ ರೂ. ೧—೧೧—೦ ಬೀಳುವುದು. ೧೦೦ ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವ ಪುಸ್ತಕವ್ಯಾಪಾರಿಗಳಿಗೆ ಶೇಕಡಾ ೨೫ ರೂಪಾಯಿಯಂತೆ ಡಿಸ್ಕೌಂಟು ಕೊಡಲಾಗುತ್ತದೆ. ಬೇಗ ಈ ವಿಳಾಸಕ್ಕೇನೇ ಬರೆಯಿರಿ:—

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದು ಸಾರಿ ಓದಿದ ಮೇಲೆ ಅದನ್ನು ಪುನಃ ಪುನಃ ಓದಬೇಕೆಂದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ೩—೩—೦. ಪತ್ರಿಕೆ ಪ್ರಕಟನೆ ಬರೆಯುವ ವರ್ಗಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ನಷ್ಟ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ನಮ್ಮೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ.

ವಿಳಾಸ—ಮ್ಯಾನೇಜರ್. ಸಿ. ಎಲ್. ಎಸ್. ಬುಕ್ ಡಿಪೋ,

ಮೈಸೂರು.

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯುಡುವರ

ಬ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-34

೧. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ, ೩ ರ, ೭ ರ, ಚಳಿ, ಇನ್ಫ್ಲುಯಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿಮಾಡುವದು. ಪೆಟ್ಟಿಗೆ೧ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧. ಕೂದಲು ಉದುರಿಹೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿಹೋಗುವದು. ಸೀಸೆ ೧ ಕ್ಕೆ ೮ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆವಿಗೂ ೫ ಆಣೆ.

೧೩. ಸುಗಂಧದಂತಚೂರ್ಣ—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೩. ಚೇಳಿನ ಔಷಧ—ಚೇಳುಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವದು. ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ಕ್ಕೆ ೪ ಆಣೆ ವಿ. ಪಿ. ಛಾರ್ಜು ೧೨ ಸೀಸೆ ವರೆಗೂ ೫ ಆಣೆ ೧೨ ಸೀಸೆಗಳನ್ನು ಒಂದೇ ಆರ್ಡರ ತರಿಸಿಕೊಂಡರೆ ಬೇರೆ ೨—೮—೦ ರೂ ವಿ. ಪಿ. ಛಾರ್ಜು ಅಲ್ಲಾಯದ ಸಿಲ್ಲೋವಿಗೆ ೫ ಆಣೆ.

೧೪ ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ನಿರ್ಮೂಲ ಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಪಷ್ಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡುವರ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು ಡಬ್ಬಿ ೧ ಕ್ಕೆ ೮ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯಿಂದ ಗಂಡಸರೂ, ಹೆಂಗಸರೂ, ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತ ಹಾಡಿ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಸ್ವಚ್ಛವಾಗಿ, ಮಿಂಚುವಂತೆ ನುಣುಪಾಗಿಟ್ಟು ಅಂದವನ್ನುಂಟುಮಾಡುವದು. ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತ ವಾದುದರಿಂದ ಪ್ರಯೋಜನಕರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ ಪೆಟ್ಟಿಗೆ೧ಕ್ಕೆ ೮ ಆಣೆ. ವಿ. ಪಿ. ಹಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳಸೆಳೆತ, ನಿದ್ರೆಬಾರದಿರುವದು, ಅಧಿಕವಾಗಿ ಸೋರುವದು, ಛಳಿ, ಕೆಮ್ಮಲು, ತಲೆನೋವು, ಸೆಗಣ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ೧ಕ್ಕೆ೧೦ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೭. ಗೋರೋಜನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು ಮಲಬಾಧೆ ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗುವ ದ್ದರ, ಮಿದುಳು ಜ್ವಾಸಕೋಶಗಳು ಕೆಟ್ಟಜ್ವರ ಗುಣಮಾಡುವದು ಮಕ್ಕಳಿಗೆ ಬರುವ ಜ್ವರ, ಅಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆಬಾರದಿರುವಿಕೆ, ಹೊಟ್ಟೆಗೆ ಹೋಗುವದು, ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವದು ಸೀಸೆ ೧ಕ್ಕೆ ೧೦ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು ಕುರು, ಹುರುಕಾಲು, ಅಜ್ಜ, ಅನೇಕಜ್ಜ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ಎಕ್ಸಿಗಳೂ, ಸುಂಡು, ಹಲೆಯಲ್ಲಿಯೂ ಇದರ ಕಾಲಿಗಳಲ್ಲಿಯೂ ಬರುವ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಚೆಲೆ ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಬಾಟ್ಲಿ ವರಿಗೆ ೫ ಆಣೆ.

೧೯. ಕೇಶಸಂಜೀವಿನಿ—ಈ ತೈಲವು ಪೂರ್ವಕಾಲದ ದೇಶಿಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ತಲೆಯ ಪರಿಮಳ ಕೊಡುವಂಥಾದ್ದಾಗಿರುತ್ತದೆ ಇದರ ಉಪಯೋಗದಿಂದ ಕೂದಲು, ಮಿಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದುಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಹನಿಮಲೆ ವಸ್ತುಗಳ ಮೇಲೆ ಪ್ರೀತಿ ಇರುವವರಿಗೆ ಅಚ್ಚು ಮೆಚ್ಚಿನದಾಗಿರುತ್ತದೆ. ಸಲೆ ರೂ. ೧ ವಿ. ಪಿ. ಛಾರ್ಜು ಎರಡು ಬಾಟ್ಲು ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—**P. SUBBAROY,**

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

15—6—1906 ರಿಂದ 22—6—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರದ ಸಂಖ್ಯೆ.	
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	2	2
ಮೈಸೂರು ,,	0	0	7	8
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	3	1
ಹಾಸನ (ಜಿಲ್ಲೆ)	4	1	0	0
ಚಿತ್ರದುರ್ಗ ,,	0	0	0	0
ಕಡೂರ್ ,,	1	0	0	0
ಶಿವಮೊಗ್ಗ ,,	0	0	9	5
ಜುಮ್ಲಾ	5	1	19	11

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಆಷಾಢ ಶುದ್ಧ ಚತ್ರುದಶಿ ಗುರುವಾರದಿಂದ ಆಷಾಢ ಬಹುಳ ಷಷ್ಟಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜುಲೈ.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶುದ್ಧ ಆಷಾಢ ಮಾಸ
5	ಗುರು	ಚತ್ರುದಶಿ	17-0	ಮೂಲ	41 2	22
6	ಶುಕ್ರ §	ಪೌರ್ಣ	11-20	ಪೂಷಾ	37-48	23
7	ಶನಿವಾ	ಪಾಡ್ಯ	6-22	ಉತ್ತರಾ	31-58	24
8	ರವಿವಾ	ಬಿದಿಗೆ	2-2	ಉಪವು	56-58	25
9	ಚಂದ್ರ ‡	ಚೌತಿ	56-56	ಧ	32-30	26
10	ಕುಜ ¶	ಪಂಚಮಿ	55-10	ಶ	32-18	27
11	ಬುಧ	ಷಷ್ಟಿ	6-2	ಪೂಭಾ	31-20	28

† ಮಹಾಚಾತುರ್ಮಾಸ, ಪೂರ್ಣಿಮಾತಿಥಿ § ವ್ಯಾಸಪೂರ್ಣಿಮಾ, ಶ್ರೀಚಾಮರಾಜೇಶ್ವರ ರಥ, ಬೋಧಾಯನೋಪಾಕರ್ಮ. ದಗ್ಧಯೋಗ

‡ ಸಂಕಷ್ಟಚತುರ್ಥಿ. ¶ ದಗ್ಧಯೋಗ, ವ್ಯತೀಪಾತ ಯೋಗ, ಶ್ರೀ ಶಾಂಕರಾಚಾರ್ಯರ ಪುಣ್ಯದಿನ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು.
ಕಚ್ಚೇ ಅಕ್ಕಿ ಪಲ್ಲಾ ಒಂಕ್ಕೆ	ರೂ.	೧೩—೮—೦	೧೩—೮—೦
ಕೆಂಪುಸಣ ಅಕ್ಕಿ ಅವಲ್	..	೧೩—೮—೦	೧೩—೮—೦
,, ದಯಂ	..	೧೩—೭—೦	೧೦—೮—೦
ಜಾಬ್ರಾಣಿ ಅಕ್ಕಿ	..	೧೩—೭—೦	೧೦—೦—೦
ಸಣ್ಣಕ್ಕಿ ಅವಲ್	..	೧೫—೦—೦	೧೫—೦—೦
,, ದಯಂ	..	೧೪—೦—೦	೧೪—೦—೦
ತೊಗರೀ ಬೇಳೆ ಪಲ್ಲಾ ಒಂಕ್ಕೆ	..	೧೧—೦—೦	೧೦—೦—೦
,, ದಯಂ	..	೧೦—೦—೦	೧೧—೮—೦
ಕಡ್ಲೇ ಬೇಳೆ ಪಲ್ಲಾ ಒಂಕ್ಕೆ	..	೮—೦—೦	೬—೦—೦
ಕಾರಾಗಿ	..	೩—೦—೦	೬—೮—೦
ಜೋಳ	..	೯—೦—೦	೮—೮—೦
ಹುರುಳಿಕಟ್ಟಿ ಪಲ್ಲಾ ಒಂಕ್ಕೆ	..	೯—೮—೦	೧೦—೦—೦
ಬಿಳೀ ಅವರೆ	..	೮—೦—೦	೧೧—೦—೦
ಹೆಸರು	..	೧೧—೮—೦	೧೦—೭—೦
ಉದ್ದು	..	೧೦—೬—೦	೧೧—೮—೦
ಕಡಲೆ	..	೧೧—೦—೦	೧೧—೮—೦
ಎಳ್ಳು ಸೇ. ೧೦೦ ಕ್ಕೆ	..	೨೦—೮—೦	೨೦—೦—೦
ಹುರಳಿ	..	೮—೮—೦	೧೦—೦—೦
ಹರಳು ೧೦೦ ಸೇರಿಗೆ	..	೧೫—೮—೦	೧೩—೦—೦
ನೆಲಗಡಲೆ ಮಣ ಒಂಕ್ಕೆ	..	೩—೦—೦	೩—೦—೦
ಮೆಣಸಿನಕಾಯಿ	..	೩—೦—೦	೩—೮—೦
,, ದಯಂ	..	೩—೭—೦	೩—೭—೦
ಬೆಲ್ಲ ದೊಡ್ಡ ಅಚ್ಚು	..	೩—೭—೦	೩—೧೦—೦
ಒಣ್ಣೆಣ್ಣೆ ಮಣ ಒಂಕ್ಕೆ	..	೫—೭—೦	೫—೬—೦
ಹರಳೆಣ್ಣೆ ,,	..	೫—೮—೦	೫—೮—೦
ಕೊಬ್ಬರಿ ಪಲ್ಲಾ ಒಂಕ್ಕೆ	..	೧೦—೮—೦	೧೦—೦—೦
ಉಪ್ಪು ,,	..	೫—೧೦—೦	೬—೮—೦
ಹುಣಸೇ ಹಣ್ಣು	..	೦—೧೨—೦	೦—೧೧—೦
,, ಹಳೇದು	..	೦—೮—೦	೦—೧೦—೦
ತುಪ್ಪ ಮಣ ಒಂಕ್ಕೆ	..	೧೬—೦—೦	೧೬—೦—೦
ಸೀಮೆಯೆಣ್ಣೆ ಪೆಟ್ಟಿ ಒಂಕ್ಕೆ	..	೫—೭—೦	೫—೭—೦
ತೆಂಗಿನಕಾಯಿ ೧೦೦ ಕ್ಕೆ	..	೫—೪—೦	೫—೪—೦
ಅಡಕೆಕಾಯಿ ಮಣ ಒಂಕ್ಕೆ	..	೧—೦—೦	೦—೧೧—೦
ಅಂತ್ವಾರದ ಕಾಯಿ ಮಣ ಒಂಕ್ಕೆ	..	೦—೧೨—೦	೦—೧೨—೦
ಚಿನ (ಪವನ್) ಕೆಂಪು	..	೧೫—೭—೦	೧೫—೫—೦
,, ,, ಪಸಿಮೆ	..	೧೫—೧೧—೦	೧೫—೧೧—೦
,, ,, ಗಟ್ಟಿ ತೊಲ ಒಂಕ್ಕೆ	..	೨೫—೧೦—೦	೨೫—೫—೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೫—೦—೦	೭೫—೦—೦

Printed and Published by the Rev. E. W. Thompson, M.A., the Proprietor and Manager, Wesleyan Mission Press, Mysore. 5/7/1906.

ವೃತ್ತಾಂತ ಪತ್ರಿಕೆ.

REGISTERED M. 90.

೮ ಯುಗದುಷ್ಟು　　　　ಕ್ರಯುಗದುಷ್ಟು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦　　ಮೈಸೂರು--ಸನ್ ೧೯೦೬ ನೇ ಇಸವಿ ಜುಲೈ ತಾರೀಖು ೧೨ ನೇ ಗುರುವಾರ.　　ಸಂಚಿಕೆ ೬

ಈಗತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲುಗಳ ಕೇಶರಂಜನ ತೈಲ.

11 91

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ವಿಕರಿಮಾಡಿದ್ದಿಲ್ಲ. ನಗದು ಕ್ರಯ ಮಾತ್ರ.—

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨-೧೨-೦
ಸಣ್ಣ ಬಾಟ್ಲಿ ಒಂದಕ್ಕೆ ರೂ. ೦-೧೧-೬
ಒಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮-೬-೦
" ೬ " " " ರೂ. ೪-೦-೦

ಅಪೇಕ್ಷಿಸತಕ್ಕವರು ಮುಂಗಡ ಹಣ ಸಹಿತ ಬರೆಯಿರಿ ನಮ್ಮ ವಿಳಾಸ. ಎಲ್ ಎ ಪ್ರೋಠವಾಲ್ ಕಂಪನಿ,
ಜನರಲ್ ಮತ್ತು ಕಮಿಷನ್ ಏಜಂಟರು,
ತಾಲ್ಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೋ ಮೋ ಸಿ ಯಾ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇರ್ಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ರುಜುವಾಗಿದೆ.

ಈ ತೈಲವು ತತ್ಕಾಲದಲ್ಲಿ ಬೇನೆಗಳಿಗೆ ಮುಕ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಏಟುಗಳು, ನರ ಹೊರಳುವದು, ಚಳಿ, ಕೀಲುನೋವು, ಗುಳ್ಳೆಗಳು, ಹಲ್ಲುನೋವು, ಮುಖ ಬೀಗುವದು, ಗೂಡುಗಳು, ಗಜ್ಜಿಗಳು, ರೋಗಗಳು, ಸುಳುಕಿದ್ದು, ಸೊಳ್ಳೆ ಮುಂತಾದ ಕೀಟಗಳು ಕಡಿದದ್ದು, ಚಿಪ್ಪುರುವದು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಕತ್ತು ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಕಳೆಯುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨-೮-೦, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ. ೨-೮ ಆಣೆ ಒಂದು ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨-೮ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

●●●●●●●●

ಹೋಮಿಯೋಪತಿ ಯುಂಬ್ರೋಕೇಷನ್

ಈ ತೈಲವು ಸರ್ವ ನೋವುಗಳಿಗೆ ಉಪಯೋಗಿಸತಕ್ಕದ್ದು. ಅಮೃತ ಬೆರೆದ ಹಾಗೆ ಇದನ್ನು ಲೆಕ್ಕಿಸಬಹುದು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ಶ್ರೇಷ್ಠವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಅಮೃತವು ಬಹು ಬೇಗನೆ ಸೇರಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಮಾರ್ಗಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಕೋಷ್ಟಕಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿ ಕಂಪೆನಿ, ೨೩ ಬೆಂಟು ಸ್ಟ್ರೀಟ್, ಮದ್ರಾಸ್

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು. ಬೆಳೆಮಾಡಿದ ಸ್ಥಳದಿಂದಲೇ ನೇಟಿಗೆ ರವಾನಿಸಲ್ಪಡುವದು.

85 22

ಕಾಫಿತೋಟದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು. ಕೈಗಳ್ಗಳು ಇಲ್ಲಿ ವಿಲಾಸದ ಚೀಟಿ ಸುತ್ತಿಲ್ಲದಿರುವದು ಸ್ವಚ್ಛವಾದವುಗಳಲ್ಲ. ಅವು ಸಮ್ಮತವಲ್ಲ. ಏಜಂಟರಗಳು ಬೇಕು. ಅಂಥವರಿಗೆ ಅಲಾಯಿದ ದರ. ಬರೆಯುವವರು ದಯಮಾಡಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸರ್ಸ್
—ಕಾಫಿ ವರ್ಕ್ಸ್, ಹುಣಸೂರು

ಜ್ವರಹರಿ.

71 11



ಇದು ಸಾಧಾರಣ ಜ್ವರ, ಚಳೀಜ್ವರ, ಮರೋಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಹಾನ ಶ್ರೀ ಅಲಂಕಾರ ಸಬ್ ಓವರ್ಸೀಯರ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರ—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಟಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧-೮ ರೂ., ೩-೧೨-೦, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

●●●●●●●●

ಓ ಮು ೦ ಕ ಪೂ ರ ಕ

Syrum Carpee

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ್ಳುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಾರುದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜ್ವರಹರಿಯು ಓಮುಂ ಕರ್ಪೂರವನ್ನು ನಾನೂ ನನ್ನ ಕಾರ್ಯೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ—

ಜ್ವರಹರಿಯುಳ್ಳ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೆಂಪ್ ಸ್ಟ್ರೀಟ್ ಕ್ವೀನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) ರೂ. ೧-೦-೦

ಅಂಚೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಟಪಾಲ್

ಸೇರಿ ರೂ. ೧-೧೪-೦

" " " ೨-೧೫-೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮೂರು ನವೀನ ಪುಸ್ತಕಗಳು.

96-1

ಬಿ ಕೆ ಮೂರ್ತಿ ಕಂಪನಿಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಮೆ॥ ಭಾರತಿ ಸಂಪಂಗಿರಾಮಯ್ಯನವರಿಂದ ತಯಾರಾದ ಪುಸ್ತಕಗಳು

೧. ತಾವಾಗಿ ಇಂಗ್ಲಿಷ್ ಕಲಿಯುವಿಕೆ:—ಸ್ವಲ್ಪ ಪ್ರತಿಗಳೇ! ಬೇಗ ಬರೆಯಿರಿ! ಬೇಗ ಬರೆಯಿರಿ!

ಇದರಲ್ಲಿ ಎ ಬಿ ಸಿ ಡಿ ಆರಂಭಿಸಿ ಬಿ ಎ ವರೆಗೆ ಉಳ್ಳ ಇಂಗ್ಲಿಷ್ ಓದಿಗೆ ಮತ್ತು ಲೆಕ್ಕ ಅಕ್ಷರಗಳನ್ನು ಗುರುತು ಹಿಡಿಯುವದು, ಅಕ್ಷರಗಳನ್ನು ಒಂದಕ್ಕೊಂದು ಕೂಡಿಸುವದು ಅವುಗಳ ಉಚ್ಚಾರ, ಅರ್ಥ, ಭೋಧನೆ, ಕಾಗುಣಿತ, ಸಂಸಾರ, ಉಡಿಗೆ ತೊಡಿಗೆ, ವ್ಯಾಪಾರ, ಇವುಗಳಲ್ಲಿ ಮಾತಾಡುವ ಈಗ ಮಾತಿನಲ್ಲಿ ಉಪಯೋಗಿಸುವ ಇತರ ಅಪೂರ್ವವಾದ ಅನೇಕ ಶಬ್ದಗಳು, ಕಾಗದಗಳು, ಗಾದೆಗಳು, ಪ್ರಶ್ನೋತ್ತರಗಳು, ಲೇವಾದೇವಿ, ಸರ್ಕಾರ ಸಾಹುಕಾರ ವೈಗೈರೆ ಜನಗಳಿಗೆ ವಿಶೇಷವಾಗಿ ಬರೆಯುವ ಕಾಗದಗಳ ನಮೂನೆಗಳು, ಅರ್ಜಿಗಳು, ಪತ್ರಗಳ ನಮೂನೆಗಳು, ಇತ್ಯಾದಿ ಅನೇಕ ಭಾಗಗಳನ್ನು ಸೇರಿಸಿ ಸ್ವಲ್ಪಮಟ್ಟಿಗೆ ಕನ್ನಡಭಾಷೆ ಬಲ್ಲವರು ಉಪಾಧ್ಯಾಯರ ಸಹಾಯವಿಲ್ಲದೇಲೂ, ದ್ರವ್ಯವ್ಯಯ, ಶ್ರಮಪ್ರಯಾಸವಿಲ್ಲದೇಲೂ, ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ತಿಳಿದು, ಓದುವದಕ್ಕೂ, ಬರೆಯುವದಕ್ಕೂ, ಮಾತಾಡುವದಕ್ಕೂ ಕಲಿಯುವ ಹಾಗೆ ಪ್ರತಿ ಒಂದು ಶಬ್ದವನ್ನು ಮೊದಲು ಇಂಗ್ಲಿಷಿನಲ್ಲಿ ಬರೆದು ಕನ್ನಡ ಅಕ್ಷರದಿಂದ ಅದನ್ನು ಉಚ್ಚರಿಸುವ ರೀತಿಯನ್ನು ತಿಳಿಸಿ, ಅದರ ಕೆಳಗೆ ಕನ್ನಡಭಾಷೆಯ ಅರ್ಥವನ್ನು ವಿವರಿಸಿರುತ್ತೆ. ಇಂಗ್ಲಿಷ್ ಭಾಷೆ ಕಲಿತು ಬಗೆಬಗೆ ಲಾಭ ಹೊಂದಬೇಕೆಂಬ ಕೋರಿಕೆಯುಳ್ಳ ವ್ಯಾಪಾರಿ ಜನಗಳು, ರೈತಾಪಿಜನರು, ಜಮೀನ್ದಾರರು, ಶ್ಯಾನುಭೋಗರು, ಇಜಾರದಾರ್ ಇಲಾಖೆಯಲ್ಲಿ ಕೆಲಸಮಾಡುವ ಗುತ್ತಿಗೆ ಅಥವಾ ಕಂಟ್ರಾಕ್ಟುದಾರರು, ಸ್ಟೇಷನ್‌ಗಳು, ನೌಕರರು, ಬಾಯರ್ ಗುಮಾಸ್ತೆಯರು ಮೊದಲಾದ ಎಲ್ಲಾ ಜನಗಳೂ ಅತ್ಯವಶ್ಯ ಯೋಗ್ಯವಾದದ್ದು. ಕ್ರಯ—ವಿ ಪಿ ಖರ್ಚು ಸಹಿತ ರೂ. ೧-೬-೦.

೨. ಪ್ರಶ್ನೋತ್ತರ ಲೇಖ್ಯಬೋಧಿನಿ:—ಕ್ರಯ ವಿ. ಪಿ. ಸಹಿತ ರೂ. ೧-೬-೦. ಕ್ರಯಸಾಧನ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ಮುಲ್ಕಿ, ರೆವಿನ್ಯು, ಎಕ್ಸೈಜು, ಎಡ್ಯುಕೇಷನ್, ಫಾರೆಸ್ಟು, ಇಂಜಿನಿಯರ್, ಮ್ಯುನಿಸಿಪಲ್, ಲೋಕಲ್‌ಬೋರ್ಡು, ಹಿಂದೂಲಾ, ಮಹಮ್ಮದನ್ ಲಾ ಕಂಟ್ರಾಕ್ಟು, ಚಿಮೇಜಿ, ಮುಂಗಡ, ಮೈಸೂರು, ಕೋರ್ಟು ಫೀಜು, ಪೊಲೀಸು, ಸಮ್ಮನ್ಸು, ಮೆಟ್ಟು, ಅಂಚೆ ಮೊದಲಾದ ಎಲ್ಲಾ ವಿಧವಾದ ಅಕ್ಕರೆಗಳ ನಮೂನೆಗಳನ್ನು ತಿಳಿಸುತ್ತಿದೆ. ಕ್ರಯ ವಿ ಪಿ ಖರ್ಚು ಸಹಿತ ರೂ. ೧-೬-೦.

೩. ಮೋಜಣಿ ಕಲಿಯತಕ್ಕ ಪುಸ್ತಕ—ಕ್ರಯ ವಿ ಪಿ. ಖರ್ಚು ಸಹಿತ ೧೨ ಆಣೆ

ಭೂಮಿಯನ್ನು ಅಳೆಯುವ ರೀತಿಯನ್ನು ಅತಿ ಸುಲಭವಾಗಿ ತಿಳಿಸುವದಲ್ಲದೆ ಇದನ್ನು ಓದಿದ ಮಾತ್ರದಲ್ಲೇ ಮೋಜಣಿದಾರನಾಗುವುದರಲ್ಲಿ ಸಲ್ಪವೂ ಸಂಶಯವಿಲ್ಲ. ಒಂದಾವರ್ತಿ ತರಿಸಿ ಓದಿನೋಡಿ ಕ್ರಯ ವಿ ಪಿ ಖರ್ಚು ಸೇರಿ ೧೨ ಆಣೆ.

ವಿಳಾಸ—ಬಿ ಕೆ ಮೂರ್ತಿ ಕಂಪೆನಿ
ಅರಕಲಗೂಡು ಪೋಸ್ಟ್, ಹಾಸನ ಡಿಸ್ಟ್ರಿಕ್ಟ್.

ಅದ್ಭುತದ ಮೇಲೆ ಅದ್ಭುತ.

86 7

ಎಲ್ಲಾ ತರದ ವಾಯುವೇದನೆ, ಜರೆ ಲಿನೋವು, ನರಗಳ ಇಳಿತ ತಲೆನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಬಾಗೆನಮ್ಮು, ಗೊಟ್ಟುಕುಣ್ಣು, ಕಲುವಿನ್ನು ಎದೆಗಳ ನೋವು, ಆಸ್ತ್ಮ, ಈ ಸ್ಥಳಕೆ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯ ಪಡಬೇಕಾದದ್ದಿಲ್ಲ ಈ ವೇದನಾಭೇದಗಳಿಗೆಲ್ಲಾ ಕ್ಲೆಮೆಂಟ್ ಯವರ ಇಮ್ಯಜಿ ...ಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ... ಒಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ಯೂ ನಿವಾರಣೆ ಮಾಡುವುದು ಉಪಯೋಗಿಸುವ ವಿಧಾನ ಮುಂತಾದ್ದನ್ನು ಬಾಟ್ಲಿ ಜೊತೆಯಲ್ಲಿ ಅಚ್ಚಾದ ಪಟ್ಟಿಗಳಲ್ಲಿ ತಿಳಿಸುತ್ತೇವೆ ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗವು ಖವ್ವು ತೇಲ ... ಸುಖವಂತೋಣಗೊಂಡಾಗುತ್ತೆ ... ಬಾಧೆಯನ್ನನುಭವಿಸುವವರಾಗಿದ್ದಲ್ಲಿ ... ಈ ಔಷಧವನ್ನು ತರಿಸಿಕೊಳ್ಳ ತಪ್ಪಿಸಿದೆವಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ ಇದರ ಗುಣವು ಅಷ್ಟು ಅನುಭವವುಳ್ಳದ್ದು ಕ್ರಯ — ೧ ಬಾಟ್ಲಿಗೆ ೧ ... ರೂಪಾಯಿ, ... ರೂ ... ರೂಪಾಯಿ ... ರೂಪಾಯಿ ಅಂಚೆ ವೆಚ್ಚ ಒಂದರಿಂದ ನಾಲ್ಕು ಬಾಟ್ಲಿ ವರಿಗೆ ೩ ಆಣೆ

ನನ್ನ ವಿಳಾಸ — ಎಸ್ ಡಬ್ಲ್ಯು ಆರ್ಗ, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಪರಿಮಳ ನಸ್ಯ ಪಾಕ

18-6

ಪರಿಮಳ ನಸ್ಯದ ಪುಟ ಡಬ್ಬಿ ೧ ಕ್ಕೆ	0—9—0
ಥಾಂಗಿ ಖರ್ಚು	0—3—0
... ನಸ್ಯದ ಪುಟ ಡಬ್ಬಿ ೧ ಕ್ಕೆ	0—6—0
ಥಾಂಗಿ ಖರ್ಚು	0—3—0

ಈ ಪುಡಿಯನ್ನು ನೇಲಾಪ ... ನಿಂದ ಸುವಾಸನೆಯ ... ಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ ಇದರ ಸುವಾಸನೆ ಬಂದ ಸೇರು ... ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿ ಯೆಲ್ಲಾ ಗಮಗಮಿಸುತ್ತೆ ಉಪಯೋಗಿಸುವವರಿಗೆ ಸುವಾಸನೆಯನ್ನು ಆನಂದವನ್ನು ಉಂಟುಮಾಡುತ್ತೆ

ತಲೆ ನೋವು, ಪಿನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ ನಾದರಿಗೆ ೧ ಗಡ್ಡಿಯನ್ನು ತರಿಸಿ ಪರೀಕ್ಷಿಸಿರಿ

... ಪ್ರತಿ ೧ ಡಬ್ಬಿಯಲ್ಲಿ ... ತೊಲ ನಸ್ಯವು ಇರುತ್ತೆ ನಾದರಿ ನಸ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಅವರಿನಲ್ಲಿ ಇಟ್ಟು ಕಳಿಸಿದರೆ ನಾದರಿಗೆ ಪುಡಿಯನ್ನು ಕಳುಹಿಸುತ್ತೇವೆ

ವಿಳಾಸ — ಮ್ಯಾನೇಜರ್, ಧನ್ವಂತ್ರಿ ವೈದ್ಯಶಾಲಾ,

69 ... ರೋಡ್ ಸಾಹುಕಾರ್ ಪೇಟೆ, ಮದ್ರಾಸ್

ಒಕ್ಕಲಿಗರ ಸಂಘ.

98 1

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರತಕ್ಕದ್ದಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ ಈ ಸಂಘದ ಉದ್ದೇಶದಿಂದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ... ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಿಲ ಒಳಗೆ ಇರುವ ಮ|| ರಾ|| ದೊಡ್ಡಣ್ಣಶೆಟ್ರವರ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸಹ ಸೇರಿತು ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮಾತ್ರ ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ... ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ ಫರೆನ್ಸ್) ಬರಮಾಡಿಕೊಂಡು ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ ಮಹಾ ಸಭೆಗೆ ದಯಮಾಡುವ ದೊಡ್ಡ ಮನುಷ್ಯರಿಗೆ ಬೇಕಾದ ಬಿಡಾರ ವಗೈರ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನು ಸಹ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮಾತ್ರ ಬರುವವರ ಹೆಸರುಗಳನ್ನು ಕಾಗದದ ಮೂಲಕ ನಮಗೆ ದಯವಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು ... ಸುಬ್ಬಯ್ಯ ಬಿ ಎ

ಬೆಂಗಳೂರು ... ಕೆ ... ಬಿ ಎ

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು

ಇದಾ — ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ... ಒಂದು ಸಣ್ಣ ಪುಸ್ತಕವು (ಪಾಂಫ್ಲೆಟ್) ಛಾಪಿಸಲ್ಪಡುತ್ತಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು ಇದೂ ಅಲ್ಲದೆ ಈ ಸಂಘಕ್ಕೆ ಸಂಬಂಧಪಟ್ಟೆಲ್ಲಾ ವಿಷಯಗಳನ್ನು ಚೆನ್ನಾಗಿ ತಿಳಿಯಪಡಿಸಲು ಕೆಲವರು ಎಕ್ಸ್ಟ್ರಾ ಕಿತ್ ... ಗಳಿಗೆ ಸೇರಬೇಕೆಂದಿರುವವರಾಗಿದ್ದರೆ ಅವರನ್ನು ತಾಲ್ಲೂಕುಗಳೂ ಒದಗಿಸಬೇಕೆಂದಿರುವ ಅಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

95 2



ನಿನ್ನ ... ಬಿನಲ್ಲಿನ ನೋವು ... ಗಳಲ್ಲಿ ಆಗುವ ನೋವು, ಖಂಡಗಳಲ್ಲಿ ... ನೋವು, ... ಪಟ್ಟಿದ ಕಡೆಗಳ ನೋವು, ವಾಯುನೋವು — ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡತಕ್ಕ ಅಂಥಾ ಔಷಧ ಮಾಯುವುದೇನೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ... ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು — ಇವೇ ಇವೆಲ್ಲಾ ... ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ನಾಲ್ಕು ಕಡೆಯೂ ವ್ಯಾಪಿಸುತ್ತದೆ ಬಹಳ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಮಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ಷಯಿಂದ ಮಾಡಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ದೇವನಹಳ್ಳಿ ನೋಟೀಸ್

97 1

ಬೆಂಗಳೂರು ತಾ ... ಹೋ ... ನ ಅಗ್ರಹಾರದಲ್ಲಿರುವ ಶಾ|| ವೆಂಕಟರಾಯಪ್ಪನ ಮಗ ರಾಮಸ್ವಾಮಯ್ಯನ ಆನೆ ಗ್ರಾಮದಲ್ಲಿರುವ ಸರ್ವೆ ... ನೇ ನಂಬರು ಜಮೀನು ... ಸ್ತ್ರೀಧನವಾಗಿ ಆತನ ಧರ್ಮಪತ್ನಿ ಸುಂದರಮ್ಮನಿಗೆ ಕೊಟ್ಟಿರುವುದರಿಂದ ಅವುಗಳ ಮೇಲೆ ಈತನ ಅಣ್ಣ ವೆಂಕಣ್ಣ ಆಗಲಿ ಇತರರಿಗೆ ಪರಭಾರ ಮಾಡ ವದಕ್ಕೆ ಅಧಿಕಾರವಿಲ್ಲವೆಂದು ತಿಳಿಸಿರುತ್ತೆ

ತಾ ... ೧೯೦೬ ಸುಂದರಮ್ಮನ ಅಣ್ಣ ವೆಂಕಟರಾಮಯ್ಯ

SCOTT'S EMULSION 57 17

(ಸ್ಕಾಟ್ ಇಮಲ್ಷನ್)

ಎಂಥೀ ಸೇವನಾ ಔಷಧವನು ಕೇಡಬೇಕು ಕಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪ ... ವಾಗಿ ಆಹಾರ ರುಚಿ ... ಚೆನ್ನಾಗಿ ತೋರಿಸುವುದು

ಕ್ಷಯಿಂದ ಮಾಡಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲಿ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಹಿಡಿದ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ವೃತ್ತಾಂತ ಪತ್ರಿಕೆ

೧

ಸೆ ೧೯೦೬ ನೇ ಇಸವಿ ಜುಲೈ ತಾ|| ೧೨ ನೇ ಗುರುವಾರ

ಮೈಸೂರು ಸಂಸ್ಥಾನದ ದೊಡ್ಡ ಅಧಿಕಾರಗಳು

ಮೈಸೂರು ಗವರ್ನಮೆಂಟಿನವರು ಮೈಸೂರು ಸಿವಿಲ್ ಸರ್ವಿಸ್ ಎಂಬ ದೊಡ್ಡ ದೊಡ್ಡ ಅಧಿಕಾರಸ್ಥಾನಗಳ ವಿಷಯದಲ್ಲಿ ಕಳೆದ ಜೂನ್ ೨೮ನೇ ತಾರೀಖಿನಲ್ಲಿ ಹುಕುಮನ್ನು ಪ್ರಕಟಿಸಿದ್ದಾರೆ ಯಾವ ಯಾವ ಅಧಿಕಾರ ಸ್ಥಾನಗಳು ಸಿವಿಲ್ ಸರ್ವಿಸಿಗೆ ಸೇರುವವು, ಹಾಗೆ ಸೇರಿಸುವುದಕ್ಕೆ ಯಾವ ಕ್ರಮಗಳನ್ನನುಸರಿಸಬೇಕು ಎಂಥವರನ್ನು ಅಧಿಕಾರಿಗಳನ್ನಾಗಿ ನೇಮಿಸಬೇಕು, ಅಧಿಕಾರಿಗಳ ತಲಬೇನು, ಸಂಬಳವೂ ಅಧಿಕಾರವೂ ಯಾವ ರೀತಿ ಬಡ್ತಿಯಾಗುವವು, ಇವೇ ಮೊದಲಾದ ವಿಷಯಗಳನ್ನೆಲ್ಲಾ ಈ ಹುಕುಮಿನಿಂದ ಪರಿಷ್ಕಾರವಾಗಿ ತಿಳಿಯಬಹುದಾಗಿದೆ ಕಳೆದ ೧೮೯೧ರಲ್ಲೇ ಇಂಥಾ ಏರ್ಪಾಡು ಆಗಿದ್ದಾಗ್ಯೂ ಅದರಂತೆ ಅನೇಕ ಸಂದರ್ಭಗಳಲ್ಲಿ ನಡೆಯಲಿಲ್ಲವೆಂತಲೂ ಕಳೆದ ಐದು ವರುಷಗಳಲ್ಲಿ ಆ ಕ್ರಮಗಳನ್ನು ಅಲಕ್ಷ್ಯ ಮಾಡಿ ಸಿಕ್ಕಿದಂತೆ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂತಲೂ ದಿವಾನರವರು ಈ ಹುಕುಮಿನಲ್ಲಿ ಬರೆದಿದ್ದಾರೆ ಈಗ ಶ್ರೀಮನ್ ಮಹಾರಾಜರವರು ಒಪ್ಪಿ ಸ್ಯಾಂಕ್ಷನ್ ಮಾಡಿರುವ ಹೊಸ ಕ್ರಮವೇನೆಂದರೆ — ಪ್ರತಿ ಎರಡು ವರುಷಗಳಿಗೊಂದಾವರ್ತಿ ಸಿವಿಲ್ ಸರ್ವಿಸ್ ಎಂಬ ಪರೀಕ್ಷೆ ನಡೆದು, ಮೊದಲನೆ ಎರಡನೆಯವರಾಗಿ ತೇರ್ಗಡೆ ಹೊಂದುವಂಥಾ ಇಬ್ಬರನ್ನು ಮಾತ್ರ ಚುನಾಯಿಸಿಕೊಳ್ಳತಕ್ಕದ್ದು ಪ್ರತಿ ಎರಡು ವರುಷಗಳಲ್ಲೂ ಸುಮಾರು ೬ ಅಧಿಕಾರ ಸ್ಥಾನಗಳು ಖಾಲಿಬೀಳುವವು ಈ ಪೈಕಿ ಇಬ್ಬರನ್ನು ಪರೀಕ್ಷೆಯಿಂದ ಮೇಲ್ಕಂಡಂತೆ ಸೇರಿಸಿಕೊಳ್ಳಬೇಕು ಉಳಿದ ೪ ಅಧಿಕಾರಸ್ಥಾನಗಳಿಗೆ ಕೀಳು ದರ್ಜೆಗಳಿಂದ ಸಮರ್ಥರನ್ನೂ ದೊಡ್ಡ ವಂಶೀಕರಾಗಿಯೂ ಯೋಗ್ಯರಾಗಿಯೂ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರುವಂಥಾವರನ್ನು ಶ್ರೀಮನ್ಮಹಾರಾಜರವರು ಸ್ವತಂತ್ರಿಸಿ ಚುನಾಯಿಸಿಕೊಳ್ಳುತ್ತಾರೆ

ಆಗಲೆ ಈ ಪರೀಕ್ಷೆ ಇಟ್ಟದ್ದರಿಂದ ಮೈಸೂರಿನ ಪ್ರಜೆಗಳಿಗೆ ದೊಡ್ಡ ದೊಡ್ಡ ಅಧಿಕಾರ ಸ್ಥಾನಗಳು ದೊರಕುವುದಿಲ್ಲವೆಂತಲೂ ಪರದೇಶದವರು ಬಂದು ತೇರ್ಗಡೆ ಹೊಂದಿ ಈ ಸ್ಥಾನವನ್ನು ತುಂಬಿಕೊಳ್ಳುತ್ತಾರೆಂತಲೂ ಆಕ್ಷೇಪಣೆ ಮಾಡುವರು ಇದು ಸಹಜವಾದ ಆಕ್ಷೇಪಣೆಯಲ್ಲ ಎರಡು ವರುಷಕ್ಕೊಂದು ಸಲ ಪರೀಕ್ಷೆ ಮಾಡಿ ಇಬ್ಬರನ್ನು ಮಾತ್ರ ಚುನಾಯಿಸೋಣದರಿಂದ ಈ ಪರೀಕ್ಷೆಯಲ್ಲೂ ಮೈಸೂರಿನವರೇ ತೇರ್ಗಡೆಹೊಂದಬಹುದೆಂದು ನಿರೀಕ್ಷಿಸುತ್ತೇವೆ ಇಲ್ಲವಾದರೆ ಗವರ್ನಮೆಂಟಿನವರು ಉತ್ತಮರಾದವರನ್ನು ಚುನಾಯಿಸುವರು ಹೊರಗಿನವರಿಗೂ ಮೈಸೂರಿನವರಿಗೂ ಈ ರೀತಿ ಮೇಲಾಟವನ್ನಿಟ್ಟದ್ದರಿಂದ ಇಲ್ಲಿನವರಲ್ಲಿ ಗೆಲ್ಲಬೇಕೆಂಬ ಕುತೂಹಲ ಸಾಹಸ ಚಟುವಟಿಕೆಗಳು ಹೆಚ್ಚುವುದಕ್ಕೆ ಬಹಳ ಸಹಾಯವಾಗಿದೆ. ಈ ಹೊಸ ಏರ್ಪಾಟಿನಿಂದ ಈಗಿರುವ ದೊಡ್ಡ ಅಧಿಕಾರಿಗಳ ದರ್ಜೆ ಬಡ್ತಿ ಮುಂತಾದ್ದು ನಿಷ್ಕರ್ಷೆಯಾಯಿತು. ಇಂಥಾ ಕ್ರಮವು ಇದುವರೆಗೆ ಇರಲಿಲ್ಲವೆಂದೇ ಹೇಳಬಹುದಾದ್ದರಿಂದ ಅನೇಕ ಅಧಿಕಾರಿಗಳು ಅಸಮಾಧಾನದಿಂದ ಗೊಣಗುಟ್ಟುವುದಕ್ಕೆ ಆಸ್ಪದವಾಗಿದ್ದಿತು ಈಗ ಮಾಡಿರುವ ಏರ್ಪಾಡು ಸ್ತೋತ್ರಾರ್ಹವಾಗಿದೆ ಸರ್ಕಾರದವರು ಇದನ್ನು ಮೂಲೆಗೆ ಹಾಕಿಬಿಡಗೆ ಆದರಲ್ಲಿ ಕಂಡಂತೆಯೇ ನಡಸುತ್ತಾ ಬರಬೇಕೆಂದು ಕೋರುತ್ತೇವೆ.

"ಬಯಲಿಗೆ ಬಾರದ ಗುಟ್ಟು ಯಾವದೂ ಇಲ್ಲ"

ಸುಮಾರು ಐವತ್ತು ವರ್ಷಗಳ ಹಿಂದೆ ಈ ದೇಶದಲ್ಲಿ ದಕ್ಕಾಯಿತಿ ಅಥವಾ ಹಗ್ಗದಿಂದ ಕಳ್ಳರ ಆವಾಂತರ ಮಿತಿಮೀರಿ ಹೋಗಿತ್ತು. ಇಂಥ ಕಳ್ಳರ ಗುಂಪಿನಲ್ಲಿ ಜೀವನದಾಸನೆಂಬೊಬ್ಬ ಮನುಷ್ಯನು ಸೇರಿದವನಾಗಿ ಬಹಳ ಹಾವಳಿ ಮಾಡುತ್ತಿದ್ದನು ಒಂದಾನೊಂದು ದಿನ ಇವನು ಹಾರೀಕಾಯುತ್ತಾ ಇರುವಲ್ಲಿ ಆ ಮಾರ್ಗವಾಗಿ ಒಬ್ಬ ಪ್ರಯಾಣಿಕನು ಬರುತ್ತಿದ್ದನು ಈ ಪ್ರಯಾಣಿಕನು ನೆರೆಯೂರಿಗೆ ಹೋಗುತ್ತಿದ್ದ ಒಬ್ಬ ವರ್ತಕನಾಗಿದ್ದನು ಜೀವನದಾಸನು ಅವನ ಮೇಲೆ ಬಿದ್ದು ಹೊಡೆದು ಅವನ ಪೆಟ್ಟಿಗೆಯ ಸೊತ್ತನ್ನೆಲ್ಲಾ ಅಪಹರಿಸಿಕೊಂಡು ಹೋದನು ಅವನು ಅಪಹರಿಸಿದ ವಸ್ತುಗಳಲ್ಲಿ ಒಂದು ಬೈಬಲ್ ಪುಸ್ತಕದ ಕೆಲವು ಓಲೆಗಳು ಇದ್ದವು ಈ ಪುಸ್ತಕವನ್ನು ಜೀವನದಾಸನು ಇಂತಾದ್ದೆಂದರಿಯದೆ ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟಿರಲು ಅವನ ಮಗನು ಅವುಗಳನ್ನು ಓದುತ್ತಾ ಬಂದನು

ಹೀಗೆ ಕೆಲವು ಕಾಲವಾದ ಮೇಲೆ ಒಂದು ದಿನ ಆ ಜೀವನದಾಸನು ಮನೆಯಲ್ಲಿ ಬಿಡುವಾಗಿ ಕುಳಿತಿರುವಾಗ ತಾನು ಕೆಲವು ದಿನಗಳ ಹಿಂದೆ ಕದ್ದು ತಂದಿದ್ದ ಪುಸ್ತಕಗಳನ್ನು ನೆನಪಿಗೆ ತಂದು ಅವುಗಳಲ್ಲಿ ಯಾವದಾದರೂ ಒಂದನ್ನು ಓದಿ ಹೇಳಬೇಕೆಂದು ತನ್ನ ಮಗನಿಗೆ ಹೇಳಲು ಅವನು ಹಳೆ ಒಡಂಬಡಿಕೆಯ ಒಂದು ಭಾಗದಲ್ಲಿರುವ ಅಂಕೆಗಳ ಪುಸ್ತಕವನ್ನು ಓದಲಾರಂಭಿಸಿದನು ಒಳಕ್ಕೆ ಅವನು ಅದರ ... ಅಧ್ಯಾಯದ ... ನೆಯ ವಚನದಲ್ಲಿ — ನೀವು ದೇವರ ಮುಂದೆ ಪಾಪವನ್ನು ಮಾಡಿದರೆ ನಿಮ್ಮ ಪಾಪವು ನಿಮ್ಮನ್ನು ನಿಜವಾಗಿ ಹುಡುಕುವದು ಎಂದು ಬರೆದಿರುವದನ್ನು ಓದಿದನು ಈ ಜೀವನದಾಸನು ಈ ವಾಕ್ಯವನ್ನು ಕೇಳಿದ ಕೂಡಲೆ ಅವನ ಮೈ

ಯೆಲ್ಲಾ ನಡಗುವದಕ್ಕಾರಂಭಿಸಿತು. ಅವನ ಮುಖವು ವಿಕಾರವಾಯಿತು. ತಂದೆಯು ಈ ಪರಿಯನ್ನು ಆ ಮಗನು ನೋಡಿ ಸ್ವಲ್ಪ ಭಯಗ್ರಸ್ತನಾಗಿ—ಅಪ್ಪಾ ಇದೇನು, ನಿನ್ನ ಮೈಯೆಲ್ಲಾ ನಡಗುತ್ತಿದೆ! ನಮ್ಮ ಬಳಿ ಹೇಳಯ್ಯ! ಎಂದು ಕೇಳಿದನು. ಆ ಜೀವನ ದಾಸನು ಮಗನಿಗೆ ಏನೂ ಇಲ್ಲವೆಂದು ಹೇಳಲು ಅವನು ಸುಮ್ಮನಾದನು. ಆದರೆ ಆ ತಂದೆಯು ಮನಸ್ಸಿನಲ್ಲಿ ಹುಟ್ಟಿದ ಏಕಲ್ಪವು ಕಳದುಹೋಗಲಿಲ್ಲ. ಅವನು ಕೆಲವು ದಿವಸಗಳ ಬಳಿಕ್ಕಾ ಪುಸ್ತಕಗಳನ್ನು ಮಗನ ಬಳಿಯಿಂದ ತೆಗೆದುಕೊಂಡು ತಾನೇ ಓದಲಾರಂಭಿಸಿದನು. ಹೀಗೇ ಓದುತ್ತಾ ಬರುವಲ್ಲಿ ತಾನು ಮೊದಲು ಮಗನ ಮೂಲಕವಾಗಿ ಕೇಳಿದ ಆ ವಚನವೇ ಪುನಃ ಅವನ ಮನಸ್ಸಿಗೆ ಚೆನ್ನಾಗಿ ತಗುಲಿಕೊಂಡಿತು. ಪಾಪಮಾಡಿದಂಥವನು ಎಷ್ಟು ದಿವಸವಿದ್ದರೂ ಒಂದು ದಿನ ಆ ಪಾಪದ ದೆಸೆಯಿಂದ ನಷ್ಟವನ್ನು ಹೊಂದದೆ ಇರಲಾರನು ಎಂಬ ವಿಷಯವು ಅವನಲ್ಲಿ ಖಚಿತವಾಯಿತು.

ತರುವಾಯ ಅವನು ಬಳಿಕ ಒಡಂಬಡಿಕೆಯನ್ನು ಕ್ರಮವಾಗಿ ಓದುತ್ತಾ ಬಂದನು. ಆ ವೇಳೆ ಹೊಸ ಒಡಂಬಡಿಕೆಯನ್ನು ಓದಿದನು. ಇದೊಂದೇ ನಾಯಿತಂದರೆ—ನಾನು ಘೋರ ಪಾಪಿಯೆಂದು ತಿಳಿದನು. ಮತ್ತು ತನ್ನ ಪಾಪಗಳನ್ನು ಪರಿಹರಿಸಿ ತನ್ನನ್ನು ಶುದ್ಧನನ್ನಾಗಿ ಮಾಡಬಲ್ಲವನು ಯೇಸು ಸ್ವಾಮಿಯೇ ಎಂದು ಅವನ ಮನಸ್ಸಿಗೆ ಚೆನ್ನಾಗಿ ತಿಳಿಯಿತು. ಅವನು ಬಟ್ಲರ್ ಎಂಬ ಊರಿಗೆ ಹೋಗಿ ಅಲ್ಲಿರುವ ಕ್ರೈಸ್ತ ಮಿಷನರಿಗಳಲ್ಲಿ ದೀಕ್ಷಾಸ್ನಾನವನ್ನು ಪಡೆದು ಕ್ರೈಸ್ತ ಭಕ್ತನಾಗಿ ಸಕಲರಿಂದ ಸನ್ಮಾನಿತನಾಗಿ ಬದುಕಿ ಸುಮಾರು ಆರು ವರ್ಷಗಳ ಕೆಳಗೆ ಮರಣವನ್ನು ಹೊಂದಿದನು.

ಈ ಭಕ್ತನ ಚರಿತ್ರೆಯಂತೆಯೇ ಅನೇಕರ ಚರಿತ್ರೆ ಇರುವದು. ಸುವಾರ್ತೆಯನ್ನು ಓದಿದಂಥ ಅನೇಕ ಜನರು ಈ ಜೀವನದಾಸನಂತೆಯೇ ತಮ್ಮ ಘೋರ ಕೃತ್ಯಗಳನ್ನು ಬಿಟ್ಟು ಕ್ರೈಸ್ತ ಭಕ್ತರಾಗಿರುವರು.

ಕೀರ್ತನೆಗಳೆಂಬ ಪುಸ್ತಕದಲ್ಲಿ ಒಬ್ಬನು—"ನನ್ನ ಅಪರಾಧಗಳು ನಿನಗೆ ಮರೆಯಾಗಿರುವದಿಲ್ಲ" ಎಂತಲೂ ... ಕಡೆಯಲ್ಲಿ—"ಸರ್ವೇಶ್ವರನೇ, ನೀನು ನನ್ನನ್ನು ಪರೀಕ್ಷಿಸುತ್ತಾ ಬಲ್ಲೆ. ನಾನು ಕೂತುಕೊಂಡರು, ಏಳಲಿ, ಎದ್ದು ಹೋಗುವ ದಿಕ್ಕು ಸಹ ನಿನಗೆ ತಿಳಿದೇ ಇದೆ. ದೂರದಿಂದ ನನ್ನ ಮನಸ್ಸಿನ ಆಲೋಚನೆಯು ನಿನಗೆ ಗೊತ್ತಾಗಿದೆ. ನನ್ನ ನಡತೆಯೆಲ್ಲಾ ನಿನಗೆ ಗೋಚರವಾಗಿದೆ. ನನ್ನ ಬಾಯಿಯಿಂದ ಮಾತು ಹೊರಡುವದಕ್ಕಿಂತ ಮುಂಚೆ ಅದು ನಿನಗೆ ಚೆನ್ನಾಗಿ ತಿಳಿದಿದೆ. ನಾನು ನಿನಗೆ ಸಿಕ್ಕದಂತೆ ಎಲ್ಲಿಗೆ ಹೋಗಲಿ! ನಾನು ಮೇಲಣ ಲೋಕಕ್ಕೆ ಏರಿಹೋದರೂ ಅಲ್ಲಿ ಇದ್ದೀ. ಪಾತಾಳದಲ್ಲಿ ಮಲಗಿಕೊಂಡರೂ ಅಲ್ಲಿಯೂ ಇದ್ದೀಯಲ್ಲಾ! ಕತ್ತಲೆಯು ನನ್ನನ್ನು ಮುಚ್ಚುವದು ಎಂದು ನಾನು ಹೇಳಿದರೂ ಕತ್ತಲೆ ಎಂಬುವದು ನಿನಗೆ ಕತ್ತಲೆಯಲ್ಲ. ನಿನಗೆ ಕತ್ತಲೆ ಬೆಳಕು ಎರಡು ಒಂದೇ" ಎಂತಲೂ ಹೇಳುತ್ತಾನೆ. ಹೀಗೆ ಭಗವಂತನ ಮುಂದೆ ಮರೆಯಾಗಿರುವ ಸಂಗತಿಯೊಂದೂ ಇಲ್ಲವೆಂದು ಹಳೇ ಒಡಂಬಡಿಕೆಯಲ್ಲಿ ಹೇಳಿರುವದಕ್ಕನುಗುಣವಾಗಿ ಹೊಸ ಒಡಂಬಡಿಕೆಯಲ್ಲಿ ಯೇಸು ಸ್ವಾಮಿಯು—ಬಯಲಿಗೆ ಬಾರದ ಗುಟ್ಟು ಯಾವದೂ ಇಲ್ಲವೆಂದು ಹೇಳಿದ್ದಾನೆ. ನಮ್ಮಲ್ಲಿ ಯೋಚನೆಗಳು ಸ್ಪಷ್ಟವಾಗಿ ವಾದಿ ಪ್ರತಿವಾದಿಗಳಂತೆ—ಇದು ತಪ್ಪು, ಇದು ತಪ್ಪಲ್ಲ ಎಂದು ಸೂಚಿಸುತ್ತವೆ. ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ತೀರ್ಪು ಮಾಡುವ ದಿವಸವು ಒಂದೇ ಬರುವದು. ಆಗ ನಾವು ಯಾರನ್ನು ಮರೆಹೊಕ್ಕೇವು? ಯಾರು ನಮಗೆ ನ್ಯಾಯಾಧಿಪತಿಯೆಂದು ನಿಯಮಿಸಲ್ಪಟ್ಟಿದ್ದಾನೋ ಆ ಯೇಸು ಸ್ವಾಮಿಯೇ ನಮ್ಮ ಆಪ್ತನು ಕರ್ತನಾಗಿದ್ದಾನೆ. ಆತನನ್ನು ಆಶ್ರಯಿಸಿದರೆ ನಮ್ಮ ಪಾಪವೆಲ್ಲಾ ಹೋಗಿ ಶುದ್ಧರಾಗುವೆವು. ಪಾಪದಿಂದ ಬರುವ ದಂಡನೆಗೂ ತಪ್ಪಿಸಿಕೊಂಡು ಧನ್ಯರಾಗುವೆವು.

ಒಳದೇಶದ ವೃತ್ತಾಂತಗಳು.

ಮೊನ್ನೆ ಮಂಗಳವಾರ ಬೆಳಿಗ್ಗಿನ ಝಾಮದಲ್ಲಿ ಇಲ್ಲಿನ ಸಂತೇಪೇಟೆಯಲ್ಲಿ ಒಂದು ಅಂಗಡಿಗೆ ಬೆಂಕಿ ತಗಲಿ ಸ್ವಲ್ಪ ಉರಿದುಹೋಯಿತು.

❖❖❖❖

ಮೊನ್ನೆ ಸೋಮವಾರ ನಡೆದ ಗುರುಪಾದಕಲ್ಯಾಣೋತ್ಸವಕ್ಕೆ ಶ್ರೀ ಸ್ವರ್ಣ ಮಹಾರಾಜರವರೂ ಮಹಾಮಾತೃಶ್ರೀಯವರೂ ಪರಿವಾರಸಮೇತ ನಂಜನಗೂಡಿಗೆ ದಯಮಾಡಿದ್ದರು.

❖❖❖❖

ಮೈಸೂರು ಪ್ರೈಮರಿ ದೇವಸ್ಥಾನಕ್ಕೆ ಹಿಂದಿನ ಮಂಗಳವಾರ ರಾತ್ರಿ ಕಳ್ಳರು ಬಿದ್ದು ಮೂರು ಬಾಗಿಲುಗಳನ್ನು ಒಡೆದು ಒಳಗಿದ್ದ ವಿಗ್ರಹವನ್ನೂ ಕೆಲವು ನಗಗಳನ್ನೂ ಕಳವು ಮಾಡಿದರೆಂದು ತಿಳಿಯುವದು.

❖❖❖❖

ದಾವಣಗೆರೆ ತಾಲ್ಲೂಕು ಮಾಯಕೊಂಡೆಯಲ್ಲಿ ಒಬ್ಬ ಕುರುಬರವನು ಕೆಟ್ಟ ರೋಗದಿಂದ ನರಳಲಾರದೆ ರಂಪ್ಪನ ಭಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂತಲೂ ಪ್ರಜೆಗಳಿಗೆ ಇದರಿಂದ ನೀರಿನ ಕಷ್ಟ ಬಹಳವಾಗಿ, ಅಲೆಯುತ್ತಿದಾರೆಂತಲೂ ಕೇಳುತ್ತೇವೆ.

❖❖❖❖

ದೊಡ್ಡಬಳ್ಳಾಪುರದ ಕೋಟೆ ಮೆಟ್ಟಿನ ಭಾವಿಯಲ್ಲಿ ಮೊನ್ನೆ ಶುಕ್ರವಾರ ಬೆಳಿಗ್ಗೆ ಬಿದ್ದು ಸತ್ತುಹೋಗುತ್ತಿದ್ದ ಸಂಜುಂಡೈಯ್ಯನೆಂಬುವವನನ್ನು ನಾಗಯ್ಯ, ದಾಸಪ್ಪ ಎಂಬಿವರು ಸಾಹಸಮಾಡಿ ಮೇಲಕ್ಕೆ ಎತ್ತಿ ಪ್ರಾಣ ಬದುಕಿಸಿದರೆಂದು ಕೇಳಿ ಸಂತೋಷಪಡುವೆವು.

❖❖❖❖

ಉತ್ತರ ಆರ್ಕಾಟಿಗೆ ಸೇರಿದ ಕಂಗುಂದಿ ಕುಪ್ಪಲಲ್ಲಿ ಒಬ್ಬ ವಿಧವೆಯು ಬಸುರಾಗಿ ಹೆತ್ತ ಮಗುವನ್ನು ಕೊಂದುಹಾಕಿದಳೆಂದು ಮೊಕದ್ದಮೆ ಆಗಿದೆ. ಅವಳನ್ನು ಲಾಕಪ್ಪಿನಲ್ಲಿಟ್ಟಿದಾರೆ. ಅವಳಿಗೆ ಮೂರು ಮಂದಿ ವಯಸ್ಸಾದ ಮಕ್ಕಳಿರುತ್ತಾರೆಂದು ತಿಳಿದು ಬರುವದು.

❖❖❖❖

ಕಳೆದ ಶುಕ್ರವಾರ ಮಧ್ಯಾಹ್ನ ಶ್ರೀರಂಗಪಟ್ಟಣದ ಅಂಗಡಿ ಬೀದಿಯ ಹಿಂದಿನ ಸಾಲಿನಲ್ಲಿ ಒಂದು ಮನೆಗೆ ಬೆಂಕಿ ಬಿದ್ದು ಒಂದು ಭಾಗವೂ ನೆರಮನೆಯಲ್ಲಿ ಸ್ವಲ್ಪವೂ ಉರಿದುಹೋಯಿತು. ಪ್ರಜೆಗಳೂ ಅಮಲ್ದಾರರೂ ಪೊಲೀಸಿನವರೂ ಸಾಹಸಪಟ್ಟು ಬೆಂಕಿಯನ್ನು ಆರಿಸಿದರು.

❖❖❖❖

ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯರಾಗಿದ್ದ ಮಿ॥ ಗೋಪಾಲ ಕೃಷ್ಣರಾಯರಿಗೆ ವಿದ್ಯಾರ್ಥಿಗಳೆಲ್ಲಾ ಸೇರಿ ಮೊನ್ನೆ ಸೋಮವಾರ ಸಾಯಂಕಾಲ ಔತನ ಮಾಡಿ ತಮ್ಮ ಜ್ಞಾಪಕಾರ್ಥವಾಗಿ ಒಂದು ಗಡಿಯಾರವನ್ನು ಒಪ್ಪಿಸಿ, ತಮ್ಮ ಭಕ್ತಿ ಪ್ರೀತಿ ಕೃತಜ್ಞತೆಗಳನ್ನು ಪ್ರಕಾಶಪಡಿಸಿದರು.

❖❖❖❖

ಹೊಳೆನರಸೀಪುರದಿಂದ ನಾಲ್ಕು ಮೈಲಿ ದೂರದಲ್ಲಿರುವ ಕಲ್ಲುಕಟ್ಟೆ ಕೊಪ್ಪಲಿನಲ್ಲಿ ಗಬ್ಬಗೌಡ ಪುಟ್ಟನೆಂಬುವನು ತನ್ನ ಹೆಂಡತಿ ವೆಂಕಟಿ ಎಂಬಾಕೆಯನ್ನು ಮೊನ್ನೆ ಭಾನುವಾರ ಬೆಳಗಿನ ಝಾಮದಲ್ಲಿ ಹೊಡೆದು ಘೋರ ಗಾಯಮಾಡಿರುತ್ತಾನೆಂದೂ, ವೆಂಕಟಿಯು ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿದಾಳೆಂದೂ, ಗಂಡನನ್ನು ಪೊಲೀಸಿನವರು ಹಿಡಿದಿರುತ್ತಾರೆಂದೂ ಕೇಳುತ್ತೇವೆ.

❖❖❖❖

ಬೆಂಗಳೂರು ದಂಡಿನ ಪ್ರದೇಶದ ಆಚೆ ಕಂಪೆನಿಯ ಪಕ್ಕದ ಕಳಗಿನ ಉಲಿ, ತೋಳ, ಚಿರತೆಗಳು ಸೇರಿರುತ್ತವೆಂತಲೂ, ಮೊನ್ನೆ ಸೋಮವಾರ ಬೆಳಿಗ್ಗೆ ಹೂವು ತರಲು ಎತ್ತುವ ಪಕ್ಕದಲ್ಲಿ ಹೋದವರು ತೆ... ಒಂದೆರಡನ್ನು ನೋಡಿದರೆಂತಲೂ, ಒಂದು ವ್ಯಾಘ್ರವನ್ನು ಹ... ಕೊಂಡು ಹೋಗುತ್ತಿರುವುದನ್ನು ನೋಡಿದವರು ಹೇಳುತ್ತಾರೆ.

❖❖❖❖

ಒಬ್ಬ ಬ್ರಾಹ್ಮಣನು ... ಹಳ್ಳಿಯಿಂದ ಬರುವಾಗ ದಾರಿಯಲ್ಲಿ ... ಒಂದು ತಾಳೆ ಪೊದೆಯಲ್ಲಿ ಒಂದು ನವಿಲಿನ ಮರಿ ಸಿಕ್ಕಿತು. ವಿಚಿತ್ರವಾದ ಆ ಮೃಗದ ಹೆಸರು ಕನ್ನಡದಲ್ಲಿ ಚಿಪ್ಪುಹಂದಿ, ತೆಲುಗಿನಲ್ಲಿ ಅಲುಗು, ತಮಿಳಿನಲ್ಲಿ ಅಲುಗು ಎಂದು ಹೇಳುತ್ತಾರೆ. ಅದು ತಿನ್ನುವದು ಕೆಂಪು ಇರುವೆ ಮತ್ತು ಗೆದ್ದಲು ಎಂಬುದೇ.

❖❖❖❖

ಕರ್ನಲ್ ದೇಶಲಾಜೇ ಅರಸಿನವರು ಪೋಲೋ ಪಂದ್ಯದಲ್ಲಿ ಗೆದ್ದವರಿಗೆ ಬೆಳ್ಳಿ ಬಟ್ಟಲನ್ನು ಬಹುಮಾನ ಕೊಡುವದಾಗಿ ತಿಳಿಸಿದರು. ಕಳೆದ ವಾರ ನಾಲ್ಕು ಪಕ್ಷದವರು ಆ ಪಂದ್ಯದಲ್ಲಿ ಹೋರಾಡಿದರು. ಕಡೆಗೆ ಮೊನ್ನೆ ಸೋಮವಾರ ಮೈಸೂರು ದಂಡಿನ ಎಂಬ ಸಂಘದವರು ಎಲ್ಲರನ್ನೂ ಸೋಲಿಸಿದ್ದರಿಂದ ಬ್ರಿಟಿಷ್ ರೆಸಿಡೆಂಟರು ಅವರ ಚತುರತೆಯನ್ನು ಕೊಂಡಾಡಿ ಬೆಳ್ಳಿ ಬಟ್ಟಲನ್ನು ಒಪ್ಪಿಸಿದರು. ಈ ಗೆದ್ದವರ ಗುಂಪಿನಲ್ಲಿ ಮಿ॥ ಹೀಲ್, ಕರ್ನಲ್ ದೇಶಲಾಜೇ ಅರಸ್, ಶ್ರೀಮಾನ್ ಯುವರಾಜರವರು, ಧನ್ನಸಿಂಗ್ ಎಂಬಿವರು ಆಡಿದರು.

❖❖❖❖

ಹೊಸಕೋಟೆಯಲ್ಲಿ ತೇಲಿ ಚಕ್ಕಣ್ಣನೆಂಬುವವನು ಕೃಷ್ಣನೆಂಬ ಆಸಾಮಿಯನ್ನು ಪಾರ್ಟಿ ಪ್ರತಿವಾದಿ ಮೇಲೆ ಸಿವಿಲ್ ಕೋರ್ಟಿನಲ್ಲಿ ದಾವಾ ಹಾಕಿದ್ದನು. ವಿಚಾರಣೆಯಲ್ಲಿ ಆ ಪತ್ರದ ಸೃಷ್ಟನೆಯೆಂದು ವ್ಯಕ್ತಪಟ್ಟ ಮೇಲೆ ಪ್ರತಿವಾದಿಗಳು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಕ್ರಿಮಿನಲ್ ಫಿರ್ಯಾದು ಮಾಡಿದರು. ಅಪರಾಧಿಯು ತಪ್ಪಿತಸ್ಥನೆಂದು ಧೃಢಗೊಳಿಸಲ್ಪಟ್ಟು ಒಂದು ತಿಂಗಳು ಕಾರಾಗೃಹವಾಸ ಶಿಕ್ಷೆಗೂ ೧,೦೦೦ ರೂಪಾಯಿ ಜುಲ್ಮಾನೆಗೂ ಗುರಿಯಾದನು. ಈಗ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿರುವದಾಗಿ ವರ್ತಮಾನವಿದೆ.

❖❖❖❖

ಮೈಸೂರು ಸರ್ಕಾರದವರು ರಬ್ಬರ್ ವ್ಯವಸಾಯಕ್ಕೆ ಪ್ರವರ್ತಿಸಬೇಕೆಂದು ಯೋಚಿಸಿರುತ್ತಾರೆ. ಇಂಥಾ ವ್ಯವಸಾಯ ಮಾಡುವುದಕ್ಕೆ ಇಷ್ಟಪಡುವವರೆಲ್ಲಾ ಯಾವ ಯಾವ ರಿಯಾಯಿತಿ ತಮಗೆ ಸಿಕ್ಕಬೇಕೆಂಬುವದನ್ನು ಗವರ್ನಮೆಂಟಿನವರಿಗೆ ತಿಳಿಸಬೇಕೆಂತಲೂ, ಇದಕ್ಕಾಗಿ ಅಂಥವರ ಅಭಿಪ್ರಾಯಗಳನ್ನು ತಿಳಿಕೊಳ್ಳಬೇಕೆಂದು ದಿವಾನರವರು ಇದೇ ಜುಲೈ ೧೫ನೆ ತಾ. ಬುಧವಾರ ೩ ಗಂಟೆಗೆ ಬೆಂಗಳೂರು ಅಠಾರಕಛೇರಿಯಲ್ಲಿ ಒಂದು ಸಭೆಯನ್ನು ಮಾಡುವರು. ಈ ರಬ್ಬರ್ ವ್ಯವಸಾಯದಲ್ಲಿ ಆಶೆ ಪಡುವವರೆಲ್ಲಾ ಆ ದಿನ ಖುದ್ದಾಗಿ ಹೋಗಿ ತಮ್ಮ ಅಭಿಪ್ರಾಯಗಳನ್ನು ದಿವಾನರವರಿಗೆ ತಿಳಿಸತಕ್ಕದೆಂದು ಪ್ರಕಟಿಸಿರುತ್ತಾರೆ.

ಬಹುಮಾನ ಪಡೆದ ವರ್ತಮಾನವು.

[ಈ ವಾರ್ತೆ ಎನ್ನು ಕಳುಹಿಸಿದ ಮ॥ ಗುರುರಾವ್, ನಾಸಿಗ, ಚನ್ನಪಟ್ಟಣ ಇವರು ಹೇಳುವಂತೆ ಸ್ಪಷ್ಟವಾಗಿ ಇವರಿಗ ಈ ವಾರದ ಬಹುಮಾನವನ್ನು ಕಳುಹಿಸಿದ್ದೇವೆ.]

ಸೊರಬ ತಾಲ್ಲೂಕು ಕುಬಟೂರ ಕೆರೆ ಏರಿನ ಹಬ್ಬದಲ್ಲಿ ನಡೆದ ಅಪಾಯ ಮತ್ತು ಆಶ್ಚರ್ಯ.

ಈ ಆನವಟ್ಟಿ ಟವನ್‌ಗೆ ಒಂದು ಮೈಲಿ ದೂರದಲ್ಲಿ ಕುಬಟೂರ ಕೆರೆಯೆಂಬ ದೊಡ್ಡಕೆರೆಯುಂಟು. ಈ ಕೆರೆಯು ಎಂದಿಗೂ ಬತ್ತುವದಿಲ್ಲ. ಈ ದೊಡ್ಡ ಕ್ಷಾಮದಲ್ಲಿ ಇದು ಬತ್ತಿ ಹೋದದ್ದರಿಂದ ಜುಲೈ ೧ ನೆ ತಾ. ಆದಿತ್ಯವಾರ ಈ ಕೆರೆಯ ಮೀನಿನ ಬೇಟೆ ಆಯಿತು. ಇದನ್ನು ಆನವಟ್ಟಿ ಶೇಕದಾರರು ತರಾಪು ಮಾಡಿಸಲು ಹೋಗಿದ್ದರು. ಅವರ ಸಂಗಡ ನಾನೂ ಇನ್ನೂ ನಾಲ್ಕೈದು ಜನಗಳೂ ಹೋದೆವು. ಯಾವಾಗಲೂ ಬತ್ತದ ಕೆರೆಯಾದ್ದರಿಂದ ಬಹು ದೊಡ್ಡ ಮೀನುಗಳು ಸಿಕ್ಕುವವೆಂದು ೧೦—೧೫ ಮೈಲಿ ಫಾಸಲೆಯ ಗ್ರಾಮಗಳಿಂದ ಜನಗಳು ಬಂದಿದ್ದರು. ಸುಮಾರು ೩—೪ ಸಾವಿರ ಜನವಾಗಬಹುದು. ಶೇಕದಾರರು ತರಾಪು ಮಾಡಿಸುವಲ್ಲಿ ಕುಬಟೂರ ನಿವಾಸಿಯೊಬ್ಬನು ಕೆಲವು ರೂಪಾಯಿಗೆ ತರಾಪು ಪಡೆದು, ಆಳಿಗೆ ೧ ಆಣೆಯಂತೆ ವಸೂಲು ಮಾಡುತ್ತಿದ್ದನು. ಕುಬಟೂರವಾಸಿಗಳಿಗೆ ಇದು ರಿಯಾಯಿತಿ ಇದ್ದದ್ದರಿಂದ ಅವರು ಆ ಜನಗಳಲ್ಲಿ ಕಲೆಯಬಾರದೆಂದು ಕೆರೆಯ ಹಿಂದೆ ಗುಡಿಯಲ್ಲಿ ೫—೬ ನೂರು ಜನಗಳು ಮೀನು ಹಿಡಿಯುವ ಸಾಹಿತ್ಯವಾದ ಕೂಣಿಗಳೊಂದಿಗೆ ಕೂತಿದ್ದರು. ತರಾಪುದಾರನು ಜನ ೧ಕ್ಕೆ ಆಣೆಯಂತೆ ಎಷ್ಟೋ ಜನಗಳಿಂದ ವಸೂಲುಮಾಡಿ, ಅವರನ್ನು ಒಂದು ಪಕ್ಕದಲ್ಲಿ ಕೂಡಿಸಿದ್ದನು. ಇನ್ನೂ ಎಷ್ಟೋ ಜನಗಳಿಂದ ವಸೂಲುಮಾಡಿರಲಿಲ್ಲ. ಅಷ್ಟರಲ್ಲಿ ರುಸುಂ ಕೊಟ್ಟು ಬೇರೇ ಕೂತಿದ್ದ ಜನಗಳಲ್ಲಿ ಯಾವನೋ ಒಬ್ಬನು ಶಿಳ್ಳು ಹಾಕಿದನು. ಇನ್ನೊಬ್ಬನು ಕೆರೆ ಹೊಗಲು ಶಿಳ್ಳು ಹಾಕಿದರೆಂದು ಹೇಳಲು, ೩—೪ ಸಾವಿರ ಜನರು ಕೇಕೇ ಹಾಕುತ್ತಾ ದೊಡ್ಡ ಕೋಲಾಹಲವನ್ನು ಮಾಡುತ್ತಾ ಕೆರೆ ಹೊಕ್ಕರು. ಅಲ್ಲಿಯೇ ಗುಡಿಯಲ್ಲಿ ಕೂತಿದ್ದ ಕುಬಟೂರು ನಿವಾಸಿಗಳು ಈ ಕೋಲಾಹಲ ಶಬ್ದವನ್ನು ಕೇಳಿ ಓಡಿ ಬಂದು ನೋಡುವಲ್ಲಿ ಕೆರೆ ಹೊಕ್ಕುಬಿಟ್ಟಿದ್ದರು. ತಾವು ಬಾರದೆ ಹೊಕ್ಕದ್ದಕ್ಕೆ ಕೋಪಗೊಂಡು ತರಾಪುದಾರನ ಅಪ್ಪಣೆ ಇಲ್ಲದೆಯೂ ಕೆರೆ ಹೊಕ್ಕರೆಂಬ ರೋಷದಿಂದ ... ಬಂದ ಕುಬಟೂರ ನಿವಾಸಿಗಳು ಕೈಲಿಗಳಲ್ಲಿ ನೆಟ್ಟಿದ್ದ ಗೂಟ, ಗುದಿಗೆಗಳನ್ನು ಕಿತ್ತುಕೊಂಡು ಕೆರೆಯಲ್ಲಿ ... ಮೀನು ಹಿಡಿಯುತ್ತಿದ್ದ ಜನಗಳನ್ನು ಬಹು ಬಲವಾಗಿ ಪ್ರಹರಿಸುತ್ತಾ ... ರಿಂದ ಮೀನುಗಳನ್ನು ಕಸುಕೊಳ್ಳುತ್ತಾ ಬಂದರು. ಹೀಗೆ ಪರಸ್ಪರ ಹೊಡೆದಾಡಿಗೆ ನೀರಿನಲ್ಲಿ ಬಹಳ ಹೊತ್ತು ಜಗಳವಾಗಿ, ಕೆಲವು ಜನಕ್ಕೆ ತಲೆ ಒಡೆದು ... ಎಷ್ಟೋ ಜನಕ್ಕೆ ಘೋರ ಗಾಯಗಳಾದವು. ಕೆಲವರು ಕೈಮುರಿದುಕೊಂಡರು. ಕೆಲವರು ಕಾಲು ಮುರಿದುಕೊಂಡರು. ಹೀಗಾಗಲು ಮೀನು ಹಿಡಿಯುವ ಕೋಲಾಹಲಧ್ವನಿಯು ಅಡಗಿ, ಗಾಯಪಟ್ಟವರ ರೋದನಧ್ವನಿಯು ಪ್ರಬಲವಾಯಿತು. ಇದನ್ನು ಕೇಳಿ ಅಲ್ಲಿಯ ಶಾನಭೋಗರು ಪಗೈರೆ ಬಂದು ಕುಬಟೂರು ನಿವಾಸಿಗಳನ್ನೂ ಅಲ್ಲಿಯ ಜನಗಳನ್ನೂ ಸಮಾಧಾನ ಪಡಿಸಿ, ಕೆರೆ ಹೊಗಲು ಅಪ್ಪಣೆ ಕೊಟ್ಟರು. ಆ ವೇಳೆ ಬಾರ ಗಾಯಪಟ್ಟ ಜನಗಳು ... ಕೆರೆಯೊಳಕ್ಕೆ ಮೀನು ಹಿಡಿಯಲು ಓಡಿದರು. ನೋಡಿದಿರಾ! ಈ ಹಳ್ಳಿಗ ಜನಗಳಿಗೆ ಮೀನಿನ ಆಶೆ ಎಷ್ಟಿರಬಹುದು! ... ಸಾಯಂಕಾಲವಾಗಿ ಕತ್ತಲಾಗಿದ್ದಾಗ್ಯೂ ಮೀನು ಹಿಡಿಯುವದನ್ನು ಬಿಡಲಿಲ್ಲ. ಆದರೂ ಬಹು ಕತ್ತಲೆಯಾದ್ದರಿಂದ ಮೀನಿನ ಬೇಟೆ ಸಂಪೂರ್ಣವಾಗಲಿಲ್ಲ. ಈ ಪ್ರಕಾರ ಹೊಡೆದು ಕೊಂಡು ಜನಗಳು ಘಾಯಪಟ್ಟದ್ದಕ್ಕೆ ಸಾಕ್ಷಾತ್ತಾದವೂ, ಗಾಯಪಟ್ಟ ಜನಗಳು ಪುನಃ ನೋವಿ ಲಕ್ಷ್ಯ ಮಾಡದೆ ಬೇಟೆಗೆ ಹೋದದ್ದಕ್ಕೆ ಆಶ್ಚರ್ಯವೂ ಪಡಬೇಕಾಗಿದೆ.

ಬಹುಮಾನದ ಮೋಹಪಡತಕ್ಕಾಗಿ ಬಂದ ಇನ್ನೊಂದು ವಾರ್ತೆ.
ಚನ್ನಪಟ್ಟಣದಲ್ಲಿ ಹುಲಿಯ ಭಯ.

ಎಲ್ಲಿಂದಲೋ ಒಂದು ತಿಂಗಳಿನ ಹಿಂದೆ ಒಂದು ಹುಲಿಯು ಚನ್ನಪಟ್ಟಣದ ತಾಲ್ಲೂಕಿಗೆ ಬಂದು ಒಪಲ ಕೊಂಡದೆಯನ್ನು ಹುಟ್ಟಿಸಿ ಎಲ್ಲರ ಮನಸ್ಸಿಗೂ ಬೇಯನ್ನುಂಟುಮಾಡಿತು. ೨೫ ದಿವಸಗಳ ಮುಂಚೆ ಕಿರುವಾನ ಹಳ್ಳಿ ಗ್ರಾಮಕ್ಕೆ ಸಮೀಪ ವನದಲ್ಲಿ ಹುಲಿಯು ಹೊಂಚುತ್ತಿರುವಾಗ ಒಬ್ಬ ಮನುಷ್ಯನು ಹಸು ಕರುವನ್ನು ಹೊಡೆದುಕೊಂಡು ಕಾಡಿನ ಕಡೆಯ ಎಮ್ಮೆಗಳ ಬಳಿ ಬಂದನು. ಹುಲಿಯು ನೋಡಿ ಹಾರಿ ಮುನ್ನಿಕೆ ಆಗ ಹುಲಿ ಮತ್ತು ಒಂದು ಹಸು ಅವನನ್ನು ಗಂಡಾಂತರ ಹೊಡೆದು ಗಾಯಮಾಡಿತು. ಕಳೆದ ಅಸ್ಪತ್ರೆಯಲ್ಲಿ ಗುಣವಾಯಿತು. ಅದೇ ಪ್ರಾಂತ ಮತ್ತೆ ೩—೪ ಜನರನ್ನು ಗಾಯಪಡಿಸಿತು. ಎಲ್ಲರೂ ದುಃಖದ ಮನಸಿನಿಂದ ಗೂಡು ಹೊಂದಿದರು. ೪ ದಿನದಲ್ಲಿ ಸಟ್ಟು ಗ್ರಾಮದ ಬಳಿ ಕೆಲವರನ್ನು ಗಾಯಪಡಿಸಿತು. ಕಳೆದ ಗುರುವಾರ ಹುಲಿರಾಯನು ... ಚನ್ನಪಟ್ಟಣಕ್ಕೆ ಬಂದಿತು. ಕೋಟೆ ಮೂಲೆಯಲ್ಲಿ ಕೋಟೆ ಗೋಡೆಯ ಹಿಂಭಾಗದ ಹೊಲದಲ್ಲಿ ಮೇಯುತ್ತಲಿದ್ದ ಕುದುರೆಯನ್ನು ಕೊಂದು, ರಕ್ತ ಪಾನವಮಾಡಿ ಹೋಯಿತು. ಮಾರನೇ ಬೆಳಿಗ್ಗೆ ಅಲ್ಲಿ ತಿರುಗಾಡುವ ಜನಗಳು ಸತ್ತು ಬಿದ್ದ ಕುದುರೆಯನ್ನು ಹುಲಿಯು ಆಳಿದ ಮತ್ತು ಹಲ್ಲಿನ ಗುರುತನ್ನು ನೋಡಿ ಬಂದು ಎಲ್ಲರಿಗೂ ತಿಳಿಸಿದರು. ಸಾಯಂಕಾಲ ಹುಲಿಯನ್ನು ಹೊಡೆಯುವ ದಕ್ಕೆ ಅಲ್ಲಿ ಕಟ್ಟಿ ಆ ಬಳಿ ಸಂಗಡ ಇಬ್ಬರನ್ನು ಕರೆದುಕೊಂಡು ಆಕ್ಷಾಮಾಗ್ರಗಳೊಡನೆ ಆ ಸ್ಥಳಕ್ಕೆ ಹೋದರು. ಅಷ್ಟರಲ್ಲಿ ... ಹುಲಿ ಬಂದು ತಾನು ಕೊಂದಿದ್ದ ಕುದುರೆಯನ್ನು ತಿನ್ನುತ್ತಲಿತ್ತು. ಅದು ಇವರನ್ನು ನೋಡಿ ಘರ್ಜನೆ ಮಾಡಿ ಓಡಿಹೋಯಿತು. ಅವರಿಗೂ ಸ್ವಲ್ಪ ಹೆದರಿಕೆಯುಂಟಾಯಿತು. ಇವರು ಪ್ರಾತಃಕಾಲದ ವರೆಗೂ ಹುಲಿಯನ್ನು ಕಾಯುತ್ತಾ ಇದ್ದರು. ಅದು ಮತ್ತೆ ಬರಲೇ ಇಲ್ಲ. ಅದೇ ರಾತ್ರಿ ಮಳೂರಿನ ಬಳಿ ಒಂದು ಕುದುರೆಯನ್ನು ಕೊಂದಿರುತ್ತದೆ. ಇದರಿಂದ ಸುತ್ತು ಮುತ್ತಿನ ಗ್ರಾಮದ ಮತ್ತು ಪೇಟೆಯ ಜನಗಳಿಗೆ ಬಹಳ ಭೀತಿಯುಂಟಾಗಿದೆ. ಯಾರು ಅದನ್ನು ಹೊಡೆದು ಜನಗಳ ಭೀತಿ ತಪ್ಪಿಸಿ ಕೀರ್ತಿಪಡೆಯುತ್ತಾರೋ ನೋಡಬೇಕು.

(೧) ಪ್ರತಿ ಮೋಹಪಡ ಲೇಖ ದ ಮೇಲೂ "ಬಹುಮಾನದ ಮೋಹಬ" ವೆಂದು ಬರೆದು ಲೇಖಕರ ಹೆಸರನ್ನು ವಿಳಾಸವನ್ನು ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಗ್ರಾಸ್ತಿದಾರರು ತಿಳಿಸುವ ಸ್ಥಳದ ಬಹಳ ದೃಷ್ಟ ಎಂ ೪ ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಥವಾಗಲು ಸಾಧ್ಯವಿರುವಷ್ಟು ಒಂದು ಕಾಗದದ ಒಂದೇ ಬದಿಯಲ್ಲಿ ಬರೆದಿರಬೇಕು. (೩) ಪ್ರತಿವಾರದ ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲಿಪಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರಕ್ಕೂ ಪ್ರಕಟಿಸುವದಲ್ಲದೆ, ಬಹುಮಾನವನ್ನು ಮನಿಯಾರ್ಡರ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರುವ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕಚೇರಿ ಸ್ವತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು.

ಇಂಡಿಯಾ ದೇಶದ ವೃತ್ತಾಂತಗಳು.

ಸರ್ ಡೇವಿಡ್ ಸಸೂನ್ ಎಂಬ ಧರ್ಮಾತ್ಮನು ಯುರೋಪ್ಯ ಷಯ ರೋಗಿಗಳಿಗಾಗಿ ಪೂನಾ ಪಟ್ಟಣದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಎರಡು ಲಕ್ಷ ರೂಪಾಯಿ ಕೊಟ್ಟಿರುತ್ತಾನೆ.

●●●●

ಹೈದರಾಬಾದಿನ ಮಂತ್ರಿಶ್ರೇಷ್ಠರಾದ ಮಹಾರಾಜಾ ಕೃಷ್ಣಪ್ರಸಾದ್ ಬಹದೂರ್ ಯವರು ಆರು ತಿಂಗಳ ರಜಾ ಪಡೆದು, ತರುವಾಯ ಹಾಗೇ ಕೆಲಸ ಬಿಟ್ಟುಬಿಡುತ್ತಾರೆಂದು ವರ್ತಮಾನ ಹುಟ್ಟಿತ್ತು. ಇದು ನಿಜ ವಲ್ಲವೆಂದು ಅಲ್ಲಿನ ಬಾತ್ಮೀದಾರರು ತಿಳಿಸುತ್ತಾರೆ

●●●●

ಹೈದರಾಬಾದಿನ ಸರ್ಕಾರಿ ಮೃಗಾಲಯದಲ್ಲಿ ಒಂದು ಹುಲಿಯು ಗಟ್ಟಿಯಾಗಿ ಮೂರು ಮರಿಗಳನ್ನು ಹಾಕಿದೆ. ತಾಯಿಯೂ ಮರಿಗಳೂ ಸುಖವಾಗಿ ಬೆಳೆಯುತ್ತಿರುವವು ಸೆರೆಯಲ್ಲಿರುವ ಮೃಗಗಳು ಮರಿಗಳನ್ನು ಹಾಕಿ ಅವೆಲ್ಲಾ ಆರೋಗ್ಯವಾಗಿರುವುದು ಅಪೂರ್ವವೇ ಸರಿ.

●●●●

ಮಧುರಾ ಡಿಸ್ಟ್ರಿಕ್ಟಿನಲ್ಲೆಲ್ಲಾ ಹಿಡುವಳಿ ಜಮೀನ್ ಕಂದಾಯದ ಮೇಲೆ ರೂಪಾಯಿಗೆ ಮೂರು ಪೈಸಂತೆ ಒಂದು ಹೊಸ ವರಿಯನ್ನು ಹಾಕಿ ಎತ್ತಬೇಕೆಂತಲೂ ಈ ಹಣವನ್ನು ಅಲ್ಲಿನ ರೈಲ್ ಬಡಾವಣೆಗೆ ವಿನಿಯೋಗಿಸಿಕೊಳ್ಳಬಹುದೆಂತಲೂ ಮದರಾಸ್ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ.

●●●●

ಪಂಡರಪುರದ ಜಾತ್ರೆಗೆ ಈ ಸಲ ಬಹು ಜನ ಯಾತ್ರಾರ್ಥಿಗಳು ಹೋಗಿ ಸೇರಿದ್ದಾರೆ. ಅಲ್ಲಿ ಈಗ ವಾಂತಿಭೇದಿ ಉಪದ್ರ ಪ್ರಾರಂಭವಾಗಿ ಅನೇಕರು ಕಾಲವಾದರು. ಬೊಂಬಾಯಿ ಗವರ್ನರವರು ಅಲ್ಲಿ ಪ್ರಜೆಗಳಿಗೆ ಮಾಡಿರುವ ಏರ್ಪಾಡುಗಳನ್ನು ನೋಡಿಕೊಂಡು ಬರುವುದಕ್ಕೆ ಅಲ್ಲಿಗೆ ಹೋಗಿದ್ದರು.

●●●●

ಒರಿಸ್ಸಾ ಡಿಸ್ಟ್ರಿಕ್ಟಿಗೆ ಸೇರಿದ ಬಾಲಸೋರ್ ಪಟ್ಟಣದಲ್ಲಿ ಹಿಂದು ಮುಸಲ್ಮಾನ್ ಪ್ರಜೆಗಳಿಗೆ ಪರಸ್ಪರ ವೈಷಮ್ಯಗಳುಂಟಾಗಿವೆ ಮಸೀದಿಗಳ ಬಳಿ ೩೦ ಗಜ ದೂರದಲ್ಲೂ ಹಿಂದು ಮೆರವಣಿಗೆಗಳು ಬರಕೂಡದೆಂಬ ಮುಸಲ್ಮಾನರಿಂದಲೂ ಅಂಥಾ ಅವಶ್ಯವೇನೂ ಇರುವುದಿಲ್ಲವೆಂದು ಹಿಂದುಗಳೂ ಹೇಳುತ್ತಿದ್ದಾರೆ

●●●●

ದೆಹಲಿ ಪಟ್ಟಣದಲ್ಲಿ ಘೋಷಾಸ್ತ್ರೀಯರು ಬಹು ಜನರು ಕಾಯಿಲೆ ಬಿದ್ದು ಔಷಧಾದಿಗಳನ್ನು ಪಡೆಯುವುದಕ್ಕೆ ಅವಕಾಶವಿಲ್ಲದೆ ಬಹಳ ಕಷ್ಟಪಡುತ್ತಿರುವವುದನ್ನು ನೋಡಿ ಮ್ಯುನಿಸಿಪಾಲಿಟಿಯವರು ತಮ್ಮ ಖರ್ಚಿನಿಂದ ಒಂದು ಜನಾನಾ ಆಸ್ಪತ್ರೆಯನ್ನು ಪ್ರತ್ಯೇಕವಾಗಿ ಏರ್ಪಾಡು ಮಾಡುವವರಾಗಿದ್ದಾರೆ.

●●●●

ಪೂರ್ವ ಬಂಗಾಳಾ ಎಂಬ ಹೊಸ ಆಧಿಪತ್ಯದಲ್ಲಿ ಈಗ ಕ್ಷಾಮಪ್ರಾಪ್ತವಾಗಿರುವುದನ್ನು ಕೇಳಿ ಮಣಿಪುರದ ಒಬ್ಬ ಬ್ರಾಹ್ಮಣಸ್ತ್ರೀಯು ಕ್ಷಾಮನಿವಾರಣೆಯಾಗುವ ತನಕ ಬಡಬಗ್ಗರನ್ನು ಸಂರಕ್ಷಣೆಮಾಡುವುದಕ್ಕೆ ಪ್ರತಿ ತಿಂಗಳಲ್ಲೂ ೫೦ ರೂಪಾಯಿನಂತೆ ಕಳುಹಿಸುತ್ತಾ ಬರುವುದಾಗಿ ಮಾತುಕೊಟ್ಟಿದ್ದಾಳೆ.

●●●●

ಕಡಪೆಯಲ್ಲಿ ಬಹಳ ಮಳೆ ಬಂದು ಅಲ್ಲಿನ ಭಾರೀ ಕೆರೆ ಏರಿಯು ಕಿತ್ತುಹೋಯಿತು ಅದನ್ನು ದುರಸ್ತು ಮಾಡುವುದಕ್ಕೆ ಆಳುಗಳನ್ನು ಬಿಟ್ಟು ಕೆಲಸ ಮಾಡಿಸುತ್ತಿದ್ದರು. ಇವರು ಕಟ್ಟಿಹಾಕುತ್ತಿರುವಲ್ಲಿ ಏರಿ ಮಣ್ಣಿನೊಳಗಿಂದ ಸಾವಿರಾರು ಕೊಂಡೀ ಚೇಳುಗಳು ಸರಸರನೆ ಬಂದು, ಆಳುಗಳಲ್ಲಿ ಸುಮಾರು ೩೦—೩೫ ಜನರನ್ನು ಕಡಿದವು.

●●●●

ಲಕ್ನೋ ಪಟ್ಟಣದ ಪೋಸ್ಟ್ ಆಫೀಸಿನಲ್ಲಿ ಸಬ್ ಪೋಸ್ಟ್ ಮಾಸ್ಟರ್ ಲೀಟ್ ಎಂಬಾತನೂ ರಾಸ್ ಬಿಹಾರಿ ಲಾಲ್ ಎಂಬ ಗುಮಾಸ್ತನೂ ಸೇರಿ ಆ ಪೋಸ್ಟಾಫೀಸಿನ ೮,೫೦೧ ಚಿಲ್ಲರೆ ರೂಪಾಯನ್ನು ತಿಂದು ಹಾಕಿದರೆಂದು ಮೊಕದ್ದಮೆ ಬಂದಿದೆ. ಮ್ಯಾಜಿಸ್ಟ್ರೇಟರು ಅವನ್ನು ಸೆಷನ್ ವಿಚಾರಣೆಗೆ ಗುರಿಮಾಡಿದ್ದಾರೆ. ಪೋಸ್ಟ್ ಮಾಸ್ಟರಿಗೆ ೧೮ ತಿಂಗಳ ಕಠಿಣ ಸಜಾ, ೮,೫೦೦ ರೂ ಜುಲ್ಮಾನೆ ಆಯಿತು.

●●●●

ಬರ್ಮಾ ಅಧಿಪತ್ಯಕ್ಕೆ ಸೇರಿದ ಮೂ ಕಣಿವೆ ಡಿಸ್ಟ್ರಿಕ್ಟುಗಳಲ್ಲಿ ಪ್ರವಾಹಗಳು ಅಪಾರವಾಗಿ ಬಂದು, ಸುಮಾರು ೪೦ ಮೈಲಿದೂರಕ್ಕೆ ರೈಲ್ ರಸ್ತೆಯನ್ನು ಹಾಳುಮಾಡಿರುತ್ತವೆ ಅನೇಕ ಸ್ಥಳಗಳಲ್ಲಿ ಬಂಡೆ ಕಲ್ಲು ಮಣ್ಣು ೩೦,೦೦೦ ಘನ ಅಡಿಯಷ್ಟು ರಸ್ತೆಯ ಮೇಲೆ ಬಿದ್ದು ಮುಚ್ಚಿಬಿಟ್ಟಿದೆ. ಅದನ್ನೆಲ್ಲಾ ತೆಗೆದು ರಸ್ತೆಯನ್ನು ಸರಿಮಾಡುವ ತನಕ ಪ್ರಯಾಣಿಕರನ್ನು ಅಲ್ಲಲ್ಲಿ ಇಳಿಸಿ ನಡಿಸಿಕೊಂಡು ಹೋಗುವರು

●●●●

ರಂಗೂನ್ ಪಟ್ಟಣದಲ್ಲಿ ಎರಡು ಅಂತಸ್ಥಿನ ಒಂದು ಭಾರೀ ಬಂಗಲೆಯು ಬೆಂಕಿ ಬಿದ್ದು ಉರಿದು ಹೋಯಿತು ಭಾರೀ ಸಾಹುಕಾರರು ಅದರಲ್ಲಿ ಬಹು ಉತ್ಕೃಷ್ಟವಾದ ಪದಾರ್ಥಗಳನ್ನಿಟ್ಟು ಬಿಕರಿ ಮಾಡುತ್ತಿದ್ದರು ಒಡವೆಗಳೂ ರೇಷ್ಮೆ ಬಟ್ಟೆಬರೆಗಳೂ ಕೆಲವು ಲಕ್ಷ ರೂಪಾಯಿ ಕ್ರಯದ ಬಾಳುವದಾಗಿದ್ದವು ಎರಡು ಗಂಟೆ ಹೊತ್ತು ಬೆಂಕಿಯು ಆರಲಿಲ್ಲ ೨—೩ ಲಕ್ಷ ರೂಪಾಯಿನ ಮಾಲುಗಳು ಉರಿದು ಹೋಗಿ ಸಾಹುಕಾರರಿಗೆ ನಷ್ಟವಾಗಿದೆ

●●●●

ಬ್ಯಾರಿಸಾಲ್ ಗಲಭೆಯಲ್ಲಿ ಮುಂದಾಳಾಗಿದ್ದ ಮಿ॥ ಸುರೇಂದ್ರನಾಥ ಬಾನರ್ಜಿಯವರಿಗೂ ಅದೇ ಗಲಭೆಯಲ್ಲಿ ಪೋಲೀಸಿನವರಿಂದ ಏಟು ತಿಂದರೂ ಸುಮ್ಮನಿರದೆ 'ವಂದೇ ಮಾತರಂ' ಎಂದು ಕೂಗುತ್ತಿದ್ದ ಒಬ್ಬ ಬಂಗಾಳಿ ಹುಡುಗನಿಗೂ ದಕ್ಷಿಣ ದೇಶದಿಂದ ಬಹಳ ಸುಂದರವಾದ ಎರಡು ಬಹುಮಾನಗಳನ್ನು ಬಹುಮಾನವಾಗಿ ಕಳುಹಿಸಿರುತ್ತಾರೆ. ಅವೆರಡನ್ನು ಟುಟಿಕಾರ್ನಿನಲ್ಲಿ ತಯಾರುಮಾಡಿಸಿ ತಿನ್ನವೆಲ್ಲಿ ಕೈಗಾರಿಕೆಗಳ ಪ್ರದರ್ಶನಶಾಲೆಯಲ್ಲಿ ಇಡಿಸಿದ್ದರು

●●●●

ಪೇಟೆ ಪಟ್ಟಣದ ಹತ್ತಿರ ಅನಕಪಲ್ಲಿ ಎಂಬ ಊರಿನಲ್ಲಿ ಸೀಸದ ಕಡ್ಡಿಯನ್ನು ತಯಾರುಮಾಡುವಂಥಾ ಒಂದು ಕಾರ್ಖಾನೆಯನ್ನು ಕಟ್ಟುತ್ತಿದ್ದಾರೆ ಈ ಕಾರ್ಖಾನೆಗೆ ಬೇಕಾಗುವ ಯಂತ್ರ ಮೊದಲಾದ ಸಾಮಗ್ರಿಗಳು ವಿಲಾಯತಿಯಿಂದ ರವಾನೆಯಾದವು. ಒಂದೆರಡು ವಾರದೊಳಗಾಗಿ ಎಲ್ಲಾ ಸಿದ್ಧವಾಗುವುದು ಸುಮಾರು ಎರಡು ತಿಂಗಳೊಳಗೆ ಈ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭವಾಗಿ ಕಪ್ಪು ಮತ್ತು ಬೇರೆ ಬೇರೆ ಬಣ್ಣಗಳ ಸೀಸದ ಕಡ್ಡಿಗಳು ತಯಾರಾಗುತ್ತವೆ

●●●●

ಬರ್ಮಾ ಆಧಿಪತ್ಯಕ್ಕೆ ಸೇರಿದ ಕೆಂಟಂಗ್ ಪಟ್ಟಣದ ದೊಡ್ಡ ಬೀದಿಯಲ್ಲಿ ಬೆಂಕಿ ಬಿದ್ದು ೭೩೧ ಮನೆಗಳು ನಾಶವಾದವು. ಅನೇಕ ದೇವಸ್ಥಾನಗಳು, ಪೋಸ್ಟಾಫೀಸು, ಬಹು ಸುಂದರವಾದ ಅಂಗಡಿಗಳು ಎಲ್ಲಾ ಸುಟ್ಟುಹೋದವು ಬಡಬಗ್ಗರ ಕಷ್ಟನಿವಾರಣೆಗಾಗಿ ಚಂದಾ ಹಣವನ್ನು ಎತ್ತುತ್ತಿದ್ದಾರೆ. ಪ್ರಜೆಗಳೂ ವರ್ತಕರೂ ಸರ್ಕಾರದವರೂ ಮತ್ತೆ ಅದೇ ಸ್ಥಳದಲ್ಲಿ ಮನೆ ಅಂಗಡಿ ಪೋಸ್ಟಾಫೀಸು ಮುಂತಾದವುಗಳನ್ನು ಕಟ್ಟಲಾರಂಭಿಸಿದ್ದಾರೆ ದೇವಸ್ಥಾನಗಳನ್ನು ಕಟ್ಟುವುದು ಸಾವಕಾಶವಾದೀತು

●●●●

ಸಿಮ್ಲಾ ಡಿಸ್ಟ್ರಿಕ್ಟಿಗೆ ಸೇರಿದ ಬುಷಾಹರ್ ಎಂಬ ಸಣ್ಣ ದೇಶೀಯ ಸಂಸ್ಥಾನದಲ್ಲಿ ಕೆಲವು ರೈತರು ಸರ್ಕಾರಕ್ಕೆ ಕಂದಾಯವನ್ನೇ ಕೊಡುವುದಿಲ್ಲವೆಂದು ಹಟ ಹಿಡಿದಿದ್ದು ಪೋಲೀಸಿನವರೂ ಸೈನಿಕರೂ ಹೋದಾಗ ಗ್ರಾಮಗಳನ್ನೇ ಬಿಟ್ಟು ಓಡಿ ಹೋಗಿದ್ದರಷ್ಟೆ ಅವರನ್ನೆಲ್ಲಾ ತಕ್ಕಹಾಗೆ ಶಿಕ್ಷೆ ಮಾಡಿ ಅವರಿಂದ ಕಂದಾಯಗಳನ್ನು ವಸೂಲ್ಮಾಡಿಕೊಂಡು, ಅವರಲ್ಲಿ ಮುಖಂಡರಾಗಿದ್ದ ೭ ದಿನೇಳು ಜನರನ್ನು ಹಿಡಿದು ತಂದಿದ್ದಾರೆ ಸರ್ಕಾರದವರು ಇವರನ್ನು ದರ್ಯಾಫ್ತಿ ಮಾಡಿ, ಅವರಿಗೆ ಸರಿಯಾದ ಶಿಕ್ಷೆ ವಿಧಿಸುವವರಾಗಿದ್ದಾರೆ.

●●●●

ಅಫ್ಘಾನಿಸ್ಥಾನದ ಪ್ರಜೆಗಳು ನೆಯ್ಗೆ ಕಸಬನ್ನು ಈಗೀಗ ಪ್ರಾರಂಭಿಸಿ ಹತ್ತಿಯಲ್ಲೂ ರೇಷ್ಮೆಯಲ್ಲೂ ನಾನಾ ತರದ ಬಟ್ಟೆಗಳನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಕಜಾರಾ ಮೊದಲಾದ ಕೆಲವು ಕಡೆಗಳಲ್ಲಿ ಆಗಲೇ ಅನೇಕ ಕಾರ್ಖಾನೆಗಳು ಏರ್ಪಾಟಾಗಿ ಬಹು ಸೊಗಸಾದ ಜವಳಿಗಳು ತಯಾರಾಗುತ್ತಿರುವವು ಅಮೀರರು ಅಂಥಾ ನೆಯ್ಗೆಯವರಿಗೆಲ್ಲಾ ಪ್ರೋತ್ಸಾಹನವಾಗುವಂತೆ ಬಹುಮಾನಗಳನ್ನು ಆಗಾಗ್ಗೆ ಕಳುಹಿಸುತ್ತಿದ್ದಾರೆ ಇದರಿಂದ ಆಫ್ಘಾನಿನಲ್ಲಿ ಕಸಬುಗಳೂ ಬೇಗನೆ ಅಭಿವೃದ್ಧಿಗೆ ಬರುವವೆಂದು ತಿಳಿಯಬಹುದಾಗಿದೆ

●●●●

ಹಿಂದುಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಕಲ್ಕತ್ತೆಯಲ್ಲಿ ಹಿಂದುಗಳು ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಈ ಸಂಘದವರು ವಿದ್ಯಾವಂತರನ್ನು ಚುನಾಯಿಸಿ ವೇತನ ಕೊಟ್ಟು ಪರರಾಜ್ಯಗಳಿಗೆ ಕಳುಹಿಸಿ ಕಸಬುಗಳನ್ನು ಕಲಿಸುತ್ತಾರೆ. ಇಂಥಾ ಸಂಘದ ಉದ್ದೇಶವನ್ನು ಸಾರ್ಥಕಪಡಿಸಬೇಕೆಂದು ವ್ರಜೇಂದ್ರ ಕಿಶೋರೆ ರಾಯ ಚೌದ್ರಿ ಎಂಬೊಬ್ಬ ಬಂಗಾಳಿ ಬಾಬುವು ತನ್ನ ಆಸ್ತಿಯಲ್ಲಿ ಐದು ಲಕ್ಷ ರೂಪಾಯನ್ನು ಧರ್ಮಮಾಡಿರುತ್ತಾನೆ. ಇದು ಸ್ತೋತ್ರಾರ್ಹವಾದದ್ದೆನ್ನುವದಕ್ಕೆ ಸಂಶಯವಿಲ್ಲ.

●●●●

ಗಿಲ್‌ಜಿಟ್ ಪ್ರಾಂತ್ಯದಲ್ಲಿ ಅಪಾರವಾದ ಮಳೆ ಸುರಿಯಿತು ಹಿಮಾಚಲ ಪರ್ವತದ ಮೇಲಿನಿಂದ ಮಂಜುಗಡ್ಡೆಗಳು ಕರಗಿ ಪ್ರವಾಹಗಳು ಬಂದವು ಈ ಪ್ರವಾಹಗಳ ದೆಸೆಯಿಂದ ಒಂದು ಕಡೆ ಹದಿನಾರು ಸೇತುವೆಗಳೂ ಇನ್ನೊಂದು ಕಡೆ ಮೂರು ಸೇತುವೆಗಳೂ ಕಿತ್ತು ಕೊಚ್ಚಿಕೊಂಡು ಹೋಗಿರುತ್ತವೆ ಗೋಪೀ ನದಿಯ ಮೇಲೆ ಹಾಕಿದ್ದ ಅಂತರಾಳದ ಸೇತುವೆಯನ್ನು ಸರ್ಕಾರದವರು ಬೇಗನೆ ಬಿಚ್ಚಿಸಿಬಿಟ್ಟರು ಇನ್ನೂ ನದಿಯಲ್ಲಿ ಪ್ರವಾಹ ಹೆಚ್ಚುತ್ತಲೇ ಇರೋಣದರಿಂದ ಅಲ್ಲಿನ ಕಷ್ಟನಷ್ಟಗಳು ಇಷ್ಟಕ್ಕೆ ಕೊನೆಮುಟ್ಟುವಂತೆ ಕಾಣುವುದಿಲ್ಲ

●●●●

ಕಲ್ಕತ್ತೆಯ ದೊಡ್ಡ ಷಾಪಿನಲ್ಲಿ ನೌಕರನಾಗಿದ್ದ ತಿವೋಲ್ ಎಂಬುವನೂ ವಿನಾಯ ಜಮುನಾದಾಸನೆಂಬುವನೂ ಸೇರಿ ಆ ಅಂಗಡಿಯ ಕೆಲವು ಲಕ್ಷ ರೂಪಾಯಿಗಳನ್ನು ದುರುಪಯೋಗ ಪಡಿಸಿರುತ್ತಾರೆಂದು ಮೊಕದ್ದಮೆ ಆಯಿತು ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ಸೆಷನ್ ವಿಚಾರಣೆಗೆ ಗುರಿ ಮಾಡಿದರು, ವಕೀಲರ ಅಪೇಕ್ಷೆಯಂತೆ ಅಪರಾಧಿಗಳನ್ನು ಜಾಮೀನ್ ಮೇಲೆ ಬಿಡುವುದಿಲ್ಲವೆಂದು ಹೇಳಿದಾಗ ವಕೀಲರು ಹೈಕೋರ್ಟಿಗೆ ಅರ್ಜಿ ಕೊಟ್ಟು ಅಪ್ಪಣೆ ಪಡೆದು ಬಂದರು ಅದರ ಮೇಲೆ ಮ್ಯಾಜಿಸ್ಟ್ರೇಟರು ಪ್ರತಿ ಒಬ್ಬನಿಗೂ ೩೦,೦೦೦ ರೂಪಾಯಿ ಜಾಮೀನ್ ತೆಗೆದುಕೊಂಡು ಬಿಟ್ಟಿದ್ದಾರೆ.

●●●●

ಪೂರ್ವ ಬಂಗಾಳಾ ಮತ್ತು ಆಸಾಂ ಎಂಬ ಹೊಸ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರವರ ಮಂತ್ರಾಲೋಚನಾ ಸಭೆಗೆ ಗವರ್ನಮೆಂಟಿನವರು ಮೆಂಬರುಗಳನ್ನು ಚುನಾಯಿಸಬೇಕಾಗಿದೆ ಮೈಮನಸಿಂಗಿನ ಮಹಾರಾಜರವರು ತಮಗೆ ಮೆಂಬರ ಕೆಲಸವಾಗಬೇಕೆಂದು ಪ್ರಕಟಿಸಿದ್ದಾರೆ ಅಲ್ಲಿನ ಹಿಂದುಗಳೆಲ್ಲಾ ಬಂಗಾಳಾ ವಿಭಜನ ಮಾಡಿದರಲ್ಲಾ ಎಂದು ಸರ್ಕಾರದವರ ಮೇಲೆ ಸಿಟ್ಟುಗೊಂಡು ಹಿಂದುಗಳಲ್ಲಿ ಯಾರೂ ಮೆಂಬರ ಕೆಲಸವನ್ನು ಒಪ್ಪಿಕೊಳ್ಳಕೂಡದೆಂದು ಹೇಳುತ್ತಿದ್ದಾರೆ. ಇಂಥಾ ಹಿಂದುಗಳು ಮೇಲ್ಕಂಡ ಮಹಾರಾಜರವರ ಪ್ರಕಟನೆಯನ್ನು ಕೇಳಿ ಕೋಪಿಸಿಕೊಂಡು ಅವರನ್ನು ನಾನಾ ಪ್ರಕಾರವಾಗಿ ದೂರುತ್ತಿರುವರು ಒತ್ತಟ್ಟಾಗಿ ಕಾಯಸ್ಥರೆಲ್ಲಾ ಸೇರಿ ಮಹಾರಾಜರವರನ್ನು ಬಹಿಷ್ಕರಿಸಬೇಕೆಂದು ಆಲೋಚನೆ ಮಾಡಿಕೊಂಡಿರುತ್ತಾರೆ.

●●●●

ಪೂರ್ವ ಬಂಗಾಳಾ ಮತ್ತು ಆಸಾಮಿನ ಲೆಫ್ಟಿನೆಂಟ್ ಗವರ್ನರವರು ಸಿರಾಜಗಂಜ್ ಎಂಬ ಪಟ್ಟಣಕ್ಕೆ ಸರ್ಕೀಟು ಹೋಗಿದ್ದಾಗ ಅಲ್ಲಿನ ಅಧಿಕಾರಿಗಳು ಅವರನ್ನು ಸತ್ಕರಿಸುವುದಕ್ಕೆ ಕೆಲವು ಬಾಣಬಿರುಸುಗಳನ್ನು ಮಾಡಿಕೊಡಬೇಕೆಂದು ಒಬ್ಬ ಕಾರೀಗಾರನಿಗೆ ಹೇಳಿದರು ಅವನು ಮಾಡಿಕೊಡಲಿಲ್ಲ. ಅದಕ್ಕಾಗಿ ಪೋಲೀಸಿನವರು ಆ॥ ಕಮಿಷನರ ಆಜ್ಞೆಯ ಪ್ರಕಾರ ಅವನನ್ನು ಹಿಡಿದು ಬಂಧನದಲ್ಲಿಟ್ಟರು ಈಗ ಅವನು ಪೋಲೀಸಿನವರ ಮೇಲೂ ಆ॥ ಕಮಿಷನರ ಮೇಲೂ ಅಕ್ರಮ ಹತೆಮಾಡಿದವರೆಂದು ಹೈಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದಾನೆ. ಅಲ್ಲಿನ ವಕೀಲರ್ಯಾರೂ ಅವನ ಕಡೆ ವಕಾಲತ್ತು ತೆಗೆದುಕೊಳ್ಳುವುದಿಲ್ಲ

●●●●

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಬಂಗಾಳಿಯು ೧೪ ಆಣೆಗೆ ಅಂಗಡಿಯಲ್ಲಿ ವಿಲಾಯತೀ ಬಟ್ಟೆಯನ್ನು ಕೊಂಡುಕೊಂಡನು ಅದನ್ನು ನೋಡಿ ಮೂವರು ಬಂಗಾಳಿಗಳು ಅವನ ಕೈಲಿದ್ದ ಬಟ್ಟೆಯನ್ನು ಕಿತ್ತುಕೊಂಡು, ಬೆಂಕಿಗೆ ಹಾಕಿ ಸುಟ್ಟು ಅದರ ಕ್ರಯವನ್ನು ಅವನಿಗೆ ಕೊಟ್ಟು, ಸ್ವದೇಶೀ ಬಟ್ಟೆಯನ್ನು ಕೊಂಡುಕೊಳ್ಳುವಂತೆ ಹೇಳಿದರು ಅವನಿಗೆ ಅದು ಇಷ್ಟವಿಲ್ಲದೆ ಪೋಲೀಸಿಗೆ ತಿಳಿಸಿದನು ಮ್ಯಾಜಿಸ್ಟ್ರೇಟರು ಆ ಮೂವರನ್ನೂ ಹಿಡಿದು ತರಿಸಿ ದರ್ಯಾಫ್ತಿಮಾಡಿ, ಮೊದಲನೆಯವನಿಗೆ ೨ ವಾರ ಕಠಿಣ ಸಜಾ ೨೫ ರೂಪಾಯಿ ಜುಲ್ಮಾನೆ, ಎರಡನೆಯವರಿಗೆ ೧೦, ೩೦ ರೂಪಾಯಿ ಜುಲ್ಮಾನೆ; ಈ ರೀತಿ ಶಿಕ್ಷೆ ವಿಧಿಸಿದ್ದಾರೆ.

●●●●

ಹಿಂದುಸ್ಥಾನದ ಕೆಲವು ದೊಡ್ಡ ಮನುಷ್ಯರನ್ನು ಇಂಡಿಯಾ ಗವರ್ನಮೆಂಟಿನವರು ಚುನಾಯಿಸಿ ವಿಲಾಯತಿಗೂ ಯುರೋಪ್ಪಿನ ಇತರ ರಾಜ್ಯಗಳಿಗೂ ಕಳುಹಿಸಿ, ಸಣ್ಣ ಸಣ್ಣ ಕಸಬುಗಳು ಅಂಥಾ ಕಡೆಗಳಲ್ಲಿ ಯಾವ್ಯಾವ ರೀತಿಯಾಗಿ ಅಭಿವೃದ್ಧಿಗೆ ಬಂದಿವೆ ಎಂಬುದನ್ನೂ ಅವುಗಳ ಪೂರ್ವೋತ್ತರವನ್ನೂ, ಹಿಂದುಸ್ಥಾನದಲ್ಲೂ ಅಂಥಾ ಸಣ್ಣ ಕಸಬುಗಳನ್ನು ಹ್ಯಾಗೆ ಅಭಿವೃದ್ಧಿಗೆ ತರಬಹುದು ಎಂಬುದನ್ನೂ ಕಣ್ಣಾರೆ ನೋಡಿ ತಿಳಿದುಕೊಂಡು ಬರುವಂತೆ ಏರ್ಪಾಡು ಮಾಡುತ್ತಿದ್ದಾರೆ. ಆ ದೊಡ್ಡ ಮನುಷ್ಯರಿಗೆ ಬೇಕಾಗುವ ದ್ರವ್ಯ ಮೊದಲಾದ ಸಹಾಯಸಂಪತ್ತುಗಳನ್ನೆಲ್ಲಾ ಇಂಡಿಯಾ ಗವರ್ನಮೆಂಟಿನವರೂ ವಿಲಾಯತಿ ಸರ್ಕಾರದವರೂ ಹಂಚಿ ಕೊಡುತ್ತಾರೆಂದು ತಿಳಿದುಬಂದಿದೆ

●●●●

ಬೊಂಬಾಯಿ ಪಟ್ಟಣದಲ್ಲಿ ಕಳೆದ ಪ್ರಥಮ ಏಕಾದಶಿಯ ದಿನ ಎಲ್ಲಾ ಸ್ಕೂಲುಗಳಿಗೂ ರಜಾ ಕೊಟ್ಟಿದ್ದರು ವಿಲ್‌ಸನ್ ಕಾಲೇಜ್ನಲ್ಲಿ ಮಾತ್ರ ಕೊಡಲಿಲ್ಲ ಆದ್ದರಿಂದ ಅಲ್ಲಿನ ಹುಡುಗರ ಪೈಕಿ ಕೆಲವರು ಪ್ರಿನ್ಸಿಪಲ್‌ರವರ ಬಳಿಗೆ ಹೋಗಿ ರಜಾ ಕೊಡಬೇಕೆಂದು ಕೇಳಿದರು ಅವರು ಕೊಡಲಿಲ್ಲ. ಆಗ ಸುಮಾರು ೨೫೦ ಮಂದಿ ವಿದ್ಯಾರ್ಥಿಗಳು ಸ್ಕೂಲಿಗೆ ಹೋಗದೆ ನಿಂತುಬಿಟ್ಟು, ಗುಂಪು ಕೂಡಿ 'ವಂದೇ ಮಾತರಂ' ಎಂಬ ಪದವನ್ನು ಹೇಳಿ ಕೂಗುತ್ತಾ ಬೀದಿ ಬೀದಿಗಳಲ್ಲಿ ಅಲೆದರು ಮರು ದಿನ ಅವರು ಸ್ಕೂಲಿಗೆ ಹೋದಾಗ ಪ್ರಿನ್ಸಿಪಲ್‌ರವರು ಅವರನ್ನೆಲ್ಲಾ ಕರೆದು—ನಾಳೆಯೊಳಗಾಗಿ ನೀವೆಲ್ಲಾ ಬರಹ ಮೂಲಕ ಕ್ಷಮಾಪಣೆಯನ್ನು ಕೇಳದಿದ್ದರೆ ನಿಮ್ಮ ಹೆಸರನ್ನು ತೆಗೆದುಬಿಡುತ್ತೇವೆಂದು ಹೇಳಿದರು ಆ ಹುಡುಗರೆಲ್ಲಾ ಅದೇ ಪ್ರಕಾರ ಕ್ಷಮಾ ಪತ್ರವನ್ನು ಬರೆದು ಒಪ್ಪಿಸಿರುತ್ತಾರೆ.

●●●●

ಕಲ್ಕತ್ತೆಯ ಬಾಬು ಸುರೇಂದ್ರನಾಥ ಬಾನರ್ಜಿಯವರ ಮೇಲೆ ಪೂರ್ವ ಬಂಗಾಳಾ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರವರು ತಂದಿದ್ದ ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡರು ಈ ವಿಷಯದಲ್ಲಿ ಟೆಲಿಗ್ರಾಫ್ ಎಂಬ ಪತ್ರಿಕೆ ಬರೆಯುವುದೇನೆಂದರೆ—ಈ ಮೊಕದ್ದಮೆಯನ್ನು ನಡಿಸುವುದಕ್ಕೆ ಲೆಫ್ಟಿನೆಂಟ್ ಗವರ್ನರವರು ರೈತನ ಹಣದಲ್ಲಿ ಏಳುಸಾವಿರ ರೂಪಾಯಿ ಖರ್ಚು ಮಾಡಿದರು ಇದು ವ್ಯರ್ಥವಾಯಿತು ಅವರ ಉದ್ದೇಶ ನೆರವೇರದೆ ಮೊಕದ್ದಮೆಯನ್ನು ಕಡೆಗೆ ವಾಪಸ್ ತೆಗೆದುಕೊಳ್ಳಬೇಕಾಯಿತು ಕ್ಷಾಮಪೀಡಿತರಾದ ಪ್ರಜೆಗಳನ್ನು ಸಂರಕ್ಷಣೆ ಮಾಡುವುದಕ್ಕೆ ಈ ಹಣವನ್ನು ವಿನಿಯೋಗಿಸಿದ್ದರೆ ಎಷ್ಟೋ ಉಪಕಾರವಾಗುತ್ತಿತ್ತು. ಅನೇಕ ಪ್ರಜೆಗಳು ಬದುಕಿಕೊಳ್ಳುತ್ತಿದ್ದರು ವೈಸ್‌ರಾಯಿ ಲಾರ್ಡ್ ಮಿಂಟೋರವರು ಈ ಹಣವನ್ನು ಲೆಫ್ಟಿನೆಂಟ್ ಗವರ್ನರವರ ಕೈಯಿಂದ ತೆರಿಸುವರೋ ಎಂಬುದೇ.

●●●●

ಪಾರ್ಸಿ ನಾಟಕದ ಕಂಪನಿಯವರು ಬೊಂಬಾಯಿನಲ್ಲಿ ಆಡುತ್ತಿರುವಾಗ್ಗೆ ಅವರಲ್ಲಿ ಒಬ್ಬ ಮುಖ್ಯ ನಾಟಕಧಾರಿಗೆ ಪ್ಲೇಗ್ ತಗಲಿತು ಭಗವಾನದಾಸ್ ಕಾಳಿದಾಸ್ ಎಂಬ ಕರ್ನಾಟಕ ಪಂಡಿತರಿಬ್ಬರು ಐದು ದಿನ ರೋಗಿಯ ಮನೆಗೆ ಹೋಗಿ ಔಷಧಗಳನ್ನು ಕೊಟ್ಟರು ಆದರೆ ರೋಗಿಗೆ ವಾಸಿಯಾಗಲಿಲ್ಲ ಅವನು ಸತ್ತು ಹೋದನು ಆ ಕಂಪನಿಯ ಮ್ಯಾನೆಜರಾದ ಮುಲ್ ಜಿ ಎಂಬಾತನನ್ನು ಈ ಪಂಡಿತರು ತಾವು ಔಷಧ ಕೊಟ್ಟದ್ದಕ್ಕೂ ರೋಗಿಯನ್ನು ಹೋಗಿ ನೋಡಿದ್ದಕ್ಕೂ ತಮಗೆ ೩೦೦ ಚಿಲ್ಲರೆ ರೂಪಾಯಿ ರುಸುಂ ಬರಬೇಕೆಂದು ಕೇಳಿದರು. ಆ ಮ್ಯಾನೆಜರು ಅಷ್ಟು ಹಣ ಕೊಡುವುದಿಲ್ಲವೆಂದು ತಿರಸ್ಕರಿಸಿದನು. ಆಗ ಪಂಡಿತರು ಅವನ ಮೇಲೆ ದಾವಾ ತಂದರು. ಜಡ್ಜಿಯವರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ದಾವಾವನ್ನು ಡಿಸ್ಮಿಸ್ ಮಾಡದಲ್ಲದೆ ಪಂಡಿತರು ಆ ಮ್ಯಾನೆಜರ ಕೋರ್ಟು ಖರ್ಚಿಗೆ ೫೦ ರೂಪಾಯಿ ಕೊಡತಕ್ಕದ್ದೆಂದು ತೀರ್ಮಾನ ಹೇಳಿದರು. ಕರ್ನಾಟಕ ಪಂಡಿತರಿಗೆ ಐದು ದಿನ ಚಿಕಿತ್ಸೆ ಮಾಡಿದ್ದಕ್ಕೆ ೩೦೦ ರೂಪಾಯಿ ಸಿಕ್ಕುವುದು ನ್ಯಾಯವೆಂದು ಯಾರು ತಾನೇ ಒಪ್ಪಬಹುದು!

●●●●

ಸಿಂಧು ದೇಶಕ್ಕೆ ಸೇರಿದ ಥಾರ್ ಪಾರ್ಕರ್ ಡಿಸ್ಟ್ರಿಕ್ಟಿನ ಜೇಂಸಾಬಾದಿನ ಜಮೀನ್ದಾರನಾದ ಫಸಲ್ ಮಹಮದ್ ಎಂಬಾತನು ಷ-ದಿಪಲ್ಲಿಯ ಧನವರ್ಮನೆಂಬೊಬ್ಬ ಸಾಹುಕಾರನ ಬಳಿ ಒಂದು ಸ್ಥಳ ಇಟ್ಟಿಗೆಯನ್ನು ಅಡವಿಟ್ಟು ೨೨ ಸಾವಿರ ರೂಪಾಯಿ ಸಾ

...ಕೆಂದು ಕೇಳಿದನು ಆ ಸಾಹುಕಾರನು ಆ ಇಟ್ಟಿಗೆಯನ್ನು ಪರೀಕ್ಷೆ ಮಾಡಿದಾಗ ಅದು ಬರೀ ಕಂಚಿನದಾಗಿತ್ತು. ಅದರ ಮೇಲೆ ಅವನು ಆ ಜಮೀನ್ದಾರನನ್ನೂ ಅವನು ತಂದ ಇಟ್ಟಿಗೆಯನ್ನೂ ಪೋಲೀಸಿಗೆ ಒಪ್ಪಿಸಿದನು. ಸೆಷನ್ಸ್ ಜಡ್ಜರು ಈ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಆ ಜಮೀನ್ದಾರನಿಗೆ ಕಳೆದ ಏಪ್ರಿಲ್ ತಿಂಗಳಲ್ಲಿ ೪ ವರುಷ ...ಣ ಸಜಾ, ೧೫,೦೦೦ ಜುಲ್ಮಾನೆ; ಜುಲ್ಮಾನೆ ಕೊಡದೆ ಹೋದರೆ ಇನ್ನೊಂದು ವರುಷ ಸಜಾ ಎಂಬೀ ಶಿಕ್ಷೆಯನ್ನು ವಿಧಿಸಿದರು ಆ ಜಮೀನ್ದಾರನು ಕಲಕತೆ ಹೈಕೋರ್ಟಿನ ಜುಡಿಷಿಯಲ್ ಕಮಿಷನರವರ ಕೋರ್ಟಿನಲ್ಲಿ ಅಪೀಲ್ ಮಾಡಿರುತ್ತಾನೆ ಈ ಮೊಕದ್ದಮೆಯು ನಿನ್ನೆ ಬುಧವಾರ ನಡೆಯಬೇಕಾಗಿತ್ತು. ಜಮೀನ್ದಾರನು ಮದರಾಸಿನ ...ದ ಪ್ರಸಿದ್ಧ ವಕೀಲರಾದ ಮಿ॥ ನಾರ್ಟನ್‌ರವರನ್ನು ತನ್ನ ಕಡೆ ವಾದಿಸುವುದಕ್ಕೆ ಕರೆಸಿಕೊಂಡಿರುತ್ತಾನೆ.

****

ಲಾಹೋರ್ ಪಟ್ಟಣದಲ್ಲಿರುವ ಇಸ್ಲಾಮಿಯಾ ಕಾಲೇಜಿನ ಅಧ್ಯಕ್ಷರಾದ ಡಾಕ್ಟರ್ ಅಬ್ದುಲ್ ಘನಿ ಯವರನ್ನು ಆಫ್ಘಾನಿಸ್ಥಾನದ ಅಮೀರರು ಕಾಬೂಲ್ ಪಟ್ಟಣಕ್ಕೆ ಬರಬೇಕೆಂದು ಹುಕುಂ ಕೊಟ್ಟಿದ್ದಾರೆ ನಸರುಲ್ಲಾ ಖಾನರವರು (ಅಮೀರರ ಸಹೋದರರು) ವಿಲಾಯಿತಿಗೆ ಹೋಗಿದ್ದಾಗ ಅಬ್ದುಲ್ ಘನಿಯವರು ವಿಲಾಯಿತಿಯಲ್ಲಿ ವೈದ್ಯಶಾಸ್ತ್ರವನ್ನು ಕಲಿಯುತ್ತಿದ್ದರು. ನಸರುಲ್ಲಾ ಖಾನರವರು ಅವರಿಗೆ ವೈದ್ಯದಲ್ಲಿ ತೇರ್ಗಡೆಯಾದ ಮೇಲೆ ಕಾಬೂಲ್ ಪಟ್ಟಣದಲ್ಲೇ ಕೆಲಸ ಕೊಡುತ್ತೇವೆಂದು ಹೇಳಿ, ಬರುವುದಾಗಿ ಅವರಿಂದ ಭಾಷೆ ತೆಗೆದುಕೊಂಡಿದ್ದರು ಡಾಕ್ಟರು ಅದೇ ಪ್ರಕಾರ ವಿಲಾಯಿತಿಯಿಂದ ಕಾಬೂಲಿಗೆ ಹೋಗಿ, ಅಮೀರ್ ಅಬ್ದುರ್ ರೆಹಮಾನರವರ ಕೈಕೆಳಗೆ ಅವರ ಪ್ರೈವೆಟ್ ಸೆಕ್ರೆಟರಿಯಾಗಿ ಆರು ವರುಷ ಕೆಲಸ ಮಾಡುತ್ತಿದ್ದು, ರಜಾ ಪಡೆದು ಹಿಂದುಸ್ಥಾನಕ್ಕೆ ಬಂದರು. ತರುವಾಯ ಲಾಹೋರಿನ ಇಸ್ಲಾಮಿಯಾ ಕಾಲೇಜು ಏರ್ಪಾಡಾಯಿತು ಡಾಕ್ಟರು ಅಮೀರರವರ ಅಪ್ಪಣೆ ಪಡೆದು ಆ ವಿದ್ಯಾಶಾಲೆಯ ಅಧ್ಯಕ್ಷರಾಗಿ, ಅದನ್ನು ತುಂಬಾ ಅಭಿವೃದ್ಧಿಗೆ ತಂದರು ಇವರು ಮಾಡಿದ ಪ್ರಯತ್ನದಿಂದಲೇ ಅಮೀರರು ಈ ವಿದ್ಯಾಶಾಲೆಗೆ ೩೦,೦೦೦ ರೂಪಾಯಿ ಚಂದಾ ಕೊಟ್ಟರು; ಇದಲ್ಲದೆ ಪ್ರತಿ ವರುಷವೂ ಅದಕ್ಕೆ ೨,೦೦೦ ರೂಪಾಯಿ ಸಹಾಯ ದ್ರವ್ಯ ಕಳುಹಿಸುತ್ತಿದ್ದಾರೆ

****

ಕಳವು ಕೊಲೆ ಮೊದಲಾದ ದೊಡ್ಡ ಅಕೃತ್ಯಗಳು ನಡೆದರೆ ಪೋಲೀಸಿನವರು ತನಿಖೆ ಮಾಡುವಾಗ್ಗೆ ಪ್ರಜೆಗಳು ಅವರಿಗೆ ಬೇಕಾದ ಸಹಾಯ ಮಾಡುವುದಿಲ್ಲ. ಅಕೃತ್ಯ ನಡೆದದ್ದು ತಿಳಿದಿದ್ದಾಗ್ಯೂ ಅಪರಾಧಿಗಳನ್ನು ಹಿಡಿದು ಶಿಕ್ಷೆ ಮಾಡಿಸುವುದಕ್ಕೆ ಹಿಂತೆಗೆಯುತ್ತಾರೆ. ಇದರಿಂದ ಅಪರಾಧಿಗಳು ಶಿಕ್ಷೆಯಾಗದೆ ತಪ್ಪಿಸಿಕೊಳ್ಳುವುದಕ್ಕೂ ಅವರೇ ಇನ್ನೂ ಪ್ರಜೆಗಳನ್ನು ಹಿಂಸಿಸುವುದಕ್ಕೂ ಅವಕಾಶವಾಗಿರುತ್ತದೆ. ಕಳ್ಳರನ್ನೂ ಕೊಲೆಗಾರರನ್ನೂ ಜನರು ಒಳಹಾಕಿಕೊಂಡು ಅಪಸಾಕ್ಷಿ ನುಡಿಯುವುದೂ ಅಪರೂಪವಲ್ಲ. ಇಂಥಾದ್ದರಲ್ಲಿ ಪೋಲೀಸಿನವರು ಅಪರಾಧಿಗಳನ್ನು ಪತ್ತೆಮಾಡಿ, ಅವರಿಗೆ ಶಿಕ್ಷೆ ಮಾಡಿಸಿ ಪ್ರಜೆಗಳ ಮಾನ ಪ್ರಾಣ ಧನಗಳನ್ನು ಕಾಪಾಡುವುದು ಹ್ಯಾಗೆ? ಪ್ರಜೆಗಳೂ ಪೋಲೀಸಿನವರಿಗೆ ಸಹಾಯ ಮಾಡಿದರೆ ದುಷ್ಟರನ್ನು ಬೇಗನೆ ಹಿಡಿಯಬಹುದು. ಈ ಭಾಗದಲ್ಲಿ ಇಂಡಿಯಾ ಗವರ್ನ್ಮೆಂಟಿನವರು ಪೋಲೀಸಿನವರಿಗೆ ವಿಶೇಷ ಸಹಾಯ ಮಾಡಿದಂಥಾ ಪ್ರಜೆಗಳಿಗೆ ಬಹುಮಾನ ಕೊಡಬೇಕೆಂದು ಈಗ ಹುಕುಂ ಮಾಡಿರುತ್ತಾರೆ ಈ ಹುಕುಂವಿನ ಅಭಿಪ್ರಾಯವೇನೆಂದರೆ—ಒಬ್ಬ ಗ್ರಾಮಾಧಿಕಾರಿಗಾಗಲಿ ನೌಕರನಿಗಾಗಲಿ ಅವನು ಅಪರಾಧಿಯನ್ನು ಹಿಡಿಯುವುದಕ್ಕೆ ಪೋಲೀಸಿನವರಿಗೆ ಸಹಾಯ ಮಾಡಿದ ಪಕ್ಷದಲ್ಲಿ ೬೦೦ ರೂಪಾಯಿನೊಳಗೆ ಕ್ರಯ ಬಾಳುವ ಜಮೀನನ್ನು ಅವನ ಜೀವಮಾನವಿರುವ ತನಕ ಅಥವಾ ೨೫ ವರುಷಗಳ ವರೆಗೆ ಇನಾಮತಿಯಾಗಿ ಕೊಡಬಹುದು ಅಥವಾ ಹಾಗೆ ಸಹಾಯ ಮಾಡುವವನ ಹೆಂಡತಿಗೋ ವಾರಸುದಾರನಿಗೋ ವರುಷಕ್ಕೆ ೧೫ ರೂಪಾಯಿನ ಆದಾಯದ ಜಮೀನನ್ನು ೨೫ ವರುಷಗಳ ಅನುಭವಕ್ಕೆ ಬಹುಮಾನ ಕೊಡಬಹುದು. ಇಂಥಾ ಏರ್ಪಾಡಿನಿಂದಲಾದರೂ ಪ್ರಜೆಗಳ ಮುಂಖಡರು ದುಷ್ಟರನ್ನು ತಮ್ಮ ಮಧ್ಯದಿಂದ ಹಿಡಿದು ಕೊಟ್ಟಾರೆಂತಲೂ ಪೋಲೀಸಿನವರಿಗೆ ಆವಶ್ಯವಾದ ಸಹಾಯವನ್ನು ಒದಗಿಸಿಕೊಡುತ್ತಾರೆಂತಲೂ ಗವರ್ನ್ಮೆಂಟಿನವರು ನಿರೀಕ್ಷಿಸುತ್ತಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಪ್ಪದೆ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್.

ಶಿಳ್ಳೆಯವರೂ, ಸ್ಕೂಲೂ.

ಅಯ್ಯಾ,

ಶಿಳ್ಳೆಯವರ ಮೂಢತ್ವವನ್ನು ಎಷ್ಟೆಂದು ಹೇಳೋಣ! ಚಿತ್ರದುರ್ಗದ ತಾಲ್ಲೂಕು ಹಿರೇಗುಂಟನೂರು ಹೋಬಳಿ ಬೊಮ್ಮನಹಳ್ಳಿ ಗ್ರಾಮದಲ್ಲಿ ಈಗ ೪—೫ ವರ್ಷಗಳಿಂದಲೂ ಕೂಲಿ ಸ್ಕೂಲನ್ನು ಇಡಿಸಿ ಸಾಲೀಯಜಾನ ೪೦—೫೦ ರೂಪಾಯಿಗೆ ಕಡಮೆ ಇಲ್ಲದೆ ಸಂಬಳ ಕೊಟ್ಟು ವಿವೇಕವಿಲ್ಲದೆ ವೃಥಾ ವ್ಯಥೆಪಟ್ಟರೂ ಇವರ ಅವಿವೇಕದಿಂದ ಆ ಸ್ಕೂಲು ಉನ್ನತ ಸ್ಥಿತಿಗೆ ಬಾರದೆ ನಿಕೃಷ್ಟಸ್ಥಿತಿಯಲ್ಲಿದೆ. ಸರ್ಕಾರ ಸ್ಕೂಲನ್ನೇರ್ಪಡಿಸಿರೆಂದು ಕೇಳಿದರೆ ಅದರಿಂದ ಏಳ್ಗೆಷ್ಟು ಪ್ರಯೋಜನವಿಲ್ಲವೆಂದು ಹೇಳುತ್ತಾ ಗ್ರಾಮದ ಮುಖ್ಯಸ್ಥರೊಬ್ಬರಾದರೂ ಅದಕ್ಕೆ ಗಮನ ಕೊಡುವುದೇ ಇಲ್ಲ. ಮುಖ್ಯ ಉಪಾಧ್ಯಾಯರು ಎಷ್ಟೇ ಚನ್ನಾಗಿ ಪಾಠ ಹೇಳುವಂಥವರಾದರೂ ಗ್ರಾಮಸ್ಥರು ಅವರಿಗೆ ಪ್ರೋತ್ಸಾಹ ಕೊಡದೆ ಅವರನ್ನು ಆಕ್ಷೇಪಿಸುವುದೇ ಸ್ಕೂಲ್ ಉನ್ನತ ಸ್ಥಿತಿಗೆ ಬಾರದಿರುವುದಕ್ಕೆ ಮುಖ್ಯ ಕಾರಣವೆಂದು ತೋರುತ್ತೆ ದೇವರು ಶೀಘ್ರದಲ್ಲಿ ಇವರ ಮೂಢತ್ವವನ್ನು ಹೋಗಲಾಡಿಸಲಿ ಎಂದು ಕೋರುವ

ವಿದ್ಯಾಭಿಮಾನಿ

ಮಲೆನಾಡು ಆಸ್ಪತ್ರೆಗಳ ವಿಚಾರ

ಅಯ್ಯಾ,

ಈ ಮಲೆನಾಡು ಪ್ರದೇಶದಲ್ಲಿ ಯಾವನಿಗಾದರೂ ಒಬ್ಬನಿಗೆ ಜೋರು ಕಾಯಿಲೆಯಾಗಿ ಆಸ್ಪತ್ರೆಗಳಿಗೆ ತೆಗೆದುಕೊಂಡು ಹೋದರೆ ಡಾಕ್ಟರುಗಳಿಗೆ ಲಂಚ (? ರುಸುಂ) ಕೊಡಬೇಕಾಗಿಯೂ ಹಾಗೆ ಕೊಡದಿದ್ದರೆ ಸದ್ರಿ ಕಾಯಿಲೆ ಮನುಷ್ಯನಿಗೆ ಒಳ್ಳೆ ಔಷಧಿ ವಗೈರೆ ಕೊಡದೆಯೂ ಅವನನ್ನು ಚನ್ನಾಗಿ ನೋಡದೆಯೂ ವೈಕುಂಠಯಾತ್ರೆಗೆ ಫಲಾಯನಗೈಯುವ ಅವಸ್ಥೆಗೆ ಒಳಗಾಗುತ್ತಾರೆ ಡಾಕ್ಟರುಗಳಿಗೆ ಲಂಚ ಕೊಡಬೇಕೆಂತ ಗವರ್ನ್ಮೆಂಟಿನವರು ಆರ್ಡರ್ ಕೊಟ್ಟಿರುವ ಸಂಗತಿ ನಮಗೆ ಗೊತ್ತಿಲ್ಲ. ಸದ್ರಿ ಕಾಯಿಲೆಯವನ ಬಂಧು ಬಾಂಧವರ ಗೋಳಾಟ ಬಂದು, ತನ್ಮಧ್ಯೆ ಆಸ್ಪತ್ರೆಗೆ ಕಾಯಿಲೆಯವನನ್ನು ತೆಗೆದುಕೊಂಡು ಹೋದರೆ ಡಾಕ್ಟರರ ಸಂತೋಷ ಒಂದು "ಇಲಿಗೆ ಪ್ರಾಣಸಂಕಟ, ಬೆಕ್ಕಿಗೆ ಚೆಲ್ಲಾಟ" ಎಂಬ ಗಾದೆಗೆ ಸರಿಯಾಯಿತು ಕಾಯಿಲೆಯವನ ಬಂಧು ಬಾಂಧವರ ದುಃಖವನ್ನು ನೋಡಲೋ! ಡಾಕ್ಟರ ಸಂತೋಷವನ್ನು ನೋಡಲೋ! ಕಳೆದ ತಾ ೯ನೇ ಶುಕ್ರವಾರ ಒಬ್ಬ ವಿಧವೆ ಹೆಣ್ಣು ಮಗಳಿಗೆ ಇಲಿ ಕಚ್ಚಿ ನಂಜು ವಿಪರೀತವಾಗಿ ಕಾಯಿಲೆ ಜಾಸ್ತಿಯಾದ್ದರಿಂದ ತಿಳಿದ ದೊಡ್ಡ ಮನುಷ್ಯರ ಹತ್ರ ಹೋಗಿ ಔಷಧಿ ಕೇಳಿದ್ದಕ್ಕೆ ಅವರು ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ಕಾಯಿಲೆ ಗುಣವಾಗಬಹುದಾಗಿ ಹೇಳಿದ್ದರಿಂದ ಸಮೀಪವಾದ ಆಸ್ಪತ್ರೆಗೆ ಗಾಡಿಯ ಮೇಲೆ ತೆಗೆದುಕೊಂಡು ಹೋದರು ಅಗ್ಗೆ ಡಾಕ್ಟರು ನೋಡಿ ಈ ಕಾಯಿಲೆಯನ್ನು ಹುಷಾರು ಮಾಡಿದರೆ ಏನು ಕೊಡುತ್ತೀರಾಗಿ ಕೇಳಿದ್ದಕ್ಕೆ, ಸ್ವಾಮಿ, ನಾವು ಗರೀಬರು, ಹಣ ಕೊಡ್ವ ಶಕ್ತಿ ಇದ್ದರೆ ಆಸ್ಪತ್ರೆಗೆ ಯಾಕೆ ಬರಬೇಕೆಂಬುದಾಗಿ ಸದ್ರಿಯವರು ಕೇಳಿದ್ದಕ್ಕೆ—ನೀವು ಗರೀಬರೋ ಎಂಬುದಾಗಿ ಕೇಳಿದ್ದರಿಂದ ಇವರು ಹೆದರಿ ಎಲ್ಲಿಯೋ ಒಬ್ಬ ಸಾಹುಕಾರರ ಹತ್ರ ಹೋಗಿ ೩೦ ರೂಪಾಯಿ ಸಾಲ ತಂದು ಕೊಡುವುದಕ್ಕೆ ಹೋದರೆ ಡಾಕ್ಟರು—ಇದು ಸ್ವಲ್ಪ ಹಣ, ನಾನು ಒಲ್ಲೆನೆಂಬುದಾಗಿ ಹೇಳಿದ್ದಕ್ಕೆ ಸದ್ರಿ ಜನಗಳು ಡಾಕ್ಟರ ಪಾದದ ಮೇಲೆ ಬಿದ್ದು ಗೋಳಾಡಿದ್ದಕ್ಕಾಗಿ ಸದ್ರಿ ಡಾಕ್ಟರು ಔಷಧಿ ಕೊಟ್ಟರು ಆ ಮೇಲೆ ಕಾಯಿಲೆ ಸ್ವಲ್ಪ ಗುಣವಾಯಿತೆಂತಲೂ ಸದ್ರಿ ಕಾಯಿಲೆಯವರ ಕಡೆ ಜನಗಳು ಸಾಹುಕಾರರ ಹತ್ರಕ್ಕೆ ಇನ್ನೊಂದ್ಸಾರ ಹೋಗಿ ಅವರಲ್ಲಿ ಹಣ ಕೇಳಿದ್ದಕ್ಕೆ ಅವರು ಕೊಡುವುದಿಲ್ಲವೆಂತ ಹೇಳಿದ್ದರಿಂದ ಈ ಬಡ ಜನಗಳು ಬಹಳ ಗೋಳಾಡಿ ಹಣ ತಂದರೆಂತಲೂ ವರ್ತಮಾನ ಕೇಳಿ, ಬಹಳವಾಗಿ ವಿಷಾದಿಸುತ್ತೇನೆ ಈ ವಿಷಯವನ್ನು ದಯಾಳುಗಳಾದ ಸಿವಿಲ್ ಸರ್ಜನರವರು ಗಮನ ಕೊಟ್ಟು ಇಂಥಾ ದುರ್ನಡತೆಗಳನ್ನು ನಿಲ್ಲಿಸುವರಾಗಿ ನಂಬಿದ್ದೇನೆ.

ನಿಷ್ಪಕ್ಷಪಾತಿ.

ಭಿಕ್ಷ ಮಾಡತಕ್ಕವರ ಸಾಹಸ.

ಅಯ್ಯಾ,

ಕುಣಿಗಲ್ ತಾಲ್ಲೂಕು ಕೊತ್ತಗೆರೆ ಸಮ್ಮತು ಹೆಬ್ಬಗೆರೆಗೆ ಒಂದು ಮೈಲಿ ಫಾಸಲೆಯಲ್ಲಿರುವ ಸೂಳೇಕುಪ್ಪೆ ಗ್ರಾಮದಲ್ಲಿ ಹಾಲಿ ವಾಸವಾಗಿರುವ ವೀರಶೈವ ಮಠದ ಸ್ವಾಮಿಗಳು ಗಂಗಾಧರ ಸ್ವಾಮಿಗಳೆಂತಲೂ ಜಡೇ ಸ್ವಾಮಿಗಳೆಂತಲೂ ಕರೆಯಲ್ಪಡುತ್ತಾರೆ. ಅವರು ಯಾವ ದೇಶದವರೋ ಗೊತ್ತಿಲ್ಲ ಇಲ್ಲಿ ಇರಲು ಸ್ಥಳವಿಲ್ಲದೆ ಮನೆಮನೆಯಲ್ಲಿ ಕಂತೆಭಿಕ್ಷವೆತ್ತಿ ಜೀವನ ಮಾಡುತ್ತಾರೆ. ಸದರಿ ಸೂಳೇಕುಪ್ಪೆ ಗ್ರಾಮದಲ್ಲಿ ಕುಡಿಯುವ ನೀರಿಗೆ ಬಹಳ ಶ್ರಮವಾಗಿ ಎರಡು ಫರ್ಲಾಂಗು ದೂರ ಹೋಗಬೇಕಾಗಿತ್ತು. ಜನರು ಅಲ್ಲಿಯೂ ನೀರು ಸಿಕ್ಕದೆ ಬಹಳ ಕಷ್ಟಪಡುತ್ತಿದ್ದರು ಈ ಶ್ರಮವನ್ನು ಡಿಟ್ಟೋ ಸ್ವಾಮಿಗಳವರು ಪರಾಂಬರಿಸಿ, ತಮ್ಮ ಸ್ವಂತ ಲಾಗೋದಿನಿಂದ ಯಾರ ಸಹಾಯವೂ ಪಡೆಯದೆ ಗ್ರಾಮದ ಮುಂದೆ ಇನ್ನೂರು ರೂಪಾಯಿ ಖರ್ಚುಮಾಡಿ, ಒಂದು ಕಲ್ಲು ಕಟ್ಟಡದ ಭಾವಿಯನ್ನೂ ಪರಸ್ಥಳದವರು ಬಂದು ವಾಸಮಾಡಲು ಅನುಕೂಲಿಸುವಂತೆ ಒಂದುನೂರ ಎಂಬತ್ತು ರೂಪಾಯಿ ಖರ್ಚಿನಿಂದ ಒಂದು ಮಠವನ್ನೂ ಕಟ್ಟಿಸಿ ಪೂರೈಸಿದರು. ಡಿಟ್ಟೋ ಮಠದಲ್ಲಿ ಸಂತರ್ಪಣೆ ನಡೆಯುವ ಉದ್ದಿಶ್ಯ ಸ್ವಾಮಿಗಳವರು ಸಂಚಾರ ಹೊರಟು ರಾಗಿ, ಅಕ್ಕಿ ವಗೈರೆ ದವಸ ಕೂಡಿಸಿ, ಕಳೆದ ಜೂನ್ ತಾ ೨೫ನೇ ಸೋಮವಾರ ತಾವು ಕಟ್ಟಿಸಿದ ಸೂಳೇಕುಪ್ಪೆ ಮಠದಲ್ಲಿ ಸಂತರ್ಪಣೆ ಮಾಡಿಸಿದರು ಸುಮಾರು ಐದಾರು ಖಂಡಗದ ವರೆಗೂ ಬತ್ತ್ಯ ಬೇಯಿಸಿ ಸಂತರ್ಪಣೆ ಮಾಡಿಸಿದರು ಎರಡು ಸಾವಿರದ ಆರುನೂರು ಜನಗಳ ವರೆಗೂ ಊಟ ಮಾಡಿದರು ಹೆಬ್ಬಗೆರೆ ನಂಜೇಗೌಡರು, ನಾಗನಹಳ್ಳಿ ಪಟೇಲ್ ಚಿಕ್ಕಣ್ಣೇಗೌಡರು, ಪಟೇಲ್ ಸಿದ್ದೇಗೌಡರು, ಇನ್ನೂ ಅನೇಕ ದೊಡ್ಡ ಮನುಷ್ಯರು ಹಾಜರಾಗಿದ್ದರು. ರಾಮಾಯಣದಲ್ಲಿ ಪ್ರಸಿದ್ಧವಾಗಿರುವ ಹಲ್ಸ್ಯೆಯ್ಯನವರನ್ನು ಕರಸಿ, ಹರಿಕಥೆ ಮಾಡಿಸಿ, ಭಾಗ್ಸುದಾರ ಕೂಡಿಸಿ ಸರ್ವರನ್ನೂ ಸಂತೋಷಪಡಿಸಿದರು ಸಭೆಯು ಉಪಸಂಹಾರ ಮಾಡಲ್ಪಟ್ಟಿತು. ಸ್ವಾಮಿಗಳವರ ಉದಾರ ಚಿತ್ತವನ್ನು ಕೊಂಡಾಡಿ ಎಲ್ಲರೂ ತಮ್ಮ ತಮ್ಮ ಗೃಹಕ್ಕೆ ತೆರಳಿದರು ಇವರು ಇಲ್ಲಿಗೆ ಬಂದು ಎರಡು ವರ್ಷವಾಯಿತು ತೊಂಭತ್ತು ವರುಷ ವಯಸ್ಸುಳ್ಳವರು ಇನ್ನೂ ದೃಢಕಾಯರಾಗಿರುತ್ತಾರೆ ಜಾತಿಭೇದವೆಂಬ ತಾರತಮ್ಯವಿಡದೆ ಇರುವವರು ಬರೋಡ, ಹೈದರಾಬಾದ್, ಪಂಜಾಬು ಮುಂತಾದ ಸಂಸ್ಥಾನಗಳಲ್ಲಿ ಸಂಚರಿಸಿರುತ್ತಾರೆ ಇನ್ಯಾರೂ ಶಿಷ್ಯ ಮಂಡಲಿ ವಗೈರೆ ಇಲ್ಲದೆ ನಿರಾಧಾರರಾಗಿ ಒಬ್ಬರೇ ಇರುತ್ತಾರೆ ಈ ಮಹನೀಯರ ಆಶ್ಚರ್ಯಕರ ಸಾಹಸಗಳಿಗೆ ಆ ಗ್ರಾಮದವರಲ್ಲದೆ ಸರ್ವರೂ ಸ್ತೋತ್ರ ಮಾಡುತ್ತಾರೆ. ಹೀಗಲ್ಲವೇ ಭಿಕ್ಷಕರ ಸಾಹಸ!

ಬಾತ್ಮಿದಾರ

ಕ್ಲೋಸ್‌ಪೇಟೆ ರೈಲ್ವೆ ಸ್ಟೇಷನಲ್ಲಿ ನಡೆದ ಚೋರಿ.

ಅಯ್ಯಾ,

ಕರೂರು ಪದ್ಮನಾಭಶೆಟ್ಟಿ ಎಂಬುವರು ನಾರಾಯಣ ಶೆಟ್ಟಿ ಎಂಬುವರ ಹೆಸರಿಗೆ ಒಂದು ಜವಳಿ ಮೂಟೆಯನ್ನು ರೈಲ್ವೆ ಮೂಲಕ ಈ ಸ್ಟೇಷನ್ನಿಗೆ ರವಾನಿಸಿದ್ದರು ಮೂಟೆ ತೆಗೆದುಕೊಳ್ಳುವ ಮಾಲೀಕರು ಈ ಸ್ಥಳದವರೂ ಅಲ್ಲ, ಅವರು ಪ್ಯಾಸನ್ನು ತಂದು ಇನ್ನೂ ತೆಗೆದುಕೊಂಡು ಹೋಗಿರಲಿಲ್ಲ ಮೂಟೆಯು ಸ್ಟೇಷನಲ್ಲೇ ಇತ್ತು. ಇಷ್ಟರಲ್ಲಿ ತಾ. ೬ನೇ ಶುಕ್ರವಾರ ಸಾಯಂಕಾಲ ಸುಮಾರು ೫ ಗಂಟೆಯಲ್ಲಿ ಮಂಡ್ಯದ ತಾಲ್ಲೂಕ್ ಕೊಪ್ಪದ ಬೋರನೆಂಬುವನು ಬಂದು ಸ್ಟೇಷನ್ ಮಾಸ್ಟರ ಕೊಠಡಿಯೊಳಕ್ಕೆ ಹೋಗಿ ಬಂದವನಂತೆ ನಟಿಸಿ ಅಲ್ಲಲ್ಲಿ ಸುತ್ತಾಡುತ್ತಾ, ಪೋರ್ಟರು ಮುಂತಾದವರೊಡನೆ "ನನಗೆ ಜವಳೀ ಮೂಟೆ ಬಂದಿದೆ ಪ್ಯಾಸು ಇನ್ನೂ ಬರಲಿಲ್ಲ" ಎಂದು ಮುಂತಾಗಿ ಪ್ರಸಂಗೋಚಿತ ಮಾತುಗಳನ್ನಾಡುತ್ತಾ, ವಾಪಸು ಹೊರಟು ಬಂದು ಸ್ವಲ್ಪ ಹೊತ್ತಾದ ಮೇಲೆ ನಾಸಕಾದ ಕತ್ತಲೆಯ ಹೊತ್ತಿನಲ್ಲಿ ಪುನಃ ಸ್ಟೇಷನಿಗೆ ಬಂದು ಸಮಯ ನೋಡಿ ಸ್ಟೇಷನ್ ಮಾಸ್ಟರು ಮರೆಯಾಗಿರುವ ಹೊತ್ತಿನಲ್ಲಿ ಸದರಿ ಜವಳೀ ಮೂಟೆಯನ್ನು ಯಾವ ಅಟಂಕವೂ ಇಲ್ಲದೆ ಮಾಲೀಕನು ತೆಗೆದುಕೊಂಡು ಹೋಗುವಂತೆಯೇ ಸಲೀಸಾಗಿ ತೆಗೆದುಕೊಂಡು ಹೊರಟುಹೋದನು ಪೋರ್ಟರು ಮುಂತಾದವರು ಸಾಯಂಕಾಲದಲ್ಲಿ ಇವನನ್ನು ನೋಡಿದ್ದುದರಿಂದ ಪ್ಯಾಸನ್ನು ಮಾಸ್ಟರಿಗೆ ಕೊಟ್ಟು ಮೂಟೆ ತೆಗೆದುಕೊಂಡು ಹೋಗುವನೆಂದು ಊಹಿಸಿ ಉದಾಸೀನ ಮಾಡಿದರು. ತಕ್ಷಣವೇ ಸ್ಟೇಷನ್ ಮಾಸ್ಟರು ಬಂದು ನೋಡಲು ಮೂಟೆ ಇರಲಿಲ್ಲ. ನೌಕರರನ್ನು ವಿಚಾರಿಸಲು ಅವರು ನಡೆದ ವಿದ್ಯಮಾನವನ್ನು ತಿಳಿಸಿದರು ಭಯಭ್ರಾಂತರಾದ ಸ್ಟೇಷನ್ ಮಾಸ್ಟರು ನೌಕರರನ್ನು ಕಳುಹಿಸಿ ಕೂಡಲೇ ಅಲ್ಲಲ್ಲೇ ಹುಡುಕಿಸಿದರು. ಚೋರನು ಪರಾರಿಯಾಗಿದ್ದನು ಆ ಕೂಡಲೆ ಜಮಾದಾರ್ರಿಗೆ ವರ್ತಮಾನ ಕೊಡಲು ತಕ್ಷಣವೇ ಅವರು ಪತ್ತೆ ಮಾಡಲು ಪೋಲೀಸಿನವರನ್ನು ಏರ್ಪಡಿಸಿ ತಾವೂ ಹುಡುಕಿದರು. ಆದರೂ ಪತ್ತೆಯಾಗಲಿಲ್ಲ ಆದರೆ ಅದೇ ರಾತ್ರಿ ರಾಮಾನುಜಯ್ಯಂಗಾರ್ರೆಂಬುವರ ಮನೆಯಲ್ಲಿ ಹರಿಕಥೆ ಸಭೆ ಸೇರಿದ್ದಿತು ಅದು ರಾತ್ರಿ ೩ ಗಂಟೆ ವರಿಗೂ ನಡೆಯುತ್ತಿದ್ದುದರಿಂದ ಅನೇಕರು ಅಲ್ಲಿ ಸೇರಿದ್ದರು ಅಷ್ಟರಲ್ಲಿ ಬೋರನೆಂಬುವನು ಜನಸಂಚಾರ ಕಡಮೆಯಾದ ಮೇಲೆ ಮತ್ತೊಂದೂರಿಗೆ ಹೋಗಬೇಕೆಂಬ ಉದ್ದೇಶದಿಂದಲೋ ಮತ್ತ್ಯಾವ ಕಾರಣದಿಂದಲೋ ಸೇತುವೆಯ ಉತ್ತರ ಭಾಗದ ನದಿ ಪಕ್ಕದ ಬೇಲಿಯಲ್ಲಿ ಅಡಗಿಕೊಂಡಿದ್ದನು ನದಿಯಲ್ಲಿ ಇಳಿಬಿದ್ದು ಹೋಗಬೇಕೆಂಬ ಉದ್ದೇಶವಿದ್ದಿರಬಹುದು. ಆದರೆ ಆ ರಾತ್ರಿ ಸುಮಾರು ೧೨ ಗಂಟೆ ವೇಳೆಗೆ ಅಕಸ್ಮಾತ್ತಾಗಿ ಪೂರ್ಣ ಪ್ರವಾಹ ಬಂದಿದ್ದುದರಿಂದ ಅವನು ಪುನಃ ಊರೊಳಗೆ ಸ್ವಲ್ಪ ದೂರ ಬರಲೇಬೇಕಾಯಿತು ಹರಿಕಥೆಯ ಮನೆಗೂ ನದಿಗೂ ಬಹಳ ಹತ್ತಿರ. ಇವನು ಹೊಂಚು ಕಾದು ಸ್ವಲ್ಪ ದೂರ ಬರುವುದರೊಳಗೆ ಕಥೆ ಕೇಳುತ್ತಿದ್ದ ಕೆಲವರು ನದಿಯನ್ನು ನೋಡಲು ಬಂದೇಬಿಟ್ಟರು. ತಕ್ಷಣವೇ ಅವನು ಸಿಕ್ಕಿಬಿಟ್ಟನು. ಕೂಡಲೇ ಜಮಾದಾರ್ರು ಅವನನ್ನು ಮಾಲು ಸಹಿತ ಹಿಡಿದು ಪೋಲೀಸಿನಲ್ಲಿಟ್ಟರು. ಮುಂದಿನ ಕ್ರಮ ಜರಗಬೇಕಾಗಿದೆ ಇದರಿಂದ ನಿರಪರಾಧಿಗಳಾದ ರೈಲ್ವೆ ನೌಕರರಿಗೆ ಆಗುತ್ತಿದ್ದ ಶಿಕ್ಷೆ ತಪ್ಪಿದಂತಾಯಿತು ಮಾಲೀಕನಿಗೆ ನಷ್ಟ ತಪ್ಪಿತು. ಸ್ಟೇಷನ್ ಮಾಸ್ಟರ ಕಳವಳ ಕಳೆದುಹೋಯಿತು ಪೋಲೀಸಿನವರ ಸಾಹಸ ಸಾರ್ಥಕವಾಯಿತು. ಈ ಸಂಗತಿಯನ್ನು ವಾಚಕರು ನೆನಪಿನಲ್ಲಿಟ್ಟುಕೊಂಡು ಎಚ್ಚರದಿಂದಿರುವಂತೆ ಬುದ್ಧಿವಾದ ದೊರಕಿತು.

ವಾಚಕ.

ತಾಲ್ಲೂಕು ವರ್ತಮಾನಗಳು.

ತಿಪ್ಟೂರು.—ಸೋಂಕಿನಮ್ಮನನ್ನು ಕಳುಹಿಸಿದರು. ಊರಲ್ಲಿ ಚಳಿಜ್ವರ ವಿಶೇಷವಾಗಿರುವದರಿಂದ ಇದರ ಪರಿಹಾರಾರ್ಥವಾಗಿ ಒಂದು ಕೋಣವನ್ನು ಮೆರವಣಿಗೆ ಮಾಡಿಸಿ ವಿಗ್ರಹದ ಮುಂದೆ ಕತ್ತರಿಸಿ, ಮಾದಿಗರು ತಿಂದು ಕುಡಿದು ಕುಣಿದಾಡಿದರು ಎಷ್ಟು ಕುಣಿದಾಡಿದರೇನು? ರೋಗಿಗಳು ವೈದ್ಯರನ್ನು ಕರೆಯುವದು ತಪ್ಪೀತೇ?—ಅಮಲ್ದಾರರಿಗೆ ವರ್ಗವಾಯಿತು. ಅನೇಕ ಆಫೀಸರರು ಸೇರಿ ಅಮಲ್ದಾರರೊಂದಿಗೆ ಫೋಟೋ ತೆಗೆಸಿಕೊಂಡರೆಂದು ತಿಳಿಯಿತು ಇವರು ನಿಗರ್ವಿಗಳೂ, ನಿಷ್ಪಕ್ಷಪಾತಿಗಳೂ, ಕಟ್ಟಿ ಅಮಲ್ ಚನ್ನಾಗಿ ಬಲ್ಲವರೂ, ದುಷ್ಟನಿಗ್ರಹರೂ ಆಗಿದ್ದರೆಂದು ಜನರು ಮಾತಾಡಿಕೊಳ್ಳುತ್ತಾರೆ. ವೃದ್ಧರಾದರೂ ಸಿಂಹ ಘರ್ಜನೆಯುಳ್ಳವರಾಗಿದ್ದರಂತೆ. ಹೊಸದಾಗಿ ಬರತಕ್ಕ ಅಮಲ್ದಾರರಾದರೂ ಪ್ರೀತಿ, ನೀತಿಯುಳ್ಳವರಾಗಿಯೇ ಇದ್ದಾರು.—ಮಳೆ ಇನ್ನೂ ಬರಲೇ ಇಲ್ಲ. ಬಿಸಿಲ ಧಗೆ ಅಪಾರವಾಗಿದೆ. ಧಾರಣೆಗಳು ಏರುತ್ತಿವೆ. ಕಾಯಿನ ವ್ಯಾಪಾರ ಚನ್ನಾಗಿ ನಡೆಯುತ್ತದೆ ಒಡೆಯರಿಗೆ ಒಪ್ಪು, ಬಡವರಿಗೆ ಬೆಪ್ಪು ಎಂಬಂತಾಗಿದೆ.—ಈಗಿರುವ ಎ. ವಿ. ಸ್ಕೂಲ್ ಕಟ್ಟಡವು ಅನುಚಿತವೆಂದು ನೋಡಿದವರಿಗೆ ಗೊತ್ತಾದೀತು. ಬೇರೇ ಸ್ಥಳವೇನೋ ಮಂಜೂರಾಗಿದೆಯಂತೆ ಕಟ್ಟಡ ಮಾತ್ರ ಇನ್ನೂ ಇಲ್ಲ. ಮಹನೀಯರಾದ ಸಾಹುಕಾರರು ಕೊಂಚ ದ್ರವ್ಯ ಸಹಾಯ ಮಾಡಿ ಕೀರ್ತಿ ಪಡೆಯಬಾರದೇ?

ಚಿಕ್ಕಮಗಳೂರು.—ಈಗ್ಗೆ ೧೫ ದಿನಗಳಿಂದ ಮಳೆ ಇಲ್ಲ. ನೆನ್ನೆ ಸ್ವಲ್ಪ ಸೋನೆಮಳೆ ಬಂದಿತು. ಆದರೆ ಪೈರಿಗೆ ಹದವಾಗಲಿಲ್ಲ. ಪೈರು ಚನ್ನಾಗಿದ್ದರೂ ಮಳೆ ಇಲ್ಲದೆ ಬಾಡುತ್ತಿದೆ. ದಿನಸಿ ಧಾರಣೆಯಾದರೋ ದಿನ ದಿನಕ್ಕೂ ಹೆಚ್ಚುತ್ತಿದೆ. ಅಕ್ಕಿ ರೂಪಾಯಿಗೆ ೬ ಸೇರಿನಂತೆಯೂ ರಾಗಿ ೧೧—೧೨ ಸೇರಿನಂತೆಯೂ ಮಾರುವದು. ಬಡ

ಜನರ ಕಷ್ಟವಂತೂ ಹೆಚ್ಚಾಯಿತು. ನಿಂತುಹೋಗಿದ್ದ ಪ್ಲೇಗ್ ರೋಗವು ಇಂಥಾ ಕಾಲದಲ್ಲಿ ಮತ್ತೆ ತಲೆಹಾಕಿದೆ. ಒಂದು ವಾರದಲ್ಲಿ ಎರಡು ಮರಣಗಳಾದವು. ಇಲಿಗಳು ಅಲ್ಲಲ್ಲಿ ಬೀಳುತ್ತಲಿವೆ.—ಇಲ್ಲಿಂದ ಮೈಸೂರಿಗೂ ಕೋಲಾರಕ್ಕೂ ವರ್ಗವಾದ ಮೆ॥ ರಂಗಾ ಐಯರ್, ಮೆ॥ ಕುಪ್ಪುಸ್ವಾಮಿ ಮೊದಲಿಯಾರ್ ಇವರನ್ನು ಇಲ್ಲಿನ ದೊಡ್ಡ ಮನುಷ್ಯರು ತಮ್ಮ ತಮ್ಮ ಮನೆಗಳಿಗೆ ಕರೆಸಿಕೊಂಡು, ಔತಣ ಮಾಡಿಸಿದ್ದಲ್ಲದೆ, ಇಲ್ಲಿನ ಮಹಮ್ಮದಿಯರೆಲ್ಲಾ ಸೇರಿ ವರ್ಗವಾದ ದೊಡ್ಡ ಮನುಷ್ಯರನ್ನು ತಮ್ಮ ಮಸೀತಿ ಬಳಿಗೆ ಕರೆಸಿಕೊಂಡು, ಅವರಿಗೆ ಸನ್ಮಾನ ಮಾಡಿ ಭಗವಂತನು ಅವರಿಗೆ ಇನ್ನೂ ಹೆಚ್ಚಿನ ಉದ್ಯೋಗಕ್ಕೆ ಬಡ್ತಿ ಮಾಡುವಂತೆ ಪ್ರಾರ್ಥಿಸಿದ್ದಲ್ಲದೆ ಹಿಂದೆ ಡಾಕ್ಟರ್ ನಂಜಪ್ಪನವರಿಗೆ ಮಾಡಿದಂತೆ ಇಲ್ಲಿನ ಪೇಟೆ ಬೀದಿಯಲ್ಲಿ ಮೆರವಣಿಗೆ ಮಾಡಿಸಿಕೊಂಡು ಬಂದು, ಅವರವರ ಬಿಡಾರಕ್ಕೆ ಬಿಟ್ಟರೆಂದು ಕೇಳಿದೆನು.—ರಿಟೈರ್ ಆದ ತಾಲ್ಲೂಕ್ ಶಿರಸ್ತೆದಾರ್ ಮೆ॥ ಹಿರಣ್ಯಪ್ಪನವರ ಬದಲಿಗೆ ಟ್ರೆಜರಿ ಮೆ॥ ಗರುಡಾಚಾರ್ರು ನೇಮಕವಾದರೂ ಅವರಿಗೆ ಹಿಂದೆ ಎಂಟು ವರುಷದಿಂದ ಸಲ್ಲುತ್ತಿದ್ದ ಸಂಬಳವೇ ಕೊಟ್ಟು ಇಜಾಫೆಯಾಗದೆ ಇರುವದಕ್ಕೆ ಕಾರಣವೇನೋ ತಿಳಿಯದು.—ಮಾತೋಡಿ ಕಡೆಯಿಂದ ಒಂದು ಜೊತೆ ವಾಲೆ ಎರಡು ಕಿವಿಗೆ ಹಾಕುವ ಮುರುವು ಅಂತು ಸುಮಾರು ೨೦ ರೂ. ಬಾಳುವ ಒಡವೆಯನ್ನು ಕದ್ದು ತಂದು ಇಲ್ಲಿ ಮಾರುತ್ತಿದ್ದ ಚಿಕ್ಕನೆಂಜಿವನನ್ನು ೧೪ ನೆ ನಂ ಕಾನ್ಸ್ಟೇಬಲ್ ಹಿಡಿದು ತನಿಖೆಮಾಡಿದ್ದರಲ್ಲಿ ಕಳುವು ರುಜುವಾತಾಗಿ ಅಪರಾಧಿಗೆ ಟ್ರೆಜರಿ ಅ॥ ಕಮಿಷನರ ಕೋರ್ಟಿನಲ್ಲಿ ೬ ತಿಂಗಳ ಸಜಾವೂ ೫ ರೂ. ಜುಲ್ಮಾನೆಯೂ ಆಯಿತೆಂದು ಕೇಳುತ್ತೇನೆ.

ತುಂಕೂರು.—ಹಳ್ಳಿಗಳ ಕಡೆ ಮಂತಿಗಳಿಗೆ ರಾಗಿ ಹರುವ ರೈತರು ಘರ್ಮವೃಷ್ಟಿ ಇಲ್ಲದೆ ರಾಗಿ ಹಸನಾಗಿಯೂ ದಪ್ಪನಾಗಿ ಹೆಚ್ಚು ಸಫಿ ಸಿಕ್ಕಲೆಂದು ಬಹಳಮಟ್ಟಿಗೆ ನೀರು ನೇರಿಸಿ ತಂದು ಬಿಕರಿಮಾಡುತ್ತಾರೆ. ಮ್ಯುನಿಸಿಪಾಲಿಟಿಯವರು ಈ ವಿಷಯದಲ್ಲಿ ನಿಗಾಕೊಟ್ಟು ಆ ರೀತಿ ಅಕೃತ್ಯ ಮಾಡುವವರನ್ನು ಎಚ್ಚರಿಸುವದು. ಈ ಕ್ಷಾಮಕಾಲದಲ್ಲಿ ಬಡ ಜನರಿಗೆ ತುಂಬಾ ಸಹಾಯವಾಗುವದು.—ಕಳೆದ ವಾರ ಇಲ್ಲಿಗೆ ಬಂದ ಮದರಾಸು ಪ್ರಾಂತ್ಯದ ಮೆ॥ ಥರ್ಸ್ಟನ್ ಎಂಬ ಸಾಹೇಬರು ಟ್ರಾವೆಲರ್ಸ್ ಬಂಗಲೆಯಲ್ಲಿ ಒಂದು ವಾರ ಇದ್ದು ಟರ್ನಿನಿಂದ ಕೆಲವು ವರ್ಣಾಶ್ರಮದವರನ್ನು ತಮ್ಮಲ್ಲಿಗೆ ಕರೆಸಿಕೊಂಡು, ಅವರ ಮತಪ್ರಭೇದಗಳನ್ನೂ ವಿವಾಹಾದಿಕಾರ್ಯಗಳಲ್ಲಿ ನಡಿಸುವ ವಿಧಿಗಳನ್ನೂ ಆಯಾ ಜನರ ಶಕ್ತಿ, ಆಕಾರ, ಪ್ರಮಾಣ, ಸಂತಾನಾಭಿವೃದ್ಧಿ ಮುಂತಾದ್ದೆಲ್ಲವನ್ನೂ ಕೇಳಿ ಬರೆದುಕೊಂಡದ್ದಲ್ಲದೆ, ಹೊಲೆಯರು ಮಾದಿಗರು ಮುಂತಾದ ಜಾತಿಯವರು ದೇವತೆಗಳಿಗೆ ಬಲಿ ಮುಂತಾದ್ದನ್ನು ಕೊಟ್ಟು ಆರಾಧಿಸುವ ಕ್ರಮವನ್ನು ಸಾಕ್ಷಾತ್ ನೋಡಬೇಕೆಂದು ಆ ಜನರಿಗೆ ಅದಕ್ಕೆ ಬೇಕಾದ ಖರ್ಚು ಕೊಟ್ಟು ತಮ್ಮ ಸ್ಥಳದಲ್ಲೇ ದೇವತಾಪೂಜೆ ಮಾಡಿಸಿ ಕೋಣವನ್ನು ಬಲಿಕೊಡಿಸಿದರು. ಆಗ ಅಗಾದಿಗಳೆಂಬವರು ಹೇಳುವ ಪದಗಳನ್ನು ತಮ್ಮ ಫೋನೋಗ್ರಾಫ್ ಮುಖಾಂತರ ತೆಗೆದುಕೊಂಡದ್ದಲ್ಲದೆ ಪೂಜೆಮಾಡಿದ್ದ ದೇವತೆ ಸಹಿತವಾಗಿ ಎಲ್ಲವನ್ನೂ ಫೋಟೋ ತೆಗೆದುಕೊಂಡರು. ಇದರಲ್ಲಿ ಇವರ ಉದ್ದೇಶವೇನೆಂದು ಕೇಳಿದಾಗ ಅವರು ಒಂದು ಚರಿತ್ರೆಯನ್ನು ತಯಾರು ಮಾಡುತ್ತಾರೆಂತಲೂ ಅದಕ್ಕಾಗಿ ಇವೆಲ್ಲವೂ ಅವಶ್ಯವೆಂದೂ ತಿಳಿಯಬಂತು. ತಾ ೬ನೇ ಶುಕ್ರವಾರ ದಿವಾನ್ ಕಮಿಷನರಾದ ಮೆ॥ ಎ. ರಂಗಸ್ವಾಮಿಯ್ಯಂಗಾರ್ರು ಇಲ್ಲಿಗೆ ದಯಮಾಡಿ, ಡಿಸ್ಟ್ರಿಕ್ಟ್ ಆಫೀಸು ಮುಂತಾದ್ದನ್ನು ಇನ್ಸ್‌ಪೆಕ್ಷನ್ ಮಾಡಿ ಮರುದಿನ ಮುಂದಕ್ಕೆ ತೆರಳಿದರು.

ಫ್ರೆಂಚ್ ರಾಕ್ಸ್.—ಈ ಪ್ರಾಂತ್ಯ ಮಳೆಯೇ ಇಲ್ಲ. ಹಗಲೆಲ್ಲಾ ಮೋಡಗಳು ಕಟ್ಟುವದೂ ಸಾಯಂಕಾಲವಾಗುತ್ತಾ ಏನೂ ಇಲ್ಲದೆ ಮಾಯವಾಗುವದೂ ಉಂಟು. ನೀರಿನ ಕಷ್ಟವನ್ನು ಹೇಳಲಶಕ್ಯವಾಗಿದೆ. ಗೋಕಟ್ಟೆಗಳ ಗೋಳು ನೋಡಲಿಕ್ಕೆ ಅಸಾಧ್ಯ. ಮ್ಯುನಿಸಿಪಲ್ ಫಂಡಿನಿಂದ ಈ ಊರಿನ ಕೆರೆಯಲ್ಲಿ ಸರಕಾರದವರು ೩ ಭಾವಿಗಳನ್ನು ತೋಡಿಸಿದಾರೆ. ಆದರೆ ಜನರು ನೀರಿಗೆ ಇಷ್ಟು ಕಷ್ಟಪಡುತ್ತಾ ಇರುವಾಗ ಭಾವಿಗಳಿಗೆ ಇನ್ನೂ ತಿರುಗಣಿ ಹಾಕಿಸದೆ ಜನಗಳ ಉಪಯೋಗಕ್ಕೆ ಬಿಡದೆ ಇರುವದು ಆಶ್ಚರ್ಯವಾಗಿದೆ. ಕೆರೆಗೆ ನೀರು ಬಂದ ಮೇಲೆ ಅನುಕೂಲಪಡಿಸಬಹುದೋ ಏನೋ? ಈ ವಿಷಯಕ್ಕೆ ಅಮಲ್ದಾರರು ಗಮನಕೊಟ್ಟರೆ ಜನರಿಗೆ ಬಹಳ ಪ್ರಯೋಜನವಾದೀತು.—ಊರಿನ ಜಾಕೇಜಾ ವಿಷಯ ಸರಿಯಾಗಿಲ್ಲ. ಜಾಡಮಾಲಿಗಳು ೫ ಮಂದಿ ಮಾತ್ರ ಇದಾರೆ. ಇವರಿಂದ ಊರೆಲ್ಲಾ ಚೊಕ್ಕಟಮಾಡಿಸುವದು ಅಸಾಧ್ಯ. ಆದಕಾರಣ ಜಾಡಮಾಲಿಗಳನ್ನು ಹೆಚ್ಚಿಸಿದರೆ ಊರು ಶುಚಿಯಾಗಿ ಬರತಕ್ಕ ಸಾಂಕ್ರಾಮಿಕ ರೋಗಗಳಿಗೆ ತಡೆಯಾಗುತ್ತೆ.—ಸುತ್ತುಮುತ್ತು ಹಳ್ಳಿಗಳಲ್ಲಿ ಕಾಲರಾ ಎಂಬ ವಿಷವ್ಯಾಧಿ ತಲೆಹಾಕಿ ಅನೇಕ ಜನವನ್ನು ಆಹುತಿ ಮಾಡುವದು ಎಲ್ಲರಿಗೂ ಗೊತ್ತೇ ಇದೆ. ನೀರನ್ನು ಕಾಯಿಸಿ ಕುಡಿದರೆ ಬಹಳ ಪ್ರಯೋಜನ. ನಮ್ಮ ಅಮಲ್ದಾರರು ಊರು ಗಸ್ತು ಮಾಡಿದರೆ ಊರಿಗೆ ಕ್ಷೇಮ ಉಂಟು.—ಇಲ್ಲಿ ಕೆಲವು ಕಾಲವಿದ್ದು ಜನರಿಗೆ ಬಹಳ ಪ್ರಯೋಜನ ಮಾಡಿದ ಅ॥ ಕಮಿಷನರ್ ಮೆ॥ ಕೆ. ಶ್ರೀನಿವಾಸರಾಯರು ಕೋಲಾರಕ್ಕೆ ವರ್ಗವಾದರು. ಇದಕ್ಕಾಗಿ ಅನೇಕ ಜನರು ಬಹಳ ವ್ಯಸನಪಡುತ್ತಾರೆ. ಇವರ ಸ್ಥಾನಕ್ಕೆ ಅ॥ ಕಮಿಷನರ್ ಮೆ॥ ಟಿ. ವೆಂಕೋಬರಾಯರು ದಯಮಾಡಿಸಿದಾರೆ.—ಪೋಲೀಸ್ ಅ॥ ಸೂಪರ್‌ಇಂಟೆಂಡೆಂಟರಾದ ಮೆ॥ ಬಸವರಾಜೇ ಅರಸಿನವರು ತಮ್ಮ ಮನೆಯನ್ನು ರಿಪೇರಿ ಮಾಡಿಸಬೇಕೆಂದು ತಾ. ೧ ರಲ್ಲಿ ಒಬ್ಬ ಕಂಟ್ರಾಕ್ಟರನ್ನು ಕರಸಿ, ಇಂಥಿಂಥಾ ಸ್ಥಳಗಳಲ್ಲಿ ಕೆಲಸಮಾಡಬೇಕೆಂದು ನೇಮಕಮಾಡಿ ಸರ್ಕೀಟು ಹೋದರು. ಆಳುಗಳು ಕೆಲಸ ಮಾಡುತ್ತಿರುವಲ್ಲಿ ೪ ನೇ ತಾ. ಬುಧವಾರ ಬೆಳಿಗ್ಗೆ ಒಂದು ಕೊಟಡಿಯಲ್ಲಿ ಅಕಸ್ಮಾತ್ತಾಗಿ ಮೇಲ್ಛಾವಣಿ ಅನಾಮತ್ತು ಆಳುಗಳ ಮೇಲೆ ಬಿದ್ದುಬಿಟ್ಟಿತು. ಆದರ ಶಬ್ದವನ್ನು ಸಮೀಪದಲ್ಲಿದ್ದ ಪೋಸ್ಟ್ ಮಾಸ್ಟರು ಕೇಳಿ ತಮ್ಮ ಆಳುಗಳನ್ನು ಬೇಗನೆ ಕಳಿಸಿದರು. ಅವರು ನೋಡುವಾಗ ಇಬ್ಬರು ಕೆಲಸದವರು ಕೆಳಗೆ ಬಿದ್ದಿದ್ದರು. ದೇವರ ದಯದಿಂದ ಅವರಿಗೆ ಪ್ರಾಣಾಪಾಯವೇನೂ ಆಗಲಿಲ್ಲ. ಆದರೆ ಒಬ್ಬನಿಗೆ ಒಂದು ಕಾಲು ಸಂಪೂರ್ಣವಾಗಿ ಜಜ್ಜಿಹೋಯಿತು. ಇನ್ನೊಬ್ಬನಿಗೆ ಘಾಯಗಳಾಗಿವೆ. ಇಲ್ಲಿನ ಆಸ್ಪತ್ರೆ ಡಾಕ್ಟರ ಹತ್ತಿರಕ್ಕೆ ತೆಗೆದುಕೊಂಡು ಬಂದರು. ಇವರು ಘಾಯಗಳನ್ನು ನೋಡಿದ ಮೇಲೆ ಮೈಸೂರು ಆಸ್ಪತ್ರೆಗೆ ಅವರನ್ನು ತೆಗೆದುಕೊಂಡುಹೋದರು. ಆ ವ್ಯಕ್ತಿ ಒಬ್ಬನಿಗೆ ಬಹಳ ಕಷ್ಟವಾಗಿದೆ ಎಂದೂ ಅವನು ಬದುಕುವಹಾಗೆ ಕಾಣುವದಿಲ್ಲವೆಂದೂ ತಿಳಿದುಬಂದಿದೆ.

ದೊಡ್ಡಬಳ್ಳಾಪುರ.—ತಾ ೬ನೇ ಶುಕ್ರವಾರ ಸುಮಾರಾಗಿ ಒಂದು ಹದ ಮಳೆ ಬಂತು. ಈಗ ಹೊಲಗಳನ್ನು ಬಿತ್ತುವದಕ್ಕೆ ಶುರು ಮಾಡಿದ್ದಾರೆ. ಇಲ್ಲಿ ಮುನ್ಸಿಫರಾಗಿದ್ದ ಮೆ॥ ಶ್ರೀಕಂಠೇಶ ಗೌಡರು ನಂಜನಗೂಡಿಗೆ ವರ್ಗವಾದ್ದರಿಂದ ಕೋರ್ಟಿನವರೂ ಕಚೇರಿಯವರೂ ಸೇರಿ ಅವರಿಗೆ ಔತಣಮಾಡಿ ಸಂತೋಷಪಡಿಸಿ, ರೈಲಿಗೆ ಕಳುಹಿಸಿದರು. ಈಗ ಸರ್ಕಾರದವರು ಎರಡು ಹೋಬಳಿಗಳನ್ನು ರಜಾ ಮಾಡಿ, ಉಲ್ಕುಂಟೇ ಹೋಬಳಿ ಹೊಸಳ್ಳಿ ಹೋಬಳಿಗಳನ್ನು ಸೇರಿಸಿ ಸಾಸಲು ಹೋಬಳಿ ಮಾಡಿ, ರಾಜಗಟ್ಟದ ಹೋಬಳಿಯನ್ನು ತೂಬಗೆರೆ ಹೋಬಳಿಗೆ ಸೇರಿಸಿದಾರೆ. ರಾಜಗಟ್ಟದ ಹೋಬಳಿ ಶೇಕ್ದಾರ್ ಮೆ॥ ಸೂರಪ್ಪನವರನ್ನು ದೇವನಹಳ್ಳಿ ತಾ॥ ಕುಂದಾಣಕ್ಕೂ ಮೆ॥ ಶ್ರೀನಿವಾಸೈಯ್ಯಂಗಾರ್ರನ್ನು ಬೆಂಗಳೂರಿಗೆ ತಾ॥ ಮೆ(ಸ್ತ್ರಿ) ಕೆಲಸಕ್ಕೂ ವರ್ಗಮಾಡಿದಾರೆ. ಇವರ ಹತ್ರ ಇದ್ದ ಬಡ ನೌಕರರಿಗೆ ಈ ಕಷ್ಟಕಾಲದಲ್ಲಿ ಸರ್ಕಾರದವರು ಬೇರೆ ಕೆಲಸ ಕೊಡಿಸಿ ಕಾಪಾಡಬೇಕೆಂದು ಹಾರೈಸುತ್ತೇವೆ.—ಮೈಸೂರು ಎಗ್ಸಿಬಿಷನಿಗೆ ಇಲ್ಲಿನ ಮುಕ್ತಿ ಮನೆಯವರು ಕಳುಹಿಸಿದ ಕೊಳಗೆ ಸಾಮಾನಿಗೆ ಒಂದು ಮೆಡಲೂ ಶೃಂಗಾರಿ ಸ್ಟೂಲಿಗೆ ೨೦ ರೂ. ಬಹುಮಾನವೂ ಬಂತು.—ರಾಜಗಟ್ಟದ ಹೋಬಳಿ ಬೀದಿ ಕೇರೆ ಎಂಬ ಊರಿನಲ್ಲಿ ಹೋದ ವಾರ ಜೇನು ಹುಳ ಕಡಿದ ನಂಜಪ್ಪನೆಂಬುವವನು ಸತ್ತುಹೋದನು. ಊರಿನ ಸಮೀಪ ಒಂದು ಮರದಲ್ಲಿ ಜೇನು ಹುಳಗಳು ಇದ್ದವು. ಒಂದು ಕುರಿಯು ಏನೋ ರೋಗದಿಂದ ಸತ್ತುಹೋದ ಕಾರಣ ಜನರು ಅದನ್ನು ತಿನ್ನುವದಕ್ಕೆ ಸಂದೇಹಪಟ್ಟು ಚರ್ಮವನ್ನು ಸುಲಿದುಕೊಂಡು ಮಾಂಸವನ್ನು ಆ ಮರದ ಕೆಳಗೆ ಹಾಕಿದರು. ಈ ಮಾಂಸವನ್ನು ತಿನ್ನುವದಕ್ಕೆ ರಣಹದ್ದುಗಳು ರಭಸದಿಂದ ಬರುವಾಗ ಈ ಜೇನು ಹುಳಗಳಿಗೆ ತಗಲಿದ್ದರಿಂದ ಅವು ಎದ್ದು ೩ ಜನರನ್ನು ಕಡಿದವು. ದೇವರ ದಯದಿಂದ ಇಬ್ಬರು ಬದುಕಿಕೊಂಡರು. ನಂಜಪ್ಪನನ್ನು ನೂರು ಹುಳಗಳು ಮೇಲೆ ಕಡಿದವಂತೆ. ಅವುಗಳ ಮುಳ್ಳುಗಳನ್ನು ಪ್ರಯಾಸದಿಂದ ತೆಗೆದರು. ಆದರೂ ಬದುಕದೆ ಅದೇ ಸಾಯಂಕಾಲ ಸತ್ತುಹೋದನು.—ತಾ ೪ನೇ ಬುಧವಾರ ಇಲ್ಲಿನ ರೈಲ್ ಸ್ಟೇಷನ್ ಹತ್ರ ಒಂದು ಹಸು ರೈಲಿಗೆ ಸಿಕ್ಕಿ ಸತ್ತುಹೋಯಿತು. ತಾ ೭ನೇ ಶನಿವಾರ ಯಲಹಂಕದ ರೈಲ್ ಸ್ಟೇಷನ್ ಹತ್ರ ಒಬ್ಬನು ನೇಣುಹಾಕಿಕೊಂಡು ಸತ್ತನು. ಕಾರಣ ಮುಂದೆ ಗೊತ್ತಾಗುತ್ತೆ. ಒಂದು ಹುಲ್ಲು ಬಣವೆಗೆ ಬೆಂಕಿಬಿದ್ದು ಪೂರ್ಣವಾಗಿ ಸುಟ್ಟು, ಇನ್ನು ನಷ್ಟವಾಗುತ್ತಿದ್ದದ್ದನ್ನು ದೇವಪ್ಪನವರು, ಮುದ್ದನಂಜಪ್ಪನವರು ಆರಿಸಿದ್ದರಿಂದ ಸರ್ಕಾರದವರು ೨ ರೂ. ಬಹುಮಾನ ಮಾಡಿದರು.—ದೊಡ್ಡಬಳ್ಳಾಪುರದ ದೇವಾಂಗದವರಲ್ಲಿ ಎರಡು ಪಾರ್ಟಿಯಾಗಿ ನಡೆಯುತ್ತಿದ್ದ ದೇವಸ್ಥಾನದ ವ್ಯಾಜ್ಯವು ಮುನ್ಸಿಫ್ ಮೆ॥ ಶ್ರೀಕಂಠೇಶ ಗೌಡರ ಕಾಲದಲ್ಲಿ ೩೦೦ ಮನೆಯವರ ಕಡೆ ಫೈಸಲಾಯಿತು. ೩೩ ಮನೆಯವರು ಅಪೀಲ್ ಮಾಡುತ್ತಾರೆಂದು ವದಂತಿ ಇದೆ. ಈಗ ಇವರು ರಾಜಿ ಯಾದರು ಕ್ಷೇಮ.

ಔತನಗಳು.

ಮೆ॥ ಮುಹಮ್ಮದ್ ಜಾಫರ್ ಯವರು.

ಕಳೆದ ಬುಧವಾರ ಸಾಯಂಕಾಲ ಮೈಸೂರು ಪಟ್ಟಣದ ಮತ್ತು ಡಿಸ್ಟ್ರಿಕ್ಟಿನ ಪೋಲೀಸ್ ಇಲಾಖೆ ಯವರು ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಮೆ॥ ಮುಹಮ್ಮದ್ ಜಾಫರ್ ಯವರಿಗೆ ಔತಣವನ್ನು ಮಾಡಿದರು. ಮೆ॥ ಮುಹಮ್ಮದ್ ಜಾಫರ್ ಯವರು ಮೈಸೂರು ಗವರ್ನಮೆಂಟಿನಲ್ಲಿ ೩೦ ವರುಷ ಸರ್ವಿಸ್ ಮಾಡಿ ಈಗತಾನೇ ಕೆಲಸದಿಂದ ನಿವೃತ್ತರಾದರು. ಇವರು ಯಾವ ವಿಧವಾದ ಪಕ್ಷಪಾತತೆಯನ್ನೂ ತಾರತಮ್ಯವನ್ನೂ ಇಡದೆ ಸರ್ವತ್ರ ಸಮದೃಷ್ಟಿಯಿಂದ ನೋಡುತ್ತಿದ್ದದರಿಂದ ಎಲ್ಲಾ ಪಂಗಡದವರೂ ಅವರಲ್ಲಿ ಭಕ್ತಿ ಪ್ರೀತಿಗಳನ್ನುಳ್ಳವರಾಗಿದ್ದರು. ಇವರ ಅಧಿಕಾರದ ಕಡೆಯಲ್ಲಿ ಸಕಲರೂ ಏಕೀಭವಿಸಿ ಇವರಿಗೆ ಔತಣಮಾಡಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದ್ದು ಹೆಚ್ಚಲ್ಲ. ಆ ದಿನ ಮಧ್ಯಾಹ್ನದ ಮೇಲೆ ದೊಡ್ಡ ಮನುಷ್ಯರೊಡನೆ ಟೌನ್ ಹಾಲ್ ಬಂಗಲೆಯಲ್ಲಿ ಮೆ॥ ಮುಹಮ್ಮದ್ ಜಾಫರ್ ಯವರು ಕುಳಿತುಕೊಂಡಾಗ ಪೋಲೀಸ್ ಸಿಬ್ಬಂದಿಯವರಿಂದ ಕೆಲವು ಆಟಗಳನ್ನು ಆಡಿಸಿದರು. ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು. ಇವು ಪೋಲೀಸಿನವರ ಸಾಹಸ ಸಾಮರ್ಥ್ಯಗಳನ್ನು ಪ್ರಕಾಶಪಡಿಸಿದ್ದಲ್ಲದೆ ನೋಡುಕರಿಗೆ ಬಹು ಸಂತೋಷಕರವಾಗಿದ್ದವು. ದೊಡ್ಡ ಮನುಷ್ಯರೆಲ್ಲಾ ಅಲ್ಲಿಂದ ಮೇಲಂತಸ್ತಿಗೆ ಹೋಗಿ ಅವರಿಗಾಗಿ ಏರ್ಪಡಿಸಿದ್ದ ಬೇರೆ ಬೇರೆ ಸ್ಥಾನಗಳಲ್ಲಿ ಕುಳಿತು ಫಲಾಹಾರಾದಿಗಳನ್ನು ಸ್ವೀಕರಿಸಿ ಬಂದು ಸಭೆಯನ್ನಲಂಕರಿಸಿದರು. ಟೌನ್ ಹಾಲಿನಲ್ಲಿ ಆ ದಿನ ದೊಡ್ಡ ಮನುಷ್ಯರೂ ಪ್ರಜೆಗಳೂ ಕಿಕ್ಕಿರಿಯುವಂತೆ ಸೇರಿದ್ದರು. ಗ್ರಾಮೊಫೋನ್ ಎಂಬ ಯಂತ್ರದಲ್ಲಿ ಕೆಲವು ಮನೋಹರವಾದ ಹಾಡು ಪದ್ಯ ನೋಟ್ ಮೊದಲಾದುವನ್ನು ಕೇಳಿಸಿದರು. ವೈಣಿಕಶಿಖಾಮಣಿ ಮೆ॥ ಶೇಷಣ್ಣನವರ ವೀಣಾಗಾನವು ಸಭಿಕರನ್ನು ಅತ್ಯಂತವಾಗಿ ಸಂತೋಷಪಡಿಸಿತು. ಇದಾದ ಮೇಲೆ ರತ್ನಾವಳಿ ನಾಟಕದ ಕಂಪನಿ ಯವರು ಒಂದು ಅಂಕ ನಾಟಕವನ್ನು ಆಡಿ, ತಮ್ಮ ವಾಕ್ಚಾತುರ್ಯ, ಗಾನ, ಸೀನರಿ, ಮೊದಲಾದವುಗಳಿಂದ ಸಭಿಕರ ಕಣ್ಮನಗಳನ್ನು ಸೆಳೆದು ತುಂಬಾ ಸಂತೋಷಪಡಿಸಿದರು. ಅನಂತರ ಪೋಲೀಸ್ ಇಲಾಖೆಯವರು ಮೆ॥ ಮುಹಮ್ಮದ್ ಜಾಫರ್ ಯವರ ಗುಣಕಥನಮಾಡಿ, ಅವರಲ್ಲಿ ತಮಗಿರುವ ಭಕ್ತಿ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿ, ತಮ್ಮ ಜ್ಞಾಪಕಾರ್ಥವಾಗಿ ಅವರಿಗೆ ಒಂದು ಶ್ರೇಷ್ಠವಾದ ಗಡಿಯಾರವನ್ನು ಸರಪಣಿ ಸಹಿತವಾಗಿ ಒಪ್ಪಿಸಿದರು. ಮುಹಮ್ಮದೀಯರ ಪರವಾಗಿ ಮೆ॥ ದರ್ವೇಷ್ ಪೀರ್ ಯವರೂ ಖಾಜಿ ಮೈನುದ್ದೀನ್ ಸಾಹೇಬರೂ ಬಿಜ್ಞಾಪನಾ ಪತ್ರಿಕೆಯನ್ನು ಓದಿದರು. ಪ್ರಜೆಗಳ ಪಕ್ಷವನ್ನು ಮೆ॥ ಎಂ ವೆಂಕಟಕೃಷ್ಣಯ್ಯನವರುಗಳ ಪರವಾಗಿ ಮೆ॥ ಮುಹಮ್ಮದ್ ಜಾಫರ್ ಯವರ ನಿರ್ದುಷ್ಟವಾದ ತಪ್ಪು ನಿಷ್ಪಕ್ಷಪಾತವಾದ ಚರ್ಯವನ್ನು ಕುರಿತು ಮಾತನಾಡಿ, ಮೂಲಕ ಹಿಂದೂ ಮಹಮದೀಯರಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ಐಕಮತ್ಯವೂ ಉಂಟಾಗಿವೆ ಎಂದು ಸುಂದರವಾಗಿ ತಿಳಿಸಿದರು. ಅನಂತರ ಮೆ॥ ಮುಹಮ್ಮದ್ ಜಾಫರ್ ಯವರು ಕಾರಾ ಅಂದಾಯಗಳನ್ನು ಅರಿಸಿ, ಮುಂದೆ ಬಂದ ಸಭಿಕರು ತಮಗೆ ಮಾಡಿದ ಔತಣಕ್ಕಾಗಿ ತುಂಬಾ ಕೃತಜ್ಞರಾಗಿರುತ್ತೇವೆಂದು ಮೊದಲಾಗಿ ಹೇಳಿ, ಎಲ್ಲರ ವಂದಿಸಿ ಸಭೆಯನ್ನು ಮುಕ್ತಾಯಮಾಡಿದರು.

ಮೆ॥ ಕೆ. ನಾರಾಯಣಸ್ವಾಮಿಯ್ಯಂಗಾರರು.

ಮೈಸೂರು ನಾರ್ಮಲ್ ಸ್ಕೂಲಿನ ಹೆಡ್ ಮಾಸ್ಟರ್ ಮೆ॥ ನಾರಾಯಣಸ್ವಾಮಿಯ್ಯಂಗಾರ್, ಬಿ. ಎ. ಯವರಿಗೆ ಚನ್ನಪಟ್ಟಣದ ಸ್ಕೂಲ್ ಹೆಡ್ ಮಾಸ್ಟರ್ ಕೆಲಸಕ್ಕೆ ವರ್ಗವಾಯಿತು. ಆದ್ದರಿಂದ ಸ್ಕೂಲಿನ ಸಹಾಯೋಪಾಧ್ಯಾಯರೂ ವಿದ್ಯಾರ್ಥಿಗಳೂ ಸೇರಿ ಮೆ॥ ಭಾನುವಾರ ಸಾಯಂಕಾಲ ನಾರ್ಮಲ್ ಸ್ಕೂಲ್ ಕಟ್ಟಡದಲ್ಲಿ ನಾರಾಯಣಸ್ವಾಮಿಯ್ಯಂಗಾರ್ರಿಗೆ ಔತಣ ಮಾಡಿದರು. ಇದಕ್ಕಾಗಿ ಬಹು ದೊಡ್ಡ ಮನುಷ್ಯರು ಕರೆಯಲ್ಪಟ್ಟು ಹಾಜರಾಗಿದ್ದರು. ವೈಣಿಕಮಣಿ ಮೆ॥ ಶೇಷಣ್ಣನವರು ಜಲತರಂಗ್ ವಾದ್ಯವನ್ನು ನುಡಿಸಿ ಸಭಿಕರನ್ನು ಬಹುಮಾನಂದ ಪಡಿಸಿದರು. ಮೆ॥ ಹಿರಣ್ಣನವರು ಒಂದು ಅಡ್ರೆಸ್ಸನ್ನು ಓದಿ, ಮೆ॥ ನಾರಾಯಣಸ್ವಾಮಿಯ್ಯಂಗಾರ್ ಕಾಲದಲ್ಲಿ ನಾರ್ಮಲ್ ಸ್ಕೂಲು ಸ್ಥಾಪನೆಯಾದ ವಿಚಾರ, ಅವರ ಸಹಕಾರ್ಯಗಳಿಂದ ಅದು ಅಭಿವೃದ್ಧಿಗೆ ಬಂದ ವಿಚಾರ, ಅವರ ಸತ್ಚಾರಿತ್ರೆ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿ, ಇಂಥಾ ಸದ್ಗೃಹಸ್ಥರ ಸಹವಾಸವು ತಪ್ಪಿ ಹೋಗುವ ಭಯದಿಂದ ಎಲ್ಲರಿಗೂ ತುಂಬಾ ವ್ಯಸನ ಉಂಟಾಗಿದೆ ಎಂದು ತಿಳಿಸಿದರು. ಮೆ॥ ನಾರಾಯಣಸ್ವಾಮಿಯ್ಯಂಗಾರ್ರಿಗೂ ಸಭಿಕರಿಗೂ ಹಾರ ಗಂಧ ಅಲೆ ವಿನಿಯೋಗವಾಯಿತು. ಹಿಂದೂಸ್ಥಾನಿ ಉಪಾಧ್ಯಾಯರೂ ಇಲ್ಲಿ ವಿದ್ಯಾರ್ಥಿಗಳೂ ಸ್ವಲ್ಪ ಹೊತ್ತು ಅದೇ ವಿಷಯವಾಗಿ ಮಾತನಾಡಿದರು. ತರುವಾಯ ಮೆ॥ ನಾರಾಯಣಸ್ವಾಮಿಯ್ಯಂಗಾರ್ರು ಎದ್ದು ಸಹ ಉಪಾಧ್ಯಾಯರನ್ನೂ ವಿದ್ಯಾರ್ಥಿಗಳನ್ನೂ ಸಭಿಕರನ್ನೂ ವಂದಿಸಿ ತಮ್ಮ ೨೦ ವರುಷಗಳ ಸರ್ವೀಸಿನಲ್ಲಿ ೧೩ ವರುಷಗಳು ಈ ನಾರ್ಮಲ್ ಸ್ಕೂಲಿನಲ್ಲಿ ಕಳೆದವೆಂತಲೂ, ಸಹಾಯೋಪಾಧ್ಯಾಯರ ಸುವ್ಯವಸ್ಥೆ ಪ್ರತಿಷ್ಠಾಪೂರ್ವಕವಾದ ಅವರ ಸಹಾಯವೂ ತನಗೆ ದೊರಕಿದ್ದರಿಂದಲೇ ಸ್ಕೂಲು ಇಷ್ಟು ಅಭಿವೃದ್ಧಿಗೆ ಬರಲು ಕಾರಣವಾಯಿತೆಂತಲೂ, ತಮ್ಮ ತರುವಾಯ ತಮ್ಮ ಸ್ಥಾನಕ್ಕೆ ಬರುವ ಮೆ॥ ಹಿರಿಯಣ್ಣನವರ ಕಾಲದಲ್ಲಿ ಈ ಪಾಠಶಾಲೆಯು ಇನ್ನೂ ಅತಿಶಯವಾಗಿ ಅಭಿವೃದ್ಧಿಯಾಗುವುದಕ್ಕೆ ಸಂಶಯವಿಲ್ಲವೆಂತಲೂ ಹೇಳಿ ಸಭೆಯನ್ನು ಮುಕ್ತಾಯ ಮಾಡಿದರು.

ದಿವಾನ್ ರವರೂ ಕ್ರೈಸ್ತಸಂಘವೂ

ಕಳೆದ ಶುಕ್ರವಾರ ಸಾಯಂಕಾಲ ಮೈಸೂರು ಸಂಸ್ಥಾನದ ಕ್ರೈಸ್ತ ಪ್ರಜೆಗಳು ಬೆಂಗಳೂರು ಸಿಟಿ ಲಂಡನ್ ಮಿಷನ್ ಸ್ಕೂಲ್ ಕಟ್ಟಡದ ಸಭೆ ಸೇರಿ, ದಿವಾನ್ ಮೆ॥ ವಿ. ಪಿ. ಮಾಧವರಾಯರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಕೌನ್ಸಿಲ್ ಮೆಂಬರುಗಳು, ಸೆಕ್ರೆಟರಿಗಳು, ಚೀಫ್ ಕೋರ್ಟ್ ಜಡ್ಜಿ ಮೊದಲಾದ ದೇಶೀಯ ಅಧಿಕಾರಿಗಳೂ, ಊರ ದೊಡ್ಡ ಮನುಷ್ಯರೂ ಯೂರೋಪಿಯನ್ ಸರದಾರರೂ ದೊರೆಸಾನಿಗಳೂ ಕ್ರೈಸ್ತಮಂಡಲಿಯವರೂ ಹಾಜರಾಗಿದ್ದರು. ಮದರಾಸಿನ ಬಿಷಪ್‌ರವರೂ ದಯಮಾಡಿದ್ದರು. ಮೆ॥ ಮಾಧವರಾಯರು ಎದುರುಗೊಂಡು ಕರೆದುಕೊಂಡು ಹೋಗಿ ಶ್ರೇಷ್ಠವಾದ ಆಸನ ಕೊಡಿಸಿದ ಮೇಲೆ ರೆವ್. ಪಿ. ಎ. ರೈಸ್ ಯವರು ಎದ್ದು ಭಗವತ್ಪ್ರಾರ್ಥನೆ ಮಾಡಿದರು. ತರುವಾಯ ಹೆಣ್ಣುಮಕ್ಕಳು ಕೀರ್ತನೆಯನ್ನು ಹಾಡಿದರು. ರೆವ್. ಇ. ಪಿ. ರೈಸ್ ಯವರು ಎದ್ದುನಿಂತು ಸಭಿಕರನ್ನು ಕುರಿತು—ಕಳೆದ ನೂರು ವರುಷಗಳಲ್ಲಿ ಕ್ರೈಸ್ತಮತಾಭಿವೃದ್ಧಿಯ ಕ್ಷೇತ್ರ ಚರಿತ್ರೆಯನ್ನು ಸರಸವಾಗಿಯೂ ಸ್ವಾರಸ್ಯವಾಗಿಯೂ ವಿವರಿಸಿ ಮೊದಲ್ಮೊದಲು ಹಿಂದುಗಳಿಗೆ ಕ್ರೈಸ್ತ ಮತದ ಮೇಲಿದ್ದ ದ್ವೇಷಾದಿಗಳು ಕಾಲಕ್ರಮದಲ್ಲಿ ಹ್ಯಾಗೆ ಅದೃಶ್ಯವಾಗಿ, ಈಗ ಪರಸ್ಪರ ಮೈತ್ರಿ ಪ್ರೀತಿ ವಾತ್ಸಲ್ಯಗಳು ವೃದ್ಧಿಹೊಂದುತ್ತಿರುವವೋ, ಮಿಷನರಿಗಳ ವಿದ್ಯಾಭಿವೃದ್ಧಿಗೆ ಎಲ್ಲೆಲ್ಲಿ ಹ್ಯಾಗೆ ಕಾರಣಭೂತರಾದರು ಪ್ರಕೃತ ಮೈಸೂರು ಸಂಸ್ಥಾನದಲ್ಲಿ ಕ್ರೈಸ್ತಮಂಡಲಿಯು ಬಹಳ ಚಿಕ್ಕದಾಗಿದ್ದರೂ ಕಾಲಾನುಕಾಲದಲ್ಲಿ ಆ ಬೀಜವು ವೃಕ್ಷವಾಗಿ ಹಬ್ಬಿ ಫಲ ಬಿಡುತ್ತೆನ್ನುವುದಕ್ಕೆ ಸಂಶಯವಿಲ್ಲವೆಂತಲೂ ತಿಳಿಸಿದರು. ಆ ಮೇಲೆ ಮೆ॥ ಜ್ಞಾನಸಕ್ಕರವರು ಕ್ರೈಸ್ತಮಂಡಲಿಯ ಪರವಾದ ವಿಜ್ಞಾಪನ ಪತ್ರಿಕೆಯನ್ನು ಓದಿ, ಶ್ರೇಷ್ಠವಾದ ಚಿತ್ರ ಕೆಲಸ ಮಾಡಿದ ಗಂಧದ ಪೆಟ್ಟಿಗೆಯಲ್ಲಿಟ್ಟು ಮೆ॥ ಮಾಧವರಾಯರಿಗೆ ಒಪ್ಪಿಸಿದರು. ಈ ಅಡ್ರೆಸ್ಸಿನ ಮುಖ್ಯಾಭಿಪ್ರಾಯವೇನೆಂದರೆ—

ತಮಗೆ ಮೈಸೂರು ಸಂಸ್ಥಾನದ ದಿವಾನ್‌ಗಿರಿ ನೇಮಕವಾದದ್ದನ್ನು ನೋಡಿ ಕ್ರೈಸ್ತಮಂಡಲಿಯು ನಾವೆಲ್ಲಾ ಮನಃಪೂರ್ವಕವಾಗಿ ಸಂತೋಷಪಟ್ಟು, ನಮ್ಮ ಆನಂದವನ್ನು ಈ ಮೂಲಕ ಪ್ರಕಾಶಪಡಿಸುತ್ತೇವೆ. ಅನಂತಶಯನದಲ್ಲಿ ತಾವು ದಿವಾನ್‌ಗಿರಿಮಾಡಿ ಅಲ್ಲಿನ ಕ್ರೈಸ್ತಮಂಡಲಿಯವರಿಗೆ ವಿಶೇಷ ಪ್ರೋತ್ಸಾಹಕೊಟ್ಟಿರುತ್ತೀರಿ. ಈ ಸಂಸ್ಥಾನದಲ್ಲಿ ನೀವು ಪಡೆದ ಅನುಭವವೂ ಅನಂತಶಯನದ ದಿವಾನ್‌ಗಿರಿ ಮಾಡಿದ್ದರಿಂದುಂಟಾದ ಅನುಭವವೂ ಈಗ ನಿಮ್ಮನ್ನು ಯುಕ್ತೋಪಯುಕ್ತವಂತರನ್ನಾಗಿ ಮಾಡಲು ವಿಶೇಷ ಸಹಾಯಮಾಗಿವೆ. ನಿಮ್ಮಲ್ಲಿರುವ ಪ್ರಜಾಪ್ರೀತಿಯೂ ರಾಜಕಾರ್ಯಾಸಕ್ತಿಯೂ ಅಸಮಾನಗಳಾಗಿರೋಣದರಿಂದ ನಿಮ್ಮ ದಿವಾನ್‌ಗಿರಿಯಲ್ಲಿ ಈ ಸಂಸ್ಥಾನದ ಸಕಲ ಪ್ರಜೆಗಳೂ ವಿದ್ಯಾಸಾಮರ್ಥ್ಯಸಂಪನ್ನರಾಗಿ ಬೇಗನೇ ಅಭಿವೃದ್ಧಿ ಹೊಂದುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ಸಂದರ್ಭದಲ್ಲಿ ನಮ್ಮ ಕ್ರೈಸ್ತ ಪ್ರಜೆಗಳಿಗೆ

ಕೊಂತೆಗಳನ್ನು ನಿವಾರಣೆಮಾಡಬೇಕೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಒಂದು ಮಸೂದೆ ಕಾನೂನನ್ನು ಮಾಡಿ ಪ್ರಕಟಿಸಿ, ಶ್ರೀ ಅಪಾರವಾದ ಉದಾರಮನಸ್ಸನ್ನೂ ನಿಷ್ಪಕ್ಷಪಾತತೆಯನ್ನೂ ತೋರ್ಗೊಳಿಸಿದ್ದಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ ಇದ ಶೀಘ್ರದಲ್ಲೇ ಕಾನೂನುಮಾಗಿ ಜಾರೀಲಿ ತರಬೇಕೆಂದು ಪ್ರಾರ್ಥಿಸುವೆವು. ತಮ್ಮ ಆಳ್ವಿಕೆಯು ದೀರ್ಘವಾಗಿಯೂ ಶ್ರೇಯಸ್ಕರವಾಗಿ ಇರಲೆಂದೂ ತಮಗೆ ಆಯುರಾರೋಗ್ಯಾದಿಗಳು ಅವಿಚ್ಛಿನ್ನವಾಗಿ ವೃದ್ಧಿಯಾಗಲೆಂದೂ ಕೋರುತ್ತೇವೆ

ತರುವಾಯ ಮೆ॥ ಪಾರ್ಥಸಾರಥಿರವರು ಸಭಾಸದರ ಜಯಘೋಷದ ಮಧ್ಯೆ ಎದ್ದು ಕ್ರೈಸ್ತಮಂಡಲಿಯವರನ್ನೂ ಸಭಿಕರನ್ನೂ ಕುರಿತು ಈ ಕೆಳಗಿನ ಪ್ರತ್ಯುತ್ತರದ ಅಭಿಪ್ರಾಯವೇನೆಂದರೆ.—

ಸಭಿಕರೇ, ಮೊನ್ನೆ ತಾನೇ ರೋಮನ್ ಕ್ಯಾಥೋಲಿಕ್ ಕ್ರೈಸ್ತಮಂಡಲಿಯವರು ನನಗೆ ಅಡ್ರೆಸ್ಸನ್ನು ಕೊಟ್ಟು ಸನ್ಮಾನ ಮಾಡಿದರು ಈಗ ಇನ್ನೊಂದು ಪಂಗಡದವರು ಅಂದರೆ ಪ್ರೊಟೆಸ್ಟೆಂಟ್ ಮಂಡಲಿಯ ಕ್ರೈಸ್ತರು ಕೊಟ್ಟ ಆದರ ಸನ್ಮಾನಪೂರ್ವಕವಾಗಿ ಅಡ್ರೆಸ್ಸು ಕೊಟ್ಟಿರುತ್ತಾರೆ ಅದಕ್ಕಾಗಿ ನಾನು ಅವರನ್ನು ಅತ್ಯಂತ ವಿಶೇಷವಾಗಿ ವಂದಿಸುತ್ತೇನೆ. ಅದರಲ್ಲೂ ಪಾದಪಿಯಿಸಿದ ಬಿಷಪ್‌ರವರು ಈ ಸಂದರ್ಭದಲ್ಲೂ ಕೂಡ ಬಂದಿರೋಣವು ನನ್ನನ್ನು ಇನ್ನೂ ಘನತೆ ಪಡಿಸಿದೆ ಎಂದು ಭಾವಿಸುತ್ತೇನೆ. ನಾನು ಈ ಸಂಸ್ಥಾನದಲ್ಲೂ ಅನಂತಶಯನದಲ್ಲೂ ಮಾಡಿದ ಕಾರ್ಯಗಳನ್ನು ಕುರಿತು ನೀವು ಸೂಚಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ಈ ಸಂಸ್ಥಾನದ ಏಳಿಗೆಗೋಸ್ಕರ ನನ್ನ ತನುಮನಗಳನ್ನು ವಿನಿಯೋಗಿಸಬೇಕೆಂಬುವದೇ ನನ್ನ ಪರಮ ಉದ್ದೇಶವು. ಅಲ್ಪಮಾತ್ರವಾದರೂ ಫಲಕಾರಿಯಾಗಲೆಂದು ಹಾರೈಸುವೆನು. ತಿರುವಾಂಕೂರಿನಲ್ಲೂ ಕ್ರೈಸ್ತಮಂಡಲಿಯವರ ಭಕ್ತಿ ಪ್ರೀತಿ ಅವರ ವಿದ್ಯಾಪ್ರೋತ್ಸಾಹವೇ ಮೊದಲಾದ ಪರೋಪಕಾರ ಕಾರ್ಯಗಳು ಜನಮನ್ನಿತವಾಗಿರುತ್ತವೆ ಅವರಿಂದ ದೇಶದಲ್ಲಿ ಸದ್ಗುಣ ಚಾರಿತ್ರ ಸದ್ಭಾವನೆಗಳು ಹುಟ್ಟಿ ಆಧಾರವಾಗಿ ನೆಲೆಗೊಂಡಿರುವವು ಸಭ್ಯತೆಯೂ ಅವರ ರಾಜಭಕ್ತಿಯೂ ಅವರನ್ನು ದಿನೇ ದಿನೇ ಅಭಿವೃದ್ಧಿಗೆ ತರುತ್ತಿರುವವು ಕ್ರೈಸ್ತಮತಾವಲಂಬಿಗಳ ಪದ್ಧತಿಗಳ ವಿಚಾರವಾಗಿ ಮಾಡಿರುವ ಮಸೂದೆ ಕಾನೂನಿನ ವಿಷಯವನ್ನು ಅವರು ಅಡ್ರೆಸ್ಸಿನಲ್ಲಿ ಸೂಚಿಸಿದಾರೆ. ಇದು ವಿಂಶತಿಸಂಘದ ಬಹು ಮುಖ್ಯವಾದ ಭಾಗವೆಂದು ಒಪ್ಪಿಕೊಳ್ಳುತ್ತೇನೆ. ಈ ವಿಷಯವಾಗಿ ನಾನು ಸದ್ಯ ಹೆಚ್ಚೇನೂ ಹೇಳಲಾರೆನು ಈ ಕಾನೂನು ಎಷ್ಟುಮಟ್ಟಿಗೆ ಪಂಗಡದ ಪ್ರಜೆಗಳಿಗೆ ಯಾವ ಯಾವ ಭಾಗದಲ್ಲಿ ನಷ್ಟಗಳುಂಟಾಗುವುವೋ ಅದನ್ನೆಲ್ಲಾ ಕುರಿತು ಆಲೋಚನೆ ಮಾಡಬೇಕಾಗಿದೆ ಮತ್ತು ಈ ಕಾನೂನಿನ ಉಭಯಪಕ್ಷಗಳನ್ನೂ ಚೆನ್ನಾಗಿ ಪ್ರಜೆಗಳೆಲ್ಲಾ ಚರ್ಚೆ ಮಾಡಿದ್ದಕ್ಕೆ ಗವರ್ನಮೆಂಟಿನವರು ಸಂಪೂರ್ಣ ಗಮನಕೊಟ್ಟು, ಪ್ರಜೆಗಳ ಅಭಿಪ್ರಾಯಗಳನ್ನು ಗ್ರಹಿಸಿ, ಅವುಗಳ ಸಾಧಕಬಾಧಕಗಳನ್ನು ಗೊತ್ತು ಮಾಡಬೇಕಾಗಿರುವುದು. ಅದ್ದರಿಂದ ಈಗಲೇ ಈ ವಿಷಯದಲ್ಲಿ ನಾನು ಖಂಡಿತ ಉತ್ತರವನ್ನು ಹೇಳಲಾರೆನು.

ಅನಂತರ ಲಾರ್ಡ್ ಬಿಷಪ್ ಯವರು ಎದ್ದು ಸಮಯೋಚಿತವಾದ ಮಾತುಗಳಿಂದ ಸಭೆಯನ್ನು ಮುಕ್ತಾಯ ಮಾಡಿದರು.

ಮೈಸೂರು ಗೆಜೆಟ್ ಸಂಗ್ರಹ.

ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಸಿ. ಶೇಷಾದ್ರಿ ಅಯ್ಯಂಗಾರ್‌ರಿಗೆ ಜುಲೈ ೧ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮುಗಿದ ತರುವಾಯ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್ ಮೆ॥ ಎ. ಆನಂದರಾಯರಿಗೆ ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಂಸ್ಥಾನದ ಹುಜೂರ್ ಖಜಾನೆಯ ಛಾರ್ಜನ್ನು ಮೆ॥ ಕೆ. ಕೃಷ್ಣಯ್ಯರವರು ಮೆ॥ ಎಲ್. ಬಿಸ್ವೆಸ್ಸಿಂಗ್ ಬಾದಾಮಿಯವರಿಂದ ೧೫ ರಲ್ಲಿ ವಹಿಸಿಕೊಂಡರು.

ರೊಡತೊರೆ ತಾಲೂಕ್ ಅಮಲ್ದಾರ್ ಮೆ॥ ಎಂ. ರಾಮರಾಯರವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಇತ್ತೊಂದು ಹುಕುಂ ಕೊಡಲ್ಪಡುವ ತನಕ ಶಿರಸ್ತೆದಾರ್ ಚಕ್ರವರ್ತಿ ಅಯ್ಯಂಗಾರ್‌ರು ಯಡತೊರೆ ತಾಲ್ಲೂಕು ಅಮಲ್ದಾರ್ ಮತ್ತು ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಕೋಲಾರಕ್ಕೆ ವರ್ಗವಾಗಿರುವ ತಿಪ್ಪೂರು ತಾಲ್ಲೂಕ್ ಮೆ॥ ನಾರಾಯಣಯ್ಯಂಗಾರ್ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿಕಬಳ್ಳಾಪುರದ ಡೆಪ್ಯುಟಿ ಅಮಲ್ದಾರ್ ಎಸ್ ಅನಂತರಾಮಯ್ಯಂಗಾರ್ ಕೋಲಾರ್ ತಾಲ್ಲೂಕ್ ಅಮಲ್ದಾರ್‌ರಾಗಿ ಬದಲಿ ನೋಡತಕ್ಕದ್ದು.

ಕೋಲಾರ್ ಡೆಪ್ಯುಟಿ ಕಮಿಷನರ್ ಆಫೀಸ್ ರೆವಿನ್ಯು ಹೆಡ್ ಮುನ್ಷಿ ಜೆ. ಸುಬ್ಬರಾಯರು ಗುಂಡ್ಲುಪೇಟೆಯ ಡೆಪ್ಯುಟಿ ಅಮಲ್ದಾರ್ ಮತ್ತು ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಅ॥ ಕಮಿಷನರ್ ಮೆ॥ ಟಿ ಲೋಕನಾಥನವರಿಗೆ ಸ್ಪೆಷಲ್ ಡ್ಯೂಟಿಯ ಕೆಲಸಕ್ಕೆ ದಾಖಲಾಗುವ ಅವಧಿಯ ಜೊತೆಗೆ ೧೨ ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಹರಿಹರದ ಡೆಪ್ಯುಟಿ ಅಮಲ್ದಾರ್ ಮೆ॥ ಮಹಮದ್ ಪೀರ್ ಯವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿ ಮಾಡಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಜೆ ಜೆ. ಮಾಂಟೇರೋ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಪಿ. ಎಸ್. ಗೋವಿಂದರಾಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನ ಛಾರ್ಜನ್ನು ವಹಿಸಿರತಕ್ಕದ್ದು.

ಅಮಲ್ದಾರ್‌ರುಗಳ ವರ್ಗಾವರ್ಗಿಯನ್ನು ಮುಂದೆ ಹೇಳುವಂತೆ ಬದಲಾವಣೆ ಮಾಡಲಾಗಿದೆ:—

ಮೆ॥ ಪಿ. ರಂಗರಾಯರನ್ನು ಚಿಕ್ಕಬಳ್ಳಾಪುರದಿಂದ ಹೆಗ್ಗಡದೇವನ ಕೋಟೆಗೆ; ಮೆ॥ ಧರ್ಮರಾಯರನ್ನು ನಂಜನಗೂಡಿಗೆ; ಮೆ॥ ಬಲಿಗೆ ಕೃಷ್ಣರಾಯರನ್ನು ತರೀಕೆರೆಗೆ.

ಇದರಿಂದ ಮೆ॥ ಗಳಾದ ಷೇಕ್ ಅಬ್ದುಲ್ಲಾ, ಟಿ. ಕೇಶವಯ್ಯಂಗಾರ್ ಸವರು ಎಂಬೀ ಅಮಲ್ದಾರ್‌ರುಗಳ ವರ್ಗಾವರ್ಗಿಯನ್ನು ರದ್ದುಮಾಡಿದೆ

ಮೆ॥ ಎಸ್ ಎಂ ಅಪ್ಪಣ್ಣಯ್ಯಂಗಾರ್‌ರನ್ನು ಮೇ ೧೫ರಿಂದ ನಾಲ್ಕನೇ ಕ್ಲಾಸ್ ಅಮಲ್ದಾರ್‌ರನ್ನಾಗಿ ಖಾಯಂ ಮಾಡಿದೆ.

ಮೆ॥ ಕೆ. ಶ್ರೀನಿವಾಸರಾಯರನ್ನು ೧೯೦೫ನೇ ನೋವೆಂಬರ್ ೧೭ ರಿಂದ ೧ನೇ ಕ್ಲಾಸ್ ಅ॥ ಕಮಿಷನರಾಗಿ ಖಾಯಂ ಮಾಡಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ॥ ಇಂಜನಿಯರ್ ಮೆ॥ ಬಿ. ಸುಬ್ರಹ್ಮಣ್ಯಾರಾಧ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ವಿದೇಶ ವರ್ತಮಾನಗಳು.

ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಲ್ಲಿ ಸಹಿಸಲಶಕ್ಯವಾದ ಉಷ್ಣಗಾಳಿ ಬೀಸಿದ್ದರಿಂದ ಹದಿನಾಲ್ಕು ಜನರು ಆದರ ತಾಪವನ್ನು ತಡೆಯಲಾರದೆ ಪ್ರಾಣಬಿಟ್ಟರು. ಅನೇಕರು ಕಾಯಿಲೆಬಿದ್ದುಕೊಂಡಿದಾರೆ.

❖❖❖❖

ಕ್ಯಾಂಬೋಡಿಯಾ ರಾಜ್ಯದ ದೊರೆಯಾದ ಸಿಸೋವಾತಾರವರು ಯೂರೋಪಿನಲ್ಲಿ ದೇಶಾಟನೆ ಮಾಡುತ್ತಿದಾರೆ. ಆತನ ಸಂಗಡ ಅವರ ಹೆಣ್ಣುಮಕ್ಕಳೂ ಗಂಡುಮಕ್ಕಳೂ ಮಂತ್ರಿಗಳೂ ೬೯ ಮಂದಿ ನಾಟ್ಯಗಾತಿಯರೂ ಹೋಗಿರುವರು.

❖❖❖❖

ರಷ್ಯಾ ರಾಜ್ಯದ ೧೭ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮ ಪ್ರಾಪ್ತವಾಗಿರೋಣದರಿಂದ ಪ್ರಜೆಗಳನ್ನು ಸಂರಕ್ಷಣೆಮಾಡುವುದಕ್ಕೆ ಹದಿನೈದು ಕೋಟಿ ದ್ರವ್ಯ ಸ್ಯಾಂಕ್ಷನ್ ಆಗಬೇಕೆಂದು ಸರ್ಕಾರದವರು ಡೂಮಾ ಎಂಬ ಹೊಸ ಪಾರ್ಲಿಮೆಂಟಿನವರನ್ನು ಕೇಳಿರುತ್ತಾರೆಂದು ತಂತೀ ವರ್ತಮಾನ ಬಂದಿದೆ.

❖❖❖❖

ಅಮೇರಿಕಕ್ಕೆ ಸೇರಿದ ವ್ಯೊಮಿಂಗ್ ಡಿಸ್ಟ್ರಿಕ್ಟಿನಲ್ಲಿ ಅಪೂರ್ವವಾದ ಮಳೆ ಸುರಿದು ಪ್ರವಾಹಗಳ ದೆಸೆಯಿಂದ ಮೂರು ಸಣ್ಣ ಪಟ್ಟಣಗಳು ಸಂಪೂರ್ಣವಾಗಿ ಕೊಚ್ಚಿಹೋದವೆಂದೂ, ಅನೇಕರಿಗೆ ಗಾಯಗಳಾದರೂ ದೇವರ ದಯದಿಂದ ಹತ್ತು ಮಂದಿಗಿಂತ ಹೆಚ್ಚಾಗಿ ಮೃತಪಡಲಿಲ್ಲವೆಂದೂ ದೂ ತಂತೀವರ್ತಮಾನ ಬಂದಿದೆ.

❖❖❖❖

ಕಳೆದ ತಿಂಗಳಲ್ಲಿ ನಾರ್ವೆ ರಾಜ್ಯದ ದೊರೆಯವರಿಗೆ ಕಿರೀಟಧಾರಣೆಯಾಯಿತು ಈ ಉತ್ಸವ ಕಾಲದಲ್ಲಿ ಹಾಜರಾಗಿದ್ದು ದೊರೆಯ ಮೇಲೆ ಕಟ್ಟಿದ ಪದ್ಯಗಳನ್ನು ಹಾಡುವುದಕ್ಕೋಸ್ಕರ ಅಮೇರಿಕದ ಮುಖ್ಯಪಟ್ಟಣವಾದ ನ್ಯೂಯಾರ್ಕಿನಿಂದ ೨೫೦ ಮಂದಿ ಸಂಗೀತಗಾರರು ನಾರ್ವೆಗೆ ಹೋಗಿದ್ದರೆಂತಲೂ, ಇವರೆಲ್ಲಾ ನಾರ್ವೆ ಪ್ರಜೆಗಳೇ ಎಂತಲೂ, ಅಮೇರಿಕದಲ್ಲಿ ಜೀವನೋಪಾಯವನ್ನು ಹುಡುಕಿಕೊಂಡಿರತಕ್ಕವರೆಂತಲೂ ತಿಳಿದುಬಂದಿದೆ

❖❖❖❖

ಭೂಕಂಪದ ದೆಸೆಯಿಂದ ಸ್ಯಾನ್ ಫ್ರಾನ್ಸಿಸ್ಕೊ ಪಟ್ಟಣವು ಬಹಳ ಮಟ್ಟಿಗೆ ನಾಶವಾದರೂ ಪ್ರಜೆಗಳು ಪುನಃ ಅದೇ ಸ್ಥಳದಲ್ಲಿ ಬಂಗಲೆ ಮುಂತಾದ್ದನ್ನು ಕಟ್ಟಿ ಅಬಾದು ಮಾಡಿಕೊಳ್ಳಲಾರಂಭಿಸಿದಾರೆ. ಅಲ್ಲಿನ ನಾಟಕದ ಕಂಪನಿಯವರು ನಾಟಕಶಾಲೆಗಳು ತಯಾರಾಗುವ ತನಕ ಡೇರಾಗಳಲ್ಲಿ ನಾಟಕಗಳನ್ನು ಆಡಬೇಕೆಂದು ಗೊತ್ತುಮಾಡಿ, ಏಕಕಾಲದಲ್ಲಿ ೬-೮ ಸಹಸ್ರ ಜನರು ಕೂತುಕೊಂಡು ನೋಡುವಂಥಾ ಭಾರೀ ಡೇರಾಗಳನ್ನು ಮಾಡಿಸಿರುತ್ತಾರೆ

❖❖❖❖

ಆಫ್ರಿಕದಲ್ಲಿ ಈಜಿಪ್ಟಿನ ರಾಜಧಾನಿಯಾದ ಕೈರೋ ಪಟ್ಟಣದಿಂದ ಆ ಖಂಡದ ದಕ್ಷಿಣದಲ್ಲಿರುವ ಕೇಪ್ ಟೌನಿಗೆ ಉದ್ದಕ್ಕೂ ರೈಲುರಸ್ತೆ ಹಾಕುತ್ತಿದಾರೆ ಇದುವರೆಗೆ ವಿಕ್ಟೋರಿಯಾ ಜಲಪಾತದಿಂದ ದಕ್ಷಿಣಕ್ಕೆ ೩೩೮ ಮೈಲಿ ದೂರ ರೈಲ್‌ರಸ್ತೆ ಹಾಕಿಯಾಯಿತು. ಈ ಪೈಕಿ ಕಡೇ ೬೦ ಮೈಲಿ ರಸ್ತೆಯನ್ನು ೩೦ ದಿನಗಳಲ್ಲಿ ಮಾಡಿ ಮುಗಿಸಿದಾರೆ ಈ ರೈಲ್‌ರಸ್ತೆಯ ಕಾಮಗಾರಿಯಲ್ಲಿ ೫,೦೦೦ ಜನದವರಗ ಸ್ವದೇಶಿಗಳನ್ನೂ ೩೦೦ ಮಂದಿ ಬಿಳೀ ಜನರನ್ನೂ ನೇಮಿಸಿದಾರೆ

❖❖❖❖

ವಿಲಾಯತಿಗೆ ಸೇರಿದ ಕ್ಲಾಫಂ ಪಟ್ಟಣದಲ್ಲಿ ಹಿಂದಿನ ವಾರ ಉಪಾಧ್ಯಾಯಿನಿಯರ ಸಭೆ ನಡೆಯಿತು. ೨೦೦ ಮಂದಿಗಿಂತಲೂ ಹೆಚ್ಚಾಗಿ ಉಪಾಧ್ಯಾಯಿನಿಯರು ಮೆಂಬರುಗಳಾಗಿ ನಿಂತು, ವಿದ್ಯಾಭ್ಯಾಸ ಮಾಡಿಸುವುದಕ್ಕೆ ಸ್ತ್ರೀಯರು ಬಹಳ ಅವಶ್ಯವೆಂದು ಎಣಿಸಲ್ಪಟ್ಟಿರೋಣದರಿಂದ ಸರ್ಕಾರದವರು ಸ್ತ್ರೀಯರಿಗೂ ಪುರುಷರಿಗೂ ಯಾವ ಭೇದವನ್ನೂ ಇಡದೆ ಅವರಿಗೂ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನೂ ಮೆಂಬರಾಗಿ ಚುನಾಯಿಸಲ್ಪಡುವ ಹಕ್ಕನ್ನೂ ಕೊಡಬೇಕೆಂಬು ತೀರ್ಮಾನ ಮಾಡಿರುತ್ತಾರೆ.

❖❖❖❖

ರಷ್ಯಾ ರಾಜ್ಯದಲ್ಲಿ ಹೊಸದಾಗಿ ಏರ್ಪಾಡಾಗಿರುವ ಡ್ಯೂಮಾ ಎಂಬ ಪಾರ್ಲಿಮೆಂಟ್ ಮೆಂಬರುಗಳು ಕಳೆದ ವಾರ ಮರಣ ದಂಡನೆಯ ವಿಚಾರವಾಗಿ ಬಹು ಕಠಿಣವಾಗಿ ವಿಶೇಷ ವಾಗ್ವಾದಗಳನ್ನು ನಡಿಸಿ, ಕಡೆಗೆ ಇನ್ನು ಮುಂದೆ ಗಲ್ಲಿಗೆ ಎತ್ತುವ ಶಿಕ್ಷೆಯನ್ನೇ ವಜಾ ಮಾಡಿದೆ ಎಂದು ತೀರ್ಮಾನವಮಾಡಿದಾರೆ. ಆಗ ಕೆಲವು ಮಂತ್ರಿಗಳು ಹೋಗಿ ಹೀಗೆ ತೀರ್ಮಾನ ಮಾಡಕೂಡದೆಂದು ಮೆಂಬರುಗಳ ಸಂಗಡ ಚರ್ಚೆ ಮಾಡಿದ್ದಕ್ಕೆ ಮೆಂಬರುಗಳು ಮಂತ್ರಿಗಳನ್ನು ಕುರಿತು—ನೀವೆಲ್ಲಾ ಕೊಲೆಗೇಡಿಗರು, ದರೋಡೆಕೋರರು, ಕಟುಕರು ಎಂಬದಾಗಿ ಕೂಗುತ್ತಾ ಅವರನ್ನು ದೂರಿದರು.

❖❖❖❖

ಲಂಡನ್ ಪಟ್ಟಣದ ಈಸ್ಟ್ ಎಂಡ್ ಎಂಬ ಭಾಗದಲ್ಲಿ ಅನೇಕಾನೇಕ ಬಡಬಗ್ಗರು ಜೀವನಕ್ಕೆ ತುಂಬಾ ಕಷ್ಟಪಡುತ್ತಾ ಇದಾರೆ. ಇವರಲ್ಲಿ ಬಹು ಜನರು ಪರರಾಜ್ಯಗಳಿಂದ ಬಂದವರು; ವಿಲಾಯತಿಯ ಪ್ರಜೆಗಳಲ್ಲ ಇಂಥವರಲ್ಲಿ ಸದೃಢರಾಗಿರತಕ್ಕ ೧೦,೦೦೦ ಜನರನ್ನು ಚುನಾಯಿಸಿ ಅರ್ಜೆಂಟೈನಾ, ಬ್ರೆಜಿಲ್, ಚಿಲ್ಲಿ ಎಂಬೀ ದೇಶಗಳಿಗೆ ಕಳುಹಿಸಿಬಿಡಬೇಕೆಂಗು ಏರ್ಪಾಡಾಗಿದೆ ಆ ದೇಶಗಳ ಅಧಿಕಾರಿಗಳು ಇವರಿಗೆಲ್ಲಾ ಜೀವನಕ್ಕೆ ಮಾರ್ಗವಾಗುವಂತೆ ಭೂಮಿಕಾಣಿಗಳನ್ನು ಕೊಡುತ್ತೇವೆಂತಲೂ, ಕಸುಬುಗಳನ್ನು ಅವಲಂಬಿಸತಕ್ಕವರಿಗೆ ಬೇಕಾಗುವ ಸಹಾಯ ಮಾಡುತ್ತೇವೆಂತಲೂ ಒಪ್ಪಿಕೊಂಡಿದಾರೆ.

❖❖❖❖

ಅಮೇರಿಕದಿಂದ ಕೆಲವು ಜನರು ಹಡಗಿನಲ್ಲಿ ವಿಲಾಯತಿಗೆ ಬಂದರು. ಈ ಹಡಗು ಪ್ಲಿಮತ್ ಎಂಬ ತೀರಪಟ್ಟಣವನ್ನು ತಲುಪಿತು ಅಲ್ಲಿಂದ ಪ್ರಯಾಣಿಕರನ್ನು ಒಂದು ರೈಲ್ ಗಾಡಿಯು ಕೂರಿಸಿಕೊಂಡು ಪದ್ಧತಿಯ ಪ್ರಕಾರ ಲಂಡನ್ ಪಟ್ಟಣಕ್ಕೆ ಅತಿ ವೇಗವಾಗಿ ಹೋಗುತ್ತಿತ್ತು ಈ ರೈಲ್ ಗಾಡಿಗೆ ಸಾಲಿಸ್‌ಬರಿ ಎಂಬ ಸ್ಟೇಷನ್ ಬಳಿ ಕಳೆದ ವಾರ ಅಪಾಯ ಉಂಟಾಗಿ ಮೂರು ಗಾಡಿಗಳು ಒಡೆದು ಹೋದವು ಇಪ್ಪತ್ತನಾಲ್ಕು ಮಂದಿ ಪ್ರಯಾಣಿಕರು ಈ ಅನಾಹುತಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡರು ಇವರಲ್ಲಿ ಬಹು ಮಂದಿ ಅಮೇರಿಕದವರು. ಸುಮಾರು ೧೦ ಜನರಿಗೆ ಗಾಯಗಳಾಗಿವೆ ಎಂಬದಾಗಿ ತಂತೀವರ್ತಮಾನ ಬಂದಿದೆ.

❖❖❖❖

ಅಮೇರಿಕದ ಕೋಟ್ಯಾಧೀಶ್ವರರು ಕಳೆದ ೧೩ ವರುಷಗಳಲ್ಲಿ ಬೇರೆ ಬೇರೆ ಧರ್ಮಕಾರ್ಯಗಳಿಗೂ ವಿದ್ಯಾಪ್ರೋತ್ಸಾಹಕ್ಕೂ ೩೦೦ ಕೋಟಿ ರೂಪಾಯಿ ಉಚಿತಾರ್ಥವಾಗಿ ಕೊಟ್ಟಿರುತ್ತಾರೆಂತಲೂ ಅವರಲ್ಲೆಲ್ಲಾ ಮೆ॥ ಆಂಡ್ರು ಕಾರ್ನೆಗಿ ಎಂಬ ಕೋಟ್ಯಾಧೀಶ್ವರನ ಧರ್ಮಕಾರ್ಯಗಳೇ ಅಪಾರವಾಗಿರುತ್ತವೆಂತಲೂ, ಕಳೆದ ಅಕ್ಟೋಬರ್ ತಿಂಗಳ ವರೆಗೆ ಆತ ಕೊಟ್ಟಿರುವುದೇ ೩೩ ಕೋಟಿಯೂ ೫೦ ಲಕ್ಷ ರೂಪಾಯಿಗಳೆಂತಲೂ, ಕಳೆದ ಆರು ಸಂವತ್ಸರಗಳಲ್ಲಿ ಕಾಲೇಜುಗಳಿಗೂ ಯೂನಿವರ್ಸಿಟಿಗಳಿಗೂ ಅಮೇರಿಕದವರು ೭೦ ಕೋಟಿಯೂ ೫೦ ಲಕ್ಷ ರೂಪಾಯಿ ಉಚಿತಾರ್ಥವಾಗಿ ಕೊಟ್ಟಿದ್ದಾರೆಂತಲೂ ತಿಳಿದು ಬಂದಿದೆ.

❖❖❖❖

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಪ್ರಜೆಗಳು ಏರ್ಪಡಿಸುವ ಪ್ರತಿ ಒಂದು ಸಂತೋಷೋತ್ಸವದಿಂದಲೂ ಸರ್ಕಾರದವರು ಸುಂಕ ವಸೂಲ್ಮಾಡಬೇಕೆಂದು ಗೊತ್ತುಮಾಡಿದಾರೆ. ನಾಟಕ, ಉಪನ್ಯಾಸ, ಸಂಗೀತಸಭೆ, ಸರ್ಕಸ್ ಕುಣಿತ, ಕುದುರೆಪಂದ್ಯ, ಸಂತೆ, ಪ್ರದರ್ಶನ, ಈ ಮೊದಲಾದವು ಎಲ್ಲಿ ನಡೆದರೂ ಅದನ್ನು ನೋಡುವುದಕ್ಕೆ ಪ್ರಜೆಗಳು ದುಡ್ಡುಕೊಟ್ಟು ಟಿಕೆಟ್ ಕೊಂಡುಕೊಳ್ಳಬೇಕು. ಇಂಥಾ ಪ್ರತಿ ಒಂದು ಟಿಕೇಟಿಗೂ ಸರ್ಕಾರದವರು ಕಾಯಿದೆ ಅನುಸಾರ ಒಂದಾಣೆಯಂತೆ ಟಿಕೇಟುಗಳ ಬೆಲೆಯ ಮೇಲೆ ಸುಂಕಜಾಸ್ತಿ ವಸೂಲ್ಮಾಡುತ್ತಾರೆ ಇಂಥಾ ಸುಂಕವು ಪ್ರಾರಂಭವಾದದ್ದೆಂದು ಯಾರೂ ಕೇಳಲಾರರು ವರುಷಕ್ಕೆ ಇದರಿಂದ ೯ ಲಕ್ಷ ರೂಪಾಯಿ ಉತ್ಪತ್ತಿ ಆಗುವುದೆಂದು ಕಾಣುತ್ತದೆ.

❖❖❖❖

ಅನೇಕ ವರುಷಗಳಿಂದ ವಿಲಾಯತಿಯಲ್ಲಿ ವಾಸಮಾಡಿಕೊಂಡಿದ್ದ ಪ್ರಸಿದ್ಧ ಸಂಗೀತಗಾರನಾದ ಮಾನ್ಯುಯಲ್ ಗಾರ್ಷಿಯಾ ಎಂಬಾತನು ಈಗತಾನೇ ಕಾಲವಾದನೆಂದು ತಂತೀ ವರ್ತಮಾನ ಬಂದಿದೆ ಮರಣ ಕಾಲದಲ್ಲಿ ಈತನಿಗೆ ೧೦೧ ವರುಷಗಳಿಗಿಂತಲೂ ಹೆಚ್ಚಾಗಿತ್ತು ಮ್ಯಾಡ್ರಿಡ್ ನಗರದಲ್ಲಿ ಜನಿಸಿದನು. ಈತನ ಹಿರಿಯರೆಲ್ಲಾ ಸಂಗೀತ ವಿದ್ಯೆಯಲ್ಲಿ ಹೆಸರಾದವರು ಈತನು ಕೆಲವು ಕಾಲ ನಾಟಕಶಾಲೆಯಲ್ಲಿದ್ದು ಅಲ್ಲಿಂದ ಉಪಾಧ್ಯಾಯನಾಗಿ ಕಡೆಯಲ್ಲಿ ಮನುಷ್ಯನ ಕಂಠ ವಿಚಾರದಲ್ಲೂ ಅಲ್ಲಿ ಹುಟ್ಟುವ ಧ್ವನಿಗಳ ವಿಚಾರದಲ್ಲೂ ಬಹುಕಾಲದ ವರೆಗೆ ಅನೇಕ ಪರೀಕ್ಷೆಗಳನ್ನು ಮಾಡಿ, ಕಂಠ ಪರಿಶೋಧನೆಗಾಗಿ ಅಪೂರ್ವವಾದ ಒಂದು ಯಂತ್ರವನ್ನು ಕಂಡುಹಿಡಿದು ಪ್ರಖ್ಯಾತಿಗೆ ಬಂದನು. ಹೋದ ವರುಷ ಲಂಡನ್ ಪಟ್ಟಣದಲ್ಲಿ ಆತನ ಶತಮಾನೋತ್ಸವವು ಬಹು ಅಟ್ಟಹಾಸವಾಗಿ ನಡೆಯಿತು.

ಮುಂಬಯಿ ವ್ಯಾಪಾರವಾಹಲಿಟ್ಟ್ವೈಸುವವರು

857

ಮುಂಬಯಿಯಲ್ಲಿ ದ್ವಿತೀಯೋಂದು ನೂಲಿನ ತೂಕ ಅಳತೆ ಮತ್ತು ನೂಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ವಿಷಯಗಳುಳ್ಳ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೆಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬ ಕನ್ನಡ ಪುಸ್ತಕ—ನಾಲ್ಕು ಆಣೆ ಅಲ್ಲದೆ ಅಕ್ಷರದಿಂದ ಬರೆಯಲು ಹಚ್ಚಿ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟು ಮಾಂಡ್ವಿ, ಮುಂಬಯಿ.

ಟಪಾಲ ಖರ್ಚ ಪುಕಟ! ಟಪಾಲ ಖರ್ಚ ಪುಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್

ನೀಲಿ, ಕಪ್ಪು ಮತ್ತು ಕೆಂಪು ಮಶಿ.

914



ವಿಲಾಯಿತಿ ಮಶಿಗೆ ಟಕ್ಕರಕೊಡುವಂಥ ಉತ್ತಮ ಟಿಕ್ಕಿಗಳಿವೆ, ಅಗ್ಗವಾದದ್ದು ಇವೇ ಹಿಂದು ಸ್ಥಾನದಲ್ಲಿ ಸಿದ್ಧವಾದೇ ಇರುತ್ತವೆ ಒಮ್ಮೆ ಅನುಭವ ತಕ್ಕೊಳ್ಳಿರಿ ೯೦೦ ಪುಡಿಗಳಿಗೆ ೧ ರೂಪಾಯಿ ಟಪಾಲ ಖರ್ಚ ಪುಕಟ

ವಿಳಾಸ—ವಾಯ್ ಜಿ ದೀಕ್ಷಿತ, ಸ್ಟೇಶನರ, ಪುಣೆ ಸಿಟಿ

ತ್ವರೆ ಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ 912

ರಾಸ್ಕೋಪ ಸಿಸ್ಟಂ ಲಿವ್ಹರ್ ವಾಚ್

ಬಂದೋಬಸ್ತು ಮಜಬೂತ



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪಟ್ಟಿ, ಹೀಗೆ ೩ ನಮೂನೆ ಕಳುಹಿಸುತ್ತೇವೆ ಟಿ. ಬಿ. ಗೀರೆ ಒಂದೇ ಸಾರಿ ೩ ವಾಚು ತೆಗೆದುಕೊಂಡರೆ ಟಪಾಲು ಮಾಫಿ ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯ ಕಿಮ್ಮತ್ತು ೦—೮—೦, ಹುಕಾಯಂತ್ರ ೦—೮—೦, ವಾಚಿನ ಕವರು ೦—೮ ೦ ವಿ ಪಿ ಇಂದಲೂ ರವಾನಿಸುತ್ತೇವೆ

ವಿಳಾಸ—ಜಿ. ಯಲ್ ಜೋಶಿ ಅಂಡ್ ಕೋ,

ಪೋಸ್ಟ್ ಶಿರ್ಶಿ, ಜಿಲ್ಲಾ ಉತ್ತರ ಕನಡಾ

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—10

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೬೮ ಸಾವಿರ ಷೇರುಗಳಿಂದಾಗುವ ೧೭ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಪ್ರಿಮಿಯಮ್ ಫೀ ಕೊಟ್ಟು ೧೭ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ ನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬರುತ್ತದೆ. ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜೆಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು

ಷೇರು ಹಣವನ್ನು ಚೀಫ್ ಕ್ಯಾಷ್ ಫ್ಲೋಸಿಂಗ್ ಏಜೆಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜೆಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು ಇದಕ್ಕಾಗಿ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಸಾಂಕ್ಷನ್ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫೀ ರವಾನಿಸಬೇಕು ಇದು ಷೇರು ಮೊಬಲಗಿನಲ್ಲಿ ಮುರಾ ಆಗುವುದಿಲ್ಲ.

(ಸ್ಹೀ) ಬಿ. ವಿ ರಾಮಸ್ವಾಮಿ ಶೆಟ್ಟಿ, ಬಿ ಎ,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜೆಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ

P. SUBBROYA'S

World Renowned and most Efficacious Ayurvedic Medicines

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು

1135

೧ ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿ ಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ಒಳ್ಳೆ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು ಪೆಟ್ಟಿ ಒಳ್ಳೆ ರೂ ೨ ವಿ ಪಿ ಛಾರ್ಜಿ ೩ ಆಣೆ

೨೦ ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು ಅತ್ಯುತ್ತಮವಾದದ್ದು ಮತ್ತು ಒಂದೇ ರಂಗಿನ ಇರತಕ್ಕದ್ದು ತೊಲ ೧ ಕ್ಕೆ ರೂ ೬೮ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ ವಿ ಪಿ ಚಾರ್ಜು ಅಲಾಯಿದ

೨೧ ಸುಗಂಧ ನಶ್ಯಪುಡಿ —ಈ ನಶ್ಯಪುಡಿಯು ಬಹಳ ಸುವಾಸನಾ ಯುಕ್ತವಾಗಿರೋಣದರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಕೂಡದು ನೀವು ದಿನವೂ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಿದ ಕೂಡಲೇ ಸೇರಿಸಿದರೆ ನಶ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು ಇದರಿಂದ ನಶ್ಯ ಹಾಕಿಕೊಳ್ಳುವನ ರ ಬಳಿ ಬರುವ ಕಾರಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಾಳಿಕೊತ್ತು ಇರುತ್ತದೆ ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ ಇಂಥಾ ನಶ್ಯಹಾಕಿಕೊಂಡಲ್ಲಿ ಶೀತ, ಅರಬೇನೆ, ವಾತ ಮೊದಲಾದವು ನಿವಾರಣೆಯಾಗುತ್ತವೆ ಆಗಾಗ್ಗೆ ನಶ್ಯಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು ಇದರಲ್ಲಿ ಮಾದಕಗಳ ಮಿಶ್ರಿತವಾಗಿ ಸೇರಿರುವುದಿಲ್ಲ ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ ಕ್ರಯ ಒಂದು ಡಬ್ಬಿಗೆ ೪ ಆಣೆ ೧ ರಿಂದ ೩ ಡಬ್ಬಿ ತನಕ ವಿ ಪಿ ಚಾರ್ಜು ೩ ಆಣೆ ಹೆಚ್ಚು ವಿ ಪಿ ಛಾರ್ಜು ೪ ರಿಂದ ೬ ಡಬ್ಬಿ ತನಕ ೫ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜು ೭ ಆಣೆ

೨೨. ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ತೇಯಲೆಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ. ಕಾಫಿ ತೇಯಲೆಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ,

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೀರೋ ಆ ಕ್ರಮದಲ್ಲಿಯೇ ಇದನ್ನು ಉಪಯೋಗಿಸಿದರೆ ವಿಶೇಷ ರುಚಿಕರವಾದ ಪಾನೀಯವಾಗುವದು ಕರುಗಳು ಮೊದಲುಗೊಂಡು ವೃದ್ಧಾಪ್ಯದಲ್ಲೂ ಸಹ ಎಲ್ಲಾ ಕಾಲಗಳಲ್ಲಿಯೂ ಉಪಯೋಗಿಸಬಹುದಾಗಿದೆ ಜ್ವರ, ಸನ್ನಿ, ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸಮಯಾನುಸಾರವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವದಲ್ಲದೆ, ಯಾವದೊಂದು ರೋಗವೂ ಕಾಲುಹಾಕಿಕೊಳ್ಳದಂತೆ ಕಾಪಾಡುವುದು ಪಿತ್ತವಾಯುವು, ಗೂರ್ಲು ಉಬ್ಬಸವು ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರತಕ್ಕ ಸಕ್ಕರೆಯನ್ನೂ ವಿಶೇಷವಾದ ಬೆವರನ್ನೂ ಕಡಿಮೆ ಮಾಡಿ, ಮೂತ್ರ ರೋಗದ ಬೇರನ್ನೇ ನಿರ್ಮೂಲ ಮಾಡುವುದು ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾನಶಕ್ತಿಯನ್ನು ವೃದ್ಧಿಗೊಳಿಸುವುದು ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ತೇಯಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ಒಕ್ಕೆ ಕ್ರಯ ೩ ಆಣೆ, ವಿ ಪಿ ಛಾರ್ಜು ೩ ಆಣೆ ಹೆಚ್ಚಾಗುವುದು ಮುಂಗಡ ೮ ಆಣೆ ಕಳುಹಿಸಿಕೊಟ್ಟು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —P. SUBBAROY,

Porto Novo, South Arcot.

ವಿಳಾಸ—ಪಿ ಸುಬ್ಬರಾಯ್,

ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೨—೬—೧೯೦೬ ರಿಂದ ೨೮—೬—೧೯೦೬ ರ ವರೆಗೆ

ಸ್ಥಳ	ಪ್ಲೇಗ್ ಹಗಲಿ ಬಿದ್ದ	ಸತ್ತು ಬಿದ್ದ	ಹೋದ ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	0	0	0
ಮೈಸೂರು ,,	0	1	2
ಬೆಂಗಳೂರು ಡಿಸ್ಟ್ರಿಕ್ಟು	0	0	13
ಮೈಸೂರು ,,	4	2	4
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗುಣಿಗಳು	0	0	0
ತುಂಕೂರು ಡಿಸ್ಟ್ರಿಕ್ಟು	0	0	1
ಹಾಸನ (ಹೊರಗಿನದು)	0	1	0
ಚಿತ್ರದುರ್ಗ ,,	0	0	0
ಕಡೂರ್ ,,		1	0
ಶಿವಮೊಗ್ಗ ,,	0	0	8
ಜುಮ್ಲಾ	4	5	25

ಶಾಲಿವಾಹನ ಶಕ ವರುಷಗಳು ೧೮೨೮ ನೇ ಪರಾಭವ ಸಂವತ್ಸರದ ಆಷಾಢ ಬಹುಳ ಸಪ್ತಮಿ ಗುರುವಾರದಿಂದ ಆಷಾಢ ಬಹುಳ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜುಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
12	ಗುರು	ಸಪ್ತಮಿ	57-18	ಉತ್ತರಾ	37 2
13	ಶುಕ್ರ	ಅಷ್ಟಮಿ	60 0	ರೇ	11 6
14	ಶನಿ	ಅಷ್ಟಮಿ	0 3	ಅ	16 6
15	ರವಿ	ನವಮಿ	3 10	ಭ	52 2
16	ಚಂದ್ರ	ದಶಮಿ	8 15	ಕೃ	58 26
17	ಕುಜ	ಏಕಾದಶಿ	13 19	ರೋ	60 0
18	ಬುಧ ,,	ದ್ವಾದಶಿ	18 14	ರೋ	4 52

ಮೇಲುಕೋಟೆ ಲಿ ಕೃಷ್ಣರಾಜಮುಡಿ ಉತ್ಸವ, ಬಾಮುಸ್ವರಿ ಜನ್ಮೋತ್ಸವ ದಗ್ಧಯೋಗ, ಅಮೃತಸಿದ್ಧಿಯೋಗ ನನಯೋಗ ಮೇಲುಕೋಟೆಲಿ ಕೃಷ್ಣರಾಜಮುಡಿ ರಥ ಯನ ಪುಣ್ಯಕಾಲ ಮಹಾಭಾವ, ಸರ್ವತ್ರ ಏಕಾದಶಿ ,, ದರ್ಶ ತಿಥಿ, ಪ್ರದೋಷ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ	ರೂ	೧೭ ೦-೦	[illegible]
ಕೆಂಪುತಿ ಅಕ್ಕಿ ಅವಲ್		೧೬-೦-೦	[illegible]
,, ದುಯಂ		೧೩-೧-೨ ೦	[illegible]
ಜೀರಾಗೆ ಅಕ್ಕಿ		೧೩ ೦-೦	[illegible]
ಸಣ್ಣಕ್ಕಿ ಅವಲ್		೧೫ ೦-೦	[illegible]
,, ದುಯಂ		೧೪-೮-೦	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ		೧೧ ೬ ೦	[illegible]
,, ದುಯಂ		೧೦ ೮ ೦	[illegible]
ಹೈನ ರಾಗಿ ಪಲ್ಲಾ ೧ಕ್ಕೆ		೮ ೬ ೦	[illegible]
ಕಾರಾಗಿ		೩ ೨ ೦	[illegible]
ಜೋಳ		೯-೦-೦	[illegible]
ಹಲಸಂದೆ ಪಲ್ಲಾ ೧ಕ್ಕೆ		೧೧ ೦ ೦	[illegible]
ಬಿಳೀ ಅವರೆ		೧೦-೦-೦	[illegible]
ಹೆಸರು		೧೨ ೦-೦	[illegible]
ಉದ್ದು		೧೨-೪ ೦	[illegible]
ಕಡಲೆ		೧೨ ೧-೦	[illegible]
ಎಳ್ಳು ಸೆ ೧೨೩ ಕ್ಕೆ		೨೧-೮ ೦	[illegible]
ಹುರುಳಿ		೧೦ ೮-೦	[illegible]
ಹರಳು ೧೨೫ ಸೇರಿಗೆ		೧೫-೮-೦	[illegible]
ಸೀಗೆಕಾಯಿ ಮಣ ೧ಕ್ಕೆ		೨-೮-೦	[illegible]
ಮೆಣಸಿನಕಾಯಿ		೪-೦-೦	[illegible]
,, ದುಯಂ		೩-೪-೦	[illegible]
ಬೆಲ್ಲ ದೊಡ್ಡ ಅಚ್ಚು		೪-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ		೫-೬ ೦	[illegible]
ಹರಳೆಣ್ಣೆ ,,		೫-೮ ೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ		೧೧ ೮-೦	[illegible]
ಉಪ್ಪು ,,		೫-೧೦ ೦	[illegible]
ಹುಣಸೇ ಹಣ್ಣು		೦-೧೨-೦	[illegible]
,, ಹಳೇದು		೦-೮-೦	[illegible]
ತುಪ್ಪ ಮಣ ೧ಕ್ಕೆ		೧೮-೦ ೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೪ ೦	[illegible]
ತೆಂಗಿನಕಾಯಿ ೧೦೦ ಕ್ಕೆ		೪ ೮-೦	[illegible]
ಅಡಿಕೇಕಾಯಿ ಮಣ ೧ಕ್ಕೆ		೧ ೦-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	[illegible]
ಚಿನ (ಪೇಟ) ಕೆಂಪು		೧೫ ೪ ೦	[illegible]
,, ,, ಹಸಿಮ		೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೮೫-೦-೦	[illegible]

Printed and published by the Rev E THOMPSON, M A the Proprietor and Ma[illegible] Wesleyan Mission Press, Mysore 12/7/19[illegible]

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ | ಮೈಸೂರು—ಸನ್ ೧೯೦೬ ನೇ ಇಸವಿ ಜೂಲೈ ತಾರೀಖು ೧೯ನೇ ಗುರುವಾರ. | ಸಂಚಿಕೆ ೭

ಈಗ ತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲುಗಳ ಕೇಶರಂಜನ ತೈಲ.

10 22

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ಬಿಕರಿಮಾಡಿದ್ದಿಲ್ಲ. ನಗದು ಕ್ರಯ ಮಾತ್ರ

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨—೧೨—೦

ಸಣ್ಣ ಬಾಟ್ಲಿ ಒಂದಕ್ಕೆ ರೂ. ೦—೧೧—೬

ಒಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮—೪—೦

„ ೩ „ „ „ ರೂ. ೮—೦—೧

ಅಪೇಕ್ಷೆ ಪಡುವವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ. ಎಲ್ ಎ ಪ್ರೊರವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ

ಜೋನೋಸಿಯಾ.

ತಿಗಲುತ್ತಿರುವ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಆಫೀಸು, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣೆ, ವಿದ್ಯಾಶಾಲೆ, ಹೋಟೇಲ್, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟಿರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತಕ್ಷಣದಲ್ಲಿ ಬೇನೆಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ಸೊಸ್ತು ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ನೋವು ಎಂದರೆ ಇದನು ಹಚ್ಚತಕ್ಕ ತೈಲವೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಳುಕು, ಗಾಯಗಳು, ನರ ಹೊರಳುವದು, ಸಂಕಟ, ಸಿಡಿಲು ವಾಯು, ಗುಳ್ಳೆಗಳು, ಹಲ್ಲುನೋವು, ಮುಖ ನೋವು, ಊದುಗಳು, ಗಡ್ಡೆಗಳು, ರೋಗಗಳು, ಹುಳುಕಡ್ಡಿ, ಸೊಳ್ಳೆ ಮುತ್ತು, ಚೇಳು ಕಡಿದದ್ದು, ಚಿಪ್ಪುರುಡು, ಬೆಂಕಿಯಲ್ಲಿ ಸುಟ್ಟು ಕೊಂಡದ್ದು, ಶತ್ರ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ವಾಸಿಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ ೩ ಸಣ್ಣ ಡಬ್ಬಿ ೦ ಕ್ಕೆ ೧ ರೂ., ದೊಡ್ಡದಕ್ಕೆ ರೂ. [illegible] ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. [illegible] ಡಬ್ಬಿದಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. [illegible] ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖

ಜೋನೋಸಿಯಾ ಯಂಬ್ರೋಕೇಷನ್

ಈ ತೈಲವು ಪಶು ರೋಗಗಳಿಗೆ ಉಪಯೋಗಿಸತಕ್ಕದ್ದು. [illegible] ಇದನ್ನು ಹಚ್ಚಿ ಕಟ್ಟಬಹುದು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಹಚ್ಚುವದು ಬಹು ಬೇಗನೆ ಸೇರಿಕೊಳ್ಳಬಲ್ಲುದು. ಡಬ್ಬಿಗಳಲ್ಲಿ ತುಂಬಿ [illegible] ಬಿಕರಿ ಮಾಡಲ್ಪಡುವದು. [illegible] ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಸ್ಥಳಗಳಲ್ಲಿ ದೊರೆಯುವದು.

ಈ ಔಷಧಗಳ ವಿವರವನ್ನೂ, ಸರ್ಟಿಫಿಕೇಟುಗಳನ್ನೂ ಉಳ್ಳ ಕೋಟುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಜೋನೋಸಿಯಾ ಕಂಪೆನಿ, [illegible] ಸ್ಟ್ರೀಟ್, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಕಲಬೆರಕೆ ಇಲ್ಲದವು ಅಥವಾ ಈಗ ತಾನೇ ಹುರಿದದ್ದು. ತೋಟದಿಂದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು

35 23

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲ್ಪವಾದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ:—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 71-12



ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚೆಕ್ಕೆಸಿಯಲ್ಲಿರುವ ಪಬ್ಲಿಕ್ ವರ್ಕ್ಸ್ ಸಬ್ ಡಿವಿಷನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕಳುಹಿಸಿದ ಹಿಂದೆ ಕಳುಹಿಸಿಕೊಟ್ಟ ೦೦ ಔಷಧಿ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಚಲೀ ಬೇಕೆನ್ನುತ್ತಿರುವ ಕಾರಣ ದಯವಿಟ್ಟು ಇನ್ನೊಂದು ೦೦ ಔಷಧಿ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮—೦; [illegible] ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖

ಅಮೃತಾಂಜನ ಕರ್ಪೂರ.

Zam-Buk Camphor

ಈ ಔಷಧವು ಅಜೀರ್ಣ, ಅತಿಭೇದಿ, ಸಾಧಾರಣ ಹೊಟ್ಟೆನೋವು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ ಕ್ಷಣಾರ್ಧದಲ್ಲಿ ಪರಿಣಾಮ ಕೊಡುವ ಔಷಧವಾಗಿ ಪರಿಣಮಿಸಿ, ತ್ವರಿತ ಗುಣಕೊಡುವದು. ಇದು ಸಂಗಡ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನೂ ಕೂಡ ಗುಣಪಡಿಸುತ್ತದೆ. ಕ್ರಯದ ದರವು ಪ್ರಾಂಚ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಇದು ಅಮೂಲ್ಯವಾದ ಔಷಧವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಎಂದು ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಅಮೃತಾಂಜನ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕಲೆಕ್ಟರ್ ಸ್ಟ್ರೀಟ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಸ್ಥಳಗಳಲ್ಲೂ ನಮ್ಮ ಏಜಂಟರು ಮೂಲಕ ಕೊಡುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸ್ಟೇಜ್ ಸಹಿತ . . . ರೂ ೧—೧೪—೦

„ „ ೦—೧೫—೦

ಚಂದಾದಾರರಾಗ ಬಯಸುವವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆದು ಕಳುಹಿಸಿ. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ಸೂಚಿಸಬೇಕು.

ನಮ್ಮ ವಿಳಾಸ—ಮ್ಯಾನೇಜರ್ ವೃತ್ತಾಂತ ಪತ್ರಿಕೆ, ಮೈಸೂರು.

ಮುಂಬಯಿ ವ್ಯಾಪಾರವಾಡತಕ್ಕುವವರು.

65 8

ನಮ್ಮಲ್ಲಿ ಪ್ರಯೋಜನ ಮುಂತಾದ ತಕ್ಕ ಅಳತೆ ಮತ್ತು [illegible] ಉಪಯುಕ್ತ ಮಾಹಿತಿಯುಳ್ಳ ಪುಸ್ತಕ—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು [illegible] ಯೋಗ್ಯ [illegible] ಲಿಂಗಾಯತ ಧರ್ಮಸಂಬಂಧ ವಿರಕ್ತ [illegible] ಪುಸ್ತಕ—ನಾಲ್ಕು ಆಣೆ. [illegible] ಮುಂಬಯಿ.

ಟಪಾಲು ಖರ್ಚ ಫುಕಟ! ಟಪಾಲು ಖರ್ಚ ಫುಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 5



ಎಲ್ಲಾ ಬಣ್ಣಗಳ ಮಸಿಯನ್ನು ಕೂಡ ಅಂಥ ಉತ್ತಮ ಮಸಿಯನ್ನು ಅಗ್ಗವಾಗಿ ಇಷ್ಟರ ಹಿಂದು ಸ್ಥಾನದಲ್ಲಿ ಯಾರೂ ಕೊಟ್ಟಿಲ್ಲ. ಒಮ್ಮೆ ಅನುಭವ ತಕ್ಕಲ್ಲಿ ೧೦೦ ಪುಡಿಗಳಿಗೆ ೧ ರೂಪಾಯಿ ಟಪಾಲು ಖರ್ಚ ಫುಕಟ

ವಿಳಾಸ—ವಾಯ್ ಜಿ ಶಾಸ್ತ್ರಿ [illegible], ಪುಣೆ ಸಿಟಿ.

ತ್ವರೆಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲ. 94 3

ರಾಸ್ಕೋಪ ಸಿಸ್ಟಂ ಲಿವರ್ ವಾಚ್.

ಬಂದೋಬಸ್ತು. ನಂಬಿಗೆಯುತ.



ಇದರ ಸಂಗಡ ಸ್ಪ್ರಿಂಗ್, ಚೆನ್ನಾಗಿ, ಪೆಟ್ಟಿಗೆ, ಹೀಗೆ ೩ ಸಾ[illegible]ನು ಕಳುಹಿಸುತ್ತೇವೆ. ಟ ಬ ಬೇರೆ ಒಂದೇಸಾರಿ ೩ ವಾಚು ತೆಗೆದುಕೊಂಡರೆ ಟಪಾಲ ಖರ್ಚು ಮಾಫಿ, ೬ ವಾಚು ತರಿಸಿಕೊಂಡರೆ ೧ ವಾಚು ಬಹುಮಾನ ಕೊಡುವೆವು. ಹೀಗೆ ಬೇಕಾಗುವ ಸರಪಣಿಯ ಕಿಮ್ಮತ್ತು ೦—೮—೦, ಅಂಥಾ ಯಂತ್ರ ೧—೮—೦, ಸಾಧಾರಣವಾದವು ೦—೮—೦ ವಿ ಪಿ ಇಂದಲೂ ರವಾನಿಸುತ್ತೇವೆ.

ವಿಳಾಸ—ಜಿ. ಯಲ್. ಜೋಶಿ ಅಂಡ್ ಕೋ,

ಪೋಸ್ಟ್ ಶಿರ್, ಜಿಲ್ಲಾ ಉತ್ತರ ಕಾನಡಾ.

ಅದ್ಭುತದ ಮೇಲೆ ಅದ್ಭುತ.

86 8

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇಳಿತ, ತಲೆನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಗಂಟಲುಹುಣ್ಣು, ಕೀಲುಬೇನು, ಎದೆಗಳ ನೋವು, ಆಸ್ತ್ಮಾ, ಈ ಪ್ರಕಾರವಾದ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಧೈರ್ಯಪಡಬೇಕಾದದ್ದಿಲ್ಲ ಈ ದೇಹಬಾಧೆಗಳಿಗೆಲ್ಲಾ ಪ್ಲೇನ್ಟೆಂಟ್ ಯವರ ವ್ಯಾಪಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ಒಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿಯೂ ನಿವಾರಣೆ ಮಾಡುವುದು ಉಪಯೋಗಿಸುವ ವಿಧಾನ ಮುಂತಾದ್ದನ್ನು ಬಾಟ್ಲ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ ತರಿಸಿದವರಲ್ಲಾ ಎಂದೂ ಎಂದಿಗೂ ವ್ಯಸನಪಡುವುದಿಲ್ಲ ಇದರ ಗುಣವು ಅಷ್ಟು ಅನುಭವವುಳ್ಳದ್ದು ಕ್ರಯ —೧ ಬಾಟ್ಲಿಗೆ ೧೦ ಆಣೆ, ೩ಕ್ಕೆ ೨ ರೂಪಾಯಿ, ೬ಕ್ಕೆ ೩ [illegible] ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ

ನವ್ಯ ವಿಳಾಸ —ಎಫ್ ಪಟ್ಟಿಯಬ ಅರ್ಗ, ಸಿವೆಟ್ರಿ ರೋಡ್, ವೇಪೇರಿ, ಮದರಾಸ್

CHAMBERLAIN'S COLIC, CHOLERA AND DIARRHOEA REMEDY

ಚೇಂಬರ್ಲೇನ್ ಯವರು ಹೊಟ್ಟೆರೋಗ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

15 3



ಈ ಹೊಟ್ಟೆಯ ನೋವು, ಬರೀ ಭೇದಿಯಾಗುವುದು ಆಸಂಕೆ, ರಕ್ತಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಔಷಧ ಯಾಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿನ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ [illegible] ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಶೀಸೆಗೆ ೧ ರೂಪಾಯಿ   ದೊಡ್ಡ ಶೀಸೆಗೆ ೨ ರೂಪಾಯಿ

ಅಭಾವದ ಕುರುಹುಗಳು

ಸ್ವಾಭಾವಿಕವಾಗಿ ಆರೋಗ್ಯ ಬರಬೇಕಾದ ಕುರುಹುಗಳನ್ನು ಕಂಡುಹಿಡಿಯಬಹುದು

ಶಕ್ತಿಯ ಅಭಾವದ ಕುರುಹು!

[illegible] ಬಲಹೀನವುಳ್ಳವರುಗಳಿಂದ ಇದರಿಂದ [illegible] ಬಲಪಡಿಸತಕ್ಕದ್ದು ಬಹು ಆವಶ್ಯಕ

SCOTT'S EMULSION 57 18

(ಸ್ಕಾಟ್ಸ್ ಇಮಲ್ಷನ್)

[illegible] ಈ ಕುರುಹುಗಳನ್ನು ಹೋಗಲಾಡಿಸುವುದು.

ಬಲಹೀನವಾದ ಶ್ವಾಸಕೋಶಗಳನ್ನು, ಅರವು, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್

ಈ ಮೀನಿನ ಗುರುತು ಇರುವ ಔಷಧವನ್ನೇ ಕೇಳಿಕೊಳ್ಳಿ

ವೃತ್ತಾಂತ ಪತ್ರಿಕೆ.

ಸರ್ ೧೯೦೬ ನೇ ಇಸವಿ ಜೂಲೈ ತಾ ೧೯ ನೇ ಗುರುವಾರ

ವಿಗ್ರಹಾರಾಧನೆ

ವಿಗ್ರಹಪೂಜೆಯ ಪಕ್ಷವನ್ನು ಹಿಡಿದು ವಾದಿಸುವವರು ವಿಗ್ರಹಗಳ ಸಹಾಯವಿಲ್ಲದೆ ದೇವರನ್ನು ಆರಾಧಿಸುವುದು ಅಸಾಧ್ಯವೆಂದು ಸಾಧಿಸುವರು ಕ್ರಿಸ್ತರು ಮುಂತಾದವರು ವಿಗ್ರಹಗಳ ಸಹಾಯವಿಲ್ಲದೆ ದೇವಾರಾಧನೆಯನ್ನು ಮಾಡುವವರಾಗಿದ್ದಾರಲ್ಲ ಎಂದು ನ್ಯಾಯವನ್ನು ಒಡ್ಡಿದರೆ ಅದಕ್ಕೆ ಇವರು ಹೇಳುವದೇನೆಂದರೆ—ವಿಗ್ರಹಗಳು ಎರಡು ವಿಧಗಳಾಗಿವೆ ಒಂದು ವಿಧ ವಿಗ್ರಹಗಳು ಕಲ್ಲು ಮಣ್ಣು ಚಿನ್ನ ಬೆಳ್ಳಿ ಎಂಬಿವೇ ಮೊದಲಾದ ವಸ್ತುಗಳಿಂದ ಮಾಡಿದಂಥವುಗಳು ಇವು ನಮ್ಮ ಹೊರಗಣ ವಸ್ತುಗಳಾಗಿಯೂ ಇಂದ್ರಿಯಗಳಿಗೆ ಗೋಚರವಾದವುಗಳಾಗಿಯೂ ಇವೆ ವಸ್ತುರೂಪವಾದ ವಿಗ್ರಹಗಳಲ್ಲದೆ ಬುದ್ಧಿಗೆ ಗೋಚರವಾಗತಕ್ಕಂಥ ವಿಗ್ರಹಗಳೂ ಇವೆ ಬುದ್ಧಿಗೆ ಗೋಚರವಾಗತಕ್ಕ ವಿಗ್ರಹಗಳು ಎಂಥವುಗಳೆಂದರೆ—ನಾವು ಯಾವ ದೇವರನ್ನು ಆರಾಧಿಸುತ್ತೇವೋ ಆತನ ವಿಷಯವಾಗಿ ನಮ್ಮಲ್ಲಿರುವ ಭಾವಗಳೇ ಈ ವಿಗ್ರಹಗಳು ದೇವರನ್ನು ಪೂಜಿಸುವದಕ್ಕೆ ಮೇಲೆ ಕಂಡ ಈ ಎರಡು ವಿಧ ವಿಗ್ರಹಗಳಲ್ಲಿ ಯಾವುದಾದರೊಂದು ಬಗೆಯ ವಿಗ್ರಹಗಳ ಸಹಾಯವಿಲ್ಲದೆ ಆಗುವದೇ ಇಲ್ಲ ಆದದರಿಂದ ಸಕಲರೂ ವಿಗ್ರಹಾರಾಧಕರೇ ಕ್ರಿಸ್ತರಿಗೂ ಇತರ ಮತಸ್ಥರಿಗೂ ಈ ವಿಷಯದಲ್ಲಿ ವರ್ತಿಸುವ ವ್ಯತ್ಯಾಸವು ಸ್ವಲ್ಪವೇ ಎಂದು ವಿಗ್ರಹಪೂಜಕರು ವಾದಿಸುವರು ಇವರನ್ನು ಸ್ವಲ್ಪವಾಗಿ ಬಾಹ್ಯ ನೋಡೋಣ ಬಹುವಸ್ತುರೂಪವಾದ ವಿಗ್ರಹಕ್ಕೂ ಬುದ್ಧಿಗೆ ಗೋಚರವಾಗತಕ್ಕ ಭಾವಕ್ಕೂ ಇರುವ ವ್ಯತ್ಯಾಸವು ಸ್ವಲ್ಪವೇ ಎಂದು ಹೇಳುವದನ್ನು ನಾವು ಒಪ್ಪಲಾರೆವು. ಆ ವ್ಯತ್ಯಾಸವು ಅಪರಿಮಿತವಾಗಿದೆ ವಸ್ತುರೂಪವಾದ ವಿಗ್ರಹಗಳ ಮೂಲಕವಾಗಿ ಆರಾಧಿಸುವದರಿಂದ ಉಂಟಾಗುವ ಫಲಗಳಿಗೂ ಬುದ್ಧಿಗೆ ಗೋಚರವಾಗತಕ್ಕ ಭಾವಗಳ ಮೂಲಕವಾಗಿ ಆರಾಧಿಸುವದರಿಂದ ಉಂಟಾಗುವ ಫಲಗಳಿಗೂ [illegible] ಬಹು [illegible] ವಿಗ್ರಹದ ಸಹಾಯವಿಲ್ಲದೆ ದೇವರನ್ನಾರಾಧಿಸುವದಕ್ಕೆ ಆಗುವದೇ ಇಲ್ಲವೆಂದು ನಾವು ಒಪ್ಪಿಕೊಳ್ಳುತ್ತೇವೆ ಒಂದು ವಸ್ತುವಿನ ವಿಷಯದಲ್ಲಿ ಯೋಚಿಸಿದರೆ ಒಂದು ಭಾವವಿಲ್ಲದೆ ಯೋಚಿಸುವದಕ್ಕೆ ಆಗುವದಿಲ್ಲ [illegible] ಆ ವಸ್ತುವಿನ ವಿಷಯದಲ್ಲಿ ನಾವು ತಿಳಿದಿರುವ ಭಾವ [illegible] ಬುದ್ಧಿಗೆ ಗೋಚರವಾಗುವ ವಿಗ್ರಹವಾಗಿದೆ [illegible] ಭಾವಕ್ಕೆ [illegible] ಇದರಿಂದ ಅಪರಿಮಿತ ಭಾವವು [illegible] ಆಗಿರುವ ಪರಿಣಾಮ [illegible] ನಮ್ಮ ಜೀವನವು ಆ [illegible] ಪೂರ್ಣವಾಗಿರಲಾರದು. [illegible] ಅದು ಸರಿ ಎಂದಾಗಿ [illegible] ಒಳಪಡುತ್ತಲೇ ಇರಬೇಕಾಗಿದೆ ಬುದ್ಧಿಸ್ವರೂಪವಾಗಿ ದೇವರನ್ನು ಆರಾಧಿಸುವವನಿಗೆ ಆ ಪ್ರಕಾರ [illegible] ವಿಗ್ರಹ ಇರುವ ವ್ಯತ್ಯಾಸವು ಏನೆಂದರೆ—ಆವನು [illegible] ಮುಂದೆ ಯಾವ ವಸ್ತುವನ್ನು ಮಾಡಿಟ್ಟುಕೊಳ್ಳುತ್ತಾನೋ ಅದಕ್ಕನುಸಾರವಾಗಿಯೇ ದೇವರ ವಿಷಯವಾದ ಅವನ ಭಾವವೂ ಬುದ್ಧಿಯಲ್ಲಿ ರೂಪಿಸಲ್ಪಡುತ್ತಿರುವುದಿಲ್ಲ ಪರಂತು ಬುದ್ಧಿಗೆ ಗೋಚರವಾಗತಕ್ಕಂಥ ರೂಪದ ಮೂಲಕವಾಗಿಯೇ ದೇವರನ್ನು ಆರಾಧಿಸುವವನು ದೇವರ ವಿಷಯವಾಗಿ ತನ್ನಲ್ಲಿ ಹುಟ್ಟುವ ಭಾವವನ್ನು ದೇವರ [illegible] ದ್ದನ್ನಾಗಿ ಮಾಡಬೇಕೆಂದು ದೇವರನ್ನೇ ಕೇಳಿಕೊಳ್ಳುತ್ತಾನೆ ಈ ವಿಷಯವಾಗಿ ತನ್ನ ಭಾವವನ್ನು ದೇವರ ಪರೀಕ್ಷೆಗೆ ಒಪ್ಪಿಸಿಕೊಡುತ್ತಾನೆ. ದೃಷ್ಟಾಂತವಾಗಿ—ದೇವರಿಗೆ ಯಾವ ರೂಪವಾದರೂ ಇಲ್ಲವೆಂತಲೂ ಆತನು ಪರಿಪೂರ್ಣನೆಂತಲೂ ಸಕಲ ವಿದ್ಯಾಪೂರ್ಣನೆಂತಲೂ ಸರ್ವವ್ಯಾಪಿ ಇಂಥ ಪರಮಾತ್ಮನನ್ನು ಪೂಜಿಸುವದಕ್ಕೆ ವಿಗ್ರಹಾರಾಧಕರು ಜಡವಸ್ತುರೂಪವಾದ ಒಂದು ಆಕೃತಿಯನ್ನು ಮಾಡಿಟ್ಟುಕೊಳ್ಳುವರು ಒಳ್ಳೆಯದು ಈ ಆಕೃತಿಗೆ ಯಾವದೋ ಒಂದು ಪರಿಮಾಣವೂ, ಮುಖ, ಕೈಕಾಲುಗಳು ಮೊದಲಾದ ಕೆಲವು ಅವಯವಗಳೂ ಇರಬೇಕು ಇಂಥ ಅವಯವಗಳಿಗೆ ಗೋಚರವಾಗುವಂಥ ಈ ವಿಗ್ರಹಗಳನ್ನು ಮುಂದಿಟ್ಟುಕೊಂಡು ಯಾವಾತನು ಪೂಜಿಸುತ್ತಾನೋ ಆತನು ದೇವರ ವಿಷಯವಾಗಿ ತನ್ನ ಬುದ್ಧಿಯಲ್ಲಿ ಉಂಟಾಗಿರುವ ಭಾವವು ಆ ವಿಗ್ರಹದ ರೂಪಕ್ಕನುಸಾರವಾಗಿಯೇ ರೂಪಿಸಲ್ಪಡುತ್ತದೆ ದೇವರು ನಿರಾಕಾರಿಯಾಗಿದ್ದಾನೆಂಬ ಭಾವವನ್ನು ಬರುತ್ತ ಬರುತ್ತ ಕ್ರಮೇಣ [illegible] ಬಿಟ್ಟು ದೇವರು ಯಾವದೋ ಒಂದು ರೂಪವುಳ್ಳವನಾಗಿದ್ದಾನೆಂದೇ ತಿಳಿದುಕೊಳ್ಳುವದಕ್ಕೆ ವಿಗ್ರಹಾರಾಧನೆಯು ಕಾರಣವಾಗುತ್ತದೆ ನಿಜವಾಗಿ ದೇವರು ಸಹಜವಾಗಿ ಯಾವ ರೂಪವಿಲ್ಲದವನೋ ಆ ರೂಪವುಳ್ಳವನೇ ಆಗಿದ್ದಾನೆಂದು ಯೋಚಿಸುವಂತೆ ಮಾಡುವದಾಗಿದೆ ದೇವರ ಸಹಜವಾದ ಇರುವಿಕೆಯ ವಿಷಯದಲ್ಲಿ ನಮಗಿರಬೇಕಾದ ಅಭಿಪ್ರಾಯವನ್ನು ಬೇರೆ ಮಾಡಿ ಆತನ ನಿಜವಾದ ಇರುವಿಕೆಗೆ ವಿರುದ್ಧವಾದ ಭಾವವನ್ನು ನಮ್ಮಲ್ಲಿ ಹುಟ್ಟಿಸುವದಾಗಿದೆ ದೇವರು ಆತ್ಮಸ್ವರೂಪ, ವಿಗ್ರಹವಾದರೋ ಜಡವಸ್ತುವಾಗಿದೆ; ದೇವರು ನಿರಾಕಾರಿಯಾಗಿದ್ದಾನೆ ವಿಗ್ರಹವಾದರೋ ರೂಪವುಳ್ಳ ವಸ್ತುವಾಗಿದೆ

[ಸಶೇಷ]

ಒಳದೇಶದ ವೃತ್ತಾಂತಗಳು.

ತಿರುಪತಿಯಲ್ಲಿ ಈಗ ವಾಂತಿಭೇದಿ ಉಪದ್ರವಿರೋಣದರಿಂದ ನೈವೇದ್ಯ [illegible] ಮೂರು ಸಂಸ್ಥಾನದಿಂದ ಅಲ್ಲಿಗೆ ಹೋಗಬಾರದೆಂದು ಸೂಚಿಸುತ್ತೇವೆ

****

ಬೆಂಗಳೂರಿನಲ್ಲಿ ಕೋರ್ಟುಗಳನ್ನು ಒಂದು ಕಡೆ ಮಾಡಬೇಕೆಂದು ಗೊತ್ತುಮಾಡಿ, ಅವುಗಳಿಗಾಗಿ ಬೇರೆ ಕಟ್ಟಡ ಕಟ್ಟುವದಕ್ಕೆ ಸರಕಾರದವರು ಮೂರು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ

****

ರಬ್ಬರ್ ವ್ಯವಸಾಯಕ್ಕೆ ಜಮೀನು ಕೊಡುವ ವಿಚಾರವಾಗಿ ಮೈಸೂರು ಗವರ್ನ್ಮೆಂಟಿನವರು ಈ ತಿಂಗಳ ಎಂಟಕ್ಕೆ ಬೆಂಗಳೂರಿನಲ್ಲಿ ದೊಡ್ಡ ಸಭೆ ಮಾಡಿ, ಪ್ಲಾಂಟರುಗಳ ಮೊದಲಾದವರ ಅಭಿಪ್ರಾಯವನ್ನು ಸಂಗ್ರಹ ಮಾಡಬೇಕೆಂದು ಗೊತ್ತುಮಾಡಿದ್ದರಷ್ಟೆ. ಈಚೆಗೆ ಪ್ಲಾಂಟರುಗಳ ಸಂಘದವರೂ ಇತರರೂ ಬಂದುಕೊಂಡದ್ದರಿಂದ [illegible] ಗವರ್ನ್ಮೆಂಟಿನವರು ಆ ಸಭೆಯನ್ನು ಮುಂದಿನ ಆಗಸ್ಟು ೧೬ನೇ ಗುರುವಾರ ಮಧ್ಯಾಹ್ನ ನಡೆಸುವದಾಗಿ ಗೊತ್ತುಮಾಡಿ [illegible]

****

ಮೈಸೂರು [illegible] ಸೆಂಟ್ರಲ್ ಪ್ರೆಸ್ [illegible] ಪರೀಕ್ಷೆಗಳಲ್ಲಿ [illegible] ಮೊದಲಿನ ಸ್ಥಾನಗಳನ್ನು [illegible] ಅವರಿಗೆ ಸರಕಾರದ [illegible] ಕೊಟ್ಟಿದ್ದಾರೆ

****

ಈ ಸಲ [illegible] ಬೆಂಗಳೂರು [illegible] ಪರ್ಯಂತ ಇರುವ [illegible] ವಿನ ಆ ಸಹ [illegible] ಕೊಡುವದಾಗಿ [illegible] ರೂಪಾಯಿ [illegible] ಕೊಟ್ಟು ಹಾಗೆ ಹೇಳಿ [illegible]

****

ಗೋರಿಪಾಳ್ಯದ ರಂಗ [illegible] ವೆಂಕಟೆ ಗ್ರಾಮದಲ್ಲಿ ಗುಂಡಬಟ್ಟಲಿನ ಹೊಲದಲ್ಲಿ ಉಳುತ್ತಿದ್ದ ಬಾಯಾರಿ ನೀರು ಕುಡಿಯುವದಕ್ಕೆ ಬಾವಿಯಲ್ಲಿಳಿದವನು ಆಕಸ್ಮಾತ್ತಾಗಿ ಬಿದ್ದು ಸತ್ತುಹೋದನೆಂದು ಕೇಳುತ್ತೇವೆ

****

ಮೆ|| ಎ. ಕೆ ಸೀತಾರಾಮ ಶಾಸ್ತ್ರಿಗಳು ದಕ್ಷಿಣ ದೇಶದಿಂದ ಬಂದು ಒಂದು ವಾರದಿಂದ ರಾಜಧಾನಿಯಲ್ಲಿ ಭಕ್ತಿ, ಜ್ಞಾನ, ಕ್ರಿಕೆ [illegible] ಮೊದಲಾದ ವಿಷಯಗಳನ್ನು ಕುರಿತು ಕನ್ನಡದಲ್ಲಿ ಇಂಗ್ಲೀಷಿನಲ್ಲೂ ಉಪನ್ಯಾಸಮಾಡುತ್ತಿದ್ದಾರೆ

****

ನಮ್ಮ ಚೀಫ್ ಕೋರ್ಟಿನ ಚೀಫ್ ಜಡ್ಜರಾಗಿರುವ ಮೆ|| ಸ್ಟೆಯಿವರು ಆ ಕೆಲಸಕ್ಕೆ ರಾಜೀನಾಮೆಕೊಟ್ಟು ಹೊರಟುಹೋಗಿದ್ದಾರಷ್ಟೆ ಆವರ ಸ್ಥಾನಕ್ಕೆ ಗವರ್ನ್ಮೆಂಟಿನವರು [illegible] ಪ್ಲಿರುವ ಮೆ|| [illegible] ಎಂಬ ಜಡ್ಜಿಯವರನ್ನು ನೇಮಿಸುತ್ತ [illegible] ಬಂದಿದೆ

****

ಬೆಂಗಳೂರು ರೈಲ್ವೆಸ್ಟೇಷನ್ ಬಳಿ ತಾ|| ೧೦ನೇ ಮಂಗಳವಾರ [illegible] ರೈಲಿಗೆ ಸೇರಿದ ಆಗಸ [illegible] ಬಳಿ ಯಾರೋ ಒಂದು ಶಿಶುವನ್ನು ಕುಕ್ಕೆಯಲ್ಲಿಟ್ಟು ಹೋಗಿದ್ದರೆಂತಲೂ ಅದನ್ನು ಕೆಲವರು ನೋಡಿದಾಗ್ಗೆ ಅದಕ್ಕೆ ಕಟುಕರು ಪ್ರಾಣವಿದ್ದು ಕೂಡಲೆ ಸತ್ತುಹೋಯಿತೆಂತಲೂ ವರ್ತಮಾನ ಬಂದಿದೆ

****

ದಿವಾನರವರು ಸೆಕ್ರಟರಿಗಳ ಸಮೇತ ಕಳೆದ ಗುರುವಾರ ಬೆಳಿಗ್ಗೆ ರಾಜಧಾನಿಗೆ ಬಂದು ಮೊನ್ನೆ ಭಾನುವಾರ ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ ವಾಪಸು ಹೋದರು ಅನಂತರ [illegible] ಅಧಿಕಾರಿಗಳ ಸಮೇತ ಬಳಗಳಕ್ಕೆ ಹೋಗಿ ಪಡುವಣ ಸೇರು ಸರಬರಾಯಿ ಆಗುವ ಕಾರ್ಖಾನೆಯನ್ನು ನೋಡಿಕೊಂಡು ಬಂದರು

****

ಉಡುಪಿ ಮಠದ ಸ್ವಾಮಿಗಳು ಕಳೆದ ವಾರ ಚನ್ನರಾಯಪಟ್ಟಣ ಮಾರ್ಗವಾಗಿ ಬಂದು ಸಾವೇ [illegible] ಹಿರೀಸಾವೆಯಲ್ಲಿ ಒಂದೆರಡು ದಿನ ತಂಗಿದ್ದರೆಂತಲೂ, ಅಲ್ಲಿನ ಪ್ರಜೆಗಳು ಅವರನ್ನು ಸತ್ಕರಿಸಿ, ಮಹಾರಾಜರಿಂದ ನಲ್ಲಿಗೆ ಕರೆದೆ [illegible] ಬೆಟ್ಟ [illegible] ಬರೆಯುತ್ತಾರೆ

****

ಬೆಂಗಳೂರು [illegible] ಸ್ಕೂಲಿನಲ್ಲಿ ಹಿಂದಿನ ಗುರುವಾರ [illegible] ವ್ಯವಸಾಯದ ಇಲಾಖಾ ಮೆ|| ಬಿ. ಜಿ. ರಾಮ [illegible] ಯವರು ಅಗ್ರಾಸನವನ್ನು [illegible] ಅಭಿವೃದ್ಧಿ [illegible] ಕುರಿತ ಮಾತನಾಡಿ, ಬಾಲಕರಿಗೆ [illegible] ನಗಳನ್ನು ಕೊಟ್ಟರೆಂದು ತಿಳಿದು ಬಂದಿದೆ

****

ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ಬ್ಲೇಸ್ ಸರ್ವಿಸ್ [illegible] ರುವಂಥವರ [illegible] ಸಣ್ಣ ಸಣ್ಣ ನೌಕರಿಗಳಲ್ಲಿ ಇರುವ ನೌಕರದಾರರನ್ನು ಗವರ್ನ್ಮೆಂಟ್ ಬದ್ದಿಗೆ ಪ್ರಶ್ನೆಪತ್ರಗಳೆಂಬ ಏಕೆ

ನೇಮಿಸಿ, ಅವರಿಗೆ ೧೦ ರೂಪಾಯಿ ಅಲೌನ್ಸು ಕೊಟ್ಟು, [illegible] ವರ್ಷಗಳ ತನಕ ಪೆಟ್ಟಿ ಶಿವಿಲಿಯನ್ ಆಫೀಸಿನಲ್ಲಿ ಕೆಲಸ ಕಲಿಯುವಂತೆ ಇಟ್ಟರೆ, ಡೆಪ್ಯುಟಿ ಅಮಲ್ದಾರರನ್ನಾಗಿಯೂ ಅಮಲ್ದಾರರನ್ನಾಗಿಯೂ ನೇಮಿಸುತ್ತೇವೆಂತಲೂ ಹಾಗೆ ಒಂದು ವರುಷ ಬದಲಿ ನೌಕರಿ ಸಮರ್ಥರೆನಿಸಿಕೊಂಡರೆ ಆ ಅಧಿಕಾರದಲ್ಲಿ ಅವರನ್ನು ಖಾಯಂ ಮಾಡುತ್ತೇವೆಂತಲೂ ಗವರ್ನಮೆಂಟಿನವರು ಹೊಸ ಏರ್ಪಾಡು ಮಾಡಿದ್ದಾರೆ.

●●●●

ಕೋಲಾರದ ಸರ್ವಸ್ ಜಡ್ಜರು ಪುಟ್ಟಾಜಿರಾವ್ ಎಂಬ ಪೋಲೀಸ್ ಹೆಡ್ ಕಾನ್ಸ್ಟೆಬಲಿಗೆ ಅತನು ಲಾಕಪ್ಪಿನಲ್ಲಿದ್ದವರನ್ನು ಹಿಂಸೆಪಡಿಸಿದ್ದಕ್ಕಾಗಿ ನಾಲ್ಕು ವರುಷ ಕಠಿಣ ಶಿಕ್ಷೆ ವಿಧಿಸಿದ್ದರು. ಈ ಮೊಕದ್ದಮೆ ಚೀಫ್ ಕೋರ್ಟಿನಲ್ಲಿ ಅಪೀಲಾಗಿ ಜಡ್ಜಿಗಳು ಆ ಶಿಕ್ಷೆಯನ್ನು ವಜಾಮಾಡಿ, ಅತನನ್ನು ಬಿಡುಗಡೆಮಾಡಿದರು.

●●●●

ಮೈಸೂರು ಸಂಸ್ಥಾನದ ಅಸಿಸ್ಟೆಂಟಾಗಿದ್ದ ಮಿ॥ ಮಾರ್ಕ್‌ಕಿಂಗ್ ಯವರು ನರ್ಗಕಟ್ಟು ಕಳೆದ ತಿಂಗಳಲ್ಲಿ ಮಿ॥ ಮಾರ್ [illegible] ಎಂಬುವರಿಗೆ ಕೆಲಸದ ಛಾರ್ಜನ್ನು ವಹಿಸಿ ಪ್ರಯಾಣಮಾಡಿದರು. ಖಾಯಂ ಅಸಿಸ್ಟೆಂಟಾಗಿ ನೇಮಕವಾಗಿರುವ ಮಿ॥ ಎಸ್. ಪಿ. ರೆನ್ನಿಯವರು ಅಕ್ಟೋಬರ್ ತಿಂಗಳಲ್ಲಿ ಬಂದು ಕೆಲಸದ ಛಾರ್ಜು ವಹಿಸುವರು.

●●●●

ಯಪ[illegible]ರೆಯಲ್ಲಿರುವ ಮಿ॥ ನಾರಾಯಣರಾವ್ ಕ್ರಿಕೆಂಟ್ಯರ್ಯೆನೆಂಬ ಪ್ರ[illegible]ನಂತರು ಈ ಸಲ ಬಂಜನಗೂಡಿನಲ್ಲಿ [illegible]ಕಲ್ಯಾಣೋತ್ಸವ ಕಾಲದಲ್ಲಿ ೧೦೦ ರೂಪಾಯಿ ಮುಟ್ಟಿಸಿ ಸಂತರ್ಪಣೆ ಮಾಡಿಸಿದರೆಂತಲೂ ಇನ್ನು ಮುಂದೆಯೂ ಹಾಗೆ ಸಂತರ್ಪಣೆ ನಡೆಸುವ ದಕ್ಕೋಸ್ಕರ ಗವರ್ನಮೆಂಟಿನಲ್ಲಿ ೧೬,೦೦೦ ರೂಪಾಯಿ ಪ್ರಾಮಿಸರಿ ನೋಟು ಇಡುವವರಾಗಿರುವರೆಂತಲೂ ಕೇಳುತ್ತೇವೆ.

●●●●

ಅರಮನೆ ಆಫೀಸರ್ ಮಿ॥ ಬಿ. ರಾಮಕೃಷ್ಣರಾಯರ ಪತ್ನಿಯವರು ಕಳೆದ [illegible] ಗರ್ಭಿಣಿಯಾಗಿ ಒಂದು ನಾಂತಿಯ [illegible] ಕಳೆದ ಗುರುವಾರ ಬೆಳಿಗ್ಗೆ ೯—೧೦ ಗಂಟೆ ಸ್ವರ್ಗದಲ್ಲಿ ಕಾಲವಾದರೆಂದು ತಿಳಿಸಲು ವ್ಯಸನಪಡುತ್ತೇವೆ. ನಮ್ಮ ಪ್ರಿಯರಲ್ಲ ಮಿ॥ ರಾಮಕೃಷ್ಣರಾಯರಿಗೆ ಈ ವಿಯೋಗದಿಂದ ಬಹಳ ದುಃಖವಾದದ್ದಕ್ಕಾಗಿ ಸಂತಾಪಪಡುವೆವು.

●●●●

ಶಿಕಾರಿಪುರದಲ್ಲಿ ಪ್ರಜೆಗಳೂ ಗ್ರಾಮಾಧಿಕಾರಿಗಳೂ ಕಳೆದ ಬುಧವಾರ ಹೊಸ ಅಮಲ್ದಾರ್ ಮಿ॥ ಗುಲಾಂ ಮಹಮದ್ ಮೆಕ್ಕೆಯವರನ್ನು ಅತ್ಯಂತ ಆದರಪೂರ್ವಕವಾಗಿ [illegible] ಎದುರುಗೊಂಡು ಸತ್ಕಾರಮಾಡಿದರೆಂತಲೂ, ಅವರು ಆ [illegible] ತಾಲ್ಲೂಕಿನ ಛಾರ್ಜನ್ನು ವಹಿಸಿಕೊಂಡರೆಂತಲೂ, ಎರಡು ವಾರಗಳಿಂದ ಮಳೆ ಇಲ್ಲದೆ ಸೈತರು ಬೆಳೆ ಕಳೆವೆವೆಂದು [illegible] ಪ್ರಜೆಗಳು ಮೊಳಕೆಯು ಸೀದು ಹೋಗುತ್ತಾ ಬಂದಿವೆ ಎಂತಲೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ.

●●●●

ಒಬ್ಬ ಬಾತ್ಮೀದಾರರು —ತರೀಕೆರೆಯಲ್ಲಿರುವ ಗಿಡ್ಡೆ ಕೃಷ್ಣಪ್ಪನವರ ಮಗ ಸುಮಾರು ೧೦—೧೧ ವರುಷದ ರಾಮಸ್ವಾಮಿ ಎಂಬುವನು ತಾ. ೯ ನೆ ಸೋಮವಾರ ೧೧ ಗಂಟೆಗೆ ಸ್ಕೂಲಿಗೆ ಹೋಗುತ್ತೇನೆಂತು ಹೇಳಿ ಎಲ್ಲಿಯೋ ಹೊರಟು ಹೋದನು. ಸಾಯಂಕಾಲವಾದರೂ ಮನೆಗೆ ಬಾರದ್ದರಿಂದ ಮನೆಯವರು ಅವನನ್ನು ಹುಡುಕುತ್ತಾ ಬಂದರು. ಮರುದಿನ ಬೆಳಿಗ್ಗೆ ವಿಚಾರಿಸುವಲ್ಲಿ ಅಣ್ಣಾಜಿ ಶಾಮಣ್ಣನವರ ತೋಟದ ಹಿಂದೆ ಇಳೇ ಬಾವಿ ಕಟ್ಟೆಯ ಮೇಲೆ ಸ್ಲೇಟು, ಪುಸ್ತಕ, ಪಂಚೆ ಬೋಸಿಗಳು ಮಾತ್ರ ಕಂಡುಬಂದವು. ಬಾವಿಯಲ್ಲಿ ನೋಡಲು ೩ ಆಳುದ್ದದ ಕೆಳಗೆ ಒಂದು ಪೊಟರೆಯಲ್ಲಿ ಕಾಲು ಸಿಕ್ಕಿ ಬಿದ್ದಿದ್ದನು. ಮೇಲಕ್ಕೆ ತೆಗೆದು ಸರ್ಕಾರದಿಂದ ಮಾಡಿಪ[illegible] ಹೆಣವನ್ನು ವಾರಸ್ದಾರರಿಗೆ ಕೊಟ್ಟರು.

●●●●

ಗೋರೀಬಿದನೂರು ತಾಲ್ಲೂಕ್ ಅಮಲ್ದಾರ್ ಮಿ॥ ಬಿ. ಸುಬ್ಬರಾಯರು ತಾವು ಹುಟ್ಟಿದ್ದು ೧೮೪೯ನೇ ಇಸವಿಯಲ್ಲಿ ಎಂದು ಒಂದು ಸಲವೂ, ೧೮೪೬ರಲ್ಲಿ ಎಂದು ಎರಡನೆಯ ಸಲವೂ, ೧೮೪೦ ರಲ್ಲಿ ಎಂದು ಮೂರನೇ ಸಲವೂ ಗವರ್ನಮೆಂಟಿಗೆ ತಿಳಿಸಿದರು. ತಮ್ಮನ್ನು ಪೆನ್ಷನ್ ಮೇಲೆ ತೆಗೆದುಬಿಡುತ್ತಾರೆಂದು ಊಹಿಸಿ, ಇನ್ನೂ ಕೆಲಸದಲ್ಲಿರಬೇಕೆಂಬ ಕುತೂಹಲದಿಂದ ಅವರು ಈ ರೀತಿ ಬದಲಾವಣೆ ಮಾಡಿದರೆಂದೂ ಇದು ಬಹು ನಿಂದಾರ್ಹವಾದ ನಡವಳಿಕೆ ಎಂದೂ ಗವರ್ನಮೆಂಟಿನವರು ತೀರ್ಮಾನಿಸಿ, ಅವರನ್ನು ಕೂಡಲೆ ಕೆಲಸದಿಂದ ಬಿಡಿಸಿ ರುಖ್ಸತಾಗಿ ಹುಕುಂ ಕೊಟ್ಟು, ಇಂಥಾ ಅಕ್ರಮ ನಡೆಯಲು ಯಾವ ಯಾವ ನೌಕರರು ಕಾರಣರಾದರೋ ಅಂಥವರ ವಿಷಯವನ್ನೆಲ್ಲಾ ಗವರ್ನಮೆಂಟಿಗೆ ರಿಪೋರ್ಟು ಮಾಡಬೇಕೆಂದು ಕಂಟ್ರೋಲರವರನ್ನು ಕೇಳಿದ್ದಾರೆ.

●●●●

ಒಬ್ಬ ಬಾತ್ಮೀದಾರರು ಬರೆಯುವುದು —ಹಾಸನದ ತಾಲ್ಲೋಕು ಮಲ್ಲಿಪಟ್ಟಣ ಹೋಬಳಿ ಹೆರಗು ಗ್ರಾಮದಲ್ಲಿ ಕಳೆದ ತಾ. ೭ ನೆ ಶನಿವಾರ ರಜಾಮರ ಕಂಬ್ಳಿನ ಹತ್ತಲಿಗೆ ಅದೇ ಗ್ರಾಮದ ಕೆಲವು ಜನಗಳು ರಾತ್ರಿ ಹೋಳೆಯಲ್ಲಿ ಕಳವಿನಿಂದ ಮಲ್ಲನ್ನು ದೋಚಿಕೊಂಡು ಮೆಡೆ ಒಳಗಿದ್ದ ಅವರ ಮೂಡೆಯನ್ನು ಸಹಾ ಕಳವು ಮಾಡಿ, ಕೆಲವು ಹೊರೆ ಹುಲ್ಲನ್ನು ಸಾಗಿಸಿ ಕೆಲವು ಹೊರೆಗಳನ್ನು ಸಾಗಿಸುತ್ತಿರುವಷ್ಟರಲ್ಲಿ ಪೋಲೀಸಿನವರೂ ಅದೇ ಗ್ರಾಮದ ಇನ್ನು ಕೆಲವು ಜನಗಳೂ ಕಂಡು, ೩ ಜನಗಳನ್ನು ಹಿಡಿದಿರುವುದಾಗಿಯೂ, ಇನ್ನು ಕೆಲವು ಜನಗಳು ಪರಾರಿಯಾಗಿರುವುದಾಗಿಯೂ ವರ್ತಮಾನ ಕೇಳುತ್ತೇವೆ. ಈಗ ಮಳೆ ಬೆಳೆ ಇಲ್ಲದೆ ದನಕರುಗಳ ಪೋಷಣೆಗೆ ಅನಾನುಕೂಲವಾಗಿದೆ. ಇಂಥಾ ದುರ್ಭಿಕ್ಷಕಾಲದಲ್ಲಿ ಇಂಥಾ ಕೆಲಸಗಳು ನಡೆದರೆ ಗೋಕರುಗಳ ಪೋಷಣೆಗೆ ಅನಾನುಕೂಲವಾಗುತ್ತೆ. ಪಾಪ! ಆ ಗ್ರಾಮಕ್ಕೆ ಸಮೀಪ ಗ್ರಾಮಸ್ಥರಾದ್ದರಿಂದ ಭಯಸ್ಥರಾಗಿ ಅರಿಕೆ ಮಾಡಿಕೊಂಡಿದ್ದೇವೆ.

●●●●

ರಾಜಧಾನಿಯಲ್ಲಿ ಕಾಕ್ಸರಹಳ್ಳಿ ಕೆರೆಯ ನೀರನ್ನು ಪರಿಶೋಧನೆ ಮಾಡಿ ನೋಡಿದ್ದರಲ್ಲಿ ಅದರೊಳಗೆ ವಿಷಕ್ರಿಮಿಗಳಿವೆ ಎಂದು ಕಂಡುಬಂದದ್ದರಿಂದ ಆ ನೀರನ್ನು ಪ್ರಜೆಗಳು ಉಪಯೋಗಿಸಕೂಡದೆಂದು ಪಳ್ಳಿಮ್ಯುನಿಸಿಪಾಲಿಟಿಯವರು ಪಟ್ಟಣಕ್ಕೆಲ್ಲಾ ತಿಳಿಸಿದ್ದಾರೆ. ಆದರ ಮ್ಯುನಿಸಿಪಾಲಿಟಿಯವರು ಅದೇ ನೀರನ್ನು ಪ್ರಜೆಗಳಿಗೆ ಕೊಡುತ್ತಿರುವುದಕ್ಕೆ ಕಾರಣವೇನೋ ತಿಳಿಯದು. ಪ್ರಜಾ ಆರೋಗ್ಯವನ್ನು ಕಾಪಾಡುವುದಕ್ಕಾಗಿಯೇ ಏರ್ಪಟ್ಟಿರುವ ಈ ಇಲಾಖೆಯವರು ಈ ವಿಷಕರವಾದ ನೀರನ್ನು ಇನ್ನಾದರೂ ಕೊಡದೆ ನಿಲ್ಲಿಸುವರೆಂದು ನಂಬಿದ್ದೇವೆ. [illegible]ಜಾಗ್ರತೆಯ ಏರ್ಪಾಡು ಇಲ್ಲದೆ ಹೋದದ್ದರಿಂದ ಕಳೆದ ವಾರ ೩೪ ರಲ್ಲಿ ವಾಂತಿಭೇದಿ ರೋಗ ಕಾಣಿಸಿಕೊಂಡು, ಮೊನ್ನೆ ೧೩ನೆ ತಾ ಮಂಗಳವಾರದ ವರೆಗೆ ೩೪೭ ಜನರಿಗೆ ತಗಲಿದ್ದರಲ್ಲಿ ೩೬ ಜನರು ಕಾಲವಾಗಿದ್ದಾರೆ. ಸೋಂಕಿದವರ ಸಂಖ್ಯೆ ಎಷ್ಟೆಂದರೆ—ಲಷ್ಕರ್ ೧೦೬; ಮಂಡಿ ೧೧೬, ದೇವರಾಜ್ ೧೩೭; ಚಾಮರಾಜ್ ೭೨; ಕೃಷ್ಣರಾಜ್ ೯೩, ನಜರ್‌ಬಾದ್ ೨೧, ಅಸ್ಪತ್ರೆ ೩೦೩, ಕೋಟೆಯಲ್ಲಿ ಉಪದ್ರವಿಲ್ಲ. ಈಗ ಎರಡು ದಿನದಿಂದ ಮೋಡ ಮುಚ್ಚಿಕೆ. [illegible] ಆಗಾಗ್ಗೆ ಸಾಲ್ಮಾರು ಹನಿ ಬೀಳುತ್ತಿದೆ. ದೊಡ್ಡಮಳೆ ಬಂದಿಲ್ಲ.

ಬಹುಮಾನ ಪಡೆದ ವರ್ತಮಾನವು

[(೧) ಪ್ರತಿ ಮೊದಲನೆಯ ಸಂಚಿಕೆಯ ಮೇಲೂ "ಬಹುಮಾನದ ಶೀರ್ಷಿಕೆ" ಎಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಸವಿಸ್ತಾರವಾಗಿ ತಿಳಿಸಬೇಕು (೨) ಲೇಖನವು ಬಾತ್ಮೀದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎರಡು ಮೂರು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಥಗರ್ಭಿತವಾಗಿರಬೇಕು ಒಂದು ಕಾಲಮಿಗಂತ ಹೆಚ್ಚಾಗಬಾರದು. (೩) ಪ್ರತಿಯೊಂದು ಲೇಖನವು ನಮ್ಮ ಕಛೇರಿಗೆ ಪ್ರತಿವಾರದ ಸೋಮವಾರ ಪ್ರಾತಃಕಾಲವೇ ತಲುಪಬೇಕು. (೪) ಬಹುಮಾನ ಪಡೆದವರ ಹೆಸರನ್ನು ಮಾತ್ರ ಪ್ರಕಟಿಸುವೆವಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನದ ನಿಮಿತ್ತವಾಗಿ ನಮಗೆ ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ಬಾತ್ಮಿ ಕಳುಹಿಸಿದ ಮಿ॥ ಎಚ್. ನಾಗೇಶಾಸ್ತ್ರಿಯರ್, ಇಂಗ್ಲಿಷ್ ಮಾಸ್ಟರ್, ಎ. ವಿ. ಸ್ಕೂಲ್, ಶಿಕಾರಿಪುರ, ಶಿವಮೊಗ್ಗ ಡಿಸ್ಟ್ರಿಕ್ಟ್, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದ್ದೇವೆ]

ಕಪಿಗಳ ಚಲ್ಲಾಟವು.

ಈ ತಿಂಗಳು ತಾ॥ ೧ನೆ ಭಾನುವಾರ ಪ್ರಾತಃಕಾಲ ಸ್ನಾನಕ್ಕಾಗಿ ಈ ಊರಿಗೆ ೩ ಮೈಲಿಯಲ್ಲಿರುವ ನದಿಗೆ ಹೋಗಿ ಬಟ್ಟೆ ಒಗೆಯುತ್ತಾ ನಿಂತಿದ್ದೆನು. ದಡದ ಮೇಲೆ ಕೋತಿಗಳು ಗುಂಪಾಗಿ ಕೊಂಬೆಯಿಂದ ಕೊಂಬೆಗೆ ನೆಗೆಯುತ್ತಾ ಕಿರಿಚುತ್ತಿದ್ದವು. ಆ ಪ್ರಕೃತಿ ಭೂಮಿಯ ಮೇಲೆ ನಡೆದುಕೊಂಡು ಮರವನ್ನು ಹತ್ತುವುದಕ್ಕೆ ಹೋಗುತ್ತಿದ್ದ ಒಂದು ಕೋತಿಯ ಕೈಯಲ್ಲಿ ನಾಲ್ಕೈದು ಬಾಳೇಹಣ್ಣುಗಳ ಒಂದು ಚಿಪ್ಪು ಇದ್ದದ್ದನ್ನು ಕಂಡು, ಇದೇನಾಶ್ಚರ್ಯ! ಇಲ್ಲಿ ಬಾಳೇತೋಟಗಳಿಲ್ಲವೆಂದು ಅಲ್ಲಿಯೇ ನಿಂತು, ಸುತ್ತಲೂ ನೋಡಲಾಗಿ ನನ್ನ ಬಲಭಾಗಕ್ಕೆ ಎದುರು ದಡದಲ್ಲಿ ಬಾಳೇಹಣ್ಣಿನ ೨ ಬುಟ್ಟಿಗಳೂ ಅವುಗಳ ಪಕ್ಕದಲ್ಲಿ ೨ ಸಿಂಬಿಗಳೂ ಕಾಣಬಂದವು. ಕೋತಿಗಳು ಬಾಳೇಹಣ್ಣಿನ ಚಿಪ್ಪು ಚಿಪ್ಪುಗಳನ್ನೇ ಎತ್ತಿಕೊಂಡು ಓಡಿಹೋಗುತ್ತಿದ್ದವು. ಈ ಗಲಾಟೆಯನ್ನು ನೋಡಿ, ಹೋ! ಹೋ! ಬಾಳೇಕಾಯಿ! ಬಾಳೇಕಾಯಿ! ಎಂದು ಕೂಗಿಕೊಂಡೆನು. ಕೋತಿಗಳು ಹಿಂದಕ್ಕೆ ಸ್ವಲ್ಪ ಹೋಗಿ ಕಿರಿಚಿದವು. ಆದರೆ ಜನರ್‍ಯಾರೂ ಬರಲಿಲ್ಲ. ನಾನು ಬಟ್ಟೆ ಒಗೆಯುವುದಕ್ಕೆ ಹೋಗ್ಗಿ ಡ ಕೂಡಲೇ ಒಂದೊಂದಾಗಿ ಕೋತಿಗಳು ಆ ಬುಟ್ಟಿಗಳ ಬಳಿಗೆ ಬರುತ್ತಿದ್ದವು. ಸುಮಾರು ಹತ್ತು ನಿಮಿಷಗಳ ವರೆಗೆ ಸಣ್ಣ ಸಣ್ಣ ಕಲ್ಲುಗಳನ್ನು ಎಸೆಯುತ್ತಾ ನಿಂತುಬಿಟ್ಟೆನು. ಅಷ್ಟು ಹೊತ್ತಿಗೆ ಸುಮಾರು ಮಧ್ಯವಯಸ್ಸಿನ ಒಬ್ಬ ಹೆಂಗಸು ಕುರುಚಲುಗಿಡದ ಪೊದೆಯ ಬಳಿಯಿಂದ ಒಂದು ಸೀಳುದಾರಿಯಿಂದ ಬಂದಳು. ಸಟಾ! ಗ್ಯಾ! ಹಗಾ! ಎಂದು ಕೂಗುತ್ತಾ ಒಂದು ಬರಳಕೋಲನ್ನು ಕೈಯಲ್ಲಿ ಹಿಡಿದಿದ್ದಳು. ತನ್ನ ಬುಟ್ಟಿಯನ್ನು ಅಲ್ಲಿಯೇ ಬಿಟ್ಟು, ಮರದ ಬಳಿಗೆ ಬರುವಷ್ಟರಲ್ಲಿ ಇನ್ನೊಬ್ಬಳು ಬುಟ್ಟಿಯ ಬಳಿಗೆ ಬಂದುಸೇರಿ ತನ್ನ ಗ್ರಾಮ್ಯಭಾಷೆಯಿಂದ "ಅಯ್ಯೋ! ಚಲೋ ಯಾಪಾರಕಾಣ! ಈ ಕಾಳುಮುಂಡೇವು ಎಲ್ಲಿದ್ದಿಗಿದ್ದವ್ವೋ! ತುಸ ಕಂತಗಳ್ಳೆಂದೆ ನಾ ಹೊಂಟ ಕೂಡ್ಲೆ ತಾವೂ ಎದ್ದೋಗಿದಾಳೆ. ತಗೋ ಲಾಟಾನಾ ಗಂಟಿಗೆ ಚಾಕ್! ನೀವೆಂತಾ ಯಪಾರಮಾತ್ತೀರಿ ದಿಂಡೇಮುಂಡೇರು" ಎಂದು ಅನ್ನುತ್ತಾ, ಬುಟ್ಟಿಯ ಬಳಿ ಕೂತುಕೊಂಡಳು. ಆ ಮತ್ತೊಬ್ಬಳು ಕೈಯಲ್ಲಿ ಒಂದು ಬರಳಕೋಲನ್ನು ಹಿಡಿದುಕೊಂಡು ಕೂಗುತ್ತಾ ಬಂದು, ಗಿಡದ ರೆಂಬೆ ಮೇಲೆ ಕೂತಿದ್ದ ಕೋತಿಗಳನ್ನು ಬೆದರಿಸಲು ಅವು ಹಾರುವಾಗ ಒಂದು ಕೋತಿಯ ಕೈಯಿಂದ ಚಿಪ್ಪು ಕೈತಪ್ಪಿ ಕೆಳಗೆ ಬಿದ್ದಿತು. ಆ ಹೆಂಗಸು ಅಲ್ಲಿಂದ ಮತ್ತೊಂದು ಮರದ ಬಳಿಗೆ ಹೋಗುತ್ತಿದ್ದಳು. ಈ ಪ್ರಕೃತಿ ೫—೬ ಕೋತಿಗಳು ನಾನು ಒಗೆಯುತ್ತಿದ್ದ ಎಡಪಾರ್ಶ್ವದ ಎದುರುಭಾಗದಲ್ಲಿ ಕೂತುಕೊಂಡು, ಹಣ್ಣು ತಿನ್ನುತ್ತಿದ್ದವು. ಒಂದು ಸಣ್ಣ ಕೋತಿಯು ಹಣ್ಣಿನ ಸಿಪ್ಪೆಯನ್ನು ಅಲುಗಿಸುತ್ತಾ ಕೂತಿತು. ಇದೇ ಕೋತಿಯೇ ಚಿಪ್ಪನ್ನು ಭದ್ರವಾಗಿ ಹಿಂಗಾದೆ ಒಂದು ಹಣ್ಣನ್ನು ಮಾತ್ರ ಹಿಡಿದಿತ್ತಾದ್ದರಿಂದ ಆ ಹಣ್ಣು ಕಳಚಿ ಕೈಗೆ ಬಂದು, ಚಿಪ್ಪು ಬಿದ್ದುಹೋಗಿರಬಹುದೆಂದು ಊಹಿಸುತ್ತಿರುವಷ್ಟರಲ್ಲಿ, ಬಾಳೇಚಿಪ್ಪು ತೆಗೆದುಕೊಂಡು ಬರುತ್ತಿದ್ದ ಮತ್ತೊಂದು ದೊಡ್ಡಕೋತಿಯು ತನ್ನನ್ನು ನೋಡುತ್ತಿದ್ದ ಈ ಕೋತಿಗೆ ಬಾಳೇಚಿಪ್ಪನ್ನು ಕೊಟ್ಟು, ತಾನು ಹಿಂದಕ್ಕೆ ಹೋಯಿತು. ಅಲ್ಲಿ ಒಂದು ಮುದಿಮಂಗನು ಮರದ ಮೇಲೆ ಹಣ್ಣುತಿನ್ನುತಿದ್ದುದನ್ನು ಹೆದರಿಸಿದರೆ ಆ ಚಿಪ್ಪು ಕೆಳಗೆ ಬಿದ್ದು ತನಗೆ ಎರಡು ಚಿಪ್ಪುಗಳು ಸಿಕ್ಕಿದಂತೆ ಆಗುವುದೆಂಬ ಆಶೆಯಿಂದ ಆ ಹೆಂಗಸು ತನಗೆ ಸಿಕ್ಕಿದ್ದ ಚಿಪ್ಪನ್ನು ತುದಿ ಮೇಲಾಗಿ ಎಡಗೈಯಲ್ಲಿ ಎತ್ತಿ ಹಿಡಿದುಕೊಂಡು, ಬಲಗೈಯೊಳಗೆ ಹಿಡಿದಿದ್ದ ಬರಳಕೋಲಿನಿಂದ ಮೇಲೆನೋಡುತ್ತಾ ಹೆದರಿಸುತ್ತಿರುವಾಗ್ಗೆ ಹಿಂದುಗಡೆ ಇದ್ದು ಕೈಯ್ಯೊಳಗಿನ ಬಾಳೇಹಣ್ಣಿನ ಮೇಲೆ ಭ್ರಾಂತಿಗೊಂಡಿದ್ದ ಕೋತಿಯು ಚಂಗನೆ ಆಕೆಯ ಭುಜದ ಮೇಲಕ್ಕೆ ಹಾರಿ ಚಿಪ್ಪನ್ನು ಭದ್ರವಾಗಿ ಹಿಡಿದು, ಕಳಕ್ಕನೆ ಧುಮುಕಿ ಹೋಯಿತು! ಇದನ್ನು ನೋಡಿ ಹಲವು ರೀತಿಯಿಂದ ಯೋಚಿಸುತ್ತಾ ಸ್ನಾನಮಾಡಿ ಹಿಂದಿರುಗಿದೆನು. ಈ ಚಮತ್ಕಾರಗಳನ್ನು ನೋಡಿ ದಾರಿಯಲ್ಲಿ ಆಲೋಚಿಸಿದ ಸಂಗತಿಗಳು —, ತನಗೆ ಸಿಕ್ಕಿದ್ದ ವಸ್ತುವನ್ನು ಮತ್ತೊಬ್ಬರಿಗೆ ಕೊಟ್ಟು ತಾನು ಬೇರೆ ಹುಡುಕುವಷ್ಟು ಔದಾರ್ಯಗುಣವು ಮನುಷ್ಯವರ್ಗದಲ್ಲಿಯೇ ಅಪರೂಪವೆಂದು ಹೇಳಬೇಕು. ಈ ಕೋತಿಗೆ ಎಲ್ಲಿಂದ ಬಂತು? ಹಾಗಲ್ಲ; ಕೋತಿಗಳು ಮರಿಗಳನ್ನು ಬಗಲಲ್ಲಿ ಅಪ್ಪಿಕೊಂಡು ಓಡಾಡುವುದನ್ನು ಅವು ದೊಡ್ಡದಾದ ಮೇಲೆ ಬಿಟ್ಟುಬಿಟ್ಟು ಈ ವಿಶ್ವಾಸದ ಮೇಲೆ ಕೆಲವು ಕಾಲ ಈ [illegible] ಕೊಡುತ್ತಿರಬಹುದು ಎಂತಿರಲಿ, ಆ ಹೆಂಗಸು ಎಂಥಾ ಮೋಸಹೋದಳು! ಕಡೆಗೆ ಗಾಬರಿಯಿಂದ ಕೋಲನ್ನು ಬಿಸಾಟು ಬೈದುಕೊಳ್ಳುತ್ತಾ ಹಿಂದಿರುಗಿದಳು ಛೇ! ಎಂಥಾ ಸ್ವಾಭಿಮಾನತೆ! ಹಾಗೆಂದರೆ? ಕೋತಿಗಳಿಗೆ ವಿವೇಕಜ್ಞಾನವಿಲ್ಲ, ಹಣ್ಣುಗಳು ಇಷ್ಟ. ಬಾಳೇಹಣ್ಣು ಅವುಗಳ ಸ್ವಾಧೀನದಲ್ಲಿದ್ದರೆ ಅವುಗಳವೇ ಎಂದು ಯೋಚಿಸದೆ, ಒಂದು ಚಿಪ್ಪು ಸಿಕ್ಕಿದರೂ ಸಾಲದೆಂದು ತುತ್ತಿಗಾಗಿ ಆಶೆಪಟ್ಟದ್ದರಿಂದ ಮೊದಲಿಗೇ ಮೋಸಹೋಯಿತು; ಅದೂ ಹಾಗಿರಲಿ, ಪ್ರಾಣದ ಮೇಲೆ ಆಶೆಯನ್ನು ತೊರೆದು ಕೋತಿಯು ಆಕೆಯ ಭುಜದ ಮೇಲಕ್ಕೆ ಹಾರಿತಲ್ಲಾ! ಅದೇನಾಶ್ಚರ್ಯ! ಮನುಷ್ಯನಂತೆ ಅವಕ್ಕೆ ವಿವೇಕಜ್ಞಾನವಿಲ್ಲ. ಪ್ರಾಣಿಗಳು ಇಂದ್ರಿಯಗಳ ಮೂಲಕ ಆಶೆಯನ್ನು ಹೆಚ್ಚಿಸಿ ಹಣ್ಣಿನ ಮೇಲೆ ಭ್ರಾಂತಿಯುಂಟುಮಾಡಿತು. ಇಂದ್ರಿಯ ಪರವಶನಾಗಿ ವಿಚಾರವಿಲ್ಲದೆ ತನ್ನ ಸೊತ್ತು ಅನ್ಯರ ಸೊತ್ತು ಎಂದು ನೋಡದೆ ವರ್ತಿಸಿದರೆ ಬಾಳುವಿಲ್ಲದ ಕಪಿಯಂದೇ ಹೇಳಬೇಕಾಗುತ್ತದೆ.

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.

ಕರಡೀ ದೆಸೆಯಿಂದಾದ ಭಯ.

ಶಿಕಾರಿಪುರದಿಂದ ನಾನು ಕಳೆದ ತಾ ೧೩ ನೇ ಗುರುವಾರ ಪ್ರಾತಃಕಾಲ ೭॥ ಗಂಟೆಗೆ ಸಂಸಾರ ಸಮೇತ ಶಿವಮೊಗ್ಗೆಗೆ ಪ್ರಯಾಣ ಮಾಡುವ ಕಾಲದಲ್ಲಿ ಶಿಕಾರಿಪುರದಿಂದ ೬ ಮೈಲಿ ದೂರ ಬಂದ ಮೇಲೆ ನಮ್ಮ ಬಲಭಾಗದ ಒತ್ತಾದ ಪೊದೆಯೊಳಗಿಂದ ಒಂದು ದೊಡ್ಡ ಕರಡಿಯು ಹೊರಟು ರಸ್ತೆಗೆ ಬಂತು. ಅದು ಉದ್ದ ಸುಮಾರು ೬ ಅಡಿ, ಎತ್ತರ ಸುಮಾರು ೩॥ ಅಡಿ ಇದ್ದು ಬಹು ಕಪ್ಪಗೆ ಹೊಳೆಯುತ್ತಿದ್ದ ಕೂದಲುಳ್ಳ ಈ ಕರಡಿಯು ನಮ್ಮನ್ನು ಕಂಡ ಕೂಡಲೇ ಅವೇಶವನ್ನು ಧರಿಸಿತು. ಅದಕ್ಕೂ ನಮಗೂ ಸುಮಾರು ೨೦ ಗಜ ದೂರವಿತ್ತು. ಭಯಂಕರವಾದ ಮೂತಿಯಿಂದ ಕ್ರೂರವಾಗಿ ಗುರುಗುಟ್ಟಿತು. ಅದರ ಮೊದಲನೇ ಶಬ್ದಕ್ಕೇನೇ ನಮ್ಮ ಗಾಡಿಯವನು ಸ್ತಂಭೀಭೂತನಾದನು. ಎತ್ತುಗಳೂ ತಲ್ಲಣಿಸಿ ಹಾರಾಡಿದವು. ಅದರ ಶಬ್ದವೂ, ಈ ದೃಷ್ಟಿಯೂ ಕ್ರಮೇಣ ಹೆಚ್ಚುತ್ತಲೇ ಬಂತು. ಈಗ ನಮ್ಮ ಭಯವೂ ಸಂಕಟವೂ ಅಪಾರವಾದವು. ಅದನ್ನು ಹೆದರಿಸುವುದಕ್ಕಾಗಿ ಎತ್ತುಗಳ ಕೊರಳುಗಳಲ್ಲಿದ್ದ ಗಂಟೆಗಳನ್ನು ಅಲ್ಲಾಡಿಸಿದೆನು. ಆದರೂ ಅದು ಹಿಂತೆಗೆಯಲಿಲ್ಲ. ಬಳಿಕ ನಮ್ಮಲ್ಲಿದ್ದ ಗಂಗಳಗಳನ್ನು ಬಡಿದೆವು. ಇದನ್ನೂ ಅದು ಲಕ್ಷ್ಯಮಾಡಲಿಲ್ಲ. ಬರಬರ ಸಮೀಪಕ್ಕೇ ಬಂದಿತು. ಆಗ ನಾವೆಲ್ಲರೂ ಏಕವಾಗಿಯೂ ಬೇರೆ ಬೇರೆಯಾಗಿಯೂ ನಾನಾ ಆರ್ಭಟದಿಂದ ಅರಚಿ ಕಿರಚಿಕೊಂಡೆವು. ನಮ್ಮ ಗಂಟಲು ನೊಂದದ್ದೊಂದೇ ಫಲವಾಯಿತು. ಅನಂತರ ನಮ್ಮ ಅಂತ್ಯಾವಸ್ಥೆಯು ಸಮೀಪವಾಯಿತೆಂದೂ ಅದು ನಮ್ಮನ್ನು ಹಿಂಸಿಸುವುದೆಂದೂ ತಿಳಿದು, ನಮ್ಮಲ್ಲಿದ್ದ ಬೆಂಕಿಕಡ್ಡಿಯನ್ನು ಹೊತ್ತಿಸಿ ಗಾಡಿಯಲ್ಲಿದ್ದ ಹುಲ್ಲನ್ನು ಉರಿಸಿ ಹಿಡಿದೆವು. ಆಗ ಬಹು ಸಮೀಪವಾಗಿ ಬಂದಿದ್ದ ಆ ಭಯಂಕರವಾದ ಕರಡಿಯು ಬೆಳಗನೆಗೆ ಸ್ವಲ್ಪ ಹಾಲಿತು. ಆಗ ನಮಗೆ ಸ್ವಲ್ಪ ಧೈರ್ಯವಾಯಿತು. ಆದರೂ ಅದು ನಮ್ಮನ್ನು ಸಂಪೂರ್ಣವಾಗಿ ಬಿಡದೆ, ಸ್ವಲ್ಪ ದೂರದಲ್ಲಿ ಮಗ್ಗುಲಾಗಿ ಬಿರಬಿರನೆ ನೋಡುತ್ತಿತ್ತು. ಕರಡಿಯು ಮನುಷ್ಯನಿಗೆ ಎದುರಾದಾಗ, ಬಹು ಬಲವಾಗಿ ಮನುಷ್ಯರನ್ನು ಹಿಡಿದು ಬಾಧಿಸುವುದೆಂದು ಎಲ್ಲರಿಗೂ ತಿಳಿದೇ ಇದೆ. ಆದರೆ ನಾವೆಲ್ಲರೂ ಬಹಳ ಹೊತ್ತಿನ ವರೆಗೂ ಬೆಂಕಿ ಹೊತ್ತಿಸಿ, ಘೋರವಾದ ಶಬ್ದ ಮಾಡಿದ ಬಳಿಕ ಅದು ಇನ್ನೂ ಸ್ವಲ್ಪ ದೂರ ಗಿಡಕ್ಕೆ ಹೋಯಿತು. ಬಳಿಕ ನಾವೆಲ್ಲರೂ ಕೂಗುತ್ತಾ ಅರಚುತ್ತಾ, ಹಿಂಭಾಗದಲ್ಲಿ ಅಂಟಿಕೊಂಡಿದ್ದೇವೆ ವಿನಹ ಮುಂದಕ್ಕೆ ಹೋಗಲಿಲ್ಲ. ಅದು ಸ್ವಲ್ಪ ಹೊಟ್ಟಿಗೆ ಮರೆಯಾಯಿತು. ಕೂಡಲೇ ಬಹಳ ದೂರದ ವರೆಗೂ ನಾವು ಹಿಂದೆ ನೋಡುತ್ತಾ, ಗಾಡಿಯನ್ನು ಓಡಿಸಿಕೊಂಡು ಬಂದೆವು.

[ಈ ರೀತಿಯಾದ ಸ್ವಂತ ಅನುಭವವನ್ನು ಕುರಿತ ಬಾತ್ಮಿಗಳಿಗೆ ಬಹುಮಾನ ಕೊಡಲಾರೆವು. ಉತ್ಸಾಹವನ್ನು ಹುಟ್ಟಿಸುವ ಪಬ್ಲಿಕ್ ವಿಷಯಗಳನ್ನು ವಿವರಿಸಿ ಬಾತ್ಮಿ ಬರೆಯತಕ್ಕದ್ದು —ಎಡಿಟರ್]

ಇಂಡಿಯಾ ದೇಶದ ವೃತ್ತಾಂತಗಳು.

ಕೊಯಮುತ್ತೂರಿನಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಮದರಾಸ್ ಗವರ್ನಮೆಂಟಿನವರು ೬೭,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ.

****

ಉತ್ತರ ದೇಶದಲ್ಲಿ ೪,೧೭,೪೯೭ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದಾರೆ. ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೭೧,೨೨೬ ಜನರು ಕಡಿಮೆ.

****

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೬೧೦ ಜನರಿಗೆ ಪ್ಲೇಗ್ ತಗಲಿತು. ೫೩೭ ಮಂದಿ ಕಾಲವಾದರು. ಇವರಲ್ಲಿ ಬಂಗಾಳ ೧೭೦; ಪಂಜಾಬ್ ೧೫೫, ಬೊಂಬಾಯಿ ೧೪೯.

****

ಅಫ್ಘಾನಿಸ್ಥಾನದ ಅಮೀರರವರು ತಮ್ಮ ರಾಜಧಾನಿಯಲ್ಲಿ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಅರಮನೆಗೂ ಪಟ್ಟಣಕ್ಕೂ ರಾತ್ರಿಹೊತ್ತು ದೀಪಗಳನ್ನಿಡಬೇಕೆಂದು ಸೂಚನೆಪಡುತ್ತಿದಾರೆ.

****

ಭಾವಲ್‌ಪುರ ಸಂಸ್ಥಾನದಲ್ಲಿ ಐದು ಲಕ್ಷ ರೂಪಾಯಿ ಮುಟ್ಟಿಸಿ ಎಂಬತ್ತು ಮೈಲಿ ಉದ್ದವಾದ ನಾಲೆಯನ್ನು ತೆಗಿಸಿ ಅದರ ಕೆಳಗೆ ಉದ್ದಕ್ಕೂ ಸಾವಿರಾರು ಎಕರೆ ಜಮೀನುಗಳು ತರೀ ಸಾಗುವಳಿ ಆಗುವಂತೆ ಮಾಡುವವರಾಗಿದಾರೆ.

****

ಕಲ್ಕತ್ತೆಯಲ್ಲಿರುವ ಸರಳ ಬಾಲಮಿತ್ರ, ಅತ್ತಿಯಾ ಫೈಜೀ ಎಂಬಿಬ್ಬರು ಯುವತಿಯರನ್ನು ವಿಲಾಯಿತಿಗೆ ಕಳುಹಿಸಿ, ಉಪಾಧ್ಯಾಯಿನಿಯರ ಉದ್ಯೋಗವನ್ನು ಕಲಿತು ಬರುವಂತೆ ಬಂಗಾಳಾ ಸರ್ಕಾರದವರು ಗೊತ್ತು ಮಾಡಿದಾರೆ.

****

ನೇಪಾಳ ಸಂಸ್ಥಾನದ ಮಹಾರಾಜಾಧಿರಾಜರವರಿಗೆ ಗಂಡು ಮಗುವಾಯಿತು. ರಾಜಧಾನಿಯಾದ ಖಟ್ಮಂಡು ನಗರದಲ್ಲೂ ಸಂಸ್ಥಾನದಲ್ಲೂ ಪ್ರಜೆಗಳು ಯುವರಾಜರು ಹುಟ್ಟಿದರೆಂದು ಸಂತೋಷ ಸಂಭ್ರಮಪಡುತ್ತಾ ನಾನಾ ಉತ್ಸವಗಳನ್ನು ಮಾಡುತ್ತಿದಾರೆ.

****

ಹೈದರಾಬಾದಿನಲ್ಲಿ ಸಬ್ ಜಡ್ಜರಾಗಿದ್ದು ಪೆನ್ಷನ್ ಪಡೆದು ಇರುವ ಮೆ॥ ಬಸಂತ ಲಾಲ್ ಕರ್ಮರ್ಕರವರು ಕಾಶೀ ಪಟ್ಟಣದ ಹಿಂದೂ ಕಾಲೇಜ್ ಎಂಬ ವಿದ್ಯಾಲಯದ ಮೂಲಧನಕ್ಕೆ ತಮ್ಮ ಆಸ್ತಿಯಿಂದ ೧೦,೦೦೦ ರೂಪಾಯಿ ನಿರ್ಣಯಮಾಡಿರುತ್ತಾರೆ.

****

ಕಳೆದ ಶುಕ್ರವಾರ ರಾತ್ರಿ ೧೧ ಗಂಟೆ ಸಮಯದಲ್ಲಿ ರಂಗೂನ್ ಪಟ್ಟಣದ ೬ನೇ ಬೀದಿಯೊಳಗೆ ಬೆಂಕಿಬಿದ್ದು ಎರಡು ಭಾರೀ ಬಂಗಲೆಗಳು ಸುಟ್ಟುಹೋಗಿ ೯೦,೦೦೦ ರೂಪಾಯಿ ನಷ್ಟವಾಯಿತು. ಕಾವಲಿದ್ದ ಒಬ್ಬ ಜವಾನನು ಬೆಂಕಿಜ್ವಾಲೆ ಒಡಹೋದದ್ದನ್ನು ಅನೇಕರು ಕಂಡರೂ ಅವನು ತಪ್ಪಿಸಿಕೊಂಡೇ ಹೋದನು.

****

ಕಲ್ಕತ್ತೆಯಲ್ಲಿ ಮೆ॥ ಎಚ್. ಎಂ. ಹುಸ್ಸೇನ್ ಎಂಬೊಬ್ಬ ಬ್ಯಾರಿಸ್ಟರು ಮ್ಯುನಿಸಿಪಲ್ ಜವಾನನನ್ನು ವಾರಂಟು ಜಾರಿಮಾಡಿ ಕಂದಾಯ ವಸೂಲ್ಮಾಡದಂತೆ ತಡೆದರು. ಇದಕ್ಕೋಸ್ಕರ ಆ ಬ್ಯಾರಿಸ್ಟರಿಗೆ ಕೋರ್ಟು ಬರಖಾಸ್ತಾಗುವ ತನಕ ಬಂಧನದಲ್ಲಿರಬೇಕೆಂಬ ಶಿಕ್ಷೆಯಾಯಿತು. ಅದರ ಮೇಲೆ ಬ್ಯಾರಿಸ್ಟರು ಅಪೀಲ್ ಮಾಡಿದರೂ ಪ್ರಯೋಜನವಾಗಲಿಲ್ಲ.

****

ಕಪೂರ್ಥಲ ಸಂಸ್ಥಾನದ ಹೊಸ ಅರಮನೆಯು ಈಗತಾನೇ ಕಟ್ಟಿ ಪೂರೈಸುತ್ತಾ ಬಂದಿದೆ. ಅದರೊಳಗಡೆ ಚಿತ್ರವಿಚಿತ್ರವಾಗಿ ಅಲಂಕಾರ ಮಾಡುವುದಕ್ಕೆ ಮಹಾರಾಜರವರು ಜೈಪುರದಿಂದ ನಾಲ್ವರು ಕಾರೇಗಾರರನ್ನು ಕರೆಯಿಸಿ ಅವರಿಂದ ಕೆಲಸಮಾಡಿಸುತ್ತಿರುವರು. ಹಿಂದುಸ್ಥಾನದ ಮಹಾ ಸುಂದರವಾದ ಕಟ್ಟಡಗಳಲ್ಲಿ ಇದೂ ಒಂದಾಗುವುದೆಂದು ಹೇಳುತ್ತಾರೆ.

****

ದರ್ಭಾಂಗ ಸಂಸ್ಥಾನವೆಲ್ಲಾ ಈಗ ದುಃಖಪಡುತ್ತಿರುವುದು. ಮಹಾರಾಜರವರಿಗೆ ಪುತ್ರಸಂತಾನವಿಲ್ಲ. ಮಹಾರಾಣಿಯವರು ಗರ್ಭವತಿಯರಾಗಿ ಕಳೆದ ವಾರ ಅವಳಿ ಮಕ್ಕಳನ್ನು ಹಡೆದರು. ಒಂದು ಮಗು ಸತ್ತು ಹುಟ್ಟಿತು; ಎರಡನೆಯದು ಹುಟ್ಟಿ ಸತ್ತಿತು. ಶ್ರೀಮನ್ ಮಹಾರಾಜರವರು ಕಲ್ಕತ್ತೆಗೆ ದಯಮಾಡಬೇಕೆಂದು ಪ್ರಯಾಣ ಸನ್ನದ್ಧರಾಗಿದ್ದವರು ದುಃಖಾಕ್ರಾಂತರಾಗಿ ನಿಂತುಬಿಟ್ಟರು.

****

ಒಬ್ಬ ವೃದ್ಧ ಬ್ರಾಹ್ಮಣನು ಪತ್ನಿ ಸಹಿತ ರೈಲ್ ಪ್ರಯಾಣ ಮಾಡುತ್ತಾ ಲಾಹೋರ್ ಸ್ಟೇಷನಿಗೆ ಹೋದನು. ಅಲ್ಲಿ ಪ್ಲೇಗ್ ನಿರ್ಬಂಧವಿದ್ದದ್ದರಿಂದ ದಂಪತಿಗಳು ತಮ್ಮನ್ನು ಹಿಡಿದು ಕ್ಯಾಂಪಿನಲ್ಲಿ ಹಾಕುವರೆಂದು ಹೆದರಿ ಮುಂದಕ್ಕೆ ಹೋಗದೆ ಹಿಂತಿರುಗಿ ಪೈಜಾಬಾದಿಗೆ ಬರುತ್ತಿರುವಾಗ್ಗೆ ಮಳೆ ಗಾಳಿ ಅಪಾಯವಾಗಿ ಅವರಿಬ್ಬರೂ ಸೇತುವೆ ಮೇಲಿನಿಂದ ಬಿದ್ದು ನದಿಪಾಲಾದರೆಂದು ತಿಳಿದು ಬಂದಿದೆ.

****

ಲಾಹೋರ್ ಪಟ್ಟಣದ ಪಂಜಾಬ್ ಬ್ಯಾಂಕ್ ಏಜಂಟ್ ಮೆ॥ ಎಲ್. ಧಾಂಡಮಲ್ ಎಂಬಾತನ ಸೋದರಿಯಾದ ೧೫ ವರುಷದ ವಿಧವೆಗೆ ಆತನು ಪುನರ್ವಿವಾಹ ಮಾಡಬೇಕೆಂದು ಹಂಬಲಿಸುತ್ತಿದಾನೆ. ಮೂವತ್ತು ವರುಷದೊಳಗಿರುವ ಬ್ರಾಹ್ಮಣ, ಕ್ಷತ್ರಿಯ ಅಥವಾ ಖತ್ರಿ ಜಾತಿಯ ಪ್ರಾಯಸ್ಥನ್ಯಾರಾದರೂ ವಿವಾಹಮಾಡಿಕೊಳ್ಳಲಿಚ್ಛೆಪಟ್ಟರೆ ಆತನಿಗೆ ಬರೆದು ಗೊತ್ತುಮಾಡಿಕೊಳ್ಳಬಹುದು.

ಧಾರವಾಡದಲ್ಲಿ ಒಬ್ಬಳು ೪ ವರುಷದ ಹೆಣ್ಣು ಮಗುವನ್ನು ದತ್ತು ಮಾಡಿಕೊಂಡು ೧೨—೧೩ ವರುಷದವಳಾಗುವ ತನಕ ಸಾಕಿ, ಮೈನೆರೆದ ಮೇಲೆ ಆ ಹುಡುಗಿಯನ್ನು ದೇವದಾಸಿಯಾಗಿ ಮಾಡಿಬಿಟ್ಟಳು. ಹೀಗೆ ಮಾಡಿದ್ದರಿಂದ ಆ ಹುಡುಗಿಗೆ ಬದ್ಧಚಾಲು ಕಲಿಸಿದಂತಾಗುವುದೆಂದು ಆ ಹೆಂಗಸನ್ನು ಹಿಡಿದು ಮೊಕದ್ದಮೆ ನಡಿಸಿದ್ದಲ್ಲಿ ಸೆಷನ್ಸ್ ಜಡ್ಜರು ಅವಳಿಗೆ ಎಂಟು ತಿಂಗಳ ಸಾದಾ ಸಜಾ, ೫೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು.

****

ಕಳೆದ ವಾರ ಹೈದರಾಬಾದ್ ನೈಜಾಮರವರಿಗೆ ಬಹಳ ಕಾಯಿಲೆಯಾಗಿದೆ ಎಂದು ಇದ್ದಕ್ಕಿದ್ದ ಹಾಗೇ ವರ್ತಮಾನ ಹುಟ್ಟಿತು. ಪಟ್ಟಣದಲ್ಲಿದ್ದ ದೊಡ್ಡ ಮನುಷ್ಯರೆಲ್ಲಾ ಗಾಬರಿಬಿದ್ದು ಬೇಗಬೇಗನೆ ಅರಮನೆಗೆ ಹೋಗಿ ನೈಜಾಮರವರ ಭೇಟಿ ತೆಗೆದುಕೊಂಡರು. ಅವರಿಗೆ ಸ್ವಲ್ಪ ದೇಹಾಲಸ್ಯವಾಗಿದ್ದದ್ದೇನೋ ನಿಜ. ಆದರೆ ಗಾಬರಿಪಡುವುದಕ್ಕೆ ಕಾರಣವಿರಲಿಲ್ಲ. ನೈಜಾಮರವರು ಬಂದವರಿಗೆಲ್ಲಾ ಭೇಟಿ ಕೊಟ್ಟು ಸಂತೋಷಪಡಿಸಿ ಕಳುಹಿಸಿದರು.

****

ಸಿಲೋನ್ (ಲಂಕಾ) ದ್ವೀಪದಲ್ಲಿ ಒಬ್ಬನು ತನ್ನ ಮಗನನ್ನು ಶಿಕ್ಷಿಸುತ್ತೇನೆಂದು ಹೇಳಿದನು. ಅವನು ಏಟು ತಪ್ಪಿಸಿಕೊಳ್ಳುವುದಕ್ಕೆ ರೈಲ್ ಗಾಡಿಯ ಕೆಳಗಡೆ ಚಕ್ರಗಳ ದೂರಿಯ ಮೇಲೆ ಕುಳಿತು ಗುಟ್ಟಾಗಿ ಇನ್ನೊಂದೂರಿಗೆ ಹೋಗುತ್ತಿರುವಾಗ ಪ್ರಯಾಣಿಕರಲ್ಲಿ ಒಬ್ಬನು ಅವನನ್ನು ಹಿಡಿದು ಪೋಲೀಸಿಗೆ ಕೊಟ್ಟರು. ಮ್ಯಾಜಿಸ್ಟ್ರೇಟರು ಅಪ್ಪನ ಕೈ ಏಟು ತಪ್ಪಿಸಿಕೊಂಡು ಹೋದ ಆ ಹುಡುಗನಿಗೆ ೬ ಏಟು ಹೊಡಿಸಿ ಮನೆಗೆ ಕಳುಹಿಸಿದರು.

****

ಬರ್ಮಾ ಅಧಿಪತ್ಯಕ್ಕೆ ಸೇರಿದ ಹಂತವಡ್ಡಿ ಎಂಬ ಊರಿನಲ್ಲಿ ಒಬ್ಬ ಬರ್ಮೀಯನ ಮನೆಗೆ ಒಬ್ಬ ಭಿಕ್ಷುಕನು ಹೋಗಿ ಭಿಕ್ಷೆಕೊಡೆಂದು ಪೀಡಿಸಿದನು. ಸುಮಾರು ೧೨—೧೩ ವರುಷದ ಹುಡುಗಿ ಒಳಗಿನಿಂದ ಬಂದು ಅವನನ್ನು ಮುಂದಕ್ಕೆ ಹೋಗಿ ಬರುವಂತೆ ಎಷ್ಟು ಹೇಳಿದರೂ ಕೇಳಲಿಲ್ಲ. ಆಗಲವಳು ಒಂದು ಸೌದೆ ತುಂಡನ್ನು ತಂದು ಅವನನ್ನು ಹೊಡೆದಳು. ಅವನು ಅಲ್ಲೇ ಸತ್ತು ಬಿದ್ದುಬಿಟ್ಟನು. ಈಗ ಅವಳನ್ನು ಹಿಡಿದು ಸೆಷನ್ ವಿಚಾರಣೆಗೆ ಗುರಿಮಾಡಿದಾರೆ.

****

ಚೋಟಾ ನಾಗಪುರದ ಸೆಷನ್ಸ್ ಜಡ್ಜರು ಒಂದು ಕೊಲೆಯ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ, ಒಂದೇ ಸಂಸಾರಕ್ಕೆ ಸೇರಿದ ಏಳು ಮಂದಿ ಅಪರಾಧಿಗಳ ಪೈಕಿ ಐದು ಜನರನ್ನು ಗಲ್ಲಿಗೆ ಎತ್ತಬೇಕೆಂತಲೂ ಇಬ್ಬರನ್ನು ಯಾವಜ್ಜೀವವೂ ಸೆರೆಮನೆಯಲ್ಲಿಡಬೇಕೆಂತಲೂ ಶಿಕ್ಷೆ ವಿಧಿಸಿದ್ದರು. ಇದರ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಆಯಿತು. ಜಡ್ಜಿಗಳು ಅವರ ಮೇಲೆ ಅಪರಾಧ ರುಜುವಾತಾಗುವುದಿಲ್ಲವೆಂದು ಹೇಳಿ ಏಳು ಮಂದಿಯನ್ನೂ ಸೆರೆಯಿಂದ ಬಿಡಿಸಿದರು.

****

ಪರಮಹಂಸ ರಾಮಕೃಷ್ಣಾನಂದ ಸ್ವಾಮಿಗಳ ಶಿಷ್ಯರಾಗಿ ಕಳೆದ ಹನ್ನೊಂದು ವರುಷಗಳಿಂದ ಯೂರೋಪ್ ಅಮೇರಿಕ ರಾಜ್ಯಗಳಲ್ಲಿ ಸಂಚಾರ ಮಾಡಿ ಹಿಂದೂಮತದ ತತ್ವಗಳನ್ನು ಕುರಿತು ಉಪನ್ಯಾಸ ಮೂಲಕ ಪ್ರಚಾರಪಡಿಸುತ್ತಿದ್ದ ಅಭೇದಾನಂದ ಸ್ವಾಮಿ ಎಂಬುವರು ಈಗ ಮದರಾಸಿಗೆ ಬಂದು ಉಪನ್ಯಾಸ ಮಾಡುತ್ತಲೂ ಹಿಂದೂ ಪ್ರಜೆಗಳಿಂದ ಸನ್ಮಾನ ಸತ್ಕಾರಗಳನ್ನು ಹೊಂದುತ್ತಲೂ ಇದ್ದಾರೆ. ಇವರು ಇನ್ನು ಕೆಲವು ದಿನಗಳಲ್ಲಿ ಬೆಂಗಳೂರು ಮೈಸೂರು ಪಟ್ಟಣಗಳಿಗೂ ಬರುವರೆಂದು ವರ್ತಮಾನವಿದೆ.

****

ಪೂನೆಯಿಂದ ಬೊಂಬಾಯಿಗೆ ಹೋಗುತ್ತಿದ್ದ ರೈಲ್ ಗಾಡಿಯಲ್ಲಿ ಆಲ್‌ಫ್ರೆಡ್ ವಿಲ್ಸನ್ ಎಂಬೊಬ್ಬ ಯೂರೋಪ್ಯನು ಒಬ್ಬ ದೊಡ್ಡ ಮನುಷ್ಯರ ಮನೆ ಸ್ತ್ರೀಯನ್ನು ರೈಲ್ ಗಾಡಿಯಲ್ಲಿ ಮಾನಭಂಗ ಪಡಿಸಬೇಕೆಂದು ಪ್ರಯತ್ನಪಟ್ಟನೆಂದು ಮೊಕದ್ದಮೆ ಆಗಿದೆ. ಪೂನಾ ಪಟ್ಟಣದ ಮ್ಯಾಜಿಸ್ಟ್ರೇಟರು ತನಿಖೆಮಾಡುತ್ತಾರೆ. ಮೊನ್ನೆ ಮಂಗಳವಾರ ಹೀರಿಂಗು ಇತ್ತು. ಈ ಮೊಕದ್ದಮೆಯು ಜನರಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ. ಪೂನೆಯಿಂದಲೂ ಬೊಂಬಾಯಿನಿಂದಲೂ ಅನೇಕ ದೊಡ್ಡ ಮನುಷ್ಯರು ಸಾಕ್ಷಿಗಳಾಗಿ ಬರುವರು.

****

ಕಲ್ಕತ್ತಾ ಪಟ್ಟಣದ ಬಾರಾಸೇತ್ ಎಂಬ ಮೊಹಲೆಯಲ್ಲಿ ಕುಮಾರಿದಾಸಿ ಎಂಬೊಬ್ಬ ವಿಧವೆಯ ಮಗಳನ್ನು ನಿವಾರಣನೆಂಬುವನು ಮದುವೆಮಾಡಿಕೊಂಡನು. ವಿಧವೆಯು ತನ್ನ ಮಗಳನ್ನು ಗಂಡನ ಮನೆಗೆ ಕಳುಹಿಸದೆ ಸಬೂಬು ಹೇಳುತ್ತಾ ಬಂದಳು. ಅಳಿಯನೂ ಅವನ ಅಣ್ಣನೂ ಇನ್ನಿಬ್ಬರೂ ಸೇರಿಕೊಂಡು ಒಂದು ದಿನ ಬೆಳಗಿನ ಝಾಮದಲ್ಲಿ ಅವಳ ಮನೆಗೆ ಹೋಗಿ ಎಲ್ಲರೂ ಮಲಗಿ ನಿದ್ರೆಮಾಡುತ್ತಿರುವಾಗ್ಗೆ ಕುಮಾರಿ ದಾಸಿಯನ್ನೂ ಅವಳ ಇಬ್ಬರು ಹೆಣ್ಣು ಮಕ್ಕಳನ್ನೂ ಕಡಿದು ಹಾಕಿ ಕೊಂದುಬಿಟ್ಟರು. ಈಗ ಈ ನಾಲ್ಕು ಜನರನ್ನೂ ಹಿಡಿದು ತನಿಖೆ ನಡೆಯುತ್ತಿದೆ.

****

ಆನೆಯನ್ನು ಕದ್ದು ಬಚ್ಚಿಡುವುದು ಸಾಧ್ಯವೇ! ಇಂಥಾ ಕಳುವು ಬರ್ಮಾ ಅಧಿಪತ್ಯದ ಕಾಡುಗಳಲ್ಲಿ ನಡೆಯುವುದು ಅಪರೂಪವಲ್ಲ. ಕಳೆದ ವಾರ ಇಬ್ಬರು ಜಂಗಲಿಗೆ ಹೋಗಿ ಒಬ್ಬ ಸಾಹುಕಾರನ ಭಾರೀ ಆನೆಯನ್ನು ಇನ್ನೊಂದು ಕಾಡಿಗೆ ನೂಗಿಸಿಕೊಂಡು ಹೋಗಿ ಅಲ್ಲಿ ಅದನ್ನು ಕೆಡವಿಕೊಂಡು ಅದರ ಭಾರೀ ದಂತಗಳನ್ನು ಕೊಯ್ದುಕೊಳ್ಳುತ್ತಿದ್ದರು. ಮಾಲೀಕನು ಅಷ್ಟರಲ್ಲೇ ಕಂಡುಹಿಡಿದು ಅವರನ್ನು ದಸ್ತಗಿರಿ ಮಾಡಬೇಕೆಂದು ಪ್ರಯತ್ನಪಟ್ಟನು. ಆದರೆ ಒಬ್ಬ ಕಳ್ಳನು ಪರಾರಿಯಾದನು; ಇನ್ನೊಬ್ಬನನ್ನು ಹಿಡಿದರೂ ಅವನು ವಿಷಕುಡಿದು ಆತ್ಮಹತ್ಯ ಮಾಡಿಕೊಂಡನು.

ಲಾರ್ಡ್ ಕರ್ಜನ್ ಪ್ರಭುಗಳು ವೈಸ್‌ರಾಯರಾಗಿದ್ದಾಗ ಬಂಗಾಳ ಅಧಿಪತ್ಯವನ್ನು ಎರಡಾಗಿ ವಿಭಾಗಿಸಿ, ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಅಧಿಪತ್ಯವನ್ನು ಮಾಡಿ, ಅದಕ್ಕೆ ಬೇರೊಬ್ಬ ಲೆಫ್ಟಿನೆಂಟ್ ಗವರ್ನರನ್ನು ನೇಮಕಮಾಡಿದರು. ಇದು ನ್ಯಾಯವಾದ ವಿಭಜನೆಯಲ್ಲವೆಂದೂ ಅದನ್ನು ರದ್ದುಮಾಡಬೇಕೆಂದೂ ಬಂಗಾಳಿಗಳು ಅಂದಿನಿಂದಲೂ ತುಂಬಾ ಗಲಾಟೆಯೆಬ್ಬಿಸಿರುತ್ತಾರೆ. ಸೆಕ್ರೆಟರಿ ಮೆ॥ ಮಾರ್ಲಿಯವರು ಕಳೆದ ವಾರ ಈ ವಿಭಜನೆಯನ್ನು ರದ್ದುಪಡಿಸುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟರು. ಇನ್ನಾದರೂ ಬಂಗಾಳಿಗಳು ವೃಥಾ ಗಲಭೆಮಾಡುವುದನ್ನು ನಿಲ್ಲಿಸಿಬಿಟ್ಟರೆ ಕ್ಷೇಮವಾದೀತು.

****

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕ್ಯಾಂಡಿ ಪಟ್ಟಣದಲ್ಲಿ ಮ್ಯುನಿಸಿಪಲ್ ಕಮೀಷನರಾಗಿದ್ದ ಮೆ॥ ಪಿ. ಟಿ. ಜಯಿಬೋ ಎಂಬುವರ ಮಗನು ರೈಲ್ ಮಾರ್ಗದಲ್ಲಿ ನಿಂತಿದ್ದ ಗಾಡಿ ಬರುವುದನ್ನು ಕಂಡು ಕೂಡಲೇ ಚತ್ರಿ ರುಮಾಲು ಮುಂತಾದ್ದನ್ನು ಕೆಳಗಿಟ್ಟು ಕಂಬಿಯ ಮೇಲೆ ಅಡ್ಡಲಾಗಿ ಮಲಗಿಕೊಂಡದ್ದನ್ನು ಗಾಡಿ ನಡಿಸುವವನು ದೂರದಲ್ಲಿ ನೋಡಿದಾಗ್ಯೂ ಎಷ್ಟು ಸಾಹಸಪಟ್ಟರೂ ಗಾಡಿಯನ್ನು ನಿಲ್ಲಿಸುವುದಕ್ಕಾಗದೆ ಅವನ ಮೇಲೆ ಹರಿದು ಕೊಂದುಬಿಟ್ಟಿತೆಂದು ಆ ಗಾಡಿ ನಡಿಸುವವನು ವಾಙ್ಮೂಲ ಹೇಳಿದ್ದನೆ. ಆದ್ದರಿಂದ ಅವನು ಬೇಕೆಂದು ಆತ್ಮಹತ್ಯ ಮಾಡಿಕೊಂಡನೆಂಬುದಾಗಿ ಮ್ಯಾಜಿಸ್ಟ್ರೇಟರು ತೀರ್ಮಾನ ಮಾಡಿದರು.

****

ಮೂರನೇ ತರಗತಿಯ ಪ್ರಯಾಣಿಕರಿಂದ ಬರುವ ಆದಾಯವೇ ಹೆಚ್ಚಾಗಿದ್ದರೂ ರೈಲ್ ಕಂಪನಿಯವರು ಸ್ಟೇಷನ್‌ಗಳಲ್ಲಿ ಅವರಿಗೂ ಅವರ ಹೆಂಗಸರು ಮಕ್ಕಳಿಗೂ ಗಾಡಿ ಬರುವ ತನಕ ಅಥವಾ ಹೊರಡುವ ತನಕ ಕಾದಿರುವುದಕ್ಕೆ ಪ್ರತ್ಯೇಕವಾದ ಮತ್ತು ಮಳೆ ಬಿಸಿಲು ಗಾಳಿಗೆ ಆಸ್ಪದವಾದ ವೇಟಿಂಗ್ ರೂಂ ಎಂಬ ಕಟ್ಟಡಗಳನ್ನು ಮಾಡಿಕೊಟ್ಟಿಲ್ಲ. ಇಂಥಾ ಅನುಕೂಲಗಳನ್ನು ಕಲ್ಪಿಸಬೇಕೆಂದು ಹಿಂದುಸ್ಥಾನದ ರೈಲ್ವೆ ಬೋರ್ಡಿನವರು ಸಮಸ್ತ ರೈಲ್ವೆ ಕಂಪನಿಯವರಿಗೂ ತಿಳಿಸಿದ್ದರು. ಕಲ್ಕತ್ತೆಯ ಹತ್ತಿರ ದಿನಪುರವೆಂಬ ರೈಲ್ ಸ್ಟೇಷನ್‌ನಲ್ಲಿ ಮಾತ್ರ ಈಗ ೩೦,೦೦೦ ರೂಪಾಯಿ ಮುಟ್ಟಿಸಿ ಇಂಥಾ ಕಟ್ಟಡವನ್ನು ಕಟ್ಟಲಾರಂಭಿಸಿದಾರೆ.

****

ಪೂನಾ ಪಟ್ಟಣದಲ್ಲಿ ಒಬ್ಬ ಪುಣ್ಯಾತ್ಮನು ಮನೆಯಲ್ಲೇ ಗುಟ್ಟಾಗಿ ಯಂತ್ರಸಾಮಗ್ರಿಗಳನ್ನಿಟ್ಟುಕೊಂಡು, ಬೆಲ್ಲ ಹಣ್ಣುಗಳು ಒಂದು ತರಹ ಹೂವು ಇವುಗಳನ್ನು ಉಪಯೋಗಿಸಿ ಬಟ್ಟಿ ಇಳಿಸಿ ಸಾರಾಯಿ ಮಾಡುತ್ತಿದ್ದನು. ಪೋಲೀಸಿನವರು ಅವನನ್ನು ಹಿಡಿದು ವಿಚಾರಣೆ ಮಾಡಿದಾಗ ಅವನು ಎರಡು ಸಂವತ್ಸರಗಳಿಂದ ತಾನೇ ತನ್ನ ಮನೆಯಲ್ಲೇ ತನ್ನ ಸ್ವಂತ ಖರ್ಚಿನಿಂದಲೇ ಸಾರಾಯಿ ಮಾಡುತ್ತಿದ್ದುದನ್ನು ಒಪ್ಪಿಕೊಂಡು, ಅದನ್ನು ಯಾರಿಗೂ ವಿಕ್ರಯಮಾಡುತ್ತಿರಲಿಲ್ಲವೆಂತಲೂ ಒಂದು ದೇವತೆಗಾಗಿ ತಯಾರುಮಾಡುತ್ತಿದ್ದೆನೆಂತಲೂ ಹೇಳಿದನು. ಮ್ಯಾಜಿಸ್ಟ್ರೇಟರು ಅವನಿಗೆ ೧೦೦ ರೂಪಾಯಿ ಜುಲ್ಮಾನೆ ಹಾಕಿ, ಅವನ ಮನೆಯಲ್ಲಿದ್ದ ಯಂತ್ರಸಾಮಗ್ರಿಗಳನ್ನೆಲ್ಲಾ ಕಿತ್ತುಕೊಂಡರು.

****

ಅಫ್ಘಾನಿಸ್ಥಾನದ ಅಮೀರರಾದ ಹಬೀಬುಲ್ಲಾ ಖಾನರವರು ಪರಿವಾರಸಹಿತ ನೋವೆಂಬರ್ ತಿಂಗಳಲ್ಲಿ ವೈಸ್‌ರಾಯ್ ರವರ ಭೇಟಿಗೋಸ್ಕರ ಹಿಂದುಸ್ಥಾನಕ್ಕೆ ಬರುತ್ತಾರೆಂದು ಲಾಹೋರಿನಲ್ಲೂ ಪೇಷಾವರಿನಲ್ಲೂ ವರ್ತಮಾನ ಹುಟ್ಟಿದೆ. ಕಾಬೂಲಿನಿಂದ ಬಂದಿರುವ ವರ್ತಮಾನವನ್ನು ನೋಡಿದರೆ ಅಲ್ಲಿನ ಪ್ರಜೆಗಳೂ ಸಮ್ಮತಿಪಟ್ಟಿರುವಂತೆ ಕಾಣುವುದು. ಆದರೂ ಅಮೀರರು ತಮ್ಮ ಸಂಸ್ಥಾನದ ಮುಖ್ಯ ದಳಪತಿಗಳನ್ನೂ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಕರೆಸಿ ಅವರ ಅನುಮತಿಯನ್ನು ಪಡೆಯಬೇಕಾಗಿರುವುದು. ಅವರ ಗೈರ್‌ಹಾಜರಿಯಲ್ಲಿ ಅವರ ತಮ್ಮಂದಿರಾದ ಸರ್ದಾರ್ ನಸರುಲ್ಲಾ ಖಾನರವರು ಕೆಲವು ವಾರಗಳ ವರೆಗೆ ಸಂಸ್ಥಾನದ ಕಾರುಬಾರುಗಳನ್ನು ನೋಡಿಕೊಳ್ಳುವನ್ನು ಸಮರ್ಥರಾಗಿದಾರೆ. ಆಗ್ರಾಪಟ್ಟಣದಲ್ಲಿ ಅಮೀರರಿಗೆ ಆತಿಥ್ಯ ನಡಿಯಬಹುದೆಂದು ಕಾಣುತ್ತದೆ.

****

ಬಾಬೂ ಸುರೇಂದ್ರನಾಥ ಬಾನರ್ಜಿಯವರು ದೊಂಬಿ ಎಬ್ಬಿಸಿದರೆಂದು ಬ್ಯಾರಿಸಾಲ್ ಮ್ಯಾಜಿಸ್ಟ್ರೇಟರು ಅವರನ್ನು ಹಿಡಿದು ತರಿಸಿ ದರ್ಯಾಫ್ತು ಮಾಡುತ್ತಿದ್ದಾಗ್ಗೆ ಬಾನರ್ಜಿಯವರು ಮಾತನಾಡುತ್ತಿದ್ದ ಹಾಗ್ಯೂ, ಸುಮ್ಮನಿರಬೇಕೆಂದು ಹೇಳಿದರೂ ಕೇಳದೆಹೋದ ಹಾಗೂ, ಇದರಿಂದ ಅವರು ಕೋರ್ಟಿಗೆ ಅವಮಾನಮಾಡಿದರೆಂದು ಹೇಳಿ ಅವರಿಗೆ ೨೦೦ ರೂಪಾಯಿ ಜುಲ್ಮಾನೆ ಹಾಕಿದ ಹಾಗೂ ಮೊದಲೇ ತಿಳಿಸಿರುತ್ತೆ. ಈ ಮೊಕದ್ದಮೆಯು ಹೈಕೋರ್ಟಿನಲ್ಲಿ ಅಪೀಲಾಯಿತು. ಮ್ಯಾಜಿಸ್ಟ್ರೇಟರು ಮೇಲ್ಕಂಡ ಜಡ್ಜ್‌ಮೆಂಟನ್ನು ಹೇಳಿದ ಮೂರು ದಿನಗಳ ಮೇಲೆ ಆ ಜಡ್ಜ್‌ಮೆಂಟಿನ ಬರವಣಿಗೆಯನ್ನು ತಿದ್ದಿಬಿಟ್ಟರೆಂದು ತಿಳಿದು ಬಂತು. ಕಲ್ಕತ್ತೆಯ ಜಡ್ಜಿಗಳು ಇದಕ್ಕಾಗಿ ತುಂಬಾ ಆಗ್ರಹಪಟ್ಟು, ಕೆಳಕೋರ್ಟಿನ ಶಿಕ್ಷೆಯನ್ನು ರದ್ದು ಮಾಡಿ, ಜುಲ್ಮಾನೆ ಹಣವನ್ನು ವಾಪಸು ಕೊಡಿಸಿದರು.

****

ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಸರ್ಕಾರಿ ತಾಲ್ಲೂಕ್ ಕಚೇರಿಗಳಲ್ಲಿ ಈಗಲೂ ಒಂದು ವಿಚಿತ್ರವಾದ ಪೂರ್ವ ಪದ್ಧತಿಯನ್ನಿಟ್ಟುಕೊಂಡಿದಾರೆ. ಪ್ರತಿ ವರುಷವೂ ಜನವರಿ ತಿಂಗಳಲ್ಲಿ ಸರ್ಕಾರದ ಕಂದಾಯವನ್ನು ರೈತರಿಂದ ವಸೂಲ್ಮಾಡುವರಷ್ಟೆ. ಅದನ್ನು ತಾಲ್ಲೂಕ್ ಖಜಾನೆಗೆ ತಂದು ಜಮಾವಣೆ ಮಾಡುವುದಕ್ಕೆ ತಹಸೀಲ್‌ದಾರರು ಜೋಯಿಸರಿಂದ ಶುಭ ದಿನವನ್ನು ಗೊತ್ತು ಮಾಡಿಸಿ, ಆ ದಿನಕ್ಕೆ ವಸೂಲಾದದ್ದು ಕಂದಾಯವನ್ನು ಕೂಡಿಸಿ ತಂದು ತಾಲ್ಲೂಕಿಗೆ ಕಟ್ಟಬೇಕೆಂದು ಸಮಸ್ತ ಗ್ರಾಮಪಟೇಲರಿಗೂ ತಾಕೀತು ಕಳುಹಿಸುತ್ತಾರೆ. ಆ ಶುಭ ದಿನ ಗ್ರಾಮಪಟೇಲರು ಮಂಗಳಕರವಾದ ಉಡುಪುಗಳನ್ನು ಹಾಕಿಕೊಂಡು

...ಂದಾಯಗಳನ್ನು ತಕ್ಕೊಂಡು ಕಛೇರಿಗೆ ಬರುವರು. ತಹಶೀಲ್ದಾರರು ...ಲಗ ಹಾಳ ವಾಳೆಗಳ ಸಮೇತ ಮೆರವಣಿಗೆಯಲ್ಲಿ ತಾಲ್ಲೂಕ್ ಖಜಾ...ಕಗೆ ಬಂದು ಕುಳಿತುಕೊಳ್ಳುವರು ಕಂದಾಯಗಳನ್ನೆಲ್ಲಾ ಸರ್ಕಾರ...ಕ್ಕೆ ಪಾವತಿಮಾಡಿದ ತರುವಾಯ ಅಲ್ಲಿ ಸೇರಿರುವ ಸಮಸ್ತ ನೌಕರ ...ಮಾನೇರಿಗೂ ಜವಾನರಿಗೂ ಕೂಡ ಗಂಧ ಹೂವು ಅಡಿಕೆಲೆಗಳನ್ನು ...ವಿನಿಯೋಗ ಮಾಡುತ್ತಾರೆ ಇದಕ್ಕಾಗಿ ಪ್ರತಿ ತಾಲ್ಲೂಕ್ ಕಛೇರಿಗೂ ...ರ್ಕಾರದವರು ಎರಡು ರೂಪಾಯಿ ಸ್ಯಾಂಕ್ಷನ್ ಮಾಡಿರುವರು ಸಾಲ...ವನ್ನು ಗ್ರಾಮಾನ್ತೀಕರರು ಸಂಬಳ ಕೊಡಬೇಕಾಗಿದೆ ಎಂದು ...ಹೇಳತಕ್ಕ ಅಗತ್ಯವಿಲ್ಲ

◆◆◆◆

ಬೊಂಬಾಯಿ ಪಟ್ಟಣಗ ಕಿಟ್ಟಬಂದರಿ ಹಾಲ್ ಎಂಬ ಬಂಗಲೆಯು...ಲ್ಲಿ ಸಾತಾರೆಯ ಮಹಾಜನರವರು ಕಳೆದ ವಾರ ಸಭೆಸೇರಿ ತೀರ್ಮಾನ ...ಮಾಡಿರುವುದೇನೆಂದರೆ—ಕೊಲ್ಹಾಪುರ ಸಂಸ್ಥಾನದ ಛತ್ರಪತಿ ಮಹಾ...ರಾಜರವರೂ ಮರಾಠೆಯವರೂ ಕ್ಷತ್ರಿಯ ವರ್ಗಕ್ಕೆ ಸೇರಿದವರಲ್ಲವೆಂ...ದು ಶಂಕರೇಶ್ವರ ಮಠದ ಶ್ರೀ ಶಂಕರಾಚಾರ್ಯರು ಶ್ರೀಮುಖವನ್ನು ...ಕೊಟ್ಟಿರುತ್ತಾರೆ ಮರಾಠೆಯವರನ್ನು ಹಿಂದುಗಳಲ್ಲಿ ಕೀಳುದರ್ಜೆಯವ...ರೆಂದು ಹೇಳಿ ಅವಮಾನಪಡಿಸಬೇಕೆಂಬುದೇ ಅವರ ಉದ್ದೇಶವಾಗಿದೆ ...ಗೆ ಅವರು ತೀರ್ಮಾನ ಮಾಡುವುದಕ್ಕೆ ಶಾಸ್ತ್ರಾಧಾರಗಳೇನೂ ಇ...ರುವುದಿಲ್ಲ ಆದಕಾರಣ ಅಂಥಾ ಶ್ರೀಮುಖವನ್ನು ಸರಿ ಎಂದು ಒಪ್ಪಿ...ಕೊಳ್ಳುವ ಯಾವ ಬ್ರಾಹ್ಮಣನನ್ನೂ ಮರಾಠೆಯವರು ತಮ್ಮ ಮನೆಗೆ ...ಕರೆಸಿಕೊಂಡು ಅವನಿಂದ ಹವ್ಯ ಕವ್ಯಾದಿ ಕರ್ಮಗಳನ್ನು ಮಾಡಿಸಿ...ಕೊಳ್ಳಲೇ ಕೂಡದು, ಅಂಥಾ ಬ್ರಾಹ್ಮಣರನ್ನು ನಿರಾಕರಿಸಬೇಕು ...ಎಂಬುದೇ

◆◆◆◆

ಅಲಹಾಬಾದ ಪಟ್ಟಣದ ಹೈಕೋರ್ಟ್ ಜಡ್ಜಿಗಳ ಮೇಲೆ ಅಲ್ಲಿ ಸ...ವ್ಯಾರಿಸ್ಟರ್ ಮಿ॥ ಸರ್ವಾಧಿಕಾರಿಯು ತನ್ನ ಮಾಸಪತ್ರಿಕೆಯಲ್ಲಿ ಅವ...ಮಾನಕರವಾದ ದೂರು ದುರ್ವಾದವನ್ನು ಬರೆದು ಪ್ರಕಟಿಸಿದನು ಆದ...ರಿಂದ ಜಡ್ಜಿಗಳು ಕುಳಿತು ಅವನನ್ನು ಕರೆಸಿ ವಿಚಾರಣೆ ಮಾಡಿದರು ...ಬ್ಯಾರಿಸ್ಟರು ಮೊದಲೆಲ್ಲಾ ತನ್ನನ್ನು ವಿಚಾರಣೆ ಮಾಡುವದ...ಕ್ಕೆ ಜಡ್ಜಿಗಳಿಗೆ ಅಧಿಕಾರವೇ ಇಲ್ಲವೆಂದು ವಾದಿಸಿ, ಕಡೆಗೆ ...ತಾನು ಮಾಡಿದ್ದು ತಪ್ಪೆಂದು ತಿಳಿದುಕೊಂಡು, ಬರೆದ ಕ್ಷಮಾಪಣ...ವನ್ನು ಬರೆದು ತಂದು ಜಡ್ಜಿಗಳಿಗೆ ಒಪ್ಪಿಸಿ ತನ್ನ ಅಪರಾಧವನ್ನು ಕ್ಷಮಿ...ಸಬೇಕು ಕ್ಷಮಿಸಬೇಕೆಂದು ಬಹಳವಾಗಿ ಬೇಡಿಕೊಂಡನು ಅವನು ...ಒಂದು ಸಲ ಹೈಕೋರ್ಟ್ ಜಡ್ಜಿಯನ್ನು ಅವಮಾನಪಡಿಸಿ, ...ಂಗಳ ತನಕ ಸೆರೆಮನೆವಾಸ ಶಿಕ್ಷೆಯನ್ನು ಅನುಭವಿ...ಸಿದ್ದನು ಈಗ ಜಡ್ಜಿಗಳು ಇವನ ಅಪರಾಧವನ್ನು ಕ್ಷಮಿಸತಕ್ಕ...ದಲ್ಲವೆಂದು ಗೊತ್ತುಮಾಡಿ, ಈ ಲಾಗಾಯತು ನಾಲ್ಕು ವರುಷಗಳ ...ತನಕ ಅವನು ವಕಾಲತ್ತು ನಡೆಸಕೂಡದೆಂಬ ಶಿಕ್ಷೆಯನ್ನು ವಿಧಿಸಿರು...ತ್ತಾರೆ.

◆◆◆◆

ಮಿ॥ ಹ್ಯಾವಿಟ್ ಮಿ॥ ಷವ್ರಲ್ ಎಂಬಿಬ್ಬರು ವಿಲಾಯತಿ ಪಾದ್ರಿಗಳು ...ಬ್ಬ ದೇಶೀಯ ಕ್ರೈಸ್ತಸ್ತ್ರೀಯನ್ನು ತಮ್ಮ ಗಾಡಿಯಲ್ಲಿ ಕೂಡಿಸಿ...ಕೊಂಡು ಕಲ್ಕತ್ತೆಯ ಬಳಿ ಶಾಂತಿಪುರದ ಸ್ಟೇಷನ್ನಿಗೆ ಬಂದರು ಸ್ಟೇ...ಷನ್ನಿನಲ್ಲಿ ಬಹು ಜನ ಹಿಂದುಗಳು ಶಿವಾಜಿ ಉತ್ಸವಕ್ಕೋಸ್ಕರ ರೈಲಿ...ನಲ್ಲಿ ಬರುವ ಬಾಬು ಬಿಪಿನ್ ಪಾಲ್ ಎಂಬಾತನನ್ನು ಎದುರುಗೊಳ್ಳಬೇ...ಕೆಂದು ಕಾದಿದ್ದರು ಆ ಪಾದ್ರಿಗಳ ಗಾಡಿ ಬಂದದ್ದನ್ನೂ ಅದರ ಮಧ್ಯ...ದಲ್ಲಿ ಹಿಂದೂ ಸ್ತ್ರೀಯು ಕುಳಿತಿರುವುದನ್ನೂ ಕಂಡು, ಹಿಂದುಗಳ...ಲ್ಲಿ ಕೆಲವರು ಹೋಗಿ ಆ ಹೆಂಗಸ್ಯಾರೆಂದು ಪಾದ್ರಿಗಳನ್ನು ಪ್ರಶ್ನೆ ಮಾಡಿ...ದರು ಆಕೆ ಕ್ರೈಸ್ತಸ್ತ್ರೀ ಎಂತಲೂ ಕಾಯಿಲೆಯಾಗಿರೋದರಿಂದ ...ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆಂತಲೂ ಎಷ್ಟು ಹೇಳಿದರೂ ...ಹಿಂದುಗಳು ನಂಬದೆ ಅವರು ಹಿಂದೂ ಸ್ತ್ರೀಯನ್ನು ಅಪಹರಿಸಿಕೊಂ...ಡು ಬಂದಿದ್ದಾರೆಂದು ಹಟ್ಟಿಸಿ, ಅವರನ್ನು ಹಿಡಿದು ಕೆಳಕ್ಕೆ ಕೆಡವಿ ಹೊಡೆ...ದರು. ಇಬ್ಬರಿಗೂ ಪೂರಾ ಗಾಯಗಳಾಗಿವೆ. ಅಷ್ಟರಲ್ಲೇ ಅಧಿಕಾರಿಗಳು ...ಬಂದು ದೊಂಬಿಯನ್ನು ನಿಲ್ಲಿಸಿ, ಕೆಲವು ಜನರನ್ನು ದಸ್ತಗಿರಿ ಮಾಡಿ, ...ಶಿವಾಜಿ ಉತ್ಸವವನ್ನು ನಡಿಸಕೂಡದೆಂದು ಹುಕುಂ ಕೊಟ್ಟಿರುವರು

◆◆◆◆

ಮೈಸೂರುಪಟ್ಟಣದ ಪುರಾತನ ಕ್ರಿಶ್ಚನ ಅನಸ ಹೆಂಡತಿ ದತ್ತು ಮಾಡಿ...ಕೊಂಡು, ಆ ದತ್ತಪುತ್ರನು ಕಾಲವಾದರೆ ಹೆಂಡತಿಗೆ ಪುನಃ ದತ್ತು ...ಮಾಡಿಕೊಳ್ಳುವ ಅಧಿಕಾರವಿದೆಯೇ ಇಲ್ಲವೇ ಎಂಬುದಾಗಿ ಮದರಾಸ್ ...ಹೈಕೋರ್ಟಿನಲ್ಲಿ ಒಂದು ಮೊಕದ್ದಮೆ ಬಂದಿದ್ದುದ್ದು, ಹೈಕೋರ್ಟಿ...ನ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ವಿಚಾರಣೆ ಮಾಡಿ, ...ಹೆಂಡತಿಗೆ ಅಂಥಾ ಅಧಿಕಾರವಿರುತ್ತದೆ ಎಂಬುದಾಗಿ ತೀರ್ಮಾನ ಹೇಳಿದ್ದ...ನ್ನು ನಮ್ಮ ವಾಚಕರಿಗೆ ತಿಳಿಸಿರುವೆವಷ್ಟೆ ಈ ಮೊಕದ್ದಮೆಯು ...ರಿವರ ಮೇಲೆ ವಿಲಾಯತಿಯ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ...ಅಪೀಲಾಗಿತ್ತು ಅಲ್ಲಿ ನಾಲ್ಕರು ಪ್ರಸಿದ್ಧರಾದ ಜಡ್ಜಿಗಳು ಕುಳಿತು ಈ ...ಮೊಕದ್ದಮೆ ... ಕಾಗದಪತ್ರಗಳನ್ನೆಲ್ಲಾ ಸಾಂಗೋಪಾಂಗವಾಗಿ ಓದಿ, ಉಭಯ ...ಪಕ್ಷಗಳ ಕಡೆ ಬ್ಯಾರಿಸ್ಟರುಗಳ ಅಭಿಪ್ರಾಯಗಳನ್ನೂ ಕೇಳಿ, ಇಂಥಾ ...ದತ್ತಸ್ವೀಕಾರದ ವಿಷಯದಲ್ಲಿ ಇದುವರೆಗೆ ಬೇರೆ ಬೇರೆ ಜಡ್ಜಿಗಳು ...ತೀರ್ಮಾನಮಾಡಿರುವ ತೀರ್ಪುಗಳನ್ನೂ ಅವರ ಅಭಿಪ್ರಾಯಗಳನ್ನೂ ...ಓದಿಕೊಂಡು, ಎರಡನೇ ದತ್ತು ಮಾಡಿಕೊಂಡದ್ದು ನ್ಯಾಯವಾಗಿದೆ ...ಎಂಬುದಾಗಿ ಮದರಾಸ್ ಹೈಕೋರ್ಟ್ ಜಡ್ಜಿಗಳು ತೀರ್ಮಾನಿಸಿದ್ದದ್ದ...ನ್ನೇ ಖಾಯಂ ಮಾಡಿದಾರೆ

ವಿದೇಶ ವರ್ತಮಾನಗಳು.

ಕನಡಾ ಸಾಮ್ರಾಜ್ಯಕ್ಕೆ ಸೇರಿದ ನಿಕೊಲೆಟ್ಟೆಂಬ ಊರಿನಲ್ಲಿ ಒಂದು ...ರೋಮಾಯ ಕ್ರೈಸ್ತ ದೇವಾಲಯಕ್ಕೆ ಬೆಂಕಿಬಿದ್ದು ಉರಿದುಹೋಗಿ ...೫ ಲಕ್ಷ ದ್ರವ್ಯನಷ್ಟವಾಯಿತೆಂದು ತಂತೀ ವರ್ತಮಾನ ಬಂದಿದೆ.

ಚೀಣಾ ರಾಜ್ಯದ ಪ್ರಜೆಗಳು ಹಿಂದುಸ್ಥಾನದಲ್ಲಿ ತಯಾರಾಗುವ ಅಫೀಮನ್ನೇ ಬಹಳ ಚನ್ನಾಗಿದೆ ಎಂದು ಹೇಳಿ ಕೊಂಡುಕೊಳ್ಳುತ್ತಾರೆ. ವರುಷ ೧ ಕ್ಕೆ ಮೂರು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಈ ಅಫೀಮಿನಿಂದ ಹಿಂದುಸ್ಥಾನಕ್ಕೆ ಆದಾಯ ಬರುತ್ತಿದೆ.

◆◆◆◆

ವಿಲಾಯತಿಗೆ ಸೇರಿದ ನಾಟಿಂಗ್ಹಾಂ ನಗರದಲ್ಲಿ ಗಣಿ ಕಂಪನಿಯವರು ತಮ್ಮ ಕಂಪನಿಯ ಕೂಲಿಕಾರರಲ್ಲಿ ವಯಸ್ಸಾಗಿ ಕೆಲಸಮಾಡಲಾರದಂಥಾವರಿಗೆ ತಲಾ ವಾರಕ್ಕೆ ೩ ರೂಪಾಯಿಯಿಂದ ೬ ರೂಪಾಯಿ ತನಕ ಪೆನ್ಷನ್ ಕೊಡುವುದಾಗಿ ತೀರ್ಮಾನ ಮಾಡಿರುತ್ತಾರೆ.

◆◆◆◆

ಜರ್ಮನ್ ಚಕ್ರವರ್ತಿ ವಿಂಕ್ಯಾಡೋ ಯವರು ಪರೀಕ್ಷೆ ಮಾಡಿಸಿ ಮಹಮ್ಮದೀಯ ಮತವೇ ಸರ್ವಶ್ರೇಷ್ಠವಾದ ಮತವೆಂದು ತೀರ್ಮಾನಿಸಿ, ತಾವೂ ತಮ್ಮ ಸಂಸಾರಕ್ಕೆ ಸೇರಿದವರೂ ಆಸ್ಥಾನಿಕರ ಸಮೇತ ಮುಸಲ್ಮಾನ ಮತಕ್ಕೆ ಸೇರಿಕೊಂಡರೆಂದು ವರ್ತಮಾನ ಹುಟ್ಟಿತ್ತು. ಇದು ನಿಜವಲ್ಲವೆಂದು ಈಚೆಗೆ ತಿಳಿದುಬಂದಿದೆ.

◆◆◆◆

ವಿಲಾಯತಿ ರಾಜ್ಯದ ಹದಿಮೂರು ಜಹಜುಗಳು ಈ ತಿಂಗಳ ೨ನೆ ತಾರೀಖಿಗೆ ಹೊರಟು ರಷ್ಯಾ ರಾಜ್ಯಕ್ಕೆ ಸೇರಿದ ಲಿಬೌ, ಹಾಂಗೋ, ಕ್ರಾನ್‌ಸ್ಟಾಡ್, ರೇವಲ್, ಪಿಲೌ, ಲೂನೆಕ್ ಎಂಬೀ ತೀರಪಟ್ಟಣಗಳಿಗೆ ಹೋಗಿ ಅಲ್ಲಲ್ಲಿರುವ ರಷ್ಯಾ ಜಹಜು ಸೈನಿಕರಿಂದ ಸತ್ಕಾರಹೊಂದಿ ಪರಸ್ಪರ ಸ್ನೇಹಭಾವವನ್ನು ವೃದ್ಧಿಪಡಿಸಿಕೊಂಡು ಬರುವವರಾಗಿದಾರೆ

◆◆◆◆

ಸ್ಕಾಟ್ಲಾಂಡಿನಲ್ಲಿ ಹಡಗುಗಳಲ್ಲಿ ಕೆಲಸಮಾಡತಕ್ಕವರ ಮಕ್ಕಳನ್ನೂ ಸೈನಿಕರ ಮಕ್ಕಳನ್ನೂ ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಲೇಟ್ ಮಹಾರಾಜ್ಞಿ ವಿಕ್ಟೋರಿಯಾ ಚಕ್ರವರ್ತಿಯವರ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ಡನ್‌ಬ್ಲೇನ್ ಪಟ್ಟಣದಲ್ಲಿ ಕಟ್ಟುವವರಾಗಿದಾರೆ ಇದಕ್ಕೆ ಆಗಲೇ ೩ ಲಕ್ಷ ರೂಪಾಯಿ ತನಕ ಚಂದಾ ವಸೂಲಾಗಿರುವುದು

◆◆◆◆

ಸ್ಪೇಯಿನ್ ರಾಜ್ಯಕ್ಕೆ ಸೇರಿದ ಬಾರ್ಸಿಲೋನಾ ಪಟ್ಟಣದಲ್ಲಿ ಕೆಲವರು ಸೇರಿಕೊಂಡು ಗುಟ್ಟಾಗಿ ಯಂತ್ರಗಳನ್ನಿಟ್ಟುಕೊಂಡು ಪ್ರತಿ ವರುಷವೂ ನಾಲ್ಕು ಲಕ್ಷ ರೂಪಾಯಿಯಂತೆ ಖೋಟಾ ನಾಣ್ಯಗಳನ್ನು ಛಾಪಾ ಹಾಕಿ ಚಲಾವಣೆ ಮಾಡುತ್ತಿದ್ದರು ಈ ಕಾರ್ಖಾನೆಯನ್ನು ಪೋಲೀಸಿನವರು ಕಳೆದ ವಾರ ಪತ್ತೆ ಮಾಡಿ, ಒಂಬತ್ತು ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ

◆◆◆◆

ವಿಲಾಯತಿಗೆ ಸೇರಿದ ಸಸೆಕ್ಸ್ ಡಿಸ್ಟ್ರಿಕ್ಟಿನಲ್ಲಿ ಕ್ರಾಲೀ ಎಂಬ ಊರಿನಬಳಿ ಒಂದು ಮೋಟಾರ್ ರೈಲ್ ಗಾಡಿಯು ಗುಡ್ಡದಿಂದ ಇಳಿದು ಬರುವಾಗ್ಗೆ ಆಯತಪ್ಪಿ ಮಗುಚಿಕೊಂಡು ಅನಾಹುತವಾಯಿತು ಅದರಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದವರ ಪೈಕಿ ಹತ್ತು ಮಂದಿ ಪ್ರಾಣ ಕಳೆದುಕೊಂಡರೆಂತಲೂ ಇಪ್ಪತ್ತಾರು ಮಂದಿಗೆ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ

◆◆◆◆

ಸ್ಪೇಯಿನ್ ರಾಜ್ಯದ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ನೂತನ ರಾಜದಂಪತಿಗಳು ದೇವಸ್ಥಾನದಿಂದ ಅರಮನೆಗೆ ಮೆರವಣಿಗೆ ಹೊರಟುಕೊಂಡು ಬರುತ್ತಿದ್ದಾಗ್ಗೆ ಅವರನ್ನು ಕೊಲ್ಲಬೇಕೆಂದು ಮದ್ದಿನ ಗುಂಡನ್ನು ಅವರ ಗಾಡಿಯ ಮೇಲಕ್ಕೆ ಎಸೆದದ್ದರಿಂದ ಅನಾಹುತವಾದ ಸಂಗತಿ ತಿಳಿದಿದೆಯಷ್ಟೆ ಈ ಅನಾಹುತದಲ್ಲಿ ಒಟ್ಟು ೨೩ ಮಂದಿ ಹತರಾದರೆಂತಲೂ ೧೫ ಜನರಿಗೆ ಗಾಯಗಳಾದವೆಂತಲೂ ಸರ್ಕಾರದವರು ಪ್ರಕಟಿಸಿದಾರೆ.

◆◆◆◆

ಅಮೇರಿಕ ಸರ್ಕಾರದವರು ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ತಮ್ಮ ಕಡೆಯ ರಾಯಭಾರಿಯನ್ನು ಕಳುಹಿಸಿ ಅಲ್ಲೇ ವಾಸಮಾಡುವುದಕ್ಕೆ ಒಪ್ಪಬೇಕೆಂದು ತುರ್ಕಿ ಸುಲ್ತಾನರಿಗೆ ಬರೆದು ಕೇಳಿದ್ದಕ್ಕೆ ತುರ್ಕಿ ಸುಲ್ತಾನರು ನಮಗೂ ನಿಮಗೂ ಯಾವ ವಿಧವಾದ ಕರಾರೂ ಆಗಿರುವುದಿಲ್ಲವಾದ್ದರಿಂದ ನಿಮ್ಮ ರಾಯಭಾರಿಯನ್ನು ನಮ್ಮ ಆಸ್ಥಾನಕ್ಕೆ ಕಳುಹಿಸಕೂಡದೆಂದು ಜವಾಬು ಕೊಟ್ಟರು ಎಂದು ತಂತೀ ವರ್ತಮಾನ ಬಂದಿದೆ

◆◆◆◆

ದಕ್ಷಿಣ ಆಫ್ರಿಕದಲ್ಲಿ ಕೇಪ್ ಕಾಲನಿಯ ದೇಶೀಯ ಜನರು ಸುಮಾರು ೩೦,೦೦೦ ಮಂದಿ ಇಂಗ್ಲಿಷರ ಮೇಲೆ ದಂಗೆಯೆದ್ದಿರುತ್ತಾರಷ್ಟೆ. ಇಂಗ್ಲಿಷರು ಅವರನ್ನು ಕಾಡುಗಳಲ್ಲಿ ಓಡಿಸಿಕೊಂಡು ಹೋಗಿ ಮುತ್ತಿಗೆ ಹಾಕಿ ಕೆಲವು ಯುದ್ಧಗಳನ್ನು ಮಾಡಿ, ಅವರಲ್ಲಿ ಇದುವರೆಗೆ ಸಾವಿರಾರು ಜನರನ್ನು ಕೊಂದಿರುತ್ತಾರೆ ಆದರೂ ಅವರ ದಂಗೆಯು ಇನ್ನೂ ಶಮನವಾಗಲಿಲ್ಲ ಕಳೆದ ವಾರ ಅವರ ಪೈಕಿ ನಾಲ್ಕಾರು ಮಂದಿ ನಾಯಕರನ್ನು ಇಂಗ್ಲಿಷರು ಕೈಸೆರೆ ಹಿಡಿದುಕೊಂಡು ಹೋದಿದ್ದಾರೆ

◆◆◆◆

ರಷ್ಯಾ ಜಪಾನ್ ಯುದ್ಧದಲ್ಲಿ ವ್ಲಾಡಿವೋಸ್ಟಾಕ್ ಪಟ್ಟಣದೊಳಗಿದ್ದ ಚೀಣಾ ವರ್ತಕರಿಗೆ ಉಂಟಾದ ನಷ್ಟಗಳಿಗಾಗಿ ಅವರೆಲ್ಲಾ ತಮಗೆ ಪರಿಹಾರದ್ರವ್ಯವನ್ನು ರಷ್ಯಾ ಗವರ್ನ್‌ಮೆಂಟಿನಿಂದ ಕೊಡಿಸಬೇಕೆಂದು ಚೀಣಾ ರಾಜ್ಯಾಧಿಕಾರಿಗಳನ್ನು ಕೇಳಿಕೊಂಡಿದ್ದರು ಈ ವಿಚಾರವಾಗಿ ರಷ್ಯಾ ಮತ್ತು ಚೀಣಾ ರಾಜ್ಯಗಳ ಅಧಿಕಾರಿಗಳಿಗೆ ವ್ಯಾಜ್ಯವು ನಡೆಯುತ್ತಿದ್ದು ಈಗ ರಷ್ಯಾದವರು ೧ ಕೋಟಿ ೩೩ ಲಕ್ಷದ ೭೪ ಸಾವಿರ ರೂಪಾಯಿ ಪರಿಹಾರ ದ್ರವ್ಯ ಕೊಡುವುದಕ್ಕೆ ಒಪ್ಪಿಕೊಂಡಿದಾರೆ

◆◆◆◆

ರಷ್ಯಾ ರಾಜ್ಯಕ್ಕೆ ಸೇರಿದ ಕೆಲವು ಕಡೆಗಳಲ್ಲಿ ಮತ್ತೆ ಪ್ರಜಾಶಾಂತಿಗೆ ಭಂಗವುಂಟಾಗಿದೆ. ಸಿಬಾಸ್ಟಪೋಲ್ ನಗರದಲ್ಲಿ ಸೈನಿಕನೊಬ್ಬನು ಹಡಗುಗಳ ಅಧಿಪತಿಯಾಗಿದ್ದ ಅಡ್ಮಿರಲ್ ಚುಕ್ನಿನ್ ಎಂಬಾತನನ್ನು ಹೊಡೆದು ಗಾಯಮಾಡಿದನು. ಆ ಹುದ್ದೇದಾರನು ಮರುದಿನ ಮೃತಪಟ್ಟನು. ಅತ್ತಲಾಗಿ ವಾರ್ಸಾ ನಗರದಲ್ಲಿ ಕಳೆದ ಗುರುವಾರ ಬಹಳ ಗಲಭೆಯುಂಟಾಯಿತು. ಸುಮಾರು ೭೦ ಸಾವಿರ ಯೆಹೂದ್ಯ ಪ್ರಜೆಗಳು ಮುದುಕರು, ಹೆಂಗಸರು, ಮಕ್ಕಳ ಸಮೇತ ತಲೆತಪ್ಪಿಸಿಕೊಂಡು ಓಡಿಹೋದರೆಂದು ತಂತೀ ವರ್ತಮಾನ ಬಂದಿದೆ.

◆◆◆◆

ಅಮೇರಿಕದಲ್ಲಿ ಈಚೆಗೆ ಮಿಲಿಟರಿ (ಸೈನ್ಯದ) ಇಲಾಖೆಯವರೂ ಇತರರೂ ಹಕ್ಕಿ ಪಕ್ಷಿಗಳನ್ನು ಅಪಾರವಾಗಿ ಕೊಂದು, ಅವುಗಳ ಗರಿ ಪುಕ್ಕ ರೆಕ್ಕೆಗಳನ್ನು ಕಿತ್ತು ತಮ್ಮ ಟೋಪಿಗಳಿಗೆ ಕಟ್ಟಿಕೊಂಡು ಅಲಂಕಾರ ಮಾಡಿಕೊಳ್ಳುವುದು ಬಹಳ ರೂಢಿಗೆ ಬಂದಿತು ಗವರ್ನ್‌ಮೆಂಟಿನವರು ಸುಂದರವಾದ ಹಕ್ಕಿ ಪಕ್ಷಿಗಳನ್ನೆಲ್ಲಾ ಈ ರೀತಿ ಜನರು ಕೊಲ್ಲುವದನ್ನು ನಿಲ್ಲಿಸಬೇಕೆಂದು ಬಹು ಖಂಡಿತವಾದ ಕಾನೂನ್‌ಮಾಡಿ ಜಾರಿಗೆ ತಂದಿದಾರೆ. ಯಾವ ಇಲಾಖೆಯವರಾಗಲಿ ಪ್ರಜೆಗಳಲ್ಲಿ ಯಾರೇ ಆಗಲಿ ಗರಿಗಳನ್ನು ಯಾವ ಕೆಲಸಕ್ಕೂ ಉಪಯೋಗಿಸಲೇ ಕೂಡದೆಂದು ವಿಧಿಸಿರುತ್ತಾರೆ

◆◆◆◆

ಅಮೇರಿಕಕ್ಕೆ ಸೇರಿದ ಮಸಾಚುಸೆಟ್ಸ್ ಡಿಸ್ಟ್ರಿಕ್ಟಿನಲ್ಲಿ ಅಲ್ಲಿಂಗ್ಟನ್ ಎಂಬ ಉದ್ಯಾನವನದೊಳಗೆ ಸಸ್ಯಶಾಸ್ತ್ರಜ್ಞರು ವಿಚಿತ್ರವಾದ ಪರೀಕ್ಷೆಯನ್ನು ಮಾಡಿದಾರೆ ಸಸಿಗಳನ್ನು ಕುಂಡಗಳಲ್ಲಿಟ್ಟು ಕೆಲವಕ್ಕೆ ಉತ್ಕೃಷ್ಟವಾದ ಗೊಬ್ಬರವನ್ನು ಹಾಕಿ ಸಾಕುತ್ತಲೂ ಇನ್ನು ಕೆಲವು ಗಿಡಗಳ ಬೇರುಗಳಿಗೆ ವಿದ್ಯುಚ್ಛಕ್ತಿಯನ್ನು ಪ್ರಯೋಗಮಾಡಿ ಸಾಕುತ್ತಲೂ ಪರೀಕ್ಷೆ ಮಾಡಿದರು ಗೊಬ್ಬರ ಹಾಕಿದ ಸಸಿಗಳಿಗಿಂತಲೂ ವಿದ್ಯುಚ್ಛಕ್ತಿಯಿಂದ ಬೆಳೆದ ಗಿಡಗಳು ಬಹಳ ಜಾಗ್ರತೆಯಿಂದಲೂ ಅತಿ ಕೋಮಲವಾಗಿಯೂ ವೃದ್ಧಿಹೊಂದಿದವು ಇದು ಎಲ್ಲರಿಗೂ ಮಹದಾಶ್ಚರ್ಯವನ್ನುಂಟುಮಾಡಿದೆ

◆◆◆◆

ಚೀಣಾ ಜನರು ದಕ್ಷಿಣ ಆಫ್ರಿಕದಲ್ಲಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆಂದು ಅನೇಕರು ಊಹಿಸಬಹುದು ಅವರ ಸ್ಥಿತಿಗತಿಯನ್ನು ಚೀಣಾದಲ್ಲೂ ದಕ್ಷಿಣ ಆಫ್ರಿಕದಲ್ಲೂ ಹೋಲಿಸಿ ನೋಡುವಲ್ಲಿ ಚೀಣಾದಲ್ಲಿ ಅವರಿಗೆ ಹಿಟ್ಟು ಬಟ್ಟೆ ಮವೆಚ್ಚ ಕಳೆದು ವರುಷಕ್ಕೆ ೩೫-೪೦ ರೂಪಾಯಿ ಉಳಿಯುವುದೇ ದುರ್ಲಭವಾಗಿದೆ ದಕ್ಷಿಣ ಆಫ್ರಿಕದಲ್ಲಾದರೋ ಅವರಿಗೆ ವಾಸದ ಮನೆ, ಊಟ, ಬೇಕಾದ ಸಾಮಾನು ಮುಂತಾದ್ದೆಲ್ಲಾ ಬಿಟ್ಟಿ ಸಿಕ್ಕುವುದು ಇದಲ್ಲದೆ ಅವರಿಗೆ ೪೦೦ ರೂಪಾಯಿಗಿಂತಲೂ ಹೆಚ್ಚಾಗಿಯೇ ಸಂಪಾದನೆಯಾಗುತ್ತದೆ. ಆದ್ದರಿಂದ ಚೀಣೆಯವರಿಗೆ ತಮ್ಮ ದೇಶದಲ್ಲಿ ದೊರಕುವ ಸೌಕರ್ಯಗಳಿಗಿಂತಲೂ ಹೆಚ್ಚಾಗಿಯೇ ಹೊರಗೆ ಸಂಪಾದನೆಯಾಗುತ್ತದೆ. ಆದ್ದರಿಂದ ಚೀಣೆಯವರಿಗೆ ತಮ್ಮ ದೇಶದಲ್ಲಿ ದೊರಕುವ ಸೌಕರ್ಯಗಳಿಗಿಂತಲೂ ದಕ್ಷಿಣ ಆಫ್ರಿಕದ ಜೀವನವೇ ಎಷ್ಟೋ ಲಾಭಕರವಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ

ತಾಲ್ಲೋಕು ವರ್ತಮಾನಗಳು.

ಚನ್ನಪಟ್ಟಣ.—ಇದುವರೆಗೂ ಈ ತಾಲ್ಲೋಕಿನಲ್ಲಿ ಮಳೆ ಇಲ್ಲದ್ದರಿಂದ ಪ್ರಜೆಗಳ ಕಣ್ಣುಗಳೆಲ್ಲಾ ಮುಗಿಲನ್ನೇ ನೋಡುತ್ತಿದ್ದವು. ದಿನಸಿಗಳ ಧಾರಣೆ ಭಯವಾಗುತ್ತಾ ಬಂತು ಕಳೆದ ವಾರ ಒಂದೆರಡು ಹದ ಮಳೆ ಸುರಿದದ್ದರಿಂದ ರೈತಾಬಿ ಜನಗಳು ಈಗಲೇ ಬಿತ್ತಲಿಕ್ಕೆ ಪ್ರಾರಂಭಿಸಿದಾರೆ.—ಕೋಟೆಯ ಒಂದು ಮೂಲೆಯಲ್ಲಿ ಸೇರಿಕೊಂಡಿರುವ ಹುಲಿಯ ಭೀತಿ ಇನ್ನೂ ತಪ್ಪಲಿಲ್ಲ. ಈ ದುಷ್ಟಮೃಗದ ಭೀತಿಯಿಂದ ಕೋಟೆಯ ನಿವಾಸಿಗಳು ಸಾಯಂಕಾಲ ೭ ಘಂಟೆಗಲ್ಲಾ ತಂತಮ್ಮ ಮನೆ ಬಾಗಿಲು ಭದ್ರಮಾಡಿಕೊಳ್ಳುವರು ಈ ಭೀತಿಯು ಎಂದಿಗೆ ನಿವಾರಣೆ ಯಾಗುವದೋ.—ಇಲ್ಲಿನ ಚರ್ಮದ ಮಂಡಿಗಳು ಊರೊಳಗಿರುವದರಿಂದ ಪ್ರಜೆಗಳಿಗಿರುವ ಅಸಹ್ಯ ಅನಾರೋಗ್ಯಗಳನ್ನು ಕುರಿತು ಇದುವರೆಗೂ ಸರ್ಕಾರದವರು ಗಮನಕ್ಕೆ ತಾರದಿರುವದು ತುಂಬಾ ವಿಷಾದವೂ ಆಶ್ಚರ್ಯವೂ ಆಗಿದೆ. ಮುಂದಿನ ಮಳೆಗಾಲದಲ್ಲಿ ಈ ಮಂಡಿಗಳಿಂದ ಬರುವ ದುರ್ಗಂಧ ಅನಾರೋಗ್ಯಗಳನ್ನು ಹ್ಯಾಗೆ ತಾನೇ ಸಹಿಸಬಹುದಾಗುವದು ? ಈ ಮಂಡಿಗಳನ್ನು ಊರಹೊರಗೆ ಸಾಗಿಸುವದು ತುಂಬಾ ಪ್ರಯೋಜನಕರವಾಗಿದೆ.—ಕಳೆದ ವಾರ ಇಲ್ಲಿ ಪಾನಮನಿಯನೊಬ್ಬನು ಗಾಡಿಯನ್ನು ರಾಜಮಾರ್ಗದಲ್ಲಿ ವೇಗವಾಗಿ ಹೊಡೆದುಕೊಂಡು ಬರುತ್ತಿರುವಾಗ್ಗೆ ಗಾಡಿ ಅಕಸ್ಮಾತ್ತಾಗಿ ಒಬ್ಬ ಮುದುಕಿಯ ಮೇಲೆ ಹಾದುಹೋಯಿತು ಮುದುಕಿಯ ತೊಡೆ ನೋವಾಗಿ, ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿರುವದಾಗಿಯೂ, ತಕ್ಷಣವೇ ಪೋಲೀಸಿನವರು ಗಾಡಿಯವನನ್ನು ಹಿಡಿದು ರಿಕಾರ್ಡುಮಾಡಿಕೊಂಡಿರುವದಾಗಿಯೂ ತಿಳಿದು ಬಂದಿದೆ.—ಕಳೆದ ತಾ॥ ೧೨ ನೇ ಗುರುವಾರ ಮೈಸೂರು ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮಿ॥ ಕೆ ನಾರಣೈಯ್ಯಂಗಾರ್ರು ಇಲ್ಲಿನ ಹೈ ಸ್ಕೂಲ್ ಹೆಡ್ ಮಾಸ್ಟರಾಗಿ ಬಂದರು ಈ ಊರಿನ ಮಹಮ್ಮದೀಯ ದೊಡ್ಡ ಮನುಷ್ಯರೆಲ್ಲಾ ಸೇರಿ, ತಮ್ಮ ಕಡೆಯ ಮಿ॥ ಎ ಕೆ ಸೈಯದ್ ರಸೂಲ್ ಎಂಬುವರನ್ನು ಹೆಡ್ ಮಾಸ್ಟರವರೊಂದಿಗೆ ಬರುವದಕ್ಕಾಗಿ ಮದ್ದೂರಿನ ವರೆಗೂ ಕಳುಹಿಸಿದ್ದರು. ಹೆಡ್ ಮಾಸ್ಟರು ಸ್ಟೇಷನ್ನಿನಲ್ಲಿ ರೈಲ್ ಇಳಿದ ಕೂಡಲೆ ದೊಡ್ಡ ಮನುಷ್ಯರುಗಳೆಲ್ಲಾ ಸೇರಿ ಅವರಿಗೆ ಸುಸ್ವಾಗತವನ್ನು ಬಯಸಿ, ಇಂಗ್ಲಿಷ್ ಬ್ಯಾಂಡಿನೊಂದಿಗೆ ಹಿಂದುಸ್ಥಾನಿ ಸ್ಕೂಲಿಗೆ ಬರಮಾಡಿಕೊಂಡು, ಅವರು ಇಲ್ಲಿಗೆ ವರ್ಗವಾಗಿ ಬಂದದ್ದು ಎಲ್ಲರಿಗೂ ತುಂಬಾ ಸಂತೋಷವೆಂಬರ್ಥಕ್ಕೆ ಒಂದು ಅಡ್ರಸ್ ಓದಿದರು ಇಲ್ಲಿನ ಅನೇಕ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರು ಸೇರಿದ್ದರು. ಮಿ॥ ನಾರಣೈಯ್ಯಂಗಾರ್ರು ಸಮಯೋಚಿತವಾದ ಕೆಲವು ಮಾತುಗಳನ್ನು ಹೇಳಿ, ಎಲ್ಲರೂ ಹಸ್ತಲಾಘವಗಳಿಂದ ತಮ್ಮ ಸಂತೋಷಗಳನ್ನು ಪ್ರಕಾಶಪಡಿಸಿದರು ಕೂಡಲೆ ಸಭೆಗೆಲ್ಲಾ ಪುಷ್ಪ, ಗಂಧ, ತಾಂಬೂಲಗಳನ್ನು ಹಂಚಿ ಸಭೆಯನ್ನು ಬರಖಾಸ್ತು ಮಾಡಿ, ಮಿ॥ ನಾರಣೈಯ್ಯಂಗಾರ್ರನ್ನು ಅವರ ಮನೆಯ ವರಿವಿಗೂ ಬಿಟ್ಟುಬಂದರು

ಇಂಡಿಯಾ ದೇಶದ ವೃತ್ತಾಂತಗಳು

ಕೊಯಮುತ್ತೂರಿನಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಮದರಾಸ್ ಗವರ್ನ್‌ಮೆಂಟಿನವರು ೬೭,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

❖❖❖❖

ಉತ್ತರ ದೇಶದಲ್ಲಿ ೩,೧೭,೪೪೬ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದಾರೆ, ಅಂದರೆ, ಹಿಂದಿನ ವಾರದ ಸಂಖ್ಯೆಗಿಂತ ೭೧,೨೨೬ ಜನರು ಕಡಿಮೆ

❖❖❖❖

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೬೧೦ ಜನರಿಗೆ ಪ್ಲೇಗ್ ತಗಲಿತು ೫೩೬ ಮಂದಿ ಕಾಲವಾದರು ಇವರಲ್ಲಿ ಬಿಹಾರ್ ೧೩೦, ಪಂಜಾಬ್ ೧೫೫, ಬೊಂಬಾಯಿ ೧೪೯

❖❖❖❖

ಅಫ್ಘಾನಿಸ್ಥಾನದ ಅಮೀರರವರು ತಮ್ಮ ರಾಜಧಾನಿಯಲ್ಲಿ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಅರಮನೆಗೂ ಪಟ್ಟಣಕ್ಕೂ ರಾತ್ರಿಹೊತ್ತು ದೀಪಗಳನ್ನಿಡಬೇಕೆಂದು ಸಾಹಸಪಡುತ್ತಿದಾರೆ

❖❖❖❖

ಭಾವಲ್‌ಪುರ ಸಂಸ್ಥಾನದಲ್ಲಿ ಐದು ಲಕ್ಷ ರೂಪಾಯಿ ಮುಟ್ಟಿಸಿ ಎಂಬತ್ತು ಮೈಲಿ ಉದ್ದವಾದ ನಾಲೆಯನ್ನು ತೆಗಿಸಿ ಅದರ ಕೆಳಗೆ ಉದ್ದಕ್ಕೂ ಸಾವಿರಾರು ಎಕರೆ ಜಮೀನುಗಳು ತರೀ ಸಾಗುವಳಿ ಆಗುವಂತೆ ಮಾಡುವವರಾಗಿದಾರೆ

❖❖❖❖

ಕಲ್ಕತ್ತೆಯಲ್ಲಿರುವ ಸರಳ ಬಾಲಮಿತ್ರ, ಆತ್ಮೀಯಾ ಫ್ರೆಂಡ್ ಎಂಬವರು ಯುವತಿಯರನ್ನು ವಿಲಾಯಿತಿಗೆ ಕಳುಹಿಸಿ, ಉಪಾಧ್ಯಾಯಿನಿಯರ ಉದ್ಯೋಗವನ್ನು ಕಲಿತು ಬರುವಂತೆ ಬಂಗಾಳಾ ಸರ್ಕಾರದವರು ಗೊತ್ತು ಮಾಡಿದಾರೆ

❖❖❖❖

ನೇಪಾಳ ಸಂಸ್ಥಾನದ ಮಹಾರಾಜಾಧಿರಾಜರವರಿಗೆ ಗಂಡು ಮಗುವಾಯಿತು ರಾಜಧಾನಿಯಾದ ಖಟ್ಮಂಡು ನಗರದಲ್ಲೂ ಸಂಸ್ಥಾನದಲ್ಲೂ ಪ್ರಜೆಗಳು ಯುವರಾಜರು ಹುಟ್ಟಿದರೆಂದು ಸಂತೋಷ ಸಂಭ್ರಮಪಡುತ್ತಾ ನಾನಾ ಉತ್ಸವಗಳನ್ನು ನಡಸುತ್ತಿದಾರೆ

❖❖❖❖

ಫೈಜಾಬಾದಿನಲ್ಲಿ ಸಬ್ ಜಡ್ಜರಾಗಿದ್ದು ಪೆನ್ಶನ್ ಪಡೆದು ಇರುವ ಮೆ|| [illegible] ಶರ್ಮರವರು ಕಾಶೀ ಪಟ್ಟಣದ ಹಿಂದೂ ಕಾಲೇಜ್ ಎಂಬ ವಿದ್ಯಾಲಯದ ಮೂಲಧನಕ್ಕೆ ತಮ್ಮ ಆಸ್ತಿಯಿಂದ ೧೦,೦೦೦ ರೂಪಾಯಿ ಸಮರ್ಪಣೆ ಮಾಡಿರುತ್ತಾರೆ

❖❖❖❖

ಕಳೆದ ಶುಕ್ರವಾರ ರಾತ್ರಿ ೧೧ ಗಂಟೆ ಸಮಯದಲ್ಲಿ ರಂಗೂನ್ ಪಟ್ಟಣದ ೩ನೇ ಬೀದಿಯೊಳಗೆ ಬೆಂಕಿಬಿದ್ದು ಎರಡು ಭಾರೀ ಬಂಗಲೆಗಳು ಸುಟ್ಟುಹೋಗಿ ೯೦,೦೦೦ ರೂಪಾಯಿ ನಷ್ಟವಾಯಿತು ಕಾವಲಿದ್ದ ಒಬ್ಬ ಜವಾನನು ಬೆಂಕಿಹಾಕಿ ಓಡಿಹೋದದ್ದನ್ನು ಅನೇಕರು ಕಂಡರೂ ಅವನು ತಪ್ಪಿಸಿಕೊಂಡೇ ಹೋದನು

❖❖❖❖

ಕಲ್ಕತ್ತೆಯಲ್ಲಿ ಮೆ|| ಎಸ್ ಎಂ ಹುಸ್ಸೇನ್ ಎಂಬೊಬ್ಬ ಬ್ಯಾರಿಸ್ಟರು ಮ್ಯುನಿಸಿಪಲ್ ಜವಾನನನ್ನು ವಾರಂಟು ಜಾರಿಮಾಡಿ ಕಂದಾಯ ವಸೂಲ್ಮಾಡದಂತೆ ತಡೆದರು ಇದಕ್ಕೋಸ್ಕರ ಆ ಬ್ಯಾರಿಸ್ಟರಿಗೆ ಕೋರ್ಟು ಬರಖಾಸ್ತಾಗುವ ತನಕ ಬಂಧನದಲ್ಲಿರಬೇಕೆಂಬ ಶಿಕ್ಷೆಯಾಯಿತು ಅದರ ಮೇಲೆ ಬ್ಯಾರಿಸ್ಟರು ಅಪೀಲ್ ಮಾಡಿದರೂ ಪ್ರಯೋಜನವಾಗಲಿಲ್ಲ

❖❖❖❖

ಕಪೂರ್ಥಲ ಸಂಸ್ಥಾನದ ಹೊಸ ಅರಮನೆಯು ಈಗತಾನೇ ಕಟ್ಟಿ ಪೂರ್ತಿಸುತ್ತಾ ಬಂದಿದೆ ಅದರೊಳಗೆ ಚಿತ್ರವಿಚಿತ್ರವಾಗಿ ಅಲಂಕಾರ ಮಾಡುವುದಕ್ಕೆ ಮಹಾರಾಜರವರು ಶೀಮೆಯಿಂದ ನಾಲ್ವರು ಕಾರೀಗಾರರನ್ನು ಕರೆಯಿಸಿ ಅವರಿಂದ ಕೆಲಸಮಾಡಿಸುತ್ತಿರುವರು ಹಿಂದುಸ್ಥಾನದ ಮಹಾ ಸುಂದರವಾದ ಕಟ್ಟಡಗಳಲ್ಲಿ ಇದೂ ಒಂದಾಗುವುದೆಂದು ಹೇಳುತ್ತಾರೆ

❖❖❖❖

ದರ್ಭಾಂಗ ಸಂಸ್ಥಾನವೆಲ್ಲಾ ಈಗ ದುಃಖಪಡುತ್ತಿರುವುದು ಮಹಾರಾಜರವರಿಗೆ ಪುತ್ರಸಂತಾನವಿಲ್ಲ ಮಹಾರಾಣಿಯವರು ಗರ್ಭವತಿಯರಾಗಿ ಕಳೆದ ವಾರ ಅವಳಿ ಮಕ್ಕಳನ್ನು ಹಡೆದರು ಒಂದು ಮಗು ಸತ್ತು ಹುಟ್ಟಿತು, ಎರಡನೆಯದು ಹುಟ್ಟಿ ಸತ್ತಿತು ಶ್ರೀಮನ್ ಮಹಾರಾಜರವರು ಕಲ್ಕತ್ತೆಗೆ ದಯಮಾಡಬೇಕೆಂದು ಪ್ರಯಾಣ ಸನ್ನದ್ಧರಾಗಿದ್ದವರು ದುಃಖಾಕ್ರಾಂತರಾಗಿ ನಿಂತುಬಿಟ್ಟರು

❖❖❖❖

ಒಬ್ಬ ವೃದ್ಧ ಬ್ರಾಹ್ಮಣನು ಪತ್ನಿ ಸಹಿತ ರೈಲ್ ಪ್ರಯಾಣ ಮಾಡುತ್ತಾ ಲಾಸೂರಾ ಸ್ಟೇಷನ್ಗೆ ಇಳಿದನು ಅಲ್ಲಿ ಪ್ಲೇಗ್ ನಿರ್ಬಂಧವಿದ್ದದ್ದರಿಂದ ದಂಪತಿಗಳು ತಮ್ಮನ್ನು ಹಿಡಿದು ಕ್ಯಾಂಪಿನಲ್ಲಿ ಇಡುವರೆಂದು ಹೆದರಿ ಮುಂದಕ್ಕೆ ಹೋಗದೆ ಹಿಂತಿರುಗಿ ಮೈಜಾಪುರಕ್ಕೆ ಬರುತ್ತಿರುವಾಗ್ಗೆ ಮಳೆ ಗಾಳಿ ಅಧಿಕವಾಗಿ ಅವರಿಬ್ಬರೂ ಸೇತುವೆ ಮೇಲಿನಿಂದ ಬಿದ್ದು ನದಿಪಾಲಾದರೆಂದು ತಿಳಿದು ಬಂದಿದೆ

❖❖❖❖

ಲಾಹೋರ್ ಪಟ್ಟಣದ ಪಂಜಾಬ್ ಬ್ಯಾಂಕ್ ಏಜಂಟ್ ಮೆ|| ಎಲ್ ದೌಂರಖಪಾಲ್ ಎಂಬಾತನ ಸೋದರಿಯಾದ ೨೫ ವರ್ಷದ ವಿಧವೆಗೆ ಆತನು ಪುನರ್ವಿವಾಹ ನಡಸಬೇಕೆಂದು ಕುತೂಹಲಪಡುತ್ತಿದಾನೆ ಮೂವತ್ತು ವರುಷದೊಳಗಿರುವ ಬ್ರಾಹ್ಮಣ, ಕ್ಷತ್ರಿಯ ಅಥವಾ ಖಾತ್ರಿ ಜಾತಿಯ ಪ್ರಾಯಸ್ಥರ್ಯಾರಿದರೂ ವಿವಾಹಮಾಡಿಕೊಳ್ಳಲು ಇಷ್ಟಪಟ್ಟರೆ ಆತನಿಗೆ ಬರೆದು ಗೊತ್ತುಮಾಡಿಕೊಳ್ಳಬಹುದು

ಧಾರ್ವಾಡದಲ್ಲಿ ಒಬ್ಬಳು ೪ ವರುಷದ ಹೆಣ್ಣುಮಗುವನ್ನು ದತ್ತು ಮಾಡಿಕೊಂಡು ೧೨—೧೩ ವರುಷಗಳಾಗುವ ತನಕ ಸಾಕಿ, ವ್ಯಭಿಚಾರದ ಮೇಲೆ ಆ ಹುಡುಗಿಯನ್ನು ವೇಶ್ಯಾಸಿಯಾಗಿ ಮಾಡಿಬಿಟ್ಟಳು ಹೀಗೆ ಮಾಡಿದ್ದರಿಂದ ಆ ಹುಡುಗಿಗೆ ಬದ್ಧಬಾಲಾ ಕಲಿಸಿದಂತಾಗುವುದೆಂದು ಆ ಹೆಂಗಸನ್ನು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಸೆಷನ್ಸ್ ಜಡ್ಜರು ಅವಳಿಗೆ ಎಂಟು ತಿಂಗಳ ಸಾದಾ ಸಜಾ ೫೦ ರೂಪಾಯಿ ಜುಲ್ಮಾನೆಯನ್ನು ವಿಧಿಸಿದರು

❖❖❖❖

ಕಳೆದ ವಾರ ಹೈದರಾಬಾದ್ ನೈಜಾಮರವರಿಗೆ ಬಹಳ ಕಾಯಿಲೆಯಾಗಿದೆ ಎಂದು ಪ್ರಸಿದ್ಧವಾಗೇ ವರ್ತಮಾನ ಹುಟ್ಟಿತು ಮನಸಬ್ದಾರ್ ದೊಡ್ಡ [illegible]ರೆಲ್ಲಾ ಗಾಬರಿಬಿದ್ದು ಬೇಗಬೇಗನೆ ಅರಮನೆಗೆ ಹೋಗಿ ನೈಜಾಮರವರ ಭೇಟಿ ತೆಗೆದುಕೊಂಡರು ಅವರಿಗೆ ಸ್ವಲ್ಪ ದೇಹಾಲಸ್ಯವಿದ್ದದ್ದೇನೋ ನಿಜ ಆದರೆ ಗಾಬರಿಪಡುವದಕ್ಕೆ ಕಾರಣವಿರಲಿಲ್ಲ ನೈಜಾಮರವರು ಬಂದವರಿಗೆಲ್ಲಾ ಭೇಟಿ ಕೊಟ್ಟು ಸಂತೋಷಪಡಿಸಿ ಕಳುಹಿಸಿದರು

❖❖❖❖

ಸಿಲೋನ್ (ಲಂಕಾ) ದ್ವೀಪದಲ್ಲಿ ಒಬ್ಬನು ಅಣ್ಣ ಮಗನನ್ನು ಶಿಕ್ಷಿಸುತ್ತೇನೆಂದು ಹೇಳಿದನು ಅವನು ಏಟು ತಪ್ಪಿಸಿಕೊಳ್ಳುವುದಕ್ಕೆ ರೈಲ್ ಗಾಡಿಯ ಕೆಳಗಡೆ ಚಕ್ರಗಳ ದಾರಿಯ ಮೇಲೆ ಕುಳಿತು ಗುಟ್ಟಾಗಿ ಇನ್ನೊಂದೂರಿಗೆ ಹೋಗುತ್ತಿರುವಾಗ ಪ್ರಯಾಣಿಕರಲ್ಲಿ ಒಬ್ಬನು ಅವನನ್ನು ಹಿಡಿದು ಪೋಲಿಸಿಗೆ ಕೊಟ್ಟರು ಮ್ಯಾಜಿಸ್ಟ್ರೇಟರು ಅಪ್ಪನ ಕೈ ಏಟು ತಪ್ಪಿಸಿಕೊಂಡು ಹೋದ ಆ ಹುಡುಗನಿಗೆ ೬ ಏಟು ಹೊಡಿಸಿ ಮನೆಗೆ ಕಳುಹಿಸಿದರು

❖❖❖❖

ಬಿಹಾರ್ ಆಧಿಪತ್ಯಕ್ಕೆ ಸೇರಿದ ಹಂತವತ್ತಿ ಎಂಬ ಊರಿನಲ್ಲಿ ಒಬ್ಬ ಬವಿರ್ಹಾಯನ ಮನೆಗೆ ಒಬ್ಬ ಭಿಕ್ಷುಕನು ಹೋಗಿ ಭಿಕ್ಷೆ ಕೊಡೆಂದು ಪೀಡಿಸಿದನು ಸುಮಾರು ೧೨—೧೩ ವರುಷದ ಹುಡುಗಿ ಒಳಗಿನಿಂದ ಬಂದು ಅವನನ್ನು ಮುಂದಕ್ಕೆ ಹೋಗಿ ಒರುವಂತೆ ಎಷ್ಟು ಹೇಳಿದರೂ ಕೇಳಲಿಲ್ಲ ಆಗಲವಳು ಒಂದು ಸೌದೇ ತುಂಡನ್ನು ತಂದು ಅವನನ್ನು ಹೊಡೆದಳು ಅವನು ಅಲ್ಲೇ ಸತ್ತು ಬಿದ್ದುಬಿಟ್ಟನು ಈಗ ಅವಳನ್ನು ಹಿಡಿದು ಸೆಷನ್ ವಿಚಾರಣೆಗೆ ಗುರಿಮಾಡಿದಾರೆ

❖❖❖❖

ಚೋಟಾ ನಾಗಪುರದ ಸೆಷನ್ಸ್ ಜಡ್ಜರು ಒಂದು ಕೊಲೆಯ ಮೊಕದ್ದಮೆಯನ್ನು ದರ್ಯಾಫ್ತು ಮಾಡಿ ಒಂದೇ ಸಂಸಾರಕ್ಕೆ ಸೇರಿದ ಏಳು ಮಂದಿ ಅಪರಾಧಿಗಳ ಪೈಕಿ ಐದು ಜನರನ್ನು ಗಲ್ಲಿಗೆ ಎತ್ತಬೇಕೆಂತಲೂ ಇಬ್ಬರನ್ನು ಯಾವಜ್ಜೀವವೂ ಸೆರೆಮನೆಯಲ್ಲಿಡಬೇಕೆಂತಲೂ ಶಿಕ್ಷೆ ವಿಧಿಸಿದ್ದರು ಇದರ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ಅಪೀಲ್ ಆಯಿತು ಜಡ್ಜಿಗಳು ಅವರ ಮೇಲೆ ಅಪರಾಧ ರುಜುವಾತಾಗುವುದಿಲ್ಲವೆಂದು ಹೇಳಿ ಏಳು ಮಂದಿಯನ್ನೂ ಸೆರೆಯಿಂದ ಬಿಡಿಸಿದರು

❖❖❖❖

ಪರಮಹಂಸ ರಾಮಕೃಷ್ಣಾನಂದ ಸ್ವಾಮಿಗಳ ಶಿಷ್ಯರಾಗಿ ಕಳೆದ ಹನ್ನೊಂದು ವರುಷಗಳಿಂದ ಯೂರೋಪ್ ಅಮೇರಿಕ ರಾಜ್ಯಗಳಲ್ಲಿ ಸಂಚಾರ ಮಾಡಿ ಹಿಂದೂಮತದ ತತ್ವಗಳನ್ನು ಕುರಿತು ಉಪನ್ಯಾಸ ಮೂಲಕ ಪ್ರಚಾರಪಡಿಸುತ್ತಿದ್ದ ಅಭೇದಾನಂದ ಸ್ವಾಮಿ ಎಂಬುವರು ಈಗ ಮದರಾಸಿಗೆ ಬಂದು ಉಪನ್ಯಾಸ ಮಾಡುತ್ತಲೂ ಹಿಂದೂ ಪ್ರಜೆಗಳಿಂದ ಸನ್ಮಾನ ಸತ್ಕಾರಗಳನ್ನು ಹೊಂದುತ್ತಲೂ ಇದ್ದಾರೆ ಇವರು ಇನ್ನು ಕೆಲವು ದಿನಗಳಲ್ಲಿ ಬೆಂಗಳೂರು ಮೈಸೂರು ಪಟ್ಟಣಗಳಿಗೂ ಬರುವರೆಂದು ವರ್ತಮಾನವಿದೆ

❖❖❖❖

ಪೂನೆಯಿಂದ ಬೊಂಬಾಯಿಗೆ ಹೋಗುತ್ತಿದ್ದ ರೈಲ್ ಗಾಡಿಯಲ್ಲಿ ಆಲ್‌ಫ್ರೆಡ್ ಡಿಲ್ಲಾನ್ ಎಂಬೊಬ್ಬ ಯೂರೋಪ್ಯನು ಒಬ್ಬ ದೊಡ್ಡ ಮನುಷ್ಯರ ಮನೆ ಸ್ತ್ರೀಯನ್ನು ರೈಲ್ ಗಾಡಿಯಲ್ಲಿ ಮಾನಭಂಗ ಪಡಿಸಬೇಕೆಂದು ಪ್ರಯತ್ನಪಟ್ಟನೆಂದು ಮೊಕದ್ದಮೆ ಆಗಿದೆ ಪೂನಾಪಟ್ಟಣದ ಮ್ಯಾಜಿಸ್ಟ್ರೇಟರು ತನಿಖೆಮಾಡುತ್ತಾರೆ ಮೊನ್ನೆ ಮಂಗಳವಾರ ಹಿಯರಿಂಗು ಇತ್ತು ಈ ಮೊಕದ್ದಮೆಯು ಜನರಲ್ಲಿ ತುಂಬಾ ಗಲಭೆಯನ್ನುಂಟುಮಾಡಿದೆ ಪೂನೆಯಿಂದಲೂ ಬೊಂಬಾಯಿನಿಂದಲೂ ಅನೇಕ ದೊಡ್ಡ ಮನುಷ್ಯರು ಸಾಕ್ಷಿಗಳಾಗಿ ಬರುವರು

❖❖❖❖

ಕಲ್ಕತ್ತಾ ಪಟ್ಟಣದ ಬಾರಾಸೇತ್ ಎಂಬ ಮೊಹಲೆಯಲ್ಲಿ ಕುಮಾರಿದಾಸಿ ಎಂಬೊಬ್ಬ ವಿಧವೆಯು ಮಗಳನ್ನು ನಿವಾರಣನೆಂಬುವನು ಮದುವೆಮಾಡಿಕೊಂಡನು ವಿಧವೆಯು ತನ್ನ ಮಗಳನ್ನು ಗಂಡನ ಮನೆಗೆ ಕಳುಹಿಸದೆ ಸಬಬು ಹೇಳುತ್ತಾ ಬಂದಳು ಅಳಿಯನೂ ಅವನ ಅಣ್ಣನೂ ಇನ್ನಿಬ್ಬರೂ ಸೇರಿಕೊಂಡು ಒಂದು ದಿನ ಬೆಳಗಿನ ಝಾಮದಲ್ಲಿ ಅವಳ ಮನೆಗೆ ಹೋಗಿ ಎಲ್ಲರೂ ಮಲಗಿ ನಿದ್ರೆಮಾಡುತ್ತಿರುವಾಗ್ಗೆ ಕುಮಾರಿ ದಾಸಿಯನ್ನೂ ಅವಳ ಇಬ್ಬರು ಹೆಣ್ಣು ಮಕ್ಕಳನ್ನೂ ಕತ್ತಿದುಹಾಕಿ ಕೊಂದುಬಿಟ್ಟರು ಈಗ ಈ ನಾಲ್ಕು ಜನರನ್ನೂ ಹಿಡಿದು ತನಿಖೆ ನಡಿಯುತ್ತಿದೆ

❖❖❖❖

ಆನೆಯನ್ನು ಕದ್ದು ಬಚ್ಚಿಡುವುದು ಸಾಧ್ಯವೇ! ಇಂಥಾ ಕಳವು ಬರ್ಮಾ ಆಧಿಪತ್ಯದ ಕಾಡುಗಳಲ್ಲಿ ನಡೆಯುವುದು ಅಪರೂಪವಲ್ಲ ಕಳೆದ ವಾರ ಇಬ್ಬರು ಜಂಗಲಿಗೆ ಹೋಗಿ ಒಬ್ಬ ಸಾಹುಕಾರನ ಭಾರೀ ಆನೆಯನ್ನು ಇನ್ನೊಂದು ಕಾಡಿಗೆ ಸಾಗಿಸಿಕೊಂಡು ಹೋಗಿ ಅಲ್ಲಿ ಅದನ್ನು ಕೆಡವಿಕೊಂಡು ಅದರ ಭಾರೀ ದಂತಗಳನ್ನು ಕೊಯ್ದುಕೊಳ್ಳುತ್ತಿದ್ದರು ಪೊಲೀಸನು ಅಷ್ಟರಲ್ಲೇ ಕಂಡುಹಿಡಿದು ಅವರನ್ನು ದಸ್ತಗಿರಿ ಮಾಡಬೇಕೆಂದು ಪ್ರಯತ್ನಪಟ್ಟನು ಆದರೆ ಒಬ್ಬ ಕಳ್ಳನು ಪರಾರಿಯಾದನು, ಇನ್ನೊಬ್ಬನನ್ನು ಹಿಡಿದರೂ ಅವನು ವಿಷಕುಡಿದು ಆತ್ಮಹತ್ಯ ಮಾಡಿಕೊಂಡನು

ಲಾರ್ಡ್ ಕರ್ಜನ್ ಪ್ರಭುಗಳು ವೈಸ್‌ರಾಯರಾಗಿದ್ದಾಗ ಬಂಗಾಳ ಆಧಿಪತ್ಯವನ್ನು ಎರಡಾಗಿ ವಿಭಾಗಿಸಿ, ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಆಧಿಪತ್ಯವನ್ನು ಮಾಡಿ, ಅದಕ್ಕೆ ಬೇರೊಬ್ಬ ಲೆಫ್ಟಿನೆಂಟ್ ಗವರ್ನರನ್ನು ನೇಮಕಮಾಡಿದರು ಇದು ನ್ಯಾಯವಾದ ವಿಭಜನೆಯಲ್ಲವೆಂದೂ ಅದನ್ನು ರದ್ದುಮಾಡಬೇಕೆಂದೂ ಬಂಗಾಳಿಗಳು ಅಂದಿನಿಂದಲೇ ತುಂಬಾ ಗಲಾಟೆಎಬ್ಬಿಸಿರುತ್ತಾರೆ ಸೆಕ್ರೆಟರಿ ಮೆ|| ಮಾರ್ಲಿಯವರು ಕಳೆದ ವಾರ ಈ ವಿಭಜನೆಯನ್ನು ರದ್ದುಮಾಡುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟರು ಇನ್ನಾದರೂ ಬಂಗಾಳಿಗಳು ವೃಥಾ ಗಲಭೆಮಾಡುವುದನ್ನು ನಿಲ್ಲಿಸಿಬಿಟ್ಟರೆ ಕ್ಷೇಮವಾದೀತು

❖❖❖❖

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕ್ಯಾಂಡಿ ಪಟ್ಟಣದಲ್ಲಿ ಮ್ಯುನಿಸಿಪಲ್ ಕಮಿಷನರಾಗಿದ್ದ ಮೆ|| ಪಿ ಟಿ. ಪಟಿಪೋ ಲಬ್ಬೆ ಎಂಬಾತನು ರೈಲ್ ಮಾರ್ಗದಲ್ಲಿ ನಿಂತಿದ್ದು ಗಾಡಿ ಬರುವುದನ್ನು ಕಂಡು ಕೂಡಲೇ ಚತ್ರಿ ರುಮಾಲು ಮುಂತಾದ್ದನ್ನು ಕೆಳಗಿಟ್ಟು ಕಂಬಿಗಳ ಮೇಲೆ ಅಡ್ಡಲಾಗಿ ಮಲಗಿಕೊಂಡದ್ದನ್ನು ಗಾಡಿ ನಡಿಸುವವನು ದೂರದಲ್ಲಿ ನೋಡಿದಾಗ್ಯೂ ಎಷ್ಟು ಸಾಹಸಪಟ್ಟರೂ ಗಾಡಿಯನ್ನು ನಿಲ್ಲಿಸುವುದಕ್ಕಾಗದೆ ಅವನ ಮೇಲೆ ಹರಿದು ಕೊಂದುಬಿಟ್ಟಿತೆಂದು ಆ ಗಾಡಿ ನಡಿಸುವವನು ಸಾಕ್ಷ್ಯ ಹೇಳಿದ್ದನು. ಆದ್ದರಿಂದ ಅವನು ಬೇಕೆಂದು ಆತ್ಮಹತ್ಯ ಮಾಡಿಕೊಂಡನೆಂಬುದಾಗಿ ಮ್ಯಾಜಿಸ್ಟ್ರೇಟರು ತೀರ್ಮಾನ ಮಾಡಿದರು

❖❖❖❖

ಮೂರನೇ ತರಗತಿಯ ಪ್ರಯಾಣಿಕರಿಂದ ಬರುವ ಆದಾಯವೇ ಹೆಚ್ಚಾಗಿದ್ದರೂ ರೈಲ್ ಕಂಪನಿಯವರು ಸ್ಟೇಷನ್ಗಳಲ್ಲಿ ಅವರಿಗೂ ಅವರ ಹೆಂಗಸರು ಮಕ್ಕಳಿಗೂ ಗಾಡಿ ಬರುವ ತನಕ ಅಥವಾ ಸೇರುವ ತನಕ ಕಾದಿರುವುದಕ್ಕೆ ಪ್ರತ್ಯೇಕವಾದ ಮತ್ತು ಮಳೆ ಬಿಸಿಲು ಗಾಳಿಗೆ ಅಡ್ಡಿಯಾದ ವೇಯಿಟಿಂಗ್ ರೂಂ ಎಂಬ ಕಟ್ಟಡಗಳನ್ನು ಮಾಡಿಕೊಟ್ಟಿಲ್ಲ ಇಂಥಾ ಅನುಕೂಲಗಳನ್ನು ಕಲ್ಪಿಸಬೇಕೆಂದು ಹಿಂದುಸ್ಥಾನದ ರೈಲ್ವೆ ಬೋರ್ಡಿನವರು ಸಮಸ್ತ ರೈಲ್ವೆ ಕಂಪನಿಯವರಿಗೂ ತಿಳಿಸಿದ್ದರು ಕಲ್ಕತ್ತೆಯ ಹತ್ತಿರ ದಿನಪುರವೆಂಬ ರೈಲ್ ಸ್ಟೇಷನ್ನಲ್ಲಿ ಮಾತ್ರ ಈಗ ೨೦,೦೦೦ ರೂಪಾಯಿ ಮುಟ್ಟಿಸಿ ಇಂಥಾ ಕಟ್ಟಡವನ್ನು ಕಟ್ಟಿಸಲಾರಂಭಿಸಿದಾರೆ

❖❖❖❖

ಪೂನಾ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನು ಮನೆಯಲ್ಲೇ ಗುಟ್ಟಾಗಿ ಯಂತ್ರಸಾಮಗ್ರಿಗಳನ್ನಿಟ್ಟುಕೊಂಡು, ಬೆಲ್ಲ ಪಾಣಿಸೆಮ್ಮಾ ಒಂದು ತರಹ ಹೂವು ಇವುಗಳನ್ನು ಉಪಯೋಗಿಸಿ ಬಟ್ಟಿ ಇಳಿಸಿ ಸಾರಾಯಿ ಮಾಡುತ್ತಿದ್ದನು ಪೋಲೀಸಿನವರು ಅವನನ್ನು ಹಿಡಿದು ವಿಚಾರಣೆ ಮಾಡಿದಾಗ ಅವನು ಎರಡು ಸಂವತ್ಸರಗಳಿಂದ ತಾನೇ ತನ್ನ ಮನೆಯಲ್ಲೇ ತನ್ನ ಸ್ವಂತ ಖರ್ಚಿನಿಂದಲೇ ಸಾರಾಯಿ ಮಾಡುತ್ತಿದ್ದುದನ್ನು ಒಪ್ಪಿಕೊಂಡು, ಅದನ್ನು ಯಾರಿಗೂ ಬಿಕರಿಮಾಡುತ್ತಿರಲಿಲ್ಲವೆಂತಲೂ ಒಂದು ದೇವತೆಗಾಗಿ ತಯಾರ್ಮಾಡುತ್ತಿದ್ದೆನೆಂತಲೂ ಹೇಳಿದನು ಮ್ಯಾಜಿಸ್ಟ್ರೇಟರು ಅವನಿಗೆ ೧೦೦ ರೂಪಾಯಿ ಜುಲ್ಮಾನೆ ಹಾಕಿ, ಅವನ ಮನೆಯಲ್ಲಿದ್ದ ಯಂತ್ರಸಾಮಗ್ರಿಗಳನ್ನೆಲ್ಲಾ ಕಿತ್ತುಕೊಂಡರು

❖❖❖❖

ಅಫ್ಘಾನಿಸ್ಥಾನದ ಅಮೀರರಾದ ಹಬೀಬುಲ್ಲಾ ಖಾನರವರು ಪರಿವಾರಸಹಿತ ನೋವೆಂಬರ್ ತಿಂಗಳಲ್ಲಿ ವೈಸ್‌ರಾಯರವರ ಭೇಟಿಗೋಸ್ಕರ ಹಿಂದುಸ್ಥಾನಕ್ಕೆ ಬರುತ್ತಾರೆಂದು ಲಾಹೋರಿನಲ್ಲೂ ಪೇಷಾವರಿನಲ್ಲೂ ವರ್ತಮಾನ ಹುಟ್ಟಿದೆ ಕಾಬೂಲಿನಿಂದ ಬಂದಿರುವ ವರ್ತಮಾನವನ್ನು ನೋಡಿದರೆ ಅಲ್ಲಿನ ಪ್ರಜೆಗಳೂ ಸಮ್ಮತಿಪಟ್ಟಿರುವಂತೆ ಕಾಣುವುದು ಆದರೂ ಅಮೀರರು ತಮ್ಮ ಸಂಸ್ಥಾನದ ಮುಖ್ಯ ದಳಪತಿಗಳನ್ನೂ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಕರೆಸಿ ಅವರ ಅನುಮತಿಯನ್ನು ಪಡೆಯಬೇಕಾಗಿರುವುದು ಅವರ ಗೈರ್‌ಹಾಜರಿಯಲ್ಲಿ ಅವರ ತಮ್ಮಂದಿರಾದ ಸರ್ದಾರ್ ನಸರುಲ್ಲಾ ಖಾನರವರು ಕೆಲವು ವಾರಗಳ ವರೆಗೆ ಸಂಸ್ಥಾನದ ಕಾರುಬಾರ್ಗಳನ್ನು ನೋಡಿಕೊಳ್ಳುವನ್ನು ಸಮರ್ಥರಾಗಿದಾರೆ ಆಗ್ರಾ ಪಟ್ಟಣದಲ್ಲಿ ಅಮೀರರಿಗೆ ಆತಿಥ್ಯ ನಡಿಯಬಹುದೆಂದು ಕಾಣುತ್ತದೆ

❖❖❖❖

ಬಾಬೂ ಸುರೇಂದ್ರನಾಥ ಬಾನರ್ಜಿಯವರು ದೊಂಬಿ ಎಬ್ಬಿಸಿದರೆಂದು ಬ್ಯಾರಿಸಾಲ್ ಮ್ಯಾಜಿಸ್ಟ್ರೇಟರು ಅವರನ್ನು ಹಿಡಿದು ತರಿಸಿ ದರ್ಯಾಫ್ತು ಮಾಡುತ್ತಿದ್ದಾಗ್ಗೆ ಬಾನರ್ಜಿಯವರು ಮಾತನಾಡುತ್ತಿದ್ದ ಹಾಗೂ, ಸುಮ್ಮನಿರಬೇಕೆಂದು ಹೇಳಿದರೂ ಕೇಳದೆಹೋದ ಹಾಗೂ, ಇದರಿಂದ ಅವರು ಕೋರ್ಟಿಗೆ ಅವಮಾನಮಾಡಿದರೆಂದು ಹೇಳಿ ಅವರಿಗೆ ೨೦೦ ರೂಪಾಯಿ ಜುಲ್ಮಾನೆ ಹಾಕಿದ ಹಾಗೂ ಮೊದಲೇ ತಿಳಿಸಿತ್ತು ಈ ಮೊಕದ್ದಮೆಯು ಹೈಕೋರ್ಟಿನಲ್ಲಿ ಅಪೀಲಾಯಿತು ಮ್ಯಾಜಿಸ್ಟ್ರೇಟರು ಮೇಲ್ಕಂಡ ಜಡ್ಜಮೆಂಟನ್ನು ಹೇಳಿದ ಮೂರು ದಿನಗಳ ಮೇಲೆ ಆ ಜಡ್ಜಮೆಂಟಿನ ಬರವಣಿಗೆಯನ್ನು ತಿದ್ದಿಬಿಟ್ಟರೆಂದು ತಿಳಿದುಬಂತು ಕಲ್ಕತ್ತೆಯ ಜಡ್ಜಿಗಳು ಇದಕ್ಕಾಗಿ ತುಂಬಾ ಆಗ್ರಹಪಟ್ಟು, ಕೆಳಕೋರ್ಟಿನ ಶಿಕ್ಷೆಯನ್ನು ರದ್ದು ಮಾಡಿ, ಜುಲ್ಮಾನೆ ಹಣವನ್ನು ವಾಪಸು ಕೊಡಿಸಿದರು

❖❖❖❖

ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಸರ್ಕಾರಿ ತಾಲ್ಲೂಕ್ ಕಚೇರಿಗಳಲ್ಲಿ ಈಗಲೂ ಒಂದು ವಿಚಿತ್ರವಾದ ಪೂರ್ವಪದ್ಧತಿಯನ್ನಿಟ್ಟುಕೊಂಡಿದಾರೆ ಪ್ರತಿ ವರುಷವೂ ಜನವರಿ ತಿಂಗಳಲ್ಲಿ ಸರ್ಕಾರದ ಕಂದಾಯವನ್ನು ರೈತರಿಂದ ವಸೂಲ್ಮಾಡುವರಷ್ಟೆ ಅದನ್ನು ತಾಲ್ಲೂಕ್ ಖಜಾನೆಗೆ ತಂದು [illegible] ಮಾಡುವುದಕ್ಕೆ ತಹಶೀಲ್ದಾರರು ಜೋಯಿಸರಿಂದ ಶುಭ ದಿನವನ್ನು ಗೊತ್ತುಮಾಡಿಸಿ, ಆ ದಿನಕ್ಕೆ ವಸೂಲಾದದ್ದನ್ನು ಕಂದಾಯವನ್ನು ಕೂಡಿಸಿ ತಂದು ತಾಲ್ಲೂಕಿಗೆ ಕಟ್ಟಬೇಕೆಂದು ಸಮಸ್ತ ಗ್ರಾಮಪಟೇಲರಿಗೂ ತಾಕೀತು ಕಳುಹಿಸುತ್ತಾರೆ ಆ ಶುಭ ದಿನ ಗ್ರಾಮಪಟೇಲರು ಮಂಗಳಕರವಾದ ಉಡುಪುಗಳನ್ನು ಹಾಕಿಕೊಂ

ಕಂದಾಯಗಳನ್ನು ತಕೊಂಡು ಕಛೇರಿಗೆ ಬರುವರು ತಹಶೀಲ್‌ದಾರರು ಒಬ್ಬಗ ಶಾಳ ಮೇಳಗಳ ಸಮೇತ ಮೆರವಣಿಗೆಯಲ್ಲಿ ತಾಲ್ಲೂಕ್ ಖಜಾನೆಗೆ ಬಂದು ಕುಳಿತುಕೊಳ್ಳುವರು ಕಂದಾಯಗಳನ್ನೆಲ್ಲಾ ಸರ್ಕಾರಕ್ಕೆ ಪಾವತಿಮಾಡಿದ ತರುವಾಯ ಅಲ್ಲಿ ಸೇರಿರುವ ಸಮಸ್ತ ನೌಕರ ಮಾನ್ಯರಿಗೂ ಜವಾನರಿಗೂ ಕೂಡ ಗಂಧ ಹೂವು ಅಡಿಕೆಲೆಗಳನ್ನು ವಿನಿಯೋಗ ಮಾಡುತ್ತಾರೆ ಇದಕ್ಕಾಗಿ ಪ್ರತಿ ತಾಲ್ಲೂಕ್ ಕಛೇರಿಗೂ ಸರ್ಕಾರದವರು ಎರಡು ರೂಪಾಯಿ ಸ್ಯಾಂಕ್ಷನ್ ಮಾಡಿರುವರು ಸಾಲದ್ದನ್ನು ಗ್ರಾಮನೌಕರರು ಕಂಚೆಕೊಂಡು ಕೊಡಬೇಕಾಗಿದೆ ಎಂದು ಹೇಳತಕ್ಕ ಅಗತ್ಯವಿಲ್ಲ.

●●●●

ಬೊಂಬಾಯಿ ಪಟ್ಟಣದ ಕಿಟ್ಟೆಂಬರಿ ಹಾಲ್ ಎಂಬ ಬಂಗಲೆಯಲ್ಲಿ ಸೊತಾರೆಯ ಮರಾಟೆಯವರು ಕಳೆದ ವಾರ ಸಭೆ ಸೇರಿ ತೀರ್ಮಾನ ಮಾಡಿರುವುದೇನೆಂದರೆ—ಕೊಲ್ಹಾಪುರ ಸಂಸ್ಥಾನದ ಛತ್ರಪತಿ ಮಹಾರಾಜರವರೂ ಮರಾಟೆಯವರೂ ಕ್ಷತ್ರಿಯ ವರ್ಗಕ್ಕೆ ಸೇರಿದವರಲ್ಲವೆಂದು ಶಂಕೇಶ್ವರ ಮಠದ ಶ್ರೀ ಶಂಕರಾಚಾರ್ಯರು ಶ್ರೀಮುಖವನ್ನು ಕೊಟ್ಟಿರುತ್ತಾರೆ ಮರಾಟೆಯವರನ್ನು ಹಿಂದುಗಳಲ್ಲಿ ಕೀಳುದರ್ಜೆಯವನೆಂದು ಹೇಳಿ ಅವಮಾನಪಡಿಸಬೇಕೆಂಬುದೇ ಅವರ ಉದ್ದೇಶವಾಗಿದೆ ಹೀಗೆ ಅವರು ತೀರ್ಮಾನ ಮಾಡುವುದಕ್ಕೆ ಶಾಸ್ತ್ರಾಧಾರಗಳೇನೂ ಇರುವದಿಲ್ಲ ಆದಕಾರಣ ಅಂಥಾ ಶ್ರೀಮುಖವನ್ನು ಸರಿ ಎಂದು ಒಪ್ಪಿಕೊಳ್ಳುವ ಯಾವ ಬ್ರಾಹ್ಮಣನನ್ನೂ ಮರಾಟೆಯವರು ತಮ್ಮ ಮನೆಗೆ ಕರೆಸಿಕೊಂಡು ಅವನಿಂದ ಗೃಹ್ಯ ಕರ್ಮಾದಿ ಕರ್ಮಗಳನ್ನು ಮಾಡಿಸಿಕೊಳ್ಳಲೇ ಕೂಡದು. ಅಂಥಾ ಬ್ರಾಹ್ಮಣನನ್ನು ನಿರಾಕರಿಸಬೇಕು ಎಂಬುದೇ.

●●●●

ಅಲಹಾಬಾದ್ ಪಟ್ಟಣದ ಹೈಕೋರ್ಟ್ ಜಡ್ಜಿಗಳ ಮೇಲೆ ಅಲ್ಲಿನ ಬ್ಯಾರಿಸ್ಟರ್ ಮಿ॥ ಸ್ವಾರ್ಥಿಕಾರಿಯು ತನ್ನ ವಾರಪತ್ರಿಕೆಯಲ್ಲಿ ಅವಮಾನಕರವಾದ ದೂರು ದುರ್ಬೋಧನವನ್ನು ಬರೆದು ಪ್ರಕಟಿಸಿದನು ಆ ಮೂವರು ಜಡ್ಜಿಗಳು ಕೂಡಿ ಆತನನ್ನು ಹಿಡಿಸಿ ವಿಚಾರಣೆ ಮಾಡಿದರು ಆ ಬ್ಯಾರಿಸ್ಟರು ಮೊದಲೇ ತನ್ನನ್ನು ವಿಚಾರಣೆ ಮಾಡುವದಕ್ಕೆ ಜಡ್ಜಿಗಳಿಗೆ ಅಧಿಕಾರವಿಲ್ಲವೆಂದು ವಾದಿಸಿ, ಕಡೆಗೆ ತಾನು ಮಾಡಿದ್ದು ತಪ್ಪೆಂದು ಒಪ್ಪಿಕೊಂಡು, ಕ್ಷಮಾಪಣ ಪತ್ರವನ್ನು ಬರೆದು ಆ ಜಡ್ಜಿಗಳಿಗೆ ಒಪ್ಪಿಸಿ, ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬಹಳವಾಗಿ ಬೇಡಿಕೊಂಡನು ಆ ತನು ಹಿಂದೆಯೂ ಒಂದು ಸಲ ಹೈಕೋರ್ಟ್ ಜಡ್ಜಿಯನ್ನು ಅವಮಾನಪಡಿಸಿ, ೩ ತಿಂಗಳ ತನಕ ವಕೀಲಿ ಮಾಡಕೂಡದೆಂಬ ಶಿಕ್ಷೆಯನ್ನು ಅನುಭವಿಸಿದ್ದನು ಈಗ ಜಡ್ಜಿಗಳು ಇದು ಎರಡನೆಯ ತಪ್ಪು ಕ್ಷಮಿಸತಕ್ಕದ್ದಲ್ಲವೆಂದು ಗೊತ್ತುಮಾಡಿ, ಈ ಆಗಾಯಿತು ನಾಲ್ಕು ವರುಷಗಳ ತನಕ ಅವನು ವಕಾಲತ್ತು ನಡಸಕೂಡದೆಂಬ ಶಿಕ್ಷೆಯನ್ನು ವಿಧಿಸಿಬಿಟ್ಟರು.

●●●●

ಮಿ॥ ಸ್ಕ್ಯಾಪಿಟ್ ಮಿ॥ ಪವ್ವಲ್ ಎಂಬಿಬ್ಬರು ಮಿಷನ್ ಪಾದ್ರಿಗಳು ಒಬ್ಬ ದೇಶೀಯ ಕ್ರೈಸ್ತಸ್ತ್ರೀಯನ್ನು ತಮ್ಮ ಗಾಡಿಯಲ್ಲಿ ಕೂಡಿಸಿಕೊಂಡು ಕಲ್ಕತ್ತೆಯ ಬಳಿ ದಾಂತಿಪುರದ ಸ್ಟೇಷನಿಗೆ ಬಂದರು ಸ್ಟೇಷನಿನಲ್ಲಿ ಬಹು ಜನ ಹಿಂದುಗಳು ಶಿವಾಜಿ ಉತ್ಸವಕ್ಕೋಸ್ಕರ ರೈಲಿನಲ್ಲಿ ಬರುವ ಬಾಬು ವಿಹಾರಿ ಪಾಲ್ ಎಂಬಾತನನ್ನು ಎದುರುಗೊಳ್ಳಬೇಕೆಂದು ಕಾದಿದ್ದರು ಆ ಪಾದ್ರಿಗಳ ಗಾಡಿ ಬಂದದ್ದನ್ನೂ ಅವರ ಮಧ್ಯೆ ಒಬ್ಬ ಹಿಂದೂ ಸ್ತ್ರೀಯು ಕುಳಿತಿರುವುದನ್ನೂ ಕಂಡು, ಹಿಂದುಗಳಲ್ಲಿ ಕೆಲವರು ಹೋಗಿ ಆ ಹೆಂಗಸ್ಯಾರೆಂದು ಪಾದ್ರಿಗಳನ್ನು ಪ್ರಶ್ನೆ ಮಾಡಿದರು ಆಕೆ ಕ್ರೈಸ್ತಸ್ತ್ರೀ, ಎಂತಲೂ ಕಾಯಿಲೆಯಾಗಿರೋಣದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇವೆಂತಲೂ ಎಷ್ಟು ಹೇಳಿದರೂ ಹಿಂದುಗಳು ನಂಬದೆ ಅವರು ಹಿಂದೂಸ್ತ್ರೀಯನ್ನು ಅಪಹರಿಸಿಕೊಂಡು ಬಂದಿದ್ದಾರೆಂದು ಹುಟ್ಟಿಸಿ, ಅವರನ್ನು ಹಿಡಿದು ಕೆಳಕ್ಕೆ ಕೆಡವಿ ಹೊಡೆದರು. ಇಬ್ಬರಿಗೂ ಪೂರಾ ಗಾಯಗಳಾಗಿವೆ ಅಷ್ಟರಲ್ಲೇ ಅಧಿಕಾರಿಗಳು ಬಂದು ಪೋಲೀಸರನ್ನು ನಿಲ್ಲಿಸಿ, ಕೆಲವು ಜನರನ್ನು ದಸ್ತಗಿರಿ ಮಾಡಿ, ಶಿವಾಜಿ ಉತ್ಸವವನ್ನು ನಡಿಸಕೂಡದೆಂದು ಹುಕುಂ ಕೊಟ್ಟಿದಾರೆ.

●●●●

ಸ್ಮೃತಿಪಟ್ಟನದ ವಾತಿನ ಪ್ರಕಾರ ಅವನ ಹೆಂಡತಿ ದತ್ತು ಮಾಡಿಕೊಂಡು, ಆ ದತ್ತಪುತ್ರನು ಕಾಲವಾದರೆ ಹೆಂಡತಿಗೆ ಪುನಃ ದತ್ತು ಮಾಡಿಕೊಳ್ಳುವ ಅಧಿಕಾರವಿದೆಯೋ ಇಲ್ಲವೇ ಎಂಬುದಾಗಿ ಮದರಾಸ್ ಹೈಕೋರ್ಟಿನಲ್ಲಿ ಒಂದು ಮೊಕದ್ದಮೆ ಬಂದಿದ್ದದ್ದು ಹೈಕೋರ್ಟಿನ ಇಬ್ಬರು ಜಡ್ಜಿಗಳು ಈ ಮೊಕದ್ದಮೆಯನ್ನು ದರ್ಯಾಪ್ತು ಮಾಡಿ, ಹೆಂಡತಿಗೆ ಅಂಥಾ ಅಧಿಕಾರವಿರುತ್ತೆ ಎಂಬುದಾಗಿ ತೀರ್ಮಾನ ಹೇಳಿದ್ದದ್ದು ನಮ್ಮ ವಾಚಕರಿಗೆ ತಿಳಿದಿರಬಹುದು ಈ ಮೊಕದ್ದಮೆಯು ಅದರ ಮೇಲೆ ವಿಲಾಯತಿಯ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲಾಗಿತ್ತು ಅಲ್ಲಿ ನಾಲ್ವರು ಪ್ರಸಿದ್ಧರಾದ ಜಡ್ಜಿಗಳು ಕುಳಿತು ಆ ಮೊಕದ್ದಮೆ ಕಾಗದ ಪತ್ರಗಳನ್ನೆಲ್ಲಾ ಸಾಂಗೋಪಾಂಗವಾಗಿ ಓದಿ, ಉಭಯ ಕಕ್ಷಿಗಳ ಕಡೆ ಬ್ಯಾರಿಸ್ಟರುಗಳ ಅಭಿಪ್ರಾಯಗಳನ್ನೂ ಕೇಳಿ, ಇಂಥಾ ದತ್ತುಸ್ವೀಕಾರದ ವಿಷಯದಲ್ಲಿ ಇದುವರೆಗೆ ಬೇರೆ ಬೇರೆ ಜಡ್ಜಿಗಳು ತೀರ್ಮಾನಮಾಡಿರುವ ತೀರ್ಪುಗಳನ್ನೂ ಅವರ ಅಭಿಪ್ರಾಯಗಳನ್ನೂ ಓದಿಕೊಂಡು, ಎರಡನೇ ದತ್ತು ಮಾಡಿಕೊಂಡದ್ದು ನ್ಯಾಯವಾಗಿದೆ ಎಂಬುದಾಗಿ ಮದರಾಸ್ ಹೈಕೋರ್ಟ್ ಜಡ್ಜಿಗಳು ತೀರ್ಮಾನಿಸಿದ್ದಷ್ಟನ್ನೇ ನ್ಯಾಯಂ ಮಾಡಿದಾರೆ.

ವಿದೇಶ ವರ್ತಮಾನಗಳು.

ಕೆನಡಾ ಸ್ವಿಸ್ಟ್ರ್ಯಕ್ಕೆ ಸೇರಿದ ನಿಕೊಲೆಟ್ಟೆಂಬ ಊರಿನಲ್ಲಿ ಒಂದು ರೋಮನ್ಯ ಕ್ರೈಸ್ತ ದೇವಾಲಯಕ್ಕೆ ಬೆಂಕಿಬಿದ್ದು ಉರಿದುಹೋಗಿ ೧೨ ಲಕ್ಷ ದ್ರವ್ಯನಷ್ಟವಾಯಿತೆಂದು ತಂತೀ ವರ್ತಮಾನ ಬಂದಿದೆ.

ಚೀನಾ ರಾಜ್ಯದ ಪ್ರಜೆಗಳು ಹಿಂದುಸ್ಥಾನದಲ್ಲಿ ತಯಾರಾಗುವ ಅಫೀಮನ್ನೇ ಬಹಳ ಚೆನ್ನಾಗಿದೆ ಎಂದು ಹೇಳಿ ಕೊಂಡುಕೊಳ್ಳುತ್ತಾರೆ. ವರುಷ ೧ ಕ್ಕೆ ಮೂರು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಈ ಅಫೀಮಿನಿಂದ ಹಿಂದುಸ್ಥಾನಕ್ಕೆ ಆದಾಯ ಬರುತ್ತಿದೆ.

●●●●

ವಿಲಾಯತಿಗೆ ಸೇರಿದ ನಾಟಿಂಗ್ಹಾಂ ನಗರದಲ್ಲಿ ಗಣಿ ಕಂಪನಿಯವರು ತಮ್ಮ ಕಂಪನಿಯ ಕೂಲಿಕಾರರಲ್ಲಿ ವಯಸ್ಸಾಗಿ ಕೆಲಸಮಾಡಲಾರದಂಥಾವರಿಗೆ ತಲಾ ವಾರಕ್ಕೆ ೩ ರೂಪಾಯಿನಿಂದ ೬ ರೂಪಾಯಿ ತನಕ ಪೆನ್ಷನ್ ಕೊಡುವುದಾಗಿ ತೀರ್ಮಾನ ಮಾಡಿರುತ್ತಾರೆ.

●●●●

ಜರ್ಮನ್ ಚಕ್ರವರ್ತಿ ಮಿಕ್ಯಾಡೋ ಯವರು ಪರೀಕ್ಷೆ ಮಾಡಿಸಿ ಮಹಮ್ಮದೀಯ ಮತವೇ ಸರ್ವಶ್ರೇಷ್ಠವಾದ ಮತವೆಂದು ತೀರ್ಮಾನಿಸಿ, ತಾವೂ ತಮ್ಮ ಸಂಸಾರಕ್ಕೆ ಸೇರಿದವರೂ ಆಪ್ತಾಸಿಕರ ಸಮೇತ ಮುಸಲ್ಮಾನ್ ಮತಕ್ಕೆ ಸೇರಿಕೊಂಡರೆಂದು ವರ್ತಮಾನ ಹುಟ್ಟಿತ್ತು ಇದು ನಿಜವಲ್ಲವೆಂದು ಈಚೆಗೆ ತಿಳಿದುಬಂದಿದೆ.

●●●●

ವಿಲಾಯತಿ ರಾಜ್ಯದ ಇದಿವೂರು ಜಹಜುಗಳು ಈ ತಿಂಗಳ ೨೧ ನೆ ತಾರೀಖಿಗೆ ಹೊರಟು ರಷ್ಯಾ ರಾಜ್ಯಕ್ಕೆ ಸೇರಿದ ಲಿಬಾ, ಹಾಂಗೊ, ಕ್ರಾನ್‌ಸ್ಟಾಟ್, ರೇವಲ್, ಪಿಲೌ, ಲೂಬೆಕ್ ಎಂಬೀ ತೀರಪಟ್ಟಣಗಳಿಗೆ ಹೋಗಿ ಅಲ್ಲಲ್ಲಿರುವ ರಷ್ಯಾ ಜಹಜು ಸೈನಿಕರಿಂದ ಸತ್ಕಾರಹೊಂದಿ ಪರಸ್ಪರ ಸ್ನೇಹಭಾವವನ್ನು ವೃದ್ಧಿಪಡಿಸಿಕೊಂಡು ಬರುವವರಾಗಿದಾರೆ.

●●●●

ಸ್ಕಾಟ್ಲಾಂಡಿನಲ್ಲಿ ಹಡಗುಗಳಲ್ಲಿ ಕೆಲಸಮಾಡತಕ್ಕವರ ಮಕ್ಕಳನ್ನೂ ಸೈನಿಕರ ಮಕ್ಕಳನ್ನೂ ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಲೇಟ್ ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿಯವರ ಹೆಸರಿನ ಮೇಲೆ ಒಂದು ವಿದ್ಯಾಶಾಲೆಯನ್ನು ದರ್ಬೀನ್ ಪಟ್ಟಣದಲ್ಲಿ ಕಟ್ಟುವವರಾಗಿದಾರೆ ಇದಕ್ಕೆ ಆಗಲೇ ೬ ಲಕ್ಷ ರೂಪಾಯಿ ತನಕ ಚಂದಾ ವಸೂಲಾಗಿರುವುದು.

●●●●

ಸ್ಪೈನ್ ರಾಜ್ಯಕ್ಕೆ ಸೇರಿದ ಬಾರ್ಸಿಲೋನಾ ಪಟ್ಟಣದಲ್ಲಿ ಕೆಲವರು ಸೇರಿಕೊಂಡು ಗುಟ್ಟಾಗಿ ಯಂತ್ರಗಳನ್ನಿಟ್ಟುಕೊಂಡು ಪ್ರತಿ ವರುಷವೂ ನಾಲ್ಕು ಲಕ್ಷ ರೂಪಾಯಿನಂತೆ ಖೋಟಾ ನಾಣ್ಯಗಳನ್ನು ಛಾಪಾಹಾಕಿ ಚಲಾವಣೆ ಮಾಡುತ್ತಿದ್ದರು ಈ ಕಾರ್ಖಾನೆಯನ್ನು ಪೋಲೀಸಿನವರು ಕಳೆದ ವಾರ ಪತ್ತೇ ಮಾಡಿ, ಒಂಬತ್ತು ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ.

●●●●

ವಿಲಾಯತಿಗೆ ಸೇರಿದ ಸಸೆಕ್ಸ್ ಡಿಸ್ಟ್ರಿಕ್ಟಿನಲ್ಲಿ ಕ್ರಾಲೀ ಎಂಬ ಊರಿನಬಳಿ ಒಂದು ಮೋಟಾರ್ ರೈಲ್ ಗಾಡಿಯು ಗುಡ್ಡದಿಂದ ಇಳಿದು ಬರುವಾಗ್ಗೆ ಆಯತಪ್ಪಿ ಮಗುಚಿಕೊಂಡು ಅನಾಹುತವಾಯಿತು ಅದರಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದವರ ಪೈಕಿ ಹತ್ತು ಮಂದಿ ಪ್ರಾಣ ಕಳೆದುಕೊಂಡರೆಂತಲೂ ಇಪ್ಪತ್ತಾರು ಮಂದಿಗೆ ಗಾಯಗಳಾದವೆಂತಲೂ ತಂತೀ ವರ್ತಮಾನ ಬಂದಿದೆ.

●●●●

ಸ್ಪೈನ್ ರಾಜ್ಯದ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ನೂತನ ರಾಜದಂಪತಿಗಳು ದೇವಸ್ಥಾನದಿಂದ ಅರಮನೆಗೆ ಮೆರವಣಿಗೆ ಬರುತ್ತಿದ್ದಾಗ್ಗೆ ಅವರನ್ನು ಕೊಲ್ಲಬೇಕೆಂದು ಮದ್ದಿನ ಗುಂಡನ್ನು ಅವರ ಗಾಡಿಯ ಮೇಲಕ್ಕೆ ಎಸೆದದ್ದರಿಂದ ಅನಾಹುತವಾದ ಸಂಗತಿ ತಿಳಿದಿದೆಯಷ್ಟೆ ಈ ಅನಾಹುತದಲ್ಲಿ ಒಟ್ಟು ೨೩ ಮಂದಿ ಹತರಾದರೆಂತಲೂ ೯೯ ಜನರಿಗೆ ಗಾಯಗಳಾದವೆಂತಲೂ ಸರ್ಕಾರದವರು ಪ್ರಕಟಿಸಿದಾರೆ.

●●●●

ಅಮೇರಿಕ ಸರ್ಕಾರದವರು ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ತಮ್ಮ ಕಡೆಯ ರಾಯಭಾರಿಯನ್ನು ಕಳುಹಿಸಿ ಅಲ್ಲೇ ವಾಸಮಾಡುವುದಕ್ಕೆ ಒಪ್ಪಬೇಕೆಂದು ತುರ್ಕಿ ಸುಲ್ತಾನರಿಗೆ ಬರೆದು ಕೇಳಿದ್ದಕ್ಕೆ ತುರ್ಕಿ ಸುಲ್ತಾನರು ನಮಗೂ ನಿಮಗೂ ಯಾವ ವಿಧವಾದ ಕರಾರೂ ಆಗಿರುವುದಿಲ್ಲವಾದ್ದರಿಂದ ನಿಮ್ಮ ರಾಯಭಾರಿಯನ್ನು ನಮ್ಮ ಆಸ್ಥಾನಕ್ಕೆ ಕಳುಹಿಸಕೂಡದೆಂದು ಜವಾಬು ಕೊಟ್ಟರು ಎಂದು ತಂತೀ ವರ್ತಮಾನ ಬಂದಿದೆ.

●●●●

ದಕ್ಷಿಣ ಆಫ್ರಿಕದಲ್ಲಿ ಕೇಪ್ ಕಾಲನಿಯ ದೇಶೀಯ ಜನರು ಸುಮಾರು ೨೫,೦೦೦ ಮಂದಿ ಇಂಗ್ಲೀಷರ ಮೇಲೆ ದಂಗೆಯೆದ್ದಿರುತ್ತಾರಷ್ಟೆ ಇಂಗ್ಲೀಷರು ಇವರನ್ನು ಕಾಡುಗಳಲ್ಲಿ ಹಿಂಬಾಲಿಸಿಕೊಂಡು ಹೋಗಿ ಮುತ್ತಿಗೆ ಹಾಕಿ ಕೆಲವು ಯುದ್ಧಗಳನ್ನು ಮಾಡಿ, ಅವುಗಳಲ್ಲಿ ಇದುವರೆಗೆ ಸಾವಿರಾರು ಜನರನ್ನು ಕೊಂದಿರುತ್ತಾರೆ ಆದಾಗ್ಯೂ ಅವರ ದಂಗೆಯು ಇನ್ನೂ ಶಮನವಾಗಲಿಲ್ಲ ಕಳೆದ ವಾರ ಅವರ ಪೈಕಿ ನಾಲ್ಕಾರು ಮಂದಿ ನಾಯಕರನ್ನು ಇಂಗ್ಲೀಷರು ಕೈಸೆರೆ ಹಿಡಿದುಕೊಂಡು ಒಯ್ದಿದ್ದಾರೆ.

●●●●

ರಷ್ಯಾ ಜಪಾನ್ ಯುದ್ಧದಲ್ಲಿ ವ್ಲಾಡಿವೋಸ್ಟಾಕ್ ಪಟ್ಟಣದೊಳಗಿದ್ದ ಚೀನಾ ವರ್ತಕರಿಗೆ ಅಪಾರವಾದ ನಷ್ಟಗಳಾದವು ಅವರೆಲ್ಲಾ ತಮಗೆ ಪರಿಹಾರದ್ರವ್ಯವನ್ನು ರಷ್ಯಾ ಗವರ್ನಮೆಂಟಿನವರು ಕೊಡಿಸಬೇಕೆಂದು ಚೀನಾ ರಾಜ್ಯಾಧಿಕಾರಿಗಳನ್ನು ಕೇಳಿಕೊಂಡಿದ್ದರು ಈ ವಿಚಾರವಾಗಿ ರಷ್ಯಾ ಮತ್ತು ಚೀನಾ ರಾಜ್ಯಗಳ ಅಧಿಕಾರಿಗಳಿಗೆ ಉಗ್ರವಾದ ನಡೆಯುತ್ತಿದ್ದು ಈಗ ರಷ್ಯಾದವರು ೧ ಕೋಟಿ ೨೨ ಲಕ್ಷದ ೨೪ ಸಾವಿರ ರೂಪಾಯಿ ಪರಿಹಾರ ದ್ರವ್ಯ ಕೊಡುವುದಕ್ಕೆ ಒಪ್ಪಿಕೊಂಡಿದಾರೆ.

●●●●

ರಷ್ಯಾ ರಾಜ್ಯಕ್ಕೆ ಸೇರಿದ ಕೆಲವು ಕಡೆಗಳಲ್ಲಿ ಮತ್ತೆ ಪ್ರಜಾಶಾಂತಿಗೆ ಭಂಗವುಂಟಾಗಿದೆ. ಸಿಬಾಸ್ಟಪೋಲ್ ನಗರದಲ್ಲಿ ಸೈನಿಕನೊಬ್ಬನು ಹಡಗುಗಳ ಅಧಿಪತಿಯಾಗಿದ್ದ ಅಡ್ಮಿರಲ್ ಚೂಕ್ನಿನ್ ಎಂಬಾತನನ್ನು ಹೊಡೆದು ಗಾಯಮಾಡಿದನು ಆ ಹುದ್ದೇದಾರನು ಮರುದಿನ ಮೃತಪಟ್ಟನು ಅತ್ತಲಾಗಿ ವಾರ್ಸಾ ನಗರದಲ್ಲಿ ಕಳೆದ ಗುರುವಾರ ಬಹಳ ಗಲಭೆಯುಂಟಾಯಿತು ಸುಮಾರು ೪೦ ಸಾವಿರ ಯೆಹೂದ್ಯ ಪ್ರಜೆಗಳು ಮುದುಕರು, ಹೆಂಗಸರು, ಮಕ್ಕಳ ಸಮೇತ ತಲೆತಪ್ಪಿಸಿಕೊಂಡು ಓಡಿಹೋದರೆಂದು ತಂತೀ ವರ್ತಮಾನ ಬಂದಿದೆ.

●●●●

ಅಮೇರಿಕದಲ್ಲಿ ಈಚೆಗೆ ಮಿಲಿಟರಿ (ಸೈನ್ಯದ) ಇಲಾಖೆಯವರೂ ಇತರರೂ ಹಕ್ಕಿ ಪಕ್ಷಿಗಳನ್ನು ಅಪಾರವಾಗಿ ಕೊಂದು, ಅವುಗಳ ಗರಿ ಪುಕ್ಕ ರೆಕ್ಕೆಗಳನ್ನು ಕಿತ್ತು ತಮ್ಮ ಟೋಪಿಗಳಿಗೆ ಕಟ್ಟಿಕೊಂಡು ಅಲಂಕಾರ ಮಾಡಿಕೊಳ್ಳುವುದು ಬಹಳ ರೂಢಿಗೆ ಬಂದಿತು ಗವರ್ನಮೆಂಟಿನವರು ಸುಂದರವಾದ ಹಕ್ಕಿ ಪಕ್ಷಿಗಳನ್ನೆಲ್ಲಾ ಈ ರೀತಿ ಜನರು ಕೊಲ್ಲುವದನ್ನು ನಿಲ್ಲಿಸಬೇಕೆಂದು ಬಹು ಖಂಡಿತವಾದ ಕಾನೂನುಮಾಡಿ ಜಾರಿಗೆ ತಂದಿದ್ದಾರೆ. ಯಾವ ಇಲಾಖೆಯವರಾಗಲಿ ಪ್ರಜೆಗಳಲ್ಲಿ ಯಾರೇ ಆಗಲಿ ಗರಿಗಳನ್ನು ಯಾವ ಕೆಲಸಕ್ಕೂ ಉಪಯೋಗಿಸಲೇ ಕೂಡದೆಂದು ವಿಧಿಸಿರುತ್ತಾರೆ.

●●●●

ಅಮೇರಿಕಕ್ಕೆ ಸೇರಿದ ಮಸಾಚುಸೆಟ್ಸ್ ಡಿಸ್ಟ್ರಿಕ್ಟಿನಲ್ಲಿ ಆರ್ಲಿಂಗ್ಟನ್ ಎಂಬ ಉದ್ಯಾನವನದೊಳಗೆ ಸಸ್ಯಶಾಸ್ತ್ರಜ್ಞರು ವಿಚಿತ್ರವಾದ ಪರೀಕ್ಷೆಯನ್ನು ಮಾಡಿದಾರೆ ಸಸಿಗಳನ್ನು ಕುಂಡಗಳಲ್ಲಿಟ್ಟು ಕೆಲವಕ್ಕೆ ಉತ್ಕೃಷ್ಟವಾದ ಗೊಬ್ಬರವನ್ನು ಹಾಕಿ ಸಾಕುತ್ತಲೂ ಇನ್ನು ಕೆಲವು ಗಿಡಗಳ ಬೇರುಗಳಿಗೆ ವಿದ್ಯುಚ್ಛಕ್ತಿಯನ್ನು ಪ್ರಯೋಗಮಾಡಿ ಸಾಕುತ್ತಲೂ ಪರೀಕ್ಷೆ ಮಾಡಿದರು ಗೊಬ್ಬರ ಹಾಕಿದ ಸಸಿಗಳಿಗಿಂತಲೂ ವಿದ್ಯುಚ್ಛಕ್ತಿಯಿಂದ ಬೆಳೆದ ಗಿಡಗಳು ಬಹಳ ಜಾಗ್ರತೆಯಿಂದಲೂ ಅತಿ ಕೋಮಲವಾಗಿಯೂ ವೃದ್ಧಿಹೊಂದಿದವು ಇದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ.

●●●●

ಚೀನಾ ಜನರು ದಕ್ಷಿಣ ಆಫ್ರಿಕದಲ್ಲಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆಂದು ಅನೇಕರು ಊಹಿಸಬಹುದು ಅವರ ಸ್ಥಿತಿಗತಿಯನ್ನು ಚೀನಾದಲ್ಲೂ ದಕ್ಷಿಣ ಆಫ್ರಿಕದಲ್ಲೂ ಹೋಲಿಸಿ ನೋಡುವಲ್ಲಿ ಚೀನಾದಲ್ಲಿ ಅವರಿಗೆ ಹೊಟ್ಟೆ ಬಟ್ಟೆ ಮನೆಬಾಡಿಗೆ ಕಳೆದು ವರುಷಕ್ಕೆ ೩೫-೪೦ ರೂಪಾಯಿ ಉಳಿಯುವುದೇ ದುರ್ಲಭವಾಗಿದೆ ದಕ್ಷಿಣ ಆಫ್ರಿಕದಲ್ಲಾದರೋ ಅವರಿಗೆ ವಾಸದ ಮನೆ, ಊಟ ಬೇಕಾದ ಸಾಮಾನು ಮುಂತಾದ್ದೆಲ್ಲಾ ಬಿಟ್ಟಿ ಸಿಕ್ಕುವುದು ಇದಲ್ಲದೆ ಅವರಿಗೆ ೪೦೦ ರೂಪಾಯಿಗಿಂತಲೂ ಹೆಚ್ಚಾಗಿಯೇ ಸಂಪಾದನೆಯಾಗುತ್ತದೆ ಆದ್ದರಿಂದ ಚೀಣೆಯವರಿಗೆ ತಮ್ಮ ದೇಶದಲ್ಲಿ ದೊರಕುವ ಸೌಕರ್ಯಗಳಿಗಿಂತಲೂ ಹೆಚ್ಚಾಗಿಯೇ ಹೊರಗೆ ಸಂಪಾದನೆಯಾಗುತ್ತದೆ ಆದ್ದರಿಂದ ಚೀಣೆಯವರಿಗೆ ತಮ್ಮ ದೇಶದಲ್ಲಿ ದೊರಕುವ ಸೌಕರ್ಯಗಳಿಗಿಂತಲೂ ದಕ್ಷಿಣ ಆಫ್ರಿಕದ ಜೀವನವೇ ಎಷ್ಟೋ ಲಾಭಕರವಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ.

ತಾಲ್ಲೋಕು ವರ್ತಮಾನಗಳು.

ಚನ್ನಪಟ್ಟಣ.—ಇದುವರಿಗೂ ಈ ತಾಲ್ಲೋಕಿನಲ್ಲಿ ಮಳೆ ಇಲ್ಲದ್ದರಿಂದ ಪ್ರಜೆಗಳ ಕಣ್ಣುಗಳೆಲ್ಲಾ ಮುಗಿಲನ್ನೇ ನೋಡುತ್ತಿದ್ದವು. ದಿನಸಿಗಳ ಧಾರಣೆ ಘಡಾವಾಗುತ್ತಾ ಬಂತು ಕಳೆದ ವಾರ ಬಂದೆರಡು ಜಡ ಮಳೆ ಸುರಿದದ್ದರಿಂದ ರೈತಾಪಿ ಜನಗಳು ಈಗಲೇ ಬಿತ್ತಲಿಕ್ಕೆ ಪ್ರಾರಂಭಿಸಿದಾರೆ.—ಕೋಟೆಯ ಒಂದು ಮೂಲೆಯಲ್ಲಿ ಸೇರಿಕೊಂಡಿರುವ ಹುಲಿಯ ಭೀತಿ ಇನ್ನೂ ತಪ್ಪಲಿಲ್ಲ. ಈ ದುಷ್ಟಮೃಗದ ಭೀತಿಯಿಂದ ಕೋಟೆಯ ನಿವಾಸಿಗಳು ಸಾಯಂಕಾಲ ೭ ಘಂಟೆಗೆಲ್ಲಾ ತಂತಮ್ಮ ಮನೆ ಬಾಗಿಲು ಭದ್ರಮಾಡಿಕೊಳ್ಳುವರು ಈ ಭೀತಿಯು ಎಂದಿಗೆ ನಿವಾರಣೆ ಯಾಗುವದೋ.—ಇಲ್ಲಿನ ಚರ್ಮದ ಮಂಡಿಗಳು ಊರೊಳಗಿರುವದರಿಂದ ಪ್ರಜೆಗಳಿಗಿರುವ ಅಸಹ್ಯ ಅನಾರೋಗ್ಯಗಳನ್ನು ಕುರಿತು ಇದುವರಿಗೂ ಸರ್ಕಾರದವರು ಗಮನಕ್ಕೆ ತಾರದಿರುವದು ತುಂಬಾ ವಿಷಾದವೂ ಆಶ್ಚರ್ಯವೂ ಆಗಿದೆ ಮುಂದಿನ ಮಳೆಗಾಲದಲ್ಲಿ ಈ ಮಂಡಿಗಳಿಂದ ಬರುವ ದುರ್ಗಂಧ ಅನಾರೋಗ್ಯಗಳನ್ನು ಹ್ಯಾಗೆ ತಾನೇ ಸಹಿಸಬಹುದು? ಈ ಮಂಡಿಗಳನ್ನು ಊರಹೊರಗೆ ಸಾಗಿಸುವದು ತುಂಬಾ ಪ್ರಯೋಜನಕರವಾಗಿದೆ.—ಕಳೆದ ವಾರ ಇಲ್ಲಿ ಮಹಮ್ಮದೀಯನೊಬ್ಬನು ಗಾಡಿಯನ್ನು ರಾಜಮಾರ್ಗದಲ್ಲಿ ವೇಗವಾಗಿ ಹೊಡೆದುಕೊಂಡು ಬರುತ್ತಿರುವಾಗ್ಗೆ ಗಾಡಿ ಅಕಸ್ಮಾತ್ತಾಗಿ ಒಬ್ಬ ಮುದುಕಿಯ ಮೇಲೆ ಹಾದು ಹೋಯಿತು ಮುದುಕಿಯ ತೊಡೆ ನೋವಾಗಿ, ಆಸ್ಪತ್ರೆಯಲ್ಲಿ ಇಲಾಜು ಹೊಂದುತ್ತಿರುವದಾಗಿಯೂ, ತಕ್ಷಣವೇ ಪೋಲೀಸಿನವರು ಗಾಡಿಯವನನ್ನು ಹಿಡಿದು ರಿಪೋರ್ಟುಮಾಡಿಕೊಂಡಿರುವದಾಗಿಯೂ ತಿಳಿದು ಬಂದಿದೆ.—ಕಳೆದ ತಾ॥ ೧೨ ನೇ ಗುರುವಾರ ಮೈಸೂರು ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರಾಗಿದ್ದ ಮಿ॥ ಕೆ ನಾರಣಯ್ಯಂಗಾರರು ಇಲ್ಲಿನ ಹೈಸ್ಕೂಲ್ ಹೆಡ್ ಮಾಸ್ಟರಾಗಿ ಬಂದರು ಈ ಊರಿನ ಮಹಮ್ಮದೀಯ ದೊಡ್ಡ ಮನುಷ್ಯರೆಲ್ಲಾ ಸೇರಿ, ತಮ್ಮ ಕಡೆಯ ಮಿ॥ ಎ ಕೆ ಸೈಯದ್ ರಸೂಲ್ ಎಂಬುವವರನ್ನು ಹೆಡ್ ಮಾಸ್ಟರವರೊಂದಿಗೆ ಬರುವದಕ್ಕಾಗಿ ಮದ್ದೂರಿನ ವರಿಗೂ ಕಳುಹಿಸಿದ್ದರು ಹೆಡ್ ಮಾಸ್ಟರು ಸ್ಟೇಷನಿನಲ್ಲಿ ರೈಲ್ ಇಳಿದ ಕೂಡಲೆ ದೊಡ್ಡ ಮನುಷ್ಯರುಗಳೆಲ್ಲಾ ಸೇರಿ ಅವರಿಗೆ ಸುಸ್ವಾಗತವನ್ನು ಬಯಸಿ, ಇಂಗ್ಲಿಷ್ ಬ್ಯಾಂಡಿನೊಂದಿಗೆ ಹಿಂದುಸ್ಥಾನಿ ಸ್ಕೂಲಿಗೆ ಬರಮಾಡಿಕೊಂಡು, ಅವರು ಇಲ್ಲಿಗೆ ವರ್ಗವಾಗಿ ಬಂದದ್ದು ಎಲ್ಲರಿಗೂ ತುಂಬಾ ಸಂತೋಷವೆಂಬರ್ಥಕ್ಕೆ ಒಂದು ಅಡ್ರೆಸ್ ಓದಿದರು ಇಲ್ಲಿನ ಅನೇಕ ಹಿಂದೂ ಮಹಮ್ಮದೀಯ ದೊಡ್ಡ ಮನುಷ್ಯರು ಸೇರಿದ್ದರು. ಮಿ॥ ನಾರಣಯ್ಯಂಗಾರರು ಸಮಯೋಚಿತವಾದ ಕೆಲವು ಮಾತುಗಳನ್ನು ಹೇಳಿ, ಎಲ್ಲರೂ ತಮ್ಮ ಆದರಗಳಿಂದ ತಮ್ಮ ಸಂತೋಷಗಳನ್ನು ಪ್ರಕಾಶಪಡಿಸಿದರು ಕೂಡಲೆ ಸಭೆಗೆಲ್ಲಾ ಪುಷ್ಪ, ಗಂಧ, ತಾಂಬೂಲಗಳನ್ನು ಹಂಚಿ ಸಭೆಯನ್ನು ಬರಖಾಸ್ತು ಮಾಡಿ, ಮಿ॥ ನಾರಣಯ್ಯಂಗಾರರನ್ನು ಅವರ ಮನೆಯ ವರಿಗೂ ಕಳುಹಿಸಿ ಬಿಟ್ಟುಬಂದರು.

ಸಾಗರ.—ಈ ತಾಲ್ಲೋಕಿನಲ್ಲಿ ಮಳೆ ಇಲ್ಲ. ಜನಗಳಿಗೆ ಅಡಿಗೆ ಮಾಡಿ ಊಟಮಾಡುವದಕ್ಕೆ ನೀರು ಇಲ್ಲದೆ ಜನಗಳ ಗೋಳು ಹೇಳತೀರದು. ಭತ್ತದ ಪೈರಂತೂ ಮುಂದೆ ನಾಲ್ಕರಲ್ಲಿ ಒಂದು ಪಾಲೂ ಕೂಡ ಬರುವದಿಲ್ಲ ಎಂತ ಕಂಡುಬರುತ್ತೆ. ಮುಂದೆ ಜನಗಳು ಜೀವನಮಾಡುವುದು ಬಹಳ ಕಷ್ಟಕ್ಕೆ ಬಂದಿದೆ. ನಿನ್ನೆ ಬುಧವಾರ ಮಾತ್ರ ಮೇಘರಾಜನು ಸ್ವಲ್ಪ ಮಳೆಹನಿ ಉದುರಿಸಿದನು. ಜನರು ಮೇಘರಾಜನನ್ನೇ ಸ್ಮರಿಸುತ್ತಾರೆ. ಇದು ಅಲ್ಲದೆ ಇಂಥಾ ಕಷ್ಟಕಾಲದಲ್ಲಿ ಪ್ಲೇಗ್ ರೋಗವೂ ಅಲ್ಲಲ್ಲಿ ತಲೆದೋರಿ, ಇದೇ ತಾಲ್ಲೂಕು ಲಿಂಗದಹಳ್ಳಿಯಲ್ಲಿ ಹದಿನೆಂಟು ವರುಷದ ಹುಡುಗನೂ ಹನ್ನೆರಡು ವರುಷದ ಹುಡುಗಿಯೂ ಮೃತಪಟ್ಟರು. ಇನ್ನು ಕೆಲವರಿಗೆ ಆಗಿದೆ. ದೇವರು ಜಾಗ್ರತೆ ದಯಮಾಡಿ ಜನರಿಗೆ ಸುಖ ಕೊಡಲೆಂದು ಹಾರೈಸುತ್ತೇನೆ.

ಮಾಯಕೊಂಡ.—ಇಲ್ಲಿ ಮಳೆ ಇಲ್ಲ. ಬಿಸಲಿನ ತಾಪ ಹೆಚ್ಚಾಗಿ ಇದೆ. ಜೂನ್ ತಿಂಗಳು ೧೩—೧೪ ರಲ್ಲಿ ಮಳೆಯಾಗಿತ್ತು. ಅದು ವರಿಗೂ ಮಳೆಯಾಗಿರಲಿಲ್ಲ. ಜನಗಳು ಆ ಮಳೆಗೆ ಎಲ್ಲಿಯೂ ಪೈರು ಮಾಡುವದಕ್ಕೆ ಪ್ರಾರಂಭಮಾಡಿದರು. ಹಾಕಿದ ಪೈರುಗಳು ಚೆನ್ನಾಗಿವೆ. ಇವುಗಳಿಗೆ ಈಗ ಸಂಭವಿಸಿರುವದೇನಂದರೆ, ಕಂಬಳಿಹುಳುಗಳು ಎಲ್ಲಾ ಪೈರುಗಳನ್ನು ತಿಂದುಹಾಕಿರುತ್ತವೆ. ಭತ್ತದ ಪೈರು ಒಣಗಿಹೋಗುತ್ತದೆ.—ಇಲ್ಲಿ ಬಾವಿಗಳಲ್ಲಿ ನೀರು ಇಲ್ಲ. ಬೆಳಗಿನ ಝಾವದಲ್ಲಿ ಎದ್ದು ಹೋದವರಿಗೆ ನೀರು ಸಿಕ್ಕುತ್ತೆ. ಇಲ್ಲವಾದರೆ ನೀರು ಸಿಕ್ಕುವದಿಲ್ಲ. ಇಲ್ಲಿ ದಿನ ಒಂದಕ್ಕೆ ಧಾರಣೆಗಳು ಏರುತ್ತಲಿವೆ. ರಾಗಿ ರೂಪಾಯಿಗೆ ೧೨ ಸೇರು, ಜೋಳ ೧೦ ಸೇರು, [illegible] ಇದೆ.—ಇಲ್ಲಿನ ಜನಗಳ ಸಂಕಟವನ್ನು ಹೇಳಲಿಕ್ಕಸಾಧ್ಯ. ಯಾವಾಗಲೂ ಫಾರೆಸ್ಟ್ ಜಂಗಲಿನಲ್ಲಿ ಬಿಟ್ಟುಕೊಟ್ಟು ದನಕರುಗಳನ್ನು ಮೇಯಲಿಕ್ಕೆ ಬಿಡುತ್ತಿದ್ದರು. ಫಾರೆಸ್ಟ್ ಇಲಾಖಾ ಸಾಹೇಬರವರು [illegible] ಕೊಟ್ಟಿರುವದಿಲ್ಲವಾದ್ದರಿಂದ ಇನ್ನು ಮೂರು ತಿಂಗಳು ದನಗಳನ್ನು ಜಂಗಲಿನಲ್ಲಿ ಬಿಡಕೂಡದೆಂದು ಡಂಗೂರ ಹಾಕಿಸಿದರು. ಈ ಊರಿಗೆ ಗೋಮಾಳದ [illegible] ಇರುತ್ತೆ. ಅದಕ್ಕೆ ಹೋಗುವದಕ್ಕೆ ದಾರಿಯು [illegible] ಇರುತ್ತವೆ. ಇದಕ್ಕೆ ನಮ್ಮ ತಾಲ್ಲೂಕು ಅಮಲ್ದಾರ್ [illegible] ಅವರು ಘನಸರ್ಕಾರದ ಚಿತ್ತಕ್ಕೆ ತಂದು ಬಡಜನರ ಮೇಲೆ ಅಂತಃಕರಣವಿಟ್ಟು ಗೋಮಾಳದ ಸಂಬಂಧ ದನಕರುಗಳು ಓಡಾಡುವದಕ್ಕೆ ದಾರಿಯನ್ನು ಬಿಡಿಸಿಕೊಟ್ಟಾರೆಂತ ನಂಬಿರುತ್ತೇನೆ.

ಮಂಡ್ಯ.—ಪ್ಲೇಗ್ ಗಲಾಟೆಯ ನೆಸೆಯಿಂದ ಜನರು ಊರು ಬಿಟ್ಟು ಗುಡಿಸಲಿನಲ್ಲಿ [illegible] ತಿಂಗಳಾದಾಗ್ಯೂ ಇನ್ನೂ [illegible] ಊರಿನಲ್ಲಿ ವಾಸಿಸುತ್ತಿದ್ದುದರಿಂದ ೮—೧೦ ದಿನಕ್ಕೆ ಒಂದಾವರ್ತಿ ವ್ಯಾಧಿಯು ಕಾಣಿಸಿಕೊಳ್ಳುತ್ತಾ ಇದೆಯೇ ಹೊರತು ಉಪಶಮನಕ್ಕೆ ಬಂದಿಲ್ಲ. [illegible] ಇಲ್ಲಿಗೆ [illegible] ಮೈಲಿ ದೂರದಲ್ಲಿರುವ ಕಲ್ಲಹಳ್ಳಿಯಲ್ಲೂ ಹೊಡಸೂರಿನಲ್ಲಿಯೂ ಕಾಣಿಸಿಕೊಂಡು ಇದೆ. ಈವರೆಗೂ ೩—೪ ಜನರು ಈ ವ್ಯಾಧಿಯಿಂದ [illegible]ರು. ಮಳೆ ಸುತರಾಂ ಇಲ್ಲ. ಧಾರಣೆಯಾಗಿಗಳೆಲ್ಲಾ [illegible] ಕಾಲದಲ್ಲಿ ಬಡಬಗ್ಗರ ಸ್ಥಿತಿ ಬಹಳ ಕಷ್ಟವಾಗಿದೆ.—ಇಲ್ಲಿನ ಮಿಡ್ಲ್ ಸ್ಕೂಲುಗಳು ಎರಡು ತಿಂಗಳಿಂದ ಪ್ಲೇಗ್ ಗಲಾಟೆಯ ನಿಮಿತ್ತ ಮುಚ್ಚಲ್ಪಟ್ಟಿತ್ತು. ಘನ [illegible] ಸಾಹೇಬರು ಸ್ಕೂಲಿನ ಅಭಿವೃದ್ಧಿಗೆ ಆತಂಕ ಬಾರದ ಹಾಗೆ ಒಂದು [illegible] ಮಿಡ್ಲ್ ಖರ್ಚಿನಿಂದ ಕಟ್ಟಿಸಿರುತ್ತಾರೆ. ಈ ಕಟ್ಟಡವನ್ನು ಆಸ್ಪತ್ರೆ ಎದುರಿಗೆ ಕಟ್ಟುವ ಹಾಗೆ ಇಲ್ಲಿನ ಆಸ್ಪಿಟಲ್ ಅಸಿಸ್ಟೆಂಟರು [illegible] ದಯಮಾಡಿಸಿದರು. ಇದು ಮಕ್ಕಳು ಹೋಗುವದಕ್ಕೆ ಬಹಳ ಒಳ್ಳೇ ಜಾಗ. ಇಲ್ಲಿ ನೀರಿನ ಕಷ್ಟ ಬಹಳವಾಗಿತ್ತು. ಇಲ್ಲಿನ ಡಾಕ್ಟರು ನಮ್ಮ ಹೊಸ ಅಮಲ್ದಾರರಿಗೆ ಸೂಚಿಸಿದ್ದಲ್ಲದೆ, ತಾವೂ ಅವರೂ ರೆವಿನ್ಯೂ ಕಮಿಷನರ್ ಸಾಹೇಬರವರ [illegible] ಪ್ರಜೆಗಳಿಗೆ ಅನುಕೂಲವಾಗುವಂತೆ [illegible] ನಲ್ಲಿಯ ಹಾಗೆ ಇಲ್ಲಿ ಒಂದು ನಲ್ಲಿಯನ್ನು ಕಳೆದ [illegible] ಇರಿಸಿದ್ದರಿಂದ ಅವರುಗಳನ್ನು ಬಹಳವಾಗಿ ಕೊಂಡಾಡಬೇಕಾಗಿದೆ.

ಬೇಲೂರು.—[illegible] ಗವಾಗಿ ನಿರಾಶೆಯನ್ನುಂಟುಮಾಡಿತು. ಮಳೆ ಚೆನ್ನಾಗಿಲ್ಲ. ಆಸ್ಪತ್ರೆಗೆ ಹೋಗುವವರ ಸಂಖ್ಯೆಯು ಏರುತ್ತಿರುವದು. ಬಿರುಭೇದಿ, ಕಣ್ಣುನೋವು, ಚಳೀಜ್ವರ, ಗಡ್ಡಕಟ್ಟುವದು ಮುಂತಾದ ವ್ಯಾಧಿಗಳು [illegible]ವೆ. ಹೊಸದಾಗಿ ಬಂದಿರುವ ರಾಗಿಯೆಲ್ಲಾ ಬತ್ತಿ, ಪ್ರಜೆಗಳು ಆಕಾಶವನ್ನೇ ನೋಡುತ್ತಿದ್ದಾರೆ. ಇದುವರೆಗೆ ಇಲ್ಲಿ ಅಮಲ್ದಾರರಾಗಿದ್ದ ಮೆ|| ಸಿ. ಕೃಷ್ಣ ಐಯ್ಯರವರಿಗೆ ಹೊಳೇನರಸೀಪುರಕ್ಕೆ ವರ್ಗವಾಗಿ ಅವರಿಗೆ ಪ್ರತಿಯಾಗಿ ಸಕಲೇಶಪುರದಿಂದ ಮೆ|| ಕೃಷ್ಣಯ್ಯಂಗಾರವರು ದಯಮಾಡಿದಾರೆ.—ಮೆ|| ಕೃಷ್ಣ ಐಯ್ಯನವರನ್ನು ಕಳೆದ ಭಾನುವಾರ ಮಧ್ಯಾಹ್ನ ಬಾಜಾಬಜಂತ್ರಿಗಳೊಡನೆ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿ ಸಂಸ್ಕೃತ ಶ್ಲೋಕಗಳ [illegible], ಪ್ರಜೆಗಳು ಅವರ ಗುಣಕಥನಮಾಡಿ, ನಂತರ ಸಂಗೀತ, ನರ್ತನ ಮುಂತಾಗಿ ಅಟ್ಟಹಾಸದಿಂದ ಶ್ರೀಯವರ ದೇವಸ್ಥಾನಕ್ಕೆ ಬರಮಾಡಿಕೊಂಡು ಹೋಗಿ ಅಲ್ಲಿ ಅವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡಿ ಸಡಗರದಿಂದ ಕಳುಹಿಸಿಕೊಟ್ಟರು. ಈಗ ಬಂದಿರುವ ಮೆ|| ಕೃಷ್ಣಯ್ಯಂಗಾರವರು ಪ್ರಜಾಹಿತಚಿಂತಕರಾಗುವರೆಂದು ಹಾರೈಸುವೆನು.—ಇದೇ ತಾ|| ಬೆಳ್ಳಾವೆ(?) ಹೋಬಳಿ ಮಾಳಿಗೆರೆಯಲ್ಲಿ ಒಬ್ಬ ಒಕ್ಕಲಿಗನು ಬೇರೆ ಊರಿನ ಒಬ್ಬನಿಗೆ ತನ್ನ ಮಗಳನ್ನು ಕೊಡುವದಾಗಿ ವಾಗ್ದಾನಮಾಡಿ ಲಗ್ನಪತ್ರಿಕೆ ಬರೆಸಿಕೊಟ್ಟು ಅವನಿಂದ ತೆರನ ಬಾಬತು ಕೆಲವು ಹಣವನ್ನು ತೆಗೆದುಕೊಂಡ ಹಾಗೂ ಗೊತ್ತಾದ ದಿನ ಆ ವರನು ಬರುವವೇಳಗೆ ಹೆಚ್ಚು ತೆರ ಕೊಟ್ಟ ಬೇರೆಯವನಿಗೆ ಕೊಟ್ಟು ಮದುವೆಮಾಡಿದ ಹಾಗೂ ನಂತರ [illegible] ಮೊದಲನೆ ವರನು ಮಾನಹಾನಿ ಧನಹಾನಿ ಹೊಂದಿ ಸುಮ್ಮನೆ ಹೊರಟುಹೋದ ಹಾಗೂ ಕೇಳುತ್ತೇನೆ. ಇಂತಹ ಮೋಸಗಳು ಈ ಮಲ್ನಾಡು ತರಫಿನಲ್ಲಿ ನಡೆಯುವದು ವಿಷಾದಕರವಾಗಿದೆ.

ತಿಪ್ಟೂರು ಸರ್ಕೀಟು.—ಗುಬ್ಬಿಯಲ್ಲಿರುವ ಮಿಡ್ಲ್ [illegible]ರಾದ ಘನ ತ್ರಿವೆಲ್ಲಾ ಥೊರೆಯವರು ಚಿಕ್ಕನಾಯಕನಹಳ್ಳಿ ಕಡೆ [illegible]ಗೆ ಪ್ರಯಾಣ ಮಾಡಿ, ಬೆಳ್ಳಾರದ ಚಿನ್ನದ ಗಣಿಯಲ್ಲಿರುವ ಯೂರೋಪಿಯನ್ ದೊಡ್ಡ ಮನುಷ್ಯರಿಗೆ ಇಂಗ್ಲಿಷ್ ಆರಾಧನೆಯನ್ನು ನಡಿಸಿ, ಈಗತಾನೇ ವಾಪಸ್ ಗುಬ್ಬಿಗೆ ದಯಮಾಡಿದರು. ಚಿನ್ನದ ಗಣಿಯಲ್ಲಿ ಸದಾ ನೀರಿಗೆ [illegible]ವಾಗಿ ಅನೇಕ ಯಂತ್ರಗಳು ಕೆಲಸ ಮಾಡದೆ ಸುಮ್ಮನೇ ನಿಂತಿದ್ದವು. ಈ ಗಣಿಯು ಕೆಲವು ಕಡೆ ಒಳಗಡೆಯ ಸುರಂಗದಲ್ಲಿ ದೀಪಗಳೂ, ಮಡಿಕೆಗಳೂ ಸಿಕ್ಕಿದವಂತೆ. ಪೂರ್ವ ಕಾಲದ ಜನಗಳು ಇಲ್ಲಿ ಗಣಿಯನ್ನು ಮಾಡಿಕೊಂಡಿದ್ದರೆಂದು ಜನರು ಮಾತಾಡುತ್ತಿದ್ದರು. ಇಲ್ಲಿ ಒಂದು ತೆಕ್ಕೆ ರಾಗಿ ಹುಲ್ಲಿಗೆ ೧೧ ಆಣೆ ಕ್ರಯ ಕೊಡಬೇಕು. ಸ್ಥಳವೇನೋ ಮನೋಹರವಾಗಿರುತ್ತದೆ.—ಬೋರನ ಕಣಿವೆಯು ಅಣೆಕಟ್ಟು ನೀರಿಲ್ಲದ ಕಣಿವೆಯಂತಿದೆ. ಅಣೆಯ ಮೇಲೆ ನೀರು ಹೋಗಿ ಸುಮಾರು ೯ ವರುಷವಾಯಿತೆಂದು ಅಲ್ಲಿಯವರು ಹೇಳಿದರು. ಹುಳಿಯಾರಿನಲ್ಲಿ ೩ ಕಾಸಿಗೆ ಒಂದು ಕೊರೆ [illegible] ಸಿಕ್ಕುತ್ತದೆ. ದನ [illegible]ನುಕೂಲ ಆದರೆ ದಾಕ್ಷಿಣ್ಯಾನುಕೂಲ.—ಚಿಕ್ಕನಾಯಕನಹಳ್ಳಿಗೆ ತಿಪ್ಟೂರಿಂದ ವರ್ಗವಾಗಿ ಹೋಗಿರುವ ಪೊಲೀಸ್ ರೈಟರ್ ಕೃಷ್ಣಪ್ಪನವರ ಹೆಂಡತಿಯು ಅಕಸ್ಮಾತ್ ಕಾಲುಜಾರಿ ಭಾವಿಯಲ್ಲಿ ಬಿದ್ದರಂತಲೂ, ಕೂಡಲೇ ಇನ್ಸ್ಪೆಕ್ಟರ್ ಮೆ|| ನರಸಿಂಹಯ್ಯಂಗಾರ್ರವರು ಜನರನ್ನು [illegible]ಗೆ ಇಳಿಸಿ ಆಕೆಯನ್ನು ಮೇಲಕ್ಕೆ ತೆಗೆಸಿದರೆಂತಲೂ ಸ್ವಲ್ಪ ಪೆಟ್ಟು ಬಿದ್ದಿದ್ದರೂ ಪ್ರಾಣ ಭಯವೇನೂ ಇಲ್ಲವೆಂದೂ ತಿಳಿಯಿತು. ಮುನಿಸಿಪಲ್ ದೀಪಗಳು ಲೆಕ್ಕದಲ್ಲಿ ನಾಲ್ಕಾರು(?) ರಸ್ತೆಯ ಪಕ್ಕದಲ್ಲಿ ಒಂದೆರಡು; ಮಿಕ್ಕವೇನಾದರೂ [illegible] ಇಲ್ಲ ಎಂಬಂತಿದೆ. ರಸ್ತೆಗಳೋ ಎಲ್ಲಿ ನೋಡಿದರಲ್ಲಿ [illegible] ಹುಲ್ಲಿಂದ ಬೆಳೆದಿವೆ. ಮುನಿಸಿಪಾಲಿಟಿಯು ಮಾರ್ಕೆಟಿನಲ್ಲಿ [illegible] ಚೆನ್ನಾಗಿ [illegible]. ಆ ಊರಿಗೆ ಪ್ಲೇಗ್ ಬಂದರೆ [illegible] ಕಾಯಿಲೆ [illegible] ಕೆಲವು [illegible] ಒಂದೆರಡು [illegible] ಮಳೆಯಾಯಿತು [illegible] ರೈತರ [illegible] ತವಕದಿಂದ [illegible] ಅಮಲ್ದಾರರು ಆಗಾಗ್ಗೆ [illegible] ಮಾಡುತ್ತಿದ್ದಾರೆ.

ಬೆಂಗಳೂರು.—ಕಳೆದ [illegible] ಸಾಯಂಕಾಲ ೫ ಘಂಟೆ [illegible] ಸರಿಯಾಗಿ [illegible] ಸೆಂಟ್ರಲ್ ಕಾಲೇಜ್ ಮೈದಾನದಲ್ಲಿ ೭ ದಿನ [illegible] ಫುಟ್‌ಬಾಲ್ ಮ್ಯಾಚ್ ಪ್ರಾರಂಭವಾಯಿತು. ಮೂರು ದಿನಗಳಿಂದ [illegible] ನೇಟಿವ್ [illegible] ಮತ್ತು ಸೆಂಟ್ ಅಲಾಸಿಯಸ್ ಎಂಬ ಯೂರೋಪಿಯನ್ನರೂ ತುಂಬಾ [illegible] ಆಡುತ್ತಿದ್ದರು. ನೋಡುವದಕ್ಕೆ ಸಾವಿರಾರು ಜನ ಬಂದಿದ್ದರು. ಈ ಸಮಯದಲ್ಲಿ ಮಳೆಯು ಬಂದರೂ [illegible] ಈ ಮಳೆಯಲ್ಲಿಯೇ [illegible] ಕೊಟ್ಟರು. ಕಡೆಯಲ್ಲಿ ಲಂಡನ್ ಮಿಷನ್ ಸ್ಕೂಲಿನವರು ಒಂದು ಗೋಲನ್ನು ಕೊಟ್ಟು [illegible] ಸೆಂಟ್ ಅಲಾಸಿಯಸ್‌ನವರಿಗೆ [illegible] ಇಂದಿಗೆ [illegible] ಕೃಷ್ಣಪ್ಪನೆಂಬುವ ಒಬ್ಬ [illegible] ಎಲ್ಲರ [illegible] ಕಂಡ ಹಾಗೆ [illegible]ಗಳನ್ನು [illegible] ಇವನು [illegible] ಸಂಪಾದಿಸಿದ್ದನ್ನೆಲ್ಲಾ ಅವನೇ [illegible]. ಇದನ್ನು [illegible] ಇವರ ಬಂಧುಗಳು [illegible] ಅವನನ್ನು ಮನೆಯಿಂದ ಹೊರಡಿಸಲು, ಅವನು ಒಂದು ತಿಂಗಳ ಕೆಳಗೆ [illegible] ಅವಲಂಬಿಸಿ [illegible] ಕೆಲವು ದಿವಸಗಳು ಒಬ್ಬ [illegible] ಮನೆಯಲ್ಲಿ [illegible] ಇದ್ದು ಅವನಿಂದ [illegible] ಕಳೆದ [illegible] ರೈಲ್ ಸ್ಟೇಷನಿಗೆ ೧೦೦ ಗಜಗಳ [illegible]ದಲ್ಲಿರುವ ಒಂದು ಮರಕ್ಕೆ [illegible] ಸತ್ತು ನೇತಾಡುತ್ತಿದ್ದನು. ಅವನ ಮನೆಯವರು ಒಬ್ಬರೂ ಆ ಹೆಣವನ್ನು ಮುಟ್ಟಲಿಲ್ಲ. ಅನಂತರ ಕೆಲವು [illegible]ರು ಬೆಂಗಳೂರಿನಲ್ಲಿರುವ [illegible]ಗಳಿಗೆ [illegible] ಸಹಾಯ [illegible] ಅದನ್ನು [illegible] ಮಾಡಿದರು.—ಈ ತಿಂಗಳು ತಾ ೧೩ ರಲ್ಲಿ ಬೆಂಗಳೂರು ತಾಲ್ಲೂಕು [illegible]ಗೆ ಹೋಗಿದ್ದಾಗ್ಯೆ ಅಲ್ಲಿ [illegible] ಯಾಣಿಯು [illegible] ಅಕಸ್ಮಾತ್ತಾಗಿ ಆ ಊರು ಪಟೇಲ್ [illegible]ನ ಕಲ್ಲುಕಟ್ಟ ಭಾವಿಯಲ್ಲಿ ಬಿದ್ದು ಹೆಣ ತೇಲುತ್ತಿತ್ತು. ವಿಚಾರಿಸುವಲ್ಲಿ ಇವಳಿಗೆ ಕೆಲವು ದಿವಸಗಳಿಂದಲೂ [illegible] ಹಿಡಿದಿತ್ತೆಂತಲೂ ಇವಳಿಗೆ ಎರಡು ಸಣ್ಣಸಣ್ಣ ಮಕ್ಕಳಿರುವರೆಂತಲೂ ಕೇಳಿ ವ್ಯಸನಪಡಬೇಕು.

ಮಧುಗಿರಿ ತಾಲ್ಲೂಕು.—ಬಡವನಹಳ್ಳಿಗೆ ಸುಮಾರು ೨ ಮೈಲಿ ದೂರದಲ್ಲಿ ಬ್ಯಾಲ್ಯವೆಂಬ ಒಂದು ದೊಡ್ಡ ಗ್ರಾಮವಿದೆ. ಅಲ್ಲಿಗೆ ಚಿಂತಾಮಣಿ ಎಂಬ ಊರಿನ ನಾಟಕದ ಕಂಪೆನಿಯವರು ಬಂದು ಕೆಲವು ದಿನಗಳಿಂದಲೂ ಆಡುತ್ತಿದ್ದರು. ಜೂನ್ ೩೦ ನೇ ತಾ ರಾತ್ರಿ ಆಡುವದಕ್ಕೆ ಟಿಕೇಟು ಕೊಡುತ್ತಿರುವಾಗ ಕೆಲವು ಜನರು ಬಿಟ್ಟಿ ಟಿಕೇಟು ಕೇಳಿದ ಹಾಗೂ, ಮ್ಯಾನೇಜರು ಹಾಗೆ ಕೊಡಲಾಗದೆಂದದ್ದಕ್ಕೆ ಅವರು ಈ ರಾತ್ರಿ ನೀವು ಆಡುವದನ್ನು ನೋಡೋಣ ಅಂದ ಹಾಗೂ ಆನಗೆ ಆಡುವದಕ್ಕೆ ಪ್ರಾರಂಭಿಸಿ ಕೆಲವು ಗಳಿಗೆಗಳಾದ ಮೇಲೆ ಒಂದು ಕಡೆಯಿಂದ ಒಂದು ದಪ್ಪ ಕಲ್ಲು ತೂರಿದ ಮೇಲೆ ಬೀಳಲು [illegible] ಹರಿದು ಒಳಗೆ ಬಿದ್ದಿತು. ದೈವವಶಾತ್ ಯಾರ ಮೇಲೂ ಬೀಳಲಿಲ್ಲ. ನಂತರ ಕಲ್ಲುಗಳು ಜಾಸ್ತಿಯಾಗಿ ಬೀಳುವದಕ್ಕೆ ಪ್ರಾರಂಭಿಸಿದಾಗ ನಾಟಕದ ಕಡೆಯವರು ಕೆಲವರು ಹೋಗಿ ಎಲ್ಲಿ ನೋಡಿದರೂ ಯಾರೂ ಸಿಕ್ಕಲಿಲ್ಲ. ನಂತರ ಮ್ಯಾನೇಜರೊಬ್ಬರೇ ಒಂದು ಸ್ಥಳದಲ್ಲಿದ್ದು ನೋಡುವಾಗ ಕೆಲವರು ಇವರ ದೃಷ್ಟಿಗೆ ಬಿದ್ದರು. ಅವರನ್ನು ಹಿಡಿಯುವದಕ್ಕೆ ಮುಂದುಮುಂದಕ್ಕೆ ಹೋದ ಹಾಗೆಲ್ಲಾ ಅವರು ಸಹ ಹಿಂದೆ ಹೋಗಿ ಊರಿನ ಮಧ್ಯೆ ೮ ಮಂದಿ ಸುತ್ತಿಕೊಂಡು ಅವರನ್ನು ಹೊಡದು ಕತ್ತು ಹಿಸುಕಿ ಹಿಂಸಿಸುವಾಗ ಕೂಗಿಕೊಳ್ಳಲು, ಹೊರಗೆ ಬಂದಿದ್ದ ಪಂಚಾಂಗದ ವೆಂಕಟರಾಮಯ್ಯನವರು ಕೇಳಿ ಅಲ್ಲಿಗೆ ಹೋದರು. ಅಲ್ಲಿಯ ಪಟೇಲರೂ ಹೋದರು. ಆ ತುಂಟರು ಇವರ ಮೇಲೂ ಕೈ [illegible] ಹಾಕಿ ಓಡಿಹೋದರು. ಬೆಳದಿಂಗಳಾಗಿದ್ದ ಕಾರಣ ಸ್ಥಳಕ್ಕೆ [illegible] ಪಂಚಾಂಗದಯ್ಯನವರೂ, ಪಟೇಲರೂ ಅವರು ಇಂಥಿಂಥವರೆಂದು ಗುರ್ತು ಹಿಡಿದು, [illegible]ರಲ್ಲಿ ಮೂವರನ್ನು [illegible]ರಲ್ಲಿ ಇಟ್ಟು [illegible] ಮೂವರಲ್ಲಿ ಒಬ್ಬನನ್ನು ಹಿಡಿದು ಚಾವಡಿಯಲ್ಲಿ ಇಟ್ಟಿದ್ದಾರೆಂದೂ ಪೆಟ್ಟು ತಿಂದ ಮ್ಯಾನೇಜರನ್ನು ಚಿಕಿತ್ಸೋಪಚಾರ ಮಾಡಿಸಿಕೊಳ್ಳುವದಕ್ಕೆ ಮಧುಗಿರಿಗೆ ಬೆಳಿಗ್ಗೆ ಡಾಕ್ಟರ [illegible]ಗೆ ಕಳಿಸಿದಾರೆಂದೂ ವರ್ತಮಾನ ಕೇಳುತ್ತೇನೆ. ಆಡುವದಕ್ಕೆ ಲೈಸೆನ್ಸ್ [illegible] ಮೇಲೆ ಪೊಲೀಸ್ [illegible] ಇರಬೇಕಲ್ಲ. ಆ ರಾತ್ರಿ ಅವರು ಎಲ್ಲಿ ಹೋಗಿದ್ದರು? ಇಂಥಾ ಸಂದರ್ಭಗಳಲ್ಲಿಯೇ ಹೀಗಾದರೆ ಸಾಧಾರಣ ಸಂದರ್ಭಗಳಲ್ಲಿ ಇವರು ಇನ್ನು ಹ್ಯಾಗೆ ನಡೆಯುವರೆಂದು ಊಹಿಸಬಹುದಾಗಿದೆ. ಆ ರಾತ್ರಿ ಪೊಲೀಸಿನವರು ಇದ್ದಿದ್ದರೆ ಈ ರೀತಿ ಆಗುತ್ತಿರಲಿಲ್ಲ.—ಕಾಲಸ್ಥಿತಿಯು ವ್ಯತ್ಯಾಸವಾಗಿರುವದರಿಂದ ಈಗೀಗ ಅಲ್ಲಲ್ಲಿ ಕಳ್ಳತನಗಳು ನಡೆಯಲು ಪ್ರಾರಂಭಿಸಿವೆ. ಮೂರು ಹಳ್ಳಿಗಳಲ್ಲಿ ನಿನ್ನೆ ಒಂದೇ ರಾತ್ರಿ ಕಳ್ಳತನಗಳು ನಡೆದವೆಂದು ವದಂತಿ ಹುಟ್ಟಿದೆ. [illegible] ಮುದ್ದೇಗೌಡರು ಚಾವಡಿಯಲ್ಲಿ ಒಬ್ಬ ತೋಟಿಯವನ ಜೊತೆ [illegible] ಆ ಊರಿನವರು [illegible] ಗ್ರಾಮ ಗಸ್ತುಮಾಡಿ ಊರು [illegible] ಮಾಡುವದು ವಾಡಿಕೆಯಾಗಿತ್ತು. ಈ ಕಾಲದಲ್ಲಿ ಇಲ್ಲ. ಗೌಡರೇ ಇವರ ವಿಷಯ ನಿಗಾಕೊಡತಕ್ಕವರು. ಅವರು ಸಹ ಆಗಾಗ್ಗೆ ಬಂದು ತನಿಖೆ ಮಾಡುತ್ತಾರೆ. ದಫೇದಾರರೂ ಇದರ ಮೇಲೆ ಅಧಿಕಾರಿಗಳೂ ಈ ವರೆಗೂ ಆ ವಿಷಯ ಏನೂ ವಿಚಾರವಾಗಿಲ್ಲ. ಮೇಲಕ್ಕೆ [illegible] ರೀತಿ [illegible] ನಡೆಯುತ್ತಿಲ್ಲ. ಅಮಲ್ದಾರರು [illegible] ಈ ವಿಷಯದಲ್ಲಿ ತಕ್ಕ ಬಂದೋಬಸ್ತು ಮಾಡಿದರೆ ಉತ್ತಮ ಕೃತ್ಯವೆನಿಸುವದಕ್ಕೆ [illegible]ಯಾಗಿದ್ದರೆ ಉತ್ತಮ.

ಚನ್ನರಾಯಪಟ್ಟಣ.—ಈ ಊರಿಗೆ [illegible] ವರ್ಗವಾಗಿ ಬಂದಿರುವ ಅಮಲ್ದಾರ್ ಮೆ|| [illegible] ಅಯ್ಯಂಗಾರ್ ಬಿ. ಎ., ಬಿ. ಎಲ್. ರವರು ತಾ [illegible] ರಲ್ಲಿ [illegible] ಅಧಿಕಾರವನ್ನು ಒಪ್ಪಿಸಿ [illegible] ಅಮಲ್ದಾರರಾದ ಮೆ|| ಚನ್ನಪ್ಪನವರ [illegible] ನಂತರ [illegible] ಸ್ಥಳಗಳಿಗೆಲ್ಲಾ [illegible] ಟ್ರಾವೆಲರ್ಸ್ ಬಂಗ್ಲೆಗೆ [illegible] ವರಾಂಡಾದಲ್ಲಿ ಅವರಿಗೋಸ್ಕರ ಸಿದ್ಧಪಡಿಸಿದ್ದ ಕುರ್ಚಿಗಳ ಮೇಲೆ ಉಭಯ ಅಮಲ್ದಾರರು, ಡಾಕ್ಟರೇ ಮುಂತಾದ ಮುಖ್ಯ ಮನುಷ್ಯರು ಕುಳಿತುಕೊಂಡು [illegible] ಮರ್ಯಾದಾಪೂರ್ವಕವಾಗಿ [illegible] ರುಗಳಿಗೆ ಫಲ ತಾಂಬೂಲ [illegible] ಗಂಧ ಪತ್ರಗಳನ್ನು [illegible] ಮೆ|| ಜೋಗಿರಾಯರೆಂಬ [illegible] ಮೆ|| ಚನ್ನಪ್ಪನವರು [illegible] ಬಹಳ ಸಂತೋಷದಿಂದ ಎದ್ದು [illegible] ತಾವುಗಳು ನನಗೆ [illegible] ಆದರಪೂರ್ವಕವಾಗಿ ಮಾಡಿದ ಮರ್ಯಾದೆಯನ್ನು ಉತ್ಸಾಹದಿಂದ ಸ್ವೀಕರಿಸುತ್ತೇನೆ. ಆದರೆ ಕಳೆದ ೨ ವರ್ಷಗಳಿಂದ ನಾನು ನಿಮ್ಮ ಸರ್ಕಾರಿ ಕೆಲಸಗಳಲ್ಲಿ ಯಾವದೊಂದು ಲೋಪವೂ [illegible] ಇಲ್ಲದಂತೆ ಕೆಲಸ ಮಾಡಿರುವೆನು [illegible] ನಿಮ್ಮೆಲ್ಲರಿಗೂ ವಂದನೆ ಮಾಡುತ್ತೇನೆ ಎಂಬುದಾಗಿ ಹೇಳಿ ಸಭೆ ಬರಖಾಸ್ತು ಮಾಡಿದರು. ಮಧ್ಯಾಹ್ನ ಮೆ|| ಚನ್ನಪ್ಪನವರು [illegible] ಕುಣಿಗಲ ಮೇಲೆ ತಮ್ಮ ಸ್ಥಳವಾದ ತುಂಕೂರಿಗೆ ಹೊರಟ ಕಾಲದಲ್ಲಿ ಊರಿನ ಅನೇಕ ಜನರು ಮಂಗಳವಾದ್ಯ ಸಮೇತ ಅವರನ್ನು ಹಿಂಬಾಲಿಸಿ ಹೋದಾಗ ಅರ್ಧ ಮೈಲಿಯಲ್ಲಿ ಅವರು [illegible] ಬಂದಿದ್ದವರನ್ನೆಲ್ಲಾ ವಂದನೆಮಾಡಿ—ಈಗ ಬಂದಿರತಕ್ಕ ಅಮಲ್ದಾರರು ತುಂಬಾ ವಿದ್ಯಾವಂತರಾಗಿಯೂ, ನನಗಿಂತಲೂ ಹೆಚ್ಚಾಗಿ ತಿಳುವಳಿಕೆಯುಳ್ಳವರಾಗಿಯೂ ನಿಷ್ಪಕ್ಷಪಾತಿಗಳಾಗಿಯೂ ಇರುತ್ತಾರೆಂತ ನಾನು ಧೃಢವಾಗಿ ಹೇಳುತ್ತೇನೆ. ಇವರ ವಿಷಯದಲ್ಲಿ ವಿಧೇಯರಾಗಿ ನಡೆದುಕೊಂಡರೆ ನಿಮಗೆ ಕ್ಷೇಮ ಉಂಟಾಗುತ್ತೆಂದು ಹೇಳಿ ಸರ್ವರನ್ನೂ ಊರಿಗೆ ವಾಪಸು ಕಳುಹಿಸುವ ಕಾಲದಲ್ಲಿ ಸರ್ವರೂ ದೇವರು ಅವರಿಗೆ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹರಸಿ ಬಂದರು.—ಈ ಊರಿನಲ್ಲಿರುವ ಜವಳಿ ಅಂಗಡಿ [illegible] ಸುಬ್ರಾಯಶೆಟ್ಟರ ಈಶ್ವರದೇವಸ್ಥಾನದ ಗರ್ಭಾಂಕಣದ ಮೇಲೆ ಹಾಕಿದ್ದ ಕಲಶವನ್ನು ಇಲ್ಲಿಗೆ ಸಮೀಪದಲ್ಲಿರುವ ಅನಕೆರೆಗ್ರಾಮದ ಚಿಕ್ಕನಮ್ಮ, ದೊಡ್ಡನಮ್ಮ ಎಂಬೀ ದೇವಸ್ಥಾನಗಳ ಕಲಶವನ್ನೂ ಕಳ್ಳರು ರಾತ್ರಿವೇಳೆ ಕದ್ದುಕೊಂಡು ಹೋಗಿ ೭—೮ ದಿವಸವಾದಾಗ್ಯೂ ಇನ್ನೂ ಪತ್ತೆಯೇ ಆಗಿಲ್ಲ. ಆ ಶಿಖರಗಳನ್ನು ಕಳೆದುಕೊಂಡ ದೇವರುಗಳೇ ಅವರಿಗೆ ಶಿಕ್ಷೆ ವಿಧಿಸಬೇಕಾಗಿದೆ. ಮಳೆ ಬೆಳೆ ಹೋಗಿರುವುದೇ ಇಂಥಾ ತುಂಬರ ವಳಿಗೆಗೆ ಕಾರಣವಾಗಿರುತ್ತೆ. ಈ ಊರಿನಲ್ಲಿ ಸುತರಾಂ ಮಳೆ ಇಲ್ಲದೆ ಜನಗಳಿಗೂ ಗೋಕಾಯಿಗಳಿಗೂ ತುಂಬಾ ಅನಾನುಕೂಲವಾಗಿದೆ. ಜನಗಳೆಲ್ಲ ಮೇಘವನ್ನು ನೋಡುತ್ತಿದ್ದಾರೆ.—ಈ ಊರು ಕೋಟೆಯಲ್ಲಿ ಕೊಳದ ಬಾಗಿಲು ವೆಂಕಟರಮಣಯ್ಯನವರ ಮನೆ ಅಂಗಳದಲ್ಲಿ ದನಗಳನ್ನು ಕಟ್ಟುತ್ತಿದ್ದ ಸೋಗೆ ಜೋಪಡಿಗೆ ಬೆಂಕಿ ಬಿದ್ದಿತು. ಉರಿಯು ಬಹಳ ಜೋರಾಗಿದ್ದು ಬಾಜೂ ಮನೆಗೂ ವ್ಯಾಪಿಸಿ, ಆ ಮನೆಯೂ ಕೊಂಚ ಭಾಗ ಹತ್ತಿಕೊಂಡಾಗ ಮನೆಯವರು ನೋಡಿ ಕೂಗಿಕೊಂಡರು. ೨೦೦—೩೦೦ ಜನಗಳ ವರಿಗೂ ಮನೆಗಳಲ್ಲಿ ಶೇಖರ ಮಾಡಿಟ್ಟುಕೊಂಡಿದ್ದ ನೀರಿನ ಕೊಡ, ಕೊಳಗದಪ್ಪಲೆ, ಹಂಡೆ ಮಗ್ಗೆಗಳಲ್ಲಿ ನೀರು ತಂದು ಪಂಚಿನ ಮೇಲಗಡೆ ಹತ್ತಿ ಬಹಳ ಶ್ರಮಪಟ್ಟು ಉರಿಯನ್ನು ಆರಿಸಿ ಉಳಿದಿದ್ದ ಜೋಪಡಿಯನ್ನು ಕಿತ್ತುಹಾಕಿ ನೀರೆರೆದು ಆರಿಸಿದರು. ಈ ಗಲಭೆಯಲ್ಲಿ ಅನೇಕರಿಗೆ ಮೈ ಸುಟ್ಟಿತು. ತಲೆ ಒಡೆದು ಗಾಯವೂ ಆಗಿವೆ. ಜೋಪಡಿಯಲ್ಲಿದ್ದ ದನಗಳಿಗಾಗಲೀ ಜನಗಳಿಗಾಗಲೀ ಪ್ರಾಣಹಾನಿಯಾಗಲಿಲ್ಲ.

ನಂಜನಗೂಡು.—ಇಲ್ಲಿ ಈ ತಿಂಗಳು ತಾ ೯ ರಿಂದ ... ವರೆಗೂ ಗಿರಿಜಾಕಲ್ಯಾಣೋತ್ಸವ ನಡೆಗಿತು ಇದಕ್ಕೆ ಅನೇಕರು ಪರಸ್ಥಳಗಳಿಂದ ಇಲ್ಲಿಗೆ ಬಂದಿದ್ದರೂ ನೋಮಸಾರ ಸಾಯಂಕಾಲ ... ಮಹಾರಾಜರೂ, ಮಹಾರಾಣೀಯವರೂ ಅವರೊಂದಿಗೆ ಶ್ರೀ ಕಾಂತರಾಜೇ ಅರಸಿನವರೂ ದಯಮಾಡಿಸಿದರು ಇಲ್ಲಿನ ... [illegible]

[illegible]

ಕೃಷ್ಣ ಹಾಕಿದ್ದರೂ ... ನಿಜ ತಮ್ಮ ಇಷ್ಟದಂತೆ ಇಲ್ಲಿಗೆ ಬಂದು ... ಮಹಾರಾಜರವರು ... [illegible]

ಕೊಳಗೇ ... ಅವರಲ್ಲಿದ್ದ ... ಗಳನ್ನು ... ಬಂದರು ಇವರು ... ಕಷ್ಟ ... ನೋಡಿ ... ವಿಚಾರ ಮಾಡಲು ಅವರ ... ಕರುಬಿಗಳ ವ್ಯಸನಪಟ್ಟು ... ವಿಷಯವನ್ನು ಪೋಲೀಸಿಗೆ ತಿಳಿಸಲು ... ಅವರಿಗೆ ... ದೇವರ ದಯದಿಂದ ಅವರಿಗೆ ... ವಿಷಯವು ... ಕೇಳಿಕೊಂಡು ... ಇಬ್ಬರು ... ದಾಗಿ ಈಗ ಮೈಸೂರಿನಲ್ಲಿರುತ್ತಾರೆ ಮತ್ತೊಬ್ಬನು ಪತ್ತೆಯಾಗಿಲ್ಲ

ಮೈಸೂರು ಗಜೆಟ್ ಸಂಗ್ರಹ

ಶ್ರೀರಂಗಪಟ್ಟಣದ ತಾಲ್ಲೂಕ್ ಅಮಲ್ದಾರ್ ಮೆ॥ ಎ ಗೋಪಾಲಕೃಷ್ಣ ಅಯ್ಯಂಗಾರ್ರು ಮೇ ೧೮ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳುವ ರಜವನ್ನು ರದ್ದುಮಾಡಿದೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆ॥ ಕಮೀಷನರ್ ಮೆ॥ ಬಿ ಜೆ ಕುಮಾರಸ್ವಾಮಿ ನಾಯಕರವರು ಜೂನ್ ೮ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳುವ ರಜವನ್ನು ರದ್ದುಮಾಡಿದೆ.

ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮೆ॥ ಜೆ ಹ್ಯೂಂ ವೈಟ್ ಯವರಿಗೆ ಕೊಟ್ಟಿರುವ ಆರು ತಿಂಗಳ ರಜವನ್ನು ಇನ್ನೂ ಹತ್ತು ದಿನಗಳಿಗೆ ಜಾಸ್ತಿ ಮಾಡಿದೆ

ಡೆ॥ ಕಂಟ್ರೋಲರ್ ಮೆ॥ ಎಲ್ ಬಿಷ್ಟೋಜಿರಾವ್ ಬಾದಾಮಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ। ಸರ್ಜನ್ ಮೆ॥ ಸಿ ಅಣ್ಣಾದುರೈ ಮೊದಲಿಯಾರ್ರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ರಜಾ ಜೊತೆಗೆ ಇನ್ನೂ ಮೂರು ತಿಂಗಳ ಫರಲೋ ರಜಾ ಕೊಟ್ಟಿದೆ

ಜಗಲೂರ್ ತಾಲ್ಲೂಕ್ ಅಮಲ್ದಾರ್ ಮೆ॥ ಇ ಸದಾಶಿವಂಪಿಳ್ಳೆಯವರಿಗೆ ಇಪ್ಪತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಾಲ್ಲೂಕ್ ಶಿರಸ್ತೆದಾರ್ ವೆಂಕಟಾಚಲೈಯ್ಯನವರು ಅಮಲ್ದಾರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡತಕ್ಕದ್ದು

ಆಕ್ಟಿಂಗ್ ಪರ್ಸನಲ್ ಮೆ॥ ಎಸ್ ವೆಂಕಟಕೃಷ್ಣಯ್ಯನವರನ್ನು ಹೊಳೆನರಸೀಪುರಕ್ಕೆ ವರ್ಗ ಮಾಡಿದೆ ಮೆ॥ ಎಂ ನರಸಪ್ಪಯ್ಯನವರು ಸಾಗರದಲ್ಲೇ ಇರತಕ್ಕದ್ದು

ಜೂನ್ ೩೦ ರಲ್ಲಿ ಮೆ॥ ಎಂ ನಾರಾಯಣರಾಯರು ಮೆ॥ ಎಂ ಎಸ್ ನಾರಾಯಣರಾಯರಿಂದ ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಮತ್ತು ಖಜಾನಾ ಛಾರ್ಜನ್ನು ವಹಿಸಿಕೊಂಡಿದ್ದಾರೆ

ಮೆ॥ ಆನಂದರಾವ್ ಸುಬ್ರಾಯರವರನ್ನು ಗೌಡ್ಲಗಿರಿ ಓವರ್ಸಿಯರು, ಮೆ॥ ಸಿ ನಾರಾಯಣರಾಯರನ್ನು ಸುದ್ದಗಿರಿಯಿಂದ ಗುಬ್ಬಿ ಸಬ್ ಡಿವಿಷನಿಗೆ ವರ್ಗ ಮಾಡಿದೆ

ಜೂನ್ ೩೦ ರಲ್ಲಿ ಮೆ॥ ಎಂ ಕಾಂತರಾಜೇ ಅರಸಿನವರು ಮೆ॥ ಎಚ್ ಎಚ್ ಸ್ವಾಮಿಯವರಿಂದ ಮೈಸೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡಿದ್ದಾರೆ

ಅಮಲ್ದಾರರಾಗಿದ್ದು ಈಗ ಪೋಲೀಸ್ ಡೆ॥ ಸೂಪರಿಂಟೆಂಡೆಂಟರಾಗಿರುವ ಮೆ॥ ಎ ಪಿ ವಿಶ್ವನಾಥರಾಯರಿಗೆ ಜೂನ್ ... ಒಂದು ಒಂದು ತಿಂಗಳ ಫರಲೋ ರಜಾ ಕೊಟ್ಟಿದೆ

ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಎ ಹೇಮಂತರಾಜೇ ಅರಸು ... ಗಾರು ಪೋಲೀಸ್ ಸೂಪರಿಂಟೆಂಡೆಂಟರಾಗಿ ಕೆಲಸ ನೋಡತಕ್ಕದ್ದು

ಕೆಲಸದಿಂದ ... ಅಗರದ ... ಡೆ॥ ಕಮಿಷನರ್ ಮೆ॥ ಎಚ್ ... ಹೆಚ್ಚು ... ರ್ ಕ್ಲಾಸಿಗೆ ಬಡ್ತಿ ಮಾಡಿದೆ

ಮೈಸೂರ್ ... ಕವಾಯಿತ್ ದಫೆಯಲ್ಲಿ ಹವಾಲ್ದಾರ್ ... ವರನ್ನು ಹವಾಲ್ದಾರ್ ಮೇಜರ್ ನಿಂದ ಸೆಕೆಂಡ್ ಗ್ರೇಡ್ ಜಮಾದಾರಿಗೆ ಬಡ್ತಿ ಮಾಡಿದೆ

ಗತಿಸಿದ ಆಸ್ಥಾನ ವಿದ್ವಾಂಸರು ವೇ॥ ರಾ॥ ನಂಜನಗೂಡು ಸುಬ್ಬಾಶಾಸ್ತ್ರಿಗಳು

[ಬಿಬ್ಬಿ ಪತ್ರಿಕೆಯಿಂದ]

ಇವರು ಸುಮಾರು ಅಸ್ತ್ರ ... ನೇ ವಯಸ್ಸಿನಲ್ಲಿ ಜನ್ಮಭೂಮಿಯಾದ ನಂಜನಗೂಡನ್ನು ಬಿಟ್ಟು ಮೈಸೂರಿಗೆ ಬಂದರು ಬಾಲ್ಯದಲ್ಲಿಯೇ ವೈದ ವ್ಯಾಕರಣ ವಿದ್ವತ್ ಪ್ರಭಾವದಲ್ಲಿಯೂ ಅಭಿನವ ವೇದವ್ಯಾಸ ... ಲಿಂಗರಾಜೇ ಅರಸಿನವರ ಆಸ್ಥಾನದಲ್ಲಿ ವೇ॥ ಸಬ್ಬಾಶಾಸ್ತ್ರಿಗಳವರು ಪ್ರಮುಖರಾಗಿ ... ಅನೇಕ ಗ್ರಂಥಗಳಿಗೆ ಸಹಾಯಕರಾಗಿಯೂ ಇದ್ದರು ... ನಂಜರಾಜಬಹದ್ದೂರವರಲ್ಲಿಯೂ ಇವರು ಮಾನ್ಯರಾಗಿದ್ದರು ಶ್ರೀಮನ್ಮಹಾರಾಜ(ರವ) ಒಡೆಯರ್ ಬಹದ್ದೂರ್ ರವರು ಇವರು ಬರೆದಿರುವ "ಕರ್ನಾಟಕ ಮಾಳವಿಕಾಗ್ನಿಮಿತ್ರ" ನಾಟಕವನ್ನು, "ಮೃಚ್ಛಕಟಿಕ ಪ್ರಕರಣ" ವನ್ನು, "ಸಿಂಬೆಲೈನ್" ಎಂಬ ಇಂಗ್ಲಿಷ್ ನಾಟಕದ ಭಾಷಾಂತರವನ್ನು ಪರಿಶೋಧಿಸಿ, ಇವರನ್ನು ಆಸ್ಥಾನಪಂಡಿತರನ್ನಾಗಿಯೂ ರಾಜಕುಮಾರರಿಗೆ ಸಂಸ್ಕೃತ ಪಾಠಕರನ್ನಾಗಿಯೂ ನಿಯಮಿಸಿಕೊಂಡಿದ್ದರು ಜೊತೆಗೆ ಇವರು "ಪೂರ್ವಸೀತಾಚರಿತ್ರೆ" "ಉತ್ತರಸೀತಾಚರಿತ್ರೆ" ಎಂಬ ಕನ್ನಡ ಪದ್ಯಗ್ರಂಥಗಳನ್ನೂ, "ಚಾಮುಂಡಾಂಬಿಕಾದಿ ಸ್ತೋತ್ರಮಾಲಿಕೆ," "ವಿದ್ವಚ್ಚಕೋರಚಂದ್ರಿಕೆ" "ಶ್ರೀಕೃಷ್ಣವರ್ಣಮಾಲಾಸ್ತವಳಿ" ಎಂಬ ಸಂಸ್ಕೃತಗ್ರಂಥಗಳನ್ನೂ ವಿರಚಿಸಿದ ಖ್ಯಾತಿ ಸಂಸ್ಕೃತಕರ್ನಾಟಕಭಾಷೆಗಳಲ್ಲಿ ಅತಿ ಲಲಿತವಾಗಿರುವ ಇವರ ಕವಿತಾ ಸರಣಿಯನ್ನು ನಮ್ಮ ಓದುಗರಲ್ಲಿ ಅನೇಕರು ಓದಿರಬಹುದೆಂದು ಊಹಿಸುತ್ತೇವೆ ಇದಲ್ಲದೆ ಇವರಿಗೆ ಸಂಗೀತಶಾಸ್ತ್ರದಲ್ಲಿಯೂ ಪರಿಚಯವು ಬಹಳ ಚನ್ನಾಗಿತ್ತು "ಬಾಲಿಕಾಗೀತಮುಕ್ತಾಕಲಾಪ" ವೆಂಬ ಹಾಡಿನ ಪುಸ್ತಕದಲ್ಲಿ ಇವರು ರಚಿಸಿರುವ ಅನೇಕ ಹಾಡುಗಳು ಜೊತೆಯಲ್ಲಿ ಗರಳಪುರ ಗಂಧರ ಎಂಬ ಅಂಕಿತದಿಂದ ರಂಜಿಸುತ್ತಿರುವವು ಇವರ ಪಾಂಡಿತ್ಯಕ್ಕೆ ಮೆಚ್ಚಿ ಶ್ರೀ ಶೃಂಗಗಿರಿಜಗದ್ಗುರುಗಳವರು ಇವರಿಗೆ ತೋಡಾವನ್ನು ದಯಪಾಲಿಸಿರುತ್ತಾರೆ ಇಂತಹ ಸುಪ್ರಸಿದ್ಧ ಯೋಗ್ಯರಾದ ಇವರು ಇದೇ ಜೂಲೈ ತಾ ೧೧ ನೇ ಭಾನುವಾರ ಬೆಳಿಗ್ಗೆ ಕಾಲರಾ ಉಪದ್ರವದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ಬಹಳ ವಿಷಾದಿಸುತ್ತೇವೆ ಇವರಿಗೆ ಈಗ ಎಪ್ಪತ್ತೆರಡನೇ ವರ್ಷ ನಡೆಯುತ್ತಿತ್ತು ಇವರ ವಿಯೋಗದಿಂದ ನಮ್ಮ ಸಂಸ್ಥಾನಕ್ಕೆ ... ನಷ್ಟವೆಂಬುದರಲ್ಲಿ ಸಂದೇಹವಿಲ್ಲ

ಬಾತ್ಮೀದಾರರಿಗೆ ನೋಟೀಸು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಹೆಸರು ಪತ್ರಿಕೆಗಳಲ್ಲದೆ ಒಪತಕ್ಕ ಪತ್ರಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳಿವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಪತ್ರವನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಕರೆಸ್ಪಾಂಡೆನ್ಸ್

ಬೆಂಗಳೂರು—ಚಿಕ್ಕಬಳ್ಳಾಪುರ ರೈಲ್ವೆ

ಅಯ್ಯಾ,

ಪ್ರತಿ ದಿನವೂ ಮಳೆ ಬರುವದರಿಂದ ರೈತರು ಬಿತ್ತನೆ ಮುಂತಾದ ಕೆಲಸಗಳನ್ನು ಮಾಡುತ್ತಾರೆ ಚಿಕ್ಕಬಳ್ಳಾಪುರಕ್ಕೆ ಬೆಂಗಳೂರಿಂದ ರೈಲು ಹಾಕುತ್ತಾರೆಂಬ ಸಮಾಚಾರವನ್ನು ಇಲ್ಲಿನ ಪ್ರಜೆಗಳು ಕೇಳಿ ಬೆಂಗಳೂರಿಂದ ಹಾಕುವದು ಗುಣವಿಲ್ಲ, ದೊಡ್ಡಬಳ್ಳಾಪುರದಿಂದ ದೇವನಹಳ್ಳಿಯ ಮೇಲೆ ಹಾಕಿದರೆ ಇಲ್ಲಿನವರಿಗೂ ದೇವನಹಳ್ಳಿಯವರಿಗೂ ಬೆಂಗಳೂರಿನವರಿಗೂ ಮೈಸೂರಿನವರಿಗೂ ಇನ್ನೂ ಬಹು ದೂರದಿಂದ ಬರತಕ್ಕ ಪ್ರಯಾಣಿಕರಿಗೂ ಅನುಕೂಲವೆಂದು ಮಾತಾಡುತ್ತಾರೆ ಆದ್ದರಿಂದ ರೈಲ್ವೆ ಕಂಪನಿಯವರು ಇದನ್ನು ಯೋಚನೆ ಮಾಡಿ ... ಗಳೂರಿಂದ ಹಾಕುವದನ್ನು ತಪ್ಪಿಸಿ, ದೊಡ್ಡಬಳ್ಳಾಪುರದಿಂದ ಹಾಕುವಂತೆ ಮಾಡುತ್ತಾರೆಂದು ನಂಬುತ್ತೇನೆ ರೂಪಾಯಿಗೆ ೧೭ ಸೇರು ರಾಗಿ, ೮ ಸೇರು ಅಕ್ಕಿ ಸ್ವಲ್ಪ ಧಾರಣೆ ತಗ್ಗಿರುವದರಿಂದ ಬರಬರುತ್ತ ಹೀಗೆಯೇ ತಗ್ಗಲೆಂದು ಪ್ರಾರ್ಥನೆ

ದೊಡ್ಡಬಳ್ಳಾಪುರ ಎಚ್ ಎಂ

ಮಂದಗದ ಕೆರೆಯೊಳಗಿನ ದೇವಸ್ಥಾನದ ಶಿಖರ

ಅಯ್ಯಾ,

ಈ ತಾಲ್ಲೂಕಿನಲ್ಲಿ ಮಂದಗದ ಕೆರೆ ಎಂಬ ಒಂದು ಭಾರಿ ಕೆರೆಯುಂಟು ಇದರಲ್ಲಿ ನೀರು ವಿಪರೀತ ಆಳವಾಗಿರುವದಲ್ಲದೆ ಕೆಸರು ವಿಶೇಷವಾಗಿರುತ್ತದೆ ಈ ಕೆರೆಯೊಳಗೆ ಒಂದು ದೇವಸ್ಥಾನವಿರುವದಾಗಿ ಜನಗಳು ಬಹಳ ದಿನಗಳಿಂದಲೂ ಹೇಳುತ್ತಲಿದ್ದರು ಅದಕ್ಕೆ ಸರಿಯಾಗಿ ಈಗ ಎರಡು ವರುಷ ಮಳೆ ಹೋದದ್ದರಿಂದ ನೀರು ಬತ್ತಿ ನೀರಿನೊಳಗೆ ಒಂದು ಕಲ್ಲಿನ ದೊಡ್ಡದಾದ ಶಿಖರದಂತೆ ಕಾಣುತ್ತೆ ಅನೇಕ ಜನಗಳು ಅದನ್ನು ಪರೀಕ್ಷಿಸುವದಕ್ಕೆ ... ಕಟ್ಟಿಗೆ ಹಾದ ಮೊದಲಾದವುಗಳಿಂದ ಪರೀಕ್ಷಿಸಿದರು ಅದರ ನಾರವೇ ಸಿಕ್ಕಲಿಲ್ಲ ಸುತ್ತಲೂ ನೀರೂ ಕೆಸರು ಸಹ ತುಂಬಿರುತ್ತವೆ ಅಂಥ ಕೆರೆಯೊಳಗೆ ದೇವಸ್ಥಾನವನ್ನು ಕಟ್ಟಿರುವುದು ಆಶ್ಚರ್ಯವೇ ಸರಿ ಆ ಕೆರೆಗೆ ಕುಮುದ್ವತಿ ನದಿಯು ಹೋಗಿ ಬೀಳುತ್ತದೆ ನೀರು ಬತ್ತಿದ್ದರೂ ಈಗ ಎಷ್ಟೋ ಉದ್ದ ನೀರು ಇರುತ್ತದೆ ಇದನ್ನು ನೋಡಿ ಅನೇಕ ಜನಗಳು ಅಲ್ಲಿಗೆ ಹೋಗಿ ಹಣ್ಣು ಕಾಯಿ ಮೊದಲಾದವುಗಳನ್ನು ನೈವೇದ್ಯ ಮಾಡಿ ಪೂಜೆ ಮೊದಲಾದ ಭಕ್ತಿಯನ್ನು ಅರ್ಪಿಸಿ ಬರುತ್ತಲಿರುವರು

ಎಸ್ ಎಚ್

ಸಂಘಪರಿಷ್ಕರಣ ವಿಚಾರವು

ಅಯ್ಯಾ,

ಇದೇ ಜೂಲೈ ತಿಂಗಳು ಮೊದಲನೇ ತಾರೀಖಿನಲ್ಲಿ ತೀರ್ಥಹಳ್ಳಿ ತಾಲ್ಲೂಕು ಮಾಳೂರು ಹೋಬಳಿ ಬಿದರಗೋಡಿನಲ್ಲಿರುವ ಮೆ॥ ಪುಟ್ಟಯ್ಯಗೌಡರು ತಮ್ಮ ಮನೆಯಲ್ಲಿ ನಡಿಸಿದ ಲಗ್ನದಲ್ಲಿ ಅನೇಕ ತಿದ್ದುಪಾಟುಗಳನ್ನು ಮಾಡಿದರೆಂದು ತಿಳಿಸಲು ಸಂತೋಷಿಸುತ್ತೇನೆ ಇವರು ನಾಡವರ ಜಾತಿಯವರು ಈ ನಾಡವರಲ್ಲಿ ಅನೇಕ ಜನಗಳು ವಿದ್ಯಾವಿಹೀನರಾದುದರಿಂದ ಮಾನುಷ ಕಲ್ಪಿತವಾದ ಅನೇಕ ಕಟ್ಟುಗಳಿಗೂ ಆಚಾರಗಳಿಗೂ ಒಳಬಿದ್ದು ಬಹು ಕಷ್ಟನಷ್ಟಗಳಿಗೆ ಗುರಿಯಾಗಿ, ತಮ್ಮ ಅಭಿವೃದ್ಧಿಗೆ ಕೊರತೆ ತಂದುಕೊಂಡಿರುತ್ತಾರೆ ಪೂರ್ವಿಕರು ನಡಿಸುತ್ತಿದ್ದ ನಿಷ್ಪ್ರಯೋಜನವಾದ ಆಚರಣೆಗಳಲ್ಲಿ ಒಂದನ್ನಾದರೂ ನಡಿಸದೆ ತಪ್ಪಿದರೆ ದೇವರಿಂದ ತಮಗೆ ಮಹಾ ಕೇಡು ಸಂಭವಿಸುವುದೆಂದು ನೆನಸುವವರಾಗಿರುತ್ತಾರೆ ಇಂಥಾದ್ದರಲ್ಲಿ ಲಗ್ನಮಂಟಪಕ್ಕೆ ಅಗಸನು ಮೇಲ್ಕಟ್ಟು ಕಟ್ಟುವುದು, ನಾಯಿಂದನು ಮದವಣಿಗನಿಗೆ ಮುಖ ಕ್ಷೌರ ಮಾಡುವುದು, ಕೋಡ ಕೊಡುವುದು ಅಂದರೆ ಮದವಣಿಗನ ಸಂಬಂಧಿಕರಾದ ಹೆಂಗಸರಲ್ಲೊಬ್ಬರು ಮದವಣಿಗನ ಜೊತೆಯಲ್ಲಿದ್ದು ಹೆಣ್ಣಿನ ಮನೆಗೆ ಅವನೊಂದಿಗೆ ಪಲ್ಲಕ್ಕಿಯಲ್ಲಿ ಕೂತುಕೊಂಡು ಹೋಗುವುದು, ಇವೇ ಮೊದಲಾದ ಕೆಲವು ಆಚರಣೆಗಳನ್ನು ಸದರಿ ಪುಟ್ಟೇಗೌಡರು ಸಂಪೂರ್ಣವಾಗಿ ನಿಲ್ಲಿಸಿಬಿಟ್ಟದ್ದಲ್ಲದೆ, ಕೆಲವು ಪದ್ಧತಿಗಳನ್ನು ಬದಲಾವಣೆ ಸಹ ಮಾಡಿರುತ್ತಾರೆ ಇದಕ್ಕೆ ಪೂರ್ವ ಮೇಲ್ಕಂಡ ಆಚರಣೆಗಳಲ್ಲಿ ಒಂದಾದರೂ ನಡಿಯದೆ ಇದ್ದರೆ ಲಗ್ನ ಕಾರ್ಯವೇ ನಿಂತುಹೋಗುತ್ತಿತ್ತು ಮತ್ತು ಈ ನಾಡವರು ಪುರೋಹಿತರು ನೇಮಿಸುವ ಸುದಿನದಲ್ಲಿ ಎಲ್ಲರೂ ಒಂದೇ ಸಾರಿ ಲಗ್ನ ನಿಶ್ಚಯಿಸಿಕೊಳ್ಳುವದರಿಂದಲೂ, ಈ ಮಲೆನಾಡು ಪ್ರಾಂತ್ಯದಲ್ಲಿ ಕೈಸಾಲದವರು ಕಡಿಮೆಯಾಗಿರುವುದರಿಂದಲೂ, ಈ ಆಚರಣೆಗಳಿಂದ ಜನರಿಗೆ ದ್ರವ್ಯ ನಷ್ಟವಾಗುತ್ತಿದ್ದದಲ್ಲದೆ ಬಹು ಕಷ್ಟವೂ ಆಗುತ್ತಿತ್ತು ಇದನ್ನು ತಿಳಿದು ಒಡನಾಡ ಕ್ಷೇಮಾಕಾಂಕ್ಷೆಯಿಂದ ಕಾರ್ಯತಃ ಸಂಘಪರಿಷ್ಕರಣ ಕಾರ್ಯಕ್ಕೆ ಕೈಹಚ್ಚಿದ ಮೆ॥ ಪುಟ್ಟೇಗೌಡರು ಮತ್ತು ಇವರ ಅಭಿಪ್ರಾಯವನ್ನು ಅನುಮೋದಿಸಿ ಸಹಾಯ ಮಾಡಿದ ಇವರ ಬಂಧು ಮಿತ್ರಾದಿಗಳೂ ಸ್ತೋತ್ರಾರ್ಹರೇ ಸರಿ ಇವರು ಇದೇ ರೀತಿ ಮುಂದೆಯೂ ಪ್ರಜಾ ಏಳಿಗೆಗೆ ಕಂಟಕವಾಗಿರುವ ಮಾನುಷ ಕಲ್ಪಿತವಾದ ಮೂಢ ಪದ್ಧತಿಗಳೂ ಆಚಾರಗಳೂ ಯಾವವೆಂಬುದನ್ನು ಅರಿತು, ಅವುಗಳನ್ನು ಸಂಪೂರ್ಣವಾಗಿ ತ್ಯಜಿಸಿ, ಅವಕ್ಕೆ ಬದಲಾಗಿ ದೇವರ ಸತ್ಯಾಚಾರ ಕಟ್ಟಳೆಗಳನ್ನು ತಮ್ಮ ಅನುಷ್ಠಾನಕ್ಕೆ ತಂದುಕೊಂಡರೆ ಇವರ ಸಮಾಜವು ಶ್ರೇಷ್ಠ ಅಭಿವೃದ್ಧಿಗೆ ಬರಲು ಸ್ವಲ್ಪವೂ ಸಂದೇಹವಿಲ್ಲ. ಸಂಘಪರಿಷ್ಕರಣವಾಗಬೇಕೆಂದು ಸಭೆಯಲ್ಲಿ ಉಪನ್ಯಾಸ ಮಾತ್ರ ಮಾಡಿ, ಕಾರ್ಯತಃ ಒಂದನ್ನೂ ನೆರವೇರಿಸದಿರುವವರು ಇವರಿಂದಲಾದರೂ ಪಾಠ ಕಲಿತುಕೊಳ್ಳುವರೆಂದು ನಂಬಿದ್ದೇನೆ.

ಸಂಘಪರಿಷ್ಕರಣಾಪೇಕ್ಷಿ.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—11

ನಿಯಮಾಕ್ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯನಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ನಿಂದ ಈ ರೈಲಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ೩ವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯಮಾಡಿ ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ಅರಜಿಯನ್ನು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ವಿಕ್ರಯಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ) ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಕಡೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯನಂತೆ ಅಡ್ಮಿಷನ್ ಫೀ ರವಾನಿಸಬೇಕು ಇದು ಷೇರುಕೊಡಲಿಗನಲ್ಲಿ ಉತ್ತರ ಕೊಡಲ್ಪಡುವುದು.

(ಸ್ವ) ಟಿ ವಿ ರಾಮಸ್ವಾಮಿ ಚೆಟ್ಟಿ, ಬಿ ಎ,

ಅಡ್ವೊಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.

ನಗರಪೇಟೆ, ಬೆಂಗಳೂರು ಸಿಟಿ

ಒಕ್ಕಲಿಗರ ಸಂಘ.

98 2

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅನನ್ನತ ಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ನೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮಾ। ರಾ। ದೊಡ್ಡ ಕ್ಯಾತೆಟ್ಟವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯಮಾಡಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡ್ಡು, ಎಂ. ಸುಬ್ಬಯ್ಯ, ಬಿ. ಎ,

ಬೆಂಗಳೂರು. ಕೆ. ಹಚ್. ರಾಮಯ್ಯ, ಬಿ. ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ.—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರಿಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಟ್ಟಾದ ಕೂಡಲೇ ಒಂದು ಪ್ರತಿಯು ಪಾಕೆಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋಗುವವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲು ಇಚ್ಛಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರಿಟರಿಗಳಿಗೆ ಬರೆದು ತಿಳಿಸಬೇಕು

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-36

೧. ಪುಷ್ಟಿರಸಾಯನ.—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ತಕ್ಕ ಔಷಧವು ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪೆಟ್ಟಿಗೆಕ್ಕೆ ರೂ. ೨ ವಿ. ಪಿ. ಛಾಂಗಿ ೬ ಆಣೆ

೨. ಅಜೀರ್ಣ ಗುಳಿಗೆ.—ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ಥ, ಬಾಯಿಯ ದುರ್ಗಂಧ, ಹೊಟ್ಟೆಶೂಲೆ, ನಿದ್ದೆ ಇಲ್ಲದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿ ೧ಕ್ಕೆ ೮ ಆಣೆ. ವಿ. ಪಿ. ೨ ಪೆಟ್ಟಿಗೆ ವರೆಗೆ ಛಾಂಗಿ ಛಾರ್ಜು ೫ ಆಣೆ.

೩. ಲಕ್ಷ್ಮೀಕರ ಕಸ್ತೂರಿಮಾತ್ರೆ—ಇದು ತಾಂಬೂಲಕ್ಕೆ ಪ್ರಾಣಮಿತ್ರನು. ಇದರಿಂದ ಬಾಯಿಯ ದುರ್ಗಂಧವು ಹೋಗುವದು, ಭೋಜನಾನಂತರ ತಾಂಬೂಲದ ಸಂಗಡ ೧—೨ ಮಾತ್ರೆಗಳನ್ನು ಸೇವಿಸಿದರೆ, ಇತರ ಸುವಾಸನಾದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು ಬೆಳಿಗ್ಯೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ ಅಜೀರ್ಣ, ಮಂದಿ, ಹಲ್ಲುವೇದನೆ, ಹೊಟ್ಟೆಯ ಉರಿ, ಇವುಗಳು ವಾಸಿಯಾಗುವವು ಇದರಲ್ಲಿ ಆಕ್ಷೇಪಣೀಯವಾದ ಮತ್ತು ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲದ್ದರಿಂದಲೂ, ಇದರ ತಯಾರಿಗೆ ಕಸ್ತೂರಿ ಸುವರ್ಣ ವರಕು ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ, ಎಳೇ ಮಕ್ಕಳಿಂದ ಮುದುಕರವರಿಗೆ ಎಲ್ಲರೂ ತಾಂಬೂಲದೊಡನೆ ಅಥವಾ ಬರೀಬಾಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು ಕ್ರಮವಾಗಿ ಸೇವಿಸುವವರ ದೇಹದಲ್ಲಿ ರೋಗಕ್ಕೆ ಅಸ್ಪದ ಕೊಡದೆ ಸಹ ಸ್ಕೋಕೊಳ್ಳುವದು. ಜ್ವರ, ವಗೆಗಿ, ಕೆಮ್ಮು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ ರಿಂದ ೪ ಮಾತ್ರೆಗಳಿಂತೆ ಕೊಟ್ಟರೆ ಗುಣ ಕಾಣುವದು. ಸುಮಾರು ೨೦೦ ಮಾತ್ರೆ ಉಳ್ಳ ಸೀಸೆ ೧ಕ್ಕೆ ೪ ಆಣೆ ೧ ರಿಂದ ೧೨ ಸೀಸೆಗೆ ವಿ. ಪಿ. ಛಾಂಗಿ ಛಾರ್ಜು ೫ ಆಣೆ.

೪. ಮೇಹನಾಶನಾರ್ಕ ತೈಲವು—ಇದನ್ನು ಮೇಲ್ಭಾಗದಲ್ಲಿ ಮಾಲೀಸು ಮಾಡುವದರಿಂದ ಕೈಕಾಲು ಹಿಡಿದುಕೊಳ್ಳುವದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳತ, ಮೊಣಕಾಲು ಸೊಂಟ ಮುಂತಾದವುಗಳ ನೋವು, ತಲೆಶೂಲೆ, ಹಲ್ಲುನೋವು, ಕಿವಿನೋವು, ಚಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು ಸೀಸೆ ೧ಕ್ಕೆ ೧ ರೂ ೩ ಬಾಟ್ಲೆ ವರೆಗೆ ವಿ ಪಿ ಛಾಂಗಿ ಛಾರ್ಜು ೬ ಆಣೆ

೫ ಲೋಕಪ್ರಸಿದ್ಧವಾದ ಪರಿಮಳ ಕೇಶತೈಲವು—ಬೋಳುತಲೆ, ಹುಂಡು ಅಥವಾ ಹೊಟ್ಟು ಉದುರುವಿಕೆ, ಇವು ಸಂಪೂರ್ಣವಾಗಿ ವಾಸಿಯಾಗುವದಲ್ಲದೆ, ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ, ತಲೆ, ಮೀಸೆ, ಹುಬ್ಬುಕೂದಲುಗಳನ್ನು ಹೇರಳವಾಗಿ ಬೆಳೆಸುವದು ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗಗಳನ್ನೆಲ್ಲಾ ವಾಸಿ ಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು ಬೆಲೆ ಸೀಸೆ ೧ಕ್ಕೆ ೮ ಆಣೆ. ೨ ಸೀಸೆ ವರೆಗೆ ವಿ ಪಿ. ಛಾರ್ಜು ೫ ಆಣೆ

೬. ನೇತ್ರಬಿಂದು.—ಸವಿಮಾಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವದು, ಕಣ್ಣುನೋವು, ಹೂವು ಬರುವುದು, ಉರಿ ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು ಸೀಸೆ ೧ಕ್ಕೆ ೮ ಆಣೆ. ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ

೭ ಶ್ರೋತ್ರಬಿಂದು—ಕಿವಿಯು ಎಷ್ಟು ಚೆಟ್ಟಾಗಿ ನೋಯುತ್ತಿದ್ದರೂ ಅದನ್ನು ಶೀಘ್ರ ಸುರಿಯುವುದು, ಕಿವಿಯ ಸೋರುವುದು, ಕಿವುಡು ಮುಂತಾದ್ದನ್ನೂ ಜಾಗ್ರತೆ ಪರಿಹರಿಸುವುದು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೮. ಹುಳಕಡ್ಡಿಗೆ ಔಷಧಿ—ಚರ್ಮ ರೋಗಕ್ಕೂ, ಚರ್ಮಗಳವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು ಒಂದು ಸಾರಿ ವಾಸಿಯಾದ ಮೇಲೆ ಪುನಃ ತಲೆದೋರುವುದಿಲ್ಲ. ಸೀಸೆ ೧ಕ್ಕೆ ೪ ಆಣೆ ವಿ. ಪಿ ಛಾರ್ಜು ೩ ಸೀಸೆ ವರೆಗೂ ೫ ಆಣೆ.

೯. ಸುಖಭೇದಿ.—ಹೊಟ್ಟೆನೋವು, ಆಯಾಸ ಯಾವದೂ ಸ್ವಲ್ಪವೂ ಉಂಟಾಗದಂತೆ ಸುಖವಾಗಿ ಭೇದಿಯಾಗುವದು ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ಥ, ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ೧ಕ್ಕೆ ೮ ಆಣೆ ವಿ. ಪಿ. ಛಾರ್ಜು ೩ ಸೀಸೆ ವರೆಗೂ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to:—P. SUBBAROY,

Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,

ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೯ 6—1906 ರಿಂದ 6—7—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಸತ್ತಿದ್ದು.	ಹೋದವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	0	0	0	[illegible]
ಮೈಸೂರು ,,	0	0	1	[illegible]
ಬೆಂಗಳೂರು ಡಿಸ್ಟ್ರಿಕ್ಟು	೧	C	7	[illegible]
ಮೈಸೂರು ,,	3	೪	0	[illegible]
ಕೋಲಾರ್ ,,	೧	6	[illegible]	[illegible]
ಕೋಲಾರ್ ಚಿನ್ನದ ಗಣಿಗಳು	೧	0	0	[illegible]
ತುಮಕೂರು ಡಿಸ್ಟ್ರಿಕ್ಟು	೦	0	೪	[illegible]
ಹಾಸನ (ಹೊರಗಿನದು)	0	0	1	[illegible]
ಚಿತ್ರದುರ್ಗ ,,	0	0	0	[illegible]
ಕಡೂರ್ ,,		೩	C	[illegible]
ಶಿವಮೊಗ್ಗ ,,	೧	೧	೪	[illegible]
ಜುಮ್ಲಾ	14	6	49	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಆಷಾಢ ಬಹುಳ ತ್ರಯೋದಶಿ ಗುರುವಾರದಿಂದ ಶ್ರಾವಣ ಶುದ್ಧ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಜೂಲೈ.

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ.	ಶ್ರೀ ಆದಿ ಮಾಸ
19	ಗುರು ‡	ತ್ರಯೋದಶಿ	22-53	ಮೃ	11 12	4
20	ಶುಕ್ರ ♃	ಚತುರ್ದಶಿ	26 33	ಆರ್ದ್ರಾ	16-30	5
21	ಶನಿ	ಅಮಾವಾಸ್ಯೆ	29 10	ಪು	21-6	6
22	ರವಿ	ಪ್ರಾಡ್ಯ	30 54	ಪು	24-38	7
23	ಚಂದ್ರ ‡	ಬಿದಿಗೆ	31-20	ಆ	26-56	8
24	ಕುಜ	ತದಿಗೆ	30-20	ಮ	27-48	9
25	ಬುಧ	ಚೌತಿ	28-12	ಪು	27-28	10

: ಶಿವಸ್ವರ್ಗತಿಥಿ, ಮಾಸಶಿವರಾತ್ರಿ, ♃ ಆದಿಪುಷ್ಕರ ಪ್ರವಾರ. : ಸತ್ರ ಅಮಾವಾಸ್ಯೆ, ಕಟಕೆ ಪಂಚಗ್ರಹಯೋಗ, ಭೀಮೇಶ್ವರವ್ರತ ‡ ಉತ್ತರಶೃಂಗ ◐ ಮಂಗಳಗೌರೀವ್ರತ ,, ಸಿಂಹಾಯನಗತೆ ರವಿಃ, ನಾಗರಚತುರ್ಥಿ

ಪೇಟೇ ಧಾರಣೆ.

ಏನಸು	ಮೈಸೂರು.	ಬೆಂಗಳೂರು.
ಕಮ್ಮೀ ಅಕ್ಕಿ ಪಲ್ಲ ೧ಕ್ಕೆ ರೂ	೧೪-೦-೦	೧೩-೮
ಕೆಂಬೂತಿ ಅಕ್ಕಿ ಅವಲ್	೧೬-೦-೮	೧೩-೦
,, ದುಂಡು	೧೩-೧೨-೦	೧೨-೮
ಜವಾಡಿ ಅಕ್ಕಿ	೧೩-೦-೦	೧೨-೧೨
ಸಣ್ಣಕ್ಕಿ ಅವಲ್	೧೫-೦-೦	೧೫-೦
,, ದುಂಡು	೧೪-೮-೦	೧೪-೬
ತೊಗರೀ ಬೇಳೆ ಪಲ್ಲ ೧ಕ್ಕೆ	೧೧-೬-೦	೧೨-೪
,, ದುಂಡು	೧೦-೮-೦	೧೧-೪
ಹೈ ರಾಗಿ ಪಲ್ಲ ೧ಕ್ಕೆ	೮-೬-೦	೬-೧೨
ಕಾರಾಗಿ	೩-೨-೦	೬-೮
ಜೋಳ	೯-೦-೦	೮-೧೦
ಕಲಕಂದೆ ಪಲ್ಲ ೧ಕ್ಕೆ	೧೧-೦-೦	೧೧-೦
ಬಿಳೀ ಅವರೆ	೧೦-೦-೦	೧೧-೪
ಹೆಸರು	೧೨-೦-೦	೧೨-೦
ಉದ್ದು	೧೨-೪-೦	೧೧-೧೨
ಕಡಲೆ	೧೨-೬-೦	೧೧-೮
ಎಳ್ಳು ಸೆ ೧-೨೩ಕ್ಕೆ	೨೧-೮-೦	೨೧-೪
ಹುರುಳಿ	೧೦-೮-೦	೧೦-೧
ಹರಳು ೧-೨೩ ಸೇರಿಗೆ	೧೫-೮-೦	೧೩-೦
ಸೀಗೇಕಾಯಿ ಮಣ ೧ಕ್ಕೆ	೨-೮-೦	೩-೦
ಮೆಣಸಿನಕಾಯಿ	೪-೦-೦	೩-೧೦
,, ದುಂಡು	೩-೪-೦	೩-೬
ಬೆಲ್ಲ ದೊಡ್ಡ ಅಚ್ಚು	೪-೪-೦ ಮ	೧-೧೪
ಒಳ್ಳೆಣ್ಣೆ ಮಣ ೧ಕ್ಕೆ	೫-೪-೦	೫-೪
ಹರಳೆಣ್ಣೆ ,,	೫-೮-೦	೫-೮
ಕೊತ್ತುಂಬರಿ ಪಲ್ಲ ೧ಕ್ಕೆ	೧೧-೮-೦	೧೦-೦
ಉಪ್ಪು ,,	೫-೧೦-೦	೬-೮
ಹುಣಸೇ ಹಣ್ಣು	೦-೧೨-೦	೦-೧೧
,, ಹಳೇದು	೦-೮-೦	೦-೧೦
ತುಪ್ಪ ಮಣ ೧ಕ್ಕೆ	೧೮-೦-೦	೧೬-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	೪-೦
ತೆಂಗಿನಕಾಯಿ ೧೦೦ಕ್ಕೆ	೪-೮-೦	೪-೪
ಅಳಲೇಕಾಯಿ ಮಣ ೧ಕ್ಕೆ	೧-೦-೦	೦-೧೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೬-೨-೦	೦-೧೨
ಚಿನಿ (ಶುಗರ್) ಕೆಂಪು	೧೫-೪-೦	೧೫-೫
,, ,, ಹಸಿಮ	೧೫-೧೦-೦	೧೫-೧೦
,, ,, ಗಟ್ಟಿ ಕೊಟ ೧ಕ್ಕೆ	೨೩-೧-೨-೦	೨೪-೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	೮೦-೦

Printed and published by the Rev. E. W. THOMPSON, M.A., the Proprietor and Manager, Wesleyan Mission Press, Mysore. 19/7/1906.

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ — ಮೈಸೂರು—೧೯೦೬ ನೇ ಇಸವಿ ಜೂಲೈ ತಾರೀಖು ೨೬ ನೇ ಗುರುವಾರ. — ಸಂಚಿಕೆ ೮

ಈಗತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲಿಗಳ ಕೇಶರಂಜನ ತೈಲ.

40-23

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ವಿಕರಿಮಾಡಿದ್ದಿಲ್ಲ. ನಗದು ಕ್ರಯ ಮಾತ್ರ:—

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨—೧೨—೦

ಸಣ್ಣ ಬಾಟ್ಲಿ ಒಂದಕ್ಕೆ ರೂ. ೦—೧೧—೬

ಒಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮—೪—೦

„ ೩ „ „ „ ರೂ. ೮—೦—೦

ಅಪೇಕ್ಷೆ ಪಡುವವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ:—ಎಲ್ ಎ ಪೋರವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೋಮೋಸಿಯಾ.

ಅಜ್ಞಾನ ಪರಿಣಾಮ — ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅಂಗಡಿ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಸೆಳೆಯುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಗುಡುಗಳು, ಗಜ್ಜಿಗಳು, ವ್ರಣಗಳು, ಜಲಕುಷ್ಠ, ಸೊಳ್ಳೆ ಮುಂತಾದ ಕ್ರಿಮಿ ಕಚ್ಚಿದದ್ದು, ಚಪ್ಪರಿಸುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಪರಿಹರಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಸೇರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೮ ಆಣೆ ಬಾಟ್ಲಿ ಡಬ್ಬಿಯಲ್ಲಿ ೧ ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ ೮ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಹಸುರು ಬಣ್ಣದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೮ ಆಣೆಗೂ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಪೆಟ್ಟಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪನಿ, ೨೩ ಕೋಟು ಬಿಲ್ಡಿಂಗ್ಸ್, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು. ತಯಾರಿಸಿದ ಸ್ಥಳದಿಂದಲೇ ನೆಟ್ಟಗೆ ರವಾನಿಸಲ್ಪಡುವದು.

35-21

ವ್ಯಾಪಾರದ — ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

74-13



ಇದು ಸಾಧಾರಣ ಜ್ವರ, ಚಳೀಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್ಸಿಯರ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂಕರ್ಪೂರ.



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಜೆಸ್ಸಿಯ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಜೆಸ್ಸಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಕೆಂಬ್ ಬೀಚ್ ಲೈನ್, ಮದ್ರಾಸ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ. ೧—೦—೦

ವರ್ತಮಾನಪತ್ರಗಳ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಸಾಸಲ್ ಸೇರಿ . . . . ರೂ. ೧—೧೪—೦

„ „ „ ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಸರಿಯಾದ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮುಂಬಯಿ ವ್ಯಾಪಾರಮಾಡಬಿಚ್ಛಿಸುವವರು.

85 9

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿಗ ಕೊಟ್ಟಪ್ಪ ಪ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬಿಳುಪು ಕಾಗದ ಚನ್ನ ಬಸಪ್ಪ ಮಲ್ಲಪ್ಪ ನಾರದ. ಪೋಸ್ಟು ಮಾಂಡ್ವಿ, ಮುಂಬಯಿ

ಟಪಾಲು ಖರ್ಚು ಪ್ರಕಟ! — ಟಪಾಲು ಖರ್ಚು ಪ್ರಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 6

ವಿಲಾಯತೀ ಮಸೀಗ ಟಿಕ್ಕರಿಕೆ ದಿವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೇ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ. ೧೦೦ ಪುಡಿಕೆಗಳಿಗೆ ೧ ರೂಪಾಯಿ. ಟಪಾಲ ಖರ್ಚು ಪ್ರಕಟ.

ವಿಳಾಸ:—ವಾಯ್ ಜಿ. ದೀಕ್ಷಿತ, ಸ್ಟೇಷನರ, ಪೂನಾ ಸಿಟಿ.

ತ್ವರೆಮಾಡಿರಿ! — ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ — 94-4

ರಾಸ್ಕೋಪ ಸಿಸ್ಟಂ ಲಿವರ್ ವಾಚ್.

ಬೆಂಗೋಬಸ್ತು. — ಮಜಬೂತ.



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಹೀಗೆ ೩ ಸಾಮಾನು ಕಳುಹಿಸುತ್ತೇವೆ ಟ. ಖ. ಬೇರೆ. ಒಂದೇಸಾರಿ ೩ ವಾಚು ತರಿಸಿಕೊಂಡರೆ ಟ. ಖ ಮಾಫಿ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಳಿಯು ಕಿಮ್ಮತ್ತು ೦—೮—೦, ದುರ್ಬೀನು ಯಂತ್ರ ೦—೮—೦, ವಾಚಿನ ಕವರು ೦—೮—೦. ವಿ. ಪಿ. ಇಂದಲೂ ರವಾನಿಸುತ್ತೇವೆ.

ವಿಳಾಸ:—ಜಿ. ಯಲ್. ಜೋಶಿ ಅಂಡ್ ಕೋ.,

ಪೋಸ್ಟು ಶಿರ್ಶಿ, ಜಿಲ್ಲಾ ಉತ್ತರ ಕನಡಾ.

ನೋಟೀಸು

100 1

ಮೈಸೂರು ಲಷ್ಕರ್ ಮೊಹಲ್ಲಾ ಕಟ್ಟೆಣದ ಅಂಗಡಿ ಬೀದಿಯಲ್ಲಿ ರುವ ಕಾಂಗೀ ಪುಟ್ಟೆಯ್ಯನ ಸಂಪತಿ ಗವ್ವರನ್ನ ಬಾಬತು ಕಡ್ಲೆ ಅಂಗಡಿ ಸಂದುನಲ್ಲಿರುವ ಡೋರ್ ನಂಬರು ೧೦೨ ನೆ ಮನೆ ಒಂದು ಇದಕ್ಕೆ ಮುಂಭಾಗದ ರಸ್ತೆ ಪಕ್ಕದಲ್ಲಿರುವ ಡೋರ್ ನಂ ೩೦ ವ್ರಕ್ಕೆ ಮನೆ ೧, ಇದರ ಪಕ್ಕದಲ್ಲಿರುವ ಡೋರ್ ನಂ ೨೯ ವ್ರಕ್ಕೆ ಮಳಿಗೆ ನಂ ೮, ಇದರ ಪಕ್ಕದಲ್ಲಿರುವ ೭೮ ನೆ ನಂಬರು ಮಳಿಗೆ ಒಂದು, ಶ್ರೀರಂಗಪಟ್ಟಣದ ತಾಲ್ಲೋಕು ಹುಂಡುವಾಲಿನಲ್ಲಿ ತರಿ ಸರ್ವೆ ನಂಬರು ೨೩೦ ಎಕರೆ ೨ ಕುಂಟೆ ೩ ಆಕಾರ ರೂಕಾಲ್ ಸಹ ೧೭। ೨೯ ವ್ರಕ್ಕೆ ಖಾಕಂ ೧, ತರಿ ಸರ್ವೆ ನಂಬರು ೨೦೨ ನ ಎಕರೆ ೧ ಕುಂಟೆ ೩೯ ಆಕಾರ ರೂಕಾಲ್ ಸಹ ೧೩॥ - ವ್ರಕ್ಕೆ ಖಾಕಂ ೧, ಇದನ್ನು ಖಾಕಂ ೨, ಮೈಸೂರು ಶಿಲ ಅಗ್ರಹಾರದ ಸುಣ್ಣದ ಕೇರಿ ಕಾಲುವೆ ಬಳಿ ೧೬೭ ನೆ ನಂಬರು ಮನೆ ಪೂ, ಈ ಪೇಲ್ಕಂಡ ಸ್ವತ್ತುಗಳನ್ನು ಸದರಿ ಗವ್ವರ ಮ್ಮನಿಂದಾ ಪರಾಧೀನ ಮಾಡುವುದಕ್ಕೆ ಯಾವ ಹಕ್ಕು ಇರುವದಿಲ್ಲ. ಈ ಪ್ರಕಿ ಮನೆಗಳ ಆಗಲಿ ಅಂಗಡಿಗಳೆ ಆಗಲಿ ಗದ್ದೆಗಳ ಆಗಲಿ ಹೀಗೆ ಪ್ರಕಿ ಯಾವ್ದು ಪುದೇಕವಾಗಲಿ ಗವರನ್ನು ನಿಂದ ಅದಾರವೆ ಆಗಲಿ ಮೋಗ್ಯವೇ ಆಗಲಿ ಕಗ್ಗಯಿಯೆ ಆಗಲಿ ಹಿಂದೆ ಮಾಡಿದ್ದಾಗಲಿ ಮುಂದೆ ಮಾಡುವದಾಗಲಿ ಅಂತಾದ್ದು ಪೂರ್ಜಿತವಾಗುವದಿಲ್ಲವೆಂದು ಈ ಆಸ್ತಿಗಳಿಗೆ ಹಕ್ಕುದಾರನಾದ ಮೈಸೂರು ಶಿಲೆ ಅಗ್ರಹಾರದ ಕಾಂಗೀ ಮಲ್ಲಣ್ಣಾ ಎಂಬ ನಾನು ಎಲ್ಲರಿಗೂ ಈ ಮೂಲಕ ತಿಳಿಸಿರುತ್ತೇನೆ

ಇಮಿಟೇಷನ್ ವಜ್ರದ ಹರಳಿನಲ್ಲಿ ತಯಾರಿಸಿದ ಷರಟು ಗುಂಡಿ

99 1

ಇದೊಂದು ಆಶ್ಚರ್ಯಕರವಾದ ನಿರ್ಮಾಣದ ಷರಟು ಗುಂಡಿ ಪ್ರತಿ ಸೆಟ್ ೧ಕ್ಕೆ ರೂಪಾಯಿ ೧—೦—೦

ನವರತ್ನಗಳೊಳಗೆ ಶ್ರೇಷ್ಠವಾದ ವಜ್ರದ ಆಭರಣಕ್ಕೆ ಸಕಲರಿಗೂ ಸಾಧ್ಯವಿಲ್ಲದೇ ಇದ್ದಾಗ್ಯೂ ಅಮೇರಿಕಾ ದೇಶದವರೊಂದ ವಜ್ರಕ್ಕೆ ಸಮಾನವಾದ ಪ್ರತಿರೂಪ ಹರಳನ್ನು ನಿರ್ಮಾಣಮಾಡಲ್ಪಟ್ಟು ಇದಕ್ಕೆ (ಇಮಿಟೇಷನ್ ಡೈಮಂಡ್) ಎಂದು ಹೆಸರನ್ನು ಇಡಲ್ಪಟ್ಟಿರುತ್ತೆ. ಇದರಿಂದ ಷರಟು ಗುಂಡಿಗಳನ್ನು ತಯಾರಿಸಲ್ಪಟ್ಟಿರುತ್ತವೆ. ಇದರ ಪ್ರಭಾವವು ದೀಪದ ಬೆಳಕಿಗೆ ಬೆಂಕಿಯಂತೆ ಫಳಫಳಿಸುವದಲ್ಲದೆ ವಜ್ರಕ್ಕೆ ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಇರುತ್ತೆ. ಇದನ್ನು ಒಂದು ಸಲ್ಪು ತರಿಸಿ ಪರೀಕ್ಷಿಸಿದರೆ ಇದರ ವಿಷಯ ಗೊತ್ತಾಗುತ್ತೆ.

ಜರಮನ್ ಸಿಲ್ವರ್ ಘಟ್ಟಿ ಕಾಲಕಡಗ

ಅನೇಕರು ಸುಲಭಕ್ರಯದಲ್ಲಿ ತಯಾರಿಸಿ ಕಳಿಸಬೇಕೆಂದು ಕೋರಿದ್ದ ಸಕಲರಿಗೂ ಉಪಯೋಗವಾಗುವ ಹಾಗೆ ಇದುವರೆಗೆ ಕಾಂಬುವ ಆ ಕ್ರಯದಿಂದ ಸ್ಪೆಷಲ್ ಆರ್ಡರು ಕೊಟ್ಟು ಆಸ್ಟ್ರೇಲಿಯಾ ದೇಶದಿಂದ ಕಂಬಿ ಮತ್ತು ತಗಡುಗಳನ್ನು ತರಿಸಿ ಅದಾಗಿಂದ ಸಕಲ ಆಭರಣಗಳನ್ನು ತಯಾರಿಸುತ್ತಲಿದ್ದೇವೆ. ಇವುಗಳ ಜಿಲ್ಲಾ ರಂಗು ಎಷ್ಟು ವರುಷಗಳಾದರೂ ಕೆಡುವುದು ಹೊಳೆವ ನ

ಮೂಡಿಸಿದ ಮೇಲಿಗೆ ಈ ಕಾಲ ಕಡಗಗಳನ್ನು ನಾಲ್ಕು ತರಹಾಗ್ಯೂ ತಯಾರಿಸಲ್ಪಟ್ಟಿರುತ್ತವೆ ಮತ್ತು ಇವುಗಳ ರಂಗು ಇತರ ಕಡ್ಡಿಕ್ರಯದ ಜರ್ಮನ್ ಸಿಲ್ವರ್ ಬೆಳ್ಳಿಯ ಹಾಗೆ ಅಲಿಕಿನ ಬೆಳ್ಳಿಕ್ಕೆ ತಗದೆ ಸ್ವಯವಾದ ಬೆಳ್ಳಿಗೆ ಸಮಾನವಾಗಿ ಇರುತ್ತೆ. ಎಲ್ಲರು ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಲಭಕ್ರಯವನ್ನೇ ಇಟ್ಟಿದ್ದೇವೆ

ನಂ	೧ ದೊಡ್ಡವರಿಗೆ	ರೂ.	೧—೧೨—೦
,,	೨ ಚಿಕ್ಕವರಿಗೆ	,,	೧—೮—೦
,,	೩ ಹುಡುಗಿಯರಿಗೆ	,,	೧—೦—೦
,,	೪ ಮಕ್ಕಳಿಗೆ	,,	೦—೭—೦

ಮೈಸೂರು ದೇಶದ ಕೈಕಪ್ಪ. ಬೆಲೆ ರೂಪಾಯಿ ೧—೦—೦



ಇದನ್ನು ಗಂಡಸರು ಕೈಗೆ ಹಾಕಿಕೊಳ್ಳುವ ಬಂಗಾರದ ಗಿಲೀಟಿನ ಕಂಬಿಯಲ್ಲಿ ಬಹು ಸೊಗಸಾದ ನವಿಲಿನೆಯನ್ನು ಹಾಕಿ ನೋಟಕ್ಕೆ ಅತಿ ಸುಂದರವಾಗಿ ತಯಾರಿಸಲ್ಪಟ್ಟ ಕೈಕಪ್ಪ. ಇವರ ಬೆಲ್ಲಿ ಬಹಳ ಕಾಲದವರೆಗೆ ನಿಲ್ಲುವಂತೆ ಹೊಸ ನಮೂನೆಯ ಲೋಹದಿಂದ ತಯಾರಿಸಿ ಬಂಗಾರದ ಗಿಲೀಟ್ ಹಾಕಲ್ಪಟ್ಟಿರುತ್ತೆ. ಇದನ್ನು ನೋಡಿದವರು ನಿಜವಾದ ಬಂಗಾರದ ಕಪ್ಪವೆಂದೇ ಅನ್ನುವರು.

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷದವು

15 1



ಶೀತದ ಕೆಮ್ಮು, ಗಂಟ್ಲು ಗಾರೆನ್ನುವದು, ಹುಚಿಗೆಮ್ಮು, ಸಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲು ಎದೆಯಲ್ಲು ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಸ್ವಲ್ಪ ಅಪಾಯ ವನ್ನುಂಟು ಮಾತಹಳ್ಳುದ್ದಾಗಿದೆ. ಅದರ ವೇಗಕ್ಕೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ೨ ದಿನ ಬರುವದು. ತರುವಾಯ ಉಗುಳಿನಲ್ಲಿ ರಕ್ತ ಬೀಳುತ್ತದೆ. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷದವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವದನ್ನೂ ಶ್ಲೇಷ್ಮ ಬೀಳುವದನ್ನೂ ಉತ್ತಮವಾಗಿ ನಿವಾರಣೆ ಮಾಡುತ್ತದೆ. ಉಸಿರು ಕಟ್ಟುವದು ಕಷ್ಟವಾದ್ದರೆ ಅದನ್ನು ಕೂಡಲೇ ಸರಿಪಡಿಸುತ್ತದೆ. ಅಪಾಯಕರವಾದ ಕೆಮ್ಮಿನ ಚಿಹ್ನವನ್ನು ನಿಲ್ಲಿಸುತ್ತದೆ. ಎದೆ ಒಣಗುವಂತಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮಿನ ಶಮನವಾದ ನಂತರ ಸುಖವಾಗಿ ನಿದ್ರೆಮಾಡುವಂತೆ ಮನುಷ್ಯನ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸಿ ಇಲ್ಲ.

ಈ ಔಷದವು ನವಸ್ವರಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿ

ಎಲ್ಲೆಲ್ಲೂ ಬಿಕರಿಯಾಗುವದು | ಸಣ್ಣ ಸೀಸೆಗೆ ೧೨ ಹಣ | ದೊಡ್ಡ ಸೀಸೆಗೆ ೨ ರೂಪಾಯಿ

ಅಮೃತದ ಮೇಲೆ ಅಮೃತ.

86 1

ಎಲ್ಲಾ ತರದ ವಾಯುಸಂಬಂಧ ಜರಾಲೀನ ತ್ರ, ಸರ್ದಿ ಜ್ವರ, ತಲೆನೋವು, ಚಳಿಜ್ವರ, ಕೆಮ್ಮುಗಳ್ ಎದೆನೋವು, [illegible] ಗಂಟ್ಲುಬೇನೆ, ಕೀಲುನೋವು ದೇಗಿಲ ನೋವು, ಆದಿಯಾಗಿ ಈ ವ್ಯಾಧಿಯಾದ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳಿಗೆ ಅತ್ಯಾವಶ್ಯಕವಾದ ಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೋರೋಡೈನ್ ಎಂಬ ವಸ್ತು ಜಿ [illegible] ದಿವ್ಯ ಔಷದವನ್ನು ನೆ (ವಿರುವ ಸ್ಥಳಕ್ಕೆ ಹಚ್ಚುವದು [illegible] ಒಳಕ್ಕೆ ಸೇವಿಸಿ ರೋಗವನ್ನು ಎಂದು ನಿವೃತ್ತಿ [illegible] ಉಪಯೋಗಿಸಿ [illegible] ವಿವಾಹ [illegible] ಬಡ್ಡನ್ನು [illegible] ಇದನ್ನು [illegible] ಸುಗಂಧ [illegible] ಸುಖಿಯನ್ನು [illegible] ಜನರಿಗೆ [illegible] ಬರುವದು [illegible] ಇವರ ಗುಣವು ಅಷ್ಟು ಅದುಭುತವಾಗಿದ್ದರು ಕ್ರಯ —೦ ಬಾಟ್ಲಿಗೆ ೦—೪ ಆಣೆ ಪ್ಯಾಕ್ [illegible] ರೂಪಾಯಿ ೨, ೨ ಚಿಕ್ಕ ರೂ ೩ [illegible] ರೂಪಾಯಿ, ೧೦ಕ್ಕೆ ೩ ರೂಪಾಯಿ, ಅಂಚೆ ವೆಚ್ಚ ಒಂದರಿಂದ ೩ ಮೂರು ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ — ಎಮ್. ಪಚ್ಚೆಯಪ್ಪ ಆರ್ಟೆ, ಸಿಟೆ ಸ್ಟ್ರೀಟ್, ವೇಪೇರಿ, ಮದ್ರಾಸ್

ಹಿಂದೂಸ್ಥಾನದಲ್ಲಿ ಮಕ್ಕಳು

ಶೀತೋಷ್ಣ ಉಷ್ಣಾಧಿಕ್ಯವಾದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬರಬೇಕಾಗಿದೆ

ಆದರೆ ಎಳ್ಳು ಸಣ್ಣ ಮಕ್ಕಳಿಗೆ ನಾನಾಸಂಬಂಧಗಳ ಸರಿಯಾಗಿ ಬಳಸಿಕೊಂಡು ಬೆಳೆಯುವುದಕ್ಕೆ ಅವರ ಟಕ್ಕಾದಿಸಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವದು ಆವಶ್ಯಕ

SCOTT'S EMULSION 57-19

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷದದಲ್ಲಿ ಮಕ್ಕಳ ಸಮಸ್ತ ಅಂಗಗಳಿಗೂ ಬಲ ಕೊಡುವ ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷದವನ್ನು ಸೇವನೆ ಮಾಡುತ್ತಾ ಬಂದ ಬಳಿಕೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್

ಮೀನು ನನ್ನಿ ಇರುವ ಈ ಚಿಹ್ನದ ಗುರುತು

ವೃತ್ತಾಂತ ಪತ್ರಿಕೆ

ಸಂ ೧೯೦೭ನೇ ಇಸವಿ ಜೂಲೈ ತಾ॥ ೨೬ನೇ ಗುರುವಾರ.

ರಷ್ಯಾ ರಾಜ್ಯದ ಪ್ರತಿನಿಧಿ ಸಭೆ ವಜಾ ಆದದ್ದು

ರಷ್ಯಾ ರಾಜ್ಯದ ಚಕ್ರವರ್ತಿ ಯವರ ಅಪ್ಪಣೆಯ ಪ್ರಕಾರ ಡೂಮಾ ಎಂಬ ಪ್ರಜಾಪ್ರತಿನಿಧಿ ಸಭೆಯು ಸ್ಥಗಿತವಾದದ್ದೂ, ಪ್ರಜೆಗಳು ಪ್ರತಿನಿಧಿಗಳನ್ನು ಚುನಾಯಿಸಿ ಆ ಸಭೆಗೆ ಕಳುಹಿಸಿಕೊಟ್ಟದ್ದೂ, ಈ ಡೂಮಾ ಸಭೆಯವರು ರಾಜಕೀಯ ವಿಷಯಗಳನ್ನು ಕುರಿತು ಚರ್ಚೆಮಾಡತ್ತಾ ಬಂದದ್ದೂ, ಈ ಭಾಗದಲ್ಲಿ ಪ್ರಧಾನ ಮಂತ್ರಿಗಳಿಗೂ ಪ್ರತಿನಿಧಿಗಳಿಗೂ ಆಗ್ಗಾಗ್ಗ ನಡೆದದ್ದೂ ವಾಚಕರ ನೆನಪಿನಲ್ಲಿ ರಬಹುದು. ಮಂತ್ರಿಗಳು ಪ್ರತಿಪ್ರಜೆಗಳಿಗೆ ಜಮೀನು ಹಂಚಿಕೊಡುವುದು, ಬಿತ್ತನೆಬೀಜ

ಯಾವಾಗಾಗಲಿ ಅವರಿಗೆ ಸಾಲ [illegible] ರಷ್ಯಾ ರಾಜ್ಯದಲ್ಲಿ [illegible] ಪ್ರಜೆಗಳನ್ನು ಸಂರಕ್ಷಣೆ ಮಾಡುವದು, ಈ ಮೊದಲಾದ [illegible] ಪ್ರತಿನಿಧಿ [illegible] ಚಕ್ರವರ್ತಿಯವರ [illegible]

ರಷ್ಯಾ ಚಕ್ರವರ್ತಿಯವರು [illegible] ಪ್ರತಿನಿಧಿ ಸಭೆಯನ್ನು [illegible] ಯಾವ ಕಾರಣದಿಂದ ಮಾಡಿದರು ಎಂಬುದು ಇನ್ನೂ [illegible] ಚಕ್ರವರ್ತಿಯವರಿಗೂ ಅವರ ಮಂತ್ರಿಗಳಿಗೂ [illegible] ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ರಾಜ್ಯಪರಿಪಾಲನೆಯನ್ನು [illegible] ಮಂತ್ರಿಗಳ ಸರ್ವಸ್ವಾತಂತ್ರ್ಯ [illegible] ರಷ್ಯಾ ದೇಶದಲ್ಲಿ ಇನ್ನೂ [illegible] ದಂಗೆಗಳು [illegible] ಚಕ್ರವರ್ತಿಯವರನ್ನು ಅವರ ಕಾರ್ಯವಾಹಕರನ್ನು ಕಾಪಾಡಲೊಂದು [illegible] ಇನ್ನು ಮುಂದೆಯೂ ಇರುವದೆಂದು ನಿರೀಕ್ಷಿಸಬಹುದು. ಕಷ್ಟ, ಯಾಕಂದರೆ ಆಗಲೇ ಅಲ್ಲಲ್ಲಿ ಸೈನಿಕರು ಸರ್ಕಾರದವರ ಮೇಲೆ ಗುಣಗುಟ್ಟುತ್ತಾ ತಿರುಗಿ ಬೀಳಲಾರಂಭಿಸಿದ್ದಾರೆ. ವೃತ್ತಾಂತವಾಗಿ ಸಮಾಚಾರ ಕೂರ್ಪವಾಗಿ ಚಕ್ರವರ್ತಿಯವರ ಶರೀರರಕ್ಷಕರು ಅದ ಒಂದು ರೆಜಿಮೆಂಟಿನ ಸೈನಿಕರು ದಂಗೆಯೆದ್ದು ಕೂಡಲೇ ಚಕ್ರವರ್ತಿಯವರು ಅವರ ಆಯುಧಗಳನ್ನೆಲ್ಲಾ ಕಿತ್ತುಕೊಂಡು ಕಾರಾಗೃಹಕ್ಕೆ ಹಾಕಿ, ಸೈನ್ಯಕ್ಕೆ ಸೇರಿಸಿ [illegible] ಅವರನ್ನು ಕಂಪರಾ ಮಾಡಿದರು. ಇದರಿಂದ ಸಂಗತಿಯಿಂದ ಚಕ್ರವರ್ತಿಯವರ ಮತ್ತು ಅವರ ಮಂತ್ರಿಗಳ ಸ್ವೇಚ್ಛಾಪ್ರವರ್ತನೆ ಸ್ವಸಹಾಯದಿಂದ [illegible] ಬಹುಕಾಲ [illegible] ಗೊತ್ತಾದೆ ರಷ್ಯಾ ಪ್ರಜೆಗಳು ನಾನಾ ಕಷ್ಟ ನಷ್ಟ ದುಃಖಗಳನ್ನು ಅನುಭವಿಸಿ ಸ್ವಾತಂತ್ರ್ಯವನ್ನು ಸ್ವತಂತ್ರಾಧಿಕಾರವನ್ನು ಸಂಪಾದಿಸಿಕೊಳ್ಳಬೇಕಾಗಿದೆ. ಇದು ಸುಲಭಸಾಧ್ಯವಾದದ್ದಲ್ಲ. ಈಗಿನ ಜನರಿಗೂ ಅವರ ಅಣ್ಣಗಳಿಗೂ ಹೀಗೆ ಕಷ್ಟ ದುಃಖ ಪೂರ್ಣವಾಗಿದ್ದಾಗಲೇ ಪ್ರಜೆಗಳು ಹುಟ್ಟು ವಿಳಿಗೆಯೂ ಸಾಗಿಯೇ ಮಹಾ ಕಷ್ಟವಾಗಿರುತ್ತವೆ

ವಿಗ್ರಹಾರಾಧನೆ.

[ಕಳೆದ ಸಂಚಿಕೆಯಿಂದ ಸಾಗಿ ಬಂದದ್ದು]

ಇಲ್ಲದೆ ನಮ್ಮ ಈ ಹಿಂದೂದೇಶದಲ್ಲಿ ಬಹು ಕಾಲದಿಂದ ಉಪಯೋಗಿಸಲ್ಪಡುತ್ತಾ ಬಂದಿರುವ ಗಣೇಶ ಕೃಷ್ಣ ಮಾರಿಯೇ ಮೊದಲಾದ ವಿಗ್ರಹಗಳನ್ನು ಕುರಿತು ಆಲೋಚಿಸುವಲ್ಲಿ ಅವುಗಳ ರೂಪವ

ನೋಡಿದ ಕೂಡಲೆ ಯಾವ ಯಾವ ಸಂಗತಿಗಳನ್ನು ಅವನು ನಡೆಸಿದನೆಂದು ಗೊತ್ತಾಗುತ್ತದೋ ಅಂಥ ವಿಷಯಗಳೆಲ್ಲಾ ಬರೀ ಕಟ್ಟುಕಥೆಗಳೇ ಆಗಿವೆಯೆಂದು ಹೇಳಬೇಕಾಗುತ್ತದೆ. ಒಂದು ವೇಳೆ ನಿಜವಾಗಿ ನಡೆದ ಸಂಗತಿಗಳೇ ಎಂದು ಒಪ್ಪಿದರೂ ಕೂಡ ಸರ್ವಸ್ವತಂತ್ರನಾಗಿರುವ ಆ ಭಗವಂತನು ನಡೆಸಿದ ಕಾರ್ಯಗಳು ಎಂದು ಎನ್ನುವುದಕ್ಕೆ ಸಾಧ್ಯವಾಗದು. ಹೀಗೆ ಜಡವಸ್ತುರೂಪವಾದ ವಿಗ್ರಹವನ್ನು ಮುಂದಿಟ್ಟುಕೊಳ್ಳುವದರಿಂದ ಭಗವಂತನ ವಿಷಯವಾಗಿ ಕೇವಲ ಅನ್ಯಥವಾದ ಭಾವಗಳನ್ನು ನಮ್ಮ ಮನಸ್ಸಿಗೆ ತಂದುಕೊಳ್ಳುವವರಾಗಿದ್ದೇವೆ. ದೇವರ ವಿಷಯವಾಗಿ ನಮ್ಮ ಬುದ್ಧಿಯಲ್ಲಿ ಗೋಚರಪಡಿಸಿಕೊಳ್ಳುವಂಥ ಭಾವವು ಈ ಜಡವಸ್ತುರೂಪವಾದ ವಿಗ್ರಹದ ದೆಸೆಯಿಂದ ಕೆಟ್ಟು ಹೀನಸ್ಥಿತಿಯನ್ನೈದುತ್ತದೆ. ಆದರೆ ಕೃಷ್ಣ ಗಣೇಶ ಮಾರಿಯಿಂಬಿವರೇ ಪರಮಾತ್ಮನಲ್ಲ, ಸರ್ವೇಶ್ವರನಾದ ಭಗವಂತನ ಸೃಷ್ಟಿಗಳಾಗಿಯೂ ಆತನ ಕೈಕೆಳಗಣ ಅಧಿಕಾರಿಗಳಾಗಿಯೂ ಇದ್ದಾರೆ ಎಂದೂ ಇಂಥವರನ್ನು ಸೂಚಿಸುವದಕ್ಕೆ ಜಡವಸ್ತುರೂಪಗಳಾದ ವಿಗ್ರಹಗಳನ್ನು ಇಟ್ಟುಕೊಳ್ಳಬಹುದೆಂದೂ ಹೇಳುವರು. ಹಾಗಾದರೆ ಆ ವಿಗ್ರಹಗಳಿಗೆ ಮಾಡುವಂಥ ಪೂಜೆಯು ದೇವರಿಗೆ ಸಲ್ಲುವದಿಲ್ಲವೆಂಬುದು ಸ್ಪಷ್ಟವಾಯಿತು. ಯಜಮಾನನು ಪೂರ್ಣನೋ ಆ ಸರ್ವಶಕ್ತನಾದ ಪರಮಾತ್ಮನೊಬ್ಬನನ್ನು ಆರಾಧಿಸುವದರಲ್ಲಿ ಜಡವಸ್ತುರೂಪವಾದ ವಿಗ್ರಹಗಳಿಂದ ಪ್ರಯೋಜನವೇನೂ ಇಲ್ಲ.

ವಿಗ್ರಹಗಳನ್ನಿಟ್ಟುಕೊಳ್ಳದೆ ಭಗವಂತನನ್ನು ಆರಾಧಿಸುವ ಮನುಷ್ಯನ ವಿದ್ಯಮಾನವನ್ನು ವಿಚಾರಿಸಿ ನೋಡೋಣ. ಅವನು ದೇವರ ಪ್ರಾರ್ಥನೆಯನ್ನು ಮಾಡುವಾಗ ನಿಂತುಕೊಳ್ಳಬಹುದು, ಅಥವಾ ಮೊಣಕಾಲೂರಿಕೊಂಡಿರಬಹುದು, ಇಲ್ಲವೆ ಸಾಷ್ಟಾಂಗ ನಮಸ್ಕಾರ ಮಾಡಬಹುದು. ಒಂದು ವೇಳೆ ಕಣ್ಣು ಮುಚ್ಚಿಕೊಂಡಿರಬಹುದು, ಅಥವಾ ಕಣ್ಣು ತೆರೆದು ತನ್ನ ದೃಷ್ಟಿಯನ್ನು ಆಕಾಶದಲ್ಲಿಟ್ಟಿರಬಹುದು. ಹ್ಯಾಗಿದ್ದರೂ ಬಾಧಕವಿಲ್ಲ. ದೇವರು ನಿರಾಕಾರಿಯಾಗಿದ್ದಾನೆಂಬುವದಕ್ಕೆ ಆರಾಧನಾಸ್ಥಾನದಲ್ಲಿ ಜಡವಸ್ತುರೂಪವಾದ ವಿಗ್ರಹವು ಇಲ್ಲದಿರುವದೇ ಸಾಕ್ಷಿಯಾಗಿದೆ. ದೇವರನ್ನು ಉಪಾಸಿಸತಕ್ಕವರ ಆತ್ಮಸಂಬಂಧವಾದಂಥ ಪವಿತ್ರತೆ ಮೊದಲಾದ ಲಕ್ಷಣಗಳ ಮೂಲಕವೇ ತಿಳಿಯಬೇಕಾಗಿದೆ. ಆತನು ನಮ್ಮ ಆಲೋಚನೆಗೆ ನಿಲುಕಲಾರದವನಾಗಿದ್ದಾನೆ. "ನನ್ನ ದಾರಿಯು ನಿಮ್ಮ ದಾರಿಯಲ್ಲ, ನಿನ್ನ ಆಲೋಚನೆಗೂ ನನ್ನ ಆಲೋಚನೆಗೂ ಎಷ್ಟೋ ಅಂತರವಿದೆ" ಎಂದು ಬಲ್ಲವನು ಹೇಳುವದು ನಿಜವಾದ ಮಾತು.

ದೇವರನ್ನು ವಿಗ್ರಹಗಳ ಸಹಾಯವಿಲ್ಲದೆ ಆರಾಧಿಸತಕ್ಕ ಪುರುಷನು ತನ್ನ ಮನಸ್ಸಿನಲ್ಲಿ ದೇವರ ವಿಷಯವಾದ ಭಾವವು ಹ್ಯಾಗೆ ಉಂಟಾಗಿರುತ್ತದೆಂಬುದು ತಿಳಿಯುವದಿಲ್ಲ. ಆದರೂ ಅವನು ತನ್ನ ಮನಸ್ಸನ್ನು ನೆಟ್ಟಗೆ ದೇವರ ಬಳಿಗೇ ತೆಗೆದುಕೊಂಡು ಹೋಗಿ ತನ್ನ ಮನಸ್ಸಿನಲ್ಲಿ ದೇವರ ವಿಷಯವಾದ ಭಾವವನ್ನು ಆರೋಗ್ಯನೂ, ಸರ್ವವ್ಯಾಪಕನೂ, ಸರ್ವಜ್ಞನೂ, ಸರ್ವೇಶ್ವರನೂ ಆಗಿರುವ ಆ ಭಗವಂತನೇ ತಿದ್ದಿ ಹುಟ್ಟಿಸಿಕೊಡಬೇಕೆಂದು ಆತನನ್ನು ಬೇಡಿಕೊಳ್ಳುತ್ತಾನೆ. ಜಡವಸ್ತುರೂಪವಾದ ವಿಗ್ರಹವು ಸ್ಥಿರವಾದದ್ದು. ಅದು ಬೆಳೆಯುವದಿಲ್ಲ. ಬೆಳೆಯತಕ್ಕ ಸಾಮರ್ಥ್ಯವು ಅದರಲ್ಲಿಲ್ಲ. ಒಬ್ಬನು ಅದನ್ನು ದೇವರ ಪೂಜೆಯ ನಿಮಿತ್ತವಾಗಿ ಹತ್ತು ವರ್ಷಗಳು ಉಪಯೋಗಿಸುತ್ತಾ ಬಂದರೂ ಮೊದಲು ಅದರಿಂದೆಷ್ಟು ಉಪಯೋಗವಿತ್ತೋ ಹತ್ತು ವರ್ಷಗಳ ಮೇಲೆಯೂ ಅಷ್ಟೇ ಉಪಯೋಗವಿರುವದು. ಅದನ್ನು ರೂಪಿಸಿದವನ ಕೈಯಿಂದ ಹೊರಡುವಾಗ್ಯೆ ಅದು ಹ್ಯಾಗೆ ಇರುತ್ತದೆಯೋ ಹಾಗೆಯೇ ಎಷ್ಟು ವರ್ಷಗಳಾದರೂ ಒಂದೇ ವಿಧವಾಗಿರುತ್ತದೆಯೇ ಹೊರತು ಸ್ವಲ್ಪವೂ ಬದಲಾಗುವದಿಲ್ಲ. ಮನಸ್ಸಿನಲ್ಲಿ ಹುಟ್ಟುವ ಭಾವವು ಹೀಗಿರುವದಿಲ್ಲ. ದೇವರ ವಿಷಯವಾಗಿ ನಮ್ಮಲ್ಲಿ ಚಿಕ್ಕಂದಿನಲ್ಲಿದ್ದಂಥ ಭಾವವು ನಾವು ದೊಡ್ಡವರಾದ ಮೇಲೆ ಅದೇ ಪ್ರಕಾರವಿರುವದಿಲ್ಲ. ನಾವು ದೇವಭಕ್ತರಾಗಿಯೂ ಸತ್ಯವಂತರಾಗಿಯೂ ಒಳ್ಳೆಯವರಾಗಿಯೂ ಜೀವಿಸುತ್ತಾ ಬಂದವರಾಗಿದ್ದರೆ ದೇವರ ವಿಷಯವಾದ ನಮ್ಮ ಭಾವವೂ ಬೆಳೆಯುತ್ತಲೇ ಇರುವದು. ದೇವರೇ ನಮ್ಮ ಮನಸ್ಸಿನಲ್ಲಿ ತುಂಬಿದ್ದ ಮೂಢತ್ವವನ್ನು ಪರಿಹರಿಸಿ ಅದನ್ನು ಕಳಂಕವಾದ ದುರಾಶೆಗಳೆಂಬ ಕಲ್ಮಷವನ್ನೆಲ್ಲಾ ಸುಟ್ಟುಹಾಕಿ ಶುದ್ಧೀಕರಿಸಿ ಕನ್ನಡಿಯ ಹಾಗೆ ಮಾಡುವನು. ಅದರಲ್ಲಿ ದೇವರ ಮಹಿಮೆಯನ್ನು ದಿನದಿನಕ್ಕೂ ಹೆಚ್ಚಾಗಿ ಪ್ರತಿಬಿಂಬಿಸುವಂತೆ ಆಗುತ್ತದೆ. ಜಡವಸ್ತುರೂಪವನ್ನು ಉಪಯೋಗಿಸುವ ದೇವಾರಾಧಕನು ತನ್ನ ಮನೋಭಾವಗಳನ್ನು ಜಡವಸ್ತುರೂಪಕ್ಕೆ ಮಾರ್ಪಡಿಸುವದರಿಂದ ದೇವರ ವಿಷಯವಾದ ಭಾವಗಳ ವೃದ್ಧಿಯನ್ನು ಹೊಂದದೆ ಹೀನಸ್ಥಿತಿಗೆ ಬರುವಂತೆ ಮಾಡಿಕೊಳ್ಳುತ್ತಾನೆ. ಜಡವಸ್ತುವಿನ ಸಹಾಯವಿಲ್ಲದೆ ದೇವರನ್ನು ಆರಾಧಿಸುವವನು ತನ್ನ ಮನಸ್ಸನ್ನು ದೇವರಿಗೇ ಒಳಪಡಿಸಿಕೊಳ್ಳುತ್ತಾನೆ. ಇದರ ಫಲವೇನಂದರೆ—ದೇವರ ವಿಷಯದಲ್ಲಿ ಸಹಜವಾದ ಅವನ ಮನೋಭಾವವು ವಿಸ್ತಾರವಾಗಿ ಬೆಳೆದು ವೃದ್ಧಿಹೊಂದುತ್ತಲೂ ಅವನ ಆರಾಧನೆಯು ದಿನದಿನಕ್ಕೂ ಅಧಿಕವಾದ ಪವಿತ್ರತೆಯನ್ನು ಹೊಂದುತ್ತಲೂ ಇರುವದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಸಿಟಿ ಮಾರ್ಕೆಟ್ಟನ್ನು ಈಗಿರುವ ಸ್ಥಳದಿಂದ ತೆಗೆದು ಕಲಾಸಿಪಾಳ್ಯದ ಮೈದಾನದಲ್ಲಿ ಕಟ್ಟಬೇಕೆಂದು ಯೋಚಿಸಿದ್ದಾರೆ.

****

ನೆಲಮಂಗಲದ ತಾಲೂಕ್ ಶಿರಸ್ತೇದಾರ್ ಮೆ॥ ಕಾಶೀನಾಥರಾಯರು ದೊಡ್ಡಬಳ್ಳಾಪುರದ ಅಮಲ್ದಾರರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

****

ಕಳೆದ ಗುರುವಾರ ಮಧ್ಯಾಹ್ನ ೧.೩೦ ಗಂಟೆಗೆ ಮೋಟಾರ್ ಗಾಡಿಯಲ್ಲಿ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಬೆಂಗಳೂರಿಗೆ ಪಯಣವಾಗಿ, ಮೊನ್ನೆ ಸೋಮವಾರ ಸಾಯಂಕಾಲ ವಾಪಸು ಚಿತ್ತೈಸಿದರು.

ಚಾಮರಾಜನಗರದ ಡಿಸ್ಟ್ರಿಕ್ಟ್ ಉಪಾಧ್ಯಾಯರ ಹೇಳಿಕೆಯಂತೆ ರಸ್ತು ಮಾಡುವುದರಲ್ಲಿ ಸರ್ಕಾರದವರು ಚಾಮರಾಜೇಶ್ವರ ದೇವಸ್ಥಾನದ ಫಂಡಿನಿಂದ ೫,೩೫೯ ರೂಪಾಯಿ ಖರ್ಚುಮಾಡಬಹುದೆಂದು ಸ್ಯಾಂಕ್ಷನ್ ಆಗಿದೆ.

****

ಬೌರಿಂಗ್ ಪೇಟೆ ತಾಲೂಕು ಸುಂದರಪಾಳ್ಯವೆಂಬ ಗ್ರಾಮಕ್ಕೆ ಸೇರಿದವರಾದ ಹಂದೂಕಳ್ಳರು ಸುಗ್ಗಿ ಭಾಗ್ಯವಂತನಾದ ಒಬ್ಬ ರೈತನ ಮನೆಯಿಂದ ೧,೦೦೦ ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋದರೆಂದು ಪ್ರಕಟವಾಗಿದೆ.

****

ಕಳೆದ ೧೯ ನೇ ತಾ. ನಿಂದ ಮೊನ್ನೆ ೨೩ ನೇ ತಾ ವರೆಗೆ ಏಳು ದಿನಗಳಲ್ಲಿ ಮೈಸೂರಿನಲ್ಲಿ ೧೧ ಮಂದಿಗೆ ವಾಂತಿಭೇದಿ ಉಪದ್ರವಾಗಿ ೫ ಮಂದಿ ಕಾಲವಾದರು. ಹೋದವಾರವೆಲ್ಲಾ ಮೋಡಹಾಕಿಕೊಂಡು ಸೋನೆಮಳೆ ಸುರಿಯುತ್ತು ಇನ್ನೂ ಶೀತಗಾಳಿ ಬೀಸುತ್ತಿದೆ.

****

ಕಳೆದ ವರುಷ ಕೋಲಾರ್ ಚಿನ್ನದ ಗಣಿಗಳಲ್ಲಿ ಒಟ್ಟು ೨೯,೬೯೫ ಮಂದಿ ಚಿನ್ನ ತೆಗೆಯುವ ಕೆಲಸದಲ್ಲಿದ್ದರು. ಅಂದರೆ, ಹಿಂದಿನ ವರುಷಕ್ಕಿಂತ ೨,೯೦೦ ಮಂದಿ ಹೆಚ್ಚು. ಹೋದ ವರುಷ ೨೪೫ ಅಪಾಯತಗಳಾದವು. ೬೫ ಜನರು ಮೃತಪಟ್ಟರು. ೨೨೩ ಜನರಿಗೆ ದೊಡ್ಡ ಗಾಯಗಳಾದವು.

****

ಮೆ॥ ಬಿ. ಧರ್ಮರಾಜ ಚೆಟ್ಟಿಯವರು ಇತರ ಕೆಲಸದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಹೋಗುವ ತನಕ ಕನಕನಹಳ್ಳಿ ತಾಲೂಕ್ ಶಿರಸ್ತೇದಾರ್ ಮೆ॥ ಚಿನ್ನರಾಜೇ ಅರಸಿನವರು ದೇವನಹಳ್ಳಿ ತಾಲೂಕ್ ಅಮಲ್ದಾರರಾಗಿ ನೇಮಿಸಲ್ಪಟ್ಟಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ.

****

ಸೀನಿಯರ್ ಸರ್ಜನ್ ಸ್ಯಾನಿಟರಿ ಕಮಿಷನರಾದ ಕರ್ನಲ್ ಸ್ಮಿತ್ ಯವರು ಒಂದು ವರ್ಷ ರಜಾ ಪಡೆದು ಸೆಪ್ಟೆಂಬರ್ ತಿಂಗಳಲ್ಲಿ ಸೀಮೆಗೆ ಹೋಗಿ ಬರುವವರಾಗಿದ್ದಾರೆಂತಲೂ ಇವರ ಕೆಲಸಕ್ಕೆ ಲೆಫ್ಟಿನೆಂಟ್ ಕರ್ನಲ್ ಜೇಂಸ್ ಯವರನ್ನೋ ಮೇಜರ್ ನಿಬ್ಲಾಕ್ ಯವರನ್ನೋ ನೇಮಿಸುವರೆಂತಲೂ ವರ್ತಮಾನವಿದೆ.

****

ಅರಸಿಕೆರೆಯ ಕೆಲವು ಅಂಗಡಿಗಳಲ್ಲಿ ಸೇಂದಿಗೆ ಬೆರಕೆಹಾಕಿ ಕಮ್ಮಿ ಅಳತೆಯಿಂದ ವಿಕರಿ ಮಾಡುತ್ತಾರೆಂತಲೂ ಧಾರಣೆಯಲ್ಲೂ ಒಂದು ಕಾಸು ಹೆಚ್ಚಿಸುತ್ತಾರೆಂತಲೂ, ಇದರಿಂದ ಕೂಲಿಮಾಡಿ ಜೀವಿಸುವವರಿಗೆ ನಷ್ಟವಾಗುತ್ತಿದೆಯೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಇಲಾಖಾ ಅಧಿಕಾರಿಗಳು ಈ ವಿಷಯಕ್ಕೆ ಗಮನಕೊಡಬೇಕಾಗಿದೆ.

****

ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಕೃಷ್ಣಯ್ಯಂಗಾರ್ ದಾಸಪ್ಪ ಎಂಬ ನೌಕರರಿಬ್ಬರು ಒಬ್ಬ ಐಯ್ಯರಿಗೆ ಕೆಲಸ ಮಾಡಿಸಿಕೊಡುವದಾಗಿ ಹೇಳಿ ಆತನಿಂದ ೫೦೦ ರೂಪಾಯಿ ತೆಗೆದುಕೊಂಡು, ಕೆಲಸ ಮಾಡಿಸಿಕೊಡದೇನೂ ರೂಪಾಯಿ ವಾಪಸು ಕೊಡದೇನೂ ಇದ್ದರೆಂದು ಪ್ರಕಟವಾಗಿ ಡೆಪ್ಯುಟಿ ಕಮಿಷನರೂ ಪೊಲೀಸ್ ಸೂಪರಿಂಟೆಂಡೆಂಟರೂ ತನಿಖೆ ಮಾಡುತ್ತಿರುವದಾಗಿ ಅಲ್ಲಿನ ಪತ್ರಿಕೆಯು ತಿಳಿಸಿರುತ್ತದೆ.

****

ಮೆ॥ ವಿ. ಎನ್. ನರಸಿಂಹಯ್ಯಂಗಾರರು ಅರಮನೆ ಕಂಟ್ರೋಲರಾಗಿದ್ದಾಗ ರಾಜಧಾನಿಯ ಕೋಟೆಯಲ್ಲಿರುವ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಕೆಲವು ವಿಗ್ರಹಗಳಿಗೂ ಸೂರ್ಯಪಾನಗಳಿಗೂ ವಡಗಲೆ ನಾಮಗಳನ್ನು ಹೊಸದಾಗಿ ಮಾಡಿಸಿ ಇಟ್ಟಿದರೆಂದು ಗವರ್ನಮೆಂಟಿಗೆ ಅರ್ಜಿ ಹೋದದ್ದರ ಮೇಲೆ ಸರ್ಕಾರದವರು ಈ ತೆಂಗಲೆ ವಡಗಲೆ ಜಗಳವನ್ನು ತಲೆಯೆತ್ತದಂತೆ ಮಾಡಬೇಕೆಂದು ಆ ನಾಮಗಳನ್ನು ತೆಗೆದು ಬರೀ ತಿಲಕಗಳನ್ನಿಡತಕ್ಕದ್ದೆಂದು ಹುಕುಂ ಮಾಡಿದ್ದಾರೆ.

****

ಸರಿಕೆರೆಯ ಬಾತ್ಮಿದಾರರು ಬರೆಯುವದು—ಈ ಪ್ರಾಂತ್ಯ ಜಮೀನು ಚೆನ್ನಾಗಿ ಬೆಳೆದರೆ ಒಂದು ವರುಷದ ಫಸಲು ಮೂರುವರುಷದವರೆಗೂ ಸಾಕಾಗುತ್ತೆ. ಅಂದರೆ ಮಧ್ಯೆ ಎರಡು ವರುಷ ಮಳೆ ಬಾರದಿದ್ದರೂ ಕಷ್ಟವಾಗುವದಿಲ್ಲ. ಇಲ್ಲಿನ ಬೆಳೆಗಳು ಅಷ್ಟು ಉತ್ಕೃಷ್ಟವಾಗಿರುವವು. ಆದರೆ ಈಗ ೨—೩ ವರುಷಗಳಿಂದಲೂ ಕಾಲಕಾಲಕ್ಕೆ ಮಳೆ ಬಾರದೆ ಕೆಲವು ಕಡೆ ಕಾಲುಫಸಲು, ಕೆಲವು ಕಡೆ ಅರ್ಧ ಫಸಲು ಆದದ್ದರಿಂದ ಬಡಜನರಲ್ಲೂ ರೈತ ಪ್ರಜೆಗಳಲ್ಲೂ ಧಾನ್ಯಗಳು ದಾಸ್ತಾನು ಇಲ್ಲದೆ ಧಾರಣೆಯೂ ಹೆಚ್ಚಾಗಿರುವದರಿಂದ ಜೀವನಕ್ಕೆ ಕಷ್ಟಪಡುತ್ತಿದ್ದಾರೆ.

****

ಮಂಗಳೂರಿಗೂ ಕಣ್ಣೂರಿಗೂ ಸುಮಾರು ಎರಡು ತಿಂಗಳಿಂದ ಹೋಗಿ ಬರುತ್ತಿದ್ದ ಹೂಂಗಾ ಟಪ್ಪಾಲ್ ಬಂಡಿಯು ಕಳೆದ ೧೦ ನೇ ತಾರೀಖಿನಿಂದ ನಿಂತುಹೋಯಿತು. ಘಾಟೀಕರು ಗಟ್ಟಗಳಲ್ಲಿರುವ ರಸ್ತೆಗಳ ದೆಸೆಯಿಂದ ಬಹಳ ತೊಂದರೆಗೂ ನಷ್ಟಕ್ಕೂ ಗುರಿಯಾದದ್ದರಿಂದ ಕರಾರನ್ನು ಮುರಿದುಬಿಟ್ಟರು. ಚಾರ್ಮಾಡಿ ಘಟ್ಟದಲ್ಲಿ ಎರಡು ಸಾರಿ ಬಂಡಿಗಳು ಕುದುರೆಗಳ ಸಹಿತ ಹಳ್ಳಕೊಳ್ಳಗಳಲ್ಲಿ ಬಿದ್ದು ನುಚ್ಚುನೂರಾದವು. ಗಾಡಿಯವರಿಬ್ಬರು ಇನ್ನೂ ಬೆಳ್ತಂಗಡಿಯ ಆಸ್ಪತ್ರೆಯಲ್ಲಿ ಇರುತ್ತಾರಂತೆ. ಸದ್ಯ ಮಂಗಳೂರಿನ ಟಪ್ಪಾಲ್ ಚೀಲಗಳು ಮುಂಚಿನಂತೆ ರನ್ನರುಗಳ ಮೂಲಕ ಕಣ್ಣೂರಿಗೆ ಹೋಗಿಬರುತ್ತವೆ —ನ.

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಮೋಜಾವ ಲೇಖನದ ಮೇಲೂ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ಊರನ್ನೂ ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧಕಾಲಮಿಗಿಂತ ಕಡಿಮೆಯಾಗಿರಬಾರದು. ಒಂದು ಕಾಲಮ್‌ಗಿಂತ ಹೆಚ್ಚಾಗಬಾರದು. (೩) ಪ್ರತಿ ಒಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು (೪) ಬಹುಮಾನ ಪಡೆದವರ ಹೆಸರನ್ನು ವಾರವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನದ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲ ವರ್ತಮಾನ ಪತ್ರಿಕೆಯ ಸ್ವತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ಕೊಡಲಾಗದು.]

[ಈ ಬಾರಿ ಕಳುಹಿಸಿದ ಮೆ॥ ವೆಂಕಟೇಶಯ್ಯ, ಸ್ಕೂಲ್ ಕಟ್ಟೆ ಸ್ಯಾಮು ಫೋಗ್, ಚಿಕ್ಕನಾಯಕನಹಳ್ಳಿ ತಾಲೂಕ್ ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿರುತ್ತೇವೆ.]

ಸಿಡಿಲಿನಿಂದಾದ ಅನಾಹುತಗಳು

ಚಿಕ್ಕನಾಯಕನಹಳ್ಳಿ ತಾಲೂಕು ಕಂದಿಕೆರೆ ಗ್ರಾಮಕ್ಕೆ ೩ ಮೈಲಿ ದೂರದಲ್ಲಿ ತಿಮ್ಮನಹಳ್ಳಿ ಎಂಬ ಊರು ಇರುತ್ತೆ. ಇದೇ ಜುಲೈ ಮಾಹೆ ತಾ ೧೦ ರಲ್ಲಿ ತಿಮ್ಮನಹಳ್ಳಿ ನಿವಾಸಿಗಳಾದ ಮಾದಿಗರ ಜಾತಿ ಇಬ್ಬರು ಗಂಡಸರು, ಇಬ್ಬರು ಹೆಂಗಸರು, ಇಬ್ಬರು ಹೆಣ್ಣುಹುಡುಗರು, ಒಟ್ಟು ೬ ಜನಗಳು ಈ ಗ್ರಾಮಕ್ಕೆ ಅರ್ಧ ಮೈಲಿ ಫಾಸಲೆ ಇರುವ ಬೆಳವಾಡಿ ಕೆರೆಯಲ್ಲಿ ಮಾಟಪ್ಪನೆಂಬ ದೇವರನ್ನು ಮಾಡಬೇಕೆಂದು ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ಮನೆಯಿಂದ ಹೊರಟು ಸ್ವಲ್ಪದೂರ ಬರುವಾಗ್ಗೆ ಮಳೆ ಪ್ರಾರಂಭವಾಗಿ ಬಹು ಬಲವಾಗಿ ಬಂದದ್ದರಿಂದ ಸಮೀಪದಲ್ಲಿದ್ದ ಕರೆಕಲ್ಲನೆಂಬುವನ ಹೊಲದಲ್ಲಿ ಒಂದು ಹುಣಸೇ ಮರವನ್ನು ನೋಡಿ ಕಂಬಳಿ ಕೊಪ್ಪೆಗಳನ್ನು ಇಟ್ಟುಕೊಂಡು ಮೇಲ್ಕಂಡ ೬ ಜನಗಳೂ ಆ ಮರದ ಕೆಳಭಾಗದಲ್ಲಿ ನಿಂತುಕೊಂಡರು. ಆ ಮರದಲ್ಲಿ ಒಂದು ನಾಗರ ಹಾವು ಇದೆ ಎಂಬ ಪ್ರವಾದ ಇದ್ದೇ ಇತ್ತು. ಮಳೆ ಬಹಳ ಹೊತ್ತು ಬಿಡದೆ ಇದ್ದದ್ದರಿಂದ ಸಾಯಂಕಾಲ ೪ ಘಂಟೆ ವರೆಗೂ ಆ ಜನಗಳು ಅಲ್ಲಿಯೇ ನಿಲ್ಲಬೇಕಾಯಿತು. ಸ್ವಲ್ಪ ಶಮನವಾಗಲು ಅವರು ಮುಂದಕ್ಕೆ ಹೊರಡಬೇಕೆಂದು ಉದ್ಯುಕ್ತರಾಗುವದರೊಳಗೇನೇ ಸಿಡಿಲುಬಡಿದು ಅವರಲ್ಲಿ ೫ ಮಂದಿ ಸ್ಮರಣೆತಪ್ಪಿ ಬಿದ್ದುಬಿಟ್ಟರು. ಈ ಸಂದರ್ಭವನ್ನು ಮತ್ತಾರೂ ಅರಿಯರು. ನಾನು ಆ ದಿನ ತಿಮ್ಮನಹಳ್ಳಿಗೆ ಹೋಗಿ ಊರಿಗೆ ಬರಬೇಕೆಂದು ಹೊರಡುವಾಗ್ಗೆ ಮಳೆ ಬಂದದ್ದರಿಂದ ಆ ಗ್ರಾಮದಲ್ಲಿರುವ ಆಂಜನೇಯ ದೇವಸ್ಥಾನದಲ್ಲಿ ಆ ಗ್ರಾಮದ ಪಟೇಲ, ಇನ್ನು ೨-೩ ಜನಗಳ ಸಮೇತ ಕೂತುಕೊಂಡಿದ್ದೆನು. ಅಷ್ಟರಲ್ಲಿ ತನ್ನ ಹೊಲದಿಂದ ಮನೆಗೆ ಬರುತ್ತಾ ಇದ್ದ ತಳವಾರ ಪಪ್ಪನೆಂಬುವನು ಈ ಮಾದಿಗರು ಬಿದ್ದಿರುವದನ್ನು ನೋಡಿ ಅನುಮಾನವಾಗಿ ನಾವು ಇದ್ದ ದೇವಸ್ಥಾನಕ್ಕೆ ಬಂದು ಪಟೇಲನೊಡನೆ ಈ ಸಂಗತಿಯನ್ನು ತಿಳಿಸಿದನು. ಒಡನೆಯೇ ನಾವೆಲ್ಲರೂ ಹೋಗಿ ಬಹಳ ಹೊತ್ತು ನೋಡಿದೆವು. ಅವರು ಏಳಲೇ ಇಲ್ಲ. ನಾವುಗಳೆಲ್ಲ ಅಲ್ಲಿಯೇ ಇರುವಾಗ್ಗೆ ಬಚ್ಚಿಗೊಂಡನ ಗ್ರಾಮದ ಕಡೆಯಿಂದ ಒಬ್ಬನು ಬಂದು, ಒಬ್ಬ ಗಂಡಸು, ಒಬ್ಬ ಹೆಂಗಸು ಗರ್ಭಿಣಿಯಾದವಳು, ೨ ಹುಡುಗರು, ಒಂದು ಎತ್ತು ಸಹ ಸಿಡ್ಲಿನಿಂದ ಮೃತಪೊಂದಿದರೆಂದು ತಿಳಿಸಿದನು. ಈ ಗ್ರಾಮದಲ್ಲಿ ನಡೆದಿರುವ ಅನಾಹುತವನ್ನು ನೋಡಿ ಸಹಿಸುವದೇ ಅಸಾಧ್ಯವಾಗಿದ್ದ ನಮಗೆ ಸಂಕಟವು ಹೆಚ್ಚಾಗುತ್ತಾ ಬಂತು. ಯತ್ನವೇನು! ದೈವನಿಯಾಮಕಕ್ಕೆ ಯಾರು ತಾನೇ ಮಾಡತಕ್ಕದ್ದು ಏನಿರುತ್ತೆ! ಈ ಸಂದರ್ಭವನ್ನು ತಾಲೂಕಿಗೆ ಪಟೇಲನು ರಿಪೋರ್ಟು ಮಾಡಲಾಗಿ ಮಾರನೇ ದಿನ ಅಮಲ್ದಾರರು ಬಂದು ಅಜಮಾಯಿಷಿ ಮಾಡಿದರು. ಸತ್ತು ಬಿದ್ದವರ ಪೈಕಿ ಒಬ್ಬ ಮುದುಕನ ಬೆನ್ನು ಪೂರಾ ಸುಟ್ಟುಹೋಗಿತ್ತು. ಈ ಆಶ್ಚರ್ಯವನ್ನು ನೋಡುವದಕ್ಕೆ ಊರೂರುಗಳಿಂದ ಜನಗಳು ಸಾಲಿಟ್ಟು ಬರುತ್ತಿದ್ದರು. ಅನಂತರ ಅಮಲ್ದಾರರ ಅಪ್ಪಣೆ ಮೇರೆಗೆ ಶವಗಳನ್ನು ದಫನ್ ಮಾಡಿದರು. ಇತ್ತಲಾಗಿ ಬಚ್ಚಿಗೊಂಡನ ಗ್ರಾಮದಲ್ಲಿ ಸತ್ತುಬಿದ್ದವರ ಪೈಕಿ ಒಬ್ಬ ಹೆಂಗಸು, ೨ ಹುಡುಗರು ಸಹ ಎಚ್ಚರವಾದರು. ಬಾಕಿಯವರು ಈ ಸಿಡ್ಲಿನ ಬಾಧೆಗೆ ತುತ್ತಾಗಿ, ದೀರ್ಘನಿದ್ರೆಯಂ ಗೈದರು. ಅದೇ ದಿವಸ ಬೈರಾಪುರವೆಂಬ ಗ್ರಾಮದಲ್ಲಿ ನಾಲ್ಕು ತೆಂಗಿನ ಮರಗಳು ಸಿಡಿಲುಬಡಿದು ಒಣಗಿಹೋದವು. ಮರದ ಕೆಳಗೆ ಇದ್ದ ಜನಗಳಿಗೇನೂ ಅಪಾಯ ಸಂಭವಿಸಲಿಲ್ಲ. ದೈವಸಂಘಟನೆಯಿಂದ ಪ್ರಾಪ್ತವಾಗುವದಕ್ಕೆ ಮನುಷ್ಯ ಪ್ರಯತ್ನವು ನಿಷ್ಪ್ರಯೋಜನವಾದರೂ ನಾಗರ ಹಾವು, ಕಂಚು ಇರತಕ್ಕ ಸ್ಥಳಕ್ಕೆ ಸಿಡಿಲು ಬಡಿಯುವದು ಎಂಬುವ ಹಿರಿಯರ ವಾಕ್ಯದಂತೆ ಮಳೆ ಬರುವ ಕಾಲದಲ್ಲಿ ಜಾಗರೂಕರಾಗಿರುವದು ಉತ್ತಮವಾದದ್ದೆಂದು ಈ ಅನಾಹುತದಿಂದ ವ್ಯಕ್ತವಾಗುತ್ತೆ.

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಓಲೆ.

ಗದ್ದಿಗೆ ಕಲಶಗಳ ಕಳುವು.

ಕೊಡಗಿನ ಮಹಾರಾಜರಾದ ಲಿಂಗರಾಜೇಂದ್ರ ಒಡೆಯರವರ ಗದ್ದಿಗೆಯು ಬಹು ಪುರಾತನದ್ದಾಗಿಯೂ, ಅಪೂರ್ವ ಕಟ್ಟಡವಾಗಿಯೂ ಇದೆ. ಇಂಥಾ ಕಟ್ಟಡವು ನವೀನವಾದ ಚಿತ್ರಕೆಲಸಗಳಿಂದ ತಯಾರಿಸಿದ ಶಿಲೆಗಳಿಂದಲೂ, ಕಂಚು ಕಬ್ಬಿಣ ಗಾರೆಯಿಂದಲೇ ತಯಾರಿಸಿ ಎರಡು ಅಂತಸ್ತು ಇಟ್ಟು, ಮೂರನೆ ನಾಲ್ಕನೆ ಅಂತಸ್ತಿನಲ್ಲಿ ಶಿಖರವು ಅದರ ಮೇಲೆ ಚಿನ್ನದ ಕಲಶ [illegible] ಸ್ಥಾಪನೆಯಾಗಿತ್ತು. ಭೂಮಟ್ಟದಿಂದ ಕಲಶಕ್ಕೆ ಸುಮಾರು ೫೦ ಅಡಿಗಿಂತ ಎತ್ತರವಿದೆ. ಸಪ್ಪ ಕಲಶದ ಪ್ರಭೆಯು ಮಡಿಕೇರಿಯನ್ನೆಲ್ಲಾ [illegible] ತ್ತಿತ್ತು. ಇಂಥಾ ಕಲಶವನ್ನು ಈ ತಾರೀಖು [illegible] ನೆ ಮಂಗಳವಾರ [illegible] ಪ್ರಬಲವಾದ ಮಳೆ ಸುರಿಯುತ್ತಾ ಇದ್ದ ಸಮಯದಲ್ಲಿ ಕಳ್ಳರು ಬಿದಿರು ಏಣಿಯನ್ನಿಟ್ಟು ಹಗ್ಗದಿಂದ ಕಟ್ಟಿ ಮೇಲೆ ಹತ್ತಿ ಕಲಶದ ಅರ್ಧಭಾಗ ತೆಗೆದುಕೊಂಡು ಹೋಗಿರುತ್ತಾರೆ. ಉಳಿಕೆ ಅರ್ಧಭಾಗ ತೆಗೆಯುವುದಕ್ಕೆ ಅಸಾಧ್ಯವಾದ್ದರಿಂದಲೋ ಇನ್ನೊಂದು ಕಾರಣದಿಂದಲೋ ಇಟ್ಟದ್ದೋ ಗೊತ್ತಾಗುವದಿಲ್ಲ. ಕಳವಾದ [illegible] ವದೇ ಪ್ರಯಾಸವಾಗಿರುತ್ತೆ. ಈಗ ಪಕ್ಷಿಗಳು ಸಹ ಕೂರಲಿಕ್ಕೆ ಅತಿ ಪ್ರಯಾಸವಾದ ಶಿಖರಕ್ಕೆ ಹತ್ತಿದ ಕಳ್ಳನ ಸಾಮರ್ಥ್ಯವು ಕೊಂಡಾಡತಕ್ಕದ್ದಾಗಿದೆ. ಇವನೀಗ ಜಗಳ್ಳನೆಂದು ನೆನಸಬೇಕು. ಮಾರನೆ ದಿನ ಪೊಲೀಸ್ ಸಬ್ ಇನ್ಸ್ಪೆಕ್ಟರ ಬಳಿಗೆ ನಾನು ಹೋಗಿ, ಫಿರ್ಯಾದು ಬರೆಸಲಿಕ್ಕೆ ಅವರ ಸನ್ನಿಧಿ ನಿರೀಕ್ಷಣದಿಂದ ತೊಂದರೆ ಅನುಭವಿಸಿದಾಗ್ಯೂ ಅನಂತರ ಬರೆಸಿದೆನು. ಅವರು ಬಂದು ಸ್ಥಳ ಅಜಮಾಯಿಷಿಯಿಂದ ಮಹಜರು ಮಾಡಿ ಕಳ್ಳರ ಸಾಹಿತ್ಯ ಸಾಗಿಸಿಕೊಂಡು ಹೋಗುವಲ್ಲಿ ಕೆಲವರ ಮೇಲೆ ಗುಮಾನ ಇರುವದಾಗಿ ಅವರ ಹೆಸರು ತಿಳಿಸಿದೆನು. ಅದಕ್ಕೆ ಉದಾಸೀನದಿಂದ ಕಿವಿಹಿಸ್ಸಲ್ಲಾದಿಸಿದರು. ಇನ್ನಾದರೂ ಇಂಥಾ ಕಳ್ಳನನ್ನು ಹ್ಯಾಗೂ ಪತ್ತೆಮಾಡಿ, ಸಬ್ ಇನ್ಸ್ಪೆಕ್ಟರ ಕೆಲಸಕ್ಕೆ ಕೀರ್ತಿವಂತರೆಂಬ ಹೆಸರು ಸಂಪಾದಿಸಲಿ.

ಇಂಡಿಯಾ ದೇಶದ ವೃತ್ತಾಂತಗಳು.

ಕರ್ನೂಲ್ ಡಿಸ್ಟ್ರಿಕ್ಟ್ ಪಾಕಾಕಾಪುರದ ಕೆರೆಗೆ ಗುಂಡ್ಲಕಮ್ಮದಲ್ಲಿ ಅಣೆ ಕಟ್ಟಿ ಕಾಲ್ವೆ ತಂದು ಬಿಡಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ೧,೧೬,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ

ಕೊಡಗಿಗೆ ಸೇರಿದ ಪೊಲ್ಲಿಬೆಟ್ಟದಲ್ಲಿ ಮೆ॥ ಆರ್ಚರ್ಡ್ ಎಂಬಾತನು ಕಳೆದವಾರ ಷಿಕಾರಿಗೆ ಹೋಗಿ ಒಂದೇ ಕಡೆ ನಾಲ್ಕು ಹುಲಿಗಳನ್ನು ಕಂಡು, ನಾಲ್ಕನ್ನೂ ಹೊಡೆದು ಕೊಂದುಹಾಕಿದನೆಂದು ತಿಳಿದುಬಂದಿದೆ

ಅಸ್ಸಾಂ-ಬಂಗಾಳಾ ರೈಲ್ವೆಗೆ ಸೇರಿದ ಚಾಂದಪುರ ಸ್ಟೇಷನಲ್ಲಿ ಅಕಸ್ಮಾತ್ತಾಗಿ ಅಪೂರ್ವವಾದ ಬಿರುಗಾಳಿ ಪ್ರಾಪ್ತವಾಗಿ ೩೦ ರೈಲ್ ಗಾಡಿಗಳು ಕಂಬಿಗಳಿಂದ ಹಾರಿಬಿದ್ದು ಕೆಲವು ಒಡೆದುಹೋದವೆಂದು ತಿಳಿದುಬಂದಿದೆ

ಕಲ್ಕತ್ತೆಯಲ್ಲಿ ಹೀರಾ ಲಾಲ್ ಬ್ಯಾನರ್ಜಿ ಎಂಬುವನೂ ಪ್ರಸನ್ನ ಮುಖರ್ಜಿ ಎಂಬುವನೂ ಸುಳ್ಳಾದ ತಂತೀ ವರ್ತಮಾನವನ್ನು ತೋರಿಸಿ ೬೦,೦೦೦ ರೂಪಾಯಿಗೆ ಮೋಸಮಾಡಿದರೆಂದು ಏಳು ವರುಷ ಕಠಿಣ ಸಜಾ ವಿಧಿಸಲ್ಪಟ್ಟರು

ಪಂಜಾಬ್ ಅಧಿಪತ್ಯದಲ್ಲಿ ಪ್ಲೇಗ್ ಪ್ರಾರಂಭವಾದಾರಭ್ಯ ಕಳೆದ ವರುಷದ ಅಕ್ಟೋಬರ್ ವರೆಗೆ ೧೯,೨೩,೧೯೭ ಜನರು ಆ ಉಪದ್ರದಲ್ಲಿ ಮೃತಪಟ್ಟರು. ಆದರೆ ಅದೇ ಕಾಲದಲ್ಲಿ ಜ್ವರದಿಂದ ೩೯,೨೯,೬೪೭ ಜನರು ಕಾಲವಾಗಿದಾರೆ

ಮೆ॥ ಸುರೇಂದ್ರನಾಥ ಬ್ಯಾನರ್ಜಿಯವರು ಮ್ಯಾಜಿಸ್ಟ್ರೇಟರಾಗಿದ್ದ ಮೆ॥ ಇಮರ್ಸನ್ ಮತ್ತು ಮೆ॥ ಕೆಂಪ್ ಎಂಬಿವರ ಮೇಲೆ ಅವರು ತಮ್ಮನ್ನು ಅನ್ಯಾಯವಾಗಿ ದಸ್ತಗಿರಿ ಮಾಡಿದರೆಂತಲೂ ತಮಗೆ ಅವರಿಂದ ೧೦,೪೦೦ ರೂಪಾಯಿ ಪರಿಹಾರ ಬರಬೇಕೆಂತಲೂ ದಾವಾ ತಂದಿದಾರೆ

ಕಾಶ್ಮೀರ ಸಂಸ್ಥಾನದ ಮಂತ್ರಿಗಳಾದ ರಾಯ ಸಾಹೇಬ್ ಭಾಗವತ ನಾರಾಯಣ ದಾಸ್, ಎಂ. ಎ. ಇವರು ಆ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಬಾಲಿಕಾ ಪಾಠಶಾಲೆಗಳನ್ನು ಏರ್ಪಡಿಸಿ, ಹುಡುಗಿಯರಿಗೆ ವಿದ್ಯೆ ಕಲಿಸಬೇಕೆಂದು ತಂದೆತಾಯಿಗಳನ್ನೂ ಪೋಷಕರನ್ನೂ ಪ್ರೋತ್ಸಾಹ ಪಡಿಸುತ್ತಿದಾರೆ

ದೆಹಲಿ ಪಟ್ಟಣದಲ್ಲಿ ಕಾಗದಗಳನ್ನು ತಯಾರುಮಾಡುವುದಕ್ಕೆ ಒಂದು ಕಾರ್ಖಾನೆಯನ್ನಿಡಬೇಕೆಂದು ಅಲ್ಲಿನ ಸ್ವದೇಶೀ ದೊಡ್ಡಮನುಷ್ಯರು ಒಂದು ಕಂಪನಿ ಮಾಡಿಕೊಂಡು, ಅದರ ಮೂಲಧನಕ್ಕೆ ಬೇಕಾದ ೫ ಲಕ್ಷ ರೂಪಾಯಿಗಳನ್ನು ಷೇರಿಗೆ ೧೦೦ ರೂಪಾಯಿಯಂತೆ ಎತ್ತಿ ಕೂಡಿಸಲಾರಂಭಿಸಿದಾರೆ

ಉತ್ತರ ದೇಶದಲ್ಲಿ ಹಿಂದಿನ ವಾರ ೬,೭೩,೦೧೬ ಜನರು ಕ್ಷಾಮಪೀಡಿತರಾಗಿದ್ದರು. ಆದರೆ ಈಚೆಗೆ ಸ್ವಲ್ಪ ಮಳೆ ಅಲ್ಲಲ್ಲಿ ಆದದ್ದರಿಂದ ಆ ಪೈಕಿ ೯೩,೫೧೯ ಜನರು ವ್ಯವಸಾಯ ಮಾಡಲಿಕ್ಕೆ ತಮ್ಮ ತಮ್ಮ ಊರುಗಳಿಗೆ ಹೊರಟು ಹೋದರು ಈಗ ಇನ್ನೂ ೩,೧೯,೬೬೭ ಜನರು ಸರ್ಕಾರದವರ ರಿಲೀಫ್ ಕಾಮಗಾರಿಗಳನ್ನು ಮಾಡುತ್ತಿದಾರೆ

ಕಲ್ಕತ್ತಾ ಪಟ್ಟಣದಲ್ಲಿ ಶವಗಳನ್ನು ಸುಡುವಂಥಾ ಯಂತ್ರಗಳನ್ನಿಟ್ಟು ಒಂದು ಕಟ್ಟಡವನ್ನು ಕಟ್ಟಿ ಈಗ ತಾನೇ ಪೂರೈಸಿರುತ್ತಾರೆ ಮ್ಯುನಿಸಿಪಾಲಿಟಿಯವರಿಗೆ ಹೆಣ ೧ಕ್ಕೆ ೩೦ ರೂಪಾಯಿಯಂತೆ ಕೊಟ್ಟರೆ ಅವರು ಈ ಕಟ್ಟಡದಲ್ಲಿಟ್ಟು ಸ್ವಲ್ಪ ಹೊತ್ತಿನಲ್ಲೇ ಹೆಣದ ಬೂದಿಯನ್ನು ವಾಪಸು ಕೊಡುವರು ಬಡವರಾದವರಿಗೆ ಅವರು ಆ ಛಾರ್ಜನ್ನು ಕಡಿಮೆ ಮಾಡಬಹುದಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿ ಹೊಸದಾಗಿ ಯಾವದಾದರೊಂದು ಬೀದಿಗೆ ಹೆಸರಿಡಬೇಕಾದರೆ ಆ ಬೀದಿಯಲ್ಲಿ ರತಕ್ತವರಾಗಲಿ ಇತರರ್ಯಾರೇ ಆಗಲಿ ಮ್ಯುನಿಸಿಪಾಲಿಟಿಗೆ ಹೆಚ್ಚು ಹಣ ಕೊಟ್ಟಲ್ಲಿ ಅಂಥವರ ಹೆಸರನ್ನು ಇಡಬೇಕೆಂದು ಕೆಲವು ಮ್ಯುನಿಸಿಪಲ್ ಕಮಿಷನರು ಸೂಚಿಸಿದರು. ಹೀಗೆ ಮಾಡುವುದು ಅಪಹಾಸ್ಯಕರವಾದದ್ದೆಂದು ತೋರಿದ್ದರಿಂದ ಇತರ ಮೆಂಬರುಗಳೆಲ್ಲಾ ಒಪ್ಪದೆಹೋದರು

ಹಿಂದುಸ್ಥಾನದ ಸಮಸ್ತ ರೈಲ್ ಗಾಡಿಗಳಲ್ಲೂ ಒಂದು ತರಹಾ ಸರಪಣಿಯನ್ನು ಮಾಡಿಟ್ಟು, ಯಾವ ಪ್ರಯಾಣಿಕನಾದರೂ ಅದನ್ನು ಹಿಡಿದು ಎಳೆದರೆ ಗಾಡಿ ನಿಲ್ಲಿಸುವಂತೆ ಏರ್ಪಾಡು ಮಾಡಬೇಕೆಂತಲೂ, ಇಂಥಾ ಏರ್ಪಾಡು ವಿಲಾಯತಿಯಲ್ಲಿ ಬಹಳ ತೃಪ್ತಿಕರವಾಗಿ ನಡೆದಿದೆ ಎಂತಲೂ, ಇನ್ನೆರಡು ವರುಷಗಳೊಳಗಾಗಿ ಇದನ್ನು ಹಿಂದುಸ್ಥಾನದಲ್ಲೂ ಜಾರಿಗೆ ತರಬೇಕೆಂತಲೂ ರೈಲ್ವೆ ಬೋರ್ಡಿನವರು ಸಮಸ್ತ ರೈಲ್ ಕಂಪನಿಯವರಿಗೂ ತಿಳಿಸಿರುತ್ತಾರೆ

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ನಾಕಾಲ್ ಎಂಬ ದೇವಸ್ಥಾನದ ಬಳಿ ಇರುವ ಸಂದಿಗೊಂದಿಗಳಲ್ಲಿ ಕೀಳು ಜಾತಿಯವರು ತಿರುಗಕೂಡದೆಂತಲೂ, ಕ್ರೈಸ್ತರೂ ಕೀಳು ಜಾತಿಯವರೆಂತಲೂ ದಿವಾನರವರು ಹೇಳಿ ಹುಕುಂ ಕೊಟ್ಟಿದಾರೆ ಈ ಹುಕುಮು ಬಹಳ ಗಲಭೆಯನ್ನೂ ಮನಸ್ತಾಪವನ್ನೂ ಉಂಟುಮಾಡಿದೆ ಪ್ರಜೆಗಳು ಈ ಹುಕುಮನ್ನು ರದ್ದುಮಾಡಿಸಬೇಕೆಂದು ಅಲ್ಲಲ್ಲಿ ಸಭೆಗಳನ್ನು ನಡಸಿ ತಮ್ಮ ತೀರ್ಮಾನವನ್ನು ಗವರ್ನಮೆಂಟಿಗೆ ಕಳುಹಿಸುತ್ತಿದಾರೆ.

ಆಗ್ರಾ ಪಟ್ಟಣದಲ್ಲಿ ಇಂದೋರ್ ಮಹಾರಾಜರ ಕಡೆಯ ಪೈಲ್ವಾನ್ ಕಾಲ್ಲು ಎಂಬುವನಿಗೂ ಜೋಧಪುರದ ನವಾಬರ ಕಡೆಯ ಪೈಲ್ವಾನ್ ಕಾದಿರ್ ಎಂಬುವನಿಗೂ ಭಾರೀ ಕುಸ್ತಿ ಆಯಿತು. ಸಾವಿರಾರು ಜನರು ಹೋಗಿ ನೋಡಿ ಸಂತೋಷಪಟ್ಟರು ಮೂರು ದಂ ಕುಸ್ತಿ ಆದದ್ದರಲ್ಲಿ ಕಾಲ್ಲು ಎಂಬ ಪೈಲ್ವಾನನು ಶತ್ರುವನ್ನು ಕೆಡವಿ ಬೆನ್ನುಮಾಡಿ ಜಯ ಹೊಂದಿದನು ನೋಟಕರೆಲ್ಲಾ ಅವನ ಸಾಹಸ ಚಮತ್ಕಾರಗಳನ್ನು ಕೊಂಡಾಡಿದರು. ಪಂದ್ಯ ಕಟ್ಟಿದ ೧,೬೦೦ ರೂಪಾಯನ್ನು ಗೆದ್ದವನಿಗೆ ಬಹುಮಾನಕೊಟ್ಟರು

ಕೋತ್ರಿಯಿಂದ ಕರಾಚಿಗೆ ರೈಲ್ ಗಾಡಿಗಳಲ್ಲಿ ಗೋಧಿ ಮೂಟೆಗಳು ಅಪಾರವಾಗಿ ಹೋಗಿ ಅಲ್ಲಿಂದ ಹಡಗಿನ ಮೇಲೆ ವಿಲಾಯತಿಗೆ ರಫ್ತಾಗುವವು ಈಗ ಆ ಪ್ರಾಂತ್ಯದಲ್ಲಿ ಮಳೆಬೆಳೆಗಳಿಲ್ಲದೆ ಜನರು ಜೀವನಕ್ಕೆ ಬಹಳ ಕಷ್ಟಪಡುತ್ತಿದಾರೆ ಇವರಲ್ಲಿ ಕೆಲವರು ರೈಲ್ ಗಾಡಿ ಹೋಗುತ್ತಿರುವಾಗ ದಾರಿಯಲ್ಲಿ ಹತ್ತಿ ಗಾರ್ಡನ್ನು ಸುಮ್ಮನಿರದಿದ್ದರೆ ಕೊಲ್ಲುವೆವೆಂದು ಹೆದರಿಸಿ, ವಾರ್ಗಗಳಲ್ಲಿ ಭರ್ತಿಯಾಗಿರುವ ಗೋಧಿ ಚೀಲಗಳನ್ನು ಗಾಡಿಯಿಂದ ನೆಲದ ಮೇಲಕ್ಕೆ ಉರುಳಿಸಿ ಕೆಡವಿ, ಸಾಗಿಸಿಕೊಂಡು ಹೋಗುತ್ತಿದಾರೆ ಇಂಥಾ ಕೊಳ್ಳೆಯನ್ನು ಪೋಲೀಸಿನವರೂ ರೈಲ್ವೆಯವರೂ ಏನಾದರೂ ಮಾಡಿ ನಿಲ್ಲಿಸಬೇಕೆಂದು ಸಾಹಸಪಡುತ್ತಿರುವರು

ಕರಾಚಿ ಪಟ್ಟಣದಲ್ಲಿ ಒಬ್ಬ ಭಾರೀ ಜಮೀನ್ದಾರನು ಚಿನ್ನದ ಇಟ್ಟಿಗೆಯನ್ನು ಸಾಹುಕಾರನಲ್ಲಿ ಒತ್ತೆ ಇಡುವುದಕ್ಕೆ ಹೋದನೆಂದೂ ಅದು ಕಂಚಿನ ಗಟ್ಟಿಯಾಗಿತ್ತೆಂದೂ, ಅದಕ್ಕೆ ಆ ಜಮೀನ್ದಾರನಿಗೆ ಸೆಷನ್ಸ್ ಜಡ್ಜರು ೪ ವರುಷ ಕಠಿಣ ಸಜಾ ಅನುಭವಿಸಬೇಕೆಂದು ಶಿಕ್ಷೆ ವಿಧಿಸಿದ್ದರೆಂದೂ, ಮದರಾಸಿನಿಂದ ಆ ಜಮೀನ್ದಾರನ ಪರವಾಗಿ ವಾದಿಸುವುದಕ್ಕೆ ಪ್ರಸಿದ್ಧ ವಕೀಲರಾದ ಮೆ॥ ನಾರ್ಟನ್‌ರವರು ಹೋಗಿದ್ದರೆಂದೂ ತಿಳಿಸಿದೆವಷ್ಟೆ ಈಚೆಗೆ ಜುಡಿಷಲ್ ಕಮಿಷನರವರು ಈ ಮೊಕದ್ದಮೆಯ ಸಾರಾಂಶವನ್ನೆಲ್ಲಾ ಕೇಳಿ ಆ ಜಮೀನ್ದಾರನಿಗಾಗಿದ್ದ ಶಿಕ್ಷೆಯನ್ನು ವಜಾ ಮಾಡಿ ಅವನನ್ನು ಖುಲಾಸ್ ಮಾಡಿಸಿದರೆಂದು ತಿಳಿದುಬಂದಿದೆ

ಮುರ್ಷಿದಾಬಾದಿನಲ್ಲಿ ಒಬ್ಬ ಭಿಕ್ಷುಕನು ಒಬ್ಬ ಹೆಂಗಸಿಗೆ ದೈಯ್ಯ ಬಿಡಿಸುತ್ತೇನೆಂದು ನಟಿಸಿ, ಅವಳನ್ನು ನಿಲ್ಲಿಸಿ ಸುತ್ತಲೂ ತಾಳೇ ಎಲೆಗಳನ್ನು ಹಾಕಿ ಬೆಂಕಿಯಿಟ್ಟು ಉರಿಸುತ್ತಾ ಮಂತ್ರಗಳನ್ನು ಹೇಳುತ್ತಾ ಬಂದನು ಉರಿಯು ಆ ಹೆಂಗಸಿನ ಸೀರೆಗೆ ತಗಲಿ ಹತ್ತಿಕೊಂಡಿತು ಅವಳು ಕೂಗಲಾರಂಭಿಸಿದಾಗ ಜನರು ಅವಳನ್ನು ಹೊರಕ್ಕೆ ಎಳೆದುಕೊಳ್ಳಬೇಕೆಂದು ಪ್ರಯತ್ನಪಟ್ಟರು ಭಿಕ್ಷುಕನು ಅವಳಿಗೆ ಉರಿ ತಗಲುವುದಿಲ್ಲವೆಂದೂ ಅವಳ ಮೈಮೇಲಿರುವ ದೈಯ್ಯವು ಉರಿದುಹೋಗುತ್ತದೆಂದೂ ಹೇಳಿ ತಡೆದುಬಿಟ್ಟನು ಅವಳು ಕಡೆಗೆ ಮೈಯೆಲ್ಲಾ ಸುಟ್ಟ ಗಾಯಗಳಾಗಿ ಆಸ್ಪತ್ರೆಯಲ್ಲಿ ಸತ್ತುಹೋದಳು ಈಗ ಭಿಕ್ಷುಕನ ಮೇಲೆ ಮೊಕದ್ದಮೆ ಆಗಿದೆ

ಪೂನಾ ಪಟ್ಟಣದಲ್ಲಿ ಪಂಡಿತ ಕಾರ್ವೆ ಎಂಬ ಹಿಂದೂ ದೊಡ್ಡಮನುಷ್ಯರು ಒಂದು ವಿಧವಾ ಸದನವನ್ನು ಇಟ್ಟು ನಡಸುತ್ತಿದಾರೆ. ಈಗ ಈ ಸದನದಲ್ಲಿ ೨೦ ಮಂದಿ ಹಿಂದೂ ವಿಧವೆಯರು ಇದ್ದುಕೊಂಡು ಸ್ತ್ರೀಸಾಮಾನ್ಯಕ್ಕೆ ಆವಶ್ಯಕಗಳಾದ ವಿದ್ಯೆ ಬುದ್ಧಿಗಳನ್ನು ಕಲಿಯುತ್ತಿರುವರು ಕಳೆದ ವಾರ ರಾಮೇಶ್ವರಕ್ಕೆ ಹೋಗಿ ತೀರ್ಥಯಾತ್ರೆ ಮಾಡಿಕೊಂಡು ಬರಬೇಕೆಂದಿದ್ದ ಇಬ್ಬರು ಹಿಂದುಗಳು ಈ ಸದನವನ್ನು ಆಕಸ್ಮಾತ್ತಾಗಿ ಹೋಗಿ ನೋಡಿ, ಅದಕ್ಕಿಂತಲೂ ಪುಣ್ಯಕಾರ್ಯ ಬೇರೊಂದಿಲ್ಲವೆಂದು ತೀರ್ಮಾನಿಸಿ, ತಮ್ಮ ಯಾತ್ರೆಗಾಗಿ ಸಂಪಾದಿಸಿಟ್ಟುಕೊಂಡಿದ್ದ ೫೦೦ ರೂಪಾಯಿಗಳನ್ನು ಈ ಸದನದ ಮೂಲಧನಕ್ಕೆ ಕೊಟ್ಟು, ಅದನ್ನು ಇನ್ನೂ ಅಭಿವೃದ್ಧಿಗೆ ತರಬೇಕೆಂದು ಹೇಳಿದರು

ಕಾಶ್ಮೀರ ಸಂಸ್ಥಾನದಲ್ಲಿ ಶ್ರೀನಗರವೆಂಬ ರಾಜಧಾನಿಯೊಳಗೆ ಕಳೆದ ಭಾನುವಾರ ಅಪೂರ್ವವಾದ ಬಿರುಗಾಳಿ ಪ್ರಾಪ್ತವಾಗಿ ಅನಾಹುತವಾಯಿತು. ಹಗಲು ೧೧॥ ಗಂಟೆಗೆ ಗಾಳಿ ಪ್ರಾರಂಭಿಸಿ ಮಧ್ಯಾಹ್ನ ೧॥ ಯ ತನಕ ಬಹು ರಭಸವಾಗಿ ಬೀಸಿತು ಮಳೆ, ಗುಡುಗು, ಮಿಂಚು ಅಪಾರವಾದವು. ೧೦೦ ಮನೆಗಳು ಸುಟ್ಟುಹೋದವು ಒಂದು ಸೇತುವೆಯೂ ಸ್ವಲ್ಪಮಟ್ಟಿಗೆ ಸುಟ್ಟು ಬೂದಿಯಾಯಿತು ೧॥ ಗಂಟೆಯ ಮೇಲೆ ಎಲ್ಲಾ ಉರಿದುಹೋದ ತರುವಾಯ ಮಳೆ ಪ್ರಾರಂಭವಾಯಿತು. ಅನೇಕ ಮನೆ ಮಠಗಳ ಮೇಲ್ಛಾವಣಿಗಳು ಗಾಳಿಗೆ ಹಾರಿಹೋದವು, ತೋಟಗಳಲ್ಲಿ ಹಣ್ಣು ಹಂಪಲು ಕಿತ್ತು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ ಮಳೆ ಬಾರದೆ ಹೋಗಿದ್ದರೆ ಆ ಉರಿಯು ಪಟ್ಟಣವನ್ನೆಲ್ಲಾ ನಿರ್ನಾಮ ಮಾಡುತ್ತಿತ್ತೆಂದು ತಂತೀ ವರ್ತಮಾನ ಬಂದಿದೆ

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸೀತಾಪುರ ಸ್ಟೇಷನಲ್ಲಿ ಕೆಲವು ದುಷ್ಟ ಹುಡುಗರು ಕ್ರೈಸ್ತ ಪಾದ್ರಿಗಳನ್ನು ಹಿಡಿದು ಹೊಡೆದು ಗಾಯಮಾಡಿದರೆಂದೂ, ಅವರ ಪೈಕಿ ಸರ್ಕಾರದವರು ೨೦—೩೦ ಮಂದಿಯನ್ನು ಹಿಡಿದು ತನಿಖೆ ಮಾಡುತ್ತಿದಾರೆಂದೂ ಕಳೆದ ವಾರ ತಿಳಿಸಿದೆವಷ್ಟೆ ಈಚೆಗೆ ಆ ಹುಡುಗರೆಲ್ಲಾ ಒಟ್ಟಾಗಿ ತಾವು ಮಾಡಿದ್ದು ತಪ್ಪೆಂದು ಒಪ್ಪಿಕೊಂಡು ಒಂದು ಅರ್ಜಿ ಬರೆದು ಕ್ಷಮಿಸುವಂತೆ ಆ ಪಾದ್ರಿಗಳನ್ನು ಕೇಳಿಕೊಂಡರು. ಅವರ ತಂದೆತಾಯಿಗಳೂ ಪೋಷಕರೂ ಆ ಅರ್ಜಿಗೆ ರುಜು ಹಾಕಿ ತಮ್ಮ ಹುಡುಗರು ಮಾಡಿದ್ದನ್ನು ಕ್ಷಮಿಸಬೇಕೆಂದು ಕೇಳಿಕೊಂಡದ್ದಲ್ಲದೆ ೩೦೦ ರೂಪಾಯಿ ಅಪರಾಧ ಕಾಣಿಕೆಯನ್ನೂ ಒಪ್ಪಿಸಿದರು ದಯಾಳುಗಳಾದ ಪಾದ್ರಿಗಳು ಅವರ ತಪ್ಪನ್ನು ಮನ್ನಿಸಿ, ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡಿದಾರೆ.

ಅಲಹಾಬಾದ್ (ಪ್ರಯಾಗ)ದಲ್ಲಿರುವ ಹೈ ಕೋರ್ಟನ್ನು ಲಕ್ನೋ ಪಟ್ಟಣದಲ್ಲಿ ಮಾಡಬೇಕೆಂದು ಗವರ್ನಮೆಂಟಿನವರು ಯೋಚಿಸುತ್ತಿದಾರೆ ಅಲಹಾಬಾದಿನ ವಕೀಲರೂ ಕೆಲವು ಪ್ರಜೆಗಳೂ ಹಾಗೆ ಕೋರ್ಟನ್ನು ವರ್ಗಮಾಡೋಣದರಿಂದ ತುಂಬಾ ಅನಾನುಕೂಲಗಳುಂಟಾಗುವವೆಂದು ಹೇಳಿರುವರು. ಅಯೋಧ್ಯಾ ಮಹಾರಾಜರವರು ಕೋರ್ಟನ್ನು ಅಲಹಾಬಾದಿನಿಂದ ತೆಗೆದುಬಿಟ್ಟರೆ ಅಲ್ಲಿ ಗೋವುಗಳ ಕೊಲೆ ಕಡಿಮೆಯಾದೀತೆಂದು ತಿಳಿಸಿದರು. ಈಚೆಗೆ ಈ ವಿಷಯವನ್ನು ಕಾಶೀ ಪಟ್ಟಣದ ಹಿಂದೂ ಪಂಡಿತರ ಸಭೆಗೆ ತಿಳಿಸಿ ಅವರ ಅಭಿಪ್ರಾಯವನ್ನು ಕೇ ದಾಗ ಅವರೆಲ್ಲಾ ಅದಕ್ಕೆ ಒಪ್ಪಿಕೊಂಡು, ಸರ್ಕಾರಿ ಕೆಲಸಗಳ ಅವ ಕತೆಗಾಗಿ ಅವರು ಆಗಾಗ್ಗೆ ಬೇಕಾದ ಬದಲಾವಣೆಗಳನ್ನು ಮಾಡಿಕೊ ಬಹುದೆಂತಲೂ ಇಂಥಾ ಬದಲಾವಣೆಯ ವಿಚಾರವು ಮತಕ್ಕೆ ಸಂಬಂ ಪಡುವುದಿಲ್ಲವೆಂತಲೂ ಅಭಿಪ್ರಾಯಪಟ್ಟಿದಾರೆ

ದಕ್ಷಿಣ ದೇಶದಲ್ಲಿ ರೈಲನ್ನು ಪಾಂಬನ್ ಪಟ್ಟಣದಿಂದ ರಾಮೇ ದೇವಸ್ಥಾನದವರೆಗೆ ಹಾಕಿದ್ದಾಯಿತು ಮುಂದಿನ ತಿಂಗಳ ಪ್ರಾರಂ ಲ್ಲಿ ಗಾಡಿಗಳನ್ನು ಬಿಡುತ್ತಾರೆ ಇದರಿಂದ ರಾಮೇಶ್ವರಕ್ಕೆ ತೀ ಯಾತ್ರೆ ಹೋಗಿಬರುವ ಸಾವಿರಾರು ಪ್ರಜೆಗಳಿಗೆ ತುಂಬಾ ಉಪಕ ವಾಯಿತೆನ್ನುವುದಕ್ಕೆ ಸಂಶಯವಿಲ್ಲ ಈ ರೈಲನ್ನು ಅಲ್ಲಿಂದ ಧ ನುಷ್ಕೋಟಿಯ ತನಕ ಹಾಕುತ್ತಾರೆಂದು ವರ್ತಮಾನವಿದೆ ಧನುಷ್ಕೋ ಯಿಂದ ಲಂಕಾ ದ್ವೀಪಕ್ಕೆ ೧೭ ಮೈಲಿ ಮಾತ್ರ ಆಗುವುದು ಈ ಮೈಲಿ ದೂರ ಹಡಗಿನ ಮೇಲೆ ಹೋಗಿಬರುವಂತೆ ಏರ್ಪಾಡಾಗಬೇಕೆಂ ರೈಲ್ವೆ ಇಲಾಖೆಯವರೂ ಲಂಕಾ ದ್ವೀಪದ ಗವರ್ನರವರೂ ಆಲೋ ಮಾಡುತ್ತಿದಾರೆ ಈ ರೀತಿ ಹಡಗು ಹೋಗಿಬರುವಂತಾದರೆ ಈಗ ಮೈಲಿ ನೀರಿನ ಮೇಲೆ ಪ್ರಯಾಣಮಾಡಿ ಲಂಕಾ ದ್ವೀಪವನ್ನು ತಲು ಕಾಗಿರುವುದು ತಪ್ಪಿ, ಹಿಂದುಸ್ಥಾನಕ್ಕೂ ಆ ದ್ವೀಪಕ್ಕೂ ಆಮದು ರ ಹೆಚ್ಚಾಗಿ ಪರಸ್ಪರ ಸಂಬಂಧ ಬೆಳೆಯುತ್ತದೆ

ಈ ತಿಂಗಳ ೭ ನೆ ತಾ ನಲ್ಲಿ ಅಫ್ಘಾನಿಸ್ಥಾನದ ಅಮೀರ್ ಹ ಬುಲ್ಲಾ ಖಾನರವರು ದರ್ಬಾರ್ ನಡಸಿ ವಿದ್ಯಾಭಿವೃದ್ಧಿಯ ವಿಷಯ ಗಿ ಉಪನ್ಯಾಸಮಾಡಿದರು ಅವರು ಹೇಳಿದ ಮುಖ್ಯಾಭಿಪ್ರಾಯ ನೆಂದರೆ—ವಿದ್ಯೆಯು ಸಕಲಮನುಷ್ಯರಿಗಳಿಗೆ ಉಪಯುಕ್ತವಾದದ ವಿದ್ಯೆ ಇಲ್ಲದವನು ದೇವರನ್ನು ಅರಿಯಲಾರನು. ಹಬೀಬಿಯಾ ಸ್ಕೂ ಏರ್ಪಡಾಗಿ ಮೂರು ವರುಷಗಳಾದರೂ ದಿನೇ ದಿನೇ ಕ್ಷೀಣಗ ಬರುತ್ತದೆ ಸರ್ಕಾರಿ ಅಧಿಕಾರಿಗಳೇ ಇದಕ್ಕೆ ಕಾರಣರಾಗಿದಾರೆ. ಪಂಚದಲ್ಲೆಲ್ಲಾ ವಿದ್ಯಾವಂತರೇ ಅಧಿಕಾರಸ್ಥಾನಗಳಿಗೆ ಬರುತ್ತಿದಾ ನಮ್ಮ ಸಂಸ್ಥಾನದಲ್ಲಾದರೋ ಅಧಿಕಾರಿಗಳಲ್ಲಿ ಶೇಕಡಾ ೨೦ ಮ ವಿದ್ಯಾವಂತರು ಸಿಕ್ಕುವುದು ದುರ್ಲಭವಾಗಿದೆ ನಮಗೆ ದೊಡ್ಡ ಪ ಬಂದಿದೆ, ಮುದುಕರಾದೆವು, ನಮಗೆ ಏತಕ್ಕೆ ಎಂದು ಹೇಳುವರು. ದ್ಯಾವಂತರೇ ಅಧಿಕಾರಿಗಳಾಗುತ್ತಾರಾದ್ದರಿಂದ ರೈತಪ್ರಜೆಗಳ ಮಕ್ಕ ಹೆಸರುವಾಸಿಗೆ ಬಂದುಬಿಡುವರು ನಮ್ಮ ಮಕ್ಕಳು ನಿರ್ನಾಮರಾ ವರು ನಮ್ಮ ನೌಕರರು ಇಂಥಾವರಾಗಿದಾರೆ ಅವರಿಗೆ ವಿದ್ಯದ ಮೇ ಅಭಿಮಾನವಿಲ್ಲ ಒಳ್ಳೇ ದೊಡ್ಡ ವಂಶದಲ್ಲಿ ಹುಟ್ಟಿದವರೆಂಬ ಅ ಕಾರ ಅವರಲ್ಲಿದೆ ಹೀಗಾದ್ದರಿಂದ ನಮ್ಮ ಪಾಠಶಾಲೆಯು ಕ್ಷೀಣಗ ಬಂತು ಇದರಿಂದ ವಜೀರರ ಮಕ್ಕಳು ವಿದ್ಯೆ ಇಲ್ಲದೆ ಭಿಕ್ಷೆ ಬೇಡುವ ರಾದರು ವಿವೇಕಿಗಳಾದ ರೈತರ ಮಕ್ಕಳು ವಜೀರರಾಗುತ್ತಿದಾ ದೊಡ್ಡ ವಂಶಕ್ಕೆ ಸೇರಿದವರೆಂದು ಅಹಂಕಾರ ಪಡುತ್ತಾ ವಿದ್ಯೆ ಯಿಲ್ಲದೆ ಇರುವವರು ಒಣಕಲ ಮೂಳೆಗಳನ್ನು ಕಡಿಯುತ್ತಾ ಆಸ ಪಡುವ ನಾಯಿಗಳೋಪಾದಿಯಲ್ಲಿದ್ದಾರೆಂದು ಹೇಳಬಹುದು ಒಬ್ಬ ಇನ್ನೊಬ್ಬನಿಗಿಂತ ಮೇಲಾದವನೆನ್ನಿಸಿಕೊಳ್ಳಬೇಕಾದರೆ ವಿದ್ಯೆ ಬು ವಿವೇಕಗಳೇ ಕಾರಣವಲ್ಲದೆ ದೊಡ್ಡ ಮನೆತನವಾಗಲಿ ಐಶ್ವರ್ಯ ಗಲಿ ಕಾರಣವಾಗಲಾರದು ಆದಕಾರಣ ಈ ವಿದ್ಯಾಶಾಲೆಯನ್ನು ಅ ವೃದ್ಧಿಗೆ ತರಬೇಕೆಂದು ಕುತೂಹಲ ಪಡುತ್ತೇವೆ. ಉಪಾಧ್ಯಾಯ ಅವರ ಕುಂದುಕೊರತೆಗಳನ್ನು ಅರಿಕೆ ಮಾಡಬೇಕಾಗಿದೆ ಎಂಬುದೇ

ಹಿಂದುಸ್ಥಾನದಲ್ಲಿ ಪ್ರಜೆಗಳು ಈಗ ಸಾರ್ವತ್ರಿಕವಾಗಿ ದೀಪ ಹಾಕಿ ಉರಿಸುವ ಕೆರೊಸಿನ್ ಎಣ್ಣೆಯ ಪೂರ್ವೋತ್ತರವನ್ನು ಸ್ವಲ್ಪ ವಿ ರಿಸಿ ನೋಡೋಣ ೧೮೯೬ನೆ ಇಸವಿಯಲ್ಲಿ ಹಿಂದುಸ್ಥಾನಕ್ಕೆ ಆವ ವಾಗಿದ್ದಷ್ಟು ಕೆರೊಸಿನ್ ಎಣ್ಣೆಯನ್ನೂ ರಷ್ಯಾ ಮತ್ತು ಅಮೇರಿಕದವ ಕಳುಹಿಸುತ್ತಿದ್ದರು ಆ ವರುಷ ರಷ್ಯದಿಂದ ೪೪೫ ಲಕ್ಷ ಗ್ಯಾಲನ್‌ಗ ಷ್ಟು, ಅಮೇರಿಕದಿಂದ ೧೯೦ ಲಕ್ಷ ಗ್ಯಾಲನ್‌ಗಳಷ್ಟು ಈ ದೇಶ ಬಂದವು ಈಚೆಗೆ ೧೯೦೧ ರಲ್ಲಿ ರಷ್ಯಾ ಎಣ್ಣೆಯು ೮೪೫ ಲಕ್ಷ ಗ್ಯಾಲ ರಫ್ತಾಯಿತು. ಅಮೇರಿಕದ ಎಣ್ಣೆ ೫೦ ಲಕ್ಷ ಗ್ಯಾಲನ್‌ಗೆ ಇಳಿಯಿತು ತರುವಾಯ ರಷ್ಯಾ ಎಣ್ಣೆ ಈ ದೇಶಕ್ಕೆ ಬರುವುದು ಕಮ್ಮಿಯಾ ತ್ತಾ ಬಂದು, ೧೯೦೫ ರಲ್ಲಿ ೮೦ ಲಕ್ಷ ಗ್ಯಾಲನ್‌ಗೆ ಇಳಿಯಿತು. ಎಣ್ಣೆಯನ್ನು ಬೇಟೂಂ ಎಂಬ ಪ್ರದೇಶದಲ್ಲಿ ಕಾರ್ಖಾನೆಗಳನ್ನಿಟ್ಟು ತೆಗೆಯುತ್ತಿದ್ದರು. ಅಲ್ಲಿ ಕೂಲಿಯಾಳುಗಳು ದಂಗೆಯೆದ್ದು ಗಲಾ ಯಾದದ್ದರಿಂದ ರಷ್ಯಾ ಎಣ್ಣೆಯನ್ನು ತೆಗೆಯುವುದೂ ರಫ್ತು ಮಾಡು ದೂ ಕಡಿಮೆಯಾಗುತ್ತಾ ಬಂದಿದೆ ಅತ್ತಲಾಗಿ ಅಮೇರಿಕದ ಎಣ್ಣೆ ರಫ್ತಾಗಿ ಬರುವುದು ಹೆಚ್ಚುತ್ತಾ, ಕಳೆದ ವರುಷ ೨೭೦ ಲಕ್ಷ ಗ್ಯಾ ಳಿಗೆ ಏರಿತು. ಹೀಗೆ ಹೊರಗಿನಿಂದ ಬರುವ ಎಣ್ಣೆ ಕಡಿಮೆಯಾಗ ಇನ್ನೊಂದು ವಿಶೇಷ ಕಾರಣವುಂಟು ಈಚೆಗೆ ಬರ್ಮಾ ಅಧಿಪತ್ಯದ ಳಗೆ ಎಣ್ಣೆ ಬಾವಿಗಳನ್ನು ಕಂಡುಹಿಡಿದು, ಅದರಿಂದ ವರುಷೇ ವರು ಹೆಚ್ಚು ಹೆಚ್ಚಾಗಿ ಎಣ್ಣೆಯನ್ನು ತೆಗೆಯುತ್ತಿದಾರೆ. ಮೊದಲು ಬಾವಿಗಳಿಂದ ೧೮೯೬ನೆ ಇಸವಿಯಲ್ಲಿ ೪೦ ಸಾವಿರ ಗ್ಯಾಲನ್ ಎಣ್ಣೆ ಮಾತ್ರ ಉತ್ಪತ್ತಿಯಾಗಿ ಹಿಂದುಸ್ಥಾನಕ್ಕೆ ರವಾನೆಯಾಯಿತು ಅಂದರೆ ೧೯೦೫ ರಲ್ಲಿ ೭೬೦ ಲಕ್ಷ ಗ್ಯಾಲನ್‌ಗಳನ್ನು ಉತ್ಪತ್ತಿಮಾ ಕಳುಹಿಸಿದಾರೆ ಈಚೆಗೆ ಬೋರ್ನಿಯೋ ಸುಮಾಟ್ರಾ ದ್ವೀಪಗಳಲ್ಲಿ ಈ ಎಣ್ಣೆ ಬಾವಿಗಳು ಸಿಕ್ಕಿರುತ್ತವೆ ಹತ್ತು ವರುಷಗಳ ಕೆಳಗೆ ಬರ್ಮಾ ಬಾವಿಗಳಲ್ಲಿ ೧೯೦ ಲಕ್ಷ ಮಣಗಳ ಎಣ್ಣೆ ಮಾತ್ರ ಉತ್ಪತ್ತಿಯಾಗು ದ್ದದ್ದನ್ನೂ ಈಗ ಅದೇ ಬಾವಿಗಳಲ್ಲಿ ಅದಕ್ಕಿಂತಲೂ ಹತ್ತರಷ್ಟು ಹೆ ಗಿ ಉತ್ಪತ್ತಿಯಾಗುತ್ತಿರುವುದನ್ನೂ ನೋಡಿದರೆ ಈ ಕಸುಬು ಎ ಅಭಿವೃದ್ಧಿಗೆ ಬರುತ್ತಿದೆಯೊ ಗೊತ್ತಾಗುವುದು. ಎಣ್ಣೆಯ ಧಾ ಯೂ ಹೆಚ್ಚು ಕಡಿಮೆಯಾಗುತ್ತಿದೆ. ೧೯೦೧ ರಲ್ಲಿ ವಿಕ್ಟೋರಿ ಮಾರ್ಕಿನ ಬರ್ಮಾ ಎಣ್ಣೆಗೆ ಎರಡು ಡಬ್ಬಗಳಿರುವ ಪೆಟ್ಟಿಗೆಗೆ ರು ೩-೧೧-೫ ಪೈ ಕ್ರಯವಿತ್ತು ಈಗ ಈ ಕ್ರಯವು ರೂ. ೨-೧-೨ ಇಳಿದಿದ್ದರೂ ಇದರಲ್ಲಿ ತುಂಬಾ ಲಾಭವುಂಟು

ವಿದೇಶ ವರ್ತಮಾನಗಳು.

ವಿಲಾಯಿತಿಗೆ ಸೇರಿದ ಬ್ರಿಸ್ಟಲ್ ಪಟ್ಟಣದಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕೆ ಧರ್ಮಾತ್ಮರಾದ ಮೂರು ಮಂದಿ ಸೇರಿ ೧,೭೫,೦೦೦ ರೂಪಾಯಿ ಕೊಟ್ಟಿದ್ದಾರೆ.

****

ಚೀಣಾ ಗವರ್ನಮೆಂಟಿನವರು ತಮ್ಮ ಅಂಚೆ ಇಲಾಖೆಯನ್ನು ಈಗಿನ ಕಾಲಕ್ಕೆ ತಕ್ಕಂತೆ ಏರ್ಪಾಡು ಮಾಡಬೇಕೆಂದು ಅದಕ್ಕಾಗಿ ಒಬ್ಬ ಮೇಲ್ವಿಚಾರಕನನ್ನು ನೇಮಿಸಿದ್ದಾರೆ. ಅಂಚೆ ಇಲಾಖೆಯು ಆ ರಾಜ್ಯದಲ್ಲಿ ಇದುವರೆಗೆ ಪ್ರತ್ಯೇಕವಾಗಿರಲಿಲ್ಲ.

****

ಜರ್ಮನಿಗೆ ಸೇರಿದ ಸ್ಟೆಟಿನ್ ಎಂಬ ಪಟ್ಟಣದಲ್ಲೂ ಫ್ರಾನ್ಸಿಗೆ ಸೇರಿದ ಪಾರಿಸ್ ನಗರದಲ್ಲೂ ಮಾರದಿಂದ ರೇಷ್ಮೆ ಧಾರವನ್ನು ತೆಗೆಯುವುದಕ್ಕೆ ಕಾರ್ಖಾನೆಗಳನ್ನಿಟ್ಟಿದ್ದಾರೆಂತಲೂ ಮೊದಲನೆಯ ಸ್ಥಳದಲ್ಲಿ ೭೦೦ ಜನರು ಈ ಕಸಬನ್ನು ಮಾಡುತ್ತಿದ್ದಾರೆಂತಲೂ ತಿಳಿದು ಬಂದಿದೆ.

****

ಈಜಿಪ್ಟಿನಲ್ಲಿ ಕೆಲವು ವರ್ತಮಾನ ಪತ್ರಿಕೆಗಳು ಇಂಗ್ಲಿಷ್ ಗವರ್ನಮೆಂಟಿನವರ ಮೇಲೆ ಪ್ರಜೆಗಳಿಗೆ ದ್ವೇಷಾಸೂಯೆಗಳುಂಟಾಗುವ ರೀತಿಯಲ್ಲಿ ಬಾತ್ಮಿಗಳನ್ನು ಬರೆದು ಪ್ರಕಟಿಸಿ ಪ್ರಜೆಗಳ ಮನಸ್ಸನ್ನು ಕೆಡಿಸುತ್ತಿದ್ದುದರಿಂದ ಸರ್ಕಾರದವರು ಎರಡು ಪತ್ರಿಕೆಗಳನ್ನು ಬಾಯಿಮುಚ್ಚಿಸಿ ಮತ್ತೆ ಪ್ರಕಟವಾಗದಂತೆ ಮಾಡಿದರು.

****

ವಿದ್ಯಾವತಿಯರಾದ ಹೆಂಗಸರನ್ನು ಅಮೇರಿಕ ರಾಜ್ಯದಲ್ಲಿ ಅಂಚೆ, ಆಫೀಸು, ಕೋರ್ಟು, ಕಚೇರಿ ಮುಂತಾದ ಕಡೆಗಳಲ್ಲಿ ಗುಮಾಸ್ತೆಯರನ್ನಾಗಿ ನೇಮಿಸಿಕೊಂಡು ಆನಂದ ಕೆಲಸ ತೆಗೆದುಕೊಳ್ಳುತ್ತಿದ್ದಾರೆ. ಅಧಿಕಾರಿಗಳೆಲ್ಲಾ ಹೆಂಗಸರನ್ನು ಕೆಲಸಕ್ಕೆ ನೇಮಿಸಿಕೊಳ್ಳಕೂಡದೆಂತಲೂ, ಈಗ ಕೆಲಸ ಮಾಡತಕ್ಕವರನ್ನು ಕಿತ್ತುಹಾಕುತ್ತೇವೆಂತಲೂ ಅವರಿಗೆಲ್ಲಾ ನೋಟೀಸ್ ಕೊಟ್ಟಿದ್ದಾರೆ.

****

ವಿಲಾಯಿತಿಯ ಸಾರ್ವಭೌಮ ಚಕ್ರವರ್ತಿಯವರು ಪತ್ನೀ ಪರಿವಾರ ಸಹಿತ ಕಳೆದ ವಾರ ನ್ಯೂಕ್ಯಾಸಲ್ ಎಂಬ ನಗರದಲ್ಲಿ ಒಂದು ವಿದ್ಯಾಶಾಲೆ, ಒಂದು ಆಸ್ಪತ್ರೆ, ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆ, ಇವುಗಳನ್ನು ಪ್ರತಿಷ್ಠೆ ಮಾಡಿದರು. ಅಗ್ಗ ಮಳೆ ಸುರಿಯುತ್ತಿದ್ದರೂ ಸಾವಿರಾರು ಪ್ರಜೆಗಳು ಅಲ್ಲಿ ಸೇರಿ ಉತ್ಸವವನ್ನು ಬಹು ಆಟಾಟೋಪದಿಂದ ನೆರವೇರಿಸಿದರೆಂದು ತಂತೀ ವರ್ತಮಾನ ಬಂದಿದೆ.

****

ರಷ್ಯಾ ಚಕ್ರವರ್ತಿಯವರು ತಮ್ಮ ಪ್ರಜೆಗಳು ಸೈನ್ಯದ ಇಲಾಖೆಯಲ್ಲಿ ತರವೇತಾಗಿ ನೌಕರಿ ಮಾಡಬೇಕಾದ ಅವಧಿಯನ್ನು ವಿಧಾಯಕ ಮಾಡಿದ್ದಾರೆ. ಕ್ಯಾಗಂಪರೆ—ಶಿಪಾಯಿ ಮತ್ತು ಪಿರಂಗಿ ಸೈನ್ಯಕ್ಕೆ ಸೇರುವವರು ೩ ವರುಷ ಕೆಲಸಮಾಡಬೇಕು, ಇತರ ಶಾಖೆಗಳವರಿಗೆ ೪ ವರುಷ, ರಿಜರ್ವ್ ಸೈನಿಕರಿಗೆ ೭ ರಿಂದ ೧೬ ವರುಷ, ನಾವೆಯ ಸೈನಿಕರಿಗೆ ೫-೭ ವರುಷ, ರಿಜರ್ವ್ ನಾವೆ ಸೈನಿಕರಿಗೂ ೫ ವರುಷ.

****

ದಕ್ಷಿಣ ಅಮೇರಿಕದಲ್ಲಿರುವ ಗಾಟಿಮಾಲಾ ರಾಜ್ಯದವರೂ ಸ್ಯಾನ್ ಸಾಲ್ವೆಡರ್ ರಾಜ್ಯದವರೂ ಈಗ ೨—೬ ವಾರಗಳಿಂದ ಬಹಳ ಭಯಂಕರವಾಗಿ ಕಾದಾಡುತ್ತಿದ್ದರು. ಎರಡು ಕಡೆಗಳಲ್ಲೂ ನೂರಾರು ಮಂದಿ ಹತರಾದರು. ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಮಧ್ಯಸ್ಥಗಾರರಾಗಿ ನಿಂತು ಅವರ ಕದನಗಳನ್ನು ನಿಲ್ಲಿಸಿ, ಅವೆರಡು ರಾಜ್ಯಗಳಿಗೂ ಕರಾರುಮಾಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ.

****

ಸ್ಪೇನ್ ರಾಜ್ಯದ ರಾಜಧಾನಿಯಾದ ಮ್ಯಾಡ್ರಿಡ್ ನಗರದಲ್ಲಿ ಮೊನ್ನೆ ನೂತನ ರಾಜದಂಪತಿಗಳು ಮೆರವಣಿಗೆ ಮಾಡಿಕೊಂಡು ಬರುತ್ತಿದ್ದಾಗ್ಗೆ ಯಾವ ಮನೆಯಿಂದ ಅವರ ಗಾಡಿಯ ಮೇಲಕ್ಕೆ ಮದ್ದಿನ ಗುಂಡು ಎಸೆಯಲ್ಪಟ್ಟಿತೋ ಆ ಮನೆಯನ್ನು ಅರಮನೆಯವರು ಕೊಂಡುಕೊಂಡು ನೆಲಸಮಮಾಡಿ, ಆ ಸ್ಥಳದಲ್ಲಿ ಒಂದು ದೇವಾಲಯವನ್ನು ಕಟ್ಟಿಸಬೇಕೆಂದು ದೊರೆಯ ಮಾತೃಶ್ರೀಯವರು ಗೊತ್ತುಮಾಡಿದ್ದಾರೆ.

****

ರಷ್ಯಾ ಜಪಾನ್ ಯುದ್ಧದಲ್ಲಿ ರಷ್ಯಾ ಸೈನ್ಯಾಧಿಪತಿಯಾಗಿದ್ದು ಬಹಳ ಹೆಸರುವಾಸಿಗೆ ಬಂದಿರುವ ಜನರಲ್ ಲಿನೆವಿಚ್ ಎಂಬಾತನನ್ನು ಈಗ ರಷ್ಯಾ ಗವರ್ನಮೆಂಟಿನವರು ೩ ನೆ ಸೈಬೀರಿಯಾ ರಿಜಿಮೆಂಟಿಂಬ ಸೈನ್ಯಕ್ಕೆ ಅಧಿಪತಿಯನ್ನಾಗಿ ನೇಮಿಸಿರುತ್ತಾರೆ. ಈ ಹುದ್ದೇದಾರನು—ಇಷ್ಟರಲ್ಲೇ ನಾವು ಹಗೆ ತೀರಿಸಿಕೊಳ್ಳುವುದಕ್ಕಾಗಿ ಜಪಾನಿನವರ ಮೇಲೆ ಯುದ್ಧವನ್ನಾರಂಭಿಸುತ್ತೇವೆನ್ನುವುದಕ್ಕೆ ಸಂಶಯವೇ ಇಲ್ಲ ಎಂದು ಹೇಳಿರುತ್ತಾನೆ.

****

ಆಫ್ರಿಕದಲ್ಲಿ ಜರ್ಮನಿಯವರಿಗೆ ಸೇರಿದ ಭಾಗದಲ್ಲಿ ಸೈನಿಕರಿಗೂ ಸ್ವದೇಶಿಗಳಿಗೂ ಈಗ ಕೆಲವು ತಿಂಗಳಿಂದ ಜಗಳ ಕದನಗಳಾಗುತ್ತಿವೆ. ಇದರಲ್ಲಿ ಜರ್ಮನಿ ಸೈನಿಕರಲ್ಲಿ ೧,೭೪೦ ಜನರು ಪ್ರಾಣ ಕೊಟ್ಟರು. ಆದರೆ ಅವರು ೧೭,೦೦೦ ದೇಶೀಯ ಪ್ರಜೆಗಳನ್ನು ಕೈಸೆರೆ ಹಿಡಿದಿದ್ದಾರೆ. ಹಾಟೆಂಟಾಟರೆಂಬ ಸ್ವದೇಶಿಗಳು ಒಂದು ಸ್ಥಳದಲ್ಲಿ ೧೦೦ ಮಂದಿ ಸವಾರರನ್ನು ಬಳಸಿ ಸೆರೆ ಹಿಡಿದರು. ಒಬ್ಬ ಡಾಕ್ಟರನ್ನೂ ಅವನ ಹಿಂಬಾಲಕರಾದ ೩೦ ಮಂದಿಯನ್ನೂ ಕೊಂದುಹಾಕಿದರು.

****

ದಕ್ಷಿಣ ಆಫ್ರಿಕದಲ್ಲಿ ರೈತರು ಬಹಳ ಕಷ್ಟಪಟ್ಟು ವ್ಯವಸಾಯ ಮಾಡುವ ದ್ರಾಕ್ಷೇತೋಟಗಳು ಅನೇಕವಾಗಿರುತ್ತವೆ. ಆದರೆ ಫಲ ಬಿಡುವಾಗ್ಗೆ ಒಂದು ತರಹಾ ಹುಳು ಹತ್ತಿದು ಹಣ್ಣನ್ನೆಲ್ಲಾ ನಾಶಮಾಡುವುದು. ಈಗ ಈ ಹುಳುಗಳನ್ನು ಹಿಡಿದು ತಿಂದು ನಾಶಮಾಡುವಂಥಾ ಕಾಂತಿಮದ ಪಕ್ಷಿ (ಲೇಡಿ ಬರ್ಡ್) ಗಳನ್ನು ಸರ್ಕಾರದವರು ಅಮೇರಿಕದಿಂದ ವಿಲಾಯಿತಿಯ ಮಾರ್ಗವಾಗಿ ದಕ್ಷಿಣ ಆಫ್ರಿಕಕ್ಕೆ ಕಳುಹಿಸಿದ್ದಾರೆ. ಮೊನ್ನೆ ಒಂದು ಸಲವು ಅಂಥಾ ೩೦ ಲಕ್ಷ ಪಕ್ಷಿಗಳನ್ನು ದೊಡ್ಡ ದೊಡ್ಡ ಗೂಡುಗಳಲ್ಲಿಟ್ಟು ಸಾಗಿಸಿಕೊಂಡು ಹೋಯಿತೆಂದು ತಿಳಿದು ಬಂದಿದೆ.

****

ಅಮೇರಿಕದ ಉತ್ತರ ಭಾಗದಲ್ಲಿರುವ ಕೆನಡಾ ಎಂಬ ಇಂಗ್ಲಿಷ್ ರಾಜ್ಯಾಂಗದ ಸರ್ಕಾರದವರು ಅಲ್ಲಿ ಒಂದು ಭಾರೀ ಸೇತುವೆಯನ್ನು ಪ್ರತಿಷ್ಠೆ ಮಾಡುವುದೇ ಮೊದಲಾದ ಕಾರ್ಯಗಳನ್ನು ನಡಿಸಿ, ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ ದಯಮಾಡಬೇಕೆಂದು ವಿಲಾಯಿತಿಯ ಚಕ್ರವರ್ತಿ ಸಾರ್ವಭೌಮರವರಿಗೆ ಆಹ್ವಾನ ಪತ್ರಿಕೆಯನ್ನು ಕಳುಹಿಸಿದ್ದರಷ್ಟೆ. ಈ ಬಿನ್ನಹವನ್ನು ಚಕ್ರವರ್ತಿಯವರು ಒಪ್ಪಿಕೊಂಡು ವಿಲಾಯಿತಿಯಿಂದ ಬಹಳ ದೂರ ಪ್ರಯಾಣ ಮಾಡುವುದು ತಮಗೂ ರಾಜ್ಯಕ್ಕೂ ಸರಿಯಾದದ್ದಲ್ಲವಾದ್ದರಿಂದ ಬರಲಿಕ್ಕಾಗಲಾರದೆಂದು ಜವಾಬು ಕೊಟ್ಟಿದ್ದಾರೆ.

****

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಜನರು ಮನೆಗಳ ಚೊಚ್ಚನ್ನು ಬೀದಿಗಳಿಗೆ ತಂದು ಹಾಕುತ್ತಿದ್ದರು. ಇದನ್ನು ತಪ್ಪಿಸಿ ಕಸತುಂಬುವ ತೊಟ್ಟಿಗಳಿಗೆ ಹಾಕಿಸಬೇಕೆಂದು ಮ್ಯುನಿಸಿಪಾಲಿಟಿಯವರು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಈಗ ಸ್ಕೂಲ್ ಮಕ್ಕಳನ್ನು ಕಾವಲುಗಾರರಂತೆ ಅಧಿಕಾರ ಕೊಟ್ಟು ನೇಮಿಸಿದ್ದಾರೆ. ಮನೆಯ ಜನರಿಗೆ ಕಸಹಾಕುವ ಸ್ಥಳಗಳನ್ನು ತೋರಿಸುವುದೂ ಹಾಗೆ ಹಾಕದೆ ತಪ್ಪಿದವರನ್ನು ಹಿಡಿದು ಅಧಿಕಾರಿಗಳಿಗೆ ಒಪ್ಪಿಸುವುದೂ ಆ ಹುಡುಗರ ಕೆಲಸ. ಸದ್ಯ ೧,೫೦೦ ಹುಡುಗರನ್ನು ಈ ರೀತಿ ನೇಮಿಸಿದ್ದಾರೆ. ಇಷ್ಟರಲ್ಲೇ ಅವರ ಸಂಖ್ಯೆಯನ್ನು ೨೦,೦೦೦ ಕ್ಕೆ ಹೆಚ್ಚಿಸಬೇಕೆಂದು ಗೊತ್ತಾಗಿದೆ.

****

ಪರ್ಷಿಯಾ ರಾಜ್ಯದ ಷಾ ಸುಲ್ತಾನರು ೧೯೦೦ ರಲ್ಲಿ ಯೂರೋಪ್ ಖಂಡದ ರಾಜ್ಯಗಳಲ್ಲಿ ಸಂಚಾರ ಮಾಡಿಕೊಂಡು ಬಂದಾರಭ್ಯ ಅರಮನೆ ಆಸ್ಥಾನದಲ್ಲಿ ಹೆಚ್ಚು ಖರ್ಚು ನಡೆಯುತ್ತಿರುವುದನ್ನೂ ರಷ್ಯಾದವರಿಂದ ಪರ್ಷಿಯಾ ಗವರ್ನಮೆಂಟಿನವರು ಹಣ ಸಾಲವಾದ ಅವರಿಗೆ ಅಧೀನರಾಗುತ್ತಿರುವುದನ್ನೂ, ಪ್ರಜೆಗಳ ಕಷ್ಟನಿಷ್ಠುರಗಳು ದಿನೇದಿನೇ ಹೆಚ್ಚುತ್ತಿರುವುದನ್ನೂ ಅಲ್ಲಿನ ವೈದಿಕ ಮಂಡಲಿಯವರು ನೋಡಿ, ರಾಜ್ಯಭಾರಕ್ರಮಗಳಲ್ಲಿ ಬದಲಾವಣೆಗಳು ನಡೆಯಬೇಕೆಂದು ೩-೪ ವರುಷಗಳಿಂದ ಹೇಳುತ್ತಿದ್ದಾರೆ. ಇದರಿಂದ ಪ್ರಜೆಗಳಲ್ಲಿ ಅಸಮಾಧಾನವಿತ್ತೆಂದು ಹೇಳಬಹುದು. ಕಳೆದ ವಾರ ಅಲ್ಲಿಂದ ಬಂದ ತಂತೀ ವರ್ತಮಾನಗಳೇನೆಂದರೆ—ರಾಜದ್ರೋಹವೆಂಬ ಅಪರಾಧ ಮಾಡಿದ್ದಕ್ಕಾಗಿ ಸುಲ್ತಾನರು ಒಬ್ಬ ದೊಡ್ಡ ಮನುಷ್ಯನಾದ ಗುರುವನ್ನು ಹಿಡಿದು ಸೆರೆಮನೆಗೆ ಕಳುಹಿಸಿದ್ದರು. ಬಹುಜನ ಶಿಷ್ಯರು ಬಂದೀಖಾನೆಗಳಿಗೆ ನುಗ್ಗಿ ಪಹರೆಯವರ ಸಂಗಡ ಕಾದಾಡಿ ಆತನನ್ನು ಬಿಡಿಸಿಕೊಂಡು ಬಂದರು. ತರುವಾಯ ಸರ್ಕಾರಿ ಸೈನಿಕರಿಗೂ ಪ್ರಜೆಗಳಿಗೂ ರಾಜಧಾನಿಯೊಳಗೇ ದೊಡ್ಡ ಕದನವಾಯಿತು. ಹತ್ತಾರು ಮಂದಿ ಹತರಾದರು. ರಾಜಕೀಯ ಬದಲಾವಣೆಗಳು ನಡೆಯಲೇಬೇಕೆಂದು ವೈದಿಕಮಂಡಲಿಯವರು ಕೇಳುತ್ತಿದ್ದಾರೆ. ಷಾ ಸುಲ್ತಾನರು ಪ್ರಜೆಗಳ ಮುಖಂಡರನ್ನು ಕರೆಸಿಕೊಂಡು ಅವರನ್ನು ಸಮಾಧಾನಪಡಿಸಿ ಕಳುಹಿಸಿದರು. ಈಗ ಗಲಭೆಯೆಲ್ಲಾ ನಿಂತು ಪ್ರಜೆಗಳು ನೆಮ್ಮದಿಯಾಗಿರುವರು.

****

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಕಾರ್ಖಾನೆಗಳವರು ಪ್ರಾಣಿಗಳನ್ನು ಕೊಂದು ಅನಿಗೆಮಾಡಿ ಟಿನ್‌ಗಳಿಗೆ ತುಂಬಿ ಆಹಾರ ಪದಾರ್ಥಗಳಂತೆ ವಿಕರಿ ಮಾಡುತ್ತಾರೆ. ಇದನ್ನು ಪ್ರಪಂಚದಲ್ಲೆಲ್ಲಾ ಸೈನಿಕರೂ ದೊಡ್ಡಮನುಷ್ಯರೂ ಕೊಂಡು ತರಿಸಿ ತಿನ್ನುತ್ತಾರೆ. ಆದರೆ ಈಚೆಗೆ ಆ ಕಾರ್ಖಾನೆಗಳಲ್ಲಿ ನಡೆಯುವ ಹೇಸಿಗೆ ಕಾರ್ಯಗಳನ್ನೆಲ್ಲಾ ಒಬ್ಬ ಗ್ರಂಥಕರ್ತನು ನೋಡಿಬಂದು ಅದರ ದೋಷಗಳನ್ನೆಲ್ಲಾ ಎತ್ತಿಹಾಕಿ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದನು. ಈ ಪುಸ್ತಕವನ್ನು ಓದಿದ ಕೂಡಲೇ ಅಮೇರಿಕದವರೂ ಯೂರೋಪ್ಯ ರಾಜ್ಯಗಳವರೂ ದಿಗ್ಭ್ರಮೆ ಹೊಂದಿ, ಅಷ್ಟು ಅಸಹ್ಯಕರವಾದ ಮತ್ತು ವಿಷಕರವಾದ ಪದಾರ್ಥಗಳನ್ನು ಕೊಂಡು ತಿನ್ನುವುದು ಹೇಗೆಂದು ಗುಲ್ಲೆಬ್ಬಿಸಿದರು. ಅಮೇರಿಕದ ಸರ್ಕಾರದವರು ಕೆಲವು ದೊಡ್ಡಮನುಷ್ಯರನ್ನು ನೇಮಿಸಿ ಆ ಕಾರ್ಖಾನೆಗಳಿಗೆ ಕಳುಹಿಸಿ ಅವರಿಂದ ಅಜಮಾಯಿಷಿ ಮಾಡಿಸಿ ರಿಪೋರ್ಟು ತರಿಸಿಕೊಂಡು, ಅದರ ಮೇಲೆ ಆ ಕಾರ್ಖಾನೆಗಳ ಮೇಲೆಲ್ಲಾ ಸರಿಯಾದ ಉಸ್ತುವಾರಿ ಇಟ್ಟು ನೋಡಿಕೊಳ್ಳುವಂತೆ ಏರ್ಪಾಡುಮಾಡಿರುತ್ತಾರೆ. ಆ ಕಾರ್ಖಾನೆಗಳಲ್ಲಿ ಮಹಾರೋಗಹಿಡಿದ ಪ್ರಾಣಿಗಳನ್ನು ಕೊಂದು ಅದರಿಂದ ಆಹಾರ ಪದಾರ್ಥಗಳನ್ನು ಮಾಡಿ ಸುಂದರವಾದ ಟಿನ್ ಡಬ್ಬಿಗಳಲ್ಲಿ ಹಾಕಿ ವಿಕರಿಮಾಡಿ ಕೋಟ್ಯಂತರ ದ್ರವ್ಯವನ್ನು ಸಂಪಾದನೆ ಮಾಡಿಬಿಟ್ಟರು. ಈಗ ಅಪರಾಧಿಗಳೆಂದು ಕಂಡುಬಂದಂಥಾ ಕಂಪನಿಯವರಿಗೂ ಡಾಕ್ಟರುಗಳಿಗೂ ರೈಲ್ವೆ ಕಂಪನಿಯವರಿಗೂ ಭಾರಿ ಭಾರೀ ಜುಲ್ಮಾನೆಯನ್ನೂ ಸಜಾ ಶಿಕ್ಷೆಯನ್ನೂ ಹಾಕಿರುತ್ತಾರೆ.

****

ವಿಲಾಯಿತಿಯಲ್ಲಿ ಪಾರ್ಲಿಮೆಂಟಿಗೆ ಹೆಂಗಸರನ್ನೂ ಮೆಂಬರುಗಳಾಗಿ ಅಂಗೀಕರಿಸಬೇಕೆಂತಲೂ, ಮೆಂಬರುಗಳನ್ನು ಚುನಾಯಿಸುವ ಹಕ್ಕು ಸ್ತ್ರೀಯರಿಗೂ ಕೊಡಬೇಕೆಂತಲೂ ಈಗ ಚರ್ಚೆ ನಡೆಯುತ್ತಿದೆ. ಸ್ತ್ರೀಸಂಘದ ಪಕ್ಷವನ್ನು ಹಿಡಿದು ವಾದಿಸುವುದಕ್ಕೋಸ್ಕರ ಮಿಸೆಸ್ ಬಿಲ್ಲಿಂಗ್ಟನ್ ಎಂಬಾಕೆಯು ವಿಲಾಯಿತಿಯ ಖಜಾನಾ ಭಕ್ಷಿಯವರ ಮನೆಗೆ ಹೋದಾಗ ಪೋಲೀಸಿನವರು ಆಕೆಯನ್ನು ಒಳಕ್ಕೆ ಬಿಡದೆ ತಡೆದರು. ಆಕೆ ಪೋಲೀಸಿನವರ ಮೇಲೆ ಕೈಮಾಡಿದಳೆಂದು ಮೊಕದ್ದಮೆ ಹುಟ್ಟಿ, ಆಕೆಗೆ ೧೦೦ ರೂಪಾಯಿ ಜುಲ್ಮಾನೆ ಇಲ್ಲವೇ ಎರಡು ತಿಂಗಳ ಸಜಾ ಆಯಿತು. ಆದರೆ ಅನೇಕರು ಜುಲ್ಮಾನೆ ಹಣವನ್ನು ಆಕೆಗೋಸ್ಕರ ಕೊಡುತ್ತೇವೆಂದು ಹೇಳಿದರೂ ಆಕೆ ಜುಲ್ಮಾನೆ ಕೊಡುವುದಿಲ್ಲವೆಂದು ಪ್ರತಿಭಟಿಸಿ ಸೆರೆಮನೆಗೆ ಹೋದಳು. ಈ ವರ್ತಮಾನವನ್ನು ಕೇಳಿ ಸ್ತ್ರೀಯರು ಆಕೆಯ ಪಕ್ಷದಲ್ಲಿ ಹೋರಾಡಬೇಕೆಂದು ೫೦೦ ಸಭೆಗಳನ್ನು ಮಾಡಿ, ಸರ್ಕಾರದವರು ಆಕೆಯ ಮೇಲೆ ಶಿಕ್ಷೆ ವಿಧಿಸಿದ್ದು ಅನ್ಯಾಯವೆಂತಲೂ ಕೂಡಲೆ ಆಕೆಯನ್ನು ಬಿಟ್ಟುಬಿಡಬೇಕೆಂತಲೂ ಆ ಖಜಾನಾ ಭಕ್ಷಿಯವರನ್ನು ಕೆಲಸದಿಂದ ತೆಗೆದುಹಾಕಬೇಕೆಂತಲೂ ತೀರ್ಮಾನಮಾಡಿ, ಸರ್ಕಾರಕ್ಕೆ ತಿಳಿಸಿದರು. ಮಿಸೆಸ್ ಲಾರೆನ್ಸ್ ಎಂಬಾಕೆ ಹೇಳುವುದೇನೆಂದರೆ—ಸ್ತ್ರೀಯರಾದ ನಮಗೆ ನ್ಯಾಯವಾದ ಹಕ್ಕುಗಳನ್ನು ಕೊಡದೆಹೋದರೆ ನಾವು ಸುಮ್ಮನಿರುವುದಿಲ್ಲ. ವರ್ತಮಾನ ಪತ್ರಿಕೆಗಳು ನಮಗೆ ಸಹಾಯಮಾಡದಿದ್ದರೆ ನಮ್ಮ ಚೈತನ್ಯ ಕಡಿಮೆಯಾಗುವುದಿಲ್ಲ. ಹತ್ತುಲಕ್ಷ ನಮಗೆ ಬೆಂಬಲವಾಗಿ ನಿಂತಿದ್ದಾರೆ. ಹಣಕಾಸಿಗೇನೂ ಕೊರತೆಯಿಲ್ಲ. ನಮ್ಮಲ್ಲಿರುವ ನೂರಾರುಮಂದಿ ಎರಡು ತಿಂಗಳಲ್ಲ ಎರಡು ವರ್ಷಬೇಕಾದರೂ ಬಂದೀಖಾನೆಯಲ್ಲಿದ್ದು ಬರುವುದಕ್ಕೆ ಸಿದ್ಧರಾಗಿದ್ದಾರೆ. ನಮ್ಮಲ್ಲಿ ಬಹುಮಂದಿ ಇದಕ್ಕಾಗಿ ಪ್ರಾಣಕೊಡುವುದಕ್ಕೂ ಸಿದ್ಧರಾಗಿರುವರು. ಗಂಡಸರು ನಮಗೆ ಸಹಾಯಮಾಡದೆ ಹೋದರೂ ಹೋಗಲಿ, ನಾವು ನಾವೇ ಒಬ್ಬರಿಗೊಬ್ಬರು ಬೆಂಬಲ ಕೊಟ್ಟು ನಿಂತು ಈ ಹಕ್ಕುಪಡೆಯುವ ವಿಷಯದಲ್ಲಿ ಜಯಶೀಲೆಯರಾಗುವ ತನಕ ಹೋರಾಡುತ್ತಾ ಬಂದೇವು ಎಂಬುದೇ.

ತಾಲ್ಲೂಕು ವರ್ತಮಾನಗಳು.

ನೆಲಮಂಗಲ.—ಇಲ್ಲಿನ ಅಮಲ್‌ದಾರ್ ಮೆ॥ ಸುಬ್ರಾಯಸಾಯ್ಯಯವರ ಧರ್ಮಪತ್ನಿ ಅಮ್ಮಣ್ಣಮ್ಮಾಳ್‌ಯವರು ಕೆಲವು ದಿವಸಗಳಿಂದ ಖಾಯಿಲೆಯಾಗಿದ್ದು ತಾ॥ ೧೬ ನೇ ಸೋಮವಾರ ಕಾಲವಾದರು. ಈಕೆಗೆ ಬಡವರಲ್ಲಿ ಕನಿಕರವೂ, ದೇವರಲ್ಲಿ ಭಕ್ತಿಯೂ, ಚಿಕ್ಕ ಮಕ್ಕಳಲ್ಲಿ ಅತ್ಯಂತಪ್ರೀತಿಯೂ ಇದ್ದುದಲ್ಲದೆ ಕೆಲವು ಯೂರೋಪ್ಯರ್ ಫೋರೆಸ್ಟಿನವರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಮಿಸೆಸ್ ಹೆರ್ಲ್, ಇ. ಡರ್‌ಹಿಲ್ ಯವರು ಈ ಅಮ್ಮಣ್ಣಮ್ಮಾಳ್‌ಯವರ ಮೇಲೆ ಅತ್ಯಂತ ಪ್ರೀತಿಯುಳ್ಳವರಾಗಿದ್ದರು. ಇವರು ಮೃತಪಟ್ಟದ್ದಕ್ಕಾಗಿ ನೆಲಮಂಗಲದ ಆಬಾಲವೃದ್ಧರೂ ವ್ಯಸನಪಡುತ್ತಿದ್ದಾರೆ. ದೇವರು ಈ ನಮ್ಮ ಅಮಲ್‌ದಾರ್ರಿಗೂ ಅವರ ಮಕ್ಕಳಿಗೂ ಈ ವಿಯೋಗದುಃಖವನ್ನು ಹೋಗಲಾಡಿಸಿ ಕಾಪಾಡಲೆಂದು ಪ್ರಾರ್ಥಿಸುವೆವು — ತಾ॥ ೧೫ ನೇ ಭಾನುವಾರದಿಂದ ೨೧ ರ ವರಿಗೂ ಹಿಡಿದಮಳೆ ಬಿಡದೆ ಅಹೋರಾತ್ರಿ ಸುರಿಯುತ್ತಾ ಮಲ್ನಾಡು ಮಳೆಯನ್ನು ವಿಡಂಬಿಸುತ್ತಿದೆ. ಹಚ್ಚೆ ಪೈರುಗಳೆಲ್ಲಾ ನೀರು ಹೆಚ್ಚಾಗಿ ಕೆಟ್ಟುಹೋಗುತ್ತಾ ಬಂತು. ಮಳೆ ಇನ್ನೂ ನಿಂತಿಲ್ಲ. ಆದಾಗ್ಯೂ ಈ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಗಿಂತಲೂ ಈ ನೆಲಮಂಗಲ ತಾಲ್ಲೂಕೇ ಆರೋಗ್ಯಕರವಾದ ಪ್ರದೇಶವಾಗಿಯೂ, ಜಲವಸತಿಯಾಗಿಯೂ ಇರುವದು — ಗೊಲ್ಲಹಳ್ಳಿಯಲ್ಲಿ ನಡಿಯುತ್ತಿದ್ದ ಗುರುವಾರ ಸಂತೆಯನ್ನು ತಪ್ಪಿಸಿ ನೆಲಮಂಗಲದಲ್ಲಿ ೩—೪ ವಾರಗಳಿಂದ ಸರ್ಕಾರದವರು ನಡಿಸುತ್ತಿರುವದರಿಂದ ಸಂತೆಯು ದಿನೇದಿನೇ ಹೆಚ್ಚುತ್ತಾ ಬಂದಿದೆ. ವ್ಯಾಪಾರಸ್ತರು ಸಂತೋಷಪಟ್ಟು ಸರ್ಕಾರದವರನ್ನು ವಂದಿಸುತ್ತಾರೆ.

ಚಿಕ್ಕಮಗಳೂರು.—ಇಲ್ಲಿ ಸಾಧಾರಣವಾಗಿ ಸೋನೆ ಮಳೆಯು ಬೀಳುತ್ತಲೇ ಇದೆ. ತಾ. ೧೯—೨೦ ರಲ್ಲಿ ಸುಮಾರು ೨॥ ಇಂಚು ಮಳೆಯಾಗಿದೆ. ಪೈರುಗಳೆಲ್ಲಾ ಚೆನ್ನಾಗಿವೆ. ಕೆರೆ ಕಟ್ಟೆಗಳಿಗೆ ಅಲ್ಪಸ್ವಲ್ಪ ನೀರು ಬರುತ್ತಲಿದೆ. ಗಾಳಿ ಮಳೆ ಛಳಿ ಈಗ್ಗೆ ಹೆಚ್ಚೆಂತಲೇ ಹೇಳಬೇಕು. ಇಂಥಾದ್ದರಲ್ಲಿ ಈ ಊರಿನಲ್ಲಿ ಪ್ಲೇಗ್ ರೋಗವು ತಲೆ ಹಾಕಿ ಸುಮಾರು ಒಂದುವರೆ ತಿಂಗಳಾಯಿತು. ಮಧ್ಯದಲ್ಲಿ ಸ್ವಲ್ಪ ಕಡಿಮೆಯಾಗಿದ್ದು ಮತ್ತೆ ಜೋರಾಗಿ ೧೧ ನೆ ತಾ. ನಿಂದ ೨೦ ನೆ ತಾ. ವರಿಗೆ ಸುಮಾರು ೨೪ ಜನರು ಆ ರೋಗದಿಂದ ಸತ್ತರೆಂದೂ ಹೇಳುತ್ತಾರೆ. ಅನೇಕ ಜನರು ಊರು ಬಿಟ್ಟು ತಮ್ಮ ನೆಂಟರಿಷ್ಟರಿರುವ ಕಡೆಗೂ, ಕೆಲವರು ತಮ್ಮ ಕಾಫೀ ತೋಟಗಳ ಕಡೆಗೂ, ಕೆಲವರು ಗುಡಿಸಲುಗಳಿಗೂ ಹೋಗಿದ್ದಾರೆ. ಗುಡಿಸಲು ಕಟ್ಟಿಕೊಳ್ಳುವ ಬಡಜನರಿಗೆ ಸರ್ಕಾರದವರು ಗಳು ಕವೆಗಳನ್ನು ಕೊಟ್ಟರು. ಈ ಕಾಲದಲ್ಲಿ ಗುಡಿಸಲಿನಲ್ಲಿ ವಾಸ ಮಾಡುವದು ಪ್ರಯಾಸ. ಊರಿನ ಎಲ್ಲಾ ಕಡೆಗಳಲ್ಲಿಯೂ ಇಲಿಗಳು ಬೀಳುತ್ತವೆಂದು ಹೇಳುತ್ತಾರೆ. ಇಂಥಾ ಕಾಲದಲ್ಲಿ ನೆನ್ನೆ ಸಂತೆಗೆ ಬೇಲೂರು ಕಡೆಯಿಂದ ಅಕ್ಕಿ ಗಾಡಿಗಳೂ ಕಡೂರು ಕಡೆಯಿಂದ ಇದೇ ದಿನಸೀ ಗಾಡಿಗಳೂ ಬಾರದೆ ಹೋದದ್ದರಿಂದ ಧಾರಣೆ ಬಹಳ ಹೆಚ್ಚಿತು. ಈ ಟೌನಿನಲ್ಲಿ ದೀಪಗಳು ಸರಿಯಾಗಿ ಉರಿಯುವದಿಲ್ಲವೆಂದೂ ಉರಿದರೂ ಸುಮಾರು ೧೨ ಗಂಟೆಯೊಳಗಾಗಿ ಆರಿ ಹೋಗುತ್ತವೆಂದೂ ಹೇಳುತ್ತಾರೆ. ಇದಕ್ಕೆ ಕಾರಣವೇನೆಂದು ವಿಚಾರಿಸಿದಲ್ಲಿ ಕಂಟ್ರಾಕ್ಟರನ್ನು ಬದಲಾಯಿಸಿದ ಹಾಗೂ ಮೊದಲಿದ್ದ ಕಂಭ ೧ ಕ್ಕೆ ಪಡಿವೈದ್ಯಕಾಲಾಣೆ ದರವನ್ನು ಸನ್ನೊಂದೂವರೆ ಆಣೆಗೆ ಇಳಿಸಿದಂತೆಯೂ ಹೇಳುತ್ತಾರೆ. ಹೀಗೆ ದರವು ಕಮ್ಮಿಯಾದ್ದರಿಂದಲೇ ಪ್ರಕಾಶವೂ ಉರಿಯುವ ಕಾಲವೂ ಕಮ್ಮಿಯಾದವೆಂದು ಹೇಳಬಹುದೇ!

ಚಾಮರಾಜನಗರ.—ಒಂದು ಹದ ಮಳೆ ತಾ॥ ೮ ರಲ್ಲಿ ಚೆನ್ನಾಗಿ ಆದ್ದರಿಂದ ಸ್ವಲ್ಪಮಟ್ಟಿಗೆ ಈ ಕಡೆ ಹವ ಬದಲಾಯಿಸಿರುತ್ತೆ. ಬಿಸಿಲಿನ ಧಗೆ ಕಡಮೆಯಾಗಿದೆ. ರೈತರು ಮಳೆ ನಿರೀಕ್ಷಣೆ ಮಾಡಿ ನಿಷ್ಫಲರಾಗಿ ಉಳಿದು ನಿಟಿರೆದ್ದ ಜೋಳದ ಪೈರುಗಳ ಕೆಲಭಾಗಗಳನ್ನು ಉತ್ತುಬಿಟ್ಟರು. ಉಳಿದ ಜೋಳದ ಪೈರು ಚೇತರಿಸಿಕೊಂಡವು. ಹುಲ್ಲಿನ ನೇರಿಲೆ ಚೆನ್ನಾಗಿರುತ್ತೆ. ಅನೇಕ ಭಾಗಗಳ ರೈತರು ರಾಗಿ ಬಿತ್ತುತ್ತಲಿದ್ದಾರೆ. ತರಿ ಬೆಳೆಮಾಡಲು ನೀರು ಅನುಕೂಲಿಸಲಿಲ್ಲ. ಈಗತಾನೇ ಅಲ್ಲಲ್ಲಿ ಅಲ್ಪಸ್ವಲ್ಪ ನೀರು ಬಂದಿರುವುದಾಗಿ ತಿಳಿಯಬರುತ್ತೆ. ಬೆಳೆಗೆ ಅನುಕೂಲವಿಲ್ಲ. ಜನರು ಕೆಲವು ಕಡೆ ನೀರಿಗೆ ಅಲೆದು ಶ್ರಮ ಪಡುತ್ತಿರುವರು. ಬಡವರನೇಕರು ತಿನ್ನುವುದಕ್ಕಿಲ್ಲದೆ ಶ್ರಮಪಡುವರು. ಕೂಲೀನಾಲಿಯಂತೂ ಸಿಕ್ಕುವುದೇ ಅಪರೂಪ. ಕೆಲವು ಸ್ಥಳಗಳ ಭಾರೀ ರೈತರು ತಮ್ಮಲ್ಲಿರುವ ಆಹಾರವಾದ ದವಸ ಧಾನ್ಯಗಳನ್ನು ಬಡವರಿಗೆ ಮಾರುತ್ತಲೂ, ಸಾಲಕೊಡುತ್ತಲೂ ಕಾಪಾಡುತ್ತಿರುವರು. ಇದು ತುಂಬಾ ಸ್ತೋತ್ರಾರ್ಹವಾಗಿರುತ್ತೆ. ದನಗಳಿಗೆ ತಿನ್ನುವುದಕ್ಕೆ ಕಸಕಡ್ಡಿಗೆ ತುಂಬಾ ತಾಕೊಂದರೆಯಾಗಿದೆ. ನಂಜನಗೂಡು ಕಡೆ ದನಗಳಿಗಿಂತ ಉತ್ತಮ

ಸ್ಥಿತಿಯಲ್ಲಿರುವದು —ವಾಗಿ ರೂಪಾಯಿಗೆ ೧೧—೧೧॥ ಸೇರೂ ಜೋಳ ೯—೧೦ ಸೇರೂ, ಅಕ್ಕಿ ೭॥—೭ ಸೇರೂ ಸಿಕ್ಕುವುದು ಈ ಕಾಲದಲ್ಲೀ ವರ್ತಕರು ಸಂತೆ ಪಸ್ತಿನ ಸ್ಥಳಗಳಲ್ಲಿ ಮೋಸಮಾಡುವುದಾಗಿ ಬಡವರು ಹೇಳಿಕೊಳ್ಳುತ್ತಾರೆ ಮುನ್ಸಿಪಾಲಿಟಿ ಅಧಿಕಾರಿಗಳು ಗಮನಕೊಡಬೇಕಾಗಿದೆ ಮಳೆ ಬಿದ್ದುದರಿಂದ ಬೀದಿಗಳು ನಿರ್ಮಲವಾಗಿರುತ್ತವೆ ಕೆಲವು ಕಡೆ ಮ್ಯುನಿಸಿಪಾಲಿಟಿಯವರು ಹೊಸದಾಗಿ ಬರೀ ಲಾಂದ್ರಕಂಭಗಳನ್ನು ಮಾತ್ರ ನಿಲ್ಲಿಸಿರುವರು. ದೊಡ್ಡ ಅಂಗಡಿಬೀದಿಯ ಚೌಕದಲ್ಲಿ ಲಾಂದ್ರವನ್ನು ಹಚ್ಚುತ್ತಾ ಇಲ್ಲ ಅಂಗಡಿಗಳ ಬೆಳಕೇ ಸಾಕೆಂದು ಯೋಚಿಸಿರುವ ಹಾಗೆ ಕಾಣುತ್ತೆ ಮ್ಯುನಿಸಿಪಾಲಿಟಿಯವರು ಹಾಳು ಜಾಗಗಳ ವಿಷಯದಲ್ಲಿ ಗಮನ ಕೊಟ್ಟು ಗಿಡ ಕೀಳಿಸಬೇಕು.

ಸಂಜನಗೂಡು.—ಟವರ್ನಲ್ಲಿ ೯ ದಿವಸಗಳಿಂದ ಹೆಚ್ಚಾಗಿ ಮಳೆ ಬರುತ್ತಾ ಇದೆ ಹೊಳೆಯಲ್ಲಿ ಮಾಮೂಲಿಗಿಂತ ಪ್ರವಾಹ ಬಂದು ತೋಪುಗಳೂ ಮುಗ್ಗುರುತ್ತೆ ಈಗ ಮಳೆಯಾಗಿರುವುದರಿಂದ ಭತ್ತ ರಾಗಿ ವಗೈರೆ ಪಿಸಸಿಗಳಿಗೆ ಅನುಕೂಲ ಬರಾವಾಗಿರತಕ್ಕ ದಿನಸಿಗಳ ಕ್ರಯ ಅಗ್ಗವಾಗಬೇಕಾಗಿದೆ ಆದರೂ ಈ ತಾಲ್ಲೋಕಿನ ಕೆಲವು ಗ್ರಾಮಾಂತರಗಳಲ್ಲಿ ರೈತರು ತಿನ್ನಲು ಗತಿಯಿಲ್ಲದೆ ಕ್ಷಾಮಪೀಡಿತರಾಗಿ ಕಷ್ಟಪಡುತ್ತಾರೆ. ಈ ಟವರ್ನಲ್ಲಿ ಈಗ್ಗೆ ೨೦ ದಿನಗಳಿಂದಲೂ ಕಲರಾ ಉಪದ್ರವು ಕಾಣಿಸಿಕೊಂಡು ಈ ವರೆಗೆ ೧೦—೧೫ ಮಂದಿ ಕಾಲವಾದರು ಈಗಲೂ ಕೆಲವು ಸಂದಿಗಳಲ್ಲಿ ರಾತ್ರೆಯ ಕಾಣುವದು ಮಳೆ ಬಿದ್ದಿರುವದರಿಂದ ಕ್ಷೀಣವಾದರೆಂದು ತೋರುತ್ತೆ.—ಈ ಟವರ್ನಲ್ಲಿ ಶಿವಪೂಜಾಸ್ವಾಮಿಗಳೆಂಬವರು ಸಾಕುತ್ತಿದ್ದ ಬಸವನು ಕಾಯಿಲೆ ಬಿದ್ದು ಮೃತಪಟ್ಟಿತು ಈ ಬಸವನನ್ನು ಸ್ವಾಮಿಗಳು ತುಂಬಾ ಭಕ್ತಿ ಪ್ರೀತಿಗಳಿಂದ ಬಹಳ ಚನ್ನಾಗಿ ಸಾಕಿದ್ದರು ಇದು ಕಾಯಿಲೆ ಆದಲಾಗಾಯ್ತು ಸ್ವಾಮಿಗಳು ತುಂಬಾ ಕೊರಗಿದರು ಸತ್ತಕೂಡಲೆ ಬಸವನನ್ನು ಬಂಡಿ ಮೇಲೆ ಕೂರಿಸಿ ಬಹಳವಾಗಿ ಹೂವಿನಿಂದ ಅಲಂಕಾರ ಮಾಡಿ ಪೀತಾಂಬರಗಳನ್ನು ಹೊದಿಸಿ ವಾದ್ಯದ ಸಮೇತ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿಸಿ ಚಾಮುಂಡೇಶ್ವರಿ ದೇವಸ್ಥಾನದ ಸಮೀಪದಲ್ಲಿ ಅದನ್ನು ಸಮಾಧಿ ಮಾಡಿಸಿದರು. ಆ ಸ್ಥಳದಲ್ಲಿ ಒಂದು ಮಂಟಪವನ್ನು ಕಟ್ಟಿಸುತ್ತಾರೆಂದು ವರ್ತಮಾನವಿದೆ.—ರಾತ್ರಿ ಕಾಲದಲ್ಲಿ ಬೀದಿಗಳಲ್ಲಿ ದೀಪಗಳು ಲಾಂದ್ರ ದೀಪಗಳು ಸಾಲದ್ದಾಗಿವೆ

ತಿಪಟೂರು.—ಸುಮಾರು ಎರಡು ತಿಂಗಳಿಂದಲೂ ಇಲ್ಲಿ ಹರಡಿಕೊಂಡಿರುವ ಚಳಿಜ್ವರವೆಂಬ ಕಾಯಿಲೆಯು ಮತ್ತೊಂದು ರೀತಿ ಪರಿಣಮಿಸಿದೆ ಒಂದು ಸಾರಿ ಬೇತಿಸಿಕೊಂಡವರನ್ನೇ ಪುನಃ ಪುನಃ ಮಗ್ಗಲು ಮಾಡುತ್ತದೆ ಮತ್ತು ೨ ೩ ವಾರಗಳೊಳಗಾಗಿ ಶರೀರವನ್ನೆಲ್ಲಾ ಬೆಳ್ಳಗೆ ಮಾಡುತ್ತದೆ ಊಟವೂ ರುಚಿಸುವುದಿಲ್ಲ. ತಲೆನೋವು ಸುಮಾರು ಪ್ಲೇಗ್ ರೋಗದಂತೆ ಕಾಣಿಸಿ, ಕೆಲವರಿಗೆ ವಿಪರೀತ ವಾಂತಿ ಭೇದಿಯಾಗಿ ನಿತ್ರಾಣಮಾಡುತ್ತದೆ ಮತ್ತು ಕೆಲವರಿಗೆ ರಕ್ತ ಮಿಶ್ರವಾದ ಭೇದಿಯಾಗಿ ಪ್ರಾಣಹಾನಿಯಾಗುತ್ತದೆ ಅಂತೂ ಬೇರೆ ಬೇರೆ ಕಾರಣಗಳಿಂದ ಕಳೆದ ವಾರ ೩ ೪ ಜನ ದೊಡ್ಡವರು ಸತ್ತರೆಂದು ವರ್ತಮಾನ ಬಂದಿರುತ್ತದೆ. ಒಂದೆರಡು ಏನೇನೋ ಔಷಧಿ ಮಾಡಿದರೂ ಗುಣವಾದ ಮೇಲೆ ಭಯವಿಲ್ಲವೆಂದು ರೋಗಿಗಳಿಗೆ ಧೈರ್ಯ ಹೇಳುತ್ತಾರೆ. ಮುಂದೆ ನೋಡಬೇಕು.—ಊರು ಮುಂದಿನ ಹನುಮಂತರಾಯನ ಗುಡಿಯನ್ನು ಕ್ರಮಪ್ರಕಾರ ಕಟ್ಟಲಿಲ್ಲವಾದ್ದರಿಂದ ರೋಗ ಬಂದಿದೆ ಎಂದು ಕೆಲವರು ಕಟ್ಟು ಮಾಡಿಕೊಂಡಿದಾರಂತೆ ಆದರೆ ಕಟ್ಟು ಬಿಟ್ಟುಕೊಂಡಿರುವವರ ಪಾಡೇನೆಂದು ಜನರು ಚಿಂತಿಸುತ್ತಿದ್ದಾರೆ ಐದು ಜನ ಅಮ್ಮನವರು ಬಂದಿದ್ದಾರೆಂದು ಕೆಲವರು ಹೇಳುವರು ಮೆ॥ ಮುನಿಸಾಮಿ ಪಿಳ್ಳೆಯವರು ಸೋಡಾ ಮೆಷೀನ್ ಇಟ್ಟು ಸೋಡಾ ತಯಾರು ಮಾಡುವದರಿಂದ ಅನೇಕ ರೋಗಿಗಳಿಗೆ ಪ್ರಯೋಜನವಾಯಿತು.—ಊರಲ್ಲಿ ಬೀದಿಯಲ್ಲಿರುವ ಮ್ಯುನಿಸಿಪಲ್ ಬಾವಿಯನ್ನು ಇನ್ನೂ ಆಳಕ್ಕೆ ಇಳಿಸಿದರೆ ಬೇಕಾದಷ್ಟು ನೀರು ಬರುತ್ತದೆ. ಜನರಿಗೆ ಸುಖವಾಗುತ್ತದೆ ಆದರೆ ಮ್ಯುನಿಸಿಪಲ್ ಮೆಂಬರುಗಳಿಗೆ ಈ ವಿಷಯ ಬೇಕಿಲ್ಲವೆಂದು ತೋರುತ್ತದೆ ನಮ್ಮ ಹೊಸ ಅಮಲ್ದಾರರಾದರೂ ಬಡಪ್ರಜೆಗಳ ಮೇಲೆ ದಯವಿಟ್ಟು ಈ ಬಾವಿಯಲ್ಲಿ ನೀರು ಬರುವಂತೆ ಮಾಡ್ಯಾರೆಂದು ಹಾರೈಸುತ್ತಾರೆ.—ಒಂದು ತಿಂಗಳ ಕೆಳಗೆ ಹಾತ್ ಬೇಡಿ ಸಹಿತ ಪರಾರಿಯಾಗಿದ್ದ ಮಾದಿಗರ ಉಗ್ರಸಂಜೀವನನ್ನು ತಂಗಡಿ ಕಂಟ್ರಾಕ್ಟರ್ ಮಹಮ್ಮದ್ ದಸ್ತಗೀರ್ ಸಾಹೇಬರು ಕಳೆದ ೯ ನೇ ತಾ ನಿಟ್ಟೂರು ಸಮೀಪದ ನಾಗನ ಗುಟ್ಟೆಯಲ್ಲಿ ಪತ್ತೆಮಾಡಿ ಪೋಲೀಸಿಗೆ ಒಪ್ಪಿಸಿದರೆಂದು ತಿಳಿಯಿತು ಇಂಥಾ ಸಾರ್ವಜನಿಕ ಸೇವೆ ಮಾಡುವ ಪ್ರಜೆಗಳಿಗೆ ಸರ್ಕಾರದವರು ತಕ್ಕ ಪ್ರೋತ್ಸಾಹ ಮಾಡಬೇಕು

ದಾವಣಗೆರೆ.—ಕಳೆದ ೨೨ ನೇ ತಾ ಬೆಳಿಗ್ಗೆ ೯ ಗಂಟೆಗೆ ಡಿವಿಜನ್ ಕಮಿಷನರ್ ಮೆ॥ ರಂಗಸ್ವಾಮಿಯ್ಯಂಗಾರ್ಯರವರ ಸವಾರಿ ಈ ದಾವಣಗೆರೆ ಟವರ್ಗೆ ದಯಮಾಡಿಸಿತು ಅವರು ಇಲ್ಲಿನ ಸಬ್ ಡಿವಿಜನ್ ಸಾಹೇಬರಾದ ಮೆ॥ ಬಾಬು ರಾಮೇಗೌಡರ ಜೊತೆಯಲ್ಲಿ ಟವರ್ ನೋಡಿ ಸಂಧ್ಯಾ ಇಲ್ಲಿನ ಸರ್ಕಾರಿ ಕೆಲಸಗಳನ್ನು ನೋಡಿದ ಮೇಲೆ ಸಾಯಂಕಾಲ ೬ ಗಂಟೆಗೆ ಟವರ್ ಹಾಲಿನಲ್ಲಿ ಈ ಟವರ್ನ ಮ್ಯುನಿಸಿಪಲ್ ಮೆಂಬರುಗಳು ಮತ್ತು ಅನೇಕ ಸದ್ಗೃಹಸ್ಥರು ಸ್ಕೂಲು ಮಕ್ಕಳು ಆ ರನ್ನು ಆಲಿಂಗನ ಮಾಡಿಕೊಂಡು ಯಳಂದೂರು ನಾಟಕದವರಿಂದ ಸಂಗೀತ ಗೋಷ್ಠಿ ನಡೆಸಿದರು ವಾದ್ಯ ಮಾಡಿಸಿದ್ದು ಮಾತ್ರವಲ್ಲದೆ ವಿಶೇಷವಾಗಿ ಸುಶ್ರೀಮನ ವಿದ್ಯುತ್ ದೀಪದಿಂದ ಆ ಸಭೆಯಲ್ಲಿದ್ದ ಎಲ್ಲಾ ಜನರ ಮನಸ್ಸುಗಳನ್ನು ಆಕರ್ಷಿಸುವಂತೆ ಮಾಡಿದರು ಆದ ನಂತರ ಇಲ್ಲಿನ ವೆಸ್ಲಿಯನ್ ಮಿಷನ್ ಸ್ಕೂಲಿನ ಹೆಣ್ಣುಮಕ್ಕಳು ಮಹಾರಾಜರ ಮೇಲಿನ ಪದ್ಯವನ್ನು ಸಭೆಯವರಿಗೆ ಇಂಪಾಗುವಂತೆ ಹಾಡಿದರು ರೆವಿನ್ಯೂ ಕಮಿಷನರವರಿಗೆ ಹಾರ ತುರಾಯಿ ಗಂಧ ತಾಂಬೂಲಾದಿಗಳು ಒಪ್ಪಿಸಲ್ಪಟ್ಟ ಮೇಲೆ ರೆವಿನ್ಯೂ ಕಮಿಷನರು ಸಭೆಯವರಿಗೂ ಮ್ಯುನಿಸಿಪಲ್ ಮೆಂಬರುಗಳಿಗೂ ತಕ್ಕ ಮಾತುಗಳನ್ನು ಹೇಳಿ ಸಭೆಯನ್ನು ಮುಕ್ತಾಯ ಮಾಡಿದರು.—ಇಲ್ಲಿ ಒಂದು ವಾರದಿಂದಲೂ ಒಳ್ಳೆ ಮಳೆಯಾಯಿತು ಜನರು ವ್ಯವಸಾಯದಲ್ಲಿ ನಿರತರಾಗಿದಾರೆ. ಇಷ್ಟು ಮಳೆ ಬಂದಾಗ್ಯೂ ಇಲ್ಲಿ ಪೇಟೆ ಧಾರಣೆ ಮಾತ್ರ ಇಳಿಯಲಿಲ್ಲ.—ಸಂತೆಯ ಅಕ್ರಮವನ್ನು ಇನ್ನೂ ಸರ್ಕಾರದವರು ಸರಿಮಾಡಲಿಲ್ಲ. ಮಸಸ್ಸೀ ಸೇರುಗಳು ಮತ್ತು ಕೊರತೆ ಉಂಟು ಒಂದು ರೂಪಾಯಿಗೆ ಅಕ್ಕಿ ತಂದು ಮನೆಯಲ್ಲಿ ಅಳೆದರೆ ಒಂದು ಸೇರು ಕಮ್ಮಿ ಬರುತ್ತದೆ ಇದರ ವಿಷಯದಲ್ಲಿ ತಾಲ್ಲೋಕ್ ಅಮಲ್ದಾರರು ತಕ್ಕ ಬಂದೋಬಸ್ತು ಮಾಡುವರೆಂದು ನಂಬುತ್ತೇನೆ. ಈ ಸಂತೆಯಲ್ಲಿ ಕೆಲವರು ಜೂಜು ಆಡುತ್ತಾರೆ ಇದನ್ನು ಪೋಲೀಸಿನವರು ನೋಡುತ್ತಾ ಇದ್ದಾರೆಯೇ ಹೊರತು ಅವರನ್ನು ದಂಡಿಸುವದಿಲ್ಲ ಇದರಿಂದ ಇವರೇ ಅವರಿಗೆ ಅವಕಾಶ ಕೊಟ್ಟಿರುವರೆಂದು ನನಗೆ ತೋರುವದು. ಪೋಲೀಸ್ ಇನ್ಸ್ಪೆಕ್ಟರು ತಕ್ಕ ಬಂದೋಬಸ್ತು ಮಾಡಬೇಕಾಗಿದೆ—ಮುನಿಸಿಪಲ್ ಸ್ವೀಪರ್ ಬಂಡಿಗಳನ್ನು ... ಯತಕ್ಕ ... ಗಳ ಗತಿಯನ್ನು ಹೇಳುವದು ಅಸಾಧ್ಯ ಪ್ರತಿ ಒಂದು ಬಂಡಿಯಲ್ಲಿಯೂ ೧೦೦ ಸೇದಿನ ಚೀಲಗಳನ್ನು ೧೨—೧೫ ಹಾಕುತ್ತಾರೆ ಅವು ಎಳೆಯಲಾರದೆ ಎಳೆಕೊಂಡು ಹೋಗುತ್ತವೆ. ಈ ಊನವರೆಲ್ಲಾ ಲಿಂಗಾಯತರಾಗಿದ್ದಾಗ್ಯೂ ಇವುಗಳಿಗೆ ಕರುಣೆ ತೋರಿಸಬೇಕೆಂಬುವ ಬಂದೆ ಒಬ್ಬರಿಗೂ ಇಲ್ಲ. ಸರಕಾರದವರಾದರೂ ಇದಕ್ಕೆ ತಕ್ಕ ನಿಗಾಕೊಟ್ಟು ಬಂಡಿಗೆ ಇಷ್ಟೇ ಮೂಟೆಗಳನ್ನು ಹಾಕುವಂತೆ ನಿಗದಿ ಮಾಡುವರೆಂದು ನಂಬಿ ಸೂಚಿಸಿರುತ್ತೇನೆ.

ಬೆಂಗಳೂರು.—ಈ ತಿಂಗಳು ೧೯ನೆ ತಾ ಬೆಳಿಗ್ಗೆ ಬೆಂಗಳೂರು ಚಿಕ್ಕಪೇಟೆ ಪೋಸ್ಟ್ ಆಫೀಸು ಬಳಿ ಇಟ್ಟಿರುವ ಎಂಬಲು ತೊಟ್ಟಿಯಲ್ಲಿ ಯಾರೋ ದುಷ್ಟ್ಯಾತ್ಮರು ಆಗತಾನೇ ಹುಟ್ಟಿದ ಕೂಸನ್ನು ಒಂದು ರೈಲ್ ಪ್ಯಾಗಿನಲ್ಲಿಟ್ಟು ಬಿಸಾಟು ಹೋಗಿದ್ದರು ಮ್ಯುನಿಸಿಪಾಲಿಟಿ ಕಚೇರಿ ಜಾಗಿಯ ಗಾಡಿಯವನು ಆ ಎಂಬಲ ಗುಂಡಿಯ ಸಮೀಪ ಗಾಡಿ ನಿಲ್ಲಿಸಿ ಕಸವನ್ನು ತುಂಬಲು ಆ ತೊಟ್ಟಿಯನ್ನು ತೆಗೆಯಲು ಆ ಗುಂಡಿಯಲ್ಲಿ ರೈಲ್ ಚೀಲವು ಬಿದ್ದಿದ್ದದ್ದನ್ನು ನೋಡಿ ಯಾರೋ ಕಳ್ಳರು ಬಡವೆ ವಸ್ತುಗಳನ್ನು ತಂದು ಹಾಕಿರಬಹುದೆಂದು ಯೋಚಿಸಿ ತೆಗೆದು ನೋಡುವಲ್ಲಿ ಒಂದು ಹೆಣ್ಣುಕೂಸು ಮಾತ್ರ ಸತ್ತು ಬಿದ್ದಿತ್ತು ಬಂಡಿಯವನು ಕೂಡಲೇ ಸಮೀಪದಲ್ಲಿದ್ದ ಪೋಲೀಸಿಗೆ ತಿಳಿಸಲು ಅವರು ಬಂದು ನೋಡಿ ಆಸ್ಪತ್ರೆಗೆ ಕಳುಹಿಸಿಕೊಂಡು ಹೋಗಿ ಡಾಕ್ಟರಲ್ಲಿ ಪರೀಕ್ಷೆ ಮಾಡಿಸಲು ಆ ಶಿಶುವಿನ ಎದೆಗೆ ಚಾಕುವಿನಿಂದ ತಿವಿದು ಇದ್ದ ಸಂಗತಿ ತಿಳಿಯಲಾಯ್ತು ಮ್ಯಾಜಿಸ್ಟ್ರೇಟು ರೂಬರೂ ಬಂದು ಇದು ಶವ ಪರೀಕ್ಷೆ ಆಗುವ ಪ್ರಮೇಯವಿದ್ದದ್ದರಿಂದ ಬೆಳಿಗ್ಗೆ ೭ ಗಂಟೆ ಲಾಗಾಯ್ತು ರಾತ್ರಿ ೩ ಗಂಟೆ ವರೆಗೆ ಅನ್ನ ನೀರಿಲ್ಲದೆ ಕಾದುಕೊಂಡು ಇದ್ದನು ಆ ಶಿಶುವನ್ನು ಕಂಡದ್ದಕ್ಕೆ ಬಂಡಿಯವನಿಗೆ ಇಷ್ಟು ಕಷ್ಟವಾಯಿತು ಮಗು ಯಾರದೆಂದು ವಿಚಾರ ಮಾಡಲಾಗಿ ಒಬ್ಬ ವಿಧವೆಯು ಗರ್ಭ ಧರಿಸಿ ಮಗು ಹೆತ್ತದ್ದರಿಂದ ಆ ಮಗುವನ್ನು ಕೊಂದು ತಂದು ಈ ಗುಂಡಿಗೆ ಹಾಕಿದಳೆಂದು ತಿಳಿಯಿತು. ಹೆಂಗಸರಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಗಂಡಂದಿರು ಸತ್ತುಹೋಗುವ ಕಾರಣ ಈ ರೀತಿ ಅಕೃತ್ಯಗಳು ನಡಿಯುತ್ತವೆ ಬಾಲವಿಧವೆಯರಿಗೆ ಪುನರ್ವಿವಾಹ ಮಾಡುವದು ರೂಢಿಯಾದರೆ ಲೋಕದಲ್ಲಿ ಇಂಥಾ ಪಾಪಕೃತ್ಯಗಳು ನಡಿಯಲಾರವು

ಮೈಸೂರು ಮಹಾರಾಜರವರ ೩ ನೇ ಇನ್ಫೆಂಟ್ರಿ ಸುಬೇದಾರ್ ವರದರಾಜುಲು ಯವರು ಎಂಟೇ ದಿವಸ ಚಳಿಜ್ವರ ಬಂದು ಜುಲೈ ೧೭ ನೇ ಮಂಗಳವಾರ ದೈವಾಧೀನರಾದರು ಇವರು ಮೊದಲು ಬ್ರಿಟಿಷ್ ರಜಿಮೆಂಟಿನಲ್ಲಿ ಸಾರ್ಜಂಟಾಗಿದ್ದು ಎರಡು ಯುದ್ಧಗಳಿಗೆ ಹೋಗಿ ಜಯಶೀಲರಾಗಿ ಗೌರ್ನಮೆಂಟಿನಿಂದ ಎರಡು ಮೆಡ್ಲುಗಳನ್ನು ಪಡೆದುಕೊಂಡು ನಂತರ ಪೆನ್ಷನಿನ ಮುಖಾಂತರವಾಗಿ ಮೈಸೂರ್ ಮಹಾರಾಜಾ ಇನ್ಫೆಂಟ್ರಿಯ ಡ್ರಿಲ್ ಸಾರ್ಜೆಂಟ್ ಉದ್ಯೋಗ ಸೇರಿದರು. ಇವರುಗಳು ಡ್ರಿಲ್ಲಿನಲ್ಲಿಯೂ ಸ್ವಭಾವದಲ್ಲಿಯೂ ಒಳ್ಳೆ ಪ್ರಖ್ಯಾತಿ ಹೊಂದಿದವರಾಗಿ ಕಂಡುಬಂದದ್ದರಿಂದ ಲೇಟ್ ಶ್ರೀ ಚಾಮರಾಜ ಒಡೆಯರವರು ತಮ್ಮ ಕುಮಾರರಿಗೆ ಕವಾಯಿ ಮುಂತಾದವುಗಳನ್ನು ಕಲಿಸುವದಕ್ಕೆ ಇಟ್ಟುಕೊಂಡರು ನಂತರ ನಮ್ಮ ಮಹಾರಾಜರವರು ಇವರನ್ನು ಜಮೇದಾರಿಗೂ ನಂತರ ಸುಬೇದಾರಿಗೂ ಬಡ್ತಿ ಮಾಡಿದರು ಇವರನ್ನು ದಫನ್ ಮಾಡಲು ಹೊರಟಾಗ ಎಲ್ಲಾ ಸಂಗಡಿಗ ಜನಗಳೂ ಸೇರಿ, ಅನೇಕ ತರವಾದ ವಾದ್ಯಗಳಿಂದಲೂ, ಇಂಗ್ಲೀಷ್ ವಾದ್ಯಗಳಿಂದಲೂ, ಹರಿಭಜನೆ ಮುಂತಾದವುಗಳಿಂದಲೂ ರಿಜಿಮೆಂಟಿನ ಎಲ್ಲಾ ಆಫೀಸರುಗಳೂ ಕೂಡಿದವರಾಗಿ ವಿಜೃಂಭಣೆಯಿಂದ ಸಾಗಿಸಿಕೊಂಡು ಹೋಗಿದ್ದರು ಇವರು ಮರಣವಾದ ದಿವಸ ಬಹುಜನರು ಸಂತಾಪಪಟ್ಟರು ಮರಣ ಕಾಲದಲ್ಲಿ ೬೫ ವಯಸ್ಸಾಗಿದ್ದಿತು ಇವರಿಗೆ ತುಂಬಾ ಮಕ್ಕಳುಮರಿಗಳು ಇರುತ್ತಾರೆ. ಆ ಮಕ್ಕಳ ಗೋಳಾಟವನ್ನು ವರ್ಣಿಸಲಶಕ್ಯವಾಗಿರುತ್ತೆ

ತುಂಕೂರು.—ಒಂದು ವಾರದಿಂದಲೂ ಅಬಾರ ಗಾಳಿಯಿಂದ ಮೋಡ ಮುಚ್ಚಿಕೊಂಡು ಜಿಟಿಮಳೆಯಾಗುತ್ತಿದೆ ಇದರಿಂದ ವ್ಯವಸಾಯಕ್ಕೂ, ಗೋಗ್ರಾಸಕ್ಕೂ ಬಹಳ ಅನುಕೂಲವೆಂದು ತೋರುತ್ತೆ. ಹವಾ ಬದಲಾಯಿಸಿ ಶೀತವಾಗಿರುವದರಿಂದ ತತ್ಸಂಬಂಧವಾದ ಕಾಯಿಲೆಗಳು ಉಂಟಾಗಿವೆ ಧಾರಣಿವಾಸಿಗಳು ರಾಗಿ ಖಂಡಿ ೧ ಕ್ಕೆ ೬೭—೬೮ ರಂತೆಯೂ, ಭತ್ತ ಖಂಡಿ ೧ ಕ್ಕೆ (ಎರಡು ಖಂಡಗ) ೬೦—೬೫ ರಂತೆಯೂ ಇತರ ಜಿನಸುಗಳು ಅದೇ ರೀತಿ ಜಾಸ್ತಿಯಾಗಿವೆ ಪ್ರತಿ ಸಂತೆಯಲ್ಲಿಯೂ ಮಾಮೂಲ್ ಜಾಗದಲ್ಲಿ ಮಾಂಸದ ಅಂಗಡಿಗಳು ಸಾಲದೆ ಮಾಂಸದ ಅಂಗಡಿಯು ಜೋಡಿಯಾಗಿ ಇರುತ್ತವೆ ಇದು ಬಹು ಜನರಿಗೆ ತುಂಬಾ ಅಸಹ್ಯಕರವಾಗಿರುತ್ತೆ. ಈ ಅಂಗಡಿಗಳನ್ನು ಪ್ರತ್ಯೇಕವಾಗಿ ಇಡುವ ಏರ್ಪಾಡು ಮಾಡಿಸಬೇಕಾಗಿ ಈಗಲೂ ಮ್ಯುನಿಸಿಪಾಲಿಟಿಯವರ ಗಮನಕ್ಕೆ ತಂದಿರುತ್ತೇವೆ.— ಇಲ್ಲಿ ಕೆಲವು ದೊಡ್ಡ ಮನುಷ್ಯರು ಅಯಾ ಮತಸ್ಥರಿಗೆ ಅನುಕೂಲಿಸುವಂತೆ ಊರಿಗೆ ಬಹಳ ಸಮೀಪವಾಗಿಯೂ ಕೆರೆಯ ಹಿಂಭಾಗದಲ್ಲಿರುವ ಗದ್ದೆ ಪ್ರದೇಶದಲ್ಲಿ ಒಂದೇ ಕಡೆ ಸ್ಮಶಾನವನ್ನು ಏರ್ಪಡಿಸುವದಕ್ಕಾಗಿ ಚಳುವ ಎತ್ತುತ್ತಿದ್ದಾರೆ ಇದು ಸರ್ವೋತ್ತಮವಾದದ್ದೇ ಸರಿ ಆದರೆ ಆ ಪ್ರದೇಶವು ಊರಿನ ಜನರಿಗೆ ಅನಾರೋಗ್ಯಕ್ಕೆ ಕಾರಣವಾಗುವದಿಲ್ಲವೇ ? ಇದನ್ನು ಅವರು ಮೊದಲು ಆಲೋಚಿಸುವದು ಅವಶ್ಯವಾಗಿದೆ ಕಳೆದ ವಾರ ಟವರ್ಗೆ ಸಮೀಪವಾದ ಜಾಡೇನಹಳ್ಳಿಯಲ್ಲಿ ಒಬ್ಬ ಆಗಸನು ತಂಬಾಕು ಮದ್ದು ಸತಿ ಮಂಜುವೆಲ್ಲಾ ಸುಟ್ಟುಹೋಗಿ ನರಳುತ್ತಿದಾನೆ ತುಂಕೂರಿಗೆ ಮೂರು ಮೈಲಿಯಲ್ಲಿರುವ ಬೆಳಗುಂಬ ಗ್ರಾಮದ ಒಬ್ಬನು ಸಾಲಮುರಕ್ಕೆ ನೇಣು ಹಾಕಿಕೊಂಡು ಸತ್ತುಹೋಗಿದ್ದನು ಇದು ಸರ್ಕಾರಕ್ಕೆ ತಿಳಿದು ಪೋಲೀಸ್ ಆಫೀಸರು ಅಲ್ಲಿಗೆ ಹೋಗಿ ಹೆಣವನ್ನು ತೆಗೆಸಿಕೊಂಡು ಬಂದು, ದರಿಂದ ಆಪರೀಕ್ಷೆಮಾಡಿಸಿ ಮಹಜರು ಮಾಡಿಕೊಂಡು ದಫನ್ ಮಾಡಿದರು ಮೃತಪಟ್ಟವನು ಇಂಥಾವನೆಂದಾಗಲಿ ಆತನ ವಾಸಸ್ಥಳವಾಗಲಿ ಇದುವರೆಗೂ ತಿಳಿದುಬಂದಿಲ್ಲ ಸರ್ಕಾರದವರು ತಲಾಷ್ ಮಾಡುತ್ತಿದಾರೆ. ಇಲ್ಲಿನ ಕೆಲವು ರೈಲ್ ನೌಕರರು ಕಳೆದವಾರ ಒಂದು ಸಾಯಂಕಾಲ ಟ್ರಾಲಿ ಮೇಲೆ ೬೦ ಗಳ ೫ ಗಂಟೆಯ ಮೇಲೆ ಬರುವ ರೈಲು ಮೈಲಿ ಹಾಸಲು ಹೋಗಿ ಹಿಂತಿರುಗಿ ಬರುವಾಗ ದಿನ್ನೆಯಲ್ಲಿ ಟ್ರಾಲಿ ವೇಗ ಕಡಮೆಯಾಗಲು ಹಿಡಿದು ಕೊಂಡಿದ್ದ ನಂಜನೆಂಬ ಆಳು ವೇಗ ನೂಕುವದಕ್ಕೆ ಇಳಿದನು. ಆತನ ಚಪ್ಪಲಿ ಆದರ ಕೈಸಿಡಿಗೆ ಸಿಕ್ಕಿಕೊಂಡು ಕೆಳಕ್ಕೆ ಬಿದ್ದು ಕಾಲು ಚಕ್ರಕ್ಕೆ ಸಿಕ್ಕಿ ನಗ್ಗಿಹೋಯಿತು. ಗಾಯದ ಆತನ ಕಾಲನ್ನು ಈಗ ಆಸ್ಪತ್ರೆಯಲ್ಲಿ ತೆಗೆದುಹಾಕಿ ಗುಣಪಡಿಸುತ್ತಿದಾರೆ ರೈಲ್ವೆ ಕಂಪನಿಯವರು ಕಾಲು ಕಳೆದುಕೊಂಡಿರುವ ಆ ಬಡನೌಕರನಿಗೆ ಜೀವನೋಪಾಯಕ್ಕೆ ಏನಾದರೂ ಕೊಡುವ ಸಂಭವ ಇದೆ — ಈ ಊರು ಚಿಕ್ಕಪೇಟೆ ಲಕ್ಷ್ಮೀಕಾಂತ ಸ್ವಾಮಿ ದೇವಸ್ಥಾನದ ಹಿಂಭಾಗದ ಲೈನಿನಲ್ಲಿ ರಿಟೈರ್ಡ್ ಡಿಪುಟಿ ಕಮಿಷನರ್ ಮೆ॥ ಎಸ್ ನಾರಾಯಣಯ್ಯನವರ ಅಣ್ಣನವರು ಮೆ॥ ಶ್ರೀನಿವಾಸರಾವ್ ವಾಸಿಸುತ್ತಿದಾರೆ. ಇವರು ಪರಸ್ಥಳದ ಕೆಲವು ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೂ ಅನ್ನಾದ್ಯಾದಿಗಳಿಗೂ ಸಹಾಯಕರಾಗಿರುತ್ತಾರೆ ಹೀಗಿರುವಾಗ ನೆನ್ನೆ ತಾ ೧೯ನೇ ಗುರುವಾರ ಸಾಯಂಕಾಲ ಸುಮಾರು ೭॥ ಗಂಟೆಯಲ್ಲಿ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಅವರ ಮನೆಯ ಮೇಲೆ ಪಾಠಗಳನ್ನು ಅಭ್ಯಾಸ ಮಾಡುತ್ತಿದ್ದರು ಇವರಲ್ಲಿ ಮಹಾದೇವನೆಂಬ ಹದಿನೈದು ವರ್ಷದ ಹುಡುಗನು ಓದುತ್ತಾ ಕುಳಿತಿದ್ದನು ಮೇಲ್ಮಾಳಿಗೆಯ ಕಿಟಕಿಯಿಂದ ಕೆಳಕ್ಕೆ ಬಿದ್ದನು ಕಟಕಟ ಎಂಬ ಶಬ್ದವಾದ ಕೂಡಲೇ ಹುಡುಗರು ಬಹಳ ಭಯಾಕ್ರಾಂತರಾಗಿ ಜಾಡಿ ಬಂದು ಜ್ಞಾನವಿಲ್ಲದೆ ಮಹಡಿ ಬಾಗಿಲಿನಿಂದ ಕೆಳಕ್ಕೆ ಧುಮುಕಿದ್ದರು ಅಷ್ಟರಲ್ಲಿ ಮೇಲ್ಮಾಳಿಗೆಯ ಕಿಟಕಿ ಸಹಿತ ಮುರಿದು ಬಾಗಿಲಿನಿಂದ ಕೆಳಕ್ಕೆ ಬಿತ್ತು ಬೀಳುವಾಗ ಬಿದ್ದ ಹುಡುಗನ ಎಡ ಕಾಲಿಗೆ ಬಿದ್ದು ತುಂಬಾ ಗಾಯವಾಯಿತು. ಮತ್ತೊಬ್ಬನಿಗೆ ಬೆನ್ನಿನ ಮೇಲೂ, ಇನ್ನೊಬ್ಬನಿಗೆ ಕಾಲಿನ ಮೇಲೂ ಗಾಯವಾಯಿತು. ಅಷ್ಟರಲ್ಲಿ ಈ ಅಪಾಯದಿಂದ ತಪ್ಪಿಸುವದಕ್ಕೆ ಮೆ॥ ಶ್ರೀನಿವಾಸರಾಯರು ಪ್ರಯತ್ನಿಸುವಾಗ ಅವರಿಗೂ ತಲೆಗೆ ಏಟು ತಗಲಿ ಗಾಯವಾಗಿದೆ. ಅನಂತರ ಇವರು ಅವನ್ನು ಲಕ್ಷಿಸದೆ ಕೆಲವರ ಸಹಾಯದಿಂದ ಆ ಹುಡುಗರನ್ನು ಸಂತೈಸಿ ಚಿಕಿತ್ಸಾರ್ಥವಾಗಿ ಆಸ್ಪತ್ರೆಗೆ ಕಳುಹಿಸಿದರು ಮೆ॥ ಶ್ರೀನಿವಾಸರಾಯರು ಬಹು ಕುಟುಂಬಿಗಳಾಗಿಯೂ ಪರೋಪಕಾರಿಗಳಾಗಿಯೂ ಇದಾರೆ ಇಂಥಾವರನ್ನು ಈ ಅಪಾಯದ ಭಗವಂತನು ತಪ್ಪಿಸಿದ್ದಕ್ಕಾಗಿ ಎಲ್ಲರೂ ಸಂತೋಷಪಡುವರು

ಮೈಸೂರು ಗೆಜಟು ಸಂಗ್ರಹ.

ಅ॥ ಕಮಿಷನರ್ ಮೆ॥ ಟಿ. ಚೆನ್ನಕೃಷ್ಣನವರಿಗೆ ಕೊಟ್ಟಿದ್ದ ... ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ.

ಡೆಪ್ಯುಟಿ ಕಮಿಷನರ್ ಮೆ॥ ಎಂ. ಎಸ್. ನಾರಾಯಣ ರಾಯರಿಗೆ ಒಂದು ತಿಂಗಳು ಇಪ್ಪತ್ತ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ರಜಾ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು

ಎಕ್ಸೈಸ್ ಇಲಾಖಾ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ... ಗೋಪಾಲೈಯ್ಯಂಗಾರ್ಯರಿಗೆ ಜೂಲೈ ೩ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ರಜಾ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು.

ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ಸಿ ಕೃಷ್ಣರಾಯರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ರಜಾ ಪೂರೈಸಿದಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು.

ಕಾಲೀಸ್‌ಪೇಟೆಗೆ ವರ್ಗಾಯಿಸಲ್ಪಟ್ಟಿರುವ ಡಿಪ್ಟಿ ಅಮಲ್ದಾರ್ ಬಿ. ಪಿ. ಹಮೀದ್ ಷರೀಫ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಚನ್ನಪಟ್ಟಣ ಸಬ್ ರೆಜಿಸ್ಟ್ರಾರ್ ಎಂ. ಟಿ. ನರಸಿಂಹ ಐಯ್ಯಂಗಾರ್ಯರು ಕೋಲಾರ ಪೇಟೆ ಸಬ್ ತಾಲ್ಲೋಕಿನ ಡಿಪ್ಟಿ ಅಮಲ್ದಾರ್ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮೆ॥ ಎಚ್. ಎಚ್ ಸ್ಪೆನ್ಸರ್ ಯವರು ಮೆ॥ ಪಿ. ದೇವರಾಜ ಅರಸಿನವರಿಂದ ಬೆಂಗಳೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಜೂಲೈ ೯ ರಲ್ಲಿ ವಹಿಸಿಕೊಂಡಿದಾರೆ

ರಾವ್ ಬಹದ್ದೂರ್ ಪಿ ಎಸ್. ಕೃಷ್ಣರಾವ್, ಬಿ ಎ., ಬಿ ಎಲ್ ಯವರು ಮೈಸೂರು ಛೀಫ್ ಕೋರ್ಟಿನಲ್ಲಿ ಜಡ್ಜಿ ಕೆಲಸಕ್ಕೆ ಜೂಲೈ ೧ ರಲ್ಲಿ ದಾಖಲಾಗಿರುತ್ತಾರೆ.

ಮೆ॥ ಸಿ ನಾರಾಯಣರಾಯರನ್ನು ಎಕ್ಸ್ಟ್ರಾ ಅ॥ ಕಮಿಷನರ ದರ್ಜೆಯಲ್ಲಿ ೪ ರಿಂದ ೩ ನೆ ಕ್ಲಾಸಿಗೆ ಫೆಬ್ರುವರಿ ೬ ರಿಂದ ಬಡ್ತಿ ಮಾಡಲ್ಪಟ್ಟಿದೆ

ಅಸಿಸ್ಟೆಂಟ್ ಪ್ರೊಫೆಸರ್ ಮೆ॥ ಬಿ. ಶ್ರೀನಿವಾಸೈಯ್ಯಂಗಾರ್ಯರು ಮೇ ೧೬ ರಿಂದ ಅ॥ ಕಂಟ್ರೋಲರಾಗಿ ನೇಮಕವಾಗಿರುತ್ತೆ.

ಮುಂದೆ ಹೇಳುವ ಅಮಲ್ದಾರ್ ಮ್ಯಾಜಿಸ್ಟ್ರೇಟರಿಗೆ ಫಾರೆಸ್ಟ್ ರೆಗ್ಯುಲೇಷನ್ಗೆ ಸಂಬಂಧಪಡುವ ಅಪರಾಧಗಳನ್ನು ಹಿಡಿದು ತನಿಖೆ ಮಾಡಲು ಅಧಿಕಾರ ಕೊಟ್ಟಿದೆ.—ಹೊನ್ನಾಳಿಯ ಮೆ॥ ಕೃಷ್ಣಾಜಿರಾವ್ ... ಯವರು, ಸೊರಬದ ಮೆ॥ ಎಸ್ ಕೃಷ್ಣಪ್ಪನವರು, ನಗರದ ... ಬಿ ನಂಜಿಂಗರಾಯರು, ತೀರ್ಥಹಳ್ಳಿಯ ಮೆ॥ ಕೆ. ಶ್ರೀನಿವಾಸರಾಯ...

ವಿಶೇಷವಾರ್ತೆಗಳು.

ಹಿಂದುಸ್ಥಾನದ ಕೆಲವು ಪ್ರಖ್ಯಾತ ಪುರುಷರು ಈಗ ವಿಲಾಯತಿಗೆ ಹೋಗಿರುತ್ತಾರೆ ಪ್ರಮುಶೋಲೆ, ರಾಜಪಿಟ್ಲಾ ರಾಜರೂ ಬರ್ದವಾನ್ ಮಹಾರಾಜಾಧಿರಾಜರೂ, ಸರ್ ಪಿರೋಜಷಾ ಮೆಹೆಟ ಎಂಬ ಪಾರ್ಸಿ ಘೋಷ್ ಯವರೇ ಮೊದಲಾದವರು ಅಲ್ಲಿ ನಾರ್ತ್‌ಬ್ರೂಕ್ ಸೊಸೈಟಿ ಬೋಧ ಸ್ನೇಹಕೂಟವು ಏರ್ಪಾಡಾಗಿದೆ ಹಿಂದುಸ್ಥಾನದವರಲ್ಲಿ ಯೂ ಇಂಗ್ಲೀಷರಲ್ಲೂ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಅಭಿವೃದ್ಧಿಪ ಡಿಸಬೇಕೆಂಬುದೇ ಈ ಸಂಘದವರ ಪರಮೋದ್ದೇಶವಾಗಿರುವುದು ಮೇಲ ಂಡ ಮಾನ್ಯರು ಈ ಸಂಘಕ್ಕೆ ಮೆಂಬರರಾಗಿ ಸೇರಿರುತ್ತಾರೆ

ಹೌಸ್ ಆಫ್ ಲಾರ್ಡ್ಸ್ ಎಂಬ ವಿಲಾಯತಿಯ ಪಾರ್ಲಿಮೆಂಟಿ ನಲ್ಲಿ ಮೆಂಬರುಗಳು ಸಭೆಸೇರಿ, ಹುಡುಗರು ಸಿಗರೆಟ್ಟುಗಳನ್ನು ಸೇದದಂ ತೆ ನಿಷೇಧಿಸತಕ್ಕ ಕಾನೂನನ್ನು ಕುರಿತು ಚರ್ಚೆ ಮಾಡುತ್ತಿದ್ದಾ ಗ, ಹದಿನಾರು ವರ್ಷಕ್ಕಿಂತ ಕಡಿಮೆ ಇರುವ ಹುಡುಗರು ಹೊಗೆಸೊಪ್ಪನ್ನು ಸೇದುವುದು ದೇಹಕ್ಕೆ ಬಹಳ ಕೆಟ್ಟದ್ದೆಂದು ದೊಡ್ಡ ಡಾಕ್ಟರುಗಳು ಅ ಭಿಪ್ರಾಯಪಟ್ಟಿದ್ದಾರೆ ಈ ಕಾನೂನು ಜಾರಿಯಲ್ಲಿ ಬಂದರೆ ಏನಾಗು ವದೆಂದರೆ—ಅಂಗಡಿಯವರು ಹುಡುಗರಿಗೆ ಚುಟ್ಟಾ ಬೀಡಿಗಳನ್ನು ಬಿ ಕ್ರಿಮಾಡತಕ್ಕದ್ದಲ್ಲ ಬೀದಿ ಸೇದುವ ಹುಡುಗರನ್ನು ಅವರ ಪ್ರೋಷ ಕರನ್ನು ಹಿಡಿದು ಶಿಕ್ಷಿಸುವರು ಪೋಲೀಸಿನವರು ಅಂತಾ ಹುಡುಗರ ಹತ್ತಿರದ ಹೊಗೆಸೊಪ್ಪು, ಬೀಡಿ ಸಿಗರೆಟ್ಟುಗಳನ್ನು ಕಿತ್ತುಕೊ ಳ್ಳುವರು ಆದ್ದರಿಂದ ಪಾರ್ಲಿಮೆಂಟಿನವರು ತಪ್ಪದೆ ಹೇಳಿದ ಪ್ರಯ ತ್ನ ... ಮುಂಬಯಿ ಸನ್ನ ನಮ್ಮ ಹಿಂದುಸ್ಥಾನದ ಹುಡುಗರಿಗೂ ಕಾರ್ಯಕಾರಿಯಾಗಬೇಕು

ಕಳೆದ ... ಕರ್ಜನ್ ರವರು ವಿಲಾಯತಿಯಲ್ಲಿ ಕಾಲ ವರೆದು ... ವರ್ತಮಾನ ... ಸುಮಾರ ... ಕಾಯಿಲೆಯಾಗಿ ... ದೈವ ಸಂಕಲ್ಪವೆಂದು ... ಲಾರ್ಡ್ ಕರ್ಜನ್ ... ಸೇರಿ ... ತತ್ಕಾಲ ... ಜನಗಳ ... ಪ್ರಸಿದ್ಧ ... ಕರ್ಜನ್ ... ಹತ್ತಿರ ... ಸುಮಾನ್ಯ ... ಅತಿ ಕಾರ್ಯ ... ಸ್ವಭಾವ ... ಕರ್ಜನ್‌ರವರ ... ತಮಗೆ ... ಸಂದರ್ಭಗಳಲ್ಲಿ ... ದೇವರ ... ಜನಗಳ ... ನಗರಗಳಲ್ಲಿ ಶೀಘ್ರಕಾಲದಲ್ಲಿ ಬಗವಾನ್ ... ದರ್ಶನಗಳನ್ನು ... ನಿರ ...

ಬಾತ್ಮೀದಾರರಿಗೆ ನೋಟೀಸು

ಕೆಲವು ವಿಷಯಗಳಲ್ಲಿ ವರ್ತಕರು ಬಾತ್ಮೀಗಳಿಗೆ ನಾವು ನಿಗಾ ಮಾಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ಪತ್ರಿಕೆಗೆ ಕ ಳುಹಿಸತಕ್ಕ ಸರಿಯಾದ ಕೆಲವು ವಿಷಯಗಳನ್ನು ಓದಿ ತಿಳಿಸತಕ್ಕ ದು, ಮತ್ತು ಬಾತ್ಮೀಯನ್ನು ಕಾಗದದ ಒಂದು ಪಕ್ಕಗಳಲ್ಲೇ ಬರೆ ಯಕೂಡದು ಇಂತಪ್ಪುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮೀದಾರರು ಪಮನ ಅಭಿಪ್ರಾಯಗಳಿಗೆ ನಾವು ಜೋಖೇದಾರರು ಪ್ರುದಿಲ್ಲವೆಂಬಂಶವನ್ನು ಸಕಲರೂ ತಿಳಿದಿರಬೇಕು —ಎಡಿ.

ಕರೆಸ್‌ಪಾಂಡೆನ್ಸ್.

ಗೋವುಗಳಿಗೆ ಔಷದ ಬೇಕು

ಸ್ವಾಮಿ

ನಮ್ಮಲ್ಲಿರುವ ಹಸುವಿಗೂ ಅದರ ಕರುವಿಗೂ 'ಪಿಡುಗು' ಗಳೆಂಬ ರೋಗವೊಂದು ಪಕ್ಷಕವಾಗಿ ಶರೀರದ ಚರ್ಮಕ್ಕೆ ಅಂಟಿಕೊಂಡಿವೆ ಅಗಾ ಗಲೇ ಅವುಗಳನ್ನು ತೊಳೆದರೂ ಕಡಮೆಯಾಗುವುದಿಲ್ಲ ಇವುಗಳನ್ನು ಕಳೆಯಬೇಕಾದರೆ ಉತ್ತಮವಾದ ಔಷದವು ಯಾವುದಾದರೂ ಇದೆ ಯೆ? ಅಥವಾ ಬೇರೆ ಯಾವ ಉಪಾಯವನ್ನು ಅನುಸರಿಸಿದರೆ ಹೋ ಗುವುದು? ತಾವಾಗಲೀ ತಮ್ಮ ವಾಚಕ ಮಹಾಶಯರಲ್ಲಿ ಗೋಸ್ವಾಸ್ಥ್ಯ ತಿಳಿದವರು ಯಾರಾದರೂ ಆಗಲೀ ಸಮುತ್ತರವನ್ನು ದಯಪಾಲಿಸಿ ಸತ್ಕೀರ್ತಿಗಳನ್ನು ಪಡೆಯಬೇಕೆಂದು ಪ್ರಾರ್ಥಿಸುವ

ಅಕ್ಕೂರ್ ಚಿಕ್ಕಣ್ಣ.

ಔದಾರ್ಯ ವರ್ತ್ತ

ಸ್ವಾಮಿ

ರಾಜಧಾನಿಯಲ್ಲಿ ವೆಸ್ಲಿಯನ್ ಮಿಷನ್ ಧರ್ಮಶಾಲೆಯು ಕಟ್ಟಿಸುತ್ತಿರುವ ಆ ಸ್ಪತ್ರೆ ವಿಷಯವಾಗಿಯೂ ಅದಕ್ಕೆ ತಗಲುವ ಮೊಬಲಗಿನ ವಿಷಯ ವಾಗಿಯೂ ಪರ್ಮಿಷನ್ನರಿಂದ ಸದರಿ ಕಟ್ಟಡಕ್ಕಾಗಿ ದ್ರವ್ಯ ಸಹಾಯ ಅವ ಶ್ಯವಾಗಿದೆ ಎಂಬದರ ವಿಷಯವಾಗಿಯೂ ಹಿಂದೆ ಒಂದೆರಡು ಸಲ ಪ್ರಕಟಿಸಿದ್ದೇವಷ್ಟೆ

ನಮ್ಮ ಕೇಳಿಕೆಯ ಪ್ರಕಾರ ಇದುವರಿವಿಗೂ ಚಂದಾ ಹಣವನ್ನು ಕೊಟ್ಟವರ ಪೈಕಿ ಲೇಟ್ ಕಮಾಂಡೆಂಟ್ ಮೈಸೂರು ಪ್ಯಾಲೆಸ್ ಗಾರ್ಡ್ ನ ಮಹಮ್ಮದ್ ಬದ್ರುದ್ದೀನ್ ಖಾನ್ ಬಹದ್ದೂರ್ ಎಂಬ ಪ್ರಸಿದ್ಧ ರಾದವರು ಕಳೆದ ವಾರ ೧೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ ದೊಡ್ಡ ಮನುಷ್ಯರ ಉದಾರಗುಣವನ್ನು ಈ ಪಟ್ಟಣದಲ್ಲಿಯೂ ಬೇರೆ ಕಡೆಗಳಲ್ಲಿಯೂ ಇರುವಂಥ ಧರ್ಮಿಷ್ಠರು ಅನುಸರಿಸಿ, ಸ್ವ ಹೆಸರುಗಳನ್ನು ಶಾಶ್ವತಗೊಳಿಸುವರೆಂದು ಅಪೇಕ್ಷಿಸುವ

T. L

ದೆವ್ವ ಬಿಡಿಸುವುದು

ಅಯ್ಯಾ,

ನಾನು ನೆನ್ನೆ ಶುಕ್ರವಾರ ಚಾಮರಾಜನಗರದ ತಾಲ್ಲೂಕು ಮದ ಡಳ್ಳಿ ಹೋಬಳಿ ಸ್ವಕೆ ಕೋಟಂಬಳ್ಳಿ ಕಡೆ ರೈತರ ಮತ್ತು ಜಾನುವಾ ರುಗಳ ಸ್ಥಿತಿಯನ್ನು ನೋಡಲು ಹೋಗಿದ್ದೆನು ಆ ದಿವಸ ಅಮಾವಾಸ್ಯೆ ಯಾಗಿತ್ತು ಸಂಧ್ಯಾಕಾಲದಲ್ಲಿ ಮನೆಯ ಹತ್ತಿರ ತಿರುಗಾಡುತ್ತಿರು ವಲ್ಲಿ ಊರೊಳಗೆ ಸ್ವಲ್ಪ ಗಲಭೆ ಕೇಳಿಸಿತು ಏನೆಂದು ಹೋಗಿ ನೋಡ ಲು ಅಲ್ಲಿ ಒಂದು ಮನೆಯ ಹತ್ತಿರ ಜನ ಗಲಭೆಯಾಗಿತ್ತು ಒಬ್ಬಳಿಗೆ ದೆವ್ವ ಹಿಡಿದಿದೆಯೆಂದೂ, ಮಂತ್ರವಾದಿಗಳು ಬಿಡಿಸುತ್ತಿರುವರೆಂದೂ ಜನ ರಿಂದ ತಿಳಿಯಬಂದು ನೋಡಬೇಕೆಂಬ ಕುತೂಹಲದಿಂದ ಒಳಹೋಗ ಲು ಬಿಚ್ಚು ಜೋಲಾಡುತ್ತಿರುವ ಕೂದಲುಗಳಿಂದ ಒಬ್ಬ ಹೆಂಗಸು ಕುಳಿತಿರಲೂ ಇಬ್ಬರು ಮೂವರು ಮಂತ್ರವಾದಿಗಳಿಂದ ಪರಿವೃತಳಾಗಿದ್ದ ಳು ಮಂತ್ರವಾದಿಗಳು ಪಟಪಟ ಶಬ್ದದಿಂದ ಚಲ್ಲಾಕಡಿಯುತ್ತಾ ಆರ್ಭ ಟ ಮಾಡುತ್ತಿದ್ದರು ದೆವ್ವ ಹಿಡಿದವಳ ಮುಂದೆ ಚಿತ್ರತರವಾಗಿ ರಂಗ ವಲ್ಲಿ ಹಾಕಿದ್ದರು ನಂತರ ಮಾಡತಕ್ಕ ಕೆಲಸಗಳನ್ನು ಮಾಡಿದರು. ಆ ದೆವ್ವವು ಕೇಳಿದ ಮಿಠಾಯಿ, ಎಲೆ ಅಡಿಕೆ, ಸಕ್ಕರೆ, ಫಲಾಹ, ಅನ್ನ ವಸ್ತ್ರಂಗಳನ್ನು ಉಡಿಕೊಟ್ಟರು ದೆವ್ವವು ಒಂದು ಕೆಲವು ಕೆಳಗೆಯೊಳ ಗಾಗಿ ಬಿಟ್ಟು ಹೋರಟುಹೋದ ಹಾಗೆ ತಿಳಿಯಬಂತು ಮಂತ್ರವಾದಿಗೆ ... ರೂಪಾಯಿ ಸಂದಿರು ಎಂತಹ ದೆವ್ವ! ಈ ಮಧ್ಯೆ ನಡೆದ ಸಂಗ ತಿಯನ್ನು ವಾಚಕರಿಗೆ ತಿಳಿಸಲು ಕೂತೂಹಲಪಡುತ್ತೇನೆ ದೆವ್ವಕ್ಕೆ (ಕಾಣದ್ದನ್ನು ಹೇಳಲು) ಬೇರೆ ಚಿಕ್ಕ ಮನೆಗೆ ಹೋಗಬೇಕೆಂದು ಮಂತ್ರವಾದಿಯು ಹೇಳಿದ್ದಕ್ಕೆ ಮನೆಯವರು ಒಪ್ಪದೆ ಸಂಗದ ಒಬ್ಬ ನನ್ನು ಕರೆದು ಹಾಗೆ ತಿಳಿಸಿದರ ಮಂತ್ರವಾದಿಯು ಒಪ್ಪದವನಾ ದರು. ಅವನ ಜಬರ್ದಸ್ತಿ ದ ಒಳಕೆ ಕ್ರರು ಅಲ್ಲಿ ವಿಚಾರಿಸುವಲ್ಲಿ ಆ ಹೆಂಗಸು ಅತ್ತೆ, ಮಾವ ಗಂಡನಿಂದ ಹಿಂಸೆಯಿಂದ ತನಗೆ ಬೇಕಾದ ತಿಂಡಿ ಅನ್ನ ಸಿಗುವಂತಿಲ್ಲವೆಂದೂ, ಒಪ್ಪಿ ಆ ರೀತಿ ಮಾಡಿದೆನೆಂತಲೂ, ಯಾರಿಗೂ ಹೇಳಕೂಡದೆಂತಲೂ ಬೇಡಿಕೊಂಡಳು ನೋಡಿದಿರಾ ಇ ಳ್ಳಿ ಮಕ್ಕಳ ದೆವ್ವ! ಎಂದು ಆಗ ಎದ್ದು ದೆವ್ವವಾಟವೆ ಮಾಡುವುದು! ಆ ದಿವಸ ಕಾಳೆನಂಬಿದವರ್ಗೂ ಮಾಡಿಗಿದ್ದ ಪ್ರೇತ ಅರ್ಧ ರೂಪಾಯಿಯು ದೆವ್ವ ಆಗ ಹೋಯಿತು ಜಾಗ, ... ಕಾಲದಲ್ಲಿ ಅಂತ ... ಮಂತ್ರವಾದಿಗಳಿಗೆ ಅತ್ರ ... ಎಂದು ...

ಬಾವಿಯ ಕಳುವು ಮುಂತಾದ್ದು.

ಮಂಗಳೂರು ಕಣ್ಣಿಂ ಕಾಟ

ದಕ್ಷಿಣ ಕನಡಾ ಜಿಲ್ಲಾ ಮಂಗಳೂರು ತಾಲ್ಲೂಕು ಕಣಬಾ ಕೋ ಟೆಯ ... ಮಾರ್ಗದ ಮಧ್ಯೆ ... ನಡುವೆ ಇರುವ ... ಮಠದ ಅಂಗಡಿ ಪಟವಾಕರ ಮಗ ... ನಿವಾಸ ... ಮನೆಗೆ ... ತಾ॥ ೧೧ ನೇ ... ಮಂಗಳವಾ ರ ರಾತ್ರಿ ಪಂಚಿ ... ನಾಳೆಯೂ ... ತ್ತನಲ್ಲಿ ಸುಮಾರು ೫ ಜನ ಕಳ್ಳರು ವೇಷವಲ್ಲದೆ ... ಮು ಖಕ್ಕೆ ಬಿಳೇ ಕಪ್ಪು ತರದ ಬಣ್ಣಗಳನ್ನು ... ನಾನಾ ರಂದ ಒಳಗೆ ನ್ನು ನುಗ್ಗಿದರು ... ಹಾಗೆ ... ಮನೆ ... ಮನೆಯ ಗಂಡಸರೆಲ್ಲರೂ ಬಾವಿಯಲ್ಲಿ ಮಲಗಿದ್ದರು ಅವರಿಗೆಲ್ಲಾ ನಿದ್ರೆ ಬಿದ್ದಿತ್ತು ಆಗ್ಗ ಈ ಕಳ್ಳರು ... ಇರುವ ಎರಡು ನಾಯಿಗಳ ನ್ನು ಕೊಂದು ... ಮಲಗಿದ್ದವರನ್ನು ಚನ್ನಾಗಿ ಕಟ್ಟಿದರು ಅವರ್ಜೇ ಮಾಡಿ ಅವರೆಲ್ಲರನ್ನು ಬಂದು ಕೋಣೆಯೊಳಗೆ ಹಾಕಿದರು. ಇದನ್ನು ನೋಡಿ ಒಳಗಿದ್ದ ... ಮಕ್ಕಳೂ ಬೊಬ್ಬೆ ಹಾಕಲಿಕ್ಕೆ ಪ್ರ ರಂ ಭಿಸಿದರು ಆಗ್ಗ ಕಳ್ಳರು ಮಕ್ಕಳನ್ನು ಹೆಂಗಸರನ್ನೂ ಒಂದೊಂದು ಕಂಭಕ್ಕೆ ಕಟ್ಟಿ ಹಾಕಿ ಮಕ್ಕಳನ್ನೆಲ್ಲಾ ಒಂದು ಕೋಣೆಯೊಳಗೆ ಹಾಕಿ ಒಳಗಿದ್ದ ಪೆಟ್ಟಿಗೆಯನ್ನು ಒಡೆದು ಅದರಲ್ಲಿದ್ದ ಚಿನ್ನದ ನಾನಾ ತರದ ನ ಗಗಳನ್ನೂ ನೋಟುಗಳನ್ನೂ ನಗದು ರೂಪಾಯಿಗಳನ್ನೂ ಒಟ್ಟಿಗೆ ಸುಮಾರು ೪ ಸಾವಿರ ರೂಪಾಯಿ ಬಾಳುವ ಜಿನಸುಗಳೆಲ್ಲಾ ತೆಗೆದು ಪಲಾಯನ ಮಾಡಿದ್ದಾರೆ ಅಲ್ಲಿ ಸುಮಾರು ... ಕೋರ್ಟ್ ಅಕ್ಕಿ ಮುಡಿ ಗಳು ದಾಸ್ತಾನು ಇದ್ದವು. ಅದನ್ನು ಮುಟ್ಟಲೇ ಇಲ್ಲ ಆವಾಗ್ಗೆ ಮ ಳೆಯೂ ಬಿರುಗಾಳಿಯೂ ಬೀಸುವದರಿಂದಲೂ ಒಾಕಿಯವರ ಮನೆ ಅರ್ಧ ಫರ್ಲಾಂಗು ದೂರ ಇರುವದರಿಂದಲೂ ಇವರು ಬೊಬ್ಬೆ ಹಾಕಿ ದ್ದು ಯಾರಿಗೂ ಕೇಳಲಿಲ್ಲ ಬೆಳಗಾಗುತ್ತಲೇ ಎಲ್ಲರೂ ಬಂದು ನೋ ಡಿದ್ದಲ್ಲಿ ಒಬ್ಬ ಗಂಡಸಿಗೆ ಜಕಮಾಗಿ ... ಗಾಯಗಳೂ ಬಹಳ ಇದ್ದ ವು ಇವರನ್ನು ಎಲ್ಲರೂ ತನಿಕೆಮಾಡಿ ವೆನ್ಲಾಕ್ ಆಸ್ಪತ್ರೆಗೆ ತೆಕ್ಕೊಂ ಡು ಹೋಗಿದ್ದಾರೆ ಈತನು ಸುಮಾರು ಆಗುವದು ಬಹಳ ಕಷ್ಟವಂತೆ. ಒಾಕಿಯವರಿಗೇನೋ ವಿಶೇಷ ಏನು ಅಪಾಯ ಆಗಲಿಲ್ಲ ಕಳ್ಳ ರನ್ನು ಹಿಡಿಯುವದಕ್ಕೋಸ್ಕರ ಪೋಲೀಸಿನವರು ತನಿಕೆಯಲ್ಲಿ ಇದ್ದಾರೆ ಈ ಕಳ್ಳರ ಕಾಟವನ್ನು ಕೇಳಿ ಊರಿನವರೆಲ್ಲರೂ ಗಾಬರಿ ಪಡುತ್ತಾರೆ.

ಭಾವಿಯು ಕುಸಿದು ಬಿದ್ದದ್ದು

ವೃತ್ತಾಂತ ಸುಮಾರು ೭ ಮೈಲಿ ದೂರ ... ಬಿಳಿಗೆ ಮಳೆ ಬಿ ... ಕಾರಿದ್ವಾರದಲ್ಲಿ ಮೊನ್ನೆ ತಾ॥ ೧೮ ರಲ್ಲಿ ಜನಗಳೆಲ್ಲರೂ ಆಗಲೆ ಎದ್ದು ಕೆಲಸಕ್ಕೆ ಹೋಗುತ್ತಿದ್ದರು ಒಬ್ಬ ಜವಾನನು ಬನ್ನಿ ವೆಂಕಟರಾಯರ ಮೊಸಳಭಾವಿಯ ಕಡುಕೋಂಡು ಬಿದ್ದು ಕೆಲಸ ಮಾಡುತ್ತಿದ್ದ ಜನಗಳು ಒಳಗೇ ಸಿಕ್ಕಿ ಸತ್ತರು ಎಂದು ಬಹಳ ಗಾಬರಿಯಿಂದ ಕೂಗಿಕೊಳ್ಳು ತ್ತಾ ಎಂಜಿನ್ಯರ್ರು ಬಳಿಗೆ ಓಡಿಹೋದನು ಜನರೆಲ್ಲ ಭಯವಾಕ್ರಾಂತರಾ ಗಿ ನೋಡುವದಕ್ಕೆ ಬಹು ಬೇಗ ಹೋದರು ಹಿಂದಿನ ದಿವಸ ಡೆಪ್ಯುಟಿ ಕ ಮಿಷನರು ಮತ್ತು ಅಸಿಸ್ಟೆಂಟರು ಇಲ್ಲಿಗೆ ಬಂದು ಕಂಟ್ರಾಕ್ಟ್‌ದಾರ್ ವೆಂಕಟರಾಯರೊಂದಿಗೆ ಹೋಗಿ ಆ ಭಾವಿಯನ್ನು ನೋಡಿ ಬಂದಿದ್ದ ರು ಈ ದಿವಸ ಅವರು ಈ ಊರಿನಲ್ಲೇ ಮೊಕ್ಕಾಂ ಮಾಡಿದ್ದರು ಭಾ ವಿಯನ್ನು ತೋಡುವದಕ್ಕೆ ಪ್ರಾರಂಭಿಸಿ ೪ ತಿಂಗಳಾಗಿರಬಹುದು. ಭಾವಿಯು ಬಹಳ ಭಾರಿಯಾದದ್ದು ಆರೆವಾಸಿ ಭಾವಿಯಲ್ಲಿ ಸಿಕ್ಕಿದ ಕಲ್ಲು ಬಂಡೆಯನ್ನು ಒಡೆಸಿಯೂ ತೋಟದ ಮಣ್ಣಿನಲ್ಲೂ ಸುಮಾರು ೩—೪ ಆಳುದ್ದ ತೆಗೆಸಿತ್ತು ಇನ್ನೂ ಜಲ ಬಿದ್ದಿರಲಿಲ್ಲ ಭಾವಿಯು ಮೇಲೆ ಕಿರಿದಾಗಿಯೂ ಕೆಳಗೆ ಅಗಲವಾಗಿಯೂ ಇತ್ತು ಭಾವಿಯ ಕೆ ಲಸಮಾಡುವದಕ್ಕೆ ಯೋಜನಸ್ಥರೇ ಇಳಿದು ಇದ್ದರು ನೋಡಲು ಭಾವಿ ಯ ಒಂದು ಕಡೇ ಭಾಗಮಾತ್ರ ಬಿತ್ತು. ಇದನ್ನು ಒಳಗಿದ್ದವರು ನೋಡಿ, ಕೂಡ್ಲೆ ಇಬ್ಬರು ಬುಟ್ಟಿಯಲ್ಲಿ ಕೂತು ಎಳೆಯಿರೀ ಎಂದಂದು ಹೆದ ರಿ ಕೂಗಿದರು ಮೇಲಿದ್ದವರು ಅವರನ್ನು ರಾಟೆ ತಿರುಗಿಸಿ ಎತ್ತುತ್ತಲಿ ದ್ದರು ಉಳಿದ ೩ ಜನರು ನಮಗಾದಕ್ಕೆ ಕಟ್ಟಿದ್ದ ಹಗ್ಗವನ್ನು ಹಿಡಿದು ಕೊಂಡಿದ್ದರು ರಾಟೆ ತಿರುಗಿಸುತ್ತ ಇರುವಾಗ ಅದರ ಕೈಹಿಡಿಗಳು ಮು ರಿದುಹೋಗಿ ಬುಟ್ಟಿಗಳು ಪುನಃ ಕೆಳಕ್ಕೆ ಬಿದ್ದವು ಮೇಲಿದ್ದ ಜನಗಳು ಹೆದರಿ ಓಡಿಹೋದರು ಪುನಃ ಸ್ವಲ್ಪ ಭಾವಿಯೂ ಬಿತ್ತು ಈಗ ಮಾ ಡುವುದೇನು? ಹಗ್ಗ ಹಿಡಿದುಕೊಂಡು ಇಳಿಯುತ್ತಿದ್ದ ಜನಗಳನ್ನು ಮಣ್ಣು ಮುತ್ತಿ ಬಿಟ್ಟಿತು ಆದರೆ ಅವನ್ನು ಸಾಹಸಮಾಡಿ ಮಣ್ಣೊಳ ಗಿನಿಂದ ಎದ್ದ ಮೇಲಕ್ಕೆ ಬರಲು ಹಗ್ಗಗಳು ತಡೆಯಾಗಿದ್ದವು ಹೆಚ್ಚಾ ಗಿ ಉಸಿರು ಬಿಡಲು ಸ್ಥಳ ಸಾಲದು ಅಂಥದರಲ್ಲಿ ಗದ್ದಗ ಸ್ವರದಿಂದ ಕೂಗಿದರು. ಇವರು ಮೇಲೆ ಬಂದದ್ದರಿಂದ ಕೂಗು ಕೇಳಿ ಜನಗಳು ಹಲಗೆಯನ್ನು ಎಳೆದರು ಅವರು ಮೇಲೆ ಬಂದರು ಇವರಲ್ಲಿ ಒಬ್ಬನಿ ಗೆ ಮಾತ್ರ ಪೆಟ್ಟು ತಗಲಿ ಕೈಗೆ ಬೆನ್ನಿಗೆ ಸಹ ಬಹಳ ನೋವಾಯಿತು ಇನ್ನಿಬ್ಬರು ಕೂಡ್ಲೆ ಹಗ್ಗ ಹಿಡಿದು ಮೇಲೆ ಬಂದರು ... ಮೇಲೆ ಬಂದವರೆಲ್ಲಾ ಆ ಭಾವಿಯ ಅಂಚಿನ ಸುತ್ತಲೂ ನಿಂತು ನೋಡುತ್ತಿದ್ದರು. ಅಷ್ಟರಲ್ಲಿ ಅಮಲ್‌ದಾರರು ಡೆಪ್ಯುಟಿ ಕಮಿಷನರು ಅಸಿಸ್ಟೆಂಟರು ಬಂದು ಸುತ್ತಲೂ ನಿಂತ ಜನಗಳನ್ನೆಲ್ಲಾ ದೂರ ಕಳುಹಿಸಿದರು ಆ ಕೂಡಲೆ ಸುತ್ತಲೂ ಇ ಗಡ ಪ್ರದೇಶವು ಮೇಲಿದ್ದ ಮನೆ ಸಹಿತ ಮತ್ತೆ ಕುಸಿಕೊಂಡು ಬಿದ್ದಿ ತು ಅಮಲ್ದಾರರು ದೂರ ಕಳುಹಿಸದೇ ಇದ್ದರೆ ನೋಡುವುದಕ್ಕೆ ಹೋದವರೂ ಸಹ ಭಾವಿಯ ಪಾಲಾಗುತ್ತಿದ್ದರು ಇಂಥಾ ವಿಪತ್ತಿನಿಂ ದ ತಪ್ಪಿಸಿದ್ದಕ್ಕೋಸ್ಕರ ಭಗವಂತನನ್ನು ಎಷ್ಟು ಪ್ರಾರ್ಥಿಸಿದರೂ ಸಾಲ ದು ಕೆಳಗೆ ಭಾವಿಯಲ್ಲಿ ಇಳಿದಿದ್ದ ಮೂವರಿಗಿಂದ ಅವನಿಗೆ ಕೆಲವು ಪಾಪಾಂಗಗಳು ಸಿಕ್ಕಿದವು

ದೊಡ್ಡಜಾಪಟೆ ಕಸುಕೊಂಡದ್ದು

ಪಾಗುತಿ ತಾಲ್ಲೂಕು ಗೆಬ್ಬಗಾರನಪ್ಪ ಗ್ರಾಮದಲ್ಲಿ ಕಳೆದ ತಾ ೧೬ ನೇ ಬುಧವಾರ ಸಾಯಂಕಾಲ ೫ ಗಂಟೆ ವೇಳೆಯಲ್ಲಿ ಅಕ ಸ್ಮಾತ್ ಸಿಡಿಲು ಹೊಡೆದಂತೆ ಶಬ್ದವಾಯಿತು ಜನಗಳು ಗಾಬರಿಯಾ ಗಿ ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ಬೀದಿಗೆ ಬಂದು ಏನು! ಏನು!! ಏನೆಂದು ವಿಷಯವನ್ನು ತಿಳಿಯದೆ ವಿಗ್ರಹದಂತೆ ಒಬ್ಬ ರ ಮುಖ ಒಬ್ಬರು ನೋಡುತ್ತಾ ಇದ್ದರು ಆ ಬೀದಿಯಲ್ಲಿ ಒಬ್ಬಳು ಬಹಳ ವ್ಯಾಕುಲಿತ್ತು ... ನಗೆಗೊಡು ಗುಂಪುಕಟ್ಟಿ ನೋಡು ತ್ತಾ ಬಯಸನ್ನು ಆಶ್ಚರ್ಯವನ್ನು ಹೊಂದಿದ್ದರು ಆ ಬೀದಿಯ ಲ್ಲಿ ಇದೇ ಗ್ರಾಮದಲ್ಲಿರುವ ಬಚ್ಚೆಸಿದ್ದಯ್ಯನೆಂಬವರ ಹಳೇ ಜಾಪಟೆ ಯೊಂದಿತ್ತು ಅದು ಬೀದಿಯ ಮಟ್ಟಕ್ಕೆ ಮೂರಡಿ ಎತ್ತರದ ಮೇಲೆ ಸುಮಾರು ಅರವತ್ತು ಎತ್ತರವಾಗಿ ಕಟ್ಟಲ್ಪಟ್ಟಿತ್ತು ಮತ್ತು ಆ ಜಾಪಟೆಯು ಎರಡು ಸಾಲಿನಲ್ಲಿಯೂ ಸೇರಿ ಇಪ್ಪತ್ತರಷ್ಟು ಚಂಗಳನ್ನು ಕೊಟ್ಟು ಕಟ್ಟಿದ ಹಮ್ಮು ಅಂಕಣವುಳ್ಳ ಮಣ್ಣುಮಾಳಿಗೆ ಎಲ್ಲಾ ಭದ ವಾಗಿದ್ದರೂ ಅದರ ಕಂಭಗಳು ಮಾತ್ರ ಬೀದಿಯ ಕಡೆಗೆ ಸ್ವಲ್ಪ ಹಲ ಬಾಗಿದ್ದವು ಇವನ್ನು ಕೇಳಿಸಿ ರಿಪೇರಿ ಮಾಡಿಸಬೇಕೆಂದು ಮಾಲೀಕ ರು ಪ್ರಯತ್ನ ಮಾಡಿಕೊಂಡಿದ್ದರು ಅಷ್ಟರಲ್ಲಿಯೇ ಸ್ವಲ್ಪವೂ ಗುಳ ಯಿದ ಮೇಲೆ ಕಂಡಂತೆ ಮಹಾ ಶಬ್ದದೊಡನೆ ಒಟ್ಟಿಗೆ ಬಿದ್ದುಹೋ ಯಿತು ಕಟಗಾವರೂ ಜನಗಳ್ಯಾರ ಈ ಅಚಾಯಕ್ಕೆ ಸಿಕ್ಕದೆ ಇದ್ದ ದು ಪರಮಾಶ್ಚರ್ಯವಾಗಿದೆ ಇದರಲ್ಲಿ ಯಾವಾಗಲೂ ಜನಗಳು ಸೇ ರುತ್ತಾ ಇದ್ದುದಲ್ಲದೆ ಬೇಸಿಗೆ ಕಾಲದ ರಾತ್ರಿ ವೇಳೆ ಇದರ ತುಂಬ ಜನಗಳು ಮಲಗುತ್ತಾ ಇದ್ದರು ಈ ಕಾಲದಲ್ಲಿಯೂ ಸಹ ರಾತ್ರಿ ವೇಳೆ ಇಬ್ಬರು ಜವಾನಯಿಗೆ ಮಲಗುತ್ತಿದ್ದರು ಅಂಥಾ ವೇಳೆಗಳಲ್ಲಿ ಈ ಕಟ್ಟಡವು ಬಿದ್ದುಬಿಟ್ಟಿದ್ದರೆ ಬಹಳ ಅನಾಹುತವಾಗುತ್ತಾ ಇತ್ತೆಂ ಬುದರಲ್ಲಿ ಸಂದೇಹವಿಲ್ಲ ನೋಡಿದ ಜನಗಳೆಲ್ಲ ಬಹಳ ಆಶ್ಚರ್ಯ ಪಟ್ಟು ಇವರ ಅಪಾಯವನ್ನು ಉಪಾಯದಲ್ಲಿ ನಿವಾರಣೆ ಮಾಡುವ ಕ್ಕಾಗಿ ದೇವರು ದೊಡ್ಡವನು ದೇವರ ದೊಡ್ಡವನು ಎಂದುಕೊಂಡು ತಂತಮ್ಮ ಕೆಲಸಗಳಿಗೂ ಮನೆಗಳಿಗೂ ಹೊರಟುಹೋದರು ಸಿಡಿಲ ಬಡಿ ದ ಮರಗಳಂತಾದ ಕಟ್ಟಡಗಳಲ್ಲಿ ವಾಸಮಾಡತಕ್ಕ ಜನಗಳು ಈ ಸಂಗತಿಯನ್ನು ನೆನಪಿಟ್ಟುಕೊಂಡು, ಅಪಾಯಗಳಿಗೆ ಒಳಗಾಗದೆ ಮುಂಜಾಗ್ರತೆಯನ್ನುವಹಿಸಿರಲೆಂದು ಕೋರಿಕೆ

ಬೆಂಗಳೂರಲ್ಲಿ ಮಾಳಿಗೆ ಬಿದ್ದದ್ದು.

ಬೆಂಗಳೂರು ಮುನಿಸಿಪಾಲಿಟಿಗೆ ಸೇರಿದ ಶಂಕರದೇವರ ಮಠದ ಗಲ್ಲಿಯಲ್ಲಿ ಮುನಿಸ್ವಾಮಪ್ಪನ ಮನೆ ಬಾಡಿಗೆಗೆ ತೆಗೆದುಕೊಂಡು, ನೇ ಯಿಗೆ ಕೆಲಸದ ಈಚಿಗಿನ ಜಾತಿ ಸುಮಾರು ೨೫ ವರುಷದ ರಾಮ ಸ್ವಾಮಿ ಎಂಬುವನು ಸಂಸಾರ ಸಹಿತ ವಾಸಮಾಡುತ್ತಿದ್ದನು ಈತ ತರಗಿನ ವ್ಯಾಪಾರದಲ್ಲಿ ಮೂಟೆ ಹೊತ್ತು ಜೀವನ ಮಾಡುತ್ತಾ ಇದ್ದನು ಇವನ ಹೆಂಡತಿ ಸುಮಾರು ೨೫ ವರುಷದ ರಂಗಮ್ಮ, ಇವಳ ಮಗಳು ೮ ವರುಷದ ಮುನ್ನಾಗಿ, ರಂಗಮ್ಮನ ಅಕ್ಕನ ಮಗಳು ೧೦ ವರುಷದ ತುಳ ಸಿ ಸಹಾ ಇದ್ದರು ಮುನ್ನಾಗಿ ತುಳಸಿ ಎಂಬ ಇಬ್ಬರು ಹುಡುಗಿಯ ರು ಕಂಬಳಿ ಮಿರ್ಜಿನಲ್ಲಿ ಕೆಲಸ ಮಾಡಿ ತಿಂಗಳಿಗೆ ಮೂರು ರೂಪಾ ಯಿನಂತೆ ಆರು ರೂಪಾಯಿ ತರುತ್ತಾ ಇದ್ದರು ಹೀಗಿರುವಲ್ಲಿ ಇದೇ ತಿಂಗಳು ೨೦ ನೆ ತಾ ಭಾನುವಾರ ರಾತ್ರಿ ೨ ಗಂಟೆ ಸಮಯದಲ್ಲಿ ಮೇಲ್ಕಂಡ ಮನೆಯಲ್ಲಿ ರಂಗಮ್ಮ, ಇವಳ ಬಳಗ ಮುನ್ನಾಗಿ, ವಿಠಗೆ ತುಳಸಿ, ಈ ಮೂರು ಜನವು ಮಲಗಿದ್ದರು ನಾಲ್ಕು ದಿವಸ ದಿಂದ ಹಿಡಿದ ಮಳೆ ಹಿಡಿದು ಮಾಳಿಗೆ ನನೆದು ಇತ್ತು ಮಳೆ ಮೂಸಲಿಕ ಮಾಡಿ ಹಾಳೆ ಜೋರುಮಾಡೆ ಇದರಿಂದ ನೆನ್ನೆ ಬಂದ ವೇಳೆ ಸದರಿ ಮಾಳಿ ಗೆ ಕಾವಿತಕೊಂಡು ಮೂರು ಜನರ ಮೇಲೆ ಮಾಳಿಗೆ ಬಿದ್ದ ಪೆಟ್ಟಿಗೆ ಪ್ರಾಣ ಹೋಗಿರುತ್ತೆ ನೋಡುವಾಗ ಪ್ರಾಣವೇ ಇಟರು ಒಂದು ಮರದಿರು ಮಾಡಿಸಿಕೊಂಡು ದಪ್ಪನ್ನುಗ ಅದರಲ್ಲಿಕೊಟ್ಟರು ಹೆಣಗಳ ವಾರಸು ದಾರರು ತಮಟೆ ಭೇರಿ ಮೃದಂಗದೊಡನೆ ಮೂರು ಹೆಣಗಳನ್ನೂ ವಿಧ್ಯುಂ ಬಡೆಯಂದ ವರ್ಷ ಒಬ್ಬ ಸ್ಥಳಕ್ಕೆ ತೆಗೆದುಕೊಂಡು ಹೋದರು ಇವನ್ನು ನೋಡುವ ಉದ್ದಿಷ್ಯ ಸುವಿಧರು ಜನರು ಗುಂಪುಗುಂಪಾಗಿ ಬರುತ್ತಾ ಹೋಗುತ್ತಾ ಇದ್ದರು

ಸ್ಥಿತಿಯಲ್ಲಿರುವವು —ರಾಗಿ ರೂಪಾಯಿಗೆ ೧೦—೧೧ ಸೇರೂ, ಜೋಳ ೯—೧೦ ಸೇರೂ, ಅಕ್ಕಿ ೬॥—೭ ಸೇರೂ ಸಿಕ್ಕುವುದು. ಈ ಕಾಲದಲ್ಲೇ ವರ್ತಕರು ಸಂತೆ ವಗೈರೆ ಸ್ಥಳಗಳಲ್ಲಿ ಮೋಸಮಾಡುವುದಾಗಿ ಜನರು ಹೇಳಿಕೊಳ್ಳುತ್ತಾರೆ. ಮುಖ್ಯಾಧಿಕಾರಿಗಳು ಗಮನಕೊಡಬೇಕಾಗಿದೆ. ಮಳೆ ಬಿದ್ದಂದಿನಿಂದ ಬೀದಿಗಳು ನಿರ್ಮಲವಾಗಿರುತ್ತವೆ. ಕೆಲವು ಕಡೆ ಮ್ಯುನಿಸಿಪಾಲಿಟಿಯವರು ಹೊಸದಾಗಿ ಬರೀ ಲಾಂದ್ರಕಂಭಗಳನ್ನು ಮಾತ್ರ ನಿಲ್ಲಿಸಿರುವರು. ದೊಡ್ಡ ಅಂಗಡಿಬೀದಿಯ ಚೌಕದಲ್ಲಿ ಲಾಂದ್ರವನ್ನು ಕಟ್ಟತಕ್ಕದ್ದು ಇಲ್ಲ. ಅಂಗಡಿಗಳ ಬೆಳಕೇ ಸಾಕೆಂದು ಯೋಚಿಸಿರುವ ಹಾಗೆ ಕಾಣುತ್ತೆ. ಮ್ಯುನಿಸಿಪಾಲಿಟಿಯವರು ಪಾಳು ಜಾಗಗಳ ವಿಷಯದಲ್ಲಿ ಗಮನ ಕೊಟ್ಟಿಗೆ ಕೊಡಬೇಕು.

ಸಂಜನಗೂಡು.—ಟವುನಿನಲ್ಲಿ ೪ ದಿನಗಳಿಂದ ಚೆನ್ನಾಗಿ ಮಳೆ ಸುರಿಯುತ್ತಾ ಇದೆ. ಈ ಮಳೆಯಲ್ಲಿ ಮುಕ್ಕಾಲುಭಾಗ ಪ್ರವಾಹ ಬಂದು ತೋಪುಗಳೆಲ್ಲಾ ನುಗ್ಗಿರುತ್ತೆ. ಈಗ ಮಳೆಯಾಗಿರುವುದರಿಂದ ಭತ್ತ ರಾಗಿ ವಗೈರೆ ದಿನಸಿಗಳಿಗೆ ಅನುಕೂಲ ಭವವಾಗಿರತಕ್ಕ ದಿನಸಿಗಳ ಕ್ರಯ ಅಗ್ಗವಾಗಬೇಕಾಗಿದೆ. ಆದರೂ ಈ ತಾಲ್ಲೂಕಿನ ಕೆಲವು ಗ್ರಾಮಾಂತರಗಳಲ್ಲಿ ಪ್ರೈತರು ತಿನ್ನಲು ಗತಿಯಿಲ್ಲದೆ ಕ್ಷಾಮಪೀಡಿತರಾಗಿ ಕಷ್ಟಪಡುತ್ತಿದ್ದಾರೆ. ಈ ಟವುನಿನಲ್ಲಿ ಈಗ್ಗೆ ೨೦ ದಿನಗಳಿಂದಲೂ ಕಾಲರಾ ಉಪದ್ರವವು ಹರಡಿಕೊಂಡು ಈ ವರೆಗೆ ೧೦—೧೫ ಮಂದಿ ಕಾಲವಾದರು. ಈಗಲೂ ಕೆಲವು ಸಂದಿಗಳಲ್ಲಿ ರುತ್ತೆಂದು ಕಾಣುವನು. ಮಳೆ ಬಿದ್ದಿರುವುದರಿಂದ ಕಡಿಮೆಯಾಗಬಹುದೆಂದು ತೋರುತ್ತೆ.—ಈ ಟವುನಿನಲ್ಲಿ ಶಿವಪಾದಸ್ವಾಮಿಗಳವರು ಸಾಕುತ್ತಿದ್ದ ಬಸವನು ಕಾಯಿಲೆ ಬಿದ್ದು ಮೃತಪಟ್ಟಿತು. ಈ ಬಸವನನ್ನು ಸ್ವಾಮಿಗಳು ತುಂಬಾ ಭಕ್ತಿ ಪ್ರೀತಿಗಳಿಂದ ಬಹಳ ಚನ್ನಾಗಿ ಸಾಕಿದ್ದರು. ಇದು ಕಾಯಿಲೆ ಆದಲಾಗಾಯ್ತು ಸ್ವಾಮಿಗಳು ತುಂಬಾ ಕೊರಗಿದರು. ಸತ್ತ ಕೂಡಲೆ ಬಸವನನ್ನು ಬಂಡಿ ಮೇಲೆ ಕೂರಿಸಿ ವಿಶೇಷವಾಗಿ ಹೂವಿನಿಂದ ಅಲಂಕಾರ ಮಾಡಿ ಪೀತಾಂಬರಗಳನ್ನು ಹೊದಿಸಿ ಬ್ಯಾಂಡು ಸಮೇತ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿಸಿ ಚಾಮುಂಡೇಶ್ವರಿ ಛತ್ರದ ಸಮೀಪದಲ್ಲಿ ಅದನ್ನು ಸಮಾಧಿ ಮಾಡಿಸಿದರು. ಆ ಸ್ಥಳದಲ್ಲಿ ಒಂದು ಮಂಟಪವನ್ನು ಕಟ್ಟಿಸುತ್ತಾರೆಂದು ವರ್ತಮಾನವಿದೆ.—ರಾತ್ರಿ ಕಾಲದಲ್ಲಿ ಬೀದಿಗಳಲ್ಲಿ ತಿರುಗಾಡಲು ಲಾಂದ್ರ ದೀಪಗಳು ಕಾಲದಲ್ಲಿವೆ.

ತಿಪ್ಟೂರು.—ಸುಮಾರು ಎರಡು ತಿಂಗಳಿಂದಲೂ ಇಲ್ಲಿ ಹರಡಿಕೊಂಡಿರುವ ಚಳಿಜ್ವರವೆಂಬ ಕಾಯಿಲೆಯು ಮತ್ತೊಂದು ರೀತಿ ಪರಿಣಮಿಸಿದೆ. ಒಂದು ಸಾರಿ ಗುಣಹೊಂದಿದವರನ್ನೇ ಪುನಃ ಪುನಃ ಮುಗ್ಗಲು ಮಾಡುತ್ತದೆ. ಸುಕ್ಕು ಹಿಡಿದ ಬಲಹೀನವಾದ ಶರೀರವನ್ನೆಲ್ಲಾ ಬೆಳ್ಳಗೆ ಮಾಡುತ್ತದೆ. ಯಾವ ಊಟವೂ ರುಚಿಸುವುದಿಲ್ಲ. ತಲೆನೋವು ಸುಮಾರು ಪ್ಲೇಗ್ ನೋವಿನಂತೆ ಕಾಣಿಸಿ, ಕೆಲವರಿಗೆ ವಿಪರೀತ ವಾಂತಿ ಭೇದಿಯಾಗಿ ನಿತ್ರಾಣವಾಡುತ್ತದೆ. ಮತ್ತೂ ಕೆಲವರಿಗೆ ರಕ್ತ ಮಿಶ್ರವಾದ ಭೇದಿಯೂ ಬೆಂತುಳ್ಳೆ ಎಳೆಯುತ್ತ. ಅಂತೂ ಬೇರೆ ಬೇರೆ ಕಾರಣಗಳಿಂದ ಕಳೆದ ವಾರ ಏಳು ಜನ ದೊಡ್ಡವರು ಸತ್ತರೆಂದು ವರ್ತಮಾನ ಬಂದಿದೆ. ಸಂವರಂ ... ಪರ್ನೇಸನೋರ ತಂದಿದ್ದಾರೆ. ವಾಸಿಯಾದ ಮೇಲೆ ಧರಿಸಿಲ್ಲವೆಂದು ರೋಗಿಗಳಿಗೆ ಧೈರ್ಯ ಹೇಳುತ್ತಿದ್ದಾರೆ. ಮುಂದೆ ನೋಡಬೇಕು. ಊರು ಮುಂದಿನ ಹನುಮಂತರಾಯನ ಗುಡಿಯನ್ನು ಕ್ರಮಪ್ರಕಾರ ಕೀಳಲಿಲ್ಲವಾದ್ದರಿಂದ ರೋಗ ಬಂದಿದೆ ಎಂದು ಕೆಲವರು ಹಟ ಮಾಡಿಕೊಂಡಿದ್ದಾರಂತೆ. ಆದರೆ ಕಟ್ಟಿಬಿಟ್ಟು ಹೋಗಿರುವವರ ಶಾಪವೆಂದು ಜನರು ಚಿಂತಿಸುತ್ತಿದ್ದಾರೆ. ಬಡ ಜನ ಅಮ್ಮನವರು ಬಂದಿದ್ದಾರೆಂದು ಕೆಲವರು ಹೇಳುವರು. ಮೆ॥ ಮುನಿಸ್ವಾಮಿ ಪಿಳ್ಳೆಯವರು ಕೊಟ್ಟ ಮೆಷ್ನರ್ ಛಾಪ್ ಕ್ವಿನೈನ್ ಕಷಾಯದಿಂದ ಅನೇಕ ರೋಗಿಗಳಿಗೆ ಪ್ರಯೋಜನವಾಯಿತು.—ಪೇಟೆ ಬೀದಿಯಲ್ಲಿರುವ ಮ್ಯುನಿಸಿಪಲ್ ಭಾವಿಯನ್ನು ಇನ್ನೂ ಆಳಕ್ಕೆ ಇಳಿಸಿದರೆ ಬೇಕಾದಷ್ಟು ನೀರು ಬರುತ್ತದೆ. ಜನರಿಗೆ ಸುಖವಾಗುತ್ತದೆ. ಆದರೆ ಮ್ಯುನಿಸಿಪಲ್ ಮೆಂಬರುಗಳಿಗೆ ಈ ವಿಷಯ ಬೇಕಿಲ್ಲವೆಂದು ತೋರುತ್ತದೆ. ನಮ್ಮ ... ಅಮಲ್ದಾರರಾದರೂ ಬಡಪ್ರಜೆಗಳ ಮೇಲೆ ದಯವಿಟ್ಟು ಈ ಭಾವಿಯಲ್ಲಿ ನೀರು ಬರುವಂತೆ ಮಾಡುವರೆಂದು ಪ್ರಾರ್ಥಿಸುತ್ತಾರೆ.—ಎಂಟು ತಿಂಗಳ ಕೆಳಗೆ ಹಾಲ್ ಬೇಡ ಸಹಿತ ಪರಾರಿಯಾಗಿದ್ದ ನಾಮಿಗೌಡ ಉಗ್ರನಂಜಿಯನನ್ನು ರಂಗಡಿ ಕಂಟ್ರಾಕ್ಟರ್ ಮಹಮ್ಮದ್ ದಸ್ತಗೀರ್ ಸಾಹೇಬ್ ಎಂಬುವರು ಕಳೆದ ೯ನೇ ತಾ ನಿಟ್ಟೂರು ಸಮೀಪದ ಮಾದನಗಟ್ಟದಲ್ಲಿ ಪತ್ತೆಮಾಡಿ ಪೋಲೀಸಿಗೆ ಒಪ್ಪಿಸಿದರೆಂದು ತಿಳಿಯಿತು. ಇಂಥಾ ಸಾರ್ವಜನಿಕ ಸಹಾಯ ಪ್ರಜೆಗಳಿಗೆ ಸರ್ಕಾರದವರು ತಕ್ಕ ಪ್ರೋತ್ಸಾಹ ಮಾಡಬೇಕು.

ದಾವಣಗೆರೆ.—ಕಳೆದ ೧೭ನೇ ತಾ ಬೆಳಿಗ್ಗೆ ೯ ಗಂಟೆಗೆ ರೆವಿನ್ಯು ಕಮೀಷನರ್ ಮೆ॥ ರಂಗಸ್ವಾಮಿಅಯ್ಯಂಗಾರ್ಯರ ಸವಾರಿ ಈ ದಾವಣಗೆರೆ ಟವುನಿಗೆ ದಯಮಾಡಿತು. ಅವರು ಇಲ್ಲಿನ ಸಬ್ ಡಿವಿಜನ್ ಆಫೀಸರಾದ ಮೆ॥ ಟಾಂಡ ನಾಗೇಶರ ಜೊತೆಯಲ್ಲಿ ಟವುನ್ ನೋಡುತ್ತಾ ಇಲ್ಲಿನ ಸರ್ಕಾರಿ ಕೆಲಸಗಳನ್ನು ನೋಡಿದ ಮೇಲೆ ಸಾಯಂಕಾಲ ೫ ಗಂಟೆಗೆ ಟವುನ್ ಹಾಲಿನಲ್ಲಿ ಈ ಊರಿನ ಮ್ಯುನಿಸಿಪಲ್ ಮೆಂಬರುಗಳು ಮತ್ತು ಅನೇಕ ಪ್ರಮುಖ ಮನುಷ್ಯರು ಸ್ಕೂಲು ಮಕ್ಕಳು ಅವರನ್ನು ಅಲ್ಲಿಗೆ ಬರಮಾಡಿಕೊಂಡು ಯಳಂದೂರು ನಾಟಕದವರಿಂದ ಸಂಗೀತ ವೇದಪಾಠವರ್ಗಗಳ ಹಾಡಿಸಿದ್ದು ಮಾತ್ರವಲ್ಲದೆ ವಿಶೇಷವಾಗಿ ಸುಶ್ರಾವ್ಯವಾದ ... ವಿದ್ಯುದ್ದೀಪ ಆ ಸಭೆಯಲ್ಲಿದ್ದ ಎಲ್ಲಾ ಜನರ ಮನಸ್ಸುಗಳನ್ನು ಆಕರ್ಷಿಸುವಂತೆ ಮಾಡಿದರು. ಇದ ನಂತರ ಇಲ್ಲಿನ ವೆರ್ನಾಕ್ಯುಲರ್ ಮಿಡಲ್ ಸ್ಕೂಲಿನ ಕೆಲವು ಮಕ್ಕಳು ಮಹಾರಾಜರ ಮೇಲಿನ ಪದ್ಯವನ್ನು ಸಭೆಯವರಿಗೆ ಸಂತೋಷವಾಗುವಂತೆ ಹಾಡಿದರು. ರೆವಿನ್ಯೂ ಕಮೀಷನರವರಿಗೆ ಹಾರ ತುರಾಯಿ ಗಂಧ ತಾಂಬೂಲಾದಿಗಳು ಒಪ್ಪಿಸಲ್ಪಟ್ಟ ಮೇಲೆ ರೆವಿನ್ಯು ಕಮೀಷನರು ಸಭೆಯವರಿಗೂ ಮ್ಯುನಿಸಿಪಲ್ ಮೆಂಬರುಗಳಿಗೂ ತಕ್ಕ ಮಾತುಗಳನ್ನು ಹೇಳಿ ಸಭೆಯನ್ನು ಮುಕ್ತಾಯ ಮಾಡಿದರು.—ಇಲ್ಲಿ ಒಂದು ವಾರದಿಂದಲೂ ಒಳ್ಳೆ ಮಳೆಯಾಯಿತು. ಜನರು ವ್ಯವಸಾಯದಲ್ಲಿ ನಿರತರಾಗಿದ್ದಾರೆ. ಇಷ್ಟು ಮಳೆ ಬಂದಾಗ್ಯೂ ಇಲ್ಲಿ ಪೇಟೆ ಧಾರಣೆ ಮಾತ್ರ ಇಳಿಯಲಿಲ್ಲ.—ಸಂತೆಯ ಅಕ್ರಮವನ್ನು ಇನ್ನೂ ಸರ್ಕಾರದವರು ಪರಿಹರಿಸಲಿಲ್ಲ. ಮನಸ್ವೀ ಸೇರುಗಳು ಮತ್ತು ತೂಕವು ಉಂಟು. ಒಂದು ರೂಪಾಯಿಗೆ ಅಕ್ಕಿ ತಂದು ಮನೆಯಲ್ಲಿ ಅಳೆದರೆ ಒಂದು ಸೇರು ಕಮ್ಮಿ ಬರುತ್ತದೆ. ಇದರ ವಿಷಯದಲ್ಲಿ ತಾಲ್ಲೂಕ್ ಅಮಲ್ದಾರರು ತಕ್ಕ ಬಂದೋಬಸ್ತು ಮಾಡುವರೆಂದು ನಂಬುತ್ತೇನೆ. ಈ ಸಂತೆಯಲ್ಲಿ ಕೆಲವರು ಜೂಜು ಆಡುತ್ತಾರೆ. ಇದನ್ನು ಪೋಲೀಸಿನವರು ನೋಡುತ್ತಾ ಇದ್ದಾರೆಯೇ ಹೊರತು ಅವರನ್ನು ದಂಡಿಸುವದಿಲ್ಲ. ಇದರಿಂದ ಇವರೇ ಅವರಿಗೆ ಅವಕಾಶ ಕೊಟ್ಟಿರುವರೆಂದು ನನಗೆ ತೋರುವದು. ಪೋಲೀಸ್ ಇನ್ಸ್‌ಪೆಕ್ಟರ್ ... ರ ತಕ್ಕ ಬಂದೋಬಸ್ತು ಮಾಡಬೇಕಾಗಿದೆ. ... ವ್ಯಾಪಾರಸ್ಥರಿಗೆ ಸಾಮಾನುಗಳನ್ನು ... ಕೂಲಿಗಳು ಗೆ ... ಹೇಳುವುದು ಅಸಾಧ್ಯ. ಪ್ರತಿ ಒಂದು ಬಂಡಿಯಲ್ಲಿಯೂ ೧೦೦ ಸೇರಿನ ಚೀಲಗಳನ್ನು ೧೨—೧೫ ಹಾಕುತ್ತಾರೆ. ಅವು ಎಳೆಯಲಾರದೆ ಎಳೆಕೊಂಡು ಹೋಗುತ್ತವೆ. ಈ ಊರಿನವರೆಲ್ಲಾ ಲಿಂಗಾಯತರಾಗಿದ್ದಾಗ್ಯೂ ಇವುಗಳಿಗೆ ಕರುಣೆ ತೋರಿಸಬೇಕೆಂಬುವ ಬಂತೆ ಒಬ್ಬರಿಗೂ ಇಲ್ಲ. ಸರಕಾರದವರಾದರೂ ಇದಕ್ಕೆ ತಕ್ಕ ನಿಗಾಕೊಟ್ಟು ಬಂಡಿಗೆ ಇಷ್ಟೇ ಮೂಟೆಗಳನ್ನು ಹಾಕುವಂತೆ ನಿಗದಿ ಮಾಡುವರೆಂದು ನಂಬಿ ಸೂಚಿಸಿರುತ್ತೇನೆ.

ಬೆಂಗಳೂರು.—ಈ ತಿಂಗಳು ೯ನೇ ತಾ ಬೆಳಿಗ್ಗೆ ಬೆಂಗಳೂರು ಚಿಕ್ಕಪೇಟೆ ಪೋಸ್ಟ್ ಆಫೀಸು ಬಳಿ ಇಟ್ಟಿರುವ ಎಂಜಲು ತೊಟ್ಟಿಯಲ್ಲಿ ಯಾರೋ ದುಷ್ಟಾತ್ಮರು ಆಗತಾನೇ ಹುಟ್ಟಿದ ಕೆಸನ್ನು ಒಂದು ರೈಲ್ ಬ್ಯಾಗಿನಲ್ಲಿಟ್ಟು ಬಿಸಾಟು ಹೋಗಿದ್ದರು. ಮ್ಯುನಿಸಿಪಾಲಿಟಿ ಕಸ ತೆಗೆಯುವ ಗಾಡಿಯವನು ಆ ಎಂಜಲ ಗಾಡಿಯ ಸಮೀಪ ಗಾಡಿ ನಿಲ್ಲಿಸಿ ಕಸವನ್ನು ತುಂಬಲು ಆ ತೊಟ್ಟಿಯನ್ನು ತೆಗೆಯಲು ಆ ಗಾಡಿಯಲ್ಲಿ ರೈಲ್ ಚೀಲವು ಬಿದ್ದಿದ್ದದ್ದನ್ನು ನೋಡಿ ಯಾರೋ ಕಳ್ಳರು ಬಡವೆ ವಸ್ತುಗಳನ್ನು ತಂದು ಹಾಕಿರಬಹುದೆಂದು ಯೋಚಿಸಿ ತೆಗೆದು ನೋಡಲು ಅದರಲ್ಲಿ ಒಂದು ಹೆಣ್ಣು ಕೂಸು ಮಾತ್ರ ಸತ್ತು ಬಿದ್ದಿತ್ತು. ಬಂಡಿಯವನು ಕೂಡಲೇ ಸಮೀಪದಲ್ಲಿದ್ದ ಪೋಲೀಸಿಗೆ ತಿಳಿಸಲು ಅವರು ಬಂದು ನೋಡಿ ಆಸ್ಪತ್ರೆಗೆ ತೆಗೆಸಿಕೊಂಡು ಹೋಗಿ ಡಾಕ್ಟರಲ್ಲಿ ಪರೀಕ್ಷೆ ಮಾಡಿಸಲು ಆ ಶಿಶುವಿನ ಎದೆಗೆ ಚಾಕಿನಿಂದ ತಿವಿದು ಇದ್ದ ಸಂಗತಿ ತಿಳಿಯಲಾಯ್ತು. ಮ್ಯಾಜಿಸ್ಟ್ರೇಟರು ರೂಢಿಯಾಗಿ ಬರುವವನ ಕೈಯಿಂದ ಆಗುವ ಪ್ರಮೇಯವಿದ್ದದ್ದರಿಂದ ಬೆಳಿಗ್ಗೆ ೭ ಗಂಟೆ ಲಾಗಾಯ್ತು ರಾತ್ರಿ ೨ ಗಂಟೆ ವರೆಗೂ ಅನ್ನ ನೀರಿಲ್ಲದೆ ಕಾದುಕೊಂಡು ಇದ್ದನು. ಆ ಶಿಶುವನ್ನು ಕೊಂದದ್ದಕ್ಕೆ ಒಂದು ಯುವತಿಗೆ ಇಷ್ಟು ಶಿಕ್ಷೆಯಾಯಿತು. ನಂಗು ಯಾರದೆಂದು ವಿಚಾರಮಾಡಲಾಗಿ ಒಬ್ಬ ವಿಧವೆಯು ಕದ್ದು ಬಸುರಾಗಿ ಹೆತ್ತದ್ದರಿಂದ ಆ ಮಗುವನ್ನು ಕೊಂದು ತಂದು ಈ ಗಾಡಿಗೆ ಹಾಕಿದಳೆಂದು ತಿಳಿಯಿತು. ಹೆಂಗಸರಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಗಂಡಂದಿರು ಸತ್ತುಹೋಗುವ ಕಾರಣ ಈ ರೀತಿ ಅಕೃತ್ಯಗಳು ನಡೆಯುತ್ತವೆ. ಆದಕಾರಣ ವಿಧವೆಯರಿಗೆ ಪುನರ್ವಿವಾಹ ಮಾಡುವದು ರೂಢಿಯಾದರೆ ಲೋಕದಲ್ಲಿ ಇಂಥಾ ದುಷ್ಕೃತ್ಯಗಳು ನಡೆಯಲಾರವು.—ಮೈಸೂರು ಮಹಾರಾಜರವರ ೩ನೇ ಇನ್‌ಫ್ಯಾಂಟ್ರಿ ಸುಬೇದಾರ್ ನರಸಿಂಹಲು ಯವರು ಎರಡೇ ದಿವಸ ಚಳಿಜ್ವರ ಬಂದು ಜೂಲೈ ೧೦ನೇ ಮಂಗಳವಾರ ದೈವಾಧೀನರಾದರು. ಇವರು ಮೊದಲು ಬ್ರಿಟಿಷ್ ರಿಜಿಮೆಂಟಿನಲ್ಲಿ ಸಾರ್ಜೆಂಟಾಗಿದ್ದು ಎರಡು ಯುದ್ಧಗಳಿಗೆ ಹೋಗಿ ದಯಶೀಲರಾಗಿ ಗೌರ್ನಮೆಂಟಿನಿಂದ ಎರಡು ಮೆಡಲ್ಲುಗಳನ್ನು ಪಡೆದುಕೊಂಡು ನಂತರ ಪೆನ್‌ಷನಿನ ಮುಖಾಂತರವಾಗಿ ಮೈಸೂರ್ ಮಹಾರಾಜಾ ಇನ್‌ಫೆಂಟ್ರಿಯ ಡ್ರಿಲ್ ಸಾರ್ಜೆಂಟ್ ಉದ್ಯೋಗ ಸೇರಿದರು. ಇವರುಗಳು ಡ್ರಿಲಿನಲ್ಲಿಯೂ ಸ್ವಭಾವದಲ್ಲಿಯೂ ಒಳ್ಳೆ ಪ್ರಖ್ಯಾತಿ ಹೊಂದಿದವರಾಗಿ ಕಂಡುಬಂದಿದ್ದರಿಂದ ಲೇಟ್ ಶ್ರೀ ಚಾಮರಾಜ ಒಡೆಯರವರು ತಮ್ಮ ಕುಮಾರರಿಗೆ ಕಸರತ್ತು ಮುಂತಾದವುಗಳನ್ನು ಕಲಿಸುವದಕ್ಕೆ ಇಟ್ಟುಕೊಂಡರು. ನಂತರ ನಮ್ಮ ಮಹಾರಾಜರವರು ಇವರನ್ನು ಜಮೇದಾರಿಗೂ ನಂತರ ಸುಬೇದಾರಿಗೂ ಬಡ್ತಿಮಾಡಿದರು. ಇವರನ್ನು ದಫನ್ ಮಾಡಲು ಹೊರಟಾಗ ಎಲ್ಲಾ ಹಂಗಡಗಳ ಜನಗಳೂ ಸೇರಿ, ಅನೇಕ ತರವಾದ ವಾದ್ಯಗಳಿಂದಲೂ, ಇಂಗ್ಲೀಷ್ ವಾದ್ಯಗಳಿಂದಲೂ, ಪರಿಭಜನೆ ಮುಂತಾದವುಗಳಿಂದಲೂ ರಿಜಿಮೆಂಟಿನ ಎಲ್ಲಾ ಆಫೀಸರುಗಳೂ ಕೂಡಿ ಬಹಳವಾಗಿ ವಿಜೃಂಭಣೆಯಿಂದ ಸಾಗಿಸಿಕೊಂಡು ಹೋಗಿದ್ದರು. ಇವರು ಪರಾಣವಾದ ದಿನಸ ಬಂಧುಜನರು ಸಂತಾಪಪಟ್ಟರು. ಮರಣ ಕಾಲದಲ್ಲಿ ೫೫ ವಯಸ್ಸಾಗಿದ್ದಿತು. ಇವರಿಗೆ ತುಂಬಾ ಮಕ್ಕಳುಮರಿಗಳು ಇರುತ್ತಾರೆ. ಆ ಮಕ್ಕಳ ಗೋಳಾಟವನ್ನು ವರ್ಣಿಸಲಶಕ್ಯವಾಗಿರುತ್ತೆ.

ತುಂಕೂರು.—ಒಂದು ವಾರದಿಂದಲೂ ಅಪಾರ ಗಾಳಿಯಿಂದ ಮೋಡ ಮುಚ್ಚಿಕೊಂಡು ಜಿಟಿಮಳೆಯಾಗುತ್ತಿದೆ. ಇದರಿಂದ ವ್ಯವಸಾಯಕ್ಕೂ, ಗೋ(ಗ)ಸಕ್ಕೂ ಬಹಳ ಅನುಕೂಲವೆಂದು ತೋರುತ್ತೆ. ಹವಾ ಬದಲಾಯಿಸಿ ಶೀತವಾಗಿರುವದರಿಂದ ತತ್ಸಂಬಂಧವಾದ ಕಾಯಿಲೆಗಳು ಉಂಟಾಗಿವೆ. ದಾರಣಿವಾಸಿಗಳು ರಾಗಿ ಖಂಡಿ ೧ಕ್ಕೆ ೪೩—೪೮ ರಂತೆಯೂ, ಭತ್ತ ಖಂಡಿ ೧ಕ್ಕೆ (ಎರಡು ಖಂಡಿಗ) ೪೦—೪೫ ರಂತೆಯೂ ಇತರ ಜಿನಸುಗಳು ಅದೇ ರೀತಿ ಜಾಸ್ತಿಯಾಗಿವೆ. ಪ್ರತಿ ಸಂತೆಯಲ್ಲಿಯೂ ಮಾಮೂಲ್ ಜಾಗದಲ್ಲಿ ನಿವಾಸಿನ ಅಂಗಡಿಗಳು ಸಾಲದೆ ಮಾಂಸದ ಅಂಗಡಿಯು ಜೊತೆಯಾಗಿ ಇರುತ್ತವೆ. ಇದು ಬಹು ಜನರಿಗೆ ತುಂಬಾ ಅಸಹ್ಯಕರವಾಗಿರುತ್ತೆ. ಈ ಅಂಗಡಿಗಳನ್ನು ಪ್ರತ್ಯೇಕವಾಗಿ ಇಡುವ ಏರ್ಪಾಡು ಮಾಡಬೇಕೆಂದಾಗಿ ಈಗಲೂ ಮ್ಯುನಿಸಿಪಾಲಿಟಿಯವರ ಗಮನಕ್ಕೆ ತಂದಿರುತ್ತೇನೆ.— ಇಲ್ಲಿ ಕೆಲವು ದೊಡ್ಡ ಮನುಷ್ಯರು ಆಯಾ ಮತಸ್ಥರಿಗೆ ಅನುಕೂಲಿಸುವಂತೆ ಊರಿಗೆ ಬಹಳ ಸಮೀಪವಾಗಿಯೂ ಕೆರೆಯ ಹಿಂಭಾಗದಲ್ಲಿರುವ ಗದ್ದೆ ಪ್ರದೇಶದಲ್ಲಿ ಒಂದೇ ಕಡೆ ಸ್ಮಶಾನವನ್ನು ಏರ್ಪಡಿಸುವದಕ್ಕಾಗಿ ಚಂದಾ ಎತ್ತುತ್ತಿದ್ದಾರೆ. ಇದು ಸರ್ವೋತ್ತಮವಾದದ್ದೇ ಸರಿ. ಆದರೆ ಆ ಪ್ರದೇಶವು ಊರಿನ ಜನರಿಗೆ ಅನಾರೋಗ್ಯಕ್ಕೆ ಕಾರಣವಾಗುವದಿಲ್ಲವೇ? ಇದನ್ನು ಅವರು ಮೊದಲು ಆಲೋಚಿಸುವದು ಅವಶ್ಯವಾಗಿದೆ. ಕಳೆದ ವಾರ ಟವುನಿಗೆ ಸಮೀಪವಾದ ಕಾವೇನಹಳ್ಳಿಯಲ್ಲಿ ಒಬ್ಬ ಅಗಸನು ತುಪಾಕಿ ಮದ್ದು ಹತಿ ಮುಖವೆಲ್ಲಾ ಸುಟ್ಟುಹೋಗಿ ನರಳುತ್ತಿದ್ದಾನೆ. ತುಂಕೂರಿಗೆ ಮೂರು ಮೈಲಿನಲ್ಲಿರುವ ಬೆಳಗುಂಬ ಗ್ರಾಮದ ಒಬ್ಬನು ಸಾಲ ಮಾರಕ್ಕೆ ನೇಣುಹಾಕಿಕೊಂಡು ಸತ್ತುಹೋಗಿದ್ದನು. ಇದು ಸರ್ಕಾರಕ್ಕೆ ತಿಳಿದು ಪೋಲೀಸ್ ಆಫೀಸರು ಅಲ್ಲಿಗೆ ಹೋಗಿ ಹೆಣವನ್ನು ತೆಗೆಸಿಕೊಂಡು ಬಂದು ... ರಿಂದ ಪರೀಕ್ಷೆ ಮಾಡಿಸಿ ಮಹಜರು ಮಾಡಿಕೊಂಡು ದಫನ್ ಮಾಡಿದರು. ಮೃತಪಟ್ಟವನು ಇಂಥವನೆಂದಾಗಲಿ ಆತನ ಕಾರಣವಾಗಲಿ ಇದುವರೆಗೂ ತಿಳಿದುಬಂದಿಲ್ಲ. ಸರ್ಕಾರದವರು ತಲಾಷ್ ಮಾಡುತ್ತಿದ್ದಾರೆ. ಇಲ್ಲಿನ ಕೆಲವು ರೈಲ್ ನೌಕರರು ಕಳೆದವಾರ ಒಂದು ಸಾಯಂಕಾಲ ಟ್ರಾಲಿ ಮೇಲೆ ಹೋಗಿ ... ಮೇಲೆ ... ವಾನ್ನೈರಿ ಘಾಸಲೆ ಹೋಗಿ ಹಿಂದಿರುಗಿ ಬರುವಾಗ ಟ್ರಾಲಿ ವೇಗ ಕಡಮೆಯಾಗಲು ಹಿಂದೆ ಕೂತಿದ್ದ ನಂಜನೆಂಬ ಆಳು ವೇಗ ನೂಕುವದಕ್ಕೆ ಇಳಿದನು. ಆತನ ಚಡ್ಡಿ ಅದರ ಕೈಪಿಡಿಗೆ ಸಿಕ್ಕಿ ಅವನು ಕೆಳಕ್ಕೆ ಬಿದ್ದು ಕಾಲು ಚಕ್ರಕ್ಕೆ ಸಿಕ್ಕಿ ನಗ್ಗಿಹೋಯಿತು. ... ಆತನ ಕಾಲನ್ನು ಈಗ ಆಸ್ಪತ್ರೆಯಲ್ಲಿ ತೆಗೆದುಹಾಕಿ ಗುಣಪಡಿಸುತ್ತಿದ್ದಾರೆ. ರೈಲ್ವೆ ಕಂಪನಿಯವರು ಕಾಲು ಕಳೆದುಕೊಂಡ ಆ ಬಡನೌಕರನಿಗೆ ಜೀವನೋಪಾಯಕ್ಕೆ ಅನುಕೂಲ ಮಾಡುವರೆಂದು ಇದೆ.—ಊರು ಚಿಕ್ಕಪೇಟೆ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನದ ಹಿಂಭಾಗದ ಲೈನಿನಲ್ಲಿ ... ಡೆಪ್ಯುಟಿ ಕಮೀಷನರ್ ಮೆ॥ ಎಸ್ ನಾರಾಯಣರಾಯರ ಅಣ್ಣಂದಿರಾದ ಮೆ॥ ಭೀಮಸೇನರಾಯರು ವಾಸಿಸುತ್ತಿದ್ದಾರೆ. ಇವರು ಪರಸ್ಥಳದ ಕೆಲವು ವಿದ್ಯಾರ್ಥಿಗಳಿಗೆ ಪ್ರಾಸಂಗಿಕವಾಗಿ ಆಶ್ರಯವನ್ನು ಕೊಡುತ್ತಿದ್ದಾರೆ. ಸನ್ನಿವೇಶವಾಗಿ ಹೀಗಿರುವಾಗ ಮೊನ್ನೆ ತಾ ೧೬ನೇ ಬುಧವಾರ ಸಾಯಂಕಾಲ ಸುಮಾರು ೬॥ ಗಂಟೆಯಲ್ಲಿ ಮೂರು ನಾಲ್ಕು ಜನ ವಿದ್ಯಾರ್ಥಿಗಳು ಉಪ್ಪರಿಗೆಯ ಮೇಲೆ ಪಾಠಗಳನ್ನು ಅಭ್ಯಾಸಮಾಡುತ್ತಿದ್ದರು. ಇದಕ್ಕೆ ಮುಂಚೆ ... ಹಿಡಿದ ... , ಮೇಲ್ಛಾವಣಿ ಹೆಂಚುಗಳು ... ಕಟಕಟ ಶಬ್ದವಾದ ಕೂಡಲೇ ಹುಡುಗರು ಬಹಳ ಭಯಾಕ್ರಾಂತರಾಗಿ ಜ್ಞಾನ ಇಲ್ಲದೆ ... ಕೆಳಕ್ಕೆ ಧುಮುಕಿದ್ದರು. ಅಷ್ಟರಲ್ಲಿ ಮೇಲ್ಛಾವಣಿಯು ... ಸಹಿತ ಮುರಿದ ಬಾಗಿಲಿನಿಂದ ಕೆಳಕ್ಕೆ ಬಿತ್ತು. ಬೀಳುವಾಗ ಒಬ್ಬ ಹುಡುಗನ ಮೇಲೆ ಬಿದ್ದು ತುಂಬಾ ಗಾಯವಾಯಿತು. ಮತ್ತೊಬ್ಬನಿಗೆ ಹೆಚ್ಚಿನ ಮೇಲೂ ಇನ್ನೊಬ್ಬನಿಗೆ ಕಾಲಿನ ಮೇಲೂ ಗಾಯವಾಯಿತು. ಅಷ್ಟರಲ್ಲಿ ಈ ಅಪಾಯದಿಂದ ತಪ್ಪಿಸುವದಕ್ಕೆ ಮೆ॥ ಭೀಮಸೇನರಾಯರು ಪ್ರಯತ್ನಿಸುವಾಗ ಅವರಿಗೂ ತಲೆಗೆ ಪೆಟ್ಟು ತಗಲಿ ಗಾಯವಾಗಿದೆ. ಅನಂತರ ಇವರು ಅವನ್ನು ಲಕ್ಷಿಸದೆ ಕೆಲವರ ಸಹಾಯದಿಂದ ಆ ಹುಡುಗರನ್ನು ಸಂತೈಸಿ ಚಿಕಿತ್ಸಾರ್ಥವಾಗಿ ಆಸ್ಪತ್ರೆಗೆ ಕಳುಹಿಸಿದರು. ಮೆ॥ ಭೀಮಸೇನರಾಯರು ಧಾರಾ ಕುಟುಂಬಿಗಳಾಗಿಯೂ ಉಪಕಾರಿಗಳಾಗಿಯೂ ಇದ್ದಾರೆ. ಇಂಥಾವರನ್ನು ಈ ಅಪಾಯದಿಂದ ಭಗವಂತನು ತಪ್ಪಿಸಿದ್ದಕ್ಕಾಗಿ ಎಲ್ಲರೂ ಸಂತೋಷಪಡುವರು.

ಮೈಸೂರು ಗೆಜೆಟ್ ಸಂಗ್ರಹ.

ಡೆ॥ ಕಮಿಷನರ್ ಮೆ॥ ಟಿ ಚೊಕ್ಕಣ್ಣನವರಿಗೆ ಕೊಟ್ಟಿದ್ದ ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಐದು ದಿನಗಳಿಗೆ ಜಾಸ್ತಿ ಮಾಡಿದೆ.

ಡೆಪ್ಟಿ ಕಮಿಷನರ್ ಮೆ॥ ಎಂ. ಎಸ್ ನಾರಾಯಣರಾಯರಿಗೆ ಒಂದು ತಿಂಗಳು ಇಪ್ಪತ್ತ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಈ ರಜಾ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು.

ಎಕ್‌ಸೈಸ್ ಇಲಾಖಾ ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಗೋಪಾಲಯ್ಯಂಗಾರ್ಯರಿಗೆ ಜೂಲೈ ೨ ರಿಂದ ಮೂರು ತಿಂಗಳ ಪ್ರಿವಿ ರಜಾ ಕೊಟ್ಟಿದೆ. ಅವರು ರಜಾ ಪೂರೈಸಿದ ಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು.

ಎಕ್‌ಸ್ಟ್ರಾ ಅ॥ ಕಮಿಷನರ್ ಮೆ॥ ಸಿ ಕೃಷ್ಣರಾಯರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ರಜಾ ಪೂರೈಸಿದಮೇಲೆ ಕೆಲಸದಿಂದ ನಿವೃತ್ತರಾಗತಕ್ಕದ್ದು.

ಕಾಲೀನ್‌ಪೇಟೆಗೆ ವರ್ಗಮಾಡಲ್ಪಟ್ಟಿರುವ ಡಿಪ್ಟಿ ಅಮಲ್ದಾರ್ ಬಿ. ಕೆ ಪರ್ನೀಕ್ ಪರೇಪ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚನ್ನಪಟ್ಟಣ ಸಬ್ ರಿಜಿಸ್ಟ್ರಾರ್ ಎಸ್. ಟಿ. ನರಸಿಂಹ ಐಯ್ಯಂಗಾರ್ಯರು ಕಾಲೀನ್‌ಪೇಟೆ ಸಬ್ ತಾಲ್ಲೂಕಿನ ಡಿಪ್ಟಿ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮೆ॥ ಎಚ್ ಎಚ್ ಸ್ಪಾರ್ಕ್ಸ್ ಯವರು ಮೆ॥ ವಿ ದೇವದಾಸನವರಿಂದ ಬೆಂಗಳೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಜೂಲೈ ೯ ರಲ್ಲಿ ವಹಿಸಿಕೊಂಡಿದ್ದಾರೆ.

ರಾವ್ ಬಹದ್ದೂರ್ ಪಿ ಎಸ್ ಕೃಷ್ಣರಾವ್, ಬಿ ಎ., ಬಿ ಎಲ್ ಯವರು ಮೈಸೂರು ಚೀಫ್ ಕೋರ್ಟಿನಲ್ಲಿ ಜಡ್ಜಿ ಕೆಲಸಕ್ಕೆ ಜೂಲೈ ೯ ರಲ್ಲಿ ದಾಖಲಾಗಿರುತ್ತಾರೆ.

ಮೆ॥ ಸಿ ನಾರಾಯಣರಾಯರನ್ನು ಎಕ್‌ಸ್ಟ್ರಾ ಅ॥ ಕಮಿಷನರ ದರ್ಜೆಯಲ್ಲಿ ೬ ರಿಂದ ೩ ನೆ ಕ್ಲಾಸಿಗೆ ಪೆಬ್ರುವರಿ ೬ ರಿಂದ ಬಡ್ತಿ ಮಾಡಲ್ಪಟ್ಟಿದೆ.

ಅಕೌಂಟ್ ಪ್ರೊಬೇಷನರ್ ಮೆ॥ ಬಿ. ಶ್ರೀನಿವಾಸಯ್ಯಂಗಾರ್ಯರು ಮೇ ೧೬ ರಿಂದ ಅ॥ ಕಂಟ್ರೋಲರಾಗಿ ನೇಮಕವಾಗಿರುತ್ತೆ.

ಮುಂದೆ ಹೇಳುವ ಅಮಲ್ದಾರ್ ಮ್ಯಾಜಿಸ್ಟ್ರೇಟರಿಗೆ ಫಾರೆಸ್ಟ್ ರೆಗ್ಯುಲೇಷನ್ನಿಗೆ ಸಂಬಂಧಪಡುವ ಅಪರಾಧಗಳನ್ನು ಹಿಡಿದು ತನಿಖೆ ಮಾಡಲು ಅಧಿಕಾರ ಕೊಟ್ಟಿದೆ.—ಹೊನ್ನಾಳಿಯ ಮೆ॥ ಕೃಷ್ಣಾಜಿರಾವ್ ಯವರು, ಸೊರಬದ ಮೆ॥ ಎಸ್ ಕೃಷ್ಣಪ್ಪನವರು, ನಗರದ ಪಿ ನರಸಿಂಗರಾಯರು, ತೀರ್ಥಹಳ್ಳಿಯ ಮೆ॥ ಕೆ. ಶ್ರೀನಿವಾಸರಾಯರು

ವಿಶೇಷವಾರ್ತೆಗಳು.

ಹಿಂದುಸ್ಥಾನದ ಕೆಲವು ಪ್ರಖ್ಯಾತಿ ಪುರುಷರು ಈಗ ವಿಲಾಯತಿಗೆ ಹೋಗಿರುತ್ತಾರೆ. ಪುದುಕೋಟೆ, ರಾಜಪಿಪ್ಲಾ ರಾಜರೂ, ಬಿರ್ದವಾನ್ ಮಹಾರಾಜಾಧಿರಾಜರೂ, ಸರ್ ದಿನಷಾ ಪೆಟಿಟ್ ಎಂಬ ಪಾರ್ಸಿ ಕೋಟ್ಯಾಧೀಶ್ವರರೂ ಅಲ್ಲಿರುವರು. ಅಲ್ಲಿ ನಾರ್ತ್‌ಬ್ರುಕ್ ಸೊಸೈಟಿ ಯೊಂದು ಕ್ಷೇಮಕೂಟವು ಏರ್ಪಾಡಾಗಿದೆ. ಹಿಂದುಸ್ಥಾನದವರಲ್ಲೂ ವಿಲಾಯತಿಯವರಲ್ಲೂ ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಅಭಿವೃದ್ಧಿಪಡಿಸಬೇಕೆಂಬುದೇ ಈ ಸಂಘದವರ ಪರಮೋದ್ದೇಶವಾಗಿರುವುದು. ಮೇಲಿನ ಮಹನೀಯರು ಈ ಸಂಘಕ್ಕೆ ಮೆಂಬರುಗಳಾಗಿ ಸೇರಿರುತ್ತಾರೆ.

ಹೌಸ್ ಆಫ್ ಲಾರ್ಡ್ಸ್ ಎಂಬ ವಿಲಾಯತಿಯ ಪಾರ್ಲಿಮೆಂಟಿನ ಮೆಂಬರುಗಳು ಸಭೆಸೇರಿ, ಹುಡುಗರು ಸಿಗರೆಟ್‌ಗಳನ್ನು ಸೇದದಂತೆ ಮಾಡುವಂಥಾ ಕಾನೂನನ್ನು ಕುರಿತು ಚರ್ಚೆ ಮಾಡುತ್ತಿದ್ದಾರೆ. ಪ್ರಾಯಪ್ರಬುದ್ಧರಾಗದೆ ಇರುವ ಹುಡುಗರು ಹೊಗೆಸೊಪ್ಪನ್ನು ಸೇದುವುದು ದೇಹಕ್ಕೆ ಬಹಳ ಕೆಟ್ಟದ್ದೆಂದು ದೊಡ್ಡ ಡಾಕ್ಟರುಗಳು ಅಭಿಪ್ರಾಯಪಟ್ಟಂತೆ ಈ ಕಾನೂನು ಜಾರಿಯಲ್ಲಿ ಬಂದರೆ ಏನಾಗುವದೆಂದರೆ—ಅಂಗಡಿಯವರು ಹುಡುಗರಿಗೆ ಚುಟ್ಟಾ ಬೀಡಗಳನ್ನು ಬಿಕರಿಮಾಡಕೂಡದು; ಬೀದಿ ಸೇದುವ ಹುಡುಗರನ್ನು ಅವರ ಪೋಷಕರನ್ನು ಹಿಡಿದು ಶಿಕ್ಷಿಸುವರು; ಪೋಲೀಸಿನವರು ಅಂಥಾ ಹುಡುಗರನ್ನು ಹಿಡಿದು ಶೋಧನೆಮಾಡಿ, ಬೀಡಿ ಸಿಗರೆಟ್ಟುಗಳನ್ನು ಕಿತ್ತುಕೊಳ್ಳುವರು. ಆದ್ದರಿಂದ ಪಾರ್ಲಿಮೆಂಟಿನವರು ತಪ್ಪಿಸಬೇಕೆಂದು ಪ್ರಯತ್ನಪಡುತ್ತಿರುವ ಇಂಥಾ ದುರಭ್ಯಾಸವನ್ನು ನಮ್ಮ ಹಿಂದುಸ್ಥಾನದ ಹುಡುಗರು ಯಾಕೆ ಅಭ್ಯಾಸಮಾಡಬೇಕು?

ಕಳೆದ ಬುಧವಾರ ಲೇಡಿ ಕರ್ಜನರವರು ವಿಲಾಯತಿಯಲ್ಲಿ ಕಾಲವಾದರೆಂಬ ದುಃಖಕರವಾದ ತಂತೀ ವರ್ತಮಾನ ಬಂದಿದೆ. ಸುಮಾರು ಎರಡು ವರುಷಗಳಲ್ಲಿ ಆಕೆಗೆ ಬಹಳ ಕಾಯಿಲೆಯಾಗಿ ಬದುಕುವುದೇ ದುಂಬಾ ಕಷ್ಟವಾಗಿತ್ತು. ದೈವ ಸಂಕಲ್ಪದಿಂದ ಆಗ ಚೇತರಿಸಿಕೊಂಡರು. ಆದರೆ ಅಂದಿನಿಂದಲೂ ಆಕೆಯ ದೇಹಸ್ಥಿತಿಯು ಆರೋಗ್ಯವಾಗಿಯೂ ತೃಪ್ತಿಕರವಾಗಿಯೂ ಇರಲಿಲ್ಲ. ಅಂಥಾದ್ದರಲ್ಲೇ ಲೇಡಿ ಕರ್ಜನ್‌ರವರು ಹಿಂದುಸ್ಥಾನಕ್ಕೆ ಮರಳಿಬಂದು, ತಮ್ಮ ಕಾಯಿಲೆಯಲ್ಲಿ ಈ ದೇಶದ ಹೆಂಗಸರು ತೋರಿಸಿದ ಪ್ರೀತಿ ವಿಶ್ವಾಸಗಳನ್ನು ಜ್ಞಾಪಕಪಡಿಸಿ, ತಮ್ಮ ಕೃತಜ್ಞತೆಯನ್ನು ಸೂಚಿಸುವದಕ್ಕಾಗಿ ಕಲ್ಕತ್ತೆಯಲ್ಲಿ ಆಕೆಯುಪರ ಹೆಸರಿನ ಮೇಲೆ ಕಟ್ಟಿಸಿದ ಸೀಯರಿಗಾಗಿರುವ ಕಟ್ಟಡಕ್ಕೆ (ಫೌಂಟೆನ್) ಅಸ್ತಿವಾರವನ್ನು ಹಾಕಿದರು. ಆಕೆಯ ಸೌಂದರ್ಯವೂ ಕುಶಲಬುದ್ಧಿಯೂ ಸಾಮಾನ್ಯವಾಗಿರಲಿಲ್ಲ. ಲಾರ್ಡ್ ಕರ್ಜನರವರು ನಡಿಸಿದ ಕೆಲವು ಭಾಷಣಗಳಲ್ಲಿ ಆಕೆಯ ಸಹಾಯ ತಮಗೆ ಎಷ್ಟು ಪಾಲ್ಗೊಂಡಿತ್ತೆಂಬುದನ್ನು ಅನೇಕ ಸಂದರ್ಭಗಳಲ್ಲಿ ತಿಳಿಸಿರುತ್ತಾರೆ. ಈ ಪತಿಪತ್ನಿಯರುಗಳ ದಾಂಪತ್ಯಸುಖಸಂತೋಷಗಳು ಅಪೂರ್ವವಾಗಿದ್ದವು. ಆಕೆಯ ದೇಹಾಂತ್ಯಕ್ಕೆ ಸಮಾಧಾನಗಳು ಲಭ್ಯವಾಗಲೆಂದು ಲಂಡನ್, ಕಲ್ಕತ್ತಾ, ಸಿಮ್ಲಾ, ಇವೇ ಮೊದಲಾದ ನಗರಗಳಲ್ಲಿ ಏಕಕಾಲದಲ್ಲಿ ಭಗವತ್ಪ್ರಾರ್ಥನೆಗಳನ್ನು ನಡಿಸಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರುವ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಗೋವ್ಯಾಧಿಗೆ ಔಷಧ ಬೇಕು.

ಅಯ್ಯಾ,

ನಮ್ಮಲ್ಲಿರುವ ಪಶುವಿಗೂ ಅದರ ಕರುವಿಗೂ 'ಬಿಸದ' ಗಳೆಂಬ ಹುಳುಗಳು ತಂಡತಂಡವಾಗಿ ಮೈ ಚರ್ಮಕ್ಕೆ ಅಂಟಿಕೊಂಡಿವೆ. ಅಗಾಗ ನೀರಿನಿಂದ ಮೈ ತೊಳೆದರೂ ಕಡಮೆಯಾಗುವುದಿಲ್ಲ. ಇವುಗಳನ್ನು ಹೋಗಲಾಡಿಸುವುದಕ್ಕಾಗಿ ತಕ್ಕ ಔಷಧವು ಯಾವುದಾದರೂ ಇದೆಯೇ? ಅಥವಾ ಬೇರೆ ಯಾವ ಉಪಾಯವನ್ನು ಅನುಸರಿಸಿದರೆ ಹೋಗುವವು? ತಾವಾಗಲೀ ತಮ್ಮ ವಾಚಕ ಮಹಾಶಯರಲ್ಲಿ ಗೋವ್ಯಾಧಿ ಶಾಸಕರು ಯಾರಾದರೂ ಆಗಲೀ ಸಮುತ್ತರವನ್ನು ದಯಪಾಲಿಸಿ ಗೋ ಕೀರ್ತಿಗಳನ್ನು ಪಡೆಯಬೇಕೆಂದು ಪ್ರಾರ್ಥಿಸುವ

ಲಕ್ಷ್ಮಣ್ ಚಿಕ್ಕಣ್ಣ.

ಔದಾರ್ಯ ಧರ್ಮ.

ಅಯ್ಯಾ,

ರಾಜಧಾನಿಯಲ್ಲಿ ವೆಸ್ಲಿಯನ್ ಮಿಶನಿನವರು ಕಟ್ಟಿಸುತ್ತಿರುವ ಆಸ್ಪತ್ರೆಯ ವಿಷಯವಾಗಿಯೂ ಅದಕ್ಕೆ ತಗಲುವ ಮೊಬಲಗಿನ ವಿಷಯವಾಗಿಯೂ ಧರ್ಮಿಷ್ಠರಿಂದ ಸದರಿ ಕಟ್ಟತಕ್ಕಾಗಿ ದ್ರವ್ಯ ಸಹಾಯ ಅವಶ್ಯಕವಾಗಿದೆ ಎಂಬದರ ವಿಷಯವಾಗಿಯೂ ಹಿಂದೆ ಒಂದೆರಡು ಸಲ ಪ್ರಕಟಿಸಿದ್ದೇವಷ್ಟೆ.

ನಮ್ಮ ಕೋರಿಕೆಯ ಪ್ರಕಾರ ಇದುವರೆವಿಗೂ ಚಂದಾ ಹಣವನ್ನು ಕೊಟ್ಟವರ ಪೈಕಿ ಲೇಟ್ ಕಮಾಂಡೆಂಟ್ ಮೈಸೂರು ಪ್ಯಾಲೆಸ್ ಗಾರ್ಡ್ಸ್ ಮಹಮ್ಮದ್ ಬದ್ರುದ್ದೀನ್ ಖಾನ್ ಬಹದ್ದೂರ್ ಎಂಬ ದೊಡ್ಡ ಮನುಷ್ಯರು ಕಳೆದ ವಾರ ೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ದೊಡ್ಡ ಮನುಷ್ಯರ ಉದಾರಗುಣವನ್ನು ಈ ಪಟ್ಟಣದಲ್ಲಿಯೂ ಬೇರೆ ಕಡೆಗಳಲ್ಲಿಯೂ ಇರುವಂಥ ಧರ್ಮಿಷ್ಠರು ಅನುಸರಿಸಿ, ತಮ್ಮ ಹೆಸರುಗಳನ್ನು ಶಾಶ್ವತಗೊಳಿಸುವರೆಂದು ಅಪೇಕ್ಷಿಸುವ

T. L.

ದೆವ್ವ ಬಿಡಿಸುವುದು.

ಅಯ್ಯಾ,

ನಾನು ನೆನ್ನೆ ಶುಕ್ರವಾರ ಚಾಮರಾಜನಗರದ ತಾಲ್ಲೂಕು ಮರಹಳ್ಳಿ ಹೋಬಳಿ ಪೈಕಿ ಕೋಟಂಬಳ್ಳಿ ಕಡೆ ರೈತರ ಮತ್ತು ಜಾನುವಾರುಗಳ ಸ್ಥಿತಿಯನ್ನು ನೋಡಲು ಹೋಗಿದ್ದೆನು. ಆ ದಿವಸ ಹುಣ್ಣಿಮೆಯಾಗಿತ್ತು. ಸಂಧ್ಯಾಕಾಲದಲ್ಲಿ ಮನೆಯ ಹತ್ತಿರ ತಿರುಗಾಡುತ್ತಿರುವಲ್ಲಿ ಊರೊಳಗೆ ಸ್ವಲ್ಪ ಗಲಭೆ ಕೇಳಿಸಿತು. ಏನೆಂದು ಹೋಗಿ ನೋಡುವಲ್ಲಿ ಒಂದು ಮನೆಯ ಹತ್ತಿರ ಜನ ಗಲಭೆಯಾಗಿತ್ತು. ಒಬ್ಬಳಿಗೆ ದೆವ್ವ ಹಿಡಿದಿದೆಯೆಂದೂ, ಮಂತ್ರವಾದಿಗಳು ಬಿಡಿಸುತ್ತಿರುವರೆಂದೂ ಜನರಿಂದ ತಿಳಿಯಬಂತು. ನೋಡಬೇಕೆಂಬ ಕುತೂಹಲದಿಂದ ಒಳಹೊಗಲು, ಬಿಚ್ಚಿ ಜೋಲಾಡುತ್ತಿರುವ ಕೂದಲುಗಳಿಂದ ಒಬ್ಬ ಹೆಂಗಸು ಸುತ್ತಲೂ ಇಬ್ಬರು ಮೂವರು ಮಂತ್ರವಾದಿಗಳಿಂದ ಪರಿವೃತಳಾಗಿದ್ದಳು. ಮಂತ್ರವಾದಿಗಳು ಚಟಪಟ ಶಬ್ದದಿಂದ ಹಲ್ಲುಕಡಿಯುತ್ತಾ ಆರ್ಭಟ ಮಾಡುತ್ತಿದ್ದರು. ದೆವ್ವ ಹಿಡಿದವಳ ಮುಂದೆ ಚಿತ್ರತರವಾಗಿ ರಂಗವಲ್ಲಿ ಹಾಕಿದ್ದರು. ನಂತರ ಮಾಮೂಲು ಕೆಲಸಗಳನ್ನು ಮಾಡಿದರು. ಆ ದೆವ್ವವು ಕೇಳಿದ ಮಿಠಾಯಿ, ಎಲೆ ಅಡಿಕೆ, ಸಕ್ಕರೆ, ಫಲಾವು, ಅನ್ನ ವಗೈರೆಗಳನ್ನು ತರಿಸಿಕೊಟ್ಟರು. ದೆವ್ವವು ತಿಂದು ಕೆಲವು ಘಳಿಗೆಯೊಳಗಾಗಿ ಬಿಟ್ಟು ಹೊರಟುಹೋದ ಹಾಗೆ ತಿಳಿಯಬಂತು. ಮಂತ್ರವಾದಿಗೆ ೨೫ ರೂಪಾಯಿ ಸಂದಿತು. ಎಂತಹ ದೆವ್ವ! ಈ ಮಧ್ಯೆ ನಡೆದ ಸಂಗತಿಯನ್ನು ವಾಚಕರಿಗೆ ತಿಳಿಸಲು ಕುತೂಹಲಪಡುತ್ತೇನೆ. ದೆವ್ವಕ್ಕೆ ಬೇಕಾದದ್ದನ್ನು ಕೇಳಲು ಬೇರೆ ಚಿಕ್ಕ ಮನೆಗೆ ಹೋಗಬೇಕೆಂದು ಮಂತ್ರವಾದಿಯು ಹೇಳಿದ್ದಕ್ಕೆ ಮನೆಯವರು ಒಪ್ಪದೆ ಸಂಗಡ ಒಬ್ಬನನ್ನು ಹೋಗುವ ಹಾಗೆ ತಿಳಿಸಿದರು. ಮಂತ್ರವಾದಿಯು ಒಪ್ಪದವನಾದರೂ ಅವನ ಬಲವಂತದಿಂದ ಒಳಹೊಕ್ಕರು. ಅಲ್ಲಿ ವಿಚಾರಿಸುವಲ್ಲಿ ಆ ಹೆಂಗಸು ಅತ್ತೆ, ಮಾವ, ಗಂಡಂದಿರ ಹಿಂಸೆಯಿಂದ ತನಗೆ ಬೇಕಾದ ತಿಂಡಿ ತಿನ್ನಲು ಅನುಕೂಲವಿಲ್ಲವೆಂದೂ, ಅದಕ್ಕೆ ಆ ರೀತಿ ಮಾಡಿದೆನೆಂತಲೂ, ಯಾರಿಗೂ ಹೇಳಕೂಡದೆಂತಲೂ ಬೇಡಿಕೊಂಡಳು. ನೋಡಿದಿರಾ! ಹಳ್ಳಿ ಮಂಕ್ಕರ ವಿದ್ಯೆ! ಅಂಟಿಗೆ ಆಸೆ ಬಿದ್ದು ದೆವ್ವನಟನೆ ಮಾಡುವದು! ಆ ದಿವಸವೇ ಕಾಳೆನೆಂಬುವನಿಗೂ ಮಲಗಿದ್ದ ವೇಳೆ ಅರ್ಧ ರಾತ್ರಿಯಲ್ಲಿ ದೆವ್ವ ಹಿಡಿದುಕೊಂಡಿತಂತೆ! ಪಾಪ, ಹೊಟ್ಟೆಗಿಲ್ಲದ ಕಾಲದಲ್ಲಿ ತಿಂಡಿಯಿಲ್ಲದವರಿಗೆ ಮಧುರವಾದ ತಿಂಡಿಯೂ, ಮಂತ್ರವಾದಿಗಳಿಗೆ ತಂತ್ರದಿಂದ ದ್ರವ್ಯವೂ ಉಂಟಾಗುವುದೇ ಫಲ. ಸ. ವ. ರ.

ಅಪಾಯ ಕಳುವು ಮುಂತಾದ್ದು.

ಮಂಗಳೂರು ಕಳ್ಳರ ಕಾಟ.

ದಕ್ಷಿಣ ಕನಡಾ ಜಿಲ್ಲಾ ಮಂಗ್ಳೂರು ತಾಲ್ಲೂಕು ಕಸಬಾ ಜೋಡಿಯಾಲಬೈಲು ವಾರ್ಡಿನ ಮತ್ತು ಕದ್ರಿ ವಾರ್ಡಿನ ನಡುವೆ ಇರುವ ಜಮೀನುದಾರ ರೋಮನ ಕೆಥೋಲಿಕ ಮತದ ಆಂತೋನಿ ಪಟವಾಳರ ಮಗ ವಿಂಗಿಲ ಪಡವಾಳರ ಮನೆಗೆ ನೆನ್ನೆ ತಾ॥ ೧೬ನೇ ಮಂಗಳವಾರ ರಾತ್ರಿ ಘಂಟೆ ೧೧ಕ್ಕೆ ಒಳ್ಳೇ ಮಳೆಯೂ ಗಾಳಿಯೂ ಬರುವ ಹೊತ್ತಿನಲ್ಲಿ ಸುಮಾರು ೬೦ ಜನ ಕಳ್ಳರು ವೇಷಪಲ್ಲಟಮಾಡಿಕೊಂಡು ಮುಖಕ್ಕೆ ಬಿಳೇ ಕಪ್ಪುತರದ ಬಣ್ಣಗಳನ್ನು ಹಾಕಿ ನಾನಾ ತರದ ಆಯುಧಗಳನ್ನು ನಾತನಾಡಿ ಗುರ್ತು ತಿಳಿಯದ ಹಾಗೆ ಅವರ ಮನೆ ಹೊಕ್ಕಿದರು. ಮನೆಯ ಗಂಡಸರೆಲ್ಲರೂ ಚಾವಡಿಯಲ್ಲಿ ಮಲಗಿದ್ದರು. ಅವರಿಗೆಲ್ಲಾ ನಿದ್ರೆ ಬಿದ್ದಿತ್ತು. ಆಗ್ಗೆ ಈ ಕಳ್ಳರು ಪತ್ರ ಇರುವ ಎರಡು ನಾಯಿಗಳನ್ನು ಕೊಂದುಹಾಕಿ ಮಲಗಿದ್ದವರನ್ನು ಚನ್ನಾಗಿ ಹೊಡೆದು ಅರ್ಧಜೀವನಮಾಡಿ ಅವರೆಲ್ಲರನ್ನು ಬಂದು ಕೋಣೆಯೊಳಗೆ ಹಾಕಿದರು. ಇದನ್ನು ನೋಡಿ ಒಳಗಿದ್ದ ಹೆಂಗಸರೂ ಮಕ್ಕಳೂ ಬೊಬ್ಬೆ ಹಾಕಲಿಕ್ಕೆ ಪ್ರಾರಂಭ ಮಾಡಿದರು. ಆಗ್ಗೆ ಕಳ್ಳರು ಮಕ್ಕಳನ್ನೂ ಹೆಂಗಸರನ್ನೂ ಒಂದೊಂದು ಕಂಭಕ್ಕೆ ಕಟ್ಟಹಾಕಿ ಮಕ್ಕಳನ್ನೆಲ್ಲಾ ಒಂದು ಕೋಣೆಯೊಳಗೆ ಹಾಕಿ ಒಳಗಿದ್ದ ಪೆಟ್ಟಿಗೆಯನ್ನು ಒಡೆದು ಅದರಲ್ಲಿದ್ದ ಚಿನ್ನದ ನಾನಾ ತರದ ನಗಗಳನ್ನೂ ನೋಟುಗಳನ್ನೂ ನಗದು ರೂಪಾಯಿಗಳನ್ನೂ ಒಟ್ಟಿಗೆ ಸುಮಾರು ೫ ಸಾವಿರ ರೂಪಾಯಿ ಬಾಳುವ ಒಡವೆಗಳನ್ನೆಲ್ಲಾ ತೆಗೆದು ಪಲಾಯನ ಮಾಡಿದ್ದಾರೆ. ಅಲ್ಲಿ ಸುಮಾರು ೨ ಕೋರ್ಜ ಅಕ್ಕಿ ಮುಡಿಗಳು ದಾಸ್ತಾನು ಇದ್ದವು. ಅದನ್ನು ಮುಟ್ಟಲೇ ಇಲ್ಲ. ಆವಾಗ್ಗೆ ಮಳೆಯೂ ಬಿರುಗಾಳಿಯೂ ಬೀಸುವದರಿಂದಲೂ ಬಾಕಿಯವರ ಮನೆ ಅರ್ಧ ಫರ್ಲಾಂಗು ದೂರ ಇರುವದರಿಂದಲೂ ಇವರು ಬೊಬ್ಬೆ ಹಾಕಿದ್ದು ಯಾರಿಗೂ ಕೇಳಲಿಲ್ಲ. ಬೆಳಗಾಗುತ್ತಲೇ ಎಲ್ಲರೂ ಬಂದು ನೋಡುವಲ್ಲಿ ಒಬ್ಬ ಗಂಡಸಿಗೆ ಜಖಮುಗಳೂ ಗಾಯಗಳೂ ಬಹಳ ಇದ್ದವು. ಇವರನ್ನು ಎಲ್ಲರೂ ತನಿಖಿಮಾಡಿ ವೆನ್‌ಲಾಕ್ ಆಸ್ಪತ್ರೆಗೆ ತೆಕ್ಕೊಂಡು ಹೋಗಿದ್ದಾರೆ. ಈತನು ಹುಷಾರು ಆಗುವದು ಬಹಳ ಕಷ್ಟವಂತೆ. ಬಾಕಿಯವರಿಗೆಲ್ಲಾ ವಿಶೇಷ ಏನು ಆದರೂ ಜಖಮು ಆಗಲಿಲ್ಲ. ಕಳ್ಳರನ್ನು ಹಿಡಿಯುವದಕ್ಕೋಸ್ಕರ ಪೋಲೀಸಿನವರು ತನಿಖಿಯಲ್ಲಿ ಇದ್ದಾರೆ. ಈ ಕಳ್ಳರ ಕಾಟವನ್ನು ಕೇಳಿ ಊರಿನವರೆಲ್ಲರೂ ಗಾಬರಿ ಪಡುತ್ತಾರೆ.

ಭಾವಿಯು ಕುಸಿದು ಬಿದ್ದದ್ದು.

ಪ್ರಾತಃಕಾಲ ಸುಮಾರು ೭ ಘಂಟೆ ಸಮಯ. ಬಹಳ ಮಳೆ. ಟಿ. ಕಾರಿಪುರದಲ್ಲಿ ಮೊನ್ನೆ ತಾ॥ ೧೮ ರಲ್ಲಿ ಜನಗಳೆಲ್ಲರೂ ಆಗಲೆ ಎದ್ದು ಕೆಲಸಕ್ಕೆ ಹೋಗುತ್ತಿದ್ದರು. ಒಬ್ಬ ಜವಾನನು ಬನ್ನಿ ವೆಂಕಟರಾಯರ ಹೊಸಭಾವಿಯು ಕವುಚಿಕೊಂಡು ಬಿದ್ದು ಕೆಲಸ ಮಾಡುತ್ತಿದ್ದ ಜನಗಳು ಒಳಗೇ ಸಿಕ್ಕಿ ಸತ್ತರು ಎಂದು ಬಹಳ ಗಾಬರಿಯಿಂದ ಕೂಗಿಕೊಳ್ಳುತ್ತಾ ಅಮುಲ್ದಾರರ ಬಳಿಗೆ ಓಡಿಹೋದನು. ಜನರೆಲ್ಲ ಭಯಾಕ್ರಾಂತರಾಗಿ ನೋಡುವದಕ್ಕೆ ಬಹು ಬೇಗ ಹೋದರು. ಹಿಂದಿನ ದಿವಸ ಡೆಪ್ಯುಟಿ ಕಮಿಷನರು ಮತ್ತು ಅಸಿಸ್ಟೆಂಟರು ಇಲ್ಲಿಗೆ ಬಂದು ಕಂಟ್ರಾಕ್ಟದಾರ್ ವೆಂಕಟರಾಯರೊಂದಿಗೆ ಹೋಗಿ ಆ ಭಾವಿಯನ್ನು ನೋಡಿ ಬಂದಿದ್ದರು. ಈ ದಿವಸ ಅವರು ಈ ಊರಿನಲ್ಲೇ ಮೊಕ್ಕಾಂ ಮಾಡಿದ್ದರು. ಭಾವಿಯನ್ನು ತೋಡುವದಕ್ಕೆ ಪ್ರಾರಂಭಿಸಿ ೪—೯ ತಿಂಗಳಾಗಬಹುದು. ಭಾವಿಯು ಬಹಳ ಭಾರಿಯಾದದ್ದು. ಅರೆವಾಸಿ ಭಾವಿಯಲ್ಲಿ ಸಿಕ್ಕಿದ ಕಲ್ಲು ಬಂಡೆಯನ್ನು ಒಡಿಸಿಯೂ ತೋಟಾ ಮೂಲಕವೂ ಸುಮಾರು ೩—೪ ಅಳದ್ದು ತೆಗೆಸಿತ್ತು. ಇನ್ನೂ ಜಲ ಬಿದ್ದಿರಲಿಲ್ಲ. ಭಾವಿಯು ಮೇಲೆ ಕಿರಿದಾಗಿಯೂ ಕೆಳಗೆ ಅಗಲವಾಗಿಯೂ ಇತ್ತು. ಭಾವಿಯ ಕೆಲಸಮಾಡುವದಕ್ಕೆ ಯಾವನಸ್ಸರೇ ಇಳಿದು ಇದ್ದರು. ಮೊದಲು ಭಾವಿಯ ಒಂದು ಕಡೇ ಭಾಗಮಾತ್ರ ಬಿತ್ತು. ಇದನ್ನು ಒಳಗಿದ್ದವರು ನೋಡಿ, ಕೂಡಲೇ ಇಬ್ಬರು ಬುಟ್ಟಿಯಲ್ಲಿ ಕೂತು ಎಳೆಯಿರೀ ಎಂದಂದು ಹೆದರಿ ಕೂಗಿದರು. ಮೇಲಿದ್ದವರು ಅವರನ್ನು ರಾಟೆ ತಿರುಗಿಸಿ ಎತ್ತುತ್ತಲಿದ್ದರು. ಉಳಿದ ೭ ಜನರು ಸಮಯಾದಕ್ಕೆ ಕಟ್ಟಿದ್ದ ಹಗ್ಗವನ್ನು ಹಿಡಿದು ಹತ್ತುತ್ತಿದ್ದರು. ರಾಟೆ ತಿರುಗಿಸುತ್ತಿರುವಾಗ ಅದರ ಕೈಹಿಡಿಗಳು ಮುರಿದುಹೋಗಿ ಬುಟ್ಟಿಗಳು ಪುನಃ ಕೆಳಗೆ ಬಿದ್ದವು. ಮೇಲಿದ್ದ ಜನಗಳು ಹೆದರಿ ಓಡಿಹೋದರು. ಪುನಃ ಸ್ವಲ್ಪ ಭಾವಿಯು ಬಿತ್ತು. ಈಗ ಮಾಡುವುದೇನು? ಹಗ್ಗ ಹಿಡಿದುಕೊಂಡು ಹತ್ತುತ್ತಿದ್ದ ಜನಗಳನ್ನು ಮಣ್ಣು ಸುತ್ತಿಬಿಟ್ಟಿತು. ಆದರೂ ಅದಷ್ಟು ಸಾಹಸಮಾಡಿ ಮಣ್ಣೊಳಗಿನಿಂದ ಎದ್ದು ಮೇಲಕ್ಕೆ ಬರಲು ಹಲಗೆಗಳು ತಡೆಯಾಗಿದ್ದವು. ಹೆಚ್ಚಾಗಿ ಉಸುರು ಬಿಡಲು ಸ್ಥಳ ಸಾಲದು. ಅಂಥವರಲ್ಲಿ ಗದ್ಗದ ಸ್ವರದಿಂದ ಕೂಗಿದರು. ಇವರು ಮೇಲೆ ಬಂದದ್ದರಿಂದ ಕೂಗು ಕೇಳಿ ಜನಗಳು ಹಲಗೆಯನ್ನು ಎಳೆದರು. ಇವರು ಮೇಲೆ ಬಂದರು. ಇವರಲ್ಲಿ ಒಬ್ಬನಿಗೆ ಮಾತ್ರ ಸೋಟೆ ತಗಲಿ ಕೈಗೆ ಬೆನ್ನಿಗೆ ಸಹ ಬಹಳ ನೋವಾಯಿತು. ಇನ್ನಿಬ್ಬರು ಕೂಡ್ಲೆ ಹಗ್ಗ ಹಿಡಿದು ಮೇಲೆ ಬಂದರು. ಹೋದವರೆಲ್ಲಾ ಆ ಭಾವಿಯ ಅಂಚಿನ ಸುತ್ತಲೂ ನಿಂತು ನೋಡುತ್ತಿದ್ದರು. ಅಷ್ಟರಲ್ಲಿ ಅಮುಲ್‌ದಾರರು ಡೆಪ್ಯುಟಿ ಕಮಿಷನರು ಅಸಿಸ್ಟೆಂಟರು ಬಂದು ಸುತ್ತಲೂ ನಿಂತ ಜನಗಳನ್ನೆಲ್ಲಾ ದೂರ ಕಳುಹಿಸಿದರು. ಆ ಕೂಡಲೆ ಸುತ್ತಲು ೫ ಗಜ ಪ್ರದೇಶವು ಮೇಲಿದ್ದ ಮನೆ ಸಹಿತ ಮತ್ತೆ ಕವುಚಿಕೊಂಡು ಬಿದ್ದಿತು. ಅಮುಲ್ದಾರರು ದೂರ ಕಳುಹಿಸದೇ ಇದ್ದರೆ ನೋಡುವುದಕ್ಕೆ ಹೋದವರೂ ಸಹ ಭಾವಿಯ ಪಾಲಾಗುತ್ತಿದ್ದರು. ಇಂಥಾ ವಿಪತ್ತಿನಿಂದ ತಪ್ಪಿಸಿದ್ದಕ್ಕೋಸ್ಕರ ಭಗವಂತನನ್ನು ಎಷ್ಟು ಪ್ರಾರ್ಥಿಸಿದರೂ ಸಾಲದು. ಕೊನೆಗೆ ಭಾವಿಯಲ್ಲಿ ಇಳಿದಿದ್ದು ಪಾರಾಗಿಬಂದ ಜನಕ್ಕೆ ಕೆಲವು ಇನಾಮುಗಳನ್ನು ಕೊಟ್ಟರು.

ದೊಡ್ಡಚಾವಡಿ ಕುಸುಕೊಂಡದ್ದು.

ಮಾಗಡಿ ತಾಲ್ಲೂಕು ಗೃಹಾರಗುಪ್ಪೆ ಗ್ರಾಮದಲ್ಲಿ ಕಳೆದ ತಾ. ೧೮ ನೇ ಬುಧವಾರ ಸಾಯಂಕಾಲ ೫ ಗಂಟೆ ವೇಳೆಯಲ್ಲಿ ಅಕಸ್ಮಾತ್ ಸಿಡಿಲು ಹೊಡೆದಂತೆ ಶಬ್ದವಾಯಿತು. ಜನಗಳು ಗಾಬರಿಯಾಗಿ ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ಬೀದಿಗೆ ಬಂದು—ಏನು! ಏನು!! ಏನೆಂದು ವಿಷಯವನ್ನು ತಿಳಿಯದೆ ಏಗ್ರಮಿಂದ ಓಡಾಡುತ್ತಾ ಶಬ್ದವಾದ ಕಡೆಗೆ ಹೋದರು. ಆ ಬೀದಿಯಲ್ಲಿ ಬಹಳವಾಗಿ ಧೂಳು ವ್ಯಾಪಿಸಿತ್ತು. ಬಾಜು ಮನೆಗಳವರು ಗುಂಪುಕಟ್ಟಿ ನೋಡುತ್ತಾ ಭಯವನ್ನೂ ಆಶ್ಚರ್ಯವನ್ನೂ ಹೊಂದಿದ್ದರು. ಆ ಬೀದಿಯಲ್ಲಿ ಇದೇ ಗ್ರಾಮದಲ್ಲಿರುವ ಬಿಜ್ಜೆಸಿದ್ದಯ್ಯನೆಂಬವರ ಹಳೇ ಚಾವಡಿಯೊಂದಿತ್ತು. ಅದು ಬೀದಿಯ ಮಟ್ಟಕ್ಕೆ ಮೂರಡಿ ಎತ್ತರದ ಮೇಲೆ ಸುಮಾರು ಆರಡಿಯಷ್ಟು ಎತ್ತರವಾಗಿ ಕಟ್ಟಲ್ಪಟ್ಟಿತ್ತು. ಮತ್ತು ಆ ಚಾವಡಿಯು ಎರಡು ಸಾಲಿನಲ್ಲಿಯೂ ಸೇರಿ ಹನ್ನೆರಡು ಕಂಭಗಳನ್ನು ಕೊಟ್ಟು ಕಟ್ಟಿದ ಜತ್ತು ಅಂಕಣವುಳ್ಳ ಮಣ್ಣುಮಾಳಿಗೆ ಎಲ್ಲಾ ಭದ್ರವಾಗಿದ್ದರೂ ಅದರ ಕಂಭಗಳು ಮಾತ್ರ ಬೀದಿಯ ಕಡೆಗೆ ಸ್ವಲ್ಪ ತಲೆಬಾಗಿದ್ದುವು. ಇದನ್ನು ಕೇಳಿಸಿ ರಿಪೇರಿ ಮಾಡಿಸಬೇಕೆಂದು ಮಾಲೀಕರು ಪ್ರಯತ್ನ ಮಾಡಿಕೊಂಡಿದ್ದರು. ಅಷ್ಟರಲ್ಲಿಯೇ ಸ್ವಲ್ಪವೂ ಉಳಿಯದೆ ಮೇಲೆ ಕಂಡಂತೆ ಮಹಾ ಶಬ್ದದೊಡನೆ ಒಟ್ಟಿಗೆ ಬಿದ್ದುಹೋಯಿತು. ನಗಲಾದರೂ ಜನಗಳ್ಯಾರೂ ಈ ಅಪಾಯಕ್ಕೆ ಸಿಕ್ಕದೆ ಇದ್ದುದು ಪರಮಾಶ್ಚರ್ಯವಾಗಿದೆ. ಇದರಲ್ಲಿ ಯಾವಾಗಲೂ ಜನಗಳು ಸೇರುತ್ತಾ ಇದ್ದುದಲ್ಲದೆ ಬೇಸಿಗೆ ಕಾಲದ ರಾತ್ರಿ ವೇಳೆ ಇದರ ತುಂಬ ಜನಗಳು ಮಲಗುತ್ತಾ ಇದ್ದರು. ಈ ಕಾಲದಲ್ಲಿಯೂ ಸಹ ರಾತ್ರಿ ವೇಳೆ ಇಬ್ಬರು ಖಾಯಮಾಗಿ ಮಲಗುತ್ತಿದ್ದರು. ಅಂಥಾ ವೇಳೆಗಳಲ್ಲಿ ಈ ಕಟ್ಟಡವು ಬಿದ್ದುಬಿಟ್ಟದ್ದರೆ ಬಹಳ ಅನಾಹುತವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ನೋಡಿದ ಜನಗಳೆಲ್ಲ ಬಹಳ ಆಶ್ಚರ್ಯಪಟ್ಟು ಇದರ ಅಪಾಯವನ್ನು ಉಪಾಯದಲ್ಲಿ ನಿವಾರಣೆ ಮಾಡುವುದಕ್ಕಾಗಿ ದೇವರು ದೊಡ್ಡವನು ದೇವರು ದೊಡ್ಡವನು ಎಂದುಕೊಂಡು ತಂತಮ್ಮ ಕೆಲಸಗಳಿಗೂ ಮನೆಗಳಿಗೂ ಹೊರಟುಹೋದರು. ಶಿಥಿಲವಾದ ಹಾಗೆ ಮುಂತಾದ ಕಟ್ಟಡಗಳಲ್ಲಿ ವಾಸಮಾಡತಕ್ಕ ಜನಗಳು ಈ ಸಂಗತಿಯನ್ನು ನೆನಪಿಟ್ಟುಕೊಂಡು, ಅಪಾಯಗಳಿಗೆ ಒಳಗಾಗದೆ ಮುಂಜಾಗ್ರತೆಯುಳ್ಳವರಾಗಿರಲೆಂದು ಕೋರಿಕೆ.

ಬೆಂಗಳೂರಲ್ಲಿ ಮಾಳಿಗೆ ಬಿದ್ದದ್ದು.

ಬೆಂಗಳೂರು ಮನೋರ್ನಪೇಟೆಗೆ ಸೇರಿದ ಶಂಕರದೇವರ ಮಠದ ಗಲ್ಲಿಯಲ್ಲಿ ಮುನಿಸ್ವಾಮಪ್ಪನ ಮನೆ ಬಾಡಿಗೆಗೆ ತೆಗೆದುಕೊಂಡು ವೇಲೂರು ಕಡೆಯ ತಿಗಳ ಜಾತಿ ಸುಮಾರು ೬೫ ವರುಷದ ರಾಮಸ್ವಾಮಿ ಎಂಬುವನು ಸಂಸಾರ ಸಹಿತ ವಾಸವಾಗಿದ್ದನು. ಈತ ತರಗಿನಪೇಟೆಯಲ್ಲಿ ಮೂಟೆ ಹೊತ್ತು ಜೀವನ ಮಾಡುತ್ತಾ ಇದ್ದನು. ಇವನ ಹೆಂಡತಿ ಸುಮಾರು ೩೫ ವರುಷದ ರಂಗಮ್ಮ, ಇವಳ ಮಗಳು ೧೦ ವರುಷದ ಮುನ್ನಾಗಿ, ರಂಗಮ್ಮನ ಅಕ್ಕನ ಮಗಳು ೧೦ ವರುಷದ ತುಳಸಿ ಸಹಾ ಇದ್ದರು. ಮುನ್ನಾಗಿ ತುಳಸಿ ಎಂಬ ಇಬ್ಬರು ಹುಡುಗಿಯರು ಕಂಬಳಿ ಮಿಲ್ಲಿನಲ್ಲಿ ಕೆಲಸ ಮಾಡಿ ತಿಂಗಳಿಗೆ ಮೂರು ರೂಪಾಯಿನಂತೆ ಆರು ರೂಪಾಯಿ ತರುತ್ತಾ ಇದ್ದರು. ಹೀಗಿರುವಲ್ಲಿ ಇದೇ ತಿಂಗಳು ೨೨ ನೆ ತಾ. ಭಾನುವಾರ ರಾತ್ರಿ ೧೨ ಗಂಟೆ ಸಮಯದಲ್ಲಿ ಮೇಲ್ಕಂಡ ಮನೆಯಲ್ಲಿ ರಂಗಮ್ಮ, ಇವಳ ಬಲಗಡೆ ಮುನ್ನಾಗಿ, ಎಡಗಡೆ ತುಳಸಿ, ಈ ಮೂರು ಜನವು ಮಲಗಿದ್ದರು. ನಾಲ್ಕು ದಿವಸದಿಂದ ಜಡಿಮಳೆ ಹಿಡಿದು ಮಾಳಿಗೆ ನೆನೆದು ಇತ್ತು. ಮಳೆ ಮಾಡಿಸಿಕೊಂಡ ಮಾಡಿ ಗಾಳಿ ಹೋದಾಗಿದೆ. ಇವರಿಗೆ ನಿದ್ದೆ ಬಂದ ವೇಳೆ ಸದರಿ ಮಾಳಿಗೆ ಕವಿಚಿಕೊಂಡು ಮೂರು ಜನಕ್ಕೂ ಮಾಳಿಗೆ ಬಿದ್ದ ಪೆಟ್ಟಿಗೆ ಪ್ರಾಣ ಹೋಗಿರುತ್ತೆ. ಸೋಮವಾರ ಮ್ಯಾಜಿಸ್ಟ್ರೇಟರು ಬಂದು ಮಹಜರು ಮಾಡಿಸಿಕೊಂಡು ದಫನ್ನಿಗೆ ಆರ್ಡರು ಕೊಟ್ಟರು. ಹೆಣಗಳ ವಾರಸುದಾರರು ತಮಟೆ ಭೇರಿ ಮೃದಂಗದೊಡನೆ ಮೂರು ಹೆಣಗಳನ್ನೂ ವಿಜೃಂಭಣೆಯಿಂದ ವರ್ಷ ಬಿಸ್ಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋದರು. ಇದನ್ನು ನೋಡುವ ಉದ್ದೇಶ್ಯ ಸಾವಿರಾರು ಜನರು ಗುಂಪುಗುಂಪಾಗಿ ಬರುತ್ತಾ ಹೋಗುತ್ತಾ ಇದ್ದರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—12

ನಿಯಮಿತ ಮೂಲಧನ ಷೇರು ಒಂದಕ್ಕೆ ೧೦೦ ರೂಪಾಯಿಗಳಂ ಬೆಲೆಯುಳ್ಳ ೬೦ ಸಾವಿರ ಷೇರುಗಳಿಂದಾಗುವ ೬೦ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೫ ಕ್ಕಿಂತ ಕಮ್ಮಿ ಆಗಲಾರದೆಂದು ತೋರುವುದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ೩ ರ ಬಡ್ಡಿ ಕೊಡುವಂತೆ ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯಮಾಡಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಫೀ ದವಾಖಲು ಮಾಡಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ಪಿ. ರಾಮಸ್ವಾಮಿ ಚೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ

ಒಕ್ಕಲಿಗರ ಸಂಘ.

98-3

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯವನ್ನೇ ಮುಖ್ಯವಾಗಿ ನಡೆಸುತ್ತಿರುವ ಒಕ್ಕಲಿಗರು ಸಮುದಾಯ ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವ ಪ್ರಯುಕ್ತ ಅಭಿವೃದ್ಧಿ ಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ೧೯೦೬ನೇ ಇಸವಿಯಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ನೇ ಇಸವಿ ಏಪ್ರಿಲ್ ತಿಂಗಳು ೨೯ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಿಲು ಬಳಿ ಇರುವ ಮಿ॥ ರಾ॥ ದೊಡ್ಡಣ್ಣಶೆಟ್ಟರವರ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಛತ್ರಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಸಮುದಾಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೩, ೪, ೭ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ತಾತ್ಪರ್ಯ ಮಾಡಿರುವುದಲ್ಲದೆ ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ. ಆದ್ದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ಮುಂಚಿತವಾಗಿ ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಎಸ್. ಸುಬ್ಬಯ್ಯ, ಬಿ. ಎ.,

ಬೆಂಗಳೂರು. ಕೆ. ಹೆಚ್. ರಾಮಯ್ಯ, ಬಿ. ಎ.,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ:—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೆ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುತ್ತದೆ. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಚನ್ನಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಡುವವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

P. SUBBROYA'S

World Renowned and most Efficacious Ayurvedic Medicines.

ಪಿ. ಸುಬ್ಬರಾಯರವರ

ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ ಆಯುರ್ವೇದ ಔಷಧಗಳು.

11-37

೧೦. ಜ್ವರಸಂಹಾರಿ—ಎಲ್ಲಾ ವಿಧವಾದ ಜ್ವರ, ವಿಷಮಶೀತ ಜ್ವರ ೨ರ, ೩ರ, ಚಳಿ, ಇನ್‌ಫ್ಲುಯೆಂಜಾ, ಚಳಿಜ್ವರ, ವಾತರೋಗ, ಇವುಗಳನ್ನು ಸಂಪೂರ್ಣವಾಗಿ ವಾಸಿ ಮಾಡುವದು. ಪೆಟ್ಟಿಗೆ ೧ಕ್ಕೆ ರೂ. ೧. ವಿ. ಪಿ. ಛಾರ್ಜು ೫ ಆಣೆ.

೧೧. ಕೂದಲು ಉದರಿಸೋಗುವದಕ್ಕೆ—ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷದಲ್ಲೇ ಉದುರಿ ಹೋಗುವದು. ಸೀಸೆ ೧ ಕ್ಕೆ ೮ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರಿವಿಗೂ ೫ ಆಣೆ.

೧೨. ಸುಗಂಧಕದಂತಚೂರ್ಣ.—ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡುವದು. ಸೀಸೆ ೧ಕ್ಕೆ ೪ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೩. ಚೇಳಿನ ಔಷಧ—ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಇದರ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು. ಸೀಸೆ ೧ಕ್ಕೆ ೪ ಆಣೆ ವಿ. ಪಿ. ಛಾರ್ಜು ೧೨ ಸೀಸೆ ವರೆಗೂ ೫ ಆಣೆ. ೧೨ ಸೀಸೆಗಳನ್ನು ಒಂದೇ ಆವರ್ತಿ ತರಿಸಿಕೊಂಡರೆ ಬೆಲೆ ೨-೮-೦ ರೂ. ವಿ. ಪಿ. ಛಾರ್ಜು ಅಲಾಯಿದ ಸಿಲೋನಿಗೆ ೬ ಆಣೆ.

೧೪. ಮಧುರಧ್ವನಿ ಮಾತ್ರೆ—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು. ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು. ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತಹ ಧ್ವನಿಯು ಹೊರಡುವದು. ಸೀಸೆ ೧ ಕ್ಕೆ ೮ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ

೧೫. ಸ್ನಾನಕ್ಕೆ ಸುವಾಸನಾ ಭಸ್ಮ—ಸುವಾಸನೆಯುಳ್ಳ ಈ ಭಸ್ಮವನ್ನು ಸ್ನಾನಕಾಲದಲ್ಲಿ ಪ್ರಾಯಶಃ ಗಂಡಸರೂ, ಹೆಂಗಸರೂ, ಮಾದುಕರೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುವಾಗಿ, ಮಿಂಚುವಂತೆ ಹೊಳಪುಕಟ್ಟಿ, ತಂಪನ್ನುಂಟುಮಾಡುವದು. ಇದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಚೂರ್ಣವು ಸ್ನಾನಕಾಲದಲ್ಲಿ ಅತ್ಯಂತೋಪಯುಕ್ತವಾದುದರಿಂದ ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿ ೧ಕ್ಕೆ ೮ ಆಣೆ. ವಿ. ಪಿ. ಹಾಸಲು ೩ ಆಣೆ.

೧೬. ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳ ಸೆಳೆತ, ಸ್ತ್ರೀಚಾರವಿರುವದು, ಅಧಿಕವಾಗಿ ಹೋಗುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರೂ ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೭. ಗೋರೋಚನ ಮಾತ್ರೆ—ಎಲ್ಲಾ ವಿಧವಾದ ಜ್ವರಗಳಿಗೂ ವಿಷಮಶೀತಜ್ವರ, ಎರಡರ ಜ್ವರ, ಪ್ರತಿದಿನ ಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲೇರಿಯಾ ಜ್ವರ, ಹೊಟ್ಟೆಯಲ್ಲಿ ಗೆಡ್ಡೆ ಆಗಿದ್ದರೆ, ಮಿದುಳು ವ್ಯಾಸಕೋಶಗಳು ಕೆಟ್ಟಿದ್ದರೆ ಗುಣಮಾಡುವದು. ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರೋಣ, ಹೆಚ್ಚಾಗಿ ಹೋಗುವದು, ಚಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ, ಇವುಗಳನ್ನು ಪರಿಹಾರ ಮಾಡುವವು. ಸೀಸೆ ೧ಕ್ಕೆ ೧೦ ಆಣೆ ವಿ. ಪಿ. ಛಾರ್ಜು ೬ ಸೀಸೆ ವರೆಗೂ ೫ ಆಣೆ.

೧೮. ಚರ್ಮರೋಗಕ್ಕೆ ಔಷಧ—ಮಕ್ಕಳಿಗೆ ಬರುವ ಕರಪಾನು, ಹುರಿ, ಪುರುಕಾಲು, ಕಜ್ಜಿ, ಆನೆಕಜ್ಜಿ ಮತ್ತು ದೊಡ್ಡವರಿಗೆ ಬರುವ ನಾನಾ ವಿಧವಾದ ಕಜ್ಜಿ ಸಂಬಂಧವಾದ ವ್ಯಾಧಿಗಳು, ನವೆ, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ಬಹಳ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಗುಳ್ಳೆಗಳೂ ಹೊರಗೆ ಹಚ್ಚುವದರಿಂದಲೇ ಜಾಗ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಛಾರ್ಜು ೨ ಬಾಟ್ಲಿ ವರೆಗೆ ೫ ಆಣೆ.

೧೯. ಕೇಶಸುವಾಸಿನಿ.—ಈ ತೈಲವು ಪೂರ್ವಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾ ದ್ರವ್ಯಯುಕ್ತವಾಗಿ ರುಚಿಕಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರ ಉಪಯೋಗದಿಂದ ಕೂದಲು, ಮಿಾಸೆ ಕಣ್ಣು ರೆಪ್ಪೆ ಸಮೃದ್ಧಿಯಾಗಿ ಬೆಳೆಯುತ್ತವೆ. ತಲೆ ಮಿದಳು ಕಣ್ಣುಗಳಿಗೆ ತಂಪುಕೊಡುತ್ತದೆ. ಬೋಳುತಲೆ, ಸುರು ಮುಂತಾದ್ದನ್ನು ವಾಸಿಮಾಡುತ್ತದೆ ವಿಲಾಯಿತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದಾಗಿರುತ್ತದೆ. ಬೆಲೆ ರೂ. ೧ ವಿ. ಪಿ. ಛಾರ್ಜು ಎರಡು ಬಾಟ್ಲಿ ವರೆಗೆ ೫ ಆಣೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to :—**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟೋನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೬—೭—1906 ರಿಂದ 13—7—1906 ರ ವರೆಗೆ

ಸ್ಥಳ	ಪ್ಲೇಗ್ (ತಗಲಿದ್ದು.)	ಸತ್ತದ್ದು.	ಹೋದವಾರ ಈ ವಾರ ಸಂಖ್ಯೆ.
ಬೆಂಗಳೂರು ಪಟ್ಟಣ	0	0	0
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	4	2	2
ಮೈಸೂರು ,,	3	3	1
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಮಕೂರು ಡಿಸ್ಟ್ರಿಕ್ಟು	0	6	3
ಹಾಸನ ,,	2	1	0
ಚಿತ್ರದುರ್ಗ ,,	0	0	0
ಕಡೂರ್ ,,	18	10	0
ಶಿವಮೊಗ್ಗ ,,	0	0	28
ಜುಮ್ಲಾ	27	16	44

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಗುರುವಾರದಿಂದ ಶ್ರಾವಣ ಶುದ್ಧ ದ್ವಾದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಜೂಲೈ.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಶ್ರಾವಣ ಮಾ
26	ಗುರು †	ಪಂಚಮಿ	24-48	ಹಸ್ತ	26 6	11
27	ಶುಕ್ರ §	ಷಷ್ಠಿ	20-40	ಚಿತ್ರಾ	23-56	12
28	ಶನಿವಾ ::	ಸಪ್ತಮಿ	15-52	ಸ್ವಾತಿ	20-48	13
29	ರವಿವಾ	ಅಷ್ಟಮಿ	10-10	ವಿಶಾ	17-16	14
30	ಚಂದ್ರ	ನವಮಿ	4-28	ಅನೂ	53-43	15
31	ಕುಜ ¶	ಏಕಾದಶಿ	52-10	ಮೂಲ	9-9	16
1	ಬುಧ ::	ದ್ವಾದಶಿ	46-5	ಜ್ಯೇ	4-53	17

† ಗರುಡಪಂಚಮಿ, ಚಿತ್ರವೀಣಾವ್ರತಂ § ತಿಥಿದ್ವಯಂ, ಶುಕ್ರವಾರಂ. :: ಅಷ್ಟಮಿತಿಥಿಃ, ಶ್ರಾವಣ ಶನಿವಾರಂ. ¶ ಮಂಗಳಗೌರೀವ್ರತಂ, ಸ್ಮಾರ್ತ ಏಕಾದಶಿ :: ದಾಮೋದರ ದ್ವಾದಶಿ, ವೈಷ್ಣವ ಏಕಾದಶಿ, ಉಪವಾಸ

ಪೇಟೆ ಧಾರಣೆ.

ದಿನಸಿ		ಮೈಸೂರು,	ಬೆಂಗಳೂರು
ಕಬ್ಬಿ ಅಕ್ಕಿ ಪಲ್ಲ ೧ಕ್ಕೆ	ರೂ.	೧೩-೦-೦	೧೩-[illegible]
ಕೆಂಬತಿ ಅಕ್ಕಿ ಅವಲ್	..	೧೭-೦-೦	೧೨-೧೨
,, ದಯಂ	..	೧೩-೧೨-೦	೧೨-[illegible]
ಜಿರಾಶಿ ಅಕ್ಕಿ	..	೧೩-೮-೦	೧೨-೭
ಸಣ್ಣಕ್ಕಿ ಅವಲ್	..	೧೫-೦-೦	೧೩-೭
,, ದಯಂ	..	೧೩-೭-೦	೧೩-೦
ತೊಗರಿ ಬೇಳೆ ಪಲ್ಲ ೧ಕ್ಕೆ	..	೧೧-೮-೦	೧೨-೦
,, ದಯಂ	..	೧೦-೭-೦	೧೧-೦
ಹೈ ರಾಗಿ ಪಲ್ಲ ೧ಕ್ಕೆ	..	೭-೬-೦	೨-೦
ಕಾರಾಗಿ	..	೩-೧೨-೦	೬-೦೨
ಜೋಳ	..	೯-೮-೦	೭-೧೨
ಹಲಸಂದೆ ಪಲ್ಲ ೧ಕ್ಕೆ	..	೧೧-೦-೦	೧೮-೭
ಬಿಳೇ ಅವರೆ	..	೧೦-೪-೦	೧೧-೦
ಹೆಸರು	..	೧೨-೦-೦	೧೨-೦
ಉದ್ದು	..	೧೨-೩-೦	೧೧-೦೨
ಕಡಲೆ	..	೧೨-೦-೦	೧೧-೭
ಎಳ್ಳು ಸೆ ೧೨೩ ಕ್ಕೆ	..	೨೧-೭-೦	೨೧-೦
ಹುರಳಿ	..	೧೮-೭-೦	೧೮-೦
ಹರಳು ೧೨೩ ಸೇರಿಗೆ	..	೧೪-೭-೦	೧೬-೦
ಹಿಂಗೇಕಾಯಿ ಮಣ ೧ಕ್ಕೆ	..	೨-೭-೦	೩-೦
ಮೆಣಸಿನಕಾಯಿ	..	೮-೦-೦	೩-೭
,, ದಯಂ	..	೩-೮-೦	೩-[illegible]
ಬೆಲ್ಲ ದೊಡ್ಡ ಅಚ್ಚು	..	೮-೩-೦	ಮ ೧-೦[illegible]
ಒಳ್ಳೆಣ್ಣೆ ಮಣ ೧ಕ್ಕೆ	..	೪-೮-೦	೪-[illegible]
ಹರಳೆಣ್ಣೆ ,,	..	೪-೭-೦	೪-೩
ಕೊತ್ತುಂಬರಿ ಪಲ್ಲ ೧ಕ್ಕೆ	..	೧೦-೭-೦	೧೦-೦
ಉಪ್ಪು ,,	..	೪-೧೦-೦	೬-[illegible]
ಹುಣಸೇ ಹಣ್ಣು	..	೦-೧೨-೦	೦-೧೪
,, ಹಳೇದು	..	೦-೭-೦	೦-೯
ತುಪ್ಪ ಮಣ ೧ಕ್ಕೆ	..	೧೭-೦-೦	೧೬-[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೪-೮-೦	೫-[illegible]
ತೆಂಗಿನಕಾಯಿ ೧೦೦ ಕ್ಕೆ	..	೮-೭-೦	೮-೧೦
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೦-೧[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೦
ಚಿನ (ಪವನ್) ಕೆಂಪು	..	೧೪-೮-೦	೧೪-[illegible]
,, ,, ಪಸಿಮೆ	..	೧೪-೧೦-೦	೧೪-೯
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೮-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೭೪-೦-೦	೭೦-[illegible]

Printed and published by the Rev. E. Thompson, M.A., the Proprietor and Manag[er] Wesleyan Mission Press, Mysore. 26/7/1906.

ವೃತ್ತಾಂತ ಪತ್ರಿಕೆ.

REGISTERED M. 20.

ಯಂ ೧ ದು ಡ್ಡು — ಕ್ರೈ ಯಂ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೨೦ — ಮೈಸೂರು—ಸನ್ ೧೯೦೬ ನೇ ಇಸವಿ ಆಗಸ್ಟ್ ತಾರೀಖು ೨ ನೇ ಗುರುವಾರ. — ಸಂಚಿಕೆ ೯

ಈಗತಾನೇ ಕಟ್ಟು ಬಿಚ್ಚಿದೆ.

೨,೦೦೦ ಬಾಟ್ಲಿಗಳ ಕೇಶರಂಜನ ತೈಲ.

40-21

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ವಿಕರಿಮಾಡಿದ್ದಿಲ್ಲ. ಈಗದು ಕ್ರಯ ಮಾತ್ರ:—

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨—೧೨—೦

ಸಣ್ಣ ಬಾಟ್ಲಿ ಒಂದಕ್ಕೆ ರೂ. ೦—೧೧—೬

ಪೆಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೮—೪—೦

" ೩ " " " ರೂ. ೮—೦—೦

ಬೇಕಾದವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ:—ಎಲ್. ಎ. ಫೋರವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೋಮೋಸಿಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಹೋಟೆಲ್, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮುಖ್ಯವಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಮುಳ್ಳುಚುಚ್ಚು, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಬೆಚ್ಚಿರುವದು, ಬೆಂಕಿಯಲ್ಲಿ ಸುಟ್ಟು ಹೋದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ವಾಸಿಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ನೋವು ಇದ್ದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ನೋವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ಇಟ್ಟಿದೆ. ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮೋಸಿಯಾ ಕಂಪೆನಿ, ೨೩ ಸೇಂಟು ಜಾರ್ಜ್ ರೋ, ಮದ್ರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು.

ತಯಾರು ಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35-25

ವ್ಯಾಪಾರದ ಹೆಗ್ಗುರ್ತು

ಕಾಫಿಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮವಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸನ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

1-101



ಇದು ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯಂಗರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ೪ ೩. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಂದು ಓಮಂ ಕರ್ಪೂರವನ್ನು ನಾನೂ ನನ್ನ ಸಹೋದ್ಯೋಗಿಗಳೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಸರಿರುವ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೇಂಟ್ ಜಾರ್ಜ್ ಕ್ರಾಸ್, ಮದ್ರಾಸ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

- - - - -

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ .. .. ರೂ. ೧—೧೪—೦

" " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-10

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ಮಾಲಿನ ಸರ್ಗನ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರೊಮಾಲ್ಲಿ ... ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಚ್ಚಿನಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟು ಮಾಂಡ್ವಿ, ಮುಂಬಯಿ

ಟಪಾಲ ಖರ್ಚ ಪ್ರಕಟ! ಟಪಾಲ ಖರ್ಚ ಪ್ರಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91-7

ವಿಲಾಯತೀ ಮಸೀಗೆ ಟಕ್ಕರಕೊಡುವಂಥ ಉತ್ತಮ ಮಸಿಗಳಿದ್ದು, ಅಗ್ಗವಾದದ್ದೂ ಇದೇ ಹಿಂದುಸ್ತಾನದಲ್ಲಿ ನಮ್ಮದೇ ಇರುತ್ತದೆ ಒಮ್ಮೆ ಅನುಭವ ತಕ್ಕೊಳ್ಳಿರಿ. ೧೦೦ ಪುಡಿಕೆಗಳಿಗೆ ೧ ರೂಪಾಯಿ. ಟಪಾಲ ಖರ್ಚ ಪ್ರಕಟ.

ವಿಳಾಸ:—ವಾಯ್. ಜಿ. ಏಕ್ಷೀರ, ಸ್ಟೇಶನರ, ಪುಣೇ ಸಿಟಿ.

ತ್ವರೆಮಾಡಿರಿ! ಬಿಡಬೇಡಿರಿ!!

ಇಂಥಾ ಸಮಯ ಮುಂದೆ ಸಿಗಲಿಕ್ಕಿಲ್ಲಾ 94-5

ರಾಸ್ಕೋಪ ಸಿಸ್ಟಂ ಲಿವರ್ ವಾಚ್.

ಬಂದೋಬಸ್ತು. ಮಜಬೂತ.



ಇದರ ಸಂಗಡ ಸ್ಪ್ರಿಂಗ್, ಕನ್ನಡಿ, ಪೆಟ್ಟಿಗೆ, ಹೀಗೆ ೩ ಸಾಮಾನು ಕಳುಹಿಸುತ್ತೇವೆ. ೩ ವ. ಗ್ಯಾರೆ. ಒಂದೇಸಾರಿ ೩ ವಾಚು ತರಿಸಿಕೊಂಡರೆ ಟ ಖ ಮಾಫಿ. ೬ ವಾಚು ತರಿಸಿಕೊಂಡರೆ ೧ ವಾಚು ಬಕ್ಷೀಸು ವಾಚಿಗೆ ಬೇಕಾಗುವ ಸರಪಣಿಯ ಕಿಮ್ಮತು ೦—೮—೦, ದುರ್ಬೀನ ಯಂತ್ರ ೦—೮—೦, ವಾಚಿನ ಕವರು ೦—೮—೦. ವಿ ಪಿ. ಇಂದಲೂ ರವಾನಿಸುತ್ತೇವೆ.

ವಿಳಾಸ:—ಜಿ. ಯಲ್. ಜೋಶಿ ಅಂಡ್ ಕೋ,

ಪೋಸ್ಟ್ ಶಿರ್ಸಿ, ಜಿಲ್ಲಾ ಉತ್ತರ ಕನಡಾ.

ಶ್ರೀ ದೇವಿಯೆಡಿ! ಸುಲಭ ಖರೀದಿ!!

ಕ್ರಯ ರೂ. ೬ ಕ್ರಯ ರೂ. ೬

105-1

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನು ಎಂದಿಗೂ ಕಪ್ಪಾಗದಿರುವ ಸೀಮೆ ಹಿತ್ತಾಳೆಯಿಂದ ಅತಿಸುಂದರವಾದ ಪೋಗರೆ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ. ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಪ್ರಯೋಜನವಿಲ್ಲ. ಕ್ರಯ ರೂ. ೬—೦—೦. ವಿ ಪಿ ಪಿ ಖರ್ಚು ೦—೬—೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಗುರುಬಸವ ಅಂಡ್ ಕಂಪನಿ, ಸಾಹುಕಾರ್ ಪೇಟೆ, ಮದರಾಸ್.



ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 105-1

ಕಥಾಸಂಗ್ರಹ	೧ ರಿಂದ ೩ ಭಾಗಗಳು	ಕ್ರಯ	೦—೬—೦
	ವಿ. ಪಿ. ಪಿ ಮೂಲಕ		೦—೩—೦
ಅನುಭವಸಾರ		ಕ್ರಯ	೦—೨—೦
ಗ್ರೀಕರ ಚರಿತ್ರೆ			೦—೨—೦
ರೋಮನರ ಚರಿತ್ರೆ			೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು. ಇದರ ಕ್ರಯ ಎಂಟೇ ಆಣೆ ವಿ ಪಿ ಪಿ ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ. ಅನೇಕ ಚಿತ್ರರೂಪಗಳು ಇವೆ. ಇದನ್ನು ಕರಿತಾ ರಾಜಧರ್ಮಪ್ರವೀಣ ಮಿ|| ರಾ|| ರಂಬೋಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದಾರೆ. ಕ್ರಯ ೦—೮—೦ ವಿ. ಪಿ. ಪಿ. ಮೂಲಕ ೦—೧೦—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೩—೦
ಕ್ರಿಮಿವರ್ಗವರ್ಣನೆ	೦—೧—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು:— ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ. ಪಿ. ಪಿ. ಮೂಲಕ ೨—೩—೦.

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ದೇವಾಲಯಗಳ ವರ್ಣನೆ	೦—೧—೦
ಸ್ತ್ರೀಯರಿಗೆ ಹೇಳಿದ ಕಥೆಗಳು	೦—೧—೦

ಬಾಲಿಕಾಗೀತಮುಕ್ತಾ ಕಲಾಪ, ಗೀತಮಂದಾರ ೦—೨—೦, ಕನ್ಯಾಗೀತಾವಳಿ ೦—೪—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಹಿಂದೂದೇಶಪ್ರದಕ್ಷಿಣ. ಇದರಲ್ಲಿ ನೂರಾರು ಶೋಭಿತವು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಮೊದಲನೇ ಮುದ್ರಣವಾಗಿದ್ದು ಪೋಗಿತ್ತಾ ಬಂದಿದೆ. ನಮ್ಮಲ್ಲಿ ಇನ್ನೂ ನೂರಾರು ನಾಲ್ವತ್ತು ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿ. ಇದರ ಕ್ರಯ ೦—೮—೦ ವಿ. ಪಿ. ಪಿ. ಮೂಲಕ ೦—೧೧—೦

ಮುದ್ರಾಮಂಜೂಷ ೧—೪—೦. (ವಿ. ಪಿ. ಪಿ. ಮೂಲಕ್ ೧ ೧೦ ೦)

ನಮ್ಮ ವಿಳಾಸ —

ಮ್ಯಾನೇಜರ್, ಸಿ ಎಲ್ ಎನ್. ಬುಕ್ ಡಿಪೋ, ಮೈಸೂರು.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

95-5



ಬೆನ್ನು ಉಳುಕಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಚಳಿಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ. ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿನಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮಾಂಸಖಂಡಗಳಲ್ಲಿ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಸ್ವದೇಶಿ ನಾನಾ ಬಗೆಯ ಚಿತ್ರ ಕಾರ್ಡುಗಳು.

101-1

ಬಾಲಿ, ಯಾ ಸುಂದರ ಚಿತ್ರಗಳುಳ್ಳದ್ದು ನಮೂನಾ ೧೬ ಕಾರ್ಡುಗಳಿಗೆ ೧|| (ಸ್ಟ್ಯಾಂಪು ಹೊರತು), ೧೦೦ ಕಾರ್ಡುಗಳಿಗೆ ೬ ಆಣೆ. ಸ್ವದೇಶಿ ಪೆಂಫ್ಲೆಟ್ ಸೀಸೆಗೆ ೬ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರ್‌ಸೈಜ್ ಪುಸ್ತಕಗಳು, ಸ್ವದೇಶಿ ಸಂಗೀತದಿಂದ ಟೋಪಿಗಳು, ಇವುಗಳಿಗೆ ಟಿಡ್ಡಾಬಟನ್ ಫ್ರೇಂ. ವರ್ತಕರಿಗೆ ಒಳ್ಳೆ ಕಮಿಷನ್, ಇಂಗ್ಲಿಷಿನಲ್ಲೆ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟ್ಯಾಂಪ್ ಇಟ್ಟು ಬರೆದುಕೊಳ್ಳತಕ್ಕದ್ದು. Bhatt & Co., Poona city.

ಪರಿಮಳ ನಶ್ಯದ ಪುಡಿ

102-1

ಪರಿಮಳ ಒಸ್ಯದ ಪುಡಿ ಡಬ್ಬಿ ೧ಕ್ಕೆ	0—9—0
ಭಾಂಗಿ ಖರ್ಚು	0—3—0
ಸೋಡಾ ನಶ್ಯದ ಪುಡಿ ಡಬ್ಬಿ ೧ಕ್ಕೆ	0—6—0
ಭಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ನಿಟ್ಟಿನ ಸೌಕ್ಯಾರ್ಯ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಸುಗಂಧಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯಿಂದ ಆನಂದವನ್ನು ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ವಾಸಿಮಾಡುವದಕ್ಕೆ ... ವಾದಿಗಳು ಅದನ್ನು ಪರೀಕ್ಷಿಸಿ ...

ಪ್ರತಿ ಪಟ್ಟಣದಲ್ಲಿಯೂ ... ನಶ್ಯದಪುಡಿ ಇಟ್ಟು ಮಾರುವವರಿಗೆ ... ಏಜೆಂಟರನ್ನು ಕಳುಹಿಸಿದರೆ ಕೂಡಲೆ ... ರಿನಲ್ಲಿ ಇಟ್ಟು ಕಳುಹಿಸಿದರೆ ನಾವು ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—ಮ್ಯಾನೇಜರ್, ದಮ್ಮೀ ವೈದ್ಯಶಾಲಾ, 60 ಬ್ರಾಡ್‌ವೇ ಸ್ಟ್ರೀಟ್, ಸಾಹುಕಾರ್ ಪೇಟೆ, ಮದ್ರಾಸ್.

೧೮೯೯ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

(ಸ್ಕಾಟ್ಸ್ ಇಮಲ್ಶನ್)

ಎಂಬ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ.—

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು;

ಸಕಲವಿಧ ಕೃಶತ್ವಗಳು, ಮಾಂಸಖಂಡಗಳ ಕ್ಷೀಣತೆ;

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿ ಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ. 57-20

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಚಿಹ್ನೆಯುಳ್ಳ ಸಾರವ ಔಷಧವನ್ನೇ ಕೇಳಿಕೊಳ್ಳಿ.

ಅದ್ಭುತದ ಮೇಲೆ ಅದ್ಭುತ.

86 10

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ತಲೆನೋವು, ಎಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಗಂಟಲುಹುಣ್ಣು, ಕೀಲುಬೇನೆ, ಎದೆಗಳ ನೋವು, ಆಸ್ತ್ಮಾ ಈ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಪ್ಲೆಮೆಂಟ್ ಯವರ ಮ್ಯಾಜಿಕ್ ಬಾಮ್ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚುವರು. ಒಳಕ್ಕೆ ಸೇವಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಬಂದಿಸುತ್ತದೆ. ... ಉಪಯೋಗಿಸುವ ವಿಧಾನ ಮುದ್ರಿಸಿ ಬಾಟ್ಲಿ ಜೊತೆಯಲ್ಲಿ ಅಚ್ಚಾದ ಚೀಟಿಗಳಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಗಳು ಬಿಟ್ಟು ಹೋಗಿ ಸುಖಸಂತೋಷಗಳುಂಟಾಗುತ್ತೆ. ಔಷಧವನ್ನು ಅನುಭವಿಸುವುದರಲ್ಲಿ ಕೂಡಲೇ ಬರುವ ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರು ಎಂದೂ ಎಂದಿಗೂ ವ್ಯಸನಪಡುವದಿಲ್ಲ. ಇದರ ಗುಣವು ಅಷ್ಟು ಅಪೂರ್ವವುಳ್ಳದ್ದು. ಕ್ರಯ ೨—೦ ಬಾಟ್ಲಿಗೆ ೧೦ ಆಣೆ, ೩ಕ್ಕೆ ೨ ರೂಪಾಯಿ, ೬ಕ್ಕೆ ರೂ ೩|| ರೂಪಾಯಿ, ೧೨ಕ್ಕೆ ೬ ರೂಪಾಯಿ. ಅಂಚೆ ಖರ್ಚು ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ

ನಮ್ಮ ವಿಳಾಸ ...ಪ್ ಕಂಪೆನಿಯವರು ಅರಳಿ, ಸಿದ್ದೇಶ್ವರ ರೋಡ್, ದೇವರಿ, ಮದರಾಸ್.

ವೃತ್ತಾಂತ ಪತ್ರಿಕೆ.

೦

ಸನ್ ೧೯೦೬ ನೇ ಇಸವಿ ಆಗಸ್ಟ್ ತಾ|| ೨ ನೇ ಗುರುವಾರ

ಕಾಲಸ್ಥಿತಿಯು

ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ತಾಲೂಕ್ ವರ್ತಮಾನಗಳಿಂದ ಈ ಸಂಸ್ಥಾನದ ಅನೇಕ ಭಾಗಗಳಲ್ಲಿ ಮಳೆ ಸಕಾಲದಲ್ಲಿ ಬೀಳದೆ ವ್ಯವಸಾಯಕಾರ್ಯಗಳು ನಿಂತುಹೋಗಿದ್ದದ್ದೂ ಕೆರೆ ಕಟ್ಟೆ ಬಾವಿಗಳು ಒಣಗಿ ಪ್ರಜೆಗಳಿಗೂ ಗೋಕರುಗಳಿಗೂ ಮುಖ್ಯವಾಗಿ ಬೇಕಾದ ನೀರಿಗೆ ತುಂಬಾ ಕಷ್ಟಪ್ರಾಪ್ತವಾಗಿದ್ದದ್ದೂ ಅನೇಕರಲ್ಲಿ ಈ ಸಲ ಕ್ಷಾಮ ಪ್ರಾಪ್ತವಾಗಬಹುದೆಂಬ ಭೀತಿಯನ್ನುಂಟುಮಾಡಿದ್ದವು. ಆದರೆ ಈಚೆಗೆ ನಮ್ಮ ಬಾತ್ಮೀದಾರರ ಕಾಗದಗಳಿಂದ ಎಲ್ಲಾ ಕಡೆಗಳಲ್ಲೂ ತಕ್ಕಷ್ಟು ಮಳೆ ಆಗಿದೆ ಎಂತಲೂ ವ್ಯವಸಾಯಕಾರ್ಯಗಳು ತೃಪ್ತಿಕರವಾಗಿವೆ ಎಂತಲೂ ತಿಳಿದು ಸಂತೋಷಿಸುತ್ತೇವೆ. ಮೈಸೂರು ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳಲ್ಲಿ ತಕ್ಕಷ್ಟು ಮಳೆ ಆಗಿಲ್ಲವಾದ್ದರಿಂದ ಜೀವನಕ್ಕೆ ಕಷ್ಟಪಡುವಂಥಾ ಜನರನ್ನು ಕೂಡಿಸಿ ಬಂದೆಂದು ಕೆರೆಗಳಲ್ಲಿ ಮುಂತಾದ ಕಾಮಗಾರಿಯನ್ನು ಮಾಡಿಸುತ್ತಿದ್ದಾರೆ ಮರುದಿನ ವಾರಗಳಲ್ಲಿ ಇನ್ನೂ ಎಲ್ಲಾ ಕಡೆಗಳಿಗೂ ಮಳೆಯಾಗಬಹುದೆಂಬ ನಿರೀಕ್ಷೆಯುಂಟು. ಆದಕಾರಣ ಸ್ವಲ್ಪ ಬರವಿರುವದಾಗ್ಯೂ ಈ ಸಲ ಸುವೃಷ್ಟಿಯೂ ಸುಭಿಕ್ಷವೂ ಆಗಲೆಂದು ಗೊಳ್ಳುವವೆಂದು ಪ್ರಾರ್ಥಿಸುತ್ತೇವೆ.

"ಉಂಡು ನಗದಿಹ ಮೋರೆಯುಮವ ಕಾಣಿಸೋರೆ"

ರಾಮರಾಯರು ಪಡಸಾಲೆಯಲ್ಲಿ ಕುಳಿತಿದ್ದರು. ಸ್ವಲ್ಪ ಚಳಿಗಿದ್ದ ಕಾರಣ ಅವರು ಶಾಲನ್ನು ಬಿಚ್ಚಿಗೆ ಹೊದ್ದುಕೊಂಡು ಆ ಶಾಲೆಯ ಒಂದು ಮೂಲೆಯಲ್ಲಿ ಕುಳಿತು ಎದುರಿನ ಬೀದಿಯಲ್ಲಿ ಓಡಿಕೊಳ್ಳುತ್ತಾ ಕುಳಿತಿದ್ದ ಮಗನನ್ನು ನೋಡುತ್ತಾ ಏನೋ ಯೋಚನೆ ಮಾಡುತ್ತಾ ಇದ್ದರು. ಅವರಲ್ಲಿ ಆಗಾಗ್ಗೆ ಹಾದುಬರುತ್ತಾ ಇದ್ದ ಒಬ್ಬ ಸ್ನೇಹಿತರು ಬಂದು ಕೂತುಕೊಂಡು ಬಾ! ಏನು ಚಳೆ ಸ್ವಾಮಿ! ಜಲ್ದೆಲ್ಲಾ ನಡುಗುತ್ತದೆ. ಇಂಥಲ್ಲಿ ನನ್ನಂಥ ಬಡವರು ಎಷ್ಟು ಕಷ್ಟಪಡಬೇಕಾಗುತ್ತದೆ! ಹೊದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ! ಇಂಥಾದ್ದರಲ್ಲಿ

ವು ಬೇರೆ. ಬಡವರ ಪಾಡು ಏನು ಹೇಳಬೇಕು! ಈ ಘೋರ ಸಂಸಾರವೆಂಬ ಬಲೆಯಲ್ಲಿ ವಿಧಿಯು ನಮ್ಮನ್ನು ತಳ್ಳಿ ಬಹಳ ಕಾಟಪಡಿಸುತ್ತಾನೆ. ಈ ಜನ್ಮ . . .

ದಾ ರಾ.—ಛಿ! ಛೀ! ಕೃಷ್ಣಪ್ಪನವರೇ, ನಿಲ್ಲಿಸಿ! ನಿಲ್ಲಿಸಿ! ದೇಹ ಪ್ರಲಾಪ!

ಕೃ.—ಪ್ರಲಾಪವೆಂದು ಹೇಳುತ್ತೀರಾ! ಈ ಹಾಳು ಜನ್ಮದಲ್ಲಿ ಇನ್ನೆಲ್ಲಾ ಸಹಿಸಬೇಕಾಗಿ ಬಂದಿದೆಯಲ್ಲಾ. ದೇವರು ಎಷ್ಟು ಪಕ್ಷಪಾತಿಯೋ? ನಿಮಗೇನು ಹೊಟ್ಟೆಗೆಯು ತುಂಬಾ ಹೊನ್ನಿದೆ. ಕಾಣದವರೂ ಇಲ್ಲದೆ. ಸುಖವಾಗಿ ಉಂಡುಕೊಂಡು ಕಾಲಕ್ಷೇಪ ಮಾಡುತ್ತೀ. ನಮ್ಮಂಥ ಬಡವರ ಪಾಡು ನಿಮಗೆ ಗೊತ್ತೇ ಇಲ್ಲವೇ? ನಾನು ಪ್ರಲಾಪಿಸುವದಕ್ಕೆ ಕಾರಣವಿಲ್ಲವೇ?. . . . . . .

ಎನ್ನು ನಮ್ಮರಲ್ಲಿ ರಾಮರಾಯರ ಮಗನು ಓದುತ್ತಿದ್ದ ಶ್ಲೋಕವು ಸ್ಪಷ್ಟ ಕಿವಿಗೆ ಬಿತ್ತು. ಕೂಡಲೆ ರಾಮರಾಯರು ಕೃಷ್ಣಪ್ಪನವರ ನ್ನು ನೋಡಿ—ನಮ್ಮ ಹುಡುಗನು ಓದಿದ್ದು ಕೇಳಿದಿರಾ? "ಉಂಡು ಹೋದ ಮೇಲೆ ಯದುವೆ ಕಹಿಸೋರೆ" ಎಂಬಂತೆ ನೀವು ದೇವರಲ್ಲಿ ಎಷ್ಟೋ ಉಪಕಾರಗಳನ್ನು ಪಡೆದಿದ್ದಾಗ್ಯೂ ಉಪಕಾರ ಸ್ಮರಣೆಯಿಲ್ಲ ಮನಸ್ಸು ಬಂದಂತೆ ಮಾತಾಡುವದು ತರವಲ್ಲ. ಚೆನ್ನಾಗಿ ಊಟಮಾಡಿದ ಮೇಲೆ ಕಹಿ ಸೋರೆಯನ್ನು ತಿಂದವನಂತೆ ಮುಖವನ್ನು ವಿಕಾರ ಮಾಡಿಕೊಳ್ಳುವದು ನ್ಯಾಯವೇ?

ಕೃ.—ದಾಯರೇ, ನಿಮ್ಮ ನ್ಯಾಯವೇ ನನಗೆ ಗೊತ್ತಾಗುವದಿಲ್ಲ. ದೇವರಲ್ಲಿ ಉಪಕಾರವನ್ನು ಪಡೆದರೂ ಆತನನ್ನು ದೂಷಿಸತಕ್ಕ ಅಧಮನಲ್ಲ ನಾನು! ದೇವರು ನನಗೇನು ಉಪಕಾರವನ್ನು ಮಾಡಿದ್ದಾನೆ? ನಮ್ಮ ನೆರೆಮನೆಯ ಸುಬ್ಬಾಬಟ್ಟನಿಗಿಂತ ನಾನು ಕೀಳಾದವನೇ? ಅವನು ದುರಹಂಕಾರಿ, ಅವನು ವಿದ್ಯೆಯವದಕ್ಕೆ ವಿಂತಿಯೇ ಇಲ್ಲ. ಹಿಂದುವವರನ್ನು ಕೊಡಿರುವವರ ಮೇಲೆ ತಳ್ಳಿ ಜಗಳ ತಂದಿಕ್ಕಿ ತಮಾಷೆ ನೋಡುವವನು ಊರೆಲ್ಲಾ ಸುಲಿದು ತನ್ನ ಮನೆ ತುಂಬಿಕೊಳ್ಳುತ್ತಾ ಅವನನ್ನು ಹಿಡಿಯುವವರೇ ಇಲ್ಲ. ಇಂಥವನಿಗೆ ದೇವರು ಐಶ್ವರ್ಯವನ್ನು ಕೊಟ್ಟಿದ್ದಾನೆ. ಮಾನದಿಂದ ಜೀವಿಸಿಕೊಂಡಿರಬೇಕೆಂದು ಎಷ್ಟೋ ಪ್ರಯಾಸ ಪಡತಕ್ಕವನಾದ ನನಗೂ ನನ್ನಂಥ ಬಡವರಿಗೂ ಅನ್ನಕ್ಕೂ ಬಟ್ಟೆಗೂ ಕೊರತೆ. ಕೆಟ್ಟಾಗಿ ಹೇಳಿದರೆ ಪ್ರಲಾಪವೆನ್ನುತ್ತೀರಿ.

ದಾ. ರಾ.—ನಿಮಗೆ ಕೊರತೆಯಿಲ್ಲವೆಂದು ನಾನು ಹೇಳುವದಿಲ್ಲ. ಹಾಗಾದರೆ ದೇವರು ನಿಮಗೆ ಉಪಕಾರ ಮಾಡಿಲ್ಲವೋ? ಅದನ್ನು ಹೇಳಿ. ಕೊರತೆಯಿಲ್ಲದ ಪ್ರಾಣಿ ಯಾರಿದ್ದಾನೆ? ಕೊರತೆಗಳನ್ನು ಹೇಳಿಕೊಂಡು ಹೋದರೆ ಅದೆಲ್ಲಿ ಮುಗಿಯುತ್ತದೆ? ಹನುಮಂತನ ಬಾಲವು ಬೆಳೆದ ಹಾಗೇ ಸರಿ. ನೀವು ಆ ಸುಬ್ಬಾಬಟ್ಟನ ವಿಷಯವಾಗಿ ಹೇಳಿದ್ದೆಲ್ಲಾ ನಿಜವಾಗಿ ನೋಡಿದರೆ ಅವನಿಗೆ ನಷ್ಟ. ಅವನಷ್ಟು ಕೊರತೆಯುಳ್ಳ ಪ್ರಾಣಿ ಇನ್ನೊಬ್ಬನಿಲ್ಲವೆಂದು ಹೇಳಬೇಕಾಗುತ್ತದೆ. ಅವನಿಗೆ ಮಾನವೆಂಬುದೊಂದಿದ್ದರೇನು ಬಂತು? ಅವನ ಹೊನ್ನನ್ನೆಲ್ಲಾ ನೀವು ತೆಗೆದುಕೊಂಡು ನಿಮ್ಮ ಗೌರವವನ್ನೆಲ್ಲಾ ಅವನಿಗೆ ಕೊಟ್ಟುಬಿಡುವಿರಾ? ಮಾನವೇ ಪ್ರಾಣಕ್ಕಿಂತ ಶ್ರೇಷ್ಠವಾದದ್ದು! ಮಾನವು ಹೋದ ಮೇಲೆ ಬೇರೆ ಏನು ಎಷ್ಟಿದ್ದರೂ ಫಲವೇನು? ನಾನು ಮಿಷನ್ ಸ್ಕೂಲಿನಲ್ಲಿ ಓದಿದ ಒಂದು ಸಂಗತಿಯು ಯಾವಾಗಲೂ ನೆನಪಿಗೆ ಬರುತ್ತದೆ.

ಕೃ.—ನಿಮ್ಮನ್ನು ಬಿಡಿ ಸ್ವಾಮಿ! ಯಾವಾಗ ನೋಡಿದರೂ ಮಿಷನ್ ಸ್ಕೂಲಿನ ಪಾದ್ರಿಗಳು ಹೇಳಿಕೊಟ್ಟದ್ದನ್ನೇ ಜಪಿಸುತ್ತಾ ಇದ್ದೀರಿ. ಆದರೂ ಬೈಬಲ್ ಪುಸ್ತಕವು ಕಳೆಯತಕ್ಕದ್ದಲ್ಲ. ನಿಮ್ಮ ನೆನಪಿಗೆ ಬಂದದ್ದೇನು ಹೇಳಿ ಕೇಳೋಣ.

ದಾ. ರಾ.—ಅದೇನಂದರೆ—ದೇವರು ಜಗತ್ಸೃಷ್ಟಿಯನ್ನು ಪರಾಂಬರಿಸುವ ವಿಷಯವೇ. ಕಾಗೆಗಳನ್ನು ನೋಡಿರಿ ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ. ಅವುಗಳಿಗೆ ಉಗ್ರಾಣವಾಗಲಿ ಕಣಜವಾಗಲಿ ಇಲ್ಲ. ಆದಾಗ್ಯೂ ದೇವರು ಅವುಗಳನ್ನು ಸಾಕಿ ಸಲಹುತ್ತಾನೆ. ಆ ಪಕ್ಷಿಗಳಿಗಿಂತ ಮನುಷ್ಯನು ಎಷ್ಟೋ ಹೆಚ್ಚಿನವನಲ್ಲವೇ? ಅಡವಿಯ ಹೂಗಳ ವಿಷಯವನ್ನು ನೋಡಿದರೆ ಅವುಗಳಿಗಿರುವ ಅಲಂಕಾರವು ಎಂಥ ಅರಸಿಗೂ ಇಲ್ಲ. ಅನ್ನ ಬಟ್ಟೆಗಳಿಗಾಗಿ ಹಂಬಲಿಸಬೇಡಿರಿ. ಇವುಗಳ ವಿಷಯ ಅಜ್ಞಾನಿಗಳು ಹಂಬಲಿಸುತ್ತಾರೆ. ಇವುಗಳೆಲ್ಲಾ ನಿಮಗೆ ಬೇಕೆಂದು ನಿಮ್ಮ ತಂದೆಗೆ ತಿಳಿದಿದೆ. ಕೃಷ್ಣಪ್ಪನವರೇ, ಇನ್ನೂ ಹೇಳತಕ್ಕದ್ದಿದೆ. ಆದರೆ ಸ್ನಾನಕ್ಕೆ ಹೊತ್ತಾಯಿತು. ನೀವೂ ಏಳಿ. ಇಲ್ಲೇ ಭೋಜನ ತೀರಿಸಿಕೊಂಡು ಇದರ ವಿಷಯ ಇನ್ನೂ ಮಾತಾಡುವಿರಂತೆ. ಕೊರತೆ ಯೆಂಬುದು ಯಾರನ್ನೂ ಬಿಟ್ಟದ್ದಲ್ಲ. ನನ್ನ ಸಮಾಚಾರ ನಿಮಗೆ ತಿಳಿಯದ್ದಲ್ಲ. ನಿತ್ಯ ದಾರಿದ್ರ್ಯವು ಇಲ್ಲದಿದ್ದರೂ ನಿತ್ಯರೋಗಿಯಾಗಿದ್ದೇನೆ. ನಿಮ್ಮ ಆರೋಗ್ಯ ನನಗೆ ಇರಬಾರದೇ? ಆದರೇನು? ದೇವರು ನನಗೆ ಎಷ್ಟೋ ಸಂತೋಷವನ್ನು ಕೊಟ್ಟಿದ್ದಾನೆ. ಆತನಿಗೆ ಎಷ್ಟು ಕೃತಜ್ಞನಾಗಿದ್ದರೆ ತಾನೆ ಆದೀತು? ಕಷ್ಟವಿದ್ದರೂ ಚಿಂತೆಯಿಲ್ಲ. ದೇವರು ನನ್ನ ತಂದೆಯೆಂದು ತಿಳಿದಿದ್ದೇನೆ. ಎಲ್ಲವನ್ನೂ ಒಳ್ಳೆಯದಕ್ಕಾಗಿಯೇ ಕೊಟ್ಟಿದ್ದಾನೆ. ನೀವೂ ಹಾಗೆಯೇ ತಿಳಿಯಿರಿ. ನಿಮಗೂ ಸಂಸಾರದಲ್ಲಿ ಮಗುಸ್ಸು ತಪ್ಪಿ, ಈಗ ನಿಮಗಿರುವ ದೇಹದಾರ್ಢ್ಯವು ಮತ್ತೂ ವೃದ್ಧಿಯಾಗಿ ಸುಖಪಟ್ಟು ಭಗವಂತನ ಸೇವೆಯನ್ನು ಚೆನ್ನಾಗಿ ಮಾಡುವಿರಿ.

ಸ್ವದೇಶದ ವೃತ್ತಾಂತಗಳು.

ನಾಳೆ ಶನಿವಾರ ಗ್ರಹಣವಿದ್ದುದರಿಂದ ಉಪಾಕರ್ಮವನ್ನು ಭಾದ್ರಪದ ಶುದ್ಧ ಪೌರ್ಣಮಿ ದಿನ ಆಚರಿಸಬೇಕೆಂದು ಗೊತ್ತುಮಾಡಿದಾರೆ.

****

ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿಯವರು ಅಕ್ಟೋಬರ್ ೧೬ ನೆ ತಾ ರಾಜಧಾನಿಗೆ ದಯಮಾಡಿ, ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವವರಾಗಿದಾರೆ

****

ಚೆನ್ನರಾಯಪಟ್ಟಣದೇವನಕೋಟೆ ತಾಲ್ಲೂಕ್ ಅಮಲ್ದಾರ್. ಮ॥ ವೆಂಕಟ ಸುಬ್ಬಯ್ಯನವರು ಪ್ರಜೆಗಳನ್ನು ಬಹಳ ಪ್ರೀತಿಯಿಂದ ಪಾಲಿಸುತ್ತಿದ್ದರು. ಈಗ ಅವರಿಗೆ ವರ್ಗವಾದದ್ದನ್ನು ಕೇಳಿ ಅಲ್ಲಿನ ಪ್ರಜಾಮುಖಂಡರೂ ಸರ್ಕಾರಿ ನೌಕರರೂ ತಮ್ಮ ಭಕ್ತಿವಿಶ್ವಾಸಗಳನ್ನು ಪ್ರಕಾಶಪಡಿಸಿ, ಔತಣಾದಿಗಳನ್ನು ಮಾಡಿ, ಫೋಟೋ ತೆಗೆಸಿದ ಹಾಗೂ ಕೇಳುತ್ತೇವೆ.

ಕಳೆದವಾರ ಛಾಂಪಿಯನ್ ರೀಫ್ ಎಂಬ ಕೋಲಾರ್ ಚಿನ್ನದ ಗಣಿಯಲ್ಲಿ ಒಂದು ಅನಾಹುತವಾಗಿ ಐದು ಮಂದಿ ಮೃತಪಟ್ಟರು, ಇಬ್ಬರಿಗೆ ಗಾಯಗಳಾದವು

****

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಬಡಾವಣೆಗೆ ೧೮,೦೦೦ ರೂಪಾಯನ್ನೂ, ಅದರ ಹಿಂಭಾಗದಲ್ಲಿ ಸರ್ಕಾರಿ ಕನ್ಯಾಸ್ಪತ್ರೆಯನ್ನು ಕಟ್ಟುವುದಕ್ಕೆ ಒಂದೂವರೆ ಲಕ್ಷ ರೂಪಾಯನ್ನೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡುವವರಾಗಿದಾರೆ.

****

ಎಕ್ಸ್ಟ್ರಾ ಅ॥ ಕಮಿಷನರ್ ಮ॥ ಎ. ಆನಂದರಾಯರೂ ಅಮಲ್ದಾರ್ ಮ॥ ಶಂಕರಾಚಾರ್ಯ ಕಾಯಿಲೆಯಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು ಕಳೆದವಾರ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ.

****

ರವಿನ್ಯೂ ಪ್ರೊಬೇಷನರ್ ಮ॥ ಟಿ ಸುಬ್ಬರಾಜೆ ಅರಸಿನವರಿಗೆ ಕೋಲಾರ್ ಡಿಸ್ಟ್ರಿಕ್ಟ್ ಬಜಾಂಟ ಕೆಲಸ ನೇಮಕವಾಯಿತೆಂತಲೂ, ಅವರು ಕಟ್ಟಬೇಕಾದ ೫,೦೦೦ ರೂಪಾಯಿ ಜಾಮೀನನ್ನು ಶ್ರೀ ಮನ್ಮಹಾರಾಜರವರು ದಯಪಾಲಿಸಿದರೆಂತಲೂ ಕೇಳುತ್ತೇವೆ

****

ಸಾಲಿಗ್ರಾಮದ ಬಾತ್ಮಿದಾರರು ಬರೆಯುವದು—ಈ ಪ್ರಾಂತ್ಯದ ಮಳೆ ಆಗಿ ಪೈರು ಒಳ್ಳೇ ಸ್ಥಿತಿಯಲ್ಲಿದೆ. ಕಾವೇರಿ ನದಿ ಚಾಮರಾಜ ಅಣೆಕಟ್ಟಿನ ಮೇಲೆ ೮ ಅಡಿ ಪ್ರವಾಹ ಬಂದಿದ್ದು ಇಳಿಯಿತು. ತಾ. ೧೦ರಿಂದ ಈ ಊರಲ್ಲಿ ಕಾಲರಾ ಪ್ರಾರಂಭವಾಗಿ ತಾ ೨೭ ರ ವರೆಗೆ ೨೫ ಜನಕ್ಕೆ ತಗಲಿ ೧೫ ಜನ ಸತ್ತರು. ಡಾಕ್ಟರ್ ಮುತ್ತಯ್ಯನವರೂ ಕೇಶವ ಹೆಬ್ಬಾರರೂ ಬಹು ಮುತುವರ್ಜಿಯಿಂದ ಕಾಲರಾ ಡ್ಯೂಟಿ ಮಾಡುತ್ತಾರೆ. ಮ್ಯುನಿಸಿಪಾಲಿಟಿಯವರ ಅನಾದರಣೆಯಿಂದ ಈ ರೋಗ ಹುಟ್ಟಿತೆಂದು ಹೇಳಬೇಕಾಗಿದೆ.

****

ಒಬ್ಬ ಬಾತ್ಮಿದಾರರು ಹೇಳುವುದು—ಉಡುಪಿ ತಾಲ್ಲೂಕು ಕೋಟೇಶ್ವರ ಸಮೀಪದ ನಾಗಸಾ ಕಲ್ಯಾಣಪುರದ ಹತ್ತಿರ ಸುವರ್ಣನದಿಯಲ್ಲಿ ತಾ ೧೮ನೆ ಬುಧವಾರ ಭಾರಿ ಮಳೆ ಸುರಿದು ದೊಡ್ಡನೆರೆ ಬಂದು ಧಡ ಮೀರಿ ತೀರಕ್ಕೆ ಸುಮಾರು ೨ ಮೈಲಿ ದೂರ ಹರಿದು ಕೆಲವು ಕಡೆ ೩೦ ಅಡಿ ತನಕ ನೀರು ಏರಿತು. ತೀರದಲ್ಲಿ ಸುಮಾರು ೮೦೦ ಮನೆಗಳವರು ತಮ್ಮ ಬಿಡಾರವನ್ನು ದೋಣಿಗಳ ಮೇಲೆ ಇರಿಸಿಕೊಂಡು ಪ್ರವಾಹದಲ್ಲಿ ಸಿಕ್ಕಿ ಸುತ್ತುತ್ತಾ ತಮ್ಮ ಕಷ್ಟನಷ್ಟಗಳನ್ನು ಎಣಿಸುತ್ತಿದ್ದರು. ಈ ಜಾಲದಲ್ಲಿ ಪ್ರವೀಣರಾದ ನೂರಾರು ಜನರು ಬೇರೆ ಬೇರೆ ದೋಣಿಗಳಲ್ಲಿ ಪ್ರವಾಹಕ್ಕಿಳಿದು ನನೆಯುತ್ತಾ ಕೊಚ್ಚಿ ಬರುವ ದಿಮ್ಮಿ, ಕಾಯಿ, ಹಣ್ಣು ಮೊದಲಾದ ಮುಂತಾದುದನ್ನು ಎತ್ತಿ ಹಾಕುತ್ತಿದ್ದರು ಎಂಬುದೇ

****

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿ ಮ॥ ಕೆ ಹೆಚ್. ದಾಸಪ್ಪ ಬಿ. ಎ ಯವರು ಒಕ್ಕಲಿಗರ ಸಂಘದ ಚರಿತ್ರೆ ಮತ್ತು ಉದ್ದೇಶಗಳನ್ನು ಕುರಿತು ಉಪನ್ಯಾಸ ಮಾಡಲು ಆಗಸ್ಟ್ ೨೯ನೇ ತಾ. ನಿಂದ ಪ್ರಯಾಣ ಹೊರಡುತ್ತಾರೆ. ಇವರು ಮೊದಲು ಚೆನ್ನಪಟ್ಟಣ, ಮದ್ದೂರು, ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ, ಮೈಸೂರು, ತಿರುಮಕೂಡ್ಲು ನರಸೀಪುರ, ನಂಜನಗೂಡು, ಚಾಮರಾಜನಗರ, ಯಡತೊರೆ, ಹುಣಸೂರು ಮುಂತಾದ ಸ್ಥಳಗಳಿಗೆ ಹೋಗುವರು. ಅನಂತರ ಹಾಸನ, ಚಿತ್ರದುರ್ಗ, ಶಿವಮೊಗ್ಗ, ಕಡೂರು, ತುಮಕೂರಿನ ಮುಖ್ಯ ಮುಖ್ಯ ತಾಲ್ಲೂಕುಗಳಿಗೆ ಇದೇ ಕೆಲಸಕ್ಕಾಗಿ ಹೊರಡುವರು. ಒಕ್ಕಲಿಗ ಮುಖಂಡರೆಲ್ಲಾ ಇವರನ್ನು ಖುದ್ದಾಗಿ ಕಂಡು, ಇವರಿಂದ ಸಮಸ್ತ ವಿಷಯಗಳನ್ನೂ ತಿಳಿದುಕೊಳ್ಳಲು ಇದು ಒಳ್ಳೇ ಸಮಯವಾಗಿದೆ

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಲೇಖನದ ಲಕೋಟೆಯ ಮೇಲೂ "ಬಹುಮಾನದ ಲೇಖನ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನು ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧ ಕಾಲಮಿಗಿಂತ ಕಡಿಮೆಯಾಗಿರಬಾರದು. ಒಂದು ಕಾಲಮಿಗಿಂತ ಹೆಚ್ಚಾಗಿರಬಾರದು. (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಿರಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನದ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ಬಾತ್ಮಿಯನ್ನು ಕಳುಹಿಸಿದ ಮ॥ ಶ್ರೀನಿವಾಸಮೂರ್ತ್ಯಾಚಾರ್, ಹೆಡ್ ಮಾಸ್ಟರ್, ಕೋಳೆಸರ್ವೇಶ್ವರ, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿರುತ್ತೇವೆ]

ಮೈಸೂರು ಮಾರ್ಗದಲ್ಲಿ ನಡೆದ ಅನಾಹುತಗಳು

ಕಳೆದ ಜುಲೈ ತಾ ೨೩ ನೆ ಸೋಮವಾರ ಸಾಯಂಕಾಲ ನಾನು ಮತ್ತು ಯಡತೊರೆ ತಾಲ್ಲೂಕು ಸಾಲಿಗ್ರಾಮಕ್ಕೆ ಹೋಗತಕ್ಕವರು ಅಂದರೆ ಮೈಸೂರು ಟವರ್ ವಾಸಸ್ಥರು ಒಬ್ಬ ಹೆಂಗಸು, ಇಬ್ಬರು ಗಂಡಸರು ಸಹ ಬಂಟಿಕೊಪ್ಪಲು ತಿಮ್ಮನ ಗಾಡಿಯಲ್ಲಿ ಕೂತುಕೊಂಡು, ಯಡತೊರೆಗೆ ಪ್ರಯಾಣ ಮಾಡಿದೆವು. ಸದರಿ ಗಾಡಿಯವನು ರೈಲ್ವೆ ಸ್ಟೇಷನ್ ಬಳಿ ಗೇಟನ್ನು ದಾಟಿ ತನ್ನ ಊರಿಗೆಹೋಗಿ ಹುಲ್ಲು ಮತ್ತು ತಿಂಡಿ ತರುತ್ತೇನೆಂತ ನಮ್ಮನ್ನು ಗಾಡಿಯಲ್ಲಿ ಕೂಡಿಸಿಕೊಂಡು ಗೇಟನ್ನು ದಾಟಿ ಆಚೆ ರಸ್ತೆಗೆ ಹೋಗಲು ರೈಲ್ವೆ ಕಾವಲಿನವರು ಬಿಡಲಿಲ್ಲ. ಗಾಡಿಯವನಿಗೂ ಅವರಿಗೂ ಬಹಳ ಜಗಳವಾಗುತ್ತಿರುವಷ್ಟರಲ್ಲಿ ಒಂದು ಕುದುರೆಗಾಡಿ ಬಂದು ಅದೇ ಸ್ಥಳವನ್ನು ದಾಟಹೋಯಿತು. ಕಾವಲುಗಾರರು ಅಡ್ಡಿಮಾಡದೆ ಆ ಗಾಡಿಯನ್ನು ಬಿಟ್ಟದ್ದರಿಂದ ಅದರ ಹಿಂದೆ ನಮ್ಮ ಗಾಡಿಯವನೂ ಗಾಡಿಯನ್ನು ಬೇಗ ಓಡಿಸಿದನು. ಕಾವಲುಗಾರರು ಇವನ ಗಾಡಿಯನ್ನು ಹಿಡಿದು ಎತ್ತುಗಳನ್ನು ಬಿಚ್ಚಿ ಸ್ಟೇಷನ್‌ಗೆ ತೆಗೆದುಕೊಂಡು ಹೋಗುವುದಾಗಿ ಸ್ವಲ್ಪದೂರ ಎಳೆಯಲು ಗಾಡಿಯವನು ಅವರ ಕಾಲುಕಟ್ಟಿ ಅತ್ತು ಬೇಡಿಕೊಂಡನು. ಆಗ ಅವರು ಬೇರೆ ರಸ್ತೆಯಲ್ಲಿ ಹೊಡೆದುಕೊಂಡು ಹೋಗೆಂದು ಹೇಳಿ ಕಳುಹಿಸಿದರು. ಇಷ್ಟಾಗುವದರೊಳಗೆ ೯ ಘಂಟೆ ಆಯಿತು. ಆ ಮೇಲೆ ಗಾಡಿಯವನು ತನ್ನೂರಿಗೆ ಹೋಗಿ ಸಾಮಾನು ಹಾಕಿಕೊಂಡು, ಮುಂದೆ ಹೋಗಿದ್ದ ಗಾಡಿಗಳನ್ನು ಹಿಡಿಯೋಣವೆಂದು ಓಡಿಸಿ, ಹಿಂಕಲ್ ಬೋರೆ ಹತ್ತಿರ ಸ್ವಲ್ಪ ಮುಂದೆ ನಿಲ್ಲಿಸಿ ಮಲಗಿದ್ದ. ನಿದ್ರೆಹೋಗುತ್ತಾ ಇದ್ದನು. ಗಾಡಿ ಹೊಡೆಯುವುದು ನಾವು ಕೂಡ ನಿದ್ರೆಗೆ ಮರುಳಾದೆವು. ಇಂಥಾ ವೇಳೆಯಲ್ಲಿ ಮಲಗಿದ್ದ ಹೆಂಗಸಿನ ಹತ್ತಿರ ಎರಡು ಹೊಸಸೀರೆ, ಹೊಸಪಂಚೆ, ರವಿಕೆ ಖಣಗಳು, ತಿಂಡಿಸಾಮಾನು ಮುಂತಾದ್ದನ್ನು ಕಟ್ಟಿದ್ದ ಗಂಟನ್ನು ಕಳ್ಳರು ಬಂದು ತೆಗೆದುಕೊಂಡು, ಗಾಡಿಯೊಳಕ್ಕೆ ಹತ್ತಿ ಸದರಿ ಹೆಂಗಸಿನ ಕಾಲು ತುಳಿದರು. ಆ ಹೆಂಗಸು ಅಳುತ್ತಾ ಬಾಯಿ ಬಿಡುತ್ತಾ ಕೊಂಡಳು. ಎಲ್ಲರೂ ಎದ್ದು ಕೂಗಿಕೊಂಡೆವು. ಮುಂದೆ ಹೋಗುತ್ತಿದ್ದ ೮—೧೦ ಗಾಡಿ ಜನಗಳು ಅಲ್ಲಿಂದ ಕೂಗಿಕೊಳ್ಳುತ್ತಾ ಓಡಿಬಂದರು. ಈ ಶಬ್ದವನ್ನು ಕೇಳಿ ಕಳ್ಳರು ಓಡಿಹೋದರು. ಕಳ್ಳರು ಕತ್ತಲಲ್ಲಿ ಮರೆಯಾದರು ಎಂದು ಹೇಳಿದಳು.

ಅನಂತರ ಗಾಡಿಗಳೆಲ್ಲಾ ಸಾಲುಕಟ್ಟಿ ಇಲವಾಲಕ್ಕೆ ಬಂದವು. ಅಲ್ಲಿ ಬಂಟಿಕೊಪ್ಪಲು ಗಾಡಿಯವನು ಯಡತೊರೆಯ ಶಿವಭಕ್ತರಿಬ್ಬರನ್ನೂ ಒಬ್ಬ ಹುಡುಗನನ್ನೂ ಕೂಡಿಸಿಕೊಂಡು, ಎತ್ತಿಗೆ ಹುಲ್ಲು ತಿನ್ನಿಸುತ್ತಿದ್ದನು. ತರುವಾಯ ಅವನೂ ನಮ್ಮ ಗಾಡಿಗಳ ಸಂಗಡ ಹೊರಟನು. ಹೀಗೆ ಹೋಗುತ್ತಿರುವಾಗ್ಗೆ ಲಕ್ಷ್ಮಣತೀರ್ಥಕಟ್ಟೆ ಹತ್ತಿರ ಬಹಳ ಮಳೆ ಬಂತು. ರಸ್ತೆ ಪಕ್ಕದಲ್ಲಿ ಒಂದು ಕಾಲುವೆ ಹಳ್ಳ ಬಹಳ ಆಳವಾದ ಪ್ರದೇಶದಲ್ಲಿ ಎಲ್ಲಾ ಗಾಡಿಗಳೂ ಹೋಗುತ್ತಾ ಇರಲು, ಇಲವಾಲದಿಂದ ಹೊರಟ ಗಾಡಿ ಹಿಂದುಗಡೆ ಇತ್ತು. ಸದರಿ ಗಾಡಿಯವನು ಎತ್ತುಗಳಿಗೆ ನೀರು ಕುಡಿಸಿರಲಿಲ್ಲವೋ. ನಿದ್ರೆಯಿಂದ ಎಲ್ಲರೂ ಮಲಗಿದ್ದರಿಂದಲೋ, ಸದರಿ ಎತ್ತುಗಳು ಹೊಸ ಹೋರಿಗಳಾದಕಾರಣವೋ, ಆ ಕಾಲುವೆ ಹಳ್ಳಕ್ಕೆ ಗಾಡಿಯನ್ನು ಎಳೆದು ಬಿಟ್ಟವು. ಗಾಡಿಯವನೂ ಒಬ್ಬ ಹುಡುಗನೂ ಬಹಳವಾಗಿ ಅರಚಿಕೊಂಡರು. ಈ ಶಬ್ದವನ್ನು ಕೇಳಿದ ಎಂಟು ಹತ್ತು ಗಾಡಿ ಜನಗಳಲ್ಲಿ ಕೆಲವರು—ಹಿಂದೆ ಕಳ್ಳರ ಭೀತಿಯಿಂದ ಕೂಗಿದ ಜನಗಳಂತೆ ಕೂಗುತ್ತಾರೆಂದೂ, ಕೆಲವರು—ಯಾರೋ ಕಳ್ಳರು ಪುನಃ ಬಂದಿದಾರೆಂದೂ ಗಾಡಿಗಳಲ್ಲೇ ಕೂತುಕೊಂಡು ಯೋಚಿಸುತ್ತಿದ್ದರು. ನೀರಿನೊಳಗೆ ಬಿದ್ದಿದ್ದ ಗಾಡಿಯವನು ಮತ್ತು ಆ ಹುಡುಗನು—"ನೀರಿನೊಳಗೆ ಬಿದ್ದಿರುತ್ತೇವೆ, ಒಬ್ಬ ಸಹ ಹೋದ. ಎತ್ತು ಸತ್ತು ಹೋಯಿತು, ಮಲ್ಲಯ್ಯಾ! ಮಲ್ಲಯ್ಯಾ!" ಎಂದು ಕೂಗಿಕೊಂಡನು. ಆಗ ಒಬ್ಬ ಗಾಡಿ ಆಳು ಇಳಿದು ನೋಡಿ ನೀರಿನಲ್ಲಿ ಬಿದ್ದು ಅರಚಿಕೊಳ್ಳುತ್ತಾರೆಂದು ಆತನು ಕೂಗಿಕೊಂಡನು. ತಕ್ಷಣವೇ ೫—೬ ಜನ ಮಾತ್ರ ಇಳಿದು ಬಿಚ್ಚಿ ಎಸೆದು ಗಾಡಿ ಆಳನ್ನೂ ಒಬ್ಬ ಹುಡುಗನನ್ನೂ ಮೇಲಕ್ಕೆ ಎತ್ತಿದರು. ಇಬ್ಬರು ಪ್ರಾಯದವರು ಮುಣುಗಿದವರು ಏಳಲೇ ಇಲ್ಲ. ಒಂದು ಎತ್ತು ಸತ್ತು ಹೋಗಿತ್ತು. ಮತ್ತೊಂದು ಎತ್ತು ಮೂಗುದಾರ ಕಿತ್ತುಕೊಂಡು ಮೇಲಕ್ಕೆ ಬಂತು. ಬಾಕಿ ಇಬ್ಬರು ಪ್ರಾಯದವರನ್ನು ನೀರಿನಲ್ಲಿ ಹುಡುಕಲು ರಾತ್ರಿ ಸುಮಾರು ೨ ಗಂಟೆ ಹೊತ್ತಾಗಿದ್ದಕಾರಣ ಸಾಧ್ಯವಿಲ್ಲದೆ ಎಲ್ಲರೂ ಯಡತೊರೆಗೆ ಬಂದೆವು. ಬದುಕಿಬಂದ ಹುಡುಗನು ಅವರ ಮನೆಗೆ ಹೋಗಿ ಈ ಸಂಗತಿಗಳನ್ನು ತಿಳಿಸಲು, ಮುಳುಗಿ ಹೋಗಿರುವ ಪ್ರಾಯದವರ ಮನೆ ಜನಗಳು ಅಳುತ್ತಾ, ನಾವುಗಳು ಇದ್ದ ಸ್ಥಳಕ್ಕೆ ಬಂದು ಕೇಳಿದರು. ನಾವು ಅವರಿಗೆ ಈ ವಿಷಯ ತಿಳಿಸಲು ಬಹಳ ವಿಷಾದಪಟ್ಟು ಸುಮ್ಮನಿದ್ದೆವು. ಅವರ ಗೋಳಾಟವನ್ನು ನೋಡಲಾರದೆ ಕಡೆಗೆ ನಡೆದ ಸಂಗತಿಗಳನ್ನೆಲ್ಲಾ ತಿಳಿಸಲು ಅವರ ಸಂಬಂಧಿಗಳೊಡನೆ ಸೇರಿ ಸದರಿ ಅನಾಹುತವಾದ ಸ್ಥಳಕ್ಕೆ ಹೋದರು. ಅಲ್ಲಿ ಕೆಲವರು ಹೇಳಿದರು—ಪ್ರಾಯದವರು ಹೋದರೆಂಬುದು ವಿಶೇಷ ವ್ಯಥೆಯೇ ಸರಿ

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.

ತರೀಕೆರೆಯಲ್ಲಿ ಪಂಜಾಕಳ್ಳರು

ತರಿಕೆರೆ ಟವರ್ ತೋಟಪ್ಪನವರ ಬೀದಿಯಲ್ಲಿ ಸಾಹುಕಾರ್ ಫಣಿಯಪ್ಪನವರು ಬಹಳ ಬಂದೋಬಸ್ತಾದ ಗಾರೆಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಈ ಮನೆ ಹಿಂಭಾಗದಲ್ಲಿ ಹೂವಿನತೋಟ ಮಾಡಿರುವದರಿಂದ ಪಕ್ಕದಲ್ಲಿ ಒಂದು ಬಾಗಿಲು ಇಟ್ಟಿದಾರೆ. ಇಂಥಾ ಭಟ್ಟಿಗೆ ಯೋಚಾದಿಯಲ್ಲಿರುವ ಮನೆಗೆ ತಾ ೨೩ ನೆ ಸೋಮವಾರ ರಾತ್ರಿ ಸುಮಾರು ೨ ಘಂಟೆಯ ಸಮಯದಲ್ಲಿ ೮—೧೦ ಜನ ಕಳ್ಳರು ಬಂದು, ಮುಂಬಾಗಿಲಿಗೆ ಚಿಲಕಾ ಹಾಕಿ, ಹಿಂದಗಡೆ ಬಾಗಲಿಗೂ ಒಳಗಿನ ಬಾಗಲಿಗೂ ಕನ್ನಾ ಹಾಕಿ ಬಾಗಲುಗಳನ್ನು ತೆಗೆದು ಒಳಗೆಬಂದು, ಮತ್ತೊಂದು ಬಾಗಿಲು ಗೋಡೆಗೆ ಕನ್ನಾ ಹಾಕಲು ಆ ಗೋಡೆ ಕಟಗಟ್ಟಿನದಾದ್ದರಿಂದ ಅವರ ಪ್ರಯತ್ನ ಸಾಗದೆ, ಕದವನ್ನೇ ತೂತುಮಾಡಿ ಒಳಗೆ ಪ್ರವೇಶಿಸುವಷ್ಟರಲ್ಲಿ ಆ ಶಬ್ದವನ್ನು ಸಾಹುಕಾರರು ಕೇಳಿ, ಹೆಂಗಸರನ್ನು ಎಬ್ಬಿಸಲು ಅವರು ಘಾಬರಿಯಿಂದ ಬಾಗಿಲು ಅಗಣಿ ತೆರೆದರು. ತಕ್ಷಣವೇ ವೇಷ ಹಾಕಿಕೊಂಡಿದ್ದ ೬ ಜನ ಕಳ್ಳರು ಪಂಜಾಟ್ ಹಿಡಿದು ಒಳದಂಡು ನುಗ್ಗಿದರು. ಸಾಹುಕಾರರಿಗೂ ಕಳ್ಳರಿಗೂ ಜಗಳವಾಯಿತು. ಒಬ್ಬಾತನೆ ಕೋಣೆಗೆ ಹೆಂಗಸರನ್ನು ಕಳಿಸಿದನು. ಕಿಟಕಿಗಳನ್ನು ತೆರೆದು, ಗದ್ದಲ ಮಾಡಿದ್ದರಿಂದ ಎದುರುಮನೆ ಸುಬ್ಬನಾಯಕನು ಅವರ ಮುಂಬಾಗಿಲಿಗೆ ಹಾಕಿದ್ದ ಚಿಲಕಾ ತೆರೆದನು. ಆ ಬಾಗಲಲ್ಲಿದ್ದ ೩ ಜನ ಕಳ್ಳರು ಸಾಹುಕಾರರನ್ನು ಹೊಡೆದರು. ಈ ಕೂಗನ್ನು ಕೇಳಿ ಕೆಲವು ಪಕ್ಕದವರು, ಸಿದ್ದಗಿರಿಯಪ್ಪನವರು, ನಾನು ಮುಂತಾಗಿ ಜನಸೇರಿ, ಹಿಂಬಾಗಲಿಗೆ ಬರುವಷ್ಟರಲ್ಲಿ ಒಳಗಿದ್ದ ಕಳ್ಳರು ೬ ಜನ ಹೆಂಗಸರ ಮೈಮೇಲಿದ್ದ ಸುಮಾರು ಎರಡು ಸಾವಿರ ರೂಪಾಯಿನ ಮಾಲನ್ನು ತೆಗೆದುಕೊಂಡು ಪರಾರಿಯಾಗಿದ್ದರು. ಅವರು ಘಟ್ಟಿಗರು. ಹ್ಯಾಗೆಂದರೆ ಸಾಹುಕಾರರ ಮನೆಯ ಅಕ್ಕಪಕ್ಕ ಎಲ್ಲರ ಮನೆ ಬಾಗಲಿಗೂ ಚಿಲಕ ಹಾಕಿದ್ದಾರೆ. ಸುಬ್ಬನಾಯಕನ ಬಾಗಲಿಗೆ ಮಾತ್ರ ಹಾಕಿರಲಿಲ್ಲ. ಇದರಿಂದ ಬಹಳ ಉಪಕಾರವಾಯಿತು. ಅಲ್ಲದೆ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರು, ಅ॥ ಕಮಿಷನರು, ಅಮಲ್ದಾರರು, ಇನ್ಸ್‌ಪೆಕ್ಟರು ಮುಂತಾಗಿ ಇರುವ ಆ ದಿವಸವೇ ಕಳ್ಳರು ನಿರ್ಭೀತರಾಗಿ ಈ ಕಾರ್ಯ ಮಾಡಿದ್ದಾರಲ್ಲಾ! ಒಳ್ಳೇ ಶಕ್ತಿವಂತರೇ ಸರಿ. ಇಂಥಾ ಪರಾಕ್ರಮಿಗಳಾದ ಕಳ್ಳರನ್ನು ಸರ್ಕಾರದವರು ಹಿಡಿದು ಸಾಹುಕಾರರಿಗೆ ಮಾಲುಕೊಡಿಸಿ ಕಳ್ಳರಿಗೆ ಹೆಚ್ಚು ಶಿಕ್ಷೆಮಾಡಿಸಿ, ಕೀರ್ತಿ ಪಡೆದಾರೆಂದು ಹಾರೈಸುತ್ತೇನೆ.

ರೋಗಗ್ರಸ್ತರ ಕರ್ತವ್ಯವೇನು?

ಬ್ರಾಹ್ಮಣರಲ್ಲಿ ಅನೇಕ ಸ್ತ್ರೀಪುರುಷರು ರೋಗಗ್ರಸ್ತರಾದಾಗ ಬ್ರಾಹ್ಮಣೇತರರು ಕೊಟ್ಟ ಔಷಧವನ್ನು ಸೇವಿಸುವದಕ್ಕೆ ಇಷ್ಟಪಡರು ನೀರು ಬೆರಸಿದ ಔಷಧವನ್ನು ಕೈಯಿಂದ ಸಹ ಮುಟ್ಟುವದಿಲ್ಲ. ಕೆಲವು ವ್ಯಾಧಿಪೀಡಿತರಾಗಿದ್ದಾಗ್ಯೂ ವಿಧವೆಯರು ನಿತ್ಯಸ್ನಾನ, ಕಾಲೋಚಿತ ಉಪವಾಸಗಳು, ಇನ್ನೂ ಆರೋಗ್ಯಕ್ಕೆ ಕುಂದುಕ ಮಾಡುವ ನಿಯಮ ಗಳನ್ನು ಬಿಡರು. ಆತ್ಮಸಂರಕ್ಷಣದೋಷಕ್ಕೆ ದೋಷ್ಯವ ಇಂಥಾ ಕಾಲದ ಆಚರಣೆಯು ಶಾಸ್ತ್ರಸಮ್ಮತವಾದದ್ದೇ? ಎಂದಿಗೂ ಅಲ್ಲ. ಈ ಯುಗ ಕ್ಕೆ ಪ್ರಾಯಶ್ಚಿತ್ತ ವಿಚಾರದಲ್ಲಿ ಮೂಲಾಧಾರವಾದ ಪರಾಶರಸ್ಮೃತಿಯ ಲ್ಲಿ ಆ ಮಹರ್ಷಿಗಳು ರೋಗಗ್ರಸ್ತರಾದಾಗಲೂ ಕಷ್ಟಕಾಲದಲ್ಲಿಯೂ ಜನರು ಮಾಡಬೇಕಾದ ಕರ್ತವ್ಯವನ್ನು ಹೀಗೆ ವಿವರಿಸಿರುವರು:—

ಶ್ಲೋ॥ ದೇಶಭಂಗೇ ಪ್ರವಾಸೇವಾ ವ್ಯಾಧಿಷ್ವ್ಯಸನೇಷ್ವಪಿ ॥
ರಕ್ಷೇದೇವ ಸ್ವದೇಹಾದಿ ಪಶ್ಚಾದ್ಧರ್ಮಂ ಸಮಾಚರೇತ್॥

ಪರಸ್ವ್ಯಾಯುಧ ತನಾದಾಗಲೀ, ತೀರ್ಥಯಾತ್ರಾದಿಗಳಿಗೆ ಹೋ ದಾಗಲೂ, ವ್ಯಾಧಿ ಉಪದ್ರವ ಪೀಡಿತನಾದಾಗಲೂ, ವ್ಯಸನ ಪ್ರಾಪ್ತ ವಾದಾಗಲೂ, ಶುಚಿ ಅಶುಚಿ ಎಂಬ ವಿಚಾರ ಮಾಡುವುದು ಶುಚಿ ಯಾದ್ದರಿಂದ ಆಗಲಿ, ಅಶುಚಿಯಿಂದಾಗಲಿ ನನ್ನ ಪುತ್ರಮಿತ್ರಕಳತ್ರಾದಿಗ ಳಿಗೆ ಬೇಗ ಸುಖವಾಗಬೇಕು. ಆದರೆ ಅವರು ಕೊಟ್ಟ ಔಷಧವನ್ನು ಸೇ ವಿಸಿ, ಕಾಯಿಲೆ ವಾಸಿಯಾದನಂತರ ಧರ್ಮವನ್ನು ಆಚರಿಸಬೇಕು ಮಾತ್ರ—

ಶ್ಲೋ॥ ಪಿನಕೇನಚಿತ್ಪಥೋಪಾಯೇನ ವ್ಯಾಧಿನಾ ಪೀಡಿತೋಜನಃ ॥
ಉದ್ಧರೇದ್ದೀನಮಾತ್ಮಾನಂ ಸಮರ್ಥೋಧರ್ಮಮಾಚರೇತ್॥

ಶುದ್ಧ ದ್ರವ್ಯಾದಿಗಳಿಂದ ಮಾಡಿದ್ದು ಪ್ರದುರ್ನನಿಸುವದು, ತದ್ವಿಪ ರೀತವು ದುರ್ವಾಸ್ವಾ, ಅಂದರೆ ಸ್ವಸ್ವಾಸ್ಥ್ಯ, ಮಾಂಸಪಿಶಾದಿಸ್ಥ ಸೇವ ನವು. ಇವೆರಡರಲ್ಲಿ ಯಾವುದಾದರೂ ರೋಗದಿಂದ ಪ್ರಾಪ್ತವಾಗಿ ದೀ ನತ್ವವನ್ನು ಹೊಂದಿದ ದೇಹವನ್ನು ವೇಳಕ್ಕೆ ಎತ್ತಿ ರೋಗವು ವಾಸಿ ಯಾಗಿ ಪ್ರಾಣಭಿಂದ ನೇರೆ ಆಚಾರಕಾಂಡೋಕ್ತ ವಿಹಿತಾನುಷ್ಠಾನ ವು ಪ್ರಾಯಶ್ಚಿತ್ತ ಕಾಂಡೋಕ್ತ ವಿಧಿನಿಷೇಧ ಕ್ರಮಾನುಸಾರವೂ ಎಂ ಬ ಎರಡು ವಿಧವಾದ ಧರ್ಮವನ್ನು ಆಚರಿಸಬೇಕು.

ಈ ಎರಡು ಶ್ಲೋಕಗಳನ್ನು ಮುಖ್ಯಾಧಾರವಾಗಿಟ್ಟುಕೊಂಡು, ರೋಗಿಷ್ಠರು ವೈದ್ಯರ ಮಾತು ಕೇಳಬಾರದೆಂಬುದನ್ನು ಯೋಚಿಸುತ್ತಿರದೆ ಸಾಧ್ಯವಾದಷ್ಟು ಬೇಗ ಚಿಕಿತ್ಸೆಗೆ ಅವಕಾಶಕೊಟ್ಟು, ವೈದ್ಯರು ವಿಧಿ ಸಿದ ಪಥ್ಯವನ್ನು ಸೇವಿಸಿ, ಅವರು ಹೇಳಿದಂತೆ ಕೇಳುತ್ತಿರಬೇಕು. ಜ್ಞಾನಿಗಳಾದ ಹಿಂದಿನವರು ಸಹ ಹೀಗೆ—

"ಶರೀರನಾಶ್ಯಂ ಜಲವದರ್ಥಸಾಧನಂ ಔಷಧಂ ಜಾಹ್ನವೀ ತೋಯಂ ವೈದ್ಯೋನಾರಾಯಣೋ ಹರಿಃ"

ಎಂದು ಹೇಳಿಕೊಂಡು ಔಷಧವನ್ನು ನುಂಗುವರು. ಇದರಿಂದ ಔಷಧಸೇವನೆಯು ಪಾಪವೆಂದು ದೃಷ್ಟಿಕೆಡಿಸಿದ ಹಾಗಾಯಿತು. ದೇಹ ಸ್ವಾಸ್ಥ್ಯವಿಲ್ಲದಾಗ ಯಾವ ಕಾರ್ಯವೂ ನಡಿಯಬಾರದು. ವೈದ್ಯರೂ ಔಷಧಗಳೂ ಪವಿತ್ರವೆಂದು ಹೇಳಿ ಬೇಕು. ಹಿಂದಿನವರಿಗೆ ಗಂಗೋದಕ ಕ್ಕಿಂತಲೂ ಪವಿತ್ರವಾದದ್ದು ಮತ್ತೊಂದಿಲ್ಲ.

ಪ್ರಾಣಿಗಳಿಗೆ ಹಿತಕಾರಿಯಾಗಿರಬೇಕೆಂತಲೂ, ಸಮಯಾನುಸಾರ ವೂ ಶಕ್ತ್ಯಾನುಸಾರವೂ ದೇವರನ್ನು ಪೂಜಿಸಬೇಕೆಂತಲೂ ದೇವರು ನ ಮಗೆ ಶರೀರವೆಂಬ ಉತ್ತಮವಾದ ವಸ್ತುವನ್ನು ಕೊಟ್ಟಿರುವನು. ಶಕ್ತಿ ಯೂ, ಆರೋಗ್ಯವೂ ಕುಂದಿದರೆ ಭಗವತ್ಕೈಂಕರ್ಯವು ಸಮರ್ಪಕ ವಾಗಿ ನಡಿಯಲಾರದು. ಮನುಷ್ಯನಿಗೆ ದೇಹಸ್ವಾಸ್ಥ್ಯವೇ ಮುಖ್ಯಕಾರ ಣ. ಮನಃಪೂರ್ವಕವಾಗಲಿ ಬೇರೊಂದು ಕಾರಣದಿಂದಾಗಲಿ ಆರೋ ಗ್ಯವನ್ನು ಕಳಕೊಂಡವನು ದೇಹವೆತ್ತಿದುದರ ಉದ್ದೇಶವನ್ನು ನೆರವೇ ರಿಸಲಾರನು. ಈ ನಿಮಿತ್ತದಿಂದಲೇ ಸಕಲ ಮತಗಳೂ ಆತ್ಮಹತ್ಯ ಸಲ್ಲ ದೆಂದು ಹೇಳುವದಕ್ಕೆ ಒಪ್ಪಿ ಖಂಡಿತವಾಗಿ ನಿರಾಕರಿಸುತ್ತವೆ. ಐಹಿಕ ಕರ್ಮಗಳು ಕಷ್ಟಸಾಧ್ಯವೆಂದು ಅದನ್ನು ಬಿಟ್ಟುಬಿಡಲು ಯತ್ನಿಸು ವಂತೆ ಅಜ್ಞಾನಮಗ್ನರಾದ ಜನರಿಗೆ ಉದಾಹರಣವಾಗುವನು. ಅನ್ಯಾ ಯವಾದದ್ದನ್ನೂ ಅನಾಯಕಾರವಾದದ್ದನ್ನೂ ಮಾಡಬೇಕೆಂದು ಎಂದಿ ಗೂ ಶಾಸ್ತ್ರಗಳು ವಿಧಿಸುವದಿಲ್ಲ. ಪೃಥಕ್ಕಾಯನಿಗೆ ಹೇಳಿದ ನಿಬಂಧನೆ ಗಳನ್ನು ರೋಗಗ್ರಸ್ತರಾದಾಗ ಸುಲಭವಾಡಬಹುದೆಂದು ಹೇಳಿವೆ. ಆದರೆ ಹೀಗೆ ಶಾಸ್ತ್ರೋಕ್ತಿಯನ್ನು ಸಡಿಲಮಾಡಬಹುದೆಂದು ಆಧಾರ ಸಿಕ್ಕಿ ದಮಾತ್ರದಿಂದ ಶರೀರಪಾಲನೆಗೆ ಅತ್ಯಗತ್ಯವಿಲ್ಲದಿದ್ದರೂ ನಿಷೇಧಕವಾದ ಪಾನಗಳನ್ನೂ ಖಾದ್ಯಗಳನ್ನೂ ಉಪಯೋಗಿಸಬಹುದೆಂದು ಹೇಳಿದ ಹಾಗಾಯಿತೆಂದು ತಿಳಿಯಬಾರದು. ವಿಶ್ವಾಮಿತ್ರಮಹಾಮುನಿಗಳು ಕ್ಷು ಧಾರ್ತರಾಗಿದ್ದಾಗ ಚಂಡಾಲನ ಮನೆಯಲ್ಲಿ ಮಾಂಸವನ್ನು ಕದ್ದುತಂ ದು, ಆ ಹಸಿವು ಆರಿದ ಬಳಿಕ ಕುಡಿಯಬೇಕೆಂದು ಸಮರ್ಪಿಸಿದ ನೀರ ನ್ನು ತ್ಯಜಿಸಿದ ಇತಿಹಾಸವೆ ಇದಕ್ಕೆ ತಕ್ಕ ದೃಷ್ಟಾಂತವಾಗಿ ತೆಗದು ಕೊಳ್ಳಬೇಕು. ಇದರಿಂದ ಶಾಸ್ತ್ರವನ್ನು ಎಷ್ಟರಮಟ್ಟಿಗೆ ಸಡಿಲ ಬಿಡ ಬಹುದೆಂಬ ವಾಚಕರೇ ಯೋಚಿಸಬಹುದು. ಆಲಸ್ಯಕಾಲದಲ್ಲಿ ಉಂಟಾ ದ ವಿಧಿಲೋಪಕ್ಕೂ ಮರ್ಯಾದೋಲ್ಲಂಘನೆಗೂ ಮೇಲೆ ಹೇಳಿದ ಶ್ಲೋಕಗಳಲ್ಲಿ ಉಕ್ತವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. "ಜೀವಂಭದ್ರಾಣಿಪಶ್ಯತಿ." ಜೀವವಿದ್ದವನು ಒಳ್ಳೆಯ ಕೆಲಸಗಳ ನ್ನು ಮಾಡುತ್ತಾನೆ.

ನಮ್ಮ ಪೂರ್ವಿಕರಿಗಿಂತಲೂ ನಾವುಗಳು ಪದೇಪದೇ ವ್ಯಾಧಿಗ್ರಸ್ತ ರಾಗುವೆವು. ನಮ್ಮಲ್ಲಿ ಬರಬರುತ ದೌರ್ಬಲ್ಯವು ಹೆಚ್ಚಿತೆಂದು ಇಟ್ಟು ಕೊಂಡಾಗ್ಯೂ ಪೂರ್ವಿಕರ ಶಾಸ್ತ್ರವಚನಾನುಸಾರ ನಾವು ಅನುಸರಿಸದಿ ರುವದು ಬೇರೊಂದು ಕಾರಣವಾಗಿದೆ. ಕ್ಲಿಷ್ಟವಾದ ಮಿತಾಹಾರ, ನಿತ್ಯ ಸ್ನಾನ, ಶುಚಿಯಾಗಿರೋಣ, ಸದಾ ನಿರ್ಮಲಚಿತ್ತರಾಗಿರುವದು, ಇವೇ ದೀರ್ಘಾಯುರಾರೋಗ್ಯಕ್ಕೆ ಮುಖ್ಯೋಪಧಗಳು. ಆದರೆ ಹುಟ್ಟಿದಾಗ ಲೆ ಶರೀರವು ಬಲಹೀನವಾದುದೆಂದು ನಂಬಿ, ಉದಯಕಾಲದಲ್ಲಿ ಫಲಾಹಾ ರವೂ, ಪಾನವೂ, ಸರ್ವದಾ ಉಂಗುಷ್ಠಾದಿ ಶೇಷಾಂಶವೂ ಪೈ ಬಿಡದಂತೆ ವಸ್ತ್ರಧಾರಣವೂ, ರೋಗವು ಬಾರದಿರಲೆಂದು ಕೆಲವು ಔಷಧಗಳನ್ನು ಸೇವಿಸುತ್ತಿರುವದೂ, ಇವೇ ನಮ್ಮಗಳ ರೋಗಬಾಧೆಗೆ ಕಾರಣವಾ ಗಿವೆ. ದೇಹವನ್ನು ದೃಢಪಡಿಸಬೇಕೆಂದು ಮಾಡಿಕೊಳ್ಳುವ ಪ್ರಯತ್ನಗ ಳು ಅದನ್ನು ಬಲಹೀನ ಮಾಡಿಬಿಡುವವು. ಮ. ರ. ಅ.

ಇಂಡಿಯಾ ದೇಶದ ವೃತ್ತಾಂತಗಳು.

ಆಸ್ಸಾಂ ಪ್ರಾಂತ್ಯಕ್ಕೆ ಸೇರಿದ ಕಾಸಿಯಾದಲ್ಲಿ ಗೌತಮ ಬುದ್ಧನು ನಿರ್ವಾಣ ಹೊಂದಿದ ಸ್ಥಳವೂ ದೇವಸ್ಥಾನಗಳೂ ಸಿಕ್ಕಿವೆ ಎಂದು ಪ್ರಾ ಚೀನ ಸ್ಥಳಪರಿಶೋಧಕರು ತಿಳಿಸಿದಾರೆ.

****

ಮಣಿಪುರದಲ್ಲಿ ಕ್ಷಾಮನಿವಾರಣೆಗಾಗಿ ಏರ್ಪಟ್ಟ ಕಮಿಟಿ ಎಂಬ ರುಗಳು ಕಳೆದ ಮೂರು ತಿಂಗಳಿಂದಲೂ ಪ್ರತಿ ದಿನವೂ ೧,೨೦೦ ರೂಪಾ ಯಿನಂತೆ ಖರ್ಚುಮಾಡಿ, ಬಡಜನರನ್ನೂ ಹೋಷಾ ಸ್ತ್ರೀಯರನ್ನೂ ಸಂರಕ್ಷಣೆ ಮಾಡುತ್ತಿದ್ದಾರೆ.

****

ದೇವಬಂಧು ನಗರದಲ್ಲಿ ಒಬ್ಬ ಮಾರ್ವಾಡಿಯು ಗೋಧಿ ತುಂಬಿ ಕೊಂಡಿದ್ದ ನೆಲಮಾಳಿಗೆಗೆ ಮೂರು ಜನರನ್ನು ಒಬ್ಬನ ಹಿಂದೆ ಒಬ್ಬನಂತೆ ಇಳಿಸಿದನು. ಆ ಮೂವರೂ ಇಳಿದು ಹೋಗುತ್ತಾ ಇರುವಲ್ಲೇ ಒಳಗಿನ ವಿಷಗಾಳಿಯನ್ನು ಕುಡಿದು ಮೃತಪಟ್ಟರು.

****

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೩೨೭ ಜನರು ಪ್ಲೇಗಿ ನಲ್ಲಿ ತೀರಿಹೋದರು. ಈ ಪೈಕಿ ಬೊಂಬಾಯಿ ಆಧಿಪತ್ಯ ೧೮೪, ಪಂಜಾಬ್ ೧೦೦, ಬಂಗಾಳಾ ೨೭; ಸಂಯುಕ್ತ ಆಧಿಪತ್ಯಗಳು ೯, ಇತರ ಕಡೆಗಳಲ್ಲಿ ೭.

****

ಕಾಶ್ಮೀರದ ಮಹಾರಾಜರವರು ಆಪ್ರಜ್ಞೆ ಪಟ್ಟಣಕ್ಕೆ ಹೋದ ಮಹಾರಾ ಜರವರು ಈ ತಿಂಗಳಲ್ಲಿ ಕಾಶ್ಮೀರಕ್ಕೆ ಹೋಗಿ ಮಹಾರಾಜರವರ ಆತಿ ಥ್ಯವನ್ನು ಸ್ವೀಕರಿಸುವವರಾಗಿದಾರೆ. ಅವರ ಸಂಗಡ ಅವರ ಕುಮಾರರು ಹೋಗಿಬರುತ್ತಾರೆ.

****

ಭಾವಲ್‌ಪುರಸಂಸ್ಥಾನದ ನವಾಬರವರು ಕಳೆದ ಭಾನುವಾರ ತಮ್ಮ ರಾಜಧಾನಿಯಲ್ಲಿ ವಿಕ್ಟೋರಿಯಾ ಮೆಮೋರಿಯಲ್ ಆಸ್ಪತ್ರೆ ಯನ್ನು ಕಟ್ಟಿಸುವುದಕ್ಕೆ ತಾವೇ ಅಸ್ತಿಭಾರ ಹಾಕಿದರು. ಅದು ಪೂರೈ ಸುವುದಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುವುದು.

****

ಹಿಂದುಸ್ಥಾನದಲ್ಲಿರುವ ಪೋರ್ಚುಗೀಸ್ ಆಧಿಪತ್ಯದ ಗವರ್ನರ್ ಜನರಲ್‌ರವರು ಕಳೆದ ವಾರ ಪೂನಾಪಟ್ಟಣಕ್ಕೆ ಬಂದು, ಬೊಂಬಾಯಿ ಗವರ್ನರರವರ ಆತಿಥ್ಯವನ್ನು ಸ್ವೀಕರಿಸಿದರು. ಅವರಿಗಾಗಿ ಅಧಿಕಾರಿಗಳು ನಾನಾ ವಿಧವಾದ ಸಂತೋಷೋತ್ಸವಗಳನ್ನು ನಡಿಸಿದರು.

****

ಅಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಕಳೆದ ವಾರ ಅಂಗಡಿಬೀದಿಗೆ ಬೆಂಕಿಬಿದ್ದು ನೂರಕ್ಕಿಂತಲೂ ಹೆಚ್ಚಾಗಿರುವ ಮನೆಗಳೂ ಮಳಿಗೆಗಳೂ ಸುಟ್ಟುಹೋದವು. ಇದಲ್ಲದೆ ಆ ಸಂಸ್ಥಾನದ ನವಿಗಳಲ್ಲಿ ಅಪಾರವಾದ ಪ್ರವಾಹಗಳು ಬಂದು ಮನೆ ಮಠ ಆಸ್ತಿಪಾಸ್ತಿ ಗಳನ್ನು ಕೊಚ್ಚಿಬಿಟ್ಟವು.

****

ಲಾಹೋರ್ ಪಟ್ಟಣದಲ್ಲಿ ಹಿಂದೂ ಎಂಬ ವರ್ತಮಾನ ಪತ್ರಿಕೆ ಯು ಗವರ್ನಮೆಂಟಿಗೆ ವಿರೋಧವಾದ ಅಂದರೆ ಪ್ರಜೆಗಳಿಗೆ ಗವರ್ನಮೆಂ ಟಿನವರಲ್ಲಿ ದ್ವೇಷಾಸೂಯೆಗಳುಂಟಾಗುವಂಥಾ ಲೇಖನಗಳನ್ನು ಪ್ರಕ ಟಿಸುತ್ತಿದೆ ಎಂದು ಸರ್ಕಾರದವರು ಆ ಪತ್ರಿಕಾಧಿಕಾರಿಗಳ ಮೇಲೆ ಫಿರ್ಯಾದು ತಂದಿದಾರೆ.

****

ಈಗ ಲಾರ್ಡ್ ಕಿಚ್ನರ್ ಯವರು ಹಿಂದುಸ್ಥಾನದ ಸರ್ವಸೇನಾ ಪತಿಯಾಗಿರುತ್ತಾರೆ. ಇವರ ಅನಂತರ ಆ ಕೆಲಸಕ್ಕೆ ಡ್ಯೂಕ್ ಆಫ್ ಕನ್ನಾಟ್ ಎಂಬ ರಾಜಕುಮಾರರು ನೇಮಕವಾಗುವುದೇ ಖಂಡಿತವೆಂ ದು ವಿಲಾಯತಿಯಲ್ಲಿ ವರ್ತಮಾನ ಹುಟ್ಟಿದೆ. ಇವರ ಸಹೋದರರೇ ನಮ್ಮ ಚಕ್ರವರ್ತಿ ಸಾರ್ವಭೌಮರು.

****

ಅಚೇ ವರುಷ ಪರರಾಜ್ಯಗಳಿಂದ ಹಿಂದುಸ್ಥಾನಕ್ಕೆ ೬೩ ಲಕ್ಷ ರೂ ಪಾಯಿನ ಸಾಬೂನು ರಫ್ತಾಗಿ ಬಂದು ಖರ್ಚಾಯಿತು. ಕಳೆದ ವರು ಷವಾದರೋ ೩೭ ಲಕ್ಷ ರೂಪಾಯಿ ಸಾಬೂನು ಬಂದಿತು. ಇದರಿಂದ ಈ ದೇಶದವರು ಸ್ನಾನ ಮಾಡುವುದರ ಪ್ರಯೋಜನವನ್ನು ದಿನೇ ದಿನೇ ಹೆಚ್ಚುಹೆಚ್ಚಾಗಿ ತಿಳಿದುಕೊಳ್ಳುತ್ತಿದ್ದಾರೆಂದು ಹೇಳಬಹುದು.

****

ಹಿಂದುಸ್ಥಾನದಲ್ಲಿ ಯಂಟ್ರಿಕ್ ಎಂಬ ವಿಷಜ್ವರವು ಬಹಳ ಪ್ರಬಲ ವಾಗುತ್ತಿರುವುದನ್ನು ನೋಡಿ ಇಂಡಿಯಾ ಗವರ್ನಮೆಂಟಿನವರು ಅದರ ಕಾರಣ ಲಕ್ಷಣ ಪರಿಹಾರಗಳನ್ನು ಕಂಡುಹಿಡಿಯುವಂತೆ ೭ ಮಂದಿ ಪ್ರಸಿದ್ಧವೈದ್ಯರನ್ನು ನೇಮಕಮಾಡಿದಾರೆ. ಈ ಸಂಘದವರು ಮೂರು ದಿನಗಳಿಂದ ಪರಿಶೋಧನಾ ಕಾರ್ಯವನ್ನು ಪ್ರಾರಂಭಿಸಿರುತ್ತಾರೆ.

****

ಲಾಹೋರ್ ಪಟ್ಟಣದ ವೈದ್ಯವಿದ್ಯಾಶಾಲೆಯಲ್ಲಿ ಓದುತ್ತಿದ್ದ ಈಶ್ವ ರದಾಸನೆಂಬ ವಿದ್ಯಾರ್ಥಿಯು ಸರ್ದಾರ್ ಅಯೂಬ್ ಖಾನ್ ಎಂಬುವನ ಮನೆಗೆ ಹೋಗಿ ಅವನ ಪತ್ನಿಯನ್ನು ಕೆಡಿಸಬೇಕೆಂದು ಪ್ರಯತ್ನಪಟ್ಟ ನೆಂದು ಮೊಕದ್ದಮೆ ಬಂದು, ಅವನಿಗೆ ಒಂದು ವರುಷ ಕಠಿಣಸಜವೂ ೩೦೦ ರೂಪಾಯಿ ಜುಲ್ಮಾನೆಯೂ ಆಯಿತು. ಅಪೀಲ್ ಮಾಡಿದಾನೆ.

****

ಲಾಹೋರ್ ಪಟ್ಟಣದಿಂದ ಇಂದ್ರಸಿಂಗ್, ಮಂಗಳಸಿಂಗ್ ಎಂಬ ಸಹೋದರರು ಕೆಲವು ದಿನಗಳ ಕೆಳಗೆ ವಾಯುವ್ಯ ಸರಹದ್ದಿನ ಆಚೆ ಹೋಗಿ ಅಲ್ಲಿರುವ ಸಿಕ್ ಜನರಿಂದ ಕಪ್ಪಕಾಣಿಕೆಗಳನ್ನು ವಸೂಲ್ಮಾ ಡುತ್ತಿದ್ದರು. ಬೆಟ್ಟಗುಡ್ಡಗಳ ಮಹಮ್ಮದೀಯರು ಅವರನ್ನು ಹಿಡಿದು ಕೊಂಡು ಹೋಗಿ ಸೆರೆಯಲ್ಲಿ ಹಾಕಿಕೊಂಡು ಹಣಕೊಟ್ಟರೆ ಬಿಡುತ್ತೇವೆಂದು ಹೇಳಿದರು. ಲಾಹೋರಿಗೆ ಈ ವರ್ತಮಾನಬಂದು ಆ ಸಹೋದರರ ಸ್ನೇಹಿತರು ಅಲ್ಲಿಗೆಹೋಗಿ ೧,೦೦೦ ರೂ. ಪ್ರತಿಫಲವನ್ನು ಕೊಟ್ಟು, ಅವರನ್ನು ಬಿಡಿಸಿಕೊಂಡು ಬಂದಿದಾರೆ.

ಕಳೆದ ತಿಂಗಳು ಮೂರನೇ ದಿನದಲ್ಲಿ ಬೊಂಬಾಯಿ ಗವರ್ನರರ ಮೂರನಾಡದ ವಿಷಯಗಳನ್ನು ಕುರಿತು ನಾತಾರೆಯ ಪ್ರತೋದ ಎಂಬ ಪತ್ರಿಕೆಯು ಬರೆದ ಕಾರಣವಾಗಿ ಅಕ್ಷೇಪಣೆ ಮಾಡಿ ಬ್ರಾಹ್ಮಣ ಪ್ರಕಾಶ ದ್ದರಿಂದ ಕೊಲ್ಲಾಪುರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆ ಪತ್ರಿಕಾ ಕರ್ತನ ಮೇಲೆ ಯಾಕೆ ಮೊಕದ್ದಮೆ ಮಾಡಕೂಡದು ಎಂದು ಕೇಳಿದಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಬಾಬು ಘಾಟ್ ಎಂಬ ಗಂಗಾನದೀ ತೀರದ ಲ್ಲಿ ಹಿಂದೂ ಸ್ತ್ರೀಯರು ಪ್ರತ್ಯೇಕವಾಗಿ ಸ್ನಾನಾದಿಗಳನ್ನು ಮಾ ಡುತ್ತಿ ಉಟ್ಟುಕೊಳ್ಳುವದಕ್ಕೆ ಅನುಕೂಲಿಸುವಂತೆ ಸೋಪಾನಗಳು ಒಂದು ಘಟ್ಟವನ್ನು ಕಟ್ಟಿಸಿಕೊಡುತ್ತೇವೆಂತಲೂ ಇದಕ್ಕೆ ೪೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆಂತಲೂ ಮ್ಯುನಿಸಿಪಾಲಿಟಿಯವರು ತಿಳಿಸಿದಾರೆ.

****

ಬನರ್ಜಿ ಸರ್ಕಾರದವರು ಕಾಥಾ ಡಿಸ್ಟ್ರಿಕ್ಟಿನಲ್ಲಿ ಆನೆಗಳ ಹಿಡಿಯುವದಕ್ಕೆ ತರಬೇತಾದ ಮಾವುತರು ಆನೆಗಳನ್ನು ಕೆಡ್ಡಾ ಕಾಡಿ ಗೆ ಕಳುಹಿಸಿದರು. ಈ ಆನೆಗಳಿಗೆ ಕಾಲುಬಾಯಿ ರೋಗ ಕಾಣಿಸಿ ಕೊಂಡು ಆ ಪೈಕಿ ೨೪ ಆನೆಗಳು ಮೃತಪಟ್ಟವು. ಇದರಿಂದ ಸರ್ಕಾ ರದವರಿಗೆ ೮—೧೦ ಲಕ್ಷ ರೂಪಾಯಿ ನಷ್ಟವಾಗಿದೆ. ಹೋದ ವರು ಷ ಈ ರೋಗದಲ್ಲಿ ಅನೇಕ ಆನೆಗಳು ಕಾಲವಾದಂತೆ ಅಳಿಯಿತು.

****

ಕರಾಚಿಪಟ್ಟಣದಲ್ಲಿ ಗುಲಾಂ ಹುಸ್ಸೇನ್ ಖಾಲಿಕ್ ಎಂಬ ಒಬ್ಬ ಖೋಜಾ ಮಹಮ್ಮದೀಯ ಸಾಹುಕಾರನು ಚಿಕ್ಕ ವಯಸ್ಸಿನಲ್ಲೇ ಕಾಲ ವಾದನಾದಾಗ್ಯೂ ಸಾಯುವುದಕ್ಕೆ ಮೊದಲು ಲಕ್ಷಾಂತರ ರೂಪಾಯಿ ಗಳನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಿದನು. ಈತನ ಹೆಸರಿನ ಒಂದು ಟೌನ್ ಹಾಲ್ ಬಂಗಲೆಯು ನೊನ್ನೆ ತಯಾರಾಗಿ ಕಮಿಷನ ರಿಂದ ಪ್ರವೇಶವಾಯಿತು. ಈ ಕಟ್ಟಡಕ್ಕೆ ೪೦,೦೦೦ ರೂಪಾಯಿ ತನಕ ಖರ್ಚಾಗಿದೆ.

****

ಹತ್ತಿಬೀಜದಲ್ಲಿ ಬಹು ಶ್ರೇಷ್ಠವಾದ ಎಣ್ಣೆಯನ್ನು ತೆಗೆಯ ಬಹುದು. ಅದನ್ನು ಗೋಶಾಲೆಗಳಿಗೆ ಹಾಕೋಣವೆಂದ ದೃಷ್ಟಿಯು ಟು. ಇವೆರಡೂ ಈಗ ಪರರಾಜ್ಯಗಳಿಗೆ ಅಳಿದುಬಂದು ಕಾರಣ ಹಿಂದು ಸ್ಥಾನದಿಂದ ಹತ್ತೀ ಬೀಜವನ್ನು ಹೆಚ್ಚು ಹೆಚ್ಚಾಗಿ ತರಿಸಿಕೊಳ್ಳು ದಾರೆ. ೧೯೦೪ ೦೫ನೇ ಸಾಲಿನಲ್ಲಿ ೧,೯೩,೫೩೦ ಟನ್ನುಗಳಷ್ಟು ಬೀಜ ಹಿಂದುಸ್ಥಾನದಿಂದ ಹೊರಕ್ಕೆ ಸಾಗಿ ಹೋಯಿತು. ಅದರ ಕ್ರಯ ೧,೦೭,೯೩,೪೦೦ ರೂಪಾಯಿ.

****

ಕಲ್ಕತ್ತೆಯ ಹತ್ತರ ಶಿವಪುರದಲ್ಲಿ ಅಬ್ದುಲ್ ವಾಸಿಫ್ ಎಂಬೊಬ್ಬ ಮಹಮ್ಮದೀಯನು ೧೮ ವರುಷದ ತನ್ನ ಹೆಂಡತಿಯನ್ನು ತೌರುಮನೆ ಹೋಗಿ ಬರಬೇಕೆಂದು ಅವಳು ಪ್ರಯತ್ನ ಮಾಡಿದ್ದಕ್ಕೆ ಸೈಸಲಾರ ಹಿಡಿದು ಚೆನ್ನಾಗಿ ಬರೆ ಹಾಕಿ, ಮಾರನೇದಿನ ಬಾಜೆಯನ್ನು ಹರೆದು ವಿವ ಹ ಸಂಬಂಧವನ್ನು ಮುರಿದುಬಿಟ್ಟು, ಅವಳನ್ನು ತೌರುಮನೆಗೆ ಕಳು ಹಿಸಿದನು. ಕೋರ್ಟ್ ಮ್ಯಾಜಿಸ್ಟ್ರೇಟರು ಅವನಿಗೆ ಎಂಟು ತಿಂಗಳ ಕ ಠಿಣ ಸಜಾ ವಿಧಿಸಿರುತ್ತಾರೆ.

****

ಕಾಶ್ಮೀರ ಸಂಸ್ಥಾನದ ಮಹಾರಾಜರವರು ತಮ್ಮ ರಾಜಧಾನಿಯಾದ ಶ್ರೀನಗರದಲ್ಲಿ ಕಳೆದ ವಾರ ಒಂದು ಹಿಂದೂ ಕಾಲೇಜನ್ನು ಕಟ್ಟಿಸುವ ದಕ್ಕೆ ಅಸ್ತಿಭಾರ ಹಾಕಿದರು. ಬ್ರಿಟಿಷ್ ರೆಸಿಡೆಂಟರು, ಪ್ರೆಂಚ್ ರಾಜದ ಮಿಸೆಸ್ ಬೆಸೆಂಟರು, ಮೊದಲಾದವರೆಲ್ಲಾ ಸೇರಿದ್ದರು. ಆ ವಿದ್ಯಾಶಾಲೆ ಗೆ ಶ್ರೀ ಪ್ರತಾಪ ಹಿಂದೂ ಕಾಲೇಜ್ ಎಂಬ ಹೆಸರಿಟ್ಟದಾರೆ. ಮಹಾರಾಜ ರವರು ವಿಸ್ತಾರವಾದ ಜಮೀನನ್ನೂ ವರ್ಷಾಶನವನ್ನೂ ಆ ವಿದ್ಯಾಶಾಲೆಗೆ ಕೊಟ್ಟಿರುವರು.

****

ಹಿಂದುಸ್ಥಾನದಲ್ಲಿ ಸರ್ಕಾರದವರು ನಾಣ್ಯಗಳನ್ನು ಛಾಪಾ ಹಾಕು ವುದಕ್ಕೆ ಮೂರು ಟಂಕಸಾಲೆಗಳನ್ನಿಟ್ಟದಾರೆ. ಈ ಮೂರರಲ್ಲು ತಾಂಬ್ರದ ನಾಣ್ಯಗಳನ್ನು ಛಾಪಾ ಹಾಕಕೂಡದೆಂದು ಅಪ್ಪಣೆಕೊಟ್ಟು ಇದೇ ಆಗಸ್ಟ್ ಪ್ರಾರಂಭದಿಂದ ನಿಲ್ಲಿಸಿಬಿಟ್ಟರು. ತಾಂಬ್ರದ ಕಾಸು ಒಂದೂವರೆ ಕಾಸು, ಕಾಲಾಣೆ, ಈ ದಮ್ಮಡಿಗಳನ್ನು ಇನ್ನು ಮೇಲೆ ಚಲಾವಣೆಯಿಂದ ಕ್ರಮೇಣ ತೆಗೆದುಹಾಕಿ ಅವೇ ದಮ್ಮಡಿಗಳನ್ನು ಕಂಚಿ ನಲ್ಲಿ ಛಾಪಾಹಾಕಿ ಚಾರಿಯಲ್ಲಿ ತರುತ್ತಾರೆ.

****

ಪೂನೆಯಿಂದ ಬೊಂಬಾಯಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಮೊ॥ ದ್ವಾರಕದಾಸ್ ಎಂಬಾತನ ಮನೆ ಹೆಂಗಸರ ಪೈಕಿ ಒಬ್ಬಾಕೆಯ ನ್ನು ಆದೇ ಗಾಡಿಯಲ್ಲಿ ಹೋಗುತ್ತಿದ್ದ ಅಲ್ಬರ್ಟ್ ಬಿಲ್ಲಾರ್ ಎಂಬು ನು ಮಾನಭಂಗಪಡಿಸಬೇಕೆಂದು ಪ್ರಯತ್ನ ಪಟ್ಟನು. ಪೂನೆಯ ಮ್ಯಾಜಿಸ್ಟ್ರೇಟರು ಅವನನ್ನು ವಿಚಾರಿಸಿ ಮಾಡಿ, ಅವನಿಗೆ ೫೦ ರೂಪಾಯಿ ಜುಲ್ಮಾನೆ ಇಲ್ಲವೆ ೨ ತಿಂಗಳ ಸಜವನ್ನು ವಿಧಿಸಿದರು. ಅವನು ಜುಲ್ಮಾನೆ ಕೊಟ್ಟು ಹೋದನು.

****

ಉತ್ತರ ದೇಶದಲ್ಲಿ ಈಚೆಗೆ ಮಳೆಯಾದದ್ದರಿಂದ ಕ್ಷಾಮಬಾಧೆ ಬಹಳಮಟ್ಟಿಗೆ ಕಡಿಮೆಯಾಗಿದೆ. ಹಿಂದಿನ ವಾರ ಸರ್ಕಾರದವರ ಲೆಖ ಪಣೆಯಲ್ಲಿದ್ದ ಕ್ಷಾಮಪೀಡಿತರ ಸಂಖ್ಯೆಯಲ್ಲಿ ೪೩,೮೦೦ ಮಂದಿ ಭೂ ವ್ಯವಸಾಯವನ್ನು ಕುರಿತು ಹೊರಟುಹೋದರು. ಈಗ ಇನ್ನೂ ೨,೬೪,೦೦೦ ಪ್ರಜೆಗಳು ರಿಲೀಫ್ ಕಾಮಗಾರಿಯಲ್ಲಿದಾರೆ. ಇದಲ್ಲದೆ ಪೂರ್ವ ಬಂಗಾಳಾ ಎಂಬ ಹೊಸ ಆಧಿಪತ್ಯದಲ್ಲೂ ಕ್ಷಾಮದ ದೆಸೆಯಿಂ ದ ೬,೨೦೦ ಜನರು ರಿಲೀಫ್ ಕಾಮಗಾರಿಗೆ ಸೇರಿಕೊಂಡರು.

****

ದೆಹಲಿ ದರ್ಬಾರಿನಲ್ಲಿ ವೈಸ್‌ರಾಯಿ ಲಾರ್ಡ್ ಕರ್ಜನರವರನ್ನು ಪತ್ನಿ ಸಹಿತ ಮೆರವಣಿಗೆ ಮಾಡಿಸಿಕೊಂಡು ಬಂದ ಲಕ್ಷ್ಮಣಪ್ರಸಾದ ಎಂಬ ಆನೆಯು ಇನ್ನೊಂದು ಆನೆಯ ಸಂಗಡ ಕಾದಾಡಿ ಗಾಯಪ ಟ್ಟು ನರಳಿ ಕಳೆದ ವಾರ ಕಾಶೀ ಪಟ್ಟಣದಲ್ಲಿ ಸತ್ತುಹೋಯಿತು.

ದಕ್ಕೆ ಸುಮಾರು ೮೦ ವರುಷವೆಂದು ಹೇಳುತ್ತಾರೆ ಈಚೆಗೆ ಪ್ರಿನ್ಸ್ ಆಫ್ ವೇಲ್ಸ್‌ರವರೂ ಪತ್ನಿ ಸಹಿತ ಈ ಆನೆಯಮೇಲೆ ಕುಳಿತು ಕಾಶೀಪಟ್ಟಣದಲ್ಲಿ ಸಂಚಾರಮಾಡಿದ್ದರು

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಗೌಳಿಗರು ರೂಪಾಯಿಗೆ ೭-೮ ಸೇರಿಗಿಂತ ಜ್ಯಾಸ್ತಿ ಹಾಲು ಕೊಡುವುದಿಲ್ಲ. ಅವರ ಸ್ಥಿತಿಗತಿಯನ್ನೆಲ್ಲಾ ಮ್ಯುನಿಸಿಪಾಲಿಟಿಯವರು ಪರಿಶೋಧನೆ ಮಾಡಿಸಿದ್ದರಲ್ಲಿ ಅವರ ಖರ್ಚನ್ನು ಕಳೆದು ರೂಪಾಯಿಗೆ ೬ ಸೇರು ಕೊಡುವದೂ ಅವರಿಗೆ ನಷ್ಟವೇ ಇಲ್ಲದು ಕಂಡುಬಂದದ್ದರಿಂದ ಅವರು ನೀರು ಬೆರಸದೆ ಅಷ್ಟು ಅಗ್ಗವಾಗಿ ಕೊಡಬಾರರೆಂದು ಗೊತ್ತಾಯಿತು ಕೆಟ್ಟನೀರು ಬೆರಕೆಯಾದ ಹಾಲಿನಿಂದ ಜನರಿಗೆ ರೋಗಗಳು ಬರುತ್ತವೆಂದೂ ಅದನ್ನು ತಪ್ಪಿಸುವ ಉಪಾಯವನ್ನು ಕಂಡುಹಿಡಿಯಬೇಕೆಂದೂ ಪ್ರಯತ್ನ ಪಡುತ್ತಿದಾರೆ

❖❖❖❖

ಹಿಂದುಸ್ಥಾನದಲ್ಲಿ ಯೂರೋಪ್ಯಿಯನ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಪ್ರತ್ಯೋಪಚಾರಮಾಡುವುದಕ್ಕೆ ಯೋಗ್ಯರಾದಂಥಾ ನರ್ಸ್ ಎಂಬ ದಾದಿಯರನ್ನು ಗೊತ್ತು ಮಾಡಬೇಕೆಂದೂ ಇಂಥಾ ಪುಣ್ಯಕೆಲಸಕ್ಕೆ ಯೂರೋಪ್ಯಿಯನ್ ಪ್ರಜೆಗಳು ಚಂದಾ ಕೊಡಬೇಕೆಂದೂ ವೈಸ್‌ರಾಯರವರ ಪತ್ನಿಯಾದ ಲೇಡಿ ಮಿಂಟೋರವರು ತಿಳಿಸಿ, ಒಂದು ಫಂಡನ್ನು ಸ್ಥಾಪನೆ ಮಾಡಿದಾರೆ ಕಳೆದ ಮೂರು ವಾರಗಳಲ್ಲೇ ಈ ಫಂಡಿಗೆ ೧,೦೦೦ ರೂಪಾಯಿ ತನಕ ಚಂದಾ ವಸೂಲಾಗಿರುವುದು. ವಿಲಾಯತಿ ಮಹಾರಾಜ್ಞಿಯವರು ಕೂಡ ಪರಮ ಸಂತೋಷದಿಂದ ೧,೫೦೦ ರೂಪಾಯಿ ಚಂದಾ ಕಳುಹಿಸಿದಾರೆ

❖❖❖❖

ಲಾಹೋರ್ ಪಟ್ಟಣದ ಇಸ್ಲಾಮಿಯಾ ಕಾಲೇಜಿನ ಹುಡುಗರು ಒಂದು ಅರ್ಜಿ ಬರೆದು ಇತರ ಸರ್ಕಾರಿ ಸ್ಕೂಲುಗಳಿಗೆ ಬೇಸಿಗೆ ರಜಾ ದಿವಸಗಳು ತಾರೀಖು ಕೊಡಬೇಕೆಂದು ಆ ಸ್ಕೂಲಿನ ಕಮಿಟಿ ಮೆಂಬರುಗಳಿಗೆ ಕೊಟ್ಟರು. ಕಮಿಟಿಯವರು ಹಾಗೆ ರಜಾ ಕೊಡುವುದಿಲ್ಲವೆಂದು ತಿರಸ್ಕರಿಸಿಬಿಟ್ಟರು ಈಗ ಆ ಸ್ಕೂಲಿನ ೫೦೦ ಹುಡುಗರು ರಜಾಕಾಲದಲ್ಲಿ ಸ್ಕೂಲಿಗೆ ಹೋಗದೆ ನಿಂತರುತ್ತಾರೆ ಆರು ದಿವಸಗಳೊಳಗೆ ಸ್ಕೂಲಿಗೆ ಬಂದು ಸೇರಿಕೊಳ್ಳದಿದ್ದರೆ ಅವರ ಹೆಸರನ್ನೆಲ್ಲಾ ವಜಾ ಮಾಡುತ್ತೇನೆಂದೂ, ಸರ್ಟಿಫಿಕೇಟು ಕೊಡುವುದಿಲ್ಲವೆಂದೂ ಕಮಿಟಿಯವರು ತಿಳಿಸಿದಾರೆ

❖❖❖❖

ಪ್ರಾಣ ಹೋಗುವ ಪರ್ವತ ಸಾಲು ಎಂಬ ಪರ್ವತದ ಮುಂದೆ ಒಂದು ನಲ್ಲಿಯನ್ನಿಟ್ಟಿದಾರೆ ಹಿಂದುಗಳು ಅಲ್ಲಿಂದ ನೀರು ತರುತ್ತಿದ್ದರು. ಆ ಸ್ಥಳಕ್ಕೆ ಅಬ್ದುಲ್ ಅಜೀಜುದ್ದೀನ್ ಎಂಬುವನು ಹಿಂದುಗಳನ್ನು ನಲ್ಲಿ ಮುಟ್ಟನಂತೆ ಅಡ್ಡಿ ಮಾಡುತ್ತಾ ಇದ್ದನು ಶಿಬೋ ರಾಯನೆಂಬ ಒಬ್ಬ ಬ್ರಾಹ್ಮಣನು ನಲ್ಲಿ ತಗಿಸಿ ನೀರು ಹಿಡಿಯುತ್ತಿರುವಾಗ್ಗೆ ಆ ಮಹಮದೀಯನು ಪರ್ವತದೊಳಗಿಂದ ಚಾಕು ಹಿಡುಕೊಂಡು ಬಂದು, ಆವನನ್ನು ಹೊಡೆದು ಪ್ರಾಣ ಗಾಯಮಾಡಿ ಕೊಂದುಬಿಡುತ್ತಿದ್ದನು. ಅಷ್ಟರಲ್ಲೇ ಜನರು ಬಂದು ಬಿಡಿಸಿದರು ಅವನ ಮೇಲೆ ಸೆಷನ್ಸ್ ದಲ್ಲಿ ಆ ಮಹಮದೀಯನಿಗೆ ಏಳು ವರುಷ ಕಠಿಣ ಸಜಾ ಹಾಕಿದಾರೆ

❖❖❖❖

ಐದು ಮಂದಿ ಕಾಬೂಲೀ ಮಹಮದೀಯರು ಹಿಂದುಸ್ಥಾನದ ಸರಹದ್ದಿನೊಳಕ್ಕೆ ಬಂದು, ತುರ್ಕಿ ಸುಲ್ತಾನರೇ ಮೊದಲಾದ ಮಹಮದೀಯ ರಾಜಾಧಿಪತಿಗಳಲ್ಲಾ ತಮ್ಮನ್ನು ಹಿಂದುಸ್ಥಾನಕ್ಕೆ ಅಧಿಕಾರಕೊಟ್ಟು ಕಳುಹಿಸಿದಾರೆಂತಲೂ, ಅವರ ಅಪ್ಪಣೆಯ ಪ್ರಕಾರ ತಾವು ಹಿಂದುಸ್ಥಾನದಲ್ಲೆಲ್ಲಾ ಸಂಚಾರ ಮಾಡಿ, ನಮ್ಮ ಮಹಮದೀಯರು ಇನ್ನು ಮೇಲೆ ಕೂದಲನ್ನು ಉದ್ದವಾಗಿ ಬೆಳಸದೆ ಕತ್ತರಿಸಿಕೊಳ್ಳುವಂತೆಯೂ, ಮುಖ್ಯವಾಗಿ ಮಸೀತಿಗಳಿಗೆ ಹೋಗುವಂತೆಯೂ ಬಲಾತ್ಕರಿಸಬೇಕೆಂತ ಹೇಳುತ್ತಿದಾರೆ ಅವರ ಅಧಿಕಾರಪತ್ರಕ್ಕೆ ವಿಲಾಯತಿಯ ಚಕ್ರವರ್ತಿಯವರೂ ಒಪ್ಪಿ ರುಜು ಮಾಡಿದ್ದಾರಂತೆ. ಅವರು ಮಹಮದೀಯರನ್ನು ಬೀದಿ ಬೀದಿಗಳಲ್ಲಿ ಹಿಡಿದು ನಿಲ್ಲಿಸಿಕೊಂಡು, ತಾವೇ ಅವರ ತಲೆ ಗಡ್ಡ ಮೀಸೆಗಳನ್ನು ಬಲಾತ್ಕರಿಸಿ ಕತ್ತರಿಸುತ್ತಿದಾರೆ ಇದರಿಂದ ಗಲೇ ಹಿಂದುಸ್ಥಾನದ ಸರಹದ್ದಿನಲ್ಲಿರುವ ಪಟ್ಟಣಗಳಲ್ಲಿ ಗಲಭೆಯುಂಟುಮಾಡಿದ್ದರೂ ಪೋಲೀಸಿನವರು ಅದರ ಪರ್ಯವಸಾನವೇನಾಗುವುದೋ ನೋಡೋಣವೆಂದು ಸುಮ್ಮನಿದಾರೆ

❖❖❖❖

ಕಳೆದ ಬುಧವಾರ ರಾತ್ರಿ ಕಲ್ಕತ್ತಾ ಪಟ್ಟಣದಲ್ಲಿ ಬಹು ಭಯಂಕರವಾದ ಕೊಲೆಗಳು ನಡೆದವು ಶ್ರೀನಾಥನೆಂಬ ಭಾರೀ ವರ್ತಕನು ಊಟಮಾಡಿ ಮಲಗಿಕೊಳ್ಳುವಾಗ್ಗೆ ಸುಮಾರು ೨೪ ಮಂದಿ ಕಳ್ಳರು ಅವನ ಮನೆಯೊಳಕ್ಕೆ ಕತ್ತಿಯರು ಸಹಿತ ನುಗ್ಗಿ ಲೂಟಿಮಾಡತೊಡಗಿದರು. ಶ್ರೀನಾಥನು ಕೂಗಿಕೊಂಡನು ಆ ಕೂಡಲೇ ಕಳ್ಳರು ಅವನ ಕತ್ತು ಕತ್ತರಿಸಿಹಾಕಿದರು ಶ್ರೀನಾಥನ ಹೆಂಡತಿ ಅವರನ್ನು ನೋಡಿ ಕಿರಿಚಿಕೊಂಡಳು ಒಡನೆಯೇ ಅವಳನ್ನೂ ಕಡಿದು ಮಲಗಿಸಿದ್ದಲ್ಲದೆ ಅವರ ಕಿರುಪುತ್ರನಾದ ೫ ವರುಷದ ಹುಡುಗನನ್ನೂ ಹೊಡೆದು ಪ್ರಾಣ ಗಾಯ ಮಾಡಿದರು. ಮನೆಯಲ್ಲಿ ಸಿಕ್ಕಿದ ಆಸ್ತಿಪಾಸ್ತಿಯನ್ನೆಲ್ಲಾ ಕೂಡಿಸಿಕೊಂಡು ಹೊರಟುಹೋಗುವಾಗ್ಗೆ ಆ ಕಳ್ಳರು ಸಾಹುಕಾರನ ಮತ್ತು ಅವನ ಹೆಂಡತಿಯ ಶವಗಳನ್ನು ಸುತ್ತಿ ಮನೆಗೆ ಬೆಂಕಿ ಹಾಕಿಬಿಟ್ಟರು. ಮಗುವು ಅಳುತ್ತಾ ಹೊರಕ್ಕೆ ಹೋಯಿತು. ನೆರೆಹೊರೆಯವರು ಬಂದು ನೋಡುವಷ್ಟರಲ್ಲೇ ಹೆಣಗಳು ಸ್ವಲ್ಪಮಟ್ಟಿಗೆ ಉರಿಯುತ್ತಿದ್ದವು. ಎರಡು ಹಸುಗಳು ಜೀವಸಹಿತ ಸುಟ್ಟುಹೋದವು ಕಳ್ಳರ್ಯಾರೋ ಅವರ ಸುಳುವೇ ಇನ್ನೂ ಗೊತ್ತಾಗಲಿಲ್ಲ

❖❖❖❖

ಲಾರ್ಡ್ ಕರ್ಜನರವರು ವೈಸ್‌ರಾಯರಾಗಿದ್ದು ಬಂಗಾಳಾ ಆಧಿಪತ್ಯವನ್ನು ಎರಡಾಗಿ ವಿಭಜನೆಮಾಡಿ ಹೋದರು. ಅದರಿಂದ ಬಹಳ ಅನಾನುಕೂಲವಾಗಿದೆ ಎಂದು ಅಲ್ಲಿನ ಪ್ರಜೆಗಳು ಅಂದಿನಿಂದಲೂ ಗಲಭೆ ಮಾಡಿ, ಗವರ್ನಮೆಂಟಿನವರು ಅದನ್ನು ರದ್ದು ಮಾಡುವ ತನಕ ವಿಲಾಯತಿಯ ಸರಕುಗಳನ್ನೂ ಬಟ್ಟೆಬರೆಗಳನ್ನೂ ಯಾರೂ ಕೊಂಡುಕೊಳ್ಳಕೂಡದೆಂದೂ ಸ್ವದೇಶೀ ವಸ್ತುಗಳನ್ನೇ ಕೊಂಡು ಉಪಯೋಗಿಸಬೇಕೆಂದೂ ಶಪಥಮಾಡಿಕೊಂಡಿದಾರೆ ಆದರೆ ಇಂಡಿಯಾ ಸ್ಟೇಟ್ ಸೆಕ್ರೆಟರಿ ಮಿ॥ ಜಾನ್ ಮಾರ್ಲೀ ಯವರು ಎರಡು ವಾರಗಳ ಹಿಂದೆ ಬಂಗಾಳಾವಿಭಜನೆಯು ಸ್ಥಿರಪಟ್ಟುಹೋಯಿತು ಅದನ್ನು ಬದಲಾಯಿಸುವುದಿಲ್ಲ ಎಂಬುದಾಗಿ ಹೇಳಿಬಿಟ್ಟರು. ಈ ಮಾತನ್ನು ಕೇಳಿ, ಕಲ್ಕತ್ತಾ ಪಟ್ಟಣದಲ್ಲಿ ಸಾವಿರಾರು ಹಿಂದುಗಳು ಕಳೆದ ವಾರ ಸಭೆ ಸೇರಿ, ಪ್ರತಿಭಟಿಸಿ ಉಪನ್ಯಾಸಗಳನ್ನು ಮಾಡಿ, ಈ ವಿಭಜನೆಯು ರದ್ದಾಗುವ ತನಕ ನಾವು ಸುಮ್ಮನಿರುವುದಿಲ್ಲವೆಂತಲೂ ಸ್ವದೇಶೀ ಪದಾರ್ಥವನ್ನೇ ಪ್ರೋತ್ಸಾಹಪಡಿಸುತ್ತೇವೆಂತಲೂ ಹಿಂದೆ ೧೯೦೫ ನೆ ಅಕ್ಟೋಬರ್ ೧೬ ರಲ್ಲೇ ಭಗವತ್ಸಾಕ್ಷಿಯಾಗಿ ಎಲ್ಲರೂ ಸೇರಿ ಶಪಥಮಾಡಿಕೊಂಡಿರುವುದನ್ನು ಯಾರೂ ಮರೆಯಕೂಡದೆಂತಲೂ ಗೊತ್ತುಮಾಡಿಕೊಂಡರು.

❖❖❖❖

ಮಧ್ಯ ಪ್ರಾಂತ್ಯಗಳಿಗೆ ಸೇರಿದ ಖಾಂಡ್ವಾ ಡಿಸ್ಟ್ರಿಕ್ಟಿನಲ್ಲಿ ಬರ್ಹಾನ್‌ಪುರದ ದೊಡ್ಡ ಬೀದಿಗೆ ಕಳೆದ ಏಪ್ರಿಲ್ ೨೨ ರಲ್ಲಿ ಬೆಂಕಿ ಬಿದ್ದು ಅನಾಹುತವಾದದ್ದನ್ನು ಅಲ್ಲಿನ ಛೀಫ್ ಕಮಿಷನರರವರು ವಿವರಿಸಿ ಗವರ್ನಮೆಂಟಿಗೆ ರಿಪೋರ್ಟು ಬರೆದಿದಾನೆ. ಈ ರಿಪೋರ್ಟಿನಲ್ಲಿ ತಿಳಿಯುವ ವಿಷಯವೇನೆಂದರೆ—ಪಟ್ಟಣದಲ್ಲಿ ಹಗಲು ೧ ಗಂಟೆಗೆ ಬೆಂಕಿ ಕಾಣಿಸಿಕೊಂಡಿತು ದೊಡ್ಡ ಗಾಳಿ ಅದಕ್ಕೆ ಸಹಾಯ ಮಾಡಿದ್ದರಿಂದ ಉರಿಯು ಬಹು ಬೇಗನೆ ಊರಿಗೆಲ್ಲಾ ಹರಡಿಕೊಂಡಿತು. ಸಾಯಂಕಾಲದ ತನಕ ಸಾವಿರಾರು ಜನರು ತುಂಬಾ ಸಾಹಸಮಾಡಿ ಉರಿಯನ್ನು ಆರಿಸಿದರು ೭೦ ವರುಷದ ಒಬ್ಬ ಮುದುಕಿ, ಒಬ್ಬ ಹುಡುಗಿ, ೧೯ ವರುಷದ ಒಬ್ಬ ಹುಡುಗ, ಈ ಮೂವರೂ ಬೆಂಕಿಯಲ್ಲಿ ಸಿಕ್ಕಿ ಮೃತಪಟ್ಟರು. ಈ ಅನಾಹುತದಿಂದ ಏಳು ಲಕ್ಷ ರೂಪಾಯಿನ ಮನೆಮಠಗಳು ಸುಟ್ಟುಹೋದವು ಒಟ್ಟು ೬೫೭ ಮನೆಗಳು ನಾಶವಾದವು. ಈ ಪೈಕಿ ೨೩೦ ಮನೆಗಳವರು ತುಂಬಾ ಬಡವರು ಉರಿ ಇತರ ಕಡೆಗಳಿಗೆ ವ್ಯಾಪಿಸದಂತೆ ಬಡಬಗ್ಗರ ೬೭ ಮನೆಗಳನ್ನು ಕಿತ್ತುಹಾಕಬೇಕಾಯಿತು ಬಡವರೆಲ್ಲಾ ಮನೆ ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ ೭,೫೦೦ ರೂಪಾಯನ್ನೂ ಮ್ಯುನಿಸಿಪಾಲಿಟಿಯಿಂದ ೧೫,೦೦೦ ರೂಪಾಯನ್ನೂ ಕೊಟ್ಟರು ಅವರನ್ನೆಲ್ಲಾ ಸತ್ರ ಮಠ ದೇವಸ್ಥಾನ ಮುಂತಾದ ಸ್ಥಳಗಳಲ್ಲಿಟ್ಟು, ಧರ್ಮಿಷ್ಠರು ಕೊಟ್ಟ ಚಂದಾ ಹಣದಿಂದ ಸಂರಕ್ಷಣೆ ಮಾಡುತ್ತಿದಾರೆ ಬೋಹ್ರಾ ಜನರು ೧೦,೦೦೦ ರೂಪಾಯಿ ಚಂದಾ ಕೂಡಿಸಿ, ತಮ್ಮ ಜಾತಿಯ ಬಡವರನ್ನು ಪೋಷಿಸುತ್ತಿದಾರೆ ಎಂಬುದೇ

ವಿದೇಶ ವರ್ತಮಾನಗಳು.

ಸ್ಕಾಟ್‌ಲೆಂಡಿಗೆ ಸೇರಿದ ಡಂಡೀ ಪಟ್ಟಣದಲ್ಲಿ ಮದದ್ರವ್ಯಗಳ ಒಂದು ಕಾರ್ಖಾನೆಗೆ ಕಳೆದ ವಾರ ಬೆಂಕಿ ಬಿದ್ದು ೬೦ ಲಕ್ಷ ರೂಪಾಯಿ ದ್ರವ್ಯಗಳೂ ನಾರಿನ ಗಟ್ಟಿಗಳೂ ಸುಟ್ಟುಹೋದವು.

❖❖❖❖

ಲಂಡನ್ ಪಟ್ಟಣದ ಪ್ಲೈಟ್ ಛೀಫ್ ಇಂಜನಿಯರಾಗಿದ್ದ ಕಾಲವಾದ ಮಿ॥ ಫ್ರಾನ್ಸಿಸ್ ವೆಬ್ ಎಂಬಾತನು ೨೯॥ ಲಕ್ಷ ರೂಪಾಯಿ ಸಂಪಾದಿಸಿ, ಆ ಪೈಕಿ ೧೭॥ ಲಕ್ಷ ರೂಪಾಯನ್ನು ಧರ್ಮಕೆಲಸಗಳಿಗೆ ವಿನಿಯೋಗಿಸಬೇಕೆಂದು ಬರೆದಿಟ್ಟಿರುತ್ತಾನೆ.

❖❖❖❖

ದಕ್ಷಿಣ ಆಫ್ರಿಕದ ಕೋಟ್ಯಾಧೀಶ್ವರನಾಗಿದ್ದ ಮಿ॥ ವರ್ನರ್ ಬೀಟ್ ಎಂಬಾತನು ಕಾಲವಾದನು. ಇವನು ತನ್ನ ಆಸ್ತಿಯಿಂದ ಮೂರು ಕೋಟಿ ರೂಪಾಯನ್ನು ದಕ್ಷಿಣ ಆಫ್ರಿಕಾ, ವಿಲಾಯತಿ, ಜರ್ಮನಿಗಳಲ್ಲಿ ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ

❖❖❖❖

ರಷ್ಯಾ ಚಕ್ರವರ್ತಿಯವರು ಜರ್ಮನಿಗೆ ಅಲ್ಲಿನ ಚಕ್ರವರ್ತಿಯವರ ಅತಿಥಿಗಳಾಗಿ ಕೆಲವು ದಿನಗಳ ಮಟ್ಟಿಗೆ ಹೋಗಿ ಬರುವುದಕ್ಕೆ ಒಪ್ಪಿಕೊಂಡಿದ್ದರು ಈಗ ರಷ್ಯಾ ರಾಜ್ಯದಲ್ಲಿ ತುಂಬಾ ಗಲಭೆಯುಂಟಾಗಿರುವುದರಿಂದ ಸದ್ಯಕ್ಕೆ ಬರುವುದಕ್ಕಾಗುವುದಿಲ್ಲವೆಂದು ಅವರಿಗೆ ಹೇಳಿ ಕಳುಹಿಸಿಬಿಟ್ಟರು.

❖❖❖❖

ಉತ್ತರ ಅಮೇರಿಕದಲ್ಲಿರುವ ಕೆನಡಾ ಎಂಬ ಇಂಗ್ಲಿಷ್ ಸಾಮ್ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಗಳ ಮಂತ್ರಿಗಳು ಐದು ವರುಷ ಸರ್ವಿಸ್ ಮಾಡಿ ಕೆಲಸ ಬಿಡುವ ಪಕ್ಷದಲ್ಲಿ ಅಂಥವರಿಗೆ ಸರ್ಕಾರದಿಂದ ತಿಂಗಳಿಗೆ ೮೩೫ ರೂಪಾಯಿ ಪೆನ್ಷನ್ ಸಲ್ಲಬೇಕೆಂದು ಈ ಮೊದಲೇ ಕಾನೂನಾಗಿ ಜಾರಿಯಲ್ಲಿದೆ ಈಗ ಅದನ್ನು ವಜಾ ಮಾಡಬೇಕೆಂದು ಚರ್ಚೆ ನಡೆಯುತ್ತಿದೆ

❖❖❖❖

ದಕ್ಷಿಣ ಅಮೇರಿಕಕ್ಕೆ ಸೇರಿದ ಗ್ವಾಟೆಮಾಲಾ, ಸ್ಯಾನ್‌ಸಾಲ್ವೆಡರ್ ಎಂಬೀ ರಾಜ್ಯಗಳಿಗೆ ಜಗಳವಾಗಿ, ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟ್ ರೂಸ್‌ವೆಲ್ಟ್ ಯವರು ಮಧ್ಯಸ್ಥಿಕೆ ಮಾಡಿ, ಕಾದಾಟವನ್ನು ನಿಲ್ಲಿಸಿದರೆಂದು ಕಳೆದ ವಾರ ತಿಳಿಸಿದೆವಷ್ಟೆ. ಈಚೆಗೆ ಒಂದು ಕರಾರಾಗಿ ಅವೆರಡು ರಾಜ್ಯಗಳವರೂ ಅದರಂತೆ ಒಪ್ಪಿಕೊಂಡು ರುಜು ಹಾಕಿರುತ್ತಾರೆಂದು ತಂತೀವರ್ತಮಾನ ಬಂದಿದೆ.

❖❖❖❖

ಪರ್ಷಿಯಾ ರಾಜ್ಯದಲ್ಲಿ ಪ್ರಜೆಗಳು ಷಾಸುಲ್ತಾನರ ನಡವಳಿಕೆಯಲ್ಲಿ ಸಮಾಧಾನವಿಲ್ಲದೆ ಗುಣುಗುಟ್ಟುತ್ತಿದಾರೆ ಪ್ರಜೆಗಳಿಗೂ ಸರ್ಕಾರಿ ಸೈನಿಕರಿಗೂ ಕೆಲವು ಕದನಗಳಾದವೆಂದು ತಿಳಿಸಿದ್ದೇವಷ್ಟೆ ಈಚೆಗೆ ೫,೦೦೦ ವಿದ್ಯಾರ್ಥಿಗಳೂ, ಕಸಬುದಾರರೂ, ವ್ಯಾಪಾರಸ್ಥರೂ ಏಕವಾಗಿ ಸರ್ಕಾರದವರು ತಮ್ಮನ್ನು ಹಿಡಿದು ಶಿಕ್ಷಿಸುತ್ತಾರೆಂದು ಹೆದರಿ ಟೆಹರಾನ್ ಪಟ್ಟಣದಲ್ಲಿರುವ ಇಂಗ್ಲಿಷ್ ರಾಯಭಾರಿಯ ಆಶ್ರಯವನ್ನು ಹೋಗಿ ಸೇರಿಕೊಂಡರು. ಪ್ರಜಾ ನೆಮ್ಮದಿಗೆ ಭಂಗ ಉಂಟಾಗಿದೆ. ಷಾಸುಲ್ತಾನರು ತಮ್ಮ ಮಂತ್ರಿಯನ್ನು ವಜಾಮಾಡಿ, ಕೂಂ ಎಂಬಲ್ಲಿಗೆ ಓಡಿಹೋಗಿರುವ ವೈದಿಕರನ್ನೆಲ್ಲಾ ವಾಪಸು ಕರೆಸಿಕೊಂಡು, ರಾಜ್ಯದ ಬದಲಾವಣೆಗಳನ್ನು ಮಾಡಬೇಕೆಂಬುದಾಗಿ ಪ್ರಜೆಗಳು ಕೇಳಿಕೊಳ್ಳುತ್ತಿದಾರೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ಸ್ವದೇಶಿಗಳು ದಂಗೆಯೆದ್ದು ಇಂಗ್ಲಿಷರ ಮೇಲೆ ಕಾದಾಡುತ್ತಿದ್ದಾರಷ್ಟೆ. ಅವರ ಮುಖಂಡನಾಗಿದ್ದ ಬಂಬಾಟ ಎಂಬುವನನ್ನು ಹಿಡಿದು ಕೊಂದದ್ದಾಯಿತು. ಅವನ ಹಿಂಬಾಲಕರಲ್ಲಿ ಅನೇಕರು ಇಂಗ್ಲಿಷರಿಗೆ ಶರಣಾಗತರಾದರು. ಇನ್ನೂ ಕೆಲವರು ಹಟ ಸಾಧಿಸುತ್ತಿರುವುದರಿಂದ ಅವರ ಮೇಲೆ ಇಂಗ್ಲಿಷ್ ಸೈನಿಕರನ್ನು ಯುದ್ಧಕ್ಕೆ ಕಳುಹಿಸಿದಾರೆ

❖❖❖❖

ಬ್ರೆಜಿಲ್ ಮುಖ್ಯಪಟ್ಟಣವಾದ ರ್‍ಯೊಡಿಜನಿರೋದಲ್ಲಿ ವಿಲಾಯತಿಯವರಿಬ್ಬರು ದಾರಿಹಿಡಿದು ಹೋಗುತ್ತಾ ರಸ್ತೆ ಯಾವದೆಂದು ಒಂದು ಮನೆಯ ಹೆಂಗಸರನ್ನು ಕರೆದು ಕೇಳಿದ್ದಕ್ಕೆ ಸುತ್ತುಮುತ್ತಿನ ಸ್ವದೇಶಿ ಪೋಲೀಸಿನವರು ಅವರನ್ನು ಹಿಡಿದು ನಾನಾ ತರವಾಗಿ ಅವರನ್ನು ಹಿಂಸೆ ಪಡಿಸಿದ್ದೂ ಅಲ್ಲದೆ ಇಬ್ಬರಿಗೂ ಐವತ್ತೈವತ್ತು ಛಡಿಯೇಟು ಹೊಡೆದು ಬಿಟ್ಟರು. ಈ ವಿಚಾರವು ಪ್ರಕಟವಾಗಿ ವಿಚಾರಣೆಯಾಗುತ್ತಿದೆ

❖❖❖❖

ಫ್ರಾನ್ಸ್, ಜರ್ಮನಿ, ಆಸ್ಟ್ರಿಯ, ವಿಲಾಯತಿ, ಈ ರಾಜ್ಯಗಳವರು ತಮ್ಮ ತಮ್ಮ ಭೂಸೈನ್ಯವನ್ನು ನಾವೆಯನ್ನೂ ಹೆಚ್ಚಿಸಿಕೊಳ್ಳುತ್ತಿದಾರೆಂತಲೂ ಇದರಿಂದ ಮುಂದೆ ರಾಜ್ಯರಾಜ್ಯಗಳಿಗೆ ಮನಸ್ತಾಪಗಳುಂಟಾಗಿ ಕಲಹಗಳು ಹುಟ್ಟಬಹುದೆಂತಲೂ, ಇಷ್ಟಕ್ಕೆ ಅವಕಾಶಕೊಡದೆ ಸೈನ್ಯವನ್ನು ಕಡಿಮೆಮಾಡಿಬಿಡಬೇಕೆಂತಲೂ ಇಟಲಿ ರಾಜ್ಯದ ಮಂತ್ರಿಯಾದ ಸೇನಾರ್ ಟಿಟ್ಟೋನಿಯವರು ಅವರಿಗೆಲ್ಲಾ ತಿಳಿಸಿದಾರೆ.

❖❖❖❖

ಪರರಾಷ್ಟ್ರಗಳವರು ಜಾಲ್ನಿ ಪಟ್ಟಣಕ್ಕೆ ವ್ಯಾಪಾರ ಸರಕುಗಳನ್ನು ತೆಗೆದುಕೊಂಡು ಹೋಗದಂತೆ ಜಪಾನವರು ಎಲ್ಲರನ್ನೂ ಅಡ್ಡಿ ಮಾಡುತ್ತಿರುವುದಾಗಿಯೂ, ತಮ್ಮ ವ್ಯಾಪಾರ ಸಾಮಗ್ರಿಗಳನ್ನು ಮಾತ್ರ ಅಪಾರವಾಗಿ ಮ್ಯಾಂಚೂರಿಯಕ್ಕೆ ತೆಗೆದುಕೊಂಡು ಹೋಗುತ್ತಿರುವುದಾಗಿಯೂ, ಕೇಳಿದರೆ ಚೀನಾಯವರು ಬಂದು ಸರಕುಗಳಿಗೆ ಸುಂಕ ವಸೂಲ್ಮಾಡಿಕೊಳ್ಳುವ ಭಾಗದಲ್ಲಿ ನಮ್ಮ ಅಡ್ಡಿಯೇನೂ ಇರುವುದಿಲ್ಲವೆಂದು ಹೇಳುತ್ತಿರುವುದಾಗಿಯೂ ತಿಳಿದು ಬಂದಿದೆ. ಈ ವಿಚಾರವನ್ನು ಇಂಗ್ಲಿಷ್ ಸರ್ಕಾರದವರು ತನಿಖೆ ಮಾಡಲಾರಂಭಿಸಿದಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ಬಹಳ ಬಡವರಾಗಿರುವವರನ್ನು ಧರ್ಮಾತ್ಮರು ಚಂದಾ ಕೊಟ್ಟು ಒಂದು ಭಾಗದಲ್ಲಿ ಪ್ರತ್ಯೇಕವಾಗಿ ಇಡಿಸಿ ಸಾಕಿ ಸಂರಕ್ಷಣೆ ಮಾಡುತ್ತಿದಾರೆ ಅದರ ಮೇಲ್ವಿಚಾರಣೆ ನೋಡಿಕೊಳ್ಳುವವರ ಮೇಲೆ ಮೊಕದ್ದಮೆ ಮಾಡಿದಾರೆಂದು. ಅಪವಾದ ಹುಟ್ಟಿ ತನಿಖೆಗೆ ಬಂದಾಗ ಅವರು ಬಡಬಗ್ಗರಿಗೆ ದಿನಕ್ಕೆ ಮೂರು ಸಲ ಸುಖಭೋಜನ ಮಾಡಿಸುತ್ತಾ, ಸರ್ವೋತ್ತಮವಾದ ಟೀ, ತಿಂಡಿಗಳನ್ನು ಕೊಡಿಸುತ್ತಾ, ವಾರಕ್ಕೊಂದಾವರ್ತಿ ಅವರಿಗೆ ಬ್ರೇಕ್ ಫಾಸ್ಟ್ ಕೊಟ್ಟು ಪಟ್ಟಣಕ್ಕೆ ಕಳುಹಿಸುತ್ತಿದ್ದದ್ದಲ್ಲದೆ ಅವರ ಖರ್ಚಿಗೆ ಕೈಯಲ್ಲಿ ದುಡ್ಡುಕೊಟ್ಟು ಕಳುಹಿಸುತ್ತಿದ್ದರೆಂದು ತಿಳಿದುಬಂದಿದೆ ಇದನ್ನು ನೋಡಿ ಇಂಥಾ ಜೀವನವು ಸಾಮಾನ್ಯವಾದ ಐಶ್ವರ್ಯವಂತರಿಗೂ ಲಭ್ಯವಿಲ್ಲವಲ್ಲಾ! ಧರ್ಮದ ಹಣವನ್ನು ಹೀಗೆ ದುಂದಾಗಿ ಖರ್ಚು ಮಾಡಬಹುದೇ ಎಂಬೀ ರೀತಿಯಾಗಿ ಅನೇಕರು ಆಕ್ಷೇಪಣೆ ಮಾಡಿದಾರೆ

❖❖❖❖

ವಿಲಾಯತಿಯ ಹವಾ ಬಹಳ ಕೆಟ್ಟದ್ದೆಂದು ಅನೇಕರು ತಿಳಿದುಕೊಂಡಿದ್ದಾರೆ. ಈ ವಿಷಯದಲ್ಲಿ ಅಲ್ಲಿನ ಡಾಕ್ಟರ್ ಸ್ಯಾಂಡ್‌ಫೋರ್ಡರವರು ಅಪ್ಪಣೆ ಕೊಡಿಸಿರುವ ಅಭಿಪ್ರಾಯವೇನೆಂದರೆ—ನಾನು ಕಾರ್ಯಾಂತರದಿಂದ ವಿಲಾಯತಿ ಬಿಟ್ಟು ಹೊರಗೆ ಸಂಚರಿಸುತ್ತೇನಲ್ಲದೆ ಹವಾ ಬದಲಾಯಿಸುವುದಕ್ಕಾಗಲಿ ಇಲ್ಲಿನ ಹವಾ ಕೆಟ್ಟದ್ದೆಂದಾಗಲಿ ಹೋಗುವುದಿಲ್ಲ. ಸರ್ವಸಾಮಾನ್ಯವಾಗಿ ವಿಲಾಯತಿಯಷ್ಟು ಉತ್ಕೃಷ್ಟವಾದ ಹವಾ ಪ್ರಪಂಚದ ಇನ್ಯಾವ ಭಾಗದಲ್ಲೂ ಇಲ್ಲ. ಇಲ್ಲಿನ ಹವಾ ಆರೋಗ್ಯಕರವಾದದ್ದೆನ್ನುವುದಕ್ಕೆ ಇಂಗ್ಲಿಷ್ ಪ್ರಜೆಗಳ ಕಾಯಪುಷ್ಟಿಯೇ ದೊಡ್ಡ ದೃಷ್ಟಾಂತವಾಗಿದೆ ಎಂಬುದೇ. ಇದಲ್ಲದೆ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಹಿಂದುಸ್ಥಾನಕ್ಕೆ ದಯಮಾಡಿದ್ದಾಗ್ಗೆ ಇದೇ ವಿಷಯವಾಗಿ ಹೇಳಿರುವದೇನೆಂದರೆ—ವಿಲಾಯತಿಯ ಹವಾ ಕೆಟ್ಟದ್ದೆಂದು ಅನ್ಯಾಯವಾಗಿ ಅಲ್ಲಗಳೆಯುತ್ತಾರೆ ಅದು ಎಂದಿಗೂ ದೂಷ್ಯವಾದದ್ದಲ್ಲ. ಪ್ರಪಂಚದಲ್ಲೆಲ್ಲಾ ವಿಲಾಯತಿಯ ಹವಾ ಸರ್ವೋತ್ತಮವಾದದ್ದೆಂದು ನನಗೆ ತೋರುವುದು ಎಂಬುದೇ

❖❖❖❖

ಲಂಡನ್ ಪಟ್ಟಣದ ಹೌಸ್ ಆಫ್ ಲಾರ್ಡ್ಸ್ ಎಂಬ ಪಾರ್ಲಿಮೆಂಟ್ ಸಭೆಯಲ್ಲಿ ಕಳೆದ ವಾರ ಒಂದು ದೊಡ್ಡ ಸಮಾಜ ನಡೆಯಿತು. ಯೂರೋಪ್ ಮತ್ತು ಅಮೇರಿಕಗಳಲ್ಲಿರುವ ರಾಜ್ಯಗಳ ಪಾರ್ಲಿಮೆಂಟ್ ಮೆಂಬರುಗಳ ಪ್ರತಿನಿಧಿಗಳು ೬೦೦ ಮಂದಿ ಆ ಸಮಾಜದಲ್ಲಿ ಹಾಜರಾಗಿದ್ದರು ರಾಜ್ಯ ರಾಜ್ಯಗಳಿಗೆ ಕಲಹವಾಗುವುದು, ಮಧ್ಯಸ್ಥಿಕೆ ಮಾಡುವುದು ಮುಂತಾದ ವಿಚಾರಗಳನ್ನು ಕುರಿತು ಚರ್ಚೆ ಮಾಡುವುದೇ ಈ ಸಮಾಜದವರ ಉದ್ದೇಶವಾಗಿದೆ ವಿಲಾಯತಿಯ ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್ಮನ್‌ರವರು ಈ ಸಮಾಜದ ಮೆಂಬರುಗಳಿಗೆ ಸುಸ್ವಾಗತವನ್ನು ಬಯಸಿ, ಸಮಾಜದ ಕಾರ್ಯಗಳನ್ನು ಪ್ರಾರಂಭಮಾಡಿ, ವಿಲಾಯತೀ ದೊರೆಯವರೂ ಇಂಗ್ಲಿಷ್ ಗವರ್ನಮೆಂಟಿನವರೂ ಪ್ರೀತಿ ಅಭಿಮಾನಗಳ ಪೂರ್ವಕವಾಗಿ ಸಭೆಯ ಉದ್ದೇಶಗಳನ್ನು ಪೋಷಿಸಿ ಪ್ರೋತ್ಸಾಹಪಡಿಸುವವರಾಗಿದ್ದಾರೆಂದು ಹೇಳಿ, ರಷ್ಯಾ ರಾಜ್ಯದ ಡ್ಯೂಮಾ ಎಂಬ ಹೊಸ ಪಾರ್ಲಿಮೆಂಟಿನ ಪ್ರತಿನಿಧಿಗಳನ್ನು ಕುರಿತು—ಜಾರ್ ಚಕ್ರವರ್ತಿ ಯವರು ಪಾರ್ಲಿಮೆಂಟನ್ನು ಏರ್ಪಾಡು ಮಾಡಿದ್ದು ಬಹಳ ಸಂತೋಷಕರವಾಗಿದೆ ಎಂದೂ, ಆ ಪಾರ್ಲಿಮೆಂಟು ಸದ್ಯದಲ್ಲಿ ವಜಾ ಮಾಡಲ್ಪಟ್ಟದ್ದಾಗ್ಯೂ ಮುಂದೆ ಪುನಹಾ ಸೇರಿ ಅಭಿವೃದ್ಧಿಗೆ ಬರಲೆಂದು ಕುತೂಹಲಪಡುತ್ತೇನೆಂದೂ ಹೇಳಿದರು ಅದಕ್ಕೆ ಡ್ಯೂಮಾ ಪ್ರತಿನಿಧಿಗಳು—ನಾವು ರಷ್ಯಾಕ್ಕೆ ಹೋಗಿ ಇತರ ಮೆಂಬರುಗಳ ಸಂಗಡ ಕಲೆತು ಗವರ್ನಮೆಂಟಿನವರ ಸಂಗಡ ಹೋರಾಡಲಾರಂಭಿಸುತ್ತೇವೆಂದು ಪ್ರತ್ಯುತ್ತರ ಕೊಟ್ಟರು

ಮೈಸೂರು ಗೆಜೆಟ್ ಸಂಗ್ರಹ.

ಮೊಳಕಾಲ್ಮುರು ತಾ ಅಮಲ್ದಾರ್ ಮೆ॥ ಬಿ ಕೇಶವಯ್ಯನವರಿಗೆ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಕೆ. ರಾಮರಾಯರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಕುಣಿಗಲ ತಾ ಅಮಲ್ದಾರ್ ಮೆ॥ ಆರ್ ರಾಘವೇಂದ್ರರಾಯರಿಗೆ ಜುಲೈ ೪ ರಿಂದ ಎರಡು ತಿಂಗಳು ಎಂಟು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ತರುವಾಯ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಮುಂದೆ ಹೇಳಿರುವ ಆಸ್ಪತ್ರೆ ಅಸಿಸ್ಟೆಂಟರನ್ನು ಒಂದು ದರ್ಜೆ ಬಡ್ತಿ ಮಾಡಿದೆ—ಕೆ ಕೃಷ್ಣಯ್ಯಂಗಾರ್ರು, ಎಂ ಸಿ. ವೆಂಕಟಾಚಾರ್ರು, ಎಂ. ಗುರುರಾಯರು, ವಿಜಯರಂಗಂ ನಾಯ್ಡು ಯವರು, ಬಿ ಜಯರಾಮರು, ವಿ. ಅಪ್ಪಾದೊರೆನಾಯ್ಕರು, ಎ ಎಲ್ ವಹಾಬುಯಲ್ ಯವರು, ಮಹಮದ್ ಮೂಸಾ ಯವರು, ಸಿ ಬಸಪ್ಪಶೆಟ್ಟರು.

ನೆಲಮಂಗಲದ ಶಿರಸ್ತೆದಾರ್ ಸಿ ಕಾಶೀನಾಥರಾಯರನ್ನು ದೊಡ್ಡಬಳ್ಳಾಪುರಕ್ಕೂ ಕಾರ್ಖಾನೆಹಳ್ಳಿ ಶಿರಸ್ತೆದಾರ್ ಚನ್ನರಾಜೇ ಅರಸಿನವರನ್ನು ದೇವನಹಳ್ಳಿಗೂ ಅಮಲ್ದಾರ್ ಮತ್ತು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಮೆ॥ ನರಸಿಂಗರಾವ್ ಪ್ರೊಫೆಸರಯ್ಯನವರನ್ನು ಈ ಕಮಿಷನರ ದರ್ಜೆಯಲ್ಲಿ ೩ ನೆ ಕ್ಲಾಸಿಗೆ ಬಡ್ತಿ ಮಾಡಿದೆ

ಮೈಸೂರು ಲೋಕಲ್ ಸರ್ವಿಸ್ ರೆಜಿಮೆಂಟ್ ಜಮಾದಾರ್ ಮಹಮದ್ ಸರ್ದಾರ್ ಯವರನ್ನು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ ೪ ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ವರ್ಗಮಾಡಿದೆ

ರಷ್ಯಾ ರಾಜಕೀಯ ವಿಚಾರಗಳು.

ಪ್ರಜೆಗಳ ಹೋರಾಟವೂ ಸರ್ಕಾರದವರ ನಿರ್ಬಂಧಗಳೂ.

ಕಳೆದ ವಾರ ಬಂದ ತಂತಿ ವರ್ತಮಾನಗಳು

ಜುಲೈ ೨೨—ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಅಧಿಕಾರಿಗಳು ಆರು ವರ್ತಮಾನ ಪತ್ರಿಕೆಗಳನ್ನು ಪ್ರಕಟಿಸಕೂಡದೆಂದು ಆಜ್ಞೆಮಾಡಿ ನಿಲ್ಲಿಸಿಬಿಟ್ಟರು ಪ್ರಜೆಗಳು ಅವರ ಮೇಲೆ ಗಲಭೆಯೆಬ್ಬಿಸಿ ಪೋಲೀಸಿನವರನ್ನೂ ಸೈನಿಕರನ್ನೂ ಕಲ್ಲುಗಳಿಂದ ಹೊಡೆದರು ಡ್ಯೂಮಾ ಸಭೆಗೆ ಸೇರಿದ ಮೆಂಬರುಗಳಲ್ಲಿ ೨೦೦ ಮಂದಿ ರಾಜಕೀಯ ವಿಷಯಗಳನ್ನು ಚರ್ಚಿಸುವುದಕ್ಕೆ ಫಿನ್‌ಲೆಂಡಿಗೆ ಹೋಗಿದಾರೆ. ಅವರು ಇದುವರೆಗೆ ಸಭೆ ಮಾಡುತ್ತಿದ್ದ ಮಂದಿರದ ಬಾಗಿಲನ್ನು ಸರ್ಕಾರದವರು ಮುಚ್ಚಿಬಿಟ್ಟು, ಪೋಲೀಸ್ ಪಹರೆ ಇಟ್ಟಿದಾರೆ ಪರರಾಜ್ಯಗಳ ರಾಯಭಾರಿಗಳಿರುವಂಥಾ ಬಂಗಲೆಗಳನ್ನೂ ಅವರ ಆಸ್ತಿಪಾಸ್ತಿಗಳನ್ನೂ ಸೈನಿಕರನ್ನಿಟ್ಟು ಕಾಪಾಡುವಂತೆ ಏರ್ಪಾಡು ಮಾಡಿದಾರೆ ರೈಲ್ ಪ್ರಯಾಣವು ನಿಂತುಹೋಗಿದೆ; ಪೋಸ್ಟ್ ಆಫೀಸುಗಳು ಮುಚ್ಚಲ್ಪಟ್ಟಿವೆ. ನೆನ್ನೆ ಸಾಯಂಕಾಲ ಸ್ವಲ್ಪ ಗಲಭೆಯಾಯಿತು. ಸೈನಿಕರನ್ನು ಕರೆಸಿ ಅಣಗಿಸಿದರು.

ಸೈನಿಕರಲ್ಲಿ ಅಸಮಾಧಾನವೂ ಗೋಣಗಾಟವೂ ಮತ್ತು ಪ್ರಾರಂಭವಾಗಿದೆ ಕ್ರಾನ್‌ಸ್ಟ್ಯಾಡಿನಲ್ಲಿ ಪುನರಪ್ಪಕರ ಗಲಭೆಯನ್ನು ಅಣಗಿಸುವುದಕ್ಕೆ ಕಡಲ ಸೈನ್ಯವನ್ನು ಕಳಿಸಿದಾರೆ. ಕಪ್ಪುಕಡಲಿನ ಯುದ್ಧನಾವೆಗಳಲ್ಲಿ ಕೆಲಸಮಾಡುವ ೨೫,೦೦೦ ರಷ್ಯಾ ನೌಕರರು ಸೀಬಾಸ್ಟಪೂಲ್ ಪಟ್ಟಣದಲ್ಲಿ ದೊಡ್ಡ ಸಭೆಮಾಡಿ, ತಮ್ಮ ಕೊರತೆಗಳನ್ನೆಲ್ಲಾ ಅರ್ಜಿ ಬರೆದು ಅಡ್ಮಿರಲ್ ಕ್ರೂಗರ್ ಲಾಫ್ ಎಂಬ ಅಧಿಪತಿಗೆ ಒಪ್ಪಿಸಿ, ಆ ಕೊರತೆಗಳನ್ನು ಬೇಗ ನಿವಾರಣೆಮಾಡಿಕೊಡದೆ ಹೋದರೆ ನಮಸ್ತ ನಾವಿಕರೂ ದಂಗೆಯೇಳುವೆವೆಂದು ತಿಳಿಸಿದಾರೆ.

ಜುಲೈ ೨೩ ಸ್ವೀಬರ್ಗಿನಲ್ಲಿ ಬಹುಮಂದಿ ಡ್ಯೂಮಾ ಮೆಂಬರುಗಳು ಸಭೆಸೇರಿ, ಪ್ರಜೆಗಳಲ್ಲಿ ಯಾರೂ ಸರ್ಕಾರ ರಕ್ಕ ಕಂದಾಯ ಕೊಡಕೂಡದೆಂತಲೂ ಸೈನಿಕರ ಪೈಕಿ ಯಾರೂ ಸರ್ಕಾರದವರ ಹುಕುಮನ್ನು ಚಲಾವಣೆ ಮಾಡಕೂಡದೆಂತಲೂ ಒಂದು ಪತ್ರಿಕೆಯನ್ನು ಬರೆದು ಪ್ರಕಟಿಸಿದಾರೆ. ರಾಜಧಾನಿಯಲ್ಲೆಲ್ಲಾ ಪೋಲೀಸಿನವರೂ ಸೈನಿಕರೂ ತುಂಬಿ ಕಾವಲು ಕಾಯುತ್ತಿರುವುದರಿಂದ ಗಲಭೆಯೇನೂ ಆಗಿಲ್ಲ. ಸರ್ಕಾರದವರು ಹಲವು ವರ್ತಮಾನ ಪತ್ರಿಕೆಗಳನ್ನು ಪ್ರಕಟವಾಗದಂತೆ ಬಲಾತ್ಕಾರವಾಗಿ ನಿಲ್ಲಿಸಿಬಿಟ್ಟರು

ಜುಲೈ ೨೪—ರಷ್ಯಾರಾಜ್ಯದ ಎಲ್ಲಾ ಕಡೆಗಳಲ್ಲೂ ಯೆಹೂದ್ಯ ಪ್ರಜೆಗಳು ನುಚ್ಚು ಕೊಲೆಗಳು ಪ್ರಾರಂಭವಾಗುವವೆಂದು ಕಂಪಿಸುತ್ತಿದಾರೆ ಒಡೆಸ್ಸಾ ಪಟ್ಟಣದಲ್ಲಿ ಕಾಸಕ್ ಸೈನಿಕರು ಲೂಟಿಮಾಡಲಾರಂಭವಾಗಿದೆ ಯೆಹೂದ್ಯ ಪ್ರಜೆಗಳ ಗಾಬರಿಯು ಹೆಚ್ಚುತ್ತಿದೆ ಕೊಳ್ಳೆಯು ನೆನ್ನೆರಾತ್ರಿ ನಿಂತಿತು ಯೆಹೂದ್ಯ ಪ್ರಜಾಪ್ರತಿನಿಧಿಗಳು ಗವರ್ನರ್ ಜನರಲ್ ಕೌಲ್‌ಬಾರ್ಸ್ ಎಂಬಾತನನ್ನು ಕಂಡು, ನಡುಗುತ್ತಾ ತಮ್ಮ ಗಾಬರಿಯನ್ನು ಹೇಳಿಕೊಂಡಾಗ ಆತನು ಅವರನ್ನು ಕುರಿತು—ಒಬ್ಬ ಕಾಸಕ್ ಸೈನಿಕನಿಗಾದರೂ ಗಾಯವಾದ ಪಕ್ಷದಲ್ಲಿ ಒಡೆಸ್ಸಾ ಪಟ್ಟಣದಲ್ಲಿ ನುಂಪೇ ಉದ್ಧ ರಕ್ತ ಹರಿದೀತು ಎಂದು ಉತ್ತರಕೊಟ್ಟು ಕಳುಹಿಸಿದನು ಹಲ್ಲಿ ನುಚ್ಚು ಗಲಭೆಗಳು ಉಂಟಾದವು. ಹಲವು ಯಹೂದ್ಯರು ಕೊಲ್ಲಲ್ಪಟ್ಟರು ಪಟ್ಟಣಕ್ಕೆ ಪಟ್ಟಣವೇ ಗಾಬರಿಬಿದ್ದು, ಪ್ರಜೆಗಳೆಲ್ಲ ಪಲಾಯನವಾಗುತ್ತಿದಾರೆ.

ಡ್ಯೂಮಾ ಪಾರ್ಲಿಮೆಂಟ್ ಮೆಂಬರುಗಳು ಮತ್ತೆ ರಾಜಧಾನಿಗೆ ಬಂದರು. ಅವರನ್ನು ಯಾರೂ ಸ್ವಲ್ಪವೂ ತೊಂದರೆ ಪಡಿಸಲಿಲ್ಲ. ವೈಬರ್ಗಿನಲ್ಲಿ ಅವರು ಸಭೆಸೇರಿದ್ದಾಗ ಸೈನ್ಯವನ್ನು ಗವರ್ನಮೆಂಟಿನವರ ಮೇಲೆ ತಿರುಗಿಬೀಳುವಂತೆ ಮಾಡುವುದಕ್ಕೆ ಸನ್ನಾಹಮಾಡಬೇಕೆಂದು ತೀರ್ಮಾನಿಸಿಕೊಂಡು ಬಂದರು.

ಜುಲೈ, ೨೫.—ರಾಜಧಾನಿಯಲ್ಲಿ ಪ್ರಕಟವಾಗುತ್ತಿದ್ದ ಸಮಸ್ತ ವರ್ತಮಾನ ಪತ್ರಿಕೆಗಳನ್ನೂ ಪ್ರಕಟವಾಗದಂತೆ ನಿಲ್ಲಿಸಿಬಿಟ್ಟಿದಾರೆ. ನೋವೋ ವ್ರೀಮಿಯಾ, ರೋಸಿಯಾ ಎಂಬೀ ಎರಡು ಪತ್ರಿಕೆಗಳು ಮಾತ್ರ ಪ್ರಕಟವಾಗುತ್ತಿರುವವು ನೆನ್ನೆ ಸೆಂಟ್ ಪೀಟರ್ಸ್‌ಬರ್ಗ್, ಮಾಸ್ಕೋ ನಗರಗಳಲ್ಲಿ ನೂರಾರು ಜನರನ್ನು ಹಿಡಿದು ಸೆರೆಯಲ್ಲಿ ಹಾಕಿದರು; ಅನೇಕ ಸಂಘ (ಕ್ಲಬ್) ಗಳನ್ನು ಮುಚ್ಚಿಸಿದರು ಒಡೆಸ್ಸಾದಲ್ಲಿ ಇದುವರೆಗೆ ಯೆಹೂದ್ಯರು ೮ ಮಂದಿ ಹತರಾದರು; ೧೧ ಜನರಿಗೆ ಗಾಯಗಳಾಗಿವೆ

ರಷ್ಯಾರಾಜ್ಯಕ್ಕೆ ಬಂದುಹೋಗುವ ಸಮಸ್ತ ಹಡಗು ಜಹಜುಗಳನ್ನು ಸರ್ಕಾರಿ ಅಧಿಕಾರಿಗಳು ತಡೆದು ಅಜಮಾಯಿಷಿ ಮಾಡುವುದಾಗಿಯೂ ಯುದ್ಧ ಸಾಮಗ್ರಿಗಳನ್ನುಳ್ಳ ಹಡಗನ್ನು ಹಿಡಿದು ಸ್ವಾಧೀನಪಡಿಸಿಕೊಳ್ಳುವುದಾಗಿಯೂ ಇಸ್ತಿಹಾರು ಹಾಕಿದಾರೆ

ಡ್ಯೂಮಾ ಮೆಂಬರುಗಳ ಪೈಕಿ ಸ್ವಲ್ಪ ಸಭ್ಯರಾದವರು ಒಂದು ನೋಟೀಸನ್ನು ಪ್ರಕಟಿಸಿ, ಪ್ರಜೆಗಳು ಚಕ್ರವರ್ತಿಯವರ ಆನುಜ್ಞೆಯನ್ನು ಶಿರಸಾವಹಿಸಿ ಆ ಪ್ರಕಾರ ನಡೆದುಕೊಳ್ಳಬೇಕೆಂತಲೂ, ಹೊಸದಾಗಿ ಮೆಂಬರುಗಳನ್ನು ಚುನಾಯಿಸುವುದಕ್ಕೆ ಈಗಿನಿಂದಲೂ ಸಿದ್ಧರಾಗಬೇಕೆಂತಲೂ ಇಂಥಾ ಕಂಟಕಕಾಲದಲ್ಲಿ ಪ್ರಜೆಗಳು ಪ್ರಭುವಿನ ಆಜ್ಞೆಗಳನ್ನು ತಿರಸ್ಕಾರಮಾಡುವುದು ದೊಡ್ಡ ಅಪರಾಧವೆಂತಲೂ ತಿಳಿಸಿದಾರೆ

ರಷ್ಯಾ ರಾಜ್ಯದ ಸಕಲ ಭಾಗಗಳಲ್ಲೂ ಸರ್ಕಾರದವರು ವರ್ತಮಾನ ಪತ್ರಿಕೆಗಳನ್ನು ಪ್ರಕಟವಾಗದಂತೆ ಬಲಾತ್ಕಾರಪಡಿಸಿ ನಿಲ್ಲಿಸುತ್ತಾ, ಪ್ರಜೆಗಳನ್ನು ಹಿಡಿದು ಸೆರೆಮನೆಯಲ್ಲಿ ಹಾಕುತ್ತಾ ಬಂದಿದಾರೆ. ಒಡೆಸ್ಸಾದಲ್ಲಿ ಹತ್ತು ಸಹಸ್ರಮಂದಿ ಯೆಹೂದ್ಯರು ಮನೆಗಳಲ್ಲಿದ್ದರೆ ಪ್ರಾಣ ಕಳಕೊಳ್ಳುವೆವೆಂದು ಭೀತಿಪಟ್ಟು, ರಾತ್ರಿಯನ್ನು ಮೈದಾನಗಳಲ್ಲಿ ಕಳೆಯುವರು ಅವರನ್ನು ಕೊಲ್ಲಬೇಕೆಂದು ಕೆಲವರು ಪ್ರಯತ್ನಪಟ್ಟರು ಆದರೆ ರಾಜಧಾನಿಯಿಂದ ಹುಕುಂ ಬಂದ ಪ್ರಕಾರ ಅನಾಹುತವು ಅಣಗಿತು

ಜುಲೈ ೨೬.—ನೆನ್ನೆಯೆಲ್ಲಾ ರಷ್ಯಾರಾಜ್ಯವು ನೆಮ್ಮದಿಯಾಗಿತ್ತು ಗಲಭೆಗಳೇನೂ ಎಲ್ಲೂ ನಡೆಯಲಿಲ್ಲ ಕೂಲಿಕಾರರ ಸಂಘಗಳವರು ಕೂಲಿಮಾಡುವ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾ, ಎಲ್ಲಾ ಸಿದ್ಧವಾಗುವುದಕ್ಕೆ ಮೊದಲೇ ಅವರು ದಂಗೆಯೇಳದಂತೆ ಜುಸ್ತುಮಾಡಿಕೊಳ್ಳುತ್ತಿದಾರೆ

ಜುಲೈ, ೨೭—ರಷ್ಯಾ ಪ್ರಧಾನ ಮಂತ್ರಿಯಾದ ಎಂ ಸ್ಟೋಲಿಪಿನ್ ಯವರು ನೆನ್ನೆ ತಿಳಿಸಿದ್ದೇನೆಂದರೆ—ಚಕ್ರವರ್ತಿಯವರಲ್ಲಿ ಬಲವಾದ ರಾಜಕೀಯ ಬದಲಾವಣೆಗಳನ್ನು ಮಾಡಬೇಕೆಂಬ ಸಂಕಲ್ಪವಿದೆ. ಆದರೆ ರಾಜ್ಯಭಾರಕ್ರಮಗಳನ್ನೆಲ್ಲಾ ತಲೆಕೆಳಗು ಮಾಡಬೇಕೆಂಬುವರ ಉದ್ದೇಶವನ್ನು ಭಂಗಪಡಿಸಬೇಕು. ಸಾಮಾನ್ಯಪ್ರಜೆಗಳಲ್ಲಿ ರಾಜಭಕ್ತಿಯು ಅಚಂಚಲವಾಗಿರುವುದೇನೋ ಖಂಡಿತ ಚಕ್ರವರ್ತಿಯವರು ಅಂಥಾ ಪ್ರಜೆಗಳ ಭಕ್ತಿ ಪ್ರೀತಿಗಳ ಸಹಾಯದಿಂದ ಕೂಡಿದವರಾಗಿ, ರಾಜ್ಯದಲ್ಲಿ ಅನಾಯಕತ್ವವನ್ನುಂಟುಮಾಡಬೇಕೆಂತಲೂ ಈಗಿನ ರಾಜ್ಯಭಾರ ಕ್ರಮಗಳನ್ನೆಲ್ಲಾ ಸಂಪೂರ್ಣವಾಗಿ ತಲೆಕೆಳಗು ಮಾಡಬೇಕೆಂತಲೂ ಪ್ರಯತ್ನಪಡುವವರನ್ನೆಲ್ಲಾ ಮತ್ತೆ ಎಂದೆಂದಿಗೂ ತಲೆಯೆತ್ತದಂತೆ ನಾಶಪಡಿಸಬೇಕೆಂದು ನಿಶ್ಚಯಿಸಿಕೊಂಡಿದಾರೆ ಎಲ್ಲಾ ಇಲಾಖೆಗಳಿಗೂ ಮಂತ್ರಿಗಳು ನೇಮಕವಾದ ಮೇಲೆ ಜಮೀನು ವಿಚಾರದಲ್ಲಿ ದೊಡ್ಡ ಬದಲಾವಣೆಯನ್ನು ಮಾಡಬೇಕೆಂದಿದ್ದೇನೆ ಡ್ಯೂಮಾ ಮೆಂಬರುಗಳು ಗಲಭೆ ಎಬ್ಬಿಸದೆ ಹೋದರೆ ಅವರನ್ನೇನೂ ಮಾಡುತ್ತಿದ್ದಿಲ್ಲ. ಚಕ್ರವರ್ತಿಗಳು ಡ್ಯೂಮಾ ಸಮಾಜದ ಕಾರ್ಯಕರ್ಮಗಳನ್ನು ನೋಡಿ, ಅದರಿಂದ ಯಾವ ಪ್ರಯೋಜನವೂ ಆಗಲಾರದೆಂದು ತಿಳಿದ ಮೇಲೆಯೇ ಬಹು ಅಸಮಾಧಾನಪಟ್ಟು ಅದನ್ನು ನಿಲ್ಲಿಸಿದರು ಎಂಬುದೇ.

ಪರರಾಜ್ಯಗಳಿಂದ ಬರುವ ವರ್ತಮಾನಪತ್ರಿಕೆಗಳನ್ನೆಲ್ಲಾ ರಾಜಧಾನಿಯಲ್ಲಿ ಅಧಿಕಾರಿಗಳು ಮೊದಲು ಓದಿನೋಡಿ, ತಾವು ಒಪ್ಪದೆ ಹೋಗುವಪತ್ರಗಳನ್ನು ವಿಳಾಸದಾರರಿಗೆ ರವಾನೆ ಮಾಡಕೂಡದೆಂದು ಖಂಡಿತವಾದ ಹುಕುಂ ಈಗ ಜಾರಿ ಮಾಡಲಾಗಿದೆ

ಜುಲೈ, ೨೮—ವಾರ್ಸಾ, ಟವರ್ ಡಿಸ್ಟ್ರಿಕ್ಟುಗಳಲ್ಲಿ ರೈತಪ್ರಜೆಗಳು ದಂಗೆಯೇಳುತ್ತಿದಾರೆ. ಕುರಸ್ಕ್ ಅಧಿಪತ್ಯಕ್ಕೆ ಸೇರಿದ ಪೊಲೊಸೋವಿಕಾದಲ್ಲಿ ರೈತಪ್ರಜೆಗಳು ಸೈನಿಕರ ಮೇಲೆ ಯುದ್ಧಮಾಡಿ ಸೋಲಿಸಿದರೆಂದು ವರ್ತಮಾನವಿದೆ

ಗವರ್ನಮೆಂಟನ್ನು ತಲೆಕೆಳಗುಮಾಡಬೇಕೆಂಬ ಗುಂಪಿನವರು ವಾರ್ಸಾ ಪಟ್ಟಣದಲ್ಲಿ ರೈಲ್‌ಗಾಡಿಯನ್ನು ತಡೆದು, ಇಬ್ಬರು ಜನರಲ್ ಗಳೆಂಬ ಸೈನ್ಯಾಧಿಪತಿಗಳನ್ನೂ, ಒಬ್ಬ ಖಜಾಂಚಿಯನ್ನೂ, ೪ ಮಂದಿ ಸೈನಿಕರನ್ನೂ ಕೊಂದು, ೧೬,೦೦೦ ದ್ರವ್ಯವನ್ನು ಅಪಹರಿಸಿದರು.

ಜುಲೈ, ೨೯ —ವಾರ್ಸಾ ಬಳಿ ದಂಗೆಕೋರರು ಇನ್ನೊಂದು ರೈಲ್‌ಗಾಡಿಯನ್ನು ಕೊಳ್ಳೆಹೊಡೆದು ೧,೦೯,೦೦೦ ದ್ರವ್ಯವನ್ನು ಎತ್ತಿ ಹಾಕಿದರು.

ಡ್ಯೂಮಾ ಮೆಂಬರುಗಳಲ್ಲೇ ಎರಡು ಪಂಗಡಗಳಾಗಿವೆ ಒಂದು ಪಂಗಡದವರು ಗವರ್ನಮೆಂಟನ್ನೇ ತಲೆಕೆಳಗುಮಾಡಬೇಕೆನ್ನುವರು ಎರಡು ಪಕ್ಷದವರು ಅಷ್ಟೊಂದು ಬದಲಾವಣೆ ಅಗತ್ಯವಿಲ್ಲವೆನ್ನುತ್ತಾರೆ

ರಷ್ಯಾರಾಜ್ಯದ ಕೂಲಿಕಾರರ ಸಂಘದವರೂ ಸೋಷಲಿಸ್ಟ್ ಎಂಬ ಸಂಘದವರೂ ಏಕವಾಗಿ ಇಸ್ತಿಹಾರುಗಳನ್ನು ರಾಜದ್ರೋಹ ಪ್ರಕಟಿಸಿ, ಸೈನಿಕರೆಲ್ಲಾ ಪ್ರಜೆಗಳ ಪರವಾಗಿ ನಿಂತು ಗವರ್ನಮೆಂಟಿನವರ ಮೇಲೆ ಹೋರಾಡಬೇಕೆಂದು ಕೇಳುತ್ತಿದಾರೆ.

ಪ್ರಜೆಗಳಿಗೂ ಸರ್ಕಾರದವರಿಗೂ ಹೋರಾಟ ಪ್ರಾರಂಭವಾಗುತ್ತಿದೆ ರಾಜ್ಯದ ಎಲ್ಲಾ ಭಾಗಗಳಲ್ಲೂ ಗಲಭೆಗಳುಂಟಾಗಿವೆ ಎಂದು ವರ್ತಮಾನವಿದೆ ಆದರೆ ಇದುವರೆಗೆ ಕಟಾಕಟಿಗಳಾಗಿಲ್ಲ

ತಾಲ್ಲೋಕು ವರ್ತಮಾನಗಳು.

ತರೀಕೆರೆ—ಇಲ್ಲಿ ೩—೪ ದಿನಗಳಿಂದ ಹಿಡಿದ ಮಳೆ ಬಿಟ್ಟಿಲ್ಲ. ಬರುತ್ತಲೇ ಇದೆ. ರೈತರುಗಳೆಲ್ಲಾ ಹರ್ಷಮುಖಿಗಳಾಗಿದಾರೆ. ಆದರೆ ಕೆರೆಗಳಿಗೆ ನೀರು ಸಾಲದು ಇಲ್ಲಿ ಕಾಲರಾ ಗಲಾಟೆ ಎಂದು ಜನಗಳು ಗುಣಗುಟ್ಟುತ್ತಿದ್ದರು. ದೇವರ ದಯದಿಂದ ಅಷ್ಟೇನೂ ಭೀತಿಗೆ ಕಾರಣವಿಲ್ಲ ಆದರೆ ಈಗ ಮೈಲೇ ಜಾಸ್ತಿಯಾಗಿದೆ—ಇದು... ಗೂ ಇಲ್ಲಿನ ಹಿಂದೂ ವೈದ್ಯಶಾಲೆಯನ್ನು ಕಾಳ್ಳಗೌಡರ ಛತ್ರ... ನಡಿಸುತ್ತಿದ್ದರು ಈಗ ಸರ್ಕಾರದವರು ನಡುಪೇಟೆಯಲ್ಲಿರುವ ... ಸ್ಕೂಲ್ ಕಟ್ಟಡವನ್ನು ಕೊಡಿಸಿರುವದರಿಂದ ಅಲ್ಲಿ ವೈದ್ಯಶಾಲೆಯ... ಇಟ್ಟು ನಡಿಸುತ್ತಿದಾರೆ. ಇದರಿಂದ ಜನಗಳಿಗೆ ಸವಿಾಪವಾಗಿರು... ಲ್ಲದೆ ತುಂಬಾ ಅನುಕೂಲವಾಗಿರುತ್ತದೆ ಮತ್ತು ಇದುವರಿಗೂ ... ಹೊರಗೆ ನಡೆಯುತ್ತಿದ್ದ ಸಂತೆಯನ್ನು ಪಳೇ ಮಾರ್ಕೆಟ್ಟಿಗೆ ವ... ಯಿಸಿರುವುದರಿಂದ ಜನಗಳಿಗೆ ತುಂಬಾ ಸೌಲಭ್ಯವುಂಟಾಗಿರುತ್ತದೆ.

ಅರಸೀಕೆರೆ.— ಇಲ್ಲಿ ಆಗಾಗ್ಗ ಮಳೆ ಬರುತ್ತಾ ಇರುವದರಿ... ರೈತರು ಸಂತೋಷವಾಗಿರುತ್ತಾರೆ ಮತ್ತು ಬಿತ್ತನೆ ವಗೈರೆ ಕೆಲಸ... ಲ್ಲಾ ಪೂರೈಸುತ್ತಾ ಬಂತು. ಇಲ್ಲಿನ ಮಾಲೆಕಲ್ಲು ತಿರುಪತಿಯ... ಹಿಂದೆ ಕಲರಾ ಕೇಸು ಆಗಿದ್ದರಿಂದ ರಥೋತ್ಸವವನ್ನು ನಿಲ್ಲಿಸಿದ್ದ... ಈ ಸಲ ಇದೇ ಶ್ರಾವಣ ಮಾಸ ದ್ವಾದಶಿ ದಿವಸ ರಥೋತ್ಸವ ಜರುಗು... ಸದ್ಯ ಯಾವದೊಂದು ಗಲಾಟೆ ಇಲ್ಲದ್ದರಿಂದ ಎಂದಿನಂತೆ ಜನಗಳು ... ರುತ್ತಾರೆಂದು ತೋರುವದು ನೀರಿನ ಕ್ಷಾಮ ಇನ್ನೂ ಇದ್ದೇ ಇ... ತ್ತೆ.—ಇಲ್ಲಿನ ಶಿರಸ್ತೆದಾರ್ ಮೆ॥ ಶ್ರೀನಿವಾಸರಾಯರು ಕೆಲಸದಿಂದ ... ಟೈರ್ ಆದರು ಇದಕ್ಕಾಗಿ ತಾಲ್ಲೂಕು ಕಚೇರಿ ಜನಗಳೆಲ್ಲಾ ಸ... ಶಿರಸ್ತೆದಾರ್‌ರಿಗೆ ಔತನ ಮಾಡಿಸಿದರು ಇವರ ಬದ್ಲಿಗೆ ಇನ್ನೂ ಯಾರೂ ಬಂದಿಲ್ಲ. ಅಮಲ್ದಾರ್‌ರಿಗೆ ಪ್ರಮೋಷನ್ ಆದದ್ದಕ್ಕಾಗಿ ಇಲ್ಲಿನ ಜನ... ಳು ಸಂತೋಷಪಟ್ಟರು ಇಲ್ಲಿನ ಸಬ್ ರಿಜಿಸ್ಟ್ರಾರವರು ಸಕಾಲಕ್ಕೆ ಆಫೀಸಿಗೆ ಬಾರದೇ ಇರುವದರಿಂದ ಬಹಳ ದೂರದಿಂದ ಬರುವ ಜ... ನಗಳಿಗೆ ಬಹಳ ತೊಂದರೆಯಾಗಿರುತ್ತೆ ಇನ್ನುಮೇಲೆ ಈ ತೊಂದ... ನಿವಾರಣೆ ಮಾಡುತ್ತಾರೆಂದು ನಂಬಿರುತ್ತೇನೆ ಮತ್ತು ಗಂಡಸಿ, ಹ... ಟ್ಟ, ಆಗುಂಬೆ ಕೊಳಲಗೆರೆ ಮುಂತಾದ ಗ್ರಾಮಸ್ಥರು ಪೆಷ್ಕ... ವರ್ ಸೋಕೇಬಿಗೆ ಅರ್ಜಿ ಬರೆದುಕೊಂಡಿರುತ್ತಾರೆ

ಚಿಕ್ಕಬಳ್ಳಾಪುರ.—ಇಲ್ಲಿ ೧೦—೧೪ ದಿನಗಳಿಂದಲೂ ... ಮುಚ್ಚಿಕೊಂಡು, ಸುಮಾರು ಒಂದು ತರಹ ಪರಿಪಿಗೂ ... ತ್ತು. ಗಟ್ಟಿ ಮಳೆ ಬರದಿರುವದರಿಂದ ಕೆರೆ ಬಾವಿಗಳಿಗೆ ನೀರು ಒದಗಲಿಲ್ಲ... ಜನರಲ್ಲಿ ಜ್ವರಗಳೂ, ಭೇದಿ ಮತ್ತು ಸಿಡುಬು ಮುಂತಾದ ರೋಗ... ಳೂ ಅಧಿಕವಾಗಿರುತ್ತವೆ. ಇತ್ತಲಾಗೆ ಮುನಿಸಿಪಾಲಿಟಿಯವರು ಊರ... ರೊಚ್ಚು ಸರಾಗವಾಗಿ ಹೊರಗೆ ಹೋಗುವುದಕ್ಕಾಗಿ ಹೊಸಚರಂಡಿ ಕೆಲವು ... ರಂಡಿಗಳನ್ನು ಕೀಳಿಸಿ, ದೊಡ್ಡದಾಗಿಯೂ ಚನ್ನಾಗಿಯೂ ಕಟ್ಟಿಸುತ್ತಾರೆ ಮಳೆಗಾಲದಲ್ಲಿ ಕೆಲವು ಸಂದುಗಳಲ್ಲಿ ಕೆಸರು ಹೇಸಿಗೆ ... ತಿರುಗಾಡುವದೇ ಕಷ್ಟವಾಗಿದೆ ಕೋಟೆ ಶನಿವಾರ ಸ್ವಲ್ಪ ಮಳೆಯಾದದ್ದ... ರಿಂದ ಸಂತೆಯ ಮಾರ್ಕೆಟ್ಟಿನಲ್ಲಿ ಎಲ್ಲಿ ನೋಡಿದಾಗ್ಯೂ ಕೆಸರು ತು... ಬಿತ್ತು ಜನರು ಆ ಕೆಸರಿನಲ್ಲೇ ಬಿದ್ದು ಹೊರಳೊಳ್ಳುತ್ತಾ ಬಿದ್ದು ಹೇ... ಬಿಹೋಗುತ್ತಿದ್ದರು ಮುನಿಸಿಪಾಲಿಟಿಯವರಿಗೆ ಈ ಮಾರ್ಕೆಟ್ಟ... ಮೇಲೆ ಯಾವಾಗ ದಯಬರುವದೋ ತಿಳಿಯದು ಕೆಲವು ದಿನಗ... ಳಿಗೆ ಕಳುವು ಮಾಡಿದ ಒಬ್ಬ ಕಳ್ಳನನ್ನು ಹಿಡಿದುಕೊಂಡು ... ಅವನನ್ನು ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ... ದಾಗ ನನ್ನ ಗಂಡನ ಗತಿ ಏನಾಗುವದೋ ಎಂದು ಗೊತ್ತಾಗದೆ ... ಳ್ಳುವದಕ್ಕೋಸ್ಕರ ಪೂರ್ಣ ಗರ್ಭಿಣಿಯಾದ ಅವನ ಹೆಂಡತಿ ಕೋ... ಬಂದಳು. ಬಂದ ಕೆಲವು ದಿವಸದಲ್ಲಿಯೇ ಅವಳು ಹೆತ್ತಳು ಅವಳಿ... ಈ ಊರಿನಲ್ಲಿ ಗುರುತು ಕಂಡವರ್ಯಾರೂ ಇಲ್ಲದ್ದರಿಂದ ಬಹಳ ಕಷ್ಟ... ಕ್ಕೆ ಗುರಿಯಾದಳು ಈ ವರ್ತಮಾನವನ್ನು ಸರಾಫ್ ಮಲ್ಲಿಕಾರ್ಜು... ನಪ್ಪನವರು ಕೇಳಿ ಕನಿಕರಪಟ್ಟು ಅವಳಿಗೆ ಸಹಾಯ ಮಾಡಿದರೆಂದ... ಕೇಳುತ್ತೇನೆ. ಇದೇ ಅಲ್ಲವೇ ಧರ್ಮದ ಗುಣವೂ ಸಮಯವೂ

ದೊಡ್ಡಬಳ್ಳಾಪುರ.—ಒಂದು ವಾರದಿಂದ ಜಡಿ ಮಳೆ ಸು... ಯುತ್ತಾ ಇದೆ ಜನಕ್ಕೆ ಸ್ವಲ್ಪ ಧೈರ್ಯವಾಯಿತು. ಅಮಲ್ದಾರ್ ಮೆ॥ ರಂಗನಾಥರಾವ್ ಸಾಹೇಬರವರು ೧೨ ನೇ ತಾ. ಶಿರಸ್ತೆದಾರ್‌ರಿಗೆ ಛಾರ್ಜು ಕೊಟ್ಟು, ೨ ತಿಂಗಳ ರಜದ ಮೇಲೆ ಹೋದರು ಇಲ್ಲಿನ ದೊಡ್ಡ ಮನುಷ್ಯರುಗಳೆಲ್ಲ ತಾಲ್ಲೂಕ್ ಕಚೇರಿ ಸ್ಕೂಲಿಗೆ ಅವರನ್ನು ಬರಮಾಡಿಕೊಂಡು ಬಹಳ ಸನ್ಮಾನಮಾಡಿದರು ಆಗ ಸುಬ್ರಹ್ಮಣ್ಯ ಐಯ್ಯ... ನವರು ತಂದು ಓದಿದ ಪ್ರೊಗ್ರಾಮಿನಿಂದ ಸಭೆಯವರು ಸಂತೋ... ಷಪಟ್ಟರು. ತರುವಾಯ ಅಮಲ್ದಾರರನ್ನು ಕಚೇರಿಯವರೂ ಕೆಲವು ಲಾಯರುಗಳೂ ಸೇರಿ, ಸ್ಟೇಷನ್ ವರೆಗೆ ಛತ್ರಕ್ಕೆ ಕರೆಸಿಕೊಂಡು ಔತಣಮಾಡಿ, ಸಂತೋಷಪಡಿಸಿ ಕಳುಹಿಸಿದರು —ಈಗ ಕಚೇರಿಯಲ್ಲಿ ಕೆಲವರಿಗೆ ಬಡ್ತಿ ಆಗಿದೆ. ಗುಮಾಸ್ತೆದಾರರಾಗಿಯೂ ಅನುಭವಸ್ಥರಾಗಿಯೂ ಇದ್ದವರಿಗೆ ಬಡ್ತಿ ಕೊಡದೆ ಇತರರಿಗೆ ಬಡ್ತಿ ಆಗಿರುವದರಿಂದ ಕೆಲವರಿಗೆ ವ್ಯಸನವಾಗಿದೆ. ಮೆ॥ ಶ್ರೀನಿವಾಸಯ್ಯನವರಿಗೆ ಕೆರೆ ಓವರ್ಸಿಯರ್ ನೇಮಕವಾಯಿತು.—ಕೋಡಹಳ್ಳಿ ಪೋಬಳಿಯನ್ನು ಕೊನ್ನ... ದ ಪೋಬಳಿಗೆ ಸೇರಿಸಿ, ಕಾಕೋಳು ಪೋಬಳಿಯಲ್ಲಿ ಕೆಲವನ್ನು ಬೆ... ಗಳೂರಿಗೂ, ಮಿಕ್ಕ ಕೆಲವನ್ನು ಇಲ್ಲಿನ ಕಸಬಾಕ್ಕೂ ಕೂಡಿಸಿದರು. ರಾಮರಾಯರು ತೋಪಿನಲ್ಲಿ ಹುಂಡಗಳ ಸಂಧ್ಯ ಸಮಯವಾಗ ಅವ... ರೂ ಹೋಗಿ ಒಬ್ಬ ಮುಸಲ್ಮಾನ ಸಾಹೇಬರ ಕಾಲಿಗೆ ಬಂದೇ ಸ್ವಲ್ಪ ಹೊಡೆದು ಗಾಯ ಮಾಡಿದವು —ಇಲ್ಲಿ ಪೊ. ಇನ್‌ಸ್ಪೆಕ್ಟರಾಗಿದ್ದ ರಾಮಚಂದ್ರರಾಯರು ಹಾಸನಕ್ಕೆ ಬಡ್ತಿ ಮೇಲೆ ೨೨ ನೇ ತಾ. ನಲ್ಲಿ ಹೋದರು. ಇವರನ್ನು ಇಲ್ಲಿನ ದೊಡ್ಡಮನುಷ್ಯರು ಮರ್ಯಾದೆ ಮಾಡಿ, ವಾದ್ಯಗಳೊಂದಿಗೆ ಕಳುಹಿಸಿದರು. ಇವರು ಒಳ್ಳೆಯವರು; ತಮ್ಮ ಕೈಕೆಳಗಿನ ನೌಕರರನ್ನು ಚನ್ನಾಗಿ ಕಾಪಾಡುತ್ತಿದ್ದರು ಜಮಾದಾರ್ ಕೇಶಣ್ಣನವರಿಗೆ ಮಾಗಡಿ ಪೊ ಇನ್‌ಸ್ಪೆಕ್ಟರ್ ಕೆಲಸ ಖಾಯಂ ಆಯಿತೆಂದು ಕೇಳಿ ಇಲ್ಲಿನವರು ಸಂತೋಷಪಡುತ್ತಾರೆ. ಇಲ್ಲಿಗೆ ಮೆ॥ ರಂಗಪ್ಪನವರು ಇನ್‌ಸ್ಪೆಕ್ಟರಾಗಿ ಬಂದಿದಾರೆ. ಇವರು ಹಿಂದಿನವರ ಹಾಗೆ ಕೀರ್ತಿಗೊಂಡುವರೆಂದು ಕೋರುತ್ತೇವೆ.

ಬೆಂಗಳೂರು.—ಕಳೆದ ೨೬ ನೇ ತಾ. ಗುರುವಾರ ಬೆಳಿಗ್ಗೆ ಸು ಮಾರು ೯ ಗಂಟೆ ಸಮಯದಲ್ಲಿ ಮೈಸೂರು ಚೀಫ್ ಕೋರ್ಟ್ ಜಡ್ಜಿ ಯಾದ ಮೆ॥ ನಂಜುಂಡೈಯ್ಯನವರ ತಮ್ಮಂದಿರು ಮೆ॥ ಕೃಷ್ಣಯ್ಯನ ವರು ಗಾಡಿಯಲ್ಲಿ ಸವಾರಿ ಹೋಗುತ್ತಿರುವಾಗ ಸರ್ವೆ ಆಫೀಸಿನ ಬಳಿ ಅವರ ಗಾಡಿಗೆ ಕಟ್ಟಿದ್ದ ಕುದುರೆಯು ಗಾಬರಿ ಬಿದ್ದು ಗಾಡಿಯನ್ನು ರಸ್ತೆ ಪಕ್ಕದ ಹಳ್ಳಕ್ಕೆ ಎಳೆದುಕೊಂಡು ಹೋಗಲಾಗಿ ಅವರು ತಕ್ಷಣ ಕೆಳಕ್ಕೆ ಧುಮುಕಿದರು ಕುದುರೆಗೆ ಮಾತ್ರ ಸ್ವಲ್ಪ ಘಾಯವಾಗಿ ತ್ತು ಗಾಡಿಯು ರಿಪೇರಿಗೆ ಹೋಯಿತು.—ಮೊನ್ನೆ ಸೋಮವಾರ ಬೆಳಿಗ್ಗೆ ಬೆಂಗಳೂರು ಸಿಟಿಗೆ ಪರಮಹಂಸ ಅಭೇದಾನಂದ ಸ್ವಾಮಿಗಳ ವರು ಮದರಾಸಿನಿಂದ ದಯಮಾಡಿಸಿದರು. ಇವರುಗಳ ಆಗಮನಕ್ಕಾಗಿ ಮುನ್ನೆದಿನ ಎಲ್ಲರಿಗೂ ನೋಟೀಸುಗಳು ಕಳುಹಿಸಲ್ಪಟ್ಟವು. ರೈಲ್ ಸ್ಟೇಷನಲ್ಲಿ ೨ ನೇ ಕೌನ್ಸಲರ್ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟಿ ಮೊದಲಾದ ಅಧಿಕಾರಿಗಳೂ, ಮುನಿಸಿಪಲ್ ಕಮಿಷನರ ಪೈಕಿ ಕೆಲವ ರೂ, ಇನ್ನು ಅನೇಕ ದೊಡ್ಡ ಮನುಷ್ಯರೂ ವರ್ತಕರೂ, ವಿದ್ಯಾರ್ಥಿ ಗಳೂ ಕಾದು ಇದ್ದರು ರೈಲ್ ಗಾಡಿ ಬಂದ ಒಡನೆ ಮೆ॥ ಪುಟ್ಟಣ್ಣಚೆ ಟ್ಟಿ ಹಾರ, ತುರಾಯಿಗಳನ್ನು ಒಪ್ಪಿಸಿ ಸ್ವಾಮಿಗಳಿಗೆ ಸುಸ್ವಾಗತವನ ನ್ನು ಬಯಸಿದರು. ಪರಸ್ಪರ ಕ್ಷೇಮಲಾಭಗಳ ಸಂಭಾಷಣೆಯು ನಡೆದ ಮೇಲೆ ಎಲ್ಲರೂ ಹೊರಟರು ಮೆ॥ ಪುಟ್ಟಣ್ಣಚೆಟ್ಟಿಯವರು, ಪ್ರೇಮರಮಾನಂ ದಸ್ವಾಮಿಗಳು, ಇವರ ಪಕ್ಕದಲ್ಲಿ ರಾಮಕೃಷ್ಣಪರಮಹಂಸಸ್ವಾಮಿಗ ಳು, ಇವರ ಎದುರಾಗಿ ಒಬ್ಬ ಶಿಷ್ಯರೂ ಗಾಡಿಯಲ್ಲಿ ಕುಳಿತುಕೊಂಡ ರು. ಅನೇಕ ವಿದ್ಯಾರ್ಥಿಗಳು ಗಾಡಿಯನ್ನು ತಾವೇ ಎಳೆದುಕೊಂಡು ಹೋಗುತ್ತೇವೆ. ಕುದುರೆಗಳು ಕಟ್ಟಿರುವದನ್ನು ಬಿಚ್ಚಬೇಕೆಂದು ಕೇ ಳಿಕೊಂಡ ಮೇರೆಗೆ ಕುದುರೆಗಳು ಬಿಚ್ಚಲ್ಪಟ್ಟವು. ಸ್ವಾಮಿಗಳು ಕೂ ತುಕೊಂಡ ಗಾಡಿಯನ್ನು ವಿದ್ಯಾರ್ಥಿಗಳೇ ಎಳೆದುಕೊಂಡು ಹೊರಟ ರು. ಇನ್ನು ಗಾಡಿ ಮುಂದೆ ಸ್ವಾಮಿ ವಿವೇಕಾನಂದಸ್ವಾಮಿಗಳವರ ಚಿತ್ರ ಪಟವು ಒಂದು ಗಾಡಿಯಲ್ಲಿ ಇಟ್ಟು ಇತ್ತು. ಇದರ ಮುಂದೆ ಈ ಸ್ವಾ ಮಿಗಳ ಗುಣಗಳ ಪದವು ಇತ್ತು. ಅನೇಕ ದೊಡ್ಡ ಮನುಷ್ಯರು ಗಾಡಿ ಗಳಲ್ಲಿ ಕುಳಿತು ಹಿಂದೆ ಹೊರಟರು. ಬೆಂಗಳೂರಲ್ಲಿರುವ ಒಂದೂ ಭ ಜನೆ ಗುಂಪಿನವರು ಭಜನೆ ಮಾಡಿಕೊಂಡು ಸ್ವಾಮಿಗಳ ಗಾಡಿ ಹಿಂದೆ ಬರುತ್ತಿದ್ದರು. ಇದ್ದರೂ ಒಬ್ಬ ಬ್ಯಾಂಡ್ ವಾದ್ಯವು ಮುಂದೆ ಬಾರಿಸುತ್ತ ಇದ್ದರು. ಸಿಟಿಯಲ್ಲಿ ಎಲ್ಲಾ ತೋರಣಗಳು ಕಟ್ಟಿದ್ದರು ರೈಲ್ ಸ್ಟೇಷನಲ್ಲಿ ಅಲಂಕಾರ ಮಾಡಿದ್ದರು. ಈ ಸ್ವಾಮಿಗಳ ಸವಾ ರಿಯು ಮಹಾರಾಜರವರ ಅರಮನೆಗೆ ಹೊರಟಿತು ಎಲ್ಲರೂ ಜಯಜ ಯ ಧ್ವನಿ ಮಾಡುತ್ತಾ ಬಿರುದುಗಳನ್ನು ಹೊಗಳುತ್ತಿದ್ದರು. ಸಾಯಂ ಕಾಲ ದೊಡ್ಡಣ್ಣನವರ ಹಾಲಿನಲ್ಲಿ ಸ್ವಾಮಿಗಳ ಉಪನ್ಯಾಸವು ಜರುಗಿತು.

ಚೆನ್ನರಾಯಪಟ್ಟಣ.—ಈ ಊರಲ್ಲಿ ಜನಕ್ಕೆ ನೀರಿನ ಕ್ಷೋಭೆ ಸ್ವಲ್ಪ ಇಲ್ಲ. ಈ ಕಷ್ಟವನ್ನು ಕಂಡು ನಮ್ಮ ..... ಅಮಲ್ದಾರ್ ರಾ॥ ಅಪ್ಪಣ್ಣಯ್ಯಂಗಾರ್ರು ಒಳಗೆಡೆಯಲ್ಲಿ, ಮೈಸೂರು ರಸ್ತೆಯ ಲ್ಲಿ ೨ ಭಾವಿಗಳನ್ನು ತೆಗೆಸುತ್ತಾ ಇದ್ದಾರೆ. ಇವರು ಬಂದ ಮೇಲೆ ಮುನಿಸಿಪಲ್ ಲಾಂದ್ರ ವಗೈರೆಗಳನ್ನೆಲ್ಲಾ ರಿಪೇರಿ ಮಾಡಿಸಿ ನಿರ್ಮಲ ವಾದ ..... ಕಾಲಕ್ಕೆ ಸರಿಯಾಗಿ ... ... ಕೊಟ್ಟರು ... ಸಂತೆಯಲ್ಲಿ ... ... ಸಿಗಾಕೊಟ್ಟು ... ... ಕಳುಹಿಸಿರು ತ್ತಾರೆ. ಫಲಿತಾಂಶ ಏನೆಂದು ತಿಳಿಯಬೇಕು.—ಇದೇ ಊರು ಪೇಟೆ ಯ ... ... ಅಗಲಿ ... ... ಊರಲ್ಲಿ ಪೇಟೆ ... ... ಜನಗಳಿಗೆ ತುಂಬಾ ಅನಾರೋಗ್ಯಕ್ಕೆ ಕಾರಣವಾಗಿ ದೆ. ಸಂತೆ ದಿವಸ ಜನರನ್ನು ಕೊಂಡು ಕೊಳಚೆ ರಪ್ತಾ ಮಾಡು ತ್ತಾರೆ ಜನರು ತಿರುಗಾಡುವ ದಾರಿಯಲ್ಲೇ ಕಸ, ಅದು, ವಗೈರೆಗಳ ನ್ನು ಹಾಕುತ್ತಾರೆ. ಇದಕ್ಕೆಲ್ಲಾ ನಮ್ಮ ವಾಕ್ಯವು ಯಾತಕ್ಕೆ ನಿಗಾ ಇಟ್ಟಿಲ್ಲವೋ ತಿಳಿಯದೆ ತುಂಬಾ ಶೋಚನೀಯವಾಗಿದೆ. ನಮ್ಮ ಅಮ ಲ್ದಾರರು ಟರ್ಮ ಗಸ್ತಿಗೆ ಬಂದಾಗ್ಯೆ ಅವುಗಳ ಕಡೆ ನಿಗಾಕೊಟ್ಟು ಊರ ಹೊರಗೆ ಅಂಗಡಿಗಳನ್ನು ಮಂಡಿಗಳನ್ನೂ ಇಡಬೇಕೆಂದು ಅಪ್ಪಣೆ ಮಾಡಿ, ಹಾಲೀ ಇರುವ ಸ್ಥಳಗಳನ್ನು ತಪ್ಪಿಸುತ್ತಾರೆಂತ ನಂಬುತ್ತೇನೆ. ಇವರು ಏಳಿಗೆ ಶ್ರದ್ಧೆಯಿಂದ ತಮ್ಮ ಸರಹದ್ದಿನ ಗ್ರಾಮಗಳಲ್ಲೂ ಟರ್ಮ ಲ್ಲೂ ಕಾಲಕ್ಷೇಪವಿಲ್ಲದೆ ಗಸ್ತು ಮಾಡುತ್ತಿರುವುದರಿಂದ ಕುಂಟಜನ ಕ್ಕೆ ಏಳಿಗೆಗೆ ಅವಕಾಶವಿಲ್ಲ. ತಾಲ್ಲೋಕು ಅರ್ಥವಾಲು ಹಕೋಟಿಗೆ ಇಂದಿರುವಂತೆ ಚೆನ್ನಾಗಿಯೂ ಗೊತ್ತಾಗುತ್ತೆ. ತುಂಟರಲ್ಲಿ ಅಗ್ರಗಣ್ಯರಾಗಿ ರುವವರನ್ನೆಲ್ಲಾ ಉತ್ತರೋತ್ತರ ಪತ್ತೆ ಮಾಡಿ ಶಿಕ್ಷೆಯೂ ವಿಧಿಸಬಹು ದೆಂತ ಧಾರಾಳವಾಗಿ ಹೇಳಬಹುದು

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು; ಅಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಬರೆಯುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರು ಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

"ಪ್ರಜಾಹಿತೈಷಿ," ಸರ್ದಾರ್ಪುರ—ಈ ವಿಷಯವನ್ನು ಗ್ರಾಮಸ್ಥರು ಸೇರಿ ಮಹಜರು ಮಾಡಿ ಅಮಲ್ದಾರರಿಗೆ ತಿಳಿಸಿದರೆ ಅವರು ಗಮನ ಕೊಟ್ಟಾರು.—ಎಡಿ]

ಕರೆಸ್‌ಪಾಂಡೆನ್ಸ್.

ಗೋವ್ಯಾಧಿಗೆ ಔಷಧ.

ಅಯ್ಯಾ,

ತಮ್ಮ ಜುಲೈ ೨೬ನೆ ವೃತ್ತಾಂತ ಪತ್ರಿಕೆಯಲ್ಲಿ ಬರೆದಿದ್ದ ಗೋ ವ್ಯಾಧಿಗೆ ವಿಷಧಿ:—ಅಡಕೆ ಹೊಂಬಾಳೆಯನ್ನು ತಂದು ಜಜ್ಜಿಗೆಯಲ್ಲಿ ಅರೆದು ದಿನಕ್ಕೆ ಒಂದಾವರ್ತಿಯಂತೆ ಮೂರು ದಿವಸ ಹಚ್ಚಬೇಕು. ನಾಲ್ಕನೆ ದಿವಸ ಬಿಸಿನೀರಿನಲ್ಲಿ ವೈತೊಳೆಯಬೇಕು. ಹುಳುಗಳು ನಾಶ ವಾಗುತ್ತವೆ. ನಮಾರೆ ಅಂತಪ್ಪ.

೨

ಅಯ್ಯಾ,

ತಮ್ಮ ಕಳೆದ ೨೬ನೆ ಸುರ್ಕಾರ್ ಪತ್ರಿಕೆಯಲ್ಲಿ ಲಕ್ಕಾರ್ ಚಿಕ್ಕ ಣ್ಣನವರು ದಾಸುಗಳನ್ನು ಪೀಡಿಸುವ ಪಿಡುಗಿನ ವಿಷಯವಾಗಿ ಪ್ರಕಟ ಸಿರುವರಷ್ಟೆ. ನಮ್ಮಕಡೆ ನಾಡು ಪಶುವೈದ್ಯರು ಈ ರೀತಿ ತಿಳಿಸಿರುವರು. (೧) ಬಜೆಯನ್ನು ನುಚ್ಚು ಕುಟ್ಟಿ ಪುಡಿಮಾಡಿ ಪಿಡುಗಿನ (ಉಣ್ಣೆ) ಅಂಟಿರುವ ಕಡೆ ಉಜ್ಜಿದರೆ ಸತ್ತು ಉದುರಿಹೋಗುವುದು. (೨) ಸುಣ್ಣದ ಸೊಪ್ಪನ್ನು ತಂದು ಮೇಲೆ ಹೇಳಿದ ಮೇರೆ ತಿಕ್ಕಿ ಬಿಸಿನೀರಿನಲ್ಲಿ ತೊಳೆ ದರೆ ನಿವಾರಣೆಯಾಗುತ್ತದು ರಾಮಕೃಷ್ಣ.

ಬಲಗೈ ಜಾತಿಯವರ ಸಂಕಟ.

ಅಯ್ಯಾ,

ಮಂಡ್ಯ ತಾಲ್ಲೋಕು ಹಲ್ಲೆಗೆರೆ ಗ್ರಾಮದ ಬಲಗೈ ಜಾತಿ ಜನಗಳು ಬಹುಕಾಲದಿಂದಲೂ ಈ ಗ್ರಾಮದ ಕೆರೆ ನೀರನ್ನು ದಂಡಮ್ಮ ದೇವರ ದೇವಸ್ಥಾನದ ಪಕ್ಕದ ಕಡೆಯಿಂದ ತಂದು ಪಾನಮಾಡುತ್ತಿದ್ದರು ಈಗ್ಗೆ ೪ ದಿನದಲ್ಲಿ ಊರಿನ ಸಕಲ ಪ್ರಜೆಗಳೂ ಸೇರಿ ಸಭೆಮಾಡಿ ಬಲ ಗೈ ಜಾತಿಯವರಿಗೆ ನೀರಿಗೆ ಅಗಲಿ ಮಾತಿಗೆ ಅಗಲಿ ಸಹಾಯ ಮಾಡ ಕೂಡದೆಂದು ಕಟ್ಟುಪಾಡು ಬರೆಸಿಕೊಂಡು, ಮಾರನೆ ದಿವಸವೇ ಆ ಜನ ಗಳು ನೀರಿಗೆ ಬಾರದಂತೆ ಅಡಕಾಯಿಸಿ ತೊಂದರೆ ಕೊಟ್ಟದ್ದರ ಮೇಲೆ ಅವರು ತಾಲ್ಲೋಕಿಗೆ ಅರ್ಜಿ ಕೊಟ್ಟದ್ದಕ್ಕೆ ಈ ಗ್ರಾಮದವರಿಂದಲೇ ನಿಚ್ಚಳಿಕೆ ಮುಚ್ಚಳಿಕೆ ತೆಗೆದು ಅರ್ಜಿ ಖೈದು ಮಾಡಲಾಯಿತು. "ಕಳ್ಳನ ತಾಯ ನ್ನು ಕಾಣಕೇಳಿದರೆ ತನ್ನ ಮಗ ಕದ್ದನೆಂತ ಹೇಳುವಳೇ ನಿಜವೇ?" ಪ್ರಜೆಗಳೆಲ್ಲಾ ಒಗ್ಗಟ್ಟಾಗಿ ಏನೋ ಒಂದು ಮಹಜರು ಬರೆದು ರವಾ ನಿಸಿಬಿಟ್ಟರು. ಅಮಲ್ದಾರರು ಈ ವಿಷಯ ಹ್ಯಾಗೆ ಫೈಸಲ್ಮಾಡುವರೋ ಹೇಳುವುದು ಅಸಾಧ್ಯ. ಈ ಬಡಪ್ರಜೆಗಳ ಗೋಳಾಟವನ್ನು ನೋಡಿ ದರೆ ಯಾರಿಗೆ ತಾನೇ ವ್ಯಸನವಾಗಲಾರದು! ದುಷ್ಟರಿಗೆ ಇಂಥಾ ಕೆಲಸ ಮಾಡುವದಕ್ಕೆ ಬುದ್ಧಿ ಚನ್ನಾಗಿದೆ. ಹೆಂಡರು ಮಕ್ಕಳನ್ನಾದರೂ ಮಾರಿ ದಂಡಕ್ಕೆ ಖರ್ಚುಮಾಡಬಲ್ಲರು ಸಾವಿರಾರುವೆಚ್ಚವಾದರೂ ಮುಟ್ಟಿಸಿ ಸರ್ಕಾರದಲ್ಲಿ ಆ ಜಾತಿಯವರು ಕೆರೆಯಲ್ಲಿ ಮಾಮೂಲಾ ಗಿದ್ದ ಭಾಗದಲ್ಲಿ ನೀರು ಕುಡಿಯುವದನ್ನು ತಪ್ಪಿಸಬೇಕೆಂತ ಹಟಹಿ ಡಿದಿದಾರೆ ಇದು ಎಂಥಾ ಘಾತಕನ ಕೆಲಸ! ಯಥಾರ್ಥವಾದಿ.

ಬಾಣಾವಾರ ಕೆರೆ, ಅಂಗಡಿಕಂದಾಯಗಳ ವಿಚಾರ.

ಅಯ್ಯಾ,

ಹಾಸನ ತಾಲ್ಲೋಕು ಬಾಣಾವಾರ ಗ್ರಾಮದ ಅಕ್ಕಪಕ್ಕದ ಗ್ರಾಮ ಗಳ ಕೆರೆಗಳು ಭರ್ತಿ ಆಗಿ ಕೋಡಿ ಆಗುತ್ತಾ ಇವೆ ಬಾಣಾವಾರ ಗ್ರಾ ಮದ ಕೆರೆ ನೋಡುವಾಗ ಕನಿಕರಪಡುವಂತಿರುವದು ಸರಿಯಷ್ಟೆ. ಕೆರೆ ಗೆ ನೀರು ಬಂದ ಭಾಗವೆಲ್ಲಾ ತೂಬಿನ ೨ ಕಡೆ ಕಾಲುವೆಯಲ್ಲಿ ನೀರು ಅನಾಯಕವಾಗಿ ಹೋಗಿ, ರಂಗೇನಹಳ್ಳಿ ಕೆರೆಗೆ ಬೀಳುತ್ತ ದೇವರ ಕೃಪೆಯಿಂದ ಇಂಥಾ ಕ್ಷಾಮಕಾಲದಲ್ಲಿ ಕೆರೆಗೆ ನೀರು ಬಂದಿರುವದೇ ವಿಶೇಷ. ಅಂಥಾಸ್ಥಳದಲ್ಲಿ ಕೆರೆ ತೂಬನ್ನು ಬಂದುಮಾಡಿ ನೀರು ಹೋಗ ದಂತೆ ಮಾಡು ಎಂದು ನೀರುಗಂಟಿಗೆ ತಿಳಿಸಿದ್ದಕ್ಕೆ ಅವನು ನಿಗಾಕೊ ಡುವದಿಲ್ಲ. ಪಟೇಲ್ ಶ್ಯಾನುಭೋಗರಿಗೆ ತಿಳಿಸಿದರೆ ಅವರು ತಮ್ಮ ಸ್ವಂತ ಜಮೀನು ಕೆರೆ ಹಿಂದೆ ಇಲ್ಲವೆಂದು ಅಲಕ್ಷ್ಯಮಾಡುತ್ತಾರೆ. ಸರ್ಕಾರದವರು ಪಟೇಲ್ ಶ್ಯಾನುಭೋಗರನ್ನು ಯಾತಕ್ಕಾಗಿ ಇಟ್ಟ ದ್ದಾರೋ ತಿಳಿಯದು. ಈ ಕೆರೆ ಏರಡಾವರ್ತಿ ತುಂಬಿದರೆ ತರಿ ಫಸಲು ಆಗುತ್ತೆ. ಈಗ ಕೆರೆಗೆ ಬಂದಿರತಕ್ಕ ನೀರು ಅನಾಯಕವಾದರೆ ಮುಂದೆ ತರಿ ಫಸಲ್ ಆಗುವದು ಹ್ಯಾಗೆ? ಪುನಹ ಕೆರೆ ತುಂಬುತ್ತೆಂಬುವದು ಯಾವ ನಂಬಿಕೆ? ಸರ್ಕಾರದವರು ಈ ಕೆರೆಗಳ ವಿಷಯದಲ್ಲಿ ೨೦ ರೂಲುಸುಗಳನ್ನು ಪಟೇಲ್ ಶ್ಯಾನುಭೋಗರಿಗೆ ಕೊಟ್ಟು ಇದ್ದಾಗ್ಯೂ ಅದರ ನಿಗಾ ಸ್ವಲ್ಪವಾದರೂ ಇಲ್ಲವಾಗಿದೆ. ಆದಕಾರಣ ಅಮಲ್ದಾ ರರು ಅಕ್ಕರೆ ನಿಗಾಕೊಟ್ಟು ಈ ಕೆರೆ ನೀರು ಅನಾಯಕವಾಗಿ ಹೋಗ ದಂತೆ ತೂಬಿಗೆ ಒಂದು ಬೀಗ ಮಾಡಿಸಿ ಕೊಡುವದಲ್ಲದೆ ಹಾಲಿ ಇರುವ ನೀರುಗಂಟಿಗೆ ಬದಲಾಗಿ ಇನ್ನೊಬ್ಬನನ್ನು ನೇಮಿಸಿ ಕೊಟ್ಟಲ್ಲದೆ ಈ ಕೆರೆ ಕೆಳಗಣ ಫಸಲು ಗರೀಬರಾದ ರೈತರ ಕೈಸೇರುವ ಹಾಗಿಲ್ಲ

ಈ ಬಾಣಾವಾರ ಗ್ರಾಮದಲ್ಲಿ ಅನೇಕರು ಅವರವರ ಮನೆಗಳಲ್ಲಿ ಅಡಿಕೆಲೆ ಚಿಲ್ಲರೆ ವ್ಯಾಪಾರ ನಡೆಸುತ್ತಾರೆ ಇಂಥವರಿಗೆ ಗ್ರಾಮಾಧಿಕಾರಿ ಗಳು ಯಾಕೆ ಕಂದಾಯ ದಾಖಲ್‌ಮಾಡದೆ ಬಿಟ್ಟುಕೊಂಡಿದ್ದಾರೆಯೋ ತನಿಖೆಯಾಗಬೇಕು. ಇದು ಸರ್ಕಾರಕ್ಕೆ ನಷ್ಟವಲ್ಲವೇ? ಬಡವಾ ಗಲಾದ ಅಂಗಡಿಯವರಿಗೆ ಮಾತ್ರ ಕಂದಾಯ ದಾಖಲ್‌ಮಾಡಿ ವಸೂಲ್ ಮಾಡುವದು ಯಾವ ನ್ಯಾಯವೂ? ಸರ್ಕಾರದವರು ನಿಗಾಕೊಟ್ಟು ಅಂಗಡಿಇಡುವವರ ವಿಚಾರಣೆ ಮಾಡಿ ಅವರಿಗೂ ಕೂಡ ಕಂದಾಯ ದಾಖಲ್ ಮಾಡಿಸಬೇಕೆಂದು ಪ್ರಾರ್ಥನೆ. ದೇಶಾಭಿಮಾನಿ.

ಮಗುವೂ ಸರ್ಪವೂ.

ಅಯ್ಯಾ,

ಅನಾದಿಯಿಂದಲೂ ಹಿಂದುಗಳು ಗರುಡಸರ್ಪ ಮುಂತಾದವುಗಳು ತಮ್ಮ ದೇವರುಗಳೆಂದೂ ಅವುಗಳ ಆರಾಧನೆ, ಸೇವಾ, ಧ್ಯಾನ ಮುಂತಾ ದವುಗಳಿಂದ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಿದ್ದರೆಂತಲೂ ಪುರಾಣ ಪ್ರಸಿದ್ಧವಾಗಿರುವದು ಸರ್ವಸಾಮಾನ್ಯವಾಗಿ ಜನಜನಿತವಾ ಗಿಯೇ ಇದೆಯಷ್ಟೆ. "ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು" ಎಂಬ ಹಿರಿಯರುಕ್ತಿಯಂತೆ ಈ ಮಾತು ಪ್ರಾಣಿಗಳು ದೇವರುಗಳೆಂದೂ, ಇವುಗಳಿಂದ ಇಷ್ಟಾರ್ಥ ಪೂರ್ತಿಯಾಗುವುದೆಂದೂ ಸ್ವಾನುಭವದಿಂದ ತಿಳಿದುಕೊಳ್ಳಲು ಅವಕಾಶವೇ ಇರಲಿಲ್ಲ. ಈ ವಿಷಯವಾಗಿ ಕಡೂರ್ ಡಿಸ್ಟ್ರಿಕ್ಟ್ ಈ ಯಡೆಹಳ್ಳಿ ಟರ್ಮನಲ್ಲಿ ಒಂದು ವಿಚಿತ್ರ ಸಂಗತಿಯು ನಡೆದಿರುವದು. ಇದೇ ಜುಲೈ ತಾ॥ ೧೫ ನೇ ಭಾನುವಾರ ಮಧ್ಯಾಹ್ನ ಈ ಊರು ಪೇಟೆಯಲ್ಲಿರುವ ದರ್ಜಿ ಯರ್ರಪ್ಪೋಜಿರಾವು ಹೆಂಡತಿ ಗೋ ದಾಬಾಯಿ ಎಂಬುವಳು ಒಂದು ಹೆಣ್ಣು ಕೂಸನ್ನು ಹೆತ್ತಿದ್ದಳು. ಹೆತ್ತ ಒಡನೆ ಅಕಸ್ಮಾತ್ತಾಗಿ ಎಲ್ಲಿಂದಲೋ ಒಂದು ನಾಗರಹಾವು ಬಂದು, ಆ ಮಗುವಿನ ಪಕ್ಕದಲ್ಲಿ ಹೆಡೆ ಸುತ್ತಿಕೊಂಡು ಹೆಡೆ ಬಿಚ್ಚಿಕೊಂಡು ಕೂ ತುಕೊಂಡಿತ್ತು. ಈ ಹಾವು ಕೂಡಾ ಮಗುವಿನ ಜೊತೆಯಲ್ಲಿಯೇ ಹುಟ್ಟಿರುವದೆಂಬ ವಾರ್ತೆಯು ಸರ್ವತ್ರ ಹರಡಿಕೊಂಡಿದೆ. ಇದು ಎಷ್ಟ ರಮಟ್ಟಿಗೆ ನಿಜವೋ ನಾನು ಕಂಡೋಕ್ತವಾಗಿ ಹೇಳಲಾರೆ. ಹೇಗಾದ ರೂ ಇರಲಿ ಹಾವೇನೋ ಮಗುವಿನ ಪಕ್ಕದಲ್ಲಿಯೇ ನಿಂತು ಬಿಟ್ಟಿತು. ಅಲ್ಲಿದ್ದವರೆಲ್ಲರೂ ಇದನ್ನು ನೋಡಿ ಬಹಳ ಭಯದಿಂದಲೂ ಆಶ್ಚರ್ಯ ದಿಂದಲೂ ಕೂಡಿ ಅದನ್ನು ಹೊರಕ್ಕೆ ಹೊರಡಿಸಲು ನಾನಾ ಉಪಾಯ ಗಳನ್ನು ಮಾಡಿದರೂ ಬೂದಿಯಲ್ಲಿ ಮಾಡಿದ ಹೋಮದಂತಾಯಿತು. ಇದನ್ನು ಕೇಳಿ ಬಹು ಜನಗಳು ಈ ಆಶ್ಚರ್ಯವನ್ನು ನೋಡುವದ ಕ್ಕೋಸ್ಕರ "ಜನ ಮರುಳೋ ಜಾತ್ರೆ ಮರುಳೋ" ಎಂಬಂತೆ ಗುಂಪುಗುಂಪಾಗಿ ಬಂದು ನೋಡಿ, ಮನಬಂದಂತೆ ಮಾತಾಡಿಕೊಳ್ಳು ತ್ತಿದ್ದರು. ಎಷ್ಟೆಷ್ಟು ಬೆದರಿಕೆಯನ್ನು ತೋರಿಸಿದರೂ ಹಾವು ಮಾತ್ರ ಅಲ್ಲಿಂದ ಕದಲದೆ ತನ್ನನ್ನು ನೋಯಿಸಬಂದವರ ಮೇಲಿನ ಆಗ್ರಹದಿಂ ದ ಹೆಡೆಯನ್ನು ಎತ್ತಿ ನೆಲಕ್ಕೆ ಬಡಿಯುವುದೂ ಬುಸುಗುಟ್ಟುವುದೂ ಹೀಗೆಲ್ಲಾ ಮಾಡುತ್ತಾ ತನ್ನ ಮಹತ್ತನ್ನು ತೋರಿಸಿತೇ ಹೊರತು ದ ತ್ತಿರುವ ಮಗುವಿಗಾಗಲಿ ಇತರರಿಗಾಗಲಿ ಯಾವದೊಂದು ಬಾಧೆಯ ನ್ನೂ ಮಾಡಲಿಲ್ಲ. ಆಗ ಹಿರಿಯರಾದವರು ನಾಗಪ್ಪನಿಗೆ ಹೀಗೆಲ್ಲಾ ಸಿ ಟ್ಟು ಬರಿಸಿದರೆ ಬಹಳ ಅರಿಷ್ಟವಲ್ಲವೇ? ಅವನು ಬಾಲ ಮೂಲಕ ಮನೆ ಯ ಏಳಿಗೆಯನ್ನೇ ನಿರ್ಮೂಲಮಾಡಿ ಬಿಡುವದಿಲ್ಲವೇ? ಹಿಂದೆ ಪರೀ ಕ್ಷಿತನೇ ಮೊದಲಾದ ಮಹಾ ಪುರುಷರೆಲ್ಲಾ ಈ ಮಹಾರಾಯನ ದೆಸೆ ಯಿಂದ ಅನೇಕ ಕಷ್ಟಗಳಿಗೆ ಗುರಿಯಾಗಲಿಲ್ಲವೇ? ಎಂಬದಾಗಿ ಪುರಾ ಣಪ್ರವಚನ ಮಾಡಿಸಿದರು. ಇದು ಯುಕ್ತವೆಂದು ಗ್ರಹಿಸಿ ಧೂಪ, ದೀಪ, ನೈವೇದ್ಯಗಳಿಂದ ಸತ್ಕಾರ ಮಾಡಿದರು. ಅದ್ರಕ್ಕೂ ತೃಪ್ತಿಯಾಗಲಿಲ್ಲ. ಹೀಗೆ ನಾನಾ ವಿಧವಾದ ಉಪದ್ರವಗಳನ್ನೂ ಉಪಚಾರಗಳನ್ನೂ ಅನು ಭವಿಸಿಯೂ ಅಲ್ಲಿಂದ ಅಡಿಯಿಡದೆ ಹೆಡೆ ಬಿಚ್ಚಿಕೊಂಡು ಒಂದು ಸಗ ಲು ಒಂದುರಾತ್ರೆ ಸಹಾ ಮಗುವಿನ ಪಕ್ಕದಲ್ಲಿಯೇ ಯೋಗಧ್ಯಾನ ಪರಾ ಯಣನಾದ ಮುನೀಶ್ವರನಂತೆ ಮೆರೆಯುತ್ತಲಿತ್ತು. ಇದನ್ನು ನೋಡಿ ಇನ್ನೂ ಬುದ್ಧಿವಂತರಾದವರು ದೊಣ್ಣೆ ಕಲ್ಲು ಹೊಡೆದರೆ ಒಂದಾದರೂ ಕಗ್ಗಲಂತೆ ಹಲವು ಪ್ರಾರ್ಥನೆಗಳಿಂದಲಾದರೂ ನಾಗಪ್ಪನು ಪ್ರೀತನಾಗಿ ಹೊರಟು ಹೋಗುವನೆಂತಲೂ, ಇನ್ನೂ ಕೆಲರು ನಾಗಪ್ಪನಿಗೆ ಏನೋ ದೊಡ್ಡ ಅಪರಾಧ ಮಾಡಿದ್ದೀರಿ; ಇದಕ್ಕಾಗಿ ಏನಾದರೂ ಕಾ ಣಿಕೆ ಕಟ್ಟಿಕೊಳ್ಳಬೇಕೆಂತಲೂ ಹೇಳಿದ ಮೇಲೆ ಆ ಮನೆಯವರು ಯ ಥಾಶಕ್ತಿ ಕಾಣಿಕೆಯನ್ನು ಕಟ್ಟಿ ನಾಗಪ್ಪನಿಗೆ ಕೈ ಮುಗಿದುಕೊಂಡು ತಮ್ಮ ಅಪರಾಧಗಳನ್ನು ಕ್ಷಮಿಸಬೇಕೆಂತಲೂ ಈ ಸೇವೆಗೆ ನಿನ್ನ ಸಂ ದರ್ಶನ ಇಟ್ಟು ಕರೆಯುತ್ತೇನೆಂತಲೂ ಹೇಳಿ ಅಡ್ಡಬಿದ್ದು ಪ್ರಾರ್ಥನೆ ಮಾಡಿದ ಮೇಲೆ ಆ ಪುಣ್ಯ ಪುರುಷನು ನಿಲ್ಲುಮೆಲ್ಲಗೆ ದಿಗ್ವಿಜಯಮಾಡಿ ದನು. ಈ ಹಾವು ಯಾತಕ್ಕೋಸ್ಕರ ಅಲ್ಲಿಗೆ ಬಂತೋ, ಏಕೆ ಬಹಳ ಹೊತ್ತು ಹೊರಗೆ ಹೊರಡಲಿಲ್ಲವೋ, ಪ್ರಸಹ ಯಾಕೆ ತನ್ನಷ್ಟಕ್ಕೆ ತಾನೇ ಹೊರಟುಹೋಯಿತೋ ನಿಶ್ಚಯ ಹೇಳಲು ಯಾರಿಗೂ ಸಾಧ್ಯ ವಿಲ್ಲ. ತಮ್ಮ ಯಾವದೋ ಒಂದು ಅಪರಾಧದಿಂದ ಈ ರೀತಿ ಮಾಡಿ ತೆಂತಲೂ, ನಂತರ ತಮ್ಮ ಪ್ರಾರ್ಥನೆಯಂತೆ ತೃಪ್ತಿಯಾಗಿ ಹೊರಟು ಹೋಯಿತೆಂತಲೂ ನಂಬಿರುವ ಹಿಂದುಗಳ ಮೌಢ್ಯವು ಇನ್ನೂ ನೆಲ ಗೊಂಡಿರುವದಲ್ಲವೇ? ವಾಚಕ

ಪ್ರಕಟನೆ.

ಮೋಸು! ಬಹಳ ಮೋಸು!! ಅಗ್ಗ! ಬಹು ಅಗ್ಗ!!

ಮೇಲಾದ ಸ್ವದೇಶಿ ಬ್ಲೂ ಬ್ಲಾಕ್ ಇಂಕ್

ಮೂರು ತೋಲಗಳುಳ್ಳ ಪೆಟ್ಟಿ ೧ಕ್ಕೆ ಕ್ರಯ—೦—೧—೦

ಛಾಂಗಿ ಛಾರ್ಜು ೦—೩—೦

ಸ್ವದೇಶಿ ಇಂಕ್ ಪೌಡರ್. ಇದು ಇತರ ಯಲ್ಲಾ ಇಂಕಿಗಳಿಗಿಂತ ಬಹಳ ಮೇಲಾದದ್ದು. ಇದು ಆಫೀಸುಗಳಲ್ಲೂ ಬ್ಯಾಂಕುಗಳಲ್ಲೂ ಸ್ಕೂಲುಗಳಲ್ಲೂ ಉಪಯೋಗಿಸತಕ್ಕದ್ದು. ಇಂಥಾ ಮೇಲಾದ ಪುಡಿ ಯು ಇಷ್ಟು ಸುಲಭ ಕ್ರಯಕ್ಕೆ ಮತ್ತೆಲ್ಲಿಯೂ ದೊರೆಯಲಾರದು.

ಈ ಇಂಕಿನಿಂದ ಬರೆದ ಕಾಗದವನ್ನು ನೀರಿನಲ್ಲಿ ನೆನೆಸಿ ಬಂಲಿ ನಿಂದ ಅಕ್ಷರಗಳನ್ನು ಉಜ್ಜಿದಾಗ್ಯೂ ಕಳಸಿಕೋಗದು. ಸ್ವಲ್ಪವನ್ನು ತರಿಸಿ ಪರೀಕ್ಷಿಸಿರಿ. ಇದನ್ನು ಉಪಯೋಗಿಸುವ ವಿಧವು ಡಬ್ಬಿಗೆ ಸುತ್ತಿ ರುವ ಕಾಗದದಲ್ಲಿ ಬರೆದಿರುತ್ತೆ.

☞ ನಾಲ್ಕು ಡಬ್ಬಿಗೆ ಕಮ್ಮಿಯಾಗಿ ದರಖಾಸ್ತು ಕಳುಹಿಸಿದರೆ ಛಾಂಗಿ ಛಾರ್ಜು ಜಾಸ್ತಿಯಾಗುವದರಿಂದ ೪ ಡಬ್ಬಿಗಿಂತ ಕಮ್ಮಿಯಾಗಿ ದರಖಾಸ್ತು ಕಳುಹಿಸಕೂಡದು. ನಮ್ಮ ವಿಳಾಸ:—

ವಿಳಾಸ 103-1

ಸ್ವದೇಶಿ ಇಂಕ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—13

ನಿಯಮಿತ ಮೂಲಧನ ಷೇರು ಒಂದಕ್ಕೆ ೧೦ ರೂಪಾಯಿಗಳ ಬೆಲೆಯುಳ್ಳ ೩೦ ಸಾವಿರ ಷೇರುಗಳಿಂದಾಗುವ ೩ ಲಕ್ಷ ರೂಪಾಯಿಗಳು. ಈ ಷೇರು ಮೇಲೆ ೨ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ಕೊಟ್ಟು ೧೦ ಕಂತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ ನಿಂದ ಈ ಲೈನಿನ ವರಮಾನ ಶೇಕಡ ೬ ಕ್ಕಿಂತ ಕಮ್ಮಿ ಆಗಲಾರದೆಂದು ತೋರುವುದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪೆನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ವಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸಹರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಒಲ್ಕಾಟ ವ ಬ್ರಾಂಚು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕ್ ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಷೇರು ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಫೀ ರವಾನಿಸಬೇಕು. ಇದು ಷೇರು ಮಾಬಲಗಿನಲ್ಲಿ ಉತ್ತಾರ ಹಾಕಲ್ಪಡುವುದು.

(ಸ್ವರ್ಗ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರದ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಒಕ್ಕಲಿಗರ ಸಂಘ.

38 1

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ತಮಗೆಲ್ಲಾ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರ ದೇಶಾಭಿಮಾನಿಗಳಿಂದ ಸ್ಥಾಪಿಸಲ್ಪಟ್ಟಿರುವದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಿಲ ಬಳಿ ಇರುವ ಶ್ರೀ ದೊಡ್ಡ ಬಳ್ಳಾಪುರದ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಪಾಠಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ ಆ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನು ಸಹ ನೇಮಿಸಿರುತ್ತಾರೆ. ಆದುದರಿಂದ ಅಭಿಮಾನಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನೂ ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತೇವೆ.

ತಮ್ಮ ವಿಧೇಯರು,
ಲಾಲ್‌ಬಾಗ್ ರೋಡ ಎಂ ಸುಬ್ಬಯ್ಯ, ಬಿ. ಎ,
ಬೆಂಗಳೂರು ಕೆ ಹೆಚ್. ರಾಮಯ್ಯ, ಬಿ ಎ,
ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು

ಷರಾ —ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಟ್ಟಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋಗತಕ್ಕವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

P. SUBBROYA'S

World Renowned and most Efficacious Ayurvedic Medicines

ಪಿ. ಸುಬ್ಬರಾಯರವರ
ಲೋಕಪ್ರಸಿದ್ಧವಾದ ಮತ್ತು ಅತ್ಯಂತ ಗುಣಕಾರಿಯಾದ
ಆಯುರ್ವೇದ ಔಷಧಗಳು

11-38

೧ ಪುಷ್ಟಿರಸಾಯನ —ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಇತರ ವಿಧವಾದ ಎಲ್ಲಾ ಶರೀರದ ದುರ್ಬಲಗಳೂ ಹೋಗಿ, ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ, ದೇಹವು ಪುಷ್ಟಿಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ, ಪುಷ್ಟಿಯೂ, ಬಲವೂ ಉಂಟಾಗುವವು. ಪಟ್ಟಿ ಒಂದಕ್ಕೆ ರೂ ೨ ವಿ. ಪಿ ಛಾರ್ಜಿ ೬ ಆಣೆ.

೨೦ ಅತ್ಯುತ್ತಮವಾದ ಕಸ್ತೂರಿ —ಕಾಶ್ಮೀರದಿಂದ ತರಿಸಿರುವದು. ಅತ್ಯುತ್ತಮವಾದದ್ದು ಮತ್ತು ಒಂದೇ ರಖಂ ಇರತಕ್ಕದ್ದು. ತೋಲ ೧ ಕ್ಕೆ ರ ೯, ೩೦ ಬೆಲೆಯಾಗಿ ಒಂದು ರೂಪಾಯಿಗೂ ದೊರಕುತ್ತದೆ. ವಿ. ಪಿ. ಚಾರ್ಜಿ ಅಲಾಯಿದ.

೨೧ ಸುಗಂಧ ನಶ್ಯಪುಡಿ —ಈ ನಶ್ಯಪುಡಿಯು ಬಹಳ ಸುವಾಸನಾಯುಕ್ತವಾಗಿರೋಣವರಿಂದ ಇದನ್ನೇ ಪ್ರತ್ಯೇಕವಾಗಿ ಹಾಕಿಕೊಳ್ಳಬಹುದು. ನೀವು ದಿನವೂ ಹಾಕಿಕೊಳ್ಳುವ ಸಾಮಾನ್ಯ ನಶ್ಯಕ್ಕೆ ಈ ಸುಗಂಧಪುಡಿಯಲ್ಲಿ ಒಂದೆರಡು ಚಿಟಿಕೆಯಷ್ಟನ್ನು ಬೆರಸಿ, ಹೀಗೆ ಮಿಶ್ರಮಾಡಿದಮೇಲೆ ನಶ್ಯವು ಬಹು ಸುವಾಸನೆಯುಳ್ಳದ್ದಾಗಿಯೂ ಮನೋಹರವಾಗಿಯೂ ಆಗುವುದು. ಇದರಿಂದ ನಶ್ಯ ಹಾಕಿಕೊಳ್ಳುವವರ ಬಳಿ ಬರುವವರಿಗೆ ಕಠಿಣವಾದ ಕೆಟ್ಟವಾಸನೆ ಇರುವುದೇ ಇಲ್ಲ. ಸುವಾಸನೆಯು ಬಹಳಹೊತ್ತು ಇರುತ್ತದೆ. ಈ ಪುಡಿ ಬೆರಸಿದ ನಶ್ಯ ಬಹಳ ಕಾಲದ ತನಕ ಕೆಡುವುದಿಲ್ಲ. ಇಂಥಾ ನಶ್ಯ ಹಾಕಿಕೊಂಡಲ್ಲಿ ನೇತ್ರ, ಅರೆತಲೆನೋವು, ವಾತ ಮೊದಲಾದವು ನಿವಾರಣೆಯಾಗುತ್ತವೆ. ಆಗಾಗ್ಗೆ ನಶ್ಯ ಹಾಕಿಕೊಳ್ಳಬೇಕೆಂಬ ಇಚ್ಛೆಯನ್ನು ಕಡಿಮೆಮಾಡುವುದು. ಇದರಲ್ಲಿ ಮಾದಕಗಳು ಖಂಡಿತವಾಗಿ ಸೇರಿರುವುದಿಲ್ಲ. ಇಂಥಾ ಒಂದು ಡಬ್ಬಿ ನಶ್ಯವು ಒಂದು ತಿಂಗಳ ತನಕ ಬರುತ್ತೆ. ಕ್ರಯ ಒಂದು ಡಬ್ಬಿಗೆ ೪ ಆಣೆ. ೧ ರಿಂದ ೩ ಡಬ್ಬಿ ತನಕ ವಿ ಪಿ ಛಾರ್ಜಿ ೩ ಆಣೆ. ಹೆಚ್ಚು ವಿ ಪಿ ಛಾರ್ಜಿ ೪ ರಿಂದ ೬ ಡಬ್ಬಿ ತನಕ ೫ ಆಣೆ ೭ ರಿಂದ ೧೨ ಡಬ್ಬಿ ವರೆಗೆ ವಿ ಪಿ ಛಾರ್ಜಿ ೭ ಆಣೆ.

೨೨ ರಕ್ಷಾಮೃತಂ—ಸಸ್ಯವರ್ಗಗಳಲ್ಲಿ ಸೇರಿದ ಅನೇಕ ಅಪೂರ್ವ ಮೂಲಿಕೆಗಳಿಂದ ಮಾಡಲ್ಪಟ್ಟಿರುವ ಈ ಚೂರ್ಣವು ಕಾಫಿ, ಟೀಯಿರಿಗೆ ಬದಲಾಗಿ ಉಪಯೋಗಿಸುವುದಕ್ಕೋಸ್ಕರವೇ ತಯಾರುಮಾಡಲ್ಪಟ್ಟಿರುತ್ತದೆ. ಕಾಫಿ, ಟೀಯರಿಗಳಲ್ಲಿರುವ ದುರ್ಗುಣಗಳು ಇದಕ್ಕಿಲ್ಲ,

ಕಾಫಿ ಪುಡಿಯನ್ನು ಯಾವ ಕ್ರಮದಲ್ಲಿ ಉಪಯೋಗಿಸುತ್ತೇವೆಯೋ ಆ ಕ್ರಮದಲ್ಲಿಯೇ ಇದನ್ನು ಉಪಯೋಗಿಸಿದರೆ ಬಹಳ ರುಚಿಕರವಾದ ಪಾನವಾಗುವುದು. ಜನಗಳು ಮೊದಲುಗೊಂಡು ವೃದ್ಧಾಪ್ಯದಲ್ಲಿರುವವರ ವರೆಗೆ ಎಲ್ಲಾ ವಯಸ್ಸಿನ ಸ್ತ್ರೀಪುರುಷರೂ ಉಪಯೋಗಿಸಬಹುದಾಗಿದೆ. ಜ್ವರ, ನಸ್ಯ ಬಸರು, ಹೆರಿಗೆ, ವಾಂತಿಭೇದಿ, ಈ ಮೊದಲಾದವುಗಳು ಸಂಭವಿಸಿರುವ ಕಾಲಗಳಲ್ಲಿಯೂ ಈ ರಕ್ಷಾಮೃತ ಚೂರ್ಣದ ಕಷಾಯವನ್ನು ಹಾಲನ್ನು ಬೆರಸಿಯಾಗಲಿ ಬೆರಸದೆಯಾಗಲಿ ಸದಾಯನಾನುಕೂಲವಾಗಿ ಸೇವಿಸಿದರೆ ಜನರನ್ನು ಸಮಸ್ತ ವ್ಯಾಧಿಗಳಿಂದಲೂ ಖಂಡಿತವಾಗಿ ಬಿಡುಗಡೆ ಮಾಡುವುದಲ್ಲದೆ, ಯಾವದೊಂದು ರೋಗವೂ ಕಾಲಿಡಾಕದಂತೆ ಕಾಪಾಡುವುದು. ಪಿತ್ತವಾಯುವು, ಗುಲ್ಮ ಉಬ್ಬಸವು ಕ್ಷಯವು, ಅಜೀರ್ಣವು, ಮಲಬದ್ಧತೆಯು, ತಲೆನೋವು ಈ ಮೊದಲಾದ ರೋಗಗಳು ನಿವಾರಣೆಯಾಗುತ್ತವೆ. ಪ್ರಾಣಾಧಾರವಾಗಿ ಇರುವಂಥಾ ರಕ್ತವನ್ನು ಶುದ್ಧಿಮಾಡಿ, ಧಾತುವನ್ನು ವೃದ್ಧಿಪಡಿಸಿ, ದೇಹಾರೋಗ್ಯವನ್ನು ಕೊಡುತ್ತದೆ. ಅಗ್ನಿಮಾಂದ್ಯ ಉಳ್ಳವರಿಗೂ, ಮಧುಮೂತ್ರ ಮತ್ತು ಅತಿಮೂತ್ರ ರೋಗಿಗಳಿಗೂ ವಿಶೇಷ ಅಪೂರ್ವವಾದಂಥಾ ಚೂರ್ಣವು ಇದನ್ನು ಬಿಟ್ಟರೆ ಬೇರೊಂದಿಲ್ಲ.

ಇದನ್ನು ಕ್ರಮಾನುಸಾರ ತಪ್ಪದೆ ಉಪಯೋಗಿಸುತ್ತಾ ಬಂದರೆ ಮಧುಮೂತ್ರ ರೋಗಿಗಳ ಶರೀರದಿಂದ ಹೊರಡುವ ಬೆವರಿನಲ್ಲಿ ರತಕ್ತ ಸಕ್ಕರೆಯನ್ನು ವಿಶೇಷವಾದ ಬೆವರನ್ನು ಕಡಿಮೆ ಮಾಡಿ, ಮೂತ್ರರೋಗದ ಬೇರನ್ನೇ ನಿರ್ಮೂಲ ಮಾಡುವುದು. ದೇಹದ ಉಷ್ಣವನ್ನು ಶಾಂತಿಮಾಡುವುದು, ಮೆದುಳನ್ನು ಬಲಪಡಿಸಿ ಜ್ಞಾಪಕಶಕ್ತಿಯನ್ನು ವೃದ್ಧಿಗೊಳಿಸುವುದು. ವಿದ್ಯಾರ್ಥಿಗಳು, ವಕೀಲರು, ಉದ್ಯೋಗಸ್ಥರು, ವಿರೋಧಕಾರಿಯಾದ ಗುಣವುಳ್ಳ ಕಾಫಿ, ಟೀಯಲೆಯನ್ನು ಖಂಡಿತವಾಗಿ ಬಿಟ್ಟು, ಈ ರಕ್ಷಾಮೃತ ಚೂರ್ಣವನ್ನೇ ಉಪಯೋಗಿಸುತ್ತಾ ಬಂದಲ್ಲಿ ಇದು ಅಪೂರ್ವವಸ್ತುವಾಗಿ ಪರಿಣಮಿಸುವುದು. ಇಪ್ಪತ್ತು ದಿನಗಳಿಗೆ ಸಾಕಾಗುವಷ್ಟು ಚೂರ್ಣವುಳ್ಳ ಡಬ್ಬಿ ೧ಕ್ಕೆ ಕ್ರಯ ೬ ಆಣೆ. ವಿ ಪಿ. ಛಾರ್ಜಿ ೩ ಆಣೆ ಹೆಚ್ಚಾಗುವುದು. ಮುಂಗಡ ೮ ಆಣೆ ಸ್ಟಾಂಪುಟ್ಟು ಬರೆದಲ್ಲಿ ಒಂದು ಡಬ್ಬಿ ಚೂರ್ಣ ಕಳುಹಿಸಲ್ಪಡುತ್ತೆ.

ಕಾಗದವನ್ನು ಇಂಗ್ಲಿಷ್ ಅಥವಾ ತಮಿಳಿನಲ್ಲಿ ಬರೆಯಿರಿ.

Apply to —**P. SUBBAROY,**
Porto Novo, South Arcot.

ವಿಳಾಸ:—ಪಿ. ಸುಬ್ಬರಾಯ್,
ಪೋರ್ಟನೋವೋ, ದಕ್ಷಿಣ ಆರ್ಕಾಟ್ ಜಿಲ್ಲಾ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

13—7—1906 ರಿಂದ 20—7—1906 ರ ವರೆಗೆ

ಸ್ಥಳ	ಪ್ಲೇಗ್ ಆದವರ ಸಂಖ್ಯೆ	ಸತ್ತವರ ಸಂಖ್ಯೆ	ಕಾಯಿಲೆ ಬಿದ್ದ ಇಲಿಗಳ ಸಂಖ್ಯೆ
ಬೆಂಗಳೂರು ಪಟ್ಟಣ	1	1	0
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟ್	18	11	24
ಮೈಸೂರು ,,	0	0	15
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಮಕೂರು ಡಿಸ್ಟ್ರಿಕ್ಟ್	0	0	8
ಹಾಸನ ,,	2	2	3
ಚಿತ್ರದುರ್ಗ ,,	0	0	0
ಕಡೂರ್ ,,	33	22	0
ಶಿವಮೊಗ್ಗಾ ,,	0	0	12
ಜುಮ್ಲಾ	54	36	62

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಶ್ರಾವಣ ಬಹುಳ ತ್ರಯೋದಶಿ ಗುರುವಾರದಿಂದ ಶ್ರಾವಣ ಬಹುಳ ... ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	...
2	ಗುರು (	ತ್ರಯೋದಶಿ	10 23	ಪುಷ್ಯ	0 56	[illegible]
3	ಶುಕ್ರ §	ಚತುರ್ದಶಿ	35 40	ಉತ್ತರಾ	55 3	[illegible]
4	ಶನಿ	ಪೌರ್ಣಮಿ	31 30	ಪ್ರ	52-55	[illegible]
5	ರವಿ	ಪಾಡ್ಯ	27 56	ದ	51-52	21
6	ಚಂದ್ರ	ಬಿದಿಗೆ	25 38	ಶ್ರ	51 50	22
7	ಕುಜ ●	ತದಿಗೆ	24-40	ಪೂರ್ವಾ	53 15	23
8	ಬುಧ	ಚೌತಿ	24 56	ಉತ್ತರಾ	56 50	24

(ಪ್ರದೋಷ, ಪದಿನಟ್ಟಾಂಪರಪ್ಪು § ವರಮಹಾಲಕ್ಷ್ಮೀವ್ರತ ಆದಿಪರ್ಯಾಪರಂ ಶ್ರಾವಣ ಶನಿವಾರ, ಹಯಗ್ರೀವಜಯಂತಿ, ಯಜುರುಪಾಕರ್ಮ ● ಮಂಗಳಗೌರೀವ್ರತಂ, ಸಂಕಷ್ಟ ಚತುರ್ಥಿ

ಪೇಟೆಯ ಧಾರಣೆ.

ದಿನಸಿ		ಮೈಸೂರು,	ಬೆಂಗಳೂರು
ಕಸ್ತೂರಿ ಅಕ್ಕಿ ಪಲ್ಲ ೧ಕ್ಕೆ	ರೂ	೧೬ ೦-೮	೧೩-೮
ಕೆಂಪು ಅಕ್ಕಿ ಅವಲ್		೧೨-೮ ೮	೧೨-೮
,, ದಪ್ಪ		೧೩-೧೨-೮	೧೨-೩
ಜೀರಾಸಣ್ಣ ಅಕ್ಕಿ		೧೩-೮-೦	೧೨-೮
ಸಣ್ಣಕ್ಕಿ ಅವಲ್		೧೫-೦-೦	೧೪-೧೨
,, ದಪ್ಪ		೧೬ ೮-೦	೧೪-೮
ತೊಗರಿ ಬೇಳೆ ಪಲ್ಲ ೧ಕ್ಕೆ		೧೨ ೬ ೦	೧೨ ೮
,, ದಪ್ಪ		೧೧ ೮ ೦	೧೧-೮
ಕೈಜೋಳ ಪಲ್ಲ ೧ಕ್ಕೆ		೮ ೬-೦	೭-೮
ರಾಗಿ		೩ ೭ ೦	೬ ೩
ಜೋಳ		೯-೬-೦	೮-೧೨
ಹಲಸಂದೆ ಪಲ್ಲ ೧ಕ್ಕೆ		೧೭ ೦-೦	೧೦ ೮
ಬಿಳೀ ಅವರೆ		೧೦-೦ ೦	೧೧-೮
ಹೆಸರು		೧೨ ೦ ೦	೧೨ ೮
ಉದ್ದು		೧೨ ೪-೦	೧೧-೧೨
ಕಡಲೆ		೧೭-೦-೦	೧೧ ೧೨
ಎಳ್ಳು ಸೆ ೧೨೫ ಕ್ಕೆ		೨೨-೮-೦	೨೧ ೦
ಹುರುಳಿ		೧೦ ೦-೦	೧೦-೦
ಹರಳು ೧೨೫ ಸೇರಿಗೆ		೧೫-೮-೦	೧೬-೪
ಸೀಗೆಕಾಯಿ ಮಣ ೧ಕ್ಕೆ		೨-೮-೦	೩-೦
ಮೆಣಸಿನಕಾಯಿ		೪-೦-೦	೩-೮
,, ದಪ್ಪ		೩-೪-೦	೩-೪
ಬೆಲ್ಲ ದೊಡ್ಡ ಅಚ್ಚು		೪-೪-೦	ಮ ೧-೧೪
ಒಬ್ಬೆಣ್ಣೆ ಮಣ ೧ಕ್ಕೆ		೬-೪-೦	೫-೬
ಹರಳೆಣ್ಣೆ ,,		೫-೮-೦	೫-೬
ಕೊತ್ತುಂಬರಿ ಪಲ್ಲ ೧ಕ್ಕೆ		೧೧-೦-೦	೧೦ ೦
ಉಪ್ಪು ,,		೬-೧೦-೦	೬-೪
ಹುಣಿಸೇ ಹಣ್ಣು		೦-೧೪-೦	೦-೧೪
,, ಹಳೇದು		೦-೮-೦	೦-೯
ತುಪ್ಪ ಮಣ ೧ಕ್ಕೆ		೧೩-೯-೦	೧೬ ೦
ಸೀಮೆಯೆಣ್ಣೆ ಪಟ್ಟಿ ೧ಕ್ಕೆ		೫-೪-೦	೩-೦
ತೆಂಗಿನಕಾಯಿ ೧೦೦ ಕ್ಕೆ		೪-೮-೦	೪-೧೦
ಅಡಿಕೆಕಾಯಿ ಮಣ ೧ಕ್ಕೆ		೧-೮-೦	೦-೧೨
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-೧೦
ಚಿನ (ಪೌನ್) ಕೆಂಪು		೧೫-೪-೦	೧೫-೬
,, ,, ಹಸಿರು		೧೫-೧೦-೦	೧೫-೯
,, ,, ಗಟ್ಟಿ ತೊಲ ೧ಕ್ಕೆ		೨೩-೧೨-೦	೨೪-೫
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೭೫-೦-೦	೭೦-೦

Printed and published by the Rev E W THOMPSON, M A, the Proprietor and Manager, Wesleyan Mission Press, Mysore 2/8/1906.

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೨೦ — ಮೈಸೂರು—ಸನ್ ೧೯೦೬ ನೇ ಇಸವಿ ಆಗಸ್ಟ್ ತಾರೀಖು ೯ ನೇ ಗುರುವಾರ. — ಸಂಚಿಕೆ ೧೦

ಈಗತಾನೇ ಕಟ್ಟು ಬಿಚ್ಚಿದೆ.

೩,೦೮೦ ಬಾಟ್ಲಿಗಳ ಕೇಶರಂಜನ ತೈಲ.

40-25

ನಮ್ಮಲ್ಲಿ ವ್ಯಾಪಾರ ಮಾಡತಕ್ಕವರಿಗೂ ಮತ್ತು ಇತರ ಸಮಸ್ತ ಜನಗಳಿಗೂ ಸುಲಭವಾಗಿ ಸಿಕ್ಕುವಂತೆ ಈ ತೈಲದ ಕ್ರಯವನ್ನು ಕಡಿಮೆ ಮಾಡಿರುತ್ತೇವೆ. ಬೆಂಗಳೂರಿನಲ್ಲಿ ಈ ಕ್ರಯಕ್ಕೆ ಇದುವರೆಗೆ ವಿಕರಿಮಾಡಿದ್ದಿಲ್ಲ. ಈಗದು ಕ್ರಯ ಮಾತ್ರ:—

ದೊಡ್ಡ ಬಾಟ್ಲಿ ಒಂದಕ್ಕೆ ರೂ. ೨—೧೨—೦

ಸಣ್ಣ ಬಾಟ್ಲಿ ಒಂದಕ್ಕೆ ರೂ. ೦—೧೧—೬

ಪೆಟ್ಟಿಗೆ ೧ ಡಜನ್ ಸಣ್ಣ ಬಾಟ್ಲಿಗೆ ರೂ. ೯—೪—೦

„ ೩ „ „ „ ರೂ. ೯—೦—೦

ಬೇಕಾದವರು ಮುಂಗಡ ಹಣ ಸಹಿತ ಬರೆಯಿರಿ.

ನಮ್ಮ ವಿಳಾಸ:—ಎಲ್. ಎ. ಕ್ರೋನವಾಲ್ ಕಂಪನಿ,

ಜನರಲ್ ಮತ್ತು ಕಮಿಷನ್ ಏಜಂಟರು,

ತಾಲ್ಲೂಕ್ ಕಚೇರಿ ರೋಡ್, ಬೆಂಗಳೂರು ಸಿಟಿ.

ಹೋ ಮೋ ಸಿ ಯಾ.

ತಲೆ ನೋವು

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣೆ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ವೇದನೆಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಸರ್ವಾಂಗವಾಯು, ಮೂಲವ್ಯಾಧಿ, ಉಳುಕು, ಗಾಯಗಳು, ನರ ಹೊರಳುವದು, ಉಳುಕು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟುಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಬಿಟ್ಟು ತಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೧—೯—೦, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ ಬಿಡುತ್ತಾರೆ. ರೂ. ೨—೯ ಆಣೆ ಬಾಟ್ಲು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೯ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

❖❖❖❖❖❖❖❖❖

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಚರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ಇರುತ್ತೆ, ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩, ಸೆಕೆಂಡು ಲೇನ್ ಬೀಚ್, ಮದ್ರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಈಗತಾನೆ ಹುರಿದದ್ದು.

ಪೈದಾಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

95-20

ವ್ಯಾಪಾರದ ಹೆಗ್ಗುರ್ತು

ಕಾಡಾನೆಯ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಹತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರಿ. 101-2



ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು. ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎನ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೯ ಆಣೆ, ೧ ರೂ., ೧—೯ ರೂ.; ೨೦ ಔ. ೨—೧೨ ಆ., ೧೧ ರೂ.; ಒನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❖❖❖❖❖❖❖❖❖

ಓ ಮು ಂ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಲ್ಲಿ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮಂ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಸ್ರಾದುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ . . . ರೂ. ೧—೧೪—೦

. . . „ „ ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-11

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬಿಕ್ಕಲಿಗೆ ಯೋಗ್ಯ ಕಮಿಷನ್ ದೊರೆಯುವದು. ಮಾತು ಲಿಂಗಾದಿ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ಮಾರದ, ಪೋಸ್ಟು ಮಾಂಡ್ವಿ, ಮುಂಬಯಿ

ಟಪಾಲ ಖರ್ಚ ಪುಕಟ! ಟಪಾಲ ಖರ್ಚ ಪುಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 8

ವಿಲಾಯಿತೀ ಮಸೀಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೀ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ. ೧೦೦ ಪುಡಿಕೆಗಳಿಗೆ ೧ ರೂಪಾಯಿ ಟಪಾಲ ಖರ್ಚ ಪುಕಟ

ವಿಳಾಸ:—ವಾಯ್. ಜಿ. ದಿಕ್ಷೀತ, ಸ್ಪೇನಸರ, ಪುಣೇ ಸಿಟಿ

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104 2

ಖಾಲಿ. ಯಾ ಸುಂದರ ಚಿತ್ರಗಳುಳ್ಳದ್ದ ನಮೂನೆ ೧೬ ಕಾರ್ಡುಗಳಿಗೆ ೧॥ (ಸ್ಟ್ಯಾಂಪು ಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ. ಸ್ವದೇಶಿ ಮೆಂಥಾಲ್ ಸೀಸೆಗೆ ೭ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಇಂಗ್ರೇಜಿಯನ್ ಟೋಪಿಗಳು, ಇವುಗಳಿಗೆ ಟಪಾಲುಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲೆ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರ ರಿಪ್ಲೈ ಸ್ಟಾಂಪು ಇಟ್ಟು ಬರೆದುಕೊಳ್ಳತಕ್ಕದ್ದು. Bhatt & Co, Poona city

---

ಮೇಲು! ಬಹಳ ಮೇಲು!! ಅಗ್ಗ! ಬಹು ಅಗ್ಗ!!

ಮೇಲಾದ ಸ್ವದೇಶಿ ಬ್ಲೂ ಬ್ಲಾಕ್ ಇಂಕ್

ಮೂರು ತೊಲಗಳುಳ್ಳ ಪ್ಯಾಕೆಟ್ಟು ೧ ಕ್ಕೆ ಕ್ರಯ—೦—೧—೦

ಭಾಂಗಿ ಭಾಡಿಗೆ ೦ ೩—೦

ಸ್ವದೇಶಿ ಇಂಕ್ ಪೌಡರ್, ಇದು ಇತರ ಬ್ಲೂ ಬ್ಲಾಕ್ ಇಂಕಿಗಳಿಗಿಂತ ಬಹಳ ಮೇಲಾದದ್ದು. ಇದು ಆಫೀಸುಗಳಲ್ಲೂ, ಬ್ಯಾಂಕುಗಳಲ್ಲೂ, ಸ್ಕೂಲುಗಳಲ್ಲೂ ಉಪಯೋಗಿಸತಕ್ಕದ್ದು. ಇಂಥಾ ಮೇಲಾದ ಪುಡಿಯು ಇಷ್ಟು ಸುಲಭ ಕ್ರಯಕ್ಕೆ ಎಲ್ಲಿಯೂ ದೊರೆಯಲಾರದು.

ಈ ಇಂಕಿನಿಂದ ಬರೆದ ಕಾಗದವನ್ನು ನೀರಿನಲ್ಲಿ ನೆನೆಸಿ ಬೆರಳಿನಿಂದ ಅಕ್ಷರಗಳನ್ನು ಉಜ್ಜಿದಾಗ್ಯೂ ಕಲಸಿಹೋಗದು. ಸ್ವಲ್ಪವನ್ನು ತರಿಸಿ ಪರೀಕ್ಷಿಸಿರಿ. ಇದನ್ನು ಉಪಯೋಗಿಸುವ ವಿಧವು ಡಬ್ಬಿಗೆ ಸುತ್ತಿರುವ ಕಾಗದದಲ್ಲಿ ಬರೆದಿರುತ್ತೆ.

☞ ನಾಲ್ಕು ಡಬ್ಬಿಗೆ ಕಮ್ಮಿಯಾಗಿ ದರಖಾಸ್ತು ಕಳಿಸಿದರೆ ಭಾಂಗಿ ಭಾಡಿಗೆ ಜಾಸ್ತಿಯಾಗುವದರಿಂದ ೪ ಡಬ್ಬಿಗಿಂತ ಕಮ್ಮಿಯಾಗಿ ದರಖಾಸ್ತು ಕಳುಹಿಸಕೂಡದು. ನಮ್ಮ ವಿಳಾಸ —

ವಿಳಾಸ 103-2

ಸ್ವದೇಶಿ ಇಂಕ್ ಡಿಪೊ, ಸಾಹುಕಾರ್ ಪೇಟೆ, ಮದ್ರಾಸ್.

ಪ್ರಸಿದ್ಧ ಪತ್ರಿಕೆ.

100 1

ಮೈಸೂರ್ ಸ್ಟಾರ್ ಆಫೀಸಿನಲ್ಲಿ ಪ್ರಕಟವಾಗಿರುವ ಸಟೀಕ ನೃಪ ತುಂಗವಿಜಯ, ಕ್ರಿಯಾಸಾರ, ಸಿದ್ಧಾಂತ ಶಿಖಾಮಣಿ, ಪ್ರಾಚೀನ ಮನೋವಿಲಾಸ, ಅನುಭವಸೂತ್ರ ಮತ್ತು ವೀರಪ್ರಶಂಸಾ, ನಂದಿವ್ರತ, ಶತಕತ್ರಯ, ಕೊಟ್ಟೂರು ಬಸವೇಶ್ವರ ಪುರಾಣ, ಕರ್ನಾಟಕ ಶಬ್ದ ಮಂಜರಿ, ಬಿಕಾವಲಿ, ಶಿವಪೂಜಾವಿಧಿ, ಸಟೀಕ ವಿವಾಹವಿಧಿ, ಪರಮಾರ್ಥ ಗಜಾಂಕುಶ ತಾರಾವಳಿ, ಮತ್ತು ದೀಕ್ಷಾವಿಧಿ ಪುಸ್ತಕಗಳು ಕಳುವಿನಿಂದ ಹೊರಗೆ ಮಾರಲ್ಪಡುತ್ತಿವೆ ಎಂದು ಕೇಳುತ್ತೇನೆ. ಅವುಕಾರಣ ಹಾಗೆ ಮಾರುವವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಡಲ್ಪಡುತ್ತದೆ ಯಲ್ಲದೆ ನಮ್ಮ ಸೈನ್ ಅಥವಾ ಆಫೀಸ್ ಮೊಹರು ಇಲ್ಲದಿರುವ ಪುಸ್ತಕ ಗಳನ್ನು ತೆಗೆದುಕೊಂಡವರು ಕಳುವಿನ ಛಾರ್ಜಿಗೆ ಗುರಿಯಾಗುವರು

ತಾ. ೯-೮-೧೯೦೬ ಮ್ಯಾನೇಜರ್, ಮೈಸೂರ್ ಸ್ಟಾರ್ ಆಫೀಸ್

ಇಂಡಿಯದ ದೊಡ್ಡ ನೋವುಹರ.

86 11

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರೆತಲೆನೋವು, ನರಗಳ ಇರಿತ, ತಲೆನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಬಾಣಗೆಮ್ಮು, ಗಂಟಲುಕುಣ್ಣು, ಕೀಲು ಕೆನ್ನು ಎದೆಗಳ ನೋವು, ಅಸ್ತ್ಮಾ, ಈ ಪ್ರಕಾರ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡ ಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ಒಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ಯೂ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾದ್ದನ್ನು ಸೀಸೆಯ ಜೊತೆಯಲ್ಲಿ ಅಚ್ಚಾದ ಪತ್ರಗಳನ್ನಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗವು ಬಿಟ್ಟು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಉತ್ತಮವಾದ ಈ ಔಷಧವನ್ನು ತರಿಸಿಕೊಳ್ಳಿ. ತರಿಸದೆ ಇದ್ದಲ್ಲಿ ಕೊನೆಗೆ ಬರುವ ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವೆ ಅಷ್ಟು ಅನುಭವವುಳ್ಳದ್ದು. ಕ್ರಯ — ೧ ಬಾಟ್ಲಿಗೆ ೧೨ ಆಣೆ, ೩ಕ್ಕೆ ೨ ರೂಪಾಯಿ; ೬ಕ್ಕೆ ರೂ. ೩|| ರೂಪಾಯಿ; ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ.

ನಮ್ಮ ವಿಳಾಸ.—ಎಫ್. ಏಬ್ರಿಯ ಅಂಡ್, ಸಿವೆಟ್ರಿ ರೋಡ್, ವೇಪೇರಿ, ಮದರಾಸ್

ಒಕ್ಕಲಿಗರ ಸಂಘ.

95 5

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿ ಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮಾ|| ರಾ|| ದೊಡ್ಡಣ್ಣಶೆಟ್ಟರವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ. ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳುಹಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಎಂ. ಸುಬ್ಬಯ್ಯ, ಬಿ. ಎ,

ಬೆಂಗಳೂರು. ಕೆ. ಹೆಚ್. ರಾಮಯ್ಯ, ಬಿ. ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ.—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋಗುವವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

95-6



ಕೆಳ ಹೊಟ್ಟೆಯ ನೋವು, ಬಿರೀ ಭೇದಿಯಾಗುವದು, ಆಮಶಂಕೆ, ಅತಿಭೇದಿ ಉಪದ್ರ, ಶೀತ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮ ಯೋಗ್ಯವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನು ನಿವಾರಿಸಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಜಾಗ್ರತೆಯಾಗಿ ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂ. ೪.

ಮಕ್ಕಳ ಹಿತಕಾರಿ

ಎಂದು

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೀಸೆಯ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನಮಾಡುತ್ತಾರೆ. 57-21

ಇದು ಕಾಹಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಆಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧ ವನ್ನೇ ಕೇಳಿಕೊಳ್ಳಿ.

ನೋಟೀಸ್

108-1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ —

(೧) ಮೈಸೂರು ಹಳೇ ಅಗ್ರಹಾರದಲ್ಲಿರುವ ಕಂಬಮಲ್ಲಣ್ಣನೆಂಬುವನು ಕಂಬಪುಟ್ಟಯ್ಯನವರ ಹೆಂಡತಿ ಗೌರಮ್ಮನಿಂದ ಆಸ್ತಿಯ ವಿಷಯದಲ್ಲಿ ಸನ್ ೧೯೦೬ ನೇ ಇಸವಿ ಜುಲೈ ತಾರೀಖು ೨೬ ನೆ ಮಂಗಳವಾರ ಮೈಸೂರು ವೃತ್ತಾಂತ ಪತ್ರಿಕೆಯ (೨ ನೇ) ಪೇಜಿನಲ್ಲಿ ಮೋಸದ ಇರಾದೆಯಿಂದ ತಗಲೂಫಿ ನೋಟೀಸನ್ನು ಪ್ರಕಟಪಡಿಸಿರುವದ್ದರಿಂದ ಇದಕ್ಕೆ ಜವಾಬಾಗಿ ನಾನು ಸಮಸ್ತರಿಗೂ ಈ ಮೂಲಕ ಶೃತಪಡಿಸುವುದೇನೆಂದರೆ,—

(೨) ಮೇಲ್ಕಂಡ ಕಂಬಮಲ್ಲಣ್ಣನೆಂಬುವನು ಮೃತಪಟ್ಟ ನನ್ನ ಗಂಡ ಪುಟ್ಟಯ್ಯನೆಂಬುವರಿಗೆ ದತ್ತುಮಗನೆಂತಲೂ, ನನ್ನ ವಿಶಿಷ್ಟ ಆಸ್ತಿಯನ್ನೂ ತನಗೆ ಖರಮಾಡಿಕೊಡಬೇಕೆಂತಲೂ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟು ೧೯೦೪ ನೇ ಇಸವಿ ೨೩೩ ನೇ ನಂಬರಿನಲ್ಲಿ ತನ್ನ ತಂದೆಯ ಮೂಲಕ ಒಂದು ವ್ಯಾಜ್ಯವನ್ನು ದಾಖಲ್ ಮಾಡಿದನು. ಮಕ್ಕಳಿಲ್ಲದ ವಿಧವೆಯಾದ ನನ್ನ ಆಸ್ತಿಯನ್ನು ಮೋಸದಿಂದ ಅಪಹರಿಸಬೇಕೆಂಬದಾಗಿ ಮಾಡಿದ ಈ ಪ್ರಯತ್ನವು ಕಂಬಮಲ್ಲಣ್ಣನಿಗೆ ಕೈಗೂಡಲಿಲ್ಲ. ಈ ವ್ಯಾಜ್ಯವು ಮೈಸೂರು ಚೀಫ್ ಕೋರ್ಟು ೧೯೦೪ ನೇ ಇಸವಿ ಅಪೀಲ್ ೨೩೩ ನೇ ನಂಬರಿನಲ್ಲಿ ಸದರಿ ಮಲ್ಲಣ್ಣನ ದತ್ತುವ ಅಸಿದ್ಧವಾದದ್ದೆಂತಲೂ, ಇವನು ನನಗೆ ಎರಡು ಕೋರ್ಟುಗಳ ಖರ್ಚುಗಳನ್ನು ಕೊಡಬೇಕೆಂತಲೂ ಘನವುಳ್ಳ ಚೀಫ್ ಕೋರ್ಟು ಜಡ್ಜಿಗಳು ಅಖೈರು ತೀರ್ಮಾನವನ್ನು ಮಾಡಿದರು. ಈ ರೀತಿ ಫೈಸಲಾದಾಗ್ಯೂ ಈ ಕಂಬಮಲ್ಲಣ್ಣನ ದುರಾಶೆಯು ಅಂತ್ಯವಾಗಲಿಲ್ಲ.

(೩) ನನ್ನ ಸವತಿಯಾದ ದೇವೀರಮ್ಮನು ಮೃತಪಟ್ಟ ಕೂಡಲೆ ಈ ಕಂಬಮಲ್ಲಣ್ಣನು ನನ್ನ ಸ್ವಾಧೀನದಲ್ಲಿರುವ ಚರಸ್ಥಿರ ಆಸ್ತಿಗಳು ತನಗೆ ದಾನವಾಗಿ ಬಂತೆಂದು ಏರ್ಪಾಡು ಮಾಡಿಕೊಂಡು ಮೈಸೂರು ಸಬ್‌ಜಡ್ಜಿಯವರ ಕೋರ್ಟು ೧೯೦೫ ನೇ ಇಸವಿ ಆ ಜೇನಸಲ್ ೨೦ ನೇ ನಂಬರಿನಲ್ಲಿ ಪುನಃ ವ್ಯಾಜ್ಯ ಮಾಡಿದನು. ಸಬ್ ಜಡ್ಜಿಯವರು ಈ ಮೊಕದ್ದಮೆಯನ್ನು ಚನ್ನಾಗಿ ದರ್ಯಾಪ್ತು ಮಾಡಿ ಕಂಬಮಲ್ಲಣ್ಣನ ವ್ಯಾಜ್ಯವನ್ನು ವಜಾ ಮಾಡಿ ಇವನು ನನಗೆ ಕೋರ್ಟು ಖರ್ಚನ್ನು ಕೊಡಬೇಕೆಂದು ಫೈಸಲ್ ಮಾಡಿದರು. ಇದರ ಮೇಲೆ ಅಪೀಲ್ ಮಾಡುವದಕ್ಕೆ ಇವನಿಗೆ ಯಾವ ಮುಖವೂ ಇಲ್ಲ ಸುಮ್ಮನೆ ಇದ್ದು ಈಗ ನನ್ನ ಆಸ್ತಿಗೆ ಪುನಃ ಆಶೆಪಟ್ಟು ನೋಟೀಸ್ ಛಾಪಿಸಿ ಮಾಡಿದನು. ಇದರಿಂದ ಇವನಿಗೆ ಏನೂ ಪ್ರಯೋಜನ ಗಳಾರದು

(೪) ಸದರಿ ಕಂಬಮಲ್ಲಣ್ಣನು ದುರಾಗ್ರಹದಿಂದ ಮಾಡಿದ ಮೇಲ್ಕಂಡ ವ್ಯಾಜ್ಯಗಳನ್ನು ನಾನು ಗೆಲ್ಲುವದರಲ್ಲಿ ನನ್ನ ಆಸ್ತಿಯಲ್ಲಾ ಖರ್ಚಾದದ್ದಲ್ಲದೆ ನನಗೆ ಸಾಲವೂ ಸಹಾ ಉಂಟಾಗಿ ತುಂಬಾ ಬಳಲಿದೆನು. ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ಈ ಸಾಲಗಳನ್ನು ನಿವೃತ್ತಿ ಮಾಡಿಕೊಳ್ಳುವದಕ್ಕೂ ಮತ್ತು ನನ್ನ ಗೃಹಕೃತ್ಯಕ್ಕೂ ನ್ಯಾಯವಾಗಿ ನಾನು ಕೆಲವು ಆಸ್ತಿಗಳನ್ನು ವಿನಿಯೋಗಿಸಿ ಇರುತ್ತೇನೆ. ನಾನು ನ್ಯಾಯವಾಗಿ ಮಾಡುವ ಯಾವ ಕೆಲಸಕ್ಕೂ ಯಾರೇ ಆಗಲಿ ಅಡ್ಡಿ ಮಾಡಲು ಶಕ್ತಿಯಿಲ್ಲ. ಈ ಕಂಬಮಲ್ಲಣ್ಣನು ತನ್ನ ವ್ಯಾಜ್ಯಗಳನ್ನೆಲ್ಲಾ ಕೋರ್ಟಿನಲ್ಲಿ ಕಳೆದುಕೊಂಡದ್ದರಿಂದಲೂ, ಮತ್ತು ಸ ... ಮೇಲಣ ದ್ವೇಷದಿಂದಲೂ ಅನೇಕ ಸುಳ್ಳು ಸಂಗತಿಗಳನ್ನು ಸಮಾಚಾರ ಪತ್ರಿಕೆಯಲ್ಲಿ ನೋಟೀಸನ್ನು ಛಾಪಿಸಿರುತ್ತಾನೆ. ಇದನ್ನು ಯಾರೂ ನಂಬಕೂಡದು. ಮತ್ತು ಇವನ ನೋಟೀಸು ಗಮನಿಸತಕ್ಕದ್ದಲ್ಲ.

ಕಂಬಪುಟ್ಟಯ್ಯನ ಹೆಂಡತಿ ಗೌರಮ್ಮ

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಆಗಸ್ಟ್ ತಾ|| ೯ ನೇ ಗುರುವಾರ.

ಸ್ವಾಮಿ ಅಭೇದಾನಂದರವರು.

ಬೆಂಗಳೂರಿನಲ್ಲಿ ನಡೆವಂತೆಯೇ ನೆನ್ನೆ ಬೆಳಿಗ್ಗೆ ಮೈಸೂರು ... ಣದ ಪ್ರಜೆಗಳ ಮುಖಂಡರೂ ವಿದ್ಯಾರ್ಥಿಗಳೂ ಅಭೇದಾನಂದಸ್ವಾಮಿ ಗಳನ್ನು ಇಲ್ಲಿನ ರೈಲ್ ಸ್ಟೇಷನ್ನಲ್ಲಿ ಆದರಪೂರ್ವಕವಾಗಿ ಎದುರುಗೊಂಡು ಪಟ್ಟಣಕ್ಕೆ ಕರೆದುಕೊಂಡು ಬಂದಿದ್ದಾರೆ. ಈ ಸ್ವಾಮಿಗಳು ಯಾರು, ಇವರು ಮಾಡಿರುವ ಕೆಲಸವೇನು ಎಂದು ವಾಚಕರು ಕೇ ... ಬಹುದು. ಸ್ವಾಮಿ ಅಭೇದಾನಂದರವರು ಬಂಗಾಳಿ ಶ್ರೀಮಯವರು. ಸ್ವಾಮಿವಿವೇಕಾನಂದರವರ ಶಿಷ್ಯವರ್ಗಕ್ಕೆ ಸೇರಿದ್ದಾರೆ. ಹತ್ತು ವರ್ಷಗಳಿಂದ ವಿಲಾಯತಿಯಲ್ಲೂ ವಿಶೇಷವಾಗಿ ಅಮೇರಿಕದಲ್ಲೂ ಇದ್ದು ಬಂದಿರುವರು. ಅಮೇರಿಕದವರಿಗೆ ವೇದಾಂತ ಮತವನ್ನು ಬೋಧಿಸಿ ಅಲ್ಲಿನ ಹಲವು ನಗರಗಳಲ್ಲಿ ಸಂಘಗಳನ್ನು ಸ್ಥಾಪಿಸಿರುವುದಾಗಿಯೂ ವೇದಾಂತವನ್ನೂ ಯೋಗಾಭ್ಯಾಸವನ್ನೂ ಅಲ್ಲಿನವರು ಅಭ್ಯಾಸಮಾಡಿ ಕಲಿಯುತ್ತಿರುವುದಾಗಿಯೂ ಹೇಳುತ್ತಾರೆ. ಇದರಿಂದ ಇವರು ಅಮೇರಿಕದವರಿಗೆ ವೇದಾಂತವನ್ನು ಕಲಿಸಿಕೊಡುವ ಹಿಂದೂ ಬೋಧಕರಾಗಿರುವರು. ಇವರು ಬೆಂಗಳೂರಿನಲ್ಲಿ ಪಶ್ಚಿಮ ರಾಜ್ಯಗಳಿಗೆ ೧೦೦ ಮಂದಿ ಹಿಂದೂಮತ ಬೋಧಕರು ಬೇಕಾಗಿದ್ದಾರೆಂದು ಹೇಳಿದರು.

ಅನೇಕ ಹಿಂದುಗಳು ಕ್ರೈಸ್ತಮತ ಬೋಧಕರ ಸಂಗಡ—ಪಾಶ್ಚಾತ್ಯರ ಮರ್ಯಾದವರಿಗೆಲ್ಲಾ ಕ್ರೈಸ್ತಮತವು ಒಳ್ಳೇದಾಗಿದೆ. ನಮಗೆ ಹಿಂದೂಮತ ಒಳ್ಳೇದಾಗಿದೆ. ಬರ್ಮಾದವರಿಗೂ ಚೀನೆಯವರಿಗೂ ಬೌದ್ಧಮತವೇ ಒಳ್ಳೇದು. ಈ ರೀತಿಯಾಗಿ ಪ್ರತಿ ಒಂದು ಜನಾಂಗಕ್ಕೂ ಅನುಕೂಲವಾದ ಒಂದೊಂದು ಮತ ಇರುತ್ತದೆ ಎಂದು ಹೇಳುತ್ತಾರೆ. ಇಂಥಾ ಜನರಿಗೆ ಪ್ರತಿಯಾಗಿ ನಾವು ಎರಡೇ ಎರಡು ವಿಷಯಗಳನ್ನು ತಿಳಿಸಲಪೇಕ್ಷಿಸುವೆವು (೧) ಸಕಲರಿಗೂ ಸತ್ಯವಾದ ಮತವು ಒಂದೇ ಒಂದಾಗಿರಬೇಕು. ಈ ಪ್ರಪಂಚವು ಎಲ್ಲಾ ಕಡೆಗಳಲ್ಲೂ ಸಮಸ್ತರಿಗೂ ಗೋಳಾಕಾರವಾಗಿರಬೇಕು, ಇಲ್ಲವೇ ಬೇರೆಯಾಗಿರಬೇಕು. ಯಾಕೆಂದರೆ ಭೂಮಿಯು ಹಿಂದುಸ್ಥಾನದವರಿಗೆ ಗುಂಡಾಗಿಯೂ ಇಂಗ್ಲೀಷರಿಗೆ ತಟ್ಟೆಯ ಹಾಗೂ ಇದೆ ಎಂದು ಹೇಳಿ ಸಾಧಿಸುವುದು ಅಸಾಧ್ಯ. ಹಾಗೆಯೇ ದೇವರ ವಿಷಯವೂ ಜೀವಾತ್ಮದ ವಿಷಯವೂ ಸಕಲ ದೇಶಗಳಲ್ಲೂ ಸಮಸ್ತ ಜನಾಂಗಗಳಿಗೂ ಒಂದೇ ಸಿದ್ಧಾಂತವಾಗಿರಬೇಕು. (೨) ಯಾರು ತಮ್ಮ ಮತವೇ ಯಥಾರ್ಥವಾದ ಮತವೆಂದು ನಂಬುತ್ತಾರೋ ಅಂಥವರು ಅದನ್ನು ಪ್ರಚಾರ ಮಾಡುವುದು ಅವರ ಕರ್ತವ್ಯವಾಗಿರುತ್ತದೆ. ಸತ್ಯವೆಂಬುವುದು ಒಂದೇ ಜಾತಿಗಾಗಲಿ ಒಂದೇ ಜನಾಂಗಕ್ಕಾಗಲಿ ಸೇರತಕ್ಕದ್ದಲ್ಲ. ಬಿಸಲು ಗಾಳಿ ಹ್ಯಾಗೋ ಹಾಗೆ ಸತ್ಯವೂ ಮಾನುಷವರ್ಗದವರೆಲ್ಲಾ ಅನುಭೋಗಿಸತಕ್ಕದ್ದಾಗಿರುವುದು.

ಶ್ಲೋ|| ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಂ|
ಉದಾರಚರಿತಾನಾಂ ತು ವಸುಧೈವ ಕುಟುಂಬಕಂ||

ಅಂದರೆ, ಅಲ್ಪಸಂಖ್ಯರು ಅದು ಎಷ್ಟೋ (ಅಥವಾ ಎರಡನೋ) ಬಿಡನ್ನು ಮಾತ್ರ ಕರ್ತೃ ಯೋಚಿಸುವರು ಶ್ರೇಷ್ಠಪುರುಷನಿಗೆ ಪಂಚವೆಲ್ಲಾ ಒಂದೇ ಸಲ್ಲಕ್ಷಣವಾಗಿರುವುದು

ಜ್ಞಾನವನ್ನು ಪಡೆದು ಪ್ರಚಾರವಾದ ಸಿದ್ಧಾಂತವನ್ನು ಪುಸ್ತಕ ಪರಿಷ್ಕಾರವಾಗಿ ತಿಳಿಸಿದ್ದಾನೆ ಅತನು ತನ್ನ ಶಿಷ್ಯರಿಗೆ — ಈ ಪ್ರಪಂಚವನ್ನೆಲ್ಲಾ ಸುತ್ತಿ ಸುವಾರ್ತೆಯನ್ನು ಸಾರಬೇಕೆಂದು ಹೇಳಿದನು ಮತವಿಷಯವೆಲ್ಲಾ ತಮ್ಮ ಸ್ವಾಧೀನದಲ್ಲಿರಬೇಕೆಂದು ಹೇಳಿಕೊಂಡು ಸಾಮಾನ್ಯಜನರನ್ನು ತುಚ್ಛವಾಗಿ ಕಾಣುವ ಶಾಸ್ತ್ರಿಗಳನ್ನು ಆತನು ಖಂಡಿಸಿದನು.

ಸ್ವಾಮಿ ಅಭೇದಾನಂದರವರು ಹೇಳುವಂತೆ ವೇದಾಂತಮತವೆಂಬುದೊಂದೇ ಸತ್ಯವಾದ ಮತವೆಂದು ನಾವು ನಂಬುವುದಿಲ್ಲ ಆದರೆ ಅವರು ಆ ರೀತಿ ನಂಬುವ ಪಕ್ಷದಲ್ಲಿ ಆ ಮತವನ್ನು ಪ್ರಚಾರಮಾಡುವುದೇ ಅವರ ಧರ್ಮವೆಂದು ಒಪ್ಪಿಕೊಳ್ಳುತ್ತೇವೆ ಈ ಸ್ವಾಮಿಗಳಿಗೆ ಸಂಬಂಧಿಸಿದ ಬಯಲಿದ್ದನ್ನು ನೋಡುವಾಗ್ಗೆ ಹಿಂದೂಗಳೆಲ್ಲಾ ಮತವೆಂಬುದು ಒಂದೇ ಎಂದು ಒಪ್ಪಿ, ತಾವು ನಂಬುವುದನ್ನು ಪ್ರಚಾರಮಾಡುವುದೇ ತಮ್ಮ ಕರ್ತವ್ಯವೆಂದು ಪರಿಷ್ಕಾರವಾಗಿ ತಿಳಿದಿರುತ್ತಾರೆಂದು ನಿರೀಕ್ಷಿಸುವೆವು ಈ ರಾಷ್ಟ್ರದಲ್ಲಿ ದೇವರ ವಿಷಯವನ್ನು ಎತ್ತಿ ಹೇಳಿದರೆ— ನನಗೇನು ಗೊತ್ತಿದೆ? ಏನೂ ತಿಳಿಯದು" ಎಂದು ಹೇಳುವವರು ಎಷ್ಟು ಕೋಟಿಜನರಿದ್ದಾರೆ! ವೇದಾಂತಿಗಳು ಸತ್ಯವಂತರಾಗಿದ್ದರೆ ಅವರು ಪಾಶ್ಚಾತ್ಯರಿಗೆ ಬೋಧನೆ ಮಾಡುವುದಲ್ಲದೆ ಹಿಂದುಸ್ಥಾನದ ಪ್ರಜಾಕೋಟಿಗಳ ಅಜ್ಞಾನವನ್ನು ನಿವಾರಣೆಮಾಡುವವರಾಗಲಿ

ಒಳದೇಶದ ವೃತ್ತಾಂತಗಳು.

ನೆಲಮಂಗಲದ ಅಮಲ್ದಾರರಾಗಿದ್ದು ಆರು ವರ್ಷಗಳ ಕೆಳಗೆ ವರ್ಷ ಪಡೆದ ಮ॥ ಸಿರಾಜ್ ಮೊಹಿದೀನ್ ಅಲಿ ಸಾಹೇಬ್ ಯವರು ಕಳೆದ ೧ ನೆ ತಾ. ತುಂಕೂರಿನಲ್ಲಿ ಕಾಲವಾದರೆಂದು ತಿಳಿದುಬಂದಿದೆ

❦❦❦❦

ಸರ್ಕಾರದವರು ರಾಜಧಾನಿಯ ಪೋಲೀಸ್ ಇನ್‌ಸ್ಪೆಕ್ಟರ್ ಮ॥ ...ಷಿಷ್ ಯವರನ್ನು ಕೋಲಾರ್ ಚಿನ್ನದ ಗಣಿಗೂ, ಅಲ್ಲಿನ ಇನ್‌ಸ್ಪೆಕ್ಟರ್ ಮ॥ ಎಲ್ ಒಸ್ಟ್ರಾರ್ಟರ್ಯವರನ್ನು ರಾಜಧಾನಿಗೂ ವರ್ಗಮಾಡಿದ್ದಾರೆಂದು ಪ್ರಕಟವಾಗಿದೆ

❦❦❦❦

ಶ್ರೀಮನ್ ಯುವರಾಜರವರು ಕಳೆದ ಶುಕ್ರವಾರ ಬೆಂಗಳೂರಿಂದ ಮೋಟಾರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿ, ಅರಮನೆಯಲ್ಲಿ ಫಲಾಹಾರವನ್ನು ಸ್ವೀಕರಿಸಿಕೊಂಡು, ಮೊನ್ನೆ ಸೋಮವಾರ ವಾಪಸು ಬೆಂಗಳೂರಿಗೆ ಚಿತ್ತೈಸಿದರು.

❦❦❦❦

ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿಯವರು ನಾಳೆ ಸೋಮವಾರ ಬೆಳಿಗ್ಗೆ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿ, ಶ್ರೀಮನ್ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ, ಮರುದಿನ ಬೆಳಿಗ್ಗೆ ಮದ್ರಾಸಿಗೆ ತೆರಳುವವರಾಗಿದ್ದಾರೆ

❦❦❦❦

ಮೈಸೂರು ಚೀಫ್ ಕೋರ್ಟಿನ ಹೊಸ ಛೀಫ್ ಜಡ್ಜರಾದ ಮ॥ ...ರ್ ಯವರು ನೆನ್ನೆ ದಿನ ಕೆಲಸದ ಛಾರ್ಜನ್ನು ವಹಿಸಿಕೊಂಡರು ಶ್ರೀಮನ್ಮಹಾರಾಜರವರ ಸರ್ಕಾರದಲ್ಲಿ ಇವರು ಮಾಡಿದ ಸರ್ವಿಸಿಗಾಗಿ ಅವರಿಗೆ ವರುಷಕ್ಕೆ ೧೯,೦೦೦ ರೂಪಾಯಿ ಪೆನ್ಷನ್ ಸಲ್ಲುವುದು

❦❦❦❦

ಬ್ರಿಟಿಷ್ ರೆಸಿಡೆಂಟರೂ ಕರ್ನಲ್ ಜೋನ್ಸ್ ಯವರೂ ಮೊನ್ನೆ ಸೋಮವಾರ ಮೋಟಾರ್ ಗಾಡಿಯಲ್ಲಿ ಬೆಂಗಳೂರಿಂದ ಕುಣಿಗಲಿಗೆ ಹೋಗಿ ಅಲ್ಲಿನ ಕುದುರೆಗಳ ಫಾರಂ ಅಜಮಾಯಿಷಿ ಮಾಡಿಕೊಂಡು, ಸಾಯಂಕಾಲವೇ ವಾಪಸು ಬೆಂಗಳೂರಿಗೆ ಬಂದರು

❦❦❦❦

ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಹಾಜರಾಗತಕ್ಕ ಉಮೇದುವಾರರ ಕಾಯಪುಷ್ಟಿ ಆರೋಗ್ಯಸ್ಥಿತಿಗಳನ್ನು ಪರೀಕ್ಷೆ ಮಾಡುವುದಕ್ಕೆ ಗವರ್ನಮೆಂಟಿನವರು ಡಾಕ್ಟರ್ ಆರುಮುಗಂ ಮೊದಲಿಯಾರ್, ಡಾಕ್ಟರ್ ರಾಮಸ್ವಾಮಿಅಯ್ಯಂಗಾರ್, ಮ॥ ಅಬ್ಬಾಯಿನಾಯುಡು ಎಂಬೀ ವೈದ್ಯರನ್ನು ನೇಮಕಮಾಡಿದ್ದಾರೆ

❦❦❦❦

ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರಾದ ಮ॥ ಎ ರಂಗಸ್ವಾಮಿಅಯ್ಯಂಗಾರ್ಯ ಅಣ್ಣಂದಿರ ಕುಮಾರ ಮ॥ ಆರ್ ಸೀತಾರಾಮಯ್ಯನವರು ಮದರಾಸಿನಿಂದ ಮೊನ್ನೆ ಮಂಗಳವಾರ ವಿಲಾಯಿತಿಗೆ ಪ್ರಯಾಣಮಾಡಿದನು ಅಲ್ಲಿರುವ ಕೆಲವು ದೇಶೀಯ ದೊಡ್ಡ ಮನುಷ್ಯರು ಹಣ ಹಾಕಿ ಆತನ ಖರ್ಚನ್ನೆಲ್ಲಾ ವಹಿಸಿಕೊಂಡಿದ್ದಾರೆ ವಿಲಾಯಿತಿಯಲ್ಲಿ ನಡಿಯುವ ಹಿಂದುಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಆತನು ತೇರ್ಗಡೆಹೊಂದಿ ಬರಬೇಕೆಂಬುದೇ ಅವರ ಉದ್ದೇಶ

❦❦❦❦

ಒಬ್ಬ ಬಾತ್ಮಿದಾರರು ಬರೆಯುವದು —ಬೆಂಗಳೂರು ತುಳಸೀತೋಟದ ...ಜನೇಯಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿರುವ ಛತ್ರದಲ್ಲಿ ...ಗ ೧—೨ ತಿಂಗಳಿಂದ ಪುರಾಣ ನಡಿಯುತ್ತಾ ಇದ್ದು ಕಳೆದ ಗುರುವಾರ ೩೦೦-೪೦೦ ಜನರಿಗೆ ಸಂತರ್ಪಣೆ ವಿಜೃಂಭಣೆಯಿಂದ ನಡಿಸಲ್ಪಟ್ಟಿತು ಇದಕ್ಕೆ ಮುಖಂಡರಾಗಿ ಇದ್ದ ಸಾಹುಕಾರ್ ಮರಿಯಪ್ಪನವರು ಪುರಾಣ ಹೇಳುತ್ತಿದ್ದ ಹೊಳವನಹಳ್ಳಿ ವಿದ್ವಾನ್ ಆಸೂರು ಶೇಷಾಚಾರ್ಯರಿಗೆ ನೂರು ರೂಪಾಯಿ ನಗದು, ಶಾಲು ಧೋತ್ರ, ವಗೈರೆ ಸಾಮಾನುಗಳಿಂದ ಬಹುಮಾನಮಾಡಿದರು ಎಂಬುದು

❦❦❦❦

ಇನ್ನು ಮೇಲೆ ಅಮಲ್ದಾರರೂ ಡೆಪ್ಯುಟಿ ಅಮಲ್ದಾರರೂ ತಮ್ಮ ಹೆಡ್ ಕ್ವಾರ್ಟರುಗಳಿಂದ ಸರ್ಕಾರಿ ಕೆಲಸದ ನಿಮಿತ್ತ ಐದು ಮೈಲಿಗೆ ಮೇಲೆ ತಂಗಿದ ಪಕ್ಷದಲ್ಲಿ ಪ್ರತಿ ದಿನವೂ ಅವರಿಗೆ ಒಂದೊಂದು ರೂಪಾಯಿ ಭತ್ಯ ಕೊಡುತ್ತೇವೆಂದು ಸರ್ಕಾರದವರು ಹುಕುಂಕೊಟ್ಟಿದ್ದಾರೆ ಇದರಿಂದ ಈ ಅಧಿಕಾರಿಗಳು ಗ್ರಾಮಾಂತರಗಳಲ್ಲಿ ಹೆಚ್ಚಾಗಿ ಸಂಚಾರಮಾಡಿ, ಪ್ರಜೆಗಳ ಕಷ್ಟ ಅನಾನುಕೂಲಗಳನ್ನು ಬೇಗ ನಿವಾರಣೆ ಮಾಡುವುದಕ್ಕೂ ಸರಬರಾಯಿ ವಿಷಯದಲ್ಲಿ ರೈತಪ್ರಜೆಗಳಿಗಾಗುತ್ತಿದ್ದ ಕಷ್ಟನಷ್ಟಗಳು ತಪ್ಪುವುದಕ್ಕೂ ಬಹಳ ಸಹಾಯವಾಯಿತೆಂದು ಸಂತೋಷಪಡತಕ್ಕದ್ದಾಗಿದೆ

❦❦❦❦

ಸ್ವಾಮಿ ಅಭೇದಾನಂದರವರು ಇಬ್ಬರು ಶಿಷ್ಯರೊಡನೆ ನೆನ್ನೆ ಬೆಳಿಗ್ಗೆ ರಾಜಧಾನಿಗೆ ದಯಮಾಡಿದರು ಮ॥ ಕಾಂತರಾಜೇ ಅರಸಿನವರೂ, ಮ್ಯುನಿಸಿಪಲ್ ಕಮಿಷನರುಗಳೂ, ಅರಮನೆ ಆಫೀಸರು, ಇನ್ನೂ ಕೆಲವು ಅಧಿಕಾರಿಗಳೂ ವೈದಿಕರೂ ನೂರಾರು ಮಂದಿ ವಿದ್ಯಾರ್ಥಿಗಳೂ ರೈಲ್ ಸ್ಟೇಷನ್ನಲ್ಲಿ ಕಾದಿದ್ದು, ಸ್ವಾಮಿಯವರನ್ನು ಎದುರುಗೊಂಡರು. ಮ॥ ಕಾಂತರಾಜೇ ಅರಸಿನವರು ಗಾಡಿಯೊಳಕ್ಕೆ ಹೋಗಿ, ಸ್ವಾಮಿಗಳಿಗೂ ಅವರ ಶಿಷ್ಯರಿಗೂ ಹಾರಾಹಾರ ತುರಾಯಿಗಳನ್ನೊಪ್ಪಿಸಿ ಸುಖಾಗಮನವನ್ನು ಬಯಸಿ, ಯೋಗಕ್ಷೇಮವನ್ನು ವಿಚಾರಿಸಿದರು ತರುವಾಯ ಸ್ವಾಮಿಗಳು ಗಾಡಿಯಿಂದಿಳಿದು ಮುಂದಕ್ಕೆ ಬರುವಲ್ಲಿ ಎಲ್ಲರೂ ಅವರಿಗೆ ವಂದನೆ ಮಾಡಿದರು ಮ॥ ಕಾಂತರಾಜೇ ಅರಸಿನವರು ಸ್ವಾಮಿಗಳನ್ನೂ ಅವರ ಶಿಷ್ಯರನ್ನೂ ತಮ್ಮ ಸಾರೋಟಿನಲ್ಲಿ ಕೂರಿಸಿಕೊಂಡು ಗೆಸ್ಟ್ಸ್ ಕ್ವಾರ್ಟರ್ಸ್ ಎಂಬ ಬಿಡಾರಕ್ಕೆ ಕರೆದುತಂದು ಇಳಿಸಿ, ಒಂದು ಗಂಟೆಯ ತನಕ ಅಲ್ಲಿ ಅವರ ಸಂಗಡ ಮಾತನಾಡುತ್ತಿದ್ದರು ಬಹು ಮಂದಿ ದೊಡ್ಡ ಮನುಷ್ಯರೂ ಸ್ಕೂಲ್ ಹುಡುಗರೂ ಸೇರಿ ಸ್ವಾಮಿಗಳನ್ನು ಸನ್ಮಾನ ಮಾಡಿದರು. ಮಧ್ಯಾಹ್ನ ಸ್ವಾಮಿಗಳು ಅರಮನೆಗೆ ದಯಮಾಡಿ, ಮಹಾರಾಜರವರ ಭೇಟಿ ತೆಗೆದುಕೊಂಡು, ತರುವಾಯ ಸಾಯಂಕಾಲ ೬ ಗಂಟೆಗೆ ಟೌನ್ ಹಾಲ್ ಬಂಗಲೆಗೆ ಬಂದು ಪುರನಿವಾಸಿಗಳ ವಿಜ್ಞಾಪನೆಯನ್ನು ಸ್ವೀಕರಿಸಿ ಉಪನ್ಯಾಸ ಮಾಡಿದರು

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಹೊದಿಕೆಯ ಮೇಲೂ "ಬಹುಮಾನಕ್ಕೆ ಮೀಸಲು" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧಕಾಲಮಿಗಿಂತ ಕಡಮೆಯಾಗಬಾರದು ಒಂದು ಕಾಲಮಿಗಿಂತ ಹೆಚ್ಚಾಗಬಾರದು (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರ ಪ್ರಕಟಿಸುವೆವಲ್ಲದೆ, ಹಣವನ್ನು ಮನಿಆರ್ಡರ್ ಮೂಲಕ ರವಾನಿಸುವೆವು (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಇದನ್ನು ಕಳುಹಿಸಿದ ಮ॥ ಸಿ ವಿ. ರಙ್ಗಯ್ಯ, ಫೋಟೋಗ್ರಾಫರ್, ಚಿಕ್ಕಬಳ್ಳಾಪುರ, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದ್ದೇವೆ]

ಚಿಕ್ಕಬಳ್ಳಾಪುರದಲ್ಲಿ ನಡೆದ ಅನಾಹುತ.

ಇದೇ ತಿಂಗಳು ೨ ನೇ ತಾ ಗುರುವಾರ ಮಧ್ಯಾಹ್ನ ಸುಮಾರು ೩ ಗಂಟೆ ಸಮಯದಲ್ಲಿ ನಮ್ಮ ತೋಟವನ್ನು ನೋಡಿಕೊಂಡು ಬರುವ ಉದ್ದಿಶ್ಯ ಹೋಗುತ್ತಿರುವಾಗ ಸಮೀಪದಲ್ಲಿದ್ದ ಒಂದು ಭಾವಿಯ ಬಳಿ ಕೆಲವು ಜನರು ಸೇರಿ ಗದ್ದಲ ಮಾಡುತ್ತಿದ್ದದ್ದನ್ನು ಕಂಡು, ಅದೇನೆಂದು ವಿಚಾರಿಸಲಾಗಿ ಅವರಿಂದ ತಿಳಿದುಬಂದದ್ದೇನೆಂದರೆ—ಇದೇ ಊರಲ್ಲಿರುವ ಕುರುಬರ ಲಿಂಗಪ್ಪನ ಮಗಳು ಸುಮಾರು ೧೨ ವರುಷ ವಯಸ್ಸುಳ್ಳ ಮುನಿಕೆಂಪಕ್ಕ ಎಂಬ ಹುಡುಗಿಯು ತೋಟದಲ್ಲಿ ಆಕಳನ್ನು ಮೇಯಿಸುತ್ತಿರುವಾಗ ಆಕಳು ವಿಶೇಷವಾಗಿ ಸುತ್ತುಮುತ್ತಲು ಹೋಗುತ್ತಿದ್ದುದನ್ನು ಕಂಡು ಒಂದೇ ಕಡೆ ನಿಂತು ಮೇಯಲೆಂಬ ಉದ್ದೇಶ್ಯದಿಂದ ಆಕಳಿಗೆ ಕಟ್ಟಿದ್ದ ಹಗ್ಗದ ಕೊನೆಯ ಭಾಗವನ್ನು ತನ್ನ ನಡುವಿಗೆ ಭದ್ರವಾಗಿ ಕಟ್ಟಿಕೊಂಡು ಮೇಯಿಸುತ್ತಿರಲು ಅಕಸ್ಮಾತ್ತಾಗಿ ಹಸುವು ಬೆದರಿ ನೆಗೆಯುತ್ತ ಹಿಂದಹಿಂದಕ್ಕೆ ಹೋಗುತ್ತ ಸಮೀಪದಲ್ಲಿದ್ದ ಭಾವಿಯಲ್ಲಿ ತನ್ನ ಹಿಂದಿನ ಕಾಲುಗಳನ್ನು ಇಟ್ಟಿತು ಅದನ್ನು ಹುಡುಗಿಯು ಕಂಡು ಹಸುವು ಭಾವಿಯಲ್ಲಿ ಬಿದ್ದೀತೆಂಬ ಭಯದಿಂದ ಹಗ್ಗವನ್ನು ಗಟ್ಟಿಯಾಗಿ ಹಿಡಿದು ಎಳೆಯುತ್ತಿರುವಾಗ ಆಕಳು ಮೇಲಕ್ಕೆ ಕಾಲುಗಳನ್ನು ತೆಗೆಯಲು ಶಕ್ತಿಯಿಲ್ಲದೆ ಭಾವಿಯಲ್ಲಿ ಬಿದ್ದಿತು ಹಗ್ಗವನ್ನು ಹಿಡಿದುಕೊಂಡಿದ್ದ ಹುಡುಗಿಯೂ ಕೂಡ ಅದರ ಸಂಗಡಲೇ ಭಾವಿಯೊಳಕ್ಕೆ ಬಿದ್ದುಬಿಟ್ಟಳು ಆಗ ಆಕಳು ಬಹಳ ಗಾಬರಿಯಿಂದ ಹುಡುಗಿಯನ್ನು ತುಳಿದದ್ದರಿಂದ ಸ್ವಲ್ಪ ಹೊತ್ತಿನಲ್ಲಿಯೇ ಅವಳು ಸತ್ತುಹೋದಳು. ಆಕಳು ಕೂಡಾ ಮೇಲಕ್ಕೆ ಬರಲು ದಾರಿಯಿಲ್ಲದೆ, ನೀರಿನಲ್ಲಿ ಸ್ವಲ್ಪಹೊತ್ತು ಈಜಾಡುತ್ತಿದ್ದು ನಂತರ ಸತ್ತುಹೋಯಿತು ಸುತ್ತುಮುತ್ತಲಿದ್ದವರು ಬಂದು ಸಹಾಯ ಮಾಡುವಷ್ಟರಲ್ಲಿಯೇ ಇಷ್ಟು ಸಂಗತಿಯೂ ನಡೆದು ಹೋಗಿತ್ತು ಆ ಹುಡುಗಿಯ ತಾಯಿತಂದೆಗಳಿಗೆ ಈಕೆಯೊಬ್ಬಳೇ ಮಗಳಾದುದರಿಂದ ಅವರ ಗೋಳನ್ನು ವಿವರಿಸಲು ಅಸಾಧ್ಯವಾಗಿರುತ್ತೆ ಮಾರನೆಯ ದಿವಸ ಬಾವಿಯಿಂದ ಹುಡುಗಿ ಆಕಳನ್ನು ತೆಗೆಯಲು ನೋಡಲಾಗಿ ಶರೀರದಲ್ಲಿ ಯಾವ ಘಾಯಗಳೂ ಇಲ್ಲದೆ ಇದ್ದಾಗ್ಯೂ ಕೆಂಪಗೆ ಮಾತ್ರ ಮಾರಿದುಹೋಗಿತ್ತು ಅದು ಭಾರಿ ಆಕಳಾದ್ದರಿಂದ ನೋಡಲು ವಿಷಾದಕರವಾಗಿತ್ತು

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ

ಹಾನಗಲ್ ಸ್ವಾಮಿಗಳವರು ಮಾಡಿದ ಉಪನ್ಯಾಸವು

ನಮ್ಮ ವೀರಶೈವ ಮತಸ್ಥರಲ್ಲಿ ವಿದ್ಯಾಭ್ಯಾಸವು ಬಹಳ ಮಟ್ಟಿಗೆ ಕಡಮೆಯಾಗಿರುತ್ತದೆ ಇದಕ್ಕೆ ಕಾರಣವೇನೆಂದರೆ ದೊಡ್ಡವರು ಮಕ್ಕಳನ್ನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಕೆಲಸಗಳಿಗೆ ಹಚ್ಚಿಕೊಳ್ಳುವರು ಇದರಿಂದ ಆ ಮಕ್ಕಳು ಪ್ರಬುದ್ಧಮಾನಕ್ಕೆ ಬಂದ ಮೇಲೆ ಬಹಳ ಕಷ್ಟನಷ್ಟಗಳಿಗೆ ಗುರಿಯಾಗುವರು ಇದನ್ನು ತಿಳಿದು ನಮ್ಮ ಶ್ರೀ ಹಾನಗಲ್ ಮಠದ ಮಹಾಸ್ವಾಮಿಗಳವರೂ ಶಿಕ್ಷೆ ಸಂಸ್ಥಾನದ ಹಿರಿಮಠದ ಪಟ್ಟಾಧ್ಯಕ್ಷರವರೂ ದಯಮಾಡಿಸಿ ವಿರಕ್ತಮಠದಲ್ಲಿ ನಮ್ಮ ಜನಗಳನ್ನೆಲ್ಲಾ ಸಭೆ ಸೇರಿಸಿ, ಈ ವಿದ್ಯಾಭ್ಯಾಸದ ವಿಷಯದಲ್ಲಿ ಉಪನ್ಯಾಸ ಮಾಡಿದರು ಮತ್ತು ಎಲ್ಲಾ ಹುಡುಗರನ್ನೂ ಕರೆಸಿಕೊಂಡು ಮ॥ ಚನ್ನಬಸಪ್ಪ ಮೇಷ್ಟರವರಿಂದ ಎಲ್ಲರನ್ನೂ ಪರೀಕ್ಷೆ ಮಾಡಿಸಿದರು. ಆಗ ಸರ್ವರಿಗೂ ಅವರು ಹೇಳಿದುದೇನೆಂದರೆ— ಈ ಊರಿನಲ್ಲಿ ಇಷ್ಟು ವೀರಶೈವರು ಇದ್ದು ಹೀಗೆ ಮಾಡುವುದು ಸರಿಯಲ್ಲ ಪ್ರತಿಯೊಬ್ಬರೂ ತಮ್ಮ ತಮ್ಮ ಮಕ್ಕಳಿಗೆ ಕೈಲಾದಷ್ಟು ವಿದ್ಯಾಭ್ಯಾಸ ಮಾಡಿಸಬೇಕು ಸರ್ಕಾರಿ ಕೆಲಸಕ್ಕೋಸ್ಕರವಾಗಿಯೇ ವಿದ್ಯಾಭ್ಯಾಸ ಮಾಡಿಸಬೇಕೆಂದು ತಿಳಿದುಕೊಂಡಿರುವುದು ತಪ್ಪು ತಿಳುವಳಿಕೆ ವಿವೇಕಿಗಳಾಗಲೂ ಸನ್ಮಾರ್ಗಿಗಳಾಗಲೂ ಮರ್ಯಾದೆಯುಳ್ಳವರಾಗಲೂ ಸಂಸಾರ ನಡಿಸಲು ಸಶಕ್ತರಾಗಲೂ ಸಮಯೋಚಿತ ಉಪಾಯಗಳನ್ನು ತಿಳಿದುಕೊಳ್ಳುವವರಾಗಲೂ ದೇಹರಕ್ಷಣಶಕ್ತಿಯುಳ್ಳವರಾಗಲೂ ತೊಂದರೆಗಳನ್ನು ಪರಿಹರಿಸಿಕೊಳ್ಳುವವರಾಗಲೂ ಯುಕ್ತಾಯುಕ್ತ ತಿಳುವಳಿಕೆಯುಳ್ಳವರಾಗಲೂ, ಸುಲಭೋಪಾಯದಿಂದ ಜೀವನ ನಡಿಸಿಕೊಳ್ಳುವವರಾಗಲೂ, ಚಟುವಟಿಕೆಯಿಂದ ಕೆಲಸ ಮಾಡಿಕೊಳ್ಳುವವರಾಗಲೂ ಪ್ರಾಪಂಚಿಕ ಜ್ಞಾನವುಳ್ಳವರಾಗಲೂ ಧನವಿನಿಯೋಗ ಕಾರ್ಯತತ್ಪರರಾಗಲೂ ಕಸುಬುಗಳಲ್ಲಿ ನೂತನವನ್ನು ಕಂಡುಕೊಳ್ಳುವವರಾಗಲೂ ಎಚ್ಚರಿಕೆಯುಳ್ಳವರಾಗಲೂ ಮತಧರ್ಮ ತಿಳಿದುಕೊಳ್ಳಲೂ ದೇವರನ್ನು ಅರಿಯಲೂ ಪಾಪಪುಣ್ಯಜ್ಞಾನವುಳ್ಳವರಾಗಲೂ ಪ್ರತಿಯೊಬ್ಬ ಸ್ತ್ರೀಪುರುಷರೂ ವಿದ್ಯಾವಂತರಾಗಬೇಕು ಎಂಬುದಾಗಿ ಹೇಳಿದರು ಈ ವಿಷಯವನ್ನು ಬಾಲಿಕಾಪಾಠಶಾಲಾ ಉಪಾಧ್ಯಾಯರಾದ ಮ॥ ಹುಚ್ಚರಾಯರವರು ತಿಳಿದು ಮಾರನೇ ದಿವಸ ಸ್ವಾಮಿಗಳವರ ಬಳಿಗೆ ಹೋಗಿ ಇಲ್ಲಿ ಇರತಕ್ಕ ವೀರಶೈವರ ಸಂಖ್ಯೆಯನ್ನೂ ಸ್ಕೂಲಿಗೆ ಬರತಕ್ಕ ಬಾಲಕಿಯರ ಸಂಖ್ಯೆಯನ್ನೂ ತೋರಿಸಿ ಮಕ್ಕಳನ್ನು ಕ್ರಮವಾಗಿ ಮನಸ್ಸಿಟ್ಟು ಸ್ಕೂಲಿಗೆ ಕಳುಹಿಸದೆ ಮಾಸ್ಟರಿಗೆ ಕೊಡತಕ್ಕ ತೊಂದರೆಯನ್ನು ತಿಳುಹಿಸಿದರು ಇದನ್ನೆಲ್ಲಾ ಕೇಳಿ ಸ್ವಾಮಿಗಳವರು ಹೆಣ್ಣುಮಕ್ಕಳನ್ನೆಲ್ಲಾ ಕರೆಸಿಕೊಂಡು ಪರೀಕ್ಷಿಸಿ ಸರ್ವರಿಗೂ ಹೇಳಿದ್ದೇನೆಂದರೆ—ಗಂಡಸಿಗೆ ಹೇಗೆ ವಿದ್ಯೆಯು ಅವಶ್ಯಕವೋ ಹಾಗೆಯೇ ಹೆಂಗಸಿಗೆ ವಿದ್ಯೆಯು ಅಷ್ಟು ಆವಶ್ಯಕ. ಮತ್ತು ಸೌಶೀಲ್ಯಾದಿ ಗುಣಗಳು ಸ್ತ್ರೀಯರಲ್ಲೂ ಖಂಡಿತವಾಗಿ ಇರಲೇ ಬೇಕು ಇದರಿಂದ ಅನೇಕ ದುರ್ವಿಚಾರಗಳು ಖಂಡಿತವಾಗಿ ಕಡಮೆಯಾಗುವವು ದೇಶೋನ್ನತಿಗೂ ಇದೇ ಮುಖ್ಯಕಾರಣ ಹೆಂಗಸರು ಜಡ್ಜಿ ಮಾಡಲು ವಿದ್ಯಾಭ್ಯಾಸ ಮಾಡಬೇಕಾಗಿರುವುದಿಲ್ಲ ಗಂಡಸರ ಮಂದಮತಿಯಿಂದ ಹೆಂಗಸರು ದುರ್ಗತಿಯುಳ್ಳವರಾಗುವರು ಹೆಂಗಸರು ಬುದ್ಧಿವಂತೆಯರಾದರೆ ಗಂಡಸರ ದುರ್ಗತಿಯನ್ನು ತಪ್ಪಿಸುವರು ಅಲ್ಪಬುದ್ಧಿಯಿಂದ ಅನೇಕ ಅನಾಹುತಗಳುಂಟಾಗುವವು ಪ್ರತಿಯೊಬ್ಬರೂ ಹೆಣ್ಣುಮಕ್ಕಳಿಂದಲೇ ಅನೇಕ ಕೀರ್ತಿ ಅಪಕೀರ್ತಿಗಳನ್ನು ಹೊಂದಬೇಕಾಗಿರುವುದು. ಆದುದರಿಂದ ಯಾರು ಕ್ರಮವಾಗಿ ಬಾಲಕಿಯರನ್ನು ಸ್ಕೂಲಿಗೆ ಕಳುಹಿಸುವುದಿಲ್ಲವೋ ಮುಂದೆ ತಿಳಿಸಿದರೆ ಅವರಿಗೆ ವಿಚಾರ ಮಾಡುತ್ತೇನೆ ಎಂಬದಾಗಿ ಹೇಳಿದರು ಈಗಲಾದರೂ ನಮ್ಮ ವೀರಶೈವ ಮತಸ್ಥರು ಹೆಣ್ಣು ಮಕ್ಕಳಿಗೆ ನಗಳು ಹಿಡಿಯುವದೇ ಮೊದಲಾದ ದುರಭ್ಯಾಸವನ್ನು ತಪ್ಪಿಸಿ ಗಂಡುಮಕ್ಕಳನ್ನೂ ಹೆಣ್ಣುಮಕ್ಕಳನ್ನೂ ಏಕರೀತಿ ನೀತಿವಂತರನ್ನಾಗಿ ಮಾಡಿ, ಗುರುವಾಕ್ಯ ಪರಿಪಾಲನೆ ಮಾಡಿ ಕೀರ್ತಿ ಸಂಪಾದನೆ ಮಾಡಬಾರದೇ?

ಮೈಸೂರು ಗೆಜೆಟ್ ಸಂಗ್ರಹ

ಕೋಲಾರ್ ಚಿನ್ನದ ಗಣಿಗಳ ಮುನ್ಸಿಫ್‌ರವರ ಅಧಿಕಾರಕ್ಕೊಳಪಟ್ಟಿದ್ದ ಮಾಲೂರ್ ತಾಲ್ಲೂಕನ್ನು ಸೆಪ್ಟಂಬರ್ ೧ ಯಿಂದ ಕೋಲಾರ್ ಮುನ್ಸಿಫ್‌ರವರ ಅಧಿಕಾರಕ್ಕೆ ಸೇರಿಸಲ್ಪಡುವುದು.

೧೯೦೬ ನೆ ಸೆಪ್ಟಂಬರ್ ೧ ನೆ ತಾರೀಖಿನಿಂದ ಒಂದು ವರುಷದ ವರೆಗೆ ಬೆಂಗಳೂರು ಸಿಟಿಯಲ್ಲಿ ಬಲಾತ್ಕಾರವಾಗಿ ದೇವಿ (ಸಿಡುಬು) ಹಾಕುವುದನ್ನು ಜಾರಿಗೆ ತರಲ್ಪಡುವುದು ಮ್ಯುನಿಸಿಪಾಲಿಟಿಯವರು ಅದಕ್ಕಾಗಿ ಬೈಲಾಗಳನ್ನು ಮಾಡಿ ಕೂಡಲೇ ಗವರ್ನಮೆಂಟಿನವರ ಸ್ಯಾಂಕ್ಷನ್ ಬಗ್ಗೆ ಕಳುಹಿಸಿಕೊಡಬೇಕಾಗಿದೆ

ಹಾಸನದ ಪೋಲೀಸ್ ಅ॥ ಸೂಪರಿಂಟೆಂಡೆಂಟ್ ಮ॥ ಎಂ ಗುಲಾಂ ಮೊಹಿದೀನ್‌ಖಾನ್‌ರವರಿಗೆ ಜೂಲೈ ೧ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಮೈಸೂರ್ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮ॥ ಮುಹಮದ್ ಜಾಫರ್ ಯವರಿಗೆ ಜೂಲೈ ೩ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್‌ನಲ್ಲಿರುವ ಸೀನಿಯರ್ ಅ॥ ಕಮಿಷನರ್ ಮ॥ ಬಿ ರಾಮಸ್ವಾಮಿಅಯ್ಯಂಗಾರ್ರಿಗೆ ಜುಲೈ ೧ ರಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮ॥ ಎಂ ಕಾಂತರಾಜೇ ಅರಸಿನವರಿಗೆ ಕೊಟ್ಟಿದ್ದ ಹದಿನೆಂಟು ತಿಂಗಳ ರಜವನ್ನು ಅವರು ೧೯೦೫ ನೆ ಜನವರಿ ೪ ರಿಂದ ಉಪಯೋಗಿಸಿಕೊಂಡು ೧೯೦೬ ನೆ ಜೂನ್ ೩೦ ರಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದು ಮಾಡಿದೆ

ಪ್ರಾಚೀನ ಲಿಪ್ಯನ್ವೇಷಣದ ಇಲಾಖಾ ಡೈರೆಕ್ಟರ್ ಮ॥ ಬಿ ಎಲ್ ರೈಸ್, ಸಿ ಐ ಇ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಹೊಸದುರ್ಗ ತಾಲ್ಲೂಕ್ ಅಮಲ್ದಾರ್ ಮ॥ ಕೆ ಹನುಮಂತರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ

ಮದರಾಸ್ ಹೈಕೋರ್ಟಿನ ಜಡ್ಜಿಯ ಕೆಲಸದಿಂದ ನಿವೃತ್ತರಾದ ಮ॥ ಲೂಯಿ ಮೂರ್, ಐ. ಸಿ ಎಸ್ ಯವರನ್ನು ಶ್ರೀಮನ್ಮಹಾರಾಜರವರು ಮೈಸೂರ್ ಛೀಫ್ ಕೋರ್ಟಿನ ಛೀಫ್ ಜಡ್ಜರನ್ನಾಗಿ ನೇಮಕ ಮಾಡಿರುತ್ತಾರೆ

ಮೈಸೂರು ಸರ್ಕಾರಿ ಹುಕುಮುಗಳು.

ಇನಾಂ ರಿಜಿಸ್ಟರುಗಳ ತನಿಖೆ.

ಡೆಪ್ಯುಟಿ ಕಮಿಷನರು, ಜಮಾಬಂದಿ ಆಫೀಸರುಗಳು, ಅರಮನೆ ಆಫೀಸರು ತಾಲ್ಲೂಕುಗಳಲ್ಲಿಟ್ಟಿರುವ ಇನಾಂ ರಿಜಿಸ್ಟರುಗಳನ್ನು ಆಗಾಗ್ಗೆ ತನಿಖೆ ಮಾಡಿ, ಅವುಗಳಲ್ಲಿ ಹೇಳಿರುವಂಥಾ ಧರ್ಮಕಾರ್ಯಗಳು ನಡೆಯುತ್ತಾ ಇವೆಯೋ ಅಥವಾ ಯಾವ ಯಾವ ಭಾಗದಲ್ಲಿ ಲೋಪವಾಗಿದೆ, ಹ್ಯಾಗೆ ದುರುಪಯೋಗವಾಗುತ್ತಿದೆ ಎಂಬೀ ಸಂಗತಿಯನ್ನು ಕುರಿತು ಅಜಮಾಯಿಷಿಯಿಂದ ವರುಷಕ್ಕೊಂದುಸಲ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸುತ್ತಾ ಬರಬೇಕೆಂದು ಸರ್ಕಾರದವರು ಕಳೆದ ಜೂನ್ ೪ ರಲ್ಲಿ ಹುಕುಂ ಕೊಟ್ಟಿದಾರೆ.

ದಸರಾ ಪ್ರೊಸೀಡಿಂಗ್ಸಿನ ಬಿಕರಿ.

ಕಳೆದ ವರುಷ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಪ್ರಜಾಪ್ರತಿನಿಧಿ ಸಮಾಜದ ಪ್ರೊಸೀಡಿಂಗ್ಸ್ ಪ್ರತಿಗಳನ್ನು ಆಯಾ ವರುಷ ಸರ್ಕಾರದವರು ಅಚ್ಚು ಹಾಕಿಸಿ, ಮೆಂಬರುಗಳಿಗೂ ಇತರರಿಗೂ ಬಿಕರಿಯಾಗುವಂತೆ ಅಪ್ಪಣೆ ಆಗಬೇಕೆಂದು ಕೇಳಿಕೊಂಡರು. ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ದಸರಾ ಪ್ರೊಸೀಡಿಂಗ್ಸ್ ಪ್ರತಿಗಳನ್ನು ಇಂಗ್ಲಿಷಿನಲ್ಲೂ ಕನ್ನಡದಲ್ಲೂ ಅಚ್ಚು ಹಾಕಿಸಿ, ಕೆಲವನ್ನು ಬೆಂಗಳೂರು ಸರ್ಕಾರಿ ಬುಕ್ ಡಿಪೋದಲ್ಲಿಟ್ಟು ಒಂದು ಪ್ರತಿಗೆ ಒಂದು ರೂಪಾಯಿಯಂತೆ ಬಿಕರಿಮಾಡಬಹುದು. ಪಟೇಲರೂ ಶ್ಯಾನುಭೋಗರೂ ಸರಿಯಾದ ಮಾರ್ಗದಲ್ಲಿ ಕೇಳಿಕೊಂಡರೆ ಅವರಿಗೆ ಅರ್ಧಕ್ರಯಕ್ಕೆ ಬಿಕರಿ ಮಾಡಬೇಕು ಎಂಬುದು.

ಅಂಚೆಯ ಮೂಲಕ ದರಖಾಸ್ತು ಕೊಡುವದು.

೧೯೦೪ ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ದರಖಾಸ್ತನ್ನು ಖುದ್ದಾಗಿ ಅಮಲ್ದಾರರಿಗೆ ಕೊಡಬೇಕೆಂಬುವ ನಿಯಮವನ್ನು ತಪ್ಪಿಸಿ, ಅಂಚೆ ಮೇಲೆ ಕಳುಹಿಸುವದಕ್ಕೆ ಅವಕಾಶಕೊಡಬೇಕೆಂದು ಕೇಳಿಕೊಂಡರು. ೧೯೦೬ ನೆ ಮೇ ೩೧ ರಲ್ಲಿ ಗವರ್ನಮೆಂಟಿನವರು ದರಖಾಸ್ತಿನ ವಿಷಯವಾದ ರೆವಿನ್ಯೂ ಕೋಡ್ [illegible] ನೆ ರೂಲನ್ನು ಬದಲಾಯಿಸಿರುವುದು ಹ್ಯಾಗೆಂದರೆ— ಖಡುವಳಿಯಲ್ಲಿ ಇಲ್ಲದೆ ಇರುವಂಥಾ ಜಮೀನು ಬೇಕಾಗಿದ್ದರೆ ಲಿಖಿತ ಮೂಲಕ ಅರ್ಜಿಯನ್ನು ಖುದ್ದಾಗಿ ಅಮಲ್ದಾರರಿಗೆ ಕೊಡಬೇಕು ಅಥವಾ ಅಂಚೆಯ ಮೇಲೆ ಕಳುಹಿಸಬಹುದು. ಅಂಚೆಮೇಲೆ ಕಳುಹಿಸುವದಾದರೆ ಶ್ಯಾನುಭೋಗ ಅಥವಾ ಶೇಕದಾರ ಇಲ್ಲವೇ ಮ್ಯಾಜಿಸ್ಟ್ರೇಟರು ದರಖಾಸ್ತುದಾರ ಇವನೇ ಎಂಬುದಾಗಿ ರುಜು ಮಾಡಿರಬೇಕು. ಅರ್ಜಿದಾರನಿಂದ ಅಧಿಕಾರ ಹೊಂದಿದವನಾದರೂ ರೂಬರೂಬು ಅರ್ಜಿ ಕೊಡಬಹುದು.

ಧರ್ಮ ಫಂಡುಗಳ ಬಡ್ಡಿ ವಿಚಾರ.

ಶಿವಮೊಗ್ಗೆಯ ಮೆ॥ ವೆಂಕಟಪ್ಪನವರು ಛತ್ರ ಮೊದಲಾದ ಕೆಲವು ಧರ್ಮಗಳನ್ನು ಸ್ಥಾಪಿಸಿ, ಅವುಗಳನ್ನು ಶಾಶ್ವತವಾಗಿ ನಡಿಸಿಕೊಂಡು ಬರಬೇಕೆಂದು ೩೦,೦೦೦ ರೂಪಾಯಿ ಫಂಡು ಕೊಟ್ಟರು. ಬೆಂಗಳೂರಿನಲ್ಲಿ ಮೆ॥ ಬ್ಯಾಟಪ್ಪನವರು ಕಡೂರಿನಲ್ಲಿ ಏರ್ಪಾಡು ಮಾಡಿರುವ ತಮ್ಮ ಸತ್ರ ದೇವಸ್ಥಾನಗಳ ಮೂಲಧನಕ್ಕೆ ೧೦,೦೦೦ ರೂಪಾಯಿ ಕೊಟ್ಟರು. ಮೆ॥ ತೆಂಗಲಿ ಶೇಷಯ್ಯಂಗಾರ್ರು ಕಡೂರಿನಲ್ಲಿರುವ ಸತ್ರವನ್ನು ನಡಿಸುವದಕ್ಕೆ ೧೦,೦೦೦ ರೂಪಾಯಿ ಕೊಟ್ಟರು. ಧರ್ಮಪ್ರವರ್ತಕ ಮೆ॥ ತೋಟದಪ್ಪನವರು ಬೆಂಗಳೂರಿನಲ್ಲಿ ಕಟ್ಟಿಸಿರುವ ಸತ್ರವನ್ನು ಚಿರಕಾಲ ನಡಿಸಬೇಕೆಂದು ೩೪,೦೦೦ ರೂಪಾಯಿ ಮೂಲಧನ ಹಾಕಿದರು. ಮೈಸೂರು ಸರ್ಕಾರದವರು ಇಂಥಾ ಧರ್ಮ ಫಂಡುಗಳಿಗೆ ಇದುವರೆಗೆ ಶೇಕಡಾ ವರುಷಕ್ಕೆ ೪ ರೂಪಾಯಿಯಂತೆ ಬಡ್ಡಿ ಕೊಡುತ್ತಿದ್ದರು. ಈಗ ಕಳೆದ ಮೇ॥ ೧೭ ರಲ್ಲಿ ಈ ಬಡ್ಡಿ ದರದ ವಿಷಯವಾಗಿ ಕೊಟ್ಟಿರುವ ಹುಕುಂ ಏನೆಂದರೆ—ಇಂಥಾ ಮೂಲಧನಕ್ಕೆ ಕೊಡುತ್ತಿದ್ದ ಬಡ್ಡಿಯನ್ನು ಈಗಲೂ ಕೊಡುವುದು ಸಹಜವಲ್ಲವೆಂದು ಗವರ್ನಮೆಂಟಿನವರು ಯೋಚಿಸುತ್ತಾರೆ. ಆದಕಾರಣ ಇಂಥಾ ಧರ್ಮಿಷ್ಟರು ತಾವು ಕೊಡುವಷ್ಟು ಹಣಕ್ಕೆ ಇಂಡಿಯಾ ಗವರ್ನಮೆಂಟಿನ ಸಾಲದಪತ್ರಗಳನ್ನು ಕೊಂಡುಕೊಂಡು ಗವರ್ನಮೆಂಟಿನವರ ವಶಕ್ಕೆ ಕೊಟ್ಟಲ್ಲಿ ಗವರ್ನಮೆಂಟಿನವರು ಆಗಿಂದಾಗ್ಗೆ ಆ ಪತ್ರಗಳ ಬಡ್ಡಿಯನ್ನು ಕೊಡಿಸಿ, ಆಯಾ ಧರ್ಮಕಾರ್ಯಗಳನ್ನು ಲೋಪವಿಲ್ಲದೆ ನಡಸುತ್ತಾ ಬರಬಹುದಾಗಿದೆ ಎಂಬುದು.

ಮೈಸೂರು ಮಹಾರಾಣಿಯವರ ಕಾಲೇಜು.

ಮೈಸೂರು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರು ಮೈಸೂರು ಮಹಾರಾಣಿಯವರ ಕಾಲೇಜನ್ನು ಕಳೆದ ಫೆಬ್ರವರಿಯಲ್ಲಿ ತನಿಖೆ ಮಾಡಿದರು. ಮತ್ತು ಯೂನಿವರ್ಸಿಟಿ ಕಮಿಷನ್ ಮೆಂಬರುಗಳು ೧೯೦೫ ನೆ ಜುಲೈ ತಿಂಗಳಲ್ಲೂ ಇನ್ಸ್ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರೂ ಇಬ್ಬರು ಡೆಪ್ಯುಟಿ ಇನ್ಸ್ಪೆಕ್ಟರುಗಳೂ ೧೯೦೫ ನೆ ನವೆಂಬರಿನಲ್ಲೂ ಪರೀಕ್ಷೆ ಮಾಡಿದರು. ಆ ಕಾಲೇಜಿನಲ್ಲಿ ೧೧ ತರಗತಿಗಳಿವೆ. ೩೦೦ ಹೆಣ್ಣುಮಕ್ಕಳು ವಿದ್ಯಾಭ್ಯಾಸಮಾಡುತ್ತಾರೆ. ಈ ಪೈಕಿ ಮಕ್ಕಳ ಎಂಟು ತರಗತಿಗಳಲ್ಲೇ ೨೬೩ ಮಂದಿ ಇರುವರು. ಮೇಲಣ ತರಗತಿಗಳು ಎರಡರವು. ಈ ತರಗತಿಗಳು ೧೯೦೪ ರಲ್ಲಿ ಏರ್ಪಾಡಾದುವು. ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಐದು ವಿದ್ಯಾರ್ಥಿನಿಯರು ಸಂಸ್ಕೃತವನ್ನು ಕಲಿಯುವದಾರಂಭಿಸಿದರೆ ೩-೪ ವರುಷಗಳು ಓದಿದರೆ ಅವರಿಗೆ ತೇರ್ಗಡೆಯಾಗಬಹುದು. ತೇರ್ಗಡೆ ಹೊಂದಿದರೂ ಪ್ರಯೋಜನವಿಲ್ಲವಾದ್ದರಿಂದ ಆ ತರಗತಿಗಳನ್ನೇ ವಜಾಮಾಡಿ, ಎರಡು ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟರೆ ಉಪಯೋಗವಾಗುವುದು ಎಂದು ಇನ್ಸ್ಪೆಕ್ಟರ್ ಜನರಲ್‌ರವರು ತಿಳಿಸಿದರು. ಇದಲ್ಲದೆ ೧ನೆ ಕ್ಲಾಸನ್ನು ಮಕ್ಕಳ ಎರಡು ಕ್ಲಾಸುಗಳನ್ನೂ ಈಗ ೧೧ ರಿಂದ ೩ ಗಂಟೆ ತನಕ ನಡಿಸುತ್ತಾರೆ. ಡ್ರಿಲ್ ಮತ್ತು ಕಿಂಡರ್‌ಗಾರ್ಟನ್ ಹೇಳಿಕೊಡುವದಿಲ್ಲ. ಆದರೆ ೧೧ ರಿಂದ ೩ರ ತನಕ ಈ ಮಕ್ಕಳ ಕ್ಲಾಸನ್ನು ಇಡುವುದು ಅನುಕೂಲವಾಗಿರುವಂತೆ ಕಾಣುವುದಿಲ್ಲವೆಂತಲೂ, ೩ನೆ ಕ್ಲಾಸಿನಿಂದ ಕೆಳಗಿರುವ ತರಗತಿಗಳನ್ನೂ ಟ್ರೇನಿಂಗ್ ತರಗತಿಯನ್ನೂ ಬೆಳಿಗ್ಗೆ ೭ ರಿಂದ ೧೧॥ ಗಂಟೆಯ ತನಕ ಮಾಡಿ ಮಕ್ಕಳ ತರಗತಿಯನ್ನು ೧೦-೩೦ಕ್ಕೆ ಮುಚ್ಚುತ್ತಾ ಬಂದರೆ ಒಳ್ಳೆಯದೆಂದು ಇನ್ಸ್ಪೆಕ್ಟರ್ ಜನರಲ್‌ರವರು ಸೂಚಿಸಿದರು. ಗವರ್ನಮೆಂಟಿನವರು ಈ ರಿಪೋರ್ಟನ್ನು ಪರಾಂಬರಿಸಿ, ಅದರ ನಕಲನ್ನು ಮೇಲ್ಕಂಡ ಕಾಲೇಜಿನ ಮ್ಯಾನೇಜಿಂಗ್ ಕಮಿಟಿಯವರಿಗೆ ಕಳುಹಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಲ್ಲದೆ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಜಿ. ಎಲ್. ಪಲಿತಾರ್ಪ್ ಯವರ ತಲಬನ್ನು ಜೂನ್ ೧ ರಿಂದ ೩೫೦ ರೂಪಾಯಿಗೆ ಇಜಾಫೆ ಮಾಡಿ, ೭೦೦ ರೂಪಾಯಿ ತನಕ ಬಡ್ತಿ ಆಗಬೇಕೆಂದು ಹುಕುಂ ಕೊಟ್ಟಿದಾರೆ.

ದನಗಳ ರೋಗಚಿಕಿತ್ಸೆ.

ಕಳೆದ ಏಪ್ರಿಲ್ ೬ ರಲ್ಲಿ ಮೈಸೂರು ಪಟ್ಟಣದ ಕೃಷ್ಣರಾಜಮೊಹಲ್ಲಿಯಲ್ಲಿ ಕೆಲವು ಗೋಕಾಯಿಗಳಿಗೆ ಒಂದು ಹೊಸ ರೋಗ ಪ್ರಾಪ್ತವಾಗಿ ಬೇಗಬೇಗನೆ ಸಾಯುತ್ತಾ ಬಂದವು. ಈ ಸಂಗತಿಯನ್ನು ಹೆಲ್ತ್ ಆಫೀಸರಿಗೂ ಸಿವಿಲ್ ಸರ್ಜನರಿಗೂ ತಿಳಿಸಿದಾಗ್ಯೂ ಅವರು ಮೇ ತಿಂಗಳ ೧೪ ನೇ ತಾರೀಖುವರೆಗೆ ಅದನ್ನು ಗೋಕಾಯಿಗಳ ಇನ್ಸ್ಪೆಕ್ಟರ ಗಮನಕ್ಕೆ ತರಲಿಲ್ಲ. ಆ ಇನ್ಸ್ಪೆಕ್ಟರು ಮೇ ೨೪ಕ್ಕೆ ಬಂದು ಅಜಮಾಯಿಷಿ ಮಾಡುವಷ್ಟರಲ್ಲಿ ರೋಗ ಶಮನವಾಗಿತ್ತು. ಇದರಿಂದ ಇನ್ಸ್ಪೆಕ್ಟರು ರೋಗ ಲಕ್ಷಣವನ್ನು ಪರೀಕ್ಷೆ ಮಾಡುವದಕ್ಕಾಗಲಿ ಪರಿಹಾರವನ್ನು ಕಂಡು ಹಿಡಿದು ತಿಳಿಸುವದಕ್ಕಾಗಲಿ ಅವಕಾಶವಿಲ್ಲದೆ ಹೋಯಿತು. ರೋಗ ಕಾಣಿಸಿಕೊಂಡ ಕೂಡಲೇ ತಂತಿಸಮಾಚಾರಕೊಟ್ಟು ಅವನನ್ನು ಕರೆಸಿದ್ದರೆ ತುಂಬಾ ಉಪಕಾರವಾಗುತ್ತಿತ್ತೆನ್ನುವುದಕ್ಕೆ ಸಂಶಯವಿಲ್ಲ. ಅನ್ಯಾಯವಾಗಿ ಆ ಗೋಕಾಯಿಗಳು ಚಿಕಿತ್ಸೆಯಿಲ್ಲದೆ ಮೃತಪಟ್ಟವು. ಇನ್ನು ಮುಂದೆ ಗೋಕಾಯಿಗಳಿಗೆ ಎಲ್ಲಿ ರೋಗ ಪ್ರಾಪ್ತವಾದರೂ ಕೂಡಲೆ ಇನ್ಸ್ಪೆಕ್ಟರಿಗೆ ತಿಳಿಸಿ ಅವನನ್ನು ಕರೆಸಿಕೊಂಡು ಅಜಮಾಯಿಷಿ ಮಾಡಿಸಿ ಚಿಕಿತ್ಸೆ ಮುಂತಾದ್ದನ್ನು ಮಾಡಿಸುವಂತೆ ರೆವಿನ್ಯೂ ಕಮಿಷನರರೂ, ಸೀನಿಯರ್ ಸರ್ಜನರೂ, ವಿಟರ್ನರಿ ಅಸಿಸ್ಟೆಂಟರೂ ತಮ್ಮ ತಾಬೇದಾರರುಗಳಿಗೆಲ್ಲಾ ತಿಳಿಸಬೇಕಾಗಿದೆ.

ಪಶುವೈದ್ಯ ಇನ್ಸ್ಪೆಕ್ಟರ್ ಮೆ॥ ನರಸಿಂಹಯ್ಯಂಗಾರು, ಇನ್ನು ಮುಂದೆ ರೆವಿನ್ಯೂ ಕಮಿಷನರವರ ತಾಬಿನಲ್ಲಿ ಕೆಲಸ ಮಾಡತಕ್ಕದ್ದು. ಅವರು ಅಂಥಾ ರೋಗ ಪರೀಕ್ಷೆಗಳನ್ನು ಬೇಕಾಗಿದ್ದಾಗ ಸರ್ಕಾರಿ ಪರಿಶೋಧನಾಶಾಲೆಯಲ್ಲಿ ಮಾಡಬಹುದು. ಪಶುಗಳಿಗೆ ಪ್ರಾಪ್ತವಾಗುವ ಸಾಮಾನ್ಯ ರೋಗಗಳ ಲಕ್ಷಣಗಳನ್ನೂ ಚಿಕಿತ್ಸೆಗಳನ್ನೂ ಇನ್ಸ್ಪೆಕ್ಟರು ಗ್ರಾಮಾಂತರಗಳಲ್ಲಿ ತಿಳಿಸುತ್ತಾ ಬಂದರೆ ಹಳೇ ಕಂದಾಚಾರದ ಚಿಕಿತ್ಸೆಗಳು ಕಡಿಮೆಯಾಗುತ್ತಾ ಬಂದು, ಗೋಕಾಯಿಗಳು ಅಭಿವೃದ್ಧಿ ಹೊಂದುವವೆಂದು ಗವರ್ನಮೆಂಟಿನವರು ಯೋಚಿಸುತ್ತಾರೆ. ಈ ಭಾಗದಲ್ಲಿ ವಿಶೇಷ ಖರ್ಚಿಲ್ಲದಂತೆ ಯಾವ ಏರ್ಪಾಡು ಮಾಡಬಹುದೋ ರೆವಿನ್ಯೂ ಕಮಿಷನರು ಯೋಚಿಸಿ ಗವರ್ನಮೆಂಟಿಗೆ ತಿಳಿಸಬೇಕಾಗಿದೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಆರೋಗ್ಯವಿಚಾರ.

ಸ್ಯಾನಿಟರಿ ಕಮಿಷನರವರ ಅಸಿಸ್ಟೆಂಟ್ ಡಾಕ್ಟರ್ ಪಲ್ಪುಯವರು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡಿ, ಪ್ರಜಾ ಆರೋಗ್ಯವಿಚಾರವನ್ನು ಕುರಿತು ರಿಪೋರ್ಟು ಬರೆದರು. ಅದನ್ನು ಅಜಮಾಯಿಷಿ ಮಾಡಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ತಾಲ್ಲೂಕು ಜಾತಿನಲ್ಲಿ ಜನನಮರಣ ಲೆಕ್ಕಗಳು ಕ್ರಮವಾಗಿ ಇಟ್ಟಿಲ್ಲ. ಇದು ತಾಲ್ಲೂಕ್ ನೌಕರರಿಗೆ ಕೆಟ್ಟ ಹೆಸರು ತಂದಿರುವುದು. ಜನನಮರಣ ಲೆಕ್ಕಗಳನ್ನು ಕ್ರಮವಾಗಿ ಇಡುವಂತೆ ನೋಡಿಕೊಳ್ಳುವುದು ಅಮಲ್ದಾರರ ಮುಖ್ಯ ಕೆಲಸಗಳಲ್ಲಿ ಒಂದಾಗಿರುತ್ತದೆ. ಯಾವ ತಾಲ್ಲೂಕಿನಿಂದ ಸರಿಯಾದ ಜನನಮರಣ ಲೆಕ್ಕಗಳು ಬರುವುದಿಲ್ಲವೋ ಆ ತಾಲ್ಲೂಕಿನ ಅಮಲ್ದಾರರು ಗವರ್ನಮೆಂಟಿನವರ ಅಪ್ರೀತಿಗೆ ಒಳಗಾಗುವರು. ಗವರ್ನಮೆಂಟಿನವರ ದೃಷ್ಟಿಯಲ್ಲಿ ಸಮರ್ಥರೆನಿಸಿಕೊಳ್ಳುವದಕ್ಕೆ ಅಮಲ್ದಾರರು ತಮ್ಮ ತಾಲ್ಲೂಕಿನ ಜನನಮರಣ ಲೆಕ್ಕಗಳನ್ನು ತಪ್ಪಿಲ್ಲದೆ ಸೇರಿಸಿ ಇಟ್ಟಿರುವುದೂ ಒಂದು ಅಂಶವಾಗಿರುತ್ತದೆಂದು ತಿಳಿಯಬೇಕು. ಗ್ರಾಮಗಳ ಆರೋಗ್ಯವಿಚಾರದಲ್ಲಿ ಸರ್ಕಾರದವರು ಕೆಲವು ರೂಲು ಮಾಡಿರುತ್ತಾರೆ. ಹೊಸಮನೆಗಳನ್ನು ಗ್ರಾಮಸ್ಥರು ಕಟ್ಟಿಕೊಳ್ಳುವಾಗ್ಗೆ ತಾಲ್ಲೂಕಿನ ಮತ್ತು ಡಿಸ್ಟ್ರಿಕ್ಟಿನ ಅಧಿಕಾರಿಗಳು ಮೇಲ್ವಿಚಾರಣೆ ಮಾಡಿ ಆರೋಗ್ಯವಿಧಿಗನುಸಾರವಾಗಿ ಕಟ್ಟಿಕೊಳ್ಳುವಂತೆ ಏರ್ಪಡಿಸದೆ ಇರುವುದು ವ್ಯಸನಕರವಾಗಿದೆ. ಗ್ರಾಮಗಳಲ್ಲಿ ಕಸ ಸಾಗಿಸುವುದೂ ಆರೋಗ್ಯವನ್ನು ಕಾಪಾಡುವುದೂ ಪಟೇಲರ ಮುಖ್ಯ ಕರ್ತವ್ಯವಾಗಿದ್ದರೂ ಕೆಲವು ಕಡೆಗಳಲ್ಲಿ ಪಟೇಲರಿಗೆ ಅಂಥಾ ರೂಲಿರುವುದೇ ತಿಳಿದಿಲ್ಲ. ಇದರಿಂದ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಅಧಿಕಾರಿಗಳು ಆರೋಗ್ಯವಿಚಾರದಲ್ಲಿ ಮುಂತಾದ ಜನಹಿತ ಕಾರ್ಯಭಾಗ ನಡಿಸುತ್ತಾರೆಂಬುವದು ಗೊತ್ತಾಗುವದಿಲ್ಲ. ಪ್ರಜೆಗಳ ಆರೋಗ್ಯ, ಕಾಯಿಲೆ, ಇಂಥಾ ಪ್ರಯೋಜನಗಳ ವಿಷಯದಲ್ಲೇ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಮುಖ್ಯ ಹುದ್ದೇದಾರರು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ಮಾಡಿದಂತಾಗಲಿಲ್ಲ. ಅವರು ತಮ್ಮ ಕರ್ತವ್ಯವನ್ನು ಅಲಕ್ಷ್ಯಮಾಡಿದಾರೆಂತಲೂ ತಿರಸ್ಕರಿಸಿದಾರೆಂತಲೂ ಈ ರಿಪೋರ್ಟಿನಿಂದ ಗೊತ್ತಾಗುವುದು. ಆದಕಾರಣ ಅವರು ಸ್ಯಾನಿಟೇಷನ್ ರೂಲುಗಳನ್ನು ಪ್ರತಿ ಒಂದು ಗ್ರಾಮದವರೂ ತಿಳಿದು ನಡಿಯುವಂತೆ ಪ್ರಯತ್ನಪಡಬೇಕಾಗಿದೆ. ಈ ರೂಲುಗಳ ಅಭಿಪ್ರಾಯವನ್ನು ಪ್ರಜೆಗಳಿಗೆ ತಿಳಿಸಿ, ಅದರಂತೆ ಅವರು ನಡೆಯದಿದ್ದಾಗ ತಕ್ಕಹಾಗೆ ಅವರನ್ನು ಶಿಕ್ಷಿಸಬೇಕು. ಆದರೂ ಅವರು ಆ ರೀತಿ ನಡೆಯದಿದ್ದರೆ ಒಬ್ಬೊಬ್ಬರ ಮೇಲೆ ಮೊಕದ್ದಮೆ ಮಾಡತಕ್ಕದ್ದು. ಇದರಿಂದ ಇತರರಿಗೆ ಬುದ್ಧಿ ಬಂದೇ ಬರುವುದಕ್ಕೆ ಸಂಶಯವಿಲ್ಲ. ಇನ್ನು ಮುಂದೆ ಪಟೇಲರನ್ನು ನೇಮಕ ಮಾಡುವಾಗ್ಗೆ ಗವರ್ನಮೆಂಟಿನವರು ಅಕ್ಷರಸ್ಥರನ್ನೇ ಸಾಧ್ಯವಾಗುವ ಮಟ್ಟಿಗೂ ಮೊಕರರ್ ಮಾಡುವವರಾಗಿದಾರೆ. ಗುಡಿಸುವವರು ಇರುವಂಥಾ ಮ್ಯುನಿಸಿಪಲ್ ಟೌನುಗಳಲ್ಲಿ ಪಾಯಖಾನೆಗಳ ಹತ್ತಿರ ಹುಡುಗರಿಗಾಗಿ ಒಂದೊಂದು ಹಿತ್ತಲಮನೆಯನ್ನು ಕಟ್ಟಿಸಿಕೊ[illegible] ಕೆಂಬುವದನ್ನು ಗವರ್ನಮೆಂಟಿನವರು ಅಂಗೀಕರಿಸಿ, ಈ ವಿಷಯ[illegible] ಸರಿಯಾದ ಏರ್ಪಾಡು ಮಾಡುವಂತೆ ಇನ್ಸ್ಪೆಕ್ಟರ್ ಜನರಲ್‌ರವ[illegible] ತಿಳಿಸಿದಾರೆ. ಮ್ಯುನಿಸಿಪಲ್ ಟೌನುಗಳಲ್ಲಿ ಬೀಳುವ ಕಸವನ್ನು [illegible] ಯಾಗಿ ಸಾಗಿಸುವ ವಿಷಯದಲ್ಲಿ ಪ್ರೆಸಿಡೆಂಟರು ನಿಗಾ ಕೊಡಬೇ[illegible] ಮೆಟ್ಟಲುಗಳಿರುವ ಭಾವಿ ಕೊಳಗಳ ನೀರು ಜನರ ಬಳಕೆಯಿಂದ [illegible] ರೋಗ್ಯಕರವಾಗುವುದು. ಆದ್ದರಿಂದ ಅಂಥಾ ಮೆಟ್ಟಲುಗಳನ್ನು [illegible] ಹಾಕಿ, ಸೇದುವ ಭಾವಿ ಮಾಡಬೇಕು. ಈ ವಿಷಯಕ್ಕೆ ಅಮಲ್ದಾ[illegible] ಡಿಸ್ಟ್ರಿಕ್ಟ್ ಅಧಿಕಾರಿಗಳೂ ವಿಶೇಷವಾದ ಗಮನಕೊಡತಕ್ಕ[illegible] ಮ್ಯುನಿಸಿಪಾಲಿಟಿಯವರು [illegible] ಹರಿಂತಿ ಮುಂತಾದ್ದನ್ನು [illegible] ತೋರಿದಂತೆ ಕಟ್ಟದೆ ಇಂಜನಿಯರಿಗೂ ಡಾಕ್ಟರಿಗೂ ತಿಳಿಸಿ [illegible] ಅಭಿಪ್ರಾಯ ತೆಗೆದುಕೊಂಡು ಕಟ್ಟಬೇಕಾಗಿದೆ. ಇನ್ನು ಮೇಲೆ ಸ್ಯಾ[illegible] ಟರಿ ಕಮಿಷನರವರು ಪ್ರತಿ ಗ್ರಾಮ, ಪ್ರತಿ ಊರು, ಪ್ರತಿ ಪಟ್ಟ[illegible] ಆರೋಗ್ಯವಿಚಾರವನ್ನು ಅಜಮಾಯಿಷಿ ಮಾಡಿ, ನ್ಯೂನಾತಿರೇ[illegible] ನ್ನು ಪ್ರತ್ಯೇಕಪ್ರತ್ಯೇಕವಾಗಿ ಬರೆದು ಗವರ್ನಮೆಂಟಿಗೆ ತಿಳಿಸು[illegible] ಬಂದರೆ ಆಯಾ ಸ್ಥಳಕ್ಕೆ ಅನುಗುಣವಾದ ಹುಕುಮನ್ನು ಮಾಡಬ[illegible] ದಾಗಿದೆ. ಆರೋಗ್ಯವಿಷಯವಾದ ಕಾರ್ಯಗಳು ಜಾಗ್ರತೆಯಾಗಿ [illegible] ಯುವವು ಗೊತ್ತಾಗ ಅವಕಾಶವಿರುವುದಿಲ್ಲ.

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಾಲಿಟಿಯವರು ಅಲ್ಲಿರುವ [illegible] ಟವರ್ ಹಾಲ್ ಬಂಗಲೆಯನ್ನು ಗವರ್ನಮೆಂಟಿಗೆ ಹತ್ತು ಲಕ್ಷ ರೂಪಾಯಿ[illegible] ಗೆ ಬಿಕರಿ ಮಾಡಬೇಕೆಂದು ಗೊತ್ತುಮಾಡಿದಾರೆ.

****

ಹೈದರಾಬಾದ್ ಸಂಸ್ಥಾನದ ನೈಜಾಮರವರಿಗೆ ಮೊನ್ನೆ ಪ್ರ[illegible] ವಾಗಿದ್ದ ಕಾಯಿಲೆ ಸಮಾಧಾನವಾದ್ದರಿಂದ ಅವರು [illegible] ವೈದ್ಯರುಗಳ ಉಪಕಾರವನ್ನು ಮನ್ನಿಸಿ ಪ್ರೀತಿಯಿಂದ ಬಹುಮಾನ ಮಾಡಿದ[illegible]

****

ನಾಟುಕೋಟೆಚೆಟ್ಟಿಗಳು ಕಾಶಿಯಲ್ಲಿ ಕಳೆದ ವಾರ ೫೦,೦[illegible] ರೂಪಾಯಿ ಖರ್ಚುಮಾಡಿ, ಅಲ್ಲಿನ ದೇವಸ್ಥಾನದಲ್ಲಿ ಕುಂಭಾಭಿಷೇ[illegible] ವನ್ನು ಮಾಡಿಸಿ, ಸಾವಿರಾರು ಜನರಿಗೆ ಅನ್ನದಾನಮಾಡಿದರು.

****

ಕೊಯಮುತ್ತೂರು ಸೆಂಟ್ರಲ್ ಜೈಲ್ ಸಂಗಡ ಕಾರ್ಖಾನೆ[illegible] ಮ್ಯಾನೇಜರ್ ಮೆ॥ ದೇವಾಳ್ ಎಂಬಾತನು ಮದರಾಸ್ ಸರ್ಕಾರದವ[illegible] ದ ವೇತನಪಡೆದು ನೆಯಿಗೆಯನ್ನು ಚೆನ್ನಾಗಿ ಕಲಿತು ಬರುವುದ[illegible] ವಿಲಾಯಿತಿಗೆ ಈ ವಾರ ಪ್ರಯಾಣ ಮಾಡಿದನು.

****

ತಿರುವಾಂಕೂರು ಸಂಸ್ಥಾನಕ್ಕೆ ಯೂರೋಪಿನಿಂದಾಗಲಿ ಅಮೇ[illegible] ಕದಿಂದಾಗಲಿ ಯಾರಾದರೂ ಹೋಗಿ ಜಮೀನು ಮುಂತಾದ್ದನ್ನು ಪಡೆ[illegible] ಅಲ್ಲೇ ನಿಲ್ಲುವ ಇಷ್ಟವಿದ್ದರೆ ಅಂಥಾವರು ಮೊದಲೇ ಆ ಸಂಸ್ಥಾ[illegible] ಅಧಿಕಾರಿಗಳಿಗೆ ತಿಳಿಸಬೇಕೆಂದು ವಿಧಿಸಿರುತ್ತಾರೆ.

****

ಬಂಗಾಳದಲ್ಲಿ ರೈಲ್ವೆ ನೌಕರರು ಕೆಲಸಕ್ಕೆ ಬಾರದೆ ನಿಂತುಬಿ[illegible] ಟ್ಟಿದ್ದರಿಂದ ರೈಲ್ ಗಾಡಿಗಳನ್ನು ಕೆಡವಬೇಕೆಂದು ಪ್ರಯತ್ನಪಡುತ್ತಾ[illegible] ಲೆಫ್ಟಿನೆಂಟ್ ಗವರ್ನರವರು ಕಳೆದ ವಾರ ಪ್ರಯಾಣಮಾಡುತ್ತಿರು[illegible] ಅವರಿದ್ದ ಗಾಡಿಯನ್ನು ಕೆಡವಬೇಕೆಂದು ಪ್ರಯತ್ನ ಮಾಡಿದ್ದರು. [illegible] ವರ ದಯದಿಂದ ಅದು ನೆರವೇರಲಿಲ್ಲ.

****

ಕಳೆದ ವಾರ ಹಿಂದೂಸ್ಥಾನದಲ್ಲಿ ೪೯೬ ಜನರು ಮಾತ್ರ ಪ್ಲೇ[illegible] ಉಪದ್ರವದಿಂದ ಕಾಲವಾದರು. ಈ ಪೈಕಿ ಬೊಂಬಾಯಿ ಅಧಿಪತ್ಯ [illegible] ಮೈಸೂರು ಸಂಸ್ಥಾನ ೨೫, ಪಂಜಾಬ್ ಅಧಿಪತ್ಯ ೩೪, ಸಂಯು[illegible] ಅಧಿಪತ್ಯಗಳು ೧೩, ಬಂಗಾಳ ೧೩. ಕಳೆದ ಎರಡು ವಾರಗಳಲ್ಲಿ [illegible] ಗೂರ್ ಪಟ್ಟಣದಲ್ಲಿ ೩೪೦ ಮರಣಗಳಾಗಿವೆ.

****

ಕೊಯಮುತ್ತೂರಿನಲ್ಲಿ ಒಬ್ಬ ತಂದೆಯು ತನ್ನ ಹೆಂಡತಿಯನ್ನು ಮಗನನ್ನೂ ಬಿಟ್ಟು ಪ್ರತ್ಯೇಕವಾಗಿದ್ದನು. ಅವನು ಒಂದು ದಿನ [illegible] ನ ಮನೆ ಬಾಗಿಲು ಒಡೆದು ನುಗ್ಗುವುದಕ್ಕೆ ಪ್ರಯತ್ನಪಟ್ಟು, ತ[illegible] ಮಕ್ಕಳಿಗೆ ಜಾಗವಾಗಿ, ಮಗನನ್ನು ಬಿಸಿಕೆಂಡದ ಕೊಡಲಿ [illegible] ಹಾಕಿರುತ್ತಾನೆ. ಅವನಿಗೆ ಮರಣದಂಡನೆ ವಿಧಿಸಲ್ಪಟ್ಟಿತು.

****

ರಾಂಪುರ ಸಂಸ್ಥಾನದ ದಿವಾನರಾದ ಖಾನ್ ಬಹದ್ದೂರ್ ಮೌ[illegible] ಅಬ್ದುಲ್ ಗಫಾರ್ ಯವರ ಭಾವಮೈದನನ್ನು ಲಂಚ ತೆಗೆದುಕೊಂ[illegible] ನೆಂದು ಶಿಕ್ಷಿಸಲ್ಪಟ್ಟಿದ್ದರು. ಅವನು ಲಾಕಪ್ಪಿನಲ್ಲಿ ಆತ್ಮಹತ್ಯ ಮಾ[illegible] ಕೊಂಡನೆಂತಲೂ, ದಬಿಗೆ ಆ ದಿವಾನರೂ ತಮ್ಮ ಕೆಲಸಕ್ಕೆ ರಾ[illegible] ನಾಮೆ ಕೊಟ್ಟುಬಿಟ್ಟರೆಂತಲೂ ತಂತೀ ವರ್ತಮಾನ ಬಂದಿದೆ.

****

ಅಸ್ಸಾಂ ಪ್ರಾಂತ್ಯಕ್ಕೆ ಸೇರಿದ ಸುಮಾರ್ ಕಣಿವೆಯ ಟೀ ತೋ[illegible] ಗಳಲ್ಲಿ ಗೋಕಾಯಿಗಳಿಗೆ ಕಾಲುಬಾಯಿ ರೋಗ ಕಾಣಿಸಿಕೊಂ[illegible] ಕೆಲವು ಜನರು ಬಾಗುತ್ತಾ ಎರಡು ಲಕ್ಷ ದನಗಳೂ ಎಮ್ಮೆ ಕೋ[illegible] ಗಳೂ ಮೃತಪಟ್ಟವು. ಆ ಪ್ರಾಂತ್ಯದ ಪ್ರಜೆಗಳು ಪಶುವೈದ್ಯರ[illegible] ಕಳುಹಿಸಿಕೊಡಬೇಕೆಂತಲೂ ವಿದ್ಯಾಶಾಲೆಗಳನ್ನು ಸ್ಥಾಪಿಸಿಕೊ[illegible] ಕೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಂಡಿದಾರೆ.

****

ಡಿಂಡಿಗಲ್ ಪಟ್ಟಣದ ಮೆ॥ ಕಂದಸ್ವಾಮಿಪಿಳ್ಳೆ ಎಂಬ ಜೋ[illegible] ಸನು ಮಳೆ ಅಪಾರವಾಗಿ ಸುರಿಯುತ್ತೆಂದು ಈ ವರುಷ ಎರಡು [illegible] ಪ್ರಕಟಿಸಿದನು. ಆದರೂ ಮಳೆ ಬರಲಿಲ್ಲ. ಈಗಲೂ ಆತನು [illegible]

ಷ್ಟು ೧೩ ಅಥವಾ ೧೪ ನೆ ತಾರೀಖಿನಿಂದ ಖಂಡಿತವಾಗಿಯೂ ಪ್ರೋ ಮಳೆ ಹಿಡಿಯುತ್ತೆಂದೂ ಅಲ್ಲಿಂದಾಚೆಗೆ ೧೦೫ ದಿವಸಗಳ ವರೆಗೆ ಅಲ್ಲ ಮಳೆ ತಪ್ಪದೆ ಸುರಿಯುತ್ತಾ ಬರುವುದೆಂದೂ ತಿಳಿಸಿರುವನು

◆◆◆◆

ಕಳೆದ ಸೋಮವಾರ ಮಧ್ಯಾಹ್ನ ಬೊಂಬಾಯಿ ಸಮುದ್ರ ತೀರ ಒಂದು ಸಣ್ಣ ಹಡಗು ನೀರಿನಲ್ಲಿದ್ದ ಬಂಡೆಗೆ ಬಡಿದು ಮುಳುಗಿ ಹೋಯಿತು. ಅದರಲ್ಲಿದ್ದ ಜನರ ಪೈಕಿ ಮೂವರು ಯೂರೋಪ್ಪಿಯನ್ನರೂ ಹನ್ನೊಂದು ಮಂದಿ ಸೇವಕರೂ ಸಮುದ್ರದ ಪಾಲಾದರು. ಇಂಥ ಪ್ರಾಣನಷ್ಟವು ಆ ಪಟ್ಟಣದ ಸಮುದ್ರ ತೀರದಲ್ಲಿ ಕಳೆದ ಮೂವತ್ತು ಸಂವತ್ಸರಗಳಿಂದಲೂ ಸಂಭವಿಸಿರಲಿಲ್ಲ.

◆◆◆◆

ಆಗ್ರಾಪಟ್ಟಣದಲ್ಲಿ ಐದು ಡಕಾಯಿತಿ, ಒಂದು ಕೊಲೆ, ಈ ಅಕೃತ್ಯಗಳನ್ನು ನಡೆಸಿದ ಕಳ್ಳರ ಗುಂಪನ್ನು ಹಬೀಬುಲ್ಲಾ ಎಂಬ ಇನ್ಸ್ಪೆಕ್ಟರು ಬಹು ಸಾಹಸ ಪಟ್ಟು ಹಿಡಿದನು. ಆ ಗುಂಪಿನಲ್ಲಿದ್ದ ೨೧ ಮಂದಿ ಅಪರಾಧಿಗಳನ್ನು ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡಿ, ಆ ಪೈಕಿ [illegible] ಮಂದಿಗೆ ಟಾಪು ಸಜಾ ವಿಧಿಸಿದರು, ಅವರಲ್ಲಿ ಅಗ್ರೇಸರನಾಗಿದ್ದ ಸಂತೋಂಗ್ ಠಾಕೂರ್ ಎಂಬುವನಿಗೆ ಮರಣದಂಡನೆಯಾಯಿತು

◆◆◆◆

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಗವರ್ನ್‌ಮೆಂಟಿನವರು ಕೋತೆಯಾರ್ ನದಿಗೆ ಅಡ್ಡಕಟ್ಟೆ ಹಾಕಿ ಭಾರೀ ಕೆರೆ ಕಟ್ಟಿ ಕಾಲುವೆ ನಾಲೆಗಳನ್ನು ಪ್ರಾರಂಭಿಸಿದ್ದರಷ್ಟೆ. ಈ ಅಣೆಕಟ್ಟೆಯ ಕೆಲಸಗಳು ಈಗ ಪೂರೈಸಿದವೆಂದು ತಿಳಿಯುವುದು. ಇದಕ್ಕೆ ಹತ್ತು ವರ್ಷ ಹಿಡಿಯಿತು, ೩೮ ಲಕ್ಷ ರೂಪಾಯಿ ಖರ್ಚಾಗಿದೆ. ಈ ಭಾರೀ ಯ ನಾಲೆ ನೀರು ಐದು ತಾಲ್ಲೂಕುಗಳಲ್ಲಿ ಹರಿದು, ಉದ್ದಕ್ಕೂ ಸಾವಿರಾರು ಎಕರೆ ಜಮೀನು ತರಿಯಾಗುವುದು

◆◆◆◆

ಬೊಂಬಾಯಿ ಆಧಿಪತ್ಯದ ಗವರ್ನರಾದ ಲಾರ್ಡ್ ಲಾಮಿಂಗ್ಟನ್‌ರವರು ಮುಂದಿನ ಡಿಸೆಂಬರ್ ತಿಂಗಳಲ್ಲಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ವಿಲಾಯಿತಿಗೆ ಹೊರಟು ಹೋಗುವವರಾಗಿದ್ದಾರೆ. ಇವರ [illegible]ಯವರ ದೇಹಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲದಿರುವದೇ ಇದಕ್ಕೆ ಕಾರಣ. ಇಲ್ಲಿಗೆ ಬರುವುದಕ್ಕೆ ಮೊದಲು ಅವರು ಎರಡು ವರುಷ ಆಸ್ಟ್ರೇಲಿಯಾ ದ್ವೀಪದಲ್ಲಿ ಕೆಲಸ ಮಾಡಿದ್ದಾರೆ. ಹಿಂದುಸ್ಥಾನಕ್ಕೆ ಬಂದ ಮೇಲೆ ಎರಡು ವರುಷ ಮಾತ್ರ ಸರ್ವೀಸ್ ಮಾಡಿದಂತಾಗುವುದು.

◆◆◆◆

ಬೊಂಬಾಯಿನಲ್ಲಿರುವ ಪಾರ್ಸಿ ಮುಖಂಡರು ಸಭೆ ಸೇರಿ ಒಂದು [illegible] ಫಂಡನ್ನು ಕೂಡಿಸಲಾರಂಭಿಸಿದಾರೆ. ಹಿಂದುಸ್ಥಾನದಲ್ಲೂ ಬೇರೆ ರಾಜ್ಯದಲ್ಲೂ ಇರುವ ಪಾರ್ಸಿ ಜನರಿಂದ ಚಂದಾ ಎತ್ತಬೇಕೆಂದು ತೀರ್ಮಾನವಾಗಿದೆ. ಪರ್ಷಿಯಾ ರಾಜ್ಯದಲ್ಲಿ ನಿರ್ಗತಿಕರಾಗಿರುವ ಪಾರ್ಸಿ ಹುಡುಗರಿಗೆ ಅಲ್ಲೇ ಒಂದು ದೊಡ್ಡ ವಿದ್ಯಾಶಾಲೆಯನ್ನು [illegible] ವಿದ್ಯೆ ಕಲಿಸಿ, ಅಭಿವೃದ್ಧಿಗೆ ತರಬೇಕೆಂಬುವದೇ ಇವರ ಉದ್ದೇಶ. ಫಂಡಿಗೆ ಇದುವರೆಗೆ ೭೮,೦೦೦ ರೂಪಾಯಿ ವಸೂಲಾಗಿರುವುದು

◆◆◆◆

ಅನಂತಶಯನದಲ್ಲಿ ಸರ್ಕಾರದವರು ಪ್ರತಿ ವರುಷವೂ ಕೆಲವು ಪಂಡಿತರಿಗೆ ೨,೦೦೦ ರೂಪಾಯಿ ಇನಾಮಾಗಿ ಹಂಚಿಕೊಟ್ಟು, ಉಪಯುಕ್ತವಾದ ವಿಷಯಗಳನ್ನು ಕುರಿತು ಅವರಿಂದ ಆಗಿಂದಾಗ್ಗೆ ಉಪನ್ಯಾಸಗಳನ್ನು ಮಾಡಿಸುತ್ತಾರೆ. ಇದಲ್ಲದೆ ಆ ಸಂಸ್ಥಾನಕ್ಕೆ ಸೇರಿದ [illegible] ಪಾಠಶಾಲೆಗಳಲ್ಲಿ ಸ್ಕೂಲ್ ಫೀ ದರಗಳನ್ನು ಹೆಚ್ಚು ಮಾಡಿ, [illegible]ದಿನ ಜನವರಿಯಿಂದ ಜಾರಿಗೆ ಬರತಕ್ಕದ್ದೆಂದು ಹುಕುಂ ಮಾಡಿದರು. ಮತ್ತು ಅದೇ ಜನವರಿ ಲಾಗಾಯತು ಹೆಣ್ಣುಮಕ್ಕಳೂ ಸ್ಕೂಲ್ ಫೀ ಯನ್ನು ಅರೆವಾಸಿ ಕೊಡಬೇಕೆಂದು ವಿಧಿಸಿದಾರೆ

◆◆◆◆

ಮಿನುಕೋಟಾ ವ್ಯವಸಾಯಾಭಿವೃದ್ಧಿ ಸಂಘದವರು ಈಚೆಗೆ ಪಟ್ಟವು ಎಂಬ ಊರಿನಲ್ಲಿ ಗೆಣಸು ಕಾಯಿಗಳ ಪ್ರದರ್ಶನವನ್ನು ನಡೆಸಿದರು. ಅಲ್ಲಿಗೆ ಕ್ಷೇತ್ರಪ್ರಜೆಗಳು ೩,೦೦೦ ದ [illegible]ಗಳನ್ನು ತಂದಿದ್ದರು. [illegible]ಕಾಯಿಗಳ ಬೆಳೆವಳಿಗೆ ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಆದರೆ ಆ ಸಂಘದವರು ತಮ್ಮಲ್ಲಿರುವ ಹಣವನ್ನು ಖರ್ಚು ಮಾಡಿ ಒಳ್ಳೆ ಬೀಜದ ಜೋಳಗಳನ್ನು ತರಿಸಿ ಗ್ರಾಮಗಳ ಮೇಲೆ ಕಳುಹಿಸುವೆವೆಂತಲೂ, ರೈತರು ಅವುಗಳ ಸಹಾಯದಿಂದ ತಮ್ಮ [illegible]ಗಳನ್ನು [illegible] ಸ್ಥಿತಿಗೆ ತಂದುಕೊಳ್ಳುವುದಕ್ಕೆ ಅನುಕೂಲಿಸುವುದೆಂತಲೂ ಗೊತ್ತುಮಾಡಿದಾರೆ

◆◆◆◆

ಹೈದರಾಬಾದಿನಲ್ಲಿರುವ ಮುಲ್ಲಾ ಅಬ್ದುಲ್ ಕಾಯಂ ಎಂಬ ಮಹನೀಯರು ದೊಡ್ಡ ಮನುಷ್ಯರು ಹೈದರಾಬಾದಿನ ವಿದ್ಯಾರ್ಥಿಗಳನ್ನು [illegible], ಅಮೇರಿಕಗಳಿಗೆ ವೇತನ ಕೊಟ್ಟು ಕಳುಹಿಸಿ ಕಸಬುಗಳನ್ನು ಕಲಿಸಿಕೊಂಡು ಅವರ ಮೂಲಕ ಹೈದರಾಬಾದಿನಲ್ಲಿ ಸಕಲ ವಿಧವಾದ ಕಸಬುಗಳನ್ನೂ ಅಭಿವೃದ್ಧಿಗೆ ತರಬೇಕೆಂದು ಸಾಹಸ ಪಡುತ್ತಿದಾರೆ. ಇದಕ್ಕೋಸ್ಕರ ಅವರು [illegible] ಲಕ್ಷ ರೂಪಾಯನ್ನು ಕೂಡಿಸಿ ಫಂಡು ಹಾಕಬೇಕೆಂದು ಅಲ್ಲಿನ ಐಶ್ವರ್ಯವಂತರಿಗೆಲ್ಲಾ ಪ್ರೋತ್ಸಾಹಪಡಿಸುತ್ತಲೂ, ಅವರಿಂದ ಚಂದಾ ಹಣವನ್ನು ಕೂಡಿಸುತ್ತಲೂ ಇದ್ದಾರೆ. ಇವರ ದೇಶಾಭಿಮಾನವು ಸ್ತೋತ್ರಾರ್ಹವಾದದ್ದು.

◆◆◆◆

ಮಿ॥ ಡಬ್ಲ್ಯು. ಸಿ. ಬಾನರ್ಜಿ ಯವರು ಕಾಲವಾದರೆಂದು ತಂತಿ ವರ್ತಮಾನ ಬಂದಿದೆ. ಈ ದೊಡ್ಡ ಮನುಷ್ಯರು ಬ್ಯಾರಿಸ್ಟರಾಗಿ ಕಲ್ಕತ್ತಾ ಹೈ ಕೋರ್ಟಿನಲ್ಲಿ ಬಹುಕಾಲ ಮೊಕದ್ದಮೆಗಳನ್ನು ಹಿಡಿದು ನಡೆಸುತ್ತಾ ತುಂಬಾ ಹೆಸರುವಾಸಿಗೆ ಬಂದವರು. ಇವರು ನ್ಯಾಷನಲ್ ಕಾಂಗ್ರೆಸ್ ಎಂಬ ಹಿಂದುಸ್ಥಾನದ ಸಾರ್ವಜನಿಕ ಸಭೆಗೆ ಪ್ರಾರಂಭದಿಂದಲೂ ತುಂಬಾ ಸಹಾಯಕರಾಗಿದ್ದರು. ಕೆಲವು ವರುಷಗಳ ಹಿಂದೆ ಇವರು ವಿಲಾಯಿತಿಗೆ ಹೋಗಿ ಅಲ್ಲೇ ನಿಂತು, ಹಿಂದುಸ್ಥಾನದಿಂದ ಹೋಗುವ ಅಪೀಲುಗಳನ್ನು ಹಿಡಿದು ಅಲ್ಲಿನ ಪ್ರಿವಿ ಕೌನ್ಸಿಲ್‌ನಲ್ಲಿ ವಾದಿಸುತ್ತಲೂ, ಹಿಂದುಸ್ಥಾನದ ಕ್ಷೇಮಚಿಂತಕರಾಗಿ ಅಲ್ಲಿರುವ ದೊಡ್ಡ ಮನುಷ್ಯರ ಸಂಗಡಲೂ ಅಧಿಕಾರಿಗಳ ಸಂಗಡಲೂ ಹೋರಾಡುತ್ತಲೂ ಇದ್ದರು. ಇಂಥಾ ಸಹಾಯಕರನ್ನು ಕಳೆದುಕೊಂಡದ್ದರಿಂದ ಹಿಂದುಸ್ಥಾನದ ಸಾರ್ವಜನಿಕ ಸಮಾಜ ಕಾರ್ಯಕ್ಕೆ ಬಹಳ ನಷ್ಟವಾಯಿತೆಂಬುವುದರಲ್ಲಿ ಸಂಶಯವಿಲ್ಲ

◆◆◆◆

ಉತ್ತರದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯಲ್ಲಿ ಕಳೆದ ವಾರ ೩೦,೬೦೦ ಮಂದಿ ಕಡಿಮೆಯಾದರು. ಆ ಪೈಕಿ ಬೊಂಬಾಯಿ ಆಧಿಪತ್ಯದವರು ೨೩,೮೦೦ ಮಂದಿ. ಸಂಯುಕ್ತ ಆಧಿಪತ್ಯಗಳಲ್ಲಿ ಕ್ಷಾಮಪೀಡಿತರ ಸಂಖ್ಯೆಯು ೧೫,೯೦೦ ಕ್ಕೆ ಇಳಿಯಿತು. ಆದರೂ ಸರ್ಕಾರದವರ ಅನ್ನಛತ್ರಗಳಲ್ಲಿದ್ದವರ ಸಂಖ್ಯೆಯು ೯೭,೩೦೦ ರಿಂದ ೬೧,೬೦೦ ಕ್ಕೆ ಹೆಚ್ಚಿತು. ಪೂರ್ವಬಂಗಾಳಾ ಮತ್ತು ಆಸ್ಸಾಂನಲ್ಲಿ ೩,೦೦೦ ಜನರು ರಿಲೀಫ್ ಕಾಮಗಾರಿಗಳಲ್ಲೂ ೧೨,೮೦೦ ಜನರು ಧರ್ಮ ಛತ್ರಗಳಲ್ಲೂ ಸೇರಿದ್ದರು. ನೋಕೋಕಾಳಿ ಮತ್ತು ಬಾಕರಗಂಜೆಗಳಲ್ಲೇ ಕ್ಷಾಮ ಹೆಚ್ಚಾಗಿದೆ, ಫರಿದ್‌ಪುರದಲ್ಲಿ ಕ್ಷಾಮ ನಿವಾರಣೆಯಾಗಿದೆ ಎಂತಲೇ ಹೇಳಬಹುದು. ಈ ಕಡೆ ರಾಜಪುಟಾನಾದಲ್ಲಿ ಇನ್ನೂ ಅಲ್ಲಲ್ಲಿ ಅಂದರೆ ಜೈಸಲ್ಮೀರ್, ಭರತಪುರ, ಧೋಲ್‌ಪುರ ಮೊದಲಾದ ಸಂಸ್ಥಾನಗಳಲ್ಲಿ ಮಳೆ ಆಗಬೇಕಾಗಿದೆ. ಅಲ್ಪಸ್ವಲ್ಪ ಆಗಿರುವ ಬೆಳೆಗಳು ಒಣಗುವ ಸ್ಥಿತಿಯಲ್ಲಿವೆ. ಮಧ್ಯ ಇಂಡಿಯಾದಲ್ಲಾದರೋ ಕ್ಷಾಮದ ಕಷ್ಟಗಳು ಸಂಪೂರ್ಣವಾಗಿ ನಿವಾರಣೆಯಾದಂತೆಯೇ ತೋರುವುದು.

◆◆◆◆

ಪೂನಾ ಪಟ್ಟಣದಲ್ಲಿ ಒಂದು ಪಂಚಾಯಿತಿ ಸಂಘವಿರುವುದು. ಈ ಸಂಘಕ್ಕೆ ೮೯ ಜನ ದೊಡ್ಡ ಮನುಷ್ಯರು ಸೇರಿಕೊಂಡು, ತಮ್ಮಲ್ಲಿ ಸಮರ್ಥರಾದ ೧೪ ಮೆಂಬರುಗಳನ್ನು ಪಂಚಾಯಿತಿ ಕೋರ್ಟಿನ ಜಡ್ಜಿಗಳನ್ನಾಗಿ ನೇಮಿಸಿ, ಅವರು ಸರದಿಯ ಪ್ರಕಾರ ಕೋರ್ಟಿನಲ್ಲಿ ಕುಳಿತುಕೊಂಡು ಮೊಕದ್ದಮೆಗಳನ್ನು ಫೈಸಲ್ ಮಾಡುವಂತೆ ಏರ್ಪಾಡು ಮಾಡಿಕೊಂಡಿದಾರೆ. ಈ ಕೋರ್ಟಿನಲ್ಲಿ ಕಳೆದ ೧೯೦೫ ನೆ ವರುಷದಲ್ಲಿ ೯೫೩ ಮೊಕದ್ದಮೆಗಳು ದಾಖಲಾದವು. ಪಂಚಾಯಿತಿ ಜಡ್ಜಿಗಳು ೩೨೩ ಮೊಕದ್ದಮೆಗಳನ್ನು ತನಿಖೆಯಿಂದ ಫೈಸಲ್ ಮಾಡಿದರು. ೮೬ ರಾಜೀ ಮಾಡಲ್ಪಟ್ಟವು. ೫೬ ವಜಾ ಆದವು. ೭೨ ಇನ್ನೂ ವ್ಯವಸ್ಥೆ ಆಗದೆ ಉಳಿಕೊಂಡಿವೆ ಎಂದು ಈ ಸಂಘದ ವಾರ್ಷಿಕ ರಿಪೋರ್ಟಿನಿಂದ ತಿಳಿದು ಬರುತ್ತದೆ. ಕಕ್ಷಿಗಾರರು ಸರ್ಕಾರ ಕೋರ್ಟುಗಳಲ್ಲಿ ಮೊಕದ್ದಮೆಗಳು ಇತ್ಯರ್ಥವಾಗುವುದಕ್ಕೆ ಬಹಳ ಕಾಲ ಹಿಡಿಯುತ್ತೆಂತಲೂ, ಬಹಳ ಹಣ ಖರ್ಚಾಗುವುದೆಂತಲೂ ತಿಳಿದು ಈ ಪಂಚಾಯಿತಿ ಕೋರ್ಟಿಗೆ ಬಂದು ಮೊಕದ್ದಮೆಗಳನ್ನು [illegible] ಬೇಗಬೇಗನೆ ಫೈಸಲ್ ಮಾಡಿಸಿಕೊಂಡು ಹೋಗುತ್ತಾರೆ. ಇಂಥ ತೃಪ್ತಿಕರವಾದ ಏರ್ಪಾಡು ಮಾಡಿಕೊಂಡಿರುವುದಕ್ಕಾಗಿ ಆ ಸಂಘದವರನ್ನು ಎಲ್ಲರೂ ಹೊಗಳುತ್ತಿರುವರು.

◆◆◆◆

ಪೂರ್ವಬಂಗಾಳಾ ಆಧಿಪತ್ಯಕ್ಕೆ ಸೇರಿದ [illegible]ರಿನಲ್ಲಿ ಕಳೆದ ೧೮೯೩ ನೆ ಇಸವಿಯಲ್ಲಿ ಟೀ ತೋಟದ ಮಾಲೀಕನಾದ ಕಾಕ್‌ಬರ್ನ್ ಎಂಬುವನನ್ನೂ, ಎಂಟು ಮಂದಿ ಕಾನಿಸ್ಟೇಬಲರನ್ನೂ ಒಬ್ಬ ಹೆಂಗಸನ್ನೂ ದುಷ್ಟ ದ್ರೋಹಿಗಳು ಕೊಂದುಹಾಕಿದರು. ಆ ಹೆಂಗಸು ಸಾಯುವಾಗ್ಗೆ ಒಬ್ಬ ಕಾಬೂಲಿನವನೂ ಕೆಲವು ಮಂದಿ ಕೇಬಾರಿನವರೂ ಬಂದು ತನ್ನೆಲ್ಲರನ್ನೂ ಕೊಂದರೆಂದು ವಾಙ್ಮೂಲ ಬರೆಸಿದ್ದಳು. ಈಚೆಗೆ ಪೋಲೀಸಿನವರು ಏಳು ಮಂದಿ ಮ[illegible]ದ ನಿವಾಸಿಗಳನ್ನು ಹಿಡಿದು, ಅವರೇ ಆ ಕೊಲೆ ಮಾಡಿದವರೆಂದು ಮೊಕದ್ದಮೆ ತಂದರು. ಸೆಷನ್ಸ್ ಜಡ್ಜರು ಅವರನ್ನು ದರ್ಯಾಫ್ತು ಮಾಡಿ, ಆ ಪೈಕಿ ನಾಲ್ವರನ್ನು ಗಲ್ಲಿಗೆತ್ತಬೇಕೆಂತಲೂ, ಇನ್ನು ಮೂರು ಮಂದಿ ಟಾಪ್ ಸಜಾ ಅನುಭವಿಸಬೇಕೆಂತಲೂ ಶಿಕ್ಷೆ ವಿಧಿಸಿದರು. ಈ ಅಪರಾಧಿಗಳು ಕಲ್ಕತ್ತಾ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಾಗ ಹೈ ಕೋರ್ಟ್ ಜಡ್ಜಿಗಳು ಆ ಮೊಕದ್ದಮೆಯ ಕಟ್ಟನ್ನೆಲ್ಲಾ ಪರಾಂಬರಿಸಿ, ಅವರನ್ನೆಲ್ಲಾ ಖುಲಾಸ್ ಮಾಡಿದೆ ಎಂತಲೂ, ಆ ಕೋರ್ಟಿನ ಜಡ್ಜಿಯನ್ನೂ ಮ್ಯಾಜಿಸ್ಟ್ರೇಟರನ್ನೂ ಪೋಲೀಸಿನವರನ್ನೂ ಚೆನ್ನಾಗಿ ದಂಡಿಸಿ, ಹೀಗೆ ನಿರಪರಾಧಿಗಳನ್ನು ಹಿಡಿದು ಶಿಕ್ಷಿಸುವುದು ಯೋಗ್ಯವಲ್ಲವೆಂತಲೂ ಜಡ್ಜ್‌ಮೆಂಟು ಹೇಳಿದರು. ಹನ್ನೆರಡು ವರುಷಗಳ ಮೇಲೆ ಈಗ ಸರ್ಕಾರದವರು ಆ ಏಳು ಮಂದಿಯನ್ನು ಹಿಡಿದಿದಾರೆ. ಇವರಲ್ಲಿ ಮೂರು ಜನ ಮೇಲ್ಕಂಡ ಕೊಲೆಗಳು ನಡೆದ ವೃತ್ತಾಂತವನ್ನೆಲ್ಲಾ ಪರಿಷ್ಕಾರವಾಗಿ ವಿವರಿಸಿ ವಾಙ್ಮೂಲ ಕೊಟ್ಟಿದಾರೆಂದು ತಿಳಿದುಬಂದಿದೆ

ವಿದೇಶ ವರ್ತಮಾನಗಳು.

ಸ್ಪೇನ್ ರಾಜ್ಯಕ್ಕೆ ಸೇರಿದ ಸೆರ್ಗೋವಿಯಾದಲ್ಲಿ ಕಳೆದ ವಾರ ಭಯಂಕರವಾದ ಆನೆಕಲ್ಲಿನ ಮಳೆ ಸುರಿಯಿತು. ಆನೆಕಲ್ಲುಗಳು ಕಿತ್ತಳೆ ಹಣ್ಣಿನ ಗಾತ್ರ ಇರುದವು. ಅನೇಕ ಮನೆಗಳ ಮಾಳಿಗೆಗಳು ಒಡೆಯಲ್ಪಟ್ಟವು. ಒಬ್ಬನಿಗೆ ಪ್ರಾಣವೇ ಹೋಯಿತು. ೫೦ ಮಂದಿಗೆ ಗಾಯಗಳಾದವು

◆◆◆◆

ಲಂಡನ್ ಪಟ್ಟಣದಲ್ಲಿ ತಿಂಡಿ ಸಾಮಾನು ಮಾರಿ ಬಿಕರಿಮಾಡುವ ಅಂಗಡಿಗಳನ್ನಿಟ್ಟು ನಡಿಸುತ್ತಿರುವ ಕಂಪನಿಯ ಮ್ಯಾನೇಜರಾಗಿದ್ದ ಮಿ॥ ಜಾರ್ಜ್ ಕೋಲೆ ಎಂಬಾತನು ಕುಡುಕತನವನ್ನು ಪ್ರಜೆಗಳಲ್ಲಿ ಕಡಿಮೆ ಮಾಡುವಂಥಾ ಧರ್ಮಸಂಘಕ್ಕೆ ತನ್ನ ಆಸ್ತಿಯಲ್ಲಿ ೩೭॥ ಲಕ್ಷ ರೂಪಾಯಿ ಕೊಟ್ಟಿದಾನೆ

ಲಂಡನ್ ಪಟ್ಟಣದ ಪಾರ್ಕ್ ಲೇನ್ ಎಂಬ ಬೀದಿಯಲ್ಲಿದ್ದ ಕಾಲವಾದ ಫ್ರಾಂಕ್ ಬೇಲೀ ಎಂಬಾತನು ೨೩,೧೧,೦೦೦ ರೂಪಾಯಿ ಸಂಪಾದನೆ ಮಾಡಿಟ್ಟು, ಅದರಲ್ಲಿ ೧೨ ಲಕ್ಷ ರೂಪಾಯನ್ನು ಲಂಡನ್ ಪಟ್ಟಣದಲ್ಲಿರುವ ಎಡ್ವರ್ಡ್ ದೊರೆಯವರ ಆಸ್ಪತ್ರೆ ಫಂಡಿಗೆ ಕೊಡಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ.

◆◆◆◆

ಆಫ್ರಿಕದ ಉತ್ತರ ಭಾಗದಲ್ಲಿ ತುರ್ಕಿಯ ಮತ್ತು ಈಜಿಪ್ಟಿನ ದಾಯಭಾರಿಗಳು ರಾಫಾ ಎಂಬ ಸ್ಥಳದಲ್ಲಿ ಸೇರಿ ಎಲ್ಲೆಯನ್ನು ಗುರುತು ಮಾಡುತ್ತಿದಾರೆ. ಮೊದಲಿನ ಎಲ್ಲೆಯನ್ನು ತುರ್ಕಿಯವರು ಒಪ್ಪದೆ [illegible]ದಿಂದ ರಾಫಾವರೆಗೆ ತಮ್ಮ ಸರಹದ್ದೆಂದು ಹೇಳುತ್ತಿದಾರೆ. ಈ ಹೋರಾಟವು ಇನ್ನೂ ಮುಕ್ತಾಯವಾಗಿಲ್ಲ

◆◆◆◆

ಫಿಲಿಪ್ಪೋಪೊಲೀಸ್ ಪಟ್ಟಣದಲ್ಲಿ ತುರ್ಕಿ ಜನರು ಗ್ರೀಕರ ಮೇಲೆ ತಿರುಗಿಬಿದ್ದು ಅವರ ಮೂರು ದೇವಾಲಯಗಳನ್ನು ಆಕ್ರಮಿಸಿಕೊಂಡಿದಾರೆ. ಅವರವರಿಗೆ ಬಹಳ ಹೊಡೆದಾಟವಾಯಿತು. ಕೆಲವರು ಸತ್ತರು. ಕೆಲವರಿಗೆ ಗಾಯಗಳಾದವು. ಕಡೆಗೆ ಸೈನ್ಯವನ್ನು ಕಳುಹಿಸಿ ಈ ದಂಗೆಯನ್ನು ಶಮನ ಮಾಡಬೇಕಾಯಿತೆಂದು ತಂತೀ ವರ್ತಮಾನಬಂದಿದೆ

◆◆◆◆

ಬ್ರಿಟಿಷ್ ಕೊಲಂಬಿಯಾ ಎಂಬ ಆಧಿಪತ್ಯದಲ್ಲಿ ಸರ್ಕಾರದವರು ಹಿಂದುಸ್ಥಾನದಿಂದ ೩೦೦ ಸಿಖ್ ಜನರನ್ನು ಕರೆಸಿ ಸೈನ್ಯಕ್ಕೆ ಸೇರಿಸಿಕೊಂಡಿದಾರೆ. ಈ ಸೈನಿಕರು ಬಹಳ ಸಮರ್ಥರೆನಿಸಿಕೊಂಡಿರುವುದನ್ನು ನೋಡಿ ಆ ಸರ್ಕಾರದವರು ಮತ್ತೆ ಹಿಂದುಸ್ಥಾನದಿಂದ ೮,೦೦೦ ಸಿಖ್ ಜನರನ್ನು ಕರೆಸಿಕೊಳ್ಳಬೇಕೆಂದು ಪ್ರಯತ್ನಪಟ್ಟಿರುವರು

◆◆◆◆

ಇಟಲಿ ರಾಜ್ಯಕ್ಕೆ ಸೇರಿದ ಮಿಲಾನ್ ನಗರದಲ್ಲಿ ಇಟಲಿ ಆಸ್ಟ್ರಿಯಾ ರಾಜ್ಯಗಳವರು ಸೇರಿ ಸರ್ವವಸ್ತು ಪ್ರದರ್ಶನೋತ್ಸವವನ್ನು ನಡಸುತ್ತಿದಾರೆ. ಈ ಪ್ರದರ್ಶನಶಾಲೆಯ ಒಂದು ಭಾಗಕ್ಕೆ ಕಳೆದ ವಾರ ಬೆಂಕಿಬಿದ್ದು ಅಪಾರ ನಷ್ಟವಾಯಿತು. ಸುಮಾರು ೨೪ ಲಕ್ಷ ರೂಪಾಯಿನ ಸಾಮಾನುಗಳು ಸುಟ್ಟುಹೋದಂತೆ ತಂತೀ ವರ್ತಮಾನ ಬಂದಿದೆ.

◆◆◆◆

ದಕ್ಷಿಣ ಆಫ್ರಿಕಾದಲ್ಲಿ ಚಿನ್ನ, ವಜ್ರ ಮೊದಲಾದ ಗಣಿಗಳೊಳಗೆ ಕಳೆದ ಜೂನ್ ಅಂತ್ಯದಲ್ಲಿ ೫೭,೩೦೦ ಮಂದಿ ಚೀಣಾ ಜನರೂ ೬೩,೫೦೦ ಸ್ವದೇಶಿಗಳೂ ಸೇರಿ ಕೆಲಸಮಾಡುತ್ತಿದ್ದರು. ೮೯ ಜನ ಚೀಣೆಯವರು ರೋಗಾದಿಗಳಿಂದ ಜೂನ್ ತಿಂಗಳಲ್ಲಿ ಮೃತಪಟ್ಟರು. ಇಂಗ್ಲಿಷ್ ಸರ್ಕಾರದವರು ಆ ತಿಂಗಳಲ್ಲಿ ೬೨೦ ಜನ ಚೀಣೆಯವರಿಗೆ ಖರ್ಚು ಮುಂತಾದ್ದನ್ನು ಕೊಟ್ಟು ದಕ್ಷಿಣ ಆಫ್ರಿಕಾದಿಂದ ವಾಪಸು ಕಳುಹಿಸಿದರು.

◆◆◆◆

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ಸ್ವದೇಶಿಗಳು ದಂಗೆ ಎದ್ದು, ಇಂಗ್ಲಿಷ್ ಸೈನಿಕರ ಮೇಲೆ ಯುದ್ಧ ಮಾಡುತ್ತಿದ್ದರು. ಈಗ ಆ ಇಂಗ್ಲಿಷ್ ಸೈನ್ಯದ ಕಮ್ಯಾಂಡರಾದ ಕರ್ನಲ್ ಮೆಕೆಂಜಿಯವರು ಯುದ್ಧಭೂಮಿಯಿಂದ ವಾಪಸು ಬಂದು, ದಂಗೆಯೆಲ್ಲಾ ಮುಕ್ತಾಯವಾಯಿತೆಂತಲೂ, ಕೆಲವು ಸೈನ್ಯವನ್ನು ಒಂದು ವಾರದಲ್ಲೂ, ಇನ್ನು ಕೆಲವನ್ನು ಎರಡು ವಾರಗಳಲ್ಲೂ ಯುದ್ಧಭೂಮಿಯಿಂದ ವಾಪಸು ಕರೆಸುವರೆಂತಲೂ, ಹೊಸದಾಗಿ ಕೆಲವು ಸೈನ್ಯವನ್ನು ಕೂಡಿಸಿ ಆ ದಂಗೆಯಾದ ಪ್ರಾಂತ್ಯದಲ್ಲಿ ಆರು ತಿಂಗಳು ಇದ್ದು ಬರುವಂತೆ ಕಳುಹಿಸುವುದಾಗಿಯೂ ಡರ್ಬನ್ ಪಟ್ಟಣದಲ್ಲಿ ಹೇಳಿದರು.

◆◆◆◆

ಪರ್ಷಿಯಾ ರಾಜ್ಯದ ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಪ್ರಜೆಗಳು ಅಧಿಕಾರಿಗಳ ಮೇಲೆ ತಿರುಗಿಬಿದ್ದು ಬಹಳ ಗಲಭೆಮಾಡಿ, ರಾಜ್ಯಭಾರ ಕ್ರಮದಲ್ಲಿ ಬದಲಾವಣೆ ಆಗಬೇಕೆಂದು ಕೇಳುತ್ತಿದಾರಷ್ಟೆ. ಷಾ ಸುಲ್ತಾನರು ತಮ್ಮ ಮಂತ್ರಿಯನ್ನು ಕೆಲಸದಿಂದ ವಜಾಮಾಡಿ, ಮುಷೀರುದ್ದೌಲಾ ಎಂಬ ದೊಡ್ಡಮನುಷ್ಯನಿಗೆ ಮಂತ್ರಿಪದವಿಯನ್ನು ಕೊಟ್ಟರು. ಇತರ ಬದಲಾವಣೆಗಳನ್ನು ಮಾಡಲಿಲ್ಲವಾದ್ದರಿಂದ ಜನರು ಇನ್ನೂ [illegible] ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಬಿಟ್ಟಿದಾರೆ. ವ್ಯಾಪಾರ ನಡೆಯುವುದಿಲ್ಲ. ೧೩,೦೦೦ ಪ್ರಜೆಗಳು ಇಂಗ್ಲಿಷ್ ರಾಯಭಾರಿಯ ಮರೆಹೊಕ್ಕು, ರಾಜಕೀಯ ಬದಲಾವಣೆ ಮಾಡಿಸಿಕೊಡಬೇಕೆಂದು ಕೇಳುತ್ತಿದಾರೆ

◆◆◆◆

ವಿಲಾಯಿತಿಗೆ ಸೇರಿದ ನ್ಯೂಕ್ಯಾಸಲ್ ಪಟ್ಟಣದಲ್ಲಿ ಒಂದು ವರ್ತಮಾನ ಪತ್ರಿಕೆಯನ್ನು ಬಹುಕಾಲದಿಂದಲೂ ಪ್ರಕಟಿಸುತ್ತಾ, ಸ್ವದೇಶವತ್ಸಲನೆಂತಲೂ ರಾಜನೀತಿಯನ್ನು ತಿಳಿದವನೆಂತಲೂ ವರ್ತಮಾನ ಪತ್ರಿಕೆಯನ್ನು ನಡೆಸತಕ್ಕವನೆಂತಲೂ ಕೀರ್ತಿಹೊಂದಿ, ಸಕಲ ಪ್ರಜೆಗಳ ಮತ್ತು ಅಧಿಕಾರಿಗಳ ಪ್ರೀತಿ ಗೌರವಗಳನ್ನೂ ಸಂಪಾದಿಸಿಕೊಂಡಿದ್ದ ಮಿ॥ ಜೋಸೆಫ್ ಕೋವೆನ್ ಎಂಬಾತನ ಹೆಸರನ್ನು ಶಾಶ್ವತ ಪಡಿಸುವುದಕ್ಕಾಗಿ ಆತನ ಪ್ರತಿಮೆಯನ್ನು ಕಂಚಿನಲ್ಲಿ ಮಾಡಿಸಿ ಪ್ರತಿಷ್ಠೆ ಮಾಡಿದರು. ಸಾವಿರಾರು ಜನರು ಆ ದಿನ ಹಾಜರಾಗಿದ್ದು ಆತನ ಪ್ರಜಾರಂಜಕ ಕಾರ್ಯಗಳನ್ನು ಹೊಗಳಿದರು. ಅನೇಕ ದೊಡ್ಡ ಮನುಷ್ಯರು ಆತನ ವಿಷಯವಾಗಿ ಕಾಗದಗಳನ್ನು ಬರೆದು ಕಳುಹಿಸಿದರು.

◆◆◆◆

ಭಾನುವಾರಗಳಲ್ಲಿ ಜನರು ವಿಶ್ರಾಂತಿ ಸುಖವನ್ನು ಪಡೆಯಬೇಕಾದದ್ದು ಮಹಾ ಆವಶ್ಯವೆಂದು ಹಿಂದಿನವಾರ ಯೂರೋಪ್ ಅಮೇರಿಕಗಳ ಕೆಲವು ಸಂಸ್ಥಾನಗಳಲ್ಲಿ ತೀರ್ಮಾನ ಮಾಡಿರುತ್ತಾರೆ. ಫ್ರಾನ್ಸ್ ಸರ್ಕಾರದ ಪಾರ್ಲಿಮೆಂಟಿನವರು ಒಂದು ಕಾನೂನ್ ಮಾಡಿ, ಅಲ್ಲಿ ವ್ಯಾಪಾರ ಕೈಗಾರಿಕೆಗಳೇ ಮೊದಲಾದ ಕಸಬುಗಳನ್ನು ನಡಿಸುವ ಯಜಮಾನರು ಕೂಲಿಕಾರರಿಗೂ ಹಾಜರಿದಾರರಿಗೂ ವಾರಕ್ಕೊಂದುದಿವಸ

ವಿಶ್ರಾಂತಿ ಕೊಡಬೇಕೆಂದೂ, ಕೆಲಸ ನಿಲ್ಲಿಸುವುದು ಸಾಧ್ಯವಿಲ್ಲದಂಥಾ ಸಂದರ್ಭಗಳಲ್ಲಿ ಸರದಿಯ ಮೇರೆ ಕೆಲಸ ಮಾಡಿಸಬೇಕೆಂದೂ ನಿರ್ಧಾರಕ ಮಾಡಿದಾರೆ. ಅಮೇರಿಕಾ ಸಂಸ್ಥಾನದ ನ್ಯೂ ಯಾರ್ಕ್ ಮೊದಲಾದ ದೊಡ್ಡ ಪಟ್ಟಣಗಳಲ್ಲಿಯೂ ಅದೇ ರೀತಿ ಸಮಸ್ತ ಜನರಿಗೂ ವಾರದಲ್ಲಿ ಒಂದುದಿನ ವಿರಾಮ ಸಿಕ್ಕುವಂತೆ ಏರ್ಪಾಡು ಮಾಡಿದಾರೆ. ಇದಕ್ಕೆ ವಿರೋಧವಾಗಿ ಕೆಲಸ ಮಾಡಿಸುವಂಥಾ ಯಜಮಾನರನ್ನು ಆಯಾ ಸರ್ಕಾರದವರು ಹಿಡಿದು ದಂಡಿಸುತ್ತೇವೆಂದು ತಿಳಿಸಿದಾರೆ.

ಜಪಾನ್ ರಾಜ್ಯದವರ ಸ್ಯಾನಿಟರಿ (ಆರೋಗ್ಯ ವಿಚಾರವಾದ) ಏರ್ಪಾಡುಗಳು ಸ್ತೋತ್ರಾರ್ಹವಾಗಿರುತ್ತವೆ. ಹ್ಯಾಗೆಂದರೆ ಅಷ್ಟು ದೀರ್ಘಕಾಲ ಅವರ ಆಕಾರವಾದ ಸೈನ್ಯಗಳು ಯುದ್ಧಭೂಮಿಯಲ್ಲಿದ್ದು ನಾನಾ ಕಷ್ಟಗಳನ್ನು ಅನುಭವಿಸಿದಾಗ್ಯೂ ಅಷ್ಟು ಸೈನ್ಯದಲ್ಲೂ ಯಾವದೊಂದು ಅಂಟುಜಾಡ್ಯವೂ ಸ್ವಲ್ಪಮಟ್ಟಿಗೂ ಕಾಣಿಸಿಕೊಳ್ಳಲಿಲ್ಲ. ಹದಿನೆಂಟು ತಿಂಗಳ ತನಕ ಮಳೆ ಗಾಳಿ ಮಂಜು ಹಿಮಗಳಲ್ಲೇ ಅವರು ಬಾಧೆಪಡುತ್ತಿದ್ದರು. ಈ ರೀತಿ ಯುದ್ಧಭೂಮಿಯಿಂದ ಹಿಂತಿರಿಗಿ ಜಪಾನಿಗೆ ಹೋಗಿ ಸೇರಿದವರನ್ನಾಗಲಿ ಅವರ ಸಾಮಾನು ಮುಂತಾದ್ದನ್ನಾಗಲಿ ಯಾರೂ ಮನೆಗೆ ಬರಮಾಡಿಕೊಳ್ಳಲಿಲ್ಲ. ಹತ್ತುಲಕ್ಷ ಸೈನಿಕರನ್ನೂ ಅವರ ಸಮಸ್ತ ಸಾಮಾನುಗಳ ಸಮೇತ ಸರ್ಕಾರದವರು ಡಿಸಿನ್ಫೆಕ್ಷನ್ ಮಾಡಿಸಿದರು. ಆ ಪೈಕಿ ಒಬ್ಬನಾದರೂ ಅದಕ್ಕೆ ಹಿಂತೆಗೆಯಲಿಲ್ಲ. ಅಂಟುಜಾಡ್ಯಗಳ್ಯಾವೂ ಹುಟ್ಟಿ ಹಬ್ಬದಂತೆ ಜಪಾನ್ ಪ್ರಜೆಗಳು ಸರ್ಕಾರದವರ ಕಾನೂನಿಗೆ ವಿಧೇಯರಾಗಿ ಅವರಿಗೆ ಸಹಾಯ ಮಾಡಿದರು. ಇದಲ್ಲವೇ ಐಕಮತ್ಯವೆನ್ನುವುದು!

ರಷ್ಯಾ ರಾಜಕೀಯ ವಿಚಾರಗಳು.

ಪ್ರಜೆಗಳ ಹೋರಾಟವೂ ಸರ್ಕಾರದವರ ನಿರ್ಬಂಧಗಳೂ.

ತಂತೀವರ್ತಮಾನ ಸಾರ.

ಸರ್ಕಾರಿ ಸೈನಿಕರು ಹೆಲ್ಸಿಂಗ್‌ಫರ್ಸಿನ ದಂಗೆಯನ್ನು ಅಡಗಿಸಿ, ಸ್ವೆಟಬರ್ಗ್ ಪಟ್ಟಣವನ್ನು ಆಕ್ರಮಿಸಿಕೊಂಡರು.

ಆಗಸ್ಟ್ ೧.—ದೆವ್ಲಾಗಿರಿನ ಸೈನಿಕರು ದಂಗೆಯೆದ್ದು ತಮ್ಮ ಕಮ್ಯಾಂಡರನ್ನೂ ಏಳುಮಂದಿ ಹುದ್ದೇದಾರರನ್ನೂ ಕೊಂದುಹಾಕಿ, ಸ್ವತಂತ್ರಾಧಿಕಾರವನ್ನು ವಹಿಸಿರುತ್ತಾರೆ

ಜೂಲೈ ೩೧.—ವೈಬರ್ಗಿನಲ್ಲಿ ಸಭೆ ಸೇರಿ ಅಲ್ಲಿಂದ ಸರ್ಕಾರಕ್ಕೆ ವಿರುದ್ಧವಾದ ಇಸ್ತಿಹಾರನ್ನು ಪ್ರಕಟಿಸಿದ ಡ್ಯೂಮಾ ಮೆಂಬರುಗಳನ್ನು ಹಿಡಿದು ದಸ್ತಗಿರಿ ಮಾಡಬೇಕೆಂದು ಗವರ್ನಮೆಂಟಿನವರು ಗೊತ್ತು ಮಾಡಿದಾರೆ.

ಹೆರ್ಜೆನ್ಸ್ಟೀನ್ ಎಂಬ ಐಶ್ವರ್ಯವಂತನಾದ ಯೆಹೂದ್ಯ ಡ್ಯೂಮಾ ಮೆಂಬರು ತನ್ನ ಹೆಂಡತಿ ಮಕ್ಕಳ ಸಂಗಡ ಫಿನ್ಲೆಂಡಿನ ಸಮುದ್ರ ತೀರದಲ್ಲಿ ತಿರುಗಾಡುತ್ತಿದ್ದಾಗ ಒಬ್ಬನು ಅವನನ್ನು ಕೊಂದುಹಾಕಿ, ತಪ್ಪಿಸಿಕೊಂಡುಹೋದನು

ಸೆಂಟ್ ಪೀಟರ್ಸ್‌ಬರ್ಗಿನಿಂದ ಹೆಲ್ಸಿಂಗ್‌ಫರ್ಸಿಗೆ ಸೈನ್ಯಗಳು ಬಾರದೆ ಅಡ್ಡಿಯಾಗುವಂತೆ ರಿಹಿಮಾಕಿ ಎಂಬ ಸ್ಥಳದಲ್ಲಿದ್ದ ಸೇತುವೆಯನ್ನೂ ರೈಲ್ ಸ್ಟೇಷನನ್ನೂ ಒಡೆದು ಕೆಡವಿದರು. ಸ್ವೇಬರ್ಗಿನಲ್ಲಿ ಫಿರಂಗಿಗಳ ಶಬ್ದ ನಿಂತಿಲ್ಲ. ಅನೇಕ ಹೆಣಗಳನ್ನೂ ಗಾಯಪಟ್ಟವರನ್ನೂ ಅಲ್ಲಿಂದ ಹೆಲ್ಸಿಂಗ್‌ಫರ್ಸಿಗೆ ಸಾಗಿಸಿಕೊಂಡು ಬರುತ್ತಿದಾರೆ

ಟಿಫ್ಲಿಸ್ಸಿನಲ್ಲಿ ಒಂದು ವಾರದಿಂದಲೂ ಆರ್ಮೇನಿಯಾ ಪ್ರಜೆಗಳಿಗೂ ಟಾರ್ಟರ್ ಪ್ರಜೆಗಳಿಗೂ ಮನಸ್ತಾಪಗಳು ಹುಟ್ಟಿ ಬಹು ಕಠಿಣವಾದ ಯುದ್ಧ ನಡೆಯುತು. ಆಸ್ಕರ್ ಕಣಿವೆಯ ಅಜೂಬಾಜೂ ಗ್ರಾಮಗಳಲ್ಲಿ ಹೆಣಗಳ ರಾಶಿ ಬಿದ್ದಿದೆ. ಫಿರಂಗಿ ಗುಂಡುಗಳ ಹೊಡೆತದಿಂದ ಷೂಸಾ ಪಟ್ಟಣಕ್ಕೆ ಬೆಂಕಿಬಿದ್ದು ಉರಿಯುತ್ತಿರುವುದು.

ಆಗಸ್ಟ್ ೨.—ಸ್ವೇಬರ್ಗಿನಲ್ಲಿ ನೆನ್ನೆ ಸಾಯಂಕಾಲದ ತನಕ ಫಿರಂಗಿ ಗುಂಡು ಹೊಡೆಯುತ್ತಿದ್ದರು. ಯುದ್ಧ ಜಹಜುಗಳಿಂದ ಸೈನಿಕರು ದಂಗೇಕೋರರ ಮೇಲೆ ಗುಂಡುಹಾರಿಸಿ ಹೊಡೆದದ್ದರಲ್ಲಿ ಒಂದು ಮದ್ದಿನ ಮನೆ ಹತ್ತಿಕೊಂಡು ಹಾರಿತು. ಸಾಯಂಕಾಲ ಬಿಳೀ ಬಾವುಟಾ ನೆಟ್ಟರು. ದಂಗೇಕೋರರೆಲ್ಲಾ ಶರಣಾಗತರಾದಂತೆ ವರ್ತಮಾನವಿದೆ.

ಹೆಲ್ಸಿಂಗ್‌ಫರ್ಸಿಗೆ ಸೇರಿದ ಸ್ವೇಬರ್ಗ್ ಕೋಟೆಯಲ್ಲಿ ಫಿರಂಗಿ ಸೈನ್ಯದವರು ನೆನ್ನೆ ರಾತ್ರಿ ದಂಗೆಯೆದ್ದು, ತಮ್ಮ ಜೊತೆಗೆ ಸೇರುವುದಿಲ್ಲವೆಂದು ನಿಂತಿದ್ದ ಕಾಲ್ಬಲದ ಸೈನಿಕರ ಮೇಲೆ ಫಿರಂಗಿಗಳನ್ನು ಎತ್ತಿಕಟ್ಟಿ ಹೊಡೆದರು. ೫೦೦ ಜನ ನಷ್ಟ ಹೊಂದಿದರು. ಸ್ವೆಟಬರ್ಗ್ ಪಟ್ಟಣದ ಸೈನಿಕರು ಈ ದಿನ ಬೆಳಿಗ್ಗೆ ದಂಗೆಯೆದ್ದು, ತಮ್ಮ ಮೇಲ್ಪಟ್ಟ ಹುದ್ದೇದಾರರನ್ನೆಲ್ಲಾ ಹಿಡಿದು ಸೆರೆಯಲ್ಲಿಟ್ಟುಕೊಂಡಿದಾರೆ

ಜೂಲೈ ೩೦.—ಡ್ಯೂಮಾ ಸಭೆಯ ಮೆಂಬರುಗಳು ರಷ್ಯಾ ರಾಜ್ಯದಲ್ಲಿರುವ ಭೂಸೈನಿಕರಿಗೂ ಹಡಗಿನ ಸೈನ್ಯದವರಿಗೂ—ನೀವೆಲ್ಲಾ ರಷ್ಯಾ ಪ್ರಜೆಗಳ ಮಕ್ಕಳೇ ಆಗಿರುವುದರಿಂದ ಪ್ರಜೆಗಳಿಗೆ ಜಮೀನು ಸಿಕ್ಕುವಂತೆಯೂ ಸ್ವತಂತ್ರಾಧಿಕಾರ ಬರುವಂತೆಯೂ ಪ್ರಜಾಪ್ರತಿನಿಧಿಗಳಾದ ನಮ್ಮ ಪಕ್ಷದಲ್ಲಿ ನಿಂತು ಸರ್ಕಾರದವರ ಮೇಲೆ ಹೋರಾಡಬೇಕು ಎಂಬುದಾಗಿ ಇಸ್ತಿಹಾರು ಮೂಲಕ ತಿಳಿಸಿ, ಅವರ ಸಹಾಯವನ್ನು ಕೇಳಿರುತ್ತಾರೆ

ಫಿನ್ಲೆಂಡಿನಲ್ಲಿ ದಂಗೆ ಎದ್ದಿರುವ ಸುದ್ದಿಯನ್ನು ಕ್ರಾನ್‌ಸ್ಟಾಡಿನವರು ಕೇಳಿ ಗಲಭೆ ಮಾಡಲಾರಂಭಿಸಿದಾರೆ. ಇದು ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಬಹಳ ಗಾಬರಿಯನ್ನುಂಟುಮಾಡಿದೆ. ಕ್ರಾನ್‌ಸ್ಟಾಡಿನ ಹಡಗಿನ ಸೈನಿಕರು ದಂಗೆಯೆದ್ದರೆಂದು ವರ್ತಮಾನ ಬರುತ್ತಿದೆ. ಅಲ್ಲಿಗೂ ಸೆಂಟ್ ಪೀಟರ್ಸ್‌ಬರ್ಗಿಗೂ ಹಾಕಿದ್ದ ಟೆಲಿಫೋನ್ ತಂತಿಗಳನ್ನು ಕಡಿದು ಹಾಕಿದಾರೆ. ಸಮಾರಾ ಪಟ್ಟಣದಲ್ಲೂ ಡಿಸ್ಟ್ರಿಕ್ಟಿನಲ್ಲೂ ಸೈನಿಕರು ದಂಗೆಯೆದ್ದು ಕ್ರೂರಕೃತ್ಯಗಳನ್ನು ನಡಸುತ್ತಿದಾರೆ.

ರಾಜ್ಯವನ್ನು ಅಡಿಕೆಳಗು ಮಾಡಬೇಕೆಂಬ ಸಂಘಗಳವರೂ ಡ್ಯೂಮಾ ಪ್ರತಿನಿಧಿಗಳೂ ರೈತಪ್ರಜೆಗಳಿಗೆಲ್ಲಾ ಇಸ್ತಿಹಾರುಗಳ ಮೂಲಕ ತಿಳಿಸಿರುವುದೇನೆಂದರೆ—ಚಕ್ರವರ್ತಿಯವರ ಮಂತ್ರಾಲೋಚನೆಗೆ ಸೇರಿದ ಅಧಿಕಾರಿಗಳೂ ಗ್ರಾಂಡ್ ಡ್ಯೂಕರೆಂಬ ದೊಡ್ಡ ಮನುಷ್ಯರೂ ಬಹು ಕ್ರೂರತನದಿಂದ ಆಕ್ರಮಿಸಿಕೊಂಡಿರುವ ಜಮೀನುಗಳನ್ನೆಲ್ಲಾ ಬಲಾತ್ಕಾರ ಮಾಡಿ ಕಿತ್ತುಕೊಳ್ಳಿ. ಸ್ಥಳಾಧಿಕಾರಿಗಳನ್ನು ಓಡಿಸಿಬಿಡಿ ನಿಮ್ಮ ಪೈಕಿಯಿಂದಲೇ ಅಧಿಕಾರಿಗಳನ್ನು ನೇಮಿಸಿಕೊಳ್ಳಿ. ಗವರ್ನಮೆಂಟಿನವರು ಪ್ರಜೆಗಳ ಮೇಲೆ ಯುದ್ಧ ಮಾಡುವುದಕ್ಕೆ ಹೊರಟಿದಾರೆ. ಆದ್ದರಿಂದ ರಷ್ಯಾ ರಾಜ್ಯದ ಪ್ರಜೆಗಳೆಲ್ಲಾ ಒಗ್ಗಟ್ಟಾಗಿ ದಂಗೆಯೇಳುವುದಕ್ಕೆ ಇದೇ ಒಳ್ಳೇ ಸಮಯ ಎಂಬುದೇ

ಕ್ರಾನ್‌ಸ್ಟಾಡಿನಲ್ಲಿರುವ ಕಾನ್‌ಸ್ಟಂಟೈನ್ ಕೋಟೆಯ ಸೈನಿಕರು ದಂಗೆಯೆದ್ದದ್ದನ್ನು ಅಲ್ಲಿನ ಇತರ ಕೋಟೆಗಳ ಸೈನ್ಯದವರು ಪ್ರಯತ್ನಪಟ್ಟು ಅಡಗಿಸಿದರು. ಕ್ರಾನ್‌ಸ್ಟಾಡಿನಿಂದ ಬಂದ ಪ್ರಯಾಣಿಕರು—ಅಲ್ಲಿ ಸೈನಿಕರು ತಮ್ಮ ಹುದ್ದೇದಾರರನ್ನು ಕೊಂದುಹಾಕಿದರು ಎಂದು ಹೇಳುತ್ತಾರೆ ಕ್ರಾನ್‌ಸ್ಟಾಡಿನಲ್ಲಿ ದಂಗೆಯೆದ್ದಿದ್ದವರೆಲ್ಲಾ ಶರಣಾಗತರಾದರು. ಕಾದಾಟದಲ್ಲಿ ೪ ಜನ ಹುದ್ದೇದಾರರು ಕೊಲ್ಲಲ್ಪಟ್ಟರು ಮೂವರು ಗಾಯಪಟ್ಟರು ಎಂದು ಸರ್ಕಾರದವರು ತಿಳಿಸುವರು

ರಷ್ಯಾ ಸರ್ಕಾರದವರು ಸ್ವೇಬರ್ಗಿನಲ್ಲಿ ಎರಡು ಜಹಜುಗಳಿಂದ ಬಲವಾಗಿ ಗುಂಡುಗಳ ಮಳೆಯನ್ನು ಸುರಿಸಿ ದಂಗೆಯನ್ನು ಅಡಗಿಸಿದರು. ರೆವೆಲ್ ಪಟ್ಟಣದಲ್ಲಿ ಸೈನಿಕರು ದಂಗೆಯೆದ್ದಿರುವಂತೆ ವರ್ತಮಾನವಿದೆ ಆದರೆ ಅದರ ಇನ್ನೂ ವಿವರ ಇನ್ನೂ ತಿಳಿದಿಲ್ಲ.

ಆಗಸ್ಟ್ ೩.—ಕ್ರಾನ್‌ಸ್ಟಾಡಿನಲ್ಲಿ ದಂಗೆಯೆದ್ದಿದ್ದವರು ೨,೯೦೦ ಜನ ಸೈನಿಕರು. ಇವರ ಪೈಕಿ ಏಳು ಮಂದಿಯನ್ನು ಸರ್ಕಾರದವರು ಹಿಡಿದು ದಸ್ತಗಿರಿ ಮಾಡಿ ಗುಂಡಿನ ಬಾಯಿಗೆ ಕಟ್ಟಿ ಕೊಂದುಬಿಟ್ಟರು. ಬಾಲ್ಟಿಕ್ ದಡದಲ್ಲಿ ಒಂದು ಖಜಿನ ನೌಕರರೆಲ್ಲಾ ಸೇರಿ ಅಧಿಕಾರಿಯನ್ನೂ ನಾಲ್ವರು ಹುದ್ದೇದಾರರನ್ನೂ ಕೊಂದರು. ಆದರೆ ಸರ್ಕಾರದ ಕ್ಷೇಮಚಿಂತಕರು ಅವರನ್ನೆಲ್ಲಾ ಹಿಡಿದು ಅವರ ಆಯುಧಗಳನ್ನು ಕಿತ್ತುಕೊಂಡು ಅವ[illegible] ರೆವೆಲ್ ಪಟ್ಟಣದ ಸೆರೆಮನೆಯಲ್ಲಿ ಹಾಕಿಕೊಂಡಿದಾರೆ.

ಆಗಸ್ಟ್ ೪.—ರಾಜಧಾನಿಯ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಕೆಲಸಕ್ಕೆ ಬಾರದೆ ನಿಂತುಬಿಡುತ್ತಾರೆಂಬ ನಿರೀಕ್ಷೆಯು ಸಿದ್ಧಿಸಿತು. ಹದಿನೈದು ಸಹಸ್ರ ಕೂಲೀ ಜನರು ಕಾರ್ಖಾನೆಗಳಿಗೆ ಹೋಗದೆ ನಿಂತುಬಿಟ್ಟದಾರೆ ರಾಜಧಾನಿಯ ರೈಲಿನಲ್ಲಿ ಕೆಲಸ ಮಾಡತಕ್ಕವರೆಲ್ಲಾ ಈ ದಿನ ಸಮರಾತ್ರಿಯಲ್ಲಿ ಕೆಲಸವನ್ನು ಒಟ್ಟಾಗಿ ಬಿಟ್ಟು ಹೋಗಬೇಕೆಂದು ಮಸಲತ್ತಾಗಿದೆ ಮಾಸ್ಕೋ ಪಟ್ಟಣದ ರೈಲ್ವೆ ಜನರು ನಾಳೆ ಮಧ್ಯಾಹ್ನ ಕೆಲಸಬಿಡುವಂತೆ ಏರ್ಪಾಡಾಗಿದೆ.

ಸಮಾರಾ ಅಧಿಪತ್ಯದ ಗವರ್ನರರ ಮೇಲೆ ಮದ್ದಿನ ಗುಂಡು ಹಾಕಿ ಕೊಂದುಬಿಟ್ಟರು.

ಫಿರಂಗಿಗಳ ಸಮೇತವಾದ ಜಹಜುಗಳು ನೀವಾ ನದಿಯ ಉದ್ದಕ್ಕೂ ಕೂಲಿಕಾರರು ದಂಗೆಯೆದ್ದರೆ ಅಡಗಿಸುವುದಕ್ಕೆ ಸಂಚರಿಸುತ್ತಿವೆ ಸ್ವೇಬರ್ಗಿನಲ್ಲೂ, ಕ್ರಾನ್‌ಸ್ಟಾಡಿನಲ್ಲೂ ಕೈಸೆರೆಯಾದವರಲ್ಲಿ ಕೆಲವರು ಡ್ಯೂಮಾ ಸಭೆಯ ಮೆಂಬರುಗಳೆಂದು ಹೇಳುತ್ತಾರೆ ಸ್ವೇಬರ್ಗಿನಲ್ಲಿ ಕೊಲ್ಲಲ್ಪಟ್ಟವರೂ ಗಾಯಪಟ್ಟವರೂ ೬೦೦ ಮಂದಿ ಇನ್ನೂ ೧,೬೦೦ ಜನರು ಸಿಕ್ಕಿ ಇಲ್ಲ. ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ೫೫,೦೦೦ ಜನರು ಕಾರ್ಖಾನೆಗಳಿಗೆ ಹೋಗದೆ ನಿಂತು ಬಿಟ್ಟದಾರೆ ರೈಲ್ವೆ ನೌಕರರು ಇನ್ನೂ ಕೆಲಸ ಬಿಟ್ಟಿಲ್ಲ. ಡಾಷ್ಲಾಗರಿನಲ್ಲಿ ಸೈನಿಕರು ದಂಗೆಯೆದ್ದು ತಮ್ಮ ಹುದ್ದೇದಾರರ ಮೇಲೆ ಗುಂಡು ಹೊಡೆದು ಆರು ಮಂದಿಯನ್ನು ಕೊಂದು ನಾಲ್ವರನ್ನು ಗಾಯಮಾಡಿದರು

ಆಗಸ್ಟ್ ೫.—ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ೫೫,೦೦೦ ಜನರು ಕಾರ್ಖಾನೆಗಳಿಗೆ ಹೋಗದೆ ನಿಂತು ಬಿಟ್ಟಿದ್ದಾಗ್ಯೂ ಅವರ ದಂಗೆಯು ದೀರ್ಘಕಾಲ ಇರಲಾರದೆಂದು ಕಾಣುತ್ತದೆ ಗವರ್ನಮೆಂಟಿನವರ ಚಟುವಟಿಕೆಯೂ ಅವರಿಗಿರುವ ಸೈನ್ಯದ ಬೆಂಬಲವೂ ದಂಗೇಕೋರರಲ್ಲಿ ಸ್ವಲ್ಪ ಅಧೈರ್ಯವನ್ನುಂಟುಮಾಡಿದೆ

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಹಿತಚಿಂತಕ, ಅರಸೀಕೆರೆ—ಸರ್ಕಾರಿ ನೌಕರರನ್ನು ಮೃಗಗಳಿಗೆ ಹೋಲಿಸಿ ನೀವು ಬರೆದಿರುವಂಥಾ ಬಾತ್ಮಿಯನ್ನು ಪ್ರಕಟಿಸಲಾರೆವು ಅಂಥಾ ನೌಕರರಿಂದ ಮಾಡಲ್ಪಟ್ಟ ಪ್ರಜಾಕಂಟಕ ಕಾರ್ಯಗಳನ್ನು ಸಹಜವಾದ ರೀತಿಯಲ್ಲಿ ವಿವರಿಸುವುದು ಯೋಗ್ಯವಾಗಿದೆ.—ಎಡಿ]

ಕರೆಸ್ಪಾಂಡೆನ್ಸ್.

ಅಡಿಕೆ ಮರಕ್ಕೆ ಕವಲುಗಳು

ಅಯ್ಯಾ,

ಪ್ರತಿ ಒಂದು ಅಡಿಕೆ ಮರದಲ್ಲೂ ತೆಂಗಿನ ಮರದಲ್ಲೂ ಒಂದೊಂದು ಸುಳಿಯೇ ಹೊರಡುವದು ವಾಡಿಕೆಯಾಗಿದೆಯಷ್ಟೆ. ನಮ್ಮ ತೋಟದಲ್ಲಿ ಒಂದು ಅಡಿಕೆ ಮರವು ಸುಮಾರು ೧೨ ಅಡಿ ಉದ್ದ ಬೆಳೆದು, ಅಲ್ಲಿಂದ ಮುಂದಕ್ಕೆ ಒಂದೇ ಲೈನಾಗಿ ೭ ಕವಲುಗಳು ಒಡೆದು ಅದರಲ್ಲಿ ಪ್ರತಿ ಒಂದರಲ್ಲೂ ಒಂದೊಂದು ಸುಳಿ ಹೊರಡುತ್ತಾ, ಎಲ್ಲಾದರಲ್ಲೂ ಹೊಂಬಾಳೆಗಳು ಬಿಟ್ಟು ಇರುತ್ತವೆ. ಪ್ರಾಯಶಃ ಹೀಗೆ ಇರತಕ್ಕ ಎಲ್ಲಿಯೂ ಇಲ್ಲವಾದ್ದರಿಂದ ಇದು ಹೀಗೆ ಬಿಟ್ಟು ಇರತಕ್ಕದ್ದು ತ ಆಶ್ಚರ್ಯವಾದದ್ದಲ್ಲವೇ ?

ಸುಬ್ರಾವ್, ಹಳೇಪುರ

ಆಶ್ಚರ್ಯಕರವಾದ ಸಂಗತಿ

ಅಯ್ಯಾ,

ತಾ. ೨೮ನೆ ಜುಲೈ ಶನಿವಾರ ಮಧ್ಯಾಹ್ನ ೩ ಘಂಟೆಯಲ್ಲಿ ನನ್ನ ಚಿಕ್ಕಪ್ಪ ರಾಮಯ್ಯನೆಂಬಾತನೂ ಎಳನೀರು ಕಾಡಿಮಬೇ ಗ್ರಾಮಕ್ಕೆ ಒಂದು ಮೈಲಿಯಲ್ಲಿರತಕ್ಕ ತೋಟಕ್ಕೆ ಹೋ ಹೋಗುವಾಗ್ಗೆ ಬಿಸಲು ಬಹಳವಾದ್ದರಿಂದ ದಾರಿಯಲ್ಲಿರತಕ್ಕ ಗಾವಲಿನಲ್ಲಿ ಹಸಿಮಾವಿನಗಿಡದ ಕೆಳಗೆ ಕುಳಿತೆವು. ಚಿಕ್ಕಪ್ಪನ ಹಾಗೆಯೇ ನಿದ್ರೆಬಂದದ್ದರಿಂದ ಹೊದ್ದಿದ್ದ ಪಂಚೆ ಹಾಸಿಕೊಂಡು ಮ ಸಿದರು. ನಾನು ಕೊಂಚಹೊತ್ತು ಟೋಪಿ ಹೆಣೆಯುತ್ತಾ ಕು ಕೊಂಡೆನು. ದಾರಿಯಲ್ಲಿ ಹೋಗುತ್ತಿದ್ದ ರೈತನು ನನ್ನನ್ನು ನೋ ಸ್ವಾಮಿ, ತೋಟದಲ್ಲಿ ದನಗಳು ತುಂಬಾ ನುಗ್ಗಿವೆ ಎಂಬದಾಗಿ ಹೇ ನಾನು ಮಲಗಿದ್ದವರನ್ನು ಎಬ್ಬಿಸದೆ ಹಾಗೆಯೇ ತೋಟಕ್ಕೆ ಹ ದನಗಳನ್ನು ಓಡಿಸಿದೆ. ಅಷ್ಟರಲ್ಲಿ ಇಬ್ಬರು ಒಡ್ಡರು ಇಲಿಗಳನ್ನು ಹಿಡಿಯುವದಕ್ಕೋಸ್ಕರ ತೋಟದ ಬದುಗಳ ಮೇಲಿರುವ ಹುತ್ತಗ ಬಗಿಯುತ್ತಿದ್ದರು. ಆ ಪೈಕಿ ಒಬ್ಬ ೩೦ ವರ್ಷದ ಮುದುಕ ಮ ಬ್ಬ ಸುಮಾರು ೧೮ ವರ್ಷದ ಹುಡುಗ ಇವರಿಬ್ಬರು ಬಗಿಯುತ್ತಿದ್ದ ಹುತ್ತಗಳ ದೂರ ಸುಮಾರು ೩೦ ಗಜವಾಗಬಹುದು ನಾನು ಹು ನು ಬಗಿಯುತ್ತಿದ್ದ ಹುತ್ತದ ಬಳಿ ಇಲಿಗಳನ್ನು ಹ್ಯಾಗೆ ಹಿಡಿಯು ರೆಂದು ನೋಡಬೇಕೆಂಬ ಕುತೂಹಲದಿಂದ ಕೂತುಕೊಂಡೆ. ಆ ಹುಡುಗನು ಕೊಂಚದೂರ ಹುತ್ತವನ್ನು ಬಗೆದು ಬಿಲದಲ್ಲಿ ಕೈ ದನು. ಆಕಸ್ಮಿಕವಾಗಿ ಅದರೊಳಗಿದ್ದ ಘಟಸರ್ಪವು ಅವನ ಬೆಟ್ಟು ಹಿಡಿದುಕೊಂಡಿತು. ಹುಡುಗನು ಬೆಟ್ಟನ್ನು ಈಚೆಗೆ ತೆಗೆಯಲು ಬಿದ್ದ ಸರ್ಪವು ಉಂಗುಷ್ಟದಿಂದ ಶಿರಸ್ಸಿನವರವಿಗೂ ಬೆಟ್ಟಿನ ಜೊತೆ ಲ್ಲಿ ಉದ್ದವಾಗಿ ಜಗ್ಗದ ಹಾಗೆ ಬಂತು. ಹುಡುಗನು ನೋಡಿದ ಕೂ ಅಪ್ಪಾವರೆ ಎಂಬದಾಗಿ ಕೂಗಿಕೊಂಡು, ಜ್ಞಾನತಪ್ಪಿ ಬಿದ್ದನು. ಧ್ವನಿಯನ್ನು ಕೇಳಿ ಮೇಲೆ ಬಗೆಯುತ್ತಿದ್ದ ಮುದುಕನು ಓಡಿಬ ತನ್ನ ಹತ್ತಿರ ಇದ್ದ ಚೀಲವನ್ನು ತೆಗೆದು ಬೇರನ್ನು ಕಲ್ಲಿನ ಮೇ ತೇದು ಕುಡಿಸಿದನು. ಅಲ್ಲದೆ ಯಾವದೋ ವಿಜಾತೀಯವಾದ ಮಣ್ಣನ್ನೂ ಶರೀರದಲ್ಲಿ ಘಾಯಮಾಡಿ ಅಂಟಿಸಿದನು ತರುವಾಯ ಆ ದೇಹವನ್ನೆಲ್ಲಾ ಚಿಗುಟುವುದಕ್ಕೆ ಪ್ರಾರಂಭಿಸಿದನು ಆದರೂ ಹುಡುಗ ಮಾತಾಡಲಿಲ್ಲ. ಇವನು ಕುತ್ತಿಗೆ ಹತ್ತಿರ ಚಿಗುಟಿದಾಗ ಮಾತ್ರ ಕೂ ಕೊಂಡನು. ತರುವಾಯ ನೆತ್ತಿಯನ್ನು ಘಾಯಮಾಡಿ ಅದೇ ಔ ಷಧಿಯನ್ನು ಉದುರಿಸಿದನು. ಇಷ್ಟರಲ್ಲಿ ಅಲ್ಲಿದ್ದ ಸರ್ಪವು ಹು ದೊಳಕ್ಕೆ ಹೋಯಿತು. ಒಡ್ಡರವನು ಹುತ್ತವನ್ನು ಬಗೆದು ಅದ ಹೊರಕ್ಕೆ ಹೊರಡಿಸಿದನು. ಅದು ಹೆಡೆಯನ್ನು ಎತ್ತುತ್ತಾ ಮೇಲೆ ರುವುದಕ್ಕೆ ಬಂದಿತು. ಚೀಲದಿಂದ ಬೇರನ್ನು ತೆಗೆದು ಅದರ ಮು ಇರಿಸಿದನು ಸರ್ಪವು ಸುಮ್ಮನೆ ಮಲಗಿತು. ಈ ಮಧ್ಯೆ ಹುಡುಗ ಅಪ್ಪಾ ಎಂದು ಎದ್ದು ಕಡಿದಿದ್ದ ಬೆಟ್ಟಿಗೆ ಬಟ್ಟೆ ಸುತ್ತಿಕೊಂಡು ತನ್ನ ಕೆಲಸಕ್ಕೆ ಪ್ರಾರಂಭಿಸಿದನು. ಇಷ್ಟರೊಳಗೆ ಚಿಕ್ಕಪ್ಪನವರು ಎ ಬಂದರು. ನಂತರ ಒಡ್ಡರವನನ್ನು ಔಷಧಿ ವಿಚಾರಿಸಿದರು. ಅವ ಯಾರಿಗೂ ಹೇಳುವದಿಲ್ಲವೆಂತ ಹೇಳಿದ. ಚಿಕ್ಕಪ್ಪನವರು ಬಲವ ಮಾಡಿ, ಕೆಲವು ರೂಪಾಯಿ ಕೊಡುತ್ತೇನೆಂತ ಹೇಳಿದರೂ ಕೇಳಲಿ ಒಡ್ಡರವನು—ಒಳ್ಳೇದು ಸ್ವಾಮಿ, ನಾಳೆ ಬರುತ್ತೇನೆ ಅವ ಹೇಳುತ್ತೇನೆ ಎಂದನು. ಕೂತಿದ್ದ ನಾನು ಒಡ್ಡರವನನ್ನು ಕೊ ಹೊತ್ತು ಹಾವನ್ನು ಆಡಿಸುವ ಹಾಗೆ ಹೇಳಿದೆ ಆ ಹಾವನ್ನು ಹೆದ ಬೆದರಿಸಿ ಕೊಂಚ ಹೊತ್ತು ಆಡಿಸಿ ಆ ದೊಣ್ಣೆಯಿಂದ ಕೊಂದ ದನು. ನಮ್ಮಗಳ ಬುದ್ಧಿಗೆ ಆ ಹುಡುಗನು ಬದುಕುವನೆಂದು ಗೋ ರಲಿಲ್ಲ. ಒಡ್ಡರವನು ನಾಳೆ ಬರುತ್ತೇನೆಂದು ಹೇಳಿದನು ಬಾರಲೆ ಇ ಇಂಥಾ ಔಷಧಿಗಳನ್ನು ತಿಳಿದು ಪ್ರಯೋಗಿಸಿದರೆ ಅನೇಕರು ಗುಣಹೊ ದುವದರಲ್ಲಿ ಸಂದೇಹವಿಲ್ಲ. ಸುಮಾರು ಕಾಲುಘಂಟೆಯೊಳಗೆ ಇದೆ ನಡೆಯಿತು. ಒಡ್ಡರವನು ಎಂಥಾ ಹಾವು ಕಡಿದರೂ ಬದುಕಿಸುತ್ತೇನೆಂ ಹೇಳಿದ. ಇಂಥಾ ನೋಟವನ್ನು ನೋಡುವುದಕ್ಕೆ ನಮಗೆ ಬಹ ಆಶ್ಚರ್ಯವಾಗಿತ್ತು. ಅನೇಕರು ಹಾವು ಕಡಿದು ಸಾಯುತ್ತಿದ್ದಾ ನಾನು ಕಂಡ ಹಾಗೆ ೧೫ ದಿವಸದಲ್ಲಿ ೧೮ ವರ್ಷದ ಹುಡುಗ ಸ ಹೋದ. ಇಂಥಾ ಔಷಧ ಬಲ್ಲವರು ಸಿಕ್ಕಿದರೆ ಉಪಾಯವಾಗಿ ತಿಳಿ ಕೊಳ್ಳುವುದು ಸಕಲರಿಗೂ ಉತ್ತಮವಾಗಿರುತ್ತೆ.

ದೊಡ್ಡಮೇಟಿಕುರಿಕೆ, ಅರಸೀಕೆರೆ ತಾ. ಹರಿಯಣ್ಣ.

ಅನಾಹುತಗಳು.

ಬಂದೂಕಿನಿಂದ ಆದ ಅಪಾಯ

ಕಳೆದ ತಿಂಗಳು ತಾ. ೨೯ನೇ ಭಾನುವಾರ ಮಧ್ಯಾಹ್ನ ನಾ ಸೊರಬಕ್ಕೆ ವಾಪಸು ಬರುತ್ತಿರುವಾಗ ಸೊರಬದ ನದಿಯ ಆಚೆ ಇರು ಒಂದು ಕೆರೆಯಲ್ಲಿ ಶಿಕಾರಿ ಉದ್ದಿಶ್ಯ ಈ ಊರು ದರ್ಜಿಜಾತಿ ಬೆಸ್ತ ಅಣ್ಣಪ್ಪನವರ ಮಗ ಸುಮಾರು ೧೬ ವರ್ಷದ ರಾಮಪ್ಪನೆಂಬು ಸದರಿ ಕೆರೆಯಲ್ಲಿ ನಾನು ನಿಂತು ನೋಡುತ್ತಿರುವಾಗಲೆ ಒಂದು ನೀ ಕೋಳಿಯನ್ನು ಬಂದೂಕಿನಿಂದ ಹೊಡೆದನು. ಆದರೆ ತಾ ೩೦ ಸೋಮವಾರ ಬೆಳಿಗ್ಗೆ ಶಿಕಾರಿ ಮಾಡಬೇಕೆಂಬ ಕುತೂಹಲದಿಂದ ನು ಸದರಿ ಕೆರೆಗೇನೇ ಹೊರಟು ಬಂದೂಕವನ್ನು ಭರ್ತಿಮಾಡಿ ನ್ನು ಜೋಡಿಸಿ ಕುದುರೆಯನ್ನು ಇಳಿಸದೆ ಹಾಗೇ ನೆಲಕ್ಕೆ ಬಂದೂಕದ ಬಾಯಿಗೆ ತನ್ನ ಕೈಯನ್ನು ಇಟ್ಟುಕೊಂಡು ನಿಂ ವಾಗ ಆಕಸ್ಮಾತ್ತಾಗಿ ಬಂದೂಕು ಹಾರಿ ಆತನ ಅಂಗೈಗೆ ಚರೆಗಳ ತಗಲಿ ಅಂಗೈ ಛಿದ್ರಛಿದ್ರವಾಗಿ ಮಧ್ಯೆ ಒಂದು ರೂಪಾಯಿ ಅಗಲ

...ದ್ದು ಬಹು ಭಯಂಕರವಾಯಿತು. ರಾಮಪ್ಪನು ಪಟು ಅಗಲಿದ ...ಡ್ಡೆ ಮನೆಗೆ ಬಂದನು. ಮನೆಯವರು ತಕ್ಷಣವೇ ಆಸ್ಪತ್ರೆಗೆ ಕರೆ ಕೊಂಡು ಹೋದರು ಡಾಕ್ಟರವರು ಅದಕ್ಕೆ ಸರಿಯಾದ ಚಿಕಿತ್ಸೆ ...ನ್ನು ನಡೆಸಿದರು ತಂದೆ ತಾಯಿಗಳು ಬಾಲ್ಯವಯಸ್ಸಿನ ಮಕ್ಕಳನ್ನು ...ರೀತಿ ಸ್ವೇಚ್ಛಾಸಕ್ತಿಗೆ ಬಿಡುವದರಿಂದ ಕೇಡುಗಳು ಸಂಭವಿಸುವವು ವೇ?

ಹೆಂಗಸು ಅಟ್ಟದಿಂದ ಬಿದ್ದದ್ದು.

ತಿಪ್ಟೂರು ತಾಲ್ಲೂಕ್ ಕಲ್ಲೆಗೌಡನ ಪಾಳ್ಯದ ಪಾರುಪತ್ಯಗಾರ ಕ ...ಗೌಡನ ಮಗ ಚಿಕ್ಕೆಗೌಡನ ಹೆಂಡತಿಯು ತಾ ೨ ನೇ ಗುರುವಾರ ...ಯಂಕಾಲ ೩ ಗಂಟೆ ಸಮಯದಲ್ಲಿ ತನ್ನ ಮನೆಯ ಅಟ್ಟವನ್ನು ...ಸಾರಿಸುತ್ತಾ ಹಿಂದಾಹಿಂದಕ್ಕೆ ಬರುತ್ತಿರಲು ಅಟ್ಟವು ಮುಗಿಯು ...ಇನ್ನೂ ಅಟ್ಟ ಇದೆ ಎಂಬ ಭ್ರಾಂತಿಯಿಂದ ಹಿಂದಕ್ಕೆ ಜರುಗಲು ...ಸಿದ್ದ ಪಣೆಯ ಮೇಲೆ ಬಿದ್ದು ಅದರ ಎರಡು ಕಾಲು ಮುರಿದು ಅ ...ದ ಕಳಕ್ಕೆ ಆಕೆಯು ಬೀಳಲು ಬಹಳ ರಕ್ತಪ್ರವಾಹವಾಯಿತು ...ಕೆ ತನ್ನ ವಿಪತ್ತನ್ನು ಯಾರೂ ನೋಡಬಾರದೆಂಬಭಿಪ್ರಾಯದಿಂದ ...ಲ್ಪ ಚೇತರಿಸಿಕೊಂಡು ಚೆಲ್ಲಿದ್ದ ರಕ್ತವನ್ನು ಹ್ಯಾಗೂ ಮರೆಮಾಡ ...ಕೆಂಪು ಕಾರ್ ಗುಡಿಸುವದಕ್ಕೆ ಪ್ರಯತ್ನಿಸಲು ರಕ್ತಪ್ರವಾಹವು ...ತ್ತಾ ಜಾಸ್ತಿಯಾದ್ದರಿಂದ ದಿಗ್ಭ್ರಮೆಹಿಡಿದು ಅಶಕ್ತ್ಯತೆಯಿಂದ ...ಗಿಕೊಳ್ಳಲು ಪಕ್ಕದ ಮನೆಯ ಹುಡುಗಿ ಒಳಗೆ ಹೋಗಿ ಚೆಲ್ಲಿರುವ ...ವನ್ನೂ ಸ್ಮರಣೆತಪ್ಪಿ ಬಿದ್ದಿರುವ ಹೆಂಗಸನ್ನೂ ಕಂಡು, ಹೊರಗೆ ...ದು ಗದ್ದಲಮಾಡಲು ಅನೇಕ ಗಂಡಸರೂ ಹೆಂಗಸರೂ ಸೇರಿಕೊಂ... ...ತಣ್ಣೀರು ಸುರಿದರೂ ರಕ್ತಪ್ರವಾಹ ನಿಲ್ಲಲೇ ಇಲ್ಲ ಮತ್ತು ...ತಾಡಲೂ ಇಲ್ಲ ಹೆಂಗಸಿನ ಮಾವನೂ ಮಗನೂ ಮಾತಾಡಿಕೊಂ... ...ನೇರಲ್ಕೋಟೆಯಲ್ಲಿ ಒಬ್ಬ ಪಂಡಿತರಿದ್ದಾರೆಂದು ಅಲ್ಲಿಗೆ ಆಳನ್ನು ...ಕಳುಹಿಸುವದಕ್ಕೆ ಯೋಚಿಸುತ್ತಿದ್ದರು ಮತ್ತು ಸದರಿ ಗ್ರಾಮದ ಪಕ್ಕ... ...ಇಂದಿರ್‌ಗೆರೆಗ್ರಾಮವಿದೆ ಇಲ್ಲಿರುವ ಪಂಡಿತರು ಪೋಲ್ಕೋಟೆಯ ...ಷಧವನ್ನೇ ಕೊಡುತ್ತಾರೆಂದು ಹಣ್ಣು, ಕಾಯಿ, ದಕ್ಷಿಣೆಯನ್ನು ತೆಗೆ... ...ಕೊಂಡು ಹೋದರು. ಸರ್ಕಾರದ ದವಾಖಾನೆ ಆಸ್ಪತ್ರೆಯು ಹತ್ತಿರ ...ವಿದ್ದುಕೊಂಡು ಈ ರೀತಿ ಹಂಬಲಿಸುವ ಜನರ ಮೌಢ್ಯಕ್ಕಾಗಿ ವಿಷಾ ...ದಿಸಬೇಕಾಗಿದೆ

ಹುಲಿಯ ಶಿಕಾರಿಯು

ತೀರ್ಥಹಳ್ಳಿ ತಾಲ್ಲೂಕು ನಾಲೂರ ಸಮೀಪವಿರುವ ಮಳೆಮಾತಿ ...ಪ್ಪಗೌಡರೆಂಬುವರಿಗೆ ತನ್ನ ಮನೆಯಿಂದ ಸುಮಾರು ಅರ್ಧ ಮೈ ...ಫಾಸಲೆ ಕಾಪಬೈಲೆಂಬುವಲ್ಲಿ ಪಸುಗಳನ್ನು ಕಟ್ಟಲಾವಕ್ಕ ಒಂದು ...ಕೊಟ್ಟಿಗೆ ಇರುತ್ತೆ ಈ ಕೊಟ್ಟಿಗೆಯು ಮಣ್ಣುಗೋಡೆಯಿಂದ ತುಂ ...ಬಿತ್ತು. ಇಂಥಾ ಬಲವಾದ ಗೋಡೆ ಹಾಕಿರುವ ಕಾರಣ ಇದರಲ್ಲಿ ...ವು ವರುಷಗಳ ಬಾಗಾಯತ್ತು ರಾತ್ರಿ ಕಾಲದಲ್ಲಿ ಪಸುಗಳನ್ನು ಕಟ್ಟಿ ...ಕೆ ಬಾಗಿಲು ಮುಚ್ಚಿ ಮನೆಗೆ ಹೋಗುತ್ತಾ ಇದ್ದರು ಇದೇ ಆಗಿ... ...ತಾ ೨ ನೇ ರಾತ್ರಿ ಸುಮಾರು ೧೦—೧೨ ಆಕಳನ್ನು ಕಟ್ಟಿ ಹಾ ...ರು ಈ ರಾತ್ರಿ ಸಮಯದಲ್ಲಿ ಎಲ್ಲಿಂದಲೋ ಒಂದು ಹುಲಿ ಈ ...ಟ್ಟಿಗೆ ಸಮೀಪಕ್ಕೆ ಬಂದು ಕೊಟ್ಟಿಗೆಯನ್ನು ಪ್ರದಕ್ಷಿಣೆಮಾಡಿ ...ವ ಕಡೆಯಿಂದಲೂ ಒಳಗೆ ಹೋಗಲು ಸ್ಥಳ ಕಾಣದೆ ಮೆಲ್ಲಗೆ ...ಮೇಲೆ ಹೊದ್ದಿಸಿದ್ದ ಹುಲ್ಲುಚಾವಣಿ ಹತ್ತಿ ತನ್ನ ನಖಗಳ ಬ ...ಲದ ಒಂದು ಕಂಡಿ ಕೊರೆದು ಒಳಗೆ ಪ್ರವೇಶಿಸಿ ಕಟ್ಟಿಹಾಕಿದ್ದ ಆ ...ಕಳ ಪೈಕಿ ತನ್ನ ಮನಸ್ಸೊಪ್ಪಿದ ೩ ಆಕಳುಗಳನ್ನು ಹಿಡಿದು ...ಕೊಂದು ರಕ್ತಪಾನಮಾಡಿ, ಇನ್ನು ತಿನ್ನಲಿಕ್ಕೆ ಸಮಯ ಸಾಲದೆಂದು ...ಯೋಚಿಸಿ ಒಂದು ಸಣ್ಣ ಆಕಳನ್ನು ಹಿಡಿದುಕೊಂಡು ತಾನು ಇಳಿದು ...ದ ಕಂಡಿಯ ಮಾರ್ಗವಾಗಿಯೇ ಹೊರಗೆ ಬಂದು, ತಾನು ಹಿಡಿದು ...ದು ಬಂದ ಆಕಳನ್ನು ರಕ್ಷಿಸಿ ಹೊರಟುಹೋಗಿರುತ್ತೆ. ದೇವರ ...ದಯದಿಂದ ಬೇರೆ ಆಕಳುಗಳ ತಂಟೆಗೆ ಹೋಗಲಿಲ್ಲ. ಮಾಲೀಕರಿಗೆ ...ಷ್ಟದ ನಷ್ಟಕ್ಕೆ ಕಾರಣವಿಲ್ಲದಂತಾಯಿತು ಅದು ಪ್ರದಕ್ಷಿಣೆ ಮಾಡಿ ...ದಂಜಾದ ಗುರುತು ಚನ್ನಾಗಿ ಕಾಣುತ್ತಿತ್ತು. ಕೊಟ್ಟಿಗೆ ಬಳಿಗೆ ಇ ...ವರೆಗೆ ಹುಲಿಯು ಹೋಗದೆ ಇರುವದರಿಂದ ಈ ಪ್ರಾಂತ್ಯದವರಿಗೆ ಆ ...ಶ್ಚರ್ಯವಾಗಿರುತ್ತದೆ.

ತೆಂಗಿನಮರದಿಂದಾದ ನಷ್ಟ.

ಈ ಜುಲೈ ತಾ ೨೬ ನೇ ಗುರುವಾರ ಬೆಳಿಗ್ಗೆ ನಾನೂ ನನ್ನ ...ಇತರರೂ ಕೆಲವು ತೆಂಗಿನ ಕಾಯಿಗಳನ್ನು ಜಮಾಯಿಸುವದಕ್ಕಾಗಿ ...ರು ತಾ ಕಣಕೂರಿಗೆ ೮ ಮೈಲಿ ದೂರದಲ್ಲಿರುವ ಉಳ್ಳಾವಳ್ಳಿ ...ಯಕ್ಕೆ ಹೋಗಿ ಪಟೇಲ ಮುಂತಾದವರೊಡನೆ ತೆಂಗಿನಕಾಯಿ ವಿ... ...ಮಾತನಾಡುತಲಿದ್ದೆವು. ಆ ಪಟೇಲನು ಕೆಲವು ರೈತರನ್ನು ಕರೆಸಿ ...೦೦ ಕಾಯಿಗಳಂತೆ ರಡುಕೊಡಬೇಕೆಂದು ಹೇಳಿದಂತೆ ಅವರು ...ತೋಟಗಳಿಗೆ ಹೋಗಿ ಕಾಯಿ ತಂದುಕೊಟ್ಟರು ಆ ದಿವಸ ...ರ್ಯ ರಶ್ಮಿಯು ಇಲ್ಲದೆ ಸೋನೆಮಳೆ ಸುರಿಯುತ್ತಿತ್ತು. ಉಳಿ ...ಕೆಲ್ಸರು ಮಂದಿ ಇನ್ನೂ ಬಂದಿರಲಿಲ್ಲ. ಪಟೇಲನು ಆಳುಮಾಡಿ ...ನ್ನು ಕರಸಿ, ಉಳಿದವರನ್ನು ಜಾಗ್ರತೆ ಕರತರುವಂತೆ ಹೇಳಿ ಕಳು ...ಹಿ, ಅವನು ಅದೇ ಪ್ರಕಾರ ಅವರ ತೋಟದ ಕಡೆ ಹೋಗುತ್ತಿರಲು ...ಳಿ ಜನಗಳು ಎದುರಾಗಿ ಕಾಯಿ ಹೊತ್ತು ತರುತ್ತಿದ್ದರು ಇವ ...ರವರನ್ನು ಜಾಗ್ರತೆ ಹೋಗಿ ಎಂದು ಹೇಳಿ, ಇನ್ನೊಬ್ಬ ರಂಗಣ್ಣನೆಂ ...ನನ್ನ ಹುಡುಕಲು ಅವನ ತೋಟಕ್ಕೆ ಪ್ರವೇಶ ಮಾಡುವಾಗಲೇ ...ತೆಂಗಿನಕಾಯಿ ದೊಪ್ಪನೆ ಬಿದ್ದಿತು ರಂಗನು ಆ ಮರದ ಕೆಳ ...ಹೋತಿದ್ದನು. ದೈವಾಧೀನ ಅದು ಅವನ ಮೇಲೆ ಬೀಳಲಿಲ್ಲ ಆಗ ...ಯಾವ ಗೊನೆಯಿಂದ ಈ ಕಾಯಿ ಬಿತ್ತೆಂಬದಾಗಿ ಕತ್ತೆತ್ತಿ ...ಮೇಲೆ ನೋಡುವಾಗ್ಗೆ ಎರಡು ಕಾಯಿಗಳು ಮೇಲ್ಭಾಗದಿಂದ ಮೇಲೆ ಬಿದ್ದವು. ಇಷ್ಟು ಅಲ್ಲದೆ ಒಂದು ಮೋತೆಗಾಯೂ ಅವನ ಕಣ್ಣಿನ ಮೇಲೆ ಬಿದ್ದಿತು ಇದನ್ನು ಕಂಟ ಕೂಳವಾಡ ಬಂದು ಪಟೇಲನಿಗೆ ತಿಳಿಸಿದನು. ಪಟೇಲನೊಡನೆ ನಾವೂ ಆ ತೋಟಕ್ಕೆ ಹೋಗಿ ನೋಡಲಾಗಿ ರಂಗಣ್ಣನು ಪಟ್ಟಸುದ ಮೂರ್ಛೆಹೋಗಿ ಬಿದ್ದಿದ್ದನು. ನೆತ್ತಿಗೆ ಸ್ವಲ್ಪ ನೀರಂತಟ್ಟಿ ಪುನಃ ಕೂಗಲಾಗಿ ಕೀಚು ಧ್ವನಿಯಿಂದ ಸ್ವಲ್ಪ ಮಾತನಾಡಿದನು ಅವನ ಕಣ್ಣುಗಳು ರಕ್ತವು ಬಹಳವಾಗಿ ಸುರಿದು ಕಣ್ಣೇ ಕಾಣಿಸುತ್ತಿರಲಿಲ್ಲ ಎಲ್ಲರೂ ಕೂಡಿ ಗಾಡಿಯ ಮೇಲೆ ಅವನನ್ನು ಊರೊಳಕ್ಕೆ ಸಾಗಿಸಿ ಔಷಧಿಗಳನ್ನು ಕಟ್ಟಿದೇವೆ ಗುಣವಿಲ್ಲದ್ದರಿಂದ ಯಾವದಾದರೂ ಒಂದು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪ್ರಯತ್ನ ಪಟ್ಟಿದಾರೆ

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು —ಇಲ್ಲಿ ಮಳೆ ಬೆಳೆಗಳು ಚನ್ನಾಗಿವೆ ಕೆರೆ ಕಟ್ಟೆಗಳು ತಕ್ಕ ಮಟ್ಟಿಗೂ ತುಂಬಿವೆ ಒಂದೆರಡು ಸಣ್ಣ ಕೆರೆಗಳು ಒಡೆದುಹೋದಂತೆ ವರ್ತಮಾನ ಪ್ಲೇಗ್ ರೋಗವು ದಿನದಿನಕ್ಕೂ ಹೆಚ್ಚುತ್ತಲಿದೆ ಇದುವರೆಗೂ ಪ್ರಾರಂಭದಿಂದ ತಗಲಿದವರು ೯೮, ಸತ್ತವರು ೪೯. ಅನೇಕ ಜನರು ಊರು ಬಿಟ್ಟು ಬೇರೆ ಬೇರೆ ಕಡೆಗಳಿಗೆ ಹೋಗಿಬಿಟ್ಟರು ಮಿಕ್ಕಾದವರು ಹೊರಗೆ ಹೋಗಿ ಷೆಡ್ಡು ಕಟ್ಟಿಕೊಳ್ಳುವದಕ್ಕೆ ಇಲ್ಲಿನ ಟಿಂಬೋಮಿಸಲ್ಲಿ ಬಿದಗುಗಳು ಇಲ್ಲದೆ ಇರುವದರಿಂದ ನಮ್ಮ ಡೆಪ್ಟಿ ಕಮಿಷನರ್ ಸಾಹೇಬರು ಆವೇ ಅಲ್ದೂರು ಕಡೆ ಇರುವ ಜಂಗಲಿನ ಕಡೆ ಹೋಗಿ ಷೆಡ್ಡುಗಳಿಗೆ ಬೇಕಾಗುವ ಸಾಮಾನನ್ನು ಸಂಗ್ರಹಮಾಡಿಕೊಡಿಸುವರೆಂದು ಕೇಳುತ್ತೇನೆ ಡೆಪ್ಟಿ ಕಮಿಷನರವರು ಈ ಕಾಲದಲ್ಲಿ ಜನರಿಗೆ ಬುದ್ಧಿವಾದವನ್ನು ಹೇಳಿ ಮನೆಗಳನ್ನು ಬಿಟ್ಟು ಷೆಡ್ಡುಗಳಿಗೆ ಹೋಗುವಂತೆ ಹೇಳುವದಲ್ಲದೆ ಬಡಬಗ್ಗರಿಗೆಗಳು ಅವೆಗಳನ್ನು ಸಹಾಯ ಮಾಡುತ್ತಿದಾರೆ ಈಗ ಮಳೆ ಇಲ್ಲದೆ ಇರುವದು ಷೆಡ್ಡು ಹಾಕಿಕೊಳ್ಳುವವರಿಗೆ ಅನುಕೂಲ ಜನರು ಬೇಗ ಮನೆಗಳನ್ನು ಬಿಟ್ಟು ಷೆಡ್ಡುಗಳಲ್ಲಿ ವಾಸ ಮಾಡುವದಾದರೆ ಪ್ಲೇಗ್ ನಿಂತು ಹೋಗಬಹುದು. ಇದಲ್ಲದೆ ಮುನಿಸಿಪಾಲಿಟಿಯವರು ಊರನ್ನು ಶುಚಿಯಾಗಿಡಿಸುವದರಲ್ಲಿ ತುಂಬಾ ನಿಗಾಕೊಡುವರು ಒಳ್ಳೇದು ಕಡೂರು ಪ್ರಾಂತ್ಯ ಕೆಲವು ಗ್ರಾಮಗಳಲ್ಲಿ ಕಾಲರಾ ಉಪದ್ರವಿದೆ ಎಂದು ಕೇಳುತ್ತೇನೆ

ಹಾಸನ.—ಇಲ್ಲಿನ ಹೈಸ್ಕೂಲ್ ಅ॥ ಮಾಸ್ಟರ್ ಮೆ॥ ಮಾಧೂರಾವ್, ಬಿ. ಎ ಯವರಿಗೆ ಮೈಸೂರು ಮಹಾರಾಣಿಯವರ ಕಾಲೆಜ್ಜಿಗೆ ವರ್ಗವಾಯಿತು. ಇದಕ್ಕಾಗಿ ಕಳೆದ ಜುಲೈ ೨೮ ನೇ ಶನಿವಾರ ಸಾಯಂಕಾಲ ಹಾಸನದ ಹೈಸ್ಕೂಲ್ ವಿದ್ಯಾರ್ಥಿಗಳೆಲ್ಲರೂ ಸೇರಿ ಇಲ್ಲಿನ ಸಬ್ ಜಡ್ಜರಾದ ಮೆ॥ ಬಿ. ಶೇಷಗಿರಿರಾವ್, ಪರ್ಷನ ಅ॥ ಕಮಿಷನರ್ ಮೆ॥ ಯಂ. ಎ. ತಿರುಮಲಾಚಾರ್ ಮತ್ತು ಹೆಡ್ ಮಾಸ್ಟರ್ ಮೆ॥ ಎಸ್ ಕ್ರಾಸ್, ಇನ್ನೂ ಹೈ ಸ್ಕೂಲ್ ಮಾಸ್ತರುಗಳು ಕೆಲವು ಕಛೇರಿ ನೌಕರರು ಮೊದಲಾದವರನ್ನೆಲ್ಲಾ ಜೂಬಿಲಿ ಹಾಲಿನಲ್ಲಿ ಸಭೆ ಸೇರಿಸಿ ಮೆ॥ ಮಾಧೂರಾಯರನ್ನು ವಾದ್ಯಘೋಷದಿಂದ ಕರೆದುಕೊಂಡು ಬಂದರು. ವಿದ್ಯಾರ್ಥಿಗಳು ವಿಜ್ಞಾಪನಾ ಪತ್ರಿಕೆಗಳನ್ನು ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದುಸ್ತಾನಿ ಭಾಷೆಗಳಲ್ಲಿ ಓದಿ ವಿನಯಪೂರ್ವಕವಾಗಿ ಒಪ್ಪಿಸಿದರು ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರ್ ಮೆ॥ ವೇದಾಂತೈಯ್ಯಂಗಾರು) ಅವರ ವಿಷಯವಾಗಿ ಉಪನ್ಯಾಸಮಾಡಿದರು ವಿದ್ಯಾರ್ಥಿಗಳು ಗಂಧ, ಪುಷ್ಪ, ತಾಂಬೂಲಾದಿಗಳನ್ನು ಕೊಟ್ಟು ಆದರಿಸಿ ಬೀಳ್ಕೊಟ್ಟರು ಮೆ॥ ಮಾಧೂರಾಯರಿಗೂ ಅವರ ಸ್ನೇಹಿತರಿಗೂ ಉಳಿದ ಎಲ್ಲಾ ಸ್ಕೂಲ್ ಹುಡುಗರಿಗೂ ಆದರ ಪೂರ್ವಕವಾಗಿ ಫಲಾಹಾರ ಮಾಡಿಸಿದರು. ಸುಮಾರು ೨೦೦—೩೦೦ ಜನಗಳ ಮಗೂ ಸೇರಿದ್ದರು ಫಲಾಹಾರವಾದನಂತರ ಗಂಧ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ಮೆ॥ ಮಾಧೂರಾಯರವರು ಬಾಲಕರಿಗೆಲ್ಲಾ ಒಳ್ಳೇ ನಡತೆಗಳನ್ನೂ ಬುದ್ಧಿವಾದಗಳನ್ನೂ ಕುರಿತು ಇಂಗ್ಲಿಷಿನಲ್ಲಿ ಉಪನ್ಯಾಸ ಮಾಡಿದರು ಇವರು ಈ ಸ್ಥಳಕ್ಕೆ ಬಂದು ಸುಮಾರು ೭ ವರ್ಷಗಳಾದವು ಅಂದಿನಾರಭ್ಯ ವಿದ್ಯಾರ್ಥಿಗಳಿಗೆ ತಿಮ್ಮಲ್ಲಿರತಕ್ಕ ಸದ್ಗುಣಗಳನ್ನು ಬೋಧಿಸಿ, ಅವರಲ್ಲಿದ್ದ ದುರ್ಗುಣಗಳನ್ನು ಹೋಗಲಾಡಿಸಿ ಸನ್ಮಾರ್ಗಕ್ಕೆ ತಂದಂಥಾ ಸದ್ಗುಣಶಾಲಿಗಳಾದ ಇವರನ್ನು ಅಗಲಿರಬೇಕಾದರೆ ಯಾರಿಗಾಗಲಿ ವ್ಯಸನಕರವೇ ಇವರು ಈ ತಿಂಗಳು ೨ ನೇ ತಾ ಗುರುವಾರ ಸಾಯಂಕಾಲ ಮೈಸೂರಿಗೆ ಪ್ರಯಾಣಮಾಡಿದರು. ಇವರನ್ನು ಕಳುಹಿಸುವದಕ್ಕೆ ವಿದ್ಯಾರ್ಥಿಗಳನೇಕರು ಬಹಳ ದೂರದವರೆಗೂ ಜೊತೆಯಲ್ಲಿ ಹೋಗಿ ಪಶ್ಚಾತ್ತಾಪಪಟ್ಟು ಸಾಗಕಳುಹಿಸಿದರು

ದೊಡ್ಡಬಳ್ಳಾಪುರ.—ಇಲ್ಲಿನ ಗೋಣಿಗರ ಪೇಟೆ ಗರಡಿ ಯಶವಂತರಾವ್ ಎಂಬುವನಿಗೂ, ನಗರ್ತರ ಪೇಟೆ ಗರಡಿ ಚಿಕ್ಕ ವೀರಪ್ಪನಿಗೂ ಸುಮಾರು ಎರಡು ತಿಂಗಳಿಂದಲೂ ಕುಸ್ತಿ ಮಾಡುವಂತೆ ಗೊತ್ತುಮಾಡಿ ಉಭಯತ್ರರೂ ಅವರ ಗರಡಿಗಳಲ್ಲಿ ಯಶವಂತರಾವ್ ಎಂಬುವನು ಸ್ವಂತ ಪೈಲ್ವಾನನಿಂದಲೂ, ಚಿಕ್ಕ ವೀರಪ್ಪನು ಪರಸ್ಥಳದ ಇಬ್ಬರು ಮೂವರು ಪೈಲ್ವಾನರುಗಳಿಂದಲೂ, ಲಡತ್ ತೆಗೆದುಕೊಳ್ಳುತ್ತಿದ್ದರು ಈ ಕುಸ್ತಿಯಲ್ಲಿ ಗೆದ್ದವನಿಗೆ ೫ ರೂಪಾಯಿ ಬಾಜೂ ಕುಸ್ತಿ ನೋಡಲಿಕ್ಕೆ ಬಂದ ಪ್ರಜೆಗಳಿಂದ ಹುಟ್ಟಿದ ಟಿಕೆಟ್ಟಿನ ಎಲ್ಲಾ ಮೊಬಲಗೂ ಸಲ ಕೊಡುವಂತೆ ನಿಷ್ಕರ್ಷೆಯಾಗಿ ಈ ತಿಂಗಳು ೫ ನೇ ತಾ ಭಾನುವಾರ ಸಾಯಂಕಾಲ ಕೋಟೆಯ ದೊಡ್ಡ ಆಷರ್ಣೆಯಲ್ಲಿ ಕುಸ್ತಿ ನಡೆಯಿತು ಸಾವಿರಾರು ಪ್ರಜೆಗಳು ಈ ಚೆಪ್ಪಿನ ಕುಸ್ತಿಯನ್ನು ನೋಡಲು ನೆರೆದಿದ್ದರು ೫॥ ಗಂಟೆಗೆ ಕುಸ್ತಿ ಶುರುವಾಗಿ ಸುಮಾರು ೧೦ ನಿಮಿಷಗಳೊಳಗಾಗಿ ಯಶವಂತರಾವ್ ಚಿಕ್ಕ ವೀರಪ್ಪನನ್ನು ಚಿತ್ತುಮಾಡಿ ಸೋಲಿಸಿದನು ಬೆಂಗಳೂರು ಮತ್ತು ದಂಡಿನಿಂದ ಬಂದಿದ್ದ ದೊಡ್ಡ ಪೈಲ್‌ವಾನುಗಳೂ, ನೆರೆದಿದ್ದ ಪ್ರಜೆಗಳೂ ಹಸ್ತತಾಡನೆಗಳಿಂದ ಜಯಘೋಷವನ್ನು ಮಾಡಿದರು ಗೆದ್ದವನನ್ನು ವಿಜೃಂಭಣೆಯಿಂದ ಎಲ್ಲಾ ಪೇಟೆಗಳಲ್ಲಿ ಮೆರವಣಿಗೆಮಾಡಿ ಹೂ ಬತ್ತಾಸು ಕಡ್ಲೆಪುರಿಯೂ ಸಹ ಅತಿವೃಷ್ಟಿಯಂತೆ ಸುರಿಸಿದರು ಈ ಮಧ್ಯೆ ಸೋತು ಹೋದ ಚಿಕ್ಕ ವೀರಪ್ಪನಿಗೆ ತಯಾರಿ ಹಾಕಿಸುತ್ತಿದ್ದ ಮೂರು ನಾಲ್ಕು ಮಂದಿ ಸಾಹುಕಾರರು ಪೂರಾ ಕುಸ್ತಿಯಾಗಲಿಲ್ಲ, ಅರ್ಧ ಮುಗ್ಗಾಲು ಮಾತ್ರ ಆಯಿತೆಂದು ತಕರಾರು ತಂದರು ಈ ವಿಷಯ ಅಮಲ್‌ದಾರರ ವರಿಗೂ ಹೋಯಿತು ಅವರು ಸಭೆಮಾಡಿ ಮ್ಯುನಿಸಿಪಲ್ ಮೆಂಬರುಗಳನ್ನೂ ಇತರ ದೊಡ್ಡ ಮನುಷ್ಯರನ್ನೂ ಸೇರಿಸಿ ನಿಜಸ್ಥಿತಿಯನ್ನು ತಿಳಿದು ಗೆದ್ದವನಿಗೆ ಮೂರು ಭಾಗವೂ, ಸೋತವನಿಗೆ ಒಂದು ಭಾಗವೂ ಹಣ ಕೊಡುವಂತೆ ತೀರ್ಮಾನ ಮಾಡಿದರೆಂದು ಕೇಳಿ ಸರ್ವರೂ ಆನಂದ ಪಟ್ಟರು. ಕುಸ್ತಿಯಾದ ಕೂಡಲೆ ಬಿದ್ದ ಮಳೆಯು ಪುಷ್ಪವೃಷ್ಟಿಯಂತೆ ಪ್ರಜೆಗಳಿಗೆ ಹರ್ಷವನ್ನುಂಟುಮಾಡಿತು.

ಅರಸಿಕೆರೆ.—ಇಲ್ಲಿ ಮಳೆ ತಕ್ಕಮಟ್ಟಿಗೆ ಜದವಾಯಿತು ಕೆರೆ ಕುಂಟೆಗಳಿಗೆ ನೀರು ಸುತರಾಂ ಇಲ್ಲ ಮಾಲೆಕಲ್ಲು ತಿರುಪತಿವೆಂಕಟರಮಣಸ್ವಾಮಿ ರಥೋತ್ಸವದ ದಿನ ಮುಂತಾದ್ದನ್ನು ಜನಗಳಿಗೆ ನೀರಿನ ಅನುಕೂಲವಾದರೆ ಮುಂದೆ ನೇಮಕ ಮಾಡುವರು. ಮತ್ತು ನಮ್ಮ ಅರಸಿಕೆರೆ ಅಮಲ್‌ದಾರರಿಗೆ ಪ್ರಮೋಷನ್ ಎಂದು ತಿಳಿದು ಪ್ರಜೆಗಳು ಸಂತೋಷಪಟ್ಟರೂ ಅದು ನಿಜವಲ್ಲವಾದ ಕಾರಣ ವಿಷಾದಿಸಬೇಕಾಗಿದೆ.—ಮೆ॥ ಬಲವಂತರಾಯರನ್ನು ಯಾವ ಕಾರಣದಿಂದಲೋ ಮೆಂಬರ ಕೆಲಸದಿಂದ ತೆಗದುಬಿಟ್ಟಿದ್ದರು ಅವರು ನ್ಯಾಯವಾದ ಕಾರ್ಯಗಳ ವಿಷಯ ಯೋಚಿಸತಕ್ಕವರು, ಅಂಥಾವರು ತಿರಿಗಿ ಕೆಲಸಕ್ಕೆ ನೇಮಕವಾಗಿರುವದರಿಂದ ಜನಗಳಿಗೆ ತುಂಬಾ ಸಂತೋಷವಾಗಿದೆ ಕೆಲವು ಮೆಂಬರುಗಳು ಬಿಡಜನಗಳ ವಿಷಯದಲ್ಲಿ ಕನಿಕರಪಡದೆ, ತುಂಬಾ ಇರಾ ಕೊಡುತ್ತಾರೆ. ಚಿಕ್ಕ ನೌಕರರನ್ನು ತಮ್ಮ ಮನೆ ತಮ್ಮ ಅಂಗಡಿ ಮುಂದೆ ಮಾತ್ರ ಶುದ್ಧಮಾಡಬೇಕು ಮತ್ತು ಅಮಲ್‌ದಾರರ ಮನೆ ಬೀದಿ ಶುದ್ಧವಾಗಿದ್ದರೆ ಸಾಕು ಎನ್ನುವವರಾಗಿದಾರೆ —ಊರಿನ ಗೊಬ್ಬರವನ್ನು ತಮ್ಮ ಸ್ವಂತ ಗದ್ದೆ ತೋಟಗಳ ಕಡೆ ಹಾಕಬೇಕೆಂದೂ ಅಪ್ಪಣೆ ಕೊಡುತ್ತಾರೆಂಬದಾಗಿ ತಿಳಿದುಬರುತ್ತದೆ ಇಂಥಾ ಮೆಂಬರುಗಳಿಂದ ಸರ್ಕಾರಕ್ಕೆ ನಷ್ಟ; ಪ್ರಜೆಗಳಿಗೆ ಕಷ್ಟ —ಎರಡು ತಿಂಗಳ ಪಂಚಿ ಸಂತೆ ಗಲಾಟೆ, ಪಸಿಗೆ ವಿಷಯದಲ್ಲಿ ಅಮಲ್‌ದಾರರು ಒಳ್ಳೇ ತಾಕೀತುಕೊಟ್ಟು ಏರ್ಪಾಡಿಸಿ, ಪಸಿಗೆ ಮುಂತಾದ್ದು ತೆಗೆಯುವಂತೆ ಬಂದೋಬಸ್ತು ಮಾಡಿದ್ದರು ಅದು ಈ ಸಂತೆಯಿಂದ ಪುನಹಾ ಬಹಳವಟ್ಟಿಗೆ ತಲೆದೋರಿರುತ್ತದೆ ಇದಕ್ಕೆ ಪೋಲೀಸಿನವರು ಅನುಗುಣವಾಗಿದ್ದಾರೆಯೋ ಗಂಟುಕಳ್ಳರ ಕಾಟ ಜೋರಾಗಿದೆ. ಎಸ್ ಎಂ ಆರ್. ನೌಕರರಾದ ಹಂಜಾಟಿ ಕೇಶವ ಐಯ್ಯರ್ ಮೈಸೂರಿಗೆ ವರ್ಗವಾಗಿ ಹೋಗುವದು ಇಲ್ಲಿನ ಜನಗಳಿಗೆ ವ್ಯಸನ —ಇಲ್ಲಿ ದಿನಸಿಧಾರಣೆ ದಿನದಿನಕ್ಕೆ ಅಗ್ಗವಾಗುತ್ತಾ ಇದೆ. ಟವ್ನ ಪಾಕೀದು ಸರಿಯಾಗಿಲ್ಲ. ಸಂತೆಗೂ ಊರಿಗೂ ಮಧ್ಯೆ ಚರ್ಮದ ಮಂಡಿ ಇರುವದರಿಂದ ದುರ್ವಾಸನೆ ಸಹಿಸಲಾಗದು ಇದು ಮ್ಯುನಿಸಿಪಲ್ ಮೆಂಬರುಗಳ ನಾಸಿಕಾದ್ವಾರಕ್ಕೆ ಸೇರಲಿಲ್ಲವಾದೀತು ಮಳೆಯ ದೆಸೆಯಿಂದ ಅವರ ಮೂಗು ಕಟ್ಟಿಕೊಂಡಿರಬಹುದು. ಇನ್ನು ಮೇಲೆ ಆಸ್ಪತ್ರೆಗೆ ಹೋಗಿ ವಾಸಿಮಾಡಿಕೊಂಡು ಅದರ ಮೇಲೆ ನಿಗಾ ಇಡುವರೆಂದು ನಂಬುತ್ತೇನೆ

ತುಂಕೂರು —ಹವಾ ಅನುಕೂಲವಾಗಿದೆ ಹೋದ ಶನಿವಾರದಿಂದ ಮಳೆ ಪ್ರಾರಂಭವಾಗಿ ವ್ಯವಸಾಯಕ್ಕೆ ಅನುಕೂಲಿಸುವಂತೆ ಆಗುತ್ತಿದೆ. ಮುಂದೆ ಭಾರಿ ಮಳೆಗಳಾಗಿ ಕೆರೆ ಕಟ್ಟೆಗಳಿಗೆ ನೀರು ಬರುವ ಸಂಭವವಿದೆ ಧಾರಣೆವಾಸಿಗಳು ಸ್ವಲ್ಪವೂ ಇಳಿಮುಖವಾಗದೆ ಜಾಸ್ತಿಯಾಗಿಯೇ ಇವೆ ನಮ್ಮ ಖಾಯಂ ಅಸಿಸ್ಟಂಟ್ ಮೆ॥ ಕಂಠೀರವಾಚಾರ್ರು ಕಾಯಿಲೆ ನಿವಾರಣಾರ್ಥವಾಗಿ ರಜಾಪಡೆದುಕೊಂಡು ಬೆಂಗಳೂರಿಗೆ ಹೋಗಿದ್ದರು. ಖಾಯಿಲೆಯು ಜೋರಾಗಿ ಕಳೆದ ವಾರ ದೈವಾಧೀನರಾದರೆಂಬ ವರ್ತಮಾನವು ಇಲ್ಲಿನ ಪ್ರಜೆಗಳಿಗೆ ತುಂಬಾ ವಿಷಾದಕರವಾಗಿದೆ. ಇವರ ಬದಲಿಗೆ ಬಂದಿರುವ ಮೆ॥ ಜೆ ಬಾಲ್‌ರವರು ತುಂಬಾ ನಿಧಾನಿಗಳಾಗಿಯೂ ಸರ್ಕಾರಿ ಕೆಲಸದಲ್ಲಿ ವಿಚಕ್ಷಣೆಯುಳ್ಳವರಾಗಿಯೂ ಇರುತ್ತಾರೆ ಇವರನ್ನೇ ನಮ್ಮ ಗೌರ್ನಮೆಂಟಿನವರು ಇಲ್ಲಿ ಖಾಯಂ ಮಾಡಬೇಕಾಗಿ ಪ್ರಾರ್ಥನೆ.—ಈಗ ಮಳೆಗಾಲವಾಗಿದ್ದರೂ ಮೊನ್ನೆ ಮಂಗಳವಾರ ಸಾಯಂಕಾಲ ೬ ಗಂಟೆ ಸಮಯದಲ್ಲಿ ಟವ್ನಿಗೆ ಉತ್ತರಭಾಗದಲ್ಲಿ ಲಗತ್ತಾಗಿರುವ ಅರಳೀಮರದ ಪಾಳ್ಯದಲ್ಲಿ ಒಂದು ಹುಲ್ಲಿನ ಮನೆಯು ಹತ್ತಿಕೊಂಡಿತು ಕೂಡಲೇ ಸಮೀಪದ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದವರು ಓಡಿಬಂದು ನೀರಿಲ್ಲದ ಈ ಕಾಲದಲ್ಲಿ ತುಂಬಾ ಶ್ರಮಪಟ್ಟು ಬೆಂಕಿ ಆರಿಸಿದರು. ಇನ್ನು ಕೊಂಚ ತಡವಾಗಿದ್ದಲ್ಲಿ ಸಮೀಪದಲ್ಲಿದ್ದ ಇತರ ಮನೆಗಳಿಗೂ ಬೆಂಕಿ ತಗಲಿ ಆ ರಾತ್ರಿ ಜನರಿಗೆ ತುಂಬಾ ಕಷ್ಟನಷ್ಟಗಳು ಪ್ರಾಪ್ತವಾಗುತ್ತಿದ್ದವು ಬೆಂಕಿಹೊಗಲು ಕಾರಣ ವಿಚಾರಿಸುವಾಗ್ಗೆ ಅಡಿಗೆ ಮಾಡುತ್ತಿದ್ದ ಹೆಂಗಸರಿಂದ ಪರೆಷ ಅಚಾತುರ್ಯವೆಂದು ತಿಳಿಯಬಂತು —ಯಳಂದೂರು ನಾಟಕದ ಕಂಪನಿಯವರು ಬಂದು ನಾಟಕವಾಡುತ್ತಿದ್ದಾರೆ ಇನ್ನು ಒಂದು ತಿಂಗಳ ವರಿಗೂ ಇವರು ಇಲ್ಲೇ ಇರುವಂತೆ ತಿಳಿಯಬಂದಿದೆ —ಎರಡು ಮೂರು ವರುಷದಿಂದ ನಮ್ಮ ಮಿಷನ್ ಗರಲ್ಸ್ ಸ್ಕೂಲ್‌ಗಳ ಲೇಡೀ ಸೂಪರಿಂಟೆಂಡೆಂಟರಾಗಿರುವ ಮಿಸ್ ಪ್ಯಾಜೆಟ್ ಅಮ್ಮನವರು ಈ ವಾರದಲ್ಲಿ ಸೀಮೆಗೆ ದಯಮಾಡಿಸುವರೆಂಬ ವದಂತಿ ಇದೆ ಇವರು ತಮ್ಮ ಕಾಲದಲ್ಲಿ ಸ್ಕೂಲುಗಳಲ್ಲಿ ವಿದ್ಯಾಭಿವೃದ್ಧಿಪಡಿಸಿದ್ದಲ್ಲದೆ ಈ ಊರಿನ ಹೆಂಗಸರಿಗೆ ಅವರವರ ಮನೆಗಳಿಗೆ ಹೋಗಿ ಕಸೂತಿ ಮುಂತಾದ ಹೊಲಿಗೆಗಳನ್ನು ಪಾಠಗಳನ್ನೂ ಕಲಿಸುತ್ತಿದ್ದು ಎಲ್ಲಾ ಜನರಲ್ಲೂ ತುಂಬಾ ಪಳಗೆಯುಳ್ಳವರಾಗಿರುತ್ತಾರೆ. ಹಿಂದೆ ಪ್ಲೇಗಿನ ಕಾಲದಲ್ಲಂತೂ ಬಹು ಜನರಿಗೆ ತುಂಬಾ ಉಪಕಾರಿಗಳಾಗಿದ್ದರು. ಇಂಥಾ ಜನಾನುರಾಗಿಗಳಾದ ಮಿಸ್ ಪ್ಯಾಜೆಟ್‌ರವರು ಸೀಮೆಗೆ ದಯಮಾಡಿಸುವದರಿಂದ ಎಲ್ಲರಿಗೂ ತುಂಬಾ ವ್ಯಸನಕ್ಕೆ ಕಾರಣವಾಗಿದೆ



ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 107-1

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿನ ಕನ್ನಡ ಗ್ರಂಥಗಳೂ, ಶಾಲಾಪುಸ್ತಕಗಳೂ, ಪೇನಾ, ಪೇನ್ಸಿಲ್, ನೋಟ್‌ಬುಕ್, ನಾನಾ ವಿಧವಾದ ಕಾಗದದ ಟೋಪಿಗಳು, ವೃತ್ತಾಂತ ಪತ್ರಿಕೆ, ಮಹಿಳಾಸಖಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರಸ್, ಹಾರ್ವೆಸ್ಟ್ ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಲೆಯಾಗಿ ಮಾರಾಟವಾಗುತ್ತಿವೆ ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ಪ್ರಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ:—

ಕಥಾಸಂಗ್ರಹ	೧ ರಿಂದ ೩ ಭಾಗಗಳು	ಕ್ರಯ ೧—೬—೦
	ವಿ. ಪಿ. ಪಿ. ಮೂಲಕ	೧—೩—೦
ಅನುಭವಸಾರ	..	ಕ್ರಯ ೦-೧೨—೦
ಗ್ರೀಕರ ಚರಿತ್ರೆ	..	,, ೦—೨—೦
ರೋಮನರ ಚರಿತ್ರೆ	..	,, ೧—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ.
ವಿ. ಪಿ. ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ. ಉತ್ಕೃಷ್ಟವಾದ ಪುಸ್ತಕ. ಅನೇಕ ತಸ್ವೀರುಗಳು ಇವೆ. ಇದನ್ನು ಕುರಿತು ರಾಜಧರ್ಮಪ್ರವೀಣ ಮಾ॥ ರಾ॥ ತಂಬೂಶೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ. ಕ್ರಯ ೦—೮—೦
ವಿ. ಪಿ. ಪಿ. ಮೂಲಕ ೦—೧೦—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ	೦—೬—೦
ಕ್ರಿಮಿವರ್ಗವರ್ಣನೆ	೦—೧—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು.—ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು ಭಾರಿ ಪುಸ್ತಕ. ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ ಪಿ ಪಿ. ಮೂಲಕ ೨—೩—೦. ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ

ಪಕ್ಷಿಗಳ ಚರಿತ್ರೆ	೦—೧—೦
ಪ್ರಾಚೀನ ಜೀವರಾಶಿಗಳ ವರ್ಣನೆ	೦—೧—೦
ಸಣ್ಣವರಿಗೆ ಹೇಳುವ ಕಥೆಗಳು	೦—೧—೦

ಬಾಲಿಕಾಗೀತಮುಕ್ತಾಕಲಾಪ, ಗೀತಮಂದಾರ ೦—೨—೦, **ಕಲ್ಯಾಣಗೀತಾವಳಿ** ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ.

ಹಿಂದೂದೇಶಪ್ರದಕ್ಷಿಣ, ಇದರಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಮೊದಲನೇ ಮುದ್ರಣವು ಮುಗಿದು ಹೋಗುತ್ತಾ ಬಂದಿವೆ. ನಮ್ಮಲ್ಲಿ ಇನ್ನೂ ಸುಮಾರು ನಾಲ್ವತ್ತು ಪ್ರತಿಗಳು ಮಾತ್ರ ಉಳಿದಿವೆ. ಬೇಗ ತರಿಸಿಕೊಳ್ಳಿ ಇದರ ಕ್ರಯ ೦—೮—೦. ವಿ. ಪಿ. ಪಿ. ಮೂಲಕ ೦—೧೧—೦

ಮುದ್ರಾಮಂಜೂಷ ೦-೮-೦. (ವಿ. ಪಿ. ಪಿ. ಮೂಲಕ ೦ ೧೧-೦)

ಮುಖ್ಯವಾಗಿ ಸ್ನೇಹಿತರೇ, ತಾವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವುದಕ್ಕೆ ಪ್ರಯತ್ನಮಾಡುತ್ತೇವೆ

ವಿಳಾಸ:— ಮ್ಯಾನೇಜರ್.
ಸಿ. ಎಲ್ ಎಸ್, ಬುಕ್ ಡಿಪೋ,
ಮೈಸೂರು.

ಪರಿಮಳ ನಶ್ಯದಪುಡಿ

102-2

ಪರಿಮಳ ನಶ್ಯದ ಪುಡಿ ಡಬ್ಬಿ ೧ ಕ್ಕೆ	0—9—0
ಅಂಚೆ ಖರ್ಚು	0—3—0
ಸಾದಾ ನಶ್ಯದ ಪುಡಿ ಡಬ್ಬಿ ೧ಕ್ಕೆ	0—6—0
ಅಂಚೆ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೇನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನು. ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳುಹಿಸಿದರ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—ಮ್ಯಾನೇಜರ್, ದರ್ಪ ವೈದ್ಯಶಾಲಾ,
69 ಬ್ರಾಡ್‌ವೇ ರೋಡ್, ಸಾಹುಕಾರ್ ಪೇಟೆ, ಮದ್ರಾಸ್.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ. ೩ ಕ್ರಯ ರೂ. ೩

106-2

ಗೆಜ್ಜೆ ನಾಗರ.

ಈ ಗಜ್ಜೆನಾಗರವನ್ನು ಎಂದಿಗೂ ಕಪ್ಪಾಗದಿರುವ ನೀಲಿ ಹಿತ್ತಾಳೆಯಿಂದ ಅತಿಸುಂದರವಾದ ಶೃಂಗಾರ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆ ನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ. ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಪ್ರಯೋಜನವಿಲ್ಲ ಕ್ರಯ. ರೂ. ೩—೦—೦. ವಿ. ಪಿ. ಪಿ ಖರ್ಚು. ೦—೩—೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಗುರುಬಸವ ಅಂಡ್ ಕಂಪನಿ, ಸಾಹುಕಾರ್ ಪೇಟೆ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—14

ನಿಯಮಿತ್ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳು ಬೆಲೆಯುಳ್ಳ ೩೮ ಸಾವಿರ ಷೇರುಗಳಿಂದಾಗುವ ೯.೫ ಲಕ್ಷ ರೂಪಾಯಿಗಳು ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೩ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫಿ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸ್ವರ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

20—7—1906 ರಿಂದ 27—7—1906 ರ ವರೆ[illegible]

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋ[illegible] ಈ[illegible] ಸಂ[illegible]
ಬೆಂಗಳೂರು ಪಟ್ಟಣ	0	0	0
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟ್	19	17	7
ಮೈಸೂರು ,,	0	0	4
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಂಕೂರು ಡಿಸ್ಟ್ರಿಕ್ಟ್	0	0	14
ಹಾಸನ ,,	0	2	3
ಚಿತ್ರದುರ್ಗ ,,	0	0	0
ಕಡೂರ್ ,,	10	10	6
ಶಿವಮೊಗ್ಗ ,,	0	0	40
ಜುಮ್ಲಾ	29	29	71

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ [illegible]ರದ ಶ್ರಾವಣ ಬಹುಳ ಪಂಚಮಿ ಗುರುವಾರದಿಂದ ಶ್ರಾವಣ ಬಹುಳ [illegible]ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಆಗಸ್ಟ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.
9	ಗುರು	ಪಂಚಮಿ	26- 9	ರೇ	59 40
10	ಶುಕ್ರ ✣	ಷಷ್ಟಿ	27-58	ಅ	60- 0
12	ಶನಿವಾ ::	ಸಪ್ತಮಿ	32-38	ಅ	4 -12
13	ರವಿವಾ †	ಅಷ್ಟಮಿ	36-58	ಭ	11-26
14	ಚಂದ್ರ	ನವಮಿ	41-50	ಕೃ	16-10
15	ಕುಜ ¶	ದಶಮಿ	46-58	ರೋ	22-40
16	ಬುಧ ‡	ಏಕಾದಶಿ	51-41	ಮೃ	28-52

✣ ಆದಿಶುಕ್ರವಾರಂ. :: ಶ್ರೀಕೃಷ್ಣಜನ್ಮಾಷ್ಟಮಿ, ಶ್ರಾವ[illegible]ವಾರಂ. † ಮಹಾವ್ಯತೀಪಾತಃ. ¶ ಮಂಗಳಗೌರೀವ್ರತಂ. ‡ ಸ[illegible] ಏಕಾದಶಿ.

ಪೇಟೇ ಧಾರಣೆ.

ಪಿನಸಿ.		ಮೈಸೂರು.	ಬೆಂಗಳೂರು.
ಕಸ್ತೂರಿ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೬-೦-೦	೧೩-[illegible]
ಕೆಂಬೂತಿ ಅಕ್ಕಿ ಅವಲ್	..	೧೬-೦-೦	[illegible]
,, ದುಯಂ		೧೩-೧೨-೦	[illegible]
ಜಾವಾಳಿ ಅಕ್ಕಿ	..	೧೩-೮-೦	[illegible]
ಸಣ್ಣಕ್ಕಿ ಅವಲ್	..	೧೫-೦-೦	[illegible]
,, ದುಯಂ	..	೧೪-೮-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೨-೬-೦	[illegible]
,, ದುಯಂ	..	೧೧-೮-೦	[illegible]
ಹೈನ ರಾಗಿ ಪಲ್ಲಾ ೧ಕ್ಕೆ	..	೯-೪-೦	[illegible]
ಕಾರಾಗಿ	..	೭-೨-೦	[illegible]
ಜೋಳ		೯-೦-೦	[illegible]
ಜಲಸಂದೆ ಪಲ್ಲಾ ೧ಕ್ಕೆ		೧೨-೦-೦	[illegible]
ಬಿಳೀ ಅವರೆ	..	೧೦-೦-೦	[illegible]
ಹೆಸರು	..	೧೨-೦-೦	[illegible]
ಉದ್ದು	..	೧೨-೪-೦	[illegible]
ಕಡಲೆ	..	೧೨-೦-೦	[illegible]
ಎಳ್ಳು ಸೆ. ೧೨೩ ಕ್ಕೆ	..	೨೨-೮-೦	[illegible]
ಹುರುಳಿ	..	೧೦-೦-೦	[illegible]
ಹರಳು ೧೨೩ ಸೇರಿಗೆ	..	೧೫-೮-೦	[illegible]
ಸೀಗೇಕಾಯಿ ಮಣ ೧ಕ್ಕೆ	..	೨-೮-೦	[illegible]
ಮೆಣಸಿನಕಾಯಿ	..	೪-೦-೦	[illegible]
,, ದುಯಂ	..	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	..	೪-೩-೦	ಮ [illegible]
ಒಳ್ಳೆಣ್ಣೆ ಮಣ ೧ಕ್ಕೆ	..	೬-೪-೦	[illegible]
ಹರಳೆಣ್ಣೆ ,,	..	೫-೮-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	..	೧೧-೦-೦	[illegible]
ಉಪ್ಪು ,,	..	೬-೧೦-೦	[illegible]
ಹುಣಸೇ ಹಣ್ಣು	..	೦-೧೪-೦	[illegible]
,, ಹಳೇದು	..	೦-೮-೦	[illegible]
ತುಪ್ಪ ಮಣ ೧ಕ್ಕೆ	..	೧೩-೯-೦	[illegible]
ಸೀಮೆಯೆಂಣೆ ಪಟ್ಟ ೧ಕ್ಕೆ	..	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೩-೮-೦	[illegible]
ಅಡಿಕೇಕಾಯಿ ಮಣ ೧ಕ್ಕೆ	..	೧-೦-೦	[illegible]
ಅಂಬ್ಯಾಳದ ಕಾಯಿ ಮಣ ೧ಕ್ಕೆ	..	೦-೧-೨-೦	[illegible]
ಚಿನ (ಪವನ್) ಕೆಂಪು	..	೧೫-೪-೦	೧೫-[illegible]
,, ,, ಪಸಿಮೆ	..	೧೫-೧೦-೦	೧೫-[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೧-೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	[illegible]

Printed and published by the Rev. E[illegible] THOMPSON, M.A., the Proprietor and Ma[illegible] Wesleyan Mission Press, Mysore. 9/8/190[illegible]

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದುಡ್ಡು ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೨೦ ಮೈಸೂರು—ಸನ್ ೧೯೧೬ ನೇ ಇಸವಿ ಆಗಸ್ಟ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೧೧

ಇಂಡಿಯದ ದೊಡ್ಡ ನೋವುಹರ.

86-12

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಹುಣ್ಣು, ಕೀಲು ಸೆನ್ನು, ಏಡೆಗಳ ನೋವು, ಆಸ್ತ್ಮಾ, ಈ ಪ್ರಕಾರವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯಪಡ ಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾದ್ದು ಬಾಟ್ಲಿ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ನಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರೆಲ್ಲಾ ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭವದ್ದು. ಕ್ರಯ — ೧ ಬಾಟ್ಲಿಗೆ ೧೦ ಆಣೆ, ೩ಕ್ಕೆ ೨ ರೂಪಾಯಿ; ರೂ. ೩॥ ರೂಪಾಯಿ, ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ವರೆಗೆ ಮೂರು ಬಾಟ್ಲಿ ವರಿಗೆ ೩ ಆಣೆ.

ನಮ್ಮ ವಿಳಾಸ —ಎಸ್ ಪಟ್ನಿಯು ಆರ್ಗ, ಸಿವೆಟ್ರಿ ರೋಡ್, ವೇಪೇರಿ, ಮದರಾಸ್.

ಮೊ ೞ ವ ಗ ೞ ಸಿ ಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖವು, ಊತಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ, ಚೇಳು ಕಡಿದದ್ದು, ಚಿಪ್ಪುರವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನೀಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೧ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ. ರೂ. ೨—೪ ಆಣೆ ಬೆಲೆಯುಳ್ಳ ಡಬ್ಬಿಯಲ್ಲಿ ೧ ಡಬ್ಬಿಯಲ್ಲಿರುವದಕ್ಕಿಂತ ೬ ರಷ್ಟು ಹೆಚ್ಚು ಔಷಧವಿರುತ್ತೆ. ೨—೪ ಆ ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಜೋಕೇಷ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಬರೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಬಹು ವೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿಗೂ, ೧ ರೂ. ಗೆ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಊರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಲಂಪು ಬೀದಿ, ಮದರಾಸ್.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಉತ್ಪತ್ತಿಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-27

ವ್ಯಾಪಾರದ E C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಆಫ್ ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರಿ.

101 3



ಇದು ಸಾಧಾರಣ ಜ್ವರ, ಚಳಿಜ್ವರ, ಸನ್ನಿಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಪರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ ...—ಸೀಸೆ ೧ ಕ್ಕೆ ೪ ಆಣೆ, ೧ ರೂ., ೧—೪ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಅ ಮ ೦ ಕ ಪೂ ರ ದ.

Amrut-Kapoor
TRADE MARK

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಇದು ನಮ್ಮ ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ನೆಪ್ರಿಯು ಒಮಂ ಕರ್ಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ.—

ಹೆನ್ರಿಡಾವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) ರೂ. ೧—೦—೦

ವರಕ್ಕೆ ಕೊಡುವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ .. .. ರೂ. ೧—೧೪—೦

" " " ೧—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-12

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಶನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಿಕ್ಕೋಡಿಯಿಂದ ಬರುಯರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟ್ ಮಾಂಡ್ವಿ, ಮುಂಬಯಿ.

ಟಪಾಲ ಖರ್ಚ ಫುಕಟ! ಟಪಾಲ ಖರ್ಚ ಫುಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91-9

ವಿಲಾಯತೀ ಮಸಿಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದು, ಅಗ್ಗವಾದದ್ದು. ಇದೇ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ ೧೦೦ ಪುಡಿಕೆಗಳಿಗೆ ೧ ರೂಪಾಯಿ. ಟಪಾಲ ಖರ್ಚ ಫುಕಟ.

ವಿಳಾಸ:—ವಾಯ್. ಜಿ. ದಿಕ್ಷೀತ, ಸ್ಟೇಶನರ, ಪುಣೇ ಸಿಟಿ.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು

104 3

ಪಾಲಿ, ಬಹು ಸುಂದರ ಚಿತ್ರಗಳುಳ್ಳದ್ದು. ನಮೂನೆ ೧೬ ಕಾರ್ಡುಗಳಿಗೆ ೯॥ (ಸ್ಟಾಂಪು ಕಳುಹಿಸಿ), ೧೦೦ ಕಾರ್ಡುಗಳಿಗೆ ೬ ಆಣೆ. ಸ್ವದೇಶಿ ಮೊಂದಾಲ್ ಸೀಸೆಗೆ ೬ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಇಂಪೀರಿಯಲ್ ಟೋಪಿಗಳು, ಇವುಗಳಿಗೆ ಟಪಾಲುಖರ್ಚ ಬೇರೆ. ವರ್ತಕರಿಗೆ ಒಳ್ಳೇ ಕಮಿಶನ್, ಇಂಗ್ಲಿಷಿನಲ್ಲಿ ಬರಿಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟಾಂಪು ಹಚ್ಚಿ ಬರೆಯತಕ್ಕದ್ದು. Bhatt & Co., Poona city.

ಮೋಜು! ಬಹಳ ಮೋಜು!! ಅಗ್ಗ! ಬಹು ಅಗ್ಗ!!

ಮೇಲಾದ ಸ್ವದೇಶಿ ಬ್ಲೂ ಬ್ಲಾಕ್ ಇಂಕ್

ಮೂರು ತೊಲೆಗಳುಳ್ಳ ಪೊಟ್ಟಣ ೧ ಕ್ಕೆ ಕ್ರಯ—೦—೧—೦

ಭಾಂಗಿ ಛಾರ್ಜ ೦ ೩—೦

ಸ್ವದೇಶಿ ಇಂಕ್ ಪೌಡರ್, ಇದು ಇತರ ಎಲ್ಲಾ ಇಂಕುಗಳಿಗಿಂತ ಬಹಳ ಮೇಲಾದದ್ದು. ಇದು ಆಫೀಸುಗಳಲ್ಲೂ ಬ್ಯಾಂಕುಗಳಲ್ಲೂ ಸ್ಕೂಲುಗಳಲ್ಲೂ ಉಪಯೋಗಿಸತಕ್ಕದ್ದು. ಇಂಥಾ ಮೇಲಾದ ಪುಡಿಯು ಇಷ್ಟು ಸುಲಭ ಕ್ರಯಕ್ಕೆ ಮತ್ತೆಲ್ಲಿಯೂ ದೊರೆಯಲಾರದು.

ಈ ಇಂಕಿನಿಂದ ಬರೆದ ಕಾಗದವನ್ನು ನೀರಿನಲ್ಲಿ ನೆನಸಿ ಬೆರಳಿನಿಂದ ಅಕ್ಷರಗಳನ್ನು ಉಜ್ಜಿದಾಗ್ಯೂ ಕಲಸಿಹೋಗದು. ಸ್ವಲ್ಪವನ್ನು ತರಿಸಿ ಪರೀಕ್ಷಿಸಿರಿ. ಇದನ್ನು ಉಪಯೋಗಿಸುವ ವಿಧವು ಡಬ್ಬಿಗೆ ಸುತ್ತಿರುವ ಕಾಗದದಲ್ಲಿ ಬರೆದಿರುತ್ತೆ.

☞ ನಾಲ್ಕು ಡಬ್ಬಿಗೆ ಕಮ್ಮಿಯಾಗಿ ಪರಬಾಸ್ತು ಕಳಿಸಿದರೆ ಭಾಂಗಿ ಛಾರ್ಜ ಜಾಸ್ತಿಯಾಗುವದರಿಂದ ೪ ಡಬ್ಬಿಗಿಂತ ಕಮ್ಮಿಯಾಗಿ ದರಬಾಸ್ತು ಕಳುಹಿಸಕೂಡದು. ನಮ್ಮ ವಿಳಾಸ.—

ವಿಳಾಸ 103-3

ಸ್ವದೇಶಿ ಇಂಕ್ ಡಿಪೊ, ಸಾಹುಕಾರ್ ಪೇಟೆ, ಮದರಾಸ್.

"ವೀರಶೈವಾನಂದಿನಿ"

110 1

ಈ ಮಾಸಪತ್ರಿಕೆಯು ಸೆಪ್ಟಂಬರಿನಿಂದ ಪ್ರತಿ ತಿಂಗಳಲ್ಲಿಯೂ ಪ್ರಕಟಿಸಲ್ಪಡುವುದು ಇದರಲ್ಲಿ ಸಟೀಕಾ ಅಪ್ಪಯ್ಯದೀಕ್ಷಿತರ ಭಾಷ್ಯವೂ, ಪುರಾತನ ವೀರಶೈವ ಕವಿಗಳ ಕನ್ನಡ ಕಾವ್ಯಗಳೂ, ರಸವತ್ತರಗಳಾದ ಗದ್ಯಗ್ರಂಥಗಳೂ ಬರುವುವು ಈ ಮಾಸ ಸಂಚಿಕೆಯು ಇಪ್ಪತ್ತನಾಲ್ಕು ಪುಟಗಳುಳ್ಳದ್ದಾಗಿರುವುದು ಇದರ ಚಂದಾ ವರ್ಷಕ್ಕೆ ಪೋಸ್ಟೇಜು ಸೇರಿ ೧೨ ಆಣೆಗಳು ಮಾತ್ರವೇ ವಿದ್ಯಾಭಿಮಾನಿಗಳು ಉದಾರಾಶ್ರಯ ವೀಯಬೇಕೆಂದು ಪ್ರಾರ್ಥನೆ

ವಿಳಾಸ—ಎಸ್ ವೀರಪ್ಪಶಾಸ್ತ್ರಿ, ಪ್ರೊಪ್ರೈಟರ್, ಮಾಗಡಿ

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 57-22

(ಸ್ಕೊಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿ ಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈ ಸೋಕದೆ ತಯಾರಾದದ್ದು

ಎಲ್ಲಾ ಔಷದ ವ್ಯಾಪಾರಗಾರರಲ್ಲೂ ಮಾರಲ್ಪಡುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಒಕ್ಕಲಿಗರ ಸಂಘ.

98 6

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಒಳೆ ಇರುವ ಸ್ವಾ॥ ರಾ॥ ದೊಡ್ಡಣ್ಣಶೆಟ್ಟರವರ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಪಾಠಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೩, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಎಂ ಸುಬ್ಬಯ್ಯ, ಬಿ ಎ,

ಬೆಂಗಳೂರು ಕೆ ಹೆಚ್. ರಾಮಯ್ಯ, ಬಿ. ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು

ಷರಾ—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅವ್ಯಾದ ಕೂಡಲೇ ಒಂದು ಪ್ರತಿಯು ಮುಫತಾಗಿ ರವಾನಿಸಲ್ಪಡುವುದು ಇದಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಡುವವರಾಗಿದ್ದಾರೆ ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

CHAMBERLAIN'S COUGH REMEDY.

ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



95 7

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರಹ ಶೀತ, ಗಂಟಲನ್ನು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವ್ರು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲನಲ್ಲಿ ಶ್ಲೇಷ್ಮಕಟ್ಟುವುದನ್ನೂ ಶ್ಲೇಷ್ಮ ಬಿಡುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಬಾಗುವಂಥಾ ಕೆಟ್ಟಸ್ಥಿತಿಯು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನೋಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲಿಯೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ನೋಟೀಸ್—ಹುಣಸೂರು

111—1

ಹುಣಸೂರಲ್ಲಿರುವ ಹಿಂದುಸ್ತಾನಿ ಸ್ಕೂಲ್ ಹೆಡ್ ಮಾಸ್ಟರ್ ಜಾಫರ್ ಮೊಹಿದ್ದೀನ್ ಖಾನ್ ಸಾಹೇಬರು ತಿಳಿಯಪಡಿಸುವದೇನಂದರೆ—ಹುಣಸೂರು ಟವನಿನಲ್ಲಿರುವ ಪಟೇಲ್ ಬಿಡಾಂಸಾಹೇಬರ ಹೆಸರಿನ ಖಾತೆಯನ್ನು ಇವರ ಮೊಮ್ಮಗನಾದ ಮೈನರ್ ಮಹಮ್ಮದ್ ದಸ್ತಗಿರಿ ಹೆಸರಿಗೆ ಸಬ್ ಡಿವಿಜನ್ ಹುಜೂರಿನಿಂದ ಸಾದರಾದ ೨೧—೪—೧೯೦೬ ಮಾರ್ಕ ೧೧೨೬ ನೇ ನಂಬರು ಹುಕುಂ ಮೇರೆ ಖಾತೆ ಮಾಡಿಸಿರುವದರಿಂದ ಇದನ್ನು ಯಾರೂ ಆಧಾರ ಭೋಗ್ಯ ಕ್ರಯ ವಗೈರೆ ಮಾಡಿಕೊಳ್ಳಕೂಡದು ಹಾಗೆ ಮಾಡಿದ್ದಲ್ಲಿ ಮುಂದೆ ಬಹಳ ನಷ್ಟಕ್ಕೆ ಗುರಿಯಾಗುವರೆಂದು ಈ ಮೂಲಕ ಗೊತ್ತುಪಡಿಸಿರುತ್ತೇನೆ

ಬೇಕಾಗಿದ

112 1

ಹಿಂದುಸ್ತಾನಿ, ಇಂಗ್ಲಿಷ್, ಕನ್ನಡ, ಈ ಅಕ್ಷರಗಳನ್ನು ಶಿಲಾಯಂತ್ರದಲ್ಲಿ ಬರೆದು ಅಚ್ಚು ಹಾಕುವುದು, ಭೂಪಟ (ಮ್ಯಾಪ್) ಬರೆಯುವುದು, ಲಿಥೋಗ್ರಾಫ್ ಪ್ರೆಸ್ಸಿನ ಎಲ್ಲಾ ಕೆಲಸಗಳನ್ನೂ ಮಾಡುವುದು—ಈ ವಿಷಯಗಳನ್ನು ಚನ್ನಾಗಿ ತಿಳಿದಿರುವ ಒಬ್ಬ ಸಂಬಳಗಾರನು ಬೇಕಾಗಿದೆ ಯೋಗ್ಯತೆ ಪಡೆದಿರುವವರು ಮೈಸೂರು ಮಿರರ್ ಪ್ರೆಸ್ ಮ್ಯಾನೇಜರಿಗೆ ಕೂಡಲೆ ಬರೆದುಕೊಳ್ಳಲಿ

ವೃತ್ತಾಂತ ಪತ್ರಿಕೆ

ಸನ್ ೧೯೦೬ ನೇ ಇಸವಿ ಆಗಸ್ಟ್ ತಾ॥ ೧೬ ನೇ ಗುರುವಾರ

ಹಿಂದುಸ್ಥಾನದ ಬಜೆಟ್ಟೂ, ಮೊ॥ ಮಾರ್ಲೀಯವರ ಭಾಷಣವೂ

ಹಿಂದುಸ್ಥಾನದ ಜಮಾಖರ್ಚಿನ ಅಂದಾಜು ಪಟ್ಟಿಯನ್ನು ಕುರಿತು ಪ್ರತಿ ವರುಷವೂ ವಿಲಾಯತಿ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುವುದು ಇಂಡಿಯಾ ಗವರ್ನಮೆಂಟಿನವರು ಮೊದಲೇ ಕಳುಹಿಸುವ ಬಜೆಟ್ ಪಟ್ಟಿಯನ್ನು ಸ್ಟೇಟ್ ಸೆಕ್ರಟರಿಯವರು ಪಾರ್ಲಿಮೆಂಟಿನಲ್ಲಿ ಹಾಜರುಮಾಡಿ ವಿವರಿಸುವುದು ಅವರ ಕರ್ತವ್ಯವಾಗಿದೆ ಈಗಿನ ಲಿಬರಲ್ ಗವರ್ನಮೆಂಟಿನಲ್ಲಿ ಮೊ॥ ಜಾನ್ ಮಾರ್ಲೀಯವರೇ ಸ್ಟೇಟ್ ಸೆಕ್ರಟರಿ ಇವರು ಗ್ರಂಥಕರ್ತರು, ತತ್ವಜ್ಞಾನಿಗಳು ಮಹಾ ಸತ್ಯಶೀಲರು ಎಂಬದಾಗಿ ಪ್ರಖ್ಯಾತಿಯನ್ನು ಪಡೆದಿರುತ್ತಾರೆ ಇವರು ಇಂಡಿಯಾ ಗವರ್ನಮೆಂಟಿನ ವಿಚಾರವಾಗಿ ಕಳೆದ ಜೂಲೈ ೨೦ ರಲ್ಲಿ ಮಾಡಿರುವ ಭಾಷಣವು ಬಹು ಉತ್ಕೃಷ್ಟವಾದದ್ದು ಅದು ಹಿಂದುಸ್ಥಾನದಲ್ಲೂ ವಿಲಾಯತಿಯಲ್ಲೂ ಬಹಳ ಉತ್ಸಾಹವನ್ನುಂಟುಮಾಡಿರುವದರಿಂದ ಅದರ ಮುಖ್ಯ ವಿಷಯಗಳನು ನಮ್ಮ ವಾಚಕರು ತಿಳಿಯತಕ್ಕದ್ದಾಗಿದೆ. ಮೊ॥ ಮಾರ್ಲೀಯವರು ಹೇಳಿದ್ದೇನೆಂದರೆ—ಇಂಡಿಯಾ ಗವರ್ನಮೆಂಟಿನ ಕಾರುಬಾರುಗಳೆಲ್ಲಾ ವ್ಯರ್ಥವಾದವುಗಳೆಂದು ಕೆಲವು ಲಿಬರಲ್ ಮೆಂಬರುಗಳು ಊಹಿಸುತ್ತಾರೆ ನಾನು ಇದನ್ನು ಒಪ್ಪಲಾರೆನು ಅದರಲ್ಲಿ ಕೆಲವು ಕೊರತೆಗಳಿರುವವೆಂದು ಹೇಳಬಹುದಾದರೂ ಸಾಮಾನ್ಯವಾಗಿ ಆ ರಾಜ್ಯಭಾರವು ಸರ್ವೋತ್ಕೃಷ್ಟವಾದದ್ದೆನ್ನುವುದಕ್ಕೆ ಸಂಶಯವಿಲ್ಲ ಗವರ್ನಮೆಂಟಿನ ಆದಾಯವ್ಯಯಗಳು ತೃಪ್ತಿಕರವಾಗಿರುತ್ತವೆ ಈ ವರುಷ ಖರ್ಚು ಕಳದು ೩೪ ಲಕ್ಷ ಪೌಂಡು (೫೧೦ ಲಕ್ಷ ರೂಪಾಯಿ) ಆದಾಯ ಕಂಡು ಬಂದಿದೆ ಇದಲ್ಲದೆ ಆ ರಾಷ್ಟ್ರದ ಐಶ್ವರ್ಯವು ದಿನಕ್ರಮೇಣ ವೃದ್ಧಿ ಹೊಂದುತ್ತಿರುವುದು ಹಿಂದುಸ್ಥಾನದ ಐಶ್ವರ್ಯವು ಸಾಲದ ಬಡ್ಡಿಗಾಗಿ ಪರರಾಜ್ಯಗಳಿಗೆ ವರುಷೇವರುಷ ಹಾಗಿಹೋಗುತ್ತಿದೆ ಎಂಬ ಆಕ್ಷೇಪಣೆಗೆ ಮೊ॥ ಮಾರ್ಲೀಯವರ ಭಾಷಣದಿಂದಲೇ ಎದುರುತ್ತರ ಕೊಡವೆವು ಹಿಂದುಸ್ಥಾನದ ಸಾಲವೆಲ್ಲಾ ಒಟ್ಟು ೨೧ ಕೋಟಿಯೂ ೪೦ ಲಕ್ಷ ಪೌಂಡು ಈ ಪೈಕಿ ನೀರಾವರಿ ಕಾಮಗಾರಿಯು ಮತ್ತು ರೈಲ್ ಬಾಬತಿನ ಸಾಲವೇ ೧೭ ಕೋಟಿಯೂ ೪೦ ಲಕ್ಷ ಪೌಂಡಾಗುವುದು ಉಳಿದ ೩ ಕೋಟಿ ಪೌಂಡಿನ ಸಾಲಕ್ಕೆ ೮ ಲಕ್ಷ ಪೌಂಡು ಬಡ್ಡಿ ಪಾವತಿಯಾಗುತ್ತಿದೆ ಆದರೆ ರೈಲ್ವೆ ಮತ್ತು ನೀರಾವರಿಗಳ ಹುಟ್ಟುವಳಿಯಿಂದ ಸಾಲದ ಬಡ್ಡಿ ಹೋಗಲಾಗಿ ಮೇಲೆ ೩೦ ಲಕ್ಷ ಪೌಂಡು ಲಾಭ ಸಂಪಾದನೆಯಾಗಿದೆ ಆದ್ದರಿಂದ ಇಂಡಿಯಾ ಗವರ್ನಮೆಂಟಿನ ಒಟ್ಟು ಸಾಲಕ್ಕೆ ಬಡ್ಡಿ ಪಾವತಿ ಆದ ಮೇಲೆ ೨೨ ಲಕ್ಷ ಪೌಂಡು ಆದಾಯ ಬಂದಿದೆ ಈ ಸಾಲಮಾಡಿ ತಂದ ಹಣವನ್ನು ಜನೋಪಕಾರಕ ಕಾರ್ಯಗಳಿಗೆ ವಿನಿಯೋಗಿಸಿ, ಗವರ್ನಮೆಂಟು ಈ ರಾಷ್ಟ್ರದ ಐಶ್ವರ್ಯವನ್ನು ಅಭಿವೃದ್ಧಿಪಡಿಸಿರುತ್ತಾರಲ್ಲದೆ, ಬೇರೆ ಅಲ್ಲವು

ಮೊ॥ ಮಾರ್ಲೀಯವರು ತಮ್ಮ ಭಾಷಣದ ಅಂತ್ಯಭಾಗದಲ್ಲಿ ವಿಲಾಯತಿಯಲ್ಲಿರುವಂಥಾ ಪಾರ್ಲಿಮೆಂಟನ್ನು ಹಿಂದುಸ್ಥಾನದಲ್ಲಿ ದೇಶಸಲ ಸ್ಥಾಪಿಸಿ ನಡಸುವದು ಅಸಾಧ್ಯವೆಂತಲೂ, ಅಂಥಾ ಗವರ್ನಮೆಂಟಿಗೆ ಮೆಂಬರುಗಳನ್ನು ಚುನಾಯಿಸುವಂಥಾ ಹಕ್ಕು ಪಡೆಯಕ್ಕೆ ಪ್ರಜೆಗಳು ಇನ್ನೂ ಅಷ್ಟು ವಿದ್ಯಾವಂತರಾಗಿಲ್ಲವೆಂತಲೂ, ಆ ಜನರಿಗೆ ವಿದ್ಯೆಕಲಿಸಿ ಅವರನ್ನು ಅಭಿವೃದ್ಧಿಗೆ ತಂದು ಕ್ರಮಕ್ರಮವಾಗಿ ರಾಜ್ಯಭಾರಕ್ರಮಗಳನ್ನು ಬದಲಾಯಿಸುತ್ತಾ ಬರಬೇಕಾದ್ದು ಇಂಗ್ಲಿಷ್ ಗವರ್ನಮೆಂಟಿನ ಕರ್ತವ್ಯವಾಗಿರುತ್ತದೆಂತಲೂ ತಿಳಿಸಿದ್ದಾರೆ ಸದ್ಯದಲ್ಲಿ ಅವರಿಗೆ ಸಾಧ್ಯವೆಂದು ಕಂಡುಬಂದಿರುವ ಸುಧಾರಣೆ ಏನೆಂದರೆ—ಹಿಂದುಸ್ಥಾನದ ಮಂತ್ರಾಲೋಚನಾ ಸಭೆಗಳಲ್ಲಿ ಜನಪ್ರತಿನಿಧಿ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸುವದು ರಾಯರುಗಳ ಮಂತ್ರಾಲೋಚನಾ ಸಭೆಯಲ್ಲಿ ಹಿಂದುಸ್ಥಾನದ ಆದಾಯವ್ಯಯಗಳ ಬಜೆಟ್ಟನ್ನು ಕುರಿತು ಮೆಂಬರುಗಳು ಚರ್ಚೆಮಾಡುವ ಅವಧಿಯನ್ನು ಹೆಚ್ಚು ಮಾಡುವುದು, ಇಲ್ಲಿನ ಛಾರ್ಭಾರೀ ಹುದ್ದೆಗೆ ಈಗಿಂತಲೂ ಹೆಚ್ಚಾಗಿ ಈ ರಾಷ್ಟ್ರದ ವಿದ್ಯಾವಂತರನ್ನೇ ನೇಮಕಮಾಡುವುದು ಇಷ್ಟನ್ನು ಕೂಡಲೇ ಜಾರಿಗೆ ತರಬಹುದೆಂದು ಮಾರ್ಲೀಯವರು ತಿಳಿಸಿದ್ದಾರೆ ಈ ಬದಲಾವಣೆಗಳನ್ನು ಕುರಿತು ಶೋಧಿಸಿ ಮಾಡಿ ರಿಪೋರ್ಟು ಬರೆಯಬೇಕೆಂದು ವೈಸ್‌ರಾಯಿ ಪ್ರಭುಗಳು ಕೆಲವು ಮೆಂಬರುಗಳನ್ನುಳ್ಳ ಒಂದು ಸಣ್ಣ ಕಮಿಟಿಯನ್ನು ನೇಮಿಸಿರುತ್ತಾರೆ

ವಿಶೇಷ ವಾರ್ತೆಗಳು

ದಕ್ಷಿಣ ಆಫ್ರಿಕದಲ್ಲಿ ವಜ್ರಗಳ ಗಣಿಯ ಮಾಲೀಕನಾದ ಬೀಟ್ ಎಂಬ ಮಹದೈಶ್ವರ್ಯವಂತನು ಕಾಲವಾದನೆಂಬ ಸಂಗತಿಯನ್ನು ತಿಳಿಸಿರುತ್ತೇವಷ್ಟೆ ಈತನು ತನ್ನ ಆಸ್ತಿಯಲ್ಲಿ ವಿಶೇಷ ಭಾಗವನ್ನು ಪ್ರಜೋಪಕಾರಕ ಕಾರ್ಯಗಳಿಗೆ ವಿನಿಯೋಗಿಸಿರುತ್ತಾನೆ ಧರ್ಮಪಟ್ಟಣದ ಆಸ್ಪತ್ರೆಗಳಿಗೂ ವಿದ್ಯಾಶಾಲೆಗಳಿಗೂ ವಿಶೇಷವಾಗಿ ಸಹಾಯ ಮಾಡಿರುವದಲ್ಲದೆ, ಜರ್ಮನಿ ದೇಶಕ್ಕೆ ಸೇರಿದ ತನ್ನ ಜನ್ಮಭೂಮಿಯಾದ ಹಾಂಬರ್ಗ್ ಪಟ್ಟಣಕ್ಕೂ ಒಂದಂಶವನ್ನು ವಿನಿಯೋಗಿಸಿರುತ್ತಾನೆ ಇಷ್ಟೇ ಅಲ್ಲ ದಕ್ಷಿಣ ಆಫ್ರಿಕಕ್ಕೆ ಸೇರಿದ ಜೊಹಾನಸ್‌ಬರ್ಗ್ ಎಂಬ ನಗರದ ವಿದ್ಯಾಸಂಘಕ್ಕೆ ೩,೦೦,೦೦೦ ರೂಪಾಯಿ ಕೊಟ್ಟಿರುವನು ಅತ್ತಲಾಗಿ ರೈಲ್ ರಸ್ತೆಯು ಬಡಾವಣೆ ಮಾಡಬೇಕೆಂದು ಹೇಳಿ ರೊಡೇಸಿಯಾ ಗವರ್ನಮೆಂಟಿನವರ ವಶಕ್ಕೆ ೧೦,೦೦೦ ರೂಪಾಯಿಗಳನ್ನು ಕೊಟ್ಟಿದಾನೆ ಈ ರೈಲ್ ಬಡಾವಣೆಗೆ ಹಣ ಅವಶ್ಯವಿಲ್ಲದಿದ್ದರೆ ಅಷ್ಟು ಹಣವನ್ನೂ ರೊಡೇಸಿಯಾ ಸೀಮೆಯ ಜನಗಳ ವಿದ್ಯಾಭಿವೃದ್ಧಿಗೆ ವಿನಿಯೋಗಿಸಬೇಕೆಂದು ತಿಳಿಸಿರುವನು

ಅನ್ಯ ಮತಗಳಲ್ಲಿನ ಅಭಿಮಾನಕ್ಕೆ ಒಂದು ದೃಷ್ಟಾಂತ—ಜಪಾನಿನ ರಾಜಧಾನಿಯಾದ ಟೋಕಿಯೋ ನಗರದ ವಾರ್ತಾದಾರರು ತಿಳಿಸುವದೇನೆಂದರೆ—ಹೋದ ವರುಷ ಸೆಪ್ಟಂಬರ್ ತಿಂಗಳಲ್ಲಿ ಟೋಕಿಯೋ ಪಟ್ಟಣದೊಳಗಿರುವ ಕ್ರೈಸ್ತರ ದೇವಾಲಯಗಳೂ ಪಾಠಶಾಲೆಗಳೂ ದೊಂಬಿ ಕಲಹದಲ್ಲಿ ಕೆಡಿಸಲ್ಪಟ್ಟವು ಕ್ರೈಸ್ತರಿಗೆ ಇದರಿಂದ ತುಂಬಾ ನಷ್ಟವಾಯಿತೆಂದೂ ಅವುಗಳನ್ನು ಪುನಹಾ ಕಟ್ಟಿಸಿಕೊಡಬೇಕೆಂದೂ ಜಪಾನ್ ರಾಜ್ಯದಲ್ಲಿ ಮುಖಂಡ ಬೌದ್ಧರು ತೀರ್ಮಾನಿಸಿ, ಅದರ ಖರ್ಚಿನಲ್ಲಿ ಒಂದು ಪಾಲು ಷಿಂಟೋ ಮತಸ್ಥರು ಕೊಡುವುದಾದರೆ ತಾವು ಒಂದು ಪಾಲು ಕೊಡುತ್ತೇವೆಂದು ತಿಳಿಸಿದರು ಆದರೆ ಷಿಂಟೋ ಜನರು ಆ ದುಡ್ಡಿನ ಪಾಲಿನಷ್ಟು ಕೊಡಲಾರದೆಹೋದರು ಇದನ್ನು ನೋಡಿ ಆ ರಾಜ್ಯದ ಸಕಲ ಮತ ಸಮಾಜವೆಂಬ ಕೂಟದವರು ಸವಾಸ್ಥ್ಯವಾಗಿ ಕಂಡಲೂ ಚಂದಾ ಎತ್ತಬೇಕೆಂದು ಗೊತ್ತುಮಾಡಿ, ನೋಟೀಸುಗಳನ್ನು ಪ್ರಕಟಿಸಿದಾರೆ ಕ್ರೈಸ್ತ, ಬೌದ್ಧ, ಷಿಂಟೋ ಮತಸ್ಥರಲ್ಲಿ ಮುಖ್ಯರೆನಿಸಿದ ದೊಡ್ಡ ಮನುಷ್ಯರುಗಳೇ ಆ ನೋಟೀಸಿಗೆ ರುಜು ಮಾಡಿ ಇವರು ಚಂದಾ ಕೊಡಬೇಕೆಂದು ಪ್ರಜೆಗಳನ್ನು ಕೇಳಿಕೊಳ್ಳುತ್ತಿದ್ದು—ಮೇಲ್ಕಂಡ ಕಟ್ಟಡಗಳನ್ನು ನಾಶಮಾಡಿದ್ದಕ್ಕೆ ಸಹಜವಾದ ಕಾರಣವೇನೂ ಕಂಡುಬರುವುದಿಲ್ಲ ನಾವುಗಳು ಈ ವಿಷಯವನ್ನು ವಿಸ್ತಾರವಾಗಿ ತನಿಖೆ ಮಾಡಿರುತ್ತೇವೆ ಆದಕಾರಣ ಅವರ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಜಪಾನ್ ಪ್ರಜೆಗಳೆಲ್ಲಾ ಚಂದಾ ಕೊಡುವುದು ನ್ಯಾಯವಾಗಿದೆ ಎಂಬುದಾಗಿ ತಿಳಿಸಿದಾರೆ.

ಸ್ವಲ್ಪ ಹೆಚ್ಚು ಕಡಿಮೆ ಅಮೇರಿಕದಲ್ಲಿರುವ ರಾಜ್ಯಗಳೆಲ್ಲಾ ಸ್ವತಂತ್ರ ಪ್ರಜಾಪ್ರಭುತ್ವವೇ ರೂಢಿಯಾಗಿದೆ. ಈ ರಾಜ್ಯಗಳವರೆಲ್ಲಾ ಒಬ್ಬೊಬ್ಬ ಪ್ರತಿನಿಧಿಯನ್ನು ಚುನಾಯಿಸಿ ರಿಯೋ, ಜನೀರೋ ಎಂಬ ಪಟ್ಟಣಕ್ಕೆ ಕಳುಹಿಸಿದರು. ಈ ಪ್ರತಿನಿಧಿಗಳು ಸಭೆಸೇರಿ ಸಕಲ ರಾಜ್ಯಂಗಳಿಗೂ ಅನ್ವಯಿಸುವಂಥಾ ವಿಷಯಗಳನ್ನು ಕುರಿತು ಚರ್ಚಿಸಿ, ಏಕರೀತಿಯಾಗ ವ್ಯವಹಾರಗಳು ನಡೆಗೊಳ್ಳುವಂತೆ ವಿಚಾರ ಮಾಡುತ್ತಿದಾರೆ. ಸುಂಕಗಳು, ಗ್ರಂಥಪ್ರಕಟನೆ, ಯಂತ್ರ ಮೊದಲಾದ ಸಾಧನಗಳ ಹಕ್ಕುದಾರಿ, ಈ ಮೊದಲಾದ ವಿಷಯಗಳನ್ನೂ ವ್ಯಾಪಾರ ವಿಚಾರ, ಆರೋಗ್ಯಸೂತ್ರಗಳು, ಅಂಟು ಜಾಡ್ಯಗಳಿರುವ ಕಡೆಯಿಂದ ಬರುವ ಪ್ರಯಾಣಸ್ಥರನ್ನು ತಡೆಯೋಣ, ಈ ಮೊದಲಾದ ವಿಷಯಗಳನ್ನೂ ಅಮೇರಿಕಕ್ಕೆ ಸೇರಿದ ಸಕಲ ಪ್ರಭುತ್ವಗಳಲ್ಲೂ ವ್ಯತ್ಯಸ್ತವಿಲ್ಲದೆ ಏಕರೀತಿಯಲ್ಲಿರುವಂತೆ ಮಾಡಿಕೊಳ್ಳಬೇಕೆಂದು ಚರ್ಚೆ ಮಾಡುತ್ತಿರುವರು. ಅಲ್ಲದೆ ಒಂದು ಪ್ರಭುತ್ವದಲ್ಲಿ ಸಾಲಮಾಡಿ ಇನ್ನೊಂದು ಪ್ರಭುತ್ವಕ್ಕೆ ಹೋದವನನ್ನು ಆ ಪ್ರಭುತ್ವದವರು ಸೈನಿಕರನ್ನು ಬಿಟ್ಟು ಹಿಡಿದು ವಸೂಲ್ಮಾಡಿಸುತ್ತಿರುವ ಈಗಿನ ಪದ್ಧತಿಯನ್ನು ವಜಾ ಮಾಡಬೇಕೆಂದು ಅರ್ಜೆಂಟೈನ್ ಪ್ರಭುತ್ವದ ಮಂತ್ರಿ ಡಾ॥ ಡ್ರಾಗೋ ಎಂಬುವರು ಸಭಿಕರಿಗೆ ತಿಳಿಸಿದಾರೆ. ಯಾಕೆಂದರೆ ಯೂರೋಪಿನ ಬಲಿಷ್ಟ ರಾಜ್ಯಾಧಿಕಾರಿಗಳು ದಕ್ಷಿಣ ಅಮೇರಿಕದ ಸಣ್ಣ ಸಣ್ಣ ರಾಜ್ಯಗಳಲ್ಲಿ ಬಲಾತ್ಕಾರ ಪೂರ್ವಕವಾಗಿ ಸಾಲಗಳನ್ನು ವಸೂಲ್ಮಾಡುತ್ತಾರೆ. ಇದನ್ನು ತಪ್ಪಿಸಬೇಕೆಂಬುದೇ ಅವರ ಉದ್ದೇಶ. ಆದರೆ ಇದನ್ನು ಸಂಯುಕ್ತ ಸಂಸ್ಥಾನಗಳವರು ಒಪ್ಪಿಕೊಳ್ಳುವಂತೆ ಕಾಣುವುದಿಲ್ಲ. ಆ ಸಂಸ್ಥಾನಗಳ ರಾಯಭಾರಿಯು ಈ ವಿಚಾರವನ್ನು ಹೇಗ್ ಪಟ್ಟಣದ ಸಭೆಗೆ ತಿಳಿಸಿ, ಅವರಿಂದ ತೀರ್ಮಾನ ಮಾಡಿಸಿಕೊಳ್ಳಬೇಕೆಂದು ಅಭಿಪ್ರಾಯಪಡಬಹುದಾಗಿ ತೋರುತ್ತದೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್ವಾಲ್ ಚಿನ್ನದ ಗಣಿಗಳಲ್ಲಿ ಚೀನೆಯವರನ್ನು ಕೂಲಿಮಾಡುವುದಕ್ಕೆ ನೇಮಿಸಿಕೊಂಡಿದಾರೆ. ಈಗ ವಿಲಾಯಿತಿಯಲ್ಲಿ ಈ ಕೂಲಿಕಾರರ ವಿಷಯ ಬಹಳ ಚರ್ಚೆ ನಡೆಯುತ್ತಿದೆ. ಸದ್ಯ ಇಂಗ್ಲಿಷ್ ಗವರ್ನಮೆಂಟನ್ನು ನಡಸುವ ಲಿಬರಲ್ ಪಾರ್ಟಿಯವರು—ಚೀನೆಯವರನ್ನು ಅವರ ಮನೆಮಠಗಳಿಂದಲೂ ಸಂಸಾರ ಬಂಧುಬಳಗಗಳಿಂದಲೂ ಟ್ರಾನ್ಸ್ವಾಲಿಗೆ ಕರೆತಂದು ದುಡಿಸುವುದು ಜೀತಮಾಡಿಸಿಕೊಂಡಂತಾಗಿದೆ ಎಂತಲೂ, ಇನ್ನು ಮೇಲೆ ಚೀನೆಯವರನ್ನು ಅಲ್ಲಿ ಕರೆದುಕೊಂಡು ಹೋಗದಂತೆ ತಡೆಮಾಡುವೆವೆಂತಲೂ ಹೇಳಿ, ಮೇಲ್ಕಂಡ ಚಿನ್ನದ ಗಣಿಗಳ ಆವರಣಗಳಲ್ಲಿ ನೋಟೀಸುಗಳನ್ನು ಬಿಗಿಯಿಸಿ, ಚೀನಾಕ್ಕೆ ವಾಪಸು ಹೋಗಬೇಕೆನ್ನುವ ಕೂಲಿಯವರು ತಮ್ಮ ಇಷ್ಟವನ್ನು ತಿಳಿಸಿದಲ್ಲಿ ಅಂಥವರನ್ನು ಕೂಡಲೇ ಹಡಗುಗಳ ಮೇಲೆ ಕಳುಹಿಸಿಕೊಡುತ್ತೇವೆ ಎಂದು ತಿಳಿಯಪಡಿಸಿದರು. ಆದರಂತೆ ಇಷ್ಟಪಟ್ಟ ಚೀನೆಯವರು ಬಹಳ ಕೊಂಚವೇ. ಬಹುಮಂದಿ ವಾಪಸು ಹೋಗುವದಕ್ಕೆ ಇಷ್ಟಪಡುವವರಾಗಿಲ್ಲ. ಯಾಕೆಂದರೆ, ಅಲ್ಲಿ ಅವರಿಗೆ ಕೂಲಿಯಿಂದ ಬಹಳ ಸಂಪಾದನೆಯಾಗುತ್ತಿದೆ, ಇಷ್ಟೇ ಅಲ್ಲ, ಅಲ್ಲಿ ಅವರಿಗೆ ಸುಖಸಾಧನಗಳು(?) ತುಂಬಾ ಅನುಕೂಲವಾಗಿವೆ. ಅವರು ಕೆಲವು ವರುಷಗಳ ವರೆಗೆ ಕೂಲಿಮಾಡಿ, ತುಂಬಾ ಹಣ ಕೂಡಿಸಿಕೊಂಡು ದೇಶಕ್ಕೆ ಹೋಗುವರೇ ವಾಡಿಕೆ. ಇವರ ಸ್ಥಿತಿಗತಿಗಳನ್ನು ಕುರಿತು ವಿಚಾರಿಸಿಕೊಂಡು ಹೋದ ಸರ್ಕಾರಿ ಕಮಿಷನ್ ಕಚೇರಿಗರು(?)—ಆ ಕೂಲಿಕಾರರಿಗೆ ಕೊರತೆ ಏನೂ ಇಲ್ಲವೆಂತಲೂ ಎಲ್ಲಾ ವಿಷಯಗಳಲ್ಲೂ ಗಣಿ ಕಂಪನಿಯವರು ಅವರನ್ನು ತೃಪ್ತಿಕರವಾಗಿ ನೋಡಿಕೊಳ್ಳುತ್ತಿದಾರೆಂತಲೂ ತಿಳಿಸಿರುತ್ತಾರೆ. ಚೀನಾ ಕೂಲಿಕಾರರನ್ನು ಅಲ್ಲಿ ಹಿಂಸೆಪಡಿಸಿ ಗುಲಾಮರಂತೆ ಕಾಣುವುದಿಲ್ಲ. ಹಿಂದುಸ್ಥಾನದಿಂದ ಮಾರಿಷಸ್, ಪಶ್ಚಿಮ ಇಂಡೀಸ್, ಸಿಲೋನ್ ಮೊದಲಾದ ಕಡೆಗಳಿಗೆ ಹೋಗುವ ಕೂಲಿಕಾರರನ್ನು ಆಯಾ ಕಡೆಗಳಲ್ಲಿ ಯಾವ ರೀತಿ ಕಾಪಾಡುತ್ತಾ, ಕೂಲಿಕೊಟ್ಟು ಅವರಿಂದ ಕೆಲಸಮಾಡಿಸಿಕೊಳ್ಳುತ್ತಿದಾರೆಯೋ ದಕ್ಷಿಣ ಆಫ್ರಿಕದವರೂ ಚೀನಾ ಕೂಲಿಕಾರರನ್ನು ಅದೇ ರೀತಿ ಕಾಪಾಡುತ್ತಿರುವರು. ಆದಾಗ್ಯೂ ಜನರನ್ನು ಅವರ ಸಂಸಾರಗಳಿಂದ ಬಿಡಿಸಿ ಸಾವಿರಾರು ಮೈಲಿಗಳ ದೂರಕ್ಕೆ ಈ ರೀತಿ ಕರೆದುಕೊಂಡು ಹೋಗುವುದು ತರವಲ್ಲವೆಂದೂ, ದಕ್ಷಿಣ ಆಫ್ರಿಕಾ ಗಣಿಗಳಲ್ಲಿ ಅಲ್ಲಿನ ಕಪ್ಪು ಮತ್ತು ಬಿಳಿಯ ಪ್ರಜೆಗಳೇ ಸೇರಿ ಕೆಲಸಮಾಡುವುದೇ ಸಹಜವೆಂದೂ ಅವರಿಗೆ ತೋರುತ್ತಿದೆ.

ಈ ವಿಷಯವನ್ನು ಕುರಿತು ಟ್ರಾನ್ಸ್ವಾಲ್ ಮಂತ್ರಾಲೋಚನಾ ಸಭೆಯಲ್ಲಿ ಲೆಫ್ಟಿನೆಂಟ್ ಗವರ್ನರವರು ತಿಳಿಸಿರುವುದೇನೆಂದರೆ—ಇಲ್ಲಿನ ೬೬ ಗಣಿಗಳೊಳಗೆ ೫೩,೦೦೦ ಚೀನೆಯವರು ಈಗ ಕೆಲಸ ಮಾಡುತ್ತಿದಾರೆ. ಇನ್ಸ್ಪೆಕ್ಟರುಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿರುವರು. ಆರೋಗ್ಯ ವಿಚಾರವು ಚೆನ್ನಾಗಿದೆ. ಹೋದವರುಷ ಈ ಕೂಲಿಕಾರರಲ್ಲಿ ೧೩,೪೦೦ ಸಣ್ಣ ತಕ್ಸೀರುಗಳು ನಡೆದವು. ೧,೭೦೦ ಜನರು ಕೆಲಸ ಬಿಟ್ಟುಹೋದರು. ಕೊಲೆ ನಡಿಸಿದ್ದಕ್ಕಾಗಿ ೩೦ ಮಂದಿಗೆ ಶಿಕ್ಷೆಯಾಯಿತು. ೧,೧೧೪ ಜನರನ್ನು ಜೈಲಿಗೆ ಕಳುಹಿಸಿದೆ. ಈ ಕೂಲಿಕಾರರು ಸರ್ವಸಾಮಾನ್ಯವಾಗಿ ಬಹಳ ಸಭ್ಯರು. ಕೈಲಾಗದವರನ್ನು ವಾಪಸು ಚೀನಕ್ಕೆ ಕಳುಹಿಸಿರುತ್ತೇವೆ. ಅವರು ಮಾಡತಕ್ಕ ಅಪರಾಧಗಳು ಸ್ವಲ್ಪವಾದವು. ಕೆಲಸಕ್ಕೆ ಬಾರದೆ ನಿಂತುಬಿಡುತ್ತಾರೆ. ಜೂಜಾಡುವ ಕೆಟ್ಟಸಹವಾಸಗಳಲ್ಲಿ ಬಿದ್ದು ತಕ್ಸೀರುಮಾಡುತ್ತಾರೆ. ಅಂಥಾ ಕೆಟ್ಟವರನ್ನು ಹಿಡಿದು ವಾಪಸು ಕಳಿಸುವೆವು. ಸರ್ಕಾರದವರು ನೋಟೀಸನ್ನು ಪ್ರಕಟಿಸಿದ ಮೇಲೆ ಒಬ್ಬನೇ ಒಬ್ಬ ಕೂಲಿಯವನು ಬಂದು, ಚೀನಕ್ಕೆ ಹೋಗಬೇಕೆಂದು ತಿಳಿಸಿದನು.

ಒಳದೇಶದ ವೃತ್ತಾಂತಗಳು.

ಚೆನ್ನಪಟ್ಟಣದೀಚೆ ಆಚೆ ಬಿಡವಿಯ ತನಕ ಕಳೆದ ವಾರ ಬಹಳ ಮಳೆ ಸುರಿದು ಕೆಲವು ಕಡೆ ರೈಲ್ ರಸ್ತೆ ಕಿತ್ತುಹೋದದ್ದರಿಂದ ರೈಲ್ ಬಂಡಿಗಳು ತುಂಬಾ ತಾಮಸವಾಗಿ ಹೋಗಿ ಬರುತ್ತಿರುವವು. ರಾಜಧಾನಿಯಲ್ಲಿ ೩—೪ ದಿನಗಳಿಂದ ರಾತ್ರಿ ಹೊತ್ತು ಜಡಿಮಳೆ ಹಿಡಿಯುತ್ತಿದೆ. ಕೆರೆ ಕೊಳಗಳಿಗೆ ನೀರು ಬಂದಿಲ್ಲ. ಜನರು ಬಟ್ಟೆ ಬರೆಗಳನ್ನು ಒಗೆಯುವುದಕ್ಕಿಲ್ಲದೆ ತುಂಬಾ ಅನಾನುಕೂಲವಾಗಿದೆ.

ದಿವಾನರವರು ಸೆಕ್ರಿಟರಿಗಳ ಸಮೇತ ಕಳೆದ ಶನಿವಾರ ಮಧ್ಯಾಹ್ನ ರಾಜಧಾನಿಗೆ ದಯಮಾಡಿ, ನೆನ್ನೆ ಮಧ್ಯಾಹ್ನದ ರೈಲಿನಲ್ಲಿ ಬೆಂಗಳೂರಿಗೆ ವಾಪಸುಹೋಗುವವರಾಗಿದ್ದರು.

****

ಸ್ವಾಮಿ ಅಭೇದಾನಂದರವರು ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲಿನಲ್ಲಿ ಪುರಜನರ ಅಡ್ರೆಸ್ಸನ್ನು ಅಂಗೀಕರಿಸಿ, ವೇದಾಂತಮತವಿಚಾರವನ್ನೂ ಅಮೇರಿಕದಲ್ಲಿ ತಾವು ನಡಸುತ್ತಿರುವ ಕಾರ್ಯಗಳನ್ನೂ ಕುರಿತು ಉಪನ್ಯಾಸ ಮಾಡಿದರು. ಮರುದಿನ ಅವರು ಚಾಮುಂಡಿಬೆಟ್ಟಕ್ಕೆ ಹೋಗಿ ಬಂದರು. ಶ್ರೀಮನ್ಮಹಾರಾಜರವರ ಆಸ್ಥಾನದ ಪಂಡಿತರನ್ನೂ ಕೆಲವು ಉದ್ಯೋಗಸ್ಥರನ್ನೂ ಕರೀಕಲ್ಲುತೊಟ್ಟಿಗೆ ಕರೆಸಿಕೊಂಡು ಒಂದು ಸಭೆ ಮಾಡಿ ಸ್ವಾಮಿಗಳಿಗೂ ವೈದಿಕರಿಗೂ ಮತವಿಷಯವಾಗಿ ಸಂವಾದ ಮಾಡಿಸಿದರು. ಭಾನುವಾರ ಬೆಳಿಗ್ಗೆ ಸ್ವಾಮಿಗಳವರು ಟೌನ್ ಹಾಲ್ ಬಂಗಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಒಂದು ಉಪನ್ಯಾಸ ಮಾಡಿ, ಸಕಲರೂ ಜಾತಿ ಮತಗಳ ತಾರತಮ್ಯವಿಡದೆ ವೇದಾಂತಮತವನ್ನು ಅವಲಂಬಿಸಿ, ಈ ರಾಷ್ಟ್ರವನ್ನು ವಿದ್ಯೆ ಬುದ್ಧಿ ಕೌಶಲ್ಯಾದಿಗಳ ಮೂಲಕ ಅಭಿವೃದ್ಧಿಗೆ ತರಬೇಕೆಂದು ಹೇಳಿದರು. ಮೊನ್ನೆ ಸೋಮವಾರ ಮಧ್ಯಾಹ್ನ ಸ್ವಾಮಿಗಳು ರಾಜಧಾನಿಯಿಂದ ಮುಂದಕ್ಕೆ ಪ್ರಯಾಣ ಮಾಡಿರುತ್ತಾರೆ.

ರಷ್ಯಾ ರಾಜಕೀಯ ವಿಚಾರಗಳು.

ಪ್ರಜೆಗಳ ಹೋರಾಟವೂ ಸರ್ಕಾರದವರ ನಿರ್ಬಂಧಗಳೂ

ತಂತೀ ವರ್ತಮಾನಸಾರ.

ಆಗಸ್ಟ್ ೭.—ರಷ್ಯಾ ಗವರ್ನಮೆಂಟಿನವರು ಜಿತಮನಸ್ಸಿನಿಂದಲೂ ಸೈನ್ಯಸಹಾಯದಿಂದಲೂ ರಾಜ್ಯದಲ್ಲಿ ಬಲಾತ್ಕಾರದಿಂದ ಪ್ರಜಾ ನೆಮ್ಮದಿಯನ್ನು ಪುನಃ ಸ್ಥಾಪನೆ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿದಾರೆ. ಆದರೂ ಈ ಅಭಿಪ್ರಾಯವನ್ನು ಸರ್ಕಾರಿಯಾಗಿ ಪ್ರಕಟಪಡಿಸಿದರು. ಅತ್ತಲಾಗಿ ರಾಜ್ಯವನ್ನು ತಲೆಕೆಳಗೆ ಮಾಡಬೇಕೆಂಬ ಪ್ರಜಾಮುಖಂಡರು ಇಸ್ತಿಹಾರು ಕೊಟ್ಟು—ಪ್ರಜೆಗಳೆಲ್ಲಾ ಗವರ್ನಮೆಂಟಿನ ಮೇಲೆ ತಿರುಗಿಬಿದ್ದು ಜಿತಮನಸ್ಸಿನಿಂದ ಹೋರಾಡಬೇಕೆಂದು ಚಿತಾವಣೆ ಮಾಡಿದಾರೆ.

ಸಿವಾಸ್ಟಪೂಲ್ ಪಟ್ಟಣದಲ್ಲಿ ದಂಗೇಕೋರರು ನೆನ್ನೆ ಬೆಳಿಗ್ಗೆ ಮಿಲ್ಟೇರಿ ಕೋರ್ಟಿನ ಗಂಟೆಯನ್ನು ಅಲ್ಲಾಡಿಸಿ, ಕಾವಲುಗಾರರನ್ನು ಹಿಡಿದು ಕಣ್ಣುಕಟ್ಟಿ ಒಳಕ್ಕೆ ನುಗ್ಗಿ ದಂಗೇಕೋರರ ಮೇಲೆ ಬರೆದಿಟ್ಟಿದ್ದ ರಿಕಾರ್ಡುಗಳನ್ನೂ ಸ್ಮಿತ್ ಎಂಬ ಹುದ್ದೇದಾರನ ಮೊಕದ್ದಮೆಯ ಕಟ್ಟನ್ನೂ ಅಪಹರಿಸಿದರು.

ಆಗಸ್ಟ್ ೮.—ರಾಜಧಾನಿಯಾದ ಸೆಂಟ್ಪೀಟರ್ಸ್ಬರ್ಗಿನಲ್ಲೂ ಮಾಸ್ಕೋ ಪಟ್ಟಣದಲ್ಲೂ ಕೂಲೀಕಾರರ ದಂಗೆಯು ಅಷ್ಟೇನೂ ಕಠಿಣವಾಗಿಲ್ಲ; ಗವರ್ನಮೆಂಟಿನವರ ಬಂದೋಬಸ್ತು ಕಾರ್ಯಗಳು ತೃಪ್ತಿಕರವಾಗಿವೆ. ಸೈನಿಕರು ಗಲಭೆ ಮಾಡಿದವರನ್ನು ದಸ್ತಗಿರಿ ಮಾಡಿ, ದಂಗೇಕೋರರ ಗುಂಪುಗಳನ್ನು ಚಟುವಟಿಕೆಯಿಂದ ಚದರಿಸಿದರು.

ಆಗಸ್ಟ್ ೧೦.—ಸೆಂಟ್ ಪೀಟರ್ಸ್ಬರ್ಗಿನಲ್ಲೂ ಮಾಸ್ಕೋದಲ್ಲೂ ದಂಗೇಕೋರರು ತುಂಬಿಟ್ಟುಕೊಂಡಿದ್ದ ಆಯುಧಗಳೂ ಮದ್ದುಗುಂಡುಗಳೂ ಅವರ ಇಸ್ತಿಹಾರುಗಳೂ ಅಪಾರವಾಗಿ ಸರ್ಕಾರದವರಿಗೆ ಸಿಕ್ಕಿದವು. ಜನರನ್ನು ದಸ್ತಗಿರಿ ಮಾಡುವುದು ದಿನೇ ದಿನೇ ಹೆಚ್ಚುತ್ತಲಿದೆ.

ಆಗಸ್ಟ್ ೧೧.—ವೈಬರ್ಗಿನಲ್ಲಿ ಸಭೆ ಸೇರಿ ಠರಾವು ಹಾಕಿ ಪ್ರಜೆಗಳಿಗೆಲ್ಲಾ ಇಸ್ತಿಹಾರು ಪ್ರಕಟಿಸಿದ ಡೂಮಾ ಸಭೆಯ ೨೦೦ ಮಂದಿ ಮೆಂಬರುಗಳನ್ನು ಹಿಡಿದು ದಯಾಫ್ತು ಮಾಡಬೇಕೆಂದು ಗವರ್ನಮೆಂಟಿನವರು ಗೊತ್ತು ಮಾಡಿದಾರೆ.

ಕ್ರಾನ್ಸ್ಟಾಡಿನಲ್ಲಿ ರಷ್ಯಾ ಗವರ್ನಮೆಂಟಿನ ಮೇಲೆ ದಂಗೆ ಮಾಡಿದ ೩,೦೦೦ ಜನರನ್ನು ಸರ್ಕಾರದವರು ಹಿಡಿದು ದರ್ಯಾಪ್ತು ಮಾಡುವವರಾಗಿದಾರೆ.

ಆಗಸ್ಟ್ ೧೨.—ಡೂಮಾ ಪ್ರತಿನಿಧಿ ಸಭೆಯ ಕೆಲವು ಸಭ್ಯರಾದ ಮೆಂಬರುಗಳು ಗವರ್ನಮೆಂಟಿಗೆ ವಿರೋಧವಾಗಿ ಕಾರ್ಯಭಾಗ ನಡಸುವುದು ಯೋಗ್ಯವಲ್ಲವೆಂತಲೂ, ದೊರೆ ಮಂತ್ರಿಗಳು ಪಾರ್ಲಿಮೆಂಟ್ ಮೆಂಬರುಗಳು ಏಕೀಭವಿಸಿ ಕಾರ್ಯ ನಡಸುವಂಥಾ ರಾಜ್ಯಭಾರವು ರಷ್ಯಾದಲ್ಲಿ ಸ್ಥಾಪನೆಯಾಗಿ ರೂಢಿಗೆ ಬಂದರೆ ಸಾಕಾಗಿದೆ ಎಂತಲೂ ಅಭಿಪ್ರಾಯಪಟ್ಟು, ಆ ಅರ್ಥಕ್ಕೆ ಇಸ್ತಿಹಾರನ್ನು ಪ್ರಕಟಿಸಿದಾರೆ.

ರಷ್ಯಾರಾಜ್ಯದ ಅನೇಕ ಕಡೆಗಳಲ್ಲಿ ಸರ್ಕಾರವು ಬೇಬಂದಾಗಿ ಜನರು ಗವರ್ನಮೆಂಟಿನವರ ಉಗ್ರಾಣಗಳನ್ನೂ ಅಂಗಡಿ ಬಸ್ತುಗಳನ್ನೂ ಲೂಟಿ ಮಾಡುತ್ತಿದಾರೆ. ವಾರ್ಸಾದಲ್ಲೂ ಲಾಡ್ಸ್ ಎಂಬಲ್ಲೂ ಪ್ರಜೆಗಳ ಭೀತಿಯನ್ನು ಇಷ್ಟಿಷ್ಟೆಂದು ವಿವರಿಸಲಾಗದು. ಹಿಂಸೆ ಮಾಡುವ ಗುಂಪಿನವರು ಊರುಗಳನ್ನು ಸೂರೆಗೊಳ್ಳುತ್ತಿದಾರೆ.

ಒಡೆಸ್ಸಾ ಪಟ್ಟಣದ ಹೋಟೇಲಿನಲ್ಲಿದ್ದ ಒಬ್ಬ ಯೌವನಸ್ಥೆಯು ಜನರಲ್ ಕೌಲ್ಬಾರ್ಸ್ ಎಂಬ ದಳಪತಿಯನ್ನು ಕೊಲ್ಲಬೇಕೆಂದು ಒಂದು ಮದ್ದಿನ ಗುಂಡನ್ನು ಬಚ್ಚಿಟ್ಟುಕೊಂಡಿದ್ದಳು. ಅದು ಹ್ಯಾಗೋ ಕಿಟಕಿಯಿಂದ ಬೀದಿಗೆ ಬಿದ್ದು ಮಹಾ ಶಬ್ದದೊಡನೆ ಹಾರಿತು. ಪೋಲೀಸಿನವರು ಬಂದು ಹಿಡಿಯುತ್ತಾರೆಂದು ಅವಳು ಆ ಕೂಡಲೇ ಆತ್ಮಹತ್ಯ ಮಾಡಿಕೊಂಡಳು. ಅವಳು ಒಬ್ಬ ದೊಡ್ಡ ಮನುಷ್ಯನ ಕುಮಾರ್ತೆ; ಚಿಕ್ಕಂದಿನಲಿ ಜನರಲ್ ಕೌಲ್ಬಾರ್ಸ್ ರವರ ಹೆಣ್ಣುಮಕ್ಕಳ ಸಂಗಡಲೇ ವಿದ್ಯಾಭ್ಯಾಸ ಮಾಡಿದವಳು. ಅವಳು—ದುಷ್ಟಸಂಘಕ್ಕೆ ಸೇರಿದವಳೆಂತಲೂ, ಆ ದಳಪತಿಯನ್ನು ಕೊಲ್ಲಬೇಕೆಂದಿದ್ದೆನೆಂತಲೂ ಕಾಗದ ಬರೆದಿಟ್ಟು, ಆತ್ಮಹತ್ಯಮಾಡಿಕೊಂಡಳು.

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಮೇಲಾಟದ ಲೇಖನದ ಮೇಲೂ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧಕಾಲಮಿಗಿಂತ ಕಡಿಮೆಯಾಗಿದ್ದರೂ ಒಂದು ಕಾಲಮಿನಷ್ಟು ಹೆಚ್ಚಾಗಿದ್ದರೂ ಇರಲಾಗದು. (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು.]

[ಈ ಬಾತ್ಮಿ ಕಳಿಸಿದ ಮ॥ ಸಿ. ಬಿ. ನರಸಿಂಗರಾವ್, ಸ್ಕೂಲ್ ಹೆ. ಮಾ., ಗೊಂದಿಹಳ್ಳಿ, ಮದ್ದುಗಿರಿ ತಾಲ್ಲೂಕು, ಇವರಿಗೆ ಈ ವಾರದ ಬಹುಮಾನವನ್ನು ಕಳಿಸಿರುತ್ತೇವೆ.]

ಮೋಸಗಾರರ ಠಕ್ಕು

ಮದ್ದುಗಿರಿ ತಾ॥ ಗೊಂದಿಹಳ್ಳಿಯಲ್ಲಿ ೫ ನೆ ತಾ॥ ಭಾನುವಾರ ಒಬ್ಬ ಠಕ್ಕುಗಾತಿಯು ಭಿಕ್ಷ ಬೇಡುವ ನೆಪದಿಂದ ಅಲೆಯುತ್ತಾ ನನ್ನ ಮನೆಗೆ ಬಂದಳು. ನಾನು ಓದುತ್ತಾ ಕುಳಿತಿದ್ದೆನು. ಅವಳು—ಸ್ವಾಮಿ, ಒಬ್ಬ ಊರುಗೋಲ್ಲರವನು ಬೆಳ್ಳಿ ಉಂಗುರಗಳನ್ನೂ ಕಾಲಿಗೆ ಬೆಳ್ಳಿ ಸರಿಗೆಯನ್ನೂ ಇಟ್ಟುಕೊಂಡು, ಸಣ್ಣಗಂಬಳಿ ಹೊದ್ದುಕೊಂಡು ಬೆಳ್ಳಂಗೋವಿ ಹಿಡಿದುಕೊಂಡಿದ್ದಾನೆ. ಇಂಥಾ ಮನುಷ್ಯನೇನಾದರೂ ಭಿಕ್ಷಾಟನೆಗಾಗಿ ಬಂದಿದ್ದನೇ? ನೀವು ನೋಡಿದಿರಾ? ಎಂದು ಕೇಳಿದಳು. ನಾನು ಕಾಣೆನೆಂದೆನು. ಅವಳು—ಸ್ವಾಮಿ, ಆತನ ಮಹಾತ್ಮೆ ಹೇಳಲಶಕ್ಯ. ನನ್ನ ತಂದೆಯ ಬಹಳ ದಿನಗಳ ವಾಯುರೋಗವನ್ನು ಪರಿಹಾರ ಮಾಡಿದನು. ನನ್ನ ಅಕ್ಕನಿಗೆ ೧೨ ವರುಷಗಳಿಂದ ಮಕ್ಕಳಿರಲಿಲ್ಲ. ಮಕ್ಕಳಾಗುವಂತೆ ಔಷಧ ಕೊಟ್ಟನು. ಈ ಉಪಕಾರಕ್ಕಾಗಿ ನಾನು ಅವನಿಗೆ ೬ ರೂಪಾಯಿ ಕೊಡುವದಕ್ಕೆ ಹೋದೆ. ಬೇಡ, ನನ್ನ ಗುರುವಿನಾಜ್ಞೆ ಇದೆ ಎಂದು ಹೇಳಿದನು. ಒಂದು ಕಾಸು ಮುಟ್ಟುವದಿಲ್ಲ. ಒಬ್ಬರ ಮನೇಲಿ ಅನ್ನ ತಿನ್ನುವದಿಲ್ಲ. ಈಗ ನನ್ನ ತಮ್ಮನಿಗೆ ಹೊಟ್ಟೇಲಿ ಗಡ್ಡೆ ಇದೆ. ಅದನ್ನು ಪರಿಹಾರ ಮಾಡುವದಕ್ಕಾಗಿ ಅವನನ್ನು ಹುಡುಕಿಕೊಂಡು ಬಂದಿದ್ದೇನೆ. ಇಲ್ಲಿಗೇನಾದರೂ ಬಂದರೆ ನಾನು ಬಂದಿದ್ದೆನೆಂಬ ಸಂಗತಿ ಹೇಳಬೇಕು ಎಂದು ಕೈ ಮುಗಿದು ಬೇಡಿಕೊಳ್ಳುವೆನೆಂದು ಹೇಳಿ ಹೊರಟು ಹೋದಳು. ಈ ರೀತಿ ಈ ಊರಿನ ಎಲ್ಲಾ ಮನೆಗಳಲ್ಲಿಯೂ ಹೇಳದೆ ಮಧ್ಯೆ ಮಧ್ಯೆ ಬಿಟ್ಟು ಹೇಳಿಕೊಂಡು ಹೋದಳು. ಮಾರನೇ ದಿನವೇ ಇವಳು ಹೇಳಿರುವ ಕುರುಹುಗಳನ್ನುಳ್ಳವನು ಬಂದನು. ನಾನು ಅವನನ್ನು ನೋಡಿ—ನೆನ್ನೆ ದಿನ ಯಾರೋ ಒಬ್ಬಳು ನಿನ್ನನ್ನು ಹುಡುಕಿಕೊಂಡು ಬಂದಿದ್ದಳು. ಅವಳ ತಮ್ಮನಿಗೆ ರೋಗಪರಿಹಾರ ಮಾಡಬೇಕಂತೆ ಎಂದು ಹೇಳಿದ್ದಕ್ಕೆ, ಅವನು—ಸ್ವಾಮಿ, ನನ್ನ ವಿಷಯ ಯಾರಿಗೂ ಹೇಳಬೇಡಿ. ನಾನು ಒಬ್ಬರ ಮನೆಗೆ ಹೋಗತಕ್ಕವನಲ್ಲ. ನಿಮ್ಮ ಅದೃಷ್ಟದ ಒಲಿಮೆಯಿಂದ ಇಲ್ಲಿಗೆ ಬಂದೆನು ಎಂದು ಹೇಳುತ್ತಿರುವಷ್ಟರಲ್ಲಿಯೇ ಆ ಠಕ್ಕಿಗಾತಿ ಹೇಳಿದ್ದ ಮನೆಯವರೆಲ್ಲಾ ಬಹಳ ಕುತೂಹಲದಿಂದ ಒಬ್ಬರಿಗೊಬ್ಬರ ತಮ್ಮ ತಮ್ಮ ಮಹಾನ್ನವನ್ನು(?) ಬಿಡದೆ ಇವನು ಬರುವದನ್ನೇ ನಿರೀಕ್ಷಿಸುತ್ತಲಿದ್ದರು. ಇವನು—ತನಗೆ ಭಾವಿಯ ನೀರಿನಲ್ಲಿ ಕೂತು ಅಡಿಗೆ ಮಾಡಿ ಊಟ ಮಾಡುವುದು ಬರುತ್ತೆ. ಅಗ್ನಿಸ್ತಂಭನ ಬರುತ್ತೆ ಎಂದು ಹೇಳಿ—ಹೊತ್ತಾಯಿತು, ನಾನು ಹೋಗಿಬರುತ್ತೇನೆಂದು ಹೊರಟನು. ಕೂಡಲೇ ಕಾದಿದ್ದ ಜನರು ಬಹಳ ಭಕ್ತಿಯಿಂದ ಅವನನ್ನು ಕರೆದುಕೊಂಡು ಮನೆಗಳಿಗೆ ಹೋಗಿ ತಮಗೆ ಬೇಕಾದ ವಿಷಯಗಳನ್ನು ಕೇಳಲು, ಆ ಮೋಸಗಾರನು ಇವರಿಗೆ ಭ್ರಾಂತಿ ಹುಟ್ಟಿಸಿ, ಬಟ್ಟೆಗಳ ದುಡ್ಡು ಒಡವೆಗಳು ಅಪಹರಿಸಿ ಇವರ ಮೌಢ್ಯತನಕ್ಕೆ ನಗುತ್ತಾ(?) ಹೊರಟು ಹೋದನು. ಇದರ ನಿಜಸ್ಥಿತಿ—ಮೊದಲು ಆ ಹೆಂಗಸು ಮನೆಮನೆಗೂ ಬಂದು, ಮಹಾತ್ಮನೆಂದು ಹೇಳಿಕೊಂಡು ಹೋಗುವುದು, ನಂತರ ಇವಳು ಹೋಗಿದ್ದ ಮನೆಗಳಿಗೆ ಅವನು ಹೋಗಿ ಜನಗಳನ್ನು ಭ್ರಾಂತಿಪಡಿಸಿ ಹಣ ಕಾಸು ಸುಲಿದುಕೊಂಡು ಹೋಗುವದು; ಇಷ್ಟೇ. ಇದೆಂಥಾ ಭ್ರಾಂತಿ! "ಜನಮರುಳೋ ಜಾತ್ರೆ ಮರುಳೋ" ಎಂಬಂತೆ ಜನರು ಮೋಸಹೋಗುವುದು ಆಶ್ಚರ್ಯ!

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.

ಹಾನಗಲ್ ಮಾರ್ಗದಲ್ಲಿ ನಡೆದ ಆಶ್ಚರ್ಯ ಸಮಾಚಾರವು.

ಶಿಕಾರಿಪುರದಿಂದ ಹಾನಗಲ್ಲಿಗೆ ಹೋಗುವ ಮಾರ್ಗದಲ್ಲಿ ಮೂಡೂರುಗಿಡ ಎಂಬ ಪ್ರಸಿದ್ಧವಾದ ಗಿಡವಿರುವದು. ಅದು ಬಹಳ ದಟ್ಟವಾಗಿದೆ. ಆಗಸ್ಟ್ ತಾ ೩ರಲ್ಲಿ ಒಬ್ಬ ಪ್ರಯಾಣಿಕನೂ ಅವನ ಸಂಗಡ ಒಬ್ಬ ಆಳೂ ಊರಿಗೆ ಹೋಗುವದಕ್ಕೋಸ್ಕರ ಪ್ರಯಾಣ ಮಾಡಿದರು. ಆ ಗಿಡದಲ್ಲಿ ಹೋಗುತ್ತಿರುವಾಗ್ಗೆ ಅಕಸ್ಮಾತ್ತಾಗಿ ಒಂದು ಕರಡಿಯು ಒಂದು ಜಿಂಕೆಯನ್ನು ಹಿಂಬಾಲಿಸಿರುವುದು ಇವರ ದೃಷ್ಟಿಗೆ ಬಿತ್ತು. ಇವರು ತಮ್ಮ ಹತ್ತಿರ ಆಯುಧಗಳಿವೆ ಎಂಬ ಧೈರ್ಯದಿಂದ ಕೇಕೆ ಹಾಕಿದರು. ಅದು ಜಿಂಕೆಯನ್ನು ಹಿಂಬಾಲಿಸುವುದನ್ನು ಬಿಟ್ಟು ಇವರನ್ನು ಹಿಡಿದು ತಿನ್ನುವುದಕ್ಕಾಗಿ ಓಡಿಬಂದಿತು. ಕೂಡಲೇ ಇವರು ಆಯುಧಸನ್ನದ್ಧರಾದರು. ಅನಂತರ ಕರಡಿಯೊಂದಿಗೆ ಅನೇಕ ಹೊತ್ತು ಜಗಳವಾಡಿದಾಗ್ಯೂ ತಮ್ಮ ಶರೀರವನ್ನು ಅಪಾಯಗೊಳಿಸಲಿಕ್ಕೆ ಬಿಡಲಿಲ್ಲ. ಆದರೆ ಆಳಿನ ಕೈಯಲ್ಲಿ ಸಾಗದೆ ಧೈರ್ಯಗುಂದಿ ನೆಲಕ್ಕೆ ಬಿದ್ದುಬಿಟ್ಟನು. ಆ ಕರಡಿಯು ಇವನ ಬಳಿಗೆ ಬಂದು, ಇವನ ಮೂಗಿನ ಹತ್ತಿರ ಮೂಸಿನೋಡಿತು. ಆದರೂ ಇವನು ತನ್ನ ಪ್ರಾಣಕ್ಕೆ ಅಪಾಯ ಬಂದೀತೆಂದು ಉಸಿರು ಕಟ್ಟಿದ್ದನು. ಕೊನೆಗೆ ಅದು ಇವನ ಬಗಲಲ್ಲಿ ಕೈಹಾಕಿತು. ಅವನಿಗೆ ನಗು ಬರುವಹಾಗಾಯಿತು. ಆದರೂ ಅವನು ಉಸಿರು ಕಟ್ಟಿ ಮೆಲ್ಲನೆ ಮೇಲಕ್ಕೆದ್ದು ಅದರ ಮೈಕೈ ಮೇಲೆ ತನ್ನ ಕೈಯನ್ನೆಳೆದನು. ಅದಕ್ಕೆ ಬಹಳ ಗಾಯವಾದ್ದರಿಂದ ಅದಕ್ಕೇನು ಸಂತೋಷವಾಯಿತೋ. ಮತ್ತು ಸುಮ್ಮನೇ ಪೊದೆಯೊಳಗೆ ಹೊರಟುಹೋಯಿತು. ಆದ್ದರಿಂದ ಮೂಗುಪ್ರಾಣಿಗಳಿಗೆ ಕರುಣೆ ತೋರಿಸಿದ ಪಕ್ಷದಲ್ಲಿ ಅವು ಕೇಡು ಮಾಡಲಾರವೆಂದು ಕಾಣುವುದು.

ಸ್ವಾಮಿ ಅಭೇದಾನಂದರವರೂ ವೇದಾಂತವೂ.

[ಮೇಲ್ಕಂಡ ವಿಚಾರದಲ್ಲಿ ವಾಚಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಲಪೇಕ್ಷಿಸಬಹುದಾದ್ದರಿಂದ ಅದಕ್ಕೆ ನಾವು ಅವಕಾಶ ಕೊಡುವೆವು. ಅಂಥಾ ಪತ್ರಿಕೆಗಳನ್ನು ಸಂಕ್ಷೇಪವಾಗಿಯೂ ಯೋಗ್ಯವಾಗಿಯೂ ಬರೆಯತಕ್ಕದ್ದು.—ಎಡಿ]

ಸ್ವಾಮಿ ಅಭೇದಾನಂದರವರು ಬೆಂಗಳೂರಿಗೆ ಬಂದಿದ್ದಾಗ್ಗೆ ಉಪನ್ಯಾಸಮಾಡಿ—ಸ್ವಾಮಿ ವಿವೇಕಾನಂದರವರು ಅಮೇರಿಕದಲ್ಲಿ ಬಹು ಪ್ರಯಾಸಪಟ್ಟರು. ಅವರು ಗತಿಸಿದನಂತರ ತಾವು ನ್ಯೂಯಾರ್ಕ್ ಪಟ್ಟಣದಲ್ಲಿ ಸುಮಾರು ೮ ವರುಷಗಳಿಂದಲೂ, ಕೆಲಸ ಮಾಡಿದರೆಂತಲೂ ಅದರ ಪ್ರತಿಫಲವು ಕ್ಷಿಪ್ರದಲ್ಲಿಯೇ ಅಮೇರಿಕಾದವರು ಅದ್ವೈತವನ್ನು ಕೈಕೊಳ್ಳಲು ಸಿದ್ಧರಾಗಿರುತ್ತಾರೆಂತಲೂ, ಯೋಗನಿಯಮ, ಪ್ರಾಣಾಯಾಮ, ಮೊದಲಾದ ವೇದಾಂತ ತತ್ವಗಳನ್ನು ಅವರು ಅಭ್ಯಾಸಿಸುವವರೆಂತಲೂ, ಸಮಾಧಿಹೊಂದಿ ಪರಬ್ರಹ್ಮನನ್ನು ಕಾಣುತ್ತಾರೆಂತಲೂ ಕೇಳಿ ಬಹು ವಿಸ್ಮಯಗೊಂಡೆವು.

ಕ್ರೈಸ್ತಮತವು ಪಾಪಪುಣ್ಯಗಳ ವಿಚಾರದಲ್ಲಿ, ಕ್ರೀಸ್ತನನ್ನು ಕೈಕೊಂಡು, ಮೊದಲನೇ ಮನುಷ್ಯನಾದ ಆದಾಮನಿಂದ ಪಾಪವು ಹುಟ್ಟಿದ್ದರಿಂದ ಆತನ ಸಂತತಿಯವರಾದ ಮಾನವಕುಲವ್ಯಾವತ್ತೂ ಪಾಪಿಷ್ಟರಾದ್ದರಿಂದ ಅವರ ವೇದವೇ ಪಾಪದ ತಾಪಕ್ಕೆ ಕ್ರೀಸ್ತನ ಮುಖೇನ ಮುಕ್ತಿಯು ಪಡೆಯಬೇಕೆಂದು ಸಾಧಿಸುವದರಿಂದ ಕ್ರೈಸ್ತಮತವು ಸುಳ್ಳು. ವೇದಾಂತ ಮತವಾದರೋ ಶ್ರುತಿವಾಕ್ಯದಂತೆ ಜಗನ್ಮಿಥ್ಯೆಯು ಎಂದು ಹೇಳುವದರಿಂದಲೂ ಮತ್ತು "ಶೃಣ್ವಂತುವಿಶ್ವೇ ಅಮೃತಸ್ಯ ಪುತ್ರಾ। ಆಯೇಧಾಮಾನಿ ದಿವ್ಯಾನಿ ತಸ್ಥುಃ ॥" ಅಂದರೆ, "ಆ ಅಮೃತನ ಪುತ್ರರಿಂದ ಯಾರ್‍ಯಾರು ಪ್ರಕಾಶಮಾನವಾದಂಥಾ ಸ್ಥಾನಗಳನ್ನು ಹೊಂದಿ ಇದ್ದಾರೋ ಎಲ್ಲರೂ ಕೇಳಲಿ" ಎಂದು ತದ್ವೇದಗಳೇ "ಅಮೃತಸ್ಯ ಪುತ್ರಾಃ" ಅಮೃತನ ಪುತ್ರರಾದ್ದರಿಂದ ಕ್ರೈಸ್ತರು ಹೇಳಿದಂತೆ ಪಾಪಿಷ್ಟನ ಮಕ್ಕಳಲ್ಲವಾದ್ದರಿಂದ ವೇದಾಂತವು ಸತ್ಯವು. ಪಾಪವು ಒಂದು ಅವಿದ್ಯೆಯು, ಮರೀಚಿಕಾ ಜಲವು ಇಂತಲ್ಲದೆ ಪಾಪವು ಕ್ರೀಸ್ತರಂತೆ ನಿತ್ಯವಲ್ಲವು ನಾವು ಪಾಪಿಗಳೆಂದು ತಿಳಿದುಕೊಂಡಿದ್ದಾದರೆ ಪಾಪಿಷ್ಟರಾಗುವೆವು ಪುಣ್ಯವಂತರೆಂದು ತಿಳಿದುಕೊಂಡರೆ ಪುಣ್ಯಾತ್ಮರಾಗುವೆವು ಯಾಕಂದರೆ "ಯದ್ಭಾವಂ ತದ್ಭವತಿ." ಪಾಪವು ಮಿಥ್ಯವಾದ್ದರಿಂದ ಪಾಪಕ್ಕೆ ಅನುತಾಪವೇ ಇಲ್ಲವು ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಒಂದು ಹಿಂದೂ ದೇವಾಲಯವುಂಟು. ಇದು ಹೋದ ವರ್ಷ ನಡೆದ ಅನಾಹುತಗಳಿಂದ ತಪ್ಪಿಸಿಕೊಂಡಿರುತ್ತದೆ. ಕ್ರೈಸ್ತರಿಂದಲೇ ಇದು ಅದ್ಭುತವೆಂದು ನಂಬಿಕೆ ಹುಟ್ಟಿರುತ್ತದೆ. ವೇದಾಂತವಾದರೋ ಗುಡಿಗಳಲ್ಲಿಯೂ ಕಲ್ಲುಗಳಲ್ಲಿಯೂ ಮನುಷ್ಯನಲ್ಲಿಯೂ ಪರಮಾತ್ಮನಂ ದರ್ಶಿಸುತ್ತದೆ. "ಅಣೋರಣೀಯಾಂ ಮಹತೋ ಮಹೀಯಾಂ" ಎಂದು ವೇದವು ಸಾರುವದರಿಂದ ಸರ್ವರಿಗೂ ರಸವತ್ತಾದ ಅದ್ವೈತದಲ್ಲಿ ಎಷ್ಟು ಆಕರ್ಷಣೆಯುಂಟು ? ವಿಧವಿಧವಾಗಿ ಆರ್ಚಿಸುವವರೆಲ್ಲರೂ ಸ್ಮಾರ್ತ ಸ್ಥಾರಾದಾಗ್ಯೂ ಸರಿಯೇ, ಯಹೂದ್ಯ, ಕ್ರೈಸ್ತ, ಮಹಮ್ಮದೀಯ, ಬೌದ್ಧ ಮತಸ್ಥರಾದರೂ ಸರಿಯೆ ವೇದಾಂತಕ್ಕೆ ಸರ್ವವಶವಾಗಿದೆ.

ವೇದಾಂತ ಮತವು ಸರ್ವರಿಗೂ ಸನಾತನವಾದದ್ದು. ಇತರ ಮತಗಳಂತಲ್ಲವು. ಇತರ ಮತಗಳೋ ಯಾವದಾದರೊಂದು ಮನುಷ್ಯನ ಆಧಾರದ ಮೇಲೆ ನಿಂತಿರುತ್ತವೆ ವೇದಾಂತಕ್ಕೆ ಯಾವೊಬ್ಬರೂ ಅಧ್ಯಕ್ಷರಲ್ಲವು ವೇದಾಂತ ಸೂತ್ರಗಳು, ಉಪನಿಷತ್ತುಗಳು ಮೊದಲಾದವುಗಳೇ ಇದಕ್ಕೆ ಆಧಾರವು. ಅನೇಕರಿಂದ ಬರೆಯಲ್ಪಟ್ಟದ್ದು ಆದುದರಿಂದ ಮತವು ಸತ್ಯವೆಂಬುದಕ್ಕೆ ಇದೊಂದು ಸಿಗ್ಗುರುತು. ಶ್ರೇಷ್ಟವಾದ ಲಾಂಛನವು. ವೇದಾಂತವೇ ಸತ್ಯವು, ಪರಮೋತ್ಕೃಷ್ಟವು

ವಿಗ್ರಹಾರಾಧನೆ ವೇದಾಂತಕ್ಕೆ ಸೇರಲಿಲ್ಲವು ಕೇವಲ ಮಾನಸಿಕ ಪೂಜೆಯೇ ಭಗವಂತನಿಗೆ ಅರ್ಹವಾದ ಪೂಜೆಯು ಆದರೆ ವಿಗ್ರಹಗಳು ಕಿಂಚಿತ್‌ಜ್ಞಾನವುಳ್ಳವರಿಗೆ ಅವಶ್ಯಕವು ಚಿಹ್ನೆಗಳಿಲ್ಲದೆ ಒಂದು ಪದಾರ್ಥವನ್ನು ಗ್ರಹಿಸಲಾರೆವು. ಕ್ರೈಸ್ತಮತದಲ್ಲೂ ಚಿಹ್ನೆಗಳುಂಟು ಚಿಹ್ನೆಗಳ್ಯಾವತ್ತೂ ಅತಿ ಮೂಢರಾದ ಜನರಿಗೆ ಮೆಟ್ಟುಗಳು ಯಾವ ಪ್ರಕಾರವಾಗಿ ಒಬ್ಬನ ಅಂಗಿಯು ಮತ್ತೊಬ್ಬನಿಗೆ ಧರಿಸಲು ಆಗಬಾರದೋ ಅದೇ ರೀತಿ ಕೆಲವರಿಗೆ ವಿಗ್ರಹಗಳಲ್ಲಿ ಅಭಿರುಚಿಯು. ಜ್ಞಾನವೂ ಬುದ್ಧಿಯೂ ಸರ್ವರಿಗೂ ಒಂದೇ ಸಮನಾಗಿಲ್ಲವು ಅವರವರ ಶಕ್ತ್ಯನುಸಾರ ಸತ್ಯವನ್ನು ಗ್ರಹಿಸುವರು. ವೇದಾಂತವು ಇದನ್ನರಿತದ್ದಂಥಾದ್ದು ದುವರಿಂದ ವಿಗ್ರಹಗಳ ಆರಾಧನೆಯನ್ನು ಖಂಡಿಸುವುದಿಲ್ಲವು.

ಮೇಲೆ ಕಂಡುಬರುವ ಕೆಲವು ವಿರುದ್ಧಾಂಶಗಳನ್ನು ವಿಸ್ತಾರವಾಗಿ ನೋಡಲವಕಾಶ ಇಲ್ಲಿ ಇಲ್ಲದಿದ್ದಾಗ್ಯೂ ಭಗವಂತನು ಕೊಟ್ಟಿರುವ ಬುದ್ಧಿಯಿಂದ ಪರೀಕ್ಷಿಸೋಣ. ಅಮೆರಿಕಾದವರು ಯೋಗ, ಸಮಾಧಿ, ಪ್ರಾಣಾಯಾಮಗಳನ್ನು ಮಾಡುವವರೆಂದು ಅಭೇದಾನಂದರವರು ಹೇಳುವರು. ಹಾಗಾದರೆ ಎಷ್ಟು ಜನರು ಸನ್ಯಾಸಾಶ್ರಮವನ್ನು ಕೈಕೊಂಡಿರುವರು ? ಗೃಹಸ್ಥಾಶ್ರಮಕ್ಕೆ ತಿಲತರ್ಪಣವಂ ಎಷ್ಟು ಜನರು ಬಿಟ್ಟರು ? ದ್ವಾಪರ, ತ್ರೇತಾಯುಗಗಳಿಗೆ ಸರಿಯಾಗಿ ಬರೆದಿಟ್ಟ ಕೆಲವು ವಿಧಿಗಳು ಕ್ರಿ. ಶ. ೨೦ ಶತಮಾನಗಳಲ್ಲಿ ಹೇಗೇ ತಾನೇ ಸಂಬಂಧ ಪಟ್ಟಾವು ? ಕಾಲಚಕ್ರವು ಮುಂದೆ ಸಾಗುವದೋ ? ಹಿಂಭಾಗಕ್ಕೆ ಹೋಗುವದೋ ? ತಿಳಿಯದು ಸನ್ಯಾಸಾಶ್ರಮವು ದ್ವಾಪರಯುಗದಲ್ಲಿ ಒಂದು ವೇಳೆ ಉತ್ತಮವಾಗಿದ್ದೀತು. ಆದರೆ ತತ್ಕಾಲದಲ್ಲಿ ಎಷ್ಟು ದೇಶಕಾಲ ಭೇದಗಳು ಜನಿಸಿರುವವು ? ಕಾಲಕ್ಕೆ ತಕ್ಕಂತೆ ಬುದ್ಧಿಯೂ ಜ್ಞಾನವೂ ಚತುರತೆಯೂ ನಾಗರೀಕತೆಯೂ ಅಭಿವೃದ್ಧಿ ಹೊಂದುತ್ತಲಿವೆ ಅಮೆರಿಕಾದವರು ಅದ್ವೈತವೇದಾಂತವನ್ನು ವಹಿಸಿದ್ದಾದರೆ ದೇಶಕೋಶರಾಜ್ಯಗಳು ಅಭಿವೃದ್ಧಿ ಹೊಂದಲಾರವು. ವೇದಾಂತಿಗಳಿಗೆ ಬಾಹ್ಯಪ್ರಪಂಚವಾದ ಭೂತಭೌತಿಕವಸ್ತುಗಳ್ಯಾವತ್ತೂ ಮಿಥ್ಯವು. ಕಾಲಕ್ರಮೇಣ ಅವರು ಇಂಥಾ ಮಿಥ್ಯಾವಾದಿಗಳಾದ ವೇದಾಂತಬೋಧನೆಗೊಳಗಾಗದೆ ಸನ್ನೀತಿ, ಸದಾಚಾರ ಸಂಪನ್ನರಾಗಿ, ನಾಗರೀಕತೆಗೆ ಲೋಪ ಬಾರದಂತೆ ಗೃಹಸ್ಥಾಶ್ರಮದಲ್ಲಿರುವ ಧರ್ಮವನ್ನು ಭಂಗಿಸದೆ, ಧರ್ಮವನ್ನು ಸತ್ಕಾರ್ಯಸಾಧನೆಗಳಲ್ಲಿ ಹೊಂದಿಸಿ ನಡೆಯುವರೆಂದು ಪ್ರಾರ್ಥಿಸೋಣ.

ಅದ್ವೈತವೇದಾಂತವು ಪಾಪದ ವಿಚಾರದಲ್ಲಿ ತಿಲಾಂಶವಾದರೂ ಗಮನ ಕೊಡುವದಿಲ್ಲವು. ಆದರೆ ಕ್ರೈಸ್ತಮತವು ಪಾಪವನ್ನು ನಿತ್ಯವೆಂದು ಸ್ಥಾಪಿಸುತ್ತದೆ. ಪಾಪವು ಅದ್ವೈತಿಗಳಿಗೆ ಅವಿದ್ಯೆಯಾದ್ದರಿಂದ ಪುಣ್ಯವೂ ಮಿಥ್ಯವೆಂದೇ ತರ್ಕಶಾಸ್ತ್ರವನ್ನರಿತವರು ಹೇಳದಿರಲಾರರು ಪಾಪಪುಣ್ಯಗಳು ಮಿಥ್ಯವಾದಲ್ಲಿ ಪಾಪಕೃತ್ಯಗಳೂ ಪುಣ್ಯಕರ್ಮಗಳೂ ಮಿಥ್ಯೆಯೇ. ಹಾಗಾದರೆ ಮಾನವಜನ್ಮವೂ ಮಿಥ್ಯವು ಇದರಿಂದ ಪರಿಷ್ಕಾರವಾಗುವದೇನಂದರೆ—ಧರ್ಮ, ಸತ್ಯ, ನೀತಿ, ಪರೋಪಕಾರಗಳು ಮಿಥ್ಯವಾಗಬೇಕು ! ಹೀಗಿರುವ ಮಿಥ್ಯಬ್ರಹ್ಮವಾದಿಗಳು ಯಾವ ಕೆಲಸ ಮಾಡಿದಾಗ್ಯೂ, ಯಾವ ನೆನಪು ನೆನಸಿದಾಗ್ಯೂ ಅಂದರೆ ಜಾರತ್ವವನ್ನಾಗಲಿ, ಚೋರತ್ವವನ್ನಾಗಲಿ, ಸತ್ಯವನ್ನಾಗಲಿ, ಅಸತ್ಯವನ್ನಾಗಲಿ, ಹೇಯವಾದ ಕೊಲೆಪಾತಕವನ್ನಾಗಲಿ, ಸತ್ಕಾರ್ಯವನ್ನಾಗಲಿ, ದುಷ್ಕಾರ್ಯವನ್ನಾಗಲಿ ಆಚರಿಸಬಹುದಲ್ಲವೇ ? ಕ್ರೈಸ್ತಮತವು ಮಾಡಿದ ದೋಷವಂ ನೋಡೋಣ. ಇದಾದರೋ ಪಾಪವು ನಿತ್ಯವೆಂದು ಸ್ಥಾಪಿಸಿ, ಪಾಪದ ತಾಪಕ್ಕೆ ಪಶ್ಚಾತ್ತಾಪಪಡಬೇಕೆಂದು ಹೇಳಿದುದರಿಂದ ಅದು ಸುಳ್ಳಾಯಿತು ! ವೇದಾಂತವು ಪಾಪವು ಸುಳ್ಳೆಂದು ಹೇಳಿದುದರಿಂದ ಸತ್ಯವಾಯಿತು ! ಅಯ್ಯೋ ಪಾಪ ! ಕ್ರೈಸ್ತಮತವು ಪಾಪದಲ್ಲೂ ದುಃಖದಲ್ಲೂ ಮುಳುಗಿರುವ ಸಾವಿರಾರು ಕಾಡು ಜನರನ್ನೂ ಪಂಚಮರನ್ನೂ ಕುಷ್ಠರೋಗಿಗಳನ್ನೂ ಕುಂಟರನ್ನೂ ಕುರುಡರನ್ನೂ ಅಜ್ಞಾನಿಗಳನ್ನೂ ಉತ್ತೀರ್ಣದೆಸೆಯಂ ಹೊಂದಿಸಲು ಆಸ್ಪತ್ರೆಗಳನ್ನೂ ಧರ್ಮಶಾಲೆಗಳನ್ನೂ ವಿದ್ಯಾನಿಲಯಗಳನ್ನೂ ಲಕ್ಷಾಂತರ ರೂಪಾಯಿ ವ್ಯಯ ಮಾಡಿ ಧರ್ಮಛತ್ರಗಳನ್ನೂ ಕಟ್ಟಿಸಿದ್ದರಿಂದ ಕ್ರೈಸ್ತಮತವು ಸುಳ್ಳಾಯಿತು ! ವೇದಾಂತವು ಸಾವಿರಾರು ವಿಧವಾ ಸ್ತ್ರೀಯರನ್ನು ಮನೆಯಲ್ಲಿಟ್ಟುಕೊಂಡು ಅವರ ಘೋರ ಶೋಕವನ್ನು ತೃಣೀಕರಿಸಿ ಲಜ್ಜಾಸ್ಪದವಾದ ವೇಶ್ಯಾಸ್ತ್ರೀಯರನ್ನು ದೇವರ ಗುಡಿಯೊಳಗೆ ನರ್ತನ ಮಾಡಿಸಿ, ಕೀಳು ಜಾತಿಯವರನ್ನು ಸಹೋದರ ಭಾವನೆಯಿಂದ ನೋಡದೆ ಧಿಕ್ಕರಿಸಿ, ರೋಗರುಜಿನಗಳಿಗೆ ಕಾರಣವಾಗಿ ಯಾವ ಸೌಕರ್ಯವನ್ನೊದಗಿಸದೆ ಭ್ರಷ್ಟಕರವಾದ ಜಾತಿಯನ್ನು ಕಲ್ಪಿಸಿ ಮನುಷ್ಯಮನುಷ್ಯರಿಗೂ ಸ್ತ್ರೀಸ್ತ್ರೀಯರಿಗೂ ಪಿಟಾಗಿಸಿ, ಪಶುಪಕ್ಷಿಕೀಟಕರಂತೆ ಬಿಟ್ಟಿರುವದರಿಂದ ವೇದಾಂತವು ಸತ್ಯವಾಯಿತು ! ಆಗಬಹುದಾಗಬಹುದು !

ವಿಗ್ರಹಾರಾಧನೆಯನ್ನು ಪ್ರಕಟಿಸಲು ಅಭೇದಾನಂದರವರು ಪಟ್ಟ ಕಷ್ಟವು ಅಮಿತವು. "ನೀನು ಭಾವಿಸುವ ಹಾಗೆ ಆದರಂತಾಗುವೆನು" ನಾನು ಪಾಪಿಷ್ಟನೆಂದು ತಿಳಿದುಕೊಂಡರೆ ಪಾಪಿಯೇ ಆಗುವೆನು. ಪುಣ್ಯನೆಂದು ತಿಳಿದುಕೊಂಡರೆ ಪುಣ್ಯನಾಗುವೆನು ! ಗಾರ್ದಭವನ್ನು ಮನುಷ್ಯನೆಂದು ಊಹಿಸಿದರೂ ಸರಿಯೇ, ಮನುಷ್ಯನನ್ನು ಗಾರ್ದಭವೆಂದಾಗ್ಯೂ ಸರಿಯೇ "ಯದ್ಭಾವಂ ತದ್ಭವತಿ." ಆದುದರಿಂದ ಷಣ್ಮತದವರೂ ಅವರವರ ಮನಸ್ಸಿನಂತೆ ಸಿಂಹವ್ಯಾಘ್ರವಾದಿ ಕಾರ್ಯವಾದ ಪರಮಾತ್ಮನನ್ನು ಜಪವಾದ ಮಣ್ಣಿನಿಂದ ಮಾಡಿದ ಅನೇಕ ಮನುಷ್ಯರ ದೊಡ್ಡ ಕೋಟೆಯುಳ್ಳ ರೂಪಕವಾಹನನಾಗಿರುವ ಕುರುಡವಾಕೃತಿಯಂ ಹೊಂದಿದ ಒಂದು ಗಣಪತಿಯನ್ನೂ, ರೌದ್ರಮುಖವಾಗಿಯೂ ಯೆಮ್ಮೆ ಕೋಣ ಮನುಷ್ಯರ ರಕ್ತವಂ ಪಾನಮಾಡುವ ಒಂದು ಕಾಳಿಯನ್ನೂ, ಕಾಮುಕಪ್ರಿಯಾದ ಹನುಮಂತನನ್ನೂ ಇನ್ನೂ ಅನೇಕ ಕ್ಷುದ್ರದೇವತೆಗಳೆನಿಸಿಕೊಳ್ಳುವ ಡಾಕಿನೀ ಶಾಕಿನೀ ಪಿಶಾಚಿ ಮಾರಿಯನ್ನೂ ಆತನಿಗೆ ಸಮಾನ ಕೊಡಿಸುವುದಲ್ಲವೇ ? ಇದೆಲ್ಲಾ ವೇದಾಂತಕ್ಕೆ ಸಮ್ಮತವಲ್ಲವೇ ? ಮಾನಸಿಕ ಆರಾಧನೆಯು ಉತ್ತಮವಾಗಿದ್ದರೆ ಇವುಗಳನ್ನೇಕೆ ಖಂಡಿಸಕೂಡದು ? ಸನಾತನ ಧರ್ಮವಿದು ! ಆರ್ಯಕೀರ್ತಿಯಿದು ! ವೇದಾಂತವ ಸಾಧಿಸಿ ! ಮಹಾ ವಾದಿಗಳ ಕುತರ್ಕವಿದು !

ವೇದಾಂತ ಮತವಲ್ಲದೆ ಅನ್ಯಮತಗಳು ಸುಳ್ಳು ಎಂದು ನಿರೂಪಿಸಿದರಷ್ಟೆ. ಮತಗಳ ಚರಿತ್ರೆಯನ್ನೋದಿದರೆ ಆಯಾ ಕಾಲಕ್ಕೆ ತಕ್ಕಂತೆ ಪರಮೇಶ್ವರನ ಭಾವನೆಯು ಆಯಾ ಮನಸ್ಸಿನಲ್ಲಿ ಬೆಳೆಯುತ್ತಲೂ, ಬೆಳೆದು ಬೆಳೆದು ಆ ಭಾವನೆಯೇ ಪ್ರಬಲಿಸಿ ಉತ್ತರೋತ್ತರವಾದ ಆಸ್ತಿಕ ಮತವು ಅಭಿವೃದ್ಧಿ ಹೊಂದಿತೆಂಬುದು ಕಂಡುಬರುವದಲ್ಲದೆ ಯಾವ ಮನುಷ್ಯನ ಆಧಾರದ ಮೇಲೆ ಯಾವ ಮತವೂ ಕೂಡ ನಿಂತಿರುವದಿಲ್ಲವೆಂದು ಕರತಲಾಮಲಕದಂತೆ ಸಾಧ್ಯವಾಗುವದು ಕ್ರೀಸ್ತ, ಮಹಮ್ಮದ್, ಶಂಕರ, ನಾನಕ್, ರಾಮಾನುಜಾಚಾರ್ಯರೇ ಮುಂತಾದ ಮಹನೀಯರು ಮತವು ಶಿಥಿಲವಾಗುವದನ್ನು ನೋಡಿ ಉದ್ಧಾರ ಮಾಡಲು ಪ್ರಯತ್ನಪಟ್ಟರೇ ವಿನಹಾ ಯಾರೂ ಕಾರಣಕರ್ತರಲ್ಲವು. ಆ ಮಹಾ ಪುರುಷರು ತಂತಮ್ಮ ಹೃದಯದ ಶಿಲಾಶಾಸನದಲ್ಲಿ ಭಗವಂತನು ಬರೆದಿರುವ ಲಿಪಿಯಿಂದ ಆ ಭಗವಂತನನ್ನು ಪವಿತ್ರ ಹೃದಯದಿಂದ ಆರಾಧಿಸಿ ಮತವನ್ನು ಪಾವನ ಮಾಡಿದರೇ ವಿನಹ ಯಾರೂ ಯಾವ ಮತಕ್ಕೆ ಅಧ್ಯಕ್ಷರಲ್ಲವು. ಅಭೇದಾನಂದರವರು ಇದನ್ನು ತಿಳಿಯದೆ ನುಡಿದುದು ಶೋಚನೀಯವಾಗಿದೆ ಅಭೇದಾನಂದರು ಹಿಂದೂ ಮತವು ಒಂದೇ ಸತ್ಯವು ಎಂದು ಹೇಳಿದರಲ್ಲವೇ ? ಹಾಗಾದರೆ ಹಿಂದೂಮತವೆಂದರೆ ಅವುದು ? ವೇದಾಂತವೆಂದರೆ ವೇದದಲ್ಲಿರುವದೆಲ್ಲವನ್ನೂ, ಉಪನಿಷತ್ತುಗಳಲ್ಲಿರುವದನ್ನೂ ಷಣ್ಮತಗಳೆಲ್ಲವೂ ಎಂದು ತಿಳಿಯಬೇಕೋ ? ಅಥವಾ ಅದ್ವೈತವೆಂದೇ ಒಪ್ಪಬೇಕೋ ? ವೇದಾಂತಿಗಳೇ ಇದನ್ನರುಹಲಿ. ಪ್ರಕೃತದಲ್ಲಿ ಸರ್ವಜ್ಞನು ಹೇಳಿದಂಥಾದ್ದನ್ನು ಇಲ್ಲಿ ವೇದಾಂತಿಗಳಿಗೆ ಜ್ಞಾಪಕಕ್ಕೆ ತರುವೆನು:—

"ಅದ್ವೈತಮತವೋದಿ । ಇದ್ದದ್ದು ಕಳಕೊಂಡು ।
ಪ್ರದ್ಧಾನವಮರವೇರಿ । ಅಲ್ಲಿಂದ ಕೈಬಿಟ್ಟು ಮುಗ್ಗರಿಸಿ
ಬಿದ್ದಂತಾಯಿತಯ್ಯ ಸರ್ವಜ್ಞ ॥"

ವೇದಾಂತಿಗಳ ಹೇಳಿಕೆಯ ಮೇರೆ ಸರ್ವರಿಗೂ ಒಂದೇ ಮತವಸಾಧ್ಯವು. ಆದರೆ ವೇದಾಂತವು ಸರ್ವರಿಗೂ ಸಮವಾಗಿ ಸಮಾಧಾನಂ ಕೊಡುತ್ತದೆ ಸತ್ಯವನ್ನು ತೊಟ್ಟುಕೊಳ್ಳುವ ಅಂಗಿಯಂತೆಂಬ ಉಪಮಾನವು ಉಪಮಾನವಲ್ಲ ಸತ್ಯ, ಧರ್ಮ ಸಾಮಾನ್ಯ ಪದಗಳು. ವೇದಶ್ಲೋಕಗಳ ಅಪಾರ್ಥವನ್ನು ಅಭೇದಾನಂದರವರು ಮಾಡಲುದ್ಯೋಗಿಸುವರು ಸತ್ಯವು ಎಲ್ಲರಿಗೂ ಒಂದೇ. ಒಬ್ಬರಿಗೊಂದು ಮತ್ತೊಬ್ಬರಿಗೊಂದಾಗುವದೋ ? ಅದಕ್ಕೆ ರೂಪವರ್ಣಗಳಿಲ್ಲವು. ಕಾಲನಿಯಮಗಳಿಲ್ಲವು. ಅದು ಯಾರಿಗೂ ಪಕ್ಷಪಾತ ಮಾಡುವದಿಲ್ಲವು. ಚಕ್ರಾಧಿಪತಿಗಾಗಲಿ ಬಿಕ್ಷುಕರಿಗಾಗಲಿ, ಪಾಮರನಿಗಾಗಲಿ ಸತ್ಯವು ಮಾರ್ಗಗಳನ್ನು ಹೊಂದುವದೋ ? ಯಾವಾತನು ಸತ್ಯವಂ ಸಾರುವದಿಲ್ಲವೋ, ಸತ್ಯವಂ ಆಚರಿಸುವದಿಲ್ಲವೋ, ಆತನು ಅಸತ್ಯನಾಗುವನು. ಇದು ಸತ್ಯವು. [illegible] ತನು ಸತ್ಯವನ್ನಪೇಕ್ಷಿಸಿ ಸತ್ಯವಂ ಬಿಟ್ಟು ಬೇರೆ ವಿಧದಿಂದ [illegible] ಪ್ರಯತ್ನಿಸುವನೋ ಆತನು ಆತ್ಮಕಳ್ಳನಾಗುವನು ಸತ್ಯಕ್ಕೆ [illegible] ಘಾಟಿ. ಅನ್ಯ ಪಥಂಗಳಿಲ್ಲವು ಸತ್ಯವು ಎಂದೆಂದಿಗೂ ಚ್ಯುತಿಯ [illegible] ರದು ಯಾಕಂದರೆ "ಸತ್ಯಮೇವಜಯತೇ ನಾನೃತಂ" ಸತ್ಯ [illegible] ತ್ಯವು. ಸತ್ಯಕ್ಕೆ ಎಷ್ಟು ದಾರಿಗಳುಂಟು ? ಯಾವ ರೂಪುಂಟು ? [illegible] ದಾನಂದರವರೇ ತಿಳಿಸಲಿ.

ಎಂ ನಾರಾಯಣ್ ಸಿಂಗ್

ಇಂಡಿಯಾ ದೇಶದ ವೃತ್ತಾಂತಗಳು.

ಬಿಲಾಸ್‌ಪುರದಲ್ಲಿ ಒಬ್ಬ ಹೆಂಗಸು ಕಳೆದ ೨೮ನೆ ತಾರೀ[illegible] ಮೂರು ಮಕ್ಕಳನ್ನು ಹಡೆದಳು ಎರಡು ಗಂಡುಮಕ್ಕಳು, [illegible] ಹೆಣ್ಣು ಮಗು ಶಿಶುಗಳೂ ಬಾಣಂತಿಯೂ ಚೆನ್ನಾಗಿದಾರೆಂದು [illegible] ವಾಗಿದೆ

●●●●

ದರ್ಭಾಂಗ ಸಂಸ್ಥಾನದ ಮಹಾರಾಜರವರು ಕಳೆದ ವಾರ [illegible] ಪಟ್ಟಣದಲ್ಲಿರುವ ಹಿಂದೂ ಕಾಲೇಜಿಗೆ ಹೋಗಿ ನೋಡಿ [illegible] ಸಂತೋಷಪಟ್ಟು, ಅದರ ಮೂಲಧನಕ್ಕೆ ೫೦,೦೦೦ ರೂಪಾಯಿ [illegible] ಮಾಡಿದರೆಂದು ತಂತಿ ವರ್ತಮಾನ ಬಂದಿದೆ

●●●●

ಡೆಹಲಿ ಪಟ್ಟಣದಲ್ಲಿ ಯಮುನಾ ನದಿಯು ಪೂರ್ಣಪ್ರವಾಹ[illegible] ದು ಸ್ನಾನಮಾಡುತ್ತಿದ್ದ ನಾಲ್ವರನ್ನು ಕೊಚ್ಚಿಕೊಂಡು ಹೋಯ [illegible] ನೀರು ಕೋಟೆ ಬಾಗಿಲ ತನಕ ಬಂದಿದೆ. ಉದ್ಯಾನವನಗಳ[illegible] ತೋಟಗಳಲ್ಲೂ ನಾಲ್ಕಾರು ಅಡಿಗಳ ನೀರು ನಿಂತಿವೆ

●●●●

ಕಳೆದ ಶುಕ್ರವಾರದ ದಿನ ಮಧ್ಯಾಹ್ನ ಪಟ್ಟಣದ ಬಳಿ ಯಮು[illegible] ನದಿಯಲ್ಲಿ ಒಂದು ದೋಣಿಯು ಅಕಸ್ಮಾತ್ತಾಗಿ ಮುಳುಗಿಹೋಯಿ[illegible] ಅದರಲ್ಲಿ ಕೂತಿದ್ದ ಯಾತ್ರಾರ್ಥಿಗಳ ಪೈಕಿ ಅನೇಕರು ನದಿಯ [illegible] ವರು ಅನೇಕ ಹೆಣಗಳನ್ನು ಹುಡುಕಿ ತೆಗೆದರು ಇನ್ನು [illegible] ದು ಸಿಕ್ಕಲಿಲ್ಲ

●●●●

ಕಲ್ಕತ್ತಾ ಪಟ್ಟಣದ ರೈಲ್ ಸ್ಟೇಷನ್ ಬಳಿ ಒಬ್ಬ ಪೋಲೀಸಿ[illegible] ತಿಂಡಿ ಸಾಮಾನು ಚಿಕ್ಕ ಮಾರುತ್ತಿದ್ದವನ ಹತ್ತಿರ ಮೂರು [illegible] ಕಿತ್ತುಕೊಂಡನು ಇದನ್ನು ಇನ್ಸ್‌ಪೆಕ್ಟರು ನೋಡಿದರು. ಅದರಮೇ[illegible] ನೊಬ್ಬರವರು ಸರಿದು ಆ ಪೋಲೀಸಿನವನಿಗೆ ಎರಡು ತಿಂಗಳ ಕಠಿಣ [illegible] ವಿಧಿಸಲ್ಪಟ್ಟಿತು.

●●●●

ರಂಗೂನ್ ಪಟ್ಟಣದಲ್ಲಿ ಒಬ್ಬ ಜವಾಹಿರಿ ವರ್ತಕನು ಸಾಲಗಾ[illegible] ತಗಾದೆ ಹೆಚ್ಚಿ ಮಾನಭಂಗ ಹುಟ್ಟುವುದೆಂದೂ ಅವಮಾನವಾಗುವುದೆ[illegible] ಜೆಹರು ವಿಷಕುಡಿದು ಆತ್ಮಹತ್ಯ ಮಾಡಿಕೊಂಡನು ಗಂಡನೇ [illegible] ಬಿಟ್ಟ ಮೇಲೆ ತಾನಿದ್ದೇನು ಫಲವೆಂದು ಅವನ ಹೆಂಡತಿಯೂ ಅವ[illegible] ಯೇ ವಿಷಕುಡಿದು ಸತ್ತಳು

●●●●

ಹೈದರಾಬಾದಿನಲ್ಲಿ ಒಬ್ಬ ಸಿಕ್ ಜಾತಿಯವನು ಕೊಲೆಪಾ[illegible] ಕ್ಕಾಗಿ ಅವನಿಗೆ ಸರ್ಕಾರದವರು ಮರಣದಂಡನೆಯನ್ನು ವಿಧಿಸಿ, [illegible] ನ ಪದ ತಿಲು ಪ್ರಕಾರ ಅವನನ್ನು ರಾಜಬೀದಿಗಳಲ್ಲಿ ಮೆರವಣಿಗೆ [illegible] ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗಿ, ಕತ್ತಿಯಿಂದ ಅವನ ಕತ್ತ[illegible] ಕಡಿದುಹಾಕಿದರು ಇದು ಮಹಾ ಭಯಂಕರವಾದ ನೋಟವನ್ನು [illegible] ಕ್ಕೆ ಸಂಶಯವಿಲ್ಲ

●●●●

ಕಳೆದ ವಾರ ರಾಂಪುರ ಸಂಸ್ಥಾನದ ದಿವಾನ್ ಮೌಲ್ವಿ ಅಬ್ದು[illegible] ಫಾರ್ ಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂತಲೂ [illegible] ಭಾವಮೈದುನ ಬಾಕಿಪ್ಪಿನಲ್ಲಿ ಆತ್ಮಹತ್ಯ ಮಾಡಿಕೊಂಡನೆಂತಲೂ [illegible] ದ್ದೆವಷ್ಟೆ. ಈಚೆಗೆ ಆ ದಿವಾನರವರು ತಾವು ರಜಾ ಪಡೆದಿದ್ದೇವೆಂ[illegible] ಆತ್ಮಹತ್ಯ ಮಾಡಿಕೊಂಡವನು ತಮ್ಮ ಭಾವಮೈದುನನಲ್ಲವೆಂತಲೂ [illegible] ವರ್ತಮಾನ ಕೊಟ್ಟಿದಾರೆ.

●●●●

ಕೊಚ್ಚಿ ಸಂಸ್ಥಾನದಲ್ಲಿ ಸೆಂಟ್ ಜಾನ್ ಪುತ್ತೂರು ಎಂಬ ಊರಿ[illegible] ಸಮುದ್ರವು ಉಕ್ಕಿ ಬಂದು ಸುಮಾರು ೩,೦೦೦ ತೆಂಗಿನ ಮರಗ[illegible] ಒಂದು ತೋಟವನ್ನೂ ಕೆಲವು ಮನೆಗಳನ್ನೂ ನುಂಗಿಬಿಟ್ಟ[illegible] ಕೆಲವು ಜನರು ತಮ್ಮ ಮನೆಮಠಗಳನ್ನು ಕಿತ್ತುಕೊಂಡು ಇನ್ನೊಂ[illegible] ದು ಕಡೆ ಹೋಗಬೇಕಾಯಿತು ಪ್ರಜೆಗಳೂ ಸ್ಥಳಾಧಿಕಾರಿಗಳೂ [illegible] ಮದ್ರಾಸ್ ಗವರ್ನಮೆಂಟಿಗೆ ಈ ಸಂಗತಿಯನ್ನು ತಿಳಿಸಿದ ರೆ.

●●●●

ಕಳೆದ ವಾರ ಹಿಂದುಸ್ಥಾನದಲ್ಲಿ ೫೬೨ ಪ್ಲೇಗ್ ಮರಣಗಳಾದ[illegible] ಇದು ಹೋದವಾರದ ಸಂಖ್ಯೆಗಿಂತ ಬಹಳ ಕಡಿಮೆ. ಈ ಪೈಕಿ ಬೊ[illegible] ಬಾಯಿನಲ್ಲೇ ೨೬೨ ಮರಣಗಳಾಗಿವೆ ಮದರಾಸಿನಲ್ಲಿ ೬, ಬಂಗಾ[illegible] ದಲ್ಲಿ ೧೫, ಸಂಯುಕ್ತ ಆಧಿಪತ್ಯಗಳಲ್ಲಿ ೧೬, ಪಂಜಾಬ್ ೧೧, ಪೂ[illegible] ಬಂಗಾಳಾ, ೩, ಮಧ್ಯಪ್ರಾಂತ್ಯಗಳು ೧, ಮಧ್ಯ ಇಂಡಿಯ ೨, ಮೈ[illegible] ರು ೩೭. ಬಿಮಾರ್ ದಲ್ಲಾದರೋ ೨೦೮ ಮರಣಗಳಾದವು.

●●●●

ಕಳೆದ ೧೮೫೭ ನೆ ಇಸವಿಗೆ ಆಖೈರಾದ ಆರು ಸಂವತ್ಸರಗ[illegible] ಹಿಂದುಸ್ಥಾನದ ಸೈನ್ಯಗಳನ್ನು ಈ ರಾಷ್ಟ್ರದ ಸರಹದ್ದುಗಳಲ್ಲಿ [illegible] ಬೇರೆ ಬೇರೆ ಕಲಹಗಳಿಗೆ ಕಳುಹಿಸಿದ್ದರಲ್ಲಿ ಯುದ್ಧಕಾರ್ಯಗಳು[illegible] ದು ಇಂಗ್ಲಿಷ್ ಸೈನ್ಯದಲ್ಲಿ ೬೩ ಮಂದಿ ಹುದ್ದೇದಾರರೂ ೯೫[illegible] ಸಿಪಾಯಿಗಳೂ, ದೇಶೀಯ ಹುದ್ದೇದಾರರಲ್ಲಿ ೧೨ ಮಂದಿಯೂ [illegible] ಯಗಳಲ್ಲಿ ೨೫೦ ಮಂದಿಯೂ ಕೊಲ್ಲಲ್ಪಟ್ಟರೆಂದು ಪ್ರಕಟವಾ[illegible]

●●●●

ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಹೊಸ ಆಧಿಪ[illegible] ಲೆಫ್ಟಿನೆಂಟ್ ಗವರ್ನರ್ ಸರ್ ಬಿ. ಫುಲ್ಲರ್ ಯವರು ತಮ್ಮ [illegible] ರಕ್ಕೊಳಪಟ್ಟ ಕೆಲವು ವಿದ್ಯಾಶಾಲೆಗಳಲ್ಲಿ ಹುಡುಗರು ದುಷ್ಟರಾಗಿ[illegible] ರೆಂತಲೂ ಆ ವಿದ್ಯಾಶಾಲೆಗಳನ್ನು ಯೂನಿವರ್ಸಿಟಿಗೆ ಸೇರಿಸ[illegible]

ವದೆಂತಲೂ ಮೇಲಕ್ಕೆ ಬರೆದರು. ಇವರು ಬರೆದಂತೆ ನಡೆಯದೆ ಹೋಯಿತು. ಇದಕ್ಕೋಸ್ಕರ ಸರ್ ಫುಲ್ಲರ್ ಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟರು.

❖❖❖❖

ಸಿಂಧು ದೇಶಕ್ಕೆ ಸೇರಿದ ಮಿರ್‌ಪುರದ ಮಿರ್ ಫತ್ತೆ ಖಾನ್ ತಲಪುರ್ ಎಂಬ ರಾಜನ ಮೊಮ್ಮಗನಾದ ಮಿರ್ ಫಸಲ್ ಖಾನ್ ಎಂಬಾತನು ಮೊದಲಿದ್ದ ಕಲೆಕ್ಟರು ತನಗೆ ೧,೦೦೦ ಎಕರೆ ಜಮೀನ್ ಕೊಟ್ಟರೆಂಬಂತೆ ಒಂದು ಸುಳ್ಳು ಕಾಗದವನ್ನು ಮಾಡಿ ಅಧಿಕಾರಿಗಳಿಗೆ ತೋರಿಸಿದನು. ಈಗಿನ ಕಲೆಕ್ಟರು ಅದು ಸೃಷ್ಟಿಸಿದ ಕಾಗದವೆಂದು ಗೊತ್ತುಮಾಡಿ, ಆ ರಾಜಕುಮಾರನನ್ನು ಹಿಡಿದು ಮೊಕದ್ದಮೆ ಮಾಡಿದರು. ಸೆಷನ್ ಜಡ್ಜರು ಅದನ್ನು ದರ್ಯಾಫ್ತು ಮಾಡಬೇಕಾಗಿದೆ.

❖❖❖❖

ಕಾಕಿನಾಡಾದಲ್ಲಿರುವ ರಾವ್ ಸಾಹೇಬ್ ವ್ಯಾಡಾ ವೆಂಕಟಾಚಲಪತಿರಾಯರವರು ಆ ಪಟ್ಟಣದಲ್ಲಿ ಒಂದು ಟೌನ್ ಹಾಲ್ ಬಂಗಲೆಯು ಕಟ್ಟುವುದಕ್ಕೆ ೨,೦೦೦ ರೂಪಾಯಿ ಕ್ರಯ ಬಾಳುವ ಜಮೀನನ್ನು, ಕಟ್ಟಡಕ್ಕೆ ೧೩,೦೦೦ ರೂಪಾಯನ್ನೂ ಕೊಟ್ಟಿದ್ದಾರೆ. ಇದಲ್ಲದೆ ಪಿಠಾಪುರ್ ರಾಜರ ಕಾಲೇಜ್ಗೆ ಕೆಲವು ಸಾಮಾನ್ ಕೊಂಡುಕೊಳ್ಳುವುದಕ್ಕಾಗಿ ೨,೦೦೦ ರೂಪಾಯನ್ನು ಒಂದು ಸಂಸ್ಕೃತಪಾಠಶಾಲೆಯ ಒಳಿಗೆ ೫೦೦ ರೂಪಾಯನ್ನೂ ಧರ್ಮ ಮಾಡಿದಾರೆ.

❖❖❖❖

ಹಿಂದುಸ್ಥಾನದಲ್ಲಿ ಈಚೆಗೆ ಇಂಡಿಯಾ ಗವರ್ನಮೆಂಟಿನವರು ಬಿಳಿ ಪುರ್ಕಿ ಎಂಬ ೧೫ ರೂಪಾಯಿ ಬೆಲೆಯುಳ್ಳ ನಾಣ್ಯವನ್ನು ಚಲಾವಣೆಗೆ ತಂದಿರುತ್ತಾರಷ್ಟೆ. ಇಂಥಾ ಚಿನ್ನದ ನಾಣ್ಯಗಳನ್ನು ಬಸರು ಕ್ರೈಸ್ತ ವರ್ಷಗಳಿಗೆ ಎಷ್ಟು ತಯಾರು ಮಾಡುತ್ತಾರೋ ಆದರ ಲೆಕ್ಕವನ್ನು ಕಳುಹಿಸಬೇಕೆಂದು ಇಂಡಿಯಾ ಗವರ್ನಮೆಂಟಿಗೆ ಹುಕುಂ ಆಗಿದೆ. ಇದರಿಂದ ಈ ರಾಷ್ಟ್ರದಲ್ಲಿ ಈ ಚಿನ್ನದ ನಾಣ್ಯಗಳು ಎಷ್ಟು ಮಟ್ಟಿಗೆ ಉಪಯೋಗಿಸುತ್ತಲಿವೆ ಎಂಬುದನ್ನು ಸ್ವಲ್ಪಮಟ್ಟಿಗೆ ತಿಳಿಯಬಹುದು.

❖❖❖❖

ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಹಿತ ಮದರಾಸಿಗೆ ದಯಮಾಡಿದ್ದಕ್ಕೆ ಅಲ್ಲಿನ ಪ್ರಜೆಗಳು ಅವರನ್ನು ಸಸ್ನೇಹಪೂರ್ವಕವಾಗಿ ಚಂದಾ ಎತ್ತಿಸಿ ನಾನಾ ಉತ್ಸವಗಳನ್ನು ಮಾಡಿಸಿದರು. ಆ ಹಣದಲ್ಲಿ ಖರ್ಚಾಗದೆ ಉಳಿದಿರುವ ಆರು ಸಾವಿರ ರೂಪಾಯಿನ ಪೈಕಿ ಅಲ್ಲಿನ ಕಸಬಿನ ಪಾಠಶಾಲೆಗೆ ೧,೦೦೦ ರೂಪಾಯಿ ಕೊಟ್ಟು ಇದರಲ್ಲಿ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಬೇಕೆಂತಲೂ, ೫,೦೦೦ ರೂಪಾಯನ್ನು ವಿಕ್ಟೋರಿಯಾ ಘೋಷಾ ಆಸ್ಪತ್ರೆಗೆ ಕೊಟ್ಟು, ಅದರಲ್ಲಿ ಇಟ್ಟ ರೋಗಿಗಳನ್ನು ಸಂರಕ್ಷಿಸಿಮಾಡುತ್ತಾ ಬರಬೇಕೆಂತಲೂ ತಿಳಿಸಿದಾರೆ.

❖❖❖❖

ಕೆಲವು ದಿನಗಳ ಕೆಳಗೆ ಕೊಯಮತೂರಿನಲ್ಲಿ ಎರಡು ರೈಲುಗಾಡಿಗಳು ಎದುರುಬದುರಾಗಿ ಬಂದು ಢಿಕ್ಕಾ ಹೊಡೆದು ಅನಾಹುತವಾದದ್ದರಿಂದ ನಾಲ್ಕಾರು ಮಂದಿ ಮೃತಪಟ್ಟದ್ದು ನಮ್ಮ ವಾಚಕರಿಗೆ ಅರಿದಿರುವುದಷ್ಟೆ. ಈಚೆಗೆ ಆ ಗಾಡಿಯ ಗಾರ್ಡಾಗಿದ್ದ ಬ್ರೀಸ್ಲೆ ಎಂಬವನನ್ನೂ ಸ್ಟೇಷನ್ ಮಾಸ್ಟರನ್ನೂ ಮದರಾಸಿನ ಮಾಜಿಸ್ಟ್ರೇಟರು ವಿಚಾರಣೆ ಮಾಡಿ ಗಾರ್ಡಿಗೆ ಮೂರು ತಿಂಗಳ ಕಠಿಣ ಸಜೆಯನ್ನು, ಸ್ಟೇಷನ್ ಮಾಸ್ಟರ್ ಅಚ್ಯುತರಾಯನಿಗೆ ಹತ್ತು ವಾರಗಳ ಕಠಿಣ ಸಜೆಯನ್ನು ವಿಧಿಸಿದರು. ಈಗ ಅವರು ಮದರಾಸ್ ಹೈ ಕೋರ್ಟಿನಲ್ಲಿ ಅಪೀಲು ಮಾಡಿಕೊಂಡಿದಾರೆ.

❖❖❖❖

ಜಲಂಧರ ನಗರದಲ್ಲಿ ಕಳೆದ ವಾರ ಒಂದು ವಿಧವಾ ಪುನರ್ವಿವಾಹವಾಯಿತು. ಡಾಕ್ಟರ್ ಪಂಡಿತ ರಾಮನಾಥ ಎಂಬ ವೈದ್ಯವೃತ್ತಿಯವರು ಈ ವಿವಾಹವನ್ನು ನೆರವೇರಿಸಿದರು. ಲಾಲಾ ದಯಾರಾಂ ಎಂಬ ಯೌವನಸ್ಥನು ಇಪ್ಪತ್ತು ವರುಷದ ವಿಧವೆಯನ್ನು ಪರಿಗ್ರಹಣ ಮಾಡಿದನು. ವಿವಾಹಕಾರ್ಯಗಳೆಲ್ಲಾ ವೇದೋಕ್ತವಾಗಿಯೇ ನಡೆಸಲ್ಪಟ್ಟವು. ನೂತನ ದಂಪತಿಗಳ ಮೆರವಣಿಗೆಯು ಬಹು ವೈಭವದಿಂದ ನಡೆಯಿತು. ಒಂದು ಸಾವಿರ ಜನ ದೊಡ್ಡಮನುಷ್ಯರು ಸೇರಿ, ವಧೂವರರನ್ನು ಆಶೀರ್ವದಿಸಿ, ಅವರಿಗೆ ಉಡುಗೆರೆಗಳನ್ನು ಕೊಟ್ಟರು. ಆ ಪ್ರಾಂತ್ಯದಲ್ಲಿ ಇದೇ ಮೊದಲನೆಯ ಪುನರ್ವಿವಾಹವೆಂದು ತಿಳಿಯಬಹುದು.

❖❖❖❖

ಗಂಜಾಂ ಡಿಸ್ಟ್ರಿಕ್ಟಿನಲ್ಲಿ ಸನ್ಯಾಸಿ ವೇಷದಲ್ಲಿದ್ದ ಒಬ್ಬ ಮಂತ್ರವಾದಿಯು ನಾನಾ ದುಷ್ಟ ಮಾಟಗಳನ್ನು ಮಾಡಬಲ್ಲನೆಂತಲೂ ಅವನೇ ಜನರಿಗೆ ವಾಂತಿಭೇದಿ ಉಪದ್ರವನ್ನು ಬರಮಾಡಿದನೆಂತಲೂ ಕೆಲವು ಜನರು ತಿಳಿದುಕೊಂಡು ಅವನನ್ನು ಕಂಡರೆ ಹೆದರುತ್ತಿದ್ದರು. ಒಂದು ಗ್ರಾಮದಲ್ಲಿ ಒಬ್ಬನು ಆ ಉಪದ್ರ ತಗಲಿ ಕಾಲವಾದನು. ಕೆಲನರು ಶವವನ್ನು ಹೊತ್ತುಕೊಂಡು ಹೋಗುತ್ತಾ ಮಾಟಗಾರನನ್ನೂ ಬಲಾತ್ಕರಿಸಿ ಜೊತೆಯಲ್ಲಿ ಕರೆದುಕೊಂಡು ಹೋಗಿ ಶವವನ್ನು ಚಿತೆಯ ಮೇಲಿಟ್ಟು ಉರಿಹಾಕಿ ಅದರ ಸುತ್ತಲೂ ಕುಳಿತು ಸಾರಾಯಿ ಕುಡಿದು ಮಾಟಗಾರನ ಮೇಲೆ ಬಿದ್ದು ಅವನನ್ನು ಕತ್ತರಿಸಿಹಾಕಿ, ಶವವನ್ನು ಬೆಂಕಿಗೆ ಎಳೆದು ಸುಟ್ಟುಬಿಟ್ಟರು. ಇದು ಮೊಕದ್ದಮೆ ಆಗಿ ಸೆಷನ್ ಜಡ್ಜರು ಕೆಲವು ಮುಖಂಡರಿಗೆ ಜೀವ ಸಜೆಯನ್ನೂ ಇತರರಿಗೆ ಕಠಿಣ ಸಜೆಯನ್ನೂ ವಿಧಿಸಿರುತ್ತಾರೆ.

❖❖❖❖

ಬೊಂಬಾಯಿ ಪಟ್ಟಣದಲ್ಲಿ ಅಮರಚಂದ್ ಎಂಬ ವ್ಯಾಪಾರಿಯು ಟೇಬಿಲ್ ಎಂಬ ಸಾಹೇಬನಿಂದ ಮೊದಲೇ ಬಡ್ಡಿ ಕೂಡಿಸಿ ೮೦೦ ರೂಪಾಯಿಗೆ ಪತ್ರ ಬರೆಸಿಕೊಂಡು, ೧,೮೫೦ ರೂಪಾಯಿ ಕೊಟ್ಟನು. ಈ ಪತ್ರದ ಸಾಲಕ್ಕೆ ಸಾಹೇಬನು ಮೂರು ಕಂತಿನಲ್ಲಿ ೧,೧೨೫ ರೂಪಾಯಿ ಪಾವತಿ ಮಾಡಿದನು. ತರುವಾಯ ಸಾಹುಕಾರನು ಅವನ ಮೇಲೆ ಬಾಕಿ ಹಣಕ್ಕಾಗಿ ದಾವಾ ತಂದನು. ಹೈ ಕೋರ್ಟಿನಲ್ಲಿ ಜಡ್ಜಿಯವರು ಈ ಮೊಕದ್ದಮೆಯ ನಿಜಸ್ಥಿತಿಯನ್ನು ತಿಳಿದು, ನಿಜವಾಗಿ ಕೊಟ್ಟದ್ದು ಸಾಲದ ಪೈಕಿ ಪಾವತಿ ಆಗದೆ ಉಳಿದಿದ್ದ ೭೨೫ ರೂಪಾಯಿ, ಅದರ ಬಡ್ಡಿ ಶೇಕಡಾ ೧೧ ರಂತೆ ಕೂಡಿಸಿ ಸಾಹೇಬನಿಂದ ಸಾಹುಕಾರನಿಗೆ ಪಾವತಿ ಆಗಬೇಕೆಂದು ಡಿಕ್ರಿ ಕೊಟ್ಟರು.

❖❖❖❖

ಕಾಲಾಣೆಯ ಪೋಸ್ಟ್ ಕಾರ್ಡಿನ ಒಳಗೂ ಮೇಲ್ಭಾಗದಲ್ಲೂ ವರ್ತಮಾನ ಮುಂತಾದ್ದನ್ನು ಬರೆದು ಕೆಳಗಣ ಅರ್ಧಭಾಗದಲ್ಲಿ ವಿಳಾಸ ಬರೆದು ಸ್ಟಾಂಪು ಹಚ್ಚಬಹುದೆಂದು ಇಂಡಿಯಾ ಗವರ್ನಮೆಂಟಿನವರು ನಿಯಮಿಸಿ ತೋರಿಸಿದ್ದಾರಷ್ಟೆ. ಇದರಿಂದ ಪೋಸ್ಟ್ ಇಲಾಖೆಯವರು ಬೇಗನೆ ವಿಳಾಸಗಳನ್ನು ಕಂಡುಹಿಡಿದು ಪಾವತಿ ಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದರಿಂದ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ವಿಳಾಸ ಬರೆಯುವ ಕಡೆ ಮೇಲಿನಿಂದ ಕೆಳಗಿನ ತನಕ ಅರ್ಧಭಾಗಕ್ಕೆ ಸರಿಯಾಗಿ ಒಂದು ಗೀಟು ಎಳೆದು ಎಡಪಾರ್ಶ್ವದ ಅರ್ಧಭಾಗದಲ್ಲಿ ವರ್ತಮಾನ ಮುಂತಾದ್ದನ್ನು ಬರೆಯಬೇಕು. ಬಲಗಡೆಯ ಅರ್ಧಭಾಗದಲ್ಲಿ ವಿಳಾಸ ಬರೆಯಬೇಕು. ಮತ್ತು ಸ್ಟಾಂಪು ಹಚ್ಚಬೇಕು. ಈ ಬದಲಾವಣೆಯನ್ನು ೧೯೦೭ನೆ ಜನವರಿ ೧ ರಿಂದ ಜಾರಿಗೆ ತರಬೇಕೆಂದು ಹುಕುಂ ಕೊಟ್ಟದಾರೆ.

❖❖❖❖

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಖಾಂಡೇಷ್ ಡಿಸ್ಟ್ರಿಕ್ಟನ್ನು ಎರಡಾಗಿ ವಿಭಾಗ ಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರಿಟೆರಿಯವರಿಗೆ ಬರೆದಿದ್ದರು. ಅದರಂತೆ ಸೆಕ್ರಿಟೆರಿಯವರು ಜಾನ್ ಮಾರ್ಲೀ ಸ್ಯಾಂಕ್ಷನ್ ಮಾಡಿರುತ್ತಾರೆ. ಈಗ ಈ ಹುಕುಮನ್ನು ಜಾರಿಗೆ ತರುವರು. ಪೂರ್ವ ಖಾಂಡೇಷ್, ಪಶ್ಚಿಮ ಖಾಂಡೇಷ್ ಎಂದು ಎರಡು ಜಿಲ್ಲೆಗಳಾಗುವವು. ಪಶ್ಚಿಮ ಖಾಂಡೇಷಿಗೆ ಧೂಲಿಯಾ ಪಟ್ಟಣವು, ಪೂರ್ವ ಖಾಂಡೇಷಿಗೆ ಜಲಗಾಂವ್ ಪಟ್ಟಣವೂ ಹೆಡ್‌ಕ್ವಾರ್ಟರಾಗುತ್ತವೆ. ಇದರಿಂದ ಗವರ್ನಮೆಂಟ್ ಕಿಬ್ಬಂದಿಯ ಖರ್ಚು ವರುಷಕ್ಕೆ ೮೦,೮೩೫ ರೂಪಾಯಿ ಹೆಚ್ಚುವುದು. ಮತ್ತು ಕಚೇರಿ ಮುಂತಾದ ಕಟ್ಟಡಗಳನ್ನು ಹೊಸದಾಗಿ ಕಟ್ಟುವುದಕ್ಕೆ ೩,೯೮,೯೦೦ ರೂಪಾಯಿ ಖರ್ಚಾಗಬೇಕಾಗಿದೆ. ಇದನ್ನೂ ಸೆಕ್ರಿಟೆರಿಯವರು ಸ್ಯಾಂಕ್ಷನ್ ಮಾಡಿದಾರೆ.

❖❖❖❖

ಸಂಯುಕ್ತ ಆಧಿಪತ್ಯಗಳಲ್ಲಿ ಪರಸ್ಪರ ಸಹಾಯಕ ಸಂಘಗಳು ೩೦೦ ಇದ್ದುವು. ಅವುಗಳ ಮೂಲಧನವೆಲ್ಲಾ ಎರಡು ಲಕ್ಷ ರೂಪಾಯಿ. ಕಾನ್‌ಪುರದ ನೆಟ್ಟಿಗ ಕಾರ್ಖಾನೆಯವರು ೧೦,೦೦೦ ರೂಪಾಯನ್ನು, ಕಲ್ಕತ್ತೆಯ ಸರ್ ಜಾನ್ಸ್ ಲೆ ಸ್ಟ್ಯಾಂಡ್ಫೋರ್ಡ್‌ರವರು ೫,೦೦೦ ರೂಪಾಯನ್ನು ಆ ಸಂಘಗಳಿಗೆ ಸಹಾಯ ಮಾಡಿದರು. ಆ ಸಂಘಗಳ ಪೈಕಿ ಕೆಲವು ಒಳ್ಳೆ ಒಳ್ಳೇ ಸ್ಥಿತಿಯಲ್ಲಿವೆ. ಮೊರಾದಾಬಾದಿನ ಸಂಘದವರು ಸಕ್ಕರೆ ಕಾರ್ಖಾನೆಯನ್ನು ಇಟ್ಟು ಕೆಲಸ ಪ್ರಾರಂಭಿಸುವವರಾಗಿದಾರೆ. ಕಾಶೀ ಪಟ್ಟಣದ ರೇಷ್ಮೆ ನೆಯ್ಗೆ ಸಂಘದವರು ಸನಗಳನ್ನು ತಯಾರುಮಾಡಿ ದಳ್ಳಾಳಿಗಳನ್ನಿಟ್ಟುಕೊಳ್ಳದೇನೇ ವಿಕ್ರಯಿಸುತ್ತಿದ್ದಾರೆಂದು ಹೇಳಿದಾರೆ. ಇಂಥಾ ಪರಸ್ಪರ ಸಹಾಯಕ ಸಂಘಗಳು ಈ ರಾಷ್ಟ್ರದಲ್ಲಿ ಹೆಚ್ಚಿ ದೇಶೀಯ ಕಸಬುಗಳ ಅಭಿವೃದ್ಧಿ ಹೊಂದಬೇಕಾಗಿದೆ. ಇದಕ್ಕಾಗಿ ಒಂದು ಸಂಘದವರು ತಯಾರುಮಾಡುವ ಪದಾರ್ಥಗಳನ್ನು ಇತರ ಸಂಘಗಳವರು ಕೊಂಡುಕೊಂಡು ವಿಕ್ರಯ ಮಾಡುತ್ತಾ ಬಂದಲ್ಲಿ ಕಸಬಿನ ಅಭಿವೃದ್ಧಿಗೆ ಬಹಳ ಸಹಾಯವಾಗುವುದು.

❖❖❖❖

ಲಾರ್ಡ್ ಕರ್ಜನ್‌ರವರು ಬಂಗಾಳ ಆಧಿಪತ್ಯವನ್ನು ವಿಭಜನೆ ಮಾಡಿ ಈ ತಿಂಗಳ ೭ ನೆ ತಾರೀಖಿಗೆ ಒಂದು ವರುಷವಾಯಿತು. ಅಂದಿನಿಂದಲೂ ಬಂಗಾಳಿಗಳು ಆ ವಿಭಾಗ ಮಾಡಿದ್ದನ್ನು ಒಪ್ಪದೆ, ಅದನ್ನು ರದ್ದು ಮಾಡಬೇಕೆಂತಲೂ ಇಲ್ಲವಾದರೆ ಬೇರೆ ರೀತಿಯಾಗಿ ವಿಭಾಗ ಮಾಡಬೇಕೆಂತಲೂ ಕೋರುತ್ತಾ, ತಮ್ಮ ಇಷ್ಟಾರ್ಥವನ್ನು ಗವರ್ನಮೆಂಟಿನವರು ನೆರವೇರಿಸಿಕೊಡುವ ತನಕ ವಿಲಾಯತಿಯಿಂದ ಬರುವ ಮುಂತಾದ ಸಾಮಾನುಗಳನ್ನು ಯಾರೂ ಕೊಂಡುಕೊಳ್ಳಕೂಡದೆಂತ ಸ್ವದೇಶೀವಸ್ತುಗಳನ್ನೇ ಕೊಂಡು ಉಪಯೋಗಿಸುತ್ತಾ ಬರಬೇಕೆಂತಲೂ ಶಪಥಮಾಡಿಕೊಂಡು ಅದೇ ರೀತಿ ನಡಕೊಳ್ಳುತ್ತಿದ್ದಾರೆ. ಒಂದು ವರುಷವಾದಾಗ್ಯೂ ಗವರ್ನಮೆಂಟಿನವರು ತಮ್ಮ ಹುಕುಮನ್ನು ಪುನರಾಲೋಚನೆ ಮಾಡಲಿಲ್ಲವೆಂದು ಬಂಗಾಳಿಗಳು ಕಳೆದ ವಾರ ಕಲ್ಕತ್ತೆಯಲ್ಲಿ ದೊಡ್ಡ ಸಭೆ ಮಾಡಿ, ಮತ್ತೆ ಅದೇ ವಿಷಯವನ್ನು ಕುರಿತು ಮೊದಲಿನಂತೆಯೇ ಶಪಥಮಾಡಿಕೊಂಡರು. ಮೆ॥ ಗಳಾದ ನರೇಂದ್ರನಾಥ ಸೇನ್, ಭೂಪೇಂದ್ರನಾಥ ಬೋಸ್, ಜೆ. ಎನ್. ರಾಯ್, ಸುರೇಂದ್ರನಾಥ ಬಾನರ್ಜಿ, ಈ ಮೊದಲಾದ ಬಂಗಾಳಿಗಳು ಉಪನ್ಯಾಸಗಳನ್ನು ಮಾಡಿದರು. ಸ್ವದೇಶೀ ಚಳುವಳಿಗೆ ಸಕಲರೂ ಏಕೀಭವಿಸಿ ಸಹಾಯ ಮಾಡುತ್ತಾ ಬರುವೆವೆಂದೂ ಅನ್ಯದೇಶಗಳಿಂದ ಬರುವ ಪದಾರ್ಥಗಳನ್ನು ಕೊಂಡು ಉಪಯೋಗಿಸುವುದಿಲ್ಲವೆಂದೂ ಆ ಸಭೆಯಲ್ಲಿ ಸೇರಿದ್ದ ಪ್ರತಿ ಒಬ್ಬನೂ ಹೇಳಿ ಭಾಷೆ ತೆಗೆದುಕೊಂಡಿರುತ್ತಾನೆ.

❖❖❖❖

ಜೋಧಪುರ ಸಂಸ್ಥಾನದ ಮಹಾರಾಜರವರ ಪೇಷ್‌ಖಾನೆಯ ಊಳಿಗದವನು ಸ್ವಲ್ಪ ಹೆಚ್ಚು ಕಡಿಮೆ ಮಹಾರಾಜರಂತೆಯೇ ರೂಪು ಆಕಾರಗಳನ್ನುಳ್ಳವನಾಗಿದಾನೆ. ಈ ಊಳಿಗದವನು ತಾನೇ ಮಹಾರಾಜನೆಂದು ಹೇಳಿಕೊಂಡು ಕಳೆದ ಭಾನುವಾರ ಮಧ್ಯಾಹ್ನ ೩ ಗಂಟೆಗೆ ಬರೋಡಾ ಪಟ್ಟಣಕ್ಕೆ ಹೋಗಿ ಇಳಿದು, ಸ್ಟೇಷನಿನಿಂದ ನೆಟ್ಟಗೆ ಸಾರೋಟಿನಲ್ಲಿ ಕುಳಿತು ಬರೋಡಾ ದಿವಾನರವರ ಬಂಗಲೆಗೆ ಹೋದನು. ದಿವಾನರು ಜೋಧಪುರದ ಮಹಾರಾಜರು ಬಂದಿದ್ದಾರೆಂದು ತಿಳಿದು ಕೂಡಲೇ ಹೋಗಿ ಅವನನ್ನು ವಿಶೇಷ ಮರ್ಯಾದೆಯೊಡನೆ ಕರೆದುಕೊಂಡು ಹೋಗಿ ಕೂರಿಸಿಕೊಂಡು ಸ್ವಲ್ಪಹೊತ್ತು ಸಂಭಾಷಣೆ ಮಾಡುತ್ತಿದ್ದು, ಮಹಾರಾಜರಿಗೆ ಯೋಗ್ಯವಾದ ಬಂಗಲೆಯನ್ನು ಅವನಿಗೆ ಬಿಡಿಸಿಕೊಟ್ಟು, ವಿಶೇಷ ಆಟ್ಟಹಾಸದೊಡನೆ ಅವನನ್ನು ಸತ್ಕಾರಮಾಡಿದರು. ಅವನಿಗೆ ರಾಜಯೋಗ್ಯವಾದ ಸಾರೋಟನ್ನು ಕೊಟ್ಟರು. ಸಾಯಂಕಾಲ ಅವನಿಗೆ ಔತಣವನ್ನು ಮಾಡಿಸಿದರು. ಅಷ್ಟರಲ್ಲೇ ಅವನು ದಿವಾನರವರ ಸಂಗಡ ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರನ್ನು ಕಾಣಬೇಕೆಂದು ಹೇಳಿದನು. ಕೂಡಲೇ ದಿವಾನರವರು ಸಿಂಧಿಯಾ ಮಹಾರಾಜರವರು ಬೊಂಬಾಯಿನಲ್ಲಿದಾರೆಂದು ಹೇಳಿ, ಬೊಂಬಾಯಿಗೆ ತಂತೀ ವರ್ತಮಾನ ಕಳುಹಿಸಿ, ಸಿಂಧಿಯಾ ಮಹಾರಾಜರಿಗೆ—ನಿಮ್ಮ ಸಹೋದರರಾದ ಜೋಧಪುರದ ಮಹಾರಾಜರವರು ನಿಮ್ಮನ್ನು ಕಾಣುವುದಕ್ಕಾಗಿ ನಾಳೆ ಅಲ್ಲಿಗೆ ಬರುತ್ತಾರೆ ಎಂಬುದಾಗಿ ತಿಳಿಸಿದರು. ಅದೇ ಪ್ರಕಾರ ಆ ಊಳಿಗದವನು ಮರುದಿನ ಬೆಳಿಗ್ಗೆ ಬೊಂಬಾಯಿನಲ್ಲಿ ಇಳಿದು ಸಿಂಧಿಯಾ ಮಹಾರಾಜರವರ ಬಂಗಲೆಗೆ ಹೋಗಿ ಅವರನ್ನು ಕಂಡನು. ಅವರು ಇವನನ್ನು ನೋಡುತ್ತಲೇ—ಇವನು ಮೋಸಗಾರನೆಂದು ಹೇಳಿ ಪೋಲೀಸಿಗೆ ಹಿಡಿದು ಕಳುಹಿಸಿದರು. ಪೋಲೀಸಿನವರು ಇವನನ್ನು ಮೊನ್ನೆ ಮಂಗಳವಾರ ತನಿಖೆಮಾಡಿದರು.

❖❖❖❖

ಕಾರ್ವಾರಿಗೆ ಏಳು ಮೈಲಿ ದೂರದಲ್ಲಿರುವ ಖಾರ್ಗೆ ಎಂಬ ಗ್ರಾಮದಲ್ಲಿ ಗೌಡಬ್ರಾಹ್ಮಣ ನೀಲಕಂಠನೆಂಬೊಬ್ಬ ವಿದ್ಯಾರ್ಥಿಯು ತನ್ನ ಹೆಂಡತಿಯನ್ನು ಗುಂಡಿನಿಂದ ಹೊಡೆದು ಕೊಂದ ವೃತ್ತಾಂತವೇನೆಂದರೆ—ಅವನ ತಂದೆತಾಯಿಗಳು ಸೊಸೆಯ ಮೇಲೆ ನಾನಾ ದೂರುಗಳನ್ನು ಹೇಳುತ್ತಿದ್ದರು. ಅವಳು ತಂದ ನೀರನ್ನು ಕುಡಿಯುತ್ತಿರಲಿಲ್ಲ. ಅವಳು ತಾಯಿ ಮನೆಯಿಂದ ಆಸ್ತಿ ತರದೆ ಹೋದದ್ದೇ ಮುಖ್ಯಕಾರಣ. ಅನೇಕಾವರ್ತಿ ಅವಳನ್ನು ತೌರುಮನೆಗೆ ಕಳುಹಿಸಿದರು. ಆದರೆ ಮಗನೂ ಸೊಸೆಯೂ ತುಂಬಾ ಪ್ರೀತಿಸುತ್ತಿದ್ದರು. ಅವನು ಹೆಂಡತಿಯ ಮೇಲಣ ಪ್ರೀತಿಯಿಂದ ತೌರುಮನೆಗೆ ಹೋಗಿ ಅವಳನ್ನು ತನ್ನ ಮನೆಗೆ ಕರತರುತ್ತಿದ್ದನು. ಒಂದು ದಿನ ತಂದೆತಾಯಿಗಳು ಅವಳನ್ನು ದೂಷಿಸುತ್ತಿದ್ದದ್ದನ್ನು ನೋಡಿ ಸಹಿಸಲಾರದ ಆ ಹುಡುಗನು ಬಂದೂಕು ತೆಗೆದುಕೊಂಡು ಆತ್ಮಹತ್ಯ ಮಾಡಿಕೊಳ್ಳೋಣವೆಂದು ಪ್ರಯತ್ನಪಟ್ಟನು. ಅವನ ಹೆಂಡತಿ ಓಡಿಹೋಗಿ ಗಂಡನನ್ನು ಹಿಡಿದುಕೊಂಡು, ಮೊದಲು ನನ್ನನ್ನು ಕೊಂದು ತರುವಾಯ ನೀನು ಸಾಯಿ ಎಂದು ಕೇಳಿಕೊಂಡಳು. ಆಗ ಅವಳ ಮಾತ ಬಂದು—ನೀನು ನನಗೆ ಹುಟ್ಟಿದವನಾದರೆ ಈಗಲೇ ಅವಳನ್ನು ಕೊಲ್ಲು ನೋಡೋಣ ಎಂದು ಆಜ್ಞೆ ಮಾಡಿದನು. ಮಗನು ಅದೇ ರೀತಿ ತನ್ನ ಹೆಂಡತಿಯನ್ನು ಗುಂಡಿನಿಂದ ಹೊಡೆದು ಕೊಂದು, ಓಡಿಹೋಗಿ ಬಾವಿಯಲ್ಲಿ ಬಿದ್ದುಕೊಂಡನು. ಆದರೆ ಅವನನ್ನು ಮೇಲಕ್ಕೆ ಎತ್ತಿಹಾಕಿ ಬದುಕಿಸಿದರು. ಹೆಂಡತಿಯನ್ನು ಕೊಂದ ಅಪರಾಧವು ಆ ವಿದ್ಯಾರ್ಥಿಯ ಮೇಲೆ ಹೊರಬಿದ್ದಿತು. ಕಾರವಾರ ಸೆಷನ್ ಜಡ್ಜರು ದರ್ಯಾಫ್ತು ಮಾಡಿ ಆ ಹುಡುಗನಿಗೆ ಮರಣದಂಡನೆಯನ್ನು ವಿಧಿಸಿದರು. ಅದರ ಮೇಲೆ ಅವನು ಬೊಂಬಾಯಿ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು. ಇಬ್ಬರು ಜಡ್ಜಿಗಳು ಮೊಕದ್ದಮೆಯ ಸಾರಾಂಶವನ್ನೆಲ್ಲಾ ನೋಡಿ ಆ ಹುಡುಗನಿಗೆ ಹತ್ತು ವರುಷದ ಕಠಿಣ ಸಜೆಯನ್ನು ವಿಧಿಸಿ, ಮರಣದಂಡನೆಯನ್ನು ವಜಾ ಮಾಡಿದರು.

ವಿದೇಶ ವರ್ತಮಾನಗಳು.

ಅಮೇರಿಕದಲ್ಲಿ ಇಂಗ್ಲೀಷರಿಗೆ ಸೇರಿರುವ ನ್ಯೂಫೌಂಡ್‌ಲೆಂಡ್ ಎಂಬ ದ್ವೀಪಕ್ಕೆ ಚೀನೀಯರು ಹೋಗಿ ನಿಲ್ಲುವುದಾದರೆ ಪ್ರತಿ ಒಬ್ಬ ಚೀನೀಯನೂ ೯೦೦ ರೂಪಾಯಿ ತಲೆ ತೆರಿಗೆಯನ್ನು ಕೊಡಬೇಕೆಂದು ಆ ಸರ್ಕಾರದವರು ವಿಧಿಸಿ ಇಸ್ತಿಹಾರು ಕೊಟ್ಟದಾರೆ.

❖❖❖❖

ವಿಲಾಯತಿಯ ಚಕ್ರವರ್ತಿ ಸಾರ್ವಭೌಮರವರು ಸಾಕಿಕೊಂಡಿದ್ದ ಸ್ಪೈಮನ್ ಜುಬಿಲಿ ಎಂಬ ಶ್ರೇಷ್ಠವಾದ ಜಾತಿನ ಕುದುರೆಯನ್ನು ಸೆನೆಟರ್ ಕೊರಿಯಸ್ ಎಂಬಾತನು ನಾಲ್ಕೂವರೆ ಲಕ್ಷ ರೂಪಾಯಿ ಕೊಟ್ಟು ಕೊಂಡುಕೊಂಡು ಮೋಂಟ್ಸ್ವಿಡಿಯೊಗೆ ಸಾಗಿಸಿಕೊಂಡುಹೋದನು.

❖❖❖❖

ಪರ್ಷಿಯಾ ರಾಜ್ಯದ ಹೊಸ ಅಮಾತ್ಯ ಶ್ರೇಷ್ಠರು ಪ್ರಜೆಗಳ ಅಪೇಕ್ಷೆಯಂತೆ ರಾಜಕೀಯ ಬದಲಾವಣೆಗಳನ್ನು ಮಾಡುವವರಾಗಿದಾರೆ. ಇಂಗ್ಲೀಷ್ ರಾಯಭಾರಿಗಳ ಆಶ್ರಯದಲ್ಲಿರುವ ಪ್ರಜೆಗಳ ಅಭಿಪ್ರಾಯವನ್ನು ಬೇಗ ನೆರವೇರಿಸಿಕೊಡಬೇಕೆಂದು ವಿಲಾಯತಿಯ ಮಂತ್ರಿಯವರು ಪರ್ಷಿಯಾ ಸರ್ಕಾರಕ್ಕೆ ತಿಳಿಸಿದಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ಸಾರಾ ವಾರ್ಟನ್ ಎಂಬಾಕೆಗೆ ಕಳೆದ ವಾರ ೧೦೦ ವರುಷ ತುಂಬಿದ ವರ್ಧಂತಿ ನಡೆಯಿತು. ಚಕ್ರವರ್ತಿಸಾರ್ವಭೌಮರವರು ತುಂಬಾ ಸಂತೋಷಪಟ್ಟು ಆಕೆಗೆ ದೀರ್ಘಾಯುಸ್ಸನ್ನು ಬಯಸಿ ಕಾಗದವನ್ನು ಬರೆದು ಕಳುಹಿಸಿದರು. ಆಕೆಯ ಹಿರಿಯರಲ್ಲಿ ಅನೇಕರು ಬಹು ದೀರ್ಘಾಯುಗಳಾಗಿದ್ದರು.

❖❖❖❖

ಜೆ. ದೊರೆಸಾಮಿ ಎಂಬೊಬ್ಬ ಮದರಾಸಿಯು ಬಿಲಿಯರ್ಡ್ ಆಡುವುದರಲ್ಲಿ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಈಗ ವಿಲಾಯತಿಯಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸಿ ಸನ್ಮಾನ ಹೊಂದುತ್ತಿದಾನೆ. ಈತನು ಇನ್ನು ಕೆಲವು ದಿನಗಳಲ್ಲೇ ಅಲ್ಲಿಂದ ಅಮೇರಿಕಕ್ಕೂ ಹೋಗಿ ಆರು ತಿಂಗಳಿದ್ದು ಬರುವನೆಂದು ಪ್ರಕಟವಾಗಿದೆ.

❖❖❖❖

ದಕ್ಷಿಣ ಆಫ್ರಿಕವನ್ನು ಬಹುಕಾಲ ಆಳಿ ವಿಲಾಯತಿಗೆ ವಾಪಸ್ಸು ಬಂದಿರುವ ಲಾರ್ಡ್ ಮಿಲ್ನರ್ ಯವರನ್ನೂ ಅವರು ಮಾಡಿದ ಕೆಲಸ ಕಾರ್ಯಗಳನ್ನೂ ಕೊಂಡಾಡಿ ದಕ್ಷಿಣ ಆಫ್ರಿಕದವರು ಒಂದು ಅಡ್ರೆಸ್ಸನ್ನು ಅವರಿಗೆ ಅಂಚೆಯ ಮೂಲಕ ಒಪ್ಪಿಸಿರುತ್ತಾರೆ. ಈ ಅಡ್ರೆಸ್ಸಿಗೆ ದಕ್ಷಿಣ ಆಫ್ರಿಕದ ೩,೭೦,೦೦೦ ಗಂಡಸರು ರುಜು ಹಾಕಿದಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ಕಳೆದ ಎರಡು ತಿಂಗಳಲ್ಲಿ ಮೋಟಾರ್ ಗಾಡಿಗಳು, ಮೋಟಾರ್ ಬೈಸಿಕಲ್‌ಗಳು, ಮೋಟಾರ್ ಬಸ್ಸು ಗಾಡಿಗಳು, ಇವುಗಳ ಸಂಬಂಧದಿಂದ ೧೯೦೫ ಕಡೆ ಅನಾಹುತಗಳಾದವು. ಅದರಿಂದ ೧೩ ಜನರು ಮೃತಪಟ್ಟರು; ೭೮೯ ಜನರಿಗೆ ಗಾಯಗಳಾದವು. ಇದನ್ನು ನೋಡಿ ಪಾರ್ಲಿಮೆಂಟಿನವರು ಪ್ರಜೆಗಳ ಕ್ಷೇಮಚಿಂತನೆಯಿಂದ ಕೆಲವು ಕಠಿಣವಾದ ಕಾನೂನುಗಳನ್ನು ಮಾಡಿ ಜಾರಿಗೆ ತರಬೇಕೆಂದು ಯೋಚಿಸುತ್ತಿದಾರೆ.

ಆಫ್ರಿಕದ ಉತ್ತರ ಭಾಗದಲ್ಲಿರುವ ಟ್ರಿಪೋಲಿ ಎಂಬ ಸಣ್ಣ ರಾಜ್ಯದಲ್ಲಿ ತುರ್ಕಿಯವರು ದಜಾನೆಟ್ ಎಂಬ ಭಾಗವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುವುದನ್ನು ಫ್ರೆಂಚರು ನೋಡಿ, ಅಲ್ಲಿಂದ ಹಿಂದಕ್ಕೆ ಹೋಗಬೇಕೆಂದು ಹೇಳಿ ಕಳುಹಿಸಿದರು. ತುರ್ಕಿಯವರು ಆ ಪ್ರಾಂತ್ಯ ತಮ್ಮದೇ ಎಂತಲೂ ಅದನ್ನು ಬಿಟ್ಟುಕೊಡುವುದಿಲ್ಲವೆಂತಲೂ ಜವಾಬುಕೊಟ್ಟಿದ್ದಾರೆ.

****

ಉತ್ತರ ಅಮೇರಿಕದಲ್ಲಿರುವ ಕಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಅಲ್ಲಿನ ಸರ್ಕಾರದವರು ಒಂದು ಲಕ್ಷ ಎಕರೆ ಭೂಮಿಯನ್ನು ಜರ್ಮನರಿಗೆ ಕೊಟ್ಟು, ಅವರನ್ನು ಕರೆತಂದು ನಿಲ್ಲಿಸಿಕೊಳ್ಳಬೇಕೆಂದು ಗೊತ್ತುಮಾಡಿದ್ದಾರೆ. ಜರ್ಮನರು ಅಲ್ಲಿ ಹೋಗಿ ಮನೆ ಮಠಗಳನ್ನು ಮಾಡಿಕೊಂಡು ನಿಲ್ಲುವುದಕ್ಕೆ ಇಷ್ಟಪಡುವರೋ ಇಲ್ಲವೋ ಮುಂದೆ ತಿಳಿಯಬೇಕಾಗಿದೆ.

****

ಇಟಲಿ ರಾಜ್ಯದ ಸಿರಿಯೋ ಎಂಬ ಹಡಗು ಜೆನೋವಾ ಪಟ್ಟಣದಿಂದ ದಕ್ಷಿಣ ಅಮೇರಿಕಕ್ಕೆ ಪ್ರಯಾಣಮಾಡುತ್ತಾ, ಕಾರ್ಟಜೇನಾ ನಗರದ ಬಳಿ ಪಾಲೂಸ್ ಭೂಶಿರದ ಎದುರುಪಾರ್ಶ್ವದಲ್ಲಿ ಒಂದು ಬಂಡೆಗೆ ಬಡಿದು ಮುಳುಗಿಹೋಯಿತು. ಅದರಲ್ಲಿ ೬೦೦ ಮಂದಿ ಪ್ರಯಾಣಸ್ಥರೂ ೧೦೦ ಮಂದಿ ಸೇವಕರೂ ಇದ್ದರು. ಇವರಲ್ಲಿ ೩೦೦ ಮಂದಿ ಸಮುದ್ರದ ಪಾಲಾದರು.

****

ಕೋಟ್ಯಾಧೀಶ್ವರರೆನಿಸಿಕೊಂಡವರೆಲ್ಲಾ ಅಲ್ಪಾಯುಗಳಾಗಿ ಕಾಲವಾಗುತ್ತಿದ್ದಾರೆ. ಮೊನ್ನೆ ಅಲ್‌ಫ್ರೆಡ್ ಬೀಟ್ ಎಂಬಾತನು ೫೩ನೆ ವರುಷದಲ್ಲಿ ತೀರಿಹೋದನು. ಇನ್ನು ಕೆಲವು ಕೋಟ್ಯಾಧೀಶ್ವರರಿಗೆ ಮರಣಕಾಲದಲ್ಲಿ ಎಷ್ಟು ವಯಸ್ಸಾಗಿತ್ತೆಂದರೆ—ಬಿ ಬಿ ಬಾರ್ನೆಟೋ ೪೬, ಫುಲ್ ಜೋಯಲ್ ೩೪, ಹರ್ಬರ್ಟ್ ಡೇವಿಸ್ ೪೩, ಕರ್ನಲ್ ನಾರ್ಥ್ ೫೪, ಸೆಸಿಲ್ ರೋಡ್ಸ್ ೪೮, ಛಾರ್ಲ್ಸ್ ಆಸೆಲ್ ೪೬.

****

ಅಮೇರಿಕಕ್ಕೆ ಸೇರಿದ ಟೆಕ್ಸಾಸ್ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಸಾಹುಕಾರನು ಹದಿನೆಂಟು ಸಹಸ್ರ ರೂಪಾಯಿಗೆ ೪೦ ಗೂಳಿಗಳನ್ನೂ ಮೂರು ಸಾವಿರ ಕರುಗಳನ್ನೂ ಹಿಂದುಸ್ಥಾನದಿಂದ ಕೊಂಡು ತರಿಸಿಕೊಂಡು, ಇವುಗಳ ಮೂಲಕ ಆ ಪ್ರಾಂತ್ಯದ ದನಗಳನ್ನು ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದಾನೆ. ಅಲ್ಲಿನ ಸರ್ಕಾರದವರು ಹಿಂದುಸ್ಥಾನದ ಗೋವುಗಳನ್ನು ಯಾರೂ ಅಲ್ಲಿಗೆ ತರಕೂಡದೆಂದು ಆಜ್ಞೆ ಮಾಡಿದ್ದರೂ ಆ ಸಾಹುಕಾರನ ಸಾಹಸವನ್ನು ಮೆಚ್ಚಿಕೊಂಡಿದ್ದಾರೆ.

****

ಕಪೂರ್ಥಲದ ಮಹಾರಾಜರವರು ಹಿಂದಿನ ವಾರ ಲಂಡನ್ ಪಟ್ಟಣದ ಬಕಿಂಗ್ಹಾಂ ಎಂಬ ರಾಜಭವನಕ್ಕೆ ಹೋಗಿ ಚಕ್ರವರ್ತಿಯವರ ಮತ್ತು ಮಹಾರಾಜ್ಞಿಯವರ ಭೇಟಿ ಮಾಡಿಕೊಂಡು ಬಂದರು. ಕೂಚ್ ಬೇಹಾರಿನ ಮಹಾರಾಣಿಯವರು ಮಾರ್ಲ್‌ಬರೋ ಹೌಸ್ ಎಂಬ ಭವನದಲ್ಲಿ ಪ್ರಿನ್ಸ್ ಆಫ್ ವೇಲ್ಸ್ ದಂಪತಿಗಳ ಜೊತೆಯಲ್ಲಿ ಕುಳಿತು ಫಲಾಹಾರ ಮಾಡಿದರು. ತರುವಾಯ ಪ್ರಿನ್ಸ್ ಆಫ್ ವೇಲ್ಸ್‌ರವರು ಕಪೂರ್ಥಲದ ರಾಜರು, ಪ್ರದುಕೋಟೆಯ ರಾಜರು, ಪಾಟಿಯಾಲಾ ಸರ್ ರಣವೀರಸಿಂಗ್ ರವರು, ಬರ್ದವಾನ ಮಹಾರಾಜರವರು, ಇವರನ್ನೆಲ್ಲಾ ಆಸ್ಥಾನಕ್ಕೆ ಬರಮಾಡಿಕೊಂಡು, ಅವರ ಸಂಗಡ ಸ್ವಲ್ಪಹೊತ್ತು ಸಂಭಾಷಣೆ ಮಾಡಿದರು.

****

ವಿಲಾಯತಿ ರಾಜ್ಯದಲ್ಲಿ ಸುಮಾರು ೧೫೦ ಲಕ್ಷ ಪ್ರಜೆಗಳು ಕೂಲಿ ನಾಲಿ ಮಾಡಿ ಜೀವಿಸತಕ್ಕವರಾಗಿದ್ದಾರೆ. ಇವರಲ್ಲಿ ಕ್ಷಯರೋಗ ಪ್ರಾಪ್ತವಾಗಿ ವರುಷಕ್ಕೆ ೬೯,೫೦೦ ಜನರು ಕಾಲವಾಗುವರು. ಇದನ್ನು ಕಡಿಮೆ ಮಾಡಬೇಕೆಂದು ಕೆಲವು ದೊಡ್ಡ ಮನುಷ್ಯರು ಗೊತ್ತುಮಾಡಿಕೊಂಡು, ಕ್ಷಯರೋಗ ಪೀಡಿತರನ್ನು ಕರೆತಂದು ಸಂರಕ್ಷಣೆ ಮಾಡಿ ಔಷಧಾದಿ ಚಿಕಿತ್ಸೆಗಳನ್ನು ಮಾಡಿಸಬೇಕೆಂದು ಪ್ರಯತ್ನ ಪಟ್ಟಿದ್ದಾರೆ. ಈ ಸಂಘದವರು ಕಳೆದ ವಾರ ಕೇಟ್ ಡಿಸ್ಟ್ರಿಕ್ಟಿಗೆ ಸೇರಿದ ಬೆನೆಂಡೆನ್ ಪಟ್ಟಣದಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಕಟ್ಟಲಾರಂಭಿಸಿ, ರಾಜಕುಮಾರ್ತೆಯಾದ ಪ್ರಿನ್ಸೆಸ್ ಕ್ರಿಶ್ಚಿಯನ್‌ರವರ ಕೈಯಿಂದ ಅದರ ಅಸ್ತಿಭಾರ ಕಲ್ಲನ್ನು ಪ್ರತಿಷ್ಠೆಮಾಡಿಸಿದ್ದಾರೆ.

****

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಮೆ॥ ವಿಲ್ಯಂ ಥಾ ಎಂಬ ಪ್ರಭಾವ್ಯಕ್ತನು ಜೈಲ್‌ಖಾನೆಗಳಿಂದ ಬಿಡುಗಡೆಯಾಗಿ ಬಂದು ಜೀವನಕ್ಕೆ ಮಾರ್ಗವಿಲ್ಲದೆ ಅಳೆದು ಕಷ್ಟ ಪಡುವಂಥಾ ಜನರಿಗೆ ಹಣ ಕಾಸು ಕೊಟ್ಟು ಅವರಿಂದ ಕಸಬನ್ನೋ ವ್ಯಾಪಾರಾದಿಗಳನ್ನೋ ಮಾಡಿಸುವದು ಆತನ ಸ್ವಭಾವವಾಗಿದೆ. ಈತನ ಹಿರಿಯ ಮಗನಾದರೋ ಪುಣ್ಯ ಕಾರ್ಯಗಳನ್ನು ಮಾಡುವದರಲ್ಲಿ ತಂದೆಗಿಂತಲೂ ಹೆಚ್ಚಾದ ಹೆಸರು ಪಡೆದಿರುವನು. ಈತನು ಆ ಪಟ್ಟಣದಲ್ಲಿ ಮಕ್ಕಳ ರೋಗಚಿಕಿತ್ಸೆಗಾಗಿ ಒಂದು ಭಾರೀ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾನೆ ಮತ್ತು ಮಕ್ಕಳು ವಿದ್ಯೆ ಬುದ್ಧಿ ಕಲಿತು ಪರಸ್ಪರ ಸಹಾಯಕರಾಗುವಂತೆ ಅವರಿಗಾಗಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿರುವನು. ಇಷ್ಟೇ ಅಲ್ಲ. ಆ ಪಟ್ಟಣದಲ್ಲಿರುವ ಬಡಬಗ್ಗರ ಮಕ್ಕಳನ್ನು ತನ್ನ ಮನೆಗೆ ಕರೆದು ಅವರಿಗೆಲ್ಲಾ ಅನ್ನದಾನಮಾಡುತ್ತಿದ್ದಾನೆ. ಈ ರೀತಿಯ ಪುಣ್ಯಕಾರ್ಯವನ್ನು ಪ್ರಾರಂಭಿಸಿ ೧೨ ವರುಷಗಳಾದವೆಂತಲೂ, ಪ್ರತಿದಿನವೂ ೪೦೦—೫೦೦ ಮಕ್ಕಳು ಆತನ ಮನೆಯಲ್ಲಿ ಭೋಜನ ಮಾಡುತ್ತಿದ್ದಾರೆಂತಲೂ ತಿಳಿದುಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ಮೆ॥ ಸಿ ಆರ್ ಕೃಷ್ಣರಾಯರಿಗೆ ಜುಲೈ ೨೫ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ನಾಲ್ಕೊಂದು ಹುಕೂಂ ಕೊಡತಕ್ಕವ ಹಸಕ್ ಕೋಲಾರ್ ಜಿಲ್ಲೆಯ ಗಣಿಗಳ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಎಂ ಕೇಶವೈಯ್ಯನವರು ಬೌರಿಂಗ್‌ಪೇಟೆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದ್ದಾರೆ.

ಅಮಲ್ದಾರ್ ಮೆ॥ ಜೆ. ಡಿ. ಚಿನ್ನಪ್ಪಾವು ಪಿಳ್ಳೆಯವರಿಗೆ ಜುಲೈ ೬ ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುವ ಅಮಲ್ದಾರ್ ಮೆ॥ ಸಿ. ಎಸ್. ಕುಪ್ಪುಸ್ವಾಮಿ ಐಯ್ಯಂಗಾರ‍್ರಿಗೆ ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ದೊಡ್ಡಬಳ್ಳಾಪುರದ ತಾಲ್ಲೂಕ್ ಅಮಲ್ದಾರ್ ಮೆ॥ ಸಿ ರಂಗನಾಥರಾವ್ ಸಾಹೇಬ್ ಯವರಿಗೆ ೨ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಸಬ್ ಅ॥ ಸರ್ಜನರಾದ ಮೆ॥ ಎ ಕೋದಂಡಪಾಣಿ ಮೊದಲಿಯಾರ‍್ರೂ, ಮೆ॥ ಬಿ ಮಾಧವನ್ ನಾಯರ್‌ಯವರೂ ಸಂಬಳವಿಲ್ಲದ ರಜಾ ಪಡೆದಿರುವದರಿಂದ ಮೆ॥ ಎಫ್ ನೊರೊನ್ಹಾ ಯವರನ್ನೂ, ಮೆ॥ ಎನ್ ಎಸ್ ನಂಜುಂಡೈಯ್ಯನವರನ್ನೂ ರಂಗಾಮಿಯಾಗಿ ಸಬ್ ಅ॥ ಸರ್ಜನರಾಗಿ ನೇಮಕಮಾಡಿದೆ.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್

ಆಳತೆ ಸೇರಿನ ಮೋಸ.

ಅಯ್ಯಾ,

ಜುಲೈ ೧೬ ತಾ ಸೋಮವಾರ ದೊಡ್ಡ ಬಾಣಾವಾರದ ಸಂತೆಯಲ್ಲಿ ಪಿಚ್ಚ ಸೇರಿನಿಂದ ಮಾರಾಟ ಮಾಡುತ್ತಿದ್ದ ಇಬ್ಬರು ಗಂಡಸರು ಒಬ್ಬ ಹೆಂಗಸು ಇವರನ್ನು ಇಲ್ಲಿನ ಶೇಕದಾರ‍್ರು, ಸಾಹುಕಾರ್ ಸೈಡ್ ಬಂಡಸಾಹೇಬರೂ ಹಿಡಿದು, ವಿಚಾರಣೆ ಬಗ್ಗೆ ಅಮಲ್ದಾರರ ಬಳಿಗೆ ಅರಸೀಕೆರೆಗೆ ಕಳುಹಿಸಿರುತ್ತಾರೆ. ಈಗ ಈ ಅಪರಾಧಕೃತ್ಯವು ಹಾಸನದ ಕೋರ್ಟಿನಲ್ಲಿ ದಾಖಲಾಗಿ ಈ ಅಗಸ್ಟ್ ೨೯ ಕ್ಕೆ ಹಿಯರಿಂಗ್ ನೇಮಕವಾಗಿದೆ. ಇದರ ಫಲಿತಾಂಶ ಮುಂದೆ ಗೊತ್ತಾಗುವದು. ಈ ಬರಗಾಲದಲ್ಲಿ ಎಲ್ಲಾ ಧಾನ್ಯಗಳೂ ಬಹಳ ತುಟ್ಟಿಯಾಗಿ ಮಾರುವಾಗ್ಗೆ ಜನರ ದುಃಖವು ಎಷ್ಟೋ ಹೆಚ್ಚು. ಇದರೊಳಗೂ ಸೇರಿನ ಮೋಸವು ಮತ್ತು ಹೆಚ್ಚು ದುಃಖವು ಅಧಿಕವಾಗಿದೆ. "ದುರ್ಭಿಕ್ಷಕಾಲದಲ್ಲಿ ಅಧಿಕಮಾಸ ಬಂತು" ಎಂಬ ಗಾದೆಗೆ ಸರಿಯಾಗಿದೆ. ಅಧಿಕಾರಿಗಳು ತಕ್ಕ ಶಿಕ್ಷೆ ಕೊಟ್ಟು ಸಕಲರಿಗೂ ಬುದ್ಧಿ ಕಲಿಸುವರೆಂದು ನಂಬಿದ್ದೇನೆ.

ಆರ್ ಎಸ್

ಮಲೆನಾಡಿನಲ್ಲಿ ಪ್ರವಾಹದ ಕಷ್ಟ ನಷ್ಟಗಳು

ಅಯ್ಯಾ,

ತೀರ್ಥಹಳ್ಳಿ ತಾಲ್ಲೂಕು ಆಗುಂಬೇ ಊರಲ್ಲಿ ತಾ ೧೩-೭-೦೬ ಲಾಗಾಯಿತು ತಾ. ೨೭-೭-೦೬ ವರೆಗೆ ಅತ್ಯಾತ ಮಳೆ ಸುರಿದದ್ದರಿಂದ ಈ ಆಗುಂಬೆ ಊರಲ್ಲಿ ಯಾವತ್ತು ತರೀ ಜಮೀನುಗಳಿಗೂ ಬೈಲ್ ಪ್ರದೇಶಗಳಿಗೆಲ್ಲ ನದಿಗಳ ಪ್ರವಾಹ ತುಂಬಿರುವದರಿಂದ ಮಲನಾಡು ಜನಗಳಿಗೆ ಮನೆ ಭೂಮಿ ಯಾವದೂ ಇಲ್ಲದೇನೆ ಗೋಳಾಡುವದನ್ನು ನೋಡಿದರೆ ಏನು ಹೇಳಬೇಕು? ಯಾವತ್ತು ತರಿ ಜಮೀನುಗಳೆಲ್ಲ ಸಮುದ್ರದಂತೆ ಬಂದಿರತಕ್ಕ ಪ್ರವಾಹದೊಳಗೆ ಮುಳುಗಿರುವದರಿಂದ ಮುಂದಿನ ಜೀವನಕ್ಕೋಸ್ಕರ ಬಿತ್ತನೆ ಬಿತ್ತಿ ತಯಾರಾಗುವ ಮಾಡಿರುತ್ತಾರಷ್ಟೆ. ಯಾವತ್ತು ಫಸಲು ಕೊಳೆತು ನಷ್ಟವಾಗಿರುತ್ತೆ. ಈ ಊರು ಜನಗಳ ಗೋಳಾಟವನ್ನು ಎಷ್ಟೆಂದು ವಿವರಿಸಲು ಸಾಧ್ಯವಿಲ್ಲ. ಕೆಲವು ಜನಗಳ ವಾಸದ ಮನೆಗೆ ಕೂಡ ರಾತ್ರಿ ವೇಳೆಯಲ್ಲಿ ಜನಗಳ ನಿದ್ರೆ ಕಾಲದಲ್ಲಿ ಮನೆಗೆ ನೀರು ಪ್ರವೇಶಿಸಿ, ಮಲಗಿದ ಹಾಸಿಗೆಯೊಳಗೆ ನೀರು ತುಂಬಿದ ನಂತರ ಎಚ್ಚತ್ತು ಪ್ರಾಣ ಮಾತ್ರ ಉಳಿಸಿಕೊಳ್ಳಬೇಕಾಯಿತು. ಜೀವಾಯು ಪ್ರಾಣನಷ್ಟವೇನೂ ಆಗಲಿಲ್ಲ. ಪ್ರಾಣ ಉಳಿದರೂ ಜೀವನಕ್ಕೆ ಇಲ್ಲವಾದರೆ ಉಳಿದಂತಾಯಿತೆ? ಇಂಥಾ ಪ್ರವಾಹದ ದೆಸೆಯಿಂದ ಪಾಪ ಆ ಜನಗಳು ಹ್ಯಾಗೆ ಜೀವನ ಮಾಡಬೇಕು! ಅಲ್ಲದೆ ಬಹಳ ಕಂದಾಯ ಕೊಡತಕ್ಕ ಜಮೀನ್‌ದಾರರ ಗತಿ ಏನಾಗಬೇಕು - ಯಾವತ್ತು ಫಸಲು ಈ ರೀತಿ ನಷ್ಟವಾದರೆ ಮುಂದೆ ಜಮೀನ್ ಕಂದಾಯ ಕೊಟ್ಟು ಜೀವನ ಹ್ಯಾಗೆ ಮಾಡುತ್ತಾರೆ? ಸರಕಾರದವರು ಚಿತ್ತಕ್ಕೆ ತೆಗೆದುಕೊಂಡು ಈ ಮಲನಾಡು ಜನಗಳನ್ನು ರಕ್ಷಿಸಬಾರದೇಕೆ? ವರುಷೇ ವರುಷವೂ ಈ ರೀತಿ ಪ್ರವಾಹ ಬರುತ್ತದೆ. ಆದರೆ ಇಂಥಾ ಪ್ರವಾಹ ೧೯೦೬ ರ ಈಚೆ ಬಂದಿಲ್ಲ. ಗೋಕಾಯಿಗಳ ಗೋಳಂತು ಹೇಳಲು ಅಸಾಧ್ಯವಾಗಿರುತ್ತೆ. ಮಳೆಯಲ್ಲಿ ನೆನೆತು ಕಾಲವಾಗುವವು. ಹೀಗೆ ಆದದ್ದರಲ್ಲಿ ಜಮೀನ್‌ದಾರರು ಕಂದಾಯ ಕೊಡಲು ದ್ರವ್ಯಸಹಾಯ ಕಡಿಮೆ. ಆದ್ದರಿಂದ ಯಾವತ್ತು ಜಮೀನ್ ಸರಾಪು ಮಾಡಿಸುವದರಿಂದ ಹ್ಯಾಗೆತಾನೇ ಜೀವನ ಮಾಡಬೇಕು? ಮೈಸೂರ್ ಸಂಸ್ಥಾನದ ದಿವಾನ್ ಬಹದೂರ್ ಯವರು ನಮ್ಮಗಳನ್ನು ಕಾಪಾಡಿಯಾರೆಂದು ನಂಬಿರುವುದಾಗಿದೆ.

ಕರುಣಾಭಿಮಾನಿ.

ದೆವ್ವಗಳು ಉಂಟೆನ್ನುವುದಕ್ಕೆ ದೃಷ್ಟಾಂತ

ಅಯ್ಯಾ,

ಚಿಕ್ಕಬಳ್ಳಾಪುರದ ಟವನ್ ಪೋಲೀಸ್ ಕಾನ್ಸ್‌ಟೇಬಲ್ ವೆಂಕಟಪ್ಪನು ಮೊನ್ನೆ ಮಂಗಳವಾರ ರಾತ್ರಿ ಮನೆಯಲ್ಲಿ ಊಟಮಾಡಿ ತನಗೆ ಆ ರಾತ್ರಿ ನೇಮಿಸಿದ್ದ ದಾಸರಾ ಬೀಟು ಮಾಡಲು ಗೇಟಿ ಹಳೇ ಕಛೇರಿಗೆ ಮಲಗಿಕೊಳ್ಳುವದಕ್ಕೆ ಹೋದನು. ಅವನು ಎಂದಿನಂತೆ ಪೇಟೆ... ಹೋಗದೆ ಕೋಟೆಯಲ್ಲಿ ಆ ದಿನ ಮಾತ್ರ ಮೇಲ್ಕಂಡ ಸ್ಟೇಷನ್... ಡು ಕಂದಕಗಳ ಮಧ್ಯೆ ಹೋಗುವ ದಾರಿಯಲ್ಲಿ ಹೋಗುತ್ತಾ ... ದಲ್ಲಿಯೇ ಇರುವ ಖಾಲಿಯಾದ ಯರ‍್ರಪ್ಪನವರ ಮನೆ ಮುಂದೆ ... ಆ ಮನೆ ಅಂಗಳದಲ್ಲಿರುವ ಮತ್ತು ರಸ್ತೆ ಕಡೆಗೆ ಬಾಗಿರುವ ... ಗಮರದಿಂದ ಏನೋ ಒಂದು ಕಪ್ಪಾದ ತುಂಡು ಬಿದ್ದದ್ದನ್ನು ನೆ... ಭಯಾಕ್ರಾಂತನಾಗಿ ದಿಗ್ಭ್ರಮೆಯಿಂದ ಸ್ತಬ್ಧನಾಗಿ ನಿಂತನು. ... ಆ ಕಪ್ಪಾಗಿ ಬಿದ್ದ ವಸ್ತುವು ಒಂದು ಕುರಿಯಂತೆ ಪರಿಣಮಿಸಿ, ... ಎರಡು ಕಾಲುಗಳ ಮಧ್ಯೆ ತೂರಿ ಅವನನ್ನು ಕೆಳಕ್ಕೆ ಕೆಡವಿ, ... ದೊಳಕ್ಕೆ ಓಡಿ ಹೋಯಿತು. ಮೊಣಕಾಲುಗಳ ಮೇಲೆ ಗಾಯ... ದ ಇವನು ಬಹಳ ಭಯದಿಂದ ಕೂಗಿಕೊಂಡನು. ಆಗ ರಾತ್ರಿ... ದ ಕಾರಣ ಯಾರೂ ಸಹಾಯಕ್ಕೆ ಬರಲಿಲ್ಲ, ಅವನು ಮೆಲ್ಲನೆ ... ದುಕೊಂಡು ಮೇಲ್ಕಂಡ ಸ್ಟೇಷನ್‌ಗೆ ಹೋಗಿ ಮಲಗಿಕೊಂಡನು. ... ತರ ದಾಸರಾ ಬೀಟು ಗಬಂದ ಪೋಲೀಸ್ ಕಾನ್ಸ್‌ಟೇಬಲ್‌ಗಳು ಇವನ... ಅನೇಕ ಸಲ ಬಹಳ ಹೊತ್ತು ಕೂಗಿದಾಗ್ಯೂ ಏಳದೆ ಹೋದ ... ಪ್ರಾಣಾಪಾಯ ಏನು ಸಂಭವಿಸಿದೆಯೋ ಎಂದು ದೀಪ ಹಿಡಿದು ... ಸಿದರು. ಆಗ ಇವನಿಗೆ ಪ್ರಜ್ಞೆ ತಪ್ಪಿತ್ತು. ಮೊಣಕಾಲುಗಳ ಮೇ... ಗಾಯಗಳಾಗಿತ್ತು. ಆದ್ದರಿಂದ ಎಬ್ಬಿಸುತ್ತಿದ್ದವರು ಜಮಾಮಾನ ... ತಕ್ಷಣ ಜಮಾದಾರ‍್ರಿಗೆ ವರ್ತಮಾನ ಕೊಟ್ಟು ಕರೆಸಿದರು. ಅವರು ಎ... ಪ್ರಯತ್ನ ಮಾಡಿ ಎಬ್ಬಿಸಿದರೂ ನಿಷ್ಫಲವಾಯಿತು. ಅವರು ಪಾ... ರುಡಪ್ಪನನ್ನು ಕರೆಸಿ ತೆಂಗಿನಕಾಯಿ ಬೇವಿನಸೊಪ್ಪು ಮೊದಲಾ... ತರಿಸಿ ಮಂತ್ರ ಹಾಕಿಸಿದರು. ಬೆಳಗಿನ ಝಾವ ೩ ಗಂಟೆಗೆ ಪ್ರ... ಬಂತು. ಆಗ ವಿಚಾರಿಸಲು ಮೇಲ್ಕಂಡಂತೆ ನಡೆದ ಸಂಗತಿಗಳನ್ನು ... ಪಡಿಸಿದನು. ದೆವ್ವಗಳು ಇಲ್ಲವೆಂದು ಅನೇಕರು ಅಭಿಪ್ರಾಯ... ರುವರಷ್ಟೆ! ಆದರೆ ಈ ವಿಷಯವು ದೆವ್ವಗಳು ಉಂಟು ಎನ್ನುವ... ದೃಷ್ಟಾಂತವಾಗಿದೆ.

ಸಿ. ತಿಮ್ಮೈಯ್ಯ.

[ಆ ಪೋಲೀಸಿನವನು ಸಾಹಸಪಟ್ಟು ಅವನ್ನು ಹಿಡಿದುತಂದು ... ಪನಲ್ಲಿ ಕೂಡಿದ್ದ ಪಕ್ಷದಲ್ಲಿ ಆಗ್ಗೆ ದೆವ್ವ ಉಂಟೆಂದು ನಾವೂ ಒಪ್ಪಿಕೊಳ್ಳುತ್ತಿದ್ದೆವು.—ಎಡಿ]

ದೆವ್ವವಲ್ಲ ದುಷ್ಟಮೃಗ.

ಅಯ್ಯಾ,

ಕಳೆದ ತಿಂಗಳ ತಾ ೩೧ ನೇ ರಾತ್ರಿ ವಿಜಯಾಪುರ ... ಯ ಹತ್ತು ನೂರಾಲ್‌ಪಟ್ಟಿ ಗ್ರಾಮದಲ್ಲಿ ಒಂದು ಹೊಲೆಯರ ಗು... ಲ್ಲಿ ಮಲಗಿದ್ದ ಒಂದು ಹೊಲೆಯರ ಹುಡುಗನು, ಮರುದಿವಸ ಬೆಳಗ್ಗೆ ... ಲಗಿದವರೆಲ್ಲ ಎದ್ದು ನೋಡುವಾಗ್ಗೆ ಎಲ್ಲಿ ಉಂಟೆಂತ ಕಾಣದೆ ಹೋ... ತು. ಆ ಸಂಗತಿ ಏನೆಂತ ಗೊತ್ತಾಗಲೇ ಇಲ್ಲ. ಮರುದಿವಸ ರಾತ್ರಿ ಅದೇ ಹೊಲೆಯರ ನೆರೆ ಗುಡಿಯಲ್ಲಿ ಅದೇ ರೀತಿ ಮಲಗಿದ್ದ ಹೊಲೆ... ಹುಡುಗನು ಸಹ ಬೆಳಗ್ಗೆ ನೋಡುವಾಗ್ಗೆ ಅಂತರ್ಧಾನವಾಗಿತ್ತು. ಅದ... ದರ ಕಾರಣ ಸಹ ಏನೆಂಬುದು ಗೊತ್ತಾಗಲಿಲ್ಲ. ಅದರ ಮರುದಿವಸ ... ದರೆ ಇದೇ ತಿಂಗಳು ತಾ. ೨ನೇ ರಾತ್ರಿ ಅದೇ ಪ್ರಕಾರ ಒಬ್ಬ ರೋ... ಕಥೋಲಿಕ ಯೌವನಸ್ಥನು ತನ್ನ ಮನೆಯ ಹೊರ ಜಗಲಿಯಲ್ಲಿ ... ಲಗಿದ್ದನು. ಆತನಿಗೆ ಸರಿಯಾಗಿ ನಿದ್ರೆ ಬಿದ್ದ ಸಮಯದಲ್ಲಿ ಒ... ದೊಡ್ಡ ಜಂತುವು ಬಂದು ಆತನ ತಲೆಯನ್ನು ತುಳಿದಂತಾಯಿತು. ತಕ್ಷಣವೇ ಕಚ್ಚಿದಂತಾಯಿತಂತೆ. ಆಗ್ಗೆ ಆತನು ಗಟ್ಟಿಯಾಗಿ ಕೂ... ರಿಂದ ಬಹಳ ಜನ ಸಮೂಹವು ಕೂಡಿತು. ಜನರು ಒಟ್ಟು ಕೂ... ಕೂಡ್ಲೆ ಆತನ ಹತ್ತಿರದಿಂದ ಒಂದು ಮೃಗವು ಸ್ವಲ್ಪ ದೂರಕ್ಕೆ ಹ... ದಂತೆ ಕತ್ತಲಲ್ಲಿ ಕಾಣಿಸಿತು. ಪರೀಕ್ಷಿಸಿ ನೋಡುವಾಗ್ಗೆ ಅದು ಒ... ಚಿರತೆಯೆಂತಲೂ ಈತನ ತಲೆಯು ಎಲ್ಲ ನುಚ್ಚುನೂರಾಗಿ ಅದೆ... ಲೂ ಕಂಡುಬಂತು. ಕೂಡ್ಲೆ ಅವನನ್ನು ಕಾರ್ಕಳದ ಆಸ್ಪತ್ರೆಗೆ ... ನಿಸಿದರು. ಆತನು ಇನ್ನು ಅಲ್ಲಿ ಚಿಕಿತ್ಸೆ ಹೊಂದುತ್ತಾನೆ. ಚಿರತೆ... ದು ಗೊತ್ತಾಗಲಿಕ್ಕೆ ಮುಂಚೆ ಹೊಲೆಯರು ತಮ್ಮ ಮಕ್ಕಳನ್ನು ... ತವ್ರೋ ಪಿಶಾಚವ್ರೋ ತೆಗೆದುಕೊಂಡು ಹೋಯಿತು. ಆ ಮಕ್ಕಳ... ವಾಪಸು ಪಡೆದುಕೊಳ್ಳುವ ಬಗ್ಗೆ ಒಂದು ದೊಡ್ಡ ಔತಣವನ್ನೂ ... ಲಗೂ (ಪಿಶಾಚನಿಗೂ) ಭೂತಕ್ಕೊಂದು ದೊಡ್ಡ ಆರಾಧನೆಯನ್ನು ಮಾಡುವನೆಂತ ನಿಶ್ಚಯಿಸಿದ್ದರು. ಕಡೆಗೆ ಪರಾಮರ್ಶಿಸುವಾಗ್ಗೆ ಆ ಮಕ್ಕಳನ್ನು ತೆಗೆದುಕೊಂಡು ಹೋದ ಭೂತವು ಅನೇ... ಹುಲಿಭೂತವಾ... ಬೇಕು ಎಂಬುದು ಸ್ಪಷ್ಟವಾಗುತ್ತದೆ. ಆ ಮೂಢಜನರು ಯಾವ ... ಕಂಟಕವೆಂದರೂ ಭೂತವೇ ಪಿಶಾಚವೇ ಮೊದಲಾದವುಗಳನ್ನು ... ಢಭಕ್ತಿಯಿಂದ ನಂಬಿ ಅವುಗಳಿಗೆ ಔತಣ, ಆರಾಧನೆ ಮಾಡುವು... ಈ ಕಾರಣದಿಂದ ಅವರಿಗೆ ಗೊತ್ತಾಗಲಿಕ್ಕೆ ಸಾಕು. ನಂತರ ತಾ. ... ರಾತ್ರಿ ಒಬ್ಬ ದೇವಡಿಗ ಮನೆಯ ಜಗಲಿಗೆ ಹುಲಿ ಹೋಗಿ ಅಲ್ಲಿ ಮಲ... ಒಬ್ಬ ಯೌವನಸ್ಥನಿಗೆ ಅವನ ಕಾಲು ಬೆರಳನ್ನು ಮಾತ್ರ ಕಚ್ಚಿರ... ಡಲೆ ಅವನು ಗಟ್ಟಿಯಾಗಿ ಕೂಗಿದ್ದರಿಂದ ಬಿಟ್ಟು ಹೋಡಿಹೋಯ... ಇನ್ನು ಒಂದೆರಡು ಕಡೆಗಳಲ್ಲಿ ಹೀಗೆಯೇ ಹಾವಳಿ ಮಾಡಿದ್ದ... ಆ ಚಿರತೆಯು ದನಕರುಗಳನ್ನು ಹತ್ತಿರ ನೋಡಿದರೂ ಕೊಲ್ಲು... ಯುವದಿಲ್ಲವಂತೆ. ಇದು ಮನುಷ್ಯರ ರಕ್ತ ಕುಡಿದ ಹುಲಿ ... ಗಳನ್ನು ಕೊಲ್ಲುವದಿಲ್ಲವೆಂತ ಕೆಲವು ಜನರು ಹೇಳುತ್ತಾರೆ. ... ರೀತಿಯಲ್ಲಿ ಚಿರತೆ ಹುಲಿಗಳು ಮನೆಯೊಳಕ್ಕೆ ಜನರನ್ನು ಭಕ್ಷಿಸ... ವವಾದರೆ ದನಕರುಗಳ ಗತಿಯೇನು? ಕೆಲವು ಜನ ಕೋವಿಗಾ... ಒಟ್ಟುಕೂಡಿ ಬೇಟೆಯಾಡಿದರೂ ಆ ಚಿರತೆಯನ್ನು ಕೊಲ್ಲಬೇಕೆ... ಎಷ್ಟು ಪ್ರಯತ್ನ ಮಾಡಿದರೂ ನಿಷ್ಫಲವಾಯಿತು.

ವಿ. ಎಲ್ ನಾಯಕ್.

ದರೀಕೆರೆಯ ವಿಷಯಗಳು.

ಅಯ್ಯಾ,

ಈ ಊರಲ್ಲಿ ಈಗ ಸ್ವಲ್ಪ ಮಳೆ ಬಂದದ್ದರಿಂದ ರೈತರಿಗೆ ... ಯಿತಿ ಕೆಲಸಕ್ಕೆ ತುಂಬಾ ಅನುಕೂಲವಾಗಿದೆ. ಕೆರೆ ಕಟ್ಟೆಗಳ... ನ್ನೂ ನೀರು ತುಂಬಿ ಬಂದಿಲ್ಲ. ಇನ್ನು ಮುಂದೆ ಬರಬಹುದು.

ಈ ಊರಲ್ಲಿ ಕಳ್ಳರ ಗಲಾಟೆ ಇನ್ನೂ ತಪ್ಪಿಲ್ಲ. ಮ॥ ಸಾಹುಕಾರ ಫಣಿಯಪ್ಪನವರ ಮನೆಯಲ್ಲಿ ಕಳವು ಮಾಡಿದ ಜನರನ್ನು ಸರ್ಕಾರದವರು ಹಿಡಿದು ಶಿಕ್ಷೆ ಮಾಡಿದ್ದರೆ ಈ ಗಲಾಟೆಗೆ ಅವಕಾಶವಾಗುತ್ತಾ ಇರಲಿಲ್ಲ. ಈ ಕಳ್ಳರಿಗೆ ಸರ್ಕಾರದವರ ಭಯ ಇಲ್ಲವೆಂತ ತೋರುತ್ತದೆ. ಯಾಕೆಂದರೆ ಈ ಕಳ್ಳರು ಪ್ರತಿ ದಿವಸವೂ ರಾತ್ರಿ ೮—೧೦ ಗಂಟೆ ಸಮಯದಲ್ಲಿಯೇ ಸಂಚುಮಾಡುತ್ತಾ ತಿರುಗಾಡುತ್ತಾ ಜನರ ದೃಷ್ಟಿ ಬಿದ್ದರೆ ಓಡಿ ಹೋಗುತ್ತಾರೆ. ಇವರನ್ನು ನೋಡಿದರೆ ಬಹಳ ಶಕ್ತರೆಂದು ಕಾಣುತ್ತೆ. ಇವರ ಮೇಲೆ ಸರ್ಕಾರದವರು ಸರಿಯಾದ ನಿಗಾ ಇಟ್ಟು ಹಿಡಿಸಿ ಶಿಕ್ಷೆಮಾಡಿದ ಹೊರತು ಕಳ್ಳರ ಗಲಾಟೆ ತಪ್ಪುವದಿಲ್ಲ. ಅಮಲ್‌ದಾರ್ ಮೆ॥ ಬಾಲಕೃಷ್ಣರಾಯರು ಇಲ್ಲಿಗೆ ಬಂದ ಲಾಗಾಯತು ಕಛೇರಿ ಆಡಳಿತಗಳು ಬಹಳ ಚನ್ನಾಗಿ ನಡೆಯುತ್ತಾ ಇವೆ. ಸಿವಿಲ್ ಕೇಸುಗಳನ್ನು ನ್ಯಾಯವಾಗಿ ವಿಚಾರ ಮಾಡಿ, ಸರಿಯಾದ ಫೈಸಲ್ ಮಾಡುತ್ತಾರೆ. ಜನಗಳ ಮೇಲೆ ವಿಶ್ವಾಸಿಗಳಾಗಿ ಇದ್ದಾರೆ. ಇವರಿಗೆ ಇಲ್ಲಿಯೇ ಕಾಯಂ ಆದರೆ ಜನಗಳಿಗೆ ತುಂಬಾ ಅನುಕೂಲವಾಗುತ್ತೆ.

ಈ ಟವನ್ನಿನಲ್ಲಿ ವಾಸವಾಗಿರುವ ಸುಬ್ರಹ್ಮಣ್ಯಭಟ್ಟರು ಸಾ॥ ಫಣಿಯಪ್ಪನವರ ಮನೆಯಲ್ಲಿ ಕಳವಿನಿಂದ ಕೆಲವು ಮಾಲುಗಳನ್ನು ತಂದಿದ್ದಾರೆಂತ ೧೯೦೫ ನೆ ಜೂನ್ ತಿಂಗಳ ಸುಮಾರಿನಲ್ಲಿ ಪೊಲೀಸಿನವರಿಗೆ ಕಳವು ಪಿರ್ಯಾದು ಬಂದದ್ದರ ಮೇಲೆ ಪೊಲೀಸಿನವರು ಸದರಿ ಸುಬ್ರಹ್ಮಣ್ಯಭಟ್ಟರು ವಾಸವಾಗಿರುವ ಮನೆಗೆ ಬಂದು ಝಡತಿಮಾಡಿ, ಆ ಮಾಲುಗಳನ್ನು ತೆಗೆದುಕೊಂಡು ಹೋಗಿದ್ದರು. ಈ ಕೇಸು ಪೊಲೀಸಿನಲ್ಲಿ ವಿಚಾರ ನಡೆದು, ಬಿ ರಿಪೋರ್ಟ್ ಕೊಟ್ಟದ್ದರ ಮೇಲೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ೧೯೦೫ ನೆ ಜೂನ್ ತಿಂಗಳಲ್ಲಿ ಕೇಸು ವಜಾ ಮಾಡಿ, ಸದರಿ ಮಾಲುಗಳನ್ನು ಅಪರಾಧಿಗೆ ವಾಪತಿ ಮಾಡಬೇಕೆಂದು ಆರ್ಡರು ಮಾಡಿದ್ದು, ಈಗ ಅಪರಾಧಿಯು ಮಾಲು ಕೊಡಿಸಬೇಕೆಂದು ಕೇಳಿದ್ದಕ್ಕೆ ಈ ಮಾಲುಗಳು ಯಾವದೂ ಕೋರ್ಟಿನಲ್ಲಿ ಇಲ್ಲವೆಂದು ಆ ರಾಶಿ ಸುಬ್ರಹ್ಮಣ್ಯಭಟ್ಟರಿಗೆ ಎಂಡಾರ್ಸ್ ಕೊಟ್ಟಿದ್ದ ಪ್ರಯುಕ್ತ ಇವರು ಈ ಸಂಗತಿ ಕುರಿತು ಕಮೀಷನರು ಡಿ॥ ಸ್ಟಿ॥ ಕಮಿಷನರ ಸಾಹೇಬರಿಗೂ ಶ್ರೀಮನ್ ಮಹಾರಾಜರ ಸಾಹೇಬ್ ರೆಸಿಡೆಂಟರಿಗೂ ಅರ್ಜಿ ಬರಕೊಂಡು ಇರುವಂತೆ ವರ್ತಮಾನ ಕೇಳುತ್ತೇನೆ. ಈ ಅರ್ಜಿ ಯಿ ಸುಬ್ರಹ್ಮಣ್ಯಭಟ್ಟರು ವಾಸವಾಗಿರುವ ಮನೆಯಿಂದ ತೆಗೆದುಕೊಂಡು ಹೋದ ಮಾಲುಗಳ ಪೈಕಿ ಕೆಲವು ದಸ್ತಗಳು ಮತ್ತು ಪಾತ್ರೆಗಳು ಇದ್ದವು. ಈ ದಸ್ತರಗಳಲ್ಲಿ ಸದರಿ ಭಟ್ಟರಿಗೆ ಬರಬೇಕಾಗಿದ್ದ ಸುಮಾರು ೩,೫೦೦ ೩,೦೦೦ ರೂಪಾಯಿ ಕಾಗದಗಳು ಇದ್ದು ಇವುಗಳೆಲ್ಲಾ ಲಿಮಿಟೇಷನ್ ಕೇಳದಿದ್ದಲ್ಲದೆ ಇವುಗಳೆಲ್ಲಾ ದಸ್ತರದ ಸಂಗಡ ಹೋಯಿತು. ಇದರಿಂದ ಸದರಿಯವರಿಗೆ ತುಂಬಾ ನಷ್ಟವೆಂಟಾಗಲಿಲ್ಲವೇ? ಇವರು ಈ ರೀತಿ ನಷ್ಟ ಹೊಂದಿದ್ದಕ್ಕೆ ತುಂಬಾ ವ್ಯಸನಪಡುತ್ತಾ ಇದ್ದಾರೆ. ಸರ್ಕಾರದವರು ಇವರ ಮನೆಯಿಂದ ತೆಗೆದುಕೊಂಡು ಹೋದ ಮಾಲುಗಳು ಖಜಾನೆಯ ಕಡೆದಂತೆ ಇಟ್ಟುಕೊಂಡಿದ್ದು, ಈ ಕೇಸು ಫೈಸಲಾದದ್ದಕ್ಕೆ ಮುಂಚೆಯೇ ಯಾರಿಗೋ ವಾಪತಿ ಮಾಡಿ, ಸದರಿ ಸುಬ್ರಹ್ಮಣ್ಯಭಟ್ಟರಿಗೆ—ನಿಮ್ಮ ಮಾಲುಗಳು ಇಲ್ಲ. ಈ ಮೊದಲೆ ವಾಪತಿಯಾದ್ದಕ್ಕೆ ಮಾಲು ಪಟ್ಟಿಯಲ್ಲಿ ಈ ಗುರ್ತು ಹಾಕಿ ಇದೆ. ಹಾಗೆ ನಿಮಗೆ ವಾಪತಿ ಆಗದೆ ಇದುವರೆಗೆ ಇದ್ದರೆ ಕೇಸು ನಡೆದ ಲಾಗಾಯತು ಈವರೆಗೆ ಬಿದ್ದ ಅರ್ಜಿಗಳನ್ನು ಯಾಕೆ ಕೇಳಿಕೊಳ್ಳಲಿಲ್ಲ? ಆದ್ದರಿಂದ ನಿಮ್ಮ ಮಾಲುಗಳು ಇಲ್ಲವಾಗಿ ಎಂಡಾರಸು ಹುಕುಂ ಕೊಟ್ಟಿರುತ್ತಾರೆ. ಈ ಕೇಸು ಬಿದ್ದದ್ದು ೧೯೦೫ ನೆ ಇಸವಿ, ಫೈಸಲಾದದ್ದು ೧೯೦೬ ನೆ ಇಸವಿ ಮಧ್ಯೆ ೩ ವರುಷಗಳ ವರಿಗೆ ಕೇಸು ಫೈಸಲು ಮಾಡದೆ ಮಾಲುಗಳನ್ನು ವಾಪತಿ ಮಾಡಿದ್ದಕ್ಕೆ ರಶೀತಿಯೂ ಇದೆ. ಮೊದಲೇ ವಾಪತಿಯಾಗಿದೆ ಎಂತ ಸರ್ಕಾರದವರು ಹೇಳುವದು ನೋಡಿದರೆ ತುಂಬಾ ಆಶ್ಚರ್ಯವಲ್ಲವೇ? ಈ ಸಂಬಂಧವಾಗಿ ಸದರಿ ಸುಬ್ರಹ್ಮಣ್ಯಭಟ್ಟರಿಗೆ ಉಂಟಾಗಿರುವ ನಷ್ಟಕ್ಕೆ ಪಿರ್ಯಾದಿ ಅಥವಾ ಸರ್ಕಾರದವರು ಈ ಪೈಕಿ ಯಾರು ಜವಾಬ್ದಾರರಾಗುತ್ತಾರೋ ಮುಂದೆ ತಿಳಿಯಬೇಕು. ಈ ಸಂಗತಿಯನ್ನು ಶ್ರೀಮನ್ ಮಹಾರಾಜಾರವರ ಸರ್ಕಾರದವರು ಸರಿಯಾಗಿ ವಿಚಾರಮಾಡಿ, ಅಪರಾಧಿಗೆ ಉಂಟಾಗಿರುವ ನಷ್ಟವನ್ನು ತಪ್ಪಿತಗಾರರಿಂದ ಕೊಡಿಸಿ ತುಂಬಾ ಕೀರ್ತಿಯನ್ನು ಪಡೆಯುವರಾಗಿ ಖಂಡಿತ ನಂಬಿದ್ದೇನೆ.

ಟಿ. ಎಂ. ಎಸ್.

ತಾಲ್ಲೋಕು ವರ್ತಮಾನಗಳು.

—

ಚೋರಟಗೆರೆ.—ಈ ತಾಲ್ಲೂಕು ಗೂಡ್ಲುಪಾಳ್ಯವೆಂಬ ಗ್ರಾಮದಲ್ಲಿ ಇದೇ ಅಗಸ್ಟ್ ತಾ ೧೦ನೆ ಶುಕ್ರವಾರ ಮಧ್ಯಾಹ್ನ ೩ ಘಂಟೆ ಸಮಯದಲ್ಲಿ ಪಟೇಲರ ನಾಗಪ್ಪನ ೩ ವರುಷದ ಹೆಣ್ಣುಮಗು ಆಡುತ್ತಾ ಆಚೆಗೆ ಹೋಗಿದ್ದ ವೇಳೆಯಲ್ಲಿ ಅದರ ಕೈಗೆ ಇಟ್ಟಿದ್ದ ೧೦ ರೂಪಾಯಿನ ಬೆಳ್ಳಿ ಬಳೆಯನ್ನು ಯಾರೋ ಅದರ ಕೈಗೆ ತಿನ್ನುವದಕ್ಕೆ ವಸ್ತುವನ್ನು ಕೊಟ್ಟು ಆ ಬಳೆಗಳನ್ನು ಕಿತ್ತುಕೊಂಡಿದ್ದಾರೆ. ಆ ಮಗುವನ್ನು ಕೇಳುವಲ್ಲಿ ಇಂಥಾವರೆಂದು ಹೇಳಲು ಜ್ಞಾಪಕಶಕ್ತಿ ಸಾಲದು. ಈ ದಿನ ರಾತ್ರಿಯು ಕುಂಟೆಗರ ನಾಗಪ್ಪನವರ ೧೧ ವರುಷದ ಹೆಣ್ಣುಮಗಳು ಮನೆ ಹಜಾರದಲ್ಲಿ ಮಲಗಿರಲು ಅದರ ಸೊಂಟದಲ್ಲಿ ೧೫ ತೊಲೆ ಬಾಳುವ ಗೆಜ್ಜೆ ಡಾಬನ್ನು ಯಾರೋ ದುಷ್ಟಾತ್ಮರು ಆ ಹುಡುಗಿಯನ್ನು ಹೊರಳಿಸಿ ಕಿತ್ತುಕೊಂಡು ಹೋಗಿದ್ದಾರೆ. ಇಂಥಾ ಊರಿನ ಮಕ್ಕಳಿಗೆ ಇನ್ನೂ ಭಾರಿ ಒಡವೆಗಳನ್ನು ಇಟ್ಟರೆ ದುಷ್ಟರು ಒಡವೆ ಆಸೆಗೆ ಇನ್ನೂ ಕ್ರೂರ ಕೃತ್ಯ ಮಾಡುವದಕ್ಕೆ ಅಂಜುವದಿಲ್ಲ.

ದೊಡ್ಡಬಳ್ಳಾಪುರ.—ತಾ ೧೧ ರಲ್ಲಿ ದೊಡ್ಡ ತುಮಕೂರಿನ ಗಾಣಿಗರವನಿಗೆ ಹಾವು ಕಡಿದು ಸತ್ತನು. ಇಲ್ಲಿ ೧೦—೧೧ ನೇ ತಾ ಬಲವಾಗಿ ಮಳೆ ಸುರಿಯಿತು. ೧೧ ನೇ ತಾ. ಮಧ್ಯಾಹ್ನ ೩ ಗಂಟೆಯಲ್ಲಿ ಬಂದ ಮಳೆಯಿಂದ ಚರಂಡಿಗಳಲ್ಲಿ ನೀರು ಬಲವಾಗಿ ಹೋಗುತ್ತಿರುವಾಗ ತೇರುಬೀದಿಯ ಚರಂಡಿಯಲ್ಲಿ ಹೆಣ್ಣುಮಗುವು ಕೊಚ್ಚಿಕೊಂಡು ಹೋಗುವದನ್ನು ಎತ್ತಿದರು.—ಕುಸ್ತಿಯು ಪುನಃ ೧೪ ನೇ ತಾ ನಡೆಯುವ ಹಾಗೆ ತೋರುತ್ತೆ. ಪೊಲೀಸ್ ವೆಂಕಟೇಶಯ್ಯನವರ ಮನೆಯಲ್ಲಿ ಕೆಲವು ಪಾತ್ರೆಗಳು ಕಳವಾದವು. ಸಾಮಾನು ಸಹಿತ ಇಬ್ಬರನ್ನು ಹಿಡಿದು ವಿಚಾರಣೆಗೆ ಗುರಿ ಮಾಡಿದ್ದಾರಂತೆ.—ತೂಬಗೆರೆ ಹೋಬಳಿ ಜೋಡಿಚಿಕ್ಕನಹಳ್ಳಿ ಸಮೀಪದಲ್ಲಿ ನಾನಾ ಕಡೆಯ ರಸ್ತೆಗಳು ಸೇರುತ್ತವೆ. ಕೋರ್ಟಿಗೂ ರೈಲಿಗೂ ಜನರು ತಿರುಗುವ ರಸ್ತೆಯಾಗಿರುವದರಿಂದ ಬಹು ಜನರು ಸಂಚಾರ ಮಾಡುತ್ತಾರೆ. ಒಳ್ಳೇ ಮಧ್ಯಾಹ್ನಕ್ಕೆ ಜನರು ಇಲ್ಲಿಗೆ ತಲಪುವದರಿಂದ ಜನರಿಗೆ ಅಡಿಗೆ ಊಟಕ್ಕೆ ಎಲ್ಲಿಯೂ ನೀರಿಲ್ಲದೆ ಇರುವದರಿಂದ ಅಲೆಯುತ್ತಾರೆ. ಇದು ಕಾಡುಸ್ಥಳವಾಗಿರುವದರಿಂದ ಮತ್ತೂ ಕಷ್ಟಪಡುತ್ತಾರೆ. ಇಲ್ಲಿ ಒಂದು ಭಾವಿಯನ್ನು ತೆಗಿಸುವ ಹಾಗೆ ಸರ್ಕಾರಕ್ಕೆ ಜೋಡಿದಾರ್ ವೆಂಕಟಕೃಷ್ಣಂಭಟ್ಟರು ಎಷ್ಟೋ ಅರ್ಜಿಗಳನ್ನು ಕೊಟ್ಟಿದ್ದಾರೆ. ಅಂದಾಜು ಪಟ್ಟಿ ಸಹ ಕಳುಹಿಸಲ್ಪಟ್ಟಿದೆ. ದಯವಿಟ್ಟು ಸರ್ಕಾರದವರು ಶೀಘ್ರದಲ್ಲಿ ಗಮನಕ್ಕೆ ತಂದುಕೊಂಡು ಭಾವಿಯನ್ನು ತೋಡಿಸಿ, ಬಹು ಜನರ ದಣುವನ್ನು ಶಮನ ಮಾಡುವಂತೆ ಇಲ್ಲಿನವರು ಪ್ರಾರ್ಥಿಸುತ್ತಾರೆ. ಜೋಡಿಗ್ರಾಮಗಳಲ್ಲಿ ಸರ್ಕಾರದವರು ಬಹು ಕಡೆ ಭಾವಿಗಳನ್ನು ತೆಗಿಸಿದ್ದಾರಂತೆ.

ಕುಣಿಗಲು.—ಈ ತಾಲ್ಲೋಕಿನಲ್ಲಿ ಆಗಾಗ್ಗೆ ಮಳೆ ನಡೆಸುತ್ತಾ ಇದೆ. ಪೈರುಗಳು ಅನುಕೂಲಸ್ಥಿತಿಯಲ್ಲಿರುವುದಲ್ಲದೆ ಕೆರೆಗಳಿಗೂ ಕೊಂಚ ಕೊಂಚ ನೀರು ಬಂದಿರುತ್ತೆ. ಈ ಟವನ್ ಮ್ಯುನಿಸಿಪಾಲಿಟಿಯು ಇನ್ನೂ ಅನುಕೂಲಸ್ಥಿತಿಗೆ ಬಂದಿಲ್ಲ. ಈ ಪ್ರಾಂತ್ಯ ದಾರಿದ್ರ್ಯ ಸ್ಥಿತಿಗಳು ಇನ್ನೂ ಇಳಿಯಲಿಲ್ಲ.—ಮಿಸ್ಟರ್ ಇಲಾಖಾ ಮಹಜೊಂದಿದ ಟ್ರಿವೆಲ್ಲಾ ಘೋರಯ್ಯನರು ಪತ್ನಿ ಸಹಿತ ದಯಮಾಡಿಸಿ ಇದೇ ಮಾಹೆ ೬ನೇ ತಾ ಬುಧವಾರ ಇಲ್ಲಿನ ಗರ್ಲ್ ಸ್ಕೂಲ್ ವಿದ್ಯಾರ್ಥಿಯರಿಗೆ ಬಹುಮಾನ ಹಂಚಲು ಸ್ಕೂಲಿನಲ್ಲಿ ನೆರೆದಿದ್ದ ಸಭೆಯನ್ನಲಂಕರಿಸಿದರು. ಈ ಸಭೆಗೆ ಅಮಲ್ದಾರರವರೂ, ಶಿರಸ್ತೇದಾರರೂ, ಸಬ್ ರಿಜಿಸ್ಟ್ರಾರವರೆ ಮೊದಲಾದ ಅಧಿಕಾರಿಗಳೂ, ಎ ವಿ ಸ್ಕೂಲಿನ ಮೆ॥ ವೆಂಕಣ್ಣಯ್ಯನವರೂ ಆ॥ ಮಾಸ್ತರುಗಳೂ ದೊಡ್ಡ ಮನುಷ್ಯರೂ, ಬಾಲಕಿಯರ ಪೋಷಕರೂ ಬಂದು ಉಚಿತಾಸನಗಳಲ್ಲಿ ಕುಳಿತುಕೊಂಡ ಮೇಲೆ ಘೋರಯ್ಯನವರು ಎದ್ದು ದೇವರ ಪ್ರಾರ್ಥನೆ ಮಾಡಿ ಅಮಲ್ದಾರರವರನ್ನು ಅಗ್ರಾಸನಾಧಿಪತಿಗಳನ್ನಾಗಿ ಮಾಡಿ, ಬಾಲಿಕೆಯರಿಗೆ ಬುದ್ಧಿವಾದಗಳು ಹೇಳಿದರು. ಅಮಲ್ದಾರರು ಬಾಲಿಕೆಯರಿಗೆ ಬಹುಮಾನಗಳನ್ನು ಹಂಚಿದರು. ಆ ತರುವಾಯ ಮೆ॥ ಈಶ್ವರ ಶಾಸ್ತ್ರಿಗಳವರು ಎದ್ದು ಒಂದು ಶ್ಲೋಕವನ್ನು ಹೇಳಿ ಬಾಲಿಕೆಯರಿಗೆ ವಿಶದಪಡಿಸಿ ವಂದನಾದವನ್ನು ಹೇಳಿದರು. ಸಭಿಕರಿಗೆಲ್ಲಾ ಗಂಧ ಪುಷ್ಪಗಳು ಹಂಚಲ್ಪಟ್ಟದ್ದಲ್ಲದೆ, ಬಾಲಿಕೆಯರಿಗೆ ಬತ್ತಾಸು ಮೊದಲಾದದ್ದನ್ನು ವಿನಿಯೋಗ ಮಾಡಿದರು. ಅಗ್ರಾಸನಾಧಿಪತಿಗಳು ಬಾಲಿಕೆಯರಿಗೆ ಬುದ್ಧಿವಾದಗಳನ್ನು ಹೇಳಿ ಸಮಯೋಚಿತವಾದ ಉಪನ್ಯಾಸವಾಡಿ ಸಭೆಯನ್ನು ಮುಕ್ತಾಯ ಮಾಡಿದರು.

ಚಿತ್ರದುರ್ಗ.—ಇಲ್ಲಿ ಮಳೆ ಬೆಳೆಗಳು ಈಗಿನವರಿಗೂ ಚನ್ನಾಗಿ ಆಗಿವೆ. ಮುಂದೆಯೂ ಹೀಗೆಯೇ ನಡಸಿ ಹಿಂದಣವರುಷದ ದುರ್ಭಿಕ್ಷವನ್ನು ಮರೆಸುವದೆಂದು ಕಾಣುವದು. ಇದುವರೆಗೆ ಆದ ಮಳೆಗಳಿಂದ ಕೆರೆಗೆ ನೀರು ಬರಲಿಲ್ಲ. ಕಳೆದ ಜನವರಿ ಆಖೆಯಿಂದಲೂ ಕೆರೆಯಲ್ಲಿ ನೀರು ಇಲ್ಲದ್ದರಿಂದ ಕೆರೆಯ ಹಿಂದಣ ಒಡ್ಡಿನಿಂದ ನಲ್ಲಿಗಳ ಮೂಲಕ ಟವನಿಗೆ ನೀರು ಸರಬರಾಯಿ ಆಗುತ್ತಾ ಇದೆ. ಒಡ್ಡಿನಲ್ಲಿಯೂ ನೀರು ಬಹಳ ಮಟ್ಟಕ್ಕೆ ಇಳಿದು ಹೋಗಿರುವದರಿಂದ ನಲ್ಲಿಗೆ ನೀರು ಸಲೀಸಾಗಿ ಬರುವದಿಲ್ಲ. ಆದ್ದರಿಂದ ಒಡ್ಡಿನಿಂದ ನೀರನ್ನು ಕೂಲಿಗಳಿಂದ ಎತ್ತಿಸಿ ನಲ್ಲಿಗಳಿಗೆ ಬಿಡುತ್ತಾ ಇದ್ದಾರೆ. ಟವನಿಗೆ ನೀರಿನ ಸರಬರಾಯಿ ಸಾಲದೆಂದು ಹೇಳಬೇಕಾಗಿದೆ. ಬೆಳಗಿನ ಹೊತ್ತು ಕೆಲವು ಗಂಟೆಗಳ ಕಾಲ ಊರಿನ ಒಂದು ಭಾಗದ ನಲ್ಲಿಗಳಲ್ಲಿ ನೀರು ಬಿಟ್ಟು ಮಧ್ಯಾಹ್ನ ಆ ಭಾಗಕ್ಕೆ ಬಂದು ಮಾಡಿ ಸಾಯಂಕಾಲ ಕೆಲವು ಗಂಟೆಯ ಹೊತ್ತು ಇನ್ನೊಂದು ಭಾಗಕ್ಕೆ ಬಿಡುತ್ತಾರೆ. ಜಾಗ್ರತೆ ಮಳೆ ಬಂದು ನೀರಿನ ಕ್ಷಾಮವನ್ನು ಹೋಗಲಾಡಿಸಬೇಕಾಗಿದೆ.—ಇಲ್ಲಿಗೆ ಸುಮಾರು ೬ ಮೈಲಿ ದೂರದಲ್ಲಿ ಪೂರ್ವದಿಕ್ಕಿಗಿರುವ ದೊಡ್ಡ ಸಿದ್ಧನ ಹಳ್ಳಿಯಲ್ಲಿ ಕಾಲರಾ ತಲೆದೋರಿ ಕೆಲವರು ಮೃತಿ ಹೊಂದಿದರು. ಈಗಲೂ ಅಲ್ಲಿ ಕೆಲವರು ಆ ವ್ಯಾಧಿಯಿಂದ ನರಳುತ್ತಾ ಇದ್ದಾರೆ. ಅಲ್ಲಿಂದ ನಯಪಟ್ಟು ಈ ಊರಿಗೆ ಬಂದ ಒಬ್ಬ ಈಡಿಗರವಳಿಗೆ ಕಾಲರಾ ಆಯಿತು. ಸರಕಾರದವರು ತಕ್ಷಣ ಆದ ಉಪಾಯ ಮಾಡಿ ಅವಳನ್ನೂ ಆ ಮನೆಯವರನ್ನೂ ಊರ ಹೊರಗಣ ಛತ್ರಕ್ಕೆ ಸಾಗಿಸಿದರು. ಆಕೆ ಬದುಕಿದೆ ಮೃತಪಟ್ಟಳು. ಬಾಕಿಯವರೆಲ್ಲಾ ಆರೋಗ್ಯವಾಗಿದ್ದಾರೆ. ಆ ಮಾರನೆ ದಿನವೇ "ನೀರನ್ನು ಕಾಯಿಸಿ ಕುಡಿಯಬೇಕು. ಮನೆ ಹಟ್ಟಿ ಅಂಗಳ ಶುಚಿಯಾಗಿಡಬೇಕು. ಅಲ್ಲಲ್ಲಿ ಕಾಲರಾ ಶುರುವಾಗಿದೆ" ಎಂದು ಸಾರಿಸಿದರು. ಆರೋಗ್ಯಕ್ಕೆ ಅತ್ಯವಶ್ಯಕವಾದ ಈ ಕಟ್ಟಳೆಗಳನ್ನು ಎಲ್ಲರೂ ಅನುಸರಿಸಬೇಕಾಗಿದೆ. ಸರಕಾರದವರು ಬಾವಿ ನೀರನ್ನೂ ಉಚ್ಚಂಗಮ್ಮನ ಹೊಂಡದ ನೀರನ್ನೂ, ನಲ್ಲಿಯಿಂದ ಊರಿಗೆ ನೀರು ಸರಬರಾಯಿ ಮಾಡುವ ಒಡ್ಡಿನ ನೀರನ್ನೂ ಅಜಮಾಯಿಷಿ ಬಗ್ಗೆ ಬೆಂಗಳೂರಿಗೆ ಕಳುಹಿಸಿದ್ದ ಹಾಗೂ ಇವುಗಳ ಪೈಕಿ ಒಡ್ಡಿನ ನೀರು ವಿನಹ ಉಳಿದ ಭಾವಿ ಮತ್ತು ಉಚ್ಚಂಗಮ್ಮನ ಹೊಂಡದಲ್ಲಿಯೂ ಇರುವ ನೀರಿನಲ್ಲಿ ಕಾಲರಾ ಜಂತುಗಳು ಇರುತ್ತವೆಂದು ತಾತ್ಪರ್ಯಪಟ್ಟ ಹಾಗೂ ಅಂದುಕೊಳ್ಳುತ್ತಾರೆ. ಅಂತೂ ಯಾವ ನೀರನ್ನಾಗಲಿ ಚನ್ನಾಗಿ ಕುದಿಸಿ, ಸೋಸಿ ಕುಡಿಯುವದರಿಂದ ಯಾವ ಕೇಡಕೂ ಇಲ್ಲವೆಂದು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿದೆ.

ತೀರ್ಥಹಳ್ಳಿ.—ಈಚೆಗೆ ಮಳೆಯು ಸುಮಾರಾಗಿ ಆಗುತ್ತಾ ಬಂದಿದೆ. ಅಂತೂ ಹಿಂದಿನ ಕಾಲದ ಮಳೆಯನ್ನು ನಾರೆಯಬೇಕೆಂದು ಜನರು ಮಾತನಾಡಿಕೊಳ್ಳುತ್ತಾರೆ. ಹಿಂದೆ ಈ ಕಾಲದಲ್ಲಿ ಇನ್ನೂರು ಅಂಗುಲ ಮಳೆಯಾಗುತ್ತಿತ್ತು. ಈಗ ನೂರಂಗುಲಕ್ಕೆ ಇಳಿದಿದೆ. ಇದಲ್ಲದೆ ಈಗ್ಗೆ ಮೂರು ವರುಷಗಳಿಂದಲೂ ಅನೇಕವಾಗಿ ತೋಟ ಗಿಡಗಳನ್ನು ಕಡಿಯುವದಕ್ಕೆ ಪ್ರಾರಂಭಿಸಿರುವದರಿಂದ ಮಲೆನಾಡಿನಲ್ಲಿ ಮಳೆಯು ಕಡಿಮೆಯಾಯಿತೆಂದು ರೈತರು ಹೇಳುತ್ತಾರೆ.—ಇಲ್ಲಿನ ಎ. ವಿ ಸ್ಕೂಲಿನಲ್ಲಿ ಒಬ್ಬರು ವಿನಹ ಎಲ್ಲರೂ ಸ್ಥಳೀಕರೇ ಉಪಾಧ್ಯಾಯರಾಗಿರುವದರಿಂದ ಕೆಲಸದ ಮೇಲೆ ಮುತುವರ್ಜಿ ಇಲ್ಲವೆಂದು ಊರಿನ ಜನರೆಲ್ಲ ಹೇಳುತ್ತಾರೆ. ಮತ್ತು ಪ್ರತಿಯೊಬ್ಬ ಉಪಾಧ್ಯಾಯರೂ ಸ್ವಲ್ಪ ಕಡಿಮೆ ಬೇರೆ ಬೇರೆ ಅರ್ಜಿಗಳ ಕೆಲಸ ಸಂಪಾದಿಸಿಕೊಂಡಿದ್ದಾರೆ. ಇಂಥವರು ಹ್ಯಾಗೆ ತಾನೇ ಮುತುವರ್ಜಿಯಿಂದ ಪಾಠ ಹೇಳಬಹುದು. ತಂದೆ ತಾಯಿಗಳು ಮಕ್ಕಳನ್ನು ವಿದ್ಯಾವಂತರಾಗಲೆಂದು ಕಳುಹಿಸುವ ಮಾಸ್ತರುಗಳ ಸಮೀಪಕ್ಕೆ ಕಳುಹಿಸುವದಕ್ಕಿಂತ ಮನೆಯ ಕೆಲಸ ಮಾಡಿಸುವದುತ್ತಮವೆಂದು ಹೇಳುತ್ತಾರೆ. ಇದಲ್ಲದೆ ಈ ತಾಲೂಕಿನ ಮಾಸ್ತರುಗಳು ಹುಡುಗರಿಗೆ ಮಾಡುವ ಶಿಕ್ಷೆಗೆ ಪಾರವೇ ಇಲ್ಲವೆಂದು ಹೇಳಬೇಕು.—ಅರಗದ ಕಡೆಯೂ ಇನ್ನು ಕೆಲವು ಮಾಗಣಿಗಳಲ್ಲಿಯೂ ಶೇಕ್ದಾರರೂ ಶಾನುಭೋಗರೂ ಪಟೇಲರೂ ರೈತರಿಂದ ಕಂದಾಯದ ಹಣ ವಸೂಲ್ ಮಾಡಿಕೊಂಡು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸರ್ಕಾರಕ್ಕೆ ಮೋಸ ಪಡಿಸುತ್ತಾರೆಂದು ವರ್ತಮಾನವಿದೆ. ಇಂಥಾ ದುರ್ಮಾರ್ಗಿಗಳು ಅಮಲ್ದಾರನ್ನು ಸಹ ಮೋಸಪಡಿಸಿ ಗುಟ್ಟನಲ್ಲಿದ್ದಾರೆಂದೂ ಅಲ್ಲದೆ ಜಪ್ತಿ ಜರಾಬು ಹುಟ್ಟಿಸಿ ಆರು ತಿಂಗಳು ತಾವೇ ಜೀವನಮಾಡಿಕೊಂಡು, ಜರಾಬುಕಾಲಕ್ಕೆ ಎಲ್ಲಿಂದಲಾದರೂ ಹಣ ತಂದು ಕಟ್ಟಿ ನಂತರ ಇಂಥಾ ಬಾಕಿದಾರನಿಂದ ಬಾಕಿಯಾಯಿತೆಂದು ಮೋಸದ ಸಂಗತಿ ನಡೆಸುತ್ತಾರೆಂದೂ ಕೇಳುತ್ತೇನೆ. ಇನ್ನೂ ಅನೇಕ ಪಟೇಲರು ಆಸ್ತಿ ಮುಂತಾದ್ದು ಒಂದೂ ಇಲ್ಲದೆ ಕಂದಾಯದ ಹಣವನ್ನು ವಸೂಲ್ ಮಾಡಿ ತಾವೇ ಉಪಯೋಗಿಸಿಕೊಳ್ಳುವದು ಅಪರೂಪವಲ್ಲ. ಇಂಥವರನ್ನು ನಂಬುವದು ಹ್ಯಾಗೆ? ಆದ್ದರಿಂದ ಒಳ್ಳೇ ಆಸ್ತಿ ಇರುವ ಯೋಗ್ಯರಾದವರನ್ನು ಮಾತ್ರ ಪಟೇಲರಾಗಿ ಚುನಾಯಿಸುವದು ಉತ್ತಮ.—ತೀರ್ಥಹಳ್ಳಿಯಲ್ಲಿದ್ದ ಜಮಾದಾರ್ ಮತ್ತು ಇಬ್ಬರು ಕಾನಸ್ಟೇಬಲ್‌ಗಳು ಜನರನ್ನು ಹಿಂಸಿಸಿ ಲಂಚ ತಂದರೆಂದು ಪಿರ್ಯಾದು ಆದ್ದರಿಂದ ಸದ್ಯ ಕೆಲಸದಿಂದ ವಜಾ ಆಗಿದ್ದಾರೆ. ಉಮ್ಮರ್ ಸಾಬಿ ಎಂಬ ಒಬ್ಬನನ್ನು ಹೊಡೆದು ಮರಕ್ಕೆ ತೂಗುಹಾಕಿದ್ದರೆಂದು ಕೈಫಿಯತ್ತು ಆಗಿದೆ. ಇಲ್ಲಿನ ಇನ್ಸ್‌ಪೆಕ್ಟರಿಗೂ ವರ್ಗವಾಗಿ ಬೇರೆ ಬಂದರು.—ಅರಗದ ಕಾಳಮ್ಮನ ಗುಡಿಯ ಒಬ್ಬ ಹೆಂಗಸು ಹಳ್ಳದಲ್ಲಿ ಬಿದ್ದು ಸತ್ತಳು. ಕಿವಿಯಲ್ಲಿದ್ದ ಮೂವತ್ತು ರೂಪಾಯಿನ ಒಡವೆಗಳನ್ನು ಒಬ್ಬ ಪಟೇಲನು ಅಪಹರಿಸಿದನಂತೆ. ಇದು ನಿಜವಿರಬಹುದೇ?

ಸೊರಬ.—ಕಳೆದ ಜೂಲೈ ತಿಂಗಳಲ್ಲಿ ಸ್ವಲ್ಪ ಮಳೆ ಬಿತ್ತು. ರೈತರು ಬೀಜ ಬಿತ್ತಿಕೊಂಡರು. ಈಚೆಗೆ ಮಳೆ ಅಷ್ಟು ಬರಲಿಲ್ಲ. ರೈತರು ಆಶ್ಚರ್ಯಪಟ್ಟು ಆಕಾಶವನ್ನು ನೋಡುತ್ತಿದ್ದಾರೆ. ಕೆಲವು ಗ್ರಾಮಗಳಲ್ಲಿ ನೀರಿನ ಕ್ಷೋಭೆ ಇನ್ನೂ ತಪ್ಪಲಿಲ್ಲ.—ಕಳೆದ ಸಾಲಿನಲ್ಲಿ ನಾಲ್ಕಾಣೆಗಿಂತ ಕಮ್ಮಿ ಬೆಳೆ ಆದ ತರಿ ಜಮೀನುಗಳಿಗೆ ಅರ್ಧ ಕಂದಾಯ ಮಾಫ್ ಮಾಡಿರುವದಾಗಿ ಗವರ್ನಮೆಂಟಿನವರು ಅಪ್ಪಣೆ ಮಾಡಿದ್ದಾರೆ. ಈ ಸಂಗತಿಯನ್ನು ರೈತರು ಕೇಳಿ ಬಹಳ ಸಂತೋಷದಲ್ಲಿದ್ದರು. ಆದರೆ ಆ ಸಂತೋಷವು ನೆಲೆಯಾಗಿ ನಿಲ್ಲಲಿಲ್ಲ. ಯಾಕೆಂದರೆ ಶಾನುಭೋಗರು ತಾ ॥ ಮಾಡಿದ ಕಾಲದಲ್ಲಿ ಜಮೀನನ್ನು ನಸಲು, ನೋಡದೆ ಮನೆಯಲ್ಲಿ ಕೂತುಕೊಂಡು ೬ ಆಣೆ ಫಸಲಾಗಿದೆ ಎಂದು ಪಹಣಿಯಲ್ಲಿ ದಾಖಲ್ ಮಾಡಿರುವದರಿಂದ ರೈತರಿಗೆ ಕಂದಾಯ ಕಮ್ಮಿಯಾಗುವಂತೆ ಕಾಣಲಿಲ್ಲ. ಇಲ್ಲಿಗೆ ದಯಮಾಡಿಸಿದ್ದ ಸಾಗರದ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ರೈತರು ತಮ್ಮ ಅಸಮಾಲುಗಳನ್ನು ಹೇಳಿಕೊಂಡರು. ಸಾಹೇಬರು ವಿಚಾರ ಮಾಡುವದಾಗಿ ಅಪ್ಪಣೆ ಮಾಡಿದರೆ.—ಹಾನಗಲ್ ತಾಲ್ಲೋಕು ಆಡೂರ ಗ್ರಾಮದ ಓವಾಟಿಗ ಜಂಗಮ ಜಾತಿ ಗದ್ದಿಗ್ಯೆಯ್ಯನೆಂಬುವನು ಈ ತಾಲ್ಲೋಕು ಜಡೆಯಲ್ಲಿಯೂ ಸೊರಟಗಿ ಎಂಬ ಗ್ರಾಮದಲ್ಲಿಯೂ ಭಿಕ್ಷದ ನೆವದ ಮೇಲೆ ಮನೆಗಳಿಗೆ ಹೋಗಿ ಮನೆಯವರು ಒಳಗಿದ್ದ ಸಮಯ ನೋಡಿಕೊಂಡು ಒಂದು ಮನೆಯಲ್ಲಿ ಒಂದು ಗಡಿಯಾರವನ್ನೂ ಇನ್ನೊಂದು ಮನೆಯಲ್ಲಿ ಒಂದು ಜರತಾರಿ ರುಮಾಲನ್ನೂ ಕಳವು ಮಾಡಿಕೊಂಡು ಧಾರವಾಡ ಸೀಮೆಗೆ ಹೋಗಿ ಅಲ್ಲಿ ಮಾಲು ಬಿಕರಿ ಮಾಡಿದನು. ಸೊರಬದ ಪೊಲೀಸಿನವರು ಮಾಲನ್ನು ಅಪರಾಧಿಯನ್ನೂ ಪತ್ತೆಮಾಡಿ ಶಿಕ್ಷೆ ಮಾಡಿಸಿದರು. ಗದ್ದಿಗ್ಯೆಯ್ಯನವರು ಸೊರಬದಲ್ಲಿ ಮಣ್ಣುಹೊರುತ್ತಾರೆ.—ಸೊರಬದ ಟವನಿನಲ್ಲಿ ಕೆಲವು ಮುಸಲ್ಮಾನ ಜನರು, ಕೆಲವು ಬ್ರಾಹ್ಮಣರು ಕೆಲವು ಬೆಂಡಿಗರು ಹಗಲು ರಾತ್ರಿ ಇಸ್ಪೀಟು ಜೂಜಾಡುತ್ತಾರೆ. ಇವರಿಂದ ಅನೇಕರು ಹಾಳಾದರು. ಸೊರಬದ ಪೊಲೀಸಿನವರು ಸದರಿ ಜನಗಳನ್ನು ಹಿಡಿದು ಶಿಕ್ಷೆ ಮಾಡಿದರು. ಆದರೂ ಆ ಜನಗಳಿಗೆ ಬುದ್ಧಿಬಂದಂತೆ ತೋರಲಿಲ್ಲ. ಪುನಃ ಆಡಲು ಪ್ರಾರಂಭಿಸಿದ್ದಾರೆ. ಇವರ ಜೊತೆಯಲ್ಲಿ ಸರಕಾರದ ನೌಕರರು ಸಹ ಸೇರಿ ಆಡುವದರಿಂದ ಆ ಜನರಿಗೆ ಭಯ ತಪ್ಪಿತು. ಸರಕಾರದ ಅಧಿಕಾರಿಗಳು ಈ ಜೂಜಾಟವನ್ನು ನಿಲ್ಲಿಸಬಿಡುವರೆಂದು ನಂಬಿದ್ದೇನೆ.—ಸೊರಬದ ಮುನಿಸಿಪಲ್ ಲಾಂದ್ರಗಳಲ್ಲಿ ಕೆಟ್ರೋಸ್ಕ್ಯೂಡ್ ದೀಪಗಳನ್ನು ಸರಿಯಾಗಿ ರಾತ್ರಿ ಕಾಲದಲ್ಲಿ ಹಚ್ಚದೆ ಪ್ರಯಾಣ ಮಾಡುವ ಜನಗಳಿಗೆ ತುಂಬಾ ತೊಂದರೆ ಉಂಟಾಗುತ್ತದೆ. ಇದನ್ನು ಅಮಲ್ದಾರರು ತಮ್ಮ ಗಮನಕ್ಕೆ ತಂದುಕೊಳ್ಳುವರೆಂದು ನಂಬಿದ್ದೇನೆ.—ಸೊರಬದ ಜಾಡರ ಹುಚ್ಚನೆಂಬುವನು ಗ್ರಾಮಾಂತರಗಳ ಮೇಲೆ ಹೋಗಿ, ತಾನು ಟ್ಯಾಂಕ್ ಇನ್ಸ್‌ಪೆಕ್ಟರವರ ಕಡೆ ಜವಾನನೆಂತಲೂ ಡಾಕ್ಟರ ಕಡೆ ಜವಾನನೆಂತಲೂ ಅಮಲ್ದಾರ್ರ ಕಡೆ ಜವಾನನೆಂತಲೂ ಹೇಳಿಕೊಂಡು, ಪಟೇಲ್ ಮತ್ತು ಗ್ರಾಮಸ್ಥರನ್ನು ಮೋಸಪಡಿಸಿ, ಸರಬರಾಯಿ ಪಡೆಯುತ್ತಾ ಇದ್ದನೆಂದು ಪೊಲೀಸ್ ಇನ್ಸ್‌ಪೆಕ್ಟರಿಗೆ ತಿಳಿದು ಬಂತು. ಅವರು ವಿಚಾರ ಮಾಡಿ ಸದರಿಯವನನ್ನು ಹಿಡಿಯುವದಕ್ಕೆ ಪೊಲೀಸಿನವರನ್ನು ಕಳುಹಿಸಿದ್ದಾರೆ.

ಇದನ್ನು ನೋಡಿದರೆ ನೀವು ಬಹು ಆಶ್ಚರ್ಯ ಪಡುವಿರಿ!!! 107-2

ನಮ್ಮ ಪ್ರಸಿದ್ಧವಾದ ಪುಸ್ತಕಭಂಡಾರದಲ್ಲಿ ಅನೇಕ ಸಹಸ್ರ ರೂಪಾಯಿನ ಕನ್ನಡ ಗ್ರಂಥಗಳೂ, ಪಾಠಪುಸ್ತಕಗಳೂ, ಪೇನಾ, ಪೇನ್ಸಿಲ್, ನೋಟ್‌ಬುಕ್, ನಾನಾ ವಿಧವಾದ ಹಾಸನದ ಟೋಪಿಗಳು, ವೃತ್ತಾಂತ ಪತ್ರಿಕೆ, ಸಹಿಳಾಸಖಿ, ಕನ್ನಡ ಗ್ರಂಥ ಮಿತ್ರ, ಪ್ರಾಗ್ರೆಸ್, ಹಾರ್ವೆಸ್ಟ್ ಫೀಲ್ಡ್ ಮುಂತಾದ ಪ್ರಸಿದ್ಧವಾದ ವರ್ತಮಾನ ಪತ್ರಿಕೆಗಳೂ ಇಲ್ಲಿ ಅನೇಕ ಸಾವಿರಗಟ್ಟಲೆಯಾಗಿ ಮಾರಾಟವಾಗುತ್ತವೆ. ಈ ಡಿಪೋ ಕಟ್ಟಡವು ರಾಜಧಾನಿಯಲ್ಲಿ ಬಹು ಪ್ರಸಿದ್ಧವಾದ ಸ್ಥಳವೆಂದು ಮೈಸೂರು ದೇಶದಲ್ಲೆಲ್ಲಾ ಹೆಸರುಗೊಂಡಿದೆ. ಈ ಕೆಳಗೆ ನಮೂದಿಸಿರುವ ಪುಸ್ತಕಗಳನ್ನು ಸ್ವಲ್ಪ ನೋಡಿ.—

ಕಥಾಸಂಗ್ರಹ ೧ ರಿಂದ ೩ ಭಾಗಗಳು ಕ್ರಯ ೧—೦—೦
ವಿ. ಪಿ. ಪಿ. ಮೂಲಕ ೧—೩—೦

ಅನುಭವಸಾರ .. . ಕ್ರಯ ೦-೧೨—೦

ಗ್ರೀಕರ ಚರಿತ್ರೆ . . ,, . ೦—೨—೦

ರೋಮನರ ಚರಿತ್ರೆ . .. ,, . . ೦—೨—೦

ಕನ್ನಡ—ಇಂಗ್ಲಿಷ್—ಹಿಂದೂಸ್ಥಾನಿ ಭಾಷಾಮಂಜರಿ. ಈ ಪುಸ್ತಕದಿಂದ ಇಂಗ್ಲಿಷ್ ಮತ್ತು ಹಿಂದುಸ್ಥಾನಿ ಭಾಷೆಗಳನ್ನು ಬಹು ಸುಲಭವಾಗಿ ಕಲಿಯಬಹುದು ಇದರ ಕ್ರಯ ಎಂಟೇ ಆಣೆ.
ವಿ ಪಿ ಪಿ. ಮೂಲಕ ೦—೧೦—೦

ಶ್ರೀಚಾಮರಾಜೇಂದ್ರ ಒಡೆಯರವರ ಚರಿತ್ರೆ ಉತ್ಕೃಷ್ಟವಾದ ಪುಸ್ತಕ. ಅನೇಕ ತಸ್ವೀರುಗಳು ಇವೆ. ಇದನ್ನು ಕಾರಿತು ರಾಜಧರ್ಮಪ್ರವೀಣ ಮಾ॥ ರಾ॥ ತಂಬೂಶೆಟ್ಟರು ಒಂದು ಉತ್ಕೃಷ್ಟವಾದ ಅವತರಣಿಕೆಯನ್ನು ಬರೆದಿದ್ದಾರೆ ಕ್ರಯ ೧—೮—೦
ವಿ. ಪಿ. ಪಿ. ಮೂಲಕ ೧—೧೧—೦

ಎಡ್ವರ್ಡ್ ಸಾರ್ವಭೌಮರ ಜೀವಚರಿತ್ರೆ ೦—೪—೦

ಕ್ರಿಮಿವರ್ಗವರ್ಣನೆ ೦—೧—೦

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು.—ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ. ವಿ ಪಿ ಪಿ. ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ, ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ.

ಪಕ್ಷಿಗಳ ಚರಿತ್ರೆ ೦—೧—೦

ಪ್ರಾಚೀನ ಜೀವರಾಶಿಗಳ ವರ್ಣನೆ ೦—೧—೦

ಸಣ್ಣವರಿಗೆ ಹೇಳಿದ ಕಥೆಗಳು ೦—೧—೦

ಬಾಲಿಕಾಗೀತಮುಕ್ತಾ ಕಲಾಪ, ಗೀತಮಂದಾರ ೦—೨—೦, ಕಲ್ಯಾಣಗೀತಾವಳಿ ೦—೫—೦, ಈ ಹಾಡಿನ ಪುಸ್ತಕಗಳು ನಮ್ಮಲ್ಲಿ ಯಾವಾಗಲೂ ದೊರೆಯುತ್ತವೆ

ಹಿಂದೂದೇಶಪ್ರದಕ್ಷಿಣ. ಇದರಲ್ಲಿ ಸುಮಾರು ತೊಂಭತ್ತು ಉತ್ಕೃಷ್ಟವಾದ ಚಿತ್ರಗಳು ಅಡಗಿವೆ. ಮೊದಲನೇ ಮುದ್ರಣವು ಮಾರಿಹೋಗುತ್ತಾ ಬಂದಿದೆ. ನಮ್ಮಲ್ಲಿ ಇನ್ನು ಸುಮಾರು ನಾಲ್ವತ್ತು ಪ್ರತಿಗಳು ಮಾತ್ರ ಉಳಿದಿವೆ ಬೇಗ ತರಿಸಿಕೊಳ್ಳಿ ಇದರ ಕ್ರಯ ೦—೮—೦ ವಿ ಪಿ. ಪಿ. ಮೂಲಕ ೦—೧೧—೦

ಮುದ್ರಾಮಂಜೂಷ ೦-೮-೦. (ವಿ. ಪಿ. ಪಿ. ಮೂಲಕ. ೦ ೧೧-೦)

ಮುಖ್ಯವಾಗಿ ಸ್ನೇಹಿತರೇ, ನೀವು ರಾಜಧಾನಿಗೆ ಬರುವಾಗಲೆಲ್ಲಾ ನಮ್ಮ ಪುಸ್ತಕಾಲಯವನ್ನು ನೋಡಿಯೇ ಹೋಗಬೇಕೆಂದು ಕೇಳಿಕೊಳ್ಳುತ್ತೇವೆ. ನಿಮಗೆ ಪುಸ್ತಕವಲ್ಲದೆ ಬೇರೆ ಯಾವದಾದರೂ ಪದಾರ್ಥಗಳಾಗಲೀ ಅಥವಾ ಸಂಗತಿಗಳಾಗಲೀ ಅಪೇಕ್ಷಿಸುವ ಸಂದರ್ಭದಲ್ಲಿ ನೀವು ನಮಗೆ ಒಂದು ಕಾರ್ಡು ಬರೆದರೆ ತಕ್ಷಣವೇ ಜವಾಬು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ವಿಳಾಸ :— ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ,
ಮೈಸೂರು.

ಪರಿಮಳ ನಶ್ಯದಪುಡಿ

102-3

ಪರಿಮಳ ನಶ್ಯದ ಪುಡಿ ಡಬ್ಬಿ ೧ ಕ್ಕೆ . . . . . 0—9—0
ಅಂಚೆ ಖರ್ಚು . . . . 0—3—0
ಸಾದಾ ನಶ್ಯದ ಪುಡಿ ಡಬ್ಬಿ ೧ಕ್ಕೆ . . . . . . 0—6—0
ಅಂಚೆ ಖರ್ಚು . . . . 0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯನ್ನೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನ್ನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ

☞ ಪ್ರತಿ ೧ ಡಬ್ಬಿಯಲ್ಲಿ ೯ ತೋಲ ನಶ್ಯದಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳುಹಿಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ:—ಮ್ಯಾನೇಜರ್, ಧರ್ಮ ವೈದ್ಯಶಾಲಾ,
69 ಚೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದ್ರಾಸ್.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ. ೪

ಕ್ರಯ ರೂ. ೪

106-3

ಗೆಜ್ಜೆ ನಾಗರ.

ಈ ಗೆಜ್ಜೆನಾಗರವನ್ನು ಎಂದಿಗೂ ಕಪ್ಪಾಗದಿರುವ ಸೀಮೆ ಹಿತ್ತಾಳೆಯಿಂದ ಅತಿಸುಂದರವಾದ ಹೊಗೆನೆ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆ ನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಪ್ರಯೋಜನವಿಲ್ಲ ಕ್ರಯ. ರೂ. ೪—೦—೦. ವಿ. ಪಿ ಪಿ ಖರ್ಚು ೦—೪—೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಗುರುಬಸವ ಅಂಡ್ ಕಂಪನಿ, ಸಾಹುಕಾರ್ ಪೇಟೆ, ಮದರಾಸ್

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

73—15

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಸ್ಪೆಷಲ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ಶಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿನ ಸಬ್ ಏಜಂಟರಾಗಿ ವಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನುಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫಿ ರವಾನಿಸಬೇಕು ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸ್ವರ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೭—೭—೧೯೦೬ ರಿಂದ ೩—೮—೧೯೦೬ ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದ ವಾರದ ... ಸಂಖ್ಯೆ
ಬೆಂಗಳೂರು ಪಟ್ಟಣ	0	0	6
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	20	16	12
ಮೈಸೂರು ,,	2	1	2
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಮಕೂರು ಡಿಸ್ಟ್ರಿಕ್ಟು	9	4	4
ಹಾಸನ ,,	0	0	0
ಚಿತ್ರದುರ್ಗ ,,	0	0	0
ಕಡೂರ್ ,,	47	19	28
ಶಿವಮೊಗ್ಗ ,,	1	0	37
ಜುಮ್ಲಾ	78	39	9[illegible]

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಶ್ರಾವಣ ಬಹುಳ ದ್ವಾದಶಿ ಗುರುವಾರದಿಂದ ಭಾದ್ರಪದ ಶುದ್ಧ ಪಾಡ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಆಗಸ್ಟ್.

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
16	ಗುರು ⚘	ದ್ವಾದಶಿ	55 44	ದ್ರಾ	34 50	[illegible]
17	ಶುಕ್ರ ·	ತ್ರಯೋ	58 50	ಪ್ನ	39-30	[illegible]
18	ಶನಿವಾ †	ಚತುರ್ದಶಿ	60-0	ಷ್ಯ	43-12	[illegible]
19	ರವಿವಾ ¶	ಚತುರ್ದಶಿ	0-12	ಶ್ಲೆ	46 42	[illegible]
20	ಚಂದ್ರ ‡	ಅಮಾ	0-58	ಮ	46 18	[illegible]
21	ಕುಜ *	ಪಾಡ್ಯಮಿ	2-15	ಪ್ಬ	55 42	[illegible]
22	ಬುಧ ,,	ತದಿಗೆ	54-23	ಪ್ತ	45-40	[illegible]

⚘ ಹರಿವಾಸರ. · ಪ್ರದೋಷಃ † ಶ್ರಾವಣ ಶನಿವಾರ. ¶ ಸರ್ವತ್ರ ಅಮಾವಾಸ್ಯ ‡ ಅಮಾಸೋಮ ವ್ರತಂ. * ಚಂದ್ರೋದಯ ,, ಬಲರಾಮ ಜಯಂತಿ, ದಗ್ಧಯೋಗಃ, ಸ್ವರ್ಣಗೌರೀವ್ರತಂ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ ರೂ.	೧೩-೮-೦	೧೩-[illegible]
ಕೆಂಬತ್ತಿ ಅಕ್ಕಿ ಅವಲ್	೧೩-೮-೦	[illegible]
,, ದುಯಂ	೧೩-೪-೦	[illegible]
ಜೀರಾಸಣ್ಣ ಅಕ್ಕಿ	೧೩ ೮-೦	[illegible]
ಸಣ್ಣಕ್ಕಿ ಅವಲ್	೧೪-೮-೦	೧೪-[illegible]
,, ದುಯಂ	೧೪-೦ ೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨-೬-೦	[illegible]
,, ದುಯಂ	೧೦ ೮ ೦	[illegible]
ಪೈರು ರಾಗಿ ಪಲ್ಲಾ ೧ಕ್ಕೆ	೩-೧೨-೦	[illegible]
ಕಾರಾಗಿ	೩-೪-೦	[illegible]
ಜೋಳ	೮-೮-೦	೮-[illegible]
ಹಲಸಂದೆ ಪಲ್ಲಾ ೧ಕ್ಕೆ	೧೨-೦-೦	[illegible]
ಬಿಳೀ ಅವರೆ	೧೧-೦-೦	[illegible]
ಹೆಸರು	೧೩-೦-೦	[illegible]
ಉದ್ದು	೧೨-೪-೦	[illegible]
ಕಡಲೆ	೦೨-೮-೦	[illegible]
ಎಳ್ಳು ಸೆ ೧೨೩ ಕ್ಕೆ	೨೨-೮-೦	[illegible]
ಹುರುಳಿ	೯-೦-೦	[illegible]
ಹರಳು ೧೨೩ ಸೇರಿಗೆ	೧೫-೮-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೮-೦	[illegible]
ಮೆಣಸಿನಕಾಯಿ	೪-೧-೦	[illegible]
,, ದುಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೫-೪-೦	ಮ [illegible]
ಒಳ್ಳೆಣ್ಣೆ ಮಣ ೧ಕ್ಕೆ	೩-೮-೦	[illegible]
ಹರಳೆಣ್ಣೆ ,,	೩-೮-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೧೧-೦-೦	[illegible]
ಉಪ್ಪು ,,	೬-೦-೦	[illegible]
ಹುಣಸೇ ಹಣ್ಣು	೦-೧೪-೦	[illegible]
,, ಹಳೇದು	೦-೮-೦	[illegible]
ತುಪ್ಪ ಮಣ ೧ಕ್ಕೆ	೧೨-೦-೦	[illegible]
ಸೀಮೆಯೆಂಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೪-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೦-೨-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ್ನ (ಪೌನ್) ಕೆಂಪು	೧೫-೪-೦	[illegible]
,, ,, ಪಚಿಮೆ	೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	[illegible]

Printed and published by the Rev. E[illegible] THOMPSON, M.A., the Proprietor and Ma[illegible] Wesleyan Mission Press, Mysore 16/8/1[illegible]

REGISTERED M. 20.

ವೃತ್ತಾಂತ ಪತ್ರಿಕೆ.

ಕ್ರಯ ೧ ರು ಪೋಸ್ಟು   ಕ್ರಯ ೧ ರು ಪ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨   ಮೈಸೂರು—ಸನ್ ೧೯೦೭ ನೇ ಇಸವಿ ಆಗಸ್ಟ್ ತಾರೀಖು ೨೨ ನೇ ಗುರುವಾರ.   ಸಂಚಿಕೆ ೧೨

ಇಂಗ್ಲೀಷಿನ ಪ್ರಸಿದ್ಧ ನೋವುಹರ.

86-13

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ಬೆನ್ನುನೋವು, ತಲೆಭಾರ, ಕೀಲುಗಳು, ಎದೆನೋವು, ಶೀತ, ಊಗೆಮುತ್ತು, ಹೊಟ್ಟೆಶೂಲೆ, ಕೀಲು ಬೆನ್ನು ಎದೆಗಳ ನೋವು, ಆಸ್ತಮ, ಈ ಪ್ರಕಾರವಾದ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯಪಡಬೇಕಾದದ್ದಿಲ್ಲ. ಈ ನೋವು ಬಾಧೆಗಳಿಗೆಲ್ಲಾ ಕ್ಲೆಮೆಂಟ್ ಅವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೇ ಸ್ಥಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ... ಉಪಯೋಗಿಸುವ ವಿಧಾನ ಮುಂತಾದ್ದನ್ನು ಬುಡ್ಡಿ ಜೊತೆಯಲ್ಲಿ ಹಚ್ಚಿದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗವು ತೊಲಗಿ ಸುಖಕರವಾಗುತ್ತೆ. ... ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಕೂಡಲೇ ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರೆಲ್ಲಾ ... ಇದರ ಗುಣವು ಅನುಭವಕ್ಕೆ ಬಂದಿದ್ದು. ಕ್ರಯ:— ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ; ... ರೂ, ... ರೂಪಾಯಿ, ... ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ... ವರಿಗೆ ೩ ಆಣೆ

ನಮ್ಮ ವಿಳಾಸ — ... ಕಂಪೆನಿ. ಅರ್ಮ, ಸಿಮೆಂಟ್ರಿ ರೋಡ್, ವೇಪೇರಿ, ಮದರಾಸ್.

ಹಿ ಮ ಲ ಯ.

... ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧವು ಮನೆ, ಅಂಗಡಿ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೂ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವದಾತೆಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ... ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಚ್ಚಿದ್ದು, ಚಪ್ಪರುವದು, ಬೆಂಕಿಯಲ್ಲಿ ಸುಟ್ಟು ಹೋದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನಿವಾರಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ರೂ. ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮಿಯೋಪತಿ ಯಂಬ್ರೋಕೇಷನ್

ಈ ತೈಲವು ಎಲ್ಲಾ ನೋವುಗಳಿಗೆ ಉಪಯೋಗಿಸತಕ್ಕದ್ದು. ಮೂರ್ಛೆ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ಹಾಕಿ ಅರ್ಧಗೂ, ೧ ರೂ. ಗೂ ಒಂದರಂತೆ ವಿಕ್ರಯ ಮಾಡಲ್ಪಡುವದು. ೧೨ ಕ್ಕೆ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಔಷಧಗಳೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿ ಕಂಪೆನಿ, ೨೩ ಸೆಕೆಂಡು ಬೀಚ್ ರ, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು. ಬೆಳೆದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-29

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜೆಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಮೈಸೂರು.

ಜ್ವ ರ ಹ ರಿ.

101-4

ಇದು ಸಾಧಾರಣ ಜ್ವರ, ಕಾಲಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ನಾಶಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖೆ ಸಬ್ ಓವರ್ಸಿಯರ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿನಗಳ ಹಿಂದೆ ಕಳುಹಿಸಿಕೊಟ್ಟ ೨೦ ಬೀಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಬೀಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ; ೩ ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಡಿ ಮ ಂ ಕ ರ್ಪೂ ರ.

Dinum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯವು ದರವು ದ್ವಾರಕಾ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗೋಪತಿಯವರು—ಡಿಮಂ ಕರ್ಪೂರವನ್ನು ನಾನೂ ನನ್ನ ಆಚೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಪಾರ್ಕುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—

ಕೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ರೋಡ್, ಮದ್ರಾಸ್

ಬೇಕಾಗಿದೆ.

112-2

ಹಿಂದುಸ್ಥಾನಿ, ಇಂಗ್ಲಿಷ್, ಕನ್ನಡ, ಈ ಅಕ್ಷರಗಳನ್ನು ಶಿಲಾಯಂತ್ರದಲ್ಲಿ ಬರೆದು ಅಚ್ಚು ಹಾಕುವುದು, ಭೂಪಟ (ಮ್ಯಾಪ್) ಬರೆಯುವುದು, ಲಿಥೋಗ್ರಾಫ್ ಪ್ರೆಸ್ಸಿನ ಎಲ್ಲಾ ಕೆಲಸಗಳನ್ನೂ ಮಾಡುವುದು—ಈ ವಿಷಯಗಳನ್ನು ಚನ್ನಾಗಿ ತಿಳಿದಿರುವ ಒಬ್ಬ ಸಂಬಳಗಾರನು ಬೇಕಾಗಿದೆ. ಯೋಗ್ಯತೆ ಪಡೆದಿರುವವರು ಮೈಸೂರು ಮಿಷನ್ ಪ್ರೆಸ್ ಮ್ಯಾನೇಜರಿಗೆ ಕೂಡಲೆ ಬರೆದುಕೊಳ್ಳಲಿ.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-13

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಬೆಲೆಯ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ನಾಗಪ್ಪ ವಾರ್ಪೋಷ್ಟು ಮಾಂಡ್ವಿ, ಮುಂಬಯಿ.

ಟಪಾಲ ಖರ್ಚ ಪ್ರಕಟ!   ಟಪಾಲ ಖರ್ಚ ಪ್ರಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಶಿ.

91-10



ವಿಲಾಯತೀ ಮಶೀಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೇ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕೊಳ್ಳಿರಿ. ೧೦೦ ಪುಡಿಕೆಗಳಿಗೆ ೨ ರೂಪಾಯಿ ಟಪಾಲಖರ್ಚ ಪ್ರಕಟ ವ್ಯಾಪಾರಸ್ಥರಿಗೆ ಕಮಿಷನ

ವಿಳಾಸ:—ವಾಯ್. ಜಿ. ದೀಕ್ಷಿತ, ಸ್ಟೇಷನರ, ಪೂನಾ ಸಿಟಿ

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

101-4

ಖಾಲಿ, ಯಾ ಸುಂದರ ಚಿತ್ರಗಳುಳ್ಳದ್ದು. ನಮೂನೆ ೧೬ ಕಾರ್ಡುಗಳಿಗೆ ೦॥ (ಸ್ಟ್ಯಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ. ಸ್ವದೇಶಿ ಮೆಂಥಾಲ್ ಸೀಸೆಗೆ ೫ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶೀ ಜಂಗೇರಿಯನ್ ಟೋಪಿಗಳು, ಇವುಗಳಿಗೆ ಟಪಾಲಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲಿ ಬರೆಯಬೇಕು. ಜವಾಬು ಅಪೇಕ್ಷಿಸುತ್ತವರು ರಿಪ್ಲೈ ಸ್ಟ್ಯಾಂಪು ಹಚ್ಚಿ ಬರೆದುಕೊಳ್ಳತಕ್ಕದ್ದು. Bhatt & Co., Poona city.

ಮೇಲು! ಬಹಳ ಮೇಲು!!   ಅಗ್ಗ! ಬಹು ಅಗ್ಗ

ಮೇಲಾದ ಸ್ವದೇಶಿ ಬ್ಲೂ ಬ್ಲಾಕ್ ಇಂಕ್

ಮೂರು ತೋಲಗಳುಳ್ಳ ಪೊಟ್ಟಣ ೧ ಕ್ಕೆ ಕ್ರಯ—೦—೧—

ಭಾಂಗಿ ಛಾರ್ಜು ೦—೩—೦

ಸ್ವದೇಶಿ ಇಂಕ್ ಪೌಡರ್, ಇದು ಇತರ ಎಲ್ಲಾ ಇಂಕಿಗಳಿಗಿಂತ ಬಹಳ ಮೇಲಾದದ್ದು. ಇದು ಆಫೀಸುಗಳಲ್ಲೂ ಬ್ಯಾಂಕುಗಳಲ್ಲೂ ಸ್ಕೂಲುಗಳಲ್ಲೂ ಉಪಯೋಗಿಸತಕ್ಕದ್ದು. ಇಂಥಾ ಮೇಲಾದ ಪುಡಿಯು ಇಷ್ಟು ಸುಲಭ ಕ್ರಯಕ್ಕೆ ಮತ್ತೆಲ್ಲಿಯೂ ದೊರೆಯಲಾರದು

ಈ ಇಂಕಿನಿಂದ ಬರೆದ ಕಾಗದವನ್ನು ನೀರಿನಲ್ಲಿ ನೆನೆಸಿ ಬೆರಳಿನಿಂದ ಅಕ್ಷರಗಳನ್ನು ಉಜ್ಜಿದಾಗ್ಯೂ ಕಲಸಿಹೋಗದು. ಸ್ವಲ್ಪವನ್ನು ತರಿಸಿ ಪರೀಕ್ಷಿಸಿರಿ. ಇದನ್ನು ಉಪಯೋಗಿಸುವ ವಿಧವು ಡಬ್ಬಿಗೆ ಸುತ್ತಿರುವ ಕಾಗದದಲ್ಲಿ ಬರೆದಿರುತ್ತೆ.

☞ ನಾಲ್ಕು ಡಬ್ಬಿಗೆ ಕಮ್ಮಿಯಾಗಿ ತರಿಸುವವರಿಗೆ ಭಾಂಗಿ ಛಾರ್ಜು ಜಾಸ್ತಿಯಾಗುವದರಿಂದ ೪ ಡಬ್ಬಿಗಿಂತ ಕಮ್ಮಿಯಾಗಿ ದರಖಾಸ್ತು ಕಳುಹಿಸಕೂಡದು. ನಮ್ಮ ವಿಳಾಸ:—

ವಿಳಾಸ   103-4

ಸ್ವದೇಶಿ ಇಂಕ್ ಡಿಪೊ, ಸಾಹುಕಾರ್ ಪೇಟ್, ಮದ್ರಾಸ್.

ಅನಂತವ್ರತಕ್ಕೆ ಅನಂತನ ದಾರಗಳು.

ರೂಪಾಯಿ ೧ಕ್ಕೆ ೩, ೩, ೪, ೧೦, ೧೨ ಜತೆಗಳು ದಾಗ್ಗಿಕೆ ಹರಿಸಿಕೊಳ್ಳಿ ವಿಳಾಸ—ಎಚ್ ಎಸ್ ರಾವ್ ಬ್ರದರ್ಸ್, ೨೬೩, ಚಿಕ್ಕಪೇಟೆ, ಬೆಂಗಳೂರು ಸಿಟಿ

REDUCTION SALE!!!

PRICES REDUCED BY HALF.

APPLY SHARP.

COPY BOOKS.

Jackson's Upright Penmanship Nos 1 to 4, Price @ 1 Anna each, now reduced to ೫೮ pies each

THE MANAGER,
C. L. S Book Depot,
Mysore

ಅಗ್ಗ ! ಅಗ್ಗ !! ಬಹು ಅಗ್ಗ !!!

ಮೇಲಾದ ಜರ್ಮನ್ ಸಿಲ್ವರ್.

ಫುಡುಚ್ಚೇರಿ ಬೋಲ್ ಕಾಲ್‌ಗೊಲಸು

ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಜಬೂತಾದ ತಿರಿಪಿನಿಂದಲೂ ಬೆಳ್ಳಿ ಗೊಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಚೊಕ್ಕಬೆಳ್ಳಿಯ ಘುಡಿಯಿಂದ ಅಂಟಿಸಿ ಬಹಳ ನಾಜೋಕಾಗಿ ತಯಾರಿಸಲ್ಪಟ್ಟಿರುತ್ತೆ ಎಂದಿಗೂ ಬಣ್ಣ ಕೆಡಲಾರದು ಇದನ್ನು ನೋಡಿದವರು ಚೊಕ್ಕಬೆಳ್ಳಿಯ ರುಳಿಯೆಂದು ಅನ್ನುವರು. ಶ್ರೀಮಂತರು ಸಹ ಇದನ್ನೇ ಉಪಯೋಗಿಸುತ್ತಾರೆ. ನೋಡುವವರ ಕಣ್ಣು ಚದರುವಷ್ಟು ಕಾಂತಿಯೂ ಪ್ರಕಾಶವೂ ಉಳ್ಳದ್ದು ಒಂದು ಜೊತೆಯನ್ನು ತರಿಸಿ ಪರೀಕ್ಷಿಸಿರಿ ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸ ಲಭಕ್ರಯ

ದೊಡ್ಡವರಿಗೆ	ಜೊತೆ	೧ ಕ್ಕೆ	ರೂ.	೨	೦	೦
ಚಿಕ್ಕವರಿಗೆ	ಜೊತೆ	೧	,,	,,	೧ ೧೨	೦
ಸಣ್ಣವರಿಗೆ	ಜೊತೆ	೧	,,	,,	೧ ೮	೦
ಮಕ್ಕಳಿಗೆ	ಜೊತೆ	೧	,,	,,	೧ ೬	೦

ಜರ್ಮನ್ ಸಿಲ್ವರ್ ಘುಟ್ಟಿ ಕಾಲ್ಕಡಗ.

ಅನೇಕ ಬೆಳ್ಳಿಯ ರಂಗಿಗೆ ಸಮಾನವಾದ ಜರ್ಮನ್ ಸಿಲ್ವರ್ ಕಂಬಿಯಿಂದ ತಯಾರಿಸಲ್ಪಟ್ಟ ಘಟ್ಟಿಕಾಲ್ಕಡಗಗಳು ಬೇಕೆಂದು ಕೋರಿದ್ದರಿಂದ ಎಷ್ಟು ವರುಷಗಳ ಪರ್ಯಂತರ ಉಪಯೋಗಿಸುತ್ತ ಬಂದಾಗ್ಯೂ ಚೊಕ್ಕಬೆಳ್ಳಿಯ ರಂಗಿಗೆ ಸ್ವಲ್ಪವೂ ವ್ಯತ್ಯಾಸತೋರದಂತೆ ಇರುವ ಕಂಬಿಯನ್ನು ಆಸ್ಟ್ರಿಯಾ ದೇಶದಿಂದ ತರಿಸಿ ಅದಕ್ಕೆ ಎಂಟು ಪಟ್ಟಿಗಳು ಮೇಲಾದ ಜರ್ಮನ್ ಸಿಲ್ವರ್ ಗಂಡುಗಳನ್ನು ಚೊಕ್ಕಬೆಳ್ಳಿಯ ಘುಡಿಯಿಂದ ಕಡಗದ ಕೊನೆಯಲ್ಲಿ ಅಂಟಿಸಿ ನೋಡುವವರಿಗೆ ಸ್ವಲ್ಪವಾದರೂ ಚೊಕ್ಕಬೆಳ್ಳಿಯ ಕಡಗವಲ್ಲವೆಂದು ನೀಡ ತೋರದ ಹಾಗೆ ಬಹಳ ಸುಂದರವಾಗಿ ತಯಾರಿಸಲ್ಪಟ್ಟಿರುತ್ತೆ

ನಂಬರು	೧	ದೊಡ್ಡವರಿಗೆ	ರೂ	೦	೧೨	೦
,,	೨	ಚಿಕ್ಕವರಿಗೆ	,,	೦	೬	೦
,,	೩	ಹುಡುಗಿಯರಿಗೆ	,,	೦	೧೩	೦
,,	೪	ಸಣ್ಣಮಕ್ಕಳಿಗೆ	,,	೦	೧೦	೦

ಮೈಸೂರು ದೇಶದ ಸುಂದರವಾದ ಡಾಬು (ವಡ್ಯಾಣ).

ಇದು ಹಿಂದೆ ಹೇಳಲ್ಪಟ್ಟ ತಗಡಿನಿಂದ ಮಜಬೂತಾದ ಕೊಕ್ಕೆಗಳನ್ನಿಟ್ಟು ತಯಾರಿಸಲ್ಪಟ್ಟಿರುತ್ತೆ. ಒಬ್ಬರು ಒಂದನ್ನು ತರಿಸಿದರೆ ಎಲ್ಲರೂ ಕೇಳುವರು ಇದನ್ನು ನೋಡಿದವರು ಬೆಳ್ಳಿಯಲ್ಲವೆಂದು ಹೇಳಲಾರರು ಇದರ ಬೆಲ್ಟು ರಂಗುಗಳಿಗೆ ನಾವು ಜವಾಬ್ದಾರರಾಗಿರುವೆವು ಇದರ ಕೆಲಸದ ಸೌಂದರ್ಯವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ! ಒಂದನ್ನು ತರಿಸಿ ಹತ್ತು ವರುಷಗಳ ವರೆಗೂ ಉಪಯೋಗಿಸಿ ನಂತರ ಕೆಟ್ಟಾಗ್ಯೂ ನಾವು ವಾಪಸು ಪಡೆದು ಇದರ ಮೊಬಲಗನ್ನು ಹಿಂದಕ್ಕೆ ಕಳಿಸುವೆವು

ನಂಬರ್	೧	ದೊಡ್ಡವರಿಗೆ	ರೂ	೧	೮	೦
,,	೨	ಚಿಕ್ಕವರಿಗೆ	,,	೧	೩	೦
,,	೩	ಮಕ್ಕಳಿಗೆ	,,	೧	೦	೦

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ವೃತ್ತಾಂತ ಪತ್ರಿಕೆ

ಸ ೧೯೦೬ ನೇ ಇಸವಿ ಆಗಸ್ಟ್ ತಾ॥ ೨೩ ನೇ ಗುರುವಾರ

ಗತಿಸಿದ ಮೆ॥ ಹಾಡ್ಯದ ದಾಸಪ್ಪನವರು

ಇವರ ಹೆಸರನ್ನು ಶಾಶ್ವತಪಡಿಸಿದ್ದು

ರಾಜಧಾನಿಯ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ನೆನ್ನೆ ಬೆಳಿಗ್ಗೆ ಒಂದು ಅಪೂರ್ವವಾದ ಸಭೆಯು ಸೇರಿತ್ತು ವಿದ್ಯಾಭ್ಯಾಸದ ಇಲಾಖೆಯ ಆಕ್ಟಿಂಗ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ॥ ವಿಯರ್ ಸಾಹೇಬರು ಅಗ್ರಾಸನವನ್ನು ವಹಿಸಿದರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದ ೨೫ ನೆ ವಯಸ್ಸಿನಲ್ಲಿ, ಸಂಜನಗೂಡಿನ ಹೊಳೆಯಲ್ಲಿ ಅಕಸ್ಮಾತ್ತಾಗಿ ಬಿದ್ದು ಕಾಲವಾದ ಮೆ॥ ಹಾಡ್ಯದ ದಾಸಪ್ಪನವರ ಹೆಸರನ್ನು ಅವರು ಮೊದಲು ವಿದ್ಯಾಭ್ಯಾಸ ಮಾಡಿದ ಮೇಲ್ಕಂಡ ಸ್ಕೂಲಿನಲ್ಲಿ ಶಾಶ್ವತಪಡಿಸಿದರು ಮೆ॥ ದಾಸಪ್ಪನವರ ವಿದ್ಯಾಭ್ಯಾಸ ಅವರ ಅಪೂರ್ವವಾದ ಬುದ್ಧಿಶಕ್ತಿ ಅವರ ವಿದ್ಯಾಪ್ರಾಶಸ್ತ್ಯತೆ ಅವರ ಪ್ರೀತಿ ದಯ ಮನೋನಿಷ್ಠೆಯು, ಅವರ ಸದ್ಗುಣ ಸಚ್ಚರಿತ್ರೆ ಈ ಮೊದಲಾದ ವಿಷಯಗಳನ್ನೆಲ್ಲಾ ಮೆ॥ ಬಂಟ, ಮೆ॥ ವಿಯರ್ ಮೆ॥ ಬಿದಾನಪ್ಪ, ಮೆ॥ ರೀಸ್ ಮೊದಲ ದವರು ವಿವರಿಸಿದರು ಗತಿಸಿದ ಮೆ ದಾಸಪ್ಪನವರ ಹೆಸರಿನಲ್ಲಿ ೫೦೦ ರೂಪಾಯಿ ಸಂಡ ಹಾಕಿದಾರೆ ಈ ಫಂಡಿನಿಂದ ಬಡ್ಡಿ ಉತ್ಪತ್ತಿಯಾಗುವ ೨೫ ರೂಪಾಯಿಯನ್ನು ಮಿಷನ್ ಹೈಸ್ಕೂಲಿನಲ್ಲಿ ಪ್ರತಿ ವರ ಷವೂ ಇಂಗ್ಲಿಷ್ ಭಾಷೆಯಲ್ಲಿ ಬುದ್ಧಿವಂತನೆನಿಸಿಕೊಂಡವನಿಗೆ ಬಹುಮಾನ ಕೊಡುವರು ಒಂದು ಕಲ್ಲಿನ ಮೇಲೆ ಲೆಟರ್ ದಾಸಪ್ಪನವರ ಹೆಸರು ಮುಂತಾದ್ದನ್ನು ಕೆತ್ತಿಸಿ ಆ ಸ್ಕೂಲಿನ ಗೋಡೆಯಲ್ಲಿ ನೆಟ್ಟಿಸಿ ಅವರ ತಸ್ವೀರನ್ನು ಕಟ್ಟಿಸಿದಾರೆ ಮನೆಯವರೆಲ್ಲ ಬಂಧುಬಳಗಗಳೆಲ್ಲಾ ಉಪಾಧ್ಯಾಯರೆಲ್ಲ ಸ್ನೇಹಿತರೆಲ್ಲಾ ಅಚ್ಚುಮೆಚ್ಚಾಗಿದ್ದು ಸರ್ವ ಶ್ರೇಷ್ಠವಾದ ಹೊಗಳಿಕೆಯನ್ನು ಸಂಪಾದಿಸಿಕೊಂಡ ಮೆ॥ ದಾಸಪ್ಪನವರು ಅಷ್ಟು ಚಿಕ್ಕ ವಯಸ್ಸಿನಲ್ಲೇ ಕಾಲವಾದದ್ದು ತುಂಬಾ ಪರಿತಾಪಕರವಾಗಿದೆ

ಬಹುಮಾನ ಪಡೆದ ವರ್ತಮಾನವು

(೧) ಪ್ರತಿ ಮೇಲಿನಂದ ಲೇಖನದ ಮೇಲೆ "ಬಹುಮಾನದ ಮೇಲೆ" ವೆಂದು ಬರೆದು ಲೇಖಕರ ಹೆಸರನ್ನು ಪೂರ್ಣವನ್ನು ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ಹಾಳೆಯ ಒಂದು ಕಡೆ ಮಾತ್ರ ಬರೆದು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ದಿನದ ಒಳಗೆ ನಡೆದ ವರ್ತಮಾನವಾಗಿರಬೇಕು ಅರ್ಥವು ಸುಲಭವಾಗಿ ತಿಳಿಯುವಂತೆ ಇರಬೇಕು (೩) ಪ್ರತಿ ಸಂಚಿಕೆಯ ಲೇಖನವು ನಮ್ಮ ಆಫೀಸಿಗೆ ಪ್ರತಿವಾರ ಸೋಮವಾರ ಪ್ರಾತಃಕಾಲದ ಒಳಗೆ ತಲುಪಬೇಕು (೪) ಬಹುಮಾನ ಪಡೆಯದ ಲೇಖನಗಳನ್ನು ವಾಪಸು ಕಳುಹಿಸುವದಿಲ್ಲ (೫) ಬಹುಮಾನದ ವಿಷಯವಾಗಿ ನಮ್ಮ ತೀರ್ಮಾನವೇ ಅಂತಿಮ (೬) ಬಹುಮಾನ ಪಡೆದ ಲೇಖನಗಳನ್ನು ವೃತ್ತಾಂತ ಪತ್ರಿಕೆಯ ಕಡೆಯ ಸೋಮವಾರ ಪ್ರಕಟಿಸುವದು ಒಂದೇ ತಿಂಗಳಲ್ಲಿ ಒಬ್ಬನ ಲೇಖನಕ್ಕೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಇದನ್ನು ಕಳುಹಿಸಿದ ಮ॥ ರಾ॥ ಕೋದಂಡರಾಮಶೆಟ್ಟಿ, ಜನರಲ್ ಮರ್ಚೆಂಟ್ಸ್, ಬಳೆಪೇಟೆ, ಇವರಿಗೆ ಈ ವಾರದ ಬಹುಮಾನವನ್ನು ಕೊಡಿಸಿದೆವೆ]

ಬನಪ್ಪನ್ ಪಾಳ್ಯೆದಲ್ಲಿ ಕಳುವುಗಳು.

ಶ್ರೀ ಚಂದ್ರಮೌಳೇಶ್ವರಸ್ವಾಮಿ ದೇವಸ್ಥಾನದ ಬೀದಿಯಲ್ಲಿರುವ ಕೆ. ನಾರಾಯಣಶೆಟ್ಟರು ನನಗೆ ಈಗ ಹಾಕಿಕೊಂಡು ತಮ್ಮ ಸ್ವಂತ ಗ್ರಾಮಕ್ಕೆ ಹೋಗಿದ್ದರು. ೧೬ನೆ ತಾ ಗುರುವಾರ ರಾತ್ರಿ ಸುಮಾರು ೩ ಘಂಟೆ ಸಮಯದಲ್ಲಿ ಈ ಮನೆಗೆ ಕಳ್ಳರು ಬಿದ್ದು ಬೀಗವನ್ನು ಒಡೆದು ಮನೆಯೊಳಕ್ಕೆ ಪ್ರವೇಶಿಸಿ ಒಳಗೆಯಿಂದ ಬಾಗಿಲು ಗದ್ದಿ ಹಾಕಿಕೊಂಡು ಒಳಗೆ ಪ್ರತ್ಯೇಕವಾಗಿ ಹಾಕಿದ್ದ ಮನೆ ಬೀಗವನ್ನು ಒಡೆಯುವದಕ್ಕೆ ಪ್ರಯತ್ನಪಡುತ್ತಿದ್ದರು ಸದರಿ ಮನೆಯ ಪಕ್ಕದಲ್ಲಿ ಬೀದಿಗೆ ವಾಸವಾಗಿದ್ದ ರಾಮರಾವ್ ಹೆಡ್ ಕಾನ್‌ಸ್ಟೆಬಲ್‌ರು ಎಚ್ಚತ್ತು ಕಳ್ಳರು ಬೀಗ ಒಡೆಯುವ ಶಬ್ದವನ್ನು ಕೇಳಿ ಹೊರಕ್ಕೆ ಬಂದು ನೋಡಲಾಗಿ ಯಾರೂ ಇತರ ಜನಗಳು ಇರಲಿಲ್ಲ ಆದ್ದರಿಂದ ಆಜೂಬಾಜೂದಲ್ಲಿ ವಾಸವಾಗಿದ್ದ ಜನಗಳನ್ನು ಎಬ್ಬಿಸಿದರು ಸದರಿ ಮನೆಗೆ ಕೊಂಚ ದೂರದಲ್ಲಿ ರಾಜಾಸಾಹೇಬ್ ಶೆಟ್ಟಿ ಎಂಬುವರ ಮನೆಯಲ್ಲಿ ಘಂಟೆನಾಳ್ಕು ಅಪ್ಪತ್ಯಸ್ವಾಮಿಯವರ ಹರಿಕಥಾ ಕಾಲಕ್ಷೇಪ ನಡೆಯುತ್ತಿತ್ತು ಅಲ್ಲಿ ದೊಡ್ಡ ಸಭೆ ಸೇರಿತ್ತು ಕಳ್ಳರ ವರ್ತಮಾನವನ್ನು ಕೇಳಿ ಈ ಸಭಿಕರು ದೇವರ ಮಹಿಮೆ ಕೇಳುವದನ್ನು ಬಿಟ್ಟು ಕಳ್ಳರು ಪ್ರವೇಶಿಸಿರುವ ಮನೆಯ ಹತ್ತರಕ್ಕೆ ಹೋದರು ಅಷ್ಟರಲ್ಲಿ ಪೋಲೀಸಿನವರೂ ಅಲ್ಲಿಗೆ ಬಂದರು ಸದರಿ ಪೋಲೀಸಿನವರು ಅಲ್ಲಿ ಸೇರಿದ್ದ ಜನಗಳ ಬೀದಿ ನಡೆದ ಮನೆಯ ಹಿಂದುಗಡೆ ಕೆಲವರು, ಮುಂದುಗಡೆ ಕೆಲವರು ಕಾವಲು ಇಟ್ಟು ಮನೆಯೊಳಕ್ಕೆ ಹೋಗಿ ನೋಡಲಾಗಿ ಸದರಿ ಮನೆಯ ಬಾಗಿಲ ಮಾತ್ರ ಒಡೆದಿದ್ದವು ಈ ಜನಗಳ ಕೂಗು ಗಲ್ಲಿಗೆ ಕಿವಿಗೆ ಬಿದ್ದಾಗ ಅವರು ಮನೆಯ ಹಿ ಮಾಳಿಗೆ ಹತ್ತಿ ಹಾರಿ ಹೋದ ಇಳಿದು ಪರಾರಿಯಾದರು ಅವರನ್ನು ಹಿಡಿಯಬೇಕೆನ್ನುತ್ತಿದ್ದ ಪೋಲೀಸಿನವರು ಊರೆಲ್ಲಾ ಹುಡುಕಿದರೂ ಸಿಕ್ಕಲಿಲ್ಲ ನಂತರ ಪೋಲೀಸಿನವರು ಸದರಿ ಮನೆಯ ಬಳಿ ಒಂದು ನೋಡಿ ಬೇರೇ ಬೀಗ ಹಾಕಿ ಬೀಗದ ಕೈ ಸೀಲು ಮಾಡಿಕೊಂಡು ಹೋದರು ಮನೆಯಲ್ಲಿ ಪಾತ್ರೆಗಳು ಹೋಗಿರುವ ಸಮಾಚಾರವು ಮನೆಯ ಯಜಮಾನನು ಬಂದ ನಂತರ ಗೊತ್ತಾಗಬೇಕು ಆ ಮನೆಯ ಬಳಿ ಪೋಲೀಸ್ ಉಸ್ತುವಾರಿ ಇಟ್ಟಿರುತ್ತಾರೆ ಮಾರನೇ ದಿನ ಪೋಲೀಸಿನವರು ಬಹಳ ಪ್ರಯಾಸಗಳೊಂದಿಗೆ ಸ್ವಲ್ಪ ಗಸ್ತು ಮಾಡಿ, ಇಬ್ಬರು ಗುಮಾನಿ ಆಸಾಮಿಗಳನ್ನು ಹಿಡಿದು ಲಾಕಪ್ಪಿನಲ್ಲಿ ಇಟ್ಟು ತನಿಖೆ ಮಾಡುತ್ತಿದ್ದಾರೆ

ಈ ಊರು ಪಳೆ ಪೋಸ್ಟ್ ಆಫೀಸು ಸೈಡ್ ರೋಡು ಚಿಕ್ಕ ೧೫ ನೆ ತಾ ಶುಕ್ರವಾರ ರಾತ್ರಿ ನಾರಾಯಣ ಬಡವರ್ ಚಡ್ ಸೇಟು ಎಂಬುವನ ಪ್ಯಾಟರಿ ಮಾಡುತ್ತಿದ್ದ ಅಂಗಡಿಗೆ ಕಳ್ಳರು ಬಿದ್ದು ಅಂಗಡಿಗೆ ಹಾಕಿದ್ದ ಬೀಗ ಒಡೆಯುವದಕ್ಕಾಗದೆ ಹಲಗೆಗಳನ್ನು ಹಾಕಿರುವ ಅರದಂತೆ ಊಗದವನ್ನು ಗಡಾರಿಯಿಂದ ಮೀಟಿದರು ಅಂಗಡಿ ತೆರೆಯಿತು ನಂತರ ಅಂಗಡಿ ಒಳಗೆ ಪ್ರವೇಶಿಸಿ ಒಳಕ್ಕೆ ಹೋಗಿ ಒಳಗೆ ಇಟ್ಟಿದ್ದ ಮರದ ದೊಡ್ಡ ಪೆಟ್ಟಿಗೆಯ ಬೀಗವನ್ನು ಒಡೆದು ಪೆಟ್ಟಿಗೆ ತೆಗೆದು ಒಳಗಿದ್ದ ನಗದು ರೂಪಾಯಿ ಸುಮಾರು ೧೫೦, ಇನ್ನೂ ಕೆಲವು ಸಣ್ಣ ಇಟ್ಟಿದ್ದ ನಗಗಳು ೨೦೦ ರೂಪಾಯಿ, ಇನ್ನೂ ಕೆಲವು ಸಣ್ಣ ನಾಗಗಳು ಸೇರಿ ೫೦೦ ರೂಪಾಯಿ ಬೆಲೆಯಷ್ಟು ಕದ್ದುಕೊಂಡು ಹೋಗಿದಾರೆ ಮಾರನೇ ದಿನ ಬೆಳಿಗ್ಗೆ ಮಾಲೀಕನು ಬಂದು ನೋಡಿ ವ್ಯಸನಾಕ್ರಾಂತನಾಗಿ ಪೋಲೀಸಿಗೆ ರಿಪೋರ್ಟು ಮಾಡಿದಾನೆ ಆದರೆ ಬಂದ ಈ ಆಶ್ಚರ್ಯಕರವಾದ ಕಳವನ್ನು ನೋಡಿ ಪಟ್ಟಣದ ಜನರೆಲ್ಲಾ ಕೊಂಡು ಹೋಗಿದಾರೆ ಕಳ್ಳರ ಅವಾಂತ್ರಕ್ಕೆ ಊರಿನ ಜನರೆಲ್ಲಾ ಬಹಳ ಭಯಪಡುತ್ತಿದ್ದಾರೆ ಪೋಲೀಸಿನವರು ಎಷ್ಟು ಜಾಗರೂಕತೆಯಿಂದ ಬೀಟು ಮಾಡಿದಾಗ್ಯೂ ಎಂಟು ದಿನಗಳಿಗಾಗಿ ಎರಡು ಚೋರಿ ಬರುತ್ತೆ ಪ್ಯಾಲೇಸು ರೋಡು ಲೋಕದಲ್ಲೇ ಈ ರೀತಿ ಪರಿಣಮಿಸಿದರೆ ಸಂಗತಿ ಗೋಡುದಾಗಳ ಬಾಯನ್ನು ತಿಳಿಯದು

ರಾಜಧಾನಿಯಲ್ಲಿ ಮಿಷನ್ ಆಸ್ಪತ್ರೆಯನ್ನು ಪ್ರತಿಷ್ಠೆಮಾಡಿದ್ದು

ಶ್ರೀಮನ್ ಮಹಾರಾಣಿಯವರು ದಯಮಾಡಿದ್ದದ್ದು

ಈ ತಿಂಗಳ ೨೦ ನೆ ತಾ ಮಂಗಳವಾರ ಸಾಯಂಕಾಲ ರಾಜಧಾನಿಯ ವೆಸ್ಲಿಯನ್ ಮಿಷನ್ನವರು ಪಟ್ಟಣದಲ್ಲಿ ಉತ್ತರಪಾರ್ಶ್ವದ ಆಡ್ಡಾ ಬೀದಿಯಲ್ಲಿ ಮಿಷನ್ ಆಸ್ಪತ್ರೆಯನ್ನು ಕಟ್ಟಿಸಿದ್ದನ್ನು ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರ್ ಯವರು ದಯಮಾಡಿ ಪ್ರತಿಷ್ಠೆ ಮಾಡಿದರು ಇದಕ್ಕಾಗಿ ಆ ಕಟ್ಟಡವನ್ನು ನೇತ್ರಾನಂದವಾಗಿ ಅಲಂಕರಿಸಿದ್ದರು. ಆಸ್ಪತ್ರೆ ಪತ್ರಿಕೆಗಳನ್ನು ನಡೆದ ರಾಜದರ್ಬಾರಿ ಸವಾರಿ ಉದ್ಯೋಗಸ್ಥರೂ ಯೂರೋಪ್ಯರ್ ಸಹ ರರೂ ದೊರೆಸಾನಿಗಳೂ ಮುಖ್ಯ ಮುಖ್ಯವಾದ ದೇಶೀಯ ದೊಡ್ಡ ಸ್ತ್ರೀಯರೂ ಸಾಹುಕಾರರೂ ಪಕೀಲರೂ ಹಾಜರಾಗಿ ಸಾಲು ಸಾಲಾಗಿ ದರ್ಜಾವಾರಾಗಿ ಸಭೆಯನ್ನು ಅಲಂಕರಿಸಿದರು ಆ ದಿವಸ ಸಾಯಂಕಾಲ ಸನ್ನಿಧಾನವು ನೆರವೇರಿಸಿಕೊಂಡು ಹೋಗುವುದಕ್ಕಾಗಿ ಮಿಷನ್ ಫಾದರ್ ವೇವರವರೂ ಯೂರೋಪ್ಯನ್ ಮತ್ತು ದೇಶೀಯ ಗಳೂ ಬೆಂಗಳೂರಿನಿಂದ ದಯಮಾಡಿದ್ದರು ಸಾಯಂಕಾಲ ೫ ಗಂಟೆಗೆ ಶ್ರೀಮನ್ ಮಹಾರಾಜರವರು ಹಿಂದು ಮುಂದೆ ೧೦ ೧೨ ಮಂದಿ ಫ್ ಸವಾರರನ್ನು ಬಿಟ್ಟುಕೊಂಡು ಶ್ರೇಷ್ಠವಾದ ಜೋಡಿ ಕುದುರೆಯ ರೋಟಿನಲ್ಲಿ ಆಸ್ಪತ್ರೆಯ ಕಟ್ಟಡಕ್ಕೆ ಚಿತ್ತೈಸಿದರು ಮೆ॥ ಗ ರೀನ್, ಸಾಹೇ, ಸ್ಪೆನ್ಸರ್ ಮೊದಲಾದ ಯೂರೋಪ್ಯನ್ ಮಿಷನರಿಗಳು ಕಾದಿದ್ದು ಶ್ರೀಮನ್ ಮಹಾರಾಜರವರನ್ನು ಎದುರುಗೊಂಡು ಬಿಜಯಂಗೈಸಿ ಕರೆದುಕೊಂಡು ಹೋಗಿ ಅಗ್ರಾಸನವನ್ನಿಟ್ಟಿದರು ಆರುಪಾಯಿ ರೇನ್ ಮೆ॥ ಥಾಂಪ್ಸನ್ ಸಾಹೇಬರು ದೇವರ ಪ್ರಾರ್ಥನೆ ಮಾಡಿ, ಸ್ತೋತ್ರಗಳನ್ನು ಹಾಡಿಸಿ, ಆ ದಿವಸದ ಕಾರ್ಯಗಳು ಆ ಕಟ್ಟಡವನ್ನು ಅರ್ಪಿಸುವಂತೆಯೂ ಅದರ ಉದ್ದೇಶಗಳು ಪ್ರಾರ್ಥನಾಪೂರ್ವಕವಾಗಿ ಕರ ಸನ್ಮಾನ ಬೇಡಿಕೊಂಡರು

ಆಸ್ಪತ್ರೆಯ ಸಂಕ್ಷೇಪ ಚರಿತ್ರೆ

ಈ ಆಸ್ಪತ್ರೆ ಕಟ್ಟುವದರ ಪ್ರಾರಂಭದಿಂದಲೂ ಅದಕ್ಕಾಗಿಯೇ ಬುದ್ಧಿ ಶಕ್ತಿ ಸಾಮರ್ಥ್ಯ ಸಮಯಗಳನ್ನು ವಿನಿಯೋಗಿಸಿ ಸಹಾಯ ಕಾರ್ಯಗಳನ್ನು ನಡೆಸುತ್ತ ಬಂದಿರುವ ರೆವ್ ಮೆ॥ ಜಾರ್ಜ್ ಸಾಹೇಬರು ಈ ಕಟ್ಟಡದ ಉದ್ದೇಶ, ಪ್ರಾರಂಭ, ಕಾಮಗಾರಿ, ಖರ್ಚು ಮುಂತಾದ ವಿಷಯಗಳನ್ನು ಕುರಿತು ಒಂದು ಸಂಕ್ಷೇಪ ಪತ್ರವನ್ನು ಓದಿ ಶ್ರೀಮನ್ ಮಹಾರಾಜರವರಿಗೆ ಸಭಾಸದರಿಗೂ ಅರ್ಪಣೆ ಮಾಡಿದರು ಅದರ ಮುಖ್ಯ ವಿಷಯಗಳೇನೆಂದರೆ—

CHAMBERLAIN'S PAIN BALM

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು

958



ಮೈನ ಒಳಗಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಬಜ್ಜದ ಕಾಲುಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳೆಲ್ಲಾ ಮಾಂಸಖಂಡಗಳೆಲ್ಲಾ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇದೇ ಇವೆಲ್ಲಾ ನಿಜವಾಗಿ ಉಂಟಾಗುವುದೋ ಅಗ್ಗ ನಿಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೈಯೆಲ್ಲಾ ವ್ಯಾಪಿಸುತ್ತದೆ ಒಡನೆಯೆ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಕುಟ್ಟನ್ನೇ ಕಿತ್ತು ಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಈ ಪಟ್ಟಣದ ಮತ್ತು ಸುತ್ತುಮುತ್ತಲಿನ ಗ್ರಾಮಗಳ ಪ್ರಜೆಗಳಿಗೆ ೋಗಾದ್ಯುಪದ್ರಗಳ ಸಂಕಟವನ್ನು ಪರಿಹರಿಸುವುದಕ್ಕೆ ಏರ್ಪಾಡು ಡಬೇಕೆಂದು ನಾವು ಬಹುಕಾಲದಿಂದಲೂ ಕುತೂಹಲಪಡುತ್ತಿದ್ದೆವು. ು ವರುಷಗಳ ಕೆಳಗೆ ಈ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಪ್ರಾರಂ ಾಗಿ ಅಪಾರವಾದ ಕಷ್ಟ ದುಃಖಗಳನ್ನುಂಟುಮಾಡಿದ್ದನ್ನು ನಾವುಗ ರೂ ಮರೆತಿಲ್ಲ. ಆಗ್ಗೆ ಮೆ|| ಹೋಲ್ಡ್ಸ್‌ವರ್ತ್ ದೊರೆಯವರೂ ವರ ಪತ್ನೀಯವರೂ ರೋಗಿಗಳ ವಿಷಯದಲ್ಲಿ ಅಪಾರವಾಗಿ ಪರಿತಾಪ ಟ್ಟು, ಅವರಿಗೆ ತಮ್ಮ ಕೈಲಾದಮಟ್ಟಿಗೂ ನಾನಾ ರೀತಿಯಲ್ಲಿ ಸಹಾ ವು ಮಾಡಿದರು. ಅನೇಕಾನೇಕರು ಅವರಿಂದ ಪಡೆದ ಉಪಕಾರಗಳನ್ನು ಗಲೂ ನೆನಸಿಕೊಂಡು ಅವರನ್ನು ಹೊಗಳುತ್ತಿದ್ದಾರೆ ಆ ದಂಪತಿಗ ು ತಮ್ಮ ಕೆಲಸವನ್ನು ನನಗೆ ವಹಿಸಿ, ೧೯೦೧ ನೆ ಜನವರಿಯಲ್ಲಿ ಲೆಂಡಿಗೆ ಪ್ರಯಾಣಮಾಡಿದರು. ನಾನು ಇಲ್ಲಿನ ಪ್ರಜೆಗಳ ಕಟವನ್ನು ಪರಿಹರಿಸುವುದಕ್ಕೆ ವೈದ್ಯಶಾಲೆಯನ್ನು ಸ್ಥಾಪಿಸಬೇ ಕೆಂದು ಯೋಚಿಸಿ, ಅವರಿಗೆ ತಿಳಿಸಿದೆನು. [illegible]

ಬಂದಿರುತ್ತಾರೆ. ಆದ್ದರಿಂದ ಇಲ್ಲಿಗೆ ಬರತಕ್ಕ ಸಮಸ್ತ ರೋಗಿಗಳಿಗೂ ಬಹು ಪ್ರೀತಿಯಿಂದಲೂ ಮುತುವರ್ಜಿಯಿಂದಲೂ ಚಿಕಿತ್ಸೆ ಮುಂತಾದ್ದು ನಡೆಯುವುದು. ಪ್ರೀತಿಯೇ ಈ ಕಟ್ಟಡದ ಉದ್ದೇಶವಾದದ್ದರಿಂದ ಇದಕ್ಕೆ "ಕರುಣಾಲಯ," "ಪ್ರೇಮಾಲಯ" ವೆಂಬೀ ಹೆಸರುಗಳನ್ನು ಕೆತ್ತಿಸಿರುವೆವು. ಯಾಕೆಂದರೆ ನಮ್ಮ ಮಹಾಗುರುವಿನ ಉದ್ದೇಶವೇ ಪ್ರೀತಿ. "ಆತನು ನಮ್ಮ ದುಃಖ ಸಂಕಟಗಳನ್ನು ವಹಿಸಿಕೊಂಡವನಲ್ಲದೆ ನಮ್ಮ ರೋಗಾದ್ಯುಪದ್ರಗಳ ಭಾರವನ್ನು ಹೊತ್ತನು" ಎಂದು ಆತನ ವಿಷಯದಲ್ಲಿ ಹೇಳಲ್ಪಟ್ಟಿದೆ. ಇದಲ್ಲದೆ ಆತನು ಯಾವ ರೋಗಿಯನ್ನೂ ಉಪೇಕ್ಷೆಮಾಡದೆ ರೋಗಿ ಸಿಕ್ಕಿದೊಡನೆಯೇ ಪ್ರೀತಿಯಿಂದ ತನ್ನ ಕೈನೀಡಿ ವಾಸಿಮಾಡಿರುವನು. ಇಷ್ಟರಲ್ಲೇ, ಯೋಗ್ಯತಾಸಿದ್ಧಿಯನ್ನು ಪಡೆದ ಇಂಗ್ಲಿಷ್ ಲೇಡಿ ನರ್ಸ್‌ಗಳೆಂಬ ಶೈತ್ಯೋಪಚಾರಕ ಸ್ತ್ರೀಯರನ್ನು ಇಲ್ಲಿಗೆ ಕರೆಸಿ, ಅವರಿಂದ ಇಲ್ಲಿನ ದೇಶೀಯ ಸ್ತ್ರೀಯರು ನರ್ಸ್ ಕೆಲಸಗಳನ್ನು ಕಲಿತು ತಯಾರಾಗುವಂತೆ ಏರ್ಪಾಡುಮಾಡಬೇಕೆಂದಿರುತ್ತೇವೆ.

ಕಟ್ಟಡವು ಇನ್ನೂ ಸಂಪೂರ್ಣವಾಗಿಲ್ಲ. ಇದರ ಮುಂಭಾಗವು [illegible] ಇರುವುದು,

[illegible] ಮಿಷನ್ ಆಸ್ಪತ್ರೆ

ಮಾಡುವುದಾಗಿ ಹೇಳಿದರು. ಆಕೆಗೆ ಕಾಯಿಲೆ ವಾಸಿಯಾಗದೆ ಹಾಗೇ ಕಾಲವಾದರು. ಮತ್ತು ಅಂತ್ಯಕಾಲದಲ್ಲಿ ಈ ವೈದ್ಯಶಾಲೆಗಾಗಿ ೭,೫೦೦ ರೂಪಾಯಿ ವಿನಿಯೋಗಿಸಬೇಕೆಂದು ಆಕೆ ತಿಳಿಸಿದಳು. ಇದೇ ಈ ಪುಣ್ಯಕಾರ್ಯಕ್ಕೆ ಬೀಜಪ್ರಾಯವಾಯಿತು. ಇದೇ ಆ ಕರುಣಾರ್ದ್ರಹೃದಯಳಾದ ಕ್ರೈಸ್ತ ಸ್ತ್ರೀಯ ಹೆಸರು ಈ ಪಟ್ಟಣದಲ್ಲಿ ಚಿರಸ್ಥಾಯಿಯಾಗುವುದಕ್ಕೆ ಕಾರಣವಾಯಿತು. ತರುವಾಯ ಕೆಲವು ಕಾಲ ಆಸ್ಪತ್ರೆಯನ್ನು ಕಟ್ಟಬೇಕೆಂಬ ಯೋಚನೆಯುಂಟಾಗಿ, ಬಡ ಗ್ಗರಾದ ಹಿಂದುಗಳೂ ಮಹಮದೀಯರೂ ವಿಶೇಷವಾಗಿರುವಂಥಾ ಈ ಬಡಾವಣೆಯೇ ಅದಕ್ಕೆ ಸರಿಯಾದ ಸ್ಥಳವೆಂದು ತೀರ್ಮಾನಿಸಲಾಯಿತು. ಇದಕ್ಕೆ ಶ್ರೀಮನ್ಮಹಾರಾಜರವರೂ ಅವರ ಗವರ್ನಮೆಂಟಿನವರೂ [illegible] ಬೋರ್ಡಿನವರೂ ಆಗಿಂದಾಗ್ಗೆ ಸಹಾಯ ಮಾಡುತ್ತ ಸ್ಥಳವನ್ನೊದಗಿಸಿಕೊಡುತ್ತಾ ನಮ್ಮ ಉದ್ದೇಶವನ್ನು ತುಂಬಾ ಪ್ರೋತ್ಸಾಹಪಡಿಸಿದಾರೆ.

ಕಳೆದ ೧೯೦೪ ನೆ ಜೂನ್ ೩ ರಲ್ಲಿ ವಿಲಾಯತಿಯ ಹೇಸ್ಟಿಂಗ್ಸ್ ಪಟ್ಟಣದಲ್ಲಿರುವ ಕ್ಯಾಲ್ವರ್ಟ್ ದೊರಸಾನಿಯವರು ಇಷ್ಟುದೂರ ಬಂದು, ಈ ಆಸ್ಪತ್ರೆಯ ಕಟ್ಟಡವನ್ನು ಪ್ರಾರಂಭಿಸುವಂತೆ ಅಸ್ತಿಭಾರಶಿಲೆಯನ್ನು ಹಾಕಿ, ಈ ಕರುಣಾಶಾಲೆಗೆ ೩,೦೦೦ ರೂಪಾಯಿ ಧರ್ಮಮಾಡಿದರು. ಅಂದಿನಿಂದ ಈ ಕಟ್ಟಡವನ್ನು ಪೂರೈಸುವುದಕ್ಕೆ ನಾನೂ ವಿಲಾಯತಿಯಲ್ಲಿರುವ ನನ್ನ ಸ್ನೇಹಿತರೂ ಎಷ್ಟು ಸಾಹಸ ಸಮಯಗಳನ್ನು ವಿನಿಯೋಗಿಸುತ್ತಾ ಬಂದಿರುವೆವೋ ವಾಚಾ ಹೇಳಲಸಾಧ್ಯವಾಗಿದೆ.

ಈ ಆಸ್ಪತ್ರೆಯ ಉದ್ದೇಶವೇನೆಂದರೆ—ಇದನ್ನು ಕ್ರೈಸ್ತಮತಾಭಿಪ್ರಾಯಗಳಿಗನುಸಾರವಾಗಿಯೇ ನಡಸುವೆವು ದಿನವಹಿ ಪ್ರಾರ್ಥನೆಗಳೂ ಮತಸಂಬಂಧವಾದ ಸಂಭಾಷಣೆಗಳೂ ನಡಸಲ್ಪಡುವವು ಯಾಕೆಂದರೆ ಯಾವ ಪುಣ್ಯ ಕೆಲಸವಾಗಲಿ, ಅದರಲ್ಲೂ ವೈದ್ಯವು—ಭಗವತ್ಸಹಾಯ ಆಶೀರ್ವಾದಗಳಿಲ್ಲದೆ ಶ್ರೇಯಸ್ಕರವಾಗುವುದಿಲ್ಲವೆಂದು ನಾವು ತಿಳಿದಿರುತ್ತೇವೆ. ಇಷ್ಟವಿರುವವರು ಬಂದು ವೈದ್ಯಸಹಾಯವನ್ನು ಪಡೆಯಬಹುದಾಗಿದೆ, ನಾವು ಯಾವುದಕ್ಕೂ ಯಾರನ್ನೂ ಬಲಾತ್ಕಾರಮಾಡುವುದಿಲ್ಲ. ಗೆ ಬಲಾತ್ಕಾರದಿಂದ ನಾವು ಜನರನ್ನು ಕ್ರೈಸ್ತರನ್ನಾಗಿ ಮಾಡಿಕೊಳ್ಳುತ್ತೇವೆಂದು ಯಾರೂ ಅಧೈರ್ಯಪಡಬೇಕಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಬಲಾತ್ಕಾರವೆಂಬುದು ನಿಜಕ್ರೈಸ್ತಮತಾಭಿಪ್ರಾಯಕ್ಕೆ ವಿರುದ್ಧವಾಗಿರುತ್ತದೆ. ಈಗಲೇ ತಂಡ ತಂಡವಾಗಿ ಬಂದು ಔಷಧವನ್ನು ಪಡೆಯುತ್ತಿರುವುದು ಪ್ರಜೆಗಳು ನಮ್ಮಲ್ಲಿಟ್ಟುಕೊಂಡಿರುವ ನಂಬಿಕೆಗೂ ಪ್ರೀತಿಗೂ ದೃಷ್ಟಾಂತವಾಗಿದೆ. ಇಲ್ಲಿ ವೈದ್ಯ ಮಾಡುವುವ ವಿಲಾಯತಿಯಲ್ಲಿ ಮಹಾ ಉತ್ಕೃಷ್ಟವಾದ ವೈದ್ಯಪರೀಕ್ಷೆಗಳನ್ನು ಕೊಟ್ಟು ಕೆಲವು ಕಾಲ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡಿ ವಿಶೇಷದ ಅನುಭವವನ್ನು ಪಡೆದಿರುವಂಥಾ ಇಬ್ಬರು ಸ್ತ್ರೀ ವೈದ್ಯರು

ಶಸ್ತ್ರ ಹಾಕುವುದು, ರೋಗಿಗಳನ್ನು ಇಲ್ಲೇ ಇಟ್ಟು ಉಪಚರಿಸುವುದು ಈ ಮೊದಲಾದವುಗಳಿಗೆ ಅವಕಾಶವನ್ನು ಕಲ್ಪಿಸಿದೆ ಜಾತಿ ಹಿಂದುಗಳಿಗೂ ಕ್ರೈಸ್ತರಿಗೂ ಮಕ್ಕಳಿಗೂ ಬೇರೆ ಬೇರೆ ವಾರ್ಡ್ ಎಂಬ ಕೊಠಡಿಗಳನ್ನು ಮಾಡಿದ್ದೇವೆ. ಮಹಮದೀಯರಿಗೂ ಇತರ ಹಿಂದುಗಳಿಗೂ ಬೇರೆ ಕೊಠಡಿಗಳು ತಯಾರಾಗುವುದರಲ್ಲಿವೆ ಹೆರಿಗೆ ಮಾಡುವ ಮನೆಯೂ ನರ್ಸ್‌ಗಳ ವಾಸಸ್ಥಾನಗಳೂ ಇಷ್ಟರಲ್ಲೇ ಸಿದ್ಧವಾಗುವವು. ಪಶ್ಚಿಮಭಾಗದ ಖಾಲಿ ನಿವೇಶನದಲ್ಲಿ ಅಂಟುಜಾಡ್ಯಗಳ ರೋಗಿಗಳಿಗೂ ಹೆಣಗಳಿಗೂ, ಸೇವಕರಿಗೂ, ಇತರ ಕಾರ್ಯಗಳಿಗೂ ಬೇರೆ ಬೇರೆ ಕಟ್ಟಡಗಳು ಆಗಬೇಕಾಗಿರುವವು.

ಈ ಕಟ್ಟಡಕ್ಕೆ ೧,೮೮,೦೦೦ ರೂಪಾಯಿ ಖರ್ಚಾದೀತೆಂದು ಮೊದಲು ಅಂದಾಜು ಕಟ್ಟಿದ್ದೆವು. ಆದರೆ ಅದಕ್ಕಿಂತಲೂ ಖರ್ಚು ಹೆಚ್ಚುವುದೆಂದು ನಾನು ಹೇಳಬೇಕಾದದ್ದಿಲ್ಲ ಒಳಗೆ ಅವಶ್ಯವಾಗಿ ಬೇಕಾಗುವ ಸಾಮಾನು ಮುಂತಾದ್ದಕ್ಕೆ ಬೇರೆ ಕಡೇ ಪಕ್ಷ ೧೦,೦೦೦ ರೂಪಾಯಿ ಬೇಕಾದೀತು, ಇದಕ್ಕೆ ನಮ್ಮ ಮಿಷನ್ ಫಂಡಿನಿಂದ ಸ್ವಲ್ಪ ಮಾತ್ರವೂ ಗ್ರಾಂಟು ಬಂದಿರುವುದಿಲ್ಲ. ಆದ್ದರಿಂದ ಇಷ್ಟು ಹಣವನ್ನೂ ನಾನೂ ವಿಲಾಯತಿಯಲ್ಲಿರುವ ನನ್ನ ಸ್ನೇಹಿತರಾದ ಮೆ|| ಹೋಲ್ಡ್ಸ್‌ವರ್ತ್ ಸಾಹೇಬರೂ ಚಂದಾ ಮೂಲಕ ಕೂಡಿಸಬೇಕಾಗಿದೆ. ಮೈಸೂರು ಗವರ್ನಮೆಂಟಿನವರು ಕರುಣವಿಟ್ಟು ಕಟ್ಟಡಕ್ಕೆ ೨೫,೦೦೦ ರೂಪಾಯಿಯನ್ನೂ ೨೦೦ ರೂಪಾಯಿ ಮಾಸಾಶನವನ್ನೂ ಕೊಡುತ್ತಾರೆ. ಈ ಕಟ್ಟಡ ಪೂರೈಸುವುದಕ್ಕೆ ಕಡೇ ಪಕ್ಷ ಇನ್ನೂ ೧೫,೦೦೦ ರೂಪಾಯಿಯಾದರೂ ಬೇಕೇ ಬೇಕು. ಈ ಆಸ್ಪತ್ರೆಯನ್ನು ನಡಸುವುದಕ್ಕೆ ತಿಂಗಳಿಗೆ ೯೦೦ ರೂಪಾಯಿಗಿಂತ ಕಮ್ಮಿ ಆಗಲಾರದು. ಈ ಕಟ್ಟಡದಿಂದ ಪ್ರಜೆಗಳಿಗೆ ಉಪಕಾರವಾಗುತ್ತಾ ಅಭಿವೃದ್ಧಿ ಹೊಂದುತ್ತಿದೆ ಎಂದು ತಿಳಿದಹಾಗೆಲ್ಲಾ ಗವರ್ನಮೆಂಟಿನವರು ಮಾಸಾಶನವನ್ನು ಹೆಚ್ಚು ಮಾಡುತ್ತಾ ಬರುವರೆಂದು ನಿರೀಕ್ಷಿಸುತ್ತೇನೆ ಇಲ್ಲಿ ಕೂಡಿರುವ ಸಭಾಸದರೂ ಇತರ ಹಿಂದೂ ಮಹಮದೀಯರೂ ಈ ನಮ್ಮ ಪುಣ್ಯಕೆಲಸಕ್ಕೆ ಸಹಾಯ ಮಾಡಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಂಬಾರೆನ್ನುವುದಕ್ಕೆ ಸಂಶಯವಿಲ್ಲ ಕಳೆದ ಜನವರಿ ತಿಂಗಳಿಂದಲೂ ಔಷಧಗಳನ್ನು ಕೊಟ್ಟು ಚಿಕಿತ್ಸೆ ಮಾಡುತ್ತಾ ಬಂದಿರುವುದರಿಂದ ಇದಕ್ಕಾಗಿಯೇ ಈ ಏಳು ತಿಂಗಳಲ್ಲಿ ೧೧,೬೩೧ ರೂಪಾಯಿ ಖರ್ಚಾಗಿರುವುದು. ಆದದರಿಂದ ನಮಗೆ ಈ ಕಾರ್ಯಕ್ಕೆ ಹಣಕಾಸಿನ ಕಷ್ಟ ವಿಶೇಷವಾಗಿದೆ ಎಂದು ನಾನು ಹೇಳಬೇಕಾದದ್ದಿಲ್ಲ ಗವರ್ನಮೆಂಟಿನವರು ವಾಗ್ದಾನಮಾಡಿರುವ ೨೦೦ ರೂಪಾಯಿ ಮಾಸಾಶನವನ್ನು ಕಳೆದ ಜನವರಿ ಲಾಗಾಯತು ಬಾಬತಿ ಆಗುವಂತೆ ಸ್ಯಾಂಕ್ಷನ್ ಮಾಡಬೇಕಾಗಿ ಪ್ರಾರ್ಥಿಸುವೆನು.

ಈ ಆಸ್ಪತ್ರೆಯನ್ನು ಅಭಿವೃದ್ಧಿಗೆ ತರಬೇಕೆಂಬುವುದು ಮಾತ್ರವೇ ನಮ್ಮ ಉದ್ದೇಶವಲ್ಲ. ನಮ್ಮ ವೈದ್ಯರು ಔಷಧಾದಿಗಳ ಸಮೇತ ಗ್ರಾಮಾಂತರಗಳ ಮೇಲೂ ಸಂಚಾರ ಹೊರಟು, ಗ್ರಾಮವಾಸಿಗಳ ರೋಗ

ಸಂಕಟಗಳನ್ನು ಪರಿಹರಿಸುವಂತೆ ಏರ್ಪಾಡು ಮಾಡಬೇಕೆಂದು ಕುತೂಹಲಪಡತಕ್ಕವರಾಗಿದ್ದೇವೆ.

ಮೈಸೂರು ವೈದ್ಯ ಇಲಾಖೆಯ ಕರ್ನಲ್ ಸ್ಮಿತ್ ಯವರೂ, ಡಾಕ್ಟರ್ ಅಚ್ಯುತರಾಯರೂ, ಇಲ್ಲಿನ ಮಹಾರಾಣಿ ಆಸ್ಪತ್ರೆಯ ವೈದ್ಯರೂ ನಮಗೆ ಅನೇಕವಾಗಿ ಆಲೋಚನೆ ಹೇಳಿ ಸಹಾಯಗಳನ್ನು ಮಾಡಿರುತ್ತಾಗ ಇವರಿಗೆ ನಾವು ಕೃತಜ್ಞರಾಗಿರುವೆವು. ಮೈಸೂರು ಬಾಡಿಗಾರ್ಡ್ ಕಮ್ಯಾಂಡೆಂಟರಾಗಿದ್ದು ಪೆನ್ಷನ್ ಪಡೆದಿರುವ ಸರ್ದಾರ್ ಬಹದೂರ್ ಮಹಮದ್ ಬದ್ರುದ್ದೀನ್ ಸಾಹೇಬರು ನಮ್ಮ ಕೆಲಸದಲ್ಲಿ ವಿಶೇಷವಾದ ಪ್ರೀತಿಯನ್ನಿಟ್ಟು, ತಮ್ಮ ಹೆಸರಿನ ಮೇಲೆ ಒಂದು ಹಾಸಿಗೆಯನ್ನು ಏರ್ಪಡಿಸಿ, ಅದರಲ್ಲಿ ಮಹಮ್ಮದೀಯ ರೋಗಿಗಳಿಗೆ ಚಿಕಿತ್ಸೆ ಮುಂತಾದ್ದನ್ನು ಮಾಡುತ್ತಾ ಬರಬೇಕೆಂದು ಹೇಳಿ ೮೦೦ ರೂಪಾಯಿ ದಾನ ಮಾಡಿರುತ್ತಾರೆ. ಇಲ್ಲಿನ ಮಹಾರಾಣಿ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟರಾದ ಮಿಸ್ ಪಾಲಿಕಾರ್ಪ್ ಯವರು ತಮ್ಮ ಸ್ವಂತ ಖರ್ಚಿನಿಂದ ಈ ಆಸ್ಪತ್ರೆಯಲ್ಲಿ ಒಬ್ಬ ರೋಗಿಯನ್ನು ಸಾಕುವುದಾಗಿ ವಾಗ್ದಾನ ಮಾಡಿದಾರೆ. ಇಂಥಾ ಪುಣ್ಯ ಕಾರ್ಯಗಳೇ ಪರಲೋಕಸಾಧಕಗಳಾಗುವವೆನ್ನುವುದಕ್ಕೆ ಸಂಶಯವಿಲ್ಲ. ಇತರ ಪುಣ್ಯವಂತರೂ ಅವರ ಶ್ರೇಷ್ಠವಾದ ಮೇಲ್ಪಂಕ್ತಿಯನ್ನು ಅನುಸರಿಸಿಯಾರೆಂದು ಹಾರೈಸುತ್ತೇನೆ.

ನಮ್ಮ ರಾಷ್ಟ್ರದ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರೂ ಅವರ ಪತ್ನೀಯವರೂ ನಮ್ಮ ಈ ಪುಣ್ಯಕಾರ್ಯದ ವೃತ್ತಾಂತವನ್ನು ಕೇಳಿ ತುಂಬಾ ಕನಿಕರಪಟ್ಟು ತಮ್ಮಿಬ್ಬರ [illegible] ಕಳುಹಿ ಈ ಆಸ್ಪತ್ರೆಯಲ್ಲಿ ಇಟ್ಟುಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ

ಇಲ್ಲಿಗೆ ನಾವು ಪ್ರಾರಂಭಿಸಿದ ಈ ಕಾರ್ಯವು ಇಷ್ಟು ಮಟ್ಟಿಗೆ ಪೂರೈಸಿರುವುದಕ್ಕಾಗಿಯೂ, ಇದು ಚಿರಕಾಲ ತುಂಬಾ ಅಭಿವೃದ್ಧಿಗೆ ಬರಬೇಕೆಂತಲೂ ಭಗವಂತನನ್ನು ಕುರಿತು ಪ್ರಾರ್ಥಿಸುವೆವು. ಆತನು ತನ್ನ ಪವಿತ್ರವಾದ ಆಶೀರ್ವಾದವನ್ನು ದಯಪಾಲಿಸಲಿ ಈ ದಿನ ಈ ಕಟ್ಟಡವನ್ನು ಪ್ರತಿಷ್ಠೆ ಮಾಡುವ ಕಾರ್ಯಭಾರವನ್ನು ವಿಶೇಷವಾದ ಪ್ರೀತಿ ಉತ್ಸಾಹಗಳಿಂದ ವಹಿಸಿ, ಇದುವರೆಗೆ ದಯಮಾಡಿದ್ದಕ್ಕಾಗಿ ನಾವೆಲ್ಲಾ ನಮ್ಮ ಶ್ರೀಮನ್ಮಹಾರಾಜರವರನ್ನು ಕೊಂಡಾಡಿ ಮನಃಪೂರ್ವಕವಾಗಿಯೂ ರಾಜಭಕ್ತಿಯುತರಾಗಿಯೂ ವಂದನೆ ಮಾಡುವೆವು.

ಶ್ರೀಮನ್ಮಹಾರಾಜರವರ ಭಾಷಣ.

ತರುವಾಯ ಶ್ರೀಮನ್ಮಹಾರಾಜರವರು ಮೆ|| ಸಾಡೇ ಸಾಹೇಬರನ್ನೂ ಸಭಾಸದರನ್ನೂ ಕುರಿತು ಅಪ್ಪಣೆ ಕೊಡಿಸಿದ ಅಭಿಪ್ರಾಯವೇನೆಂದರೆ—

ನಾವು ಮಿಷನ್ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡುತ್ತೇವೆಂದು ಮನಃಪೂರ್ವಕವಾದ ಸಂತೋಷದಿಂದ ಒಪ್ಪಿಕೊಂಡೆವೆಂಬುದನ್ನು ಈಗ ಹೇಳಬೇಕಾದದ್ದಿಲ್ಲ. ನಾವು ಕಟ್ಟಡವನ್ನು ಪ್ರಾರಂಭದಿಂದಲೂ ಉತ್ಸಾಹಪಟ್ಟು ನೋಡುತ್ತಿದ್ದೆವು. ಇದು ಈಗ ಕಾರ್ಯತಃ ಪೂರೈಸಿರುವ ವಿಷಯದಲ್ಲಿ ಸ್ತುತಿಯೇ ಪ್ರಧಾನವಾಗಿದೆ. ಮೇಲ್ಕಂಡ ರಿಪೋರ್ಟಿನಿಂದ ಈ ಕಟ್ಟಡದ ಉದ್ದೇಶವೂ, ಇದುವರೆಗೆ ನಡೆದಿರುವ ಕಾರ್ಯಗಳೂ, ಮುಂದೆ ಆಗಬೇಕಾಗಿರುವುದೂ ಎಲ್ಲಾ ಪರಿಷ್ಕಾರವಾಗಿ ಗೊತ್ತಾಗುವುದು. ಇದಲ್ಲದೆ ಈ ಪುಣ್ಯಕಾರ್ಯವನ್ನು ಪ್ರಾರಂಭಿಸಿದ್ದರಲ್ಲಿ ಮೆ|| ಸಾಡೇ ಸಾಹೇಬರ ಮತ್ತು ಅವರ ಸಹಾಯಕರ ಉದ್ದೇಶವೂ ಅವರ ಧೈರ್ಯಸಾಮರ್ಥ್ಯಾದಿಗಳೂ ಅವರ ಹಿತಮನಸ್ಸೂ ಸ್ತೋತ್ರಾರ್ಹಗಳಾಗಿರುವುವಲ್ಲದೆ ಮತ್ತೆ ಬೇರೆ ಅಲ್ಲವು.

ವೆಸ್ಲಿಯನ್ ಮಿಷನ್ ಸಂಘದವರು ಮೈಸೂರಿನಲ್ಲಿ ನಮಗೆಲ್ಲಾ ಬಹುಕಾಲದ ಸ್ನೇಹಿತರಾಗಿರುತ್ತಾರೆ. ರಾಜಧಾನಿಯಲ್ಲಿ ಈಗಿನ ಕಾಲದ ವಿದ್ಯಾಭ್ಯಾಸವನ್ನು ಪ್ರಾರಂಭಿಸುವುದಕ್ಕೆ ಇವರೇ ಮುಂದಾಳುಗಳಾಗಿದ್ದರು. ಮತ್ತು ಅವರು ಮಾಡುತ್ತಿರುವ ಸತ್ಕಾರ್ಯಗಳೆಲ್ಲಾ ಸಕಲರಿಗೂ ಪರಿಷ್ಕಾರವಾಗಿ ತಿಳಿದೇ ಇದೆ. ಈಗ ಅವರು ಇದೊಂದು ಹೊಸ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಇದು ಸಕಲರ ಮನಸ್ಸನ್ನೂ ಸೆಳೆಯುವಂಥಾದ್ದಾಗಿರುತ್ತದೆ. ಜಾತಿಮತ ಕುಲಗೋತ್ರಗಳು ಹಾಗಿರಲಿ; ಕಾಯಿಲೆ ಬಿದ್ದು ನರಳುತ್ತಿರುವ ಹೆಂಗಸರು ಮಕ್ಕಳನ್ನು ಕರೆತರಿಸಿ ಅವರಿಗೆ ಔಷಧಾದ್ಯುಪಚಾರಗಳನ್ನು ಮಾಡುವುದಕ್ಕೆ ಸಲಕರಣೆಗಳನ್ನೊದಗಿಸುವುದೇ ಮುಖ್ಯವಾದದ್ದು. ಸಹಾಯ ಮಾಡುವಂಥಾ ಯೋಗ್ಯತೆಯನ್ನು ಪಡೆದಿರುವ ಧರ್ಮಿಷ್ಠರಿಗೆ ಇದಕ್ಕಿಂತಲೂ ಉತ್ತಮವಾದ ಪಾತ್ರವು ಇನ್ಯಾವದೂ ದೊರಕಲಾರದೆಂದು ನಮಗೆ ತೋರುತ್ತದೆ. ನಮ್ಮ ಗವರ್ನಮೆಂಟಿನಿಂದ ಸದ್ಯದಲ್ಲಿ ಈ ಉದ್ದೇಶಕ್ಕೆ ಸಹಜವಾಗಿ ಕಂಡುಬಂದಷ್ಟು ಸಹಾಯವನ್ನು ಸಂತೋಷಪೂರ್ವಕವಾಗಿ ಮಾಡಲಾಗಿದೆ ಮತ್ತು ಬಿಳಿದೇಶದಲ್ಲಿ ನಾನಾ ಮಾರ್ಗಗಳಿಂದ ಈ ಕಾರ್ಯಕ್ಕೆ ಬೇಕಾದಷ್ಟು ದ್ರವ್ಯಸಹಾಯ ದೊರಕುತ್ತಿದೆ ಎಂದು ಕೇಳಿ ಸಂತೋಷಿಸುವೆವು. ಆದರೂ ಮೈಸೂರು ಪ್ರಜೆಗಳಲ್ಲಿ ಪುಣ್ಯ ಧರ್ಮ ಕೀರ್ತಿಗಳನ್ನು ಬಯಸುವವರಿಗೆ ಈಗ ಒಳ್ಳೇ ಸಮಯ ಒದಗಿರುವುದೆಂದೂ, ಈ ಪುಣ್ಯಕಾರ್ಯಕ್ಕೆ ಅಂಥವರ ಸಹಾಯವು ಇನ್ನೂ ಅವಶ್ಯವಾಗಿರುವುದೆಂದೂ ಹೇಳಬೇಕಾದದ್ದಿಲ್ಲ. ಇಲ್ಲಿ ಸೇರಿರುವವರೆಲ್ಲರೂ ಈ ಕಟ್ಟಡದ ಸಕಲ ಭಾಗಗಳನ್ನೂ ಸುತ್ತಿ ನೋಡಿ, ಇದರ ವಿಸ್ತಾರವಾದ ಮತ್ತು ಸರ್ವೋತ್ಕೃಷ್ಟವಾದ ಎಲ್ಲಾ ಏರ್ಪಾಡುಗಳನ್ನೂ ತಿಳಿದು, ಈ ಆಸ್ಪತ್ರೆಯು ಶಾಶ್ವತವಾಗಿಯೂ ಬಹು ಪ್ರಯೋಜನಕರವಾಗಿಯೂ ನಡೆಯುವುದಕ್ಕೆ ಮೆ|| ಸಾಡೇ ಸಾಹೇಬರಿಗೆ ನಿಮ್ಮ ಕೈಲಾದಷ್ಟು ಸಹಾಯ ಮಾಡುತ್ತೀರೆನ್ನುವ ಭಾಗದಲ್ಲಿ ನಾವು ಸ್ವಲ್ಪವೂ ಸಂಶಯಪಡಲಾರೆವು

ಈಗ ನಾವು ಈ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡುತ್ತೇವೆ ದೇವರ ಆಶೀರ್ವಾದದಿಂದ ಇದರಲ್ಲಿ ನಡೆಯುವ ಕಾರ್ಯಗಳು ಇನ್ನೂ ಸಾವಿರಪಾಲು ಹೆಚ್ಚಿ ಇದರ ಮೂಲಭೂತವಾದ ಉದ್ದೇಶವು ಸಫಲವಾಗಲೆಂದು ಪ್ರಾರ್ಥಿಸುವೆವು

ತರುವಾಯ ಶ್ರೀಮನ್ಮಹಾರಾಜರವರೂ ಮೆ|| ಕಾಂತರಾಜೇ ಅರಸಿನವರೂ ಕಟ್ಟಡದ ಎಲ್ಲಾ ಭಾಗಗಳನ್ನೂ ದಯಮಾಡಿ ನೋಡಿಕೊಂಡು ಬಂದರು. ಅವರು ವಾಪಸು ದಯಮಾಡುವಾಗ್ಗೆ ಮಹಾ ಮಾತೃಶ್ರೀ ವಾಣೀವಿಲಾಸ ಸನ್ನಿಧಾನದ ಮಹಾರಾಣಿಯವರು ಈ ಆಸ್ಪತ್ರೆಯ ಮೂಲಧನಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ದಯಪಾಲಿಸುವುದಾಗಿ ಮಾಡಿದ್ದ ವಾಗ್ದಾನವನ್ನು ಮೆ|| ಸಾಡೇ ಸಾಹೇಬರಿಗೆ ಅಪ್ಪಣೆ ಕೊಡಿಸಿ, ಸಾರೋಟಿನಲ್ಲಿ ಕುಳಿತು ತೆರಳಿದರು.

ಮೈಸೂರು ಸರ್ಕಾರಿ ಹುಕುಮುಗಳು.

ದಸರಾ ಅತಿಥಿಗಳ ಸೌಕರ್ಯ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಸೂಪರಿಂಟೆಂಡೆಂಟ್ ಮಿ॥ ಸಿ ವೆಂಕಟರಾವ್, ಬಿ. ಎ ಯವರನ್ನು ೧೯೦೭ನೆ ಸೆಪ್ಟಂಬರ್ ೧ರಿಂದ ಸ್ಪೆಷಲ್ ಡ್ಯೂಟಿಗೆ ನೇಮಕ ಮಾಡಿದೆ. ಇವರು ನವರಾತ್ರಿ ಉತ್ಸವಗಳಿಗೂ ಪ್ರಜಾ ಪ್ರತಿನಿಧಿಸಭೆಯ ಮೀಟಿಂಗುಗಳಿಗೂ ರಾಜಧಾನಿಗೆ ಬರತಕ್ಕ ಅತಿಥಿಗಳನ್ನು ಕಂಡು ಅವರಿಗೆ ಸ್ಥಳ ಮುಂತಾದ್ದನ್ನು ಸಿದ್ಧಪಡಿಸಿ ಅವರಿಗೆ ಬೇಕಾಗುವ ಸಮಸ್ತ ಸೌಕರ್ಯಗಳನ್ನೂ ಕೊರತೆಯಿಲ್ಲದಂತೆ ಒದಗಿಸಿಕೊಟ್ಟು, ಮೇಲುಸ್ತುವಾರಿ ನೋಡಿಕೊಳ್ಳತಕ್ಕದ್ದಾಗಿದೆ. ಆಹ್ವಾನ ಪತ್ರಿಕೆಗಳನ್ನು ಪಡೆದು ರಾಜಧಾನಿಗೆ ಬರತಕ್ಕವರೆಲ್ಲಾ ಈ ಅಧಿಕಾರಿಗೆ ಮೊದಲೇ ಬರೆದು ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಮೈಸೂರು ಡೆಪ್ಯುಟಿ ಕಮೀಷನರು, ಮೈಸೂರು ಮ್ಯುನಿಸಿಪಲ್ ಪ್ರೆಸಿಡೆಂಟರು, ಮೈಸೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರು, ಅರಮನೆ ಇಲಾಖೆಗಳ ಆಫೀಸರವರು—ಇವರೆಲ್ಲಾ ಮೇಲ್ಕಂಡ ಸ್ಪೆಷಲ್ ಡ್ಯೂಟಿ ಆಫೀಸರಿಗೆ ಅವಶ್ಯವಾದ ಸಹಾಯಗಳನ್ನೆಲ್ಲಾ ಒದಗಿಸಿಕೊಡಬೇಕು.

೨೦ ಲಕ್ಷ ರೂಪಾಯಿನ ಸಾಲದ ಪತ್ರಗಳು.

ಸಂಸ್ಥಾನದಲ್ಲಿ ಲಾಭಕರವಾದ ಕಾಮಗಾರಿಗಳನ್ನು ಮಾಡಿಸಬೇಕಾಗಿರುವುದರಿಂದ ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರ ಅನುಮತಿಯನ್ನು ಪಡೆದು, ಇಪ್ಪತ್ತು ಲಕ್ಷ ರೂಪಾಯಿ ಸಾಲಮಾಡುವವರಾಗಿದ್ದಾರೆ ಈ ಹಣಕ್ಕೆ ಶೇಕಡಾ ವರುಷಕ್ಕೆ ನಾಲ್ಕು ರೂಪಾಯಿ ಬಡ್ಡಿ ಕೊಡುವಂತೆ ನಿಶ್ಚಯ ಮಾಡಿರುವರು ಈಗ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್‌ದಾರರು ಇಷ್ಟಪಟ್ಟರೆ ಅವರ ಡಿಪಾಜಿಟ್ ಹಣವನ್ನು ಗವರ್ನಮೆಂಟಿನವರು ಸಾಲ ತೆಗೆದುಕೊಂಡು, ಗವರ್ನಮೆಂಟ್ ಸಾಲದ ಪತ್ರಗಳನ್ನು ಕೊಡುತ್ತಾರೆ ಈ ಪತ್ರಗಳ ಬಡ್ಡಿಯನ್ನು ೧೯೦೭ನೆ ಅಕ್ಟೋಬರ್ ೧ ರಿಂದ ೧೯೨೧ ನೆ ಅಕ್ಟೋಬರ್ ೧ ರ ವರೆಗೆ ಪ್ರತಿ ವರುಷವೂ ಆರಾರು ತಿಂಗಳಿಗೊಂದು ಸಲದಂತೆ ಏಪ್ರಿಲ್ ೧ನೆ ತಾರೀಖಿನಲ್ಲೂ ಅಕ್ಟೋಬರ್ ೧ನೆ ತಾರೀಖಿನಲ್ಲೂ ಬಟವಾಡೆ ಮಾಡಲಾಗುವುದು. ಹಾಲಿ ೫,೦೦೦ ರೂಪಾಯಿಗಿಂತ ಹೆಚ್ಚಾಗಿ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟಿರತಕ್ಕವರು ಅಂಥಾ ಹೆಚ್ಚು ಹಣಕ್ಕೆ ೧೦೦ ರೂಪಾಯಿಗೆ ಒಂದರಂತೆ ಎಷ್ಟು ಸಾಲದ ಪತ್ರಗಳನ್ನು ಕೊಂಡುಕೊಳ್ಳಬೇಕೆಂದು ಅಪೇಕ್ಷಿಸುತ್ತಾರೆಯೋ ಅದನ್ನು ಸೆಪ್ಟಂಬರ್ ೧೫ನೆ ತಾರೀಖಿನೊಳಗಾಗಿ ಗವರ್ನಮೆಂಟ್ ಕಂಟ್ರೋಲರವರಿಗೆ ಅರ್ಜಿ ಬರೆದು ತಮ್ಮ ಬಳಿ ಇರುವ ಸೇವಿಂಗ್ಸ್ ಬ್ಯಾಂಕ್ ಪ್ಯಾಸ್ ಬುಕ್ಕುಗಳ ಸಹಿತ ರಿಜಿಸ್ಟರ್ ಮಾಡಿ ಟಪ್ಪಾಲಿನ ಮೇಲೆ ಕಳುಹಿಸಬೇಕು. ಆ ತಾರೀಖು ಮೀರಿ ಬರುವ ಅರ್ಜಿಗಳಿಗೆ ಗಮನಕೊಡಲಾಗುವುದಿಲ್ಲ. ಆದರೆ ಇದೇ ಆಗಸ್ಟು ೩೧ರೊಳಗಾಗಿ ಹಾಗೆ ಸಾಲದ ಪತ್ರಗಳು ಬೇಕೆಂದು ಅರ್ಜಿ ಬರೆದುಕೊಳ್ಳುತ್ತಾರೆಯೋ ಅವರಿಗೆ ಶೇಕಡಾ ಅರ್ಧ ರೂಪಾಯಿ ಕಮೀಷನ್ ಸಿಕ್ಕುವದು.

ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ಬಡ್ಡಿ.

ಮೈಸೂರು ಗವರ್ನಮೆಂಟಿನವರು ೧೮೯೦ ನೆ ಆಗಸ್ಟಿನಲ್ಲಿ ಸೇವಿಂಗ್ಸ್ ಬ್ಯಾಂಕನ್ನು ಏರ್ಪಡಿಸಿ ಆ ಬ್ಯಾಂಕಿಗೆ ಯಾರು ಬೇಕಾದರೂ ಇಷ್ಟಬಂದಷ್ಟು ಹಣ ಹಾಕಬಹುದೆಂದು ಜಾಸ್ತಿ ಸೌಕರ್ಯ ಕೊಟ್ಟರು ಅದರಂತೆ ಅನೇಕಾನೇಕ ಪ್ರಜೆಗಳೂ ಉದ್ಯೋಗಸ್ಥರೂ ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಹಾಕುತ್ತಾ ಬಂದರು. ಕಳೆದ ೧೯೦೬ನೆ ಡಿಸೆಂಬರ್ ೩೧ ರಲ್ಲಿ ಈ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್ಟು ಹಣ ತೊಂಬತ್ತೈದು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಸೇರಿತ್ತು. ಡಿಪಾಜಿಟ್‌ದಾರರು ಏಕಕಾಲದಲ್ಲಿ ಅಷ್ಟು ಹಣವನ್ನೂ ವಾಪಸು ಕೇಳಿದ ಪಕ್ಷದಲ್ಲಿ ಗವರ್ನಮೆಂಟಿನವರು ಪಾವತಿ ಮಾಡುವುದು ಅಸಾಧ್ಯವಾಗುತ್ತದೆ ಆದ್ದರಿಂದ ಈ ಡಿಪಾಜಿಟ್ಟನ್ನು ಕಡಿಮೆಮಾಡಬೇಕೆಂದು ಯೋಚನೆ ಮಾಡಿ ತೀರ್ಮಾನಮಾಡಿರುವುದೇನೆಂದರೆ—ಇನ್ನು ಮುಂದೆ ಯಾರಿಂದಲೂ ಒಂದು ವರುಷದಲ್ಲಿ ೨,೦೦೦ ರೂಪಾಯಿಗಿಂತ ಜಾಸ್ತಿ ಹಣವನ್ನು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್ಟಿಗೆ ಅಂಗೀಕರಿಸಕೂಡದು ಪ್ರತ್ಯೇಕ ಡಿಪಾಜಿಟ್‌ದಾರನ ಹೆಸರಿನಲ್ಲಿ ಯಾವಾಗಲೂ ೫,೦೦೦ ರೂಪಾಯಿಗಿಂತ ಹೆಚ್ಚು ಮೊಬಲಗು ಸರ್ಕಾರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇರಕೂಡದು. ಈಗ ೫,೦೦೦ ರೂ. ಗಿಂತಲೂ ಹೆಚ್ಚು ಹಣವನ್ನು ಡಿಪಾಜಿಟ್ ಇಟ್ಟಿರುವವರಿಗೆ ಅಂಥಾ ಹೆಚ್ಚು ಹಣವನ್ನು ಅವರು ವಾಪಸು ತೆಗೆದುಕೊಳ್ಳುವ ತನಕ ೫,೦೦೦ ರೂಪಾಯಿಗೆ ಮೇಲ್ಪಟ್ಟ ಮೊಬಲಗಿಗೆ ಶೇಕಡಾ ವರುಷಕ್ಕೆ ಎರಡು ರೂಪಾಯಿನಂತೆ ಮಾತ್ರ ಬಡ್ಡಿ ಕೊಡತಕ್ಕದ್ದೆಂದು ಗವರ್ನಮೆಂಟಿನವರು ತಿಳಿಸುತ್ತಾರೆ. ಮೈಸೂರು ಗವರ್ನಮೆಂಟಿನವರು ೨೦ ಲಕ್ಷ ರೂಪಾಯನ್ನು ಶೇಕಡಾ ೪ ರೂಪಾಯಿ ಬಡ್ಡಿ ಮೇಲೆ ಸಾಲ ತೆಗೆದುಕೊಳ್ಳುವವರಾಗಿದ್ದಾರೆ ಮೇಲ್ಕಂಡ ಡಿಪಾಜಿಟ್‌ದಾರರು ಇಷ್ಟಪಟ್ಟರೆ ತಮ್ಮ ಹಣವನ್ನು ಸರ್ಕಾರಕ್ಕೆ ಸಾಲವಾಗಿ ಕೊಟ್ಟು ಗವರ್ನಮೆಂಟಿನಿಂದ ಪ್ರಾಮಿಸರಿ ಪತ್ರಗಳನ್ನು ಪಡೆಯಬಹುದು

ಬೆಂಗಳೂರಿನಲ್ಲಿ ಇಲಿ ಹೆಗ್ಗಣಗಳನ್ನು ಕೊಲ್ಲುವದು

ಇಲಿ ಹೆಗ್ಗಣಗಳನ್ನು ಕೊಲ್ಲುವುದಕ್ಕೆ ವಿಷವನ್ನು ಹಾಕುವದು ಅಷ್ಟು ಫಲಕಾರಿಯಾದದ್ದಲ್ಲ ಬೋನುಗಳನ್ನೊಡ್ಡಿ ಹಿಡಿಯುವದೇ ಸರ್ವೋತ್ತಮ. ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರು ಕೂಡಲೆ ೧,೦೦೦ ಬೋನುಗಳನ್ನು ಕೊಂಡುಕೊಳ್ಳತಕ್ಕದ್ದು ಅವಶ್ಯವಿದ್ದರೆ ಇನ್ನೂ ಹೆಚ್ಚು ತರಿಸಿಕೊಳ್ಳಬಹುದು. ವಿಷಹಾಕಿ ಕೊಲ್ಲುವದನ್ನು ತೆಗೆದು, ಪ್ಲೇಗು ಕಮಿಟಿಯಿಂದ ನೋಡಿಕೊಳ್ಳತಕ್ಕ ಯೋಗ್ಯತೆಯುಳ್ಳವರಿಗೆ ವಿಷಪದಾರ್ಥವನ್ನು ಕೊಟ್ಟು, ಎಚ್ಚರಿಕೆ ಹೇಳಬೇಕು. ಡಿಸಿನ್‌ಫೆಕ್ಷನ್ ಸಿಬ್ಬಂದಿಯವರು ಮಾಲಿಕ ಬೋನುಗಳನ್ನು ಮನೆಗಳಿಗೆ ಕೊಡಿಸಿ, ಅವರು ಇಲಿ ಹೆಗ್ಗಣ ಬಿದ್ದ ಬೋನುಗಳನ್ನು ಕೊಡಿಸಿ ತರುವಂತೆಯೂ ಸತ್ತ ಇಲಿ ಹೆಗ್ಗಣಗಳನ್ನು ಕೈಲಿ ಮುಟ್ಟದೆ ಇಕ್ಕಳಗಳಿಂದಲೇ ಕಾವಡಿಗಳಲ್ಲಿ ತುಂಬಿಕೊಂಡು ಕಟ್ಟುವಂತೆಯೂ ಏರ್ಪಾಟು ಮಾಡತಕ್ಕದ್ದು. ಅವಶ್ಯವಿದ್ದರೆ ತಿಂಗಳಿಗೆ ೧೫೦ ರೂಪಾಯಿಗಿಂತ ಹೆಚ್ಚಾದ ಸಿಬ್ಬಂದಿಯನ್ನು ಲೆಕ್ಕ ಬರೆದಿಡುವುದಕ್ಕೆ ೧೫ ರೂಪಾಯಿ ತಲಬುಳ್ಳ ಒಬ್ಬ ಗುಮಾಸ್ತೆಯನ್ನೂ ನೇಮಿಸಬಹುದು. ಈ ಕಾರ್ಯಗಳೆಲ್ಲಾ ತೃಪ್ತಿಕರವಾಗಿ ನಡೆಯುವುದಕ್ಕೆ ಸದ್ಯ ಪ್ಲೇಗ್ ಫಂಡಿನಿಂದ ೧,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದೆ ಹೆಚ್ಚು ಹಣ ಬೇಕಾದಲ್ಲಿ ಆಗಿಂದಾಗ್ಗೆ ಸ್ಯಾಂಕ್ಷನ್ ಮಾಡಲಾದೀತು ಈ ಭಾಗದಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರು ಹದಿನೈದು ದಿನಕ್ಕೊಂದಾವರ್ತಿ ಗವರ್ನಮೆಂಟ್ ತಿಳಿವಳಿಕೆ ಬಗ್ಗೆ ರಿಪೋರ್ಟನ್ನು ಕಳುಹಿಸುತ್ತಾ ಬರಬೇಕು.

ರಿಜರ್ವ್ ಪೋಲೀಸ್ ಸಿಬ್ಬಂದಿಯ ವಿಷಯವಾಗಿ ಇನ್ಸ್‌ಪೆಕ್ಟರ್ ಜನರಲ್‌ರವರು ಗವರ್ನಮೆಂಟಿಗೆ ಸೂಚಿಸಿದ ಅಭಿಪ್ರಾಯವೇನೆಂದರೆ—ಈಗ ರಿಜರ್ವ್ ಪೋಲೀಸ್ ಸಿಬ್ಬಂದಿಯ ಪೈಕಿ ೩೫ ಮಂದಿ ಚಿತ್ರದುರ್ಗದಲ್ಲೂ, ೨೫ ಮಂದಿ ಶಿವಮೊಗ್ಗೆಯಲ್ಲೂ, ೧೨ ಮಂದಿ ಕೋಲಾರದಲ್ಲೂ, ೧೨ ಮಂದಿ ತುಮಕೂರಿನಲ್ಲೂ, ೬೦ ಮಂದಿ ಮೈಸೂರಿನಲ್ಲೂ ನೇಮಿಸಲ್ಪಟ್ಟಿದ್ದಾರೆ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಹೊರಗಡೆ ಇರುವಾಗಲೂ, ರಾಜಧಾನಿಯಲ್ಲಿ ಜಾತ್ರೆ ಮೊದಲಾದ ಉತ್ಸವಗಳ ಗಲಾಟೆಗಳೇನೂ ಇಲ್ಲದಿರುವಾಗಲೂ ಮೈಸೂರಿನಲ್ಲಿ ೬೦ ಮಂದಿಯನ್ನು ಖಾಯಮಾಗಿ ನೇಮಿಸುವುದು ಅವಶ್ಯವೆಂದು ಕಂಡುಬರುವುದಿಲ್ಲ. ಮೈಸೂರು ಟವುನ್ ಪೋಲೀಸ್ ಸಿಬ್ಬಂದಿಯು ಹೆಚ್ಚಾಗಿದೆ; ಮತ್ತು ಸಾಧಾರಣ ಕಾಲಗಳಲ್ಲಿ ಪಟ್ಟಣದ ನೆಮ್ಮದಿಯನ್ನು ಕಾಪಾಡಿಕೊಳ್ಳುವಷ್ಟು ಸಾಮರ್ಥ್ಯ ಉಳ್ಳದ್ದಾಗಿರುವುದು ಎಂಬುದು. ಗವರ್ನಮೆಂಟಿನವರು ಅದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ—ಮೈಸೂರಿನಲ್ಲೂ ಶಿವಮೊಗ್ಗೆಯಲ್ಲೂ ಯಾವಾಗಲೂ ಸ್ಪೆಷಲ್ ರಿಜರ್ವ್ ಪೋಲೀಸ್ ಸಿಬ್ಬಂದಿಯನ್ನು ಇಟ್ಟೇ ಇರಬೇಕಾದದ್ದು ಅವಶ್ಯವೆಂದು ಕಾಣುವುದಿಲ್ಲ ಮೈಸೂರು ಪಟ್ಟಣಕ್ಕೂ ಡಿಸ್ಟ್ರಿಕ್ಟಿಗೂ ಅವರ ಅವಶ್ಯಕತೆ ಬೀಳುವುದು ವಿರಳವಾಗಿದೆ ಆದರೆ ದಕಾಯಿತಿ ನಡೆಯುವ ಸಮಯಗಳಲ್ಲಿ ಶಿವಮೊಗ್ಗೆ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟುಗಳ ಎಲ್ಲೆ ಕಟ್ಟನಲ್ಲಿ ಅವರನ್ನು ನೇಮಿಸಬೇಕಾದ್ದು ತುಂಬಾ ಅವಶ್ಯ

ವ್ಯವಸಾಯ ಕೈಗಾರಿಕೆ ಪ್ರದರ್ಶನ

ಮೈಸೂರು ಗವರ್ನಮೆಂಟಿನವರು ರಾಜಧಾನಿಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಬಂದಿದ್ದಾಗ್ಗೆ ಮೈಸೂರು ಸಂಸ್ಥಾನದ ವ್ಯವಸಾಯೋಪಕರಣಗಳನ್ನೂ ಕೈಗಾರಿಕೆ ವಸ್ತು ವಿಶೇಷಗಳನ್ನೂ ಪ್ರದರ್ಶನ ಮಾಡಿಸಬೇಕೆಂದು ೧೯೦೫ನೆ ಸೆಪ್ಟಂಬರಿನಲ್ಲಿ ಹುಕುಂ ಕೊಟ್ಟು, ಅದರ ಖರ್ಚಿಗೆ ಮೊದಲು ೨೦,೦೦೦ ರೂಪಾಯಿ ಸ್ಯಾಂಕ್ಷನ್‌ಮಾಡಿದರು. ಇದಲ್ಲದೆ ಪ್ರದರ್ಶನವನ್ನು ನಡಸುವುದಕ್ಕೆ ಹತ್ತುಮಂದಿ ದೊಡ್ಡಮನುಷ್ಯರನ್ನುಳ್ಳ ಒಂದು ಕಮಿಟಿ ಮಾಡಿ ರಾವ್ ಬಹದೂರ್ ಮಿ॥ ಸಿ. ಮಾಧವರಾಯರವರನ್ನು ಪ್ರೆಸಿಡೆಂಟಾಗಿಯೂ, ಮಿ॥ ಎ. ಆನಂದರಾಯರನ್ನು ಸೆಕ್ರೆಟರಿಯಾಗಿಯೂ ನೇಮಿಸಿದರು ತರುವಾಯ ಹಣ ಸಾಲದೆ ಬಂದದ್ದರಿಂದ ಮತ್ತೆ ೨೨,೩೬೬ ರೂಪಾಯಿ ಕೊಡಲಾಯಿತು ಈ ಪ್ರದರ್ಶನಶಾಲೆಗೆ ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಒಟ್ಟು ೩೫,೬೦೮ ಬೆಲ್ಲರೆ ರೂಪಾಯಿ, ಬೆಲೆಯಾಗುವ ೨,೩೨೩ ವಸ್ತುಗಳು ಕಳುಹಿಸಲ್ಪಟ್ಟವು. ಈ ಪೈಕಿ ೬,೫೮೮ ಬೆಲ್ಲರೆ ರೂಪಾಯಿನ ಸಾಮಾನುಗಳು ಪ್ರದರ್ಶನಶಾಲೆಯಲ್ಲಿ ಬಿಕರಿ ಆಗಿರುತ್ತವೆ ಈ ಪ್ರದರ್ಶನಶಾಲೆಯು ಒಂದು ಕೊಠಡಿಯ ಸ್ತ್ರೀಯರಿಂದ ತಯಾರುಮಾಡಲ್ಪಟ್ಟ ಚಿತ್ರವಸ್ತುಗಳೇ ಇಡಲ್ಪಟ್ಟದ್ದವು ಲೇಡಿ ಕೃಷ್ಣಮೂರ್ತಿಯವರು ಮುಖ್ಯವಾಗಿ ನಿಂತು ಅನೇಕ ಸ್ತ್ರೀಯರನ್ನು ಪ್ರೋತ್ಸಾಹಪಡಿಸಿ ವಸ್ತುಗಳನ್ನು ಶೇಖರ ಮಾಡಿಸಿರುತ್ತಾರೆ ಆಕೆಯವರನ್ನು ಬಹಳ ಸಂಗಡ ಕಾರ್ಯಭಾರವನ್ನು ವಹಿಸಿದ್ದ ಸ್ತ್ರೀಯರನ್ನು ಗವರ್ನಮೆಂಟಿನವರು ಮೆಚ್ಚಿಸುತ್ತಾರೆ

ಪ್ರದರ್ಶನಶಾಲೆಯು ಕಳೆದ ಜನವರಿ ೩೦ರಿಂದ ಫೆಬ್ರವರಿ ೧೯ರ ವರೆಗೆ ೨೧ ದಿನ ತೆರೆಯಲ್ಪಟ್ಟಿತ್ತು ಪ್ರಿನ್ಸ್ ಆಫ್ ವೇಲ್ಸ್‌ರವರು ಪತ್ನಿ ಸಹಿತ ಶ್ರೀಮನ್ಮಹಾರಾಜರವರ ಮತ್ತು ರೆಸಿಡೆಂಟರವರ ಸಂಗಡ ದಯಮಾಡಿ ಪರಾಂಬರಿಸಿದರು ತರುವಾಯ ೧೬,೧೬೦ ಜನರು (ಈ ಪೈಕಿ ದೊಡ್ಡವರೇ ೧೬,೯೫೦ ಮಂದಿ) ನೋಡಿದರು ಹುಡುಗರನ್ನೂ ಹುಡುಗಿಯರನ್ನೂ ಅರ್ಧಚಾರ್ಜಿಗೆ ಬಿಟ್ಟರು ಅಮಲ್ದಾರರು ತಮ್ಮ ತಮ್ಮ ತಾಲ್ಲೋಕುಗಳಲ್ಲಿರುವ ಕಾಮಗಾರರನ್ನೂ ರೈತರನ್ನೂ ಕರೆದುಕೊಂಡು ಬಂದು ಪ್ರದರ್ಶನವಸ್ತುಗಳನ್ನು ತೋರಿಸಿರುತ್ತಾರೆ ಸರ್ವೋತ್ಕೃಷ್ಟ ವಸ್ತುಗಳಿಗೆ ೨೭ ಚಿನ್ನದ, ೬೩ ಬೆಳ್ಳಿಯ, ೧೫೬ ಕಂಚಿನ ಮೆಡಲ್‌ಗಳನ್ನೂ ೧,೭೬೮ ರೂಪಾಯಿ ಬಹುಮಾನಗಳನ್ನೂ ಕೊಡಲಾಗಿದೆ ಸ್ತ್ರೀಯರಿಂದ ಪ್ರದರ್ಶನಮಾಡಲ್ಪಟ್ಟದ್ದ ವಸ್ತುಗಳ ಪೈಕಿ ೬ಕ್ಕೆ ಚಿನ್ನದ ೧೯ಕ್ಕೆ ಬೆಳ್ಳಿಯ, ೨೫ಕ್ಕೆ ಕಂಚಿನ ಮೆಡಲುಗಳನ್ನೂ ೫೯ಕ್ಕೆ ಮೆಚ್ಚಿಕೆಯ ಸರ್ಟಿಫಿಕೇಟುಗಳನ್ನೂ ಕೊಟ್ಟಿದೆ.

ಸರ್ಕಾರದವರು ಸ್ಯಾಂಕ್ಷನ್ ಮಾಡಿದ ೪೨,೩೬೬ ರೂಪಾಯಿ ಅಲ್ಲದೆ ಟಿಕೇಟುಗಳ ಬಿಕರಿಯಿಂದ ೩,೯೬೮ ರೂಪಾಯಿಯೂ, ಕಟ್ಟಡದ ಸಾಮಾನು ಬಿಕರಿಯಿಂದ ೫,೯೩೦ ರೂಪಾಯಿಯೂ ಉತ್ಪತ್ತಿಯಾಯಿತು ಈ ಪೈಕಿ ಇದುವರೆಗೆ ೬೧,೭೭೦ ಬೆಲ್ಲರೆ ರೂಪಾಯಿ ಖರ್ಚಾಗಿ, ೧೭,೪೨೦ ಬೆಲ್ಲರೆ ರೂಪಾಯಿ ಶಿಲ್ಕು ಉಳಿದಿದೆ

ಪ್ರದರ್ಶನಕ್ಕೆ ಬಂದ ಸಾಮಾನುಗಳಿಗೆ ರೈಲ್ ಛಾರ್ಜನ್ನು ಸುಲಭ ಮಾಡಿಕೊಟ್ಟದ್ದಕ್ಕಾಗಿ ದಕ್ಷಿಣ ಮಹಾರಾಷ್ಟ್ರ ಮತ್ತು ಮದರಾಸ್ ರೈಲ್ವೆ ಕಂಪನಿಯವರನ್ನೂ, ಪ್ರತಿಫಲವನ್ನಪೇಕ್ಷಿಸದೆ ಪ್ರದರ್ಶನಶಾಲೆಯೊಳಗೆ ಇದ್ದುಕೊಂಡು ನೋಟಕರಿಗೆ ಎಲ್ಲಾ ವಸ್ತುಗಳನ್ನೂ ತೃಪ್ತಿಕರವಾಗಿ ತೋರಿಸುತ್ತಾ ಉತ್ಸಾಹದಿಂದ ಕೆಲಸಮಾಡಿದ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳನ್ನೂ, ಪ್ರದರ್ಶನದ ಕಾರ್ಯಗಳನ್ನೆಲ್ಲಾ ಚೆನ್ನಾಗಿ ನಡಸಿ ವಿಶೇಷ ಶ್ರಮ ತೆಗೆದು ನೆರವೇರಿಸಿದ್ದಕ್ಕಾಗಿ ಮಿ॥ ಮಾಧವರಾಯರವರನ್ನೂ ಕಮಿಟಿ ಮೆಂಬರುಗಳನ್ನೂ ಗವರ್ನಮೆಂಟಿನವರು ಮೆಚ್ಚಿಸುತ್ತಾರೆ

ಪ್ರದರ್ಶನದ ಸೆಕ್ರೆಟರಿಯಾಗಿದ್ದ ಮಿ॥ ಎ. ಆನಂದರಾಯರು ಕಾಲೋಚಿತವಾದ ಶ್ರಮವನ್ನು ವಹಿಸಿದರು ಇವರು ತಮ್ಮ ಅನುಭವವನ್ನೂ ಬುದ್ಧಿ ಕುಶಲತೆಯನ್ನೂ ಸಾಹಸವನ್ನೂ ವಿನಿಯೋಗಿಸಿ ಪ್ರದರ್ಶನವನ್ನು ಯಶಸ್ವಿಯಾಗಿ ನೆರವೇರಿಸಿರುತ್ತಾರೆಂದು ಗವರ್ನಮೆಂಟಿನವರು ಶಿಫಾರಸು ಮಾಡಿದ್ದಾರೆ

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದವಾರ ಹಿಂದುಸ್ಥಾನದಲ್ಲಿ ೯೮೮ ಜನರಿಗೆ ಪ್ಲೇಗ್ ೭೩೮ ಮಂದಿ ಕಾಲವಾದರು

◆◆◆◆

ಕೂಚ್ ಬೇಹಾರಿನಲ್ಲಿ ಪ್ರವಾಹಗಳ ದೆಸೆಯಿಂದ ಅಪಾರವಾದ ಬೆಳೆಗಳು ಕೊಚ್ಚಿ ಹೋಗಿ ರೈತರು ಕಳವಳಪಡುತ್ತಿದ್ದಾರೆ.

◆◆◆◆

ಕಳೆದ ೧೯೦೬ ನೆ ವರುಷದಲ್ಲಿ ಹಿಂದುಸ್ಥಾನದಲ್ಲೆಲ್ಲಾ ರೈಲ್ವೆ ಗಾಡಿಗಳ ಅಪಾಯದಿಂದ ಒಟ್ಟು ೧,೦೬೭ ಜನರು ಮೃತಪಟ್ಟರು: ೩೩ ಜನರಿಗೆ ಗಾಯಗಳಾದವು ಎಂದು ಕಂಪನಿಗಳ ರಿಪೋರ್ಟಿನಿಂದ ತಿಳಿದುಬರುವುದು

◆◆◆◆

ಹೈದರಾಬಾದ್ ನೈಜಾಮರವರಿಗೆ ಕ್ಷಾಮ ಬಂದಿರುವುದರಿಂದ ಅವರು ಪ್ರಜೆಗಳಿಗೆ ಪ್ರತಿದಿನವೂ ೧೬ ಖಂಡಿ ಅಕ್ಕಿಯನ್ನು ಅದಕ್ಕೆ ತಕ್ಕಷ್ಟು ಇತರ ಪದಾರ್ಥಗಳನ್ನೂ ಕಳುಹಿಸಿ ಬಡಬಗ್ಗರಿಗೆ ಅನ್ನದಾನ ಮಾಡಿಸುತ್ತಾ ಬಂದಿದ್ದಾರೆ

◆◆◆◆

ಸಂಯುಕ್ತ ಸಂಸ್ಥಾನಗಳಿಗೆ ಮಿ॥ ಜೆ ಪಿ ಹ್ಯೂವಿಟ್ ಯವರನ್ನೂ ಪೂರ್ವಬಂಗಾಳಾ ಮತ್ತು ಅಸ್ಸಾಂ ಎಂಬ ಆಧಿಪತ್ಯಕ್ಕೆ ಮಿ॥ ಲಾನ್ಸಲಾಟ್ ಹೇರ್ ರವರನ್ನೂ ಇಂಡಿಯಾ ಗವರ್ನಮೆಂಟಿನವರು ಲೆಫ್ಟಿನೆಂಟ್ ಗವರ್ನರುಗಳಾಗಿ ನೇಮಕ ಮಾಡಿದ್ದಾರೆ

◆◆◆◆

ಜುನಾಘಡ ಸಂಸ್ಥಾನದ ವಯೋವೃದ್ಧ ಬೇಗಂ ರಾಣಿ ಸಾಹೇಬರವರು ಎರಡು ವರುಷಗಳಿಂದ ಕಾಯಿಲೆಯಾಗಿದ್ದು ಕಳೆದ ವಾರ ಕಾಲವಾದರು ವಜೀರರೂ, ದಿವಾನರವರೂ ಛಾಯಾತ್ ದೊಡ್ಡ ಮನುಷ್ಯರೂ, ಅಮೀರರೂ ಶವವನ್ನು ಪದ್ಧತಿಯ ಪ್ರಕಾರ ದೊಡ್ಡ ಮಕ್ಬರ್ ಎಂಬ ಸ್ಥಳಕ್ಕೆ ಸಾಗಿಸಿ ದಫನ ಮಾಡಿ ಬಂದರು

◆◆◆◆

ಉತ್ತರದ ದೇಶದ ಅನೇಕ ಕಡೆಗಳಲ್ಲಿ ಚಿಕ್ಕ ಸಾಟ್ಟಗೆ ಮಳೆ ಗಿರುವುದರಿಂದ ಕ್ಷಾಮಪೀಡಿತರ ಸಂಖ್ಯೆಯೂ ಕಡಿಮೆಯಾಗಿದೆ ಆದರೂ ಇನ್ನೂ ೨,೫೬,೯೬೭ ಜನರು ಸರ್ಕಾರದ ರಿಲೀಫ್ ಕಾಮಗಾರಿಗಳಲ್ಲಿ ಸೇರಿರುತ್ತಾರೆ ಪೂರ್ವ ಬಂಗಾಳಾ ಮತ್ತು ಅಸ್ಸಾಮಿನಲ್ಲಿ ಕ್ಷಾಮಪೀಡಿತರ ಸಂಖ್ಯೆಯು ೨೫,೭೯೮. ಇದು ಇನ್ನೂ ಹೆಚ್ಚುತ್ತಿರುವುದಾಗಿ ಕಾಣುವುದು.

◆◆◆◆

ಕೊಚ್ಚಿ ಸಂಸ್ಥಾನದ ದಿವಾನ್ ಮಿ॥ ಪಟ್ಟಾಭಿರಾಮ ರಾಯರ ಅಧಿಕಾರದ ಅವಧಿಯು ಬರುವ ಡಿಸೆಂಬರಿಗೆ ಮುಕ್ತಾಯವಾಗುವದು. ಆದರೆ ಈಗ ಇವರು ಪ್ರಾರಂಭಿಸಿರುವ ಸರ್ವೆ ಸೆಟ್ಲ್‌ಮೆಂಟ ಇನ್ನೂ ಪೂರೈಸಿಲ್ಲವಾದ್ದರಿಂದ ಕೊಚ್ಚಿ ರಾಜರು ಇವರನ್ನೇ ಇನ್ನೊಂದು ವರುಷ ತನಕ ನೇಮಿಸಿಕೊಳ್ಳುವಂತೆ ಮದರಾಸ್ ಗವರ್ನಮೆಂಟಿನವರನ್ನು ಕೇಳುವವರಾಗಿದ್ದಾರೆಂದು ವರ್ತಮಾನವಿದೆ

◆◆◆◆

ಹೈದರಾಬಾದ್ ಸಂಸ್ಥಾನದ ... ಪ್ರಸಾದ್ ... ಎಂಬಾತನು ... ಒಂದು ದಿನ ... ಆದರೆ ... ತೆಗೆದು ... ನೋಡಿಕೊಳ್ಳುತ್ತಾ ಇದ್ದಾನೆ

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಬಿಸ್ಸಿನೆಸ್ ಇನ್ಸ್‌ಟಿಟ್ಯೂಟ್ ಎಂಬ ಒಂದು ಕಂಪನಿಯನ್ನು ಮಿ॥ ಕೆ ಬೋಸ್ ಎಂಬಾತನು ಪ್ರಾರಂಭಿಸಿ, ಅನೇಕರಿಂದ ಪ್ರತಿ ತಿಂಗಳಲ್ಲೂ ಹಣ ಕಾಸನ್ನು ಚಂದಾ ವಸೂಲ್ಮಾಡುತ್ತಿದ್ದನು ಈಗ ಆ ಕಂಪನಿಯು ಎದ್ದುಹೋಯಿತು ಆ ಮ್ಯಾನೇಜರನ್ನು ಪೋಲೀಸಿನವರು ಹಿಡಿದು, ಕೊಡಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರುಪಡಿಸಿದರು ಆ ಕಂಪನಿಗೆ ಹಣ ಕೊಡುತ್ತಿದ್ದವರೆಲ್ಲಾ ತಮ್ಮ ಹಣ ಏನಾಯಿತೋ ಎಂದು ಕಳವಳಪಡುತ್ತಿದ್ದಾರೆ

◆◆◆◆

ಕ್ಯಾಂಬೋಡಿಯಾ ರಾಜ್ಯದ ಸಿಸೋವಾತ್ ದೊರೆಯವರು ನಾಗಾತಿಯರ ಸಮೇತ ಕಳೆದ ವಾರ ಹಡಗಿನಿಂದ ಸಿಲೋನ್ ದ್ವೀಪಕ್ಕೆ ಬಂದಿಳಿದರು ಗವರ್ನರವರು ಅವರನ್ನು ರಾಣಿ ಅರಮನೆಯಲ್ಲಿ ಇಳಿಸಿ ಸತ್ಕಾರ ಮಾಡಿದರು. ಆ ದ್ವೀಪದಲ್ಲಿರುವ ಬೌದ್ಧ ಪ್ರಜೆಗಳು ದೊರೆಯವರಿಗೆ ವಿಜ್ಞಾಪನಾ ಪತ್ರಿಕೆಯನ್ನೊಪ್ಪಿಸಿ, ಅವರಿಂದ ದೇವಸ್ಥಾನದ ಆವರಣದಲ್ಲಿ ಒಂದು ವೃಕ್ಷವನ್ನು ನೆಡಿಸಿ ಉತ್ಸವ ಮಾಡಿದರು ದೊರೆಯವರು ಮರುದಿನ ಜಹಜು ಹತ್ತಿ ಕ್ಯಾಂಬೋಡಿಯಾವನ್ನು ಕುರಿತು ತೆರಳಿದರು.

◆◆◆◆

ಪೂರ್ವ ಬಂಗಾಳಾ ರೈಲ್ವೆ ನೌಕರರ ಪೈಕಿ ನೂರಾರು ಮಂದಿ ತಮ್ಮ ಸಂಬಳವನ್ನು ಹೆಚ್ಚುಮಾಡಿಕೊಡುವ ತನಕ ಮತ್ತು ತಮಗಿರುವ ಇತರ ಕಷ್ಟಗಳನ್ನು ಪರಿಹಾರಮಾಡಿಕೊಡುವ ತನಕ ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟರು ರೈಲ್ವೆ ಕಂಪನಿಯವರು ಆ ಪೈಕಿ ೨೫೦ ಜನರನ್ನು ಕೆಲಸದಿಂದ ವಜಾ ಮಾಡಿ, ಇತರ ಕಡೆಗಳಿಂದ ಹೊಸ ಜನರನ್ನು ಕರೆಸಿ ನೇಮಿಸಿಕೊಂಡರು ಕೂಡಲೆ ಬಿಟ್ಟುಹೋಗಿದ್ದ ಕೆಲವು ನೌಕರರು ಹೋಗಿ ತಮ್ಮ ಅನಿವಾರ್ಯ ಮನಸ್ಥಿತಿಯನ್ನು ಹೇಳಿ ಒಪ್ಪಿಸಿ ಕೆಲಸಕ್ಕೆ ಸೇರಿಕೊಂಡಿದ್ದಾರೆ

◆◆◆◆

ಸಿಂಧೂ ದೇಶದಲ್ಲಿ ರೈತರು ಈಗ ಹೊಸ ತರಹ ದೊಡ್ಡ ಜಾತಿ ... ಗಿಡಗಳನ್ನು ಹಾಕಿ ವ್ಯವಸಾಯ ಮಾಡಿರುತ್ತಾರೆ ಈ ದೊಡ್ಡ ಗಿಡದ ... ಬೀಜ ... ವಾದದ್ದರಿಂದ ಅದರ ಪರೀಕ್ಷೆಗಳು ... ದಿಂದ ... ಹತ್ತಿ ಕಾರ್ಖಾನೆಗಳನ್ನಿಟ್ಟಿರುವ ... ಸ್ಥಳಕ್ಕೆ ... ತಮ್ಮ ಹೊಸ ಹತ್ತಿಯನ್ನು ಸಿಂಧೂ ದೇಶಕ್ಕೆ ... ಈ ವರುಷ ಬೆಳೆಯಾಗುವಂಥಾ ದೊಡ್ಡ ಗಿಡದ ಹತ್ತಿಯೆಲ್ಲಾ ಕೊಂಡುಕೊಳ್ಳುವದಾಗಿ ಆ ರೈತರಿಗೆ ಮಾತುಕೊಟ್ಟು ...

ದ ಅದೇ ರೀತಿ ಕರಾರು ಬರೆಸಿಕೊಂಡಿದ್ದಾರೆ. ಇದಲ್ಲದೆ ಈ ಪತ್ತಿ ಖಾನೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಇಟ್ಟು ಯಂತ್ರಗಳನ್ನು ನಡಿಸಬೇಕೆಂತಲೂ ಯೋಚನೆ ಮಾಡಿ, ಅದಕ್ಕಾಗಿ ಸಾಹಸಪಡಲಾರಂಭಿಸಿರುರೆ.

❖❖❖❖

ತಿರುವಾಂಕೂರು ಸಂಸ್ಥಾನದ ಹೊಸ ದಿವಾನರಾದ ದಿವಾನ್ ಬಹದ್ದೂರ್ ಎಸ್. ಗೋಪಾಲಾಚಾರ್ಯರವರು ಸಂಸಾರ ಸಮೇತ ಕಳೆದ ಗುರುವಾರ ಬೆಳಿಗ್ಗೆ ತಿರುವಾಂಕೂರಿಗೆ ಹೋದರು. ಅರಮನೆ ತರೆಯಿಂದ ಕಳುಹಲ್ಪಟ್ಟದ್ದ ಸಾರೋಟಿನಲ್ಲಿ ಕುಳಿತು ತಮ್ಮ ಬಿಡಾರದ ಭಕ್ತಿವಿಲಾಸ್ ಎಂಬ ಬಂಗಲೆಗೆ ಹೋಗಿ ಇಳಿದರು. ಶ್ರೀಮನ್ಮಹಾರಾಜರವರು ಮರುದಿನ ಬೆಳಿಗ್ಗೆ ಅರಮನೆಯಲ್ಲಿ ದರ್ಬಾರ್ ಇಟ್ಟು, ಮೆ|| ಗೋಪಾಲಾಚಾರ್ಯರನ್ನು ಕರೆಸಿಕೊಂಡು ಅವರಿಂದ ಶಾಸ್ತ್ರ ಪ್ರಕಾರ ಪ್ರಮಾಣ ವಚನವನ್ನು ತೆಗೆದುಕೊಂಡು, ತಮ್ಮ ದಿವಾನರನ್ನಾಗಿ ನೇಮಿಸಿಕೊಂಡು, ಆ ಪದವಿಯನ್ನು ಅವರಿಗೆ ವಹಿಸಿದರು.

❖❖❖❖

ತಿರುವಾಂಕೂರು ಸಂಸ್ಥಾನದ ಯಾಲಕ್ಕಿ ಬೆಟ್ಟಗಳ ಪೈಕಿ ಎತ್ತ್ವಾಬ ಗುಡ್ಡದ ಮೇಲೆ ಎರಡು ಎಕರೆಗಳುಳ್ಳ ಭೂಮಿಯೊಳಗೆ ಆರುತಿಗಳಲ್ಲಿ ಹೊಗೆ ಹುಟ್ಟಿ ಮೇಲಕ್ಕೆ ಬರಲಾರಂಭವಾಗಿದೆ ಅದರ ಸುತ್ತಮುತ್ತಲೂ ಭೂಮಿಯು ಸ್ವಲ್ಪ ಮಟ್ಟಿಗೆ ಕುಸಿದಿರುತ್ತೆ. ಹೊಗೆ ಬರುವದು ನಿಲ್ಲುವದೇ ಇಲ್ಲ. ಪ್ರಜೆಗಳು ಈ ವರ್ತಮಾನವನ್ನು ಕೇಳಿ ಅಲ್ಲಿ ಅಗ್ನಿಪರ್ವತವು ಉತ್ಪನ್ನವಾಗುತ್ತೆಂದು ಹೆದರಿ ಗಾಬರಿಪಡುತ್ತಿದ್ದಾರೆ ಗವರ್ನ್ಮೆಂಟಿನವರು ಅದರ ನಿಜಸ್ಥಿತಿಯನ್ನು ಪರೀಕ್ಷಿಸುವುದಕ್ಕೆ ಭೂಗರ್ಭಶಾಸ್ತ್ರ ಪರಿಚಯವುಳ್ಳ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕೂಡಲೇ ಕಳುಹಿಸಿಕೊಡಬೇಕೆಂದು ಮದರಾಸ್ ಸರ್ಕಾರಕ್ಕೆ ಬರೆದುಕೊಂಡಿದ್ದಾರೆ.

❖❖❖❖

ಸಿಂಬಾಯನಲ್ಲಿ ಭಾರೀ ಸಾಹುಕಾರರಾಗಿಯೂ ಅನೇಕ ಪ್ರಜಾಹಿತ ಕಾರ್ಯಗಳನ್ನು ಮಾಡಿದವರಾಗಿಯೂ ಹಿಂದುಸ್ಥಾನದ ಶ್ರೇಯೋಭಿವೃದ್ಧಿಯನ್ನೇ ಬಯಸುವವರಾಗಿಯೂ ಇದ್ದ ಕಾಲವಾದ ಮೆ|| ಜೆ. ಎನ್. ಟಾಟಾ ಎಂಬ ಪಾರ್ಸಿ ದೊಡ್ಡ ಮನುಷ್ಯರ ಹೆಸರನ್ನು ಶಾಶ್ವತವಾಗಿ ಇಡಬೇಕೆಂದು ಮುಂಬಾಯಿಯ ದೊಡ್ಡ ಮನುಷ್ಯರು ತೀರ್ಮಾನಿಸಿ ಹಣ ಕೂಡಿಸುತ್ತಾ ಬಂದರು. ಈಗ ಈ ಫಂಡಿಗೆ ೪೩,೦೦೦ ರೂಪಾಯಿ ಚಂದಾ ವಸೂಲಾಗಿದೆ ಈ ಫಂಡಿನ ಕಮಿಟಿ ಮೆಂಬರುಗಳು ಕಳೆದ ವಾರ ಸಭೆ ಸೇರಿ, ಆ ಹಣದಲ್ಲಿ ಮೆ|| ಟಾಟಾ ರವರ ಛಾಯಾ ಪ್ರತಿಮೆಯನ್ನು ಲೋಹದಲ್ಲಿ ಮಾಡಿ ತರಿಸಿ ಯೋಗ್ಯವಾದ ಸ್ಥಳದಲ್ಲಿ ಪ್ರತಿಷ್ಠೆ ಮಾಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

❖❖❖❖

ಕಾಶೀ ಮಹಾರಾಜರವರು ಕಳೆದ ವಾರ ಕಾಶ್ಮೀರ ಸಂಸ್ಥಾನಕ್ಕೆ ಹೋಗುವಾಗ ಪ್ರಾಂಕ್‌ಟ್ರಂಕ್ ಎಂಬ ಸ್ಟೇಷನಲ್ಲಿ ಕಾಶ್ಮೀರದ ಮಹಾರಾಜರ ಸ್ವಂತ ದೋಣಿಗಳು ಕಾದಿದ್ದು ಕಾಶೀ ಮಹಾರಾಜರವರನ್ನು ಕೂರಿಸಿಕೊಂಡು ನದಿಯಲ್ಲಿ ಹೊರಟಿತು. ೩೦ ಜನ ಅಂಬಿಗರು ಹುಟ್ಟು ಹಾಕುತ್ತಿದ್ದಾಗ್ಯೂ ದೋಣಿಯು ಪ್ರವಾಹದಲ್ಲಿ ಸ್ವಲ್ಪ ದೂರ ಹೋಯಿತು. ತರುವಾಯ ಮಹಾರಾಜರು ಬಹಳ ಕಷ್ಟದಿಂದ ಕಾಶ್ಮೀರ ಸಂತೋಷಪಟ್ಟು ಅಲ್ಲಿ ತಲುಪಿದರು. ಶ್ರೀನಗರದಲ್ಲಿ ೧೫ ತೋಪುಗಳು ಹಾರಿಸಲ್ಪಟ್ಟವು ಇಬ್ಬರು ಮಹಾರಾಜರೂ ಸೇರಿ ಪರಸ್ಪರ ಯೋಗಕ್ಷೇಮಗಳನ್ನು ವಿಚಾರಿಸಿ ಸ್ನೇಹದಿಂದ ಸಂಭಾಷಣೆ ಮಾಡುತ್ತಿದ್ದರು. ತರುವಾಯ ಬಹು ಅಪೂರ್ವವಾದ ಸಂಗೀತಗಾನವೂ ಅಪಾರವಾದ ಮಳೆಯೂ ಪ್ರಾಪ್ತವಾದವು.

❖❖❖❖

ಜುನಾಘಡ ಸಂಸ್ಥಾನದ ಖಜಾನೆಯಲ್ಲಿ ಒಂದೂವರೆ ಲಕ್ಷ ರೂಪಾಯಿ ಕಡಿಮೆಯಾಗಿದೆ ಅದಕ್ಕೆ ಸರಿಯಾದ ಖರ್ಚು ಪಟ್ಟಿಯೂ ಸಿಕ್ಕಿಲ್ಲ. ಹೊಸದಾಗಿ ನೇಮಿಸಲ್ಪಟ್ಟ ದಿವಾನರವರು ಪಾದಂಟ್ ಕೊಟ್ಟು ನಾಯಬ್ ದಿವಾನ್ ಪುರುಷೋತ್ತಮರಾಯ ಸುಂದರಜೀ ರವರ ಮನೆಯನ್ನು ಶೋಧನೆ ಮಾಡಿ, ಅವರ ಲೆಕ್ಕದ ಪುಸ್ತಕಗಳನ್ನು ತರಿಸಿ ನೋಡಿದರು. ಆ ಪುಸ್ತಕಗಳಲ್ಲಿ ಕಂಡ ಲೆಕ್ಕದ ಪ್ರಕಾರ ಖಜಾನೆಯಿಂದ ಹಣವನ್ನು ಅವರು ಹುಂಡಿ ಮೂಲಕ ಬೊಂಬಾಯಿಗೆ ಕಳುಹಿಸಿದ ಹಾಗೂ, ಅಲ್ಲಿ ಒಂದು ಸಾವಿರ ರೂಪಾಯಿ ಬೆಲೆಯುಳ್ಳ ನೋಟುಗಳನ್ನು ಅಷ್ಟು ಹಣಕ್ಕೂ ತೆಗೆದುಕೊಂಡು, ವಜೀರ್ ಬಹಾದ್ದೂರ್ ಭಾಯಿ ಎಂಬಾತನ ವಶಕ್ಕೆ ಕೊಡಲ್ಪಟ್ಟ ಹಾಗೂ ಗೊತ್ತಾಯಿತು. ಈ ಆ ವಜೀರನನ್ನು ಕೇಳಿದರೆ—ನನಗೆ ಯಾರೂ ಅಷ್ಟು ಹಣ ಕೊಟ್ಟಿಲ್ಲ ಎಂಬದಾಗಿ ಹೇಳಿಬಿಟ್ಟನು. ಇನ್ನೂ ತನಿಖೆ ನಡೆಯುತ್ತಿದೆ.

❖❖❖❖

ಅನಂತಶಯನ (ತಿರುವಾಂಕೂರು) ಸಂಸ್ಥಾನದಲ್ಲಿ ಮೆ|| ವಿ. ಪಿ. ಮಾಧವರಾಯರು ದಿವಾನರಾಗಿದ್ದಾಗ ಶ್ರೀಮೂಲಂ ಎಂಬ ಹೆಸರಿನಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಎರಡು ಮೂರು ವರುಷವಾದರಷ್ಟೆ ಈ ವರುಷದ ಸಭೆಗೆ ಅಲ್ಲಿನ ಪೇಷ್ಕಾರರು ಪ್ರತಿನಿಧಿಗಳ ಚುನಾಯಿಸುತ್ತಿದ್ದರಂತಲೂ, ಗವರ್ನ್ಮೆಂಟಿನವರು ಆ ಚುನಾವಣೆಯನ್ನು ನಿಲ್ಲಿಸಬೇಕೆಂದು ಅಧಿಕಾರಿಗಳಿಗೆ ಹುಕುಂ ಕೊಟ್ಟಿದ್ದಾರೆಂದೂ ಇದರಿಂದ ಆ ಸರ್ಕಾರದವರಿಗೆ ಪ್ರತಿನಿಧಿಸಭೆಯನ್ನು ಮುಚ್ಚಿ ಹಾಕಬೇಕೆಂಬ ಅಭಿಪ್ರಾಯವಿರುವಂತೆ ಕಾಣುತ್ತದೆ ಎಂತಲೂ, ಈ ಸಂಗತಿಯೂ, ಅಲ್ಲಿನ ಬಲವಾದ ಸಾಮ್ರಾಜ್ಯದ ವಿಷಯದಲ್ಲಿ ಸರ್ಕಾರದವರು ತೋರುವ ಬಿಗುವಾದ ನೀತಿಯೂ ಆ ಸಂಸ್ಥಾನದ ಸ್ವತಂತ್ರ ಕಳವಳವನ್ನು ಬಲಪಡಿಸುವುದಾಗಿಯೂ, ಈ ವಿಷಯದಲ್ಲಿ ಪ್ರಜೆಗಳೆಲ್ಲಾ ಸೇರಿ ದೊಡ್ಡ ಸಭೆ ನಡಸಬೇಕೆಂದೂ ಪ್ರಯತ್ನಿಸುತ್ತಿರುವದಾಗಿಯೂ ಅಲ್ಲಿನ ಒಬ್ಬ ಪತ್ರಿಕಾಕರ್ತರು ತಿಳಿಸಿದಾರೆ.

❖❖❖❖

ಕಪ್ಪುಕಾವಾಳಿ ಸೇರಿದ ದೊಡ್ಡ ರೇವಿಯ ಸಂಸ್ಥಾನದ ಪೈಕಿಯಾದ ಜಹಾಗೀರ ಸಂಸ್ಥಾನದಲ್ಲಿ ಮಹಾರಾಜರು ಕಳೆದ ವಾರ ಕಾಲವಾದರು. ಇವರು ಪಟ್ಟಕ್ಕೆ ಬಂದು ಕೆಲವು ವರುಷಗಳು ಮಾತ್ರ ಆಗಿದ್ದವು. ಇನ್ನೂ ಚಿಕ್ಕವನೆಂತಲೇ ಹೇಳಬೇಕು. ಇವರಿಗೆ ಮಕ್ಕಳಿಲ್ಲವಾದ್ದರಿಂದ ಸಂಸ್ಥಾನದ ಪಟ್ಟಕ್ಕೆ ಯಾರು ನೇಮಕವಾಗುವರೋ ನೋಡತಕ್ಕದ್ದಾಗಿದೆ. ಯಾಕೆಂದರೆ ಇವರ ತಂದೆಯು ಮಕ್ಕಳಿಲ್ಲವೆಂದು ರಂಜಿತ್‌ಸಿಂಗ್‌ಜೀ ಎಂಬ ರಾಜಕುಮಾರರನ್ನು ದತ್ತು ಮಾಡಿಕೊಂಡು ಅವರನ್ನು ರಾಜಕೋಟೆಯ ರಾಜಕುಮಾರರ ಕಾಲೇಜಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಆದರೆ ಕೆಲವು ಕಾಲದ ಮೇಲೆ ಇವರಿಗೆ ಔರಸಪುತ್ರಸಂತಾನವಾಯಿತು. ಅವರು ಕಾಲವಾದಾಗ ಸಂಸ್ಥಾನವನ್ನು ಔರಸಪುತ್ರನಿಗೆ ಕೊಡಬೇಕೇ, ಅಥವಾ ಆ ದತ್ತಪುತ್ರನಿಗೆ ಕೊಡಬೇಕೇ ಎಂದು ಚರ್ಚೆ ನಡೆದು, ಕಡೆಗೆ ಔರಸಪುತ್ರನಿಗೇ ವಹಿಸಿದರು ಈಗ ಕಾಲವಾದವನು ಔರಸಪುತ್ರನೇ. ಈತನಿಗೆ ಮಕ್ಕಳಿಲ್ಲದ್ದರಿಂದ ರಂಜಿತ್‌ಸಿಂಗ್‌ಜೀ ಯವರಿಗೆ ಪಟ್ಟವಾಗುವುದೋ ಇನ್ನಾರಿಗಾಗುವುದೋ ಮುಂದೆ ನೋಡಬೇಕಾಗಿದೆ.

❖❖❖❖

ಪೂನಾಪಟ್ಟಣದಲ್ಲಿ "ಭಲ್ಯ" ಎಂಬ ಮರಾಟ ಪತ್ರಿಕೆಯಲ್ಲಿ ಅದರ ಎಡಿಟರಾದ ಭಾಸ್ಕರ ಬಲವಂತ ಭೋಪಟ್ಕರ್ ಎಂಬಾತನು "ನರಕದಲ್ಲಿ ದರ್ಬಾರು" ಎಂಬ ವಿಷಯವನ್ನು ಕುರಿತು ಇಂಗ್ಲಿಷ್ ಗವರ್ನ್ಮೆಂಟಿಗೆ ವಿರೋಧವಾದ ಸಂಗತಿಗಳನ್ನು ಪ್ರಕಟಿಸಿದ್ದದ್ದು ಅದಕ್ಕಾಗಿ ಸರ್ಕಾರದವರು ಆತನಿಗೆ ೬ ತಿಂಗಳ ಸಾಧಾರಣ ಸಜೆಯನ್ನೂ ೧,೦೦೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದ್ದದ್ದು ವಾಚಕರಿಗೆ ಗೊತ್ತಿದೆಯಷ್ಟೆ. ಆ ಶಿಕ್ಷೆಯ ಅವಧಿಯು ಪೂರೈಸಿದ್ದರಿಂದ ಸರ್ಕಾರದವರು ಭೋಪಟ್ಕರನನ್ನು ಥಾಣಾ ಜೈಲಿನಿಂದ ಹಿಂದಿನ ಶನಿವಾರ ಬೆಳಿಗ್ಗೆ ೮ ಗಂಟೆಗೆ ಬಿಟ್ಟುಬಿಟ್ಟರು ಆತನು ಕೂಡಲೆ ರೈಲ್ ಹತ್ತಿ ಭಾನುವಾರ ಬೆಳಿಗ್ಗೆ ೮ ಗಂಟೆಗೆ ಪೂನಾ ಪಟ್ಟಣವನ್ನು ತಲಪಿದನು. ಅಷ್ಟು ಹೊತ್ತಿಗೆ ರೈಲ್ವೆ ಸ್ಟೇಷನಲ್ಲಿ ಮೆ|| ಗಳಾದ ಬಾಲಗಂಗಾಧರ ತಿಲಕರವರೂ, ಎನ್. ಸಿ. ಕೇಲ್ಕರ್ ಅವರೂ, ಇತರರೂ ನೂರಾರು ಮಂದಿ ಸಾವಿರಗಳೂ ಕಾದಿದ್ದು "ಬಂದೇ ಮಾತರಂ," "ಶಿವಾಜಿ ಜೈ" ಎಂಬದಾಗಿ ಕೂಗಿಕೊಂಡು, ಭೋಪಟ್ಕರನಿಗೆ ಹಾರ ಹಾಕಿ, ರೈಲ್ ಸ್ಟೇಷನ್ ಬಳಿ ಇರುವ ಉದ್ಯಾನವನಕ್ಕೆ ಕರೆದುಕೊಂಡು ಹೋಗಿ ಆತನ ಸಂಗಡ ಫಲಾಹಾರಗಳನ್ನು ಸ್ವೀಕರಿಸಿ, ಆತನ ಮೇಲೆ ಕಟ್ಟಿದ ಕೆಲವು ಪದಗಳನ್ನು ಹಾಡಿ, ಜೋಡಿ ಕುದುರೆ ಕಟ್ಟಿದ ಸಾರೋಟಿನಲ್ಲಿ ಕೂಡಿಸಿಕೊಂಡು, ಕಸಬಾ ಪೇಟೆಯಲ್ಲಿರುವ ಗಣಪತಿ ದೇವಸ್ಥಾನಕ್ಕೆ ಹೋಗಿ, ಅನಂತರ ಆತನನ್ನು ಮನೆಗೆ ಕರೆದುಕೊಂಡು ಹೋಗಿ ಬಿಟ್ಟುಬಂದರು.

❖❖❖❖

ಸಿಲೋನ್ (ಲಂಕಾ) ದ್ವೀಪದ ಕೊಲಂಬೋ ಪಟ್ಟಣದಲ್ಲಿ ಸರ್ಕಾರದವರು ಎತ್ತಿನ ಗಾಡಿ ಜಮಾನರು ಗಾಡಿಯ ಮೂಕಿಗಳ ಮೇಲೆ ಕೂತುಕೊಳ್ಳಕೂಡದೆಂದು ಕಾನೂನ್ ಮಾಡಿದರು. ಬಾಡಿಗೆ ಗಾಡಿಯವರು ಸುಮಾರು ೫,೦೦೦ ಮಂದಿ ತಮ್ಮ ಗಾಡಿಗಳನ್ನು ಬಾಡಿಗೆ ಹೊಡೆಯುವುದಿಲ್ಲವೆಂತಲೂ, ಆ ಹೊಸ ರೂಲನ್ನು ರದ್ದು ಮಾಡಬೇಕೆಂತಲೂ ನಿಂತು ಬಿಟ್ಟಿದ್ದಾರೆ. ಒಬ್ಬನೊಬ್ಬ ಸಾಹುಕಾರನು ಗಾಡಿಯವರ ಪಕ್ಷವನ್ನು ವಹಿಸಿ ಅವರು ಬಾಡಿಗೆ ಹೊಡೆಯದಂತೆ ಬುದ್ಧಿ ಕೊಟ್ಟು ನಿಲ್ಲಿಸಿಕೊಂಡಿದ್ದಾನೆ ರೈಲ್ ಸ್ಟೇಷನ್, ಹಡಗಿನ ಸ್ಟೇಷನ್, ಕೋಠಿಗಳು, ಈ ಕಡೆಗಳಲ್ಲಿ ಅಪಾರ ಸಾಮಾನುಗಳೂ ವ್ಯಾಪಾರ ಸರಕುಗಳೂ ಆಹಾರ ಸಾಮಗ್ರಿಗಳೂ ರಾಶಿರಾಶಿಯಾಗಿ ಬಿದ್ದಿರುತ್ತವೆ ಸರ್ಕಾರದವರು ಕೆಲವು ಗಾಡಿಯವರಿಗೆ ಪೋಲೀಸ್ ಕಾವಲಿಟ್ಟು, ಅಲ್ಪಸ್ವಲ್ಪ ಸಾಗಿಸುವಂತೆ ಸಹಾಯ ಮಾಡಿದ್ದಾರೆ. ಆದರೆ ಅದು ಏನೇನೂ ಸಾಲದು. ಬಾಡಿಗೆ ಮ್ಯುನಿಸಿಪಾಲಿಟಿಯವರು ಪ್ರಕಟಿಸಿದ್ದ ಕಾನೂನನ್ನು ಇನ್ನೊಂದು ತಿಂಗಳ ತನಕ ಜಾರಿಗೆ ತರುವುದಿಲ್ಲವೆಂದು ಪ್ರಕಟಿಸಿದ್ದರಿಂದ ಬಾಡಿಗೆ ಗಾಡಿಯವರೆಲ್ಲಾ ಸಂತೋಷಪಟ್ಟು ಯಥಾಪ್ರಕಾರ ಸಾಮಾನು ಸಾಗಿಸುತ್ತಿದ್ದಾರೆ ಕೊಲಂಬೋ ಪಟ್ಟಣದಲ್ಲಿ ಒಂದು ದಿನ ೪೦ ಬಾಡಿಗೆ ಗಾಡಿಯವರೆಲ್ಲಾ ಒಟ್ಟುಕೂಡಿ ತುಂಬಾ ಗಲಾಟೆ ಮಾಡಿದರು. ಪ್ರಜಾ ಸಮೂಹಕ್ಕೆ ಭಂಗಬಂದೀತೆಂದು ಗವರ್ನ್ಮೆಂಟಿನವರು ಹೆದರಿ ಹೆಚ್ಚಾಗಿ ಶಿಪಾಯಿಯನ್ನು ಕರೆಸಿ ನೇಮಿಸಿದ್ದರು ಆದರೆ ಯಾವದೊಂದು ಗಲಭೆಯೂ ಆಗಲಿಲ್ಲ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಮೂಗು ಪ್ರಾಣಿಗಳ ಹಿಂಸೆಯನ್ನು ನಿಲ್ಲಿಸಬೇಕೆಂಬ ಸಂಘ ಒಂದಿರುವುದು. ಈ ಸಂಘದ ಮೆ|| ಸ್ಟೇನ್ ಎಂಬ ಅಧಿಕಾರಿಯು ಕೆಲವು ದಿನಗಳ ಕೆಳಗೆ ಕಲ್ಕತ್ತಾ ಪಟ್ಟಣದ ಚಾಂದ್ನಿಚೌಕದ ಬಳಿ ಹೋಗುತ್ತಿರುವಾಗ್ಗೆ ನಬೀಬೋ ಎಂಬ ಒಬ್ಬ ಹಕೀಮನು ಕೈಲಿ ಎರಡು ಬುಟ್ಟಿಗಳನ್ನು ಹಿಡಿದುಕೊಂಡು ಎದುರಿಗೆ ಬಂದನು ಅವನನ್ನು ನಿಲ್ಲಿಸಿ ಬುಟ್ಟಿಗಳನ್ನು ಪರೀಕ್ಷೆ ಮಾಡಿ ನೋಡಿದಾಗ ಒಂದು ಬುಟ್ಟಿಯೊಳಗೆ ಅನೇಕ ಹಲ್ಲಿ (ಪಲ್ಲಿ) ಗಳು ಇದ್ದವು. ಇವುಗಳಲ್ಲಿ ಒಂದಕ್ಕೂ ಬೆನ್ನಿನ ಮೂಳೆಯೇ ಇರಲಿಲ್ಲ. ಎಲ್ಲಾ ತಲೆಕೆಳಗಾಗಿ ಮಲಗಿ ಸ್ವಲ್ಪ ಸ್ವಲ್ಪ ಹೊತ್ತಿಗೆ ಬಾಲವನ್ನೇ ತಲೆಯನ್ನೇ ಅಲ್ಲಾಡಿಸುತ್ತಿದ್ದವು ಇದರಿಂದ ಅವುಗಳಿಗೆ ಪ್ರಾಣವಿತ್ತೆಂದೂ ಬಹಳ ಬಾಧೆಯನ್ನನುಭವಿಸುತ್ತಿದ್ದವೆಂದೂ ಗೊತ್ತಾಯಿತು ಇದನ್ನು ಯಾಕೆ ಹೀಗೆ ತುಂಬಿಕೊಂಡಿದ್ದೀಯೆ ಎಂದು ಕೇಳಿದ್ದಕ್ಕೆ ಆ ಹಕೀಮನು—ಇದನ್ನೆಲ್ಲಾ ಲಕ್ನೋ ಪಟ್ಟಣದಿಂದ ತರಿಸಿ, ನಾನೇ ಅವುಗಳ ಬೆನ್ನುಮೂಳೆಯನ್ನು ಮುರಿದಿರುತ್ತೇನೆ ಇವು ಇನ್ನೂ ಒಂದೆರಡು ತಿಂಗಳ ತನಕ ನರಳುತ್ತಿದ್ದು ಸಾಯುವವು ಅವುಗಳಿಂದ ಒಂದು ತರಹಾ ತೈಲವನ್ನು ತಯಾರುಮಾಡಿ ನಮಸ್ತ ರೋಗಗಳಿಗೂ ಕೊಡುತ್ತೇನೆ. ಒಂದೇ ಸಲ ಅವನ್ನು ಕೊಂದುಬಿಟ್ಟರೆ ಅದರ ಎಣ್ಣೆ ಅಷ್ಟು ಪ್ರಯೋಜನವಾಗಿರುವುದಿಲ್ಲ. ನೀವು ಎಷ್ಟು ಹಣ ಕೊಟ್ಟರೂ ಈ ಪ್ರಾಣಿಗಳನ್ನು ಕೊಡಲಾರೆನು ಎಂದು ಹೇಳಿದನು. ಆ ಅಧಿಕಾರಿಯು ಅವನನ್ನು ಹಿಡಿದು ಪೋಲೀಸಿಗೆ ಕೊಟ್ಟು, ಮೂಗು ಪ್ರಾಣಿಗಳನ್ನು ಇವನು ಹಿಂಸಿಸತಕ್ಕವನೆಂದು ಫಿರ್ಯಾದು ಮಾಡಿದಾನೆ ಮತ್ತು ಕೆಲವು ರೋಗಿಗಳು ಬಂದು—ಆ ಹಕೀಮನು ಕೊಡುವ ತೈಲವನ್ನು ಉಪಯೋಗಿಸಿ ಅದು ಹಲ್ಲಿಯ ದೇಹದಿಂದ ತಯಾರಾಗಿದ್ದೆಂದು ಗೊತ್ತಿಲ್ಲದೆ ಕೊಂಡಿದ್ದೆವೆಂದು ಸಾಕ್ಷಿ ಹೇಳಿದಾರೆ ಈ ಮೊಕದ್ದಮೆಯಲ್ಲಿ ಅಪರಾಧಿಗೆ ೫೦ ರೂಪಾಯಿ ಜುಲ್ಮಾನೆ ಆಗಿದೆ.

ವಿದೇಶ ವರ್ತಮಾನಗಳು.

ತುರ್ಕಿ ಸುಲ್ತಾನರಿಗೆ ಈಚೆಗೆ ಪ್ರಾಪ್ತವಾದ ಕಾಯಿಲೆ ಇನ್ನೂ ವಾಸಿಯಾಗಲಿಲ್ಲವೆಂತಲೂ ಅವರು ಅರಮನೆಯೊಳಗೇ ಇರುತ್ತಾರೆಂತಲೂ ತಂತೀವರ್ತಮಾನ ಬಂದಿದೆ.

❖❖❖❖

ಇಟಲಿ ರಾಜ್ಯದಲ್ಲಿ ಆಟೋರ್ರೋ, ಆಲ್‌ಫ್ರೆಡ್ ಎಂಬ ಸಹೋದರರಿಬ್ಬರು ೨೫ ವರುಷಗಳಿಂದ ನಂಬಿಕೆಯಾಗಿ ಒಂದು ದೊಡ್ಡ ಬ್ಯಾಂಕಿನಲ್ಲಿ ನೌಕರರಾಗಿದ್ದು, ಆ ಬ್ಯಾಂಕಿನ ಹಣದಲ್ಲಿ ಮೂರು ಲಕ್ಷ ರೂಪಾಯನ್ನು ತಿಂದುಹಾಕಿ ತಲೆತಪ್ಪಿಸಿಕೊಂಡಿದ್ದಾರೆ.

❖❖❖❖

ಆಫ್ರಿಕಾ ಖಂಡದ ಆನೆಗಳು ಹಿಂದುಸ್ಥಾನದ ಆನೆಗಳಷ್ಟು ಬೇಗ ಒಗ್ಗುವುದಿಲ್ಲ ಸರ್ಕಾರದವರು ಹಿಂದುಸ್ಥಾನದಿಂದ ಮಾವುತರು ಆನೆಗಳನ್ನು ಅಲ್ಲಿಗೆ ತರಿಸಿಕೊಂಡು ಒಂದು ವರುಷದಿಂದ ಪ್ರಯತ್ನಪಟ್ಟು ಈಗ ೨೮ ಆನೆಗಳನ್ನು ಹಿಡಿದು ಪಳಗಿಸುತ್ತಿದ್ದಾರೆ.

❖❖❖❖

ಡಾಮಿಡಿಯೂ ಹೆಜ್ಜಾಜ್ ರೈಲ್ವೆ ಕಂಪನಿಯ ಡೈರೆಕ್ಟರ್ ಜನರಲ್ ರಾದ ಘನವನ್ನು ಹಿಡಿದ ಮಾರ್ಷಲ್ ಕಾಸಿಂಪಾಷಾ ಯವರು ತುರ್ಕಿ ರಾಜ್ಯದ ಸುಲ್ತಾನರವರಿಗೆ ಹೆಜ್ಜಾಜ್ ರೈಲ್ ರಸ್ತೆಯನ್ನು ಜಾತಲ್‌ಹಾಜ್ ಎಂಬ ಸ್ಟೇಷನ್ ತನಕ ಹಾಕಿ ಪೂರೈಸಿದೆ ಎಂದು ತಂತೀ ವರ್ತಮಾನ ಕೊಟ್ಟು ಅರಿಕೆ ಮಾಡಿದ್ದಾರೆ.

❖❖❖❖

ವಿಲಾಯತಿಯಲ್ಲಿ ಕಾಲವಾದ ಡಾಕ್ಟರ್ ಜೇಂಸ್ ಸ್ಟುವರ್ಟ್ ಎಂಬ ಪುಣ್ಯವಂತನು ಆಸ್ಟ್ರೇಲಿಯಾ ದ್ವೀಪಕ್ಕೆ ಸೇರಿದ ಮೆಲ್‌ಬೋರ್ನ್ ಪಟ್ಟಣದ ವಿದ್ಯಾಶಾಲೆಗೆ ತನ್ನ ಆಸ್ತಿಯಲ್ಲಿ ನಾಲ್ಕು ಲಕ್ಷ ರೂಪಾಯನ್ನೂ ಇನ್ನು ಕೆಲವು ಧರ್ಮಕಾರ್ಯಗಳಿಗೆ ಮೂರು ಲಕ್ಷ ರೂಪಾಯನ್ನೂ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ.

❖❖❖❖

ಈಜಿಪ್ಟ್ ರಾಜ್ಯದಲ್ಲಿ ಇನ್ನು ಸ್ವಲ್ಪ ಕಾಲದಲ್ಲೇ ಖಾನೇಷುಮಾರಿ ಲೆಕ್ಕಗಳನ್ನು ಎತ್ತುತ್ತಾರೆ. ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಳ್ಳುತ್ತಿರುವರು. ಆ ರಾಜ್ಯದಲ್ಲಿರುವ ೯೭ ಲಕ್ಷ ಪ್ರಜಾಸಂಖ್ಯೆಯ ಪೈಕಿ ಮಹಮ್ಮದೀಯರೇ ೧೦೨|| ಲಕ್ಷ ಜನರಾಗುತ್ತಾರೆಂತಲೂ ಇತರ ಮತಸ್ಥರೆಲ್ಲಾ ಒಟ್ಟು ೭|| ಲಕ್ಷವಾಗಬಹುದೆಂತಲೂ ಊಹಿಸಲ್ಪಟ್ಟಿದೆ.

❖❖❖❖

ಆಫ್ರಿಕಕ್ಕೆ ಸೇರಿದ ಸೋಮಾಲಿ ಲ್ಯಾಂಡಿನಲ್ಲಿ ಮುಲ್ಲಾ ಎಂಬ ಮಹಮ್ಮದೀಯ ಮುಖಂಡನು ಇದುವರೆಗೆ ಸುಮ್ಮನೆ ಇದ್ದು, ಒಗಾಡನ್ ಪ್ರಾಂತ್ಯಕ್ಕೆ ಸೈನ್ಯಸಮೇತ ನುಗ್ಗಿ ರೇರ್‌ಹೇರಾ ಎಂಬ ಜನರ ಮನೆಮಠಗಳನ್ನು ಕೊಳ್ಳೆ ಹೊಡೆದು, ೧,೦೦೦ ಜನರನ್ನು ಕೊಂದು ಹಾಕಿ, ಅವರ ೧೦,೦೦೦ ಒಂಟೆಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾನೆಂದು ತಂತೀವರ್ತಮಾನ ಬಂದಿದೆ.

❖❖❖❖

ಒಂದು ಹಡಗು ಇಂಗ್ಲಿಷರ ವ್ಯಾಪಾರ ಸರಕುಗಳನ್ನು ಚೀನಾಗೆ ಸಾಗಿಸಿಕೊಂಡು ಹೋಗುತ್ತಿತ್ತು. ಅದನ್ನು ಚೀನಾ ಸಮುದ್ರ ಕಳ್ಳರು ವಿಂಗ್‌ಫಾಟ್ ಎಂಬ ಸ್ಥಳದ ಹತ್ತಿರ ತಡೆದು, ನಾವಿಕರ ಪೈಕಿ ಒಬ್ಬನನ್ನು ಕೊಂದು, ಮೂರು ಮಂದಿಯನ್ನು ಹೊಡೆದು ಗಾಯಮಾಡಿ, ಹಡಗಿನಲ್ಲಿದ್ದ ಸರಕನ್ನು ಲೂಟಿ ಮಾಡಿಕೊಂಡು ಹೋಗಿರುವಂತೆ ತಂತೀ ವರ್ತಮಾನ ಬಂದಿದೆ

❖❖❖❖

ಹತ್ತಿ ಗಿಡಗಳ ಕೊಂಬೆ ತಾಳು ಮುಂತಾದ ಭಾಗಗಳಿಂದ ಅಮೇರಿಕದ ಕಾರ್ಖಾನೆಯವರು ಬಹು ಉತ್ಕೃಷ್ಟವಾದ ಕಾಗದಗಳನ್ನು ತಯಾರು ಮಾಡಬಹುದೆಂದು ಈಗತಾನೇ ಪರೀಕ್ಷೆ ಮಾಡಿ ತೀರ್ಮಾನಿಸಿರುತ್ತಾರೆ ಮುಂದೆ ಗಿಡಗಳನ್ನು ಎಳೇ ಮತ್ತು ಪ್ರಾಯದ ಗಿಡಗಳ ಮಧ್ಯೆ ಇರಗೊಡಿಸುವುದು ಬಹಳ ಕೆಟ್ಟದ್ದೆಂದೂ, ಅವುಗಳನ್ನು ಬೇಗಬೇಗನೆ ಕಡಿದು ಮೇಲ್ಕಂಡ ರೀತಿ ಕಾಗದಗಳ ತಯಾರಿಗೆ ವಿನಿಯೋಗಿಸಬಹುದೆಂದೂ ತಿಳಿಸಿರುವರು

❖❖❖❖

ಸ್ವಿಟ್ಸರ್ಲೆಂಡಿಗೆ ಸೇರಿದ ಜಿನೀವಾ ಎಂಬ ಊರಿನಲ್ಲಿ ಕೆಲವರು ಒಬ್ಬ ಮುದಿ ಹೆಂಗಸನ್ನು ಕುರಿತು—ನೀನ್ಯಾಕೆ ನಿನ್ನ ವಯಸ್ಸನ್ನು ಕೇಳಿದರೆ ಸುಳ್ಳು ಹೇಳುತ್ತೀ! ಎಂದು ಪ್ರಶ್ನೆ ಮಾಡಿದಾಗ ಆಕೆ—ಅಯ್ಯೋ, ನನ್ನ ವಯಸ್ಸು ಹೇಳಿಕೊಳ್ಳುವುದೆಂದರೆ ನನಗೆ ತುಂಬಾ ನಾಚಿಕೆಯಾಗಿದೆ ನನಗೇನೋ ಈಗ ೧೦೬ ಸಂವತ್ಸರಗಳು ತುಂಬಿದವು. ಆದರೂ ಅಷ್ಟಾಗಿದೆ ಎಂದು ಹೇಳಿಕೊಳ್ಳುವುದಿಲ್ಲ ಎಂದು ಉತ್ತರ ಕೊಟ್ಟಳು.

❖❖❖❖

ದಕ್ಷಿಣ ಆಫ್ರಿಕಾದಲ್ಲಿ ಇಂಗ್ಲಿಷ್ ಗವರ್ನ್ಮೆಂಟಿನವರು ಪಾರ್ಲಿಮೆಂಟ್ ಸಭೆ ಮನೆಗಳನ್ನು ಕಲ್ಪಿಸುವಂತೆ ತೀರ್ಮಾನ ಮಾಡಿದ್ದಾರೆ. ಈ ಸಭೆಗಳಿಗೆ ದಕ್ಷಿಣ ಆಫ್ರಿಕಾ ಪ್ರಜೆಗಳು ಸಮ್ಮತಿ ಹಾಕಿ ಮೆಂಬರುಗಳನ್ನು ಚುನಾಯಿಸುವರು ವಿಲಾಯತಿ ರಾಜ್ಯದ ಪ್ರಿನ್ಸ್ ಆಫ್ ವೇಲ್ಸ್ ಯುವರಾಜರವರು ಅಲ್ಲಿಗೆ ದಯಮಾಡಿ, ಪಾರ್ಲಿಮೆಂಟ್ ಸಭಾ ಮನೆಗಳನ್ನು ಪ್ರತಿಷ್ಠೆ ಮಾಡಿ, ಹೊಸ ರಾಜ್ಯಭಾರವನ್ನು ಪ್ರಾರಂಭಿಸಿ ಬರುತ್ತಾರೆಂದು ವರ್ತಮಾನವಿದೆ

❖❖❖❖

ಬಾರ್ಬಾಡಾಸ್ ದ್ವೀಪದಲ್ಲಿ ಕಬ್ಬಿನ ಸಿಪ್ಪೆಯನ್ನು ಒಲೆಗೆ ಒಟ್ಟಿ ಉರಿಸುತ್ತಿದ್ದರು ಈಗ ಈ ಒಣಸಿಪ್ಪೆಯಿಂದ ಸರ್ವೋತ್ತಮವಾದ ಕಾಗದ ತಯಾರಾಗುವದನ್ನು ಕಂಡುಹಿಡಿದು, ಕಾರ್ಖಾನೆಗಳಿಟ್ಟು ಕೆಲಸ ಮಾಡಲಾರಂಭಿಸಿದ್ದಾರೆ ಇದರಿಂದ ಮಾಮೂಲಾಗಿರುವ ಕಾಗದವನ್ನು ಬಿಕರಿ ಮಾಡಿದರೆ ಅಪಾರ ಲಾಭ ಬರುತ್ತದೆಂದು ಗೊತ್ತಾಗಿದೆ ನಮ್ಮ ಹಿಂದುಸ್ಥಾನದಲ್ಲಿ ರೈತರು ಬೆಲ್ಲವನ್ನು ತಯಾರುಮಾಡುವುದಕ್ಕೆ ಕಬ್ಬಿನ ಸಿಪ್ಪೆಯನ್ನೇ ಒಲೆಗೆ ಹಾಕಿ ಉರಿಸುತ್ತಿದ್ದಾರಷ್ಟೆ ಒಂದು ಕಂಪನಿಯನ್ನು ಸ್ಥಾಪಿಸಿ, ಕಾಗದ ತಯಾರಿಗೆ ಬೇಕಾಗುವ ಯಂತ್ರ ಸಾಮಗ್ರಿಗಳನ್ನು ಒದಗಿಸಿಕೊಂಡು, ಅತ್ಯಂತ ಅಗ್ಗವಾಗಿ ಸಿಕ್ಕುವ ಕಬ್ಬಿನ ಸಿಪ್ಪೆಯನ್ನೆಲ್ಲಾ ಸಂಗ್ರಹಿಸಿಕೊಂಡು ಹೋಗಿ ಅದರಿಂದ ಕಾಗದವನ್ನು ತಯಾರುಮಾಡುವುದಾದರೆ ಎಷ್ಟೋ ಲಾಭವು ಬರಬಹುದು.

ಒಳದೇಶದ ವೃತ್ತಾಂತಗಳು.

ಶ್ರೀಮತ್ ಮಹಾರಾಜರವರು ಇಷ್ಟರಲ್ಲೇ ಬೆಂಗಳೂರಿಗೆ ದಯಮಾಡುವವರಾಗಿದ್ದಾರೆಂದು ಕೇಳುತ್ತೇವೆ.

❖❖❖❖

ಶ್ರೀಮತ್ ಮಹಾರಾಜರವರು ದಿವಾನ್ ಮಿ॥ ಮಾಧವರಾಯರ ತಲಬನ್ನು ೪,೦೦೦ ರೂಪಾಯಿ ನಿಂದ ೪,೫೦೦ ಕ್ಕೆ ಬಡ್ತಿ ಮಾಡಿರುತ್ತಾರೆ.

❖❖❖❖

ಪರಸ್ಪರ ಸಹಾಯಕ ಸಂಘಗಳ ರಿಜಿಸ್ಟ್ರಾರ್ ಮಿ॥ ಎಂ. ಶಾಮರಾಯರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಸಂಘದ ಕಮಿಟಿ ಮೀಟಿಂಗನ್ನು ನಡಿಸಿದರು.

❖❖❖❖

ಕಳೆದ ವಾರ ಕೋಲಾರ್ ಚಿನ್ನದ ಗಣಿಗಳಿಂದ ೧೬,೬೫,೧೭೦ ರೂಪಾಯಿ ಚಿನ್ನವನ್ನು ಕಂಪನಿಯವರು ಬೊಂಬಾಯಿ ಮಾರ್ಗವಾಗಿ ವಿಲಾಯತಿಗೆ ಕಳುಹಿಸಿದರು

❖❖❖❖

ರಾಜಧಾನಿಯ ನಾರ್ಮಲ್ ಸ್ಕೂಲಿನ ಹೆಡ್ ಮಾಸ್ಟರ್ ಕೆಲಸವು ಅದೇ ಸ್ಕೂಲಿನ ಸಹಾಯೋಪಾಧ್ಯಾಯರಾಗಿದ್ದ ಮ॥ ಹಿರಿಯಣ್ಣನವರಿಗೆ ನೇಮಕವಾಯಿತೆಂದು ತಿಳಿಸಲು ಸಂತೋಷಿಸುತ್ತೇವೆ.

❖❖❖❖

ಸದ್ಯ ರಾಜಧಾನಿಯಲ್ಲಿ ಕುಡಿಯುವ ನೀರಿಗೆ ಸ್ವಲ್ಪ ಅನುಕೂಲವಾಯಿತು ಇನ್ನೂ ಕೆರೆ ಕಟ್ಟೆಗಳಲ್ಲಿ ಬಟ್ಟೆ ಬರೆ ಒಗೆಯುವುದಕ್ಕೆ ಜನರನ್ನು ಬಿಡುವುದಿಲ್ಲ. ಮೊನ್ನೆ ಸೋಮವಾರದಿಂದ ಮಳೆ ಸುರಿಯುತ್ತಿರುವುದು.

❖❖❖❖

ಕಾರ್ಕಳದ ಕಾಬೆಟ್ಟು ಎಂಬಲ್ಲಿ ಹುಲಿಯನ್ನು ಹೊಡೆಯಬೇಕೆಂದು ಕೆಲವು ಜನರು ಹೋದರು. ಅದು ಪೊದೆಯಿಂದ ಬಂದು ಒಬ್ಬನ ಮುಖವನ್ನು ಪರಚಿ ಕೊಂದುಹಾಕಿತು ಇನ್ನೊಬ್ಬನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ. ಆದುಷ್ಟಮೃಗವನ್ನು ಯಾರೂ ಕೊಲ್ಲಲಿಲ್ಲ.

❖❖❖❖

ಬೌರಿಂಗ್ ಪೇಟೆಯಲ್ಲಿ ಕೆಲವರು ಒಂದು ಕಾರ್ಖಾನೆಯನ್ನಿಟ್ಟು ಈ ಸಂಸ್ಥಾನದಲ್ಲಿ ಬೆಳೆಯುವ ಹೊಗೆಸೊಪ್ಪನ್ನು ತರಿಸಿಕೊಂಡು ಅದರಿಂದ ಸಿಗರೆಟ್ಟುಗಳನ್ನು ಮಾಡಿ ಬಿಕರಿ ಮಾಡುತ್ತಿದ್ದಾರೆಂತಲೂ, ಬಂಗಾಳಾ ಅಧಿಪತ್ಯದವರೇ ಅದನ್ನೆಲ್ಲಾ ತರಿಸಿಕೊಳ್ಳುತ್ತಿದ್ದಾರೆಂತಲೂ ಪ್ರಕಟವಾಗಿದೆ

❖❖❖❖

ಚಾಮರಾಜನಗರದ ಬಾತ್ಮಿದಾರರು ಬರೆಯುವುದು—ತಾ. ೭ ನೇ ಮಂಗಳವಾರದಿಂದ ಈಚೆ ಈ ಕಡೆ ಒಳ್ಳೆ ಮಳೆ ಆಯಿತು. ಕೆರೆ ಕಟ್ಟೆಗಳಿಗೆ ಮುಕ್ಕಾಲುಪಾಲು ನೀರು ಬಂತೆಂದು ತಿಳಿಯಬರುತ್ತೆ. ರೈತರೆಲ್ಲಾ ಸಂತುಷ್ಟರಾಗಿರುವರು. ಬೆಳೆಯು ಚನ್ನಾಗಿ ಆಗುವುದಲ್ಲದೆ ಧಾರಣೆ ವಾಸಿಗಳು ಕಮ್ಮಿ ಆಗಬಹುದೆಂಬ ನಿರೀಕ್ಷಣೆ ಇದೆ.

❖❖❖❖

ಕಳೆದ ವಾರ ದಿವಾನರವರು ಪ್ಲಾಂಟರುಗಳನ್ನೆಲ್ಲಾ ಬೆಂಗಳೂರಿಗೆ ಬರಮಾಡಿಕೊಂಡು ರಬ್ಬರ್ ವ್ಯವಸಾಯಕ್ಕೆ ಜಮೀನ್ ಕೊಡುವ ವಿಷಯದಲ್ಲಿ ಅವರ ಅಭಿಪ್ರಾಯಗಳನ್ನು ಕೇಳಿ ತಿಳಿದವರಾಗಿ, ಇದುವರೆಗೆ ಮೈಸೂರು ಸಂಸ್ಥಾನದಲ್ಲಿ ನೆಲಸಿರುವ ಪ್ಲಾಂಟರುಗಳಿಗೆ ರಬ್ಬರ್ ವ್ಯವಸಾಯಕ್ಕೆ ೧೦೦ ಎಕರೆಗಳುಳ್ಳ ತಾಕನ್ನು ಮೊದಲು ಮಾಫಿಯಾಗಿ ಕೊಡುವುದಾಗಿಯೂ, ಐದು ವರುಷಗಳ ಮೇಲೆ ಎಕರೆಗೆ ೨ ರೂಪಾಯಿಯಂತೆ ಕಂದಾಯ ಕೊಡಬೇಕೆಂತಲೂ, ಆ ಜಮೀನನ್ನು ಎಕರೆಗೆ ೧೦ ರೂಪಾಯಿಯಂತೆ ಬಿಕರಿಮಾಡುವುದಾಗಿಯೂ ಮಾತುಕೊಟ್ಟಿದ್ದಾರೆ.

❖❖❖❖

ಹಿಂದೂಪುರದ ತಾಲ್ಲೂಕು ಪೆನುಗೊಂಡೆಗೆ ಇಬ್ಬರು ಕೃತ್ರಿಮಗಾರರು ಒಂದು ಕೋಳೀ ಮುಂಡವನ್ನು ತಂದು ಅದರ ತಲೆಯ ಮೇಲೆ ಕೊಂಬು ಉಂಟೆಂದು ಟಿಕೇಟು ಹಾಕಿ ಪ್ರದರ್ಶನೆ ಮಾಡುತ್ತಿದ್ದರು. ನೋಟಕರಲ್ಲಿ ಒಬ್ಬನು ಬಹಳ ನಿರ್ಬಂಧಪಡಿಸಿ ಅದರ ನಿಜಸ್ಥಿತಿಯನ್ನು ಪರಿಕ್ಷೆ ಮಾಡಿದಾಗ ಒಂದು ಕೊಂಬನ್ನು ಅಂಟುಹಾಕಿ ಅದರ ತಲೆಯ ಮೇಲೆ ತಗಲಿಸಿದ್ದದ್ದು ಗೊತ್ತಾಯಿತು. ಆ ಕೃತ್ರಿಮಗಾರರು ಆ ದಿನವೇ ಪರಾರಿಯಾಗಿ ಎಲ್ಲಿ ಹೋದರೋ ತಿಳಿಯದೆಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ.

❖❖❖❖

ಒಬ್ಬ ಬಾತ್ಮಿದಾರರು ಬರೆಯುವುದು —ಹಾಸನ ತಾಲ್ಲೂಕು ಗ್ರಾಮದ ಪ್ರಾಂತ್ಯ ಮಳೆ ತಕ್ಕಮಟ್ಟಿಗೆ ಆಗಿ ಹಾಲೀ ಇರತಕ್ಕ ಪೈರಿಗೆ ಸ್ವಲ್ಪಮಟ್ಟಿನ ಅನುಕೂಲವಾಗಿದೆ. ಕೆರೆಗೆ ನೀರು ಬಾರದ್ದರದೆಸೆಯಿಂದ ಎರಡು ವರ್ಷಗಳ ಲಾಗಾಯ್ತು ಗದ್ದೆಗಳಲ್ಲಿ ಭತ್ತದ ಪೈರು ಕಾಣದೆ ಸಾಧಾರಣವಾಗಿ ಒಂದು ಗೃಹಕೃತ್ಯಕ್ಕೆ ಮಾಸೆಯಾನಾ ೨೦-೨೫ ರೂಪಾಯಿನ ಅಕ್ಕಿ ಒಂದೇ ಆಗಿದೆ ಈ ಕಷ್ಟ ನಮಗೆ ಎಂದಿಗೆ ತಪ್ಪೀತೆಂತ ಹಂಬಲಿಸುತ್ತಿದ್ದೇವೆ ತೋಟಗಳಲ್ಲಿ ಕೆಲವು ದಿವಸಗಳಿಂದ ಕಳವು ನಿಂತಿರುವಂತಿದೆ ಈ ಗ್ರಾಮದಲ್ಲೂ ನೂತನವಾಗಿ ಶ್ರೀನಿವಾಸ ಮಂದಿರಂ ರೀಡಿಂಗ್ ರೂಂ ಎಂಬ ವಾಚಕ ಶಾಲೆಯನ್ನು ಮಹನೀಯರುಗಳ ಸಹಾಯದಿಂದ ಏರ್ಪಡಿಸಿದ್ದಾರೆ

❖❖❖❖

ಬೆಂಗಳೂರು ಸಿಟಿ ಕಬ್ಬನ್ ಪೇಟೆಯಲ್ಲಿ ಕಳೆದ ಗುರುವಾರ ರಾತ್ರಿ ಒಂದು ಮನೆಯ ಮಾಳಿಗೆ ಬಿದ್ದು ಅನಾಹುತವಾಯಿತು. ದೇವರ ದಯದಿಂದ ಒಳಗಿದ್ದ ತಂದೆ ಮಕ್ಕಳಿಗೆ ಉಪಾಯವೇನೂ ಆಗಲಿಲ್ಲ. ಕಳೆದ ಭಾನುವಾರ ರಾತ್ರಿ ಬಹಳ ಮಳೆ ಸುರಿದು ರಸ್ತೆಗಳಲ್ಲಿ ಒಂದೆರಡು ಅಡಿ ಪ್ರಮಾಣ ನೀರು ಹರಿದದ್ದರಿಂದಲೂ ವಿದ್ಯುಚ್ಛಕ್ತಿಯ ದೀಪಗಳನ್ನು ಆರಿಸಿದ್ದರಿಂದಲೂ ತಿರುಗಾಡುವವರಿಗೆ ರಸ್ತೆ ಚರಂಡಿಗಳು ಕಾಣದೆ ಕತ್ತಲಲ್ಲಿ ಬಹಳ ಶ್ರಮಪಟ್ಟರು. ಈಚೆಗೆ ನಿತ್ಯವೂ ಮಳೆ ಬರುತ್ತಿದೆ ಬಿದ್ದ ಮನೆಗಳ ಮೇಲೆ ಬೆಳೆದಿರುವ ಹುಲ್ಲು ಮುಂತಾದ್ದನ್ನು ಮೊದಲೇ ನೋಡಿ ತೆಗೆಯದೆ ಇರೋಣದರಿಂದ, ಬಾಡಿಗೆ ಭೋಗ್ಯದಾರರ ಅಲಕ್ಷ್ಯದಿಂದಲೂ ಮನೆಗಳು ಬಿದ್ದುಹೋಗಲು ಕಾರಣವಾಗಿದೆ ಹಲಸೂರು ಪೇಟೆ ಪಟ್ಟಾಭಿರಾಮಶಾಸ್ತ್ರಿಗಳ ಗಲ್ಲಿಯಲ್ಲಿರುವ ಕೊಳಾಯಿನ ಬಳಿ ಜನರು ಬಹಳ ಗಲೀಜು ಮಾಡುತ್ತಾರೆ. ಮ್ಯುನಿಸಿಪಾಲಿಟಿಯವರೂ ಪೋಲೀಸಿನವರೂ ನಿಗಾ ಇಟ್ಟು ಜನರನ್ನು ಸರಿಯಾಗಿ ಎಚ್ಚರಿಸಬೇಕೆಂದು ಅಲ್ಲಿನ ಬಾತ್ಮಿದಾರರು ಬರೆಯುತ್ತಾರೆ.

❖❖❖❖

ಒಕ್ಕಲಿಗರ ಸಂಘದ ಸೆಕ್ರಟರಿ ಮಿ॥ ಕೆ. ಎಚ್. ರಾಮಯ್ಯನವರು ಇದೇ ತಿಂಗಳು ೬ ನೇ ತಾ. ಸೋಮವಾರ ಬೆಂಗಳೂರಿನಿಂದ ಚನ್ನಪಟ್ಟಣಕ್ಕೆ ಪ್ರಯಾಣ ಮಾಡಿ, ಮಾರನೇ ದಿವಸ ಸಾಯಂಕಾಲ ಆ ತಾಲ್ಲೂಕಿನ ಹೋಬಳಿಗಳಿಂದ ಬಂದಿದ್ದ ನಾಡಗೌಡರಿಗೆಲ್ಲಾ ಟ್ರಾವಲರ್ಸ್ ಬಂಗೆಲೆಯಲ್ಲಿ ಒಕ್ಕಲಿಗರ ಸಂಘದ ಉದ್ದೇಶ ಮತ್ತು ಚರಿತ್ರೆಯನ್ನು ಕುರಿತು ಉಪನ್ಯಾಸ ಮಾಡಿದರು. ಅಗ್ಗ ದಯಮಾಡಿದ ಇನ್ಸ್ಪೆಕ್ಟರು, ಸಬ್ ರಿಜಿಸ್ಟ್ರಾರು ಮತ್ತು ಹೆಡ್ ಮಾಸ್ಟರು ಸಹ ಕೆಲವು ಬುದ್ಧಿವಾದಗಳನ್ನು ಅಲ್ಲಿಗೆ ಬಂದಿದ್ದ ಗೌಡರಿಗೆ ತಿಳಿಯಪಡಿಸಿದರು ಅನಂತರ ಮಿ॥ ರಾಮಯ್ಯನವರು ಕೊಳ್ಳೇಗಾಲಕ್ಕೆ ಪ್ರಯಾಣ ಮಾಡಿ ೯ ನೇ ತಾ. ಪಾಳವಳ್ಳಿಗೆ ಬಂದು ಅಲ್ಲಿನ ಒಕ್ಕಲಿಗ ಮುಖಂಡರಿಗೆ ಉಪನ್ಯಾಸ ಮಾಡಿದರು. ೧೦ ನೇ ತಾ. ಶುಕ್ರವಾರ ಇವರು ಶ್ರೀರಂಗಪಟ್ಟಣದ ಮಾರ್ಗವಾಗಿ ಗಂಜಾಮಿಗೆ ಹೋಗಿ ಸಾಯಂಕಾಲ ಉಪನ್ಯಾಸ ಮಾಡಿದರು ೧೧ ನೇ ತಾ. ಭಾನುವಾರ ಸಾಯಂಕಾಲ ಒಕ್ಕಲಿಗರ ಸಂಘದ ವಿಷಯವಾಗಿ ಉಪನ್ಯಾಸ ಮಾಡಿದರು ಅನಂತರ ಇವರು ತಿರಮಕೂಡ್ಲು ನರಸೀಪುರಕ್ಕೆ ಹೋಗಿ ಅಲ್ಲಿಂದ ೧೪ ನೇ ತಾ. ನಂಜನಗೂಡಿಗೆ ಬಂದು ಉಪನ್ಯಾಸ ಮಾಡಿದರು. ಇವರು ಯಡತೊರೆ, ಹುಣಸೂರು, ಮತ್ತು ಮಡಕೇರಿ ಮುಂತಾದ ಸ್ಥಳಗಳಿಗೆ ಹೋಗಿ ಬಂದು, ಮೈಸೂರಿನಲ್ಲಿ ೨೦ ನೇ ತಾ. ನಿಂದ ೨೩ ನೇ ತಾ ವರಿಗೂ ಮೊಕ್ಕಾಂ ಮಾಡುತ್ತಾರೆ. ಅಗ್ಗ ಒಕ್ಕಲಿಗರ ಸಂಘದ ವಿಷಯವಾಗಿ ಕನ್ನಡದಲ್ಲಿ ಮಾಡುವ ಉಪನ್ಯಾಸವಲ್ಲದೆ ಇಂಗ್ಲೀಷಿನಲ್ಲಿಯೂ ಸಹ ೨ ಉಪನ್ಯಾಸಗಳನ್ನು ಮಾಡುವವರಾಗಿದ್ದಾರೆ. ಮೈಸೂರಿನಿಂದ ತಾ. ೨೩ ಅಥವಾ ೨೮ ಕ್ಕೆ ಹೊರಟು, ಫ್ರೆಂಚ್‌ರಾಕ್ಸ್, ಕೃಷ್ಣರಾಜಪೇಟೆ, ಮೇಲುಕೋಟೆ, ಚನ್ನರಾಯಪಟ್ಣ, ಅರಕಲಗೂಡು, ಹಾಸನ, ನಂಜರಾಬಾದು ಮುಂತಾದ ಸ್ಥಳಗಳಿಗೆ ಪ್ರಯಾಣ ಮಾಡುವರು. ಇವರು ಹೋಗತಕ್ಕ ಸ್ಥಳಗಳಲ್ಲಿರುವ ಒಕ್ಕಲಿಗರೆಲ್ಲರೂ ಇವರಿಂದ ಸಮಸ್ತ ವಿಷಯಗಳನ್ನೂ ತಿಳಿದುಕೊಂಡು, ನಾಳೇ ಅಕ್ಟೋಬರ್ ತಿಂಗಳು ೬, ೭, ೮ ರಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ ದಯಮಾಡಿ, ಒಕ್ಕಲಿಗರ ಸಂಘದ ಉದ್ದೇಶವನ್ನು ಸಫಲಗೊಳಿಸಲಿ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ.

ಕರೆಸ್‌ಪಾಂಡೆನ್ಸ್.

ಉಪಾಯದ ಕಳ್ಳತನ.

ಅಯ್ಯಾ,

ಈ ತಿಂಗಳ ೫ನೇ ತಾ ಸಾಯಂತ್ರ ಬಿಡಾರದಿಂದ ಒಬ್ಬ ಫಕೀರನು ಕಾಲೇಸ್‌ಪೇಟೆ ತಾ. ಬಿಡದಿ ಗ್ರಾಮಕ್ಕೆ ಬಂದು, ಒಂದು ಅಂಗಡಿಯಲ್ಲಿ ಮಲಗಿದ್ದನು. ಬೆಳಗ್ಗೆ ನೋಡುವಲ್ಲಿ ಆತನು ಶರೀರದ ಮೇಲೆ ಸ್ವಲ್ಪವೂ ಜ್ಞಾನವಿಲ್ಲದೆ ಇದ್ದು ನಂತರ ಬಿಗರೋಗದವನಂತೆ ಕೈಕಾಲು ಸೆಳೆಯುವದೂ ಆಡುವದೂ ಅನ್ನ ನೀರುಗಳ ಮೇಲೆ ಅಪೇಕ್ಷೆ ಇಲ್ಲದೆ ಮಧ್ಯಾಹ್ನದ ವರಿಗೂ ಇದ್ದು, ನಂತರ ಬೀಳುವದೂ ಏಳುವದೂ ಬಾಲೋನ್ಮತ್ತನ ಹಾಗೆ ಮಾಡುವದೂ ಹೀಗೆ ಸಂಕಟಪಡುತ್ತಿದ್ದನು. ಆ ವೇಳೆಯಲ್ಲಿ ನೋಡಲು ಬಂದಿದ್ದ ಜನಗಳು ಕೆಲವರು ದುಃಖಿಸುತ್ತಲೂ ಕೆಲವರು ಕುಚೇಷ್ಟೆ ಮಾಡುತ್ತಲೂ ಕೆಲವರು ಉದಾಸೀನ ಮಾಡುತ್ತಲೂ ಇದ್ದರು. ನಾನು ಹೋಗಿ ನೋಡಿ ಅನ್ನ ನೀರು ತಂದುಕೊಡಲು ತೆಗೆದುಕೊಳ್ಳದೆ ಬಹಳ ಹೊತ್ತಿನ ಮೇಲೆ ಸ್ವಲ್ಪ ತಿಂದು ಮಲಗಿ ನಿದ್ದೆ ಮಾಡಿದನು. ಬೆಳಗಾದ ಮೇಲೆ ಎದ್ದು ಗೋಳಾಡುತ್ತಾ ನನ್ನೊಡನೆ—ಇಬ್ಬರು ಬಂದು ನನಗೆ ಅನ್ನದಲ್ಲಿ ಏನೋ ವಿಷ ಪದಾರ್ಥವನ್ನು ಇಟ್ಟು ನನಗೆ ಜ್ಞಾನತಪ್ಪಿದ ಮೇಲೆ ನನ್ನಲ್ಲಿದ್ದ ೨೦ ಜುಬ್ಬಗಳನ್ನೂ, ೨ ಅಂತ್ರಿಕೋಟುಗಳನ್ನೂ, ಎಂಟಾಣೆ ಅರು ಪೈ ದುಡ್ಡನ್ನೂ ತೆಗೆದುಕೊಂಡು ಹೋದರೆಂದು ಹೇಳಿದನು. ಅವನಿಗೆ ಸ್ವಲ್ಪ ಸಹಾಯ ಮಾಡಿ ಕಳುಹಿಸಿಕೊಟ್ಟೆವು. ಆದರೆ ಇಂಥಾ ಉಪಾಯಗಳ್ಳರನ್ನು ನಾವೆಲ್ಲಿಯೂ ನೋಡಿರಲಿಲ್ಲ.

ಸೈದುಸಮ್ಮಾರ್ಸಾಬ್.

ದೊಡ್ಡಬಳ್ಳಾಪುರದಲ್ಲಿ ಮಳೇ ನೀರಿನ ತೊಂದರೆಗಳು.

ಅಯ್ಯಾ,

ಕಸಬಾ ಟರ್ನ ಹಳೆ ಕಛೇರಿ ಸರಹದ್ದಿನಿಂದ ಗೂಳಿಕಟ್ಟೆ ಪೇಟೆಯೆಲ್ಲಾ ನೀರು ಸೇರಿ ಪೋಲೀಸ್ ಸ್ಟೇಷನ್ ಎದುರು ಗಲ್ಲಿಯಿಂದ ಹೊರಟು ಸದರಿ ಪೇಟೆಯ ತುಂಬಾ ಮಳೆ ಜೋರಾದರೆ ವಿಪರೀತ ರಭಸದಿಂದ ಸಾಧಾರಣ ಹೊಳೆಯಂತೆ ಒಂದೆರಡು ಅಡಿ ಎತ್ತರ ಗಲ್ಲಿಯ ತುಂಬಾ ನೀರು ಹರಿಯುವದರಿಂದ ವಿಶೇಷ ಕೆಸರುಂಟಾಗುವದಲ್ಲದೆ ಮನೆಗಳ ಗೋಡೆಗಳು ಜೌಗು ಹಿಡಿದು ಅನಾರೋಗ್ಯಕ್ಕೆ ಕಾರಣವಾಗುವದು. ಮತ್ತು ಮನೆಗಳು ಬೀಳುವದಕ್ಕೆ ಸಂದೇಹವಿರುವದಿಲ್ಲ. ಜನಗಳ ಓಡಾಟಕ್ಕೆ ತುಂಬಾ ಅನಾನುಕೂಲವಾಗಿರುತ್ತೆ ಈ ಗಲ್ಲಿಯ ಎರಡು ಪಕ್ಕಗಳಲ್ಲಿಯೂ ಚರಂಡಿ ಇಲ್ಲವೇ ಇಲ್ಲ. ಈ ಪೇಟೆಯಲ್ಲಿ ಉಸ್ತಾರ್ಸಾಹೇಬರ ಚರ್ಮದ ಮಂಡಿ ಬಳಿ ದೊಡ್ಡದಾದ ಅರಳಿಮರಗಳೂ ಬೇವಿನಮರವೂ ಇರುತ್ತವೆ. ಪಕ್ಕದಲ್ಲಿ ಪೂರ್ವ ಕಡೆಗೆ ಮಾಡುವ ಮುಸಲ್ಮಾನರ ಸ್ಮಶಾನವಿದೆ. ಸದರಿ ಸ್ಮಶಾನದ ಯೂ ಮರಗಳ ಪಕ್ಕದಲ್ಲಿಯೂ ದಾರಿ ಇರುತ್ತೆ. ಆದ್ದರಿಂದ ಕಾಲ ತಿರುಗಾಡಲು ಮರಗಳ ಕತ್ತಲು ಸುತ್ತಲೂ ವ್ಯಾಪಿಸುವ ಎಲ್ಲಾ ಜನರಿಗೂ ಕಣ್ಣು ಕಟ್ಟಿದ ಹಾಗೆ ತಡಕಾಡುವದಲ್ಲದೆ ಎದ್ದು ಕಷ್ಟಗಳು ಅನುಭವಿಸುತ್ತಿದ್ದಾರೆ. ಮೊನ್ನೆ ತಾ. ೧೧ ಥ್ಯಾಸ್ಟು ಸುಮಾರು ೩ ಗಂಟೆಯಿಂದ ೫ ಗಂಟೆ ವರಿಗೆ ಮಳೆ ತು. ನಂತರ ನಮ್ಮ ಅಮಲ್‌ದಾರ್ರೂ ಶಿರಸ್ತೆದಾರ್ರೂ ಟೌನ್ ಷನ್ ಮಾಡಲು ದಯಮಾಡಿಸಿದಾಗ್ಗೆ ಈ ಪೇಟೆಯ ಕೆಲವು ತಮಗೆ ಮಳೆ ನೀರಿನಿಂದುಂಟಾಗುವ ತೊಂದರೆಗಳನ್ನೂ ರಾತ್ರಿ ಡಲು ಕತ್ತಲಿನಿಂದುಂಟಾಗುವ ಕಷ್ಟಗಳನ್ನೂ ರೂಬರೂಬು ಮಾಡಿಕೊಂಡರು. ಅಮಲ್ದಾರ್ರ ಹೇಳಿಕೆಯಿಂದ ಅವರ ಹಿಂದೆ ಗುಮಾಸ್ತರು ನೋಟು ಮಾಡಿಕೊಂಡರು. 'ಇಷ್ಟಲ್ಲದೆ ಅದೇ ಯವರು ತಾ. ೧೩ ರಲ್ಲಿ ಎಲ್ಲರೂ ಸೇರಿ ಮುನಿಸಿಪಲ್ ವೈಸ್ ಪ್ರೆಸಿಡೆಂಟರ ಆಫೀಸಿಗೆ ಮೇಲ್ಕಂಡ ವಿಷಯವಾಗಿ ಅರ್ಜಿ ಬರೆದು ರು. "ನರೀ ಕೂಗು ಗಿರೀ ಮುಟ್ಟೀತೇ !" ಎಂಬಂತೆ ತವಲ್ ಅವರ ಗಮನಕ್ಕೆ ಬರಲಿಲ್ಲ. ಈ ಪೇಟೆಯವರ ದುರಾದೃಷ್ಟವಿದು. ಇನ್ನಾದರೂ ನಮ್ಮ ಅಮಲ್‌ದಾರರು ಗಮನಿಸಿ ಜಾಗ್ರತೆ ಳಿಗೆ ನೀರಿನಿಂದುಂಟಾಗುವ ತೊಂದರೆಗಳನ್ನು ತಪ್ಪಿಸಿ ಮೇಲ್ಕಂ ಬೇವುಮರಗಳ ಹತ್ತಿರ ಬೆಳಕಿಗಾಗಿ ಒಂದು ಲಾಂದ್ರ ಕಂಭವನ್ನು ಪರ್ಕಟ್ಟಿರುವ ಕಣ್ಣುಗಳು ಬಿಚ್ಚಿ ಸಲೀಸಾಗಿ ಎಲ್ಲರೂ ತಿರುಗಾ ಸಂಶಯವಿರುವದಿಲ್ಲವೆಂದು ನಂಬಿದ್ದೇನೆ.

ಪ್ರಜಾ ಕ್ಷೇಮಚಿಂತಕ

ಸ್ವಾಮಿ ಅಭೇದಾನಂದರವರೂ ವೇದಾಂತವೂ.

ಆಕ್ಷೇಪಣೆಗೆ ಉತ್ತರ.

ಅಯ್ಯಾ,

ತಮ್ಮ ಕಳೆದ ೧೬ ನೇ ತಾ. ಪತ್ರಿಕೆಯಲ್ಲಿ ಕೊಟ್ಟಿರುವ ನಾರಾಯಣಸಿಂಗರ ವೇದಾಂತ ಪ್ರಶ್ನೆಗಳನ್ನು ನೋಡಿದೆನು. ಹಿ ಸನಾತನಧರ್ಮ ಬೋಧಕರಾದ ಸ್ವಾಮಿ ಅಭೇದಾನಂದರವರು ದಾಂತ ವಿಚಾರದ ಉಪನ್ಯಾಸಗಳಲ್ಲಿ ವಿಷಯಗಳನ್ನು ಸಾಧಾರಣ ಪಂಡಿತ ಪಾಮರ ರಂಜನೆಯಾಗಿಯೂ ಹೃದಯಂಗಮವಾಗುವಂತೆ ಅನುವಾದಮಾಡಿರುವರು. ಇದನ್ನು ತಿಳಿದುಕೊಳ್ಳಲು ಗ್ರಂಥಪಠನ ಶೂನ್ಯರಾಗಿಯೂ ಹಿಂದೂ ವೇದಾಂತವಚನ ಸಂಪತ್ತನ್ನರಿಯದ ಯೂ ಕೇವಲ ಸ್ವಪಕ್ಷಪುರಸ್ಕಾರದಲ್ಲಿನ ಕಾರ್ಯಕಾರಣಗಳರಿಯದೆ ಇರುವ ಮತ್ತು ನಾನೂರು ವರ್ಷಗಳೀಚೆಗೆ ಈ ಭರತಖಂಡಕ್ಕೆ ರುವ ಪೀನಮತದವರು ಹಿಂದೂ ಧರ್ಮಸಾರವನ್ನರಿಯದೆ ಪತ್ತು ಶತಮಾನದಿಂದೀಚೆಗೆ ಬರೆದಿರುವ ಮತ್ತು ಮಧ್ಯೆ ಮಧ್ಯೆ ತಿದ ಯಾಗಿರುವ ವೇದಾಂತವನ್ನು ತಿಳಿಕೊಂಡು, ಅನಾದಿಯಾದ ಸೃಷ್ಟಿಸ್ಥಿತಿಲಯಗಳಿಗೆ ಮೂಲಕಾರಣವಾಗಿರುವ ವಿಷಯಗಳನ್ನು ಈ ಸಮಸ್ತ ಪ್ರಪಂಚದಲ್ಲಿ ಉಪಯೋಗಿಸುತ್ತಲಿರುವ ಭೌತಿಕ ಯ ಮಾನಸಿಕ ದೈವಿಕಸಂಬಂಧವಾದ ಮೂಲತತ್ವವನ್ನು ಒಳಗೊಂಡು ಶೋಭಿಸುತ್ತಲಿರುವ ಹಿಂದೂ ವೇದಾಂತವನ್ನು ನಿಷ್ಕಾರಣ ದೂಷಿಸುವದು ಶುದ್ಧ ವೇದಾಂತವೇ ಸರಿ. ಅಲ್ಲದೆ ಪತ್ರಿಕಾ ಪ್ರಸ ಳಾದ ಮ॥ ಸಿಂಗರವರು ತಮ್ಮ ಅಭಿಪ್ರಾಯದಲ್ಲಿ ಹಿಂದೂ ವೇದ ರಹಸ್ಯಗಳನ್ನು ತಿಳಿಯಬೇಕೆಂಬ ಅಭಿಲಾಷೆಯಿಂದ ಕುತರ್ಕವಾದ ಒಂದೆರಡು ವಿಷಯಗಳಿಗೆ ಅನುವಾದ ಮಾಡುವೆವು. ಏನೆಂದರೆ, ಸ್ತ್ರೀಯರು ಕುರುಡ ಕುಂಟ ಕುಷ್ಟರಿಗೆ ತುಂಬಾ ದಯೆಯನ್ನು ತೋರುವವರಾಗಿಯೂ ಅದ್ದರಿಂದ ದೂಷ್ಯರೆಂತಲೂ ಹೇಳಿರುವರು. ಹಿಂದು ದಾಂತಿಗಳು ಇದನ್ನು ಯಾವಾಗ ದೂಷಿಸಿರುವರು? ನಮ್ಮ ವೇ ದಲ್ಲೇನೋ ದೂಷಿಸಿರುವದಿಲ್ಲ. ಹಿಂದೂಗಳಲ್ಲಿ ವೇಶ್ಯೆಯರನ್ನು ಸ್ಥಾನದಲ್ಲಿ ಕಾಣಿಸುವದು, ಸಾವಿರಾರು ವಿಧವೆಯರನ್ನು ಇಟ್ಟಿರುವದು, ಕೀಳುಜಾತಿಯವರನ್ನು ಸಹೋದರರಂತೆ ಕಾಣದೆ ಸುವದು, ಈ ವಿಷಯಗಳೆಲ್ಲಾ ವೇದಾಂತಕ್ಕೆ ಸಂಬಂಧಪಟ್ಟವು ಅದರಲ್ಲಿ ಈ ಭಾಗವು ಹೇಳಿರುವದಿಲ್ಲ. ಒಂದು ವೇಳೆ ಅದರ ತತ್ವವನ್ನು ಗ್ರಹಿಸದೆ ವ್ಯವಹಾರದಲ್ಲಿನ ಅವಿಜ್ಞತೆಗಳಿಗೆ ವೇದ ಅರ್ಥವನ್ನು ಪ್ರತಿಪಾದಿಸಿ ದೂಷಿಸಿರಬಹುದು ಅಲ್ಲದೆ ಶಾಕಿನಿ ಗಣಪತಿ ಮೊದಲಾದ ಕುರೂಪಾಕೃತಿಯ ವಿಗ್ರಹಗಳನ್ನು ದೇ ಹೋಲಿಸುವರು ಎಂದು ಬರೆಯುತ್ತಾರ. ಅವರು ವೇದಾಂತ ವಿ ತರ್ಕಮಾಡುವಾಗ ಕರ್ಮ ವಿಚಾರವಾದ ವಿಷಯಗಳನ್ನು ಅನು ಮಾಡುವದು ಅಸಂಬದ್ಧ ಪ್ರಲಾಪವೇ ಸರಿ. ಕರ್ಮ ಮಾರ್ಗವೇ ಜ್ಞಾನ ಮಾರ್ಗವೇ ಬೇರೆ. ಕರ್ಮ ವಿಚಾರವಾಗಿ ತರ್ಕ ಮಾಡಿದ ರಾಯರನು ಸಿಂಹನಾಗುವದಕ್ಕೂ ಇತರ ಕರ್ಮ ವಿಚಾರಕ ತ್ತರ ದೊರೆಯಬಹುದು. ವೇದಾಂತ ವಿಷಯಾಪೇಕ್ಷಿಗಳಿಗೆ ಗ್ರಂ ನಿವೇಶನವೂ ಪ್ರಮಾಣಗಳೂ ಇದ್ದು ವಾದಿಸಿದರೆ ಆಗಬಹುದು. ಇಂಥಾ ಪ್ರಮಾಣ ದೋಷಗಳನ್ನು ತಿಳಿಸಿರುವದಿಲ್ಲ. ಇದಕ್ಕೆ ಅವರು ಈಗಿರುವದಕ್ಕಿಂತಲು ಹೆಚ್ಚು ಬುದ್ಧಿ ಶಕ್ತಿಯನ್ನು ಉಪಯೋಗಿಸಿ ಮೊದಲು ಗ್ರಂಥ ಪ್ರವೇಶ ಮಾಡಿ ನಂತರ ವೇದಾಂತ ರಹಸ್ಯ ತಿಳಿಯಲಪೇಕ್ಷಿಸಿದರೆ ಅದು ತಾನಾಗಿ ಗ್ರಾಹ್ಯವಾಗುತ್ತೆ. ದೈ ಯಗಳಿಂದ ಸಹಾಯ ರಹಿತರಾಗಿರುವ ಪಟ್ಟಣ ವಾಸಿಗಳಿಗೆ ಸಾಧ್ಯವಿಲ್ಲ.

ವೇದಾಂತಾಭಿಮಾನಿ

ತಾಲ್ಲೂಕು ವರ್ತಮಾನಗಳು.

ಚಿಕ್ಕಮಗಳೂರು —ಇಲ್ಲಿ ಮಳೆಬೆಳೆಗಳು ಚನ್ನಾಗಿವೆ. ನೋಡಿದಾಗ್ಯೂ ಭೂಮಿಯು ಹಸುರಾಗಿಯೂ ಹೊಲ ಗದ್ದೆಗಳು ರುಗಳಿಂದ ತುಂಬಿ ಮನೋಹರವಾಗಿಯೂ ಕಾಣುತ್ತಲಿವೆ. ಧಾರಣೆಯೇನೋ ಇಳಿಯಲಿಲ್ಲ. ಪ್ಲೇಗಿನ ಹಾವಳಿಯು ಕಡಿ

ದಿನದಿನಕ್ಕೂ ಹೆಚ್ಚುತ್ತಲಿದೆ. ಪ್ರತಿ ನಿತ್ಯದಲ್ಲೂ ೧೫,೨೦,೧೮,೨೫ ಜನರು ಸಾಯುತ್ತಿದ್ದಾರೆ. ಅನೇಕರು ಷೆಡ್ಡುಗಳಿಗೆ ಹೋಗಿದ್ದ ಅಲ್ಲಿಯೂ ರೋಗವು ವ್ಯಾಪಿಸಿ ಜನರು ಸಾಯುತ್ತಲಿದ್ದಾರೆ. ಈ ರೋಗದ ಸ್ಥಿತಿಯು ಬಹು ಕಠಿಣವಾಗಿದೆ ಎಂದೂ ಹಿಂದೆ ಬಂದಿದ್ದಕ್ಕಿಂತಲೂ ಇದು ಕಠಿಣವೆಂತಲೂ ಹೇಳುತ್ತಾರೆ. ಸುತ್ತುಮುತ್ತಲಿನ ಗ್ರಾಮಗಳಲ್ಲಿಯೂ ಪ್ಲೇಗ್ ರೋಗವು ವ್ಯಾಪಿಸುತ್ತಲಿದೆ. ಇಲ್ಲಿನ ಜನರ ಕಷ್ಟವೂ ದುಃಖವೂ ಈ ಮಳೆಕಾಲದಲ್ಲಿ ಷೆಡ್ಡುಗಳಲ್ಲಿನ ವಾಸವೂ ಹೇಳಲಸಾಧ್ಯ. ಈ ಕಾಲದಲ್ಲಿ ಇಲ್ಲಿರುವ ಮುನಿಸಿಪಾಲಿಟಿಯು ಪ್ರೆಸಿಡೆಂಟರೂ ವೈಸ್ ಪ್ರೆಸಿಡೆಂಟರೂ ಜನರಿಗೆ ತುಂಬಾ ಸಹಾಯ ಮಾಡುತ್ತಲಿದ್ದಾರೆ. ಡಾಕ್ಟರ್ ಸಾಹೇಬರು ಕೂಡ ರೋಗಿಗಳ ವಿಷಯದಲ್ಲಿ ಬಹು ಪ್ರೀತಿಯಿಂದ ನೋಡಿಕೊಳ್ಳುತ್ತಲಿದ್ದಾರೆ. ಇಲ್ಲಿನ ಮಠಗಳಾದ ಪ್ರತಿನಿತ್ಯವಲ್ಲೂ ತೆರೆಯಲ್ಪಟ್ಟ ಗಣ್ಯರುಗಳಿಗೆ ನೋಡಿದರೆ ಮಾ...ಗಳೇ ಬಂದ ಕಡೆಯಲ್ಲಿ ಕೂತುಕೊಂಡು ಓದಿಕೊಳ್ಳುವಂತೆ ...ತ್ತದಲ್ಲಿದೆ. ಹುಡುಗರು ಬೇರೆ ಇಲ್ಲ.—ಶಿವಮೊಗ್ಗೆಯಿಂದ ...ಸ್ ಪತ್ರಿಗಳು ಬಂದು ನಡಸಿದ ಕೇಸುಗಳಲ್ಲಿ ಕಾಮೀ ಕಲ್ಲು ಮ... ಕೊಲೆಯ ಮೊಕದ್ದಮೆ, ಕಡೂರು ತಾಲ್ಲೂಕಿನಲ್ಲಿ ಗರ್ಭಿಣಿ ...ಗೆ ಮದ್ದುಕೊಟ್ಟು ಕೊಂದ ಮೊಕದ್ದಮೆ ಸರಿಯಾದ ರುಜುವಾತಿಲ್ಲದಕಾರಣ ವಜಾ ಆದವೆಂಬ ವರ್ತಮಾನ.—ಈಗ ಊರೊಳಿ...ಟ್ಟಿಗೆ ಖಾಲಿಯಾಗಿವೆ. ಷೆಡ್ಡುಗಳು ಭರ್ತಿಯಾಗಿವೆ. ಈ ಕಾಲದ ಪೊಲೀಸಿನವರ ಸಹಾಯವು ತುಂಬಾ ಅವಶ್ಯ. ಪೋಲೀಸ್ ಅಧಿಕಾರಿಗಳು ತಮ್ಮ ಸಿಬ್ಬಂದಿಯನ್ನು ಕ್ರಮಪಡಿಸಿ, ಊರಿನಲ್ಲೂ ಷೆಡ್ಡುಗಳ ಕಳವು ಮೊದಲಾದ ನಷ್ಟ ಕಷ್ಟಗಳು ಸಂಭವಿಸದಂತೆ ಕ್ರಮವಾದ ...ಸ್ತುವಾರಿಯನ್ನು ಇಡಿಸುವದು ಒಳ್ಳೇದು

ಚಳ್ಳಕೆರೆ.—ಚಳ್ಳಕೆರೆ ತಾಲ್ಲೂಕು ನಾಯ್ಕನಹಟ್ಟಿ ಹೋಬಳಿ ಮಾಂತರಗಳಲ್ಲಿ ಇದುವರೆಗೂ ಚೆನ್ನಾಗಿ ಮಳೆ ಇಲ್ಲದೆ ಕೆಲವು ...ಗಳಲ್ಲಿ ಪೂರ್ತಾಂಗವಾಗಿ ಜನರಿಗೆ ಹೊಟ್ಟೆಗೆ ಇಲ್ಲದೆ ಬಹಳ ...ದಪಡುತ್ತಾರೆ ಅಲ್ಲದೆ ಗೋಳಾಯಿಗಳ ಕಷ್ಟನಿಷ್ಟುರಗಳನ್ನು ...ಲಸಾಧ್ಯ ಹೋಬಳಿ ಮುಕದೀಮರುಗಳಲ್ಲಿಯೂ ಹೊಟ್ಟೆ...ದೆ ತೊಂದರೆಪಡುತ್ತಿರುವ ಬಡಜನರು ಅನೇಕರಿದ್ದಾರೆ. ಈಗ ೨೦ ದಿವಸದ ಕೆಳಗೆ ಮಾತ್ರ ಸಾಧಾರಣವಾದ ೧ ಹದ ಮಳೆಯಾ... ಈ ಗ್ರಾಮದ ಜನಗಳು ಸ್ವಲ್ಪಮಟ್ಟಿಗೆ ...ಬಂದ ಕೂಡ್ಲೆ ...ರ್ಗಗಳಿಗ್ಯಾವತ್ತು ಪೈರನ್ನು ಮಾತ್ರ ಮಾಡಿದರು. ತಾ. ೨೦ ರಲ್ಲಿ ... ಮಳೆ ಬಂತು ಮುಂದೆ ಹ್ಯಾಗಾಗುವದೋ ತಿಳಿಯದು ಈಗ ...ರು ೨-೩ ವರ್ಷಗಳಿಂದಲೂ ಚೆನ್ನಾಗಿ ಮಳೆ ಇಲ್ಲದೆ ಜನಗಳ ...ದನೆಯನ್ನು ಹೇಳಲು ಸಾಧ್ಯವಿಲ್ಲ ಈ ಗ್ರಾಮದ ತರಿ ಫಸಲಿಗೆ ...ಂಡ ನಾಯ್ಕನಹಟ್ಟಿ ೩ ಕೆರೆಗಳು ತುಂಬಿದರೆ ಆ ಕೆರೆ ಜಂಗಿನ ...ಯು ಆಸರೆಯಿಂದ ಪೋಗುವಳಿ ಆಗಬೇಕಾಗಿದೆ. ಮಳೆ ದುರ್ಲ...ದರೆ ಆ ಕೆರೆಗಳು ತುಂಬುವದು ಹ್ಯಾಗೆ? ಆದರೆ ಇದುವರೆಗೂ ... ತಾಲ್ಲೂಕು ಅಮಲ್ದಾರರವರು ಈ ಬಡಜನಗಳ ತೊಂದರೆ ...ನೋಡಲಾರದೆ ಅನೇಕ ಜನಗಳಿಗೆ ಭಾವಿ, ಹೊಟ್ಟೆಗೆ ಪನ್ನರೆ ...ಗಳನ್ನು ಬಹಳ ಮುತುವರ್ಜಿಯಿಂದ ಕೊಡಿಸಿರುತ್ತಾರೆ. ಅಲ್ಲದೆ ... ಹೋಬಳಿ ಪೈಕಿ ೩ ಕೆರೆಗಳನ್ನು ಸಹ ರಿಲೀಫಾಗಿ ಕಾಂಗಾರಿ ...ಸಿ ಇದುವರಿಗೂ ಕಾಪಾಡಿಕೊಂಡುಬಂದರು ಇನ್ನು ಮುಂದೆ ಈ ...ಗಳಿಗೆ ನಿ... ಹೋಯಿತೆಂಬ ವಾರ್ತೆಯನ್ನು ಬಡಜನಗಳು ತುಂಬಾ ವ್ಯಥೆಪಡುತ್ತಾರೆ ನಮ್ಮ ಅಮಲ್ದಾರರು ಇದುವರೆಗೂ ... ತೊಂದರೆಯನ್ನು ತಪ್ಪಿಸಿ ಕಾಪಾಡಿಕೊಂಡು ಬಂದದ್ದಕ್ಕಾಗಿ ...ಂತನು ಅವರಿಗೆ ತುಂಬಾ ಸಹಾಯಮಾಡಲಿ! ನಮ್ಮ ಸರ್ಕಾರದ ... ಇನ್ನು ಮುಂದೆ ಯಾವದಾದರೂ ಒಂದು ಕೆಲಸ ಹಿಡಿಸಿ ಇನ್ನೂ ...ತ್ರಿ ಕಾಲ ಕಾಪಾಡ್ಯಾರೆಂದು ಹಾರೈಸುತ್ತೇನೆ.

ತುಮಕೂರು.—ಈಗ ಒಂದು ವಾರದಿಂದ ಹಗಲು ಬಿಸಿಲು ಕಾಯು... ರಾತ್ರಿ ಮಳೆಯಾಗುವದೂ ಪದ್ಧತಿಯಾಗಿದೆ ಇದರಿಂದ ಕೆರೆಗಳಿಗೆ ಸ್ವಲ್ಪಮಟ್ಟಿಗೆ ನೀರು ಬಂದಿರುವದಲ್ಲದೆ ಮುಸ್ಕೀ ಫಸಲಿಗೆ ...ಅನುಕೂಲವಾಗಿ ಆರಂಬವು ಬಹಳ ಚೆನ್ನಾಗಿದೆ ಮುಂದೆ ಭಾರಿ ...ಗಳಾಗುವ ಸಂಭವವಿದೆ ಸ್ವಲ್ಪ ದೊಡ್ಡ ಮಳೆಯಾದಾಗ್ಯೂ ನಮ್ಮ ... ಕೆರೆಗೆ ಮಾತ್ರ ನೀರು ಬರುವದು ಸ್ವಲ್ಪವೇ ಕಾರಣವೇನಂದರೆ, ಕೆರೆಯ ಹಿಂಭಾಗದಲ್ಲಿ ಅಗಾಧವಾದ ಪರ್ವತ ಶ್ರೇಣಿ ಇರುತ್ತೆ. ...ನಲಿಗೆ ಅದರ ಮೇಲೆ ಭಾರಿಯಾಗಿ ಮಳೆಯಾದರೆ ಜಾಗ್ರತೆ ಕೆರೆ ...ತ್ತಿತ್ತು ಈಗಬಾದರೋ ಆ ನೀರು ಬರುವ ರೇವಿನಲ್ಲಿ ಕ್ರಮೇಣ ಮಣ್ಣು ಬಂದು ಸೇರಿರುವದರಿಂದ ದಿಣ್ಣೆಯಾಗಿ ಬಂದ ನೀರು ಹಾ...ಸದು. ಮೂರು ನಾಲ್ಕು ವರುಷಗಳಿಗೊಂದಾವರ್ತಿ ಕೋಡಿ ತುಂ...ದು ದುರ್ಲಭವಾಗಿರುತ್ತೆ. ಈ ವಿಷಯವಾಗಿ ಸರ್ಕಾರದವರು ...ಮುತುವರ್ಜಿ ವಹಿಸಿ ದಿಬ್ಬ ನೀರಿನ ರೇವಿನಲ್ಲಿ ಸ್ವಲ್ಪಮಟ್ಟ... ಕಾಮಗಾರಿ ಮಾಡಿಸಿದಲ್ಲಿ ಪ್ರತಿ ವರುಷವೂ ರಿಮಾರ್ಷವಾಗುವ ಸ...ರೈತರ ಬೀಳು ಕಂಡಾಯವೂ ತಪ್ಪುತ್ತದೆ. ಈ ವಿಷಯವಾಗಿ ... ಇಂಜನಿಯರ್ ಸಾಹೇಬರು ಗಮನಿಸಿರುವಂತೆ ವರ್ತಮಾನವಿದೆ. ...ಈ ಮಹೋಪಕಾರವನ್ನು ತಮ್ಮ ಕಾಲದಲ್ಲಿ ಮಾಡಿಸಿ ಕೀರ್ತಿಗಳಾಗಬೇಕಾಗಿ ಅರಿಕೆಮಾಡಿಕೊಳ್ಳುತ್ತೇವೆ —ಕಳೆದ ವಾರ ಟರ್ವ... ವಾಸವಾಗಿರುವ ಮೊಲೀ ಕೋಟೆಯಲ್ಲಿ ಉಪ್ಪಾರಜಾತಿ ಬಂಡ್ಡನೆಂ... ವಯಸ್ಸಿನ ತರುಣನು ಈ ತುಂಕೂರಿನಲ್ಲಿ ಕೆಲವು ಕಡೆ ಜನಳ ...ರಾದ್ದಕ್ಕೆ ಸಾಲ ಮಾಡಿ ತೀರಿಸಲು ಹಣ ಕಾಣದೆ ಮೆಳಕೆಂಟಿ... ತನ್ನ ಸೋದರ ಮಾವನ ಸುಮಾರು ಎರಡು ವರುಷ ವಯಸ್ಸಿನ ... ಮಗುವಿನ ಮೈ ಮೇಲಿದ್ದ ಬೆಳ್ಳಿ ಒಡವೆಗಳನ್ನು ಅಪಹರಿಸಿಕೊಂಡು ಹೋಗಿ ಸಾಲಗಾರನಿಗೆ ಕೊಟ್ಟದ್ದು ರುಜುವಾತಾಗಿರುವಾಲು ಐತ್ತ...ದ್ದರಿಂದ ಅಮಲ್ದಾರರ ಕೋರ್ಟಿನಲ್ಲಿ ಆ ಹುಡುಗನಿಗೆ ಎರಡು ತಿಂಗಳ ಸಜಾ ಆಯಿತು. ಇದೇ ವಾರದಲ್ಲಿ ಈ ಊರಿನ ಎಮ್ಮೆ ಕೇರಿಯ ...ನ ನಾಯಕನಾನಿ ತಿಮ್ಮಿ ಎಂಬವಳನ್ನು ಪುರಸ್ಥಳದ ಮಾಗನ ...ತ್ತೈಯ್ಯಾ ಎಂಬುವನು ಆಕೆಗೆ ಮಾನಭಂಗ ಮಾಡಿದನೆಂಬ ಅಪಾದನೆಗೆ ಗುರಿಮಾಡಲ್ಪಟ್ಟು ಅವನಿಗೆ ಒಂದು ತಿಂಗಳ ಕೈದು ಆಗಿರುತ್ತೆ. ಈ ವಾರ ಇಲ್ಲಿಗೆ ಸೆಷನ್ ಕೋರ್ಟು ಬಂದು ಮೊಕದ್ದಮೆಗಳು ವಿಚಾರಣೆ ಆಗಿ ತೀರ್ಪು ಆಗಿರುತ್ತವೆ. ಪಾವಗಡದ ತಾಲ್ಲೂಕು ಬ್ರಹ್ಮಣರ ಶೀನಪ್ಪನೆಂಬುವನು ಖೂನಿ ಮಾಡಿದ್ದು ರುಜುವಾತಾದ್ದರಿಂದ ಫಾಸೀ ಸಜವೂ, ಅವನ ಆಳು ನಾಯ್ಕರ ಈರಿಗಾ ಎಂಬುವನಿಗೆ ಮರಣಾಂತ್ಯ ಸಜವೂ, ಚಿಕ್ಕನಾಯ್ಕನ ಹಳ್ಳಿ ತಾಲ್ಲೂಕು ಲಿಂಗಾಯತರ ರಾಮಾ ಎಂಬುವನು ಖೂನಿ ಮಾಡಿದ್ದಕ್ಕಾಗಿ ಜನ್ಮಾವಧಿ ಸಜವೂ, ಇದೇ ತಾಲ್ಲೂಕು ಹುಳಿಯಾರಿಗೆ ಸ್ಟೇಷನ್ ಬಳಿ ಇರುವ ಒಡ್ಡರು ದೇವಸ್ಥಾನದ ಆಭರಣಗಳನ್ನು ಕಳುವು ಮಾಡಿದ್ದಕ್ಕೆ ಪತ್ತೆಯವರು ತಲಾ ಒಂದುವರೆ ವರುಷದಂತೆ ಇಬ್ಬರಿಗೂ, ಒಬ್ಬನಿಗೆ ಒಂದು ವರುಷವೂ ಕಠಿಣ ಸಜಾ ವಿಧಿಸಿರುತ್ತಾರೆ. ಕ್ಯಾತಸಂದ್ರದಲ್ಲಿ ಮಾದಿಗರ ವೆಂಕಟಮ್ಮ, ಅಮಾಸೆ ಎಂಬುವರು ಕಳುವಿನಿಂದ ದನ ಕೊಯ್ದುದ್ದಕ್ಕೆ ಇವರು ಒಂದಕ್ಕೆ ೬ ತಿಂಗಳಂತೆ ಸಜಾ ಆಗಿದೆ.

ಆನೇಕಲ್ಲು.—ಇಲ್ಲಿ ಬೇಕಾದಷ್ಟು ಮಳೆಯಾಯಿತು. ಕೆರೆಕುಂಟೆಗಳೆಲ್ಲಾ ತುಂಬುತ್ತಲಿವೆ. ಹೊಲಗದ್ದೆಗಳಲ್ಲಿ ಪೈರುಗಳು ಚೆನ್ನಾಗಿವೆ. ಇದೇ ತಿಂಗಳು ೧೩ ನೇ ತಾ. ಇಲ್ಲಿರುವ ಲಂಡನ್ ಮಿಷನ್ ಸ್ಕೂಲಿನಲ್ಲಿ ಬಾಲಕ ಬಾಲಕಿಯರಿಗೆ ಬಹುಮಾನ ಕೊಡಲಾಯಿತು ಅಮಲ್ದಾರ್ ಮೆ|| ಟಿ. ಸುಬ್ಬರಾಯರು ಅಗ್ರಾಸನವನ್ನು ವಹಿಸಿದರು. ಮತ್ತು ರೆವರೆಂಡ್ ಜೇ ಮಾಥರ್ ಮತ್ತು ಜೆ ವಿಲ್‌ಕಿನ್ಸ್ ಸಾಹೇಬರುಗಳು ದಯಮಾಡಿದ್ದರು. ಇಲ್ಲಿನ ಸರ್ಕಾರಿ ಉದ್ಯೋಗಸ್ತರೂ ಗ್ರಾಮದ ದೊಡ್ಡ ಮನುಷ್ಯರೂ ಕೂಡಿದ್ದರು ಅಗ್ರಾಸನಾಧಿಪತಿಗಳು ಕಟ್ಟಡದೊಳಗೆ ಪ್ರವೇಶಿಸುವದಕ್ಕಿಂತ ಮುಂಚೆ ಶಾಲೆಯ ಎದುರಿನಲ್ಲಿ ಹುಡುಗರ ಡ್ರಿಲ್ ನಡೆಯಿತು. ಒಳಕ್ಕೆ ಎಲ್ಲರೂ ದಯಮಾಡಿದರು. ಹಾಡುಗಳೂ, ಡೈಲಾಗುಗಳೂ, ರೆಸಿಟೇಷನ್‌ಗಳೂ, ಮರ್ಚಂಟು ಆಫ್ ವೆನಿಸ್ ಎಂಬ ನಾಟಕವೂ ನಡೆಯಿತು ಅನಂತರ ಬಾಲಕರಿಗೆ ಪುಸ್ತಕಗಳೂ ಬಾಲಕಿಯರಿಗೆ ಸಣ್ಣಸಣ್ಣ ಪೆಟ್ಟಿಗೆ ಗೊಂಬೆಗಳೂ, ಸೀರೆ, ಕುಪ್ಪಸ ಲಂಗಗಳೂ ಬಹುಮಾನ ಕೊಡಲ್ಪಟ್ಟವು ಸಭಿಕರೆಲ್ಲರೂ ನಡೆದಂಥಾ ಕಾರ್ಯಗಳನ್ನು ನೋಡಿ ಕೇಳಿ ಬಹಳ ಸಂತೋಷಪಟ್ಟರು ಇವರ ಸಂತೋಷವನ್ನು ತೋರಿಸುವ ಬಗ್ಗೆ ಅಲ್ಲಿಯೇ ಈ ಬಾಲಕ ಬಾಲಕಿಯರಿಗೆ ಹಣವನ್ನೂ ಕೆಲವು ವರ್ತಕರೂ ಯಜಮಾನರೂ ಇನಾಮು ಕೊಟ್ಟರು. ಚೇರಮೆನ್‌ರವರು ಉಪನ್ಯಾಸದಲ್ಲಿ ಮಿಷನರಿ ಸಂಘದವರು ವಿದ್ಯೆಗಾಗಿ ಪಡುವ ಕಷ್ಟಗಳು ಬಹಳವೆಂತಲೂ, ಗ್ರಾಮದ ಜನರು ಮಕ್ಕಳನ್ನು ಧಾರಾಳವಾಗಿ ಇಂಥಾ ಸ್ಕೂಲುಗಳಿಗೆ ಕಳುಹಿಸಿಕೊಡುವದು ಉತ್ತಮವೆಂತಲೂ, ನಡೆದಂಥಾ ಕಾರ್ಯಗಳನ್ನು ಕುರಿತು ಅತಿ ಸಂತೋಷ ಪಟ್ಟೆವೆಂತಲೂ ಹೇಳಿದರು ಅನಂತರ ೧೮ ನೆ ತಾ. ಇಲ್ಲಿರುವ ಲಂಡನ್ ಮಿಷನ್ ಪಂಚಮ ಸ್ಕೂಲ್ ಬಾಲಕ ಬಾಲಕಿಯರಿಗೆ ಸ್ಕೂಲು ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಇನಾಮುಗಳು ಕೊಡಲ್ಪಟ್ಟವು ಇಲ್ಲಿಯೂ ಅಮಲ್ದಾರರು ಅಗ್ರಾಸನವನ್ನು ವಹಿಸಿದ್ದರು. ಮತ್ತು ಊರಿನ ಉದ್ಯೋಗಸ್ತರು, ವ್ಯಾಪಾರಸ್ತರು ಮೊದಲಾದವರೆಲ್ಲ ಕೂಡಿದ್ದರು. ಸಂಗೀತ, ಡೈಲಾಗು, ರಿಸಿಟೇಷನ್ ಇತ್ಯಾದಿಗಳು ನಡೆದವು. ಅಗ್ರಾಸನಾಧಿಪತಿಗಳು—ಪಂಚಮರು ಇಷ್ಟು ಮಟ್ಟಿಗೆ ವಿದ್ಯೆ ಕಲಿತಿರುವದನ್ನು ನೋಡಿ ನಾನು ಬಹಳ ಆಶ್ಚರ್ಯ ಪಡುತ್ತೇನೆಂದು ಹೇಳಿ ಮತ್ತು ಇನ್ನೂ ಅನೇಕ ವಿಧವಾಗಿ ಶ್ಲಾಘ್ಯವಾದ ಮಾತುಗಳನ್ನು ನುಡಿದು ಅವರಿಗೆ ಇನಾಮು ಕೊಟ್ಟರು. ಇನ್ನು ಕೆಲವರು ಸ್ವಲ್ಪ ದ್ರವ್ಯ ಸಹಾಯ ಮಾಡಿದರು. ಇದು ಮಾತ್ರವಲ್ಲದೆ ಇಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರೂ ಅಬ್ಕಾರಿ ಸೂಪ್ರವೈಜರೂ ಪಂಚಮ ಬಾಲಕ ಬಾಲಕಿಯರು ಇಷ್ಟು ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಸಭೆಯವರನ್ನು ಇಷ್ಟು ಸಂತೋಷ ಪಡಿಸಿದ್ದನ್ನು ತಾವು ನೋಡಲಿಲ್ಲವೆಂದು ಹೇಳಿ ಮುಂದಿನವರುಷ ಇದಕ್ಕಿಂತ ಹೆಚ್ಚಾಗಿ ಮಾಡಿದರೆ ಒಂದನೆ ಎರಡನೆ ವಿದ್ಯಾರ್ಥಿಗಳಿಗೆ ಒಬ್ಬೊಬ್ಬರು ಐವತ್ತೈದು ರೂಪಾಯಿ ಬಹುಮಾನ ಕೊಡುತ್ತೇವೆಂದು ವಾಗ್ದಾನ ಮಾಡಿದರು ಮೆ|| ಮಾಥರ್ ಸಾಹೇಬರು ಈ ಸ್ಕೂಲುಗಳು ಇಷ್ಟು ಚೆನ್ನಾಗಿ ಹೊಗಳಿಕೆಯನ್ನು ಹೊಂದಿದ್ದನ್ನು ಕುರಿತು ಬಹು ಸಂತೋಷ ಪಟ್ಟೆವೆಂದು ಮೊದಲಾಗಿ ಪ್ರೋತ್ಸಾಹದ ಮಾತುಗಳನ್ನು ಹೇಳಿದರು ಕಡೆಯಲ್ಲಿ ಹುವ್ವಿನ ಹಾರ ಕೊಡಲ್ಪಟ್ಟವು. ಮೈಸೂರು ಮಹಾರಾಜರವರ ಮಂಗಳ ಹಾಡಿ ಸಭೆಯನ್ನು ಮುಗಿಸಿದರು

ಚಿಕ್ಕನಾಯಕನ ಹಳ್ಳಿ —ಕಳೆದ ವಾರ ಆಂಜನೇಯನ ದೇವಸ್ಥಾನದ ಸಮೀಪದ ಸಂದುಗಳಲ್ಲಿ ಪುನಃ ಪ್ಲೇಗ್ ಪ್ರಾರಂಭವಾಗಿ ೫-೬ ಇಲಿಗಳು ಮೃತಪಟ್ಟದರಿಂದಕಾರಣ ಅಮಲ್ದಾರರು ಆಸ್ಪತ್ರೆ ಅಸಿಸ್ಟೆಂಟರೂ ಸೇರಿ ಆ ವಠಾರವನ್ನೆಲ್ಲಾ ಖಾಲಿಮಾಡಬೇಕೆಂದು ಹಾಕೀತು ಕೊಟ್ಟದ್ದರ ಮೇಲೆ ಅನೇಕರು ಷೆಡ್ಡುಗಳಿಗೆ ಹೋಗುತ್ತಾ ಇದ್ದಾರೆ. ಮತ್ತು ಕೆಲವು ಷೆಡ್ಡುಗಳು ಹಿಂದಿನ ವರುಷದಲ್ಲಿ ಕಟ್ಟಿದವುಗಳಾದ ಕಾರಣ ಗೆದ್ದಲು ಹಿಡಿದು ಬಹಳ ಕುಸಿದು ಬಿದ್ದು ಹೋಗಿವೆ. ಇನ್ನು ಕೆಲವನ್ನು ಹೊಲಗಳಲ್ಲಿ ಹಾಕಿದ್ದ ಕಾರಣ ವ್ಯವಸಾಯ ಕಾಲದಲ್ಲಿ ಕಿತ್ತು ಕೊಂಡು ಹೋಗಿಬಿಟ್ಟರು. ಉಪದ್ರವು ಹೀಗೆ ಒಂದು ವೇಳೆ ಊರನ್ನು ವ್ಯಾಪಿಸುವದಾದರೆ ಈ ಮಳೆಗಾಲದಲ್ಲಿ ತುಂಬಾ ಕಷ್ಟವಾಗುವದೆಂಬುದಕ್ಕೆ ಸಂದೇಹವಿಲ್ಲ ದೈವಯತ್ನದಿಂದ ಆ ಸ್ಥಳ ವಿನಃ ಮತ್ತೆಲ್ಲಿಯ ಜಾಗದಲ್ಲಿ ಏನೂ ಇಲ್ಲ ಮಳೆಯು ಅಧಿಕವಾಗಿರುವದರಿಂದ ಈ ವ್ಯಾಧಿಯು ಎಲ್ಲಿ ವ್ಯಾಪಿಸುತ್ತೋ ಎಂದು ಚಿಂತಿಸುತ್ತಾ ಇದ್ದಾರೆ ಮಳೆಯಿಂದ ಕೆಲವು ಹೊಲಗಳ ಪೈರುಗಳು ಕೆಟ್ಟು ಹೋದವು. ಕೆಲವು ಸೊಂಪಾಗಿ ಬೆಳೆದಿವೆ -ಈ ಊರಿನ ಕುರುಬರ ಸಿದ್ದೈಯ್ಯನು ತನ್ನ ಹೆಂಡತಿ ಮುದ್ದಮ್ಮ ಎಂಬವಳಿಗೆ ಎರಕ್ಕೆ ಮೇಲ್ಪಟ್ಟ ಕಾಸ್ತಿಯ ೭ ಆಣೆ ಕೊಡುತ್ತಾ ಬರುತ್ತಿದ್ದನು. ಈ ಮುದ್ದ ಸಾಲದೇ ಬರುತ್ತಿದ್ದ ಕಾರಣ ಗಂಡನ ಪೂರ್ತಿಗೆ ಆಗಿ ಮಾಡಿಟ್ಟು ತಾನು ಮನೆಗೆ ತಾನು ಹೋಗಿ ಊಟ ತೀರಿಸಿಕೊಂಡು ಬರುತ್ತಿದ್ದಳು ಹೀಗಿರಲಾಗಿ ಒಂದಾನೊಂದು ದಿವಸ ಇವರಿಬ್ಬರಿಗೂ ಮಾತು ಬಂದು ಕಳೆಯದೇನು ಕೊಡುವ ಈ ಪಳಿ ಆಕೆಯಿಂದ ಅಕ್ಕಿ ಎಗ್ಗದೆ ಸಾಮಾನು ತಂದು ಬಾಳುವದಕ್ಕೆ ಆಗುವದಿಲ್ಲ ಎಂದದ್ದರ ಮೇಲೆ ಗಂಡನಿಗೆ ಸಿಟ್ಟು ಬಂದು ಹೊಡೆದನು. ನಂತರ ಸಿದ್ದೈಯ್ಯನು ಬಹಿರ್ಭೂಮಿಗೆ ಹೋಗಿ ಬರುವಷ್ಟರೊಳಗಾಗಿ ಮುದ್ದಮ್ಮನು ಬಾಗಲಿಗೆ ಅಗಳಿ ಹಾಕಿ ಕೊಂಡು ನಡುಮನೆಯಲ್ಲಿ ನೇಣು ಹಾಕಿ ಕೊಂಡು ನೇತಾಡುತ್ತಾ ಇದ್ದಳು. ಗಂಡ ಬಂದು ನೋಡಿ ಈಕೆ ಸತ್ತು ಹೋಗುತ್ತಾಳೆಂದು ತಿಳಿದು ಅವಳನ್ನು ಮೇಲಕ್ಕೆ ಎತ್ತಿ ಹಿಡಿದು ಕೂಗಿ ಕೊಂಡದ್ದರಿಂದ ಅಡು ಬಾಜು ಜನರು ಬಂದು ಹಗ್ಗವನ್ನು ಕೊಯಿದು ಕೆಳಗಿಳಿಸಿ ಹುಲ್ಲಿಟ್ಟಿಸಿದಾಗ ಅವಳಿಗೆ ಬಾಯಿಗಟಗಿಸಿತ್ತು. ಆದರೆ ಬಂದಿದ್ದ ಜನರು ಈಕೆ ಸತ್ತಿದ್ದಾಳೋ ಬದುಕಿದ್ದಾಳೋ ಎಂದು ತಿಳುವಿಕೆಯ ಬಗ್ಗೆ ಸುಮಾರು ಅರ್ಧ ಸೇರು ಮೆಣಸಿನಕಾಯಿಯನ್ನು ಊದುರೆ(ಹೊಗೆ) ಹಾಕಿಸಿದಾಗ ಕೆಮ್ಮಿದಳು. ಆಗ ಜನರು ಈಕೆ ಬದುಕಿದಾಳೆ ಸತ್ತಿದ್ದರೆ ನಮ್ಮ ತಲೆಗೆ ಬರುತ್ತಿತ್ತು ಎಂದು ಗಾಬರಿಪಟ್ಟು ಕೂಡ್ಲೆ ಪೋಲಿಸಿಗೆ ರಿಪೋರ್ಟು ಮಾಡಿದರು. ಆ ಮೇಲೆ ಆಸ್ಪಟಲ್ ಅಸಿಸ್ಟೆಂಟರು ಬಂದು ಪರಿಕ್ಷಿಸಿದಾಗ ಜನರ ಗುಂಪು ಕೂಡಿತ್ತು. ಎಲ್ಲರನ್ನೂ ಓಡಿಸಿ ಔಷಧಿ ಕೊಟ್ಟು ಮಾತಾಡಿಸಿ ಕೇಳಿದ್ದಕ್ಕೆ—ನನ್ನ ಗಂಡನು ಸೂಳೆಯನ್ನು ಇಟ್ಟು ಕೊಂಡು, ಹೊಲಗಳನ್ನೆಲ್ಲಾ ಮಾರಿ ಸೂಳೆಯ ಬಾಯಿಗೆ ಹಾಕಿ ನನ್ನನ್ನು ಉಪವಾಸವಾಗಿ ಕೆಡವುವದಲ್ಲದೆ, ಸೂಳೆಯ ಮಾತನ್ನು ಕೇಳಿ ನನ್ನ ಗಂಡನೇ ನನ್ನನ್ನು ಕೊಲ್ಲಬೇಕೆಂದು ನೆನಸಿ, ಗಲ್ಲಿಗೆ ಎತ್ತಿದನು ಎಂದು ಕೈಸಿಯತ್ತು ಕೊಟ್ಟಳು.—ಹೊಸದಾಗಿ ಬಂದಿರುವ ಮೆ|| ಎಸ್. ಸಂಪತ್ತನವರು ಊರಿನ ಗಲೀಜನ್ನು ಶುಚಿಮಾಡುವದರ ವಿಷಯ ತುಂಬಾ ನಿಗಾ ಕೊಟ್ಟು, ಸಂದುಗೊಂದುಗಳನ್ನೆಲ್ಲಾ ಸಂಚರಿಸಿ ಪಾಕ್ ಮಾಡುತ್ತಾ ಇದ್ದಾರೆ. ಇದರ ವಿಷಯ ಎಲ್ಲರು ಬಹಳವಾಗಿ ಹೊಗಳುತ್ತಾರೆ. ಇವರು ಹೊಸಬರಾದಾಗ್ಯೂ ತುಂಬಾ ನಿಗಾ ಕೊಡುವದರಿಂದ ಸಂತೋಷಪಡಬೇಕಾಗಿದೆ. ಇವರಂತೆಯೇ ಭೂಮಿಗೆ ಭಾರವಾಗಿ ತಲೆ ಇಲ್ಲದೆ ಬೋಳಾಗಿ ನಿಂತಿರುವ ಲಾಂದ್ರಾ ಕಂಭಗಳಿಗೆ ಜೀವಕಳೆಯನ್ನು ತುಂಬಿಸುವದಾದರೆ ರಾತ್ರಿ ಹೇಸಿಗೆ ಮಾಡುವವರಿಗೆ ನಾಚಿಕೆಯೂ ಭಯವೂ ಇರುವದು ಸಂದುಗೊಂದುಗಳಲ್ಲಿ ಅಲ್ಲದೆ ದೊಡ್ಡ ಬೀದಿಯಲ್ಲಿ ಕೂಡ ಹೇಸಿಗೆಯು ಮಳೆಯ ದೆಸೆಯಿಂದ ತುಂಬಾ ಅಸಹ್ಯವನ್ನು ಉಂಟುಮಾಡುತ್ತೆ. ಧಣಿಯವರು ಮುನಿಸಿಪಾಲಿಟಿಯವರ ಸಂಗಡ ಈ ಲಾಂದ್ರಗಳ ವಿಷಯದಲ್ಲಿ ಮಾತಾಡಿ ಹೆಸರುವಾಸಿ ಪಡೆಯುವರೆಂದು ನಂಬುತ್ತೇವೆ

ರಷ್ಯಾರಾಜ್ಯದ ರಾಜಕೀಯ ವಿಚಾರಗಳು.

ಪ್ರಜೆಗಳ ಹೋರಾಟವೂ ಸರ್ಕಾರದವರ ನಿರ್ಬಂಧಗಳೂ.

ತಂತೀ ವರ್ತಮಾನ ಸಾರ

ಆಗಸ್ಟ್, ೧೪.—ರಷ್ಯಾ ಗವರ್ನಮೆಂಟಿನವರು ಯುದ್ಧದ ನಾವೆಗಳೂ ಸೈನಿಕರೂ ಸಿದ್ಧರಾಗಬೇಕೆಂದು ಹುಕುಂ ಕೊಟ್ಟಿದ್ದಾರೆ.

ವಿಹಾರಾರ್ಥವಾಗಿ ವಾರ್ಸಾ ಪಟ್ಟಣದಿಂದ ಮೊನ್ನೆ ಭಾನುವಾರದ ದಿನ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದವರನ್ನೆಲ್ಲಾ ಸರ್ಕಾರದ ಸೈನಿಕರು ತಡೆದು ನಿಲ್ಲಿಸಿ, ಗಾಡಿಗಳೊಳಗಿದ್ದವರನ್ನು ಪರಿಕ್ಷೆಮಾಡಿ, ಆ ಪೈಕಿ ೫೦ ಮಂದಿಯನ್ನು ಕೈಸೆರೆ ಹಿಡಿದುಕೊಂಡು ಹೋದರು.

ಒಡೆಸ್ಸಾ ಪಟ್ಟಣದ ಗವರ್ನರ್ ಜನರಲ್‌ರವರು...ಕಾರ್ಖಾನೆಗಳಿಗೆ ಕೆಲಸಕ್ಕೆ ಬಾರದೆ ನಿಂತುಬಿಟ್ಟಿರುವಂಥಾ ಕೂಲಿಕಾರರಿಗೆ ಯಜಮಾನರು ಕೂಲಿ ಕೊಡಕೂಡದೆಂತಲೂ, ಹಾಗೆ ಕೊಟ್ಟದ್ದು ತಿಳಿದುಬಂದರೆ ಮ್ಯಾನೆಜರುಗಳನ್ನು ಹಿಡಿದು ಶಿಕ್ಷಿಸುತ್ತೇವೆಂತಲೂ, ದಂಗೇಕೋರರು ಪ್ರಜೆಗಳ ಮನೆಗಳನ್ನು ನುಗ್ಗಿ ಹಣಕಾಸು ದೋಚಿಕೊಂಡು ಹೋದದ್ದನ್ನೂ ಸರ್ಕಾರಕ್ಕೆ ಮನೆಯವರು ತಿಳಿಸದೆ ಹೋದರೆ ಶಿಕ್ಷಿಸುತ್ತೇವೆಂತಲೂ ಇಸ್ತಿಹಾರು ಹಾಕಿಸಿದ್ದಾರೆ ಈ ಎರಡು ವಿಷಯಗಳನ್ನೂ ನಡಸಿಕೊಡುವುದು ಅಸಾಧ್ಯವಾದ್ದರಿಂದ ಆ ಪಟ್ಟಣದಲ್ಲಿ ತುಂಬಾ ಗಾಬರಿಯುಂಟಾಗಿದೆ

ಆಗಸ್ಟ್, ೧೬ —ವಾರ್ಸಾ ಪಟ್ಟಣದಲ್ಲಿ ರಾಜ್ಯವನ್ನೇ ತಲೆಕೆಳಗು ಮಾಡಬೇಕೆಂಬ ಕ್ರಿತೂರಿಗಾರರು ಮದ್ದಿನ ಗುಂಡುಗಳಿಂದಲೂ ಪಿಸ್ತೂಲುಗಳಿಂದಲೂ ಪೊಲೀಸಿನವರನ್ನೂ ಗಸ್ತು ತಿರುಗುವ ಕಾಲ್ಬಲದವರನ್ನೂ ಕೊಂದುಹಾಕಬೇಕೆಂದು ನಿಶ್ಚಯಿಸಿಕೊಂಡು ೪೫ ಮಂದಿಯನ್ನು ಕೊಂದು ಗಾಯಮಾಡಿದರು. ಅಷ್ಟರೊಳಗೇ ಹೊಸ ಸೈನಿಕರು ಬಂದು ದಂಗೇಕೋರರ ಮೇಲೆ ಗುಂಡುಗಳ ಮಳೆ ಸುರಿಸಿ ೧೪೫ ಜನರನ್ನು ಗಾಯಮಾಡಿ ಕೊಂದು, ಸನೀಪುಗಳನ್ನು ತೋರಿಸುತ್ತಾ ನುಗ್ಗಿ ದಂಗೇಕೋರರ ಗುಂಪುಗಳನ್ನು ಚದರಿಸಿದರು ಲಾಡ್ಜ್ ಪಟ್ಟಣದಲ್ಲೂ ಇದೇ ರೀತಿ ನಡೆಯಿತು.

ನೆನ್ನೆ ನಡೆದ ಭಯಂಕರವಾದ ಕ್ರೂರ ಕೃತ್ಯಗಳ ದೆಸೆಯಿಂದ ವಾರ್ಸಾ, ಪ್ಲಾಕ್, ಲೋಡ್ಜ್, ಸೊಕ್ಲಾವೆಕ್, ರ್‍ಯಾಡಂ, ಈ ಮೊದಲಾದ ಪಟ್ಟಣಗಳಲ್ಲಿ ಪ್ರಜೆಗಳು ದಿಕ್ಕು ಕಾಣದೆ ಗಾಬರಿಪಡುತ್ತಿದ್ದಾರೆ. ಸೈನಿಕರು ಗುಂಡು ಹೊಡೆದು ಕೊಂದುಹಾಕಿದವರಲ್ಲಿ ಬಹುಜನ ನಿರಪರಾಧಿಗಳು ಮಡಿದುಹೋದರು ನೆನ್ನೆ ವಾರ್ಸಾ ಪಟ್ಟಣದಲ್ಲೇ ಮೃತಪಟ್ಟವರೂ ಗಾಯಪಟ್ಟವರೂ ೩೦೬ ಜನರು. ನೆನ್ನೆ ರಾತ್ರಿಯೂ ಯುದ್ಧ ನಡೆಯುತ್ತಿತ್ತು

ಆಗಸ್ಟ್, ೧೭ —ಬುಧವಾರದ ದಿನ ಸರ್ಕಾರಿ ಸೈನಿಕರು ಹಗಲೆಲ್ಲಾ ದಂಗೇಕೋರರ ಗಲಭೆಯನ್ನು ಶಮನಮಾಡಿ ಸಾಯಂಕಾಲವಾದ ಮೇಲೆ ಯಹೂದ್ಯಪ್ರಜೆಗಳ ಮೇಲೆ ಬಿದ್ದು ಕಾದಾಡಿದರು. ಯಹೂದ್ಯರಲ್ಲಿ ಕೊಲ್ಲಲ್ಪಟ್ಟವರೂ ಗಾಯಪಟ್ಟವರೂ ೨೫೦ ಜನರು

ರಷ್ಯಾರಾಜ್ಯದಲ್ಲೆಲ್ಲಾ ಪ್ರಜೆಗಳು ಗಾಬರಿಪಡಲಾರಂಭಿಸಿದ್ದಾರೆ. ಸರ್ಕಾರಿ ಸೈನಿಕರ ಮತ್ತು ಅಧಿಕಾರಿಗಳ ಹಿಂಸೆ ಸಹಿಸಲಾಗದ್ದಾಗಿದೆ. ಪೋಲೀಸಿನವರಿಗೆ ದಂಗೆಯನ್ನು ಅಣಗಿಸುವುದಕ್ಕೆ ಸಾಮರ್ಥ್ಯ ಸಾಲದು. ಪ್ರಜೆಗಳಿಗೆ ಧೈರ್ಯ ಹೇಳಿ ನೆಮ್ಮದಿಯನ್ನು ಕಾಪಾಡುವುದಕ್ಕೆ ಮಾರ್ಗವೇ ಕಾಣುವುದಿಲ್ಲ.

ವಾರ್ಸಾ ಪಟ್ಟಣದಲ್ಲಿ ನೆನ್ನೆ ಸಾಯಂಕಾಲ ಒಬ್ಬ ಹುಡುಗನು ಯಹೂದ್ಯರುಗಳ ಗುಂಪಿನ ಮೇಲೆ ಮದ್ದಿನ ಚೀಲವನ್ನು ಎಸೆದನು. ಅದು ಒಡೆದು ಹದಿ ಇಬ್ಬರು ಗಾಯಪಟ್ಟರು ಕೂಡಲೇ ಗಸ್ತುಮಾಡುತ್ತಿದ್ದ ಸಿಪಾಯಿಗಳು ನುಗ್ಗಿ ಹೋಗಿ ಆ ಗುಂಪಿಗೆ ಗುರಿಯಿಟ್ಟು ಗುಂಡು ಹೊಡೆದರು. ಇದರಿಂದ ೩೮ ಮಂದಿಗೆ ಗಾಯಗಳಾಗಿವೆ.

"ವೀರಶೈವಾನಂದಿನಿ"

110 2

ಈ ಮಾಸಪತ್ರಿಕೆಯು ಸೆಪ್ಟಂಬರಿನಿಂದ ಪ್ರತಿ ತಿಂಗಳಲ್ಲಿಯೂ ಪ್ರಕಟಿಸಲ್ಪಡುವುದು. ಇದರಲ್ಲಿ ಸಟೀಕಾ ಆಧ್ಯಾತ್ಮ(ಸ್ವರ ಭಾವ್ಯವೂ, ಪುರಾತನ ವೀರಶೈವ ಕವಿಗಳ ಕನ್ನಡ ಕಾವ್ಯಗಳೂ, ರಸವತ್ತರಗಳಾದ ಗದ್ಯಗ್ರಂಥಗಳೂ ಬರುವುವು. ಈ ಮಾಸ ಸಂಚಿಕೆಯು ಇಪ್ಪತ್ತನಾಲ್ಕು ಪುಟಗಳುಳ್ಳದ್ದಾಗಿರುವುದು. ಇದರ ಚಂದಾ ವರ್ಷಕ್ಕೆ ಪೋಸ್ಟೇಜು ಸೇರಿ ೧॥ ಆಣೆಗಳು ಮಾತ್ರವೇ. ವಿದ್ಯಾಭಿಮಾನಿಗಳು ಉದಾರಾಶ್ರಯ ವೀಯಬೇಕೆಂದು ಪ್ರಾರ್ಥನೆ.

ವಿಳಾಸ—ಎಸ್ ವೀರಪ್ಪಶಾಸ್ತ್ರಿ, ಪ್ರೊಪ್ರೈಟರ್, ಮಾಗಡಿ.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಬೆಳೆವಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದ ಆಹಾರದಿಂದ ಅಪಮೆಯುಳ್ಳವರಾಗಿರುವರೆಂದು ಕಂಡ ಕೂಡಲೆ

SCOTT'S EMULSION 57-23

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ಆಗುವುದು.

ಅದ ಸಂತೋಷವೂ ಆನಂದವೂ ಪ್ರಮಾಣದಾಗಿ ಆಹಾರದ ರುಚಿ ಕೊಂಡಿ ಮುಖ ಚಿಹ್ನೆ ತೋರಿಸುವುದು.

ಸ್ಕಾಟ್ರಿಯಿಂದ ಮಾತ್ರ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ.

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಎಮಲ್ಷನು ಔಷಧ

ವನ್ನೇ ಕೊಂಡುಕೊಳ್ಳಿ.

ಒಕ್ಕಲಿಗರ ಸಂಘ.

98 7

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರು ಮಿಕ್ಕ ಜಾತಿಯವರ ಸಮುದಾಯಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳವರಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇತರ ಜಾತಿಯವರ ಸಮಸ್ಥಿತಿಗೆ ಬಾರದೆ ಇರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದೇ ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವುದಕ್ಕಾಗಿ ಈ ಮೇಲ್ಕಂಡ ಸಂಘವ ಏರ್ಪಡಿಸಲ್ಪಟ್ಟು ಕೆಲವರ ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರ ಪಡಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯೇ ಮೊದಲಾದವು ನೆರವೇರಬೇಕೆಂದು ೧೯೦೬ನೇ ಸೆಪ್ಟೆಂಬರ್ ೮ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಒಳ ಇರುವ ಮಹಾರಾಜ ದೊಡ್ಡ ಚಿಕ್ಕಬೆಟ್ಟದ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವರ ಪಾರುಪತ್ಯದಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ನೆಂಟ್ಟ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಒಟ್ಟುವ ಅಕ್ಟೋಬರ್ ತಿಂಗಳು ೭ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ಏಳಿಗೆ ಅಭಿವೃದ್ಧಿಗೆ ಬೇಕಾದ ನಿರ್ಧಾರಗಳನ್ನು ಮಾಡಬೇಕೆಂದು ಇಷ್ಟರ್ಥ ಮಾಡಿರುವುದಲ್ಲದೆ ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಬೇಕಾದ ವಿಡಾರ ವಸ್ತೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ. ಆದ ದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆಗೆ ಬರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನು ಕಾಗದದ ಮೂಲಕ ನನಗೆ ದಯವಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು. ಎಂ ಸುಬ್ಬಯ್ಯ, ಬಿ ಎ,

ಬೆಂಗಳೂರು. ಕೆ ಹೆಚ್ ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಸೂಚನೆ—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಿರುತ್ತೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಉಚಿತವಾಗಿ ರವಾನಿಸಲ್ಪಡುವುದು. ಇದಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಬುದ್ಧಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋದರು ನನಗಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲು ಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

ಪರಿಮಳ ನಶ್ಯದ ಪುಡಿ

102-3

ಪರಿಮಳ ನಶ್ಯದ ಪುಡಿ ಡಬ್ಬಿ ೧ಕ್ಕೆ	0—9 0
ಛಾಂಗಿ ಖರ್ಚು	0—3—0
ಸಾದಾ ನಶ್ಯದ ಪುಡಿ ಡಬ್ಬಿ ೧ಕ್ಕೆ	0—6—0
ಛಾಂಗಿ ಖರ್ಚು	0—3—0

ಈ ಪುಡಿಯನ್ನು ಮೇಲಾದ ಹೊಗೆಸೊಪ್ಪಿನಿಂದ ಸುವಾಸನೆಯುಳ್ಳದ್ದಾಗಿ ತಯಾರು ಮಾಡಲ್ಪಟ್ಟಿರುತ್ತೆ. ಇದರ ಸುವಾಸನೆ ಒಂದು ಸೇರು ಸಾಧಾರಣ ಪುಡಿಯಲ್ಲಿ ಸ್ವಲ್ಪವನ್ನು ಹಾಕಿ ಕಲಸಿದರೆ ಪುಡಿಯೆಲ್ಲಾ ಗಮಗಮಿಸುತ್ತೆ. ಉಪಯೋಗಿಸುವವರಿಗೆ ಸುವಾಸನೆಯೂ ಆನಂದವನ್ನೂ ಉಂಟುಮಾಡುತ್ತೆ.

ತಲೆನೋವು, ಪೀನಸ, ಜಲದೋಷ, ಶಿರೋವ್ಯಾಧಿ ಇವುಗಳನು ತಪ್ಪದೆ ಪರಿಹರಿಸುತ್ತೆ. ಮಾದರಿಗೆ ೧ ಡಬ್ಬಿಯನ್ನು ತರಿಸಿ ಪರೀಕ್ಷಿಸಿರಿ.

☛ ಪ್ರತಿ ೧ ಡಬ್ಬಿಯಲ್ಲಿ ೫ ತೋಲ ನಶ್ಯಪುಡಿ ಇರುತ್ತೆ.

ಮಾದರಿ ನಶ್ಯವನ್ನು ಕೋರುವವರು ಅರ್ಧಾಣೆ ಸ್ಟಾಂಪನ್ನು ಕವರಿನಲ್ಲಿ ಇಟ್ಟು ಕಳುಹಿಸಿದರೆ ಮಾದರಿಗೆ ಪುಡಿಯನ್ನು ಕಳುಹಿಸುತ್ತೇವೆ.

ವಿಳಾಸ—ಮ್ಯಾನೇಜರ್, ದರ್ಪಣ ವೈದ್ಯಶಾಲಾ,

69 ಜೈನಾಬಜಾರು ರೋಡ್, ಸಾಹುಕಾರ್ ಪೇಟೆ, ಮದ್ರಾಸ್.

ತ್ವರೆಮಾಡಿ! ಸುಲಭ ಖರೀದಿ!!

ಕ್ರಯ ರೂ. ೪ ಕ್ರಯ ರೂ ೪

106 3

ಗೆಜ್ಜೆ ನಾಗರ

ಈ ಗೆಜ್ಜೆನಾಗರವನ್ನು ಎಂದಿಗೂ ಕಪ್ಪಾಗದಿರುವ ಸೀಮೆ ಹಿತ್ತಾಳೆಯಿಂದ ಅತಿಸುಂದರವಾದ ಫ್ಯಾನ್ಸಿ ಕೆಲಸವನ್ನು ಮಾಡಿ, ಶುದ್ಧ ಬಂಗಾರದ ಗಿಲೀಟು ಮಾಡಲ್ಪಟ್ಟಿದೆ. ಬಂಗಾರದಿಂದ ಮಾಡಿದ ಗೆಜ್ಜೆನಾಗರಕ್ಕೂ ಇದಕ್ಕೂ ಸ್ವಲ್ಪವೂ ಭೇದ ತೋರುವದಿಲ್ಲ. ಇಷ್ಟು ಸುಲಭ ಖರೀದಿಗೆ ಯಾರಿಂದಲೂ ಇದುವರೆಗೆ ಮಾರಲ್ಪಟ್ಟಿಲ್ಲವು. ಇದನ್ನು ಉಪಯೋಗಿಸಿದರೆ ಗೊತ್ತಾಗುವದು. ನಾವು ಹೊಗಳುವದರಿಂದ ಏನೂ ಆಗಲಿಕ್ಕಿಲ್ಲ. ಕ್ರಯ ರೂ ೪—೦—೦ ವಿ ಪಿ ಟಪಾಲ ಖರ್ಚು ೦—೬—೦. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಗುರುಬಸವ ಅಂಡ್ ಕಂಪನಿ, ಸಾಹುಕಾರ್ ಪೇಟೆ, ಮದರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್

73—1

ನಿಬಂಧನೆ ಮೂಲಧನ ಷೇರು ಒಂದಕ್ಕೆ ೧೦ ರೂಪಾಯಿ ೧೪ ಲಕ್ಷ ರೂಪಾಯಿಗಳು. ಈ ಷೇರು ಬೆಲೆಯುಳ್ಳ ೪ ಲಕ್ಷ ಷೇರುಗಳಿಂದಾಗುವ ೧೦ ಲಕ್ಷ ರೂಪಾಯಿಗಳು. ಈ ಷೇರು ಬೇಡುವವರು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಒಟ್ಟು ೫೦ ಕೋಟಿ ೧೦ ವರ್ಷಗಳಲ್ಲಿ ಲೈನಿನ ಸರ್ವೆ ಪ್ರಾರಂಭಿಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಪ್ರಕಾರ ಪ್ರಾಸ್ಪೆಕ್ಟಸ್ಸಿನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ವಾಲ್ಲರಂಶ ಬಡ್ಡಿ ಕೂಡ ಈ ಕಂಪನಿಗೆ ಜಾಮೀನಾಗಿರುತ್ತೇವೆಂದು ದಯವಿಟ್ಟು ಲಿಖಿತ ಮೂಲಕ ಒಪ್ಪಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ) ಅಥವಾ ಮೈಸೂರು ಸೀಮೆಯ ತಾಲ್ಲೂಕು, ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಶನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಶನ್ ಫೀ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವುದು.

(ಸ್ಹಿ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್,

ನಗರ್ತಪೇಟೆ ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೩—8—1906 ರಿಂದ 10—8—1906 ರ ವರೆಗೆ

ಸ್ಥಳ	ಪ್ಲೇಗ್ ಆಗಲಿದ್ದು	ಸತ್ತದ್ದು	ಹೊರಟ ಈ ವಾರದ ಸಂಖ್ಯೆ
ಬೆಂಗಳೂರು ಪಟ್ಟಣ	೫	0	೬
ಮೈಸೂರು ,,	೦	0	0
ಬೆಂಗಳೂರು ಡಿಸ್ಟ್ರಿಕ್ಟು	೪	೬	೬೨
ಮೈಸೂರು ,,	೬	1	೬೦
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	0
ತುಂಕೂರು ಡಿಸ್ಟ್ರಿಕ್ಟು	೬	೬	೬
ಹಾಸನ ,,	0	0	0
ಚಿತ್ರದುರ್ಗ ,,	0	0	0
ಕಡೂರ್ ,,	೬೪	೪೨	೧೬
ಶಿವಮೊಗ್ಗ ,,	0	0	೪೬
ಜುಮ್ಲಾ	೯0	57	೪೪

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಭಾದ್ರಪದ ಶುದ್ಧ ಚೌತಿ ಗುರುವಾರದಿಂದ ಭಾದ್ರಪದ ದಶಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
23	ಗುರು §	ಚೌತಿ	50 30	ಸ್ವಾ	43 36
24	ಶುಕ್ರ	ಪಂಚಮಿ	45 10	ವಿಶಾ	40-10
25	ಶನಿವಾ †	ಷಷ್ಟಿ	40 12	ಅನೂ	37 26
26	ರವಿವಾ ¶	ಸಪ್ತಮಿ	34 24	ಜ್ಯೇ	33 30
27	ಚಂದ್ರ ‡	ಅಷ್ಟಮಿ	28 20	ಮೂ	29 28
28	ಕುಜ *	ನವಮಿ	22 12	ಪೂ	25 12
29	ಬುಧ ,	ದಶಮಿ	16 16	ಉ	21 14

§ ಸಾಮ ಗೋಪಾಕರ್ಮ, ಸಿದ್ಧಿ ವಿನಾಯಕ ವ್ರತಂ. ‡ ಪಂಚಮಿ ವ್ರತಂ. † ಕನ್ಯಾಯಂ ನಾಗೋಪವೀತ ಮಹಾಷಷ್ಠಿ ದ 3 ಅ ವರ್ಧಯೋಗ. ¶ ಅನುಷ್ಯಾ ಬೆರಣಸಪ್ತಮಿ, ಉತ್ಪಾತಯೋಗ. ‡ ಜ್ಯೇಷ್ಠಾಲಕ್ಷ್ಮೀ ಸಿದ್ಧಿಲಕ್ಷ್ಮೀ ಮಹಾಲಕ್ಷ್ಮೀವ್ರತಂ. * ಕಿಧಿದ್ವಯಂ. , ಉಪ್ಪವ್ರತಂ ಏಕಾದಶೀತಿಥಿ, ಕ್ಷೀರವ್ರತಾರಂಭ.

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಅನ್ನ ಅಕ್ಕಿ ಪಲ್ಲಾ ೧ಕ್ಕೆ	೦೬-೪-೦	೦೬
ಕೆಂಪೂತ ಅಕ್ಕಿ ಅವಲ್	೦೬-೪-೦	೦೬
,, ದುಯಂ	೦೬-೬-೦	೦೬
ಜಿಬ್ರಾ ಅಕ್ಕಿ	೦೬-೪-೦	೦೬
ಸಣ್ಣಕ್ಕಿ ಅವಲ್	೦೬-೪-೦	೦೬
ದುಯಂ	೧೬-೦-೦	೦೬
ತೊಗರಿ ಬೇಳೆ ಪಲ್ಲಾ ೧ಕ್ಕೆ	೧೨-೬-೦	೦೬
,, ದುಯಂ	೧೦-೦-೦	೦೬
ಕ್ಕಾ ರಿಗಿ ಪಲ್ಲಾ ೧ಕ್ಕೆ	೬-೦-೦	೦೬
ಕಾಡ್ರಾಗಿ	೩-೩-೦	೦೬
ಜೋಳ	೪-೪-೦	೦೬
ಹಲಸಂದೆ ಪಲ್ಲಾ ೧ಕ್ಕೆ	೦-೦-೦	೦೬
ಬಿಳಿ ಅವರೆ	೧೦-೦-೦	೦೬
ಹೆಸರು	೦೬-೦-೦	೦೬
ಉದ್ದು	೦-೪-೦	೦೬
ಕಡಲೆ	೦-೪-೦	೦೬
ಎಳ್ಳು ಸೆ ೧೦೦ಕ್ಕೆ	೦-೪-೦	೦೬
ಹುರಳಿ	೯-೦-೦	೦೬
ಹರಳು ೧೦೦ಕ್ಕೆ ಸೇರಿಗೆ	೦೬-೪-೦	೦೬
ಸೀಗೆಕಾಯಿ ಮಣ ೧ಕ್ಕೆ	೦-೪-೦	೦೬
ಮೆಣಸಿನಕಾಯಿ	೪-೦-೦	೦೬
,, ದುಯಂ	೩-೩-೦	೦೬
ಬೆಲ್ಲ, ದೊಡ್ಡ ಅಚ್ಚು	೫-೬-೦	೦೬
ಒಲ್ಲೆಕ್ಕೆ ಮಣ ೧ಕ್ಕೆ	೬-೪-೦	೦೬
ಹರಳೆಣ್ಣೆ ,,	೬-೪-೦	೦೬
ಕೊತ್ತುಂಬರಿ ಪಲ್ಲಾ ೧ಕ್ಕೆ	೧೦-೦-೦	೦೬
ಉಪ್ಪು	೩-೦-೦	೦೬
ಹುಣಿಸೇ ಹಣ್ಣು	೦-೧೨-೦	೦೬
,, ಪಳೇದು	೦-೪-೦	೦೬
ತುಪ್ಪ ಮಣ ೧ಕ್ಕೆ	೦೬-೦-೦	೦೬
ಸೀಮೆಯೆಂಣೆ ಪೆಟ್ಟಿ ೧ಕ್ಕೆ	೫-೩-೦	೦೬
ತೆಂಗಿನಕಾಯಿ ೧೦೦ಕ್ಕೆ	೩-೪-೦	೦೬
ಅಡಕೇಕಾಯಿ ಮಣ ೧ಕ್ಕೆ	೦-೦-೦	೦೬
ಅಂಟುವಾಳದ ಕಾಯಿ ಮಣ ೧ಕ್ಕೆ	೦-೦-೦	೦೬
ಚಿನ (ಕ್ಸ್) ಕೆಂಪು	೦೬-೩-೦	೦೬
,, ,, ಸನ್ನ	೦೫-೦೦ ೦	೦೬
,, ,, ಗಟ್ಟಿ ತೋಲ ೧ಕ್ಕೆ	೦೪-೦-೦	೦೬
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೪೫-೦-೦	೦೬

Printed and published by the Rev. E. THOMPSON, M A , the Proprietor and Manager, Wesleyan Mission Press, Mysore 23/8/1906

ವೃತ್ತಾಂತ ಪತ್ರಿಕೆ.

REGISTERED M. 20

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಆಗಸ್ಟ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೧೩

ಇಂಡಿಯದ ದೊಡ್ಡ ನೋವುಹರ.

86-14

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ಕಿವಿನೋವು, ತಲೆಭಾರ, ಸೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಹಲ್ಲುಹುಣ್ಣು, ಕೀಲುಬೇನು ಎದೆಗಳ ನೋವು, ಅಸ್ತ್ರ ಈ ಪ್ರಕಾರ ಯಾವ ತರದ ಬಾಧೆ ಆದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ಸ್ಥಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿಯೂ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾದ್ದನ್ನು ಬಾಟ್ಲ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರ್ಯಾರೂ ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭವಕ್ಕೆ ಬಂದಿದ್ದು. ಕ್ರಯ —೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ, ೬ಕ್ಕೆ ರೂ. ೩॥ ರೂಪಾಯಿ; ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚದಿಂದ ಮೂರು ಬಾಟ್ಲ ವರಿಗೆ ೩ ಆಣೆ.

ನಮ್ಮ ವಿಳಾಸ —ಎಫ್ ಡಬ್ಲಿಯು. ಆರ್, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಹೋಮೋಸಿಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೋಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತೊಂದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಶಕ್ತಿಕೊಡುವ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅವರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ಸೆಳತ, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಕಚ್ಚಿ ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಹೋದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ವಾಸಿಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ

ಕ್ರಯ — ಸಣ್ಣ ಡಬ್ಬಾ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೮ ಆ. ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪಾಲ್ ಖರ್ಚು ಬಿಡುತ್ತಾರೆ ರೂ. ೨—೮ ಆಣೆ ಬಾಟ್ಲು ಡಬ್ಬದಲ್ಲಿ ೧ ರೂ. ಡಬ್ಬಾದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ರೂ. ೨—೮ ಆ ಈ ಡಬ್ಬಾವನ್ನು ತರಿಸಿಕೊಳ್ಳುವವರಿಗೆ ಟಪಾಲ್ ಖರ್ಚು ಮಾಫಿ ಬಿಡುತ್ತೆ.

****

ಹೋಮೋಸಿಯಾ ಯುಂಗ್ವೆಂಟ್ ಕೇಪರ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಬಹಳ ಒಳೆದ ಕಡೆ ಇದನ್ನು ಹಚ್ಚಕೂಡದು. ಇವರಲ್ಲಿ ಹೋಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ರೋಗವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಾಗಳಲ್ಲಿ ತುಂಬಿ ೧೨ ಆಣೆಗೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಷಾಪುಗಳಲ್ಲೂ ದೊರೆಯುವದು

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡು ಲೇನ್, ಮದರಾಸ್.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಶದವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-29

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

101-5



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೧ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೧ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯವರ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104-5

ಖಾಲಿ, ಯಾ ಸುಂದರ ಚಿತ್ರಗಳುಳ್ಳದ್ದು ನಮೂನೆ ೧೩ ಕಾರ್ಡುಗಳಿಗೆ ೦॥ (ಸ್ಟಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ. ಸ್ವದೇಶಿ ಮೆಂಥಾಲ್ ಸೀಸೆಗೆ ೪ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಬಂಗೇರಿಯನ್ ಟೋಪಿಗಳು ಇವುಗಳಿಗೆ ಟಪಾಲುಖರ್ಚು ಬೇರೆ. ಏಜಂಟರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲಿ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟ್ಯಾಂಪು ಬಿಟ್ಟು ಬರೆದುಕೊಳ್ಳತಕ್ಕದ್ದು Bhatt & Co. Poona city.

ಮುಂಬಯಿ ವ್ಯಾಪಾರವನ್ನು ಹೆಚ್ಚಿಸುವವರು.

85-14

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ದೂರ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿದ ಕೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಕೆಳೂ ಅನ್ನದಿಂದ ಬರಿಯರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋಸ್ಟು ಮಾಂಡ್ವಿ, ಮುಂಬಯಿ.

ಒಕ್ಕಲಿಗರ ಸಂಘ.

98-8

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮ॥ ರಾ॥ ದೊಡ್ಡ ಕ್ಷೇತ್ರವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳುಹಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಬೆಂಗಳೂರು

ಎಂ. ಸುಬ್ಬಯ್ಯ, ಬಿ. ಎ,

ಕೆ. ಹೆಚ್. ರಾಮಯ್ಯ, ಬಿ. ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರಟರಿಗಳು.

ಷರಾ —ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಡುವವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು

ಅಜೀರ್ಣದ ಕುರುಹುಗಳು.

ಸ್ವಾಭಾವಿಕವಾಗಿ ಆಯಾಸ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ.

SCOTT'S EMULSION. 57-24

(ಸ್ಕೋಟ್ಸ್ ಇಮಲ್‌ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ವಿಶಾನಮನುಷ್ಯ ಇರುವ
ಔಷಧ ಸ್ವೀಕರಿಸಿಕೊಳ್ಳಿ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

95-9



ಕಳೆ ಹೊಟ್ಟೆಯು ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮ ಯೋಗ್ಯವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲವಾಗಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ಪರಿಣಿತರುಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

೧೯೦೬ ನೇ ಇಸವಿ ಆಗಸ್ಟ್ ತಾ॥ ೨೦ ನೇ ಗುರುವಾರ.

ಮೈಸೂರು ಮಿಷನ್ ಆಸ್ಪತ್ರೆಯ ಉದ್ದೇಶ

ಕಳೆದ ವಾರ ಪ್ರೀಮಿಯರ್ ಮಹಾರಾಜರವರು ರಾಜಧಾನಿಯಲ್ಲಿರುವ ಈ ಹೊಸ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡಿದಾಗ್ಗೆ ರೆವ್. ಜಿ. ಡಬ್ಲ್ಯು. ಸೌಡೀ ದೊರೆಯವರು ಆ ಕಟ್ಟಡದ ವೃತ್ತಾಂತವನ್ನು ತಿಳಿಸಿದರಷ್ಟೆ. ಈ ಆಸ್ಪತ್ರೆಯ ಉದ್ದೇಶವನ್ನು ಕುರಿತು ಆಗ ಅವರು ಇಂಗ್ಲಿಷಿನಲ್ಲಿ ಹೇಳಿದ ಅಭಿಪ್ರಾಯವನ್ನು ನಾವು ಭಾಷಾಂತರ ಮಾಡಿ ಕಳೆದ ವಾರ ಪ್ರಕಟಿಸಿದ್ದರಲ್ಲಿ ಒಂದು ತಪ್ಪು ಕಂಡುಬಂದಿರುವುದು. ನಾವು ಪ್ರಕಟಿಸಿದ್ದೇನೆಂದರೆ–

"ವಿವಾಹ ಪ್ರಾರ್ಥನೆಗಳೂ ಮತಸಂಬಂಧವಾದ ಸಂಭಾಷಣೆಗಳೂ ನಡೆಸಲ್ಪಡುವವು ಯಾಕೆಂದರೆ ಯಾವ ಪುಣ್ಯ ಕೆಲಸವಾಗಲಿ ಅದರಲ್ಲಿ ವೈದ್ಯವು–ಭಗವಂತನ ಕೃಪೆಯು ಆಶೀರ್ವಾದಗಳಿಲ್ಲದೆ ಶ್ರೇಯಸ್ಕರವಾಗುವುದಿಲ್ಲವೆಂದು ನಾವು ತಿಳಿದಿರುತ್ತೇವೆ ಇಷ್ಟವಿರುವವರು ಬಂದು ವೈದ್ಯಸಹಾಯವನ್ನು ಪಡೆಯಬಹುದಾಗಿದೆ"

ಇದರಿಂದ ಔಷಧ ಪಡೆಯುವುದಕ್ಕೆ ಈ ಆಸ್ಪತ್ರೆಗೆ ಹೋಗತಕ್ಕವರು ಅಲ್ಲಿ ನಡೆಯುವ ಪ್ರಾರ್ಥನಾ ಕೂಟಗಳಿಗೂ ಮತಸಂಬಂಧವಾದ ಸಂಭಾಷಣೆಗಳಿಗೂ ಹಾಜರಾಗಲೇಬೇಕೆಂಬ ಅರ್ಥವಾಗಬಹುದು. ಇಂಗ್ಲಿಷಿನಲ್ಲಿ ಈ ಅರ್ಥವಿರಲಿಲ್ಲ. ಆದ್ದರಿಂದ ಇಷ್ಟಪಡತಕ್ಕವರ್ಯಾರೋ ಅಂಥವರು ಆ ಕೂಟಗಳಲ್ಲಿ ಸೇರಬಹುದು; ಇಷ್ಟವಿಲ್ಲದವರು ಬಿಡಬಹುದು. ಅಂತು ಪ್ರಾರ್ಥನಾ ಕೂಟಗಳಿಗೂ ಸಂಭಾಷಣೆಗಳಿಗೂ ಸೇರತಕ್ಕವರಿಗಾಗಲಿ ಸೇರದೆ ಹೋಗುವವರಿಗಾಗಲಿ ಈ ಆಸ್ಪತ್ರೆಯಲ್ಲಿ ಏಕರೀತಿಯಾದ ಔಷಧ ಚಿಕಿತ್ಸಾದಿಗಳು ದೊರಕುವವೆಂದು ತಿಳಿಯತಕ್ಕದ್ದು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ದೊಡ್ಡಪೇಟೆ ವೀರಶೈವ ರುದ್ರಪ್ಪನವರು ಮೈಸೂರು ಪುನರ್ವಸನಕ್ಕೆ ಸಂಬಂಧಪಟ್ಟದ್ದು ಉಂಟಾಗಿದ್ದ ಗಂಧದ ಮರ ಹಾದ ಸಾಮಾನುಗಳಿಗೆ ಸರ್ಕಾರದವರು ವಿಶೇಷವಾದ ಭಂಗಾರದ ಪದಕವನ್ನು ದಯಪಾಲಿಸಿರುತ್ತಾರೆಂದು ತಿಳಿಯುವುದು.

****

ಚನ್ನಗಿರಿ ತಾಲ್ಲೂಕು ನಿಜಮಾನಿಂದಿ ಮಜರೆ ಕೊಟ್ಟೂರು ಗ್ರಾಮದಲ್ಲಿ ನಾಗಪ್ಪನೆಂಬಾತನ ಹೆಂಡತಿಯು ಕಳೆದ ತಾ. ೧೯ ನೆ ಶನಿವಾರ ಇಬ್ಬರು ಹೆಣ್ಣು ಮಕ್ಕಳನ್ನೂ ಇಬ್ಬರು ಗಂಡು ಮಕ್ಕಳನ್ನೂ ಹಡೆದಿರುತ್ತಾಳೆಂದು ವರ್ತಮಾನ ಬಂದಿದೆ.

****

ಕನಕಪುರ ತಾಲ್ಲೂಕು ಅಂಕೋಪ್ರದಲ್ಲಿ ಕಳೆದ ೧೯ ನೆ ತಾ. ಭಾನುವಾರ ಸಾಯಂಕಾಲದಲ್ಲಿ ಶಿವನ ವಗ್ಗೆರೆಯರು ಕೊಡ್ಲಿ ಮೊಚ್ಚು ಗಳಿಂದ ಕಾಳೇಗೌಡನೆಂಬುವನನ್ನು ಕಡಿದುಹಾಕಿದರೆಂತಲೂ, ಪೋಲೀಸ್ ತನಿಖೆಯೂ ಡಾಕ್ಟರ ಪರೀಕ್ಷೆಯೂ ಆಯಿತೆಂತಲೂ ತಿಳಿದುಬಂದಿದೆ.

****

ನಾಗಲಾಪಟ್ಟಣದ ರಾಯಪ್ಪನವರಲ್ಲಿ ಕಂಬಳಿಯ ಅಂಗಡಿ ವಗ್ಗೆರೆ ಇಟ್ಟು ವ್ಯಾಪಾರ ಮಾಡುತ್ತಿರುವ ಸಾಹುಕಾರ್ ಕರೇ ಗೌಂಡಪ್ಪನವರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಯಳನಡು ಗ್ರಾಮದ ಸಿದ್ಧರಾಮೇಶ್ವರ ಸ್ವಾಮಿ ದೇವಸ್ಥಾನಕ್ಕೆ ಸುಮಾರು ನಾಲ್ಕುಮಣ ಬೆಳ್ಳಿ ಹಾಕಿ ಬಾಗಿಲುವಾಡ ಮತ್ತು ಕವಾಟಗಳನ್ನು ಮಾಡಿಸಿಕೊಟ್ಟು, ಉತ್ಸವ ಪೂಜೆ ಮುಂತಾದ್ದನ್ನು ನಡೆಸಿರುತ್ತಾರೆಂದು ಕೇಳಿದ್ದೇವೆ.

****

ಶಿಕಾರಿಪುರದಿಂದ ಕಳೆದ ತಾ. ೧೦ ನೇ ಗುರುವಾರ ಸಿರಿಗೋಡು ಗ್ರಾಮಕ್ಕೆ ಹೋಗುತ್ತಿದ್ದ ನಾಲ್ವರು ಚಾಪ್ರಿ ಕತ್ತಲಾದ್ದರಿಂದ ಗೋಣಿ ಗ್ರಾಮದ ಗುಡಿಯಲ್ಲಿ ಮಲಗಿರುವಾಗ್ಗೆ ಮಧ್ಯರಾತ್ರಿಯಲ್ಲಿ ೧೫ ಮಂದಿ ಕಳ್ಳರು ಅವರ ಮೇಲೆ ಬಿದ್ದು ಎದಿರೋಗುತ್ತಿದ್ದವರನ್ನು ಹಿಡಿದು ಗಾಬರಿ ಪಡಿಸಿ, ಅವರ ಬಳಿ ಇದ್ದ ೨೦ ರೂಪಾಯಿ ಕಸುಕೊಂಡು ಬಟ್ಟಾ ಬಂದೋಬಸ್ತು ಪಟ್ಟ ಹೋದರು. ಇದರಿಂದಾಗಿ ಕಳ್ಳರ ಕೈಗೆ ಸಿಕ್ಕಿದವನೊಬ್ಬನು ಬಿಡಿಯುತ್ತಾನೆ.

****

ತರೀಕೆರೆ ಸಾಹುಕಾರ್ ಫಣಿಯಪ್ಪನವರ ಮನೆಯಲ್ಲಿ ನಡೆದ ಬೀರ್ ಕಳವನ್ನು ಅಲ್ಲಿನ ಇನ್ಸ್‌ಪೆಕ್ಟರ್ ಸುಂದರರಾಜಯ್ಯಂಗಾರ್ಯ ಯವರ ಜವಾಬ್ದಾರಿ ಅಪ್ಪಾಜಿರಾಯರೂ ಚನ್ನಗಿರಿಯಲ್ಲಿ ಪತ್ತೆಮಾಡಿರುತ್ತಾರೆ. ಒಬ್ಬ ಕಳ್ಳ ಬಿರುವ ಧಾರವಾಡದ ಒಬ್ಬನ ಕೈ ಗಿರವಿ ನಗಗಳನ್ನು ಅಲ್ಲಿನ ಸಾಹುಕಾರರಿಗೆ ಮಾರಿ ಬಯಲಿಗೂ ೨೦೦೦ ರೂಪಾಯಿ ತನಕ ಬಿಕರಿ ಮಾಡಿದ್ದರೆಂತಲೂ, ಎಂಟು ಮಂದಿಯನ್ನು ಹಿಡಿದಿರುತ್ತಾರೆಂತಲೂ ತಿಳಿದುಬಂದಿದೆ.

****

ದಾವಣಗೆರೆ ಮುನಿಸಿಪಾಲಿಟಿಯಲ್ಲಿ ಬಹು ಕಾಲದಿಂದ ಓವರ್‌ಸಿಯರ್ ಕೆಲಸ ಮಾಡುತ್ತಿದ್ದ ಬಾಬು ಚಂದ್ರನ್ನು ಕಾರಣಾಂತರದಿಂದ ಕೆಲಸ ಬಿಡಿಸಿದ್ದರು. ಈಚೆಗೆ ಮುನಿಸಿಪಲ್ ಕಮಿಷನರುಗಳು ಕಲೆಕ್ಟರ್ ಎಂಬ ಹೊಸ ನೌಕರಿಯನ್ನು ಕಲ್ಪಿಸಿ, ಆ ಕೆಲಸಕ್ಕೆ ಮಿ॥ ಬಾಬು ಚಂದ್ರನ್ನು ನೇಮಿಸಿ ಕೆಲಸ ಮಾಡಿಸಿದರು ಇದಲ್ಲದೆ ಇಲ್ಲಿನ ಸಾಹುಕಾರನೊಬ್ಬ ಉಚ್ಚಂಗಿ ರಸ್ತೆಯಲ್ಲಿ ಕಟ್ಟೆ ಕಟ್ಟಿಕೊಂಡು ಸರ್ಕಾರದ ಒಳ್ಳೆ ಜಾಗದಲ್ಲಿ ಸಿರಿ ಕಾಸೆಯಲ್ಲಿ ಕಟ್ಟೆ ಕಟ್ಟಿಕೊಳ್ಳುವಂತೆ ಗಾಣಿಗರಿಗೆ ಸ್ಥಳ ಕೊಟ್ಟ ಕೊಳ್ಳುವಂತೆ ಹೇಳಿಕೊಂಡು ಗೊತ್ತುಮಾಡಿದರು.

****

ಶಿವಮೊಗ್ಗದ ಚಾತ್ರಿಗಾರರು ಬರೆಯುವುದು – ಕಳೆದ ತಾ. ೧೯ನೇ ಬುಧವಾರ ಈ ಪ್ರಾಂತ್ಯ ವಿಶೇಷ ಮಳೆ ಆಗಿ ಕೆರೆ ಕುಂಟೆಗಳಿಗೆ ಅರ್ಧ ಭಾಗ ನೀರು ಬಂದಿರುತ್ತೆ. ಸ್ವಲ್ಪಪಟ್ಟಿಗಳೆಲ್ಲಾ ಚನ್ನಾಗಿವೆ. ವೇದಾವತಿ ನದಿಯು ೭ ದಿನ ತುಂಬಿ ಹರಿಯುತ್ತ ನಾಲೆಗೂ ಏಸಲ ಕಡೆಯಿಂದ ಬಿರುಸ ಬಿದ್ದಿತು. ಸುಮಾರು ೫ ದಿನ ಸುಸ್ತಿಯಾಗಿ, ಪ್ರಾಣವು ಸ್ವಲ್ಪ ಕಡಮೆ ಇದನಂತರ ಸಾಗಿದ್ದಿತು. ತಿಂಬಿಕೆಯುತ್ತಿದ್ದ ಈ ಪ್ರವಾಹದಲ್ಲಿ ದನಕರುಗಳು ತೇಲಿಹೋದವೆಂದೂ, ಕಂಡವರು ಕೆಳಗಡೆ ಈ ಪ್ರವಾಹವೆಲ್ಲಾ ಮಾಗಣೆಯ ಮೇಲೆ ಹೋಗಿ ಬೀಳುವುದರಿಂದ ಆ ದೊಡ್ಡ ಕೆರೆಗೆ ವಿಶೇಷ ನೀರು ಬರಬಹುದೆಂದೂ ಹೇಳಬಹುದು.

****

ಫ್ರೆಂಚ್‌ರಾಕ್ಸ್ ಚಾತ್ರಿಗಾರರು ಬರೆಯುವುದು – ಈಗ ೧೫ ದಿವಸದಿಂದ ಈ ಪ್ರಾಂತ್ಯ ತುಂಬಾ ಮಳೆ ಸುರಿದು ಕೆರೆ ಕಟ್ಟೆಗಳು ತುಂಬಿ ಕೊಂಡವು ಪಶು ಕರುಗಳಿಗೆ ಅನುಕೂಲವಾಯಿತು ಧಾರಣೆ ತಕ್ಕಮಟ್ಟಿಗೆ ಇಳಿದಿದೆ ರಾಗಿ ೧೫ ಸೇರು, ಅಕ್ಕಿ ೪ ಸೇರು ಸಿಕ್ಕುತ್ತೆ. ಈ ಪ್ರಾಂತ್ಯ ಕಾಲರಾ ಉಪದ್ರ ಜೋರಾಗಿ ಅನೇಕ ಗ್ರಾಮಗಳಲ್ಲಿ ವ್ಯಾಪಿಸಿ ಅನೇಕ ಜನರು ತೀರಿಕೊಂಡರು ಗ್ರಾಮಗಳಲ್ಲಿ ಈ ರೋಗಿಗಳಿಗೆ ಸಮಯಕ್ಕೆ ಡಾಕ್ಟರ ಚಿಕಿತ್ಸೆ ದೊರಕುವುದು ಕಷ್ಟ. ಜನಗಳು ಕ್ಲೋರ್ಡೈನ್ ಎಂಬ ಔಷಧಿಯನ್ನು ಕೊಂಡು ಇಟ್ಟುಕೊಂಡಿದ್ದಾರೆ ಈ ರೋಗಕ್ಕೆ ಈ ಔಷಧಿ ಮನೆಯಲ್ಲಿ ಹತ್ತಿರ ಇಟ್ಟು ಘನ ಪಂಡಿತನೇ ಇದ್ದಂತಾಗುವುದು ಇದನ್ನು ತೆಗೆದುಕೊಳ್ಳುವ ವಿಧಾನ ಹ್ಯಾಗೆಂದರೆ—ದೊಡ್ಡವರಿಗೆ ಸ್ವಲ್ಪ ತಣ್ಣೀರಿನಲ್ಲಿ ೧೦ ಬೊಟ್ಟು ಔಷಧಿ ಹಾಕಿ ದಿನಕ್ಕೆ ೩ ಸಾರಿ ಕುಡಿಸಿ, ಗಂಜಿಗೆ ಉಪ್ಪು ಹಾಕಿ ಕಾಯಿಸಿ ಹಾಲು ಮಿಶ್ರಮಾಡಿ ಆಹಾರ ಕೊಡಬಹುದು

****

ಅಜ್ಜಂಪುರದಲ್ಲೂ ಚಿತ್ರದುರ್ಗ ಮುಂತಾದ ಆಜೂಬಾಜೂ ಪ್ರಾಂತ್ಯದಲ್ಲೂ ಕಳೆದ ತಾ. ೧೫ ನೆ ಬುಧವಾರ ರಾತ್ರಿ ಅಪಾರವಾದ ಮಳೆ ಸುರಿದು ಮಧ್ಯರಾತ್ರಿಯಲ್ಲಿ ಪ್ರಜೆಗಳೂ ಗೋಕಾಯಿಗಳೂ ಬಹಳ ಕಷ್ಟಪಟ್ಟರೆಂತಲೂ, ದವಸಧಾನ್ಯಗಳೂ ಸಾಮಾನುಗಳೂ ಪೈರು ಪಚ್ಚೆಗಳೂ ಕೊಚ್ಚಿಹೋದವೆಂತಲೂ, ಕೂಡಲೂರು ಬಗ್ಗವಳ್ಳಿ ಕೆರೆಗಳು ತುಂಬಿ ಒಡೆದು ಅವುಗಳ ನೀರೂ, ಸೊಕ್ಕೆಹಳ್ಳಿ ಅಜ್ಜಂಪುರದ ಕಟ್ಟೆಗಳ ನೀರೂ ಪರ್ವತದಂತೆ ಕೆರೆಗೆ ನುಗ್ಗಿ, ಈ ಭಾರೀ ಕೆರೆ ಏರಿಯೂ ಒಂಭಾಗದ ಗದ್ದೆಗಳೂ ಗೋಚರವಿಲ್ಲದಂತಾದವೆಂತಲೂ, ತರುವಾಯ ಆ ಕೆರೆ ಏರಿ ೪೦ ಗಜ ದೂರ ಒಡೆದು ನೀರು ನುಗ್ಗಿ ಚಿತ್ರದುರ್ಗ ಗ್ರಾಮದ ಊರು ಬಾಗಿಲು ಕುಂಬಾರಕೇರಿ ಗೌಡ ಕೇರಿಗಳ ತನಕ ನೀರು ನುಗ್ಗಿ ಗೋಪುರ ಬಾಗಿಲುಗಳನ್ನು ಕೊಚ್ಚಿಕೊಂಡು ಹೋದವಂತಲೂ ಈ ಪೂರ್ವ ದಿಕ್ಕಿನ ಏರಿ ೪೦ ಗಜವೂ, ಇನ್ನೊಂದು ಕಡೆ ೩೦ ಗಜ ಒಡೆದು ಹೋಗಿದೆ ಎಂತಲೂ, ಈ ಪ್ರವಾಹದ ದೆಸೆಯಿಂದ ರೈಲ್ವೆ ಗಳ ಸಂಚಾರವು ೨—೩ ದಿನ ತಪ್ಪಿ ಪ್ರಯಾಣಸ್ಥಗಿತವಾಯಿತೆಂತಲೂ ಅಜ್ಜಂಪುರ ಚಿತ್ರದುರ್ಗ ಗ್ರಾಮಗಳ ಕೆಲ ಗದ್ದೆಗಳಲ್ಲಾ ಕೆರೆ ಮಣ್ಣಿನಿಂದ ಪೈರು ಫಲ ತರಕಾರಿ ಗಿಡ ಮುಂತಾದ್ದೆಲ್ಲಾ ಕೆಟ್ಟು ಮಣ್ಣುಪಾಲಾಗಿರುವುದರಿಂದ ಪ್ರಜೆಗಳಿಗೆ ತುಂಬಾ ಕಷ್ಟವಪ್ಪಾ! ಒದಗಿದೆ ಎಂತಲೂ ತಿಳಿದುಬರುತ್ತದೆ

ಸಮಾಚಾರದೋಷ.

ನಾನು ಶಿವಮೊಗ್ಗೆ ಸಂತೆಗೆ ಹೋಗಿ ವಾಪಸ್ ಒಂದು ಆ ಊರು ಸಮೀಪಕ್ಕೆ ಬಂದಾಗ ಸ್ವಲ್ಪ ಆಯಾಸ ಪರಿಹಾರಕ್ಕೆ ಒಂದು ಸೋಗೆಯ ಛಪ್ಪರ ಬಳಿ ಇದ್ದ ಅರಳಿ ಮರದ ಕಟ್ಟೆಯ ಮೇಲೆ ಕುಳಿತು ಕೊಂಡೆ. ಆಗ ಸುಮಾರು ಆರು ಗಂಟೆ ಸಂಜೆ ಕಾಲ ಸೂರ್ಯನು ತನ್ನ ಪ್ರಯಾಣವನ್ನು ಮುಗಿಸುವ ಪಕ್ಷದಲ್ಲಿ ಪಶ್ಚಿಮ ಪರ್ವತದ ಮರೆಯನ್ನು ಸೇರುತ್ತಿದ್ದನು. ದನಕರುಗಳು ಹಿಂದಿರುಗಿ ಬರುವ ದಾರಿಯಲ್ಲಿ ಎದ್ದ ಧೂಳಿ ಒಂದು ರಸ್ತೆಯನ್ನು ಸೇರಿ ತಮ್ಮ ಎಳೆಯ ಕರುಗಳನ್ನು ಕರೆದು ತಾಯಂದಿರು ಮನೆಯ ದಾರಿಯನ್ನು ಹಿಡಿದು ಬರುತ್ತಿದ್ದವು. ಆಗ ನಾನು ಪಕ್ಕ ಮನೆಯ ಮುಂಬಾಗಿಲಿನ ಕಡೆ ನೋಡುತ್ತಿದ್ದವನು ಯಾರೋ ಪೂರ್ವಕ್ಕೆ ತಿರುಗಿ ನೋಡಿದಾಗ ಕಾಣುವ ಹಾಗೆ ಸ್ತ್ರೀಯೊಬ್ಬಳು ರಸ್ತೆಗೆ ಅಭಿಮುಖವಾಗಿ ಸೀರೆ ಹೊದೆಯಿಂದ ಕಣ್ಣುಗಳ ಕೆಳಗೆ ಕೈಯಿಟ್ಟುಕೊಂಡು ಬಿಕ್ಕಿ ಬಿಕ್ಕಿ ಅಳುತ್ತ ಹಿಂದಕ್ಕೆ ಹೊರಳುವ ದೃಶ್ಯವನ್ನು ಕಂಡೆ. ಹೀಗೆ ಹೆಣ್ಣೊಬ್ಬಳು ಏಕೆ ಅಳುತ್ತಿದ್ದಾಳೆ ಎಂದು ಯೋಚಿಸುತ್ತಿರುವಾಗ, ಬಾಗಿಲಿನ ಒಳಗೆ—ಯಾರೋ ಒಬ್ಬರು ಕೂಗಿದ್ದು ನನಗೆ ಕೇಳಿಸಿತು. ನನ್ನ ಸಮೀಪಕ್ಕೆ ಒಬ್ಬಳು ಮುದುಕಿ ಬಂದಳು. ಅವಳನ್ನು ಯಾರೆಂದು ಗುರುತು ತಿಳಿಯದಿದ್ದ ಕಾರಣ ಆಕೆಯನ್ನು ಸ್ವರದಿಂದ ಅವಳು ನಮ್ಮ ನೆರೆಹೊರೆಯ ಚನ್ನವ್ವನೆಂದು ತಿಳಿದು—ಏನು ಚನ್ನವ್ವನಿನ್ನವ್ವ, ಕಣ್ಣಿಗೆ ಏನಾಯಿತು? ಅಂಗಾಗ ಬಿಕ್ಕಿ ಬಿಕ್ಕಿ ಅಳುತ್ತೀಯೆ ಏಕೆ ಕೇಳಿದ್ದಕ್ಕೆ ಆಕೆ ಆಶ್ಚರ್ಯದಿಂದ ನನ್ನ ಮುಖವನ್ನು ನೋಡಿ ನಕ್ಕು—ಏನು ಮಾಡುವ್ವ' ಒಳ್ಳೇ ಸಂಗತಿ ಕೇಳಿದಿರಿ ಅದೊಂದು ಕಥೆಯೇ ಒದಗಿದ್ದು ಎಂದಳು.

ಆಕೆ ಹೇಳಿದ್ದನ್ನು ನಾನು ಹೇಳಿದ್ದು ಇದೇ ಮೊದಲು ಅಲ್ಲ ಇವನ ಮನೆಯ ವಿಷಯದಲ್ಲಿ ಎಳೆದಿದ್ದ ಜ್ಞಾಪಕಕ್ಕೆ ಬಂತು. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಇದ್ದ ಮನೆ ಇವರದ್ದು. ಇವರ ಪೂರ್ವಿಕರು ಒಳ್ಳೆ ಕಾಲದಿಂದ ಐಶ್ವರ್ಯವಂತರಾಗಿದ್ದು ಸ್ವಚ್ಛದಿಯಾಗಿ ವಾಸಮಾಡಿ ಆ ದೊಡ್ಡ ಮನೆಯನ್ನೂ ಸ್ಥಿರಚರ ಆಸ್ತಿಯನ್ನೂ ಗಳಿಸಿಕೊಂಡು ಚನ್ನಾಗಿ ಕಾಲಕ್ಷೇಪ ಮಾಡುತ್ತಿದ್ದರು. ಚನ್ನವ್ವನವ್ವನ ಗಂಡನು ಆತನ ತಂದೆ ತೀರಿಹೋದ ನಂತರ ದುಸ್ಸಹವಾಸಕ್ಕೆ ಸೇರಿ ಜೂಜಾಡುವದನ್ನು ಕಲಿತು ಮನೆ ಚಿನ್ನ ಬೆಳ್ಳಿಯ ನಗಗಳನ್ನು ಅಡವಿಟ್ಟು ಹಾಳುಮಾಡಿ ಆ ಮೇಲೆ ತೋಟ ಮುಂತಾದ ಸ್ಥಿರಾಸ್ತಿಗಳನ್ನೆಲ್ಲಾ ಭೋಗ್ಯ ಆಧಾರಗಳ ಮೂಲಕ ದನ ಇದೆಲ್ಲಾ ಕೈ ಬಿಟ್ಟುಹೋದ ಮೇಲೆ ಅವನ ಗೆಳೆಯರು ಅವನನ್ನು ಇನ್ನೊಂದು ವಿಧವಾದ ಸಂಪಾದನೆಗೆ ಪ್ರೇರಣೆ ಮಾಡಿ ಅವರ ತಮ್ಮ ಗುಂಪಿಗೆ ಸೇರಿಸಿಕೊಂಡರು. ಇವರ ಕಸಬು ಚೋರಿ. ಕೀವಲಿಂಗಪ್ಪನೆಂಬ ಇವನ ಮರದೃವ್ವಕ್ಕೆ ಆ ಕಳ್ಳರ ಗುಂಪು ಪತ್ತೆ ಆದಾಗ ಈ ಗೆಳೆಯರ ಸಂಗಡ ಬೇಡಿ ಬಿದ್ದನು. ಅಂದಿನಿಂದ ಚೆಲ್ಲನ್ವನ ಮರ್ಯಾದೆಯನ್ನೂ ಶಿಷ್ಟಸಂಪ್ರದಾಯಗಳನ್ನೂ ಪರಿಗಣಿಸದೆ ಹೋಯಿತು. ಆಕೆ ಸ್ವಭಾವಿಕವಾಗಿ ಮಾನವಂತಳು, ದೊಡ್ಡ ವಂಶಕ್ಕೆ ಸೇರಿದವಳು. ಆದರೇನು ಮಾಡುವುದು? ಆಗಲೇ ಗಂಡನು ತನ್ನ ಪ್ರೇಮವನ್ನು ಮಾನದ ಮೇಲೆ ದೃಷ್ಟಿ ಇಡದೆ ತನ್ನ ಪ್ರಿಯಳ ಮಾತು ಕೇಳದೆ ದುರ್ಮಾರ್ಗವನ್ನು ಅವಳ ಮೇಲೆ ತಂದಿಟ್ಟನು. ಆಕೆಯು ಇನ್ನೂ ನಡುವಯಸ್ಸಿನವಳು, ಆದರೂ ಮಾನದ ಮೇಲೆ ದೃಷ್ಟಿ ಇಟ್ಟು ಹೊಗದೆ ಕಸೂತಿ ಹಾಕುವ ಬೀಸುವ ಕೆಲಸದಿಂದ ತನ್ನ ಮತ್ತು ತನ್ನ ಮಂದಿ ಚಿಕ್ಕ ಮಕ್ಕಳ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದಳು. ಅಯ್ಯೋ! ಬಡ ಪ್ರಾಣಿ. ಆಕೆ ಈಗಲೂ ಸಹನವನ್ನು ತಾಳಿ ಕಷ್ಟ ವಿಧವಾಗಿದಾಳೆ ಆದರೆ ಒಂದೊಂದು ವೇಳೆ ಎಲ್ಲಾ ಜ್ಞಾಪಿಸಿಕೊಂಡು ಕಣ್ಣೀರಿಗೆ ತಾನೇ ಬಹಳ ಶೋಕಮಾಡುತ್ತಾಳೆಂತ ನಾನು ಆಲ್ಲಿ ಯೋಚಿಸುತ್ತ—"ಏನಿರವ್ವ, ಕೀವಲಿಂಗಣ್ಣ ಯಾವಾಗ ಬರುತ್ತಾನೆ" ಎಂದು ಕೇಳಿದ್ದಕ್ಕೆ ಅವಳು ಕಣ್ಣುಗಳನ್ನು ಒರಸಿ ಕೊಳ್ಳುತ್ತಾ—"ಅಯ್ಯಯ್ಯೋ! ಆ ಸುದ್ದಿ ಏತಕ್ಕೆ ಬೇಕಿರಿ" ಹೇಳಿ ನಾನು ಪುನಃ ಮಾತನಾಡುವದಕ್ಕಿಂತ ಮುಂಚೆ ಹೊರಟು ಕೊಂಡು ನಡೆದೇಬಿಟ್ಟಳು

ದಾಜಾಮದಾರರನ್ನು ಹಿಡಿದು ಶಿಕ್ಷೆಮಾಡುವದೆಂಬ ಕಾನೂನು ಇಚಿಗೆ ನಮ್ಮ ಮೈಸೂರು ಸೀಮೆಯಲ್ಲಿಯೂ ಜಾರಿಗೆ ಬಂದಿದೆ ಎಂದು ತಾರೀಕಿನ್ನು, ಕೇಶವ ನಾಗಿರೆ ಪತ್ರಿಕಾಕರ್ತರೇ, ಈ ವರ್ತ ಮಾನವೇ? ಏನೆಂದರೆ ಹಾರೈಸುತ್ತೇನೆ ಯಾಕೆಂದರೆ ಪಟ್ಟಣಗ ಳಲ್ಲಿ ಮಾತ್ರವಲ್ಲ, ಹತ್ತು ನಲವತ್ತು ಮನೆಗಳಿರುವ ಹಳ್ಳಿಗಳಲ್ಲಿ ಯೂ ದ್ಯೂತವೆಂಬ ದುರ್ವ್ಯಸನಕ್ಕೆ ಕಾತರರಾಗಿ ಹಸ್ತಿ ಕುಡುಗಿರು ವ ಮೇಲೆ ಎಂದು ಕೆಲಸ ಬಿಟ್ಟು ಸೋಮವಾರಿಗಳಾಗಿ ಗುಂಪು ಕೂಟ ಜೂಜಾ ಟದಲ್ಲಿ ವರ್ತಿಸಿರುವರು ಕಡೆಗೆ ಇವರ ಫಲವು ನಮ್ಮ ನೆರೆಮನೆಯ ವಲಿಂಗಪ್ಪನ ಗತಿಯೇ ಆಗಿ ಫಲಿಸುವದು

ಕಾನೂನು ಜಾರಿಯಲ್ಲಿ ಬಂದರೆ ಪತ್ತೆಯಾಗುವ ಅಪರಾಧಿಗಳನ್ನು ಶಿಕ್ಷಿಸುವದು ಆದರೆ ಮನಸ್ಸು ಇನ್ನೊಂದು ವಿಧವಾಗಿ ಶಂಕಿಸುತ್ತಲಿರು ವದು ಪತ್ತೆಯಾಗದ ರೀತಿ ತನ್ನ ಮನೋರಥವನ್ನು ಸಾಧಿಸಿಕೊಳ್ಳು ವ ವಂಚಕರಿಗೇನೂ ಕಡಿಮೆ ಇಲ್ಲ ಆತ್ಮಸಂಯಮನವನ್ನು ತ್ಯಜಿಸಿ ವಿಷಯಲಂಪಟರಾಗಿ ಇತರರ ಸಂಸಾರಗಳ ಮೇಲೆ ಕಲ್ಲು ಹಾಕುವವರನ್ನೂ ಸ್ನೇಹದ ಸೋಗಿನಿಂದ ಬುದ್ಧಿಭ್ರಮಣೆಗೆ ಗುರಿಯಾಗಿ ಕೆಟ್ಟು ಹೋಗುವ ವರನ್ನೂ ದ್ಯೂತದಿಂದ ಅಪಮಾನಕ್ಕೂ ನಷ್ಟಕ್ಕೂ ಪಾಪಕ್ಕೂ ಗುರಿ ಯಾಗುವವರನ್ನೂ ಸರಕಾರವು ಹಿಡಿದು ಶಿಕ್ಷಿಸುವದು ಅಸಾಧ್ಯ ಅಂತರಂ ಗದಲ್ಲಿ ಪಾಪಾಚರಣರಾಗಿರುವವರನ್ನು ಸರಕಾರವು ತಿದ್ದಲಾರದು ಇಂಥ ವರೆಲ್ಲರೂ ನಮ್ಮ ಮಲ್ಲಪ್ಪನ ಗಂಡನ ಸ್ಥಿತಿಯನ್ನು ಸ್ಮರಿಸತಕ್ಕದ್ದು ಪತ್ರ ಮೂಲಗಳಿಂದ ನಾವು ಗುಣಹೀನರೂ ದಂಭಾಚಾರರೂ ಆಗುವದ ಲ್ಲದೆ ನಮ್ಮ ಪ್ರೀತಿಪಾತ್ರರಾದ ಪತ್ನೀಪುತ್ರರ ಮನೋವ್ಯಥೆಗೂ ದಾರಿದ್ರ್ಯ ಕ್ಕೂ ಅಪಮಾನಕ್ಕೂ ಕಾರಣರಾಗುತ್ತೇವೆ. ನಾವು ನಮ್ಮ ವಿಷಯವಾ ಗಿ ನಿಷ್ಕರುಣಿಗಳಾಗಿ ಪಾಪವನ್ನು ಬಿಡುವದಕ್ಕೆ ಮನಸ್ಸಿಲ್ಲದಿದ್ದರೂ ನ ಮ್ಮನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಮಾಡುವವರ ಪರಿಣಾಮವ ನ್ನಾದರೂ ಚಿಂತಿಸಿ ಅವರಿಗೆ ಅಶುಭವಾಗಬಾರದೆಂದು ನೋಡಿಕೊಳ್ಳತ ಕ್ಕದ್ದು ಮುಖ್ಯವಾಗಿ ಅನೇಕ ಪಾಪಗಳಿಗೆ ದುಸ್ಸಹವಾಸವೇ ಮೂಲ ದುರ್ಮಾರ್ಗಪ್ರವರ್ತಕರಾಗಿದ್ದ ಅನೇಕ ಯೌವನಸ್ಥರು ದುಷ್ಟರ ಪ್ರೇರಣೆ ಗೆ ಗುರಿಯಾಗಿ ಅವರ ಜೊತೆಯಲ್ಲಿ ಪಾಪದ ಪಾಶಕ್ಕೆ ಸಿಕ್ಕಿ ಬಿಡಿಸಿಕೊ ಳ್ಳಲಾರದೆ ಅದರಲ್ಲಿಯೇ ಹೊರಳ್ಯಾಡುತ್ತಾರೆ ದುಸ್ಸಹವಾಸವನ್ನು ಸಹಸರ್ಪಕ್ಕಿಂತಲೂ ಘೋರವಾದ ವಿಷಭರಿತವಾದುದೆಂದು ವರ್ಜಿಸಬೇ ಕು ದುಷ್ಟ ಸಹವಾಸ ಕೈಯ್ಯಮುಟ್ಟ ಹಿತಿತರಬಹುದು ಅಟ್ಟಿಬ ಮಜಕರಿಯ ಕಟ್ಟಬಹುದು ॥ ಕೃಷ್ಣಸರ್ಪನ ಜೊತೆ ಕಲೆತು ಜೀವಿಸ ಬಹುದು ದುಷ್ಟಾತ್ಮರಾದವರ ಬಿಟ್ಟು ಕಳೆ ಮನವೇ ॥ ಪಾಪೇತರಾ ಗುವದಕ್ಕೆ ಮನಸ್ಸುಳ್ಳವರು ಸದಾ ಸತ್ಪುರುಷರ ಸಹವಾಸವನ್ನು ಸಂಪಾದಿಸಿಕೊಳ್ಳತಕ್ಕದ್ದು ಯಾಕೆಂದರೆ ಅಂಥವರ ಸಹವಾಸದಲ್ಲಿ ದೇ ವ ಪ ಕ ಕ್ಷ ಪಾಸ್ನಿಧ್ಯನೇ ಸ್ವಲ್ಪಮಟ್ಟಿಗಾದರೂ ಲಭ್ಯವಾಗುವದಕ್ಕೆ ಸಂದೇಹವಿಲ್ಲ ಸನ್ನಡತೆಗೆ ತಕ್ಕ ಪ್ರೇರಣೆಯು ಉಂಟಾಗದೆ ಇರದು

ಕ್ಯೂಬಾ ದ್ವೀಪದಲ್ಲಿ ದಂಗೆ

ಪಶ್ಚಿಮ ಇಂಡೀಸ್ ಎಂಬ ದ್ವೀಪ ಸಮುದಾಯಗಳಲ್ಲಿ ಒಂದಾದ ಈ ಕ್ಯೂಬಾ ದ್ವೀಪವು ಮೊದಲು ಸ್ಪೇನ್ ರಾಜ್ಯದವರಿಗೆ ಸೇರಿತ್ತು ಇದ ನ್ನು ಅಮೇರಿಕಾದವರು ಕೆಲವು ಕಾಲ ಆಳಿ, ಆ ದ್ವೀಪ ದಲ್ಲಿ ಕಳೆದ ... ವರುಷದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ ನಮ್ಮ ಮೇಲ್ವಿಚಾರಣೆಯಲ್ಲಿಟ್ಟುಕೊಂಡಿದ್ದಾರೆ ಸೇನಾರ್ ಪಾಲ್ಮಾ ಎಂಬಾತನು ಆ ರಾಜ್ಯದ ಪ್ರೆಸಿಡೆಂಟೆಂಬ ಸರ್ವಾಧಿಕಾರಿಯಾಗಿದ್ದಾನೆ ಈಗ ಆ ದ್ವೀಪದಲ್ಲಿ ತುಂಬಾ ಗಲಭೆಯಾಗಿ ಪ್ರಜಾ ನೆಮ್ಮದಿ ಗೆ ಭಂಗವುಂಟಾಗಿರುವಂತೆ ಕಳೆದ ವಾರ ಅಲ್ಲಿಂದ ತಂತೀ ವರ್ತಮಾನ ಗಳು ಬಂದಿರುವವು ಆ ವರ್ತಮಾನಗಳೇನೆಂದರೆ—

ಆಗಸ್ಟ್ ೨೦—ಕ್ಯೂಬಾ ದ್ವೀಪದಲ್ಲಿ ಪ್ರಜಾ ನೆಮ್ಮದಿಗೆ ಭಂಗ ವುಂಟಾಗಿದೆ ಒಂದು ಸಾವಿರ ಜನರು ಸರಕಾರದ ಮೇಲೆ ತಿರುಗಿ ಬಿದ್ದು, ಹವಾನಾ ಎಂಬ ಪಟ್ಟಣದಿಂದ ೨೦ ಮೈಲಿ ದೂರದಲ್ಲಿ ಯುದ್ಧ ಮಾಡ ಲು ಎರಡು ಕಡೆಯವರಲ್ಲೂ ಅನೇಕರಿಗೆ ಗಾಯಗಳಾದವು ಗೋ ಮೆಸ್ ಎಂಬ ಪ್ರಸಿದ್ಧ ಮುಖಂಡನು ದಂಗೆಕೋರರ ಸಂಗಡ ಸೇರಿ ಕೊಂಡಿದ್ದಾನೆ ಗ್ರಾಮಾಂತರಗಳಲ್ಲಿರುವ ಪ್ರಜೆಗಳೆಲ್ಲಾ ಗಾಬರಿಯಿಂದ ಓಡಿ ಹೋಗಿ ಹವಾನಾ ಪಟ್ಟಣವನ್ನು ಸೇರಿಕೊಳ್ಳುತ್ತಿದ್ದಾರೆ

ಆಗಸ್ಟ್ ೨೨—ಸರಕಾರದವರು ಹವಾನಾ ಪಟ್ಟಣದಲ್ಲಿ ೭೦ ಜನರನ್ನು ಖೈದಿ ಮಾಡಿದವೆಂದು ಹಿಡಿದಿರುತ್ತಾರೆ ನೆನ್ನೆ ಆ ಪಟ್ಟಣದ ಹತ್ತಿರ ಇನ್ನೊಂದು ಯುದ್ಧವಾಯಿತು ದಂಗೆಕೋರರು ಸೋತು ಹೋದರು ಗೋಮೆಸ್ ಎಂಬ ಮುಖಂಡನನ್ನು ಹಿಡಿದುಕೊಂಡರು ಆದರೆ ಮೇಲೆ ದಂಗೆಕೋರರು ಸಾನ್ ಲೂಯಿ ಮತ್ತು ಪ್ಲಾಸರ್ ಡೆಲ್ ... ಎಂಬೀ ನಗರಗಳನ್ನು ಆಕ್ರಮಿಸಿಕೊಂಡಿದ್ದಾರೆ ಇವರಲ್ಲಿ ಪ್ರಮುಖರಾದವರಿಗೆ ಸರಕಾರದ ದೊಡ್ಡ ಅಧಿಕಾರಗಳೂ ಹುದ್ದೆಗಳೂ ದೊ ರೆಯಲಿಲ್ಲವೆಂಬುವದೇ ಈ ದಂಗೆಗೆ ಕಾರಣವೆಂದು ತಿಳಿಯುವುದು

ಆಗಸ್ಟ್ ೨೩—ದಂಗೆಕೋರರ ದಳಪತಿಯಾದ ಜನರಲ್ ಡೆಲ್ಗಾಡೋ ಎಂಬುವನನ್ನು ಕೊಂದುಹಾಕಿದರು ಅವರೂ ದಂಗೆಕೋ ರರ ಪೈಕಿ ಮುಖ್ಯರಾದವರು ಸಾನ್ ಜುವಾನ್ ಡಿ ಮಾರ್ಟಿನೆಸ್ ಎಂಬ ನಗರವನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಆದ್ದರಿಂದ ಕ್ಯೂಬಾ ಗವರ್ನಮೆಂಟಿನವರು ಈ ದಂಗೆಯನ್ನು ಅಡಗಿಸುವದಕ್ಕಾಗಿ ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಕಾರದವರನ್ನು ಎರಡು ಪಿರಂಗಿ ಗಳನ್ನು ಸೈನ್ಯಸಮೇತ ಕಳುಹಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ

ಆಗಸ್ಟ್ ೨೪—ಜನರಲ್ ಗ್ವೆರಾ ಎಂಬಾತನು ೩೦೦೦ ದಂಗೆ ಕೋರರನ್ನು ಕಟ್ಟಿ, ಹೊಸ ದಂಗೆಕೋರರನ್ನು ಎದುರು ನೋಡು ತ್ತ ಪೈನಾರ್ ಡೆಲ್ ರಿಯೋ ಎಂಬಲ್ಲಿ ಠಾಣ್ಯ ಹಾಕಿಕೊಂಡಿದ್ದಾನೆ ಇವನು ಸೈನ್ಯಸಮೇತ ಹವಾನಾ ಪಟ್ಟಣಕ್ಕೆ ಮುತ್ತಿಗೆ ಹಾಕುವಂತೆ ಬೆದರಿಕೆ ಹಾಕುತ್ತಿರುವನು

ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಲ್ಲಿ ಅನೇಕ ಮಂದಿ ಕ್ಯೂಬಾ ದೊಡ್ಡ ಮನುಷ್ಯರು ಇದ್ದಾರೆ ಇವರು ಗಳ ಕ್ಯೂಬಾದಲ್ಲಿ ಪ್ರಾರಂಭವಾಗಿರುವ ದಂಗೆಯನ್ನು ನೋಡಿ, ಜಾತಿ ಜಾತಿಗೆ ದ್ವೇಷಾಸೂಯೆಗಳಿರುವುದೇ ಈ ದಂಗೆಗೆ ಕಾರಣವೆಂತಲೂ, ಅಲ್ಲಿರುವ ನೀಗ್ರೋ ಜನರೂ ಮಲೆಟೋ ಜನರೂ ಲಾಭಕರವಾದ ಸಮಸ್ತ ನೌಕರಿ ಉದ್ಯೋಗಗಳನ್ನೂ ಬಿಳಿಯ ಜನರೇ ಅನುಭೋ ಗಿಸುತ್ತಾ ಬಂದಿರುವುದನ್ನು ನೋಡಿ, ಅಸಮಾಧಾನ ಪಟ್ಟು ಗಲಭೆಯೆ ಬ್ಬಿಸಿದ್ದಾರೆಂತಲೂ ಹೇಳುವರು

ಸರಕಾರದ ಪಿರಂಗಿ ಸೈನಿಕರು ಹೋಗಿ ಸಾನ್ ಜುವಾನ್ ಮಾರ್ಟಿ ನೆಸ್ ಪಟ್ಟಣವನ್ನು ದಂಗೆಕೋರರ ಆಟಕಾಯಿ ಇಲ್ಲದೆ ಸುಲಭವಾಗಿ ಆಕ್ರಮಿಸಿಕೊಂಡರು ದಂಗೆಕೋರರ ಬಲ ಹೆಚ್ಚುತ್ತಿದೆ ವ್ಯಾಪಾರ ಕ್ಕೆ ಕುಂದಕವಾಗುತ್ತಿದೆ ಪೈನಾರ್ ಡೆಲ್ ರಿಯೋದಲ್ಲಿ ದೊಡ್ಡ ಯುದ್ಧ ನಡೆಯುವಂತಿದೆ ದಂಗೆಕೋರರು ಹವಾನಾದಿಂದ ೫ ಮೈಲಿ ದೂರದಲ್ಲಿ ಒಂದು ಗ್ರಾಮವನ್ನು ಸ್ವಾಧೀನ ಪಡಿಸಿಕೊಂಡು, ಮತ್ತೆ ಬಿಟ್ಟು ಹೋಗಿದ್ದಾರೆ

ರಷ್ಯಾರಾಜ್ಯದ ರಾಜಕೀಯ ವಿಚಾರಗಳು.

ಆಗಸ್ಟ್ ೧೮—ಬಾಲ್ಟಿಕ್ ಕಡಲು ನಾವೆಯ ಸೈನಿಕರಲ್ಲಿ ದಂಗೆ ಮಾಡಿದ ಹದಿನೆಂಟು ಮಂದಿಯನ್ನು ದಯಾರ್ಹವಾದ ಮರಣದಂಡನೆ ಯನ್ನು ವಿಧಿಸಿ ಅವರನ್ನೆಲ್ಲಾ ಗಲ್ಲಿಗೆ ಎತ್ತಿದರು. ಕ್ರಾನ್‌ಸ್ಟಾಡಿನಲ್ಲೂ ಅದೇ ರೀತಿ ೧೦ ಮಂದಿಯನ್ನು ಗಲ್ಲಿಗೆ ಹಾಕಿದ್ದಲ್ಲದೆ ೧೧೦ ಜನರನ್ನು ಯಾವಜ್ಜೀವವೂ ಕಠಿಣಸಜಾ ಅನುಭವಿಸುವಂತೆ ಶಿಕ್ಷೆ ಮಾಡಿದರು

ಆಗಸ್ಟ್ ೧೯—ವಾರ್ಸಾ ಆಧಿಪತ್ಯದ ಗವರ್ನರ್ ಜನರಲ್‌ರವ ರು ಸಾರೋಟಿನಲ್ಲಿ ಹೋಗುತ್ತಿದ್ದಾಗ ಅವರನ್ನು ಕೊಲ್ಲಬೇಕೆಂದು ದಂಗೆಕೋರರು ಅವರ ಕಡೆಗೆ ಮೂರು ಮದ್ದಿನ ಗುಂಡುಗಳನ್ನು ಎಸೆದರು ಆದರೆ ಅವರಿಗೆ ಅಪಾಯವಾಗಲಿಲ್ಲ ಶರೀರದ ನರಗಳೆಲ್ಲಾ ಕೆದರಿ ಹೋಗಿರುತ್ತವೆ

ಆಗಸ್ಟ್ ೨೧—ಕ್ರಾನ್‌ಸ್ಟಾಡಿನಲ್ಲಿ ಸರಕಾರದವರು ಇನ್ನೂ ಹತ್ತು ಜನರನ್ನು ಕಡಿಸಿ ಹಾಕಿದರು ಪೋಲೆಂಡಿಗೆ ಸೇರಿದ ಸೀಡಲ್ಸ್ ಪಟ್ಟಣದಲ್ಲಿ ಪೋಲೀಸ್ ಮುಖ್ಯಉದ್ಯೋಗಸ್ಥನನ್ನು ದಂಗೆಕೋರರು ಮದ್ದಿನ ಗುಂಡಿನಿಂದ ಕೊಂದು ಬಿಟ್ಟರು.

ಆಗಸ್ಟ್ ೨೩—ರಷ್ಯಾ ರಾಜ್ಯದ ಮಂತ್ರಾಲೋಚನಾ ಸಭೆಯ ಮೆಂಬರುಗಳು ರಾಜ್ಯದಲ್ಲೆಲ್ಲಾ ಸಮಸ್ತ ಪ್ರಜೆಗಳಿಗೂ ವಿದ್ಯೆ ಕಲಿಸುವ ಏರ್ಪಾಡು ಮಾಡಬೇಕೆಂತಲೂ, ೫೫ ಲಕ್ಷ ದ್ರವ್ಯವನ್ನು ವಿನಿಯೋಗಿ ಸಿ ಹೊಸ ಪಾಠಶಾಲೆಗಳನ್ನು ಕಟ್ಟಿ ಉಪಾಧ್ಯಾಯರ ಸಂಬಳ ಬಡ್ತಿ ಮಾಡಬೇಕೆಂತಲೂ ಆಲೋಚನೆ ಮಾಡಿರುತ್ತಾರೆ

ರಷ್ಯಾ ರೈಲ್ವೆ ಇಲಾಖೆಯ ೯೨ ಪ್ರತಿನಿಧಿಗಳು ಫಿನ್‌ಲಾಂಡಿನಲ್ಲಿ ಸಭೆ ಸೇರಿ, ರಾಜಕೀಯ ವಿಷಯಗಳನ್ನು ಕುರಿತು ಚರ್ಚೆ ಮಾಡಿ, ಇಷ್ಟರಲ್ಲೇ ರೈಲ್ವೆ ನೌಕರರೆಲ್ಲಾ ಕೆಲಸ ಬಿಡುವಂತೆ ಏರ್ಪಾಡು ಮಾ ಡಿಕೊಂಡಿದ್ದಾರೆ

ಆಗಸ್ಟ್ ೨೪—ರೈಗಾದಲ್ಲಿ ಪೋಲೀಸಿನವರಿಗೆ ಅಪಾಯಸಂಭವಿ ಸದಂತೆ ಅವರು ಎದೆಗಳಿಗೆ ಕಟ್ಟಿಕೊಳ್ಳುವಂಥಾ ಗುರಾಣಿಗಳನ್ನು ಮಾ ಡಿಸಿಕೊಳ್ಳುವದಕ್ಕಾಗಿ ದ್ರವ್ಯಸಹಾಯ ಮಾಡಬೇಕೆಂದು ಸರಕಾರದ ವರು ಪ್ರಜೆಗಳನ್ನು ಕೇಳಿದ್ದಾರೆ ಒಡೆಸ್ಸಾ ಪಟ್ಟಣದ ಬಳಿ ಎರಡು ರಿಜ ಮೆಂಟಿನ ಸೈನಿಕರು ಕಾಪ್ಟೇದಾರರ ಮೇಲೆ ತಿರುಗಿ ಬಿದ್ದು ಗಲಭೆ ಮಾ ಡಿದ್ದಲ್ಲದೆ ಸರಕಾರದವರು ತಮ್ಮನ್ನು ದಂಗೆಕೋರರ ಮೇಲೆ ಗುಂಡು ಹೊಡೆಯುವಂತೆ ಆಜ್ಞೆ ಮಾಡಿದಾಗ್ಯೂ ತಾವ ಗುಂಡು ಹೊಡೆಯುವು ದೇ ಇಲ್ಲವೆಂದು ಸಂಕಲ್ಪ ಮಾಡಿಕೊಂಡಿದ್ದಾರೆ

ಆಗಸ್ಟ್ ೨೫—ಏರಿವಾನ್ ಸ್ಟೇಷನಿನಿಂದ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿಗೆ ಒಂದು ರೈಲು ಗಾಡಿಯಲ್ಲಿ ಹಣ ಭರ್ತಿಯಾ ಗಿತ್ತು ಆ ಹಣದ ಚೀಲಗಳಲ್ಲಿ ಒಂದೂವರೆ ಲಕ್ಷ ದ್ರವ್ಯ ಕಳುವಾಗಿ ತ್ತು ಸರಕಾರದವರು ನೆನ್ನೆ ೨೩ ಜನರನ್ನು ಗುಮಾನಿಯ ಮೇಲೆ ಹಿಡಿದಿರುತ್ತಾರೆ ಇದೇ ರೀತಿ ರಾಜ್ಯದ ಎಲ್ಲಾ ಕಡೆಗಳಿಂದಲೂ ರೈಲ್ ಗಾಡಿ, ಬ್ಯಾಂಕು, ಕಾರ್ಖಾನೆಗಳಲ್ಲಿ ದ್ರವ್ಯ ಕಳುವಾಗುತ್ತಿದೆ ಎಂದು ಸಮಾಚಾರ ಬರುತ್ತಿರುವುದು

ಸರಕಾರದವರು ಶ್ಲಿಸೆಲ್‌ಬರ್ಗ್ ಮದ್ದಿನ ಕಾರ್ಖಾನೆಯಿಂದ ಯುದ್ಧ ಸಾಮಗ್ರಿಗಳನ್ನು ಆಧಾರವಾಗಿ ಪೋಲಾಂಡಿಗೂ ಕಾಕಸಸ್ ಪ್ರಾಂತ್ಯಕ್ಕೂ ರವಾನೆ ಮಾಡುತ್ತಿದ್ದಾರೆ ಆ ಕಾರ್ಖಾನೆಯಲ್ಲಿ ಯುದ್ಧ ಸಾಮಗ್ರಿಗಳನ್ನು ಬಹಳ ಹೆಚ್ಚಾಗಿಯೂ ಆತುರವಾಗಿಯೂ ತಯಾ ರ್ಮಾಡಿಸುತ್ತಿರುವರು

ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗಿನಲ್ಲಿ ಎಂ. ಸ್ಟೋಲಿ ಪಿನ್ ಎಂಬ ದೊಡ್ಡ ಮನುಷ್ಯನು ತನ್ನ ಬಂಗಲೆಯಲ್ಲಿ ತನ್ನ ಮೊಮ್ಮ ಗನ ನಾಮಕರಣ ಮಾಡಿ, ಬಹು ಮಂದಿ ದೊಡ್ಡ ಮನುಷ್ಯರನ್ನೂ ಅಧಿಕಾರಿಗಳನ್ನೂ ಅರಮನೆ ಆಸ್ಥಾನಗಳಿಂದ ಕರೆಸಿಕೊಂಡಿದ್ದನು ಕರೆದಿದ್ದವರೆಲ್ಲಾ ಬಂಗಲೆಗೆ ಬಂದ ಮೇಲೆ ಬಾಗಿಲಲ್ಲಿ ಕಾವಲಿಟ್ಟಿದ್ದನು. ಆಗ ಇಬ್ಬರು ಸೈನಿಕರಂತೆಯೂ ಇಬ್ಬರು ಅಧಿಕಾರಿಗಳಂತೆಯೂ ವೇ ಷಹಾಕಿಕೊಂಡು ಸಾರೋಟಿನಲ್ಲಿ ಕುಳಿತು ಆ ಬಂಗಲೆಗೆ ಹೋದರು ಕಾವಲುಗಾರರು ಅವರನ್ನು ಒಳಕ್ಕೆ ಬಿಡದೆ ತಡೆದುಬಿಟ್ಟರು ಬಾಗಿ ಲಲ್ಲೇ ಜಗಳವಾಯಿತು ಆ ನಾಲ್ವರ ಪೈಕಿ ಒಬ್ಬನು ತನ್ನ ಬಳಿ ಇದ್ದ ಮದ್ದಿನ ಗುಂಡನ್ನು ಅಲ್ಲಿಂದಲೇ ಒಳಕ್ಕೆ ಎಸೆದನು ಒಳಗೆ ಎಲ್ಲರೂ ಸೇರಿ ಸಂಭ್ರಮಪಡುತ್ತಿದ್ದಾಗ ಈ ಗುಂಡು ಅವರ ಮಧ್ಯೆ ಬಿದ್ದು ಮಹಾ ಶಬ್ದದೊಡನೆ ಒಡೆಯಿತು ತಕ್ಷಣವೇ ಅಲ್ಲಿದ್ದವರ ಪೈಕಿ ಮೂವತ್ತು ಜನ ದೊಡ್ಡ ಮನುಷ್ಯರು ಹೆಂಗಸರು ಮಕ್ಕಳ ಸಮೇತ ಮೃತಪಟ್ಟರು ಸ್ಟೋಲಿಪಿನ್ ಎಂಬ ಯಜಮಾನನಿಗೆ ಏನೂ ಆಗಲಿಲ್ಲ ಆತನ ಮಗಳ ಎರಡು ಕಾಲುಗಳೂ ಛಿದ್ರವಾಗಿ ಕಿತ್ತುಹೋದವು ಮತ್ತು ಮೂವತ್ತು ಮೂರು ಮಂದಿಗೆ ಗಾಯಗಳಾಗಿವೆ, ಮೇಲ್ಕಂಡ ಫಿತೂರಿಗಾರರಲ್ಲೂ ಇಬ್ಬರು ಮೃತಪಟ್ಟರು, ಇನ್ನಿಬ್ಬರಿಗೆ ಗಾಯಗಳಾದವು ಆ ಬಂಗಲೆ ಯೂ ಮುಕ್ಕಾಲು ಪಾಲು ಕಳಚಿಬಿದ್ದಿದೆ

ಆಗಸ್ಟ್ ೨೬—ಸಿಮೆನೋವ್‌ಸ್ಕಿ ರೆಜಿಮೆಂಟಿನ ಕಮ್ಯಾಂಡರಾ ದ ಜನರಲ್ ಮಿನ್ ಎಂಬ ಉದ್ಯೋಗಸ್ಥನನ್ನು ಪೀಟರ್ ಹಾಫ್ ರೈಲ್ವೆ ಸ್ಟೇಷನ್ನಿನಲ್ಲಿ ನೆನ್ನೆ ಸಾಯಂಕಾಲ ಒಬ್ಬ ಹೆಂಗಸು ಬೆನ್ನ ಕಡೆಯಿಂದ ಮೂರು ಸಲ ಗುಂಡು ಹೊಡೆದು ಕೊಂದು ಹಾಕಿದಳು ಆ ಹುಡು ಗಿಯನ್ನು ಹಿಡಿದಿರುತ್ತಾರೆ ಕಳೆದ ಡಿಸೆಂಬರಿನಲ್ಲಿ ಮಾಸ್ಕೋ ಪಟ್ಟ ಣದಲ್ಲಿ ಮೇಲ್ಕಂಡ ಉದ್ಯೋಗಸ್ಥನು ದಂಗೆಯನ್ನು ಅಡಗಿಸುವದರಲ್ಲಿ ಮುಖಂಡನಾಗಿದ್ದನು ಆದ್ದರಿಂದ ಟಿಫ್ಲಿಸ್ ಆಧಿಪತ್ಯದ ವೈಸ್‌ರಾಯ ರವರನ್ನು ಕೊಂದು ಹಾಕಬೇಕೆಂದು ಒಂದು ಫಿತೂರಿ ನಡೆದಿದ್ದದ್ದು ಪತ್ತೆ ಆಗಿ ಸರಕಾರದವರು ಅನೇಕ ಜನರನ್ನೂ ಉದ್ಯೋಗಸ್ಥರನ್ನೂ ಕೈಸೆರೆ ಹಿಡಿದುಕೊಂಡರು

ದಕ್ಷಿಣ ಅಮೇರಿಕದಲ್ಲಿ ಭೂಕಂಪದ ಅನಾಹುತವು.

ದಕ್ಷಿಣ ಅಮೇರಿಕದಲ್ಲಿ ಚಿಲ್ಲಿ ಎಂಬ ಪ್ರಜಾಪ್ರಭುತ್ವವೂ, ಈ ಪ್ರ ಭುತ್ವದಲ್ಲಿ ಅಕಂಕಾಗುವಾ ಎಂಬ ಅಗ್ನಿ ಪರ್ವತವೂ ಇರುವವು ಅಲ್ಲಿ ಆಗಾಗ್ಗೆ ಭೂಕಂಪಗಳಾಗುತ್ತವೆ. ಈ ಪ್ರಭುತ್ವದಲ್ಲಿ ದೊಡ್ಡ ವ್ಯಾಪಾ ರ ಸ್ಥಳವಾಗಿಯೂ ಸಮುದ್ರತೀರ ಪಟ್ಟಣವಾಗಿಯೂ ಸುಮಾರು ೧,೩೫,೦೦೦ ಪ್ರಜಾ ಸಂಖ್ಯೆಯನ್ನುಳ್ಳದ್ದಾಗಿಯೂ ಇರುವ ವಾಲ್ಪಾರೈ ಸೋ ಎಂಬ ನಗರವು ಹಿಂದೆ ೧೮೫೫ ನೇ ಇಸವಿಯಲ್ಲಿ ಭೂಕಂಪಕ್ಕೆ ಸಿಕ್ಕಿ ನಾಶವಾಗಿತ್ತು ಈಚೆಗೆ ಅದನ್ನು ಪುನಃ ಕಟ್ಟಿ ಆಬಾದು ಮಾ ಡಿಕೊಂಡಿದ್ದರು ಈ ತಿಂಗಳು ತಾ ೧೬ ನೇ ಗುರುವಾರ ರಾತ್ರಿ ೮ ಗಂ ಟೆಗೆ ವಾಲ್ಪಾರೈಸೋ ಪಟ್ಟಣದಲ್ಲಿ ಭೂಕಂಪವು ಪ್ರಾಪ್ತವಾಯಿತು ಈ ಅನಾಹುತದ ವೃತ್ತಾಂತವನ್ನು ಅಲ್ಲಿಂದ ಬಂದಿರುವ ತಂತೀವರ್ತ ಮಾನಗಳಿಂದ ಪರಿಷ್ಕಾರವಾಗಿ ತಿಳಿದುಕೊಳ್ಳಬಹುದಾಗಿದೆ —

ಆಗಸ್ಟ್ ೧೮—ಗುರುವಾರ ರಾತ್ರಿ ೮ ಗಂಟೆಗೆ ವಾಲ್ಪಾರೈಸೋ ಪಟ್ಟಣದಲ್ಲಿ ಭೂಮಿಯು ನಡುಗಲಾರಂಭವಾಯಿತು ಮನೆಗಳು ಕಳ ಚಿಬಿದ್ದವು. ಬೆಂಕಿ ಹುಟ್ಟಿ ಉರಿ ಹೆಚ್ಚಿತು ಅನೇಕ ಪ್ರಜೆಗಳು ಮೃತ ಪಟ್ಟರು ಅನೇಕರಿಗೆ ಗಾಯಗಳಾದವು ವ್ಯಾಪಾರ ನಡೆಯುತ್ತಿದ್ದ ಭಾಗವೂ ಮನೆಮಠಗಳೂ ಸಂಪೂರ್ಣವಾಗಿ ನಾಶಹೊಂದಿದವು ಬೆಂಕಿ ಇನ್ನೂ ಕಡಿಮೆಯಾಗಲಿಲ್ಲ ಪ್ರಜೆಗಳ ಗಾಬರಿ ಅಪಾರವಾಗಿದೆ ಸ ಮುದ್ರತೀರದಲ್ಲಿದ್ದ ಹಡಗುಗಳಿಗೆ ಯಾವ ಅಪಾಯವೂ ಆಗಲಿಲ್ಲ.

ಸಾಂಟಿಯಾಗೋ ಎಂಬ ಇನ್ನೊಂದು ಪಟ್ಟಣದಲ್ಲೂ ಭೂಕಂ ಪವಾಗಿ ಅನೇಕ ಮನೆಗಳು ನಾಶವಾದವು. ಇದುವರೆಗೆ ಇಷ್ಟು ಕಠಿಣ ವಾದ ಭೂಕಂಪ ಪ್ರಾಪ್ತವಾದದ್ದಿಲ್ಲ ಬೀದಿಗಳಲ್ಲಿ ಪ್ರಜೆಗಳು ನಿಂತು ತುಂಬಾ ಕಷ್ಟಪಡುತ್ತಿದ್ದಾರೆ

ಈ ಭೂಕಂಪವು ೬೭ ಮೈಲಿಯಷ್ಟು ವಿಸ್ತಾರವುಳ್ಳ ಭೂಪ್ರದೇಶ ಕ್ಕೆ ವ್ಯಾಪನೆಯಾಯಿತು ಅನೇಕ ಪಬ್ಲಿಕ್ ಬಂಗಲೆ ಮುಂತಾದ ಕ ಟ್ಟಡಗಳೂ ವಾಸದ ಮನೆಗಳೂ ಕಳಚಿ ಬಿದ್ದವು ೭೦ ಲಕ್ಷ ದ್ರವ್ಯದ ಆಸ್ತಿ ಹಾಳಾಯಿತೆಂದೂ ಸಾಂಟಿಯಾಗೋದಲ್ಲಿ ೩೦ ಜನರೂ, ವಾ ಲ್ಪಾರೈಸೋದಲ್ಲಿ ೫೦೦ ಜನರೂ ಮೃತಪಟ್ಟರೆಂದೂ ಊಹಿಸಲ್ಪಟ್ಟಿದೆ ವಾಲ್ಪಾರೈಸೋದಲ್ಲಿ ಬೆಂಕಿಯನ್ನಾರಿಸುವದಕ್ಕೆ ಸಾಂಟಿಯಾಗೋದಿಂ ದ ಜನರು ಹೋಗಿದ್ದಾರೆ

ಕ್ವಿಲ್ಲೋಟಾ, ವೆಲಿಪಿಲ್ಲಾ, ಸ್ಯಾನ್ ಆಂಟೋನಿಯೋ, ಲ್ಯಾಮೆಲ್ಲಾ ಯ ಎಂಬೀ ಗ್ರಾಮಗಳಲ್ಲಿ ಎಲ್ಲಾ ನಾಶವಾಗಿದೆ, ತಲ್ಕಾಹುಆನೋ, ಸಾಫ ರ್ನಾಂಡೋ ಗ್ರಾಮಗಳಲ್ಲಿ ಪ್ರಜೆಗಳು ಮೃತಪಟ್ಟರು, ಅನೇಕರಿಗೆ ಜಖಂ ಆಗಿದೆ.

ಆಗಸ್ಟ್ ೨೦—ವಾಲ್ಪಾರೈಸೋದಲ್ಲಿ ಪ್ರಜಾ ನಷ್ಟಕ್ಕಿಂತಲೂ ಆ ಸ್ತಿಗಳೂ ಮನೆಮಠಗಳೂ ಹಾಳಾದದ್ದೇ ಹೆಚ್ಚು ಪ್ರಜೆಗಳು ಬೆಟ್ಟಗಳ ಮೇಲೂ ಉದ್ಯಾನ ವನಗಳಲ್ಲೂ ಸಮುದ್ರ ತೀರಗಳಲ್ಲೂ, ಹಡಗುಗಳ ಮೇಲೂ ಹೋಗಿ ನಿಂತು ಜೀವನಕ್ಕೆ ಪಟ್ಟು ಪಡುತ್ತಿದ್ದಾರೆ ಕೆರೆ ಕೊಳ ಗಳು ಒಡೆದು ಹೋದವು ಜನರಿಗೆ ಅನ್ನ ನೀರು ಸಿಕ್ಕುವುದು ತುಂಬಾ ಪ್ರಯಾಸವಾಗಿದೆ

ಆಗಸ್ಟ್ ೨೧—ಚಿಲ್ಲಿ ಪ್ರಭುತ್ವದಲ್ಲಿ ಭೂಕಂಪದಿಂದ ಹದಿಮೂ ರು ಸಣ್ಣ ಪಟ್ಟಣಗಳು ಹಾಳಾದವು ಇನ್ನು ಕೆಲವು ಅದರಿರುತ್ತವೆ ಎರಡು ಲಕ್ಷ ಜನರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ ಜುವಾನ್ ಫರ್ನಾಂಡಿಸ್ ಎಂಬ ಚರಿತ್ರಾರ್ಹವಾದ ದ್ವೀಪವು ... ಹೋಗಿದೆ ಮಾರ್ಟಿನಿಕ್ ದ್ವೀಪದಲ್ಲೂ ಭೂಕಂಪವನ್ನು ಅನುಭವಿಸಿದರು ವಾ ಲ್ಪಾರೈಸೋದಲ್ಲಿ ಡೈನಮೈಟ್ ಉಪಯೋಗಿಸಿ ಬೆಂಕಿಯನ್ನು ಸಂಪೂ ರ್ಣವಾಗಿ ಆರಿಸಿದ್ದಾಯಿತು ಲೂಟಿ ಮಾಡುತ್ತಿದ್ದ ಅನೇಕ ಜನರನ್ನು ಸರಕಾರಿ ಸೈನಿಕರು ಗುಂಡಿನಿಂದ ಹೊಡೆದು ಕೊಂದುಬಿಟ್ಟರು ಅಲ್ಲಿ ನ ಗವರ್ನರವರು—೩೦೦ ಜನ ಮೃತಪಟ್ಟರು, ೫೦೦ ಮಂದಿಗೆ ಗಾಯ ಗಳಾಗಿವೆ ಎಂತಲೂ ಸುಮಾರಾಗಿ ಪಟ್ಟಣವೆಲ್ಲಾ ನಾಶವಾಯಿತು ಎಂ ತಲೂ ತಿಳಿಸುತ್ತಾರೆ

ಪ್ರಜೆಗಳ ಕಷ್ಟ ನಿವಾರಣೆ ಮಾಡುವುದಕ್ಕೆ ರಿಲೀಫ್ ಸಂಘಗಳು ಏರ್ಪಾಡಾಗಿವೆ ಸ್ಯಾನ್‌ಫ್ರಾನ್ಸಿಸ್ಕೋ ರಿಲೀಫ್ ಸಂಘದವರು ೩೦,೦೦೦ ರೂಪಾಯಿ ಕಳುಹಿಸಿದರು. ಐದು ನಿಮಿಷಗಳ ವರೆಗೆ ಭೂಕಂಪವಾ ಯಿತು ಒಲೆಗಳು ಅನೇಕವಾಗಿ ಬಿದ್ದು ಕಟ್ಟಡ ಮನೆಗಳನ್ನು ಹತ್ತಿ ಉರಿಸಿದವು ಇನ್ನೂ ಜನರು ಬೈಲಿನಲ್ಲೇ ಮಲಗುತ್ತಿದ್ದಾರೆ. ನೆನ್ನೆ ರಾತ್ರಿ ಮತ್ತೆ ಭೂಮಿಯು ಕಂಪಿಸಿತು.

ಆಗಸ್ಟ್ ೨೨—ಕೆಲವು ಸಹಸ್ರ ಜನರೇ ಮೃತಪಟ್ಟಂತೆಯೂ ಬೇರೆ ಬೇರೆ ಗ್ರಾಮ ಊರುಗಳು ಭೂಕಂಪಕ್ಕೆ ಸಿಕ್ಕಿದಂತೆಯೂ ವ ರ್ತಮಾನ ಬರುತ್ತಲೇ ಇದೆ ಸಾಂಟಿಯಾಗೋದಲ್ಲಿ ಸರಕಾರದವರು ೩೦,೦೦೦ ಜನರು ವಾಸಮಾಡುವುದಕ್ಕೆ ಷೆಡ್ಡುಗಳನ್ನು ಕಟ್ಟಿಸುತ್ತಿದ್ದಾ ರೆ ವಾಲ್ಪಾರೈಸೋದಿಂದ ಪ್ರಜೆಗಳನ್ನು ಹಡಗುಗಳ ಮೇಲೆ ಸಾಗಿಸಿ ಕೊಂಡು ಬರುವಂತೆ ಹುಕುಂ ಆಗಿದೆ ಆ ಪ್ರಭುತ್ವದಲ್ಲಿದ್ದ ಇಂಗ್ಲಿಷ್ ... ಯ ಕಾಲು ಜಖಂ ಆಗಿದೆ ಆತನ ಬಂಗಲೆ ನಾಶವಾಯಿತು

ಆಗಸ್ಟ್ ೨೩—ವಾಲ್ಪಾರೈಸೋದಲ್ಲಿ ಪುನಃ ಮನೆ ಮಠಗಳ ನ್ನು ಕಟ್ಟಲಾರಂಭವಾಗಿದೆ ಬಹಳ ನಗರವಾದ ಪ್ಲಾನ್ ಉಪಯೋ ಗಿಸಿ ಕಟ್ಟುತ್ತಿದ್ದಾರೆ ರಸ್ತೆಗಳನ್ನು ಮೊದಲಿದ್ದದ್ದಕ್ಕಿಂತಲೂ ಅಗಲವಾ ಗಿ ಹಾಕುತ್ತಿರುವರು ವ್ಯಾಪಾರ ಸಾಪಾರಗಳು ಮತ್ತೆ ಪ್ರವೇಶ ನ ಡೆಯುತ್ತಿವೆ

ಆಗಸ್ಟ್ ೨೪—ಇದುವರೆಗೆ ಸಾವಿರದ ಎಂಟುನೂರು ಶವಗಳನ್ನು ವಾಲ್ಪಾರೈಸೋದಲ್ಲಿ ಸಾಗಿಸಿ ದಫನ್ ಮಾಡಿದ್ದಾಯಿತು ಸಾಂಟಿಯಾ ಗೋದಲ್ಲಿ ಆಗಾಗ್ಗೆ ಭೂಮಿಯು ಇನ್ನೂ ಅದರುತ್ತಲೇ ಇರೋಣದ ರಿಂದ ಮನೆಗಳು ಕಳಚಿ ಬೀಳುತ್ತಿವೆ

ಆಗಸ್ಟ್ ೨೫—ಸಾಂಟಿಯಾಗೋದಲ್ಲಿ ಅನೇಕ ಜನರು ಕಟ್ಟ ಡಗಳ ಕೆಳಗೆ ಸಿಕ್ಕಿ ಐದು ದಿನಗಳಿಂದ ಕೊರಗುತ್ತಾ ಪ್ರಾಣ ಇಟ್ಟುಕೊಂ ಡಿದ್ದರು ಸರಕಾರದವರು ಇಂಥಾ ಜನರನ್ನು ಬಿಡಿಸಿ ಸಂರಕ್ಷಣೆ ಮಾ ಡುತ್ತಿದ್ದಾಗ ಆ ಊರಿನ ಬೆಟ್ಟದ ಮೇಲಿದ್ದ ಸಮಾಧಿ ಸ್ಥಾನದ (ಗೋರಿ ಗಳಿದ್ದ ಭಾಗ) ಒಂದು ಪಾಲು ಕಳಚಿ ಕೆಳಕ್ಕೆ ಬಿದ್ದು ಸಮಾಧಿ ಮಾಡಿದ್ದ ಕೆಲವು ಗೋರಿಗಳು ಒಡೆದು, ಅವುಗಳಲ್ಲಿದ್ದ ಶವಗಳ ಪೆಟ್ಟಿಗೆಗಳು ಎರ ಚಲ್ಪಟ್ಟವು ಸರಕಾರದವರು ಅವುಗಳೆಲ್ಲಾ ಸುಣ್ಣಕಲ್ಲು ಸುರಿಸಿ ಮುಚ್ಚಿಸಬೇಕೆಂದು ಪ್ರಯತ್ನಪಟ್ಟಾಗ ವೈದಿಕ ಮಂಡಲಿಯವರು ಕೂ ಡದೆಂದು ಆಕ್ಷೇಪ ಮಾಡಿದ್ದಾರೆ ೪೮ ಗಂಟೆಗಳಿಂದೀಚೆಗೆ ಭೂಕಂಪಗಳೇ ನೂ ಆಗುತ್ತಾ ಇಲ್ಲ

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಲೇಖನದ ಲೇಖನದ ಮೇಲೂ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗ ನಡೆದ ವಿಷಯವಾಗಿರಬೇಕು ಅರ್ಧಕಾಲಮಿಗಿಂತ ಕಡಿಮೆಯಾಗಬಾರದು ಒಂದು ಕಾಲಮಿಗಿಂತ ಹೆಚ್ಚಾಗಬಾರದು. (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಿರಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವದಲ್ಲದೆ, ಹಣವನ್ನು ಮನಿಯಾರ್ಡರ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮಗೆ ಬರೆ ಯ ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸ್ವತ್ತಾಗಿ ಭಾವಿಸಲ್ಪಡುವವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ಬಾತ್ಮಿಯನ್ನು ಕಳುಹಿಸಿದ ಮೆ॥ ಎಂ. ನಾಗೇಶಶಾಸ್ತ್ರಿ, ಸ್ಕೂಲ್ ಮಾಸ್ಟರ್, ಷಿಕಾರಿಪುರ, ಇವರಿಗೆ ಈ ವಾರದ ಬಹುಮಾನವನ್ನು ಕೊಟ್ಟಿರುತ್ತೇವೆ]

ವ್ಯಾಪಾರದ ತಮಾಷ.

ಕಳೆದ ಶನಿವಾರ, ತಾ. ೧೮—೮—೦೬ ಈ ಊರ ಸಂತೆಯಾದ್ದರಿಂದ ಮನೆಗೆ ಬೇಕಾದ ಸಾಮಾನುಗಳನ್ನು ತರುವುದಕ್ಕಾಗಿ ಮನುಷ್ಯನೊಂದಿಗೆ ಹೊರಟೆನು. ಇದು ಗೌರಿ ಗಣೇಶನ ಹಬ್ಬದ ಸಂತೆಯಾದ್ದರಿಂದ ಎಂದಿಗಿಂತಲೂ ಭಾರಿ ಜನ ಸೇರಿತ್ತು. ಮೊದಲು ಅಕ್ಕಿಯನ್ನು ಕೊಳ್ಳಬೇಕೆಂದು ದೊಡ್ಡ ಮಾವಿನಮರದ ಸಮೀಪ ಸೇರಿದ್ದ ಅಕ್ಕಿ ಬುಟ್ಟಿಗಳ ಬಳಿಗೆ ಹೋಗುವಷ್ಟರಲ್ಲಿ ದೊಡ್ಡಮಳೆ ಸುರಿಯಿತು. ಗಿರಾಕಿಗಳೆಲ್ಲ ದೊಡ್ಡ ಮಾವಿನಮರದ ಬುಡಕ್ಕೆ ಬಂದು ಸೇರಿದರು ಅಕ್ಕಿ ಬುಟ್ಟಿಗಳ ಮಾಲೀಕರು ಮಾತ್ರ ಅಲ್ಲಲ್ಲಿಯೇ ಕೊಡೆಗಳನ್ನು ಹಿಡಿದು, ಬುಟ್ಟಿಗಳಿಗೆ ನೀರು ಬೀಳದಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿರುವಾಗ್ಗೆ ಇಬ್ಬರು ಕೊಡೆಯನ್ನು ಹಿಡಿದುಕೊಂಡು ಅಲ್ಲಿಗೆ ಬಂದರು

ಗಿರಾಕಿ—ಏನು ಅಳೆಯುತ್ತೀಯೋ? ಬೇಗ ಹೇಳು ಒಂದು ಮಾತು!

ಮಾಲೀಕಳು—ಇಲ್ಲರೀ, ಬಾವು ಹೆಚ್ಚಿಗೆ ಕೊಡುತ್ತೇನೆ, ಬೇಕಾದರೆ ಅಳಸಿಕೊಳ್ಳಿರಿ.

ಗಿರಾಕಿ—ನೋಡು, ಮಳೆ ಬೇಗೆ ಬಂತು! ಇನ್ನೊಂದು ಗಳಿಗೆಯೊಳಗೆ ಧಾರಣೆ ಇಳಿಯುತ್ತೆ. ಸುಮ್ಮನೆ ಕೆಡಬೇಡ, ಕೊಡು, ಕೊಡು.

ಇಷ್ಟರಲ್ಲಿ ಮಳೆ ಕಡಿಮೆಯಾಗಲು, ಮತ್ತೊಬ್ಬನು ಒಂದು ಗೋಣೀ ಚೀಲವನ್ನು ಹೆಗಲ ಮೇಲೆ ಹಾಕಿಕೊಂಡು ನಾವು ನಿಂತಿದ್ದ ಮರದ ಬುಡದಿಂದ ಅಲ್ಲಿಗೆ ಹೋದನು ಕೈಯಿಂದ ಅಕ್ಕಿ ರಾಶಿಯೊಳಗಡೆಯಿಂದ ಒಂದು ಮುಷ್ಟಿ ಅಕ್ಕಿಯನ್ನು ಹೊರಗೆ ತೆಗೆಯುತ್ತಾ, ಅತ್ತ ಇತ್ತ ನೋಡುತ್ತಾ, ಬಾಯಿಯಿಂದ "ಉಫ್" ಎಂದು ಕೈಯೊಳಗಿನ ಅಕ್ಕಿಯನ್ನು ಊದಿ ಕೊಟ್ಟದ್ದೆಯೆಂದು ತೋರಿಸುತ್ತಾ, ಹತ್ತಿರ ನಿಂತು ವ್ಯಾಪಾರ ಮಾಡುತ್ತಿದ್ದವನ ಸಂಗಡ—ಹ್ಯಾಂಗೋ? ಹ್ಯಾಂಗಳುತ್ತೀ? ಎನ್ನಲು, ಆತನು—ನೋಡಪ್ಪಾ, ಅದೆ ಮಾಡಬೇಡ ಎಂದರೆ ಕೇಳುವುದಿಲ್ಲ ಎಂದನು. ಆ ಮಾತನ್ನು ಕೇಳಿ ಆಶ್ಚರ್ಯ ತೋರ್ಪಡಿಸಿ—ಏನು ಅದೆ ಅಂದರೆ, ಎಂಟೂವರೆಯೋ? "ಜ್ ಮ ? ಹ್ ದು" ಎನ್ನಲು, ಆತನು—ಅಯ್ಯೋ ಹುಚ್ಚಪ್ಪಾ! ಈ ಅಕ್ಕೀನೇ? ನೋಡಲ್ಲಿ ಒಂಭತ್ತು ಸೇರು ಅಳಸ್ತಾರೆ ಎಂದು ದೂರದಲ್ಲಿದ್ದ ಅಕ್ಕಿ ರಾಶಿಯನ್ನು ತೋರಿಸಲು, ಆತನು—ಹೋ! ಹಾಂಗೋ ಎಂದು ಹೊರಟುಹೋಗುತ್ತಿದ್ದನು ಅವನು ಹೋದದ್ದನ್ನು ನೋಡಿ ನಮ್ಮ ಕಡೆ ಮನುಷ್ಯನು ಅಲ್ಲಿಗೆ ಹೋಗಿ ವಿಚಾರಿಸಿಕೊಂಡು ಬರುತ್ತೇನೆಂದು ಹೊರಟನು. ಇನ್ನೂ ಸ್ವಲ್ಪ ಮಳೆ ಬೀಳುತ್ತಿದ್ದದ್ದರಿಂದ ಮನುಷ್ಯನು ಬರುವ ವರಿಗೂ ಅಲ್ಲಿಯೇ ನಿಲ್ಲಬೇಕಾಯಿತು ಮೊದಲನೇ ಗಿರಾಕಿಯನ್ನು ಓಡಿಸಿದ ಎರಡನೇ ಗಿರಾಕಿಯು ಆ ಅಕ್ಕಿಯ ಮಾಲೀಕಳನ್ನು ನೋಡಿ—ಏನಮ್ಮಾ, ಹಾಗಾಯಿತೂ ಕೊಡು, ಎಂಟೂವರೆ ಮಾಡಬೇಡ, ಸುಮ್ಮನೆ ಯಾಕೆ ಕೂತುಕೊಳ್ಳುತ್ತೀ? ಅಗೋ, ನೋಡು; ಅಲ್ಲಿ ೯—೯॥ ಈ ದಿನ ಮಳೆಯಾದ್ದರಿಂದ ೧೦ ಸೇರ ವರಿಗೂ ಆಗಬಹುದು. ಏನಪ್ಪ ಉಲ್ಲ. ಅಳೆದುಬಿಡು ಎನ್ನಲು, ಮಾಲೀಕಳು—ಕಟ್ಟಿದ ಕೂಲಿ ಬರುವಹಾಂಗಿಲ್ಲಪ್ಪಾ! ಹ್ಯಾಂಗೆ ಕೊಡೋದು? ಎನ್ನಲು, ಹಿಂದುಗಡೆ ಕೂತಿದ್ದ ಅಕೆಯ ಯಜಮಾನಗೌಡನು—ಮಳೆ ಬಂದು ಯಾಪಾರ ಕೆಡಿಸಿತು ಅಳೆದು ಹಾಕು, ಮಾಡುವದೇನು? ಎನ್ನುತ್ತಾ, ಪಕ್ಕಾ ಸೇರನ್ನು ಕೈಗೆ ಕೊಟ್ಟು, ತಾನು ಎಲೆ ಅಡಿಕೆ ಹೊಗೆಸೊಪ್ಪು ಜಗೆಯುತ್ತಾ, ಅಲ್ಲಲ್ಲಿಯೇ ಉಗುಳುತ್ತಾ ಕೂತನು ಇಷ್ಟರಲ್ಲಿಯೇ ಹೊನ್ನಾಳಿ ಗಾಡಿಯವನೊಬ್ಬನು ಹೆಗಲ ಮೇಲೆ ಚೀಲ ಹಾಕಿಕೊಂಡು ಬಂದು ನಿಂತು—ಏನಪ್ಪಾ ಯಜಮಾನೀ, ಅಳೆದು ಹಾಕು. ಎಂಟೂ ಪಾವಿಗೆ ಹೆಚ್ಚಾಗಿ ಎಲ್ಲಿಯೂ ಸಿಕ್ಕದಿದ್ದರೆ ಇಲ್ಲಿಗೇ ಬರುವುದಾಗಿ ಹೇಳಿದ್ದೆನಪ್ಪ. ನಮ್ಮ ಗಾಡೀ ಕಟ್ಟಬೇಕು, ಹೊತ್ತಾಯಿತು ಅಳಿ ಎಂದು ಚೀಲಾ ಹಿಡಿದನು ಎಂಟೂವರೆ ಹಾಂಗೆ ಒಪ್ಪಿ ಆಗೀತವ್ವೋ; ತೆಗಿತೆಗಿಯೋ ಎಂದು ತನ್ನ ಚೀಲವನ್ನು ಅವಸರದಿಂದ ಹಿಡಿದು—ಅಳಿ ಬೇಗ ಎಂದು ಆ ೨ ನೇ ಗಿರಾಕಿಯು ಅಂದ ಕೂಡಲೇ ಆ ಹೆಂಗಸು ಬೆರಗಾಗಿ—ಎಂಟೂವರೆ ಕೊಡೋದಿಲ್ಲವ್ವೋ, ಅವರು ಎಂಟೂ ಪಾವಿಗೆ ಒಪ್ಪಿಕೊಂಡಿದ್ದಾರೆ ಬೇಕಾದರೆ ನೀನೂ ಹಾಂಗೇ ತಗೋ ಎಂದು ಮಾ ಗಾಳು ಸಹ ಬಿಟ್ಟಳು ಆದಕ್ಕಾತನು—ನೀನು ಕೊಡದಿದ್ದರೆ ನಾನು ಬಿಡೋದಿಲ್ಲ (ಗಿರಾಕಿ ಕಡೆಗ) ನೀನ್ಯಾಕ್ಕಯ್ಯಾ, ಮಧ್ಯೆ ಬಂದು ನನ್ನ ಯಾಪಾರ ಕೆಡಿಸ್ತೋಕೆ? ತೆಗಿ ನಿನ್ನ ಚೀಲಾ ಎಂದು ಗದ್ದಲ ಮಾಡಲು, ನನ್ನ ಚೀಲಾ ಎಳೆದು ಹಾಕುವುದಕ್ಕೆ ನೀನ್ಯಾರು? ಎಂದು ಆ ಇಬ್ಬರು ಗಿರಾಕಿಗಳಿಗೂ ಬಲವಾದ ವಾಗ್ವಾದ ಬಿತ್ತು ಈ ಮಧ್ಯೆ ಯಜಮಾನ ಗೌಡನು ಪಂಚಾಯಿತಿ ಮಾಡಲಿಕ್ಕೆ ಎದ್ದು ನಿಂತು—ಹೌದಯ್ಯಾ, ಹೌದು, ಆಗ ನಾಳೆ ಬಂತು, ಒಂಬತ್ತೂವರೆ ಸೇರು ಅಳೆಯುತ್ತಿದ್ದರು, ಈಗ ಮಳೆ ಬಿಟ್ಟಿತು. ಅಲ್ಲಿ ಎಂಟೇ ಸೇರಾಯಿತು. ಮೊದಲು ಕೇಳಿ ಹೋದವರು ಎಂಟೂ ಪಾವಿಗೆ ಇಲ್ಲಿಗೆ ಬಂದಿದಾರೆ. ಇದು ಬಿಟ್ಟು ನಿನಗೆ ಎಂಟೂವರೆ ಅಳಿಯಬೇಕೋ? ಅಲ್ಲಿ ೯॥ ಸೇರಿನ ಅಕ್ಕಿ ಬಿಟ್ಟು, ಇಲ್ಲಿ ೮॥ ಗೆ ಯಾಕೆ ಗುದ್ದ್ಯಾಟ? ಎನ್ನುವಷ್ಟರಲ್ಲಿ, ನಮ್ಮ ಕಡೆ ಮನುಷ್ಯನು ತಿರಿಗಿ ಬಂದು, ಈ ಅಕ್ಕಿಯೇ ಉತ್ತಮವೆಂದನು ನಾನು ಅಲ್ಲಿಗೆ ಹೋಗಲು ಆಗ ಗೌಡನು—ನಮ್ಮ ರಾಯರಿಗೆ ಅಳೆದು ಹಾಕುತ್ತೇನೆ, ನಡೇರಿ, ನಿಮ್ಮಿಬ್ಬರಿಗೂ ಬೇಡ ಎಂದು ನನ್ನ ಚೀಲಕ್ಕೆ ಅಳೆದು ಹಾಕಲು, ಅವರು ಹಿಂದಿರುಗಿದರು ಈ ಗೌಡನ ಪಂಚಾಯಿತಿಯು ತನಗೂ ತನ್ನ ಹೆಂಡತಿಗೂ ಲಾಭಕರವಾಗಿದ್ದದ್ದಲ್ಲದೆ ಮೋಸಗಾರ ಗಿರಾಕಿಗೆ ಪ್ರತ್ಯುತ್ತರ ಕೊಡಲಿಕ್ಕೆ ಅಸ್ಪದ ಸಿಕ್ಕದ ಹಾಗೆ ಮರ್ಮಭೇದಕವಾಗಿ ಅತಿ ಚಮತ್ಕಾರವಾಗಿದ್ದು ಕೇಳತಕ್ಕವರಿಗೆ ಒಳ್ಳೇ ವಿನೋದವನ್ನುಂಟುಮಾಡಿತು

ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.
ಶಿಡ್ಲಗಟ್ಟದಲ್ಲಿ ನಡೆದ ಮೋಸಕೃತ್ಯಗಳು

೧ ಇದೇ ಶಿಡ್ಲಗಟ್ಟದ ಟೌನಲ್ಲಿ ಈಗ್ಗೆ ಕೆಲವು ದಿನಗಳ ಮುಂಚೆ ಹಿಂದುಸ್ಥಾನದಿಂದ ಒಬ್ಬ ಮುಸಲ್ಮಾನ ವೈದ್ಯನು ತಾನು ಕಣ್ಣುಗಳಲ್ಲಿ ಪೊರೆಗಳು ತೆಗೆಯುತ್ತೇನೆ, ಮತ್ತು ಕಣ್ಣುಗಳ ವಿಷಯದಲ್ಲಿ ಎಂಥಾ ರೋಗವಿದ್ದಾಗ್ಯೂ ವಾಸಿ ಮಾಡುತ್ತೇನೆ ಎಂದು ನಟಿಸಿ, ಬಹು ಔಷಧ ಸಾಮಾನುಗಳನ್ನು ಸಿದ್ಧಪಡಿಸಿಕೊಂಡು ಒಂದು ಗುಡಿಯಲ್ಲಿ ಠಾಣೆ ಹಾಕಿದನು ಆಗ ಕಣ್ಣುಗಳ ಪೊರೆಗಳು ತೆಗೆಸಿಕೊಳ್ಳುವದಕ್ಕೆ ಜನಗಳು ಬರುವದಕ್ಕೆ ಶುರು ಮಾಡಿದರು ಅವನು ಪೊರೆ ಯಾರಿಗಾದರೂ ತೆಗೆದರೆ ಅಂಥಾವರ ಕಣ್ಣಿಗೆ ಪಟ್ಟಿ—ಹದಿನೈದು ದಿನದ ವರೆಗೂ ಆ ಪಟ್ಟಿ ತೆಗೆಯಕೂಡದು, ನಂತರ ತೆಗೆಯಬಹುದು ಎಂದು ಹೇಳುತ್ತಾ ಬಂದನು. ಹದಿನೈದು ದಿನಗಳಲ್ಲಿ ಸುಮಾರು ೧೨೫ ರೂಪಾಯಿ ಸಂಪಾದಿಸಿ, ಇಲ್ಲಿನ ಮುಸಲ್ಮಾನ ದೊಡ್ಡ ಮನುಷ್ಯರಲ್ಲಿ ಬರ್ನೀ ಡಬ್ಬಲ್ ಕೋಟುಗಳು ಹಾಕಿಕೊಳ್ಳುವದಕ್ಕೆ ತೆಗೆದುಕೊಂಡು ಮುತ್ತು ಮತ್ತು ಬಿಟ್ಟಿಗಳು ಎಲ್ಲಾ ಗಂಟು ಕಟ್ಟಿಕೊಂಡು, ರಾತ್ರಿ ಹೊತ್ತು ತನ್ನ ಪಕ್ಕದಲ್ಲಿ ಮಲಗಿದ್ದವರಿಗೆ ತಿಳಿಯದಂತೆ ಪತ್ತೆಯಿಲ್ಲದೆ ಪರಾರಿಯಾದನು ಹಳ್ಳಿಹಳ್ಳಿಗಳಿಂದ ಬಂದ ಜನಗಳೂ ಕಣ್ಣುಗಳಿಗೆ ಪಟ್ಟಿ ಕಟ್ಟಿರತಕ್ಕಂಥಾ ಜನಗಳೂ ಮಾರನೇ ದಿನ ಬೆಳಿಗ್ಗೆ ಬಂದು ನೋಡಿದಾಗ ಅಲ್ಲಿ ಕೆಲವು ಸೀಸಾಯಿಗಳು ಮಾತ್ರ ಬಿದ್ದಿದ್ದವು ಈಗಲೂ ಆ ಜನಗಳ ಕಣ್ಣುಗಳಲ್ಲಿ ಬೆಳಕು ಹೋಗಲಿಲ್ಲ. ನೋವಿನಿಂದ ಗೋಳಾಡುತ್ತಾ ಇದಾರೆ ಮೊದಲು ಸ್ವಲ್ಪ ಕಾಣಿಸುತ್ತಾ ಇತ್ತು. ಈಗ ಕುತರಾಂ ಕಾಣಿಸುವದಿಲ್ಲ ಇಂಥಾ ಮೋಸಗಾರರನ್ನು ಸರ್ಕಾರದವರು ಹಿಡಿಸಿ ಶಿಕ್ಷಿಸುತ್ತಾರೆಂದು ನಿರೀಕ್ಷಿಸುತ್ತೇನೆ

೨ ಮೇಲ್ಕಂಡ ಮೋಸಗಾರಿಕೆ ನಡೆದ ಎರಡು ದಿನದಲ್ಲಿ ಇದೇ ಊರಿಗೆ ಶ್ರೀನಿವಾಸಪುರದಿಂದ ಇಬ್ಬರು ಮುಸಲ್ಮಾನರು ಗಾಡಿಯಲ್ಲಿ ಕೆಲವು ರಗಾಯಿಗಳನ್ನು ಹಾಕಿಕೊಂಡು ಮಾರುವದಕ್ಕೆ ಬಂದರು. ಅವರು ಅಂಗಡಿಗಳಲ್ಲಾ ಮಾರು ಬಾಲಿ ಗಾಡಿ ನಿಲ್ಲಿಸಿದ್ದರು ಆಗ ಮತ್ತೊಂದು ಊರಿನಿಂದ ಒಬ್ಬ ಹಿಂದುವು ಶ್ರೀನಿವಾಸಪುರಕ್ಕೆ ಗಾಡಿ ಬರುತ್ತೇನೋ ಎಂದು ಅವರನ್ನು ಕೇಳಿ ಎರಡು ರೂಪಾಯಿ ಬಾಡಿಗೆ ಮೊಕರ್ರು ಮಾಡಿ—ನಾನು ಇದೇ ಊರು ಉಲ್ಲೂರು ಪೇಟೆಯಲ್ಲಿರುವ ತೆಗ್ಗನಾರಪ್ಪನ ಮನೆಯಲ್ಲಿ ಇಳಿದು ಇದ್ದೇನೆ ಗಾಡಿ ಅಲ್ಲಿಗೆ ಹೊಡೆದುಕೊಂಡು ನಡೀರಿ ಎಂದು ಹೇಳಿಕೊಂಡು ಹೋಗಿ ಎತ್ತುಗಳು ಆತನ ಮನೆಯಲ್ಲಿಯೇ ಕಟ್ಟಿಸಿ, ಗಾಡಿಯವನನ್ನು ಗಾಡಿಯಲ್ಲಿ ಕೂಡಿಸಿ, ಸದರಿ ನಾರಪ್ಪನ ಹತ್ತಿರಕ್ಕೆ ಹೋಗಿ ನನಗೆ ಕೆಲವು ಒಳ್ಳೇ ವಸ್ತ್ರಗಳು ಖರೀದಿಗೆ ಬೇಕು ಎಂದು ಕೇಳಿ, ವಸ್ತ್ರಗಳ ಗಂಟು ಕೈಲಿ ತೆಗೆದುಕೊಂಡು, ಮೊಂತಿ ನಾರಣಪ್ಪನವರ ಅಂಗಡಿಯಲ್ಲಿ ತೋರಿಸಿಕೊಂಡು ಬರುತ್ತೇನೆ ಎತ್ತುಗಳು ನಿಮ್ಮ ಮನೆಯಲ್ಲಿಯೇ ಇರಲಿ, ಜಾಗ್ರತೆಯಾಗಿ ಬರುತ್ತೇನೆ ಎಂದು ಹೇಳಿ ಹೋದವನು ಇದುವರಿವಿಗೂ ಬರಲಿಲ್ಲ. ಆಗ ಮೇಲ್ಕಂಡ ಗಾಡಿಯವನು ಬಹಳ ಹೊತ್ತು ಕಾದಿದ್ದನು ಆದರೂ ಆ ಮೋಸಗಾರನು ಬರಲಿಲ್ಲ ಆಗ ಗಾಡಿಯವನು ತನ್ನ ಗಾಡಿ ಕಟ್ಟಿಕೊಂಡು ಊರಿಗೆ ಹೋಗೋಣವೆಂದು ಎತ್ತುಗಳು ಬಿಚ್ಚುವದಕ್ಕೆ ಬಂದನು. ಸದರಿ ನಾರಪ್ಪನು—ಎತ್ತುಗಳು ತೆಗೆದುಕೊಳ್ಳಕೂಡದು, ನಮ್ಮ ವಸ್ತ್ರಗಳು ನಿಮ್ಮ ಗಾಡಿ ಯಜಮಾನ ತೆಗೆದುಕೊಂಡು ಹೋಗಿದಾನೆ, ಬರುವ ತನಕ ಹೋಗಕೂಡದು ಎಂದು ತಡೆ ಹಾಕಲು, ಗಾಡಿಯವನು—ಅವನ್ಯಾರು, ನಾನ್ಯಾರು? ನನ್ನ ಕೈಲಿ ನೀವು ವಸ್ತ್ರಗಳು ಕೊಡಲಿಲ್ಲ. ನನ್ನ ಗಾಡಿ ಬಿಡಿ ಎಂದು ಗಾಡಿ ತೆಗೆದುಕೊಂಡು ಹೊರಟು ಹೋದನು.

ಮೇಲಾಟಕ್ಕಾಗಿ ಬಂದ ಮತ್ತೊಂದು ಬಾತ್ಮಿ.
ವೇಷಧಾರಿಗಳ ತಂತ್ರೋಪಾಯ.

ನಾನು ವಾಸಮಾಡುವ ದೊಡ್ಡ ಬಳ್ಳಾಪುರದ ತಾಲ್ಲೂಕು ತೂಬಗೆರೆ ಗ್ರಾಮಕ್ಕೆ ೩ ಮೈಲಿ ದೂರದಲ್ಲಿರುವ ನನ್ನ ಶ್ಯಾನುಭೋಗಿಕೆ ಗ್ರಾಮವಾದ ಕಂಟಿಗಾನಹಳ್ಳಿ ಗ್ರಾಮಕ್ಕೆ ನಾನು ಇದೇ ತಿಂಗಳು ೧೯ ನೇ ತಾ. ಭಾನುವಾರ ಬೆಳಗಿನ ಝಾಮಕ್ಕೆ ಎದ್ದು ಸರ್ಕಾರಿ ಕೆಲಸದ ಉದ್ದಿಶ್ಯ ಹೋಗಿ ಕರ್ಮ ಕಡೆ ನೋಡಿಕೊಂಡು, ಊರೊಳಕ್ಕೆ ಹೋಗುವಾಗ್ಗೆ ಸುಮಾರು ೮ ಘಂಟೆಯಾಗಿತ್ತು ಆಗ ಅಲ್ಲಿ ಒಂದು ಆಶ್ಚರ್ಯವಾದ ಸಂಗತಿ ನಡೆಯಿತು ಏನಂದರೆ, ಒಬ್ಬ ಬೈರಾಗಿಯು ಸುಮಾರು ೪೦ ವರುಷ ವಯಸ್ಸಿನವನಾಗಿದ್ದ ೬–೩ ಅಡಿ ಎತ್ತರ ಉಂಟು ತಲೆಯಿಂದ ಹಿಡಿದು ಕಾಲಿನ ಹಿಮ್ಮಡಿ ವರಿವಿಗೂ ಜಡೆಯನ್ನು ಇಳೇ ಬಿಟ್ಟುಕೊಂಡು ವಿಭೂತಿ ರುದ್ರಾಕ್ಷಿ ಧರಿಸಿ ಕಾವಿ ಬಟ್ಟೆ ಹೊದ್ದಿದ್ದ ಆ ದಿನ ಮೋಡ ಮುಚ್ಚಿಕೊಂಡು ಸಣ್ಣ ಹನಿ ಬೀಳುತ್ತಾ ಇದ್ದದ್ದರಿಂದ ತನ್ನ ಕೈಲಿ ಒಂದು ಕೊಡೆ ಸಹಾ ಹಿಡಿದಿದ್ದ. ಇವನ ಹಿಂದೆ ಒಬ್ಬ ಶಿಷ್ಯನು ಸಹಾ ಇದ್ದನು. ಇವನನ್ನು ನೋಡಿದರೆ ಒಬ್ಬ ಮಹಾ ಸಿದ್ಧಪುರುಷನಂತೆ ಕಾಣುತ್ತಿದ್ದನು ಇಂಥಾ ಮನುಷ್ಯನು ಮಾಡಿದ ಕಾರ್ಯವೇನಂದರೆ ಇವನು ಕೈಲಿ ಹಿಡಿದಿದ್ದ ಘಂಟೆಯನ್ನು ಬಾರಿಸುತ್ತಾ, ತನ್ನ ಶಿಷ್ಯನ ಸಮೇತ ಮೊದಲು ನಡುಬೀದಿಯಲ್ಲಿ ಕೊಂಚಹೊತ್ತು ನಿಂತುಕೊಂಡು, ತನಗೆ ತೋಚಿದ ಕೆಲವು ಮಾತನ್ನು ಹೇಳಿ ನಂತರ ಪ್ರತಿ ಒಂದು ಮನೆಗೂ ಹೋಗುತ್ತಾ, ಆ ಮನೆಯ ಯಜಮಾನನ ಹೆಸರನ್ನು ತಾನೇ ತಾನೇ ಕೂಗುವದು, ಅವರಿಗೆ ಭೂತಭವಿಷ್ಯತ್ ವರ್ತಮಾನಗಳ ಹೇಳುವದು, ಕೆಲವರಿಗೆ ಕೈನೋಡಿ ಹೇಳುವದು, ಕೆಲವರಿಗೆ ಮುಖವನ್ನು ನೋಡಿ ಹೇಳುವದು, ನಂತರ ಅವರಿಂದ ದಕ್ಷಿಣೆ, ಬಟ್ಟೆ, ಅಕ್ಕಿ, ಬೇಳೆ ಮುಂತಾದ ಪದಾರ್ಥಗಳು ತೆಗೆದುಕೊಳ್ಳುವದು, ಅವನ್ನು ಶಿಷ್ಯನು ತನ್ನ ಚೀಲಕ್ಕೆ ಸೇರಿಸಿಕೊಳ್ಳುವದು, ಈ ರೀತಿಯು ಮನೆಮನೆಗೂ ಮಾಡುತ್ತಾ ಬರಲು, ಇದು ನೋಡಿದ ಜನಗಳಿಗೆ ಬಹು ಆಶ್ಚರ್ಯವನ್ನು ಉಂಟುಮಾಡುತ್ತಿತ್ತು ಹೀಗೆ ಮಾಡುತ್ತಾ ಇವನು ನೀರಗಂಟಿ ದಾಸಪ್ಪ ಎಂಬುವನ ಮನೆ ಹತ್ತಿರಕ್ಕೆ ಬಂದು, ಎಲ್ಲರಿಗೂ ಅದೃಷ್ಟವನ್ನು ಕುರಿತು ಹೇಳಿ—ಈ ಮನೆಯಲ್ಲಿ ಇನ್ನು ಸ್ವಲ್ಪ ದಿವಸದಲ್ಲಿ ಒಂದು ಕೇಡು ಸಂಭವಿಸುವದೆಂತಲೂ, ಗೌರಿ ಹಬ್ಬದ ದಿವಸ ಎಲ್ಲರ ಮನೆಯಲ್ಲಿಯೂ ಹಬ್ಬವನ್ನು ಮಾಡುತ್ತಿದ್ದರೆ ಈ ಮನೆಯಲ್ಲಿ ಗೋಳಾಟ ಉಂಟಾಗುತ್ತದೆಂತಲೂ ಹೇಳುವಲ್ಲಿ, ಆ ಮನೆ ಯಜಮಾನನು ಬಹಳ ಘಾಬರಿಪಟ್ಟು—ಸ್ವಾಮಿ, ಅದನ್ನು ತಾವು ಪರಿಹರಿಸಬೇಕೆಂತಲೂ ಅದನ್ನು ಪರಿಹರ ಮಾಡಿಕೊಡಬೇಕೆಂತಲೂ ಅವನು ಅಲ್ಲಿ ಇದ್ದವರ ಸಹಿತ ಕೇಳಿಕೊಂಡದ್ದರ ಮೇಲೆ—ಕಷ್ಟಸಾಧ್ಯವೇ ಅದನ್ನು ನಿವಾರಣೆ ಮಾಡಬೇಕೆಂತ ಹೇಳಿ, ಅವನ ಮೇಲೆ ಇವನು ಬಹು ಕನಿಕರವನ್ನು ತೋರಿಸಿದವನಂತೆ ನಟಿಸಿ, ನಂತರ—ಈ ಮನೆ ಈಗ್ಗೆ ಸುಮಾರು ಒಂದು ತಿಂಗಳ ಕೆಳಗೆ ಒಂದು ಕ್ಷೇಮಂಕಾರಿ (ಗರುಡಪಕ್ಷಿ) ಕೂತುಕೊಂಡು ಇತ್ತು ಅದನ್ನು ನೀವು ಕಾಣಿರಿ ಅದಕ್ಕೆ ಈ ಮನೆಯನ್ನು ತಕ್ಷಣ ಬಿಟ್ಟು ಮನೆ ಯಜಮಾನನು ಶಾಂತಿ ಮಾಡಿಕೊಳ್ಳಬೇಕಾಗಿತ್ತು ಅದು ತಪ್ಪಿಹೋದ್ದರಿಂದ ಈ ಮನೆ ದೊಡ್ಡ ಕೇಡು ನಿಗೆ ಪ್ರಾಣದ ಮೇಲೆ ಬಂದಿದೆ, ನನಗೆ ಈ ರೀತಿಯಾಗಿ ಕಾಣುತ್ತಾ ಎಂಬೀ ವಗೈರೆ ಮಾತುಗಳನ್ನು ಹೇಳಲು, ಅವನು ಮತ್ತಷ್ಟು ಘಾಬರಿಬಿದ್ದು—ಈ ಕಷ್ಟವನ್ನು ತಾವು ನಿವಾರಣೆ ಮಾಡಬೇಕೆಂತ ಬೇಡಲು ಅವನು ತನ್ನ ಶಿಷ್ಯನ ಹತ್ತಿರ ಇದ್ದ ಚೀಲವನ್ನು ತೆಗೆದುಕೊಂಡು ಹಿತ್ತಿಲಲ್ಲಿ ಕೂತುಕೊಂಡು ಮಡಿಯನ್ನು ತೆಗೆದು—ಈ ಮನೆಗೆ ವಿಘ್ನವನ್ನು ಮಾಡಬೇಕು ಈ ಮನೆ ದೋಷ ಹೋಗುವುದಕ್ಕೆ ಒಂದು ಯಂತ್ರಧಾರಣೆ ಮಾಡಬೇಕು ಎಂದು ಹೇಳಿ, ಅಲ್ಲಿ ಮನಸ್ವಿ ರಂಗೋಲಿ ಹಾಕಿದು, ಚಕ್ರಾಕಾರ ಮಂಡಲ ಬರೆಸಿ, ನಾಲ್ಕು ಮೂಲೆಗೂ ನಾಲ್ಕು ಹಣತೆ ಇರಿಸಿ, ಪೂಜೆಗೆ ಒಂದು ರೂಪಾಯಿ ಇರಿಸಿ, ಪೂಜೆಮಾಡಿ ಒಂದು ಕೋಳಿಯನ್ನು ಕೊಯ್ದು, ಅದನ್ನು ತಾನೇ ತಗದುಕೊಂಡು, ಮನೆ ಯಜಮಾನನ ತಲೆ ಮೇಗಣಿಂದ ಮನೆ ಸುತ್ತ ನಿವಾಳಿಸುತ್ತಾ ಸುತ್ತ ನಾಲ್ಕು ಮೂಲೆಗೂ ನಾಲ್ಕು ಬೇರನ್ನು ಹೂಳಿಸಿ ಯಜಮಾನನ ಮಗ ಆ ದಿನ ಊರಲ್ಲಿ ಇರಲಿಲ್ಲವಾದ್ದರಿಂದ ಅವನಿಗೆ ಕಟ್ಟಬೇಕಾದ ಯಂತ್ರವನ್ನು ಅವನ ಹೆಂಡತಿಗೆ ಕಟ್ಟಬೇಕೆಂತ ಹೇಳಿ, ಆ ಬೇರು ಕಟ್ಟಿ, ಅಕ್ಕಿ ಬೇಳೆ ದಕ್ಷಿಣೆ ಸಮೇತ ಹೊರಟುಹೋದನು ಇದು ನೋಡಿ ನನಗೆ ಬೇಜಾರಾಗಿ ಊರಿಗೆ ಬಂದೆನು ಪುನಃ ಅವನು ಊರಿನ ಒಬ್ಬ ಮನುಷ್ಯನಿಗೆ ತನಗೆ ಬಂಗಾರ ಮಾಡುವದು ಬರುತ್ತದೆ, ಅದನ್ನು ಮಾಡತಕ್ಕ ಮೂಲಿಕೆಯನ್ನು ತೋರಿಸುತ್ತೇನೆಂತ ಆಸೆಯನ್ನು ಹುಟ್ಟಿಸಿ, ಅವನಿಂದಲೂ ಪ್ರಯೋಜನವನ್ನು ಮಾಡಿಕೊಂಡನೆಂಬದಾಗಿ ತಿಳಿಯಬಂತು. ಹೀಗೆ ಇವನು ಭಂಗಾರ ಮಾಡುವದು ಬಲ್ಲವನಾಗಿದ್ದ ಪಕ್ಷದಲ್ಲಿ ಇವನು ಈ ರೀತಿ ತಂತ್ರೋಪಾಯವನ್ನು ಮಾಡುತ್ತಿರಲಿಲ್ಲ ಈ ರೀತಿಯಾಗಿ ಜನಗಳು ಕೆಲವು ವಿಧ ವೇಷಧಾರಿಗಳಾಗಿ ಜನಗಳನ್ನು ಮೋಸಗೊಳಿಸಿ, ದ್ರವ್ಯಾರ್ಜನೆ ಮಾಡಲೆತ್ನಿಸಿದಾರೆ. ಇಂಥಾ ಸನಾಗರೀಕ ಕಾಲದಲ್ಲಿಯೂ ಕೆಲವು ಬುದ್ಧಿಹೀನರಾದ ಹಿಂದುಗಳು ಇವರ ತಂತ್ರೋಪಾಯಗಳಿಗೆ ಮರುಳಾಗಿ ಕೆಡುತ್ತಿದಾರಲ್ಲಾ ಎಂಬ ವ್ಯಸನಪಡಬೇಕಾಗಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೧೩೫೩ ಜನರಿಗೆ ಪ್ಲೇಗು ತಗಲಿ ೯೩೩ ಮರಣಗಳಾದವು

✦✦✦✦

ಬರ್ಮಾ ಆಫೀಸಕ್ಕೆ ಸೇರಿದ ಮಿಲಿಟರಿ ಪೋಲೀಸಿನವರಲ್ಲಿ ೩ ಮಂದಿ ಒಂದು ಬೌದ್ಧ ದೇವಸ್ಥಾನಕ್ಕೆ ಕನ್ನಾ ಹಾಕಿದರೆಂದು ಪ್ರಸಿದ್ಧವೆ ಬಂದಿದೆ.

✦✦✦✦

ಇನ್ನು ಕೆಲವು ದಿವಗಳೊಳಗಾಗಿ ಈಗ್ಗಿಂತಲೂ ದಪ್ಪನಾದ ೩ ಕಾಸಿನ ಪೋಸ್ಟ್ ಕಾರ್ಡುಗಳು ತಯಾರಾಗಿ ಮಾರಾಟವಾಗುವವು. ತಿಳಿದುಬಂದಿದೆ.

✦✦✦✦

ಮಾಲ್ಯಾಬಿನಲ್ಲಿ ಒಬ್ಬ ಭಾರೀ ನಾಯರ್ ಸಾಹುಕಾರನ ಪ್ರೀತ್ಯವಾದ ಆನೆಯು ಸೊಂಡಲನ್ನು ಒಂದು ಹುಚ್ಚುನಾಯಿ ಕಚ್ಚಿದರಿಂದ ಆನೆಂಟು ನಾಲ್ಕಾರು ದಿನ ಸರಳಿ ಮೃತಪಟ್ಟಿತು.

✦✦✦✦

ಲಂಡನ್ ಪಟ್ಟಣದಿಂದ ಕಲ್ಕತ್ತೆಗೆ ಬಂದ ಹಡಗಿನಲ್ಲಿ ಬೆಳ್ಳಿ ಗಟ್ಟಿಗಳು ಇದ್ದವು ಈ ಪೈಕಿ ೧೨,೦೦೦ ರೂಪಾಯಿ ಕ್ರಯದ ಒಂದು ಗಟ್ಟಿ ಕಳುವಾಯಿತು ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ

✦✦✦✦

ಹಿಂದುಸ್ಥಾನದ ಎಲ್ಲಾ ಆಧಿಪತ್ಯಗಳಲ್ಲೂ ವ್ಯವಸಾಯ ಶಾಸ್ತ್ರವನ್ನು ಕಲಿಸುವಂಥಾ ವಿದ್ಯಾಶಾಲೆಗಳನ್ನು ಹೇರಳವಾಗಿ ಇಟ್ಟು ನಡಸಬೇಕೆಂದು ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಗವರ್ನಮೆಂಟಿಗೆ ಬರೆದು ತಿಳಿಸಿದಾರೆ.

✦✦✦✦

ಪೂನಾ ಪಟ್ಟಣದಲ್ಲಿ ಒಬ್ಬ ಮನುಷ್ಯನು ಅವನ ಎರಡನೇ ಹೆಂಡತಿಯೂ ಸೇರಿ ಮೊದಲನೆಯ ಹೆಂಡತಿಯ ಮಗಳನ್ನು ಕಟ್ಟಿ ಮೈಗೆಲ್ಲಾ ಬರೆ ಹಾಕಿದರು. ಇದಕ್ಕಾಗಿ ಆ ಗಂಡ ಹೆಂಡತಿ ತಲಾ ಆರಾರು ತಿಂಗಳ ಕಠಿಣಸಜಾ ವಿಧಿಸಲ್ಪಟ್ಟಿದೆ.

ಪೂನಾ ಪಟ್ಟಣದ ಪ್ರಸಿದ್ಧ ಮಿ॥ ಗೋಖಲೆಯವರು ಹಿಂದುಸ್ಥಾನ ರಾಜಕೀಯ ವಿಷಯಗಳನ್ನು ತಿಳಿಸುವುದಕ್ಕೆ ವಿಲಾಯತಿಗೆ ಹೋಗಿದ್ದರು. ಇವರು ಈ ತಿಂಗಳ ೧೮ ಕ್ಕೆ ಅಲ್ಲಿಂದ ಹೊರಟು ಸೆಪ್ಟಂಬರ್ ೭ ಕ್ಕೆ ಬೊಂಬಾಯಿಗೆ ಬಂದು ಜಹಜು ಇಳಿಯುವವರಾಗಿದಾರೆ

****

ಪೂನಾ ಪಟ್ಟಣದಲ್ಲಿ ತಂದೆಯೂ ಎರಡನೆ ಹೆಂಡತಿಯೂ ಸೇರಿ ಮೊದಲನೆ ಹೆಂಡತಿ ಮಗಳಾದ ೧೬ ವರುಷದ ನಜೀರಾಬಾಯಿ ಎಂಬ ಹುಡುಗಿಯನ್ನು ಕಟ್ಟಿಹಾಕಿ ಕಾಲುಗಳ ಮೇಲೆ ೭ ೮ ಕಡೆ ಬರೆ ಹಾಕಿದರೆಂದು ಅವಳು ಆ ತಂದೆತಾಯಿಗಳ ಮೇಲೆ ಮೊಕದ್ದಮೆ ತಂದಿದಾಳೆ

****

ಕಲ್ಕತ್ತಾ ಪಟ್ಟಣದಲ್ಲಿ ಸ್ವದೇಶೀ ಸಭೆ ನಡೆಯುತ್ತಿದ್ದಾಗ ಒಂದು ದಿವಸ ಹುಡುಗನೊಬ್ಬನು ವಂದೇಮಾತರಂ ಎಂದು ಕೂಗುತ್ತಾ ಬೀದಿಗಳಲ್ಲಿ ಹೋಗುತ್ತಿದ್ದನು. ಪೋಲೀಸಿನವರು ಅವನನ್ನು ಹಿಡಿದು ೫ ರೂಪಾಯಿ ಜುಲ್ಮಾನೆ ಹಾಕಿದರು. ಅವನು ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ

****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬಾರಾಸೇತ್ ಎಂಬ ಊರಿನಲ್ಲಿ ಎರಡು ಗುಂಪುಗಳಾಗಿ ಒಬ್ಬರ ಮೇಲೊಬ್ಬರು ಬಿದ್ದು ಕಾದಾಡಿದರು. ಬಹಳ ಜನರು ಪೆಟ್ಟುಪಟ್ಟರು. ಹತ್ತು ಮಂದಿಗೆ ಗಾಯಗಳಾಗಿವೆ. ಒಂದೂರಿನ ಜನರು ಕತ್ತಿ, ಈಟಿ ಮುಂತಾದ ಆಯುಧಗಳನ್ನು ಹಿಡಿದುಕೊಂಡು ಓಡಿಹೋದರೆಂದು ತಿಳಿಯುವುದು

****

ಕಳೆದ ವಾರ ಉತ್ತರದೇಶದಲ್ಲಿ ಪ್ಲೇಗಿನಿಂದ ಸತ್ತ ಜನರು ಎಂದರೆ ಹಿಂದಿನ ವಾರಕ್ಕಿಂತ ೧೫೦೦ ಮಂದಿ ಕಡಿಮೆ. ಪ್ಲೇಗು ಹೆಚ್ಚಾಗಿದ್ದ ಸಂಯುಕ್ತ ಅಧಿಪತ್ಯಗಳಲ್ಲಿ ೧೧,೦೦೦ ಜನರೂ ಅಜ್ಮೀರದಲ್ಲಿ ೫೦೦ ಜನರೂ ಸತ್ತರು. ಹಿಂದಿನ ಸಂಖ್ಯೆಗೆ ಹೋಲಿಸಿದರೆ ಈ ಕಡೆಗಳಲ್ಲಿ ಪ್ಲೇಗು ಕಡಿಮೆಯಾಗುತ್ತಾ ಬಂದಿದೆ

****

ರಂಗೂನ್ ಪಟ್ಟಣದಲ್ಲಿ ಲೆಫ್ಟಿನೆಂಟ್ ಗವರ್ನರವರು ರೈಲಿನ ಮೇಲೆ ಪ್ರಯಾಣ ಮಾಡುತ್ತಿದ್ದಾಗ ರೈಲ್ ಗಾಡಿ ನಡೆಸುತ್ತಿದ್ದ ಡೇವಿಸ್ ಎಂಬ ಯೂರೋಪಿಯನ್ ಡ್ರೈವರು ಕುಡಿದು ಮತ್ತನಾಗಿ ಬಿದ್ದುಕೊಂಡ. ಗಾಡಿಗೆ ಅಪಾಯವಾಗಿ ಗವರ್ನರವರನ್ನು ಅಪಾಯಕ್ಕೆ ಗುರಿಮಾಡಿದನು. ಆ ಡ್ರೈವರನ್ನು ಹಿಂದೆ ಎರಡು ವರುಷಗಳ ಕಾಲ ಸಜಾ ವಿಧಿಸಿದಾರೆ

****

[illegible] ಚಂಡಮಾರುತದಿಂದ ಕಟ್ಟೆ ನಿಲ್ಲದೆ ನೀರು ನುಗ್ಗಿ ಕಾರ್ವಾರ ಜಿಲ್ಲೆಯ ಪ್ರಜೆಗಳಿಗೆ ಬಹಳ ಸಂಕಟ ಪ್ರಾಪ್ತವಾಗಿದೆ. ನಾನಾ ದಿಕ್ಕುಗಳಿಂದಲೂ ಬರುವ ನೀರು ಅಲ್ಲೇ ನಿಲ್ಲುವುದರಿಂದ ಆ ಸ್ಥಳದಿಂದ ಬೇರೆ ಕಡೆಗೆ ಹರಿದುಹೋಗುವ ಹಾಗೆ ಕಾಲುವೆ ಕಡಿಸಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದಾರೆ

****

ಬಿಹಾರ ಪ್ರಾಂತ್ಯದಲ್ಲಿ ಒಬ್ಬ ದೊಡ್ಡ ಮನುಷ್ಯರ ಮನೆಯಲ್ಲಿ ಅತ್ತೆ, ಗಂಡ, ಇವನ ಸ್ನೇಹಿತ, ಈ ಮೂವರು ಮಂದಿಯೂ ಸೇರಿ ಒಂದು ಚಿಕ್ಕ ವಯಸ್ಸಿನ ಸೊಸೆಯನ್ನು ಹಿಂಸಿಸಿ ಕೊಂದುಹಾಕಿದಾರೆಂದು ಮೊಕದ್ದಮೆ ಬಂದಿದೆ. ಈ ಅಪರಾಧಿಗಳನ್ನು ಜಾಯಿಂಟ್ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ವಿಚಾರಣೆ ಮಾಡುತ್ತಾರೆ

****

ಕಳೆದ ಜೂನ್ ತಿಂಗಳಲ್ಲಿ ಹಿಂದುಸ್ಥಾನಕ್ಕೆ ೫೧ ಲಕ್ಷ ರೂಪಾಯಿನ ಚಿನ್ನವು ಶಿಲ್ಕಿನರೂಪವಾಗಿ ಬಂದಿತು. ಜೂಲೈ ತಿಂಗಳ ಮೂರು ವಾರಗಳಲ್ಲಿ ೫೦ ಲಕ್ಷ ರೂಪಾಯಿನ ಚಿನ್ನದ ನಾಣ್ಯಗಳೂ ಬಂದಿರುತ್ತವೆ. ಬೊಂಬಾಯಿ ಮತ್ತು ಕಲ್ಕತ್ತಾ ಪಟ್ಟಣಗಳ ಟಂಕಸಾಲೆಗಳಲ್ಲಿ ೧೫ ಲಕ್ಷ ರೂಪಾಯಿಗಳೂ ೩೦ ಲಕ್ಷ ರೂಪಾಯಿನ ನಾಣ್ಯಗಳೂ ತಯಾರಾದವು

****

ಟಿಟಿಕಾರಿನ (ತಟ್ಟುಗುಡಿ) ಯಲ್ಲಿ ಕೆಲವು ಸ್ವದೇಶಿಗಳು ಸೇರಿ ಸ್ವದೇಶೀ ನಾವೆಯ ಕಂಪನಿಯನ್ನು ಏರ್ಪಡಿಸಿ, ಅದಕ್ಕೆ ಷೇರುಗಳ ಮೂಲಕ ಹಣ ಕೂಡಿಸುತ್ತಿದಾರೆ. ಷೇರು ೧ ಕ್ಕೆ ೫೦ ರೂಪಾಯಿ. ಮೂರು ಲಕ್ಷ ರೂಪಾಯಿ ಈ ಹಣದಿಂದ ಹಡಗುಗಳನ್ನು ಕೊಂಡು ಟಿಟಿಕಾರಿನಿಂದ ಸಿಲೋನ್ ದ್ವೀಪಕ್ಕೆ ಹಡಗಿನ ಟಪ್ಪಾಲ್ ಇಟ್ಟು ನಡೆಸಬೇಕೆಂದು ಉದ್ದೇಶಪಟ್ಟಿದಾರೆ

****

ಪಂಜಾಬ್ ಅಧಿಪತ್ಯದಲ್ಲಿ ಗವರ್ನಮೆಂಟಿನವರು ವ್ಯವಸಾಯದ ಕೆಲಸಗಳನ್ನು ಅಭಿವೃದ್ಧಿಗೆ ತರಬೇಕೆಂದೂ ಅದಕ್ಕಾಗಿ ಅನೇಕ ಸ್ಥಳಗಳಲ್ಲಿ ಅಮೃತಮಹಲ್ ಏರ್ಪಡಿಸಿ ಒಳ್ಳೊಳ್ಳೇ ಗೂಳಿಗಳನ್ನು ಸಾಕಿ ರೈತರಿಗೆ ಕೊಡಬೇಕೆಂದೂ ತೀರ್ಮಾನಿಸಿ ಪ್ರತಿ ವರುಷವೂ ಇದಕ್ಕಾಗಿ ಒಂದು ಲಕ್ಷ ರೂಪಾಯಿನಂತೆ ಐದು ವರುಷ ವಿನಿಯೋಗಿಸಬೇಕೆಂದು ನಿಶ್ಚಯಮಾಡಿದಾರೆ

****

ಡಾಕ್ಟರ್ ಬುಲಕ್ ವರ್ಕ್‌ಮ್ಯಾನ್ ಎಂಬಾತನು ಪತ್ನಿಸಹಿತ ಕಾಶ್ಮೀರದಲ್ಲಿ ಹಿಮಾಚಲಪರ್ವತದ ಮೇಲೆ ಹತ್ತಿ ಹೋದನೆಂತಲೂ, ಸಮುದ್ರಮಟ್ಟಕ್ಕಿಂತ ೨೩,೦೦೦ ಅಡಿ ಪ್ರಮಾಣದ ವರೆಗೆ ಹತ್ತಿ ಬಂದನೆಂತಲೂ, ಈ ವರನಂಗೆ ಡಾಕ್ಟರ್ ಅಬ್ರುಜ್ಜಿ ಎಂಬ ಸೂಮೂರ್ ಹೊರತು ಮತ್ತಾರೂ ಹೋಗಿದ್ದವರಿಲ್ಲವೆಂತಲೂ, ಇದುವರೆಗೆ ಯಾರೂ ಇಷ್ಟು ಎತ್ತರ ಹೋಗಿ ಬಂದಿಲ್ಲವೆಂತಲೂ ತಿಳಿದು ಬಂದಿದೆ

****

ಪಂಜಾಬ್ ಅಧಿಪತ್ಯದಲ್ಲಿರುವ ಭಾರಿ ಭಾರೀ ಜಮೀನ್ದಾರಿಗಳು ಹಿಸ್ಸೆಗಳಾಗಿ ವಿಭಾಗಗಳಾಗುತ್ತಾ ಅವು ಕ್ರಯ ಭೋಗ್ಯ ಆಧಾರಗಳ ಮೂಲಕ ಪರಾಧೀನವಾಗುತ್ತಾ ಬರುವುದನ್ನು ನೋಡಿ ಇದನ್ನು ತಪ್ಪಿಸುವುದಕ್ಕಾಗಿ ಗವರ್ನಮೆಂಟಿನವರು ಒಂದು ಕಾನೂನನ್ನು ಜಾರಿಗೆ ತರಬೇಕೆಂಬದಾಗಿ ಜಮೀನ್ದಾರರ ಸಭೆ ಸೇರಿ ತೀರ್ಮಾನಿಸಿ, ಲೆಫ್ಟಿನೆಂಟ್ ಗವರ್ನರವರಿಗೆ ಅರಿಕೆ ಮಾಡಿಕೊಂಡರು

ದರ್ಭಾಂಗ ಸಂಸ್ಥಾನದ ರಾಜಧಾನಿಯಲ್ಲಿ ಅಪೂರ್ವವಾದ ಮಳೆ ಸುರಿದು ನದಿಗಳಲ್ಲಿ ಅಪಾರ ಪ್ರವಾಹಗಳು ಬಂದು ಸುತ್ತಮುತ್ತಲೂ ಬಹಳ ಅಪಾಯವನ್ನುಂಟುಮಾಡಿವೆ. ಕೋರ್ಟು ಕಚೇರಿಗಳನ್ನು ಮುಚ್ಚಿಬಿಟ್ಟರು. ಅರಮನೆಯ ಬಾಗಿಲ ತನಕ ನೀರು ಹತ್ತಿರುತ್ತದೆ. ರೈಲ್ ರಸ್ತೆಗಳೂ ಸೇತುವೆಗಳೂ ಕೊಚ್ಚಿಹೋಗಿವೆ. ಮನೆಮಾರುಗಳು ಹಾಳಾದವು. ಪ್ರಾಣನಷ್ಟವಾದ ವಿಚಾರ ಇನ್ನೂ ಪ್ರಕಟವಾಗಿಲ್ಲ

****

ಮದರಾಸಿನಲ್ಲಿ ಮಿ॥ ಎಂ ಓ ಪಾರ್ಥಸಾರಥಿ ಐಯ್ಯಂಗಾರ್‌ರನ್ನು ಮದರಾಸ್ ಗವರ್ನಮೆಂಟಿನವರು ಗೋದಾವರಿ ಜಿಲ್ಲೆಯ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಯ ಕೆಲಸಕ್ಕೆ ಬಡ್ತಿಮಾಡಿ ನೇಮಿಸಿರುತ್ತಾರೆ. ಇವರು ಮದರಾಸಿನಲ್ಲಿ ತಿರುವಲಿಕ್ಕೇಣಿಯಲ್ಲಿ ಒಂದು ಹಿಂದೂ ಬಾಲಿಕಾ ಪಾಠಶಾಲೆಯನ್ನು ನಡೆಸುತ್ತಿದ್ದರು. ಮೊನ್ನೆ ಮದರಾಸಿನಿಂದ ಹೋಗುವಾಗ್ಗೆ ಆ ಸ್ಕೂಲಿನ ಮೂಲಧನಕ್ಕೆ ೧೦,೦೦೦ ರೂಪಾಯನ್ನು ದಾನಮಾಡಿದರು

****

ಹಿಂದುಸ್ಥಾನದಲ್ಲಿ ನೂರಾರು ದೇಶೀಯ ಸಂಸ್ಥಾನಗಳಿರುತ್ತವೆ. ಈ ಸಂಸ್ಥಾನಗಳ ಅರಸುಗಳ ಪೈಕಿ ಮುಖ್ಯರಾಗಿಯೂ ವಿದ್ಯಾವಂತರಾಗಿಯೂ ಇರುವಂಥಾ ಕೆಲವರನ್ನು ಚುನಾವಣೆ ಮಾಡಿ, ಒಂದು ಕೌನ್ಸಿಲ್ ಸಭೆಯನ್ನು ಏರ್ಪಾಡು ಮಾಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಯೋಚನೆ ಮಾಡಿ ಅದಕ್ಕಾಗಿ ಪ್ರಿನ್ಸ್ ಆಫ್ ವೇಲ್ಸ್ ರವರ ಸಂಗಡ ಕಾಗದಪತ್ರಗಳನ್ನು ನಡೆಸುತ್ತಿದಾರೆಂದು ತಂತೀ ವರ್ತಮಾನ ಬಂದಿದೆ

****

ಮೈಸೂರಾಧಿಪತಿಯವರ ಪತ್ನೀಯರವರು ಹಿಂದಿ ಸ್ತ್ರೀಯರು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಶೈತ್ಯೋಪಚಾರ ಮಾಡುವಂಥಾ ಸ್ತ್ರೀಯರನ್ನು ವಿಶೇಷವಾಗಿ ತರಪೇತು ಮಾಡಿ ನೇಮಿಸಬೇಕೆಂದು ಉದ್ದೇಶಪಟ್ಟು ಅದಕ್ಕಾಗಿ ಒಂದು ಫಂಡು ಕೂಡಿಸಲಾರಂಭಿಸಿದಾರಷ್ಟೆ. ಈಚೆಗೆ ಈ ಫಂಡಿಗೆ ಸಿಂಧಿಯಾ ಮಹಾರಾಜರವರು ೫,೦೦೦ ರೂಪಾಯಿ ಕೊಟ್ಟರು. ಈ ಫಂಡಿನಲ್ಲಿ ಇದುವರೆಗೆ ೩೧,೦೦೦ ರೂಪಾಯಿ ಕೂಡಿದಂತಾಯಿತು

****

ಒರಿಸ್ಸಾ ಅಧಿಪತ್ಯಕ್ಕೆ ಸೇರಿದ ಒಂಗೋಲ್ ಪಟ್ಟಣದಲ್ಲಿ ದಂಗೆ ಮಾಡಿದರೆಂದು ಸರ್ಕಾರದವರು ೧೯ ಜನರನ್ನು ಹಿಡಿದು ದಯಾರ್ಹ್ಯವಾದ ಶಿಕ್ಷೆ ವಿಧಿಸಿದಾರೆ. ಈ ಪ್ರಕೃತಿ ಕೆಲವರ ಬೌದ್ಧ ಸ್ವಾಮಿಗಳು ದಯಾರ್ಹತೆಯಲ್ಲಿ ಒಬ್ಬ ಸಾಕ್ಷಿ ಹಿಂದೆ — ಇವರೆಲ್ಲ ಸೇರಿ ೩೦೦ ರೂ ದಂಡ ಜನರ ಸಹಾಯದಿಂದ ಉದ್ಧಕ್ಕೂ ರೈಲ್ ರಸ್ತೆಯನ್ನು ಕಿತ್ತು ಹಾಳುಮಾಡಬೇಕೆಂದು ಯತ್ನಿಸಿದರು ಎಂದು ಹೇಳುತಾನೆ. ಮೊಕದ್ದಮೆ ಇನ್ನೂ ಪೂರೈಸಲಿಲ್ಲ

****

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ಒಂದು ದಿನ ಮನೆ ಗುತ್ತಿಕೊಂಡ ಒಂದು ದೊಡ್ಡ ಅನಾಹುತ ಸಂಭವಿಸುತ್ತಿದ್ದಾಗ ಪೀಟರ್ ಎಂಬ ಸೈನಿಕನು ತನ್ನ ಪ್ರಾಣದ ಮೇಲೆ ಲಕ್ಷ್ಯವಿಡದೆ ಆ ಮಂದಿರದ ಮನೆಯ ಒಳಕ್ಕೆ ನುಗ್ಗಿ ಸಿಂಕಿಯನ್ನು ಆರಿಸಿದನು. ಇದಕ್ಕಾಗಿ ಬೊಂಬಾಯಿ ಗವರ್ನರವರೂ ಇತರ ಹುದ್ದೆದಾರರೂ ಆತನ ಪರಾಕ್ರಮವನ್ನು ನೋಡಿ ಮೆಚ್ಚಿದವರಾಗಿ ಅವನಿಗೆ ೬ ಸವರ್ನ ನಾಣ್ಯಗಳನ್ನು ಕಾಣಿಕೆಯನ್ನೂ ಒಂದು ಚೇಳಿನಂತೆ ಒಂದು ಬಹುಮಾನ ಕೊಟ್ಟರು

****

ವಿಜಯನಗರದಲ್ಲಿ ಆಗಸ್ಟ್ ೩ ನೇ ತಾರೀಖು ಅಪಾರವಾದ ಮಳೆ ಸುರಿಯುತ್ತಿದ್ದಾಗ ಬೆಟ್ಟದಿಂದ ಬೀಸಿಬಂದ ಗಾಳಿಯು ಜೋರಾಯಿತು. ಆಗ ಅಲ್ಲಿದ್ದ ಸುಮಾರು ಐದು ವರುಷಗಳ ಕೆಳಗೆ ಸನಿಹದಲ್ಲಿ ರುವ ದಾಮರಿಯರ ದೇವತೆ ಗುಡ್ಡದಲ್ಲಿ ಗಂಧಕದ ಹೊಗೆ ತುಂಬಾ ಎದ್ದಿತು. ಈಗ ಮೇಲ್ಗಡೆಯಿಂದ ಉಷ್ಣವಾಯು ಭೂಮಿಯಿಂದ ಹುಟ್ಟುತ್ತಿರುವುದನ್ನು ನೋಡಿ ಅಲ್ಲಿನ ಜನರು ಸ್ವಲ್ಪ ಗಾಬರಿ ಪಡಲಾರಂಭಿಸಿದಾರೆ. ಇದನ್ನು ಪರೀಕ್ಷೆ ಮಾಡುವುದಕ್ಕೆ ಭೂಶಾಸ್ತ್ರಜ್ಞರು ಹೋಗಬೇಕೆಂದು ಅಪೇಕ್ಷಿಸಿದಾರೆ

****

ದಕ್ಷಿಣ ದೇಶದಲ್ಲಿ ಟಿಟಿಕಾರಿನ (ತಟ್ಟುಗುಡಿ) ಎಂಬ ತೀರದಪಟ್ಟಣದಿಂದ ಲಂಕಾದ್ವೀಪಕ್ಕೆ ಸ್ವದೇಶೀ ಹಡಗುಗಳು ಹೋಗಿ ಬರುವಂತೆ ಕೆಲವು ದಿನಗಳಿಂದ ಏರ್ಪಾಡಾಗಿ ನಡೆಯುತ್ತಿತ್ತು. ಬೊಂಬಾಯಿನ ಮಿ॥ ಇಸ್ಮಾಯಿಲ್ ಬಾಯಿ ಎಂಬ ವರ್ತಕನು ತನ್ನ ಹಡಗುಗಳನ್ನು ಇಟ್ಟು ನಡೆಸುತ್ತಾ ಇದ್ದನು. ಸುಮಾರು ತಿಂಗಳಲ್ಲೇ ಅವನಿಗೆ ಈ ಹಡಗಿನ ಟಪ್ಪಾಲಿನಿಂದ ೧೦ ಸಹಸ್ರ ರೂಪಾಯಿ ಲಾಭ ಸಂಪಾದನೆಯಾಯಿತು. ಈಗ ಏಕಾಏಕಿ ಅವನು ಹಡಗಿನ ಸಂಚಾರವನ್ನು ನಿಲ್ಲಿಸಿಬಿಟ್ಟಿರುತ್ತಾನಂತೆ. ಇದಕ್ಕೇನು ಕಾರಣವೋ ತಿಳಿಯಲಿಲ್ಲ

****

ದಕ್ಷಿಣ ದೇಶದಲ್ಲಿ ಸ್ವತಂತ್ರವಾಗಿ ಓಡುವ ಮೋಟಾರ್ ಕಾರ್ ಎಂಬ ಗಾಡಿಗಳನ್ನು ಇಟ್ಟವರ ಪವರು ಈ ವರುಷದ ಅಂತ್ಯಭಾಗದಲ್ಲಿ ಅಂದರೆ ಡಿಸೆಂಬರ್ ೨೬ ೨೭ ೨೮ ನೇ ತಾರೀಖುಗಳಲ್ಲಿ ಮೈಸೂರಿಂದ ಮದರಾಸ್ ಪಟ್ಟಣದ ತನಕ ಓಡಬೇಕೆಂದು ಏರ್ಪಾಡಾಗುತ್ತಿದೆ. ಮೊದಲನೆಯ ದಿನ ಮೈಸೂರಿನಿಂದ ಬೆಂಗಳೂರಿಗೆ ೯೨ ಮೈಲಿ ದೂರವೂ, ಎರಡನೆಯ ದಿನ ಬೆಂಗಳೂರಿಂದ ಕಾಟ್ಪಾಡಿಗೆ ೧೩೦ ಮೈಲಿ ದೂರವೂ, ಮೂರನೆಯ ದಿನ ಕಾಟ್ಪಾಡಿಯಿಂದ ಮದರಾಸಿಗೆ ೮೦ ಮೈಲಿ ದೂರವೂ ಹೋಗಬೇಕಾಗುತ್ತದೆಂದು ಮೂರು ಬಹುಮಾನಗಳನ್ನು ಮಾಡಿಕೊಂಡಿದಾರೆ

****

ಕಲ್ಕತ್ತಾ ಪಟ್ಟಣದಲ್ಲಿ ಮ್ಯುನಿಸಿಪಲ್ ಕಚೇರಿ ಗುಡಿಸುವವರು ಸುಮಾರು ೨,೦೦೦ ಮಂದಿ ತಮಗೆ ಸಲ್ಲುವ ೮ ರೂಪಾಯಿ ಸಂಬಳದಿಂದ ಜೀವನ ನಡೆಯುವುದಿಲ್ಲವೆಂತಲೂ ೧೦ ರೂಪಾಯಿ ಕೊಡಬೇಕೆಂದು ಕೆಲಸ ಮಾಡುವುದಿಲ್ಲವೆಂತಲೂ ಹೇಳಿ ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ತರುವಾಯ ಮ್ಯುನಿಸಿಪಾಲಿಟಿಯವರು ಈಗಿನ ಕಷ್ಟಕಾಲವನ್ನು ನೋಡಿ ಅವರಿಗೆಲ್ಲಾ ಕ್ಷಾಮದ ಅಲೋಯನ್ಸ್ ಎಂಬದಾಗಿ ತಿಂಗಳಿಗೆ ಒಂದು ರೂಪಾಯಿನಂತೆ ಇಜಾಫೆ ಕೊಡುವುದಾಗಿ ಮಾತುಕೊಟ್ಟರು. ಅದರ ಮೇಲೆ ಅವರು ಒಪ್ಪಿ ಎಂದಿನಂತೆ ಕಚೇರಿ ಗುಡಿಸಿ ಸಾಗಿಸುತ್ತಾ ಬಂದಿದಾರೆ

****

ಅಫ್ಘಾನಿಸ್ಥಾನದ ಅಮೀರರು ಈ ವರುಷದ ಅಂತ್ಯದಲ್ಲಿ ಹಿಂದುಸ್ಥಾನಕ್ಕೆ ದಯಮಾಡಿ, ವೈಸ್‌ರಾಯರವರ ಆತಿಥ್ಯವನ್ನು ಸ್ವೀಕರಿಸುವರೆಂದು ವರ್ತಮಾನವಿದೆಯಷ್ಟೆ. ಅವರು ಹಾಗೆ ಬರುವುದಾದರೆ ಆಗ್ರಾಪಟ್ಟಣಗಳಲ್ಲಿ ಹಿಂದುಸ್ಥಾನದ ೩೦,೦೦೦ ಸೈನ್ಯವನ್ನು ಕೂಡಿಸಿ, ಅವರಿಂದ ಸಾಹಸಕಾರ್ಯಗಳನ್ನು ಮಾಡಿಸಿ, ಅಮೀರರಿಗೆ ತೋರಿಸಬೇಕೆಂದು ಯೋಚನೆ ಇದೆ. ಇನ್ನಲ್ಲದೆ ಅಮೀರರು ಈ ರಾಜ್ಯದ ಕೆಲವು ಪ್ರಾಂತ್ಯಗಳನ್ನು ಸುತ್ತಿ ನೋಡಿಕೊಂಡು ಬರುವುದಕ್ಕಾಗಿ ಗವರ್ನಮೆಂಟಿನವರು ಶೀಘ್ರದಿಂದ ಒಂದು ಮೋಟಾರ್ ಗಾಡಿಯನ್ನು ತರಿಸುವವರಾಗಿದಾರೆಂತಲೂ ತಿಳಿಯುವುದು

****

ಜೋಧಪುರದ ಮಹಾರಾಜರವರ ಪೋಷಾಕ್ ಖಾನೆಯ ಒಬ್ಬ ಸೇವಕನು ಮಹಾರಾಜರಂತೆ ವೇಷಹಾಕಿಕೊಂಡು ಬರೋಡೆಗೆ ಹೋಗಿ ಅಲ್ಲಿನ ದಿವಾನರನ್ನು ಮೋಸಪಡಿಸಿ ಅಲ್ಲಿಂದ ಬೊಂಬಾಯಿಗೆ ಒಂದು ಸಿಕ್ಕಿಬಿದ್ದು ಲಾಕಪ್ಪಿನಲ್ಲಿರುತ್ತಾನಷ್ಟೆ. ಈಚೆಗೆ ಇವನು ಆ ಮಹಾರಾಜರ ಸೇವಕನೇ ಅಲ್ಲವೆಂತಲೂ ಏಕೆ ತಕ್ಕೆದಾರನೆಂತಲೂ ತಿಳಿದು ಬಂದಿದೆ. ಅವನು ರಜಪುತ್ ಜಾತಿಯವನು, ಸರ್ದಾರ್ ಸಿಂಗ್ ಮುಂಗಳ ಸಿಂಗ್ ಎಂದು ಅವನ ಹೆಸರು. ಇವನು ಬರೋಡೆಯಲ್ಲಿ ಮೋಸ ಮಾಡಿರುತ್ತಾನಾದ್ದರಿಂದ ಅಲ್ಲೇ ಅವನನ್ನು ಪರ್ಯಾಪ್ತಿ ಮಾಡಬೇಕೆಂದು ಕಾವಲಿಟ್ಟು ಬರೋಡೆಗೆ ಕಳುಹಿಸಿದಾರೆ

****

ಕಳೆದ ವರುಷ ಮಧ್ಯ ಪ್ರಾಂತ್ಯಗಳಲ್ಲಿ ೬,೪೦೩೮೩ ಮರಣಗಳಾದವು. ಈ ಸಂಖ್ಯೆ ಹಿಂದಿನ ವರುಷದೊಳಗಿನ ೧,೮೩,೯೧೬ ಸಾವುಗಳ ಕಾಲವಾಗಿದಾರೆ. ಇದರಿಂದ ಈ ರಾಜ್ಯದಲ್ಲಿ ಮಕ್ಕಳನ್ನು ಸಾಕಿ ಬೆಳಸುವ ವಿಧಾನಗಳೂ ಆರೋಗ್ಯಸೂತ್ರಗಳೂ ಜನರಿಗೆ ಸರಿಯಾಗಿ ತಿಳಿದಿಲ್ಲವೇನು ಗೊತ್ತಾಗದು. ಗ್ರಾಮಾಂತರಗಳಲ್ಲಿ ಊರು ಕೇರಿಗಳಲ್ಲಿ ಜನರು ಬಿಸಿಲಿಗೂ ಮಳೆಗೂ ರಕ್ಷಣೆ ತುಂಬಿರುವ ಮನೆಮಠಗಳಲ್ಲಿ ವಾಸ ಮಾಡುವರು. ಪಿರಂಗಿಯನ್ನು ಕುಡಿದು ದೊಡ್ಡವರು ಜೀರ್ಣಿಸಿಕೊಳ್ಳುವ ಹಾಗೆ ಮಕ್ಕಳು ಜೀರ್ಣಿಸಿಕೊಳ್ಳಲಾರದೆ ಸ್ವಲ್ಪ ಹವಾ ಬದಲಾವಣೆಯಾದ ಕೂಡಲೇ ಚಳಿಯ ಪ್ರಾಯದ ಅನೇಕ ಮಕ್ಕಳು ಸತ್ತು ಹೋಗುವವು

****

ಕಾಶೀ ಪಟ್ಟಣದ ಪ್ರಚಾರಕ ದರ್ಮ ಮಹಾಮಂಡಲಿಸಂಘದವರು ಹಿಂದುಸ್ಥಾನದಲ್ಲಿ ಪ್ರಜೆಗಳಿಗೆ ಸತ್ಯಭಕ್ತಿ ಆಚಾರ ವಿಚಾರಗಳನ್ನು ಬೋಧಿಸಬೇಕೆಂತಲೂ, ಸಂಸ್ಕೃತ ವಿದ್ಯೆಯನ್ನು ಸಕಲರೂ ಅಭ್ಯಾಸಿಸುವಂತೆ ಮಾಡಬೇಕೆಂತಲೂ, ಅಲ್ಲಲ್ಲಿ ಬ್ರಹ್ಮಚರ್ಯಾಶ್ರಮಗಳನ್ನು ಕಲ್ಪಿಸಿ ವಿದ್ಯೆ ಕಲಿಸಬೇಕೆಂತಲೂ ಬಹಳ ಅಪೂರ್ವವಾದ ಪ್ರಯತ್ನವನ್ನು ಮಾಡಿದಾರೆ. ಹಿಂದುಸ್ಥಾನದ ಅನೇಕ ಹಿಂದೂ ರಾಜರೂ ಮಹಾರಾಜರೂ ಈ ಸಂಘದ ಪೋಷಕರಾಗಿರುವರು. ಈ ಸಂಘದ ಉದ್ದೇಶವನ್ನು ನೆರವೇರಿಸುವುದಕ್ಕೆ ಹಣ ಸಹಾಯ ಕೊಟ್ಟಿದಾರೆ. ಉದಯಪುರದ ಮಹಾರಾಣಾರವರು ಮೊದಲುಗೊಂಡು ೩೦ ಮಂದಿ ರಾಜರು ತುಂಬಾ ಹಣವನ್ನು ಕೊಟ್ಟರು. ದರ್ಭಾಂಗದ ಮಹಾರಾಜರವರೇ ಈ ಸಂಘದ ಅಧ್ಯಕ್ಷರಾಗಿರುವರು

****

ಅಯೋಧ್ಯೆಯ ಮಾಜೀ ನವಾಬ್ ಪ್ರಸಿದ್ಧವಾದ ವಾಜಿದ್ ಆಲಿ ಶಾ ಅವರ ಮಗ ಮಹಮದ್ ಅನ್ಸಾರಿ ಎಂಬುವನು ತನ್ನ ಮೇಲೆ ಅಲಿ ಬೇಗಂ ಎಂಬ ಆತನ ಮೊದಲನೆ ಪತ್ನಿಯು ಕಲ್ಕತ್ತಾ ಪಟ್ಟಣದ ಪೊಲೀಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಆತನು ತನ್ನನ್ನು ಬಾಳಿಸದೆ ಮನೆಯಿಂದ ಓಡಿಸಿ ಬಿಟ್ಟಿದಾನೆಂದು ಮೊಕದ್ದಮೆ ಹಾಕಿದಾಳೆ. ಆತನು ಮೊನ್ನೆ ಮೊಹರಂ ಹಬ್ಬದಲ್ಲಿ ಎರಡನೆ ಹೆಂಡತಿಯನ್ನು ಮಾಡಿಕೊಂಡು ಅವಳನ್ನೇ ಪ್ರೀತಿಸುವದು ಮಾತ್ರವಲ್ಲದೆ ಮೊದಲನೆ ಹೆಂಡತಿಯ ಮದುವೆ ಸಂಬಂಧವನ್ನು ರದ್ದುಮಾಡಿದನು. ರಾಜಕುಮಾರನನ್ನು ಕರೆಸಿ ಕೇಳಿದಾಗ ಆತನು—ಅವಳು ತಾನೇ ಬೇಕೆಂದಂತೆ ಹೊರಟುಹೋದದ್ದರಿಂದ ಅವಳನ್ನು ತ್ಯಾಗ ಮಾಡಿದೆನು ಎಂದು ತಿಳಿಸಿದನು. ಈ ಮೊಕದ್ದಮೆಯು ಇನ್ನೂ ಇತ್ಯರ್ಥವಾಗಲಿಲ್ಲ

****

ಧಾರವಾಡದ ಸೆಷನ್ಸ್ ಜಡ್ಜಾದ ಮಿ॥ ನೈಟ್ ಎಂಬುವರು ಕಳೆದ ೧೯೦೫ನೇ ಇಸವಿಯಲ್ಲಿ ಒಂದು ಮೊಕದ್ದಮೆಯ ನ್ನು ತೀರ್ಮಾನಮಾಡಿ ಅದರಲ್ಲಿ ಬರೆದದ್ದೇನೆಂದರೆ—ಒಂದು ತಿಂಗಳೊಳಗಾಗಿ ದುಷ್ಟರು ಮೂರಾರು ಸಲ ಸಾಕ್ಷಿಗಳನ್ನು ಕೊಂದು ಅವರ ಮೈಮೇಲೆ ಇದ್ದ ಆಭರಣಗಳನ್ನು ಅಪಹರಿಸಿದರು. ಇಂಥಾ ಮೊಕದ್ದಮೆಗಳು ಈ ದೇಶದಲ್ಲಿ ಆಗಾಗ್ಗೆ ಅನೇಕವಾಗಿ ನಡೆಯುತ್ತಿವೆ. ಸರ್ಕಾರದವರ ತಿಳುವಳಿಕೆಗೆ ಬಾರದೆ ಇರುವ ಇಂಥಾ ಕೃತ್ಯಗಳ ಇನ್ನೂ ಅಪಾರವಾಗಿ ನಡೆಯುವವೆನ್ನುವುದಕ್ಕೆ ಸಂದೇಹವಿಲ್ಲ. ಆದ್ದರಿಂದ ಗವರ್ನಮೆಂಟಿನವರು ಇಂಥಾ ಅಕೃತ್ಯಗಳನ್ನು ನಿಲ್ಲಿಸುವುದಕ್ಕೆ ಒಂದು ಕಾನೂನು ಮಾಡಿದರೆ ಎಷ್ಟೋ ಉಪಕಾರವಾದೀತು. ಜನರು ತಮ್ಮ ಮಕ್ಕಳಿಗೆ ಒಡವೆಗಳನ್ನು ಹಾಕಿ ಬೀದಿಗೆ ಬಿಡದಂತೆಯೂ, ಹಾಗೆ ಬಿಟ್ಟದ್ದ ಪಕ್ಷದಲ್ಲಿ ಅವರ ಮೈಮೇಲಿರುವ ನಗಗಳನ್ನು ಸರ್ಕಾರದವರು ಜಪ್ತಿಮಾಡಿಕೊಳ್ಳುವಂತೆಯೂ ಕಾನೂನು ಮಾಡಿದರೆ ಈ ಕೊಲೆಗಳೂ ಕಳ್ಳತನಗಳೂ ಕಡಿಮೆಯಾಗಿ ನಿಂತುಹೋಗುವವು ಎಂದರೆ. ಸೆಷನ್ಸ್ ಜಡ್ಜರು ಈ ರೀತಿ ಬರೆದದ್ದು ಬಹಳ ಒಳ್ಳೇದೆಂದೂ ಅದರಂತೆ ಕಾನೂನು ಆಗಬೇಕೆಂದೂ ಅನೇಕರು ಇಂಡಿಯಾ ಗವರ್ನಮೆಂಟಿನವರಿಗೆ ವಿಜ್ಞಾಪನಾ ಪತ್ರಿಕೆಗಳನ್ನು ಬರೆದುಕೊಂಡಿದಾರೆ. ಇಂಥಾ ಕಾನೂನು ಅವಶ್ಯವಾದದ್ದೆನ್ನುವುದಕ್ಕೆ ಸಂಶಯವಿಲ್ಲ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್‌ಸ್.

ನಾಯಿ ಗಾಡಿಯನ್ನು ಹೊತ್ತದ್ದು

ಅಯ್ಯಾ,

ಕಳೆದ ತಾ. ೨೫ ನೆ ಶನಿವಾರ ಪ್ರಾತಃಕಾಲ ೬ ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತರು ೪—೫ ಜನಗಳು ಪಂಚೆಗಳನ್ನು ಒಗೆಯುವ ಉದ್ದೇಶ್ಯ ಬೆಂಗಳೂರು ಕೋಟೆಪೇಟೆಗರ ಚಲಿಮೆ ಎಂಬ ಕೊಳಕ್ಕೆ ಹೊರಟೆವು. ನನ್ನ ಸ್ನೇಹಿತರ ಪೈಕಿ ಇಬ್ಬರು ತಮ್ಮ ನಾಯಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಕಂಟೋನ್‌ಮೆಂಟಿನಿಂದ ಒಬ್ಬ ಮುಸಲ್ಮಾನನು ತನ್ನ ಜಟಕಾ ಗಾಡಿಯಲ್ಲಿ ನಾಲ್ಕು ಜನರನ್ನು ಅವರ ಸಾಮಾನು ಸಮೇತ ಬಹಳ ವೇಗವಾಗಿ ದರ್ಮಾಂಬುಧಿ ಕೆರೆ ಏರಿಯ ಮೇಲೆ ಹೊಡೆದುಕೊಂಡು ಸಿಟಿ ರೈಲ್ವೆ ಸ್ಟೇಷನ್ನಿಗೆ ಬರುತ್ತಿದ್ದನು. ಆ ಕಾಲದಲ್ಲಿ ಮೇಲ್ಕಂಡ ನನ್ನ ಸ್ನೇಹಿತರ ಎರಡು ನಾಯಿಗಳು ಸಂಗಮಾಡಿಕೊಂಡು ನಮ್ಮ ಮುಂದೆ ಹೋಗುತ್ತಿದ್ದವು. ಜಟಕಾ ಗಾಡಿಯವನು ಅದನ್ನು ಓಡಿಸದೆ ಗಾಡಿಯನ್ನು ಬಿಟ್ಟದ್ದರಿಂದ ನನ್ನ ಸ್ನೇಹಿತನಾದ ನಂಜಪ್ಪನವರ ನಾಯಿಯ ಹೊಟ್ಟೆಯ ಮೇಲೆ ಗಾಡಿಯ ಚಕ್ರವು ಹರಿದು ಹೋಯಿತು. ಆಗ್ಗೆ ನಾನೂ ನನ್ನ ಸ್ನೇಹಿತರೂ ನಾಯಿಯು ಪ್ರಾಣದೊಂದಿಗೆ ಉಳಿಯುವದಿಲ್ಲವೆಂದು ಊಹಿಸಿ ಗಾಡಿಯನ್ನು ತಡೆದು, ಅವನನ್ನು ಹಿಡಿದುಕೊಂಡು ಪೋಲೀಸು ಸ್ಟೇಷನಿಗೆ ಕರೆದುಕೊಂಡು ಹೋಗಬೇಕೆಂದು ಬರುತ್ತಿದ್ದೆವು. ಅಷ್ಟರಲ್ಲಿಯೇ ಜನಗಳೂ ಗುಂಪು ಕೂಡಿದರು. ಆ ಗಾಡಿಯವನು ನಮ್ಮನ್ನು ಕುರಿತು—ನನ್ನಿಂದ ತಪ್ಪಿತವಾಯಿತೆಂತಲೂ ಇನ್ನು ಮೇಲೆ ಜಾಗರೂಕತೆಯಿಂದ ಗಾಡಿ ಹೊಡೆಯುವೆನೆಂಬದಾಗಿಯೂ ಬಹಳ ದೀನಭಾವದಿಂದ ಕೇಳಿಕೊಂಡದ್ದರಿಂದಲೂ, ಅನೇಕ ಜನಗಳು ನಮಗೆ ಸಮಾಧಾನ ಹೇಳಿದ್ದರಿಂದಲೂ, ಇದೂ ಅಲ್ಲದೆ ನನ್ನ ಸ್ನೇಹಿತನ ನಾಯಿಗೆ ಅಂಥಾ ಅಪಾಯವೇನೂ ಆಗಲಿಲ್ಲವಾದ್ದರಿಂದಲೂ ಅವನನ್ನು ಬಿಟ್ಟುಬಿಟ್ಟೆವು. ನಾಯಿಯಾದರೋ ೨ ಅಡಿ ಎತ್ತರವಾಗಿಯೂ, ೩ ಅಡಿ ಉದ್ದವಾಗಿಯೂ ಇದೆ. ಈ ನಾಯಿಯು ಎಂದಿನಂತೆ ಸರಾಗವಾಗಿ ಓಡಾಡುವದರಲ್ಲಿಯೂ ಆಹಾರದಲ್ಲಿಯೂ ಯಥಾಪ್ರಕಾರವಾಗಿರುವದು. ಆದರೆ ಕೆಲವು ದಿನಗಳ ಕೆಳಗೆ ಬೆಂಗಳೂರಿಗೆ ಬಂದಿದ್ದ ಇಂಡಿಯನ್ ಸ್ಟ್ಯಾಂಡೋಯವರು ಎದೆಯ ಮೇಲೆ ೨೫ ಜನಗಳುಳ್ಳ ಗಾಡಿಯನ್ನು ಬಿಟ್ಟಂತೆ ಈ ನಾಯಿಯ ಮೇಲೆ ೪ ಜನ, ಗಾಡಿಯವನು ಒಬ್ಬ, ಅಂತು ೫ ಜನಗಳುಳ್ಳ ಗಾಡಿಯನ್ನು ಬಿಟ್ಟಾಗ್ಯೂ ಅದಕ್ಕೆ ಯಾವ ಅಪಾಯವೂ ಆಗಲಿಲ್ಲವಾದ್ದರಿಂದ ಇದು ಬಹಳ ಆಶ್ಚರ್ಯವಾಗಿರುತ್ತೆ.

ಬೆಂಗಳೂರು ಸಿಟಿ. ಕೆ ಪುಟ್ಟಪ್ಪ.

ಇನ್ನೂ ತಪ್ಪಿಲ್ಲವಾದ ಬಡಮಾಸ್ಟರುಗಳ ಸಂಕಟ

ಅಯ್ಯಾ,

ದೊಡ್ಡ ದೊಡ್ಡ ಸರ್ಕಾರಿ ಉದ್ಯೋಗಸ್ಥರು ಸಮಯಾನುಸಾರವಾಗಿ ತಮ್ಮ ಕೆಲಸಗಳಿಗನುಗುಣವಾಗಿ ಬಡ್ತಿ ಹೊಂದಿ ಇದ್ದವಟ್ಟಿಗೆ ಜೀವಿತ ಕಾಲವನ್ನು ಸುಖಾನಂದಗಳಲ್ಲಿ ಕಳೆಯುವರು. ಮತ್ತು ತಮಗೆ ಸಂಬಂಧಿಸಿದ ಸರ್ಕಾರಿ ಉದ್ಯೋಗಗಳನ್ನು ಅತಿ ಶ್ರದ್ಧೆಯಿಂದಲೂ, ಹೆಚ್ಚು ಮುತುವರ್ಜಿಯಾಗಿಯೂ ನಡೆಯಿಸುವರು. ಈ ಸಂತೋಷಕ್ಕೆ ಅವರಿಗೆ ಕಾಲಕ್ರಮವಾಗಿ ಸಿಕ್ಕುವ ಬಡ್ತಿಯೇ ಕಾರಣವು. ಅಂಥಾ ಉತ್ಸಾಹ, ಪ್ರೋತ್ಸಾಹಗಳು ವಿದ್ಯಾಭ್ಯಾಸದ ಇಲಾಖೆಯಲ್ಲಿ ಮಾತ್ರ ಸದ್ಯಕ್ಕೆ ಕಾಣಲಿಲ್ಲ. ಸ್ವಲ್ಪ ದೂರವಾಗಿ ಯೋಚಿಸಿದರೆ ಎಲ್ಲಾ ಇಲಾಖೆಗಳಿಗಿಂತಲೂ ಈ ಇಲಾಖೆಯು ಬಹು ಮುಖ್ಯವಾಗಿಯೂ ದೇಶದ ಎಲ್ಲಾ ಪ್ರಜೆಗಳು ಜ್ಞಾನಸಂಪನ್ನರಾಗಲಿಕ್ಕೂ ತನ್ಮೂಲಕ ದೇಶವು ಅತ್ಯುನ್ನತಸ್ಥಿತಿಗೆ ಬರುವುದಕ್ಕೂ ಆಧಾರವಾಗಿಲ್ಲವೇ? ಈ ಉದ್ದೇಶಗಳು ನೆರವೇರಬೇಕೆಂದೇ ಅಲ್ಲವೇ ನಮ್ಮ ಸರ್ಕಾರದವರು ಗ್ರಾಮಾಂತರಗಳಲ್ಲೆಲ್ಲಾ ಪಾಠಶಾಲೆಗಳನ್ನು ಸ್ಥಾಪಿಸಿರುವುದು? ಉಪಾಧ್ಯಾಯರು ಇನ್ನೂ ತರಪೇತು ಹೊಂದಿ ಶಕ್ತರಾಗಬೇಕೆಂದು ಕೆಲವು ಪರೀಕ್ಷೆಗಳನ್ನೂ ಏರ್ಪಡಿಸಿ ನಾರ್ಮಲ್ ಸ್ಕೂಲುಗಳನ್ನು ಸ್ಥಾಪಿಸಿಲ್ಲವೇ? ಹಾಗೆ ತೇರ್ಗಡೆ ಹೊಂದಿ ಬಂದ ಮಾಸ್ತರುಗಳಿಗೂ ಮಿಕ್ಕವರಿಗೂ ಹಾಲಿ ಸಲ್ಲುತ್ತಿರುವ ಜುಜುಬಿ ತಲಬು ತಪ್ಪಿಸಿ ಅಂದರೆ ೭ ರೂ. ಇದ್ದವರಿಗೆ ೧೦ ರೂ., ೧೦ ರೂ. ಇದ್ದವರಿಗೆ ೧೨ ರೂ., ೧೨ ರೂ. ಇದ್ದವರಿಗೆ ೧೫ ರೂ., ೧೫ ರೂ. ಇದ್ದವರಿಗೆ ೨೦ ರೂ. ಮಾಡಿಕೊಟ್ಟು ಬದುಕುವದಕ್ಕೆ ಮಾರ್ಗ ಮಾಡಿಕೊಡುವುದು ಗವರ್ನಮೆಂಟಿಗೆ ದೊಡ್ಡದೇ? ಕೆಲವು ವೇಳೆ ಈ ಮಾಸ್ತರುಗಳ ಗೋಳು ನಮ್ಮ ಮಹಾರಾಜಾ ಸಾಹೇಬ ಬಹದ್ದೂರವರ ಚಿತ್ತಕ್ಕೇ ವೇದ್ಯವಾಗಿರುವುದಿಲ್ಲ! ೭ ರೂ. ತಲಬುಳ್ಳ ಒಬ್ಬ ಬಡ ಮಾಸ್ತರನು ೨೦ ರೂಪಾಯಿ ಹೊಂದಬೇಕಾದರೆ ಪೂರಾಯುಸ್ಸಿನಲ್ಲಿ ಮುಕ್ಕಾಲು ಅಂಶವನ್ನೂ ಅದಕ್ಕೆ ತಕ್ಕಂತೆ ಬುದ್ಧಿ ಶಕ್ತಿಗಳನ್ನೂ ವೆಚ್ಚಮಾಡಬೇಕಾಗಿರುವುದಲ್ಲಾ! ಇವನ ಮನೆಯಲ್ಲಿ ದರೋ ೨೦೦ ರೂ. ತಲಬುಳ್ಳ ಉದ್ಯೋಗಸ್ಥನ ಮನೆಗಿಂತಲೂ ಹೆಚ್ಚು ಸಂಸಾರವೇ ತುಂಬಿರುವುದು. ಕಾಲಸ್ಥಿತಿಯನ್ನು ಕುರಿತು ವಿಚಾರಿಸಿದರೆ ೭ ರೂಪಾಯಿ ತಲಬಿಗೂ ಈಗಿನ ಧಾರಣವಾಸಿಗಳಿಗೂ ಅರ್ಥಾನರ್ಥಕ ಸಂಬಂಧವೇ ಇಲ್ಲ! ಅಥವಾ ಈ ೭ ರೂಪಾಯಿ ದರಿದ್ರಪಕ್ಷ ೧೫ ದಿವಸಗಳ ಅಹಸ್ಯವನಿ ಕಾಲಕ್ಷೇಪವಾದರೆ ಆಸ್ತಿಪಾಸ್ತಿಗಳೆಲ್ಲವನ್ನೂ ಮಾರಿ ಈ ಕೆಲಸವೇ ಆಸ್ತಿ ಎಂದು ನಂಬಿಕೊಂಡು ಇರುವ ಬಡ ಮಾಸ್ತರುಗಳು ಇನ್ನುಳಿದಿರುವ ೧೫ ದಿವಸಗಳ ಕಾಲಹರಣ ಮಾಡುವುದು ಹೇಗೆ? ಈ ವಿಷಯಗಳೆಲ್ಲಾ ಘನವನ್ನು ಹೊಂದಿದ ನಮ್ಮ ಶ್ರೀಮನ್ಮಹಾರಾಜರವರಿಗೂ, ಹಾಗೆಯೇ ಹೊಸ ಪ್ರಧಾನಿಗಳಿಗೂ ತಿಳಿಯದ ವಿಷಯವಾಗಿಲ್ಲ. ದೇವರು ಈ ಇಲಾಖೆಯ ಮೇಲಣ ಅಧಿಕಾರಿಗಳ ಮನಸ್ಸಿನೊಳಹೊಕ್ಕು ಈ ವರ್ಷದಲ್ಲಿ ಯಾವರೂ ಬಡ್ತಿ ಕೊಡುವಂತೆ ಪ್ರೇರೇಪಿಸಲಿ!

ಬಡ ಮಾಸ್ತರುಗಳ ಹಿತಚಿಂತಕ.

ಕಾಡುಹಂದಿಯ ಮೇಲೆ ಕೈ ಮಾಡುವುದು.

ಅಯ್ಯಾ,

ಚಿತ್ರದುರ್ಗದ ತಾಲ್ಲೋಕು ಹಿರೇಗುಂಟನೂರು ಹೋಬಳಿ ಬೊಮ್ಮೇನಹಳ್ಳಿ ಗ್ರಾಮದಲ್ಲಿ ಇದೇ ಮಾಹೆ ತಾ. ೧೭ ನೆ ಶುಕ್ರವಾರ ಸಾಯಂಕಾಲ ಸುಮಾರು ೪ ಗಂಟೆ ಸಮಯದಲ್ಲಿ ಅಕಸ್ಮಾತ್ತಾಗಿ ೨-೩ ಕಾಡು ಹಂದಿಗಳು ಎಲ್ಲಿಂದಲೋ ಬಂದವು. ಅವುಗಳನ್ನು ಕಂಡು ಕೆಲವು ಹುಡುಗರೂ ದೊಡ್ಡವರೂ ಗಲಾಟೆ ಮಾಡುತ್ತ ಅಟ್ಟಿಕೊಂಡು ಗ್ರಾಮದ ಪಶ್ಚಿಮದಿಕ್ಕಿನಲ್ಲಿರುವ ಬೆಟ್ಟದ ಕಡೆಗೆ ಹೋದರು. ಗಲಾಟೆ ನೋಡಿ ಅದೇನೆಂದು ಕೇಳಲು ಮೇಲ್ಕಂಡ ವರ್ತಮಾನ ತಿಳಿಯಿತು. ಅಷ್ಟರಲ್ಲಿಯೇ ಅವುಗಳ ಜೊತೆಯಲ್ಲಿ ಹೋಗಿದ್ದ ಕೆಲವರು ಹಿಂದಕ್ಕೆ ಬಂದರು. ಇನ್ನೂ ಕೆಲವರು ಅವುಗಳ ಜೊತೆಯಲೇ ಸ್ವಲ್ಪದೂರ ಹೋಗಿ ಎಟುಕದಿರಲು ಅವರೂ ಹಿಂತಿರುಗಿ ಬಂದರು. ಹಂದಿಗಳು ಇನ್ನೂ ಮುಂದೆ ಸುಮಾರು ಅರ್ಧ ಮೈಲಿ ದೂರ ಹೋಗಿ ಬೆಟ್ಟವನ್ನು ಸ್ವಲ್ಪ ದೂರ ಹತ್ತಿ ಹೋಗುತ್ತಿರುವಷ್ಟರಲ್ಲಿಯೇ ಸಮೀಪದ ಹೊಲದಲ್ಲಿದ್ದ ನಾಯಕರ ಬೋರನೆಂಬುವನು ನೋಡಿ, ನಿರಾಯುಧನಾಗಿ ಓಡಿಹೋಗಿ ಅವುಗಳಲ್ಲಿ ಒಂದರ ಮೂತಿ ಹಿಡಿದು ನಿಲ್ಲಿಸುವುದಕ್ಕೆ ಹೋಗಲು, ಅದು ಬೊಗ್ಗದೆ ಸದರಿಯವನ ಕೈಯ ಬೆರಳನ್ನು ಬಾಯಿಯಿಂದ ಕಚ್ಚಲು ಬೆರಳು ಸ್ವಲ್ಪ ಘಾಯವಾದರೂ ಬಿಡದೆ, ಅದರ ಕತ್ತನ್ನು ಬಲವಾಗಿ ಅಮುಕಿ ಹಿಡಿದುಕೊಂಡು, ಅದರ ಜೊತೆಯಲ್ಲಿ ಒಬ್ಬನೇ ಸುಮಾರು ಅರ್ಧ ಗಂಟೆ ಹೊತ್ತು ಹೋರಾಡಿ, ಬೆಟ್ಟದ ಕೆಳಭಾಗ ಎಳೆದುಕೊಂಡು ಬರುವಷ್ಟರಲ್ಲಿ ಹಂದಿಯು ಸೋತು ಹೋಗಿತ್ತು. ತದನುಸಾರ ಅವನೂ ಅದಕ್ಕೆ ಇಮ್ಮಡಿಯಷ್ಟು ಸೋತಿದ್ದನು. ಆದರೂ ಬಿಡದೆ ಬಲವಾಗಿ ಹಿಡಿದು ಕೂಗಿಕೊಂಡದ್ದರ ಮೇಲೆ ಸಮೀಪದ ಹೊಲಗಳಲ್ಲಿ ವ್ಯವಸಾಯ ಕೆಲಸದಲ್ಲಿ ನಿರತರಾಗಿದ್ದ ಕೆಲವು ಜನಗಳು ಹೋಗಿ ತಮ್ಮ ಕೈಯಲ್ಲಿದ್ದ ಕೊಡಲಿಗಳಿಂದಲೂ ದೊಣ್ಣೆಗಳಿಂದಲೂ ಹಂದಿಯನ್ನು ಹೊಡೆದು ಕೊಂದರು. ಆದರೆ ಆ ಬೋರನೆಂಬುವನು ಒಬ್ಬನೇ ಇರುವಾಗ ಧೈರ್ಯಮಾಡಿ ಸುಮಾರು ಒಂದು ಗಜ ಎತ್ತರವಿರುವ ಒರಟು ಜಾತಿಯಾದ ಹಂದಿಯನ್ನು ಹಿಡಿದು, ಅದರೊಡನೆ ಹೋರಾಡಿ ಬಿಡದೆ ಹಿಡಿದುಕೊಂಡು ಬೆಟ್ಟದ ಕೆಳಗೆ ತಂದಿರುವುದು ಆಶ್ಚರ್ಯವಾಗಿರುತ್ತದೆ. ಅವನಿಗೆ ಮೈ ಮೇಲೆ ೪—೬ ಕಡೆ ಸ್ವಲ್ಪ ಸ್ವಲ್ಪ ತರದ ಘಾಯವಾಗಿತ್ತು. ತದನಂತರ ಅದನ್ನು ಊರೊಳಕ್ಕೆ ತಂದರು. ಆಗ ಊರಿನಲ್ಲಿ ಬಹು ಜನರು ಸೇರಿ ಬೆಟ್ಟದ ಹತ್ತಿರ ನಡೆದದ್ದನ್ನೆಲ್ಲಾ ಆ ಮೂಲಾಗ್ರವಾಗಿ ನೋಡಿದ್ದ ದಾಮೈಯ್ಯನಿಂದ ತಿಳಿದು ಆಶ್ಚರ್ಯಪಟ್ಟು ಆ ಬೋರನ ಶಕ್ತಿಗೂ ತದನುಸಾರವಾದ ಧೈರ್ಯಕ್ಕೂ ಮೆಚ್ಚಿ ಮುಖಂಡರಾದವರೆಲ್ಲರೂ ಯೋಗ್ಯತಾನುಸಾರ ರುಮಾಲು, ಧೋತ್ರ, ವಸ್ತ್ರ, ಅಂಗರೇಖ ಮೊದಲಾದ ಸುಮಾರು ೨೦—೨೫ ರೂಪಾಯಿ ಬೆಲೆ ಬಾಳತಕ್ಕ ಪದಾರ್ಥಗಳನ್ನು ಇನಾಂ ದಯಪಾಲಿಸಿದರು. ಹಂದಿಯನ್ನು ತಿನ್ನತಕ್ಕಂಥವರಿಗೆ ಕೊಟ್ಟುಬಿಟ್ಟರು. ಈ ವಿಷಯದಲ್ಲಿ ಪ್ರಾಣಿಹಿಂಸೆಯು ಸ್ವಲ್ಪ ನಿಂದಾಸ್ಪದವಾದರೂ ಅವನ ಶಕ್ತಿಯೂ ಧೈರ್ಯವೂ ಸ್ತೋತ್ರಾರ್ಹವಾಗಿದೆ. ಅಂಥಾ ಭಾರೀ ಕಾಡು ಹಂದಿಯನ್ನು ಕೈಯಲ್ಲಿ ಹಿಡಿದು ನಿಲ್ಲಿಸಿ ಹೋರಾಡುವುದು ಸಾಮಾನ್ಯವೇ?

ಬೊಮ್ಮೇನಹಳ್ಳಿ ಬಿ ರಾಮರಾವ್.

ಸ್ವಾಮಿ ಅಭೇದಾನಂದರವರೂ ವೇದಾಂತವೂ—ಪ್ರತ್ಯುತ್ತರವು.

ಅಯ್ಯಾ,

ತಮ್ಮ ಪತ್ರಿಕಾ ಮುಖೇನ ಬಾತ್ಮಿದಾರರಾದ ವೇದಾಂತಾಭಿಮಾನಿಯವರು ಕೊಟ್ಟಿರುವ ಉತ್ತರವು ಸದುತ್ತರವಲ್ಲದು. ಈ ವಿಷಯವಾಗಿ ನಾನು ಬರೆದಿರುವದೊಂದು, ಅವರ ವಿಚಾರವೊಂದು. ಎ ದಿಗೆ ತಾನೇ ಚರ್ಚೆಯು ಮುಕ್ತಾಯವಾದೀತು? ಇದೂ ಅಲ್ಲದೆ ನನ್ನಲ್ಲಿಲ್ಲದಿರುವ ದೋಷಗಳನ್ನು ತೋರಿಸಿ ಪರಿಹಾಸ್ಯವಂ ಮಾಡುವಂತೆ ಕಾಣುವದು. ಇವರ ಅವಿನಾತವೇ ಹೀಗಿದ್ದಲ್ಲಿ ಇನ್ನು ಮುಂದೆ ಇವರಿಂದ ಬರೆಯಲ್ಪಡುವ ಬಾತ್ಮಿಗಳಿಗೆ ನಾನು ಲೇಶಮಾತ್ರವೂ ಗಮನ ಕೊಡುವಂಥವನಲ್ಲವು. ಇದನ್ನ ಚನ್ನಾಗಿ ಅವರು ದೃಷ್ಟಿಯಲ್ಲಿಡಲಿ. ನಾನು ಕುತರ್ಕಿಯಲ್ಲವು. ಕುತರ್ಕ ವಿತರ್ಕಂಗಳು ವೇದಾಂತಾಭಿಮಾನಿಗಳಲ್ಲಿ ಉತ್ಪನ್ನವಾದ ಸಹಜ ಗುಣಂಗಳು. ಪ್ರಸ್ತುತ ಒಂದೆರಡು ವಿಷಯಗಳನ್ನು ವೇದಾಂತಾಭಿಮಾನಿಯು ಅನ್ಯಾರ್ಥ ಮಾಡಿಕೊಂಡಿರುವದನ್ನು ತೋರಿಸಿ ಇತರ ವಿಷಯಂಗಳ್ಯಾವತ್ತೂ ಉತ್ತರವು ಹೊಂದಲು ಎಷ್ಟರ ಮಟ್ಟಿಗೆ ಅರ್ಹವೋ ಅನರ್ಹವೋ ವಾಚಕರೇ ತಿಳಿದುಕೊಳ್ಳಲಿ.

ಸ್ವಾಮಿ ಅಭೇದಾನಂದರ ಉಪನ್ಯಾಸಂಗಳ ಮೇಲೆ ನನ್ನದು ನಿಷ್ಪಕ್ಷಪಾತವಾದ ಆಕ್ಷೇಪಣೆಗಳೇ ಹೊರತು ಅನ್ಯಥಾ ನಾನು ತತ್ವಶಾಸ್ತ್ರವನ್ನಾಗಲಿ, ಸನಾತನ ವೇದಾಂತ ಧರ್ಮಗಳನ್ನೇ ಆಗಲಿ ನನ್ನ ಪ್ರಥಮ ಬಾತ್ಮಿಯಲ್ಲಿ ತೃಣೀಕರಿಸಲಿಲ್ಲವಾದುದರಿಂದ ವೇದಾಂತಾಭಿಮಾನಿಯವರ ದುರಭಿಮಾನವೂ ದಾಗುದವೂ ಎಷ್ಟೆಂದು ತಾನೇ ಹೇಳಲಿ?

(೧) "ಕ್ರೈಸ್ತ ಮತವಾದರೋ ಪಾಪವು ನಿತ್ಯವೆಂದು ಸ್ಥಾಪಿಸಿ ಪಾಪದ ತಾಪಕ್ಕೆ ಮಾನಸಾಂತರಪಡಬೇಕೆಂದು ಹೇಳುವದರಿಂದ ಇದು ಸುಳ್ಳಾಯಿತು! ವೇದಾಂತವು ಪಾಪವು ಸುಳ್ಳೆಂದು ಹೇಳಿದುದರಿಂದ ಸತ್ಯವಾಯಿತು!" ,ನಾನು ಮೇಲ್ಕಂಡ ಎರಡು ವಾಕ್ಯಗಳನ್ನು ಹೋಲಿಸಿ ಎಷ್ಟರಮಟ್ಟಿಗೆ ಆರ್ಯರಾದ ಹಿಂದುಗಳ ನಡತೆಗಳಲ್ಲಿಯೂ ಪಾಶ್ಚಿಮಾತ್ಯರಾದ ಕ್ರೈಸ್ತರ ನಡತೆಗಳಲ್ಲಿಯೂ ಗೃಹಸ್ಥಾಶ್ರಮದಲ್ಲಿಯೂ ದಿನಂಪ್ರತಿ ಚರ್ಯೆಯಲ್ಲಿಯೂ ಒಂದೋವರ ಧರ್ಮಾರ್ಥಧರ್ಮಗಳ ನಿದರ್ಶನವಾಗಿ ತೋರಿಸಿರುವೆನೇ ಹೊರತು ವೇದಾಂತವು ಕ್ರೈಸ್ತರ ಧರ್ಮಗಳನ್ನು ಕುರಿತು ದೂಷಿಸುವದೆಂದು ಹೇಳಲಿಲ್ಲವಷ್ಟೆ.

(೨) "ವೇದಾಂತವು ಪಂಡಿತಪಾಮರ ರಂಜನವಾಗಿದೆ" ಎಂ ತಿಳಿಸಿರುವರು. ಆದರೆ ಸ್ವಾಮಿ ಅಭೇದಾನಂದರವರು ಅನುಮೋದಿ ವಂಥಾದ್ದು ಅದ್ವೈತ ವೇದಾಂತವಾದುದರಿಂದ ರಾಮಾನುಜಾಚಾ ರಿಂದ ಸ್ಥಾಪಿಸಲ್ಪಟ್ಟ ವಿಶಿಷ್ಟಾದ್ವೈತವೇದಾಂತವೂ ಮಧ್ವಾಚಾ ರಿಂದ ಪ್ರತಿಪಾದಿಸಲ್ಪಟ್ಟ ದ್ವೈತವೇದಾಂತವೂ ಭಿನ್ನಭಿನ್ನವಾಗಿ ಹೊರತು ಅದ್ವೈತವೇದಾಂತದವರಾದ ಪಂಡಿತ ಪಾಮರರಿಗೆ ಪ್ರಥ ಗವಾದ ವೇದಾಂತವು ಮೇಲೆ ಅರುಹಿದ ಎರಡು ವೇದಾಂತಗಳ ತ ಪಾಮರರಿಗೆ ಅನ್ವಯಿಸುವದಿಲ್ಲವಷ್ಟೆ.

(೩) ನಾರಾಯಣನು ಸಿಂಹವಾದದ್ದೂ ಕರ್ಮ ಚಕ್ರವಿನಿಂದ ದಾಂತಾಭಿಮಾನಿಯು ಮಾಯಾಜಾಲದ ಆವರಣೆಯಿಂದ ಪರಮಾ ಮಂ ತಾಳಿದ್ದೂ ಪುರಾಣ ಪುರಸ್ಸರವಾಗಿ ವೇದ್ಯವಾಗಬಹುದು! ಇದ ನೂ ಸಂದೇಹವಿಲ್ಲವು! ಪರಂತು, ಪಾಪ ಪುಣ್ಯ ವಿಚಾರಗಳನ್ನು (ಸ್ವಾಚರಣೆಯಿಂದ ಪಾಪವಂ ಕಳೆದು ಪುಣ್ಯವಂ ಪಡೆಸುವದು ಸ ಮತದವರ ಅಭೀಷ್ಟವನ್ನು) ವಿಚಾರ ಮಾಡದಿರುವ ವೇದಾಂತವು ಥ್ಯವೆಂದು ಸಾರುವದರಿಂದಲೂ 'ನಾನೇ ಬ್ರಹ್ಮನು,' "ಯದ್ಭಾವಂ ತದ್ಭವತಿ" ಎಂದು ಹೇಳುವದರಿಂದಲೂ ನಾವು ಇಂಥಾ ವೇದಾಂತವನ್ನು ತುಕೊಳ್ಳಲು ಹೆಚ್ಚಾದ ಶಕ್ತಿ, ಬುದ್ಧಿಯಂ ಭಗವಂತನೇ ಕೊಡದಿರ

(೪) ನೂತನ ವೇದಾಂತವೆಂತಲೂ ಹತ್ತೊಂಬತ್ತನೇ ಶತಮಾ ದಿಂದ ತಿದ್ದುಪಾಟಾಗಿರುವ ವೇದಾಂತವೆಂತಲೂ ಹೇಳುವುದಾವುದೋ ವೀನ ಮತವಾಗಿರುತ್ತದೆ. ಅದು ಅವುದು? ಶಾಂತಚಿತ್ತರಾಗಿ ಯಾ ರೂ ಸರಿಯೇ ನಾನು ಬರೆದಿರುವ ಅಂಶಗಳನ್ನು ನ್ಯಾಯವಾಗಿ ಚ ಸುವಲ್ಲಿ ನಾನು ಸದುತ್ತರವಂ ಕೊಡಲು ಸಿದ್ಧನಾಗಿರುವೆನು.

ಬೆಂಗಳೂರು ಎಂ. ನಾರಾಯಣ್ ಸಿಂಗ್.

ತಾಲ್ಲೋಕು ವರ್ತಮಾನಗಳು

ಹೊನ್ನಾಳಿ.—ಈ ತಿಂಗಳು ತಾ ೧೬ ರಲ್ಲಿ ಹೊನ್ನಾಳಿ ಬಳಿ ಮೈಲಿ ಫಾಸಲೆಯಲ್ಲಿ ಅರಕೆರೆ ಎಂಬ ಗ್ರಾಮವಿದೆ. ಅದರ ಹತ್ತಿರ ದ ಬೆಟ್ಟದ ಮೇಲೆ ಜೋನತ್ತೇಮನ ಪ್ರಸಿದ್ಧ ದೇವಾಲಯವುಂಟು. ಅಲ್ಲಿಯೇ ಒಂದು ಕಟ್ಟೆಯ ಬಳಿ ಸದರಿ ಗ್ರಾಮದ ಕೆಲವು ಒಕ್ಕಲಿ ಹುಡುಗರು ದನಗಳನ್ನು ಮೇಯಿಸುತ್ತಿರುವಾಗ್ಗೆ ಹುಡುಗರುಗಳು ಬ್ಬರಿಗೊಬ್ಬರು ನಿರ್ನಿಮಿತ್ತವಾಗಿ ಕುಸ್ತಿ ಮಾಡಲಾರಂಭಿಸಿದರು. ಸಮಾಚಾರವು ಮನೆಯವರಿಗೆ ತಿಳಿಯಿತು. ಯಜಮಾನರುಗಳು ಯಾದ ಮನೆಯಲ್ಲಿರುವ ಅಣ್ಣಂದಿರುಗಳು ಆ ಹಾಲನ ಕಡೆ ೧೦ ರೂ ಈರನ ಕಡೆ ೧೦ ಜನರೂ ಆ ಸ್ಥಳಕ್ಕೆ ಕೈಯಲ್ಲಿ ದೊಣ್ಣೆ ಡ್ಡಿ ಕಲ್ಲು ಸಹಾ ತೆಗೆದುಕೊಂಡು ಬಂದ ಒಡನೆ ಪರಸ್ಪರ ಕಲಹ ದೊಡ್ಡವರುಗಳಲ್ಲಿಯೇ ಯುದ್ಧದಂತೆ ಮಾರಾಮಾರಿ ಆಗಿ ಹೊಡೆ ದರು,-ಎಷ್ಟೋ ಗಾಯಗಳಾಗಿ ದೊಣ್ಣೆ ಏಟುಗಳು ಬಿದ್ದವು. ಅಷ್ಟ ಲ್ಲಿಯೇ ಈ ತಮಾಷೆಯನ್ನು ನೋಡಿ ಬಿಡಿಸಿದರು. ಅವರಿಬ್ಬರು ದುಗರಿಗೂ ಹೊಡೆದದ್ದರಿಂದ ಏಳಲಾರದೆ ನೋತು ಇರುವರು. ಎಂ ಗ್ರಾಮಕ್ಕೆ ಜಲ್ಲೆಯಲ್ಲಿ ಹೇರಿಸಿಕೊಂಡು ಬಂದವರೇ ಪಟೇಲ ರಿಪೋರ್ಟು ತೆಗೆದುಕೊಂಡು ಒಂದು ಪೋಲೀಸಿನವರಲ್ಲಿ ಫಿರ್ಯಾ ಪಟ್ಟರು. ಮಾರನೆ ದಿನ ಕಾನ್‌ಸ್ಟೇಬಲರು ಕೇಸಾಗಿ ವಿಚಾರಣೆ ನಡೆಸುವ ಲ್ಲಿ ಕೆಲವರು ಆಸ್ಪತ್ರೆಗೆ ಹೋಗಿ ಘಾಯಕ್ಕೆ ಪ್ಲಾಸ್ತರು ಹಾಕಿಸಿ ದರು. ೨ ದಿವಸ ಕಚೇರಿ ಕಾಯುವದರಲ್ಲಿಯೇ ಭಯಪಟ್ಟು ಕ ರು ಹೇಳಿದ ಬುದ್ಧಿವಾದದಂತೆ ಕೇಳಿ ನಷ್ಟಪಟ್ಟುಕೊಂಡು, ಉಭ ಪಾರ್ಟಿಯವರೂ ರಾಜಿ ಆದರು. ಇದಲ್ಲವೇ ಮುಗ್ಧಸ್ವಭಾವ ಲಕ್ಷ

ಚಾಮರಾಜನಗರ.—ಕಳೆದ ಮಂಗಳವಾರದಿಂದ ಈ ಕಡೆ ಮ ಯು ಅಪಾರವಾಗಿ ಸುರಿಯುತ್ತಿರುವುದರಿಂದ ಕೆರೆ ಕುಂಟೆ ಕಟ್ಟೆಗ ಲ್ಲಾ ನೀರು ಬಂದು ಕೋಡಿ ಹರಿಯುತ್ತಿವೆ. ಆದರೆ ಮಳೆ ವಿಪ ವಾದ್ದರಿಂದ ಬೆಳೆಗಳು ತಲೆ ಎತ್ತುವುದೇ ಕಷ್ಟವಾಗಿದೆ. ಸುವರ್ಣಾ ಪ್ರವಾಹವು ಹರಿಯುತ್ತಿದೆ. ಈ ಕಾಲದಲ್ಲಿ ಮರಹಳ್ಳಿ ಸಂತೆಗೆ ಗಾ ಳು ಹೋಗಿ ಬರುವುದೇ ಪ್ರಯಾಸವಾಗಿರುತ್ತೆ. ಅಡ್ಡ ಹಳ್ಳಗಳಿಗೆ ತಮೆಗಳನ್ನು ಕಟ್ಟಿಸದಿರುವುದು ಮುಖ್ಯಕಾರಣ.—ಊರಿನ ಮ್ಯು ಪಾಲಿಟಿಯೇ ಚನ್ನಾಗಿಲ್ಲ. ನಮ್ಮ ಅಮಲ್ದಾರರು ಹೊರಗೆ ಸಂಚ ಮಾಡದಿದ್ದರೆ ಜನರ ಆರೋಗ್ಯಭಾಗ್ಯ ಕೈಗೂಡುವುದು ಹೇಗೆ? ಕಾಲದಲ್ಲಿ ನಮ್ಮ ಆಸ್ಪತ್ರೆ ಅಸಿಸ್ಟೆಂಟರು ರೋಗಿಗಳ ವಿಚಾರವಾಗಿ ನ್ನಾಗಿ ನೋಡುತ್ತಿರುವರು. ಗೋರಕ್ಷಣ ಸಭೆಯೊಂದು ಶೀಘ್ರ ಯ ಸ್ಥಾಪಿತವಾಗುತ್ತದೆ.—ಕಳೆದ ೧೯ ನೇ ಭಾನುವಾರ ಸಾಯ ಲ ಇದೇ ಊರಿನಲ್ಲಿ ದೇವಾಂಗದ ಬೀದಿಯಲ್ಲಿರುವ ರಂಗಣ್ಣನೆಂಬ ಸುಮಾರು ೧೦—೧೧ ವರುಷದ ಹುಡುಗಿ ತಮ್ಮ ಮನೆ ಬಾಗಿಲ ಬಳಿ ತಿತ್ತು. ಅವರ ಮನೆಯ ಹಸುವು ನುಗ್ಗಿ, ನಿಂತಿದ್ದ ಹುಡುಗಿಯ ಗಾಬರಿಯಿಂದ ತಿವಿಯಿತು. ಹಸುವಿನ ಕೊಂಬು ಹುಡುಗಿಯ ಮೈ ಟಿಯ ಕೆಳಗೆ, ಪಲ್ಲುಗಳ ಮೇಲಕ್ಕೆ ನುಗ್ಗಿ ಮೂಗಿನ ನೇರಕ್ಕೆ ಹ ಬಿಟ್ಟಿತು. ತಕ್ಷಣ ರಕ್ತ ಪ್ರವಾಹವು ಪೂರವಾಗಲು ಮಗುವು ಪ್ರ ಪ್ಪಿಬಿದ್ದಿತು. ಕೂಡಲೆ ಅಜ್ಜೂ ಬಾಜೂದವರೂ ತಂದೆ ತಾಯಿಗಳೂ ಬಿಬಂದು ಎಷ್ಟು ಪ್ರಯತ್ನ ಮಾಡಿದರೂ ರಕ್ತವು ನಿಲ್ಲದಿರಲು ಆಸ್ಪ ಗೆ ತೆಗೆದುಕೊಂಡುಹೋದರು. ನಮ್ಮ ಡಾಕ್ಟರವರು ಹೊಲಿದು ಹಾಕಿ ಉಪಚಾರ ಮಾಡಿದರು. ಈಗಲೂ ಆಸ್ಪತ್ರೆಯಲ್ಲೇ ಇ ಹೊಂದುತ್ತಿರುವಳು.

ಮಳವಳ್ಳಿ.—ಇದೇ ಶಿವನಸಮುದ್ರಕ್ಕೆ ತಾ ೧೩ ರಲ್ಲಿ ಸ ಕಾಲ ಸುಮಾರು ೩ ಗಂಟೆ ಸಮಯದಲ್ಲಿ ಸ್ವಾಮಿ ಅಭೇದಾನಂ ಅವರ ಶಿಷ್ಯರೊಡನೆ ಇಲ್ಲಿಗೆ ಬರುವಾಗ್ಯೆ ಬ್ಲಫಿನ ಸಮೀಪದಲ್ಲಿ

ಗದಲ್ಲಿ ಬರುತ್ತಿದ್ದ ಟಾಂಗಾ ಗಾಡಿಯು ಮುರಿದು ಬಾಜೂದಲ್ಲಿರುವ ಚರಂಡಿಗೆ ಬೀಳಲು ಒಳಗಿದ್ದವರು ಜಾಗ್ರತೆಯಿಂದ ಧುಮುಕಿ ಮುಂದೆ ಬರುತ್ತಿದ್ದ ವಿಕ್ಟೋರಿಯಾ ಕುದುರೆ ಬಂಡಿಯಲ್ಲಿ ಕುಳಿತುಕೊಂಡು ಇಲ್ಲಿನ ಮುಸಾಫರಖಾನೆಗೆ ಬಂದರು. ನಂತರ ಇಲ್ಲಿನ ಮೆಡಿಕಲ್ ಆಫೀಸರ್ ಮೆ॥ ಎಸ್. ಜೆ. ವೆಸ್ಲಿಯವರೂ, ಚಾನಲ್ ಮಾನೆಗಾರ್ ಮ. ರಾಮಣ್ಣನವರೂ ಇನ್ನೂ ಕೆಲವು ಮಹನೀಯರೂ ಸೇರಿ ಸ್ವಾಮಿಗಳ ಭೇಟಿ ತೆಗೆದುಕೊಂಡರು. ಇಲ್ಲಿನ ಹೈಡ್ರಾಲಿಕ್ ಆಪರೇಟರು ಮೆ॥ ವಿ. ಆರ್. ಕೌಶಿಕ್ ಯವರು ಸ್ವಾಮಿಗಳವರಿಗೂ ಅವರ ಶಿಷ್ಯಮಂಡಲಿಗೂ ತಂಬಾಯಿಗಳನ್ನೊಪ್ಪಿಸಿ ಸಕಲರೂ ಕೆಲವು ಹೊತ್ತು ಸಂಭಾಷಿಸುತ್ತಿದ್ದರು. ಆ ದಿನ ರಾತ್ರಿ ಸ್ವಾಮಿಗಳವರು ಇಲ್ಲಿನ ಚೇಫ ಆಪರೇಟರು ಮೆ॥ ಡಿ. ಕಾಸ್ಟಲ್ ಸಾಹೇಬರು, ಮೆ॥ ಎಫ್. ಎಲ್. ವಿಂಲ್ ಸಾಹೇಬರು ಇನ್ನೂ ಅನೇಕ ದೊಡ್ಡ ಮನುಷ್ಯರು ಸಭೆಯಲ್ಲಿ ಹಾಜರಾಗಿದ್ದರು. ಸಕಲರೂ ಕೆಲವು ಹೊತ್ತು ಸ್ವಾಮಿಗಳ ಸಂಗಡ ಸಂಭಾಷಿಸುತ್ತಿದ್ದು ತೆರಳಿದರು. ಸ್ವಾಮಿಗಳ ಸಂಗಡ ಮಂಡ್ಯದ ತಾಲ್ಲೂಕು ಪೋಲೀಸ್ ಇನ್ಸ್‌ಪೆಕ್ಟರೂ ಅಮಲ್ದಾರರೂ ಮತ್ತು ಎಗ್ಸಿಕ್ಯೂಟಿವ್ ಇಂಜನಿಯರು ಸಾಹೇಬರವರೂ, ಮಳವಳ್ಳಿ ತಾಲ್ಲೂಕು ಶಿರಸ್ತೇದಾರರೂ ಬಂದು ಇಲ್ಲಿನ ಕಾರ್ಯಗಳನ್ನು ಸಾಂಗವಾಗಿ ನಡಿಸಿದರು. ಸ್ವಾಮಿಗಳು ತಾ ೧೭ನೆ ಮಧ್ಯಾಹ್ನ ಸುಮಾರು ೩ ಗಂಟೆ ಸಮಯದಲ್ಲಿ ಇಲ್ಲಿಂದ ಮದ್ದೂರಿಗೆ ಪ್ರಯಾಣ ಮಾಡಿದರು. ಈ ಮಹನೀಯರುಗಳು ಇಷ್ಟು ದೂರ ಬಂದು ಭೇಟಿಕೊಟ್ಟು ಪ್ರಯಾಣಮಾಡಿದ್ದು ಸಕಲರಿಗೂ ಮಹಾನಂದವಾಗಿರುತ್ತದೆ.

ಚಿತ್ರದುರ್ಗ.—ಕಳೆದ ವಾರವೆಲ್ಲಾ ಇಲ್ಲಿ ವಿಶೇಷವಾದ ಮಳೆಯಾಗಿ ಕೆರೆಕಟ್ಟೆಗಳೆಲ್ಲಾ ಭರ್ತಿಯಾದವು. ಟವನ್ನಿಗೆ ಕೊರತೆಯಾಗಿದ್ದ ನೀರಿನ ಸರಬರಾಯಿಯು ಸಂಪೂರ್ಣವಾಯಿತು. ಕೆರೆಯೂ ಅದರ ಹಿಂದಣ ಒಡ್ಡುಗಳೇ ಸುಮಾರು ಮುಕ್ಕಾಲುಪಾಲಿಗಿಂತಲೂ ಹೆಚ್ಚಾಗಿಯೇ ತುಂಬಿವೆಯೆಂದು ಕೇಳಬಂದು ಇನ್ನೂ ಮೋಡವೂ ಜಡಿ ಮಳೆಯೂ ಹಿಡಿದೇ ಇದೆ. ಸುಮಾರು ೧೦-೧೨ ದಿನಗಳಿಂದ ಬಿಸಿಲನ್ನು ನೋಡಬೇಕೆಂದು ಬಯಸಿದರೂ ಇಲ್ಲವಾಗಿದೆ. ಎತ್ತನೋಡಿದರೂ ಹಸುರು ಹುಲ್ಲು ಕೋಮಲವಾಗಿ ಬೆಳೆದು ನಿಂತಿರುವ ಜೋಳ, ರಾಗಿಯೇ ಮುಂತಾದ ಪೈರುಗಳೂ ಕಂಗೊಳಿಸುತ್ತಿರುವವು. ಕ್ಷಾಮದ ಬಾಧೆಯು ಈ ಸಾರಿ ತಪ್ಪಿತೆಂದು ಎಲ್ಲರೂ ಸಂತೋಷಪಡುತ್ತಿರುವರು. ಇದೂ ಅಲ್ಲದೆ ಸ್ವಲ್ಪವಾಗಿ ತಲೆದೋರಿದ್ದ ಕಾಲರಾ ಜಾಡ್ಯವೂ ನಿಶ್ಶೇಷವಾಗಿ ಹಿಂತೊಲಗಿದೆ. ಬಹಕಾಲದಿಂದ ಒಣಗಿದ್ದ ದನ ಕರುಗಳು ಚನ್ನಾಗಿ ಬೆಳೆದ ಹುಲ್ಲನ್ನು ಗುಡ್ಡಗಳ ಮೇಲೆ ಮೇದು ಕಣಿವೆಗಳ ನೀರನ್ನು ಕುಡಿದು ತೃಪ್ತಿಯನ್ನು ಹೊಂದುತ್ತಿರುವವು. ಈ ಶುಭೋದಯದ ಕಾಲದಲ್ಲಿ ಜನರು ದಯಾಳುವಾದ ದೇವರ ಮಹೋಪಕಾರಗಳನ್ನು ಸ್ಮರಿಸುತ್ತ ಕೃತಜ್ಞತೆಯಿಂದಲೂ ವಿಧೇಯತೆಯಿಂದಲೂ ಆತನನ್ನು ಮೆಚ್ಚಿಸುವವರಾಗಲಿ!—ಕಳೆದ ಗುರುವಾರ ಮೈಸೂರು ವೆಸ್ಲಿಯನ್ ಮಿಷನ್ ಜನರಲ್ ಸೂಪರಿಂಟೆಂಡೆಂಟಾದ ರೆವ್ ಡಿ ವಿ ಲೀಸ್ ಸಾಹೇಬರವರು ಈ ಊರಿಗೆ ದಯಮಾಡಿಸಿ, ಊರಿನ ಟವನ್‌ಹಾಲಿನಲ್ಲಿ ಇಂಗ್ಲಿಷ್ ವಿದ್ಯಾರ್ಥಿಗಳಿಗೂ ಊರಿನ ಮಹಾ ಜನಗಳಿಗೂ ಗಂಭೀರವಾದ ಮತ್ತು ತಾತ್ಪರ್ಯದಿಂದಲೂ ಆಸಕ್ತಿಯಿಂದಲೂ ಉಪನ್ಯಾಸ ಮಾಡಿದರು. ಆಗ ಅಗ್ರಾಸನವನ್ನು ಅಲಂಕರಿಸಿದ್ದ ಡೆಪ್ಯುಟಿ ಕಮಿಷನರ್ ಮೆ॥ ಎಚ್. ರಾಮರಾವ್ ನಾಯ್ಡುರವರು ಉಪನ್ಯಾಸಕರನ್ನು ಸಭೆಯ ಪರವಾಗಿ ವಂದಿಸಿ, ಉಪನ್ಯಾಸವು ಬಹಳ ಪ್ರಯೋಜನ ಕರವಾಗಿ ಇತ್ತು. ಇನ್ನೊಂದಾವರ್ತಿ ಈ ಪಾದ್ರಿಯವರು ಇಲ್ಲಿಗೆ ದಯಮಾಡಿಸಿದಾಗ ಇನ್ನೊಂದು ಉಪನ್ಯಾಸ ಮಾಡಬೇಕು ಎಂದು ಕೇಳಿ ಸಭೆಯನ್ನು ಬರಖಾಸ್ತು ಮಾಡಿದರು. ಉಪನ್ಯಾಸದ ವಿಷಯವು "ಪಾಪದಿಂದ ಬಿಡುಗಡೆ ಯಾಗುವದು" ಎಂಬುವದನ್ನು ಕುರಿತದ್ದಾಗಿತ್ತು.—ಬೊಂಬಾಯಿನಿಂದ ಪ್ರೊಫೆಸರ್ ...ಬ್ ಎಂಬವರು ಕಿನೆಮಾಸ್ಕೋಪ್ ಎಂಬ ಮ್ಯಾಜಿಕ್ ಲಾಂದ್ರವನ್ನೂ ...ಫೋನ್ ಎಂಬ ವಾದ್ಯ ಯಂತ್ರವನ್ನೂ ತಂದು ಟವನ್‌ಹಾಲಿನಲ್ಲಿ ೩-೪ ರಾತ್ರಿಗಳು ಪ್ರತಿದಿನವೂ ಚಲಿಸುವ ಚಿತ್ರಗಳಿಂದ ರಷ್ಯಾ ಜಪಾನ್ ಯುದ್ಧ ನಡದ ವಿಧವನ್ನೂ, ಪೋರ್ಟ್ ಆರ್ಥರ್ ಕೋಟೆಯನ್ನು ಹಿಡಿದ ಕ್ರಮವನ್ನೂ ತೋರಿಸಿ ಗಾನದಿಂದ ಎಲ್ಲ ಸಭಿಕರನ್ನೂ ಬಹಳ ಸಂತೋಷಪಡಿಸಿದರು. ಅವರಿಗೆ ಅದರಿಂದ ತಕ್ಕ ಆದಾಯವೂ ಉತ್ಪತ್ತಿಯಾಯಿತು.—ಇಲ್ಲಿನ ಎ ವಿ ಸ್ಕೂಲ್ ಹೆಡ್ ಮಾಸ್ತರಾಗಿದ್ದ ಮೆ॥ ಕೃಷ್ಣಯ್ಯರು ಕೋಲಾರ್ ಎ ವಿ ಸ್ಕೂಲಿಗೆ ವರ್ಗಾಯಿಸಲ್ಪಟ್ಟು ಹೋದರು. ಇವರು ತುಂಬಾ ವಿದ್ಯಾವಂತರೂ ನಿಗರ್ವಿಗಳೂ ವಿದ್ಯಾರ್ಥಿಗಳಿಗೆ ಶ್ರದ್ಧೆಯಿಂದ ಪಾಠಹೇಳುವವರೂ ಆಗಿದ್ದರು.

ತರೀಕೆರೆ.—ಈ ಊರಿನಲ್ಲಿ ತಾ|| ೧೩ರ ಲಾಗಾಯಿತು ಮಳೆ ಪ್ರಾರಂಭವಾಗಿ ಅತಿಯಾಗಿ ಬಂದು ಎಲ್ಲಾ ಕೆರೆಗಳು ಕೋಡಿ ಬಿದ್ದು, ಅನೇಕ ಕೆರೆಗಳು ಒಡೆದು ಹೋಗಿರುತ್ತವೆ. ಇದರಿಂದ ಅನೇಕ ಜನಗಳಿಗೆ ತುಂಬಾ ಅನಾನುಕೂಲವಾಗಿರುತ್ತೆ.—ಕಸಬಾದಲ್ಲಿರುವ ವೈಶ್ಯರ ವೆಂಕಟರಂಗಯ್ಯ ಶೆಟ್ಟಿ ಎಂಬುವನು ದೊಡ್ಡ ವ್ಯಾಪಾರ ಮಾಡತಕ್ಕವನಾಗಿದ್ದಾನೆ. ಇವನಿಗೆ ನಾಗರಹಾವು ಸಂಧ್ಯಾ ವೇಳೆ ಕಡಿದು ವಿಷ ಏರಿ ಬದುಕಲಾರನೆಂದು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ತೋರಿಸಲು ಡಾಕ್ಟರು ನೋಡಿ ಇಲಾಜು ಮಾಡಿ ಘಾಯಕ್ಕೆ ಸರಿಯಾದ ಔಷಧಿ ಹಾಕಿದ್ದರಿಂದ ಗುಣವಾಗಿರುತ್ತೆ. ಪುನಃ ಸದರಿಯವನು ಒಂದು ದಿವಸ ಮಲಗಿರಲು ಆ ಹಾವೇನೇ ಪುನಃ ಇವನು ಮಲಗಿದ್ದ ಸ್ಥಳದಲ್ಲಿ ಬಂದು ಶಬ್ದ ಮಾಡುತ್ತಾ ಇರಲು ಶೆಟ್ಟಿಯು ನೋಡಿ ಕೂಗಲು ಜನಗಳು ಸೇರಿ ಆ ಹಾವನ್ನು ಗುಂಡಿನಿಂದ ಹೊಡೆದುಹಾಕಿದರು. ನಮ್ಮ ಡಾಕ್ಟರು ಇಂಥಾದ್ದನ್ನು ಹುಷಾರು ಮಾಡಿದ್ದಕ್ಕೆ ಎಷ್ಟು ಕೊಂಡಾಡಿದರೂ ತೀರದ್ದಾಗಿದೆ.—ಈ ಊರಿನಲ್ಲಿರುವ ಎ. ವಿ. ಸ್ಕೂಲಿನಲ್ಲಿ ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಇಂಗ್ಲಿಷಿನಲ್ಲಿ ... ಜನ, ಕನ್ನಡದಲ್ಲಿ ೯ ಜನ ವಿದ್ಯಾರ್ಥಿಗಳು ಅಪ್ಲಿಕೇಷನ್ ಕಳುಹಿಸಿದ್ದಾರೆ. ಅಲ್ಲದೆ ಇಂಗ್ಲಿಷ್ ಮತ್ತು ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಗೆ ವಿದ್ಯಾರ್ಥಿಗಳು ದರಖಾಸ್ತು ಬಗ್ಗೆ ಕೊಡುವ ಮೊಬಲಗು ಪತ್ರಿಕಾ ಮುಖೇನ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ. [ನಾಲ್ಕು ರೂಪಾಯಿಗಳು.—ಎಡಿ.]—ಈಗ ಊರಲ್ಲಿ ಸ್ವಲ್ಪ ಕಾಲರಾ ಗಲಾಟೆ ಇದ್ದಂತೆ ಕಾಣುತ್ತೆ. ವೈಶ್ಯರ ಖಮೀದಿ ಸುಬ್ಬಣ್ಣನ ಮಗ ಶೀನಪ್ಪನೆಂಬುವನು ಕಾಲರಾದಿಂದ ತಾ. ೨೨ನೇ ಬುಧವಾರ ಮೃತಪಟ್ಟನು. ಶವವನ್ನು ಸಾಗಿಸುವ ಬಗ್ಗೆ ವೈಶ್ಯರೆಲ್ಲರು ಸೇರದೆ ಸಾವಕಾಶಮಾಡಿದ್ದರಿಂದ ಅಮಲ್ದಾರ್ರವರು ಖುದ್ದು ಶ್ರಮೆಯಮಾಡಿ ಆ ಜನಗಳನ್ನೆಲ್ಲಾ ಸೇರಿಸಿ ಶವವನ್ನು ಸಾಗಿಸಿದರು.—ಈ ಊರಿನಲ್ಲಿರುವ ಸಾಹುಕಾರ್ ಫಣಿಯಪ್ಪನವರ ಮನೆಯಲ್ಲಿ ಮಹಾಲ್ ಕಳವು ನಡೆದ ಸಂಗತಿ ಗೊತ್ತಿದೆಯಷ್ಟೆ. ಈ ಕಳ್ಳರು ಚನ್ನಗಿರಿ ತಾಲ್ಲೂಕಿನಲ್ಲಿ ಸಿಕ್ಕಿ ಕೆಲವು ಮಾಲು ಪತ್ತೆ ಆಗಿರುವಂತೆ ವರ್ತಮಾನ ಕೇಳುತ್ತೇವೆ. ಸಾಹುಕಾರ್ರು ಅಲ್ಲಿಗೆ ಹೋಗಿರುತ್ತಾರೆ. ಬಂದ ನಂತರ ಸಂಗತಿ ಗೊತ್ತಾಗಬೇಕು.—ಇಲ್ಲಿ ಮುಜರ್ ಮ್ಯಾನೇಜುಮೆಂಟಿಗೆ ಸೇರಿದ ೫—೬ ದೇವಸ್ಥಾನಗಳು ಇರುವವು. ಹಾಲಿ ವಿಚಾರಣೆ ಸರಿಯಾಗಿಲ್ಲ. ಸರ್ಕಾರದವರು ಧರ್ಮದರ್ಶಿಗಳನ್ನು ಏರ್ಪಾಡು ಮಾಡಿ, ದೇವಸ್ಥಾನಗಳ ವಿಷಯದಲ್ಲಿ ತುಂಬಾ ನಜರು ಇರಿಸಿ ಅನುಕೂಲಪಡಿಸಬೇಕಾಗಿ ನಂಬಿರುತ್ತೇವೆ.—ಇಲ್ಲಿ ಬ್ರಾಹ್ಮಣರಲ್ಲಿ ಒಂದು ಕಂಪನಿ ಏರ್ಪಾಡು ಆಗುವಂತೆ ತೋರುತ್ತೆ. ನಂತರ ಜನರಿಗೆ ಅನುಕೂಲವಾದ ಕೆಲವು ವಿಷಯ ಜಾರಿಗೆ ಬರಬಹುದು.

ಮದ್ದಗಿರಿ.—ಒಂದು ವಾರದಿಂದಲೂ ಮಳೆ ಬರುತ್ತಲೇ ಇದೆ. ಹೊಲಗಳಿಗೆ ತೇವವು ಜಾಸ್ತಿಯಾಗಿ ಪೈರುಗಳು ಕೆಟ್ಟು ಹೋಗುವ ಸ್ಥಿತಿಯಲ್ಲಿವೆ. ಇನ್ನೂ ಮೋಡಗಳಾಡುತ್ತಲೇ ಇವೆ. ಮಳೆ ಕೊಂಚ ವಿರಾಮ ಕೊಟ್ಟರೆ ಮೇಲೆಂದು ರೈತರು ಹೇಳಿಕೊಳ್ಳುತ್ತಿರುವರು.—ತಿಮ್ಮನಹಳ್ಳಿಯೆಂಬ ಗ್ರಾಮದಲ್ಲಿ ಜನರು ಹೊಲ ಗದ್ದೆಗಳಿಗೆ ಹೋದ ಸಮಯವನ್ನೇ ನೋಡಿಕೊಂಡಿದ್ದ ಪಟೇಲ್ ತಿಮ್ಮೇಗೌಡನ ಮಗ ಗಿರಿಯಪ್ಪನೆಂಬವನು ಚಿಕ್ಕಣ್ಣನೆಂಬವನ ಮಾಳಿಗೆ ಮನೆಯ ಮೇಲೆ ಹತ್ತಿ ದಂತಿಯನ್ನು ಕಿತ್ತು ಗವಾಕ್ಷಿಯಲ್ಲಿ ಇಳಿದು, ನಗದು ೯೦ ರೂಪಾಯಿಗಳನ್ನೂ, ಚಿನ್ನ ಬೆಳ್ಳಿ ನಗಗಳನ್ನೂ ಕಳವು ಮಾಡಿಕೊಂಡು ಹೋಗಿದ್ದನು. ಈ ಸಂಗತಿ ಕೋಡಿಗೇನಹಳ್ಳಿ ಸ್ಟೇಷನ್ ದಫೇದಾರರಿಗೆ ಗೊತ್ತಾದ ಕೂಡಲೇ ಬಂದು ಪತ್ತೆ ತರದೂದು ನಡೆಸಿ, ಮದ್ದಗಿರಿ ಪೋಲೀಸ್ ಇಲಾಖೆಗೆ ತಿಳಿಸಲು ಅಲ್ಲಿಂದ ಜಮೇದಾರರು ಸಹ ಬಂದು ಆ ದಿನವೇ ಮಾಲು ಸಹಿತ ಆಸಾಮಿಯನ್ನು ಮದ್ದಗಿರಿಗೆ ಸಾಗಿಸಿಕೊಂಡು ಹೋಗಿ ವಿಚಾರಣೆಗೆ ಗುರುಮಾಡಿದ್ದರಲ್ಲಿ ೧೦ ರೂಪಾಯಿ ಜುಲ್ಮಾನೆಯೂ ೬ ತಿಂಗಳ ಸಜವೂ ಆಯಿತು. ಈ ದಫೇದಾರರು ಹೋದ ವರ್ಷ ಗೌರೀಬಿದನೂರಿಗೆ ಸೇರಿದ ಹೊಸೂರೆಂಬ ಗ್ರಾಮದಲ್ಲಿ ಮರಾಟೆ ಸಿದ್ದೋಜಿ ಎಂಬವನು ಸಂಜೀವಿ ಎಂಬವಳನ್ನು ಖೂನಿ ಮಾಡಿ ಪರಾರಿಯಾಗಿದ್ದನು. ಆ ಅಪರಾಧಿಗೆ ಯಾವಜ್ಜೀವವೂ ಸಜಾ ವಿಧಿಸಲ್ಪಟ್ಟಿತು. ಮೆಹನತ್ತಿನಿಂದ ಕೆಲಸ ಮಾಡಿದ ದಫೇದಾರರಿಗೆ ಸರ್ಕಾರದವರು ಪ್ರೋತ್ಸಾಹಗೊಳಿಸಿದರೆ ಬೇರೆಯವರು ಸಹ ಆಸಕ್ತಿಯಿಂದ ತಮ್ಮ ಕೆಲಸಕಾರ್ಯಗಳನ್ನು ಮಾಡುವದರಲ್ಲಿ ಅನುಮಾನವಿಲ್ಲ.—ಈಚೀಚೆಗೆ ರಾತ್ರಿ ಕಾಲಗಳಲ್ಲಿ ಕಳ್ಳರು ಕುರಿ ತೊಪ್ಪಗಳಿಗೆ ನುಗ್ಗಿ ಆಡುಗಳನ್ನು ಹಿಡಿದುಕೊಂಡು ಹೋಗಿ ಚರ್ಮ ಮಾತ್ರ ತೆಗೆದುಕೊಂಡು ಮಾಂಸವನ್ನೆಲ್ಲಾ ಹಾಗೆಯೇ ಬಿಸಾಟು ಹೋಗುವರು. ಯಾಕೆಂದರೆ ಮಾಂಸ ಮಾರಿದರೆ ಊರಿನವರು ಅನುಮಾನ ಪಡುವರೆಂದು. ಹೀಗೆ ಮಾಡುವರು ಚರ್ಮ ಮಾರಿ ಬಂದ ದುಡ್ಡನ್ನು ಮಾತ್ರ ತಾವು ತೆಗೆದುಕೊಳ್ಳುವರು. ಈ ರೀತಿ ಕೆಲವು ಗ್ರಾಮಗಳಲ್ಲಿ ನಡೆದಿದೆ. ಆದ್ದರಿಂದ ಗ್ರಾಮಗಸ್ತಿನ ವಿಷಯ ಆಯಾ ಗ್ರಾಮದ ಪಟೇಲರು ಹೆಚ್ಚು ನಿಗಾ ಕೊಡುವದು ತುಂಬಾ ಪ್ರಯೋಜನವಾಗಿರುವದು.—ಬ್ಯಾಲ್ಯದಲ್ಲಿ ನಾಟಕದ ಮ್ಯಾನೇಜರನ್ನು ಕೆಲವು ತುಂಟರು ಹೊಡೆದರೆಂದು ಬರೆದಿದ್ದೆವಷ್ಟೆ. ಹಾಗೆ ಹೊಡೆದವರ ಪೈಕಿ ಮಾದಿಗರು ನಾಯ್ಕರು ಸೇರಿರಲಿಲ್ಲ. ೭ ಮಂದಿ ಸಾದರು ಮಾತ್ರ ಸೇರಿದ್ದರು. ನಾಟಕದವರಿಗೆ ೨೦ ರೂಪಾಯಿಗಳನ್ನು ಅಪರಾಧ ಕಾಣಿಕೆ ಕೊಟ್ಟು ಸಮಾಧಾನ ಮಾಡಿಕೊಂಡರು.—ಇಲ್ಲಿ ಕೆಲವು ಮಕ್ಕಳು ಸಿಡುಬಾಗಿ ಸತ್ತಿರುವರು. ಸರ್ಕಾರದವರು ಸಿಡುಬಿನಿಂದಾಗ ತಕ್ಕ ಕಷ್ಟವನ್ನೂ ನಷ್ಟವನ್ನೂ ತಪ್ಪಿಸಲು ಬೇಕಾದಷ್ಟು ಹಣವನ್ನು ವ್ಯಯಮಾಡಿ ದೇವಿ ಪಂಡಿತರನ್ನು ನೇಮಿಸಿರುವರು. ಪ್ರತಿ ತಾಲ್ಲೂಕುಗಳಿಗೂ ಇವರು ನೇಮಕವಾಗಿದ್ದರೂ ಮದ್ದಗಿರಿ ತಾಲ್ಲೂಕಿಗೆ ನೇಮಕವಾಗಿರುವರೋ ಇಲ್ಲವೋ ಎಂದು ಚಿಂತೆಯಿಂದ ಹೇಳಬೇಕಾಗಿದೆ. ಬಡವನಹಳ್ಳಿಯಲ್ಲಿ ಕೆಲವರು ದೇವಿ ಪಂಡಿತರು ಬಂದು ೧-೨ ವರ್ಷಗಳಾದವೆಂದೂ ಈಗಲಾದರೂ ಬಂದರೆ ಮಕ್ಕಳಿಗೆ ಸಿಡುಬು ಹಾಕಿಸಬಹುದಲ್ಲಾ ಎಂದೂ ಪ್ರಲಾಪಿಸುವರು. ಇವರ ಮೇಲಿನಧಿಕಾರಿಗಳು ಡೈರಿಯನ್ನು ಸರಿಯಾಗಿ ತನಿಖೆ ಮಾಡುತ್ತಿದ್ದಲ್ಲಿ ಇಂಥಾ ಅಕ್ರಮವು ನಡಿಯಲಾರದೆಂದು ತೋರುವದು. ಈಗಲಾದರೂ ಅವರನ್ನು ಗದರಿಸಿ ಸರಿಯಾಗಿ ಗ್ರಾಮಗಸ್ತು ಮಾಡಿಸುವ ಏರ್ಪಾಡಿನಿಂದ ಪ್ರಜೆಗಳಿಗೆ ಮೇಲು ಮಾಡುವರೆಂಬ ನಿರೀಕ್ಷೆಯುಂಟು.

ವಿದೇಶ ವರ್ತಮಾನಗಳು.

ಕಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಕ್ರೈಸ್ತ ಮತ ಪ್ರಸಾರಕ ಕಾರ್ಯಕ್ಕೆ ಒಬ್ಬನೊಬ್ಬ ಪುಣ್ಯಾತ್ಮನು ೩೬,೦೦೦ ರೂಪಾಯನ್ನು ದಾನಮಾಡಿದ್ದಾನೆ. ಆದರೆ ಆತನು ತನ್ನ ಹೆಸರು ತಿಳಿಸಿಲ್ಲ.

❖❖❖❖

ಜಪಾನ್ ಬ್ಯಾಂಕಿನ ವೈಸ್ ಗವರ್ನರಾದ ಮೆ॥ ತಕಹಾಷಿಯವರು ಮ್ಯಾಂಚೂರಿಯಾ ಸೀಮೆಯನ್ನು ಆಬಾದು ಮಾಡುವುದಕ್ಕಾಗಿ ವಿಲಾಯತಿಯಲ್ಲೂ ಅಮೇರಿಕದಲ್ಲೂ ಎಂಟುಕೋಟಿ ದ್ರವ್ಯವನ್ನು ಸಾಲ ಮಾಡಿ ತರಬೇಕೆಂದು ಪ್ರಯಾಣಮಾಡಿದಾರೆ.

❖❖❖❖

ರಷ್ಯಾ ಜಪಾನ್ ಯುದ್ಧದಲ್ಲಿ ಪೋರ್ಟ್ ಆರ್ಥರ್ ಕೋಟೆಯ ಬಳಿ ೨೧ ಯುದ್ಧದ ಜಹಜುಗಳು ಮುಳುಗಿಹೋಗಿದ್ದವು. ಜಪಾನ್ ರಾಜ್ಯದವರು ಸಮುದ್ರದಲ್ಲಿದ್ದಂತೆಯೇ ಆ ಜಹಜುಗಳನ್ನು ಹರಾಜು ಹಾಕಿಸಿ ಮುವತ್ತು ಕೋಟಿ ದ್ರವ್ಯ ತೆಗೆದುಕೊಂಡಿದಾರೆ.

ದಕ್ಷಿಣ ಆಫ್ರಿಕಕ್ಕೆ ಸೇರಿದ ವಜ್ರದ ಗಣಿ ಕಂಪನಿಯವರು ಕೇಪ್ ಕಾಲನಿಯಲ್ಲೂ ವಿಲಾಯತಿಯಲ್ಲೂ ಎರಡಾವರ್ತಿ ಆದಾಯದ ಮೇಲಣ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಬೇಕಾದದ್ದು ನ್ಯಾಯವಾಗಿದೆ ಎಂದು ಹೌಸ್ ಆಫ್ ಲಾರ್ಡ್ಸ್ ಎಂಬ ವಿಲಾಯತಿ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಿರುತ್ತದೆ.

❖❖❖❖

ಫ್ರಾನ್ಸ್ ಸಂಸ್ಥಾನದ ಪ್ರೆಸಿಡೆಂಟರಾದ ಎಂ. ಫಾಲಿಯರಿಸ್ ಯವರನ್ನು ಮದ್ದುಗುಂಡಿನಿಂದ ಕೊಂದುಹಾಕಬೇಕೆಂದು ಮಾರ್ಸೇಲ್ಸ್ ಪಟ್ಟಣದಲ್ಲಿ ಕೆಲವರು ಸೇರಿ ಫಿತೂರಿ ಮಾಡಿಕೊಂಡಿದ್ದರು. ಆ ಪಟ್ಟಣದ ಪೋಲೀಸಿನವರು ಆ ಫಿತೂರಿಯ ಗುಟ್ಟನ್ನು ತಿಳಿದು, ಸಿರಿಲ್ಲೋ ಎಂಬೊಬ್ಬ ಇಟಲಿ ದೇಶಸ್ಥನನ್ನು ಹಿಡಿದಿರುತ್ತಾರೆ.

❖❖❖❖

ವಿಲಾಯತಿ ರಾಜ್ಯಕ್ಕೆ ಸೇರಿದ ಐರ್ಲಾಂಡಿನಲ್ಲಿ ಈ ಸಲ ಆಲೂಗೆಡ್ಡೆಯ ಪೈರು ಬಹಳ ಮಟ್ಟಿಗೆ ಕೆಟ್ಟುಹೋಯಿತು. ಅಲ್ಲಿನ ಪ್ರಜೆಗಳ ಮುಖ್ಯ ಆಹಾರ ಪದಾರ್ಥವೇ ಆಲೂಗೆಡ್ಡೆಗಳು. ಈಗ ಪ್ರಜೆಗಳು ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುವಂತಾಗಿದೆ. ಸರ್ಕಾರದವರನ್ನು ರಿಲೀಫ್ ಕಾಮಗಾರಿ ಪ್ರಾರಂಭಮಾಡಬೇಕೆಂದು ಬೇಡಿಕೊಳ್ಳುತ್ತಿದಾರೆ.

❖❖❖❖

ಈಜಿಪ್ಟ್ ರಾಜ್ಯದ ಪ್ರಿನ್ಸ್ ಇಬ್ರಹಿಂ ಮಹಮ್ಮದ್ ಎಂಬ ರಾಜಕುಮಾರನು ಫ್ರಾನ್ಸಿಗೆ ಸೇರಿದ ಬರ್ನೆ ಎಂಬ ಪಟ್ಟಣದಲ್ಲಿ ಮೋಟಾರ್ ಕಾರ್ ಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ ಆ ಗಾಡಿಯು ರೈಲ್ ಗಾಡಿಗೆ ಢಕ್ಕಾ ಹೊಡೆದು, ರಾಜಕುಮಾರನಿಗೆ ಗಾಯಗಳಾಗಿ ಅದೇ ದಿನ ಆ ರಾಜಕುಮಾರನು ಸತ್ತುಹೋದನೆಂದು ವರ್ತಮಾನ ಬಂದಿದೆ.

❖❖❖❖

ಅಮೇರಿಕಕ್ಕೆ ಸೇರಿದ ಫಿಲಿಪೈನ್ ದ್ವೀಪಗಳಲ್ಲಿ ಪ್ಯೂಲಾಜಾನಿಸ್ ಎಂಬ ಸ್ವದೇಶಿಗಳು ಸೈನಿಕರ ಮೇಲೆ ತಿರುಗಿಬಿದ್ದು ಎರಡು ಕಡೆ ಯುದ್ಧಮಾಡಿದರು. ಮೊದಲನೆ ಯುದ್ಧದಲ್ಲಿ ೧೪ ಮಂದಿ ಸೈನಿಕರು ಮೃತಪಟ್ಟರು. ಎರಡನೆಯ ಯುದ್ಧದಲ್ಲಿ ಸೈನಿಕರು ಸ್ವದೇಶಿಗಳನ್ನು ಸೋಲಿಸಿ ಅವರಲ್ಲಿ ೫೦ ಮಂದಿಯನ್ನು ಕೊಂದು, ೧೦೦ ಜನರಿಗೆ ಗಾಯಪಡಿಸಿದರು. ಅಲ್ಲಿಗೆ ಅವರ ದಂಗೆಯು ಶಮನವಾಯಿತು.

❖❖❖❖

ತುರ್ಕಿ ಸುಲ್ತಾನರಾದ ಅಬ್ದುಲ್ ಹಮೀದ್ ಬಾದಷಾ ರವರು ಕಾಯಿಲೆ ಬಿದ್ದಿದಾರೆಂದು ಕಳೆದ ವಾರ ತಿಳಿಸಿದೆವಷ್ಟೆ. ಈಗ ಅವರಿಗೆ ವಾಸಿಯಾಗಿ ಯಥಾ ಪ್ರಕಾರ ಆರೋಗ್ಯವಾಗಿರುತ್ತಾರೆಂತಲೂ, ಅವರು ತಮಗೆ ಕಾಯಿಲೆ ವಾಸಿಯಾದದ್ದಕ್ಕಾಗಿ ತಮ್ಮ ರಾಜ್ಯದ ಬಂದೀಖಾನೆಗಳಲ್ಲಿರುವ ಮೂರನೇ ಎರಡುಪಾಲು ಶಿಕ್ಷೆಯನ್ನು ಪೂರ್ತಿ ಅನುಭವಿಸಿರುವ ಖೈದಿಗಳನ್ನೆಲ್ಲಾ ಖುಲಾಸ್ ಮಾಡಬೇಕೆಂದು ಅಪ್ಪಣೆ ಕೊಟ್ಟಿರುತ್ತಾರೆಂತಲೂ ತಂತೀ ವರ್ತಮಾನ ಬಂದಿದೆ.

❖❖❖❖

ಹೆಂಡತಿ ಮೃತಪಟ್ಟನೆ ಅವಳ ತಂಗಿಯನ್ನು ವಿವಾಹ ಮಾಡಿಕೊಳ್ಳುವುದು ಯೋಗ್ಯವಲ್ಲವೆಂದು ವಿಲಾಯತಿಯಲ್ಲಿ ಸರ್ಕಾರದವರು ಅಂಥಾ ಮದುವೆಗಳನ್ನು ನಿಷೇಧ ಮಾಡಿರುತ್ತಾರೆ. ಹೀಗೆ ತಡೆ ಮಾಡಿರುವುದು ಸರಿಯಲ್ಲವೆಂತಲೂ, ಅದಕ್ಕೆ ವಿರೋಧವಾದ ವೇದ ವಚನಗಳೇನೂ ಇಲ್ಲವೆಂತಲೂ, ಅಂಥಾ ಮದುವೆಗಳು ನಡೆಯುವಂತೆ ಕಾನೂನ್ ಮಾಡಬಹುದೆಂತಲೂ ಅಲ್ಲಿನ ವೈದಿಕಮಂಡಲಿಯ ಪೈಕಿ ಒಂದು ಗುಂಪಿನವರು ಗವರ್ನ್‌ಮೆಂಟಿಗೆ ಅರಿಕೆ ಮಾಡಿಕೊಂಡಿರುತ್ತಾರೆ.

❖❖❖❖

ಪರ್ಷಿಯಾ ರಾಜ್ಯದಲ್ಲಿ ಷಾಸುಲ್ತಾನರು ಪ್ರಜೆಗಳ ಅಭಿಪ್ರಾಯದಂತೆ ಪ್ರತಿನಿಧಿಗಳಿಂದ ಕೂಡಿದ ಒಂದು ಮಂತ್ರಾಲೋಚನಾ ಸಭೆಯನ್ನು ಏರ್ಪಡಿಸಿ, ಪ್ರಜೆಗಳೆಲ್ಲಾ ಸಮ್ಮತಿ ಹಾಕಿದಂಥಾ ದೊಡ್ಡ ಮನುಷ್ಯರನ್ನು ಮೆಂಬರಾಗುವಂತೆ ತಿಳಿಸಿದಾರೆ. ಇದು ಸಕಲ ಪ್ರಜೆಗಳಲ್ಲಾ ತುಂಬಾ ಆನಂದವನ್ನುಂಟುಮಾಡಿದೆ. ಅಲ್ಲಿನ ಇಂಗ್ಲಿಷ್ ರಾಯಭಾರಿಯ ಬಂಗಲೆಯಲ್ಲಿ ಆಶ್ರಯ ಪಡೆದಿದ್ದ ಪ್ರಜೆಗಳು ತಮ್ಮ ಸುಲ್ತಾನರು ಮಾಡಿರುವ ರಾಜಕೀಯ ಬದಲಾವಣೆಯನ್ನು ಮೆಚ್ಚಿಕೊಂಡು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ಇನ್ನೂ ಸುಮಾರು ೨೦೦೦ ಜನರು ತಮಗೆ ಅನ್ಯಾಯವಾಗಿದೆ ಎಂತಲೂ ಅದನ್ನು ಕ್ರಮಪಡಿಸಿಕೊಡಬೇಕೆಂತಲೂ ರಾಯಭಾರಿಯನ್ನು ಕೇಳುತ್ತಿದಾರೆ.

❖❖❖❖

ಅಮೇರಿಕಕ್ಕೆ ಸೇರಿದ ರಾಕ್‌ಫೆಲರ್ ವಿದ್ಯಾ ಸಂಘದ ಡಾಕ್ಟರ್ ಕೆರೆಲ್ ಎಂಬಾತನು ಬಹು ಅಪೂರ್ವವಾದ ಪ್ರಾಣಿ ಚಿಕಿತ್ಸೆಯನ್ನು ಮಾಡಿರುವುದಾಗಿ ತಂತೀ ವರ್ತಮಾನ ಬಂದಿದೆ. ನಾಯಿ, ಬೆಕ್ಕುಗಳ ಹೊಟ್ಟೆಯಲ್ಲಿರುವ ಜಲಬಾಧೆ ಕೋಶವನ್ನು ಕತ್ತರಿಸಿ ತೆಗೆದು, ಬೇರೆ ನಾಯಿ ಬೆಕ್ಕುಗಳ ಜಲಬಾಧೆ ಕೋಶಗಳನ್ನೂ ಕಾಲುಗಳನ್ನೂ ಅವುಗಳ ಸ್ಥಾನಕ್ಕೆ ಜಂಟಿಸಿ, ಅವುಗಳನ್ನು ಸಾಕುತ್ತಿದಾನೆ. ಇದರಿಂದ ಒಂದೇ ಜಾತಿಯ ಅಂಗಗಳು ತಮ್ಮ ಸ್ಥಾನದಲ್ಲಿದ್ದರೆ ತಮ್ಮ ಕೆಲಸಗಳನ್ನು ಮಾಡಬಲ್ಲವೆಂಬುವುದು ದೃಷ್ಟಾಂತವಾಯಿತು. ಈ ನೂತನ ಚಿಕಿತ್ಸೆಯು ಡಾಕ್ಟರುಗಳಲ್ಲಿ ತುಂಬಾ ಆಶ್ಚರ್ಯವನ್ನುಂಟುಮಾಡಿರುತ್ತದೆ.

❖❖❖❖

ಬೊಂಬಾಯಿ ಹೈಕೋರ್ಟಿನ ಜಡ್ಜರಾಗಿದ್ದು ಕಣ್ಣಿನ ಉಪದ್ರಕ್ಕೆ ಔಷಧ ಹಾಕಿಸಿಕೊಂಡು ಬರುವದಕ್ಕಾಗಿ ವಿಲಾಯತಿಗೆ ಹೋಗಿದ್ದ ಮೆ॥ ಬದ್ರುದ್ದೀನ್ ತಾಯಬ್ಜಿಯವರು ಅಲ್ಲೇ ಕಾಲವಾದರೆಂದು ತಂತೀ ವರ್ತಮಾನ ಬಂದಿದೆ. ಇವರಿಗೆ ೬೨ ವರುಷವಾಗಿತ್ತು. ಇವರು ಜಡ್ಜಿಗಳಲ್ಲಿ ಬಹಳ ಹೆಸರುವಾಸಿಯನ್ನು ಪಡೆದಿದ್ದರು. ಹಿಂದೂಸ್ಥಾನದ ಸಾರ್ವಜನಿಕ ಸಮಾಜದ ಉದ್ದೇಶಗಳನ್ನೂ ಕಾರ್ಯಗಳನ್ನೂ ಇವರು ಅನುಮೋದಿಸಿ, ಪ್ರೋತ್ಸಾಹಪಡಿಸುತ್ತಿದ್ದರು. ಮಹಮದೀಯರ ವಿದ್ಯಾಭ್ಯಾಸಕ್ಕೆ ತುಂಬಾ ಸಹಾಯ ಮಾಡುತ್ತಿದ್ದರು. ಹಿಂದೂಗಳೂ ಮಹಮದೀಯರೂ ಇಂಡಿಯಾ ಗೌರ್ನಮೆಂಟಿನವರೂ ಅವರನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಇಂಥಾ ಯೋಗ್ಯರೂ ಸಮರ್ಥರೂ ಕಾಲವಾದದ್ದಕ್ಕಾಗಿ ತುಂಬಾ ವ್ಯಸನಪಡಬೇಕಾಗಿದೆ.

ರಷ್ಯಾ ರಾಜ್ಯದವರಿಗೆ ಏಷ್ಯಾ ಖಂಡದಲ್ಲಿ ಸೈಬೀರಿಯಾ ಎಂಬ ಸೀಮೆಯು ಸೇರಿರುತ್ತದೆ ಅಲ್ಲಿ ರಷ್ಯಾದವರು ರೈಲ್ ರಸ್ತೆಯನ್ನು ಹಾಕಿ ಅನೇಕ ಪಟ್ಟಣಗಳನ್ನು ಕಟ್ಟಿ ಆಬಾದುಮಾಡಿರುತ್ತಾರೆ. ಟೋಂಸ್ಕ್ ಎಂಬ ಭಾರೀ ಪಟ್ಟಣದಲ್ಲಿ ರಷ್ಯಾ ಸರ್ಕಾರದವರು ತಮ್ಮ ಉಗ್ರಾಣಗಳನ್ನು ಆಪನೂಯುಷಿ ಮಾಡಿಸಿದರು ಸೈಬೀರಿಯಾ ರೈಲ್ವೆಗೆ ಸಂಬಂಧಪಟ್ಟ ೧,೪೦೦ ವಾರ್ಗೆ ಬಂಡಿಗಳು ಸಿಕ್ಕ ಇಲ್ಲ ಒಂದೇ ಒಂದು ಸ್ಟೇಷನ್ನಲ್ಲಿ ೧೦೫ ಲಕ್ಷ ರೂಪಾಯಿನ ಸರ್ಕಾರಿ ಸಾಮಾನುಗಳು ಕಳವಾಗಿವೆ ಎಂದು ಸರ್ಕಾರದವರಿಗೆ ಈಗ ತಿಳಿದುಬಂದಿರುವುದು.

❋❋❋❋

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಪತ್ನಿ ಪರಿವಾರ ಸಮೇತ ವಿಲಾಯತಿಗೂ ಅಲ್ಲಿಂದ ಅಮೇರಿಕಕ್ಕೂ ಹೋಗಿದ್ದರಷ್ಟೆ. ಇವರು ಅಮೇರಿಕದಲ್ಲಿ ಎಲ್ಲಾ ಸಂಗತಿಗಳನ್ನೂ ನೋಡಿ ಕೇಳಿ ತಿಳಿದುಕೊಂಡು, ಕಳೆದ ತಿಂಗಳ ೨೩ ರಲ್ಲಿ ಅಲ್ಲಿಂದ ಹಡಗು ಹತ್ತಿ ವಿಲಾಯತಿಗೆ ಪ್ರಯಾಣ ಮಾಡಿದರು. ಹೊರಡುವ ಸಮಯದಲ್ಲಿ ಅಮೇರಿಕದ ಕೆಲವರು ಹೋಗಿ ಮಹಾರಾಜರನ್ನು ಕಂಡು—ಅಮೇರಿಕದ ಹೆಂಗಸರ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ಎಂದು ಪ್ರಶ್ನೆ ಮಾಡಿದರು. ಮಹಾರಾಜರು ಅವರಿಗೆ—ನಿಮ್ಮ ಹೆಂಗಸರು ಮಹಾ ಸ್ವತಂತ್ರಗಳೂ, ನಿಷ್ಕಪಟಗಳು, ಮತ್ತು ಆತ್ಮತೃಪ್ತಿಯುಳ್ಳವರು ಎಂದು ಧಾರಾಳವಾಗಿ ಹೇಳುತ್ತೇನೆ. ಅವರು ಮಹಾ ಸುಂದರಿಗಳೆಂದು ಎಲ್ಲರೂ ಹೇಳುತ್ತಿದ್ದದ್ದನ್ನು ಕೇಳಿದ್ದೆನು. ಆದರೆ ಸಾಕ್ಷಾತ್ತಾಗಿ ನೋಡಿದ್ದರಲ್ಲಿ ಅಂಥಾ ಸೌಂದರ್ಯವೇನೂ ಇರುವಂತೆ ನನಗೆ ಕಂಡುಬರುವುದಿಲ್ಲ ಎಂಬುದಾಗಿ ಜವಾಬು ಹೇಳಿದರು ಆದರ ಮೇಲೆ ಅಮೇರಿಕದ ವರ್ತಮಾನ ಪತ್ರಿಕೆಗಳೆಲ್ಲಾ "ಗಾಯಕವಾಡರವರ ಕಣ್ಣು ಕುರುಡು" ಎಂಬ ಶಿರನಾಮೆಯುಳ್ಳ ಅನೇಕ ಟಿಪ್ಪಣಿಗಳನ್ನು ಪ್ರಕಟಿಸಿದರು

❋❋❋❋

ವಿಲಾಯತಿ ರಾಜ್ಯದ ಪ್ರಿನ್ಸ್ ಆಫ್ ವೇಲ್ಸ್ ರವರು ಪತ್ನಿ ಸಹಿತ ಹರ್ಟ್‌ಫರ್ಡ್ ಪಟ್ಟಣದಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ಪ್ರತಿಷ್ಠೆ ಮಾಡುವುದಕ್ಕಾಗಿ ಆ ಪಟ್ಟಣಕ್ಕೆ ಹೋಗಿ ಇಳಿದು, ರೈಲ್ ಸ್ಟೇಷನಿಂದ ಸ್ಕೂಲ್ ಕಟ್ಟಡಕ್ಕೆ ಜೋಡಿ ಕುದುರೆ ನಾರೋಟಿನಲ್ಲಿ ಕುಳಿತು ದಯಮಾಡಿಸಿದರು ರಸ್ತೆಯ ಉಭಯಕಡೆ ಸಾವಿರಾರು ಪ್ರಜೆಗಳು ತುಂಬಿಕೊಂಡು ಯುವರಾಜರನ್ನು ನೋಡಿ ಜಯಘೋಷ ಮಾಡಿದರು ಈ ಕೋಲಾಹಲಧ್ವನಿಯನ್ನು ಕೇಳಿ ಆ ಕುದುರೆಗಳು ಬೆದರಿ ಏನು ಮಾಡಿದರೂ ನಿಲ್ಲದೆ ಸ್ವೇಚ್ಛೆಯಾಗಿ ಗಸ್ತಿಬಿಟ್ಟು ಹೊರಟು ಉದ್ಯಾನವನದೊಳಕ್ಕೆ ನುಗ್ಗಿ ಗಾಡಿಯನ್ನು ಬಹು ರಭಸವಾಗಿ ಎಳೆದುಕೊಂಡು ಹೋಯಿತು. ಏನು ಅನಾಹುತವಾಗಿ ಯುವರಾಜದಂಪತಿಗಳಿಗೆ ಎಷ್ಟು ಅಪಾಯಸಂಭವಿಸುವುದೋ ಎಂದು ಪ್ರಜೆಗಳೆಲ್ಲಾ ತುಂಬಾ ಕಳವಳಪಡಲಾರಂಭಿಸಿದರು ದೇವರ ದಯದಿಂದ ಆ ಕುದುರೆಗಳು ಮರದಿಂದ ಮರಕ್ಕೆ ಕಟ್ಟಿದ್ದ ಹಗ್ಗದ ಬಳಿಗೆ ಹೋಗಿ ನಿಂತುಕೊಂಡವು ಕೂಡಲೇ ಪೋಲೀಸಿನವರು ಕುದುರೆಗಳ ಮುಂದೆ ನುಗ್ಗಿ ಗಾಡಿಯನ್ನು ನಿಲ್ಲಿಸಿದರು. ಇಷ್ಟಾದರೂ ಯುವರಾಜ ದಂಪತಿಗಳು ಸ್ವಲ್ಪವೂ ಗಾಬರಿ ಪಡದೆ ಗಾಡಿಯೊಳಗೇ ಕುಳಿತಿದ್ದರು ತರುವಾಯ ಅವರು ಅದೇ ಗಾಡಿಯಲ್ಲಿ ಮುಂದಕ್ಕೆ ಹೋಗಿ ಪಾಠಶಾಲೆಯನ್ನು ಪ್ರತಿಷ್ಠೆ ಮಾಡಿದರು

ಪ್ರಕಟನೆಗಳು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—17

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್‌ನಿಂದ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪೆನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿಕೊಡಲು ಈ ಕಂಪೆನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಬಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟನವರು ಹುಕುಂ ಕೊಟ್ಟಿದ್ದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫಿ ರವಾನಿಸಬೇಕು ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು

(ಸ್ಹಿ) ಟಿ. ವಿ ರಾಮಸ್ವಾಮಿ ಶೆಟ್ಟಿ, ಬಿ. ಎ.,
ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,
ನಗರ್ತಪೇಟೆ, ಬೆಂಗಳೂರು ಸಿಟಿ

ಟಪಾಲ ಖರ್ಚ ಫ್ರೀಕಟ! ಟಪಾಲ ಖರ್ಚ ಫ್ರೀಕಟ!

ಇಂಡಿಯನ್ ಬ್ಲೂ ಬ್ಲಾಕ್ ಅಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91-11

ವಿಲಾಯತೀ ಮಸೀಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೀ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ ೧೦೦ ಪುಡಿಕೆಗಳಿಗೆ ೧ ರೂಪಾಯಿ. ಟಪಾಲಖರ್ಚ ಫ್ರೀಕಟ ವ್ಯಾಪಾರಸ್ಥರಿಗೆ ಕಮಿಷನ್.

ವಿಳಾಸ:—ವಾಯ್. ಜಿ. ದೀಕ್ಷಿತ, ಸ್ಟೇಶನರ, ಪುಣೇ ಸಿಟಿ

ಬೇಕಾಗಿದೆ.

1123

ಹಿಂದುಸ್ತಾನಿ, ಇಂಗ್ಲಿಷ್, ಕನ್ನಡ, ಈ ಅಕ್ಷರಗಳನ್ನು ಶಿಲಾಯಂತ್ರದಲ್ಲಿ ಬರೆದು ಅಚ್ಚು ಹಾಕುವುದು, ಭೂಪಟ (ಮ್ಯಾಪ್) ಬರೆಯುವುದು, ಲಿಥೋಗ್ರಾಫ್ ಪ್ರೆಸ್ಸಿನ ಎಲ್ಲಾ ಕೆಲಸಗಳನ್ನೂ ಮಾಡುವುದು—ಈ ವಿಷಯಗಳನ್ನು ಚನ್ನಾಗಿ ತಿಳಿದಿರುವ ಒಬ್ಬ ಸಂಬಳಗಾರನು ಬೇಕಾಗಿದೆ. ಯೋಗ್ಯತೆ ಪಡೆದಿರುವವರು ಮೈಸೂರು ಮಿಷನ್ ಪ್ರೆಸ್ ಮ್ಯಾನೇಜರಿಗೆ ಕೂಡಲೆ ಬರೆದುಕೊಳ್ಳಲಿ.

REDUCTION SALE!!!

115 2

PRICES REDUCED BY HALF.
APPLY SHARP.

COPY BOOKS.

Jackson's Upright Penmanship. Nos 1 to 4, Price @ 1 Anna each, now reduced to *six* pies each.

THE MANAGER,
C. L. S. Book Depot,
Mysore

ಅಗ್ಗ! ಅಗ್ಗ!! ಬಹು ಅಗ್ಗ!!!

ಮೇಲಾದ ಜರ್ಮನ್ ಸಿಲ್ವರ್.

113-2

ಪುದುಚ್ಚೇರಿ ಬೋಲ್ ಕಾಲ್‌ಗೊಲಸು

ಇದು ಬೆಳ್ಳಿಗೆ ಸಮಾನವಾದ ಜರ್ಮನ್ ಸಿಲ್ವರ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿರುತ್ತೆ. ಸುಲಭವಾಗಿ ಹಾಕಿ ತೆಗೆಯುವಂತೆ ಕೀಲಿನಿಂದಲೂ ಮಾದರಿಯಾದ ರಿಪಿನಿಂದಲೂ ಬೆಳ್ಳಿ ಗೊಲಸಿಗೆ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಚೊಕ್ಕಬೆಳ್ಳಿಯ ಪುಡಿಯಿಂದ ಅಂಟಿಸಿ ಬಹಳ ನಾಜೋಕಾಗಿ ತಯಾರಿಸಲ್ಪಟ್ಟಿರುತ್ತೆ. ಎಂದಿಗೂ ಬಣ್ಣ ಕೆಡಲಾರದು ಇದನ್ನು ನೋಡಿದವರು ಚೊಕ್ಕಬೆಳ್ಳಿಯ ರಾಳಿಯೆಂದು ಅನ್ನುವರು. ಶ್ರೀಮಂತರು ಸಹ ಇದನ್ನೇ ಉಪಯೋಗಿಸುತ್ತಾರೆ. ನೋಡುವವರ ಕಣ್ಣು ಚೆದರುವಷ್ಟು ಕಾಂತಿಯೂ ಪ್ರಕಾಶವೂ ಉಳ್ಳದ್ದು. ಒಂದು ಜೊತೆಯನ್ನು ತರಿಸಿ ಪರೀಕ್ಷಿಸಿರಿ ಬಡವರಿಗೂ ಭಾಗ್ಯವಂತರಿಗೂ ಉಪಯೋಗಿಸುವಷ್ಟು ಸುಲಭಕ್ರಯ

ದೊಡ್ಡವರಿಗೆ	ಜೊತೆ ೧ ಕ್ಕೆ	ರೂ.	೨	೦	೦
ಚಿಕ್ಕವರಿಗೆ	ಜೊತೆ ೧	,,	೧	೧೨	೦
ಸಣ್ಣವರಿಗೆ	ಜೊತೆ ೧	,,	೧	೮	೦
ಮಕ್ಕಳಿಗೆ	ಜೊತೆ ೧	,,	೧	೬	೦

ಜರ್ಮನ್ ಸಿಲ್ವರ್ ಪುಟ್ಟಿ ಕಾಲ್ಕಡಗ.

ಅನೇಕ ಬೆಳ್ಳಿಯಂತರಗಿಗೆ ಸಮಾನವಾದ ಜರ್ಮನ್ ಸಿಲ್ವರ್ ಕಂಬಿಯಿಂದ ತಯಾರಿಸಲ್ಪಟ್ಟ ಪುಟ್ಟಿಕಾಲ್ಕಡಗಗಳು ಬೇಕೆಂದು ಕೋರಿದ್ದರಿಂದ ಎಷ್ಟು ವರುಷಗಳ ಪರ್ಯಂತರ ಉಪಯೋಗಿಸುತ್ತ ಬಂದಾಗ್ಯೂ ಚೊಕ್ಕಬೆಳ್ಳಿಯ ರಂಗಿಗೆ ಸ್ವಲ್ಪವೂ ವ್ಯತ್ಯಾಸತೋರದಂತೆ ಇರುವ ಕಂಬಿಯನ್ನು ಆಸ್ಟ್ರಿಯಾ ದೇಶದಿಂದ ತರಿಸಿ ಅದಕ್ಕೆ ಎಂಟು ಪಟ್ಟಿಗಳು ಮೇಲಾದ ಜರ್ಮನ್ ಸಿಲ್ವರ್ ಗುಂಡುಗಳನ್ನು ಚೊಕ್ಕಬೆಳ್ಳಿಯ ಪುಡಿಯಿಂದ ಕಡಗದ ಕೊನೆಯಲ್ಲಿ ಅಂಟಿಸಿ ನೋಡುವವರಿಗೆ ಸ್ವಲ್ಪವಾದರೂ ಚೊಕ್ಕಬೆಳ್ಳಿಯ ಕಡಗವಲ್ಲವೆಂದು ಭೇದ ತೋರದ ಹಾಗೆ ಬಹಳ ಸುಂದರವಾಗಿ ತಯಾರಿಸಲ್ಪಟ್ಟಿರುತ್ತೆ.

ನಂಬರು ೧	ದೊಡ್ಡವರಿಗೆ	ರೂ.	೧	೧೨	೦
,, ೨	ಚಿಕ್ಕವರಿಗೆ	,,	೧	೪	೦
,, ೩	ಹುಡುಗಿಯರಿಗೆ	,,	೦	೧೪	೬
,, ೪	ಸಣ್ಣಮಕ್ಕಳಿಗೆ	,,	೦	೧೦	೦

ಮೈಸೂರು ದೇಶದ ಸುಂದರವಾದ ಡಾಬು (ವಡ್ಯಾಣ).

ಇದು ಹಿಂದೆ ಹೇಳಲ್ಪಟ್ಟ ತಗಡಿನಿಂದ ಮಾದರಿಯಾದ ಕೆತ್ತಿಗೆಗಳನ್ನಿಟ್ಟು ತಯಾರಿಸಲ್ಪಟ್ಟಿರುತ್ತೆ. ಒಬ್ಬರು ಒಂದನ್ನು ತರಿಸಿದರೆ ಎಲ್ಲರೂ ಕೋರುವರು ಇದನ್ನು ನೋಡಿದವರು ಬೆಳ್ಳಿಯಲ್ಲವೆಂದು ಹೇಳಲಾರರು ಇದರ ಬೆಲ್ಲ ರಂಗುಗಳಿಗೆ ನಾವು ಜವಾಬ್ದಾರರಾಗಿರುವೆವು ಇದರ ಕೆಲಸದ ಸೌಂದರ್ಯವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ! ಒಂದನ್ನು ತರಿಸಿ ಹತ್ತು ವರುಷಗಳ ವರೆಗೂ ಉಪಯೋಗಿಸಿ ನಂತರ ಕೆಟ್ಟುಹೋಗ್ಯೋ ನಾವು ವಾಪಸು ಪಡೆದು ಇದರ ಮೊಬಲಗನ್ನು ಹಿಂದಕ್ಕೆ ಕಳಿಸುವೆವು

ನಂಬರ್ ೧	ದೊಡ್ಡವರಿಗೆ	ರೂ	೧	೮	೦
,, ೨	ಚಿಕ್ಕವರಿಗೆ	,,	೧	೪	೦
,, ೩	ಮಕ್ಕಳಿಗೆ	,,	೧	೦	೦

ವಿಳಾಸ:—ಮ್ಯಾನೇಜರ್, ಜರ್ಮನ್ ಸಿಲ್ವರ್ ಜ್ಯುಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

10—8—1906 ರಿಂದ 17—8—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	2	1	3
ಮೈಸೂರು ,,	1	1	0
ಬೆಂಗಳೂರು ಡಿಸ್ಟ್ರಿಕ್ಟ್	19	14	43
ಮೈಸೂರು ,,	1	0	28
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	1	1	7
ತುಂಕೂರು ಡಿಸ್ಟ್ರಿಕ್ಟ್	0	0	3
ಹಾಸನ ,,	18	9	0
ಚಿತ್ರದುರ್ಗ ,,	0	0	1
ಕಡೂರ್ ,,	66	51	5
ಶಿವಮೊಗ್ಗ ,,	0	0	45
ಜುಮ್ಲಾ.	106	77	135

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಭಾದ್ರಪದ ಶುದ್ಧ ಏಕಾದಶಿ ಗುರುವಾರದಿಂದ ಭಾದ್ರಪದ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಆಗಸ್ಟ್ ಮತ್ತು ಸೆಪ್ಟಂಬರ್

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
30	ಗುರು §	ಏಕಾದಶಿ	10-40	ಪೂಷಾ	17 40
31	ಶುಕ್ರ ∴	ದ್ವಾದಶಿ	5-35	ಉತ್ತಷಾ	14-43
1	ಶನಿವಾ †	ತ್ರಯೋ	1-38	ಉಪರಿ	55-42
2	ರವಿವಾ ¶	ಪೌರ್ಣಮಿ	55-56	ಧ	11-38
3	ಚಂದ್ರ ‡	ಪಾಡ್ಯ	54-40	ಶ್ರ	11-46
4	ಕುಜ *	ಬಿದಿಗೆ	51-46	ಪೂಭಾ	11-48
5	ಬುಧ ,,	ತದಿಗೆ	56 20	ಉತ್ತಭಾ	13-57

§ ಸರ್ವತ್ರ ಪರಿವರ್ತನ ಏಕಾದಶಿ. ∴ ಕಲ್ಕಿದ್ವಾದಶಿ, ವಾಮನಜಯಂತಿ, ಪ್ರದೋಷ † ಶ್ರೀಮದನಂತ ಪದ್ಮನಾಭ ವ್ರತಂ, ಅಶ್ವಲಾಯನೋಪಾಕರ್ಮ. ¶ ಉಮಾಮಹೇಶ್ವರವ್ರತಂ, ನವೀನ ಆಪಸ್ತಂಭೋಪಾಕರ್ಮ. ‡ ಮಹಾಲಯ ಪಕ್ಷಾರಂಭ * ಪ್ರೇತದ್ವಿತೀಯಾ. ,, ಭದ್ರಾಗ್ನೀವ್ರತಂ, ದಗ್ಧಯೋಗ, ಯಮತೃತೀಯಾ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೩-೦-೦	[illegible]
ಕೆಂಬೂತಿ ಅಕ್ಕಿ ಅವಲ್	..	೧೩-೦-೦	[illegible]
,, ದುಯಂ	.	೧೨-೧೨-೦	[illegible]
ಜೀರಾಸಾಲೆ ಅಕ್ಕಿ	..	೧೩-೦-೦	[illegible]
ಸಣ್ಣಕ್ಕಿ ಅವಲ್	..	೧೪-೦-೦	[illegible]
,, ದುಯಂ	..	೧೩-೮-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೨-೬-೦	[illegible]
,, ದುಯಂ	..	೧೧ ೮-೦	[illegible]
ಕೈರ ರಾಗಿ ಪಲ್ಲಾ ೧ಕ್ಕೆ	..	೩-೦-೦	[illegible]
ಕಾರ್ರಾಗಿ	..	೬-೪-೦	[illegible]
ಜೋಳ	..	೮-೮-೦	[illegible]
ಹಲಸಂದೆ ಪಲ್ಲಾ ೧ಕ್ಕೆ	..	೧೨-೦-೦	[illegible]
ಬಿಳೀ ಅವರೆ	..	೧೧-೦-೦	[illegible]
ಹೆಸರು	..	೧೩-೦-೦	[illegible]
ಉದ್ದು	..	೧೨-೪-೦	[illegible]
ಕಡಲೆ	..	೧೨-೮-೬	[illegible]
ಎಳ್ಳು ಸೆ. ೧೨೩ ಕ್ಕೆ	..	೨೨-೮-೦	[illegible]
ಹುರುಳಿ	..	೯-೦-೦	[illegible]
ಹರಳು ೧೨೩ ಸೇರಿಗೆ	..	೧೫-೮-೦	[illegible]
ಸೀಗೇಕಾಯಿ ಮಣ ೧ಕ್ಕೆ	..	೨-೮-೦	[illegible]
ಮೆಣಸಿನಕಾಯಿ	..	೪-೦-೦	[illegible]
,, ದುಯಂ	..	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	..	೫-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	..	೬-೮-೦	[illegible]
ಹರಳೆಣ್ಣೆ ,,	..	೬-೮-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	..	೧೧-೦-೦	[illegible]
ಉಪ್ಪು ,,	..	೩-೦-೦	[illegible]
ಹುಣಿಸೇ ಹಣ್ಣು	..	೦-೧೪-೦	[illegible]
,, ಹಳೇದು	..	೦-೮-೦	[illegible]
ತುಪ್ಪ ಮಣ ೧ಕ್ಕೆ	..	೧೭-೦-೦	[illegible]
ಸೀಮೆಯುಂಡೆ ಪಟ್ಟೆ ೧ಕ್ಕೆ	..	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೪-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	.	೧-೦-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	[illegible]
ಚಿನ (ಪೌನ್) ಕೆಂಪು	..	೧೫-೪-೦	[illegible]
,, ,, ಹಸಿಮೆ	..	೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	[illegible]

Printed and published by the Rev E. THOMPSON, M A, the Proprietor and Man[ager] Wesleyan Mission Press, Mysore 30/8/1906

ವೃತ್ತಾಂತ ಪತ್ರಿಕೆ.

REGISTERED M. 20.

ಕ್ರಯ ೧ ದುಡ್ಡು ———— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—೧೯೦೬ ನೇ ಇಸವಿ ಸೆಪ್ಟಂಬರ್ ತಾರೀಖು ೬ ನೇ ಗುರುವಾರ. ಸಂಚಿಕೆ ೧೮

ಇಂತಿಯದ ದೊಡ್ಡ ನೋವುಹರ.

86-15

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಸೆಳೆತ, ...ಲೆನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ...ಟ್ಟೆಹುಣ್ಣು, ಕೀಲುಬೇನೆ, ಎದೆಗಳ ನೋವು, ಅಸ್ತ್ಮ, ಈ ವೈಕಿ ...ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡ ...ಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿ...ಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡ್ಲೆ ...ಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ...ಯೂ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾ...ದನ್ನು ಬಾಟ್ಲಿ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ...ದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗನುಃಖವು ತೊಲ...ಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿ...ದ್ದಲ್ಲಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವಲ್ಲಾ ...ಂದು ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭ...ವುಳ್ಳದ್ದು. ಕ್ರಯ:—೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ; ...ಕ್ಕೆ ರೂ. ೩॥ ರೂಪಾಯಿ; ೧೨ಕ್ಕೆ ೬ ರೂಪಾಯಿ. ಅಂಚೆ ವೆಚ್ಚ ...ಂವರಿಂದ ಮೂರು ಬಾಟ್ಲಿ ವರಿಗೆ ೩ ಆಣೆ.

ನಮ್ಮ ವಿಳಾಸ.—ಎಫ್ ಡಬ್ಲ್ಯು. ಆರ್ಥ, ಸಿವೆಟ್ರಿ ರೋಡ್, ವೇಪೇರಿ, ಮದರಾಸ್.

ಹೋಮೋಸಿಯಾ.

ತಕ್ಷಣ ...ರಿಹಾರ. ತಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ...ಲೀಸ್ ಠಾಣಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ...ಗಳಲ್ಲೆಲ್ಲಾ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾ...ವೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ...ತಕ್ಕ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟ...ರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇ...ಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ...ವಾಸಿಯಾಗುವದು:

ಈ ತೈಲವು ಅರೆ ತಲೆನೋವು, ಸೊಂಟನೋವು, ದುರ್ಬ್ಬಲವಾ...ಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ತೊಳಲುವದು, ...ಳೆತ, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ...ನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ...ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ...ಕೊಂಡದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ...ಟ್ಟಡಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ...ಬರುವದಿಲ್ಲ.

ಕ್ರಯ:— ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ...—೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ...ಫ್ ಬಿಡುತ್ತಾರೆ. ರೂ. ೨—೮ ಆಣೆ ಬೆಲೆಯ ಡಬ್ಬಿಯಲ್ಲಿ ೧ ...ರೂ. ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ...ರೂ. ೨—೮ ಆ. ಈ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ...ಖರ್ಚು ಮಾಫ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ...ರ್ಮ ಒಡೆದ ಕಡೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋಮೋ...ಸಿಯದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ...ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ...ಚರ್ಮವು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ...ಒಂದಕ್ಕೂ, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ...ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫ. ಎಲ್ಲಾ ಷಾಪುಗಳ...ಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ...ಪಟ್ಟಿಕೆಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕೆಂಡು ಲೇನ್ ...ಡ್, ಮದರಾಸ್.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಶಪಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-80

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ಧರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸನ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

101-6

ಇದು ಸಾಧಾರಣ ಜ್ವರ, ಚಳೀಜ್ವರ, ಸೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫ ಬಿಡಲಾಗುವದು.

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕೊಡಗಿನ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆನ್ರಿಯು ಓಮಂ ಕರ್ಪೂರವನ್ನು ನಾನೂ ನನ್ನ ಹಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರ್ರಲ್ಲಿ ವಿಶೇಷ:—

ಹೆನ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಲೇನ್ ಬೀಚ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104-6

ಖಾಲಿ, ಯಾ ಸುಂದರ ಚಿತ್ರಗಳುಳ್ಳದ್ದು. ನಮೂನೆ ೧೬ ಕಾರ್ಡುಗಳಿಗೆ ೧॥ (ಸ್ಟ್ಯಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ, ಸ್ವದೇಶಿ ಪೆಂಥಾಲ್ ಸೀಸೆಗೆ ೪ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಹಂಗೇರಿಯನ್ ಟೋಪಿಗಳು, ಇವುಗಳಿಗೆ ಟಪಾಲಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲೆ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟ್ಯಾಂಪಿಟ್ಟು ಬರೆದುಕೊಳ್ಳತಕ್ಕದ್ದು. Bhatt & Co., Poona city.

ಮುಂಬಯಿ ವ್ಯಾಪಾರಮಾಡಬಿಚ್ಛಿಸುವವರು.

85-15

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರಿಯುರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋಷ್ಟ ಮಾಂಡ್ವಿ, ಮುಂಬಯಿ.

ಒಕ್ಕಲಿಗರ ಸಂಘ.

98-9

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರೆಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮ॥ ರಾ॥ ದೊಡ್ಡಣ್ಣಶೆಟ್ಟರವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಪಾಠಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳುಹಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಬ್ರೂಲ್ಪೇಟೆ ರೋಡು, ಬೆಂಗಳೂರು.

ಎಂ. ಸುಬ್ಬಯ್ಯ, ಬಿ. ಎ,

ಕೆ. ಹೆಚ್. ರಾಮಯ್ಯ, ಬಿ. ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ:—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ. ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಮುಖ್ಯವಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋಗತಕ್ಕವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

ಮಾಲೀಕರು ಯಾರು ?

ರಾಜಧಾನಿಯ ರೈಲ್ವೆ ಸ್ಟೇಷನ್ ರೋಡಿನಲ್ಲಿ ಒಂದು ಚಿನ್ನದ ಕನ್ನಡಕ ಸಿಕ್ಕಿತು. ಅದನ್ನು ಕಳಕೊಂಡವರು ನಮ್ಮ ಆಫೀಸಿಗೆ ಬಂದು ಕೇಳಿ ಪಡೆಯಬಹುದು.

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಆವಶ್ಯಕ

SCOTT'S EMULSION 57-25

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಬೇಕಾದಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೋನ್ ಲಿಮಿಟೆಡ್ ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ವಿಶಾ... ... ಇರುವ ಈ ಔಷಧವ ಗುರುತು

CHAMBERLAIN'S COUGH REMEDY.

ಚೇಂಬರ್ಲೈನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

95-10



ಶೀತದ ಕೆಮ್ಮು, ಗಂಟಲು ಗೂರಲು ವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲ... ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇ... ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತ ಬೀಳುವ... ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ... ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರ ಅದನ್ನು ಕೂಡಲೇ ... ಪರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟನ್ನು ನಿಲ್ಲಿಸಿಬಿಡುತ್ತದೆ ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯ... ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿ... ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸು... ವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರು.

ಕೈಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಸಪ್ಟಂಬರ್ ತಾ॥ ೬ ನೇ ಗುರುವಾರ

ಮೈಸೂರು ಗಣಿಗಳ ಕಾನೂನು.

ಮೈಸೂರು ಗವರ್ನ್‌ಮೆಂಟಿನವರು ಗಣಿಗಳ ವಿಷಯದಲ್ಲಿ ಒಂದು ಹೊಸ ಕಾನೂನನ್ನು ಮಾಡಿ ಈಗತಾನೇ ಜಾರಿಗೆ ತಂದರು. ಇದನ್ನು ನೋಡಿ ಪ್ರಜೆಗಳು ಚರ್ಚೆ ಮಾಡಲಾರಂಭಿಸಿದಾರೆ. ಆದ್ದರಿಂದ ನಾವು ಈ ಹೊಸ ಕಾನೂನಿನ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಸಂಕ್ಷೇಪವಾಗಿಯೂ ನಿಷ್ಪಕ್ಷಪಾತವಾಗಿಯೂ ತಿಳಿಸಲಪೇಕ್ಷಿಸುವೆವು ಮೊದಲು ಈ ಕಾನೂನಿನ ಮುಖ್ಯಾಂಶಗಳನ್ನು ವಾಚಕರು ತಿಳಿದುಕೊಳ್ಳಬೇಕಾಗಿದೆ. ಅದರಲ್ಲಿ ಎರಡು ಭಾಗಗಳುಂಟು. ಗಣಿಗಳ ಕಂಪನಿಯವರ ಸ್ವತ್ತುಗಳನ್ನು ಅನ್ಯರು ಅಪಹರಿಸದಂತೆ ಕಾಪಾಡುವುದು ಮೊದಲನೆಯ ಭಾಗ ಗಣಿಗಳಲ್ಲಿ ಕೆಲಸ ಮಾಡುವ ನೌಕರರಾದವರ ಮತ್ತು ಕೂಲಿಕಾರರ ಕ್ಷೇಮವನ್ನೂ ಅವರ ಆರೋಗ್ಯವನ್ನೂ ಕಾಪಾಡುವುದು ಎರಡನೆಯ ಭಾಗ. ಮೊದಲನೆಯದಾಗಿ ಗಣಿಗಳ ಪ್ರಾಂತ್ಯದಲ್ಲಿ ಕಲ್ಲುಗಳನ್ನು ಒಡೆಯುವುದಕ್ಕೆ ಉಪಯೋಗಿಸುವ ಡೈನಮೈಟು ಕಲ್ಲಿನಿಂದ ಚಿನ್ನ ಬೇರೆ ಮಾಡಿ ತೆಗೆಯುವುದಕ್ಕೆ ಉಪಯೋಗಿಸುವ ಪಾದರಸ, ಯಾವ ರೂಪದಲ್ಲಾದರೂ ಇರುವ ಚಿನ್ನದಗಟ್ಟಿ, ಈ ಮೊದಲಾದ ಗಣಿಗಳ ಸ್ವತ್ತನ್ನು ಯಾವನು ಪಡೆದಿರುತ್ತಾನೋ ಅಂಥವನು ಅದಕ್ಕೆ ತೃಪ್ತಿಕರವಾದ ಸಮಾಧಾನವನ್ನೂ ಕಾರಣವನ್ನೂ ತೋರಿಸದೆ ಹೋದಲ್ಲಿ ಶಿಕ್ಷಿಸಲ್ಪಡುತ್ತಾನೆ. ಆ ಪ್ರದೇಶದಲ್ಲಿ ಚಿನ್ನ ಕೆಲಸ ಮಾಡುವವನೂ ಅದನ್ನು ಕೊಂಡು ಮಾರುವವನೂ ಪ್ರತಿ ವರುಷವೂ ಮ್ಯಾಜಿಸ್ಟ್ರೇಟರಿಂದ ಲೈಸೆನ್ಸು ಪಡೆಯಬೇಕು. ಮತ್ತು ಅಂಥವರು ಅಂಗಡಿಗಳಲ್ಲಿ ಚಿನ್ನ ಕೊಂಡದ್ದನ್ನೂ ಬಿಕರಿಮಾಡಿದ್ದನ್ನೂ ಕ್ರಮವಾಗಿ ಲೆಕ್ಕದ ಪುಸ್ತಕಗಳಲ್ಲಿ ಬರೆದಿಡಬೇಕು. ಚಿನ್ನದ ಒಡವೆ ಕೊಂಡು ಮಾರಿದ್ದನ್ನೂ ಬರೆದಿಡಬೇಕು ಇದಲ್ಲದೆ ಚಿನ್ನವನ್ನಾಗಲಿ ಚಿನ್ನದ ಒಡವೆಗಳನ್ನಾಗಲಿ ಕೊಂಡು ತಂದ ಮೂರು ದಿನಗಳ ತನಕ ಕರಗಿಸಕೂಡದು; ಮತ್ತು ಇತರರಿಗೆ ಬಿಕರಿಮಾಡಲೂ ಕೂಡದು. ಅವರು ಇಡತಕ್ಕ ಈ ಲೆಕ್ಕದ ಪುಸ್ತಕಗಳನ್ನು ಹೆಡ್ ಕಾನ್‌ಸ್ಟೆಬಲ ದರ್ಜೆಯ ಮತ್ತು ಆ ದರ್ಜೆಗೆ ಮೇಲ್ಪಟ್ಟ ಪೊಲೀಸ್ ಅಧಿಕಾರಿಗಳೇ ಹೋಗಿ ಆಜಮಾಯಿಷಿ ಮಾಡತಕ್ಕದ್ದು. ಇದಲ್ಲದೆ ಗಣಿ ಪ್ರಾಂತ್ಯದಲ್ಲಿ ಲೈಸೆನ್ಸ್ ಪಡೆಯದ ಇರುವಂಥವನ್ಯಾರೂ ಯಾವ ಸರಕನ್ನೂ ಮನೆಯಿಂದ ಮನೆಗೆ ಹೊತ್ತುಕೊಂಡು ಹೋಗುತ್ತಾ ಬಿಕರಿ ಮಾಡಕೂಡದು

ಈ ಕಾನೂನಿನ ಎರಡನೆಯ ಭಾಗದಲ್ಲಿ ಹೇಳುವುದೇನೆಂದರೆ—ಸರ್ಕಾರಿ ಗಣಿ ಇನ್‌ಸ್ಪೆಕ್ಟರುಗಳು ಬೇಕಾದಾಗ ಇಷ್ಟಬಂದ ಗಣಿಯನ್ನು ಪ್ರವೇಶಿಸಿ ಆಜಮಾಯಿಷಿ ಮಾಡುವುದಕ್ಕೆ ಗಣಿ ಕಂಪನಿಗಳ ಮ್ಯಾನೇಜರುಗಳು ಅವರಿಗೆ ಅವಕಾಶ ಕೊಡಬೇಕು ಗಣಿಗಳಲ್ಲಿ ಕೆಲಸ ಮಾಡುವಂಥಾ ಜನರ ಕ್ಷೇಮಕ್ಕಾಗಿ ಯಾವ ತರಹಾ ಏರ್ಪಾಡುಗಳನ್ನು ಮಾಡಬೇಕೆಂದು ಅವರು ಸೂಚಿಸುತ್ತಾರೋ ಮ್ಯಾನೇಜರುಗಳು ಅದರಂತೆ ನಡಸತಕ್ಕದ್ದು ಆ ರೀತಿ ಮಾಡದೆ ತಪ್ಪುವ ಮ್ಯಾನೇಜರುಗಳು ಶಿಕ್ಷಾರ್ಹರಾಗುವರು. ಇದಲ್ಲದೆ ಗಣಿಗಳಲ್ಲಿ ಜನರು ವಾಸಮಾಡತಕ್ಕ ಮನೆಗಳ ಮತ್ತು ಜೋಪಡಿಗಳ ಆರೋಗ್ಯ ವಿಚಾರವನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದವರು ಒಂದು ಸ್ಯಾನಿಟರಿ ಬೋರ್ಡ್ ಎಂಬ ಸಂಘವನ್ನು ನೇಮಿಸಿರುತ್ತಾರೆ.

ಇತ್ತೀಚೆಗೆ ಇಂಥಾ ಕಾನೂನನ್ನು ಜಾರಿಗೆ ತಂದದ್ದಕ್ಕಾಗಿ ಕೆಲವರು ಮ॥ ಮಾಧವರಾಯರನ್ನು ಬಹಳ ಕಠಿಣವಾಗಿ ಬಯ್ಯುತ್ತಿರುವರು ಆದರೆ ಇದು ಸರ್ ಕೆ. ಪಿ. ಕೃಷ್ಣಮೂರ್ತಿಯವರ ದಿವಾನಗಿರಿಯಲ್ಲಿ ಆದದ್ದು. ಅವರ ಕಾಲದಲ್ಲಿ ಇದರ ಮಸೂದೆಯು ತಯಾರಾಗಿ ಇಂಡಿಯಾ ಗವರ್ನ್‌ಮೆಂಟಿನವರ ಸ್ಯಾಂಕ್ಷನ್ ಗೆ ಕಳುಹಿಸಲ್ಪಟ್ಟಿತು. ಮತ್ತು ಅದನ್ನು ಇಂಡಿಯಾ ಗವರ್ನ್‌ಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಿ ಕಳುಹಿಸಿರುತ್ತಾರಾದ್ದರಿಂದ ಅದರ ಜವಾಬ್ದಾರಿಯು ಆ ಗವರ್ನ್‌ಮೆಂಟಿನವರಿಗೂ ಸೇರಿದ್ದಾಗಿರುವುದು. ಹಿಂದಿನವರು ಮಾಡಿಟ್ಟು ಇಂಡಿಯಾ ಗವರ್ನ್‌ಮೆಂಟಿನವರ ಸ್ಯಾಂಕ್ಷನ್ ಪಡೆದಿರುವಂಥಾ ಈ ಕಾನೂನನ್ನು ಮ॥ ಮಾಧವರಾಯರು ಹ್ಯಾಗೆ ಬದಲಾವಣೆ ಮಾಡುವುದಕ್ಕಾಗಿತ್ತು. ಅದೂ ಅಲ್ಲದೆ ಸರ್ ಕೃಷ್ಣಮೂರ್ತಿಯವರು ಕೂಡ ಅದು ತಮ್ಮ ಕಾಲದಲ್ಲಿ ನಡೆದದ್ದಲ್ಲವೆಂದು ಹೇಳಬೇಕಾದ ಅಗತ್ಯವೇನೂ ಕಾಣುವುದಿಲ್ಲ. ಯಾಕಂದರೆ ಈ ಕಾನೂನಿನಲ್ಲಿ ಅಂಥಾ ಅನ್ಯಾಯವಾದ ಭಾಗವ್ಯಾವುದೂ ಇರುವಂತೆ ನಮಗೆ ಕಂಡುಬರುವುದಿಲ್ಲ.

ಮೊದಲನೆಯದಾಗಿ, ಈ ಕಾನೂನು ಕೋಲಾರ್ ಚಿನ್ನದ ಗಣಿಗಳಿರುವ ಪ್ರದೇಶದಲ್ಲಿ ಮಾತ್ರ ಅಂದರೆ ಬೌರಿಂಗಪೇಟೆ ತಾಲ್ಲೂಕಿನಲ್ಲಿ ಜಾರಿಗೆ ತಂದಿದಾರೆ. ಆ ತಾಲ್ಲೂಕಿನಲ್ಲೂ ಗಣಿಗಳಿಲ್ಲದೆ ಇರುವಂಥಾ ಬೂದಿಕೋಟೆ, ಬೌರಿಂಗ್‌ಪೇಟೆ ಕಸಬಾ, ಬೇತಮಂಗಲ, ರಾಮಸಾಗರ ಎಂಬೀ ನಾಲ್ಕು ಹೋಬಳಿಗಳಿಗೆ ಸೇರಿದ ೧೬೯ ಗ್ರಾಮಗಳಲ್ಲಿ ಈ ಕಾನೂನನ್ನು ಜಾರೀಗೆ ತಂದಿಲ್ಲ ಆದ್ದರಿಂದ ಈ ಕಾನೂನಿನಿಂದ ಈ ಸಂಸ್ಥಾನದ ಪ್ರಜೆಗಳಿಗೆ ಯಾವ ಕುಂದೂ ಕೊರತೆಯೂ ಉಂಟಾಗಲಾರದು ಚಿನ್ನದ ಗಣಿಗಳಲ್ಲಿರತಕ್ಕವರೆಲ್ಲಾ ವಿಶೇಷವಾಗಿ ಪರದೇಶಿಗಳೇ. ಯೂರೋಪ್ಯಿಯನ್ ಗಣಿಗಾರರು, ತಮಿಳು ಕೂಲಿಕಾರರು, ವರ್ತಕರು, ಈ ಜನರೇ ಅಲ್ಲಿ ಹೆಚ್ಚಾಗಿದಾರೆ. ಕರ್ನಾಟಕ ಪ್ರಜೆಗಳು ಆ ಪ್ರದೇಶದಲ್ಲಿ ಇರುವುದು ಬಹಳ ಕೊಂಚವೆಂದೇ ಹೇಳಬಹುದು

ಎರಡನೆಯದಾಗಿ, ಗಣಿ ಕಂಪನಿಯವರು ತಮ್ಮ ಸ್ವತ್ತನ್ನು ಕಾಪಾಡಿಕೊಳ್ಳುವುದಕ್ಕೆ ಗೋಡೆ ಹಾಕಿಕೊಳ್ಳಲಿ; ಸ್ಪೆಷಲ್ ಪೊಲೀಸನ್ನು ನೇಮಿಸಿಕೊಳ್ಳಲಿ; ಇಂಥಾ ಕಠಿಣವಾದ ಕಾನೂನುಮಾಡಿ ಯಾಕೆ ಜಾರಿಗೆ ತರಬೇಕು ಎಂದು ಆಕ್ಷೇಪಿಸಬಹುದು. ಗಣಿ ಕಂಪನಿಯವರು ಸುಮ್ಮನೆ ಇಲ್ಲ. ಅವರು ಬಹಳ ಹಣ ಖರ್ಚುಮಾಡಿ ಪಂಜಾ... ಮುಂತಾದ ದೂರದೇಶಗಳಿಂದ ಗಟ್ಟಿಗರಾದ ಪೊಲೀಸಿನ... ರನ್ನು ಕರೆದುತಂದು ನೇಮಿಸಿಕೊಂಡಿದಾರೆ ಇನ್ನೂ ... ತರ ಮಾರ್ಗಗಳಲ್ಲೂ ತಮ್ಮ ಸ್ವತ್ತು ಕಳುವಾಗದಂತೆ ... ಸುತ್ತಾ ಇಟ್ಟಿರುವರು ಮೊದಲಿದ್ದ ಕಾನೂನಿನ ಪ್ರಕಾ... ಗಣಿಗಳ ಸ್ವತ್ತು ಕಳುವಾದದ್ದು ಯಥಾರ್ಥವೆಂದು ಗೊ... ತ್ತಾದಾಗ್ಯೂ ಕಳ್ಳರನ್ನು ಶಿಕ್ಷಿಸುವುದಕ್ಕೆ ಆಗುತ್ತಿರಲಿ... ಗಣಿಗಳಿರತಕ್ಕ ಪ್ರದೇಶವೂ ಇತರ ಸಾಮಾನ್ಯ ಪ್ರದೇ... ಗಳಂತೆಯೇ ಎಂದು ಭಾವಿಸಬಾರದು. ಅದು ವಿಶೇಷವಾ... ದ ಪ್ರದೇಶ ಪ್ರಪಂಚದಲ್ಲೆಲ್ಲಾ ಇಂಥಾ ಗಣಿಗಳ ಪ್ರದೇ... ದಲ್ಲಿ ವಿಶೇಷ ಕಠಿಣವಾಗಿರುವಂಥಾ ಕಾನೂನುಗಳನ್ನು ಮಾಡಿ ಜಾರಿಗೆ ತಂದಿದಾರೆ. ಅಂಥಾ ಕಾನೂನು ಆ ಪ್ರದೇಶಕ್ಕೆ ಅವಶ್ಯವಾದದ್ದು ಯಾಕಂದರೆ ಆ ಪ್ರದೇಶಕ್ಕೆ ನಾ... ದೇಶಗಳಿಂದಲೂ ಬದ್ಮಾಷರಾದವರೇ ಹೋಗಿ ಸೇರುವರು... ಸುಲಭದಲ್ಲಿ ಐಶ್ವರ್ಯವಂತರಾಗಬೇಕೆಂದು ಪ್ರಯತ್ನ... ಡುವುದೂ ರೂಢಿ ಇಂಥಾ ಕಳ್ಳರ ಮತ್ತು ಮೋಸಗಾ... ರ ದಾವಳಿಯನ್ನು ಅಡಗಿಸುವುದಕ್ಕೆ ಅನೇಕ ಗವರ್ನ್‌ಮೆಂಟಿನವರು ಕಠಿಣತರವಾದ ಕಾನೂನುಗಳನ್ನು ಮಾಡಿ ಜಾರೀಗೆ ತಂದಿರುತ್ತಾರೆ.

ಮೂರನೆಯದಾಗಿ, ಯೂರೋಪಿಯನ್ ಗಣಿ ಕಂಪನಿಗೆ ಪ್ರಯೋಜನ ಮಾಡಬೇಕೆಂಬ ಉದ್ದೇಶದಿಂದ ಈ ಕಾನೂನು ಮಾಡಿದ್ದಾರೆ ಎಂದು ಆಕ್ಷೇಪಿಸುವ... ಇದು ನಿಜವಾದ ಪಕ್ಷಕ್ಕೆ ಮೈಸೂರು ಸರ್ಕಾರದವರ ... ಲೂ ಇಂಡಿಯಾ ಗವರ್ನ್‌ಮೆಂಟಿನವರ ಮೇಲೂ ದೋ... ಆಕ್ಷೇಪಣೆಯೇ ಸರಿ. ಏನೆ ನಾವು ಮೇಲೆ ಹೇಳಿರುವ... ಈ ಕಾನೂನು ಗಣಿ ಕಂಪನಿಯವರ ಸ್ವತ್ತನ್ನು ಎ... ಮಟ್ಟಿಗೆ ಕಾಪಾಡುವುದೋ ಅಷ್ಟುಮಟ್ಟಿಗೂ ಗಣಿಗಳ ನೌ... ಕರರ ಮತ್ತು ಅಲ್ಲಿನ ಕೂಲಿಕಾರರ ಕ್ಷೇಮಾ... ಗಳನ್ನು ಕಾಪಾಡುವುದಾಗಿದೆ ಎನ್ನುವುದಕ್ಕೆ ಸಂದೇಹವಿ... ಅಲ್ಲಿ ಯೂರೋಪ್ಯಿಯನ್ನರಲ್ಲೂ ಚಿನ್ನ ಕೊಂಡು ಮಾರುವವ... ಕ್ರಮವಾದ ಲೈಸೆನ್ಸ್ ಪಡೆದು, ಲೆಕ್ಕದ ಪುಸ್ತಕಗಳ... ಇಡಬೇಕಾಗಿದೆ. ಅವರೂ ಕೂಡ ಹಿಂದೂ ವರ್ತಕರಂ... ಯೇ ಸೂಪರಿಂಟೆಂಡೆಂಟರಿಂದ ಬರಹ ಮೂಲಕವಾದ ಸಮ್ಮ... ತಿಯನ್ನು ಪಡೆಯದೆ ಗಣಿಗೆ ಸಂಬಂಧಪಟ್ಟ ಯಾವ ಸ್ವ... ನ್ನೂ ಪದಾರ್ಥವನ್ನೂ ಪರಾಧೀನ ಮಾಡಕೂಡದೆಂದು ... ಸಲ್ಪಟ್ಟಿದೆ. ಆದ್ದರಿಂದ ಇದರಲ್ಲಿ ಪಕ್ಷಪಾತವೇನೂ ಕ... ಬರುವುದಿಲ್ಲ.

ನಾಲ್ಕನೆಯದಾಗಿ, ಈ ಕಾನೂನಿನಿಂದ ಪ್ರಜೆಗಳ ಸ್ವ... ತಂತ್ರ್ಯವೇ ಹೋಯಿತೆಂದೂ ಜನರು ಗುಲಾಮರಾಗು... ವೆಂದೂ ಹೇಳುವರು. ಈ ಸಂದರ್ಭದಲ್ಲಿ ಆಸ್ಟ್ರೇಲಿಯ... ದ್ವೀಪದ ನಡವಳಿಕೆಯನ್ನು ಸ್ವಲ್ಪ ನೋಡೋಣ. ... ಸ್ವತಂತ್ರವುಳ್ಳ ಸ್ವಾಸ್ಥ್ಯವಾಗಿದ್ದರೂ ಚಿನ್ನ ಉತ್ಪತ್ತಿಯ... ವಂಥಾ ವಿಕ್ಟೋರಿಯಾ, ಪಶ್ಚಿಮ ಆಸ್ಟ್ರೇಲಿಯಾ ಪ್ರ... ಗಳಲ್ಲಿ ಪ್ರಜೆಗಳೇ ಒಪ್ಪಿ ಇಂಥಾ ಕಠಿಣತರವಾದ ಕಾನೂ... ಗಳನ್ನು ಮಾಡಿ ಜಾರಿಗೆ ತಂದುಕೊಂಡಿದಾರೆ ಮೈಸೂ... ಕಾನೂನಾದರೂ ಒಂದು ತಾಲ್ಲೂಕಿನಲ್ಲೂ ಕೆಲವು ಗ್ರಾ... ಗಳಲ್ಲಿ ಮಾತ್ರ ಜಾರಿಯಲ್ಲಿ ತರಲ್ಪಟ್ಟಿದೆ; ಆ ದೇಶದಲ್ಲಾ... ಇಂಥಾ ಕಾನೂನು ಎಲ್ಲಾ ಪ್ರಾಂತ್ಯಗಳಲ್ಲೂ ಜಾರಿಯ... ಲುವುದು. ಆ ಅಧಿಪತ್ಯಗಳಲ್ಲೆಲ್ಲಾ ಪ್ರತಿಬಬ್ಬ ಅಕ್ಕ... ಯೂ ಲೈಸೆನ್ಸ್ ಪಡೆಯಬೇಕು ಕೊಂಡ ಅಥವಾ ... ಮಾಡಿದ ಚಿನ್ನವನ್ನು ಐದು ದಿನಗಳ ತನಕ ಕರಗಿಸಕೂ...

...ಲ್ಕ್ಯಂಪತೆ ಲೆಕ್ಕದ ಪುಸ್ತಕಗಳನ್ನು ಬರೆದಿಡಬೇಕು. ಹೀಗೆ ...ಡದೆ ತಪ್ಪಿದರೆ ಅವರು ಬಹು ಕಠಿಣವಾದ ಶಿಕ್ಷೆಗೆ ಗುರಿ ...ಗುತ್ತಾರೆ.

ವಿಲಾಯತಿಯುಳ್ಳೂ ಮನೆಯ ಮೇಲೆ ಸಾವರ್ನ್ ತಂದು ...ಕರಿ ಮಾಡತಕ್ಕವನು ಲೈಸೆನ್ಸ್ ಪಡೆಯಬೇಕಾಗಿದೆ. ...ಷಧಾರಿಗಳಾದ ಇಂಥಾ ಮೋಸಗಾರರನ್ನೂ ಕಳ್ಳರ... ...ಕೋಲಾರ್ ಚಿನ್ನದ ಗಣಿಗಳ ಪ್ರದೇಶದಿಂದ ಓಡಿಸ ...ಕೆಂಬುವುದೇ ಈ ಕಾನೂನಿನ ಮುಖ್ಯವಾದ ಉದ್ದೇ ...ಶ. ಇಂಥವರು ಪದಾರ್ಥ ಬಿಕರಿ ಮಾಡುವುದಕ್ಕೆಂದು ...ನೆಮನೆ ಅಲೆದು ಕದ್ದ ಚಿನ್ನವನ್ನು ಜನರಿಂದ ಕೊಂಡು ...ಳ್ಳುವುದು ತಪ್ಪುತ್ತದೆ.

ಸತ್ಯವಂತನಾದ ವರ್ತಕನು ಗಣಿಗಳ ಪ್ರದೇಶದಲ್ಲಿ ...ರದಂತೆ ಈ ಕಾನೂನು ಅಡ್ಡಿಮಾಡುವುದಿಲ್ಲ. ಅಂಥಾ ...ಣಿಗಳಲ್ಲಿ ಚಿನ್ನ ಕೆಲಸ ಮಾಡತಕ್ಕವರು ಯಾಕೆ ಹೋದಾ... ...ಅಲ್ಲಿರುವಂಥಾ ಅಕ್ಕಸಾಲೆಗಳಿಗೆ ಈ ಕಾನೂನು ಕಠಿ... ...ವೆಂದು ಕಂಡುಬಂದರೆ ಆ ಸ್ಥಳವನ್ನೇ ಬಿಟ್ಟುಹೋಗಲಿ. ...ಸಂಸಾರ ಮಾಡಿಕೊಂಡು ಒಡವೆ ವಸ್ತುಗಳನ್ನು ...ಡಿಸತಕ್ಕವರು ಅಷ್ಟೇನೂ ವಿಶೇಷವಾಗಿಲ್ಲ.

ನಾವೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಕುಂದು ಕೊರತೆ ...ರಬಾರದೆಂದು ಕೋರತಕ್ಕವರೇ ಆಗಿದ್ದೇವೆ. ಗಣಿ ...ಕನಿಯವರು ದಿನೇ ದಿನೇ ಅಭಿವೃದ್ಧಿಗೆ ಬರಲೆಂದು ಹಾ...ಸುವುದಕ್ಕಿಂತಲೂ ನಾವು ಇಲ್ಲಿನ ಪ್ರಜೆಗಳ ಶ್ರೇಯೋ...ವೃದ್ಧಿಯನ್ನೇ ವಿಶೇಷವಾಗಿ ಕೋರುವವರಾಗಿರುವೆವು ...ರಣ ನಿಷ್ಕಾರಣವಾಗಿ ಮೈಸೂರು ಗವರ್ನಮೆಂಟಿನವ... ಮೇಲೆ ಕೆಲವರು ಆಕ್ಷೇಪಣೆ ಮಾಡುತ್ತಿರುವುದನ್ನು ...ವು ನೋಡಿ ಸುಮ್ಮನಿರಲಾರೆವು. ಅಂಥಾ ಆಕ್ಷೇಪಣೆಗ... ನಿರಾಧಾರವಾದವುಗಳೆಂದು ಖಂಡಿಸಿ ಹೇಳುತ್ತೇವೆ. ...ಗ್ಯೂ ನಮ್ಮ ಗೌವರ್ನಮೆಂಟಿನವರು ಈ ಕಾನೂನ... ...ಜಾರಿಗೆ ತರುವುದಕ್ಕಿಂತ ಮೊದಲು ರೂಢಿಯಲ್ಲಿರು...ತೆ ಮೂರು ತಿಂಗಳ ತನಕ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕ...ಸಿ ಪ್ರಜೆಗಳ ಅಭಿಪ್ರಾಯವನ್ನು ತಿಳುಕೊಂಡಿದ್ದರೆ ಬಹ... ...ಚನ್ನಾಗಿತ್ತು.

ಸನ್ಯಾಸವಂದರೇನು ?

[ರಾಜಧಾನಿಯ ...ಪಿಸಲ್ಲಿ ಕೆ. ಥಾಮ್ಸನ್ ಬಳವರು ಮಾಡಿದ ಒಂದು ಉಪನ್ಯಾಸದಲ್ಲಿ ಒಂದು ಭಾಗ]

ದ್ವಿಜರಾದವರು ಬ್ರಹ್ಮಾವರ್ತ ಮಧ್ಯದೇಶ ಆರ್ಯಾವರ್ತ ಎಂಬೀ ...ರು ಪ್ರದೇಶಗಳಲ್ಲಿ ಯಾವದಾದರೊಂದರಲ್ಲಿ ವಾಸಮಾಡಿಕೊಂ... ...ಬೇಕೇ ಹೊರತು ಆಚೆ ಹೋಗಬಾರದೆಂದು ಮಾನವ ಧರ್ಮಶಾ...ಸ್ತ್ರದಲ್ಲಿ ವಿಧಿಸಲ್ಪಟ್ಟಿದೆ ಆದರೆ ಈ ಕಾಲದಲ್ಲಿ ದ್ವಿಜರು ವಿಂಧ್ಯಾ...ದ್ರಿಯನ್ನು ದಾಟಿ ಈ ದೇಶದ ಕೇವಲ ದಕ್ಷಿಣ ಭಾಗಗಳಲ್ಲಿ ...ವಾಸವಾಗಿದ್ದಾರೆ ಹೀಗಿದ್ದರೂ ಕೂಡ ಈ ದೇಶೀಯರು ವಿದ್ಯೋ... ...ಪಾರ್ಜನಾರ್ಥವಾಗಿ ಹೊರಡಬೇಕಾದರೆ ಸುತ್ತಲಿರುವ ಸಮುದ್ರವ... ದಾಟಿ ಹೋಗಕೂಡದೆಂಬ ಪುರಾತನ ಪದ್ಧತಿಯನ್ನು ಬಿಡದೆ ...ತ್ತಾರೆ ಈಗಲೂ ಸಹಾ ಈ ಹಿಂದೂ ದೇಶವು ಪುಣ್ಯಭೂ... ...ಮೆಂತಲೂ ಇತರ ದೇಶಗಳ ಮಣ್ಣು ನೀರೂ ಅಪವಿತ್ರ... ...ದವುಗಳೆಂತಲೂ ಸಾಧಿಸುವರು ಸಮುದ್ರಯಾನವು ಧರ್ಮವಿರು...ದ್ಧವಾದದ್ದೆಂದು ಹೇಳುವದನ್ನು ಕೇವಲ ವೈದಿಕರು ಇನ್ನೂ ಬಿಟ್ಟಿಲ್ಲ. ಕಾಲಸ್ಥಿತಿಯು ಹೀಗಿರುವಲ್ಲಿ ಸ್ವಾಮಿ ಅಭೇದಾನಂದರವರು ಈ ...ಭೂಮಿಯನ್ನು ಬಿಟ್ಟು ಯೂರೋಪ್ ಅಮೇರಿಕ ದೇಶಗಳಿಗೆ ...ಯಾಣ ಮಾಡಿ ಅಪವಿತ್ರವಾದವುಗಳೆನ್ನಿಸಿಕೊಳ್ಳುವ ಆ ದೇಶಗಳ... ಬಹು ಕಾಲ ವಾಸ ಮಾಡಿ ಇಲ್ಲಿಗೆ ಹಿಂತಿರುಗಿ ಬರಲು ಈ ದೇಶೀ...ಯರು ಅವರನ್ನು ಅತ್ಯಂತ ಮರ್ಯಾದೆಯಿಂದ ಅಂಗೀಕರಿಸಿ, ಅವರು ...ದೇಶಗಳಲ್ಲಿದ್ದು ಬಂದದ್ದು ತಪ್ಪಲ್ಲವೆಂಬ ಭಾವವನ್ನು ಪರಿಷ್ಕಾರವಾ...ಗಿ ತೋರಿಸಿದರು. ಅವರು ಸನ್ಯಾಸಿಗಳಾದದರಿಂದ ಅವರಿಗೆ ಸ್ಥಳಭೇದ ಇಲ್ಲವೆಂದು ಕೆಲವರು ಸಾಧಿಸಬಹುದು—ಆದರೆ ಸನ್ಯಾಸಿಗಳಿಗಿರ... ...ಬೇಕಾದ ಎರಡು ಮುಖ್ಯ ಲಕ್ಷಣಗಳನ್ನು ಕುರಿತು ಉಪನಿಷತ್ತುಗಳಲ್ಲಿ ...ಹೇಳಿರುವದನ್ನು ನೋಡಿದರೂ ಸ್ವಾಮಿ ಅಭೇದಾನಂದರವರ ಸನ್ಯಾಸ... ...ಇದಕ್ಕೆ ಒಪ್ಪುವದಿಲ್ಲವೆಂದು ತಿಳಿದು ಬರುತ್ತದೆ. ಆ ಲಕ್ಷಣಗಳಲ್ಲಿ ...ಮೊದಲನೆಯದು ಯಾವದೆಂದರೆ—ಸನ್ಯಾಸಿಯು ಏಕಾಂತವಾದ ಸ್ಥಳಗಳಲ್ಲಿ ಎಂ... ...ಗುಹೆಗಳಲ್ಲೋ ನದೀಮಧ್ಯ ದ್ವೀಪದಲ್ಲೋ ಹಾಳುಬಿದ್ದ ಮಠದಲ್ಲೋ ...ದೇವಸ್ಥಾನದಲ್ಲೋ ವಾಸಿಸಬೇಕೆಂದು ಶಾಸ್ತ್ರ ವಿಧಿಯಿರುವ... ಸ್ವಾಮಿ ಅಭೇದಾನಂದರವರು ಜನಭರಿತವಾದ ಮಹಾ ನಗರಗಳಲ್ಲಿ ...ತ್ತ ಬೋಧನೆಯನ್ನು ಹೇಳುತ್ತಲೂ ಜನಗಳು ವಾಸಿಸುವ ಪ್ರದೇಶ...ಗಳಲ್ಲೇ ತಾವೂ ವಾಸಿಸುತ್ತಲೂ ಇರುವರು. ಎರಡನೇ ಲಕ್ಷಣವು ಯಾ...ವದೆಂದರೆ—ಸನ್ಯಾಸಿಯು ದ್ವಂದ್ವಾತೀತನಾಗಿರಬೇಕು. ಹಾಗೆಂದರೆ ಅವ... ...ಅವಸ್ಥೆಗಳ ಮೇಲಣ ಜ್ಞಾನವೇ ಇರಕೂಡದು ಪರಮಾತ್ಮನ ...ಪಾಸನೆಯಲ್ಲೇ ನಿಷ್ಠನಾಗಿರಬೇಕು.

ಶ್ಲೋಕ॥ ನಿರ್ದ್ವಂದ್ವೋಹಿ ಮಹಾಬಾಹೋ ಸುಖಂ ಬಂಧಾತ್ ಪ್ರ...ಮುಚ್ಯತೇ ॥ ಇಂಥ ಸನ್ಯಾಸಿಯು ಈ ಶರೀರದಲ್ಲಿ ಬಹು ಕಾಲ ಜೀವಿ...ಸಿರನು, ಅಚ್ಚನ್ನು ಬಿಟ್ಟು ಹೊರಳುವ ಗಾಲಿಯಂತೆ ಸ್ವಲ್ಪ ಕಾಲ ...ಉರುಳುತ್ತಾ ಹೋಗಿ ಬ್ರಹ್ಮೈಕ್ಯವನ್ನು ಹೊಂದುವನು. ಸ್ವಾಮಿ ಅ...ಭೇದಾನಂದರವರಾದರೋ ಭೂಲೋಕದ ಕಾರ್ಯಗಳಲ್ಲಿ ಸಂಬಂಧ...ವನ್ನು ಬಿಟ್ಟಿಲ್ಲ. ಅಂದರೆ ರಾಜಕೀಯವಾದಂಥ ಮತ್ತು ಸಾಮಾ...ಜಿಕವಾದಂಥ ಕಾರ್ಯಗಳಲ್ಲಿ ಹಿತಚಿಂತಕರಾಗಿರುತ್ತಾರೆ ಜನರು ಕೈಗಾರಿಕೆಗಳಲ್ಲಿ ಅಭಿವೃದ್ಧಿಯನ್ನು ಪಡೆಯಬೇಕು ಎಂದು ಬುದ್ಧಿ ವಾದವನ್ನು ಹೇಳುತ್ತಾರೆ. ಇಂಥವರನ್ನು ಕೇವಲ ಗೌರವದಿಂದ ಅಂಗೀಕರಿಸಿದ ವಿಷಯವನ್ನು ಪರ್ಯಾಲೋಚಿಸಿದರೆ ಅವರು ಹಿಡಿದಿರುವ ಸನ್ಯಾಸ ರೀತಿಯು ಈ ಕಾಲದವರ ಮನಸ್ಸಿಗೆ ಒಪ್ಪುತ್ತದೆಂದು ಧಾರಾಳವಾಗಿ ಹೇಳಬೇಕಾಯಿತು. ಪೂರ್ವದಲ್ಲಿ ವಿಧಿಸಲ್ಪಟ್ಟ ಸನ್ಯಾಸವನ್ನು ಬಿಟ್ಟು ಈಗ ಬೇರೊಂದು ವಿಧವಾದ ಸನ್ಯಾಸವನ್ನು ಒಪ್ಪುವ ಹಾಗಾಯಿತು ಅದೇನಂದರೆ—ಯಾವಾತನು ಜನರ ಮಧ್ಯದಲ್ಲಿ ವಾಸ ಮಾಡಿಕೊಂಡು ಐಹಿಕಕಾರ್ಯಗಳಲ್ಲಿ ಪ್ರಜಾಹಿತೈಷಿಯಾಗಿರುತ್ತ ತನ್ನ ಹೃದಯದಲ್ಲಿ ಪರಿಶುದ್ಧನಾಗಿರುತ್ತಾನೋ ಆತನೇ ನಿಜವಾದ ಸನ್ಯಾಸಿಯೆಂದು ಒಪ್ಪಬೇಕಾಯಿತು. ಇದನ್ನು ನೋಡುವಲ್ಲಿ ಯೇಸುಸ್ವಾಮಿಯು ಹೇಳಿರುವ ಮಾತು ಸ್ಮರಣೆಗೆ ಬರುತ್ತದೆ. ಅದೇನಂದರೆ—ತನ್ನ ಶಿಷ್ಯರು ಲೋಕದಲ್ಲಿ ವಾಸವಾಗಿದ್ದರೂ ಲೋಕದವರಾಗಿರಕೂಡದೆಂದು ಪ್ರಾರ್ಥಿಸಿದನು. ಇದಲ್ಲದೆ ಆತನು ಹೇಳಿರುವದೇನಂದರೆ—ಮನುಷ್ಯನು ಊಟ ಮಾಡುವಂಥಾದ್ದು ಅವನನ್ನು ಹೊಲೆ ಮಾಡುವುದಿಲ್ಲ, ಅವನೊಳಗಿನಿಂದ ಹೊರಡುವಂಥಾದ್ದು ಅಂದರೆ ಸೂಳೆಗಾರಿಕೆ, ಕಳ್ಳತನ, ಕೊಲೆ, ದ್ರವ್ಯಾಪೇಕ್ಷೆ, ಕೆಡುಕುತನ, ಮೋಸ, ಹೊಟ್ಟೆಕಿಚ್ಚು ಇವೇ ಮೊದಲಾದ ಕೆಟ್ಟ ಆಲೋಚನೆಗಳೇ ಮನುಷ್ಯನನ್ನು ಹೊಲೆ ಮಾಡುತ್ತವೆ. ದೇಶದ ಮಣ್ಣಿನಲ್ಲಿ ಪವಿತ್ರತೆಯಾಗಲಿ ಅಪವಿತ್ರತೆಯಾಗಲಿ ಇಲ್ಲ. ಯಾವ ಮನುಷ್ಯನ ಮನಸ್ಸು ಪರಿಶುದ್ಧವಾಗಿದೆಯೋ ಆ ಮನಸ್ಸೇ ಪುಣ್ಯಭೂಮಿಯಾಗಿದೆ ಯೇಸುಸ್ವಾಮಿಯು ಹೇಳಿರುವ ಪ್ರಕಾರ—ಜನರು ಪರಮಪಿತನಾದ ಆ ದೇವರನ್ನು ಈ ಬೆಟ್ಟದಲ್ಲಾಗಲಿ ಆ ಊರಿನ ದೇವಸ್ಥಾನದಲ್ಲಾಗಲಿ ಮಾತ್ರ ಪೂಜಿಸಬೇಕೆಂದು ಯೋಚಿಸದೆ ಯಾವ ಸ್ಥಳದಲ್ಲಾಗಲಿ ಪೂಜಿಸತಕ್ಕ ಕಾಲವು ಬಂದೇ ಬಂದಿದೆ. ದೇವರು ಆತ್ಮಸ್ವರೂಪನು, ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು ಎಂದು ಆ ಸತ್ಯಸ್ವರೂಪನಾದ ಸ್ವಾಮಿಯು ಹೇಳಿರುವದನ್ನೇ ನಮ್ಮ ದೇಶೀಯರೂ ಈ ರಾಜಧಾನಿಯಲ್ಲಿ ಪ್ರಕಟತರವಾಗಿಯೂ ಅತ್ಯಂತ ಗೌರವದಿಂದಲೂ ಮನ್ನಣೆ ಮಾಡುವ ಹಾಗಾಯಿತು. ಈ ಪ್ರಕಾರ ಸನ್ಯಾಸಧರ್ಮದ ವಿಷಯದಲ್ಲಿ ಕ್ರೈಸ್ತರೂ ಹಿಂದೂ ಮತಸ್ಥರೂ ಒಂದೇ ಅಭಿಪ್ರಾಯವುಳ್ಳವರಾಗಿರುವದನ್ನು ನೋಡಿ ಸಂತೋಷಪಡಬೇಕು.

ಒಳದೇಶದ ವೃತ್ತಾಂತಗಳು.

ಬರುವ ತಿಂಗಳ ಮೊದಲನೇ ವಾರದಲ್ಲಿ ಸರ್ಕಾರಿ ಅಮೃತಮಹಲ್ ಎತ್ತುಗಳನ್ನು ಹುಣಸೂರಿನಲ್ಲಿ ಬಿಕರಿ ಮಾಡುತ್ತಾರೆ

❖❖❖❖

ಬೆಂಗಳೂರು ಸಿಟಿ ಇನ್ಸ್‌ಪೆಕ್ಟರ್ ಮೆ॥ ಆರ್ ಎಸ್ ನಾಗಪ್ಪಾರ್‌ಯವರಿಗೆ ಅಲ್ಲಿನ ಸೆಂಟ್ರಲ್ ಜೈಲಿನ ಛೀಫ್ ಜೈಲರ್ ಕೆಲಸವಾಯಿತು.

❖❖❖❖

ದಿವಾನ್ ಮೆ॥ ವಿ. ಪಿ ಮಾಧವರಾಯರು ಮೊನ್ನೆ ಶುಕ್ರವಾರ ಮಧ್ಯಾಹ್ನದ ರೈಲಿನಲ್ಲಿ ರಾಜಧಾನಿಗೆ ದಯಮಾಡಿ, ಮಾರನೆಯ ರಾತ್ರಿಯೇ ಬೆಂಗಳೂರಿಗೆ ಪ್ರಯಾಣಮಾಡಿದರು

❖❖❖❖

ಶ್ರೀರಂಗಪಟ್ಟಣ ಗಂಜಾಂ ಗಳ ಪ್ರಜೆಗಳು ಈ ತಿಂಗಳ ೧೬ನೇ ತಾ. ಭಾನುವಾರ ದಿವಾನರವರನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡು ಸತ್ಕಾರ ಮಾಡಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸುವವರಾಗಿದ್ದಾರೆಂದು ತಿಳಿದುಬಂದಿದೆ

❖❖❖❖

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಮೆ॥ ಇ. ಮೆಕಾನಕೀಯವರು ಇನ್ನೂ ಒಂದು ವರುಷ ಅಂದರೆ ೧೯೦೭ ನೆ ಇಸವಿ ಆಖೈರ್ ವರೆಗೆ ಅದೇ ಕೆಲಸದಲ್ಲಿರಬಹುದೆಂದು ಇಂಡಿಯಾ ಗವರ್ನಮೆಂಟಿನವರು ಒಪ್ಪಿ ಸ್ವೀಕಾರಮಾಡಿದಂತೆ ಕೇಳುತ್ತೇವೆ.

❖❖❖❖

ಮುನ್‌ಸಿಫ್ ಮೆ॥ ಪಿ ಎ ಶಿವಪ್ರಕಾಶಂ ಪಿಳ್ಳೆಯವರಿಗೆ ಸರ್ಕಾರದವರು ಇನ್ನೂ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟು, ಮೆ॥ ಎ. ಕೆ. ಶ್ರೀನಿವಾಸರಾಘವಾಚಾರ್ರಿ ದೊಡ್ಡಬಳ್ಳಾಪುರದ ಮುನ್‌ಸಿಫರಾಗಿ ಕೆಲಸ ಮಾಡತಕ್ಕದ್ದೆಂದು ಹುಕುಂ ಮಾಡಿದಾರೆ

❖❖❖❖

ಹಿಂದಿನ ವಾರ ದಿವಾನರವರು ಶಿವಮೊಗ್ಗೆಗೆ ದಯಮಾಡಿದ್ದಾಗ ಅಲ್ಲಿನ ಪ್ರಜೆಗಳು ಅವರನ್ನು ಸತ್ಕರಿಸಿ ಅವರಿಗೆ ತಮ್ಮ ಕೊರತೆಗಳನ್ನು ಅರಿಕೆ ಮಾಡಿಕೊಂಡರು ದಿವಾನರವರು ಆ ಕೊರತೆಗಳ ವಿಚಾರವನ್ನು ತನಿಖೆ ಮಾಡಿ ಸಾಧ್ಯವಾದಷ್ಟನ್ನು ನಿವಾರಣೆ ಮಾಡಿಕೊಡುವುದಾಗಿ ತಿಳಿಸಿದರು.

❖❖❖❖

ರಾಜಧಾನಿಯಲ್ಲಿ ಇನ್ನೂ ಮಾಂತಿಭೇದಿಯು ಉಪದ್ರ ನಿಂತಿಲ್ಲ. ಕಳೆದ ವಾರ ಕೆಲವು ಜನರು ಈ ರೋಗ ತಗಲಿ ಕಾಲವಾದರು. ಹೆಲ್ತ್ ಆಫೀಸರು ಪ್ರಜೆಗಳಿಗೆ ನೀರು ಕಾಯಿಸಿ ಕುಡಿಯಬೇಕೆಂದು ಎಚ್ಚರಿಸಿದಾರೆ. ಸ್ಯಾನಿಟರಿ ಕಮಿಷನರವರು ಕಳೆದ ವಾರ ಬಂದು ಇಲ್ಲಿನ ಸಂಗತಿಗಳನ್ನು ನೋಡಿಕೊಂಡು ಹೋದರು

❖❖❖❖

ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿರುವ ತಾತಾರವರ ರೇಷ್ಮೆಕಾರ್ಖಾನೆಯಲ್ಲಿ ನಮ್ಮ ಸಂಸ್ಥಾನದ ಉಪಾಧ್ಯಾಯರಿಗೆ ರೇಷ್ಮೆ ತಯಾರಿ ಮುಂತಾದ ಸಂಗತಿಗಳನ್ನು ಕಲಿಸಿಕೊಡಬೇಕೆಂದೂ, ಅಲ್ಲಿ ನಡೆಯುವ ಕ್ರಮಗಳನ್ನು ರೈತರಿಗೆ ತಿಳಿಸಬೇಕೆಂದೂ ಗೊತ್ತುಮಾಡಿ ಆ ಕಾರ್ಖಾನೆಗೆ ಸರ್ಕಾರದಿಂದ ೩,೦೦೦ ರೂಪಾಯಿ ವರ್ಷಾಶನ ಕೊಡುವಂತೆ ಸ್ವೀಕಾರಮಾಡಿದಾರೆ

❖❖❖❖

ಕಳೆದ ಶುಕ್ರವಾರ ರಾತ್ರಿ ರಾಜಧಾನಿಯ ಪ್ರಿನ್ಸಿಪಲ್ ಮುನ್‌ಸಿಫ್ ಕೋರ್ಟಿನಲ್ಲಿ ಹಳೇ ಕಾಗದ ಪತ್ರಗಳನ್ನಿಟ್ಟಿದ್ದ ಕೋಣೆಗೆ ಬೆಂಕಿ ಬಿದ್ದು ಸ್ವಲ್ಪ ಭಾಗ ಸುಟ್ಟುಹೋಯಿತು ಕಾವಲುಗಾರನು ಜಡ್ಜಿಗಳಿಗೆ ತಿಳಿಸಿದನು ಅವರು ಬಂದು ನಿಂತುಕೊಂಡು ಉರಿಯನ್ನು ಆರಿಸುವ ಏರ್ಪಾಡುಮಾಡಿದರು ಈಚೆಗೆ ಜಡ್ಜಿಗಳೂ ಪೋಲೀಸಿನವರೂ ಈ ಬೆಂಕಿಯ ಪೂರ್ವೋತ್ತರವನ್ನು ಕಂಡುಹಿಡಿಯಬೇಕೆಂದು ಆಲೋಚನೆ ಮಾಡುತ್ತಿದಾರೆ

ಮಾಗಡಿ ತಾಲ್ಲೂಕು ತಾವರೆಕೆರೆಯಲ್ಲಿ ಕಳೆದ ೧೮೯೩ ನೆ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ವ್ಯವಸಾಯದ ಬ್ಯಾಂಕಿನ ಕಾರುಬಾರುಗಳನ್ನು ಆಜಮಾಯಿಷಿ ಮಾಡಿದ್ದರಲ್ಲಿ ತೃಪ್ತಿಕರವಾಗಿಲವೆಂತಲೂ ಸರ್ಕಾರಕ್ಕೆ ಸಲ್ಲಬೇಕಾಗಿರುವ ಕಿಸ್ತುಗಳನ್ನು ಪಾವತಿ ಮಾಡಲಿಲ್ಲವೆಂತಲೂ ಕಂಡು ಬಂದದ್ದರಿಂದ ಅದನ್ನು ಮುಚ್ಚಿಬಿಡಬೇಕೆಂತಲೂ ಸರ್ಕಾರಕ್ಕೆ ಬರಬೇಕಾಗಿರುವ ಹಣವನ್ನು ಕ್ರಮಪ್ರಕಾರ ವಸೂಲ್ಮಾಡಬೇಕೆಂತಲೂ ಹುಕುಂ ಆಗಿದೆ.

❖❖❖❖

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ತಮ್ಮಯ್ಯನೆಂಬಾತನ ಮನೆಯಲ್ಲಿ ಮೈಸೂರಿನವನೊಬ್ಬನೂ ಬೆಂಗಳೂರಿನವನೊಬ್ಬನೂ ಗಾಂಜಾ ಸೊಪ್ಪು ತಂದಿಟ್ಟು ಗುಟ್ಟಿನಲ್ಲಿ ಬಿಕರಿ ಮಾಡುತ್ತಿದ್ದರು ಸರ್ಕಾರದವರು ಕಳೆದ ವಾರ ಅವರನ್ನೂ ಅವರಲ್ಲಿ ಗಾಂಜಾ ಕೊಂಡುಕೊಂಡು ಹೋಗುತ್ತಿದ್ದವನನ್ನೂ ಸುಮಾರು ೧೬ ಸೇರು ಗಾಂಜಾಸೊಪ್ಪು ಸಮೇತ ಹಿಡಿದು ಮೊಕದ್ದಮೆ ಮಾಡಿದಾರೆ. ಮನೆಯವನನ್ನು ಮಾತ್ರ ಜಾಮೀನಿನ ಮೇಲೆ ಬಿಟ್ಟಿರುವರು.

❖❖❖❖

ನಂಜನಗೂಡಿನಲ್ಲಿ ಸ್ವದೇಶಿ ವ್ಯಾಪಾರವನ್ನು ಅಭಿವೃದ್ಧಿ ಪಡಿಸುವ ದಕ್ಷೋಡಶಿಕರ ಮ॥ ಪ್ಲೀಡರ್ ವೆಂಕಟಸುಬ್ಬಯ್ಯನವರ ಅಂಗಡಿ ಮನೆಯಲ್ಲಿ ಈಚೆಗೆ ಒಂದು ವಾಚು ವಿಪರ್ಯಾಸವಾಗಿರುತ್ತೆ. ಸ್ವದೇಶಾಭಿಮಾನಿಗಳೆಲ್ಲರೂ ಪ್ರೋತ್ಸಾಹಗೊಳಿಸುವರೆಂದು ನಂಬಿದ್ದೇವೆ ಚಾಮರಾಜನಗರ ಗುಂಡ್ಲುಪೇಟೆ, ಯಳಂದೂರು, ನರಸೀಪುರದ ತಾಲ್ಲೋಕುಗಳ ವರ್ತಕರಿಗೆ ತುಂಬಾ ಅನುಕೂಲವಾಗುವುದರಲ್ಲಿ ಸಂದೇಹವಿರುವುದಿಲ್ಲ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

❖❖❖❖

ಶಿವಮೊಗ್ಗೆ ಲೇಟ್ ಸ್ಪೆಷಲ್ ರಿಸರ್ವ್ ಪೋಲೀಸ್ ಕಾನ್‌ಸ್ಟೇಬಲ್ ಜಬಿಬುಲ್ಲಾ ಖಾನಗೆ ಸಲ್ಲಬೇಕಾಗಿದ್ದ ೨೩ ಚಿಲ್ಲರೆ ರೂಪಾಯಿ ಭತ್ಯವನ್ನು ಹೆಡ್ ಮುನ್‌ಷಿ ರಂಗಣ್ಣನವರು ಗೂಡ್ಸ್ ಇಂಟರ ಬಾಯಿಮಾತಿನ ಪ್ರಕಾರ ಟ್ರೆಜರಿಗೆ ವಾಪಸು ಕಳುಹಿಸದೆ ಹೋದದ್ದನ್ನೂ ಈಚೆಗೆ ಆ ಹಣವನ್ನು ನೌಕರರಿಂದ ವಸೂಲ್ಮಾಡಿರುವುದನ್ನೂ ಕೇಳಿ ಸರ್ಕಾರದವರು—ಇನ್ನು ಮುಂದೆ ಯಾರ ಸಂಬಳವಾಗಲಿ ಭತ್ಯವಾಗಲಿ ಬಾಕಿ ಉಳಿದರೆ ಅದನ್ನು ಕೂಡಲೇ ಖಜಾನೆಗೆ ಕಳುಹಿಸಬೇಕೆಂತಲೂ ನೌಕರರ ವಶದಲ್ಲಿ ಇಟ್ಟುಕೊಂಡಿರಕೂಡದೆಂತಲೂ ಹುಕುಂ ಮಾಡಿದಾರೆ.

ಬಹುಮಾನ ಪಡೆದ ವರ್ತಮಾನವು.

[ಇದನ್ನು ಬರೆದ ಮೆ॥ ಸಿ ಮರಳೇಗೌಡ, ಪಂಚನ ಹಳ್ಳಿ, ಕಡೂರು ತಾಲ್ಲೂಕು, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ.]

ಮಗನೂ ತಾಯಿಯೂ ಬಾವಿಯ ಪಾಲಾದದ್ದು.

ಕಡೂರು ತಾಲ್ಲೂಕು ಬಿದರೆ ಹೋಬಳಿ ಪಂಚನಹಳ್ಳಿ ಫಿರ್ಕಾ ಉಪ್ಪಿನಹಳ್ಳಿಗ್ರಾಮದಲ್ಲಿ ಕಳೆದ ಆಗಸ್ಟ್ ೨೮ ನೆ ಮಂಗಳವಾರ ಮಧ್ಯಾಹ್ನ ೨ ಗಂಟೆ ಸಮಯದಲ್ಲಿ ಇದೇ ಊರಲ್ಲಿರುವ ಅಕ್ಕಸಾಲೆ ಕರೀವೀರೈಯ್ಯನ ಹಿರೀಮಗ ಸುಮಾರು ೧೬ ವರುಷ ವಯಸ್ಸಿನ ಹುಡುಗನು ಊಟಮಾಡಿಕೊಂಡು ಎಂದಿನಂತೆ ಪಂಚೆಗಳನ್ನು ಒಗೆಯುವುದಕ್ಕೆ ಊರು ಮುಂದೆ ಇರುವ ಶಿಕಸ್ತಾಗಿ ಬಿದ್ದುಹೋಗಿರುವ ಕಲ್ಲುಭಾವಿಗೆ ಹೋದವನು ಪಂಚೆ ಒಗೆಯುತ್ತಾ ಹ್ಯಾಗೋ ಎಚ್ಚರತಪ್ಪಿ ಸದರಿ ಭಾವಿಯೊಳಕ್ಕೆ ಬಿದ್ದುಬಿಟ್ಟನು ಅವನ ಜೊತೆಯಲ್ಲಿ ಹೋಗಿದ್ದ ಹುಡುಗನು ಕೂಡ್ಲೆ ಓಡಿಬಂದು ಅವನ ಮನೆಯಲ್ಲಿ ಇದ್ದ ಆ ಹುಡುಗನ ತಾಯಿಗೆ ತಿಳಿಸಿದನು ಆಕೆಯು ಹಿಂದೆ ಮುಂದೆ ಯೋಚಿಸದೆ ಯಾರಿಗೂ ತಿಳಿಸದೆ ಮಗ ಬಿದ್ದನಲ್ಲಾ ಎನ್ನುವ ಸಂಕಟದಿಂದ ಅಳುತ್ತಾ ಓಡಿಹೋಗಿ ಸದರಿ ಭಾವಿಗೇನೇ ಬಿದ್ದುಬಿಟ್ಟಳು ಒಳ್ಳೇ ಮಧ್ಯಾಹ್ನವಾದ್ದರಿಂದ ಈ ಸಂಗತಿಯನ್ನು ನೋಡ್ದವರು ಯಾರೂ ಕಾಣರು. ಸ್ವಲ್ಪ ಹೊತ್ತಿನ ಮೇಲೆ ಎಲ್ಲೋ ಹೊರಗೆ ಹೋಗಿದ್ದ ಆ ಹುಡುಗನ ತಂದೆ ಕರೀವೀರೈಯ್ಯನು ಕೇಳಿ ಊರಲ್ಲೆಲ್ಲಾ ಬಹಳವಾಗಿ ಕೂಗಿಕೊಂಡು ಗೋಳಾಡಿದನು. ಆ ದಿನ ಕಣಕಟ್ಟೆ ಸಂತೆಯಾದ್ದರಿಂದ ಊರಲ್ಲಿ ಯ್ಯಾರೂ ಇರಲಿಲ್ಲ. ಇದ್ದ ಕೆಲವು ಜನಗಳೂ ಹೊರಗೆ ವ್ಯವಸಾಯ ಕೆಲಸಕ್ಕೆ ಹೋಗಿದ್ದರು. ಇವನು ಮಾಡಿದ ಗಲಾಟೆಯಿಂದ ಹೊರಗೆ ಹೋಗಿದ್ದವರು ಬಂದು ನೋಡುವಾಗ್ಗೆ ಭಾವಿಯಲ್ಲಿ ಬಿದ್ದಿದ್ದ ಹೆಂಗಸು ಮೃತಪಟ್ಟು ನೀರಿನಿಂದ ಮೇಲಕ್ಕೆ ತೇಲುತ್ತಾ ಇದ್ದಳು. ಹುಡುಗ ಮಾತ್ರಾ ಮುಳುಗಿದವನು ಮೇಲೆ ಏಳಲೇ ಇಲ್ಲ. ಅನಂತರ ಸಂತೆಗೆ ಹೋಗಿದ್ದ ಆತನ ಕುಲಸ್ಥರುಗಳಿಗೂ ವರ್ತಮಾನ ಹೋಯಿತು. ಅವರೆಲ್ಲರೂ ಬಂದು ಸೇರಿದರು. ಆ ಕೂಡ್ಲೆ ಆ ಗ್ರಾಮದ ಪಟೇಲನಿಂದ ಕಂಚನಾಪು ಪೋಲೀಸ್ ಸ್ಟೇಷನ್‌ಗೆ ರಿಪೋರ್ಟ್ ಆಯಿತು. ಆ ದಿನ ಅಲ್ಲಿಂದ ಇಬ್ಬರು ಪೋಲೀಸು ಕಾನ್‌ಸ್ಟೇಬಲ್‌ರು ಉಸ್ತುವಾರಿಗಾಗಿ ಬಂದರು ಮೇಲ್ಪಟ್ಟ ಆಫೀಸರು ಯಾರೂ ಬರಲಿಲ್ಲ ನಂತರ ೨ ದಿನದ ಮೇಲೆ ಕಡೂರು ತಾಲ್ಲೂಕು ಪೋಲೀಸು ಜವಾಬುದಾರರು ಬಂದು ಮುಕಜರು ವಗೈರೆ ವಿಚಾರಣೆಯಿಂದ ಹೆಣಗಳನ್ನು ದಫನ್‌ಮಾಡಿಸಿದರು. ಸದರಿ ಕರೀವೀರೈಯ್ಯನ ಸಂಕಟಕ್ಕೆ ಪಾರವೇ ಇಲ್ಲ.

[ಮೇಲ್ಕಂಡ ವಿಷಯವನ್ನೇ ಕುರಿತು ಇನ್ನೊಂದು ಬಾತ್ಮಿ ಬಂದಿರುವುದು. ಅದನ್ನು ಬರೆದವರು—ಆ ಹುಡುಗ ಹಟಾಕಿ ಆಡಿಸುತ್ತಿದ್ದದನ್ನು ಅವನ ತಂದೆ ನೋಡಿ ದಂಡಿಸಿದನೆಂತಲೂ, ಅದಕ್ಕಾಗಿ ಅವನು ಬಾವಿಯಲ್ಲಿ ಬಿದ್ದನೆಂತಲೂ, ತರುವಾಯ ಅವನ ತಾಯಿ ಊಟಮಾಡುತ್ತಿದ್ದವಳು ಹಾಗೇ ಹೋಗಿ ಆ ಬಾವಿಯಲ್ಲಿ ಬಿದ್ದಳೆಂತಲೂ, ಇದನ್ನು ಕೇಳಿದ ತಂದೆಯು "ಕಲ್ಲನ್ನು ತೆಗೆದುಕೊಂಡು ಎದೆಗೆ ಗುದ್ದಿಕೊಳ್ಳುತ್ತಾ ಎದೆಯಲ್ಲಿ ರಕ್ತ ಸುರಿಯುತ್ತಿದ್ದ ಹಾಗೆಯೇ ತಾನೂ ಬಾವಿಯೊಳಕ್ಕೆ ದುಮುಕಿದಾಗ ಬಹುದೂರದಲ್ಲಿದ್ದ ರೈತಜನರಲ್ಲಿ ಕೆಲವರು ಬಾವಿಯ ಮೆಟ್ಟಲುಗಳನ್ನಿಳಿದು, ನೀರು ಕುಡಿದು ಮುಳುಗುತ್ತಿದ್ದವನನ್ನು ಹಿಡಿದು ಮೇಲಕ್ಕೆ ಹಾಕಿ ಹೊಟ್ಟೆ ಕೈಕಾಲು ತಿವಿದು ಬಾಯಿಂದ ಸ್ವಲ್ಪ ನೀರನ್ನು ಹೊರಕ್ಕೆ ತೆಗೆದು ಆತನನ್ನು ಮನೆಗೆ ಎತ್ತಿಕೊಂಡು ಹೋದರು. ಉಪಚರಿಸಲು ಸಂಜೆ ಹೊತ್ತಿಗೆ ಮಾತನಾಡಲು ಪ್ರಯತ್ನಿಸಿದನು" ಎಂತಲೂ ವಿವರಿಸಿರುತ್ತಾರೆ.—ಎಡಿ]

ಮೈಸೂರು ಸರ್ಕಾರಿ ಹುಕುಮುಗಳು.

ಇಸ್ತಿಹಾರ್ನಾಮೆ—ಕೌನ್ಸಿಲ್ ವಿಚಾರ

ಕಳೆದ ೧೯೦೩ನೆ ಆಗಸ್ಟ್ ೮ ರಲ್ಲಿ ಏರ್ಪಡಿಸಿದ ಮಂತ್ರಾಲೋಚನಾ ಸಭೆಗೆ ಶ್ರೀಮನ್ಮಹಾರಾಜರವರು "ಶ್ರೀಮನ್ಮಹಾರಾಜರವರ ಕೌನ್ಸಿಲ್" ಎಂಬ ಹೆಸರನ್ನು ದಯಪಾಲಿಸಿರುತ್ತಾರೆ ಈ ಕೌನ್ಸಿಲ್ಲಿನಲ್ಲಿ ಮೊದಲಿನಂತೆ ದಿವಾನರೂ ಇಬ್ಬರು ಮೆಂಬರುಗಳೂ ಇರತಕ್ಕದ್ದು ಇವರು ಮುಖ್ಯವಾದ ಸಮಸ್ತ ವಿಷಯಗಳಲ್ಲೂ ಶ್ರೀಮನ್ಮಹಾರಾಜರವರಿಗೆ ವಿವೇಕಪೂರ್ವಕವಾದ ಅಭಿಪ್ರಾಯಗಳನ್ನು ತಿಳಿಸತಕ್ಕದ್ದು ದಿವಾನರವರಿಗೂ ಮೆಂಬರುಗಳಿಗೂ ಹಂಚಿಕೆ ಮಾಡಿರುವ ಇಲಾಖೆಗಳ್ಯಾವುವೆಂದರೆ—(೧) ದಿವಾನರವರಿಗೆ—ರಾಜಕೀಯ ವಿಚಾರಗಳು, ಜಮಾಖರ್ಚು ಮತ್ತು ಖಜಾನೆ, ಭೂಗರ್ಭ ಇಲಾಖೆ ಮತ್ತು ಗಣಿಗಳು, ಮರಾಮತ್ತು ಮತ್ತು ರೈಲ್ವೆಗಳು, ಸೈನ್ಯವು ಅಮೃತಮಹಲು, ಜಮೀನುಕಂದಾಯದ ಇಲಾಖೆ (೨) ಮೊದಲನೆಯ ಕೌನ್ಸಿಲರಿಗೆ—ಫಾರೆಸ್ಟ್, ಎಕ್ಸೈಸ್, ವಿದ್ಯಾಭ್ಯಾಸ, ಕಾನೂನು, ಕೋರ್ಟು ಕಚೇರಿಗಳು ರೆಜಿಸ್ಟ್ರೇಷನ್, ಲೋಕಲ್ ಮತ್ತು ಮ್ಯುನಿಸಿಪಲ್ ಫಂಡು ಇಲಾಖೆಗಳು (೩) ಎರಡನೆಯ ಕೌನ್ಸಿಲರಿಗೆ—ಮುಜರಾಯಿ, ಪೋಲೀಸ್, ವೈದ್ಯ ಸ್ಯಾನಿಟೇಷನ್ ಪ್ಲೇಗ್, ಬಂದೀಖಾನೆಗಳು, ಪೆನ್ಷನ್, ಸ್ಟಾಂಪು, ಲೆಕ್ಕಗಳು, ಛಾಪಖಾನೆ, ಈ ಮೊದಲಾದ ಸಣ್ಣ ಇಲಾಖೆಗಳು ಕೌನ್ಸಿಲ್ ಮೆಂಬರುಗಳು ಚರ್ಚೆಮಾಡಿ ತಮ್ಮ ಅಭಿಪ್ರಾಯಗಳ ಸಹಿತ ಶ್ರೀಮನ್ಮಹಾರಾಜರವರ ಹುಕುಂ ಬಗ್ಗೆ ಒಪ್ಪಿಸಬೇಕಾದ ವಿಷಯಗಳ್ಯಾವುವೆಂದರೆ—ಹೊಸ ಕಂದಾಯ ಕೌಲಿಗೆ ಹಾಕುವದು, ಇರತಕ್ಕವುಗಳನ್ನು ಗಾಡ ಮಾಡುವುದು, ಕಾನೂನು ಮಾಡುವುದು, ಪ್ರತಿ ಇಲಾಖೆಯ ಜಮಾಖರ್ಚನ್ನೂ ಬಡ್ಜೆಟ್ಟನ್ನು ಗೊತ್ತುಮಾಡುವುದು, ಎಲ್ಲಾ ಇಲಾಖೆಗಳ ವಾರ್ಷಿಕ ರಿಪೋರ್ಟುಗಳನ್ನೂ ಪರಾಂಬರಿಸುವುದು, ಮುಂದೆ ಹೇಳುವ ಅಧಿಕಾರಿಗಳ ನೇಮಕ ಬದಲಿ ಬರತರ್ಫ ಮುಂತಾದ್ದು—ಡಿ॥ ಕಮಿಷನರ, ಸಬ್ ಜಡ್ಜರು ಪೋಲೀಸ್ ಡಿ॥ ಸೂಪರಿಂಟೆಂಡರು, ಡಿ॥ ಮತ್ತು ಸಬ್ ಡಿ॥ ಸರ್ಜನರು, ಡಿ॥ ಮತ್ತು ಸಬ್ ಡಿ॥ ಫಾರೆಸ್ಟ್ ಕನ್ಸರ್ವೇಟರು, ಡಿ॥ ಮತ್ತು ಸಬ್ ಡಿ॥ ಇಂಜನಿಯರು, ಮರಾಮತ್ ಇ॥ ಎಕ್ಸಾಮಿನರು, ಎಕ್ಸೈಸ್ ಭೂಗರ್ಭ ಕಂಟ್ರೋಲರ್ ಸರ್ವೇ ಸೂಪರಿಂಟೆಂಡ್ ಇವರುಗಳ ಅಸಿಸ್ಟೆಂಟರು, ೩೦ನೆ ಕ್ಲಾಸಿನ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು, ಗವರ್ನಮೆಂಟು ಸೆಕ್ರೆಟರಿಗಳು, ಟೌನ್ ಮ್ಯಾಜಿಸ್ಟ್ರೇಟರು, ಗವರ್ನಮೆಂಟ್ ಅಡ್ವೊಕೇಟ್, ಪಬ್ಲಿಕ್ ಪ್ರಾಸಿಕ್ಯೂಟರು ಸೂಪರಿಂಟೆಂಡೆಂಟರು, ಮೈಸೂರು ಬೆಂಗಳೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರು, ಮುನ್ಸಿಪರು ಅಮಲ್ದಾರು ಡೆಪ್ಟಿ ಅಮಲ್ದಾರು, ಲಕ್ಷ ರೂಪಾಯಿನ್ನು ಮಾಫ್ ಮಾಡುವುದು, ನೌಕರರ ಮೇಲೆ ಮೊಕದ್ದಮೆ ತರುವುದು, ಇಲಾಖೆಗಳಲ್ಲಿ ವಿಶೇಷವಾದ ಬದಲಾವಣೆಗಳನ್ನು ಮಾಡುವುದು ಮಿಲ್ಟೇರಿ ಇಲಾಖೆಯ ವಿಚಾರಗಳು, ವಿಶೇಷವಾದ ಕಂಟ್ರಾಕ್ಟುಗಳು, ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸುವ ಇತರ ವಿಷಯಗಳು—ಈ ಸಂಗತಿಗಳೆಲ್ಲಾ ಕೌನ್ಸಿಲ್ಲಿಗೆ ಬಂದು, ಮೆಂಬರುಗಳ ಅಭಿಪ್ರಾಯ ಸಹಿತ ಶ್ರೀಮನ್ಮಹಾರಾಜರವರಿಗೆ ಅರಿಕೆಯಾಗಿ ಅವರ ಅಪ್ಪಣೆಪಡೆಯತಕ್ಕವುಗಳಾಗಿರುತ್ತವೆ ಕೌನ್ಸಿಲ್‌ನಲ್ಲಿ ದಿವಾನರು ಪ್ರೆಸಿಡೆಂಟರಾಗಿದ್ದು ಕಾರ್ಯಗಳನ್ನು ನಡೆಸತಕ್ಕದ್ದು ಚರ್ಚೆಯಾದ ವಿಷಯಗಳಲ್ಲಿ ದಿವಾನರೂ ಮೆಂಬರುಗಳೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಒಂದು ರಜಿಸ್ಟರಿನಲ್ಲಿ ಬರೆಯಬೇಕು ಕೌನ್ಸಿಲ್ಲು ಆಗಿಂದಾಗ್ಗೆ ಕ್ರಮವಾಗಿ ನಡೆಯಬೇಕು ಶ್ರೀಮನ್ಮಹಾರಾಜರಾಗಲಿ ದಿವಾನರಾಗಲಿ ಅಪೇಕ್ಷಿಸಿದರೆ ಕೌನ್ಸಿಲ್ ಕೂಡಬೇಕು. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ ೨೦ನೆ ಸೆಕ್ಷನ್ ೧ ಇಂದ ಜಾರಿಗೆ ಹೇಳುವ ವಿಚಾರದಲ್ಲಿ ರೆವಿನ್ಯೂ ಕಮಿಷನರ ತೀರ್ಮಾನದ ಮೇಲೆ ಗವರ್ನಮೆಂಟಿನವರು ಅಪೀಲ್ ಹಿಡಿಯುತ್ತಾರೆ ಇಂಥಾ ಅಪೀಲನ್ನು ಇಬ್ಬರು ಮೆಂಬರುಗಳು ತನಿಖೆಮಾಡಿ ಇತ್ಯರ್ಥಮಾಡಬೇಕು ಆದರೆ ಇಬ್ಬರು ಮೆಂಬರುಗಳೂ ಬೇರೆ ಬೇರೆ ಅಭಿಪ್ರಾಯಪಡುವುದಾದರೆ ಅದನ್ನು ದಿವಾನರಿಗೆ ತಿಳಿಸಬೇಕು ದಿವಾನರವರು ಯಾವ ಅಭಿಪ್ರಾಯವನ್ನು ಒಪ್ಪುವರೋ ಅದರಂತೆ ಅಪೀಲ್ ತೀರ್ಮಾನವಾಗತಕ್ಕದ್ದು ಇಲಾಖಾ ಅಧಿಕಾರಿಗಳ ಹುಕುಮನ್ನು ಬದಲಾಯಿಸಬೇಕಾದರೆ ಅದನ್ನು ರದ್ದುಮಾಡಬೇಕಾದರೂ ಕೌನ್ಸಿಲ್ ಮೆಂಬರುಗಳು ಮೊದಲು ಹೀಗೆಂದು ಇಷ್ಟು ಪಾರ್ಟಿಗಳಿಗೆ ನೋಟೀಸ್ ಕೊಡಬೇಕು ಪಾರ್ಟಿಯೇ ಖುದ್ದಾಗಿ ಬಂದು ಅಹವಾಲ್ ಹೇಳಿಕೊಳ್ಳಬಹುದು ಮತ್ತು ಪಾರ್ಟಿಯು ಹೆಂಗಸು ಅಥವಾ ಮೈನರಾಗಿದ್ದರೆ ಅವರ ಸ್ನೇಹಿತರೋ ಪೋಷಕರೋ ಕೌನ್ಸಿಲ್‌ಗೆ ಹಾಜರಾಗಿ ಮೆಂಬರುಗಳಲ್ಲಿ ತಮ್ಮ ಅಹವಾಲ್ ಹೇಳಿಕೊಳ್ಳಬಹುದು ಜರೂರಾತಿಯಾದ ಸಂದರ್ಭಗಳಲ್ಲಿ ದಿವಾನರವರೇ ಸ್ವತಂತ್ರಿಸಿ ಹುಕುಂ ಮಾಡಿ ಕಾರ್ಯ ನಡೆಸಬಹುದು ಆದರೆ ಅಂಥಾ ಹುಕುಮನ್ನು ದಿವಾನರು ಆ ಇಲಾಖಾ ಕೌನ್ಸಲರಿಗೂ ಮಹಾರಾಜರವರಿಗೂ ಕಾರಣಸಹಿತ ಕೂಡಲೇ ತಿಳಿಸತಕ್ಕದ್ದಾಗಿದೆ

ರೆವಿನ್ಯೂ ಕಮಿಷನರ ಅಧಿಕಾರಬದಲಾವಣೆ

ಮೈಸೂರು ಗವರ್ನಮೆಂಟಿನವರು ರೆವಿನ್ಯೂ ಕಮಿಷನರಿಗೆ ಇದುವರೆಗೆ ಇದ್ದ ಅಧಿಕಾರಗಳನ್ನು ಬದಲಾಯಿಸಿ ಹೆಚ್ಚುಮಾಡಿರುತ್ತಾರೆ ಅದರಂತೆ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಕೆಲವು ಸೆಕ್ಷನುಗಳನ್ನು ಬದಲಾವಣೆಮಾಡಿ ಕಳೆದ ಆಗಸ್ಟ್ ೨೦ ರಿಂದ ಜಾರಿಗೆ ತಂದಿರುವರು ಜಮೀನು ಕಂದಾಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಮೇಲೂ ಗವರ್ನಮೆಂಟಿಗೆ ಎರಡನೆಯದಾಗಿ ರೆವಿನ್ಯೂ ಕಮಿಷನರವರೇ ಮುಖ್ಯವಾದ ನಡವಳಿಕೆ ಅಧಿಕಾರವನ್ನು ವಹಿಸಿರತಕ್ಕದ್ದು ಅವಶ್ಯವೆಂದು ಕಂಡುಬರುವಷ್ಟು ಡಿ॥ ಕಮಿಷನರನ್ನು ಗವರ್ನಮೆಂಟಿನವರು ನೇಮಿಸಿ ರೆವಿನ್ಯೂ ಕಮಿಷನರ ತಾಬೆಗೆ ಕೊಡುತ್ತಾರೆ ಇವರು ರೆವಿನ್ಯೂ ಕಮಿಷನರಿಂದ ಆಗಿಂದಾಗ್ಗೆ ಕೊಡಲ್ಪಡುವ ಹುಕುಂ ಅನುಸರಿಸಿ ಕೆಲಸ ನಡಸಬೇಕು. ರೆವಿನ್ಯೂ ಕಮಿಷನರಿಗೆ ಅಪೀಲ್ ಮಾಡಿಕೊಂಡಾಗ ಅವರು ತೀರ್ಮಾನಮಾಡಿದ ಮೇಲೆ ಸಾಮಾನ್ಯವಾಗಿ ಅವರ ತೀರ್ಮಾನದ ಮೇಲೆ ಗವರ್ನಮೆಂಟಿನವರು ಅಪೀಲ್ ಹಿಡಿಯುವುದಿಲ್ಲ ಆದರೆ ಅವರು ತೀರ್ಮಾನಮಾಡಿದ ವಿಷಯವು ಕಾನೂನಿಗಾಗಲಿ ಪ್ರಬಲವಾದ ಪದ್ಧತಿಗಾಗಲಿ ವಿರೋಧವಾಗಿರುವ ಪಕ್ಷದಲ್ಲಿ ಮಾತ್ರ ಗವರ್ನಮೆಂಟಿಗೆ ಅಪೀಲ್ ಮಾಡಿಕೊಳ್ಳಬಹುದಾಗಿದೆ ಇದಲ್ಲದೆ ಮೊದಲಿದ್ದ ಲ್ಯಾಂಡ್ ರೆವಿನ್ಯೂ ಕೋಡಿನ ಕೆಲವು ಸೆಕ್ಷನುಗಳಲ್ಲಿ "ಗವರ್ನಮೆಂಟ್" ಎಂಬ ಮಾತಿಗೆ ಬದಲಾಗಿ "ರೆವಿನ್ಯೂ ಕಮಿಷನರ್" ಎಂಬೀ ಮಾತುಗಳನ್ನು ಉಪಯೋಗಿಸಿ ಓದಿಕೊಳ್ಳಬೇಕೆಂದು ಬದಲಾಯಿಸಿರುತ್ತಾರೆ

ರೆವಿನ್ಯೂ ಅಪೀಲುಗಳು

೧ ಕುಣಿಗಲ ತಾಲ್ಲೂಕು ನಡೇಮಾವಿನಪುರದ ಅಣೆಯಿಂದ ತರೀ ವ್ಯವಸಾಯಕ್ಕೆ ನೀರು ಒದಗಲಿಲ್ಲವಾದ್ದರಿಂದ ಸಿಂಗೋನಹಳ್ಳಿಯ ಕೆಲವು ಜಮೀನುಗಳಲ್ಲಿ ತರೀಫಸಲು ಬೆಳೆಯಲಿಲ್ಲ ರೈತರಿಂದ ತರೀ ಕಂದಾಯವನ್ನೇ ವಸೂಲ್ಮಾಡಿದರು ತಿಪ್ಪೂರುಗ್ರಾಮದಲ್ಲಿ ಮಾತ್ರ ರೈತರ ಅಹವಾಲ್ ಪ್ರಕಾರ ಅದೇ ಅಣೆಯ ಕೆಳಗಿನ ಜಮೀನುಗಳಿಗೆ ತರೀ ಕಂದಾಯವನ್ನು ವಜಾಮಾಡಿ ಖುಷ್ಕಿ ಕಂದಾಯವನ್ನು ವಸೂಲ್ಮಾಡಿದರು ಉಸ್ಮಾನ್ ಸಾಬಿ ಎಂಬ ರೈತನು ತನ್ನ ಜಮೀನುಗಳಿಗೂ ಖುಷ್ಕಿ ಕಂದಾಯವನ್ನೇ ತೆಗೆದುಕೊಳ್ಳಬೇಕೆಂದು ಅರ್ಜಿ ಬರೆದುಕೊಂಡನು ರೆವಿನ್ಯೂ ಅಧಿಕಾರಿಗಳು ಅವನ ಅರ್ಜಿ ಇತ್ಯರ್ಥವಾಗುವುದರೊಳಗೆ ಆ ಜಮೀನುಗಳನ್ನು ಕಂದಾಯದ ಬಾಕಿಗಾಗಿ ಹರಾಜು ಹಾಕಿ ಸರ್ಕಾರದ ಖಾತೆಗೆ ನಿಲ್ಲಿಸಿಕೊಂಡರು ಅದರ ಮೇಲೆ ಗವರ್ನಮೆಂಟಿನವರು ಹುಕುಂಮಾಡಿರುವುದೇನೆಂದರೆ—ನೀರು ಕೊಡುವ ತನಕ ಜಮೀನಿಗೆ ತರಿ ಕಂದಾಯಕ್ಕೆ ಬದಲಾಗಿ ಖುಷ್ಕಿ ಕಂದಾಯ ತೆಗೆದುಕೊಳ್ಳಬೇಕೆಂದು ಅರ್ಜಿದಾರನು ಕೇಳುವುದು ನ್ಯಾಯವಾಗಿದೆ ಆದ್ದರಿಂದ ಹರಾಜನ್ನು ರದ್ದುಮಾಡಿ, ಆ ಜಮೀನುಗಳ ಕಂದಾಯ ಬಾಕಿ ಇರುವುದನ್ನು ರೂಲಿಸು ಪ್ರಕಾರ ಕಮಿಷನರಿಗೆ ತರಬೇಕು ಎಂದು ಹುಕುಂ ಮಾಡಿದಾರೆ

೨ ದೇವನಹಳ್ಳಿ ತಾಲ್ಲೂಕು ಕುಮಾರನಹಳ್ಳಿ ಜಂಗಮ ಮಠಕ್ಕೆ ಕಳೆದ ೧೮೮೨ನೆ ಇಸವಿಯಲ್ಲಿ ಲೇಟ್ ಮುಮ್ಮಡಿ ಕೃಷ್ಣರಾಜ ಒಡೆಯರವರು ಏಳು ಜೋಡಿ ಗ್ರಾಮಗಳನ್ನು ಇನಾಂ ದಯಪಾಲಿಸಿದರು ಪಕೇರಹಳ್ಳಿಯು ಜೋಡಿ ಅನುಭವಿಸುತ್ತಿದ್ದ ಮಲ್ಲವಡೆಯರ ಮಗ ಸಂಜನಯ್ಯನು ಆ ಗ್ರಾಮದ ವರುಷದಲ್ಲಿ ಕೊಟಮಾತಕವನ್ನು ನಡಸಿದ್ದರಿಂದ ೧೮೮೩ನೆ ಇಸವಿಯಲ್ಲಿ ಆ ಜೋಡಿಯನ್ನು ಸರ್ಕಾರಕ್ಕೆ ವಾಪಸು ತೆಗೆದುಕೊಂಡರು ಆದರೆ ಯಾವ ಕಾರಣದಿಂದಲೋ ೧೮೯೬ನೆ ಇಸವಿಯಲ್ಲಿ ಪೌಜ್‌ದಾರ್ ಲಿಂಗರಾಜೇ ಅರಸಿನವರು ಆ ಗ್ರಾಮವನ್ನು ಜಂಗಮ ಬಿಟ್ಟು ಕೊಡಬೇಕೆಂದು ಹುಕುಂಕೊಟ್ಟಿದ್ದಾರೆ ಆದರೂ ಆ ಲಾಗಾಯಿತು ತಸಲ್ ನರಿಗೂ ಅಂದರೆ ೯೨ ವರುಷಗಳಿಂದಲೂ ಆ ಗ್ರಾಮವು ಸರ್ಕಾರಿ ಗ್ರಾಮವಾಗಿಯೇ ಲೆಕ್ಕಗಳಲ್ಲಿ ದಾಖಲಾಗಿರುವುದ ಈಗ ಆ ಮಠದ ಏಜಂಟ್ ಚನ್ನಬಸವದೇವರು ಈ ಗ್ರಾಮವನ್ನು ಮಠಕ್ಕೆ ಇನಾಂ ಸನ್ನದಿನಲ್ಲಿ ಕಂಡಂತೆ ಕೊಡಿಸಬೇಕೆಂದು ಗವರ್ನಮೆಂಟಿನಲ್ಲಿ ಅಪೀಲ್ ಮಾಡಿಕೊಂಡರು ಗವರ್ನಮೆಂಟಿನವರು ಈ ಮೊಕದ್ದಮೆಯ ಕಟ್ಟನ್ನೆಲ್ಲಾ ಪರಾಂಬರಿಸಿ—ತೊಂಬತ್ತೆರಡು ವರುಷಗಳಿಂದ ಈ ಗ್ರಾಮವು ಸರ್ಕಾರಿಯಾಗಿದ್ದರೂ ಇದುವರೆಗೆ ಜೋಡಿದಾರರು ಅದರ ಸ್ವಾಧೀನದ ವಿಷಯದಲ್ಲಿ ಚರ್ಚೆ ನಡಿಸಲಿಲ್ಲವಾದ್ದರಿಂದ ಅದು ಸರ್ಕಾರಿಯಾಗಿರುವುದನ್ನು ಅವರ ಒಪ್ಪಿಕೊಂಡ ಹಾಗೇ ಆಯಿತು ೧೮೯೬ ರಲ್ಲಿ ಜೋಡಿಯನ್ನು ವಾಪಸು ಕೊಡಬೇಕೆಂದು ಹುಕುಂ ಆಗಿದ್ದರೂ ಅದರಂತೆ ಜಾರಿ ಆಗದೆ ಇರುವುದಕ್ಕೆ ಸರಿಯಾದ ಕಾರಣಗಳು ಇದ್ದಿರಬೇಕೆಂದು ಊಹಿಸಬಹುದಾಗಿದೆ ಆದ್ದರಿಂದ ಆ ಗ್ರಾಮವನ್ನು ಆ ಮಠಕ್ಕೆ ವಾಪಸ್ ಬಿಡಬೇಕಾದದ್ದಿಲ್ಲ ಅರ್ಜಿದಾರರ ಅಪೀಲನ್ನು ವಜಾ ಮಾಡಿದೆ ಎಂಬದಾಗಿ ಹುಕುಂ ಕೊಟ್ಟಿದ್ದಾರೆ

೩ ಬೆಂಗಳೂರು ತಾಲ್ಲೂಕು ರಾಮಸಮುದ್ರದಲ್ಲಿ ಅಬ್ದುಲ್ ಕರೀಂ ಸಾಬಿಗೆ ಸೇರಿದ ಎರಡು ನಂಬರ್ ಜಮೀನುಗಳನ್ನು ಕಂದಾಯದ ಬಾಕಿಗಾಗಿ ಸರ್ಕಾರದವರು ಹರಾಜಿಗೆ ತಂದು ತಮ್ಮ ಖಾತೆಗೆ ನಿಲ್ಲಿಸಿಕೊಂಡು ಅದೇ ಜಮೀನುಗಳನ್ನು ರಂಗಣ್ಣನೆಂಬಾತನಿಗೆ ಹರಾಜಿನಲ್ಲಿ ಕ್ರಯಕ್ಕೆ ಕೊಟ್ಟರು ೧೯೦೪ನೆ ಮೇ ೨ರಲ್ಲಿ ಡೆಪ್ಟಿ ಕಮಿಷನರು ೧೫ ದಿನಗಳೊಳಗಾಗಿ ಖಾತೇದಾರನು ಕಂದಾಯ ಪಾವತಿಮಾಡದರೆ ಜಮೀನು ಆತನಿಗೆ ಕೊಡಬಹುದೆಂದು ಹುಕುಂಮಾಡಿದರು ಅದರಂತೆ ಪಾವತಿಮಾಡಲಿಲ್ಲ ಎರಡು ತಿಂಗಳ ಮೇಲೆ ಪಾವತಿಮಾಡಿದನು. ಆದರೂ ಡೆಪ್ಟಿ ಕಮಿಷನರು ಒಪ್ಪಿಕೊಂಡು ಹರಾಜು ರದ್ದುಮಾಡಿ ಎರಡು ನಂಬರುಗಳನ್ನೂ ಅಬ್ದುಲ್ ಕರೀಂ ಸಾಬಿಗೆ ವಾಪಸು ಕೊಡುವಂತೆ ಹುಕುಂಮಾಡಿದರು ಹರಾಜಿನಲ್ಲಿ ಒಡೆದಿದ್ದ ರಂಗಣ್ಣನು ಗವರ್ನಮೆಂಟಿಗೆ ಅಪೀಲ್ ಹೋದಾಗ ಗವರ್ನಮೆಂಟಿನವರು ಕಂದಾಯದ ಬಾಕಿಗಾಗಿ ಮೇಲ್ಕಂಡ ನಂಬರುಗಳನ್ನು ಹರಾಜುಮಾಡಿ ಗವರ್ನಮೆಂಟಿಗೆ ಸೇರಿಸಿಕೊಂಡದ್ದಾಯಿತು ಡೆಪ್ಟಿ ಕಮಿಷನರು ಹರಾಜನ್ನು ಖಾಯಂಮಾಡಿದರು ಕೆಲವು ಕಾಲದ ಮೇಲೆ ರಂಗಣ್ಣನು ದರಖಾಸ್ತು ಮಾಡಿ ಕ್ರಮ ಹರಾಜಿನಲ್ಲಿ ಆ ನಂಬರುಗಳನ್ನು ಕ್ರಯಕ್ಕೆ ಪಡೆದುಕೊಂಡನು ಖಾತೇದಾರನು ಸರಿಯಾದ ಕಾಲದಲ್ಲಿ ಕಂದಾಯ ಪಾವತಿಮಾಡಲಿಲ್ಲ ಆದ್ದರಿಂದ ಜಮೀನು ಬಿಟ್ಟುಕೊಡಬೇಕೆಂಬ ಡೆಪ್ಟಿ ಕಮಿಷನರ ಹುಕುಮು ನ್ಯಾಯವಾಗಿಲ್ಲವಾಗಿ ಅದನ್ನು ವಜಾಮಾಡಿದೆ ಅಪೀಲ್‌ದಾರ ರಂಗಣ್ಣನ ಕಡೆ ಫೈಸಲ್ ಕೊಟ್ಟಿದೆ ಎಂದು ತೀರ್ಮಾನ ಮಾಡಿರುತ್ತಾರೆ

೪ ತಿಪಟೂರು ತಾಲ್ಲೂಕು ಕೆಸರಮಡುವಿನಲ್ಲಿ ಸರ್ವೆ ೬೩ನೆ ನಂಬರು ಜಮೀನು ನಾಗಪ್ಪನ ಹೆಂಡತಿ ನಾಗಮ್ಮನೆಂಬಾಕೆಯ ಹೆಸರಿನಲ್ಲಿ ಖಾತೆ ಆಗಿದೆ ಮುಂಡಪ್ಪಯ್ಯನ ಹೆಂಡತಿ ನಾಗಮ್ಮನೆಂಬಾಕೆ ಅಪ್ಪಣ್ಣಯ್ಯ ಮುಂಡಪ್ಪ ಎಂಬುವರ ಮೇಲೆ ಜೀವನಾಂಶದ ದಾವಾ ತಂದು ಡಿಕ್ರಿ ಪಡೆದು ಜಾರೀಮಾಡಿ ಕೋರ್ಟ್ ಹರಾಜಿನಲ್ಲಿ ೬೦೧ ರೂಪಾಯಿಗೆ ಪಡೆಕೊಂಡು, ಅದರ ಖಾತೆ ತನ್ನ ಹೆಸರಿಗೆ ಮಾಡಿಕೊಡಬೇಕೆಂದು ಡಿ॥ ಕಮಿಷನರಲ್ಲಿ ಅರ್ಜಿಕೊಟ್ಟಳು ೧೯೦೫ನೆ ಜನವರಿ ೧೨ ರಲ್ಲಿ ಡಿ॥ ಕಮಿಷನರು ಹೀಗೆಂದು ಇಷ್ಟು ಖಾತೇದಾರಳಿಗೆ ನೋಟೀಸ್ ಕೊಟ್ಟು ೭ ದಿನ ಆಕೆ ಹಾಜರಾಗದೆಹೋದದ್ದರಿಂದ ಖಾತೆ ಬದಲಾಯಿಸಬೇಕೆಂದು ತೀರ್ಮಾನ ಹೇಳಿದರು ಆದರೆ ಈ ತೀರ್ಮಾನ ಬರೆದಿಟ್ಟ ಮೇಲೆ ಅದೇ ದಿನ ಖಾತೇದಾರಳು ಡಿ॥ ಕಮಿಷನರಿಗೆ ತಂತೀವರ್ತಮಾನ ಕೊಟ್ಟಳು ಡಿ॥ ಕಮಿಷನರ ಹುಕುಮನ್ನು ರದ್ದು ಮಾಡಬೇಕೆಂದು ಖಾತೇದಾರಳು ೧೯೦೫ನೆ ಫೆಬ್ರವರಿಯಲ್ಲಿ ಡೆಪ್ಟಿ ಕಮಿಷನರಲ್ಲಿ ಅಪೀಲ್ ಹಾಕಿದಳು ಅವರು ಅದು ಸಿವಿಲ್ ಕೋರ್ಟಿನ ವ್ಯಾಜ್ಯವೆಂದು ಹೇಳಿ ಆಕೆಯ ಅರ್ಜಿಯನ್ನು ವಜಾ ಮಾಡಿದರು ಇದರ ಮೇಲೆ ಮೊದಲನೆ ಖಾತೇದಾರಳು ಗವರ್ನಮೆಂಟಿಗೆ ಅಪೀಲ್ ಹೋದಳು ಗವರ್ನಮೆಂಟಿನವರು ಡೆಪ್ಟಿ ಕಮಿಷನರ ಹುಕುಮನ್ನು ತಳ್ಳಿಹಾಕಿ, ಈ ಖಾತೇದಾರಳ ಕೈಫಿಯತ್ತು ತೆಗೆದುಕೊಂಡು ಆಕೆಯ ಅಭಿಪ್ರಾಯವನ್ನು ತಿಳಿಯಬೇಕೆಂತಲೂ, ಅಪ್ಪಣ್ಣಯ್ಯನ ಹೆಸರಿನಲ್ಲಿ ಖಾತೆ ಇಲ್ಲದಿದ್ದಂಥಾ ಈ ಜಮೀನು ಡಿಕ್ರಿದಾರಳಿಗೆ ಕ್ರಯವಾಯಿತೋ ತನಿಖೆ ಮಾಡಬೇಕೆಂತಲೂ ಡಿ॥ ಕಮಿಷನರಿಗೆ ಪುನರ್ವಿಚಾರಕ್ಕೆ ಬಗ್ಗೆ ಹಾಕಿರುತ್ತಾರೆ

ಪೆನ್ಷನ್ ಸರ್ವೀಸ್ ಲೆಕ್ಕ ಮುಂತಾದ್ದು

೮೦ ನಂಬ್ರ ಪೋಲೀಸ್ ಕಾನ್‌ಸ್ಟೆಬಲನ್ನು ೧೯೦೩ನೆ ಮೇ ೩೧ರಲ್ಲಿ ಪೆನ್ಷನ್ ಮೇಲೆ ಕೆಲಸ ಬಿಡಿಸಿದರು ಅವನ ಸರ್ವೀಸ್ ಮುಂತಾದ ಲೆಕ್ಕಗಳನ್ನೂ ಇತರ ಸಂಗತಿಗಳನ್ನೂ ಅರಸೀಕೆರೆ ಹಾಸನ ತಾಲ್ಲೂಕುಗಳಿಂದ ತರಿಸಿಕೊಳ್ಳುವುದು ಬಹು ನಿಧಾನವಾಗಿ ಗವರ್ನಮೆಂಟಿನ ಸ್ಯಾಂಕ್ಷನ್ ಆಗುವುದಕ್ಕೆ ಎರಡು ವರುಷ ಎರಡು ತಿಂಗಳಾಯಿತು ಪೋಲೀಸ್ ಹೆಡ್ ನಾಯಕ್ ವೆಂಕಟರಾಮಯ್ಯನವರು ಆ ಸಂಬಂಧವಾದ ಕಾಗದವನ್ನೇ ಕಳೆದುಬಿಟ್ಟು ತಡಕ್ಕೆ ಕಾರಣವಾದದ್ದರಿಂದ ಆತನಿಗೆ ೫ ರೂಪಾಯಿ ಜುಲ್ಮಾನೆ ಹಾಕಿದರು ಗವರ್ನಮೆಂಟಿನವರು ಈ ಶಿಕ್ಷೆ ಸಾಲದೆಂದು ಹೇಳುತ್ತಾರೆ ಮತ್ತು ಮೇಲ್ಕಂಡ ಎರಡು ತಾಲ್ಲೂಕ್ ಆಫೀಸುಗಳಲ್ಲೂ ಪೋಲೀಸ್ ಆಫೀಸಿನಲ್ಲೂ ಕಾಗದಗಳು ಬಹಳ ನಿಧಾನವಾಗಿ ಬೇರೆಲ್ಲಿಗೆ ರವಾನೆಯಾದದ್ದೂ ಅನುಚಿತವೆಂದು ತಿಳಿಸಿದಾರೆ ಈ ರೀತಿ ಇಲಾಖೆಗಳ ಮುಖ್ಯಾಧಿಕಾರಿಗಳು ಸರಿಯಾದ ಮೇಲ್ವಿಚಾರಣೆ ಇಡದೆ ನಿಧಾನಕ್ಕೆ ಅವಕಾಶ ಕೊಡುವುದು ಯೋಗ್ಯವಾಗಿಲ್ಲವೆಂತಲೂ ಅವರು ವಿಶೇಷವಾದ ನಿಗಾ ಇಡಬೇಕೆಂತಲೂ ತಿಳಿಸುತ್ತಾರೆ ಅಲ್ಲದೆ ನೌಕರರಿಗೆ ಪೆನ್ಷನ್ ಸ್ಯಾಂಕ್ಷನ್ ಆಗುವುದು ನಿಧಾನವಾಗುವದರಿಂದ ಅವರು ಬಹಳ ಕಷ್ಟಪಡುವರು ಆದ್ದರಿಂದ ಇನ್ನು ಮುಂದೆ ಪ್ರತಿ ಒಬ್ಬ ಪೆನ್ಷನ್‌ದಾರನ ಕಾಗದಪತ್ರಗಳೂ ಅವನನ್ನು ಕೆಲಸ ಬಿಡಿಸಿದ ಮೂರು ತಿಂಗಳೊಳಗಾಗಿ ಫೈಸಲಾಗಬೇಕು ನಿಧಾನವಾದರೆ ಅದಕ್ಕೆ ತೃಪ್ತಿಕರವಾದ ಕಾರಣಗಳನ್ನು ತೋರಿಸಬೇಕು ಇಲ್ಲವಾದರೆ ಗವರ್ನಮೆಂಟಿನವರು ಅಂಥಾ ಅಧಿಕಾರಿಗಳ ಮತ್ತು ನೌಕರರ ನಡವಳಿಕೆಯನ್ನು ಖಂಡಿತವಾಗಿ ಅಪ್ರೀತಿಯಿಂದ ಕಾಣುವರು

ಮುಜರಾಯಿ

೧ ತಿಪಟೂರು ತಾಲ್ಲೂಕು ಕೆಸರಮಡುವಿನ ಶ್ರೀರಾಮೇಶ್ವರಸ್ವಾಮಿ ದೇವಸ್ಥಾನಕ್ಕೆ ಇನಾಂ ಜಮೀನುಗಳಿರುತ್ತವೆ ಈಗಿನ ವಹಿವಾಟುದಾರ ಕೃಷ್ಣಾಚಾರ್ರಿಗೂ ಗ್ರಾಮಸ್ಥರಿಗೂ ಸರಿಯಾಗಿಲ್ಲವಾದ್ದರಿಂದ ದೇವಸ್ಥಾನದ ರಿಪೇರಿ ಮಾಡಿಲ್ಲ ಇದು ವರ ಹಗಲಂದ ಉಪೇಕ್ಷೆಯನ್ನು ನಿಶ್ಚಿಸಿದಾರೆ ಗ್ರಾಮದಲ್ಲಿ ಎರಡು ಗುಂಪಾಗಿದೆ ಆದ್ದರಿಂದ ಈ ದೇವಸ್ಥಾನವನ್ನು ಮುಜರಾಯಿಗೆ ಸೇರಿಸಿಕೊಂಡು, ಅಮಲ್ದಾರ್ರಿಗೆ ವಹಿಸಬೇಕೆಂದು ಡೆಪ್ಟಿ ಕಮಿಷನರು ಗವರ್ನಮೆಂಟಿಗೆ ಬರೆದರು ಆಗ ಮ್ಯಾನೇಜರು ಕೃಷ್ಣಾಚಾರ್ರಿ ಆ ಕೆಲಸಕ್ಕೆ ಲಕ್ಷ್ಯದಾರಿ ಇರುವದಿಲ್ಲ ೧೮೯೩ ರಲ್ಲಿ ಅವರನ್ನು ಆ ಕೆಲಸಕ್ಕೆ ನೇಮಕಮಾಡಿದೆ ಅವರು ತೃಪ್ತಿಕರವಾಗಿ ಕೆಲಸ ಮಾಡಿಲ್ಲ ಆದ್ದರಿಂದ ಗವರ್ನಮೆಂಟಿನವರ ದೇವಸ್ಥಾನದ ಮೇಲ್ವಿಚಾರಣೆಯನ್ನು ಅದರ ಇನಾಂ ಜಮೀನುಗಳನ್ನೂ ಅಮಲ್ದಾರರಿಗೆ ವಹಿಸಿ, ವರೆ ವರ್ಷ ಮುತ್ತರವೀಜಾದ ಧನ ರಕ್ಷಣೆಗೆ ೬ ರೂಪಾಯಿ ಖರ್ಚು ಮಾಡಬೇಕೆಂತಲೂ ಉಳಿದ ೧೦ ರೂಪಾಯಿನ್ನು ರಿಪೇರಿ ಮುಂತಾದ ಖರ್ಚಿಗೆ ತಗೆದಿಡಬೇಕೆಂತಲೂ ತಿಳಿಸಿದಾರೆ

೨ ಅರಸೀಕೆರೆ ತಾಲ್ಲೂಕು ಗರುಡಗಿರಿ ಬೆಟ್ಟದ ಮೇಲಿರುವ ದೇವಸ್ಥಾನಗಳಿಗೆ ಇದುವರೆಗೆ ತಿಂಗಳಿಗೆ ರೂ ೩ ೪೫ ಸರ್ಕಾರದ ಸ್ಟೇಟು ಸಲ್ಲುತ್ತಿತ್ತು ವಾಸುದೇವಯ್ಯನೆಂಬುವರು ಬಹಳ ಶ್ರಮಪಟ್ಟು ಜನರಿಂದ ಚಂದಾ ಎತ್ತಿ ದೇವಸ್ಥಾನಗಳನ್ನು ದುರಸ್ತು ಮಾಡಿಸಿದ್ದಲ್ಲದೆ ಬೆಟ್ಟದ ಮೇಲಕ್ಕೆ ಮೆಟ್ಟಲುಗಳನ್ನು ಕಟ್ಟಿಸಿದಾರೆ ಇವನ್ನೆಲ್ಲಾ ಪರಾಂಬರಿಸಿ ಶ್ರೀಮನ್ಮಹಾರಾಜಾ ಗವರ್ನಮೆಂಟಿನವರು ಆ ದೇವಸ್ಥಾನಗಳ ತಿಂಗಳುಗಟ್ಟಳೆಯ ತಸ್ತೀಕನ್ನು ಇನ್ನೂ ೧೦ ರೂಪಾಯಿ ಹೆಚ್ಚಿಸಿ ಸ್ಯಾಂಕ್ಷನ್‌ಮಾಡಿದಾರೆ ಪರ್ವದಿನಗಳನ್ನು ನೆರವೇರಿಸುವ ವಿಚಾರವೂ ಬಾಣಾವಾರದ ಸತ್ರದಿಂದ ಅಕ್ಕಿ ಕೊಡಿಸುವ ವಿಚಾರವೂ ಸರ್ಕಾರದವರು ಪ್ರತ್ಯೇಕವಾದ ಹುಕುಂ ಕೊಡುವವರಾಗಿದಾರೆ

ಇಂಡಿಯಾ ದೇಶದ ವೃತ್ತಾಂತಗಳು.

ಪ್ರಸಿದ್ಧ ಚಿತ್ರಗಾರರಾದ ರಾಜಾ ರವಿವರ್ಮರವರು ಅನಂತಶಯನಕ್ಕೆ ಸೇರಿದ ಕಿಲಿಮನೂರಿನಲ್ಲಿ ಕಾಯಿಲೆ ಬಿದ್ದಿದಾರೆಂದು ತಿಳಿಯುತ್ತೆ

✱✱✱✱

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಅಧಿಕಾರದ ಮೊದಲನೆ ಲೆಪ್ಟಿನೆಂಟ್ ಗವರ್ನರ್ ಸರ್ ಬಿ ಫುಲ್ಲರ್‌ಯವರವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಳೆದ ವಾರ ಸೀಮೆಗೆ ಪ್ರಯಾಣ ಮಾಡಿದರು

✱✱✱✱

ಕಳೆದ ೧೯೦೫ನೆ ಇಸವಿಯಲ್ಲಿ ಕಲ್ಕತ್ತಾ ಪಟ್ಟಣದೊಳಗೆ ಸತ್ತುಹೋದ ಎಳೇ ಮಕ್ಕಳ ಸಂಖ್ಯೆಯು ಮುಖಕರವಾಗಿರುವುದು ಹುಟ್ಟಿದ ಪ್ರತಿ ೧,೦೦೦ ಮಕ್ಕಳಿಗೆ ೩೦೦ ಮಕ್ಕಳಂತೆ ೧೨ ತಿಂಗಳೊಳಗೆ ಮೃತಪಟ್ಟಿರುತ್ತವೆ.

ಲಾಹೋರ್ ಪಟ್ಟಣದ ಬಳಿ ಷಾಹೇದ್ ಮಯಾನಾ ಎಂಬ ಊರಿ ಡೇರಾ ಹೊಡಿಸಿಕೊಂಡು ಕಾಮಗಾರಿ ಮಾಡಿಸುತ್ತಿದ್ದ ಷಹಜಾದಾ ಎಂಬೊಬ್ಬ ಕಂಟ್ರಾಕ್ಟರಿಗೂ ಕಳ್ಳರ ಗುಂಪಿಗೂ ದೊಡ್ಡ ಕಾದ ಳ್ಳರು ೧೨,೦೦೦ ರೂಪಾಯಿಗಳನ್ನು ದೋಚಿಕೊಂಡು ದರು

♦♦♦♦

ಬರ್ಮಾ ಆಧಿಪತ್ಯಕ್ಕೆ ಸೇರಿದ ಶಾಪಾಯೂತ್ ಎಂಬೊಬ್ಬ ಭಿಕ್ಷ ಬಹಳ ದರಿದ್ರಾವಸ್ಥೆಯನ್ನನುಭವಿಸಿ ಕಳೆದ ವಾರ ಮೃತಪ . ಆದರೆ ಅವನು ಕೂಡಿಟ್ಟಿದ್ದ ಭಂಗಾರದ ೩೩ ಗಟ್ಟಿಗಳನ್ನು ಇಬ್ಬರು ಮಕ್ಕಳೂ ಹಂಚಿಕೊಂಡು ಬಡತನವನ್ನು ನೀಗಿಸಿ ದ್ದಾರೆ.

♦♦♦♦

ಕಲ್ಕತ್ತೆಯ ಒಬ್ಬ ಮ್ಯುನಿಸಿಪಲ್ ಸೂಪರವೈಜರ ೬ ವರುಷದ ಮಗನು ಕೋಣೆಯಲ್ಲಿಟ್ಟಿದ್ದ ಕಾರ್ಬಾಲಿಕ್ ಆಸಿಡ್ ಎಂಬ ಷದ ಸೀಸೆಯನ್ನು ಎತ್ತಿ ಮೈ ಮೇಲೆ ಸುರುಕೊಂಡು ಮೈಯೆಲ್ಲಾ ಗಾಯಗಳಾಗಿ ಮೃತಪಟ್ಟನು ಅವನು ಕಿವುಡು ಮೂಗನಾಗಿದ್ದ ಹೇಳುತ್ತಾರೆ

♦♦♦♦

ಜರ್ಮನಿ ರಾಜ್ಯದ ಸಿಯೋನೆ ಎಂಬ ಯುದ್ಧದ ಹಡಗು ಬೊಂ ಪಟ್ಟಣದ ಸಮುದ್ರತೀರದಲ್ಲಿ ಬಂದು ನಿಂತಿದೆ. ಅದರಲ್ಲಿ ಹತ್ತು ಗಳನ್ನಿಟ್ಟಿದಾರೆ ೨೫೦ ಮಂದಿ ಹುದ್ದೆದಾರರೂ ಸೇವಕರೂ ಲ್ಲಿ ಬಂದಿರುವರು ಜರ್ಮನಿಯ ಯುದ್ಧನಾವೆಯು ಹತ್ತು ವರು ಂದ ಬೊಂಬಾಯಿಗೆ ಬಂದದ್ದಿಲ್ಲ

♦♦♦♦

ಹೈದರಾಬಾದ್ ಸಂಸ್ಥಾನದಲ್ಲೆಲ್ಲಾ ಮುಖ್ಯ ದೊಡ್ಡ ಮನುಷ್ಯ ನಿವ ಘನವನ್ನೈದಿದ ನವಾಬ್ ಜಫರ್ ಜಂಗ್ ಯವರು ತುಂಬಾ ಲೆಯಾಗಿದ್ದಾರೆಂತಲೂ ನೈಜಾಮರವರು ವಿಶೇಷವಾದ ಶ್ರದ್ಧೆ ಪ್ರೀತಿಯಿಂದ ಅವರ ದೇಹಸ್ಥಿತಿಯನ್ನು ವಿಚಾರಿಸಿಕೊಳ್ಳುತ್ತಿದ್ದಾ ೂ ತಂತೀ ವರ್ತಮಾನ ಬಂದಿದೆ

♦♦♦♦

ಅಲಿಘಡದ ಪ್ರಸಿದ್ಧ ಸರ್ ಸೈಯದ್ ಅಹಮದ್ ಖಾನ್ ರವರ ಮೊ ನನ್ನು ಪಂಜಾಬ್ ಗವರ್ನಮೆಂಟಿನವರು ವಿದ್ಯೆ ಕಲಿತು ಬರುವುದ ಸರ್ಕಾರಿ ಖರ್ಚಿನಿಂದ ಮೊನ್ನೆ ಶನಿವಾರದ ದಿನ ವಿಲಾಯತಿಗೆ ಸಿಕೊಟ್ಟರು ಲೆಫ್ಟಿನೆಂಟ್ ಗವರ್ನರವರು ಆ ಹುಡುಗನ ವಿಷ ಲ್ಲಿ ಇಂಡಿಯಾ ಗವರ್ನಮೆಂಟಿಗೆ ತುಂಬಾ ಶಿಫಾರಸು ಮಾಡಿದರು.

♦♦♦♦

ಶೀತಕಾಲವು ಸಮೀಪಿಸಿದ ಹಾಗೆಲ್ಲಾ ಪ್ಲೇಗ್ ಉಪದ್ರವೂ ವೃದ್ಧಿಯಾ ದು. ಹಿಂದಿನ ವಾರ ಹಿಂದುಸ್ಥಾನದಲ್ಲಿ ೯೩೭ ಜನರು ಆ ಉಪ ಲ್ಲಿ ಕಾಲವಾದರು ಕಳೆದ ವಾರ ೧,೬೪೧ ಜನರು ಕಾಲವಾಗಿದಾರೆ ಬಾಯಿನಲ್ಲಿ ಆ ವೃಕ ೮೭೯ ಮರಣಗಳಾದವು ಬಿಹಾರ ೧೮೨, ಳಾ ೨೦, ಸಂಯುಕ್ತ ಆಧಿಪತ್ಯಗಳಲ್ಲಿ ೧೦೯, ಈ ರೀತಿ ಮರಣ ವೆ

♦♦♦♦

ಕಪೂರ್ಥಲ ಸಂಸ್ಥಾನದಲ್ಲಿರುವ ಜಗತ್ಜಿತ ಸರ್ ಜಗತ್ಜಿತ ಸಿಂಗ್, ವ ಯವರ ಮೂರನೇ ಮಗನಾದ ಸರ್ದಾರ್ ಮಹೀಜಿತ್ ಸಿಂಗ್ ವರು ಇದುವರೆಗೆ ವಿಲಾಯತಿಯ ಪ್ರಸಿದ್ಧ ವಿದ್ಯಾಶಾಲೆಗಳಲ್ಲಿ ಶುದ್ಧ ವೈದ್ಯ ಶಾಸ್ತ್ರದಲ್ಲಿ ಈಗತಾನೇ ಬಹು ಪ್ರಶಸ್ತವಾಗಿ ತೇ ಗೊಂಡಿರುತ್ತಾನೆಂದೂ ಅಲ್ಲಿನ ಬಹು ಮಂದಿ ವಿದ್ಯಾವಂತರಿಗೆ ಪಾತ್ರನಾಗಿದ್ದಾನೆಂತಲೂ ತಿಳಿದು ಬಂದಿದೆ.

♦♦♦♦

ಕಳೆದ ವಾರ ಉತ್ತರ ದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ೮,೩೨೫ ಕ್ಕೆ ಇಳಿಯಿತು ಅಂದರೆ ಹಿಂದಿನ ವಾರಕ್ಕಿಂತ ೮,೮೦೦ ಕಡಿಮೆಯಾಯಿತು. ಅಜ್ಮೀರ್ ಮೇರ್ವಾರಾಗಳಲ್ಲಿ ಸುಮಾರು ೨೦ ಜನರು ಸರ್ಕಾರ ಕಾಮಗಾರಿಗಳಿಗೂ ಅನ್ನ ಸತ್ರಗಳಿಗೂ ಹೋ ಗಿ ಬಂದು ಸೇರಿದರು. ಪೂರ್ವ ಬಂಗಾಳಾ ಮತ್ತು ಆಸ್ಸಾಮಿನಲ್ಲಿ ೧೦,೦೦೦ ಜನರು ಕ್ಷಾಮಪೀಡಿತರಾಗಿದಾರೆ

♦♦♦♦

ಕೂಲಿಗಳ ಕಂಟ್ರಾಕ್ಟುದಾರನೊಬ್ಬನು ಮದರಾಸಿನಿಂದ ಕೆಲವು ಆಳುಗಳನ್ನು ಬರ್ಮಾ ದೇಶಕ್ಕೆ ಕರೆದುಕೊಂಡು ಹೋಗಿ ಕ ನಂತೆ ಭತ್ತದ ಕಾರ್ಖಾನೆಗಳಲ್ಲಿ ಅವರಿಗೆ ಕೆಲಸ ಕೊಡಿಸದೆ ಗದ್ದೆ ಕೆಲಸ ಮಾಡುವಂತೆ ನೇಮಿಸಿದನು ಇದಕ್ಕೆ ಒಪ್ಪದೆ ಆ ಕೂ ಆ ಕಂಟ್ರಾಕ್ಟರನ್ನು ಹೊಡೆದು ಕೊಂದುಹಾಕಿ, ಶವವನ್ನು ಯಲ್ಲಿ ಹಾಕಿದ್ದರು. ಈಗ ಮೊಕದ್ದಮೆ ನಡೆಯುತ್ತಿದೆ

♦♦♦♦

ಕಲ್ಕತ್ತೆಯಲ್ಲಿ ಒಬ್ಬ ಮಹಮ್ಮದೀಯ ಪ್ರಾಯಸ್ಥನು ತನ್ನ ಹೆಂ ಯ ಬದಚಾಲನ್ನು ಕಂಡು, ಅವಳ ಮೂಗನ್ನೇ ಕತ್ತರಿಸಿ ಹಾಕಿ, ರಸೆಯಾಗುವಾಗ್ಗೆ—ಅವಳು ನನಗೆ ದ್ರೋಹಮಾಡಿದಳು ಅವಳ ಯಾರೂ ಮೋಹಿಸದಂತೆ ಶಿಕ್ಷಿಸಬೇಕೆಂಬ ಉದ್ದೇಶದಿಂದ ನಾನು ಮೂಗನ್ನು ಕತ್ತರಿಸಿ ಹಾಕಿದೇನೆ ಎಂದು ಹೈಳಿಯತ್ತು. ಕೊಟ್ಟ ಇಂಥಾ ಕ್ರೂರ ಕೃತ್ಯವನ್ನು ಮಾಡಿದ ಆ ಅಪರಾಧಿಗೆ ಮೂರು ಕಠಿಣ ಸಜಾ ವಿಧಿಸಲಾಯಿತು.

♦♦♦♦

ಲಕ್ನೊ ಪಟ್ಟಣದ ಕಮೀಷನರಾದ ಮೆ॥ ಲೆಸ್ಲಿ ಫೋರ್ಟರ್ ಯು ಅಲ್ಲಿನ ಗರಡಿಗಳಲ್ಲಿ ತರಪೇತಾಗಿರುವ ಪೈಲ್ವಾನರುಗಳನ್ನೂ ಸು ತ್ತಿನ ಪಟ್ಟಣಗಳಲ್ಲಿರುವ ಪೈಲ್ವಾನರುಗಳನ್ನೂ ಕರೆಸಿಕೊಂ ಒಂದು ವಾರದಿಂದ ಕುಸ್ತಿಗಳನ್ನು ಮಾಡಿಸುತ್ತಿದಾರೆ ಲಾಹೋರ ಜಲಂಧರ, ಅಜ್ಮೀರ, ಕೈಪುರ, ಶಾಹಪುರ ಈ ಮೊದಲಾದ ಕಡೆಗ ಪೈಲ್ವಾನರು ಹೋಗಿದ್ದಾರೆ. ಸಾವಿರಾರು ಪ್ರಜೆಗಳು ಬಹು ಉ ಹದಿಂದ ಈ ಕುಸ್ತಿಗಳನ್ನು ಹೋಗಿ ನೋಡುತ್ತಿರುವರು.

ಬರ್ಮಾ ಆಧಿಪತ್ಯಕ್ಕೆ ಸೇರಿದ ಅರಕಾನ್ ಪಟ್ಟಣದಲ್ಲಿ ಲೂಬಿ ಎಂಬೊಬ್ಬ ಬರ್ಮೀಯನು ತನ್ನ ಹೆಂಡತಿಯ ಮಾನಭಂಗ ಮಾಡಿದವ ನನ್ನೂ ಅವನ ಇಬ್ಬರು ಸಂಬಂಧಿಗಳನ್ನೂ ನದಿಯ ಬಳಿಗೆ ಕರೆದು ಕೊಂಡು ಹೋಗಿ ಸರಸವಾಗಿ ಮಾತನಾಡುತ್ತಾ ಅವರನ್ನು ಒಪ್ಪಿಸಿ ಕೈಕಾಲು ಕಟ್ಟಿಹಾಕಿ, ಆ ಮೂರು ಮಂದಿಯನ್ನೂ ಕತ್ತಿಯಿಂದ ತಲೆ ಕಡಿದುಹಾಕಿದನು. ಗ್ರಾಮಸ್ಥರೆಲ್ಲಾ ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು ಸೆಷನ್ಸ್ ಜಡ್ಜರು ಅವನಿಗೆ ಮರಣದಂಡನೆ ವಿಧಿಸಿದಾರೆ.

♦♦♦♦

ಕೊಚ್ಚಿ ಸಂಸ್ಥಾನದ ರಾಜಧಾನಿಯ ಬಳಿ ಸಮುದ್ರತೀರಕ್ಕೆ ಕಳೆ ದ ವಾರ ಯೂರ್ಲಾನಾ ಎಂಬ ಹಡಗು ಬಂತು ಆ ಹಡಗಿಗೆ ೨೦ ಪೀ ಪಾಯಿಗಳ ಮೊತ್ತವನ್ನೂ ೬೩ ಜನ ಪ್ರಯಾಣಿಕರನ್ನೂ ಒಂದು ದೋಣಿಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾಗ ಬಹು ರಭಸವಾದ ಗಾಳಿ ಹುಟ್ಟಿ ಸಮುದ್ರವನ್ನು ಅಲ್ಲಕಲ್ಲೋಲ ಮಾಡಿದ್ದರಿಂದ ಆ ದೋ ಣಿಯು ಮಗುಚಿಕೊಂಡಿತು ೩೭ ಮಂದಿ ಮಾತ್ರ ಬದುಕಿ ಬಂದರೆಂ ತಲೂ ೨೭ ಜನರು ಸಮುದ್ರಪಾಲಾದರೆಂತಲೂ ತಂತೀ ವರ್ತಮಾ ನ ಬಂದಿದೆ.

♦♦♦♦

ಯೂರೋಪಿಯನ್ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉಪಚಾರ ಮಾ ಡುವಂಥಾ ನರ್ಸ್ ಎಂಬ ದಾದಿಯರನ್ನು ತರಪೇತು ಮಾಡಬೇಕೆಂದು ನಮ್ಮ ವೈಸ್‌ರಾಯಿಯವರ ಪತ್ನೀರವರು ಒಂದು ಫಂಡನ್ನು ಕೂಡಿ ಸುತ್ತಿದಾರಷ್ಟೆ ಈ ಫಂಡಿಗೆ ಕಳೆದ ವಾರ ವಿಲಾಯತಿಯಿಂದ ಮಹಾರಾ ಜ್ಞಿ ಚಕ್ರವರ್ತಿನಿಯವರೂ, ಪ್ರಿನ್ಸ್ ಆಫ್ ವೇಲ್ಸ್‌ರವರ ಪತ್ನೀರವರೂ, ಬಾರೀ ಭಾರಿ ವರ್ತಕರೂ, ದೊಡ್ಡ ಮನುಷ್ಯರೂ ೧೭,೫೦೦ ರೂಪಾ ಯಿ ವರಿಗೆ ಚಂದಾ ಕಳುಹಿಸಿದಾರೆ. ಇದರಿಂದ ಈ ಫಂಡಿನಲ್ಲಿ ಇದುವ ರೆಗೆ ೯೫,೦೦೦ ರೂಪಾಯಿ ಕೂಡಿದಂತಾಗಿದೆ.

♦♦♦♦

ದಕ್ಷಿಣ ಕನರಾ ಜಿಲ್ಲೆಗೆ ಸೇರಿದ ಕಾಸರ್ಗೋಡಿನಲ್ಲಿ ಭಾರೀ ಜಮೀನ್ ದಾರರಾದ ಮಹಮದ್ ಷಮ್ನಾಡ್ ಎಂಬ ಮಾಪಿಳ್ಳೆ ದೊಡ್ಡಮನುಷ್ಯರು ಒಂದು ದೊಡ್ಡ ಸಭೆಯನ್ನು ನಡಿಸಿದರು. ಕಲೆಕ್ಟರ್ ಖಾನ್ ಸಾಹೆಬ್ ಎಂ ಅಜೀಜುದ್ದೀನ್ ಸಾಹೆಬ್ ಬಹದೂರ್‌ಯವರು ಅಗ್ರಾಸನವನ್ನು ವಹಿ ಸಿದ್ದರು ಆ ಡಿಸ್ಟ್ರಿಕ್ಟಿನಲ್ಲಿರುವ ಮಾಪಿಳ್ಳ ಪ್ರಜೆಗಳ ಪ್ರತಿನಿಧಿಗಳು ಹಾಜರಾಗಿದ್ದು ತಮ್ಮ ಪಂಗಡದ ಬಾಲಕರಿಗೆ ಕ್ರಮವಾಗಿ ವಿದ್ಯೆ ಕಲಿಸು ವುದಕ್ಕೆ ತೃಪ್ತಿಕರವಾದ ಏರ್ಪಾಡು ಮಾಡಬೇಕೆಂದು ಗೊತ್ತುಮಾಡಿ, ಒಂದು ಸಂಘವನ್ನು ಕಲ್ಪಿಸಿಕೊಂಡಿರುತ್ತಾರೆ

♦♦♦♦

ಬಂಗಾಳಾ ನಾಗಪುರ ರೈಲ್ ರಸ್ತೆಯ ಉದ್ದಕ್ಕೂ ಈಚೆಗೆ ಅಪಾರ ವಾದ ಮಳೆ ಸುರಿಯಿತು ಕಾತಾನಿರ್ಯಾ ಎಂಬ ಬೆಟ್ಟದ ಮೇಲಿನಿಂ ದ ಕೆಳಕ್ಕೆ ಹಾಕಿರುವ ರೈಲ್ ರಸ್ತೆಯಲ್ಲಾ ಕಂಬಿ ದಿಮ್ಮಿಗಳ ಸಮೇತ ಪ್ರವಾಹದಲ್ಲಿ ಕೊಚ್ಚಿಹೋಗಿದೆ ರಾಯಘೋಡಾ ಎಂಬ ಸ್ಥಳದಲ್ಲಿ ಏಮ್ಮೆ ಕೆಲಸ ಇಸು ಆರು ಕಾರಿ ಗಂಡಸರು ಹೆಂಗಸರು ಮಕ್ಕಳು ಎಲ್ಲಾ ಕೊಚ್ಚಿಹೋದರು ಅವರನ್ನು ಒದುಕಿಸುವುದಕ್ಕೆ ಯಾರಿಂದ ಲೂ ಸಾಧ್ಯವಾಗಲಿಲ್ಲ ಅಲ್ಲಿ ಈಗ ಉಂಟಾಗಿರುವ ಈ ಪ್ರವಾಹದ ಅನಾಹುತವು ತುಂಬಾ ದುಃಖಕರವಾಗಿರುತ್ತದೆ

♦♦♦♦

ಹಿಂದುಸ್ಥಾನದಲ್ಲಿ ಗಾಡಿ ನೊಗಗಳು ಬಲು ಭಾರವಾಗಿರುವುದರಿಂ ದ ಎತ್ತುಗಳು ಹೊರಲಾರದೆ ಅವುಗಳ ಕತ್ತಿನ ಮೇಲೆ ಹುಣ್ಣಾಗಿ ಬಹಳ ಸಂಕಟ ಪಡುವವು ಆದ್ದರಿಂದ ಮೂಗು ಪ್ರಾಣಿಗಳ ಹಿಂಸೆಯನ್ನು ತ ಪ್ಪಿಸಬೇಕೆಂದು ಪ್ರಯತ್ನ ಪಡುವ ಹಿಂದುಗಳು ಈ ನೊಗಗಳನ್ನು ಗಾ ಡಿಗೆ ಹಾಕದಂತೆಯೂ ಹಗುರವಾದ ಹೊಸ ನಮೂನೆಯ ನೊಗಗಳ ನ್ನು ಗಾಡಿಯವರು ಉಪಯೋಗಿಸುವಂತೆಯೂ ಮಾಡಿದರೆ ಎಷ್ಟೋ ಸ ಹಾಯವಾದೀತು ಅಂಥಾ ಹೊಸ ನಮೂನೆಯ ನೊಗಗಳನ್ನು ಜನರು ಉಪಯೋಗಿಸದೆ ಇರಲಾರರೆಂದು ನಿರೀಕ್ಷಿಸುತ್ತೇವೆ

♦♦♦♦

ಕಚ್ ಸಂಸ್ಥಾನದ ರಾವ್ ರಾಜರು ತಮ್ಮ ಸಂಸ್ಥಾನದೊಳಗೆ ರೈಲ್ ರಸ್ತೆ ಹಾಕಬೇಕಾದದ್ದಿಲ್ಲವೆಂದು ಖಂಡಿತವಾಗಿ ಹೇಳಿಬಿಟ್ಟ ಕಾರಣ ಇಂ ಡಿಯಾ ಗವರ್ನಮೆಂಟಿನವರು ಅದರಂತೆ ಒಪ್ಪಿ, ರೈಲ್ ಮಾರ್ಗವನ್ನು ಆ ಸಂಸ್ಥಾನದ ಹೊರಗಡೆ ಹಾಕಬೇಕೆಂತಲೂ ಸ್ವಲ್ಪ ಸುತ್ತಾದರೂ ಚಿಂತೆಯಿಲ್ಲವೆಂತಲೂ ಅಪ್ಪಣೆ ಕೊಡಿಸಿದಾರೆ ಆದರೂ ಬೊಂಬಾಯಿ ನ ಕೆಲವು ಭಾರೀ ವರ್ತಕರು ಸೇರಿ ಈ ವಿಷಯವಾಗಿ ವಿಲಾಯತಿಯ ಲ್ಲಿರುವ ಸ್ಟೇಟ್ ಸೆಕ್ರೆಟರಿ ಯವರಿಗೆ ಒಂದು ವಿಜ್ಞಾಪನಾ ಪತ್ರಿಕೆಯ ನ್ನು ಬರೆದು, ಆ ಸಂಸ್ಥಾನದೊಳಗಿನಿಂದಲೇ ರೈಲ್ ರಸ್ತೆ ಹಾಕಿಸಬೇಕೆಂ ದು ಕೇಳಿಕೊಂಡಿದಾರೆ

♦♦♦♦

ಕಾನ್ಪುರದಲ್ಲಿ ಮೆ॥ ಜೆ ಕ್ರೇಗ್ ಎಂಬ ಛೀಫ್ ಇಂಜನಿಯರ ಬಂಗಲೆಗೆ ರಾತ್ರಿ ಹೊತ್ತು ಒಂದು ತೋಳ ಬರುತ್ತಿತ್ತು ಅದನ್ನು ಹೊ ಡೆಯಬೇಕೆಂದು ಆ ಇಂಜನಿಯರು ಸಮಯ ನೋಡುತ್ತಿದ್ದರು ಕರ್ನಲ್‌ಗಂಜಿನ ಥಾಣಾದಾರನ ಒಂದು ಭಾರೀ ನಾಯಿ ಆ ಸಾಹೇಬರ ಬಂಗಲೆಗೆ ಹೋದಾಗ ಕತ್ತಲ ಮೊಬ್ಬಿನಲ್ಲಿ ನಾಯಿ ಎಂದು ತಿಳಿಯದೆ ಅದನ್ನು ಗುಂಡಿನಿಂದ ಹೊಡೆದು ಕೊಂದುಹಾಕಿದರು ಆ ನಾಯಿ ಬಹ ಳ ಶ್ರೇಷ್ಠ ಜಾತಿಯದು, ಅದನ್ನು ಥಾಣಾದಾರನು ೫೦೦ ರೂಪಾಯಿಗೆ ಕೊಂಡುಕೊಂಡಿದ್ದನು ಆದ್ದರಿಂದ ಥಾಣಾದಾರನು ಆ ಇಂಜನಿಯರ ಮೇಲೆ ಫಿರ್ಯಾದು ತಂದಿರುತ್ತಾನೆ.

♦♦♦♦

ಸಿಂಧು ದೇಶಕ್ಕೆ ಸೇರಿದ ರಥದೇರು ತಾಲ್ಲೂಕಿನಲ್ಲಿ ಸಪ್ರಿಯಾ ಎಂಬ ಗ್ರಾಮದೊಳಗೆ ಕಳೆದ ವಾರ ಒಂದು ಭಯಂಕರವಾದ ಡಕಾಯಿತಿ ನಡಿಯಿತು ಮೂವತ್ತು ಜನ ಕಳ್ಳರು ಬಂದೂಕು ಕತ್ತಿ ದೊಣ್ಣೆ ಮುಂ ತಾದ ಆಯುಧಗಳನ್ನು ಹಿಡಿದು ಕಿಷ್ಣತ್‌ರಾಯಿ ಎಂಬೊಬ್ಬ ಭಾರೀ ಸಾಹುಕಾರನ ಮನೆಯನ್ನು ನುಗ್ಗಿ ಅವನ ಮಗನನ್ನು ಒಬ್ಬ ಸೇವಕ ನನ್ನೂ ಹೊಡೆದು ಕೊಂದುಹಾಕಿದ್ದಲ್ಲದೆ ಮನೆಯಲ್ಲಿದ್ದ ೮—೧೦ ಜನ ರನ್ನು ಹೊಡೆದು ಗಾಯಮಾಡಿ ಸುಮಾರು ೩೫,೦೦೦ ರೂಪಾಯಿ ನಗ ನಾಣ್ಯಗಳನ್ನು ದೋಚಿಕೊಂಡು ಹೋದರು. ಈ ಭಯಂಕರವಾದ ಡಕಾಯಿತಿಯನ್ನು ಕೇಳಿ ಸುತ್ತುಮುತ್ತಿನ ಗ್ರಾಮಸ್ಥರೆಲ್ಲಾ ತುಂಬಾ ಗಾಬರಿಪಡುತ್ತಿದಾರೆ.

♦♦♦♦

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಪರಿವಾರ ಸಹಿತ ಅಕ್ಟೋಬರ್ ೮ ಕ್ಕೆ ಸಿಮ್ಲಾ ಪಟ್ಟಣದಿಂದ ಹೊರ ಟು, ಮರುದಿನ ರಾವಲ್ ಪಿಂಡಿಯಲ್ಲಿ ತಂಗಿ ಭೋಜನಾದಿಗಳನ್ನು ಪೂ ರೈಸಿಕೊಂಡು ಅಲ್ಲಿಂದ ಕಾಶ್ಮೀರ ಸಂಸ್ಥಾನವನ್ನು ಕುರಿತು ಪ್ರಯಾಣ ಮಾಡಿ, ತಾ. ೧೩ ಕ್ಕೆ ರಾಜಧಾನಿಯಾದ ಶ್ರೀನಗರವನ್ನು ತಲಪುವವರಾ ಗಿದಾರೆ ಅಲ್ಲಿ ನೋಡತಕ್ಕ ಅರಮನೆ, ವಿದ್ಯುಚ್ಛಕ್ತಿಯ ಕಾರ್ಖಾನೆ ಮುಂತಾದ್ದನ್ನು ನೋಡಿಕೊಂಡು, ಶಿಕಾರಿ ಮಾಡಿ ಕ್ವೆಟ್ಟಾ ಬೆಲೂಚಿ ಸ್ಥಾನದ ಸರಹದ್ದು ಪ್ರಾಂತ್ಯಗಳಲ್ಲೂ ಸಿಂಧು ದೇಶದಲ್ಲೂ ಸಂಚಾರ ಮಾಡಿ, ತಾ. ೨೯ಕ್ಕೆ ಆಗ್ರಾ ಪಟ್ಟಣವನ್ನು ತಲಪುವರೆಂದು ಪ್ರಕಟವಾ ಗಿದೆ. ತಾ ೨೬ ರಲ್ಲಿ ಲೇಡಿ ಮಿಂಟೋರವರು ದೆಹಲಿ ಪಟ್ಟಣದ ಜ ನಾನಾ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡುವರು

♦♦♦♦

ದಕ್ಷಿಣ ದೇಶದಲ್ಲಿ ರಾಮೇಶ್ವರದಿಂದ ಸಿಲೋನ್ (ಲಂಕಾ) ದ್ವೀಪ ಕ್ಕೆ ರೈಲ್ ಹಾಕಿ ಆ ದ್ವೀಪಕ್ಕೆ ಹೋಗಿಬರುವುದನ್ನೂ ಅಮದು ರಫ್ತು ನ್ನೂ ಸುಲಭ ಮಾಡಬೇಕೆಂದು ಬಹು ಕಾಲದಿಂದಲೂ ಚರ್ಚೆ ನಡೆ ಯುತ್ತಿದೆಯಷ್ಟೆ ಇದುವರೆಗೆ ಎಲ್ಲರೂ ಇದು ತುಂಬಾ ಆವಶ್ಯವೆಂದು ಹೇಳಿದ್ದನ್ನೇ ಕೇಳುತ್ತಿದ್ದೆವು. ಆದರೆ ಇದರಿಂದ ಕೆಟ್ಟದ್ದಾಗುತ್ತೆಂದು ಈಗ ಮದರಾಸಿನ ಕೆಲವು ವರ್ತಕರು ಹೇಳಲಾರಂಭಿಸಿದಾರೆ ಟುಟಿ ಕಾರಿನ್ (ತಟ್ಟುಗುಡಿ) ಯಲ್ಲಿರುವ ಕತ್ತಿ ದಳ್ಳಾಳಿಗಳೂ ಇನ್ನೂ ಕೆಲ ವು ಕಂಪನಿಗಳ ವರ್ತಕರೂ ಕಳೆದ ವಾರ ಸಭೆ ಸೇರಿ, ಈ ರೈಲನ್ನು ಹಾಕಕೂಡದೆಂತಲೂ ಅದರಿಂದ ವ್ಯಾಪಾರಕ್ಕೂ ಪ್ರಯಾಣಿಕರಿಗೂ ನಾನಾತರದ ನಷ್ಟಗಳುಂಟೆಂತಲೂ ತೀರ್ಮಾನಿಸಿ, ಈ ರೈಲನ್ನು ಹಾಕ ದಂತೆ ಗವರ್ನಮೆಂಟಿಗೆ ಕೂಡಲೇ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿ ಸಬೇಕೆಂದು ಗೊತ್ತುಮಾಡಿದಾರೆ

♦♦♦♦

ಕಲ್ಕತ್ತೆಯಲ್ಲಿ ಪನ್ನಾಲಾಲ್ ಎಂಬ ಬಟ್ಟೆ ಅಂಗಡಿಯವನು ಸೀಮೆ ಯಿಂದ ನಂಬರು ಮುದ್ರೆ ಮುಂತಾದ ಛಾಪಾ ಇಲ್ಲದಂತೆ ಬಟ್ಟೆಗಳನ್ನು ತರಿಸಿಕೊಂಡು, ತನ್ನ ಅಂಗಡಿಯಲ್ಲೇ ನಂಬರು ಮುದ್ರೆಗಳನ್ನು ಹಾಕಿ, ಆ ಬಟ್ಟೆಗಳನ್ನೆಲ್ಲಾ ಸ್ವದೇಶೀ ಕಾರ್ಖಾನೆಗಳಲ್ಲಿ ತಯಾರ್ಮಾಡಲ್ಪ ಟ್ಟವೆ ಎಂದು ಜನರಿಗೆ ಮೋಸಮಾಡಿ ವಿಕರಿಮಾಡಿ ತುಂಬಾ ಲಾಭಸಂ ಪಾದಿಸುತ್ತಿದ್ದನು ನಿಜವಾಗಿಯೂ ಸ್ವದೇಶೀ ಬಟ್ಟೆಗಳನ್ನೇ ವಿಕರಿ ಮಾಡುತ್ತಿದ್ದ ಒಬ್ಬ ಬಾಜೂ ಅಂಗಡಿಯವನು ಅವನ ಮೋಸಕೃತ್ಯ ವನ್ನು ಕಂಡುಹಿಡಿದು, ಅವನ ಮೇಲೆ ಫಿರ್ಯಾದು ಮಾಡಿದನು. ಪೋಲೀ ಸಿನವರು ಹೋಗಿ ಅಂಗಡಿಯನ್ನು ಜಪ್ತಿ ಮಾಡಿದಾಗ ಅವನು ಇಟ್ಟು ಕೊಂಡಿದ್ದ ಮುದ್ರೆಗಳೂ ನಂಬರುಗಳೂ ಮುಂತಾದ್ದೆಲ್ಲಾ ಸಿಕ್ಕಿದವು ಈಗ ಆ ಮೋಸಗಾರನನ್ನು ದರ್ಯಾಫ್ತು ಮಾಡಿಸುತ್ತಿದಾರೆ ಇಂಥಾ ಅಪ್ರಮಾಣಿಕತೆಯು ನಮ್ಮ ರಾಷ್ಟ್ರದಲ್ಲಿರುವ ವರೆಗೆ ಯಾವ ವಿಧವಾ ದ ಅಭಿವೃದ್ಧಿಯನ್ನೂ ಮಾಡಲಾಗುವುದಿಲ್ಲ

♦♦♦♦

ಮದರಾಸ್ ಪಟ್ಟಣದಲ್ಲಿ ವಯಸ್ಸಾದ ಮತ್ತು ಕಾಯಿಲೆಯಾದ ಮೂಗು ಪ್ರಾಣಿಗಳನ್ನು ಒಂದು ಕಡೆ ಇಟ್ಟು ಸಾಕಬೇಕೆಂದು ಕೆಲವು ಕಾಲದಿಂದ ಚರ್ಚೆ ನಡೆಯುತ್ತಿತ್ತು ಕಳೆದ ವಾರ ಹಿಂದೂ ಪ್ರಜಾ ಮು ಖಂಡರು ಸಭೆ ಸೇರಿ ಅದಕ್ಕಾಗಿ ಚಂದಾ ಕೂಡಿಸಿದರು ಮೆ॥ ಬಾಡಂ ಎಂಬ ದತ್ತಿಯವರು ಅಗ್ರಾಸನವನ್ನು ವಹಿಸಿದ್ದರು ಈ ಉದ್ದೇಶಕ್ಕೆ ಇದುವರೆಗೆ ೩೩,೦೦೦ ರೂಪಾಯಿ ಚಂದಾ ಕೂಡಿರುವುದು. ಇದಲ್ಲದೆ ಚತುರ್ಭುಜದಾಸ್ ಎಂಬ ಭಾರೀ ವ್ಯಾಪಾರಿ ಕಂಪನಿಯವರು ಈ ಪಶು ಸಂರಕ್ಷಣಾಲಯವನ್ನು ಕಟ್ಟುವುದಕ್ಕಾಗಿ ೧೨ ಎಕರೆ ವಿಸ್ತಾರ ವಾದ ಸ್ಥಳವನ್ನು ಧರ್ಮಾರ್ಥವಾಗಿ ಕೊಟ್ಟಿದಾರೆ. ಆ ದಿನ ನಡೆದ ಸಭೆ ಯಲ್ಲಿ ಇದೇ ಉದ್ದೇಶಕ್ಕೆ ದೊಡ್ಡ ಮನುಷ್ಯರು ೬,೦೦೦ ರೂಪಾಯಿ ಚಂದಾ ಕೊಟ್ಟರು ಈ ರೀತಿ ಹಣವೂ ಸ್ಥಳವೂ ಒದಗಿರುವುದರಿಂದ ಬೇಕಾದ ಕಟ್ಟಡವನ್ನು ಬೇಗನೆ ಕಟ್ಟಬೇಕೆಂತಲೂ ಮದರಾಸ್ ಗವ ರ್ನರ್ ಸರ್ ಆರ್ಥರ್ ಲಾಲಿಯವರಿಂದ ಆ ಕಟ್ಟಡಕ್ಕೆ ಅಸ್ತಿಭಾರ ಕಲ್ಲನ್ನು ಹಾಕಿಸಬೇಕೆಂತಲೂ ತೀರ್ಮಾನ ಮಾಡಿಕೊಂಡಿದಾರೆ.

♦♦♦♦

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಾರನ್ ಪಟ್ಟಣದಲ್ಲಿ ಲೇವಾದೇವಿ ಮಾಡುತ್ತಿದ್ದ ಮುಲ್‌ಸಿಂಗ್ ಎಂಬೊಬ್ಬ ಪಂಜಾಬಿ ಹಣಗಾರನನ್ನು ಅವ ನಿಂದ ಸಾಲಪಡೆದವರು ಕೊಂದುಹಾಕಿದರೆಂದು ಹರಿನಾಂಸಿಂಗ್ ಎಂಬು ವನು ಪೋಲೀಸಿಗೆ ತಿಳಿಸಿದನು ಅವರು ಪತ್ತೇ ತರದೂದು ನಡಿಸಿ ಆರು ಜನರನ್ನು ಹಿಡಿದು ದರ್ಯಾಫ್ತು ಮಾಡಿಸಿದರು ಅವರಲ್ಲಿ ಒಬ್ಬನು ನಾವೆಲ್ಲಾ ಸೇರಿ ಸಾಹುಕಾರನನ್ನು ಕೊಂದು ಹೆಣವನ್ನು ಗಂಡಕಿ ನದಿ ಗೆ ಹಾಕಿಬಿಟ್ಟೆವು ಎಂದು ಹೇಳಿದನು ಆದರೆ ಆ ಹಣಗಾರನ ಶವವೇ ಸಿಕ್ಕಲಿಲ್ಲ. ಪಂಚಾಯತರು—ಹೆಣಸಿಕ್ಕದಿರುವಲ್ಲಿ ಅಪರಾಧಿಗಳ ಪ್ರತಿ ಒಬ್ಬನ ಹೈಳಿಯತ್ತಿನ ಮೇಲೆ ಉಳಿದ ಐದು ಮಂದಿಯನ್ನೂ ಶಿಕ್ಷಿಸುವು ದು ಯೋಗ್ಯವಲ್ಲವೆಂದು ಹೇಳಿದಾಗ್ಯೂ ಸೆಷನ್ಸ್ ಜಡ್ಜರು ಪಂಚಾಯ ತರ ಅಭಿಪ್ರಾಯವನ್ನು ತಳ್ಳಿಹಾಕಿ, ಆ ಐದುಮಂದಿಗೂ ಯಾವ ಜ್ಜೀವ ಕಠಿಣಸಜಾ ಅನುಭವಿಸುವಂತೆ ಶಿಕ್ಷೆ ವಿಧಿಸಿದರು ಅವರ ಮೇಲೆ ಅವರು ಕಲ್ಕತ್ತಾ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂ ಡರು ಇಬ್ಬರು ಜಡ್ಜಿಗಳು ದರ್ಯಾಫ್ತುಮಾಡಿ, ಸೆಷನ್ಸ್ ಜಡ್ಜರು ಕೊಟ್ಟಿದ್ದ ಶಿಕ್ಷೆಯನ್ನು ವಜಾಮಾಡಿ, ಪಂಚಾಯತರ ಅಭಿಪ್ರಾಯದಂತೆ ಅವರು ಅಪರಾಧಿಗಳಲ್ಲವೆಂದು ತೀರ್ಮಾನಿಸಿ, ಅವರನ್ನೆಲ್ಲಾ ಖುಲಾಸ್ ಮಾಡಿಸಿರುತ್ತಾರೆ

ಬೊಂಬಾಯಿನ ಉತ್ತರ ಭಾಗದ ಎಂಬ ಊರಿನಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳು ಒಂದು ಸಂಘವನ್ನು ಮಾಡಿಕೊಂಡು ಅದರಲ್ಲಿ ಸ್ವದೇಶಿ ಪದಾರ್ಥದ ವಿಚಾರ, ಸ್ಕೂಲ್ ಹುಡುಗರು ಅಂಥಾ ಪದಾರ್ಥವನ್ನೇ ಬಳಸಬೇಕಾದದ್ದೋ ಬೇಡವೋ ಎಂಬ ವಿಚಾರ, ಈ ಮೊದಲಾದ ವಿಷಯಗಳನ್ನು ಕುರಿತು ತಮ್ಮ ತಮ್ಮಲ್ಲೇ ಚರ್ಚೆ ಮಾಡುತ್ತಾ ಬಂದರು. ಈ ವಿಷಯವನ್ನು ಅವರ ಹೆಡ್ ಮಾಸ್ಟರು ತಿಳಿದು ಅವರನ್ನೆಲ್ಲಾ ಕರೆಸಿ ಅಂಥಾ ರಾಜಕೀಯ ವಿಷಯಗಳಲ್ಲಿ ವಿದ್ಯಾರ್ಥಿಗಳು ಸೇರಬಾರದೆಂತಲೂ ಚಿಕ್ಕತನದಲ್ಲಿ ವಿದ್ಯೆ ಕಲಿಯುವುದೊಂದೇ ಅವರ ಮುಖ್ಯ ಉದ್ದೇಶವಾಗಿರಬೇಕೆಂತಲೂ ಬುದ್ಧಿ ಕಲಿಸಿದರು. ಆದರೂ ಆ ಹುಡುಗರು ಹೆಡ್ ಮಾಸ್ಟರ ಮಾತನ್ನು ಲಕ್ಷ್ಯಮಾಡಲಿಲ್ಲ. ಆಗ ಹೆಡ್ ಮಾಸ್ಟರು ಅವರಲ್ಲಿ ೨೦ ಮಂದಿಯನ್ನು ಸ್ಕೂಲಿನಿಂದ ವಜಾ ಮಾಡಿದರು. ಈ ಬಗ್ಗೆ ಆ ಪೈಕಿ ೪ ಮಂದಿ ಹೆಡ್ ಮಾಸ್ಟರ ಕ್ಷಮಾಪಣೆಯನ್ನು ಪಡೆದು ಪುನಃ ಸ್ಕೂಲಿಗೆ ದಾಖಲಾದರು. ಉಳಿದವರ ತಂದೆ ತಾಯಿಗಳ ಪೈಕಿ ಒಬ್ಬ ತಂದೆಯು ಬೊಂಬಾಯಿ ಗವರ್ನಮೆಂಟಿಗೆ ಈ ವಿಷಯವನ್ನು ತಿಳಿಸಿ ಹೆಡ್ ಮಾಸ್ಟರ ಮೇಲೆ ಆಕ್ಷೇಪಣೆ ಮಾಡಿದರು. ಗವರ್ನಮೆಂಟಿನವರು ಹೆಡ್ ಮಾಸ್ಟರ ಅಭಿಪ್ರಾಯವನ್ನೇ ಅನುಮೋದಿಸಿ ಹುಕುಂ ಕೊಟ್ಟರು. [illegible] ಹುಡುಗರೆಲ್ಲಾ [illegible] ಬೇರೆ ಸ್ಕೂಲಿಗೆ ಸೇರಿಕೊಳ್ಳಬೇಕಾಯಿತು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಪ.

ಕರೆಸ್ಪಾಂಡೆನ್ಸ್.

ವಿಗ್ರಹಗಳ ಕಳುವು

ಅಯ್ಯಾ,

ಚಿಂತಾಮಣಿಪೇಟೆಯಲ್ಲಿ ವೈಶ್ಯರು ಪುಣ್ಯವಂತರೆಂಬುದು ಪ್ರಸಿದ್ಧವಷ್ಟೆ. [illegible] ತಮ್ಮ [illegible] ಮನೆಯ ಜಂಬಿರ ಕೆಲಸಕ್ಕಾಗಿ ಇವರು ಮನೆಯಲ್ಲಿ ಚಿಲ್ಲರೆ ಕೆಲಸ ಕಾರ್ಯಗಳಿಗಾಗಿ ಗಂಡಸರನ್ನೂ [illegible] ತಂದು [illegible] ಗಂಡಸರನ್ನೂ ಮೋಕರೂರು ಮಾಡಿಟ್ಟುಕೊಂಡಿರುತ್ತಾರೆ. ಈ ನೋಟಗೆ [illegible] ತದ್ರೀತಿ ಜೀವಿಸಲಿಕ್ಕೆ ಎಲ್ಲಿಂದಲೋ ಒಬ್ಬ ಮನುಷ್ಯನು ಈ ಊರಿಗೆ ಬಂದು ಕೆಲಸಾಪೇಕ್ಷೆಯಿಂದ ಅಲ್ಲಲ್ಲಿ ಅಲೆದು ಇದೇ [illegible] ವೆಂಕಟಸುಬ್ಬಯ್ಯಶೆಟ್ಟರ ಮನೆಯಲ್ಲಿ ೧೫ ದಿನಗಳ ಕೆಳಗೆ ಸೇರಿ ಹಾಕುವ ಕೆಲಸ ದೊರಕಿಸಿಕೊಂಡು, ಬಹು ನಂಬಿಕೆಯುಳ್ಳವನಂತೆ ನಟಿಸುತ್ತಾ ಕೆಲಸ ಕಾರ್ಯಗಳಲ್ಲಿ ಜಾಗ್ರತೆ ತೋರಿಸಿದ್ದರಿಂದ ಸಾಹುಕಾರರಿಗೆ [illegible] ಮಾಡಲ್ಪಟ್ಟು [illegible] ಮೇಲ್ಕಂಡ ಸಾಹುಕಾರರ ೫೫ ವರ್ಷದ [illegible] ಇವರಿಗೆ [illegible] ಒಬ್ಬರೇ ಗಂಡು ಮಕ್ಕಳು ಇಬ್ಬರು [illegible] ಕೋರ್ಟಿನ ಕೆಲಸಕ್ಕಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು. ಇಂಥಾ ಸಮಯವನ್ನೇ ನಿರೀಕ್ಷಿಸುತ್ತಿದ್ದ ಪರಿಚಾರಕನು ಬೆಳ್ಳಿ ಬಂಗಾರಗಳಲ್ಲಿ ಮಾಡಿದ್ದ ದೇವರುಗಳನ್ನು ಒಗಲಲ್ಲಿ ಸೇರಿಸಿ ಕಳೆದ ಆಗಸ್ಟು ೨೦ನೇ ರಾತ್ರಿ [illegible] ಹೊರಟುಹೋದನು. ಮಾರನೆದಿನ [illegible] ದೇವರಮನೆಯಲ್ಲಿ ದೇವರಿಲ್ಲ. ಸಾಹುಕಾರರ ಮನೆಯಲ್ಲಿ [illegible] ಹೆಂಗಸರುಗಳು [illegible] ನಿಂತವರು [illegible] ಇಷ್ಟರಲ್ಲಿ ಕೆಲವರು [illegible] ಮನಸ್ಸಾಗಿ ಇಲ್ಲಿರುವ [illegible] ಕರೆಸಿದರು. ಆ ಶಂಬಿಗೆ [illegible] ಕಾಯಿ ಕರ್ಪೂರ [illegible] ಇಬ್ಬರ ಮನುಷ್ಯರ [illegible] ಮೇಲೆ [illegible] ಇಟ್ಟು, [illegible] ವೆಂಕಟ್ರಮಣ, ದೇವರನ್ನು ಕದ್ದವನು [illegible] ಆಗ [illegible] ಮೇಲೆ [illegible] ಕೆಲವರು ಹಾಸ್ಯ ಮಾಡಿದರು. ಎಲ್ಲಿಯೂ [illegible] ಪರೀಕ್ಷೆ ಮಾಡು [illegible] ಸದರಿ [illegible] ಅವನು ನಿಜವಾಗಿ ಸಿಕ್ಕುವನು. ಅಯ್ಯೋ ಪಾಪ! [illegible] ಇಟ್ಟು [illegible] ಈಗಲಾದರೆ [illegible] ಇದನ್ನು ಪರೀಕ್ಷಿಸಿ [illegible] ನಾನು ೧೮ ಸಂವತ್ಸರದಿಂದಲೂ ಇಗನ್ನು [illegible] ಕೇಳಿದ ಕೆಲವರು ನಂಬಿದರು. ಕೆಲವರು ಹಾಸ್ಯಕರವಾದ [illegible] ದೇವರ ಸಾಮಾನುಗಳು [illegible] ತೊಲೆ ಬೆಳ್ಳಿ [illegible]

ಎಂ. ಎಸ್.

ಕಲ್ಕತ್ತಾ ಪ್ರಾವಿಡೆಂಟ್ ಇನ್ಸ್ಟಿಟ್ಯೂಟ್

ಅಯ್ಯಾ,

[illegible] ೩೦ನೇ ತಾರೀಖಿನ ಪತ್ರಿಕೆಯ ೩ನೇ ಪುಟದಲ್ಲಿ 'ಕಲ್ಕತ್ತಾ ಪ್ರಾವಿಡೆಂಟ್ ಇನ್ಸ್ಟಿಟ್ಯೂಟ್' ಎಂಬ ಕಂಪನಿಯ [illegible] ಸದರಿ ಕಂಪನಿಯ ಮ್ಯಾನೇಜರಾದ ಮಿ॥ [illegible] ಎಂಬಾತನನ್ನು ಪೋಲೀಸಿನವರು ಹಿಡಿದು [illegible] ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ [illegible] ಪ್ರಕಟಿಸಿರುವುದು ಸರಿಯಷ್ಟೆ. [illegible] ಕಾರಣವೇನೋ ತಿಳಿಯಲಿಲ್ಲ. [illegible] ಕಂಪನಿಯು [illegible] ನಿಸ್ಪೃಹತೆಯಿಂದ ಕೆಲಸ ನಡೆಯತಕ್ಕದ್ದೆಂದು ನಂಬಿ, ಇಲ್ಲಿ ಕೆಲವರು ಆ ಕಂಪನಿಯ [illegible] ಹೋಲ್ಡರುಗಳಾಗಿ ಸೇರಿ ಈಗ್ಗೆ ಒಂದು ವರ್ಷದ ಲಾಗಾಯತು ಪ್ರತಿ ತಿಂಗಳಲ್ಲಿಯೂ ಚಂದಾ ಕಳುಹಿಸುತ್ತಿರುವುದಾಗಿದೆ. ಅವರಿಂದ ಸ್ವೀಕರಿಸಿದ ಅಕ್ನಾಲೆಡ್ಜ್‌ಮೆಂಟ್ ರಶೀತಿಗಳೂ ಬರುತ್ತಿವೆ. ಈಗ ಈ ರೀತಿ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಕಂಡು ಎಲ್ಲರಿಗೂ ತುಂಬಾ ಗಾಬರಿಯೂ ವ್ಯಥೆಯೂ ಉಂಟಾಗಿರುತ್ತದೆ. ಇನ್ನು ಆ ಕಂಪನಿಯಿಂದ ಆದಾಯ ಬರುವುದೆಂಬ ಭರವಸೆ ಏನಾದರೂ ಉಂಟೋ ಇಲ್ಲವೋ? ಈ ಲಾಗಾಯತು ಚಂದಾ ಕಳುಹಿಸತಕ್ಕದ್ದನ್ನು ಮೋಕೂಫ್ ಮಾಡತಕ್ಕದ್ದೇ? [illegible] ಬರಮಾಡಿಕೊಳ್ಳುವುದಕ್ಕಾಗಲಿ, ಮೋಸಕ್ಕೆ ತಕ್ಕ ಶಿಕ್ಷೆಯನ್ನು ಮಾಡಿಸತಕ್ಕದ್ದಕ್ಕಾಗಲಿ ನಡೆಯತಕ್ಕ ಕ್ರಮವೇನು? ಈಗ ಆ ಮ್ಯಾನೇಜರ ಮೇಲೆ ಬಂದಿರತಕ್ಕ ಮೊಕದ್ದಮೆಯ ಸಂಗತಿ ಏನು? ಡಿಟೋ ಕಂಪನಿಯು ಎದ್ದುಹೋದುದಕ್ಕೆ ಕಾರಣವೇನು? ಈ ವಿಷಯಗಳನ್ನೆಲ್ಲಾ ದಯವಿಟ್ಟು ತಮ್ಮ ಪತ್ರಿಕೆಯ ಮೂಲಕ ವಿಶದವಾಗಿ ತಿಳಿಸೋಣವಾದೀತೆಂದು ನಂಬಿದ್ದೇನೆ. ಮೋಸಗಾರರಾದ ಇಂಥ ಒಬ್ಬೊಬ್ಬರು ದ್ರೋಹ ಮಾಡುವುದರಿಂದ ಜನಗಳಿಗೆ ಯಾವ ಕಂಪನಿಯ ವಿಷಯದಲ್ಲಿಯೂ ಅಪನಂಬಿಕೆಯುಂಟಾಗುವುದಕ್ಕೆ ಕಾರಣವಾಗುತ್ತದೆ. ಮೇಲ್ಕಂಡ ಮೊಕದ್ದಮೆಯ ಫಲಿತಾಂಶದ ಸಂಗತಿಯು ಮುಂದಿನ ಪತ್ರಿಕೆಯಿಂದ ತಿಳಿಸಲ್ಪಡಲಿ.

ಸಾಕೇಪಟ್ಟ   [illegible]

[ಮಡಿಕೇರಿಯ ೧ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ॥ ಎಚ್. ಚನ್ನಯ್ಯನವರ ಕೋರ್ಟಿನಲ್ಲಿ ಮೇಲ್ಕಂಡ ಫಂಡಿನ ಮ್ಯಾನೇಜರಾದ ಕೆ. ಕೆ. [illegible] ಯವರ ಮೇಲೆ [illegible] ತಮ್ಮಯ್ಯ [illegible] ಬಸಪ್ಪ ಎಂಬೀ ನಾಲ್ಕು ಮಂದಿ ಫಿರ್ಯಾದು ಮಾಡಿರುವ ವಿವರವೇನೆಂದರೆ—(೧) ಅಪರಾಧಿಯು ಕಲ್ಕತ್ತಾ ಪ್ರಾವಿಡೆಂಟ್ ಫಂಡಿನ ಮ್ಯಾನೇಜರಾಗಿದ್ದುಕೊಂಡು, ಈ ಫಂಡಿಗೆ ಸೇರುವ ಮೆಂಬರುಗಳಿಗೆ ತುಂಬಾ ಲಾಭ ಬರುತ್ತದೆಂದು ಕೊಡಗಿನಲ್ಲಿ ನೋಟೀಸ್ ಪ್ರಕಟಿಸಿದರು. (೨) ಫಿರ್ಯಾದಿಯು ಆಸೆಪಟ್ಟು ೧೯೦೩ನೆ ಅಕ್ಟೋಬರಿನಲ್ಲಿ ಆ ಫಂಡಿನ [illegible] ತನ್ನ ಚಿಕ್ಕಮ್ಮನ ಹೆಸರಿನಲ್ಲಿ ಮಾಡಿಕೊಂಡು ಅಲ್ಲಿನ ಏಜಂಟರ ಮೂಲಕ ೧೯೦೫ನೆ ಫೆಬ್ರವರಿ ತನಕ ೧೭ ರೂಪಾಯಿ ಚಂದಾ ಕ್ರಮವಾಗಿ ಪಾವತಿ ಮಾಡಿದನು, (೩) ಆ ಚಿಕ್ಕಮ್ಮನು ೧೯೦೫ನೆ ಜನವರಿಯಲ್ಲಿ ಕಾಲವಾದ್ದರಿಂದ ಫಂಡಿನ ಅಡ್ವರ್‌ಟೈಸ್‌ಮೆಂಟ್ [illegible] ರೂಲಿನ ಪ್ರಕಾರ ತನಗೆ ಸಲ್ಲಬೇಕಾಯಿತು. (೪) ಆ ಮೃತಪಟ್ಟ ಸಂಗತಿಯನ್ನು ತಿಳಿಸಿದಾಗ ಅಪರಾಧಿಯು [illegible] ಫಾರಂಗಳನ್ನು ಫಿರ್ಯಾದಿಗೆ ಕಳುಹಿಸಿದರು. ಆ ಫಾರಂಗಳನ್ನು [illegible] ಸಹಿತ ಫಿರ್ಯಾದಿಯು ಅಪರಾಧಿಗೆ ಕಳುಹಿಸಿ, [illegible] ಬರಬೇಕೆಂದು ತಗಾದೆ ಮಾಡಿದನು. [illegible] ಮಾಡಿಸಿದಾಗ ಅಪರಾಧಿಯು—ಮೃತಪಟ್ಟ [illegible] ಇಲ್ಲದ್ದರಿಂದ ಫಂಡಿನ ಪ್ರಯೋಜನವನ್ನೆಲ್ಲಾ [illegible] ಜವಾಬು ಕೊಟ್ಟರು. (೫) ೧೯೦೫ನೆ ಸಪ್ಟೆಂಬರು ಅಕ್ಟೋಬರು ವರೆಗೆ ಚಂದಾ [illegible] ರೂಪಾಯಿ ಪೂರ್ತಾ ಪಾವತಿ ಆಗಿದೆ ಎಂದು ೧೯೦೬ನೆ ಅಕ್ಟೋಬರಿನಲ್ಲೇ ಅಪರಾಧಿಯು ಫಿರ್ಯಾದಿಗೆ ಕಾಗದ ಬರೆದು ತಿಳಿಸಿರುತ್ತಾರೆ.

[ಅಪರಾಧಿಯು ಇದಕ್ಕೆ ಏನು ಹೇಳುತ್ತಾರೆಂದರೆ—(೧) ಫಿರ್ಯಾದಿಯು ಮೇಲ್ಕಂಡಂತೆ ಕ್ರಮವಾಗಿ ಚಂದಾ ಕೊಡದೆ ತಪ್ಪಿರುತ್ತಾನೆ. (೨) [illegible] ಕಾಗದ ತಪ್ಪಾಗಿ ಬರೆಯಲ್ಪಟ್ಟಿದೆ. (೩) ಈ ಮೊಕದ್ದಮೆ ಸಿವಿಲ್ ಸ್ವಭಾವವುಳ್ಳದ್ದು. (೪) ಅಪರಾಧಿಯು ಫಿರ್ಯಾದಿಯನ್ನು [illegible] (೫) [illegible] ಕೋರ್ಟಿಗೆ ಅಧಿಕಾರವಿಲ್ಲ.

[ಫಿರ್ಯಾದಿ [illegible] ಸಾಕ್ಷಿಗಳ [illegible] ಅಪರಾಧಿಯ ಮೇಲೆ ಮೋಸ ಮಾಡಿದ್ದಕ್ಕೆ ಛಾರ್ಜ್ ಮಾಡಿದಾರೆ—(೧) ಫಿರ್ಯಾದಿಯಿಂದ [illegible] ರೂಪಾಯಿ ಮೋಸಮಾಡಿ ಅಪರಾಧಿ ತೆಗೆದುಕೊಂಡಿರುತ್ತಾರೆ. (೨) ಫಿರ್ಯಾದಿಯಿಂದ [illegible] ಮೋಸಗಾರಿಕೆಯಿಂದ [illegible] ತೆಗೆದುಕೊಂಡಿದ್ದಾರೆ.

[ಸೆಪ್ಟೆಂಬರ್ ೧೫ರಲ್ಲಿ ಅಪರಾಧಿಯ ಕಡೆ ಸಾಕ್ಷಿಗಳ [illegible] ನಡೆಯುವುದಕ್ಕೆ ಹೀಗೆ ಇಡಲ್ಪಟ್ಟಿದೆ.

[ಈ ಮೊಕದ್ದಮೆಯು ಕೋರ್ಟಿನಲ್ಲಿ ನಡೆಯುತ್ತಿರುವುದರಿಂದ ಅದರ ವಿಷಯದಲ್ಲಿ ನಾವು ಏನೂ ಹೇಳಲಾರೆವು. ಆದರೂ ೨—೩ ವರುಷಗಳ ಕೆಳಗೆ ಈ ಕಂಪನಿಯ ನೋಟೀಸನ್ನು ನಮ್ಮ ಪತ್ರಿಕೆಯಲ್ಲಿ ನಾವು ಪ್ರಕಟಿಸದೆ ನಿಲ್ಲಿಸಿಬಿಟ್ಟು, ನಮ್ಮ ವಾಚಕರಿಗೆಲ್ಲಾ ಅದರ ವಿಷಯದಲ್ಲಿ ಮೊದಲೇ ಎಚ್ಚರಿಸಿರುತ್ತೇವೆ.—ಪ.]

ತಾಲ್ಲೋಕು ವರ್ತಮಾನಗಳು

ಶಿಕಾರಿಪುರ—ಮೊನ್ನೆ ಈ ಊರ ಆಸ್ಪತ್ರೆಗೆ ಒಂದು ಹೆಣವು ತರಲ್ಪಟ್ಟಿತು. ಇದು ಈ ಶಿಕಾರಿಪುರ ತಾಲ್ಲೋಕಿನಲ್ಲಿರುವ ತೊಗಸಿ ಎಂಬ ಗ್ರಾಮದಲ್ಲಿ ಒಬ್ಬ ಗೌಳಿಗರವನು ನಡೆಸಿದ ಕೊಲೆ. ಕೊಲ್ಲಿಸಿಕೊಂಡಿರುವವಳಿಗೆ ಸುಮಾರು ೧೨-೧೩ ವರುಷ ವಯಸ್ಸಾಗಿತ್ತು. ಹೆಣದ ಒಂದು ಕೈ ಬಳೆಗಳು ಬಿಡಿಸಲ್ಪಟ್ಟಿದ್ದವು. [illegible] ಕೈಗಳ [illegible] ಕಚ್ಚುಗಳು ಉಂಟಾಗಿದ್ದವು. [illegible] ಕುತ್ತಿಗೆಯು [illegible] ಇತ್ತು. ಆ [illegible] ಶರೀರವನ್ನು ಖಂಡ[illegible] ಅವಯವಗಳನ್ನು [illegible] ಸಂಕಟಪಟ್ಟರೂ [illegible] ಆ ಅಪರಾಧಿಯನ್ನು ಹಿಡಿದು [illegible] ಇಲ್ಲಿಗೆ ಕರತಂದಿರುವರು.—ಈ ಊರಿನಲ್ಲಿ ಒಂದು ಜೀವವುಳ್ಳ [illegible] ಅವಳು [illegible] ಆದರೂ ಕೆಲವರು ಅವಳ ಎರಡು ಕೋರೆ ಹಲ್ಲುಗಳು [illegible] ಭಯವನ್ನು ಉಂಟುಮಾಡುವವುಗಳಾಗಿದ್ದವು. [illegible] ಮಕ್ಕಳು [illegible] ಪುಣ್ಯವತಿಯು [illegible] ಹೇಳಿದ ಮಾತ್ರಕ್ಕೇ ನಿಶ್ಶಬ್ದರಾಗುತ್ತಿದ್ದರು. ಇವಳ ಹೆಸರು ಮಂಚಿ. ಈಕೆ ಮೊನ್ನೆ ಶನಿವಾರದ ದಿನ ಏನು ಕಾರಣದಿಂದಲೋ ಹೋಗಿ ಕೋಟೆ ಭಾವಿಯಲ್ಲಿ ಬಿದ್ದು ಸತ್ತಿದ್ದಳು. ಬಹು [illegible] ಕಾಲದಿಂದ [illegible] ಏಕೆಂದರೆ ಇವಳಿಗೆ ಯಾರು [illegible] ಆ ಭಾವಿಯಲ್ಲಿ ಜಾರಿಕೆ ವಿಶೇಷವಾಗಿದೆ. ಈ ಊರಿನ ಕೆಲವು ಹೆಂಗಸರು ಒಬ್ಬೊಬ್ಬರೇ ಆ ಭಾವಿಗೆ ಬಟ್ಟೆ ಒಗೆಯುವುದಕ್ಕೆ ಹೋಗುತ್ತಾರೆ. ಆದ್ದರಿಂದ ಸರ್ಕಾರದವರು ಆ ಜಾರಿಕೆಯಾಗಿರುವ [illegible] ಯನ್ನು ತೆಗಿಸಿದರೆ ಬಹಳ ಒಳ್ಳೆಯದು. ಇಲ್ಲವಾದರೆ ಹೆಂಗಸರು ಭಾವಿಗೆ ಒಗೆಯುವುದಕ್ಕೆ ಹೋಗುವುದನ್ನೇ ಬಿಟ್ಟರೆ ಮತ್ತೂ ಒಳ್ಳೆಯದು.

ತ್ಯಾಮಗೊಂಡ್ಲು—ಈ ಪ್ರಾಂತ್ಯ ಈ ವರೆಗೆ ಮಳೆಯಿಂದ ಪೈರೆಲ್ಲಾ ಚೆನ್ನಾಗಿವೆ. ಕೆರೆಕಟ್ಟೆಗಳು ತುಂಬುವ ಮಳೆ [illegible] ಇಲ್ಲ. ಕಳೆದ ತಿಂಗಳು ೨೫ನೇ ತಾ॥ ಇದೇ ಊರಿನ [illegible] ಚಂದ್ರಪ್ಪನವರ ಮನೆಯಲ್ಲಿ [illegible] ಎಂಬಾತನೂ ಮತ್ತು [illegible] ಚಂದ್ರಪ್ಪನವರ ಮನೆಯ ಹಿತ್ತಲು ಕಡೆಯ ಗೋಡೆ [illegible] ಮನೆ ಬಾಗಿಲು ನುಗ್ಗಿ ಅಲ್ಲಿಟ್ಟಿದ್ದ ಒಂದು [illegible], ಒಂದು [illegible] ಗೆ ಎರಡು [illegible] ಇವುಗಳನ್ನು ಕಳವುಮಾಡಿಕೊಂಡು ಅದೇ [illegible] ಇಲ್ಲಿನ ಕಲಾಯಿ [illegible] ಒಂದು ಬಿಂದಿಗೆಯನ್ನು [illegible] ಹನುಮಂತೈಯ್ಯನಿಗೆ ಚಂಬುಗಳನ್ನೂ ಮಾರಿ [illegible] ಮಾಡುತ್ತಿರುವಷ್ಟರಲ್ಲಿ ಚಂದ್ರಪ್ಪನವರ ಮನೆಯಲ್ಲಿ ಕಳವು ಆದ [illegible] ಪ್ರಕಾರ [illegible] ಇದರ ಮೇಲೆ [illegible] ಭಯ [illegible] ಇದರ ಸಂಗತಿಯನ್ನು ಪಟೇಲ್ [illegible] ಅಪ್ಪಾಜಿ ಗೌಡರೂ [illegible] ತರದಂದು ನಟಿಸಿ [illegible]

ಕೊಡಗು—ಸಿದ್ದಾಪುರಕ್ಕೆ ಸೇರಿದ ಗ್ರೀನ್‌ಲ್ಯಾಂಡ್ ತೋಟದ [illegible] ಎಂಬೊಬ್ಬ [illegible] ಮಗಳೂ [illegible] ವಾಸಮಾಡುತ್ತಿದ್ದರು. [illegible] ಅಕಸ್ಮಾತ್ತಾಗಿ ಕಾಲವಾದರು. [illegible] ಚಿನ್ನ ಬೆಳ್ಳಿ ನಗಗಳೂ [illegible] ಸಿದ್ದಾಪುರವನ್ನು ಸೇರಿ [illegible] ಚಿನ್ನ ಬೆಳ್ಳಿ ನಗಗಳು [illegible] ಕೆಲವು ಜನಗಳು [illegible] ಸಿದ್ದಾಪುರದಲ್ಲಿ ಈ ತಿಂಗಳಲ್ಲಿ [illegible]

ಫ್ರೇಸರ್‌ಪೇಟೆ—[illegible] ಈ ಸ್ಥಳದಲ್ಲಿ [illegible] ಆಸ್ಪತ್ರೆ ಅಸಿಸ್ಟೆಂಟ್ ಸರ್ಜನ್ [illegible] ಚಿಕಿತ್ಸೆ ಮಾಡುತ್ತಾರೆ. [illegible] ಜನರಿಗೆ [illegible] ಸಂತೋಷವಾದ ಸಂಗತಿ [illegible] ಈ ವಿಷಯದಲ್ಲಿ [illegible] ಜನರಿಗೆ ಕ್ಷೇಮವಾದೀತು.—[illegible] ಕಾಲದಲ್ಲಿ [illegible] ಈ ಆಸ್ಪತ್ರೆಯಲ್ಲಿ ಕೆಲಸ ಮಾಡಿದರೆ ಜನರಿಗೆ ನಮ್ಮ [illegible] ಉಂಟಾದೀತು [illegible] ನೌಕರರು ಕಮ್ಮಿ [illegible]

ರ ಕೆಲವರು ತಿಳುವಳಿಕೆಯುಳ್ಳವರಿಗೆ ಸರಿಯಾದ ಸೇರುಗಳಿಂದ ಬಡ ಹಳ್ಳಿ ಜನರಿಗೆ ಕಮ್ಮಿ ಸೇರುಗಳಿಂದಲೂ ಅಳೆಯುವದುಂಟು ಕೆಲವರು ಅಳೆಯುವಾಗ ತಪ್ಪು ಲೆಕ್ಕ ಮಾಡಿ ಬಡ ಜನರನ್ನು [illegible]ಸ ಪಡಿಸುತ್ತಾರೆ. ಅಧಿಕಾರಿಗಳು ಇದಕ್ಕೆ ಗಮನಕೊಟ್ಟು ದುಷ್ಟ[illegible] ಶಿಕ್ಷಿಸಬೇಕಾಗಿ ಕೆಲವು ಪೋಲೀಸಿನವರಿಗೆ ತಿಳಿದಾಗ್ಯೂ ಅವರು ಗ[illegible] ಕೊಡದೆ ಇರುವದು ಯಾವದರ ಫಲವೋ ಅಧಿಕಾರಿಗಳೇ ತಿಳು[illegible] ಕೊಳ್ಳಲಿ

ಯಡತೊರೆ.—ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿ ಮ[illegible] ಈ ಪ್ರಾಂತ್ಯ ಆಗಾಗ್ಗೆ ಹದ ಮಳೆ ಆಗುತ್ತಲೇ ಇದೆ ಈ ಗ್ರಾಮ[illegible] ಧನಿಕರಾದ ೩—೬ ಜನಗಳು ತಲಾ ೭೦೦—೩೦೦ ಖಂಡಗ ಭತ್ತ[illegible]ವನ್ನು ಇಟ್ಟಿದ್ದರೂ ಖಂಡಿ ಒಂದಕ್ಕೆ ೧೧ ರೂಪಾಯಿ ಬೆಲೆ ಬಂದಾ[illegible] ರೂಪಾಯಿಗಳಾಗುತ್ತೆಂಬ ಆಶೆಯಿಂದ ನಿರೀಕ್ಷಣೆಮಾಡುತ್ತಿ[illegible] ಭಗವಂತನು ದಯವಿಟ್ಟು ೪ ನದ ಮಳೆ ನಡಸಿದ್ದರಿಂದ ಭತ್ತ[illegible] ಧಾರಣೆ ಖಂಡಿ ೧ಕ್ಕೆ ೯ ರೂಪಾಯಿಗೆ ಇಳಿಯಿತು ಆದ್ದರಿಂದ ಅಲಾಭ[illegible]ವಾಗಿ ಧನಕಾಂಕ್ಷೆಯುಳ್ಳ ಧನಿಕರ ಮನೋರಥ ಭಂಗವಾಗಿ ತುಂಬಾ [illegible]ಟಪಡುತ್ತಿದ್ದಾರೆ ಬಡವರಾದವರು ಬಹಳ ಸಂತೋಷಪಡುತ್ತಿರು[illegible] —ಈ ಊರಿನಲ್ಲಿ ಕಳೆದ ಜೂಲೈ ೧೬ ರಿಂದ ಕಾಲರಾ ಜೋರಾಗಿ [illegible] ದಿನಕ್ಕೆ ರಗಲಿ ೬೩ ಜನಗಳು ಆಗಸ್ಟು ೯ ರ ವರಿಗೆ ಸತ್ತರು. ಈ [illegible] ದೇವರು ಸುಖಮಾಡಿದಾನೆ ಕಾಲರಾ ಡ್ಯೂಟಿ ಮುಂತಾದ[illegible] ಮಾಡಿದ ಕೇಶವ ಸೆಟ್ಟಾರ್ ಎಂಬ ಕಾನ್ಸ್ಟೆಬಲಿಗೆ ಪೊ. ಇನ್ಸ್ಪೆಕ್ಟರು [illegible] ಕೊಡಿಸುವರೆಂದು ಕೇಳುತ್ತೇವೆ —ಜೂಲೈ ತಾ ೨೬ ರಲ್ಲಿ ಈ ಗ್ರಾಮದ ಪಸುಪತಿ ವಿಷಕಂಠಯ್ಯನೆಂಬುವನು ಗಾಡಿಯನ್ನು ವೇಗವಾಗಿ ಊರು ಬೀದಿಯಲ್ಲಿ ಓಡಿಸಿ ಪ್ರೀತಿಯಿಂದ ಸಾಕಿದ್ದ ಕಲ್ಲೇಗೌಡನ [illegible] ಮೇಲೆ ಹೊಡದು [illegible] ಪೃಢಪಟ್ಟಿದ್ದರಿಂದ ಇದು [illegible]. ಆಗ ಸವರಿಯವನಿಗೆ ತಾಲ್ಲೂಕು ಕೋರ್ಟಿನಲ್ಲಿ ವಿಚಾ[illegible] ನಡೆದು ೩೦ ರೂಪಾಯಿ ಜುಲ್ಮಾನೆ ಆಯಿತು.—ಈ ಗ್ರಾಮದ [illegible] ಚಲುವೇಗೌಡನ ಸೊಸೆ ನಿಂಗಮ್ಮ ಎಂಬುವಳು ಕಳೆದ ತಾ[illegible] ರಲ್ಲಿ ಹೊಲಕ್ಕೆ ಹುಲ್ಲು ತರಲು ಹೋದಾಗ್ಗೆ ತಿಮ್ಮನೆಂಬುವನು [illegible] ಈ ಅವಮಾನಕ್ಕೆ ಅತ್ತೆ ಬೈದಳೆಂಬ ಆಕ್ರೋಶದ ಮೇ[illegible] ಸಾಯ [illegible] ಚಾಮುಂಡಾ ಬಸರಾಳಿಗೆ ಮಹದ ಮೇಲಿನಿಂದ ಧು[illegible] ಸಮೀಪದಲ್ಲಿ ದಟ್ಟಿ ಒಗೆಯುತ್ತಾ ಇದ್ದ ಚಾಂಬೇಗೌ[illegible] ಬೀಳ [illegible] ನೀರಿಗೆ ಬಿದ್ದವಳನ್ನು ಮೇಲಕ್ಕೆ ಎತ್ತಿದಾ ಅಲ್ಲಿ [illegible] ಇರತ್ತೆ [illegible] ಈ ವರ್ತಮಾನ ಕೇಳಿದ ಕೂಡ್ಲೆ [illegible] ಸ್ಟೈಬಲ್ [illegible] ಜಾಗ್ರತೆ ಹೋಗಿ ನೀರಿಗೆ [illegible] ಮೇಲಕ್ಕೆ ಎತ್ತಿದ ಚಾಂಬೇಗೌಡನನ್ನು [illegible] ದಪೇದಾರರು ಮೊಕದ್ದಮೆಮಾಡಿದಾರ[illegible] ಕಟಿಗೆ [illegible]

ಕೃಷ್ಣರಾಜಪೇಟೆ.—ಈ ತಿಂಗಳೆಲ್ಲಾ ಮಳೆ ಅತಿಯಾಗಿ ಸುರಿದು ಕಟ್ಟೆಗಳೆಲ್ಲಾ [illegible] ಕೆಲವು ಒಡೆದು ಹೋಗಿವೆ ನದಿಯ [illegible] ಬಹಳ ರಭಸವಾಗಿ ಹರೇ ಹರೇ ಬರುತ್ತಾ ಜಲಸಮೃದ್ಧಿಯ[illegible]ಮಾಡುತ್ತಾ ಕಾವೇರಿ ನದಿಗೆ ಬೀಳುತ್ತದೆ [illegible] ನದಿಗೆ [illegible] ಸಹಾಯದ ಈ ಪ್ರವಾಹದ ನೀರೆಲ್ಲಾ ಸಾರ್ಥ[illegible] ಅಲ್ಲಿನ ಲಕ್ಷ್ಮಣತೀರ್ಥ [illegible] ಅಗಲ [illegible] ಆಗುವದರಲ್ಲಿ ಸಂಶಯವಿಲ್ಲ ಈ ನದಿಗೆ [illegible] ಕಾಲುವೆಗಳಿಂತಿರುವ ಉಪನದಿಗಳು ಅಲ್ಲಲ್ಲಿ ಸಂಗಮ[illegible] ಪ್ರವಾಹದ ನೀರು [illegible] ಅಂಗೋಳದ ನಿರರ್ಗಳ[illegible] ಸರ್ಕಾರದವರು ಗಮನಕೊಟ್ಟರೆ ಒಳ್ಳೇ ಪ್ರಯೋಜನ [illegible] —ಇಲ್ಲಿ [illegible] ಉದ್ಯೋಗಸ್ಥರಿಗಳ್ಯಾರೂ ಇಷ್ಟಾಗಿಲ್ಲ [illegible] ಮ್ಯುನಿಸಿಪಲ್ ಲ್ಯಾಂಪುಗಳ ಕತ್ತಲ ಕಮ್ಮಿ ಆಗಲಿಲ್ಲ [illegible] ನಾಲ್ಕು ತಿಂಗಳಿಂದ ಊರೆಲ್ಲಾ ಬಹು ಸೊಗಸಾಗಿ ಮಾಡುತ್ತಿದ್ದ ನಾಯ್ಡನು [illegible] ಮುನಿಸಿಪಲ್ ಕೆಲಸ ಬಿಟ್ಟು [illegible] ರಸ್ತೆಗಳು [illegible] ವೆ. ಬೀದಿ ಗುಡಿಸುವದು ಕಮ್ಮಿ ಆಗಿದೆ [illegible] ಸ್ಕೂಲ್ [illegible] ಸರ್ಕಾರದ ಆಸ್ಪತ್ರೆಯಲ್ಲಿ [illegible] ಕಟ್ಟಿ [illegible] ಅದನ್ನು ಕ್ರಮಪಡಿಸಲಿಲ್ಲ ಆ[illegible] ಕೆಲಸ ಪುನಃ ಶ್ಯಾನುಭೋ. (ಗಂಗೇನಹಳ್ಳಿ) [illegible] ಸ್ಥಳ ಅಲ್ಲಲ್ಲಿ ಬಹಳ ಚನ್ನಾಗಿದೆ ಕೆಲವು [illegible] ಹೊಲ [illegible] ಅತಿವೃಷ್ಟಿಯಿಂದ ಕೊಚ್ಚಿಕೊಂಡು ಹೋಗಿ [illegible] ಸದಾಗಿ ಒಬ್ಬ ಸೇಟ್ ವೈದ್ಯ [illegible] ಅದಕ್ಕೆ ಈ ಸ್ಥಳದ ಶ್ಯಾನುಭೋಗರನ್ನು ೧೫ ದಿ[illegible]ಳದ ಮೇಲೆ ನೇಮಿಸಿದಾರೆ ಅವರಿಗೆ ಒಬ್ಬ ಜವಾನನೂ ಔಷಧ[illegible]ಗೆ ಎಂಟು ರೂಪಾಯಿಗಳೂ ಮಂಜೂರಾಗಿವೆ ಅವರು ಆ [illegible] ಜನರಿಗೆಲ್ಲಾ ಧರ್ಮಕ್ಕೆ ಔಷಧ ಕೊಟ್ಟು ವಾಸಿಮಾಡಬೇ[illegible]ದೆ ಈ ಸಾರಿ ಇಂಗ್ಲಿಷ್ ಸ್ಕೂಲಿನಿಂದ ೫ ಮಂದಿಯೂ, ಕನ್ನಡ [illegible] ಮಂದಿಯೂ ಲೋಯರ್ ಸೆ ಪರೀಕ್ಷೆಗೆ ಹೋಗುವರು ಧಾರಣೆಮಾ[illegible] ಕೊಂಚವೂ ಇಳಿಯಲಿಲ್ಲ —ಕಮ್ಮಿ ತೂಕದ ಬೊಟ್ಟುಗಳೂ [illegible]ಗಳೂ ಅಲ್ಲಲ್ಲಿ ದುರ್ಭಿಕ್ಷಕ್ಕೆ ಸಹಾಯಮಾಡುತ್ತಿವೆ —ಪೋಲೀ[illegible] ಜ ಮೆ॥ ಕಾರ್ಯದವರು ವಿಚಾರಮಾಡಿಸಿ ತನಿಖೆ ನಡಿಸುತ್ತಿ[illegible] ಈ ನರ್ಸ ಸಬ್ ಡಿವಿಜನ್ ಆಫೀಸರ್ ರವರು ಗೌರಿ ಗಣೇಶ[illegible]ದಲ್ಲಿ ಬಹು ವಿಜೃಂಭಣೆಯಿಂದ ಬ್ರಾಹ್ಮಣರಿಗೆ ಸಂತೋಷವನ್ನುಂ[illegible]ಮಾಡಿದರು

ಚಿಕ್ಕಮಗಳೂರು.—ಇಲ್ಲಿ ಎರಡು ವಾರದಿಂದಲೂ ಮಳೆ ವಿಶೇ[illegible]ಗಿ ಬಂದ ಕಾರಣ ಕೆರೆ ಕಟ್ಟೆಗಳೆಲ್ಲಾ ತುಂಬಿ ಕೋಡಿ ಬಿದ್ದಿವೆ. [illegible] ಕಣಗಳಲ್ಲಿ ಗಿಡ್ಡರಾಗಿ, ಕೊತ್ತಂಬರಿ, ನೀರುಳ್ಳಿ, ಬೆಳ್ಳುಳ್ಳಿ [illegible] ಇವುಗಳು ಕುಯಿಲಿಗೆ ಬಂದಿವೆ. ಇನ್ನು ಎಂಟು ದಿನ ಮಳೆ [illegible] ಇದ್ದರೆ ರೈತರು ಬಂದಿರುವ ಪೈರನ್ನು ಪಾಕ್ ಮಾಡಿಕೊಳ್ಳುವ [illegible] ಈಗಿನ ಸ್ಥಿತಿಯು ಯಥಾಪ್ರಕಾರವಾಗಿದೆ ಗುಡಿಸಲುಗಳಲ್ಲಿರು[illegible] ತೊಂದರೆಯಂತು ಹೇಳತೀರದು ಗುಡಿಸಲುಗಳ ಸುತ್ತಲು ನೀ[illegible] ನಿಂತಿರುತ್ತದೆ. ಈ ಊರಿನ ಜನರ ಪರಿತಾಪವಾದ ಸ್ಥಿತಿಯನ್ನು ದೇ[illegible] ಪರಿಹರಿಸಬೇಕು. ಮಳೆಬೆಳೆಗಳು ಈ ಪ್ರಾಂತ್ಯ ಬಹಳ ಚನ್ನಾಗಿ [illegible] ದಿನಸಿ ಧಾರಣೆಯೇನೋ ಯಥಾಪ್ರಕಾರವಾಗಿದೆ. ಇದರಲ್ಲಿ [illegible] ದಿನಸಿ ಗಾಡಿಗಳೇ ಬರುವದು ಕಮ್ಮಿಯಾಯಿತು —ಕಳ್ಳತನವು [illegible]ರಿನಲ್ಲಿ ಹೆಚ್ಚುವಂತೆ ಕಾಣುತ್ತಲಿದೆ. ಕಳೆದ ೧೮ ನೆ ತಾ. ಅ[illegible]ಡ್ವೋಕೇಟ್ ಅಪ್ಪೂರಾಯರ ಮನೆಗೆ ಹಗಲು ೩ ಗಂಟೆ ಹೊತ್ತಿನಲ್ಲಿ ಒಬ್ಬ ಮುಸಲ್ಮಾನರವನು ಹಿತ್ತಲ ಬಾಗಲಿನ ಮೂಲಕ ಒಳಗೆ ನುಗ್ಗಿ ಮನೆಯಲ್ಲಿದ್ದ ಪಾತ್ರೆ ಪದಾರ್ಥಗಳನ್ನು ಹೊರಗೆ ಸಾಗಿಸುತ್ತಿದ್ದದನ್ನು ಏನೋ ಕೆಲಸದ ನಿಮಿತ್ತ ಮನೆ ಬಾಗಲನ್ನು ತೆರೆದು ಒಳಗೆ ಹೋದ ಅಪ್ಪೂರಾಯರೇ ಕಂಡು ಹಿಡಿದು ಪೋಲೀಸಿಗೆ ಕೊಟ್ಟಿದ್ದರ ಮೇಲೆ ಆ ಕಳ್ಳನಿಗೆ ಕೋರ್ಟಿನಲ್ಲಿ ಸುಮಾರು ಎರಡು ವರುಷ ಸಜಾ ವಿಧಿಸಿದರೆಂದು ವರ್ತಮಾನ —ಇಲ್ಲಿನ ರೇಲ್ವೆ ಔಟ್ ಏಜನ್ಸಿಯಲ್ಲಿ ರೈಟರ್ ಆಗಿದ್ದ ದಾಮಸ್ವಾಮಿ ಅಯ್ಯರ್ ಎಂಬುವರು ಕಂಪನಿಯ ಮುನ್ನೂರೂ ಚಿಲ್ಲರೆ ರೂಪಾಯಿ ಗೈರೀಲೆ ಮಾಡಿ ಕಳೆದ ೨೦ ನೆ ತಾ ರಾತ್ರಿ ಯಾರಿಗೂ ತಿಳಿಯದಂತೆ ಪರಾರಿಯಾದರು ಅವರನ್ನು ಹುಡುಕಲು ಇಲ್ಲಿಂದ ಒಬ್ಬ ಪೋಲೀಸ್ ದಫೇದಾರನು ಹೋಗಿದಾನೆ —ಈ ಊರಿನಲ್ಲಿ ಪ್ಲೇಗಿನ ಹಾವಳಿ ಇನ್ನೂ ನಿಂತಿಲ್ಲ ದಿನ ೮-೧೦-೧೫ ರಂತೆ ಸಾವಾಗುತ್ತಲಿದೆ. ಈಗ ಮಳೆ ಸ್ವಲ್ಪ ೪—೫ ದಿವಸಗಳಿಂದ ಕಡಿಮೆ ಥಂಡಿ ಹವ ಬಹಳ ಹೆಚ್ಚಾಗಿಯೇ ಇರುತ್ತೆ. ರಾಗಿ ಫಸಲು ಇಲ್ಲಿ ಕೊಯಿಲು ಆಗುತ್ತಲಿದೆ. ಹಿಂದೆ ನಡಿಸಿದ ಮಳೆಯಿಂದ ಕೆರೇ ಹಳ್ಳ ಸಮೃದ್ಧಿಯಾಗಿ ಇರುತ್ತೆ ಈ ಊರಿಗೆ ಊರೆಲ್ಲಾ ಸುಮಾರಾಗಿ ಖಾಲಿಯಾಗಿರುತ್ತೆ ಈ ದೆಸೆಯಿಂದ ಕಳ್ಳರ ಹಾವಳಿ ಹೆಚ್ಚಾಗಿರುತ್ತೆ. ಪೋಲೀಸಿನವರು ದಿನ ಪೂ ಕೇಸು ಹಿಡಿಯುತ್ತಲೇ ಇರುತ್ತಾರೆ ಇಲ್ಲಿನ ಒಂದು ಪಂಡಿತರಾದ ಸಿದ್ದಪ್ಪನವರು ಬಹಳ ಬಡಜನಗಳಿಗೆ ಅಂದರೆ ಬಡವರಿಗೂ ದೊಡ್ಡ ಮನುಷ್ಯರಿಗೂ ಬಹಳ ಮುತುವರ್ಜಿಯನ್ನು ವಹಿಸಿ ಪ್ಲೇಗು ಖಾಯಿಲೆಯವರನ್ನು ಚನ್ನಾಗಿ ನೋಡುತ್ತಲಿದಾರೆ ಮತ್ತು ಸರ್ವ ಲಾಂದ್ರಗಳ ದೀಪವು ೬—೭ ಗಂಟೆ ಒಳಗಾಗಿಯೇ ಹೋಗುತ್ತಲಿದೆ ಈ ಊರಿಗೆ ಸೇರಿದ ಕೋಟೆ ಮತ್ತು ಹಳ್ಳಿಗಳಲ್ಲಿಯೂ ಪ್ಲೇಗು ತಲೆ ಹಾಕುತ್ತದೆ ಊರು ಬಿಟ್ಟು ಷೆಡ್ಡುಗಳಿಗೆ ಹೋದರೂ ಅಲ್ಲಿಯೂ ಪ್ಲೇಗು ಅಪಾಯ ತಪ್ಪುವದೇ ಇಲ್ಲ

ತರೀಕೆರೆ.—ಈ ಊರಿನಲ್ಲಿ ಒಂದು ವಾರದಿಂದ ಕಾಲರಾ ಗಲಾಟೆ ಇಲ್ಲ. ಮಳೆಯೂ ಸ್ವಲ್ಪ ನಿಂತಿದೆ ರೈತರಿಗೆ ವ್ಯವಸಾಯಕ್ಕೆ ತುಂಬಾ ಅನುಕೂಲವಾಗಿದೆ ಇನ್ನು ೧೫ ದಿನ ಮಳೆ ಇಲ್ಲದೆ ಇದ್ದರೆ ರೈತರಿಗೆ ಅನುಕೂಲವಾದೀತು.—ಸೋಮವಾರ ಸಂತೆಯ ದಿನ ಅಕ್ಕಿ ಪಲ್ಲ ೧ ಕ್ಕೆ ೭॥ ಆಯಿತು ೮ ರೂ. ಹರಿಗೆ, ರಾಗಿ ೩॥ ಆಯಿತು ೭ ರೂ. ವರಿಗೆ ಮಾರಲ್ಪಟ್ಟಿತು ಈ ಧಾರಣೆ ಈಗ ೩ ತಿಂಗಳ ಆಯಿತು ಇರಲಿಲ್ಲ ಒಂದೇ ವಾರಕ್ಕೆ ಈ ರೀತಿ ಧಾರಣೆ ಬಹಳ ಮಟ್ಟಿಗೆ ಇಳಿದಿರುತ್ತೆ —[illegible] ದಿನದಲ್ಲಿ ಈ ಊರಿನಲ್ಲಿ ಪ್ಲೇಗು ಜಾಸ್ತಿಯಾಗಿ ಜನಗಳೆಲ್ಲ [illegible] ಗೌರಿ ಹಬ್ಬವನ್ನು ಮಾಡಿದರು. ಈ ವರುಷ ಇದುವರಿಗೆ ಯಾವ ವಿಧವಾದ ಗಲಾಟೆಯೂ ಇಲ್ಲವಾದ್ದರಿಂದ ಜನಗಳು ಊರಿನೊಳಗೆ ಇದ್ದುಕೊಂಡು ಗೌರಿ ಹಬ್ಬವನ್ನು ಅತಿ ಸಂತೋಷವಾಗಿ ಉಲ್ಲಾಸದಿಂದ ನಡೆಸಿದರು —ಈ ಊರಿನ ಎ ವಿ ಸ್ಕೂಲಿನಲ್ಲಿ ಈ ಸಾರಿ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕನ್ನಡದಲ್ಲಿ ದರಖಾಸ್ತು ಕೊಟ್ಟಿರುವ ವಿದ್ಯಾರ್ಥಿಗಳು ಅಪ್ಲಿಕೇಷನ್ ಬಗ್ಗೆ ಕಳುಹಿಸುವ ದರಖಾಸ್ತು [illegible] ರೂಪಾಯಿಗಳೆಂತಾ ಪತ್ರಿಕೆಯಲ್ಲಿ [illegible] ಆಗಿದೆ ಈ ವಿದ್ಯಾರ್ಥಿಗಳಿಂದ [illegible] ಮಾಸ್ತರು ಅಪ್ಲಿಕೇಷನ್‌ಗೆ ದರಖಾಸ್ತು ಕಳುಹಿಸು ಕಾಲದಲ್ಲಿ ಇಲ್ಲಿಂದ ಒಂದರ ೭ ರೂ. ೯ ಆ [illegible] ಈ ವಿದ್ಯಾರ್ಥಿಗಳು ಪರೀಕ್ಷೆಗೆ ಹೋಗಿ ಬಂದನಂತರ ಎರಡು ತಿಂಗಳವರಿಗೆ ಅವರ ಪರೀಕ್ಷೆಯ [illegible] ವಿದ್ಯಾರ್ಥಿಗಳು ಸ್ಕೂಲಿಗೆ ಬಾಜರಾಗುವದಿಲ್ಲ. ಅ[illegible] ಸಂಬಳ [illegible] ಈ ಕಾಲದಲ್ಲಿ ಈಗ ಅಪ್ಲಿಕೇಷನ್ [illegible] ಆಸೆಯನ್ನು ಉಪಯೋಗಿಸಿಕೊಳ್ಳುವಂತೆಯೂ ಕೇಳುತ್ತೇವೆ —ಮಂಜಿರಾಬಾದ್ ಕಾಫಿ ಪ್ಲಾಂಟರ್ ಮೆ॥ ಕಾಸಿಂಸಾಹೇಬರು [illegible] ೩ ತಿಂಗಳ ಹಿಂದೆ ೧೫೦ ರೂಪಾಯಿಗೆ ಒಂದು ಕುದುರೆಯನ್ನು ಕ್ರಯಕ್ಕೆ ತೆಗೆದುಕೊಂಡು ಇದ್ದಾರೆ ಅದು ತುಂಟಾದುದಾಗಿ [illegible] ತಿಂಗಳಿಂದ ಸವಾರಿಮಾಡಿ ಕಾಫಿ ಪ್ಲಾಂಟರು ಚನ್ನಾಗಿ [illegible]ಟಿಗೆ ತಂದಿದ್ದರು ಕಳೆದ ತಾ ೩೧ನೇ ಶುಕ್ರವಾರ ಸಾಯಂಕಾಲ ಅವರು ಆ ಕುದುರೆ ಸವಾರಿ ಮಾಡುತ್ತಾ ಇರುವಾಗ ಅದು [illegible] ಮುಂದಿನ ಎರಡು ಕಾಲುಗಳನ್ನು ಎತ್ತಿದ್ದರಿಂದ ಸವಾರಿ ಮಾಡುತ್ತಿದ್ದ ಕಾಫಿ ಪ್ಲಾಂಟರು ಜಾರಿ ಪುಟ ನೆಗೆದಂತೆ ಕುದುರೆಯಿಂದ ಕೆಳಗೆ ಬಿದ್ದು ಜ್ಞಾನ ತಪ್ಪಿದರು ಕುದುರೆ ಮುಂದಕ್ಕೆ ಹೋಯಿತು. ಅಷ್ಟರಲ್ಲಿ ಜನಗಳು ಸೇರಿ ಮೆ॥ ಕಾಸಿಂ ಸಾಹೇಬರಿಗೆ ಶೈತ್ಯೋಪಚಾರ ಮಾಡಿದರೂ ಪ್ರಜ್ಞೆ ಬರಲಿಲ್ಲ ಕೂಡಲೆ ಮಾರ್ಕೆಟಿನಿಂದ ಹಕೀಮರನ್ನು ಕರತಂದರು ಅವರು ತಕ್ಕ ಔಷಧಿಮಾಡಿ ಪ್ರಜ್ಞೆ ಬರುವಂತೆ ಮಾಡಿ ಎಬ್ಬಿಸಿದರು ಕಾಫಿ ಪ್ಲಾಂಟರು ಈಗ ಸ್ವಲ್ಪ ಕುಶಾಲಾಗಿರುತ್ತಾರೆ.

ದೊಡ್ಡಬಳ್ಳಾಪುರ.—ಒಬ್ಬ ಸನ್ಯಾಸಿಯು ಕೆಲವು ಜನರಿಗೆ ಊ[illegible] ತನವನ್ನು ಮಾಡಿಸಬೇಕೆಂದು ಕೆಲವು ದಿನಗಳಿಂದ ಇಲ್ಲಿನ ವರ್ತಕರನ್ನು ಪ್ರೇರೇಪಿಸುತ್ತಾ ಬಂದ ಕಾರಣ ಸೆಪ್ಟೆಂಬರ್ ೧ ನೆ ತಾ ವರ್ತಕರು ದೊಡ್ಡ ಊಟವನ್ನು ಮಾಡಿಸಿದರು ಬಡವರು ಮೊದಲಾಗಿ ೩ ಸಾವಿರ ಜನರು ತೃಪ್ತಿಯಾಗಿ ಭೋಜನಮಾಡಿದರು.—ಮೇಲುಕೋಟೆ ಅನಂತರಾಮಯ್ಯನವರು ಗ್ರಾಮೋಫೋನ್ ಎಂಬ ಸಂಗೀತಯಂತ್ರವನ್ನು ತಂದಿದಾರೆ ಬಹು ಚನ್ನಾಗಿ ಹಾಡುತ್ತದೆ ಈ ಕಡೆಯ ಜನರು ಇದುವರಿಗೂ ಇಂಥಾದ್ದನ್ನು ನೋಡಿರಲಾರರೆಂದು ಕಾಣುತ್ತದೆ.—ಇಲ್ಲಿ ಬಹುಕಾಲದಿಂದಲೂ ಜನರ ಪರಿಚಯಸ್ಥರಾಗಿದ್ದ ದಫೇದಾರ್ ಶಿವರಾಮೈಯ್ಯನವರನ್ನು ದಾಬಸಪೇಟೆಗೆ ವರ್ಗಮಾಡಿರುವದು ಬಹು ಜನರಿಗೆ ವ್ಯಸನವಾಗಿದೆ —ಈ ಊರಿನಲ್ಲಿ ದೇವಾಂಗದವರು ಹೆಚ್ಚಾಗಿದಾರೆ ಇವರು ಗೌರಿ ಗಣೇಶನ ಹಬ್ಬವನ್ನು ಬಹುಸಂಭ್ರಮದಿಂದ ಮಾಡುತ್ತಾರೆ. ಬಾಬಯ್ಯನ ಹಬ್ಬದಲ್ಲಿ ಅವರು ೧೦ ದಿನ ವೇಷಗಳನ್ನು ಹಾಕುವ ಪ್ರಕಾರ ಇವರು ಸಹ ಅಷ್ಟು ದಿನಗಳ ವರಿಗೆ ಎಲ್ಲಾ ತರದ ವೇಷಗಳನ್ನು ಹಾಕುತ್ತಾರೆ ಇನ್ಯಾವ ಊರಿನಲ್ಲೂ ಹೀಗೆ ವೇಷಗಳನ್ನು ಹಾಕಿದ್ದನ್ನು ನೋಡಲಿಲ್ಲ ಇದರಿಂದ ಜನರು ೧೫ ದಿನ ಕೆಲಸವಿಲ್ಲದೆ ವ್ಯರ್ಥ ಕಾಲಹರಣ ಮಾಡುವದರಿಂದ ಇವರಲ್ಲಿ ಬಡತನವು ಸ್ಥಿರವಾದವನ್ನು ಮಾಡಿಕೊಳ್ಳುವದಕ್ಕೆ ಆಸ್ಪದವಾದ ಹಾಗೆ ತೋರುತ್ತೆ —ಈ ಟೌನಿನಲ್ಲಿ ಮಾತ್ರ ಸುಂಕವು ಇರುವದರಿಂದಲೂ ಸಂತೆಗಳಲ್ಲಿ ಸುಂಕ ಇಲ್ಲದ್ದರಿಂದಲೂ ವ್ಯಾಪಾರವು ಸಂತೆಗಳಲ್ಲಿ ಹೆಚ್ಚಾಗಿ ನಡಿಯುವದು ಊರಿನಲ್ಲಿ ವ್ಯಾಪಾರವು ನಡಿಯದೆ ವರ್ತಕರು ಚಿಂತಿಸುತ್ತಾರೆ. ಹೀಗೇ ಇದ್ದರೆ ಊರು ಅಭಿವೃದ್ಧಿಗೆ ಬರುವದಕ್ಕೆ ಮಾರ್ಗವಿಲ್ಲದೆ ಇನ್ನೂ ಕ್ಷೀಣಗತಿಯನ್ನು ಹೊಂದುವದಕ್ಕೆ ಆಸ್ಪದವಾದ ಹಾಗೆ ಕಾಣುತ್ತದಲ್ಲಾ ಎಂಬದಾಗಿ ಮನಸ್ಸಿನಲ್ಲಿ ಭೀತಿಯನ್ನು ಪಟ್ಟವರಾಗಿ ತೋರುತ್ತಾರೆ. ಇದರಲ್ಲಿಯೂ ಸುಂಕದ ವಸೂಲಿಯು ಹಿಂಸೆಯಾಗಿದೆ ಎಂದು ಹೇಳುತ್ತಾರೆ ಊರಾಚೆ ಬಾರುಮಾರ್ಗವಾಗಿ ಹೋಗತಕ್ಕ ಗಾಡಿಗಳನ್ನೂ ಊರಿನ ಹೊರಗೆ ಸರಕು ಇಳಿಸತಕ್ಕ ಗಾಡಿಗಳನ್ನೂ ಸುಂಕದವರೇ ಸೇರಿಕೊಂಡು ಊರಿನ ಒಳಕ್ಕೆ ಗಾಡಿಗಳನ್ನು ಸೆಳಕೊಂಡು ಬಂದು ತೊಂದರೆ ಮಾಡುತ್ತಾರಂತೆ ಮತ್ತು ಊರಿನ ಒಳಗಿನಿಂದ ಬೇರೆ ಊರುಗಳಿಗೆ ಹೋಗತಕ್ಕ ಖಾಲಿ ಗಾಡಿ ಹಿಡಿದು, ಗಾಡಿ ಸಾಮಾನನ್ನು ಎಲ್ಲಿ ಹಾಕಿದಿರಿ? ಎಂದು ಗಾಡಿಯ ಎತ್ತುಗಳನ್ನು ಹೊಡತಂದು ದೊಡ್ಡಿಗೆ ಕೂಡುತ್ತಾರಂತೆ. ಆಮಲ್ದಾರರು ಮುಂತಾದ ಮೇಲಿನ ಅಧಿಕಾರಿಗಳು ಊರಿನಲ್ಲಿ ಇಲ್ಲದ ಸಮಯದಲ್ಲಿ ಹೀಗೆ ಮಾಡುವದರಿಂದ ಯಾರಿಗೆ ನಮ್ಮ ತೊಂದರೆಯನ್ನು ಹೇಳಿಕೊಳ್ಳೋಣ ಎಂದು ದುಃಖಿಸುವವರಾಗಿದಾರೆ ಮತ್ತು ಪರಸ್ಥಳಗಳಿಂದ ಬರತಕ್ಕ ಗಾಡಿಗಳಿಗೆ ಹೀಗೆ ಮಾಡಿದರೆ ಅನ್ನವಿಲ್ಲದೆ ಎಲ್ಲಿ ಸಾಯೋಣ ಎಂದು ವ್ಯಸನಪಡುವರು. ಇಲ್ಲಿನ ಸುಂಕದಿಂದ ಮ್ಯುನಿಸಿಪಾಲಿಟಿಗೆ ವಿಶೇಷ ಲಾಭವಿಲ್ಲದ ಹಾಗೆ ತೋರುತ್ತೆಂತಲೂ ತೊಂದರೆ ಮಾತ್ರ ಉಂಟೆಂತಲೂ ಭಾವಿಸುತ್ತಾರೆ. ಮೇಲ್ಪಟ್ಟವರು ಇದನ್ನು ಚಿತ್ತಕ್ಕೆ ತಂದುಕೊಂಡು ಹಿಂಸೆಯನ್ನು ತಪ್ಪಿಸಿ ಕೀರ್ತಿಪಡೆಯುವರೆಂದು ವರ್ತಕರು ಮೊರೆಯಿಡುತ್ತಾರೆ.

ತುಮಕೂರು.—ಕಳೆದ ವಾರವೆಲ್ಲಾ ಸುವೃಷ್ಟಿಯಾಗಿ ಕೆರೆಕುಂಟೆಗಳಿಗೆ ಅರ್ಧ, ಮುಕ್ಕಾಲು ಭಾಗ ನೀರು ಬಂದಿರುವದು. ಧಾರಣೆಗಳು ಈಗೀಗ ಅಲ್ಪಸ್ವಲ್ಪ ಇಳಿಮುಖವಾಗುತ್ತಿವೆ ಕಳೆದ ತಾ ೨೨ ನೇ ಬುಧವಾರ ರಾತ್ರಿ ಯಾರೋ ಮಂಡಿಪೇಟೆಯಲ್ಲಿ ಲಿಂಗಪ್ಪನವರ ಮಳಿಗೆ ಹಿಂಭಾಗದ ಕಿಟಕಿಯನ್ನು ಒಡೆದು ಒಳಕ್ಕೆ ಪ್ರವೇಶಿಸಿ ಕಬ್ಬಿಣದ ಪೆಟ್ಟಿಗೆಯನ್ನು ಕೆಡವಿ ಒಡೆಯಲಿಕ್ಕೆ ಬಹು ಸಾಹಸ ಮಾಡಿ ಕೊನೆಗೆ ಸಾಧ್ಯವಲ್ಲದ್ದರಿಂದ ಹಾಗೆಯೇ ಬಿಟ್ಟು ಹೋಗಿದ್ದರು ಪೋಲೀಸ್ ಸಂಬಂಧಿ ಇಲ್ಲಿಗೆ ಗಾಲಿಸೇ ಸಾಲದು —ಕಳೆದ ತಿಂಗಳು ೮—೧೦ ನೇ ತಾರೀಖಿನಲ್ಲಿ ಇಲ್ಲಿನ ಮಿಷನ್ ಅಧ್ಯಕ್ಷರಾದ ರೆವ್ ಹಡ್ಸನ್. ಇ. ಟಾಮ್ಲಿನ್ಸನ್ ದೊರೆಯವರು ಎರಡು ಜನೋಪಕಾರಗಳನ್ನು ನೆರವೇರಿಸಿರುತ್ತಾರೆಂದು ತಿಳಿಸಲು ತುಂಬಾ ಸಂತೋಷಿಸುತ್ತೇವೆ. ಈ ಟವನಿಗೆ ಸೇರಿದ ಶೇಕದಾರ್ ಬಸವಣ್ಣನವರ ಪಾಳ್ಯದಲ್ಲಿರುವ ಬಾಲಕರಿಗಾಗಿರುವ ಸ್ಕೂಲಿನ ಹೊಸ ಕಟ್ಟಡವನ್ನು ತಯಾರು ಮಾಡಿಸಿ ೮ ನೇ ತಾ. ಪ್ರತಿಷ್ಠಿಸಿದರು. ಆ ದಿನ ಅನೇಕ ಜನರು ಸಭೆ ಸೇರಿ ರೆವ್. ಟಾಮ್ಲಿನ್ಸನ್ ದೊರೆಯವರೇ ಅಗ್ರಾಸನವನ್ನು ವಹಿಸಿ ವಿದ್ಯಾಭಿವೃದ್ಧಿಯ ವಿಷಯವಾಗಿ ಉಪನ್ಯಾಸಗಳು ಬಾಲಕರ ವಿನೋದಕರವಾದ ಸಂಭಾಷಣೆಗಳು ನಡೆದ ನಂತರ ಸೇರಿದ್ದ ಜನರಿಗೆ ಪುಷ್ಪ ತಾಂಬೂಲಾದಿಗಳು ವಿನಿಯೋಗವಾದ ನಂತರ ಸಭೆಯು ಉಪಸಂಹರಿಸಲ್ಪಟ್ಟಿತು. ತಾ. ೧೦ ನೇ ಶುಕ್ರವಾರ "ಕ್ರಿಸ್ತುಯೌವನಸ್ಥರ ಯೂನಿಯನ್ ಕ್ಲಬ್" ಎಂಬ ಸಂಘವನ್ನು ಪ್ರಾರಂಭಿಸಿದರು ಇದರಲ್ಲಿ ಜನರಿಗೆ ಅನುಕೂಲವಾಗುವಂಥಾ ಇಂಗ್ಲೀಷ್, ಕನ್ನಡ ವರ್ತಮಾನ ಪತ್ರಿಕೆಗಳು ಮತ್ತು ಉಪಯುಕ್ತವಾದ ಪುಸ್ತಕಗಳು ಇಡಲ್ಪಟ್ಟಿರುವದಲ್ಲದೆ ವಾಚಕರ ಉತ್ಸಾಹಕ್ಕಾಗಿ ಅನೇಕವಾದ ಆಟಪಾಟಗಳನ್ನಾಡಲು ತಕ್ಕ ಸಲಕರಣೆಗಳು ಒದಗಿಸಿವೆ ಇಂಥಾ ಸಂಘವನ್ನು ಆ ದಿನ ದೊರೆಯವರು ಎಲ್ಲಾ ಕ್ರಿಸ್ತಯೌವನಸ್ಥರನ್ನು ಸಭೆ ಸೇರಿಸಿ ಅಗ್ರಾಸನಾಧಿಕಾರಿಗಳಾಗಿ ಅದರ ಉದ್ದೇಶಗಳನ್ನು ವಿವರಿಸಿ ಪುರೋಭಿವೃದ್ಧಿಗಾಗಿ ಪಾದ್ರಿಗಳಾದ ರೆವ್ ಸ್ಯಾಮ್ಯುವೆಲ್ ಲಾಮೆಕ್ ಅಯ್ಯನವರನ್ನು ಉಪದೇಶಿಗಳವರನ್ನು ಕಾರ್ಯದರ್ಶಿಗಳಾಗಿ ಗೊತ್ತು ಮಾಡಿದರು ಅನಂತರ ಮೆಂಬರುಗಳಿಂದ ಪಂಚಭಾಷೆಗಳಲ್ಲಿ ಸರಸಸಂಭಾಷಣಗಳು ನಡೆದು ಉಪಹಾರದೊಂದಿಗೆ ಸಭೆಯು ಬರಖಾಸ್ತಾಯಿತು ಈ ಸಂಘಕ್ಕೆ ಹಿಂದೂ ಯೌವನಸ್ಥರನ್ನೂ ಮೆಂಬರುಗಳನ್ನಾಗಿ ಮಾಡುವದಕ್ಕೆ ಕಾರ್ಯದರ್ಶಿಗಳು ಯೋಚಿಸುತ್ತಿದಾರೆ.—ಈ ಊರಿನ ಮಂಡಿ ಪೇಟೆಯ ಸಮೀಪದಲ್ಲಿರುವ ಬಾವಿಯ ಕಟ್ಟೆಯು ತುಂಬಿ ತುಳುಕುತ್ತಿದೆ ಇದರಲ್ಲಿ ಸ್ನಾನ ಮಾಡಲಿಕ್ಕೂ ಬಟ್ಟೆ ಒಗೆಯಲಿಕ್ಕೂ ಅನುಕೂಲವಾಗಿರುವ ಮೆಟ್ಟಲುಗಳಿಲ್ಲ ಜನರಿಗೆ ಅಪಾಯಕ್ಕೆ ಕಾರಣವಾಗಿದೆ ಕಳೆದ ವಾರ ಬಟ್ಟೆ ಒಗೆಯುವಾಗ ಕಾಲು ಜಾರಿ ನೀರಿನೊಳಗೆ ಬಿದ್ದವನನ್ನು ಸಮೀಪದಲ್ಲಿದ್ದವರು ಸಾಹಸ ಮಾಡಿ ದಡಕ್ಕೆ ಎಳೆದು ಹಾಕಿದರು ಆಗಾಗ್ಗೆ ಇಂಥಾ ಅಪಾಯಗಳು ಸಂಭವಿಸುತ್ತವೆ. ಮ್ಯುನಿಸಿಪಾಲಿಟಿಯವರು ಮೆಟ್ಟಲುಗಳನ್ನು ಮಾಡಿಸಿದರೆ ಜನರಿಗೆ ತುಂಬಾ ಅನುಕೂಲವಾಗುತ್ತೆ —ನಮ್ಮ ಸಂಸ್ಥಾನದ ಜೈನಮತಸ್ಥರ ಮುಖಂಡರು ನಾಳೆ ಬರುವ ಕಾರ್ತೀಕಮಾಸದಲ್ಲಿ ಈ ತುಮಕೂರಿಗೆ ಏಳು ಮೈಲಿ ದೂರದಲ್ಲಿರುವ ಮಂಡಲಗಿರಿ ಎಂಬ ಜೈನ ಬಸ್ತಿಯಲ್ಲಿ ತಮ್ಮ ಮತದವರೆಲ್ಲರನ್ನೂ ಸಭೆ ಸೇರಿಸಿ ವಿದ್ಯಾಭಿವೃದ್ಧಿ ವಿಷಯವಾಗಿ ತಕ್ಕ ಏರ್ಪಾಡು ಮಾಡಬೇಕೆಂದು ತರದೂದು ನಡಿಸುತ್ತಿರುವದಾಗಿ ವರ್ತಮಾನ ಕೇಳುತ್ತೇವೆ

ವಿದೇಶ ವರ್ತಮಾನಗಳು.

ಕ್ಯೂಬಾ ದ್ವೀಪದಲ್ಲಿ ಸ್ವದೇಶಿಗಳು ದಂಗೆಯೆದ್ದು ಬಹಳ ಗಲಭೆ ಮಾಡಿದ ವೃತ್ತಾಂತವನ್ನು ಕಳೆದ ವಾರ ತಿಳಿಸಿದೆವಷ್ಟೆ. ಈಚೆಗೆ ಅಮೇರಿಕದ ಅಧಿಕಾರಿಗಳು ಒಂದು ಇಸ್ತಿಹಾರು ಹಾಕಿಸಿ, ದಂಗೇಕೋರರಲ್ಲಿ ಯಾರ್‍ಯಾರು ಇಷ್ಟಪಟ್ಟು ಶರಣಾಗತರಾಗುವರೋ ಅಂಥವರನ್ನು ಶಿಕ್ಷಿಸದೆ ಕ್ಷಮಿಸುವದಾಗಿ ತಿಳಿಸಿದರು ಇದನ್ನು ನೋಡಿ ದಂಗೇಕೋರರ ಮುಖಂಡರೆಲ್ಲಾ ಆ ರೀತಿ ಕ್ಷಮಾಪಣೆಯನ್ನು ಬೇಡುವದಾಗಿ ಒಪ್ಪಿಕೊಂಡಿದಾರೆ ಅನೇಕರು ಆಗಲೇ ಶರಣಾಗತರಾದರು ಎಂದು ತಂತೀ ವರ್ತಮಾನ ಬಂದಿದೆ.

****

ಜರ್ಮನಿಗೆ ಸೇರಿದ ಡೆರ್ಮಷ್ಟಾಡ್ ಪಟ್ಟಣದಲ್ಲಿ ಬ್ಲೋಯಮಾರ್ ಎಂಬೊಬ್ಬ ಹೆಂಗಸು ಒಬ್ಬ ಮಿಲ್ಟೇರಿ ಉದ್ಯೋಗಸ್ಥನನ್ನು ಕೊಲ್ಲುವದಕ್ಕೆ ಸಹಾಯ ಮಾಡಿದಕಾರಣದಿಂದ ಅವಳನ್ನು ಗಲ್ಲಿಗೆ ಏರಿಸಬೇಕೆಂದು ತೀರ್ಮಾನ ಮಾಡಿದರು. ಆದರೆ ಅವಳು ಗರ್ಭಿಣಿಯಾಗಿದ್ದಳು. ಸರ್ಕಾರದವರು ಅದನ್ನು ತಿಳಿದು ಅವಳು ಹೆತ್ತ ಮೇಲೆ ಮಗುವನ್ನು ಎಂಟು ವಾರಗಳ ತನಕ ಸಾಕಬೇಕೆಂತಲೂ ಅನಂತರ ಅವಳನ್ನು ಗಲ್ಲಿಗೆ ಹಾಕಿ ಆ ಮಗುವನ್ನು ಅನಾಥಾಲಯದಲ್ಲಿಟ್ಟು ಬೆಳಸಬೇಕೆಂತಲೂ ಹುಕುಂ ಕೊಟ್ಟಿದಾರೆ.

ಚೀನಾ ರಾಜ್ಯದಲ್ಲಿ ರಾಜ್ಯಭಾರ ವಿಷಯಗಳನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಿ ಕ್ರಮಪಡಿಸುವಂತೆ ಚಕ್ರವರ್ತಿನಿಯವರು ಒಂದು ಸಣ್ಣ ಪಂಚಾಯತಿ ಸಂಘವನ್ನು ಏರ್ಪಾಡು ಮಾಡಿರುತ್ತಾರೆ.

****

ಬಲ್ಗೇರಿಯಾ ರಾಜ್ಯದ ಜೋಗ್ರಾಫಾಸ್ ಎಂಬ ಊರಿನಲ್ಲಿ ಸನ್ಯಾಸಿಗಳ ಮಠದಲ್ಲಿ ಮದ್ದು ಗುಂಡನ್ನಿಟ್ಟು ಗಟ್ಟಿಯಾಗಿ ಖೋಟಾ ಮಾಡುತ್ತಿದ್ದರು. ಪೋಲೀಸಿನವರು ಅದನ್ನು ಪತ್ತೆ ಮಾಡಿ, ಏಳು ಮಂದಿ ಸನ್ಯಾಸಿಗಳನ್ನು ಹಿಡಿದಿರುತ್ತಾರೆ.

****

ಫ್ರಾನ್ಸ್ ಪ್ರಭುತ್ವದ ಮಂತ್ರಿಗಳ ಸಭೆಯಲ್ಲಿ ಅಪರಾಧಿಗಳಿಗೆ ಮರಣದಂಡನೆ ವಿಧಿಸುವ ವಿಚಾರವು ಚರ್ಚೆಯಾಗಿ ಇನ್ನು ಮುಂದೆ ಆ ಪ್ರಭುತ್ವದಲ್ಲಿ ಗಲ್ಲಿಗೆ ಹಾಕುವ ಶಿಕ್ಷೆಯನ್ನು ನಿಲ್ಲಿಸಿಬಿಡುವುದೇ ಒಳ್ಳೆಯದೆಂದು ಆ ಸಭೆಯವರು ಒಪ್ಪಿಕೊಂಡಿದಾರೆ

****

ದಕ್ಷಿಣ ಆಫ್ರಿಕದ ನಟಾಲ್ ಗವರ್ನ್‌ಮೆಂಟಿನಲ್ಲಿ ಆದಾಯದ ಮೇಲಣ ತೆರಿಗೆಯನ್ನು ಹಾಕಿ ಪ್ರಜೆಗಳಿಂದ ವಸೂಲ್ಮಾಡಬೇಕೆಂದು ಮಂತ್ರಾಲೋಚನಾ ಸಂಘದವರು ತೀರ್ಮಾನ ಮಾಡಿದರು ಆದರೆ ಇಂಥಾ ಕಾನೂನನ್ನು ಜಾರಿಗೆ ತರಕೂಡದೆಂದು ಪ್ರಜಾಪ್ರತಿನಿಧಿ ಸಮೂಹದವರು ವಜಾ ಮಾಡಿರುತ್ತಾರೆ

****

ವಿಲಾಯಿತಿ ರಾಜ್ಯದ ಪ್ರಧಾನ ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬಾನರ್ಮನ್ನರವರ ಪ್ರಿಯ ಪತ್ನೀರವರು ಕಾಲವಾದರೆಂದು ಈಗತಾನೇ ತಂತೀ ವರ್ತಮಾನ ಬಂದಿದೆ ಚಕ್ರವರ್ತಿಯವರೂ ಬಹು ಮಂದಿ ದೊಡ್ಡ ಮನುಷ್ಯರೂ ಮಂತ್ರಿಯವರಿಗೆ ಸಂತಾಪಸೂಚಕವಾದ ಕಾಗದಗಳನ್ನು ಬರೆದು ತಮ್ಮ ವ್ಯಸನವನ್ನು ತಿಳಿಸಿರುತ್ತಾರ

****

ಉತ್ತರ ಧ್ರುವವನ್ನು ತಲಪಿ ಅಲ್ಲಿನ ವಿದ್ಯಮಾನಗಳನ್ನು ಹಿಡಿದುಕೊಂಡು ಬರಬೇಕೆಂದು ಡಾಕ್ಟರ್ ವೆಲ್ಮನ್ ಎಂಬ ಶಾಸ್ತ್ರಜ್ಞರು ನಿಶ್ಚಯಿಸಿಕೊಂಡು ಅದಕ್ಕಾಗಿ ಆಕಾಶಬುಟ್ಟಿಗಳನ್ನೂ ಮೋಟಾರ್ ಗಾಡಿಗಳನ್ನೂ ಸಿದ್ಧ ಪಡಿಸಿಕೊಳ್ಳುತ್ತಿದ್ದಾರೆಂದು ತಿಳಿಸಿದ್ದೇವಷ್ಟೆ. ಈಗ ಅವರು ಆ ಉದ್ದೇಶವನ್ನು ತ್ಯಜಿಸಿ ಬಿಟ್ಟರೆಂದು ತಂತೀ ವರ್ತಮಾನ ಬಂದಿದೆ. ಇದಕ್ಕೆ ಕಾರಣವೇನೋ ತಿಳಿದುಬಂದಿಲ್ಲ.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಡರ್ಬನ್ ಪಟ್ಟಣದಲ್ಲಿ ಒಬ್ಬ ಜೋಯಿಸನು ದೇವಸ್ಥಾನದ ಪೀಠವನ್ನಲಂಕರಿಸಿ ಸಭಿಕರನ್ನು ಕುರಿತು—ದೇವರೇ, ಸ್ವದೇಶಿಗಳು ಬಿಳೀ ಜನರನ್ನು ಈ ದೇಶದಿಂದ ಓಡಿಸುವಂತೆ ಅವರಿಗೆ ಶಕ್ತಿಸಾಮರ್ಥ್ಯಗಳನ್ನು ದಯಪಾಲಿಸು ಎಂದು ಪ್ರಾರ್ಥನೆ ಮಾಡಿದನು. ಇಂಗ್ಲಿಷ್ ಸರ್ಕಾರದವರು ಇಂಥಾ ರಾಜದ್ರೋಹಿಯನ್ನು ಹಿಡಿದು ದರ್ಯಾಫ್ತು ಮಾಡಿ, ಅವನಿಗೆ ೨೫ ಛಡಿ ಏಟು ಹೊಡಿಸಿದ್ದಲ್ಲದೆ ಆರು ತಿಂಗಳ ಸಜಾ ಹಾಕಿದರು

****

ಅಮೇರಿಕಕ್ಕೆ ಸೇರಿದ ಟಿಗರ್ ಎಂಬೂರಿನಲ್ಲಿ ಜಾರ್ಜ್ ಆಪ್ಪರ್ ಎಂಬ ವಿಚಿತ್ರ ಮನುಷ್ಯನು ೬೦ ವರುಷ ಬದುಕಿದ್ದು ಈಗ ತಾನೇ ಕಾಲವಾದನೆಂದು ತಿಳಿದು ಬಂದಿದೆ. ಅವನಿಗೆ ಎರಡು ಹೃದಯಗಳೂ ಮೂರು ಕಾಲುಗಳೂ ಇದ್ದವು ಅವನು ಸಾಯುವುದಕ್ಕೆ ಇಪ್ಪತ್ತೈದು ದಿನಗಳಿದ್ದಾಗ ಒಂದು ಹೃದಯವು ಸತ್ತು ಹೋಗಿತ್ತು ಅವನು ಕ್ಷಯರೋಗ ಹಿಡಿದು ಕೆಲವು ದಿನ ನರಳಿ ಪ್ರಾಣ ಬಿಟ್ಟನು ಎಂದು ಅಲ್ಲಿನ ಪತ್ರಿಕೆಯೊಂದು ಹೇಳುವುದು

****

ವಿಲಾಯಿತಿಗೆ ಸೇರಿದ ಲಾಂಕೆಷೀರೆಂಬ ಡಿಸ್ಟ್ರಿಕ್ಟಿನಲ್ಲಿ ಒಂದು ಪ್ರಜೆಗಳ ಕೂಟ ನಡೆದಾಗ ಡಾಕ್ಟರ್ ಸ್ಟೀಫರ್ ಎಂಬಾತನು ಸಭಾಸದರನ್ನು ಕುರಿತು—ಮನೆಗಳಲ್ಲಿ ಮಕ್ಕಳಿಗೆ ಹೊಟ್ಟೆ ಕಳೆಯುವುದಕ್ಕೂ ಭೇದಿಯಾಗುವುದಕ್ಕೂ ನೊಣಗಳೇ ಕಾರಣ. ಮಕ್ಕಳಿಗೆ ಹಾಕುವ ಹಾಲನ್ನು ತೆರೆದಿಡದೆ ಯಾವಾಗಲೂ ಭದ್ರವಾಗಿ ಮುಚ್ಚಿಟ್ಟಿರಬೇಕು ಹೀಗೆ ಮಾಡಿದ ಪಕ್ಷದಲ್ಲಿ ಅನೇಕ ಮಕ್ಕಳನ್ನು ಅಕಾಲಮರಣಕ್ಕೆ ತುತ್ತಾಗದಂತೆ ಸಾಕಿ ಬೆಳೆಸಬಹುದು ಎಂದು ತಿಳಿಸಿದಾರೆ

****

ಲಂಡನ್ ಪಟ್ಟಣದಲ್ಲಿ ಲೇಟ್ ಬರ್ನಾರ್ಡೋ ಎಂಬ ಪುಣ್ಯಪುರುಷನು ಬಡಬಗ್ಗರ ಮಕ್ಕಳನ್ನೂ ಮತ್ತು ಅನಾಥರನ್ನೂ ಬೇರೆ ಬೇರೆ ಮಠಗಳಲ್ಲಿಟ್ಟು ಕಾಪಾಡಿ ನಾನಾ ಕಸಬುಗಳನ್ನು ಕಲಿಸುವ ಏರ್ಪಾಡು ಮಾಡಿರುತ್ತಾನಷ್ಟೆ. ಈ ಪುಣ್ಯ ಮಠಗಳಲ್ಲಿ ತರಪೇತಾದ ಹುಡುಗರನ್ನೂ ಹುಡುಗಿಯರನ್ನೂ ಸ್ವತಂತ್ರವಾಗಿ ಜೀವನ ಮಾಡುವಂತೆ ಆಗಿಂದಾಗ್ಗೆ ಪರದೇಶಗಳಿಗೆ ಖರ್ಚು ಕೊಟ್ಟು ಕಳುಹಿಸುತ್ತಾರೆ. ಈ ವರುಷದ ಪ್ರಾರಂಭದಿಂದ ಮೂರು ಸಲ ಕ್ವಿಬೆಕ್ ಎಂಬ ಇಂಗ್ಲಿಷ್ ಸ್ವಾಸ್ಥ್ಯಕ್ಕೆ ಗಂಡು ಹೆಣ್ಣು ಹುಡುಗರನ್ನು ಕಳುಹಿಸಿದ್ದಲ್ಲದೆ ಕಳೆದ ವಾರ ನಾಲ್ಕನೇ ಸಲ ೨೫೩ ಹುಡುಗರನ್ನೂ ೧೧೭ ಹುಡುಗಿಯರನ್ನೂ ಜಹಜುಗಳಲ್ಲಿ ರವಾನೆ ಮಾಡಿದರು. ಇವರೆಲ್ಲಾ ಆ ಸ್ವಾಸ್ಥ್ಯದಲ್ಲಿ ಬೇರೆ ಬೇರೆ ಕಸಬುಗಳನ್ನು ಅವಲಂಬಿಸಿ ಸ್ವತಂತ್ರ ಜೀವನ ಮಾಡುತ್ತಾ ಸತ್ಪ್ರಜೆಗಳಾಗುವರು.

ಪ್ರಕಟನೆಗಳು.

REDUCTION SALE!!! 115-3

PRICES REDUCED BY HALF.

APPLY SHARP.

COPY BOOKS.

Jackson's Upright Penmanship. Nos. 1 to 4, Price @ 1 Anna each, now reduced to *six* pies each.

THE MANAGER,

C. L. S. Book Depot,

Mysore.

ಬೇಕಾಗಿದೆ.

1124

ಹಿಂದುಸ್ತಾನಿ, ಇಂಗ್ಲಿಷ್, ಕನ್ನಡ, ಈ ಅಕ್ಷರಗಳನ್ನು ಶಿಲಾಯಂತ್ರದಲ್ಲಿ ಬರೆದು ಅಚ್ಚು ಹಾಕುವುದು, ಭೂಪಟ (ಮ್ಯಾಪ್) ಬರೆಯುವುದು, ಲಿಥೋಗ್ರಾಫ್ ಪ್ರೆಸ್ಸಿನ ಎಲ್ಲಾ ಕೆಲಸಗಳನ್ನೂ ಮಾಡುವುದು—ಈ ವಿಷಯಗಳನ್ನು ಚನ್ನಾಗಿ ತಿಳಿದಿರುವ ಒಬ್ಬ ಸಂಬಳಗಾರನು ಬೇಕಾಗಿದೆ. ಯೋಗ್ಯತೆ ಪಡೆದಿರುವವರು ಮೈಸೂರು ಮಿರ್ಷ ಪ್ರೆಸ್ ಮ್ಯಾನೇಜರಿಗೆ ಕೂಡಲೆ ಬರೆದುಕೊಳ್ಳಲಿ.

ಟಪಾಲ ಖರ್ಚ ಫ್ರುಕಟ! ಟಪಾಲ ಖರ್ಚ ಫ್ರುಕಟ!

ಇಂಡಿಯನ್ ಬ್ಲೂ ಬ್ಲಾಕ್ ಆಂಡ್ ರೆಡ್ ಇಂಕ್.

ನೀಲಿ, ಕಪ್ಪು ಮತ್ತು ಕೆಂಪು ಮಸಿ.

91 12



ವಿಲಾಯಿತೀ ಮಸೀಗೆ ಟಕ್ಕರಕೊಡುವಂಥ ಉತ್ತಮ ಬಣ್ಣವುಳ್ಳದ್ದೂ, ಅಗ್ಗವಾದದ್ದೂ ಇದೀ ಹಿಂದುಸ್ಥಾನದಲ್ಲಿ ನಮ್ಮದೇ ಇರುತ್ತದೆ. ಒಮ್ಮೆ ಅನುಭವ ತಕ್ಕೊಳ್ಳಿರಿ ೧೦೦ ಪುಡಿಕೆಗಳಿಗೆ ೧ ರೂಪಾಯಿ. ಟಪಾಲಖರ್ಚ ಫ್ರುಕಟ. ವ್ಯಾಪಾರಸ್ಥರಿಗೆ ಕಮಿಶನ್

ವಿಳಾಸ:—ವಾಯ್. ಜಿ. ದಿಕ್ಷೀತ, ಸ್ಟೇಶನರ, ಪುಣೇ ಸಿಟಿ

ನೋಟೀಸು.

116 1

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.— ಗುಬ್ಬಿ ತಾಲ್ಲೂಕು ಬೆಟ್ಟನಹಳ್ಳಿ ಸಂಮತು ಅಜ್ಜನಹಳ್ಳಿ ಗ್ರಾಮವಾಸಿ ಹಳ್ಳಿಕಾರ ಜಾತಿ ಮೂಲಪುರುಷ ನಾಗಪ್ಪಗೌಡನೆಂಬವನಿಗೆ ೧ ನೆ ನಾಗೇಗೌಡ, ೨ ನೆ ಪುಟ್ಟಗೌಡ, ೩ ನೆ ಪಟ್ಟಗೌಡ ಇವರು ಮೂರು ಜನ ಮಕ್ಕಳು. ಈ ಪೈಕಿ ೧ ನೆ ನಾಗೇಗೌಡನೆಂಬವನಿಗೆ ಮದುವೆಯಾದ ಹೆಂಡತಿ ಸಿದ್ದಮ್ಮನ ಹೊಟ್ಟೆಯಲ್ಲಿ ಹುಟ್ಟಿದ ೧೬ ವರ್ಷದ ಪಟ್ಟಪ್ಪ, ೩೦ ವರ್ಷದ ಪುಟ್ಟಯ್ಯ ಎಂಬ ಇಬ್ಬರು ಮಕ್ಕಳು. ಕೂಡಿಕೆ ಹೆಂಡತಿಯಾದ ಮತ್ತೊಬ್ಬ ತಿಮ್ಮಮ್ಮನೆಂಬವಳ ಹೊಟ್ಟೆಯಲ್ಲಿ ಹುಟ್ಟಿದ ದೊಡ್ಡಪುಟ್ಟಯ್ಯ, ನರಸಮ್ಮ ಎಂಬ ಬೇರೆ ಇಬ್ಬರು ಮಕ್ಕಳು ಇವರೆಲ್ಲರೂ ಒಂದೇ ಕುಟುಂಬದಲ್ಲಿ ವಾಸವಾಗಿರುತ್ತಾರೆ ಮೇಲ್ಕಂಡ ಒಂದನೆ ನಾಗೇಗೌಡನೆಂಬವನಿಗೆ ಸಂಪೂರ್ಣ ವೃದ್ಧಾಪ್ಯ ದೆಸೆಯಿಂದ ಬುದ್ಧಿಸ್ವಾಧೀನವಿಲ್ಲದಿರುವವರಿಂದ ಕೂಡಿಕೆ ಹೆಂಡತಿಯಾದ ತಿಮ್ಮಮ್ಮ, ಈಕೆಯ ಮಕ್ಕಳು, ಮತ್ತು ಇನ್ನು ಇತರರೂ ಸೇರಿ ಪ್ರೋತ್ಸಾಹಪಡಿಸಿ ಆತನ ಹೆಸರಿನಲ್ಲಿರತಕ್ಕ ಗುಬ್ಬಿ ತಾಲ್ಲೂಕು ಬೆಟ್ಟನಹಳ್ಳಿ ಸಂಮತು ಬೆಟ್ಟನಹಳ್ಳಿ ಮತ್ತು ಅಜ್ಜನಹಳ್ಳಿ ಈ ಎರಡು ಗ್ರಾಮಗಳಲ್ಲಿರತಕ್ಕ ತರಿ, ಖುಷ್ಕಿ, ಬಾಗಾಯ್ತು, ಮೊಹತರ್ಫಾ ಮನೆ ಮತ್ತು ಹಾಳು ನಿವೇಶನಗಳು ಮತ್ತೂ ಇತರ ಚರಸ್ವತ್ತುಗಳನ್ನು ದುರ್ಮಾರ್ಗತನದಿಂದ ಪಡೆಯಲು ಉದ್ಯುಕ್ತರಾಗಿರುತ್ತಾರೆಂದು ತಿಳಿಯಬರುವದರಿಂದ ಆತನಿಗೆ ಮದುವೆಯಾದವಳ ಹೊಟ್ಟೆಯಲ್ಲಿ ಹುಟ್ಟಿದ ಮೇಲ್ಕಂಡ ಪಟ್ಟಪ್ಪ, ಪುಟ್ಟಯ್ಯ, ಇವರಬ್ಬರ ಅನುಮತಿ ಇಲ್ಲದೆ ಆತನ ಹೆಸರಿನಲ್ಲಿರತಕ್ಕ ಯಾವ ಸ್ವತ್ತನ್ನು ಯಾವ ವಿಧವಾಗಿ ಯಾರಾದರೂ ಪಡೆದುಕೊಂಡಾಗ್ಯೂ ಅಂಥಾ ಪರಭಾರೆಯು ಊರ್ಜಿತವಾಗಿ ನಿಲ್ಲತಕ್ಕದ್ದಲ್ಲವೆಂತಲೂ ಮತ್ತು ಈ ಸಮಸ್ತ ಸ್ವತ್ತನ್ನು ಮೇಲ್ಕಂಡ ನಾಗೇಗೌಡನೆಂಬವನಿಗೆ ಪರಭಾರೆ ಮಾಡಿಸಲು ಹಕ್ಕಿಲ್ಲವೆಂತಲೂ ಈ ಮೂಲಕ ತಿಳಿಯಪಡಿಸಿರುತ್ತೆ.—ಮೇಲ್ಕಂಡ ನಾಗೇಗೌಡನ ಹಿರೀ ಮಗ ಪಟ್ಟಪ್ಪನ ಗುರ್ತಿನ ರುಜು

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ ಕಂಪನಿ ಲಿಮಿಟೆಡ್.

73—18

ನಿಯಮಾಕ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪ್ರೊವೈಸಲ್ಪಟ್ಟಿದೆ

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸ್ನಂಥ ಈ ಲೈನಿನ ವರಮಾನ ಶೇಕಡ ೪ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ಶೇಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟನಾಗಿ ಬಿಕರಿಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವ್ಯಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದಾರೆ

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಡ್ಮಿಷನ್ ಫಿ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸೈನ್) ಬಿ. ಪಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

17—8—1906 ರಿಂದ 24—8—1906 ರ ವ[illegible]

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕೋ[illegible]
ಬೆಂಗಳೂರು ಪಟ್ಟಣ	1	3	0
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	7	7	39
ಮೈಸೂರು ,,	0	0	13
ಕೋಲಾರ್ ,,	0	0	1
ಕೋಲಾರ್ ಚಿನ್ನದ ಗಣಿಗಳು	0	0	0
ತುಂಕೂರು ಡಿಸ್ಟ್ರಿಕ್ಟು	0	0	3
ಹಾಸನ ,,	10	10	0
ಚಿತ್ರದುರ್ಗ ,,	0	0	0
ಕಡೂರ್ ,,	45	41	8
ಶಿವಮೊಗ್ಗ ,,	0	0	62
ಜುಮ್ಲಾ.	63	61	131

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಭಾದ್ರಪದ ಬಹುಳ ಚೌತಿ ಗುರುವಾರದಿಂದ ಭಾದ್ರಪದ[illegible] ನೌಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಸೆಪ್ಟೆಂಬರ್.

ತಾ.	ವಾ.		ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
6	ಗುರು	§	ಚೌತಿ	59-12	ರೇ	17 27
7	ಶುಕ್ರ	;	ಪಂಚಮಿ	60-0	ಅ	22-4
8	ಶನಿವಾ	†	ಪಂಚಮಿ	2-30	ಭ	27-26
9	ರವಿವಾ	¶	ಷಷ್ಠಿ	7-10	ಕೃ	43-48
10	ಚಂದ್ರ	‡	ಸಪ್ತಮಿ	12-2	ರೋ	40-29
11	ಕುಜ	*	ಅಷ್ಟಮಿ	17-27	ಮೃ	46 30
12	ಬುಧ	,,	ನೌಮಿ	22-2	ಆರ್ದ್ರ	52-31

§ ಸಂಕಷ್ಟಚತುರ್ಥಿ ಮಹಾವ್ಯತೀಪಾತ ಮಹಾಭರಣಿ ¶ ಷಷ್ಠೀ ತಿಥಿ. ‡ ಮಧ್ಯಾಷ್ಟಮಿ, ಮನ್ವಾದಿ ಸಂಪ್ರದಾಯಕ್ಕೂ [illegible] ನೆಗೂ ಗೋಕುಲಾಷ್ಟಮಿ * ನವಮೀ ತಿಥಿ, ತೊಳಸ್ಸರ್ [illegible] ಯಕ್ಕೆ ಶ್ರೀಕೃಷ್ಣಜಯಂತಿ ,, ಶೂನ್ಯತಿಥಿ, ಮಹಾ ವ್ಯತೀಪಾ[illegible]

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗ[illegible]
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ ೧೩-೮-೦	[illegible]
ಕೆಂಬೂತಿ ಅಕ್ಕಿ ಅವಲ್	೧೩-೪-೦	[illegible]
,, ದುಯಂ	೧೩-೮-೦	[illegible]
ಜುಮ್ರಾಣಿ ಅಕ್ಕಿ	೧೩-೪-೦	[illegible]
ಸಣ್ಣಕ್ಕಿ ಅವಲ್	೧೪-೮-೦	[illegible]
,, ದುಯಂ	೧೪-೦-೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೨-೦-೦	[illegible]
,, ದುಯಂ	೧೦-೮-೦	[illegible]
ಕೈಮೆ ರಾಗಿ ಪಲ್ಲ ೧ಕ್ಕೆ	೮-೦-೦	[illegible]
ಕಾರಾಗಿ	೩-೪-೦	[illegible]
ಜೋಳ	೮-೮-೦	[illegible]
ಹುರುಳಿ ಪಲ್ಲ ೧ಕ್ಕೆ	೧೨-೦-೦	[illegible]
ಬಿಳೀ ಅವರೆ	೧೦-೦-೦	[illegible]
ಹೆಸರು	೧೨-೦-೦	[illegible]
ಉದ್ದು	೧೧-೪-೦	[illegible]
ಕಡಲೆ	೧೨-೦-೦	[illegible]
ಎಳ್ಳು ಸೆ. ೧೨೩ ಕ್ಕೆ	೨೦-೮-೦	[illegible]
ಹುರುಳಿ	೮-೮-೦	[illegible]
ಹರಳು ೧೨೩ ಸೇರಿಗೆ	೧೫-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೨-೦	[illegible]
ಮೆಣಸಿನಕಾಯಿ	೪-೦-೦	[illegible]
,, ದುಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೫-೪-೦	ಮ [illegible]
ಒಳ್ಳೆಣ್ಣೆ ಮಣ ೧ಕ್ಕೆ	೬-೪-೦	[illegible]
ಹರಳೆಣ್ಣೆ ,,	೬-೦-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೧೧-೦-೦	[illegible]
ಉಪ್ಪು ,,	೬-೦-೦	[illegible]
ಹುಣಸೇ ಹಣ್ಣು	೦-೧೪-೦	[illegible]
,, ಹಳೇದು	೦-೮-೦	[illegible]
ತುಪ್ಪ ಮಣ ೧ಕ್ಕೆ	೧೬-೮-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೬-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೧-೦-೦	[illegible]
ಅಂತ್ವಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ (ಪೌನ್) ಕೆಂಪು	೧೫-೪-೦	[illegible]
,, ,, ಪಸಿಮೆ	೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	[illegible]

Printed and published by the Rev. [illegible] THOMPSON, M.A., the Proprietor and M[illegible] Wesleyan Mission Press, Mysore. 6/9/190[illegible]

ವೃತ್ತಾಂತ ಪತ್ರಿಕೆ.

REGISTERED. M. 20.

ಯ೧ಪುಡ್ಡು ——— ಕ್ರಯ೧ಪುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಸೆಪ್ಟಂಬರ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೧೫

ಬಾಧಿಸುವ ದೊಡ್ಡ ನೋವುಹರ.

86 16

ಹಾವನ್ನೂ ವಿಗಾವರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ತಲೆನೋವು, ಅರತಲೆನೋವು, ನರಗಳ ಇರಿತ, ...ನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಉಣಗೆಮಸ್ತ್ರ, ...ಜುಣ್ಣ, ಕೀಲುಗಳ ನೋವು, ಅಸ್ತ್ರ, ಈ ಪ್ರಕೃತಿ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯಪಡ... ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ... ನಿಮಿಷಗಳಲ್ಲೇ ಖಂಡಿತವಾಗಿ ... ಉಪಯೋಗಿಸುವ ವಿಧಾನ ಮುಂತಾದ್ದು ... ತಿಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ... ಮುಕ್ತಕ್ಕೆ ದುಃಖಕರವಾದ ರೋಗವುಂಟಾದರೆ ... ಬಾಧೆಯನ್ನನುಭವಿಸುವವನಾಗಿ ... ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರ್ಯಾ... ನಷ್ಟಪಡುವದಿಲ್ಲ. ಇದರ ಗುಣವು ಅಷ್ಟು ಅನುಭವ... ಬಾಟ್ಲಿಗೆ ೧೨ ಆಣೆ, ೩ಕ್ಕೆ ೨ ರೂಪಾಯಿ, ... ೧೨ಕ್ಕೆ ೭ ರೂಪಾಯಿ. ಅಂಚೆ ವೆಚ್ಚ ... ಬಾಟ್ಲಿ ವರೆಗೆ ೩ ಆಣೆ.

ವಿಳಾಸ.—...ದಕ್ಷಿಣ ಆರ್ಕ, ಸಿವೆಟ್ಟಿ ರೋಡ್, ವೇಪೇರಿ, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಪುರುವೆ ಇರುವದು ಅಥವಾ ಈಗ ತಾನೆ ಹುರಿದದ್ದು.
ತೋಟದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35 3

ವ್ಯಾಪಾರದ ... ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ಎಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅಸಮ್ಮತದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸನ್ ಕಾಫಿ ವರ್ಕ್ಸ್, ಹುಣಸೂರು.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104-7

ಖಾಲಿ, ಯಾ ಸುಂದರ ಚಿತ್ರಗಳುಳ್ಳದ್ದು ನಮೂನೆ ೦೬ ಕಾರ್ಡುಗಳಿಗೆ ೦। (ಸ್ಟಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ. ಸ್ವದೇಶಿ ಮೆಂಥಾಲ್ ಸೀಸೆಗೆ ೬ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು ಸ್ವದೇಶಿ ಇಂಗ್ರೇಜಿ ಟೋಪಿಗಳು, ಇವುಗಳಿಗೆ ಟಪಾಲಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲೆ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟಾಂಪಿಟ್ಟು ಬರೆದುಕೊಳ್ಳತಕ್ಕದ್ದು. Bhatt & Co, Poona city.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

95 16

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ ಧಾರಣೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕುಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋರ್ಟ್ ಮುಂಬಯಿ.

ಜ್ವರಹರಿ.

101-7

ಇದು ಸಾಧಾರಣ ಜ್ವರ, ಚಳೀಜ್ವರ, ಮೂರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧।—೮ ರೂ.; ಸಿ. ೬—೧೭ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆವ್ರಿಯ ಓಮಂ ಕರ್ಪೂರವನ್ನು ನಾನೂ ನನ್ನ ಜಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಹೆವ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಲೇನ್ ವೃಕ್ಷ, ಮದ್ರಾಸ್.

ಹೋಮೋಸಿಯಾ

Homocea

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ...ಸ್ ವಾಸ, ...ದಾಲ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಿ ಇದ್ದರೆ ... ಇದಕ್ಕೆ ಸಮಾನವಾದ ಔಷಧ ಮತ್ತ್ಯಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕುವ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ..., ಕೀಲುವಾಯು ಗುಳ್ಳೆಗಳು, ಹಲ್ಲುನೋವು, ಮುಖ..., ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ... ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನೀಗಿಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. ... ಆ, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ... ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ. ೨—೮ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋಸಿಯ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ... ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ... ೧ ರೂ. ಗೂ ಒಂದರಂತೆ ವಿಕರಿ ಮಾಡಲ್ಪಡುವದು. ೧೨ ... ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಶಾಪುಗಳಲ್ಲಿ ದೊರೆಯುವದು.

... ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ...ಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೩ ಸೆಕಂಡು ಲೇನ್ ಮದರಾಸ್.

ಒಕ್ಕಲಿಗರ ಸಂಘ.

98 10

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಇಲ್ಲದೆ ಇರುವದರಿಂದ ಅಭಿವೃದ್ಧಿ ಸ್ಥಿತಿಗೆ ಬಾರದೆ ಇರುವುದು ತಮಗೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮ॥ ರಾ॥ ದೊಡ್ಡ ಕ್ಯಾತೆಟ್ಟರವರ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ನಡೆಸಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೩, ೪, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಸ್ಥೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ನಮಗೆ ನೇಮಿಸಿರುತ್ತಾರೆ ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಬೆಂಗಳೂರು

ಎಂ. ಸುಬ್ಬಯ್ಯ, ಬಿ. ಎ.,
ಕೆ. ಹೆಚ್. ರಾಮಯ್ಯ, ಬಿ. ಎ.

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ:—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಮುದ್ದಾಗಿ ತಿಳಿಯಪಡಿಸಬ ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೋರಡುವವರಾಗಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೆರಡು ವರ್ಷಗಳಿಗಿಂತಲೂ ಹೆಚ್ಚಾಗಿ

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಸ್ವಸ್ಥಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕೃಶ್ಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ 57-26

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಚಿತ್ರ ದ ಗುರುತು ಇರುವ

ಔಷಧವನ್ನೇ ಕೊಂಡುಕೊಳ್ಳಿ

ಮೂರು ನವೀನ ಪುಸ್ತಕಗಳು.

117 1

ಬಿ. ಕೆ. ಮೂರ್ತಿ ಕಂಪನಿಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಮಿ|| ಭಾರಂ ರಂಗನಾಥಯ್ಯನವರಿಂದ ತಯಾರಾದ ಪುಸ್ತಕಗಳು

೧. ತಾವಾಗಿ ಇಂಗ್ಲಿಷ್ ಕಲಿಯುವಿಕೆ.—ಸ್ವಲ್ಪ ಪ್ರತಿಗಳು! ಬೇಗ ಬನ್ನಿರಿ! ಬೇಗ ಬರೆಯಿರಿ!

ಇದರಲ್ಲಿ ಎ ಬಿ ಸಿ ಡಿ ಮೊದಲು ಜಡ್ ವರೆಗೆ ಉಳ್ಳ ಇಂಗ್ಲಿಷ್ ಓದಲಿಕ್ಕೆ ಮತ್ತು ಅಚ್ಚು ಅಕ್ಷರಗಳನ್ನು ಗುರುತು ಹಿಡಿಯುವದು, ಅಕ್ಷರಗಳನ್ನು ಬರೆದುಕೊಂಡು ಕಲಿಯುವದು, ಅವುಗಳ ಉಚ್ಚಾರಣೆ ಅರ್ಥ, ಭೋಜನ ಶಾಲೆ, ಸಂಸಾರ, ಉಡಿಗೆ ತೊಡಿಗೆ, ವ್ಯಾಪಾರಿಕೆ, ಇವುಗಳಲ್ಲಿ ವಾಡಿಕೆಯ ಈಗ ಬಳಕೆಯೊಳಗಿರುವ ಡಿಕ್ಷನೆರಿ ಪುಸ್ತಕಗಳಲ್ಲಿ ಇಲ್ಲದೆ ಇರುವ ಪ್ರಾಮುಖ್ಯವಾದ ಅನೇಕ ಶಬ್ದಗಳು, ಲೋಕೋಕ್ತಿಗಳು, ಗಾದೆಗಳು, ಕ್ಷೇಮಸಮಾಚಾರ, ಲೇವಾದೇವಿ, ಸರ್ಕಾರಿ ಸಂಬಂಧದ ವ್ಯವಹಾರ ಪತ್ರಗಳು ವಿಶೇಷವಾಗಿ ಬರೆಯುವ ಕಾಗದಗಳ ನಮೂನೆಗಳು, ಕರಾರುಗಳು ಪ್ರತಿವರ್ತಮಾನಗಳ ನಕಲುಗಳು, ಇತ್ಯಾದಿ ಅನೇಕ ಭಾಗಗಳನ್ನು ಸೇರಿಸಿ ಸ್ವಲ್ಪಮಟ್ಟಿಗೆ ಕನ್ನಡಭಾಷೆ ಬಲ್ಲವರು ಕೂಡ ಇತರರ ಸಹಾಯವಿಲ್ಲದೇಲೂ, ದ್ರವ್ಯವ್ಯಯ, ಪ್ರಯಾಸವಿಲ್ಲದೇಲೂ, ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ತಿಳಿದು, ಓದುವದಕ್ಕೂ, ಬರೆಯುವದಕ್ಕೂ, ಮಾತಾಡುವದಕ್ಕೂ ಕಲಿಯುವ ಹಾಗೆ ಪ್ರತಿ ಒಂದು ಶಬ್ದವನ್ನೂ ಮೊದಲು ಇಂಗ್ಲಿಷಿನಲ್ಲಿ ಬರೆದು ಕನ್ನಡ ಅಕ್ಷರದಿಂದ ಅದನ್ನು ಉಚ್ಚರಿಸುವ ರೀತಿಯನ್ನು ತಿಳಿಸಿ, ಅದರ ಕೆಳಗೆ ಕನ್ನಡಭಾಷೆಯ ಅರ್ಥವನ್ನೂ ವಿವರಿಸಿರುತ್ತೆ. ಇಂಗ್ಲಿಷ್‌ಭಾಷೆ ಕಲಿತು ಒಳ್ಳೆ ಲಾಭಹೊಂದಬೇಕೆಂಬ ಕೋರಿಕೆಯುಳ್ಳ ವ್ಯಾಪಾರಿ ಜನಗಳು, ರೈತಾಪಿಜನರು, ಜಮೀನ್ದಾರರು, ಶೇಕದಾರ್ರು, ಇಲಾಖೆಯಲ್ಲಿ ಕೆಲಸಮಾಡುವ ಗುಮಾಸ್ತರು ಕಂಟ್ರ್ಯಾಕ್ಟುದಾರರು, ಪ್ಲಾಂಟರುಗಳು, ನೌಕರರು, ಬಟ್ಲರ್ ಗುಮಾಸ್ತೆಯರು ಮೊದಲಾದ ಎಲ್ಲಾ ಜನರಿಗೂ ಅತ್ಯಾವಶ್ಯಕವಾದದ್ದು. ಕ್ರಯ ವಿ ಪಿ ಖರ್ಚುಸಹಿತ ರೂ ೧—೬—೦.

೨. ಪ್ರಶ್ನೋತ್ತರ ಲೇಖ್ಯಬೋಧಿನಿ—ಕ್ರಯ ವಿ ಪಿ ಸಹಿತ ರೂ. ೧—೬—೦ ಕ್ಷೇಮಸಮಾಚಾರಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್, ಮುಲ್ಕಿ, ರೆವಿನ್ಯೂ ಎಕ್ಸೈಜು, ವಿದ್ಯಾಭ್ಯಾಸ, ಫಾರೆಸ್ಟು, ಇಂಜನಿಯರ್, ಮ್ಯುನಿಸಿಪಲ್, ಪೊಲೀಸು, ಹಿಂದೂ ಲಾ, ಮಹಮದಿ ಲಾ ಕಂಟ್ರ್ಯಾಕ್ಟು, ಡಾಕ್ಯುಮೆಂಟು, ವಾರಸು, ಪೈನರು, ಕೋರ್ಟ್ ಫೀಜು, ಪೌಲೀಸು, ಕ್ಯಾವಿಟಿರಿ, ಬೋರ್ಡು, ಆರಂಸು ಮೊದಲಾದ ಎಲ್ಲಾ ವಿಧವಾದ ಅಸ್ಸಲುಗಳ ಸಾರಾಂಶವನ್ನೂ ತಿಳಿಸುತ್ತದೆ. ಕ್ರಯ ವಿ ಪಿ ಖರ್ಚು ಸಹಿತ ರೂ ೧—೬—೦

೩. ಪೋಣಿ ಕಲಿಯತಕ್ಕ ಪುಸ್ತಕ—ಕ್ರಯ ವಿ ಪಿ ಖರ್ಚುಸಹಿತ ೧೪ ಆಣೆ

ಭೂಮಿಯನ್ನು ಅಳೆಯುವ ರೀತಿಯನ್ನು ಅತಿ ಸುಲಭವಾಗಿ ತಿಳಿಸುವದಲ್ಲದೆ ಇದನ್ನು ಓದಿದ ಮಾತ್ರದಲ್ಲೇ ಮೋಜಣಿದಾರರಾಗುವುದರಲ್ಲಿ ಸಲ್ಪವೂ ಸಂಶಯವಿಲ್ಲ. ಒಂದುಸಾರಿ ತರಿಸಿ ಓದಿನೋಡಿ ಕ್ರಯ. ವಿ. ಪಿ ಖರ್ಚುಸೇರಿ ೧೪ ಆಣೆ

ವಿಳಾಸ—ಬಿ. ಕೆ ಮೂರ್ತಿಕಂಪೆನಿ,

ಅಕ್ಕಿಪೇಟೆ ಪೋಸ್ಟು ಕೋಲಾರ್ ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆ.

— ೧

ಸ್ ೧೯೦೬ ನೇ ಇಸವಿ ಸೆಪ್ಟಂಬರ್ ತಾ|| ೧೩ ನೇ ಗುರುವಾರ

ಸ್ವಾಮಿ ಅಭೇದಾನಂದರವರೂ ವೇದಾಂತ ಮತವೂ.

ಅಯ್ಯಾ,

ತಮ್ಮ "ವೃತ್ತಾಂತ ಪತ್ರಿಕೆ" ಯಲ್ಲಿ ಎಂ ನಾರಾಯಣಯ್ಯಂಗಾರ್ ಎಂಬವರು "ವೇದಾಂತ" ದ ವಿಷಯ ಅನೇಕ ಆಕ್ಷೇಪಗಳನ್ನು ಬರೆದು ಅದನ್ನು ತಿರಸ್ಕರಿಸಿರುವದು ಸರಿಯಲ್ಲ. ಅದರೆ "ವೇದಾಂತ" ವನ್ನು ತಿಳಿಯಲಪೇಕ್ಷಿಸುವವರು ಪ್ರಧಾನತಃ ಅದಕ್ಕೆ ಬೇಕಾದ ಸುಜ್ಞಾನವನ್ನು ಸಂಪಾದಿಸಬೇಕು ಜ್ಞಾನವೆಂಬುದು ಸಾಧನೆಯಿಂದಲೇ ಹೊರತು ಬೇರಲ್ಲದೆ ಇಂಥಾ ಕುತರ್ಕಗಳಿಂದ ಎಂದೂ ಬರಲಾರದು "ಜ್ಞಾನಸ್ಯ ಕಾರಣಂ ಕರ್ಮಂ ಜ್ಞಾನೇ ಕರ್ಮ ನಿವಾರಣಂ। ಫಲಸ್ಯಕಾರಣಂ ಪುಷ್ಪಂ ಫಲೇ ಪುಷ್ಪನಿವಾರಣಂ" ಎಂಬ ವಚನದಂತೆ ಕರ್ಮಸಾಧನೆಯಿಂದ ಜ್ಞಾನ ಸಂಪಾದಿಸಿ, ನಂತರ "ವೇದಾಂತ" ಕ್ಕೆ ಕೈ ಹಚ್ಚಲಿ! ಪ್ಯಾಗಂಬರ—ಅನೇಕ ನಿಪುಣರು ದ್ವಿಚಕ್ರ (ಬೈಸಿಕಲ್) ಎಂಬ ಗಾಡಿಯಲ್ಲಿ ಕೂತು ಓಡಿಸುವದನ್ನು ನೋಡಬಹುದು ಆದರೆ ಎಂಥಾ ಚತುರನಾದರೂ ಅದನ್ನು ದೃಷ್ಟಿಸಿದ ಮಾತ್ರದಿಂದಲೇ ಅದರಲ್ಲಿ ಸವಾರಿ ಮಾಡಲು ಯೋಗ್ಯನಾಗನಲ್ಲ ಇಲ್ಲ ಅದಕ್ಕಾದರೆ ಒಂದೆರಡು ತಾಸಿನ ಸಾಧನೆಯು ಅವಶ್ಯವಾಗಿ ಬೇಕೇಬೇಕು. ವಿನಹಾ ನೋಡಿದ ಮಾತ್ರದಿಂದ ಯಾ ಕೇಳಿದ ಮಾತ್ರದಿಂದ ಸವಾರಿ ಯೋಗ್ಯನಾಗನು ಇದರಂತೆ ಸಾಧನೆಗಳು ವಿನಹಾ ಇವರು "ವೇದಾಂತ" ವಿಷಯಕ್ಕೆ ಕೈ ಹಚ್ಚಿ ಒದ್ದಾಡುವದು ವಿಮಾನ ಬಾರದವನು ಸಮುದ್ರದ ಆಗಾಧದಲ್ಲಿ ಬಿದ್ದು ವೃಥಾ ಕೈ ಕಾಲು ಒದ್ದಾಡಿಕೊಂಡಂತೆಯೇ ಸರಿ

"ವೇದಾಂತವು ಮಿಥ್ಯವೆಂದು ಸಾರುವದರಿಂದಲ- 'ನಾನೇ ಬ್ರಹ್ಮನು,' 'ಯದ್ಭಾವಂ ತದ್ಭವತಿ' ಎಂದು ಹೇಳುವದರಿಂದಲೂ ನಾನು ಇಂಥಾ ವೇದಾಂತವನ್ನರಿತುಕೊಳ್ಳಲು ಬೇಕಾದ ಶಕ್ತಿ, ಬುದ್ಧಿಯನ್ನು ಭಗವಂತನೇ ಕೊಡದಿರಲಿ" ಎಂದು ತಿರಸ್ಕಾರ ಭಾವದಿಂದ ಇದನ್ನು ಬರೆದಿರುವರು ಅಯ್ಯಾ, ಇವರು ನಾನು ಮೇಲೆ ಹೇಳಿದಂತೆ ಸಾಧನೆ ಕರಲ್ಲದ್ದರಿಂದ ಈ ವೇದಾಂತ ವಿವರವನ್ನು ಇವರಿಗೆ ಇಲ್ಲಿ ವಿವರಿಸಿದರೆ ಇವರು ಚನ್ನಾಗಿ ತಿಳಿಕೊಳ್ಳುವದು ಬಹಳ ಕಷ್ಟ ಸಾಧ್ಯವಾಗಿ ತೋರುತ್ತೆ. ಆದರೆ ಸದ್ಯ ಯಾವ ವೇದಾಂತ ವಿಷಯ ಬರದ ಶಾಸ್ತ್ರಗಳಲ್ಲಿ ಕೆಲವು ಕ್ರೈಸ್ತ ಶಾಸ್ತ್ರದ ವಚನಗಳನ್ನು ಉದಾಹರಿಸಿ ಸ್ವತಃ ತೃಪ್ತಿಗೊಂಡಿದಾರೆ ಎಂಬುದರಿಂದ ಇವರಿಗೆ ಕ್ರೈಸ್ತ ಶಾಸ್ತ್ರದಿಂದಲೇ ಇದರ ಸ್ವರೂಪವನ್ನು ತೋರಿಸಿದರೆ ಸುಲಭವಾಗಿ ವೇದಾಂತ ಮರ್ಮವನ್ನು ಸಾಧಾರಣ ಮಟ್ಟಿಗೆ ತಿಳಿಕೊಂಡಾರೆಂದು ನಂಬುತ್ತೇನೆ.

ವೇದಾಂತವು ಸರ್ವ ಜೀವಿಗಳಲ್ಲಿರುವ ಆತ್ಮವೂ ಒಂದೇ ಎಂದೂ, ಸಕಲವೂ ಮಿಥ್ಯೆ ಮಾಯೆ ಎಂದೂ ಹೇಳುತ್ತದೆ ಇದನ್ನು (ಪ್ರಸಂಗಿ ೩, ೧೯ ೨೦, ೨೧—೨೨ "ಮಾಯೆಗಳ ಮಾಯೆಯು ಎಂದು ಪ್ರಸಂಗಿಯು ಹೇಳಿದನು. ಸರ್ವವೂ ಮಾಯೆಯೇ" ಇತ್ಯಾದಿ ವಚನಗಳಿಂದ ಇದರ ನಿಜವನ್ನು ತಿಳಿಯಬಹುದು ಮತ್ತು 'ನಾನೇ ಬ್ರಹ್ಮನು' ಎಂದರೆ ಮನುಷ್ಯರಲ್ಲಿ ಶರೀರ, ಪ್ರಾಣ, ಆತ್ಮ ಎಂದು ಮೂರು ವಿಧ (೧ ಥೆಸ್ಸ ೫ ೨೩, ಇಬ್ರಿ ೪ ೧೨) ಶರೀರ (ಪಂಚಭೂತಗಳೂ, ಇದಕ್ಕೆ ಸಂಬಂಧಿಸಿದ ತತ್ವಗಳೂ, ಅನೇಕವುಂಟು), ಪ್ರಾಣ ಇವು ಅನಿತ್ಯವಾದುವು ಆದರೆ ಆತ್ಮನು ಹಾಗಲ್ಲ ಆತ್ಮನು ದೇವರೇ ಆಗಿರುವದರಿಂದ ನಿತ್ಯನು (ಮತ್ತಾ ೧೦ ೨೦) "ನೀವಲ್ಲ ನಿಮ್ಮೊಳಗೆ ಮಾತನಾಡುವ ನಿಮ್ಮ ತಂದೆಯ ಆತ್ಮವೇ" (ಎಫೆ ೪ ೬) "ನಿಮ್ಮೆಲ್ಲರಲ್ಲಿಯೂ ಇದ್ದಾನೆ" (ಯೋಹಾ ೧೪ ೯) "ನಾನು ಬ್ರಹ್ಮೇಬಲ್ಲ, ನೀವು ಕೊಂಡಿಗಳು ನಾನಿಲ್ಲದೆ ಏನೂ ಮಾಡಲಾರಿರಿ" (ಯೋಹಾ ೧೦ ೩೦) "ನಾನೂ ತಂದೆಯೂ ಒಂದೇ" (ಯೋಹಾ ೧೪ ೪) "ನಾನು ನಿಮ್ಮಲ್ಲಿ ಇರುವ ಪ್ರಕಾರ" (ಯೋಹಾ ೧೪ ೧೦) "ನಾನು ತಂದೆಯಲ್ಲಿ ಇದ್ದೇನೆ ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀವು ನಂಬುವುದಿಲ್ಲವೋ?" (ಯೋಹಾ ೧೭ ೨೧) "ತಂದೆಯಾದ ನೀನು ನನ್ನಲ್ಲಿಯೂ, ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರು ಸಹ ನಮ್ಮಲ್ಲಿ ಒಂದಾಗಬೇಕೆಂದು ಬೇಡಿಕೊಳ್ಳುತ್ತೇನೆ" (ಯೋಹಾ ೧೪ ೨೦) "ನಾನು ನನ್ನ ತಂದೆಯಲ್ಲಿಯೂ, ನೀವು ನನ್ನಲ್ಲಿಯೂ, ನಾನು ನಿಮ್ಮಲ್ಲಿಯೂ ಇರುವದನ್ನು ತಿಳಿದುಕೊಳ್ಳುವಿರಿ" ಇತ್ಯಾದಿ ವಚನಗಳ ಪ್ರಕಾರ ನಾಶವಾಗುವ ಶರೀರ, ಪ್ರಾಣಗಳ ವಿಷಯ ಮಾತನಾಡದೆ, ಆತ್ಮದ ವಿಷಯ ಜ್ಞಾನದಿಂದ ಮಾತಾಡುವ ವೇದಾಂತಿಗಳು "ಅಹಂ ಬ್ರಹ್ಮ" ಎಂದು ತಿಳುಕೊಂಡು ಹೇಳುತ್ತಾರೆ ಇನ್ನು "ಯದ್ಭಾವಂ ತದ್ಭವತಿ" ಎಂಬುದನ್ನು ಸಹ (ಮತ್ತಾ ೨೧ ೨೧) "ವಿಶ್ವಾಸವುಳ್ಳವರಾದರೆ ... ಎದ್ದು ಸಮುದ್ರದಲ್ಲಿ ಬೀಳೆಂದು ಈ ಬೆಟ್ಟಕ್ಕೆ ಹೇಳಿದರೂ ಆಗುವದು" (ಮತ್ತಾ ೧೭ ೨೦) "ವಿಶ್ವಾಸವು ನಿಮ್ಮಲ್ಲಿ ಇದ್ದರೆ ನೀವು ಈ ಬೆಟ್ಟಕ್ಕೆ ಇಲ್ಲಿಂದ ಅಲ್ಲಿಗೆ ಹೋಗು, ಅಂದರೆ ಹೋಗುವದು; ಮತ್ತು ನಿಮ್ಮಿಂದ ಆಗದ್ದು ಒಂದೂ ಇರದು" ಇತ್ಯಾದಿ ವಚನಗಳಿಂದ ತಿಳಿಯಬಹುದು

ಇದರಂತೆ ತನ್ನ ದೃಢಭಾವ (ವಿಶ್ವಾಸ) ವಿದ್ದರ ಸರ್ವವೂ ಸಿದ್ಧಿಸುವದರಿಂದ "ಯದ್ಭಾವಂ ತದ್ಭವತಿ" ಎಂಬ ಈ ವಚನಗಳಲ್ಲಿ ಒಂದು ಇದನ್ನೆಲ್ಲಾ ಎಂ ನಾರಾಯಣಯ್ಯಂಗಾರು ಯಥಾರ್ಥ ಮನಸಿಂದ ವಾದಿಸಿ, ಸತ್ಯವಿದನ್ನು ಒಳ್ಳೆಯವಳಿಗೆ ಇಂದು, "ಭಗವಂತನೇ ಕೊಡದಿರಲಿ" ಎಂದು ಬರೆದಿರುವ ಮುಂದಿನ ದುರ್ಭಾವವನ್ನು ಬಿಟ್ಟು "ಭಗವಂತನೇ ದಯಪಾಲಿಸಲಿ" ಎಂಬ ಸದ್ಭಾವವನ್ನು ದೇವರಿಗೆ ಒಪ್ಪಿಸಲಿ ಎಂಬುದೇ ನನ್ನ ಮುಖ್ಯ ಪ್ರಾರ್ಥನೆ

ಹಿರಿಯೂರು ರ ಮ

ಈ ಪತ್ರ ಬರೆದವರುಗಳಿಗೆ ತಮ್ಮ ಅಭಿಪ್ರಾಯಗಳನ್ನು ಹೇಳಲು ಅವಕಾಶಕೊಟ್ಟದ್ದರಿಂದಲೇ ನಾವು ಇನ್ನು ಮುಂದೆ ಈ ವಿಷಯದ ಬಗ್ಗೆ ಕಾಗದಗಳನ್ನು ಪ್ರಕಟಿಸಲಾರೆವು.

ನಾರಾಯಣಯ್ಯಂಗಾರ ಅಭಿಪ್ರಾಯಗಳನ್ನೆಲ್ಲಾ ನಾವು ಸರಿಯೆಂದು ಒಪ್ಪಲಾರೆವಾದಾಗ್ಯೂ ಅವರು ಮಾಡಿದ ಕೆಲವು ಮುಖ್ಯ ಆಕ್ಷೇಪಣೆಗಳನ್ನು ನ್ಯಾಯವಾದವುಗಳೆಂದು ಅಂಗೀಕರಿಸುತ್ತೇವೆ. ಸ್ವಾಮಿ ಅಭೇದಾನಂದರು ಪಾಪವೇ ಇಲ್ಲವೆನ್ನುತ್ತಾರೆ, ಇಲ್ಲವೇ ಪಾಪವನ್ನು ಬಹಳ ಅಲ್ಪವಾದದ್ದೆಂದು ಹೇಳುತ್ತಾರೆ. ಇಂಥಾ ಉಪದೇಶದಿಂದ ಪ್ರಪಂಚದಲ್ಲಿ ಸದ್ಧರ್ಮ ಕ್ರಿಯಾಗಲಿ ಸಚ್ಛರಿತ್ರೆಯಾಗಲಿ ಹೆಚ್ಚಾಗಲಿ ಪ್ರಬಲವಾಗುವುದಿಲ್ಲ. ಈ ಭಾಗದಲ್ಲಿ ನಮ್ಮ ಅಭಿಪ್ರಾಯ ವೇನೆಂದರೆ—ಪಾಪವು ಅಜ್ಞಾನಕೃತ್ಯವಲ್ಲ. ಅದು ಸ್ವಪ್ನ ಮನಸ್ಸಿನ ಪ್ರಬಂದಾ ಆಜ್ಞೆಯನ್ನು ಮನಃಪೂರ್ವಕವಾಗಿ ತಿರಸ್ಕರಿಸುವ ಎಂಥಾ ಪಾಪ ಮಾಡುವುದೇ. ಇವರ ಪಾಪದ ಪರಿಹಾರದಿಂದ ಪಾಪವು ಯಾಗಿರುತ್ತದೆ ನಿತ್ಯವಂತರಾಗಲಪೇಕ್ಷಿಸುವವರು ಈ ಮುಖ್ಯ ವಿಷಯವನ್ನು ಮೊದಲು ಗ್ರಹಿಸಿಕೊಳ್ಳಬೇಕಾಗಿದೆ ಸ್ವಾಮಿ ಅಭೇದಾನಂದರು—"ಯದ್ಭಾವಂ ತದ್ಭವತಿ" ಎಂದು, ಮನುಷ್ಯರು ತಾವೇ ಒಳ್ಳೆಯವರೆಂದು ಊಹಿಸಿಕೊಂಡರೆ ಪಾಪಿಗಳೇ ಆಗುತ್ತಾರೆಂದು ಹೇಳುವ ಮೇಲ್ಮುಂತ ಟಾಕ್ಟ್ರಿಗಳಿಂದ ನಡದೂರು ಬಲ್ಲಿಯ ನಾನಾವ್ಯಕ್ತಿಗಳನ್ನು ಕುರಿತು ಕ್ರಿಸ್ತಸ್ವಾಮಿಯು ಕೆಲವು ಸ್ವಂತಿಗಳನ್ನು ನಿರ್ವಹಿಸಿ ಅವರ ಈಗ ಚರ್ಚೆಯಲ್ಲಿರುವ ವಿಷಯಕ್ಕೂ ಅವರು ಹೇಳುವ ಮಾತುಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಕ್ರಿಸ್ತಸ್ವಾಮಿಯು ತನ್ನ ಶಿಷ್ಯರನ್ನು ಕುರಿತು ಉನ್ನತರಾದ ಪ್ರಯತ್ನ ಗಳನ್ನು ಮಾಡುವಲ್ಲಿ ಅವರಿಗೆ ಶಕ್ತಿಯ ಎಲ್ಲೆಯಿದ್ದರೇನೇ ಎನ್ನುವದು ಸಾಧ್ಯವಾಗುವುದೆಂಬುದನ್ನು ಪ್ರೋತ್ಸಾಹಿಸುವುದಕ್ಕಾಗಿ ಆ ವಾಕ್ಯಗಳನ್ನು ಹೇಳಿದನು. "ನೀವು ಪಾಪಿಗಳೆಂದು ತಿಳುಕೊಳ್ಳಬೇಡಿ ನೀವೆಲ್ಲಾ ಪರಮ ಸಂತರೆಂದೇ ತಿಳಿಯಿರಿ, ಪವಿತ್ರರೇ ಆಗುವಿರಿ" ಎಂಬುದಾಗಿ ಕ್ರಿಸ್ತಸ್ವಾಮಿಯು ಶಿಷ್ಯರಿಗೆ ಹೇಳಿ ಇಲ್ಲ. ಅದಕ್ಕೆ ಪ್ರತಿಯಾಗಿ ನಮ್ಮ ದೇವರ ಸನ್ನಿಧಿಯಲ್ಲಿ ಪಾಪಿಯಾಗಿದ್ದಾನೆಂಬುದನ್ನು ಮೊದಲು ಅಸ್ತಿಭಾರವಾಗಿಟ್ಟುಕೊಂಡು ಅದರ ಮೇಲೆ ಆ ಪಾಪವನ್ನು ನಿವೃತ್ತಿ ಮಾಡಿಕೊಳ್ಳುವ ಮತ್ತು ಮೋಕ್ಷಮಾರ್ಗವನ್ನು ಹುಡುಕುವದನ್ನು ಸತ್ಯವನ್ನು ಕೈಕೊಳ್ಳಬೇಕಾಗಿದೆ ಎಂತಲೇ ಹೇಳುತ್ತಾರೆ ಅಲ್ಲದೆ ಪೂರಿತರಾಗಿದ್ದ ಯೆಹೂದ್ಯರನ್ನು ಕುರಿತು—"ನೀವು ಎನಗೆ ಪಡಬೇಕೆಂದರೆ ನಾಶಹೊಂದುವಿರಿ" ಎಂತಲೂ, "ನಾನು ಬಂದದ್ದು ಸತ್ಯವಂತರನ್ನು ಕರೆಯುವುದಕ್ಕಲ್ಲ, ಪಾಪಿಗಳನ್ನು ಮಾನಸಾಂತರಪಡಿಸುವುದಕ್ಕಾಗಿಯೇ ಬಂದೆನು" ಎಂತಲೂ ಹೇಳಿದನು.

ಪ್ರತಿ ಒಬ್ಬನಲ್ಲೂ ಅಂತ್ಯವಾಗದ ಥಾ ಆತ್ಮವಿರುವುದೆಂದು ಸ್ವಾಮಿಯು ಬೋಧಿಸಿರುವುದೂ ಕ್ರೈಸ್ತಭಕ್ತರೂ ಆ ಭಕ್ತಿ ಬಿಡುವರು ಯಥಾರ್ಥವೇ ಸರಿ. ಆದರೆ "ಅಹಂ ಬ್ರಹ್ಮಾಸ್ಮಿ" ಎಂಬ ವಚನದಿಂದ "ನನ್ನಲ್ಲಿ ಶಾಶ್ವತವಾದ ಆತ್ಮವಿರುತ್ತದೆ" ದು ಮಾತ್ರವೇ ಅಲ್ಲ, ಸಕಲ ಚರಾಚರವನ್ನು ಕಾರಣವಾದ ಬ್ರಹ್ಮವೇ ನಾನು" ಎಂತಲೂ, ಸಕಲವೂ ನಾನೇ" ಎಂತಲೂ ಆಗುತ್ತದೆ ಕ್ರಿಸ್ತಸ್ವಾಮಿಯು ಯಾವ ಸಂದರ್ಭದಲ್ಲೂ ಈ ಬೋಧನೆಯನ್ನು ಬೋಧಿಸಿರುವುದಿಲ್ಲ. ಗಿಡಕ್ಕೂ ಕೊಂಬೆಗೂ ಇರುವಂಥಾ ಪ್ರತ್ಯರ ಸಂಬಂಧವೇ ಮನುಷ್ಯನಿಗೂ ದೇವರಿಗೂ ಹೌದು ಆದರೆ ಕೊಂಬೆಗಳೇ ಬುಡವೆಂದು ಅತ ಹೇಳುವದಲ್ಲ ಬುಡವೇ ಬೇರೆ, ಕೊಂಬೆಗಳೇ ಬೇರೆ ಪರಸ್ಪರ ಪ್ರೀತಿಯೂ ತೃಪ್ತಿಯೂ ಉಂಟು ಎಂಬರ್ಥದಲ್ಲಿ, ಮಗನಾದ ಕ್ರಿಸ್ತಸ್ವಾಮಿಯೂ ತಂದೆಯಾದ ದೇವರಲ್ಲಿ ಒಂದಾಗಿರುತ್ತಾನೆ ದೇವತ್ವದಲ್ಲಿ ಮೂವರೂ ಒಂದಾಗಿರುತ್ತವೆ ಹೀಗಿಲ್ಲದ ಪಕ್ಷಕ್ಕೆ ದೇವರು ಪ್ರೀತಿ ಎಂದು ಹೇಳುವದು ಸಲ್ಲ. ಕ್ರಿಸ್ತಸ್ವಾಮಿಯು ತನ್ನ ಶಿಷ್ಯರಲ್ಲಿ ಐಕ್ಯವಿರಬೇಕೆಂದು ದೇವರನ್ನು ಬೇಡಿಕೊಂಡದ್ದರಲ್ಲಿ ಅವರ ಪರಭಾವವು ಒಂದಾಗಬೇಕು

CHAMBERLAIN'S PAIN BALM

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು

95-11



ಬೆನ್ನು ಲಂಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ಕಲೆನೋವು ಬಿಟ್ಟಿದ್ದ ಕಾಲುಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಬಳಲುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇವೇ ಇವೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಬ್ಬೇನೂ ಇಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

...ವರಲ್ಲಿ ಪರಸ್ಪರವಾದ ಭಕ್ತಿವಿಶ್ವಾಸಗಳು ಸಂಪೂರ್ಣತೆಯನ್ನು ಹೊಂದಿ ಅವರೆಲ್ಲಾ ಏಕವಾಗಬೇಕೆಂದು ಅಪೇಕ್ಷಿಸಿದನು ದೇವರಲ್ಲಿಯೂ ಮಗನಿಗೂ ಇರುವ ಭೇದವು ನಿತ್ಯವಾಗಿರುತ್ತದೆ, ಹೀಗೆಯೇ ದೇವರಿಗೂ ಆತನ ಭಕ್ತರಿಗೂ ಇರುವ ಭೇದಗಳು ನಿತ್ಯವಾಗಿರುವವು. ಆದ್ದರಿಂದ ಮನುಷ್ಯನಲ್ಲಿರುವ ಆತ್ಮವೇ ಪರಮಾತ್ಮವೆಂದು ಸ್ಥಾಪಿಸುವ ಅದ್ವೈತಮತವು ಯೇಸುಕ್ರಿಸ್ತಸ್ವಾಮಿಯು ಬೋಧಿಸಿರುವ ಮತಕ್ಕೆ ವಿರೋಧವಾಗಿರುತ್ತದೆ.

ಒಳದೇಶದ ವೃತ್ತಾಂತಗಳು.

ತಿಪ್ಟೂರು ತಾಲ್ಲೂಕು ಹಂಡಗದ ಕೆರೆಗೆ ಕೆಂಪನೆಂಬುವನು ದನವನ್ನು ತೊಳೆಯುವದಕ್ಕೆ ಹೋಗಿ ಆಕಸ್ಮಾತ್ತಾಗಿ ಅದರಲ್ಲಿ ಬಿದ್ದು ಸತ್ತುಹೋದನೆಂದು ತಿಳಿದುಬಂದಿದೆ.

* * * *

ರಾಜಧಾನಿಯ ಈರನಗೆರೆಯಲ್ಲಿ ನೆನ್ನೆ ಬೆಳಿಗ್ಗೆ ಬ್ಯಾಂಡ್ ಮಾಸ್ಟರ್ ಯ್ಯನೆಂಬ ಮನುಷ್ಯನು ತನ್ನ ಹೆಂಡತಿಯನ್ನು ಹೊಡೆದು ತುಂಬ ಗಾಯ ಮಾಡಿದನೆಂತಲೂ ಪೋಲೀಸಿನವರು ತನಿಖೆಮಾಡುತ್ತಿದಾರೆಂತಲೂ ಕೇಳಿದೆವು

* * * *

ಕಳೆದ ವಾರ ತಿಳಿಸಿದ್ದ ರಾಜಧಾನಿಯ ಗಾಂಜಾ ಮೊಕದ್ದಮೆಯಲ್ಲಿ ಆ ಸೊಪ್ಪು ಸಿಕ್ಕಿದ ಮನೆ ಮಾಲೀಕನಾದ ತಮ್ಮಯ್ಯನೆಂಬುವನಿಗೆ ಮೂರು ತಿಂಗಳೂ ಹಕೀಮ್ ಎಂಬುವನಿಗೆ ಎರಡು ತಿಂಗಳೂ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತೆಂದು ಕೇಳುತ್ತೇವೆ

* * * *

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಟರಿ ಮೆ॥ ಇ ಮೆಕಾನಿಯವರು ಸಂಸಾರ ಸಹಿತ ಅಕ್ಟೋಬರ್ ೧೭ ಕ್ಕೆ ಗೋಂಬಾಯಿಯ ಹಡಗನ್ನು ಹತ್ತಿ ಸೀಮೆಗೆ ಹೋಗಿ ಒಂದು ವರುಷದ ರಜೆ ಬಿರುವವರಾಗಿದಾರೆಂದು ಪ್ರಕಟವಾಗಿದೆ

* * * *

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರಾದ ಮೆ॥ ಮಾಧವರಾಯರಿಗೆ ಊರಿಂದೂರಿಗೆ ಹೋಗಿಬರುವುದಕ್ಕೆ ಅನುಕೂಲವಾಗುವಂತ ಸರ್ಕಾರದವರು ಎರಡು ಮೋಟಾರ್ ಗಾಡಿಗಳನ್ನು ಕೊಂಡುಕೊಟ್ಟು, ಅವುಗಳಿಗೆ ಶಿಬ್ಬಂದಿಯನ್ನು ಸ್ಯಾಂಕ್ಷನ್ ಮಾಡಿದಾರೆಂದು ತಿಳಿದುಬಂದಿದೆ

* * * *

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಸ್ಕೂಲಿನಲ್ಲಿ ಹಿಂದಿನ ವಾರ ವೆ॥ ರಂಗನ ವೆಂಕಟರಂಗಾಚಾರ್ಯರು ವಿದ್ಯಾಭ್ಯಾಸ ಫಲಗಳನ್ನು ಕುರಿತು ಉಪನ್ಯಾಸ ಮಾಡಿದರೆಂತಲೂ, ಸಭೆಯು ತುಂಬಾ ಸಂತೋಷಪಟ್ಟು ಅವರನ್ನು ವಂದಿಸಿದರೆಂತಲೂ ತಿಳಿದುಬಂದಿದೆ

* * * *

ಹೊಸದುರ್ಗದ ತಾಲ್ಲೂಕು ಸಾಣೆಹಳ್ಳಿ ದೊಡ್ಡ ಮಠದ ದೇಶಿಕೇಂದ್ರಸ್ವಾಮಿಗಳು ಹಿಂದಿನ ಶನಿವಾರ ಪರಿವಾರ ಸಮೇತರಾಗಿ ತರೀಕೆರೆ ತಾಲ್ಲೂಕು ... ಗ್ರಾಮಕ್ಕೆ ದಯಮಾಡಿದರೆಂತಲೂ ಅಲ್ಲಿ ಸುತ್ತಮುತ್ತಲಿನ ಪ್ರಜೆಗಳು ಸ್ವಾಮಿಗಳನ್ನು ಮ್ಯಾನಾದಲ್ಲಿ ಕೂರಿಸಿ ವೈಭವಪೂರ್ವಕವಾಗಿ ಉತ್ಸವಾದಿಗಳನ್ನು ನಡಿಸಿದರೆಂತಲೂ ಒಬ್ಬ ವರ್ತಮಾನದಾರರು ಬರೆಯುತ್ತಾರೆ

* * * *

ರಾಜಧಾನಿಯ ಬಸ್ ಬಂಗಲೆಯಲ್ಲಿ ಮೂಗುಪ್ರಾಣಿ ಮೃಗಗಳ ನೋಡಿಕೊಳ್ಳುವ ಮೆ॥ ಹೂಬರ್ ಯವರು ಒಬ್ಬ ಓಲೇಕಾರನನ್ನು ಹೊಡೆದುದು ಮೊಕದ್ದಮೆ ಆಗಿ, ಬೆಂಗಳೂರು ಡೆಪ್ಯುಟಿ ಕಮಿಷನರಾದ ಮೆ॥ ಸ್ಟ್ರಾಕ್ಸ್ ಯವರು ದರ್ಯಾಫ್ತು ಮಾಡಿ, ಮೆ॥ ಹೂಬರ್ ಯವರಿಗೆ ೧೦೦ ರೂಪಾಯಿ ಜುಲ್ಮಾನೆ ವಿಧಿಸಿ, ಅದರಲ್ಲಿ ೧೫ ರೂಪಾಯಿ ಫಿರ್ಯಾದಿಗೆ ಪ್ರತಿಫಲ ಕೊಡಿಸಿದರು

* * * *

ಕುಣಿಗಲು ತಾಲ್ಲೂಕು ಅಮೃತೂರು ಸ್ಕೂಲ್ ಅಸಿಸ್ಟೆಂಟ್ ಮಾಸ್ಟರು ಬಸ್ವಯ್ಯನೆಂಬಾತನು ಕಳೆದ ೧೧ನೆ ತಾ ಸಾಯಂಕಾಲ ಅಲ್ಲಿಂದ ಹೊರಟು ಹುಲಿಯೂರುದುರ್ಗಕ್ಕೆ ಹೋಗುತ್ತಿರುವಲ್ಲಿ ಪ್ರವಾಹಕ್ಕೆ ಸಿಕ್ಕಿದನೋ, ಕಾಡುಮೃಗಗಳ ಪಾಲಾದನೋ ಗೊತ್ತಾಗಲಿಲ್ಲವೆಂದು ಅವನ ತಾಯಿ, ಅಣ್ಣಂದಿರು, ಚಿಕ್ಕಹೆಂಡತಿ ಮೊದಲಾದವರು ದುಃಖಪಡುತ್ತಿದಾರೆ ಎಂಬುದಾಗಿ ಒಬ್ಬ ವಾರ್ತಾದಾರರು ಬರೆದಿದಾರೆ.

* * * *

ನೆನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ವಿವಾಹ ಮಹಾಲಯದಲ್ಲಿ ಕೈ ಸ್ಕೂಲ್ ಪ್ರಿನ್ಸಿಪಲ್ ರೆವ್ ಟೇಟ್ ಯವರಿಗೆ ಮಿಸ್ ವೈಗೊಲೆಷ್ಟಾ ಎಂಬಾಕೆಯನ್ನು ಕೊಟ್ಟು ವಿವಾಹೋತ್ಸವವ ನೆರವೇರಿಸಿದರು ಯೂರೋಪ್ಯಿಯನ್ ಸರ್ದಾರರೂ ದೊರೆಸಾನಿಗಳೂ ಊರಿನ ಅನೇಕ ದೊಡ್ಡಮನುಷ್ಯರೂ ಸ್ತ್ರೀಯರೂ ಗುಡಿಯ ತುಂಬಾ ಸೇರಿ ನೂತನ ವಧೂವರರಿಗೆ ಆಯುರಾರೋಗ್ಯಾದಿಗಳನ್ನು ಬಯಸಿದರು

* * * *

ಮೈಸೂರು ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಸರ್ಕಾರಿ ರಿಜಿಸ್ಟ್ರಾರ್ ಮೆ॥ ಎಂ ರಾಮರಾಯರು ನಾಳೆನಾಡಿದ್ದರಲ್ಲಿ ಸಿಂಲಾ ಪಟ್ಟಣಕ್ಕೆ ಪ್ರಯಾಣ ಮಾಡುವರು. ಹಿಂದುಸ್ಥಾನದ ಪರಸ್ಪರ ಸಹಾಯಕಸಂಘಗಳ ರಿಜಿಸ್ಟ್ರಾರುಗಳೆಲ್ಲಾ ಅಲ್ಲಿ ಸೇರಿ ಮಂತ್ರಾಲೋಚನೆ ಮಾಡುವರೆಂದು ತಿಳಿದುಬಂದಿದೆ ಮೈಸೂರು ಸರ್ಕಾರದವರು ಮೆ॥ ರಾಮರಾಯರನ್ನು ವ್ಯವಸಾಯದ ಬ್ಯಾಂಕುಗಳ ಇನ್ಸ್ಪೆಕ್ಟರ್ ಜನರಲ್ ಕೆಲಸಕ್ಕೂ ನೇಮಕಮಾಡಿದಾರೆಂದು ಕೇಳುತ್ತೇವೆ.

ಕೊಪ್ಪದ ತಾಲ್ಲೂಕು ಶಕಟಪುರ ಮಠದ ಶ್ರೀಕೃಷ್ಣಾನಂದಸ್ವಾಮಿಗಳು ಈ ಸಲ ೩೫ನೆ ಚಾತುರ್ಮಾಸವನ್ನು ಪುದುಕೋಟೆ ಸಂಸ್ಥಾನದ ತೀರುಮೆಯು ತಾಲ್ಲೂಕು ರಾಯಪುರದಲ್ಲಿ ಮುಗಿಸಿದರೆಂತಲೂ ಕಳೆದ ಪೌರ್ಣಮಿ ದಿನ ಅಮಲ್ದಾರರು, ಉದ್ಯೋಗಸ್ಥರು, ನಾಟುಕೋಟೆ ಶೆಟ್ಟಿಗಳು ಮುಂತಾದವರು ಸೇರಿ ಯಾತ್ರೆ ಮುಂತಾದದ್ದನ್ನು ಮಾಡಿಸಿದರೆಂತಲೂ, ಸ್ವಾಮಿಗಳೂ ಇನ್ನು ಕೆಲವು ಪಂಡಿತರೂ ಉಪನ್ಯಾಸಗಳನ್ನು ಮಾಡಿದರೆಂತಲೂ ಒಬ್ಬ ವಾರ್ತಾದಾರರು ಬರೆದಿದಾರೆ.

* * * *

ಕಳೆದ ಶನಿವಾರ ರಾತ್ರಿ ಅರಮನೆಯಲ್ಲಿ ಮೂರನೆ ಮಹಾರಾಜಕುಮಾರಿಯವರು ಹೆಣ್ಣುಶಿಶುವನ್ನು ಹೆತ್ತರು. ಶಿಶುವೂ ಬಾಣಂತಿಯೂ ಕ್ಷೇಮವಾಗಿದಾರೆ. ಶನಿವಾರ ಬೆಳಿಗ್ಗೆ ಸಂತೋಷಪ್ರದರ್ಶನಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಗಾಡಿಗಳಲ್ಲಿ ಸಕ್ಕರೆ ಮೂಟೆಗಳನ್ನು ಹೇರಿ ಎಲ್ಲಾ ಮೊಹಲ್ಲಗಳಿಗೂ ಕಳುಹಿಸಿ ಸಕ್ಕರೆಯನ್ನು ಪ್ರಜೆಗಳಿಗೆ ಬೀರಿಸಿದರು. ಇಲ್ಲಿನ ಸಮಸ್ತ ಪಾಠಶಾಲೆಗಳಿಗೂ ಹಣ್ಣು ಸಕ್ಕರೆ ಹಂಚಲ್ಪಟ್ಟಿದಾರೆ ... ದಿನ ಅರಮನೆಯಲ್ಲಿ ಪುತ್ರೋತ್ಸವ ಜರುಗುವುದೆಂದು ಕೇಳುತ್ತೇವೆ

* * * *

ಮದರಾಸ್ ಗವರ್ನರಾದ ಸರ್ ಆರ್ಥರ್ ಲಾಲಿಯವರು ಮುಂದಿನ ತಿಂಗಳ ಮೂರನೆಯ ವಾರದಲ್ಲಿ ಮೈಸೂರಿಗೆ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುವವರಾಗಿದಾರಷ್ಟೆ. ಅವರು ಬಂದಾಗ್ಗೆ ಇಲ್ಲಿ ನಡೆಯ ಬೇಕಾದ ಕಾರ್ಯಗಳನ್ನು ಕುರಿತು ಅವರ ಸಂಗಡ ಮಾತನಾಡಿ ಗೊತ್ತುಮಾಡಿಕೊಂಡು ಬರುವುದಕ್ಕಾಗಿ ನಮ್ಮ ರೆಸಿಡೆಂಟರಾದ ಮೆ॥ ಫ್ರೇಸರ್ ಯವರು ಪತ್ನಿ ಸಹಿತ ಬೆಂಗಳೂರಿಂದ ನೀಲಗಿರಿಗೆ ಹೋಗಿರುತ್ತಾರೆ. ಇವರು ಮುಂದಿನ ವಾರ ವಾಪಸು ಬರುತ್ತಾರೆಂದು ಕೇಳುತ್ತೇವೆ.

* * * *

ಕಳೆದ ವಾರ ಬೆಂಗಳೂರು ದಂಡಿನಲ್ಲಿ ಒಬ್ಬ ತುರುಕರವನು ತನ್ನ ನಾದಿನಿಯನ್ನು ಕೊಂದುಹಾಕಿ, ಅವಳು ಸಾಕುತ್ತಿದ್ದ ಅಣ್ಣನ ಮಗುವನ್ನು ಎತ್ತಿಕೊಂಡು ಬರುವಾಗ್ಗೆ ಒಬ್ಬ ಸಿಪಾಯಿ ಆ ಮಗುವನ್ನು ಅವನಿಂದ ಕಿತ್ತುಕೊಂಡ ಹಾಗೂ, ಕೊಲೆಗಾರನು ಓಡಿಹೋಗಿ ತನ್ನ ಮನೆಯಲ್ಲಿದ್ದಾಗ ಪೋಲೀಸ್ ಅಧಿಕಾರಿಯು ಅವನನ್ನು ಹಿಡಿದು ಕೇಳಿದಾಗ ಅವನು ತಾನು ಕೊಲೆ ಮಾಡಲಿಲ್ಲವೆಂತಲೂ ಇನ್ನೊಬ್ಬ ಮಾಡಿದನೆಂತಲೂ ಹೇಳಿದ ಹಾಗೂ, ಈಗ ಅವರಿಬ್ಬರನ್ನೂ ಹಿಡಿದು ಲಾಕಪ್ಪಿನಲ್ಲಿ ಇಟ್ಟಿರುವ ಹಾಗೂ ತಿಳಿದುಬಂದಿದೆ.

* * * *

ದೇವನಹಳ್ಳಿ ತಾಲ್ಲೂಕು ಪಾಳ್ಯದ ಹಳ್ಳಿ ಸ್ಕೂಲ್ ಮಾಸ್ಟರು ಕಳೆದ ಗುರುವಾರ ಮಧ್ಯಾಹ್ನ ಅಲ್ಲಿನ ಕೋಟೆ ಕೆತ್ತಲದ ಹಳ್ಳದಲ್ಲಿ ಯಾರೋ ಆಗತಾನೇ ಹೆತ್ತು ಜೀವ ಸಹಿತ ತಂದಿಟ್ಟಿದ್ದ ಒಂದು ಹೆಣ್ಣುಕೂಸನ್ನು ಕಂಡು ಜನರನ್ನೆಲ್ಲಾ ಕೂಡಿಹಾಕಿ ಎಲ್ಲರ ಅನುಮತಿಯ ಪ್ರಕಾರ ಆ ಕೂಸನ್ನು ಒಬ್ಬ ಮುಸಲ್ಮಾನರವನಿಗೆ ಸಾಕಿಕೊಳ್ಳುವುದಕ್ಕಾಗಿ ಕೊಟ್ಟ ಹಾಗೂ, ಈಗ ಆ ಕೂಸು ಆರೋಗ್ಯವಾಗಿ ಬೆಳೆಯುತ್ತಿರುವ ಹಾಗೂ, ಆದರೆ ಅದನ್ನು ಹೆತ್ತ ತಾಯಿ ಯಾರೆಂಬುವುದು ಪತ್ತೆಯಾಗಲಿಲ್ಲವೆಂತಲೂ ಒಬ್ಬ ವಾರ್ತಾದಾರರಿಂದ ತಿಳಿದುಬಂದಿದೆ

* * * *

ಆನೇಕಲ್ಲು ಕಸಬಾದಲ್ಲಿರುವ ಶ್ರೀಮಂತರಾದ ಸಾಹುಕಾರ್ ಹುಚ್ಚೀರಪ್ಪನವರು ತಮ್ಮ ಕುಮಾರನಿಗೆ ಅದೇ ತಾಲ್ಲೂಕು ಅರಗಡ್ಡೆ ಕೋಟೆ ರಾಜಾಪುರದಲ್ಲಿರುವ ಸಾ॥ ಸಿದ್ಧರಾಮಯ್ಯನವರ ಕುಮಾರ್ತೆಯನ್ನು ತಂದುಕೊಂಡು, ವಿವಾಹ ನಡಸಿ, ಹದಿನೈದು ದಿನಗಳ ವರೆಗೆ ಉತ್ಸವಗಳನ್ನು ಮಾಡಿಸಿದರೆಂತಲೂ, ಈ ವಿವಾಹಕ್ಕೆ ಅನೇಕ ಕಡೆಗಳಿಂದ ಬಂಧು ಮಿತ್ರಾದಿಗಳು ಹೋಗಿದ್ದರೆಂತಲೂ, ಸಾಹುಕಾರರು ಸುಮಾರು ೫,೦೦೦ ರೂಪಾಯಿನ ತನಕ ಖರ್ಚುಮಾಡಿ ಸಕಲ ವಿಧವಾದ ದಾನಗಳನ್ನೂ ಮಾಡಿದರೆಂತಲೂ ಒಬ್ಬ ವಾರ್ತಾದಾರರು ಬರೆಯುತ್ತಾರೆ.

* * * *

ಪ್ಲೇಗ್ ಗಲಾಟೆಯ ಉದ್ದಿಶ್ಯ ಜನರು ತಮ್ಮ ನಗನಾಣ್ಯಗಳನ್ನು ಮೊಹರು ಮಾಡಿದ ಪೆಟ್ಟಿಗೆಗಳಲ್ಲಿಟ್ಟು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಖಜಾನೆಗಳಿಗೆ ಕೊಡಬಹುದೆಂದು ಸರ್ಕಾರದವರು ರಿಯಾಯಿತಿ ತೋರಿಸಿದ್ದರು. ಪ್ಲೇಗ್ ನಿಂತು ಬಹು ಕಾಲವಾದರೂ ಜನರು ತಮ್ಮ ಪೆಟ್ಟಿಗೆಗಳನ್ನು ವಾಪಸು ತೆಗೆದುಕೊಂಡು ಹೋಗದೆ ಇರುವುದನ್ನು ಕೇಳಿ ಸರ್ಕಾರದವರು ಇನ್ನು ಮೇಲೆ ಪ್ಲೇಗ್ ನಿಂತು ಜನರು ಊರಿಗೆ ವಾಪಸು ಬಂದ ಮೂರು ತಿಂಗಳೊಳಗಾಗಿ ತಮ್ಮ ಪೆಟ್ಟಿಗೆಗಳನ್ನು ತೆಗೆಸಿಕೊಂಡು ಹೋಗದಿದ್ದರೆ ಪೆಟ್ಟಿ ಕಮಿಷನರಿಗೆ ನೋಟೀಸು ತೋರಿಸಿದಲ್ಲಿ ಅಂಥಾ ಪ್ರತಿ ಪೆಟ್ಟಿಗೆಗೂ ತಿಂಗಳಿಗೆ ೪ ಆಣೆ ಲಾಗಾಯಿತು ೧ ರೂಪಾಯಿ ವರೆಗೆ ಫೀಸು ಗೊತ್ತುಮಾಡಿ ಮಾಲೀಕರಿಂದ ವಸೂಲ್ಮಾಡಬಹುದಾಗಿದೆ ಎಂದು ಹುಕುಂ ಕೊಟ್ಟಿದಾರೆ

* * * *

ಒಬ್ಬ ವಾರ್ತಾದಾರರು ಬರೆಯುವುದು—ಚನ್ನರಾಯ ಪಟ್ಟಣದ ತಾಲ್ಲೂಕು ಶ್ರವಣಬೆಳಗುಳದ ಕೋಟೆ ಹೊಸಹಳ್ಳಿ ಹತ್ತರ ಕಳೆದ ೬ನೆ ತಾ ಗುರುವಾರ ಗನ್ನಿಕೊಳೆಯಲ್ಲಿ ಹಾಕಿದ್ದ ದೋಣಿಯಲ್ಲಿ ಒಂಬತ್ತು ಜನ ಪ್ರಯಾಣಿಕರು ಕೂತಿರುವಾಗ್ಗೆ ದೋಣಿಯಲ್ಲಿ ಆರ್ಧಕೆಯಷ್ಟು ಕನ್ನ ಬಿತ್ತು ಅವರೆಲ್ಲಾ ಎದ್ದು ನಿಂತುಕೊಂಡರು ಕನ್ನದಿಂದ ನೀರು ಒಳಕ್ಕೆ ಬರುತ್ತಾ ಅಗಲವಾಯಿತು ದೋಣಿಯಿಂದ ನೀರನ್ನು ತುಂಬಿ ಆಚೆಗೆ ಹಾಕುವಷ್ಟರಲ್ಲಿ ಅವರೆಲ್ಲಾ ಒಂದೇ ಕಡೆ ಕೂಟವಾಗಿ ನಿಂತದ್ದರಿಂದ ದೋಣಿಯು ಮುಳುಗಿ ಎಲ್ಲರೂ ತೇಲಿಹೋದರು ಇಂಥಾ ಸ್ಥಳದವರೆನ್ನುವುದು ತಿಳಿಯಲಿಲ್ಲ. ಅವರನ್ನು ಪತ್ತೆ ಮಾಡಲು ಅಗ್ಗೆ ತುಂಬಾ ಸೂಳೆಯಾದ್ದರಿಂದ ಅವಕಾಶ ಕೊಡಲಿಲ್ಲ ಮುಂದೆ ಬಾನೆ ಹಳೇದಾಗಿರುವ ಕರ್ಮಪುರ್ರ ದೋಣಿಯನ್ನು ಹೊಳೆಗೆ ಹಾಕದಂತೆ ಹುಕುಂ ಕೊಡುತ್ತಾರೆಂಬದಾಗಿ ನಂಬಿದ್ದೇವೆ.

* * * *

ರಾಜಧಾನಿಯ ಕೃಷ್ಣರಾಜಮೊಹಲ್ಲಾ ಹಳೇ ಅಗ್ರಹಾರದ ಅಂಗಡಿ ಬೀದಿಯಲ್ಲಿ ಚಿಲ್ಲರೆ ಅಂಗಡಿ ರುದ್ರಪ್ಪನು ತನ್ನ ಅಂಗಡಿಗೆ ಬೇಕಾದ ಸಾಮಾನುಗಳನ್ನು ತರುವ ನಿಮಿತ್ತ ನಗದು ರೂ. ೨೦ ತೆಗೆದುಕೊಂಡು ರೇಷ್ಮೆ ವಸ್ತ್ರ ಮೊದಲಾಗಿ ಬಟ್ಟೆ ಹಾಕಿಕೊಂಡು ದೊಡ್ಡಪೇಟೆಗೆ ಹೋಗುತ್ತಿದ್ದಾಗ ಆತನ ಒಬ್ಬ ಸ್ನೇಹಿತನು ಸಿಕ್ಕಿ ಕರೆದುಕೊಂಡು ಹೋಗಿ ನಂಬಿಕೆಯಿಂದ ಆತನಿಗೆ ಒಂದು ತರಹಾ ಲೇಹ್ಯವನ್ನು ಕೊಟ್ಟು ಜ್ಞಾನ ತಪ್ಪಿಸಿ ಆತನ ಬಳಿ ಇದ್ದ ೨೦ ರೂಪಾಯನ್ನೂ ಸುಮಾರು ೨೦ ರೂ ಬಾಳುವ ರೇಷ್ಮೆ ವಸ್ತ್ರವನ್ನು ತೆಗೆದುಕೊಂಡು ಹೋದನಂತೆ. ಅನಂತರ ಜ್ಞಾನ ತಪ್ಪಿದ್ದ ಈತನನ್ನು ಸೆಂಟ್ರಲ್ ಪೋಲೀಸ್ ಸ್ಟೇಷನ್ನಲ್ಲಿಟ್ಟದಾರೆಂಬ ಸಂಗತಿ ಆತನ ಭಾವಮೈದನೆ ಮೊದಲಾದವರಿಗೆ ತಿಳಿದು ಅವರು ಗಾಡಿಯಲ್ಲಿ ಮನೆಗೆ ಕರೆತಂದು ಉಪಚರಿಸುತ್ತಲಿದಾರೆ ಎಂಬದಾಗಿ ಒಬ್ಬ ವಾರ್ತಾದಾರರು ಬರೆದಿರುವರು.

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಸೋಮವಾರದ ಲೇಖನದ ಮೇಲೆ "ಬಹುಮಾನದ ಮೇಲಾಟ" ... ಬರೆದು ... (೨) ಲೇಖನವು ವಾರ್ತಾದಾರರು ... ಬಹುದು ... ದಿನಗಳೊಳಗೆ ನಡೆದ ವಿಷಯವಾಗಿ ... ಅರ್ಥಕಾಲವಾಗಿ ... ಒಂದು ... (೩) ಪ್ರತಿಯೊಂದು ಲೇಖನವು ನಮ್ಮ ... ಪ್ರತಿವಾರವೂ ಸೋಮವಾರ ... (೪) ಬಹುಮಾನ ಪಡೆವವರ ಹೆಸರನ್ನು ವಾರ ವಾರವೂ ಪ್ರಕಟಿಸುವೆವು, ... ಮೂಲಕ ರವಾನಿಸುವೆವು (೫) ಬಹುಮಾನ ... ಬರುವಂಥ ಲೇಖನಗಳು ವೃತ್ತಾಂತ ಪತ್ರಿಕಾ ಕರ್ತರ ... ಒಂದು ತಿಂಗಳಲ್ಲಿ ಒಬ್ಬ ಲೇಖಕನಿಗೆ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ವಾರ್ತೆಯನ್ನು ಕಳುಹಿಸಿದ ಮೆ॥ ಎ, ಗುರುಶಾಂತಪ್ಪ, ಕಾನೂರುಗೌಡ, ಶಿಕಾರಿಪುರ ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ]

ಮದ್ಯಪಾನ ಮಾಡಿದವರ ಜಗಳ

ಮೊನ್ನೆ ತಾ ೧ ನೇ ಶನಿವಾರ ರಾತ್ರಿ ೯ ಗಂಟೆ ಸಮಯದಲ್ಲಿ ನಾನೂ ನನ್ನ ಸೇವಕನೂ ಕೆರೆ ನೀರು ತರುವದಕ್ಕೆ ೨ ಫರ್ಲಾಂಗು ದೂರದಲ್ಲಿರುವ ಕಾರುಬಾರ ಗುಂಡಿಗೆ ಗಾಡಿ ಹೊಡೆದುಕೊಂಡು ಹೋಗುತ್ತಿದ್ದೆವು ಊರನ್ನು ದಾಟಿದ ನಂತರ ಅರ್ಧ ಫರ್ಲಾಂಗ್ ದೂರ ಹೋದೆವೊ ಇಲ್ಲವೊ ಹ್ಯಾಗೋ ಆ ಕಡೆಗೆ ನನ್ನ ದೃಷ್ಟಿ ಬಿತ್ತು ತತ್ಕ್ಷಣವೇ ಅಲ್ಲಿ ಒಂದು ದೊಡ್ಡ ಉರಿ ಕಾಣಿಸಿತು ಆ ಉರಿಯು ನನಗೆ ತುಂಬಾ ಭಯವನ್ನು ಉಂಟುಮಾಡುವ ಹಾಗಿತ್ತು ಯಾಕೆಂದರೆ ಈಗ ಸುಮಾರು ಒಂದು ತಿಂಗಳ ಕೆಳಗೆ ನನ್ನ ಕಾರುಬಾರ ಗುಂಡಿಯ ಆಸುಪಾಸು ಜಮೀನಿನಲ್ಲಿ ಒಂದು ಸಾರಿ ರಾತ್ರಿ ೧೦ ಗಂಟೆ ಸಮಯದಲ್ಲಿ ೧೦—೧೫ ಜನಗಳುಳ್ಳ ಒಂದು ಗುಂಪು ಕಾಣಿಸಿತೆಂತಲೂ ಅದರಲ್ಲಿ ವಿಕೃತಾಕಾರಿಗಳಾದ ಜನಗಳು ಭಯಂಕರ ವೇಷಧಾರಿಗಳಾಗಿ ನಾನಾ ವಿಧವಾದ ಭಾಷೆಗಳಲ್ಲಿ ಮಾತನಾಡುತ್ತಾ ಅಡಿಗೆ ಮಾಡುವದಕ್ಕೋಸ್ಕರ ಬೆಂಕಿಯನ್ನು ಹಾಕಿಕೊಂಡಿದ್ದರೆಂತಲೂ ಅವು ಪಿಶಾಚಗಳೇ ಸರಿಯೆಂಬದಾಗಿಯೂ ನೋಡಿಕೊಂಡವರನೇಕರು "ನಾವು ಅರ್ಧದಾರಿಗೆ ಹೋಗಿ ಬೆದರಿ ಹಿಂತಿರುಗಿ ಬಂದೆವೆಂ"ದು ನನಗೆ ತಿಳಿಸಿದರು ನಾನಾದರೋ ಅವು ದೆವ್ವಗಳೆಂತ ಮನಸ್ಸಿನಲ್ಲಿ ಕೂಡಾ ನೆನಸಿದ್ದಿಲ್ಲ. ಆ ವರ್ತಮಾನವು ತಕ್ಷಣವೇ ಜ್ಞಾಪಕಕ್ಕೆ ಬಂದು ನನಗೆ ಭಯವನ್ನು ಉಂಟುಮಾಡಿತು ಇಷ್ಟೆಲ್ಲಾ ಯೋಚನೆಮಾಡುವದರೊಳಗೆ ಕಾಲು ಫರ್ಲಾಂಗು ಮುಂದೆ ಹೋದೆವು ಮುಂದಕ್ಕೆ ಹೋದಹಾಗೆಲ್ಲಾ ಭಯ ಹೆಚ್ಚುತ್ತಾ ಬಂತು ಹಾಗೂ ಹೀಗೂ ಆಗಿ ಸಮೀಪಕ್ಕೆ ಹೋದೆವು ಉರಿಯ ಸಮೀಪದಲ್ಲಿ ಎರಡು ಜನ ಮುದುಕರು ಕುಂತು ಬಂದರು ಇವರಾದರೋ ಮೇಲೆ ಹೇಳಿದ ಜನಗಳಿಗೆ ಸದೃಶರಾಗಿದ್ದರು. ಹಾ! ಇನ್ನೇನು ಹೇಳಲಿ! ಅವರ ಮುಂಡಾಸುಗಳನ್ನೂ ಗಡ್ಡ ಮೀಸೆಗಳನ್ನೂ ನೋಡಿದರೆ ಯಾರಿಗೆ ತಾನೇ ಭಯವಾಗದೆ ಇದ್ದೀತು! ಎತ್ತುಗಳು ಗಾಡಿಯನ್ನೆಳೆದುಕೊಂಡು ಇನ್ನೂ ಸಮೀಪಕ್ಕೆ ಹೋದವು. ಮರದ ಬುಡದಲ್ಲಿ ಕೂತಿದ್ದ ೪—೧೦ ಜನಗಳು ಈ ಮುದುಕರಂತೆಯೇ ಇದ್ದರು ಇವರು ತಮ್ಮ ತಮ್ಮೊಳಗೆ ಜಗಳವಾಡುತ್ತಿದ್ದಂತೆ ಕಾಣಬಂತು: ಅಷ್ಟರಲ್ಲೇ ಜಮೀನು ಕಾಯುವದಕ್ಕೆ ಹೋಗಿದ್ದ ಒಬ್ಬ ರೈತನು ಮಾತನಾಡುತ್ತಿದ್ದ ಧ್ವನಿ ಕೇಳಬಂತು ಆಗ ನನಗೆ ಸ್ವಲ್ಪ ಧೈರ್ಯವಾಯಿತು ಅವರನ್ನು ವಿಚಾರಿಸಬೇಕೆಂದು ಆಲೋಚಿಸಿ ನೀವ್ಯಾರೆಂದು ಕೇಳಿದೆನು ಅವರು "ನಾವು ಸಾಮಿ, ಕೊರಸರು" ಎಂದರು ಅದೇನು ಜಗಳವೆಂದು ಕೇಳಿದೆನು. ಅವರಲ್ಲಿ ಒಬ್ಬ ಮುಖ್ಯಸ್ಥನಾಗಿದ್ದವನು "ನೋಡಿ ಬುದ್ಧೀ, ಇವನು ನನ್ನಿಂದ ದುಡ್ಡು ಕಸುಕೊಂಡು ಹೆಂಡ ಕುಡಿದು ಬಿದ್ದವನೆ, ಕೇಳಿದರೆ ನಂಗೆ ಬಡಿಯಾಕೆ ಬರುತ್ತಾನೆ ಸಾಮಿ" ಎಂದನು ಪಂಕಿ ಯಾತಕ್ಕೆಂತ ಕೇಳಿದೆನು ಅವನು— "ಅಂಬಲಿ ಕಾಸ್ತೇವೆ ಸಾಮಿ" ಎಂದನು ನಾನು ಹೆದರಿಕೆಯಿಂದ ಅವರ ಸಂಗಡ ವಿಶೇಷ ಮಾತನಾಡದೆ ನೀರು ತುಂಬಿಕೊಂಡು ಈ ಗಂಡಾಂತರದಿಂದ ತಪ್ಪಿಸಿಕೊಂಡು ಬಂದೆನು.

ಇಂಥಾ ಕ್ಷಾಮದಲ್ಲಿ ಕೂಡಾ ಈ ಜನಗಳು ಹೆಂಡ ಮುಂತಾದ ಮಾದಕ ಪದಾರ್ಥಗಳನ್ನು ಕುಡಿದು, ದ್ರವ್ಯ ನಷ್ಟ ಮಾಡಿಕೊಳ್ಳುವರಲ್ಲದೆ, ಬುದ್ಧಿಯನ್ನೂ ಕೆಡಿಸಿಕೊಂಡು ಬಲಹೀನತ್ವವನ್ನು ಹೊಂದಿ, ಪ್ರಪಂಚದ ಜನಗಳಿಗೆ ಸಂಕಟವನ್ನುಂಟು ಮಾಡುವ ನರಾಧಮರಾಗದೆ ತಮ್ಮ ತಮ್ಮ ಮತಾನುಸಾರ ವಿನಾವಾಗಿ ಉಪಯೋಗಿಸಿ, ಸುಖವಾಗಿರಬಾರದೇ!

ಇಂಡಿಯಾ ದೇಶದ ವೃತ್ತಾಂತಗಳು.

ರಂಜಾನ್ ಹಬ್ಬವು ಮುಗಿದು ಈದ್ ಉಲ್ ಫಿತರ್ ಉತ್ಸವವನ್ನು ತೀರಿಸಿಕೊಂಡು ಅಮೀರರು ಕಾಬೂಲಿನಿಂದ ಹೊರಡುವವರಾಗಿದಾರೆ.

****

ಗುಜರಾತ್ ಪಟ್ಟಣದ ಕಾಜೀಪುರವೆಂಬ ಬೀದಿಯಲ್ಲಿ ಹತ್ತಿ ಮೂಟೆಗಳನ್ನು ಆಧಾರವಾಗಿ ಇಟ್ಟಿದ್ದ ದೊಡ್ಡ ಮನೆಗೆ ಬೆಂಕಿ ಬಿದ್ದು ೫೦,೦೦೦ ರೂಪಾಯಿನ ಹತ್ತಿ ಮುಂತಾದ್ದು ಸುಟ್ಟುಹೋಯಿತು.

****

ಜುನಗಢ ಸಂಸ್ಥಾನದ ರಾಜರು ಕಾಲವಾದ್ದರಿಂದ ಗಾದಿಗೆ ಅವರ ಸಂಬಂಧಿಗಳ್ಯಾರಿದ್ದಾರೆಂದು ಹುಡುಕಲಾರಂಭವಾಗಿದೆ. ಉಪ್ರೈಲಾ ಭಾಯಾತ್ ವಂಶದಲ್ಲಿ ಎಂಟು ವರುಷದ ಒಬ್ಬ ಹುಡುಗನಿದ್ದಾನೆಂದೂ ಈ ಹುಡುಗನಿಗೆ ಪಟ್ಟವಾಗಬೇಕೆಂದೂ ಹೇಳುತ್ತಾರೆ

****

ದಕ್ಷಿಣದೇಶದಲ್ಲಿ ಪಾಂಬನ್ ಪಟ್ಟಣದಿಂದ ರಾಮೇಶ್ವರಕ್ಕೆ ರೈಲ್ ರಸ್ತೆ ತಯಾರಾಯಿತು. ಕಳೆದ ೩ ನೆ ತಾರೀಖಿನಿಂದ ರೈಲ್ ಗಾಡಿಗಳನ್ನು ಬಿಡುತ್ತಿದಾರೆ. ಯಾತ್ರಿಕರಿಗೂ ವ್ಯಾಪಾರಗಾರರಿಗೂ ಇದರಿಂದ ತುಂಬಾ ಅನುಕೂಲವಾಗುವದೆನ್ನುವುದಕ್ಕೆ ಸಂಶಯವಿಲ್ಲ.

****

ಹಿಂದುಸ್ಥಾನದಲ್ಲಿ ಈಗ ೭೦೩ ವರ್ತಮಾನ ಪತ್ರಿಕೆಗಳು ಪ್ರಕಟವಾಗುತ್ತಿವೆ. ಅಂದರೆ ಹತ್ತುವರುಷಗಳಿಂದೀಚೆಗೆ ೧೦೦ ಪತ್ರಿಕೆಗಳು ಹೆಚ್ಚಿದವು. ಈ ಪೈಕಿ ಬೊಂಬಾಯಿ ಆಧಿಪತ್ಯದಲ್ಲೇ ಹೆಚ್ಚು ಪತ್ರಿಕೆಗಳು ೪೧೧ರಷ್ಟಿವೆ; ಅದಕ್ಕೆ ಎರಡನೆಯದು ಪಂಜಾಬ್ ಆಧಿಪತ್ಯವು.

****

ದರ್ಭಾಂಗಸಂಸ್ಥಾನದ ಮಹಾರಾಜರವರು ತಮ್ಮ ಹೆಸರಿನಲ್ಲಿ ಕಲ್ಕತ್ತಾ ವಿದ್ಯಾಸಂಘಕ್ಕೆ ೯,೦೦೦ ರೂಪಾಯಿ ಕೊಡುಗೆಯಾಗಿ ಕೊಟ್ಟು, ಈ ಫಂಡಿನ ಉತ್ಪತ್ತಿಯಲ್ಲಿ ಬೀಹಾರ್ ಕಡೆಯಿಂದ ವೈದ್ಯವನ್ನು ಕಲಿಯುವುದಕ್ಕಾಗಿ ಕಲ್ಕತ್ತೆಗೆ ಹೋಗುವ ವಿದ್ಯಾರ್ಥಿಗಳಿಗೆ ಮಾಸಾಶನವನ್ನು ಕೊಡಬೇಕೆಂದು ಬರೆದಾರೆ.

****

ಕಾನ್ಪುರದಲ್ಲಿ ವೈಟ್ ಥ್ರೆಡ್ ಇಂಜನಿಯರಾದ ಮಿ. ಕ್ರೇಗ್ ಎಂಬವರ ಮೇಲೆ ಅವರ ಹಣಕಾರನ ೫೦೦ ರೂಪಾಯಿನ ನಾಣ್ಯವನ್ನು ಕೊಂದುಹಾಕಿದನೆಂದು ಫಿರ್ಯಾದು ಆಗಿತ್ತು. ಫಿರ್ಯಾದಿಯು ಕೊಟ್ಟ ರುಜುವಾತು ತೃಪ್ತಿಕರವಾಗಿಲ್ಲವೆಂದು ಜಾಯಿಂಟ್ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ವಜಾ ಮಾಡಿರುತ್ತಾರೆ

****

ದರ್ಭಾಂಗಸಂಸ್ಥಾನದ ಮಹಾರಾಜರವರ ಅಜ್ಜಿಯವರಾದ ರುದ್ರಪ್ರಿಯೆಮಹಾರಾಣಿಯವರು ಕಾಶೀಪಟ್ಟಣದ ಮಣಿಕರ್ಣಿಕಾಘಾಟಿನಲ್ಲಿ ಕಾಲವಾದರೆಂದು ತಂತೀವರ್ತಮಾನ ಬಂದಿದೆ. ಅವರಿಗೆ ೮೦ ವರುಷವಾಗಿತ್ತು. ಅವರು ಅನೇಕ ದಾನಧರ್ಮಗಳನ್ನು ಮಾಡಿ ಪೂಜೆ ವ್ರತ ನೇಮನಿಷ್ಠೆಗಳಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದರು.

****

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ೩,೧೯೩ ಜನರು ಪ್ಲೇಗ್ ಉಪದ್ರದಲ್ಲಿ ಕಾಲವಾಗಿದಾರೆ. ಈ ಪೈಕಿ ಬೊಂಬಾಯಿ ಆಧಿಪತ್ಯದಲ್ಲಿ ೧,೬೮೮ ಮರಣಗಳಾಗಿವೆ. ಬಿಹಾರದಲ್ಲಿ ೧೩೩, ಬಂಗಾಳಾ ೧೦೦, ಮಧ್ಯಪ್ರಾಂತ್ಯಗಳು ೧೮೯, ಮೈಸೂರು ಸಂಸ್ಥಾನದಲ್ಲಿ ೩೮, ಇಂದೋರ್ ಸಂಸ್ಥಾನದ ರಾಜಧಾನಿ ಒಂದರಲ್ಲೇ ೧೩೩ ಮರಣಗಳಾಗಿರುವವು.

****

ಒಬ್ಬ ಹೆಂಗಸು ಕೊಲೆಮಾಡಿದ್ದರಿಂದ ಅವಳಿಗೆ ಸರ್ಕಾರದವರು ಜೀವ ಸಜಾ ವಿಧಿಸಿ ಅವಳನ್ನು ಫತ್ತೇಘರ್ ಪಟ್ಟಣದ ಬಂದೀಖಾನೆಯಲ್ಲಿಟ್ಟಿದ್ದರು. ಈ ಹೆಂಗಸು ಜೈಲಿನಿಂದ ಕಳೆದ ವಾರ ತಪ್ಪಿಸಿಕೊಂಡು, ಇಪ್ಪತ್ತು ಮೈಲಿ ದೂರದ ಒಂದು ಹಳ್ಳಿಗೆ ಒಂದೇ ದಿನದಲ್ಲಿ ಹೊರಟು ಹೋಗಿದ್ದಳು. ಆ ಹಳ್ಳಿಯ ಚೌಕಿದಾರನು ಅವಳನ್ನು ಹಿಡಿದು ಪಹರೆ ಇಟ್ಟು ಮೇಲ್ಕಂಡ ಜೈಲಿಗೆ ಕಳುಹಿಸಿಕೊಟ್ಟನು. ಈ ಹೆಂಗಸಿನ ಧೈರ್ಯವೇ ಧೈರ್ಯ !

****

ತಿರುವಾಂಕೂರು (ಅನಂತಶಯನ) ಸಂಸ್ಥಾನದಲ್ಲಿ ಶ್ರೀಮೂಲಂ ಪ್ರತಿನಿಧಿಸಭೆಯನ್ನು ಸದ್ಯ ನಡಿಸಕೂಡದೆಂದು ಸರ್ಕಾರದವರು ತಿಳಿಸಿದ್ದಾರೆಂದು ಪ್ರಜೆಗಳು ಬಹಳ ಚಿಂತೆಪಡುತ್ತಲೂ, ಅಲ್ಲಲ್ಲಿ ಸಭೆಗಳನ್ನು ಮಾಡಿ ತಮ್ಮ ತೀರ್ಮಾನಗಳನ್ನು ಸರ್ಕಾರಕ್ಕೆ ತಿಳಿಯಪಡಿಸುತ್ತಲೂ, ಈ ವರುಷವೂ ಎಂದಿನಂತೆ ಸಭೆಯನ್ನು ನಡಿಸಲೇಬೇಕೆಂದು ಮಹಾರಾಜರವರಿಗೂ ದಿವಾನರವರಿಗೂ ವಿಜ್ಞಾಪನಾಪತ್ರಿಕೆಗಳನ್ನು ಕಳುಹಿಸುತ್ತಲೂ ಇದ್ದಾರೆಂದು ಪ್ರಕಟವಾಗಿದೆ.

****

ವಿಲಾಯತಿಯಲ್ಲಿ ಹೋದ ತಿಂಗಳು ಡಬ್ಲಿಯು. ಸಿ. ಬಾನರ್ಜಿಯವರು ಕಾಲವಾದರೆಂದು ತಿಳಿಸಿದೆವಷ್ಟೆ. ಕಲ್ಕತ್ತೆಯಲ್ಲಿ ಅವರ ದಾಯಾದಿಯು ಉತ್ತರಕ್ರಿಯಾದಿಗಳನ್ನು ಮಾಡಿ ಬ್ರಾಹ್ಮಣರ ಸಮಾರಾಧನೆಗೆ ೩,೦೦೦ ರೂಪಾಯಿ, ಬಡಬಗ್ಗರ ಸಮಾರಾಧನೆಗೆ ೩,೦೦೦ ರೂ., ಜ್ಞಾತಿಗಳ ಮತ್ತು ಸ್ನೇಹಿತರ ಸಮಾರಾಧನೆಗೆ ೧,೦೦೦ ರೂಪಾಯಿ ಈ ರೀತಿ ಏಳು ಸಾವಿರ ರೂಪಾಯನ್ನು ಒಂದು ವಾರದೊಳಗೆ ಖರ್ಚು ಮಾಡಿಬಿಟ್ಟನೆಂದು ಪ್ರಕಟವಾಗಿದೆ

****

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಮುಸಲ್ಮಾನನೂ ಒಬ್ಬ ಹಿಂದುವೂ ಸೇರಿ ನೆರೆಮನೆಯ ಯಜಮಾನನು ಇಲ್ಲದಿದ್ದಾಗ ಅವನ ಮನೆ ನುಗ್ಗಿ ಕೋಣೆಯ ಬಾಗಿಲನ್ನು ಒಡೆದು ಒಳಗೆ ಮಲಗಿದ್ದ ಯಜಮಾನನ ಹೆಂಡತಿಯನ್ನು ಎತ್ತಿಕೊಂಡು ಹೋಗಿ ಒಂದು ಹೊಲದಲ್ಲಿ ಮಲಗಿಸಿ ಹೊಡೆದು ಬಡಿದು ಮಾನಭಂಗ ಮಾಡುವುದಕ್ಕೆ ಪ್ರಯತ್ನಪಟ್ಟರು. ಸೆಷನ್ಸ್ ಜಡ್ಜರು ಪಂಚಾಯಿತರ ಅಭಿಪ್ರಾಯದಂತೆ ಅವರಿಬ್ಬರಿಗೂ ತಲಾ ಹತ್ತು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

****

ರಂಗೂನ್ ಪಟ್ಟಣದಲ್ಲಿರುವ ಬರ್ಮೀಯರ ದೊಡ್ಡ ದೇವಸ್ಥಾನದೊಳಕ್ಕೆ ಮೂವರು ಪಂಜಾಬಿ ಮಿಲ್ಟೇರಿ ಪೋಲೀಸಿನವರು ನುಗ್ಗಿ, ಒಳಗಿದ್ದ ಬಹು ಅಪೂರ್ವ ವಸ್ತುಗಳನ್ನೂ ದ್ರವ್ಯವನ್ನೂ ಅಪಹರಿಸಬೇಕೆಂದು ಶೋಧನೆಮಾಡುತ್ತಿದ್ದರೆಂತಲೂ ಅವರನ್ನು ಸರ್ಕಾರದವರು ಹಿಡಿದು ದರ್ಯಾಫ್ತು ಮಾಡುತ್ತಿದಾರೆಂತಲೂ ತಿಳಿಸಿದ್ದೆವಷ್ಟೆ. ಈ ಮೂರು ಮಂದಿಗೂ ಅತ್ಯಂತ ಕಠಿಣವಾದ ಅಂದರೆ ತಲಾ ಮೂರುವರೆ ವರುಷದಂತೆ ಕಠಿಣ ಸಜಾ ವಿಧಿಸಲ್ಪಟ್ಟಿತೆಂದು ತಂತೀ ವರ್ತಮಾನ ಬಂದಿದೆ.

****

ಲಾಹೋರ್ ಪಟ್ಟಣದಲ್ಲಿ ಒಬ್ಬ ಪೋಸ್ಟ್ ಜವಾನನು ಬೀದಿಯಲ್ಲಿದ್ದ ಒಂದು ಕಂಬದ ಅಂಚೆ ಪೆಟ್ಟಿಗೆಯಿಂದ ದಿನವಹಿ ಕಾಗದಗಳನ್ನು ತೆಗೆದು ಪೋಷ್ಟಾಫೀಸಿಗೆ ಕೊಡದೆ ಅವುಗಳಿಗೆ ಜನರು ಅಂಟಿಸಿ ಹಾಕಿದ್ದ ತಲೇ ಚೀಟಿ (ಸ್ಟಾಂಪು) ಗಳನ್ನು ಕಿತ್ತುಕೊಂಡು, ಅದೇ ಪಟ್ಟಣದಲ್ಲಿ ಪ್ರಕಟವಾಗುವ ಗುಲ್ಜಾರಿ ಹಿಂದ್ ಎಂಬ ವರ್ತಮಾನ ಪತ್ರಿಕೆಯ ಯಜಮಾನನಿಗೆ ಬಿಕರಿ ಮಾಡುತ್ತಿದ್ದನೆಂದು ಗೊತ್ತಾದ್ದರಿಂದ ಆ ಪೋಸ್ಟ್ ಜವಾನನನ್ನೂ ಆ ಯಜಮಾನನನ್ನೂ ಸರ್ಕಾರದವರು ಹಿಡಿದು ದರ್ಯಾಫ್ತು ಮಾಡುತ್ತಿದಾರೆ.

****

ಕಲ್ಕತ್ತೆಯಲ್ಲಿ ಮೋತಿಲಾಲ್ ಮೈತ್ರಿ ಎಂಬೊಬ್ಬ ಹುಡುಗನು ಸ್ಕೂಲಿಗೆ ಹೋಗದೆ ವ್ಯರ್ಥಕಾಲಹರಣ ಮಾಡುತ್ತಿದ್ದುದನ್ನು ನೋಡಿ ಅವನ ಚಿಕ್ಕಪ್ಪನು ಚೆನ್ನಾಗಿ ದಂಡಿಸಿದನು. ಆ ಹುಡುಗನು ಅಷ್ಟಕ್ಕೇ ತುಂಬಾ ಕೋಪಿಸಿಕೊಂಡು, ಆತ್ಮಹತ್ಯ ಮಾಡಿಕೊಳ್ಳಬೇಕೆಂದು ದೀಪದಕಡ್ಡಿಗಳ ತಲೆಯಲ್ಲಿರುವ ಮದ್ದನ್ನೆಲ್ಲಾ ಕೆರೆದು ತಿಂದುಬಿಟ್ಟನು. ಕೂಡಲೇ ಅವನಿಗೆ ಜ್ಞಾನತಪ್ಪಿತು. ಮನೆಯವರು ಗಾಬರಿಬಿದ್ದು ಅವನನ್ನು ಆಸ್ಪತ್ರೆಗೆ ಸಾಗಿಸಿದರು. ದೇವರ ದಯದಿಂದ ಅಲ್ಲಿ ಅವನು ಬದುಕಿಕೊಂಡನು. ಈಗ ಅವನ ಮೇಲೆ ಆತ್ಮಹತ್ಯ ಪ್ರಯತ್ನಪಟ್ಟನೆಂಬ ಅಪರಾಧ ಹೊರಿಸಲ್ಪಟ್ಟು ಮೊಕದ್ದಮೆ ನಡೆಯುತ್ತಿದೆ

****

ಕಳೆದ ವಾರ ಉತ್ತರದೇಶದಲ್ಲಿ ಕ್ಷಾಮಪೀಡಿತರ ಸಂಖ್ಯೆಯು ಸುಮಾರಾಗಿ ಹಿಂದಿನ ವಾರದಂತೆಯೇ ಇದ್ದಿತು. ಒಟ್ಟು ೩,೩೮,೦೦೦ ಪ್ರಜೆಗಳು ರಿಲೀಫ್ ಕಾಮಗಾರಿಗಳಲ್ಲೂ ಧರ್ಮಸತ್ರಗಳಲ್ಲೂ ಇದ್ದರು. ಸಂಯುಕ್ತ ಆಧಿಪತ್ಯಗಳಲ್ಲಿ ೧,೦೦೦ ಜನ ರಿಲೀಫ್ ಕಾಮಗಾರಿಯನ್ನು ಬಿಟ್ಟುಹೋದರೂ ಧರ್ಮಸತ್ರಗಳಲ್ಲಿದ್ದವರ ಸಂಖ್ಯೆಗೆ ೯,೦೦೦ ಜನ ಹೆಚ್ಚಾಗಿ ಬಂದು ದಾಖಲಾದರು. ರಾಜಪುಟಾನಾ ಸಂಸ್ಥಾನಗಳಲ್ಲಿ ೮,೫೦೦ ಮಂದಿಯೂ ಮಧ್ಯ ಇಂಡಿಯಾದಲ್ಲಿ ೩,೦೦೦ ಜನರೂ ರಿಲೀಫ್ ಕಾಮಗಾರಿಗಳನ್ನು ಬಿಟ್ಟುಹೋಗಿದಾರೆ. ಪೂರ್ವಬಂಗಾಳಾ ಮತ್ತು ಅಸ್ಸಾಂ ಪ್ರಾಂತ್ಯದಲ್ಲಿ ೯,೦೦೦ ಜನರು ಸರ್ಕಾರದವರ ಪೋಷಣೆಯಲ್ಲಿದ್ದರು.

****

ತಿರುವಾಂಕೂರು (ಅನಂತಶಯನಪಲ್ಲಿ) ರೈತರು ಧಾನ್ಯರೂಪವಾಗಿಯೇ ಪ್ರತಿ ವರುಷವೂ ಕಂದಾಯಗಳನ್ನು ಪಾವತಿಮಾಡುವರಷ್ಟೆ. ಈಚೆಗೆ ಇದನ್ನು ತಪ್ಪಿಸಿ ಧಾನ್ಯಕ್ಕೆ ಬದಲಾಗಿ ನಾಣ್ಯ ಕೊಡುವಂತೆ ಮಾಡಬೇಕೆಂದು ಸರ್ಕಾರದವರು ಸ್ವಲ್ಪದೂರ ಪ್ರಯತ್ನಪಟ್ಟರು. ಈರೀತಿ ಸದ್ಯದಲ್ಲಿ ಬದಲಾವಣೆ ಮಾಡುವುದು ಅನುಕೂಲವಾಗಿ ಕಂಡುಬರಲಿಲ್ಲವಾದ್ದರಿಂದ ಅಳೆಯುವ ಸೇರು ಮುಂತಾದ ಅಳತೆಗಳನ್ನು ಕ್ರಮಪಡಿಸಲಾರಂಭಿಸಿದಾರೆ. ಅಳತೆ ತೂಕಗಳ ಪರಿಮಾಣಗಳು ತುಂಬಾ ವ್ಯತ್ಯಸ್ತವಾಗಿರುವವು. ಇದನ್ನು ನಿರ್ಣಯಮಾಡುವುದಕ್ಕೆ ಅವರು ಒಂದು ಕಾನೂನುಮಾಡಿದಾರೆ. ಅದು ಈ ವಾರವೋ ಮುಂದಿನ ವಾರವೋ ಜಾರಿಗೆ ಬರಬಹುದು.

****

ಬೊಂಬಾಯಿ ಪಟ್ಟಣದಲ್ಲಿದ್ದ ಮೆ॥ ಪ್ರೇಮಚಂದ್ ರಾಯಚಂದ್ ಎಂಬೊಬ್ಬ ಬಾರೀ ದಳ್ಳಾಳಿಯು ಕಳೆದ ವಾರ ಕಾಲವಾದನು. ಆತನಿಗೆ ಅಂತ್ಯಕಾಲದಲ್ಲಿ ೭೫ ವರುಷವಾಗಿತ್ತು. ಈತನು ಬಹು ಧರ್ಮಿಷ್ಠನೆಂಬ ಹೆಸರು ಪಡೆದುಕೊಂಡಿದ್ದನು. ಬೊಂಬಾಯಿ ವಿದ್ಯಾಸಂಘಕ್ಕೆ ಆರು ಲಕ್ಷ ರೂಪಾಯನ್ನೂ, ಕಲ್ಕತ್ತಾ ವಿದ್ಯಾಸಂಘಕ್ಕೆ ಮೂರುಲಕ್ಷ ರೂಪಾಯನ್ನೂ ಧರ್ಮ ಕೊಟ್ಟನು. ಇದಲ್ಲದೆ ಒಂದು ದೊಡ್ಡ ಗಡಿಯಾರವನ್ನು ಬೊಂಬಾಯಿನಲ್ಲಿ ಕಟ್ಟಿಸಿರುತ್ತಾನೆ. ಅನೇಕ ಧರ್ಮಕಾರ್ಯಗಳನ್ನು ಮಾಡಿಸಿರುವನು. ಪ್ರತಿ ತಿಂಗಳಲ್ಲೂ ಆತನು ಬಡಬಗ್ಗರಿಗೆ ೩,೦೦೦ ರೂಪಾಯಿನಂತೆ ಧರ್ಮ ಮಾಡುತ್ತಿದ್ದನು. ಇಂಥಾ ಧರ್ಮಿಷ್ಠನು ಕಾಲವಾದನೆಂದು ಅಲ್ಲಿನವರು ವ್ಯಸನಪಡುತ್ತಿರುವುದೇನೂ ವಿಶೇಷವಲ್ಲ.

****

ಅಫ್ಘಾನಿಸ್ಥಾನದ ಅಮೀರ್ ಹಬೀಬುಲ್ಲಾ ಖಾನರವರು ಡಿಸೆಂಬರ್ ೧೩ ನೆ ತಾರೀಖು ಸುಮಾರಿಗೆ ಜಲಾಲಾಬಾದಿನಿಂದ ಪ್ರಯಾಣ ಮಾಡಿ ಹಿಂದುಸ್ಥಾನಕ್ಕೆ ಬಂದು ವೈಸ್‌ರಾಯರವರ ಆತಿಥ್ಯವನ್ನು ಸ್ವೀಕರಿಸುವುದಾಗಿ ಜವಾಬು ಕೊಟ್ಟಿದಾರೆ. ಅವರು ಯಾವ ಯಾವ ತಾರೀಖಿನಲ್ಲಿ ಎಲ್ಲೆಲ್ಲಿ ಇಳಿಯುವರೋ ಯಾವ ಪಟ್ಟಣಗಳಿಗೆ ಪ್ರವಾಸಮಾಡುವರೋ ಇನ್ನೂ ನಿಶ್ಚಿತವಾಗಿಲ್ಲ. ಆಗ್ರಾ ಪಟ್ಟಣದಲ್ಲಿ ಒಂದು ಭಾರೀ ದರ್ಬಾರೂ ೩೦,೦೦೦ಸೈನ್ಯಗಳ ಕವಾತೂ ನಡೆಯುವುದೆಂದು ಕಾಣುತ್ತಿದೆ. ಸರ್ದಾರ್ ಮಹಮದ್ ಇಸ್ಮೈಲ್ ಖಾನರವರು ಡಕ್ಕಾದಲ್ಲಿ ಅಮೀರರನ್ನು ಎದುರುಗೊಳ್ಳುತ್ತಾರೆ. ಅವರ ಗೈರ್ಹಾಜರಿಯಲ್ಲಿ ಅಂದರೆ ೬.೭ ವಾರಗಳ ತನಕ ಅವರ ಸಹೋದರರಾದ ಸರ್ದಾರ್ ನಸರುಲ್ಲಾಖಾನರವರು, ಯುವರಾಜರಾದ ಸರ್ದಾರ್ ಇನಾಯತ್ ಉಲ್ಲಾ ಖಾನರವರೂ ಅಫ್ಘಾನಿಸ್ಥಾನದಲ್ಲಿದ್ದುಕೊಂಡು ರಾಜ್ಯಭಾರ ಕಾರ್ಯಗಳನ್ನು ನೋಡಿಕೊಳ್ಳುವರೆಂದು ಪ್ರಕಟವಾಗಿದೆ. ಅಂತು ಅಮೀರರು ಉತ್ತರದೇಶದಲ್ಲಿ ಅನೇಕ ದೊಡ್ಡ ಪಟ್ಟಣಗಳನ್ನು ನೋಡಿಕೊಂಡು ಹೋಗುತ್ತಾರೆನ್ನುವದಕ್ಕೆ ಸಂಶಯವಿಲ್ಲ. ಇಂಡಿಯಾ ಗವರ್ನಮೆಂಟಿನವರು ಫಾರಿನ್ ಸೆಕ್ರೆಟರಿಯವರನ್ನು ಮೆ॥ ಡಾಬ್ಸ್ ಎಂಬವರನ್ನು ಅಫ್ಘಾನಿಸ್ಥಾನಕ್ಕೆ ಸ್ಪೆಷಲ್ ಡ್ಯೂಟಿ ಮಾಡುವಂತೆ ನೇಮಕ ಮಾಡಿರುವರು. ಇವರೂ ಅಮೀರರಿಗೆ ಚೆನ್ನಾಗಿ ತಿಳಿದವರೇ ಆಗಿದಾರೆ. ಅವರು ದಯಮಾಡುವುದು ಯಾವ ರಾಜಕೀಯ ವಿಚಾರಗಳನ್ನೂ ಚರ್ಚಿಸುವುದಕ್ಕಾಗಿ ಅಲ್ಲ. ಸುಮ್ಮನೆ ವೈಸ್‌ರಾಯರವರ ಅಪೇಕ್ಷೆಯನ್ನು ಪೂರೈಸಿ ದೇಶಾಟನ ಮಾಡಿಕೊಂಡು ಹೋಗಬೇಕೆಂಬುದೇ ಅವರ ಕುತೂಹಲವು.

****

ಮದರಾಸ್ ಆಧಿಪತ್ಯದಲ್ಲಿ ಇತರ ಕಡೆಗಳಂತೆ ವಿಶೇಷ ಹತ್ತಿಯಾಗುವುದಿಲ್ಲ. ಗವರ್ನಮೆಂಟಿನವರು ರೈತರಿಗೆ ಹತ್ತಿ ಬೆಳೆಯುವಂತೆ ತುಂಬಾ ಪ್ರೋತ್ಸಾಹ ಕೊಡಲಾರಂಭಿಸಿರುತ್ತಾರಾದ್ದರಿಂದ, ಸ್ವಲ್ಪ ಕಾಲದಲ್ಲೇ ಆ ಬೆಳೆಯು ಜಾಸ್ತಿಯಾಗಿ ಹೆಚ್ಚಿ ರೈತರಿಗೆ ಆದಾಯ ತರುವುದೆಂದು ನಿರೀಕ್ಷಿಸಬಹುದಾಗಿದೆ. ಸರ್ಕಾರದವರು ರೈತರಿಗೆ ಒಳ್ಳೇ ಜಾತಿಯ ಹತ್ತಿ ಬೀಜ ಸಿಕ್ಕುವ ಸ್ಥಳವನ್ನು ತಿಳಿಸುವ, ಅವರು ಮಾಡಬೇಕಾದ ವ್ಯವಸಾಯಕ್ರಮಗಳನ್ನು ಅವರಿಗೆ ಕಲಿಸುವುದಕ್ಕೆ ಆಗಾಗ್ಗೆ ಹೋಗಿ ಅವರು ಬೆಳೆದಿರುವ ಪೈರನ್ನು ಪರೀಕ್ಷಿಸುವುದಕ್ಕೂ ವ್ಯವಸಾಯದ ಅಧಿಕಾರಿಗಳನ್ನು ನೇಮಕ ಮಾಡಿದಾರೆ. ಇಷ್ಟೇ ಅಲ್ಲ, ಮೇಲುಸಾಗಿ ಪೈರು ಬೆಳೆಯತಕ್ಕವರಿಗೆ ಬಹುಮಾನಗಳನ್ನು ಕೊಡುವದಾಗಿ ವಾಗ್ದಾನಮಾಡಿದಾರೆ

****

ರಂಗೂನ್ ಪಟ್ಟಣದ ರೈಲ್ವೆ ಇಲಾಖೆಯಲ್ಲಿ ನೌಕರಿ ಮಾಡುವ ಒಬ್ಬ ದೇಶೀಯ ಕ್ರೈಸ್ತನಿಗೆ ಜ್ವರ ಬರ ... ಕಳೆದ ಶನಿ ದಿನ ಜ್ವರವು ಬಹಳ ಹೆಚ್ಚಾಗಿದ್ದದ್ದರಿಂದ ಅವನಿಗೆ ಪ್ರಜ್ಞೆ ತಪ್ಪಿಹೋಯಿತು. ಅವನ ಕಾಯಂಯ ಸಂಬಂಧಿಗಳೂ ಪ್ರಾಣ ಹೋಯಿತೆನಿಸಿ, ಶವವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಮುಚ್ಚಳ ಹಾಕಿ, ಉತ್ತರಕ್ರಿಯಾದಿಗಳನ್ನು ನಡಿಸಿ ಹೂಣಿಡಬೇಕೆಂದು ಪ್ರಯತ್ನಪಡುತ್ತಿರುವಾಗ ಒಳಗಿದ್ದ ಕ್ರೈಸ್ತನು ಎಚ್ಚತ್ತು ಪೆಟ್ಟಿಗೆ ಮುಚ್ಚಳವನ್ನು ತಟ್ಟುವುದನು ಕಂಡಲೇ ಅವನ ಬಂಧುಗಳು ಆ ಮುಚ್ಚಳವನ್ನು ತೆಗೆದು ನೋಡುವಲ್ಲಿ ಅವನು ಸ್ಪಷ್ಟವಾಗಿ ಎದ್ದು ಕುಳಿತನು. ಕೂಡಲೇ ಅವನನ್ನು ಮನೆಗೆ ಕರೆದುತಂದು ಔಷಧಿಗಳನ್ನು ಕೊಡಿಸಿದರು. ಈಗ ಅವನಿಗೆ ವಾಸಿಯಾಗುತ್ತಿದೆ ಎಂದು ತಂತೀ ವರ್ತಮಾನ ಬಂದಿದೆ

****

ಹಿಂದುಸ್ಥಾನದ ಕ್ಷಾಮನಿವಾರಣೆಯ ಫಂಡಿನಿಂದ ಆಗ್ರಾ ಅಲಹಾಬಾದ್ ಎಂಬೀ ಎರಡು ಡಿವಿಜನ್‌ಗಳಲ್ಲಿ ಪ್ರಜೆಗಳ ಕಷ್ಟನಿವಾರಣೆಗೆಂದು ಇಪ್ಪತ್ತೈದು ಲಕ್ಷ ರೂಪಾಯನ್ನು ಸ್ಯಾಂಕ್ಷನ್ ಮಾಡಿದಾರೆ. ಈ ಹಣದಲ್ಲಿ ಎರಡು ಲಕ್ಷ ರೂಪಾಯನ್ನು ಅಲಹಾಬಾದ್ ಡಿವಿಜನ್‌ಗೂ ೭೫ ಸಾವಿರ ರೂಪಾಯನ್ನು ಆಗ್ರಾ ಡಿವಿಜನ್‌ಗೂ ವಿನಿಯೋಗಿಸುವರು. ಅಲ್ಲಲ್ಲಿ ಸರ್ಕಾರಿ ನೌಕರರನ್ನೂ ದೊಡ್ಡವರನ್ನೂ ಪ್ರಜೆಗಳ ಮುಖಂಡರನ್ನೂ ಸೇರಿಸಿ ಸಂಘಗಳನ್ನು ಏರ್ಪಡಿಸಿ ಅವರ ಮೂಲಕ ರೈತರಿಗೆ ಉಳುಮೆ ಎತ್ತುಗಳನ್ನೂ ಬಿತ್ತನೆ ಬೀಜವನ್ನೂ ಬಟ್ಟೆ ಬರೆಗಳನ್ನೂ ಕೊಂಡುಕೊಳ್ಳುವದಕ್ಕೆ ದ್ರವ್ಯಸಹಾಯ ಮಾಡುತ್ತಾರೆ. ಇದಲ್ಲದೆ ಅತ್ಯಂತ ಬಡವರಾಗಿರುವ ಮಧ್ಯಮಸ್ಥಿತಿಯಲ್ಲಿರುವ ಪ್ರಜೆಗಳಿಗೆ ಜೀವನಕ್ಕೂ ಆಹಾರ ವಸನವನ್ನೂ ಹಣವನ್ನೂ ಕೊಡಿಸುತ್ತಾರೆ

****

ದರ್ಭಾಂಗಸಂಸ್ಥಾನದಲ್ಲಿ ಕ್ಷಾಮವೂ ಅಪಾರ ಮಳೆಯೂ ಹೆಚ್ಚಾಗಿ ಜನರು ನೀರಿಗಾಗಿ ಸಾಯುತ್ತಿದಾರೆ. ಏಳು ದಿನ ಮೂವತ್ತೈದು ಜನರು ಕಾಲವಾದರು. ಮಹಾರಾಜರವರು ತಮ್ಮ ಸಾಯುವವರನ್ನು ನೋಡಿಕೊಂಡು ಬರುವದಕ್ಕಾಗಿ ಕಾಶೀಪಟ್ಟಣಕ್ಕೆ ಹೋಗಿದ್ದರು. ರಾಜಧಾನಿಯಲ್ಲಿ ಪ್ರವಾಹದ ಅನಾಹುತವನ್ನು ಕೇಳಿ ಅಲ್ಲಿಂದ ವಾಪಸು ಬರುವಾಗ್ಗೆ ಅನೇಕ ಕಡೆಗಳಲ್ಲಿ ರೈಲ್ ರಸ್ತೆ ಕಿತ್ತುಹೋಗಿದ್ದುದರಿಂದ ಕಾಲ್ನಡಿಗೆಯಲ್ಲೇ ಬಹಳ ದೂರ ಬರಬೇಕಾಯಿತು. ಅವರ ಸಂಗಡ ಇಬ್ಬರು ಮೂವರು ಮಾತ್ರ ಬಂದರು. ಮಹಾರಾಜರವರು ರಾಜಧಾನಿಗೆ ಬಂದ ಒಡನೆಯೇ ಒಂದು ಸಭೆಯನ್ನು ಮಾಡಿ, ಪ್ರಜೆಗಳ ಕಷ್ಟವನ್ನು ನಿವಾರಣೆಮಾಡುವುದಕ್ಕಾಗಿ ಒಂದು ಫಂಡನ್ನು ಏರ್ಪಾಡು ಮಾಡಿದರು. ಗವರ್ನಮೆಂಟಿನಿಂದ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ. ರೈತರಿಗೆ ತಕಾವಿ ಸಾಲ ಕೊಡಲಾರಂಭಿಸಿದಾರೆ. ಗೋಮಾ ಮನೆಯವರಿಗೂ ಬಡಬಗ್ಗರಿಗೂ ಅವರವರ ಮನೆಗಳಿಗೆ ಹೋಗಿ ಅಕ್ಕಿ ಮೊದಲಾದ ದಿನಸುಗಳನ್ನೂ ಕಾಸನ್ನೂ ಧರ್ಮಕೊಡುತ್ತಿದಾರೆ

****

ಕಳೆದ ತಿಂಗಳ ೩೧ ನೇ ತಾ. ಸರ್ದಾರ್ ಸಿಂಗ್ ಮಂಗಳ ಎಂಬುವವನನ್ನು ಬರೋಡೆಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದರ್ಯಾಫ್ತು ಮಾಡಿದರು. ಜೋಧಪುರದ ಮಹಾರಾಜರಂತೆ ವೇಷ ಹಾಕಿಕೊಂಡು ಬರೋಡೆಗೆ ಹೋಗಿ ವಿಶೇಷ ಸನ್ಮಾನಗಳನ್ನು ಪಡೆದು ಬೊಂಬಾಯಿಗೆ ಹೋಗಿ ಅಲ್ಲಿ ಮೋಸಗಾರನೆಂದು ಹಿಡಿಯಲ್ಪಟ್ಟ ಅಪನೇ. ರಾಜಕುಮಾರ ಫತ್ತೆಸಿಂಗ್ ರಾವ್ ಎಂಬವರ ಗಾರ್ಡಿಯನ್ ಆಗಿರುವ ಅಧಿಕಾರಿಯಾದ ರಾವ್ ಬಹದೂರ್ ಖಾಸೇರಾವ್ ಜಾಧವ್ ಎಂಬಾತನು ಆ ದಿನ ಕೋರ್ಟಿನಲ್ಲಿ ಹೇಳಿದ್ದೇನೆಂದರೆ— ಕಳೆದ ಜುಲೈ ತಾ ಸಾಯಂಕಾಲ ೫॥ ಗಂಟೆಗೆ ಸರ್ದಾರ್ ಸಿಂಗ್ ಮಂಗಳ ಎಂಬೀ ಅಪರಾಧಿಯು ಮೆ॥ ಮುಕುಂದನಲ್ಲಿ ಎಂಬ ಅಧಿಕಾರಿಯ ಮೂಲಕ ತಾನು ಜೋಧಪುರದ ಮಹಾರಾಜನೆಂದು ರಾಜಕುಮಾರನಿಗೆ ಹೇಳಿಸಿದನು. ಅವನಿಗೆ ರಾಜಕುಮಾರನು ೩೫೦ ರೂಪಾಯಿನ ಹಣವನ್ನೂ ೪೦ ರೂಪಾಯಿನ ಚಿನ್ನದ ಗಡಿಯಾರವನ್ನೂ ಕೊಟ್ಟರು. ಬಂದೇ ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಕೇಳಿದಾಗ ಅವನು ನಾನು ರಾತ್ರಿ ೮ ಗಂಟೆಗೆ ಅರಮನೆಯಿಂದ ಹೊರಟುಹೋದೆನು

...ಮೌ॥ ಮಹಮದಖಲ್ಲಿಯವರೂ ಮೌ॥ ಜಾಕೀರಹುಸೇನರೂ ನನ್ನನ್ನು ...ತ ಮಾಡಿ ನಿಲ್ಲಿಸಿಕೊಂಡರು ನಾನು ರಾಜಕುಮಾರನನ್ನು ... ಕೇಳಲಿಲ್ಲ ಎಂದು ಹೇಳಿದನು ತರುವಾಯ ಮ್ಯಾಜಿಸ್ಟ್ರೇಟ ...ಪಯಾಧಿಯ ಮೇಲೆ ಛಾರ್ಜು ಮಾಡಿದರು ಈ ಮೊಕದ್ದಮೆ ...ಲ್ಲಿ ವಿಚಾರಣೆ ಆಗಲಿಲ್ಲ.

****

ಬಂಗಾಳಾ ಅಧಿಪತ್ಯದ ಎರಡು ವಿಭಾಗಗಳಲ್ಲೂ ಕೆಲವು ಅವಿವೇ...ಕದ ಹಿಂದೂಗಳು ಬಾಬು ಸುರೇಂದ್ರನಾಥ ಬಾನರ್ಜಿಯವರನ್ನು ...ವಣಿಗೆಮಾಡಿ ಕರೆದುಕೊಂಡುಹೋಗಿ ಒಂದು ದೊಡ್ಡ ಸಭೆಯಲ್ಲಿ ...ರನ್ನು ಶ್ರೇಷ್ಠಾಸನದಲ್ಲಿ ಕೂರಿಸಿ ಅವರಿಗೆ ರಾಜೋಪಚಾರಗಳನ್ನು ...ದರು. ಬಾನರ್ಜಿಯವರು ಸಭಿಕರನ್ನು ಕುರಿತು ಪರದೇಶಗಳ ...ದಾರವಸ್ತುಗಳನ್ನು ಕೊಂಡುಕೊಳ್ಳಕೂಡದೆಂದು ಬಹು ಕಟ್ಟುನಿ...ದ ಉಪನ್ಯಾಸಮಾಡಿದರು. ವಿಲಾಯತಿ ಮೊದಲಾದ ಕಡೆಗಳಲ್ಲಿ ...ಬರೆಗಳನ್ನು ತಯಾರುಮಾಡುವಾಗ್ಗೆ ಅಲ್ಲಿನವರು ಹಸುವಿನ ...ತ್ರ ಹಂದಿಯ ಕೊಬ್ಬನ್ನು ಪ್ರಯೋಗಮಾಡುತ್ತಾರೆಂತಲೂ, ಹಿಂ...ಳು ಅಂಥಾ ಅಪರಿಶುದ್ಧವಾದ ಬಟ್ಟೆಬರೆಗಳನ್ನು ಕೊಂಡುತಂದು ...ಶುಭ ಕರ್ಮಗಳು ನಡೆಯುವಾಗ್ಗೆ ಉಪಯೋಗಿಸುವುದು ಶಾ...ವಿರುದ್ಧವೆಂತಲೂ, ವೈದಿಕರು ಅಂಥಾವರ ಮನೆಗಳಿಗೆ ಹೋಗಿ ಕ...ಗಳನ್ನು ಮಾಡಿಸಕೂಡದೆಂದು ಹಿಂದೂಗಳಿಗೂ ಮಹಮದೀಯರಿಗೂ ವಿವೇಕ...ಬೇಕೆಂತಲೂ ಹೇಳಿದರು ಹೀಗೆಲ್ಲಾ ಗಲಭೆಮಾಡುವುದು ಎಷ್ಟು ...ಗೂ ಸಾಜವಲ್ಲವೆಂದು ವಿವೇಕಿಗಳ ಮನಸ್ಸಿಗೆ ಹೊಳೆಯದಿರ...ದು.

****

ಹಿಂದೂಸ್ಥಾನದ ವಾಯವ್ಯಸರಹದ್ದಿನ ಆಚೆ ಇರುವ ಕೆಲವು ಗ್ರಾ...ಳ ಮುಖಂಡರಿಗೆ ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೂ ...ಹಿಂದೂಸ್ಥಾನದಿಂದ ಹೊರಗೆ ಹೋಗುವ ಕಣಿವೆ ರಸ್ತೆಗಳನ್ನೂ ಪ್ರಯಾ...ಣಿಕರನ್ನೂ ಕಾಪಾಡುವುದಕ್ಕೂ ಇಂಡಿಯಾ ಗವರ್ನಮೆಂಟಿನವರು ...ವರ್ಷಕ್ಕೆ ೩೦,೦೦೦ ರೂಪಾಯಿನ ಪ್ರಕಾರ ಅಲೋವೆನ್ಸು ಕೊಡುತ್ತಿ...ದ್ದಾರೆ. ಕಳೆದ ನವೆಂಬರ್ ೧೭ ರಲ್ಲಿ ಕ್ಯಾಪ್ಟನ್ ಹೋನಾಲ್ಡ್ಸನ್ ...ಎಂಬ ಇಂಗ್ಲಿಷ್ ಉದ್ಯೋಗಸ್ಥನನ್ನು ಬನ್ನೂ ಎಂಬ ಸ್ಥಳದಲ್ಲಿ ಒಬ್ಬ ...ಘಾಜಿ ಪ್ರಹಾರಮಾಡಿ ಕೊಂದುಬಿಟ್ಟನು ಕೂಡಲೇ ಇಂಡಿಯಾ ಗವ...ರ್ನಮೆಂಟಿನವರು ಆ ಮುಖಂಡರನ್ನೆಲ್ಲಾ ಕರೆಸಿಕೊಂಡು, ಅವರಿಗೆ ...೦,೦೦೦ ರೂಪಾಯಿ ಜುಲ್ಮಾನೆ ವಿಧಿಸಿದ್ದಲ್ಲದೆ, ಮೇಲ್ಕಂಡ ಉದ್ಯೋ...ಗಸ್ಥನ ಕೊಲೆಗೆ ಸಂಬಂಧಪಟ್ಟ ಐದುಮಂದಿ ಅಪರಾಧಿಗಳನ್ನೂ ಹಿಡಿ...ದುತಂದು ಹಾಜರುಮಾಡುವ ತನಕ ಅವರಿಗೆ ಸಲ್ಲತಕ್ಕ ೩೦,೦೦೦ ...ರೂಪಾಯಿಯನ್ನು ಕೊಡುವುದಿಲ್ಲವೆಂದು ಹೇಳಿ ಕಳುಹಿಸಿದರು. ಆ ...ಮುಖಂಡರು ಅದರಂತೆ ಹೋಗಿ ಐದು ಮಂದಿಯ ಪೈಕಿ ನಾಲ್ವರನ್ನು ...ಹಿಡಿದುಕೊಂಡು ಒಪ್ಪಿಸಿದರು ಇನ್ನೊಬ್ಬನು ಸಿಕ್ಕದೆಹೋದ್ದರಿಂದ ಅವನ ...ಮನೆಗಳನ್ನು ಸುಟ್ಟುಹಾಕಿ, ಅವನ ಜಮೀನನ್ನು ಹಾಳುಮಾಡಿ...ದ್ದಲ್ಲದೆ, ಅವನು ಸಿಕ್ಕಿದ ಕೂಡಲೇ ನಿಮಗೆ ಒಪ್ಪಿಸಿಬಿಡುತ್ತೇವೆಂದು ...ಪ್ರಮಾಣ ಮಾಡಿ ಸರ್ಕಾರದವರಿಗೆ ತಿಳಿಸಿದರು ಈಗ ಗವರ್ನಮೆಂಟ...ನವರು ಅವರಿಗೆ ಸಲ್ಲತಕ್ಕ ಅಲೋವೆನ್ಸ್ ಮೊಬಲಗನ್ನು ಮುಂದಿನ ...ದಿನಗಳಲ್ಲಿ ಬಟವಾಡೆ ಮಾಡತಕ್ಕದ್ದೆಂದು ಹುಕುಂ ಕೊಟ್ಟಿದ್ದಾರೆ.

****

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಬರಿಸಾಲಾ ಎಂಬ ನಗರದಲ್ಲಿ ...ನು ಭಯಂಕರವಾದ ಅಂತರಂಗ ಸಂಘವು ಏರ್ಪಾಡಾಗಿರುವಂತೆ ...ಯೀ ವರ್ತಮಾನ ಬಂದಿದೆ ಈ ಸಂಘಕ್ಕೆ "ಬಂಗಾಳದ ಬಂಗಾರ" ...ಬ ಹೆಸರು ಅದರ ಉದ್ದೇಶವೇನೆಂದರೆ—ಪ್ರಾಣ ಕೊಡುವುದಕ್ಕೂ ...ತಯಾರಾಗಿರುವಂಥಾ ೫೦,೦೦೦ ಭಟರು ಬೇಕಾಗಿದೆ, ಸುಮ್ಮನೆ ಅತ್ತು ...ಬಡಕೊಳ್ಳುವುದರಿಂದ ಪ್ರಯೋಜನವೇನೂ ಇಲ್ಲ. ಎದೆಯಿಂದ ...ವನ್ನು ತೆಗೆದು ಒಪ್ಪಿಸುವುದೊಂದೇ ಅವರ (ಅಂದರೆ, ಈ ಸಂಘದ ...) ಮುಖ್ಯ ಕರ್ತವ್ಯವಾಗಿರುವುದು. ಬಾಲ್ಕಿ ಪಕ್ಷಿಗಳ (ಅಂದರೆ ...ಗಳ) ಗೂಡುಗಳನ್ನು ಛಿದ್ರಛಿದ್ರವಾಗಿ ಕಿತ್ತು ಬಿಸುಹಾಕಿ, ಅವ...ನ್ನು ಗಂಗೆಯೊಳಕ್ಕೆ ಹಾಕಿಬಿಡುವುದಾಗಿ ಮೆಂಬರುಗಳು ಭಾಷೆ ತಟ್ಟ...ಕೊಳ್ಳಬೇಕು. ಐದು ಆದ ಕೂಡಲು ನಮ್ಮ ಕ್ಷೇಮಚಿಂತನೆಯನ್ನು ...ಭ (ಮೆಂಬರುಗಳು) ನೆರವೇರಿಸಿಕೊಂಡೆವೆಂದು ಹೇಳಿಕೊಳ್ಳಲಾರೆವು. ...ಗಾಳಾ ಪ್ರಜೆಗಳೆಂದು ಕರೆಸಿಕೊಳ್ಳುವಂಥಾ ಎಲ್ಲಾ ...ಂಗಗಳ ಮತ್ತು ಎಲ್ಲಾ ಮತಗಳ ಗಂಡಸರೂ ಒಂದಾಗಿ ಕೂಡಿ, ...ಗಾಳಾವಿಗೋಸ್ಕರ ತಮ್ಮ ಸರ್ವಸ್ವವನ್ನೂ ಸರ್ವಶಕ್ತಿಯನ್ನೂ ...ಣಗಳನ್ನೂ ಧಾರೆಯೆರೆಯಲು ಸಿದ್ಧರಾಗಿದ್ದೇವೆಂಬುವುದನ್ನು ಪ್ರ...ಚಕ್ಕೆಲ್ಲಾ ತೋರ್ಪಡಿಸುವವರಾಗಲಿ. ತಮ್ಮ ಹೃದಯಗಳನ್ನು ...ಟ್ಟಮಾಡಿಕೊಂಡು ನಿಂತಲ್ಲಿ ಒಂದು ಕೋಟಿ ಜನರು ಅವರ ಬೆಂಬ...ಲಕ್ಕೆ ಬಂದು ನಿಲ್ಲುವರು. ಪರಂಗಿಗಳ ಬಂದೂಕುಗಳೂ ಗುಂಡುಗಳೂ ...ಗಳೂ ಅದೃಶ್ಯವಾಗುವವು. ಈ ಪ್ರಕಾರ ಪ್ರಾಣಕೊಡುವುದಕ್ಕಿಂ...ತಲೂ ಸಂತೋಷಕರವಾದದ್ದ್ಯಾವುದಿದೆ? ಇದರಿಂದ ಅವರು ಶಾಶ್ವತ...ದ ಸುಖವನ್ನು ಪಡೆಯಬೇಕಾದ್ದರೆ ಅವರು ಬಂಗಾಳದ ಬಿರನ...ರೆಂಬುವುದನ್ನು ತೋರ್ಪಡಿಸಬೇಕು, ಇನ್ಯಾವ ಬಿರುದನ್ನೂ ಪಡೆ...ಯಬೇಕಾದದ್ದಿಲ್ಲವು ಪ್ರಾಣಕೊಡುವುದಕ್ಕೆ ಸಿದ್ಧರಾಗಿರುವವರು ...ಒಟ್ಟಾಗಿ ಸೇರಿ, ಗಟ್ಟಿಯಾದ ಧ್ವನಿಗಳಿಂದ ಸಾಹೇಬರನ್ನು ...ಹೊಡೆದು, ದೂರ ಓಡಿಸಿ, ತಮ್ಮ ಸ್ವಕೀಯವಾದ ದೇಶವನ್ನು ಆಳಬೇ...ಗಿದೆ. ಫಕೀರರು ತಮ್ಮ ಮತ ಭ್ರಾಂತಿಯನ್ನು ಪ್ರಯೋಗಿಸಿ ಜನ...ರನ್ನು ಸಿಟ್ಟೆಬ್ಬಿಸಲಿ ಎಂದು ಮೊದಲಾಗಿ ಪ್ರಕಟಿಸಿರುವುದಲ್ಲದೆ ಆ ಇಸ್ತಿ...ಹಾರಿನ ಕಡೆಯಲ್ಲಿ—ಇಂಥಾ ಕೂಟಕ್ಕೆ ಸೇರಲು ಯಾರು ಸಮ್ಮತಿಸು...ವುದಿಲ್ಲವೋ, ಯಾರು ಹೆದರಿಕೊಳ್ಳುತ್ತಾರೋ, ಅಥವಾ ಯಾರು ಇದ...ಕ್ಕೆ ವ್ಯತಿರಿಕ್ತವಾಗಿ ಕಾರ್ಯಭಾಗ ನಡೆಸುವರೋ ಅಂಥವರನ್ನು ಕಠಿ...ಣವಾಗಿ ಶಿಕ್ಷಿಸಬೇಕು ಎಂಬುದಾಗಿಯೂ ತಿಳಿಸಲ್ಪಟ್ಟಿದೆ ಈ ರಾಜ...ದ್ರೋಹಕರವಾದ ಇಸ್ತಿಹಾರಿನ ಕಾಗದ (ನೋಟೀಸು) ಗಳನ್ನು ಬಂ...ಗಾಳಾ ಅಧಿಪತ್ಯದಲ್ಲೆಲ್ಲಾ ಹಂಚಿರುತ್ತಾರೆ. ಅದರ ಒಂದು ನಕಲು ಮೈ...ಮನ್‌ಸಿಂಗ್ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಸಿಕ್ಕಿದೆ...ಯೆಂದು ತಂತೀ ವರ್ತಮಾನ ಬಂದಿದೆ.

ವಿದೇಶ ವರ್ತಮಾನಗಳು.

ಬರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಪತ್ನಿ ಪರಿವಾರ ಸಹಿತ ಈಗ ವಿಲಾಯತಿಯಲ್ಲಿ ಸಂಚಾರ ಮಾಡುತ್ತಿದ್ದಾರೆ. ಕಳೆದ ವಾರ ಅವರು ಲಂಡನ್ ಪಟ್ಟಣದಿಂದ ಸ್ಕಾಟ್ಲೆಂಡನ್ನು ನೋಡಿಬರುವುದಕ್ಕಾಗಿ ಪ್ರಯಾಣ ಮಾಡಿದರೆಂದು ತಂತೀ ವರ್ತಮಾನ ಬಂದಿದೆ.

****

ಜರ್ಮನ್ ವರ್ತಕರು ಸ್ವಯಾಂ ರಾಜ್ಯದಲ್ಲಿ ತಮ್ಮ ವ್ಯಾಪಾರಸರಕುಗಳನ್ನು ತಂದು ತುಂಬಿಕೊಂಡು, ಇತರರ ಸಾಮಾನುಗಳಿಗಿಂತಲೂ ಕಮ್ಮಿ ಖರೀದಿಗೆ ಬಿಕರಿ ಮಾಡುತ್ತಾ ಅಲ್ಲಿನ ವ್ಯಾಪಾರವನ್ನೆಲ್ಲಾ ತಮ್ಮ ಕೈಯಲ್ಲೇ ಇಟ್ಟುಕೊಳ್ಳಬೇಕೆಂದು ಸಾಹಸ ಪಡುತ್ತಿದ್ದಾರೆ ಅವರ ಚಟುವಟಿಕೆಯನ್ನೂ ಅವರ ಚಮತ್ಕಾರವನ್ನೂ ಅಲ್ಲಿರುವ ಪರರಾಜ್ಯಗಳ ವರ್ತಕರು ನೋಡಿ ಬೆರಗಾಗಿದ್ದಾರೆ.

****

ಸ್ಪೇಯಿನ್ ರಾಜ್ಯದ ದೊರೆಯವರು ಕಳೆದ ತಿಂಗಳು ವಿಲಾಯತಿಗೆ ಹೋಗಿದ್ದಾಗ ಬಹು ಬೆಲೆಯುಳ್ಳ ತಮ್ಮ ವಜ್ರದ ಉಂಗುರವನ್ನು ಎಲ್ಲೋ ಕಳಕೊಂಡು ಬಿಟ್ಟರು. ಸಮುದ್ರತೀರದ ಒಬ್ಬ ಕಾವಲುಗಾರನಿಗೆ ಆ ಉಂಗುರ ಸಿಕ್ಕಿ, ಅವನದನ್ನು ದೊರೆಯವರಿಗೆ ಒಪ್ಪಿಸಿದನು. ದೊರೆಯವರು ಬಹಳ ಸಂತೋಷಪಟ್ಟು ಅವನಿಗೆ ಒಳ್ಳೇ ಬಹುಮಾನ ಕೊಟ್ಟು ಅವನನ್ನು ವಂದಿಸಿದರು. ಅವನ ಪ್ರಾಮಾಣಿಕತೆಯು ಹೊಗಳತಕ್ಕದ್ದಾಗಿದೆ

****

ವಿಲಾಯತಿಗೆ ಸೇರಿದ ಕೆಂಟ್ ಡಿಸ್ಟ್ರಿಕ್ಟಿನಲ್ಲಿ ಟ್ರೌನ್‌ಸೆಂಡ್ ಹೂಕ್ ಕಂಪನಿಯವರು ಸ್ನೋಡ್‌ಲೆಂಡ್ ಎಂಬ ಸ್ಥಳದಲ್ಲಿ ವಿಶೇಷ ಪೂರ್ವಕಾಲದಿಂದಲೂ ಬಹಳ ದೊಡ್ಡ ಕಾಗದದ ಕಾರ್ಖಾನೆಯನ್ನಿಟ್ಟು ನಡಿಸುತ್ತಾ ಬಂದರು ಕಳೆದ ತಿಂಗಳಲ್ಲಿ ಆ ಕಾರ್ಖಾನೆಗೆ ಬೆಂಕಿ ಬಿದ್ದು ಹತ್ತಿಕೊಂಡಿತು ಮೊದಲು ಅವರೊಳಗಿದ್ದ ಒಂದು ದೀಪದ ಬುತ್ತಿಯು ಒಡೆದು ಎಣ್ಣೆ ಚೆಲ್ಲಿದ್ದರಿಂದ ಕೆಲವು ಬಗ್ಗದ ...ಗಳು ಹತ್ತಿಕೊಂಡವು, ಸ್ವಲ್ಪ ಹೊತ್ತಿನೊಳಗಾಗಿ ಕಾರ್ಖಾನೆಯೆಲ್ಲಾ ಸಂಪೂರ್ಣವಾಗಿ ಉರಿದು ಗೋಡೆಗಳು ಮಾತ್ರ ಉಳಿದುಕೊಂಡವು. ಸಮೀಪದಲ್ಲಿದ್ದ ಹಳೆ ಮನೆಗಳು ಸುಟ್ಟುಹೋದವು ೬೦೦—೭೦೦ ಜನರಿಗೆ ಕೂಲಿ ಮಾಡಿ ಹೊಟ್ಟೆ ತುಂಬ ಜೀವನಕ್ಕೆ ಕಷ್ಟವಾಗಿದೆ ಮಾಲೀಕರಿಗೆ ಐವತ್ತು ಲಕ್ಷ ರೂಪಾಯಿ ನಷ್ಟವಾಗಿರುವುದು

****

ಅಮೇರಿಕದ ಸಂಯುಕ್ತಸಂಸ್ಥಾನಗಳವರು ಪನಾಮಾ ಎಂಬಲ್ಲಿ ಭೂಮಿಯನ್ನು ಕತ್ತರಿಸಿ ಹಡಗುಗಳು ಸಂಚರಿಸುವಂತೆ ಸಮುದ್ರದ ಕಾಲುವೆಯನ್ನು ಮಾಡಬೇಕೆಂದು ಕಾಮಗಾರಿ ನಡಸುತ್ತಿದ್ದಾರೆ. ಈ ಕಾಮಗಾರಿ ಮಾಡುವುದಕ್ಕೆ ಸ್ಪೇಯಿನ್ ಜನರು ಸಿಕ್ಕುವುದಿಲ್ಲ. ಅಮೇರಿಕದವರು ಎಷ್ಟು ಹೆಚ್ಚಾಗಿ ಕೂಲಿ ಕೊಟ್ಟರೂ ಅಲ್ಲಿಗೆ ಹೋಗಿ ಆ ಕೆಲಸ ಮಾಡುವುದಕ್ಕೆ ಸಮ್ಮತಿಸುವುದಿಲ್ಲ ಪಶ್ಚಿಮ ಇಂಡಿಯಾ ನೀಗ್ರೋ ಎಂಬ ಸ್ವದೇಶಿಗಳನ್ನು ನೇಮಿಸಿಕೊಂಡರೆ ಅವರು ತೃಪ್ತಿಕರವಾಗಿ ಕೆಲಸ ಮಾಡತಕ್ಕವರಲ್ಲ ಆದ್ದರಿಂದ ಆ ಕೆಲಸಕ್ಕೆ ೨,೫೦೦ ಮಂದಿ ಚೀನಿಯವರನ್ನು ಅಲ್ಲಿಗೆ ಕರೆಸಿಕೊಳ್ಳಬೇಕೆಂದು ಗೊತ್ತುಮಾಡಿದರು. ಆದರೆ ಅಮೇರಿಕಕ್ಕೆ ಚೀನಿಯವರನ್ನು ಯಾವ ಕೆಲಸ ಮಾಡುವುದಕ್ಕೂ ಬಿಡಕೂಡದೆಂದು ಕಾನೂನು ಈಗ ಜಾರಿಯಲ್ಲಿರುವುದು ಆದಾಗ್ಯೂ ಈ ಕಾಮಗಾರಿಗೋಸ್ಕರ ಅವರನ್ನೇ ಕರೆತರಬೇಕೆಂದೂ ಅವರನ್ನು ಗುಲಾಮರಂತೆ ಕಾಣದೆ ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಡಬೇಕೆಂದೂ ಗೊತ್ತುಮಾಡಿರುತ್ತಾರೆ.

****

ಪರ್ಶಿಯಾರಾಜ್ಯದ ಪ್ರಜೆಗಳು ಷಾ ಸುಲ್ತಾನನ ದವಲತ್ತನ್ನು ಪ್ರಜಾರಂಜಕವಾಗಿ ಮಾಡಿಕೊಳ್ಳಬೇಕೆಂದು ಸಾಹಸಪಡುತ್ತಿದ್ದರು ಸುಲ್ತಾನರು ಪ್ರಜೆಗಳ ಅಭಿಪ್ರಾಯವನ್ನು ಗ್ರಹಿಸಿ, ಈಗಿನ ಕಾಲಕ್ಕೆ ತಕ್ಕಂತೆಯೂ ಜನರ ಹಿತಾನುಕೂಲದಂತೆಯೂ ರಾಜ್ಯಭಾರಕ್ರಮವನ್ನು ಬದಲಾವಣೆಮಾಡಿರುತ್ತಾರೆ. ರಾಜಧಾನಿಯಾದ ಟೆಹರಾನ್ ಪಟ್ಟಣದಲ್ಲಿ ಪ್ರಜಾಪ್ರತಿನಿಧಿಗಳ ಸಭೆಯನ್ನು ಸ್ಥಾಪಿಸಿದರು. ರಾಜವರ್ಗ, ವೈದಿಕ ಮಂಡಲಿ, ರಾಜವಂಶೀಕರು, ದೊಡ್ಡ ಮನುಷ್ಯರು, ಸಾಹುಕಾರರು, ವರ್ತಕರು—ಈ ಗುಂಪುಗಳಲ್ಲಿ ಯೋಗ್ಯತಾಸಿದ್ಧಿ ಪಡೆದಿರತಕ್ಕವರನ್ನು ಪ್ರಜೆಗಳು ತಮ್ಮ ಪ್ರತಿನಿಧಿಗಳಾಗಿ ಚುನಾಯಿಸಿ ಮೇಲ್ಕಂಡ ಸಭೆಮನೆಗೆ ಕಳುಹಿಸಬೇಕೆಂದು ಹುಕುಂಕೊಟ್ಟಿದ್ದಾರೆ ಈ ಪ್ರತಿನಿಧಿಸಭೆಗೆ ವಹಿಸಲ್ಪಟ್ಟಿರುವ ಅಧಿಕಾರಿಗಳೇನೆಂದರೆ—ರಾಜ್ಯದಲ್ಲಿ ಯಾವ ತರಹಾ ಬದಲಾವಣೆಗಳಾಗಬೇಕಾದರೂ ಈ ಸಭೆಯವರು ಮೊದಲು ಚರ್ಚಿಸಿ ತಳಿಸಬೇಕು ಮುಖ್ಯಮುಖ್ಯವಾದ ರಾಜಕೀಯ ವಿಷಯಗಳನ್ನೂ ಚರ್ಚೆ ಮಾಡಿ, ರಾಜ್ಯದ ಮಂತ್ರಿಶ್ರೇಷ್ಠರ ಮೂಲಕ ಸುಲ್ತಾನರಿಗೆ ತಿಳಿಸಬೇಕು. ಅಂಥವುಗಳನ್ನು ಸುಲ್ತಾನರು ನೋಡಿ ಒಪ್ಪಿ ರುಜುಮಾಡಿದ ಮೇಲೆ ಜಾರಿಗೆ ತರಬೇಕು. ಸಭೆಯ ಮೆಂಬರುಗಳು ಹ್ಯಾಗೆ ಸಭೆಯಲ್ಲಿ ಕಾರ್ಯಗಳನ್ನು ನಡಿಸಬೇಕೋ ಚರ್ಚೆಮಾಡಬೇಕೋ ಅದನ್ನು ಮೊದಲೇ ಗೊತ್ತುಮಾಡಿ ತಿಳಿಸಿದರೆ ಸುಲ್ತಾನರು ಅದರಂತೆ ಸ್ಯಾಂಕ್ಷನ್ ಮಾಡುವರು. ಇಂಥಾ ಪ್ರತಿನಿಧಿಸಭೆಯನ್ನು ಸ್ಥಾಪಿಸಬೇಕೆಂದು ಸುಲ್ತಾನರಿಗೆ ಮೊದಲೇ ಆಲೋಚನೆ ಇದ್ದಿತು ಪ್ರಜೆಗಳೂ ಅಪೇಕ್ಷಿಸಿದ್ದನ್ನು ನೋಡಿ ಅವರು ಬಹುಸಂತೋಷದಿಂದ ಅದನ್ನು ಸ್ಥಾಪಿಸಿರುತ್ತಾರೆ

****

ಕಳೆದ ೧೯೦೪ ನೆ ಇಸವಿ ಸೆಪ್ಟಂಬರ್ ೭ ರಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಟಿಬೆಟ್ ರಾಜಧಾನಿಯಾದ ಲಾಸಾಪಟ್ಟಣಕ್ಕೆ ಹೋಗಿ ಒಂದು ಕರಾರು ಮಾಡಿಕೊಂಡು ಬಂದರಷ್ಟೆ ಈ ಕರಾರನ್ನು ಚೀನಾ ಸರ್ಕಾರದವರು ಒಪ್ಪಿ ಅದಕ್ಕೆ ಕಳೆದ ಏಪ್ರಿಲ್ ೨೭ ರಲ್ಲಿ ರುಜುಹಾಕಿದರು ಈಗ ಈ ಕರಾರಿನ ಕಲಮುಗಳು ಪ್ರಕಟವಾಗಿವೆ ಅದರಲ್ಲಿರುವ ಮುಖ್ಯಭಾಗಗಳ್ಯಾವವೆಂದರೆ— ಕಳೆದ ೧೮೯೦ ನೆ ಮಾರ್ಚ ೧೭ ರಲ್ಲೂ ಆಬಳಿಗೆ ೧೮೯೩ ನೆ ಡಿಸೆಂಬರ್ ೫ ರಲ್ಲೂ ಇಂಗ್ಲಿಷರಿಗೂ ಚೀಣೆಯವರಿಗೂ ನಡೆದ ಕರಾರುಗಳ ಕಲಮುಗಳನ್ನು ಟಿಬೆಟ್ ಸರ್ಕಾರದವರು ತಿರಸ್ಕರಿಸಿದ್ದರಿಂದ ಇಂಗ್ಲಿಷರು ೧೯೦೪ ರಲ್ಲಿ ತಮ್ಮ ಹಕ್ಕುಗಳನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಸೈನ್ಯ ಕಳುಹಿಸಬೇಕಾಯಿತು. ಎರಡು ಗವರ್ನಮೆಂಟುಗಳವರೂ ಈಗ ನಡೆದಿರುವ ಕರಾರಿನ ಕಲಮುಗಳಂತೆ ನಡಕೊಳ್ಳುವುದಕ್ಕೆ ಒಪ್ಪಿರುತ್ತಾರೆ ಇಂಗ್ಲಿಷ್ ಗವರ್ನಮೆಂಟಿನವರು ಟಿಬೆಟ್ ರಾಜ್ಯದಲ್ಲಿ ಯಾವ ಭಾಗವನ್ನೂ ಆಕ್ರಮಿಸಿಕೊಳ್ಳುವುದಿಲ್ಲ, ಮತ್ತು ಅಲ್ಲಿನ ರಾಜ್ಯಭಾರ ವಿಷಯದಲ್ಲಿ ತಲೆಹಾಕುವುದಿಲ್ಲ. ಚೀನಿಯವರು ಪರರಾಜ್ಯಗಳವರಿಗೆ ಟಿಬೆಟ್ಟಿನಲ್ಲಿ ಸ್ಥಳ ಕೊಡಕೂಡದು, ಮತ್ತು ಅಲ್ಲಿನ ರಾಜ್ಯಭಾರ ವಿಷಯಕ್ಕೆ ಪರರು ತಲೆಹಾಕದಂತೆ ನೋಡಿಕೊಳ್ಳಬೇಕು. ಚೀನಿಯವರು ಈ ಕರಾರಿನಲ್ಲಿ ಕಂಡ ರಿಯಾಯತಿಗಳನ್ನು ಯಾವ ಪರರಾಜ್ಯದವರಿಗಾಗಲಿ ಅವರ ಪ್ರಜೆಗಾಗಲಿ ವಹಿಸಕೂಡದು ಮತ್ತು ಈ ಕರಾರಿನಲ್ಲಿ ನಮೂದು ಮಾಡಿರುವ ಕೆಲವು ವ್ಯಾಪಾರಪಟ್ಟಣಗಳಿಗೂ ಹಿಂದುಸ್ಥಾನಕ್ಕೂ ಇಂಗ್ಲಿಷ್ ಗವರ್ನಮೆಂಟಿನವರು ಟೆಲಿಗ್ರಾಫ್ ತಂತಿಗಳನ್ನು ಹಾಕಿಕೊಳ್ಳುವ ಭಾಗವನ್ನು ಚೀನಾ ಸರ್ಕಾರದವರು ಸಮ್ಮತಿಸಿರುತ್ತಾರೆ.

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್.

ವೇಷಧಾರಿಗಳ ಮೋಸಕೃತ್ಯಗಳು.

ಅಯ್ಯಾ,

ನನ್ನ ಲಗ್ನದ ಸಲುವಾಗಿ ಸಾಲಸೋಲ ಮಾಡಿಕೊಂಡು ಬರಬೇಕೆಂದು ಇದೇ ಶಿಕಾರಿಪುರದ ತಾಲ್ಲೂಕು ಸಾಳಿಯೂರಿಗೆ ೩ ಮೈಲಿಯಲ್ಲಿರುವ ಬೇಗೂರು ಗ್ರಾಮಕ್ಕೆ ಹೋದವನು ನೆನ್ನೆ ಸಾಯಂಕಾಲದ ವರಿಗೂ ಅಲ್ಲೇ ನಿಂತೆನು ಮಧ್ಯಾಹ್ನ ಊಟಮಾಡಿ, ಹಾಗೇ ಸ್ವಲ್ಪ ಮಲಗಿಕೊಂಡೆನು, ಸ್ವಲ್ಪ ಹೊತ್ತಿಗೆ ಗೀರ್ ಗೀರ್ ಎಂಬ ರಣವಾದ್ಯದ ಶಬ್ದವೂ ಗಂಟೇ ಶಬ್ದವೂ ಹೊಡೆದು ಎಬ್ಬಿಸಿದಂತೆ ಎಚ್ಚರವಾಗಲು, ಅಲ್ಲಿಂದ ಎದ್ದು ಹೋಗಿ ಕಟ್ಟೇ ಮೇಲೆ ತುಸ ಕುಂತಗಂಡೆನು ಗಂಡಸರೂ ಹೆಂಗಸರೂ ಹುಡುಗರೂ ಆಗಲೇ ಗುಂಪು ಕೂಡಿದ್ದರು. ಆಟಗಾರನು ದೊಡ್ಡ ಬಾಗಿಲುಮಾಡಿರುವ ಪೆಟ್ಟಿಗೆಯನ್ನು ಅದರ ಮೇಲೆ ಕೆಲವು ಸಾಮಾನಿಟ್ಟುಕೊಂಡು, ತಾನು ಮೈಯೆಲ್ಲಾ ಗಂಧದಿಂದಲೂ ಅರಿಸಿನದಿಂದಲೂ ಎರದುಕೊಂಡು, ತನ್ನ ಹೆಂಡತಿಯನ್ನು ಸತ್ರ ಕೂಡ್ರಿಸಿಕೊಂಡು, ತಾನು ಮಾತ್ರ ಆ ಪೆಟ್ಟಿಗೆಯ ಸುತ್ತಲೂ ತಿರುಗ್ಯಾಡುತ್ತಾ ಹೀಗೆ ನ್ನುತ್ತಿದ್ದನು —ಗಂಡಸು—ಅವ್ವಾ ನಿನಗೆ ಏನುಬೇಕು, ಹೇಳವ್ವಾ? ಹೆಂಗಸು—ತಾನತಂದನ್ನ ಗಂಡಸು—ಅಣ್ಣಾ ಕಾಯಿ ಕರ್ಪೂರ ಬಂದಿತಲ್ಲೇ ನಿನಗೆ. ಹೆಂಗಸು—ತಾನತಂದನ್ನ ಗಂಡಸು—ತೂಗೂಲೆ ತೊಟ್ಟಿಲಲ್ಲಿ ಕಂತ್ಯಲ್ಲೇ ನೀನು ಹೆಂಗಸು—ತಾನತಂದನ್ನ.

ಈ ರೀತಿ ಗಂಡಸು ಒಂದು ಮಾತು, ಹೆಂಗಸು ತನ್ನ ಪಕಮಾಲಿಕಾ ಪಲ್ಲವಿ ಹೇಳುತ್ತಾ ಇರುವಲ್ಲಿ ಗಂಡಸು ಕೈಯಲ್ಲಿ ಗಂಟೆಯನ್ನು ಹಿಡಿದು ಆ ಪೆಟ್ಟಿಗೆಯ ಸುತ್ತಲೂ ತಿರುಗ್ಯಾಡುತ್ತಾ ಬಾಯಿಯಲ್ಲಿ ವಿಧವಿಧವಾಗಿ ತನ್ನ ಬಾಯಿಪಾಠವನ್ನು ಹೇಳುತ್ತಾ ಇರುವಾಗ ಹೆಂಗಸು ಅಲ್ಲಿಗಲ್ಲಿಗೆ ತಾನು ಬಾರಿಸುತ್ತಿದ್ದ ಢಣಬಾಜವನ್ನು ಗೀಚುತ್ತಿರುವಾಗ ಆಗುವ ಧ್ವನಿಗೂ ಈ ವೇಷಧಾರಿಯ ಮಾತುಗಳಿಗೂ ಹುಡುಗರೆಲ್ಲರೂ ಕಕ್ಕಾಬಿಕ್ಕಾಗಿ ನೋಡುತ್ತಿದ್ದರು ಇಷ್ಟರಲ್ಲಿಯೇ ಈ ಮಾರ್ಯಮ್ಮನ ವೇಷಧಾರಿಯು ತಾನಿ ಸಣ್ಣದಾಗಿ ಬಾಲದಂತೆ ಇರುವ ಛಾಟಿಯನ್ನು ಹಿಡಿದು ಕೈಯಿಂದ ಕೊಡವಿದ ಕೂಡಲೇ "ಚಟ್—ಛಟ್—ಚಟೀರ್" ಎನ್ನಲು ಹುಡುಗರೂ ದೊಡ್ಡವರೂ ಸಹ ಕೂಡಲೇ ಹಿಂದಕ್ಕೆ ಸರಿದರು ಅನೇಕರು ಮೊರದಲ್ಲಿ ಅಕ್ಕಿಯನ್ನು ತಂದರು ಆ ಛಾಟಿಯು "ಛಟೀರ್" ಎಂದು ಸಪ್ಪಳವಾದ ಕೂಡಲೇ ಬೆನ್ನಿಗೆ ಮುಟ್ಟಿಕೊಳ್ಳುತ್ತಿದ್ದದ್ದನ್ನು ಗ್ರಹಿಸದೆ "ಹಾ! ಸತ್ಯ! ಸತ್ಯ!" ಎಂದು ಆನಂದಾಶ್ಚರ್ಯಮಗ್ನರಾದ ಬಾಲಕರೂ ಬಾಲೆಯರೂ ಹೆಂಗಸರೂ ಗಂಡಸರೂ ಅತಿ ಭಕ್ತಿಯಿಂದ ನಿಂತಿರಲು, ಕೆಲವರು ಮೊರದಕಾಸಿನ ಬಿಲ್ಲೆಗಳನ್ನು ಒಪ್ಪಿಸಲಿಕ್ಕೆ ಬಂದರು ಕೂಡಲೇ ಆ ವೇಷಧಾರಿಯು ಬಹು ಭಯಂಕರವಾದ ಕೆಂಪುಬಣ್ಣ ಹಾಕಿದ ಒಂದು ಮೊಖವಾಡವನ್ನು ಹಾಕಿಕೊಂಡು, ಕಣ್ಣುಗಳಿಗಾಗಿ ಬಿಟ್ಟಿದ್ದ ಕಂಡಿಯಿಂದ ಜನಗಳನ್ನು ನೋಡುತ್ತಾ "ಬೇಗ ಬೇಗನೆ ಒಪ್ಪಿಸಬೇಕಣ್ಣಾ! ತಡಮಾಡಬೇಡಿರಿ" ಎನ್ನುತ್ತಾ ಕೂಡಲೇ ಮಾರ್ಯಮ್ಮನ ಪೆಟ್ಟಿಗೆ ಹಿಂದೆ ಬಂದು, ಅಮ್ಮಾ ಕೈಯಿಕ್ಕು ನೀನಮ್ಮ ಎಂದು ಪೆಟ್ಟಿಗೆ ಗೂಡಿನಲ್ಲಿಟ್ಟಿದ್ದ ಮಾರ್ಯಮ್ಮನ ಕೈಯನ್ನು ಹಿಂದುಗಡೆಯಿಂದ ತಿರುವಲು ೩ ಕಾಸು ಕೈಯಿಂದ ಕೆಳಗೆ ಬಿತ್ತು ಆಗ ಹುಡುಗರು ನಾಲ್ವರು ಸಮೀಪ ನೋಡುತ್ತಿದ್ದರು. ತಮ್ಮೊಳಗೆ ತಾವು, ಎಲೋ! ಮಾರ್ಯಮ್ಮಗೆ ಎಚ್ಚರವಾಗೀತಲೆ! ಎದ್ದು ಬಂದು ನಮ್ಮನ್ನ ಹಿಡಿದೀತು! ದೂರಹೋಗು! ಅಡ್ಡಬೀಳು! ದುಡ್ಡು ಯಾರ ಹತ್ರ ಐತಲೇ! ಎಂದು ಒಬ್ಬರನ್ನೊಬ್ಬರು ಕೇಳಲು ೩ ಜನ ಹುಡುಗರು ಇಲ್ಲವೆನ್ನುವಾಗ ಮತ್ತೊಬ್ಬ ಸಣ್ಣ ಹುಡುಗನು—ನನ್ನ ಹತ್ತರ ೧ ಕಾಸೈತೆ ಹೀಸಲು ಕೊಂಡಕನ್ನಾಕ ಅಮ್ಮನ ಕೈಲಿ ಇಸುಗೊಂಡೀನಿ ಅಂದನು ಇದನ್ನು ಕೇಳಿ ಗಂಡಸು (ರಾಗದಿಂದ)— "ಮಾರ್ಯಮ್ಮನ ಹತ್ತರ ತಂದದ್ದ ಹಿಂದಕ್ಕೆ ಮೈಬಾರದಪ್ಪಾ," ಹೆಂಗಸು (ಬಾರಿಸುತ್ತಾ)—ತಾನತಂದನ್ನ ಎಂದಾಗ ಈ ಮಾತನ್ನು ಕೇಳಿ,

ಹುಡುಗನು ಹಾವನ್ನು ಅಲ್ಲಿ ಹಾಕಿ ಉಳಿದ ಹುಡುಗರೊಂದಿಗೆ ಹಿಂದಕ್ಕೆ ಹೋದನು

ವೇಷಧಾರಿಯು ಬಳ್ಳೀ ಕೂಸಿಯಿಂದ ತನ್ನ ಬಾಯಿಮಾತವನ್ನು ಹೇಳುತ್ತಾ, ಸಂಪಾದನೆಗಾಗಿ ವ ಾಥಭಕ್ತಿ ಜನರನ್ನೇ ಎದುರು ನೋಡುತ್ತಾ, ಅಲ್ಲಿಯೇ ಕೂತಿದ್ದನು ಊರಿಗೆ ಹೊರಡಲಿಕ್ಕೆ ಹೊತ್ತಾದ್ದರಿಂದ ಅಲ್ಲಿಂದ ಎದ್ದುಬಿಟ್ಟನು

ಸುವರ್ಣ ಪರೀಕ್ಷಕ

ಹೊಳೆ ನರಸೀಪುರದ ಗೌರೀಹಬ್ಬ

ಅಯ್ಯಾ,

ಸಾಧಾರಣವಾಗಿ ನಮ್ಮ ಮೈಸೂರು ದೇಶದಲ್ಲಿ ಎಲ್ಲಾ ಊರು ಗ್ರಾಮಗಳಲ್ಲಿಯೂ ಈ ಹಬ್ಬವನ್ನು ಆಚರಿಸುತ್ತಾರೆ ಆದರೆ ಗೌರೀ ಹಬ್ಬವನ್ನು ಆಚರಿಸುವ ರೀತಿ, ಉದ್ದೇಶಗಳು ಈ ಊರಿನ ನಿವಾಸಿಗಳಲ್ಲಿ ಬಹು ಜನರಿಗೆ ತಿಳಿದೇ ಇಲ್ಲ ರೂಢಿಯುಪ್ರಕಾರ ಹಬ್ಬ ಎಂದು ಬಾಯಿಯಲ್ಲಿ ಹೇಳುವದೇ ಹೊರತು ಮತ್ಯಾವ ಕೆಲಸವೂ ತಿಳಿಯದು ಆದರೆ ಈ ಊರಿನ ಆಬಾಲವೃದ್ಧರಲ್ಲಿಯೂ ಈ ಹಬ್ಬದಲ್ಲಿ ಎಂಟು ದಿನಗಳು ಕೆಲಸವಿಲ್ಲದೆ ಇರುವಾಗ್ಗೆ ಜೂಜಾಡುವದೇ ಮುಖ್ಯ ಉದ್ಯೋಗ ಈ ಉದ್ಯೋಗವನ್ನು ಎಂಥಾ ವೃದ್ಧನಾದರೂ ಮರೆಯುವದಿಲ್ಲ ಸದರಿ ಎಂಟು ದಿನಗಳಲ್ಲಿ ಊರಿನ ಎಲ್ಲಾ ಸಂದುಗಳಲ್ಲಿಯೂ ಜೂಜಿನವರ ಸಮೂಹವೂ ಆರ್ಭಟವೂ ಕಲಹಗಳೂ ತೋರುತ್ತವೆಯೇ ಹೊರತು ಗೌರೀ ಗಣೇಶಗಳೂ ಕಣ್ಣಿಗೇ ಕಾಣುವದಿಲ್ಲ ಕಂಡರೂ ಶೃಂಗಾರವಾದ ಮಂಟಪದಲ್ಲಿ ಮರೆಯಾಗಿರುವವು ಇದೇ ಅಲ್ಲವೇ ದೇವರನ್ನು ಪೂಜಿಸುವ ವಿಧಾನವು ? ನಮ್ಮ ದೇಶದ ಜನಗಳು ಇನ್ನೂ ಅಭಿವೃದ್ಧಿ ಪಡದಿರುವದಕ್ಕೆ ಇದೂ ಒಂದು ಕಾರಣ ಆದದರಿಂದ ನಮ್ಮ ಅಮಲ್ದಾರರು ತಮ್ಮ ಕಾಲದಲ್ಲಿ ಈ ಕೆಟ್ಟ ಜೂಜಾಡುವ ವಾಡಿಕೆಯನ್ನು ತಪ್ಪಿಸಿದರೆ ತಮ್ಮ ಕೀರ್ತಿಯು ಶಾಶ್ವತವಾದ ಪ್ರಕಾಶವನ್ನು ಹೊಂದುವದೆಂದು ನಿರೀಕ್ಷಿಸುತ್ತೇನೆ

ಪುರವಾಸಿ

ತರೀಕೆರೆಯ ಕಳುವನ್ನು ಪತ್ತೆ ಮಾಡಿದವರು

ಅಯ್ಯಾ,

ಕಳೆದ ೩೦ನೆ ತಾ ' ವೃತ್ತಾಂತ ಪತ್ರಿಕೆ " ಯನ್ನು ಈ ದಿವಸ ಬೆಂಕಿಪುರ ಮೊಕ್ಕಾಂನಲ್ಲಿ ನೋಡಿದೆನು ತರೀಕೆರೆ ಸಾಹುಕಾರ್ ಘಟಿಯಪ್ಪನವರಲ್ಲಿ ನಡದ ಘೋರ ಕಳವು ಪತ್ತೆ ಮಾಡುವುದಕ್ಕೆ [illegible] ಕೆರೆ ಪೊಲೀಸ್ ಇನ್ಸ್‌ಪೆಕ್ಟರ್ ಸುಂದರದಾಜೆಪ್ಪಂಗಾರರು ಮತ್ತು ಎತ್ತೆ ಹಳ್ಳಿ ಜಮೀದಾರ್ ಅಪ್ಪೂರಾಯರು ಪತ್ತೆ ಮಾಡಿ ಇರುವಂತೆ ಯಾವ ಬಾತ್ಮಿದಾರರು ತಮಗೆ ತಿಳಿಸಿದರೋ ನೋಡಿ ಆಶ್ಚರ್ಯವಾದ ಹಾಗಾಗಿದೆ ಸದರಿ ಮೊಕದ್ದಮೆಯನ್ನು ಪತ್ತೆ ಮಾಡಬೇಕೆಂದು ನನಗೆ [illegible] ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರು ಹುಕುಂ ಕೊಟ್ಟ ಮೇರೆಗೆ ಚನ್ನಗಿರಿಗೆ ಹೋಗಿ ಸದರಿ ಕೋರಮರ ಗ್ಯಾಂಗನ್ನು ಕಂಡುಹಿಡಿದು ಮಾಲ್ ಮುಂತಾದ್ದು ಪತ್ತೆ ಮಾಡಿದ ಸಂಗತಿಯನ್ನು ಕಡೂರು ಪೊಲೀಸ್ ಸಾ॥ ಸು॥ ರವರಿಗೂ, ತರೀಕೆರೆ ಅಮಲ್ದಾರರವರಿಗೂ ಇನ್ನು ಕೆಲವು ಕಳುವು ಹೋದ ಮಾಲುಗಳು ಬಿದ್ದ ಮಾಲ್ ಅಸಾಮಿಗಳನ್ನು ತಕ್ಕೆ ಮಾಡಿ ತರೀಕೆರೆ ಪೊಲೀಸಿನವರಿಗೆ ಒಪ್ಪಿಸಿ ವರ್ಗಾಯಿಸಿಕೊಟ್ಟು ಶಿವಮೊಗ್ಗ ತಾಲ್ಲೂಕಿಗೆ ಈ ತಿಂಗಳು ೧ನೆ ತಾರೀಖಿನ ಕೆಲಸದ ಮೇಲೆ ಬಂದಿದ್ದೇನೆ ಈ ವಿಷಯ ಗರ್ವರ್ನಮೆಂಟಿಗೆ ರಿಪೋರ್ಟ್ ಮಾಡುವದರಲ್ಲಿ ಇದ್ದೇನೆ ಈ ರೀತಿ ಕೃತ್ಯ ನಡದ ಲಾಗಾಯತು ಒಂದು ತಿಂಗಳವರಿಗೂ ಅನ್ನ ನೀರು ಬಿಟ್ಟು ಕಷ್ಟಪಟ್ಟು ಕೇಸನ್ನು ಪತ್ತೆ ಮಾಡಿದವರ ಹೆಸರು ತಿಳಿಸದೆ ಬಾಬಾಸುಗಿರಿಯನ್ನು ಮೇಲ್ಕಂಡ ಎರಡು ಜನ ಪೊಲೀಸು ಆಫೀಸರರಿಗೆ ಕೊಡಿಸುವದಕ್ಕೆ ತಮಗೆ ವರ್ತಮಾನ ಕೊಟ್ಟವರ ನಡೆನುಡಿಯನ್ನು ಪ್ರಕಟಿಸಬೇಕಾಗಿದೆ

ವೆಂಕಟಪ್ಪ,

ಪೊ ಇ , ಶಿವಮೊಗ್ಗ

ಹಂದಿಗಳ ಅಂಟುರೋಗವು

ಅಯ್ಯಾ

ತೀರ್ಥಹಳ್ಳಿ ತಾಲ್ಲೂಕು ಅಗುಂಬೆ ಗ್ರಾಮದಲ್ಲಿ ಹಂದಿ ಎಂಬ ಅಲ್ಪ ಮೃಗಗಳನ್ನು ಅಲ್ಪ ಮನುಷ್ಯರು ಸಾಕಿಕೊಂಡು ಬಿಕರಿ ಮಾಡುವರಷ್ಟೆ ಈ ಊರಿಗೆ ಸಮೀಪವಾದ ಕೂದರ ಗ್ರಾಮದಲ್ಲಿ ಕೆಲವರ ಮನೆಗಳಲ್ಲಿ ೨೦—೩೦ ವರೆಗೂ ಸಾಕಿಕೊಂಡು ಬಿಕರಿ ಮಾಡುವರು ಈ ಅಲ್ಪ ಮೃಗಗಳಿಗೆ ಒಂದು ವಾರದ ಈಚೆಗೆ ಅಂಟುರೋಗ ಅಂದರೆ ಗಂಟಲು ಕಟ್ಟಿಕೊಂಡು ಉರ್ಧ ಮುಕ್ಕಾಲು ಗಂಟೆಗೊಳಗೆ ಅತಿ ತೀವ್ರವಾಗಿ ಮೃತಪಡುತ್ತವೆ ಈ ರೋಗವು ಗೋಕಾಯಿಗಳಿಗೆ ಅಂಟಿಕೊಂಡು ಇದೇ ಊರಲ್ಲಿ ೧೦—೧೫ ರವರಿಗೂ ಮರಣವಾಗುತ್ತಾ ಬಂದಿದೆ. ಆ ಸಮೀಪವಾದ ಮಳೆಗೆ ತಪ್ಪಿ ಉಳಿಕೊಂಡು ಇರುವ ಗೋಕಾಯಿಗಳು ಈ ಹಂದಿ ಎಂಬ ಅಲ್ಪ ಮೃಗಗಳ ದೆಸೆಯಿಂದ ವ್ಯರ್ಥವಾಗಿ ಪ್ರಾಣ ಕಳೆಕೊಳ್ಳಬೇಕಾಗುತ್ತೆ ಇವುಗಳನ್ನು ಸಾಕಿಕೊಂಡುವನಗಳಿಂದ ಮನೆ ಬಾಡಿಗೆ ಅಸಹ್ಯಕರವಾದ ಗಲೀಜು ಮುಂತಾದ್ದು ಮಾಡಲಿಕ್ಕೆ ಅಲ್ಪ ಮನುಷ್ಯರು ಸಾಕಿಕೊಂಡು ರೋಗದಿಂದ ನರಳುತ್ತಿರುವರು ಇದು ಈ ಮಲನಾಡು ಜನಗಳ ಮೂಢತ್ವವಾಗಿರುತ್ತೆ ಈ ಹಂದಿ ಎಂಬ ಅಲ್ಪ ಮೃಗವನ್ನು ಯಾರುತಾನೇ ಸಾಕಿಕೊಂಡು ಇರುತ್ತಾರೆಯೋ ಊರುಗಳಿಗೆಲ್ಲಾ ಈ ರೋಗವು ಹಬ್ಬಿಕೊಂಡು ಗೋಕಾಯಿಗಳೂ ಮೃತವಾಗುತ್ತವೆ ಮತ್ತು ಇದೇ ಬಾಬು ಗ್ರಾಮದ ಇದ್ದೆ ಎಂಬ ಊರಿನಲ್ಲಿ ೨—೩ ವಾರದೀಚೆಗೆ ಇದೇ ರೋಗವು ಉತ್ಪನ್ನವಾಗಿ ಮೃತವಾದವು ಕೆಲವರ ಮನೆಯಲ್ಲಿ ೨೦—೩೦ ವರೆಗೂ ಸಾಕಿಕೊಂಡು ಇರುತ್ತಿದ್ದರು ಒಂದು ವಾರದ ಈಚೆಗೆ ಕೆಲವರು ಆ ಗ್ರಾಮದ ಪಟೇಲರಿಗೆ ತಿಳಿಸಿದ್ದರ ಮೇಲೆ ಕೂಡಲೆ ಅವರು ಅವುಗಳನ್ನು ಜಾಗ್ರತೆಯಿಂದ ತೆಗಸಿದರು ಆಚೆಗೆ ಆ ರೋಗವು ನಿಂತು ಮಾಗುಪ್ರಾಣಿಗಳಾದ ದನಕರುಗಳು ಸುಖವಾಗಿರ ಾದನ್ನು ಆ ಊರು ಜನರು ನೋಡಿ ಬಹಳ ಸಂತೋಷದಿಂದ ಪಟೇಲರನ್ನು ವಂದಿಸುವರು

ಈ ಊರಿಗೆ ಸಮೀಪವಾದ ಕಾಗಿನ ಗೊಳ್ಳಿ ಎಂಬ ಊರನಲ್ಲಿ ಕೆಲವರು ೧೦—೧೫ ವರೆಗೂ ಸಾಕಿಕೊಂಡು ಅವುಗಳ ರಕ್ಷಣೆ ಬಗ್ಗೆ ದನವಿನ ಕೊಟ್ಟಿಗೆ ಸಮೀಪದಲ್ಲಿ ಅವುಗಳ ಕೊಟ್ಟಿಗೆ ಕಟ್ಟುತ್ತಾರೆ ಇವುಗಳು ದನವಿನ ಕೊಟ್ಟಿಗೆಗೆ ಪ್ರವೇಶ ಮಾಡಿ ಸಗಣಿ ಮುಂತಾದ್ದನ್ನು ಹಾಕಿ ಈಚಗೆ ಬರುವದಲ್ಲದೆ ಇವರುಗಳು ಸಗಣಿ ಮುಂತಾದ್ದನ್ನು ಮನೆಗೆ ಸಾಗಿಸುತ್ತಾರೆ ಈ ಸ್ವಚ್ಛತೆಯಿಂದ ಜನಗಳಿಗೆ ಕಾಹಿಲೆ ಅಂಟಿಕೊಳ್ಳುತ್ತೆ ಈ ಹಂದಿಯನ್ನು ಕೊಲೀರಾ ಎಂಬ ಜಾತಿಯವರು ಸಾಕುತ್ತಾ ಇದ್ದರು ಈಚೆಗೆ ಎಲ್ಲರು ಸಾಕುವದರಿಂದ ಗೋಕಾಯಿಗಳ ಸಂತತಿ ಕಡಿಮೆಯಾಗುತ್ತೆ

ಟಿ ಬಿ ಅಣ್ಣಯ್ಯ

ರೈತರುಗಳ ದೊಂಬಿ

ಅಯ್ಯಾ,

ಹೊಸದುರ್ಗದ ತಾಲ್ಲೂಕು ಬಾಗೂರು ಗ್ರಾಮದ ತಿರುಮಲಾಪುರ [illegible] ಎಂಬ ಕೆರೆಗೆ ಹೋಗುವ ಹಳ್ಳಕ್ಕೆ ಇದೇ ತಾಲ್ಲೂಕಿಗೆ ಸೇರಿದ ಬಾಗೂರು ಗ್ರಾಮಕ್ಕೆ ೩ ಮೈಲ್ ಫಾಸಲೆ ಇರುವ ಸಗ್ಗರೆ ಮತ್ತು ಓಬಳಾಪುರ ಗ್ರಾಮಗಳ ತೆಂಗಿನ ತೋಟಗಾರರು ತಮ್ಮ ತೋಟಗಳ ಮಧ್ಯಾಂತ್ರ ಬರುವ ಮೇಲ್ಕಂಡ ಹಳ್ಳಕ್ಕೆ ಹುದಿಗಳು, ಕಲ್ಲು ಅಡ್ಡಕಟ್ಟುಗಳು ಹಾಕಿ, ಸದರಿ ಕೆರೆಗೆ ಬರುವ ನೀರಿಗೆ ಅಡ್ಡಮಾಡಿ ತೆಂಗಿನ ತೋಟಗಳಲ್ಲ ನೀರು ನಿಲ್ಲಿಸುತ್ತಾರೆಂಬ ವಿಷಯದಲ್ಲಿ ಆಗಾಗ್ಗೆ ಬಾಗೂರಿನವರಿಗೂ ಸಗ್ಗರೆ ವಗೈರ ಗ್ರಾಮಗಳ ರೈತರಿಗೆ ವಿವಾದ ನಡೆಯುತ್ತಾ ಬಂದು ಅನೇಕ ವರ್ಷಗಳಾದವು ಆ ಲಾಗಾಯಿತು ಅನೇಕ ಆಫೀಸರುಗಳು ಮತ್ತು ಪಂಚಾಯತಿ—ಇವುಗಳು ಮಾಮೂಲು ಹುದಿ ಅಡ್ಡಗಳು ಮತ್ತು ಇವುಗಳಿಂದ ಕೆರೆಗೆ ನೀರ ಹೋಗಲು ಬಾಧಕವಿಲ್ಲ ಹುದಿ, ಅಡ್ಡ ನಿಲ್ಲಿಸಲು ಹಾಕಿರುತ್ತಾರೆ ಆದರೂ ಏನೂ ಇಲ್ಲವೆಂಬ ತೀರ್ಮಾನಗಳು ಆಗಿರುತ್ತವೆ

ಈಗ ೩ನೆ ಕೌನ್ಸಿಲರ್ ಸಾಹೇಬರವರ ಸಮಾಲೋಚನೆ ಈ ಬಾಗೂರು ಗ್ರಾಮಕ್ಕೆ ಬಂದಿದ್ದಾಗ ಬಾಗೂರು ಗ್ರಾಮಸ್ಥರು ಮೇಲ್ಕಂಡ ವಿಷಯದಲ್ಲ ಫಿರ್ಯಾದು ಹೇಳಿಕೊಂಡರು, ಆಗ ಡೆಪ್ಯುಟಿ ಕಮೀಷನರ್ ಸಾಹೇಬರವರು ಹಿಂದಿನ ಪಂಚಾಯತಿ ಪರಾಮರ್ಶೆ ನಡವಳಿಕೆ ಇಂದ ಈ ಅಡ್ಡಗಳು ತೆಗೆಸಲು ಆಗುವದಿಲ್ಲ ಮಾಮೂಲ್ ಅಡ್ಡಗಳು ಎಂದು ಅಪ್ಪಣೆಯನ್ನು ಉಭಯ ಗ್ರಾಮಸ್ಥರ ಮುಖತಾ ತಿಳಿಸಿದರು ಹೀಗಿರುತ್ತಾ ಈ ಆಗಸ್ಟ್ ಮಾಹೆ ತಾ ೧೩—೧೪—೧೫ ಈ ಮೂರು ತಾರೀಖುಗಳಲ್ಲಿಯೂ ಬಾಗೂರಿನವರು ಇನ್ನೂ ಅಜಾಗರೂಕತೆಯಿಂದ ರೂ ಎಲ್ಲಾ ಸುಮಾರು ೧೦೦—೧೫೦ ಜನ ಗುಂಪು ಸೇರಿ ಸಗ್ಗರೆ ವಗೈರೆ ಆಯುಧಗಳೊಂದಿಗೆ ಬಂದು ಸದರಿ ತೋಟಗಳ ಅಡ್ಡಗಳು, ಹುದಿಗಳು ಕಿತ್ತು ನಾಶಮಾಡಿ ಲೂಟಿ ಮಾಡುತ್ತಾರೆ ಆಗ್ಗೆ ತೋಟಗಾರರ್‍ಯಾರೂ ಇರಲಿಲ್ಲ ನಂತರ ತಾ ೧೬ ರಲ್ಲಿ ಪುನಃ ಇದೇ ರೀತಿ ಬಂದರು ಆಗ್ಗೆ ತೋಟಗಾರರೂ ಗ್ರಾಮಾದಿಗರೂ ೪೦—೫೦ ಜನ ಎದುರಿಸಿ ನಿಂತರು ಆಗ ಕೆಲವು ರೈತರು ನನ್ನನ್ನು ಬರುವಂತೆ ಕೇಳಿಕೊಂಡದ್ದರ ಮೇಲೆ ನಾನೂ ಹೋಗಿ ನೋಡುವಲ್ಲಿ ಭಯವೂ ಆಶ್ಚರ್ಯವೂ ಉಂಟಾಯ್ತು ಹಿಂದೆ ಎದ್ದಿದ್ದ "ಪಾಟನ ಗಲಭೆ" ಸ್ಮರಣೆಗೆ ಬಂತು ನಂತರ ಉಭಯ ಪಕ್ಷದವರಿಗೂ [illegible] ಸಂವಾದಗಳು ನಡೆದವು ಮಾರಾಮಾರಿಯೂ ನಡೆಯುತ್ತಿತ್ತು ಅಷ್ಟರಲ್ಲಿ ಯಾರೋ ಈ ಸುದ್ದಿಯನ್ನು ಕೇಳಿ ಹೇಳಿದ್ದರು ಬಂದರೆ ಆಗ ನಾನೂ ಅವರೂ ಸಮಾಧಾನ ಮಾಡಿದೆವು ಯಾರಿಗೂ ಅಪಾಯ ಆಗಲಿಲ್ಲ ಬಾಗೂರಿನವರು ವಾಪಸ್ ಹೋದರು ಪ್ರಜೆಗಳು ಮಾತೃಪ್ರಾಯರಾದ ಸರ್ಕಾರದ ನ್ಯಾಯ ನಡವಳಿ ಅವರ ಕಷ್ಟ ನಿಷ್ಠುರಗಳನ್ನು ನಿವರ್ತಿ ಮಾಡಿಕೊಳ್ಳುವ ಅವಕಾಶವೂ ಈಗಿನ ಕಾಲದಲ್ಲಿ ಇರುವಾಗ ಆಂಗ್ಲೇಯ ರಾಜ್ಯಾಡಳಿತ ಪ್ರಾರಂಭವಾದ ಲಾಗಾಯತು ಯಾವ ಕ್ಷೋಭೆ ಅಶಾಂತಿ ಇಲ್ಲಗೆ ಪರಂಪರೆಯಂತೆ ನಡೆದುಕೊಂಡು ಬರುತ್ತಿದ್ದರೂ ಯಾವ ಪಕ್ಷಕ್ಕೂ ಅವಕಾಶವಿಲ್ಲದೆ ಪರಸ್ಪರ ಗಲಭೆ ಮಾಡಿ [illegible] ಉದ್ದೇಶಿಸುವ ಪ್ರಜೆಗಳ ಮೌಢ್ಯವನ್ನು ಸರ್ಕಾರದವರೇ ನಿವಾರಣೆ ಮಾಡಿ, ಪರಸ್ಪರ ಸೌಖ್ಯವನ್ನು ಉಂಟುಮಾಡಿ ದೇಶದ ಏಳಿಗೆಗೆ ಸರ್ವಕಾಲಗಳಲ್ಲಾಗಿ ನೆಮ್ಮದಿಯಾಗಿರುವಂತೆ ಮಾಡಲಿ ಎಂದು ಪ್ರಾರ್ಥಿಸುವ

ಪ್ರಜಾಭಿಮಾನಿ

ಹೆಣ್ಣುಮಕ್ಕಳನ್ನು ಅಪಹರಿಸಿದರೆಂಬ ಅಪವಾದವು

ಅಯ್ಯಾ,

ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆಗ್ರಾಮದಲ್ಲಿ ದೊಡ್ಡನ ಚಿಕ್ಕನೆಂಬ ಇದ್ದಾನೆ ಇವನಿಗೆ ಜವರಿ, ಮರಿ ಎಂತಾ ೨ ಜನ ಹೆಣ್ಣುಮಕ್ಕಳು ಈ ಪೈಕಿ ಜವರಿ ಎಂಬವಳನ್ನು ಇದೇ ಹೋಬಳಿ ಚನ್ನೇನಹಳ್ಳಿ ಕೊಪ್ಪಲುಗ್ರಾಮದ ಮೈಸೂರು ಕಾಳೇಗೌಡನ ಮಗನಿಗೆ ಕೊಟ್ಟು ಲಗ್ನವಾಗಿದೆ ಆದಾಗ್ಯೂ ಹುಡುಗಿಯರು ತಂದೆ ಚಿಕ್ಕನ ಪೋಷಣೆಯಲ್ಲೇ ಇದ್ದಾರೆ

ಈ ೨ ಜನ ಹೆಣ್ಣುಮಕ್ಕಳನ್ನು ಸುಮಾರು ೮—೧೦ ದಿವಸದ ಕೆಳಗೆ ಇದೇ ಹೋಬಳಿ ಹಿರಿಸಾವೆಗ್ರಾಮದಲ್ಲಿರುವ ಕರಿಯಳ ಹೆಂಡತಿ ಇವರುಗಳ ನೋಡರತ್ತೆಯಾದ ಚಿಕ್ಕಿಯು ಆ ಗ್ರಾಮದ ಪಟೇಲ್ ಬೋರೇಗೌಡನ ಶಿವನಂಜೇಗೌಡ ಸಹಾ ಸೇರಿ ಹಿರಿಸಾವೆಗೆ ಒಂದು ತಂದೆಯಾದ ಏನೂ ತಿಳಿಯದ ಚಿಕ್ಕನನ್ನು ಸದರಿ ಹಿರಿಸಾವೆಯಲ್ಲಿ ದೇವರ ಹಬ್ಬವಾಗುತ್ತೆ ನಿನ್ನ ಹೆಣ್ಣುಮಕ್ಕಳನ್ನು ಕಳುಹಿಸಿಕೊಡಬೇಕೆಂತ ಕೇಳಿದ ಹಾಗೂ ಇದು ನಿಜವೆಂದು ನಂಬಿ ಅವರ ಜೊತೆಗೆ ಕಳುಹಿಸಿಕೊಟ್ಟ ಹಾಗೂ ಇವರುಗಳು ಕರೆದುಕೊಂಡುಹೋಗಿ ಹಿರಿಸಾವೆ ಪಟೇಲ್ ಬೋರೇಗೌಡನ ಸುಪರ್ದಿಗೆ ಬಿಟ್ಟಂತೆ ಸಹಾ ತಿಳಿಯಿತು

ಸದರಿ ಬೋರೇಗೌಡನು ಇದಕ್ಕೆ ಮೊದಲೇ ಹಾಸನದ ಕಸುಬಾದಲ್ಲಿರುವ ನಾಯಕಸಾನಿ ರಮಾಮಣಿ, ಲಕ್ಷ್ಮಿ ಇವರುಗಳಿಗೆ ಹೆಣ್ಣು ಒದಗಿಸಿಕೊಡುವದಕ್ಕಾಗಿ ಹಾಸನದ ಸಬ್ ಜಡ್ಜರವರ ಕೋರ್ಟಿನಲ್ಲಿರುವ ಸರ್ಮಖ್ಯದೆ ಶ್ರೀಹರಿರಾಯರ ಮುಖಾಂತರ ಹಣಗಳನ್ನು ನಡಿಸುತ್ತಾ ಈ ಮೂರು ಜನರನ್ನು ಹಿರಿಸಾವೆಗೆ ಬರಮಾಡಿಕೊಂಡು ತಂದೆಗೆ ತಿಳಿಯದಂತೆ ೨ ಜನ ಹೆಣ್ಣುಮಕ್ಕಳನ್ನು ಅವರ ವಶಪಡಿಸಿದಂತೆಯೂ ಅವರು ಯಾರಿಗೂ ತಿಳಿಯದಂತೆ ಹಾಸನಕ್ಕೆ ಕರೆದುಕೊಂಡುಹೋ

ದಂತೆ ಸಹಾ ಕೇಳುತ್ತೇನೆ ೩—೪ ದಿವಸವಾದಾಗ್ಯೂ ಹೆಣ್ಣುಮಕ್ಕಳು ಬಾರದ್ದರಿಂದ ತಂದೆಯಾದ ಚಿಕ್ಕನಿಗೆ ಗಾಬರಿಯಾಗಿ ಹಿರಿಸಾವೆಗೆ ಹೋಗಿ ಇಲ್ಲಿಂದ ಕರೆದುಕೊಂಡುಹೋಗಿದ್ದ ಜನರನ್ನು ವಿಚಾರ ಮಾಡಿದನಂತೆ ಅವರು ಈ ದಿವಸ ಬೆಳಿಗ್ಗೆ ನಿಮ್ಮ ಊರಿಗೆ ಹೋದರೆಂದು ಹೇಳಿದ ಹಾಗೂ ಅವನು ವಾಪಸು ಚನ್ನೇನಹಳ್ಳಿಗೆ ಬಂದು ತನ್ನ ಮನೆ ನೋಡಿ ಅಲ್ಲಿಯೂ ಇರಲಿಲ್ಲವಾದ್ದರಿಂದ ಜವರಿ ಮಾವನಾದ ಕಾಳೇಗೌಡನಿಗೆ ಒಡನೆ ಹೋಗಿ ತಿಳಿಸಿದ್ದರಿಂದ ಅವನೂ ಹಿರಿಸಾವೆ ಮೊದಲಾದ ಅನೇಕ ಕಡೆ ಹುಡುಕಿ ಕೊನೆಗೆ ಹಾಸನದಿಂದ ಬಂದಿದ್ದ ನಾಯಕಸಾನಿ ರಮಾಮಣಿ ಮೊದಲಾದವರು ಕರೆದುಕೊಂಡು ಹೋದರೆಂಬ ವರ್ತಮಾನ ತಿಳಿದು, ಅಲ್ಲಿಗೆ ಹೋಗಿ ಹೆಣ್ಣುಮಕ್ಕಳನ್ನು ಪತ್ತೆಮಾಡಿ ನಂತರ ತಂದವರ ಮೇಲೆ ಹಾಸನದ ಡಿಸ್ಟ್ರಿಕ್ಟ್ ಜಜಲ್ ಅಸಿಸ್ಟೆಂಟ್ ಕಮಿಷನರರಲ್ಲಿ ಅರ್ಜಿ ಕೊಟ್ಟಿದ್ದನ್ನು ಅವರು ಒಡನೆ ಪೊಲೀಸ್ ಇನ್ಸ್‌ಪೆಕ್ಟರವರಿಗೆ ರಿಫರ್ ಮಾಡಲು ತನಿಖೆಗಾಗಿ ಹಾಸನ ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರ ಬಳಿಗೆ ಕಳಸಿದ್ದನ್ನು ಅವರು ಜಮಾದಾರ್ ಒಬ್ಬರ ಕಳೆದ ಮಾಹೆ ೩೦ ನೆ ತಾರೀಖಿನಲ್ಲಿ ವಿಚಾರಣೆ ನಡಸಿ ಆಸಾಮಿ ಪರಾರಿಗೆ ಅವಕಾಶವಿಲ್ಲದಂತೆ ನಿರ್ಧರಿಸಿಟ್ಟು ಸ್ಥಳ ತನಿಖೆ ಮಾಡಲು ಚನ್ನರಾಯಪಟ್ಟಣ ತಾಲ್ಲೂಕಿಗೆ ಕಳಿಸಿರುವುದರಿಂದ ಕೇಸು ಮುಂದೆ ಏನಾಗುವದೋ ಫಲತಾಂಶ ಏನಾಗುವದೋ ನೋಡಬೇಕಾಗಿದೆ

[illegible]

ಕೆರೆ ಕಟ್ಟೆ ಪ್ರ ರ [illegible]

ಅಯ್ಯಾ,

ಈ ಗೋಪಾಲಪುರ ತಾಲ್ಲೂಕು [illegible] ಯಲ್ಲಿ ದೊಡ್ಡ ಕೆರೆಗಳು ಇಲ್ಲದೆ ಅಲ್ಲಿನ ರೈತರೆಲ್ಲಾ ಮಳೆಯ ನೀರು ಹರಿದು ಹೋಗುವದನ್ನು ನೋಡುತ್ತಾ ಫಸಲು ಇಡುವ ಬಲವನು ಇಲ್ಲದ ಬಾಳ [illegible] [illegible] [illegible] ಗೋಳನ್ನು ಮೊರೆಯಿಡುತ್ತಾ ಬಂದದ್ದರ ಮೇಲೆ [illegible] ಗಳ ಕೆಳಗೆ ಇದೇ ನಮ್ಮ [illegible] ನದಿಗೆ ಅಡ್ಡವಾಗಿ ಒಂದು ಕರ ಕಟ್ಟಿ ಕೊಡ ಬೇಕೆಂಬ ಮೂಲಕ ಈ ಪ್ರಾಂತ್ಯದ ರೈತರಿಗೆಲ್ಲಾ [illegible] ದೂ ಅಪ್ಪಣೆ [illegible] ರಲ್ಲಾ [illegible] ಒಪ್ಪಿರುವದಲ್ಲದೆ, ಹಾಲಿ ಅಲ್ಪಸ್ವಲ್ಪ [illegible] ನ ಗಳಿಗೆ ಒಂದು ಸಾಲು ಕಂದಾಯ [illegible] ಕೊಡ [illegible] ಳಕೆಗಳು ಒಡೆದುಹೋಗಿ [illegible] ಪ್ಪದ ಮೇಲೆ—ಕೆರೆ [illegible] [illegible] ವಾಯಿತೆಂದು ರೈತರೆಲ್ಲಾ ಸಂತೋಷಪಡುತ್ತಾ ಇದ್ದರು ಮತ್ತು ಮಾಡಿಕೊಳ್ಳಬೇಕೆಂದಿದ್ದ ಬಲವನತಿ ಭಾವಿಗಳೂ [illegible] ಳ್ಳದೇ ಬಿಟ್ಟರು ಕಳೆದ [illegible] ಕೆರೆಯನ್ನು ಇತರ [illegible] ಳಗೆ ಆಗುವ ಅಂದಾಜು ಪ್ರಕಾರ ೩ ಲಕ್ಷವೂ [illegible] [illegible] ಮಾಡುವ [illegible] ರ ಮಟ್ಟ [illegible] ಇದ್ದದ್ದನ್ನು [illegible] ಅಲ್ಲಿನ ರೈತರೆಲ್ಲಾ ಮನಸ್ಸಾರಾಗಿ [illegible] [illegible] ಕ್ಷಾಮ ಬರಬೇಕಾಗುತ್ತದೆ [illegible] ಕಾಲದಂತೆ [illegible] ಈ ಕೆರೆ ಕೆಲಸವನ್ನು ಯಾತಕ್ಕೋಸ್ಕರ [illegible] ಯದು ಇನ್ನು [illegible] ಕ್ಷಾಮ [illegible] [illegible] ಗಳ ಕೆಳಗೆ ಚೀಫ್ ಕಮೀಷನರ್ [illegible] ರೆವಿನ್ಯೂ ಕಮೀಷನರ್ ಆಗಿದ್ದ ವೇಳೆ, ಒಂದರೆ [illegible] ವರ್ಷಗಳ ಕೆಳಗೆ [illegible] ಭಾವಿ [illegible] ಗಳು ಇದ್ದು, ಅಲ್ಲಿನ ರೈತರ [illegible] ಕಟ್ಟುವ ಸ್ಥಳವನ್ನು ಪರಾಂಬರಿಸಿ [illegible] ಕೆರೆ ಕಟ್ಟುವಂತೆ ಪ್ರ ಮಾಡುವದಾಗಿ ಅಪ್ಪಣೆ ಕೊಡಿಸಿದ್ದರು ಅಲ್ಲಗೆ ಈಗ ೨ ವರು ಷಗಳ ಕೆಳಗೆ [illegible] ಕೋಲಾರ ಡಿಸ್ಟ್ರಿಕ್ಟ್ [illegible] [illegible] ಜಮಾಬಂದಿಗೆ ಚಿತ್ತೈಸಿದ್ದ ವೇಳೆ ಅಲ್ಲಿನ ರೈತರೆಲ್ಲಾ ಮೇಲ್ಕಂಡ [illegible] ಕೇಳಿಕೊಂಡದ್ದರ ಮೇಲೆ ಜಾಗ್ರತೆ ಕೆರೆ [illegible] ಮಾಡುವ ಹಾಗೆ ಅಪ್ಪಣೆ ಕೊಡಿಸಿದ್ದರು ಈ ಇನ್ನೂ ಕೆಲಸಕ್ಕೆ [illegible] ಇಲ್ಲದೇ ಇರುವದರಿಂದಲೂ, ಈಗ ಕಾಲವಾಗಿರುವದರಿಂದಲೂ ಈ ಕೆಲಸವನ್ನು [illegible] ಕಾಲ ಹಾರಿ ತಪ್ಪಿಸಿ, ಜಾಗ್ರತೆ ಕಾಲ ಹಾರಿ ಶುರುಮಾಡುವಂತೆ ಪ್ರಾರ್ಥಿಸುತ್ತೇನೆ

ತಮ್ಮ [illegible]

ಕುಣಿಗಲಿನಲ್ಲಿ ನಡೆದ ಗ್ರಾಮ ದೇವತೆಯ ಹಬ್ಬ

ಅಯ್ಯಾ,

ಈ ಊರಿನಲ್ಲಿ ಗ್ರಾಮಸ್ಥರು ಗ್ರಾಮದೇವತೆ ಹಬ್ಬವನ್ನು ವಿಜೃಂಭಣೆಯಿಂದ ಮಾಡಿದರು ಇದನ್ನು ಮಾಡುವುದಕ್ಕೆ ಕಾರಣವೇನೆಂದರೆ—ಈ ಗ್ರಾಮದಲ್ಲಿ ಸುಮಾರು ಒಂದು ತಿಂಗಳಿಂದ [illegible] ರೋಗವು ಪ್ರಾರಂಭಿಸಿ, ಸುಮಾರು ೩೦—೪೦ ಜನಗಳ ವರಿವಿಗೂ [illegible] ರು ಈ ಮಧ್ಯೆ ಒಬ್ಬ ಪೂಜಾರಿಯ ಮೇಲೆ ದೇವತೆಯು [illegible] " ಈ ಊರಿಗೆ ಮೂರು ಜನ ಬಂದಿದ್ದಾರೆ, ಇವರುಗಳ ಹಬ್ಬವ ಮಾಡಿದರೆ ಈ ರೋಗವು ನಿಂತುಹೋಗುತ್ತದೆ " ಎಂಬದಾಗಿ ಹೇಳಿ ಆಗ ಪಟೇಲ್ ಮುಂತಾದ ಗ್ರಾಮದ ಮುಖಂಡರು ಸೇರಿ ಮನೆ ಕ್ಕೆ ೩—೪ ಆಣೆಯಂತೆ ೩೦—೪೦ ರೂಪಾಯಿ ವರೆಗೂ ವಸೂಲು ಕಳೆದ ತಾರೀಖು ೪ ನೇ ಮಂಗಳವಾರ ಹಬ್ಬ ಮಾಡಬೇಕೆಂದು [illegible] ಯಿಸಿದರು

ಒಬ್ಬ ಅಕ್ಕಸಾಲೆಯು ಕೈಯಿಂದ ಸುಮಾರು ಎರಡು ಅಡಿ [illegible] ವಾಗಿಯೂ ಒಂದು ಅಡಿ ಅಗಲವಾಗಿಯೂ ಜೇಡಿಮಣ್ಣಿನಿಂದ ಬೊಂಬೆಯನ್ನು ಮಾಡಿಸಿ, ಅದರ ಮೈತುಂಬಾ ಅರಿಸಿನ [illegible]

ದ ಸೀರೆ ಉಡಿಸಿ, ಒಂದು ಹಲಿಗೆಯ ಮೇಲೆ ಇಟ್ಟು ಒಬ್ಬನ ಮೇಲೆ ಹೊರಿಸಿ, ಆ ಹಲಿಗೆಯ ಉಭಯಪಾರ್ಶ್ವಗಳಲ್ಲಿಯೂ ಇಬ್ಬರಿಬ್ಬರು ಹಿಡುಕೊಂಡು ಓಲಗ, ಅರೆ, ತಮಟೆ ಮುಂತಾದ ವಾದ್ಯಗಳೊಡನೆ ಗ್ರಾಮದೇವತೆ ಗುಡಿಯ ಬಳಿಗೆ ತಂದರು. ಆ ದಾರಿಯಲ್ಲಿ ಆ ಕುರಿ, ಮೇಕೆ ಮುಂತಾದವುಗಳನ್ನು ಬಲಿಕೊಟ್ಟರು. ಆ ಬೊಂಬೆಯ ಕಣ್ಣುಗಳಾದರೋ ಆಕಾಶವನ್ನೇ ನೋಡುತ್ತಾ ಇದ್ದವು. ದೇವಿಯನ್ನು ಗುಡಿಯೊಳಗೆ ಇಟ್ಟ ಮೇಲೆ ಬ್ರಾಹ್ಮಣರು ಮತ್ತು ಇತರ ಜಾತಿಯವರು ಪೂಜೆ ನಮಸ್ಕಾರಗಳನ್ನು ಮಾಡಿದರು. ಈ ಕಾರ್ಯಗಳು ರಾತ್ರಿ ೧ ಗಂಟೆಯ ವರೆವಿಗೂ ನಡೆದವು. ಅನಂತರ ಪೂಜಾರಿಯ ಮೇಲೆ ದೇವಿ ಬಂದು, "ನನಗೆ ಹಸಿವಾಗುತ್ತದೆ" ಎಂದು ಹೇಳಿ, ಮಂತ್ರಾಕ್ಷತೆಗಳು ... ಅನ್ನದ ರಾಶಿಯಲ್ಲಿ ಸುಮಾರು ಅರ್ಧದಷ್ಟು ತಿಂದುಬಿಟ್ಟಳು. ಈ ಮಧ್ಯೆ ಇನ್ನೊಂದು ದೇವತೆಯು ಮತ್ತೊಬ್ಬನ ಮೇಲೆ ಬಂದು ಅಲ್ಲಿದ್ದ ಒಂದು ಎಳೆ ಮೇಕೆಯನ್ನು ಕಲ್ಲಿನಲ್ಲಿ ಬಗೆದು, ಅದರ ರಕ್ತವನ್ನು ಹೀರಿತು. ಇದನ್ನೆಲ್ಲಾ ನೋಡಿದಾಗ ನರಕದಲ್ಲಿರುವ ಕ್ಲೇಶಗಳು ಇಲ್ಲೇ ಆಗುತ್ತವೆಯೋ ಎಂಬದಾಗಿ ತೋರುತ್ತಿತ್ತು.

ಅನಂತರದಲ್ಲಿ ಬಲಿಕೊಡುವುದಕ್ಕಾಗಿ ಎಂಟು ಕೋಣಗಳನ್ನು ... ನಿಲ್ಲಿಸಿದ್ದ ಒಂದು ಕಂಬದ ಹತ್ತಿರಕ್ಕೆ ತಂದು ಅವುಗಳ ಕತ್ತನ್ನು ಕಂಬದ ಮೇಲಿರಿಸಿ ಕತ್ತರಿಸಿದರು. ಅವುಗಳ ತಲೆಗಳನ್ನು ದೇವರ ಮುಂಭಾಗದಲ್ಲಿಟ್ಟು, ಅವುಗಳ ಬಲಗಾಲನ್ನು ಕತ್ತರಿಸಿ ಬಾಯಿಗೆ ಕೊಟ್ಟು, ಅದರ ಮೇಲೆ ದೀಪ ಇಟ್ಟರು. ಆಗ ಆದ ತಮಟೆ, ಅರೆ, ಓಲಗ ಮುಂತಾದವುಗಳ ಶಬ್ದಗಳಿಂದ ಆ ಸಮೀಪದಲ್ಲಿದ್ದ ಮನೆಗಳ ಜನಗಳಿಗೆ ಒಂದು ಕ್ಷಣಮಾತ್ರವೂ ನಿದ್ರೆ ಬರಲಿಲ್ಲ. ಇದರಲ್ಲಿ ಮಾದಿಗರು ಹೊಲೆಯರು ಮುಂತಾದ ಜನಗಳು ಹೆಚ್ಚಾಗಿ ಸೇರಿದ್ದರು. ಇವರೆಲ್ಲರೂ ಸೇರಿ ಬಲಿಕೊಟ್ಟ ಪ್ರಾಣಿಗಳ ರಕ್ತದಿಂದ ಅನ್ನವನ್ನು ಕಲಸಿ ಊರು ಸುತ್ತಲೂ "ಕೋ ಬಲಿ, ಕೋ ಬಲಿ" ಎಂದು ಕೂಗಿಕೊಂಡು ಅನ್ನವನ್ನು ಎರಚಿದರು. ಮಾರನೇ ದಿನ ... ದಲ್ಲಿ ಕೊಂದ ಕೋಣಗಳ ... ತಲೆ ... ಮುಂದೆ ತಮಟೆ ... ಕೊಂಡು ಊದುತ್ತಾ ಬಂದರು. ಅವರು ... ಮಾಡಿದವುಗಳನ್ನು ಬಳಿದು ... ಬಿದ್ದದ್ದರಿಂದ ... ಗೆ ಕೊಡುತ್ತಿದ್ದರು. ಇಷ್ಟೆಲ್ಲಾ ಆದ ಮೇಲೆ ಆ ದೇವತೆಯನ್ನು ... ಸಿದ್ಧ ಮಾಡಿ ಆ ದೇವರನ್ನು ಒಬ್ಬನ ಮೇಲೆ ಹೊರಿಸಿ, ಊರ ಹೊರಗೆ ತಂದರು. ಹಾದಿಯಲ್ಲಿ ಆ ಊರಿನ ಜನಗಳು ಸುಮಾರು ೩೦೦-೪೦೦ ಎಂಟು ಕುರಿಗಳನ್ನು ... ಬಲಿ ಕೊಟ್ಟರು. ... ರಾಯದಲ್ಲಿ ಆ ... ಮೇಲೆ ದೇವತೆ ಬಂದು "ಈ ಊರಿನಲ್ಲಿ ಇನ್ನೂ ಇಬ್ಬರು ಮೂರಿಯರು ಇದ್ದಾರೆ, ಅವರ ... ನ್ನು ... ಮಾಡಿದರೆ ರೋಗವು ಹೋಗುತ್ತದೆ" ಎಂಬದಾಗಿ ಹೇಳಿತು. ... ಜನಗಳು ... ಮಾಡಿದೆವೆಂದು ಹೇಳಿದರು. ಅದಕ್ಕೆ ... ನಾನು ಎಲ್ಲರನ್ನೂ ಕಾಪಾಡುತ್ತೇನೆ ಎಂದು ಹೇಳಿತು. ಅನಂತರ ಸ್ವಲ್ಪ ದೂರಕ್ಕೆ ಬಿಟ್ಟು ಬಿಟ್ಟು ಬಂದರು. ಆ ದಿವಸ ಮೂರು ಜನಕ್ಕೆ ಕಾಯಿಲೆ ಆಯಿತು. ಅದರಲ್ಲಿ ಇಬ್ಬರು ಸತ್ತರು. ... ಕಾಲದಲ್ಲಿಯೂ ಕೆಲವು ಜನಗಳಿಗೆ ... ಲಿಲ್ಲ.

ಪ್ರತ್ಯಕ್ಷದರ್ಶಿ

ಮೈಸೂರು ಗೆಜೆಟ್ ಸಂಗ್ರಹ.

ಸಕಲೇಶಪುರದ ಸಬ್ ಅ॥ ಸರ್ಜನ್ ಮೆ॥ ಕೆ ಅನಂತರಾಮೈಯ್ಯಂಗಾರ್ ರವರಿಗೆ ಕೊಟ್ಟಿದ್ದ ಅರವತ್ತೆರಡು ದಿನಗಳ ಪ್ರಿವಿಲೆಜ್ ರಜವನ್ನು ... ಇಪ್ಪತ್ತೈದು ದಿನಗಳಿಗೆ ಜಾಸ್ತಿಮಾಡಿದೆ.

ಚಿಕ್ಕಮಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾದ ಮೆ॥ ಎಚ್ ಆರ್ ಸಬ್ರಾಯ ಐಯ್ಯರವರಿಗೆ ಜುಲೈ ೧೮ ರಿಂದ ... ತು ... ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅವರು ರಜಾ ತೆಗೆದುಕೊಂಡ ... ಕೆಲಸದಿಂದ ನಿವೃತ್ತರಾಗತಕ್ಕದ್ದು.

ಮೈಸೂರ್ ಜೈಲ್ ಸೂಪರಿಂಟೆಂಡೆಂಟ್ ಮೆ॥ ಟಿ ಎಸ್ ನಂಜುಂಡರಾಯರವರಿಗೆ ಆ ಜೈಲ್ ಆವರಣದೊಳಗೆ ಎರಡನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ, ... ವಿಧಿಸುವಂತೆ ನೇಮಕಮಾಡಿದೆ.

ರೆವಿನ್ಯೂ ಕಮಿಷನರ ಆಫೀಸಿಗೆ ವರ್ಗಮಾಡಲ್ಪಟ್ಟ ಮೆ॥ ಸರಾಜಿರಾಯರಿಗೆ ಬದಲಾಗಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಾಟಿನ ಅಸಿಸ್ಟೆಂಟ್ ಮೆ॥ ಬಿ ನಾರಾಯಣರಾಯರನ್ನು ಅರಕಲಗೂಡು ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ನೇಮಕಮಾಡಿದೆ.

ಪರಸ್ಪರ ಸಹಾಯಕ ಸಂಘಗಳ ರಜಿಸ್ಟ್ರಾರ್ ಮೆ॥ ಎಂ ... ಯನ್ನು ಲೀವ್ ಮೆ॥ ಎ ಅನಂದರಾಯರಿಗೆ ಬದಲಾಗಿ ಪರ್ಸನಲ್ ಅಸಿಸ್ಟೆಂಟ್ ಆಫೀಸರಾಗಿಯೂ ನೇಮಕಮಾಡಿದೆ.

ಕೋಲಾರ ಡಿಸ್ಟ್ರಿಕ್ಟ್ ಎಕ್ಸಟ್ರಾ ಅ॥ ಕಮಿಷನರ್ ಮೆ॥ ಎಂ. ನಾರಾಯಣ ಐಯ್ಯಂಗಾರ್ರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೆಜ್ ರಜಾ ... ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಮೆ॥ ಎ ಪೊನ್ನುಸ್ವಾಮಿ ಮುದಲಿಯಾರ್ರನ್ನು ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ನೇಮಿಸಿರುವುದರಿಂದ ಮುಂದೆ ಹೇಳುವ ... ವಾಗಿ ಹುಕುಂ ಮಾಡಿರುತ್ತೆ.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಎಚ್ ... ರಾಮೈಯ್ಯನವರು ... ದೊಡ್ಡ ದೇವನಕೋಟೆ ಫಾರೆಸ್ಟ್ ಸಬ್ ಡಿವಿಜನ್ ಛಾರ್ಜಿನಲ್ಲಿರತಕ್ಕದ್ದು.

ಅ॥ ಕನ್ಸರ್ವೇಟರ್ ಮೆ॥ ಎಚ್ ಶ್ರೀನಿವಾಸರಾಯರು ಸ್ಪೆಷಲ್ ಡ್ಯೂಟಿ ಮೇಲೆ ಇರತಕ್ಕದ್ದು.

ಆಸ್ಪತ್ರೆ ಅಸಿಸ್ಟೆಂಟ್ ಎಚ್ ಕೃಷ್ಣಶೆಟ್ಟರು ಒಂದು ಮೊಕದ್ದಮೆಯಲ್ಲಿ ಸುಳ್ಳಾದ ಸರ್ಟಿಫಿಕೇಟ್ ಕೊಟ್ಟಿದ್ದು ಸಾಬೀತಾದದ್ದಲ್ಲದೆ ... ಎಂದು ತಿಳಿದುಬಂದದ್ದರಿಂದ ಅವರನ್ನು ಎರಡನೆ ಕ್ಲಾಸಿಗೆ ಕಂಪರಾ ಮಾಡಿದೆ.

ಚಿತ್ರದುರ್ಗದ ಡಿವಿಜನ್ ಅ॥ ಇಂಜನಿಯರ್ ಮೆ॥ ಕೆ ಫ್ರೇಜರ್ ... ಯರಿಗೆ ಜುಲೈ ೧೯ ರಿಂದ ಒಂದು ತಿಂಗಳು ಕನ್ನೆರಡು ದಿನಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಒಂದು ವರುಷದ ಫರ್ಲೋ ರಜವನ್ನೂ ಕೊಟ್ಟಿದೆ.

ಕೋಲಾರ್ ಡಿವಿಜನ್ ಸಬ್ ಅ॥ ಇಂಜನಿಯರ್ ಮೆ॥ ಎ ತಾಂದೋಣಿರಾಯರಿಗೆ ಹದಿನೈದು ದಿನಗಳ ಕಾಯಿಲೆ ರಜಾ ಕೊಟ್ಟಿದೆ.

ತಾಲ್ಲೂಕು ವರ್ತಮಾನಗಳು

ಮಂಡ್ಯ.—ಇಲ್ಲಿ ಕಳೆದ ತಿಂಗಳು ಮಳೆ ಚನ್ನಾಗಿ ಬಂದದ್ದರಿಂದ ಊರು ಶುಚಿಯಾಗಿದೆ ಎಂದೂ ಪ್ಲೇಗ್ ಕಾಯಿಲೆ ಉಪಶಮನಕ್ಕೆ ಬಂದಿತೆ ಎಂದೂ ತಿಳಿದು ಅನೇಕ ಜನರು ಗುಡಿಸಲಿನಿಂದ ಊರಿನೊಳಗೆ ವಾಪಸು ತಮ್ಮ ತಮ್ಮ ಮನೆಗಳಿಗೆ ಬಂದರು. ಆದರೆ ಪ್ಲೇಗ್ ರೋಗವು ತಿರುಗಿ ಇಬ್ಬರು ಮೂವರಲ್ಲಿ ಕಾಣಿಸಿಕೊಂಡಿತು. ಇಬ್ಬರು ಮೃತಪಟ್ಟರು. ಇನ್ನು ಕೆಲವರು ಕಾಯಿಲೆಯಾಗಿದ್ದಾರೆ. ಇದು ಜನರಿಗೆ ಭೀತಿಯನ್ನುಂಟುಮಾಡಿದ್ದರಿಂದ ತಿರುಗಿ ವಾಪಸು ತಮ್ಮ ತಮ್ಮ ಷೆಡ್ಡುಗಳಿಗೆ ಕಳೆದ ವಾರ ಬಂದುಬಿಟ್ಟರು. ಊರಿನ ಸಮಾಚಾರ ಇನ್ನೂ ಸ್ಥಿತಿಕ್ಕೆ ಬಂದಿಲ್ಲ. ಜನರೆಲ್ಲಾ ಊರನ್ನು ಒಂದೇ ಸಾರಿ ಬಿಟ್ಟು ಬಂದಿದ್ದರೆ ಬಹಳ ಉತ್ತಮವಾಗುತ್ತು. ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಕಳೆದ ಎಂಟು ವರುಷಗಳಿಂದ ಪ್ರಜೆಗಳಿಗೆ ಹಿತಚಿಂತಕರಾಗಿಯೂ ರೋಗಾದಿ ಉಪದ್ರ ಚಿಕಿತ್ಸೆಗಳಲ್ಲಿ ಘಟ್ಟಿಗರಾಗಿಯೂ ಪ್ರೀತಿವಾತ್ಸಲ್ಯ ಮತ್ತು ಸಾಹಸ ಉಳ್ಳವರಾಗಿಯೂ ಇದ್ದರು. ಇವರು ಈಗ ಫ್ರೆಂಚ್ ರಾಕ್ಸಿಗೆ ವರ್ಗವಾಗಿ ಹೋಗುತ್ತಾರೆಂಬ ಸಮಾಚಾರ ಕೇಳಿ ವಿಷಾದಪಡಬೇಕಾಗಿದೆ. ಮುಂದಕ್ಕೆ ಇವರಿಗೆ ಬದಲಾಗಿ ಬರತಕ್ಕವರು ಇವರಂತೆಯೇ ಜನರ ಪ್ರೀತಿಗೆ ಪಾತ್ರರಾಗುವರೆಂದು ನಂಬುತ್ತೇವೆ.

ಶಿವಸಮುದ್ರ.—ಮಳವಳ್ಳಿ ತಾಲ್ಲೂಕು ಶಿವಸಮುದ್ರದಲ್ಲಿ ಈ ಮಾಹೆ ೩ನೆ ರಾತ್ರಿ ಸುಮಾರು ೯ ಗಂಟೆ ಸಮಯದಲ್ಲಿ ಇಲ್ಲಿನ ಎಲೆಕ್ಟ್ರಿಕ್ ಇಂಜಿನಿಯರ್ ಮೆ॥ ಪೆಲ್ಲರು ಸಾಹೇಬರೂ ... ಸಾಹೇಬರೂ ಸೇರಿ ಇಲ್ಲಿನ ಕೋಟೆ ... ಯಲ್ಲಿ ವಿಷಾ ಹಾಕಿ ಕೊಟ್ಟ ... ಅದರ ... ನೆಯಿಂದ ... ಯಲ್ಲಿ ... ಅವನಿಗೆ ಉರಿ ... ನಡೆಯಲು ... ಕೂಗಿದ ... ಕ್ಷ ... ತಾಳಲಾರದೆ ... ಬಿದ್ದ ... ಒಂದು ... ಅತ್ತರದಲ್ಲಿ ಇವನಿಗೆ ... ಪಾಯಿಜನ್ ... ಸಾಹೇಬರು ಕೊಟ್ಟ ಔಷಧಿಯನ್ನು ಸೇವನೆಮಾಡಲು ನಂತರ ಇವನನ್ನು ಆಸ್ಪತ್ರೆಯಲ್ಲಿ ಇರಿಸಿದರು. ಈ ಸಂಗತಿಯನ್ನು ಪೊಲೀಸ್ ಸ್ಟೇಷನಿಗೆ ರಿಪೋರ್ಟು ಮಾಡಲು ದಫೇದಾರ್ರು ಒಂದನೇ ೪, ಇದೆ ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರಿಗೆ, ಅಮಲ್ದಾರರಿಗೂ ತಿಳಿಸಲು ಇವರುಗಳ ಸಂಗಡ ೮ನೆ ತಾ॥ ಸಂಧ್ಯಾಕಾಲ ಸುಮಾರು ೫ ಗಂಟೆಗೆ ಬಂದಿತು. ಇಷ್ಟರಲ್ಲಿ ವಿಷಾ ಕುಡಿದ ನಾರಾಯಣಗೆ ಮಾತುಗಳು ತೊದಲಲು ಪ್ರಾರಂಭವಾದ್ದರಿಂದ ದಫೇದಾರ್ರು ಅವನ ಮರಣಕಾಲದ ಹೇಳಿಕೆಯನ್ನು ತೆಗೆದುಕೊಂಡರು. ೫ನೆ ತಾ॥ ಹಗಲು ಸುಮಾರು ೧೧ ಗಂಟೆ ಸಮಯದಲ್ಲಿ ಆಸಾಮಿಯು ಪರಲೋಕಗತನಾದ ಸುದ್ದಿಯನ್ನು ಕೇಳಿದ ಒಡನೆ ಅಂದರೆ ಸುಮಾರು ೧೨ ಗಂಟೆ ಸಮಯದಲ್ಲಿ ಪೆಲ್ಲರು ಸಾಹೇಬರು ಪಲಾಯನ ಸೂಕ್ತವನ್ನು ಪಠಿಸಿದರು. ಈಗ ಇವರನ್ನು ಬೆಂಗಳೂರು ... ಪತ್ತೆ ಮಾಡಿದರೆಂದು ವರ್ತಮಾನ ಕೇಳುತ್ತೇವೆ. ... ವನ್ನು ... ೫ನೆ ತಾ॥ ದಿನ ಪರೀಕ್ಷೆ ಬಗ್ಗೆ ಮಳವಳ್ಳಿಯ ಮೆಡಿಕಲ್ ಆಫೀಸರಲ್ಲಿಗೆ ... ೯ನೆ ... ಇಲ್ಲಿದ್ದ ... ಸಾಹೇಬರನ್ನು ದಸ್ತಗಿರಿಯಾದ ... ಸಾಹೇಬರು ವಗೈರೆಯ ಸವಾರಿಯು ಮಳವಳ್ಳಿಗೆ ಚಿತ್ತೈಸಿರುತ್ತೆ.

ಹೊಳೆನರಸೀಪುರ.—ಸುಮಾರು ೨೦ ದಿನಗಳಿಂದ ಹಿಡಿದ ಮಳೆ ಬಿಡುವುದೇ ಇಲ್ಲ. ... ಪೈರು ಕೊಯಿಲಿಗೆ ಬಂದಿದ್ದರೂ ಮಳೆಯ ದೆಸೆಯಿಂದ ಕೊಯಿಯುವದಕ್ಕೆ ಕಷ್ಟವಾಗಿದೆ. ... ಮಳೆಯಿಂದ ನೆಲಕ್ಕೆ ಉದುಗಿಹೋಯಿತು. ಹೀಗೆಯೇ ಇನ್ನೂ ಎಂಟು ಹತ್ತು ದಿನಗಳು ಮಳೆ ಬರುತ್ತಿದ್ದರೆ ... ನಾಶವಾಗುವವು. ಆದರೂ ಕೆರೆಗಳಿಗೆ ... ನೀರು ಬಂದಿಲ್ಲ. ಊರು ... ಟ್ಟಿಗೆ ಆರೋಗ್ಯಸ್ಥಿತಿಯಲ್ಲಿದೆ.—ಹೊಸದಾಗಿ ಬಂದಿರುವ ನಮ್ಮ ಅಮಲ್ದಾರರು ... ಜನಗಳ ಪ್ರೀತಿಗೆ ಪಾತ್ರರಾಗಿರುವದಲ್ಲದೆ ಊರು ಶುಚಿತ್ವದ ವಿಷಯದಲ್ಲಿ ... ಸಂದುಗೊಂದುಗಳಲ್ಲೆಲ್ಲಾ ಹೊಸದಾಗಿ ... ವಗೈರೆಗಳನ್ನು ಮಾಡಿಸಿ, ಟೌನಿನಲ್ಲಿ ಶಿಥಿಲವಾಗಿರುವ ನಾಲುಮೂರುಗಳನ್ನು ಹೊಸದಾಗಿ ನೆಡಿಸಿದ್ದಾರೆ. ಅಲ್ಲದೆ ಇಷ್ಟು ದೊಡ್ಡ ಟೌನಿನಲ್ಲಿ ಒಂದು ಕಕ್ಕಸೂ ಇಲ್ಲದಿರುವದರಿಂದ ಜನಗಳು ಹೊಲೆಯ ಎಂಟೆನಲ್ಲೇ ಮಲ ವಿಸರ್ಜಿಸುತ್ತಾ ಇದ್ದದ್ದರಿಂದ ಹೊಳೆಗೆ ಸ್ನಾನ ... ಗಳಿಗೆ ಹೋಗ ... ಜನಗಳಿಗೆ ... ಆಗುವದು. ಆದ್ದರಿಂದ ನಮ್ಮ ಅಮಲ್ದಾರರು ತಮ್ಮ ಕಾಲದಲ್ಲಿ ಈ ಕೆಲಸವನ್ನು ಮಾಡಿಸಿಕೊಟ್ಟರೆ ಬಹು ದಿನಗಳ ವರೆಗೂ ತಮ್ಮ ಹೆಸರು ನಿಲ್ಲುವದು. ಮತ್ತು ಸಂದುಗೊಂದುಗಳಲ್ಲೆಲ್ಲಾ ಕಟುಕರ ಅಂಗಡಿಗಳಿರುವದರಿಂದ ಮಾಂಸ ... ಗಳಲ್ಲ ... ಇದರಿಂದ ... ಬಹಳವಾಗಿದೆ. ಅಲ್ಲದೆ ಕಟುಕರು ... ದಿನಗಳ ಮಾಂಸವನ್ನು ಮಾರುತ್ತಾರೆ. ಆದ್ದರಿಂದ ಪ್ರತ್ಯೇಕವಾದ ಸ್ಥಳದಲ್ಲಿ ಮಾಂಸ ... ಮಾರುವ ಮಾರ್ಕೆಟನ್ನು ಕಟ್ಟಿಸಿದರೆ ಇದರಿಂದ ಊರಿಗೆ ಆರೋಗ್ಯವೂ ಸರಕಾರಕ್ಕೆ ಲಾಭವೂ ಆಗುವದರಲ್ಲಿ ಏನೂ ಸಂದೇಹವಿಲ್ಲ. ಅಲ್ಲದೆ ಈ ಊರು ಸಂತೆಯಲ್ಲಿ ಮಾರುವಷ್ಟು ಪ್ರಿಯವಾದ ಸಂತೆಯೂ ನಮ್ಮ ಡಿಸ್ಟ್ರಿಕ್ಟಿನ ಯಾವ ಸಂತೆಯಲ್ಲಿಯೂ ಇಲ್ಲ. ... ನೀರು ... ಮಾರುತ್ತಾರೆ. ಮಾರುವವರು ಎಷ್ಟರ ಮಟ್ಟಿಗೆ ಮಾಡಿದರೂ ಕೇಳುವವರೇ ಇಲ್ಲ. ಇದರಲ್ಲಿಯೂ ... ಬಹಳವಾಗಿದೆ. ಈ ಊರು ಸೇಂದೀ ಅಂಗಡಿಯಲ್ಲಿ ಸೇಂದಿಗೆ ನೀರು ಬೆರಸಿ ಅಳತೆಯಲ್ಲೂ ಮೋಸಮಾಡಿ ಮಾರುತ್ತಾರೆಂದು ಒಂದು ಜಾತಿಯವರು ಸೇಂದಿ ಅಂಗಡಿಗೆ ಹೋಗುವದನ್ನೇ ಕೆಲವು ಕಾಲ ಬಿಟ್ಟಿದ್ದರು. ಈಚೆಗೆ ಉಭಯತ್ರರಿಗೂ ಏನು ಮನವಿಯಾಯಿತೋ ತಿರುಗಿ ... ತ್ತಾರೆ. ಆದ್ದರಿಂದ ನಮ್ಮ ಸಜ್ಜನರು ತಮ್ಮ ಕಾಲದಲ್ಲಿ ತಮ್ಮ ಹೆಸರಿಗೆ ಅಪಕೀರ್ತಿ ಬಾರದಂತೆ ನ್ಯಾಯವಾದ ರೀತಿ ಮಾಡುವದು ಒಳ್ಳೇದು. ಇದಕ್ಕೆ ಸೇಂದಿ ಇಲಾಖೆಯವರು ತುಂಬಾ ಮುತುವರ್ಜಿ ವಹಿಸಬೇಕು. ... ಗಿದೆ.—ಕಲ್ಲುಕಟ್ಟೆ ಕೊಪ್ಪಲಿನ ಕೋಳಿಯ ವೆಂಗಟಗೆ ಆಸ್ಪತ್ರೆಯಲ್ಲಿ ಚನ್ನಾಗಿ ವಾಸಿಯಾಯಿತು. ಈತ ಬದುಕುತ್ತಾನೆಂದು ಯಾರೂ ನಿರೀಕ್ಷಿಸಿರಲಿಲ್ಲ. ಇಂಥಾ ರೋಗಿಯ ಮೇಲೆ ನಮ್ಮ ಡಾಕ್ಟರು ತುಂಬಾ ಅತ್ಯಾತುರ ... ಬೇಗ ವಾಸಿಮಾಡಿದರು. ಅಲ್ಲದೆ ಅನೇಕ ವರುಷಗಳಿಂದಲೂ ರೋಗಪೀಡಿತರಾದ ಅನೇಕರು ಆಸ್ಪತ್ರೆಯಲ್ಲಿ ಬಂದು ಬಹು ನಂಬಿಕೆಯಿಂದ ಔಷಧ ಸೇವಿಸುತ್ತಾರೆ. ಇದರಿಂದ ನಮ್ಮ ಡಾಕ್ಟರಿಗೆ ಜನಗಳ ಮೇಲಿರುವ ಪ್ರೀತಿಯೂ ವ್ಯಕ್ತವಾಗುತ್ತೆ.—ಮೆ॥ ರಾಮಶೆಟ್ಟರು ಭಾರತವನ್ನು ಮೆ॥ ರಾಮಪ್ಪನೆಂಬುವರಿಂದ ಸಕಲ ಜನಗಳ ತಿಳುವಳಿಕೆ ಬಗ್ಗೆ ಪಾರಾಯಣಮಾಡಿಸುತ್ತಾರೆ. ಪ್ರತಿ ದಿನ ರಾತ್ರಿ ೮ ಗಂಟೆ ಮೊದಲುಗೊಂಡು ೧೦ ಗಂಟೆಗಳ ವರಿಗೆ ಅನೇಕಾನೇಕರು ಕೇಳುತ್ತಿದ್ದಾರೆ. ಪ್ರತಿ ದಿನವೂ ಫಲಹಾರ ತಾಂಬೂಲ ದಾನಧರ್ಮಗಳು ಬಹು ಧಾರಾಳವಾಗಿ ಜರುಗುವವು.

ಹೊಸಕೋಟೆ.—ಇಲ್ಲಿ ಕೆಲ ದಿನಗಳಿಂದ ಮಳೆ ಇಲ್ಲದಾಗ್ಯೂ ಪೈರು ಚನ್ನಾಗಿದೆ. ಆದರೆ ಕಳೆದ ಮಳೆಗಳು ಹಾನಿಯಾದದರಿಂದ ಉರುಳಿಗಡ್ಡೆ ಪೈರು ಕೆಟ್ಟುಹೋಯಿತು. ಈ ಊರಲ್ಲಿ ಆಮಶಂಕೆ ಉಪದ್ರವು ಬಹುಜೋರಾಗಿದೆ. ಮಕ್ಕಳಿಗಂತೂ ಸ್ಮೃತಿ ತಪ್ಪಿಸಿ ಮನೆಯವರನ್ನೆಲ್ಲಾ ಗಾಬರಿಪಡಿಸುವದಾಗಿದೆ. ನಮ್ಮ ಡಾಕ್ಟರವರು ಕಾಯಿಲೆಯವರ ಮನೆಗಳಿಗೆ ದಿನಾಲು ಹೋಗಿ ನೋಡಿ ಬಹು ಮುತುವರ್ಜಿಯಿಂದ ಮದ್ದುಕೊಟ್ಟು ಪರಾಮರ್ಶಿಸುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ತಾರದೆ ಊರ ಹಕೀಮರ ಕೈಯಿಂದ ಯಾವದೋ ಮನೆಯವರು ಮಗುವಿಗೆ ಮದ್ದು ಕೊಡಿಸಿದರು. ಆ ಮಗು ಕಾಲವಾಗಿಹೋಯಿತಂತ ಕೇಳುತ್ತೇನೆ.—ಊರು ಕಸಬಾದಲ್ಲಿ ಏಸೋ ಅಂಗಡಿಗಳು ... ಆದವು. ಮಳೆದಾಯನು ತನ್ನ ದಯದ ... ಗಳನ್ನು ಧಾರಾಳವಾಗಿ ಉದುರಿಸಿ ನೀರು ... ಕೆರೆಕುಂಟೆಗಳಲ್ಲೆಲ್ಲಾ ಬೇಕಾದಷ್ಟು ನೀರು ತುಂಬಿದರೂ ಕಾಳಿನ ಧಾರಣೆಯು ಇಳಿತರಕ್ಕೆ ಬೀಳಲೇ ಇಲ್ಲ. ... ವಾರದ ತನ್ನ ... ಕಾಲ ... ಕಾರಣ ಇಲ್ಲಿ ಯಾರೂ ... ಇರುತ್ತೇವೆ.—ಇಲ್ಲಿಗೆ ಕಳೆದ ತಿಂಗಳ ೨೦ರಲ್ಲಿ ಡೆಪ್ಯುಟಿ ಕಮಿಷನರ್ ಮೆ॥ ಸ್ಪಾರ್ಕ್ಸ್ ... ಉದಯಮಾಡಿಸಿದ್ದಾಯಿತು. ಆಗ್ಗೆ ಊರು ಅಭಿವೃದ್ಧಿಯ ಸಂಬಂಧ ಕೆಲವು ಸಂಗತಿಗಳನ್ನು ವಿಚಾರಿಸಿದರು. ಅದರಲ್ಲಿ ಒಂದೆಂದು ಯಾವದೆಂದರೆ—ಹೊಸಕೋಟೆ ಉರುಳಿಗಡ್ಡೆ ಪೈರು ಗಡ್ಡೆ ... ಬಂದಿದೆ. ಇದನ್ನೇ (ಉರುಳಿಗಡ್ಡೆ) ಇನ್ನು ಹೆಚ್ಚು ದೊಡ್ಡದಾಗಿ ... ಬೆಳಸ ಪ್ರಯತ್ನಿಸಬೇಕು. ಇದಕ್ಕಾಗಿ ಒಂದು ... ಉಚಿತವೆಂಬುದು ... ಇಷ್ಟವಿದ್ದವರು ... ಕೊಟ್ಟರೂ ಚಿಂತೆಯಿಲ್ಲ. ಅಂತೂ ಎಲ್ಲರಿಗೂ ಅನುಕೂಲವಾಗಿರುವಂತೆ ಒಂದಾನೊಂದು ಅರ್ಧಾಣೆ ವರ್ಷಕ್ಕೆ ಕೊಟ್ಟರೆ ಸಾಕು. ಇದಕ್ಕೆ ಅಮಲ್ದಾರರು ಪ್ರೆಸಿಡೆಂಟರಾಗಿಯೂ ಸಬ್ ಓವರ್ಸೀಯರು ಸೆಕ್ರೆಟರಿಯಂತೆ ಡಾಕ್ಟರವರು ಟ್ರೆಜರರಾಗಿಯೂ ಇದ್ದರೆ ಉತ್ತಮ. ಇದಕ್ಕೆ ಡೆಪ್ಯುಟಿ ಕಮಿಷನರು ಕೂಡಾ ಬೇಕಾದಷ್ಟು ಸಹಾಯ ಮಾಡಿ ಕಡೆಯಿಂದ ಉತ್ಕೃಷ್ಟ ಉರುಳಿಗಡ್ಡೆ ಬೀಜ ಸಹಾ ತರಿಸಿ ಅನುಕೂಲಿಸಿ ಕೊಡುವರು. ರೈತರು ಆರಂಭಮಾಡಿ ಅಭಿವೃದ್ಧಿಗೆ ತರಬೇಕು. ಅಂದರೆ ತಾಲ್ಲೋಕುಗಳಲ್ಲಿ ಮುನಿಸಿಪಲ್ ಗಾರ್ಡನ್ ಇದ್ದರೆ ಎಷ್ಟೋ ಗಂಭೀರ, ರಮಣೀಯವಾಗಿದೆ. ಅಂಥಾದ್ದೊಂದು ಈ ಹೊಸಕೋಟೆಯಲ್ಲಿ ಕೂಡಾ ಆಗತಕ್ಕದ್ದು ನ್ಯಾಯವಾದಷ್ಟು. ಬೇಗ ಈ ಕಾರ್ಯಗಳು ಜಾಗದರೆ ಉತ್ತಮ ಎಂದು ಹೇಳಿ ... ಗಳಿಗೆ ವಾಪಸು ಚಿತ್ತೈಸಿದರು. ಅದರಂತೆಯೇ ಇದೇ ತಿಂಗಳು ತಾ॥ ೨ರಲ್ಲಿ ಇಲ್ಲಿನ ರೀಡಿಂಗ್ ರೂಮಿನಲ್ಲಿ ನಮ್ಮ ಅಮಲ್ದಾರರು ಉರುಳಿಗಡ್ಡೆ ಮಾಡಿಸತಕ್ಕ ... ಳಿಗರು, ಡೆಪ್ಯುಟಿಜನರು, ಮುನಿಸಿಪಲ್ ಮೆಂಬರುಗಳು ಮುಂತಾದವರನ್ನು ... ಊರುಗಳಿಂದ ಕರೆಯಿಸಿ, ಸ್ವಮುಂದೆ ಮೆ॥ ಸ್ಪಾರ್ಕ್ಸ್ ದೊರೆಯವರ ಅಭಿಪ್ರಾಯವನ್ನು ಜನಗಳ ತಿಳುವಳಿಕೆಗೆ ತಂದರು. ಸಭೆಯ ಜನರಲ್ಲಿ ಉತ್ಸಾಹವಾದ ಪೈರು ಯಾವದು ಎಂತ ಕೇಳಿದ್ದಕ್ಕೆ ಉರುಳಿಗಡ್ಡೆ, ಗೆಣಸು, ಕುಂಬಳಕಾಯಿ, ಜೋಳ, ನಾಲ್ಕು. ಇದರಲ್ಲಿ ಉರುಳಿಗಡ್ಡೆ ಪ್ರಾಮುಖ್ಯವಾದದ್ದು. ಉರುಳಿಗಡ್ಡೆಯಲ್ಲಿ ನಾಟಿಗಡ್ಡೆ ಉತ್ಕೃಷ್ಟವಾದದ್ದು. ಬಹಳಕಡ್ದು ಕಮಿಷನರ ಮಾತಿಗೆ ಸರಿಯಾಗಿ ನಾಟಿಗಡ್ಡೆಯನ್ನೇ ಒಳ್ಳೇತರದಲ್ಲಿ ದಪ್ಪವಾಗಿ ಬೆಳೆಸಬಹುದು ಎಂತ ಬಿಂಡನರ ... ಒಳ್ಳೇ ... ಹೇಳಿದರು. ಈ ವ್ಯವಸಾಯ ಸಂಘಕ್ಕೆ ಯಾವ ಹೆಸರು ಇಡಬೇಕು ಅಂತ ಕೇಳಿದ್ದಕ್ಕೆ ಎಲ್ಲರೂ "ಸ್ಪಾರ್ಕ್ಸ್ ವ್ಯವಸಾಯ ಸಂಘ" ಎಂಬ ಹೆಸರೇ ಇರಬೇಕು. ಮೆಂಬರುಗಳು ನೇಮಕವಾದರು. ಮತ್ತೆ ಉತ್ಕೃಷ್ಟವಾಗಿ ಬೆಳೆದಂಥ ಪೈರನ್ನು ಪ್ರದರ್ಶನ ಮಾಡಿ ಉತ್ಕೃಷ್ಟ ನಾಟಿಉರುಳಿಗಡ್ಡೆ, ಕುಂಬಳಕಾಯಿ, ಗೆಣಸು, ಜೋಳದ ಪೈರುಗಳನ್ನು ಉತ್ಕೃಷ್ಟ ತರಹ ಬೆಳೆದವರಿಗೆ ಬಹುಮಾನ ಕೊಡಬೇಕಾಗುತ್ತೆ. ಈ ಪೈರು ಪ್ರದರ್ಶನವನ್ನು ವರುಷಕ್ಕೆ ಒಂದು ಸಲ ... ನಡೆಸುವ ತೀರುಪಡಿದ ಕಾಲದಲ್ಲಿ ಮಾಡಬೇಕೆಂತ ತೀರ್ಮಾನಿಸಿ, ಚಂದಾ ಎತ್ತಲು ಪ್ರಾರಂಭಿಸಿದಾಗ ಸಭಿಕರು ಚಂದಾ ಕೊಟ್ಟರು. ಇನ್ನೂ ಚಂದಾ ಕೊಡುತ್ತಿದ್ದಾರೆ. ಮೆ॥ ಸ್ಪಾರ್ಕ್ಸ್ ದೊರೆಗಳ ಮಾತಿನಂತೆ ಕಚೇರಿಯ ಎದುರಿಗೆ ಮುನಿಸಿಪಲ್ ಗಾರ್ಡನ್ ಕೆಲಸ ಬಹು ಜೋರಾಗಿ ಆಸಕ್ತಿಯಿಂದ ನಡಿಯುತ್ತಿದೆ. ಇದರ ಪಕ್ಕದಲ್ಲಿ ಟೆನಿಸ್ ಆಟದ ಸ್ಥಳ ಸಹಾ ನೂತನವಾಗಿ ಮಾಡುತ್ತಲಿದ್ದಾರೆ. ಇನ್ನೆರಡು ಪಕ್ಕದಲ್ಲಿ ಹೊಸ ರೀಡಿಂಗ್ ರೂಂ ತೆರೆಯಲ್ಪಡುತ್ತೆ. ಇನ್ನೂ ಇದೇ ೮ ತಿಂಗಳು ತಾ॥ ೧೯ರಲ್ಲಿ ಬ್ಯಾಂಡ್ ವಾದ್ಯಗಳೊಂದಿಗೆ ಸ್ಪಾರ್ಕ್ಸ್ ದೊರೆಯವರ ಹೆಸರಿನಲ್ಲಿ ಬಹು ವಿಜೃಂಭಣೆಯಿಂದ ತೆರೆಯಲ್ಪಡುವ ಕೌತುಕದಲ್ಲಿ ಕಾರ್ಯ ನಡೆಯುತ್ತಲಿದೆ. ಮುಂದಕ್ಕೆ ಪ್ರತಿ ಭಾನುವಾರವೂ ಸಾಯಂಕಾಲ ಬ್ಯಾಂಡ್ ವಾದ್ಯಗಳ ಗಾಯನವೂ ಆನಂದಗೊಳಿಸುತ್ತದೆ. ಈಗ ಈ ಊರಿನ ಪ್ರಾಚೀನ ಸಂಬಂಧ ತೃಪ್ತಿಕರವಾದ ಏರ್ಪಾಟು ಆದರೂ ಆದೀತು. ಆದರೆ ಇವೆಲ್ಲ ಭಾಗಗಳಿಂದ ನಮ್ಮ ಹೊಸಕೋಟೆ ಅಭಿವೃದ್ಧಿಗೂ ಗೌರವಕ್ಕೂ ಬಂದರೂ ಇನ್ನೂ ಅವಶ್ಯವಾದದ್ದು ಎಲ್ಲರಿಗೂ ಬೇಕಾದದ್ದು ಒಂದು ಉತ್ಕೃಷ್ಟ ಇಂಗ್ಲಿಷ್ ವಿದ್ಯಾಶಾಲೆ ಇಲ್ಲ. ಇಷ್ಟೆಲ್ಲ ಅಭಿವೃದ್ಧಿಗೆ ತಂದ ಮಹಾನುಭಾವರು ಇದರ ವಿಷಯವೂ ಸಾಹಸಪಟ್ಟು ಏರ್ಪಡಿಸಿದ್ದರೆ ನಮ್ಮ ಹೊಸಕೋಟೆ ತಕ್ಕ ಗೌರವತೆಗೆ ತಾಲ್ಲೋಕು ಎಂಬ ಹೆಸರಿಗೆ ಯೋಗ್ಯವೇ ಅನ್ನುವೆವು.

ನೋಟೀಸು.

118 1

ಇದರಿಂದ ಕಡೂರು ತಾಲ್ಲೂಕು ಬಿಸಲೆ ಮಾಗಣೆ ಕುಂದೂರು ಗ್ರಾಮದ ಪುಟ್ಟರಾಮಣ್ಣನ ಮಕ್ಕಳು ೧ ನೇ ರಾಮ, ೨ ನೇ ಸಣ್ಣಲಿಂಗ ಈ ೨ ಜನಗಳು ಸಮಸ್ತರಿಗೂ ತಿಳಿಸುವದೇನೆಂದರೆ—

ನಮ್ಮ ತಾಯಿ ಮಲ್ಲಮ್ಮನ ತಾಯಿ ಲಕ್ಕಜ್ಜಿ ಎಂಬ ನಮ್ಮ ಅಜ್ಜಿಗೆ ಗಂಡುಮಕ್ಕಳು ಇಲ್ಲ. ನಾವು ೨ ಜನಗಳು ದೌಹಿತ್ರರಾಗಿದ್ದೇವೆ. ಅಜ್ಜಿ, ಲಕ್ಕಜ್ಜಿಗೆ ಕಡೂರು ತಾಲ್ಲೂಕು ಬಿಸ್ಲೆ ಮಾಗಣೆ ಮತ್ತಿಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರು ೨೫ನೆ ಬಾಗಾಯತು (ಎಕ್ರೆ೨-೦) (ಆಕಾರ ೨-೦-೦ ರೂ), ಸರ್ವೆ ನಂಬರು ೨೫ನೆ ಖುಷ್ಕಿ ಎಕರೆ ೬-೨೮, ಆಕಾರ ೬-೦-೦ ಉಳ್ಳ ಜಮೀನು ಮತ್ತು ಮತ್ತಿಹಳ್ಳಿ ಗ್ರಾಮದಲ್ಲಿ ಸುಮಾರು ೫ ಅಂಕಣಗಳ ಹೆಂಚಿನ ಮನೆ ಒಂದು ಈ ರೀತಿ ಸ್ವತ್ತುಗಳು ಇವೆ. ಈ ಸೊತ್ತುಗಳನ್ನು ಚರ ಆಸ್ತಿಗಳನ್ನು ನಮ್ಮಗಳ ಅನುಮತಿ ಇಲ್ಲದೆ ಈ ಹಿಂದೆ ಕ್ರಯ, ಭೋಗ್ಯ, ಆಡವು, ದಾನ ವಗೈರೆ ಮಾಡಿಸಿಕೊಂಡು ಇರುವುದಾಗಲಿ ಮುಂದೆ ಮಾಡಿಸಿಕೊಳ್ಳುವದೇ ಆಗಲಿ ಯಾವದೊಂದೂ ಸಾಧ್ಯವಾಗಲಾರದೆ ಎ ಇದರಿಂದ ಖಂಡಿತ ತಿಳಿಸಿರುತ್ತೇವೆ.

ಉಪಾಧ್ಯಾಯರುಗಳಿಗೆ ನೋಟೀಸ್

ಬಾಲಬೋಧೆ! ಸರ್ಕಾರದ ಬಾಲಬೋಧೆ

೧ನೇ ಭಾಗ!! ಬಾಲಬೋಧೆ!!!

121 1

ಮೇಲ್ಕಂಡ ಪುಸ್ತಕವು ಬೋರಿಯದೆ ಉಪಾಧ್ಯಾಯರುಗಳು ಪೇಚಾಟವನ್ನು ವಿವರಿಸಲಸಾಧ್ಯವಾಗಿದೆ. ಉಪಾಧ್ಯಾಯರುಗಳು ಸರ್ಕಾರದ ೧ನೆಯ ಭಾಗದ ಬಾಲಬೋಧೆಗೆ ಕಾದೂ ಕಾದೂ ಸಾಕಾಯಿತು. ಆದ ಕ್ಷೇತ್ರದಲ್ಲಿ ಬರುವ ಹಾಗೆ ಕಾಣಲಿಲ್ಲ. ಈ ತೊಂದರೆಗಳನ್ನೆಲ್ಲಾ ತಪ್ಪಿಸುವದಕ್ಕೆ ನಾವು ಅತ್ಯುತ್ತಮವಾದ ಬಾಲಶಿಕ್ಷೆ ಒಂದನೆ ಭಾಗವನ್ನು ಪ್ರಕಟಿಸಿರುತ್ತೇವೆ. ಇದರಲ್ಲಿ ನಾಲ್ವತ್ತು ಚಿತ್ರಗಳಿರುತ್ತವೆ. ಕಾಗದವು ಮುದ್ರೆಯೂ ಬಹು ಸೊಗಸಾಗಿವೆ. ಇದರ ಕ್ರಯ ಒಂದೇ ಆಣೆ. ವಿ. ಪಿ. ಪಿ. ಮೂಲಕ ತರಿಸಿಕೊಳ್ಳುವವರು ನಾ ರು ಪ್ರತಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಳ್ಳಬೇಕು. ನೂರು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಂಡರೆ ೫ಕಡ ೨೦ ರಂತೆ (ರೂಪಾಯಿಗೆ ಎರಡಾಣೆಯಂತೆ) ಕಮಿಷನ್ ಕೊಡುತ್ತೇವೆ. ಪುಸ್ತಕದಲ್ಲಿ ಯಾವ ಮತಸಂಬಂಧವಾದ ಬೋಧನೆಯೂ ಇಲ್ಲ. "ಸತ್ಯಂ ವದ ಧರ್ಮಂ ಚರ" ಎಂಬದನ್ನು ಪ್ರಧಾನವಾಗಿಟ್ಟು ಈ ಪುಸ್ತಕವು ಆಗಲೇ ಅನೇಕ ಸರ್ಕಾರಿ ಮತ್ತು ಪ್ರೈವೇಟ್ ಸ್ಕೂಲ್‌ಗಳಲ್ಲಿ ನೇಮಿಸಲ್ಪಟ್ಟಿರುತ್ತದೆ. ಹೆಡ್ ಮಾಸ್ಟರುಗಳು ಪುಸ್ತಕವನ್ನು ನೋಡಬೇಕಾದರೆ ಇದೇ ತಿಂಗಳು ೨೫ನೇ ತಾರೀಖಿನೊಳಗಾಗಿ ನಮಗೆ ಬರೆದುಕೊಂಡ ಪಕ್ಷದಲ್ಲಿ ಸ್ಯಾಂಪಲ್ (ಉಚಿತವಾಗಿ ಒಂದು ಪ್ರತಿ) ಪುಸ್ತಕಗಳನ್ನು ಕಳುಹಿಸಿಕೊಡುತ್ತೇವೆ.

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕ್ರಮಕ್ಕೆ ಚಿಲ್ಲರೆಯಾಗಿ ಅಗಲಿ ಒಟ್ಟಾಗಿ ಅಗಲಿ ದೂರೆಯುವದು.

120 1

ಮೈಸೂರು ತಾಲ್ಲೂಕು ಕಸಬ ಹೋಬಳಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗೆ ಸೇರುವ ಹತ್ತಿರ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ನೀರಾವರಿ ಸ್ಥಿತಿಯು ಸ್ವಚ್ಛ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ.

ಜಮೀನಿನ ವಿವರಣೆ	ಸರ್ವೆ ನಂಬರು	ಬೀಜವರಿ.		ಆಕಾರ
		ಎಕರೆ	ಗುಂಟೆ	ರೂ
ಕಾವೇರಿನಾಲೆ ಕೆಳಗಿನ ಗದ್ದೆಗಳು.	೬೦	೩	,,	೨೩
	೧೮೩	೩	೨೦	೩೩
	೧೮೪	೫	೧೩	೩೯
	೧೮೫	೫	೨೮	೩೯
	೧೮೬	೩	೩೩	೩೮
ಜುಮ್ಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರಡಿ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಮಾದರಿ ಬಳಗಾಗಿ ಆಲೋಚಿಸಲಾಗುತ್ತದೆ.

ಜಮೀನಿನ ವಿವರಣೆ	ಸರ್ವೆ ನಂಬರು	ಬೀಜವರಿ.		ಆಕಾರ.
		ಎಕರೆ	ಗುಂಟೆ	ರೂ
ಕಾವೇರಿ ನಾಲೆ ಕೆಳಗಿನ ಗದ್ದೆಗಳು.	೧೦೦	೩	೧೫	೨೩
	೧೦೭	೩	೯	೨೩
	೧೦೨	೩	೯	೨೩
	೬೦	೫	೩೩	೩೩
ಜುಮ್ಲಾ	೪	೧೫	೨೦	೧೦೩
ಮೇಲೆ ಕಂಡ ಜಮೀನ್ಗೆ	೬೦	೩	೩	೨೮
ಗಳಿಗೆ ಹತ್ತಿರುವ	೬೨	೪	೨೫	೬೮
ಪ್ರವಸ್ಥರ ಬಾಗಾಯತು	೩೩	೪	೩೩	೪೦
	೩೯	೪	೩೩	೩೯
ಜುಮ್ಲಾ	೪	೧೬	೩೯	೧೫೯
ಒಟ್ಟು ಜುಮ್ಲಾ	೧೩	೬೦	೯	೩೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ಹೋಪ್ ಲಿಟ್ಲೆಟನ್ ಮ್ಯಾನೇಜರ್ ಎಸ್. ಟಿ. ಕೃಷ್ಣಾಪ್ರಯ್ಯಂಗಾರ್ರಿಗೆ ತಲಪಿಸಬೇಕು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ವಿಜಂಟ್ರು ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) . . . . ರೂ. ೧-೦-೦

ದರಸ್ತ ಕೆದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ

ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್

ಸೇರಿ . . . . ರೂ ೧-೧೪-೦

" " ೬ " " . . . ೦-೧೫-೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

119 1

೧೯೦೬-೦೭ನೇ ಇಸವಿ ಸಿವಿಲ್ ನಂಬರ ೨೩೧.

ವಾದಿ—ಗಿರಿಯಣ್ಣ ಉರುಫ್ ಗಿರಿಯಪ್ಪಾಜಿ.

ಪ್ರತಿವಾದಿ—೧ನೆ ಕರೀಮಿಯ್ಯಾ ಉರುಫ್ ಸೈದ್ ಕರೀಂ ವಗೈರೆ.

ಇದರಿಂದ ಮೈಸೂರು ಅಷ್ಟರ್ ಮತ್ತು ಈರಣಗೆರೆ ಮೊದಲ್ಲಾದಲ್ಲಿ ಇರತಕ್ಕ ಮಹಮ್ಮದ್ ಪಂಗಡದವರಿಗೆ ತಿಳಿಯಪಡಿಸುವದೇನೆಂದರೆ-

ಮೇಲ್ಕಂಡ ಮೊಕದ್ದಮೆಯಲ್ಲಿ ವಾದಿಯು ಷೆಡ್ಯೂಲ್ ಸ್ವತ್ತು ತನಗೆ ಸೇರಿದ್ದೆಂತಲೂ ಪ್ರತಿವಾದಿಯರು ಅಕ್ರಮಸ್ವಾಧೀನ ಮಾಡಿಕೊಂಡಿರುವದರಿಂದ ತನಗೆ ಬರಮಾಡಿಸಿಕೊಡಬೇಕೆಂದು ವಗೈರೆ ಈ ಕೋರ್ಟಿನಲ್ಲಿ ವಾದಿಯು ದಾವಾಮಾಡಿರುತ್ತಾರಾಗಿ ಸಿವಿಲ್ ಪ್ರೊಸೀಜರ್ ಕೋಡು ೩೦ನೆ ಸೆಕ್ಷನ್ ಪ್ರಕಾರ ಮೇಲ್ಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಹಕ್ಕು ಇರತಕ್ಕ ವಿಶಿಷ್ಟ ಜನಗಳು ೧೯೦೬ನೆ ಇಸವಿ ಸೆಪ್ಟಂಬರ್ ೨೭ನೆ ತಾರೀಖು ದಿವಿ ೧೧ ಗಂಟೆಗೆ ಈ ಕೋರ್ಟಿಗೆ ರುಜುರೂಬು ಹಾಜರಾಗಿ ತಮ್ಮ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು. ಇದು ತಪ್ಪಿದಲ್ಲಿ ಆ ಬಳಿಕ ಯಾರ ತಕರಾರನ್ನೂ ಅಂಗೀಕರಿಸುವದಿಲ್ಲವಾಗಿ ತಿಳಿಸಿದೆ.

ತಾ ೩-೯-೦೬ | (Sd.) N. T. GOPALIENGAR, | *Principal Munsiff.*

ಷೆಡ್ಯೂಲ್

ಮೈಸೂರು ಅಷ್ಟರ್ ಮೊಹಲ್ಲಾ ವೀರನಗೆರೆಯಲ್ಲಿ ರೋಮನ್ ಕ್ಯಾಥೋಲಿಕ್ ದೇವಸ್ಥಾನದ ಎದುರಿಗೆ ಇರುವ ಪಟ್ಟಿ ಜೋಪಡಿ ಮತ್ತು ಇದಕ್ಕೆ ದಕ್ಷಿಣದಲ್ಲಿರುವ ಅಂಗಳ ಒಟ್ಟು ಚೌಹದ್ದು: ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ವಾದಿಯು ಹಾಲಿ ವಾಸವಾಗಿರುವ ಮನೆ, ಉತ್ತರಕ್ಕೆ ಹೈವೇ, ದಕ್ಷಿಣಕ್ಕೆ ಗಲ್ಲಿ. ಈ ಮಧ್ಯೆ ಇರುವ ಹಂಚ್ಚಿಜೋಪಡಿ ಮನೆ ಮತ್ತು ಅಂಗಳ.

ತಾ ೩-೯-೦೬ | (Sd.) N. T. GOPALIENGAR, | *Principal Munsiff.*

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

73—18

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು. ಈ ಷೇರು ಮೊಬಲಗು ೫ ಅಥವಾ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಡ್ಮಿಷನ್ ಫೀ ಕೊಟ್ಟು ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಮೈಸೂರು ಸರ್ಕಾರದವರು ಈಗ ಆರ್ಡರು ಮಾಡಿರುವ ಟ್ರೇಡ್ ಸ್ಟ್ಯಾಟಿಸ್ಟಿಕ್ಸಿನಿಂದ ಈ ಲೈನಿನ ವರಮಾನ ೯ಕಡ ೬ ಕ್ಕಿಂತ ಕಮ್ಮಿ ಆಗಲಾರದೆಂದು ತೋರಿಬಂದು ಮತ್ತು ಸರಿಯಾದ ಕ್ಯಾಪಿಟಲನ್ನು ಕಂಪನಿಯವರು ಒದಗಿಸಿಕೊಂಡಲ್ಲಿ ೯ಕಡ ತಾವು ನಾಲ್ಕರಂತೆ ಬಡ್ಡಿ ಕೊಡಲು ಈ ಕಂಪನಿಗೆ ಜಾಮೀನಾಗಿರುತ್ತೇವೆಂದೂ ದಯವಿಟ್ಟು ಲಿಖಿತ ಮೂಲಕ ತಿಳಿಸಿರುತ್ತಾರೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜು ಮಾಡಿರುವವರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಈ ಕಂಪೆನಿಯ ಷೇರುಗಳನ್ನು ಕಮಿಷನಿಗೆ ಸಬ್ ಏಜಂಟರಾಗಿ ವಿಕ್ರಮಾಡಲು ಅಪೇಕ್ಷೆಯುಳ್ಳ ಖಾತರಿಯಾದ ಜನರು ಸದರಿಯವರಿಗೇನೆ ಬರೆದುಕೊಳ್ಳಬಹುದು.

ಷೇರು ಹಣವನ್ನು ಚೀಫ್ ಕ್ಯಾನ್ವಾಸಿಂಗ್ ಏಜಂಟರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು. ಈಚೆಗೆ ಈ ಹಣವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಖಜಾನೆಗಳಲ್ಲಿ ಕಟ್ಟಬಹುದೆಂದು ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

ಷೇರುಗಳಿಗೆ ದರಖಾಸ್ತು ಮಾಡುವವರು ಅಪ್ಲಿಕೇಷನ್‌ಗಳ ಜೊತೆಯಲ್ಲಿ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಡ್ಮಿಷನ್ ಫಿ ರವಾನಿಸಬೇಕು. ಇದು ಷೇರು ಮೊಬಲಗಿನಲ್ಲಿ ಉತ್ತಾರ ಹಾಕಲ್ಪಡುವದು.

(ಸ್ವ) ಬಿ. ವಿ. ರಾಮಸ್ವಾಮಿ ಶೆಟ್ಟಿ ಬಿ. ಎ.,

ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್,

ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

24—8—1906 ರಿಂದ 31—8—1906 ರ ವರೆ

ಸ್ಥಳ.	ಪ್ಲೇಗ್ ತಗಲಿದ್ದು	ಸತ್ತದ್ದು.	ಕಾಲರ ಈ ವಾ ಸಂಖ್ಯೆ
ಬೆಂಗಳೂರು ಪಟ್ಟಣ		0	5
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	13	11	11
ಮೈಸೂರು ,,	0	0	7
ಕೋಲಾರ್ ,,	0	0	4
ಕೋಲಾರ್ ಚಿನ್ನದ ಗಣಿಗಳು	9	2	2
ತುಂಕೂರು ಡಿಸ್ಟ್ರಿಕ್ಟು	0	0	1
ಹಾಸನ ,,	6	7	0
ಚಿತ್ರದುರ್ಗ ,,	0	0	0
ಕಡೂರ್ ,,	88	68	9
ಶಿವಮೊಗ್ಗಾ ,,	1		33
ಜುಮ್ಲಾ	108	84	65

ಶಾಲಿವಾಹನ ಶಕ ವರ್ಷಂಗಳು ೧೮೨೮ ನೇ ಪರಾಭವ ಸಂವತ್ಸರದ ಭಾದ್ರಪದ ಬಹುಳ ದಶಮಿ ಗುರುವಾರದಿಂದ ಆಶ್ವೀಜ ಶುದ್ಧ ಪಾಡ್ಯಮಿ ಬುಧವಾರದ ವರಿಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಸೆಪ್ಟಂಬರ್

ತಾ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ
13	ಗುರು	✡	ದಶಮಿ	26-3	ಪುನ	57 31
14	ಶುಕ್ರ		ಏಕಾದಶಿ	29 8	ಪುಷ್ಯ	60-0
15	ಶನಿವಾ	|	ದ್ವಾದಶಿ	31-15	ಪುಷ್ಯ	2 30
16	ರವಿವಾ	¶	ತ್ರಯೋ	31-40	ಶ್ಲೇ	4 16
17	ಚಂದ್ರ	‡	ಚತುರ್ದಶಿ	30-51	ಮ	10 30
18	ಕುಜ	*	ಅಮಾ	28-50	ಪುಬ	6 20
19	ಬುಧ	,,	ಪಾಡ್ಯ	25-10	ಉತ್ತ	5-15

✡ ಧರ್ಮಮಹಾಲಯ. ಉತ್ಪಾತಯೋಗ, ಸರ್ವತ್ರಏಕಾ ‡ ಯಾತ್ರೇನಾಂ ಮಹಾಲಯ. ¶ ಪ್ರದೋಷ, ಶಾಮಂತನಮಹಾ ಮಾಸಶಿವರಾತ್ರಿ ‡ ವಿಷಶಸ್ತ್ರಹತಾನಾಂ ಮಹಾಲಯ. * ಸರ್ವ ಮಹಾಲಯ ಅಮಾವಾಸ್ಯೆ ,, ಚಂದ್ರೋದಯ, ಕರಸ್ನವರಾತ್ರಾರಂಭ ಜಯಲಕ್ಷ್ಮೀವ್ರತಾರಂಭ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂ
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೮-೦	೧೪
ಕೆಂಪುಕೂಳೆ ಅಕ್ಕಿ ಅವಲ್		೧೩-೩-೦	೧೩
,, ದಯಂ		೧೩-೮-೦	೧೨-೦
ಜೀರಾಸ್ತ ಅಕ್ಕಿ		೧೩-೩-೦	೧೪
ಸಣ್ಣಕ್ಕಿ ಅವಲ್		೧೪-೮-೦	೧೪
,, ದಯಂ		೧೩-೦-೦	೧೫
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨-೬-೦	೧೩
,, ದಯಂ		೧೧-೮-೦	೧೧
ಹೈ ರಾಗಿ ಪಲ್ಲಾ ೧ಕ್ಕೆ		೮-೦-೦	೩
ಕಾದ್ರಾಗಿ		೭-೩-೦	೩
ಜೋಳ		೪-೮-೦	೪
ಹಲಸಂದೆ ಪಲ್ಲಾ ೧ಕ್ಕೆ		೧೦-೦-೦	೧೦
ಬಿಳೀ ಅವರೆ		೧೦-೦-೦	೧೦
ಹೆಸರು		೧೦-೦-೦	೧
ಉದ್ದು		೧೧-೩-೦	೧೨-೦
ಕಡಲೆ		೧೨-೦-೦	೧೨-೦
ಎಳ್ಳು ಸ. ೧೨ ಕ್ಕೆ		೨೦-೮-೦	೨೨-೦
ಹುರುಳಿ		೪-೮-೦	೪
ಹರಳು ೧೨ ಸೇರಿಗೆ		೧೫-೦-೦	೧೫
ಸೀಗೇಕಾಯಿ ಮಣ ೧ಕ್ಕೆ		೨-೦-೦	೨
ಮೆಣಸಿನಕಾಯಿ		೩-೦-೦	೩
,, ದಯಂ		೩-೩-೦	
ಬೆಲ್ಲ ದೊಡ್ಡ ಅಚ್ಚು		೫-೩-೦	೫
ಒಣ್ಣಸ್ಲೆ ಮಣ ೧ಕ್ಕೆ		೩-೩-೦	೪
ಹರಳೆಣ್ಣೆ ,,		೬-೦-೦	೫
ಕೊತ್ತಂಬರಿ ಪಲ್ಲಾ ೧ಕ್ಕೆ		೧೧-೦-೦	೧೦
ಉಪ್ಪು ,,		೩-೦-೦	೩-೦
ಹುಣಿಸೇ ಹಣ್ಣು		೦-೧೨-೦	೦-೦
,, ಹಳೇದು		೦-೮-೦	೦-೧
ತುಪ್ಪ ಮಣ ೧ಕ್ಕೆ		೧೩-೮-೦	೧೪
ಸಿಲೋನ್ ಪಟ್ಟಿ ೧ಕ್ಕೆ		೫-೩-೦	೩
ತೆಂಗಿನಕಾಯಿ ೧೦೦ ಕ್ಕೆ		೩-೮-೦	೩
ಅಲಲೇಕಾಯಿ ಮಣ ೧ಕ್ಕೆ		೧-೦-೦	೦
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೦-೦	೦
ಚಿನ (ಹೊ) ಕೆಂಪು		೦೫-೩-೦	೦೫
,, ,, ಹಸಿಮೆ		೦೫-೦೦-೦	೦೫-೦
,, ,, ಗಟ್ಟಿ ತೊಲ ೧ಕ್ಕೆ		೨೫-೦-೦	೨೫
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೪೫-೦-೦	೪೪

Printed and published by the Rev. E. THOMPSON, M.A., the Proprietor and Manager Wesleyan Mission Press, Mysore. 13/9/1906.

ವೃತ್ತಾಂತ ಪತ್ರಿಕೆ.

REGISTERED, M. 20

ಎ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ — ಮೈಸೂರು—೧೯೦೬ ನೇ ಇಸವಿ ಸೆಪ್ಟೆಂಬರ್ ತಾರೀಖು ೨೦ ನೇ ಗುರುವಾರ. — ಸಂಚಿಕೆ ೧೬

ಇಂಡಿಯದ ದೊಡ್ಡ ನೋವುಹರ.

60 17

ಯಾವ ನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ಕಿವಿನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಬಣಗೆಮ್ಮು, ಟ್ಟಜಾಣ್ಣು, ಕೀಲುನೋವು, ಎದೆಗಳ ನೋವು, ಅಸ್ತಮ ಈ ಪ್ರಕಾರವಾದ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡಬೇಕಾದದ್ದಿಲ್ಲ ಈ ನೋವುಗಳಿಗೆಲ್ಲಾ ಕ್ಲೆಮೆಂಟ್ ರವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೇ ಶಮನವಾಗುವದು ... ನೋವನ್ನು ಎರಡು ನಿಮಿಷಗಳಲ್ಲಿ ಖಂಡಿತವಾಗಿ ... ಪ್ರಮಾಣ ಮಾಡುವದು ಉಪಯೋಗಿಸುವ ವಿಧಾನ ಮುಂತಾದ್ದನ್ನು ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ ನಮ್ಮ ... ದುಃಖಕರವಾದ ರೋಗವು ... ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಕೂಡಲೇ ಬಂದು ಈ ಔಷಧವನ್ನು ತರಿಸಿಕೊಳ್ಳಿ ತರಿಸಿದವರ್ಯಾರೂ ... ವ್ಯಸನಪಡುವದಿಲ್ಲ ಇದರ ಗುಣವು ಅನುಭವಸಿದ್ಧ ಕ್ರಯ —೧ ಬಾಟ್ಲಿಗೆ ೧೨ ಆಣೆ ೩ಕ್ಕೆ ೨ ರೂಪಾಯಿ ... ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ೩ ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ —ಎಫ್ ಡಬ್ಲಿಯು ಆರ್ಗ, ಸಿವೆ ಟ್ರಿ ರೋಡ್, ವೇಪೇರಿ, ಮದರಾಸ್

ಹೋಮಿಯೋಪೆ ಸಿ ಯಾ.

ಸರ್ವ ವಿಕಾರ

Homoeo...

ತಗಲುತ್ತಲೇ ನೋವು ವಾಸಿಯಾಗುತ್ತೆ

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಪೊಲೀಸ್ ಠಾಣಾ, ವಿದ್ಯಾಶಾಲೆ ಕೋರ್ಟು, ಕಛೇರಿ ಮುಂತಾದ ಸ್ಥಳಗಳಲ್ಲೆಲ್ಲಾ ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ತಾವದೂ ಇಲ್ಲವೆಂಬ ವದ ಲೋಕಪ್ರಸಿದ್ಧವಾಗಿದೆ

ಈ ತೈಲವು ತತ್ಕಾಲದಲ್ಲಿ ನೋವುಗಳಿಗೆ ಮಹತ್ತಾಗಿ ಸಿಕ್ಕತಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರುಗಳು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ನರ ಸೆಳೆಯುವದು, ಕೆಮ್ಮು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು ಮುಖನೋವು, ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಮತ್ತು ಚೇಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ಹೋದದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ವಾಸಿಮಾಡುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ ೧—೮ ಆ ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತಾರೆ ರೂ ೩—೮ ಆಣೆ ಬಾಬ್ತು ಡಬ್ಬಿಯಲ್ಲಿ ೧ ರೂ ಡಬ್ಬಿಯಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ೩—೮ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬಿಡುತ್ತೆ

****

ಹೋಮಿಯೋಪಿಯಾ ಯಂಬ್ರೋಕೇಷನ್

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಮುರಿದ ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ನೋವು ಬಹು ಬೇಗನೆ ಸೇದಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ಸೀಸೆಗಳು, ೧ ರೂ ಗೂ ಒಂದರಂತೆ ಬಿಕರಿ ಮಾಡಲ್ಪಡುವದು ೧೨ ಸೀಸೆ ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಶಾಪುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸುಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ.—ಹೋಮಿಯೋಪಿಯಾ ಕಂಪೆನಿ, ೨೩ ಸೆಕಂಡು ಬೀಚ್, ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಅಂಗಡಿಯಲ್ಲಿ ಇರುವದು ಅಥವಾ ಆಗತಾನೆ ಹುರಿವದು.

ಕೆಲಸಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು

35 32

ವ್ಯಾಪಾರದ [C C E C] ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಕೆಗ್ಗರ್ ಉಳ್ಳ ವಿಲಾಸದ ಬೇಟೆ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು ಇಂಥವರಿಗೆ ಅಲಾಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸನ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ.

101 8

ಇದು ಸಾಧಾರಣ ಜ್ವರ, ಚಳೀಜ್ವರ, ಮೊರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನು ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮುಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಕೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಕ್ಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆನ್ನಿಯ ಓಮುಂ ಕರ್ಪೂರವನ್ನು ನಾನೂ ನನ್ನ ಡಾಕ್ಟರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಕೆಪ್ಪಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕಳೆಂಡ್ ಬೀಚ್ ಲೈನ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರ ಕಾರ್ಡುಗಳು.

104 8

ಖಾಸ, ಯಾ ... ಅಂದರ ಚಿತ್ರಗಳ ಕೈಪಿಡ್ಡಿ ನಮೂನೆ ೧೬ ಕಾರ್ಡುಗಳಿಗೆ ೦' (ಸ್ಟ್ಯಾಂಪು ಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ ಸ್ವದೇಶಿ ಮೆಂಥಾಲ್ ಸೀಸೆಗೆ ೬ ಆಣೆ ನೋಟ್ ಪೇಪರು ಕವರುಗಳು, ಎಕ್ಸರ್ಸೈಜ್ ಪುಸ್ತಕಗಳು, ಸ್ವದೇಶಿ ಜಂಗೇರಿಯನ್ ಟೋಪಿಗಳು, ಇವುಗಳಿಗೆ ಟಪಾಲುಖರ್ಚು ಬೇರೆ ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲಿ ಬರೆಯಬೇಕು ದಯಾಮಾಡಿ ಅಪೇಕ್ಷಿಸತಕ್ಕವರು ಟಿಕೆಟ್ ಸ್ಟ್ಯಾಂಪು ಹಚ್ಚಿ ಬರೆದ ಕೊಳ್ಳತಕ್ಕದ್ದು Bhatt & Co Poona city

ಮುಂಬಯಿ ವ್ಯಾಪಾರವಾಡಲಿಚ್ಛಿಸುವವರು.

95 17

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಸೂಕ್ಷ್ಮ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೋ ಅಕ್ಷರದಿಂದ ಬರೆದು ಪತ್ತಾ ಚನ್ನಬಸಪ್ಪ ನೀಲಪ್ಪ ವಾರದ, ಫೋಸ್ಟು ಮಾಂಡ್ವಿ ಮುಂಬಯಿ

ಒಕ್ಕಲಿಗರ ಸಂಘ.

98 11

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಪಂಗಡವು ಇತರ ಪಂಗಡಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವದರಿಂದ ಅಭಿವೃದ್ಧಿ ಸ್ಥಿತಿಗೆ ಬಾರದೆ ಇರುವದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮ॥ ರಾ॥ ದೊಡ್ಡಣ್ಣಶೆಟ್ಟರವರ ಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸೇರಿತ್ತು ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ಮುಂತಾದ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ನೇಮಿಸಿರುತ್ತಾರೆ ಆದುದರಿಂದ ಅಭಿಮಾನಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಸಭೆ ಸೇರುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನು ಕಾಗದದ ಮೂಲಕ ನಮಗೆ ದಯವಿಟ್ಟು ತಿಳುಹಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಬೆಂಗಳೂರು

ಎಂ ಸುಬ್ಬಯ್ಯ, ಬಿ ಎ,

ಕೆ ಹೆಚ್. ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ —ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸಲ್ಪಡುತ್ತಲಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಅಚ್ಚಾದ ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯಪಡಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಡುವವರಾಗಿದ್ದಾರೆ ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಲಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು

ಆಂಗ್ಲೇಯ ವೈದ್ಯಶಾಸ್ತ್ರ.

123 1

ಇದರ ಕ್ರಯ ೧—೮—೦ ಇಂದ ೧—೦—೦ಗೆ ಇಳಿಸಲ್ಪಟ್ಟಿದೆ ಈ ಪುಸ್ತಕವು ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಬರೆಯಲ್ಪಟ್ಟಿದೆ. ವಿಳಾಸ.—ಎಂ ಗುರುರಾವ್, ಫಸ್ಟ್ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟು, ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆ.

ಸ ೧೯೦೬ ನೇ ಇಸವಿ ಸೆಪ್ಟಂಬರ್ ತಾ॥ ೨೦ ನೇ ಗುರುವಾರ

ಗಣಿಗಳ ಶೋಧನೆಯೂ ಐಶ್ವರ್ಯಾಭಿವೃದ್ಧಿಯೂ.

ಮೈಸೂರು ಸಂಸ್ಥಾನದ ಭೂಗರ್ಭಶೋಧನಾ ಇಲಾಖೆಯ ಅಧಿಕಾರಿಯಾದ ಮೆ॥ ಸ್ಮೆದರಲ್ ಯವರು ಬೆಂಗಳೂರು ಪಟ್ಟಣದ ಸಾಹುಕಾರ್ ದೊಡ್ಡಣ್ಣನವರ ಪಾಠಶಾಲಾ ಕಟ್ಟಡದಲ್ಲಿ ಕಳೆದ ಗುರುವಾರ ಸಾಯಂಕಾಲ ಈ ಸಂಸ್ಥಾನದ ಗಣಿಗಳಲ್ಲೂ ಭೂಮಿಯ ನಾನಾಭಾಗದಲ್ಲೂ ಸಿಕ್ಕುವಂಥಾ ಬಹು ಅಮೂಲ್ಯವಾದ ಬೇರೆ ಬೇರೆ ಲೋಹಗಳನ್ನು ಕುರಿತು ಬಹು ಫಲದಾಯಕವಾದ ಉಪನ್ಯಾಸವನ್ನು ಮಾಡಿದರು. ಅದನ್ನು ನಮ್ಮ ವಾಚಕರು ಚೆನ್ನಾಗಿ ತಿಳಿದುಕೊಳ್ಳಬೇಕೆಂದು ಕಾಣಿಸುತ್ತೇವೆ. ಮೈಸೂರು ಸರ್ಕಾರಿ ಭೂಗರ್ಭಶೋಧನಾ ಇಲಾಖೆಯ ಅಧಿಕಾರಿಗಳು ಕಳೆದ ಹಲವು ಸಂವತ್ಸರಗಳಿಂದ ಈ ಸೀಮೆಯಲ್ಲೆಲ್ಲಾ ಸಂಚಾರಮಾಡುತ್ತಾ, ಯಾವಯಾವ ಸ್ಥಳದಲ್ಲಿ ಎಂಥೆಂಥಾ ಗುಪ್ತಧನವು (ಲೋಹ) ಸಿಕ್ಕುವುದೋ ಎಂದು ಪರಿಶೋಧನೆಮಾಡುತ್ತಾ, ಅಂಥಾ ಸ್ಥಳಗಳನ್ನು ಗುರುತು ನಕ್ಷೆಮಾಡುತ್ತಾ ಬಂದಿರುತ್ತಾರೆ ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಸಿಕ್ಕುವ ಚಿನ್ನದ ಗಣಿಗಳು ಲೋಕಪ್ರಖ್ಯಾತವಾದವುಗಳಾಗಿವೆ ನಮ್ಮ ದೇಶದ ಪ್ರಜೆಗಳು ಚಿನ್ನವನ್ನು ಗಣಿಗಳಿಂದ ತೆಗೆದು ಶುದ್ಧಿಮಾಡುವುದಕ್ಕೆ ಅವರಿಗೆ ಅಷ್ಟು ಪರಿಶ್ರಮವಾಗಲಿ ದ್ರವ್ಯ ಮೊದಲಾದ ಸಹಾಯ ಸಂಪತ್ತುಗಳಾಗಲಿ ಇನ್ನೂ ಇರುವುದಿಲ್ಲ. ಆದಾಗ್ಯೂ ಇತರ ಲೋಹಗಳನ್ನು ತೆಗೆದು ಪರದೇಶಗಳಿಗೆ ರಫ್ತುಮಾಡಿ ಐಶ್ವರ್ಯ ಸಂಪಾದಿಸುವುದು ಕಾಲಕ್ರಮದಲ್ಲಿ ಸುಲಭಸಾಧ್ಯವಾಗಿರುವುದು. ಈ ಇತರ ಲೋಹಗಳನ್ನು ತೆಗೆಯುವುದಕ್ಕೆ ಅಷ್ಟು ಹಣವಾಗಲಿ ವಿಶೇಷ ಪರಿಶ್ರಮವಾಗಲಿ ಬೇಕಾಗಿರುವುದಿಲ್ಲ ಮ್ಯಾಂಗನೀಸ್, ಕ್ರೋಮಿಯಂ, ಮ್ಯಾಗ್ನಿಸೈಟ್ ಕುರಂಗದ ಕಲ್ಲು, ಅಭ್ರಕ (ಕಾಗೆಬಂಗಾರ), ಆಸ್ಬೆಸ್ಟಾಸ್, ಮುಖ್ಯವಾದ ಬಾರೀ ಕಟ್ಟಡಗಳಿಗೆ ಉಪಯೋಗಿಸುವಂಥಾ ಸುಂದರವಾದ ಜಾತಿ ಕಲ್ಲುಗಳು, ಈ ಮೊದಲಾದವು ವಿಶೇಷ ಶ್ರಮವಿಲ್ಲದೆಯೂ ಬಹಳ ಹಣ ಖರ್ಚಾಗದೆಯೂ ಸಿಕ್ಕುವವುಗಳಾಗಿವೆ ಇವನ್ನು ತೆಗೆದು ಸಾಗಿಸುವುದಕ್ಕೆ ಪರದೇಶಗಳಿಂದ ಬಂದು ಲಾಭ ಸಂಪಾದಿಸಿಕೊಂಡು ಹೋಗುವುದು ತರವಲ್ಲವು ನಮ್ಮ ಸೀಮೆಯ ಐಶ್ವರ್ಯವಂತರು ಸಣ್ಣ ಸಣ್ಣ ಕಂಪನಿಗಳನ್ನು ಮಾಡಿಕೊಂಡು ಸ್ವದೇಶಿಗಳ ಮೂಲಕ ಈ ಲೋಹಗಳನ್ನು ಭೂಮಿಯಿಂದ ಬಿಡಿಸಿ ಬಿಕರಿ ಮಾಡಬೇಕಾಗಿದೆ ಇದು ಬಹಳ ವಿಶೇಷವಾದ ವಿಷಯ ಪ್ರಜೆಗಳು ಇದಕ್ಕೆ ಗಮನ ಕೊಡಬೇಕಾಗಿದೆ. ಮೇಲ್ಕಂಡ ಲೋಹಗಳ ಪೈಕಿ ಮೊದಲನೆಯದಾದ ಮ್ಯಾಂಗನೀಸ್ ಎಂಬ ಲೋಹವನ್ನು ತೆಗೆಯಲು ಆಗಲೇ ಎರಡು ಕಂಪನಿಗಳು ಏರ್ಪಾಡಾಗಿರುತ್ತವೆ ಇನ್ನೂ ಅನೇಕರು ಈ ಲೋಹಾನ್ವೇಷಣೆಗೆ ಸರ್ಕಾರಕ್ಕೆ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ ಮೆ॥ ಸ್ಮೆದರಲ್ ಯವರು ಇಂಥಾ ಸಮಯದಲ್ಲಿ ಮೇಲ್ಕಂಡ ಲೋಹಗಳ ಪೂರ್ವೋತ್ತರವನ್ನೆಲ್ಲಾ ಕುರಿತು ಸ್ವಲ್ಪಮಟ್ಟಿಗೆ ತಿಳಿಯಪಡಿಸಿದ್ದು ನಮ್ಮ ಸೀಮೆಗೆ ಬಹಳ ಉಪಕಾರ ಮಾಡಿದಂತಾಯಿತು. ಆದರೆ ಇಂಥಾ ಗಣಿಗಳ ಕೆಲಸದಲ್ಲಿ ನಷ್ಟವೂ ಆಗದೆ ಇರುವುದಿಲ್ಲ ಕೋಲಾರದ ಚಿನ್ನದ ಗಣಿಗಳ ಪೈಕಿ ಕೆಲವು ಮಾತ್ರ ತುಂಬಾ ಲಾಭಕರವಾಗಿರುವುದೂ ಇನ್ನೂ ಕೆಲವು ಅಷ್ಟು ಲಾಭ ಕೊಡದಿರುವುದೂ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ ಇಷ್ಟು ಲಾಭಕರವಾದ ಪ್ರಯೋಜನವನ್ನು ವರುಷ ವರುಷವೂ ಪಡೆಯುತ್ತಲಿರುವ ದವಿರ್ಗಾಸ್ಸ ನಲ್ಲಿ ಈ ಗಣಿಗಳ ಮೇಲೆ ಆಸೆಪಟ್ಟು ತಮ್ಮ ಹಣವನ್ನು ಹಾಕಿ ಎಷ್ಟು ಮಾತ್ರವೂ ಅಪೇಕ್ಷಣೀಯವಾದದ್ದಲ್ಲ ... ಹೊಸ ಕಂಪನಿಗಳನ್ನು ಇನ್ನೂ ... ಆರಂಭಿಸುವ ಸಾಹಸದಲ್ಲಿ ಬಹಳ ಶಕ್ತಿಯಾಗಿ ಹೆಚ್ಚುವುದು. ಆದಕಾರಣ ಲೋಹಗಳನ್ನು ತೆಗೆಯುವುದಕ್ಕೆ ಹಣಗಾರರಾಗಿರತಕ್ಕವರು ಸ್ವಲ್ಪ ಹಣ ಹಾಕಿ ಕಂಪನಿಗಳನ್ನು ಏರ್ಪಾಡು ಮಾಡಿಕೊಳ್ಳುವಾರೆಂದು ಹಾರೈಸುತ್ತೇವೆ

ದೇವರು ಬೇಕೋ, ಧನವು ಬೇಕೋ ?

ರಾಮಾಚಾರಿಯರು ಯಥಾಪ್ರಕಾರ ಪಾಠಶಾಲೆಯಲ್ಲಿ ಕುಳಿತಿದ್ದರು ಅವರ ಸ್ನೇಹಿತರಾದ ಕೃಷ್ಣಪ್ಪನವರು ಬಂದು ಎದುರಾಗಿ ಕೂತುಕೊಂಡರು ಅವರನ್ನು ರಾಮಾಚಾರಿರು ಅತ್ಯಾದರದಿಂದ ಕಂಡು—ಏನು ಸ್ವಾಮಿ, ಸಾವಕಾಶ ? ಈ ಹೊತ್ತು ಆಫೀಸಿಗೆ ಹೋಗಲಿಲ್ಲವೋ ? ಓಹೋ, ಮರತಿದ್ದೆ, ಈ ಹೊತ್ತು ಹಬ್ಬವಾದದರಿಂದ ರಜವಲ್ಲವೇ ? ಮನೆಯಲ್ಲಿ ಏನೇನು ವಿಶೇಷ ಮಾಡಿಸುತ್ತೀರಿ ?

ಕೃ—ನಾನೇನು ಮಾಡಿಸಲಿ, ಸ್ವಾಮಿ, ಬಡವ ! ನನ್ನ ಬಾಧು ಇದ್ದೇ ಇದೆ ಬಿಡಿ ಈಗ ಮುಖ್ಯವಾಗಿ ನಾನು ನಿಮ್ಮ ಬಳಿಗೆ ಒಂದು ಕಾರ್ಯಾರ್ಥವಾಗಿ ಬಂದೆ ಹಿಂದಿನ ನಾವಿಬ್ಬರೂ ಮಾತಾಡಿದ್ದು ನೆನಪಿನಲ್ಲಿರಬಹುದು ಅಂದಿನಿಂದ ಒಂದು ವಿಷಯವಾಗಿ ನಿಮ್ಮನ್ನು ಕೇಳಬೇಕೇಳಬೇಕೆಂದಿದ್ದೆ ಅದು ಹಣದ ವಿಚಾರವೇ !

ರಾ—ನಿಮಗೆ ಬಡತನವಿರುವವರೆಗು ಸಾಕು, ನೀವು ಹಣವನ್ನು ಕುರಿತು ಚಿಂತಿಸುವುದೂ ಸಾಕು ! ಹಣದ ವಿಷಯವಾಗಿ ಏನು ಕೇಳಬೇಕೆಂದು ಬಂದಿರಿ

ಕೃ—ಈ ಹಣದ ಸುದ್ದಿಯೇ ಇಲ್ಲದಿದ್ದರೆ ಉತ್ತಮವಾಗಿತ್ತೆಂದು ಯೋಚಿಸಬೇಕಾಗಿದೆ. ಅಂತೂ ಹಣವಿಲ್ಲದಿದ್ದರೆ ಲೋಕ ವ್ಯವಹಾರವೇ ನಡೆಯುವುದಿಲ್ಲವೆಂದು ಬಲ್ಲೆನು ನನ್ನಂಥ ಬಡವನಿಗಂತೂ ಹಣವಿಲ್ಲದಿರುವದರಿಂದ ಏನೇನು ಪರಿಪಾಟಕ್ಕೆ ಗುರಿಯಾಗಿದೆಯೋ ಸ್ವಾಮಿಗೇ ಗೊತ್ತು ಆ ವಿಷಯದಲಿ ಚಿಂತಿಸುತ್ತಿದ್ದೇನೆಂದು ಅರಿಯಬೇಡಿರಿ ಆದರೆ ಈ ಹಣದಿಂದ ಏನೇನು ಅನರ್ಥಗಳು ಸಂಭವಿಸುತ್ತವೆ ನೋಡಿದಿರಾ ! ಇದೇ ನನ್ನ ಮನಸ್ಸಿನಲ್ಲಿ ಬಹಳ ತಲ್ಲಣವನ್ನುಂಟುಮಾಡುತ್ತಿದೆ

ರಾ—ಸ್ನೇಹಿತರೇ, ಹೌದು ಭೂಲೋಕದಲ್ಲಿ ನಡೆಯುವ ಸಕಲ ಅನರ್ಥಗಳಿಗೂ ಹಣವೇ ಮೂಲವಾಗಿದೆಯೆಂದು ಒಬ್ಬನು ಹೇಳಿದ್ದಾನೆ ಇದು ಒಂದು ಆಶ್ಚರ್ಯಕರವಾದ ಸಂಗತಿಯಾಗಿದೆ ಹಣಕ್ಕೆ ಇಷ್ಟು ಬೆಲೆಯನ್ನು ಕಟ್ಟಿದಂಥವನು ಮನುಷ್ಯನೇ ಅದನ್ನು ದೇವರ ಹಾಗೆ ಭಾವಿಸಿ ಪೂಜಿಸುವವನೂ ಮನುಷ್ಯನೇ—

ಕೃ—ಹಣವೇ ಸಾಕ್ಷಾತ್ ದೇವರು ! ಆ ಮಾತು ಬಿಡಿ ಅದನ್ನು ಪೂಜಿಸದೆ ಇನ್ಯಾವದನ್ನು ಪೂಜಿಸಬೇಕು ?

ರಾ—ಅಗೋ, ನೋಡಿದಿರಾ ! ಅದೇ ಕೆಟ್ಟ ಕೆಲಸ ! ಹಣವನ್ನು ಮನುಷ್ಯನು ಒಂದು ನಿಮಿತ್ತವಾಗಿ ಭಾವಿಸಬೇಕೇ ಹೊರತು, ಅದನ್ನೇ ಮುಖ್ಯವೆಂದು ಭಾವಿಸಕೂಡದು ಅದನ್ನೇ ದೇವರೆಂದು ಭಾವಿಸುವುದರಿಂದಲೇ ಎಷ್ಟೋ ಸಂಕಟಗಳು ಬರುತ್ತವೆ ದೇವರ ... ಒಬ್ಬ ... ದೇವರು ಚಳಿಯಿಂದ ನಡುಗುತ್ತಿರುವಲ್ಲಿ ಕಂಬಳಿಯನ್ನು ಮುಚ್ಚಿ ಕಂಕುಳಲ್ಲಿಟ್ಟುಕೊಂಡವನೇ ... ನಗಲಾರರೇ ? ಹಾಗೆಯೇ ಹೊಟ್ಟೆಯನ್ನು ಕಟ್ಟಿ ಪೆಟ್ಟಿಗೆಯಲ್ಲಿ ಹಣವನ್ನು ಕೂಡಿಟ್ಟುಕೊಳ್ಳುವ ಲೋಭಿಯ ನಡತೆಯು ಅಸಹ್ಯಕರವಾಗಿರುವುದು ನಮ್ಮ ದೇಶದಲ್ಲಿ ಹಣವಂತರು ಎಷ್ಟೋ ಮಂದಿಯಿದ್ದರೂ ಅವರು ಅದನ್ನು ಭೂಮಿಯಲ್ಲಿ ಹೂಳಿಟ್ಟುಕೊಂಡಿರುವಂತೆ ನಡೆಯುತ್ತಿರುವದರಿಂದ ಬಡತನವು ಹೆಚ್ಚುವದು ನಮಗೆ ಯಾವ ಪದಾರ್ಥವು ಬೇಕಾಗಿದ್ದರೂ ವಿದೇಶೀಯರ ಮೂಲಧನದಿಂದ ಹುಟ್ಟಿದ ವಸ್ತುಗಳಿಗೇ ಬಾಯಿತೆರೆದುಕೊಂಡಿರತಕ್ಕ ದುರ್ಗತಿಯು ಬಂದೊದಗಿದೆ ಅದಿರಲಿ ಬೈಬಲ್‌ನಲ್ಲಿ ಹೇಳಿರುವ ಮಾತು ಎಷ್ಟು ನಿಜ ನೋಡಿದಿರಾ !

ಕೃ—ಅದೇನು ಸ್ವಾಮಿ, ಹೇಳಿ ಕೇಳೋಣ.

ರಾ—ಧನದಿಂದ ಅನೇಕ ಅನ್ಯಾಯಗಳು ನಡೆಯುತ್ತವೆ ನಿಜವೇ, ಆದರೂ ಅನ್ಯಾಯಕ್ಕೆ ಹೇತುವಾಗಿರುವ ಈ ಧನವನ್ನು ನಾವು ಸ್ನೇಹಿತನನ್ನಾಗಿ ಮಾಡಿಕೊಳ್ಳಬೇಕಂತೆ.

ಕೃ—ಹಾಗಂದರೇನು ? ಅನ್ಯಾಯಕ್ಕೂ ನಮಗೂ ಸ್ನೇಹವಿರಬಾರದೇ ?

ರಾ—ಹೌದು ಉಚಿತವು ! ಯಾವದು ಅನರ್ಥಕಾರಿಯೋ ಅದನ್ನೇ ನಾವು ಪ್ರಯೋಜನಕ್ಕೆ ಬರುವಂತೆ ಮಾಡಿಕೊಳ್ಳಬೇಕು ವಿಷಕ್ಕಿಂತ ಅನರ್ಥಕಾರಿಯು ಯಾವದುಂಟು ? ಆದರೂ ಅದನ್ನೇ ಔಷಧಕ್ಕೆ ಉಪಯೋಗಿಸಿಕೊಳ್ಳುವದಿಲ್ಲವೇ ? ಹಾಗೆಯೇ ಹಣವನ್ನೂ ಬಳಸಬೇಕು. ಈ ಭಾಗದಲ್ಲಿ ಹಣವಂತರು ವಿಶೇಷವಾಗಿ ಎಚ್ಚರಿಕೆಯಿಂದಿರಬೇಕು ಇವರು ನೇರ ಉಗ್ರಾಣಿಕರಾಗಿದ್ದಾರೆ ಬ್ರಿಸ್ಟಲ್ ಎಂಬ ಮಹಾ ಪಟ್ಟಣದಲ್ಲಿ ಜೀವಿಸಿದ ಒಬ್ಬ ಸಾಹುಕಾರನ ಚರಿತ್ರೆಯು ನಮಗೆ ಒಳ್ಳೆ ಬುದ್ಧಿವಾದವನ್ನು ತಿಳಿಸುವದಾಗಿದೆ ಆತನು ಪತ್ನಿಯ ಸಮೇತ ಒಂದು ದಯಾಖಾನೆಯ ಕಾರ್ಖಾನೆಯನ್ನಿಡುವದಕ್ಕಾರಂಭ ಮಾಡುವಾಗ ಆ ಸ್ತ್ರೀಯು—ಭಗವಂತನು ನಮಗೆ ಈ ಕಾರ್ಯದಲ್ಲಿ ಸಫಲತೆಯನ್ನು ಕೊಟ್ಟರೆ ನಾವು ಬಡವರನ್ನು ಮರೆಯುವದಿಲ್ಲ ಎಂದು ಹರಕೆ ಕಟ್ಟಿಕೊಂಡಳು ಅದೇ ಪ್ರಕಾರ ದೇವರು ಅವರಿಗೆ ವಿಸ್ತಾರವಾದ ಐಶ್ವರ್ಯವನ್ನು ದಯಪಾಲಿಸಿದನು ಅವರು ಬಡವರಿಗಾಗಿ ಅನೇಕ ಉಪಕಾರಗಳನ್ನು ಮಾಡಿದರು. ಈಗಲೂ ಕೂಡ ಸನ್‌ಲೈಟ್ ಎಂಬ ಸೋಪನ್ನು ತಯಾರುಮಾಡುವ ಲೀವರ್ ಬ್ರದರ್ಸ್ ಎಂಬ ಧನಿಕರೂ ಮಹಾ ಪರೋಪಕಾರಿಗಳಾಗಿದ್ದಾರೆ ತಮ್ಮ ಕಾರ್ಖಾನೆಯಲ್ಲಿ ಕೆಲಸ ಮಾಡುವ ಸಾವಿರಾರು ಮಂದಿಗೆ ಒಂದು ಊರನ್ನೇ ಕಟ್ಟಿಸಿಕೊಟ್ಟಿದ್ದಾರೆ. ಅವರ ಮಕ್ಕಳಿಗೆ ಪಾಠಶಾಲೆಗಳನ್ನು ಮಾಡಿಕೊಟ್ಟಿದ್ದಾರೆ ವಿನೋದಾರ್ಥವಾಗಿ ಬೇಕಾದ ಸಕಲ ಸಾಮಗ್ರಿಗಳನ್ನೂ ಕಲ್ಪಿಸಿಕೊಟ್ಟಿದ್ದಾರೆ, ಇಂಥ ಪರೋಪಕಾರದಲ್ಲೇ ಮನಸ್ಸಿಟ್ಟು ಧನವನ್ನು ವ್ಯಯಮಾಡತಕ್ಕವರು ಸಾರ್ಥಕವನ್ನು ಪಡೆಯುತ್ತಾರೆ ನಮ್ಮ ಈ ದೇಶದಲ್ಲಿಯೂ ಇಂಥ ಹಣವಂತರು ಹೆಚ್ಚಬೇಕು.

ಕೃ—ಆಗ ನನ್ನಂಥ ಬಡವರು ನಿರ್ನಾಮವಾಗುವರಲ್ಲವೇ ? ಅಂಥ ಕಾಲವು ಬಂದೀತೇ ? ನೀವು ಹೇಳುವದೆಲ್ಲಾ ಆಕಾಶಪುರಾಣವೇ ಬರೀ ಭ್ರಮೆಯೋ.

ರಾ—ಕೃಷ್ಣಪ್ಪನವರೇ, ನೀವು ಹಾಗೆ ಹುಚ್ಚುಮಾತ್ನನ್ನು ನುಡಿಬೇಡಿ. ಮನುಷ್ಯನಿಗೆ ಅಸಾಧ್ಯವೆಂದು ತೋರುವುದು ದೇವರಿಗೆ ಅಸಾಧ್ಯವಲ್ಲ ಎಂದು ಯೇಸುಕ್ರಿಸ್ತನು ಹೇಳಿದ್ದು ನಿಜವೆಂದು ದೃಢವಾಗಿ ತಿಳಿದಿದ್ದೇನೆ



CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

95-12

ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ (ಕಾಲರಾ), ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಆಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯಲ್ಲಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕ್ರಯಂದ ಸ್ವಲ್ಪವೂ ಮುಖ್ಯದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ನವರಾತ್ರಿ ಉತ್ಸವಗಳು

ರಾಜಧಾನಿಯಲ್ಲಿ ಈ ವರುಷದ ನವರಾತ್ರಿ ಉತ್ಸವಗಳು ಸೋಮವಾರದಿಂದ ಪ್ರಾರಂಭವಾದವು ಈ ಉತ್ಸವಗಳ ವಿವರಣೆಯನ್ನು ಮುಂದೆ ಬರೆಯಲಾಗುವುದು ಇನ್ನೊಂದು ಕಡೆ ಪ್ರಕಟಿಸಿದೇವೆ ... ಮಹಾರಾಜರವರು ನೆನ್ನೆ ಬೆಳಗ್ಗೆ ಜಗನ್ಮೋಹನ ಅರಮನೆಯಲ್ಲಿ ದಿವ್ಯಾಭರಣ ಭೂಷಿತರಾಗಿ ಶಾಸ್ತ್ರೋಕ್ತ ಕಾರ್ಯಗಳನ್ನೆಲ್ಲಾ ನೆರವೇರಿಸಿ ಸುಮಾರು ೧೦ ಗಂಟೆಗೆ ಸಿಂಹಾಸನವನ್ನು ಅಲಂಕರಿಸಿದರು ರಾಜಬಂಧುಗಳು ದಿವಾನರು, ಕೌನ್ಸಿಲ್ ಮೆಂಬರುಗಳು, ದೊಡ್ಡ ದೊಡ್ಡ ಅಧಿಕಾರಿಗಳು ದೊಡ್ಡಮನುಷ್ಯರು, ಮೊದಲಾದವರೆಲ್ಲಾ ದರ್ಬಾರಿನಲ್ಲಿ ಹಾಜರಾಗಿದ್ದರು ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು ಸೈನಿಕರ ಕವಾತುಗಳು ನಡೆದವು ದರ್ಬಾರಿಗಳು ಮಹಾರಾಜರವರಿಗೆ ಮುಜರೆಮಾಡಿ ನಜರುಗಳನ್ನೊಪ್ಪಿಸಿದರು. ದರ್ಬಾರಿನ ಕಾರ್ಯಗಳೆಲ್ಲಾ ಹಳೆ ಪ್ರಕಾರ ವಿಶೇಷ ಸಂಭ್ರಮಯುಕ್ತವಾಗಿ ನೆರವೇರಿದವು ೧೧ ಗಂಟೆಗೆ ಮಹಾರಾಜರವರು ಸಿಂಹಾಸನದಿಂದ ಇಳಿದು ದರ್ಬಾರನ್ನು ಮುಕ್ತಾಯಮಾಡಿದರು ಸಾಯಂಕಾಲ ೬ ಗಂಟೆ ಮೇಲೆ ಪದ್ಧತಿಯ ಪ್ರಕಾರ ಶ್ರೀಮನ್ಮಹಾರಾಜರವರು ಸಿಂಹಾಸನವನ್ನು ಅಲಂಕರಿಸಿ ದರ್ಬಾರ್ ನಡಿಸಿ, ಜಟ್ಟಿಗಳ ಕುಸ್ತಿ, ಗರಡಿಯವರ ಕಸರತ್ತು ಮುಂತಾದ ಸಾಹಸ ಚಮತ್ಕಾರ ಕಾರ್ಯಗಳನ್ನು ಅವಲೋಕಿಸಿದರು ಪಟ್ಟದಾನೆ ಕುದುರೆಗಳು ಬಂದ ಮೇಲೆ ಬಾಣಬಿರುಸುಗಳು ಹಾರಿಸಲ್ಪಟ್ಟವು

ಇವತ್ತಿನಿಂದ ಬರುವ ಸೋಮವಾರದ ವರೆಗೆ ದಿನವೂ ಸಾಯಂಕಾಲದಲ್ಲಿ ದರ್ಬಾರೂ ಕಾಳಗಾದಿಗಳೂ ಬಾಣಬಿರುಸುಗಳೂ ನಡೆಯುವವು ಮುಂದಿನ ಬುಧವಾರ ಬೆಳಗ್ಗೆ ಆಯುಧ ಗಳ ... ಪೂಜೆ ಸಾಯಂಕಾಲ ಇಂಗ್ಲಿಷ್ ದರ್ಬಾರೂ ತಾ ೨೬ ನೆ ಗುರುವಾರ ವಿಜಯದಶಮಿ ... ಆಗತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿದೆ

ಈ ಉತ್ಸವಗಳಿಗಾಗಿ ಇತರ ಕಡೆಗಳಿಂದ ಸ್ವಲ್ಪಮಟ್ಟಿಗೆ ಜನರು ಬಂದಿರುತ್ತಾರೆ ಇನ್ನು ಮುಂದೆ ಇನ್ನೂ ಬರುವವರೆನ್ನುವುದಕ್ಕೆ ಸಂಶಯವಿಲ್ಲ

ಒಳದೇಶದ ವೃತ್ತಾಂತಗಳು.

ಶ್ರೀಮನ್ ಯುವರಾಜರವರು ನೆನ್ನೆ ಶನಿವಾರ ಬೆಳಗ್ಗೆ ... ರಿಂದ ರಾಜಧಾನಿಗೆ ದಯಮಾಡಿದಾರೆ

❖❖❖❖

ಕೋಲಾರದ ಚಿನ್ನದಗಣಿ ಸ್ಯಾನಿಟರಿ ಬೋರ್ಡಿಗೆ ಒಳಪಟ್ಟ ಪ್ರದೇಶದಲ್ಲಿ ಸರ್ಕಾರದವರು ಒಲಾತ್ಕಾರ ಮಕ್ಕಳಿಗೆ ಸಿಡುಬು ಹಾಕಿಸುವ ಕಾನೂನನ್ನು ಜಾರಿಗೆ ತಂದಿದಾರೆ.

❖❖❖❖

ಕೋಲಾರ್ ಗಣಿ ಚಿನ್ನವನ್ನು ೬,೦೦೦ ರೂಪಾಯಿ ಬಾಬತ್ತು ಕಳವು ಮಾಡಿಕೊಂಡು ಹೋಗಿದ್ದ ನಾಲ್ಕು ಜನರನ್ನು ಪೋಲೀಸಿನವರು ವೇಲೂರಿನಿಂದ ಹಿಡಿದು ತಂದಿದಾರ

❖❖❖❖

ಮೈಸೂರು ದೊಡ್ಡ ಪೇಟೆಯಲ್ಲಿರುವ ನ್ಯಾಷನಲ್ ಕಂಪನಿ ... ಸ್ವದೇಶಿ ... ಗಳ ವಿಷಯವಾದ ನೋಟಿಸನ್ನು ಈ ಸಂಚಿಕೆಯ ... ನಮ್ಮ ಚಂದಾದಾರರಿಗೆ ಕಳುಹಿಸಿರುತ್ತೇವೆ

❖❖❖❖

ಮೈಸೂರು ತಾಲ್ಲೂಕು ಸಿದ್ದರಾಮನ ಹುಂಡಿಯಲ್ಲಿ ... ಸೋಮವಾರ ಹಗಲು ಹೊತ್ತಿನಲ್ಲೇ ಯಾರೋ ಕಳೆದ ... ಬೋಟ್ಟ ಮುಖಂಡನನ್ನು ಖೂನಿ ಮಾಡಿಬಿಟ್ಟರು

❖❖❖❖

ರಾಜಧಾನಿಯಲ್ಲಿ ಅರಮನೆಯನ್ನು ಕಟ್ಟಿಸುತ್ತಿರುವ ಮಿ॥ ... ವಲು ನಾಯ್ಡು ಯವರ ಕುಮಾರನು ವಿದ್ಯೆ ಕಲಿತು ಬರುವದಕ್ಕೆ ವಿಲಾಯತಿಗೆ ಪ್ರಯಾಣ ಮಾಡುವನೆಂದು ಕೇಳುತ್ತೇವೆ

ಬೆಂಗಳೂರು ಪೂರ್ಣಯ್ಯನವರ ಸತ್ರದ ಬಳಿ ಕೊಟ್ಟಗೆಯಲ್ಲಿ ... ಸಿ ನರಸಿಂಹಯ್ಯಂಗಾರ್ರು ಮನೆಗೆ ಕಳೆದ ಬುಧವಾರ ರಾತ್ರಿ ... ಳ್ಳರು ಬಿದ್ದು ೬೦೦ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿದರು

*****

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಮೂಲ ... ಕ್ಕೆ ಶೇಕಡಾ ವರುಷಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿ ಕೊ... ವ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಂಡು ಅಪ್ಪಣೆ ... ಟ್ಟಿದ್ದಾರೆ

*****

ಬ್ರಿಟಿಷ್ ರೆಸಿಡೆಂಟರಾದ ಮಿ॥ ಫ್ರೇಸರ್‌ಯವರು ಪತ್ನಿ ಪರಿವಾರ ... ತ ನೀಲಗಿರಿಯಿಂದ ಮೊನ್ನೆ ಸೋಮವಾರ ಬೆಳಗ್ಗೆ ಬೆಂಗಳೂರಿಗೆ ... ಮಾಡಿದರು ನವರಾತ್ರಿ ಉತ್ಸವಕ್ಕಾಗಿ ಮುಂದಿನ ವಾರ ರಾಜಧಾ... ನಿ ಒರುವವರಾಗಿದ್ದಾರೆ

*****

ಕಳೆದ ಬುಧವಾರ ಮದ್ರಾಸ್ಸು ಕಡೂರು ಡಿಸ್ಟ್ರಿಕ್ಟ್ ಯುನೇ... ಹಳ್ಳಿ ಸ್ಕೂಲ್ ಬಾಲಕ ಬಾಲಕಿಯರಿಗೆ ಬಹುಮಾನಗಳನ್ನು ಕೊ... ರು ವರ್ಣಿಸಿದರವರು ಅಗ್ರಾಸನವನ್ನು ವಹಿಸಿದ್ದರು ಈ ಸಂತೋ... ಷತ್ಸವವು ಬ... ಪಿತರಳೆಯಿಂದ ನಡೆಯಿತೆಂದು ಕೇಳುತ್ತೇವೆ

*****

... ನಿಂ... ಸರ್ಜನ್ ರಾದ ಲೆಫ್ಟಿನೆಂಟ್ ಕರ್ನಲ್ ಸ್ಮಿತ್‌ಯವರು ... ರಜೆ ಪಡೆದು ಸೀಮೆಗೆ ಹೋಗ... ಹೊರಟಿದ್ದಾರೆ ಅವರ ಬದಲಿಗೆ ಇ... ಬೂರು ... ನಲ್ಲಿ ಡಾಕ್ಟರ್ ಪಿ ಎಸ್ ಅಚ್ಯುತರಾಯರು ... ಯಲ್ ಸರ್ಜನ್ ಕೆಲಸವನ್ನು ನೋಡುವರೆಂದು ಕೇಳುತ್ತೇವೆ

*****

ಚಿತ್ರದುರ್ಗದ ಡಿಸ್ಟ್ರಿಕ್ಟು ದಾವಣಗೆರೆಯಲ್ಲಿ ... ದಿನ ಚಾರ್ಲಿ" ... ಎಂಬ ಕನ್ನಡ ವಾರ ಪತ್ರಿಕೆಯು ಹೊಸದಾಗಿ ಪ್ರಕಟವಾಗಲಾರಂ... ಭವಾಗಿದೆ ನಮ್ಮಲ್ಲಿಗೆ ಮೊದಲನೆಯ ಸಂಚಿಕೆಯು ಬಂದಿರುವುದು ... ಈ ಪತ್ರಿಕೆಯು ಏಳಿಗೆಯನ್ನು ಹೊಂದಿ ಚಿರಕಾಲ ಬಾಳಲೆಂದು ಹಾರೈ... ಸುತ್ತೇವೆ

*****

ಸಿರಸಂಗಿದೇಸಾಯಿ ಲಿಂಗಪ್ಪ ದಯಪ್ಪರಿಂ ಹೊಬ್ಬ ಲಿಂಗಾಯತ ... ನೀಯ... ಕಾಲೇಜುವದಕ್ಕಾಗಿ ಮೈಸೂರಿನ ಲಿಂಗಾಯತರು ವ್ಯಸ... ಪಟ್ಟ ... ಅವರ ಪತ್ನಿಯವರಿಗೆ ತಮ್ಮ ಸಂತಾಪವನ್ನು ತಿಳಿಯ... ಪಡಿಸಿದರು ... ಆ ದೇಸಾಯಿಯವರು ನರುಷಕ್ಕೆ ೫೦ ಸಾವಿರ ರೂಪಾಯಿ ... ಟ್ಟುವಳಿಯ ... ತಮ್ಮ ಆಸ್ತಿಯನ್ನು ದಾನಾರ್ಹದ ಲಿಂಗ... ತ ವ... ಸ ... ಯವರಿಗೆ ವಹಿಸಿ ಬಿಟ್ಟಿದ್ದಾರೆ

*****

ಸಿಂಲಾ ಪಟ್ಟಣದಲ್ಲಿ ಈ ತಿಂಗಳ ೨೫ ನೆ ತಾರೀಖಿನಿಂದ ನಾಲ್ಕು ... ದಗಳ ... ಸಹಕಾರ ಸಂಘಗಳ ವಿಷಯವನ್ನು ಚರ್ಚೆ... ಮಾಡುವುದಕ್ಕೆ ಒಂದು ದೇಶ ... ಕಾ ... ನಾಗುವುದು ಹಿಂದೂಸ್ಥಾನದ ... ಸ್ಥಾನಗಳ ... ಆ ಇಲಾಖೆಯ ಮುಖ್ಯಸ್ಥರು ಹೋಗಿ ಅಲ್ಲಿ ... ದರು ... ಮೈಸೂರು ಸರ್ಕಾರದವರು ಈ ಸಂಸ್ಥಾನದ ಪರಸ್ಪರ ... ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮಿ॥ ಶಾಮರಾಯರನ್ನು ಅಲ್ಲಿಗೆ ... ಕಳುಹಿಸಿದ್ದಾರೆ

*****

ಕಳೆದ ವಾರ ... ಜಯ್ಸಿ ಪ್ರೊಫೆಸರ್ ವೀರ್‍ರೈಯ್ಯನೆಂಬವನಿಗೆ ಕ... ತ್ರದ ದೆಸ್ತ್ರ ... ತ್ಯನ ವರ ಸಕ್ಕರೆಯಲ್ಲಿ ಮಿಶ್ರಮಾಡಿ ... ಟ್ಟು ... ಡವನ್ನು ಪ್ರೊಫೆಸರಿಯು ಸರ್... ಕರಣ್ಣನ ... ಮಕ್ಕಳಿಗೆ ಕೊಟ್ಟ ಹಾಗೆ, ಅವರು ತಿಂದ ಸ್ವಲ್ಪ ... ತ್ತಿನಲ್ಲಿ ... ವಾಂತಿಮಾಡಿಕೊಂಡು ಸಪ್ತ ದಾಗೂ ಆಸ್ಪತ್ರೆ... ಲ್ಲಿ ... ಚಿಕಿತ್ಸೆ ಮಾಡಿಸಲಾಗಿದ್ದಲ್ಲದೆ ಪೋಲೀಸಿನವರು ಆ ಸಿಹಿ... ಯವರ ... ಗಳನ್ನು ಆಧನಮಾಡಿ ಬಗ್ಗೆ ಕಳುಹಿಸಿ, ಅವರಿಬ್ಬರ... ನ್ನು ಹಿಂದು ... ಸಲ್ಲಿ ಹಾಕಿಕೊಂಡಿರುವ ಹಾಗೆ ಕೇಳುತ್ತೇವೆ

*****

ಚನ್ನರಾಯಪಟ್ಟಣದ ತಾಲ್ಲೂಕು ಹೊಸ ಹಳ್ಳಿಯ ಹತ್ತಿರ ... ನ್ನ ... ಳೆಯಲ್ಲಿ ಒಂದು ದೋಣಿಗೆ ನೀರು ತುಂಬಿ ೯ ಜನರು ಮು... ಳುಗಿ ಹೋದರೆಂದು ಕಳೆದ ವಾರ ಒಬ್ಬ ಬಾತ್ಮಿದಾರರಿಂದ ಬರೆದು ಬಂ... ದ್ದನ್ನು ಪ್ರಕಟಿಸಿದ್ದೆವಷ್ಟೆ ಈ ವರ್ತಮಾನವು ನಿಜವಲ್ಲವೆಂದು ಇತರ ... ಬಾತ್ಮಿದಾರರಿಂದಲೂ ಸರ್ಕಾರದಿಯಾಗಿಯೂ ಈಚೆಗೆ ತಿಳಿದು ಬಂದಿದೆ ... ಮೊದಲು ಪ್ರಕಟಿಸಿರುವ ಚನ್ನರಾಯಪಟ್ಟಣದ ತಾಲ್ಲೂಕ್... ವರ್ತಮಾನವು ... ಬಾತ್ಮಿದಾರರು ಅದು ನಡೆಯಲಿಲ್ಲವೆಂದು ... ಸಿದರು

*****

... ಧರ್ಮಸ್ಥಳ ತಾಲ್ಲೂಕು ಆಗುಂಬೆ ಮಾಗಣೆ ಮುಂದಗಿನ ಸರುವ... ದ ಬಳಿಯಲ್ಲಿ ಒಂದು ಭಯಂಕರವಾದ ಹುಲಿಯು ಸೇರಿಕೊಂಡು, ...—೧೫ ದಿನಗಳಿಂದಲೂ ರೈತರ ಹಲವು ಗೋಕಾಯಿಗಳನ್ನು ಹಿಡಿ... ದು ರಕ್ತ ಹೀರುತ್ತಾ ಬಹಳ ನಷ್ಟಪಡಿಸುತ್ತಿದೆ ಎಂತಲೂ ಜನರೆಲ್ಲಾ ... ಸನಪಡುತ್ತಾ ರಾತ್ರಿಂತಲೂ ಒಂದೇ ದಿನ ಐದು ದನಗಳನ್ನು ಕಡಿದು ... ಕೊಂದು ಹಾಕಿದೆ ಎಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ ಸ... ರ್ಕಾರದವರು ತಕ್ಕ ಪ್ರೋತ್ಸಾಹ ಕೊಟ್ಟು ಈ ದುಷ್ಟ ಮೃಗದ ಹಾವಳಿಯ... ನ್ನು ಶಿಕಾರಿದಾರರ ಮೂಲಕ ತಪ್ಪಿಸುವುದಕ್ಕೆ ಬೇಗನೆ ಏರ್ಪಾಡು ... ಮಾಡಿಯಾರೆಂದು ನಿರೀಕ್ಷಿಸುತ್ತೇವೆ

*****

ಚಿಕ್ಕಬಳ್ಳಾಪುರದ ಸಮ್ಮಿತಿ ಕಳವರ ಗ್ರಾಮದಲ್ಲಿ ೨೦ ವರುಷದ ... ಕೃಷ್ಣಯ್ಯನೆಂಬುವನು ಕಳೆದ ಬುಧವಾರ ಬೆಳಗ್ಗೆ ಒಕ್ಕಣೆಗಳನ್ನು ... ಹುಡಿಯ ಬೇಕೆಂದು ಮನೆಯಲ್ಲಿದ್ದ ಕರೀಮದ್ದಿನ ಡಬ್ಬಿಯನ್ನು ... ಕೈನಲ್ಲಿ ಆದು ಒಡೆದು ಒಳಳ ಶಬ್ದದಿಂದ ಹಾರಿ ಸುಟ್ಟದ್ದರಿಂದ ... ವನ ಎದೆಗೈ ಕುತ್ತಿಗೆ ಮುಖ ಬೆರಳುಗಳು ಚೂರಾದವು ಬಲಗೈ ಮೂರು ಬೆರಳುಗಳು ಪೂರ್ತಿ ತಗಲಿ ಆಪಾಯವಾಯಿತು ಕೂಡಲೆ ಅವನ... ನ್ನು ಚಿಕ್ಕಬಳ್ಳಾಪುರದ ಆಸ್ಪತ್ರೆಗೆ ಸಾಗಿಸಿಕೊಂಡುಹೋದರು, ಅಲ್ಲಿ ... ಸ್ವಲ್ಪ ಚಿಕಿತ್ಸೆ ಮಾಡಿ, ಡಾಕ್ಟರು ಅವನನ್ನು ಬೆಂಗಳೂರು ವಿಕ್ಟೋ... ರಿಯಾ ಆಸ್ಪತ್ರೆಗೆ ಕರೆದುಕೊಂಡುಹೋಗುವಂತೆ ಹೇಳಿದರು ಆದರೆ ... ದಿಯಲ್ಲಿ ೮—೯ ಮೈಲಿ ಹೋಗುವಷ್ಟರಲ್ಲೇ ಗಾಯಪಟ್ಟವನಿಗೆ ... ಣ ಹೋಯಿತಾದ್ದರಿಂದ ಶವವನ್ನು ಕ್ರಮಪ್ರಕಾರ ಮಾರನೇ ದಿನ ... ಣೆ ಮಾಡಿದರೆಂದು ತಿಳಿದುಬಂದಿದೆ.

ಬೆಂಗಳೂರು ದೊಡ್ಡ ಪೇಟೆಯಲ್ಲಿ ಮೊನ್ನೆ ಶನಿವಾರ ಸಾಯಂಕಾಲ ಒಂದು ಕೋತಿಯು ಜನರ ಗಲಾಟೆಗೆ ಹೆದರಿ ವಿದ್ಯುಚ್ಛಕ್ತಿ ದೀಪದ ಕಂಬದ ಮೇಲಕ್ಕೆ ಹತ್ತಿ ಹೋಗಿ ಅದರ ತಂತಿಯನ್ನು ಹಿಡಿದುಕೊಂಡಿತು ತಂತಿಯಲ್ಲಿದ್ದ ವಿದ್ಯುಚ್ಛಕ್ತಿಯು ದೆಸೆಯಿಂದ ಉರಿಯಿದ್ದು ಕೋತಿಯ ಕೈಗಳೆರಡೂ ಮೈಮೇಲಿನ ರೋಮಗಳೂ ಸುಟ್ಟು ಸುಮಾರು ೨೫ ಅಡಿ ಮೇಲಿನಿಂದ ನೆಲದ ಮೇಲೆ ಬಿದ್ದು ನಾಲಿಗೆ ಕಚ್ಚಿ ಕಾಲುಗಂಟೆ ಸರಳಿ ಪ್ರಾಣ ಬಿಟ್ಟಿತು ನೀರು ಮುಂತಾದ್ದು ಹಾಕಿ ಉಪಚರಿಸಿದರೂ ಪ್ರಯೋಜನವಾಗಲಿಲ್ಲ. ಸಾವಿರಾರು ಜನರು ಇದನ್ನು ನೋಡಿ ವ್ಯಸನಪಟ್ಟರು ನಂತರ ಕೆಲವರು ಸೇರಿ ಅಂಗಡಿಗಳಲ್ಲಿ ಕಾಸು ಕೂಡಿಸಿ ಒಬ್ಬ ದಾಸಯ್ಯನಿಗೆ ಕೊಟ್ಟು ಅವನಿಂದ ಮರಾಗುಪ್ರಕಾರ ಶವವನ್ನು ದಹನ ಮಾಡಿಸಿದರು ಇನ್ನು ಮುಂದೆ ಈ ದೀಪಗಳ ತಂತಿ ಮುಟ್ಟಿದರೆ ಪ್ರಾಣಹೋಗುವುದು ಖಂಡಿತವೆಂದು ಸಕಲರೂ ಎಚ್ಚರಿಕೆಯಾಗಿರಬೇಕು ಮ್ಯುನಿಸಿಪಾಲಿಟಿಯವರು ಅಲ್ಲಿರುವ ಕೋತಿಗಳನ್ನು ... ಬ ... ಸಿ ... ಸಾಗಿಸಿದರೆ ಅನುಕೂಲ ... ವಾಗುವುದೆಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ

*****

ದಾವಣಗೆರೆಯಲ್ಲಿ ವಾಂತಿಭೇದಿ ಉಪದ್ರವು ನೀಗಿ ಸಂಪ್ರದಾಯ... ನ್ನು ... ದೇವರ ಪಕ್ಷಿ ಯನ್ನು ಪ್ರಕಾಶಪಡಿಸುವುದಕ್ಕಾಗಿ ಅಲ್ಲಿನ ವೀರ... ಶೈವ ... ಮುಖಂಡರ ಪ್ರಕೃತಿ ದೊಡ್ಡ ಪೇಟೆಯ ಮಿ॥ ಜಲ್ಲಿಗಟ್ಟ ಭರಮಪ್ಪನವರು, ಎನಿಕೊಂಡಿ ಜಂಬಣ್ಣನವರು, ಕೋಳಿಯಪ್ಪನವರ ರುದ್ರಪ್ಪನವರು ... ತೂರು ಬಸಲಿಂಗಪ್ಪನವರು, ಜೇತೂರು ತಿಪ್ಪಣ್ಣನವರು, ಇವರೆಲ್ಲಾ ಸೇರಿ ದಾವಣಗೆರೆ ವೀರಶೈವ ಮಠದವರಿಗೂ ಇತರ ಮಠದ ಎಲ್ಲಾ ಕೋಟಿ ... ನಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಕಳೆದ ತಾ ೧೬ನೇ ಶುಕ್ರವಾರ ಸುಖಭೋಜನ ಮಾಡಿಸಿದರು ಈ ಮಹಾಸಮಾರಾಧನೆಗೆ ದಾವಣಗೆರೆ ವಾಸಿಗಳಲ್ಲದೆ ಆಸುಪಾಸು ಇರುವ ಗ್ರಾಮದ ಜನಗಳು ಸಹ ಬಂದಿದ್ದರು. ಸುಮಾರು ಹತ್ತು ಸಾವಿರ ಜನಗಳಿಗೇನೂ ಕಡಿಮೆ ಇಲ್ಲದೆ ಊಟವು ತೃಪ್ತಿಯಾಯಿತು ಈ ಕಷ್ಟಕಾಲದಲ್ಲಿ ಮೇಲ್ಕಂಡ ಮಹನೀಯರು ಮುಂದಾಳುಗಳಾಗಿ ಈ ಬಡ ಜನಗಳಿಗೆ ಊಟ ಮಾಡಿಸಿ, ಒಳ್ಳೆ ಕೀರ್ತಿ ಪಡೆದದ್ದಲ್ಲದೆ, ಒಂದೆ ಯಾವಾಗಲೂ ಹೀಗೆ ಮಾಡಿಯಲ್ಲವೆಂದು ಜನಗಳು ಕೊಂಡಾಡುತ್ತಾ ಹೋದರು ಎಂದು ನಮ್ಮ ಬಾತ್ಮಿದಾರರು ತಿಳಿಸುತ್ತಾರೆ

*****

ಒಕ್ಕಲಿಗರ ಸಂಘದ ಸೆಕ್ರಟರಿ ಮಿ॥ ಕೆ. ಎಚ್. ರಾಮಯ್ಯ ಬಿ. ಎ. ಯವರು ಕಳೆದ ಶನಿವಾರ ತಾ ... ಬೆಂಗಳೂರಿಂದ ಗುಬ್ಬಿಗೆ ಹೋಗಿ ಅದೇ ಸಾಯಂಕಾಲ ಉಪನ್ಯಾಸ ಮಾಡಿದರು ಇವರು ೧೬ನೇ ತಾರೀಖು ... ವಾಗಿ ... ಶಿರಾ ... ಗೆ ಹೋಗಿ, ಶಿರಾ ಮತ್ತು ಕಳ್ಳಂಬೆಳ್ಳಗಳಲ್ಲಿ ಉಪನ್ಯಾಸಗಳನ್ನು ಮಾಡಿ ... ತುಮಕೂರಿಗೆ ೧೯ನೇ ತಾ ವಾಪಸ್ ಬಂದು ಅದೇ ದಿನ ಸಾಯಂಕಾಲ ... ಸಿನಲ್ಲಿ ಉಪನ್ಯಾಸ ಮಾಡಿದರು ಇವರು ಉಪನ್ಯಾಸ ಮಾಡುವುದಕ್ಕಾಗಿ ೧೯ನೇ ತಾ ತಿಪ್ಟೂರಿಗೂ ೨೧ನೇ ತಾ ಹಾಸನ, ೨೩ನೇ ತಾ ಸಕಲೇಶಪುರ ೨೪ನೇ ತಾ ಹೊನ್ನಾವರ ... ಹಾಸನ, ೨೬ನೇ ತಾ ಅರಕಲಗೂಡು, ೨೭ನೇ ತಾ ಹೊಳೇನರಸೀಪುರ, ೨೮ನೇ ತಾ ಚನ್ನರಾಯಪಟ್ಟಣ, ೨೯ನೇ ತಾ ಹಿರಿಸಾವೆ, ೩೦ನೇ ತಾ ನಾಗಮಂಗಲ ಈ ರೀತಿ ಸಂಚಾರ ಮಾಡುತ್ತಾರೆ ಇವರು ತಾ ೫, ೬ ಮತ್ತು ೭ರಲ್ಲಿ ಮೈಸೂರಿನಲ್ಲಿ ಉಪನ್ಯಾಸ ಮಾಡಿ ೮ಕ್ಕೆ ಫ್ರೆಂಚ್ ರಾಕ್ಸಿಗೆ ಹೋಗಿ, ತಿಂಗಳ ಬೆಂಗಳೂರನ್ನು ಸೇರುವರು. ಇವರು ಹೋಗತಕ್ಕ ಸ್ಥಳಗಳನ್ನು ಮುಂದಾಗಿ ತಿಳಿಸಿರುವುದರಿಂದ ತಾಲ್ಲೂಕು ಕಸಬಾ ಮತ್ತು ಹೋಬಳಿಗಳಲ್ಲಿರುವ ಒಕ್ಕಲಿಗ ಮಹಾಶಯರೆಲ್ಲರೂ ಆಯಾ ತಾರೀಖುಗಳಿಗೆ ಸರಿಯಾಗಿ ಆಯಾ ಸ್ಥಳಗಳಿಗೆ ಬಂದು ಮಿ॥ ರಾಮಯ್ಯನವರಿಂದ ಸಂಘದ ವಿಷಯಗಳನ್ನು ತಿಳಿಯಲು ಸುಲಭವಾಯಿತೆಂದು ತಿಳಿಯುತ್ತೇವೆ

ಬಹುಮಾನ ಪಡೆದ ವರ್ತಮಾನವು.

(೧) ಪ್ರತಿ ಮೀರುವರ ... "ಬಹುಮಾನದ ಮೇಲಾ..." ... ಜರದ ... ವನ್ನು ಪರಿಷ್ಕಾರ ... ತಿಳಿಸಿತು. (೨) ... ಬಾತ್ಮಿದಾರರು ವಾಸಿಸುವ ... ದ ಬಳಿಯ ... ಅಂತು ಕಷ್ಟ ... ವರ್ತಮಾನಕ್ಕೆ ಅರ್ಹತೆ. ... ಕಳುಹಿಸ ... ಹೆಚ್ಚಾಗಿ ... (೩) ಪ್ರತಿವಾರವು ನಮ್ಮ ... ಪ್ರತಿವಾರವೂ ... ಬಹುಮಾನ ಪಡೆದವರ ಹೆಸರನ್ನು ವಾರ ವಾರ ಪ್ರಕಟಿಸುವರು ( ) ಬಹುಮಾನ ... ವನ್ನು ಮನಿಯಾರ್ಡರ್ ಮೂಲಕ ರವಾನಿಸುವರು (೫) ಬಹುಮಾನದ ... ನಮ್ಮಲ್ಲಿಗೆ ಬರದು ಬರುವಂತ ಲೇಖನಗಳಲಾ ... ವೃತ್ತಾಂತ ಪತ್ರಿಕೆ ಕರಕರ ಸೊತ್ತಾಗಿ ಭಾವಿಸ್ಪಡುವವ ಒಂದೇ ತಿಂಗಳಲ್ಲಿ ಒಬ್ಬ ಲೇಖಕರಿಗೇ ಎರಡು ಸಾರಿ ಬಹುಮಾನ ಕೊಡಲಾಗುವುದು ।

[ಈ ಬಾತ್ಮಿ ಕಳುಹಿಸಿದ ಮಿ॥ ಕೆ ಪಿ ದೇವಪ್ಪ ಕೌಶಿಗೆ, ನಾಟೂರು,
ಮೇಗರವಳ್ಳಿ ಪೋಸ್ಟ್, ತೀರ್ಥಹಳ್ಳಿ ತಾಲ್ಲೂಕ್ಕು, ಇವರಿಗೆ
ಈ ವಾರದ ಬಹುಮಾನವನ್ನು ಕೊಟ್ಟಿದ್ದೇವೆ]

ಹೊಸಗಿರಿಯಲ್ಲಿ ಮೂರು ಹುಲಿಗಳನ್ನು ಕೊಂದದ್ದು

ಬಾಳೆ ಹಳ್ಳಿ ಗ್ರಾಮದ ಹೊಲಗಟ್ಟಿಯಲ್ಲಿ ಇರುವ ಬಂಡಬದ ಶಿದ್ದೈಯ ಗೌಡ) ಮನೆಗೆ ಎಲ್ಲಿಂದಲೋ ಒಂದು ಹುಲಿಯು ಬಂದು ಸೆಪ್ಟಂಬರ್ ತಾ ೯ನೇ ರಾತ್ರಿ ಕೊಟ್ಟಿಗೆಯೊಳಗಿನ ಗ್ಗಿ ಕಟ್ಟಿದ್ದ ಒಂದು ಆಕಳನ್ನು ಹಿಡಿಯುವಷ್ಟರಲ್ಲಿ ಆಳುಗಳು ಅಲ್ಲಿಗೇ ಇದನ್ನು ನೋಡಿದ ಕೂಡಲೆ ಆಕಳುಗಳು ದೊಡ್ಡದನಿ ಮಾಡಿಸಲು ಮನೆಯೊಳಗೆ ಮಲಗಿದ್ದ ಸದರಿ ಶಿದ್ದೈಯ್ಯಗೌಡರು ಎಚ್ಚತ್ತು ಗಾಬರಿಯಿಂದ ಬಂದು ನೋಡಲಾಗಿ ಹುಲಿಯು ಕಾಣಿಸಿತು ಕೂಡಲೆ ತಾವು ತೆಗೆದುಕೊಂಡು ಬಂದ ಕತ್ತಿಯಿಂದ ಒಂದು ಏಟುಕಡಿಯಲು ಓಡಿ ಹೋಗುವ ಕಾಲದಲ್ಲಿ ಮುಂದುಗಡೆ ಅಡ್ಡವಾಗಿ ಬಂದ ಒಬ್ಬ ಮನುಷ್ಯನ ಕೈ ಕಚ್ಚಲು ಆತ ಬೊಬ್ಬೆಯಿಟ್ಟ ಕೂಡಲೆ ಬೇರೆಯವರೆಲ್ಲ ಓಡಿ ಬರಲು ಹುಲಿಯು ಓಡಿಹೋಯಿತು ನಂತರ ಮಾರನೆಯ ದಿನ ತಾ ೧೦ರಲ್ಲಿ ಅದೇ ಊರ ಹುಡುಗರೆಲ್ಲಾ ದನಕಾಯುವದಕ್ಕೆ ಹೋದ ಕಾಲದಲ್ಲಿ ದನವಿನ ಹಿಂದಿನೊಳಕ್ಕೆ ಸದರಿ ಹುಲಿಯೂ ಇದರ ಎರಡು ಮರಿಗಳೂ ನುಗ್ಗಲು ಹುಡುಗರು ಬೊಬ್ಬೆಯಿಟ್ಟ ಕೂಡಲೆ ಆ ಎರಡು ಮರಿಗಳೂ ಚಿಕ್ಕವರಾದ ಇಬ್ಬರು ಹುಡುಗರನ್ನು ಗಿಬರಿ ಘಾಯಪಡಿಸಲು, ಹುಡುಗರ ಕೂಗಿನ ಶಬ್ದದಿಂದ ಓಡಿ ಹೋದವು ನಂತರ ಸದರಿ ಊರೆಲ್ಲಾ ಗುಲ್ಲಾಯಿತು ಊರವರೆಲ್ಲಾ ನಾಳೆ ದಿವಸ ಹುಲಿ ಶಿಕಾರಿಗೆ ಹೊರಡಬೇಕೆಂದು ಯೋಚಿಸಿಕೊಂಡಿದ್ದರು ಅದೇ ದಿವಸ ರಾತ್ರಿ ಸದರಿ ಶಿದ್ದೈಯ್ಯಗೌಡರಿಗೆ ಕೆಲವು ತಿಂಗಳಲಾಗಾಯ್ತು ವಾಸವಾಗಿಲ್ಲದ ಒಂದು ಹಾಳುಮನೆ ಇರುತ್ತೆ ಆ ಮನೆಯ ಬಾಗಲು ತೆರದಿತ್ತು ಅದರೊಳಗೆ ಈ ಮೂರು ಹುಲಿಗಳು ಮಲಗಿದ್ದವು ಇವುಗಳು ಮಲಗಿದ್ದ ಸಂಗತಿ ಯಾರಿಗೂ ಗೊತ್ತಿರಲಿಲ್ಲ. ಬೆಳಗ್ಗೆ ಎದ್ದ ಕೂಡಲೆ ಶಿದ್ದೈಯ್ಯ ಗೌಡ್ರುಯಾವದೋ ಕಾರಣದಿಂದ ಆ ಮನೆಗೆ ಹೋಗಿ ಒಳಗೆ ನೋಡಲು ಮಲಗಿದ್ದ ಈ ಹುಲಿಗಳು ಕಾಣಿಸಿದವು ಕೂಡಲೆ ಮೆಲ್ಲಗೆ ಗಾಬರಿಯಿಂದ ಬಾಗಿಲನ್ನು ಮುಚ್ಚಿ ಬಿಟ್ಟರು ಒಳಗಿದ್ದ ಹುಲಿಗಳು ಬೊಬ್ಬೆಯಿಟ್ಟು ಯಾವ ಪ್ರಯತ್ನ ಮಾಡಿದರೂ ಹೊರಗೆ ಬರಲು ದಾರಿ ಕಾಣಲಿಲ್ಲ ಕೂಡಲೆ ಊರವರೆಲ್ಲಾ ಸೇರಿ ಮನೆಯ ಮೇಲುಗಡೆ ಹತ್ತಿ ಒಂದು ಹಂಚು ... ಇಗ ... ಒಂದೂಕಿನಿಂದ ಆ ಹಳೇ ಪ್ಯಕೆಡ ಒಡೆಯನಿಂದ ಆ ಮೂರು ಹುಲಿಗಳನ್ನು ಕೊಲೆಸಿದರು ನಂತರ ನೋಡಲಾಗಿ ಸದರಿಯವರು ಕತ್ತಿಯಿಂದ ಕಡಿದ ಗುರ್ತು ನೆತ್ತಿಯ ಮೇಲೆ ಚನ್ನಾಗಿ ಕಾಣಿಸಿತು ಆ ಹುಲಿಗಳಲ್ಲಿ ಹೆಣ್ಣು ಹುಲಿಯು ದೊಡ್ಡದು, ಬಾಕಿ ಎರಡು ಗಂಡು ಹುಲಿಗಳು ಇವು ಸಹಾ ಸಾಧಾರಣ ದೊಡ್ಡ ಬಾಗಿಯೇ ಇದ್ದವು ಈ ಸಮಾಚಾರವು ಈ ಊರವರಿಗೆಲ್ಲಾ ಆಶ್ಚರ್ಯಕರವಾಗಿರುತ್ತೆ

ಬಹುಮಾನದ ವೋಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ
ಭಯಂಕರವಾದ ಕೊಲೆ

ಶ್ರೀರಂಗಪಟ್ಟಣದಲ್ಲಿ ... ವರ್ತಮಾನ ಇದರರು ತಿಳಿಪದ ಸೋಮವಾರ ೧೦ನೇ ತಾ ಪದ್ಧತಿಯ ಪ್ರಕಾರ ಮುಖತೊಳೆದುಕೊಳ್ಳಲು ಹೊಳೆಗೆ ಹೋಗಿದ್ದಾಗ್ಗೆ ಅಲ್ಲಿರುವ ಒಂದು ಮಂಟಪದಲ್ಲಿ ರಕ್ತದ ಕೋಡಿ ಹರಿದ್ದನ್ನು ನೋಡಿ ವಿಸ್ಮಯಪಡುತ್ತಾ ನಿಂತೆವು ಆಗ ಅಲ್ಲಿ ಮುಂದುಗಡೆಯಲ್ಲಿ ಒಂದು ಜೊತೆ ಜೋಡು ಮತ್ತು ಅಲ್ಲಿದ್ದ ಚಿಕ್ಕ ಮನೆಯಲ್ಲಿ ಒಂದು ತಂಬಿಗೆಯೂ ಇದ್ದದ್ದನ್ನ ಕಂಡೆವು ತಕ್ಷಣದಲ್ಲೇ ಜ್ಞಾಪಕಕ್ಕೆ ಬಂದದ್ದೇನೆಂದರೆ— ಅದರ ಹಿಂದಿನ ದಿವಸ ಅಂದರೆ ತಾ ೯ನೇ ಆದಿತ ವಾರ ಸಾಯಂಕಾಲದಲ್ಲಿ ಒಬ್ಬ ಬ್ರಾಹ್ಮಣನು ಒಂದು ತಂಬೂರಿ ಹಿಡಿದ ಅದೇ ತರದ ಜೋಡನ್ನು ಹಾಕಿಕೊಂಡು ಜೊತೆಯಲ್ಲಿ ಒಬ್ಬ ಕಪ್ಪಾಗಿ ಉಲುಗಿದ್ದ ಮನುಷ್ಯನನ್ನು ಕರೆದುಕೊಂಡು ಅಂಗಡಿ ಬೀದಿಯಲ್ಲಿ ಭಿಕ್ಷಾಟನ ಮಾಡುತ್ತಾ ಇದ್ದನು ಮತ್ತು ರಾತ್ರಿ ೭ ಘಂಟೆ ಸಮಯದಲ್ಲಿ ಆ ಕಪ್ಪಾಗಿದ್ದ ಮನುಷ್ಯನು ಅದೇ ಮಂಟಪದಲ್ಲಿ ಮಲಗಿದ್ದದ್ದನ್ನು ನಾನು ಸಂಧ್ಯಾವಂದನೆಗೆ ಹೋಗಿದ್ದ ವೇಳೆಯಲ್ಲಿ ಕಂಡೆನು" ಆದ್ದರಿಂದ ಈ ಮನುಷ್ಯನ ಜ್ಞಾಪಕ ಬಂತು ಆದರೆ ಆ ಮಂಟಪದಲ್ಲಿ ಆ ಕಪ್ಪಾಗಿದ್ದ ಮನುಷ್ಯನು ಇರಲಿಲ್ಲ ... ತೊಳೆಯುತ್ತಿದ್ದಾಗ ... ಒಬ್ಬ ... ಸಲ್ಲಿ ಸ್ನಾನಮಾಡಲು ಇಳಿಯಲು ಕಾಲಿಗೆ ಏನೋ ಮೆತ್ತಗೆ ಸಿಕ್ಕುತ್ತಿದೆ ಎಂದು ಹೇಳಿ ಆ ಸ್ಥಾನವನ್ನು ಬಿಟ್ಟು ಮುಂದೆ ಸ್ನಾನಮಾಡಿಕೊಂಡು ಹೋದನು ಸ್ವಲ್ಪ ಹೊತ್ತಿನ ಮೇಲೆ ಈ ಸಮಾಚಾರ ಪೋಲಿಸಿಗೆ ತಿಳಿಸಲು ಅವರೆಲ್ಲಾ ಬಂದು ಆ ಜಾಗವನ್ನು ಚನ್ನಾಗಿ ನೆ... ರಕ್ತವು ಹೊಳೆಯ ಮಂಟಪದಿಂದ ನದಿಯ ವರೆಗೂ ಹೋರಿದ್ದದ್ದರಿಂದ ... ಬಿಟ್ಟು ಬಿಟ್ಟರು ಕಡೆಗೆ ... ನಡೆಗೆ ಹೇಳಿ ಕಳುಹಿಸಿದರು ಅವರೆಲ್ಲಾ ಒಂದು ನೀರಿನಲ್ಲಿ ಹುಡುಕಿದರು ಅದೇ ಸ್ಥಳದಲ್ಲಿ ಆ ಶವವು ಸಿಕ್ಕಿತು ನಂತರ ನೋಡಲಾಗಿ ಆ ನು ಭಿಕ್ಷಾಟನ ಮಾಡುತ್ತಿದ್ದ ಮನುಷ್ಯನಾಗಿದ್ದನು ಮೇಲಕ್ಕೆ ತೆಗೆದ ಹಾಕಿದರು ಪಟ್ಟಿ ಮಾತ್ರ ಜೋಲಿಗೆ ಬಿದ್ದಿರಲಿಲ್ಲವೆಂದು ಅಲ್ಲಿದ್ದವರು ಊಹಿಸಿದರು. ಯಾಕೆಂದರೆ ಹಳೇ ಕಪಾಳದ ಮೇಲೆ ಆಯುಧದಿಂದ ಕೊಚ್ಚಿದ ಗಾಗಿತ್ತು ಅದನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಆ ಮೇಲೆ ದಹನ ಮಾಡಿದರು ಕಪ್ಪಾಗಿದ್ದ ಮನುಷ್ಯನನ್ನು ಸರ್ಕಾರದವರು ತಲಾಷ್ ಮಾಡತ್ತಿದ್ದಾರೆ ಈ ಕೆಲಸವು ಯಾವ ಮಹಿಮೆಯಿಂದ ನಡೆದಿರಬಹುದೆಂದು ತೋರುತ್ತೆ

ದಸರಾ ಮಹೋತ್ಸವ

ಸಪ್ಟಂ ೧೯೦೬ನೇ ಸೆಪ್ಟಂಬರ್ (ಪರಾಭವನಾಮ ಸಂವತ್ಸರದ ಆಶ್ವಯುಜ ಶುದ್ಧ) ೧೯ ಬುಧವಾರ—ಪ್ರಾತಃಕಾಲ ೯ ಘಂಟೆ ... ಮೇಲೆ ೧೧ ಘಂಟೆಯ ಒಳಗೆ ತುಲಾ ಲಗ್ನದಲ್ಲಿ ಸಿಂಹಾಸನಾರೋಹಣ, ನಜರ್. ಸಾಯಂಕಾಲ ೬ ಘಂಟೆಗೆ ದರ್ಬಾರ್, ನಜರ್

೨೦ ಗುರುವಾರದಿಂದ—೨೫ ಮಂಗಳವಾರದ ವರೆಗೆ ದಿನಾ ಪ್ರಾತಃಕಾಲ ... ಘಂಟೆಗೆ ಆನೆ ಕುದುರೆ ಕರೇ ಒಂಟೆ ಬಿಜಯಮಾಡುವದು ಸಾಯಂಕಾಲ ೬ ಘಂಟೆಗೆ ದರ್ಬಾರ್ ನಡೆಯುವುದು.

೨೬ ಬುಧವಾರ—ಪ್ರಾತಃಕಾಲ ೯॥ ಘಂಟೆಗೆ ವೃಶ್ಚಿಕ ಲಗ್ನದಲ್ಲಿ ಆನೆ ಕುದುರೆ ಮತ್ತು ಆಯುಧ ಶಾಲೆ ಒಳಗೆ ಬಿಜಯಮಾಡುವರು ಅನಂತರ ಆಯುಧ ಗಜಾಶ್ವಗಳ ಪೂಜೆ ಸಾಯಂಕಾಲ ೬ ೨೦ ಘಂಟೆಗೆ ಇಂಗ್ಲೀಷ್ ದರ್ಬಾರ್.

೨೭ ಗುರುವಾರ ಪ್ರಾತಃಕಾಲ ೯॥ ಘಂಟೆಗೆ ತುಲಾ ಲಗ್ನದಲ್ಲಿ ಆಯುಧ ಗಜಾಶ್ವ ಬನ್ನಿ ಮಂಟಪಕ್ಕೆ ಬಿಜಯಮಾಡುವರು ಅನಂತರ ಜಟ್ಟೀ ಕಾಳಗ, ಸಾಯಂಕಾಲ ೬ ಘಂಟೆಗೆ ಪಂಜಿನ ಕವಾಯಿತು, ಅನಂತರ ದರ್ಬಾರ್.

೨೮ ಶುಕ್ರವಾರ—ಸಾಯಂಕಾಲ ೬॥ ಘಂಟೆಗೆ ಜಗನ್ಮೋಹನ ಮಹಲ್‌ನಲ್ಲಿ ದರ್ಬಾರ್, ನಜರ್.

೨೯ ಶನಿವಾರ—ಸಾಯಂಕಾಲ ೬॥ ಘಂಟೆಗೆ ಜಗನ್ಮೋಹನ ಮಹಲ್‌ನಲ್ಲಿ ದರ್ಬಾರ್, ವಿಸಿಟರಿಯವರಿಗೂ, ಪ್ರಜಾಪ್ರತಿನಿಧಿಗಳಿಗೂ ನಜರ್.

ಮೈಸೂರು ಸರ್ಕಾರಿ ಹುಕುಮುಗಳು.

ಷಿಕಾರಿದಾರರಿಗೆ ರಿಯಾಯತಿಗಳು.

ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿರುವ ಷಿಕಾರಿದಾರರು ಕೆಡ್ಡಾ ಕ್ಯಾಂಪಿನ ಕ್ಯಾಯರ್‌ಗಳು ನಡಿಯುವಾಗಲೂ ಇತರ ಫಾರೆಸ್ಟು ಕೆಲಸಗಳಲ್ಲೂ ಸರ್ಕಾರಿ ನೌಕರರಿಗೆ ಸಹಾಯ ಮಾಡಬೇಕೆಂಬದಾಗಿ ವಿಧಾಯಕವಾಗಿದೆ. ಈ ಕೆಲಸ ಮಾಡುವುದಕ್ಕೋಸ್ಕರ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೂ ದುರಸ್ತು ಮಾಡಿಕೊಳ್ಳುವುದಕ್ಕೂ ಮರವನ್ನು ರುಸುಂ ತೆಗೆದುಕೊಳ್ಳದೆ ಮಾಫಿಯಾಗಿ ಕೊಡಬೇಕೆಂತಲೂ ಹುಲ್ಲುಬನ್ನಿ ಕೊಡತಕ್ಕದ್ದಿಲ್ಲವೆಂತಲೂ ಸರ್ಕಾರದವರು ರಿಯಾಯತಿ ತೋರಿಸಿ ಹುಕುಂ ಕೊಟ್ಟಿದ್ದರು. ಅದರಂತೆ ೧೮೦೪ ನೆ ಇಸವಿಯ ತನಕ ಅವರು ಆ ರಿಯಾಯತಿಗಳನ್ನು ಅನುಭವಿಸಿಕೊಂಡು ಬಂದರು. ಆದರೆ ಈಚೆಗೆ ಫಾರೆಸ್ಟು ಇಲಾಖೆಯವರು ಅವರಿಂದ ಹುಲ್ಲುಬನ್ನಿ ವಸೂಲ್ಮಾಡುವುದಕ್ಕಾರಂಭಿಸಿರುವುದನ್ನು ನೋಡಿ ಗವರ್ನಮೆಂಟಿನವರು ಹೇಳುವುದೇನೆಂದರೆ—ಷಿಕಾರಿದಾರರು ಆ ಪ್ರಾಂತ್ಯದಲ್ಲಿ ೧,೬೪೦ ಜನರಿದ್ದಾರೆಂದು ಹೆಗ್ಗಡದೇವನಕೋಟೆ ತಾಲ್ಲೂಕ್ ಅಮಲ್ದಾರರೂ, ೩೦೫ ರುಂದಿದ್ದಾರೆಂದು ಫಾರೆಸ್ಟು ಇಲಾಖೆಯವರೂ ಹೇಳುವರು. ಆದ್ದರಿಂದ ಆ ಜನರು ಇಷ್ಟೇ ಜನರಿದ್ದಾರೆಂದು ತಿಳಿಯುವದು ಮುಂಚೆ ಅವಶ್ಯ. ಹೆಗ್ಗಡದೇವನಕೋಟೆಯ ಅಮಲ್ದಾರರೂ ಅಲ್ಲಿನ ಫಾರೆಸ್ಟು ಸಬ್ ಡಿವಿಷನ್ ಆಫೀಸರೂ ಪರೀಕ್ಷಿಸಿ, ಷಿಕಾರಿದಾರರ ಪಟ್ಟಿಯನ್ನು ತಯಾರುಮಾಡಿ ಗವರ್ನಮೆಂಟಿಗೆ ಕೂಡಲೇ ಕಳುಹಿಸಬೇಕು. ಷಿಕಾರಿದಾರರ ಗುಂಪಿಗೆ ಸೇರಿದಂಥವರಿಗೆಲ್ಲಾ ಮುಂದೆ ಹೇಳುವ ರಿಯಾಯತಿಗಳನ್ನು ಕೊಡಬೇಕೆಂದು ಕನ್ಸರ್ವೇಟರವರೂ ರೆವಿನ್ಯೂ ಕಮಿಷನರವರೂ ಹೇಳುತ್ತಾರಾದ್ದರಿಂದ ಅವುಗಳನ್ನು ಗವರ್ನಮೆಂಟಿನವರು ಒಪ್ಪಿರುತ್ತಾರೆ. ರಿಯಾಯತಿಗಳ್ಯಾವವೆಂದರೆ—(೧) ಷಿಕಾರಿದಾರರ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹುಲ್ಲುಬನ್ನಿಯನ್ನು ಕೊಡಬೇಕಾದದ್ದಿಲ್ಲ. (೨) ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಸರ್ಕಾರದವರು ನಿರ್ಬಂಧ ಮಾಡದೆ ಇರುವಂಥ ಸ್ಥಳಗಳಲ್ಲಿ ಅವರು ವಿಶ್ರಮಿಸಿಕೊಳ್ಳಬಹುದು, ಕಾಡುಗಂದಿ ವಸ್ತುಗಳನ್ನು ಬಲೆ ಹಾಕಿ ಹಿಡಿದು ಕೊಲ್ಲಬಹುದು. (೩) ಮನೆಗಳ ಮೇಲೆ ಹೊದ್ದಿಸಿಕೊಳ್ಳುವಂಥಾ ದೊಡ್ಡ ಹುಲ್ಲನ್ನು ಅವರು ಮಾಫಿ ಲೈಸೆನ್ಸು ಪಡೆದು ಸ್ಟೇಟ್ ಫಾರೆಸ್ಟುಗಳಿಂದ ಸಾಗಿಸಿಕೊಂಡು ಹೋಗಬಹುದು, (೪) ಮನೆ ಕಟ್ಟುವುದಕ್ಕೂ ವ್ಯವಸಾಯದ ಕೆಲಸಗಳಿಗೂ ಅವರು ಒಂದು ಕಾಸೂ ಕೊಡದೆ ಡಿಸ್ಟ್ರಿಕ್ಟ್ ಫಾರೆಸ್ಟುಗಳಿಂದ ರಿಸರ್ವ್ ಮಾಡದೇ ಇರುವಂಥಾ ಮರವನ್ನು ಸಾಗಿಸಿಕೊಂಡು ಹೋಗಬಹುದು. ಇವರು ಷಿಕಾರಿ ಕಾರ್ಯವನ್ನು ಪ್ರಾರಂಭಿಸಿ ಹಾಗೆ ಅವರಲ್ಲಿ ಯಾರಾದರೂ ಸಹಾಯ ಮಾಡದೆ ಹೋಗದಪಕ್ಷದಲ್ಲಿ ಅಂಥವರಿಗೆ ಈ ರಿಯಾಯತಿಗಳನ್ನು ತೋರಿಸಕೂಡದು. ಮತ್ತು ಷಿಕಾರಿದಾರರಲ್ಲದವರ್‍ಯಾರಾದರೂ ಈ ರಿಯಾಯತಿಗಳನ್ನು ಪಡೆಯದಂತೆ ಅಧಿಕಾರಿಗಳು ನೋಡಿಕೊಳ್ಳತಕ್ಕದ್ದು.

ಖಜಾನೆ ಲೆಕ್ಕಗಳ ತನಿಖೆ

ತಾಲ್ಲೂಕ್ ಖಜಾನೆಗಳ ತನಿಖೆ ವಿಷಯದಲ್ಲಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ತಾಲ್ಲೂಕ್ ಖಜಾನೆಗಳನ್ನು ವರುಷಕ್ಕೆ ಎರಡುಸಾರಿ ತನಿಖೆಮಾಡಬೇಕಾದದ್ದುಂಟು. ಅವುಗಳ ಟ್ರಿಜರಿ ಆಫೀಸರು ಒಂದುಸಲವೂ ಡೆಪ್ಯುಟಿ ಕಮಿಷನರೋ ಅಥವಾ ಅವರ ಅಸಿಸ್ಟೆಂಟರೋ ಒಂದು ಸಲವೂ ಅವಶ್ಯವಾಗಿ ಮಾಡಬೇಕು. ಎರಡಾವರ್ತಿಗಿಂತ ಹೆಚ್ಚಾಗಿ ತನಿಖೆ ಮಾಡಬೇಕಾದ ಅಗತ್ಯವಿಲ್ಲ. ಈ ವಿಷಯದಲ್ಲಿ ಈಗಿರುವ ರೂಲಿನಂತೆ ನಡೆದರೆ ಸಾಕಾಗಿದೆ ಎಂಬುದೇ.

ಇನಾಂದಾರರ್‍ಗೆ ಕೊಂಡಿ ಜುಟ್ಟೆ ವಳಿಯೂ

ಕಾನಕಾನಹಳ್ಳಿ ತಾಲ್ಲೂಕು ಯರ್‍ರಹಳ್ಳಿಯನ್ನು ೧೮೪೩ ನೆ ಇಸವಿಗೆ ಮುಂಚೆ ಸರ್ವಮಾನ್ಯವಾಗಿ ಕೊಟ್ಟಿದೆ. ಆ ವರುಷ ಟೀಪೂಸುಲ್ತಾನರು ಅದನ್ನು ಖಾಯಂ ಮಾಡಿದಾರೆ. ೧೮೬೭ ನೆ ಇಸವಿಯಲ್ಲಿ ಇನಾಂ ಸೆಟ್ಲು ಆಗುವ ತನಕ ಇನಾಂದಾರರು ಅಂದಾಯವಿಲ್ಲದೆ ಅನುಭವಿಸುತ್ತಿದ್ದರು. [illegible] ಇನಾಂ ಸನ್ನದಿನಲ್ಲಾಗಲೀ ಇನಾಂ ಸೆಟ್ಲು ಆದ ಕಾಗದದಲ್ಲಾಗಲಿ ಅಬ್ಕಾರಿ ಹಕ್ಕು ಇನಾಂದಾರರಿಗೆ ಬಿಟ್ಟು ಕೊಟ್ಟಿಲ್ಲ. ಇದಲ್ಲದೆ ಆ ಗ್ರಾಮದಲ್ಲಿ ಮರ ಆಗಲಿ [illegible] ಬಳಸುವುದಕ್ಕೆ ಯೋಗ್ಯವಾದ ಮರಗಳಾಗಲಿ ಇರುವುದಿಲ್ಲವೆಂದು ತಿಳಿದು ಬಂದಿದೆ. ಆದ್ದರಿಂದ ಇನಾಂದಾರರಿಗೆ ಅಬ್ಕಾರಿ ಜುಟ್ಟು ವಳಿಯ ಮೇಲೆ ಯಾವ ಹಕ್ಕೂ ಇರುವುದಿಲ್ಲ. [illegible] ರೂಲಿನ ಪ್ರಕಾರ [illegible] ಮಾತ್ರ ಅವರಿಗೆ [illegible]ದಾಗಿದೆ.

[illegible] ತಾಲ್ಲೂಕ್ [illegible] ಎಂಬ ಗ್ರಾಮವನ್ನು ೧೮೯೯ [illegible] ಅನುಭವಿಸಿದರು [illegible] ವರುಷವೂ [illegible] ವೆಚ್ಚಗಳನ್ನು ಸರ್ಕಾರಕ್ಕೆ ಗುತ್ತಿಗೆ ಖಾವತಿಮಾಡುತ್ತಾ ಅನುಭವಿಸಿದರು. ಅಲ್ಲಿಂದೀಚೆಗೆ ೨೦ ವರುಷಗಳ ತನಕ ವರುಷಕ್ಕೆ ೨೯ ವರಹಾದಂತೆ ಸರ್ಕಾರಕ್ಕೆ ಕಂದಾಯಕೊಡುತ್ತಿದ್ದರು. ೧೮೩೬ ನೆ ಇಸವಿಯಲ್ಲಿ ಆ ಗ್ರಾಮದ ಡಿವಿಜನ್ ಸೂಪರಿಂಟೆಂಡೆಂಟರು ಇನಾಂದಾರರ ಕೈಸಿಗೆ ಬಿಟ್ಟುಮಾಡಿ, ೨೦ ವರಹಾ ಜೋಡಿ ಖಾವತಿ ಆಗತಕ್ಕದ್ದೆಂದು ಗೊತ್ತುಮಾಡಿದರು. ಈ ಪಟ್ಟೆಯಲ್ಲಿ ಆ ಗ್ರಾಮದ ನಗದಿಯಾದರೂ ಬಾಬತಿಯಾದರೂ ಇನಾಂದಾರರಿಗೆ ಸೇರತಕ್ಕದ್ದೆಂದು ಸ್ಪಷ್ಟವಾಗಿ ನಮೂದುಮಾಡಲ್ಪಟ್ಟಿದೆ. ಆದಾದ ಎರಡು ವರುಷಗಳ ಮೇಲೆ ಸೂಪರಿಂಟೆಂಡೆಂಟರು ಹುಕುಂ ಕೊಟ್ಟು ಆ ಗ್ರಾಮವನ್ನು ಕಾಯಂಗುತ್ತಿಗೆಗೆ ತಂದರು. ೧೮೭೦ ರಲ್ಲಿ ಇನಾಂ ಸೆಟ್ಲು ಆದಾಗ್ಗ್ಯೂ ಈ ಗ್ರಾಮವನ್ನು ಇನಾಂತಿಯಾಗಿ ಗೊತ್ತುಮಾಡಿ, ಅದರ ಖಾವಂದನ್ನು ಅಬ್ಕಾರಿಯನ್ನೂ ಗವರ್ನಮೆಂಟಿಗೆ ಇಟ್ಟುಕೊಂಡರು. ವಿಚಾರಿಸೆ ಕಾಲದಲ್ಲಿ ಅಬ್ಕಾರಿ ಜುಟ್ಟುವಳಿಯನ್ನು ತಮ್ಮ ಹಿರಿಯರು ಅನುಭೋಗಿಸುತ್ತಿದ್ದರೆಂಬುವುದಕ್ಕೆ ಇನಾಂದಾರರು ಯಾವ ಆಧಾರವನ್ನೂ ತೋರಿಸಲಾರರೆಂದು ಹೇಳಿದಾರೆ. ಆದಕಾರಣ ಗಿಡಗಳ ಬಾಡಿಗೆ ಶಿವಾಯ ಇನಾಂದಾರರಿಗೆ ಚೆಕ್ಕೇನೂ ಖಾವತಿ ಆಗತಕ್ಕದ್ದಿಲ್ಲವೆಂದು ತೀರ್ಮಾನಮಾಡಲಾಗಿದೆ.

ಚಿಕ್ಕಮಗಳೂರು ತಾಲ್ಲೂಕು ಬಾಬಾಬುಡನ್ ಗುಡ್ಡಗಳ ದರ್ಗಾ ದತ್ತಾತ್ರೇಯ ಪೀಠದ ಮ್ಯಾನೇಜರು ಆ ಮಠದ ಸರ್ವಮಾನ್ಯವಾದ ಸೂರಗುಪ್ಪ ಗ್ರಾಮದ ಗಂಧದ ಫಸಲನ್ನು ಮಠಕ್ಕೆ ವಹಿಸಿಕೊಡಬೇಕೆಂತಲೂ, ಆ ಬೆಟ್ಟಗಳಿಗೆ ಬಂದುಹೋಗುವ ಭಕ್ತಾದಿಗಳ ಸಂಖ್ಯೆ ಬಹಳ ಹೆಚ್ಚಾಗಿರೋಣದರಿಂದ ಅವರಿಗೆಲ್ಲಾ ಅನ್ನೋದಕಗಳನ್ನು ನಡಿಸಲು ಮಠದ ಉತ್ಪತ್ತಿಯು ಸಾಲದೆಂತಲೂ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಗವರ್ನಮೆಂಟಿನವರು ಅದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ—ಈ ಮಠಕ್ಕೆ ಆ ಸರ್ವಮಾನ್ಯ ಗ್ರಾಮದ ಸಂದಲನ್ನು ವಹಿಸಿಕೊಡುವುದು ಕಾನೂನಿಗೆ ವಿರೋಧವಾಗಿರುತ್ತದೆ. ಮತ್ತು ಇನಾಂ ಸನ್ನದಿನಲ್ಲಿ ಇದನ್ನು ವಿನಾಯಿಸಿದೆ. ಇದಲ್ಲದೆ ೧೯೦೦ ನೆ ಇಸವಿಯಲ್ಲಿ ಅದನ್ನು ಪಡೆಸುವುದಕ್ಕಾಗುವುದಿಲ್ಲವೆಂದು ಫೈಸಲೂ ಆಗಿದೆ. ಇಂತಾದ್ದರಲ್ಲಿ ಈ ವಿಷಯವನ್ನು ಮತ್ತೆ ಗವರ್ನಮೆಂಟಿನವರು ಆಲೋಚಿಸುವುದಿಲ್ಲ. ಆದರೆ ಮುಜರಾಯಿ ಸೆಕ್ರೆಟರಿಯವರು ಈಚೆಗೆ ಸರ್ಕೀಟು ಹೋಗಿ ಈ ದರ್ಗಾ ಮಠದ ಕಾರುಬಾರುಗಳನ್ನು ಶೋಧಿಸಿಕೊಂಡು ಬಂದು ಇರುತ್ತಾರಾದ್ದರಿಂದಲೂ ಹಿಂದುಗಳೂ ಮಹಮ್ಮದೀಯರೂ ಈ ಮಠದ ಭಕ್ತರಾಗಿ ಈಚೆಗೆ ಹೆಚ್ಚಾಗಿ ಹೋಗಿ ಬರುತ್ತಿರುವುದರಿಂದಲೂ ಈ ಮಠದ ಖರ್ಚಿಗೆ ೧೯೦೬ ನೆ ಜುಲೈ ೧ ರಲಾಗಾಯತು ಮಾಹೆಯಾನ ೫೦ ರೂಪಾಯಿ ಮುಜರಾಯಿ ಫಂಡಿನಿಂದ ಖಾವತಿ ಆಗುವಂತೆ ಸ್ಯಾಂಕ್ಷನ್ ಮಾಡಲಾಗಿದೆ. ಮ್ಯಾನೇಜರ ಮಠದ ಕಾರುಬಾರನ್ನು ತೃಪ್ತಿಕರವಾಗಿ ನಡಸಬೇಕು.

ಇಂಡಿಯಾ ದೇಶದ ವೃತ್ತಾಂತಗಳು.

ಅಮರಾವತಿ ಜಿಲ್ಲೆಯಲ್ಲಿ ೧,೫೦೦ ಜನ ದೊಡ್ಡಮನುಷ್ಯರೂ ಹಿಂದೂಲೀಗರೂ ಬರುತ್ತಾರೆಂದು ನಿರ್ಣಯವಾಗಿದೆ.

❖❖❖❖

ಸಿಂಧಿಯಾ ಮಹಾರಾಜ ಕುಮಾರರನ್ನು ಮಿ॥ ಕ್ಲಾರ್ಕ್ ಸ್ಟ್ರೈಟ್ ಯವರು ಮೂರು ನಾಲ್ಕು ತಿಂಗಳವರೆಗೆ ವಿಲಾಯಿತಿಗೆ ಕರೆದುಕೊಂಡು ಹೋಗಬರುವವರಾಗಿದಾರೆ.

❖❖❖❖

ಸಿಲೋನ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ೩,೦೮,೧೦೭ ಗ್ಯಾಲನ್‌ಗಳ ಟೀ ಯನ್ನೂ ೫೩,೧೦೭ ಗ್ಯಾಲನ್ ಪಟ್ರೋಲ್ ಯನ್ನೂ ಸಿಂಕಬಿದ್ದು ಸುಟ್ಟು ಹೋಯಿತು.

❖❖❖❖

ಬಿಹಾರ್ ಆಧಿಪತ್ಯಕ್ಕೆ ಸೇರಿದ ಸಂತಾಲ [illegible]ಯಲ್ಲಿ [illegible] ಎಂಬ ಗ್ರಾಮದೊಳಗೆ ಒಂದು ಮನೆಯಲ್ಲಿ ಗಂಡಹೆಂಡರಿಗೆ ವಾಗ್ವಾದಗಳು ನಡೆದು [illegible] ಹೊಡೆದಾಟ ಇಬ್ಬರೂ ಮೃತಪಟ್ಟರು.

❖❖❖❖

ಕಲ್ಕತ್ತಾ ಪಟ್ಟಣದ ಪ್ರಾವಿನ್ಸಿಯಲ್ ಇನ್ಸ್ಟಿಟ್ಯೂಷನ್ ಸಂಘದ ಸೆಕ್ರೆಟರಿ ಕೆ. ಕೆ. ಬೋಸ್ ಯವರ ಮೇಲೆ ಪೊಲೀಸ್ ಕೋರ್ಟಿನಲ್ಲಿ ಬಂದಿರುವ ಮೊಕದ್ದಮೆಯ ವಿಚಾರಣೆಯನ್ನು ಈ ತಿಂಗಳ ೧೭ರಿಂದ ತಪ್ಪಿಸಿ ಮುಂದಿನ ತಿಂಗಳ ೧೦ ಕ್ಕೆ ಇಟ್ಟಿದಾರೆ.

❖❖❖❖

ಸ್ವಾಮಿ ಅಭೇದಾನಂದರವರು ಕಳೆದ ವಾರ ಕಲ್ಕತ್ತೆಯನ್ನು ತಲುಪಿದರು. ಪ್ರಜೆಗಳು ಅವರನ್ನು ಬಹು ವೈಭವಯುಕ್ತವಾಗಿ ಎದುರುಗೊಂಡು ಸತ್ಕರಿಸಿದರು. ಈಗ ಅವರ ಅಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಾವಿರಾರು ಪ್ರಜೆಗಳಿಗೆ ಉಪನ್ಯಾಸಮಾಡುತ್ತಿದಾರೆ.

❖❖❖❖

ಆಫ್ಘಾನಿಸ್ಥಾನದ ಅಮೀರರ ಕೈ ಗಾಯವನ್ನು ಚನ್ನಾಗಿ ವಾಸಿಮಾಡಿದ [illegible] ಎಂಬ ಡಾಕ್ಟರನ್ನೇ ಈಗಲೂ ಅಮೀರರು [illegible] ತನಕ ಅವರ ಬಳಿಯಲ್ಲಿ ಡಾಕ್ಟರಾಗಿರುವಂತೆ ಇಂಡಿಯಾ ಗವರ್ನಮೆಂಟಿನವರು ನೇಮಿಸುತ್ತಾರೆ.

❖❖❖❖

ರಂಗೂನ್ ಪಟ್ಟಣದಲ್ಲಿ ಜೆ. ಇ. ಗ್ರೇಬರ್ ಎಂಬುವನು ತನ್ನ ಸಹೋದ್ಯೋಗಿಗಳ ಕೈಲಿದ್ದ ಚಿನ್ನದ ಮುರಿಯನ್ನು ಕದ್ದನು. ಇವನಿಗೆ ಹಿಂದೆ ನಾಲ್ಕಾವರ್ತಿ ಸಜಾ ಆಗಿದ್ದದ್ದನ್ನು ಕೇಳಿ ಸೆಷನ್ಸ್ ಜಡ್ಜಿ [illegible] ವರುಷಗಳ ಟ್ರಾನ್ಸ್ ಸಜವನ್ನು ವಿಧಿಸಿದರು.

❖❖❖❖

ಕರ್ನೂಲಿನ [illegible] ಗೋರಖಪುರ ಎಂಬ ಸ್ಥಳದಲ್ಲಿ ದಿನಕ್ಕೆ ೨೦ ಟನ್‌ಗಳ ಉತ್ಕೃಷ್ಟವಾದ ಸಕ್ಕರೆಯನ್ನು ತಯಾರುಮಾಡುವಂಥಾ ಸ್ವದೇಶೀ ಕಾರ್ಖಾನೆಯು ಏರ್ಪಡುವುದು. ಹೊಸ ನಮೂನೆಯ ಯಂತ್ರಗಳನ್ನೇ ತರಿಸಿಟ್ಟು ಈ ಕಾರ್ಖಾನೆಯನ್ನು ನಡಿಸುವರು.

❖❖❖❖

ಪೂರ್ವ ಬಂಗಾಳಾ ಮತ್ತು ಆಸ್ಸಾಂ ಎಂಬ ಹೊಸ ಆಧಿಪತ್ಯಕ್ಕೆ ಸೇರಿದ ರಂಗಪುರದಲ್ಲಿ ರಾಜಾ ಜಾನಕೀವಲ್ಲಭಸೇನ ಎಂಬ ಪ್ರಖ್ಯಾತ್ಮನು ವ್ಯವಸಾಯದ ಜಮೀನಿನಲ್ಲಿ ಮಾಡ್ರಿ ಬೆಳೆಗಳನ್ನು ಮಾಡಿ ರೈತರಿಗೆ ತೋರಿಸಿಕೊಡುವುದಕ್ಕಾಗಿ ೫,೦೦೦ ರೂಪಾಯಿ ಕೊಟ್ಟಿರುತ್ತಾನೆ.

❖❖❖❖

ದರ್ಭಾಂಗ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ರೈತ ಪ್ರಜೆಗಳಿಗೆ ತಕಾವಿ ಅಡ್ವಾನ್ಸು ಕೊಡಬೇಕೆಂದು ೨,೫೦,೦೦೦ ರೂ ಸ್ಯಾಂಕ್ಷನ್ ಮಾಡಿದಾರೆ. ಇದಲ್ಲದೆ ಪ್ರಜೆಗಳ ಕಷ್ಟ ನಿವಾರಣೆಗೆ ಪ್ರತಿ ತಿಂಗಳಲ್ಲೂ ೨೫,೦೦೦ ರೂಪಾಯಿ ಖರ್ಚು ಮಾಡುವಂತೆ ಅಪ್ಪಣೆ ಕೊಡಿಸಿದರು.

ಬಿಹಾರ್ ಆಧಿಪತ್ಯದ ಜೈಲ್ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರ ಆಫೀಸಿನ ಸೂಪರಿಂಟೆಂಡೆಂಟರಾಗಿದ್ದ ಮಿ॥ ಎಫ್. ಇ. [illegible] ಎಂಬ ಸಾಹೇಬನು ಜೆ. ಲಾಂಗ್ ಎಂಬಾತನ ಹೆಸರನ್ನು ಬರೆದು ೧೮ ರೂಪಾಯಿನ ಪ್ರಾಮಿಸರಿಯನ್ನು ಸೃಷ್ಟಿಮಾಡಿದನು. ಅವನಿಗೆ ಒಂದು ವರುಷ ಕಠಿಣ ಸಜಾ ವಿಧಿಸಿರುತ್ತಾರೆ.

❖❖❖❖

ರಂಗೂನ್ ಪಟ್ಟಣದಲ್ಲಿ ಈಗೀಗ ಕಳ್ಳರು ಕಳವನ್ನು ಸಾಗಿಸುವುದಕ್ಕೆ ವಿಚಿತ್ರವೂ ಅಪೂರ್ವವೂ ಆದ ಮಾರ್ಗವನ್ನು ಹುಡುಕಿಕೊಂಡಿದಾರೆ. ಎರಡು ಬೈಸಿಕಲ್ ಗಾಡಿಗಳಿಗೆ ಮೇಲ್ಗಡೆ ಹಲಗೆ ಹಾಕಿ ಕಟ್ಟಿ ಅದರ ಮೇಲೆ ಗಂಟನ್ನು ಮಲಗಿಸಿ ಸುಲಭವಾಗಿಯೂ ಸದ್ದಿಲ್ಲದೆಯೂ ತಳ್ಳಿಕೊಂಡು ಹೋಗುತ್ತಾರೆ.

❖❖❖❖

ಹಿಂದೂಸ್ಥಾನದಲ್ಲಿ ಯೂರೋಪಿಯನ್ ರೋಗಿಗಳಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಉಪಚಾರಾದಿಗಳನ್ನು ಮಾಡುವಂಥಾ ನರ್ಸ್ ಎಂಬ ದಾದಿಯರನ್ನು ಒದಗಿಸುವದಕ್ಕೋಸ್ಕರ ಮೈಸೂರು ಮಹಾರಾಣಿ ಪತ್ನಿಯವರು ಒಂದು ಫಂಡನ್ನು ಕೂಡಿಸುತ್ತಿದಾರಷ್ಟೆ. ಈ ಫಂಡಿಗೆ ಆಗಲೇ ೯,೦೩,೦೦೦ ರೂಪಾಯಿ ಚಂದಾ ಕೂಡಿರುತ್ತದೆ.

❖❖❖❖

ಕಳೆದ ವಾರ ಹಿಂದುಸ್ಥಾನದಲ್ಲಿ ೨,೫೦೨ ಜನರು ಪ್ಲೇಗ್ ರೋಗದಿಂದ ಕಾಲವಾದರು. ಈ ಸ್ಥಿತಿ [illegible] ಆಧಿಪತ್ಯದಲ್ಲೇ ೧,೩೮೮ [illegible] ಮರಣಗಳಾಗಿವೆ. ಪೂನೆ ೩೯೯, ಮದ್ರಾಸ ಇ[illegible] ೩ ಸೆಂಟ್ರಲ್ [illegible] ಪರಗಣದಲ್ಲೇ [illegible] ೩೦೩ ಸಂಯುಕ್ತ ಆಧಿಪತ್ಯಗಳು ೨೫೦, ಮಧ್ಯ ಇಂಡಿಯಾ ೯೦ ಬಂಗಾಳಾ ೧೦೫, ಬರ್ಮಾ ೧೧೨ ಮೈಸೂರು ಸಂಸ್ಥಾನ ೦೩.

❖❖❖❖

ಪೂನಾಪಟ್ಟಣದಲ್ಲಿ ಸಾಂಗ್ಲಿ ಹೊಬಾಜಿ [illegible] ೧೬ ವರುಷದ [illegible] ಎಂಬ [illegible] ವಿನೋದ ಕಸೆ ಟಿಸೆಗಳನ್ನು ಹಾಕಿದ್ದೆಂಬುದು [illegible] ಸೆಷನ್ಸ್ ಜಡ್ಜರವರು ಆ ಕೊಸಿಗೆ ೫ ವರುಷ ಕಠಿಣಸಜಾ, ೧೦೦ ರೂ ದಂಡ ಬಲ್ಕನೆ ದಂಡವನ್ನು ಕೊಡದಿದ್ದರೆ ಇನ್ನೂ [illegible] ಎಂಬೀ ಶಿಕ್ಷೆಯನ್ನು ವಿಧಿಸಿರುತ್ತಾರೆ.

❖❖❖❖

ಮುಂದಿನ ಅಕ್ಟೋಬರ್ ೧ ನೆ ತಾ [illegible] ಹಿಂದುಸ್ಥಾನದ ಮಹಮ್ಮದೀಯ ಪ್ರತಿನಿಧಿಗಳು ವೈಸ್‌ರಾಯ್ ಲಾರ್ಡ್ ಮಿಂಟೋರವರಿಗೆ ಒಂದು ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸುವರು. ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಮಹಮ್ಮದೀಯರಲ್ಲಿ ದೊಡ್ಡವರೂ ವ್ಯಾಪಾರಿಗಳೂ ಮುಖಂಡರಾಗಿಯೂ ಇರತಕ್ಕವರು ಸಿಮ್ಲಾಕ್ಕೆ ಹೋಗುವರು.

❖❖❖❖

ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿಯವರ ಅಪೇಕ್ಷೆ ಪ್ರಕಾರ ತಿರುವಾಂಕೂರು (ಅನಂತಶಯನ) ಸಂಸ್ಥಾನದ ಮಹಾರಾಜರವರು ಮುಂದಿನ ಡಿಸೆಂಬರ್ ೯ ನೆ ತಾರೀಖಿನ ದಿನ ತಿರುವಾಂದ್ರಂ ನಗರವನ್ನು ಬಿಟ್ಟು ೭ ನೆ ತಾ ಮದರಾಸನ್ನು ತಲುಪಿ ೧೫ ನೆ ತಾ ವರೆ ಮದರಾಸಿನಲ್ಲಿದ್ದು ೨೦ ನೆ ತಾ ನಲ್ಲಿ ಹಿಂತಿರುಗಿ ತಮ್ಮ ರಾಜಧಾನಿಯನ್ನು ಸೇರುವವರಾಗಿದಾರೆ.

❖❖❖❖

ತಿರುಚಿನಾಪಲ್ಲಿಯ ಹತ್ತಿರ ಒಂದು ಬಂಡೆಯೊಳಗೆ ಗುಪ್ತ ಧನವಿದೆ ಎಂದು ಅದನ್ನು ತೆಗೆಯುವುದಕ್ಕೆ ಕೆಲವು ಜನರು ಸೇರಿ ಕೂಡಿ ಕೆಲವು ಕಾಲದಿಂದ ಕಲ್ಲನ್ನು ಒಡೆಸುತ್ತಾ ಬಂದಿದ್ದಾಗ್ಯೂ ಇದುವರೆ ಯಾವ ಪ್ರಯೋಜನವೂ ಆಗಲಿಲ್ಲ. ಡೈನಮೈಟ್ ಬಿಕರಿ ಮಾಡುವರಿಗೆ ಮಾತ್ರ ಆದಾಯವಾಯಿತು. ಆ ಒಡೆದ ಕಲ್ಲುಗಳನ್ನು ರಸ್ತೆಗೆ ಉಪಯೋಗಿಸಬೇಕೆಂದು ಯೋಚಿಸುತ್ತಿದಾರೆ.

❖❖❖❖

ಕಲ್ಕತ್ತೆಯಲ್ಲಿ ಶ್ರೀ ಕಿಶನಲಾಲ್ ಎಂಬ ಸಾಹುಕಾರನು ಪಾಂಡೆ ಎಂಬ ರೈಲ್ವೆ ನೌಕರನಿಂದ ೧೨೦ ರೂಪಾಯಿಗೆ ಪತ್ರ ಬರೆಸಿಕೊಂಡು ೩೦ ರೂಪಾಯಿ ಕೊಟ್ಟನು. ಇದಕ್ಕೆ ಬಡ್ಡಿ ಹೇಳುವಾ ತಿಂಗಳಿಗೆ ೧ ರೂಪಾಯಿ. ಸಾಹುಕಾರನು ಅಸಲು ಬಡ್ಡಿ ಸೇರಿಯಂತೆ ಸುಮ್ಮನಿದ್ದು ೩೩೬ ರೂಪಾಯಿಗೆ ದಾವಾ ತಂದನು. ಜಡ್ಜಿಯು ೧೩೬ ರೂಪಾಯಿ ವಜಾ ಮಾಡಿ ೨೦೦ ರೂಪಾಯಿಗೆ ಡಿಕ್ರಿ ಕೊಟ್ಟರು.

❖❖❖❖

ಉತ್ತರದೇಶದಲ್ಲಿ ಇನ್ನೂ ೧,೨೨,೦೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರಿ ಧರ್ಮ ಸತ್ರಗಳಲ್ಲಿ ಪೋಷಿಸಲ್ಪಡುತ್ತಿದಾರೆ. ಅಲಹಾಬಾದ್ ಡಿವಿಜನಿನಲ್ಲಿ ೧,೦೦೦ ಜನರು ರಿಲೀಫ್ ಕಾಮಗಾರಿ ಮಾಡುವರು. ಬೊಂಬಾಯಿ ಆಧಿಪತ್ಯದಲ್ಲೂ ೩೮,೫೦೦ ಜನರೂ, ಅಜ್ಮೀರ ಮೇರ್ವಾಡಾಗಳಲ್ಲಿ ೧೯,೬೦೦ ಜನರೂ, ರಾಜಪುಟಾನಾ ಸಂಸ್ಥಾನಗಳಲ್ಲಿ ೯,೫೦೦ ಜನರೂ ಕ್ಷಾಮಪೀಡಿತರಾಗಿದಾರೆ.

❖❖❖❖

ಚಳ್ಳಕೆರೆ [illegible] ತಾಲ್ಲೂಕಿಗೆ ಸೇರಿದ ವಿನಾಚಂದ ಎಂಬ ಊರಿನಲ್ಲಿ ಅಳಿಯನಿಗೂ ಮಾವನವರಿಗೂ ವೈಮನಸ್ಯ ಉಂಟಾದ್ದರಿಂದ ಅಳಿಯನು ಅವನ ಸ್ನೇಹಿತರ [illegible] ರಾತ್ರಿ ಹೊತ್ತು ಮಾವನ ಮನೆಗೆ ನುಗ್ಗಿ ಅತ್ತೆ, ಮಾವ, ಹೆಂಡತಿ, ಇಬ್ಬರು ಮಕ್ಕಳು, ಅಂತು ಐದು ಮಂದಿಯನ್ನೂ ನಿದ್ದೆ ಹೋಗುತ್ತಿದ್ದಹಾಗೇ ಕೊಂದುಹಾಕಿದರೆಂದು ಪ್ರಕಟವಾಗಿದೆ. ಈಗ ಆ ಅಳಿಯನನ್ನು ಹಿಡಿದು ಲಾಕಪ್ಪಿನಲ್ಲಿ ಇರಿಸಿದಾರೆ.

❖❖❖❖

ಗತಿಸಿದ ಲೇಡಿ ಕರ್ಜನ್‌ರವರು ಹಿಂದುಸ್ಥಾನದಲ್ಲಿದ್ದಾಗ್ಗೆ ವಿಕ್ಟೋರಿಯಾ ಮೆಮೋರಿಯಲ್ ಸ್ಕಾಲರ್‌ಷಿಪ್ ಫಂಡ್ ಎಂಬ ಫಂಡನ್ನು ಮಾಡಿ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಅದಕ್ಕೆ ಚಂದಾ ಕೂಡಿಸಿದ

ಈಗ ರೇಡಿ ಕರ್ಜನರವರ ಹೆಸರಿನಮೇಲೆ ಆ ಫಂಡಿನಿಂದ ಕಲ್ಕತ್ತಾ ಯುನೋರಿಸಿಟಿ ವೈದ್ಯವನ್ನು ಕಲಿಯುವ ನಾಲ್ಕು ಮಂದಿ ವಿದ್ಯಾರ್ಥಿನಿಯರಿಗೆ ಐದು ವರುಷಗಳ ತನಕ ತಲಾ ೩೦ ರೂಪಾಯಿ ಮಾಸಾಶನವನ್ನು ಕೊಡುತ್ತಾ ಬರಬೇಕೆಂದು ನಮ್ಮ ವೈಸ್‌ರಾಯ್ ಲಾರ್ಡ್ ಮಿಂಟೋರವರ ಪತ್ನಿಯರು ಅಪ್ಪಣೆ ಕೊಡಿಸಿದಾರೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಮೋಹಿನಿ ಮೋಹನ ದಾಸ್ ನೆಂಬುವನು ಸಂನ್ಯಾಸಿಯಾಗಿ ಹೋಗಿ ಒಬ್ಬ ಅಂಗಡಿ ವರ್ತಕನನ್ನು —ನನಗೆ ಈ ರಾತ್ರಿ ಇರುವುದಕ್ಕೆ ಸ್ಥಳ ಕೊಡು ಎಂದು ಕೇಳಿದನು ಅವನು ನಿಜ ಸಂನ್ಯಾಸಿ ಎಂದು ಭಾವಿಸಿ ಅವನಿಗೆ ತನ್ನ ಮನೆಯಲ್ಲಿ ಊಟಕ್ಕಿಕ್ಕಿ ಮಲಗಿಸಿಕೊಂಡನು. ಆದರೆ ರಾತ್ರಿ ಎಲ್ಲರೂ ನಿದ್ದೆ ಮಾಡುತ್ತಿರುವಾಗ ಈ ಕಪಟ ಸನ್ಯಾಸಿಯು ವರ್ತಕನ ಕೈ ಪೆಟ್ಟಿಗೆಯನ್ನು ಒಡೆದು ಸಾವಿರಾರು ರೂಪಾಯಿಗಳನ್ನು ಎತ್ತಿ ಹಾಕಿದನು ಮಾರನೆದಿನ ಪೋಲೀಸಿನವರು ಅವನನ್ನು ಹಿಡಿದರು ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ

◆◆◆◆

ಕಲ್ಕತ್ತಾ ಪಟ್ಟಣದ ಹತ್ತಿರ ... ಎಂಬ ಊರಿನ ಸ್ಟೇಷನ್ನಿನ ಬಳಿಯಲ್ಲಿ ಇಂಗ್ಲೀಷ್ ಸೈನಿಕರು ಯಾವ ಕಾರಣದಿಂದಲೋ ೩೬ ಮಂಗಗಳನ್ನು ಕೊಂದು ಕತ್ತರಿಸಿ ಬಿಟ್ಟು ಸುಟ್ಟು ಹಾಕಿದರು. ಇದನ್ನು ವಿಚಾರಿಸುವುದಕ್ಕಾಗಿ ... ಪಟ್ಟಣದಿಂದ ಮೇಜರ್ ಜನರಲ್ ... ಯವರು ಅಲ್ಲಿಗೆ ಹೋಗಿ ಹಿಂದುಗಳ ಮುಖಂಡರ ... ಆ ... ಎಲ್ಲಾ ಸಂಗತಿಗಳನ್ನೂ ಕೇಳಿ ... ಆ ಸ್ಥಳವನ್ನು ಅಧಿಕಾರಿಗಳು ... ಸೈನ್ಯದ ಇಲಾಖೆಯ ... ಮಾಡಿರುವದಾಗಿಯೂ ಕೂಡ್ಲೆ ಈ ವಿಷಯದಲ್ಲಿ ಗವರ್ನ್ಮೆಂಟಿನಿಂದ ... ಸರಿಯಾದ ... ಕೊಡಲ್ಪಡುವುದೆಂತಲೂ ... ಸಮಾಧಾನ ... ಹೇಳಿದರು

◆◆◆◆

ಕಲ್ಕತ್ತಾ ... ಕೋರ್ಟಿನ ಜಡ್ಜರ ತಲಬು ತಿಂಗಳಿಗೆ ೩,೦೦೦ ರೂಪಾಯಿ ಅಲ್ಲಿ ಈಗ ಅಡ್ವೋಕೇಟ್ ಜನರಲ್ ಕೆಲಸವನ್ನು ಬಿಡಲಿರುತ್ತಿರುವ ಮಿ॥ ಎಸ್. ಪಿ. ಸಿನ್ಹಾ ಯವರಿಗೆ ... ಕೋರ್ಟಿನ ... ಕೆಲಸವನ್ನು ಕೊಡಬೇಕೆಂದು ಗವರ್ನಮೆಂಟಿನವರು ಯೋಚಿಸಿ ಆ ಕೆಲಸವನ್ನು ಒಪ್ಪಿಕೊಳ್ಳಬೇಕೆಂದು ಅವರನ್ನು ಕೇಳಿದ್ದಕ್ಕೆ ಮಿ॥ ಸಿನ್ಹಾ ಯವರು—ನನಗೆ ಇನ್ನೂ ೪೩ ವರುಷ ... ಬ್ಯಾರಿಸ್ಟರ್ ಕೆಲಸದಲ್ಲಿ ತಿಂಗಳಿಗೆ ೧೯,೦೦೦ ರೂಪಾಯಿನಿಂದ ... ರೂಪಾಯಿನ ತನಕ ಸಂಪಾದನೆ ಮಾಡುತ್ತಿದ್ದೇನೆ ಇದನ್ನು ಬಿಟ್ಟು ಜಡ್ಜಿಯ ಕೆಲಸವನ್ನು ಒಪ್ಪಿಕೊಂಡು ಇರಲಾರೆನು ಎಂದು ಉತ್ತರ ಕೊಟ್ಟಿದಾರೆ

◆◆◆◆

ಹೈದರಾಬಾದ್ ಸಂಸ್ಥಾನದ ನೈಜಾಮರವರಿಗೆ ಕಾಯಿಲೆ ವಾಸಿಯಾದ್ದರಿಂದ ಅವರು ನಾಲ್ವತ್ತು ದಿನಗಳ ತನಕ ಪ್ರತಿ ದಿನವೂ ೧೯,೦೦೦ ಜನರಿಗೆ ಅನ್ನದಾನ ಮಾಡಿಸಿದರು. ಮೊದಲು ಈ ಅನ್ನದಾನದಿಂದ ... ಜನರಲ್ಲಿ ... ತಿಬೇಧಿ ಕಟ್ಟುತ್ತಿಂಬ ... ಇತ್ತು ಆದರೆ ... ರೋಗವೂ ಹುಟ್ಟದೆ ಎಲ್ಲರೂ ವಿಶೇಷವಾದ ... ಭಕ್ಷ್ಯಭೋಜ್ಯಗಳನ್ನು ತಿಂದು ತೇಗಿದರು. ಇದಕ್ಕೆ ಮುಖ್ಯ ಕಾರಣವೇನೆಂದರೆ— ... ಸಾಮಗ್ರಿಗಳನ್ನೆಲ್ಲಾ ಅಜಮಾಯಿಷಿ ಮಾಡಿ ... ಒಂದು ದಿನ ೩,೦೦೦ ... ಮಾರ್ಗವನ್ನು ನೈಜಾಮರವರು ಅಜಮಾಯಿಷಿ ಮಾಡಿ, ... ಹಿಂದಿನ ದಿನ ... ದ್ದೆಂದು ತಿಳಿದು, ಕೂಡಲೇ ಅಷ್ಟನ್ನೂ ... ಸುರಿಸಿ ಮಣ್ಣು ಹಾಕಿಸಿದರು.

◆◆◆◆

ಪೂರ್ವ ಕಾಲದಲ್ಲಿ ಹಿಂದುಸ್ಥಾನವನ್ನು ಆಳಿದ ಮೊಗಲಾಯರ ವಂಶೀಕರು ಈಗ ಈ ದೆಹಲಿ ಪಟ್ಟಣದಲ್ಲಿ ಇರುತ್ತಾರೆ ಇವರಲ್ಲಿ ಬಹು ಜನ ಜೀವನಕ್ಕಿಲ್ಲದೆ ತುಂಬಾ ಕಷ್ಟಪಡುವರು ಮೊನ್ನೆ ಪ್ರಿನ್ಸ್ ಆಫ್ ವೇಲ್ಸರವರು ದೆಹಲಿಗೆ ದಯಮಾಡಿದ್ದಾಗ್ಗೆ ಅವರೆಲ್ಲಾ ಸೇರಿ ತಮ್ಮ ದುಸ್ಥಿತಿಯನ್ನು ಕುರಿತು ಅವರಿಗೆ ಅರಿಕೆ ಮಾಡಿಕೊಂಡರು. ಆಗ ಪ್ರಿನ್ಸ್ ಆಫ್ ವೇಲ್ಸರವರು ತುಂಬಾ ಕನಿಕರಪಟ್ಟು ಅವರೆಲ್ಲರ ಪೂರ್ವೋತ್ತರವನ್ನು ವಿಚಾರಣೆ ಮಾಡಿ ಅವರ ಜೀವನೋಪಾಯಕ್ಕೆ ತಕ್ಕಷ್ಟು ದ್ರವ್ಯ ಸಹಾಯ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ... ಕಮಿಷನರು ಆ ವಂಶೀಕರ ಯೋಗ್ಯತೆ ಸ್ಥಿತಿ ಗುಣಗಳನ್ನು ಕುರಿತು ಒಂದು ರಿಪೋರ್ಟ್ ಬರೆದು ಕಳುಹಿಸಿರುವರು ಇಷ್ಟರಲ್ಲೇ ಅವರ ... ವಿಚಾರಣೆಯಾಗಿ ತೀರ್ಮಾನವಾಗಬಹುದೆಂದು ನಿರೀಕ್ಷಿಸಬಹುದಾಗಿದೆ.

◆◆◆◆

ಮಕ್ಕಾ ಮದೀನಾಗಳಿಗೆ ಯಾತ್ರೆ ಹೋಗುವಂಥಾ ಮಹಮದೀಯರು ... ಬೊಂಬಾಯಿನಲ್ಲಿ ಹಡಗು ಹತ್ತುವುದಕ್ಕೆ ಮೊದಲು ಹತ್ತು ದಿನ ತನಕ ಕ್ವಾರಂಟೀನ್ ಕ್ಯಾಂಪುಗಳಲ್ಲಿ ತಡೆಯುತ್ತಿದ್ದರು ಈಚೆಗೆ ಮಹಮದೀಯರು ಇದು ತುಂಬಾ ಕಷ್ಟವೆಂತಲೂ ಅದನ್ನು ವಜಾ ಮಾಡಬೇಕೆಂತಲೂ ಕೇಳಿಕೊಂಡರು ಆದಕ್ಕೆ ಈಗ ಇಂಡಿಯಾ ಗವರ್ನ್ಮೆಂಟಿನವರು ಐದು ದಿನ ಮಾತ್ರ ಕ್ಯಾಂಪಿನಲ್ಲಿದ್ದರೆ ಸಾಕೆಂದು ಅಪ್ಪಣೆ ಕೊಟ್ಟರು ಇದನ್ನು ಕೇಳಿ ಬೊಂಬಾಯಿನಲ್ಲಿ ಕೆಲವು ... ಸುಮಾರು ... ಸಾವಿರ ಮಹಮದೀಯರು ಸಭೆ ಮಾಡಿ, ಐದು ದಿನ ತಡೆಯುವುದನ್ನು ವಜಾ ಮಾಡಬೇಕೆಂಬದಾಗಿ ಇಂಡಿಯಾ ಗವರ್ನ್ಮೆಂಟಿಗೂ ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರೆಟರಿಯವರಿಗೂ ತಂತೀ ವರ್ತಮಾನ ಕೊಟ್ಟು ಕೇಳಿಕೊಂಡಿದಾರೆ

◆◆◆◆

ಬೊಂಬಾಯಿಪಟ್ಟಣದಲ್ಲಿ ಕಲ್ಯಾಣಭಾಯಿ ಇಬ್ರಾಹಿಂ ಎಂಬ ಪ್ರಸಿದ್ಧ ... ಕಾರರಿಗೆ ಗವರ್ನಮೆಂಟಿನವರು ... ಸರ್ ... ಎಂಬ ಬಿರುದನ್ನು ದಯಪಾಲಿಸಿದರು ಅಲ್ಲಿನ ದೊಡ್ಡಮನುಷ್ಯರೂ ... ಕಾರರೂ ತುಂಬಾ ಸಂತೋಷಪಟ್ಟು ಕರೀಂಭಾಯಿ ಯವರಿಗೆ ಸತ್ಕಾರ ಮಾಡುವುದಕ್ಕೋಸ್ಕರ ಚಂದಾ ಕೂಡಿಸಿ, ಈ ಫಂಡಿನಿಂದಲೇ ಭೋಜನ ಮೊದಲಾದ ಸಮಸ್ತ ಸತ್ಕಾರದ ಖರ್ಚನ್ನೂ ಮಾಡಿದ ಮೇಲೆ ಇನ್ನೂ ೯೦,೦೦೦ ರೂಪಾಯಿ ಉಳಕೊಂಡಿತು. ಕಮಿಟಿಯವರು ಆ ಹಣವನ್ನೆಲ್ಲಾ ಕರೀಂಭಾಯಿ ಯವರಿಗೇನೇ ಕೊಟ್ಟುಬಿಟ್ಟರು ಕರೀಂಭಾಯಿ ಯವರಾದರೋ ತಮ್ಮ ಕೈಯಿಂದ ೧೦,೦೦೦ ರೂಪಾಯಿ ಹಾಕಿ ಒಂದು ಲಕ್ಷ ರೂಪಾಯನ್ನೂ ಯಾವದಾದರೂ ಶಾಶ್ವತವಾದ ಧರ್ಮ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಹೇಳಿ ಗವರ್ನಮೆಂಟಿನವರಿಗೆ ಒಪ್ಪಿಸಿರುತ್ತಾರೆ

◆◆◆◆

ರಂಗೂನ್ ಪಟ್ಟಣದ ಮೊಗಲಾಯಿ ಬೀದಿಯಲ್ಲಿ ಸುಮಾರು ಮೂವತ್ತು ವರುಷಗಳಿಂದ ಒಂದು ವಿಗ್ರಹವು ಒಂದು ಮನೆಯಲ್ಲಿ ರತ್ತಿದೆ ಅದರ ಭಕ್ತರಲ್ಲಿ ಎರಡು ಗುಂಪಾಗಿ ಒಂದು ಗುಂಪಿನವರು ಆ ವಿಗ್ರಹವನ್ನು ಆ ಸ್ಥಳದಿಂದ ಕಿತ್ತು ತೆಗೆದುಕೊಂಡು ಹೋಗಿ ಇನ್ನೊಂದು ಕಡೆ ಪ್ರತಿಷ್ಠೆ ಮಾಡಬೇಕೆಂತಲೂ ಎದರು ಕಕ್ಷಿಯವರು ಕೂಡದೆಂತಲೂ ವ್ಯಾಜ್ಯ ಮಾಡಿದರು ಆ ಮನೆಯ ಬಳಿ ಸಾವಿರಾರು ಜನರು ಸೇರಿ ಮಾರಾಮಾರಿ ನಡೆಯುವಂತಾಯಿತು ದೇವರ ದಯದಿಂದ ಅಷ್ಟರಲ್ಲೇ ಪೋಲೀಸಿಗೆ ವರ್ತಮಾನ ಹೋಗಿ ಅಯುಧಪಾಣಿಗಳಾದ ಪೋಲೀಸು ಅಧಿಕಾರಿಗಳು ಹೋಗಿ ನಿಂತು ದೊಂಬಿ ಜಗಳವನ್ನು ತಪ್ಪಿಸಿದರು. ಹಿಂದೆ ಒಂದು ಸಲ ಆ ಪಟ್ಟಣದ ಚೆಟ್ಟಿ ವರ್ತಕರಲ್ಲಿ ಒಂದು ತೆಂಗಿನ ಕಾಯಿ ವಿಚಾರವಾಗಿ ಜಗಳವಾಗಿ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ೬೦,೦೦೦ ರೂಪಾಯಿ ಖರ್ಚು ಮಾಡಬೇಕಾಯಿತು.

◆◆◆◆

ಬೊಂಬಾಯಿ ಗವರ್ನ್ಮೆಂಟಿನವರು ನಾಸಿಕ್, ಅಹಮದ್ ನಗರಗಳ ಮಧ್ಯೆ ಸಂಡಗಾವನವೆಂಬ ಸ್ಥಳದಲ್ಲಿ ಗೋದಾವರಿ ನದಿಗೆ ಅಡ್ಡ ಕಟ್ಟೆ ಹಾಕಿ ಒಂದು ಭಾರೀ ಕೆರೆ ಮಾಡುವರು ಈ ಅಡ್ಡ ಕಟ್ಟೆಯು ೮೨ ಅಡಿ ಎತ್ತರವಾಗಿಯೂ ೫,೩೦೫ ಅಡಿ ಉದ್ದವಾಗಿಯೂ ಆಗುವುದು ಅಲ್ಲಿಂದ ಕೆಳಗೆ ಸಂಪೂರ್ ಮಧುಮೇಶ್ವರವೆಂಬಲ್ಲಿಂದ ಎರಡು ನೀರಾವರಿ ಕಾಲುವೆಗಳನ್ನು ತೆಗೆಯುತ್ತಾರೆ ಒಂದು ಕಾಲುವೆ ೩೦ ಮೈಲಿ ದೂರವೂ ಇನ್ನೊಂದು ೯೦ ಮೈಲಿ ದೂರವೂ ಹೋಗುವುದು ಮೊದಲನೆ ನಾಲೆಯ ಕೆಳಗೆ ೧,೧೮,೦೦೦ ಎಕರೆಗಳೂ, ಎರಡನೆ ನಾಲೆಯ ಕೆಳಗೆ ೮೮,೦೦೦ ಎಕರೆಗಳೂ ಗೋಧಿ ಫಸಲಿಗೆ ಸಿಕ್ಕುವವು ಈ ಅಡ್ಡಕಟ್ಟಿಗೂ ನಾಲೆಗಳಿಗೂ ಒಟ್ಟು ೯೬॥ ಲಕ್ಷ ರೂಪಾಯಿ ಅಂದಾಜು ಆಗಿದೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈ ನೀರಾವರಿ ಕಾಮಗಾರಿಯನ್ನು ಸ್ಯಾಂಕ್ಷನ್ ಮಾಡಿರುತ್ತಾರಾದ್ದರಿಂದ ಇಷ್ಟರಲ್ಲೇ ಕೆಲಸ ಆರಂಭವಾಗುವುದು.

◆◆◆◆

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಅನೇಕ ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳಿಗೆ ನಾನಾತರದ ಕಷ್ಟಗಳೂ ಮನೋವ್ಯಥೆಗಳೂ ಉಂಟಾಗಿರುತ್ತವೆ ಸ್ವದೇಶೀ ವಿರ್ಗಾಡದ ಗಲಭೆ, ದುಷ್ಕಳನ್ನು ಆವರಿಸುತ್ತಾರೆಂಬುದು, ಅಪಾರ ಮಳೆ ಸುರಿದು ಪ್ರವಾಹಗಳಿಂದುಂಟಾದ ನಷ್ಟಗಳು, ಸಕಾಲದಲ್ಲಿ ಮಳೆ ಬಾರದೆ ಬೆಳೆ ಕೆಟ್ಟು ಆಹಾರ ದಿನಸಿಗಳು ತುಂಬಾ ಪ್ರಿಯವಾಗಿ ದಾರಿಸಿಗಳು ಹೆಚ್ಚುತ್ತಿರುವುದು, ಜ್ಞಾನಾದಿ ಬೀಳರ ಈ ಮೊದಲಾದವುಗಳ ದೆಸೆಯಿಂದ ಪ್ರಜೆಗಳ ಚಿತ್ತವೃತ್ತಿಯು ಸ್ವಸ್ಥವಾಗಿಲ್ಲ ಅನೇಕ ಊರುಗಳಲ್ಲಿ ನೂರಾರು ಸಾವಿರಾರು ಜನರು ಹಗಲು ರಾತ್ರಿ ಎನ್ನದೇ ಗುಂಪು ಗುಂಪಾಗಿ ಹೊರಟು ಅಂಗಡಿ ಮುಂಗಟ್ಟುಗಳನ್ನು ಲೂಟಿ ಮಾಡಿ ದವಸ ಧಾನ್ಯಾದಿಗಳನ್ನು ಎತ್ತಿಕೊಂಡು ಹೋಗುತ್ತಿದಾರೆ ಇನ್ನೊಂದು ಕಡೆ ರೈಲ್ವೆ ನೌಕರರು ಕಾರ್ಖಾನೆಗಳಲ್ಲಿ ಕೂಲಿ ಮಾಡತಕ್ಕವರೂ ಯಜಮಾನರುಗಳ ಮೇಲೆ ತಿರುಗಿಬಿದ್ದು ತಮ್ಮ ಸಂಬಳವನ್ನು ಕಂಬಳಗಳನ್ನೂ ಹೆಚ್ಚು ಮಾಡಿಕೊಟ್ಟ ಹೊರತು ವಾಪಸ್ ರೈಲ್ ಕೆಲಸಕ್ಕಾಗಲಿ ಕಾರ್ಖಾನೆಗಳಿಗಾಗಲಿ ಬರುವುದಿಲ್ಲವೆಂದು ಮುಷ್ಕರ ಹೂಡಿಕೊಂಡಿದಾರೆ ಇದನ್ನೆಲ್ಲಾ ನೋಡಿ ಬಂಗಾಳಾಕ್ಕೆ ಇದುವರೆಗೆ ಇಲ್ಲದ ಇಂಥಾ ದುರ್ದೆಸೆಯು ಯಾಕೆ ಪ್ರಾಪ್ತವಾಯಿತೋ ಎಂದು ಭಯಪಡುತ್ತಲೂ ಚಿಂತಿಸುತ್ತಲೂ ಇದಾರೆ

ವಿದೇಶ ವರ್ತಮಾನಗಳು.

ಪ್ರಪಂಚದ ಸಮಸ್ತ ರಾಜ್ಯಗಳಲ್ಲೂ ಟಂಕಸಾಲೆಗಳಲ್ಲಿ ಛಾಪಾ ಆಗುವ ಒಟ್ಟು ನಾಣ್ಯಗಳಲ್ಲಿ ನಾಲ್ಕನೇ ಒಂದು ಭಾಗದಷ್ಟು ಹಿಂದುಸ್ಥಾನದ ಬೊಂಬಾಯಿ ಮತ್ತು ಕಲ್ಕತ್ತೆಯ ಟಂಕಸಾಲೆಗಳಲ್ಲಿ ಛಾಪಾ ಆಗುತ್ತಿದೆ

◆◆◆◆

ವಿಲಾಯತಿಗೆ ಸೇರಿದ ಈಸ್ಟ್ ಬೋರ್ನ್ ಎಂಬಲ್ಲಿ ಮಿ॥ ತಾಮಸ್ ಉಡ್ ಎಂಬಾತನು ತನ್ನ ಆಸ್ತಿಯಲ್ಲಿ ೬೦,೦೦೦ ರೂಪಾಯನ್ನು ಆಸ್ಪತ್ರೆಗಳಿಗೂ ಧರ್ಮಕಾರ್ಯಗಳಿಗೂ ವಿನಿಯೋಗಿಸಬೇಕೆಂದು ಉಯಿಲು ಬರೆದಿರುತ್ತಾನೆ

◆◆◆◆

ತುರ್ಕಿರಾಜ್ಯದ ಸುಲ್ತಾನರವರಿಗೆ ಕಾಯಿಲೆ ಚನ್ನಾಗಿ ವಾಸಿಯಾಯಿತೆಂದು ಪ್ರಕಟವಾಗಿದ್ದಾಗ್ಯೂ ಈಚೆಗೆ ಡಾಕ್ಟರ್ ಬರ್ಗ್‌ಮನ್ ಎಂಬ ಪ್ರಸಿದ್ಧ ವೈದ್ಯನನ್ನು ಅರಮನೆಗೆ ಕರೆಸಿಕೊಂಡಿರುತ್ತಾರೆಂದು ತಂತೀ ವರ್ತಮಾನ ಬಂದಿದೆ

◆◆◆◆

ಉದ್‌ಫರ್ಡ್ ಎಂಬ ಇಂಗ್ಲೀಷ್ ಹಡಗಿನ ಮುಖ್ಯಸ್ಥನಾದ ಮಿ॥ ಸೆರ್ದ್ ಎಂಬಾತನು ಜಪಾನ್ ತೀರದಲ್ಲಿ ಮುಳುಗಿಹೋಗಿದ್ದ ನಾಲ್ಕರು ಜಪಾನಿನವರನ್ನು ಎತ್ತಿ ಬದುಕಿಸಿದ್ದಕ್ಕಾಗಿ ಜಪಾನ್ ಚಕ್ರವರ್ತಿಯವರು ತುಂಬಾ ಸಂತೋಷಪಟ್ಟು ಆತನಿಗೆ ಬಹು ಅಮೂಲ್ಯವಾದ ಬಹುಮಾನವನ್ನು ಕಳುಹಿಸಿದಾರೆ ಅವರು ಇದುವರೆಗೆ ಯಾರಿಗೂ ಈ ರೀತಿ ಬಹುಮಾನ ಕೊಟ್ಟದ್ದೇ ಇಲ್ಲ

ಕ್ಯೂಬಾ ದ್ವೀಪದಲ್ಲಿ ಸ್ವದೇಶಿಗಳು ಮತ್ತು ಸರ್ಕಾರದವರ ಮೇಲೆ ದಂಗೆಯೆದ್ದು ಎರಡು ಮೂರು ಯುದ್ಧಗಳನ್ನು ಮಾಡಿದರು. ಅಮೇರಿಕದಿಂದ ಹಡಗುಗಳಲ್ಲಿ ಸೈನ್ಯಗಳು ಬರಲಾರಂಭವಾಗಿವೆ ಆ ಯುದ್ಧಗಳಲ್ಲಿ ಸ್ವದೇಶಿಗಳ ಕಡೆ ೨೦೦ ಮಂದಿ ಹತರಾಗಿರುವರು.

◆◆◆◆

ಕನಡಾ ಎಂಬ ಇಂಗ್ಲೀಷ್ ಸಾಮ್ರಾಜ್ಯದಿಂದ ಮಿ॥ ಕ್ರಾಫರ್ಡ್ ಎಂಬ ಪತ್ರಿಕಾ ಕರ್ತನು ಪ್ರಪಂಚವನ್ನೆಲ್ಲಾ ಕಾಲ್ನಡಿಗೆಯಿಂದಲೇ ಸುತ್ತಿಕೊಂಡು ಬರುವುದಾಗಿ ಹೊರಟಿದಾನೆ ಈತನು ಕಾಲ್ನಡಿಗೆಯಿಂದ ಅಸ್ಸಾಂ, ಮಣಿಪುರಗಳನ್ನು ಸುತ್ತಿಕೊಂಡು ಸಿಂಗಾಪುರ ಪಟ್ಟಣದಲ್ಲಿ ದಸ್ತು ಅಲ್ಲಿಂದ ಚೀನಾರಾಜ್ಯವನ್ನು ಕುರಿತು ಪ್ರಯಾಣಮಾಡಿದನು.

◆◆◆◆

ಹಾಂಗ್‌ಕಾಂಗ್ ಕೋಟೆಯಲ್ಲಿ ಮಹಾ ಸಮರ್ಥನೆಂಬ ಹೆಸರುಪಡೆದಿರುವ ಟಿ. ಡಬ್ಲ್ಯು ಬರ್ಜಸ್ ಎಂಬಾತನು ಕಳೆದ ವಾರ ಇಂಗ್ಲೀಷ್ ಕಡಲು ಕಾಲುವೆಯನ್ನು ಈಜಬೇಕೆಂದು ಹೊರಟಿದ್ದು ೮ ಗಂಟೆ ೪೫ ನಿಮಿಷಗಳ ತನಕ ಈಜಿಕೊಂಡು ಹೋದನು ಸಮುದ್ರತೀರ ಸಿಕ್ಕುವುದಕ್ಕೆ ಆರು ಮೈಲಿಗಳಿರುವಾಗ್ಗೆ ಅವನಿಗೆ ಸಾಕಾಗಿಹೋಯಿತು ಸಮೀಪದಲ್ಲೇ ಹೋಗುತ್ತಿದ್ದ ದೋಣಿಯಲ್ಲಿ ಅವನನ್ನು ಎತ್ತಿ ಕೂಡಿಸಿಕೊಂಡು ಹೋದರು

◆◆◆◆

ವಿಲಾಯತಿಯಲ್ಲಿ ಹಿಂದಿನ ವಾರ ಕೆಲವು ದಿನಗಳ ತನಕ ಬಿಸಿಲು ಬಹು ಕಠಿಣವಾಗಿತ್ತು ಅಷ್ಟು ಸೆಕೆಯನ್ನು ಅಲ್ಲಿನವರು ಇದುವರೆಗೆ ಅನುಭವಿಸಿರಲಿಲ್ಲ ಮೈದಾನುಗಳಲ್ಲಿ ಚೆಂಡಾಟಗಳನ್ನು ಆಡುತ್ತಿದ್ದವರೂ ನೋಟಕರೂ ಬಿಸಿಲಿನ ತಾಪವನ್ನು ಸಹಿಸಲಾರದೆ ಸೊಕ್ಕಿ ಅಲ್ಲಲ್ಲೇ ಬಿದ್ದುಕೊಂಡರು ಅವರನ್ನು ಹಾಗೇ ಮನೆಗಳಿಗೆ ಸಾಗಿಸಬೇಕಾಯಿತು ನಾರ್ತ್‌ಹಾಂಪ್ಟನ್‌ನಲ್ಲಿ ಬಿಸಿಲಿನ ಝಳಕ್ಕೆ ಒಂದು ತೋಟಿ ಹತ್ತಿಕೊಂಡು ದೊಡ್ಡ ಆಸ್ಪತ್ರೆಯು ಉರಿದುಹೋಯಿತು ಫ್ರಾನ್ಸಿನ ಮನೆಗಳೂ ವಿಷ್ಣು ಬಿಳ್ಡಿಂಗುಗಳೂ ಮರಗಳೂ ಇನ್ನೂ ಅನೇಕ ಪದಾರ್ಥಗಳೂ ಸುಟ್ಟು ನಷ್ಟವಾಗಿರುತ್ತದೆ

◆◆◆◆

ವಿಲಾಯತಿಗೆ ಸೇರಿದ ನಾಟಿಂಗ್ಹಾಂ ಪಟ್ಟಣದ ರಾಜಬೀದಿಗಳಲ್ಲಿ ಮೋಟಾರ್ ಗಾಡಿಗಳ ತಿರುಗಾಟದಿಂದ ಅಪಾರ ದೂಳಿದ್ದು ರಸ್ತೆ ಕೆಟ್ಟುಹೋಗುತ್ತಿತ್ತು ಅದನ್ನು ತಪ್ಪಿಸುವುದಕ್ಕೆ ಅಲ್ಲಿನ ಪುರಾಧಿಕಾರಿಗಳು ನೀರಿಗೆ ಕ್ಯಾಲ್ಸಿಯಂ ಕ್ಲೋರೈಡನ್ನು ಬೆರಸಿ ಬೀದಿಗಳಲ್ಲಿ ಚಿಮುಕಿಸುತ್ತಾರೆ ಇದರಿಂದ ಬಹುದಿನ ತಂಪಾಗಿಯೇ ಇರುತ್ತದೆ ದೂಳು ಏಳುವುದಿಲ್ಲ ಒಂದಾವರ್ತಿ ಚಿಮುಕಿಸಿದ್ದು ಮೂರು ನಾಲ್ಕು ವಾರಗಳವರೆಗೆ ತಡೆಯುತ್ತದೆ ಇದಕ್ಕೆ ಖರ್ಚಾಗುವುದೂ ಬಹಳವಲ್ಲ. ಒಂದು ಮೈಲಿದೂರದಷ್ಟು ರಸ್ತೆಯನ್ನು ಒಂದು ವರುಷದ ತನಕ ಧೂಳೇಳದಂತೆ ಮಾಡುವುದಕ್ಕೆ ೯೦೦ ರೂಪಾಯಿ ಮಾತ್ರ ಖರ್ಚಾಗುವುದೆಂದು ತಿಳಿದುಬಂದಿದೆ

◆◆◆◆

ವಿಲಾಯತಿಯ ಕೋರ್ಟು (ನ್ಯಾಯಸ್ಥಾನ) ಗಳಲ್ಲಿ ಸಾಕ್ಷಿಗಳು ಹೇಳುವುದಕ್ಕೆ ಮೊದಲು ಕೋರ್ಟಿನಲ್ಲಿಟ್ಟಿರುವ ಬೈಬಲ್ ಎಂಬ ಕ್ರೈಸ್ತ ವೇದಪುಸ್ತಕವನ್ನು ಹಿಡಿದು ಅದಕ್ಕೆ ಮುತ್ತಿಟ್ಟು ಪ್ರಮಾಣಪೂರ್ವಕವಾಗಿ ಹೇಳುತ್ತೇನೆಂದು ಹೇಳಿ ಅರಿಯ ... ಮೊಕದ್ದಮೆಯಲ್ಲಿ ತಾನು ಕಂಡವನ್ನು ನುಡಿಯಬೇಕಾಗಿದೆ ಅಂಥಾ ವೇದಪುಸ್ತಕವು ಅನೇಕರಿಂದ ಮುತ್ತಿಡಲ್ಪಟ್ಟು ಕೊಳಕಾಗಿರೋಣದರಿಂದ ಆ ಪುಸ್ತಕವನ್ನೇ ಉಪಯೋಗಿಸದಂತೆ ಮಾಡಬೇಕೆಂತಲೂ ಅದಕ್ಕೆ ಪ್ರತಿಯಾಗಿ ಸಾಕ್ಷಿ ನುಡಿಯತಕ್ಕವರು ಮೊದಲು ತಮ್ಮ ಕೈಗಳನ್ನು ಮೇಲಕ್ಕೆತ್ತಿ ಬಾಯಿಂದ ಪ್ರಮಾಣವಾಕ್ಯಗಳನ್ನು ಉಚ್ಚರಿಸುವಂತೆ ಮಾಡಬೇಕೆಂತಲೂ ಅನೇಕರಲ್ಲಿ ಅಭಿಪ್ರಾಯ ಉಂಟಾಗಿದೆ ಇಷ್ಟರಲ್ಲೇ ಈ ರೀತಿ ಬದಲಾವಣೆಯಾಗಬಹುದೆಂದು ಹೇಳುವರು

◆◆◆◆

ಚೀನಾರಾಜ್ಯಕ್ಕೆ ಸೇರಿದ ಯಾಂಗ್ಟೀಸ್ ಕಣಿವೆಯಲ್ಲೂ ಶೈವ್ವೂ ಅಧಿಪತ್ಯದಲ್ಲೂ ಪರರಾಜ್ಯಗಳವರು ಸಂಚಾರಮಾಡುವುದು ಬಹಳ ಕಷ್ಟವಾಗಿದೆ ಎಂತಲೂ ಚೀನೀಯರು ಅವರ ಮೇಲೆ ತಮ್ಮ ... ವನ್ನು ತೀರಿಸಿಕೊಳ್ಳಬೇಕೆಂದು ನಾನಾ ಪ್ರಯತ್ನಗಳನ್ನು ಮಾಡಲಾರಂಭಿಸಿದಾರೆಂತಲೂ ತಂತೀವರ್ತಮಾನ ಬಂದಿತೆ ಇದಲ್ಲದೆ ಬಾಕ್ಸರುಗಳೆಂಬ ಗುಂಪಿನವರು ಹೊರಟು ತ್ಸೆಯೂಷಿಯನ್ ಪಟ್ಟಣಕ್ಕೆ ನುಗ್ಗಿ ಅದನ್ನು ಸ್ವಾಧೀನಪಡಿಸಿಕೊಂಡಿದಾರೆ ಮಿಷನರಿಗಳೂ ಪರದೇಶದವರೂ ಟೀವೇನ್‌ನಲ್ಲಿ ಹೋಗಿ ನಿಂತುಬಿಟ್ಟಿದಾರೆ ಅಷ್ಟರಲ್ಲೇ ಜಪಾನಿ ಸೈನ್ಯದ ಒಬ್ಬ ಹುದ್ದೇದಾರನು ಅಲ್ಲಿಗೆ ಹೋಗಿ ಚೀನಾ ಸೈನಿಕರನ್ನು ಕೂಡಿಸಿ ಬಾಕ್ಸರುಗಳ ಮೇಲೆ ಯುದ್ಧಮಾಡಿಸಿದನು ಬಾಕ್ಸರುಗಳ ಮುಖಂಡನನ್ನು ಸೈನಿಕರು ಕೊಂದುಹಾಕಿ, ಅವನ ಹಿಂಬಾಲಕರನ್ನೆಲ್ಲಾ ಚದರಿಸಿದಾರೆ

◆◆◆◆

ವಿಲಾಯತಿಯಲ್ಲಿರುವ ಹಾಲಿಫಾಕ್ಸ್ ಎಂಬ ಪಟ್ಟಣದಲ್ಲಿ ಕಲ್ಲಿ ಎಂಬೊಬ್ಬನ ಮೇಲೆ ರೈಲ್ ಗಾಡಿ ಹರಿದು ಮೃತಪಟ್ಟದ್ದರಿಂದ ಸರ್ಕಾರದವರು ಅವನ ಬಂಧುಬಾಂಧವರ್‍ಯಾರೂ ಸಿಕ್ಕಲಿಲ್ಲವೆಂದು ಹೇಳಿ ಶವವನ್ನು ದಫನ್ ಮಾಡಿಬಿಟ್ಟರು. ಅವನ ಫೋಟೋವನ್ನು ಪೋಲೀಸ್ ಸ್ಟೇಷನ್ ಮುಂಭಾಗದಲ್ಲಿ ತಗಲಿಹಾಕಿದರು ಒಬ್ಬ ಹುಡುಗನು ಅದನ್ನು ನೋಡಿ ಇವನೇ ನಮ್ಮ ತಂದೆ ಎಂದು ತಿಳಿದು ತನ್ನ ತಾಯಿಯನ್ನು ಕರೆದು ತಂದನು ಅವಳು ತನ್ನ ಗಂಡನ ಶವವೆಲ್ಲಿ ಎಂದು ಪ್ರಶ್ನೆಮಾಡಿದಳು ಅಷ್ಟರಲ್ಲೇ ಇತರ ಊರುಗಳಿಗೂ ಈ ವರ್ತಮಾನವು ಹಬ್ಬಿದ್ದರಿಂದ ಇನ್ನೂ ಐದು ಮಂದಿ ಸ್ತ್ರೀಯರು ಅಲ್ಲಿಗೆ ಬಂದು, ಆ ಚಿತ್ರವನ್ನು ನೋಡಿ ನನ್ನ ಗಂಡ, ನನ್ನ ಗಂಡನೆಂದು ಹೇಳಲಾರಂಭಿಸಿದರು ಶವವನ್ನು ಹೂಳಿ ಆರು ವಾರಗಳಾಗಿಹೋಗಿದ್ದರಿಂದ ಅದನ್ನು ಕಿತ್ತು ತೆಗೆದರೂ ಗುರುತು ಗೊತ್ತಾಗುವುದಿಲ್ಲ ಈ ಅಪೂರ್ವವಾದ ಚರ್ಚೆಯು ಯಾವ ರೀತಿ ಕೊನೆಮುಟ್ಟುವುದೋ ಹೇಳುವುದು ಕಷ್ಟವಾಗಿದೆ.

ದಿವಾನ್ ಮೆ|| ಮಾಧವರಾಯರಿಗೆ ಶ್ರೀರಂಗಪಟ್ಟಣದಲ್ಲಿ ನಡೆದ ಆತಿಥ್ಯವು.

ಮೈಸೂರು ಸಂಸ್ಥಾನ ದಿವಾನ್ ಪದವಿಗೆ ಮೆ|| ವಿ ಪಿ ಮಾಧವ ರಾವ್, ಸಿ ಐ ಇ ಯವರು ನೇಮಕವಾಗಿ ದಯಮಾಡಿದ ದಿವಸ ದಿಂ ಗಳಿಂದಲೂ ಶ್ರೀರಂಗಪಟ್ಟಣ ಗಂಜಾಮುಗಳ ಪ್ರಜೆಗಳು ಅವರಿಗೆ ಸುಖಾ ಗಮನವನ್ನು ಬಯಸಿ ತಮಗಿರುವ ಕೊರತೆಗಳನ್ನು ಅರಿಕೆಮಾಡಿಕೊ ಳ್ಳಬೇಕೆಂದು ಕಾತುರಪಡುತ್ತಿದ್ದರು ಮೊನ್ನೆ ತಾ. ೧೬ ನೆ ಭಾನು ವಾರ ಇದಕ್ಕೆ ಅವಕಾಶವಾಯಿತು ಉಭಯ ಊರುಗಳವರೂ ಅವರ ನ್ನು ಸತ್ಕರಿಸುವುದಕ್ಕಾಗಿ ಬಹು ವಿತರಣೆಯಾದ ಅನೇಕ ಏರ್ಪಾಡುಗ ಳನ್ನು ಮಾಡಿದ್ದರು ಮೊದಲೇ ಗೊತ್ತಾಗಿದ್ದಂತೆ ಮೆ|| ಮಾಧವರಾಯ ರು ಡೆಪ್ಟಿ ಕಮಿಷನರ್ ಮೆ|| ಎಂ. ಕಾಂತರಾಜೇ ಅರಸಿನವರ ಸಮೇತ ಭಾನುವಾರ ಬೆಳಿಗ್ಗೆ ೭ ಗಂಟೆಗೆ ಜೋಡಿ ಕುದುರೆ ಸಾರೋಟಿನಲ್ಲಿ ಬಾಡಿಗಾರ್ಡ್ ಕುದುರೆಗಳ ಸಹಿತ ರಾಜಧಾನಿಯಿಂದ ಹೊರಟು ಸುಮಾ ರು ೮ ಗಂಟೆ ಹೊತ್ತಿಗೆ ಶ್ರೀರಂಗಪಟ್ಟಣದ ದಕ್ಷಿಣ ಕೋಟೆ ಬಾಗಿಲ ಬಳಿಗೆ ಹೋಗಿ ಅಲ್ಲಿ ವೈತಪ್ರಜೆಗಳಿಂದ ಕಟ್ಟಲ್ಪಟ್ಟಿದ್ದ ಚಪ್ಪರದಲ್ಲಿ ರೈತಪ್ರತಿನಿಧಿಗಳಿಂದ ಒಪ್ಪಿಸಲ್ಪಟ್ಟ ಫಲಪುಷ್ಪಾದಿಗಳನ್ನು ಸ್ವೀಕರಿಸಿ, ಮುಂದಕ್ಕೆ ಆಸ್ಪತ್ರೇ ಮಾರ್ಗವಾಗಿ ಹೊರಟು, ಪ್ರಸಿದ್ಧವಾದ ಮತ್ತು ಚರಿತ್ರಾರ್ಹವಾದ ದರಿಯಾ ದೌಲತ್ ಬಾಗ್ ಎಂಬ ಟೀಪೂಸುಲ್ತಾ ನರವರ ಉದ್ಯಾನವನವನ್ನು ತಲಪಿದರು ಬಾಗಿಲಲ್ಲಿ ಒಳಗಡೆ ಉಭಯ ಊರುಗಳ ಪ್ರಜಾಪ್ರತಿನಿಧಿಗಳೂ ಸಾಲಾಗಿ ನಿಂತು ದಿವಾನರವರಿಗೆ ಫಲ ಪುಷ್ಪಗಳನ್ನು ಒಪ್ಪಿಸಿದರು ಅಲ್ಲಿಂದ ಮುಂದಕ್ಕೆ ಹೋಗಿ ಸಾರೋ ಟಿನಿಂದಿಳಿದು ಬಂಗಲೆಯ ಮೆಟ್ಟಿಲುಗಳನ್ನು ಹತ್ತಿ ವೈದಿಕಮಂಡಲಿಯವ ರು ಆಶೀರ್ವಾದಪೂರ್ವಕ ಒಪ್ಪಿಸಿದ ಫಲಮಂತ್ರಾಕ್ಷತೆಗಳನ್ನು ಸ್ವೀಕರಿಸಿ ಬಂಗಲೆಯ ಉಪ್ಪರಿಗೇ ಮೇಲಕ್ಕೆ ದಯಮಾಡಿದರು. ಅನಂತರ ದಿವಾನ್ ರವರೂ ಮೆ|| ಕಾಂತರಾಜೇ ಅರಸಿನವರೂ ಸ್ನಾನಾದಿಗಳನ್ನು ತೀರಿಸಿ ಕೊಂಡು ರಂಗನಾಥಸ್ವಾಮಿ ದೇವಸ್ಥಾನಕ್ಕೂ ಗಂಗಾಧರೇಶ್ವರಸ್ವಾಮಿ ದೇವಸ್ಥಾನಕ್ಕೂ ದಯಮಾಡಿ ಪ್ರದಕ್ಷಿಣೆ ದೇವರ ದರ್ಶನಗಳನ್ನು ಮಾಡಿ ತೀರ್ಥಪ್ರಸಾದಗಳನ್ನೂ ವೈದಿಕಮಂಡಲಿಯ ರ ಆಶೀರ್ವಾದಪೂರ್ವ ಕವಾದ ಫಲಮಂತ್ರಾಕ್ಷತೆಗಳನ್ನೂ ಸ್ವೀಕರಿಸಿ, ಯಥಾಪ್ರಕಾರ ದರಿ ಯಾ ದೌಲತ್ ಬಂಗಲೆಯನ್ನು ತಲಪಿದರು. ಶ್ರೀರಂಗಪಟ್ಟಣದ ಅಂಗ ಡಿ ಬೀದಿಯಲ್ಲಿ ವರ್ತಕರೇ ಮುಖಂಡರಾದವರು ಒಂದು ಚಪ್ಪರವನ್ನು ಹಾಕಿ ಅವರಲ್ಲಿ ಕಾದಿದ್ದು ದಿವಾನರವರಿಗೆ ಫಲಪುಷ್ಪಗಳನ್ನು ಒಪ್ಪಿಸಿ ದರು. ಬಂಗಲೆಯ ಆವರಣದೊಳಗೆ ಪ್ರತ್ಯೇಕ ಪ್ರತ್ಯೇಕವಾಗಿ ಏರ್ಪಾ ಡಾಗಿದ್ದ ಪರ್ಣಶಾಲೆಗಳಲ್ಲಿ ದಿವಾನರವರಿಗೆ ಬಹು ವಿಶೇಷವೂ ರುಚಿಕ ರವೂ ಆದ ಭಕ್ಷ್ಯಭೋಜ್ಯಗಳನ್ನು ಮಾಡಿ ಔತಣಮಾಡಿದರು ಭೋಜ ನಾನಂತರ ಮೆ|| ಗಳಾದ ಶೇಷಣ್ಣನವರು, ವಾಸುದೇವಾಚಾರ್ರು, ಬಿ ಕೃಷ್ಣಪ್ಪನವರು, ಗವಾಯಿಗಳು, ಇವರುಗಳ ಇಂಪಾದ ಸಂಗೀತವನ್ನು ಮಾಡಿಸಿದರು ಮಧ್ಯಾಹ್ನ ೩ ಗಂಟೆಯ ಮೇಲೆ ದಿವಾನರವರೂ ಮೆ|| ಕಾಂತರಾಜೇ ಅರಸಿನವರೂ ಸಾರೋಟಿನಲ್ಲಿ ಕುಳಿತು ಗಂಜಾಮಿಗೆ ದಯಮಾಡಿ, ಅಲ್ಲಿರುವ ಪ್ರಸಿದ್ಧವಾದ ಕೈದಿರಲ್ಲಿ ಟೀಪೂ ಸುಲ್ತಾನರು ಗಳ ಗೋರಿಗಳನ್ನು ನೋಡಿಕೊಂಡು ಬಂದರು ಗಂಜಾಮಿನ ವರ್ತ ಕರೂ ಪ್ರಜೆಗಳೂ ಮೂರು ಕಡೆಗಳಲ್ಲಿ ಚಪ್ಪರಗಳನ್ನು ಹಾಕಿಸಿ, ದಿವಾನರವರನ್ನು ಎದುರುಗೊಂಡು ಅವರಿಗೆ ಅಲ್ಲಲ್ಲಿ ಫಲಪುಷ್ಪಗಳನ್ನು ಒಪ್ಪಿಸಿದರು ಪಾಠಶಾಲೆಗಳ ಬಾಲಕಿಯರೂ ಬಾಲಕರೂ ಹಾಡುಗಳನ್ನು ಹೇಳಿ ವಂದನೆಮಾಡಿದರು ಮೇಲ್ಕಂಡ ಗೋರಿಯಲ್ಲಿ ಅಲ್ಲಿನ ಅಧಿಕಾರಿಗಳು ವಿಶೇಷವಾದ ಸಂಭಾವನೆಗಳನ್ನು ಮಾಡಿ, ಎಲ್ಲಾ ಭಾಗ ಗಳನ್ನೂ ತೋರಿಸಿದರು ರೋಮಾಯ ಕ್ರೈಸ್ತ ಪ್ರಜೆಗಳ ಮಕ್ಕಳು ದೇವಸ್ಥಾನದ ಬಳಿ ಗುಂಪು ಕೂಡಿ ಜಯಘೋಷಗಳಿಂದ ದಿವಾನರವರ ನ್ನು ವಂದಿಸಿದರು

ಅಡ್ರೆಸ್ ಒಪ್ಪಿಸಿದ್ದು

ಅನಂತರ ದರಿಯಾ ದೌಲತ್ ಬಂಗಲೆಯಲ್ಲಿ ದಿವಾನರವರಿಗೆ ಶ್ರೀರಂಗ ಪಟ್ಟಣದ ಮತ್ತು ಗಂಜಾಮಿನ ಪ್ರಜೆಗಳು ಸೇರಿ ಒಂದು ಅಡ್ರೆಸ್ಸನ್ನು ಓದಿ, ಬಹು ನೇತ್ರಾನಂದಕರವಾಗಿ ಚಿತ್ರಕೆಲಸ ಮಾಡಿದ ಬೆಳ್ಳಿ ಕ್ಯಾ ಪಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ಮೆ|| ಬಿ ನರಸಿಂಗರಾಯರು ಓದಿದ ಈ ಅಡ್ರೆಸ್ಸಿನಲ್ಲಿ ಕಂಡ ಮುಖ್ಯ ಭಾಗಗಳೇನೆಂದರೆ—

"ಈ ಶ್ರೀರಂಗಪಟ್ಟಣವು ನಮ್ಮ ಶ್ರೀಮನ್ಮಹಾರಾಜರವರ ಸಂ ಸ್ಥಾನದಲ್ಲಿ ಪುರಾತನವಾದದ್ದಾಗಿಯೂ ಚರಿತ್ರೆಗಳಲ್ಲಿ ಪ್ರಖ್ಯಾತವಾದ ದ್ದಾಗಿಯೂ ಪವಿತ್ರವಾದ ಕಾವೇರೀ ನದಿಯೂ ಮಹಾ ಋಷಿಗಳಿಂದ ಸ್ಥಾಪಿತವಾದ ದೇವಾಲಯಗಳೂ ಉಳ್ಳ ಪುಣ್ಯಕ್ಷೇತ್ರವಾಗಿಯೂ ಶ್ಲಾಘ ನೀಯವಾದ ಪುರಾತನ ಕಟ್ಟಡಗಳಿಂದಲಂಕೃತವಾದದ್ದಾಗಿಯೂ ಇರು ತ್ತದೆ ಈ ಪಟ್ಟಣವೂ ಇದಕ್ಕೆ ನಿಕಟವಾದ ಗಂಜಾಂ ಪಟ್ಟಣವೂ ಒಂ ದಾನೊಂದು ಕಾಲದಲ್ಲಿ ಉಚ್ಛ್ರಾಯಸ್ಥಿತಿಯಲ್ಲಿದ್ದು ಈಗ್ಗೆ ೨೫ ವರ್ಷಗಳ ಕೆಳಗೆ ಕೇವಲ ಹೀನಸ್ಥಿತಿಗೆ ಬಂದದ್ದನ್ನು ಸ್ವಾಮಿಯವರು ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರಾಗಿದ್ದಾಗ್ಗೆ ಪರಾಮರ್ಶಿಸಿ, ಈ ಪಟ್ಟಣಗಳನ್ನು ಒಳ್ಳೇ ಸ್ಥಿತಿಗೆ ತರಬೇಕೆಂಬ ಶ್ಲಾಘನೀಯವಾದ ಉದ್ದೇ ಶದಿಂದ ಹಲವು ಏರ್ಪಾಡುಗಳನ್ನು ಕಲ್ಪಿಸಿ, ಹೊಸದಾಗಿ ರಸ್ತೆಗಳನ್ನು ಹಾಕುವದರಿಂದಲೂ ಜನಗಳಿಗೆ ನೂತನವಾಗಿ ಮನೆ ಕಟ್ಟಲು ಪ್ರೋತ್ಸಾ ಹಕೊಡುವದರ ಮೂಲಕವೂ ಪುರಾತನ ದೇವಸ್ಥಾನಗಳನ್ನು ಜೀರ್ಣೋ ದ್ಧಾರಮಾಡಿದ್ದರಿಂದಲೂ ನೂತನವಾಗಿ ವೈದ್ಯಶಾಲೆ ಪಾಠಶಾಲೆಗಳನ್ನು ಸ್ಥಾಪಿಸಿ ಕಟ್ಟಡಗಳನ್ನು ಏರ್ಪಡಿಸಿ, ಅನೇಕ ಪ್ರಜೋಪಕಾರವಾದ ಕಾರ್ಯಗಳನ್ನು ಮಾಡಿಸುತ್ತಾ ಬಂದದ್ದರಿಂದಲೂ ಇವು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬರುತ್ತಿದ್ದವು ಸ್ವಾಮಿಯವರು ಈ ಸಬ್ ಡಿವಿ ಜನ್ ಬಿಟ್ಟು ದಯಮಾಡಿದ್ದರ ಮೇಲೆ ಈ ಎಲ್ಲಾ ಏರ್ಪಾಡುಗಳೂ ಅಭಿ ವೃದ್ಧಿಯೂ ಸ್ವಾಮಿಯವರ ಉದ್ದೇಶಾನುಸಾರ ನಡಿಯದೆ ಅಷ್ಟರಲ್ಲೇ ನಿಂತುಹೋದವು. ಇಷ್ಟುಮಾತ್ರವೇ ಅಲ್ಲದೆ, ಈಚೆಗೆ ಇಲ್ಲಿ ಪ್ಲೇಗ್ ರೋಗವು ತಲೆದೋರಿ ಉಭಯಪಟ್ಟಣಗಳನ್ನೂ ಬಹಳ ಮಟ್ಟಿಗೆ ಹೀನ ಸ್ಥಿತಿಗೆ ತಂದುಬಿಟ್ಟಿದೆ. ಈಗ ಪ್ರಜೆಗಳ ಆರೋಗ್ಯಕ್ಕೆ ಆಗಬೇಕಾದ ಯಾವದೊಂದು ಏರ್ಪಾಡೂ ನಡಿಯದೆಯೂ ಪಾನಕ್ಕೆ ನಿರ್ಮಲವಾದ ಉದಕ ದೊರಿಯದೆಯೂ ನಾನಾ ವಿಧದಲ್ಲೂ ಅನಾರೋಗ್ಯ ಹೆಚ್ಚು ತ್ತಲೂ ವ್ಯಾಪಾರಸ್ಥರಿಗೆ ಸರಿಯಾದ ಪ್ರೋತ್ಸಾಹಗಳಿಲ್ಲದೆ ಅವರುಗಳು ಚದರಿಹೋಗುತ್ತಲೂ ಇರುವದರಿಂದ ಈ ಪಟ್ಟಣಗಳು ದಿನೇ ದಿನೇ ಶಿಥಿಲವಾಗುತ್ತಾ ಬಂದಿರುತ್ತವೆ ಇಂಥಾ ಸನ್ನಿವೇಶದಲ್ಲಿ ಸ್ವಾಮಿಯ ವರು ಈ ಸಂಸ್ಥಾನದ ದಿವಾನ್ ಪದವಿಗೆ ಬಂದದ್ದರಿಂದ ಈ ಪಟ್ಟಣಗಳ ನಿವಾಸಿಗಳಾದ ನಾವುಗಳು ನಮ್ಮ ಅದೃಷ್ಟದಿಂದಲೇ ಸ್ವಾಮಿಯವರು ಈ ಮುಖ್ಯೋನ್ನತಪದವಿಗೆ ದಯಮಾಡಿಸಿರುವರೆಂತಲೂ ಇನ್ನು ಮೇಲೆ ಈ ಪಟ್ಟಣಗಳ ದೌರ್ಭಾಗ್ಯದುರ್ದೆಶೆಗಳು ಕಳೆದುಹೋಗಿ ಸ್ವಾಮಿಯ ವರ ಕರುಣಾ ಕಟಾಕ್ಷದಿಂದ ಈ ಪಟ್ಟಣಗಳು ಎಲ್ಲಾ ಭಾಗದಲ್ಲಿಯೂ ಉನ್ನತಸ್ಥಿತಿಗೆ ಬರುವವೆಂತಲೂ ದೃಢವಾಗಿ ನಂಬಿರುತ್ತೇವೆ."

ಅನಂತರ ಮೆ|| ವೀಣಾ ರಂಗಸಾಮೈಯ್ಯಂಗಾರ್ರು ಮುಂದೆ ಬಂದು ದಿವಾನರವರನ್ನೂ ಸಭಿಕರನ್ನೂ ಕುರಿತು—ವೈಸರಾಯ್ ಹೆರಲ್ಡ್ ಎಂಬ ಒಂದು ಇಂಗ್ಲೀಷ್ ಪತ್ರಿಕೆಯಲ್ಲಿ ಈ ಔತಣದ ವಿಷಯವಾಗಿ ಬರೆದಿರು ವ ಸಂಗತಿಗಳು ನಿಜವಲ್ಲವೆಂಬುವುದೂ ಈ ದಿನದ ಉತ್ಸವಗಳಿಗೆ ಗಂಜಾ ಮು ಶ್ರೀರಂಗಪಟ್ಟಣಗಳ ಸಕಲ ಪ್ರಜೆಗಳೂ ಸಹಭಾಗಿಗಳಾಗಿದ್ದಾರೆಂಬು ವುದೂ ಇಲ್ಲಿ ಕೂಡಿರುವ ಪ್ರಜಾ ಬಾಹುಳ್ಯದಿಂದಲೇ ದೃಷ್ಟಾಂತವಾಗಿ ದೆಯಾದ್ದರಿಂದ ಆ ಪತ್ರಿಕೆಯು ನಮ್ಮ ಅಭಿಪ್ರಾಯಗಳನ್ನು ತಿಳಿಸುವುದ ಲ್ಲ" ಎಂಬದಾಗಿ ಹೇಳಿದರು ಮೆ|| ಎನ್ ಸುಬ್ಬರಾಯರು ಈ ಅಭಿಪ್ರಾ ಯವನ್ನೇ ಅನುಮೋದಿಸಿ ಒಂದೆರಡು ಮಾತಾಡಿದರು ಹರ್ಷ ಅಮ ಲ್ದಾರರೂ ಮೈಸೂರು ಮ್ಯುನಿಸಿಪಲ್ ಕಮಿಷನರೂ ಆದ ಮೆ|| ಜಸ್ಟ ಅಲ್ಲಿ ಬೇಗ್ ಯವರು ಹಿಂದುಸ್ಥಾನಿಯಲ್ಲಿ ಅಡ್ರೆಸ್ಸನ್ನು ಓದಿ, ಸಬ್ ಡಿವಿಜನ್ ಕಛೇರಿಗಳನ್ನು ಶ್ರೀರಂಗಪಟ್ಟಣಕ್ಕೆ ತಂದಿಡಬೇಕೆಂತಲೂ ಉಭಯ ಪಟ್ಟಣಗಳನ್ನೂ ಎಲ್ಲಾ ವಿಷಯದಲ್ಲೂ ಆಬಾದುಮಾಡಬೇ ಕೆಂತಲೂ ಕೇಳಿಕೊಂಡರು ತರುವಾಯ ಅಲ್ಲಿನ ವಿವೇಕಾನಂದ ಸಂ ಘದ ಮೆಂಬರುಗಳು ತಮ್ಮ ಸಂಘದ ಉದ್ದೇಶಕಾರ್ಯಗಳನ್ನು ವಿವರಿ ಸಿ ಹೇಳಿ, "ವಿವೇಕೋದಯ" ಪುಸ್ತಕವನ್ನು ಒಪ್ಪಿಸಿದರು

ಪುಷ್ಪಮಾಲಿಕೆಗಳನ್ನು ಹಾಕಿ ತಾಂಬೂಲಗಳನ್ನೊಪ್ಪಿಸಿದ ಮೇಲೆ ದಿವಾನ್ ಮೆ|| ಮಾಧವರಾಯರು ಎದ್ದು ಸಭಿಕರನ್ನು ಕುರಿತು ಬಹು ಸಂಕ್ಷೇಪವಾದ ಪ್ರತ್ಯುತ್ತರವನ್ನಿತ್ತರು. ಅದರ ಮುಖ್ಯಾಭಿಪ್ರಾಯವೇ ನೆಂದರೆ—"ನೀವುಗಳೆಲ್ಲಾ ಇಷ್ಟು ಪ್ರೀತಿಪೂರ್ವಕವಾಗಿ ಮಾಡಿದ ಮ ರ್ಯಾದೆಗಳಿಗಾಗಿಯೂ, ಈಗ ಒಪ್ಪಿಸಿದ ಅಡ್ರೆಸ್ಸಿಗಾಗಿಯೂ ನಾನು ನಿಮಗೆಲ್ಲಾ ವಿಶೇಷ ಕೃತಜ್ಞನಾಗಿರುತ್ತೇನೆ. ನಾನು ಮೊದಲು ಇಲ್ಲಿಗೆ ಏನಾದರೂ ಒಳ್ಳೇ ಕೆಲಸಗಳನ್ನು ಮಾಡಿದ್ದರೆ ಅದನ್ನು ನೀವು ಜ್ಞಾಪಕ ದಲ್ಲಿಟ್ಟುಕೊಂಡು ಇಷ್ಟು ವಿಶೇಷವಾಗಿ ವಿವರಿಸಿ ಹೇಳುತ್ತಿರುವುದು ನಿಮ್ಮ ಸದ್ಭಾವನೆಯಾಗಿರುತ್ತದೆ ರಾಜರು ಸೌಕರ್ಯಗಳನ್ನು ಕಲ್ಪಿ ಸಿಕೊಟ್ಟು ಪ್ರಜೆಗಳನ್ನು ಕಾಪಾಡುವುದು ಅವರ ಧರ್ಮವಾಗಿದೆ ನಮ್ಮನ್ನಾಳುವ ಮಹಾರಾಜರವರೂ ಈ ಧರ್ಮವನ್ನೇ ಇಟ್ಟು ಕೊಂಡು ಸಂಸ್ಥಾನವನ್ನು ಪರಿಪಾಲಿಸುತ್ತಾ ನನಗೆ ಈ ದಿವಾನ್ ಪದವಿ ಯನ್ನು ದಯಪಾಲಿಸಿರುವುದಕ್ಕಾಗಿ ನಾನು ಕೃತಜ್ಞನಾಗಿರುತ್ತೇನೆ. ನಾನು ಮಾಡುವ ಕಾರ್ಯಗಳಿಂದ ಅವರ ಅಭಿಪ್ರಾಯ ಉದ್ದೇಶಗಳ ದಶಾಂಶದಲ್ಲಿ ಒಂದು ಅಂಶವಾದರೂ ನೆರವೇರುವುದಾದರೆ ಅಷ್ಟಕ್ಕೇ ನಾನು ಭಾಗ್ಯಶಾಲಿ ಎಂದು ಎಣಿಸಿಕೊಳ್ಳುತ್ತೇನೆ ನನಗೋ ಸ್ಕರ ನೀವು ತುಂಬಾ ತೊಂದರೆ ಪಟ್ಟದ್ದಕ್ಕಾಗಿ ನಿಮ್ಮನ್ನು ಮನಃಪೂ ರ್ವಕವಾಗಿ ವಂದಿಸುತ್ತೇನೆ ಎಂದರು ತರುವಾಯ ಸಭಿಕರಿಗೆಲ್ಲಾ ಹೂವಿನ ಹಾರ ಹಾಕಿ ಸಭೆಯನ್ನು ಮುಕ್ತಾಯ ಮಾಡಿದರು ದಿವಾನ್ ರೇ ಮುಂತಾದವರನ್ನು ನಿಲ್ಲಿಸಿ ಫೋಟೋ ತೆಗಿಸಿದರು.

ಆ ಮೇಲೆ ದಿವಾನರವರೂ ಮೆ|| ಕಾಂತರಾಜೇ ಅರಸಿನವರೂ ಸಾರೋಟಿನಲ್ಲಿ ಕುಳಿತು ಶ್ರೀರಂಗಪಟ್ಟಣದೊಳಕ್ಕೆ ದಯಮಾಡಿ, ಲೇ ಟ್ ಚಾಮರಾಜೇಂದ್ರ ಒಡೆಯರವರ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಸ್ನಾನಘಟ್ಟ, ಸತ್ರಗಳನ್ನು ನೋಡಿಕೊಂಡು, ಅಲ್ಲಿ ಒಂದು ಮಂಟಪ ಕಟ್ಟಿಸಿಕೊಡಬೇಕೆಂದು ಪ್ರಜೆಗಳು ಕೇಳಿಕೊಂಡದ್ದನ್ನು ಜ್ಞಾಪಕದ ಲ್ಲಿಟ್ಟುಕೊಂಡು, ದೇವರ ಉತ್ಸವಗಳನ್ನು ಪರಾಂಬರಿಸಿ, ಬಾಲಕ ಬಾಲಿಕಾ ಪಾಠಶಾಲೆಗಳ ಬಳಿಗೆಹೋಗಿ ಅವರಹಾಡು ಕಂದಪದ್ಯಗಳನ್ನು ಕೇಳಿ ಸಂತೋಷಪಟ್ಟು ಫಲಪುಷ್ಪಗಳನ್ನು ಸ್ವೀಕರಿಸಿ, "ಎಲ್ಲಾ ಬಹು ಶಿಸ್ತಾಗಿ ನಡಿಯಿತು, ತುಂಬಾ ಕೃತಜ್ಞನಾಗಿ ನಿಮ್ಮನ್ನು ವಂದಿಸು ತ್ತೇನೆ" ಎಂದು ರಿಸೆಪ್‌ಷನ್ ಕಮಿಟಿಯವರಿಗೆ ಹೇಳಿ, ಹಿಂತಿರುಗಿ ರಾಜ ಧಾನಿಯನ್ನು ಕುರಿತು ಪ್ರಯಾಣಮಾಡಿದರು

ಮೈಸೂರು ಗೆಜೆಟ್ ಸಂಗ್ರಹ.

ಅಮಲ್ದಾರರಾಗಿದ್ದು ಈಚೆಗೆ ಪೊಲೀಸ್ ಅ|| ಸೂಪರಿಂಟೆಂಡೆಂಟ ರಾಗಿ ನೇಮಿಸಲ್ಪಟ್ಟಿರುವ ಮೆ|| ಎಂ ಪಿ. ವಿಶ್ವನಾಥರಾಯರಿಗೆ ಮೊದ ಲು ಕೊಟ್ಟಿದ್ದ ಕಾಯಿಲೆ ರಜವನ್ನು ಇನ್ನು ಎರಡುತಿಂಗಳು ಜಾಸ್ತಿಮಾ ಡಿದೆ

ಮೆ|| ನಗರ್ ಸುಬ್ಬರಾಯರಿಗೆ ಕೊಟ್ಟಿದ್ದ ಪ್ರಿವಿಲೇಜ್ ರಜವನ್ನು ಅವರು ಉಪಯೋಗಿಸಿಕೊಂಡು ಡಿಬೈ ೧೯ ರಲ್ಲಿ ಶಿವಮೊಗ್ಗಾ ಡಿಸ್ಟ್ರಿ ಕ್ಟಿನಲ್ಲಿ ಕೆಲಸದ ಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊ ಳ್ಳದೆ ಇರುವ ಒಂದು ತಿಂಗಳು ಹದಿನಾಲ್ಕು ದಿನಗಳ ರಜವನ್ನು ರದ್ದು ಮಾಡಿದೆ

ಸಬ್ ಅ|| ಸರ್ಜನ್ ಮೆ|| ಪಿ ಮಾಧವನ್‌ನಾಯರ್‌ಯವರಿಗೆ ಕೊಟ್ಟಿ ರುವ ಸಂಬಳವಿಲ್ಲದ ಎರಡು ವರುಷಗಳ ರಜವನ್ನು ಇನ್ನೊಂದು ವರುಷ ಜಾಸ್ತಿ ಮಾಡಿದೆ

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಸೂಪರಿಂಟೆಂಡೆಂಟ್ ಮೆ|| ಸಿ ವೆಂಕಟರಾಯರನ್ನು ಸೆಕ್ರೆಟೇರಿಯಟಿನ ರೆಜಿಸ್ಟ್ರಾರಾಗಿ ನೇಮಿಸಿದೆ.

ಮೆ|| ಪಿ ವೇಣುಗೋಪಾಲ್ ನಾಯ್ಡು ಯವರ ನೇಮಕವನ್ನು ವಜಾ ಮಾಡಿ, ಅವರಿಗೆ ಬದಲಾಗಿ ಮೆ|| ಎಫ್. ನೊರೋನಾಯರನ್ನು ೩ ನೆ ಕ್ಲಾಸ್ ಸಬ್ ಅ|| ಸರ್ಜನ್ ಕೆಲಸಕ್ಕೆ ನೇಮಕ ಮಾಡಿದೆ.

ಮೈಸೂರು ಪರಸ್ಪರ ಸಹಾಯಕ ಸಂಘಗಳ ರೆಜಿಸ್ಟ್ರಾರ್ ಮೆ|| ಎಂ ರಾಮರಾಯರವರನ್ನು ವ್ಯವಸಾಯದ ಬ್ಯಾಂಕುಗಳ ಇನ್ಸ್‌ಪೆಕ್ಟ ರಾಗಿಯೂ ನೇಮಿಸಿದೆ.

ಅಮಲ್ದಾರ್ ಮೆ|| ಪಿ ಕೃಷ್ಣರಾಯರನ್ನು ಯಳಂದೂರ್ ರಿಯಲ್ಲಿ ಕೆಲಸಕ್ಕೆ ಕೊಟ್ಟಿಗೆ ಮೆ|| ಎ ಹೇಸ್ ಯವರು ಪಾಪಸು ಬರತಕ್ಕದ್ದು.

ಅಮಲ್ದಾರ್ ಮೆ|| ಮಹಮದ್ ಅಬ್ದುಲ್ಲಾ ಷರೀಫ್ ಯವ ಮಧ್ದಗಿರಿಗೆ ವರ್ಗ ಮಾಡಿದೆ, ಅವರು ೩ನೆ ಕ್ಲಾಸ್ ಮ್ಯಾಜಿಸ್ಟ್ರೇ ರಾಗಿರತಕ್ಕದ್ದು

ಅಮಲ್ದಾರ್ ಮೆ|| ಎಂ ಲಕ್ಷ್ಮಣಶಾಸ್ತ್ರಿಯವರನ್ನು ೩ ನೆ ಸ್ ಎಕ್‌ಸ್ಟ್ರಾ ಅ|| ಕಮಿಷನರಾಗಿ ಬದಲಿ ನೋಡುವಂತೆ ನೇ ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿ ಛಾರ್ಜಿಗೆ ವರ್ಗ ಮಾಡಿದೆ

ಮುಂದೆ ಹೇಳುವ ಅಮಲ್ದಾರುಗಳ ವರ್ಗಾವರ್ಗಿ ... ದಿದೆ.—ಮೆ|| ಮಹಮದ್ ಒಬೇದುಲ್ಲಾಯವರು—ಗೌಣಿಗ ಬೌರಿಂಗ್‌ಪೇಟೆಗೆ, ಮೆ|| ಸಿ ಮಾಕ್ಕೈಯ್ಯನವರು—ಮಾಲೂರಿನಿಂದ ಣಗೆರೆಗೆ, ಮೆ|| ಟಿ ಧರ್ಮರಾಜ ಚೆಟ್ಟಿಯವರು—ದೇವನಹಳ್ಳಿ ಮಾಲೂರಿಗೆ (ಸದ್ಯ ಹಾಸನದಲ್ಲಿ ಎಕ್‌ಸ್ಟ್ರಾ ಅ|| ಕಮಿಷ ಕೆಲಸ ನೋಡತಕ್ಕದ್ದು), ಮೆ|| ಸಿ ಕೃಷ್ಣಮನಾಯ್ಡು ಕಾರ್ಕಾನ ಹಳ್ಳಿಯಿಂದ ದೇವನ ಹಳ್ಳಿಗೆ ಮೆ|| ಎಂ ಕೃಷ್ಣರಾ ಮಾಗಡಿಯಿಂದ ಕಾರ್ಕಾನಹಳ್ಳಿಗೆ, ಮೆ|| ಎ ಗೋಪಾಲಕೃಷ್ಣ ಗಾರ್ರು—ಶ್ರೀರಂಗಪಟ್ಟಣದಿಂದ ಮಾಗಡಿಗೆ, ಮೆ|| ಕೆ ಆರ್ ಸು ಯರು—ಶಿಡ್ಲಘಟ್ಟದಿಂದ ತೀರ್ಥಹಳ್ಳಿಗೆ, ಮೆ|| ಕೆ ಹನುಮಂತರಾ ಹೊಸದುರ್ಗದಿಂದ ಶಿಡ್ಲಘಟ್ಟಕ್ಕೆ, ಮೆ|| ಬಿ ಕೆ ಲಕ್ಷ್ಮಣ ರಾ ವರು—ಅರಕೆರೆಯಿಂದ ಹೊಸದುರ್ಗಕ್ಕೆ ಮೆ|| ಕೆ ಶ್ರೀನಿವಾಸ ರು—ತೀರ್ಥಹಳ್ಳಿಯಿಂದ ಅರಕೆರೆಗೆ

ಮೇಲ್ಕಂಡ ಅಮಲ್ದಾರರುಗಳ ಪೈಕಿ ಶ್ರೀರಂಗಪಟ್ಟಣದ ಅ ರ್ರು ಫ್ರೆಂಚ್ ರಾಕ್ಸಿನ ಡೆಪ್ಟಿ ಅಮಲ್ದಾರರಿಗೆ ಛಾರ್ಜ್ ಕೊಟ್ಟು ತಕ್ಕದ್ದು. ಉಳಿದವರೆಲ್ಲಾ ದಸರಾ ರಜಾಕ್ಕೆ ಮೊದಲೇ ತಮ್ಮ ತಾಲ್ಲೂಕ್ ಶಿರಸ್ತೇದಾರರುಗಳಿಗೆ ಛಾರ್ಜ್ ಕೊಟ್ಟು, ರಜಾ ಪ ಮ್ಮ ರೊಳಗಾಗಿ ವರ್ಗಪಟ್ಟ ಹೊಸ ಸ್ಥಳಗಳಲ್ಲಿ ಹಾಜರಾಗಿರಬೇ

ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆಗಳ ಎಗ್ಜಿಕ್ಯೂಟಿವ್ ಎಂಜಿನಿಯರ್ ಮೆ|| ಯು. ಎಚ್. ಸ್ಕಾಟ್ ಯವರಿಗೆ ಅಕ್ಟೋಬರ್ ೬ ಎಂದ ಅಥವಾ ರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿ ರಜಾ ಕೊಟ್ಟಿದೆ

ಅ|| ಎಗ್ಜಿಕ್ಯೂಟಿವ್ ಎಂಜಿನಿಯರ್ ಮೆ|| ಎ ಅಪ್ಪಾವಮೆ-ದಲಿಯಾರ್ರು ಕೆಲಸಗಳೊಂದಿಗೆ ಮೆ|| ಸ್ಕಾಟ್ ಯವರ ಆಫೀಸ್ ಛಾರ್ಜನ್ನೂ ರತಕ್ಕದ್ದು

ಮೈಸೂರ್ ಇನ್‌ಫೆಂಟ್ರಿ ೧ ನೆ ಬೆಟಾಲಿಯನ್ ಮುನಿಸಾಮಿ ದಾರನ್ನು ೩ ನೆ ಬೆಟಾಲಿಯನ್ ಸಕ್ಕಲಾಲ್ ಸಿಂಗ್ ಯವರನ್ನೂ ಗ್ರೇಡ್ ಸುಬೇದಾರಿಗೆ ಬಡ್ತಿ ಮಾಡಲಾಗಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆ ಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾ ಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಪ.ಡಿ

ಕರೆಸ್‌ಪಾಂಡೆನ್‌ಸ್.

ಪ್ಲೇಗ್ ರೋಗವೂ ಪಟೇಲರೂ

ಅಯ್ಯಾ,

ನಮ್ಮ ಮೈಸೂರು ಸಂಸ್ಥಾನದಲ್ಲಿ ಪ್ಲೇಗ್, ಕಾಲರಾ ಸಿಡುಬು ಈ ಮೂರೂ ಸಂಧಿಸಿರುವದ್ದರಿಂದ ನಮ್ಮ ಭಾಗ್ಯ ವನ್ನು ಎಷ್ಟೆಂದು ವರ್ಣಿಸಿದರೂ ಸಾಲದು. ಗ್ರಾಮಾಂತರಗಳಲ್ಲಿ ಪಟೇಲರುಗಳಿಗೆ ಮರಣದ ಲೆಕ್ಕವನ್ನು ಬರೆಯಲಿಕ್ಕೂ ಸೇ ಹೊಂದಿದ ಕ... ರಿಪೋರ್ಟು ಮಾಡಲಿಕ್ಕೂ ಅಧಿಕಾರ ಕೊಡಲ್ಪಟ್ಟಿದೆ ಆದರೆ ಈ ವಿಚಾರದಲ್ಲಿ ಶ್ರದ್ಧೆಯನ್ನು ವಹಿ ತುಂಬಾ ಪ್ರಯೋಜನವಾದೀತು ಆದರೆ ಗ್ರಾಮದಲ್ಲಿ ಹತ್ತಾರು ಗಳು ಸತ್ತ ನಂತರ ಲೆಕ್ಕಕ್ಕೆ ದಾಖಲ್ ಮಾಡಿಕೊಂಡು ಮೇಲಿನ ಕಾರಿಗಳಿಗೆ ನಿರ್ವಾಹಕಳುಹಿಸುವ ಪದ್ಧತಿ ... ಅನೇಕ ಕಳ್ಳಿರುತ್ತೆ ಯಾತಕ್ಕೆಂದರೆ ಸರ್ಕಾರದವರು ಊರನ್ನು ಬಿಡಲಿಕ್ಕೆ ಶುದ್ಧಿ ಮಾಡಲಿಕ್ಕೂ ಆರ್ಡರ್ ಮಾಡುತ್ತಾರೆಂಬ ಭಯದಿಂದ ಇಷ್ಟ ಅವಕಾಶಕೊಡುತ್ತಾರೆ ಸಕಾಲದಲ್ಲಿ ಅಲಕ್ಷ್ಯಮಾಡಿದಲ್ಲಿ ನ ಮೇಲಿನ ಅಧಿಕಾರಿಗಳು ಎಷ್ಟೇ ಏರ್ಪಾಡುಮಾಡಿದಾಗ್ಯೂ ಸಾರ್ಥ ವಾಗಲಾರದು ಮದ್ರಾಸ್ ಪ್ರಸಿಡೆನ್ಸಿಯಲ್ಲಿ ಇಂಥಾ ವಿಷಯ ಸ್ವಾಮಿ ಏರ್ಪಾಡುಗಳೂ ಗ್ರಾಮ ಮುನಸೀಫರದಾಗಿರುತ್ತೆ ಅದರಂತೆ ನಮ್ಮ ಮೈಸೂರು ಸರ್ಕಾರದವರು ಪಟೇಲರಿಗೆ ಹೆಚ್ಚು ಉತ್ತೇ ಕೊಟ್ಟು ಜವಾಬ್ದಾರರನ್ನಾಗಿ ಮಾಡಿದಲ್ಲಿ ತುಂಬಾ ಪ್ರಯೋ ವಾದೀತು

ಎಸ್ ಕೃಷ್ಣಶರ್ಮ.

ಮಕ್ಕಳ ರೋಗಕ್ಕೆ ಔಷಧಿ ಬೇಕಾಗಿದೆ

ಅಯ್ಯಾ,

— ನಮ್ಮ ಪ್ರಾಂತ್ಯ ಸಣ್ಣ ಮಕ್ಕಳಿಗೆ ಬಾಲಗ್ರಹ ಎಂಬ ರೋಗ ವಿಶೇಷವಾಗಿ ಬರುತ್ತದೆ ಈ ರೋಗವು ಬಂದನಂತರ ಮಕ್ಕಳು ಕುವದೇ ಕಷ್ಟ. ಒಂದು ವೇಳೆ ಬದುಕಿದರೂ ಬಲಹೀನರಾಗಿರು ಮಕ್ಕಳಿಗೆ ಈ ರೋಗವು ೫—೬ ದಿವಸಗಳಿಗೆ ಒಂದಾವರ್ತಿ ಬರು ಬಂದ ಕಾಲದಲ್ಲಿ ಕೈಕಾಲುಗಳನ್ನು ಕೋಲಿನೋಪಾದಿಯಲ್ಲಿ ನೆ ಗೆ ಸೆಡತುಕೊಂಡು, ಕಣ್ಣುಗಳನ್ನು ಸಾಯುವವರ ಕಣ್ಣುಗಳಂತೆ ತಳಕ್ಕನೆ ಬಿಳಿಚಿಕೊಂಡು, ಸ್ಮರಣೆ ತಪ್ಪಿ ಹೋಗುತ್ತಾರೆ. ಹೊತ್ತಾದ ನಂತರ ಕಣ್ಣುಗಳನ್ನು ತೆರದು ಕೈಕಾಲುಗಳನ್ನು ಅಲ್ಲಾ ಎಚ್ಚರವಾಗ ಇವರು ಬದುಕಿದರು ಎಂಬ ನಂಬಿಕೆಯೇ ಹು

ದಿ "ಮಾಡಲ್"

1907. ಪಾಕೆಟ್ ಡೈರಿ. 1907.

ನಮ್ಮಲ್ಲಿ 1907 ನೇ ಇಸ್ವಿಯ ಜನವರಿ ಲಾಗಾಯ್ತು ಡಿಸೆಂಬರು ಆಖೈರು ವರೆಗೆ ಇರುವ ಪಂಚಾಂಗ ಸಹಿತವಾದ ನಾಲ್ಕು ನಮೂನೆಗಳ ಕನ್ನಡ ಪಾಕೆಟ್ ಡೈರಿಗಳು ಮತ್ತು ನಮೂನೆಯಾದ ಕ್ಯಾಲೆಂಡರುಗಳು ತಯಾರಾಗಿ ಮಾರಿಗೆ ಸಿದ್ಧವಾಗಿವೆ.

ಈ ಡೈರಿಗಳು — ವರ್ತಕರು, ಲಾಯರುಗಳು, ಕಂಟ್ರಾಕ್ಟರುಗಳು, ದೊಡ್ಡಮನುಷ್ಯರು, ಲೇವಾದೇವಿ ಮಾಡತಕ್ಕವರು, ವಿದ್ಯಾರ್ಥಿಗಳು, ಕಚೇರಿಗಳಲ್ಲಿ ವ್ಯವಹಾರಮಾಡತಕ್ಕವರು, ಸರ್ಕಾರು ಉದ್ಯೋಗಸ್ಥರು, ಮತ್ತು ಖುಷ್‌ಬಾಷ್‌ಜನಗಳು, ಮೊದಲಾದ ಸಮಸ್ತರಿಗೂ ಅತ್ಯಂತ ಉಪಯೋಗವಾಗಿರುವಂತೆ ಪಾಲೀಸು, ಮಾಸ, ತಿಥಿ, ವಾರ, ನಕ್ಷತ್ರ, ತೇದಿ, ವಗೈರೆ ತಿಳಿಸುವದಲ್ಲದೆ ಆಗಾಗ್ಗೆ ಅವಶ್ಯಕವಾಗಿ ಸಂದರ್ಭಾನುಸಾರ ಪ್ರತಿ ದಿವಸದ ನೋಡಿಕೊಳ್ಳಬೇಕಾದ ಅನೇಕ ವಿಷಯಗಳು ಇವುಗಳಲ್ಲಿ ಅಡಕವಾಗಿವೆ. ಅವು ಯಾವವೆಂದರೆ:—

1907 ಮತ್ತು 1908 ನೇ ವರುಷಗಳ ಕ್ಯಾಲೆಂಡರುಗಳು, ಗ್ರಹಣ ಪಂಚಾಂಗ, [illegible] ಕಾಲಗಳು, ಗವರ್ನಮೆಂಟ್ ಮತ್ತು ಸಿವಿಲ್ ಕೋರ್ಟಿನ ರಜಾದಿವಸಗಳು, [illegible] ಹಬ್ಬಗಳು ಮತ್ತು ವಿಶೇಷ ದಿವಸಗಳು, ಗ್ರಹಣಗಳು ಮತ್ತು ಅವುಗಳ ಫಲಗಳು, ಸ್ಟಾಂಪ್, ಕೋರ್ಟ್ ಫೀಜ್, ಮತ್ತು ರಿಜಿಸ್ಟ್ರೇಷನ್ ಚಾರ್ಜುಗಳು, [illegible] ಪೋಸ್ಟಾಫೀಸು, ಟೆಲಿಗ್ರಾಫ್ ಆಫೀಸು, ಎಸ್. ಪಿ. ಮತ್ತು ಎಂ. ಆರ್ ರೈಲ್ವೆಗಳ ಸಮಸ್ತ ವಿಷಯಗಳು, [illegible] ಬಡ್ಡಿ ಲೆಕ್ಕಾಚಾರದ ಪಟ್ಟಿ, [illegible] ಅಳತೆ ಮತ್ತು [illegible], ಸಂಸ್ಥಾನದ [illegible] ತಿಳಿದಿರಬೇಕಾದ [illegible] ವಿಷಯಗಳು, ಮತ್ತು ಅವುಗಳಿಗೆತಕ್ಕ ಅನುದಾನ, ಸ್ವರಲಕ್ಷಣ, ಅಂಗಚಲನ, ಸೀನುಗಳು, ಹಲ್ಲಿ ನುಡಿಯುವದು ಮತ್ತು ಬೀಳುವದು ಇವುಗಳ ಶುಭಾಶುಭ ಫಲಗಳು, ಪ್ರಯಾಣಕ್ಕೆ [illegible] ಫಲಗಳು, [illegible] ತಿಥಿ, ವಾರ, ನಕ್ಷತ್ರ, ಮತ್ತು ಕಾಲಗಳ [illegible] ಇವುಗಳ [illegible] ಅನೇಕ ಉಪಯುಕ್ತವಾದ ವಿಷಯಗಳು [illegible]

ಈ ಡೈರಿಗಳಿಗೆ ಬಹಳ ಸೊಗಸಾಗಿ ಬೆಳ್ಳಗೆ ಇರುವ ದಪ್ಪನಾದ ಮತ್ತು ನುಣುಪಾದ ಕಾಗದ (Double Royal, highly glazed 19 lbs) [illegible] ವಿಲಾಯತಿಯಿಂದ ತರಿಸಿರುವ ಉತ್ಕೃಷ್ಟವಾದ ಕ್ಯಾಲಿಕೊ ಮೊದಲಾದ ಬೈಂಡಿಂಗ್ ಸಾಮಾನುಗಳನ್ನು ಉಪಯೋಗಿಸಿ [illegible] ಪ್ರಖ್ಯಾತಿಹೊಂದಿರುವ ಕೆಲಸದವರಿಂದಲೂ ಬಹಳ ಅಂದವಾಗಿಯೂ, ಮಜಬೂತಾಗಿಯೂ ಮಾಡಿಸಿರುತ್ತೇವೆ.

ವಿವರಣೆ

ನಂ. 1. ಪಂಚಾಂಗಸಹಿತವಾದ, ಪೆನ್‌ಸಲ್ ಇಡುವದಕ್ಕೆ ಅನುಕೂಲವಾದ ಚಿಕ್ಕ ಸೈಜ್ ಡೈರಿ:—3½ ಅಂಗುಲ ಅಗಲ, 4½ ಅಂಗುಲ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ ೧ ಕ್ಕೆ 4 ಆಣೆ

ನಂ. 2. ಡಿಟೊ, ಮೇಲ್ಕಂಡ ಚಿಕ್ಕ ಸೈಜ್, ಫ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀತಿ, ಸ್ಟಾಂಪು, ವಗೈರೆ ಇಡುವದಕ್ಕೆ ಚೀಲವಿದೆ. ಮೇಲುಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ ೧ ಕ್ಕೆ 6 ಆಣೆ

ನಂ. 3. ಪಂಚಾಂಗಸಹಿತವಾದ, ಪೆನ್‌ಸಲ್ ಇಡುವದಕ್ಕೆ ಅನುಕೂಲವಾದ ದೊಡ್ಡ ಸೈಜ್ ಡೈರಿ:—4½ ಅಂಗುಲ ಅಗಲ, 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ ೧ ಕ್ಕೆ .. 6 ಆಣೆ.

ನಂ. 4. ಡಿಟೊ, ಮೇಲ್ಕಂಡ ದೊಡ್ಡ ಸೈಜ್, ಫ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀತಿ, ಕಾಗದ, ಕವರು, ಸ್ಟಾಂಪು, ವಗೈರೆ ಇಡುವದಕ್ಕೆ ಚೀಲ ಇರುತ್ತದೆ. ಮೇಲುಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಕ್ರಯ ಪ್ರತಿ ೧ ಕ್ಕೆ . .. 8 ಆಣೆ

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಕಡಿಮೆ ಕ್ರಯಕ್ಕೆ ಕೊಡಲಾಗುವದು. ಕೂಡಲೆ ಬರೆದು ತರಿಸಿಕೊಳ್ಳಿರಿ.

ಕ್ಯಾಲೆಂಡರ್:—ಪ್ರತಿ ತಿಂಗಳಿಗೂ ಒಂದೊಂದು ಪೇಜಿನಂತೆ ಇರುವ ಸನ್ 1907 ನೇ ಇಸ್ವಿಯ ಕ್ಯಾಲೆಂಡರುಗಳು ಬಹಳ ದೊಡ್ಡದಾಗಿಯೂ, ಅಂದವಾಗಿಯೂ ಆಯಾ ತಿಂಗಳಲ್ಲಿ ಬರತಕ್ಕ ಹಬ್ಬ ಮತ್ತು ವಿಶೇಷ ದಿವಸಗಳನ್ನು ನಮೂದಿಸಿ ಪ್ರಿಂಟು ಮಾಡಿಸಿ ಬಹಳ ಸುಲಭ ಕ್ರಯಕ್ಕೆ ಮಾರಲ್ಪಡುತ್ತವೆ—ಇದರ ಕ್ರಯ ಪ್ರತಿ ೧ ಕ್ಕೆ [illegible] ಆಣೆ.

N.B.—1 ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಡೈರಿಯನ್ನು, ಒಂದೇ ದಫೆ 12 ಕ್ಯಾಲೆಂಡರ್ ತರಿಸಿಕೊಂಡರೆ 1 ಕ್ಯಾಲೆಂಡರನ್ನು ಉಚಿತವಾಗಿ ಕೊಡುತ್ತೇವೆ. 2. ಒಂದೇ ನಮೂನೆಯಲ್ಲಿ 2 ವರ್ಷ ಡೈರಿಗಳು ಅಥವಾ ಹೆಚ್ಚಾಗಿ ಒಟ್ಟಿಗೆ ತರಿಸಿಕೊಂಡರೆ 1 ಕ್ಯಾಲೆಂಡರನ್ನು 1 ವರ್ಷ ಡೈರಿಗಳಿಗೆ 1 ಡೈರಿಯನ್ನು [illegible] ಕಮಿಷನ್ [illegible]. 3. ವಿ. ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟ್ ಛಾರ್ಜ್ ಮತ್ತು ವಿ. ಪಿ. ಕಮಿಷನ್ [illegible]. 4. ಹೆಚ್ಚು ವಿಷಯ ತಿಳಿಯಬೇಕೆನ್ನುವವರು [illegible] ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟ್ ಸ್ಟೆಂಪ್ ಆಗಲಿ ಮುಂಗಡ ಕಳುಹಿಸಬೇಕು. 5. ಎಷ್ಟು ಜಾಸ್ತಿ ಪ್ರತಿಗಳನ್ನು ಕೊಳ್ಳುವರೋ ಅಷ್ಟು ಪೋಸ್ಟ್ ಛಾರ್ಜ್ ಕಮ್ಮಿ ಆಗುವದು. [illegible] ಈ ಕೆಳಗಿನ ವಿಳಾಸದಾರರಿಗೆ ವ್ಯಾಪಾರದವರೂ ಬರೆದು ತರಿಸಿಕೊಳ್ಳಬಹುದು.

S. D. NATHMAL & Co., Doddapetta, MYSORE — ಎಸ್. ಡಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

ದಿವಾ ಮ||

ಮೈಸೂರು ಸ
ರಾವ್, ಸಿ. ಐ. ಇ.
ಗಳಿಂದಲೂ ಶ್ರೀರಂಗ
ಗಮನವನ್ನು ಬಿಡು
ಳ್ಳಬೇಕೆಂದು ಕಾತು
ವಾರ ಇದಕ್ಕೆ ಅವ
ನ್ನು ಸತ್ಕರಿಸುವುದಕ
ಕನ್ನು ಮಾಡಿದ್ದರು.
ರು ಶೆಟ್ಟಿ ಕವಿಯವರ
ಭಾನುವಾರ ಬೆಳಗ್ಗೆ
ಬಾಡಿಗಾರ್ಡ್ ಕಂದ.
ರು ೮ ಗಂಟೆ ಹೊತ್ತಿ

ಷ್ಟೇ ವಿಶೇಷವಾದುದಾಗಿದೆ ಸಾ
ಪ್ರಸಿದ್ಧಿಯಲ್ಲಿ ಇಂಥಾ ವಿಶಿಷ್ಟ ಸ್ಥಾ
ಮರ್ಕಸೀಘರದಾಗಿರುತ್ತೆ. ಆದರೆ
ರದವರು ಪಟೇಲರಿಗೆ ಹೆಚ್ಚು ಉತ್ತೇ
ಕ್ಕಾಗಿ ಮಾಡಿದಲ್ಲಿ ತುಂಬಾ ಪ್ರಯೋ

ಎಸ್. ಕೃಷ್ಣಶರ್ಮ.

ರೋಗಕ್ಕೆ ಔಷಧಿ ಬೇಕಾಗಿದೆ

ಮಕ್ಕಳಿಗೆ ಬಾಲಗ್ರಹ ಎಂಬ ರೋ
ಈ ರೋಗವು ಬಂದನಂತರ ಮಕ್ಕಳು
ಕೆಳೆ ಬದುಕಿದರೂ ಬಲಹೀನರಾಗಿರು
೩—೪ ದಿವಸಗಳಿಗೆ ಒಂದಾವರ್ತಿ ಬ
ಂಗಳನ್ನು ಕೋಲಿನೋಪಾದಿಯಲ್ಲಿ
ಗಳನ್ನು ನೋಯುವವರ ಕಣ್ಣುಗಳಿಂದ
ಸ್ಮರಣೆ ತಪ್ಪಿ ಹೋಗುತ್ತಾರೆ.
ಗಳನ್ನು ತೆರದು ಕೈಕಾಲುಗಳನ್ನು
ದುಕಿದರು ಎಂಬ ಸಂಶಯ

ತಪ್ಪಿದಾಗ ಹಾಗೆಯೇ ಸಾಯುವದೂ ಉಂಟು ಇದಕ್ಕೆ ಬಾಲ ಹುಳಿ ಎಂದು ಅಕ್ಕಸಾಲೆಯರಿಂದ ತಾಂಬ್ರದ ತಾಳಿಯನ್ನು ಮಾಡಿಸಿ ಅದನ್ನು ತೆಗೆದುಕೊಂಡು ಹೋಗುವಾಗ್ಗೆ ಅಕ್ಕಸಾಲಿಗೆ ಒಂದು ಅಕ್ಕಿ, ತೆಂಗಿನಕಾಯಿ, ವಿಳ್ಳೇದೆಲೆ, ಅಡಿಕೆ, ಮತ್ತೂ ಹಳು ಹಣ ಕೊಟ್ಟು ಆ ತಾಳಿಗೆ ಪೂಜೆಮಾಡಿಸಿ ಪಂಚರಂಗಿನ ಧಾರಗ ವಳೆ ಮಾಡಿ ಆ ತಾಳಿಗೆ ಪೋಣಿಸಿ ಆ ಮಗುವಿನ ಕುತ್ತಿಗೆಗೆ ಕಟ್ಟುತ್ತಾರೆ ಹೀಗೆ ಮಾಡುವ ಒಳ್ಳೇ ಪದ್ಧತಿ ವಿನಃ ಬೇರೊಂದೂ ಗೊತ್ತಿಲ್ಲ. ಈ ರೀತಿ ಮಾಡುವದರಿಂದ ಕೆಲವು ಮಕ್ಕಳಿಗೆ ಗುಣವೂ, ಕೆಲವರು ಸಾಯುವದೂ ಉಂಟು. ಆದ್ದರಿಂದ ಈ ರೋಗಕ್ಕೆ ತಕ್ಕ ಚಿಕಿತ್ಸೆಯನ್ನು ಕುಂಭಕೋಣ ವೈದ್ಯಶ್ರೇಷ್ಠರು ಪ್ರಸಿದ್ಧಿಪಡಿಸಿ ಮಕ್ಕಳ ಈ ಕಂಟಕರೋಗವನ್ನು ಹೋಗಲಾಡಿಸಿ ಕಾಪಾಡ ಬೇಕಾದದ್ದು ಮಾಡಬೇಕೆಂದು ಕೋರುತ್ತೇನೆ.

ಟಗರು. ಕೆ. ವೆಂಕಟರಾಯಶೆಟ್ಟಿ.

ಮಂತ್ರವಾದಿಗಳ ಜಾಣತನ

ಈ ೧೯ನೇ ತಾ ೧ನೇ ಗುರುವಾರ ದಕ್ಷಿಣ ಕೆನರಾ ಕಾರ್ಕಳ ಕಡೆಯ ವಿಜಯಪುರ ಪೇಟೆಗೆ ಮಂಜೇಶ್ವರ ಶರ್ಮನ ಅಪ್ಪಯ್ಯ ಎಂಬ ಮಂತ್ರವಾದಿ ಬಂದಿದ್ದ ಇವನ ಸಂಗಡ ಜನರನ್ನು ಕರೆದುಕೊಂಡು ಬಂದಿದ್ದನು. ಈತನಿಗೆ ಪಿಡುಗದೇವತೆ ಎಂಬ ದೇವತೆ ಇದ್ದ ಎಂದೂ ತನಗೆ ಎಲ್ಲಾ ಗೊತ್ತಾಗುತ್ತದೆ ಎಂತಲೂ ಹೇಳಿ ಕೊಂಡು ಅನೇಕ ಜನಗಳಿಗೆ ತಿಳಿಸಿದ್ದಲ್ಲದೆ ಇವರ ಕೆಲಸ ವಿಚಾರ ಮಾಡಲಾಗಿ ಸರಿಯಾದ ಕಾರಣ ಗೊತ್ತು ಇಲ್ಲದೆ ಅನೇಕ ಜನರು ತಿಳಿದ ಜನರಿಗೆ ಪತ್ರ ಒಂದು ಕಳುಹಿಸಿ ಆಗಿರಬೇಕೆಂದು (ಸ್ವಪ್ನದಲ್ಲಿ) ಕೆಲವು ಜಾಗ ಗಳಲ್ಲಿ ಮಂತ್ರ ಹೇಳಿ ನಿಧಿಯನ್ನು ನೋಡುವ ನೆವದಿಂದ ಎಂತಲೂ ಹೇಳಿ ಪೂಜೆ ಮಾಡಿ ರಾತ್ರಿ ಇವರಿಂದ ಎಷ್ಟು ಹಣ ಖರ್ಚು ಮಾಡಿಸಿ ಪೂಜೆಗೆ ಬೇಕಾದ ಪದಾರ್ಥಗಳು ತಕ್ಕ ಕಾಲಕ್ಕೆ ಫಲ ಪುಷ್ಪ ಕೊಂಡು ತಂದು ಸ್ಥಳಕ್ಕೆ ಹೋಗಿ ಆ ನಾಟಕ ನಡೆದ ಮಾರೆಯವರಿಗೆ ನಿಧಿಯ ಮಂತ್ರದ ಬಗ್ಗೆ ಜಗಳ ಸಹಾ ತರುವರೆ ಗುಣವಾಗಿ ಆ ಪ್ರಕಾರ ಮಂಗಳವಾರ ರಾತ್ರಿ ಘಂಟೆ ೧೦ಕ್ಕೆ ಈತನು ಬಂದು ರಕ್ತ ಪ್ರಸಾದ ಇಟ್ಟು ಪೂಜೆ ಮಾಡಿದನು. ಈತನ ಶಿಷ್ಯರುಗಳಂತೆ ಸಮಸ್ತ ದ್ರವ್ಯಗಳೊಡನೆ ಕಾಣಿಕೆ ಸುಮಾರು ೭೦೦ ಜನಗಳ ಅಂದಾಜು ಜನ ಕೂಡಿತ್ತು. ಶ್ರೀ ಬಸ್ತೀರಾಜ ಲೋಕದ ಬಗ್ಗೆ ಅನ್ನಾಲಯದಲ್ಲಿ ಸವಿಸಾರ ಹಿಡಿರುವ ಈ ಊರಿನ ಲಕ್ಷ್ಮೀನಾರಾಯಣ ಭಟ್ಟನೆಂಬವನು ಗುರುವಿನ ಬಲಿ ಕೊಡುವಲ್ಲಿ ಮಂತ್ರ ಮಾಡಿ ಕೈ ಹಿಡಿದಂತೆ ಹರ್ಷ ಮಾಡಿ ಕೆಲವು ಮುಗಿಯುತ್ತಲೆ ಪೂಜೆಗೆ ಮರುದಿನ ಮಂತ್ರವಾದಿಗೆ ಅನೇಕ ಬಂದು ಸೊಂಕು ತಟ್ಟಿತ್ತೆಂಬ ೬ ಜನ ತಪ್ಪಿಸಿ ಬಿಟ್ಟು ಕೊನೆಯಲ್ಲಿ ಆವರು—ಅಯ್ಯೋ ಪ್ಪಾ ಎಂಬ ಗೋಜು ಕೇಳಿಸಿತು ಸರ್ವರಿಗೆ ಪ್ರಸಾದ ಗಂಧ ಕೊಡಿಸಿತು ಅವರ ನಿಲ್ಲುತ್ತಲೇ ಮಂತ್ರವಾದಿ ಸ್ಥಿರಪಟ್ಟಿ ತಿ ಎಲಗಿಬಿಟ್ಟನು. ಜನರೆಲ್ಲರು ತಾವು ಮರುಳಾಗಿ ನೋಡ ಹೊಲ್ಲ ಎಂತ ಹಾಹಾಕಾರ ಮಾಡುವಲ್ಲಿ ಆತನ ಕಡೆಯವರು ಈಗಿಂದ ನಾಳೆ ರಾತ್ರಿ ವರೆಗೆ ಏಳಲಿಕ್ಕಿಲ್ಲ. ಗುರುವಾರದ ಸಂ ಜೆಗೆ ತಕ್ಕ ಉದಾಹರಣೆಗಳು ದೊರಕುತ್ತವೆ ಎಂತ ಸಮಜಾ ಯಿಸಿದರು ನಿನ್ನೆ ಬುಧವಾರ ಆತನು ಏಳಲೇ ಇಲ್ಲ ಆ ದಿನವೂ ಆತನು ಜಪಮಾನದೊಡನೆ ನಿನ್ನೆ ರಾತ್ರಿಯೇ ಪರಾರಿ ಆದನೆ ಕೆಲವರು ಈತನಿಂದ ಪೆಟ್ಟು ತಿಂದವರಲ್ಲ ಎಂತಲೂ, ಸುಮಾರು ಜನ ಚಿನ್ನದ ತಗಡು ಪಡೆದುಕೊಳ್ಳಲಿಕ್ಕಾಗಿ ಕೊಟ್ಟು ಪಿತ್ತಳೆಗೆ ಸಿಕ್ಕಿಗಾದರೆಲ್ಲ ಎಂತಲೂ, ನ್ಯಾಯಾಲಯಗಳು ತನ್ನ ಆಶ್ರಿ ತನನ್ನು ವಶ್ಯಪಡಿಸದಲ್ಲದೆ ಮೋಸಮಾಡಿದರಲ್ಲಾ ಎಂತಲೂ ಆಡುತ್ತಾರೆ ಸಾಕ್ಷದಾರರು ಒಟ್ಟಕ್ಕಿಲ್ಲದೆ ಕಷ್ಟಪಡುವ ಬಡವ ಧನಿಕರನ್ನು ಸಹಾ ಸುಲಿದು ಹೋದ ಚಮತ್ಕಾರಿಕ ಮಂತ್ರ ವಾದಿಯ ಕೃತ್ಯ ಸಲುವಾಗಿ ವಿಷಾದಿಸಬೇಕಾಗಿದೆ.

ಎಂ. ಪಿ. ಎ.

ತಾಲೂಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಇಲ್ಲಿ ಪೈರುಗಳು ಈಗ್ಗೆ ಚನ್ನಾಗಿರುತ್ತವೆ. ಇದುವರೆಲ್ಲೇ ಬಾರದಿದ್ದರ ಬೆಳೆ ಕೆಡುವದು—ಇಲ್ಲಿನ ಮನುಗಳನ್ನು ಪೊಲೀಸಿನ ಕಟಂಸರಿಗೆ ಸರ್ಕಾರದವರು ಲೈಸನ್ಸ ಕೊಡುತ್ತಾರೆ. ಇಲ್ಲಿನ ಜನರು ಇದನ್ನು ಟೆಕ್ಸಪಟಿಲೆಂದು ಕೇಳಿಕೊಂಡ ಮೇರೆ ಡೆಪ್ಯುಟಿ ಕಮೀಷನರ್ ಮೆ॥ ಸ್ಪಾರ್ಕ್ಸ್ ಧೊರೆಯವರು ಅವರ ಎಲ್ಲಾ ವಿಚಾರಿಸಿ ಇನ್ನು ಮುಂದೆ ಈ ಕೆಲಸಕ್ಕೆ ಟೆಕ್ಸಸು ಕೊಡಬೇಡವೆಂದು ಸಭಾ ಮಾಡಿದರೆಂದು ಕೇಳುತ್ತೇನೆ—ಇಲ್ಲಿನ ಮಹಾಬಲೇಶ್ವರ ಗುಡಿ ಅರ್ಚಕಲಕ್ಷ್ಮೀಪತಿ ವೆಂಕಟಾ ಎಂಬಾತನು ಆ ದಿನಗಳ ಕೆಳಗೆ ಪೋಲೀಸ್ ದಫೇದಾರ್ ವೆಂಕಟವೆಂಕಟೈಯ್ಯನವರ ಮನೆಯಿಂದ ಚಿನ್ನ ಆಭರಣಗಳು ಕೆಲವು ಪಾತ್ರೆ ಸಾಮಾನುಗಳನ್ನು ಕದ್ದುಕೊಂಡು ಮಾಡಿದ್ದರ ವೇಳೆ ಕೇಳದ್ದನು ಪರಿಗೆ ವೊನ್ನೆ ೧೧ನೇ ತಾ. ಗರೂರಲ್ಲಿ ಒಂದು ತಿಂಗಳು ಕಠಿಣ ಸಜಾ ವಿಧಿಸಿರುತ್ತಾರೆ—ಮೆ॥ ಹರಿ ರುದ್ರಪ್ಪ ಎಂಬ ಸಾಹುಕಾರರ ಮನೆಯಲ್ಲಿ ಒಬ್ಬ ಬಾಯಿದ ಮನೆಗೆ ಕಾಲಿಟ್ಟಾಗ ಕೊಡಲಿ ಒಂದು ಮನುಷ್ಯನ ಗುಡಾಣದಲ್ಲಿ ದಿನಗಳು ಏಳನೂಗಾಗಿ ನೀರು ಕಾಯಿಸಿ, ವೊನ್ನೆ ೧೧ನೇ ತಾ ಅದನ್ನು ಇಳಿಸಲು ೫—೬ ಜನರಿಗೆ ಕಟ್ಟಿಗೆ ಹಾಕಿ ಎತ್ತಲು ಕಾವು ಶಂಕರಪ್ಪ ಕಿಕ್ಕು ಬಿಂದು, ಆ ಮನೆಯ ಬಿಸನೀರೆಲ್ಲಾ ಆ ಜನರ ಮೇಲೆ ಬಿದ್ದು ಬೊಬ್ಬೆಗಳು ಎಗರಿ ತುಂಬಾ ಅಪಾಯವನ್ನುಂಟು ಮಾಡಿ ಅಕಸ್ಮಾತ್ ಸಂಭವಿಸುವ ಅಪಾಯವು ತಿಳಿದನ್ನಲ್ಲ—ಮಾನು ನಿಗೆ ನರ ಹುಲಿ ಎಂಬ ಒಂದು ವಿಷವಾದ ಗುಳ್ಳೆಗಳು ಎದ್ದು ವಿಕಾರ ಜಾತಿ ಇದು ಪಾಕವಾಗಲು ಏನಾದರೂ ಚಿಕಿತ್ಸೆ ತಿಳಿದಿದ್ದರೆ ಪತ್ರಿಕೆ ಪ್ರತ್ಯು ಸಂಪಾದಿಸಿಕೊಳ್ಳಬೇಕಾಗಿ ಬೇಡುವೆನು.

ಕೊಪ್ಪ.—ಈ ಪ್ರಾಂತ್ಯ ಮಳೆ ವಿಶೇಷವಾಗಿರುತ್ತೆ. ಜೂಲೈ ತಿಂಗಳಲ್ಲಿ ಪ್ರಾರಂಭವಾದ ಮಳೆ ಇನ್ನೂ ಬಿಟ್ಟೇ ಇಲ್ಲ. ಗದ್ದೆಗಳೆಲ್ಲಾ ಬಹಳ ಚನ್ನಾಗಿವೆ ಈ ವರ್ಷ ಸಂಪೂರ್ಣವಾದ ಬೆಳೆ ಆಗಬಹುದೆಂದು ತೋರುತ್ತದೆ ಸಂತೆಯಲ್ಲಿ ೬—೭ ಸೇರು ಅಕ್ಕಿ ಮಾರುತ್ತಾ ಇದ್ದದ್ದು ಹೋಗಿ ಈಗ ೮—೯ ಸೇರು ವರೆಗೆ ಮಾರುತ್ತಾ ಇದ್ದಾರೆ ಬಾಕಿ ದಿನಸಿಗಳೆಲ್ಲಾ ಬಹಳ ಪ್ರಿಯವಾಗಿಯೇ ಇವೆ ಆದರೆ ಆರೋಗ್ಯ ಒಂದು ವಿನಃ ಬಾಕಿ ಯಾವ ಪದಾರ್ಥ ಬೇಕಾದರೂ ಸಿಕ್ಕುತ್ತದೆ ತಪ್ಪು ಮಾಡಿದವರನ್ನು ಕೊಪ್ಪಕ್ಕೆ ಹಾಕು ಎಂಬ ಗಾದೆ ಹುಟ್ಟಿದ ಕಾಲಕ್ಕಿಂತಲೂ ಈಚೆಗೆ ಈ ಊರು ಬಹಳಮಟ್ಟಿಗೆ ವೃದ್ಧಿಗೆ ಬಂದಿರುತ್ತೆ ಕೊಪ್ಪವು ಮೇಲಿನ ಪೇಟೆ, ಕೆಳಗಿನ ಪೇಟೆ, ಬಾಳಗಡಿ ಎಂಬದಾಗಿ ಮೂರು ಭಾಗವಾಗಿರುತ್ತೆ ಮೇಲಿನ ಪೇಟೆಯಲ್ಲಿ ಸ್ಥಳವಂದಿಗರಾದ ಸಾಹುಕಾರರ ಮನೆಗಳೂ, ಕೆಳಗಿನ ಪೇಟೆಯಲ್ಲಿ ಚಿಲ್ಲರೆ ಅಂಗಡಿಗಳೂ, ಜವಳಿ ಅಂಗಡಿಗಳೂ, ಮಾಪ್ಪಿಗಳೂ ಇರುವದಲ್ಲದೆ ಆಸ್ಪತ್ರೆ, ಪೊಲೀಸ್ ಆಫೀಸು, ಪೋಸ್ಟಾಫೀಸುಗಳೂ ಇರುತ್ತವೆ. ಬಾಳಗಡಿಯಲ್ಲಿ ತಾಲ್ಲೂಕ್ ಕಛೇರಿ, ಸಬ್ ಜೆನಿಯರ್ ಆಫೀಸು ಮುಜರಾಯಿ ಇಕ್ಸೈಜ್ ಆಫೀಸುಗಳೂ, ತಾಲೂಕ್ ಆಫೀಸರುಗಳ ಮತ್ತು ಇತರ ನೌಕರರ ಮನೆಗಳೂ ಮುಸಾಫರ ಬಂಗಲೆಯೂ ಇರುತ್ತವೆ. ಈಚೆಗೆ ಸರ್ಕಾರದವರು ದಯಮಾಡಿ ಇಲ್ಲಿಗೆ ಒಂದು ಸ್ಕೂಲನ್ನು ಸಹಾ ಇಡಿಸಿ ಕೊಟ್ಟಿರುತ್ತಾರೆ ಇದಾಗಿ ಒಂದು ವರ್ಷ ಮಾತ್ರ ಆಯಿತು ಮಾಸ್ಟರಾಗಿ ಬಂದಿರುವ ಮೆ॥ ಎಸ್ ನಾರಾಯಣರಾಯರು ಬಹಳ ಶ್ರಮಪಟ್ಟು ಕೆಲಸ ಮಾಡಿ ಸ್ಕೂಲನ್ನು ಜಾಗ್ರತೆ ಅಭಿವೃದ್ಧಿಸ್ಥಿತಿಗೆ ತಂದರು ಮೊದಲಿಗಿಂತಲೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವದಲ್ಲದೆ ಈ ವರ್ಷ ಒಬ್ಬ ವಿದ್ಯಾರ್ಥಿ ಈ ಸ್ಕೂಲಿನಿಂದ ಕನ್ನಡ ಲೋವರ್ ಸೆಕಂಡರಿ ಪರೀಕ್ಷೆಗೆ ಅಪ್ಲಿಕೇಷನ ಕಳುಹಿಸಿರುತ್ತಾನೆ ಇಲ್ಲಿನ ಹೆಡ್ ಗುಮಾಸ್ತಾ ಮೆ॥ ಸೀತಾರಾಮಯ್ಯನವರೂ ನಗದಿ ಗುಮಸ್ತಾ ಮೆ॥ ಮಂಜಪ್ಪನವರೂ ಸ್ಕೂಲನ್ನು ಇನ್ನೂ ಅಭಿವೃದ್ಧಿಸ್ಥಿತಿಗೆ ತರುವದಕ್ಕೆ ಅತ್ಯಂತ ತರದೂದು ಮಾಡುತ್ತಾ ಪರಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಊಟಕ್ಕೆ ವಾರ ಮಾಡಿಕೊಡುವದು, ಸ್ಕೂಲ್ ಫೀಗೆ ಅನುಕೂಲ ಮಾಡಿಕೊಡುವದು ಈ ರೀತಿ ಸಹಾಯ ಮಾಡುತ್ತಾ ಇದ್ದಾರೆ ಇಲ್ಲಿನ ಅಮಲ್ದಾರ್ ಮೆ॥ ವೆಂಕಟಕೃಷ್ಣಯ್ಯನವರು ಬಡಬಗ್ಗರನ್ನು ಕಂಡರೆ ಬಹಳ ಪ್ರೀತಿಯುಳ್ಳವರಾಗಿ ಕೈಲಾದಷ್ಟುಗೂ ಅವರಿಗೆ ಸಹಾಯ ಮಾಡುತ್ತಾರೆ.

ಚಿಕ್ಕಮಗಳೂರು.—ಇಲ್ಲಿ ಸುಮಾರು ಒಂದು ವಾರದಿಂದಲೂ ಮಳೆಯಿಲ್ಲದೆ ಇರುವದು ರೈತರಿಗೆ ಸಂತೋಷವಾಗಿ ಕೊಯಲಿಗೆ ಬಂದಿರುವ ಪೈರುಗಳನ್ನೆಲ್ಲಾ ಕೊಯಿದು ಕಪ್ಪು ಹಾಕಿ ಕೊಳ್ಳುತ್ತಿದ್ದಾರೆ—ಪೈರಿಗಿನ ಹಾವಳಿಯಂತೂ ಏನದಿನಕ್ಕೂ ಹೆಚ್ಚುತ್ತಲಿದೆಯೇ ಹೊರತು ಕಡಿಮೆಯಾಗುವ ಮುಖವೇ ಇಲ್ಲವು ಇಲ್ಲಿಗೆ ರೋಗ ಪ್ರವೇಶಿಸಿ ನಾಲ್ಕು ತಿಂಗಳಾಯಿತು. ಈಗಾಗಲೇ ಸುಮಾರು ಐನೂರು ಜನರಿಗಿಂತಲೂ ಹೆಚ್ಚಾಗಿ ಈ ರೋಗದಿಂದ ಸತ್ತಿರಬೇಕೆಂದು ಊಹಿಸುತ್ತಲಿದೆ ಹೀಗೆ ಸತ್ತವರ ಸೈಕಿ ರಿಜಿಸ್ಟರಿಗೆ ಇಲ್ಲಿಗೆ ಬಂದಿದ್ದ ಒಬ್ಬ ಡೆಪ್ಯುಟಿ ಅಮಲ್ದಾರರು, ಇಲ್ಲಿಯ ಕೆಲಸವನ್ನು ತ್ಯಜಿಸ್ಸ್ ಸಬ್ ಅಸಿಸ್ಟಂಟ್ ಸರ್ಜನ್ ಮೆ॥ ಸದಾಶಿವರಾಯರೂ, ಬಿಸವನಹಳ್ಳಿ ಆಸ್ಪತ್ರೆ ಅಸಿಸ್ಟಂಟರೂ ಈ ರೋಗಕ್ಕೆ ಬಲಿಯಾದರು ಜನರ ಭಯಾತಿಶಯವಾದ ಸ್ಥಿತಿಯೂ ಅನ್ನವಿಲ್ಲದೆ ಕಷ್ಟಪಡುವ ಕೂಲಿನಾಲಿಮಾಡುವವರ ಸ್ಥಿತಿಯೂ ಹೇಳಲಸಾಧ್ಯ. ಜನರು ರೋಗಕ್ಕೆ ಹೆದರಿ ಹಳ್ಳಿಗಳಿಗೆ ಹೋಗಿದ್ದರೂ ಅಲ್ಲಿಯೂ ರೋಗತಗಲಿ ಸಾಯುತ್ತಿರುವದನ್ನು ನೋಡಿ ಕೆಲವರು ತಮ್ಮ ಮನೆಗಳಿಗೇನೆ ಬಂದಿದ್ದಾರೆ ಇನ್ನು ಕೆಲವರು ಹಳ್ಳಿಹಳ್ಳಿಗಳಲ್ಲಿ ಸೇರಿಕೊಂಡಿದ್ದರೂ ಅಲ್ಲಿಯೂ ರೋಗ ವ್ಯಾಪಿಸಿದ್ದರಿಂದ ಬೇರೆ ಕಡೆಗಳಿಗೆ ಹೋಗುತ್ತಲಿದ್ದಾರೆ ರೋಗ ತಗಲಿದವರು ಉಳಿಯುವದೇ ಕಷ್ಟವಾಗಿದೆ ಕೆಲವರು ತಗಲಿದ ಒಂದೇ ದಿನದಲ್ಲಿಯೂ ಕೆಲವರು ಎರಡು ಮೂರು ದಿನಗಳಲ್ಲೂ ಸಾಯುವರು ರೋಗದ ಸ್ಥಿತಿಯು ಕಠಿಣವಾಗಿ ಕಾಣುತ್ತಲಿದೆ ಈ ಭಯಂಕರವಾದ ರೋಗದಿಂದ ಈ ಊರನ್ನು ಬಿಡುಗಡೆ ಮಾಡು ಎಂದು ಪ್ರಜೆಗಳು ದೇವರಿಗೆ ಪ್ರತಿಸ್ತುದಿಲ್ಲಾ ಮೊರೆಯಿಡುತ್ತಲಿದ್ದಾರೆ—ಡಾಕ್ಟರ್ ಪಲ್ಪುಯವರು ಇಲ್ಲಿಗೆ ಇದೇ ತಿಂಗಳು ೧೨ನೇ ತಾ ಬಂದು ಇಲ್ಲಿ ಮಾಡಬೇಕಾದ ಕೆಲಸಗಳನ್ನು ನಡಿಸಿ ಪುನಃ ಬೆಂಗಳೂರಿಗೆ ಹೋಗುತ್ತಾರೆಂದು ವರ್ತಮಾನ—ಇಲ್ಲಿನ ಎಲ್ಲಾ ಸ್ಕೂಲುಗಳಿಗೂ ಆಕ್ಟೋಬರ್ ೬ನೇ ತಾ ವರೆಗೂ ರಜಾಕೊಟ್ಟದ್ದರಿಂದ ಸ್ಕೂಲ್ ಮಾಸ್ಟರುಗಳಲ್ಲಿ ಅನೇಕರು ಬೇರೆ ಬೇರೆ ಕಡೆಗೆ ಹೊರಟು ಹೋದರು.—ಇದೇ ತಿಂಗಳು ೧೨ನೇ ತಾ ದಿಂದ ಇಲ್ಲಿ ವಾಲಂಟಿಯರು ವಿಚಾರಣೆ ನಡೆಯುತ್ತಾ ಇರುವದರಿಂದ ಇದಕ್ಕಾಗಿ ಈ ಡಿಸ್ಟ್ರಿಕ್ಟಿನ ಅನೇಕ ಯೂರೋಪಿಯರ್ ಪ್ಲಾಂಟರುಗಳು ಒಂದು ರೈಪಲ್ ಶೂಟಿಂಗ್ ಮೊದಲಾದ ಸೈನ್ಯಸಂಬಂಧವಾದ ಕಸರತ್ತು ಮಾಡುತ್ತಿರುವದಲ್ಲದೆ ೧೫ನೇ ತಾ ಒಂದು ಕುದುರೆ ಪಂದ್ಯ ನಡೆಯುವದಾಗಿ ವರ್ತಮಾನವಿದೆ. ಬರುವ ವಾರದಲ್ಲಿ ಇನ್ನೂ ಕೆಲವು ಜೂಜುಗಳು ಇರುವದಾಗಿ ಕೇಳುತ್ತೇನೆ.

ಮುಳಬಾಗಿಲು.—ನಮ್ಮ ಮೈಸೂರು ಸಂಸ್ಥಾನದ ಕಟ್ಟಕಡೆಯಲ್ಲಿಯೂ, ಕೋಲಾರ್ ಡಿಸ್ಟ್ರಿಕ್ಟಿನ ಬಹಳ ಪೂರ್ವಭಾಗಕ್ಕೂ ತಿನ ವಿಶಾಖದಲ್ಲಿಯೂ ಪುಂಗನೂರೆಂಬ ಜಮೀನ್ದಾರಿ ಯೊಂದಿರುವುದು. ಇದು ಪೂರ್ವಕಾಲದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಸೇರಿತ್ತಂತೆ ಈ ಜಮೀನ್ದಾರಿಯ ಪ್ರಭುವಾಗಿರುವ ರಾಜಾ ಸೀತಾರಾಮ ಚಿಕ್ಕರಾಯಲ್ ಯಶೋವಂತ ಬಹದ್ದೂರೆಂಬುವರ ಸಮ್ಮುಖದಲ್ಲಿ ತುಂಬಾ ದೊಡ್ಡದಾದ ಮತ್ತು ಮಹಾ ಸುಗುಣಸಂಪನ್ನವಾದ ಆನೆಯೊಂದಿರುವುದು ಈ ಆನೆಯು ಸುಮಾರು ೪—೫ ದಿನಗಳ ಕೆಳಗೆ ವೆಂಕಟಗಿರಿಯಿಂದ ಪುಂಗನೂರಿಗೆ ಸುಮಾರು ಹತ್ತು ಮೈಲಿಯಲ್ಲಿರುವ ಶಂಕರಾಯಲ್ ಪೇಟೆಯೆಂಬುವ ಸ್ಥಳಕ್ಕೆ ತೆಗೆದುಕೊಂಡು ಹೋಗಲ್ಪಟ್ಟಿತ್ತು ಇದಕ್ಕೆ ಕೆಲವು ವರ್ಷಗಳಿಂದೀಚೆಗ್ಗೆ ಮದಹತ್ತುವುದುಂಟು ಅದ್ದರಿಂದ ಯಾಗಿಯೇ ಇದಕ್ಕೆ ಮದಹತ್ತಿದ್ದ ಸಮಯದಲ್ಲಿ ಅದರ ಯಜಮಾನನು ಮೇಲೆ ಹತ್ತಿಕೊಂಡು ಒಡಾಡೊಂದು ಮರದ ಸಮೀಪದಲ್ಲಿ ಹೋಗುತ್ತಿರುವಾಗ ಇದು ಏನುಕಾರಣವೋ ತನ್ನ ಸೊಂಡಲಿನಿಂದ ಸಮೀಪದಲ್ಲಿದ್ದ ಮರದಲ್ಲಿ ಒಂದು ದೊಡ್ಡ ಕೊಂಬೆಯನ್ನು ಮುರಿದು ಕೊಂಡು ಅದರಿಂದ ತನ್ನ ಮಾವಟಿಗನನ್ನು ಒಂದೆರಡು ಪೆಟ್ಟು ಹೊಡೆದಿದೆ. ಕೂಡಲೆ ಆ ಮಾವಟಿಗನು ಉಪಾಯದಿಂದ ಆ ಕೊಂಬೆಯನ್ನು ಅದರ ಸೊಂಡಲಿನಿಂದ ಬಿಡಿಸಿಬಿಟ್ಟು ತನ್ನ ಕೈಯಲ್ಲಿದ್ದ ಅಂಕುಶದಿಂದ ಗಜವನ್ನು ಸ್ವಲ್ಪ ಹಿಂಸೆ ಮಾಡಿದನು ಆನಂತರ ಪುಂಡರೀಕವು ಬಹಳ ಕೋಪಗೊಂಡು ತನ್ನ ಸೊಂಡಲಿನಿಂದ ಮಾವಟಿಗನನ್ನು ಕೆಳಕ್ಕೆ ಳೆದು ಕೊಂದುಹಾಕಿತು ಸುಮಾರು ೬—೭ ಗಂಟೆಗಳಾದ ತರುವಾಯ ಅದು ತನ್ನ ಯಜಮಾನನನ್ನು ತಾನೇ ಕೊಂದುಹಾಕಿತೆಂಬ ವ್ಯಸನದಿಂದಲೋ ಅಥವಾ ಮತ್ತೇನು ಕಾರಣದಿಂದಲೋ ಸುಮ್ಮನೆ ಕೂಗುತ್ತಾ ಬಹಳ ಹೊತ್ತು ಮೇನನ್ನ ಪೇಕ್ಷಿಸದೆ ನೇತ್ರಧಾರೆಗಳನ್ನು ಹಾಕುತ್ತಾ ಇತ್ತು. ಮತ್ತು ಅಲ್ಲಲ್ಲಿಯೂ ನಿಲ್ಲದೆ ಆ ಗ್ರಾಮದ ಬಳಿಯಲ್ಲಿರುವ ದೊಡ್ಡ ಕೆರೆಯಲ್ಲಿ ಅಲ್ಲಿಂದಿಲ್ಲಿಗೆ ಓಡುತ್ತಾ ತನ್ನ ಬಳಿಗೆ ಬಂದವರನ್ನೆಲ್ಲಾ ಬಹಳ ಕೋಪದಿಂದ ಹಿಂದಟ್ಟಿ ಓಡಿಸುವದಕ್ಕೆ ಪ್ರಾರಂಭಿಸಿ, ಸಾಯಂಕಾಲವಾದ ಕೂಡಲೆ ಹತ್ತಿರವಿದ್ದ ಕಬ್ಬಿನ ತೋಟಗಳಲ್ಲಿ ಪ್ರವೇಶಿಸಿ ಅವುಗಳನ್ನೆಲ್ಲಾ ನಾಶಮಾಡುತ್ತಿತ್ತು ಈ ಸಂಗತಿಯು ಮೇಲ್ಕಂಡ ರಾಜರವರಿಗೆ ತಕ್ಷಣವೇ ರಿಪೋರ್ಟ್ ಬರಲು ಸ್ವಲ್ಪ ಸಿಪ್ಪಂದಿಯನ್ನು ಕಳಿಸಿಕೊಂಡು ಅವರೇ ಸಮಕ್ಷಮ ದಯಮಾಡಿಸಿ ಗಜರಾಜನನ್ನು ಕರೆಯಲು ಅದು ತಕ್ಷಣವೇ ಇವರ ಹತ್ತಿರಕ್ಕೆ ಓಡಿಬಂದಿದೆ ಇವರುಗಳು ಕಬ್ಬಿಣದ ಸರ ಪಣಿಗಳನ್ನೂ ಹಗ್ಗಗಳನ್ನೂ ತರಿಸಿ, ಅಳುಗಳ ಕೈಗೆ ಅವುಗಳನ್ನು ಕೊಟ್ಟು ತಾವು ಪುರೋಭಾಗದಲ್ಲಿ ನಿಂತುಕೊಂಡು ಐದಾವತಕ್ಕೆ ಕಬ್ಬುಗಳನ್ನು ಆಹಾರ ಕೊಡುತ್ತಾ ಅದರ ಕಾಲುಗಳನ್ನು ಬಂಧಿಸಿಬಿಟ್ಟರು. ಅದಕ್ಕೆ ಮದವಿನ್ನೂ ಇಳಿಯಲಿಲ್ಲವೆಂತಲೂ, ಮಹಾರಾಜರವರಲ್ಲಿಯೇ ಇರುವ ಹಾಗೂ ತಿಳಿಯಬರುತ್ತದೆ ನಮ್ಮ ಮೈಸೂರು ಸಂಸ್ಥಾನದಲ್ಲಿ ನಡೆಯುವ ಹಾಗೆಯೇ ಈ ಪುಂಗನೂರು ಸಂಸ್ಥಾನದಲ್ಲಿಯೂ ಪ್ರತಿ ವರುಷವೂ ನವರಾತ್ರಿಯು ಉತ್ಸವವು ಬಹಳ ವೈಭವದಿಂದ ನಡೆಯುವುದು ಆ ಸಮಯದಲ್ಲಿ ಮೆರವಣಿಗೆಯನ್ನು ಕೆಲವು ತುರಗಗಳನ್ನೂ ದುರ್ಗಾ ಗುಡಿಗೆ ಮೆರವಣಿಗೆ ಮಾಡಿಕೊಂಡು ಹೋಗಿ ಬರುವ ಪದ್ಧತಿಯುಂಟು ಆ ಸಮಯಕ್ಕಾದರೂ ಈ ಗಜವು ಸರಿಯಾದ ಸ್ಥಿತಿಗೆ ಬಂದೀತೆಂದು ನಂಬುತ್ತಾ ಇಂಥಾ ರೌದ್ರಾಕಾರದಲ್ಲಿದ್ದ ಗಜರಾಜನನ್ನು ಈ ಪ್ರಭುಗಳೇ ಸಮೀಪಿಸಿ ತಮ್ಮ ಸಾಹಸದಿಂದ ಅದನ್ನು ಬಂಧಿಸಿರುವುದು ಬಹಳ ಆಶ್ಚರ್ಯವಾದದ್ದಾದಕಾರಣ ಇವರ ಸಾಹಸವನ್ನು ಎಲ್ಲರೂ ಕೊಂಡಾಡುವರು

ಚನ್ನರಾಯಪಟ್ಟಣ.—ಈ ಊರಿಗೆ ಈ ತಿಂಗಳಲ್ಲಿ ಸುತರಾಂ ಮಳೆ ಆಗದೆ ಹೊಲ, ಗದ್ದೆ ಮುಂತಾದವುಗಳಲ್ಲಿ ಹಾಕಿದ್ದ ಪೈರುಗಳೆಲ್ಲಾ ಬಾಡಿಹೋಗುತ್ತಾ ಇವೆ. ಕಳೆದ ತಿಂಗಳಲ್ಲಿ ಈ ಊರಿಗೂ ಸುತ್ತ ಮುತ್ತಲಿನ ಗ್ರಾಮಗಳಿಗೂ ಒಂದೆರಡು ಹದ ಮಳೆ ಆದದ್ದರಿಂದ ರೈತರೆಲ್ಲಾ ಜರಿಕೆ ವಗೈರೆ ಕೆಲಸಗಳನ್ನು ಮಾಡಿ ತುಂಬಾ ಹರ್ಷಿತರಾಗಿದ್ದರು ಈಚೆಗೆ ಮಳೆ ಆಗದೆ ಹೋಗಿರುವದರಿಂದ ಹಾಹಾಕಾರಪಡುತ್ತಿದ್ದಾರೆ. ಈ ಊರಿನಲ್ಲಿರುವ ಭಾರಿ ಕೆರೆಗೂ ಅರ್ಧಪಾಲು ನೀರು ಬಂದಿರುವದರಿಂದ ಜನಗಳಿಗೂ ಜಾನುವಾರುಗಳಿಗೂ ತುಂಬಾ ಸೌಕರ್ಯವಾಗಿರುತ್ತೆ—ಅಲ್ಲದೆ ಈ ಊರು ಕೋಟೆಯೊಳಗಿರುವ ಬಾರಿ ಕಲ್ಯಾಣಿಯು ೧೫—೨೦ ವರ್ಷಗಳಿಂದ ಕೆಸರು ಮಣ್ಣು ವಗೈರೆ ಬಿದ್ದು ಹೂತುಹೋಗಿದ್ದದ್ದನ್ನು ಪರ್ಥರ್ ಅಮಲ್ದಾರ್ ಮೆ॥ ಚನ್ನಪ್ಪನವರು ಹಳ್ಳಿಯವರು ಹೂಳು ಮಣ್ಣನ್ನು ಸಂಪೂರ್ಣವಾಗಿ ತೆಗಿಸಿ, ಶುಚಿಮಾಡಿಸಿದ್ದರು ಈಚೆಗೆ ಕೆರೆಗೆ ನೀರು ಬಂದಿರುವದರಿಂದ ಹಿಂದೆ ಪಾಳ್ಯಗಾರರ ದಿವಸದಲ್ಲಿ ಇಡಿಸಿರುವ ಕೊಳಾಯಿಯಿಂದ ಈ ಕಲ್ಯಾಣಿಗೆ ನಿರ್ಮಲವಾದ ನೀರು ಬಂದು ತುಂಬುತ್ತಾ ಇರುವದನ್ನು ನೋಡಿ ಜನಗಳೆಲ್ಲ ಬಹಳ ಸಂತೋಷದೊಡನೆ ಮೆ॥ ಚೆಲ್ಲೆಯವರು ಮಾಡಿಸಿದ ಕೆಲಸಕ್ಕಾಗಿ ಅವರನ್ನು ಕೊಂಡಾಡುತ್ತಾ ಇರುವರು—ಈಗ ಅಮಲ್ದಾರರಾಗಿರುವ ಮೆ॥ ಅಪ್ಪಣ್ಣಯ್ಯಂಗಾರ್ರವರು ಪ್ರಜಾಕ್ಷೇಮಚಿಂತೆಯುಳ್ಳವರಾಗಿ ಬಹು ಆಸಕ್ತಿಯಿಂದ ಕೆಲಸಕಾರ್ಯಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಟೌನ್ ಪಾಕೀಜಾ ವಿಷಯದಲ್ಲಿಯೂ ಪ್ರಜಾ ಆರೋಗ್ಯಕ್ಕಾಗಿಯೂ ತುಂಬಾ ನಿಗಾ ಇಟ್ಟು ಸಣ್ಣ ಸಣ್ಣ ಸಂದಿಗೊಂದಿಗಳಿಗೂ ಸಹಾ ಅನಿಷ್ಟಕರವಾದ ಭಾಗಗಳನ್ನೆಲ್ಲಾ ಶುದ್ಧಿಮಾಡಿಸಿ ಅಲ್ಲಿಯೂ ಚರಂಡಿಗಳನ್ನು ತೋಡಿಸಿ ನೀರು ಸಲೀಸಾಗಿ ಹೋಗುವ ಹಾಗೆ ಮಾಡಿಸುತ್ತಿದ್ದಾರೆ ಮತ್ತು ಈ ಊರು ಮಧ್ಯೆ ಇರುವ ಚರ್ಮದ ಮಂಡಿ, ಕಸಾಬರ ಅಂಗಡಿಗಳಿಂದ ಜನಗಳಿಗೆ ಅನಾರೋಗ್ಯವೆಂದು ತಿಳಿದು ಅವುಗಳನ್ನು ಬೇರೆ ಸ್ಥಳದಲ್ಲಿ ಏರ್ಪಡಿಸಬೇಕೆಂದು ಸ್ಥಳವನ್ನು ಗೊತ್ತುಮಾಡುವ ಉದ್ದೇಶ್ಯ ಊರು ಹೊರಗೆ ಬೆಂಗಳೂರು ರಸ್ತೆ ಹೊಲಗೇರಿ ಸಮೀಪದಲ್ಲಿ ಅನುಕೂಲವಾಗಿದೆ ಎಂದು ಯೋಚಿಸಿ, ಮೆ॥ ಶ್ರೀನಿವಾಸೈಯ್ಯಂಗಾರ್ರ) ಸಮೇತ ಹೊರಟು, ಹೊಲಗೇರಿ ಮಧ್ಯದಲ್ಲಿರುವ ಮಿಷನ್ ಬಾಲಕರ ಸ್ಕೂಲಿಗೆ ಹೋಗಿ ಹುಡುಗರನ್ನು ಪರೀಕ್ಷಿಸಿ ತುಂಬಾ ಸಂತೋಷಪಟ್ಟು ಅವರಿಗೆ ಮಿಠಾಯಿ ವಗೈರೆ ತರಿಸಿ ಕೊಟ್ಟದ್ದಲ್ಲದೆ ವಿಗ್ರಹಿಕರೂ ಕೇವಲ ಅವಿದ್ಯಾವಂತರೂ ಆದ ಈ ಜನಗಳಿಗೆ ಪ್ರೋತ್ಸಾಹಕೊಟ್ಟು ಸ್ಕೂಲು ಏರ್ಪಡಿಸಿದವರನ್ನು ಬಹಳವಾಗಿ ಶ್ಲಾಘಿಸಿರುತ್ತಾರೆ—ಈ ತಾಲ್ಲೂಕಿಗೆ ಸೇರಿದ ಕೆಲವು ಗ್ರಾಮಗಳಲ್ಲಿ ಕಾಲರಾ ಉಪದ್ರ ಉಂಟೆಂದು ತಿಳಿದು, ಡಾಕ್ಟರ ಸಮೇತ ಅವರು ಆ ಸ್ಥಳಗಳಿಗೆ ಹೋಗಿ ತಕ್ಕ ಏರ್ಪಾಡುಗಳನ್ನು ಮಾಡಿ ಟವನ್ನಲ್ಲಿ ಅಂಥಾ ಅಂಟು ಜಾಡ್ಯವಿರುವ ಸ್ಥಳಗಳಿಗೆ ಸಂತೆ ವಗೈರೆಗಳಿಗೆ ಯಾರೂ ಹೋಗಕೂಡದೆಂದು ಟಾಂಟಾಂ ಮೂಲಕ ಪ್ರಸಿದ್ಧಪಡಿಸಿರುತ್ತಾರೆ—ಈ ಊರಿಗೆ ಸಮೀಪದಲ್ಲಿರುವ ಜೆನಿವಾರದ ಕೆರೆಯು ತುಂಬಿ ಕೋಡಿ ಬಿದ್ದಿದೆ ಈಗ ಇಂಜನಿಯರ್ ಇಲಾಖೆಯವರು ರಿಪೇರಿಮಾಡಿಸುತ್ತಿದ್ದಾರೆ ಈ ಕೆರೆ ಏರಿಯ ಮೇಲೆ ಶ್ರವಣಬೆಳಗುಳದ ಸಂತೆಗೆ ಹೋಗಿ ರಾತ್ರಿ ಕಾಲದಲ್ಲಿ ಆ ಕೆರೆಯ ಏರಿ ಮೇಲೆಯೇ ಗಾಡಿಗಳನ್ನು ಹೊಡೆದುಕೊಂಡು ಬರುತ್ತಾರೆ. ಈ ಏರಿಗೆ ಎರಡು ಕಡೆಗಳಲ್ಲೂ ಯಾವ ತಡೆಯೂ ಇಲ್ಲ. ತುಂಬಾ ಅಪಾಯಕರವಾಗಿದೆ ನಮ್ಮ ಅಮಲ್ದಾರರು ಸರ್ಕಾರಿಯಾಗಿ ತಕ್ಕ ಏರ್ಪಾಡು ಮಾಡಿ ಏರಿ ಎರಡು ಕಡೆಗಳಲ್ಲಿಯೂ ಸಾಲಾಗಿ ಕಲ್ಲು ಹೂಳಿಸಿ ತಡೆಯಾಗುವಂತೆ ಮಾಡಿಸಿದರೆ ಜನಗಾಡಿಗಳ ಸಂಚಾರಕ್ಕೆ ತುಂಬಾ ಅನುಕೂಲವಾಗಿರುತ್ತೆ—ಈ ಮಾಹೆ ೯ನೇ ತಾ ಪತ್ರಿಕೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಗನ್ನಿ ಕಡುವಲ್ಲಿ ೫ ಜನ ಪ್ಲೇಗಿನ ಮೂಲಕ ಸತ್ತರು ಎಂಬುವುದು ನಿಜವಲ್ಲ ಇದಕ್ಕೊಸ್ಕರ ತಾಲ್ಲೂಕಿಗೆ ಯಾವದೊಂದು ರಿಪೋರ್ಟ್ ಬಂದಿಲ್ಲ.

ಮಕ್ಕಳ ಹಿತಕಾರಿ

ಎಂದು

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ. 57-27

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು; ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

[illegible]ನುಮನುಷ್ಯ ಇರುವ ಔಷಧ
[illegible] ಕೊಂಡುಕೊಳ್ಳಿ.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—1

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನ ಸ್ಯಾಂಕ್ಷನ್ ಮಾಡುವ ಕಂಡಿಷನ್‌ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕುರೀತಿ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚಿಗೆ ಫೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು.—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವೈ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

119 2

೧೯೦೫—೦೬ ನೇ ಇಸವಿ ಸಿವಿಲ್ ನಂಬರು ೨೩೧.

ವಾದಿ—ಗಿರಿಯಣ್ಣ ಉರುಫ್ ಗಿರಿಯಪ್ಪಾಜಿ.

ಪ್ರತಿವಾದಿ—೧ನೆ ಕರೀಮಿಯಸ್ಸಾ ಉರುಫ್ ಸೈದ್ ಕರೀಂ ವಗೈರೆ

ಇದರಿಂದ ಮೈಸೂರು ಲಷ್ಕರ್ ಮತ್ತು ಈರಣಗೆರೆ ಮೊಹಲ್ಲಾ ಪಲ್ಲಿ ಇರತಕ್ಕ ಮಹಮ್ಮದ್ ಪಂಗಡದವರಿಗೆ ತಿಳಿಯಪಡಿಸುವದೇನೆಂದರೆ–

ಮೇಲ್ಕಂಡ ಮೊಕದ್ದಮೆಯಲ್ಲಿ ವಾದಿಯು ಷೆಡ್ಯೂಲ್ ಸ್ವತ್ತು ತನಗೆ ಸೇರಿದ್ದೆಂತಲೂ ಪ್ರತಿವಾದಿಯು ಅಕ್ರಮಸ್ವಾಧೀನ ಮಾಡಿಕೊಂಡಿರುವದರಿಂದ ತನಗೆ ಬಿಡಮಾಡಿಸಿಕೊಡಬೇಕೆಂದು ವಗೈರೆ ಈ ಕೋರ್ಟಿನಲ್ಲಿ ವಾದಿಯು ದಾವಾ ಮಾಡಿರುತ್ತಾರಾಗಿ ಸಿವಿಲ್ ಪ್ರೊಸೀಜರ್ ಕೋಡು ೩೦ ನೆ ಸೆಕ್ಷನ್ ಮೇರ ಮೇಲ್ಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಹಕ್ಕು ಇರತಕ್ಕ ವಿಶಿಷ್ಟ ಜನಗಳು ೧೯೦೬ ನೆ ಇಸವಿ ಸೆಪ್ಟಂಬರ್ ೧೭ ನೆ ತಾರೀಖು ದಿವಸ ೧೧ ಗಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ತಮ್ಮ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು ಇರುತ್ತೆ. ತಪ್ಪಿದಲ್ಲಿ ಆ ಬಳಿಕ ಯಾರ ತಕರಾರನ್ನೂ ಅಂಗೀಕರಿಸುವದಿಲ್ಲವಾಗಿ ತಿಳಿಪಡಿಸಿದೆ

ತಾ. ೩-೯-೦೬. (Sd) N. T. GOPALIENGAR,
Principal Munsiff.

ಷೆಡ್ಯೂಲ್

ಮೈಸೂರು ಲಷ್ಕರ್ ಮೊಹಲ್ಲಾ ವೀರನಗೆರೆಯಲ್ಲಿ ರೋಮನ್ ಕ್ಯಾಥೋಲಿಕ್ ದೇವಸ್ಥಾನದ ಎದುರಿಗೆ ಇರುವ ಮಟ್ಟಿಜೋಪಡಿ ಮತ್ತು ಇದಕ್ಕೆ ದಕ್ಷಿಣದಲ್ಲಿರುವ ಅಂಗಳ ಒಟ್ಟು ಚೌತರಫು: ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ವಾದಿಯು ಹಾಲಿ ವಾಸವಾಗಿರುವ ಮನೆ, ಉತ್ತರಕ್ಕೆ ಮೈರೋಡು, ದಕ್ಷಿಣಕ್ಕೆ ಗಲ್ಲಿ ಈ ಮಧ್ಯೆ ಇರುವ ಮಟ್ಟಿಜೋಪಡಿ ಮನೆ ಮತ್ತು ಅಂಗಳ

ತಾ. ೩-೯-೦೬ (Sd) N. T. GOPALIENGAR,
Principal Munsiff.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . ರೂ. ೧—೮—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . . . ರೂ. ೧—೧೪—೦

೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಪೂರಾ ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಉಪಾಧ್ಯಾಯರುಗಳಿಗೆ ನೋಟಿಸ್

ಬಾಲಬೋಧೆ! ಸರ್ಕಾರದ ಬಾಲಬೋಧೆ

೧ ನೇ ಭಾಗ!! ಬಾಲಬೋಧೆ!!!

121-2

ಮೇಲ್ಕಂಡ ಪುಸ್ತಕವು ದೊರೆಯದೆ ಉಪಾಧ್ಯಾಯರುಗಳ ಪೇಚಾಟವನ್ನು ನಿವಾರಿಸಲಸಾಧ್ಯವಾಗಿದೆ ಉಪಾಧ್ಯಾಯರುಗಳು ಸರ್ಕಾರದ ೧ ನೆಯ ಭಾಗದ ಬಾಲಬೋಧೆಗೆ ಕಾದೂ ಕಾದೂ ಸಾಕಾಯಿತು ಅದು ಶೀಘ್ರದಲ್ಲಿ ಬರುವ ಹಾಗೆ ಕಾಣಲಿಲ್ಲ ಈ ತೊಂದರೆಗಳನ್ನೆಲ್ಲಾ ತಪ್ಪಿಸುವದಕ್ಕೆ ನಾವು ಅತ್ಯುತ್ಕೃಷ್ಟವಾದ ಬಾಲಶಿಕ್ಷೆ ಒಂದನೆ ಭಾಗವನ್ನು ಪ್ರಕಟಿಸಿರುತ್ತೇವೆ ಇದರಲ್ಲಿ ನಾಲ್ವತ್ತು ಚಿತ್ರಗಳಿರುತ್ತವೆ. ಕಾಗದವು ಮತ್ತು ಬೈಂಡು ಬಹು ಸೊಗಸಾಗಿವೆ ಇದರ ಕ್ರಯ ಒಂದೇ ಆಣೆ. ವಿ. ಪಿ. ಪಿ. ಮೂಲಕ ತರಿಸಿಕೊಳ್ಳುವವರು ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಳ್ಳಬೇಕು. ನೂರು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಂಡವರಿಗೆ ಶೇಕಡ ೧೨॥ ರಂತೆ (ರೂಪಾಯಿಗೆ ಎರಡಾಣೆಯಂತೆ) ಕಮಿಷನ್ ಕೊಡುತ್ತೇವೆ ಪುಸ್ತಕದಲ್ಲಿ ಯಾವ ಮತಸಂಬಂಧವಾದ ಬೋಧನೆಯೂ ಇಲ್ಲ "ಸತ್ಯಂ ಜಯತಿ ಧರ್ಮೋ ವರ್ಧತೆ" ಎಂಬದನ್ನು ದೃಢಪಡಿಸುವಂತೆ ಈ ಪುಸ್ತಕವು ಆಗಲೇ ಅನೇಕ ಸರ್ಕಾರಿ ಮತ್ತು ಪ್ರೈವೇಟ್ ಸ್ಕೂಲ್ ಗಳಲ್ಲಿ ನೇಮಿಸಲ್ಪಟ್ಟಿರುತ್ತದೆ ಹೆಡ್ ಮಾಸ್ತರುಗಳು ಪುಸ್ತಕವನ್ನು ನೋಡಬೇಕಾದರೆ ಇದೇ ತಿಂಗಳು ೨೫ನೇ ತಾರೀಖಿನೊಳಗಾಗಿ ನಮಗೆ ಬರೆದುಕೊಂಡ ಪಕ್ಷದಲ್ಲಿ ಸ್ಯಾಂಪಲ್ (ಉಚಿತಾರ್ಥವಾದ ಒಂದು ಪ್ರತಿ) ಪುಸ್ತಕಗಳನ್ನು ಕಳುಹಿಸಿಕೊಡುತ್ತೇವೆ.

ಮ್ಯಾನೇಜರ್,
ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವವು.

120 2

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ದೇವಾಗ್ರದ ಸ್ಥಿತಿಯ ಪೈಕಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ.

ಜಮೀನಿನ ವಿವರಣೆ.	ಸರ್ವೆ ನಂಬರು.	ಬೀಜವರಿ. ಎಕರೆ	ಗುಂಟೆ	ಆಕಾರ ರೂ.
ಕಾವೇರಿನಾಲೆ ಕೆಳಗಿನ ಗದ್ದೆಗಳು	೬೦	೪	,,	೨೬
	೧೬೩	೬	೨೨	೪೭
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೬	೩೭	೪೮
ಜುಮ್ಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರಡಿ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಮಿತಿಯ ಒಳಗಾಗಿ ಆಲೋಚಿಸಲಾಗುತ್ತದೆ.

ಜಮೀನಿನ ವಿವರಣೆ.	ಸರ್ವೆ ನಂಬರು	ಬೀಜವರಿ. ಎಕರೆ	ಗುಂಟೆ	ಆಕಾರ ರೂ.
ಕಾವೇರಿ ನಾಲೆ ಕೆಳಗಿನ ಗದ್ದೆಗಳು	೧೦೦	೩	೧೫	೨೪
	೧೦೧	೩	೯	೨೩
	೧೦೨	೩	೯	೨೩
	೬೦	೬	೩೭	೪೩
ಜುಮ್ಲಾ	೪	೧೫	೩೦	೧೧೩
ಮೇಲೆ ಕಂಡ ಜಮೀನುಗಳಿಗೆ ಹತ್ತಿರುವ ಧೃವಸ್ಥೈರು ಬಾಗಾಯಿತು	೬೧	೩	೪	೨೮
	೩೨	೪	೨೫	೪೨
	೬೩	೪	೧೬	೪೦
	೫೯	೪	೩೪	೩೯
ಜುಮ್ಲಾ	೪	೧೬	೩೯	೧೪೯
ಒಟ್ಟು ಜುಮ್ಲಾ	೧೩	೬೧	೯	೪೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ವಿನ್ಷರ್ ಎಸ್ಟೇಟಿನ ಮ್ಯಾನೇಜರ್ ಎಸ್. ಬಿ. ಶ್ರೀಕಾದ್ರ್ರಯ್ಯಂಗಾರ್ರಿಗೆ ತಲುಪಬೇಕು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

31—8—1906 ರಿಂದ 7—9—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋ[illegible]
ಬೆಂಗಳೂರು ಪಟ್ಟಣ	4	2	6
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	18	10	21
ಮೈಸೂರು ,,	0	0	5
ಕೋಲಾರ್ ,,	0	0	4
ಕೋಲಾರ್ ಚಿನ್ನದ ಗಣಿಗಳು	0	0	3
ತುಂಕೂರು ಡಿಸ್ಟ್ರಿಕ್ಟು	2	3	5
ಹಾಸನ ,,	5	3	0
ಚಿತ್ರದುರ್ಗ ,,	0	0	0
ಕಡೂರ್ ,,	99	68	4
ಶಿವಮೊಗ್ಗ ,,	2	3	17
ಜುಮ್ಲಾ	[illegible]84	87	68

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಆಶ್ವೀಜ ಶುದ್ಧ ಬಿದಿ ಗುರುವಾರದಿಂದ ಆಶ್ವೀಜ ಶುದ್ಧ [illegible] ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಸೆಪ್ಟಂಬರ್.

ತಾ.	ವಾರ		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.
20	ಗುರು	✠	ಬಿದಿಗೆ	21-42	ಸ್ವ	3 22
21	ಶುಕ್ರ	:	ತದಿಗೆ	17-2	[illegible]	0-38
22	ಶನಿವಾ		ಚೌತಿ	11-38	ವಿ	55-28
23	ರವಿವಾ	¶	ಪಂಚಮಿ	5 28	ಉಪರಿ	51 7
24	ಚಂದ್ರ	‡	ಸಪ್ತಮಿ	53-18	ಜೆ	15 2
25	ಕುಜ	*	ಅಷ್ಟಮಿ	47-49	ಮೂ	41-14
26	ಬುಧ	;;	ನವಮಿ	42-26	ಪೂಷಾ	37-19

✠ ಮಾಸಾವ್ಯ, ತಿಥಿದ್ವಯಂ, ಷಾಣ್ಮಾಸಂ ೧ : ಚತುರ್ಥಿ[illegible] ¶ ಉಪಾಂಗಲಲಿತಾವ್ರತಂ ‡ ಕಾತ್ಯಾಯನೀ, ಕಾಳರಾತ್ರಿ [illegible] ಮಹಿಷಾಸುರಸಂಹಾರ * ದುರ್ಗಾಷ್ಟಮಿ, ಸರಸ್ವತೀ ಪೂಜಾ ;; [illegible]ನವಮಿ, ಆಯುಧ ಗಜಾಶ್ವಪೂಜ, ಅಮಲ್‌ದೇವತಾ ಪೂಜ, ತಿ[illegible] ವೆಂಕಟಾಚಲಸ್ವಾಮಿ ರಥ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಸಾಧ್ಯೇ ಅಕ್ಕಿ ಪಲ್ಲಾ ೧ಕ್ಕೆ	ರೂ. ೧೩-೮-೦	[illegible]
ಕೆಂಬೂತಿ ಅಕ್ಕಿ ಅವಲ್	೧೩-೪-೦	[illegible]
,, ದುಯಂ	೧೩-೮-೦	[illegible]
ಜವ್ರಾಣಿ ಅಕ್ಕಿ	೧೩-೪-೦	[illegible]
ಸಣ್ಣಕ್ಕಿ ಅವಲ್	೧೪-೮-೦	[illegible]
,, ದುಯಂ	೧೪-೦-೦	[illegible]
ತೊಗರಿ ಬೇಳೆ ಪಲ್ಲಾ ೧ಕ್ಕೆ	೧೨-೦-೦	[illegible]
,, ದುಯಂ	೧೧-೮-೦	[illegible]
ಸೈನ ರಾಗಿ ಪಲ್ಲಾ ೧ಕ್ಕೆ	೮-೦-೦	[illegible]
ಕಾರಾಗಿ	೩-೪-೦	[illegible]
ಜೋಳ	೮-೮-೦	[illegible]
ಹಲಸಂದೆ ಪಲ್ಲಾ ೧ಕ್ಕೆ	೧೨-೦-೦	[illegible]
ಬಿಳೀ ಅವರೆ	೧೦-೦-೦	[illegible]
ಹೆಸರು	೧೨-೦-೦	[illegible]
ಉದ್ದು	೧೧-೪-೦	[illegible]
ಕಡಲೆ	೧೨-೦-೦	[illegible]
ಎಳ್ಳು ಸ ೧೨ ಕ್ಕೆ	೨೯-೮-೦	[illegible]
ಹುರುಳಿ	೮-೮-೦	[illegible]
ಹರಳು ೧೨ ಸೇರಿಗೆ	೧೫-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೨-೦	[illegible]
ಮೆಣಸಿನಕಾಯಿ	೪-೦-೦	[illegible]
,, ದುಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೫-೪-೦	ಮ [illegible]
ಒಳ್ಳೆಣ್ಣೆ ಮಣ ೧ಕ್ಕೆ	೬-೪-೦	[illegible]
ಹರಳೆಣ್ಣೆ ,,	೬-೦-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೧೧-೦-೦	[illegible]
ಉಪ್ಪು ,,	೬-೦-೦	[illegible]
ಹುಣಸೇ ಹಣ್ಣು	೦-೧೪-೦	[illegible]
,, ಹಳೇದು	೦-೮-೦	[illegible]
ತುಪ್ಪ ಮಣ ೧ಕ್ಕೆ	೧೬-೮-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ಕ್ಕೆ	೬-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೧-೦-೦	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ (ಪೌನ್) ಕೆಂಪು	೧೫-೪-೦	[illegible]
,, ,, ಹಸಿರು	೧೫-೧೦-೦	[illegible]
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦	[illegible]

Printed and published by the Rev. [illegible] THOMPSON, M.A., the Proprietor and M[illegible] Wesleyan Mission Press, Mysore. 20/9/19[illegible]

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯು ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಸೆಪ್ಟೆಂಬರ್ ತಾರೀಖು ೨೭ ನೇ ಗುರುವಾರ. ಸಂಚಿಕೆ ೧೭

ಇಂಡಿಯದ ದೊಡ್ಡ ಸೋಪುಗಳು.

86 18

ಮನೋವಿಗಾರರೂ ಕ್ಲೆಸಾಂಟ್ ಮ್ಯಾಜಿಕ್ ಬಾಂ ... ಯನೆ ... ಅರತಲೆನೋವು, ಸರಗಳ ಇರಿತ, ... ಶೀತ ಬಣಗೆನ್ನು ... ಎದೆಗಳ ನೋವು, ಅಸ್ತಮ ... ಬಾಧೆ ಇದ್ದರೆ ... ಅಂದಾ ರೋಗಿಗಳು ಆಶ್ಚರ್ಯಪಡ ... ಈ ದೇಶದ ... ಕ್ಲೆಸೆಂಟ್ ... ವರ ವ್ಯಾಜಿ ... ಬಾಮನ್ನು ನೋವಿನ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ... ಎರಡು ನಿಮಿಷಗಳಲ್ಲಿ ಖಂಡಿತವಾಗಿ ... ವಿರಾಮ ... ಅನೇಕ ... ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ ... ಬಹಳ ... ರೋಗವು ... ಬಾಧೆಯನ್ನನುಭವಿಸುವವರಾಗಿ ... ಬರೆಯಿರಿ ... ತರಿಸಿಕೊಳ್ಳಿ ... ಇದರ ಗುಣವು ಅಷ್ಟು ಅಧಿಕ ... ಕ್ರಯ —೧ ... ಆಣೆ ... ರೂಪಾಯಿ ... ರೂಪಾಯಿ ಅಂಚೆ ವೆಚ್ಚ ... ಆಣೆ

ವಿಳಾಸ ... ಆರ್, ಸಿವೆ ಟ್ರಿ ರೋಡ್, ಪೇಸ ೩, ಮದರಾಸ್

ಹೋಮೋಸಿಯಾ

ತಗಲ ತ್ತದೆ ನೋವು ವಾಸಿ ಯಾಗುತ್ತೆ

ಔಷಧಿಯು ... ಆರಮನೆ, ಕಾರ್ಖಾನೆ, ಆಸ್ಪತ್ರೆ, ... ಶಾಲೆ, ಕೋರ್ಟು, ಕಚೇರಿ, ಮುಂತಾದ ಸ್ಥಳ ... ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವುದೂ ... ಪ್ರಸಿದ್ಧವಾಗಿದೆ

ಕೆಲವು ತಪ್ಪಾಲದಲ್ಲಿ ಜೀವನಗಳಿಗೆ ಮುಖ್ಯವಾಗಿ ... ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ... ಮುಂತಾದವರು ಇದರ ... ಹೊಗಳಿ ಸರ್ಟಿಫಿಕೇಟ್ ... ಕೊಟ್ಟಿದ್ದಾರೆ ... ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ...

ಕೆಲವು ಅರೆ ತಲೆನೋವು ಸಂಧಿನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ... ನರ ಹೋರಳುವದು, ... ಗುಳ್ಳೆಗಳು, ಹಲ್ಲುನೋವು, ಮುಖ ... ಗಳು, ಗಜ್ಜೆಗಳು, ರಣಗಳು, ... ಸೊಳ್ಳೆ ... ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ... ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ... ಮಲಗಿದರೆ ಸೊಳ್ಳೆ ಹತ್ತಿರ ...

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೦ ರೂ , ದೊಡ್ಡದಕ್ಕೆ ರೂ. ... ಒಂದೇ ಸಲ ... ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ... ರೂ ... ಆಣೆ ... ಡಬ್ಬಿದಲ್ಲಿ ... ದಲ್ಲಿರುವದಕ್ಕಿಂತ ... ರಷ್ಟು ಹೆಚ್ಚು ಔಷಧವಿರುತ್ತೆ ... ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ... ಬಿಡುತ್ತೆ

****

ಹೋಮೋಸಿಯಾ ಯಂಬ್ರೋಕೇಷನ್

ಕೆಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ... ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋ ... ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ... ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ... ಬಹು ಬೇಗನೆ ... ಡಬ್ಬಿಗಳಲ್ಲಿ ... ೧ ರೂ ... ದಂತೆ ಬಿಕರಿ ಮಾಡಲ್ಪಡುವದು ... ಟಪ್ಪಾಲ್ ಖರ್ಚು ಮಾಫ ಎಲ್ಲಾ ... ದೊರೆಯುವದು.

ಔಷಧಗಳ ವಿವರಪಟ್ಟಿಯೂ, ಸರ್ಟಿಫಿಕೇಟುಗಳೂ ... ಅಪೇಕ್ಷಿಸಿದರೆ ಕಳುಹಿಸುವೆವು.

— ಹೋಮೋಸಿಯಾ ಕಂಪೆನಿ, ... ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಯಾಯಿಸಿ ಇರುವದು ಅಥವಾ ಆಗತಾನೆ ಹುರಿದದ್ದು. ಕದವಮಾಡಿದ ಸ್ಥಳದಿಂದಲೆ ಸೆಟ್ಟಿಗೆ ರವಾನಿಸಲ್ಪಡುವದು

35 11

ವ್ಯಾಪಾರದ ... ಟ್ರೇಡ್ ಮಾರ್ಕ್

ಕಾಫಿ ... ಪುಡಿ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ... ವಿಲಾಸದ ಚೀಟಿ ... ಸಿಕ್ಕುವದು ... ನಮ್ಮಲ್ಲಿ ಏಜಂಟರುಗಳು ಬೇಕು ... ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್ ಮ್ಯಾಡಿಸನ್ಸ್

ಕಾಫಿ ವರ್ಕ್ಸ್, ಹುಣಸೂರು

ಜ್ವರಹರಿ.

101 9



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ತಜ್ವರ ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ನಾಶಮಾಡ ವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ನವರ—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ... ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ದಿನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ... ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೪ ಆಣೆ, ೧ ರೂ , ೧—೪ ರೂ , ರೂ ...—... ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ.

Omum-Campoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ ದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು ವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ಪಿಯವ ಓಮಂ ಕರ್ಪೂರವನ್ನು ನಾನೂ ನನ್ನ ಶಾಖೆದಾರರ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ವೆಂದು ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ ಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುತ್ತವೆ ಅದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆಪ್ಪಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು

101 9

ಪಾಲಿ, ಬಹಳ ಸುಂದರ ಚಿತ್ರಗಳುಳ್ಳದ್ದು ನಮೂನೆ ... ಕಾರ್ಡು ಗಳಿಗೆ ೦೩ (ಸ್ಟಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೬ ಆಣೆ ಸ್ವದೇ ಶಿ ಪೆಂಥಾಲ್ ಸೀಸೆಗೆ ೬ ಆಣೆ ನೋಟ್ ಪೇಪರು, ಕವರುಗಳು, ಎ ಕ್ಸರ್ಸೈಜ್ ಪುಸ್ತಕಗಳು ಸ್ವದೇಶಿ ... ಇವು ಗಳಿಗೆ ಟಪಾಲುಖರ್ಚು ಬೇರೆ ... ಒಳ್ಳೇ ಕಮಿಷನ್, ಇಂಗ್ಲಿ ಷಿನಲ್ಲೆ ಬರೆಯಬೇಕು ಜವಾಬು ಅಪೇಕ್ಷಿಸತಕ್ಕವರ ... ಸ್ಟಾಂ ಪಿಟ್ಟು ಬರೆದ ಕೊಳ್ಳತಕ್ಕದ್ದು Bhatt & Co Proni ... city

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

8 18

ಮುಂಬಯಿಯಲ್ಲಿ ಪ್ರತಿಯೊಂದ ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ... ಸಹಿತವಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸು ವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕ ಮಿಷನು ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿಶ ಕೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—... ಆಣೆ ... ಬಯಿರಿ ... ವಾರದ, ಪೋಸ್ಟು ... ಮುಂಬಯಿ

ಒಕ್ಕಲಿಗರ ಸಂಘ.

93 12

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸ ತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿ ಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಇಲ್ಲದೆ ಇರುವುದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ತಮ್ಮೆಲ್ಲ ರಿಗೂ ತಿಳಿದ ವಿಷಯವಾಗಿಯೇ ಇದೆ ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯ ರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶದ ಒಕ್ಕ ಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂ ದು ೧೯೦೬ ನೇ ಇಸವಿ ಏಪ್ರಿಲ್ ತಿಂಗಳು ... ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಒಳಿ ಇರುವ ... ದೊಡ್ಡ ... ಶೆಟ್ಟರವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂ ದು ಸಭೆ ಸಹ ಸೇರಿತ್ತು ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯ ರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರು ವ ಅಕ್ಟೋಬರ್ ತಿಂಗಳು ... , ೪ ನೇ ತಾರೀಖುಗಳಲ್ಲಿ ಬೆಂಗಳೂ ರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂ ಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡ ಬೇಕೆಂದು ಇತ್ಯರ್ಥ ಮಾಡಿರುವದಲ್ಲದೆ ಮಹಾ ಸಭೆಗೆ ದಯಮಾಡಿ ಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗ ಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ ಆದ ಪರಿಂದ ಅಭಿಮಾನ ಉಳ್ಳವರಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದ ಲ್ಲದೆ, ಜಾಗ್ರತೆಯಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳಿಯಿಸ ಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ... ಸುಬ್ಬಯ್ಯ, ಬಿ ಎ,

ಬೆಂಗಳೂರು ಕೆ ಹೆಚ್ ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು

ಷರಾ —ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗ ಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪ್ಯಾಂಫ್ಲೆಟ್) ಛಾಪಿಸ ಲ್ಪಟ್ಟಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಕೂಡಲೇ ಒಂದು ಪ್ರತಿಯು ಮಾಫಿ ಯಾಗಿ ರವಾನಿಸಲ್ಪಡುವುದು ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂ ಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ತಿಳಿಯ ಪಡಿಸಲು ಕೆಲ ವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಟಿದ್ದಾರೆ ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳಬೇಕೆಂದಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು

ಯೆಸ್ಟೆ ಕೆಂಪು ಮತ್ತು ತಾಜಾ ಕಳ್ಳು.

ಹಾಸರ್ ಫ್ಲೋಲರ್ ದಾರೆ.

215-1

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಫ್ಲೋಲನ್ ದಾರ ಮಾತ್ರ

	ರೂ.	ಆ	ಪೈ.
೧ ಟೋಪಿ ಆಗುವ ಫ್ಲೋಲರ್ ದಾರದ ಕ್ರಯ	೦	೪	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩		೦
ಹಾಸನದಟೋಪಿ ಹೊಲಿಯುವ ಗೋಲ್ಡ್ ಸೂಜಿ ೧ಕ್ಕೆ ೦	೧		೯

ವಿ. ಪಿ. ಯಿಂದಲೂ ರವಾನಿಸುತ್ತೇವೆ. ಈ ದಾರದಲ್ಲಿ ಆದ ಟೋಪಿ ದರ್ಜ ೧ಕ್ಕೆ ೧೩ ೩ ೦

ವಿಳಾಸ— ಸಿ. ರಘುನಾಥ ಕಾಮತ್,
ಫ್ಲೋಲರ್ ಮರ್ಚಂಟ್,
ಬೋಳಾರ, ಮಂಗಳೂರು.

CHAMBERLAIN'S CUGH REMEDY.

ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

95-13



ಶೀತದ ಕೆಮ್ಮು, ಗಂಟ್ಲು ಗೂರೆಸುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲು ನ್ಸ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಬಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರಿಂ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿಸಲ್ಲಿ ರಕ್ತಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ. ಉಸುರು ತೆಗೆಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿ ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮ ಉಲ್ಲಾಸಕೊಡುತ್ತದೆ.

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇ ವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೪ ನೇ ಇಸವಿ ಸೆಪ್ಟಂಬರ್ ತಾ|| ೨೨ ನೇ ಗುರುವಾರ.

ಮೈಸೂರು ಪ್ರಜಾಪ್ರತಿನಿಧಿ ಸಮಾಜವು.

ಮೈಸೂರು ಸಂಸ್ಥಾನದ ೨೩ ನೆಯ ಪ್ರಜಾಪ್ರತಿನಿಧಿ ಸಮಾಜವು ಮುಂದಿನ ಅಕ್ಟೋಬರ್ ೧ ನೆಯ ತಾ ಸೋಮವಾರ ಇಲ್ಲಿನ ಪಬ್ಲಿಕ್ ಆಫಿಸ್ ಕಟ್ಟಡದಲ್ಲಿ ಪ್ರಾರಂಭವಾಗುವುದು ಈ ಸಭೆಗೆ ಬಹು ಜನ ಲಾಯರುಗಳೂ ವರ್ತಕರೂ ಜಮೀನ್ದಾರರೂ ಪೆನ್ಶನ್ ಉದ್ಯೋಗಿಗಳೂ ಮೆಂಬರುಗಳಾಗಿ ಚುನಾಯಿಸಲ್ಪಟ್ಟು ಬಂದಿರುತ್ತಾರೆ ಮೊದಲನೆಯ ದಿನ ದಿವಾನರವರು ಕಳೆದ ವರುಷದ ಸಮಾಚಾರ ಮುಂತಾದ ವಿಷಯಗಳನ್ನೂ ಬಾಕಿ ಸಾಲಿನ ಬಡ್ಜೆಟ್ಟನ್ನೂ ಮೆಂಬರುಗಳಿಗೆ ಓದಿ ಹೇಳುವರು ಎರಡನೆಯ ದಿನದಿಂದ ಮೆಂಬರುಗಳು ಡಿಸ್ಟ್ರಿಕ್ಟುವಾರಾಗಿ ಬಂದು ತಮಗಿರತಕ್ಕ ಕುಂದು ಕೊರತೆಗಳನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಳ್ಳುವುದು. ದಿವಾನರವರು ಸಾಧ್ಯವಾದಮಟ್ಟಿಗೆ ಪರಿಹರಿಸಿಕೊಡುತ್ತೇವೆಂದು ಅಪ್ಪಣೆಕೊಡುವುದೂ ವಾಡಿಕೆಯಾಗಿದೆ ಈ ಸಂದರ್ಭದಲ್ಲಿ ಮೆಂಬರುಗಳಿಗೆ ನಾವು ತಿಳಿಸಲಪೇಕ್ಷಿಸುವುದೇನೆಂದರೆ—

ಪ್ರತಿನಿಧಿಗಳು ತಮ್ಮ ಪ್ರಾಂತ್ಯದಲ್ಲಿರುವ ಕಾತಿಬಾಧೆಗಳನ್ನೂ ಕಷ್ಟನಿಷ್ಠುರಗಳನ್ನೂ ಮೊದಲೇ ಸೇರಿ ಚೆನ್ನಾಗಿ ಆಲೋಚಿಸಿಕೊಂಡು ಏಕವಾಕ್ಯತೆಯಿಂದ ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಳ್ಳಬೇಕು ಇದುವರೆಗೆ ಹೀಗೆಮಾಡಿಲ್ಲ. ಆದ್ದರಿಂದ ಸಭೆಯಲ್ಲಿ ಕೆಲವು ಪ್ರತಿನಿಧಿಗಳು ಎದ್ದು ಒಂದು ವಿಷಯ ಹೀಗೆ ಆಗಬೇಕೆಂದು ಕೇಳುವುದೂ, ಇನ್ನು ಕೆಲವರು ಅದು ಹಾಗೆ ಆಗಕೂಡದೆಂದು ಹೇಳುವುದೂ, ಇದರ ಮೇಲೆ ಚರ್ಚೆಯಾಗುವುದೂ ಸಕಲ ಮೆಂಬರುಗಳಿಗೂ ಅನುಭವಸಿದ್ಧವಾದದ್ದೇ ಆಗಿದೆ. ಪ್ರತಿ ಡಿಸ್ಟ್ರಿಕ್ಟಿನ ಮೆಂಬರುಗಳೂ ಮೊದಲೇ ಸೇರಿ ವಿಷಯಗಳನ್ನು ಚರ್ಚೆಮಾಡತಕ್ಕದ್ದಿದ್ದರೆ ಮೇಲ್ಕಂಡಂತೆ ಆಭಾಸವಾಗುವುದಿಲ್ಲ ಇದಲ್ಲದೆ ಮೆಂಬರುಗಳು ಗವರ್ನ್‌ಮೆಂಟಿನ ಬೇರೆ ಬೇರೆ ಅಧಿಕಾರಿಗಳಲ್ಲಿ ಕೇಳಿಕೊಂಡು ಪರಿಹರಿಸಿಕೊಳ್ಳಬಹುದಾದಂಥಾ ಕೊರತೆಗಳನ್ನು ಈ ಸಭೆಯಲ್ಲಿ ಬಂದು ಹೇಳಿಕೊಳ್ಳುತ್ತಾರೆ ಇದರಿಂದ ಈ ಸಭೆಯ ಅಮೂಲ್ಯವಾದ ಸಮಯವು ವ್ಯರ್ಥವಾಗುವುದು, ಬಹಳ ಆವಶ್ಯವಾದಂಥಾ ವಿಷಯಗಳನ್ನು ಪರಿಷ್ಕಾರವಾಗಿ ಚರ್ಚಿಸುವುದಕ್ಕೆ ಪ್ರತಿನಿಧಿಗಳಿಗಾಗಲಿ ಗವರ್ನ್‌ಮೆಂಟಿನವರಿಗಾಗಲಿ ಅವಕಾಶವೇ ದೊರಕುವುದಿಲ್ಲ.

ಪ್ರತಿನಿಧಿಗಳಲ್ಲಿ ಪಲವರು ಒಂದು ವಿಷಯವನ್ನು ಸಭೆಯಲ್ಲಿ ಸೂಚಿಸುವಾಗ್ಗೆ ಅದರಲ್ಲಿ ಸ್ವಾರ್ಥಸ್ವಪ್ರಯೋಜನಗಳನ್ನಿಟ್ಟುಕೊಂಡಿರುತ್ತಾರೆ. ಇದು ಸಹಜವಲ್ಲವು ಬಹು ಪ್ರಜೆಗಳ ಪಕ್ಷವನ್ನು ವಹಿಸಿ ಒಬ್ಬೊಬ್ಬ ಮೆಂಬರು ಚುನಾಯಿಸಲ್ಪಟ್ಟಿರುವುದರಿಂದ ಮೆಂಬರುಗಳು ಅಂಥಾ ಬಹು ಪ್ರಜೆಗೆ ಕಷ್ಟವಾಗಿರುವ ಸಾಮಾನ್ಯ ವಿಷಯಗಳನ್ನೇ ಸಭೆಯಲ್ಲಿ ಚರ್ಚೆಗೆ ತಂದು, ತಮ್ಮ ನಿಸ್ಪೃಹತೆಯನ್ನೂ ಪ್ರಜಾ ಇಂಗಿತವನ್ನೂ ಪ್ರದರ್ಶನಮಾಡಬೇಕಾಗಿದೆ. ಯಾಕೆಂದರೆ ಪ್ರಜಾ ಬಾಹುಳ್ಯಕ್ಕೆ ಕ್ಷೇಮವೂ ಸೌಕರ್ಯಗಳೂ ದೊರಕಬೇಕೆಂಬುವುದೇ ಈ ಸಭೆಯ ಮುಖ್ಯ ಉದ್ದೇಶವಾಗಿರುವುದು. ಆದಕಾರಣ ಮೆಂಬರುಗಳಲ್ಲಿ ಐಕಮತ್ಯವೂ ನಿಸ್ಪೃಹತೆಯೂ ಪ್ರಜಾ ಪ್ರೀತಿವಾತ್ಸಲ್ಯಗಳೂ ನೆಲೆಗೊಂಡು, ಸಭೆಯ ಕಾರ್ಯಗಳು ಸರ್ಕಾರದವರಿಗೂ ಪ್ರಜೆಗಳಿಗೂ ಪರಸ್ಪರ ಫಲದಾಯಕವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ

ಬ್ರಹ್ಮಜ್ಞಾನ ಮಾರ್ಗವು.

ದಾಸಪ್ಪನು ನಿತ್ಯಗಟ್ಲೆಯ ಪ್ರಕಾರ ಬೆಳಿಗ್ಗೆ ತನ್ನ ಕೆಲಸದ ಮೇಲೆ ಹೋಗುತ್ತಿರಲು ಇದಿರಿಗೆ ಈಶ್ವರಯ್ಯನವರು ದೊರಕಿದರು. ದಾಸಪ್ಪನಿಗೂ ಈಶ್ವರಯ್ಯನವರಿಗೂ ಬಹು ದಿನಗಳ ಪರಿಚಿತಿಯಿದ್ದ ಕಾರಣ ತನಗೆ ಹೊತ್ತು ಕೆಟ್ಟಾಗಿಲ್ಲದಿದ್ದರೂ ಈಶ್ವರಯ್ಯನವರನ್ನು ಮಾತಾಡಿಸದೆ ಹೋಗಬಾರದೆಂದು ತಿಳಿದು—ಏನು ಸ್ವಾಮಿ, ಬಹಳ ದಿನಗಳಿಂದ ಭೇಟಿಯಿಲ್ಲ ಎಲ್ಲಿ . . ಎಂದು ಹೇಳುವಷ್ಟರಲ್ಲಿ ಈಶ್ವರಯ್ಯನವರು ಒಳ್ಳೆ ಚೆನ್ನಾಗಿ ಇದಿರಿಗೆ ಬಂದರಲ್ಲಾ ಎಂದು ಮನಸ್ಸಿನಲ್ಲಿ ಅಂದುಕೊಂಡು ಪದ್ಧತಿಯ ಮೇರೆಗೆ—ಏನು ಸಮಾಚಾರ? ಅಂದರು ದಾಸಪ್ಪನು ಅದಕ್ಕೆ—ಏನೂ ವಿಶೇಷವಿಲ್ಲ. ನನಗೆ ವಿಶೇಷವೆಂಬುದಾಗಿ ತೋರಿದ್ದನ್ನು ಹೇಳಿದರೆ ನೀವು ಅದಕ್ಕೆ ಅದೇನು, ಯಾವಾಗಲೂ ಇದ್ದೇ ಇದೆಯಷ್ಟೆ ಎಂಬುದಾಗಿ ಹೇಳುವಿರಿ ಅನ್ನಲು ಈಶ್ವರಯ್ಯನವರು—

ಒಹೋ! ಈ ಊರಿಗೂ ಬಂದರೋ? ನಿಮ್ಮವರು ಸುಮ್ಮನೆ ಇರುವವರಲ್ಲ! ಅಂದರು.

ದಾ—ನಮ್ಮ ಮತವು ನಮ್ಮನ್ನು ಸುಮ್ಮನೆ ಇರಗೊಡಿಸುವುದಿಲ್ಲ ಒಂದಾನೊಂದು ಸಂದರ್ಭದಲ್ಲಿ ನಮ್ಮ ಸ್ವಾಮಿಯವರು ಸ್ವದೇಶಕ್ಕೆ ದೂರವಾದ ಅನ್ಯಜನಗಳಿರುವ ಪ್ರದೇಶಕ್ಕೆ ಹೋಗಿ ಸ್ವಲ್ಪ ಕಾಲ ಸುಧಾರಿಸಿಕೊಂಡಿರುತ್ತಾ ತನ್ನ ಶಿಷ್ಯರಿಗೆ ಧರ್ಮ ತತ್ವಗಳನ್ನು ಕುರಿತು ವಿಶೇಷವಾಗಿ ಬೋಧಿಸಬೇಕೆಂದು ಅಪೇಕ್ಷಿಸಿ ತಾನಲ್ಲಿಗೆ ಬಂದುದು ಒಬ್ಬರಿಗೂ ತಿಳಿಯಬಾರದೆಂದು ಗುಪ್ತವಾಗಿದ್ದಾಗ್ಯೂ ಆ ದೇಶಸ್ಥಳಾದ ಒಬ್ಬ ಹೆಂಗಸು ಬಂದು ಆತನನ್ನು ಬಹಳವಾಗಿ ಬೇಡಿಕೊಂಡು ಆತನಿಂದ ಉಪಕಾರವನ್ನು ಹೊಂದಿಕೊಂಡು ಹೋದಳು. ಆತನು ಎಲ್ಲಿಗೆ ಹೋದರೂ ಅಡಗಿರುವುದು ಆತನಿಗೆ ಅಸಾಧ್ಯವಾಗಿತ್ತು ಅದೇ ಪ್ರಕಾರ ಆತನ ದಾಸರಾದ ನೌಕರರು ಸುಮ್ಮನಿರಬೇಕೆಂದು ಒಂದುವೇಳೆ ಇಷ್ಟಪಟ್ಟರೂ ಅವರ ಸ್ವಾಮಿಯು ಅವರನ್ನು ಸುಮ್ಮನಿರಗೊಡಿಸುವದೇ ಇಲ್ಲ ಆದದರಿಂದಲೇ ಅವರು ತಮಗೆ ಸಿಕ್ಕಿದ ಸುವಾರ್ತೆಯನ್ನು ಇತರರಿಗೂ ತಿಳಿಸಬೇಕೆಂದು ಉತ್ಸಾಹಪಡುತ್ತಿರುತ್ತಾರೆ.

ಈ.—ನಿಮ್ಮ ಧರ್ಮದಲ್ಲೇ ಮಾತ್ರ ಇಂಥ ಸುವಾರ್ತೆಯಿದೆಯೇನು? ನಮ್ಮ ವೇದಾಂತದಲ್ಲಿಯು ಇಲ್ಲವೇ?

ದಾ—ಹಾಗಿರುವದಾದರೆ ನೀವು ಯಾತಕ್ಕೆ ಸಕಲರಿಗೂ ತಿಳಿಸುವದಿಲ್ಲ.

ಈ.—ಜ್ಞಾನಾಪೇಕ್ಷೆ ಯಾರಲ್ಲಿ ಹುಟ್ಟುವುದೋ ಅಂಥವರಿಗೆ ಅದನ್ನು ಕೊಟ್ಟರೆ ಸಾರ್ಥಕ ಅನ್ನದ ಮೇಲೆ ಅಪೇಕ್ಷೆಯಿಲ್ಲದವನಿಗೆ ಊಟಕ್ಕಿಕ್ಕಿದರೆ ಫಲವೇನು. ಇಷ್ಟೇ ಅಲ್ಲ ಜಾಲಿಣ್ವಿನ ಕೂಸಿಗೆ ಅನ್ನವನ್ನು ಕೊಟ್ಟರೆ ಅದರಿಂದ ಅದಕ್ಕೆ ಕೇಡಾಗುವದಲ್ಲವೇ? ಹಾಗೆಯೇ ನಮ್ಮ ವೇದಾಂತ ಧರ್ಮ ತತ್ವವು ಅಧ್ಯಾತ್ಮವಿಚಾರದಲ್ಲಿ ಅತ್ಯುತ್ಕೃಷ್ಟ ಪದವನ್ನು ಮುಟ್ಟಿದಂಥಾದ್ದಾಗಿದೆ ಈ ವಿಚಾರವು ವೇದಾಂತದಲ್ಲಿ ಹೇಳಿರುವಷ್ಟು ಮಟ್ಟಿಗೆ ನಿಮ್ಮ ಕ್ರಿಸ್ತಮತದಲ್ಲಿಯೇ ಆಗಲಿ ಬೇರೆ ಯಾವ ಮತದಲ್ಲಿಯೇ ಆಗಲಿ ಹೇಳಿಯೂ ಇಲ್ಲ, ಹೇಳುವುದಕ್ಕೆ ಅವಕಾಶವೂ ಇಲ್ಲ ವೇದಾಂತವೆಂಬ ಬಳಿಕ ವಿದ್ಯೆಗೆ ಅಥವ ತಿಳಿವಳಿಕೆಗೆ ಅದುವೇ ಅಂತ್ಯಾವಸ್ಥೆಯಷ್ಟೆ. ಪರಬ್ರಹ್ಮವನ್ನೇ ತಿಳಿದ ಬಳಿಕ ಅದಕ್ಕಾಚೆ ಬೇರೆ ಯಾವ ತಿಳಿವಳಿಕೆ ತಾನೆ ಇದ್ದೀತು. ಅಂಥ ತಿಳಿವಳಿಕೆಯ ನಿಸೆಯಾಗಿರುವ ವೇದಾಂತವನ್ನು ಗ್ರಹಿಸತಕ್ಕ ಶಕ್ತಿಯು ಮೊದಲು ಇದ್ದ ಹೊರತು ಅದನ್ನು ಹೇಳಿ ಪ್ರಯೋಜನವೇನು? ಇಷ್ಟು ಯಾಕೆ? ಮುತ್ತುಗಳನ್ನು ಹಂದಿಗಳ ಮುಂದೆ ಹಾಕ ಬೇಡಿರಿ ಎಂದು ನಿಮ್ಮ ಯೇಸುಕ್ರಿಸ್ತನೇ ಹೇಳಿಲ್ಲವೇ?

ದಾ.—ಹಾಗೋ! ನಿಮ್ಮ ಬಳಿಗೆ ಬಂದ ಹೊರತು ನೀವು ಒಬ್ಬರಿಗೂ ಅದನ್ನು ತಿಳಿಸುವದಿಲ್ಲವಷ್ಟೆ ಲೋಕವು ಅನಿತ್ಯವೆಂದೂ ಪರಬ್ರಹ್ಮಜ್ಞಾನವೇ ನಿತ್ಯವೆಂದೂ ಗ್ರಹಿಸುವಂಥ ಗ್ರಹಿಕೆ ಮನುಷ್ಯನಿಗೆ ಹೇಗೆ ಬರಬೇಕು? ನಿಮ್ಮ ತತ್ವದ ಪ್ರಕಾರ ಅವಿದ್ಯಾವಶನಾಗಿ ಹೋಗಿರುವ ಮನುಷ್ಯನು ತಾನಾಗಿಯೇ ಆ ಅವಿದ್ಯೆಯನ್ನು ತೊಲಗಿಸಿಕೊಳ್ಳಬೇಕೆಂದು ಪ್ರಯತ್ನಿಸುವನೆಂಬದಾಗಿ ಊಹಿಸುವದಕ್ಕೂ ಅವಕಾಶವಿಲ್ಲವಲ್ಲ. ಅಂಥ ಅಪೇಕ್ಷೆಯು ಅವನಿಂದಾಚೆ ಇರುವ ಯಾವದೋ ಒಂದು ಮೂಲದಿಂದ ಬರಬೇಕಲ್ಲವೇ? ಮೊದಲೇ ಮಾಯಾವಶನಾಗಿ ಈ ಮಾಯಾಪ್ರಪಂಚವನ್ನು ಹೊರತಂದನೆಂದು ಹೇಳಿರುವ ಪರಬ್ರಹ್ಮನು ಬೇರೆ ಈ ಲೋಕದಲ್ಲಿರುವ ನರಪ್ರಾಣಿಗಳ ವಿಷಯವಾಗಿ ಆಲೋಚಿಸುತ್ತಾನೆಂದು ನಂಬುವದು ಹ್ಯಾಗೆ? ಇಂಥ ಬ್ರಹ್ಮಜ್ಞಾನಕ್ಕೆ ನಿಮ್ಮ ಜನಗಳು ಅಧಿಕಾರಿಗಳಾಗಿದ್ದದರಿಂದಲ್ಲವೇ ದ್ವಿಜರಲ್ಲದವರಿಗೆ ಮೂಢಸ್ಥಿತಿಯೂ ಅದರಿಂದ ಸಂಕಟವೂ ಬಂದಿತು. ಪಾತ್ರವರಿತು ಜ್ಞಾನ ದಾನವನ್ನು ಮಾಡಬೇಕೆಂಬುದಕ್ಕೆ ನಾನು ಆಕ್ಷೇಪಣೆ ಮಾಡುವದಿಲ್ಲ. ಪಾತ್ರಾಪಾತ್ರಕ್ಕೆ ದ್ವಿಜತ್ವವೂ ಅದ್ವಿಜತ್ವವೂ ಇವೆರಡೇ ಸಾಧನಗಳು ಎಂದು ನಿರ್ಣಯ ಮಾಡಿ ಹಾಕುವದು ಯಾವ ನ್ಯಾಯ? ಅದರಲ್ಲಿ ಪಾತ್ರಾಪಾತ್ರತೆಯನ್ನು ತಿಳಿಯುವದಕ್ಕಾದರೂ ನೀವು ನೀವಾಗಿಯೇ ಹೊರಡದಿದ್ದರೆ ಹ್ಯಾಗೆ?

ಈ.—ಅದಕ್ಕೇ ಅಲ್ಲವೇ ಈಗ ನಾವೂ ಧರ್ಮ ಪ್ರಚಾರಕ್ಕೆ ಹೊರಟಿರುವದು?

ದಾ—ಧರ್ಮವನ್ನು ಪ್ರಚಾರಮಾಡಬೇಕೆಂಬ ಬುದ್ಧಿಯು ನಿಮ್ಮಲ್ಲಿ ಮೊದಲು ಇರಲಿಲ್ಲ ಈಗ ಎಲ್ಲಿಂದ ಹುಟ್ಟಿತು? ನಿಮಗೇ ತಿಳಿದಿರುವ ಒಂದು ನಿದರ್ಶನವನ್ನು ನಿಮ್ಮ ನೆನಪಿಗೆ ತರುತ್ತೇನೆ ವೈಯಾಕರಣಿಗಳಾದ ಬ್ರಹ್ಮಶ್ರೀ—ಆಚಾರ್ಯ ಬಳಿಗೆ ನಾವು—ವರು ಹೋಗಿ ಇಂಥ ಪದವು ಹೇಗೆ ಹುಟ್ಟಿತು ಎಂದು ಕೇಳಲು ಅವರು ಹೇಳಿದ್ದೇನು? ನೀವು ಯಾವ ಜಾತಿಯವರು ಎಂದು ಕೇಳಲದಕ್ಕೆ ಈತನು ವೈಶ್ಯನು ಎಂದು ತಿಳಿದಮೇಲೆ ಬ್ರಾಹ್ಮಣನೊಬ್ಬನಿಗೇ ಹೊರತು ಬೇರೆ ಯಾರಿಗೂ ಇದರ ವಿಷಯದಲ್ಲಿ ತಿಳಿಸುವದಿಲ್ಲ ಎಂದು ಹೇಳಲಿಲ್ಲವೇ? ಇದಲ್ಲದೆ ಇಲ್ಲಿ ಒಬ್ಬರು ವಿಶಿಷ್ಟಾದ್ವೈತವನ್ನು ತಿಳಿಯಬೇಕೆಂದಪೇಕ್ಷಿಸಿ ಆ . . . ಸ್ಥರಲ್ಲಿ ಅವನ್ನು ಕುರಿತು ವ್ಯಾಸಂಗ ಮಾಡಬೇಕೆಂದು ಎಷ್ಟು . . . ತ್ನಮಾಡಿದರೂ ಒಬ್ಬರಾದರೂ ದೊರಕಲಿಲ್ಲವಲ್ಲ. ಇಂಥ . . . ನೀವು ಇತರರಿಗೆ ಅದರಲ್ಲಿಯೂ ಹೊಲೆಯರಿಗೂ ಸಹ ವೇದಾಂತ ಬೋಧೆಯನ್ನು ಮಾಡುವದಕ್ಕಾಕಾಂಕ್ಷಿಸಿದ್ದೀರೆಂದು ಹೇಳಿದರೆ ನನಗೆ ನಿಜವಾಗಿ ಆಶ್ಚರ್ಯವಾಗುತ್ತದೆ ಪಾದ್ರಿಗಳು ಮಾಡುವ . . . ನಾವೂ ಮಾಡಬೇಕು, ಇಲ್ಲದಿದ್ದರೆ ಮತಕ್ಕೆ ಕ್ಷೀಣದಶೆಯು ಪ್ರಾ . . . ಗುವದೆಂದು ಈ ಪ್ರಕಾರ ಹೊರಟಿದ್ದೀರೋ ಹ್ಯಾಗೆ? ಹಾಗಾದರೆ . . . ಮತದಲ್ಲಿ ಇದುವರೆಗೂ ತೋರದೆ ಇದ್ದದಾಗಿಯೂ ನಿಮ್ಮಲ್ಲಿ . . . ಕ್ರೈಸ್ತರಲ್ಲಿ ಹೆಚ್ಚಾದದ್ದಾಗಿಯೂ ಇರುವ ಬೇರೊಂದು ತತ್ವ . . . ಅದನ್ನು ಅನುಸರಣೆಗೆ ತರಬೇಕೆಂದ? ಈಗ ಕೇಳಿದಾಗ ಗ್ರ . . . ಹಾಗಾಯಿತಲ್ಲವೇ? ಜ್ಞಾನವು ಒಳ್ಳೇದೇ, ಅಂಥ ಜ್ಞಾನವನ್ನು ಅ . . . ಮಾಡುವದು ಮತ್ತೂ ಒಳ್ಳೇದು, ಜ್ಞಾನಾರ್ಜನೆಯಲ್ಲಿ ಇತರ . . . ಸೇರಿಸಿಕೊಳ್ಳುವದು ಇನ್ನೂ ಒಳ್ಳೇದು ಅಂಥ ಜ್ಞಾನಾರ್ಜನೆ . . . ಜಾತಿಯವರನ್ನಲ್ಲದೆ ವಿಜಾತಿಯವರನ್ನೂ ಸೇರಿಸಿಕೊಳ್ಳುವದು . . . ಮವು. ವಿಜಾತಿಯವರೊಳಗೂ ಅಪಮಾರೆಂಬುವರನ್ನೂ ಉತ್ತಮ . . . ಗಳನ್ನಾಗಿ ಮಾಡುವಂತೆ ಅವರ ಕೇರಿಗೆ ಹೋಗಿ ಕರೆಯುವದು . . . ತ್ತಮವು. ಅಂಥವರನ್ನು ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರ . . . ಮಾಡುವ ವರೆಗೂ ಅವರಲ್ಲಿ ತಾನೂ ಒಬ್ಬನಾಗಿ ವಾಸಿಸಿ ಅವ . . . ಯಾವಜ್ಜೀವವೂ ಪ್ರಯಾಸಪಡುವದು ಉತ್ತಮೋತ್ತಮವಾದ ದಿ . . . ಣವು. ಈ ಗುಣವನ್ನು ಹೊಂದಿದವನೇ ಪರಮ ಪದವನ್ನು ಮು . . . ವನು. ಈ ಪರಮ ಪದವನ್ನು ಮುಟ್ಟುವದಕ್ಕೆ ನಾನು ಉದಾ . . . ಆರು ಮೆಟ್ಟಲುಗಳೆಂಬ ನಿಮ್ಮ ವೇದಾಂತವು ಎರಡನೆಯ ಮೆ . . . ನಲ್ಲಿಯೇ ನಿಂತಿದೆಯೆಂದು ನನ್ನ ಬುದ್ಧಿಗೆ ತೋರುತ್ತದೆ

ಈ—ಅಧ್ಯಾತ್ಮವಿಚಾರದಲ್ಲಿ ಇಷ್ಟು ವಿಷಯವೂ ಸೇರುತ್ತ . . . ಹೇಳುತ್ತೀರಾ?

ದಾ—ಜ್ಞಾನವೆಂಬ ವೃಕ್ಷಕ್ಕೆ ಪರೋಪಕಾರವೆಂಬುದಲ್ಲವೆ . . . ವು? ಫಲವಿಲ್ಲದ ವೃಕ್ಷವೆಂದೇ? ಜ್ಞಾನಕಾಂಡಗಳನ್ನು ಬಿಡದ . . . ದರೂ ಒಣಗಿದರೆ ಸೌದೆಯಾಗಿ ಆ ಪ್ರಕಾರ ಫಲವನ್ನು ಕೊಡ . . . ಜ್ಞಾನವನ್ನು ತಾನು ಹೊಂದಿದ ಬಳಿಕ ಇತರರಿಗೂ ಅದನ್ನು ಕೊ . . . ಹೋದರೆ ಮನುಷ್ಯನಾಗಿದ್ದು ಫಲವೇನು? ಇದೀಗ ಸಂಪೂರ್ಣ . . . ವಾದ ಅಧ್ಯಾತ್ಮವಿಚಾರವೆಂದು ನನಗೆ ತೋರುತ್ತದೆ ಅದೆಲ್ಲಾ ಸರಿ, ಎಲ್ಲಿಗೆ ಹೊರಟಿರಿ ಸ್ವಾಮಿ!

ಈ—ಬೆಳಿಗ್ಗೆ ಕಾರ್ಯಾರ್ಥವಾಗಿ ಹೋಗುತ್ತಿದ್ದವನನ್ನು ಪ್ರಶ್ನೆ ಕೇಳಿದ್ದು ಅಪಶಕುನವಾಯಿತು

ದಾ—ನಿಮಗೂ ಶಕುನಾಪಶಕುನಗಳುಂಟೇ? ಹಾಗಾದರೆ ವೇದಾಂತ ವಿಚಾರವನ್ನು ಮಾಡುವದಕ್ಕೆ ಪಾತ್ರರಾಗಿದ್ದೀರೋ? ವೇ . . . ತವಿಚಾರದಲ್ಲಿ ಹೊರಟವರು ಲೌಕಿಕ ವ್ಯವಹಾರವನ್ನು ಬಿಟ್ಟಿ . . . ದೀರೇ? ಹಾಗಾದರೆ ದ್ವಂದ್ವಾತೀತರಾಗುವದೆಂದಿಗೆ? ನಿಮ್ಮಂಥ . . . ವಂತರೇ ವೇದಾಂತ ವಿಚಾರದಲ್ಲಿ ಇಷ್ಟುಮಟ್ಟಿಗೆ ಇದ್ದರೆ ಇತರ . . . ಗಳು ಆ ತತ್ವವನ್ನು ಗ್ರಹಿಸತಕ್ಕ ಅರ್ಹತೆಯನ್ನು ಪಡೆಯು . . . ಯಾವಾಗಲೋ? ಈ ಜ್ಞಾನಮಾರ್ಗವು ಕೇವಲ ಅಸಾಧ್ಯವಾದ . . . ವೆಂದು ನನಗೆ ತೋರುತ್ತದೆ—

ಅಷ್ಟರೊಳಗೆ ಉಭಯರ ಪರಿಚಿತರಾದ ಕೃಷ್ಣರಾಯರು ಬಂ . . . ಇದೇನು, ಬೆಳಿಗ್ಗೆ ಮಾತಾಡುತ್ತ ನಿಂತುಕೊಂಡಿರಿ? ಎಂದು . . . ದಾಸಪ್ಪನು—ಇನ್ನೇನಿದೆ, ಮತಪ್ರಸ್ತಾಪವಲ್ಲದೆ ಮತ್ತೇನನ್ನು . . . ಮಾತಾಡೋಣ! ಅನ್ನಲಾಗಿ, ಕೃಷ್ಣರಾಯರು ಗಹಗಹಿಸಿ ನ . . . ಅಯ್ಯೋ, ಮತವಿಚಾರವನ್ನು ಕಟ್ಟಿಕೊಂಡು ಚೆನ್ನಾಗಿ ಅಳುತ್ತೀ . . . ಅದು ಈ ಕಾಲದಲ್ಲಿ ಯಾರಿಗೆ ಬೇಕು? ಅಲ್ಲಿ ನೋಡಿ, . . . ದೊತ್ತಾಯಿತು! ಅಂದರು.

ತರುವಾಯ ಮೂವರೂ ಮೂರು ದಾರಿಗಳನ್ನು ಹಿಡಿದು ತಮ್ಮ ಕೆಲಸವಾಗಿ ಹೋದರು.

ಒಳದೇಶದ ವೃತ್ತಾಂತಗಳು.

ಸೊರಬದ ತಾಲ್ಲೂಕು ಆನವಟ್ಟಿಯಲ್ಲಿ ಸಾಹುಕಾರ್ . . . ಪ್ಪನವರೂ ಮಾಡಿಗುಡ್ಡಪ್ಪನವರೂ ಸೇರಿ ಕಳೆದ ತಾ . . . ಬಹಳ ಹಣ ಖರ್ಚುಮಾಡಿ ವಿಘ್ನೇಶ್ವರನ ಉತ್ಸವಾದಿಗಳನ್ನು . . . ರೆಂದು ಒಬ್ಬ ಬಾತ್ಮೀದಾರರು ಬರೆದಿರುತ್ತಾರೆ

...ಗ್ಗಾ ಡಿಸ್ಟ್ರಿಕ್ಟ್ ಕೌಂಸಿಯಲ್ಲಿ ಮ್ಯಾಂಗನೀಸ್ ಗಣಿಯು ... ಬಹಳ ಜನರು ಸೇರಿರುತ್ತಾರೆಂಬ್ ... ಕಾಪಾಡುವುದಕ್ಕೆ ಅಲ್ಲಿ ... ಆಸ್ಪತ್ರೆಯನ್ನು ... ಕೇವು ಸರ್ಕಾರದವರು ... ರೂಪಾಯಿ ಬಾಡಿದಾರೆ

****

...ರಿನಲ್ಲಿ ಮ॥ ಜಿ ... ವೈಟ್ ಸಾಹೇಬರ ಬಂಗಲೆಯ ... ಮೇಜಿನ ಮೇಲೆ ಯಾರೋ ೧೦ ಸವರಿನ್ ನಾಣ್ಯಗಳನ್ನೂ ... ಬಾಬತು ಮೂರು ಕರೇ ಸಿ ನೋಟುಗಳನ್ನೂ ಇಟ್ಟು ... ಇದರ ಮಾಲೀಕರು ಅಲ್ಲಿನ ಪೊಲೀಸ್ ಸೂಪರಿಂಟೆಂ ... ಪಡೆದುಕೊಳ್ಳಬೇಕೆಂದು ಪ್ರಕಟವಾಗಿದೆ

****

...ಶ್ ಪೇಟೆಯ ಪತ್ರಿಕೆದಾರರು ಬರೆಯುವುದು —ವಾಂತಿ ... ಗವು ಕಳೆದ ಒಂದು ತಿಂಗಳಿಂದ ವ್ಯಾಪಿಸಿ ಈ ವರೆಗೂ ... ಮಂದಿಯನ್ನು ಕೊಂದುಬಿಟ್ಟಿತು. ಈಗಲೂ ದಿನಾ ... ಸಾಯುತ್ತಿದ್ದಾರೆ ... ತಗಲಿದ ಕೆಲವೇ ಘಂಟೆಗಳೊ ... ಗುವದು ಮುಖ್ಯವಾಗಿ ಮನುಷ್ಯರ ಜೀವಿಯುಳ್ಳ ... ಯಿಲ್ಲ ಹರಡಿರುವದೆ.

****

...ನಿಯ ಕರ್ಜನ್ ಪಾರ್ಕ್ ಎಂಬ ಉದ್ಯಾನವನದಲ್ಲಿರುವ ...ನ್ನದ ಮಾಲಾದ ... ತವನ್ನು ಒಡೆದು ಪಾರ್ಕಿಗೆ ಸೇರಿ ... ತೆಯೂ ಜನರಲ್ ಆಸ್ಪತ್ರೆಯು ಒಳ ಸ್ಥಳಗಳೂ ... ಡಿ ತೀರ್ಮಾನಿಸಿದ್ದೇ ... ಈ ಕಟ್ಟಡವನ್ನು ... ತನಕ ... ಕಾಡಬೇಕಾದುದಿಲ್ಲವೆಂದು ... ಯಿಂದ ಹುಕುಂ ಬಂದಿರುತ್ತದೆ.

****

...ಯ. ಶ್ರೀನಿವಾಸರ ... ಸ್ವಾಮಿಗಳು ಈ ಸಲ ತಂ ... ಚಾತುರ್ಮಾಸದ ಸಂಕಲ್ಪವನ್ನು ಪೂರೈಸಿ ಸಮಾ ...ತ್ಸವಾದಿಗಳನ್ನು ನಡಿಸಿದರೆಂತಲೂ ಅ॥ ಕಮಿಷನರಾದ ... ಸಮುತ್ತರ್ಜಿಯವರು, ಕ್ನೀಕರ್ ಮ॥ ವೆಂಕಟರಾಯರು ... ಇವರು ಅವರನ್ನು ಸತ್ಕಾರಮಾಡಿದರೆಂತಲೂ, ಸ್ವಾಮಿಗಳು ... ಬೆಂಗಳೂರಿಗೆ ಪಯಣಮಾಡುವರೆಂತಲೂ ತಿಳಿದು ಬಂದಿದೆ.

****

...ವರುಷ ... ಆಯುರ್ವೇದ ... ವಿದ್ಯಾ ... ಸಭೆ ... ನಡೆಯಿತು. ... ಬ್ಬಿನ ಟೌನ್ ಹಾಲ್ ಬಂಗಲೆಯಲ್ಲಿ ಸೇರಿ ವಾರ್ಷಿಕೋತ್ಸವ ಮಾಡುವವರಾಗಿದ್ದಾರೆ ದಿವಾನ್ ಮ॥ ಮಾಧವರಾಯರು ಸಭಾ ... ಸ್ಥಾನವನ್ನು ವಹಿಸುವರು. ಆ ಸಭೆಯ ವಿಷಯವನ್ನು ಕುರಿತು ... ಕಳಿಸುವರೆಂದು ಕೇಳುತ್ತೇವೆ

****

...ರ್ ಡಿಸ್ಟ್ರಿಕ್ಟಿನ ... ದ ಟೋಲ್ ಗೇಟಿನಲ್ಲಿ ನಾಲ್ಕು ಚ ... ಗೆ ... ರೂಪಾಯಿ, ಎರಡು ಚಕ್ರದ ಗಾಡಿಗೆ ೧ ರೂಪಾಯಿ ... ಸುತ್ತಾರೆ ಇದು ಬಹಳ ದುಬಾರಿ ಎಂತಲೂ ಇತರ ... ಳಂತೆ ಕಡಿಮೆ ಮಾಡಬೇಕೆಂದೂ ಪ್ಲಾಂಟರ್ ಸಂಘದ ... ಕೊಂಡಿದ್ದರ ಮೇಲೆ ಆ ಸುಂಕಗಳನ್ನು ೪ ಆಣೆ ೨ ಆಣೆಗೆ ... ಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿನವರು ಗವರ್ನಮೆಂಟಿಗೆ ... ಮಾಡಿರುತ್ತಾರೆ

****

...ಧಾನಿಯಲ್ಲಿ ನಡೆಯುತ್ತಿರುವ ನವರಾತ್ರಿ ಮಹೋತ್ಸವಗಳಿ ... ಮೈಸೂರು ಸಂಸ್ಥಾನದ ಮುಖ್ಯ ಮುಖ್ಯ ಅಧಿಕಾರಿಗಳೆಲ್ಲಾ ...ತ್ತಾರೆ. ಈ ಸಲ ಸುಮಾರು ೧೫ ಮಂದಿ ಯೂರೋಪ್ಯರ್ ... ದೊರೆಸಾನಿಗಳೂ ಶ್ರೀಮನ್ಮಹಾರಾಜರವರ ಆಹ್ವಾನ ...ನ್ನು ಅಂಗೀಕರಿಸಿ ನೆನ್ನೆ ದಿನ ಸ್ಪೆಷಲ್ ರೈಲಿನಲ್ಲಿ ಬಂದು ... ರೆಸಿಡೆನ್ಸಿ ಬಂಗಲೆಯಲ್ಲಿ ಇಳಿದಿರುತ್ತಾರೆ ಈ ದಿನವೂ ... ಬರುವವರಾಗಿದ್ದಾರೆ

****

...ಳೆ ಬೆಳೆಯಾಗದ ರೈತರಿಗ ಕಂದಾಯ ಕಟ್ಟುವುದಕ್ಕೆ ಕಷ್ಟ ...ವುದನ್ನು ನೋಡಿ ಸರ್ಕಾರದವರು ಕಡೆಯ ಎರಡು ಕಿಸ್ತಿನ ...ಮವನ್ನು ಆರು ಕಿಸ್ತಿನಲ್ಲಿ ವಸೂಲ್ಮಾಡಿ ರೈತರಿಗೆ ರಿಯಾಯಿತಿ ...ಬೇಕೆಂದು ಹುಕುಂ ಕೊಟ್ಟಿದ್ದಾರಷ್ಟೆ ತುಮಕೂರು ಡಿಸ್ಟ್ರಿ ...ರಿದ ಮಧ್ದಗಿರಿ, ಚಿಕ್ಕನಾಯಕನಹಳ್ಳಿ, ಪಾವಗಡ, ಕೊರಟಗೆರೆ, ...ಕೆರೆ, ಈ ತಾಲ್ಲೂಕುಗಳಲ್ಲಿ ಮೇಲ್ಕಂಡ ರಿಯಾಯಿತಿ ಪಡೆದ ... ಗ್ರಾಮಗಳ ಹೆಸರನ್ನು ಈ ವಾರದ ಸರ್ಕಾರಿ ಗೆಜೆಟ್ಟಿನಲ್ಲಿ ...ಷ್ ಮಾಡಿರುತ್ತಾರೆ

****

...ನ್ನೆ ಸಾಯಂಕಾಲ ಜಗನ್ಮೋಹನ ಬಂಗಲೆಯಲ್ಲಿ ಇಂಗ್ಲಿಷ್ ...ರ್ ನಡೆಯಿತು. ರೆಸಿಡೆಂಟರೇ ಮೊದಲಾದ ಯೂರೋಪ್ಯರ್ ...ರೂ ದೊರೆಸಾನಿಗಳೂ ಅರಮನೆಯ ಸಾರೋಟುಗಳಲ್ಲಿ ಕುಳಿ ...ಗಿ ಶ್ರೀಮನ್ಮಹಾರಾಜರವರಿಂದ ಪದ್ಧತಿಯ ಪ್ರಕಾರ ಸತ್ಕಾ ...ನ್ನು ಹೊಂದಿ, ನಾನಾವಿಧ ಆಟಪಾಟ ವಿನೋದಗಳನ್ನೂ ಚಿತ್ರವಿ ...ದ ಬಾಣಬಿರುಸುಗಳನ್ನೂ ನೋಡಿಕೊಂಡು ವಾಪಸು ಬಂದರು. ...ವರು ದರ್ಬಾರಿಗೆ ಹೋಗುವಾಗಲೂ ವಾಪಸು ಬರುವಾಗಲೂ ...ರ್ಥವಾದ ತೋಫುಗಳು ಹಾರಿಸಲ್ಪಟ್ಟವು.

ಈ ದಿನ ವಿಜಯದಶಮಿಯಾದ್ದರಿಂದ ಬೆಳಗ್ಗೆ ೧೧ ಗಂಟೆಗೆ ಜಗ ...ನ ಬಂಗಲೆಯಿಂದ ಆಯುಧ ಗಜಾಶ್ವಗಳು ಬನ್ನೀಮಂಟಪಕ್ಕೆ ಮೆರವಣಿಗೆಯಾಗಿ ಹೊರಡುವವು ಅನಂತರ ಜಗನ್ಮೋಹನ ಬಂಗಲೆ ... ಕೃಷ್ಣಮ್ಮಣ್ಣಿ ಮಂಟಪ ... ಪಟ್ಟಗಳ ಕಾಳಗಗಳೂ, ಸಾಯಂಕಾಲ ೪ ಗಂಟೆಗೆ ಜಂಬೂಸವಾರಿಯೂ ಬೆಳೆಯುವವು ಶ್ರೀಮನ್ಮಹಾರಾಜ ರವರು ಪದ್ಧತಿಯ ಪ್ರಕಾರ ಸಮಸ್ತ ಬಿರುದುಗಳೊಡನೆ ಮೆರವಣಿಗೆ ಯಾಗಿ ಬನ್ನೀಮಂಟಪಕ್ಕೆ ಚಿತ್ತೈಸಿ, ಶಾಸ್ತ್ರವಿಧಿಗಳನ್ನು ಬೆಳೆಸಿ, ಸೈ ನ್ಯಗಳ ಕವಾತು ಪರಾಂಬರಿಸಿ ವಾಪಸು ಮೆರವಣಿಗೆಮಾಡಿಕೊಂಡು ಜ ಗನ್ಮೋಹನ ಬಂಗಲೆಯನ್ನು ತಲಪುವರು ಈ ಉತ್ಸವಕ್ಕಾಗಿ ಮುಖ್ಯ ರಾಜಬೀದಿಗಳಲ್ಲಿ ಚಪ್ಪರ, ತೋರಣ ಮೊದಲಾದವುಗಳನ್ನು ಕಟ್ಟಿ ಶೃಂಗಾರಮಾಡಿರುತ್ತಾರೆ ರಾತ್ರಿ ದೀಪೋತ್ಸವವೂ ನಡೆಯುವುದು

ಮೈಸೂರು ಗೆಜೆಟ್ ಸಂಗ್ರಹ.

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರಟರಿ ಮ॥ ಇ ಮೆಕಾ ನ್ ಐ ಸಿ ಎಸ್. ಇವರಿಗೆ ಅಕ್ಟೋಬರ್ ೨೩ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿ ಲೆಜ್ ರಜಾ ಕೊಟ್ಟಿದೆ

ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಲೆಫ್ಟಿ ನೆಂಟ್ ಕರ್ನಲ್ ಸ್ಮಿತ್ ಯವರಿಗೆ ಸೆಪ್ಟಂಬರ್ ೧೫ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿ ಲೆಜ್ ರಜವನ್ನೂ ಆ ತರುವಾಯ ಹದಿನೈದು ತಿಂಗಳ ಫರ್ಲೋ ರಜ ವನ್ನೂ ಕೊಟ್ಟಿದೆ

ಮತ್ತೊಂದು ಹುಕುಂ ಕೊಡಲ್ಪಡುವ ತನಕ ೧ನೆ ಕ್ಲಾಸ್ ಸಿವಿಲ್ ಸರ್ಜನ್ ಮ॥ ಪಿ. ಎಸ್ ಅಚ್ಯುತರಾಯರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿ ಕೆಲಸನೋಡತಕ್ಕದ್ದು

ಸಿವಿಲ್ ಸರ್ಜನ್ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮ॥ ಇ. ಎಸ್ ಕೃಷ್ಣಸ್ವಾಮಿ ಐಯ್ಯರವರು ತಮ್ಮ ಇತರ ಕೆಲಸಗಳೊಂದಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಛಾರ್ಜನ್ನೂ ವಹಿಸತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಪ್ರೊ" ಎಕ್ಸ್ಟ್ರಾ ಅ॥ ಕಮಿಷನರ್ ಮ॥ ಬಿ ... ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡುತಿಂಗಳು ಇಪ್ಪ ತ್ತು ದಿನಗಳ ಪ್ರಿವಿಲಜ್ ರಜಾ ಕೊಟ್ಟಿದೆ

... ಹುಕುಂ ಕೊಡಲ್ಪಡುವ ತನಕ ಬೆಂಗಳೂರು ತಾಲ್ಲೂಕ್ ಅಮಲ್ದಾರ್ ಮ॥ ಎ ಕೃಷ್ಣಸ್ವಾಮಿ ಐಯ್ಯಂಗಾರ್ರನ್ನು ಎಕ್ಸ್ಟ್ರಾ ಅ॥ ಕಮಿಷನರಾಗಿ ನೇಮಕ ಮಾಡಿ, ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗ ಮಾಡಿದೆ

ಬೆಂಗಳೂರ ಸೆಂಟ್ರಲ್ ಜೈಲ್ ... ಸೂಪರಿಂಟೆಂಡೆಂಟರಾದ ಮ॥ ಪಿ ಎಸ್ ಅಚ್ಯುತರಾಯರಿಗೆ ಅದೇ ಜೈಲ್ ಆವರಣದೊಳಗೆ ಚಲಾಯಿಸು ವಂತೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ

ಮ॥ ಎಂ ವಿ. ಶ್ರೀನಿವಾಸಾಚಾರ್ರನ್ನು ಸೆಪ್ಟಂಬರ್ ೧ ರಿಂದ ... ಗಾಮಿ ಸಬ್ ಅ॥ ಇಂಜನಿಯರಾಗಿ ನೇಮಕಮಾಡಲಾಗಿದೆ

ಸ್ಪೆಷಲ್ ಡ್ಯೂಟಿ ಎಕ್ಸಿಕ್ಯೂಟಿವ್ ಇಂಜನಿಯರ ಆಫೀಸ್ ಸಬ್ ಅ॥ ಇಂಜನಿಯರ್ ಮ॥ ಕೆ ಎಂ ವಾಸುದೇವರಾಯರಿಗೆ ೩ ನೆ ತಾರೀ ಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕೋಲಾರ್ ಡಿವಿಜನ್ ಸಬ್ ಅ॥ ಇಂಜನಿಯರ್ ಮ॥ ಎ ... ಸ್ವಾಮಿರಾಯರಿಗೆ ಕೊಟ್ಟಿರುವ ಇದಿನೈದು ದಿನಗಳ ಕಾಯಿಲ ರಜವ ನ್ನು ಇನ್ನೂ ನಾಲ್ಕು ವಾರಗಳಿಗೆ ಜಾಸ್ತಿ ಮಾಡಿದೆ.

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಮೇಖಾಟದ ಮೇಲೂ " ಬಹುಮಾನದ ಮೇಖಾ ಟ " ಎಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯ ಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು. ಅರ್ಧಕಾ ಲಮಿಗಿಂತ ಕನಿಷ್ಠವಾಗಿರಬಾರದು ಒಂದು ಕಾಲಮಿಗಿಂತ ಹೆಚ್ಚಾಗಬಾರದು ... (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರಕ್ಕೆ ಪ್ರಕಟಿಸುತ್ತೇವಲ್ಲದೆ, ಹಣವನ್ನು ಮನಿಆರ್ಡರ ಮೂಲಕ ರವಾನಿಸುತ್ತೇವೆ. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರ ದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವುವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ಬಾತ್ಮಿಯನ್ನು ಕಳುಹಿಸಿದ ಮ॥ ಎಸ್. ಆರ್. ಜಾನ್, ಶಿಕಾ ರಿಪುರದ ಇವರಿಗೆ ಈ ವಾರದ ಬಹುಮಾನವನ್ನು ಕೊಟ್ಟಿದೆ]

ನಿಕ್ಷೇಪ ಸಿಕ್ಕಿದೆ.

ಶಿಕಾರಿಪುರದ ತಾಲ್ಲೂಕು ಹಾಣಸೇಕೊಪ್ಪವೆಂಬ ಗ್ರಾಮದಲ್ಲಿ ತಾ ೧೭ನೇ ಸೋಮವಾರ ಬಂದಣ್ಣನೆಂಬ ಹುಡುಗ ತಮ್ಮ ಮನೇ ಎದುರಿಗೆ ಹಣಸೇ ಮರದಡಿಯಲ್ಲಿ ಬೆಳದಿದ್ದ ಚಪ್ಪರಬದ್ನೆ ಎಂಬ ಗಿಡ ವನ್ನು ತಮ್ಮ ಹಿತ್ತಲಲ್ಲಿ ಹಾಕಬೇಕೆಂದು ಬೇರು ಸಹಿತ ಕೀಳಲೆತ್ನಿಸಿ ದಳು. ಈ ಗಿಡವು ತುಂಬಾ ನಿಕ್ಷೇಪವಿದ್ದ ಬಾನೆಯ ಮಧ್ಯಭಾಗಕ್ಕೆ ತನ್ನ ಬೇರನ್ನು ಬಿಟ್ಟಿತ್ತು. ಇದನ್ನು ಕಿತ್ತಕೂಡಲೇ ಅದರ ಬೇರಿಗೆ ಏನೋ ಕಪ್ಪಗೆ ಹಗ್ಗದ ಹಾಗೆ ಸಿಕ್ಕಿಕೊಂಡಿದ್ದ ವಸ್ತುಗಳು ಕೆಳಕ್ಕೆ ಬಿದ್ದವು. ಆ ಹುಡುಗಿ ಇದೇನೆಂದು ಬೆರಗಾಗಿ ಅದನ್ನು ಹಿಡಿದು ಉಜ್ಜಿ ಕೊಳೆದುನೋಡಲು ಅವು ೧ ಬೆಳ್ಳಿ ಸರಿಗೆ, ೧ ಭಂಗಾರದಸರಿಗೆ, ೧ ಭಂಗಾ ರದ ಕರಡಿಗೆಯಾಗಿದ್ದವು. ಅವಳು ಇವಗಳನ್ನು ನೋಡುತ್ತಾ ಹಿಗ್ಗು ತ್ತಿರಲು ಎದುರುಮನೆಯವನೊಬ್ಬನು ನೋಡಿ ತಂತ್ರೋಪಾಯದಿಂದ ಇದನ್ನು ಅಪಹರಿಸಬೇಕೆಂದು ಹುಡುಗಿಯನ್ನು ಪುಸಲಾಯಿಸಿದನು. ಇಷ್ಟರಲ್ಲಿ ಪುನಃ ಅದೇ ಸ್ಥಳಕ್ಕೆ ಒಂದು ಅವನು ನಿಕ್ಷೇಪವಿದ್ದ ಬಾನೆಯಲ್ಲಿ ... ಒಂದು ಕಾಳಿಂದ ಎಷ್ಟು ಮೀಟಿದರೂ ಅದು ಏಳದೆ ಅವನ ಕೈ ನೋವಾಯಿತು. ಆಗ ಅವಳು ಮೀಟಿದಳು ನಿಕ್ಷೇಪವಿದ್ದ ಆ ಬಾನೆಯು ಮೇಲಕ್ಕೆ ಬಂದಿತು ಚೌಕಿಗಳು ಸರ, ಜೋಮಾಲೆ, ಪದಕ ಇತ್ಯಾದಿ ನಗಗಳು ಅದರಲ್ಲಿದ್ದವು ಈ ಪದಕದ ಬೆಲೆ ತಿಳಿಯ ಲಾಗದು ಅದು ಅಷ್ಟು ರಮ್ಯವಾಗಿದೆ ಇಷ್ಟುಮಾತ್ರವಲ್ಲದೆ ಆ ಬಾನೆ ಯಲ್ಲಿ ಬರೀ ಇಕ್ಕೇರಿ ವರಹಗಳಿಂದಲೇ ತುಂಬಿಟ್ಟಿದ್ದ ಮತ್ತೊಂದು ಸಣ್ಣ ಕಾಡಿಗೆಯು ಸಿಕ್ಕಿತು ಸಿಕ್ಕಿದ್ದನ್ನೆಲ್ಲಾ ಅವರಿಬ್ಬರೂ ಸಮಭಾಗ ಮಾಡಿಕೊಂಡು ಮನೆಗೆ ಹೋದಾಗ್ಗೆ ಅವರ ತಂದೆತಾಯಿಗಳು ಹಾಜರಿ ರಲಿಲ್ಲ ಬಳಿಕ ಚನ್ನವೀರ, ಪೂಜಾರಿಲಿಂಗ ಎಂಬುವವರಿಬ್ಬರು ಇವರ ಸುಳಿವನ್ನು ತಿಳಿದು ಬಂದು ಅರಮನೆಯ ಒಡವೆಗ ಹೆಗ್ಗಣಗಳ ಗುದ್ದಾ ಟ ಎಂಬುವದಕ್ಕೆ ಸರಿಯಾಗಿ " ಕಂಗೀ ನಮ್ಮ ... ದುಡ್ ದುಡ್ಡೆ ಮೊಟೆ ಕ್ಕೇಟಿ ಗಿ ನಿಮಗ್ ಸಿಕ್ಕಿಲ್ಲಾ ! ಅಪ್ಪ ನಮ್ಮೋಕ್ಕೆ ... ಸುಮ್ನೆ ಕೊಟ್ರಿ ಸೈ ! ಇಲ್ಲಿದ್ರೆ ನಿಮ್ಗ್ ದಾವಾ ಹಾಕ್ತೀವಿ ! ಜೋಕ್, ಕೋಲ್ಟು ಕಾಚಾರಿಗತ್ತೀವಿ ! " ಎಂದು ವಾಗ್ವಾದ ಮಾಡಿ ಬೆದರಿಸಿ ಅವ ರ ಕೈಯಿಂದ ಕಸುಕೊಂಡು ಹೋಗಿಬಿಟ್ಟರು ಇವರು—ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲಾ ಎಂದು ವ್ಯಸನಪಡುತ್ತಿರುವಾಗ್ಗೆ ಈ ವಿಚಾರವು ಗೋಪ್ಯವಾಗಿ ಪೊಲೀಸಿನವರಿಗೆದಲೇ ಪತ್ತೆಯಾಯಿತು. ಮೊದಲು ಒಬ್ಬ ಪೊಲೀಸಿನವನು ಇವರನ್ನೆಲ್ಲಾ ತನಿಖೆ ಮಾಡಿದಾಗ್ಗೆ ಕೆಲವು ಸಾಮಾನುಗಳೂ, ಬಳಿಕ ದಫೇದಾರ್, ಜಮೇದಾರ್, ಇನ್ಸ್ಪೆ ಕ್ಟರ್, ಇವರೆಲ್ಲಾ ಒಟ್ಟೊಟ್ಟಿಗಾಗಿ ಬಂದು ಅವರನ್ನು ಬಲವಾಗಿ ಹಿಡಿಯಲು ಕೆಲವು ಹೊಸ ಹೊಸ ಆಭರಣ ಸಾಮಾನುಗಳು ದೊರೆ ತವು ಇದು ಲಕ್ಷಾಂತರ ರೂಪಾಯಿಗಳ ನಿಕ್ಷೇಪವೆಂದು ಗೊತ್ತಿಗೆ ಬಂದಿದೆ. ಈ ನಿಕ್ಷೇಪವು ಯಾರದೋ ಯಾರ್ಯಾರಿಗೆ ಎಷ್ಟೆಷ್ಟು ಸಿಕ್ಕಿ ದೆಯೋ ತಿಳಿಯದು. ಈಗ್ಗೆ ಸಿಕ್ಕಿರುವ ನಿಕ್ಷೇಪಕ್ಕೆ ಸಾವಿರ ರೂಪಾಯಿ ಬೆಲೆಯಾದೀತು ಇಷ್ಟರ ಜಾಗೆ ಮಾಲಿಕನಿಗೆ ಲಾಭ ಎಂಬು ದು ಮೇದ್ಯವಾಗಿದೆ ಈ ವಿಷಯದಲ್ಲಿ ಮೊದಲು ನ್ಯಾಯಮಾಡಿದವರಿಗೆ ಏನೊಂದೂ ದೊರೆಯಲಾರದೆಂಬುದು ಕಂಠೋಕ್ತವಾಗಿದೆ ಈಗ ಸಿಕ್ಕಿರುವಷ್ಟು ನಿಕ್ಷೇಪ ಮಾತ್ರ ಇಲ್ಲಿ ಬಿಜಿಲಿಯಲ್ಲಿದೆ ಈ ವಿಷಯ ಆಗಲೇ ಗವರ್ನಮೆಂಟಿಗೂ ರಿಪೋರ್ಟಾಗಿರುವುದು

ಬಹುಮಾನದ ಮೇಖಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ
ಆನೆಯ ಹಾವಳಿ

ಶಿಕಾರಿಪುರಕ್ಕೆ ೬ ಮೈಲಿ ದೂರದಲ್ಲಿ ಅಂಬ್ಲಿಗೊಳ್ಳವೆಂಬ ಗ್ರಾಮವಿದೆ ಪಕ್ಕದಲ್ಲಿ ಒಂದು ಕಾಡುಂಟು ಅದರಲ್ಲಿ ಆನೆಗಳು ಬಹಳ ಸೇ ರಿಕೊಂಡು ಜನಸಂಚಾರವನ್ನು ಅಡ್ಡಮಾಡುವದಲ್ಲದೆ ಗದ್ದೆಗಳಲ್ಲಿರುವ ಪೈರುಗಳನ್ನು ಹಾಳುಮಾಡುತ್ತವೆ ಅಂಬಲಿಗೊಳ್ಳಕ್ಕೆ ೬ ಮೈಲಿ ದೂರ ದಲ್ಲಿ ಗಾಜನೂರೆಂಬ ಸಣ್ಣ ಗ್ರಾಮದೊಳಗಿರುವ ನಮ್ಮ ಜಮೀನುಗಳನ್ನು ನೋಡುವುದಕ್ಕೆ ನಾನೂ ನನ್ನ ಸ್ನೇಹಿತರೂ ಸೇರಿ ಹೊರಟು ಮಧ್ಯಾಹ್ನ ೪ ಗಂಟೆಯಲ್ಲಿ ಗಿಡದ ಮಧ್ಯೆ ಹೋಗುತ್ತಿರುವಾಗ್ಗೆ ಅಕಸ್ಮಾತ್ತಾಗಿ ಆನೆ ಗಳು ನಮ್ಮ ಕಣ್ಣಿಗೆ ಬಿದ್ದವು ನಾವು ಬಹಳ ಭಯದಿಂದ ಕೂಡಿ ಓ ಡುತ್ತಾ ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ಆನೆಗಳ ದೃಷ್ಟಿ ನಮ್ಮ ಕಡೆಗೆ ಬೀಳಲು ಅವು ನಮ್ಮನ್ನು ಬೆನ್ನಟ್ಟಿದವು ನಾವು ಮಹಾ ಭಯಾಂ ಕ್ರಾಂತರಾಗಿ ಜೀವ ಉಳಿದರೆ ಸಾಕೆಂದು ಬೇಗ ಬೇಗ ಹೋದೆವು ಅ ಷ್ಟರಲ್ಲೇ ನಮ್ಮ ಇದಿರಿಗೆ ಕೆಲವು ರೈತರು ಹೊಲಗಳ ಪೈರುಗಳನ್ನು ನಾಶನಮಾಡುವದಕ್ಕಾಗಿ ಬರುತ್ತಿದ್ದ ಆನೆಗಳನ್ನು ಹೆದರಿಸುವುದಕ್ಕೋ ಸ್ಕರ ಬಿದಿರು ಮೆಳೆಗಳ ಮೇಲೆ ಅಟ್ಟಣಿಗೆಗಳನ್ನು ಹಾಕಿಕೊಂಡು ಇರು ವುದನ್ನೂ ಅದನ್ನು ಹತ್ತುವುದಕ್ಕೆ ಅನುಕೂಲವಾದ ಬಿದಿರು ಮೆಳೆಗಳ ಕೆಳಗೆ ಹಾಕಿಕೊಂಡಿರುವ ಏಣಿಗಳನ್ನೂ ಕಂಡು, ಅದನ್ನು ಹತ್ತಿ ಅಟ್ಟ ಣೆಯನ್ನು ಸೇರಿದೆವು ಆದರೆ ಆನೆಗಳಲ್ಲಿ ಮುಂದಾಳಾದ ಸಲಗವು ಉ ಳಿದ ಆನೆಗಳನ್ನು ಸ್ವಲ್ಪ ದೂರದಲ್ಲಿ ಬಿಟ್ಟು, ತಾನು ಮಾತ್ರ ಒಂದು ನಾವು ಹತ್ತಿಕೊಂಡಿರುವ ಅಟ್ಟಣೆಯನ್ನು ನೋಡಿ ಬಂದು ಏಣಿಯ ನ್ನು ಮುರಿಯುವುದಕ್ಕೆ ಪ್ರಾರಂಭಿಸಲು ನಾವು ಅತ್ಯಂತವಾಗಿ ಭಯ ಪಟ್ಟು ಹೋ ಎಂದು ಗಟ್ಟಿಯಾಗಿ ಕೂಗಿಕೊಂಡೆವು. ಆನೆಯು ಹಿಡಿ ದಿದೆ ಏಣಿಯನ್ನು ಸಂಪೂರ್ಣವಾಗಿ ಮುರಿದು ನಮ್ಮ ಕೂಗನ್ನು ಆಣಕಿ ಸುವುದೋ ಎನ್ನುವ ಹಾಗೆ ತಾನೂ ಗಟ್ಟಿಯಾಗಿ ಕೂಗಲು ಹತ್ತಿರದ ಲ್ಲಿದ್ದ ಬಾಕಿ ಆನೆಗಳು ಧೈರ್ಯವಾಗಿ ಬಂದು, ನಮ್ಮಿಂದ ಏನೂ ಅಪಾ ಯವಾಗದಂತೆ ಸಲಗವನ್ನು ಅಲ್ಲಿಯೇ ನಿಲ್ಲಿಸಿ, ತಾವು ಸುತ್ತಲೂ ಇದ್ದ ಎಡಬಲದ ಗದ್ದೆಗಳ ಫಸಲನ್ನೆಲ್ಲಾ ಹಾಳುಮಾಡಿ ನಂತರ ಸಲಗವನ್ನು ಕೂಡಿಕೊಂಡು ಹೊರಟು ಹೋದವು ಅಷ್ಟರಲ್ಲಿಯೇ ಕತ್ತಲೆಯಾಗ ಲು ನಮಗೆ ಇಳಿಯುವುದಕ್ಕೆ ಬಹಳ ತೊಂದರೆಯಾಯಿತು ಆದರೂ ಬಹಳ ವೇದನೆಯಿಂದ ಮುಂದಕ್ಕೆ ಪ್ರಯಾಣ ಮಾಡಿ ಊರನ್ನು ಸೇರಿ ದೆವು ಈ ರೀತಿ ಮೂಗು ಪ್ರಾಣಿಗಳು ಪೈರುಗಳನ್ನು ಹಾಳುಮಾಡು ತ್ತಿರುವುದನ್ನೂ ಮಳೆಯಿಲ್ಲದೆ ಪೈರು ಹಾಳಾಗುತ್ತಿರುವುದನ್ನೂ ಜನ ರು ನೋಡಿ ಬಹಳ ಚಿಂತಾಕ್ರಾಂತರಾಗಿರುವರು ಮೂಗು ಪ್ರಾಣಿಗಳ ಲ್ಲಿಯೂ ಕೂಡ ಇಷ್ಟು ಸ್ವಜಾತಿ ಮಮತೆಯಿಂದ ತನಗಿಲ್ಲದಿದ್ದರೂ ಚಿಂತೆಯಿಲ್ಲವೆಂದೆಣಿಸಿ ತಾನು ಅಲ್ಲಿಯೇ ನಿಂತು ಉಳಿದ ಆನೆಗಳಿಗೆ ಆಹಾರವನ್ನು ತಿನ್ನುವುದಕ್ಕೆ ಅನುಕೂಲಮಾಡಿ ಕೊಟ್ಟಿತು ಇದರಂತೆ ಜನಗಳಲ್ಲಿ ಐಕಮತ್ಯವಿಲ್ಲದೆ ಇರುವದನ್ನೂ ಎಲ್ಲವೂ ತಮಗೇ ದೊರಕ ಬೇಕೆಂಬ ಆಶೆ ಪಡುವದನ್ನೂ ನೋಡುವಲ್ಲಿ ಈ ಮನುಷ್ಯರಿಗೆ ಆ ಮೂಗು ಪ್ರಾಣಿಗಳಷ್ಟು ತಿಳುವಳಿಕೆ ಇಲ್ಲವೆಂದು ಇವರು ಮಾಡುವ ಕಾರ್ಯಗಳಿಂದ ತಿಳಿಯಲು ಯಾವ ಅಭ್ಯಂತರವೂ ಇರುವದಿಲ್ಲ.

ಪ್ರಚಂಡ ಗಾಳಿಯೂ ಪ್ರಾಣನಷ್ಟವೂ.

೧೦,೦೦೦ ಪ್ರಜಾ ನಷ್ಟವು.

ಚೀನಾ ಸಮುದ್ರ ತೀರದಲ್ಲಾದ ಅಪಾಯತದ ವಿಷಯವಾಗಿ ಕಳೆದ ವಾರ ಬಂದಿರುವ ತಂತೀ ವರ್ತಮಾನಗಳೇನೆಂದರೆ—

ಸೆಪ್ಟೆಂಬರ್ ೧೮ ನೆ ಮಂಗಳವಾರ—ಹಾಂಕಾಂಗ್ ಕಟ್ಟಣದ ಸಮುದ್ರ ತೀರದಲ್ಲಿ ಅಪಾಯಕರವಾದ ಪ್ರಚಂಡ ಗಾಳಿಯು ಪ್ರಾಪ್ತವಾಯಿತು. ಹಡಗುಗಳಿಗೆ ತುಂಬಾ ನಷ್ಟ ಸಂಭವಿಸಿದೆ ಇಂಗ್ಲೀಷರ ಮೂರು ಜಹಜುಗಳೂ ಜರ್ಮನಿಯವರ ಒಂದು ಜಹಜೂ ಸಮುದ್ರದೊಳಗೆ ಮುಳುಗಿಕೊಂಡವು ಇಂಗ್ಲೀಷರ ಏರಡು ಜಹಜುಗಳೂ ಜರ್ಮನಿಯವರ ನಾಲ್ಕು ಜಹಜುಗಳೂ ಅಮೇರಿಕದ ಒಂದು ಜಹಜೂ ರೇವಿನಿಂದ ದಡದ ಮೇಲಕ್ಕೆ ಬಡಿದುಕೊಂಡು ಬಂದು ನಿಂತುಬಿಟ್ಟವು ಅನೇಕ ಪ್ರಾಣಗಳು ನಾಶವಾಗಿವೆ

ಸೆಪ್ಟೆಂಬರ್ ೧೯ ನೆ ಬುಧವಾರ.—ನೆನ್ನೆ ಹಾಂಕಾಂಗಿನಲ್ಲಿ ಪ್ರಾಪ್ತವಾದ ಪ್ರಚಂಡ ಗಾಳಿಯು ಬಹು ವಿನಾಶಕರವಾದದ್ದು. ಇಂಗ್ಲೀಷರ ಮತ್ತು ಫ್ರೆಂಚರ ನಾಲ್ಕು ಹಡಗುಗಳು ಒಡೆದು ಚೂರಾದವು ನಾಲ್ವರು ಹುದ್ದೇದಾರರೂ ಕಡಿಮಾರು ಮಂದಿ ಸೇವಕರೂ ಮೃತಪಟ್ಟರು ಚೀಣೆಯವರ ನೂರಾರು ದೋಣಿಗಳು ಮುಳುಗಿ ಹೋದವು ನೂರು ಜನಕ್ಕಿಂತಲೂ ಹೆಚ್ಚಾಗಿಯೇ ಸತ್ತು ಹೋದರು

ಈ ಪ್ರಚಂಡವಾದ ಗಾಳಿಯು ಎರಡು ಗಂಟೆಗಳ ಕಾಲ ಬೀಸಿತು ಸಮುದ್ರ ತೀರದಲ್ಲಿ ಉಪ್ಪರಿಗೆ ನಿಲ್ಲಿಸಲ್ಪಟ್ಟಿದ್ದ ಹಡಗು ಜಹಜು ದೋಣಿ ಮೊದಲಾದವೆಲ್ಲಾ ಗಾಳಿಯಿಂದ ಹಾರಿ ಮರದ ಬಾರೀ ದಿಮ್ಮಿಗಳನ್ನು ನಾಶಪಡಿಸಿ ಕರೆಗೆ ಬಂದು ನಿಂತವು ಅವು ಒಡೆದ ಚೂರುಗಳು ದಡದ ಮೇಲೆಲ್ಲಾ ಹರಡಿಕೊಂಡಿವೆ ಜಹಜುಗಳಿಂದ ಸಾಮಾನು ಇಳಿಸುವ ಕಟ್ಟಡವು ಸಂಪೂರ್ಣವಾಗಿ ಬಿದ್ದು ಹೋಯಿತು ಸಮುದ್ರದಲ್ಲಿ ಕಟ್ಟಹಾಕಿದ್ದ ಸಮಸ್ತ ವಿಧವಾದ ದೋಣಿಗಳೂ ಪಟ್ಟಣದ ಸಮೀಪದ ಬೀದಿಗಳಲ್ಲಿ ರಾಶಿ ರಾಶಿಯಾಗಿ ಬಿದ್ದಿವೆ ರಸ್ತೆಗಳಲ್ಲಿ ಮೊಳಕಾಲುದ್ದ ನೀರು ಹರಿಯುತ್ತಿದೆ ಬಿಳಿಯ ಜನರು ಆರು ಮಂದಿ ಸತ್ತರು ಚೀಣೆಯವರು ೧,೦೦೦ ಜನರು ಸತ್ತಿರಬಹುದೆಂದು ಊಹಿಸಲ್ಪಟ್ಟಿದೆ ಬ್ರಿಟಿಷ್ ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರು ತುಂಬಾ ವ್ಯಸನಪಟ್ಟು ತಮ್ಮ ಸಂತಾಪವನ್ನು ತಿಳಿಸಿದಾರೆ

ಸೆಪ್ಟೆಂಬರ್ ೨೦ ನೆ ಗುರುವಾರ—ಹಾಂಕಾಂಗಿನಲ್ಲಿ ಪ್ರಾಪ್ತವಾದ ಪ್ರಚಂಡ ಗಾಳಿಯ ದೆಸೆಯಿಂದ ೫,೦೦೦ ಚೀಣಿಯವರು ಸತ್ತಿರಬೇಕೆಂದೂ ಮೂರು ಕೋಟಿ ರೂಪಾಯಿನ ಆಸ್ತಿ ನಾಶವಾಗಿದೆ ಎಂದೂ ಊಹಿಸಲ್ಪಟ್ಟಿದೆ ಈ ದಿನ ಬೆಳಿಗ್ಗೆ ಮತ್ತೆ ಪ್ರಚಂಡ ಗಾಳಿಯು ಬೀಸಿತು ಹೊಸ ದೋಣಿಗಳನ್ನು ಸಮುದ್ರ ತೀರಕ್ಕೆ ಕಳುಹಿಸಿ ಹೆಣಗಳನ್ನು ಎತ್ತಿ ಕಾಪಿಸುತ್ತಿದಾರೆ.

ಸೆಪ್ಟೆಂಬರ್ ೨೧ ನೆ ಶುಕ್ರವಾರ—ಹಾಂಕಾಂಗ್ ಸಮುದ್ರದ ನೀರಲಿಯ, ಚೀಣಾ ಜಿಸ್ತರು ದೋಣಿಗಳಲ್ಲಿ ವಾಸಮಾಡುತ್ತಾ ಮೀನು ಹಿಡಿಯುವರು ಇಂಥವರ ೭೦೦ ಮನೆಗಳು ಒಂದೇ ಏಟಿಗೆ ಹೋಗಿ ನಾಶ ಹೊಂದಿದವು ಈ ಅಪಾಯತದಿಂದ ೧೦,೦೦೦ ಪ್ರಜೆಗಳು ಸಮುದ್ರದ ಪಾಲಾಗಿರಬೇಕೆಂದು ಅಂದಾಜು ಕಟ್ಟುತ್ತಾರೆ

ಸೆಪ್ಟೆಂಬರ್ ೨೨ ನೆ ಶನಿವಾರ—ಹಾಂಕಾಂಗಿನ ಪ್ರಚಂಡ ಗಾಳಿಗೆ ಸಿಕ್ಕಿ ನಷ್ಟಪಟ್ಟ ಪ್ರಜೆಗಳ ಸಹಾಯಾರ್ಥವಾಗಿ ಲಾಯಿಡ್ ಎಂಬ ಜಹಜು ಕಂಪನಿಯವರು ೬೦,೦೦೦ ರೂಪಾಯನ್ನು ಕಳುಹಿಸಿಕೊಟ್ಟಿದಾರೆ ಈ ಅಪಾಯತದಿಂದ ಲಂಡನ್ ಪಟ್ಟಣದ ಬೀಮಾ ಕಂಪನಿಯವರಿಗೆ ಒಂದುವರೆ ಕೋಟಿ ರೂಪಾಯಿ ನಷ್ಟವಾಗಿದೆ

ಮೈಸೂರು ಸರ್ಕಾರಿ ಮುಖಮುಗಳು.

ಇನಾಂ ಇಲಾಖೆ

ಮೈಸೂರು ಸಂಸ್ಥಾನದ ಇನಾಂ ಸೆಟಲ್ಮೆಂಟ್ ಇಲಾಖಾ ಸೂಪರಿಂಟೆಂಡೆಂಟರವರು ೧೯೦೫-೦೬ ನೆ ಸಾಲಿನ ರಿಪೋರ್ಟನ್ನು ಪ್ರಕಟಿಸಿದಾರೆ ಈ ಇಲಾಖೆಯಲ್ಲಿ ಕಳೆದ ವರುಷ ೬೮ ಮೈನರ್ ಇನಾಂತಿಗಳ ಪಟ್ಟಿಗಳು ತಯಾರಾಗಿ ಇನಾಂದಾರರಿಗೆ ಮಾವತಿ ಬಗ್ಗೆ ರವಾನೆಯಾದವು. ಈ ಭೂನರ್ವಿಮರ್ಶೆಯಿಂದ ಈ ಸಾಲಿನ ಇನಾಂ ಕ್ವಿಟ್ ರೆಂಟಿನಲ್ಲಿ ರೂ. ೪೫೫—೩ ಆಸೆಯೂ, ಇನಾಂ ನಿರ್ವೀರ್ಜನಲ್ಲಿ ರೂ ೮—೦ ಆಸೆಯೂ ಅಂತು ರೂ ೫೩—೯ ಆಸೆ ಕಂದಾಯ ಜಾಸ್ತಿಯಾಗಿದೆ ಈ ಇಲಾಖೆಯು ಏರ್ಪಾಡಾದ ೧೮೬೮ನೆ ಇಸವಿಯಿಂದ ಇದುವರೆಗೆ ಒಟ್ಟು ರೂ. ೧೧,೯೯,೫೮೧ ಚಿಲ್ಲರೆ ರೂಪಾಯಿ ಖರ್ಚಾಗಿದೆ ಇದರಿಂದ ಸಂಸ್ಥಾನದ ವರಮಾನದಲ್ಲಿ ೮,೩೪೮,೨೦೬ ಚಿಲ್ಲರೆ ರೂಪಾಯಿ ಜಾಸ್ತಿಯಾಗಿರುವುದು ಗವರ್ನಮೆಂಟಿನವರು ಸಾಯರ್ ಖಾತೆಯಲ್ಲಿ ಇನ್ನೂ ಯಾವ ಇತ್ಯರ್ಥವನ್ನೂ ಮಾಡಲಿಲ್ಲವಾದ್ದರಿಂದ ಶೃಂಗೇರಿ ಜಹಗೀರಿಯ ಇನಾಂ ಸೆಟಲ್ಮೆಂಟ್ ನಿಲ್ಲಿಸಲ್ಪಟ್ಟಿದೆ.

ರೆವಿನ್ಯೂ ಕಮಿಷನರವರ ಅಧಿಕಾರಗಳು.

ಜಮೀನು ಕಂದಾಯದ ಬಾಬು.—(೧) ಲ್ಯಾಂಡ್ ರೆವಿನ್ಯೂ ರೂಲಿಸಿನ ೮ ನೇ ಸೆಕ್ಷನ್ ಪ್ರಕಾರ ರೆವಿನ್ಯೂ ಆಫೀಸರುಗಳು ರೈತರಿಂದ ತೆಗೆದುಕೊಳ್ಳುವ ಆಧಾರ ಜಾಮೀನುಗಳು ಸಾಕೋ ಸಾಲವೋ ಎಂಬುದನ್ನು ಕುರಿತು ಡೆಪ್ಯುಟಿ ಕಮಿಷನರುಗಳಿಂದ ಬರುವ ರಿಪೋರ್ಟುಗಳನ್ನು ಅಖೈರುಮಾಡಿ ಹುಕುಂ ಕೊಡುವ ಅಧಿಕಾರ ರೆವಿನ್ಯೂ ಕಮಿಷನರಿಗೆ ವಹಿಸಿರುತ್ತೆ, (೨) ಪ್ರಾವಿನ್ಷಿಯಲ್ ಅಥವಾ ಲೋಕಲ್ ಫಂಡ್ ರೋಡುಗಳಿಗಾಗಿ, ಸ್ಕೂಲು, ಧರ್ಮಶಾಲೆ ಮೊದಲಾದ ಪಬ್ಲಿಕ್ ಕಟ್ಟಡಗಳಿಗಾಗಲಿ ಪ್ರತಿಫಲ ಕೊಡದೇನೇ ಉಪಯೋಗಿಸಿಕೊಳ್ಳಬಹುದಾದ ಜಮೀನುಗಳನ್ನು ರೆವಿನ್ಯೂ ಕಮಿಷನರವರು ಸ್ಯಾಂಕ್ಷನ್ ಮಾಡಬಹುದು ಆದರೆ ಅಂಥಾ ಜಮೀನಿನ ಕ್ರಯವು ಕಂದಾಯ ದಾಖಲಾಗಿದ್ದಿದ್ದರೆ ೧೦೦ ರೂಪಾಯಿ ಒಳಗಿರಬೇಕು, ಕಂದಾಯ ದಾಖಲಾಗಿದ್ದರೆ ೫ ರೂಪಾಯಿ ಕಂದಾಯಕ್ಕಿಂತ ಜಾಸ್ತಿಯಾದ ಜಮೀನಾಗಿರ ಕೂಡದು ಈ ರೀತಿ ರೆವಿನ್ಯೂ ಕಮಿಷನರು ಎಷ್ಟೆಷ್ಟು ಜಮೀನುಗಳನ್ನು ಇತರ ಉದ್ದೇಶಗಳಿಗೆ ವಿನಿಯೋಗಿಸುವಂತೆ ಹುಕುಂ ಕೊಡುತ್ತಾರೋ ಅದರ ವಿವರಣೆಯನ್ನು ಆರು ತಿಂಗಳಿಗೊಂದು ಸಲ ಗವರ್ನಮೆಂಟಿಗೆ ತಿಳಿಸುತ್ತಾ ಬರಬೇಕು (೩) ಕಂದಾಯ ದಾಖಲಾಗಿರುವ ಜಮೀನುಗಳನ್ನು ಗ್ರಾಮಗಳ ಬಡಾವಣೆಗೆ ಉಪಯೋಗಿಸಿಕೊಳ್ಳುವಂತೆಯೂ ಅಂಥಾ ಕಂದಾಯವನ್ನು ವಜಾಮಾಡುವಂತೆಯೂ ರೆವಿನ್ಯೂ ಕಮಿಷನರಿಗೆ ಅಧಿಕಾರ ವಹಿಸಿದೆ (೪) ೧೮೯೦ ನೆ ಇಸವಿ ಲ್ಯಾಂಡ್ ರೆವಿನ್ಯೂ ರೂಲಿಸಿನ ೧ ನೆ ಅಪೆಂಡಿಕ್ಸಿನ ರೀತ್ಯಾ ಬಾಗಾಯತು ವ್ಯವಸಾಯಕ್ಕೆ ಜಮೀನು ಕೊಡುವ ಅಧಿಕಾರವನ್ನು ಗವರ್ನಮೆಂಟಿನವರೇ ವಹಿಸಿಕೊಂಡಿದ್ದರು ಈಗ ಈ ಅಧಿಕಾರವನ್ನು ರೆವಿನ್ಯೂ ಕಮಿಷನರಿಗೆ ವಹಿಸಿರುತ್ತಾರೆ ಆದರೆ ಯಾವ ಸಂದರ್ಭದಲ್ಲೂ ಅಂಥಾ ಜಮೀನಿನ ಕಂದಾಯವು ೫೦೦ ರೂಪಾಯಿಗೆ ಮೀರಿರ ಕೂಡದು (೫) ರೂಲಿಸಿನಲ್ಲಿ ಅವಕಾಶ ಕೊಟ್ಟಿರುವಂಥಾ ರೀಫಂಡುಗಳನ್ನು ಅವರು ಸ್ಯಾಂಕ್ಷನ್ ಮಾಡಬಹುದು ಇಂಥಾ ರೀಫಂಡುಗಳ ವಿವರವನ್ನು ಆರು ತಿಂಗಳಿಗೊಂದಾವರ್ತಿ ರೆವಿನ್ಯೂ ಕಮಿಷನರು ಗವರ್ನಮೆಂಟಿಗೆ ತಿಳಿಸುತ್ತಾ ಬರಬೇಕು. (೬) ವಸೂಲಾಗುವುದಿಲ್ಲವೆಂಬಂಥಾ ಕಂದಾಯದ ಬಾಕಿಗಳನ್ನು ರೆವಿನ್ಯೂ ಕಮಿಷನರೇ ರಿಮಿಷನ್ ಮಾಡುವಂತೆ ಹುಕುಂ ಕೊಡಬಹುದು ಈ ಬಾಗದಲ್ಲೂ ಅವರು ಆರು ತಿಂಗಳಿಗೊಂದು ಸಲ ಗವರ್ನಮೆಂಟಿಗೆ ರಿಪೋರ್ಟ್ ಕಳುಹಿಸುತ್ತಿರಬೇಕು

ವಾರ್ಷಿಕ ರಿಪೋರ್ಟುಗಳೂ ಮೊದಲಾದ ರಿಟರ್ನುಗಳೂ—ಜಮೀನು ಕಂದಾಯದ ವಸೂಲಿಯೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ರಿಪೋರ್ಟ್ ರಿಟರ್ನುಗಳ ವಿಚಾರದಲ್ಲಿ ರೆವಿನ್ಯೂ ಕಮಿಷನರು ಎಷ್ಟು ಮಟ್ಟಿಗೆ ವ್ಯವಹರಿಸತಕ್ಕದ್ದೆಂದು ಇನ್ನು ಮುಂದೆ ಪ್ರತ್ಯೇಕವಾದ ಹುಕುಂ ಕೊಡಲಾಗುವುದು

ಕೆರೆ ಮೊದಲಾದ ನೀರಾವರಿಗಳ ವಿಚಾರ—ರೆವಿನ್ಯೂ ಇಲಾಖೆಯವರ ಸ್ವಾಧೀನದಲ್ಲಿರುವ ಕೆರೆ ಕಟ್ಟೆ ನಾಲೆ ಮೊದಲಾದ ನೀರಾವರಿ ಜಲಾಶಯಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ರೂಲಿಸು ಮುಂತಾದದ್ದನ್ನು ಮಾಡಿ ಜಾರಿ ತರಬೇಕಾದ ಜವಾಬ್ದಾರಿಯನ್ನು ರೆವಿನ್ಯೂ ಕಮಿಷನರಿಗೇನೇ ವಹಿಸಿದೆ ಮತ್ತು ಕಂಟ್ರಿಬ್ಯೂಷನ್ ಮೊಬಲಗು ವಗೈರೆ ಮಾಡಿ ವಸೂಲು ಮಾಡಿಸುವುದಕ್ಕೂ, ಸಣ್ಣ ಸಣ್ಣ ಕೆರೆ ಕಟ್ಟೆಗಳ ಕಾಮಗಾರಿ ಮುಂತಾದದ್ದನ್ನು ಮಾಡಿಸುವುದಕ್ಕೂ ಅವರೇ ಬೇಕಾದ ರೂಲುಸು ಮಾಡಿ ಜಾರಿ ತರತಕ್ಕದ್ದು ಸಣ್ಣ ಕೆರೆಗಳ ಕಾಮಗಾರಿಗೆ ಎಷ್ಟೆಷ್ಟು ಹಣ ವಿನಿಯೋಗಿಸಬೇಕೆಂಬುದನ್ನು ಅವರೇ ಚೀಫ್ ಇಂಜನಿಯರ ಸಂಗಡ ಕಾಗದ ಪತ್ರಗಳನ್ನು ಬೆಳಸಿ ನಿರ್ಧರಿಸಬೇಕು ಹಾಗೆ ನಿರ್ಧರವಾದದ್ದು ಬೇಕೆಂದು ಅಪೇಕ್ಷಿಸುವ ಡೆಪ್ಯುಟಿ ಕಮಿಷನರುಗಳು ಮೊದಲು ರೆವಿನ್ಯೂ ಕಮಿಷನರಿಗೇನೇ ಬರೆದುಕೊಳ್ಳತಕ್ಕದ್ದು ಅಂಥಾ ಕಾಮಗಾರಿಗಳನ್ನು ನಡಸುವುದಕ್ಕೂ ಅವುಗಳ ವಿಚಾರದಲ್ಲಿ ರಿಪೋರ್ಟುಗಳನ್ನು ಕೇಳಿ ತರಿಸಿಕೊಳ್ಳುವುದಕ್ಕೂ ರೆವಿನ್ಯೂ ಕಮಿಷನರಿಗೆ ಅಧಿಕಾರವಿದೆ

ಜಮೀನನ್ನು ವಹಿಸಿಕೊಳ್ಳುವುದು—ಎಲ್ಲೆಲ್ಲಿ ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಜಮೀನು ಬೇಕಾಗಿರುವುದೋ ಅದನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದಕ್ಕೆ ಯಾವ ಕಾರ್ಯ ಎಷ್ಟುಮಟ್ಟಿಗೆ ನಡೆದಿದೆಯೋ ಈ ವಿಚಾರಗಳಲ್ಲಿ ರೆವಿನ್ಯೂ ಕಮಿಷನರ ಆಗಿಂದಾಗ್ಗೆ ರಿಪೋರ್ಟುಗಳನ್ನು ತರಿಸಿಕೊಳ್ಳುತ್ತಾ ಆ ಕೆಲಸಗಳನ್ನು ಜಾಗ್ರತೆ ನಡೆಸಬೇಕಾಗಿದೆ ಗವರ್ನಮೆಂಟ್ ಹುಕುಂ ಪ್ರಕಾರ ತೆಗೆದುಕೊಂಡಂಥಾ ಜಮೀನುಗಳ ಕಂದಾಯವನ್ನು ರೆವಿನ್ಯೂ ಕಮಿಷನರು ವಜಾ ಮಾಡಲು ಅಧಿಕಾರವುಳ್ಳವರಾಗಿದಾರೆ

ಸಾಲ ಮುಂತಾದ್ದು—ರೆವಿನ್ಯೂ ಕಮಿಷನರಿಗೆ ಅಧಿಕಾರ ವಹಿಸಿರುವ ಬಾಬುಗಳ್ಯಾವವೆಂದರೆ—(೧) ಗವರ್ನಮೆಂಟಿನವರು ಸಂಸ್ಥಾನಕ್ಕೆ ಸ್ಯಾಂಕ್ಷನ್ ಮಾಡಿದಂಥಾ ಹಣದ ಪೈಕಿ ಜಮೀನಿನ ಆ ಬಾಬಿಗಾಗಿಯೂ ವ್ಯವಸಾಯಕ್ಕಾಗಿಯೂ ಡಿಸ್ಟ್ರಿಕ್ಟುವಾರು ಎಷ್ಟೆಷ್ಟು ಹಣ ವಿನಿಯೋಗಿಸಬೇಕೆಂಬುದನ್ನು ರೆವಿನ್ಯೂ ಕಮಿಷನರು ಗೊತ್ತುಮಾಡಿ ಹಂಚಿ ಹಾಕುವರು (೨) ಬಟವಾಡೆ ಉಳಿದ ಹಣವನ್ನು ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ವರ್ಗಮಾಡಿ ವಿನಿಯೋಗಿಸಬಹುದು (೩) ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ರೆಗ್ಯುಲೇಷನ್ ಪ್ರಕಾರ ೨,೫೦೦ ರೂಪಾಯಿನ ವರಿಗೂ ಮತ್ತು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ ೧೯೬ನೆ ಸೆಕ್ಷನ್ ರೂಲುಸು ಪ್ರಕಾರ ೧,೦೦೦ ರೂಪಾಯಿ ವರಿಗೂ ರೆವಿನ್ಯೂ ಕಮಿಷನರು ಸಾಲಗಳನ್ನು ಸ್ಯಾಂಕ್ಷನ್ ಮಾಡುವರು (೪) ಸಾಲಗಳ ಕಿಸ್ತು ಮೊಬಲಗನ್ನು ಸುಸ್ತಿ ಬಿಟ್ಟು ವಸೂಲ್ಮಾಡುವ ವಿಷಯದಲ್ಲಿ ಡೆಪ್ಯುಟಿ ಕಮಿಷನರ ಹುಕುಮನ್ನು ಊರ್ಜಿತ ಪಡಿಸುವ ಅಧಿಕಾರವೂ, ಅಥವಾ ಅಂಥಾ ಸಂದರ್ಭಗಳಲ್ಲಿ ಸೂಕ್ತವಾದ ಇತರ ಹುಕುಂ ಮಾಡುವ ಅಧಿಕಾರವೂ, (೫) ಪ್ರತಿ ಒಂದು ಸಂದರ್ಭದಲ್ಲೂ ವಸೂಲಾಗತಕ್ಕದ್ದಲ್ಲವೆಂಬ ಸಾಲದ ಬಾಕಿಯಲ್ಲಿ ೧೦೦ ರೂಪಾಯಿ ವರೆಗೆ ರಿಮಿಷನ್ ಮಾಡಿ ಬಿಟ್ಟುಬಿಡುವ ಅಧಿಕಾರವೂ ರೆವಿನ್ಯೂ ಕಮಿಷನರಿಗೆ ವಹಿಸಿರುತ್ತೆ

ವ್ಯವಸಾಯದ ಬ್ಯಾಂಕುಗಳು ಮತ್ತು ಪರಸ್ಪರ ಸಹಾಯಕ ಸಂಘಗಳು—ಇವುಗಳನ್ನೂ ಕಾಫಿ ಬ್ಯಾಂಕುಗಳನ್ನೂ ತನಿಖೆ ಮಾಡಿ ಆಡಿಟ್ ಮಾಡುವುದಕ್ಕೂ ಅವುಗಳ ವಿಷಯದಲ್ಲಿ ಡೆಪ್ಯುಟಿ ಕಮಿಷನರ ಮತ್ತು ರೆಜಿಸ್ಟ್ರಾರರ ಆಡಿಟ್ ರಿಪೋರ್ಟುಗಳನ್ನು ಪುನರ್ವಿಮರ್ಶೆ ಮಾಡುವುದಕ್ಕೂ ರೆವಿನ್ಯೂ ಕಮಿಷನರಿಗೆ ಅಧಿಕಾರ ವಹಿಸಿರುತ್ತೆ ಈ ಸಂಘಗಳಿಗೂ ಬ್ಯಾಂಕುಗಳಿಗೂ ಗವರ್ನಮೆಂಟಿನವರು ಅಡ್ವಾನ್ಸು ಕೊಟ್ಟಿರುವ ಸಂದರ್ಭಗಳಲ್ಲಿ ಅಂಥಾ ಹಣಕ್ಕೆ ಈಗ ಈಡಾಗಿರುವ ಆಸ್ತಿಗಳನ್ನು ತಪ್ಪಿಸಿ ಬೇರೆ ಈಡು ತೆಗೆದುಕೊಳ್ಳುವ ಭಾಗದಲ್ಲಿ ರೆವಿನ್ಯೂ ಕಮಿಷನರು ಗವರ್ನಮೆಂಟಿನವರ ಅನುಮತಿಯನ್ನು ಪಡೆಯಬೇಕಾಗಿದೆ ಹೊಸ ವ್ಯವಸಾಯದ ಬ್ಯಾಂಕುಗಳನ್ನು ಏರ್ಪಡಿಸುವುದಕ್ಕೂ ಈಗಿರುವವುಗಳನ್ನು ಮುಚ್ಚಿ ಬಿಡುವುದಕ್ಕೂ ರೆವಿನ್ಯೂ ಕಮಿಷನರ ಮೂಲಕವೇ ಗವರ್ನಮೆಂಟಿಗೆ ಶಿಫಾರಸು ಬರಬೇಕು

ಕ್ಷಾಮವಿಚಾರ—ಕ್ಷಾಮನಿವಾರಣೆಯ ಬಗ್ಗೆ ಏರ್ಪಟ್ಟ ಕಾನೂನು ಪ್ರಕಾರ ರೆವಿನ್ಯೂ ಕಮಿಷನರವರೇ ಕ್ಷಾಮನಿವಾರಣೆಯ ಕಮಿಷನರಾಗಿ ಸಮಸ್ತ ಕಾರ್ಯಗಳನ್ನೂ ನಡಸುವಂತೆ ಅವರಿಗೆ ಅಧಿಕಾರ ವಹಿಸಿದೆ ಆ ಕಾನೂನಿನ ವಿಧಗಳನ್ನು ಸಾಮಾನ್ಯ ಕಾಲದಲ್ಲೂ ವಿಶೇಷ ಕಾಲದಲ್ಲೂ ಅವರೇ ರೂಪಿಸತಕ್ಕದ್ದು.

ರಜಾ ಮುಂತಾದ್ದು—ರೆವಿನ್ಯೂ ಕಮಿಷನರು ಅಸಿ ಕಮಿಷನರಿಗೆ ಕ್ಯಾಜುಯಲ್ ರಜವನ್ನೂ ಅಮಲ್ದಾರರಿಗೂ ಡೆಪ್ಯುಟಿ ಅಮಲ್ದಾರರಿಗೂ ಕ್ಯಾಜುಯಲ್ ರಜ ಮತ್ತು ಒಂದು ತಿಂಗಳ ಪ್ರಿವಿಲೆಜ್ ರಜ ಕೊಡಲು ಅಧಿಕಾರವುಳ್ಳವರಾಗಿರಾರೆ ಡೆಪ್ಯುಟಿ ಕಮಿಷನರ ಅಧೀನದಲ್ಲಿರುವ ಸಂಬಳಗಾರರನ್ನು ರೆವಿನ್ಯೂ ಇಲಾಖೆಯ ಆಫೀಸರ (ಅಂದರೆ, ಡೆಪ್ಯುಟಿ ಕಮಿಷನರ ಅ ಕಮಿಷನರ, ಅಮಲ್ದಾರ ಡೆಪ್ಯುಟಿ ಅಮಲ್ದಾರರ) ಕಚೇರಿಗಳಲ್ಲಿ ನೇಮಕ ಮಾಡುವುದಕ್ಕೆ ರೆವಿನ್ಯೂ ಕಮಿಷನರ ಒಪ್ಪಿಗೆಯನ್ನೂ ಸ್ಯಾಂಕ್ಷನನ್ನು ಪಡೆಯಬೇಕು ಆದರೆ ಪೋಸ್ಟ್ ಮತ್ತು ಪೋಲೀಸ್ ಶಾಖೆಗಳು ವಿನಾಯಿಸಲ್ಪಟ್ಟಿವೆ

ಅಪೀಲ್ ಮುಂತಾದ್ದು—ರೆವಿನ್ಯೂ ಕಮಿಷನರ ಅಧಿಕಾರಪಟ್ಟ ರೆವಿನ್ಯೂ ಮತ್ತು ಇತರ ಬಾಬುಗಳಲ್ಲಿ ಡೆಪ್ಯುಟಿ ಕಮಿಷನರು ಮಾಡಿದ ತೀರ್ಮಾನಗಳ ಮೇಲೆ ರೆವಿನ್ಯೂ ಕಮಿಷನರು ಹಿಡಿದು ತನಿಖೆ ಮಾಡುವುದಕ್ಕೂ ಅಂಥಾ ತೀರ್ಮಾನಗಳನ್ನು ಬದಲಿಸುವುದಕ್ಕೂ ಅಧಿಕಾರ ವಹಿಸಲ್ಪಟ್ಟವಾರೆ

ಒಕ್ಕಲಿಗರ ಸಂಘವೂ ಅದರ ಉದ್ದೇಶಗಳೂ.

ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘದ ಕಾರ್ಯದರ್ಶಿಗಳು ದಿನ ಅಕ್ಟೋಬರ್ ತಿಂಗಳಲ್ಲಿ ನಡಸಬೇಕೆಂದು ಏರ್ಪಾಡಾದ ಮಹಾ ಸಭೆಯ ಉದ್ದೇಶ ಮೊದಲಾದವುಗಳನ್ನು ಕುರಿತು ನಮ್ಮಲ್ಲಿಗೆ ಕಳುಹಿಸಿರುವ ಸಣ್ಣ ಪುಸ್ತಕದಿಂದ ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಪ್ರಕಟಿಸುತ್ತೇವೆ ಇದರಲ್ಲಿ ಈ ಸಂಘದ ಕಾರ್ಯ ಪ್ರೋತ್ಸಾಹವಾಗಿ ಅದು ಪ್ರತಿ ನಿಷ್ಠೆ ಹೊಂದಬೇಕೆಂಬುವುದೇ ಮುಖ್ಯ ಉದ್ದೇಶವಾಗಿರುತ್ತದೆ

ನಮ್ಮ ದೇಶದಲಿ ಒಕ್ಕಲಿಗರು ಇತರ ಮಂಡಲಿಗಳಿಗೆ ಮೀರಿದ ಸಂಖ್ಯೆಯುಳ್ಳವರಾಗಿಯೂ, ಬಾಳ ತಾಳ್ಮೆ, ಕೃಷಿ ವ್ಯಾಪಾರ ಇವೇ ಮೊದಲಾದ ಸದ್ಗುಣಗಳುಳ್ಳವರಾಗಿಯೂ, ಮೈಸೂರು ರಾಜ್ಯಕ್ಕೆ ಆಧಾರವಾಗಿಯೂ ಇದ್ದಾಗ್ಯೂ ಇವರ ವಿದ್ಯೆಯು ಬಹಳ ಕಡಿಮೆಯಾಗಿರುವುದರಿಂದ ಇವರು ಒಟ್ಟಿಗೆ ಹೀನಸ್ಥಿತಿಯಲ್ಲಿರುವುದಲ್ಲದೆ ಅನೇಕ ರೀತಿಗಳನ್ನು ಕಷ್ಟಗಳನ್ನು ಅನುಭವಿಸುತ್ತಿದಾರೆ ನಮ್ಮ ಮೈಸೂರು ದೇಶದಲ್ಲಿ ಕಳೆದ ಅಂದರೆ ೧೯೦೧ ನೇ ಇಸವಿಯ ಖಾನೇಶುಮಾರಿಯ ಪ್ರಕಾರ ಜನಸಂಖ್ಯೆಯು ೫೫ ಲಕ್ಷ ಈ ಪೈಕಿ ೧೩ ಲಕ್ಷ ಜನರು ಒಕ್ಕಲಿಗರಾಗಿದಾರೆ ಇವರಲ್ಲಿ ಅಕ್ಷರಜ್ಞಾನ ಹೊಂದಿದವರು ೨೫,೦೦೦ ಕ್ಕಿಂತ [illegible] ಇದಾರೆ ಇವರಲ್ಲಿ ಎಷ್ಟು ಜನರನ್ನು [illegible] ಮಾಡುವವರು ಅನೇಕರು ಇಲ್ಲ ಇಂಗ್ಲೀಷ್ ಭಾಷೆಯನ್ನು ಬಲ್ಲವರು ೯೯ ಮಂದಿ. ಬಿ ಎ ಪದವಿ [illegible] ರೆಗ್ಯುಲರ್ ಆಗಿರುವವರು [illegible] ಆಸ್ಪದವಾಗಿರುವವರು ೧,೦೦೦ ಮಂದಿ ಮಾತ್ರ ಇದಾರೆ ಇಂಡಿಯಾ ದೇಶದ ಬ್ರಿಟಿಷ್ ರಾಜ್ಯಗಳಲ್ಲಿ ಮತ್ತು ಹೈದರಾಬಾದು ಸಂಸ್ಥಾನದಲ್ಲಿಯೂ ಒಕ್ಕಲಿಗ ಜನರು ಅನೇಕರಿದ್ದಾರೆ ಇವರಲ್ಲಿ ವಿದ್ಯೆಯು [illegible] ಕಡಿಮೆಯಾಗಿರುವುದರಿಂದ ಇವರು ವಿಶೇಷವಾದ ದೊಡ್ಡ ಕಾರ್ಯಗಳನ್ನು ನೆರವೇರಿಸಲೂ ಅಸಮರ್ಥರಾಗಿ ಅಭಿವೃದ್ಧಿಗೆ ಬಾರದೆ ಇದಾರೆ ಹೀಗಿರುವಾಗ ಈ ಜನಗಳು ತ್ವರೆಯಾಗಿ ಅಭಿವೃದ್ಧಿಗೆ ಬರಬೇಕಾದ ಕಾರಣದಿಂದ ತ್ವರೆಗೆ ಆಲೋಚಿಸಲ್ಪಟ್ಟಿದೆ

ಒಕ್ಕಲಿಗರಿಗುಂಟಾಗಿರುವ ಈ ನ್ಯೂನತೆಗಳನ್ನು [illegible] ಸಾಧ್ಯವು ಸಮಸ್ತ ಒಕ್ಕಲಿಗರ ಕಾಲಸಾಗಿಗೆ ಒಕ್ಕಲಿಗರೆಲ್ಲರೂ ತಮ್ಮ ಬುದ್ಧಿ ಶಕ್ತಿಗಳನ್ನು ತಮ್ಮ ಜನರ ಸೇವೆಯಲ್ಲಿ ಸರ್ವದಾ ಉಪಯೋಗಿಸಬೇಕಾಗಿರುವುದಲ್ಲದೆ ಅವುಗಳನ್ನು ೧ನೇದಾಗಿ ಉಪಯೋಗಿಸಬೇಕಾಗಿರುವುದನ್ನು ಸಹ ಅವರು ಅರಿಯಬೇಕಾಗಿದೆ ಮುಖ್ಯವಾಗಿ ಅಷ್ಟು ಜನರನ್ನು ಮುಂದಕ್ಕೆ ತರಬೇಕಾದರೆ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದೇ ಸದುಪಾಯವು ಹೀಗೆ ಅವರನ್ನು ವಿದ್ಯಾವಂತರನ್ನಾಗಿ ಮಾಡಲು ದ್ರವ್ಯಸಹಾಯವು ಅವಶ್ಯಕವಾದುದರಿಂದ ಅಂಥಾ ದ್ರವ್ಯವನ್ನು ಕೂಡಿಸಲು ಸರ್ವರೂ ಏಕಮನಸ್ಸಿನಿಂದ ಒಂದು ಒಕ್ಕಲಿಗರ ಸಂಘವನ್ನು ಏರ್ಪಡಿಸುವುದು ಮೊದಲನೆಯ [illegible] ಇಂಥಾ ಘನ ಪ್ರಯತ್ನಕ್ಕಾಗಿ ಒಕ್ಕಲಿಗರು ತಮ್ಮ ಬುದ್ಧಿ ಸಾಮರ್ಥ್ಯವನ್ನು ಉಪಯೋಗಿಸಿದ್ದೇ ಆದರೆ ದೇವರು ಅವರಿಗೆ ಸಹಾಯವಾಗುವನು ಈಗ ಅವರು ಪ್ರಾರಂಭಿಸಬೇಕೆಂದಿರುವ ಕೆಲಸವು ಕೈಗೂಡುವುದೆಂಬುವುದಕ್ಕೆ ಅನೇಕ ಚರಿತ್ರೆಗಳುಂಟು. ಅವರಲ್ಲನೇಕರು ಐಶ್ವರ್ಯವಂತರಾಗಿರುವುದಲ್ಲದೆ ಬಹಳ ಉದಾರಸ್ವಭಾವವುಳ್ಳವರಾಗಿಯೂ ಇದಾರೆ ಇಂಥಾ ಮಹನೀಯರು ತಮ್ಮ ಶಕ್ತ್ಯಾನುಸಾರ ವ್ಯಯ ಮಾಡಲು ಸಿದ್ಧರಾಗಿರುವರು ಕೆಲವು ಮಂದಿ ವಿದ್ಯಾವಂತರು ನಿಸ್ಪೃಹರಾಗಿ ಕೆಲಸ ಮಾಡಲು ಉದ್ಯುಕ್ತರಾಗಿ ಇದಾರೆ ನಮ್ಮ ದೇಶದಲ್ಲಿರುವ ಸಮಸ್ತ ಒಕ್ಕಲಿಗರೂ ಅವರವರ ಶಕ್ತ್ಯಾನುಸಾರ ಸಹಾಯ ಮಾಡುತ್ತಾರೆಂಬುವುದಕ್ಕೆ ಸಂದೇಹವೇ ಇಲ್ಲ ಇದಲ್ಲದೆ ನಮ್ಮ ಇಂಡಿಯಾ ದೇಶದಲ್ಲಿ ಜನರ ವಿದ್ಯಾಭಿವೃದ್ಧಿಗಾಗಿ ಪ್ರಯತ್ನಿಸಲ್ಪಟ್ಟ ಅನೇಕ ಘನ ಪ್ರಯತ್ನಗಳು ನೆರವೇರಿರುವುದು ಸರ್ವರಿಗೂ ವೃತ್ತಾಂತವಾಗಿಯೇ ಇದೆ

ಇಂಥಾ ಘನವಾದ ಪ್ರಯತ್ನಗಳನ್ನೂ ಅವುಗಳಿಂದುಂಟಾಗಿರುವ ಒಳ್ಳೇ ಫಲಿತಾಂಶಗಳನ್ನೂ ನೋಡಿ ಪ್ರೋತ್ಸಾಹಗೊಂಡು, ಬೆಂಗಳೂರಿನಲ್ಲಿ ಕೆಲವರು ಒಕ್ಕಲಿಗರ ದೊಡ್ಡ ಮನುಷ್ಯರು ೧೯೦೬ ನೇ ಏಪ್ರಿಲ್ ತಿಂಗಳು ೧ ಮತ್ತು ೮ ನೇ ತಾರೀಖುಗಳಲ್ಲಿ ಸಭೆ ಸೇರಿ ಒಕ್ಕಲಿಗರ ಸಂಘವೆಂಬ ಹೆಸರಿನಿಂದ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ ಒಕ್ಕಲಿಗರಿಗೆ ವಿದ್ಯಾವಂತರಾಗಲು ಕೈಲಾದಮಟ್ಟಿಗೂ ಅನುಕೂಲಗಳನ್ನು ಒದಗಿಸಿ ಕೊಟ್ಟು ಇವರನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕೆಂಬುವುದೇ ಈ ಸಂಘದ ಉದ್ದೇಶ

೧೯೦೬ ನೇ ಇಸವಿ ಏಪ್ರಿಲ್ ೧೫ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಿಲ ಬಳಿ ಇರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮ ಶಾಲೆಯಲ್ಲಿ ಸಭೆ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ ಈ ಸಂಘದ ಅವಶ್ಯಕತೆಯನ್ನು ಅನುಮೋದಿಸಿದ್ದಲ್ಲದೆ ಇದರ ಶ್ರೇಯವಾದ ಉದ್ದೇಶವನ್ನು ನೆರವೇರಿಸುವ ಬಗ್ಗೆ ಬೆಂಗಳೂರು

[illegible]ಬಾದು ಗ್ರಾಮಗಳಲ್ಲಿರತಕ್ಕ ಸಮಸ್ತ ಒಕ್ಕಲಿಗ ಮಹನೀ[ಯರನ್ನು] ಬರಮಾಡಿಕೊಂಡು ಮತ್ತೊಂದು ಸಭೆಯನ್ನು ಸೇರಿಸಿ, [ಕೆಲವು] ಏರ್ಪಾಡುಗಳನ್ನು ಮಾಡಬೇಕೆಂದು ಅಭಿಪ್ರಾಯ ಪಟ್ಟರು. ೧೯೦೬ ನೇ ಏಪ್ರಿಲ್ ೨೯ ರಲ್ಲಿ ಬೆಂಗಳೂರು ಮತ್ತು ಇದರ [ಸುತ್ತ]ಪಲ್ಲಿರುವ ಗ್ರಾಮಗಳ ಒಕ್ಕಲಿಗ ಮಹನೀಯರೆಲ್ಲರೂ ಅದೇ [illegible] ಸಭೆ ಸೇರಿ ಕೆಲವು ಏರ್ಪಾಡುಗಳನ್ನು ತೀರ್ಮಾನ[ಮಾಡಿದರು]. ಅವೇನೆಂದರೆ — ಒಕ್ಕಲಿಗರ ಸಂಘಕ್ಕೆ ಗಂಗಡಕಾರ, ರೆಡ್ಡಿ, ಕುಂಚಿಟಿಗ, ಪಳ್ಳಿಕಾರ ಮೊದಲಾದ ಸಮಸ್ತ ಒಕ್ಕ[ಲಿಗರೂ] ಸೇರತಕ್ಕದೆಂತಲೂ, ಒಕ್ಕಲಿಗರ ಬಾಲಕರ ವಿದ್ಯಾಭ್ಯಾಸಕ್ಕನು[ಕೂ]ಲವಾಗುವಂತೆ ಇವರ ವಾಸಕ್ಕೋಸ್ಕರ ಸದ್ಯಕ್ಕೆ ಬೆಂಗಳೂರಿನಲ್ಲಿ [ಮ]ತ್ತು ದ್ರವ್ಯ ಸಹಾಯವಾದ ಕಾಗಲು ಈ ದೇಶದ ಇತರ ಪಟ್ಟಣಗಳಲ್ಲಿಯೂ ಸಾಧ್ಯವಾದಮಟ್ಟಿಗೆ ವಿದ್ಯಾರ್ಥಿ ನಿಲಯ ಸ್ಥಾಪಿಸಬೇಕೆಂತಲೂ, ಈ ವರ್ಷ ಅಕ್ಟೋಬರ್ ತಿಂಗಳು [illegible] ೮ ನೇ ತಾರೀಖುಗಳಲ್ಲಿ ಒಕ್ಕಲಿಗರ ವಿದ್ಯಾಭಿವೃದ್ಧಿಗಾಗಿ ಮಾಡ[ಬೇಕಾದ] ಏರ್ಪಾಡುಗಳನ್ನು ತೀರ್ಮಾನ ಮಾಡುವುದಕ್ಕೋಸ್ಕರ ಬೆಂಗ[ಳೂರಿನ]ಲ್ಲಿ ಒಂದು ಒಕ್ಕಲಿಗರ ಮಹಾ ಸಭೆಯನ್ನು (ಕಾನ್‌ಫರೆನ್ಸ್) [ಸೇರಿಸಬೇ]ಕೆಂತಲೂ, ಮೈಸೂರು ದೇಶ, ಹೈದರಾಬಾದು ಮತ್ತು ಬ್ರಿಟಿ[ಷ್ ಜಿಲ್ಲೆ]ಗಳಲ್ಲಿರುವ ಸಮಸ್ತ ಒಕ್ಕಲಿಗ ಮಹನೀಯರನ್ನು ಈ ಮಹಾ[ಸಭೆಗೆ] ಬರಮಾಡಿಕೊಳ್ಳತಕ್ಕದೆಂತಲೂ ತೀರ್ಮಾನಿಸಿ, ಈ ಮಹಾಸಭೆ[ಯ ಉ]ಪಯೋಗಕ್ಕಾಗಿ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೂ ಮತ್ತು [ಅ]ಲ್ಲಿ ತೀರ್ಮಾನಿಸಲ್ಪಡಬೇಕಾಗಿರುವ ಸಂಗತಿಗಳನ್ನು ಕುರಿ[ತು] [illegible] ನಿಬಂಧನೆಗಳ ಒಂದು ಮಸೂದೆಯನ್ನೂ [illegible] ಒಕ್ಕಲಿಗ ದೊಡ್ಡ ಮನುಷ್ಯರನ್ನು ಕಾರ್ಯನಿರ್ವಾಹಕ ಸಮಿತಿಯವರನ್ನಾಗಿ (ಎಕ್ಸಿಕ್ಯೂಟಿವ್ [ಕಮಿಟಿ]) ನಿಯಮಿಸಿದ್ದಲ್ಲದೆ, ಇದಕ್ಕೆ ಬೇಕಾದ ಖರ್ಚಿಗಾಗಿ ಒಂದು [illegible] ಆ ಸಭೆಯಲ್ಲಿ ಸೇರಿದ್ದ ದೊಡ್ಡಮನುಷ್ಯರು [illegible] ರೂಪಾಯಿಗಳಾ[illegible]

ಈ ಸಂದರ್ಭದಲ್ಲಿ ಮಾ|| ಕಂಟ್ರಾಕ್ಟರ್ [illegible] ಹೈಗ್ರೌಂಡ್ಸಿನಲ್ಲಿರುವ ಬಾಡಿಗೆ ಬೆಲೆಯುಳ್ಳ [illegible] ಒಂದನ್ನು ಸೂಚಿಸಿದವರು. ವಿದ್ಯಾರ್ಥಿ ನಿಲಯಕ್ಕಾಗಿ [illegible] ಕಟ್ಟಡ ಕಟ್ಟಿಸುವ ವರೆಗೆ ಈ ಕೆಲಸಕ್ಕೆ ಉಪಯೋಗಿಸಲು ಒಕ್ಕಲಿಗರ ಸಂಘದ ಸ್ವಾಧೀನಕ್ಕೆ ಬಿಟ್ಟುಕೊಟ್ಟಿದ್ದಾರೆ. [illegible] ಲಾಲ್ ಬಾಗ್ [illegible] ಕಂಟ್ರಾಕ್ಟರುಗ[ಳಾದ] ಮಿ|| [illegible] ಬಿ ಎಸ್ ಮಾದಪ್ಪನವರು ಮ|| ಮುನಿಸ್ವಾಮಿ[illegible] ಬರುವ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ [ಸೇರುವ] ಮಹಾಸಭೆಗೆ ಬರುವವರಿಗೆ ಭೋಜನದ ಏರ್ಪಾ[ಡಿನ] ಖರ್ಚನ್ನು ತಾವೇ ಸ್ವಂತವಾಗಿ ವಹಿಸಿರುತ್ತಾರೆ.

ಬರುವ ಅಕ್ಟೋಬರ್ ತಿಂಗಳು ೬, ೭ ೮ ನೇ ತಾರೀಖುಗಳಲ್ಲಿ [illegible] ಸಂಗತಿಗಳ ಪೈಕಿ ಕೆಲವನ್ನು ಮಾತ್ರ ಸಂ[ಕ್ಷೇಪವಾ]ಗಿ ಸೂಚಿಸುತ್ತೇವೆ. ಈ ಒಕ್ಕಲಿಗರ ಮಹಾ ಸಭೆಯು ವರ್ಷಂ[ಪ್ರತಿ] [illegible] ಡಿಸ್ಟ್ರಿಕ್ಟಿನಲ್ಲಿ ಸೇರತಕ್ಕದ್ದು. ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಮತ್ತು ತಾಲ್ಲೋಕಿನಲ್ಲಿಯೂ ಈ ಸಂ[ಘದ] ಉದ್ದೇಶವನ್ನು ನೆರವೇರಿಸುವದಕ್ಕಾಗಿ ಒಂದೊಂದು ಕಾರ್ಯನಿ[ರ್ವಾಹ]ಕ ಸಮಿತಿಯನ್ನು ಏರ್ಪಡಿಸತಕ್ಕದ್ದು. ಆಯಾಯ ಸಮಿತಿಗಳಿಗೆ [illegible] ಆ ತಾಲ್ಲೋಕಿನ ಮನುಷ್ಯರೇ ಮೆಂಬ[ರುಗಳಾ]ಗಿರತಕ್ಕದ್ದು. [illegible] ಸೇರಿದ ನಂತರ [illegible] ಮೊದಲು ಬೆಂಗಳೂರಿನಲ್ಲಿ ಒಂದು ವಿದ್ಯಾರ್ಥಿನಿಲಯವನ್ನು [ಸ್ಥಾಪಿ]ಸುವುದು. ಈ ನಿಲಯದಲ್ಲಿ ವಿದ್ಯಾರ್ಥಿಗಳ ವಾಸಕ್ಕೂ [illegible] ಅನುಕೂಲ ಪಡಿಸುವದಲ್ಲದೆ ಅವರ ವಿದ್ಯೆ, ಆರೋಗ್ಯ ಇವೇ ಮೊದಲಾದ ವಿಷಯಗಳ ಮೇಲ್ವಿಚಾರಣೆ[ಗೆ] ಒಕ್ಕಲಿಗ ದೊಡ್ಡ ಮನುಷ್ಯರ ಪೈಕಿ ಕೆಲವರನ್ನು ಮೇಲ್ವಿಚಾ[ರಣಾ ಸ]ಭೆಯಾಗಿ ಏರ್ಪಡಿಸುವದು. ಇದರಲ್ಲಿ ಒಕ್ಕಲಿಗರ ವಿದ್ಯಾರ್ಥಿಗ[ಳನ್ನು] ಮಾತ್ರ ಸೇರಿಸತಕ್ಕದ್ದು. ಅವರನ್ನು ಮೂರು ತರಗತಿಗಳಾಗಿ [ಮಾಡಿ, ಊಟ]ದ ಖರ್ಚನ್ನು ಪೂರ್ತಿಯಾಗಿ ಕೊಡಲು ಶಕ್ತಿಯುಳ್ಳವ[ರು], ಅರ್ಧಮಾತ್ರ ಕೊಡಲು ಶಕ್ತಿಯುಳ್ಳವರು, ಮತ್ತು ಸಾಧ್ಯ[illegible] ವಾಸ ಮಾಡತಕ್ಕವರು. ಇವರುಗಳನ್ನು ಅವರವರ ಯೋಗ್ಯ[ತಾನು]ಸಾರವಾಗಿಯೂ ಸ್ಥಳವಿದ್ದ ಮಟ್ಟಿಗೂ ಮತ್ತು ಒಂದೇ ಒಂದು [illegible] ಇಷ್ಟೆಂದೂ ಆರಿಸಿಕೊಳ್ಳುವದು. ಹಣ ಕೈಗೂಡಿದ [ಮೇಲೆ] ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲಿಯೂ ಅನುಕೂಲಿಸಿದರೆ ಪ್ರತಿ ಒಂದು ಮುಖ್ಯ ತಾಲ್ಲೋಕಿನಲ್ಲಿಯೂ ಇದೇ ರೀತಿ ವಿದ್ಯಾರ್ಥಿನಿಲ[ಯ]ಗಳನ್ನು ಸ್ಥಾಪನೆ ಮಾಡಿ ಆಯಾಯ ಸ್ಥಳದ ಒಕ್ಕಲಿಗ ದೊಡ್ಡ ಮನುಷ್ಯರನ್ನ ಮೇಲ್ವಿಚಾರಣೆಗೆ ನಿಯಮಿಸುವದು. ಇದಲ್ಲದೆ ಒಕ್ಕ[ಲಿಗರ] ವಿದ್ಯಾಭಿವೃದ್ಧಿಗೂ, ಒಕ್ಕಲಿಗರಿಗೆ ಪ್ರಯೋಜನಕರವಾದ ಸಂಗ[ತಿ]ಗಳೂ ಒಕ್ಕಲಿಗರ ಸಂಘದ ವಿಷಯಗಳನ್ನೂ ತಿಳಿಸುವದಕ್ಕೂ [ಈ] ಸಂಘದ ಹೆಸರಿನಲ್ಲಿ ಒಂದು ವಾರ, ಪಕ್ಷ, ಅಥವ ಮಾಸಪತ್ರಿಕೆ[ಯ]ನ್ನು ಪ್ರಕಟನೆ ಮಾಡತಕ್ಕದ್ದು. ಇದರಲ್ಲಿ ಆಗಾಗ್ಗೆ ವ್ಯವಸಾಯ, [ಕೈಗಾ]ರಿಕೆ, ವ್ಯಾಪಾರ, ವಿದ್ಯಾಭ್ಯಾಸ, ಆರೋಗ್ಯ, ಇವೇ ಮೊದಲಾದ [ವಿ]ಷಯಗಳನ್ನು ಪ್ರಚುರಪಡಿಸತಕ್ಕದ್ದು ಇವೇ ಮೊದಲಾದವು.

ಈ ಸಂಘದ ಸೆಕ್ರೆಟರಿಗಳು ಮಹಾ ಜನರನ್ನು ಕೇಳಿಕೊಳ್ಳುವು[ದೇ]ನೆಂದರೆ—

"ನಮ್ಮ ಸಹೋದರರಾದ ವಿಶಿಷ್ಟ ಒಕ್ಕಲಿಗ ಮಹನೀಯರುಗ[ಳಿಗೆ] ನಮ್ಮ ಜನರು ಬಹಳ ನಿಕೃಷ್ಟಸ್ಥಿತಿಯಲ್ಲಿ ಇದ್ದಾರೆಂಬುವದು [ಚೆನ್ನಾ]ಗಿ ತಿಳಿದೇ ಇದೆ. ಮತ್ತು ನಾವುಗಳು ನಯ ನಾಗರೀಕತೆ ಆರೋ[ಗ್ಯ] ಮತ್ತು ಐಶ್ವರ್ಯಗಳನ್ನು ಹೊಂದಿ ಉನ್ನತಸ್ಥಿತಿಗೆ ಬರಬೇಕಾದರೆ [ವಿದ್ಯೆ]ಯಿಂದಲೇ ಎಂಬುವದು ಇದುವರೆಗೆ ಹೇಳಿದ್ದರಲ್ಲಿ ವ್ಯಕ್ತವಾಗಿರು[ತ್ತ]ದೆ. ಆದುದರಿಂದ ನಮ್ಮ ಜನಗಳಲ್ಲಿ ವಿದ್ಯಾಭಿವೃದ್ಧಿಯನ್ನುಂಟು [ಮಾಡಿ] ಇವರನ್ನು ಮುಂದಕ್ಕೆ ತರಬೇಕೆಂದು ಮಾಡಿರುವ ಒಕ್ಕಲಿಗರ [ಸಂ]ಘದ ಘನವಾದ ಮತ್ತು ಸರ್ವಜನ ಸಮ್ಮತವಾದ ಪ್ರಯತ್ನವನ್ನು ತಾವುಗಳೆಲ್ಲರೂ ತಮ್ಮ ಉದಾರವಾದ ಸಹಾಯದಿಂದ ಸಫಲಗೊಳಿಸಬೇಕೆಂದು ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

"ಪ್ರಕೃತ ತಾವುಗಳು ಮಾಡಬೇಕಾದ ಕಾರ್ಯಗಳನ್ನು ಕುರಿತು ಅರಿಕೆ ಮಾಡಿಕೊಳ್ಳುತ್ತೇವೆ. ಒಕ್ಕಲಿಗ ಮಹಾಜನರೆಲ್ಲರೂ ಬರುವ ಅಕ್ಟೋಬರು ತಿಂಗಳು ೬, ೭, ಮತ್ತು ೮ ನೇ ತಾರೀಖುಗಳಲ್ಲಿ ಒಕ್ಕಲಿಗರ ವಿದ್ಯಾಭಿವೃದ್ಧಿಯನ್ನು ಕುರಿತು ಬೆಂಗಳೂರಿನಲ್ಲಿ ಸೇರುವ ಮಹಾಸಭೆಗೆ ದಯಮಾಡಬೇಕು. ಸ್ಥಳ ಊಟ ಉಪಚಾರಗಳ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನು ಕಾರ್ಯನಿರ್ವಾಹಕ ಸಭೆಯವರು ತಾವೆಲ್ಲರೂ ಮಹಾ ಸಭೆಗೆ ತಪ್ಪದೆ ಬರುತ್ತೀರೆಂಬ ಭರವಸದಿಂದ ಮುಂದಾಗಿಯೇ ಒದಗಿಸಿದ್ದಾರೆ. ಆದ್ದರಿಂದ ಬರತಕ್ಕ ಮಹನೀಯರೆಲ್ಲರೂ ಒಕ್ಕಲಿಗರ ಸಂಘಕ್ಕೆ ಜಾಯಿಂಟ್ ಸೆಕ್ರೆಟರಿಗಳಾದ ಬೆಂಗಳೂರು ಲಾಲ್ ಬಾಗ್ ರೋಡಿನಲ್ಲಿ ಆಫೀಸುಳ್ಳ ಎಂ ಸುಬ್ಬಯ್ಯ, ಬಿ ಎ, ಕೆ ಹೆಚ್ ರಾಮಯ್ಯ, ಬಿ ಎ ಯವರಿಗೆ ಸಭೆ ಸೇರುವುದಕ್ಕೆ ಮುಂಚೆ ತಮ್ಮ ಉದ್ದೇಶವನ್ನೂ ಮತ್ತು ಬರುವವರ ಹೆಸರುಗಳನ್ನೂ ದಯವಿಟ್ಟು ತಿಳಿಯಪಡಿಸಬೇಕು ಮತ್ತು ಪ್ರತಿಯೊಬ್ಬರೂ ತಮ್ಮ ತಮ್ಮ ಮಕ್ಕಳನ್ನು ಸಾಧ್ಯವಾದ ಮಟ್ಟಿಗೂ ವಿದ್ಯಾವಂತರನ್ನಾಗಿ ಮಾಡುವಂತೆ ತೀರ್ಮಾನಿಸಿಕೊಳ್ಳಬೇಕು ಎಂಬಿವೇ.

"ಮುಖ್ಯ ಒಕ್ಕಲಿಗರ ಸಂಘದ ಈ ಘನಪ್ರಯತ್ನವನ್ನು ತಾವುಗಳೆಲ್ಲರೂ ಚಿಕ್ಕವರು ದೊಡ್ಡವರು ಬಡವರು ಐಶ್ವರ್ಯವಂತರು ಗ್ರಾಮವಾಸಿಗಳು ಪಟ್ಟಣವಾಸಿಗಳು ಹೆಂಗಸರು ಗಂಡಸರು ಒಂದು ಪಂಗಡದವರು ಮತ್ತೊಂದು ಪಂಗಡದವರು ಎಂಬ ಭೇದಗಳನ್ನು ಮರೆತು ತಮ್ಮ ಸ್ವಂತ ಕಾರ್ಯವನ್ನಾಗಿ ಭಾವಿಸಿ ಸರ್ವರೂ ಏಕ ಮನಸ್ಸಿನಿಂದ ತನುಮನೋಧನಗಳ ಸಹಾಯದಿಂದ ನೆರವೇರಿಸಿಕೊಡುತ್ತೇವೆಂಬದಾಗಿ ಪ್ರತಿಜ್ಞೆ ಮಾಡಿಕೊಳ್ಳಬೇಕೆಂದು ಅತ್ಯಂತ ವಿನಯದಿಂದ ಬೇಡಿಕೊಳ್ಳುತ್ತೇವೆ" ಎಂಬುದೇ.

ಇಂಡಿಯಾ ದೇಶದ ವೃತ್ತಾಂತಗಳು.

ಬಿಹಾರ್ ಆಧಿಪತ್ಯದಲ್ಲಿ ಕಳೆದ ವರ್ಷ ಕಾಲರ ಜಾಡ್ಯ ಜ್ವರದ ಬೇನೆಯಿಂದ ೧,೧೧,[illegible] ಜನಗಳು ಮೃತಪಟ್ಟರೆಂದು ಪ್ರಕಟವಾಗಿದೆ.

❖❖❖❖

ಕಳೆದ ವರ್ಷ ಬೊಂಬಾಯಿನ ಪಾರ್ಸಿ ಸಾಹುಕಾರರು ಆಸ್ಪತ್ರೆ ಮೊದಲಾದ ಧರ್ಮಕಾರ್ಯಗಳಿಗೆ ಒಟ್ಟು [illegible]ತ್ತೊಂಬತ್ತು ಲಕ್ಷ ರೂಪಾಯಿ ದಾನಮಾಡಿರುತ್ತಾರೆಂದು ಪ್ರಕಟವಾಗಿದೆ.

❖❖❖❖

ಬೊಂಬಾಯಿ ಪಟ್ಟಣದಲ್ಲಿ ಮಿ|| ಹೀರಚಂದ್ ದೇವೀಚಂದ್ ಎಂಬ ಜವಾಹಿರಿ ಸಾಹುಕಾರನು ತನ್ನ ಗತಿಸಿದ ಮಗನ ಹೆಸರಿನಲ್ಲಿ ೭೫,೦೦೦ ರೂಪಾಯಿಗಳನ್ನು ಧರ್ಮಕಾರ್ಯಗಳಿಗೆ ದಾನಮಾಡಿರುತ್ತಾನೆ.

❖❖❖❖

ಬಿಹಾರ್ ಆಧಿಪತ್ಯಕ್ಕೆ ಸೇರಿದ [illegible] ಡಿಸ್ಟ್ರಿಕ್ಟಿನಲ್ಲಿ ಮರ[illegible] ಕಂಪನಿಗಳಿಂದ ೩೩ ಆನೆಗಳು ಕಳುವಾಗಿರುತ್ತವೆಂತಲೂ ಈ ಪೈಕಿ [illegible] ಸಿಕ್ಕದವೆ[ಂ]ತಲೂ ತಿಳಿದು ಬಂದಿದೆ.

❖❖❖❖

[illegible] ಆಧಿಪತ್ಯಕ್ಕೆ ಸೇರಿದ [illegible] ಪಟ್ಟಣದಲ್ಲಿ ಇಂಗ್ಲಿಷ್ ಸೈನಿಕರ ಆಫೀಸ ಬಂಗಲೆಗೆ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟು ಹೋಯಿತು. ಇದರಿಂದ ೫೩,೦೦೦ ರೂಪಾಯಿ ನಷ್ಟವಾಗಿರುವುದು.

❖❖❖❖

ಕಳೆದ ವಾರ ಹಿಂದುಸ್ಥಾನದಲ್ಲಿ ೨,[illegible] ಜನರು ಪ್ಲೇಗ್ ಉಪದ್ರ ತಗಲಿ ಕಾಲವಾದರು. ಈ ಪೈಕಿ ಬೊಂಬಾಯಿನಲ್ಲಿ ೧,೮೯೦ ಮಧ್ಯ ಇಂಡಿಯಾ ೩೬೨, ಸಂಯುಕ್ತ ಆಧಿಪತ್ಯಗಳಲ್ಲಿ ೧೬೩, ಪಂಜಾಬ್ ೧೦೦, ಬಂಗಾಳಾ ೮೩, ಬಿಹಾರದಲ್ಲಿ ೯೦, ಈ ರೀತಿ ಮರಣಗಳಾಗಿವೆ.

❖❖❖❖

ಹಿಂದುಸ್ಥಾನದಲ್ಲೂ ಬರ್ಮಾ ಆಧಿಪತ್ಯದಲ್ಲೂ ಇರುವ ಸಮಸ್ತ ಟೆಲಿಗ್ರಾಫ್ ಇಲಾಖಾ ನೌಕರರೂ ಸೇರಿ ತಮ್ಮ ಸಂಬಳಮುಂತಾದ್ದನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾಯಿಸಿ ಹೆಚ್ಚು ಮಾಡಿಕೊಡಬೇಕೆಂದು ವೈಸರಾಯಿ ಪ್ರಭುಗಳಿಗೆ ಇಷ್ಟರಲ್ಲೇ ಅರಿಕೆ ಮಾಡಿ ಕೇಳಿಕೊಳ್ಳುವವರಾಗಿದ್ದಾರೆ.

❖❖❖❖

ಲಂಡನ್ ಪಟ್ಟಣದಲ್ಲಿ ೨,೦೦೦ ಮಹಮ್ಮದೀಯರಿರುತ್ತಾರೆ. ಇವರೆಲ್ಲಾ ತಮ್ಮ ಹಬ್ಬ ಮುಂತಾದ ದಿನಗಳಲ್ಲಿ ದೇವರ ಪ್ರಾರ್ಥನಾದಿಗಳನ್ನು ಮಾಡುವುದಕ್ಕೆ ಅಲ್ಲಿ ಹೈಡ್ ಪಾರ್ಕ್ ಎಂಬ ಉದ್ಯಾನವನದ ಬಳಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿಕೊಳ್ಳಬೇಕೆಂದು ಗೊತ್ತುಮಾಡಿದ್ದಾರೆ. ಈ ಮಸೀತಿಗೆ ೧೫,೦೦,೦೦೦ ರೂಪಾಯಿ ಖರ್ಚಾಗುವುದು.

❖❖❖❖

ಹಿಂದುಸ್ಥಾನದ ರಾಜಕೀಯ ವಿಷಯಗಳನ್ನು ಇಂಗ್ಲಿಷ್ ಪ್ರಜೆಗಳಿಗೂ ಸರ್ಕಾರಿ ಹುದ್ದೇದಾರರಿಗೂ ತಿಳಿಸಬೇಕೆಂದು ವಿಲಾಯಿತಿಗೆ ಹೋಗಿದ್ದ ಮಿ|| ಜಿ ಕೆ. ಗೋಖಲೆ, ಸಿ. ಐ. ಇ ಯವರು ಕಳೆದ ವಾರ ವಾಪಸು ಬೊಂಬಾಯಿಗೆ ಬಂದು ಇಳಿದರು. ಬೊಂಬಾಯಿನ ಮುಖ್ಯ ದೇಶೀಯ ದೊಡ್ಡ ಮನುಷ್ಯರು ಅವರನ್ನು ಎದುರುಗೊಂಡು ಸನ್ಮಾನಮಾಡಿ ಕರೆದು ತಂದರು.

❖❖❖❖

ಅಹಮುದಾ ನಗರದಲ್ಲಿ ಕ್ಷಾಮಪೀಡಿತರಿಗಾಗಿ ಇಟ್ಟಿರುವ ಅನ್ನಸತ್ರದಲ್ಲಿ ಆರು ಜನ ಬಿಲ್ಲರು ಸೇರಿಕೊಂಡು ಬಹಳ ತೊಂದರೆಪಡಿಸುತ್ತಿದ್ದರು. ಒಬ್ಬ ಪೋಲೀಸಿನವನು ಅವರನ್ನು ಹಿಡಿಯಬೇಕೆಂದು ಪ್ರಯತ್ನಪಟ್ಟಾಗ ಗ್ರಾಮಸ್ಥರೆಲ್ಲಾ ಸೇರಿ ಆ ಪೋಲೀಸಿನವನನ್ನು ಹೊಡೆಯಲಾರಂಭಿಸಿದರು. ಆಗ ಪೋಲೀಸಿನವನು ಬಂದೂಕಿನಿಂದ ಹೊಡೆದು ಇಬ್ಬರನ್ನು ಕೊಂದು ಮಲಗಿಸಿದನು. ಇದು ಆ ಪ್ರಾಂತ್ಯ ಸ್ವಲ್ಪ ಗಲಭೆಯನ್ನುಂಟುಮಾಡಿದೆ.

ಪೂನಾ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಬಹಳ ಕಠಿಣವಾಗಿದೆ. ಪ್ರಜೆಗಳು ತುಂಬಾ ಗಾಬರಿಬಿದ್ದು ಸುತ್ತಮುತ್ತಲಿನ ಗ್ರಾಮಾಂತರಗಳಿಗೂ ಕ್ಯಾಂಪುಗಳಿಗೂ ಹೋಗಿ ಸೇರಿಕೊಂಡರು. ಅನೇಕ ಬೀದಿಗಳಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟವೆ. ಊರು ಹಾಳುಬಿದ್ದಿರುತ್ತದೆ. ಕಳೆದ ವಾರ ಒಂದೇ ದಿನ ೧೫೭ ಜನರಿಗೆ ಹೊಸದಾಗಿ ಉಪದ್ರ ತಗಲಿತೆಂತಲೂ ೧೪೦ ಮರಣಗಳಾದವೆಂತಲೂ ತಿಳಿಯುವುದು. ಆದರೆ ಈ ಸಂಖ್ಯೆಗಳಿಗಿಂತಲೂ ಇನ್ನೂ ಹೆಚ್ಚು ಜನರು ರೋಗದಲ್ಲಿ ಬಿದ್ದುಕೊಂಡಿರುವರೆಂದು ಹೇಳಬಹುದಾಗಿದೆ.

❖❖❖❖

ಉತ್ತರ ದೇಶದಲ್ಲಿ ಕ್ಷಾಮ ಬಾಧೆಯು ಇನ್ನೂ ನಿವಾರಣೆಯಾಗಲಿಲ್ಲ. ಹಿಂದಿನ ವಾರ ಕ್ಷಾಮಪೀಡಿತರ ಸಂಖ್ಯೆ ೧,೨೩,೦೦೦ ಇದ್ದದ್ದು ಕಳೆದ ವಾರ ೧,೩೭,೦೦೦ಕ್ಕೆ ಹೆಚ್ಚಿತು. ಅಲಹಾಬಾದಿನಲ್ಲಿ ೧,೦೦೦ ಜನರು ರಿಲೀಫ್ ಕಾಮಗಾರಿಗಳಲ್ಲೂ ೧,೨೦,೦೦೦ ಜನ ಧರ್ಮದ ಅನ್ನ ಸತ್ರಗಳಲ್ಲೂ ಸೇರಿಕೊಂಡು ಜೀವನ ಮಾಡುತ್ತಿದ್ದರು. ಆಗ್ರಾ ಡಿವಿಷನ್ ಅನ್ನ ಸತ್ರಗಳಲ್ಲಿ ೯,೦೦೦ ಜನರಿದ್ದರು. ಅಜ್ಮೀರ್ ಮೇರ್ವಾರಾಗಳಲ್ಲಿ ೩,೦೦೦ ಜನರೂ, ಬೊಂಬಾಯಿ ಡಿಸ್ಟ್ರಿಕ್ಟುಗಳಲ್ಲಿ ೬,೭೦೦ ಜನರೂ ಕಡಿಮೆಯಾದರು. ಪೂರ್ವ ಬಂಗಾಳಾದಲ್ಲಾದರೋ ೨೯ ಜನರು ರಿಲೀಫ್ ಕಾಮಗಾರಿಗಳಲ್ಲೂ ೧,೬೩೦ ಜನ ಧರ್ಮ ಸತ್ರಗಳಲ್ಲೂ ಸೇರಿಕೊಂಡು ಜೀವನ ಮಾಡುತ್ತಿದ್ದರು.

❖❖❖❖

ಮಕ್ಕಳ ಹಿಂಸಕರನ್ನೂ ಅವರನ್ನು ದುರ್ವ್ಯಾಪಾರಾದಿಗಳಿಗೆ ತರಬೇತು ಮಾಡತಕ್ಕವರನ್ನೂ ಹಿಡಿದು ಶಿಕ್ಷಿಸುವುದಕ್ಕೂ ಅಂಥಾ ಮಕ್ಕಳನ್ನು ಯೋಗ್ಯವಾದ ರೀತಿಯಲ್ಲಿ ಸಾಕಿ ಬೆಳೆಸುವುದಕ್ಕೂ ಕಲ್ಕತ್ತಾ ಪಟ್ಟಣದಲ್ಲಿ ಒಂದು ಪ್ರಜಾ ಸಂಘವಿರುವುದು. ಈಚೆಗೆ ಪೂನಾ ಪಟ್ಟಣದಲ್ಲಿ ಇಂಥಾ ಸಂಘವನ್ನು ಕೆಲವು ಮಹನೀಯರು ಸೇರಿ ಮಾಡಿಕೊಂಡಿದ್ದಾರೆ. ಈ ಸಂಘದವರು ಇದುವರೆಗೆ ೪೦೦—೫೦೦ ಮಕ್ಕಳನ್ನು ದುರ್ವ್ಯಾಪಾರಾದಿಗಳಿಂದ ಬಿಡಿಸಿ ಸಂರಕ್ಷಣೆ ಮಾಡಿರುತ್ತಾರೆ. ಈಗ ಇಂಥಾ ಒಂದು ಸಂಘವನ್ನು ಬೊಂಬಾಯಿ ಪಟ್ಟಣದಲ್ಲೂ ಪ್ರಾರಂಭಮಾಡಬೇಕೆಂದು ಕೆಲವರು ಪ್ರಯತ್ನಪಡುತ್ತಿರುವಂತೆ ಪ್ರಕಟವಾಗಿದೆ.

❖❖❖❖

ಲಾಹೋರ್ ಪಟ್ಟಣದಲ್ಲಿ ಒಂದು ರೂಪಾಯಿನ ವೀಳ್ಯದೆಲೆಗೆ ಮ್ಯುನಿಸಿಪಾಲಿಟಿಯವರು ೨ ಕಾಸು ಸುಂಕ ತೆಗೆದುಕೊಳ್ಳುತ್ತಿದ್ದರು. ಅದರ ಮೇಲೆ ಸುಂಕವನ್ನು ಒಂದಾಣೆಗೆ ಹೆಚ್ಚಿಸಿದರು. ಈಗ ೨೦೦ ಎಲೆಗಳಿರುವ ಕಟ್ಟಿಗೆ ಒಂದಾಣೆ ಸುಂಕ ಕೊಡಬೇಕೆಂದು ಹುಕುಂ ಕೊಟ್ಟಿದ್ದಾರೆ. ಒಂದು ಕಟ್ಟು ಎಲೆಗೆ ಕ್ರಯವೇ ಒಂದಾಣೆಯಾಗಿರುವಲ್ಲಿ ಇದರ ಮೇಲೆ ಒಂದಾಣೆ ಸುಂಕ ಹಾಕುವುದು ಬಡವರಿಗೆ ತುಂಬಾ ಕಷ್ಟವಾಗುತ್ತೆಂದು ಜನರೂ ವರ್ತಕರೂ ಗೋಳಾಡುತ್ತಿದ್ದಾರೆ. ಈಗ ವೀಳ್ಯದೆಲೆ ಮಾರುವ ವರ್ತಕರೆಲ್ಲಾ ಅಂಗಡಿ ಹಾಕಿಕೊಂಡಿದ್ದಾರೆ. ಎಲೆ ಸಿಕ್ಕುವುದಿಲ್ಲವಾದ್ದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ.

❖❖❖❖

ಕಳೆದ ೧೯೦೫ನೇ ಜೂನ್ ೬ರಲ್ಲಿ ಬ್ರೆಸೆಲ್ಸ್ ಪಟ್ಟಣದಿಂದ ನಾಲ್ವರು ಫ್ರೆಂಚರೂ ಲಂಡನ್ ಪಟ್ಟಣದಿಂದ ನಾಲ್ವರು ಇಂಗ್ಲೀಷರೂ ಕಾಲ್ನಡಿಗೆಯಲ್ಲೇ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರುತ್ತೇವೆಂದು ಪಂಜು ಕಟ್ಟಿ ಹೊರಟರು. ಈ ಎಂಟು ಜನರ ಪೈಕಿ ಹೆನ್ರಿ ಮಾಸರ್ ಎಂಬುವನೊಬ್ಬನೇ ಕಳೆದ ವಾರ ರಂಗೂನ್ ಪಟ್ಟಣಕ್ಕೆ ಬಂದನು. ಇವನು ತನ್ನ ಸಹಪಾಠಿಗಳ ದುಃಖಕರವಾದ ಚರಿತ್ರೆಯನ್ನು ವಿವರಿಸಿದನು. ಆ ಸಹಪಾಠಿಗಳಲ್ಲಿ ಇಬ್ಬರನ್ನು ಆಫ್ರಿಕಾದಲ್ಲಿ ಕೊಂದುಹಾಕಿದರು, ಆಸ್ಟ್ರೇಲಿಯಾದಲ್ಲಿ ಇಬ್ಬರು ಎಲ್ಲಿಯೋ ತಪ್ಪಿಸಿಕೊಂಡು ಹೋಗಿಬಿಟ್ಟರು, ಒಬ್ಬನು ಟರ್ಕಿ ರಾಜಧಾನಿಯಲ್ಲಿ ಕಾಲವಾದನು.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಪ್ರಿಯನಾಥ ಆಗ್ನಿ, ಜಗೇಶ್ವರ ಮನ್ನಾ ಎಂಬಿಬ್ಬರು ಬಂಗಾಳಿಗಳು ಹತ್ತು ರೂಪಾಯಿನ ಒಂದು ನೋಟನ್ನು ಅಂಗಡಿಯಲ್ಲಿ ಮುರಿಸುವುದಕ್ಕೆ ಕೊಟ್ಟರು. ವರ್ತಕನಿಗೆ ಅದನ್ನು ನೋಡಿ ಅನುಮಾನ ಬಂದು ಪೋಲೀಸಿಗೆ ಹೇಳಿದನು. ಪೋಲೀಸಿನವರು ಅವರಿಬ್ಬರನ್ನೂ ಹಿಡಿದು ಶೋಧನ ಮಾಡಿದರು. ಅವರ ಹತ್ತಿರ ಹತ್ತು ರೂಪಾಯಿನ ಖೋಟಾ ಇಪ್ಪತ್ತು ನೋಟುಗಳು ಸಿಕ್ಕಿದವು. ಇವೆಲ್ಲಾ ಅವರು ಸೃಷ್ಟನೆ ಮಾಡಿದವುಗಳೆಂದು ಗೊತ್ತಾಯಿತು. ಅವರ ಮನೆಯನ್ನು ಶೋಧನೆ ಮಾಡಿದಾಗ ನೋಟುಗಳನ್ನು ತಯಾರು ಮಾಡುವುದಕ್ಕೆ ಅವರು ಮಾಡಿಟ್ಟುಕೊಂಡಿದ್ದ ನಾನಾ ಪದಾರ್ಥಗಳು ಸಿಕ್ಕಿದವು. ಇವರನ್ನು ಈಗ ಸೆಷನ್ ವಿಚಾರಣೆಗೆ ಗುರಿಮಾಡಿದ್ದಾರೆ.

❖❖❖❖

ವಿದ್ಯೆಯ ವಿಷಯವಾಗಿ ಮಿ|| ಅರುಂಡೇಲ್‌ರವರು ಕಾಶಿಪುರದಲ್ಲಿ ಉಪನ್ಯಾಸಮಾಡುತ್ತಾ ಹೇಳಿದ ಅಭಿಪ್ರಾಯವೇನೆಂದರೆ—ವಿದ್ಯೆ ಕಲಿಸುವ ಭಾರ ಸರ್ಕಾರಕ್ಕೆ ಸೇರಿದ್ದಲ್ಲ, ತಂದೆತಾಯಿಗಳ ಕರ್ತವ್ಯವಾಗಿರುತ್ತದೆ. ಈ ಭರತಖಂಡದ ಜನರು ದೇಶಸ್ಥರಾಗಬೇಕಾದರೆ ಎಲ್ಲರೂ ವಿದ್ಯೆ ಕಲಿಯಬೇಕು, ಜನಗಳಲ್ಲಿ ತರಬೇತಾಗಬೇಕು. ಏಕಮತ, ಏಕಭಾವನೆ, ಏಕಲಿಪಿ, ಇವು ಬಹು ಅವಶ್ಯವಾಗಿರುವವು. ಸಮಸ್ತ ಸ್ತ್ರೀಯರೂ ವಿದ್ಯಾವತಿಯರಾಗಬೇಕು. ಇಷ್ಟೆಲ್ಲಾ ಆದ ಹೊರತು ಹಿಂದುಸ್ಥಾನವು ಅಭಿವೃದ್ಧಿ ಹೊಂದಲಾರದು. ಸಕಲ ಪ್ರಜೆಗಳೂ ಸಮಸ್ತ ಜಾತಿ ಕುಲಗೋತ್ರಗಳವರೂ ಏಕೀಭವಿಸಿ ಈ ಪರಮ ಶ್ರೇಷ್ಠವಾದ ಕಾರ್ಯಗಳನ್ನು ಮಾಡಲುದ್ಯುಕ್ತರಾಗಲಿ ಎಂಬುದೇ.

❖❖❖❖

ಬೊಂಬಾಯಿ ಪಟ್ಟಣದ ಮಾಂಟ್ವಿಯಲ್ಲಿ ಧರ್ಮಾತ್ಮರು ಸೇರಿ ಕುಷ್ಠರೋಗಿಗಳನ್ನು ಒಂದು ಪ್ರತ್ಯೇಕವಾದ ಆಲಯದಲ್ಲಿಟ್ಟು ಸಂರಕ್ಷಣೆ ಮಾಡುತ್ತಿದ್ದಾರೆ. ಈ ಆಲಯದ ಸೌಕರ್ಯಗಳನ್ನು ಕೇಳಿ ಹಿಂದುಸ್ಥಾನದ ಇತರ ಕಡೆಗಳಿಂದಲೂ ಅಫ್ಘಾನಿಸ್ಥಾನ ಮತ್ತು ಬಲೂಚಿಸ್ಥಾನಗಳಿಂದಲೂ ಕುಷ್ಠರೋಗಿಗಳು ಬೊಂಬಾಯಿಗೆ ಬಂದು ಬೀದಿ ಬೀದಿಗಳಲ್ಲಿ ಅಲೆಯುತ್ತಲೂ ಕೆಲವು ಅಂಗಡಿಗಳಲ್ಲಿ ಸೇವಾವೃತ್ತಿ ಮಾಡುತ್ತಾ ತಿಂಡಿ ಪದಾರ್ಥಗಳನ್ನು ವಿಕ್ರಯ ಮಾಡುತ್ತಾ ಇದ್ದಾರೆ. ಇವರೆಲ್ಲರನ್ನೂ ಆ ರೋಗಿಗಳ ಆಲಯದಲ್ಲಿಡುವುದಕ್ಕೆ ಅಲ್ಲಿ ಸ್ಥಳಸಂಕೋಚ

ವಾಗಿರುವುದು ಮ್ಯುನಿಸಿಪಾಲಿಟಿಯವರು ಇವರಿಗೆ ಇನ್ಯಾವ ಏರ್ಪಾಡು ಮಾಡಬಹುದೆಂದು ಯೋಚಿಸುತ್ತಿರುವರು ಕುಷ್ಟರೋಗವು ಸಾಂಕ್ರಾಮಿಕವಾದ ಕಾರಣ ಆ ರೋಗಿಗಳನ್ನು ಇತರರ ಸಂಗಡ ಸಂಪರ್ಕ ಮಾಡದಂತೆ ಪ್ರತ್ಯೇಕಿಸಿ ಇಡಬೇಕಾದದ್ದು ಬಹಳ ಅವಶ್ಯವಾಗಿರುತ್ತದೆ.

****

ಚಾಂಬಾ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದವರು ಹೆಣ ತಿನ್ನುವ ಒಬ್ಬ ಫಕೀರನನ್ನು ಹಿಡಿದು ದರ್ಯಾಫ್ತು ಮಾಡುತ್ತಿದ್ದಾರೆ ಒಂದು ಗ್ರಾಮದಲ್ಲಿ ಒಬ್ಬ ಹೆಂಗಸು ಕಾಲವಾದಳು ಅವಳ ಸಂಬಂಧಿಗಳು ಶವವನ್ನು ಸ್ಮಶಾನಕ್ಕೆ ಸಾಗಿಸಿ ಚಿತೆಯ ಮೇಲಿಟ್ಟು ಬೆಂಕಿಹಾಕಿ ಸ್ವಲ್ಪ ದೂರದಲ್ಲಿ ಸೋಗಿ ಕುಳಿತುಕೊಂಡು ಉರಿಯನ್ನು ನೋಡುತ್ತಿದ್ದರು ಸ್ವಲ್ಪ ಹೊತ್ತಿನಲ್ಲಿ ಉರಿಯು ಚೆನ್ನಾಗಿ ಹತ್ತಲಿಲ್ಲವೆಂದು ತಿಳಿಯಿತು ಆ ಸ್ಥಳಕ್ಕೆ ಒಬ್ಬನು ಕಾಡ... ಚೆನ್ನಾಗಿ ಉರಿ ಹಾಕಬೇಕೆಂದು ಚಿತೆಯ ಬಳಿಗೆ ಹೋಗಿ ನೋಡುವಲ್ಲಿ ಒಬ್ಬ ಫಕೀರನು ಆ ಚಿತೆಯ ಹತ್ತಿರ ಕುಳಿತುಕೊಂಡು ಆ ಶವದಿಂದ ಮಾಂಸವನ್ನು ಕತ್ತರಿಸಿ ತನ್ನ ಬಳಿಯಲ್ಲಿಟ್ಟುಕೊಂಡು ತಿನ್ನುತ್ತಿದ್ದದ್ದನ್ನು ನೋಡಿ ಗಾಬರಿಬಿದ್ದನು ಆಗ ಇತರರೂ ಸೇರಿ ಹೋಗಿ ಆ ಫಕೀರನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು. ಫಕೀರನ ಹತ್ತಿರ ಒಂದು ಬಟ್ಟೆ ಗಂಟಿನಲ್ಲಿ ಇನ್ನೂ ಮಾಂಸದ ತುಂಡುಗಳು ಸಿಕ್ಕಿದವು.

****

ಮಹಮ್ಮದೀಯರಿಗೆ ಹಿಂದುಸ್ಥಾನದಿಂದ ಯಾತ್ರೆ ಹೋಗಿ ಬರಬೇಕೆಂಬ ಯಾತ್ರಿಕರನ್ನು ಬೊಂಬಾಯಿನಲ್ಲಿ ಜಹಜು ಹತ್ತುವುದಕ್ಕೆ ಮೊದಲು ಹತ್ತು ದಿನಗಳ ತನಕ ತಡೆದು ಸಗ್ರೀಗೇಷನ್ ಕ್ಯಾಂಪುಗಳಲ್ಲಿ ಇಡುತ್ತಿದ್ದರು ಇದನ್ನು ಬದಲಾಯಿಸಬೇಕೆಂದು ಕಾಗದ ಮಾಡಿದೆ ಎಂದು ಕೇಳಿದ ಕಾರ ಹುಕುಂ ಮಾಡಿದರು ಈಗ ಹುಕುಂ ಕೊಟ್ಟಿರುವುದೇನೆಂದರೆ—ಮಹಮ್ಮದೀಯ ಯಾತ್ರಾರ್ಥಿಗಳನ್ನು ಬೊಂಬಾಯಿನಲ್ಲಿ ಒಂದು ದಿನವಾದರೂ ತಡೆಯಕೂಡದು ಅವರು ಪ್ರಯಾಣ ಮಾಡಬೇಕಾಗಿರುವ ಜಹಜಿನಲ್ಲಿ ಇಲಿ ಹೆಗ್ಗಣಗಳನ್ನೆಲ್ಲಾ ಸಂಪೂರ್ಣವಾಗಿ ಕೊಂದುಹಾಕಿ ಬಹಳ ತೃಪ್ತಿಕರವಾಗಿ ಶುದ್ಧಿ ಮಾಡಬೇಕು ಯಾತ್ರಾರ್ಥಿಗಳ ಬಟ್ಟೆ ಬರೆಗಳನ್ನು ಪರಿಪೂರ್ಣವಾಗಿ ಡಿಸ್ಇನ್‌ಫೆಕ್ಟ್ (ಶುದ್ಧಿ) ಮಾಡಬೇಕು ಬೊಂಬಾಯಿನಿಂದ ಹೊರಟ ಜಹಜನ್ನು ಏಡೆ ಪಟ್ಟಣದಲ್ಲಿ ಪೆರಿಂ ನಗರದಲ್ಲೂ ಡಾಕ್ಟರುಗಳು ಪರೀಕ್ಷೆ ಮಾಡಬೇಕು ಈ ಏರ್ಪಾಡು ಸಮಸ್ತ ಮಹಮ್ಮದೀಯರಿಗೂ ಸಂತೋಷವನ್ನುಂಟುಮಾಡುತ್ತದೆನ್ನುವುದಕ್ಕೆ ಸಂಶಯವಿಲ್ಲ.

****

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಹಿಂದುವಿನ ಮನೆಯೊಳಗೆ ವಿಚಿತ್ರ) ವಾದ ಸ್ತ್ರೀ ಹಿಂಸೆ ನಡೆಯಿತು ಆ ಮನೆಯಲ್ಲಿ ಸೊಸೆಗೆ ಕಾಲಿಗೆ ಬೇಡಿ ಹಾಕಿದ್ದರು. ಮಾವನು ರೊಟ್ಟಿ ಸುಟ್ಟು ಕೊಡೆಂದು ಸೊಸೆಗೆ ಆಜ್ಞೆ ಮಾಡಿದನು. ಸೊಸೆಯಾದವಳು ನಿದ್ದೆಗಣ್ಣಿನಲ್ಲಿ ರೊಟ್ಟಿಯನ್ನು ಸೀಸಿಬಿಟ್ಟಳು ೧೦ ವರುಷದ ಅವಳ ಮೈದುನನು ನೋಡಿ ಕೋಪಿಸಿಕೊಂಡು ಹೋಗಿ ತಂದೆಯ ಕೂಡ ಹೇಳಿದನು ಮಾವನು ಕೂಡಲೇ ರೇಗಿದವನಾಗಿ ಅವಳಿಗೆ ಬರೆ ಹಾಕೆಂದು ಆ ಹುಡುಗನಿಗೆ ಆಜ್ಞೆಯನ್ನಿತ್ತನು. ಅವನು ಸೌಟನ್ನು ಚೆನ್ನಾಗಿ ಕಾಯಿಸಿ ಬರೆಹಾಕಿದನು ಆಗ ಆಳು ತನ್ನ ತಾಯಿಗೆ ಹೋಗಿ ಹೇಳಿಕೊಂಡಳು ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಪೋಲೀಸಿನವರಿಗೆ ವರ್ತಮಾನ ತಿಳಿದಾಗ ಅವರು ಆ ಹುಡುಗನ ಮೇಲೂ ತಂದೆಯ ಮೇಲೂ ಫಿರ್ಯಾದು ತಂದರು. ಆದರೆ ವಿಚಾರಣೆಯಲ್ಲಿ ಆ ಹುಡುಗಿ ಹೋಗಿ ಇನ್ಯಾರೋ ಕಾರಣದಿಂದ ತನಗೆ ಗಾಯವಾಯಿತೆಂದು ಹೇಳಿದ್ದರಿಂದ ಮ್ಯಾಜಿಸ್ಟ್ರೇಟರು ತುಂಬಾ ಅನುಮಾನ ಪಟ್ಟು ಮೊಕದ್ದಮೆಯನ್ನು ವಜಾ ಮಾಡಬೇಕಾಯಿತು

****

ಬರೋಡಾ ಸಂಸ್ಥಾನದ ರಾಜಧಾನಿಗೆ ಹೋಗಿ ತಾನು ಜೋಧಪುರದ ಮಹಾರಾಜನೆಂದು ಹೇಳಿಕೊಂಡು ಸಕಲ ಸನ್ಮಾನಗಳನ್ನೂ ಹೊಂದಿದ ಮೋಸಗಾರನನ್ನು ಸೆಷನ್ಸ್ ಜಡ್ಜರು ದರ್ಯಾಫ್ತು ಮಾಡುವವರಾಗಿದ್ದಾರೆ ಇವನು ಕೋರ್ಟಿನಲ್ಲಿ ಹೇಳಿದ ವಾಙ್ಮೂಲದಲ್ಲಿ ಅವನು ಸೀಯೋರ್ ಎಂಬ ಊರಿನ ರಜಪುತ್ರರವನು; ಅವನಿಗೆ ೨೦ ವರುಷ ವಯಸ್ಸಾಗಿದೆ. ಇದುವರೆಗೆ ಯಾವಾಗಲೂ ಜೈಲಿಗೆ ಹೋದದ್ದಿಲ್ಲ. ತಾನಿದ್ದ ಅಮಲೇರಿದ್ದಾಗ ಬರೋಡೆಗೆ ಹೋದೆನೆಂತಲೂ, ತಾನು ಏನುಮಾಡಿದೆನೋ ಅನ್ನೇ ಸ್ಮೃತಿಯಿಲ್ಲವೆಂತಲೂ, ತಾನು ರೈಲಿಗೆ ಹೋಗಿದ್ದು ಕಳೆದ ಮಾರ್ಚಿ ೨೦ ರಲ್ಲಿ ಬೊಂಬಾಯಿಗೆ ಬಂದಿಳಿದನೆಂತಲೂ, ಇದರ ನಿಜಸ್ಥಿತಿಯನ್ನು ಆ ಜಹಜಿನ ಅಧಿಕಾರಿಯನ್ನೂ ತನ್ನ ತಾಯಿಯನ್ನೂ ಕೇಳಿದರೆ ಗೊತ್ತಾಗುವುದೆಂತಲೂ ಹೇಳಿದನು ಆದರೆ ಇತರ ಕಡೆಗಳಿಂದ ಇವನಿಗೆ ಇದುವರೆಗೆ ನಾಲ್ಕಾವರ್ತಿ ಜೈಲ್ ವಾಸ ದೊರಕಿತ್ತೆಂದು ತಿಳಿದುಬಂದ ಕಾರಣ ಮ್ಯಾಜಿಸ್ಟ್ರೇಟರು ಅವನಿಗೆ ಹೆಚ್ಚು ಶಿಕ್ಷೆಯಾಗಬೇಕಾಗಿದೆ ಎಂದು ಹೇಳಿ ಮೊಕದ್ದಮೆಯನ್ನು ಸೆಷನ್ಸ್ ಕೋರ್ಟಿಗೆ ಕಳುಹಿಸಿದಾರೆ.

ಪೈಲುವಾನರ ಸಾಹಸ

[ಬರೆಹ ಬಂದದ್ದು.]

ತಾ. ೧೯ ನೇ ಬುಧವಾರ ಹೊಸಮಠದ ತಾಲ್ಲೂಕು ಬೆಳಗೂರು ಪೇಟೆ ಮಠೀತಿಯ ಮುಂಭಾಗದ ಚೌಕದಲ್ಲಿ ಧಾರವಾಡ ಕಡೆಯ ಪೈಲ್‌ವಾನರು—ದೊಡ್ಡವರು ಆರು ಜನ, ಚಿಕ್ಕ ಹುಡುಗರು ನಾಲ್ವರು, ಆಟವನ್ನು ಶುರುಮಾಡಿ, ಮುಂಚಿತವಾಗಿ ನಾಲ್ಕು ಹುಡುಗರೂ ಲಾಗ, ಗಟಗಂ, ಕುಸ್ತಿ, ಅಂತರಿಕ್ಷ ಪಟರ್ ಹಿಂಗಾಣ ಮುಂಗಾಣ ಮೊದಲಾದವನ್ನು ಆಶ್ಚರ್ಯಕರವಾಗಿ ತೋರಿಸಿದರು. ದೊಡ್ಡ ಪೈಲ್‌ವಾನರು ಒಟ್ಟೊಟ್ಟಿಗೆ ಲಾಗ ಮುಂತಾದ ಸಾಹಸ ಚಮತ್ಕಾರಗಳನ್ನು ತೋರಿಸುತ್ತಾ, ಒಬ್ಬರಿಗಿಂತಲೂ ಮತ್ತೊಬ್ಬರು ಹೆಚ್ಚು ಹೆಚ್ಚಾದ ಚಮತ್ಕಾರಗಳನ್ನು ತೋರಿಸಿದರು. ಇವರಲ್ಲಿ ಪೈಲ್‌ವಾನ್ ಹುಸೇನ ಎಂಬುವನು ಕಾಸಿಗೆಯ ಮೇಲೆ ವಿಚಿತ್ರಾವಹವಾದ ಸಾಹಸಗಳನ್ನು ತೋರಿಸಿ ಸಂತಾಪ ತನ್ನ ಮೈಗಲ್ಲಾ ಕತ್ತಿ ಚೂರಿಗಳನ್ನು ಕಟ್ಟಿಕೊಂಡು ಲಾಗ ಹಾಕಿದನು ಕೆಲವು ತೆಂಗಿನ ಕಾಯಿಗಳನ್ನು ತಕ್ಕೊಂಡು ಒಂದಾದ ಮೇಲೊಂದರಂತೆ ಮೇಲಕ್ಕೆ ಎಸೆಯುತ್ತಾ, ಮೇಲಿನಿಂದ ಬೀಳುವ ಕಾಯಿಗಳಿಗೆ ತನ್ನ ತಲೆಯನ್ನೊಡ್ಡುತ್ತಾ, ಕಾಯಿಯನ್ನು ಚೂರು ಚೂರಾಗಿ ಮಾಡಿದನು. ಒಬ್ಬ ಹುಡುಗನನ್ನು ಮಲಗಿಸಿ ಆತನ ಹೊಟ್ಟೆಯ ಮೇಲೆ ಒಂದರ ಮೇಲೆ ಮತ್ತೊಂದರಂತೆ ನಿಂಬೆ ಹಣ್ಣುಗಳನ್ನಿಟ್ಟು ಹರಿತವಾದ ಕತ್ತಿಯಿಂದ ಎತ್ತಿ ಹೊಡೆದಾಗ ಎಲೆಗಳೆಲ್ಲಾ ಎರಡು ತುಂಡಾದವೇ ಹೊರತು ದೇಹಕ್ಕೆ ಗಾಯಕಾಣಲಿಲ್ಲ ಮತ್ತು ದಪ್ಪದಪ್ಪವಾದ ಕೆಲವು ಕಲ್ಲುಗಳನ್ನು ತಂದು ಪೈಲ್‌ವಾನ್ ಹುಸೇನನ ಎದೆಯ ಮೇಲೆ ಒಂದಾಗಿ ಇಟ್ಟು ಚಮಟಿಗೆಯಿಂದ ಕಲ್ಲುಗಳನ್ನು ಚೂರು ಚೂರು ಮಾಡಿದರು. ಆತನು ತಲೆಯ ಮೇಲೆ ಒಂದು ಬಿಳೀ ವಸ್ತ್ರ ಮಾತ್ರ ಹಾಕಿಕೊಂಡು ಕೂತಿದ್ದನಾದ್ದರಿಂದ ಇದು ಕಾಣ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಮತ್ತು ಸುಮಾರು ಎಂಟು ಜನಗಳ ನರಿಗೂ ಸೇರಿ ಒಂದು ಭಾರಿ ಈಚಲ ತೊಲೆಯನ್ನು ತಂದು ಪೈಲ್‌ವಾನ್ ಹುಸೇನ್ ಎಂಬುವನ ಬೆನ್ನಿನ ಮೇಲೆ ಇಟ್ಟರು. ಆತನು ಅದನ್ನು ಹಿಂದುಮುಂದಾಗಿ ಕೈಗಳಿಂದ ಅವಚಿಕೊಂಡು ನಾಲ್ಕಾರು ಮಾರು ದೂರದಷ್ಟಕ್ಕೆ ಓಡಿ ಬಂದು ಒಂದು ಸಣ್ಣ ಗುಂಡಿಯ ಮೇಲೆ ಆ ತೊಲೆಯೊಂದಿಗೆ ಲಾಗ ಹಾಕಿದ್ದನ್ನು ನೋಡಿದಾಗ ಪರಮಾಶ್ಚರ್ಯವನ್ನುಂಟುಮಾಡುತ್ತಿತ್ತು. ದೊಡ್ಡ ಮನುಷ್ಯರನೇಕರು ಪೈಲ್‌ವಾನ್‌ರಿಗೆ ಕೋಟು, ಬನೀನು, ರೇಷ್ಮೆ ವಸ್ತ್ರ, ಪಂಚೆ, ಶಾಲ್, ಮೊದಲಾದವುಗಳನ್ನು ಎಸೆದರು. ಕೆಲವರು ರೊಕ್ಕಾ ಎಸೆದರು ಆತನಿಗೆ ಸುಮಾರು ೭—೮ ರೂಪಾಯಿಗಳ ಫಾಯಿದೆಯು ಕಂಡು ಬಂದು, "ಜೋಡೆತ್ತು ಕಟ್ಟಿ ೩ ಕರ್ಮಾ ಗಾಡಿಗಳನ್ನು ಹೊಡಿಸಿದರು ವಿಚಿತ್ರ ಸಾಹಸವನ್ನು ತೋರಿಸುತ್ತೇವೆ" ಎಂದನು. ಆ ಕ್ಷಣವೇ ಜನರು ೩ ಕರ್ಮಾನು ಗಾಡಿಗಳನ್ನು ತರಿಸಿ ಕೊಟ್ಟರು. ಈ ಗಾಡಿಗಳನ್ನು ಒಂದರ ಹಿಂದೆ ಒಂದರಂತೆ ಜೈಂಟಾಗಿ ಕಟ್ಟಿ ರೈಲ್ ಗಾಡಿಯಂತೆ ಸಾಲಾಗಿ ಗಂಟು ಹಾಕಿ ಆ ಸುತ್ತಲಿದ್ದ ಹುಡುಗರನ್ನೆಲ್ಲಾ ಆ ಗಾಡಿಗಳ ಒಳಕ್ಕೆ ಹೋಗುವಂತೆ ಹೇಳಿದರು. ಪ್ರತಿ ಒಂದು ಗಾಡಿಯೂ ಸುಮಾರು ೧೦ ಹುಡುಗರಂತೆ ಗಾಡಿಗಳಲ್ಲಾ ಭರ್ತಿಯಾದವು ಮುಂದಿನ ಗಾಡಿಯ ಮೂಕಿಯ ತುದಿಗೆ ಒಂದು ಮಾರುದ್ದ ಹಗ್ಗವನ್ನು ಕಟ್ಟಿ, ಮತ್ತೊಂದು ತುದಿಯನ್ನು ಮೇಲ್ಕಂಡ ಪೈಲ್‌ವಾನ್ ಹುಸೇನ್ ಎಂಬುವನ ತಂದಾದ ಜುಟ್ಟು ಕೂದಲಿಗೆ ಕಟ್ಟಿ ಮೈಕಾತಿಯನ್ನು ಎತ್ತಿ ನಿಲ್ಲಿಸಿದರು ಹುಡುಗರಿಂದ ಭರ್ತಿಯಾಗಿದ್ದ ಐದು ಗಾಡಿಗಳನ್ನು ಆವನು ತನ್ನ ಕೈಯಿಂದ ಕೂಡಾ ಹಿಡಿದುಕೊಳ್ಳದೆ ಕೈ ಬೀಸಿಕೊಂಡು ಗಾಡಿಗಳನ್ನೆಲ್ಲಾ ತನ್ನ ಜುಟ್ಟಿನಿಂದಲೇ ಎಳೆದುಕೊಂಡು ಸುಮಾರು ೩೦ ಗಜದ ದೂರಕ್ಕೆ ತಂದು ನಿಲ್ಲಿಸಿದ ಅತಿ ಆಶ್ಚರ್ಯವನ್ನು ಕಂಡ ಕೂಡಲೇ ಜನಗಳೆಲ್ಲಾ ಹಸ್ತತಾಡನೆಯಿಂದ ಒಬ್ಬ ಮಾರಿ ಘಲ್ ಎಂದು ನಕ್ಕರು ಆ ಕ್ಷಣವೇ ಆತ ಜುಟ್ಟಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ಹುಡುಗರನ್ನೆಲ್ಲಾ ಎತ್ತಿಕೆಯಿಂದ ಇಳಿಸುವಾಗ ಸುಮಾರು ೫೦ ರೂಪಾಯಿಗಳವರೆಗೂ ಆತನಿಗೆ... ಈ ಸಾಹಸವನ್ನು ನೋಡಿದ ಕೂಡಲೆ ಪುನಹಾ ಬಹಳ ಜನರು ಬಟ್ಟೆ ಬರೆಗಳನ್ನು ರೊಕ್ಕವನ್ನೂ ಇನಾಮ ಕೊಟ್ಟರು. ಇಂಥಾ ಸಾಹಸ ಚಮತ್ಕಾರದ ಸಾಮುಗಳನ್ನು ಯಾವಾಗಲೂ ಕಂಡಿರಲಿಲ್ಲವೆಂದು ಪ್ರತಿಯೊಬ್ಬರೂ ಹೊಗಳುತ್ತಿದ್ದರು. ಇಂಥಾ ಸಾಹಸಿಗಳನ್ನು ಹೊರತಾಗಿ ಸಾಧ್ಯವೇ ಎಂಬುದು ನಮ್ಮ ಮೈಸೂರು ದೇಶದಲ್ಲಿ ಇಂಥಾ ಸಾಹಸಿಗಳು ಇರಲಾರರೆಂದು ನಾವು ದೃಢವಾಗಿ ನಂಬುವೆವು

ಇನ್ನೊಬ್ಬ ಪೈಲ್‌ವಾನನು ಮುಂಚಿತವಾಗಿಯೇ ನಿಲ್ಲಿಸಿದ್ದ ಭಾರಿ ಕಂಭದ ಮೇಲೆ ತೋರಿಸಿದ ಲಾಗ ಮೊದಲಾದ ಸಾಹಸ ಚಮತ್ಕಾರಗಳು ಒಂದಕ್ಕಿಂತಲೂ ಒಂದು ಸ್ತೋತ್ರಾರ್ಹವಾಗಿದ್ದವು ಇವರು ತೋರಿಸಿದ ಚಿಕೆಳ ಸಾಮುಗಳು ಮುಗಿದ ನಂತರ ಇವರಿಗೆ ಬಹು ಜನರಿಂದ ಬಹುಮಾನಗಳು ಕೊಡಲ್ಪಟ್ಟವು ಇವರು ತೋರಿಸಿದ ಕೆಲವು ಸಾಮುಗಳು ಇದು ವರಿವಿಗೂ ಯಾರಿಂದಲೂ ತೋರಿಸಲ್ಪಟ್ಟಿಲ್ಲ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರು ಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ.

ತರೀಕೆರೆ ತಾಲ್ಲೂಕು ಅಜ್ಜಂಪುರದ ಪೋಸ್ಟ್‌ಮಾಸ್ಟರು ವರ್ತಕರಿಗೆ ಬರುವ ಕಾಗದಗಳನ್ನು ಅವರೇ ಬಂದು ಕೇಳಿದರೆ ಕೊಡದೆ ಜವಾನರ ಮೂಲಕವೇ ಕಳಿಸಿ ಪಾವತಿಗೆ ಸುಸ್ತಿ ಮಾಡುತ್ತಾರೆಂದು ಒಂದು ಬಾತ್ಮಿ ಬಂದಿದೆ ಇಂಥಾ ಆಕ್ಷೇಪಣೆಯನ್ನು ಬಾತ್ಮಿದಾರರು ಅಂಚೆ ಇಲಾಖೆಯ ಇನ್ಸ್‌ಪೆಕ್ಟರಿಗೆ ಬರೆದುಕೊಂಡರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ—ಎಡಿ

ಕರೆಸ್ಪಾಂಡೆನ್ಸ್.

ರಿಕಾರ್ಡುಗಳ ವಿಲೆಯೂ ಕಿಬ್ಬಂದಿಯೂ.

ಅಯ್ಯಾ,

ಹೊಸಕೋಟೆ ರಿಕಾರ್ಡಿನಲ್ಲಿ ನಾನು ಒಂದು ದಾಖಲೆಗೋಸ್ಕರ ಹೋಗಿ ಕೇಳಿದೆನು. ೫—೬ ತಿಂಗಳಿಂದಲೂ ದಾಖಲೆ ದೊರೆಯಲಿಲ್ಲ. ಕಾರಣ ವಿಚಾರಿಸುವಲ್ಲಿ ನಿವೃತ್ತರು ಹೇಳಿದ ಸಂಗತಿ ಏನೆಂದರೆ— ರಿಕಾರ್ಡು ಹೊಸ ರೂಲ್ಸು ಮೇರೆಗೆ ಸಾರ್ಟಿಂಗು ಮತ್ತು ವೇಸ್ಟು ಬೆರಿಸುವುದಕ್ಕೆ ಹಂಗಾಮಿ ಕಿಬ್ಬಂದಿಗಳನ್ನು ಇಟ್ಟು, ವಿಧಾನವಿಲ್ಲದೆ ತಾಯಿದೆಯಲ್ಲಿ ಕೆಲಸಗಳು ಪೂರೈಸದೆ ಬಾಕೀಲಿ ಇರುತ್ತೆ ಇದುವರಿವಿಗೂ ಎ. ಬಿ ಸಬ್ಜೆಕ್ಟು ಮೇರೆಗೆ ಕೆಲವು ತಾಲ್ಲೂಕುಗಳಲ್ಲಿ ರಿಜಿಸ್ಟರುಗಳಲ್ಲಿ ಬರೆದು ನಾಶಮಾಡಿಸುವುದರಲ್ಲಿ ಇದಾರೆ. ಎ ಬಿ. ರಿಜಿಸ್ಟರುಗಳಲ್ಲಿ ದಾಖಲಾಗತಕ್ಕ ಕಾಗದಗಳು ೫—೬ ವರುಷಕಾಲ ಹಂಗಾಮಿ ಕಿಬ್ಬಂದಿಯನ್ನಿಟ್ಟು ಕೆಲಸ ಮಾಡಿಸಿದರೂ ಪೂರೈಸುವ ಹಾಗೆ ಕಾಣುವದಿಲ್ಲ ಹಂಗಾಮಿ ಕಿಬ್ಬಂದಿ ಇಡುವುದಕ್ಕಿಂತ ಒಂದು ಆರ್ಡರ್ ಕೀಪರ್ ಇಸಮನ್ನು ಖಾಯಂ ಇಟ್ಟು, ಖಾಯಂ ಆಗಿ ಇರುವ ಗಸ್ತರುಗಳಿಂದ ರಿಕಾರ್ಡ್ ಕೆಲಸಗಳಿಗೆ ಇರತಕ್ಕ ಬಿ.ಪಿ ಒನ್ನು ಸ್ವಲ್ಪ ಹೆಚ್ಚಿಸಿದಲ್ಲಿ ಎಲ್ಲಾ ಕೆಲಸಗಳೂ ಸರಿಯಾಗಿಯೂ ಗ್ರುತೆಯಾಗಿಯೂ ನಡೆಯುವದಲ್ಲದೆ, ಕೇಳಿದ ದಾಖಲೆ ದೊರೆಯುವುದೆಂದು ಹೇಳುತ್ತಾರೆ ಸರ್ಕಾರದವರು ರೂಲ್ಸು ಮಾತ್ರ ಹೆಚ್ಚಿಸಿ ಕರಣವನ್ನು ಮಾತ್ರ ಹೆಚ್ಚು ನೇಮಕ ಮಾಡದೆ ಕೆಲಸಗಳು ಬಿದ್ದು ಬಂದು ನನ್ನಂಥವರಿಗೂ ಬಡಬಗ್ಗರಿಗೂ ದಾಖಲೆಗಳು ದೊರೆಯದಂತೆ ಆಗುತ್ತಾರೆ ಆದ್ದರಿಂದ ಸರ್ಕಾರದವರು ಮೇಲ್ಕಂಡಂತೆ ನೌಕರರು ಮಾಡಿಸಿ ರೂಲ್ಸು ಮೇರೆಗೆ ಕೆಲಸಗಳು ಪೂರೈಸಿ ಬಡಬಗ್ಗರು ಕೇಳಿದ ದಾಖಲೆ ದೊರೆಯುವಂತೆ ಮಾಡುತ್ತಾರೆಂದು ನಂಬಿ ಇದ್ದೇನೆ.

ಜೋಡಿದಾರ್ ಸಂಕರಶಾಸ್ತ್ರಿ

ಪೆರಿಯಾಪಟ್ಟಣದಲ್ಲಿ ಚಿರತೆಗಳ ಕಾಟ.

ಅಯ್ಯಾ,

ಈ ಪಿರಿಯಾಪಟ್ಟಣ ಪೂರ್ವದಲ್ಲಿ ರಾಜಧಾನಿಯಾಗಿ ಒಳ್ಳೇ ಸ್ಥಿತಿಯಲ್ಲಿ ಕೊಡಗು ದೇಶಕ್ಕೂ, ಮೈಸೂರು ದೇಶಕ್ಕೂ ಸರಹದ್ದು ಪಟ್ಟಣವಾಗಿದ್ದು ಈಗ ಹೀನಸ್ಥಿತಿಗೆ ಬಂದು, ತಾಲ್ಲೂಕು, ಸಬ್ ಡಿವಿಷನ್ ಆಫೀಸು, ಸಬ್ ರಿಜಿಸ್ಟ್ರಾರ್ ಆಫೀಸು, ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಫೀಸು ವಿಲ್ಲೇಜ್ ಸ್ಕೂಲು ಇವೆಲ್ಲಾ ಇದ್ದದ್ದು ದೊಂದಿಗೆ ತಪ್ಪ ಒಳಕೋಟೆಯ ಲ್ಯಾಂಟಾನಾ ಎಂಬ ಉನ್ನತ್ತಿಯ ಪೊದೆಗಳುಂಟಾಗುತ್ತಾ ಅವುಗಳಿಗೆ ಹಾಲಿ ಮ್ಯುನಿಸಿಪಲ್ ಬೋರ್ಡಿನವರು ಈ ಕೋಟೆ ಒಳಗೆ ಜಾಸ್ತಿ ನೀರು ಸಂಗ್ರಹ ವಾಸವಾಗಿರುತ್ತೆ

ಕಿರುಬ ಮುಂತಾದ ದುಷ್ಟಮೃಗಗಳು ಮನೆ ಮಾನೆ ಕೊಟ್ಟು ಅಲ್ಲ ಸುಗ್ಗಿ ಗೋವುಗಳನ್ನು ಭಕ್ಷಿಸುತ್ತಾ, ಪ್ರಜೆಗಳಿಗಿಂತಲೂ ಕಾಡ ಸುಖದಲ್ಲಿ ಉಣ್ಣುವುದಗಲ್ಲಿ ವಾಸಮಾಡಿಕೊಂಡಿರುತ್ತವೆ ಇವುಗಳನ್ನು ನಿವಾರಣೆ ಮಾಡಿಸಿಕೊಟ್ಟು ಪ್ರಜೆಗಳನ್ನು ದಯಕರಿಗಳನ್ನು ಕಾಪಾಡುವ ಬೇಕೆಂದು ಡೆಪ್ಯುಟಿ ಕಮೀಷನರು ಟಿವಿಜಾ ಅಮಲ್ದಾರರು ಅವರಲ್ಲದೆ ಮ್ಯಾಜಿಸ್ಟ್ರೇಟರು ಅನೇಕ ಅರ್ಜಿಗಳನ್ನು ಅರ್ಜಿಗಳ ಮೂಲಕ ರಾಜಾ ರೂ... ಸವಾರಿ ದಯಮಾಡಿದಾಗ ಬಹುನಿರ್ಭಯವಾಗಿ ವಿಜ್ಞಾಪಿಸಿ ಬಹುಕಾಲವಾಗುತ್ತಾ ಬಂತು. ಇದರಲ್ಲಿ ಕಿರಬಗಳು ... ಜನರು ಕೇಳಿತಕ್ಕೆ ಮಾತು ಸುಳ್ಳು ಎಂದು ಬಾಡಿಕಾರರು ಕೇಳದೆ ಬಂದಕಾರಣ ಇಲ್ಲಿ ... ಈ ಕಷ್ಟ ನಿವಾರಣೆ ... ಕಾರದ ಮಾತು ಧ್ವಂಸವಾಗಲಿ ಎಂಬುವವರಿಗೆ ನಿಜವೂ ಧರ್ಮ ಉರ್ಜಿತವಾದಲಿ ಎಂಬುವುದಕ್ಕೆ ... ದನ ಸಹ ಒಳಕೋಟೆ ಉಣ್ಣೆಕಾಡಿನಲ್ಲಿ ... ಕಾಂಕ್ಷರ ಕಾಟ್ಟಲ್ ಕಿಡ್ಡ ... ಕಾರ ಕಿರುಬಗಳು ಸಿಕ್ಕಲಿಲ್ಲ ... ಇದೇ ವೇಳೆ - ಒಬ್ಬ ಲ್ಯಾಂಟಾನಾಗಳಿಗೆ ... ಲ್ಲಿ ಮಿರಿಯ... ದನಗಳು ತತ್ತ ಹೊರಡುವ ಕೋಣ ... ತಾವವುಗಳ ಮುಖಗಳು ರಾರಿಗಟ್ಟಿ ಕಂಪವಂತೆ ... ಹೇಳಬೇಕಾಗಿ ... ಇಪ್ಪ ಸಂಕಟದಲ್ಲಿ ಈ ಮಾಸ ... ಗುರುವಾರ ರಾತ್ರಿ ಮೇಳ ಕೊಡಲ್ಪಟ್ಟ ಕಬ್ಬಿಣದ ಬೋನನ್ನು ... ಕಾದಿರಲಾಗಿ ದಂಪತಿಗಳು ಮಕ್ಕಳ ಸಮೇತ ... ಕಿರುಬವು ನಿಶ್ಚಯವಾಗಿ ಬೋನಿನ ಬಳಿಗೆ ಬಂದವು. ಹೆಂಡತಿಯನ್ನು ಸಂತೋಷವಾಗಿ ... ದೊರೆಯ ಆತನಿಂದ ... ಕಿರುಬನು ಬೋನಿನೊಳಕ್ಕೆ ... ವೇಶವಾಯಿತು. ಆದು ಅಲ್ಲೇ ಇವುಗಳು ... ಈ ಮೇಲೆ ಬೆಳಗಿನ ವರಿಗೂ ಇದ್ದ ಈ ಸಂತೋಷವನ್ನು ನೋಡುವುದಕ್ಕೆ ಜನಾಂ... ದ ಜನಗಳ ಆಗಾಧವಾದ ಧ್ವನಿಗಳನ್ನೂ ಗಲಾಟೆಯನ್ನೂ ಕಂಡು ಮಗಳೂ ಹೆಣ್ಣು ಕಿರಬ ಸಹಾ ಮನೆ ಅದಿಪ್ಪ. ಬೋನಿನೊಳಗೆ ಇದ್ದ ... ಕಿರಬವು ಕಬ್ಬಿಣದ ಸಲಾಕಿಯನ್ನು ಕಡಿದು ತುಂಡಾಗಿ ಕತ್ತರಿಸದ್ದಲ್ಲದೆ ತನ್ನ ಕೋರೆಹಲ್ಲುಗಳನ್ನು ಕೋಪಿಷ್ಟಿ ಅವಳಿಕೆ ... ಮುಖವನ್ನೆಲ್ಲಾ ರಕ್ತಮಯವಾಗಿ ಮಾಡಿಕೊಂಡಿತು ಬೋನಿನ ಹಿಗಳಲ್ಲಿ ಪಂಜಾಗಳನ್ನು ಸೀಡಿ, ನಿಂತಿದ್ದ ಜನಗಳ ಕೈನಲ್ಲಿದ್ದ ದೊಣ್ಣೆಗಳನ್ನು ಕಿತ್ತುಕೊಂಡು ಹಲ್ಲುಗಳಿಂದ ಮುರಿದುಬಿಟ್ಟು ತನ್ನ ಆಕ್ರೋಶವನ್ನೆಲ್ಲಾ ತೋರಿಸಿತು ತಾ. ೨೦ ನೇ ಶುಕ್ರವಾರ ಬೆಳಿಗ್ಗೆ ಹತ್ತರ ... ಬೋನನ್ನು ಕಿತ್ತು ಗಾಡಿ ಮೇಲೆ ಏರಿಸಿ ಸಮಸ್ತರಿಗೂ ಕಾಣುವ ಮೆರವಣಿಗೆ ಮಾಡಿ ಕಿರಬನನ್ನು ಘೋಷಿಸುತ್ತಾ ಪಿರಿಯಾಪಟ್ಟಣದಲ್ಲಿ ಇಡಲ್ಪಟ್ಟವು. ಈ ದಿವಸ ಕಟ್ಟಿದ್ದ ಮೇಕೆ ಆಹಾರವಾಗಲಿಲ್ಲ ... ಆದರೂ ಅರ್ತರಾಗಿ ಈ ದುಷ್ಟಮೃಗಗಳ ಬಾಧೆಯಿಂದ ಸಂಕಟ ಪಡುತ್ತಿರುವ ಕೋಟೆ ವಾಸಸ್ಥರ ಹೇಳಿಕೆಯಲ್ಲಿ ಪ್ರಾಮಾಣಿಕತೆಯನ್ನು ಸರ್ಕಾರದವರು ನೆಲಗೊಳಿಸಿ ಉಳಿದಿರುವ ಕಿರಬಗಳ ಬಾಧೆಯನ್ನು ನಾಶಮಾಡಿ ಉಣ್ಣೆಪೊದೆಗಳು ಹೆಚ್ಚಿರುವದನ್ನು ನಿವರ್ತಿಪಡಿಸಿ ಪ್ರಜೆಗಳಿಗೂ ಗೋಕಾಯಿಗಳಿಗೂ ನೆಮ್ಮದಿ ಸುಖಸಂತೋಷಗಳನ್ನುಂಟುಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ.

ಬಾತ್ಮಿದಾರ್.

ತಾಲ್ಲೂಕು ವರ್ತಮಾನಗಳು.

ಚಿತ್ರದುರ್ಗ.—ಇಲ್ಲಿ ಧನಪ ಪಡಿ ಪ್ರಾರಂಭವಾಗಿ ನಾಲ್ಕೈದು ದಿನಗಳಿಂದ ಹಿಡಿದಿದೆ. ಜೋಳದ ಪೈರಿಗೆ ನೀರು ಸಾಕಾದರೂ ಮುಂದಿನ ಮುಂತಾದ ಹಿಂದಿನ ಬಿತ್ತನೆಗಳಿಗೆ ಇನ್ನೂ ಮಳೆ ಬೇಕಾಗಿದೆ ಎಂದು ಅಪೇಕ್ಷಿಸುತ್ತಿದ್ದ ಕೋರಿಕೆಯು ಸಿದ್ಧಿಸಿತು.—ಊರಿನ ಪೂರ್ವದಿಕ್ಕಿನ ಮತ್ತು ದಕ್ಷಿಣ ದಿಕ್ಕಿನ ಗುಡ್ಡಗಳಲ್ಲಿ ಈಚೀಚೆಗೆ ಚಿರತೆಗಳ ಪ್ರಬಲವಾಗಿವೆ. ಮೊದಲು ಗುಡ್ಡಗಳಲ್ಲೇ ಇದ್ದುಕೊಂಡು ಮೇಕೆಗಳನ್ನು ಕೊಲ್ಲುತ್ತಿದ್ದವು ಈಗ ಊರಿನ ಸಮೀಪಕ್ಕೂ ಊರ ಒಳಕ್ಕೂ ಬಂದಿಳಿಯಲಾರಂಭಿಸಿವೆ. ಊರಿಗೆ ಎರಡು ಮೈಲಿ ದೂರದಲ್ಲಿ ಹಿರಿ

...ಮಾರ್ಗದಲ್ಲಿ ಈಗ ಕೆಲವು ದಿನಗಳಿಗೆ ನುಗ್ಗಿಚೆ ಒಂದು ಚಿರತೆಯು ...ವುಗಳನ್ನು ಗಾಯಮಾಡಿ, ಕಡೆಗೆ ಪೆಟ್ಟು ತಿಂದು ಮೃತಪಟ್ಟಿತು ...ಊರ ಒಳಗಿರುವ ಎ. ವಿ. ಸ್ಕೂಲ್ ಪಟಾರದಲ್ಲಿ ಒಂದು ಮೇಕೆ ...ಯನ್ನು ಹಿಡಿದು ಹಾಕಿತು.—ಕೆಲವು ವರುಷಗಳಿಂದ ನಿಂತುಹೋಗಿ ...ಆಶ್ವಯುಜದ ಮೆರವಣಿಗೆಯು ಸರಕಾರದವರ ಅಪ್ಪಣೆಯನ್ನು ಪಡೆದು ...ಲ್ಪಟ್ಟಿತು.—ಅಕ್ಕಸಾಲಿಗರ ಬೀದಿಯಲ್ಲಿ ಸಾಲ್ಕು ಬಸ್ತಿಗಳು ಕೂ ...ಚೌಕದಲ್ಲಿ ಪೂರ್ವದಲ್ಲಿ ಸಲ್ಲಿಯ ಬಳಿ ಒಂದು ಲಾಂದ್ರು ಕಂಭ ...ದು ಹೇಳುತ್ತಾರೆ. ಈಗ ಅದನ್ನು ಯಾಕೋ ತೆಗೆದು ಬಿಟ್ಟ ...ದೆ. ಬಡಿ ಮಳೆಯ ಕತ್ತಲಿನಲ್ಲಿ ಚೌಕದಲ್ಲಿ ನಿಂತಿರುವ ದನ ಕರು ...ಗೊತ್ತಾಗುವದಿಲ್ಲ. ರಸ್ತೆ ಯಾವದು ? ಚರಂಡಿ ಎಲ್ಲಿ ? ಎಂಬು ...ಗೊತ್ತಾಗುವದಿಲ್ಲ. ಹೆಂಗಸರೂ ಮಕ್ಕಳೂ ತಿರುಗಾಡುವ ಜಾಗ ...ದರಿಂದ ಮುನಿಸಿಪಾಲಿಟಿಯವರು ಅಲ್ಲಿ ಯಥಾ ಪ್ರಕಾರ ಒಂದು ...ವನ್ನು ಇಟ್ಟು ಶೀಘ್ರ ದಿಸೆಗಾಣುವರೆಂದು ಹಾರೈಸುತ್ತೇವೆ.—ಸಂತೆ ...ತೂಕದ ಬಟ್ಟುಗಳಿಗೆ ಬದಲಾಗಿ ಕಂಪನಿ ಬಟ್ಟು ಕಲ್ಲುಗಳನ್ನೂ ...ಸೇರುಗಳನ್ನೂ ಇಟ್ಟುಕೊಂಡು ಮಾರಾಟ ಮಾಡುವದು ಈಚೇ ...ರೂಢಿಯಲ್ಲಿರುವದಾಗಿದೆ. ಇಂಥವರು ಸರಕಾರದವರ ತನಿಖೆ ...ಎಚ್ಚರವಿಟ್ಟುಕೊಂಡರೆ ಒಳ್ಳೇದು.

ಹೊಸಕೋಟೆ.—ಇಲ್ಲಿ ಮುನಿಸಿಪಲ್ ಉದ್ಯಾನವನವು ತಾ ...ರಲ್ಲಿ ಪ್ರತಿಷ್ಠೆಯಾಯಿತು. ಕದಳೀಕಂಭಗಳಿಂದಲೂ ಧ್ವಜಪತಾಕೆ ...ಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ತೋಟದಲ್ಲಿ ಒಂದು ಬೃಂದಾವನ ...ಸುತ್ತಲೂ ಗಿಡಗಳಿಂದ ಅಲಂಕರಿಸಲ್ಪಟ್ಟಿದೆ. ಈ ಬೃಂದಾವನದ ...ಒಂದು ಬ್ಯಾಂಡ್ ಸ್ಟ್ಯಾಂಡ್. ಇದರ ಪಕ್ಕದಲ್ಲೇ ಜನಗಳ ...ಕೂಟಗಳು ರಚಿಸಲ್ಪಟ್ಟಿವೆ. ಪಿಟೋ ವನದ ಪೂರ್ವಕ್ಕೆ ...ಟೆನ್ನಿಸ್ ಕೋರ್ಟು. ಇದರ ಉತ್ತರಕ್ಕೆ ಹೊಸ ರೀಡಿಂಗ್ ರೂ ...ಸ್ಥಾಪನೆಯಾಗಿದೆ. ತೋಟದ ಮಧ್ಯ ೩ ದೀಪಗಳು ಇದ್ದು ತೋ ...ನ್ನು ಪ್ರಕಾಶಿಸುವ ಶೋಭೆಯನ್ನುಂಟುಮಾಡುತ್ತವೆ. ಜನಗಳು ಒಳಗೆ ಪ್ರವೇ ...ನಂತರ ಬೃಂದಾವನದ ಪಕ್ಕದಲ್ಲಿ ಮೂಡಣಮುಖವಾಗಿ ಮಹಾ ...ಫೋಟೋ ಇಟ್ಟು ಅದನ್ನು ಶೃಂಗರಿಸಿದರು. ಪುರೋಹಿತರು ...ವನಕ್ಕೂ ಆ ಎರಡು ಆಶ್ರಮಗಳಿಗೂ ಅರಸಿನ ಕುಂಕುಮವಿಗ ...ಬಳಿದು ಪೂಜೆ ನಡಸಿದರು. ಮಹಾರಾಜರ ಛಾಯಾಚಿತ್ರದ ಎದು ...ಸಿಟರಿ ಸಿಪಾಯಿಗಳೂ ಪೋಲೀಸಿನವರೂ ಬಿಲ್ಲೇ ಜವಾನರೂ ...ಸಾಲಾಗಿ ನಿಂತರು. ಗಾಯಕರೂ ಸ್ಕೂಲ್ ಬಾಲಕ ಬಾಲಕಿ ...ವಾದ್ಯಗಾರರೂ ಭಜನೆಯವರೂ ಅಲ್ಲಲ್ಲಿ ಕೂತೂ ನಿಂತೂ ...ಗಳನ್ನೂ ರಾಜರ ಮೇಲಿನ ಪದಗಳನ್ನೂ ಹಾಡಿ, ಸಭೆಯನ್ನು ...ಪಡಿಸಿದರು. ನಂತರ ಅಮಲ್ದಾರರು ಮೊದಲ್ಗೊಂಡು ಸರ್ಕಾ ...ದಾರರೂ ಶಾನುಭೋಗರೂ ಮುನಿಸಿಪಲ್ ಮೆಂಬರುಗಳೂ ಪ್ರದ ...ಪೂರ್ವಕ ಫೋಟೋಗೆ ನಮಸ್ಕರಿಸಿದರು. ಮಿಲಿಟರಿ, ಪೋಲೀ ...ಸಿಪಾಯರು ಸೆಲ್ಯೂಟ್ ಮಾಡಿದರು. ಕಡೆಗೆ ಬಿಲ್ಲೇ ಜವಾನರೂ ...ಪೂರ್ವಕ ನಮಸ್ಕರಿಸಿದ್ದಾಯಿತು. ಒಬ್ಬಿಬ್ಬರು ಕನ್ನಡ, ಇಂಗ್ಲಿ ...ಹಿಂದೂಸ್ಥಾನಿ ಭಾಷೆಯಲ್ಲಿ ಎರಡು ಮಾತು ಆಡಿದರು. ಮಧ್ಯೆ ...ವಾದ್ಯಗಾರರ ಮತ್ತು ಭಜನೆಯವರ ಗಾಯನಗಳು ಜನಗಳನ್ನು ...ಪಡಿಸುತ್ತಿದ್ದವು. ಸಭಿಕರೆಲ್ಲಾ ಹೆಚ್ಚು ಗಂಡಸರು ಸರಾಸರಿ ಸಾವಿರವಿರಬ ...ದು. ಅಂದೇ ಹೊಸ ರೀಡಿಂಗ್ ರೂಮ್, ಟೆನ್ನಿಸ್ ಕೋರ್ಟು ...ತೆರೆಯಲ್ಪಟ್ಟವು. ಇದೆಲ್ಲಾ ಆದ ನಂತರ ಬಂದ ಸಭಿಕರಿಗೆ ...ಪುಷ್ಪ ತಾಂಬೂಲ ಸಕ್ಕರೆಯನ್ನು ಹಂಚಿ ಕಳುಹಿಸಿದರು. ಬಾಣ ...ಗಳು ಬಹಳ ಸೊಗಸಾಗಿ ಕಾಣುತ್ತಿದ್ದವು. ನಮ್ಮ ಅಮಲ್ದಾರರು ಉಳಿದ ...ಚಾರಿಗಳ ಸಹಾಯ ಪಡೆದು ಬಹಳ ಕಷ್ಟಪಟ್ಟು ಈ ಕಾರ್ಯವನ್ನು ...ಸಿದರು. ಇವರುಗಳು ಬಂದ ಸ್ವಲ್ಪಕಾಲದಲ್ಲಿಯೇ ಊರ ಅಭಿ ...ವೃದ್ಧಿಗೆ ಇಷ್ಟು ಗಮನಕೊಟ್ಟು ಮನಃಪೂರ್ವಕವಾಗಿ ಆಸಕ್ತಿ ...ಯಿಂದ ಕಾರ್ಯ ಸಾರ್ಥಕಪಡಿಸಿದ ಇವರ ಪ್ರಜಾ ಹಿತಚಿಂತ ...ನೆಯನ್ನು ಕೀರ್ತಿಯನ್ನೂ ಎಷ್ಟು ಶ್ಲಾಘಿಸಿದರೂ ತೀರದು. ಇನ್ನು ...ಅಭಿವೃದ್ಧಿಗೆ ಇನ್ನೂ ಒಂದು ಟೌನ್ ಹಾಲ್ ಅಲ್ಲಿಯೇ ಅಂದರೆ ...ಟೆನ್ನಿಸ್ ಕೋರ್ಟಿನ ಪಕ್ಕದಲ್ಲಿಯೇ ಕಟ್ಟಿಸುವರಂತೆ. ಅದಕ್ಕಿಂತಲೂ ...ಮಾಸ್ಟರ್ ಗಾರ್ಡನಿಗೆ ಸೇರಿದ ಸ್ಥಳದಲ್ಲಿರುವ ಆರೋಗ್ಯ ಮನೆಯ ...ಕ್ರಯಕ್ಕೆ ಪಡೆದು ಅದನ್ನೇ ಹಾಲ್ ಆಗಿ ಮಾಡಿ ಅದರಲ್ಲಿ ರೀಡಿಂ ...ರೂಮ್ ಏರ್ಪಡಿಸಿದರೆ ಉತ್ತಮವೂ ರಂಜನೆಯೂ ಮನಕ್ಕೆ ಅಂದ ...ವಾಗಿ ಕಾಣುತ್ತ ಹಿಂದಿನ ಸಂಚಿಕೆಯಲ್ಲಿ ಕಾಣಿಸಿದ ವಿದ್ಯಾ ಕೋರ ...ಯೂ ಬೇಗನೆ ನಿವಾರಣೆಯಾಗಿ ಸಂತೋಷಪಡುವ ಹಾಗೆ ಮಾಡ್ಯಾ ...ರೆಂದು ಕೋರುತ್ತೇವೆ.

ತುಂಕೂರು.—ಈ ವಾರವೆಲ್ಲಾ ಸೋನೇ ಮಳೆಯೇ ವಿಶೇಷವಾಗಿ ...ತು. ಹೊಲಗಳು ನೋಡುವದಕ್ಕೆ ಮನೋಹರವಾಗಿ ತೆನೆಯಾಗು ...ವೆ. ಹಿಂದೆ ಈ ಪತ್ರಿಕೆಯಲ್ಲಿ ನಮ್ಮ ಟವುನ್ ಕೆರೆಗೆ ನೀರು ಬರುವ ...ದಿಯ ಅಭಾವದ ವಿಷಯ ಪ್ರಕಟಿಸಿತ್ತಷ್ಟೆ. ನಮ್ಮ ಇಂಜನೀರ್ ...ಸಾಹೇಬರೂ ಅಸಿಸ್ಟೆಂಟು ಇಂಜನೀರ್ ಸಾಹೇಬರೂ ಕೆಲವು ಮುಖಂಡ ...ರೊಡನೆ ಏದಾರು ದಿನಗಳಲ್ಲಿ ಕೆರೆಯ ಹಿಂಭಾಗಕ್ಕೆ ದಯಮಾಡಿಸಿ ...ಸ್ಥಳವನ್ನೂ ಪರಾಂಬರಿಸಿಕೊಂಡು ಬಂದರು. ಮುಂದೆ ಯಾವ ರೀತಿ ...ಅನುಕೂಲ ಪಡಿಸುವರೋ ನಿರೀಕ್ಷಣೀಯವಾಗಿರುತ್ತೆ.—ಸದ್ಯ ಎರಡು ...ವಾರಗಳಿಂದ ನಮ್ಮ ಸಂತೆಯಲ್ಲಿ ಮಾಂಸಿನ ಅಂಗಡಿಗಳೂ ತರಕಾರಿ ...ಅಂಗಡಿಗಳೂ ಬೇರೆ ಯಾಗಿ ಇಡುವಂತೆ ಮ್ಯುನಿಸಿಪಾಲಿಟಿಯವರು ...ಏರ್ಪಡು ಮಾಡಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇನೆ.—ಈ ...ರಸ್ತೆಯಲ್ಲಿ ಬಹಳ ಕಾಲದಿಂದಲೂ ಸಿರಾ, ಮಧುಗಿರಿ, ಕುಣಿಗಲುಗಳಿಗೆ ...ಟ್ರಾನ್ಸಿಟ್ ಕಂಪನಿಯೊಂದು ಏರ್ಪಾಟಾಗಿದೆ. ಈ ಮಧ್ಯೆ ಇದಕ್ಕೆ ...ಪೋಟಿ ಪಾರ್ಟಿಯಾಗಿ ಇನ್ನೊಂದು ಕಂಪನಿ ಶುರುವಾಗಿ ಸಿರಾಕ್ಕೆ ...ಒಂದು ರೂಪಾಯಿ ಭಾಡಿಗೆ ಇದ್ದದ್ದನ್ನು ತಪ್ಪಿಸಿ ಆರಾಣೆ ಮಾತ್ರ ...ವಾಗಿ ಟಾಂ ಟಾಂ ಹೊಡೆಸಿದರು. ಈ ಸಂದರ್ಭದಲ್ಲಿ ಬಹು ಕಾಲ ...ರೀತಿ ನಡೆಯುವದೊಂದೇ ಅನುಮಾನ ಹೊರತು ಬಾಕಿ ಎಲ್ಲಾ ...ರುವದಲ್ಲೂ ಅನುಕೂಲವಾಗಿದೆ. ಮೊನ್ನೆ ೧೯ ನೇ ತಾ. ಈ ಎರಡು ಕಂಪನಿಯವರ ಗಾಡಿಗಳು ಸಿರಾ ಮಾರ್ಗದಲ್ಲಿ ಎದುರುಬದುರಾಗಿ ಸಂಧಿಸಿ ಒಂದಕ್ಕೊಂದು ಸಿಡಿದು ಮುರಿದು ಹೋದವು. ಉಭಯತ್ರರಿಗೂ ಮಾರಾಮಾರಿಯಾಗುವದರಲ್ಲಿ ಪೋಲೀಸಿನವರಿಂದ ಸಮಜಾಯಿಸಲ್ಪಟ್ಟಿತು.—ಇದೇ ತಿಂಗಳು ೧೫ ನೇ ತಾ. ಶನಿವಾರ ಸಾಯಂಕಾಲ ರೆವ್. ಇ. ಡಬ್ಲ್ಯು. ಥಾಂಸನ್, ಎಂ. ಎ. ಯವರು ಮೈಸೂರಿಂದ ಇಲ್ಲಿಗೆ ದಯಮಾಡಿ, ಚಿಕ್ಕ ಪೇಟೆಯಲ್ಲಿರುವ ವಿಂಷ್ಟ್ ಗರಲ್ ಸ್ಕೂಲಿನಲ್ಲಿ ಮೊದಲೇ ಏರ್ಪಾಡು ಮಾಡಿದ್ದಂತೆ ಸೇರಿದ್ದ ಸಭೆಯಲ್ಲಿ ಇಂಗ್ಲೆಂಡಿನ ಮಂತ್ರಿವರ್ಯರಾಗಿದ್ದ ಗ್ಲಾಡ್‌ಸ್ಟನ್‌ರವರ ಚರಿತ್ರೆಯನ್ನು ಇಂಗ್ಲೀಷಿನಲ್ಲಿ ಸಭಾಸದರ ಹೃದಯಂಗಮವಾಗುವಂತೆ ಉಪನ್ಯಾಸ ಮಾಡಿದರು. ತಾ. ೧೭ ರಲ್ಲಿ ಮಾರಿಕಣಿವೆ ಮಾರ್ಗವಾಗಿ ದಯಮಾಡಿಸಿದರು.—ಇದೇ ೨೦ ನೇ ತಾ. ಟವುನಿಗೆ ಸೇರಿದ ಶ್ರೀ ಬಸವಣ್ಣನವರ ಪಾಳ್ಯದಲ್ಲಿಯ ತಿಗಳರ ಸಂಜೀವೈಯ್ಯನೆಂಬುವನ ೧೬ ವರುಷ ವಯಸ್ಸುಳ್ಳ ಮಗನು ದನಕಾಯುವದಕ್ಕೆ ಹೋದವನು ಹೊನ್ನೇನ ಹಳ್ಳಿ ಕೆರೆ ಹತ್ತರ ದನಗಳನ್ನು ಬಿಟ್ಟು ಈಜು ಬಿದ್ದು ನೀರಿನೊಳಕ್ಕೆ ಮುಣಿಗಿ ಹೋದನು. ತಂದೆ ತಾಯಿಗಳು ಹುಡುಕಿದಾಗ ಮಾರನೇ ದಿನ ತೇಲುತ್ತಿರುವ ಶವವನ್ನು ಸರ್ಕಾರದವರ ಮಹಜರುನಿಸೆ ದಫನ ಮಾಡಲ್ಪಟ್ಟಿತು.—ಕಳೆದ ವಾರ ಇಲ್ಲಿಗೆ ೮ ಮೈಲಿ ದೂರದಲ್ಲಿರುವ ಕೋರಾ ಎಂಬ ಗ್ರಾಮದಲ್ಲಿ ಲಿಂಗಾಯತರವನೊಬ್ಬನು ತನ್ನ ತೋಟಕ್ಕೆ ಸೌತೇ ಕಾಯಿ ಕದಿಯಲು ಬಂದ ಇಬ್ಬರು ಹುಡುಗರನ್ನು ಹಿಡಿಯಲು ಪ್ರಯತ್ನಿಸಿ ಸಾಧ್ಯವಾಗದಿರಲು ರೋಷದಿಂದ ಕೈಯಲ್ಲಿದ್ದ ದೊಣ್ಣೆಯನ್ನು ಎಸೆಯಲು ಒಬ್ಬ ಹುಡುಗನಿಗೆ ತಗಲಿ ಕಾಲುಳು ಈಚೆಗೆ ಬಂದು ತಕ್ಷಣ ಸತ್ತು ಹೋದನು. ಇನ್ನೊಬ್ಬ ಹುಡುಗನು ಊರಿಗೆ ಓಡಿ ಹೋದನು. ಸತ್ತ ಹುಡುಗನನ್ನು ತೋಟದವನು ಒಂದು ಹಾಳು ಭಾವಿಯಲ್ಲಿ ಹಾಕಿ ಬಿಟ್ಟನು. ಈ ವಿಷಯವು ಸರ್ಕಾರದವರಿಗೆ ತಿಳಿದು ಬಂದು ವಿಚಾರಣೆ ಬಗ್ಗೆ ಆಸಾಮಿಯನ್ನು ಇಲ್ಲಿಗೆ ಹಿಡಿದು ತಂದಿರುತ್ತಾರೆ.

ವಿದೇಶ ವರ್ತಮಾನಗಳು.

ಕಳೆದ ೧೯೦೫ನೆ ವರುಷದಲ್ಲಿ ರಷ್ಯಾ ರಾಜ್ಯದಿಂದ ೧,೮೩,೭೨೨ ಮಂದಿ ಯಹೂದ್ಯ ಪ್ರಜೆಗಳು ಹೊರಟುಹೋದರು. ಈ ವರುಷ ಇದುವರಿಗೆ ೨,೫೦,೦೦೦ ಯಹೂದ್ಯರು ಇತರ ದೇಶಗಳಿಗೆ ಹೋಗಿ ನಿಂತುಬಿಟ್ಟರು.

****

ಅಮೇರಿಕದ ಗೋಪಾಳಿಗರು ತಮ್ಮ ಗೋಕಾಯಿಗಳ ಜಾತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಬೊಂಬಾಯಿ, ಮಧ್ಯ ಇಂಡಿಯ, ಕೊಲ್ಹಾಪುರ, ಮದರಾಸು, ಈ ಮೊದಲಾದ ಕಡೆಗಳಿಂದ ಒಳ್ಳೊಳ್ಳೇ ದನಗಳನ್ನು ಚುನಾಯಿಸಿಕೊಂಡು ಕೊಂಡುಹೋಗುತ್ತಿದ್ದಾರೆ.

****

ರಷ್ಯಾ ರಾಜ್ಯದಲ್ಲಿ ಕಳೆದ ನವಂಬರ್ ತಿಂಗಳಿಂದ ಗವರ್ನಮೆಂಟಿನವರು ಪ್ರಜೆಗಳಿಗೆ ಜಮೀನು ಕೊಂಡುಕೊಳ್ಳುವದಕ್ಕೋಸ್ಕರ ಅವರು ಸಾಲಪಡೆಯುವಂಥಾ ಒಂದು ಬ್ಯಾಂಕನ್ನು ಮಾಡಿದಾರೆ. ರೈತಪ್ರಜೆಗಳು ಇದುವರೆಗೆ ಈ ಬ್ಯಾಂಕಿನಿಂದ ೩೩ ಕೋಟಿ ರೂಪಾಯಿ ಸಾಲ ಪಡೆದು ೯೦ ಲಕ್ಷ ಎಕರೆ ಜಮೀನನ್ನು ಕೊಂಡುಕೊಂಡಿದಾರೆ.

****

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಎಂಬ ಭಾರೀ ಪಟ್ಟಣದಲ್ಲಿ ಕಳೆದ ೧೮೮೮ ನೆ ಇಸವಿಯಿಂದಲೂ ತುಂಬಾ ಪ್ರಸಿದ್ಧಿಗೆ ಬಂದಿದ್ದ ರೀಯಲ್ ಎಸ್ಟೇಟ್ ಎಂಬ ದೊಡ್ಡ ಬ್ಯಾಂಕು ದಿವಾಳಿಯಾಯಿತು. ಆ ಬ್ಯಾಂಕಿನ ಖಜಾಂಚಿಯು ಆತ್ಮಹತ್ಯಮಾಡಿಕೊಂಡನು. ಈಗ ಎರಡೂವರೆ ಕೋಟಿ ರೂಪಾಯಿ ಬ್ಯಾಂಕಿನಿಂದ ಪಾವತಿ ಆಗಬೇಕಾಗಿದೆ.

****

ಜರ್ಮನಿ ಚಕ್ರವರ್ತಿಯವರಿಗೆ ಮೊಮ್ಮಗನು ಜನಿಸಿದನು. ಮಗುವಿನ ನಾಮಕರಣದ ದಿನ ಚಕ್ರವರ್ತಿಯವರು ಬಂದೀಖಾನೆಗಳಲ್ಲಿರುವ ಅನೇಕ ಅಪರಾಧಿಗಳಿಗೆ ಕ್ಷಮಾಪಣೆಯನ್ನು ದಯಪಾಲಿಸಿ ಬಿಡಿಸಿಬಿಟ್ಟರು. ಇವಲ್ಲದೆ ಆಯಾ ಖೈದಿಗಳಿಗೆ ತಗಲಿದ ಕೋರ್ಟು ಖರ್ಚುಗಳನ್ನೆಲ್ಲಾ ಸರ್ಕಾರದಿಂದ ಇನಾಮಾಗಿ ಕೊಡುವಂತೆ ಹುಕುಂ ಕೊಟ್ಟಿದಾರೆ.

****

ಫ್ರಾನ್ಸ್ ಪ್ರಭುತ್ವದ ಮುಖ್ಯ ಪಟ್ಟಣವಾದ ಪ್ಯಾರಿಸ್ ನಗರದಲ್ಲಿ ಭಾನುವಾರದ ದಿನ ಎಲ್ಲಾ ಕಾರ್ಖಾನೆಗಳೂ ಕೋರ್ಟು ಕಛೇರಿಗಳೂ ವರ್ತಕರ ಮಂಡಲಿಗಳೂ ಅಂಗಡಿ ಮುಂಗಟ್ಟುಗಳೂ ಮುಚ್ಚಲ್ಪಡಬೇಕೆಂದೂ ಯಾವ ತರದ ಲೇವಾದೇವಿಗಳೂ ವ್ಯಾಪಾರಗಳೂ ಕಸಬುದಾರಿ ಕೆಲಸಗಳೂ ನಡೆಯ ಕೂಡದೆಂದು ಈಗತಾನೇ ಕಾನೂನು ಆಗಿ ಜಾರಿಯಲ್ಲಿ ತರಲ್ಪಟ್ಟಿದೆ.

****

ಅಮೇರಿಕಕ್ಕೆ ಸೇರಿದ ಮೆಕ್ಸಿಕೋ ರಾಜ್ಯದಲ್ಲಿ ಮಾಜಕ್ಕಾನ್ ಎಂಬ ಊರಿನೊಳಗೆ ಏಕಪ್ರಕಾರವಾಗಿ ಇಪ್ಪತ್ತು ದಿನಗಳು ಮಳೆಸುರಿದು ಪ್ರವಾಹಗಳು ಊರಿನೊಳಕ್ಕೆ ನುಗ್ಗಿ ಊರನ್ನೆಲ್ಲಾ ಧ್ವಂಸಮಾಡಿದು. ನೂರಾರು ಜನರು ಮನೆಮಠಗಳನ್ನು ಕಳಕೊಂಡು ಅಲೆಯುತ್ತಿದ್ದಾರೆ. ಕಬ್ಬಿನ ಬೆಳೆ ಮಾಡುತ್ತಿದ್ದ ಪ್ಲಾಂಟರುಗಳಿಗೆ ಕೋಟ್ಯಾಂತರ ದ್ರವ್ಯದ ಬೆಳೆ ನಷ್ಟವಾಗಿರುವದು.

****

ಲೆಫ್ಟಿನೆಂಟ್ ಕರ್ನಲ್ ಜಾರ್ಜ್ ಜೋಸಿಯರ್ ಎಂಬೊಬ್ಬ ಇಂಗ್ಲೀಷ್ ಸೈನ್ಯದ ಹುದ್ದೇದಾರನು ತನ್ನ ಆಸ್ತಿಯಲ್ಲಿ ೩೦ ಸಾವಿರ ರೂಪಾಯಿಯನ್ನು ಧರ್ಮ ಕಾರ್ಯಗಳಿಗೆ ವಿನಿಯೋಗಿಸಬೇಕೆಂತಲೂ ನ್ಯೂಜೀಲಾಂಡಿನಲ್ಲಿ ತನಗಿರುವ ಸಮಸ್ತ ಸ್ಥಿರಚರ ಆಸ್ತಿಯನ್ನೂ ತನ್ನ ಬಳಿ ಬಹು ಕಾಲ ನಂಬಿಕೆಯಾಗಿ ಸೇವೆ ಮಾಡುತಿದ್ದವನಿಗೆ ಕೊಡಬೇಕೆಂತಲೂ ಉಯಿಲು ಬರೆದಿದಾನೆ.

****

ಸ್ಯಾನ್‌ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಭೂಕಂಪದಿಂದಲೂ ಬೆಂಕಿಯಿಂದಲೂ ಸಮುದ್ರ ಉಕ್ಕಿದ್ದರಿಂದಲೂ ನಾನಾ ಅನಾಹುತಗಳು ನಡೆದವಷ್ಟೆ. ಅಲ್ಲಿ ನಷ್ಟವಾದ ಅನೇಕರ ಆಸ್ತಿಗಳನ್ನು ಭೀಮಾ ಕಂಪನಿಗಳಲ್ಲಿ ಇನ್ಷೂರು ಮಾಡಿಸಿದ್ದರು. ಈಗ ಕಂಪನಿಗಳವರು ಆ ನಷ್ಟವನ್ನು ಮಾಲೀಕರಿಗೆ ತಮ್ಮ ಕಂಪನಿ ಹಣದಿಂದ ಪಾವತಿಮಾಡ ಬೇಕಾಯಿತು. ವಿಲಾಯತಿಯಲ್ಲಿರುವ ೧೨೦ ಭೀಮಾಕಂಪನಿಯವರು ಒಟ್ಟು ಹದಿನಾರೂ ವರೆ ಕೋಟಿ ರೂಪಾಯನ್ನು ಪಾವತಿಮಾಡಿದಾರೆ.

****

ವಿಲಾಯತಿಯ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸಮಾಡುವ ಹುಡುಗರ ಪೈಕಿ ೧೨ ವರುಷಕ್ಕೆ ಮೇಲ್ಪಟ್ಟವರಾಗಿಯೂ ದೃಢಾಂಗಿಗಳಾಗಿಯೂ ಇರುವವರಿಗೆ ಪುಸ್ತಕ ವಿದ್ಯೆಯನ್ನು ಕಲಿಸುವುದಲ್ಲದೆ ಕಾಯಪುಷ್ಟಿಯನ್ನು ಗಟ್ಟಿಮಾಡಿಕೊಳ್ಳುವುದಕ್ಕೂ ಸೈನ್ಯದ ಆಯುಧಗಳನ್ನು ಹಿಡಿದು ಉಪಯೋಗಿಸುವುದಕ್ಕೂ ಅನುಕೂಲಿಸುವಂಥಾ ಕಸರತ್ತುಗಳನ್ನೂ ಬಂದೂಕು ಹಿಡಿಯುವುದನ್ನೂ ಕಲಿಸಿಕೊಡಬೇಕೆಂದು ಗೊತ್ತು ಮಾಡಿದಾರೆ.

****

ಇಟಲಿ ರಾಜ್ಯದ ಮಿಲಾನ್ ಪಟ್ಟಣಕ್ಕೆ ಯೂರೋಪ್ ಖಂಡದ ಪ್ರತಿ ಒಂದು ರಾಜ್ಯದಿಂದಲೂ ಕೂಲಿಕಾರರ ಪ್ರತಿನಿಧಿಗಳು ಹೋಗಿ ಸೇರಿ ದೊಡ್ಡ ಸಮಾಜವನ್ನು ಮುಂದಿನ ತಿಂಗಳ ಮೊದಲನೇ ವಾರದಲ್ಲಿ ನಡಿಸುವವರಾಗಿದಾರೆ. ಅವರು ಚರ್ಚೆಮಾಡುವ ವಿಷಯಗಳ್ಯಾವವೆಂದರೆ—(೧) ಕೂಲಿಕಾರರಿಗೆ ಕೆಲಸ ಸಿಕ್ಕದೆ ಹೋಗುವುದಕ್ಕೆ ಕಾರಣಗಳು; (೨) ಎಲ್ಲರಿಗೂ ಕೆಲಸ ದೊರಕುವುದಕ್ಕೆ ಉಪಾಯಗಳು; (೩) ಕೆಲಸ ಸಿಕ್ಕದಿದ್ದಾಗ ಕೂಲಿಯವರ ಕಷ್ಟ ಪರಿಹಾರವಾಗತಕ್ಕಥಾ ಮಾರ್ಗಗಳು ಇವೇ.

****

ಬ್ರೆಜಿಲ್ ದೇಶದ ಕಾಫಿ ಬೆಳೆಯು ಅಪಾರವಾದದ್ದೆಂದು ಪ್ರಸಿದ್ಧಿಹೊಂದಿದೆ. ಅಲ್ಲಿನ ಸರ್ಕಾರದವರು ಅದಕ್ಕೆ ಹೆಚ್ಚು ಗಿರಾಕಿಗಳನ್ನು ಸಂಪಾದಿಸಿಕೊಳ್ಳಬೇಕೆಂದೂ ಕಾಫಿ ವ್ಯವಸಾಯವನ್ನು ಇನ್ನೂ ವೃದ್ಧಿ ಮಾಡಬೇಕೆಂದೂ ಕುತೂಹಲಪಟ್ಟು ಈಗತಾನೇ, ಒಂದು ಕಾನೂನು ಮಾಡಿದಾರೆ. ಇದರ ಅಭಿಪ್ರಾಯವೇನೆಂದರೆ, ೩೦ ಲಕ್ಷ ಮೂಟೆಗಳ ಬ್ರೆಜಿಲ್ ಕಾಫಿಯನ್ನು ಕೊಂಡುಕೊಳ್ಳುವವರಿಗೆ ಶೇಕಡಾ ೨೦ ರಂತೆಯೂ, ೩೦ ಲಕ್ಷ ಮೂಟೆಗಳಷ್ಟು ಖರಿಸಿಕೊಳ್ಳುವವರಿಗೆ ಶೇಕಡಾ ೧೦ ರಂತೆಯೂ ಡಿಸ್ಕೌಂಟು ಕೊಡುವರು.

****

ದಕ್ಷಿಣ ಅಮೇರಿಕಕ್ಕೆ ಸೇರಿದ ಚಿಲಿ ಎಂಬ ಪ್ರಜಾಪ್ರಭುತ್ವದಲ್ಲಿ ಕಳೆದ ತಿಂಗಳು ಭೂಕಂಪದ ದೆಸೆಯಿಂದ ಅನಾಹುತಗಳು ನಡೆದವಷ್ಟೆ. ಇದರಿಂದ ೫,೦೦೦ ಪ್ರಜೆಗಳಿಗಿಂತಲೂ ಹೆಚ್ಚಾಗಿಯೇ ಮೃತಪಟ್ಟರು. ಮತ್ತು ೭೦೦ ಜನರಿಗೆ ಜಖಂಗಳಾದವು. ಸುಮಾರು ೬೦,೦೦೦ ಪ್ರಜೆಗಳು ಮನೆ ಮಠ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಸರ್ಕಾರದವರಿಂದಲೂ ಧರ್ಮಫಂಡುಗಳಿಂದಲೂ ಪೋಷಿಸಲ್ಪಡುತ್ತಿದ್ದಾರೆ. ಗವರ್ನಮೆಂಟಿನವರು ಬಡಬಗ್ಗರ ಸಂರಕ್ಷಣೆಗೋಸ್ಕರ ೫೨,೫೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದರು. ಅಮೇರಿಕದಿಂದಲೂ ವಿಲಾಯತಿಯೇ ಮೊದಲಾದ ಪರರಾಜ್ಯಗಳಿಂದಲೂ ಲಕ್ಷಾಂತರ ರೂಪಾಯಿ ಧರ್ಮ ಫಂಡಿಗೋಸ್ಕರವಾಗಿ ಕಳುಹಿಸಲ್ಪಟ್ಟಿತು.

****

ಹಂಗೇರೀ ರಾಜ್ಯದ ರಾಜಧಾನಿಯಾದ ಬೂಡಪೆಸ್ತ್ ನಗರದಲ್ಲಿ ಕಳೆದ ೨ನೇ ತಾರೀಖಿನ ದಿನ ಭೂಗರ್ಭ ಶಾಸ್ತ್ರ ಪಂಡಿತರಾದ ದೊಡ್ಡ ಮನುಷ್ಯರು ಸಕಲರಾಜ್ಯಗಳಿಂದಲೂ ಹೋಗಿ ಸೇರಿ ಒಂದು ಅಪೂರ್ವವಾದ ಸಭೆಯನ್ನು ನಡೆಸಿದರು. ಭೂಕಂಪಕ್ಕೆ ಒಳಗಾಗುವಂಥಾ ಪರ್ವತ ಶ್ರೇಣಿಯನ್ನು ಸರ್ವೆ ಮಾಡುವದು, ಭೂಕಂಪ ಸಂಭವಿಸಿದಾಗ್ಗೆ ಆ ಪರ್ವತಗಳು ಮೊದಲಿದ್ದದ್ದಕಿಂತಲೂ ಮೇಲಕ್ಕೆ ಬರುವವೋ ಕೆಳಕ್ಕೆ ತಗ್ಗುವವೋ ಗೊತ್ತುಮಾಡುವುದು, ಆ ಪರ್ವತ ಶ್ರೇಣಿಗಳ ಅಡಿಯ ಭೂಮಿಯು ಗಟ್ಟಿಯಾಗಿರುವುದೋ ಎಷ್ಟುಮಟ್ಟಿಗೆ ಅಳ್ಳಕವಾಗಿರುವುದೋ ಕಂಡುಹಿಡಿಯುವದು, ಈ ಮೊದಲಾದ ವಿಷಯಗಳನ್ನು ಕುರಿತು ಚರ್ಚೆಮಾಡಿ ಆ ಸಭಿಕರು ಒಂದು ರಿಪೋರ್ಟನ್ನು ಬರೆದು ಪ್ರಕಟಿಸುತ್ತಾರೆ.

****

ಡಾಕ್ಟರ್ ವೆಲ್ಮ್ಯಾನ್ ಎಂಬಾತನು ಉತ್ತರಧೃವವನ್ನು ಹೋಗಿ ನೋಡಿಕೊಂಡು ಬರುವದಕ್ಕೆ ವಾಯುಮಂಡಲದಲ್ಲಿ ಸಂಚರಿಸುವಂಥಾ ಒಂದು ವಿಮಾನವನ್ನು ಯಂತ್ರಸಹಿತವಾಗಿ ತಯಾರುಮಾಡಿಕೊಂಡು, ಯೂರೋಪ್ ಖಂಡದ ಉತ್ತರ ಮೂಲೆ ಪಟ್ಟಣವಾದ ಸ್ಪಿಟ್ಸ್‌ಬರ್ಗನಿಂದ ಪ್ರಯಾಣಮಾಡುವವನಾಗಿದ್ದದ್ದನ್ನು ಈಚೆಗೆ ನಿಲ್ಲಿಸಿ ಬಿಟ್ಟನೆಂದು ತಂತೀ ವರ್ತಮಾನ ಬಂದಿತಷ್ಟೆ. ಇದಕ್ಕೆ ಕಾರಣವೇನೆಂದರೆ, ಆ ವಿಮಾನದ ಯಂತ್ರಗಳಲ್ಲಿ ಕೆಲವು ತೃಪ್ತಿಕರವಾಗಿರಲಿಲ್ಲ. ಈಗ ಅದನ್ನು ಪ್ಯಾರಿಸ್ ಪಟ್ಟಣದಲ್ಲಿ ಸರಿಪಡಿಸಿಕೊಳ್ಳುತ್ತಿದ್ದಾನೆ. ಒಂದು ವಿಮಾನ ಗೃಹವನ್ನೇ ಕಟ್ಟಿ ಪರೀಕ್ಷೆಗಳನ್ನು ಮಾಡುತ್ತಿದ್ದಾನೆ. ಆತನು ತನ್ನ ಮೇಲ್ಕಂಡ ಉದ್ದೇಶವನ್ನು ಬಿಟ್ಟು ಬಿಡದೆ ಮುಂದಿನ ವರುಷ ಮೇ ತಿಂಗಳಲ್ಲಿ ಪ್ರಯಾಣ ಹೊರಡುವುದು ಖಂಡಿತವೆಂದು ಪ್ರಕಟವಾಗಿದೆ.

****

ರಷ್ಯಾರಾಜ್ಯದಲ್ಲಿ ಗಲಭೆಗಳು ಇನ್ನೂ ಶಮನವಾಗಲಿಲ್ಲ. ಪೋಲೆಂಡಿಗೆ ಸೇರಿದ ಸೀಡ್ಲಿಸ್ ಎಂಬ ಪಟ್ಟಣದಲ್ಲಿ ಜನರು ಸೈನಿಕರನ್ನೂ ಪೋಲೀಸಿನವರನ್ನೂ ಕೊಂದುಹಾಕಿದ್ದಕ್ಕೋಸ್ಕರ ಸರ್ಕಾರದವರು ಬಹು ಕಠಿಣವಾದ ಕ್ರೂರಕೃತ್ಯಗಳನ್ನು ನಡಿಸಿದರು. ಸೈನಿಕರನ್ನು ಪಟ್ಟಣದೊಳಕ್ಕೆ ಬಿಟ್ಟು ೧೦೦ ಜನರನ್ನು ಕೊಲ್ಲಿಸಿದರು; ೩೦೦ ಜನರಿಗೆ ಗಾಯಗಳಾದವು. ಮನೆಮನೆಗೆ ನುಗ್ಗಿ ೧,೦೦೦ ಜನಗಳನ್ನು ಹಿಡಿದು ಖೈದಿನಲ್ಲಿಟ್ಟರು. ವಾರ್ಸಾಪಟ್ಟಣದಲ್ಲೂ ಸೈನಿಕರು ಮನೆಗಳನ್ನು ಪ್ರವೇಶಿಸಿ ಸಾವಿರಾರು ಜನರನ್ನು ಹಿಡಿದಿರುತ್ತಾರೆ. ಚಕ್ರವರ್ತಿಯವರು ೧೧ ಲಕ್ಷ ಎಕರೆಗಳ ಸರ್ಕಾರಿ ಜಮೀನುಗಳನ್ನು ರೈತಪ್ರಜೆಗಳಿಗೆ ಬಿಕರಿಮಾಡಬೇಕೆಂದು ಹುಕುಂಕೊಟ್ಟರು. ಅನೇಕ ಪಟ್ಟಣಗಳಲ್ಲಿ ಜನರು ಯಹೂದ್ಯಪ್ರಜೆಗಳನ್ನು ನಾನಾ ಪ್ರಕಾರವಾಗಿ ಹಿಂಸಿಸಿ ಕಷ್ಟನಷ್ಟಗಳಿಗೆ ಗುರಿಪಡಿಸಿರುತ್ತಾರೆ. ಅನೇಕಾನೇಕರು ರಾಜ್ಯಕ್ರಮಗಳನ್ನೆಲ್ಲಾ ತಲೆಕೆಳಗುಮಾಡಬೇಕೆಂದು ಅಂತರಂಗದಲ್ಲೇ ನಿಶ್ಚಯಿಸಿಕೊಂಡಿದಾರೆ. ಕೆಲವು ಸೈನ್ಯಗಳ ಹುದ್ದೇದಾರರೂ ಈ ಫಿತೂರಿಗೆ ಸೇರಿರುವರು. ಈಗ ಆ ರಾಜ್ಯದಲ್ಲಿ ಮುಖಂಡರೆನಿಸಿರುವ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ಸಮಾಪ್ತಿ ಮಾಡಬೇಕೆಂಬುವುದೂ ಈ ಜನರ ಉದ್ದೇಶವಾಗಿರುತ್ತದೆ.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 57-28

(ಸ್ಕೊಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲತ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈ ಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೇಳಿ ಪಡೆಕೊಳ್ಳಿ.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122--2

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಟ್ಯಾಂಡರ್ಡ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಸೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಶೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಶೇರು ಮೊಬಲಗು ಶೇರು ಒಂದಕ್ಕೆ ಒಂದು ರೂಪಾಯಿ ಸಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ಬರಹಾಸ್ತು ಮಾಡಿಕೊಳ್ಳಬೇಕು.

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್

ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನಲ್ಲಿ.

119 3

೧೯೦೪—೦೫ ನೇ ಇಸವಿ ಸಿವಿಲ್ ನಂಬರು ೨೩೧.

ವಾದಿ—ಗಿರಿಯಣ್ಣ ಉರುಫ್ ಗಿರಿಯಪ್ಪಾಜಿ.

ಪ್ರತಿವಾದಿ—೧ನೆ ಕರೀಮಿಯ್ಯಾ ಉರುಫ್ ಸೈಪ್ ಕರೀಂ ವಗೈರೆ

ಇದರಿಂದ ಮೈಸೂರು ಲಷ್ಕರ್ ಮತ್ತು ಈರೀಗೆರೆ ಮೊಹಲ್ಲಾದಲ್ಲಿ ಇರತಕ್ಕ ಮಹಮ್ಮದ್ ಜಂಗಡಿಪವರಿಗೆ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ನೊಕದ್ದಮೆಯಲ್ಲಿ ವಾದಿಯು ಷಡ್ಯೂಲ್ ಸ್ವತ್ತು ತನಗೆ ಸೇರಿದ್ದೆಂತಲೂ ಪ್ರತಿವಾದಿಯು ಅಕ್ರಮಸ್ವಾಧೀನ ಮಾಡಿಕೊಂಡಿರುವದರಿಂದ ತನಗೆ ಬಿಡಮಾಡಿಸಿಕೊಡಬೇಕೆಂದು ವಗೈರೆ ಈ ಕೋರ್ಟಿನಲ್ಲಿ ವಾದಿಯು ದಾವಾಮಾಡಿರುತ್ತಾರಾಗಿ ಸಿವಿಲ್ ಪ್ರೊಸೀಜರ್ ಕೋಡು ೩೦ನೆ ಸೆಕ್ಷನ್ ಮೇರೆ ಮೇಲ್ಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಹಕ್ಕು ಇರತಕ್ಕ ವಿಶಿಷ್ಟ ಜನಗಳು ೧೯೦೬ ನೆ ಇಸವಿ ಸೆಪ್ಟಂಬರ್ ೧೭ ನೆ ತಾರೀಖು ದಿವಿ ೧೧ ಗಂಟೆಗೆ ಈ ಕೋರ್ಟು ರೂಬರೂಬು ಹಜರಾಗಿ ತಮ್ಮ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳತಕ್ಕದ್ದು ಇರುತ್ತೆ ತಪ್ಪಿದಲ್ಲಿ ಆ ಬಳಿಕ ಯಾರ ತಕರಾರನ್ನೂ ಅಂಗೀಕರಿಸುವದಿಲ್ಲವಾಗಿ ತಿಳಿಪಡಿಸಿದೆ

ತಾ. ೩-೯-೦೬. | (Sd) N. T. GOPALIENGAR, *Principal Munsiff.*

ಷೆಡ್ಯೂಲ್.

ಮೈಸೂರು ಲಷ್ಕರ್ ಮೊಹಲ್ಲಾ ವೀರನಗೆರೆಯಲ್ಲಿ ರೋಮನ್ ಕ್ಯಾಥೋಲಿಕ್ ದೇವಸ್ಥಾನದ ಎದುರಿಗೆ ಇರುವ ಮಟ್ಟೆಕೋಟೆ ಮತ್ತು ಇದಕ್ಕೆ ದಕ್ಷಿಣದಲ್ಲಿರುವ ಅಂಗಳ ಒಟ್ಟು ಚೌಕಟ್ಟು: ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ವಾದಿಯು ಹಾಲಿ ವಾಸವಾಗಿರುವ ಮನೆ, ಉತ್ತರಕ್ಕೆ ಹೈರೋಡು, ದಕ್ಷಿಣಕ್ಕೆ ಗಲ್ಲಿ ಈ ಮಧ್ಯೆ ಇರುವ ಮಟ್ಟೆಕೋಟೆ ಮನೆ ಮತ್ತು ಅಂಗಳ.

ತಾ. ೩-೯-೦೬. | (Sd) N. T. GOPALIENGAR, *Principal Munsiff.*

ಆಂಗ್ಲೇಯ ವೈದ್ಯಶಾಸ್ತ್ರ.

123 2

ಇದರ ಕ್ರಯ ೧—೮—೦ ಇಂದ ೧—೦—೦ಗೆ ಇಳಿಸಲ್ಪಟ್ಟಿದೆ ಈ ಪುಸ್ತಕವು ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಬರೆಯಲ್ಪಟ್ಟಿದೆ ವಿಳಾಸ.—ಎಂ ಗುರುರಾವ್, ಫಸ್ಟ್ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟು; ತರೀಕೆರೆ, ಕಡೂರು ಡಿಸ್ಟ್ರಿಕ್ಟು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ	ರೂ. ೧—೧೨—೦
,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ಬರೆಯುವಾಗ ತಮ್ಮ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಉಪಾಧ್ಯಾಯರುಗಳಿಗೆ ನೋಟಿಸ್

ಬಾಲಬೋಧೆ! ಸರ್ಕಾರದ ಬಾಲಬೋಧೆ

೧ ನೇ ಭಾಗ!! ಬಾಲಬೋಧೆ!!!

121 5

ಮೇಲ್ಕಂಡ ಪುಸ್ತಕವು ದೊರೆಯದೆ ಉಪಾಧ್ಯಾಯರುಗಳ ಸಂಕಟವನ್ನು ವಿವರಿಸಲಶಕ್ಯವಾಗಿದೆ ಉಪಾಧ್ಯಾಯರುಗಳು ಸರ್ಕಾರದ ೧ ನೆಯ ಭಾಗದ ಬಾಲಬೋಧೆಗೆ ಕಾದೂ ಕಾದೂ ಸಾಕಾಯಿತು ಅದು ಶೀಘ್ರದಲ್ಲಿ ಬರುವ ಹಾಗೆ ಕಾಣಲಿಲ್ಲ. ಈ ತೊಂದರೆಗಳನ್ನೆಲ್ಲಾ ತಪ್ಪಿಸುವದಕ್ಕೆ ನಾವು ಅತ್ಯುತ್ಕೃಷ್ಟವಾದ ಬಾಲಶಿಕ್ಷೆ ಒಂದನೆ ಭಾಗವನ್ನು ಪ್ರಕಟಿಸಿರುತ್ತೇವೆ. ಇದರಲ್ಲಿ ನಾಲ್ವತ್ತು ಚಿತ್ರಗಳಿರುತ್ತವೆ. ಕಾಗದವು ಮತ್ತು ಬೈಂಡು ಬಹು ಸೊಗಸಾಗಿವೆ. ಇದರ ಕ್ರಯ ಒಂದೇ ಆಣೆ. ವಿ ಪಿ. ಪಿ. ಮೂಲಕ ತರಿಸಿಕೊಳ್ಳುವವರು ನಾಲ್ಕು ಪ್ರತಿಗಳಿಗಿಂತ ಹೆಚ್ಚಾಗಿಯೇ ತರಿಸಿಕೊಳ್ಳಬೇಕು. ನೂರು ಪ್ರತಿಗಳನ್ನು ಒಟ್ಟಾಗಿ ತರಿಸಿಕೊಂಡರೆ ಸೇಕಡ ೧೨॥ ರಂತೆ (ರೂಪಾಯಿಗೆ ಎರಡಾಣೆಯಂತೆ) ಕಮಿಷನ್ ಕೊಡುತ್ತೇವೆ. ಪುಸ್ತಕದಲ್ಲಿ ಯಾವ ಮತಸಂಬಂಧವಾದ ಬೋಧನೆಯೂ ಇಲ್ಲ "ಸತ್ಯಂ ಜಯತಿ ಧರ್ಮೋ ವರ್ಧತೆ" ಎಂಬದನ್ನು ದೃಢಪಡಿಸುವಂತೆ ಈ ಪುಸ್ತಕವು ಆಗಲೇ ಅನೇಕ ಸರ್ಕಾರಿ ಮತ್ತು ಪ್ರೈವೆಟ್ ಸ್ಕೂಲ್ ಗಳಲ್ಲಿ ಸೇರಿಸಲ್ಪಟ್ಟಿರುತ್ತದೆ. ಹೆಡ್ ಮಾಸ್ಟರುಗಳು ಪುಸ್ತಕವನ್ನು ನೋಡಬೇಕಾದರೆ ಇದೇ ತಿಂಗಳು ೨೫ನೇ ತಾರೀಖಿನೊಳಗಾಗಿ ನಮಗೆ ಬರೆದುಕೊಂಡ ಪಕ್ಷದಲ್ಲಿ ಸ್ಯಾಂಪಲ್ (ಉಚಿತಾರ್ಥವಾದ ಒಂದು ಪ್ರತಿ) ಪುಸ್ತಕಗಳನ್ನು ಕಳುಹಿಸಿಕೊಡುತ್ತೇವೆ

ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವದು.

120 3

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ದೇವಾಗ್ರಹದ ಸ್ಥಿತಿಯು ಪೈಕಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರಣೆ	ಸರ್ವೆ ನಂಬರು.	ಬೀಜವರಿ. ಎಕರೆ	ಗುಂಟೆ	ಆಕಾರ ರೂ.
ಕಾವೇರಿನಾಲೆ ಕೆಳಗಿನ ಗದ್ದೆಗಳು.	೭೦	೪	,,	೨೩
	೧೦೩	೬	೨೨	೩೩
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೭	೩೭	೪೮
ಜುಮ್ಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರಡಿ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಮಾಯಿದೆ ಒಳಗಾಗಿ ಆಲೋಚಿಸಲಾಗುತ್ತದೆ.

ಜಮೀನಿನ ವಿವರಣೆ.	ಸರ್ವೆ ನಂಬರು.	ಬೀಜವರಿ ಎಕರೆ	ಗುಂಟೆ	ಆಕಾರ. ರೂ.
ಕಾವೇರಿ ನಾಲೆ ಕೆಳಗಿನ ಗದ್ದೆಗಳು	೧೦೦	೩	೦೭	೨೪
	೧೦೦	೩	೯	೨೩
	೧೦೨	೩	೯	೨೩
	೬೦	೫	೩೭	೪೩
ಜುಮ್ಲಾ	೪	೧೫	೩೦	೧೧೩
ಮೇಲೆ ಕಂಡ ಜಮೀನುಗಳಿಗೆ ಹತ್ತಿರುವ ಧೃವಪ್ಪೆರು ಬಾಗಾಯಿತು	೭೦	೩	೪	೨೮
	೭೨	೪	೨೫	೭೨
	೭೩	೪	೧೬	೪೦
	೫೯	೪	೩೪	೩೯
ಜುಮ್ಲಾ	೪	೧೬	೩೯	೧೪೯
ಒಟ್ಟು ಜುಮ್ಲಾ	೧೩	೬೧	೯	೪೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ಪೆನ್ಷನ್ ಡೆಪ್ಯುಟಿ ಕಲೆಕ್ಟರು ಎಂ. ಶ್ರೀನಿವಾಸಯ್ಯಂಗಾರ್ರಿಗೆ ತಲಪಿಸಬೇಕು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—9—1906 ರಿಂದ 14—9—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಳೆದವಾರ	ಈ ವಾರ ಸಂಖ್ಯೆ
ಬೆಂಗಳೂರು ಪಟ್ಟಣ	[illegible]	[illegible]	7	[illegible]
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	17	13	17	10
ಮೈಸೂರು ,,	5	4	0	[illegible]
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು	[illegible]	1	2	0
ತುಮಕೂರು ಡಿಸ್ಟ್ರಿಕ್ಟು	3	1	0	0
ಹಾಸನ ,,	35	18	0	0
ಚಿತ್ರದುರ್ಗ ,,	0	0	0	[illegible]
ಕಡೂರ್ ,,	88	69	4	[illegible]
ಶಿವಮೊಗ್ಗ ,,	0	0	22	14
ಜುಮ್ಲಾ	170	121	53	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಅಶ್ವೀಜ ಶುದ್ಧ ಪಾಡ್ಯ ಗುರುವಾರದಿಂದ ಆಶ್ವೀಜ ಬಹುಳ ಪಾಡ್ಯಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಸೆಪ್ಟಂಬರ್ ಮತ್ತು ಅಕ್ಟೋಬರ್.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.	ತೇದಿ ಅಶ್ವೀಜ
27	ಗುರು	§	ಪಾಡ್ಯ	37-20	ಉತ್ತರ	31 18	12
28	ಶುಕ್ರ	:	ಏಕಾದಶಿ	33-12	ಶ್ರ	31-48	13
29	ಶನಿವಾ	:	ದ್ವಾದಶಿ	29-56	ಧ	30-19	14
30	ರವಿವಾ		ತ್ರಯೋ	27-37	ಶ	29-18	15
1	ಚಂದ್ರ		ಚತುರ್ದಶಿ	26-50	ಪೂರ್ವಾಭಾ	30 38	16
2	ಕುಜ	*	ಪೌರ್ಣಮಿ	27-2	ಉತ್ತರಾ	32 10	17
3	ಬುಧ	;	ಪಾಡ್ಯ	28-10	ರೆ	35-46	18

§ ವಿಜಯದಶಮಿ, ಶಮೀಪೂಜ, ಹಯಗ್ರೀವಪೂಜ ಸರ್ವತ್ರ ಏಕಾದಶಿ, ವೆಂಕಟೇಶಜಯಂತಿ, ತುಳಸೀವ್ರತಂ ; ಪದ್ಮನಾಭದ್ವಾದಶಿ, ಗೋದ್ವಾದಶಿ, ಶನಿಪ್ರದೋಷ * ಚೆಟ್ಟುವಲ್ಲಿ ಶ್ರೀಚಾಮರಾಜಮುಡಿ ಉತ್ಸವ ಮನ್ವಾದ್ಯಪು, ಉತ್ಪಾತಯೋಗ

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು.
ಕಬ್ಬೇ ಅಕ್ಕಿ ಪಲ್ಲ ೧ಕ್ಕೆ	ರೂ	೧೪-೦-೦	೧೩-೮-[illegible]
ಕೆಂಬೂತಿ ಅಕ್ಕಿ ಅವಲ್ ..	..	೧೩-೮-೦	೧೩-೦-[illegible]
,, ದುಯ್ಯಂ	..	೧೩-೮-೦	೧೨-೮-[illegible]
ಜೀಪ್ರಾಣಿ ಅಕ್ಕಿ .	..	೧೩-೪-೦	೧೩-೦-[illegible]
ಸಣ್ಣಕ್ಕಿ ಅವಲ್ ..	..	೧೫-೮-೦	೧೭-೮-[illegible]
,, ದುಯ್ಯಂ ..	..	೧೪-೦-೦	೧೫-೦-[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	.	೧೨-೬-೦	೧೨-೦-[illegible]
,, ದುಯ್ಯಂ ..	.	೧೧-೮-೦	೧೧-೦-[illegible]
ಹೈದ್ರಾಗಿ ಪಲ್ಲ ೧ಕ್ಕೆ ..	..	೭-೪-೦	೭-೪-[illegible]
ಕಾರಾಗಿ	.	೭-೪-೦	೬-೧೨-[illegible]
ಜೋಳ	..	೭-೮-೦	೮-೧೦-[illegible]
ಹಲಸಂದೆ ಪಲ್ಲ ೧ಕ್ಕೆ ..	..	೧೨-೦-೦	೧೨-೮-[illegible]
ಬಿಳೀ ಅವರೆ ..	..	೧೦-೦-೦	೧೦-೪[illegible]
ಹೆಸರು . ..	..	೧೩-೦-೦	೧೩-೦-[illegible]
ಉದ್ದು	..	೧೨-೪-೦	೧೨-೨-[illegible]
ಕಡಲೆ	..	೧೨-೦-೦	೧೦-೧೪-[illegible]
ಎಳ್ಳು ಸೆ. ೧೨೭ ಕ್ಕೆ ..	..	೨೦-೮-೦	೨೨-೧೨-[illegible]
ಹುರಳಿ	..	೮-೮-೦	೧೦-[illegible]
ಹರಳು ೧೨೭ ಸೇರಿಗೆ ..	..	೧೯-೦-೦	೧೩-೪-[illegible]
ಸೀಗೇಕಾಯಿ ಮಣ ೧ಕ್ಕೆ	..	೨-೨-೦	೨-೮-[illegible]
ಮೆಣಸಿನಕಾಯಿ ..	..	೪-೦-೦	೩-೧೨-[illegible]
,, ದುಯ್ಯಂ ..	..	೩-೪-೦	೩-[illegible]
ಬೆಲ್ಲ ದೊಡ್ಡ ಅಚ್ಚು ..	..	೬-೪-೦	ಮ ೧-೧೪-[illegible]
ಒಳ್ಳೆಣ್ಣೆ ಮಣ ೧ಕ್ಕೆ ..	..	೬-೮-೦	೫-೮-[illegible]
ಹರಳೆಣ್ಣೆ ,, ..	..	೬-೦-೦	೫-[illegible]
ಕೊತ್ತುಂಬರಿ ಪಲ್ಲ ೧ಕ್ಕೆ ..	..	೧೧-೦-೦	೧೦-[illegible]
ಉಪ್ಪು ,, ..	..	೬-೦-೦	೬-೦೪-[illegible]
ಹುಣಸೇ ಹಣ್ಣು ..	..	೦-೧೪-೦	೦-೧-[illegible]
,, ಹಳೇದು ..	..	೦-೮-೦	೦-೧-[illegible]
ತುಪ್ಪ ಮಣ ೧ಕ್ಕೆ ..	..	೧೬-೮-೦	೧೫-೮-[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫-೪-೦	೪-[illegible]
ತೆಂಗಿನಕಾಯಿ ೧೦೦ ಕ್ಕೆ	..	೬-೮-೦	೪-೦-[illegible]
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೦-೧೪-[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	..	೦-೧೨-೦	೦-೧೦-[illegible]
ಚಿನ (ಪೌನ್) ಕೆಂಪು	..	೧೫-೪-೦	೧೫-೩-[illegible]
,, ,, ಪವನು	..	೧೫-೧೦-೦	೧೫-೦೩-[illegible]
,, ,, ಗಟ್ಟಿ ತೊಲ ೧ಕ್ಕೆ	..	೨೩-೦-೦-೦	೨೪-[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	೮೩-[illegible]

Printed and published by the Rev. E. W. THOMPSON, M.A., the Proprietor and Manager, Wesleyan Mission Press, Mysore. 27/9/1906.

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ — ಮೈಸೂರು—ಸರ್ ೧೯೦೬ ನೇ ಇಸವಿ ಅಕ್ಟೋಬರ್ ತಾರೀಖು ೪ ನೇ ಗುರುವಾರ. — ಸಂಚಿಕೆ ೧೮

ಇಂಡಿಯದ ದೊಡ್ಡ ನೋವುಹರ.

86-19

ಮನೋವಿಗಾವರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ಉಳುಕು, ತಲಭಾರ, ಕೆಮ್ಮುಗಳು, ಎದೆನೋವು, ಶೀತ, ಬಣಗೆಮ್ಮು, ಗಂಟಲು, ಕೀಲು ಹಿನ್ನು ಎದೆಗಳ ನೋವು, ಅಸ್ತ್ರ, ಈ ಪ್ರಕಿ ... ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯವಡ ... ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿ ... ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ... ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ... ಮಾಡುವುದು. ಉಪಯೋಗಿಸುವ ವಿಧಾನ ಮುಂತಾ ... ಬಾಟ್ಲ ಜೋತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ... ಇದ್ದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೋಲ ... ಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿ ... ಬರದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವನಲ್ಲ ... ಯಾರಿಗೂ ವ್ಯಸನಪಡುವುದಿಲ್ಲ. ... ದರ ಗುಣವು ಅಷ್ಟು ಅನುಭ ...

ಕ್ರಯ —೧ ಬಾಟ್ಲಿಗೆ ೧೨ ಆಣೆ, ೩ ಕ್ಕೆ ೨ ರೂಪಾಯಿ, ... ೩ ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ... ಮೂರು ಬಾಟ್ಲ ವರಿಗೆ ೩ ಆಣೆ.

ವಿಳಾಸ.—ಎಫ್ ಡಬ್ಲಿಯು. ಆರ್ಗ, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್

ಹೋಮಿಯೋಪಿಯ.

ಜಗಲ್ಲಾತನೆ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ... ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ ... ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾ ... ವೆಂಬುವದು ಲೋಕಪ್ರಸಿದ್ಧವಾಗಿದೆ.

ಕೆಲವು ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ ... ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟ ... ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟ್ ... ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ... ವಾದ.

ಕೆಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾ ... ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊಗಳುವದು, ... ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ... ಗಾಯಗಳು, ಗಜ್ಜಿಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ... ಹುಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟು ... ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ... ಸುತ್ತವೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ...

ಕ್ರಯ.— ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ರೂ. ... ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ... ತಾಗಿ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ... ಡಬ್ಬಿದಲ್ಲಿರುವದಕ್ಕಿಂತ ೪ ರಷ್ಟು ಹೆಚ್ಚು ಔಷಧವಿರುತ್ತೆ ೨—೮ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ... ಬೀಳುತ್ತೆ

****

ಹೋಮಿಯೋಪಿಯಾ ಯೂಕಲಿಪ್ಟಸ್ ...

... ಕೆಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು. ... ಇದನ್ನು ಹಚ್ಚಿಕೊಂಡು ಇದರಲ್ಲಿ ಹೋಮಿಯೋ ... ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ ಅದಕ್ಕಿಂತಲೂ ... ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ... ಬಹು ಬೇಗನೆ ಸೇರಿಸಿಕೊಳ್ಳಲಿಲ್ಲದು. ಡಬ್ಬಿಗಳಲ್ಲಿ ತುಂಬಿ ... ೧ ರೂ ಗೂ ಒಂದರಂತೆ ವಿಕರಿ ಮಾಡಲ್ಪಡುವದು. ... ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫು ಎಲ್ಲಾ ... ದೊರೆಯುವದು

ಔಷಧಗಳ ವಿವರ ... [illegible] ... ಗಳನ್ನು ... [illegible]

ವಿಳಾಸ:—ಹೋಮಿಯೋಪಿಯಾ ಕಂಪನಿ, ... [illegible]

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿದು ಪುಡಿ ಮಾಡಿದ್ದು ಅಥವಾ ಆಗತಾನೆ ಹುರಿದದ್ದು.

... ತಯಾರಾದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

86 84

ವ್ಯಾಪಾರದ — ಹೆಗ್ಗುರ್ತು — B C

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಅಂಥವರಿಗೆ ಅನುಕೂಲವಾದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸೆಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

101-10

ಇದು ಸಾಧಾರಣ ಜ್ವರ, ಹಳೇಜ್ವರ, ಮೋರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜೈಲಿನಲ್ಲಿರುವ ಮಧಾಮಕ್ ... ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ ... ನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು ದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಅಮೃತ ಕರ್ಪೂರ.

Amrutum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆ ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಕೊಡಲಾಗುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಸ್ರಿಯ ... ಕರ್ಪೂರವನ್ನು ನಾನೂ ನನ್ನ ಕಾಪೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಆ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧ ... ಬರೆದಿದ್ದಾರೆ.

ಈ ಎರಡು ಔಷಧಗಳೂ ಊರುಗಳಲ್ಲಿರುವ ... ಕೆಲವು ದೊಡ್ಡ ... ಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ... ದೊರೆಯುತ್ತವೆ. ಇದಲ್ಲದೆ ಕೆಳಗಿನ ... [illegible]

... [illegible]

... [illegible]

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104 10

ಶಾಲೆ, ಯಾ ಸುಂದರ ಚಿತ್ರಗಳುಳ್ಳದ್ದು. ನಮೂನೆ ೧೬ ಕಾರ್ಡು ಗಳಿಗೆ ೧॥ (ಸ್ಟಾಂಪುಗಳು ಕಳುಹಿಸಿ), ೧೦೦ ಕಾರ್ಡುಗಳಿಗೆ ೪ ಆಣೆ. ಸ್ವದೇಶಿ ಮೆಂಥಾಲ್ ಸೀಸೆಗೆ ೪ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಹಂಗೇರಿಯನ್ ಟೋಪಿಗಳು, ಇವು ಗಳಿಗೆ ಟಪಾಲಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲೆ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟಾಂಪು ಇಟ್ಟು ಬರೆದುಕೊಳ್ಳತಕ್ಕದ್ದು. Bhatt & Co., Poona city.

ಮುಂಬಯಿ ವ್ಯಾಪಾರವಾಡಲಿಚ್ಛಿಸುವವರು.

35-19

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಥೋಕ್ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಸೆಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟ್ ಮಾಂಡ್ವಿ, ಮುಂಬಯಿ.

ಒಕ್ಕಲಿಗರ ಸಂಘ.

98-18

ಒಕ್ಕಲಿಗ ಮಹಾಜನರಿಗೆಲ್ಲಾ ಪ್ರಾರ್ಥನೆ.

ನಮ್ಮ ದೇಶದಲ್ಲಿ ವ್ಯವಸಾಯದಿಂದಲೇ ಮುಖ್ಯವಾಗಿ ಜೀವಿಸುತ್ತಿರುವ ಒಕ್ಕಲಿಗರ ಮಂಡಲಿಯು ಇತರ ಮಂಡಲಿಗಳಿಗಿಂತಲೂ ಅಧಿಕ ಸಂಖ್ಯೆಯುಳ್ಳದ್ದಾಗಿದ್ದರೂ ಈಗಿನ ಕಾಲಕ್ಕೆ ತಕ್ಕ ವಿದ್ಯಾಭ್ಯಾಸವು ಸಾಲದೆ ಇರುವುದರಿಂದ ಅಭಿವೃದ್ಧಿಸ್ಥಿತಿಗೆ ಬಾರದೆ ಇರುವುದು ಎಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಪ್ರಕೃತ ಈ ಅವ್ಯವಸ್ಥೆಯನ್ನು ಹೋಗಲಾಡಿಸಿ, ನಮ್ಮವರನ್ನು ಉನ್ನತಸ್ಥಿತಿಗೆ ತರುವದಕ್ಕಾಗಿ ಈ ಮೇಲ್ಕಂಡ ಸಂಘವು ಬೆಂಗಳೂರಿನಲ್ಲಿ ಕೆಲವರು ದೊಡ್ಡ ಮನುಷ್ಯರಿಂದ ಸ್ಥಾಪಿಸಲ್ಪಟ್ಟಿರುವುದಲ್ಲದೆ, ಈ ಸಂಘದ ಉದ್ದೇಶವಾದ ಒಕ್ಕಲಿಗರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡಬೇಕೆಂದು ೧೯೦೬ ನೇ ಇಸವಿ ಏಪ್ರಲ್ ತಿಂಗಳು ೨೯ ನೇ ತಾರೀಖಿನಲ್ಲಿ ಬೆಂಗಳೂರು ಕೋಟೆಯ ಬಾಗಲು ಬಳಿ ಇರುವ ಮ॥ ರಾ॥ ದೊಡ್ಡಣ್ಣಶೆಟ್ರುವರ ಶ್ರೀಲಕ್ಷ್ಮೀನರಸಿಂಹಸ್ವಾಮಿ ಧರ್ಮಶಾಲೆಯಲ್ಲಿ ಒಂದು ಸಭೆ ಸಹ ಸೇರಿತ್ತು. ಈ ಸಭೆಯಲ್ಲಿ ಸೇರಿದ್ದ ದೊಡ್ಡ ಮನುಷ್ಯರೆಲ್ಲರೂ, ಮೈಸೂರು ಸಂಸ್ಥಾನ ಮತ್ತು ಇದಕ್ಕೆ ಸಮೀಪವಾಗಿರುವ ಬ್ರಿಟಿಷ್ ರಾಜ್ಯದ ಒಕ್ಕಲಿಗ ಮಂಡಲಿಯ ಮುಖಂಡರೆಲ್ಲರನ್ನೂ ಬರುವ ಅಕ್ಟೋಬರ್ ತಿಂಗಳು ೬, ೭, ೮ ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಮಹಾ ಸಭೆಗೆ (ಕಾನ್ಫರೆನ್ಸ್) ಬರಮಾಡಿಕೊಂಡು, ಒಕ್ಕಲಿಗರ ವಿದ್ಯಾಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಮಾಡಬೇಕೆಂದು ಇತ್ಯರ್ಥ ಮಾಡಿರುವುದಲ್ಲದೆ, ಮಹಾ ಸಭೆಗೆ ದಯಮಾಡಿಸುವ ದೊಡ್ಡ ಮನುಷ್ಯರಿಗೆ ಭೋಜನ, ಬಿಡಾರ ವಗೈರೆ ಸೌಕರ್ಯಗಳನ್ನು ಒದಗಿಸಲು ಒಂದು ಕಾರ್ಯನಿರ್ವಾಹಕ ಸಭೆಯನ್ನೂ ಸಹ ನೇಮಿಸಿರುತ್ತಾರೆ. ಆದುದರಿಂದ ಅಭಿಮಾನ ಶಾಲಿಗಳಾದ ತಾವೆಲ್ಲರೂ ಈ ಮಹಾ ಕಾರ್ಯಕ್ಕಾಗಿ ಯಾವ ಕೆಲಸವಿದ್ದರೂ ಬಿಟ್ಟು ಬರುವುದಲ್ಲದೆ, ಜಾಗ್ರತೆಯಾಗಿ ತಮ್ಮ ಬರುವಿಕೆಯನ್ನು ಮತ್ತು ಬರುವವರ ಹೆಸರುಗಳನ್ನೂ ಕಾಗದದ ಮೂಲಕ ನಮಗೆ ದಯವಿಟ್ಟು ತಿಳುಹಿಸಬೇಕೆಂದು ಅತ್ಯಂತ ವಿನಯದಿಂದ ಪ್ರಾರ್ಥಿಸುವ

ತಮ್ಮ ವಿಧೇಯರು,

ಲಾಲ್‌ಬಾಗ್ ರೋಡು, ಬೆಂಗಳೂರು. — ಎಂ ಸುಬ್ಬಯ್ಯ, ಬಿ. ಎ., ಕೆ. ಹೆಚ್. ರಾಮಯ್ಯ, ಬಿ ಎ,

ಒಕ್ಕಲಿಗರ ಸಂಘದ ಜಾಯಿಂಟ್ ಸೆಕ್ರೆಟರಿಗಳು.

ಷರಾ:—ಒಕ್ಕಲಿಗರ ಸಂಘದ ಮತ್ತು ವಿದ್ಯಾಭ್ಯಾಸದ ವಿಷಯಗಳನ್ನು ಕುರಿತು ಒಂದು ಸಣ್ಣ ಪುಸ್ತಕವು (ಪಾಂಫ್ಲೆಟ್) ಛಾಪಿಸಲ್ಪಟ್ಟಿದೆ ಈ ಪುಸ್ತಕ ಬೇಕಾದವರು ಮೇಲ್ಕಂಡ ಸೆಕ್ರೆಟರಿಗಳಿಗೆ ಒಂದು ಕಾರ್ಡನ್ನು ಬರೆದರೆ, ಕೂಡಲೇ ಒಂದು ಪ್ರತಿಯು ಮಾಫಿಯಾಗಿ ರವಾನಿಸಲ್ಪಡುವುದು. ಇದೂ ಅಲ್ಲದೆ, ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಖುದ್ದಾಗಿ ವಿಚಾರಿಸಲು ಕೆಲವರು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೆ ಸಂಚಾರಹೊರಟಿದ್ದಾರೆ. ಇವರನ್ನು ತಾಲ್ಲೂಕುಗಳಿಗೂ ಬರಮಾಡಿಕೊಳ್ಳ ಅಪೇಕ್ಷಿಸುವವರು ತಮ್ಮ ಕೋರಿಕೆಯನ್ನು ಜಾಗ್ರತೆಯಾಗಿ ಮೇಲ್ಕಂಡ ಸೆಕ್ರೆಟರಿಗಳಿಗೆ ಬರೆದು ತಿಳಿಸಬೇಕು.

ಹಾಸನದ ಟೋಪಿಗಳು.

123 1

ಒಳ್ಳೇ ಸಮಯ ಬಿಡಬೇಡಿರಿ

ಮೊದಲು ಹಾಸನದಲ್ಲಿದ್ದು ಹೆಸರುವಾಸಿ ಹೊಂದಿರುವ ಟೋಪಿಗಳನ್ನು ಮಾಡಿಸುತ್ತಿದ್ದ ಕಿಂಗ್ ಜೇಮ್ಸಾಯವರು, ಈಗ ತುಮಕೂರಲ್ಲಿ ಶ್ರೇಷ್ಠತರವಾದ ಟೋಪಿಗಳನ್ನು ಮಾಡಿಸುತ್ತಿದ್ದಾರೆ ಇವರಲ್ಲಿ ಮಧ್ಯಮತರದ ಟೋಪಿಗಳು ಹೆಚ್ಚಾಗಿ ಉಳಿದಿರುವದರಿಂದ ಇವನ್ನು ಹಿಂದು ತಿಂಗಳ ವರೆಗೆ ಕಡಿಮೆ ಕ್ರಯಕ್ಕೆ ವಿಕ್ರಯ ಮಾಡುತ್ತಾರೆ ಹ್ಯಾಗಂದರೆ —

ಮೊದಲಿದ್ದ ಕ್ರಯ ಡಜನ್ 1ಕ್ಕೆ	10½	ರೂಪಾಯಿ.
ಈಗ ಮಾರುವ ಕ್ರಯ „	9	ರೂಪಾಯಿ

ಅನ್ನೊಂದು ತರದವುಗಳು.

ಮೊದಲಿದ್ದ ಕ್ರಯ ಡಜನ್‌ಗೆ	9	ರೂಪಾಯಿ
ಈಗ ಮಾರುವ ಕ್ರಯ	7½	ರೂಪಾಯಿ

ಮಿಶ್ರವಾದ ಬಣ್ಣದವುಗಳು

ವಿಳಾಸ —ಕಿಂಗ್ ದೊರೆಸಾನಿಯವರು

ಹಾಸನದ ಟೋಪಿ ಮ್ಯಾನೇಜರ್, ತುಮಕೂರು

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

95 14



ಬೆನ್ನಲುಬಿನಲ್ಲಿನ ನೋವು ಪಕ್ಕಗಳಲ್ಲಿ ಆಗುವ ಸೆಳೆತ ಬಂದುಗಳಲ್ಲಿ ಹುಟ್ಟುವ ನೋವು, ಸಳಕು ಜಜ್ಜಿದ ಕಡೆಗಳ ನೋವು, ಬಾಯ ನೋವು— ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ ಯಾವುದೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು ಕಠಿಣವಾಗಿ ಸೆಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ **ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.**

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೈಯೊಳಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವ್ಯಾಧಿಯು ಪುನಃ ಹುಟ್ಟದ ಹಾಗೆ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವದು	ಸಣ್ಣ ಶೀಸೆಗೆ ೧ ರೂಪಾಯಿ	ದೊಡ್ಡ ಶೀಸೆಗೆ ೨ ರೂಪಾಯಿ

ವೃತ್ತಾಂತ ಪತ್ರಿಕೆ.

೧೯೦೬ ನೇ ಇಸವಿ ಅಕ್ಟೋಬರ್ ತಾ|| ೪ ನೇ ಗುರುವಾರ

ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಉಪನ್ಯಾಸವು

ಮೈಸೂರು ಸಂಸ್ಥಾನದ ದಿವಾನರವರು ಕಳೆದ ವರುಷದಲ್ಲಿ ನಡೆದ ರಾಜ್ಯಭಾರದ ವಿಷಯವಾಗಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಓದಿ ಹೇಳಿದ ಉಪನ್ಯಾಸದಲ್ಲಿ ಮುಖ್ಯ ಭಾಗಗಳನ್ನು ಬೇರೊಂದು ಕಡೆಯಲ್ಲಿ ಮುದ್ರಿಸಿರುತ್ತೇವೆ ಇಲ್ಲಿ ನಮಗೆ ತೋರಿದ ಒಂದೆರಡು ವಿಷಯಗಳನ್ನು ಮಾತ್ರ ಸೂಚಿಸುವೆವು ಕಳೆದ ಸಾಲಿನ ರಾಜ್ಯಭಾರದಲ್ಲಿ ನಡೆದ ಕೆಲವು ವಿಶೇಷ ಕಾರ್ಯಗಳನ್ನು ದಿವಾನರವರು ತಿಳಿಸಿದುದಲ್ಲದೆ ಮುಂದಣ ವರ್ಷದಲ್ಲಿ ಉತ್ಸವಪೂರ್ವಕವಾಗಿ ನಡೆಸಬೇಕಾಗಿರುವ ಕೆಲವು ಕಾರ್ಯಗಳನ್ನೂ ತಿಳಿಯಪಡಿಸಿದರು ಸಿವಿಲ್ ಸರ್ವಿಸ್ ಉದ್ಯೋಗಗಳಿಗೆ ಸಮರ್ಥರಾದವರನ್ನು ನೇಮಿಸುವ ವಿಷಯದಲ್ಲಿ ಹೊಸ ಕಾನೂನುಗಳನ್ನು ಮಾಡಿರುವದಲ್ಲದೆ, ಕಡಮೆ ದರ್ಜೆಯ ಉದ್ಯೋಗಸ್ಥರನ್ನೂ ಬಡತಿ ಮಾಡುವ ವಿಷಯದಲ್ಲಿ ಮುಸೂದೆ ಕಾನೂನುಗಳನ್ನು ಏರ್ಪಡಿಸಿರುವುದನ್ನು ನೋಡುವಲ್ಲಿ ನಮ್ಮ ಶ್ರೀಮನ್ಮಹಾರಾಜರವರ ಸರ್ಕಾರದವರು ರಾಜ್ಯಭಾರವನ್ನು ನಡಸುವಂತೆ ಉದ್ಯೋಗಸ್ಥರನ್ನು ಕುರಿತು ಕೇವಲ ವಿಚಾರಶೀಲರಾಗಿದ್ದಾರೆಂದು ಗೊತ್ತಾಗುತ್ತದೆ.

ಇನ್ನೊಂದು ವಿಷಯವೇನೆಂದರೆ—ಸರ್ಕಾರದ ಖಜಾನೆಗಳಲ್ಲಿ ಲೇವಣಿಯಾಗಿರುವ ಹಣವು ಕ್ರಮೇಣ ಕಡಮೆಯಾಗುತ್ತ ಬಂದಿರುವುದರಿಂದ ಸರ್ಕಾರದವರು ತಮ್ಮ ಆಯವ್ಯಯಗಳನ್ನು ಕುರಿತು ದೀರ್ಘಾಲೋಚನೆ ಮಾಡಬೇಕಾಗಿ ಬಂತು ಮೈಸೂರು ಸಂಸ್ಥಾನವು ದಿವಾಳಿಯಾಗಿ ಹೋಯಿತೆಂದು ಹೇಳುವುದಕ್ಕೆ ಆಸ್ಪದವೇ ಇಲ್ಲವಷ್ಟೆ ಆದರೆ ಆದಾಯವು ವರುಷ ವರುಷವೂ ಹೆಚ್ಚುತ್ತಲಿದೆ, ಸಾಲವು ವಿಶೇಷವಾಗಿಲ್ಲ ಹೀಗಿದ್ದರೂ ಕೂಡ ಬಹುಕಾಲದಿಂದ ಲೇವಣಿಯಾಗಿನ್ದ ದ್ರವ್ಯವು ಹೆಚ್ಚು ಕಡಮೆ ಎಲ್ಲವೂ ವ್ಯಯವಾಗಿ ಹೋಗಿರುವ ಕಾರಣ ಸಂಸ್ಥಾನದ ವ್ಯಯವನ್ನು ಸಾಧ್ಯವಾದ ಮಟ್ಟಿಗೂ ಕಡಮೆಮಾಡುವುದೂ ಲೆಖ್ಖಗಳನ್ನು ಮೊದಲಿಗಿಂತಲೂ ತೃಪ್ತಿಕರವಾದ ರೀತಿಯಲ್ಲಿ ಇಡುವುದೂ ಅವಶ್ಯಕವೆಂದು ಕಂಡುಬಂದಿದೆ ಲೇವಣಿಯ ಹಣವನ್ನು ಅತಿ ಲಾಭಕರವಾದಂಥ ಕೆಲಸಗಳಿಗಾಗಿಯೇ ವಿನಿಯೋಗಿಸಿರುವುದೂ ಇವುಗಳಿಂದ ಸಂಸ್ಥಾನಕ್ಕೆ ಈಗಾಗಲೇ ವಿಶೇಷ ಲಾಭವು ಬಂದಿರುವುದೂ ಸಕಲರಿಗೂ ವೇದ್ಯವಾಗಿದೆ ಮುಂದೆ ಮೆ|| ದಿವಾನ್ ಮಾಧವರಾಯರು ವ್ಯಾಪಾರಾಭಿವೃದ್ಧಿಯೇ ಮೊದಲಾದ ವಿಶೇಷವಾದ ಬಾಬುಗಳಲ್ಲಿ ಆದಾಯವ್ಯಯಗಳನ್ನು ಬೇರೆಯಾಗಿಯೂ ಸಾಮಾನ್ಯವಾದ ಬಾಬುಗಳಲ್ಲಿ ಆದಾಯವ್ಯಯಗಳನ್ನು ಬೇರೆಯಾಗಿಯೂ ಇಡಬೇಕೆಂದು ಉದ್ದೇಶಿಸಿದ್ದಾರೆ ಈ ಪ್ರಕಾರ ಸಾಧಾರಣವ್ಯಯವು ಸಾಧಾರಣ ಆಯಕ್ಕಿಂತ ಹೆಚ್ಚಾಗದಂತೆ ನೋಡಿಕೊಳ್ಳಬಹುದಾಗಿರುವದೆಂದು ಅವರು ನಿರೀಕ್ಷಿಸುತ್ತಾರೆ ಆಯವ್ಯಯಗಳ ವಿಷಯದಲ್ಲಿ ಅವರು ಇನ್ನೊಂದು ಸಂಗತಿಯನ್ನು ತಿಳಿಸಿದ್ದಾರೆ ಅದು ಸರ್ಕಾರದ ಸೇವಿಂಗ್ಸ್ ಬ್ಯಾಂಕಿನಲ್ಲಿ ಲೇವಣಿಯಾಗಿರುವ ಹಣದ ವಿಷಯವೇ. ಇನ್ನು ಮೇಲೆ ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳಲ್ಲಿ ರೂ. ೫,೦೦೦ ಕ್ಕಿಂತ ಹೆಚ್ಚು ಮೊಬಲಗನ್ನು ಇಡಕೂಡದೆಂದು ಸರ್ಕಾರದವರು ಮಾಡಿರುವ ನಿರ್ಧಾರವು ವಿವೇಕಪೂರ್ವಕವಾಗಿ ಮಾಡಿರುವಂಥಾದ್ದೆಂದು ನಾವು ತಿಳಿದಿದ್ದೇವೆ ಸರ್ಕಾರದವರು ಹೊಸದಾಗಿ ಸಾಲವಾಗಿ ಅಪೇಕ್ಷಿಸಿದ ೬೦ ಲಕ್ಷ ರೂಪಾಯಿಗಳನ್ನು ಸೇವಿಂಗ್ಸ್ ಬ್ಯಾಂಕು ಡಿಪಾಜಿಟರುಗಳೇ ಹೆಚ್ಚಾಗಿ ಕೊಟ್ಟಿರುವದು ಶ್ಲಾಘನೀಯವಾಗಿದೆ

ನೀರಾವರಿ ಕಾಮಗಾರಿಯ ವಿಷಯದಲ್ಲಿಯೂ ಸರ್ಕಾರದವರು ಲಕ್ಷ್ಯಕ್ಕೆ ತಂದುಕೊಂಡಿರುವದು ಪ್ರಜೆಗಳಿಗೆ ಸಂತೋಷಕರವಾದದ್ದು ಇದಲ್ಲದೆ ಸಂಸ್ಥಾನದಲ್ಲಿ ಗಣಿಗಳ ಕೆಲಸವನ್ನು ಹೊಸದಾಗಿ ಆರಂಭಿಸಬೇಕೆಂದು ಲೈಸೆನ್ಸನ್ನು ಅಪೇಕ್ಷಿಸಿದವರಲ್ಲಿ ಇಂಡಿಯಾ ದೇಶವಾಸಿಗಳಿಗೇನೇ ಅರ್ಧಭಾಗ ಲೈಸೆನ್ಸುಗಳನ್ನು ಕೊಟ್ಟಿರುವದು ಪ್ರಜೆಗಳಿಗೆ ಪ್ರೋತ್ಸಾಹಕರವಾಗಿದೆಯೆಂಬುದರಲ್ಲಿ ಸಂಶಯವಿಲ್ಲ ಮಳೆಯು ಚೆನ್ನಾಗಿ ನಡೆದು ಬೆಳೆಯೂ ಒಳ್ಳೇ ಸ್ಥಿತಿಯಲ್ಲಿರುವದರಿಂದ ನಡೆಯುವ ವರ್ಷದಲ್ಲಿ ಸಂಸ್ಥಾನಕ್ಕೆ ಅತಿ ವಿಶೇಷವಾದ ಸುಭಿಕ್ಷಕಾಲವು ಪ್ರಾಪ್ತವಾಗುವದೆಂದು ನಾವು ನಂಬತಕ್ಕದ್ದಾಗಿದೆ

ಒಳದೇಶದ ವೃತ್ತಾಂತಗಳು

ಪ್ರಜಾಪ್ರತಿನಿಧಿ ಸಭೆಗೆ ಬಂದಿರುವ ಮೆಂಬರುಗಳಿಗೆ ಪದ್ಧತಿಯ ಪ್ರಕಾರ ನೆನ್ನೆ ಔತಣವಾಯಿತು

****

ಈಸಲ ಬಹುಮಾನದ ಮೇಲಾಟಕ್ಕಾಗಿ ನಮ್ಮಲ್ಲಿಗೆ ಬರೆದು ಬಂದಿರುವ ಚಾಪ್ಟರುಗಳಲ್ಲಿ ಯಾವೊಂದೂ ಬಹುಮಾನ ಪಡೆಯುವುದಕ್ಕೆ ಅರ್ಹವಾದದ್ದಾಗಿರಲಿಲ್ಲವೆಂದು ವ್ಯಸನಪಡುತ್ತೇವೆ

****

ರಾಜಧಾನಿಯ ಎರಡನೇ ಅಡಿಷನಲ್ ಸಬ್‌ಜಡ್ಜ್ ಕೋರ್ಟನ್ನು ಸರ್ಕಾರದವರು ವಜಾ ಮಾಡಿ, ಮುನಸಿಫ್ ಮೊದಲಾದವರ ವ್ಯವಸ್ಥೆಯನ್ನು ಚಿಕ್ಕಬಳ್ಳಾಪುರಕ್ಕೆ ವರ್ಗಮಾಡಿರುವಂತೆ ಕೇಳುತ್ತೇವೆ

****

ಕಡೂರಿನಲ್ಲಿ ಡೆಪ್ಯುಟಿ ಕಮಿಷನರ್ ಮೆ|| ಎ. ಚೆಂಗ್ಲರಾಯ ಶೆಟ್ಟರವರಿಗೆ ಹಿಂದಿನ ವಾರ ಪ್ರಜೆಗಳು ಬಹು ಸಂತೋಷಪೂರ್ವಕವಾದ ಔತಣೋತ್ಸವಗಳನ್ನು ಮಾಡಿ ತಮ್ಮ ಕೃತಜ್ಞತಾ ಭಕ್ತಿಯನ್ನು ಪ್ರಕಟಿಸಿ ಮಾಡಿದರು

****

ಅಮಲ್ದಾರ್ ಮೆ|| ಎಂ ಎಸ್ ಪುಟ್ಟಣ್ಣನವರ ಚಿಕ್ಕ ಮಗುವನ್ನು ಇಟ್ಟಿದ್ದ ಗಂಡು ಮಕ್ಕಳನ್ನು ರಾಜಧಾನಿಯ ಪೋಲೀಸಿನವರು ಬಾಕ ಪ್ರಿನ್ಸಲ್ಲಿಟ್ಟು ಚೆನ್ನಾಗಿ ಹೊಡೆದಿರುತ್ತಾರೆಂದು ವಿಷಾದವೂ ಆಗಿರುವಂತೆ ಕೇಳುತ್ತೇವೆ

****

ಈ ತಿಂಗಳ ೧೫ನೇ ತಾರೀಖಿನಿಂದ ಪಂಢರಾಪುರದಲ್ಲಿ ಒಂದು ಪ್ರದರ್ಶನೋತ್ಸವ ನಡೆಯುವುದೆಂದೂ ಮೈಸೂರಿನಿಂದ ಅಲ್ಲಿಗೆ ಕೆಲವು ಕೈಗಾರಿಕೆ ಚಿತ್ರವಸ್ತುಗಳನ್ನು ಪ್ರದರ್ಶನಕ್ಕಾಗಿ ಕಳುಹಿಸುವ ಏರ್ಪಾಡು ನಡೆದಿದೆ ಎಂದೂ ಕೇಳುತ್ತೇವೆ

****

ದಾವಣಗೆರೆಯಲ್ಲಿ ಮೂರು ವರ್ಷಗಳಿಂದ ಅಮಲ್ದಾರರಾಗಿದ್ದು ಈಗತಾನೇ ವರ್ಗವಾದ ಮೆ|| ಓಬೇದುಲ್ಲಾ ಯವರಿಗೆ ಕಳೆದ ವಾರ ಅಲ್ಲಿನ ಪ್ರಜೆಗಳು ನಾನಾಪ್ರಕಾರವಾದ ಔತಣೋತ್ಸವಗಳನ್ನು ಮಾಡಿ ಸಂತೋಷಪಡಿಸಿ ಸಾಗಕಳುಹಿಸಿದರೆಂದು ತಿಳಿಯುತ್ತೇವೆ

****

ಚಿಕ್ಕಬಳ್ಳಾಪುರದ ಸಬ್‌ರಿಜಿಸ್ಟ್ರಾರಾಗಿದ್ದ ಮೆ|| ಅಂಬಾಪುರಂ ನರಸಿಂಹಯ್ಯಂಗಾರ್‌ರವರು ಕಳೆದ ವಾರ ಬೆನ್ನುಪಣಿ ಎದ್ದು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರಿಗೆ ಇನ್ನೂ ೩೦ ವರುಷವಾಗಿತ್ತೆಂದೂ ೪—೫ ಜನ ಸಣ್ಣ ಮಕ್ಕಳಿದ್ದಾರೆಂದೂ ತಿಳಿದು ಬಂದಿದೆ

****

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮುಖ್ಯ ವೈದ್ಯರಾಗಿರುವ ಮೆ|| ಟಿ ವಿ ಅರುಮುಗಂ ಮೊದಲಿಯಾರ್‌ರವರು ಮಹಾರಾಜರವರ ಕುಮಾರಿಯರ ಮಕ್ಕಳ ದೇಹಸ್ಥಿತಿಯನ್ನು ನೋಡುವುದಕ್ಕಾಗಿ ಕಳೆದ ವಾರ ರಾಜಧಾನಿಗೆ ಕರೆಸಲ್ಪಟ್ಟು ಬಂದಿದ್ದರು

ಮೈಸೂರು ನಗರದಲ್ಲಿ ಡಾಕ್ಟರಾಗಿದ್ದ ಮೆ|| ಡೇವಿಡ್ ಯವರಿಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗವಾಯಿತೆಂದು ಅಲ್ಲಿನ ಗೊತ್ತುಮನುಷ್ಯರು ನವರಾತ್ರಿ ಸೇರಿ ತಮ್ಮ ಚಹಾ ಪಾನಕ್ಕಾಗಿ ಅವರಿಗೆ ಒಂದು ವೈದ್ಯಶಾಸ್ತ್ರ ಪುಸ್ತಕವನ್ನು ತರಿಸಿಕೊಂಡು ನಿಷ್ಕರ್ಷೆ ಮಾಡಿಕೊಂಡಿರುವದಾಗಿಯೂ ತಿಳಿದು ಬಂದಿದೆ

****

ಈ ವರುಷ ದಾವಣಗೆರೆಯಲ್ಲಿ ದಸರಾ ಉತ್ಸವವು ಬಹು ಸೊಗಸಾದ ಆಡಂಬರದಿಂದ ನಡೆಯಿತು. ಅಲ್ಲಿನ ಗಂಡು ಮಕ್ಕಳ ಗರಡಿಗಳ ಸವಾರಿಯನ್ನು ಕೆಲವು ಕಡೆ ನಡೆದ ಬೀದಿಗಳಲ್ಲಿ ಹಿಂದೆ ೧೯ ವರುಷದಿಂದಲೂ ಇಂಥಾ ಉತ್ಸವ ನಡೆಯಲಿಲ್ಲವೆಂದೂ ಇಂಥಾ ಉತ್ಸವ ಆಗಿ ಎಂಟು ವರುಷಗಳಾದವೆಂದು ಕೇಳುತ್ತೇವೆ ಈ ಉತ್ಸವ ನಡೆಸುವುದಕ್ಕೆ ಅಲ್ಲಿನ ಪ್ರಜೆಗಳು ಸಹಕರಿಸಿದರೆಂದೂ ಅಲ್ಲಿನ ಮುಖ್ಯ ದಾರರು ಕರೆದಿದ್ದಾರೆ

****

ಬೆಂಗಳೂರು ಲಂಡನ್ ಮಿಷನ್ ಹೈಸ್ಕೂಲ್ ಕಾಂಪೌಂಡಿನ ಮೈದಾನಿನಲ್ಲಿ ನಾಳೆ ಸಾಯಂಕಾಲ ೬|| ಗಂಟೆಗೆ ಒಂದು ಸಭೆ ಸೇರುವುದು. ರೆವ್ ಎ ಆರ್ ಪುಲ್ಲರ್, ಬಿ ಎ ಯವರು ಒಂದು ಉಪನ್ಯಾಸ ಮಾಡುವವರಾಗಿದ್ದಾರೆ. ಭಕ್ತಿ ಮಾರ್ಗಾನುಸಾರವಾದ ಈ ಸಭೆಗೆ ಹೋಗಿ ಉಪನ್ಯಾಸವನ್ನು ಕೇಳಬೇಕಾಗಿದೆ ಹೋದ ವಾರ ಮದರಾಸ್ ಕ್ರಿಶ್ಚಿಯನ್ ಕಾಲೇಜಿನ ರೆವ್ ಜೆ ವಿಲ್, ಬಿ ಎ ಯವರು ಬಹು ಹಿತಕರವೂ ಸ್ವಾರಸ್ಯವೂ ಆದ ಉಪನ್ಯಾಸ ಮಾಡಿದರು

****

ಮೊನ್ನೆ ಸೋಮವಾರ ರಾತ್ರಿ ರಾಜಧಾನಿಯ ರೆಸಿಡೆನ್ಸಿಯಲ್ಲಿ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯರಿಗೂ ದೊರೆಸಾನಿಗಳಿಗೂ ನವರಾತ್ರಿ ಉತ್ಸವ ನಿಮಿತ್ತವಾದ ಔತಣವಾಯಿತು. ಸುಮಾರು ೧೦೦ ಮಂದಿ ಕುಳಿತು ಭೋಜನವಾದ ಮೇಲೆ ಭೋಜನಾನಂತರ ಶ್ರೀಮನ್ಮಹಾರಾಜರವರು, ಯುವರಾಜರವರು, ದಿವಾನರವರು, ಕೌನ್ಸಿಲ್ ಮೆಂಬರುಗಳು, ಹೈದರಾಬಾದಿನ ರಾಜರೇ ಮೊದಲಾದವರು ಒಳಕ್ಕೆ ದಯಮಾಡಿದ್ದರು ಶ್ರೀಮನ್ಮಹಾರಾಜರವರು ಎದ್ದು ಚಕ್ರವರ್ತಿ ಸಾರ್ವಭೌಮರವರ ಶ್ರೇಯಸ್ಸನ್ನು ಬಯಸಿದರು ಬ್ರಿಟಿಷ್ ರೆಸಿಡೆಂಟರು ಯೂರೋಪ್ಯ ಸಭಿಕರ ಪರವಾಗಿ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಪ್ರಾರ್ಥನೆ ಮಾಡಿ ವಂದಿಸಿದರು

****

ಕಳೆದ ಗುರುವಾರ ರಾಜಧಾನಿಯಲ್ಲಿ ವಿಜಯದಶಮಿ ನಿಮಿತ್ತವಾದ ಉತ್ಸವ ನಡೆಯಿತು. ನವರಾತ್ರಿಯಲ್ಲೆಲ್ಲಾ ಮೋಡ ನಾಕು ದಿವಸ ಮಳೆ ಸುರಿಯುತ್ತಾ ಬಿಸಿಲು ಕಾಣದೆ ಜನರಿಗೂ ನೋಟಕ್ಕೆ ಬಿಗುಪ್ಸೆಯಾಗಿತ್ತು ಆದರೆ ವಿಜಯದಶಮಿಯ ದಿನ ಬಿಸಿಲು ಬಿದ್ದು, ಆ ದಿನದ ಉತ್ಸವವನ್ನು ಬಹು ವಿಜೃಂಭಣೆ ಮಾಡಿ ಶ್ರೀಮನ್ಮಹಾರಾಜರವರು ಪದ್ಧತಿಯ ಪ್ರಕಾರ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ಚತುರಂಗ ಬಲ ಸಮೇತ ವಾದ್ಯಘೋಷದಲ್ಲಿ ಮೆರವಣಿಗೆ ದಯಮಾಡಿ, ಶಮೀವೃಕ್ಷವನ್ನು ಪೂಜಿಸಿ, ಸೈನ್ಯಗಳ ಕವಾಯತನ್ನು ಪರಾಂಬರಿಸಿ ಪುನಃ ಮೆರವಣಿಗೆಯಲ್ಲಿ ಹಿಂತಿರುಗಿ ಜಗನ್ಮೋಹನ ಬಂಗಲೆಯನ್ನು ತಲುಪಿದರು ರಾತ್ರಿ ಉತ್ಸವ ಮುಗಿಯುವುದಕ್ಕೆ ರಾತ್ರಿ ೧೨ ಗಂಟೆಯಾಯಿತು ಯಾವ ಪ್ರಕಾರ ಪಟ್ಟಣವನ್ನು ಅಲಂಕರಿಸಿದ್ದರು, ದೀಪೋತ್ಸವವು ನೇತ್ರಾನಂದಕರವಾಗಿತ್ತು

ಪ್ರಜಾಪ್ರತಿನಿಧಿ ಸಭೆಯು

೨೩ನೇ ಸಭೆಯ ಪ್ರಾರಂಭವು

ಇದೇ ಅಕ್ಟೋಬರು ೧ನೇ ತಾರೀಖು ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಅಂತಸ್ತಿನಲ್ಲಿರುವ ದರ್ಬಾರ್ ಹಾಲ್‌ನಲ್ಲಿ ಮೈಸೂರು ಸಂಸ್ಥಾನದ ರೈತ ಮತ್ತು ವರ್ತಕರ ಪ್ರತಿನಿಧಿಗಳ ೨೩ನೆಯ ಸಭೆಯು ಪ್ರಾರಂಭವಾಯಿತು. ಇದಕ್ಕೋಸ್ಕರ ಆ ಸಭಾ ಮಂದಿರವನ್ನು ನಾನಾ ಪ್ರಕಾರವಾಗಿ ಅಲಂಕಾರ ಮಾಡಿ, ಮಧ್ಯಭಾಗದ ಗೋಡೆಯಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಪಟ್ಟದ ಚಿತ್ರವನ್ನು ತಾಪನವಾಗಿಯೂ ಮನೋಹರವಾಗಿಯೂ ಮಾಡಿದ್ದಾರೆ ಯಥಾಗ್ರವಾದ ವೇದಿಕೆಯಲ್ಲಿ ಬ್ರಿಟಿಷ್ ರೆಸಿಡೆಂಟರವರು, ಕೌನ್ಸಿಲ್ ಮೆಂಬರುಗಳು, ಚೀಫ್ ಕೋರ್ಟ್

...ವಿನಸ್ಥ ಮತ್ತು ಸರ್ವ ಕವಿಶಾಸ್ತ್ರರುಗಳು, ಯುರೋ... ಸರ್ಕಾರದ, ದಿ ... ಗಳ, ... ಸ್ಥಾನದ ... ಸೆಕ್ರೆಟರಿಗಳು, ... ವರ್ತಮಾನಗಳು, ... ದಲಾದವರು ... ಸನಗಳಲ್ಲಿ ಕುಳಿತಿದ್ದರು ... ದ ಎಡದ ... ಗದ ಕೆ... ಒಂದು ಕಡೆ ವರ್ತಮಾನಪತ್ರಗಳ ಪ್ರತಿನಿಧಿಗಳು. ಇನ್ನೊಂದು ... ಸರ್ಕಾರಿ ಸೆಕ್ರೆಟರಿಗಳು ... ಪ್ರಜಾಪ್ರತಿನಿಧಿಗಳು ... ಗಂಟೆ ಟಸ್ ಎಂದು ಹೊಡೆಯುತ್ತಿರುವಲ್ಲಿ ಮಿ॥ ವಿ ಪಿ ಮಾಧವರಾವ್, ಸಿ ಐ ಇ ಯವರು ತಮ್ಮ ... ಬಿಟ್ಟು ಎದ್ದು ನಿಂತುಕೊಂಡು ಸಭಾಸದರನ್ನು ಕುರಿತು ... ಎಂದು ವಿಜ್ಞಾಪಿಸಿ, ಪಟುತರವಾಗಿಯೂ ಘಂಟಾಘೋಷವಾಗಿಯೂ ಇಂಗ್ಲೀಷಿನಲ್ಲಿ ಅಡ್ರೆಸ್ಸನ್ನು ಓದಿ ಹೇಳಿದರು [ಇದರ ...ಗಳನ್ನು ಇನ್ನೊಂದು ಕಡೆ ಪ್ರಕಟಿಸಿದೇವೆ.]

...ರವರು ಯಥಾಸ್ಥಾನದಲ್ಲಿ ಕುಳಿತುಕೊಂಡ ಕೂಡಲೆ ...ಕೆಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಮಿ॥ ...ನವರು ಓದಿದುದಕ್ಕೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಇಂಗ್ಲೀಷಿನಲ್ಲಿ ಅದನ್ನೇ ಮಿ॥ ... ಯವರು ಕನ್ನಡದಲ್ಲಿ ಓದಿ ಒಪ್ಪಿಸಿದರು.

... ದೇಶೀಯ ಪ್ರತಿನಿಧಿಗಳ ಪರವಾಗಿ ... ಓದಿ ಒಪ್ಪಿಸಿದ ವಿಜ್ಞಾಪನೆಯೇನೆಂದರೆ—

ಶ್ರೀಮನ್ಮಹಾರಾಜರವರ ... ಬಹದ್ದೂರ್‌ರವರ ದಿವಾನ್ ...ರವರ ಸನ್ನಿಧಾನದಲ್ಲಿ ರೆಪ್ರಸೆಂಟೆಟಿವ್ ಮೆಂಬರುಗಳಾದ ... ವಿಭಾಗಗಳಲ್ಲಿ ... ಈ ದಿವಸ ಅಪ್ಪ... ಅಡ್ರೆಸ್ಸಿಗೆ ... ನಮ್ಮ ... ಹೇಳುವುದು ... ನನ್ನನ್ನು ... ಸುತ್ತಾರೆ.

...ಮ್ಮ ಘನತೆವೆತ್ತ ಪ್ರಿನ್ಸ್ ಆಫ್ ವೇಲ್ಸ್‌ರವರು ... ಸಮ್ಮೇಳನಕ್ಕೆ ಈ ನಮ್ಮ ಸಂಸ್ಥಾನಕ್ಕೆ ದಯಮಾಡಿಸಿ ... ಮಹಾರಾಜರವರ ಕೋರಿಕೆಯನ್ನು ನೆರವೇರಿಸಿ ... ಮಹಾರಾಜರ ಪ್ರಜೆಗಳಾದ ನಮ್ಮಗಳಿಗೆ ಬ್ರಿಟಿಷ್ ಚಕ್ರವರ್ತಿ... ಇರುವ ನಮ್ಮ ಅಖಂಡವಾದ ರಾಜಭಕ್ತಿಯನ್ನು ಸಂ... ವಿಜ್ಞಾಪನೆ... ತೋರಿಸುವದಕ್ಕೆ ನಮ್ಮಗಳಿಗೆ ಅವಕಾಶ ...ಕ್ಕಾಗಿ ಸಂತೋಷ ಅತಿ ವಿನಯದಿಂದ ನಮ್ಮ ವಂದನೆಯನ್ನು ...ಸುತ್ತೇವೆ.

...ವರ್ಷವೂ ಸಾ ಹೋದ ವರುಷದಂತೆ ಮಳೆ ಬೆಳೆಗಳಿಲ್ಲದಂತೆ ... ಬಹಳ ಬೇಸರವು ನಮಗೆ ವಿಶೇಷವಾಗಿತ್ತು. ಆದರೆ ...ದಿಂದ ಮಳೆಗಳು ಪ್ರಾಪ್ತವಾದ ಕಾರಣ ನಮಗೆ ಈ ಪದರ ... ಕ್ಷಾಮಪೀಡಿತರಾದ ... ಮತ್ತು ...ಗಳ ಒತ್ತಟ್ಟಿಗೆ ಅಂದಾಯವನ್ನು ತಕ್ಕ ... ರಿಯಾಯಿತಿಗಳನ್ನು ತೋರಿಸಿದ್ದಕ್ಕಾಗಿ ... ಸರ್ಕಾರಕ್ಕೂ ನಮ್ಮ ... ಅರ್ಪಿಸುತ್ತೇವೆ.

...ಮಹಾರಾಜರವರ ಪ್ರಜೆಗಳ ಯೋಗಕ್ಷೇಮ ವಿಷಯದಲ್ಲಿ ... ಅಂಶಗಳನ್ನು ತಮ್ಮ ಸನ್ನಿಧಿಯಲ್ಲಿ ...ಕೊಳ್ಳಬೇಕೆಂತ ನನ್ನನ್ನು ಕೋರುತ್ತಾರೆ. ಅವುಗಳು ...—

ಶ್ರೀಮನ್ಮಹಾರಾಜರವರ ಪ್ರಜೆಗಳಿಗೆ ಮಾತ್ರವಲ್ಲದೆ ಇತರ ... ಅವಕಾಶಕೊಡುವ ಈ ಸಿವಿಲ್ ಸರ್ವಿಸ್ ಪರೀಕ್ಷೆಯು ...ಕ್ಕಿಗೂ ಅಭಿವೃದ್ಧಿಗೂ ಕುಂದಕವನ್ನುಂಟುಮಾಡುತ್ತ... ಅಷ್ಟರಮಟ್ಟಿಗೆ ಇದನ್ನು ಬದಲಾಯಿಸಬೇಕೆಂದು ...

... ಟ್ರೈನಿಂಗ್ ರೆಗ್ಯುಲೇಷನ್ ಎಂಬುದು ಜನಗಳಿಗೆ ಮಹಾ ಹಿಂಸೆ ...ಗಿಯೂ ಅವರುಗಳ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗೂ ... ಕುಂದಕವುಂಟುಮಾಡತಕ್ಕದ್ದಾಗಿಯೂ ಇರುತ್ತದೆ. ... ಇದನ್ನು ತಿದ್ದುಪಾಟುಮಾಡತಕ್ಕದ್ದು ಅತ್ಯಾವಶ್ಯಕವಾ...

... ಮತಪ್ರಚಾರಕರ ಕೊಂದಕ ನಿವಾರಣೆ ಮಾಡಬೇಕೆಂದು ... ಪರಿಣಾಮ ಅಕ್ಕಟ್ಟ ಎಂಬುವದು ಶ್ರೀಮನ್ಮಹಾರಾಜರ ... ಪ್ರಜೆಗಳ ವೃತ್ತಿ ... ಪ್ರಜೆಗಳಾದ ಹಿಂದು ...ಮಹಮ್ಮದೀಯರ ಮತವನ್ನು ಬಿದ್ದುತಗಳನ್ನೂ ಸಾಶನಮಾದ ... ಮತ್ತು ಇವರ ಗೃಹಕೃತ್ಯಗಳಲ್ಲಿಯೂ ಜನಗಳಲ್ಲಿಯೂ ವಿ... ಸಂಕಟ ಮತ್ತು ಬೇಗೆಯನ್ನುಂಟುಮಾಡುವದೂ ಅಪ್ಪರಿಂದ ...ವನ್ನು ಮಾಡಿಸಬೇಕೆಂದು ಪ್ರಾರ್ಥನೆ.

...ದಿವಸ ತಾವು ದಯಮಾಡಿ ಓದಿದ ಅಡ್ರೆಸ್ಸಿಗಾಗಿ ಮೆಂಬರು... ನಾನು ತಮಗೆ ವಿಶೇಷ ವಂದನೆಗಳನ್ನು ವಿಜ್ಞಾಪಿಸಿಕೊ... ದೆ ತಮ್ಮ ರಾಜ್ಯಾಡಳಿತವು ಅತ್ಯುನ್ನತಸ್ಥಿತಿಯನ್ನು ಹೊಂದ... ದೇಶವು ವಿಶೇಷ ಅಭಿವೃದ್ಧಿಗೆ ಬಂದು ತಮಗೆ ಒಳ್ಳೇ ... ಬರಬೇಕೆಂತಲೂ ಬೇಡುತ್ತೇನೆ"

...ವಿಜ್ಞಾಪನೆಗೆ ದಿವಾನರವರು ಕೊಟ್ಟ ಪ್ರತ್ಯುತ್ತರದ ಅಭಿ... ವೇನೆಂದರೆ—ನೀವು ಹೇಳಿದ ಕಡೇ ವಿಷಯವನ್ನು ಕುರಿತು ... ಅಡ್ರೆಸ್ಸಿನಲ್ಲಿ ಒಂದು ಮಾತಾದರೂ ಹೇಳಿರುವುದಿಲ್ಲ ಮೊದ... ಮತ್ತು ಎರಡನೆಯ ವಿಷಯಗಳು ಗವರ್ನ್‌ಮೆಂಟಿನವರಿಂದ ...ಸಲ್ಪಟ್ಟು ನಿಶ್ಚಯಿಸಲ್ಪಡಬೇಕಾಗಿರುತ್ತವೆ ಇವುಗಳ ವಿಷಯದಲ್ಲಿ ... ಜನಗಳಲ್ಲೇ ಭಿನ್ನಾಭಿಪ್ರಾಯಗಳಿರುವವು ಆವಶ್ಯವಿದ್ದರೆ ... ವಿಷಯಗಳನ್ನು ನೀವು ಈ ಸಭೆಯಲ್ಲಿಟ್ಟುಕೊಂಡು, ...ಮ್ಮ ಅಭಿಪ್ರಾಯಗಳನ್ನು ಚರ್ಚೆಮಾಡಿ ಗವರ್ನ್‌ಮೆಂಟಿಗೆ ...ದುದಾಗಿದೆ ಎಂಬುವದೇ.

...ನಂತರ ಹರಿಹರದ ಪ್ರಜಾಪ್ರತಿನಿಧಿಗಳು ಬಂದು ಹರಿಹರ ಸೆಟ್... ನ್ನು ಪಕ್ಕಾ ತಾಲ್ಲೂಕಾಗಿ ಮಾಡಿಕೊಡಬೇಕೆಂತಲೂ ಅಲ್ಲಿಗೆ ಆಗ ... ಪದವಿಯನ್ನು ಕಲ್ಪಿಸಿ ಕೊಡಬೇಕೆಂತಲೂ ಒಂದು ವಿಜ್ಞಾಪನೆಯನ್ನು ಒಪ್ಪಿಸಿದರು. ಇದಕ್ಕೆ ದಿವಾನರವರು ... ರವರಲ್ಲಿ ... ಇದು ಯುಕ್ತವಾಗಿಲ್ಲವೆಂದು ಗವರ್ನ್‌ಮೆಂಟಿನ ... ಅನುಕೂಲವನ್ನು ಬಿಟ್ಟಿರುತ್ತಾರೆ ಇದ್ದುದರಿಂದ ಈ ವಿಷಯವನ್ನು ಸದ್ಯ ವಿಚಾರ ಮಾಡಲು ಹೊರಟಿಲ್ಲವೆಂದೂ ನಿಮ್ಮ ನಿಮ್ಮ ಕಷ್ಟಗಳಿಕ್ಕೆ ... ಭಾಗದಲ್ಲಿ ... ಇಲಾಖೆಯಿಂದ ... ಪ್ರಯೋಜನವಾಗದಿದ್ದರೆ ... ಈ ಕೆಲಸವನ್ನು ಬಗ್ಗಿಸಬೇಕೆಂದು ಮತ್ತೆ ನಾವು ... ಕೊಡುತ್ತೇವೆಂತಲೂ ಸಂತೋಷದಿಂದ ತಿಳಿಸುತ್ತೇವೆ ಎಂಬು ... ಉತ್ತರ ಕೊಟ್ಟರು.

ತರುವಾಯ ಚನ್ನಪಟ್ಟಣದ ಗಣಿ ಕಂಪನಿಗಳ ಪ್ರತಿನಿಧಿಯೂ, ಉತ್ತರ ಮತ್ತು ದಕ್ಷಿಣ ಪ್ಲಾಂಟರುಗಳ ಸಂಘಗಳ ಪ್ರತಿನಿಧಿಗಳೂ, ಇನ್ನೂ ಕೆಲವರೂ ತಮ್ಮ ತಮ್ಮ ಭಾಗದಲ್ಲಿರುವ ಕೆಲವು ಕೊರತೆಗಳನ್ನು ನೀಗಿಸಿಕೊಡಬೇಕೆಂದು ಕೇಳಿಕೊಂಡರು. ದಿವಾನರವರು—ಕೂಡಿದ ಪಟ್ಟಿಗೂ ... ತೆಯಲ್ಲಿ ... ಕಡೆ ಸರ್ಕಾರು ಕೊರತೆ ಎಲ್ಲಾ ಸಂಗತಿಗಳನ್ನೂ ಮೊದಲು ವಿಚಾರಿಸಿಕೊಂಡು ಬರುವುದಾಗಿಯೂ ಉತ್ತರ ಕೊಟ್ಟರು.

ಆ ವೇಳೆ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಯೂರೋಪ್ಯರ್ ಸರದಾರರೂ ದೊರೆಸಾನಿಗಳೂ ದಿವಾನರವರಿಂದ ಬೀಳ್ಕೊಂಡು ಹೊರಟು ಹೋದರು. ರೆವಿನ್ಯೂ ಜನರಲ್ ಸೆಕ್ರೆಟರಿಯವರಾದ ಮಿ॥ ಜೆ ಎಸ್ ಚಂದ್ರಶೇಖರ ಅಯ್ಯರವರು ಎದ್ದು ದಿವಾನರವರ ಅಡ್ರೆಸ್ಸನ್ನು ಕನ್ನಡದಲ್ಲಿ ಓದಿ ಹೇಳಿದರು.

ಇಲ್ಲಿಗೆ ಮೊದಲನೆ ದಿನದ ಕಾರ್ಯ ಶಾರವು ಮುಕ್ತಾಯವಾಯಿತು. ಮಾರನೇ ದಿನ ಅಂದರೆ ಮಂಗಳವಾರ ಮಧ್ಯಾಹ್ನ ದಿಂದ ಜನರಲ್ ಸಬ್ಜೆಕ್ಟುಗಳನ್ನು ಕುರಿತು ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಇದನ್ನು ಬರುವ ವಾರದಿಂದ ವಾಚಕರಿಗೆ ತಿಳಿಸುತ್ತೇವೆ.

ಎರಡನೇ ದಿವಸದ ಸಭೆಯು

ತಾ ೨ನೇ ಮಂಗಳವಾರ ಮಧ್ಯಾಹ್ನ ೧ಗಂಟೆಗೆ ದಿವಾನರೇ ಮೊದಲಾದ ಸಂಸ್ಥಾನಾಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ ಸಭೆ ಸೇರಿ ಕೆಲವು ವಿಷಯಗಳನ್ನು ಚರ್ಚೆಮಾಡಿದರು. ಆ ಪೈಕಿ ಸದ್ಯ ಒಂದೆರಡನ್ನು ಮಾತ್ರ ಈಗ ತಿಳಿಸುತ್ತೇವೆ.

ಮೈ॥ ಅಂಬಳೇ ಅಂತ ... ಬಾಲ್ಯವಿವಾಹದ ... ದ ಕಾರ್ಯದಲ್ಲಿ ಮದುವೆಯಾಗುವುಗ್ಗೆ ಹೆಣ್ಣುಮಕ್ಕಳಿಗೆ ೪ ವರುಷ ವಯಸ್ಸಿರಬೇಕೆಂಬುವ ವಿಧಿಯನ್ನು ೧೦ ವರುಷಕ್ಕೆ ಹೆಚ್ಚಿಸಿ ಒದಗಿಸಿಕೊಡಬೇಕು ಇದಲ್ಲದೆ ಹುಡುಗರಿಗೆ ೨೦ ವರುಷ ತುಂಬಿದ ಹೊರತು ಮದುವೆಯಾಗಕೂಡದೆಂದೂ ವಿಧಿಯಾಗಬೇಕು. ಇಲ್ಲವೇ ಬಿ ಎ. ಪರೀಕ್ಷೆಗೆ ಅರ್ಜಿ ಹಾಕತಕ್ಕವರು ತಮಗೆ ಇನ್ನೂ ವಿವಾಹವಾಗಿಲ್ಲವೆಂಬ ಅಂಶವನ್ನು ತೋರ್ಪಡಿಸುವ ಒಂದು ಸರ್ಟಿಫಿಕೇಟ್ ಹಾಜರು ಮಾಡಬೇಕಾಗಬೇಕು.

ಇತರ ಕೆಲವು ಮೆಂಬರುಗಳು—ಕಾನೂನಿನಲ್ಲಿ ಈಗ ಮಾಡಿರುವ ನಿರ್ಬಂಧನೇ ಸಾಕಾಗಿದೆ ವಯಸ್ಸನ್ನು ೧೦ ವರುಷಕ್ಕೆ ಹೆಚ್ಚಿಸಕೂಡದು. ಗಂಡು ಹುಡುಗರಿಗೆ ಸಾಮಾನ್ಯವಾಗಿ ಅಷ್ಟು ದೂರ ವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲ. ಆ ನಿರ್ಬಂಧವನ್ನು ಹಾಕಿದ್ದರೆ ವಯಸ್ಸು ಆಗದವರಿಗೆ ಪದಗಳನ್ನು ಹುಡುಕಿ ಒದಗಿಸುವ ಕಷ್ಟ ಹೆಚ್ಚುತ್ತಲೂ ಹೆಚ್ಚುವುದು.

ದಿವಾನರವರು—ಸಭಿಕರು ಈ ರೀತಿ ಭಿನ್ನಾಭಿಪ್ರಾಯ ಪಡುತ್ತಿರುವಲ್ಲಿ ಈ ವಿಷಯವನ್ನು ಇನ್ನೂ ಮುಂದರಿಸಿ ಚರ್ಚೆಸುವುದು ಫಲಕಾರಿಯೆಂದು ಕಾಣುವುದಿಲ್ಲ.

ಒಬ್ಬ ಮಂದಿ ಮೆಂಬರುಗಳು—ಜೂಜಾಟವನ್ನು ನಿರೋಧಿಸುವ ಕಾನೂನು, ಅಳತೆ ತೂಕಗಳನ್ನು ನಿರ್ಧರಿಸುವ ಕಾನೂನು, ಮ್ಯುನಿಸಿಪಾಲಿಟಿಗಳನ್ನು ಕ್ರಮಪಡಿಸುವ ಕಾನೂನು, ಇವು ಇನ್ನೂ ಜಾರಿಗೆ ಬಂದಿಲ್ಲವಾದ್ದರಿಂದ ಪ್ರಜೆಗಳಿಗೆ ತುಂಬಾ ಕೊರತೆಯಾಗಿದೆ.

ದಿವಾನರವರು—ಈ ಕಾನೂನುಗಳೆಲ್ಲಾ ತಯಾರಾಗಿ ಸಿದ್ಧವಾಗಿರುವವು ಇಷ್ಟರಲ್ಲೇ ಅವುಗಳನ್ನು ಜಾರಿಗೆ ತರುತ್ತೇವೆ.

ತಾಲ್ಲೂಕು ವರ್ತಮಾನಗಳು

ತಿಪ್ಟೂರು.—ಕಳೆದ ವಾರವೆಲ್ಲ ಸೋನೆ ಮಳೆಯು ಹಿಡಿದಿತ್ತು. ನಾಲ್ಕು ತಿಂಗಳಿಂದಲೂ ಕಠಿಣವಾಗಿದ್ದ ಜ್ವರವು ಈಗ ಸುಮಾರಾಗುತ್ತಾ ಬಂದಿದೆ. ಬಾಣಂತಿಯರೂ ಮಕ್ಕಳೂ ಬಹಳ ಜನ ಸತ್ತರು. ಈಗ ಊರಲ್ಲಿ ಕಠಿಣವಾದ ಕೆಮ್ಮು ಪ್ರಾರಂಭವಾಗಿ ಮಕ್ಕಳನ್ನು ಕಾಂದಿಸಿ ಬಿಡುತ್ತಿದೆ. ಸಾಹುಕಾರ್ ದೇಶಮುದ್ರೆ ಶಂಕರಪ್ಪನವರ ಪತ್ನಿ ಯವರು ದೈವಾಧೀನರಾದರು. ಇವರ ವಿಯೋಗ ದುಃಖವನ್ನು ಶಂಕರಪ್ಪನವರು ಮತ್ತವರ ನಾಲ್ಕು ಚಿಕ್ಕಮಕ್ಕಳೊಂದಿಗೆ ಅನುಭವಿಸುತ್ತಿದ್ದಾರೆ.—ಅಸಿಸ್ಟೆಂಟ್ ಮಿ॥ ಚನ್ನಸ್ವಾಮಿ ಯವರು ಮೂಗಡಿಗೆ ವರ್ಗವಾಗಿ ಹೋದರು. ಮಿ॥ ಜೆ ಶಾಮಯ್ಯನವರು ಬರುತ್ತಾರೆಂಬ ವದಂತಿ ಇದೆ.— ಬಹಳ ಕಾಲದಿಂದಲೂ ಖಾಲಿಯಾಗಿದ್ದ ಮ್ಯುನಿಸಿಪಲ್ ಹಳೇ ಮೆಂಬರುಗಳನ್ನು ವಜಾಮಾಡಿ ಹೊಸ ಮೆಂಬರುಗಳನ್ನು ಚುನಾಯಿಸಿದಾರೆಂದು ತಿಳಿಯಿತು.—ಈ ಪ್ರಾಂತ್ಯ ಕೆರೆಕಟ್ಟೆಗಳೆಲ್ಲಾ ಸ್ವಲ್ಪ ಕೋಡಿಬಿದ್ದು ದ್ದೂ ಭಾರಿಕೆರೆಗಳು ಪೂರ್ಣವಾಗಿಯೇ ಇವೆ.

ಹೊಳೆನರಸೀಪುರ.—ಈಚಿಗೆ ಮಳೆಯು ನಿಂತದ್ದರಿಂದ ಹೊಲಗಳನ್ನು ಕುಯ್ಯುವದಕ್ಕೆ ಸ್ವಲ್ಪ ಅನುಕೂಲವಾಯಿತು.—ಈ ಸಾರಿ ದಸರಾ ಹಬ್ಬದ ಆಚರಣೆ ಉತ್ಸವಗಳೆಲ್ಲಾ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟವು. ತಾ. ೨೯ನೇ ಶನಿವಾರ ಸೋಮವಾರ ಪೇಟೆ ನರಸಮ್ಮನವರು ನರಸಿಂಹಸ್ವಾಮಿಗೆ ಹೊಸದಾಗಿ ೧೦೯ ರೂಪಾಯಿ ತೂಕದ ಬೆಳ್ಳಿಯಿಂದ ಒಂದು ಕಿರೀಟ ಮಾಡಿಸಿಕೊಟ್ಟಿದ್ದಲ್ಲದೆ ಶನಿವಾರ ಸಾಯಂಕಾಲ ವಸಂತೈಯ್ಯನವರ ತೋಟದಲ್ಲಿ ಬಂದ ಜನಗಳಿಗಾಗಿ ಫಲಹಾರಾದಿಗಳನ್ನು ಕೊಡಿಸಿದರು. ದೇವರುಗಳ ಮೆರವಣಿಗೆ ನಡಸಿದರು. ನೆರವ ಹಿಗೆಯು ಊರಲ್ಲಿ ಬಾಣಬಿರುಸು ಮುಂತಾದ್ದು ಬಹು ಸಾಧನೆ ಅಂಗಸಾಧನೆಗಳು ಗರಡಿಯವರಿಂದ ಮಾಡಲ್ಪಟ್ಟು ನೋಟಕರಿಗೆ ತುಂಬಾ ಆನಂದವನ್ನುಂಟುಮಾಡಿದವು.—ಹೊಸದಾಗಿ ಬಂದಿರುವ ನಮ್ಮ ಸರ್ಜನ್ ಸಾಹೇಬರಿಗೆ ಸಾಗರಕ್ಕೆ ವರ್ಗವಾಯಿತೆಂದು ಕೇಳುತ್ತೇನೆ. ಹಾಸನದಲ್ಲಿ ಪ್ಲೇಗ್ ಪ್ರಾರಂಭವು ಗಲಾಟೆಯಿಂದ ಸಂತೆಯು ಊರು ಆಚೆ ನಡೆಯುವಂತೆ ನಮ್ಮ ಅಮಲ್ದಾರರು ಸಾರಿಸಿದರು. ಸಂತೆಯು ಬಹಳ ದೂರವಾಯಿತೆಂತಲೂ ಮಳೆ ಬಂದರೆ ನಿಲ್ಲಲು ತುಂಬಾ ಅನಾನುಕೂಲವೆಂದೂ ಜನಗಳು ಬಹಳ ವ್ಯಥೆಪಡುತ್ತಾರೆ. ಸಂತೆಯನ್ನು ದೊಡ್ಡ ಸಾಲಾದಬಳಿ ಹೊಲದಲ್ಲಿ ಮಾಡಿಸಿದರೆ ಜನಗಳಿಗೆ ಎಷ್ಟೋ ಸಹಾಯವಾಗುವದು.

ಚಿಕ್ಕಮಗಳೂರು.—ಇಲ್ಲಿ ಪ್ಲೇಗಿನ ಹಾವಳಿ ತಪ್ಪಲಿಲ್ಲ. ಯಥಾಪ್ರಕಾರ ದಿನವಹಿ ೧೦—೧೫ ರಂತೆ ಸಾಯುವುದು ನಿಲ್ಲಲಿಲ್ಲ. ಈ ಟವುನಿನ ಸುತ್ತ ಗ್ರಾಮಗಳಲ್ಲಿಯೂ ಹರಡಿಕೊಂಡಿತು. ರೋಗ ವ್ಯಾಪಿಸಿದ ಗ್ರಾಮಗಳ ವಾಸ್ತವ್ಯಗಳು ಹೋಗುತ್ತಾರೋ ಇಲ್ಲವೋ ತಿಳಿಯದು. ಈ ಊರಲ್ಲಾದರೋ ಎಲ್ಲಿ ನೋಡಿದರೂ ಅಷ್ಟು ಜನರು ಸತ್ತರು, ಇಷ್ಟು ಜನರು ಸತ್ತರು, ನೆನ್ನೆ ನೋಡಿದೆನಲ್ಲಾ, ಈಹೊತ್ತು ಹೋದರೇ, ಅಯ್ಯೋ ಪಾಪ, ಯಾವಾಗ ಇದನ್ನು ಬಿಡಿಸುವ ನೋ ಎಂಬುವ ಮಾತೇ ವಿಶೇಷವಾಗಿದೆ. ಇಲ್ಲಿನ ಸಬ್ ಡಿವಿಜನರ ಬಂಗಲೆಯಲ್ಲಿ ಅವರ ಮಗಳ ಕಾಯಿಲೆ ಇರುವಂತೆ ಕೇಳುತ್ತಾರೆ. ನಮ್ಮ ಡಿಪ್ಯುಟಿ ಕಮೀಷನರ್ ಮಿ॥ ಚಂಗಯ್ಯಶೆಟ್ಟರು ಮಿ॥ ದೇವರಾಜೇಅರಸಿನವರಿಗೆ ಡಿಸ್ಟ್ರಿಕ್ಟಿನ ಚಾರ್ಜನ್ನು ಇದೇ ತಿಂಗಳು ೨೮ನೇ ತಾರೀಕಿಗೆ ವಹಿಸಿ, ಅದೇ ಸಾಯಂಕಾಲ ಸಂಸಾರ ಸಮೇತ ಹೊರಟುಹೋದರು. ೧೯ನೆ ತಾರೀಖಿನಲ್ಲಿ ಇಲ್ಲಿನ ದೇಶದ್ಧಮಾನುಸ್ಸರೆಲ್ಲ ಸೇರಿ ನೇಟಿವ್ ಕ್ಲಬ್ಬಿನಲ್ಲಿ ಮಿ॥ ಶೆಟ್ಟರಿಗೆ ಒಂದು ಅಪ್ಪರ್ ಕೊಟ್ಟರೆಂದು ವರ್ತಮಾನ.—ಕಳ್ಳಿಸಿ ಸಾಹುಕಾರರ ವಿಚಾರಕ್ಕೆ ಬಂದಿದ್ದ ಯೂರೋಪಿಯನ್ ಆಫೀಸರುಗಳಿಗೂ ಪೋಲೀಸಿನವರಿಗೂ ಯುದ್ಧ ಸಂಬಂಧವಾದ ಕಲಹವು ನಡೆದುದರಲ್ಲಿ ಪೋಲೀಸಿನವರು ಪಾಲಿಸಿದವರುಗಳನ್ನು ಚೆನ್ನಾಗಿ ಅಟಾಕ್ ಮಾಡಿದ್ದರಿಂದ ಬೆಂಗಳೂರಿನಿಂದ ಬಂದಿದ್ದ ಕರ್ನಲ್ ಸಾಹೇಬರು ಇಲ್ಲಿನ ಪೋಲೀಸಿನವರಿಗೆ ೫೦ ರೂಪಾಯಿ ಇನಾಮು ಕೊಟ್ಟರು.—ಇಲ್ಲಿನ ಪೋಲೀಸಿನವರದ ಇಟ್ಟಿಯಲ್ಲಿ ಕನ್ನಾಕಳವು ಮಾಡಿದ ಧನೋಜ ಬಾಬು ಯಾನೆ ಗೌಸ್ ಎಂಬಿಬ್ಬರು ಅಪರಾಧಿಗಳನ್ನು ೧೯ನೇ ಮತ್ತು ೧೧ನೇ ನಂಬರ್ ಕಾನ್ಸ್‌ಟೇಬಲುಗಳು ಬೇಲೂರು ತಾಲ್ಲೋಕಿನಲ್ಲಿ ಪತ್ತೆ ಮಾಡಿ, ಮಾಲುಸಹಿತ ಹಿಡಿದು ತಂದು ರಿಕಾರ್ಡ್ ಮಾಡಿದ್ದರ ಮೇಲೆ ಟ್ರೆಜರಿ ಆಗ್ ಕಮಿಷನರ ಕೋರ್ಟಿನಲ್ಲಿ ತಲಾ ಒಂದು ವರ್ಷದಂತೆ ಸಜಾ ಆಯಿತು.—ಮೂಡಿಗೆರೆಯಿಂದ ಮಂಗಳೂರಿಗೆ ಹೋಗಿ ಬರುತ್ತಿದ್ದ ಟಾಂಗಾ ಗಾಡಿಯು ನಿಂತು ಹೋಯಿತು. ಇನ್ನುಮೇಲೆ ಮೇರಿ ಮೇಲ್ ಕಂಟ್ರಾಕ್ಟ್ ಮಾಡಿಕೊಳ್ಳುವರು ಮೋಟಾರ್ ಗಾಡಿಯನ್ನು ಇಟ್ಟು ಮೇಲ ಸಾಗಿಸುವರೆಂದು ಹೇಳಿಕೊಳ್ಳುತ್ತಾರೆ. ಇಲ್ಲಿನ ವೆಸ್ಲಿಯನ್ ಮಿಷನ್ ಘನ ಪಾದ್ರಿಗಳಾದ ರೆವರೆಂಡ್ ಸಾಹೇಬರು ಸಕಲೇಶಪುರದ ಕಡೆ ಸರ್ಕೀಟು ಹೊರಟಿದಾರೆ.

ತೀರ್ಥಹಳ್ಳಿ.—ಈ ಪ್ರಾಂತ್ಯ ಒಳ್ಳೇ ಮಳೆಯಾಯಿತೆಂದು ರೈತರು ಸಂತೋಷಪಡುತ್ತಾರೆ. ಕಡೇ ಮಳೆಯಿಂದ ಅಡಿಕೆ ಫಸಲಿಗೆ ನಷ್ಟವಾಯಿತು. ಸುತ್ತಮುತ್ತ ಗ್ರಾಮಗಳಲ್ಲಿ ಚಿರತೆ ಹುಲಿಗಳ ಅಬ್ಬರ ಬಹಳವಾಗಿದೆ. ಒಂದೊಂದು ಕೊಟ್ಟಿಗೆಯ ೩-೪ ದನಗಳು ಈ ದುಷ್ಟ ಮೃಗಗಳ ಬಾಯಿಗೆ ರೈತರ ದುಃಖವನ್ನು ಕೇಳುವದಕ್ಕಾಗದು. ಎರಡು ದಿನಗಳ ಹಿಂದೆ ಮಳೆಯಾಗಲಿಲ್ಲ. ಒಬ್ಬ ಬ್ರಾಹ್ಮಣನು ಎರಡು ಕರುಗಳನ್ನು ಈ ಚಿರತೆಗಳಿಗೆ ಆಹಾರವಾದಿದನು. ಸರ್ಕಾರದವರು ಒಳ್ಳೇ ಶಿಕಾರಿದಾರರಿಗೆ ಪ್ರೋತ್ಸಾಹಪಡಿಸಿ ಪ್ರಜೆಗಳಿಗೆ ಉಪಕಾರಮಾಡದಿದ್ದರೆ ಅನೇಕರ ನಷ್ಟವನ್ನು ಹೇಳುವದಕ್ಕಾಗದು.—ಇಲ್ಲಿನ ಆಸ್ಪತ್ರೆ ಅಸಿಸ್ಟೆಂಟ್ ಮಿ॥ ರತ್ನಸ್ವಾಮಿ ಪಿಳ್ಳೆಯವರಿಗೆ ಬೆಂಗಳೂರಿಗೆ ವರ್ಗವಾಯಿತು. ಇದು ಇಲ್ಲಿನ ಜನಗಳಿಗೆ ಗೊತ್ತಾದ ಕೂಡಲೆ ಕೆಲವು ಮುಖಂಡರು ಸೇರಿ, ಅವರು ರೋಗಿಗಳಿಗೆ ಮುತುವರ್ಜಿಯಿಂದ ನೋಡುತ್ತಿದ್ದ ಚಿಕಿತ್ಸೆ ಮುಂತಾದ ಒಳ್ಳೇ ಗುಣದ ವಿಷಯ ಹೊಗಳಿದ್ದಲ್ಲದೆ ಎಲ್ಲರೂ ಏಕವಾಗಿ ಫಲಾಹಾರ ಮುಂತಾದವುಗಳನ್ನು ಹಂಚಿ ಒಳ್ಳೇ ಮರ್ಯಾದೆಯಿಂದ ಕಳುಹಿಸಿಕೊಟ್ಟರು. ಮಿ॥ ರತ್ನಸ್ವಾಮಿ ಪಿಳ್ಳೆಯವರು ಕೀರ್ತಿ ಸ್ಥಿರವಾಗಿದ್ದುಕೊಂಡು ಎಲ್ಲಾ ಜನರ ಮರ್ಜಿಗೆ ಒಳಪಟ್ಟು ನಡದದ್ದು ಸ್ತೋತ್ರಾರ್ಹವಾದದ್ದೇ ಸರಿ. ಈಗ ಬದಲಿ ಬಂದಿರುವವರು ಸಹ ಬಹಳ ಮುಂತಾಗಿ ಎಲ್ಲರಲ್ಲಿಯೂ ಏಕ ರೀತಿ ಪಾಲುಮಾರಿಕೆಯಿಲ್ಲದೆ ನಡೆವ ಜನರಂತೆ ಸ್ತೋತ್ರಗೊಂಡೆಂದು ಜನಗಳು ಹಾರೈಸುತ್ತಾರೆ.— ವಿಜಯದಶಮಿ ಉತ್ಸವಕ್ಕೆ ಇಲ್ಲಿಯೂ ಅನೇಗ ಮೆರವಣಿಗೆ ಹೊರಟು, ಕೆಲವರು ಸವಾರಿ ಸುಗ ಮಾಡಿ. ಜನಗಳಿಗೆ ಆಶ್ಚರ್ಯವನ್ನುಂಟು ಮಾಡಿದರು. ಈ ತಾಲ್ಲೂಕಿನ ಸುತ್ತಲು ಅನೇಕ ಗ್ರಾಮಗಳಲ್ಲಿ ರೈತರು ಆಮಶಂಕೆ ಉಪದ್ರದಿಂದ ನರಳುತ್ತಿದ್ದಾರೆ. ಕಾಲರದಿಂದಲೂ ಕೆಲವರು ಸತ್ತು ಹೋದರು. ಜನರು ದೂರದಿಂದ ಆಸ್ಪತ್ರೆಗೆ ಬಾರದೆ ಔಷಧಿ ಮುಂತಾದವುಗಳಿಗೆ ಅನುಕೂಲವಿಲ್ಲದೆ ನರಳುತ್ತಿದ್ದಾರೆ. ಅಮಲ್ದಾರರು ಈ ಪರಿತಾಪವನ್ನು ತಿಳಿದು ಮೇಲಕ್ಕೆ ತಿಳಿಸಿದ್ದರೆ ಗೌರ್ನಮೆಂಟಿನವರು ಸ್ಪೆಷಲ್ ಆಸ್ಪತ್ರೆ ಅಸಿಸ್ಟೆಂಟರನ್ನು ಗ್ರಾಮಗಳ ಮೇಲೆ ಕಳುಹಿಸುವ ಏರ್ಪಾಡಾದರೂ ಮಾಡುತ್ತಿದ್ದರು. ಈಗಲಾದರು ಜನಗಳು ಹಳ್ಳಿಗಳಲ್ಲಿ ಪಡುವ ಉಪದ್ರವನ್ನು ಹೇಳಿತೀರದು.—ನಮ್ಮ ಅಮಲ್ದಾರರಿಗೆ ಬೇರೆ ಕಡೆಗೆ ವರ್ಗವಾಗಿದೆ. ಮುಖ್ಯವಾಗಲಿನ ಹತ್ತು ಬಂದು ಸೇತುವೆಗೆ ಧ್ವಜನಿಯರು ಎಷ್ಟು ರಿಪೇರಿ ಮಾಡಿದರೂ ಪ್ರಯೋಜನವಿಲ್ಲದೆ ಕೆಲಸಕ್ಕೆ ಉಪಯೋಗಿಸದ ಕಲ್ಲುಗಳು ಬಿದ್ದುಹೋಗಿವೆ. ಆದಗ ರಸ್ತೆಯು ಚನ್ನಾಗಿಲ್ಲ. ಇಲಾಖೆಯವರ ಮುತುವರ್ಜಿ ಹುರುಕಿಲ್ಲವೆಂದು ಪ್ರಾಂತಜರಿಸುತ್ತದೆ.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಿಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರ್‍ರು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗ್ ನಡಸಿದರು. ಆಗ ಮ್ಯುನಿಸಿಪಲ್ ಲೆಕ್ಕಗಳನ್ನು ತನಿಖೆ ಮಾಡಿ, ಸಾಯರ್ ಉಪ್ಪವಳಿಯು ಹೋದ ವರುಷ ಆಗಿದ್ದಷ್ಟು ತಿಂಗಳಿಗಿಂತಲೂ ಈ ಆಗಸ್ಟಿನಲ್ಲಿ ೯೬೦ ಚಿಲ್ಲರೆ ರೂಪಾಯಿ ಕಡಿಮೆಯಾಗಿದೆ ಎಂತಲೂ, ರಸ್ತೆ ದುರಸ್ತು ಮಾಡುವುದಕ್ಕೆ ಜಮಾವಣೆ ಆದ ಕಲ್ಲು ಗ್ರಾವಲ್‍ಗಳ ಲೆಕ್ಕಾಚಾರ ಸರಿಯಾಗಿ ತಿಳಿಯುವದಿಲ್ಲವೆಂತಲೂ ರಿಪೋರ್ಟ್ ಬರೆದಿದಾರೆ. ಮೆ॥ ಅಂಬಳೆ [illegible]ರು ಎದ್ದು—ಕಳೆದ ವರುಷ ೩೦—೪೦ ಸಾವಿರ ರೂಪಾಯಿಯ ಕಾಮಗಾರಿ ನಡೆದಿದ್ದರೂ ಮ್ಯುನಿಸಿಪಲ್ ಕಮಿಷನರಿಗೆ ಗೋಚರವಾಗಲಿಲ್ಲವೆಂತಲೂ, ಇಂಜನಿಯರು ಕಳಿಸಿದ ಬಿಲ್ಲುಗಳನ್ನು ವೈಸ್ ಪ್ರಸಿಡೆಂಟರು ಪ್ಯಾಸ್ ಮಾಡಿ ಹಣ ಪಾವತಿ ಆಗುತ್ತದೆ ಎಂತಲೂ, ಮೊದಲಿದ್ದಂತೆ ಮೊದಲು ಕಮಿಷನರಿಗೆ ಕಾಮಗಾರಿ, ರಿಪೇರಿ ಮುಂತಾದ್ದನ್ನು ತಿಳಿಸಿ ತೋರಿಸಿ ಅವರ ಅನುಮತಿ ಪಡೆಯುವ ಏರ್ಪಾಡು ಜಾರಿಗೆ ಬರಬೇಕೆಂತಲೂ, ಈಗಿರುವ ಇಂಜನಿಯರಿಗೆ ಬದಲಾಗಿ ಸರಿಯಾಗಿ ಪ್ಯಾಸ್ ಮಾಡಿದ ಅನುಭವಶಾಲಿಯಾದ ಇಂಜನಿಯರನ್ನು ನೇಮಿಸಿ ಪರಿತೃಪ್ತಿಕರವಾಗಿ ಕೆಲಸಗಳು ನಡೆಯಬೇಕೆಂದೂ, ಅಂಥಾ ಹೊಸ ಇಂಜನಿಯರಿಗೆ ೧೫೦ ರೂಪಾಯಿ [illegible] ಸಂಬಳ ಕೊಡಬೇಕೆಂತಲೂ ಸೂಚಿಸಿದ್ದನ್ನು ಇತರ ಮೆಂಬರುಗಳು ಅನುಮೋದಿಸಿದ್ದರಿಂದ ಪ್ರಸಿಡೆಂಟರು ಆ ರೀತಿ ತೀರ್ಮಾನವನ್ನು ಬರೆದಿಟ್ಟರು—ಕೃಷ್ಣಮೂರ್ತಿ ಪುರವೆಂಬ ಬಡಾವಣೆಯಲ್ಲಿ ದೇವಸ್ಥಾನವನ್ನೂ [illegible] ಸತ್ರವನ್ನೂ ಕಟ್ಟುವುದಕ್ಕೆ ಧರ್ಮಾರ್ಥವಾಗಿ ಮ್ಯುನಿಸಿಪಲ್ ಜಮೀನನ್ನು ಕೊಡಬೇಕೆಂದು ತೀರ್ಮಾನವಾಯಿತು—ಗುರಿಕಾರ್ ಬಸವಲಿಂಗಪ್ಪನವರ ಮನೆ ಬಳಿ [illegible] ಮುಂತಾದವರಿಗೆ ಅವರ ಮನೆಗಳ ಮುಂಭಾಗದಲ್ಲಿ [illegible] ಖಾಲಿ ನಿವೇಶನವನ್ನು [illegible] ಕೊಂಡಿರಬೇಕೆಂಬ ಮತ್ತು ಕೇಳಿದಾಗ ಬಿಟ್ಟುಕೊಡಬೇಕೆಂಬ ಕರಾರಿನ ಮೇರೆ ಮಂಜೂರು ಮಾಡಬಹುದೆಂದೂ, [illegible]ಯಲ್ಲಿ ಇಂಜನಿಯರ್ ಮೆ॥ ಅಶ್ವತ್ಥನಾರಾಯಣರಾಯರಿಗೆ ಅವರ ಮನೆ ಮುಂದಿರುವ ೩೦ ಅಡಿ ರಸ್ತೆಯಲ್ಲಿ ೩೦ ಅಡಿಯನ್ನು ಕ್ರಯಕ್ಕೆ ಕೊಡಬಹುದೆಂದೂ ತೀರ್ಮಾನಿಸಿದರು—ಕರ್ಜನ್ ಪಾರ್ಕಿನಲ್ಲಿರುವ ಮಿಷನ್ ಕನ್ಯಾ ಸ್ಕೂಲ್ ಕಟ್ಟಡವನ್ನು ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ವಿಕ್ಟೋರಿಯಾ ಬಾಲಿಕಾ ಪಾಠಶಾಲೆಯ ಎದುರಿಗೆ ಸ್ಥಳ ಕೊಡಬೇಕೆಂಬ ವಿಷಯವನ್ನು [illegible] ಸದ್ಯದಲ್ಲಿ ಮುಂದರಿಸದೆ ಬಿಟ್ಟಿರಬೇಕೆಂದು ಬಂದಿದ್ದ ಗವರ್ನ್‍ಮೆಂಟ್ ಹುಕುಮನ್ನು ರಿಕಾರ್ಡು ಮಾಡಿಕೊಂಡರು—ಪಟ್ಟಣದ ಮಾನಂದವಾಡಿ ರಸ್ತೆಯ ಬಳಿ ಬಡಾವಣೆ ಮಾಡಿ ಅಲ್ಲಿ ಮ್ಯುನಿಸಿಪಲ್ ಕಟ್ಟಡವನ್ನು ಮಾಡಿಕೊಂಡು, ರಸ್ತೆ ದುರಸ್ತು ಮಾಡಿಕೊಳ್ಳುವುದಕ್ಕೆ ಸರ್ಕಾರದಿಂದ ಅವಶ್ಯವಾದಷ್ಟು ಹಣ ಪಡೆಯಬಹುದೆಂದು ಗವರ್ನಮೆಂಟಿನವರು ತಿಳಿಸಿದಾರೆ—ಕಾಲೇಜ್ ರಸ್ತೆಯಲ್ಲಿ ಮ್ಯುನಿಸಿಪಾಲಿಟಿಯವರು, ಮೆ॥ ಸುಬ್ಬಕೃಷ್ಣರಾಯರ ಬಾಬತು ಕೆಲವು ಜಮೀನನ್ನು ಕಾಂಪೆನ್ಸೇಷನ್ ಕೊಟ್ಟು ತೆಗೆದುಕೊಂಡು ರಸ್ತೆ ಹಾಕಿ, ಅಲ್ಲಿದ್ದ ಅವರ ಬಾವಿಯನ್ನು ಮುಚ್ಚಿಸಿದರು. ಬಾವಿಗೆ ಪ್ರತಿಫಲ ಕೊಡಿಸಬೇಕೆಂದು ಅವರು ಕೇಳಿದ್ದಕ್ಕೆ ಅದನ್ನು ಕೂಡಲೇ ತನಿಖೆಯಿಂದ ರಿಕಾರ್ಡು ನಡಸಿ ವ್ಯವಸ್ಥೆ ಮಾಡಲಿಲ್ಲವಾದ್ದರಿಂದ ಅವರು ಈ ವಿಷಯಕ್ಕಾಗಿ ಕೋರ್ಟಿಗೆ ಹೋಗುವುದಾಗಿ ತಿಳಿದು ಬಂದಕಾರಣ ಮ್ಯುನಿಸಿಪಾಲಿಟಿಯವರು ಅಸೋಸಿಯೇಟರಾದ ಮೆ॥ ರಂಗೈಯ್ಯಂಗಾರ್ರನ್ನೂ ಚಂದ್ರಶೇಖರೈಯ್ಯನವರನ್ನೂ ನೇಮಿಸಿ, ಇವರು ಈ ವಿಚಾರವನ್ನು ಸರಿಯಾಗಿ ತನಿಖೆ ಮಾಡಿ ರಿಪೋರ್ಟ್ ಕಳುಹಿಸಬೇಕೆಂದು ಗೊತ್ತು ಮಾಡಿದರು. ಇವರು ತನಿಖೆ ಮಾಡಿ ಆ ಬಾವಿಯು ಮೆ॥ ಸುಬ್ಬಕೃಷ್ಣರಾಯರಿಗೇ ಸೇರಿದ್ದೇ ಸರಿ ಎಂತಲೂ, ಅದನ್ನು ಮುಚ್ಚಿದ್ದಕ್ಕೆ ಮ್ಯುನಿಸಿಪಾಲಿಟಿಯವರು ಅವರಿಗೆ ೫೦೦ ರೂಪಾಯಿ ಪ್ರತಿಫಲವನ್ನೂ ೧೯೦೩ನೆ ಇಸವಿ ಲಾಗಾಯಿತು ಇದುವರೆಗೆ ಸಹಜವಾದ ಬಡ್ಡಿಯನ್ನೂ ಕೊಡಬೇಕೆಂತಲೂ ರಿಪೋರ್ಟ್ ಕಳುಹಿಸಿದರು. ಮೆಂಬರುಗಳೆಲ್ಲಾ ಈ ರಿಪೋರ್ಟನ್ನು ಓದಿಸಿ ಕೇಳಿ ಅದರಂತೆಯೇ ಆಗಬಹುದೆಂದು ತೀರ್ಮಾನ ಮಾಡಿದಾರೆ—ಮ್ಯುನಿಸಿಪಲ್ ಸ್ಕೂಲ್ ಇನ್ಸ್‌ಪೆಕ್ಟರು ಇಲ್ಲವಾದ್ದರಿಂದ ಅವರಿಗೆ ಸಲ್ಲುತ್ತಿದ್ದ ಸಂಬಳದ ಹಣದಲ್ಲಿ ಕೆಲವು ಪಳ್ಳಿ ಮಠಗಳಿಗೆ ೬೦ ರೂ. ವರಗೆ ಮಾಸಾಶನ (ಗ್ರ್ಯಾಂಟು) ಕೊಡಬಹುದೆಂತಲೂ, ಮತ್ತು ಇನ್ಸ್‌ಪೆಕ್ಟರನ್ನು ನೇಮಿಸಿದಾಗ ಈ ಗ್ರ್ಯಾಂಟು ವಜಾ ಮಾಡಬೇಕೆಂತಲೂ, ಪ್ರತಿ ಸ್ಕೂಲಿನ ವಿಷಯದಲ್ಲೂ ಮೇಲ್ವಿಚಾರಣೆ ನಡೆದ ವಾರ್ಷಿಕ ರಿಪೋರ್ಟನ್ನು ಗವರ್ನಮೆಂಟಿಗೆ ಕೂಡಲೇ ಕಳುಹಿಸಬೇಕೆಂತಲೂ ಬಂದಿದ್ದ ಸರ್ಕಾರಿ ಹುಕುಂ ರಿಕಾರ್ಡು ಮಾಡಲಾಯಿತು. ಮ್ಯುನಿಸಿಪಲ್ ಕಂದಾಯಗಳನ್ನು ವಸೂಲು ಮಾಡುವುದಕ್ಕೆ ರಿವಿಷನ್ ನಡೆದದ್ದಾಗ್ಯೂ ಇನ್ನೂ ೧೯೦೦—೦೫—೦೬ ವರುಷಗಳ ಕೆಲ ಕೆಲವು ಬಾಕಿಗಳು ಉಳಿದಿರುತ್ತವೆ. ಇದು ತೃಪ್ತಿಕರವಾಗಿಲ್ಲ. ಆದ್ದರಿಂದ ಮೊದಲು ಮ್ಯುನಿಸಿಪಲ್ ಕಮಿಷನರೂ ಮುತ್ಸದ್ದಿಗಳೂ ಸೇರಿ ತಮ್ಮ ತಮ್ಮ ಮೊಹಲ್ಲೆಯಲ್ಲಿ ವಸೂಲಾಗದೆ ಇರುವಂಥಾ ಬಾಕಿಗಳನ್ನೆಲ್ಲಾ ಒಂದೇ ಸಲ ಪಟ್ಟಿ ಮಾಡಿ ತಿಳಿಸಬೇಕೆಂದು ಗೊತ್ತು ಮಾಡಲಾಗಿದೆ.—ತುಂಬಾ ಬಡಬಗ್ಗರ ಮನೆಗಳಲ್ಲಿ ಸಂಪಾದಿಸುವ ಯಜಮಾನನು ಕಾಯಿಲೆ ಬಿದ್ದರೆ ಉಳಿದ ಹೆಂಗಸರು ಮಕ್ಕಳಿಗೆ ಜೀವನಕ್ಕೆ ಮಾರ್ಗವಾಗುವಂತೆ [illegible] ಸ್ವಲ್ಪ ಹಣ ಕೊಡಬೇಕೆಂದು ಹೆಲ್ತ್ ಆಫೀಸರು ಕೇಳಿದರು. ರೀತಿ ಒಂದೆರಡು ತಿಂಗಳಿಗೆ ೧೦೦ ರೂಪಾಯಿ ಕೊಡುವಂತೆ ಒಪ್ಪಿ ಪ್ಯಾಸ್ ಮಾಡಿರುವ ಹಣದಲ್ಲಿ ಅವಶ್ಯಬಿದ್ದಾಗ ಬಡಬಗ್ಗರ ಜೀವನಕ್ಕೆ ಸಹಾಯ ಮಾಡಬಹುದೆಂದು, ಮೆಂಬರುಗಳು ತಿಳಿಸಿದರು—ಕುಕ್ಕರಹಳ್ಳಿ ಕೆರೆಯ ನೀರು ಯಾವ ಯಾವ ಮನೆಗಳಿಗೆ ಸರಬರಾಯಿ ಆಗಲಿಲ್ಲವೋ ಅಂಥಾವರಿಗೆ ನೀರಿನ ಕಂದಾಯದಲ್ಲಿ ಮೂರರ ಒಂದಂಶವನ್ನು ಮಾಫಿ ಬಿಡುವಂತೆ ಮೆಂಬರುಗಳು ತೀರ್ಮಾನ ಮಾಡಿದರು—ಕುಕ್ಕರಹಳ್ಳಿ ಕೆರೆ ಕೆಳಗಿನ ರಸ್ತೆಯನ್ನು ಅಗಲ ಮಾಡಿದ್ದಕ್ಕೆ ಮ್ಯುನಿಸಿಪಾಲಿಟಿಯಿಂದ ೫೦೦ ರೂಪಾಯಿ ಕೊಡಬೇಕೆಂತಲೂ ಆ ರಸ್ತೆಯನ್ನು ಚನ್ನಾಗಿ ದುರಸು ಮಾಡಿಸಬೇಕೆಂತಲೂ ಗೊತ್ತಾಯಿತು—ಮುಂದಿನ ತಿಂಗಳಿಂದ ಮ್ಯುನಿಸಿಪಲ್ ಖಾಲಿ ಹಾಕ್ ಶಿಬ್ಬಂದಿಯನ್ನು ಸಂಪೂರ್ಣವಾಗಿ ವಜಾ ಮಾಡಬೇಕೆಂತಲೂ, ಮ್ಯುನಿಸಿಪಲ್ ಮರಾಮತ್ ಲೆಕ್ಕಗಳು ಕ್ರಮವಾಗಿಟ್ಟಿವೆಯೋ ಇಲ್ಲವೋ ಎಂಬುದನ್ನು ತನಿಖೆ ಮಾಡಿಸಬೇಕೆಂತಲೂ ಮೆಂಬರುಗಳು ತೀರ್ಮಾನಮಾಡಿದರು.

ಆರ್ಯ ಧರ್ಮೋಜ್ಜೀವಿನೀ ಸಭೆಯು.

ಮೊದಲನೆಯ ವಾರ್ಷಿಕೋತ್ಸವವು

ಹೋದ ವರುಷ ಆಶ್ವೀಜ ಶುದ್ಧ ಏಕಾದಶಿಯ ದಿನ ರಾಜಧಾನಿಯಲ್ಲಿ ಸರ್ ಬಿ. ಎಂ. ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿ ಆರ್ಯಧರ್ಮೋಜ್ಜೀವಿನೀ ಸಭಾ ಎಂಬೊಂದು ಸಭೆಯನ್ನು ಸ್ಥಾಪಿಸಿದರಷ್ಟೆ. ಇದೇ ಆಶ್ವೀಜ ಶುದ್ಧ ಏಕಾದಶಿಯ ದಿನ (ಕಳೆದ ೩೦ [illegible]) ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಆ ಸಭೆಯ ಪ್ರಥಮ ವಾರ್ಷಿಕೋತ್ಸವವನ್ನು ನಡಸುವುದಕ್ಕಾಗಿ ದೊಡ್ಡ ಸಭೆಯು ಸೇರಿತ್ತು. ದಿವಾನ್ ಮೆ॥ ವಿ. ಪಿ. ಮಾಧವರಾಯರು ಅಗ್ರಾಸನವನ್ನು ವಹಿಸಿದ್ದರು. ಮೆ॥ ಗ್ರಾಮದ ಟಿ. ಆನಂದರಾಯರು, ಎಚ್. ವಿ. ನಂಜುಂಡೈಯನವರು, ಪಿ. ಎನ್. ಕೃಷ್ಣರಾಯರು, ಎಸ್. ಕೆ. ಸಾಯರ್ ಯವರು, ಎಂ. ರಂಗಾಚಾರ್ರು, ಆದಿ ನಾರಾಯಣಸ್ವಯ್ಯನವರು, ತಿಮ್ಮ ಕೃಷ್ಣರಾಯರು, [illegible] ಶಾಸ್ತ್ರಿಗಳು, ಕಸ್ತೂರಿ ನರಸಿಂಹಶಾಸ್ತ್ರಿಗಳು, ಪಂಡಿತ ರತ್ನಂ ಕಸ್ತೂರಿ ರಂಗಾಚಾರ್ರು, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ರು, ಈ ಮೊದಲಾದ ಅನೇಕ ಲೌಕಿಕ ವೈದಿಕ ದೊಡ್ಡಮನುಷ್ಯರು ನೂರಾರು ಮಂದಿ ವಿದ್ಯಾರ್ಥಿಗಳೂ ಪ್ರಜಾಪ್ರತಿನಿಧಿಗಳೂ ಇತರರೂ ವಿಶೇಷವಾಗಿಯೂ ಸಭಾಸದರಾಗಿದ್ದರು. ಟೌನ್ ಹಾಲ್ ಬಂಗಲೆಯಲ್ಲಿ ಸ್ವಲ್ಪವೂ ಸ್ಥಳವಿಲ್ಲದಂತೆ ಜನರಿಂದ ತುಂಬಿಲ್ಪಟ್ಟಿತ್ತು.

ವಿದ್ಯಾರ್ಥಿಗಳು [illegible] ಈ ಸಭೆಯ ಉದ್ದೇಶವನ್ನು ವಿವರಿಸಿ ಸಭಾ ಕಾರ್ಯಗಳನ್ನು ಪ್ರಾರಂಭಿಸಿದರು. ಮೇಲ್ಕಂಡ ಸಭೆಯ ಕಾರ್ಯದರ್ಶಿಗಳಾದ ಮೆ॥ ಎ. ಮಹಾದೇವ ಶಾಸ್ತ್ರಿಗಳು ಕಳೆದ ಹನ್ನೆರಡು ತಿಂಗಳಲ್ಲಿ ನಡಸಲ್ಪಟ್ಟಿರುವ ವಿಷಯಗಳನ್ನು ಕುರಿತು ಒಂದು ರಿಪೋರ್ಟ್ ಓದಿದರು. ಅದರ ತರ್ಜುಮೆಯನ್ನು ಮೆ॥ ಡಿ. ವೆಂಕಟರಮಣಯ್ಯನವರು ಕನ್ನಡದಲ್ಲಿ ತಿಳಿಸಿದರು. ಅದರಲ್ಲಿ ಕಂಡುಬಂದ ಮುಖ್ಯಭಾಗಗಳೇನೆಂದರೆ—ವೈದಿಕರೂ ಲೌಕಿಕರೂ ಸೇರಿ ಒಂದು ಸಂಘವನ್ನು ಮಾಡಿಕೊಂಡು, ಧರ್ಮ ಆಚಾರ ವ್ಯವಹಾರ ಪದ್ಧತಿ ಈ ಮೊದಲಾದ ಮುಖ್ಯ ಭಾಗಗಳನ್ನು ಕುರಿತು ಚರ್ಚೆ ಮಾಡುತ್ತಿದಾರೆ. ಕೆಲವು ವಿದ್ಯಾವಂತರು ಈ ವಿಷಯಗಳನ್ನು ಕುರಿತು ಕಳೆದ ವರುಷ ಹನ್ನೆರಡು ಉಪನ್ಯಾಸಗಳನ್ನು ಮಾಡಿದಾರೆ. ಈ ಸಭೆಯ ಉದ್ದೇಶ ಕಾರ್ಯಸಾಧನೆ ಮುಂತಾದ್ದನ್ನು ಪ್ರಚಾರ ಪಡಿಸುವುದಕ್ಕೆ ಕನ್ನಡದಲ್ಲಿ ಒಂದು ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿರುವರು. ಸಮುದ್ರಯಾನವನ್ನು [illegible] ಮತ್ತು ಎಷ್ಟು ಮಟ್ಟಿಗೆ ಮಾಡತಕ್ಕದ್ದು, ಗಂಡು ಹೆಣ್ಣು ಮಕ್ಕಳಿಗೆ [illegible] ಮೊದಲಾದುವುಗಳನ್ನು ಕಲಿಸತಕ್ಕ ವಿಧಾನ, ಗಂಡು ಹೆಣ್ಣು ಮಕ್ಕಳಿಗೆ ಎಷ್ಟು ವರುಷದ ತನಕ ಮದುವೆ ಮಾಡದೆ ನಿಲ್ಲಿಸಬಹುದು, ಜಾತಿಗಳ ಒಳಪಂಗಡಗಳನ್ನು ನಿರ್ನಾಮ ಮಾಡುವುದು, ಧರ್ಮ ಪದ್ಧತಿ ಆಚಾರ ವ್ಯವಹಾರಗಳಲ್ಲಿ ಯಾವ ಯಾವ ಬದಲಾವಣೆಗಳನ್ನು ಮಾಡಬಹುದು ಎಂಬೀ ಮೊದಲಾದ ಸಂಘಪರಿಷ್ಕರಣ ವಿಚಾರಗಳನ್ನು ಆ ಸಭಿಕರು ಶಾಸ್ತ್ರ ಸಮ್ಮತವಾಗಿಯೂ ಈಗಿನ ಕಾಲದೇಶವರ್ತಮಾನಗಳಿಗನುಗುಣವಾಗಿಯೂ ಇರುವಂತೆ ತಿದ್ದುಪಾಟುಮಾಡಬೇಕೆಂದು ಪರ್ಯಾಲೋಚಿಸುತ್ತಿದಾರೆ. ಮುಂದಿನ ವರುಷದೊಳಗಾಗಿ ಅವರ ಕಾರ್ಯಗಳು ಎಷ್ಟು ಮಟ್ಟಿಗೆ ಸಫಲವಾಗುವವೋ ಸೆಕ್ರೆಟರಿಯವರು ತಿಳಿಯಪಡಿಸುವರು.

ಅನಂತರ ಮೆ॥ ಬಿ. ರಾಮಕೃಷ್ಣರಾಯರು ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ—ನಮ್ಮ ದೇಶದಲ್ಲಿ ಪ್ರಾಚೀನ ಕಾಲದಲ್ಲಿ ವಿದ್ಯೆ ವ್ಯವಸಾಯ ಕೈಗಾರಿಕೆ ಕಸಬು ವ್ಯಾಪಾರಾದಿಗಳು ಅಭಿವೃದ್ಧಿಯಲ್ಲಿದ್ದುವೆಂದು ಶಾಸ್ತ್ರವಚನಗಳಿಂದಲೂ ಚರಿತ್ರೆಗಳಿಂದಲೂ ಗೊತ್ತಾಗಿದೆ. ಈಚೆಗೆ ಇವೆಲ್ಲಾ ಕ್ಷೀಣಾವಸ್ಥೆಗೆ ಬಂದಿರುತ್ತವೆ. ಈಗಲಾದರೋ ಅನೇಕ ಕಡೆಗಳಲ್ಲಿ ಕಸಬುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಘಗಳು ಏರ್ಪಡಾಗಿರುವುವು. ಅವುಗಳಲ್ಲಿ ಕೆಲಸ ನಡೆಯುವುದೇನೋ ಅಷ್ಟರಲ್ಲೇ ಇದೆ. ಕಾರಣಗಳೆಂದರೆ ಜನರಲ್ಲಿ ಒಂದು ವಿಧವಾದ ನಿಕೃಷ್ಟತೆಯುಂಟಾಗಿರುವುದು. ವಿದ್ಯಾವಂತನಾದವನು ಸರ್ಕಾರಿ ಚಾಕರಿಯನ್ನು ಅಪೇಕ್ಷಿಸುತ್ತಾನಲ್ಲದೆ ಕಸಬನ್ನು ಹಿಡಿದು ನಡೆಸುವುದಿಲ್ಲ. ಇದಲ್ಲದೆ ಜನರು ನಿಜವಾದ ಉದ್ದೇಶವನ್ನೂ ಕಾರ್ಯಸಾಧನೆಯನ್ನೂ ಬಿಟ್ಟು ಅತ್ಯಲ್ಪವೂ ನಿಷ್ಪ್ರಯೋಜನವೂ ಆದ ಲಾಂಛನಗಳನ್ನು ಆಚರಣೆಯಲ್ಲಿಟ್ಟುಕೊಂಡಿದಾರೆ. ಇದರಿಂದ ನಮ್ಮ ಜನರು ಕಷ್ಟಗಳನ್ನನುಭವಿಸಿಕೊಂಡು ಸರ್ವ ವಿಷಯಗಳಲ್ಲೂ ಕ್ಷೀಣಗತಿಗೆ ಬರುತ್ತಿರುವರು. ಆದ ಕಾರಣ ಹಿಂದುಗಳ ಧರ್ಮವ್ಯಾವುದು? ಅದನ್ನು ನಡಸುವುದು ಹೇಗೆ? ಎಂಬೀ ವಿಷಯಗಳನ್ನು ನಿರ್ಧರಿಸಿ ಅದರಂತೆ ನಡೆದುಕೊಳ್ಳುತ್ತಾ ಬಂದಲ್ಲಿ ನಾವು ವೃದ್ಧಿಹೊಂದುವೆವು. ಈ ಉದ್ದೇಶದಿಂದಲೇ ಈ ಸಭೆಯನ್ನು ಸ್ಥಾಪಿಸಿರುತ್ತಾರಾದಕಾರಣ ಇದರಿಂದ ಎಲ್ಲರಿಗೂ ಪ್ರಯೋಜನವುಂಟೆಂದು ಹಾರೈಸುವೆವು.

ತರುವಾಯ ದಿವಾಣಗೆರೆಯ ಮೆ॥ ಚಂದ್ರಶೇಖರಶಾಸ್ತ್ರಿಗಳು ಹೇಳಿದ ಅಭಿಪ್ರಾಯವೇನೆಂದರೆ—ಸಮಸ್ತ ಜಾತಿಯವರೂ ತಮ್ಮ ತಮ್ಮ ಜಾತಿಗೆ ಯೋಗ್ಯವಾದ ಕರ್ಮಗಳನ್ನು ಜಿತಮನಸ್ಸಿನಿಂದಲೂ ಪ್ರೀತಿಪೂರ್ವಕವಾಗಿಯೂ ಆಚರಿಸುತ್ತಾ ಚಿತ್ತಶುದ್ಧಿಯನ್ನು ಹೊಂದ[ಬೇ]ಕು. ಚಿತ್ತಶುದ್ಧಿಯುಂಟಾದರೆ ಮೋಕ್ಷ ಮಾರ್ಗವು ಲಭಿಸುವುದು. ಲೌಕಿಕಕ್ಕೂ ವೈದಿಕಕ್ಕೂ ಸಂಬಂಧವಿಲ್ಲವೆಂದು ಎಷ್ಟು ಮಾತ್ರಕ್ಕೂ ಊಹಿಸಕೂಡದು. ಮೊದಲನೆಯದು ಎರಡನೆಯದಕ್ಕೆ ಅಸ್ತಿಭಾರಪ್ರಾಯವಾಗಿದೆ. ಸಂಸ್ಕೃತ ವಿದ್ಯೆಯ ಪ್ರಚಾರವು ಕಡಿಮೆಯಾದ್ದರಿಂದಲೇ ವೈದಿಕರಿಗೂ ಲೌಕಿಕರಿಗೂ ಐಕಮತ್ಯವೂ ಪರಸ್ಪರ ಪ್ರೀತಿವಿಶ್ವಾಸಗಳೂ ತಪ್ಪುತ್ತಾ ಬಂದಿವೆ. ಇವರು ಹೀನಜಾತಿಯವರು, ಇವರು ಕೆಟ್ಟ ಕಸಬಿನವರು ಎಂಬೀ ರೀತಿಯಾಗಿ ಹೀನೈಸುವುದೂ ತುಚ್ಛವಾಗಿ ಕಾಣುವುದೂ ಅವರನ್ನು ಅಲಕ್ಷ್ಯ ಮಾಡುವುದೂ ಯೋಗ್ಯವಲ್ಲ. ಹಾಲಿಗೂ ನೀರಿಗೂ ಯಾವ ರೀತಿ ಪರಸ್ಪರವಾದ ಐಕಮತ್ಯವಿರುತ್ತದೆಯೋ, ಅಕ್ಕಿಗೆ ಅದರ ಮೇಲಿನ ಹೊಟ್ಟು ಎಷ್ಟು ಅವಶ್ಯವಾದದ್ದೋ, ಮನುಷ್ಯನಿಗೆ ಪ್ರತಿ ಒಂದು ಅಂಗವೂ ಹೇಗೆ ಬೇಕಾಗಿರಬೇಕಾದದ್ದು ಎಷ್ಟು [illegible]ದದ್ದೋ ಹಾಗೆಯೇ ಜನಾಂಗದ ಏಳಿಗೆಗೂ ಅಭಿವೃದ್ಧಿಗೂ [illegible]ರಲ್ಲಿರುವ ಪ್ರತಿ ಒಂದು ಜಾತಿಯವರೂ ಐಕಮತ್ಯ, ಪರಸ್ಪರ ಪ್ರೀತಿ, ಸ್ನೇಹಭಾವವುಳ್ಳವರಾಗಿರಬೇಕು. ಆದಕಾರಣ ಈ ಸಭೆಯ ಕಾರ್ಯಗಳು ಸಕಲ ಜಾತಿಯವರಿಗೂ ಅವರವರ ಕರ್ತವ್ಯಗಳನ್ನು [illegible] ಕೊಟ್ಟು ಪ್ರೋತ್ಸಾಹಿಸುವುದರ ಮೂಲಕ ನಮ್ಮ ಆರ್ಯ ಧರ್ಮವನ್ನು ಉಚ್ಛ್ರಾಯಸ್ಥಿತಿಗೆ ತರುವುದಾಗಲೆಂದು ಹಾರೈಸುತ್ತೇನೆ.

ಮೆ॥ ಎಲ್. ಕೆ. ಸಾಯರ್ ಯವರು ಹೇಳಿದ್ದೇನೆಂದರೆ—[illegible]ಲ್ಲಾ ಸಾರ್ವತ್ರಿಕವಾದ ಪ್ರೀತಿಯನ್ನು ಪ್ರಾಣಿಗಳಿಗೆ ತೋರಿಸುವುದರಿಂದಲೇ ದೇಶೋನ್ನತಿ ಹೊಂದುವೆವು. ನಾವು ಮಾಡಬೇಕಾದ ಕಾರ್ಯಗಳ ಮುಖ್ಯ ಭಾಗಗಳನ್ನು ತ್ಯಜಿಸಿ ಅವುಗಳ ಲಾಂಛನಗಳನ್ನು ಮಾತ್ರ ಇಟ್ಟುಕೊಂಡು ಅನುಸರಿಸುತ್ತಾ ಬಂದಿದ್ದೇವೆ. ಅನೇಕ [illegible]ವಾದ ಮತ್ತು ಅಲ್ಪವಾದ ಆಚಾರ ವಿಚಾರಗಳನ್ನಿಟ್ಟುಕೊಂಡಿದ್ದೇವೆ. ನಮ್ಮ ವೇದಾದಿ ಸ್ಮೃತಿ ಸೂತ್ರಗಳಲ್ಲಿರುವವುಗಳನ್ನು ಬಹು ಮಟ್ಟಿಗೆ ತ್ಯಜಿಸಿಬಿಟ್ಟಿರುವೆವು. ಅವುಗಳನ್ನು ತಿಳಿದುಕೊಳ್ಳುವದಕ್ಕೆ ನಮ್ಮ ಸಾಮರ್ಥ್ಯವಿಲ್ಲದೆ ಪಾಶ್ಚಾತ್ಯರು ಓದಿಸುವ ಪುಸ್ತಕಗಳನ್ನು ಓದುವುದರಿಂದಲೂ ಅವರು ನಮ್ಮ ಮಧ್ಯೆ ಬಂದು ಉಪನ್ಯಾಸಗಳ ಮೂಲಕ ವಿವರಿಸೋಣದರಿಂದಲೂ ವಿಷಯಗಳನ್ನು ತಿಳಿದುಕೊಳ್ಳಬೇಕಾ[ಗಿದೆ]. ಇದಕ್ಕಿಂತಲೂ ಶೋಚನೀಯವಾದ ಸ್ಥಿತಿಯು ಬೇರೊಂದಿಲ್ಲ. ಕಾರಣ ನಮ್ಮ ಆಚಾರ ವ್ಯವಹಾರಾದಿ ಸಾಂಸರ್ಗಿಕ ಕಾರ್ಯಗಳನ್ನು ಕ್ರಮಪಡಿಸಿಕೊಂಡು, ನಮ್ಮ ನಮ್ಮ ಧರ್ಮಗಳನ್ನು ಕಾಪಾಡಿಕೊಳ್ಳುತ್ತಾ, ಸಮಸ್ತರನ್ನೂ ಪ್ರೇಮದಿಂದಲೂ ಸಹೋದರ [illegible]ದಿಂದಲೂ ಕಾಣುತ್ತಾ, ಅವರನ್ನೆಲ್ಲಾ ಉತ್ತಮಸ್ಥಿತಿಗೆ ತರ[ತ]ಕ್ಕ ಕಾರ್ಯ [illegible] ಪೂರ್ವಕವಾಗಿಯೂ ಜಿತಮನಸ್ಸಿನಿಂದಲೂ ನಡಸಬೇಕಾಗಿದೆ. ಸರ್ವರಲ್ಲೂ ಪ್ರೀತಿಯನ್ನಿಟ್ಟಿರುವುದೆಂದೇ [illegible]ದು. ಆ ಪ್ರೀತಿಯನ್ನು ಕಾರ್ಯದಲ್ಲಿ ತೋರಿಸಬೇಕು. ಜಾತಿ [illegible] ಗೋತ್ರಗಳ ತಾರತಮ್ಯವಿಡದೆ ಸಾರ್ವತ್ರಿಕವಾದ ಭೂತದಯೆ [illegible]ಗಳನ್ನು ತೋರಿಸುತ್ತಾ ಸಾಹಸಪಟ್ಟು ಸಕಲರನ್ನೂ ಅಭಿವೃದ್ಧಿಗೆ ತಂದರೆ [illegible] ನಮ್ಮ ರಾಷ್ಟ್ರವು ಎಲ್ಲಾ ಭಾಗಗಳಲ್ಲೂ ಏಳಿಗೆಯನ್ನು ಹೊಂದಬಹುದು.

ಮದರಾಸ್ ಪ್ರಸಿಡೆನ್ಸಿ ಕಾಲೇಜಿನ ಪ್ರೊಫೆಸರ್ ಮೆ॥ ಎಂ. ರಂಗಾಚಾರ್ಯರು ತಿಳಿಸಿದ ಅಭಿಪ್ರಾಯವೇನೆಂದರೆ—ನಮ್ಮ ಜನರಲ್ಲಿ ಹುಡುಗರುಮಕ್ಕಳಲ್ಲೂ ಪ್ರಮಾಣಿಕತೆ, ಪರಸ್ಪರ ಅಭಿಮಾನ, ಸಚ್ಚರಿತ್ರೆ ಈ ಮೊದಲಾದ ಸದ್ಗುಣಗಳು ಕಡಿಮೆಯಾಗಿರುತ್ತವೆ. ಈ [illegible]ಯ ದೆಸೆಯಿಂದ ನಮ್ಮ ಹುಡುಗರೂ ಹುಡುಗಿಯರೂ ಸದ್ಭಕ್ತ[ರಾಗಿ]ಯೂ ಸತ್ಯವಂತರಾಗಿಯೂ ಸಚ್ಚರಿತ್ರರಾಗಿಯೂ ಆಗುವುದಾದರೆ [illegible]ರ ಉದ್ದೇಶಗಳೂ ಕಾರ್ಯಸಾಧನೆಯೂ ಸಾರ್ಥಕಗಳೇ ಸರಿ. ಮನುಷ್ಯನು ಸ್ವತಃ ಒಳ್ಳೆಯವನಾಗಿದ್ದ ಮಾತ್ರಕ್ಕೇ ಪ್ರಯೋಜನವಿಲ್ಲ. [illegible]ವನ ಸದ್ಭಕ್ತಿಯೂ ಒಳ್ಳೇತನವೂ ಅವನ ಕಾರ್ಯಗಳಲ್ಲಿ ಕಂಡುಬರುವಂತಾಗಬೇಕು. ಆಗಲೇ ನಮಗೆ ಮೇಲಾದೀತು. ನಾವು ಸತ್ಯವೆಂದೂ ಸದಾಚಾರವೆಂದೂ ಮನಸ್ಸಿನಲ್ಲಿ ತಿಳಿದಿರುವುದನ್ನು ನಮ್ಮ ನಡವಳಿಯಲ್ಲಿ ನಡೆದು ತೋರಿಸಬೇಕಾಗಿದೆ. ನಮ್ಮ ಜನರು ಇದರ ಗುಟ್ಟನ್ನು ತಿಳಿದು ನಡೆಯದೆ ಇರೋಣದರಿಂದ ಕಷ್ಟಗಳನ್ನನುಭವಿಸುತ್ತಾ [illegible] ಇದರಿಂದ ನಮ್ಮ ದೇಶವು ಯಾವ ಭಾಗದಲ್ಲೂ ಅಭಿವೃದ್ಧಿಹೊಂದದೆ ಹೋಗಿದೆ.

ಮದರಾಸಿನ ಮೆ॥ ಆದಿನಾರಾಯಣಯ್ಯನವರು—ಇಂಥಾ ಸಭೆಯು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿರುವುದಕ್ಕಾಗಿ ಸಂತೋಷಪಡುತ್ತೇವೆ. ಅದರ ಉದ್ದೇಶಗಳು ಬಹು ಶ್ರೇಷ್ಠವಾಗಿರುತ್ತವೆ. ಈಗ ನಮ್ಮ ಜನರೆಲ್ಲಾ ನಾನಾ ಕೆಟ್ಟ ಅಭಿಪ್ರಾಯಗಳನ್ನಿಟ್ಟುಕೊಂಡು ದುರಭಿಮಾನದಿಂದ ದುಷ್ಟ ಪದ್ಧತಿ ದುರಾಚಾರಗಳಲ್ಲಿ ಬಿದ್ದು ಕೆಡುತ್ತಿದಾರೆ. ನಮ್ಮ ಜನರು ತಟಸ್ಥಭಾವವನ್ನು ವಹಿಸಿರುವುದು ಶೋಚನೀಯವಾಗಿದೆ. ಈಗ ಪ್ರಪಂಚದಲ್ಲಿರುವ ಎಲ್ಲಾ ಜನಾಂಗಗಳೂ ಅಭಿವೃದ್ಧಿ ಹೊಂದುತ್ತಾ ಬಂದಿರುವುದೂ ನಾವು ಮಾತ್ರ ಉದಾಸೀನರಾಗಿ ಕ್ಷೀಣಗತಿಗೆ ಬರುತ್ತಾ ಇರುವುದೂ ಯೋಗ್ಯವಲ್ಲ. ಇದುವ[ರೆಗೆ] ಚೀನೆಯವರೊಬ್ಬರೇ ಪ್ರಪಂಚದ ನವನಾಗರಿಕತೆಯು ತಮಗೆ ಅಗತ್ಯವಿಲ್ಲವೆಂದು ಉದಾಸೀನರಾಗಿದ್ದರು. ಈಗ ಅವರೂ ಕೂಡ ಕಣ್ಣು ಬಿಡುತ್ತಾ ಇದಾರೆ. ಜಪಾನವರಲ್ಲಿ ಇಂಥಾ ಕುಶಲವೂ ಕಾರ್ಯಸಾಧನೆಯೂ ಅಪಾರವಾಗಿ ಇರುವುದರಿಂದಲೇ ಇಷ್ಟು ಬೇಗನೆ ಅವರು ಉಚ್ಛ್ರಾಯಸ್ಥಿತಿಗೆ ಬಂದು ಅಷ್ಟೈಶ್ವರ್ಯಸಂಪನ್ನರಾಗಿದಾರೆ. ಆದ್ದರಿಂದ ನಾವೂ ಅವರುಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ನಮ್ಮಲ್ಲಿರುವ ಅಲ್ಪವಾದ ದುರ್ಗುಣಗಳನ್ನು ತ್ಯಜಿಸುತ್ತಾ ನಮ್ಮ ಅಭಿವೃದ್ಧಿಗೆ ತಕ್ಕ ಸಾಧನಗಳನ್ನು ಮಾಡಿಕೊಳ್ಳೋಣ. ಮದುವೆ, ಜಾತಿಯ ಒಳಪಂಗಡಗಳು, ವಿದ್ಯೆ, ದೇಶಾಟನ, ಈ ಮೊದಲಾದ ವಿಷಯಗಳಲ್ಲಿ [ನಮ್ಮಲ್ಲಿ]ರುವ ಆಚಾರವ್ಯವಹಾರಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾದ್ದು ಬಹಳ ಅವಶ್ಯವಾಗಿರುತ್ತದೆ. ಇವುಗಳನ್ನೆಲ್ಲಾ ತಿದ್ದುಪಾಟು ಮಾಡುವುದು ನಮ್ಮ ಮಠಾಧಿಪತಿಗಳ ಮುಖ್ಯ ಕರ್ತವ್ಯವಾಗಿದ್ದರೂ ಅವರು ಏನೂ ಮಾಡದೆ ತಟಸ್ಥರಾಗಿದಾರೆ. ಸ್ವಾಮಿ ವಿವೇಕಾನಂದರೇ ಮೊದಲಾದವರು ಬಂದು ಇದನ್ನೆಲ್ಲಾ ನಮಗೆ ಹೇಳಿಕೊಡಬೇಕೇ? [illegible] ತಟಸ್ಥಭಾವವನ್ನು ವಹಿಸಿರುವುದು ನಮಗೆ ಯೋಗ್ಯವಾದದ್ದಲ್ಲ. [illegible] ವೃದ್ಧಿಗೆ ಬರುವುದಕ್ಕೆ ಅವಶ್ಯವಾದ ಕಾರ್ಯಗಳನ್ನೆಲ್ಲಾ ಅವಶ್ಯ ಸಾಧಿಸೋಣ ಎಂದು ಹೇಳಿದರು.

ಚೀಫ್ ಕೋರ್ಟ್ ಜಡ್ಜಿಯಾದ ಮೆ॥ ಎಚ್. ವಿ. ನಂಜುಂಡೈಯನವರು—ಆರ್ಯಮತಸ್ಥರಲ್ಲಿ ಸರ್ವರೂ ಪರಸ್ಪರವಾದ ಪ್ರೀತಿ [ವಿಶ್ವಾ]ಸಗಳನ್ನುಳ್ಳವರಾಗಬೇಕು. ದುರಭಿಮಾನಗಳೂ ದುರ್ಭಾವಗಳೂ ತೊಲಗಿಹೋಗಬೇಕು. ಆಯಾ ಜಾತಿಯವರು ತಮ್ಮ ಕರ್ತವ್ಯವನ್ನು ಜಿತಮನಸ್ಸಿನಿಂದ ನಡಸುತ್ತಾ ಬರಲಿ. ಉದ್ಯೋಗದ [illegible] ಜಾತಿಗಳು ಹುಟ್ಟಿದವಲ್ಲದೆ ಮತ್ತೇ ಬೇರೆ ಅಲ್ಲ. ಸದ್ಭಕ್ತನೂ [illegible] ಉದ್ಯೋಗಿಯೂ ಯಾವ ಜಾತಿಗೆ ಸೇರಿದವನಾದಾಗ್ಯೂ

...ವನ್ನು ಪಡೆಯುತ್ತಾನೆ. ಜಾತಿಗಳನ್ನೇ ಸಂಪೂರ್ಣವಾಗಿ ತೊಡೆದು ಬಿಡಬೇಕೆನ್ನುವುದು ಯೋಗ್ಯವಲ್ಲ. ಜಾತಿಗಳು ಅದೃಶ್ಯವಾದರೆ ಅವು ಗಳಲ್ಲಿರುವ ಅನೇಕ ಒಳ್ಳೆ ಏರ್ಪಾಡುಗಳೆಲ್ಲಾ ಹೋಗಿಬಿಡುವವು ಎಂಬೀ ಅಭಿಪ್ರಾಯವಾಗಿ ಹೇಳಿದರು.

ಅನಂತರ ಒಳ್ಳೆ ಲಾ ಪ್ರೈಡರ್ ಮೆ॥ ಅನ್ನಿಕೃಷ್ಣರಾಯರು (ಮ್ಯೂ-ಡಾಸ್ಟ) ರೀತಿಯಲ್ಲೇ ಆಚಾರ್ಯವಂತವನ್ನು ತಿದ್ದುಪಾಟು ಮಾಡಬೇಕೆಂದು ಹೇಳುತ್ತಾರಲ್ಲಾ ' ವೇದಗಳಂತೆ ಶಾಸ್ತ್ರಗಳು ಸ್ಮೃತಿಗಳೇ ? ಅವನ್ನು ಯಾಕೆ ಪರಿಗಣಿಸಬೇಕು ? ನಾವು ಅಭಿವೃದ್ಧಿ ಹೊಂದುವುದಕ್ಕೆ ಅವು ತುಂಬಾ ಅಡಚಣೆಯಾಗಿರುತ್ತವೆ. ಭಕ್ತಿಮಾರ್ಗಕ್ಕೂ ಸಂಘದ ಆಚಾರ ವ್ಯವಹಾರಗಳಿಗೂ ಏನೇನೂ ಸಂಬಂಧವಿಲ್ಲ. ಯುಕ್ತವೇ ಬೇರೆ, ಸಂಘಪರಿಷ್ಕರಣಕಾರ್ಯವೇ ಬೇರೆ. ಅದುದರಿಂದ ಅನ್ನತಿಗೆ ಕಂಟಕಗಳಾಗಿರುವಂಥಾ ದುರಾಚಾರ ದುಷ್ಪದ್ಧತಿಗಳನ್ನು ನಿರ್ಮೂಲಮಾಡಿಕೊಳ್ಳಬೇಕು ಎಂಬೀ ರೀತಿ ಹೇಳಿದರು.

ತರುವಾಯು ಜಗ್ರಾಸನಾಧಿಪತಿಗಳಾದ ದಿವಾನ್ ಮೆ॥ ವಿ. ಪಿ. ಮಾಧವರಾಯರು ತಿಳಿಸಿದ ಅಭಿಪ್ರಾಯವೇನೆಂದರೆ—ನಾವು ಅಭಿವೃದ್ಧಿ ಹೊಂದುವುದಕ್ಕೆ ಎರಡು ವಿಷಯಗಳು ತುಂಬಾ ಅಡಚಣೆಗಳಾಗಿವೆ ಎಂದು ನನಗೆ ತೋರುತ್ತದೆ. ನಮ್ಮ ಜನಾಂಗದಲ್ಲಿ ಅಕ್ಷರಸ್ಥರು ಬಹು ಸ್ವಲ್ಪವೇ ಇದ್ದಾರೆ. ಅಗಾಧವಾದ ಕೋಟಿ ಪ್ರಜೆಗಳು ಅಕ್ಷರವನ್ನೇ ಕಾಣದೆ ಅಂಧಕಾರದಲ್ಲಿ ಬಿದ್ದುಕೊಂಡಿದ್ದಾರೆ. ಅವರನ್ನೆಲ್ಲಾ ನಾವು ಶೀಘ್ರವಾಗಿ ವಿದ್ಯಾವಂತರನ್ನಾಗಿ ಅಥವಾ ಅಕ್ಷರಸ್ಥರನ್ನಾಗಿ ಮಾಡಿ ನಮ್ಮಂತೆ ಅವರೂ ಯೋಚಿಸುವಂತೆ ಮಾಡಿಕೊಳ್ಳಬೇಕು. ನಮ್ಮಲ್ಲಿ ಸ್ತ್ರೀಯರಿಗೆ ವಿದ್ಯೆಯೇ ಇಲ್ಲ. ಮನೆಗಳೊಳಗೂ ಹೆಂಗಸರು ಸಮರ್ಪಕ ವಿದ್ಯೆ ಕಲಿತು ಪ್ರಪಂಚಜ್ಞಾನ ತಿಳಿದವರಾದರೆ ನಮ್ಮ ಕೋರಿಕೆಗಳ ಬಹಳ ವಿಶೇಷವಾದಂಥಾ ಭಾಗವು ತೀರಿ, ಇತರ ಎಲ್ಲಾ ವಿಷಯಗಳಿಗೂ ಸಹಾಯವಾಗುತ್ತದೆ. ಏಕಾಂತ ಮತಾಭಿವೃದ್ಧಿಗೂ ಸಂಘಪರಿಷ್ಕರಣ ಕಾರ್ಯಗಳಿಗೂ ಈ ವಿದ್ಯಾಲೋಪವೇ ದೊಡ್ಡ ಅಡಚಣೆ. ಸಮಸ್ತ ಪ್ರಜೆಗಳಿಗೂ ವಿದ್ಯೆಯ ಬೆಳಕನ್ನು ಕೊಟ್ಟು ಬುದ್ಧಿವಂತರನ್ನಾಗಿ ಮಾಡಿದ ಹೊರತು ನಮ್ಮ ಜನಾಂಗವು ಅಭಿವೃದ್ಧಿ ಹೊಂದಿಲಾ(?). ಒಂದು ವೇಳೆ ಅಭಿವೃದ್ಧಿ ಹೊಂದಿದರೂ ಶಾಶ್ವತವೆನಿಸಿಕೊಳ್ಳದು. ಹೆಂಗಸರಿಗೆ ಪ್ರಜಾ ಕೋಟಿಗಳಿಗೂ ವಿದ್ಯೆ ಕಲಿಸುವುದು ಮೊದಲನೆಯ ಕಾರ್ಯ. ಸಂಘಪರಿಷ್ಕರಣ ಕಾರ್ಯಗಳೆಲ್ಲಾ ಎರಡನೆಯದು. ವಿವಾಹ ವಿಷಯವಾಗಿದೆ. ಗಂಡುಹುಡುಗರಿಗಾದರೂ ವಿವಾಹದ ವಯಸ್ಸನ್ನು ಹೆಚ್ಚು ಮಾಡಬೇಕು. ಆ ವ್ಯವಿದ್ದರೆ ವಿವಾಹವಾದ ಹುಡುಗರನ್ನು ಮೇಲಿನ ಕ್ಲಾಸುಗಳಿಗೂ ಪರೀಕ್ಷೆಗಳಿಗೂ ಸೇರಿಸಿಕೊಳ್ಳಬಾರದೆಂದು ಕಟ್ಟು ಮಾಡಬೇಕಾಗಿದೆ. ಈ ತಿದ್ದುಪಾಟು ಕಷ್ಟಸಾಧ್ಯವಲ್ಲ. ನಮ್ಮ ಸಂಸ್ಥಾನದಲ್ಲಿರುವ ಪ್ರಜಾಪ್ರತಿನಿಧಿ ಸಮಾಜವು ಬಹು ಮುಖ್ಯವಾದ ಸಭೆಯಾಗಿರುತ್ತೆ. ಪ್ರತಿನಿಧಿಗಳೆಲ್ಲಾ ಏಕವಾಕ್ಯತೆಯಿಂದ ಈ ತಿದ್ದುಪಾಟುಗಳನ್ನು ಮಾಡಿಕೊಡಬೇಕೆಂದು ದಯಾಳುಗಳಾದ ಶ್ರೀಮನ್ಮಹಾರಾಜರವರನ್ನು ಕೇಳಿಕೊಂಡಲ್ಲಿ ಅವರು ಉತ್ಸಾಹಪೂರ್ವಕವಾಗಿಯೂ ಪ್ರೀತಿಯಿಂದಲೂ ನಡೆಸಿಕೊಟ್ಟುತ್ತಾರೆಂಬುದಕ್ಕೆ ಸಂಶಯವಿಲ್ಲ. ಮುಖ್ಯ ನಾವು ಅಭಿವೃದ್ಧಿ ಹೊಂದುವುದಕ್ಕೆ ಪ್ರಜಾಚರ್ಯವೇ ಮೂಲಕಾರಣವಾಗಿದೆ. ಇದನ್ನು ನಾವು ಅನುಭವದಲ್ಲಿ ತರಬೇಕು.

ಅನಂತರ ಮೆ॥ ಆರ್. ಬಿ. ಅನಂತಯ್ಯ ಪಂಡಿತರು ಸಭಾಸದರ ಪರವಾಗಿ ಮಾಧವರಾಯರನ್ನು ವಂದಿಸಿ ಸಭೆಯನ್ನು ಮುಕ್ತಾಯ ಮಾಡಿದರು.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ.

೧ನೆಯ ಇಸವಿ ಅಕ್ಟೋಬರ್ ತಾರೀಖು ೧ನೆಯ ಸೋಮವಾರ.

ಗಳಿರಾ,

ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯು ಸೇರುವ ಕಾಲದಲ್ಲಿ ಈಗ ಸ್ವಲ್ಪ ಅದರಿಂದ ಬರಮಾಡಿಕೊಂಡು ಶ್ರೀಮನ್ಮಹಾರಾಜರವರ ಅಪ್ಪಣೆಪ್ರಕಾರವಾಗಿ ಪದ್ಧತಿಯ ಮೇರೆ ಉಪನ್ಯಾಸ ಮಾಡುವದಕ್ಕೆ ನನಗೆ, ನಾನು ಮೈಸೂರು ದಿವಾನ್ ಅಧಿಕಾರದಲ್ಲಿ ಸಭೆಯಲ್ಲಿ ಪ್ರತಿನಿಧಿಗಳನ್ನು ಪ್ರಥಮತಃ ಸಂದರ್ಶಿಸುವ ಈ ಸಂದರ್ಭದಲ್ಲಿ, ಈ ಸಭೆಯ ಕಾರ್ಯವನ್ನು ವಹಿಸುವ ಗೌರವವನ್ನು ಎಷ್ಟು ವಿಶೇಷವಾಗಿ ಪರಿಗಣಿಸುತ್ತೇನೆಯೋ ಅದನ್ನು, ತಮ್ಮ ಅನುಮತಿಯಿಂದ ತಿಳಿಸಲು ಅಪೇಕ್ಷಿಸುತ್ತೇನೆ. ಈ ಸಭೆಯು ಪ್ರಾರಂಭವಾದ ಮೊದಲುಗೊಂಡು ಇದರ ಬೆಳವಣಿಗೆಯೂ ಅಭಿವೃದ್ಧಿಯಲ್ಲಿಯೂ ನಮಗೆ ಇದ್ದ ವಿಶೇಷ ಆಸಕ್ತಿಯೂ, ಇದು ಈ ಸಂಸ್ಥಾನದ ರಾಜ್ಯಭಾರದಲ್ಲಿ ಪ್ರಯೋಜನವಾದ ಮತ್ತು ಪರಿಗ್ರಾಹ್ಯವಾದ ಅಂಗವಾಗಿ ವೃದ್ಧಿಯಾಗುತ್ತಾ ಬರುವ ವಿಷಯವನ್ನು ನಾವು ಸಂತೋಷದಿಂದ ನಿರೀಕ್ಷಿಸುತ್ತಿದ್ದುದ್ದು ಸರ್ವರಿಗೂ ವೇದ್ಯವಾಗಿಯೇ ಇದೆ.

ಈ ಪ್ರತಿನಿಧಿಸಭೆಯು ೨೩ ವರ್ಷಗಳಿಗೆ ಮುಂಚೆ ಸ್ಥಾಪಿಸಲ್ಪಟ್ಟಿತೆಂದರೆ ಇದು ಪುರಾತನವಾದ್ದೆಂಬ ಗೌರವಕ್ಕೆ ಪಾತ್ರವಾಗಿದೆ, ಇದರ ಸ್ಥಾಪಕರಾದ ವಿಖ್ಯಾತನಿಂದ ಕೂಡ ಹೇಳಿಬಂದುದಾಗಿದೆ. ಈ ಸಭೆಯು ಹಿಂದಿನ ವರ್ಷದ ರಾಜ್ಯಭಾರದ ವೃತ್ತಾಂತವನ್ನೂ ಮುಂದಿನ ವರ್ಷಕ್ಕೆ ನಡೆಸಬೇಕೆಂದು ಯೋಚಿಸಿ ಇರುವ ಏರ್ಪಾಡುಗಳನ್ನೂ ಪ್ರತಿನಿಧಿಗಳ ಮೂಲಕವಾಗಿ ಪ್ರಜೆಗಳಿಗೆ ತಿಳಿಸುವುದಕ್ಕೂ, ಹಾಗೆಯೇ ಸಾಮಾನ್ಯವಾಗಿ ಜನಗಳ ಯೋಗಕ್ಷೇಮಕ್ಕೆ ಸಂಬಂಧಪಟ್ಟ ಪ್ರಜೆಗಳ ಕೋರಿಕೆಗಳನ್ನೂ ಅಭಿಪ್ರಾಯಗಳನ್ನೂ ಅವರ ಮೂಲಕ ತಿಳಿದುಕೊಳ್ಳುವುದಕ್ಕೂ ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಸಹಾಯಭೂತವಾಗಿರುವ ಈ ಸಂಸ್ಥಾನದ ಕಾರ್ಯನಿರ್ವಾಹ ವಿಷಯದಲ್ಲಿ ಈ ಸಭೆಯು ಒಂದು ನಿಯತವಾದ ಕಾರ್ಯವನ್ನು ಎಷ್ಟು ಸ್ಥಿರವಾಗಿ ನಡೆಸಿ ಕೊಂಡು ಬಂದಿದೆ ಎಂಬುದನ್ನು ಪ್ರತ್ಯಕ್ಷವಾಗಿ ಬಲ್ಲ ತಮಗೆ ಹೇಳಬೇಕಾದ್ದಿಲ್ಲ. ಇದು ಈ ದಿವಸ ಸಂಪೂರ್ಣ ದೃಷ್ಟಿಯಿಂದ ಉತ್ಕೃಷ್ಟವಿಸಿದ್ದ. ಇದು ಎಷ್ಟೋ ದೇಶೀಯ ಸಂಸ್ಥಾನಗಳಲ್ಲಿ ಅಲ್ಲಲ್ಲಿ ಪ್ರಜಾ ಸಭೆಗಳನ್ನು ಏರ್ಪಡಿಸುವದಕ್ಕೆ ನಿದರ್ಶನವಾಗಿ ಇರುವದೂ ಏನೂ ಆಶ್ಚರ್ಯವಲ್ಲ. ಆದ್ದರಿಂದ ಸರ್ಕಾರದ ಉದ್ಯೋಗಸ್ಥರ ಯಾವ ಬದಲಾವಣೆಗಳಿಂದಲೇ ಆಗಲಿ ಅಥವಾ ಸಂಸ್ಥಾನದ ಆಡಳಿತಕ್ಕಾಗಿ ಮಾಡಬೇಕಾದ ಏರ್ಪಾಡುಗಳಿಂದಲೇ ಆಗಲಿ ಈ ಸಭೆಯಿಂದುಂಟಾಗುವ ಪ್ರಯೋಜನಕ್ಕೆ ಮಾತ್ರ ಯಾವ ಕುಂದಕವೂ ಇಲ್ಲ.

ಆಡಳಿತದ ಬದಲಾವಣೆಗಳು

ಸರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರ ದಿವಾನ್ ಅಧಿಕಾರದ ಕಾಲವು ಕಳೆದ ಮಾರ್ಚಿ ತಿಂಗಳಲ್ಲಿ ಪೂರ್ತಿಯಾದ ಪ್ರಯುಕ್ತ ಶ್ರೀಮನ್ಮಹಾರಾಜರವರು ಈ ಸಂಸ್ಥಾನದ ಮುಖ್ಯಮಂತ್ರಿಯ ಉನ್ನತವಾದ ಮತ್ತು ಜವಾಬ್ದಾರಿಯುಳ್ಳ ಪದವಿಯನ್ನು ನನಗೆ ಅನುಗ್ರಹಿಸಿದರು. ಅದೇ ಕಾಲದಲ್ಲಿ ತಮ್ಮ ತಮ್ಮ ಉದ್ಯೋಗದ ಕಾಲವು ಪೂರ್ತಿಯಾಗಿ ಕೆಲಸದಿಂದ ನಿವೃತ್ತರಾದ ರಾಜತಂತ್ರ ಪ್ರವೀಣ ಮೆ॥ ಪಿ. ಶ್ರೀನಿವಾಸಯ್ಯಂಗಾರ್ ಮತ್ತು ರಾವ್ ಬಹದ್ದೂರ್ ಮೆ॥ ಸಿ. ಮಾದಯ್ಯ ಇವರುಗಳ ಸ್ಥಾನದಲ್ಲಿ, ಮೆ॥ ಟಿ. ಆನಂದರಾವ್, ಬಿ. ಎ. ಯವರು ಮೊದಲನೆಯ ಕೌನ್ಸಿಲರಾಗಿಯೂ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟರು ಎರಡನೆಯ ಕೌನ್ಸಿಲರಾಗಿಯೂ ನೇಮಕರಾಗ್ಯಲ್ಪಟ್ಟರು.

ಇದೂ ಅಲ್ಲದೆ ೧೯೦೬ನೆಯ ಆಗಸ್ಟಿನ ಕೌನ್ಸಿಲ್ ಸಭೆಯು ಯಾವ ಕಾರ್ಯನಿರ್ವಾಹಾಧಿಕಾರವೂ ಇಲ್ಲದೆ ವಿಚಾರಣಾಧಿಕಾರವಾತ್ರವುಳ್ಳ ಆಲೋಚನಾ ಸಭೆಯಾಗಿದ್ದ ಪ್ರಯುಕ್ತ, ಅದರಿಂದ ನೆರವೇರಬೇಕಾದ ಉದ್ದೇಶಗಳು ನೆರವೇರದೆ ಹೋದ್ದರಿಂದ, ಈಚೆಗೆ ಕೌನ್ಸಿಲರುಗಳಿಗೆ ರಾಜ್ಯದ ಆಡಳಿತದಲ್ಲಿ ಸ್ವಲ್ಪಮಟ್ಟಿಗೆ ಜವಾಬ್ದಾರಿಯನ್ನು ಕೊಡುವಂತೆ, ಕೌನ್ಸಿಲಿನ ಕಾರ್ಯಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು ಬದಲಾಯಿಸಲಾಯಿತು. ಮೊಟ್ಟಮೊದಲು ತಿದ್ದುಪಾಟಾದ ನಿಬಂಧನೆಗಳ ಮೇರೆ ಕೌನ್ಸಿಲಿನ ಮೆಂಬರುಗಳಿಗೆ ಸ್ವತಃ ಯಾವ ಕಾರ್ಯನಿರ್ವಾಹಾಧಿಕಾರವೂ ಇಲ್ಲದೆ ಇದ್ದಾಗ್ಯೂ, ದಿವಾನರ ಬಳಿಗಾಗಲಿ ಅಥವಾ ಕೌನ್ಸಿಲಿಗಾಗಲಿ ಕಳುಹಿಸಬೇಕಾದಷ್ಟು ಮುಖ್ಯವಲ್ಲದ ಸಾಧಾರಣವಾದ ವಿಷಯಗಳಲ್ಲಿ, ಹಿಂದಿನಂತೆ ಅವರು ತಮ್ಮ ಅಭಿಪ್ರಾಯಗಳನ್ನು ಮಾತ್ರ ಬರೆಯುವುದಕ್ಕೆ ಬದಲಾಗಿ, ಅವರವರಿಗೆ ಸೇರಿರುವ ಇಲಾಖೆಗಳಲ್ಲಿ ಆಖೈರ್ ಹುಕುಂಗಳನ್ನು ಗವರ್ನಮೆಂಟಿನ ಹೆಸರಿನಲ್ಲಿ ಕೊಡುವಂತೆ ಅಧಿಕಾರಕೊಟ್ಟಿದೆ. ಅದರ ಎಲ್ಲಾ ಮುಖ್ಯವಾದ ವಿಷಯಗಳೂ ಎಂದಿನಂತೆ ಶ್ರೀಮನ್ಮಹಾರಾಜರವರ ಹುಕುಂಗಳ ಬಗ್ಗೆ ಕಳುಹಿಸಲ್ಪಡುತ್ತಿರುವದರಿಂದ, ಸಂಸ್ಥಾನದ ಎಲ್ಲಾ ಇಲಾಖೆಗಳ ಮೇಲೂ ಇರುವ ಶ್ರೀಮನ್ಮಹಾರಾಜರವರ ಸ್ವಾತಂತ್ರ್ಯಾಧಿಕಾರಕ್ಕೆ ಮೇಲ್ಕಂಡ ಏರ್ಪಾಡಿನಿಂದ ಯಾವ ಬಾಧಕವೂ ಇರುವದಿಲ್ಲ.

ರೆವಿನ್ಯೂ ಕಮಿಷನರು

ಗತವರ್ಷದಲ್ಲಿ ಮಾಡಿದ ಮತ್ತೊಂದು ಮುಖ್ಯವಾದ ಬದಲಾವಣೆಯು, ರೆವಿನ್ಯೂ ಕಮಿಷನರ ದರ್ಜೆಗೂ ಅಧಿಕಾರಗಳಿಗೂ ಸಂಬಂಧಪಟ್ಟಿರುತ್ತದೆ. ರೆವಿನ್ಯೂ ಇಲಾಖೆಯ ಮೇಲೆ ಅಧಿಕತರವಾಗಿಯೂ ಕಾರ್ಯಸಾಧಕವಾಗಿಯೂ ಮೇಲ್ವಿಚಾರಣೆ ಮಾಡಿ ಅಧಿಕಾರ ಮಾಡುವದಕ್ಕಾಗಿ ೧೮೯೩ನೆಯ ವರ್ಷ, ರೆವಿನ್ಯೂ ಕಮಿಷನರ ಉದ್ಯೋಗವನ್ನು ಪ್ರಥಮತಃ ಏರ್ಪಡಿಸಿತು. ರೆವಿನ್ಯೂ ಕಮಿಷನರಿಗೆ ಹೆಚ್ಚು ಅಧಿಕಾರಗಳನ್ನು ಕೊಡುವದರಿಂದ ಆ ಉದ್ಯೋಗದ ಪ್ರಯೋಜನವನ್ನು ಬೇಳಿವಾಗಿ ವೃದ್ಧಿ ಮಾಡಬಹುದೆಂದು, ಕಳೆದ ೫ ವರ್ಷದ ಅನುಭವದಿಂದ ತಿಳಿಯಬಂದಿದೆ. ರೆವಿನ್ಯೂ ಕಮಿಷನರ ಉದ್ಯೋಗವು ಪ್ರಥಮತಃ ಏರ್ಪಡಿಸಲ್ಪಟ್ಟಾಗ ಅವರಿಗೆ ಕೊಡಬೇಕಾಗಿದ್ದ ಕೆಲವು ಅಧಿಕಾರಗಳನ್ನು ಗವರ್ನಮೆಂಟಿಗೆ ಉಳಿಸಿಕೊಂಡದ್ದರಿಂದ ಆ ಉದ್ಯೋಗದ ಉಪಯೋಗವನ್ನು ನಿರ್ಬಂಧಿಸಿದಂತೆ ಆಗಿ, ರೆವಿನ್ಯೂ ಇಲಾಖೆಯ ಸಮರ್ಥವಾದ ಆಡಳಿತಕ್ಕೆ ಕುಂದಕವುಂಟಾಗಿತ್ತು. ಇದಕ್ಕೆ ದೃಷ್ಟಾಂತವೇನೆಂದರೆ— ಜಮೀನ್ ಕಂದಾಯದ ವಸೂಲಿಗೆ ಅದಕ್ಕಾಗಿ ಮಾಡಬೇಕಾದ ನಡವಳಿಕೆಗಳಿಗೂ ಸಂಬಂಧಪಡುವ ವಿಷಯಗಳಲ್ಲಿ ರೆವಿನ್ಯೂ ಕಮಿಷನರಿಗೆ ಯಾವ ಅಧಿಕಾರವನ್ನೂ ಕೊಟ್ಟಿರಲಿಲ್ಲ. ಅಲ್ಲದೆ ವಂಶಪಾರಂಪರ್ಯವಾಗಿ ನಡೆಯುವ ಉದ್ಯೋಗಗಳ ಹಕ್ಕುಗಳನ್ನೂ ಮತ್ತು ಅವುಗಳಿಗೆ ಸಂಬಂಧಪಟ್ಟ ವೇತನಗಳನ್ನೂ ತೀರ್ಮಾನಿಸುವದಕ್ಕೆ ಅವರಿಗೆ ಅಧಿಕಾರವೇ ಇಲ್ಲದೆ ಇದ್ದುದರಿಂದ, ಬಹಳ ಮುಖ್ಯವಾದ ಕೆಲ ರೆವಿನ್ಯೂ ನೌಕರರ ಮೇಲೆ ಅವರಿಗೆ ತಕ್ಕ ಅಧಿಕಾರವೇ ಇರಲಿಲ್ಲ. ಈ ಕೊಂತೆಗಳನ್ನು ಹೋಗಲಾಡಿಸುವದಕ್ಕಾಗಿ ಗವರ್ನಮೆಂಟ್ ಒಳಪಟ್ಟು ರೆವಿನ್ಯೂ ಕಮಿಷನರನ್ನು ಮೇಲ್ವಿಚಾರಣೆ ಮಾಡುವ ಮುಖ್ಯವಾದ ರೆವಿನ್ಯೂ ಅಧಿಕಾರಿಯಾಗಿ ಮಾಡುವಂತೆ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಈಚೆಗೆ ತಿದ್ದುಪಾಟು ಮಾಡಲಾಯಿತು. ಅವರ ದರ್ಜೆಯು ಈಗ ಬೊಂಬಾಯಿನಲ್ಲಿ ಇರುವ ಕಮಿಷನರ ದರ್ಜೆಗೆ ಸ್ವಲ್ಪ ಹೆಚ್ಚು ಕಡಿಮೆ ಸಮಸಮವಾಗಿದೆ. ರೆವಿನ್ಯೂ ಕೋರ್ಟುಗಳು ಒಳಪಡುವ ವಿಷಯಗಳ ಅಪೀಲಿನಲ್ಲಿ ಅವರ ತೀರ್ಮಾನವು ಆಖೈರಿನದಾಗಿ ಇರುತ್ತದೆ. ಆದರೆ ಕಾನೂನಿನ ಅಥವಾ ಕಾನೂನಿನಷ್ಟು ಪ್ರಬಲವಾಗಿರುವ ವಿಷಯದಲ್ಲಿ ಮುಂದೆ ಗವರ್ನಮೆಂಟಿಗೆ ಅಪೀಲ್ ಮಾಡಬಹುದಾಗಿದೆ.

ಇದೂ ಅಲ್ಲದೆ ಇದುವರೆಗೂ ಇದ್ದಂತೆಯೇ ರೆವಿನ್ಯೂ ಕಮಿಷನರು, ಸ್ಟಾಟಿಸ್ಟಿಕ್ಸ್ ಯತಾ ಲೆಕ್ಕಗಳ ಡೈರೆಕ್ಟರಾಗಿಯೂ ಇರುತ್ತಾರೆ. ಈಚೆಗೆ ಪ್ರಕಟಿಸಲ್ಪಟ್ಟ ತಿದ್ದುಪಾಟಾದ ಮೈಸೂರು ಫ್ಯಾಮಿನ್ ಕೋಡಿನ ಮೇರೆ ಅವಶ್ಯವಾದಾಗ ಒಬ್ಬ ಪ್ರತ್ಯೇಕವಾದ ಫ್ಯಾಮಿನ್ ಕಮಿಷನರನ್ನು ನೇಮಕರಾಗುವ ವರೆಗೆ, ಇವರೇ ಉದ್ಯೋಗ ಪ್ರಯುಕ್ತ ಫ್ಯಾಮಿನ್ ಕಮಿಷನರಾಗಿಯೂ ಕೆಲಸ ಇರುತ್ತಾರೆ.

ಮತ್ತು ದಿವಾನ್ ಅವಿವೃದ್ಧಿಗಾಗಿ ಕೊಡತಕ್ಕ ಸಾಲದ ರೆಗ್ಯುಲೇಷನ್ ಮೇರೆಯೂ ಲ್ಯಾಂಡ್ ರೆವಿನ್ಯೂ ಕೋಡಿನ ೧೯ನೆಯ ಪ್ರಕಾರ ಇರುವ ಸೆಕ್ಷನುಗಳನ್ನು ಮುಂದುವರಿಸುವ ಕೈದೆ ನಿರ್ಣಯಿಸಿ ಅರ್ಜಿಗಳ ಮಂಜೂರಿಗೆ ಸ್ಪಷ್ಟವಾಗಿರುವ ನೇಮಕಗಳಿಗೂ ಇನಾಂಗಳ, ಜಮೀನ್ ಕಂದಾಯವನ್ನು ಮಾಫ್ ಮಾಡೋಣ, ಜಮೀನನ್ನು ವಶಾಧೀನ ಮಾಡೋಣ, ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಸರ್ಕಾರದ ನಾನಾ ಇತರ ಅಧಿಕಾರಗಳನ್ನೂ ಈ ವ ಇವರಿಗೇ ಕೊಡಲಾಯಿತು.

ಇದೇ ರೀತಿಯಾಗಿ ಅಧಿಕಾರವನ್ನೆಲ್ಲಾ ಒಂದೇ ಕಡೆ ಇರುವದನ್ನು ತಪ್ಪಿಸಬೇಕೆಂಬ ಉದ್ದೇಶಕ್ಕಾಗಿ ಅನುಸಾರವಾಗಿ, ಕೆಲವು ಇತರ ಇಲಾಖೆಗಳ ಮುಖ್ಯಸ್ಥರಿಗೂ ಡೆಪ್ಯುಟಿ ಕಮಿಷನರುಗಳಿಗೂ, ಅವರವರ ಇಲಾಖೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಹೆಚ್ಚು ಅಧಿಕಾರಗಳನ್ನು ಕೊಡಬೇಕಾಗಿ ಯೋಚಿಸಿ ಇದೆ.

ಮೇಲೆ ಕಂಡ ಬದಲಾವಣೆಗಳಿಂದ ಸಂಸ್ಥಾನದ ಕೆಲಸ ಕಾರ್ಯಗಳು ಕ್ಷಿಪ್ರವಾಗಿಯೂ ಸಮರ್ಪಕವಾಗಿಯೂ ವ್ಯವಸ್ಥೆಯಾಗಲು ಅನುಕೂಲಿಸುವದೆಂದು ಶ್ರೀಮನ್ಮಹಾರಾಜರವರು ನಿರೀಕ್ಷಿಸುತ್ತಾರೆ.

ಸರ್ಕಾರಿ ಆಡಳಿತದ ಕೆಲಸವು ಇನ್ನೂ ಸಮರ್ಪಕವಾಗಿ ನಡೆಯುವದಕ್ಕೋಸ್ಕರ ಮಾಡಿದ ಇತರ ಕೆಲವು ಏರ್ಪಾಡುಗಳನ್ನು ಇಲ್ಲಿ ಸೂಚಿಸುತ್ತೇವೆ —

ಸಿವಿಲ್ ಸರ್ವಿಸ್ಸು

ಸಿವಿಲ್ ಸರ್ವಿಸ್ಸಿನ ಮೇಲ್ ದರ್ಜೆಗಳಿಗೆ ಆಫೀಸರುಗಳನ್ನು ಹೊಸದಾಗಿ ಸೇರಿಸುವ ವಿಷಯದಲ್ಲಿ ಕೂಲಂಕಷವಾಗಿ ಪರ್ಯಾಲೋಚಿಸಿ, ಹಾಗೆ ಆಫೀಸರುಗಳನ್ನು ಹೊಸದಾಗಿ ಸೇರಿಸುವದಕ್ಕೆ ಸಂಬಂಧಪಟ್ಟ ನಿಯಮಗಳನ್ನೂ ವಿಧಿಸಿ, ಸಂಸ್ಥಾನದಲ್ಲಿ ಸಾರ್ವಜನಿಕ ಅಂದರೆ ಕಸಬುದಾರಿಗೆ ಸಂಬಂಧಪಡದ ನಾನಾ ಇಲಾಖೆಗಳ ಅಧಿಕಾರಿಗಳ ಸಂಖ್ಯೆಯನ್ನೂ ನಿಷ್ಕರ್ಷಿಸಿ, ತಿದ್ದುಪಾಟಾದ ನಿಬಂಧನೆಗಳನ್ನು ಕಳೆದ ಜೂನ್ ತಿಂಗಳಲ್ಲಿ ಪ್ರಕಟಿಸಲಾಯಿತು. ಕೆಲವು ವರ್ಷಗಳಿಂದ ನಿಂತುಹೋಗಿದ್ದ ಸ್ಪರ್ಧಾಪೂರ್ವಕವಾದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು, ಮೇಲ್ಕಂಡ ನಿಬಂಧನೆಗಳ ಮೇರೆ ಪುನಃ ಉಪಕ್ರಮಿಸಲಾಯಿತು. ಹಿಂದಿನ ಏರ್ಪಾಡುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿತು. ಈ ಬದಲಾವಣೆಗಳಿಂದ, ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಲ್ಲಿ ಅತ್ಯುತ್ತಮರಾದವರು ಮೈಸೂರು ಸರ್ಕಾರಿ ಅಧಿಕಾರಕ್ಕೆ ಸ್ವಲ್ಪ ಮಟ್ಟಿಗೆ ಸೇರಿಸಿಕೊಳ್ಳಲು ಅನುಕೂಲವಾದದ್ದು ಮಾತ್ರವೇ ಅಲ್ಲದೆ, ಮೈಸೂರು ನೌಕರಿಯಲ್ಲಿ ಕೆಳಗಿನ ದರ್ಜೆಗಳಲ್ಲಿ ಮೆಹನತ್ತಿನಿಂದಾಗಲಿ ಯೋಗ್ಯತೆಯಿಂದಾಗಲಿ ಮೇಲ್ ದರ್ಜೆಗೆ ಸೇರುವ ಹಕ್ಕನ್ನು ಸ್ಥಾಪಿಸಿದವರ ಬಡತಿಗೆ ಸಮೃದ್ಧಿಯಾಗಿಯೂ ನಿಶ್ಚಿತವಾಗಿಯೂ ಇರುವ ಅವಕಾಶವೂ ಉಂಟಾಗುತ್ತದೆ. ಈ ಹೊಸ ನಿಬಂಧನೆಗಳ ಮೇರೆ ರೆವಿನ್ಯೂ ಮತ್ತು ಜುಡಿಷಲ್ ಇಲಾಖೆಯ ಆಫೀಸರುಗಳು ಮಾತ್ರವೇ ಅಲ್ಲದೆ ಪೋಲೀಸು, ಸರ್ವೆ, ಅಬ್ಕಾರಿ, ಅಕೌಂಟ್ಸ್ ಯಾ ಲೆಕ್ಕದ ಇಲಾಖೆಗಳ ಆಫೀಸರುಗಳೂ ಕೂಡ, ಈಗ ಸಂಸ್ಥಾನದಲ್ಲಿ ಅತ್ಯುನ್ನತ ಪದವಿಗಳನ್ನು ಪಡೆಯಬಹುದಾಗಿದೆ.

ಅಮಲ್ದಾರರು

ಅಮಲ್ದಾರರಿಗೂ, ಡೆಪ್ಯುಟಿ ಅಮಲ್ದಾರರಿಗೂ ಅರ್ಹರಾದ ಉಮೇದುವಾರರ ಚುನಾವಣೆ ಬಗ್ಗೆ ನಿಬಂಧನೆಗಳನ್ನು ತಿದ್ದುಪಾಟು ಮಾಡಿ ಪ್ರಕಟಿಸಿದೆ. ಇದುವರೆಗೂ ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರಿಯ ಜವಾಬ್ದಾರಿಯುಳ್ಳ ಪದವಿಗೆ ಆಸ್ಪದಕ್ಕಾಗಿ ತರಬೇತಾಗುವದಕ್ಕೆ ಅವಕಾಶವೇ ಇಲ್ಲದ ಮಿರಕಮ್ಮತ್ತು, ವೈದ್ಯ, ಮತ್ತು ಇತರ ಇಲಾಖೆಗಳ ಆಫೀಸರುಗಳು ಸಹಿತವಾಗಿ ಇತರ ಎಲ್ಲಾ ಇಲಾಖೆಗಳ ಕೆಳಗಿನ ಆಫೀಸರುಗಳೂ ಈ ಉದ್ಯೋಗಗಳಿಗೆ ನೇಮಕರಾಗಬೇಕಾದದ್ದಕ್ಕೆ ಅಪೇಕ್ಷಿಸುತ್ತಿದ್ದರು. ಈಗ ತಿದ್ದುಪಾಟಾಗಿರುವ ನಿಬಂಧನೆಗಳ ಮೇರೆ ಈ ಉದ್ಯೋಗಗಳಿಗೆ ಉಮೇದುವಾರರು ರೆವಿನ್ಯೂ, ಪೋಲೀಸು, ಜುಡಿಷಲ್, ರಿಜಿಸ್ಟ್ರೇಷನ್, ಎಕ್ಸೈಸು, ಸರ್ವೆ, ಇನಾಂ ಇಲಾಖೆ ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಆಫೀಸು, ಇವುಗಳಿಂದ ಮಾತ್ರವೇ ಚುನಾಯಿಸಲ್ಪಡುವರು. ಇನ್ನು ಮುಂದೆ ನಡತೆಯಿಂದಲೂ ಯೋಗ್ಯತೆಯಿಂದಲೂ ಅಮಲ್ದಾರಿ ಯಾ ಡೆಪ್ಯುಟಿ ಅಮಲ್ದಾರಿಗೆ ಅರ್ಹರಾಗಿರುವ ಉಮೇದುವಾರರ ಒಂದು ಪಟ್ಟಿಯನ್ನು ಇಟ್ಟು, ಆ ಪಟ್ಟಿಯ ಮೇರೆ ನೇಮಕರಾಗಿಗಳು ಮಾಡಲ್ಪಡುವವು.

ಪ್ರೊಬೇಷನರುಗಳು.

ರೆವಿನ್ಯೂ ಅಥವಾ ಜುಡಿಷಲ್ ಪ್ರೊಬೇಷನರುಗಳ ಕೆಲಸಕ್ಕೆ ಮುಂದೆ ಚುನಾವಣೆಯನ್ನು ಕ್ರಮಪಡಿಸುವ ನಿಯಮಗಳನ್ನು ಸ್ಪಷ್ಟವಾಗಿ ನಿರೂಪಿಸುವದಕ್ಕಾಗಿ ಈ ಅಧಿಕಾರಗಳು ಸರ್ಕಾರಿ ನೌಕರಿಯನ್ನು ಪ್ರವೇಶಿಸುವದಕ್ಕೆ ಸ್ವತಃ ಯೋಗ್ಯತೆಯುಳ್ಳವರಾಗಿಯೂ, ಹಿಂದೆ ಸಂಸ್ಥಾನದಲ್ಲಿ ಗಣ್ಯವಾದ ಅಧಿಕಾರ ಮಾಡಿದವರ ವಂಶಸ್ಥರಾಗಿಯೂ, ಹಾಗಾದ ಪ್ರಯುಕ್ತವೇ ಶ್ರೀಮನ್ಮಹಾರಾಜರವರ ಅಭಿಪ್ರಾಯದಲ್ಲಿ ಕೆಳಗಿನ ದರ್ಜೆಗಳ ಮೂಲಕವಾಗಿಯಲ್ಲದೆ ಸರ್ಕಾರಿ ಅಧಿಕಾರದಲ್ಲಿ ನೇಮಿಸಲ್ಪಡುವದಕ್ಕೆ ಅರ್ಹರಾಗಿಯೂ ಇರುವವರಿಗೆ ಮಾತ್ರವೇ ಉದ್ದೇಶಿಸಲ್ಪಟ್ಟಿವೆ ಎಂದು ನಿರ್ಧರಿಸಲಾಗಿದೆ.

ಇತರ ಏರ್ಪಾಡುಗಳು.

ಸರ್ಕಾರದ ಕೆಲಸಗಳಿಗೆ ಸಮರ್ಥರಾದ ಅಧಿಕಾರಿಗಳನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಈ ಕೆಳಗಿನ ತಿದ್ದುಪಾಟುಗಳು ಈಚೆಗೆ ಜಾರಿಯಲ್ಲಿ ತರಲ್ಪಟ್ಟವೆ.

ರೆವಿನ್ಯೂ ಇಲಾಖೆ

ರೆವಿನ್ಯೂ ಇಲಾಖೆಯಲ್ಲಿ ಕೆಳಗಿನ ಉದ್ಯೋಗಸ್ಥರ ನೇಮಕ ರೀತಿ ಮತ್ತು ಬಡತಿಯನ್ನು ಕ್ರಮಪಡಿಸುವದಕ್ಕಾಗಿ ತಿದ್ದುಪಾಟಾದ ನಿಬಂಧನೆಗಳನ್ನು ಪ್ರಕಟಿಸಲಾಯಿತು. ಈ ಹೊಸ ನಿಬಂಧನೆಗಳ ಮುಖ್ಯಾಂಶಗಳು ಯಾವುವೆಂದರೆ—ಬೇರೆ ಬೇರೆ ಉದ್ಯೋಗಗಳಿಗೆ ಬೇಕಾದ ಯೋಗ್ಯತೆಗಳನ್ನು ನಿರ್ಧರಿಸಿ ತೋರಿಸಿ ಇದೆ, ತಾಲ್ಲೂಕು ಕಛೇರಿಗಳ ಗುಮಾಸ್ತರನ್ನು ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮಿಷನರುಗಳ ಕಛೇರಿ ನೌಕರಿಗಳಿಗೆ ಬಡತಿ ಮಾಡಲು ಅವಕಾಶ ಕೊಟ್ಟಿದೆ, ಕೆಲವು ತಾಲ್ಲೂಕು ಶಿರಸ್ತೇದಾರರನ್ನು ಯೋಗ್ಯತೆ ಹೊಂದಿದ ತಾಲ್ಲೂಕು ಹೆಡ್ ಗುಮಾಸ್ತರಿಗಾಗಿಯೂ ಶಿರಸ್ತೇದಾರರಾಗಿಯೂ ಉಳಿಸಿಟ್ಟಿದೆ, ಬಡತಿಗಳನ್ನು ಮಾಡುವ ವಿಷಯದಲ್ಲಿ ನಿಯತವಾದ ಪರೀಕ್ಷೆಗಳನ್ನು ಕೊಟ್ಟವರು ಪ್ರಥಮತಃ ಚುನಾಯಿಸಲ್ಪಡುವರು, ಆಫೀಸುಗಳ ಮುಖ್ಯಸ್ಥರು ಸರ್ಕಾರಿ ನೌಕರಿಗೆ ಸೇರುವದಕ್ಕಾಗಿ ಬರುವ ಅರ್ಜಿಗಳ ರಿಜಿಸ್ಟರುಗಳನ್ನು ಇಡಬೇಕು. ೫ ಗ್ರೇಡ್ ಇತರ ಇಲಾಖೆಗಳ ಕೆಳಗಿನ ಉದ್ಯೋಗಗಳಿಗೆ ಸಂಬಂಧಪಟ್ಟ ಇದೇ ರೀತಿಯಾದ ನಿಬಂಧನೆಗಳೂ ಪರ್ಯಾಲೋಚನೆಯಲ್ಲಿವೆ.

ಕೇಡರುಗಳು

ಕೆಳಗಿನ ರೆವಿನ್ಯೂ ಕಾರ್ಯನಿರ್ವಾಹಾಧಿಕಾರಕ್ಕೆ—ಅಂದರೆ, ಬ್ರಿಟಿಷ್ ಇಂಡಿಯಾದಲ್ಲಿ ರೆವಿನ್ಯೂ ಆಸ್ಪೆಕ್ಟರ ಕೆಲಸಕ್ಕೆ ಸಮಾನವಾದ—ಶಿರಸ್ತೇದಾರರ ದರ್ಜೆಗೆ ಹೊಸ ಜನಗಳನ್ನು ಸೇರಿಸುವ ವಿಷಯದಲ್ಲಿ ಒಂದು ವಿಶೇಷವಾದ ಬದಲಾವಣೆಯನ್ನು ಮಾಡಿ ಇದೆ. ಶೇಕಡರುಗಳ ನೇಮಕಗಳನ್ನು ಡಿಪಾರ್ಟ್ಮೆಂಟ್‌ನಿಂದ ಪ್ರಥಕ್ಕಾಗಿಯೂ ಅದಕ್ಕಾಗಿ ವಿಧಿಸಲ್ಪಟ್ಟಿರುವ ಪರೀಕ್ಷೆಗಳನ್ನು ಕೊಟ್ಟವರಾಗಿಯೂ ಕೂಡ

ಇರಬೇಕೆಂದು ನಿರ್ಬಂಧವಿಟ್ಟಿದ್ದರೂ, ಸರ್ವೇಯಿಂಗ್ ಮತ್ತು ನಕ್ಷೆ ಬರೆಯುವದು ಇವುಗಳನ್ನು ಕಲಿಯುವದಕ್ಕಾಗಿ ಟ್ರೇನಿಂಗ್ ಸ್ಕೂಲಿಗೆ ಸೇರಿಸಿಕೊಳ್ಳುವದಕ್ಕೆ ಅವಶ್ಯವಾದ ಸಾಮಾನ್ಯ ವಿದ್ಯಾಭ್ಯಾಸ ಸಂಬಂಧವಾದ ಯೋಗ್ಯತೆಗಳ ವಿಷಯದಲ್ಲಿ ಈ ನಿರ್ಬಂಧಗಳನ್ನು ಕೆಲವು ಮಟ್ಟಿಗೆ ಕಡಮೆಮಾಡಿದೆ. ಸದರಿ ಸ್ಕೂಲಿಗೆ ಸೇರುವ ಎಲ್ಲಾ ಉಮೇದುವಾರರೂ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಟ್ಟಿರಬೇಕೆಂದು ವಿಧಾಯಕ ಮಾಡಿದ್ದರೂ ವಿದ್ಯೆಯ ವಿಷಯದಲ್ಲಿ ಹಿಂದಾಗಿರುವ ಮಹಮ್ಮದೀಯರಿಗೂ ಮತ್ತು ಇತರ ಜನಗಳಿಗೂ ಆ ಪರೀಕ್ಷೆಯು ಶಕ್ತಿಗೆ ಮೀರಿದ್ದೆಂದು ಕಂಡುಬಂದಿರುವದರಿಂದ ಅವರನ್ನು ಟ್ರೇನಿಂಗ್ ಸ್ಕೂಲಿಗೆ ಸೇರಿಸಿಕೊಳ್ಳುವ ವಿಷಯದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯಾಗಿದ್ದರೆ ಸಾಕೆಂದು ಪ್ರಕಟಿಸಿ ಇದೆ ೧೮೯೭ನೆಯ ಇಸವಿಯಲ್ಲಿ ಉಪಕ್ರಮಿಸಿದ ಪೋಲೀಸು ಟ್ರೇನಿಂಗ್ ಸ್ಕೂಲಿನಲ್ಲಿಯೂ ಕೂಡ ಇದೇ ವಿಧವಾದ ರಿಯಾಯಿತಿಯನ್ನು ತೋರಿಸಿದ್ದರಿಂದ ಕಾರ್ಯನಿರ್ವಹಣದಲ್ಲಿ ಸಹಜವಾದ ಯೋಗ್ಯತೆಯುಳ್ಳ ಕೆಲವು ಜಾತಿಯವರನ್ನು ಕಷ್ಟವಿಲ್ಲ ಮಟ್ಟಿಗೆ ನೌಕರಿಗೆ ಸೇರಿಸಿಕೊಳ್ಳುವದರ ಮೂಲಕ ವಿಶೇಷ ಫಲಗಳು ಉಂಟಾಗಿವೆ ಖಾಲಿ ಇರುವ ಶೇಕದಾರರು ಹೊಸ ದರ್ಜೆಗಳಿಗೆ ಸೇರುವದಕ್ಕೋಸ್ಕರ ಯೋಗ್ಯತೆಯನ್ನು ಹೊಂದುವದಕ್ಕೆ ತಕ್ಕ ಏರ್ಪಾಡನ್ನು ಕೂಡ ಹೊಸ ನಿಬಂಧನೆಗಳಲ್ಲಿ ಮಾಡಿದೆ.

ಶಾನುಭೋಗರು

ಶಾನುಭೋಗರ ನಿಯತವಾದ ಯೋಗ್ಯತೆಯ ವಿಷಯವಲ್ಲಿ, ಅವರು ಕೆಲವು ಸುಲಭವಾದ ಪರೀಕ್ಷೆಗಳನ್ನು ಕೊಟ್ಟಿರಬೇಕೆಂದು ವಿಧಿಸಿ ಇದೆ ಇದರಿಂದ ಈ ಮುಖ್ಯವಾದ ಉದ್ಯೋಗಕ್ಕೆ ಸಂತರಾಂ ಅಯೋಗ್ಯರಾದವರು ಒಬರವಂತೆ ಆಗುವವೆಂದು ನಂಬುತ್ತೇವೆ

ತಾಲ್ಲೂಕ್ ಅಧಿಕಾರಿಗಳ ಸಂಚಾರದ ಭತ್ಯ.

ಅಮಲ್ದಾರರಿಗೂ ಡೆಪ್ಯುಟಿ ಅಮಲ್ದಾರರಿಗೂ ಅವರವರ ತಾಲ್ಲೂಕುಗಳಲ್ಲಿ ಸಂಚಾರ ಮಾಡುವದಕ್ಕೆ ಇದುವರೆಗೆ ಸಂಚಾರ ಭತ್ಯವನ್ನು ಕೊಡುತ್ತಿರಲಿಲ್ಲ ಈಗ ಅವರಿಗೆ ಇದಕ್ಕಾಗಿ ಭತ್ಯವನ್ನು ಕೊಡುವಂತೆ ಹುಕುಂ ಮಾಡಲಾಯಿತು ಈ ಏರ್ಪಾಡು, ಮೇಲ್ಕಂಡ ಮುಖ್ಯವಾದ ಕಾರ್ಯನಿರ್ವಹಣಾಧಿಕಾರಕ್ಕೆ ಸೇರಿದ ಉದ್ಯೋಗಸ್ಥರನ್ನು ವಿಶೇಷವಾಗಿ ಹೊರಗೆ ಸಂಚಾರ ಮಾಡುವಂತೆ ಪ್ರೋತ್ಸಾಹಪಡಿಸುವದು ಮಾತ್ರವಲ್ಲದೆ ರೈತರಿಂದ ಸಾಮಾನಿನ ಸರಬರಾಯಿ ತರಿಸಿಕೊಳ್ಳಲು ಅಕಪಡದಂತೆಯೂ ಮಾಡಿ, ಅವರ ಕಾರ್ಯ ಸಾಮರ್ಥ್ಯತೆಯನ್ನು ಹೆಚ್ಚಿಸುವದೆಂದು ನಿರೀಕ್ಷಿಸಿ ಇದೆ

ಮೇಲೆ ನಮೂದಿಸಿದಂತೆ ಮೊದಲೇ ಮಾಡಿರುವ ನಾನಾ ಏರ್ಪಾಡುಗಳ ಉದ್ದೇಶವನ್ನೂ ಆವಶ್ಯಕತೆಯನ್ನೂ ವಿವರವಾಗಿ ತಿಳಿಸುವ ಹುಕುಂಗಳು ಆಗಾಗ್ಗೆ ಗೆಜೆಟ್ಟಿನಲ್ಲಿ ಸಾಧಾರಣವಾಗಿ ಪ್ರಕಟಿಸಲ್ಪಡುತ್ತಿರುವದರಿಂದಲೂ, ಬೆಂಗಳೂರಿನಲ್ಲಿ ಹೊಸದಾಗಿ ಏರ್ಪಡಿಸಿರುವ ಪ್ರೆಸ್ ರೂಮ್ ಯಾ ವರ್ತಮಾನ ಪತ್ರಿಕೆಯ ಕೊಟ್ಟಡಿಯಲ್ಲಿ ಸಾಮಾನ್ಯವಾಗಿ ಪತ್ರಿಕಾಕರ್ತರ ತಿಳುವಳಿಕೆಯ ಬಗ್ಗೆ ಇಡಲ್ಪಟ್ಟಿರುವದರಿಂದಲೂ, ಅವುಗಳನ್ನು ಇನ್ನೂ ಸವಿಸ್ತಾರವಾಗಿ ವಿವರಿಸಿ ನಾವು ಇಲ್ಲಿ ಹೇಳಬೇಕಾದ್ದಿಲ್ಲವೆಂದು ನೆನೆಸುವೆವು

ಖರ್ಚು ಕಮ್ಮಿ ಮಾಡೋಣ

ಕಾರ್ಯನಿರ್ವಹಣಕ್ಕೆ ಕುಂದಕವಿಲ್ಲದೆ ಖರ್ಚನ್ನು ಕನಿಷ್ಠ ಸಂಖ್ಯೆಗೆ ಕಡಿಮೆ ಮಾಡುವ ಉದ್ದೇಶದಿಂದ ನಾನಾ ಇಲಾಖೆಗಳಲ್ಲಿ ಸಾಧ್ಯವಾದಷ್ಟು ಮಿತವ್ಯಯ ಮಾಡುವ ಏರ್ಪಾಡನ್ನು ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಈಗ ಕೈಕೊಂಡಿರುತ್ತಾರೆ. ಹಿಂದಿನ ವರ್ಷಗಳಲ್ಲಿ ಖರ್ಚು ಅಮಿತವಾಗಿ ಬೆಳೆದಿರುವದರಿಂದ ಒಟ್ಟು ಆದಾಯವ್ಯಯದ ಸ್ಥಿತಿಯು ಈಗ ಸಾವಧಾನವಾದ ಆಲೋಚನೆಯಲ್ಲಿದೆ ಇದಕ್ಕಾಗಿ ಕೌನ್ಸಿಲಿನ ಇಬ್ಬರು ಮೆಂಬರುಗಳು ಸೇರಿರುವ ಒಂದು ಸಭೆಯನ್ನು ಮೊಕರರ್ಮಾಡಿ ಅವರು ನಾನಾ ಇಲಾಖೆಯ ಮೊಖ್ತೇಸರರ ಸಂಗಡ ಆಲೋಚನೆಮಾಡಿ ಖರ್ಚನ್ನು ಕಡಿಮೆಮಾಡುವ ವಿಷಯವನ್ನು ತಿಳಿಸುವಂತೆ ಏರ್ಪಾಡು ಮಾಡಿದೆ ಆಗಲೇ ಈ ಸಭೆಯವರು ಕೆಲವು ಇಲಾಖೆಗಳ ಖರ್ಚನ್ನು ಕಡಿಮೆಮಾಡುವ ವಿಷಯದಲ್ಲಿ ಆಲೋಚಿಸುತ್ತಾ ಇದ್ದಾರೆ ಮೇಲ್ಕಂಡ ಸಭೆಯ ಸಲಹೆಗಳು ಸರ್ಕಾರಕ್ಕೆ ಕಳುಹಿಸಿಕೊಡಲು ಸಿದ್ಧವಾಗಿವೆ ಇತರ ಇಲಾಖೆಗಳ ವಿಷಯದಲ್ಲಿಯೂ ಹಾಗೆಯೇ ನಡಿಸಲಾಗುವದು. ನಾವು ಮುಂದಿನ ವರ್ಷ ಇಲ್ಲಿ ಸಭೆ ಸೇರಿದಾಗ ಈ "ಖರ್ಚು ಕಡಿಮೆಮಾಡುವ ಸಭೆಯ" ಸಲಹೆಗಳ ಫಲಿತಾಂಶವಾಗಿ ಸರ್ಕಾರದ ಖರ್ಚಿನಲ್ಲಿ ವಿಶೇಷವಾಗಿ ಕಡಿಮೆಮಾಡಿದ ಅಂಶವನ್ನು ತಮಗೆ ತಿಳಿಸುವ ಸ್ಥಿತಿಯಲ್ಲಿ ಇರುವೆವೆಂದು ನಂಬುತ್ತೇವೆ

ಆಗಲೇ ಕೆಲವು ಕಡೆಗಳಲ್ಲಿ ಖರ್ಚು ಕಡಿಮೆ ಮಾಡಲ್ಪಟ್ಟಿತು; ಅಥವಾ ವಸ್ತುತಃ ನಿಶ್ಚಯಿಸಲ್ಪಟ್ಟಿತು ಎಂದಾದರೂ ಹೇಳಬಹುದು. ಅವು ಯಾವವೆಂದರೆ—ಪ್ರತ್ಯೇಕವಾದ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ ಉದ್ಯೋಗವನ್ನು ತೆಗೆದುಹಾಕಿದ್ದು, ಮರಾಮತ್ ಇಲಾಖೆಯ ಎಗ್ಸಾಮಿನರ ಕೆಲಸವನ್ನು ಕಂಟ್ರೋಲರಿಗೆ ವಹಿಸಿದ್ದು, ಮೇಲ್ಕಂಡ ತಿದ್ದುಪಾಟಿನಿಂದ ಲೆಕ್ಕಾಚಾರದ ಆಡಿಟ್‌ ಮಾಡುವ ಕೆಲಸವು ಸ್ವತಂತ್ರವಾಗಿಯೂ ಸಮರ್ಪಕವಾಗಿಯೂ ಆಗುವದೆಂದು ಮೆ|| ಹರ್ಸ್ಟ್, ಬಿಡಲ್ಫ್, ಕಿರ್ಕ್‌ಪ್ಯಾಟ್ರಿಕ್ ಇವರೇ ಮೊದಲಾದ ಲೆಕ್ಕಾಚಾರದಲ್ಲಿ ಪ್ರವೀಣರಾದವರು ಅಭಿಪ್ರಾಯಪಟ್ಟದ್ದರಿಂದ ಈ ಏರ್ಪಾಡನ್ನು ಮಾಡಲಾಯಿತು. ಈ ಬದಲಾವಣೆಯು ಬರುವ ಜನವರಿಯಿಂದ ಜಾರಿಗೆ ಬರುವದು. ಇದಕ್ಕಾಗಿ ಕಂಟ್ರೋಲರವರ ಕೈಕೆಳಗೆ ಕೆಲಸಮಾಡುವದಕ್ಕಾಗಿ ಒಬ್ಬ ಸ್ಥಳೀಯಾಧಿಕಾರಿಯು ಮರಾಮತ್ ಲೆಕ್ಕಗಳಲ್ಲಿ ತರಬೇತು ಆಗುತ್ತಾ ಇದ್ದಾರೆ ಪ್ರಾಚೀನ ಲೇಖನಾನ್ವೇಷಣದ ಕೆಲಸವು ಮುಗಿದುದರಿಂದ ಈಗ್ಗೆ ಕೇವಲ ಅವಶ್ಯವಾಗಿರುವ ಸ್ವಲ್ಪ ಸಿಬ್ಬಂದಿಯನ್ನು ಮಾತ್ರ ಇಟ್ಟುಕೊಂಡು ಖರ್ಚನ್ನು ಬಹಳವಾಗಿ ಕಡಿಮೆಮಾಡಲು ಸಾಧ್ಯವಾಯಿತು.

ಜಮಾಖರ್ಚು

ಗತ ವರ್ಷದ ಜಮಾಖರ್ಚು ಬಡ್ಜೆಟ್ ಅಂದಾಜಾ ಪಟ್ಟಿಯಲ್ಲಿ ಒಟ್ಟು ಹುಟ್ಟುವಳಿ ೨,೨೩,೪೩,೦೦೦ ರೂಪಾಯಾಗಿಯೂ ಒಟ್ಟು ಖರ್ಚು ೨,೧೩,೪೦,೦೦೦ ರೂಪಾಯಾಗಿಯೂ ೧೪,೦೩,೦೦೦ ರೂಪಾಯಿ ಶಿಲ್ಕು ಉಳಿಯುವಂತೆಯೇ ತೋರಿಸಿ ಇತ್ತು ಈಗ ತಯಾರಾಗಿರುವ ಸುಮಾರು ಲೆಕ್ಕಗಳಲ್ಲಿ ಒಟ್ಟು ಹುಟ್ಟುವಳಿ ೨,೪೧,೧೮,೦೦೦ ವೆಂದೂ ಒಟ್ಟು ಖರ್ಚು ೨,೩೧,೨೬,೦೦೦ ವೆಂದೂ ೯,೯೨,೦೦೦ ರೂಪಾಯಿ ಶಿಲ್ಕು ಉಳಿಯುವದಾಗಿಯೂ ತೋರಿಸಿದೆ. ಇದುವರೆಗೂ ರೈಲ್ವೆಗಳ ನಿವ್ವಳ ಜಮೆಗಳನ್ನು ಮಾತ್ರ ಜಮಾಖರ್ಚು ಅಂದಾಜಾ ಪಟ್ಟಿಯ ಮತ್ತು ಲೆಕ್ಕಗಳ ಜಮೆಯ ಬಾಬಿನಲ್ಲಿ ತೋರಿಸುತ್ತಾ ಇತ್ತು ಆದರೆ ಹೀಗೆ ಲೆಕ್ಕ ಬರೆಯುವದು ತೃಪ್ತಿಕರವಾಗಿ ಕಂಡುಬಾರದೆ ಇದ್ದುದರಿಂದ, ಗತ ವರ್ಷದ ಲೆಕ್ಕಗಳಲ್ಲಿ ಒಟ್ಟು ಜಮೆಗಳನ್ನು ಹುಟ್ಟುವಳಿಯಲ್ಲಿಯೂ ಕೆಲಸ ನಡೆಸುವ ಖರ್ಚುಗಳನ್ನು ಖರ್ಚು ಬಾಬಿನಲ್ಲಿಯೂ ತೋರಿಸಿ ಇದೆ ಈ ಬದಲಾವಣೆಯಿಂದ ಹುಟ್ಟುವಳಿಯ ಮತ್ತು ಖರ್ಚಿನ ಸಂಖ್ಯೆಗಳಲ್ಲಿ ೧೪,೩೧,೦೦೦ ರೂಪಾಯಿ ಹೆಚ್ಚು ಇದೆ. ಈ ವ್ಯತ್ಯಾಸವನ್ನು ಬಿಟ್ಟುಬಿಟ್ಟು, ಒಟ್ಟು ಹುಟ್ಟುವಳಿಯನ್ನು ಜಮಾಖರ್ಚು ಅಂದಾಜಾ ಪಟ್ಟಿಗೆ ಹೋಲಿಸಿ ನೋಡುವಲ್ಲಿ ೩,೫೬,೦೦೦ ರೂಪಾಯಿ ಕಡಿಮೆಯಾಗಿಯೂ, ಖರ್ಚು ಸ್ವಲ್ಪಮಟ್ಟಿಗೆ ಎಂದರೆ ೪೫,೦೦೦ ರೂಪಾಯಿನಷ್ಟು ಹೆಚ್ಚಾಗಿಯೂ ತೋರುತ್ತದೆ.

ಗತ ವರ್ಷದಲ್ಲಿ ಅನಾವೃಷ್ಟಿಗಾಗಿಯೂ, ಪ್ರತಿಕೂಲವಾದ ಕಾಲಸ್ಥಿತಿಗಾಗಿಯೂ, ಕಂದಾಯ ಮಾಫ್ ಮಾಡೋಣದರಿಂದಲೂ, ಬಿಸ್ತುಗಳನ್ನು ಮುಂದಕ್ಕೆ ಹಾಕೋಣದರಿಂದಲೂ ಮೊದಲಿನ ಅಂದಾಜಿಗಿಂತ ವಸೂಲಾತಿಗಳು ೮,೪೬,೦೦೦ ರೂಪಾಯಿನಷ್ಟು ಕಡಿಮೆಯಾದ್ದರಿಂದ ಹುಟ್ಟುವಳಿಯು ಪೈಕಿ ಜಮೀನು ಕಂದಾಯದ ಬಾಬಿನಲ್ಲಿ ವಿಶೇಷವಾಗಿ ಕಡಿಮೆಯಾಯಿತು ಈ ನಷ್ಟಕ್ಕೆ ಪ್ರತಿಯಾಗಿ ಇತರ ಬಾಬುಗಳಲ್ಲಿ, ತತ್ರಾಪಿ ಮುಖ್ಯವಾಗಿ ಜಂಗಲ್ ಬಾಬಿನಲ್ಲಿ ೨,೩೯,೦೦೦ ರೂಪಾಯಿಯೂ, ರೈಲ್ವೆಯಲ್ಲಿ ೧,೫೯,೦೦೦ ರೂಪಾಯಿಯೂ, ಕಾವೇರಿ ವೈದ್ಯುತಶಕ್ತಿಯ ಏರ್ಪಾಡಿನಲ್ಲಿ ೬೫,೦೦೦ ರೂಪಾಯಿ ಹೆಚ್ಚು ಹುಟ್ಟುವಳಿಯಾಯಿತು

ನಾವು ಮೊದಲೇ ಹೇಳಿದಂತೆ ಖರ್ಚು ಬಾಬಿನಲ್ಲಿ ಒಟ್ಟು ೫೬೬೦೦ ರೂಪಾಯಿ ಹೆಚ್ಚು ಖರ್ಚಾಯಿತು ಪ್ರಿನ್ಸ್ ಪ್ರಿನ್ಸ್ ಮತ್ತು ಪ್ರಿನ್ಸೆಸ್ ಆಫ್ ವೇಲ್ಸರವರ ಆಗಮನಕ್ಕಾಗಿ ಅಂದಾಜಾ ಪಟ್ಟಿಯಲ್ಲಿ ದಾಖಲ್ಮಾಡಿದ್ದ ಮೊಬಲಗಿಗಿಂತ ಹೆಚ್ಚು ಖರ್ಚಾದ್ದು ವಿನಾ ಉಳಿದ ಬಾಬುಗಳೆಲ್ಲಾ ಅಂದಾಜಿನಲ್ಲಿ ಮೊದಲು ದಾಖಲ್ಮಾಡಿದ್ದಂತೆಯೇ ಸಾಮಾನ್ಯವಾಗಿ ಖರ್ಚು ಮಾಡಲಾಯಿತು

೧೯೦೫-೦೬ ರಲ್ಲಿ ಅನುಕೂಲವಾದ ಕಾಲಸ್ಥಿತಿಯಿಂದ ಜಮೀನು ಕಂದಾಯದ ವಸೂಲಾತಿಯಲ್ಲಿ ೫,೬೦,೦೦೦ ರೂ ಕಡಿಮೆ ಆಯಿತು ಅದೇ ಕಾರಣದಿಂದ ಅಬ್ಕಾರಿ ಹುಟ್ಟುವಳಿಯಲ್ಲಿ ಸ್ವಲ್ಪಮಟ್ಟಿಗೆ ಅಂದರೆ ೨೩,೦೦೦ ರೂಪಾಯಿ ಮಾತ್ರ ಕಡ್ಡಾಯಿತು ಸ್ಟಾಂಪು ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಚೇತರಿಸಿಕೊಂಡದ್ದರಿಂದ ೬೩,೦೦೦೦ ರೂಪಾಯಿ ಹೆಚ್ಚು ಉತ್ಪತ್ತಿಯಾಯಿತು. ಜಂಗಲ್ ಹುಟ್ಟುವಳಿಯು ೬,೫೫,೦೦೦ ರೂಪಾಯಿ ಹೆಚ್ಚಾಯಿತು ಈ ಪೈಕಿ ಸುಮಾರು ೮೮,೦೦೦ ರೂಪಾಯಿ ಖೆಡ್ಡಾ ಇಲಾಖೆಯಲ್ಲಿ ಆನೆಗಳ ಮಾರಾಟದಿಂದ ಉತ್ಪತ್ತಿಯಾಯಿತು ಗತ ವರ್ಷದಲ್ಲಿ ಹಿಂದೆ ಉಳಿದಿದ್ದ ಬಾಕಿಗಳು ಫೈಸಲಾದದ್ದೇ ಚಿನ್ನದಗಣಿ ಹುಟ್ಟುವಳಿಯಲ್ಲಿ ೮೬,೦೦೦ ರೂಪಾಯಿ ಹೆಚ್ಚು ಉತ್ಪತ್ತಿಯಾಗುವದಕ್ಕೆ ಮುಖ್ಯ ಕಾರಣವಾಗಿದೆ ಗತ ವರ್ಷ ಪೂರ್ತಿಯಾಗಿ ಪ್ರಥಮತಃ ಕೋಲಾರ ಚಿನ್ನದ ಗಣಿಗೆ ಬೇತಮಂಗಲದ ಕೆರೆಯಿಂದ ನೀರು ಸರಬರಾಯಿ ಮಾಡಿದ ಕಾರಣ ಮರಾಮತ್ ಇಲಾಖೆಯ ಉತ್ಪತ್ತಿಯಲ್ಲಿ ೧,೫೬೦೦೦ ರೂಪಾಯಿನಷ್ಟು ವಿಶೇಷವಾದ ಹೆಚ್ಚು ಹುಟ್ಟುವಳಿಯಾಯಿತು ಸ್ವಲ್ಪಮಟ್ಟಿಗೆ ಹಿಂದಿನ ಬಾಕಿ ವಸೂಲಾದುದರಿಂದಲೂ, ಸ್ವಲ್ಪಮಟ್ಟಿಗೆ ಬೆಂಗಳೂರಿನಲ್ಲಿ ಇಟ್ಟಿರುವ ವೈದ್ಯುತದೀಪ ವೈದ್ಯುತಶಕ್ತಿಯ ಸರಬರಾಯಿ ಈ ಏರ್ಪಾಡುಗಳ ಹುಟ್ಟುವಳಿಯಿಂದಲೂ, ಕಾವೇರಿ ವೈದ್ಯುತಶಕ್ತಿ ಸ್ಕೀಮಿನ ಲೆಕ್ಕದಲ್ಲಿ ೬,೩೦,೦೦೦ ರೂಪಾಯಿ ಹೆಚ್ಚಾಯಿತು

ಖರ್ಚುಬಾಬಿನಲ್ಲಿ ಮುಖ್ಯವಾದ ಕಡಿಮೆಗಳು ಯಾವವೆಂದರೆ.—ಕಾವೇರಿ ವೈದ್ಯುತಶಕ್ತಿಯ ಬಂಡವಾಳದ ಲೆಕ್ಕದಲ್ಲಿ ೮,೫೩,೦೦೦ ರೂಪಾಯಿ, ಮತ್ತು ಸಾಧಾರಣ ಮರಾಮತ್ ಇಲಾಖೆಯ ಖರ್ಚಿನಲ್ಲಿ ೨,೧೪,೦೦೦ ರೂಪಾಯಿ ಈ ಕಡಿಮೆಗಳಿಗೆ ಪ್ರತಿಯಾಗಿ ರೈಲ್ವೆ ಬಂಡವಾಳದ ಲೆಕ್ಕದಲ್ಲಿ ೩,೦೬,೦೦೦ ರೂಪಾಯಿಯೂ, ನಾನಾ ಸಿವಿಲ್ ಇಲಾಖೆಗಳ ಖರ್ಚಿನಲ್ಲಿ ೩,೦೮,೦೦೦ ರೂಪಾಯಿಯೂ, ಜಂಗಲ್ ಇಲಾಖೆಯ ಖರ್ಚಿನಲ್ಲಿ ೧,೩೬,೦೦೦ ರೂಪಾಯಿಯೂ ಹೆಚ್ಚು ಖರ್ಚಾಯಿತು. ಈ ಜಂಗಲ್ ಬಾಬಿನ ಖರ್ಚಿನ ಪೈಕಿ ಪ್ರಿನ್ಸ್ ಪ್ರಿನ್ಸ್ ಆಫ್ ವೇಲ್ಸರವರ ಆಗಮನ ಪ್ರಯುಕ್ತ ಖೆಡ್ಡಾ ಕೆಲಸಗಳಿಗಾಗಿ ೧,೦೦,೦೦೦ ರೂಪಾಯಿ ಖರ್ಚಾಯಿತು.

೧೯೦೫-೦೬ ರಲ್ಲಿ ಒಟ್ಟು ಶಿಲ್ಕು ಸುಮಾರು ೧೧,೦೦,೦೦೦ ರೂಪಾಯಿನಷ್ಟು ಉಳಿದಿತ್ತು. ಇದಕ್ಕೆ ಪ್ರತಿಯಾಗಿ, ಹಿಂದಿನ ವರ್ಷದಲ್ಲಿ ಜಮೆಗಿಂತ ಖರ್ಚು ೯೨,೦೦೦ ರೂಪಾಯಿನಷ್ಟು ಹೆಚ್ಚಾಗಿತ್ತು

ಶಿಲ್ಕು.

೧೯೦೫ ೦೬ನೆಯ ವರ್ಷದ ಆದಿಯಲ್ಲಿ ಸರ್ಕಾರದ ಜಮೆಯಲ್ಲಿ ೪೩,೪೯,೦೦೦ ರೂಪಾಯಿ ಶಿಲ್ಕು ಉಳಿದಿತ್ತು ಇದಕ್ಕೆ ಗತವರ್ಷದಲ್ಲಿ ಹುಟ್ಟುವಳಿಯಾದ ಸುಮಾರು ೧೦,೦೦,೦೦೦ ರೂಪಾಯಿ ಶಿಲ್ಕನ್ನು ಸೇರಿಸಲಾಗಿ ಗತ ವರ್ಷಾಂತ್ಯದಲ್ಲಿ, ಒಟ್ಟು ೫೩,೪೧,೦೦೦ ರೂಪಾಯಿ ಶಿಲ್ಕು ಉಳಿದಿತ್ತು. ಇದನ್ನೇ ಆ ತಾರೀಖಿನಲ್ಲಿ ಉಳಿದಿರುವ ಸರ್ಕಾರದ ಶಿಲ್ಕೆಂದು ವಾಡಿಕೆಯಾಗಿ ಹೇಳುವದುಂಟು ಈ ಶಿಲ್ಕು ಪ್ರಕೃತ ಬಿಡ್ಡಾಗ್ಗೆ ಉಪಯೋಗಿಸಿಕೊಳ್ಳಲಾಗುವಂತೆ ಖಜಾನೆಗಳಲ್ಲಿ ಇರುವ ನಗದು ಮೊಬಲಗೂ ಅಲ್ಲ ಅಥವಾ ಸರ್ಕಾರಿ ಪತ್ರರೂಪವಾದ ಮೊಬಲಗೂ ಅಲ್ಲ. ಈ ಮೊಬಲಗು ಸಂಸ್ಥಾನದ ಒಟ್ಟು ಆಯವ್ಯಯವನ್ನು ಮಾತ್ರ ತೋರಿಸುತ್ತದೆ, ಆದರಲ್ಲಿಯೂ ಉತ್ಪತ್ತಿಕರವಾದ ಕೆಲಸಗಳಿಗಾಗಿ ಖರ್ಚಾದ ಭಾರಿ ಮೊಬಲಗು ಕೂಡಾ ಈ ಲೆಕ್ಕದಲ್ಲಿ ಸೇರುವದಿಲ್ಲ.

ಅಂದಾಜಾ ಪಟ್ಟಿ (ಬಡ್ಜೆಟ್)

೧೯೦೬-೦೭ನೆಯ ವರ್ಷದ ಜಮಾಖರ್ಚು ಅಂದಾಜಾ ಪಟ್ಟಿಯಲ್ಲಿ ನಮೂದಾಗಿರುವ ಬಾಬುಗಳ ವಿಷಯವಾಗಿ ಈಗ ಪ್ರಸ್ತಾಪಿಸುತ್ತೇವೆ ಈ ಅಂದಾಜುಗಳಲ್ಲಿ ಒಟ್ಟು ಹುಟ್ಟುವಳಿಯು ೨,೪೬,೯೨,೦೦೦ ರೂಪಾಯೆಂದೂ ಒಟ್ಟು ಖರ್ಚು ೨,೪೬,೩೨,೦೦೦ ರೂಪಾಯೆಂದೂ ಅಖೈರು ಶಿಲ್ಕು ೬೦,೦೦೦ ರೂಪಾಯಿನಷ್ಟು ಜಾಸ್ತಿ ಮೊಬಲಗೆಂದೂ ತೋರಿಸಿ ಇದೆ. ಇದಕ್ಕೆ ಪ್ರತಿಯಾಗಿ ಗತ ವರ್ಷದಲ್ಲಿ ಸುಮಾರು ೧೦,೦೦,೦೦೦ ರೂಪಾಯಿನಷ್ಟು ಅಖೈರು ಶಿಲ್ಕು ಉಳಿದಿತ್ತು ೧೯೦೬-೦೭ನೆಯ ವರ್ಷದ ಅಖೈರು ಶಿಲ್ಕಿನಲ್ಲಿ ಕಡಿಮೆಯಾದದ್ದು, ಕಡಿಮೆಯಾದ ಹಾಗೆ ಲೆಕ್ಕದಲ್ಲಿ ಕಾಣುವದೇ ಹೊರತು ನಿಜವಾದ ಕಡಿಮೆಯಲ್ಲ ಯಾಕೆಂದರೆ ಜಮಾಖರ್ಚು ಅಂದಾಜಾ ಪಟ್ಟಿಯನ್ನು ಮುಂದಾಗಿ ಮಾಡುವಾಗ ಇದ್ದ ಕಾಲಸ್ಥಿತಿಯು ಸಮಾಧಾನವಾಗಿ ಕಾಣಬರಲಿಲ್ಲವಾದ್ದರಿಂದ ನಗದು ರಿಜರ್ವನ್ನು ಬಲಪಡಿಸುವದಕ್ಕೋಸ್ಕರ ತೆಗೆದಿಟ್ಟಿರುವ ಕಾವೇರಿ ವೈದ್ಯುತಶಕ್ತಿಯ ಹುಟ್ಟುವಳಿ ೧೪,೩೫,೦೦೦ ರೂಪಾಯಿ ಕ್ಷಾಮಪರಿಹಾರಕ್ಕಾಗಿ ಇಟ್ಟಿರುವ ೨,೦೦,೦೦೦ ರೂಪಾಯಿ ಒಟ್ಟು ಖರ್ಚು ೨,೪೬,೦೦,೦೦೦ ಚಿಲ್ಲಾನು ರೂಪಾಯಿನಲ್ಲಿ ಸೇರಿ ಇದೆ, ಹೀಗಾಗಿ ೧೯೦೬-೦೭ನೆಯ ವರ್ಷದ ಅಂದಾಜುಗಳಲ್ಲಿ ಮಾಸ್ತವಾದ ಹುಟ್ಟುವಳಿಯ ಶಿಲ್ಕನ್ನು ಹಿಂದಿನ ವರ್ಷಗಳ ಆದೇ ರೀತಿಯಾದ ಲೆಕ್ಕಗಳೊಡನೆ ಹೋಲಿಸಲಾಗಿ ೧೬,೫೫,೦೦೦ ರೂಪಾಯಿ ಆಗುತ್ತದೆ. ಈಗ ಪ್ರತಿ ಅಶ್ವಶಕ್ತಿಗೂ ೨೪ ಮತ್ತು ೧೮ ಪೌಂಡುಗಳ ಬೆಲೆ ಬರುತ್ತಿರುವದರಿಂದ ಕಾವೇರಿ ವೈದ್ಯುತಶಕ್ತಿಯ ಹುಟ್ಟುವಳಿಯು ಈಗ ಅಧಿಕವಾಗಿರುವದೇ ಈ ಫಲಿತಾಂಶಕ್ಕೆ ಮುಖ್ಯಕಾರಣ. ಇನ್ನು ೨ ವರ್ಷಗಳ ಅನಂತರ ಪ್ರತಿ ಅಶ್ವಶಕ್ತಿಯ ಕ್ರಯವನ್ನೂ ಸರಾಸರಿ ೨೦ ಪೌಂಡಿಗೆ ಇಳಿಸಲಾಗುತ್ತದೆ (ಪೌಂಡ್ ೧ಕ್ಕೆ ೧೫ ರೂ)

ಜಮಾಖರ್ಚುಗಳ ಏರ್ಪಾಡು ನಿರಪಾಯವಾಗಿರಬೇಕಾದರೆ ಕಂದಾಯ ಮತ್ತು ತರಿಗೆಯ ಸಾಧಾರಣವಾದ ಹುಟ್ಟುವಳಿಯೂ ಸರ್ಕಾರಿ ಕೆಲಸಗಳ ನಾನಾ ಇಲಾಖೆಗಳ ಸಾಧಾರಣವಾದ ಖರ್ಚುಗಳೂ ಸಮತೂಕವಾಗಿದ್ದ ಮಾತ್ರಕ್ಕೆ ಸಾಲದು, ರೈಲ್ವೆಗೋಸ್ಕರ ಸಾಲ ಮಾಡಬೇಕಾಗಿ ಬಂದಪಕ್ಷದಲ್ಲಿ ಅದರ ಬಡ್ಡಿಗೂ ಅಸಲು ತೀರಿಸುವ ಚಕ್ರಕೊಡಿತಕ್ಕ ಮೊಬಲಗಿಗೂ, ಕ್ಷಾಮಪ್ರಾಪ್ತವಾದಾಗ ಸಹಾಯಕ್ಕಾಗಿ ಬೇಕಾಗುವ ಮೊಬಲಗಿಗೂ, ಕ್ಷಾಮವಿಲ್ಲದ ಕಾಲಗಳಲ್ಲಿ ಸಂಭವಿಸಬಹುದಾದ ವಿಶೇಷ ಭಾರಿ ಖರ್ಚಿಗಾಗಿ ವರ್ಷಗಟ್ಟಲೆ ತೆಗೆದಿಡಬೇಕಾದ ಸರಾಸರಿ ಮೊಬಲಗಿಗೂ, ಅವಶ್ಯಕವಾದ ಮಟ್ಟಿಗೆ ಒದಗಿಸಿ ಇವುಗಳಿಗಾಗಿ ಒಟ್ಟಿನಲ್ಲಿ ಜಾಸ್ತಿ ಮೊಬಲಗಿನ ಶಿಲ್ಕು ಉಳಿಯುವಂತೆಯೂ ಇರಬೇಕು

ಮೈಸೂರು ಸಂಸ್ಥಾನಕ್ಕೆ ಗಣಿಗಳ ವರಮಾನವು ವಿಶೇಷ ವರಮಾನವಾಗಿದೆ ಈಗಿನ ಚಿಹ್ನೆಗಳನ್ನು ನೋಡಿದರೆ ಇದು ಹೀಗೆಯೇ ಅನೇಕ ವರ್ಷಗಳ ವರೆಗೂ ನಡೆಯಬಹುದೆಂದು ಕಂಡುಬಂದರೂ, ಈ ಮೂಲಕ ಎಷ್ಟು ಕಾಲ ಹುಟ್ಟುವಳಿಯಾಗುವದೆಂದು ನಿರ್ಣಯಿಸುವದು ಕಷ್ಟವಾಗಿದೆ ಆದರೆ ನಿಲುಮೆಯಾದ ಜಮಾಖರ್ಚಿನ ಏರ್ಪಾಡಿನ ವಿಷಯದಲ್ಲಿ ಸರ್ಕಾರ ಅವಳಿತದ ನಿಯತವಾದ ಖರ್ಚಿಗಾಗಿ ಸಾಧ್ಯವಾದ ಮಟ್ಟಿಗೂ ಈ ಹುಟ್ಟುವಳಿಯನ್ನು ನೆಚ್ಚದೆ ಇರುವದು ಉತ್ತಮ ವರಮಾನದ ಮುಖ್ಯವಾದ ಬಾಬುಗಳ ಪೈಕಿಯಿಂದ 'ಗಣಿಯ ರಾಜಧನ' ಬಾಬನ್ನು ವಜಾ ಮಾಡಿದ್ದಲ್ಲಿ ಖರ್ಚು ಬಾಬಿನಿಂದಲೂ ಚಿನ್ನದ ಗಣಿಗೆ ಸಂಬಂಧಪಟ್ಟ ಖರ್ಚನ್ನು ಕೂಡ ವಜಾಮಾಡಬೇಕು ಆಗ ಮಾಸ್ತವ್ಯಸ್ಥಿತಿಯು ಗೊತ್ತಾಗುವದು ಆದ್ದರಿಂದ ಚಿನ್ನದ ಗಣಿಯ ವರಮಾನದ ನಿಜವಾದ ನಿವ್ವಳ ಹುಟ್ಟುವಳಿಯ ಲೆಕ್ಕವನ್ನು ತಯಾರಿಸುತ್ತಾ ಇದೆ.

ಈಗ ಜಮಾಖರ್ಚುಗಳನ್ನು ನಿರಪಾಯವಾದ ಸ್ಥಿತಿಯಲ್ಲಿ ಇಡುವದಕ್ಕೆ ಬೇಕಾದಷ್ಟು ತೃಪ್ತಿಕರವಾದ ಕ್ರಮವು ಜರಗಿದೆ ಎಂದು ನಿಮ್ಮ ಜಮಾಖರ್ಚಿನ ಪಟ್ಟಿಯಿಂದ ತಿಳಿಯಬರುತ್ತದೆ. ಈ ವರ್ಷದ ಹುಟ್ಟುವಳಿಯ ಬಾಬುಗಳು ಅಂದಾಜಿಗೆ ಸರಿಯಾಗಬಹುದೆಂದು ನಿರೀಕ್ಷಿಸಿದೆ ಖರ್ಚು ಬಾಬುಗಳನ್ನು ಕೂಡ ಕೂಡಿದ ಮಟ್ಟಿಗೂ ಮಿತೋಕ್ತಿಯಲ್ಲಿ ಇಟ್ಟುಕೊಂಡಿದೆ.

ಸೇವಿಂಗ್ಸ್ ಬ್ಯಾಂಕುಗಳು.

೧೮೯೯ ನೆಯ ಇಸವಿಗೆ ಹಿಂದೆ ಪ್ರತಿ ಒಬ್ಬ ಡಿಪಾಜಿಟ್‌ದಾರನಿಂದಲೂ ೫,೦೦೦ ರೂಪಾಯಿಗೆ ಮೀರದಂತೆ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳನ್ನು ಸರ್ಕಾರಿ ಖಜಾನೆಗಳಲ್ಲಿ ತೆಗೆದುಕೊಳ್ಳುತ್ತಾ ಇತ್ತು ಆ ವರ್ಷದ ಆಗಸ್ಟಿನಲ್ಲಿ ಇನ್ನೊಂದು ಹುಕುಂ ಕೊಡುವವರೆಗೆ ಡಿಪಾಜಿಟ್‌ದಾರನಿಂದ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಯಾವ ಮಿತಿಯೂ ಇಲ್ಲದೆ ಡಿಪಾಜಿಟ್ಟನ್ನು ತೆಗೆದುಕೊಳ್ಳಬಹುದೆಂದು ಪ್ರಕಟಿಸಲಾಯಿತು. ಹೀಗೆ ತಡೆಯನ್ನು ತಪ್ಪಿಸಿದ್ದರಿಂದ ಡಿಪಾಜಿಟ್ಟು ಮೊಬಲಗು ಒಂದೇ ಬಾರಿಯಾಗಿ ಹೆಚ್ಚುತ್ತಾ ಬಂದು, ೧೮೯೯ ನೆಯ ಜೂನ್ ೩೦ ರಲ್ಲಿ ೨೮,೦೦,೦೦೦ ಇದ್ದದ್ದು ೧೯೦೫ ನೆಯ ಡಿಸೆಂಬರು ೩೧ ನೆಯ ತಾರೀಖಿನಲ್ಲಿ ೯೫,೦೦,೦೦೦ಕ್ಕೆ ಮೀರಿತು ಕೇಳಿದಾಗ ಕೊಡಬೇಕಾದ ಋಣ ಸಾಲಗಳನ್ನು ಮಾನಸ್ವೀ ಹೆಚ್ಚಿಸುವದಕ್ಕೆ ಅವಕಾಶಕೊಟ್ಟದ್ದು ವಿಶೇಷ ಅಪಾಯಕರವೆಂದು ಯೋಚಿಸಿತು. ಈ ವಿಷಯದಲ್ಲಿ ಚೆನ್ನಾಗಿ ವಿಚಾರಮಾಡಿ, ಮುಂದೆ ಯಾವದಾದರೂ ಒಂದು ಸರ್ಕಾರಿ ವರ್ಷದಲ್ಲಿ ಒಬ್ಬ ಡಿಪಾಜಿಟ್‌ದಾರನು ೨,೦೦೦ ರೂಪಾಯಿಗೆ ಮೀರಿ ಡಿಪಾಜಿಟ್ಟು ಮಾಡಕೂಡದು ಎಂದೂ ಯಾವ ಡಿಪಾಜಿಟ್‌ದಾರನ ಒಟ್ಟು ಡಿಪಾಜಿಟ್ಟು ಮೊಬಲಗೂ ಯಾವ ಕಾಲದಲ್ಲಿಯೂ ೫,೦೦೦ ರೂಪಾಯಿಗೆ ಮೀರಕೂಡದೆಂದೂ ಈಚೆಗೆ ಅಂದರೆ ೧೯೦೬ ನೆಯ ಆಗಸ್ಟು ೧೫ ನೆಯ ತಾರೀಖಿನಲ್ಲಿ ಒಂದು ಸರ್ಕಾರಿ ಇಸ್ತಿಹಾರು ಮಾಡಿಯನ್ನು ಕೊಡಲಾಯಿತು

ಹಾಲಿ ಡಿಪಾಜಿಟ್ಟು ಲೆಕ್ಕಗಳ ವಿಷಯದಲ್ಲಿ ೧೯೦೦ ನೆಯ ಅಕ್ಟೋಬರ್ ಗುರ್ರೆ ಮೊದಲುಗೊಂಡು ೫,೦೦೦ ರೂಪಾಯಿಗೆ ಮೇಲ್ಪಟ್ಟ ಡಿಪಾಜಿಟ್ಟು ಮೊಬಲಗಿಗೆ ಇದುವರೆಗೂ ಕೊಡುತ್ತಿದ್ದ ಬಡ್ಡಿ ೩ = ಬಡ್ಡಿಗೆ ಬದಲಾಗಿ ಸೇಕಡಾ ೩ ರಂತೆ ಬಡ್ಡಿ ದಾಖಲ್ಮಾಡುವದೆಂದು ಪ್ರಕಟಿಸಲಾಯಿತು. ಮೇಲೆ ಕಂಡಂತೆ ತೀರ್ಮಾನವಾದಾಗ ಪ್ರತಿ ಒಬ್ಬ ಡಿಪಾಜಿಟ್‌ದಾರನ ಲೆಕ್ಕದಲ್ಲಿಯೂ ೫,೦೦೦ ರೂಪಾಯಿಗೆ ಮೇಲ್ಪಟ್ಟ ಹೆಚ್ಚಿಗೆ ಮೊಬಲಗನ್ನು ಸೇವಿಂಗ್ಸ್ ಬ್ಯಾಂಕುಗಳಿಂದ ವಾಪಸು ಕೊಡುವದಕ್ಕೆ ಸರ್ಕಾರದವರು ಸಿದ್ಧವಾಗಿರಬೇಕೆಂದು ಯೋಚಿಸಿಕೊಂಡಿದ್ದರು. ೧೯೦೬ ನೆಯ ಜೂನ್ ೩೦ ನೆಯ ತಾರೀಖಿನಲ್ಲಿ ೫,೦೦೦ ರೂಪಾಯಿಗೆ ಮೇಲಿನ ಹೆಚ್ಚು ಡಿಪಾಜಿಟ್ಟುಗಳುಳ್ಳ ಡಿಪಾಜಿಟ್‌ದಾರರ ಸಂಖ್ಯೆಯು ೪೦೬ ಆಗಿತ್ತು ಅಂಥಾ ಡಿಪಾಜಿಟ್‌ದಾರರಿಗೆ ಕೊಡಬೇಕಾದ ಒಟ್ಟು ಮೊಬಲಗು ಸುಮಾರು ೪೯,೦೦,೦೦೦ ರೂಪಾಯಿನಷ್ಟು ಇತ್ತು. ಆದಕಾರಣ ಸರ್ಕಾರದವರು ೨೮,೦೦,೦೦೦ ರೂಪಾಯಿನಷ್ಟು ಮೊಬಲಗನ್ನು ವಾಪಸು ಕೊಡಲು ಸಿದ್ಧವಾಗಿರಬೇಕಾಗಿತ್ತು ಈ ಮೊಬಲಗನ್ನು ಸಂಸ್ಥಾನಕ್ಕೆ ಸೇರಿದ ಇಂಡಿಯಾ ಸರ್ಕಾರಗಳ ಬಳಕೆಯಿಂದ ಸಾಧಾರಣವಾಗಿ ಒದಗಿಸಿಕೊಳ್ಳಬೇಕಾಗಿತ್ತು

ದೇಶದ ಶಿರಂತೆ ಸಾಲ.

ಸೇವಿಂಗ್ಸ್ ಬ್ಯಾಂಕು ನಿಬಂಧನೆಗಳ ಬದಲಾವಣೆಯು ಪರ್ಯಾಲೋಚನೆಯಲ್ಲಿದ್ದಾಗ ಕಾವೇರೀ ವೈದ್ಯುತಶಕ್ತಿಯ ಮೂರನೆಯ ಸ್ಕೀಮು ಸರ್ಕಾರದವರಿಗೆ ಅನುಕೂಲವಾಗಿ ತೋರಿಬಂದಿತು. ಈ ವಿಷಯದ ವಿಸ್ತಾರ ಫಲಿತಾಂಶವು ಕಂಡುಬಂದದ್ದರಿಂದ ಅದನ್ನು ಕೊಳ್ಳಬೇಕೆಂದು ಸರ್ಕಾರದವರು ನಿರ್ಧರಿಸಲಾಯಿತು. ಆದರೆ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳಿಗಾಗಿ ಭಾರೀ ಮೊಬಲಗನ್ನು ವಾಪಸುಮಾಡಬೇಕಾದ್ದರಿಂದ ಸರ್ಕಾರದಲ್ಲಿ ಉಳಿದಿರುವ ಮಿಗುತೆ ರಿಜರ್ವ್ ಮೊಬಲಗಿನಿಂದ ಅದಕ್ಕೆ ಬೇಕಾದ ಹಣವನ್ನು ಒದಗಿಸುವದು ಸಾಧ್ಯವಿಲ್ಲವೆಂದು **ಇದಕ್ಕೆ ಬೇಕಾದ ಮೊಬಲಗನ್ನು ಸಾಲದ ಮೂಲಕ ಹೊಂದುವದು ಯುಕ್ತವೆಂದು** ಎಣಿಸಿತು.

ಒಂದು ವೇಳೆಯಲ್ಲಿ ಒಂದು ಕಡೆ ಸರ್ಕಾರಿ ಪತ್ರಗಳ ಮಾರಾಟ ಹುಟ್ಟುವಳಿಯಿಂದ ಸೇವಿಂಗ್ಸ್ ಬ್ಯಾಂಕ್ ಸಾಲಗಳನ್ನು ತೀರಿಸುವದು ಮತ್ತೊಂದು ಕಡೆ ಹೊಸ ಸಾಲಕ್ಕೆ ದರಖಾಸ್ತುಗಳನ್ನು ಆಪೇಕ್ಷಿಸುವದಕ್ಕೆ ಬದಲಾಗಿ ಈ ಹೊಸ ನಿಬಂಧನೆಗಳ ಮೇರೆ ತಮ್ಮ ಡಿಪಾಜಿಟ್ಟುಗಳನ್ನು ವಾಪಸು ತೆಗೆದುಕೊಳ್ಳುವಂತೆ ನಿಶ್ಚಯಿಸಲ್ಪಡುವ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್‌ದಾರರಿಗೆ ಪ್ರಥಮತಃ ಈ ಸಾಲದ ಪತ್ರಗಳನ್ನು ಕೊಡುತ್ತೇವೆಂದು ಹೇಳುವದು ಸೂಕ್ತವಾಗಿ ಕಂಡುಬಂತು. ತದನುಸಾರವಾಗಿ ೧೯೦೬ ನೆಯ ಆಗಸ್ಟು ೧೭ ನೆಯ ತಾರೀಖಿನ ಪ್ರಕಟನೆಯಲ್ಲಿ ೫,೦೦೦ ರೂಪಾಯಿಗೆ ಮೀರಿದ ಮೊಬಲಗಿನ ಡಿಪಾಜಿಟ್‌ದಾರರು ತಮಗೆ ಸಲ್ಲಬೇಕಾದ ನಗದಿಗೆ ಬದಲಾಗಿ ಈ ಸಾಲದ ಪ್ರಾಮಿಸರಿ ನೋಟುಗಳನ್ನು ಇಷ್ಟಪಟ್ಟರೆ ತೆಗೆದುಕೊಳ್ಳಬಹುದೆಂದು ತಿಳಿಸಲಾಯಿತು. ಈ ಸಾಲದ ಒಟ್ಟು ಮೊಬಲಗನ್ನು ೨೫,೦೦೦ ... ಸೆಪ್ಟೆಂಬರು ೧೫ ನೆಯ ತಾರೀಖಿನೊಳಗೆ ಬೇಕಾದವರು ದರಖಾಸ್ತು ಹಾಕಬಹುದೆಂದು ಅಪ್ಪಣೆಯಾಯಿತು.

ಆದಾಯ-ವ್ಯಯದ ಉಪಾಯಗಳು

ಉಪನ್ಯಾಸದ ಈ ಭಾಗವನ್ನು ಗತವರ್ಷದ ಆದಾಯ-ವ್ಯಯದ ಲೆಕ್ಕದ ಪ್ರಯೋಜನ ಮಾಗಿಸ ಬೇಕೆ. ಹೀಗೆ ಸಮಾಧಾನಿಸಿ ಬಂತೆ ೧೯೦೫—೦೬ ನೆಯ ವರ್ಷದ ಲೆಕ್ಕಗಳನ್ನು ಪೈಸಲ್ ಮಾಡಿದಾಗ ಸುಮಾರು ೯೩,೦೦೦ ರೂಪಾಯಿ ಶಿಲ್ಕು ಉಳಿದಿತಾಗುವದು. ಗತ ವರ್ಷದ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳು ೬೩,೧೮ ೩೬೮ ರೂಪಾಯಿ ಹೆಚ್ಚಿದ್ದರಿಂದ ಈ ಎರಡು ಬಾಬುಗಳಲ್ಲಿ ನಗದು ಶಿಲ್ಕು ೬,೦೬,೮೩೬ ಆಗುತ್ತದೆ. ಗತಸಾಲಿನ ನಿಶ್ಚಿತ ಮರು ಶಿಲ್ಕು ೬,೬೦,೩೧೯ ರೂಪಾಯಿ, ಅಪ್ಪರು ೬೭,೯೯,೦೦,೬೫೩ ರೂಪಾಯಿ, ವರ್ಷವೆಲ್ಲಾ ಕೆಲಸಕ್ಕೆ ಬೇಕಾದ ಮೊಬಲಗಿಗಿಂತ ಬಹಳ ಹೆಚ್ಚಿನದೇ ಶಿಲ್ಕು ಉಳಿದಿತ್ತು. ಮೈಸೂರು ಸರ್ಕಾರದವರು ಹಿಂದೆ ೬೭,೮೩,೨೦೦ ರೂಪಾಯಿ ಬೆಲೆ ತೋರಿಸುವ ಇಂಡಿಯಾ ಸರ್ಕಾರಿ ಪತ್ರಗಳನ್ನು ಇಟ್ಟುಕೊಂಡಿದ್ದರು. ಈಗ ಕೊಂಡುಕೊಂಡ ೫,೦೦,೦೦೦ ರೂಪಾಯಿ ಪತ್ರದ ಮೈಕೆ ೨೫,೧೦,೩೦೦ ರೂಪಾಯಿ ಬಾಳುವ ಪತ್ರಗಳನ್ನು ಸಂಸ್ಥಾನದ ಲೆಕ್ಕಕ್ಕೆ ವರ್ಗಾಯಿಸಲಾಗುತ್ತದೆ. ಇದರಿಂದ ಒಟ್ಟು ೯೦,೬೬,೦೦೦ ರೂಪಾಯಿ ಬೆಲೆ ಬಾಳುವ ಸರ್ಕಾರಿ ಪತ್ರವಿರುವಂತೆ ಆಗುತ್ತದೆ. ಹೀಗೆ ಸರ್ಕಾರಿ ಪತ್ರಗಳನ್ನು ಇಟ್ಟುಕೊಂಡದ್ದಲ್ಲದೆ ಸಾಮಾನ್ಯವಾದ ಸಂಸ್ಥಾನದ ಖರ್ಚಿಗೆಲ್ಲಾ ಕೊಡು ಮಾಡಿದ ಮೇಲೂ ಕೂಡ ಸಾಲು ಮುಗಿಯುವದರಲ್ಲಿ ೩೬೯,೦೦೦ ರೂಪಾಯಿ ಅಪ್ಪರು ಶಿಲ್ಕು ಉಳಿಯುವದಾಗಿ ನಿರೀಕ್ಷಿಸಿದೆ.

ಸರ್ಕಾರಿ ಬೀಮಾ

ಗತ ವರ್ಷದಲ್ಲಿ ೧,೩೩೪ ಸಲಹೆಗಳು ಸ್ವೀಕೃತ ಮಾಡಲ್ಪಟ್ಟು ಪ್ರತಿ ವರ್ಷ ೨,೫೩೮ ರೂಪಾಯಿ ಪ್ರೀಮಿಯಂ ಬರತಕ್ಕ ೪,೪೬,೪೯೩ ರೂಪಾಯಿ ಬೋನಸ್ ಯಾ ಪ್ರತಿಫಲವುಳ್ಳ ೧೦೩೬ ಫಲಕಾರಿಯಾದ ಪತ್ರಗಳು ಕೊಡಲ್ಪಟ್ಟವು. ೧೯೦೬ನೆಯ ಜೂನ್ ೩೦ನೆಯ ತಾರೀಖಿನಲ್ಲಿ ಈ ಫಂಡಿನ ಜಮೆಯಲ್ಲಿ ೧೩,೬೯,೧೮೭ ರೂಪಾಯಿ ಶಿಲ್ಕು ಇದ್ದಿತು. ಮೈಸೂರು ಸಂಸ್ಥಾನದಲ್ಲಿ ಪ್ರಥಮತಃ ಪ್ಲೇಗು ಕಾಣಿಸಿದಂದಿನಿಂದ ೧೮೯೮—೯೯ ನೆಯ ವರ್ಷದಿಂದ ಬೀಮಾ ಮಾಡಿದವರಲ್ಲಿ ಮರಣ ಸಂಖ್ಯೆಯು ಏಕರೀತಿಯಾಗಿ ಹೆಚ್ಚುತ್ತಾ ಬಂದು ೧೯೦೫—೦೬ ನೆಯ ವರ್ಷದಲ್ಲಿ ಕಡಿಮೆಯಾದ್ದು ತೃಪ್ತಿಕರವಾಗಿದೆ. ಬೀಮಾ ಮಾಡಿದವರ ಮರಣ ಸಂಖ್ಯೆಯು ಹಿಂದಿನ ವರ್ಷದಲ್ಲಿ ೭೬ ಇದ್ದದ್ದು ಗತವರ್ಷದಲ್ಲಿ ೪೬ಕ್ಕೆ ಇಳಿಯಿತು. [ಸಶೇಷ.]

ಇಂಡಿಯಾ ದೇಶದ ವೃತ್ತಾಂತಗಳು.

ಹೊಸಪೇಟೆ ಕೊಟ್ಟೂರು ರೈಲ್ವೆಯನ್ನು ಐದು ಮೈಲಿ ರಾಮನ ದುರ್ಗದ ಬೆಟ್ಟಗಳ ತನಕ ಬಿಗಿವಣೆ ಮಾಡುವದಕ್ಕೆ ೮೦,೦೦೦ ರೂಪಾಯಿ ಸ್ಯಾಂಕ್ಷನ್ ಆಗಿದೆ. ಆ ಬೆಟ್ಟದ ಬಳಿ ಮ್ಯಾಂಗನೀಸ್ ಲೋಹದ ಅದಿರು ಸಿಕ್ಕುವದು.

****

ಇಂಡಿಯಾದಲ್ಲೆಲ್ಲಾ ಯಂತ್ರಗಳಿಂದ ಹಣಗಳನ್ನು ಸಂಕುವದಕ್ಕೆ ಟಂಕಸಾಲೆ ಕಲ್ಕತ್ತೆಯಲ್ಲಿ ಮಾತ್ರವೇ ಇರುವದು. ಕರಾಚಿ ಪಟ್ಟಣದಲ್ಲಿ ಒಂದು ಕಟ್ಟಡವನ್ನು ಸುಮಾರು ೩೦,೦೦೦ ರೂಪಾಯಿ ಖರ್ಚುಮಾಡಿ ಕಟ್ಟಿಸಬೇಕೆಂದಿದ್ದಾರೆ.

****

ಸಿಲೋನ್ ದ್ವೀಪದ ಗವರ್ನರವರಿಗೂ ಅವರ ಮಂತ್ರಾಲೋಚನಾ ಸಭೆಯವರಿಗೂ ಯಾರೋ ಭಯಂಕರವಾದ ಕಾಗದಗಳನ್ನು ಬರೆದಿರುತ್ತಾರೆ. ಆ ಕಾಗದದ ಮುಖ್ಯ ಅಭಿಪ್ರಾಯವೇನಂದರೆ ಜಾಗ್ರತೆಯಾಗಿರಿ, ನಿಮಗೆ ಸಾವು ಹತ್ತಿರವಾಗಿರುತ್ತದೆ ಎಂಬುವದೇ.

****

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಮುಸಲ್ಮಾನನು ಹೆಂಗಸು ಗಂಡಸು ಇಬ್ಬರೂ ವೇಷಹಾಕಿಕೊಂಡು ಒಬ್ಬ ವಿದ್ಯಾರ್ಥಿಯು ಜೇಬನ್ನು ಕತ್ತರಿಸಿದಳು. ಪೋಲೀಸಿನವರು ಅವಳನ್ನು ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆ ಆಗಿ ಅವಳನ್ನು ಶಿಕ್ಷೆಗೆ ಗುರಿಮಾಡಿದರು.

****

ರಂಗೂನ್ ಪಟ್ಟಣದಲ್ಲಿ ನಾವಿನ ವ್ಯಾಪಾರ ಮಾಡುತ್ತಿದ್ದ ವ್ಯಾಪಾರ ಕಂಪನಿಯವರು ತಮ್ಮ ನೂರಸ್ನೆಲ್ಲಾ ಒಂದು ಮನೆ ಬಾಡಿಗೆ ಮಾಡಿ ಅಲ್ಲಿ ಕೂಡಿಸಿದ್ದರು. ಸ್ವಲ್ಪ ದಿನದ ಒಳಗೆ ಆ ಮನೆಗೆ ಬೆಂಕಿ ಬಿದ್ದು ಸುಮಾರು ೪೦,೦೦೦ ರೂಪಾಯಿ ನಷ್ಟವಾಗಿರುತ್ತದೆ.

****

ರಂಗೂನ್ ಪಟ್ಟಣದ ಗವರ್ನ್‌ಮೆಂಟ್ ಪ್ಲೇಗ್ ಆಸ್ಪತ್ರೆಯವರು ಪ್ಲೇಗ್ ರೋಗಕ್ಕೆ ಗುರಿಯಾದ ಒಂದು ಬೆಕ್ಕನ್ನು ಸಂಪೂರ್ಣವಾಗಿ ವಾಸಿಮಾಡಿರುತ್ತಾರೆ. **ಆ ಬೆಕ್ಕು ಒಬ್ಬ ರೋಗಿಯ ಹಾಸಿಗೆಯ ಮೇಲೆ ಮಲಗಿತ್ತು** ದ್ದರಿಂದ ಸೋಂಕಿನಿಂದ ಆ ರೋಗವು ಬೆಕ್ಕಿಗೂ ತಗಲಿತು.

****

ಕೊಯಮುತ್ತೂರಿನ ಉತ್ತರ ಒಂದು ಗ್ರಾಮದಲ್ಲಿ ಎರಡು ಮೂರು ಲಕ್ಷ ರೂಪಾಯಿ ಬಾಪಂದಾರನಾಗಿರುವ ಒಬ್ಬ ವಲ್ಲಾಳನ ಮನೆಗೆ ೨೦ ಜನ ಕಂಡುಕಳ್ಳರು ನುಗ್ಗಿ ಸಾಹುಕಾರನನ್ನೂ ಮನೆಯವರನ್ನೂ ಚೆನ್ನಾಗಿ ಹೊಡೆದು ೪,೦೦೦ ರೂಪಾಯಿ ನಗನಾಣ್ಯಗಳನ್ನು ದೋಚಿಕೊಂಡು ಹೋದರು.

****

ಮಂಗಳೂರಿ ಪಟ್ಟಣದ ಉತ್ತರವಿರುವ ರಾಜಪುರದಲ್ಲಿ ಕೆಲವು ವರ್ಷಗಳ ಹಿಂದೆ ಗಾಜನ್ನು ತಯಾರುಮಾಡುವ ಕಾರ್ಖಾನೆಯೊಂದನ್ನು ಏರ್ಪಡಿಸಿರುತ್ತಾರಷ್ಟೆ. ಈಗ ಅಲ್ಲೇ ಇನ್ನೊಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ನೇಪಾಳ ರಾಜ್ಯದ ಲೇಟ್ ದಿವಾನರಾದ ದೇವ ಶಂಶೇರ್ ಜಂಗ್‌ರವರು ಉದ್ದೇಶಿಸಿರುವರು.

****

ಬೊಂಬಾಯಿನ ಜೈನ ಮಹಾಸಭೆಯವರು ಹಿಂದುಸ್ಥಾನದ ಸಮಸ್ತ ದೇಶೀಯ ರಾಜರುಗಳಿಗೂ ಈ ಸಮಾಜ ಮಹೋದ್ಧಾರದ ಜ್ಞಾಪಕಾರ್ಥವಾಗಿ ಪಾಶ್ವದ ದಿನ ತಮ್ಮ ಸಂಸ್ಥಾನಗಳಲ್ಲಿ ಯಾರೂ ಪ್ರಾಣಿಗಳನ್ನು ಕೊಲ್ಲದಂತೆ ಆಜ್ಞೆ ಮಾಡಿ ಆ ಪ್ರಕಾರ ರೂಢಿಗೆ ತರಬೇಕೆಂದು ಒಂದು ವಿಜ್ಞಾಪನಾ ಪತ್ರಿಕೆಯನ್ನು ಕಳುಹಿಸಿರುತ್ತಾರೆ.

****

ಅಲಹಾಬಾದ್ ವಿದ್ಯಾಪೀಠಕ್ಕೆ ಸೇರಿದ ಬಿ. ಎ ಪರೀಕ್ಷೆಯಲ್ಲಿ ಮೊದಲನೆಯವನಾಗಿ ತೇರ್ಗಡೆ ಹೊಂದಿರುವ ಷಹ ಮಹಮದ್ ಸುಲೇಮಾನ್ ಎಂಬ ಮುಸಲ್ಮಾನೀಯ ವಿದ್ಯಾರ್ಥಿಗೆ ೧೦,೦೦೦ ರೂಪಾಯಿ ವಿದ್ಯಾರ್ಥಿವೇತನವನ್ನು ಕೊಟ್ಟು ಅವನನ್ನು ವಿಲಾಯಿತಿಗೆ ಕಳುಹಿಸುತ್ತಾರೆ. ಅವನು ಈ ತಿಂಗಳಿನ ಮೊದಲು ಭಾಗದಲ್ಲೇ ಪ್ರಯಾಣಮಾಡುವವನಾಗಿದ್ದಾನೆ.

****

ಕಲ್ಕತ್ತಾ ಪಟ್ಟಣದಲ್ಲಿ ಇಪ್ಪತ್ತು ಜನ ಗಾಡಿಯವರು ಬಹಳ ಕಾಲದಿಂದಲೂ ಸ್ವಷ್ಟನೆಯ ರೀತಿಗಳನ್ನು ತೋರಿಸಿ ರೈಲ್ವೆ ಸ್ಟೇಷನಿಂದ ಭಾಗಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಮಾರಿ ತಿಂದು ಹಾಕುತ್ತಿದ್ದರು. ಅವರಲ್ಲಿ ಹದಿನಾಲ್ಕು ಜನ ಸಿಕ್ಕಿರುತ್ತಾರೆ. ಮತ್ತು ಅವರ ವಿಚಾರಣೆಯು ಹೌರಾ ಪಟ್ಟಣದ ಪೋಲೀಸ್ ಕೋರ್ಟಿನಲ್ಲಿ ನಡೆಯುವದು.

****

ಜುನಾಘಡದ ಲೇಟ್ ದಿವಾನರಾದ ಪುರುಷೋತ್ತಮರಾಯ್ ಸುಂದರಜಿ ಝಾಲರವರು ಸರ್ಕಾರದ ಹಣವನ್ನು ತಿಂದಿರುತ್ತಾರೆಂದು ಅವರನ್ನು ವಿಚಾರಣೆ ಮಾಡುವದಕ್ಕಾಗಿ ಜುನಾಘಡದ ಮಹಾರಾಜರು ಕೆಲವು ಜನರನ್ನು ನೇಮಿಸಿದರು. ದಿವಾನರವರು ಆ ರಾಜ್ಯವನ್ನೇ ಬಿಟ್ಟು ಹೋಗಿ ಬೊಂಬಾಯಿ ಹೈಕೋರ್ಟಿನಲ್ಲಿ ಮುಖ್ಯಸ್ಥರಾದ ನಾಲ್ಕು ಜನರನ್ನು ತಮ್ಮ ಕಡೆ ವಾದಿಸುವದಕ್ಕಾಗಿ ನೇಮಿಸಿಕೊಂಡಿರುತ್ತಾರೆ.

****

ಕಲ್ಕತ್ತೆಯಲ್ಲಿ ಮಿ॥ ಸುರೇಂದ್ರನಾಥಬಾನರ್ಜಿ ಯವರು ದೊಡ್ಡ ಸಮಾಜದಲ್ಲಿ ಕಿರೀಟಧಾರಣೆಯನ್ನು ಮಾಡಿಸಿಕೊಂಡರೆಂದು ವರ್ತಮಾನ ಬಂದಿತ್ತಷ್ಟೆ. ಅದರ ವಿಷಯವೇನೆಂಬುದು ಈಗ ಪ್ರಕಟವಾಗಿದೆ. ಅವರಿಗೆ ವೈದಿಕರು ಸೇರಿ ಶಾಂತಿಸೇಚನವೆಂಬ ಅಭಿಷೇಕಮಾಡಿದರು. ಇದರಲ್ಲಿ ರಾಜಕೀಯವಾದ ಅಭಿಪ್ರಾಯವೇನೂ ಇರುವುದಿಲ್ಲ. ಮಹಾ ಮಹಾ ಪಂಡಿತರೂ ವೈದಿಕ ವಿದ್ವಾಂಸರೂ ಈ ರೀತಿ ಹೇಳುತ್ತಾರೆ. ಅವರ ತಲೆಗೆ ಹೂವಿನ ಕಿರೀಟವನ್ನಿಟ್ಟು ಕತ್ತಿಗೆ ಹೂಮಾಲೆ ಹಾಕಿದ್ದೇಕೆಂದು ಕೇಳಿದಾಗ ಆ ಶಾಸ್ತ್ರಿಗಳು ಹೇಳಿದ್ದೇನೆಂದರೆ—ಹಿಂದುಗಳಲ್ಲಿ ಹೂವು, ಹೂಮಾಲೆ, ಕಿರೀಟಗಳನ್ನು ನಮ್ಮ ಕರ್ಮಗಳಿಗೆ ವಿಶೇಷವಾಗಿ ಯಾವಾಗಲೂ ಉಪಯೋಗಿಸುತ್ತೇವೆ. ಮದುವೆಯಲ್ಲಿ ವರನಿಗೆ ಹೂವಿನ ಕಿರೀಟವಿಟ್ಟು ಮಾಲೆ ಹಾಕುವೆವು ಎಂದು ಹೇಳಿದಾರೆ.

****

ಲಕ್ನೋ ಪಟ್ಟಣದಲ್ಲಿ ಕೈಗಾರಿಕೆ ಉದ್ಯೋಗಗಳನ್ನು ಪ್ರೋತ್ಸಾಹಪಡಿಸುವುದಕ್ಕೆ ಒಂದು ಸಂಘ ಏರ್ಪಟ್ಟಿದೆ. ಕಳೆದ ವಾರ ಈ ಸಂಘದವರು ವಾರ್ಷಿಕೋತ್ಸವವನ್ನು ಬೆಳಸಿದರು. ಒಂದು ವರುಷದಿಂದ ಈ ಸಂಘ ನಡೆಯುತ್ತಿದ್ದರೂ ಇನ್ನೂ ಕಸಬುದಾರರು ವಿಶೇಷವಾಗಿ ಮೆಂಬರಾಗಿ ಸೇರಿಲ್ಲ. ಒಂದು ದೇವಸ್ಥಾನವನ್ನೂ ಒಂದು ಸ್ಕೂಲನ್ನೂ ಒಂದು ಕಾರ್ಖಾನೆಯನ್ನೂ ಒಂದೇ ಕಡೆ ಕಟ್ಟಿಸಿ, ಕಸಬುದಾರರ ಮಕ್ಕಳಿಗೆ ವಿದ್ಯೆಯನ್ನೂ ಕಸಬನ್ನೂ ಕಲಿಸಬೇಕೆಂತಲೂ, ಹಿಂದುಸ್ಥಾನದ ಎಲ್ಲಾ ಪ್ರದೇಶಗಳಲ್ಲೂ ಕಸಬುದಾರರು ಮಾಡುವಂಥಾ ಪದಾರ್ಥಗಳನ್ನು ನಮೂನೆಗಾಗಿ ಅಲ್ಲಿ ತರಿಸಿಟ್ಟು ಕಲಿಯುವವರಿಗೆ ಪ್ರೋತ್ಸಾಹ ಕೊಡಬೇಕೆಂತಲೂ ಗೊತ್ತುಮಾಡಿದಾರೆ. ಇದಕ್ಕೆಲ್ಲಾ ೧೫,೦೦೦ ರೂಪಾಯಿ ಬೇಕಾಗಿರುವುದರಿಂದ ಚಂದಾ ಮೂಲಕ ಹಣ ಎತ್ತಲಾರಂಭವಾಗಿದೆ.

ವಿದೇಶ ವರ್ತಮಾನಗಳು.

ಫ್ರಾನ್ಸಿಗೆ ಸೇರಿದ ಕೆನ್ನಿಸ್ ಎಂಬ ಪ್ರಾಂತ್ಯದಲ್ಲಿ ಆಕಾರವಾದ ಕಾಡ್ಗಿಚ್ಚು ಹುಟ್ಟಿ ಆಗಲೇ ೪೦,೦೦೦ ಎಕರೆ ಜಮೀನು ಸುಟ್ಟು ಹೋಗಿ ಬಿದ್ದಿದೆ. ಸೈನಿಕರು ಬೆಂಕಿಯನ್ನು ಆರಿಸುವುದಕ್ಕೆ ತುಂಬಾ ಸಾಹಸಪಡುತ್ತಿದ್ದಾರೆ.

****

ಆಫ್ರಿಕಕ್ಕೆ ಸೇರಿದ ಕಾಂಗೋ ರಾಜ್ಯದಿಂದ ವಾಪಸು ಬಂದ ಇಬ್ಬರು ಯೂರೋಪ್ಯರಿಗೆ ನಿದ್ರಾರೋಗ ತಗಲಿತ್ತು. ಬ್ರಸಲ್ಸ್ ಪಟ್ಟಣದ ಆಸ್ಪತ್ರೆಯಲ್ಲಿ ಡಾಕ್ಟರುಗಳು ಚಿಕಿತ್ಸೆ ಮಾಡಿ ಆ ರೋಗವನ್ನು ವಾಸಿಮಾಡಿದಾರೆಂದು ತಂತಿ ವರ್ತಮಾನ ಬಂದಿದೆ.

****

ಫ್ರಾನ್ಸಿಗೆ ಸೇರಿದ ಬೆಸೆಕಾರ್ ಎಂಬ ಊರಿನ ಬಳಿ ಕೋಟೆಯಲ್ಲಿ ಮದ್ದಿನ ಮನೆ ಹತ್ತಿಕೊಂಡು ಮಹಾ ಭಯಂಕರವಾದ ಶಬ್ದದೊಡನೆ ಹಾರಿತು. ಒಂಭತ್ತು ಮಂದಿ ಈ ಅನಾಹುತಕ್ಕೆ ಸಿಕ್ಕಿ ಸತ್ತರು. ಕೋಟೆಯ ಬಳಿ ಇದ್ದ ರಸ್ತೆಗಳೆಲ್ಲಾ ಛಿದ್ರ ಛಿದ್ರವಾಗಿ ಒಡೆದುಹೋದದ್ದಲ್ಲದೆ ಸುತ್ತುಮುತ್ತು ಇರುವ ಗ್ರಾಮಗಳಲ್ಲಿ ಜನರ ಮನೆಗಳ ಗಾಜು ಕಿಟಕಿಗಳು ಒಡೆದಿರುತ್ತವೆ.

****

ದಕ್ಷಿಣ ಆಫ್ರಿಕಾ ಯುದ್ಧದ ಖರ್ಚಿಗಾಗಿ ಇಂಗ್ಲಿಷ್ ಗವರ್ನ್‌ಮೆಂಟಿನವರು ಟ್ರಾನ್ಸ್‌ವಾಲಿನಿಂದ ೪೫ ಕೋಟಿ ರೂಪಾಯಿಯನ್ನು ವಸೂಲ್ಮಾಡಬೇಕೆಂದು ಮೊದಲು ಗೊತ್ತುಮಾಡಿದ್ದರು. ಈಗ ಈ ಹಣವನ್ನು ಮಾಫಿ ಬಿಡುವುದಾಗಿಯೂ, ಅಲ್ಲಿನ ಒಳದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡಸುವುದಕ್ಕೆ ಟ್ರಾನ್ಸ್‌ವಾಲಿನವರು ಆರು ಕೋಟಿ ರೂಪಾಯಿ ಸಾಲ ಮಾಡಬಹುದೆಂದು ರಿಯಾಯತಿ ತೋರಿಸುವುದಾಗಿಯೂ ತಿಳಿದು ಬಂದಿದೆ.

****

ವಿಲಾಯಿತಿಗೆ ಸೇರಿದ ಐರ್ಲೆಂಡ್ ದ್ವೀಪದ ಕಾರುಭಾರುಗಳನ್ನೂ ರಾಜ್ಯಭಾರ ವಿಚಾರಗಳನ್ನು ಅಲ್ಲಿನ ಜನರಿಗೇ ವಹಿಸಿಕೊಡಬೇಕೆಂದು ಬಹುಕಾಲದಿಂದ ಚರ್ಚೆ ನಡೆಯುತ್ತಿದೆ. ಆಸ್ಟ್ರೇಲಿಯಾ ದ್ವೀಪದ ಪಾರ್ಲಿಮೆಂಟಿನವರು ಐರ್ಲೆಂಡಿನವರಿಗೆ ಇಂಗ್ಲಿಷ್ ಗವರ್ನ್‌ಮೆಂಟಿನವರು ಸ್ವತಂತ್ರಾಧಿಕಾರವನ್ನು ವಹಿಸಿಕೊಡುವುದೇ ಸಹಜವೆಂದು ತೀರ್ಮಾನಮಾಡಿದರು. ಇದನ್ನು ಆಸ್ಟ್ರೇಲಿಯದ ಪ್ರಜೆಗಳೆಲ್ಲಾ ಕೇಳಿ ತಮ್ಮ ಪಾರ್ಲಿಮೆಂಟಿನವರು ತೀರ್ಮಾನಮಾಡಿರುವುದು ಎಷ್ಟು ಮಾತ್ರವೂ ಒಪ್ಪತಕ್ಕದ್ದಾಗಿಲ್ಲವೆಂತಲೂ ಐರ್ಲೆಂಡಿಗೆ ಸ್ವತಂತ್ರಾಧಿಕಾರವನ್ನೇ ಕೊಡಕೂಡದೆಂತಲೂ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ವಿಲಾಯಿತಿ ರಾಜ್ಯದ ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರಿಗೆ ಒಪ್ಪಿಸುವಂತೆ ತೀರ್ಮಾನ ಮಾಡಿದಾರೆ. ಈ ಅರ್ಜಿಯು ಸುಮಾರು ಒಂದು ಮೈಲಿ ಉದ್ದವಾಗಿದೆ. ವಿಕ್ಟೋರಿಯಾ, ಕ್ವೀನ್ಸ್‌ಲಾಂಡ್, ಟಾಸ್ಮೇನಿಯಾ, ಪಶ್ಚಿಮ ಆಸ್ಟ್ರೇಲಿಯಾ, ದಕ್ಷಿಣ ಆಸ್ಟ್ರೇಲಿಯಾ ಎಂಬೀ ವಿಭಾಗಗಳಲ್ಲಿರುವ ೭೫,೮೩೦ ಪ್ರಜೆಗಳು ಆ ವಿಜ್ಞಾಪನಾ ಪತ್ರಿಕೆಗೆ ರುಜುಮಾಡಿರುತ್ತಾರೆ. ಇದಲ್ಲದೆ ಒಳದೇಶದ ಅಧಿಕಾರಿಗಳಿಗೆ ಸುಮಾರು ೪೦,೦೦೦ ಪ್ರಜೆಗಳು ರುಜುಹಾಕಿದ ಒಂದು ಅರ್ಜಿಯನ್ನು ಒಪ್ಪಿಸಿದರು.

****

ಕನಡಾ ಸ್ವಾಸ್ಥ್ಯಕ್ಕೆ ಸೇರಿದ ಟೊರಾಂಟೊ ಎಂಬ ಮಹಾನಗರದ ವಿದ್ಯಾನಿಲಯದಲ್ಲಿ ವಿಲಾಯಿತಿರಾಜ್ಯದ ವೈದ್ಯವಿದ್ಯಾವಿಶಾರದರು ಒಂದು ಸಮಾಜವನ್ನು ನಡಿಸಿದರು. ಇಂಗ್ಲಿಷ್ ರಾಜ್ಯಭಾರದ ೧,೫೦೦ ಮಂದಿ ಡಾಕ್ಟರುಗಳೂ ಸಂಯುಕ್ತಸಂಸ್ಥಾನಗಳಲ್ಲಿ ಪ್ರಸಿದ್ಧಿಪಡೆದಿರುವ ೩೦೦ ಮಂದಿ ಡಾಕ್ಟರುಗಳೂ ಈ ಸಮಾಜಕ್ಕೆ ಹೋಗಿದ್ದರು. ವೈದ್ಯಶಾಸ್ತ್ರದಲ್ಲಿ ಈಚೆಗೆ ಕಂಡುಹಿಡಿಯಲ್ಪಟ್ಟ ವಿಶೇಷಗಳನ್ನೆಲ್ಲಾ ಕುರಿತು ಕೆಲವು ಡಾಕ್ಟರುಗಳು ಉಪನ್ಯಾಸಗಳನ್ನು ಮಾಡಿದರು. ಮಾಂಸ ಮುಂತಾದ್ದನ್ನು ಬಿಟ್ಟು ಹಲ್ಲು ಕಾಯಿ ಮೊದಲಾದ ಭೂಮ್ಯುತ್ಪನ್ನಗಳನ್ನೇ ತಿಂದು ಜೀವಿಸುವುದನ್ನು ಕುರಿತು ಕೆಲವು ವೈದ್ಯರು ಚರ್ಚೆ ಮಾಡಿದರು. ಮದರಾಸಿನಲ್ಲಿ ಡಾಕ್ಟರಾಗಿದ್ದು ಈಮೆಗೆ ಹೋಗಿರುವ ಡಾಕ್ಟರ್ ಸಿ. ಬಿ ರಾಮರಾಯರು ಈ ಸಮಾಜದಲ್ಲಿ ಈ ವಿಷಯವನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು. ಅಲ್ಲಿನ ಡಾಕ್ಟರುಗಳು ಆ ದೇಶದಲ್ಲಿ ಮಾಂಸಾಹಾರವನ್ನು ಬಿಟ್ಟು ವ್ಯವಸಾಯೋತ್ಪನ್ನಗಳನ್ನು ತಿಂದು ಜೀವಿಸುವುದು ಜನರಿಗೆ ಅಸಾಧ್ಯವಾಗಿದೆ ಎಂದು ಹೇಳಿದರು. ಸಾಕ್ಟರ್ ಟರ್ನರ್ ಎಂಬುವರೂ ಇನ್ನೂ ಕೆಲವರೂ ಇಷ್ಟರಲ್ಲೇ ಮೂರ್ಛೆ ರೋಗಕ್ಕೆ ಕಾರಣ ಪರಿಹಾರಗಳನ್ನು ಕಂಡುಹಿಡಿಯುವುದರಲ್ಲಿದ್ದೇವೆಂದು ತಿಳಿಸಿದರು.

****

ಲಾರ್ಡ್ ಕರ್ಜನವರು ಕಳೆದ ಇಪ್ಪತ್ತು ವರುಷಗಳಿಂದ ಕೂಡಿಹಾಕಿರುವಂಥಾ ಬಹು ಸುಂದರವಾದ ನಾನಾ ಕೈಗಾರಿಕೆಗಳ ಚಿತ್ರ ವಸ್ತುಗಳನ್ನೂ ಪ್ರಾಚೀನ ಪದಾರ್ಥಗಳನ್ನೂ ಈಗ ವಿಲಾಯಿತಿಯಲ್ಲಿರುವ ಬೆತ್ನಲ್ ಗ್ರೀನ್ ಎಂಬ ಪಟ್ಟಣದ ಸರ್ವವಸ್ತು ಪ್ರದರ್ಶನ ಶಾಲೆಯಲ್ಲಿಟ್ಟು, ಪ್ರಜೆಗಳು ನೋಡುವುದಕ್ಕೆ ಅವಕಾಶವನ್ನುಂಟು ಮಾಡಿದಾರೆ. ಲಾರ್ಡ್ ಕರ್ಜನರವರು ಹಿಂದುಸ್ಥಾನ, ಬರ್ಮಾ, ನೇಪಾಳ, ಟಿಬೆಟ್, ಅಫ್ಘಾನಿಸ್ಥಾನ, ಪರ್ಷಿಯಾ, ಚೀಣಾ, ಈ ಮೊದಲಾದ ಪೂರ್ವದಿಗ್ರಾಜ್ಯಗಳಲ್ಲಿ ಸಂಚಾರಮಾಡುವಾಗ್ಗೆ ಆ ಅಪೂರ್ವ ವಸ್ತುಗಳನ್ನು ಸಂಗ್ರಹ ಮಾಡಿಟ್ಟುಕೊಂಡಿದ್ದರು. ಡೆಲ್ಲಿ ದರ್ಬಾರಿನಲ್ಲಿ ನಡೆದ ಕಿರೀಟಧಾರಣೆಯ ಮಹೋತ್ಸವಕ್ಕೆ ಸಂಬಂಧಪಟ್ಟ ಚಿತ್ರವಸ್ತುಗಳು, ಲಾರ್ಡ್ ಕರ್ಜನರವರಿಗೆ ಹಿಂದುಸ್ಥಾನದ ಬೇರೆ ಬೇರೆ ಸಂಘಗಳವರೂ ಮ್ಯುನಿಸಿಪಾಲಿಟಿಯವರೂ ಒಪ್ಪಿಸಿದ ಬೆಳ್ಳಿಯ, ದಂತದ, ಮರದ ಚಿತ್ರಕೆಲಸ ಮಾಡಿದ ಕೈಪೆಟ್ಟಿಗೆಗಳು, ಬಹು ಅಪೂರ್ವವೂ ನಾಜೂಕೂ ಆದ ಜೀಲಗಳು, ಭರಣಿಗಳು, ವಿಶಾಖಪಟ್ಟಣದ ಪ್ರಸಿದ್ಧ ದಂತದ ಕೆಲಸದ ಪೆಟ್ಟಿಗೆಗಳು, ಮೈಸೂರಿನಲ್ಲಿ ಶ್ರೇಷ್ಠವಾದ ಮರದ ಮೇಲೆ ದಂತದ ಕೆಲಸ ಮಾಡಿದ ಚಿತ್ರ ವಸ್ತುಗಳು, ಕೊಯಮುತ್ತೂರು ಮದರಾಸುಗಳಲ್ಲಿ ಭೂಮಿಯೊಳಗಿಂದ ಅಗೆದು ತೆಗೆದ ಪ್ರಾಚೀನಕಾಲದ ಕಂಚಿನ ಪಾತ್ರೆ ಪದಾರ್ಥಗಳು, ಈ ಮೊದಲಾದ ಅನೇಕ ಚಿತ್ರವಸ್ತುಗಳನ್ನೆಲ್ಲಾ ಕಳುಹಿಸಿ, ಈಗ ಮೇಲ್ಕಂಡ ಆಲಯದಲ್ಲಿ ಪ್ರದರ್ಶನ ಮಾಡಿರುತ್ತಾರೆ.

ಯೆಣ್ಣೆ ಕೆಂಪು ಮತ್ತು ಕಾಜಾ ಕಪ್ಪು

ಹಾಸರ್ ಫೂಲ್ ದಾರ.

215 2

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಫೂಲನ್ ದಾರ ಮಾತ್ರ

	ರೂ	ಆ	ಪೈ
೧ ಟೋಪಿ ಆಗುವ ಫೂಲ್ ದಾರದ ಕ್ರಯ	೦	೮	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦
ಹಾಸನದ ಟೋಪಿ ಹೊಲಿಯುವ ಗೋಕ್ಕೆ ಸೂಜಿ ೧ಕ್ಕೆ ೦	೧	೯

ವಿ ಪಿ ಯಿಂದಲೂ ರವಾನಿಸುತ್ತೇವೆ ಈ ದಾರದಲ್ಲಿ ಆದ ಟೋಪಿ ದರ ೧ಕ್ಕೆ ೧೩ ೩ ೦

ವಿಳಾಸ— ಸಿ. ರಘುನಾಥ ಕಾಮತ್,
ಫೂಲ್ ಮರ್ಚಂಟ್,
ಬೋಳಾರ, ಮಂಗಳೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—3

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲ್ವೆ ಸ್ಕೀಂ ಮಾಡುವ ಕಂಡಿಷನ್ ಮೇರೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಆಜ್ಞೆ ಪ್ಯಾಗಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು **ನೋಟೀಸು ಕೊಟ್ಟ** ನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. **ಈ ಲೈನಿನ** ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪನಿಯ **ಷೇರುಗಳನ್ನು** ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವ**ವರಿಗೆ ಅಥವಾ** ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸೈ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಮೂರು ನವೀನ ಪುಸ್ತಕಗಳು.

127-1

ಬಿ ಕೆ. ಮೂರ್ತಿ ಕಂಪನಿಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುವ ಮೋ॥ ಭಾರತಿ ಸಂಪಂಗಿರಾಮೈಯ್ಯನವರಿಂದ ತಯಾರಾದ ಪುಸ್ತಕಗಳು

೧. ತಾವಾಗಿ ಇಂಗ್ಲಿಷ್ ಕಲಿಯುವಿಕೆ:—ಸ್ವಲ್ಪ ಪ್ರತಿಗಳೇ! ಬೇಗ ಬರೆಯಿರಿ! ಬೇಗ ಬರೆಯಿರಿ

ಇದರಲ್ಲಿ ಎ ಬಿ. ಸಿ ಡಿ ಬಾಗಾಯಿತು ಜಡ್ ವರೆಗೆ ಉಳ್ಳ ಇಂಗ್ಲಿಷ್ ಬರವಣಿಗೆ ಮತ್ತು ಅಚ್ಚು ಅಕ್ಷರಗಳನ್ನು ಗುರುತು ಹಿಡಿಯುವದು, ಅಕ್ಷರಗಳನ್ನು ಒಂದಕ್ಕೊಂದು ಕೂಡಿಸುವದು, ಅವುಗಳ ಉಚ್ಚಾರಣೆ, ಅರ್ಥ, ಬೋಧನ, ಕಲಾಶಾಲೆ ಸಂಸಾರ, ಉಡಿಗೆ ತೊಡಿಗೆ, ಕೈಗಾರಿಕೆ, ಇವುಗಳಲ್ಲಿ ಮಾತನಾಡುವ ಈಗ ವಾಡಿಕೆಯೊಳಗಿರುವ ಡಿಕ್ಷನೇರಿ, ವಕಾಬ್ಯುಲರಿಗಳಲ್ಲಿ ಇಲ್ಲದೆ ಇರುವ ಅಪೂರ್ವವಾದ ಅನೇಕ ಶಬ್ದಗಳು, ಕೋಷ್ಟಕಗಳು, ಗಾದೆಗಳು, ಕ್ಷೇಮಸಮಾಚಾರ, ಲೇವಾದೇವಿ, ಸರ್ಕಾರಿ, ಸಾಹುಕಾರಿ, ರೈತಾಬಿ ಜನಗಳು, ವಿಶೇಷವಾಗಿ ಬರೆಯುವ ಕಾಗದಗಳ ನಮೂನೆಗಳು, ಕರಾರುಗಳು, ತಂತಿವರ್ತಮಾನಗಳ ನಕಲುಗಳು, ಇತ್ಯಾದಿ ಅನೇಕ ಭಾಗಗಳನ್ನು ಸೇರಿಸಿ ಸ್ವಲ್ಪಮಟ್ಟಿಗೆ ಕನ್ನಡಭಾಷೆ ತಿಳಿದಿರುವವರು ಕೂಡ ಇತರರ ಸಹಾಯವಿಲ್ಲದೇಲೂ, ದ್ರವ್ಯವ್ಯಯ, ದೇಹಪ್ರಯಾಸವಿಲ್ಲದೇಲೂ, ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ತಿಳಿದು, ಓದುವದಕ್ಕೂ, ಬರೆಯುವದಕ್ಕೂ, ಮಾತಾಡುವದಕ್ಕೂ ಕಲಿಯುವ ಹಾಗೆ ಪ್ರತಿ ಒಂದು ಶಬ್ದವನ್ನೂ ಮೊದಲು ಇಂಗ್ಲಿಷಿನಲ್ಲಿ ಬರೆದು ಕನ್ನಡ ಅಕ್ಷರದಿಂದ ಅದನ್ನು ಉಚ್ಚರಿಸುವ ರೀತಿಯನ್ನು ಅದರ ಕೆಳಗೆ ಕನ್ನಡಭಾಷೆಯ ಅರ್ಥವನ್ನೂ ವಿವರಿಸಿರುತ್ತೆ ಇಂಗ್ಲಿಷ್ ಭಾಷೆ ಕಲಿತು ಬಗೆಬಗೆ ಲಾಭ ಹೊಂದಬೇಕೆಂಬ ಕೋರಿಕೆಯುಳ್ಳ ವ್ಯಾಪಾರಿಜನಗಳು, ವ್ಯವಸಾಯಿಜನರು ಜಮೀನ್ದಾರರು, ಲೇಕದಾರರು ಇಂಜನೀಯರ್ ಇಲಾಖೆಯಲ್ಲಿ ಕೆಲಸಮಾಡುವ ಗುತ್ತಿಗೆ ಅಥವಾ ಕಂಟ್ರಾಕ್ಟುದಾರರು, ಪ್ಲಾಂಟರುಗಳು, ನೌಕರರ, ಲಾಯರ್ ಗುಮಾಸ್ತೆಯರು ಮೊದಲಾದ ಎಲ್ಲಾ ಜನರಿಗೂ ಅತ್ಯುಪಯೋಗವಾದದ್ದು ಕ್ರಯ ವಿ ಪಿ ಖರ್ಚು ಸಹಿತ ರೂ ೧—೩—೦

೨. ಪ್ರಶ್ನೋತ್ತರ ಲೇಖ್ಯಬೋಧಿನಿ —ಕ್ರಯ ವಿ ಪಿ ಸಹಿತ ರೂ ೧—೩—೦ ಕ್ಷೆ ಮುಚ್ಚಳಿಕೆ ಕಾಗದಗಳು, ಅರ್ಜಿಗಳು, ಸಿವಿಲ್, ಕ್ರಿಮಿನಲ್ ವ್ಯವಹಾರಗಳು, ಎವಿಡೆನ್ಸ್ ವಿದಾಯಿತ್ಯಾಸ, ಫಾರೆಸ್ಟು, ಇಂಜನಿಯರ್ ಮುನಿಸಿಪಲ್, ಪೊಲೀಸ್, ಸ್ಟಾಂಪ್, ಲಾ, ಮಾಜಿಸ್ಟ್ರೇಟ್ ಲಾ, ಕಂಟೋನ್ಮೆಂಟ್ ವಿಷಯ, ಎಕ್ಸೈಸ್, ವೈದ್ಯ, ಕೋರ್ಟ್ ಫೀಜು, ಪೊಲೀಸು ಸ್ಟೇಷನು, ಡೊಡ್ಡಿ, ಅರಣ್ಯ ಮೊದಲಾದ ಎಲ್ಲಾ ವಿಧವಾದ [illegible]

[illegible] ಕೆ ಮೂರ್ತಿ ಕಂಪನಿ
ಲಕ್ಕೂರು ಪೋಸ್ಟು ಕೋಲಾರ್ ಡಿಸ್ಟ್ರಿಕ್ಟು

ಆಂಗ್ಲೇಯ ವೈದ್ಯಶಾಸ್ತ್ರ.

128 3

ಇದರ ಕ್ರಯ ೧—೮—೦ ಇಂದ ೧—೦—೦ಗೆ ಇಳಿಸಲ್ಪಟ್ಟಿದೆ ಈ ಪುಸ್ತಕವು ಇಂಗ್ಲಿಷ್ ವೈದ್ಯಶಾಸ್ತ್ರವನ್ನ ನುಸರಿಸಿ ಬರೆಯಲ್ಪಟ್ಟಿದೆ ವಿಳಾಸ—ಎಂ ಗುರುರಾವ್, ಫಸ್ಟ್ ಕ್ಲಾಸ್ ಹಾಸ್ಪಟಲ್ ಅಸಿಸ್ಟೆಂಟು, ತರೀಕೆರೆ, ಕಡೂರು ಡಿಸ್ಟ್ರಿಕ್ಟು

ಇದೊಂದು ಹೊಸ ಏರ್ಪಾಡು.

128 1

ದಾವಣಗೇರಿ ಇದು ಮೈಸೂರ ದೇಶದ ಸೈಕಿ ವ್ಯಾಪಾರದಲ್ಲಿ ಮುಖ್ಯಸ್ಥಳವಿದೆ ಇದುವರೆಗೆ ಊರಿಗೆ ಬರತಕ್ಕ ಸಂಗೀತ ನಾಟಕದವರಿಗೆ ಥಿಯೇಟರಿನ ಅಡಚಣೆ ಇತ್ತು

ಈ ಅನಾನುಕೂಲ ದೂರಮಾಡಿ, ಬರತಕ್ಕ ನಾಟ್ಯಕರ ಅನುಕೂಲಕ್ಕೋಸ್ಕರ ಇದೇ ದಾವಣಗೇರಿಯ ನ್ಯಾಯಪೇಟೆಯಲ್ಲಿ ಹೊಸದಾಗಿ ಥಿಯೇಟರ ನಿರ್ಮಾಣ ಮಾಡಿಸಲ್ಪಟ್ಟಿದೆ ಅಪೇಕ್ಷೆಯಿದ್ದವರು ಈ ಕೆಳಗಿನ ವಿಳಾಸದಾರನಿಗೆ ಬರಕೊಂಡಲ್ಲಿ ತಿಳಿಸಲ್ಪಡುವದು

ದಾವಣಗೆರೆ ನಿಲಗುಂದದ ಗುರಪ್ಪ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಕೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTTS EMULSION. 57-29

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಕೊಂದಿ ಸುಖ ಚೆನ್ನಾಗಿ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನಿನ ನಿಶ್ಯಾನೆಯಿರುವ ಔಷಧನ್ನೇ ಕೊಂಡುಕೊಳ್ಳಿ

ಕ್ರಯಕ್ಕೆ ಬಿಡಿ ಬಿಡಿಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವವು

126 4

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ದೇವಾಗ್ರದ ಸ್ಥಿತಿಯು ಪ್ರಕಾರ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರಣೆ	ಸರ್ವೆ ನಂಬರು	ಖೇಜವರಿ		ಆಕಾರ
ಕಾವೇರಿನಾಲೆ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು	೩೦	೪	,,	೨೭
	೧೦೩	೬	೨೨	೪೭
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೬	೩೭	೪೮
ಜುಮಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರ ಕೆಳಗೆ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನು ಮೇಲೆ ಕಂಡ ಷರಾಯಿಗೆ ಒಳಗಾಗಿ ಆಲೋಚಿಸಲಾಗುತ್ತದೆ

ಜಮೀನಿನ ವಿವರಣೆ	ಸರ್ವೆ ನಂಬರು	ಖೇಜವರಿ		ಆಕಾರ
ಕಾವೇರಿ ನಾಲೆ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು	೧೦೦	೩	೧೫	೨೪
	೧೦೧	೩	೯	೨೩
	೧೦೨	೩	೯	೨೩
	೩೦	೫	೩೭	೪೨
ಜುಮಲಾ	೪	೧೫	೩೦	೧೧೩
ಮೇಲೆ ಕಂಡ ಜಮೀನು	೨	೩	೪	೨೮
ಗಳಿಗೆ ಹತ್ತಿರವ	೨೨	೬	೨೧	೪೨
ಧೃವಪುರ ಒಂಗಾಲಿ	೩೩	೪	೧೬	೬೦
	೪೯	೪	೩೦	೩೯
ಜುಮಲಾ	೨	೧೬	೩೯	೧೬೯
ಒಟ್ಟು ಜುಮಲಾ	೧೩	೬೧	೯	೪೬೨

ಸವಾಲುಗಳು [illegible] ಅವು ಪಪ್ಪನ ಅಗ್ರಹಾರದ [illegible] ಲಿಮಿಟೆಡ್ ಮ್ಯಾನೇಜರ್ ಎಸ್ ಪಿ. ಶ್ರೀನಿವಾಸಯ್ಯಂಗಾರ್ರಿಗೆ ತಲುಪಬೇಕು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—9—1906 ರಿಂದ 14—9—1906 ರ ವರಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ರೋಗವಿದ್ದ ಈ ವಾರದ ಸಂಖ್ಯೆ	
ಬೆಂಗಳೂರು ಪಟ್ಟಣ	೩೬	೧೬	೭	೬
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	17	13	17	10
ಮೈಸೂರು ,,	5	4	0	1
ಕೋಲಾರ್ ,,	0	0	1	1
ಕೋಲಾರ್ ಚಿನ್ನದ ಗಣಿಗಳು		1	2	0
ತುಮಕೂರು ಡಿಸ್ಟ್ರಿಕ್ಟ್	2	1	0	0
ಹಾಸನ ,,	35	19	0	0
ಚಿತ್ರದುರ್ಗ ,,	0	0	0	0
ಕಡೂರ್ ,,	88	69	4	1
ಶಿವಮೊಗ್ಗ ,,	0	0	22	16
ಜುಮ್ಲಾ	170	121	53	31

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಆಶ್ವೀಜ ಬಹುಳ ಬಿದಿಗೆ ಗುರುವಾರದಿಂದ ಆಶ್ವೀಜ ಬಹುಳ ಅಷ್ಟಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಅಕ್ಟೋಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಾ ಅಶ್ವೀಜ
4	ಗುರು	ಬಿದಿಗೆ	31-38	ಕೃ	10 13	19
5	ಶುಕ್ರ $	ತದಿಗೆ	35 10	ಭ	45 25	20
6	ಶನಿ T	ಚೌತಿ	39 38	ಕೃ	51 20	21
7	ರವಿ	ಪಂಚಮಿ	44 30	ರೋ	57 43	22
8	ಚಂದ್ರ	ಷಷ್ಠಿ	49 53	ಮೃ	60 0	23
9	ಕುಜ	ಸಪ್ತಮಿ	54 58	ಮೃ	4 10	24
10	ಬುಧ *	ಅಷ್ಟಮಿ	58 56	ಆರ್ದ್ರಾ	10-22	25

$ ಶ್ರೀ ಚಾಮುಂಡೇಶ್ವರೀ ರಥೋತ್ಸವ
T ಸಂಕಷ್ಟಚತುರ್ಥಿ
* ಬುಧಾಷ್ಟಮಿ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ ೧೪ ೦-೦	೧೩-೮
ಕೆಂಪುಮೋತಿ ಅಕ್ಕಿ ಅವಲ್	೧೩-೮-೦	೧೩-೬
,, ದುಯ್ಯಂ	೧೩-೮-೦	೧೨-೮
ಜವಾರಿ ಅಕ್ಕಿ	೧೩-೪-೦	೧೩ ೬
ಸಣ್ಣಕ್ಕಿ ಅವಲ್	೧೫-೮-೦	೧೫ ೮
,, ದುಯ್ಯಂ	೧೪-೦-೦	೧೫-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨ ೬-೦	೧೨ ೬
,, ದುಯ್ಯಂ	೧೧ ೮-೦	೧೧ ೬
ಹೈ ರಾಗಿ ಪಲ್ಲಾ ೧ಕ್ಕೆ	೩-೪ ೦	೩ ೪
ಕಾದ್ರಾಗಿ	೩-೪-೦	೩-೧೨
ಜೋಳ	೩-೮-೦	೮ ೦
ಹಲಸಂದೆ ಪಲ್ಲಾ ೧ಕ್ಕೆ	೧೨ ೦-೦	೧೦-೧೨
ಬಿಳೇ ಅವರೆ	೧೧ ೦-೦	೧೧ ೪
ಹೆಸರು	೧೩-೦-೦	೧೩ ೦
ಉದ್ದು	೧೨-೪-೦	೧೨ ೦
ಕಡಲೆ	೧೨-೦-೦	೧೧ ೦
ಎಳ್ಳು ಸೆ ೧೨೩ ಕ್ಕೆ	೨೦-೮-೦	೨೨ ೮
ಹುರುಳಿ	೮-೮-೦	೧೦-೨
ಹರಳು ೧೨೩ ಸೇರಿಗೆ	೧೯-೦-೦	೧೩-೪
ಸೀಗೇಕಾಯಿ ಮಣ ೧ಕ್ಕೆ	೨ ೨ ೦	೨-೮
ಮೆಣಸಿನಕಾಯಿ	೪-೧-೦	೩-೧೪
,, ದುಯ್ಯಂ	೩-೪-೦	೩-೮
ಬೆಲ್ಲ ದೊಡ್ಡ ಅಚ್ಚು	೪-೪-೦	ಮ ೧-೧೪
ಬಳ್ಳುಳ್ಳಿ ಮಣ ೧ಕ್ಕೆ	೬-೮-೦	೫-೬
ಅರಿಶಿನ ,,	೬-೦ ೦	೫ ೨
ಕೊತ್ತುಂಬರಿ ಪಲ್ಲಾ ೧ಕ್ಕೆ ..	೧೧-೦-೦	೧೬-೦
ಉಪ್ಪು ,,	೩-೦-೦	೩-೧೩
ಹುಣಿಸೇ ಹಣ್ಣು	೦ ೧೪ ೦	೦-೧೨
,, ಹಳೇದು ..	೦-೮ ೦	೦ ೧೧
ತುಪ್ಪ ಮಣ ೧ಕ್ಕೆ	೧೩-೮-೦	೧೫ ೮
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪ ೦	೪ ೦
ತೆಂಗಿನಕಾಯಿ ೧೦೦ಕ್ಕೆ	೩-೮ ೦	೪-೨
ಅಳಲೇಕಾಯಿ ಮಣ ೧ಕ್ಕೆ	೧-೦-೦	೦ ೧೩
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	೦ ೧೩
ಚಿನ (ಪೌನ್), ಕೆಂಪು	೧೫ ೪ ೦	೧೫ ೩
,, ,, ಪಸಿಮೆ	೧೫-೧೦ ೦	೧೫ ೧೨
,, ,, ಗಟ್ಟಿ ತೊಲ ೧ಕ್ಕೆ	೨೩-೧೨-೦	೨೪-೪
ಬೆಳ್ಳಿ ಗಟ್ಟಿ ತೊಲ ೧೦ ಕ್ಕೆ	೮೫-೦-೦	೮೪ ೦

Printed and published by the Rev L. [illegible] THOMSON, M A the Proprietor and Manager Wesleyan Mission Press, Mysore 4/10/1906

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದು ವ್ವು ——— ಕ್ರ ಯ ೧ ದು ಡ್ದು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಅಕ್ಟೋಬರ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೧೯

ಇಂಡಿಯದ ದೊಡ್ಡ ನೋವುಹರ.

86-20

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, [illegible] ತಲೆಭಾರ ಕೆಮ್ಮುಗಳು, ಎದೆನೋವು, ಶೀತ, [illegible] ಕೀಲುಗಳನ್ನು ಎಸೆಗಳ ನೋವು, ಅಸ್ತ್ಮಾ. ಈ ಪ್ರಕೃತಿ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, [illegible] ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ನಿವಾರಣೆ ಮಾಡುವದು. [illegible]

ಕ್ರಯ: [illegible]

[illegible] — ಆರ್, ಸಿಮೆಂಟ್ಸ್ [illegible], ವೇಪೇರಿ, ಮದರಾಸ್

ಹೋಮಿಯೋಪಿಯಾ

ತಗಲುತ್ತಲೇ ನೋವು [illegible] ಯಾಗುತ್ತೆ.

☛ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, [illegible] ಶಾಲೆ, ವಿದ್ಯಾಶಾಲೆ, ಜೇಲ್ಖಾನೆ, ಕಛೇರಿ, ಮುಂತಾದ ಸ್ಥಳಗಳಲ್ಲಿ ಇಟ್ಟಿರತಕ್ಕ [illegible]. ಇದಕ್ಕೆ ಸಮಾನವಾದ ಔಷಧ ಮತ್ತೊಂದಿಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

☛ ತೈಲವು ತಕ್ಷಣದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕುವ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, [illegible] ಮುಂತಾದವರು ಅದರ ಗುಣವನ್ನು ಕುರಿತು ಸರ್ಟಿಫಿಕೇಟುಗಳನ್ನು ಕೊಟ್ಟಿರುತ್ತಾರೆ. ನೀವು ಕಂಡರೆ ಇದನ್ನು ಹಚ್ಚಿದ ಕೂಡಲೇ [illegible].

☛ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಸಟ ಹೊರಳುವದು, [illegible] ಕೀಲುವಾಯು, ಗುಳ್ಳೆಗಳು, ಹಲ್ಲುನೋವು, [illegible] ಗಾಯಗಳು, ಗಡ್ಡೆಗಳು, ಬಾವುಗಳು, [illegible] ಚೇಳು ಕಚ್ಚಿದರೂ [illegible], ಬೆಂಕಿಯಲ್ಲಿ ಸುಟ್ಟ [illegible], ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ಗುಣಪಡಿಸುತ್ತದೆ. [illegible]

ಕ್ರಯ—[illegible] ೧ ರೂ., ದೊಡ್ಡದಕ್ಕೆ [illegible]. [illegible] ತರಿಸಿಕೊಂಡರೆ ಟಪಾಲ್ ಖರ್ಚು [illegible] ಆಣೆ [illegible] ತರಿಸಿಕೊಳ್ಳುವವರಿಗೆ ಟಪಾಲ್ [illegible].

❋❋❋❋❋❋❋❋❋

ಹೋಮಿಯೋಪತಿಯಾ ಪಾಂಚಭೌತಿಕೇಶ್ವರ.

☛ ತೈಲವು [illegible] ನೋವುಗಳಿಗೆ ಉಪಯೋಗಿಸತಕ್ಕದ್ದು. [illegible] ಇದನ್ನು ಹಚ್ಚತಕ್ಕದು. ಇದರಲ್ಲಿ [illegible] ಗುಣಗಳು ಬಹು [illegible]ವಾಗಿ ಇರುತ್ತವೆ. ಅದಕ್ಕೆಂತಲೂ [illegible] ಗುಣಗಳು [illegible] ಬಾಗಿಲಿರುತ್ತವೆ. ಇದನ್ನು [illegible] ಬಹು ಬೇಗನೆ [illegible]. ಹಚ್ಚುಗಳಲ್ಲಿ [illegible] ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. [illegible] ತರಿಸಿಕೊಂಡರೆ ಟಪಾಲ್ ಖರ್ಚು ಮಾಫ ಎಲ್ಲಾ [illegible] ದೊರೆಯುವದು.

☛ ಔಷಧಗಳ ವಿವರಪಟ್ಟಿಯೂ, ಸರ್ಟಿಫಿಕೇಟುಗಳೂ ಉಳ್ಳ [illegible]ಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿಯಾ ಕಂಪೆನಿ, [illegible] ಮದರಾಸ್.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಪುಡಿ ಮಾಡಿ ಇರುವದು ಅಥವಾ ಆಗತಾನೆ ಹುರಿದದ್ದು.

ತಯಾರಾದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

35-35

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

101-11

ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಮುಂತಾದ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೆ ಬೀಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; [illegible] ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

❋❋❋❋❋❋❋❋❋

ಡಿ ಮು ೦ ಕ ಪ್ರೊ ಸ ನ.



ಈ ಔಷಧವು [illegible], ಶೀತಭೇದಿ, ಸಾಧಾರಣ ಹೊಟ್ಟೆ [illegible], ವಾಂತಿಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. [illegible] ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರೆಕುವದು.

[illegible] ಅಸಿಸ್ಟೆಂಟ್ ಸರ್ಜನ ಗಣಪತಿಯವರು—ಹೆಪ್ಪಿನ [illegible] ಕರ್ಪೂರವನ್ನು ನಾನೂ ನನ್ನ ಜಾಹೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಹೊಟ್ಟೆ [illegible] ರೋಗಕ್ಕೆ ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದರೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ಹೆಪ್ಪಿನವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಪೆಕೆಂಡ್ ಬೀಚ್ ರೋಡ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು.

104-11

ಖಾಲಿ, ಯಾ ಸುಂದರ ಚಿತ್ರಗಳುಳ್ಳದ್ದು ನಮೂನೆ ೧೬ ಕಾರ್ಡುಗಳಿಗೆ ೦।। (ಸ್ಟ್ಯಾಂಪುಗಳು ಕಳುಹಿಸಿ), ೧೦೦ ಕಾರ್ಡುಗಳಿಗೆ ೩ ಆಣೆ. ಸ್ವದೇಶಿ ಪೆಂಟಾಲ್ ಶೀಸೆಗೆ ೩ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರ್ಸೈಜ್ ಪುಸ್ತಕಗಳು, ಸ್ವದೇಶಿ ಇಂಗ್ಲಿಷ್ [illegible] ಬೋರ್ಡುಗಳು, ಇವುಗಳಿಗೆ ಟಪಾಲುಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಷನ್, ಇಂಗ್ಲಿಷಿನಲ್ಲಿ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ಅರ್ಧ ಆಣೆ ಸ್ಟ್ಯಾಂಪು ಇಟ್ಟು ಬರೆದುಕೊಳ್ಳತಕ್ಕದ್ದು. Bhatt & Co., Poona city.

ಮುಂಬಯಿ ವ್ಯಾಪಾರದ ಪಾಠಲಿಪಿ ಸೂಚನವರು.

35-20

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ನಾಕ ಅಳತೆ ಮತ್ತು ಮಾಲಿನ ವರ್ಣನೆ ಸಹಾ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ—ಕ್ರಯ [illegible] ವಿ. ಪಿ. [illegible] ಕಳುಹಿಸುವೆವು. ಟಪಾಲು ಖರ್ಚು [illegible] ಯೋಗ್ಯ [illegible] ದೊರೆಯುವದು. [illegible] ಕನ್ನಡ ಪುಸ್ತಕ—ನಾಲ್ಕು ಆಣೆ. [illegible] ಮಾರ್ಕೆಟ್, ಮುಂಬಯಿ.

ಶಾಲಾ ಪುಸ್ತಕಗಳು ಹೊಸದಾಗಿ ಬಂದಿರುತ್ತವೆ. ಜಾಗ್ರತೆ ನೋಡಿ.

120-1

ಮ್ಯಾಕ್ಮಿಲನ್‌ರ ಮೊದಲನೆಯ ಪುಸ್ತಕ (ಇ [illegible])		೦—೨—೦
,, ಎರಡನೆಯ ಪುಸ್ತಕ	,,	೦—೨—೬
,, ಮೂರನೆಯ ಪುಸ್ತಕ	,,	೦—೩—೦
,, ನಾಲ್ಕನೆಯ ಪುಸ್ತಕ	,,	೦—೪—೦
,, ಐದನೆಯ ಪುಸ್ತಕ	,,	೦—೫—೦
,, ಆರನೆಯ ಪುಸ್ತಕ	,,	೦—೬—೦
,, ಏಳನೆಯ ಪುಸ್ತಕ	,,	೦—೫—೦
ಹಿಂದೂ ದೇಶದ ಚರಿತ್ರೆ, ಭಾಗ ೧	,,	೦—೬—೦
ಹಿಂದೂ ದೇಶದ ಚರಿತ್ರೆ, ಭಾಗ ೨	,,	೦—೬—೦
ಹಿಂದೂ ದೇಶದ ಚರಿತ್ರೆ, [illegible]	,,	೦—೧೨—೦
ಹಿಂದೂ ದೇಶದ ಚರಿತ್ರೆಯ ಸುಲಭಪಾಠಗಳು	,,	೦—೩—೦
ಸಂಗಪ್ಪ ಮಲ್ಲಪ್ಪನವರ ಟ್ರಾನ್ಸ್ಲೇಷನ್ ೨ನೇ ಭಾಗ		೦—೯—೦
ಸಂಗಪ್ಪ ಮಲ್ಲಪ್ಪನವರ ಟ್ರಾನ್ಸ್ಲೇಷನ್ ೩ನೇ ಭಾಗ		೦—೧೧—೦
ಬಾಲಶಿಕ್ಷೆ ೧ನೇ ಭಾಗ		೦—೧—೦
ಬಾಲಶಿಕ್ಷೆ ೨ನೇ ಭಾಗ		೦—೨—೦
ಕ್ಷೇತ್ರಗಣಿತಸಂಗ್ರಹ		೦—೪—೦
[illegible] ಮೊದಲನೆ ಪುಸ್ತಕ		೦—೨—೬
ಬಾಲಕಿಯರ ಎರಡನೆ ಪುಸ್ತಕ		೦—೪—೦
ಭೂಗೋಳ ಶಾಸ್ತ್ರದ ಮೊದಲನೆಯ ಪುಸ್ತಕ		೦—೧—೦
,, ,, ,, ,, (ನಕಾಶೆಸಹಿತ)		೦—೨—೦
ಭೂಗೋಳ ಶಾಸ್ತ್ರದ ಮೊದಲನೆಯ ಮತ್ತು ಎರಡನೆಯ ಪುಸ್ತಕಗಳು (ಭೂಪಟಗಳಿಂದ ಕೂಡಿದ್ದು)		೦—೪—೦
ಭೂಗೋಳ ಸಂಗ್ರಹ		೦—೪—೦

	Rs.	A.	P.
New English I Reader	0	4	0
New English II Reader	0	6	0
New English III Reader	0	8	0
New English IV Reader	0	10	0
New English V Reader	0	12	0
New English VI Reader	0	12	0
Primer of English Grammar	0	3	0
New Manual of English Grammar	0	8	0
Outlines of Geography	0	10	0
Manual of Geography	0	14	0
C. L. S. Primer I	0	2	6
C. L. S. Primer II	0	2	6
Mangalore Primer	0	2	6
Arithmetical Primer	0	2	6

ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು

ವಿಳಾಸ—ಮ್ಯಾನೇಜರ್,

ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಂಗ್ಲೀಷು ವೈದ್ಯಶಾಸ್ತ್ರ.

123.4

ಇದರ ಕ್ರಯ ೧—೮—೦ ಇಂದ ೧—೦—೦ಗೆ ಇಳಿಸಲ್ಪಟ್ಟಿದೆ. ಈ ಪುಸ್ತಕವು ಇಂಗ್ಲಿಷ್ ವೈದ್ಯಶಾಸ್ತ್ರವನ್ನನುಸರಿಸಿ ಬರೆಯಲ್ಪಟ್ಟಿದೆ. ವಿಳಾಸ.—ಎಂ. ಗುರುರಾವ್, ಫಸ್ಟ್ ಕ್ಲಾಸ್ ಹಾಸ್ಪಟಲ್ ಅಸಿಸ್ಟೆಂಟು; ತರೀಕೆರೆ, ಕಡೂರು ಡಿಸ್ಟ್ರಿಕ್ಟ್.

ವೃತ್ತಾಂತ ಪತ್ರಿಕೆ.

:o:

ಸ್ ೧೯೦೬ ನೆ. ಇಸವಿ ಅಕ್ಟೋಬರ್ ತಾ ೧೧ ನೇ ಗುರುವಾರ.

ಪ್ರಜಾಪ್ರತಿನಿಧಿ ಸಭೆಯ ತಿದ್ದುಪಾಟು.

ಈ ವರುಷ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹು ದೀರ್ಘಕಾಲ ಅಂದರೆ ಎಂಟು ದಿನಗಳ ತನಕ ವಿಷಯಗಳು ಚರ್ಚೆಯಾಗಿ ಮೊನ್ನೆ ಮಂಗಳವಾರ ಮಧ್ಯಾಹ್ನಕ್ಕೆ ಪೂರೈಸಲ್ಪಟ್ಟವು. ಕೆಲವು ದಿನ ದೀಪವಿಟ್ಟೂ ಚರ್ಚೆ ನಡಿಸಿರುತ್ತಾರೆ. ಈ ಚರ್ಚೆಗಳಲ್ಲಿ ಒಂದು ವಿಷಯವನ್ನು ಸಂದೇಹವಿಲ್ಲದೆ ಹೇಳಬಹುದು. ಪ್ರತಿನಿಧಿಗಳು ಹೇಳಿಕೊಂಡ ಸಂಗತಿಗಳನ್ನು ದಿವಾನರವರು ಬಹು ನಿದಾನವಾಗಿಯೂ ಗಂಭೀರವಾಗಿಯೂ ಲಾಲಿಸಿ ಕೇಳಿ, ತಮ್ಮ ಸಹಾಯಾಧಿಕಾರಿಗಳ ಕೂಡೆ ಅಲ್ಲಲ್ಲೇ ಚರ್ಚಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಬಹು ವಿಶದವಾದ ಪ್ರತ್ಯುತ್ತರಗಳನ್ನು ದಯಪಾಲಿಸಿರುತ್ತಾರೆ. ಇದರಿಂದ ಈ ಸಂಸ್ಥಾನದ ಆಳ್ವಿಕೆಯ ಕ್ರಮಗಳಲ್ಲಿ ಲೋಪದೋಷಗಳನ್ನು ತಿದ್ದಿ ಸಂಸ್ಥಾನವನ್ನು ಅಭಿವೃದ್ಧಿಪಡಿಸಬೇಕೆಂಬ ಮಮಕಾರವೂ ಉತ್ಸಾಹಪೂರ್ವಕವಾದ ಅಭಿಲಾಷೆಯೂ ನಮ್ಮ ದಿವಾನರವರಲ್ಲಿ ಉಂಟೆಂದು ಕಂಡುಬರುತ್ತದೆ

ಆದಾಗ್ಯೂ ಈಗ ಈ ಸಭೆಯಲ್ಲಿ ನಡೆಯುವ ಕಾರ್ಯಗಳೂ ಚರ್ಚೆಗಳೂ ತೃಪ್ತಿಕರವಾಗಿಯೂ ಗಾಂಭೀರ್ಯವಾಗಿಯೂ ನಡೆಯುವುದಿಲ್ಲವೆಂದು ಸಂಶಯವಿಲ್ಲದೆ ಹೇಳಬಹುದು ಆದರೆ ಈ ಸಲ ಸಭೆಯನ್ನು ಬರಖಾಸ್ತು ಮಾಡುವಾಗ್ಗೆ ದಿವಾನರವರು ಕೆಲವು ಬದಲಾವಣೆಗಳನ್ನು ಮಾಡುವುದಾಗಿ ತಿಳಿಸಿದರು. ಈ ಬದಲಾವಣೆಗಳು ಬಹು ವಿಶೇಷವಾದವುಗಳು. ಮತ್ತು ಅವುಗಳಿಂದ ತುಂಬಾ ಪ್ರಯೋಜನವಾದೀತೆಂದು ನಿರೀಕ್ಷಿಸುತ್ತೇವೆ. ಈ ಸಭೆಯ ವಿಷಯದಲ್ಲಿ ನಮಗೆ ಕಂಡು ಬರುತ್ತಿದ್ದ ಲೋಪಗಳ್ಯಾವವೆಂದರೆ— (೧) ಪ್ರತಿನಿಧಿಗಳನ್ನು ಚುನಾಯಿಸಿ ಗೊತ್ತುಮಾಡುವ ಕ್ರಮವು ತೃಪ್ತಿಕರವಾಗಿಲ್ಲ. ತಾಲೂಕುಗಳಲ್ಲಿ ಅಮಲ್ದಾರ್ರು ಮೆಂಬರುಗಳನ್ನು ಚುನಾಯಿಸತಕ್ಕವರು ಇಂಥಾವರೆಂದಾಗಲಿ, ಮೆಂಬರಾಗಲು ಅರ್ಹರಾದವರು ಇಂಥಾವರೆಂದಾಗಲಿ ಕ್ರಮವಾಗಿ ಮೊದಲೇ ಪ್ರಕಟಿಸಿ ಪ್ರಜೆಗಳಿಗೆಲ್ಲಾ ತಿಳಿಯಪಡಿಸುತ್ತಿರಲಿಲ್ಲವೆಂಬದಾಗಿ ಶಂಕೆಯುಂಟಾಗಿರುವುದು. ಚುನಾವಣೆಯ ಮೀಟಿಂಗಿಗೆ ನೋಟಿಸ್ ಕೊಟ್ಟರೂ ಅದಕ್ಕೆ ಸರಿಯಾದ ಅವಧಿಯನ್ನು ಕೊಡುತ್ತಿರಲಿಲ್ಲ. ಸುಮಾರಾಗಿ ೨೦—೩೦ ಜನರು ಒಂದು ಕಡೆ ಸೇರುವುದೂ ಅಮಲ್ದಾರರು ಗುರುತಿಟ್ಟವರನ್ನು ಮೆಂಬರುಗಳಾಗಿ ಚುನಾಯಿಸುವುದೂ ಪದ್ಧತಿಯಾಗಿದ್ದಂತೆ ಕಾಣುತ್ತದೆ. ಇಂಥಾ ಚುನಾವಣೆಯಲ್ಲಿ ಮೆಂಬರೆನಿಸಿಕೊಂಡವರನ್ನು ಜಮೀನ್ದಾರರ ಕಡೆಯ ಪ್ರತಿನಿಧಿಗಳೆಂದು ಹೇಳಬಹುದೇ? ಇವರಿಗೇನಾದರೂ ಸ್ವಾತಂತ್ರ್ಯವಿದ್ದೀತೇ? ಎಷ್ಟು ಮಾತ್ರವೂ ಇಲ್ಲ. ಸ್ವತಂತ್ರವಾದ ರೈತ ಪ್ರತಿನಿಧಿಗಳನ್ನು ಚುನಾಯಿಸುವ ಕ್ರಮವು ಹೀಗೆಂದಿಗೂ ಅಲ್ಲ. ದಿವಾನರವರು ಈ ಮೊದಲನೆಯ ಅಕ್ರಮವನ್ನು ತಿದ್ದುವುದಕ್ಕಾಗಿ, ಚುನಾಯಿಸುವುದಕ್ಕೆ ಅರ್ಹರಾದವರ ಹೆಸರುಗಳನ್ನೆಲ್ಲಾ ಮೊದಲೇ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಮಾಡುವರು ಚುನಾವಣೆಗಾಗಿ ಮೀಟಿಂಗ್ ನಡೆಯುತ್ತೆಂದು ತಿಳಿಸುವ ನೋಟಿಸ್ ಅವರಿಗೆ ತಲಪದೆಹೋದರೂ, ಮೀಟಿಂಗು ತೃಪ್ತಿಕರವಾಗಿ ನಡೆಯಲಿಲ್ಲವೆಂದು ಗೊತ್ತಾದರೂ ಅಂಥವರು ತಮ್ಮ ಆಕ್ಷೇಪಣೆಗಳನ್ನು ಗವರ್ನಮೆಂಟಿಗೆ ತಿಳಿಸಬಹುದು. (೨) ಸಭೆಯಲ್ಲಿ ಚರ್ಚಿಸಲ್ಪಡಬೇಕಾದ ವಿಷಯಗಳನ್ನು ಕೂಡಿಸುವುದು ಕ್ರಮವಿಲ್ಲದೆಯೂ ಅತೃಪ್ತಿಕರವಾಗಿಯೂ ಇತ್ತು. ಈ ಸಲ ಕೂಡಿಸಿದ್ದ ವಿಷಯಗಳು ೧೨೦ ಕ್ಕೇನೂ ಕಡಿಮೆಯಾಗಿರಲಿಲ್ಲ. ಆ ವಿಷಯಗಳ ಪುಸ್ತಕದಲ್ಲಿ ಒಂದು ಕಡೆ ಇದ್ದ ಸಂಗತಿಗಳೇ ಇತರ ಕಡೆಗಳಲ್ಲೂ ಮತ್ತೆ ಮತ್ತೆ ಬರುತ್ತಿದ್ದವು. ಇನ್ನು ಕೆಲವು ಚರ್ಚೆಗೇ ಅರ್ಹವಾದವುಗಳಲ್ಲ. ಇದರಿಂದ ಸರ್ಕಾರಿ ಕಾಗದ ನಷ್ಟ, ಪ್ರಿಂಟು ಮಾಡುವವರಿಗೆ ವೃಥಾ ಶ್ರಮ ; ಇವೆರಡಕ್ಕಿಂತಲೂ ದಿವಾನರವರು ಮತ್ತು ಕೌನ್ಸಿಲ್ ಮೆಂಬರುಗಳ ಅಮೂಲ್ಯವಾದ ಸಮಯ ಹಾಳು ಇಂಥಾ ಪ್ರಮಾದವಾದ ದೋಷಗಳನ್ನೆಲ್ಲಾ ನಿವಾರಣೆ ಮಾಡುವುದಕ್ಕೆ ದಿವಾನರವರು ಮಾಡುವುದಾಗಿ ತಿಳಿಸಿರುವ ಏರ್ಪಾಡೇನೆಂದರೆ—ಮೊದಲನೇಯದಾಗಿ, ಡೆಪ್ಟಿ ಕಮಿಷನರು, ಚುನಾಯಿಸಲ್ಪಟ್ಟ ಮೆಂಬರುಗಳನ್ನೆಲ್ಲಾ ಮೊದಲೇ ಕರೆಸಿಕೊಂಡು ಒಂದು ಸಭೆ ಕೂಡಿಸಿ, ಪ್ರತಿನಿಧಿ ಸಭೆಗೆ ಕಳುಹಿಸತಕ್ಕ ವಿಷಯಗಳ್ಯಾವವೆಂದು ಚರ್ಚೆಮಾಡಿ ನಿರ್ಧರಿಸುವರು. ಇಂಥಾ ಡಿಸ್ಟ್ರಿಕ್ಟ್ ಮೀಟಿಂಗುಗಳಲ್ಲಿ ಗೊತ್ತುಮಾಡಲ್ಪಟ್ಟ ವಿಷಯಗಳೇ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಬರಬೇಕಲ್ಲದೆ ಈಗಿನಂತೆ ಪ್ರತಿ ಒಬ್ಬ ಮೆಂಬರೂ ಹೇಳುವಂಥಾ ಸಂಗತಿಗಳನ್ನೆಲ್ಲಾ ಚರ್ಚಿಸುವುದಿಲ್ಲ. ಎರಡನೇದಾಗಿ, ಡೆಪ್ಟಿ ಕಮಿಷನರುಗಳೇ ಕ್ರಮಪಡಿಸಬಹುದಾದ ವಿಷಯಗಳನ್ನು ಸಭೆಗೆ ಇಡುವುದಿಲ್ಲ. ಮೂರನೇದಾಗಿ, ಒಂದಾವರ್ತಿ ಚರ್ಚೆಯಾಗಿ ತೀರ್ಮಾನಿಸಲ್ಪಟ್ಟಂಥಾ ಸಂಗತಿಗಳನ್ನೂ ಸಭೆಗೆ ಕಳುಹಿಸುವುದಿಲ್ಲ. (೩) ಪ್ರತಿನಿಧಿ ಸಭೆಯಲ್ಲಿ ಚರ್ಚೆ ಮುಂತಾದ್ದು ನಡೆಯುವ ಕ್ರಮವು ಅತೃಪ್ತಿಕರವಾಗಿದೆ. ಸಿಕ್ಕಿದವರು ಸಿಕ್ಕಿದ ಹಾಗೆ ಎದ್ದು ಹೋಗಿ ಮಾತನಾಡುತ್ತಾರೆ. ಒಬ್ಬ ಮೆಂಬರಾದ ಮೇಲೆ ಇನ್ನೊಬ್ಬರು ನಿಂತು ಮಾತನಾಡಬೇಕೆಂಬ ಕ್ರಮವಿಲ್ಲ. ಕೆಲವು ವೇಳೆ ಸಭೆಯು ಸಂತೆ ಕಟ್ಟಿದ ಸ್ಥಳದಂತೆ ತೋರ್ಪಡುವುದು. ಮೆಂಬರುಗಳಲ್ಲೇ ಮಾತನಾಡುವುದಕ್ಕೆ ನಾ ಮುಂದು ತಾ ಮುಂದು ಎಂದು ನೂಕಿ ನುಗ್ಗಾಡುವರು ಇನ್ನು ಮುಂದೆ ಇಂಥಾ ಆಭಾಸವನ್ನು ತಪ್ಪಿಸಿ, ಮಾತನಾಡುವುದಕ್ಕೆ ಸರಿಯಾದ ಕ್ರಮಗಳನ್ನು ಮಾಡಿಡುವರು. ಒಂದು ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚೆಮಾಡಬೇಕೆಂದು ಅಪೇಕ್ಷಿಸುವವರೆಲ್ಲಾ ಮೊದಲೇ ಸರ್ಕಾರದವರಿಗೆ ಬರೆದು ತಿಳಿಸಿರಬೇಕೆಂದು ವಿಧಿಸಬಹುದಾಗಿ ತೋರುವುದು.

ಈ ರೀತಿಯಾದ ಹೊಸ ಕ್ರಮಗಳು ರೂಢಿಗೆ ಬಂದ ಪಕ್ಷದಲ್ಲಿ ಈ ಪ್ರತಿನಿಧಿ ಸಭೆಯಿಂದ ತುಂಬಾ ಪ್ರಯೋಜನವಾದೀತೆಂತಲೂ ಅದಕ್ಕೆ ಇನ್ನೂ ಗೌರವ ಉಂಟಾದೀತೆಂತಲೂ ನಾವು ನಂಬುತ್ತೇವೆ. ಈ ಸಭೆಯನ್ನು ಕ್ಷಯಿಸಬಿಡದೆ ಸರ್ಕಾರದವರು ಅದರ ಲೋಪದೋಷಗಳನ್ನು ತಿದ್ದಿ ಅಭಿವೃದ್ಧಿಗೆ ತರಬೇಕೆಂಬ ಕುತೂಹಲಯುಕ್ತರಾಗಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುವೆವು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

95-15



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀ… ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರ… ರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ… ರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ… ರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತ… ಈ ಔಷಧದಿಂದ ನಿರ್ಮೂಲವಾಗಿ ನಿಲ್ಲುತ್ತದೆ. ಖಂಡಿತವಾಗಿ ನಾಶಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಬಳದೇಶದ ವೃತ್ತಾಂತಗಳು.

ಮೊನ್ನೆ ಮಂಗಳವಾರ ೧೨ ಗಂಟೆಗೆ ೨೩ನೇ ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳು ಪೂರೈಸಿದವು ದಿವಾನರವರೂ ಸೆಕ್ರೆಟರಿಗಳೂ ಆ ದಿನ ರಾತ್ರಿಯೇ ಬೆಂಗಳೂರಿಗೆ ಪ್ರಯಾಣಮಾಡಿದರು. ಪುನಹ ಶುಕ್ರವಾರ ಮಧ್ಯಾಹ್ನ ವಾಪಸು ಬರುವವರಾಗಿದಾರೆ

✱✱✱✱

ರಾಜಧಾನಿಯಲ್ಲಿ ೬—೭ ದಿನಗಳಿಂದ ರಾತ್ರಿ ಹೊತ್ತು ಮಳೆ ಸುರಿಯುತ್ತಿದೆ. ವಾಂತಿಭೇದಿ ಉಪದ್ರದ ಹಾವಳಿ ಕಮ್ಮಿಯಾಯಿತು ೨-೩ ದಿನಗಳಿಂದ ಕೃಷ್ಣರಾಜ ಮೊಹಲ್ಲೆಯಲ್ಲಿ ೬-೭ ಜನರಿಗೆ ಪ್ಲೇಗ್ ತಗಲಿ ೨-೩ ಮಂದಿ ಕಾಲವಾದರೆಂದು ವರ್ತಮಾನವಿದೆ

✱✱✱✱

ಪರ್ಷಿಯನ್ ಬಾಡಿಗಾರ್ಡ್ ಕಮ್ಯಾಂಡೆಂಟರಾದ ಮೆ॥ ಮಹಮದ್ ಬದ್ರುದ್ದೀನ್ ಖಾನ್‌ಬಹದೂರ್ ಯವರು ರಾಜಧಾನಿಯ ವಿಂಡ್ಸರ್ ಆಸ್ಪತ್ರೆಯಲ್ಲಿ ತಮ್ಮ ಹೆಸರಿನ ಮೇಲೆ ಒಬ್ಬ ರೋಗಿಯನ್ನು ಆರೈಕೆ ಮಾಡಬೇಕೆಂದು ೮೦೦ ರೂಪಾಯಿ ದಾನಮಾಡಿದ್ದರಷ್ಟೆ. ಈಚೆಗೆ ಈ ಧರ್ಮಿಷ್ಟರು ತಮ್ಮ ತಾಯಿಯ ಹೆಸರನ್ನು ಶಾಶ್ವತಪಡಿಸುವುದಕ್ಕಾಗಿ ಅದೇ ಆಸ್ಪತ್ರೆಗೆ ೭೦೦ ರೂಪಾಯಿ ದಾನಮಾಡಿರುತ್ತಾರೆಂದು ಕೇಳಿ ಸಂತೋಷಪಡುತ್ತೇವೆ.

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಮೂಲಧನಕ್ಕೆ ಷೇರುದಾರರನ್ನು ಕೂಡಿಸಬೇಕೆಂದು ಒಬ್ಬ ಏಜಂಟರು … ಧಾನಿಗೆ ಬಂದಿದಾರೆ

✱✱✱✱

ಮದರಾಸ್ ಅಧಿಪತ್ಯದ ಗವರ್ನರಾದ ಘನವನ್ನೈದಿದ ಸರ್ … ರ್ ಲಾಲಿಯವರು ನಾಳೆ ಶನಿವಾರ ಬೆಳಗ್ಗೆ ಬೆಂಗಳೂರಿಗೆ ಬಂದು … ಮೂರು ಒಂಬತ್ತು ಗಂಟೆಯ ಕಾಲ ಇದ್ದು ಸ್ಪೆಷಲ್ ಗಾಡಿ ಹತ್ತಿ … ಮಧ್ಯಾಹ್ನ ೧॥ ಗಂಟೆಗೆ ರಾಜಧಾನಿಗೆ ದಯಮಾಡುವವರಾಗಿ… ೩ ಗಂಟೆಯ ಮೇಲೆ ನಮ್ಮ ಮಹಾರಾಜರವರಿಗೂ ಅವರಿಗೂ … ಮುಲಾಖತೆಗಳು ನಡೆಯುವವು. ಸಾಯಂಕಾಲ ರಾಜಧಾನಿಯಲ್ಲಿ … ಬಾರ ಮಾಡುವರು. ಭಾನುವಾರ ಬೆಳಗ್ಗೆ ಅರಮನೆ, ವಾಸಾ… ಮೊದಲಾದವುಗಳನ್ನೂ ಮಧ್ಯಾಹ್ನ ಶ್ರೀರಂಗಪಟ್ಟಣದಲ್ಲಿರುವ … ತ್ರಾರ್ಹವಾದ ಭಾಗಗಳನ್ನೂ ಸಂದರ್ಶಿಸುವರು ಗವರ್ನರ… ಸೋಮವಾರ ಷಿಕಾರಿ ಮಾಡಿಕೊಂಡು ಬಂದು ರಾತ್ರಿ ೧೦॥ ಗಂ… ರೈಲ್ ಹತ್ತಿ ಮದ್ದೂರಲ್ಲಿಳಿದು ಮರುದಿನ ಶಿವಸಮುದ್ರದಲ್ಲಿ … ಚ್ಛಕ್ತಿಯ ಕಾರ್ಖಾನೆಯನ್ನು ನೋಡಿಕೊಂಡು, ಮಧ್ಯಾಹ್ನ ಮದ್ದೂರಲ್ಲಿ ರೈಲ್ ಹತ್ತಿ ಸಾಯಂಕಾಲ ೪ ಗಂಟೆಗೆ ಬೆಂಗಳೂರನ್ನು ತಲಪಿ, … ೨೦ನೆ ಶನಿವಾರದ ತನಕ ಅಲ್ಲೇ ಇದ್ದು ಎಲ್ಲಾ ಸ್ಥಳಗಳನ್ನೂ … ಚರಿಸಿ, ಶನಿವಾರ ರಸಿಡೆಂಟರ ಸಂಗಡ ಕೋಲಾರ್ ಚಿನ್ನದಗಣಿ… ದಯಮಾಡಿ ಗಣಿಗಳನ್ನು ನೋಡಿಕೊಂಡು ಆ ಸಾಯಂಕಾಲವೇ … ಳೂರಿಗೆ ವಾಪಸು ಬರುತ್ತಾರೆ ತಾ ೨೧ನೆ ಭಾನುವಾರ ರಾತ್ರಿ … ಗಂಟೆಗೆ ರೈಲ್ ಹತ್ತಿ ಬೆಂಗಳೂರಿಂದ ಮದರಾಸಿಗೆ ಚಿತ್ತೈಸುವರು … ತಿಳಿದುಬಂದಿದೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾ… ಸಾಮಾನ್ಯ ವಿಷಯಗಳು.

ನ್ಯಾಯನಿಬಂಧನೆ ಮುಂತಾದ್ದು.

ಮೆಂಬರುಗಳ ಪ್ರಾರ್ಥನೆ —ಮೈಸೂರು ಸಂಸ್ಥಾನದಲ್ಲಿ ನ್ಯಾ… ನಿಬಂಧನೆಗಳನ್ನು ಮಾಡತಕ್ಕಂಥಾ ಲೆಜಿಸ್ಲೆಟಿವ್ ಕೌನ್ಸಿಲ್ … ಸಭೆಯನ್ನು ಸ್ಥಾಪಿಸಿಕೊಡಬೇಕು ಆದರಲ್ಲಿ ಪ್ರಜೆಗಳಿಗಿರುವ … ದುಃಖ ಕೊರತೆಗಳನ್ನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲು … ಯವಾಗುವುದು ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ ಕಾಲದಲ್ಲಿ … ವಾನ್ ರಂಗಾಚಾರ್ಯರು ಮೇಲ್ಕಂಡ ಸಭೆಯನ್ನೂ ಕಲ್ಪಿಸಬೇಕೆ… ಯೋಚಿಸಿಕೊಂಡಿದ್ದರು. ಪ್ರತಿನಿಧಿ ಸಭೆಯು ಸ್ಥಾಪನೆಯಾಗಿ … ಇಪ್ಪತ್ತೈದು ವರುಷಗಳಾದವು ಪ್ರಜೆಗಳು ಅಂದಿಗಿಂತ ತುಂಬಾ … ವೃದ್ಧಿ ಸ್ಥಿತಿಗೆ ಬಂದಿರುತ್ತಾರೆ. ನ್ಯಾಯನಿಬಂಧನೆಯ ಕೌನ್ಸಿಲ… ಸ್ಥಾಪಿಸಿದರೆ ಅದರಿಂದ ಗವರ್ನಮೆಂಟಿಗೂ ನಾನಾ ಭಾಗಗಳಲ್ಲಿ … ಯವಾದೀತು. ಈ ಪ್ರತಿನಿಧಿ ಸಭೆಯೂ ಇನ್ನೂ ಅಭಿವೃದ್ಧಿ ಹೊ… ವುದು. ಆದರೆ ಆ ಕೌನ್ಸಿಲಿನಿಂದ ಈ ಪ್ರತಿನಿಧಿ ಸಭೆಯ ಕಾಯ… ಳಿಗೂ ಉದ್ದೇಶಕ್ಕೂ ಕುಂದುಕೊರತೆಗಳು ಉಂಟಾಗಬಾರದು

ದಿವಾನರವರ ಉತ್ತರ.—ಅಂಥಾ ಕೌನ್ಸಿಲನ್ನು ಕಲ್ಪಿಸು… ಅದರಿಂದ ಈ ಸಭೆಯ ಪ್ರಾಮುಖ್ಯತೆಗೂ ಇದರ ಕಾರ್ಯಗಳ… ಸ್ವಲ್ಪವೂ ಕುಂದು ಬರಲಾರದು.

ಪ್ರಾರ್ಥನೆ.—ಅನ್ಯ ಮತಕ್ಕೆ ಹೋದವನಿಗೆ ದಾಯಭಾಗ … ತಂದ ಹಕ್ಕು ಬಾಧ್ಯತೆಗಳನ್ನು ಕೊಡಿಸಬೇಕೆಂದು ಮಾಡಿರುವ … ದೆ ಕಾನೂನನ್ನು ಜಾರಿಗೆ ತರಕೂಡದು ಆದರಿಂದ ಹಿಂದು … ದೀಯ ಸಂಸಾರಗಳಲ್ಲಿ ಕಲಹಗಳೂ ಮನೋವ್ಯಥೆಯೂ ಉಂ… ತ್ತವೆ. ಇದಲ್ಲದೆ ಅವರವ ಮತಗಳಿಗೂ ಈ ಕಾನೂನು ವಿರೋಧ… ಗಿದೆ. ಆದರಿಂದ ಕ್ರಿಶ್ಚನ್‌ಮಹಮ್ಮದರವರ ವಿಶೇಷ ಭಾಗದ ಪ್ರ… ಸೆಟ್ಟು ಉಪಕಾರವಾಗುವುದಿಲ್ಲ. ನಾನಾ ಪಾತ್ರಕ್ರೀಯವರಾದ … ರಾಣಿಯವರು ಕೂಡ ಈ ಕಾನೂನು ಆಗಕೂಡದೆಂದು ಅಭಿ… ಪಟ್ಟಿದಾರೆ

ದಿವಾನರವರು —ಒಳ್ಳೇದು, ನೀವು ಹೇಳುವ ಕಾರಣಗಳನ್ನೆ… ಕಾಣಿಸಿ ಒಂದು ಅರ್ಜಿಯನ್ನು ತಂದೊಪ್ಪಿಸಿ ಈ ಮಸೂದೆಯ… ಯವನ್ನು ಚರ್ಚಿಸುವಂಥಾ ಸ್ಪೆಷಲ್ ಕಮಿಟಿಯವರಿಗೆ ನಿಮ್ಮ … ಯನ್ನು ಕಳುಹಿಸುವೆವು

ಪ್ರಾರ್ಥನೆ.—ಪೂರ್ವದಲ್ಲಿ ಪ್ರತಿ ಒಂದು ಗ್ರಾಮದೊಳಗೂ … ಚಾಯಿತರು ಯಜಮಾನ ಶೆಟ್ಟಿ ಎಂಬ ಏರ್ಪಾಡಿತ್ತು. ಇವರು … ಗ್ರಾಮದ ಸಣ್ಣ ಸಣ್ಣ ಸಿವಿಲ್, ಕ್ರಿಮಿನಲ್ ವ್ಯಾಜ್ಯ ಕಲಹಗ…

...ಪಾಸ್ಸೆಲ್ಲಿಲ್ಲಿಯೇ ಇತ್ಯರ್ಥ ಪಡಿಸುತ್ತಿದ್ದರು. ಗ್ರಾಮಸ್ಥರಿಗೆ ಇ...ದ ಎಲ್ಲಾ ಭಾಗಗಳಲ್ಲೂ ಸೌಕರ್ಯಗಳುಂಟಾಗುತ್ತಿದ್ದವು. (ಈ ಏರ್ಪಾಡು ತಪ್ಪಿಹೋಗಿರೋಣದರಿಂದ ಅಲ್ಪ ವಿಷಯಗಳಿಗೆ ಗ್ರಾಮಸ್ಥರು ರೊಟ್ಟಿ ಬುತ್ತಿ ಕಟ್ಟಿ ಬಹುದೂರದ ಕೋರ್ಟುಗ...ಳಿಗೆ ಅಲೆದು ಆಸ್ತಿಯನ್ನು ಕಳಕೊಂಡು ವ್ಯಥೆಗೂ ಕಷ್ಟನಷ್ಟ...ಗೂ ಗುರಿಯಾಗಿ ತುಂಬಾ ಕೆಟ್ಟುಹೋಗಿದಾರೆ ಆದಕಾರಣ ಗವ...ರ್ನ್‌ಮೆಂಟಿನವರು ಕರುಣವಿಟ್ಟು ಆ ಮೊದಲಿನ ಏರ್ಪಾಡನ್ನೇ ಸ್ಥಾಪಿ...ಸಿಟ್ಟು ಪ್ರಜೆಗಳನ್ನು ಪಾಲಿಸಬೇಕೆಂದು ಪ್ರಾರ್ಥಿಸುತ್ತೇವೆ.

...ವಾನರವರು.—ಇದು ಬಹಳ ಒಳ್ಳೇ ಸಲಹೆ. ಗ್ರಾಮದಲ್ಲಿ ೧೦ ...ಯಿಗಿಂತ ಹೆಚ್ಚು ಕಂದಾಯ ಕೊಡುವ ರೈತಪ್ರಜೆಗಳ ಪೈಕಿ ...ರನೇ ಎರಡು ಭಾಗದವರು ಸೇರಿ ಅಂಥಾ ಏರ್ಪಾಡು ಮಾಡಿಕೊಡ...ಬೇಕೆಂದು ಕೇಳಿಕೊಳ್ಳುವ ಪಕ್ಷಕ್ಕೆ ಆ ರೀತಿ ನಡಿಸಿಕೊಡಲಾಗುವುದು.

ಪ್ರಾರ್ಥನೆ —ಮ್ಯುನಿಸಿಪಾಲಿಟಿಗಳಲ್ಲೂ ಯೂನಿಯನ್ ಗಳಲ್ಲೂ ...ಗಳಿಗೆ ಅಧಿಕಾರಗಳು ಯಾವವೋ ಎಷ್ಟು ಮಟ್ಟಿನವೋ ಇತ್ಯ...ರ್ಥವಿಲ್ಲವಾದ್ದರಿಂದ ಮ್ಯುನಿಸಿಪಲ್ ಕೆಲಸಗಳೂ ಆರೋಗ್ಯವಿಚಾ...ರ ಅಷ್ಟು ತೃಪ್ತಿಕರವಾಗಿ ನಡೆಯಲು ಅವಕಾಶವಿಲ್ಲದೆ ಇದೆ. ...ಮೂರು ವರುಷಗಳಾದರೂ ಗವರ್ನಮೆಂಟಿನವರು ಕಾನೂನನ್ನು ಮಾ...ಡಿಸಿ ಪಂಡಿಲ್ಲ. ಈ ವಿಷಯವನ್ನು ಮೊದಲು ಕ್ರಮಪಡಿಸಿಕೊಡ...ಬೇಕೆಂದು ಪ್ರಾರ್ಥಿಸುತ್ತೇವೆ

...ವಾನರವರು.—ನೀವು ಕೇಳುವ ಕಾನೂನು ಸಿದ್ಧವಾಗಿದೆ. ಇಂ...ಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದ ಕೂಡಲೆ ಇಷ್ಟ...ರಲ್ಲಿ ಅದನ್ನು ಪ್ರಕಟಿಸಿ ಜಾರೀ ಮಾಡುತ್ತೇವೆ

ಪ್ರಾರ್ಥನೆ.—ಗವರ್ನಮೆಂಟಿನವರು ಅಸಿಸ್ಟೆಂಟ್ ಕಮಿಷನರ ...ಸ್ಥಾನಕ್ಕೆ ಪರೀಕ್ಷೆಯನ್ನಿಡಕೂಡದು ಇದರಿಂದ ಪರದೇಶಗಳವರು ...ಕ್ಕೆ ಮಾರ್ಗವಾಗುತ್ತದೆ ಸಂಸ್ಥಾನದಲ್ಲಿ ಎರಡು ಪಾರ್ಟಿಗ...ಳವು ಪ್ರಜಾ ಸೌಕರ್ಯಕ್ಕೂ ಅಭಿವೃದ್ಧಿಗೂ ತುಂಬಾ ಕುಂ...ದಾಗುವುದು. ಸಂಸ್ಥಾನದೊಳಗಿರುವ ವಿದ್ಯಾಶಾಲೆಗಳಲ್ಲಿ ಬಹಳ ...ಯಾಗಿ ತೇರ್ಗಡೆ ಹೊಂದಿದಂಥಾವರನ್ನು ಹುಡುಕಿ ತಿಳಿದು ...ಮಾತ್ರ ಅವಾಲ್ದಾರಿಯಿಂದ ಪ್ರಾರಂಭಿಸುವಂತೆ ನೇಮಿಸಬೇಕು ...ಗಳಲ್ಲಿ ವಿದ್ಯಾವಂತರೂ ಸಮರ್ಥರೂ ಸಿಕ್ಕುವಾಗ್ಗೆ ಹೊರಗಿನ ...ವರುಷದಕ್ಕೆ ಯಾಕೆ ಅವಕಾಶವನ್ನು ಕಲ್ಪಿಸಬೇಕು? ಪರದೇಶಿ...ಗಳು ನಮ್ಮ ಮಾತೃಭಾಷೆಯಾದ ಕನ್ನಡ ತಿಳಿಯದು ನಮ್ಮ ದೇಶದ ...ಳು ವಿಷಯಗಳೂ ಕಾಗದ ಪತ್ರಗಳೂ ಕನ್ನಡದಲ್ಲಿ ನಡೆಯು...ತ್ತವೆ ಒಂದು ವೇಳೆ ಹೊರಗಿನವರು ಬಂದಾಗ್ಯೂ ಅವರಿಗೆ ಕನ್ನಡದ ...ಜ್ಞಾನ ಇರಬೇಕು ತೇರ್ಗಡೆ ಹೊಂದಿದಕ್ಕವರಿಗೆ ಗ್ರಾಮಾಂತರಗ...ಳ ಕಚ್ಚಾ ಅಮಲುಗಳೂ ರೈತ ಪ್ರಜೆಗಳ ಕಷ್ಟ ಸುಖಗಳೂ ...ಗಿ ಅನುಭವಕ್ಕೆ ಬರುವುದಕ್ಕೋಸ್ಕರ ಅವರನ್ನು ಮೊದಲು ...ದಾರಿಗೆ ನೇಮಿಸಬೇಕು ಅಸಿಸ್ಟೆಂಟ್ ಕಮಿಷನರ ದರ್ಜೆಯ ...ಲ್ಲಿ ಮಾಡಿರುವ ತಾರತಮ್ಯಗಳನ್ನು ತೆಗೆದುಹಾಕಿ, ಆ ಹೆಸರುಳ್ಳ ...ನಿಗಳೆಲ್ಲಾ ಒಂದೇ ಸಮನಾಗಿ ಬತ್ತಿ ಕೊಡುತ್ತಾ ಬರಬೇಕು

...ವಾನರವರು. —ಸರ್ಕಾರದವರು ಈ ಭಾಗದಲ್ಲಿ ಮಾಡಿರತಕ್ಕ ...ಏರ್ಪಾಡುಗಳು ಎಲ್ಲರಿಗೂ ಚೆನ್ನಾಗಿ ತಿಳಿಯದೆ ಇರೋಣದರಿಂದ ...ಈ ಆಕ್ಷೇಪಣೆ ಮಾಡುವರು. ಗವರ್ನಮೆಂಟಿನವರು ಪ್ರತಿ ವರು...ಷ ಅಸಿಸ್ಟೆಂಟ್ ಕಮಿಷನರ ದರ್ಜೆಯಲ್ಲಿ ಒಂಬತ್ತು ಕೆಲಸಗಳು ...ಖಾಲಿಯಾಗಬಹುದೆಂದು ಅಂದಾಜು ಕಟ್ಟಿ, ಆ ಪೈಕಿ ಏಳು ಕೆಲಸಗಳನ್ನು ...ಸರ್ವಿಸಿನಲ್ಲಿರತಕ್ಕವರಿಗೆ ಕೊಡಬೇಕೆಂತಲೂ, ಉಳಿದ ಎರಡು ...ಗಳನ್ನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದತಕ್ಕವರಿಗೆ ಕೊಡಬೇ...ಕೆಂತಲೂ ವಿಧಾಯಕ ಮಾಡಿರುತ್ತಾರೆ ಈ ಪರೀಕ್ಷೆಯಲ್ಲೂ ಇಲ್ಲಿನ ...ವಾಸ್ಥರೇ ತೇರ್ಗಡೆಯಾದರೂ ಆಗಬಹುದು. ಆಗ್ಗೆ ಹೊರಗಿನ ...ಬರುತ್ತಾರೆನ್ನುವ ಆಕ್ಷೇಪಣೆ ಹಾರಿಹೋಗುತ್ತೆ ಇದಲ್ಲದೆ ಇದು ...ಕೆಳಗಿನ ದರ್ಜೆ ನೌಕರಿಗಳಲ್ಲಿರತಕ್ಕವರಿಗೆ ದೊಡ್ಡ ಹುದ್ದೆಗಳನ್ನು ...ಹೊಂದುವದಕ್ಕೆ ಅವಕಾಶ ಸ್ವಲ್ಪವೂ ಇರಲಿಲ್ಲ ಈಗ ಎಷ್ಟು ಸಣ್ಣ ...ನವನಾದರೂ ಯೋಗ್ಯತೆ ಚಾಕಚಕ್ಯತೆಗಳನ್ನು ತೋರಿಸುತ್ತಾ ಬಂ...ದರೆ ಎಂಥಾ ದೊಡ್ಡ ಹುದ್ದೆಗಾದರೂ ಹತ್ತುವುದಕ್ಕೆ ಸ್ವಲ್ಪವೂ ಅಡ್ಡಿಯು ...ಇಲ್ಲ ಪರೀಕ್ಷೆಯ ಮೂಲಕ ಕೋಲಿಕೆ ಹೋರಾಟಗಳನ್ನಿಡದಿದ್ದರೆ ಅಧಿ...ಕಾರ ಸ್ಥಾನಗಳಿಗೆ ಒಳ್ಳೊಳ್ಳೆ ಸಮರ್ಥರು ಸಿಕ್ಕುವುದು ಕಷ್ಟ ಆದಾ...ಗ್ಯೂ ನೀವು ಆಕ್ಷೇಪಿಸಿರತಕ್ಕ ಭಾಗಗಳನ್ನೆಲ್ಲಾ ಕುರಿತು ಮುಂದೆ ...ಯಾಲೋಚನೆ ಮಾಡುತ್ತೇವೆ

ಬಹುಮಾನ ಪಡೆದ ವರ್ತಮಾನವು.

[ಈ ಬಾತ್ಮಿ ಕಳಿಸಿದ ತುಮಕೂರು ತಾಲ್ಲೂಕ್ ಕಸಬಾ ಸಮ್ಮತು ...ದೇವರಾಯಪಟ್ಟಣದ ಸ್ಕೂಲ್ ಮಾಸ್ಟರ್ ಮ॥ ಸಿ ಆನಂದ ರಾವ್ ...) ಯವರಿಗೆ ಈ ವಾರದ ಬಹುಮಾನವನ್ನು ಕೊಟ್ಟಿದೆ.]

ಹೊಟ್ಟೆ ಊದುವ ರಾಗಿಯಿಂದುಂಟಾದ ಮರಣ

ತುಮಕೂರ್ ತಾಲ್ಲೂಕ್ ಕಸಬಾ ಸಮ್ಮತು ದೇವರಾಯಪಟ್ಟಣ...ದ ಗ್ರಾಮದಲ್ಲಿ ತಿಗಳರ ಜಾಲಿ ರಾಮೈಯ್ಯನೆಂಬುವ ರೈತನಿಗೆ ...ಬ್ಬರು ಹೆಂಡತಿಯರು, ಸಣ್ಣ ಪ್ರಾಪ್ತ ಏಳು ಎಂಟು ಮಕ್ಕಳು. ಇವರು ...ತ್ತೆ ಕೈತೋಟಗಳಲ್ಲಿ ಬೆಳೆದ ಕಾಯಿಸೊಪ್ಪುಗಳನ್ನೂ, ಹಣ್ಣು ...ಹಂಪಲುಗಳನ್ನೂ ಹಳ್ಳಿಹಳ್ಳಿಗಳಿಗೂ, ಸಂತೆಸಾರಿಗೆಗಳಿಗೂ ತೆಗೆದು...ಕೊಂಡು ಹೋಗಿ, ದವಸ ಧಾನ್ಯಕ್ಕೂ, ದುಡ್ಡು ಕಾಸಿಗೂ ಮಾರಿ ...ಹೊಟ್ಟೆ ಹೊರಕೊಳ್ಳುತ್ತಿದ್ದರು ಹೀಗಿರುವಲ್ಲಿ ದಸರಾ ಹಬ್ಬ ಬಂತು. ...ಯುಧ ಪೂಜೆಯ ದಿನಸ ತಮ್ಮ ನೆಂಟರಿಷ್ಟರನ್ನು ಊಟಕ್ಕೆ ಕರ...ಯಬೇಕೆಂದು ಗೊತ್ತುಮಾಡಿಕೊಂಡು ಬೇಕಾದ ಸಾಮಾನುಗಳನ್ನು ...ತಂದು, ತಾವು ಹಳ್ಳಿಗಳಿಂದ ತಂದಿದ್ದ ಬಿಳಿ ರಾಗಿಯನ್ನೂ, ತಮ್ಮ ...ಮನೆಯಲ್ಲಿದ್ದ ಒಳ್ಳೇ ರಾಗಿಯನ್ನೂ ಮಿಶ್ರಮಾಡಿ ಬೀಸಿ, ಹಿಟ್ಟನ್ನು ...ತಯಾರು ಪಡಿಸಿದ್ದರು. ಆ ರಾಗಿಯಲ್ಲಿ ಹೊಟ್ಟೆ ಊದುವ ರಾಗಿಯೂ ಸೇರಿತ್ತು. ಇದು ಅವರಿಗೆ ಗೋಚರವಾಗಲಿಲ್ಲ. (ಹೊಟ್ಟೆ ಊದುವ ರಾಗಿ ಎಂದರೆ, ರೈತರು ಬೆಳೆದ ರಾಗಿಯನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ತಮ್ಮ ಮನೆಗಳ ಬಳಿಯಲ್ಲಾಗಲಿ ಹೊಲಗಳಲ್ಲಾಗಲಿ ಮಾಡಿದ ಗುಣಿಗಳು. ಇವುಗಳನ್ನು ಪಗೆಗಳೆಂದೆನ್ನುತ್ತಾರೆ ಈ ಪಗೆಗಳಲ್ಲಿ ತುಂಬಿಟ್ಟದ್ದ ಕೆಲವು ಕಾಲಾ ನಂತರ ತಳಕ್ಕೂ, ದಡಕ್ಕೂ ಹತ್ತಿಕೊಂಡು ಭೂಗುಣದಿಂದ ಕೆಲವು ರಾಗಿ ಕಠ್ರಗಾಗಿ ವಿಷಮಯವಾಗಿರುತ್ತದೆ. ಇದನ್ನು ಉಪಯೋಗಿಸಿಕೊಳ್ಳತಕ್ಕವರು ಮೊದಲು ಒಡಿನಲ್ಲಿ ಸ್ವಲ್ಪ ಹುರಿದು, ಚನ್ನಾಗಿ ಅವಲಾದರೆ ಒಳ್ಳೆಯದೆಂದೂ ಸೀದು ಕರಕಲಾದರೆ ವಿಷಮಯವಾದ್ದೆಂದೂ ತಿಳಿದು, ಈ ಕರೀ ರಾಗಿಯನ್ನು ಗೊಬ್ಬರಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಇದೇ ಹೊಟ್ಟೆ ಊದುವ ರಾಗಿ) ಹೀಗೆ ಅವರು ಸಿದ್ಧಪಡಿಸಿಕೊಂಡಿದ್ದ ರಾಗೀ ಹಿಟ್ಟಿನಲ್ಲಿ ಸ್ವಲ್ಪ ಭಾಗವನ್ನು ದುರ್ಗಾಷ್ಟಮಿ ದಿನ ತಮ್ಮ ಆಹಾರಕ್ಕಾಗಿ ಉಪಯೋಗಿಸಿಕೊಂಡು, ಹಗಲೂ ರಾತ್ರಿ ಊಟಮಾಡಲು, ಆ ರಾತ್ರಿ ಸುಮಾರು ೩ ಗಂಟೆಗೆ ಎಲ್ಲರಿಗೂ ಹೊಟ್ಟೆ ಉಬ್ಬರಕ್ಕೆ ಪ್ರಾರಂಭವಾಗಿ, ಉಚ್ಛ್ವಾಸ ನಿಶ್ವಾಸಗಳಿಗೂ ಅವಕಾಶವಿಲ್ಲದೆ, ಸಂಕಟ ಪಡುತ್ತಿರುವಲ್ಲಿ, ೨ ೩ ಪರ್ಷಕ್ಕೆ ಮುಂಚೆ ತಮಗೆ ಇದೇ ರೀತಿ ಆಗಿದ್ದದ್ದು ಸ್ಮರಣೆಗೆ ಬಂದು, ತಮ್ಮ ದೇವರುಗಳಿಗೆ ಮಿಸಲು ಕಟ್ಟಿ, ತಿಳಿದ ಕೆಲವು ಚಿಕಿತ್ಸೆಗಳನ್ನೂ, ಇತರರು ಹೇಳಿದ ಔಷಧಗಳನ್ನೂ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಅನಂತರ ಅವರ ಬಂಧುಗಳು ಈ ಹಿಟ್ಟನ್ನು ಹಾಳು ಭಾವಿಗೆ ಸುರಿದು, ಅವರನ್ನೆಲ್ಲಾ ಗಾಡಿಯಲ್ಲಿ ಹಾಕಿಕೊಂಡು ಸಮೀಪವಾದ ತುಮಕೂರು ಆಸ್ಪತ್ರೆಗೆ ತೆಗೆದುಕೊಂಡು ಹೋಗಲು, ಅಲ್ಲಿ ಡಾಕ್ಟರ ಚಿಕಿತ್ಸೆಯಿಂದ ಎಲ್ಲರಿಗೆ ಸ್ವಲ್ಪ ಗುಣವಾಗುತ್ತಾ ಬಂತು. ಆದರೆ ಈ ಜಾಲಿ ರಾಮೈಯ್ಯನ ಹಿರೀ ಮಗನಾದ ಚಿಕ್ಕ ರಾಮೈಯ್ಯನೆಂಬುವ ೧೮—೨೦ ವರುಷದ ಪ್ರಾಯಸ್ಥನಿಗೆ ಮಾತ್ರ ಗುಣವಾಗದೆ ಕಳೆದ ತಿಂಗಳು ೨೮ನೇ ಶುಕ್ರವಾರ ಕಾಲವಾದನು ಈ ಹುಡುಗನು ಚನ್ನಾಗಿ ಕಷ್ಟಪಟ್ಟು ದುಡಿದು, ಆ ಕುಟುಂಬದಲ್ಲಿ ಎಲ್ಲರನ್ನೂ ಪೋಷಿಸುತ್ತಿದ್ದನಾದಕಾರಣ ಅವನ ವಿಯೋಗಕ್ಕಾಗಿ ಅವನ ಮಾತಾಪಿತೃಗಳ ಗೋಳಾಟವೂ, ನೆಂಟರಿಷ್ಟರ ವ್ಯಸನವೂ ಅಷ್ಟಿಷ್ಟೆಂದು ಹೇಳತೀರದು. ಮೊದಲು ಇವರು ಆ ಹಿಟ್ಟನ್ನು ತಿನ್ನದೆ ಹಬ್ಬಮಾತ್ರ ಮಾಡಿ, ನೆಂಟರಿಷ್ಟರನ್ನೂ ಕರೆದಿದ್ದರೆ ಎಷ್ಟೋ ಪ್ರಾಣಾಪಾಯವಾಗಿ ತುಂಬಾ ಅನರ್ಥವಾಗುತ್ತಿತ್ತು ಇಂಥಾ ಅಪಾಯದಿಂದ ಅವರನ್ನು ಬಿಡುಗಡೆ ಮಾಡಿ ರಕ್ಷಿಸಿದ ಭಗವಂತನನ್ನು ನಾವು ಅನುದಿನವೂ ಸ್ಮರಿಸಬೇಕು. ಯಾರೇ ಆಗಲಿ ತಾವು ತೆಗೆದುಕೊಳ್ಳುವ ರಾಗಿಯನ್ನು ಚೆನ್ನಾಗಿ ಪರೀಕ್ಷೆ ಮಾಡಿ, ಆಹಾರಕ್ಕಾಗಿ ಉಪಯೋಗಿಸಿಕೊಳ್ಳುವದು ಒಳ್ಳೇದು ಇಲ್ಲವಾದರೆ ಇಂಥಾ ಅನರ್ಥಕ್ಕೆ ಗುರಿಯಾದಾರೆನ್ನುವದಕ್ಕೆ ಮೇಲಿನ ವಿಷಯವೇ ದೃಷ್ಟಾಂತವಾಗಿದೆ

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.

ಬಹುಮಾನದ ನಿರಾಶೆ

ಬೆಲಗೂರು ಗ್ರಾಮದಲ್ಲಿ ಅನೇಕ ಜನರಿಗೆ ಯಾವದಾದರೊಂದು ಬಹುಮಾನದ ಮೇಲಾಟಕ್ಕೆ ಬಾತ್ಮಿ ಸಿಕ್ಕಿದರ ಸಾಕೆಂತಲೂ ಯಾವದಾದರೊಂದು ವಿಧದಿಂದ ಪತ್ರಿಕಾ ಕಂಪನಿಯವರಿಂದ ಎರಡು ರೂಪಾಯಿ ಬಹುಮಾನ ಪಡೆಯಬೇಕೆಂತಲೂ ದುರಾಶೆ ತುಂಬಾ ಇರುವದೆಂದು ತೋರುತ್ತಿದೆ

ತಾ ೨ನೇ ಮಂಗಳವಾರ ಬೆಳಿಗ್ಗೆ ೯ ಘಂಟೆ ಸಮಯದಲ್ಲಿ ನಾನು ನಮ್ಮ ಮನೆಯಿಂದ ಕೋರ್ಟಿಗೆ ನನ್ನ ಕೆಲಸದ ಉದ್ದಿಶ್ಯ ಹೋಗುತ್ತಿರುವಾಗ್ಗೆ ಊರು ಮುಂದಲ ಕಡ್ಡಿಗೇ ಬಸಪ್ಪನ ಗುಡೀ ಹತ್ತಿರ ಕೂತಿದ್ದವರು ಮಾತನಾಡಿದ್ದೇನಂದರೆ—.

ರುದ್ರಪ್ಪ—ಕೃಷ್ಣಪ್ಪನವರೇ, ಪತ್ರಿಕಾ ಕಂಪನಿಯವರು ಬಹುಮಾನದ ಮೇಲಾಟವೆಂದು ಆಶ್ಚರ್ಯವಾದ ಒಂದು ಬಾತ್ಮಿಗೆ ಎರಡು ರೂಪಾಯಿ ಕೊಡುತ್ತಿದಾರಷ್ಟೆ ಇದರಿಂದ ಕಂಪನಿಯವರಿಗೇನು ಫಾಯಿದೇ ಇರಬಹುದು ?

ಕೃಷ್ಣಪ್ಪ—ಅನೇಕ ಕಚ್ಚಾ ಅಮಲ್‌ಗಳೆಲ್ಲಾ ಇದರಿಂದ ಸರ್ಕಾರಕ್ಕೆ ತಿಳಿದು ಬರುತ್ತೆ ಆದ್ದರಿಂದ ಸರ್ಕಾರದವರು ಬಹುಮಾನವಾಗಿ ೨ ರೂಪಾಯಿಗಳನ್ನು ಕೊಡುತ್ತಾರೆಯೋ ಜೊತರ್ ಕಂಪನಿಯವರ ಗಂಟೇನು ಹೋಗುವದು ?

ರುದ್ರಪ್ಪ—ಇದರಿಂದ ಯಾವ ಕಚ್ಚಾ ಅಮಲ್‌ಗಳು ಸಿಕ್ಕುತ್ತವೆ ?

ಕೃಷ್ಣಪ್ಪ—ಮೊನ್ನೆ ಕಾಪ್ಪನಹಳ್ಳಿ ಗ್ರಾಮದ ದುರ್ಮರಣದ ವಿಷಯ ಒಬ್ಬನು ಸುಳ್ಳು ಬಾತ್ಮಿ ಬರೆದು ಎರಡು ರೂಪಾಯಿ ಪಡೆದಾಗ್ಯೂ ಅದೇ ಬಾತ್ಮಿಯ ಕೆಳಭಾಗದಲ್ಲಿಯೇ ನಿಜಸ್ಥಿತಿಯನ್ನು ಕುರಿತು ಯಾರೋ ಇನ್ನೊಂದು ಬಾತ್ಮಿ ಹಾಕಿಸಿರಲಿಲ್ಲವೇ ?

ರುದ್ರಪ್ಪ—ನಾನು ಎಷ್ಟೋ ಕಡೆ ತಿರುಗಾಡುತ್ತೇನೆ ಅಪರೂಪದ ಬಾತ್ಮಿಗಳು ನನಗ ಸಿಕ್ಕುವದೇ ಇಲ್ಲವಲ್ಲಾ (ಎನ್ನುವಷ್ಟರೊಳಗಾಗಿ ಪಟೇಲ್ ಮರುಳೇ ಗೌಡರು ಬರಲು ಅವರನ್ನು ಕುರಿತು) ಮರುಳೇಗೌಡರೇ, ಮೊನ್ನೆ ಪೈಲ್ವಾನರ ಸಾಹಸವನ್ನು ಕುರಿತು ಬಹುಮಾನದ ಮೇಲಾಟಕ್ಕಾಗಿ ಒಂದು ಬಾತ್ಮಿ ಕಳುಹಿಸಿ ಇದ್ದಿರಷ್ಟೆ ಆ ಬಾಬತು ಎರಡು ರೂಪಾಯಿ ನಿಮಗೆ ತಲಪಿದವೋ ?

ಪಟೇಲ್—ಇನ್ನೂ ಟಪಾಲು ಬಂದಿಲ್ಲ ಈ ದಿವಸ ಮಂಗಳವಾರವಷ್ಟೆ ಈಗಾಗ ಬರಬಹುದು ನನ್ನ ಬಾತ್ಮಿ ಆಶ್ಚರ್ಯವಾದದ್ದು. ೨ ರೂಪಾಯಿ ಬರದೇ ಇರಲಾರದು (ಎಂದು ಮಾತನಾಡುತ್ತಿರುವಾಗ್ಗೆ ಪಟ್ಟಶೆಟ್ರು ಸಿದ್ರಾಮೈಯ್ಯನವರ ಮನೇ ಜಗತಿಯ ಮೇಲೆ ಕೊಂಚ ಹೊತ್ತು ಕೂತಿದ್ದು, ಈ ಸಂಭಾಷಣೆಗಳನ್ನು ಕೇಳಿದ ನಂತರ ಅವರ ಬಳಿಗೆ ಹೋಗಿ, ಪಟೇಲರೇ, ಟಪಾಲ್ ಮನೆಗೆ ಬರುವಿರಾ ? ಎಂದು ಕೇಳಿದೆನು.)

ಪಟೇಲ್—ನನಗೆ ೨ ರೂಪಾಯಿ ಬರಬೇಕಾಗಿದೆ. ಬರುತ್ತೇನೆ ನಡೀರಿ. ನನ್ನ ಹಣಬಂದರೆ ಅದೇ ಹಣವನ್ನು ಪತ್ರಿಕಾ ಕಂಪನಿಯವರಿಗೆ ಕಳುಹಿಸಿ ಒಂದು ವರ್ಷ ನನ್ನ ಹೆಸರಿಗೆ ಪತ್ರಿಕೆಯನ್ನು ಬರುವಂತೆ ಮಾಡುತ್ತೇನೆ (ಎಂದು ನನ್ನ ಜೊತೆಗೆ ಹೊರಟುಬಂದರು). ಟಪಾಲ್ ಮನೆ ಇರುವ ಕೋಟೆಗೆ ಹೋಗುತ್ತಿರುವಾಗ್ಗೆ ಬ್ಯಾಸಭೋಗರ ಭಾವಿಗೆ ಹೋಗಿ ತಿರಿಗಿ ಬರುತ್ತಿದ್ದ ಮಲ್ಲಪ್ಪನವರು ನಮ್ಮ ಎದುರಿಗೆ ಸಿಕ್ಕಿದರು ನಮ್ಮಗಳನ್ನು ನೋಡಿ)

ಮಲ್ಲಪ್ಪ—ಏನು ? ಕೋಟೇಕಡೆ ಹೋಗುತ್ತೀರಿ ?

ಪಟೇಲ್—ಟಪಾಲು ಬರಬಹುದು ಪತ್ರಿಕಾ ಕಂಪನಿಯಿಂದ ೨ ರೂಪಾಯಿ ಬರಬೇಕಾಗಿರುತ್ತೆ. ಬಂದರೆ ವರ್ಷ ಪತ್ರಿಕಾ ಚಂದಾಕ್ಕಾಗಿ ರವಾನೇ ಮಾಡಿ ಬರುತ್ತೇನೆ.

ಮಲ್ಲಪ್ಪ.—ಏನು ವೆಂಕಟರಾಯರಶೆಟ್ಟರೇ, ನೀವೂ ಅಲ್ಲಿಗೇ ಹೊರಟರೋ ? (ಎಂದು ನನ್ನನ್ನು ಕೇಳಲು ನಾನು—ಹೌದು, ಟಪಾಲೇನಾದರೂ ಬಂದಿರಬಹುದು. ವೃತ್ತಾಂತ ಪತ್ರಿಕೆಯು ಈ ದಿವಸ ಬರುತ್ತದೆ. ಈ ನಮ್ಮ ಸಂತೆಗಳ ವಿಷಯವಾಗಿ ಏನು ವಿಚಾರ ಹಾಕಿರುತ್ತಾರೋ ನೋಡಬೇಕು. ಟಪಾಲಿಗೆ ಹೋಗಿಬರುತ್ತೇನೆ—ಎಂದೆನು).

ಪಟೇಲ್—ಮಲ್ಲಪ್ಪನವರೇ, ನೀವೂ ಬನ್ನಿ ! ಟಪಾಲಿಗೆ ಹೋಗಿಬರೋಣ (ಎಂದು ಕರೆಯುತ್ತಲೇ ಮೂರು ಜನರೂ ಹೊರಟು ಪೋಸ್ಟ್ ಆಫೀಸ್ ಬಳಿಗೆ ಹೋದನಂತರ)

ಮಲ್ಲಪ್ಪ —ಏನುಸ್ವಾಮಿ ಶ್ರೀನಿವಾಸರಾಯರೇ, ನಮ್ಮವರ ಟಪಾಲು ಏನಾದರೂ ಬಂದಿದೆಯೋ ?

ಪೋಸ್ಟ್ ಮಾಸ್ಟರ್—ಡೇಟು ಒತ್ತುತ್ತೇನೆ ನೋಡೋಣ

ಪಟೇಲ್—ಸ್ವಾಮಿ, ನನ್ನ ಹೆಸರಿಗೆಯಾವದಾದರೂ ೨ ರೂಪಾಯಿ ಮನಿಆರ್ಡರ್ ಬಂದಿದೆಯೋ ?

ಮಲ್ಲಪ್ಪ—ಮುಂಚೆ ಪತ್ರಿಕೇ ಕೊಡಿ. ಅದರಲ್ಲಿ ಯಾವಸಂಗತಿಯೂ ಗೊತ್ತಾಗುತ್ತೆ. ಆಚೇವಾರ ನಾನು ಯಾರದಕೆರೇ ದುರ್ಮರಣದ ವಿಷಯವಾಗಿ ಬರೆದು ಕಳುಹಿಸಿದ್ದ ಬಹುಮಾನದ ಬಾತ್ಮಿಗೆ ಎರಡು ರೂಪಾಯಿ ಬರಬೇಕಾಗಿತ್ತು. ನನ್ನ ಹಣವೇನಾದರೂ ಬಂದರೆ ಆ ಪೈಕಿ ಒಂದು ರೂಪಾಯನ್ನು ನಾನು ತಕೊಂಡು, ಮತ್ತೊಂದು ರೂಪಾಯನ್ನು ಆರು ತಿಂಗಳ ಚಂದಾಕ್ಕಾಗಿ ಪತ್ರಿಕಾ ಕಂಪನಿ ರವಾನಿಸುತ್ತೇನೆ

ಪೋಸ್ಟ್ ಮಾಸ್ಟರ್—ಮರುಳೇಗೌಡರೇ, ನಿಮಗೆ ಯಾವ ಮನಿಆರ್ಡರೂ ಬಂದಿಲ್ಲ. ಮಲ್ಲಪ್ಪನವರ ಮನಿಆರ್ಡರೂ ಬಂದಿಲ್ಲ

ನಂತರ ನಾನು ನನ್ನ ಕೈಲಿದ್ದ ಪತ್ರಿಕೆಯನ್ನು ಓದಿನೋಡಬೇಕೆಂದು ಪ್ರಯತ್ನಿಸಲು ಒಬ್ಬರಿಗಿಂತ ಮತ್ತೊಬ್ಬರು ಮುಂಚಿತವಾಗಿ ಬಿಚ್ಚಿ ಓದಿನೋಡಲು ಮುಂಚೆ "ಬಹುಮಾನದ ಮೇಲಾಟ" ಎಂಬ ಬಾತ್ಮಿ ಎಲ್ಲಿರುವದು ಎಂದು ಹುಡುಕಿ ತೆಗೆದು ಓದಿನೋಡುವಲ್ಲಿ ಶಿಕಾರಿಪುರದ ಬಾತ್ಮಿ ವಿನಹ ಮೇಲ್ಕಂಡವರ ಯಾವ ಬಾತ್ಮಿಗಳೂ ಇರಲಿಲ್ಲ.

ಪಟೇಲ್—ನಮ್ಮ ಗ್ರಾಮದಲ್ಲಿ ಇದುವರಿವಿಗೂ ಬಹುಮಾನಕ್ಕಾಗಿ ಮೂರು ಬಾತ್ಮಿ ರವಾನಿಸಿದ್ದಾಗ್ಯೂ ಒಬ್ಬರಿಗೂ ಬಹುಮಾನ ದೊರಕಲಿಲ್ಲ. ನಮ್ಮ ಗ್ರಾಮದವರು ಅದೃಷ್ಟಹೀನರು.

ಎಂದು ಹೇಳುವಷ್ಟರಲ್ಲಿ ನಾನು ಪತ್ರಿಕೆಯನ್ನು ಬಿಚ್ಚಿ ಹುಡುಕುವಲ್ಲಿ ಪೈಲ್ವಾನರ ಸಾಹಸ ಎಂಬ ಬಾತ್ಮಿ ಕಾಣಿಸಿತು ಇಗೋ ! ನಿಮ್ಮ ಬಾತ್ಮಿ ಇಲ್ಲಿ ಇರುವಂತಿದೆ ಎಂದೆನು

ಪಟೇಲ್—ಎಲ್ಲಿ, ಎಲ್ಲಿ, ತೋರಿಸಿ (ಎಂದು ಪತ್ರಿಕೆಯನ್ನು ಕಿತ್ತುಕೊಂಡು ಓದುತ್ತಾ ಅಲ್ಲಲ್ಲಿಗೇ ನಿಲ್ಲಿಸಿ) ಎರಡು ರೂಪಾಯಿ ಏನು ಕಾರಣ ಕಳುಹಿಸಲಿಲ್ಲ ? ಎಂದು ಕೇಳಿದರು.

ನಾನು—ಈ ಬಾತ್ಮಿಯನ್ನು ಬಹುಮಾನದ ಮೇಲಾಟದ ಬಾತ್ಮಿಗಳಿಗೆ ಸೇರಿಸಿಲ್ಲ.

ಮಲ್ಲಪ್ಪ—ಸಿಕ್ಕಿದವರೆಲ್ಲಾ ಬಾತ್ಮಿಗಳನ್ನು ಬರೆದರೆ ಬಹುಮಾನ ದೊರಕಲಾರದು ಚಂದಾದಾರರು ಹಾಕಿಸಿದರೆ ಬಹುಮಾನ ದೊರಕುತ್ತೆ. ಯಾಕೆಂದರೆ ನಿಜವಾದ ಬಾತ್ಮಿಯನ್ನು ಹಾಕಿಸಿದಾಗ್ಯೂ ಕೆ. ಕೃಷ್ಣಪ್ಪ ಎಂಬುವರಿಗೆ ಬಹುಮಾನ ದೊರಕಲಿಲ್ಲ ಹುಚ್ಚೇನಹಳ್ಳಿಯವರು ಚಂದಾದಾರರಾಗಿದ್ದದ್ದರಿಂದ ತಕ್ಷಣವೇ ಬಹುಮಾನ ದೊರಕಿತು.

ಈ ರೀತಿಯಾದ ದುರಾಶೆಯ ಸಂಭಾಷಣೆಗಳನ್ನು ಆಡುವವರ ಜೊತೆಯಲ್ಲಿಯೇ ಪೋಸ್ಟ್ ಆಫೀಸನ್ನು ಬಿಟ್ಟು ಪೇಟೆಗೆ ಹೊರಟೆನು. ಮಧ್ಯಮಾರ್ಗದಲ್ಲಿ ಎದುರಿಗೆ ಸಿಕ್ಕಿದ ೨—೩ ಜನ ಸ್ನೇಹಿತರು ಇವರನ್ನು ಕುರಿತು—ಏನಿರೈಯ್ಯಾ, ಬಹುಮಾನಗಳೇನಾದರೂ ಬಂದವೋ? ಎಂದು ಪ್ರಶ್ನೆ ಮಾಡಲು, ಇವರು ವ್ಯಾಕುಲಮನಸ್ಸಿನಿಂದ ಬಹುಮಾನವು ಕಾಣೆ, ಗಿಹಮಾನವೂ ಕಾಣೆ ಅನ್ಯಾಯವಾಗಿ ಆಶೆ ಮಾಡಕೊಂಡದ್ದೇ ಸರಿ ಎಂದರು.

ನಂತರ ಪೇಟೇ ಬಜಾರ್ ಬೀದಿಯಲ್ಲಿ ಬರುವಾಗ್ಗೆ ಕೈಲಿದ್ದ ಪತ್ರಿಕೆಯನ್ನು ಕಿತ್ತುಕೊಂಡು ಓದುತ್ತ ನನಗೆ ಬಹುಮಾನದ ಬಾತ್ಮಿ ಸಿಕ್ಕಿದೆ ಎಂತಲೂ ಮತ್ತೊಬ್ಬ ನನಗೊಂದು ಸಿಕ್ಕಿದೆ ಎಂತಲೂ ಒಬ್ಬರಿಗಿಂತೊಬ್ಬರು ಮೇಲುಗಟ್ಟಿ ಮಾತನಾಡಿದರು ಈ ಗ್ರಾಮದಲ್ಲಿ ಅನೇಕರು ಹಣ ಕಂಡರೆ ಹೆಣ ಬಾಯಿಬಿಡುತ್ತೆ ಎಂಬ ಸಾಮತಿಗೆ ಸರಿಯಾಗಿ ಬಹುಮಾನ ಬಾತ್ಮಿಗಳನ್ನೇ ಹಗಲಿರುಳು ಹುಡುಕುತ್ತಿರುವದು ನೋಡುವಲ್ಲಿ ನನಗೆ ತುಂಬಾ ಆಶ್ಚರ್ಯವಾಗಿ ಕಂಡು ಬರುತ್ತಿದೆ. ಮೇಲ್ಕಂಡವರ ವಿಷಯವಾಗಿ 'ಆಶಾಹಿ ಪರಮಂ ದುಃಖಂ ನಿರಾಶಾ ಪರಮಂ ಸುಖಂ' ಎಂಬ ಸಾಮತಿ ಸರಿಯಾಯಿತು

[ಒಬ್ಬ ಬಾತ್ಮಿದಾರರು ಈ ತಮಾಷೆ ಯಾದ ಬಾತ್ಮಿಯನ್ನು ಬರೆದಿರುತ್ತಾರೆ. ಕಚ್ಚಾ ಅಮಲನ್ನು ತಿಳಿಯುವದಕ್ಕೋಸ್ಕರ ಸರ್ಕಾರದವರು ಬಹುಮಾನ ಕೊಡುತ್ತಾರೆಂಬುವದು ನಿಜವಲ್ಲ. ಅದಕ್ಕೆ ಕಾರಣವೂ ಇರುವದಿಲ್ಲ ನಾವಾಗಿಯೇ ನಮ್ಮ ಈ ಪತ್ರಿಕೆಯನ್ನು ಜನರಂಜಕವಾಗಿಯೂ ವಿಶೇಷ ವಿಷಯ ಗರ್ಭಿತವಾಗಿಯೂ ಮಾಡಬೇಕೆಂಬ ಉದ್ದೇಶದಿಂದ ಒಳ್ಳೇ ಬಾತ್ಮಿ ಬರೆದವರಿಗೆ ಬಹುಮಾನವನ್ನು ಕೊಡಲಾರಂಭಿಸಿರುತ್ತೇವೆ. ಅನೇಕ ಬಾತ್ಮಿದಾರರಲ್ಲಿ ತಮ್ಮ ಬಾತ್ಮಿಗೆ ಬಹುಮಾನ ಬರಲಿಲ್ಲವೆಂದು ನಿರಾಶೆಯುಂಟಾಗಬಹುದು. ಆದರೆ ಆಯಾವಾರದಲ್ಲಿ ನಮ್ಮಲ್ಲಿಗೆ ಬರತಕ್ಕ ಅಂಥಾ ಬಾತ್ಮಿಗಳನ್ನೆಲ್ಲಾ ಪರೀಕ್ಷೆ ಮಾಡಿ, ಆ ಪೈಕಿ ನಮಗೆ ತಿಳಿಯುವಮಟ್ಟಿಗೆ ಉತ್ಕೃಷ್ಟವಾದದ್ದೆಂದು ಕಂಡುಬಂದ ಬಾತ್ಮಿಗೆ ಬಹುಮಾನವನ್ನು ಗೊತ್ತುಮಾಡುವೆವು. ಬಹುಮಾನ ಪಡೆಯದ ಅನೇಕ ಬಾತ್ಮಿಗಳನ್ನೂ ಕೂಡ ನಾವು ತಿರಸ್ಕರಿಸದೆ ಬೇರೆ ಬೇರೆ ಭಾಗಗಳಲ್ಲಿ ಪ್ರಕಟ ಮಾಡುವೆವು. ಎಡಿ]—

ಯೂರೋಪ್ಯಿಯನ್ ಸರ್ದಾರರಿಗೆ ದಸರಾ ಔತನವು

ಈ ತಿಂಗಳ ಮೊದಲನೇ ತಾರೀಖಿನ ರಾತ್ರಿ ರಾಜಧಾನಿಯ ಗವರ್ನಮೆಂಟ್ ಹೌಸ್ ಎಂಬ ಬಂಗಲೆಯಲ್ಲಿ ನವರಾತ್ರಿ ಉತ್ಸವಗಳ ನಿಮಿತ್ತ ಕರೆಸಲ್ಪಟ್ಟಿದ್ದ ಯೂರೋಪ್ಯಿಯನ್ ಸರ್ದಾರರಿಗೂ ದೊರೆಸಾನಿಗಳಿಗೂ ಪದ್ಧತಿಯ ಪ್ರಕಾರ ಉತ್ಕೃಷ್ಟವಾದ ಔತನವು ನಡೆಯಿತು ಆಗ ಶ್ರೀಮನ್ ಮಹಾರಾಜರವರೂ ಬ್ರಿಟಿಷ್ ರೆಸಿಡೆಂಟರಾದ ಮಿ॥ ಎಸ್ ಎಂ ಫ್ರೇಸರ್ ಯವರೂ ಬಹು ವಿವೇಕಪೂರ್ವಕವಾದ ಭಾಷಣಗಳನ್ನು ಮಾಡಿದರು ಅವುಗಳ ಅಭಿಪ್ರಾಯಗಳೇನೆಂದರೆ —

ರೆಸಿಡೆಂಟರವರ ಭಾಷಣವು

ಭೋಜನಾನಂತರ ಮೊದಲು ರೆಸಿಡೆಂಟರವರು ಎದ್ದು ಸಭಿಕರಾಗಿದ್ದ ಯೂರೋಪ್ಯಿಯನ್ ಅತಿಥಿಗಳನ್ನು ಕುರಿತು ಶ್ರೀಮನ್ ಮಹಾರಾಜರವರ ವಿಷಯವಾಗಿ ಅಪ್ಪಣೆ ಕೊಡಿಸಿದ್ದೇನೆಂದರೆ—ಈಗ್ಗೆ ಸ್ವಲ್ಪ ದಿನಗಳ ಕೆಳಗೆ (ವರ್ಧಂತಿಯ ಕಾಲದಲ್ಲಿ) ಇದೇ ವಿಧವಾದ ಉಪಚಾರ ನಡೆದ ಸಮಯದಲ್ಲಿ ಶ್ರೀಮನ್ ಮಹಾರಾಜರವರನ್ನು ಕುರಿತು ನಾನು ವಂದಿಸಿದೆನು ಶ್ರೀಮನ್ ಮಹಾರಾಜರವರ ಉದಾರವಾದ ಅತಿಥಿ ಸತ್ಕಾರವನ್ನು ಕುರಿತು ನಾನು ಪದೇ ಪದೇ ಹೊಗಳಬೇಕಾಗಿರುವುದಿಲ್ಲ ವರ್ಧಂತಿಯ ಕಾಲದಲ್ಲಿ ಅತಿಥಿಗಳನ್ನು ಸತ್ಕರಿಸುವುದಕ್ಕಾಗಿ ಮಾಡಲ್ಪಡತಕ್ಕ ಏರ್ಪಾಟಿಗಿಂತಲೂ ಈಗಿನ ಏರ್ಪಾಡುಗಳು ಯಾವ ಭಾಗದಲ್ಲೂ ಕಡಿಮೆಯಾಗಿರುವುದಿಲ್ಲ ಬಹುಕಾಲದಿಂದಲೂ ಈ ದಸರಾ ಮಹೋತ್ಸವವು ಪ್ರಜೆಗಳೂ ಪ್ರಭುಗಳೂ ಒಂದು ಕಡೆ ಸೇರಿ ನಡೆದು, ಪ್ರಜಾಪ್ರತಿನಿಧಿ ಸಭೆ ಕೂಡಿದ ನಂತರ ಮುಕ್ತಾಯವಾಗುತ್ತದೆ ಈ ಪ್ರತಿನಿಧಿ ಸಭೆಯು ಪ್ರಜೆಗಳಿಗೂ ಗವರ್ನಮೆಂಟಿನವರಿಗೂ ಪರಸ್ಪರವಾದ ಉದ್ದೇಶಗಳನ್ನು ತಿಳಿಯಪಡಿಸಿಕೊಳ್ಳತಕ್ಕ ಸಾಧನವಾಗಿರುವುದು ದಸರಾ ಮಹೋತ್ಸವವು ಮೈಸೂರಿನ ಹೊರತು ಮತ್ತಾವ ಚರತಬಂಧ ಭಾಗದಲ್ಲಿಯೂ ಇಷ್ಟು ವಿಜೃಂಭಣೆಯಿಂದ ನೆರವೇರುವುದಿಲ್ಲ ಇದಕ್ಕೆ ಪ್ರಜಾಪ್ರಭುಗಳ ಮಧ್ಯದಲ್ಲಿ ದೃಢವಾಗಿರುವ ಪ್ರೀತಿ ವಿಶ್ವಾಸಗಳೇ ದೊಡ್ಡ ಕಾರಣವು ಈ ನಮ್ಮ ಮಹಾರಾಜರವರು ಕಾಲೋಚಿತವಾದ ಬದಲಾವಣೆಗಳನ್ನು ಆಗಾಗ್ಗೆ ಮಾಡುತ್ತಿದ್ದರೂ, ಪ್ರಜೆಗಳ ಮನಸ್ಸಿಗೆ ಹಿತವಾದ ಪ್ರಾಚೀನ ಪದ್ಧತಿಗಳನ್ನು ಬಿಡದೆ ನಡಿಸಿಕೊಂಡು ಬರುತ್ತಿರುವುದರಿಂದ ಇವರ ವಿಷಯದಲ್ಲಿ ಪ್ರಜೆಗಳು ಅಚಲವಾದ ಭಕ್ತಿಯನ್ನಿಟ್ಟುಕೊಂಡಿರುತ್ತಾರೆ ಈ ಮಹೋತ್ಸವದಲ್ಲಿ ಕೆಲವು ಭಾಗವನ್ನು ನಾವುಗಳೂ ನೋಡಿ ಆನಂದಪಡುವುದಕ್ಕೆ ಅವಕಾಶವನ್ನುಂಟುಮಾಡಿದ್ದಕ್ಕಾಗಿ ನಾವೆಲ್ಲರೂ ಶ್ರೀಮನ್ ಮಹಾರಾಜರವರನ್ನು ಅಭಿನಂದಿಸುವೆವು ಹಿಂದೆ ಪ್ಲೇಗು ಪ್ರಬಲಿಸಿ, ಕೆಲವು ಕಾಲ ಈ ಉತ್ಸವದ ಸೊಬಗನ್ನೇ ಹಾಳುಮಾಡಿತು ಅದರಿಂದ ಪ್ರಭುಗಳಿಗೂ ಪ್ರಜೆಗಳಿಗೂ ತುಂಬಾ ವ್ಯಾಕುಲವುಂಟಾಗಿತ್ತು ಈ ಮಹೋತ್ಸವಕ್ಕೆ ಸಂಸ್ಥಾನದ ನಾನಾ ಭಾಗಗಳಿಂದ ಜನಗಳು ಬರುವುದಕ್ಕೆ ಅವಕಾಶವಿರಲಿಲ್ಲ ಇಲ್ಲಿನ ಗವರ್ನಮೆಂಟಿನವರು ರಾಜಧಾನಿಯಲ್ಲಿ ಆರೋಗ್ಯದ ಏರ್ಪಾಡನ್ನು ಚೆನ್ನಾಗಿ ಮಾಡುತ್ತಾ ಆ ಭಯಂಕರವಾದ ರೋಗವನ್ನು ಇಲ್ಲಿಂದ ಓಡಿಸಿಬಿಟ್ಟರು ಮತ್ತೆ ಅದು ಇಲ್ಲಿಗೆ ಕಾಲಿಕ್ಕದೆ ಇರಬೇಕೆಂದು ನಾನು ಪ್ರಾರ್ಥಿಸುತ್ತೇನೆ ಈ ದಿನ ಬೆಳಿಗ್ಗೆ ದಿವಾನರವರು ಪ್ರತಿನಿಧಿ ಸಭೆಯಲ್ಲಿ ಮಾಡಿದ ಉಪನ್ಯಾಸದಿಂದ ಸಂಸ್ಥಾನದಲ್ಲಿ ಮಳೆ ಬೆಳೆಗಳು ಅನುಕೂಲವಾಗಿ ಆಗಿರುವವೆಂದು ತಿಳಿಯಬಂದಿದೆ ಇದರಿಂದ ನಮ್ಮ ಸಂತೋಷವು ಮತ್ತಷ್ಟು ಹೆಚ್ಚಿದೆ ಶ್ರೀಮನ್ ಮಹಾರಾಜರವರಿಗೂ ಅವರ ಮಂತ್ರಿಗಳಾದ ಮಿ॥ ಮಾಧವರಾಯರಿಗೂ ಸುಖವುಂಟಾಗಲೆಂದು ನಾವುಗಳೆಲ್ಲರೂ ಪ್ರಾರ್ಥಿಸುತ್ತೇವೆ ಎಂಬುದೆ

ಶ್ರೀಮನ್ ಮಹಾರಾಜರವರ ಉತ್ತರ

ತರುವಾಯ ಶ್ರೀಮನ್ ಮಹಾರಾಜರವರು ಎದ್ದು ರೆಸಿಡೆಂಟರನ್ನೂ ಅತಿಥಿಗಳನ್ನೂ ಕುರಿತು ಅಪ್ಪಣೆ ಕೊಡಿಸಿದ ಪ್ರತ್ಯುತ್ತರವೇನೆಂದರೆ— ನೀವುಗಳೆಲ್ಲ ನಮ್ಮ ಶ್ರೇಯಃಪ್ರಾರ್ಥನೆ ಮಾಡಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇವೆ ನಮ್ಮ ಹೊಸ ಮತ್ತು ಹಳೆಯ ಸ್ನೇಹಿತರೆಲ್ಲ ನಮ್ಮ ಆಹ್ವಾನವನ್ನನುಮೋದಿಸಿ, ಇಲ್ಲಿಗೆ ಬಂದುದಕ್ಕಾಗಿ ನಮಗೆ ಅಪಾರವಾದ ಸಂತೋಷವುಂಟಾಗಿದೆ ಈ ವರ್ಷದ ದಸರಾ ಮಹೋತ್ಸವ ಸಮಯದಲ್ಲಿ ಅತಿಥಿಗಳಿಗೆ ಬೇಟೆಯ ಏರ್ಪಾಡನ್ನು ಮಾಡಿಕೊಟ್ಟುದು ಒಂದು ವಿಶೇಷ ಸಂಗತಿಯಾಗಿದೆ ಈ ಸಂಸ್ಥಾನವು ಮೃಗಬೇಟೆಗೆ ಪ್ರಸಿದ್ಧವಾದದ್ದು ನಮ್ಮ ತೀರ್ಥರೂಪರವರು ಈ ಮೃಗಯಾವಿಹಾರದಲ್ಲಿ ವಿಶೇಷ ಉತ್ಸಾಹವುಳ್ಳವರಾಗಿದ್ದರು ಅವರು ಮಿ॥ ಡೇವಿಯವರೊಡನೆ ಕೂಡಿ, ಬೇಟೆ ನಾಯಿಗಳ ಮಂದೆಯನ್ನು ಇಟ್ಟುಕೊಂಡು ಬೇಟೆಯಾಡಿಕೊಂಡು ಬರುತ್ತಿದ್ದರು ಸಂಸ್ಥಾನದ ದಿವಾನರು, ಇತರ ಅಧಿಕಾರಿಗಳು, ಪ್ಲಾಂಟರುಗಳ ಮತ್ತು ಗಣಿ ಕಂಪನಿಗಳ ಪ್ರತಿನಿಧಿಗಳು—ಇವರೆಲ್ಲಾ ಬಂದು ದಸರಾ ಮಹೋತ್ಸವವನ್ನು ವಿಶೇಷ ಸಂಭ್ರಮಯುಕ್ತವಾಗುವಂತೆ ಮಾಡಿರುತ್ತಾರೆ ನಮಗೂ ನಮ್ಮ ಗವರ್ನಮೆಂಟಿನ ಅಧಿಕಾರಿಗಳಿಗೂ ಕಳೆದ ವರುಷದ ಸಂಸ್ಥಾನದ ಆಡಳಿತವನ್ನೆಲ್ಲಾ ಪರೀಕ್ಷಿಸಿ ಮುಂದೆ ಯಾವ ಯಾವ ಏರ್ಪಾಡುಗಳನ್ನು ಮಾಡಬೇಕೆಂಬುದನ್ನು ಗೊತ್ತುಮಾಡಿಕೊಳ್ಳುವುದಕ್ಕೆ ಇದು ತಕ್ಕ ಸಮಯವಾಗಿದೆ ದಿವಾನರವರು ಸಂಸ್ಥಾನದ ಆಡಳಿತವನ್ನೆಲ್ಲಾ ಈ ದಿವಸ ಸಭೆಯಲ್ಲಿ ತಿಳಿಯಪಡಿಸಿದಾರೆ ಅದನ್ನು ತೃಪ್ತಿಕರವಾಗಿ ವಿವರಿಸುವುದರಲ್ಲಿ ಅವರು ತೋರಿಸಿರುವ ಸಾಮರ್ಥ್ಯವನ್ನು ಕುರಿತು ನಮಗೆ ಉಂಟಾಗಿರುವ ಸಂತೋಷದಲ್ಲಿ ನೀವೂ ಭಾಗಿಗಳಾಗಿದ್ದೀರೆಂದು ನಂಬಿರುತ್ತೇವೆ ಕಳೆದ ಎರಡು ವರ್ಷಗಳಿಂದ ತಕ್ಕಷ್ಟು ಮಳೆಯಾಗದೆ ಇತ್ತು ಆದರೆ ಈ ವರ್ಷ ಅನುಕೂಲವಾಗಿ ಬೆಳೆ ಆಗುವದೆಂಬ ಸೂಚನೆಯು ಚೆನ್ನಾಗಿದೆ ಮಿ॥ ಮಾಧವರಾಯರು ನಮಗೂ ಇಲ್ಲಿರುವ ಅನೇಕರಿಗೂ ಪೂರ್ಣ ಪರಿಚಯವುಳ್ಳವರಾಗಿರುತ್ತಾರೆ ಸಂಸ್ಥಾನದ ಸುಭಿಕ್ಷ ಸಮಯದಲ್ಲಿ ಇವರ ದಿವಾನಗಿರಿಯು ಆರಂಭಿಸಿದುದನ್ನು ಕುರಿತು ನಾವು ಅಭಿನಂದಿಸುವುದರಲ್ಲೂ, ಅವರ ಉದ್ಯೋಗದ ಅವಧಿಯು ಅಭಿವೃದ್ಧಿಯನ್ನೂ ಸಾಫಲ್ಯವನ್ನೂ ಹೊಂದಲೆಂದು ಕೋರುವುದರಲ್ಲೂ ನಮ್ಮ ಕೂಡ ತಾವುಗಳೂ ಭಾಗಿಗಳಾಗಿರಬೇಕೆಂದು ಅಪೇಕ್ಷಿಸುತ್ತೇವೆ ಎಂಬುದೇ

ಮೈಸೂರು ಸರ್ಕಾರಿ ಹುಕುಮುಗಳು.

ಪ್ರಜಾಪ್ರತಿನಿಧಿಗಳೂ ಸರ್ಕಾರಿ ರಿಕಾರ್ಡುಗಳೂ

ಕಳೆದ ೧೯೦೪ ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವು ಮೆಂಬರುಗಳು ಸರ್ಕಾರಿ ರಿಕಾರ್ಡುಗಳನ್ನು ನೋಡುವುದಕ್ಕೆ ತಮಗೆ ಅವಕಾಶ ಕೊಡಬೇಕೆಂತಲೂ ಇದರಿಂದ ಸರ್ಕಾರಿ ಕೆಲಸ ಕಾರ್ಯಗಳಿಗೆ ತುಂಬಾ ಸಹಾಯವಾಗುವುದೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಂಡರು ಗವರ್ನಮೆಂಟಿನವರು ಇಂಥಾ ರಿಕಾರ್ಡುಗಳನ್ನು ಎಷ್ಟು ಮಟ್ಟಿಗೆ ಪ್ರತಿನಿಧಿಗಳಿಗೆ ನೋಡಲು ಅವಕಾಶ ಕೊಡಬಹುದೆಂದು ಡೆಪ್ಯುಟಿ ಕಮಿಷನರುಗಳಿಂದಲೂ ರೆವಿನ್ಯೂ ಕಮಿಷನರುಗಳಿಂದಲೂ ಅವರವರ ಅಭಿಪ್ರಾಯಗಳನ್ನು ಕೇಳಿ ತರಿಸಿಕೊಂಡು, ಅದರ ಮೇಲೆ ಹುಕುಂ ಕೊಟ್ಟಿರುವುದೇನೆಂದರೆ—ಗವರ್ನಮೆಂಟಿನವರು ಕೆಲವು ಸರ್ಕಾರಿ ಹುಕುಮುಗಳನ್ನು ವರ್ತಮಾನ ಪತ್ರಿಕೆಗಳಿಗೆ ಕಳುಹಿಸುತ್ತಾರೆ ಇಂಥಾ ಹುಕುಮುಗಳ ಪಟ್ಟಿಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುವವು ಅವುಗಳ ಪೈಕಿ ಯಾವುದನ್ನಾದರೂ ನೋಡಬೇಕೆಂದು ಪ್ರಜಾಪ್ರತಿನಿಧಿಗಳು ಅಪೇಕ್ಷಿಸಿದರೆ ಅವರಿಗೆ ಅವುಗಳನ್ನು ತೋರಿಸತಕ್ಕದ್ದು ಗೋಪ್ಯವಾದವುಗಳಲ್ಲದೆ ಇರುವಂಥಾ ಇತರ ಸರ್ಕಾರಿ ಹುಕುಂಗಳನ್ನು ನೋಡಲಪೇಕ್ಷಿಸಿದಲ್ಲಿ ಡೆಪ್ಯುಟಿ ಕಮಿಷನರುಗಳು ಸೂಕ್ತ ತೋರಿದ ರೀತಿ ತೋರಿಸಲೂ ಅಥವಾ ತಿರಸ್ಕರಿಸಲೂ ಬಹುದಾಗಿದೆ

ಸೈನ್ಯದ ಬಟವಾಡೆ ಹಣಕಾಸುಗಳ ಜಮಾಖರ್ಚು

ಮೈಸೂರು ಸಂಸ್ಥಾನದ ಮಿಲ್ಟೇರಿ ಇಲಾಖೆಯ ನೌಕರಮಾನ್ಯರಿಗೆ ಸಂಬಳ ಬಟವಾಡೆ ಮಾಡುವುದಕ್ಕೂ ಹಣಕಾಸುಗಳ ಲೆಕ್ಕದ ಪಟ್ಟಿಗಳನ್ನು ತಯಾರುಮಾಡುವುದಕ್ಕೂ ಯೋಗ್ಯತೆಯನ್ನು ಪಡೆದಿರುವಂಥಾ ಒಬ್ಬ ರಿಸಾಲ್ದಾರನನ್ನು ನೇಮಕ ಮಾಡಿ ಆತನ ಕೈಕೆಳಗೆ ಸ್ವಲ್ಪ ಸಿಬ್ಬಂದಿಯನ್ನು ಕೊಡಬೇಕೆಂದು ಗವರ್ನಮೆಂಟಿನವರು ಯೋಚಿಸಿ ಚೀಫ್ ಕಮ್ಯಾಂಡೆಂಟರ ಅಭಿಪ್ರಾಯವನ್ನು ಕೇಳಿದರು ಅವರು ಒಬ್ಬ ರಿಸಾಲ್ದಾರನಿಂದ ಬೆಂಗಳೂರು, ಮೈಸೂರು, ಶಿವಮೊಗ್ಗೆ ಮೊದಲಾದ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೆಲ್ಲಾ ಬಟವಾಡೆ ಮಾಡಿಸಿ ಲೆಕ್ಕಗಳನ್ನು ಒಪ್ಪಿಸುವುದು ಸಾಧ್ಯವಲ್ಲವೆಂತಲೂ ಒಂದೊಂದು ಸರ್ಕಲ್ ಹೆಡ್ ಕ್ವಾರ್ಟರಿಗೆ ಒಬ್ಬೊಬ್ಬ ಆಫೀಸರನ್ನು ಈ ಕೆಲಸಕ್ಕೆ ನೇಮಕ ಮಾಡಬಹುದೆಂತಲೂ, ಇವರು ರೆಜಿಮೆಂಟಿಗೆ ಸೇರಿದವರಾಗಿಯೂ ಕಂಟ್ರೋಲರವರ ಆಫೀಸಿನಲ್ಲಿ ಕೆಲವು ಕಾಲ ಇದ್ದು ಲೆಕ್ಕಾಚಾರಗಳನ್ನು ಕಲಿತು ಬಂದವರಾಗಿಯೂ ಇದ್ದ ಪಕ್ಷದಲ್ಲಿ ಕಮಾಂಡೆಂಟರಿಗೆ ಈಗಿರುವ ಹಣಕಾಸಿನ ಜವಾಬ್ದಾರಿ ಬಹು ಮಟ್ಟಿಗೆ ಕಡಿಮೆಯಾಗುತ್ತೆಂತಲೂ, ಅವರು ವಿಶೇಷ ಸಮಯವನ್ನು ಸೈನ್ಯದ ತರಬೇತಿಗೇನೇ ವಿನಿಯೋಗಿಸಲು ಅನುಕೂಲಿಸುವುದೆಂತಲೂ, ಗವರ್ನಮೆಂಟಿಗೆ ತಿಳಿಸಿದರು ಇದರ ಮೇಲೆ ಮಿಲ್ಟೇರಿ ಸೆಕ್ರೆಟರಿಯವರು ಚೀಫ್ ಕಮ್ಯಾಂಡೆಂಟರ ತಾಕೀದುದಾರರನ್ನು ಈ ಕೆಲಸಕ್ಕೆ ನೇಮಿಸಿದರೆ ಹಣಕಾಸು ಲೆಕ್ಕಪತ್ರಗಳ ತನಿಖೆ ಅಷ್ಟು ತೃಪ್ತಿಕರವಾದದ್ದಾಗಿರುವುದಿಲ್ಲವೆಂತಲೂ, ಇದಕ್ಕೆ ಬದಲಾಗಿ ಸ್ಕ್ವಾಡ್ರನ್ ಕಮ್ಯಾಂಡರುಗಳಿಗೆ ಈ ಜವಾಬ್ದಾರಿ ವಹಿಸಬಹುದೆಂತಲೂ, ಇದು ಸಾಧ್ಯವಲ್ಲವಾದರೆ ರೆಜಿಮೆಂಟ್ ದಾರರಿಗಿಂತಲೂ ಮೇಲ್ಪಟ್ಟ ಅಧಿಕಾರವನ್ನುಳ್ಳಂಥಾ ಬೇರೆ ಒಬ್ಬ ಅಧಿಕಾರಿಯನ್ನೇ ಈ ವಿಷಯಕ್ಕೆ ನೇಮಿಸಬಹುದೆಂದಲೂ ಅಭಿಪ್ರಾಯ ಪಟ್ಟರು ಅತ್ತಲಾಗಿ ಗವರ್ನಮೆಂಟ್ ಕಂಟ್ರೋಲರವರ ಮಿಲ್ಟೇರಿ ಇಲಾಖೆಯ ಹಣಕಾಸಿನ ಮೇಲ್ವಿಚಾರಣೆಯೆಲ್ಲಾ ತಮ್ಮ ಆಫೀಸಿನಲ್ಲೇ ಕ್ರಮವಾಗಿ ನಡೆಯುತ್ತಿದೆ ಎಂತಲೂ, ಮಿಲ್ಟೇರಿ ಅಸಿಸ್ಟೆಂಟರೂ ಚೀಫ್ ಕಮ್ಯಾಂಡೆಂಟರೂ ತಮ್ಮ ತಮ್ಮ ಅಸಿಸ್ಟೆಂಟರುಗಳ ಮೂಲಕ ತಮ್ಮ ಇಲಾಖಾ ಲೆಕ್ಕಾಚಾರಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬಂದರೆ ಸಾಕಾಗಿದೆ ಎಂತಲೂ ಗವರ್ನಮೆಂಟಿಗೆ ತಿಳಿಸಿದರು ಇದರ ಮೇಲೆ ಗವರ್ನಮೆಂಟಿನವರು ಕಂಟ್ರೋಲರವರ ಅಭಿಪ್ರಾಯವನ್ನೇ ಅನುಮೋದಿಸಿ ಕೊಟ್ಟಿರುವ ಹುಕುಂ ಏನೆಂದರೆ—ಹಣಕಾಸುಗಳ ಲೆಕ್ಕಾಚಾರದ ಮೇಲ್ವಿಚಾರಣೆ ಈಗಿರುವುದು ಸಾಕಾಗಿದೆ, ಬದಲಾವಣೆ ಯೇನೂ ಅವಶ್ಯವಿಲ್ಲ ಸಂಬಳ ಬಟವಾಡೆ ಮಾಡುವುದು, ಲೆಕ್ಕ ಪತ್ರಗಳನ್ನು ಕ್ರಮಪಡಿಸುವುದು, ಈ ಭಾಗಗಳ ಜವಾಬ್ದಾರಿಯನ್ನು ಸ್ಕ್ವಾಡ್ರನ್ ಕಮ್ಯಾಂಡರುಗಳಿಗೆ ವಹಿಸಬಹುದಾಗಿದೆ ಈ ಕೆಲಸಕ್ಕೆ ಅವರ ಪೈಕಿ ಬುದ್ಧಿವಂತರನ್ನೂ ವಿದ್ಯಾವಂತರನ್ನೂ ಆರಿಸಿ ಗೊತ್ತುಮಾಡಬೇಕು ಈ ಏರ್ಪಾಡು ಒಂದು ವರುಷ ಹಂಗಾಮಿಯಾಗಿ ನಡಿಸಿ, ಸಾಧಕ ಬಾಧಕಗಳನ್ನು ಕುರಿತು ಗವರ್ನಮೆಂಟಿಗೆ ರಿಪೋರ್ಟ್ ಕಳುಹಿಸಬೇಕು

ಒಬ್ಬ ಪ್ರತಿನಿಧಿಯ ಚುನಾವಣೆಯ ಆಕ್ಷೇಪವು.

ಮಿ॥ ಆಲಂಪಳ್ಳಿ ವೆಂಕಟನಾರಣಪ್ಪಯ್ಯನವರು ದೊಡ್ಡಬಳ್ಳಾಪುರದ ತಾಲೂಕಿನಿಂದ ೧೯೦೬ ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಗೆ ತಾವು ಚುನಾಯಿಸಲ್ಪಟ್ಟಿದ್ದರೂ ಮೆಂಬರುಗಳ ಪಟ್ಟಿಯಲ್ಲಿ ತಮ್ಮ ಹೆಸರು ದಾಖಲಾಗಿಲ್ಲವೆಂದು ಹೇಳಿ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು ಗವರ್ನಮೆಂಟಿನವರು ಡೆಪ್ಯುಟಿ ಕಮಿಷನರಿಂದ ರಿಪೋರ್ಟ್ ತರಿಸಿಕೊಂಡು, ಹುಕುಂ ಕೊಟ್ಟಿರುವುದೇನೆಂದರೆ—ದೊಡ್ಡ ಬಳ್ಳಾಪುರದಲ್ಲಿ ಮೊಹತರ್ಫಾ ಕಂದಾಯ ಕೊಡತಕ್ಕವರನ್ನೆಲ್ಲಾ ಒಂದು ಕಡೆಯೂ ಜಮೀನ್ ಕಂದಾಯ ಕೊಡತಕ್ಕವರನ್ನು ಇನ್ನೊಂದು ಕಡೆಯೂ ಸೇರಿಸಿ, ಮೊದಲನೆಯವರು ಒಬ್ಬ ಪ್ರತಿನಿಧಿಯನ್ನೂ ಎರಡನೆಯವರು ಮೂವರು ಪ್ರತಿನಿಧಿಗಳನ್ನೂ ಚುನಾಯಿಸುವಂತೆ ಏರ್ಪಾಡು ಮಾಡಿ ಅದರಂತೆ ಚುನಾವಣೆಯೂ ಆಯಿತು ಮೊದಲನೆಯ ಗುಂಪಿನವರು ಅರ್ಜಿದಾರರನ್ನು ಮೆಂಬರಾಗಿ ಚುನಾಯಿಸಿದರು ಆದರೆ ಅದಕ್ಕೆ ಪೂರ್ವದಲ್ಲೇ ದೊಡ್ಡಬಳ್ಳಾಪುರದ ಮ್ಯುನಿಸಿಪಾಲಿಟಿಯವರು ಇನ್ನೊಬ್ಬ ಮೆಂಬರನ್ನು ಚುನಾಯಿಸಿದ್ದರು ಆ ಕಾರಣ ಮಿ॥ ವೆಂಕಟನಾರಣಪ್ಪಯ್ಯನವರ ಹೆಸರನ್ನು ವಜಾ ಮಾಡಬೇಕಾಯಿತು ಎಂಬದಾಗಿ ಡೆಪ್ಯುಟಿ ಕಮಿಷನರು ತಿಳಿಸುತ್ತಾರೆ ಅಲ್ಲಿ ಚುನಾವಣೆ ನಡೆದ ಕ್ರಮವು ಎಷ್ಟು ಮಾತ್ರವೂ ಕ್ರಮವಾಗಿಲ್ಲ ಓಟರು (ಸಮ್ಮತಿ ಕೊಡುವವರು) ಗಳನ್ನು ಮೇಲ್ಕಂಡಂತೆ ಎರಡು ಪಂಗಡವಾಗಿ ವಿಭಾಗಮಾಡಿದ್ದಕ್ಕೆ ಯಾವ ಆಧಾರವೂ ಇಲ್ಲ ಇದರಿಂದ ಮೊಹತರ್ಫಾ ಕೊಡುವ ಓಟರುಗಳ ಸಮ್ಮತಿಗಳು ನಿರರ್ಥಕವಾದವು ಈಗ ಚುನಾಯಿಸಲ್ಪಟ್ಟಿರುವವರನ್ನೂ ಕೂಡ ಆ ತಾಲ್ಲೂಕಿನ ಓಟರುಗಳೆಲ್ಲಾ ಒಟ್ಟು ಸೇರಿ ಚುನಾಯಿಸಿರುವುದಿಲ್ಲ ಆದ್ದರಿಂದ ಇವರನ್ನು ರೂಲಿನ ಪ್ರಕಾರ ಮೆಂಬರಾಗಿ ಎಣಿಸಲಿಕ್ಕಾಗದು ಈಗ ಚುನಾವಣೆ ಆಗಿಹೋಗಿದೆ ಇದನ್ನೀಗ ರದ್ದುಮಾಡಿ ಬೇರೊಂದು ಚುನಾವಣೆಯನ್ನು ಮಾಡಿಸುವುದಕ್ಕೆ ಅವಕಾಶವಿಲ್ಲ ೧೯[illegible]ನ ಇಸವಿ ಪ್ರತಿನಿಧಿ ಸಭೆಗೆ ಆ ನಾಲ್ವರು ಮೆಂಬರುಗಳಲ್ಲದೆ ಮಿ॥ ವೆಂಕಟನಾರಣಪ್ಪಯ್ಯನವರನ್ನೂ ಒಬ್ಬ ಸ್ಪೆಷಲ್ ಮೆಂಬರಾಗಿ ಬರುವ ಅವಕಾಶ ಕೊಟ್ಟಿದೆ ಬರುವ ವರುಷ ರೂಲಿಗೆ ಅನುಸಾರವಾಗಿ ಓಟರುಗಳನ್ನು ಸೇರಿಸಿ ಬೇರೆ ಮೆಂಬರುಗಳನ್ನು ಚುನಾಯಿಸಬೇಕು ಅಮಲ್ದಾರರು ಡೆಪ್ಯುಟಿ ಕಮಿಷನರಿಗೆ ಬರೆದಿರುವ ರಿಪೋರ್ಟಿನಲ್ಲಿ ಸ್ಥೇದಾರರು ತಮ್ಮ ಹೇಳಿಕೆಯ ಪ್ರಕಾರ ಇಂಥಾ ಅಕ್ರಮವಾದ ವಿಭಾಗವನ್ನು ಜರುಗಿಸಿದರೆಂದು ಹೇಳುತ್ತಾರೆ ಅಮಲ್ದಾರರು ರೂಲುಗಳನ್ನು ಸರಿಯಾಗಿ ತಿಳಿದುಕೊಂಡು ಅದರಂತೆ ಚಲಾಯಿಸಲಿಲ್ಲವೆಂದು ಗವರ್ನಮೆಂಟಿನವರು ವಿಷಾದಪಡುವರು

ಹೊನ್ನಾಳಿ ತಾ॥ ಜೋಗದ ವ್ಯವಸಾಯದ ಬ್ಯಾಂಕು

ಆ॥ ಕಮಿಷನರ್ ಮಿ॥ ಮತ್ತನ್ ಯವರು ಹೊನ್ನಾಳಿ ತಾಲೂಕಿಗೆ ಸೇರಿದ ಜೋಗಿನಲ್ಲಿರುವ ವ್ಯವಸಾಯದ ಬ್ಯಾಂಕಿನ ೧೯[illegible] ಏಪ್ರಿಲ್ ೩೦ರಲ್ಲಿ ಅಜಮಾಯಿಷಿ ಮಾಡಿ ಮೇಲಕ್ಕೆ ರಿಪೋರ್ಟು ಬರೆದರು ಅದರ ಮೇಲೆ ಗವರ್ನಮೆಂಟಿನವರು ಅಪ್ಪಣೆಕೊಟ್ಟಿರುವುದೇನೆಂದರೆ—ಈ ರಿಪೋರ್ಟಿನಿಂದ ಈ ಬ್ಯಾಂಕಿನಲ್ಲಿ ಮುಂದೆ ಹೇಳುವ ಲೋಪಗಳೂ ಅಕ್ರಮಗಳೂ ಕಂಡುಬರುತ್ತವೆ (೧) ಬ್ಯಾಂಕಿನ ಸ್ವತ್ತುಗಳು ಪರಾಧೀನಮಾಡಲ್ಪಡದಂತೆ ಬ್ಯಾಂಕು ಗ್ಯಾರಂಟಿ ಎಂಬ ಜವಾಬ್ದಾರಿ ಅಧಿಕಾರವನ್ನು ಪಡೆದಿಲ್ಲ (೨) ಷೇರುಗಳು ಬ್ಯಾಂಕಿನ ಪಾವತಿ ಆದದ್ದಕ್ಕೆ ಪ್ರಾಮಿಸರಿ ನೋಟುಗಳನ್ನು ತೆಗೆದಿಟ್ಟುಕೊಂಡಿಲ್ಲ (೩) ಕೆಟ್ಟಂದಿ ಸಾಮಿಲ್ಯಾರು ಖರ್ಚುಗಳಿಗೆ ರಿಜಿಸ್ಟರ್ ಪುಸ್ತಕಗಳನ್ನು ಇಟ್ಟಿಲ್ಲ ಮತ್ತು ಆಸಾಮಿಗಳಿಂದ ಸಾಲದ ರಸೀತಿಗಳನ್ನು ತೆಗೆದಿಟ್ಟಿಲ್ಲ (೪) ಏಜೆಂಟರಿಗೆ ವರುಷಕ್ಕೆ ೩ [illegible] ಕಮಾಯಿಸಂತೆ ರು[illegible] ಸಲ್ಲುತ್ತದೆ (೫) ಸಾಲಗಳನ್ನು ಕೊಡುವ [illegible] ರಿಜಿಸ್ಟರ್ ಪುಸ್ತಕವನ್ನಿಟ್ಟಿಲ್ಲ (೬) ಜಾಸ್ತಿ ಕಟ್ಟುವಳಿಯದ್ದನ್ನು ಬಿಡುವ (ಮೂಲಧನ ಫಂಡಿಗೆ ತೆಗೆದಿಡಲಿಲ್ಲ ೧೯[illegible] ಮಾರ್ಚಿ ೩೧ ರಿಂದೀಚೆಗೆ ಬ್ಯಾಂಕಿನ ಜನರಲ್ ಮೀಟಿಂಗ್ ನಡೆದಿಲ್ಲ ಮೀಟಿಂಗ್ ತಾರೀಖುಗಳನ್ನು ಮೆಂಬರುಗಳಿಗೆ ತಿಳಿಸುವ ನೋಟೀಸುಗಳನ್ನೂ ಕಳುಹಿಸಿಲ್ಲ (೭) ಜನರಲ್ ಮೀಟಿಂಗ್ ಡೈರೆಕ್ಟರುಗಳನ್ನಾಗಲಿ ಆಡಿಟರುಗಳನ್ನಾಗಲಿ ಚುನಾಯಿಸಿಲ್ಲ ಮ[illegible] ಅವರು ಮೀಟಿಂಗುಗಳನ್ನೇ ನಡಿಸಿಲ್ಲ (೮) ಏಜೆಂಟರು ತಮ್ಮ ಮ[illegible]ವೆ ಖರ್ಚಿಗೆ ೧೦೦ ರೂಪಾಯಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡಾರೆ (೯) ಬ್ಯಾಂಕಿಗೆ ಆಧಾರ ಮಾಡಿಕೊಂಡಿರುವ ಆಸ್ತಿಗಳ [illegible]ಯವಾದ ಪತ್ರಗಳನ್ನು ಕ್ರಮ ಪ್ರಕಾರ ಬರೆಯಲ್ಪಟ್ಟಿಲ್ಲ ಸಾಲ [illegible] ಮಾಡಿಕೊಂಡವರು ಇಷ್ಟು ದಿನದಲ್ಲಿ ಸಾಲ ತೀರಿಸುತ್ತೇವೆಂದು ವಾಗ್ದಾನ ಮಾಡಿ ಬರೆದಿಲ್ಲ (೧೦) ಬಡ್ಡಿಯನ್ನು ಸರಿಯಾಗಿ ಮೆಂಬರುಗಳಿಂದ [illegible] ತಗಾದೆ ಮಾಡಿ ಸಾಲದ ಹಣವನ್ನು ವಸೂಲ್ಮಾಡಿಲ್ಲ ನೌಕರ[illegible] ಯಾರೂ ಮೆಂಬರುಗಳೂ ಎಲ್ಲಾ ವಾಯಿದೆಗೆ ಪಾವತಿ ಮಾಡದೆ ಇರುತ್ತಾರೆ ಮೃತಪಟ್ಟ ಪ್ರೆಸಿಡೆಂಟರು ಈ ಭಾಗದಲ್ಲಿ ಮೊದಲನೆ [illegible] ತಸ್ಥರಾಗಿದ್ದರು (೧೧) ಸುಮಾರಾಗಿ ಬ್ಯಾಂಕಿನಲ್ಲಿ ಇಡಬೇಕಾದ ಇನ್ನೂ [illegible] ರಿಜಿಸ್ಟರುಗಳನ್ನು ಇಟ್ಟೇ ಇಲ್ಲ ಗವರ್ನಮೆಂಟಿನವರು ಈ ಲೋಪಗಳನ್ನು ನೋಡಿ ಸರಿಪಡಿಸಬೇಕೆಂದು ಡೆಪ್ಯುಟಿ ಕಮಿಷನರಿಗೆ ಹುಕುಂ ಕೊಟ್ಟಿದ್ದರ ಮೇಲೆ ಅವರು ಬ್ಯಾಂಕಿನವರಿಗೆ ಸರಿಯಾದ [illegible] ಹುಕುಂ ಕೊಟ್ಟಿವೆಂತಲೂ ಏಜೆಂಟರು ಎಲ್ಲಾ ಸರಿಪಡಿಸುವಂತೆ ವಾಗ್ದಾನ ಮಾಡಿದಾರೆಂತಲೂ ೧೯೦೫ನೇ ಮೇ ೩೧ರಲ್ಲಿ ಗವರ್ನಮೆಂಟಿಗೆ ರಿಪೋರ್ಟ್ ಕಳುಹಿಸಿದರು ಒಂದು ವರುಷವಾದಾಗ್ಯೂ ಆ ಅಕ್ರಮಗಳನ್ನು ಸರಿಪಡಿಸಿಲ್ಲ ಇನ್ನೂ ಹಾಗೇ ಇರುತ್ತವೆ ಬ್ಯಾಂಕಿನ ಅಧಿಕಾರಿಗಳು ಬೇಗನೆ ಇವನ್ನೆಲ್ಲಾ ಕ್ರಮಪಡಿಸದೆ ಹೋದರೆ ಅದನ್ನು ಮುಚ್ಚಿಬಿಡುವಂತೆ ಹುಕುಂ ಕೊಡಬೇಕಾಗ ಬರುವುದೆಂಬ ಸಂಗತಿಯನ್ನು ಕೂಡ ತಿಳಿಸಿ ಇನ್ನೊಂದಾವರ್ತಿ ಎಚ್ಚರಿಸಬೇಕು ಗವರ್ನಮೆಂಟಿನವರು ಈ ಬ್ಯಾಂಕಿಗೆ ೩,೫೦೦ ರೂಪಾಯಿ ಅಡ್ವಾನ್ಸು ಕೊಟ್ಟಿದೆ ಇದನ್ನು ಐದು ಕಿಸ್ತುಗಳಲ್ಲಿ ಪಾವತಿ ಮಾಡಬೇಕೆಂದು ಕರಾರಾಗಿತ್ತು ವಾಯಿದೆ ಕಳೆದುಹೋಗಿದ್ದಾಗ್ಯೂ ಇನ್ನೂ ಪೂರ್ತಾ ಹಣ ಪಾವತಿ ಆಗಿಲ್ಲ ಇದುವರೆಗೆ ಆ ಪೈಕಿ ೧೩೩೩—೮—೦ ರೂಪಾಯನ್ನು ಮಾತ್ರ ಸಲ್ಲಿಸಿರುತ್ತಾರೆ ಉಳಿದ ಹಣವನ್ನು ಕೂಡಲೇ ಪಾವತಿ ಮಾಡುವುದಕ್ಕೆ ಏರ್ಪಾಡು ಮಾಡದಿದ್ದರೆ ಗವರ್ನಮೆಂಟಿನವರು ಆ ಹಣವನ್ನು ಒಂದೇ ಗಂಟಿನಲ್ಲಿ ವಸೂಲುಮಾಡಿಕೊಳ್ಳುವಂತೆ ಹುಕುಂ ಕೊಡುವವರಾಗಿದಾರೆ ಮೇಲ್ಕಂಡ ತನಿಖೆಮಾಡಿದ ಆಫೀಸರ ರಿಪೋರ್ಟಿನಿಂದ ಬ್ಯಾಂಕಿನಲ್ಲಿ ರೂ ೮೯೬—೧೧—೧೦ ಕ್ಕೆ ಒಪ್ಪಿ ಬಾಕಿ ಇರುವಂತೆಯೂ, ಕಂಟ್ರೋಲರವರ ಆಫೀಸ್ ರೆಜಿಸ್ಟರುಗಳ ಪ್ರಕಾರ ರೂ ೯೩೧—೫—೭ಕ್ಕೆ ನಮೂದಾಗಿರುವಂತೆಯೂ ಗೊತ್ತಾಗುತ್ತದೆ ಈ ವ್ಯತ್ಯಾಸಗಳನ್ನು ತನಿಖೆಮಾಡಿ ರಿಪೋರ್ಟ್ ಕಳುಹಿಸಬೇಕು

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸ

[ಕಳೆದವಾರದ ಶೇಷ]

ಕಾಲಸ್ಥಿತಿ

ಕಳೆದ ವರ್ಷವು ಬಹಳ ಚಿಂತೆಗೆ ಕಾರಣವಾಗಿತ್ತು ಕಳೆದ ವರ್ಷದ ಸರಾಸರಿ ಮಳೆಯು ೨೩ ಅಂಗುಲ ಮಾತ್ರವೇ ಆಗಿ ೧೮೭೬ನೆ ವರ್ಷದ ಈಚೆಗೆ ಇದೇ ಕನಿಷ್ಠ ಪರಿಮಾಣವಾಗಿತ್ತು ಇದಕ್ಕೆ ಪ್ರ[illegible]ಯಾಗಿ ಕಳೆದ ೩೫ ವರ್ಷಗಳ ಸರಾಸರಿಯು ೩೭ ಅಂಗುಲವಾಗಿತ್ತು ಮುಂಗಾರು ಹಿಂಗಾರು ಮಳೆಗಳೆರಡೂ ಅಕಾಲದಲ್ಲಿ ಬಂದುದ್ದ[illegible] ಎಲ್ಲಾ ಕಡೆಯಲ್ಲಿಯೂ ಸರಿಯಾಗಿ ಬೀಳದೆಯೂ ಹೋಗಿ ಕಾರ್ಯ[illegible] ತಪ್ಪಿಹೋದಂತೆಯೇ ಆಯಿತು ಎಲ್ಲಾ ಕಡೆಯಲ್ಲಿಯೂ ಪೈರು[illegible] ಕೆಟ್ಟುಹೋದವು. ಕೆಲವು ಕಡೆಯಲ್ಲಿ ಶುದ್ಧಾಂಗವಾಗಿ ನಷ್ಟವಾದ[illegible] ಒಟ್ಟು ಸಂಸ್ಥಾನದಲ್ಲಿ ಮುಖ್ಯಾಹಾರಗಳಾದ ಬತ್ತವೂ ರಾಗಿಯೂ [illegible] ಆಣೆಯ ಪೈರಿಗೆ ಬದಲಾಗಿ ೮ ಆಣೆಯ ಪೈರೂ ೬ ಆಣೆ ಪೈರೂ [illegible] ಬಹುದೆಂದು ಅಂದಾಜಾಗಿತ್ತು ಅನಾವೃಷ್ಟಿಯು ಬಹಳ ಪ್ರಬಲವಾ[illegible] ಕೋಲಾರ, ತುಮಕೂರು, ಚಿತ್ರದುರ್ಗ, ಮತ್ತು ಶಿವಮೊಗ್ಗೆ[illegible] ಕೆಲವು ಭಾಗಗಳು—ಈ ಪ್ರದೇಶಗಳಲ್ಲಿ ಸರಾಸರಿ ಸುಮಾರು ೫

...ವಿನಾಯಿತು ಇನ್ನು ಕೆಲವು ಪ್ರದೇಶಗಳಲ್ಲಿ ಕೇವಲ ೨ ... ಫಸಲು ಕೂಡ ಆಯಿತು ಹಿಂದಿನ ವರ್ಷವೂ ಮಳೆ ...ಯಾಗಿ ಬೆಳೆ ಅಲ್ಪವಾದ್ದಲ್ಲದೆ ಗತ ವರ್ಷವೂ ಹಾಗೆಯೇ ಆದ್ದ ...ಆಹಾರ ಧಾನ್ಯಗಳ ಬೆಲೆಯು ಜಾಗ್ರತೆಯಾಗಿ ಏರಿತು ಬಹಳ ...ವಾದ ಅಕ್ಕಿಯು ರೂಪಾಯಿಗೆ ಸರಾಸರಿ ೧೦ ಸೇರು ಇದ್ದ ...ಸ್ಥಳಗಳಲ್ಲಿ ೭ ಸೇರಿನಂತೆ ಮಾರಿತು ಸಾಮಾನ್ಯ ರೈತ ...ವರಿಗೆ ಮುಖ್ಯಾಹಾರ ಧಾನ್ಯವಾದ ರಾಗಿಯು ಸರಾ...ರೂಪಾಯಿಗೆ ೨೦ ಸೇರು ಇದ್ದದ್ದು ಕೆಲವು ಭಾಗಗಳಲ್ಲಿ ... ೧೦ ಮತ್ತು ೧೨ ಸೇರುಗಳಂತೆ ಮಾರಿತು ಆಹಾರ ಧಾನ್ಯಗಳ ...ಕ್ಕದ್ದರಿಂದಲೂ ಬಡಜನಗಳಿಗೆ ಸಾಕಾದಷ್ಟು ಕೆಲಸ ದೊರಕ... ಅವರ ಸ್ಥಿತಿಯು ಬಹಳ ಚಿಂತೆಗೆ ಕಾರಣವಾಗಿತ್ತು ...ಮಳೆಗಳು ಬರಬಹುದೆಂದು ಆತುರದಿಂದ ಎದುರು ನೋಡ... ಅವೂ ಕೂಡ ತಪ್ಪಿಹೋದ್ದರಿಂದ ಮುಂದೆ ಇನ್ನೂ ಕಷ್ಟ ... ಉಂಟಾಯಿತು ಮನುಷ್ಯರಿಗೂ ದನಕರುಗಳಿಗೂ ...ವದಕ್ಕೆ ನೀರಿಲ್ಲದೆ ಹೋದದ್ದು ಮತ್ತಷ್ಟು ಚಿಂತೆಗೆ ಕಾರಣವಾ... ಮೇವಿಲ್ಲದೆ ದನಕರುಗಳು ಬಡವಾಗುತ್ತ ಬಂದು ಬಹಳವಾಗಿ ...ಹೋದವು

...ಸರ್ಕಾರದವರು ಈ ಕಷ್ಟಕಾಲಕ್ಕೆ ತಕ್ಕಂತೆ ಸಿದ್ಧವಾ...ಕ್ಕಾಗಿ ಸಾಧ್ಯವಾದ ಎಲ್ಲಾ ಮುಂಜಾಗ್ರತೆಯ ಏರ್ಪಾಡುಗಳ ...ಮಾಡಿ ಇದ್ದರು ಕ್ಷಾಮನಿವಾರಣೋಪಾಯದಲ್ಲಿ ನೇಟಾದ ...ವನ್ನು ... ಕೆಲಸವೂ ಒಂದು ಮುಖ್ಯ ಕಾರ್ಯ ... ಬೇರೆ ಬೇರೆ ಸ್ಥಳಗಳಲ್ಲಿ ಪೈರ ಎಷ್ಟುಮಟ್ಟಿಗೆ ನಷ್ಟವಾ...ದ ಜೂನ್ ... ನ ಬರುವದಕ್ಕಾಗಿಯೇ ಸರ್ಕಾರ ...ಸಂಸ್ಥಾನದ ಪ್ರತಿ ಗ್ರಾಮದಲ್ಲಿಯೂ ಪೈರಿನ ಸ್ಥಿತಿಯನ್ನು ... ರಿಪೋರ್ಟು ಮಾಡುವಂತೆ ವರ್ಷದ ... ಕಮೀಷನರುಗಳು ...ದಿವಸಕ್ಕೊಂದಾವರ್ತಿ ಪ್ರತ್ಯೇಕವಾದ ಕಾಲಸ್ಥಿತಿಯ ರಿಪೋ...ಗಳನ್ನು ಕಳುಹಿಸುವ ಏರ್ಪಾಡು ಮಾಡಲಾಯಿತು ಇದಕ್ಕಾಗಿ ... ಅವರ ಅಧೀನ ... ಗಳು ತಮ್ಮ ತಮ್ಮ ಚಾರ್ಜಿನಲ್ಲಿರುವ ... ಸಂಚಾರವಾಗಿ ಪ್ರತಿ ಸ್ಥಳದ ವಿದ್ಯಮಾನ ... ಅಭ್ಯಾಸಮಾಡಲಾಯಿತು ವಿಶೇಷ ...ಕಾಣಿಸಿದ ಪ್ರದೇಶಗಳಲ್ಲಿ ಒಬ್ಬ ಕೌನ್ಸಿಲರವರು ... ಕಮೀಷನರೂ ... ಸಂಚಾರಮಾಡಿದರು

ಸಂಪೂರ್ಣವಾದ ಏರ್ಪಾಡುಗಳು

... ಗಳ ಭಾವನೆ ಮೇರೆ ಈ ಕೆಳಗಿನ ಏರ್ಪಾ...ಡು ಮಾಡಲಾಯಿತು — (೧) ದನಗಳಿಗೆ ಮೇವನ್ನು ಒದಗಿಸು...ವದಕ್ಕಾಗಿ ಕೆಲವು ಸ್ಟೇಟ್ ಜಂಗಲುಗಳನ್ನೂ (ಸರ್ಕಾರಿ ದನ ... ಕಾವಲುಗಳಿಂದ) ಅಮೃ...ತ್ ಕಾವಲುಗಳನ್ನೂ ಗ್ರಾಮ ದನಗಳನ್ನು ಮಾಫಿಯಾಗಿ ಮೇ...ಯಲು ಬಿಟ್ಟುಕೊಟ್ಟಿತು ಹುಲ್ಲನ್ನು ಎಲೆಗಳನ್ನೂ ಕೊ...ಯ್ದುಕೊಂಡು ಹೋಗಲು ಅಪ್ಪಣೆ ಕೊಟ್ಟಿತು ಇದಲ್ಲದೆ ದನಗಳ...ನ್ನು ಸರ್ಕಾರಿ ... ಗಳಲ್ಲಿ ಈಚಲ ಗರಿಗಳನ್ನು ... ಕಡಿದು ... ಹೋಗುವುದಕ್ಕೂ ಅಪ್ಪಣೆ ಮಾಡ...ಲಾಯಿತು (೨) ಅನೇಕ ಸ್ಥಳಗಳಲ್ಲಿ ಜನಗಳಿಗೂ ದನಗಳಿಗೂ ತೀ... ನೀರಿನ ಕಷ್ಟವನ್ನು ತಪ್ಪಿಸುವದಕ್ಕಾಗಿ ಬಾವಿ ...ತೋಡಲು ... ಫಂಡುಗಳಿಂದ ೧೯,೦೦೦ ರೂಪಾಯಿ ... ಲೋಕಲ್ ಫಂಡು ಜನರಲ್ ನಿಂದ ೨೩,೦೦೦ ರೂಪಾಯಿ ... ಒಟ್ಟು ... ೦೦೦ ರೂಪಾಯಿಗಳನ್ನು ಮಂಜೂರ್ ಮಾಡ... (೩) ... ಗಳಿಗೆ ಕೆಲಸ ಒದಗಿಸುವದಕ್ಕೋಸ್ಕರ ...ವಾದ ಅನೇಕ ಮರಾಮತ್ ಕಾಮಗಾರಿಗಳನ್ನು ಕ್ಷಾಮ ...ಸ್ಥಳಗಳಲ್ಲಿ ಪ್ರಾರಂಭಿಸಲಾಯಿತು ಕೆಲವು ಅಜಮಾಯಿ ...ಕೆರೆಗಳನ್ನು ಮಾಡುವದಕ್ಕಾಗಿ ೧೯,೦೦೦ ರೂಪಾಯಿಗಳನ್ನು ...ಸಾದ ಬಾವಿಗಳನ್ನು ತೋಡುವದಕ್ಕೆ ರೈತರಿಗೆ ಸಾಲಕೊಡು...ವದಕ್ಕಾಗಿ ೨೯,೫೦೦ ರೂಪಾಯಿಗಳನ್ನೂ, ಜಮೀನು ಅಭಿವೃದ್ಧಿಗೆ ...ಸೇರಿದ ಇತರ ಕೆಲಸಗಳನ್ನು ಮಾಡುವದಕ್ಕಾಗಿ ಸಾಲಾ ಕೊ...ಡಲು ೧೫,೦೦೦ ರೂಪಾಯಿಗಳನ್ನು ಮಂಜೂರ್ ಮಾಡಿತು ಸಣ್ಣ ... ದುರಸ್ತಿಗಾಗಿ ಮರಾಮತ್ ಇಲಾಖೆಯು ಬಿಟ್ಟಿಟ್ಟಿದ್ದ ... ರೂಪಾಯಿಗಳನ್ನು ಕೊಟ್ಟದ್ದಲ್ಲದೆ ಲೋಕಲ್ ಫಂಡ...ಗಳಲ್ಲಿ ಅದೇ ಕೆಲಸಕ್ಕಾಗಿ ೧೦,೦೦೦ ರೂಪಾಯಿಗಳನ್ನೂ ...ಮಂಜೂರು ಮಾಡಲಾಯಿತು (೪) ಸಣ್ಣ ಕೆರೆಗಳ ದುರಸ್ತಿನ ವಿಷಯ ... ಈಗ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ರೈತರು ಮಟ್ಟಿ ... ಸರ್ಕಾರದವರು ಕಲ್ಲು ಮತ್ತು ಗಾರೆ ಕೆಲಸವನ್ನು ... ಆದರೆ ಈ ವರ್ಷದ ಸನ್ನಿವೇಶದಲ್ಲಿ ಈ ನಿಬಂಧನೆ...ಯನ್ನು ತಾತ್ಕಾಲಿಕವಾಗಿ ರದ್ದುಮಾಡಿ, ಅನೇಕ ಸಣ್ಣ ಕೆರೆಗಳ ಮಟ್ಟಿ ...ಕೆಲಸವನ್ನು ಕೂಡ ಸರ್ಕಾರದ ಖರ್ಚಿನಲ್ಲಿಯೇ ಮಾಡಿಸಿತು ...ಸಂದರ್ಭಗಳಲ್ಲಿ ಸುಲಭವಾದ ಕಂತುಗಳ ಮೇರೆ ಸರ್ಕಾರಕ್ಕೆ ...ಹಿಂತಿರುಗಿಸಬೇಕೆಂಬ ಷರತ್ತಿನ ಪ್ರಕಾರ ರೈತರಿಗೆ ಮಟ್ಟಿ ...ಕೆಲಸದ ಖರ್ಚನ್ನು ಮುಂಗಡವಾಗಿ ಕೊಟ್ಟಿತು ಇದಕ್ಕಾಗಿ ... ರೂಪಾಯಿಗಳನ್ನು ಮಂಜೂರ್ ಮಾಡಲಾಯಿತು ಈ ರಿಯಾ...ಯಿತಿಯಿಂದ ಬಡ ಜನರಿಗೆ ಕೆಲಸ ಸಿಕ್ಕಿದ್ದಲ್ಲದೆ ರೈತರ ಕೆರೆಗಳನ್ನು ...ಶಾಶ್ವತವಾಗಿ ಅಭಿವೃದ್ಧಿ ಮಾಡುವದಕ್ಕೆ ಅವಕಾಶ ದೊರಕಿದ್ದರಿಂದ ...ರೈತರೂ ಈ ರಿಯಾಯಿತಿಯನ್ನು ವಿಶೇಷವಾಗಿ ಬಹುಮತಿಸಿದರು ...ಆದಾಗ್ಯೂ ಮೇಲೆ ಕಂಡ ಏರ್ಪಾಡುಗಳಿಂದ ಕೆಲ ಬಡಸ್ಥರಿಗೆ — ...ಮಿತವಾದ ವರಮಾನವಿದ್ದಾಗ್ಯೂ ಮನೆಬಿಟ್ಟು ಕೂಲಿಗೆ ಕೆಲಸ ...ಶಕ್ತರಲ್ಲದ ಬಡವರಿಗೆ — ಸಹಾಯ ಒದಗಲಾರದು ಇಂಥಾ ... ಅಪೇಕ್ಷಿಸುವ ಸಹಾಯವೇನೆಂದರೆ — ಅವರ ದನ ಕರುಗಳಿಗೆ ... ಅವು ಸತ್ತು ಹೋಗಿದ್ದಲ್ಲಿ ಹೊಸ ದನಗಳನ್ನು ಕೊಂಡುಕೊಳ್ಳು...ವದಕ್ಕೆ ಹಣ, ಬಿತ್ತನೆ ಕಾಳು ಕೊಂಡುಕೊಳ್ಳುವದಕ್ಕೆ ಸಾಲಗಳು, ... ಕೇವಲ ದರಿದ್ರರಾಗಿದ್ದಲ್ಲಿ ಕುಟುಂಬರಕ್ಷಣೆಗಾಗಿ ದಾನ— ಇವೇ ...ಉದ್ದೇಶಗಳಿಗಾಗಿ ಇಂಥಾ ಜನಗಳಿಗೆ ಸಾಲಕೊಡಲು ೬೩,೦೫೦ ...ರೂಪಾಯಿಗಳನ್ನು ಮಂಜೂರ್ ಮಾಡಲಾಯಿತು (೫) ಇದಲ್ಲದೆ ...ರು, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿಯೂ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಕಂದಾಯದ ವಸೂಲಾತಿಯ ವಿಷಯದಲ್ಲಿ ವಿಶೇಷವಾದ ರಿಯಾಯಿತಿಗಳನ್ನು ತೋರಿಸಬೇಕಾಯಿತು ಮೈಸೂರು ಸಂಸ್ಥಾನದ ಸರ್ವೆ ಸೆಟ್ಲ್‌ಮೆಂಟ್ ಕ್ರಮದಲ್ಲಿ ಪೈರು ಸ್ವಲ್ಪವಾಗಿಯಾಗಲೀ ಅಥವಾ ಪೂರಾ ಆಗಲೀ ನಷ್ಟವಾದರೆ ರಿಯಾಯಿತಿ ತೋರಿಸಲು ಅವಕಾಶವಿಲ್ಲವೆಂದು ನಿಮಗೆ ತಿಳಿದೇ ಇದೆ ಆದರೂ ಗತವರ್ಷದ ವಿದ್ಯಮಾನಗಳು ಬಹಳ ವಿಶಾಲವಾಗಿದ್ದುದರಿಂದ ಮೇಲೆ ಕಂಡ ಪ್ರದೇಶಗಳಲ್ಲಿ ಯಾವ ಪೈರೂ ಆಗದ ಅಥವಾ ಉತ್ಪತ್ತಿಯು ನಾಲ್ಕಾಣೆಗಿಂತ ಕಡಿಮೆಯಾಗಿದ್ದ ಜಮೀನುಗಳ ತರೀ ಕಂದಾಯದಲ್ಲಿ ಅರ್ಧವನ್ನು ಮಾಫ್ ಮಾಡುವಂತೆ ತೀರ್ಮಾನಿಸಿತು ಈ ಪ್ರದೇಶಗಳಲ್ಲಿ ಹುಲ್ಲುಗಾವಲಿನ ರುಸುಮನ್ನು ಕೂಡ ಪೂರಾ ಮಾಫ್ ಮಾಡಲಾಯಿತು ಇದೂ ಅಲ್ಲದೆ ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೆ ಕೆಲವು ಆರಿಸಿದ ಸ್ಥಳಗಳಲ್ಲಿ ಖುಷ್ಕಿ ಕಂದಾಯದ ಕಡೇ ಎರಡು ಕಿಸ್ತುಗಳ ವಸೂಲಾತಿಯನ್ನು ಸ್ವಲ್ಪಕಾಲ ನಿಲ್ಲಿಸಲು ಅಧಿಕಾರ ಕೊಟ್ಟಿತು ಅಂತು ಒಟ್ಟು ೩,೫೩,೧೧೧ ರೂಪಾಯಿಯನ್ನು ಪೂರಾ ಮಾಫ್ ಮಾಡಲಾಯಿತು, ಮತ್ತು ೧,೭೨,೬೩೩ ರೂಪಾಯಿ ವಸೂಲಾತಿಯನ್ನು ಮುಂದಕ್ಕೆ ಹಾಕುವಂತೆ ಹುಕುಂ ಮಾಡಿತು

ಮಳೆ ಬಾರದೆ ಇರುವವರೆಗೂ ಸರ್ಕಾರದವರು ಮಾಡಬಹುದಾದ ಯಾವ ವಿಧವಾದ ಸಹಾಯವೂ ರೈತನಿಗೆ ಭರವಸೆಯನ್ನಾಗಲಿ ಮನಸ್ಸಮಾಧಾನವನ್ನಾಗಲಿ ಉಂಟುಮಾಡಲಾರದು ಮೇ, ಜೂನ್ ಮತ್ತು ಜುಲೈ ತಿಂಗಳ ಅಧಿಕ ಭಾಗವು ಕಳೆದುಹೋದರೂ ಮಳೆಯ ಸಮಾಚಾರವೇ ಇರಲಿಲ್ಲ ಈ ಮಧ್ಯೆ ಬೆಲೆಗಳು ಏರುತ್ತಾ ಬಂದವು ಕಳೆದ ಜುಲೈ ತಿಂಗಳ ಆಖೈರಿನಲ್ಲಿದ್ದ ಬೆಲೆಗಳು ಆ ವರ್ಷದಲ್ಲಿದ್ದ ಎಲ್ಲಾ ಬೆಲೆಗಳಿಗಿಂತಲೂ ಏರಿದ್ದವು ಬಡವರಲ್ಲಿ ಕಷ್ಟವು ಎದ್ದುಗಾಣುತ್ತಿದ್ದದ್ದು ಚೆನ್ನಾಗಿ ಕಾಣಬಂತು ಸಂಜನಗೂಡು ತಾಲ್ಲೂಕಿನಲ್ಲಿ ರಿಲೀಫ್ ಕಾಮಗಾರಿಗಳನ್ನು ಆರಂಭಿಸುವುದು ಅತ್ಯವಶ್ಯವಾಯಿತು ಆದರೆ ಕೊನೆಯಲ್ಲಿ, ಚಿಂತೆಯು ನಿರಾಶೆಯ ಸ್ಥಿತಿಗೆ ಬರುವ ಸಮಯದಲ್ಲಿ, ಹಂಬಲಿಸುತ್ತಿದ್ದ ಮಳೆಯು ಸಮೃದ್ಧಿಯಾಗಿ ಬಂದು ಹಿಂದಿನ ಕೊರತೆಯನ್ನು ಸಂಪೂರ್ಣವಾಗಿ ನಿವಾರಿಸಿತು ಅನೇಕ ಕೆರೆಗಳು ತುಂಬಿ ಕೋಡಿಬಿದ್ದವು ಕೆಲವು ಕಡೆ ಕೆರೆ ಕಟ್ಟೆಗಳು ಕಿತ್ತುಹೋದವು ಈಗ ಸರ್ವತ್ರ ಭೀತಿಯೆಲ್ಲಾ ನಿವಾರಣೆಯಾಗಿ ಬೆಳೆಯ ಉತ್ಪತ್ತಿಯು ಸರಾಸರಿಯಾಗಿರುವದೆಂದು ಸಂಪೂರ್ಣವಾದ ಭರವಸೆ ಉಂಟಾಗಿದೆ

ವ್ಯವಸಾಯ

ಅನನುಕೂಲವಾದ ಕಾಲಸ್ಥಿತಿಯಿಂದ ಸಾಗುವಳಿ ಜಮೀನಿನ ವಿಸ್ತೀರ್ಣದಲ್ಲಿ ೬೩,೫೯೭ ಎಕರೆಗಳು ಕಡಿಮೆಯಾಯಿತು

ಕಾಫಿಯ ಬೆಲೆಯು ಕಡಿಮೆಯಾಗುತ್ತಾ ಬಂದದ್ದರಿಂದಲೂ ರಬ್ಬರಿಗೆ ಗಿರಾಕಿ ಹೆಚ್ಚಿದ್ದರಿಂದಲೂ ಪ್ಲಾಂಟರುಗಳೂ ಇತರರೂ ಸಂಸ್ಥಾನದಲ್ಲಿ ರಬ್ಬರು ವ್ಯವಸಾಯಕ್ಕೆ ವಿಶೇಷ ಅವಧಾನಕೊಡುವದಕ್ಕೆ ಕಾರಣವಾಯಿತು ೧೯೦೫ನೆಯ ವರ್ಷದಲ್ಲಿ ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಆರಿಸಿದ ಸ್ಥಳಗಳಲ್ಲಿ ಮೆ॥ ಅರಬತ್‌ನಾಟ್ ಮತ್ತು ಕಂಪನಿಯವರ ಪರವಾಗಿ ಮೆ॥ ಸ್ಟ್ರಿಕ್‌ಲೆಂಡ್‌ಯವರು ರಬ್ಬರು ಸಾಗುವಳಿ ಬಗ್ಗೆ ಸುಮಾರು ೫೦೦ ಎಕರೆ ಜಮೀನನ್ನು ತೆಗೆದುಕೊಂಡರು ಅಲ್ಲಿಂದ ಈಚೆಗೆ ಇವರಂತೆ ಇತರರೂ ದರಖಾಸ್ತು ಮಾಡಿದ್ದಾರೆ ರಬ್ಬರು ಸಾಗುವಳಿ ಬಗ್ಗೆ ಒಟ್ಟಿನಲ್ಲಿ ಸುಮಾರು ೨,೦೧೦ ಎಕರೆ ಜಮೀನನ್ನು ಕೊಟ್ಟಿದೆ ಮೇಲೆ ಕಂಡ ವಿಷಯದಲ್ಲಿ ವಿಧಿಸಿದ ಷರತ್ತುಗಳು ತಾತ್ಕಾಲಿಕವಾಗಿ ಮಾತ್ರ ಇದ್ದವು ಅವುಗಳಲ್ಲಿ ಕೆಲವು (ಅಂದರೆ ಮುಖ್ಯವಾಗಿ ಸರ್ಕಾರಕ್ಕೆ ಮರಗಳನ್ನು ಉಳಿಸಿಕೊಳ್ಳುವದು ಮತ್ತು ಎಸ್ಟೇಟಾಗಿ ಸಾಗುವಳಿ ಬಗ್ಗೆ ಅವಶ್ಯವಾದ ಕಾರುಬಾರಿನ ಗಿಡಗಂಟಿಗಳನ್ನು ತೆಗೆ ಹಾಕುವದ ವಿನಾ ಮರಕಡಿಯುವದಕ್ಕೆ ತಡೆ) ಅನುಭವದಿಂದ ಪ್ಲಾಂಟರುಗಳಿಗೆ ಅನನುಕೂಲವಾಗಿಯೂ ತೊಂದರೆಯಾಗಿಯೂ ಮತ್ತು ಸರ್ಕಾರದವರ ಫಾಯಿದೆಗೆ ಕುಂದಕವಾಗಿಯೂ ಕಂಡುಬಂದವು ಈ ರಬ್ಬರು ವ್ಯವಸಾಯದಲ್ಲಿ ಆಸಕ್ತಿಯುಳ್ಳ ಎಲ್ಲಾ ಜನರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವದಕ್ಕಾಗಿ ಕಳೆದ ಆಗಸ್ಟು ತಿಂಗಳಲ್ಲಿ ಬೆಂಗಳೂರಿನಲ್ಲಿ ಒಂದು ಸಭೆಯನ್ನು ನಡೆಸಿತು ಅದರ ಫಲಿತಾಂಶವಾಗಿ ಆ ನಿಬಂಧನೆಗಳನ್ನು ಬದಲಾಯಿಸಿ ಷರತ್ತುಗಳನ್ನು ಚೆನ್ನಾಗಿ ಗೊತ್ತುಮಾಡಿತು ಇದರಿಂದ ಪ್ಲಾಂಟರಿಗೆ ನಿರ್ಬಂಧ ಕಡಿಮೆಯಾದ್ದಲ್ಲದೆ ಸರ್ಕಾರದವರ ಆದಾಯವು ಚೆನ್ನಾಗಿ ರಕ್ಷಿಸಲ್ಪಟ್ಟಿತು ಈ ನಿಬಂಧನೆಗಳು ದೇಶೀಯರಿಗೂ ಯೂರೋಪಿಯನರಿಗೂ ಒಂದೇ ರೀತಿಯಾಗಿ ಲಾಗೂ ಆಗುತ್ತವೆ

ಮಾರ್ಕೊಣವೆ ಕೆರೆಯ ಕಾಮಗಾರಿಯು ಈಗ ವ್ಯವಸಾಯಕ್ಕೆ ನೀರನ್ನು ಉಪಯೋಗಿಸುವಷ್ಟು ಮಟ್ಟಿಗೆ ನಡೆದಿರುವದರಿಂದ ನೀರಿನ ಹಂಚಿಕೆಯನ್ನೂ ಅದಕ್ಕೆ ಸಂಬಂಧಪಟ್ಟ ಇತರ ಕಾರ್ಯಗಳನ್ನೂ ಹೇಗೆ ಕ್ರಮಪಡಿಸಬಹುದು ಎಂಬ ವಿಷಯವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಮೆ॥ ಅರಬತ್‌ನಾಟ್ ಮತ್ತು ಕಂಪನಿಯವರು ಉತ್ತಮವಾದ ರೀತಿಯಲ್ಲಿ ಕಬ್ಬು ಸಾಗುವಳಿಮಾಡುವ ಬಗ್ಗೆ ಬಲಗಡೆಯ ನಾಲೆಯ ಕೆಳಗೆ ೫,೦೦೦ ಎಕರೆಯನ್ನು ಆಗಲೇ ತೆಗೆದುಕೊಂಡಿದ್ದಾರೆ ಮರಾಟಾ ಕೂಲಿಯವರು ಈ ದೇಶದಲ್ಲಿ ನಿಲ್ಲುವಂತೆ ಪ್ರೋತ್ಸಾಹಪಡಿಸುವದಕ್ಕಾಗಿ ಅವರಿಗೆ ೫೦೦ ಎಕರೆಗಳನ್ನು ಕೊಟ್ಟಿದೆ ಆಗಲೇ ಒಟ್ಟು ೧೧,೫೦೫ ಎಕರೆಗಳು ಜಮಾವಳಿಯಲ್ಲಿವೆ, ಇನ್ನೂ ೧೧,೯೭೩ ಎಕರೆಗಳು ಸಾಗುವಳಿಗೆ ಸಿಕ್ಕುವವು

ಪಶು ವೈದ್ಯಸಹಾಯ

ಪಶುಗಳಲ್ಲಿ ಸಾಂಕ್ರಾಮಿಕ ಜಾಡ್ಯಗಳನ್ನು ಪರೀಕ್ಷಿಸುವದಕ್ಕೂ ಅಂಥಾ ಜಾಡ್ಯಗಳು ಪ್ರಬಲವಾಗಿರುವ ಸ್ಥಳಗಳಿಗೆ ಹೋಗಿ ನೋಡುವದಕ್ಕೂ ಜಾಡ್ಯದ ಹಾವಳಿಗೆ ಪ್ರತಿಕಾರಮಾಡುವದಕ್ಕೂ ಒಬ್ಬ ಪಶುರೋಗಪರೀಕ್ಷಕರನ್ನು ಯಾ ಇನ್ಸ್‌ಪೆಕ್ಟರನ್ನು ನೇಮಿಸಿದೆ ಗ್ರಾಮಾಂತರಗಳಲ್ಲಿ ಜನಗಳು ಪಶುವೈದ್ಯಸಂಬಂಧವಾದ ಜ್ಞಾನವನ್ನು ಸಂಪಾದಿಸುವದಕ್ಕೆ ಪ್ರೋತ್ಸಾಹ ಉಂಟಾಗುವಂತೆ ಏರ್ಪಾಡು ಮಾಡುವದಕ್ಕೂ, ಪಶುರೋಗಗಳನ್ನು ಶಾಸ್ತ್ರರೀತ್ಯಾ ಪರೀಕ್ಷಿಸುವದನ್ನೂ ಸುಲಭವಾಗಿ ಸಿಕ್ಕುವ ದೇಶೀಯ ಔಷಧಗಳ ಸರಿಯಾದ ಪ್ರಯೋಗವನ್ನೂ ಹಳ್ಳಿಯ ಪಶುವೈದ್ಯರಿಗೂ ಬಹಳವಾಗಿ ದನಗಳನ್ನು ಇಟ್ಟುಕೊಂಡು ಇರುವವರಿಗೂ ಬೋಧಿಸುವದರಿಂದ ಈ ಪಶುರೋಗಸಂಬಂಧವಾದ ಜ್ಞಾನವನ್ನು ಅಭಿವೃದ್ಧಿಪಡಿಸುವದಕ್ಕೂ ಕೂಡ ಅವರು ಅವಧಾನವನ್ನು ಕೊಡುವರು ಸಾಮಾನ್ಯವಾಗಿ ದನಗಳ ಸ್ಥಿತಿಯನ್ನು ಅಭಿವೃದ್ಧಿಪಡಿಸುವದಕ್ಕೂ ಸಾಂಕ್ರಾಮಿಕ ರೋಗಗಳು ಪ್ರಬಲವಾಗಿರುವಾಗ ಒಡನೆ ಪಶುವೈದ್ಯಸಹಾಯಮಾಡುವದಕ್ಕೂ ಒಂದು ಸುಲಭಸಾಧ್ಯವಾದ ಏರ್ಪಾಡು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ

ರೆವಿನ್ಯೂ ಮತ್ತು ವ್ಯವಸಾಯದ ಗೆಜೆಟ್ಟು.

ರೆವಿನ್ಯೂ ಕಮಿಷನರ ಸಾಕ್ಷಾತ್ ಮೇಲು ವಿಚಾರಣೆಯಲ್ಲಿ ರೆವಿನ್ಯೂ ಮತ್ತು ಆಗ್ರಿಕಲ್‌ಚರಲ್ ಗಜೆಟ್ ಯಾ ಜಮೀನ ಕಂದಾಯಕ್ಕೂ ವ್ಯವಸಾಯಕ್ಕೂ ಸಂಬಂಧಪಟ್ಟ ಒಂದು ಪತ್ರಿಕೆಯನ್ನು ದೇಶೀಯ ಭಾಷೆಯಲ್ಲಿ ೧೫ ದಿವಸಕ್ಕೆ ಒಂದಾವರ್ತಿ ಪ್ರಕಟಿಸಬೇಕೆಂದು ಯೋಚಿಸಿ ಇದೆ ಜಮೀನ್ ಕಂದಾಯಕ್ಕೆ ಸಂಬಂಧಪಡುವ ವಿಷಯಗಳು, ರೆವಿನ್ಯೂ ಮೊಕದ್ದಮೆಗಳಲ್ಲಿ ಅಪೀಲುಗಳು, ಜನಸಮುದಾಯಕ್ಕೆ ಸೇರಿರುವ ಹುಲ್ಲುಗಾವಲುಗಳಿಗೆ ಸಂಬಂಧಪಟ್ಟ ಮುಖ್ಯವಾದ ಹುಕುಂಗಳು, ಪಶುರೋಗಗಳ ಉತ್ಪತ್ತಿ ಮತ್ತು ಚಿಕಿತ್ಸೆ ವ್ಯವಸಾಯ ಸಂಬಂಧವಾದ ಪರೀಕ್ಷೆಗಳು, ಕೋಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳು, ಆರೋಗ್ಯಾಭಿವರ್ಧಕವಾದ ಉಪದೇಶಗಳು ಇವೇ ಮೊದಲಾದ ಉಪಯುಕ್ತವಾದ ವಿಷಯಗಳನ್ನು ಗ್ರಾಮಾಧಿಕಾರಿಗಳಿಗೂ ಪ್ರಜಾಸಾಮಾನ್ಯಕ್ಕೂ ಬೋಧಿಸುವದೇ ಈ ಪತ್ರಿಕೆಯ ಉದ್ದೇಶವಾಗಿದೆ

ಆಗ್ರಿಕಲ್ಚರಲ್ ಕೆಮಿಸ್ಟ್ ಯಾ ಕೃಷಿ ರಸಾಯನ ಶಾಸ್ತ್ರಜ್ಞರು

ಹೆಬ್ಬಾಳದ ಮಾದರಿ ಹೊಲದ ಕೆಲಸವು ನಡೆಯುತ್ತಿದೆ ರಸಾಯನ ಕಾರ್ಯಾಲಯದಲ್ಲಿ ಪದಾರ್ಥಪರೀಕ್ಷೆಗಳೂ ಪೃಥಕ್ಕರಣಗಳೂ ಯಥಾಕ್ರಮವಾಗಿ ನಡೆದವು ಇವುಗಳಲ್ಲಿ ಮುಖ್ಯವಾದವು ಯಾವವೆಂದರೆ— ನೈಟ್ರೊಜನನ್ನು ಹಿಡಿದು ನಿಲ್ಲಿಸುವ ಸಸ್ಯಗಳ ವಿಷಯವಾದ ಪರೀಕ್ಷೆ, ಮಾಳಿ ಪ್ರತಿ ಗೊಬ್ಬರದ ಪರೀಕ್ಷಾರ್ಥವಾಗಿ ಮಾಡಿದ ಮೆಣಸಿನ ತೋಟದ ವ್ಯವಸಾಯ, ಈ ವಿಷಯದಲ್ಲಿ ಯಾವ ನಿಷ್ಕೃಷ್ಟವಾದ ಫಲಿತಾಂಶವೂ ಇನ್ನೂ ಗೊತ್ತಾಗಿಲ್ಲ

ವ್ಯವಸಾಯದ ಬ್ಯಾಂಕುಗಳು

೧೯೦೫—೦೬ ನೆಯ ವರ್ಷದಲ್ಲಿ ಸಕಲೇಶಪುರದ ಮಾಜಿ ಕಾಫಿ ಬ್ಯಾಂಕಿಗೆ ಈಡಾಗಿದ್ದ ಕಾಫಿ ತೋಟಗಳ ಕೆಲಸದ ಖರ್ಚಿಗಾಗಿ ೨೧,೦೯೬ ರೂಪಾಯಿ ಮುಂಗಡ ಕೊಟ್ಟಿತ್ತು ವ್ಯವಸಾಯದ ಬ್ಯಾಂಕುಗಳಿಂದ ಸುಮಾರು ೧,೦೦,೦೦೦ ರೂಪಾಯಿ ವಾಪಸು ಬಂದಿತು ಇನ್ನೂ ಬಡ್ಡಿ ಸಹಿತ ವಸೂಲಾಗಬೇಕಾದ್ದು ೧೩,೦೦,೦೦೦ ರೂಪಾಯಿ ಕೆಲ್ಲ ಉಳಿದಿದೆ ಗತವರ್ಷದಲ್ಲಿ ಅಕ್ರಮವಾಗಿ ಕೆಲಸನಡಿಸುತ್ತಲೂ ಅಭಿವೃದ್ಧಿಗೆ ಬರಲಾರದೆಯೂ ಇದ್ದ ೧೧ ಬ್ಯಾಂಕುಗಳಿಗೆ ಸರ್ಕಾರದವರು ಕೊಟ್ಟಿದ್ದ ಸಾಲವನ್ನು ವಾಪಸು ತೆಗೆದುಕೊಳ್ಳಬೇಕೆಂದು ಹುಕುಂ ಮಾಡಲಾಯಿತು ಸರ್ಕಾರದ ಫಾಯಿದೆಯನ್ನು ರಕ್ಷಿಸುವದಕ್ಕೋಸ್ಕರವೂ ಮೆಂಬರುಗಳಿಗೆ ಸರ್ಕಾರಿ ಬಿತ್ತಾಸೆಮಾಡಿ ಕ್ರಮವಾದ ಮಾರ್ಗವನ್ನು ತೋರಿಸುವದಕ್ಕಾಗಿಯೂ ಕೋಆಪರೇಟಿವ್ ಸೊಸೈಟಿ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರಿಗೆ ಈ ಬ್ಯಾಂಕುಗಳ ಮೇಲ್ವಿಚಾರಣೆಯನ್ನು ವಹಿಸಿ, ಅವರನ್ನು ಈ ಕೆಲಸಕ್ಕಾಗಿ ವ್ಯವಸಾಯದ ಬ್ಯಾಂಕುಗಳ ಇನ್ಸ್‌ಪೆಕ್ಟರನ್ನಾಗಿ ಮಾಡಿದ್ದಾರೆ, ರೆವಿನ್ಯೂ ಕಮಿಷನರ ಕೈಕೆಳಗೆ ಇರುವಂತೆ ತೀರ್ಮಾನಿಸಲಾಯಿತು

ವ್ಯವಸಾಯ ಬ್ಯಾಂಕುಗಳ ವಿಷಯವನ್ನು ಮುಗಿಸುವದಕ್ಕೆ ಮುಂಚೆ ಈಗತಾನೇ ನಿಮಗೆ ತಿಳಿಸಿದ ವಿದ್ಯಮಾನಗಳಿಂದಲೂ ಸಂಖ್ಯೆಗಳಿಂದಲೂ ತಿಳಿದುಕೊಳ್ಳಬೇಕಾದ ಅಂಶವು ಒಂದಿದೆ ಎಂದು ಹೇಳಬೇಕಾಗಿದೆ ಈ ಬ್ಯಾಂಕುಗಳ ಚರಿತ್ರವು ಒಂದು ಭಾಗದಲ್ಲಿ ಅನುಚಿತವಾದ ಸ್ಥಳದಲ್ಲಿ ತೋರಿಸಿದ ಜನೋಪಕಾರಗಳಿಂದಲೂ ಮತ್ತೊಂದು ಭಾಗದಲ್ಲಿ ನಮ್ಮ ದೇಶೀಯರಲ್ಲಿ ಇರುವ ಕುಂದಕದಿಂದಲೂ ಉಂಟಾಗುವ ದೋಷಗಳಿಗೆ ನಿದರ್ಶನವಾಗಿದೆ ಶ್ರೀಮನ್ಮಹಾರಾಜಾ ಸರ್ಕಾರದವರು ಸ್ವದೇಶೀಯ ಕೈಗಾರಿಕೆಗಳನ್ನೂ ವ್ಯವಸಾಯ ಕಾರ್ಯಗಳನ್ನೂ ಪ್ರೋತ್ಸಾಹಪಡಿಸುವದಕ್ಕೆ ಯಾವ ಏರ್ಪಾಡನ್ನೂ ಮಾಡಲಿಲ್ಲವೆಂದು ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ ಹಿಂದೆ ಸಂಪೂರ್ಣವಾದ ಸಮಾಚಾರವೂ ಪರಿಜ್ಞಾನವೂ ಇಲ್ಲದ್ದರಿಂದ ಹೀಗೆ ಬರೆದಂತೆ ಕಾಣುತ್ತದೆ ರಾಜ್ಯಭಾರವನ್ನು ವಹಿಸಿಕೊಟ್ಟ ಕಾಲ ಮೊದಲುಗೊಂಡು ಹಿಂದಿನ ವರ್ಷಗಳ ದಸರಾ ಉಪನ್ಯಾಸಗಳನ್ನು ತೆಗೆದು ನೋಡಿದಲ್ಲಿ ಮೈಸೂರು ಸರ್ಕಾರದವರು ಕಬ್ಬಿಣದ ಕಾರ್ಖಾನೆಗಳು, ಹತ್ತಿ ಕಾರ್ಖಾನೆಗಳು, ಸಕ್ಕರೆ ಕಾರ್ಖಾನೆಗಳು ಇವೇ ಮೊದಲಾದವನ್ನು ಏರ್ಪಡಿಸಲು ಅಪೇಕ್ಷಿಸಿದ ಜನಗಳಿಗೆ ದ್ರವ್ಯರೂಪವಾಗಿಯೂ ವಿಶೇಷ ರಿಯಾಯಿತಿಯ ರೂಪವಾಗಿಯೂ ಸಹಾಯಮಾಡಿರುವ ಅಂಶವು ನಿಮಗೆ ಗೊತ್ತಾಗುವದು ವ್ಯವಸಾಯ ಕಾರ್ಯಗಳಿಗೂ ತತ್ರಾಪಿ ದೇಶೀಯ ಪ್ಲಾಂಟರುಗಳಿಂದ ನಡೆಸಲ್ಪಡುತ್ತಿರುವ ಕಾಫಿ ವ್ಯವಸಾಯಕ್ಕೂ ಸಹಾಯಮಾಡುವದಕ್ಕಾಗಿ ಶ್ರೀಮನ್ಮಹಾರಾಜಾ ಸರ್ಕಾರದವರು ಸುಮಾರು ೧೭ ಲಕ್ಷ ರೂಪಾಯಿಯಷ್ಟು ಭಾರೀ ಮೊಬಲಗುಗಳನ್ನು ಮುಂಗಡವಾಗಿ ಕೊಟ್ಟಿರುವದೇ ಜನಗಳ ಪುರೋಭಿವೃದ್ಧಿ ವಿಷಯದಲ್ಲಿ ಸರ್ಕಾರದವರಿಗೆ ಇರುವ ಆಸಕ್ತಿಗೆ ಅತಿ ನವೀನವಾದ ನಿದರ್ಶನವಾಗಿದೆ ಆದರೆ, ದೇಶೀಯರ ಪ್ರಕೃತಸ್ಥಿತಿಯಲ್ಲಿ, ಈ ರೀತಿಯಾದ ಸಹಾಯವು ನಿರೀಕ್ಷಿಸಿದಂತೆ ಫಲಕಾರಿಯಾಗದೆ ಹೋಯಿತು ಈ ರೀತಿಯಾಗಿ ಉದಾರವಾಗಿ ಕೊಟ್ಟ ಹಣವು ಆತುರವಾಗಿ ತೆಗೆದುಕೊಂಡ ಸಾಲವು ಒಂದು ಕಡೆಯಲ್ಲಿ ಸರ್ಕಾರಕ್ಕೆ ನಷ್ಟವನ್ನೂ ಇನ್ನೊಂದು ಕಡೆಯಲ್ಲಿ ಜನಗಳಿಗೆ ಸಂಪೂರ್ಣವಾದ ಗುಣಹಾನಿಯನ್ನೂ ಉಂಟುಮಾಡಿ ಅವರ ಸ್ವಸಹಾಯಶಕ್ತಿಯನ್ನೆಲ್ಲಾ ನಿರ್ಮೂಲಪಡಿಸಿ ಅವರನ್ನು ಪೂರ್ವಕ್ಕಿಂತಲೂ ಹೀನಸ್ಥಿತಿಗೆ ತಂದುಬಿಟ್ಟಿತು ಯೂರೋಪಿಯನ್ ಕಾಫಿ ಪ್ಲಾಂಟರುಗಳು ಮಾತ್ರ ಈ ರೀತಿಯಾಗಿ ಅನ್ಯಸಹಾಯವನ್ನು ಪಡೆಯದಿದ್ದರೂ ಕಾಲಸ್ಥಿತಿಗಳು ಅನುಕೂಲವಾಗಿಲ್ಲದಿದ್ದರೂ ಕೂಡ ಹೇಗೆಯೋ ನಿರ್ವಹಮಾಡಿಕೊಳ್ಳುತ್ತಾ ಬಂದು ಈಗ ಹೊಸ ಕೃಷಿಕಾರ್ಯಗಳಿಗೆ ಅವಧಾನವನ್ನು ಕೊಡುತ್ತಿದ್ದಾರೆ ಆದರೂ ದೇಶೀಯ ಪ್ಲಾಂಟರುಗಳಿಗೆ ಹೀಗೆ ಸರ್ಕಾರದವರು ಹಿತವನ್ನು ಮಾಡಬೇಕೆಂದು ಅಪೇಕ್ಷಿಸಿ ಕೈಕೊಂಡ ಕಾರ್ಯವು ಸಫಲವಾಗದೇ ಹೋಗುವದಕ್ಕೆ ಕಾರಣವೇನು? ನಮ್ಮ ಜನಗಳಿಗೆ ತಮ್ಮಲ್ಲಿ ತಮಗೆ ನಂಬಿಕೆಯೂ ಪರಸ್ಪರ ಒಬ್ಬರಲ್ಲಿ ಒಬ್ಬರಿಗೆ ನಂಬಿಕೆಯೂ ಮಧ್ಯಕದ ಮೇಲ್ಮೆಗಾಗಿ ಒಟ್ಟುಗೂಡಿ ಕೆಲಸ ಮಾಡುವ ಸ್ವಭಾವವೂ ಇಲ್ಲದೇ ಇರುವದೇ ಇದಕ್ಕೆ ಕಾರಣವೆಂದು ನಮಗೆ ತೋ

ರುತ್ತದೆ. ಈ ಕಂದಕವು ನಿವಾರಣೆಯಾಗುವವರೆಗೂ ಸರ್ಕಾರದವರು ತಮ್ಮ ಸರ್ವಸ್ವವನ್ನೂ ಜನಗಳ ವಶಕ್ಕೆ ಒಪ್ಪಿಸಿದರೂ ಅವರಿಗೂ ಕಾರ್ಯತಃ ಶಾಶ್ವತವಾದ ಪ್ರಯೋಜನವೂ ಆಗುವದಿಲ್ಲ. ಸರ್ಕಾರಕ್ಕೂ ಯಾವ ಆದಾಯವೂ ಉಂಟಾಗುವದಿಲ್ಲ. ಇಂಥಾ ಸಂದರ್ಭದಲ್ಲಿಯೇ ನೀವುಗಳೆಲ್ಲರೂ ನಿಮ್ಮ ಬುದ್ಧಿವಂತಿಕೆಯನ್ನೂ ಸ್ವದೇಶಾಭಿಮಾನವನ್ನೂ ಪ್ರಕಟಿಸಿ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ಮಾಡುತ್ತಿರುವ ಪ್ರಯತ್ನಗಳಿಗೆ ಸಹಕಾರಿಗಳಾಗಬೇಕಾಗಿದೆ. ಯೂರೋಪ್ ದೇಶದಲ್ಲಿ ವ್ಯವಸಾಯದ ಬ್ಯಾಂಕುಗಳ ಏಳಿಗೆಗೆ ನಿಜವಾದ ಕಾರಣವಾದ ಪರಸ್ಪರ ನಂಬಿಕೆಯೂ ಅನ್ಯೋನ್ಯ ಸಹಾಯವೂ ಸ್ವಾರ್ಥಪರಿತ್ಯಾಗವೂ ನಮ್ಮ ಮೈಸೂರು ದೇಶದ ಗ್ರಾಮಾಂತರಗಳಲ್ಲಿರುವ ಮುಖಂಡರನ್ನೂ ಪ್ರೇರಿಸಿದ್ದಲ್ಲಿ, ಈ ಬ್ಯಾಂಕುಗಳ ಚರಿತ್ರವು ಈಗಿರುವದಕ್ಕಿಂತಲೂ ಹೆಚ್ಚು ಪ್ರೋತ್ಸಾಹಕರವಾಗಿರುತ್ತಿತ್ತು. ಅಂತೂ ನಾವೆಲ್ಲರೂ ಅನುಭವದಿಂದ ವಿವೇಕವನ್ನು ಸಂಪಾದಿಸಬೇಕಾಗಿದೆ.

ಕೋ ಆಪರೇಟಿವ್ ಸೊಸೈಟಿ ಯಾ ಅನ್ಯೋನ್ಯ ಸಹಾಯಕ ಸಂಘಗಳು

ಈ ವ್ಯವಸಾಯದ ಬ್ಯಾಂಕುಗಳ ವಿಷಯವನ್ನು ಇಷ್ಟಕ್ಕೆ ಮುಗಿಸಿ ಇನ್ನು ಮುಂದೆ ಪ್ರಜೆಗಳಲ್ಲಿ ಅನ್ಯೋನ್ಯಸಹಾಯಬುದ್ಧಿಯನ್ನು ಉಂಟುಮಾಡುವದಕ್ಕಾಗಿ ಸರ್ಕಾರದವರು ಈಚೆಗೆ ನಡೆಸಿರುವ ಪ್ರಯತ್ನಗಳನ್ನು ಕುರಿತು ಪ್ರಸ್ತಾಪಿಸುತ್ತೇವೆ. ಚೆನ್ನಾಗಿ ಪರ್ಯಾಲೋಚನೆ ಮಾಡಿದ ತರುವಾಯ ಬ್ರಿಟಿಷ್ ಇಂಡಿಯಾದಲ್ಲಿ ಏರ್ಪಡಿಸಿರುವ ಅನ್ಯೋನ್ಯ ಸಹಾಯಕ ಸಂಘಗಳ ಮಾದರಿಯಾಗಿ ಇಲ್ಲಿ ಏರ್ಪಡಿಸಿರುವ ಸಂಘಗಳು ಇನ್ನೂ ಬಾಲ್ಯಾವಸ್ಥೆಯಲ್ಲಿವೆ. ಇವು ಜನರಿಗೆ ಅನ್ಯೋನ್ಯ ಸಹಾಯ ಬುದ್ಧಿಯನ್ನು ಕಲಿಸುವದು ಮಾತ್ರವಲ್ಲದೆ ರೈತರ ಮತ್ತು ಕೈಗಾರಿಕೆ ಜನರ ಅಭಿವೃದ್ಧಿಗೆ ಸಹಕಾರಿಯಾಗುವದರ ಮೂಲಕ ವ್ಯವಸಾಯ ಬ್ಯಾಂಕುಗಳಿಗಿಂತ ವಿಶೇಷ ಉಪಕಾರಿಗಳಾಗುವವೆಂದು ತೋರುತ್ತವೆ. ಬೆಂಗಳೂರುನಗರ, ಹೊಳೆನರಸೀಪುರ, ಮೈಸೂರುನಗರ, [illegible]ಪ್ಪ, ಹಿರಿಯೂರು, ಕೋರಾ (ಸೀರಾ ತಾಲ್ಲೂಕು) ಮತ್ತು ಸೀರಾ ಈ ಸ್ಥಳಗಳಲ್ಲಿ ಮಿತಿಯಾದ ಜವಾಬ್ದಾರಿಯೊಡನೆ ಏಳು ಅನ್ಯೋನ್ಯ ಸಹಾಯಸಂಘಗಳು ಈವರೆಗೆ ರಿಜಿಸ್ಟರು ಮಾಡಲ್ಪಟ್ಟಿವೆ. ಬೆಂಗಳೂರಿನ ಸಂಘವು ಮುಖ್ಯಾಂಗವಾಗಿ ನಗರನಿವಾಸಿಗಳ ಸಂಘವಾಗಿದೆ. ಹೊಳೆನರಸೀಪುರದಲ್ಲಿರುವದು ಆ ತಾಲ್ಲೂಕಿನ ನೇಗೆಯವರ ಪ್ರಯೋಜನಕ್ಕಾಗಿಯೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟಿದೆ. ಕೋರಾದಲ್ಲಿರುವ ಬ್ಯಾಂಕು ಧಾನ್ಯದ ಬ್ಯಾಂಕಾಗಿದೆ. ಅಲ್ಲಿ, ಮೆಂಬರುಗಳು ಚಂದಾವಾಗಿ ಕೊಡುವ ಬೀಜವೂ ಕೊಡುವ ಸಾಲವೂ ಧಾನ್ಯರೂಪವಾಗಿವೆ. ವ್ಯವಸಾಯದ ನಿವೃತ್ತಿಯ ವಿಧಾನಗಳನ್ನು ಜಾರಿಗೆ ತರುವದೇ ಕೊಪ್ಪದ ಬ್ಯಾಂಕಿನ ಉದ್ದೇಶವಾಗಿದೆ. ಅದರ ಮೂಲಕ ಅಭಿವೃದ್ಧಿಯಾದ ವಿಧಾನಗಳಿಂದ ಕಬ್ಬು ಬೆಳೆಯುವದರಲ್ಲಿ ಬಹಳ ಕೆಲಸ ನಡೆದಿದೆ. ಉಳಿದ ಸಂಘಗಳು ಆಯಾ ತಾಲ್ಲೂಕುಗಳ ವ್ಯವಸಾಯಗಾರರ ಮತ್ತು ಕೈಗಾರಿಕೆಯವರ ಪ್ರಯೋಜನಕ್ಕಾಗಿಯೇ ಮುಖ್ಯವಾಗಿ ಉದ್ದೇಶಿಸಲ್ಪಟ್ಟಿವೆ. ಈ ಸಂಘಗಳೆಲ್ಲವೂ ಇನ್ನೂ ಆರಂಭದಲ್ಲಿಯೇ ಇವೆ.

ರಿವಿಜನ್ ಸೆಟ್ಲ್‌ಮೆಂಟ್

ಸಂಸ್ಥಾನದಲ್ಲಿ ೧೯೦೧ನೆಯ ವರ್ಷದಲ್ಲಿ ರೀ ಸರ್ವೇ ಕೆಲಸಗಳನ್ನು ಉಪಕ್ರಮಿಸಿತು. ಕಳೆದ ವರ್ಷದಲ್ಲಿ ಚಳ್ಳಕೆರೆ ತಾಲ್ಲೂಕಿನಲ್ಲಿಯೂ ಈಗ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಂದು ಭಾಗವಾಗಿರುವ ಮಾಜಿ ಬೂದಿಹಾಳದ ತಾಲ್ಲೂಕಿನಲ್ಲಿಯೂ ಆದ ರಿವಿಜನ್ ಸೆಟ್ಲ್‌ಮೆಂಟು ಜಾರಿಗೆ ತರಲ್ಪಟ್ಟಿತು. ಈ ಎರಡು ತಾಲ್ಲೂಕುಗಳಲ್ಲಿಯೂ ಕಂದಾಯದ ಹೆಚ್ಚಿಗೆಯು ಮೊದಲನೆಯ ತಾಲ್ಲೂಕಿನಲ್ಲಿ ಶೇಕಡಾ ೧೨ ರಂತೆ ಮಾತ್ರವೂ ಎರಡನೆಯ ತಾಲ್ಲೂಕಿನಲ್ಲಿ ಶೇಕಡಾ ೪ ರಷ್ಟು ಅಲ್ಪವಾಗಿಯೂ ಇರುವದರಿಂದ ಬಹಳ ಮಿತವಾಗಿದೆ. ಈ ಎರಡನೆಯ ತಾಲ್ಲೂಕಿನಲ್ಲಿ ಕಂದಾಯದ ಹೆಚ್ಚಿಗೆಯು ಅತ್ಯಲ್ಪವಾಗುವದಕ್ಕೆ ಆ ಪ್ರದೇಶದ ನಿಜಾತೀಯವಾದ ಸ್ವಭಾವವೇ ಕಾರಣವಾಗಿದೆ, ಅಲ್ಲಿ ತರೀ ಮತ್ತು ಖುಷ್ಕಿ ಸಾಗುವಳಿಯೂ, ಅದರಲ್ಲಿ ವಿಶೇಷವಾಗಿ ತರೀ ಸಾಗುವಳಿಯೂ, ವೃದ್ಧಿಯಾಗದೆ ಪ್ರಾಯಶಃ ಒಂದೇ ರೀತಿಯಾಗಿ ಇದೆ. ಈ ಪ್ರದೇಶದಲ್ಲಿ ಬಾಗಾಯತು ಸಾಗುವಳಿಗೆ ವಿಶೇಷವಾದ ಅನುಕೂಲವಿದೆ. ಆದರೆ ೧೯೦೨ ನೆಯ ವರ್ಷದ ನಿಬಂಧನೆಗಳ ಮೇಲೆ ಬಾಗಾಯತು ಕಂದಾಯವನ್ನು ಸಾಮಾನ್ಯವಾಗಿ ಕಡಿಮೆ ಮಾಡಿದೆ. ಚನ್ನಗಿರಿ, ಬೆಂಗಳೂರು, ಮೊಳಕಾಲ್ಮುರು, ಸೊರಬ, ಶೃಂಗೇರಿ ಜಹಗೀರಿ, ಈ ತಾಲ್ಲೂಕುಗಳಲ್ಲಿ ರೀ ಸರ್ವೆ ಕೆಲಸಗಳು ಮುಗಿದಿವೆ. ಚನ್ನಗಿರಿ, ಬೆಂಗಳೂರು, ಮೊಳಕಾಲ್ಮುರು ಈ ತಾಲ್ಲೂಕುಗಳ ವಿಷಯದಲ್ಲಿ ಮುಂದಿನ ಚಳಿಗಾಲದಲ್ಲಿ ಸರ್ಕಾರದವರು ಹೊಸ ದರಗಳನ್ನು ಪ್ರಕಟಿಸುವರು.

ಸೊರಬ ತಾಲ್ಲೂಕು ಮತ್ತು ಶೃಂಗೇರಿ ಜಹಗೀರಿಗಳ ಹೊಸ ದರಗಳ ವಿಷಯವು, ಅವುಗಳ ಮೇಲಿನ ಹಾಳತ ಅಥವಾ ಸಾಯರು ಹಾಸಲನ್ನು ತೆಗೆದುಹಾಕಬೇಕೆ ಅಥವಾ ಇಟ್ಟುಕೊಳ್ಳಬೇಕೆ ಎಂಬ ವಿಚಾರಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಸಂಬಂಧಪಟ್ಟಿದೆ. ಕೆಟ್ಟ ಕಾಲಸ್ಥಿತಿ, ಕೊಳೆರೋಗ, ಭಾರಿ ಬಾಗಾಯತು ಕಂದಾಯ, ಹಾಳತದಿಂದ ಉಂಟಾಗುವ ಕೆಡಕುಗಳು, ಇವೇ ಮೊದಲಾದ ಕಾರಣಗಳಿಂದ ಅಡಕೆ ತೋಟಗಾರರು ಕ್ರಮವಾಗಿ ಹೀನಸ್ಥಿತಿಗೆ ಬಂದಿರುವದಾಗಿ ತಿಳಿಯಬಂದಿದೆ. ಈ ತೋಟಗಾರರಿಗೆ ಸ್ವಲ್ಪ ಸಹಾಯವಾಗಬೇಕೆಂಬ ವಿಷಯವನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಈ ಸಹಾಯವು ಯಾವ ರೀತಿಯಲ್ಲಿ ಎಷ್ಟು ಮಟ್ಟಿಗೆ ನಡೆಯಬೇಕೆಂಬ ವಿಷಯವು ಇನ್ನೂ ಚರ್ಚೆಯಲ್ಲಿದೆ. ಹಾಳತದ ತೆರಿಗೆಯನ್ನು ಪೂರಾ ತೆಗೆದುಹಾಕುವದು ಅವಶ್ಯವೆಂಬ ವಿಷಯದಲ್ಲಿ ಎಲ್ಲರ ಅಭಿಪ್ರಾಯವೂ ಕಾರ್ಯತಃ ಏಕರೀತಿಯೇ ಆಗಿದೆ. ಆದರೂ ಈ ವಿಷಯವು ತೀರ್ಮಾನವಾಗುವದಕ್ಕೆ ಮುಖ್ಯವಾಗಿ ಸಂಸ್ಥಾನದ ಆಯವ್ಯಯ ಸಂಬಂಧವಾದ ಯೋಚನೆಗಳೇ ತಡೆಯಾಗಿದೆ. ಈ ಹಾಳತದ ವಿಷಯವಲ್ಲದೆ ಮಲ್ನಾಡು ಸೀಮೆಯ ರೈತರಿಗೆ ಬಾಗಾಯತು ಕಂದಾಯವನ್ನು ಕಡಿಮೆಮಾಡಿ ಕೊಡುವದು ಕೂಡ ಬಹುಶಃ ಅವಶ್ಯವಾಗಿರಬಹುದು. ಈ ವಿಷಯವನ್ನು ಎಲ್ಲಾ ವಿಧದಲ್ಲಿಯೂ ಪೂರ್ತಿ ವಿಚಾರಮಾಡುವದಕ್ಕಾಗಿ ಮಲ್ನಾಡು ಪ್ರಾಂತ್ಯದ ವಿದ್ಯಮಾನವನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳುವದಕ್ಕಾಗಿ ಕರ್ನಲ್ ಗ್ರಾಂಟ್‌ರವರನ್ನು ಮುಂದಿನ ಜನವರಿಯಿಂದ ನೇಮಕ ಮಾಡುವದಾಗಿ ನಿಶ್ಚಯಿಸಿದೆ. ಇದರಿಂದ ಕರ್ನಲ್ ಗ್ರಾಂಟ್‌ರವರು ಮುಂದಿನ ಜುಲೈ ತಿಂಗಳಲ್ಲಿ ಮೈಸೂರು ನೌಕರಿಯಿಂದ ನಿವೃತ್ತರಾಗುವದಕ್ಕೆ ಮೊದಲೇ ಈ ಕಠಿಣವಾದ ವಿಷಯದ ತೀರ್ಮಾನದಲ್ಲಿ ಅವರ ಅನುಭವದ ಪ್ರಯೋಜನವನ್ನು ಸರ್ಕಾರದವರು ಪಡೆದುಕೊಳ್ಳುವಂತೆ ಆಗುವದು.

ಜಂಗಲು

ಗತ ವರ್ಷದಲ್ಲಿ ೧೫೬½ ಚದರ ಮೈಲಿ ವಿಸ್ತೀರ್ಣವುಳ್ಳ ೧೪ ತಾಕುಗಳನ್ನು ಸ್ಟೇಟು ಜಂಗಲಿಗೆ ಹೊಸದಾಗಿ ಸೇರಿಸಲಾಯಿತು. ಒಟ್ಟು ಸುಮಾರು ೬೦ ಚದರ ಮೈಲಿ ಅಳತೆಯುಳ್ಳ ೭ ತಾಕುಗಳನ್ನು ಸೆಟ್ಲ್‌ಮೆಂಟ್ ಬಗ್ಗೆ ಹೊಸದಾಗಿ ಪ್ರಕಟಿಸಿತು. ಎರಡು ಚದರ ಮೈಲಿಗೆ ಸ್ವಲ್ಪ ಹೆಚ್ಚಾದ ವಿಸ್ತೀರ್ಣವುಳ್ಳ ಒಂದು ತಾಕನ್ನು ಕೆಲವು ಅಂಶಗಳಲ್ಲಿ ಮಾತ್ರ ಸರಕಾರಕ್ಕೆ ಉಳಿಸಿಕೊಂಡಿರುವದಾಗಿ ಪ್ರಕಟಿಸಿತು. ಆದಾಯ ವ್ಯಯಗಳನ್ನು ನೋಡಲಾಗಿ ಗತವರ್ಷವೂ ಲಾಭಕರವಾಗಿತ್ತು. ಇಲಾಖೆಯ ಮೂಲಕ ಜಮಾಯಿಸಿದ ಚೌಬೀನೆಯಿಂದ ೩,೬೫,೯೦೫ ರೂಪಾಯಿ ಹುಟ್ಟುವಳಿಯಾಯಿತು. ಮತ್ತು ಗಂಧದ ಮಾರಿಂದ ೧೭,೬೪,೬೯೦ ರೂಪಾಯಿ ಆಯಿತು. ನಿವ್ವಳ ಹುಟ್ಟುವಳಿ ೧೩,೭೬,೩೩೯ ರೂಪಾಯಿ ಆಯಿತು. ಇದು ಹಿಂದಿನ ಎಲ್ಲಾ ವರ್ಷಗಳ ಹುಟ್ಟುವಳಿಗಿಂತಲೂ ಜಾಸ್ತಿಯಾಗಿದೆ. ಸ್ಥಳೀಯ ಚೌಬೀನೆಗೆ ಗಿರಾಕಿಯು ಏಕರೀತಿಯಾಗಿ ಹೆಚ್ಚಿತು. ೯,೬೪,೯೦೩ ರೂಪಾಯಿ ಬೆಲೆ ಬಾಳುವ ಚೌಬೀನೆಯನ್ನು ಚಿನ್ನದ ಗಣಿಗಳಿಗೆ ಮಾತ್ರವೇ ಸರಬರಾಯಿ ಮಾಡಿತು. ಈ ಗಿರಾಕಿಗೆ ಮರವನ್ನು ಒದಗಿಸುವದಕ್ಕಾಗಿ ಇದುವರೆಗೂ ಉಪಯೋಗಿಸಿಕೊಳ್ಳದೆ ಇದ್ದ ಸ್ಥಳಗಳಲ್ಲಿಯೂ ಕೂಡ ಮರಗಳನ್ನು ಕಡಿಯುತ್ತಿದೆ. ಹೀಗೆ ನಮ್ಮ ಜಂಗಲುಗಳ ಸಂಪತ್ತನ್ನು ಕ್ರಮವಾಗಿ ಉಪಯೋಗಿಸಿಕೊಂಡರೂ ಅವುಗಳ ಶಾಸ್ತ್ರೀಯವಾದ ರಕ್ಷಣೋಪಾಯವನ್ನು ತಾತ್ಕಾರಮಾಡಿಲ್ಲವೆಂದು ಸರ್ಕಾರದವರು ನಂಬುತ್ತಾರೆ.

ಜಂಗಲ್ ಫಸಲನ್ನು ಸಾಗಿಸಿ ಮಾರುವ ಕೆಲಸವನ್ನು ಸುಲಭಮಾಡುವದಕ್ಕಾಗಿ ಪಳ್ಳಿಗಳ ಮೂಲಕ ಲೈಸೆನ್ಸುಗಳನ್ನು ಕೊಡುವ ಪದ್ಧತಿಯನ್ನು ಸಂಸ್ಥಾನದ ಕೆಲವು ಭಾಗಗಳಲ್ಲಿ ಅಜಮಾಯಿಷಿಮಾಡಿನೋಡಿತು. ಅದರಿಂದ ಜನಗಳಿಗೂ ಇಲಾಖೆಗೂ ಅನುಕೂಲ ಹೆಚ್ಚಾಗಿರುವ ಕಾರಣ ಅದೇ ಪದ್ಧತಿಯನ್ನು ಸಂಸ್ಥಾನದ ಎಲ್ಲಾ ಭಾಗದಲ್ಲೂ ೨ ವರುಷಗಳ ವರೆಗೆ ಪರೀಕ್ಷೆಯಾಗಿ ಜಾರಿಯಲ್ಲಿ ಇರುವಂತೆಮಾಡಿದೆ.

ಶ್ರೀಮನ್ ಪ್ರಿನ್ಸ್ ಆಫ್ ವೇಲ್ಸ್‌ರವರ ಆಗಮನಕಾಲದಲ್ಲಿ ಏರ್ಪಡಿಸಿದ ಖೆಡ್ಡಾ ಕೆಲಸಗಳಿಗಾಗಿ ೯,೦೫,೨೦೦ ರೂಪಾಯಿ ಖರ್ಚಾಯಿತು. ಈ ಸಂದರ್ಭದಲ್ಲಿ ೮೭ ಆನೆಗಳು ಹಿಡಿಯಲ್ಪಟ್ಟವು, ಈ ಪೈಕಿ ೫೮ ಆನೆಗಳು ೩೯,೮೯೫ ರೂಪಾಯಿಗೆ ವಿಕ್ರಯಿಸಲ್ಪಟ್ಟವು, ೭೪,೬೦೦ ರೂಪಾಯಿ ಬಾಳುವ ೨೧ ಆನೆಗಳು ಅನ್ಯಥಾ ವಿಲೇವಾರು ಮಾಡಲ್ಪಟ್ಟವು, ಉಳಿದ ೮ ಆನೆಗಳು ಸತ್ತುಹೋದವು.

ಸರ್ಕಾರದವರು ಮೂರು ವರ್ಷಗಳ ವರೆಗೆ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಅರಣ್ಯಕಶಾಸ್ತ್ರವನ್ನು ವ್ಯಾಸಂಗಮಾಡುವದಕ್ಕಾಗಿ ಇಬ್ಬರು ವಿದ್ಯಾರ್ಥಿಗಳಿಗೆ ಸಂಸ್ಥಾನದಿಂದ ವಿದ್ಯಾರ್ಥಿವೇತನವನ್ನು ಕೊಟ್ಟು ಕಳುಹಿಸಿ ಇರುತ್ತಾರೆ. ಅದಲ್ಲದೆ ಡೇರಾದೂನ್ ಅರಣ್ಯಕ ಪಾಠಶಾಲೆಗೂ ೫ ಮಂದಿ ವಿದ್ಯಾರ್ಥಿಗಳನ್ನು ಕಳುಹಿಸಿ ಇದ್ದಾರೆ.

ಪಬ್ಲಿಕ್ ವರ್ಕ್ಸ್ ಯಾ ಮರಾಮತ್ ಕೆಲಸಗಳು

ಮರಾಮತ್ ಕೆಲಸಗಳಿಗಾಗಿ ಒಟ್ಟು ೫೦,೮೯,೨೨೩ ರೂಪಾಯಿ ಖರ್ಚಾಯಿತು. ಈ ಪೈಕಿ ನೀರಾವರಿ ಕಾಂಗಾರಿಗಳಿಗಾಗಿ ೧೫,೬೦,೯೮೪ ರೂಪಾಯಿಯೂ, ಸಿವಿಲ್ ಕಟ್ಟಡಗಳಿಗಾಗಿ ೩೧,೩೪,೮೮೮ ರೂಪಾಯಿಯೂ ಮಿಲಿಟರಿ ಕಾಂಗಾರಿಗಳಿಗಾಗಿ ೨೦,೮೩೩ ರೂಪಾಯಿಯೂ, ಕಾವೇರಿ ವೈದ್ಯುತ ಶಕ್ತಿಯ ವಿಸ್ತಾರಕ್ಕಾಗಿ ೩,೪೪,೩೭೮ ರೂಪಾಯಿಯೂ ಖರ್ಚಾದವು.

ನೀರಾವರಿ ಕಾಂಗಾರಿ

ಮಾರಿ ಕಣಿವೆ ಕಾಂಗಾರಿಯಲ್ಲಿ ಬಹಳ ಕೆಲಸ ನಡೆದಿದೆ, ಈ ವರ್ಷ ಇದಕ್ಕಾಗಿ ೩,೩೦,೦೦೦ ರೂಪಾಯಿ ಖರ್ಚಾಯಿತು. ಕಟ್ಟೆಯು ಮಂಜೂರ್ಮಾಡಿರುವ ಪೂರಾ ಎತ್ತರಕ್ಕೆ ಅಂದರೆ ಆರ್ ಎಲ್ ೧೫೨೦ ಅಡಿ ಎತ್ತರಕ್ಕೆ ಎದ್ದಿತು. ಕಟ್ಟೆಯ ಎಡಪಾರ್ಶ್ವದ ನಾಲೆಯು ಮೊದಲು ೧೫ ಮೈಲಿಯ ವರೆಗೆ ಕಾರ್ಯತಃ ಪೂರೈಸಿಯಾಯಿತು. ಮುಂದೆ ೭ ಮೈಲಿಗಳ ವರೆಗೆ ನಾಲೆ ಕಾಂಗಾರಿಯು ಬಹಳ ಮಟ್ಟಿಗೆ ನಡೆದಿದೆ. ಬಲಪಾರ್ಶ್ವದ ನಾಲೆಯ ಮೊದಲು ೧೧ ಮೈಲಿಗಳ ವರೆಗೆ ಕಾರ್ಯತಃ ಮುಗಿದಿದೆ. ಎಡಪಾರ್ಶ್ವದ ನಾಲೆಯಲ್ಲಿ ಜೂನ್ ೧೯ನೆಯ ತಾರೀಖಿನಲ್ಲಿ ೭ ನೆಯ ಮೈಲಿಯ ವರೆಗೂ, ಬಲಪಾರ್ಶ್ವದ ನಾಲೆಯಲ್ಲಿ ಜೂನ್ ೩೦ ನೆಯ ತಾರೀಖಿನಲ್ಲಿ ೧೧ ನೆಯ ಮೈಲಿಯ ವರೆಗೂ ನೀರು ಬಿಟ್ಟಿತು. ಕಾಡೆಯ ನೀರು ಕಳೆದ ವರ್ಷದಲ್ಲಿ ಆರ್ ಎಲ್ ೮೭೬.೬೦ ಅಡಿಯ ಎತ್ತರಕ್ಕೆ ಎದ್ದಿತು. ಇತರ ನೀರಾವರಿ ಕಾಂಗಾರಿಗಳಲ್ಲಿಯೂ ಕೂಡ ಬಹಳ ಕೆಲಸವು ನಡೆದಿದೆ. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—ಕೋಲಾರ ಡಿಸ್ಟ್ರಿಕ್ಟಿನಲ್ಲಿ ರಾಮಸಾಗರ, ಮುದುವಾಡಿ, ಚನ್ನಂದೂರು ಕೆರೆಗಳ ದುರಸ್ತು, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕಲ್ಲಹಳ್ಳಿಯಲ್ಲಿಯೂ ವಾಣಿಕೆರೆಯಲ್ಲಿಯೂ ಹೊಸ ಕೆರೆಗಳನ್ನು ಕಟ್ಟುವದು, ಮೈಸೂರು ಡಿಸ್ಟ್ರಿಕ್ಟಿನಲ್ಲಿ ದೇವರಾಯ ನಾಲೆಯ ಅಭಿವೃದ್ಧಿ, ಹಾಸನ ಡಿಸ್ಟ್ರಿಕ್ಟಿನಲ್ಲಿ ಶ್ರೀರಾಮದೇವರ ಅಣೆಯ ಉತ್ತರನಾಲೆಯ ಅಭಿವೃದ್ಧಿ. ಗತ ವರ್ಷದಲ್ಲಿ ಕಾರ್ಯತಃ ಮುಗಿದ ಕಾಂಗಾರಿಗಳು ಯಾವವೆಂದರೆ—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸೋಮಾಂಬುಧಿ ಮತ್ತು ಬೆಲ್ಲಹಳ್ಳಿ ಕೆರೆಗಳ ದುರಸ್ತು, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಅಗ್ರಹಾರದ ಕೆರೆಯ ದುರಸ್ತು, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಚಿಕ್ಕಮದುರೆ ಹೊಸ ಕೆರೆಯ ಕಟ್ಟಡ.

ಗತ ವರ್ಷದಲ್ಲಿ ಒಟ್ಟು ೧೦,೭೪,೭೫೬ ರೂಪಾಯಿ ಮುಟ್ಟುವದೆಂದು ಅಂದಾಜಾಗಿರುವ ೭ ಕ್ಷಾಮಪರಿಹಾರಕ ಕಾಮಗಾರಿಗಳು ಮಂಜೂರ್ಮಾಡಲ್ಪಟ್ಟವು. ಅವು ಯಾವವೆಂದರೆ—(೧) ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿ ನದಿಗೆ ಅಡ್ಡಲಾಗಿ, (೨) ನೆಲಮಂ[gala] ತಾಲ್ಲೂಕು ಗಬ್ಬೂರಿನಲ್ಲಿ, (೩) ಬೌರಿಂಗ್‌ಪೇಟೆ ತಾಲ್ಲೂಕು ಮಸಂದ್ರದಲ್ಲಿ, (೪) ಅದೇ ತಾಲ್ಲೂಕು ರಾಜಮಾಕಲಹಳ್ಳಿಯಲ್ಲಿ, (೫) ಚಿತ್ರದುರ್ಗದ ತಾಲ್ಲೂಕು ಸಿಂಗದಹಳ್ಳಿಯಲ್ಲಿ, (೬) [illegible]ಊರು ತಾಲ್ಲೂಕಿನಲ್ಲಿ ದೊಣೆಹಳ್ಳಿಯಲ್ಲಿ, ಮತ್ತು (೭) ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ವೇದಸಮುದ್ರದಲ್ಲಿ.

ಹೊನ್ನಾಳಿ ತಾಲ್ಲೂಕಿನಲ್ಲಿ ಇರುವ ಸಾಲಿಂಗದಲ್ಲಿ ಒಂದು ಕೆರೆ ಕಟ್ಟುವದಕ್ಕೆ ೧೯೦೫ ನೆಯ ಜನವರಿ ತಿಂಗಳಲ್ಲಿ ೧,೧೫[illegible] ರೂಪಾಯಿನ ಅಂದಾಜು ಮಂಜೂರಾಯಿತು. ಈ ಕಾಂಗಾರಿಯು [illegible] ವರ್ಷದಲ್ಲಿ ಇಲಾಖೆಯ ಮೂಲಕ ಸಾಧಾರಣ ಕಾಂಗಾರಿಯಂತೆ ಆರಂಭವಾಗಿ ಅದರಲ್ಲಿ ಬಹಳ ಕೆಲಸ ನಡೆದಿದೆ.

ಸಣ್ಣ ಕೆರೆಗಳು

ಹಿಂದಿನ ವರ್ಷದಂತೆಯೇ ರೆವಿನ್ಯೂ ಇಲಾಖೆಯ ಅಧಿಕಾರಕ್ಕೆ ಒಳಪಟ್ಟ ಸಣ್ಣ ಕೆರೆಗಳ ದುರಸ್ತಿಗಾಗಿ ೧,೦೦,೦೦೦ ರೂಪಾಯಿ ಮಂಜೂರ್ಮಾಡಿತು. ಗತ ವರ್ಷದಲ್ಲಿ ನಡೆದ ಕಾಂಗಾರಿಯು ಒಟ್ಟು ಸುಮಾರಾಗಿ ತೃಪ್ತಿಕರವಾಗಿದೆ ಎಂದು ಭಾವಿಸಬಹುದು.

ಕೆರೆ ನಕ್ಷೆಗಳೂ ರಿಜಿಸ್ಟರುಗಳೂ

೭ ಕೆರೆಯ ಸಾಲುಗಳಿಗೆ ಅಂದರೆ ವೇದಾವತಿಯಲ್ಲಿ ಒಂದು, ಲಾರಿನಲ್ಲಿ ಮೂರು, ಮತ್ತು ಕಾವೇರಿಯ ಜಲಾನಯನ ಪ್ರದೇಶದಲ್ಲಿ ಮೂರು, ಹೀಗೆ ೭ ಸಾಲು ಗದೆಗಳಿಗೆ ಕೆರೆ ರಿಜಿಸ್ಟರುಗಳು ಸಿದ್ಧ ತಯಾರ್ಮಾಡಲ್ಪಟ್ಟಿವೆ. ೨೦ ಸಾಲುಗಳಿಗೆ ಸಾಲು ನಕ್ಷೆಗಳು ತಯಾರ್ಮಾಡಲ್ಪಟ್ಟು, ಸಂಸ್ಥಾನಕ್ಕೆಲ್ಲಾ ಒಂದು ಇಂಡೆಕ್ಸ್ ಯಾ ಅನು[ಕ್ರಮ]ಣಿಕೆಯ ನಕ್ಷೆಯು ತಯಾರ್ಮಾಡಲ್ಪಟ್ಟಿದೆ. ಸಂಸ್ಥಾನದಲ್ಲಿರುವ ೩೦ ಸಾಲುಗಳ ಪೈಕಿ ೧೯ ಸಾಲುಗಳ ಸುಮಾರಾಗಿ ಮು[illegible] ಎಲ್ಲಾ ೩೦ ಸಾಲುಗಳ ನಕ್ಷೆಯೂ ಮುಗಿದಿದೆ. ಕಾವೇರೀ ನದಿಗೆ [illegible]ಲಾಗಿ ಒಂದು ದೊಡ್ಡ ಕೆರೆಯನ್ನು ಕಟ್ಟುವದಕ್ಕಾಗಿ ಒಂದು ಪ್ರ[illegible]ವಾದ ಸಿಬ್ಬಂದಿಯ ಮೂಲಕ ಅಜಮಾಯಿಷಿಯು ನಡೆಯುತ್ತಿ[illegible]ದನ್ನು ಕೇಳಲು ನೀವು ಕುತೂಹಲವುಳ್ಳವರಾಗಿರಬಹುದು.

ಸಿವಿಲ್ ಕಾಂಗಾರಿಗಳೂ ಕಟ್ಟಡಗಳೂ

ಸಿವಿಲ್ ಕಟ್ಟಡಗಳ ಪೈಕಿ ಗತವರ್ಷದಲ್ಲಿ ಕೆಲಸನಡೆದ ಮುಖ್ಯವಾದ ಕಾಂಗಾರಿಗಳು ಯಾವವೆಂದರೆ—ವಿಕ್ಟೋರಿಯಾ ಆ[illegible]ಯ ಅಭಿವೃದ್ಧಿ ಮತ್ತು ಬದಲಾವಣೆ, ಸರ್ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲ್ ಕಟ್ಟಡ, ಬೆಂಗಳೂರಿನಲ್ಲಿ ಹೊಸ ಮ್ಯೂನಿ[illegible] ಸ್ಕೂಲ್, ವ್ಯವಸಾಯದ ಮಾದರಿ ಹೊಲದ ಕಟ್ಟಡಗಳು, ಬೆಂ[illegible]ನಲ್ಲಿ ವಿಷಸಸ್ಯಶಾಸ್ತ್ರ, ವ್ಯವಸಾಯಶಾಸ್ತ್ರ, ಇವುಗಳಿಗೆ ಸಂಬಂಧಪಟ್ಟ ಕಾರ್ಯಾಲಯಗಳ ಬದಲಾವಣೆ, ಅರಮನೆಯ ಕಟ್ಟಡ, ಕೆ[illegible]ರದ ಚಿನ್ನದಗಣಿಯಲ್ಲಿ ಹೊಸ ಆಸ್ಪತ್ರೆ ಮತ್ತು ವೈದ್ಯಾಧಿಕಾರಿ[illegible] ವಾಸದ ಕಟ್ಟಡ, ಚಿಕ್ಕಮಗಳೂರಿನಲ್ಲಿಯೂ ತರೀಕೆರೆಯಲ್ಲಿಯೂ ಸಂದಲ್‌ಕೋಠಿಗಳು, ಮೈಸೂರಿನಲ್ಲಿ ಮೊದಲನೆ ಎರಡನೆ ಮಹಾ[illegible] ಕುಮಾರಿಯರವರ ಅರಮನೆಗಳು, ಉದಕಮಂಡಲದಲ್ಲಿರುವ [illegible] ಹಿಲ್ ಅರಮನೆಯಲ್ಲಿ ಹೊಸ ದರ್ಬಾರ್‌ಹಾಲ್, ಅರಮನೆಯಿಂದ ತಯಾರಾಗುತ್ತಿರುವ ಈ ಕಟ್ಟಡಗಳಲ್ಲಿಯೂ ಕೆಲಸನ[illegible]

[ಸಶೇಷ

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಚೀಫ್ ಕೋರ್ಟಿನ ಜಡ್ಜರಾದ ಮೆ|| ಎಚ್. ನಂಜುಂಡಯ್ಯನವರಿಗೆ ಅಕ್ಟೋಬರ್ ೭ರಿಂದ ಪೂರಾ ತಲಬಿನ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರು ಡಿವಿಜನ್ ಎಕ್ಸೈಸ್ ಅ|| ಕಮಿಷನರ್ ಮೆ|| ಸ್ಟುಯರ್ಟ್ ಹಾಜ್‌ಕಿನ್ಸ್‌ರವರಿಗೆ ಅಕ್ಟೋಬರ್ ೧೫ರಿಂದ [illegible] ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕಡೂರ್ ಡಿವಿಜನ್ ಎಕ್ಸೈಸ್ ಅ|| ಕಮಿಷನರ್ ಮೆ|| ಜಿ. ಶ್ರೀನಿವಾಸಯ್ಯಂಗಾರ್ರನ್ನು ಮತ್ತೊಂದು ಹುಕುಂ ಕೊಡುವ ತನಕ ಮೈಸೂರಿಗೆ ವರ್ಗಮಾಡಿದೆ.

ಹಾಸನ ಡಿವಿಜನ್ ಎಕ್ಸೈಸ್ ಅ|| ಕಮಿಷನರ್ ಮೆ|| [illegible]ಯವರು ಕಡೂರು ಮತ್ತು ಹಾಸನ ಡಿವಿಜನುಗಳ ಛಾರ್ಜನ್ನು [illegible] ತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಅ|| ಕಮಿಷನರ್ ಮೆ|| ಕೆ. [illegible]ಯವರಿಗೆ ಅಕ್ಟೋಬರ್ ೭ರಿಂದ ದಸರಾ ರಜಾ ಅನುಸರಿಸಿ [illegible] ತಿಂಗಳು ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಆ ತಾರೀಖು ಲಾಗಾಯಿತು ಅ|| ಕಮಿಷನರ್ ಮೆ|| ಬಿ. ಕುಮಾರಸ್ವಾಮಿ ನಾಯುಡು ಯವರು ದಾವಣಗೆರೆ ರೆವಿನ್ಯೂ [illegible] ಛಾರ್ಜನ್ನೂ ಚಿತ್ರದುರ್ಗದ ಡೆಪ್ಯುಟಿ ಕಮಿಷನರು ಚಳ್ಳಕೆರೆ [illegible] ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು.

ಎಕ್ಸೈಸ್ ಇಲಾಖಾ ಎಕ್ಸ್‌ಟ್ರಾ ಅ|| ಕಮಿಷನರ್ ಮೆ|| [illegible] ಡನ್ನಿಂಗ್ ಯವರಿಗೆ ಕೊಟ್ಟಿರುವ ಮೂರು ತಿಂಗಳ ಪ್ರಿವಿಲೆಜ್ ಮತ್ತು ಆರು ತಿಂಗಳ ಫರ್ಲೋ ರಜಾಗಳನ್ನು ಕಾಯಿಲೆ ರಜೆ ಬದಲಾಯಿಸಿ, ಅದರ ಜೊತೆಗೆ ಇನ್ನೂ ಆರು ತಿಂಗಳ ಕಾಯಿಲೆ [illegible] ಕೊಟ್ಟಿದೆ.

ಸೀನಿಯರ್ ಅ|| ಕಮಿಷನರ್ ಮೆ|| ಚಂಗೈಯ್ಯಶೆಟ್ಟಿ[illegible] ದಸರಾ ರಜಾ ಮತ್ತು ಕೆಲಸಕ್ಕೆ ದಾಖಲಾಗುವ ಅವಧಿ, ಇವುಗಳನ್ನು ಅನುಸರಿಸಿ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಕಮಿಷನರ್ ಮೆ|| ಕೆ. ಶ್ರೀಕಂಠಯ್ಯನವರಿಗೆ ಹ[illegible] ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ತಿಪ್ಟೂರು ತಾಲ್ಲೂಕು ಅಮಲ್ದಾರ್ ಮೆ|| ಸಿ. ಗೋಪಾ[illegible]ರಿಗೂ ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ ಮೆ|| ಬಿ. ಯೋಗಸ್ವಾಮಿ ಐಯ್ಯಂಗಾರ್ರಿಗೂ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇ[illegible] ಅಧಿಕಾರ ಕೊಟ್ಟಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ[illegible]ರಾದ ಅ|| ಸರ್ಜನ್ ಮೆ|| ಬಿ. ಮಹಮದ್ ಉಸ್ಮಾನ್ ಸಾಬರನ್ನು

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೆಸಿಡೆಂಟ್ ಮೆಡಿಕಲ್ ಆಫಿಸ ಬದಲಿ ನೋಡುವಂತೆ ನೇಮಿಸಿದೆ

ಸರ್ಜನ್ ಮ॥ ಡಬ್ಲ್ಯು ಶ್ರೀನಿವಾಸೈಯ್ಯಂಗಾರ್ರನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಶಿವಮೊಗ್ಗೆಗೆ ವರ್ಗಮಾ ಡಿ ಅವರು ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾ ನಿಟರಿ ಆಫೀಸರಾಗಿ ಬದಲಿ ನೋಡತಕ್ಕದ್ದು

ಅಮಲ್ದಾರ್ ಮ॥ ಎ ಶೇಸ್ ಯವರನ್ನು ಹಂಗಾಮಿಯಾಗಿ ... ತಾಲ್ಲೂಕಿನ ಛಾರ್ಜಿಗೆ ವರ್ಗಮಾಡಿದೆ

ಅಮಲ್ದಾರ್ ಮ॥ ಸಿ ಎಸ್ ಕೃಷ್ಣಸ್ವಾಮಿ ಐಯ್ಯಂಗಾರ್ರನ್ನು ... ತಾಲ್ಲೂಕಿಗೆ ವರ್ಗಮಾಡಿದೆ ಇವರಿಗೆ ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ ದಸರಾ ರಜಾ ಪೂರೈಸಿದ ಮೇಲೆ ... ಡಾಗತಕ್ಕದ್ದು

ಅಮಲ್ದಾರ್ ಮ॥ ಸೈಯದ್ ಯಾಕೂಬ್ ಯವರನ್ನು ಚಳ್ಳಕೆರೆ ... ಶ್ರೀರಂಗಪಟ್ಟಣದ ತಾಲ್ಲೂಕಿಗೆ ವರ್ಗಮಾಡಿದೆ

... ಸಬ್ ತಾಲ್ಲೂಕು ಡೆಪ್ಟಿ ಅಮಲ್ದಾರ್ ಮ॥ ಮಹಮದ್ ... ಯವರನ್ನು ಅಮಲ್ದಾರರಾಗಿ ನೇಮಿಸಿ ಚಳ್ಳಕೆರೆ ತಾಲ್ಲೂಕಿಗೆ ... ಮಾಡಿದೆ

ಚಿತ್ರದುರ್ಗದ ಡೆಪ್ಟಿ ಕಮಿಷನರ್ ಆಫೀಸ್ ಹೆಡ್ ಕ್ಲಾರ್ಕ್ ಎಂ ... ಶ್ರೀನಿವಾಸರಾವ್ ... ಶಿಕಾರಿಪುರದ ಸಬ್ ತಾಲ್ಲೂಕಿನ ಡೆಪ್ಟಿ ಅ ಮಲ್ದಾರ ಮತ್ತು ೩ ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪ ಟ್ಟಿದೆ

ಕೆಳಗೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡ ಲಾಗಿದೆ ಮ॥ ಅಬ್ದುಲ್ ಕರೀಂ ಯವರು—ಶ್ರೀನಿವಾಸಪುರದಿಂದ ... ಗೆ ಮ॥ ಎಂ ಎಸ್ ಪುಟ್ಟಣ್ಣನವರು—ಬಾಗೇಪಲ್ಲಿಯಿಂದ ... ಸಟಗಲಿಗೆ ಮ॥ ಎಂ ಎ ಶ್ರೀನಿವಾಸೈಯ್ಯಂಗಾರ್ರು—ಮುಳ ಬಾಗಿಲಿನಿಂದ ... ಮ॥ ಎಸ್ ವೆಂಕಟರಾಮಯ್ಯ ಯವರು ... ಗಿಂದ ಶ್ರೀನಿವಾಸಪುರಕ್ಕೆ

ಟ್ರೈನಿಂಗ್ ಸ್ಟೇಜಸ್ ಆಕ್ಟಿಂಗ್ ಅಮಲ್ದಾರ್ ಮ॥ ಕೇಶವೈಯ್ಯ ... ನಾಲೂರ್ ತಾಲ್ಲೂಕಿನ ಅಮಲ್ದಾರರಾಗಿ ಬದಲಿ ನೋಡತ ಕ್ಕದ್ದು

ಅಸಿಸ್ಟೆಂಟ್ ಸರ್ಜನ್ ಮ॥ ಬಿ ನಂಜುಂಡಾರಾಧ್ಯರವರಿಗೆ ಕೊಟ್ಟ ... ಡು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನು ಹದಿನಾಲ್ಕು ದಿನ ... ಮಾಡಿದೆ

... ಸ್ಪೆಶಲ್ ... ಇಂಜನಿಯರ್ ಮ॥ ಸಿ ... ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ... ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

... ಇಲಾಖೆಯಲ್ಲಿ ಮುಂದೆ ಹೇಳುವ ಎಕ್ಸಿಕ್ಯುಟಿವ್ ... ರುಗಳ ವರ್ಗಾವರ್ಗಿ ಹುಕುಂ ಮಾಡಿದೆ.

ಮ॥ ಸಿ ಎ ಮಹಾದೇವಶಾಸ್ತ್ರಿಗಳು—ಶಿವಮೊಗ್ಗೆಯಿಂದ ತುಂ ಕೂರು ಡಿವಿಜನ್, ಸ್ಪೆಷಲ್ ಡ್ಯೂಟಿ ಮೇಲಿರುವ ಮ॥ ಆರ್ ವಿ ... ಐಯ್ಯರ್ರವರು—ಶಿವಮೊಗ್ಗಾ ಡಿವಿಜನ್‍ಗೆ, ಮ॥ ಸಿ ಮಾಧ ವರಾವ್ ... ಡಿವಿಜನ್‍ನಿಂದ ಅರಮನೆ ಡಿವಿಜನ್‍ಗೆ

... ಪುರದ ತಾಲ್ಲೂಕು ಅಮಲ್ದಾರ್ ಮ॥ ಸಿ ರಂಗನಾ ಥರಾವ್ ಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ... ನ್ನು ಇನ್ನು ದಿನ್ನೈದು ದಿನಗಳ ತನಕ ಜಾಸ್ತಿ ಮಾಡಲಾಗಿದೆ

... ತಾಲ್ಲೂಕಿನ ಅಮಲ್ದಾರ್ ಮ॥ ಕೃಷ್ಣಾಜಿ ನಾರಾ ಯಣರಾವ್ ಅವರ ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿ ... ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

... ತಾಲ್ಲೂಕಿನ ಶಿರಸ್ತೆದಾರ್ ಸಿ ರಾಮರಾಯರು ತಾಲ್ಲೂಕ್ ... ನ್ನು ವಹಿಸತಕ್ಕದ್ದು

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಿರಾ ವಕಾಶ ಕೊಡುವುದಿಲ್ಲ ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ ಸ್ಕರ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ ದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ ಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರು ಅಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು —ಎಡಿ

ಕರೆಸ್ಪಾಂಡೆನ್ಸ್

ಉಡುಪಿ ಸ್ವಾಮಿಗಳೂ ತುಂಕೂರು ಶಿಷ್ಯರೂ

ಸ್ವಾಮಿ,

ಉಡುಪಿ ಶ್ರೀಮತು ಪೇಜಾವರ ಮಠದ ಶ್ರೀ ಪಾದಂಗಳವರು ಇಲ್ಲಿ ... ಮಾಡಿಸಿ ಚಾತುರ್ಮಾಸ ಸಂಕಲ್ಪಕ್ಕೆ ಕೂತಿದ್ದ ಕಾಲದಲ್ಲಿ ... ಸೇವೆಯನ್ನು ಅನೇಕ ಜನಗಳು ಮಾಡಿದಾಗ್ಯೂ ಮ॥ ವೆಂಕ ... ರು ಮ॥ ಶ್ರೀನಿವಾಸ ಮೂರ್ತಿಗಳ ಹೆಸರು ಮಾತ್ರ ಬಂದು, ... ವರ ಹೆಸರು ಬರಲಿಲ್ಲವೆಂತ ಅನೇಕರು ಪಶ್ಚಾತ್ತಾಪ ಪಡು ... ದ್ದರಿಂದ ಶ್ರೀಗಳವರ ಚರಣಾನುಗ್ರಹಕ್ಕೆ ಪಾತ್ರರಾಗಿ ದೃಢಭಕ್ತಿಯನ್ನು ... ಸಿರುವ ಮಹನೀಯರ ಹೆಸರುಗಳನ್ನು ಇವರಡಿ ನಮೂದಿಸಿ ... ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂತ ಪ್ರಾರ್ಥಿಸುತ್ತೇ ... ಅವರ ಗಳಲ್ಲದೆ ಇನ್ನು ಅನೇಕರು ವರ್ತಕರೂ ವ್ಯಾಪಾರಸ್ಥರೂ ... ದ್ಯೋಗಸ್ಥರೂ ಅವರವರ ಯೋಗ್ಯತಾನುಸಾರ ನಡೆಸಿಕೊಂಡು ... ದರೆ ಮೇಲ್ಕಂಡವರಿಬ್ಬರು ಶ್ರೀಗಳವರು ಹೊರಡುವ ದಿವಸ ... ದೂರ ಹೋಗಿದ್ದದ್ದರಿಂದಲೂ ಶ್ರೀಗಳವರು ಈ ಊರಲ್ಲಿರು ... ಗ ವಿಶೇಷ ಕಾಲ ಅವರ ಸಮುಖದಲ್ಲಿದ್ದು ಅವರಿಗೆ ದೇವರ ಪೂಜಾ ಅನುಕೂಲಮಾಡಿಕೊಳ್ಳುತ್ತಿದ್ದ ಮ॥ ರಾಮಚಂದ್ರರಾಯರು ... ಮಧ್ವಶಾಸ್ತ್ರ ಸಂಪನ್ನರೂ ದ ಕಾವಾಬಾಯ್ರಿಗೂ ಸಹಾ ... ಸುತ್ತಿದ್ದದ್ದರಿಂದ ಪ್ರಾಯಶಃ ನಿಮ್ಮ ಬಾತ್ಮಿದಾರರು ಈ ಎರಡು ... ಮಾತ್ರ ಬರೆದಂತೆ ತೋರುತ್ತೆ [ಸ್ಥಳ ಸಾಲದೆ ಹೆಸರುಗಳನ್ನು ಬಿಟ್ಟಿರುತ್ತೇವೆ —ಎಡಿ]

ಬಾತ್ಮಿದಾರ್

ಹೊಳೇ ನರಸೀಪುರದ ಹೊಲಗೇರಿಯೂ ಮುನಿಸಿಪಾಲಿಟಿಯೂ

ಅಯ್ಯಾ

ಮೇಲ್ಕಂಡ ಹೊಲಗೇರಿಯು ಟೌನಿಗೆ ಸೇರಿರುವದಲ್ಲದೆ ಊರಿಗೆ ಸಮೀಪದಲ್ಲಿಯೇ ಇದೆ ಇಲ್ಲಿ ಒಂದು ಮಿಶ್ನ್ ಸ್ಕೂಲೂ ಇದೆ ಆಗಾಗ್ಗೆ ಪಾಲಾಧಿಕಾರಿಗಳೂ ಸ್ಕೂಲ್ ಇನ್ಸ್‌ಪೆಕ್ಟರೂ ಬರುವರು ಊರಿನ ಮನೆಗಳಿಗೆ ವಸೂಲು ಮಾಡುವ ಪ್ರಕಾರ ಇಲ್ಲಿಯೂ ಮನೆ ಕಂದಾಯ ವಸೂಲು ಮಾಡುತ್ತಾರೆ ಆದರೆ ಪಾಕೀಜು ವಿಷಯದಲ್ಲಿ ಮುನಿಸಿಪಾಲಿಟಿಯವರು ಇಲ್ಲಿಗೆ ಬಂದ ದಿನವೇ ಇಲ್ಲ ಸಾಧಾರಣ ವಾಗಿ ಹೊಲೆಯರ ನಾಯಿಗಳ ಮನೆಯ ಹತ್ತಿರ ಇರುವಷ್ಟು ಕೊಳಕು ಎಲ್ಲಿದೆ? ಈ ಹೊಲಗೇರಿಯಲ್ಲಿರುವಷ್ಟು ಅಶುಚಿಯೂ ದುರ್ವಾಸನೆ ಯೂ ಇನ್ನೆಲ್ಲಿಯೂ ಇಲ್ಲವೆಂಬುವದು ಸಹಜವಾಗಿಯೇ ಇದೆ ಹೋ ದತಿಂಗಳ ಅಂತ್ಯಭಾಗದಲ್ಲಿ ಇಲ್ಲಿ ಕಾಲರಾ ಪ್ರಾರಂಭವಾಗಿ ೩—೪ ಜನರು ಸತ್ತರು ಅಶುಚಿಗೆ ಆಧಾರವು ಇಷ್ಟೇ ಸಾಲದೇ? ಹಿಂದೆ ಮುನಿಸಿಪಲ್ ದಫೇದಾರನು ಆಗಾಗ್ಗೆ ಬಂದು ನೋಡಿಕೊಂಡು ಹೋ ಗುತ್ತಾ ಇದ್ದನು ಒಂದೆರಡು ವರುಷಗಳಿಂದೀಚೆಗೆ ಠಟಸ್ಥನಾದನು ಕಾರಣವೇನೋ ತಿಳಿಯಲಿಲ್ಲ ಅಲ್ಲದೆ ಸುಮಾರು ನೂರು ಮನೆಗ ಳಿಗೆ ಕಡಿಮೆ ಇಲ್ಲದ ಈ ಕೇರಿಯಲ್ಲಿ ಒಂದಾದರೂ ಲಾಂದ್ರಗಳಿಲ್ಲದೆ ಇರುವದು ತುಂಬಾ ವಿಷಾದಕರವು ಆದ್ದರಿಂದ ದಯಾಳುಗಳೂ ಬಡ ಜನಗಳ ಹಿತಚಿಂತಕರೂ ಅಶುಚಿ ನಿವಾರಕರೂ ಆಗಿರುವ ನಮ್ಮ ಅಮ ಲ್ದಾರರು ಬಡಜನಗಳ ಮೇಲೆ ಅಂತ ಕರಣವಿಟ್ಟು ತಮ್ಮ ಕಾಲದಲ್ಲಿ ಇಷ್ಟು ದೊಡ್ಡ ಉಪಕಾರವನ್ನು ಮಾಡಿಸಿಕೊಡುವರೆಂದು ನಂಬಿ ಗೌರ ವಪೂರ್ವಕ ಸತ್ಯೇನ ವಿಜ್ಞಾಪಕ

ನಾಯಿಯಿಂದ ಹಸು ದೊರೆತದ್ದು

ಅಯ್ಯಾ

ಗತಿಸಿದ ಸೋಮವಾರ ಸಾಯಂಕಾಲ ನಮ್ಮ ಮನೆ ಆಕಳು ಕಾವ ಲಿನಿಂದ ಎಂದಿನಂತೆ ಮನೆಗೆ ಬರಲಿಲ್ಲ ಅದನ್ನು ಹುಡುಕುವುದಕ್ಕೆ ಹೆಂಗಸರು ಕೊರಲು ಹಾಕಿಯಲ್ಲಿ ದೇವಸ್ಥಾನ ಮತ್ತು ಬೀದಿಗಳನ್ನು ಸುತ್ತಿದರು ... ಯಲ್ಲಿಯೂ ನೋಡಬೇಕೆಂದು ಯೋಚನೆ ಹುಟ್ಟಿದ್ದರಿಂದ ಹಾಗೆಯೇ ಒಂದಿಗೆ ಆವರೆಗೆ ಮಾತನಾಡುತ್ತಾ ದೊಡ್ಡಿಯ ಒಳಗೆ ಬಂದು ನೋಡಲು ಅಲ್ಲಿ ಆಕಳು ಕಾಣಿಸಲಿಲ್ಲ ಕತ್ತಲೆಯೂ ಆಗುತ್ತ ಬಂತು ಅದು ಪೂರ್ಣ ಗರ್ಭವಿದ್ದ ಆಕಳಾದ್ದರಿಂದಲೂ ಸಮೀಪದ ಕಾಡಿ ನಲ್ಲಿ ಹುಲಿಯು ಉಪದ್ರ ಹೆಚ್ಚಾಗಿದ್ದು ಕೆಲವು ದಿವಸದ ಹಿಂದೆ ಒಂದು ಎಮ್ಮೆಯನ್ನು ಹುಲಿ ಹಿಡಿದಿರುವದಾಗಿ ವರ್ತಮಾನವಿದ್ದದ್ದರಿಂದಲೂ ಯೋಚನೆ ಹೆಚ್ಚಾಯಿತು ಆ ಆಕಳನ್ನು ಈ ಊರಿಗೆ ೪ ಮೈಲಿ ಯಲ್ಲಿರುವ ಸಾಲೂರಿನಿಂದ ತಂದಿತ್ತು ಅಲ್ಲಿಗೆ ಹೋಗಿದೆಯೆಂದು ಯೋಚಿಸಿ, ರಾತ್ರಿ ನಿದ್ರೆಬಾರದ್ದರಿಂದ ನನ್ನಲ್ಲಿ ಜೋಯಿಸರಿಂದ ನಿಮಿತ್ಯ ನೋಡಿಸಲು ಅವರು ತುಂಬಾ ಶೋಧನೆಯಿಂದ ಸ್ವಲ್ಪ ಹೊತ್ತು ಸುಮ್ಮನೆ ಕೂತರು ಆದೇನು ಚಿಂತೆಯಿಲ್ಲ ತಿಳಿದದ್ದನ್ನು ಹೇಳಿಬಿಡಿ ಎನ್ನಲು ಅವರು ಸಾಲೂರುಕಡೆ ಕೈ ತೋರಿಸಿ "ಆಕಡೆ ಕಾಡಿನಲ್ಲಿ ಹುಲಿ ಹಿಡಿದಂತೆ ಗಣಿತ ತೋರುವುದಾಗಿ ಹೇಳಲು ಇನ್ನೂ ಗಾಬರಿಯಾಯಿತು ಯಾಕೆ ಎಲ್ಲದೆ ರಾತ್ರಿ ಮಲಗಿದ್ದು ಕೋಳಿ ಕೂಗು ತ್ತಲೆ ಹೊರಟೆನು ಸಾಲೂರಿನಿಂದ ಇದನ್ನು ತಂದಿತ್ತಾದ್ದರಿಂದಲೂ ಹಿಂದೆ ... ಆ ಆಕಳು ಮೇಯುವದಕ್ಕೆ ಹೋದದ್ದು ಸಾಲೂ ರಿಗೆ ಓಡಿಹೋಗಿತ್ತಾದ್ದರಿಂದಲೂ ಸಾಲೂರಿನಲ್ಲಿ ಮೊದಲು ವಿಚಾರ ಮಾಡಿ ನಂತರ ಬೇರೆ ಕಡೆ ಹುಡುಕಬೇಕೆಂತ ನನಗೆ ಮನಸ್ಸಾಯಿತು ಆದ್ದರಿಂದ ಅಲ್ಲಿಗೆ ಹೋಗಿ ಲಿಂಗಣ್ಣನನ್ನು ವಿಚಾರಿಸಲು ಅವನು ಅಲ್ಲಿಗೆ ಬಂದಹಾಗೆ ಕಾಣಲಿಲ್ಲವೆಂದು ಹೇಳುತ್ತಾ ಎದ್ದು ಬಂದು ತನ್ನ ಕೊಟ್ಟಿಗೆ ಒಳಗೆ ನಿಂತಿದ್ದ ದನ ಕಾಯುವ ಹುಡುಗನನ್ನು ಕೇಳಿದನು ಆ ಹುಡುಗನು ತನ್ನ ನಾಯಿಯನ್ನು ಕಾಲಿನಿಂದ ಒದೆಯುತ್ತಾ, ನನ್ನ ದನಗಳು ಏಕೆ ಮೆಯ್ಯಾಕೆ ಹೋಗಿದ್ದವೋ ಅವೇ ಬಂದೋವು ನಾನ ಈ ಹುಡುಗ ಇಬ್ಬರಾಳೂ ಬೋಗರಿ ಆಡಿಕ್ಯಂತ ಕಾವಲಿನ್ಯಾಗೆ ಹಗ ಲೆಲ್ಲಾ ಇದ್ವಿ ನಿಮ್ಮಾಕಳು ಕಾಣಲಿಲ್ಲ ಎಂದನು ನಾನ ನಿಮಿತ್ಯ ದಲ್ಲಿ ತೋರಿದಂತೆ ಹುಲಿಯೇ ಹಿಡಿದಿರಬಹುದೆಂದು ನಿರಾಶನಾಗಿ ನಿಂತಿ ರಲು ಆ ದನಕಾಯುವ ಹುಡುಗನು ತನ್ನ ಕೈಯಲ್ಲಿದ್ದ ಬೋಗು ಯನ್ನು ಮತ್ತೊಬ್ಬ ಹುಡುಗನ ಕೈಯಲ್ಲಿ ಕೊಟ್ಟು ಕೊಟ್ಟಿಗೆ ಯೊಳಕ್ಕೆ ಹೋಗುವಾಗ್ಗೆ ಹಿಂದುಗಡೆ ಅವನ ನಾಯಿಯು ಅವನು ಹೊದ್ದಿದ್ದ ಕಂಬಳಿ ಸೆರಗನ್ನು ಬಲವಾಗಿ ಬಾಯಿಂದ ಕಚ್ಚಿ ಎಳೆಯು ತ್ತಿದ್ದದ್ದರಿಂದ ಆ ಹುಡುಗನು ಸಿಟ್ಟಾಗಿ "ಇದಕ್ಕೇನೋ ಹುಚ್ಚು ಹಿಡಿದೀತೆ. ನಿನ್ನೆ ರಾತ್ರಿನಾಗ ಎಲ್ಲೋ ಹೋಗಿ ಬೆಳಕಾದವ್ಯಾಗ ಬಂದೈತೆ" ಏನ ತಿಂತೋ ಏನೋ ಎನ್ನುತ್ತಾ ಒಂದು ಕೋಲಿನಿಂದ ಎರಡು ಹೊಡೆಯಲು, ಆ ನೋವಿಗೆ ಆ ನಾಯಿಯು ಕೂಗುತ್ತಾ ಸ್ವಲ್ಪ ಹಿಂದಕ್ಕೆ ಸರಿದು, ಮತ್ತೆ ಅವನ ಕಂಬಳಿ ಸೆರಗಿಗೆ ಬಾಯ್ಹಾಕಿ ಎಳೆಯುತ್ತಿತ್ತು ಮತ್ತೂ ಅದನ್ನು ಹೊಡೆಯಲಿಕ್ಕೆ ಹೋದಾಗ "ನೋಡೋಣ ಹೊಡೀಬೇಡ, ದನಗಳನ ಬಿಡು" ಎಂದು ನಾನೂ ಲಿಂಗಣ್ಣ ನೂ ಹಿಂದೆ ಹೋದೆವು ದನಗಳನ್ನು ಬಿಟ್ಟುಕೊಂಡು ಇಬ್ಬರು ಹುಡು ಗರೂ ನಾಯಿ ಸಹ ಮುಂದೆ ಹೋಗಲು ಕಾವಲಿನಹತ್ತಿರ ದನಗಳು ನಿಂತು ಮೇಯುತ್ತಿದ್ದಕ್ಕೆ ಚದರಿದವು ನಾಯಿಯು ಹಿಂದೆ ನೋಡು ತ್ತಾ ತಿರಿಗಿ ಮುಂದೆ ಹೋಗುತ್ತಲಿರುವದನ್ನು ನೋಡಿ, ಕೂಡಲೇ ಹುಡುಗರಿಗೆ ನೀವೂ ಮುಂದೆ ನಡೆಯಿರಿ ಎನ್ನುತ್ತಾ, ನಾವೂ ಮುಂದೆ ಮುಂದೆ ಹೆಜ್ಜೆ ಇಡಲು, ಸುಮಾರು ಅಲ್ಲಿಂದ ೨ ಫರ್ಲಾಂಗ್ ದೂರ ದಲ್ಲಿ ಒಂದು ದೊಡ್ಡ ಹುಣಿಸೆ ಮರದ ಕೆಳಗೆ ನಾಯಿಯು ನಿಂತು ಸುತ್ತಲೂ ನೋಡುತ್ತಿತ್ತು ಅಷ್ಟರಲ್ಲಿ "ಅಂಬೇ" ಎಂಬ ಎಳೆಗ ರುವಿನ ಶಬ್ದವು ಸಮೀಪದ ಗಿಡಗಳ ಮಧ್ಯದಲ್ಲಿ ಕೇಳಬರಲು, ನಾಯಿ ಯು ಗರಕ್ಕನೆ ತಿರುಗಿ ಅಲ್ಲಿಗೆ ಓಡಿತು ಇದೇನೋ ಚಮತ್ಕಾರವೆಂದು ನಾವೆಲ್ಲರೂ ಅಲ್ಲಿಗೆ ಓಡಿದಾಗ ನಮ್ಮಾಕಳು ಅದರ ಎಳೆಗರುವನ್ನು ನಾಲಿಗೆಯಿಂದ ನೆಕ್ಕುತ್ತಾ ನಿಂತಿದ್ದದ್ದನ್ನು ನೋಡಿ, ಎಲ್ಲರಿಗೂ ಆಶ್ಚ ರ್ಯವಾಯಿತು ಲಿಂಗಣ್ಣನು ಕರುವನ್ನು ಹೆಗಲ ಮೇಲಕ್ಕೆ ಎತ್ತಿ ಕೊಂಡನು ಆಕಳು ಹಿಂದುಗಡೆ ಬಂತು ಆಕಳು ಹಿಂದಿನ ರಾತ್ರಿ ಕಾಡಿನಲ್ಲಿ ಕರು ಹಾಕಿದ್ದು ಈ ನಾಯಿಕಡೆಯಿಂದ ಪತ್ತೆ ಆದ್ದಕ್ಕಾಗಿ ಎಲ್ಲರೂ ಆಶ್ಚರ್ಯಪಟ್ಟರು ಜೋಯಿಸರ ಮಾತು ಸುಳ್ಳಾಗುವುದುಂ ಟೇ? ಎಂದು ಮನೆಗೆ ಬಂದು ಪುನಃ ಅವರಲ್ಲಿ ತರ್ಕ ಮಾಡಲು ಅವರು "ನಿಮಿತ್ಯದ ಲಗ್ನಕ್ಕೆ ಗುರುದೃಷ್ಟಿಯೇನೋ ಇತ್ತು ಆದರಿಂದ ನೀವು ಬಹುವಿಧದಿಂದ ಪತ್ತೆ ಹಚ್ಚಿದಿರಿ" ಎಂದರು ಅದು ಹೇಗಾದ ರೂ ಆಗಲಿ ಹುಲಿ ಹಿಡಿದಿರಬಹುದೆಂದು ಶಂಕಿಸಿ ಹುಡುಕುವ ಯೋಚ ನೆಯನ್ನೇ ಬಿಟ್ಟು, ಇನ್ನೆರಡು ದಿನ ಅಜಾಗ್ರತೆಯಾಗಿ ಆಕಳನ್ನು ಆ ಕಾಡಿನಲ್ಲಿಯೇ ಬಿಟ್ಟಿದ್ದರೆ ಜೋಯಿಸರು ತಮ್ಮ ನಿಮಿತ್ಯದ ಗಣಿತ ದಲ್ಲಿ ಒಂದು ವೇಳೆ ತಪ್ಪಿ ಹೋಗಿದ್ದಾಗ್ಯೂ ಅವರ ಮುಖದಿಂದ ಹೊ ರಟ ಮಾತೇ ಸಿದ್ಧಿಗೆ ಬರುತ್ತಿತ್ತೆಂದು ಧಾರಾಳವಾಗಿ ಹೇಳಬಹುದು

ಎಸ್ ನಾಗೇಶಶಾಸ್ತ್ರಿ

ತಾಲ್ಲೂಕು ವರ್ತಮಾನಗಳು

ಚನ್ನಪಟ್ಟಣ —ಕಳೆದ ವಾರ ಒಂದೆರಡು ಹದ ಮಳೆಯಾಗ್ಯ ರಾಗಿ ಮೊದಲಾದ ಪೈರಿಗೆ ಮಳೆ ಸಾಲದೆಂಬ ಭೀತಿ ನಿವಾರಣೆಯಾಯಿತು ನಿನ್ನೆ ಮೊನ್ನೆಯಿಂದಲೂ ಮುಂದು ಮುಸುಕಿಕೊಳ್ಳುತ್ತಿದೆ ದಾರಣೆ ವಾಸಿಗಳು ಇಳಿಯಲಿಲ್ಲ ಅಳತೆಯಲ್ಲೂ ಏತ್ತಲಾಟ ತಪ್ಪದು ಬೇಸಿಗೆ ... ಕಾಲದಲ್ಲಿ ಅನೇಕ ಕಡೆ ವರ್ತಕರು ಬಡವರ ಪ್ರಯೋಜ ನಾರ್ಥವಾಗಿ ಸ್ವಲ್ಪ ಅಗ್ಗವಾಗಿ ಮಾರಲು ಏರ್ಪಡು ಕಲ್ಪಿಸುತ್ತಿರು ವರು ಆದರೆ ಇಲ್ಲಿ ಬಹು ಜನ ಸಾಹುಕಾರರೂ ಪುಣ್ಯವಂತರೂ ಇದ್ದರೂ ಈಗಿನ ವರಿಗೂ ಬಡ ಜನರ ಕಡೆಗೆ ದೃಷ್ಟಿ ಕೊಟ್ಟು ದಾರಣೆ ಗಳ ವಿಷಯ ರಿಯಾಯಿತಿ ತೋರಿಸಿಲ್ಲ.—ಎಲೆಕೇರಿಯಲ್ಲಿ ಕೆಲವು ದಿನಗಳಿಂದ ನಾನಾ ತರ ವ್ಯಾಜ್ಯಗಳೂ ಹೊಡೆದಾಟಗಳೂ ನಡೆಯು ತ್ತವೆ ಇಲ್ಲಿನ ನಿವಾಸಿಗಳಲ್ಲಿ ದ್ವೇಷಗಳೂ ಜಿಗುಪ್ಸೆಗಳೂ ನೆಲೆಗೊಂಡು ಬಹು ಅನರ್ಥಗಳಿಗೆ ಹೇತುವಾಗಿದೆ. ಕಳೆದ ೩೦ನೇ ... ನೇ ರಾತ್ರಿ ಕೆಲ ವರು ಸೇರಿ ಹೊಸಗ್ರಾಮದ ಲೈನ ೭—೮ ತೋಟಗಳಲ್ಲಿ ತೆಂಗು, ಅ ಡಿಕೆ, ಬಾಳೆ, ಎಲೆ, ಕಿತ್ತಳೆ ವಗೈರೆ ಸಸಿಗಳನ್ನು ನಾಶಮಾಡಬಿಟ್ಟಿರು ವರು ನಷ್ಟಪಟ್ಟಿರುವ ಮಾಲಿಕರ ಮನೋವ್ಯಥೆ ಹೇಳತೀರದು ಈ ಅನರ್ಥ ಯಾರಿಂದ ನಡೆಯಿತೆಂದು ಬಹಿರಂಗದಲ್ಲಿ ಗೋಚರವಿಲ್ಲದ್ದಾಗಿದೆ

ಮಂಜರಾಬಾದು —ಮೈಸೂರಿಗೆ ದಸರಾ ನೋಟಕ್ಕೆ ಈ ತಾ ಲ್ಲೂಕಿನಿಂದ ಹೋಗಿದ್ದವರು, ನಂಜನಗೂಡು ದೇವರ ಯಾತ್ರೆಗೆ ಸಹ ಕುಟುಂಬಸಮೇತ ಹೋದವರು ತಾ ೧ ನೆ ದಿವಸ ರಾತ್ರಿ ಸಮಯ ದಲ್ಲಿ ತಮ್ಮ ತಮ್ಮ ಗ್ರಾಮಕ್ಕೆ ಬಂದು ಸೇರಿಕೊಂಡರು ಬ್ಯಾಕರಹಳ್ಳಿ ನಂಜೇಗೌಡರು ಇವರ ಮಕ್ಕಳು ಸಹ ಅದೇ ರಾತ್ರಿ ಸ್ವಗ್ರಾಮದಲ್ಲಿ ಕಾಲ ರಾದಿಂದ ಮೃತಪಟ್ಟಿದ್ದರು ಬೆಳಿಗ್ಗೆ ಈತನ ತಮ್ಮ ದ್ಯಾವೇಗೌಡನಿಗೆ ಸಹ ಕಾಲರಾ ತಗಲಿತು ಅಮಲ್ದಾರ್ರು ಆ, ಸರ್ಜನರು ಕೂಡಲೆ ಗ್ರಾಮಕ್ಕೆ ಹೋಗಿ ಕಾಯಿಲೆ ಇದ್ದ ದ್ಯಾವೇಗೌಡನಿಗೆ ತಕ್ಕ ಔಷಧಿ ಕೊಟ್ಟರು ದ್ಯಾವೇಗೌಡ ಈಗ ಗುಣ ಹೊಂದಿದ್ದಾನೆ ಈತನ ಮಗು ಒಂದು ಮೃತಪಟ್ಟಿತು ಇದೇ ಗ್ರಾಮದ ಅಪ್ಪಸ್ವಾಮಯ್ಯನವರ ಹೆಂಡತಿ ಬರುವ ಅರ್ಧದಾರಿಯಲ್ಲಿಯೇ ಕಾಲರಾದಿಂದ ಮೃತ್ಯುವಾದಳು ಈಕೆ ಮೈಮೇಲೆ ಧರಿಸಿದ್ದ ಸುಮಾರು ೫೦೦—೬೦೦ ರೂಪಾಯಿ ಬಾಳುವ ಚಿನ್ನ ಬೆಳ್ಳಿ ನಗಗಳನ್ನು ಸಹ ತೆಗಿಸದೆ ಭಯದಿಂದ ಕೆರೆಗೆ ಹೆಣವನ್ನು ಹಾಕಿ ಬಂದರೆಂದು ಹೇಳುತ್ತಾರೆ ಇವರು ಪುಣ್ಯವಂತರಾಗಿರಬೇಕು. ಮತ್ತು ಈಕೆಯ ಮಗಳು, ಅಳಿಯ, ಮಗ ಸಹ ಪ್ರಾಣ ಉಳಿಸಿಕೊಳ್ಳ ಬೇಕೆಂಬ ಆಸೆಯಿಂದ ಬೇರೆಗ್ರಾಮಕ್ಕೆ ಓಡಿ ಹೋಗಿದ್ದರು ಆದಾಗ್ಯೂ ಅಲ್ಲಿ ಸಹ ಇದೇ ರೋಗದಿಂದ ಮೃತರಾದರು ಮೃತ್ಯು ಆಹಾ, ದೈವ ಯತ್ನ ಎಷ್ಟರ ಮಟ್ಟಿಗೆ ಇರುತ್ತೆ! ಇದೇ ರೀತಿ ನೋಟಕ್ಕೆ ಹೋಗಿ ದ್ದ ಹೆಗ್ಗಡೆ ಸಿದ್ದೇಗೌಡನೆಂಬುವನು ತನ್ನ ಊರಿಗೆ ಬಂದ ಮಾರನೆ ದಿ ವಸ ಇದೇ ರೋಗಕ್ಕೆ ಬಲಿಯಾದನು ಇನ್ನು ೨ ಜನಕ್ಕೆ ತಗಲಿರು ತ್ತೆ ಈ ರೀತಿ ಆಕಸ್ಮಾತ್ತಾಗಿ ಬಂದ ಕಾಲರಾ ಎಂಬ ಈ ಮಹಾ ರೋಗವು ಈ ತಾಲ್ಲೂಕಿನವರಿಗೆಲ್ಲಾ ತುಂಬಾ ಭಯವನ್ನೂ ವ್ಯಸನವ ನ್ನೂ ಉಂಟು ಮಾಡಿರುತ್ತೆ ದಯಾಳುವಾದ ನಮ್ಮ ಸರ್ಕಾರದವರು ಮೈಸೂರಿಗೆ ಹೋಗಿದ್ದವರು ಊರಿಗೆ ಬರುವಾಗ ಊರಿಂದ ಹೊರಗೆ ೧೦ ದಿವಸ ಇದ್ದು ಬರುವಂತೆ ಕಟ್ಟುಮಾಡಿದ್ದರೆ ಬಹು ಉಪಕಾರವಿತ್ತು.— ಇದೆ ರೀತಿ ನೋಟಕ್ಕೆ ಹೋಗಿದ್ದ ಹೆಸಗನಹಳ್ಳಿ ಡಾಕ್ಲೆ ಬೊಸಕರೆ ಗ್ರಾಮದ ಹೊಲೇರನೊಬ್ಬನು ಮತ್ತು ಒಂದು ಹುಡುಗಿ ಕಾಲರಾ ದಿಂದ ಮೃತರಾದರು ಮೈಸೂರು ನೋಟ ಯಮಲೋಕಕ್ಕೆ ಓಟ ವಾಗಿರುತ್ತೆ —ಇದೇ ತಾಲ್ಲೂಕು ಬೆಳಗೋಡು ಹೋಬಳಿ ಆಲವಳ್ಳಿ ಗ್ರಾಮದಲ್ಲಿ ಒಬ್ಬ ಹೆಂಗಸನ್ನು ಯಾರೋ ಕತ್ತಿಯಿಂದ ತುಂಡು ತುಂಡಾಗಿ ಕಡಿದು ಹಾಕಿದ್ದಾಗಿ ವರ್ತಮಾನವಿದೆ ನಮ್ಮ ಪೋಲೀಸು ಸೂಪರಿಂಟರು ಅಮಲ್ದಾರ್ರು ಸಹ ಪತ್ತೆ ತರಬೂದಿನಲ್ಲಿದಾರೆ ಇನ್ನು ಸರಿಯಾಗಿ ಪತ್ತೆಯಾಗಿಲ್ಲವೆಂದು ಹೇಳುತ್ತಾರೆ ಆಗಾಗ್ಗೆ ಈ ತಾಲ್ಲೂ ಕಿನಲ್ಲಿ ಖೂನಿಗಳು ಆಗುವದು ತಪ್ಪಲಿಲ್ಲ —ಮಟಸಾಗರಗ್ರಾಮದ ಮೇಸ್ತ್ರಿ ಪುಟ್ಟಗೌಡರೆಂಬುವರು ಈ ವಾರದಲ್ಲಿ ರಾತ್ರಿ ಮಲಗಿದ್ದಾಗ್ಗೆ ಯಾರೋ ಕಳ್ಳರು ಮಲಗಿದ್ದ ಕೋಣೆಗೆ ಕನ್ನ ಹಾಕಿ ಸುಮಾರು ೧೦೦೦ ರೂಪಾಯಿ ಬಾಳುವ ಚಿನ್ನ ಬೆಳ್ಳಿ ಒಡವೆಗಳು, ಸುಮಾರು ನಗ ದು ೫೦೦—೬೦೦ ರೂಪಾಯಿ ಕಳುವಿನಿಂದ ತೆಗೆದುಕೊಂಡು ಹೋಗಿ ದ್ದಾರೆ ನಿದ್ರೆಯಿಂದ ಎಚ್ಚರವಾಗದಂತೆ ಕಳ್ಳರು ಮಂಕುಬೂದಿ ಹಾಕಿ ಮೋಸದಿಂದ ತೆಗೆದುಕೊಂಡು ಹೋಗಿರುತ್ತಾರೆ ಸರ್ಕಾರದವರು ಆ ಸಾಮಿಗಳ ಪತ್ತೆಯಲ್ಲಿದ್ದಾರೆ ಇನ್ನು ಮಾಲು ಆಸಾಮಿ ಪತ್ತೆ ಇಲ್ಲ ವೆಂದು ಹೇಳುತ್ತಾರೆ ಈತನಿಗೆ ಬಾಗೆ ನಾಕೀಬರ ಕಾಫಿ ತೋಟದಲ್ಲಿ ತಿಂಗಳಿಗೆ ೩೦ ರೂಪಾಯಿ ಸಂಬಳದ ಮೇಸ್ತ್ರಿ ಕೆಲಸವಿರುತ್ತೆ ತುಂ ಬಾ ಅನುಕೂಲಸ್ಥನಾಗಿದ್ದನು ಈತನಲ್ಲಿ ಕೋವಿ, ಕತ್ತಿ ಏವಿದ್ದಾ ಗ್ಯೂ ಸಮಯದಲ್ಲಿ ಕಾಪಾಡಲಿಲ್ಲ —ಈ ವಾರದಲ್ಲಿ ಅಷ್ಟು ಮಳೆ ಇಲ್ಲ ಲ್ಲೇ ಬಹಳವಾಗಿ ಬರುತ್ತಾ ಇದೆ ತಾ ೬ ರಿಂದ ವಾಲಂಟಿಯರ ನಿಶಾ ಟಿಂಗೂ ಕವಾಯತು ಪರೇಡೂ ನಡಿಯುತ್ತೆ ಆಗಲೇ ಸಕಲೇಶಪುರಕ್ಕೆ ಯೂರೋಪಿಯನ್ ದೊಡ್ಡ ಮನುಷ್ಯರು ದಯಮಾಡಿಸಿರುತ್ತಾರೆ.

ಹಾಸನದ ಟೋಪಿಗಳು.

123-2

ಒಳ್ಳೇ ಸಮಯ ಬಿಡಬೇಡಿರಿ.

ಮೊದಲು ಹಾಸನದಲ್ಲಿದ್ದು ಹೆಸರುವಾಸಿ ಹೊಂದಿರುವ ಟೋಪಿಗಳನ್ನು ಮಾಡುತ್ತಿದ್ದ ಕಿಂಗ್ ದೊರೆಸಾನಿಯವರು, ಈಗ ತುಮುಕೂರಲ್ಲಿ ಶ್ರೇಷ್ಠತರವಾದ ಟೋಪಿಗಳನ್ನು ಮಾಡಿಸುತ್ತಿದ್ದಾರೆ. ಇವರಲ್ಲಿ ಮಧ್ಯಮತರದ ಟೋಪಿಗಳು ಹೆಚ್ಚಾಗಿ ಉಳಿದಿರುವದರಿಂದ ಇವನ್ನು ಒಂದು ತಿಂಗಳ ವರೆಗೆ ಕಡಿಮೆ ಕ್ರಯಕ್ಕೆ ವಿಕರಿ ಮಾಡುತ್ತಾರೆ. ಹ್ಯಾಗಂದರೆ —

ಮೊದಲಿದ್ದ ಕ್ರಯ ಡಜನ್ 1ಕ್ಕೆ	10½	ರೂಪಾಯಿ.
ಈಗ ಮಾರುವ ಕ್ರಯ ,,	9	ರೂಪಾಯಿ.
ಇನ್ನೊಂದು ತರದವುಗಳು		
ಮೊದಲಿದ್ದ ಕ್ರಯ ಡಜನ್‌ಗೆ	9	ರೂಪಾಯಿ.
ಈಗ ಮಾರುವ ಕ್ರಯ	7½	ರೂಪಾಯಿ

ಮಿಶ್ರವಾದ ಬಣ್ಣದವುಗಳು.

ವಿಳಾಸ—ಕಿಂಗ್ ದೊರೆಸಾನಿಯವರು,

ಹಾಸನದ ಟೋಪಿ ಮ್ಯಾನೇಜರ್, ತುಮಕೂರು.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನ ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ.

SCOTT'S EMULSION. 57-30

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದು.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರೆಕುತ್ತದೆ.

ಸ್ಕಾಟ್ ಅಂಡ್ ಬೋನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಳ್ಳ ಮನುಷ್ಯನ ಗುರುತಿನ ಔಷಧವನ್ನೇ ಕೊಂಡುಕೊಳ್ಳಿ.

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವದು.

120 5

ಮೈಸೂರು ತಾಲ್ಲೂಕು ಕಳಸ್ವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ದೇವಾಗ್ರದ ಸ್ಥಿತಿಯು ಪ್ರಕೃತಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೇ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರ	ಸರ್ವೆ ನಂಬರು.	ಬಿಸ್ತಾರ		ಆಕಾರ.
ಕಾವೇರಿನಾಲೆ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು.	೩೦	೪	,,	೨೨
	೧೦೩	೬	೨೦	೪೨
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೬	೩೨	೪೮
ಜುಮ್ಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರ ಕೆಳಗೆ ಕಂಡ ಜಮೀನನ್ನು ಸಹ ಇಲ್ಲಿ ಸವರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ [illegible] ಬಗೆಗಾಗಿ ಆಲೋಚಿಸಲಾಗುತ್ತದೆ

ಜಮೀನಿನ ವಿವರ	ಸರ್ವೆ ನಂಬರು	ಬಿಸ್ತಾರು.		ಆಕಾರ.
ಕಾವೇರಿನಾಲೆ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು.	೧೦೦	೩	೧೫	೨೪
	೧೦೧	೩	೯	೨೩
	೧೦೨	೩	೯	೨೩
	೩೦	೫	೩೩	೬೩
ಜುಮ್ಲಾ	೪	೧೫	೩೦	೧೧೩
ಮೇಲೆ ಕಂಡ ಜಮೀನು	೩೦	೩	೪	೨೮
ಗಳಿಗೆ ಹತ್ತಿರದ	೩೨	೬	೨೫	೪೨
ಥೈಸ್ಪೈರ್ ಬಾಗಾಯತು	೩೩	೪	೧೬	೪೬
	೫೯	೪	೩೪	೩೯
ಜುಮ್ಲಾ	೪	೧೬	೩೯	೧೪೯
ಒಟ್ಟು ಜುಮ್ಲಾ	೧೩	೩೦	೯	೪೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ಪರ್ವರ್ ಎಜೆಸ್ಸೀಟವು ಮ್ಯಾನೇಜರ್ ಎಸ್. ಟಿ. ಶ್ರೀತಾದ್ರ್ಯಯ್ಯಂಗಾರ್ರಿಗೆ ತಿಳಿಸಬೇಕು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು)	ರೂ. ೧—೦—
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ	ರೂ. ೧—೧೪—೦
,, ೬ ,, ,,	೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ತಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಯೆಷ್ಟು ಕೆಂಪು ಮತ್ತು ಕಾಜು ಕಪ್ಪು

ಹಾಸನ ಪೂಲ್ ದಾರ.

215-3

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್ ದಾರ ಮಾತ್ರ.

	ರೂ.	ಆ.	ಪೈ.
೧ ಟೋಪಿ ಆಗುವ ಪೂಲ್ ದಾರದ ಕ್ರಯ	೦	೮	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦	
ಹಾಸನದಟೋಪಿ ಹೊಲಿಯುವ ಕೋಕ್ಕೆ ಸೂಜಿ ೧ಕ್ಕೆ ೦	೧	೯	
ವಿ. ಪಿ. ಯಿಂದಲೂ ರವಾನಿಸುತ್ತೇವೆ. ಈ ದಾರದಲ್ಲಿ ಆದ ಟೋಪಿ ಪರ್ಜ ೧ಕ್ಕೆ	೧೩	೩	೦

ವಿಳಾಸ— ಸಿ. ರಘುನಾಥ ಕಾಮತ್,

ಪೂಲ್ ಮರ್ಚಂಟ್,

ಬೋಳಾರ, ಮಂಗಳೂರು.

ಸನ್ ೧೯೦೭ನೇ ಇಸವಿಯ

130 1

ಎಂ ನಂ॥ ಎಚ್ ನಂ॥ ಬಿ ನಂ॥ ಸಿ ನಂ॥ ಲೆಟ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲಿಷು—ಕನ್ನಡ

ಈ ಸೈಜಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಹುಷಾರ್ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ವಿಶ್ವಾವಸು ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಪಬ್ಬಗಳು, ರಜಾದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋನೋಟ್ ರಾಸುಂ, ಸ್ಟಾಂಪು, ಜಿಲ್ಲೆ ಸ್ಥಳಗಳು, ಪ್ರೋನಾಟಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ ಮಾಡಗಳು, ಗೌರಿ ಪಂಚಾಂಗ, ಸ್ವಪ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ದೋಟಲೆಕ್ಕ, ಜನಾಬರ್ತನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಚೀಪು ಸಾಮಾನ್ ಮೈಂಡು, ಚಿನ್ನದ ಗಿಲೀಟುಮಾಡಿದೆ

ಎ	ನಂಬರು ಚಿಕ್ಕಸೈಜು	೩ ಆಣೆ,	ಸಿ	ನಂಬರು ದೊಡ್ಡಸೈಜು	೬	ಆ		
ಎಫ್	,,	,,	೭	,,	ಎಚ್	,,	,, ೩	,,
ಬಿ	,, ಪಚ್ಚೆಕಳದ್ದು	೫	,,	ಡಿ.	,, ಮುಚ್ಚಳದ್ದು	೮	,,	

ಪೋಸ್ಟು ಚಾರ್ಜು ಬೇರೆ. ಒಂದೇ ಸಮಾನೆಯು ೧೨ ಪ್ರತಿ ತರಿಸಿಕೊಂಡರೆ ೧ ಪ್ರತಿ ಇನಾಂ. ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ

ಶ್ರೀ ಕೃಷ್ಣವಿಳಾಸ ಪ್ರೆಸ್, ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—4

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನ ಸ್ಟ್ಯಾಂಡರ್ಡ್ ಸಾಮಾನ್ ಕಂಡಿಷನ್ ಮೇಲೆ ಬಿಡುಗಡೆ ಮಾಡುವದಕ್ಕೆ [illegible] ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈ ಕಂಪನಿಗೆ ಸಲ್ಲಿಸಲ್ ಮಾಡಿರುತ್ತಾರೆ

ನಿಯಮಿತ ಮಾಡಿರುವ ಬೇರೆ ಒಂದಕ್ಕೆ [illegible] ರೂಪಾಯಿಗಳ ಬೆಲೆಯುಳ್ಳ [illegible] ರ ಪಾಲು ಗಳು— ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ [illegible] ರೂಪಾಯಿಗಳನ್ನ [illegible] ಕಂತುಗಳಲ್ಲಿ ಪಾವತಿ ಮಾಡತಕ್ಕದ್ದು [illegible] ಸರ್ವ ಪೂರೈಸಲ್ಪಟ್ಟಿದೆ

ಈ ಕಂಪೆನಿಯ [illegible] ಪ್ರತಿಷ್ಠಿಸತಕ್ಕಂಥಾ ರು. ಈ ಕೆಳಗೆ ರುಜುವಾತು ಮಾಡಿ [illegible] ಸಟ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಷೇರು [illegible] ಈ ಕೆಳಗೆ ರುಜು ಮಾಡಿದ ಏಜಂಟಿಗೆ, ಇವರಿಂದ ಲಿಖಿತ ಮೂಲಕ [illegible] ಮಾಡಲು ಅಧಿಕಾರ [illegible] ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು [illegible] (ಈ ಕಂಪೆನಿಯ ಕ್ರಿಟ್ಟಗ), ಅಥವಾ ಮೈಸೂರು [illegible] ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸೈನ್) ಬಿ. ಪಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.

ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

21—9—1906 ರಿಂದ 28—9—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಹೋಬಳಿ ಸಂಖ್ಯೆ
ಬೆಂಗಳೂರು ಪಟ್ಟಣ	2	0	11
ಮೈಸೂರು ,,	1	2	0
ಬೆಂಗಳೂರು ಡಿಸ್ಟ್ರಿಕ್ಟ್	31	18	26
ಮೈಸೂರು ,,	1	1	0
ಕೋಲಾರ್ ,,	0	0	9
ಕೋಲಾರ್ ಚಿನ್ನದ ಗಣಿಗಳು	0	1	9
ತುಂಕೂರು ಡಿಸ್ಟ್ರಿಕ್ಟ್	1	2	14
ಹಾಸನ ,,	32	26	0
ಚಿತ್ರದುರ್ಗ ,,	0	0	0
ಕಡೂರ್ ,,	63	64	26
ಶಿವಮೊಗ್ಗಾ ,,	0	0	7
ಜುಮ್ಲಾ.	131	113	95

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ನಾಮ ಸಂವತ್ಸರದ ಆಶ್ವೀಜ ಬಹುಳ ನವಮಿ ಗುರುವಾರದಿಂದ ಆಶ್ವೀಜ ಅಮಾವಾಸ್ಯ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ಅಕ್ಟೋಬರ್.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
11	ಗುರು		ನವಮಿ	60 0	ಪುಷ್ಯ	15 33
12	ಶುಕ್ರ		ನವಮಿ	2 20	ಆಶ್ಲೇಷ	19-48
13	ಶನಿ		ದಶಮಿ	1 3	ಮಘ	22 36
14	ಆದಿ	⚹	ಏಕಾದಶಿ	1 16	ಪೂ	21 24
15	ಚಂದ್ರ	⸡	ದ್ವಾದಶಿ	3 56	ಉ	21 58
16	ಕುಜ	⸸	ತ್ರಯೋ	2-12	ಹಸ್ತ	56 52
17	ಬುಧ	*	ಅಮಾ	56 5	ಚಿತ್ತಾ	22-12

⚹ ಸರ್ವತ್ರ ಏಕಾದಶಿ

⸡ ಸೋಮಪ್ರದೋಷ

⸸ ಮಾಸಶಿವರಾತ್ರಿ, ನರಕಚತುರ್ದಶೀ ಪ್ರಯುಕ್ತ ನೀರು ತುಂಬುವ ಹಬ್ಬ

* ಸರ್ವತ್ರ ಅಮಾವಾಸ್ಯೆ

ಬೇಳೆ ಧಾರಣೆ.

ದಿನಸು		ಮೈಸೂರು.	ಬೆಂಗಳೂರು
ಕಳ್ಳೀ ಅಕ್ಕಿ ಪಲ್ಲಾ ೧ಕ್ಕೆ	೩೩	೧೬-೦-೦	೧೩
ಕೆಂಬತ್ತಿ ಅಕ್ಕಿ ಅಸಲ್ ..		೧೩-೮	೧೩
,, ದುಯಂ		೧೩-೮-೦	೧೨
ಜಾಪಾಳ ಅಕ್ಕಿ	..	೧೩-೪-೦	೧೩
ಸಣ್ಣಕ್ಕಿ ಅಸಲ್		೧೫ ೮ ೦	೧೫
,, ದುಯಂ	.	೧೪ ೦-೦	೧೪
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೦ ೦	೧೨
,, ದುಯಂ		೧೧ ೮ ೦	೧೧
ಕೈಜ ರಾಗಿ ಪಲ್ಲಾ ೧ಕ್ಕೆ		೨ ೪ ೦	೬
ಕಾರಾಗಿ		೯-೪ ೦	೬
ಜೋಳ	.	೨-೮-೦	೯
ಪಲಸಂಡೆ ಪಲ್ಲಾ ೧ಕ್ಕೆ	.	೧೨ ೦ ೦	೧೩
ಬಿಳೀ ಅವರೆ		೧೦ ೦ ೦	೧೦
ಹೆಸರು	..	೧೩-೦-೦	೧೦
ಉದ್ದು		೧೨ ೪ ೦	೧೨
ಕಡಲೆ	..	೧೨-೦-೦	೧೦
ಎಳ್ಳು ಸೆ ೧೨೮ ಕ್ಕೆ	..	೨೦ ೮ ೦	೨೨
ಹುರುಳಿ	.	೮ ೮ ೦	೧೦
ಹರಳು ೧೨೧ ಸೇರಿಗೆ	.	೧೯ ೦ ೦	೧೩
ಹೊಗೆಸೊಪ್ಪು ಮಣ ೧ಕ್ಕೆ		೨ ೨ ೦	೨
ಮೆಣಸಿನಕಾಯಿ	.	೪ ೦ ೦	೩
,, ದುಯಂ		೩ ೪-೦	೩
ಸಿಲ್ಲು ದೊಡ್ಡ ಅಚ್ಚು	.	೬-೬-೦	ಮ ೦-೦
ಒಳ್ಳೆಣ್ಣೆ ಮಣ ೧ಕ್ಕೆ	.	೬ ೮-೦	೫
ಹರಳೆಣ್ಣೆ ,,	..	೬ ೦ ೦	೫
ಕೊತ್ತುಂಬರಿ ಪಲ್ಲಾ ೧ಕ್ಕೆ ..		೧೧-೦ ೦	೯-೦
ಉಪ್ಪು ,,	.	೬ ೧-೦	೬
ಕಾಮನೇ ದಾಣ್ಣು		೦ ೧ ೦	೦-೦
,, ಸಕ್ಕರೆ ..	..	೦ ೮ ೦	೦
ತುಪ್ಪ ಮಣ ೧ಕ್ಕೆ		೧೩ ೮-೦	೧೨
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೭ ೦	೬
ತೆಂಗಿನಕಾಯಿ ೧೦೦ಕ್ಕೆ	..	೩-೮-೦	೪
ಅಡಿಕೆಕಾಯಿ ಮಣ ೧ಕ್ಕೆ	.	೧ ೧ ೦	೦
ಅಚ್ಚಬೆಲ್ಲದ ಕಾಯಿ ಮಣ ೧ಕ್ಕೆ		೦ ೧೨ ೦	೦-೦
ಚಿನ್ನ (ಪೌನ್) ಕೆಂಪು	.	೧೫ ೧ ೦	೧೫
,, ,, ಪವನ್		೧೫ ೧೦ ೦	೧೫
,, ,, ಗಟ್ಟಿ ತೊಲ ೧ಕ್ಕೆ	..	೨೩ ೧೨-೦	೨೪
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	೮೪

Printed and published by the Rev. E THOMPSON, M.A., the Proprietor and Man[ager], Wesleyan Mission Press, Mysore. 11/10/1906

ವೃತ್ತಾಂತ ಪತ್ರಿಕೆ.

REGISTERED M. 20.

ಖ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೨೦

ಇಂಡಿಯದ ದೊಡ್ಡ ನೋವುಹರ.

86 21

ಸ್ತ್ರೀಪುರುಷರೆಲ್ಲರೂ ಕ್ಲೆಮೆಂಟ್ ಪ್ಯಾಜಿಕ್ ಬಾಂ. ತಲೆನೋವು, ಕತ್ತಿನ ನೋವು, ಸಂದುಗಳ ವಾಯು, ಆರಾಶಲೆನೋವು, ನರಗಳ ಇರಿತ, ಉಳುಕು, ತಲೆಭಾರ, ಕೆಮ್ಮು, ಗಂಟುಗಳು, ಎದೆನೋವು, ಶೀತ, ಬಾಣಗೆಮ್ಮು, ಹೊಟ್ಟೆ ಶೂಲೆ, ಬೆನ್ನು ಎದೆಗಳ ನೋವು, ಅಸ್ತ್ಮಾ, ಈ ವ್ಯಕೆ ಯ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡ ಬೇಕಿಲ್ಲ. ಈ ನೋವುಬಾಧೆಗಳೆಲ್ಲಾ ಕ್ಲೆಮೆಂಟ್ ಯವರ ಪ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೆಲ ನಿಮಿಷಗಳಲ್ಲೇ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ನಿವಾರಣೆ ಮಾಡುತ್ತದೆ. ಉಪಯೋಗಿಸುವ ವಿಧಾನ ಮುಂತಾದ ಬಾಬ್ತು ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನು ಕಳಿಸುತ್ತೇವೆ. ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗವು ತೊಲಗುತ್ತದೆ. ಸುಖವನ್ನು ಅನುಭವಿಸುವವರಾಗಿ ಸದಾ ಈ ಔಷಧವನ್ನು ತರಿಸಿಕೊಳ್ಳಿ. ಇದರಿಂದ ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅನುಭವಸಿದ್ಧ. ಕ್ರಯ—೧ ಡಬ್ಬಿಗೆ ೧೦ ಆಣೆ, ೩ ಡಬ್ಬಿ ೧ ರೂಪಾಯಿ, ೬ ಡಬ್ಬಿ ೨ ರೂಪಾಯಿ, ೧೨ ಡಬ್ಬಿ ೪ ರೂಪಾಯಿ. ಅಂಚೆ ವೆಚ್ಚ ಸಹ ಮಾರು ಡಬ್ಬಿವರಿಗೆ ೩ ಆಣೆ.

ವಿಳಾಸ:—ಎಫ್ ಡಬ್ಲಿಯು ಆರ್, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಹಿಂದೂ ಮೋಸಿಯಾ

ತಗಲುತ್ತಲೇ ನೋವು ಮಾಸಿ ಯಾಗುತ್ತೆ.

ಈ ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ಧರ್ಮಶಾಲಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳಗಳಲ್ಲಿ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

ಈ ತೈಲವು ತತ್ಕಾಲದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕಿದ ಔಷಧ. ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು, ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ನೋವು ಕಂಡರೆ ಇದನ್ನು ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ಗಾಯಗಳು, ನರ ಸೆಳೆಯುವದು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ ಕೆಂಪು, ಊತಗಳು, ಗಡ್ಡೆಗಳು, ರಣಗಳು, ಚಳಿಕಜ್ಜಿ, ಸೊಳ್ಳೆ, ಚೇಳು ಕಚ್ಚಿದ್ದು, ಚಿಪ್ಪು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ನೀಗಿಸುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ಬರುವದಿಲ್ಲ.

ಕ್ರಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ, ದೊಡ್ಡದಕ್ಕೆ ೧ ರೂ. ೮ ಆ. ಒಂದೇ ಸಲ ೧೨ ಡಬ್ಬಿ ತರಿಸಿದ ನಂತರ ಟಪ್ಪಾಲ್ ಖರ್ಚು ಬಿಟ್ಟು ... ಸಣ್ಣ ಡಬ್ಬಿಯಲ್ಲಿರುವದಕ್ಕಿಂತ ೩ ದಷ್ಟು ಹೆಚ್ಚು ಔಷಧವಿರುತ್ತೆ. ... ಈ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಖರ್ಚು ಮಾಫಿ ಬೀಳುತ್ತೆ.

****

ಹೋಮಿಯೋಪಥಿಯಾ ಪಂಚಾಂಗ ...

ಈ ತೈಲದ ಶಕ್ತಿ ... ಉಪಯೋಗಿಸತಕ್ಕದ್ದು. ... ಇದನ್ನು ಹಚ್ಚಿಕೊಳ್ಳುವದು. ಇದರಲ್ಲಿ ಹೇಳಿರುವ ಗುಣಗಳು ಬಹು ಶೀಘ್ರವಾಗಿ ಇರುತ್ತವೆ. ಅದಕ್ಕಿಂತಲೂ ಇಲ್ಲಿ ಇನ್ನೂ ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಹಚ್ಚಿ ಬಹು ವೇಗವಾಗಿ ಗುಣಹೊಂದಬಲ್ಲರು. ಡಬ್ಬಿಗಳಲ್ಲಿ ತುಂಬಿ ... ಮಾರಾಟ ಮಾಡಲ್ಪಡುವದು. ... ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ. ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಪಟ್ಟಿಯು, ಸರ್ಟಿಫಿಕೇಟುಗಳೂ ಉಳ್ಳ ... ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—... ಮೆಡಿಸಿನ್ ಕಂಪೆನಿ, ... ರೋಡು ..., ಮದರಾಸು.

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು. ಹದಮಾಡಿದ ಸ್ಥಳದಿಂದಲೇ ನೇರ್ಪಾಗಿ ರವಾನಿಸಲ್ಪಡುವದು.

85 50

ಸ್ವಾದಿಷ್ಟವಾದ C C E C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು. ಹೆಗ್ಗುರ್ತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಅಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ 101-12



ಇದು ಸಾಧಾರಣ ಜ್ವರ, ಚಳಿಜ್ವರ, ಮೊರೆಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುದಾಮತ್ ಜಲಾಶಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರ್‌ರವರು—ನಾವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಔಷಧಿ ಬೇಕೆನ್ನುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿರುತ್ತಾರೆ.

ಕ್ರಯ—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨-೧೨ ಆ, ೧೧ ರೂ, ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಪಿಮುಂಕ ಪೂರ್ರ.

Parimal Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಮುಂತಾದ್ದು, ವಾಂತಿಭೇದಿ, ನಾನಾ ತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ರೋಗಿಗಳು ತಿಂಗಳಿಗೆ ಒಂದಾವರ್ತಿ ಹೊಟ್ಟೆಗೆ ಆಗುವಷ್ಟು ತೆಗೆದುಕೊಂಡರೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪ್ರಕಾರ ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪರಿಮಳ ಕರ್ಪೂರವನ್ನು ನಾನೂ ನನ್ನ ಕಾರ್ಯದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ ಅಜೀರ್ಣ ಭೇದಿ ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೆ ಔಷಧವೆಂತ ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ

ಚೆನ್ನಪಟ್ಟಣ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಕೊಂಡ್ ಚೆಟ್ಟಿ ಸ್ಟ್ರೀಟ್, ಮದ್ರಾಸ್.

ಸ್ವದೇಶಿ ನಾನಾ ಬಗೆಯ ಚಿತ್ರಕಾರ್ಡುಗಳು

104 12

ಹಾಲಿ, ಯಾ ಸುಂದರ ಚಿತ್ರಗಳುಳ್ಳದ್ದು ನಮೂನೆ ೧೬ ಕಾರ್ಡುಗಳಿಗೆ ೧೫ (ಸ್ಟ್ಯಾಂಪುಕಳುಹಿಸಿ), ೧೦೦ ಕಾರ್ಡುಗಳಿಗೆ ೭ ಆಣೆ ಸ್ವದೇಶಿ ಮೆಂಥಾಲ್ ಸೀಸೆಗೆ ೪ ಆಣೆ. ನೋಟ್ ಪೇಪರು, ಕವರುಗಳು, ಎಕ್ಸರಸೈಜ್ ಪುಸ್ತಕಗಳು, ಸ್ವದೇಶಿ ಪಂಗೇರಿಯನ್ ಟೋಪಿಗಳು, ಇವುಗಳಿಗೆ ಟಪಾಲುಖರ್ಚು ಬೇರೆ. ವರ್ತಕರಿಗೆ ಒಳ್ಳೇ ಕಮಿಶನ್, ಇಂಗ್ಲಿಷಿನಲ್ಲಿ ಬರೆಯಬೇಕು. ಜವಾಬು ಅಪೇಕ್ಷಿಸತಕ್ಕವರು ರಿಪ್ಲೈ ಸ್ಟ್ಯಾಂಪು ಇಟ್ಟು ಬರೆದುಕೊಳ್ಳತಕ್ಕದ್ದು. Bhatt & Co, Poona city

ಮುಂಬಯಿ ವ್ಯಾಪಾರಮಾಡಬಿಚ್ಛಿಸುವವರು.

85 21

ಮುಂಬಯಿಯಲ್ಲಿ ಪ್ರತಿಯೊಂದು ಪದಾರ್ಥದ ಅಳತೆ ಮತ್ತು ತೂಕ, ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೂ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಫೋರ್ಟು ಮಾಂಡ್ವಿ, ಮುಂಬಯಿ.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

ನವೀನ ಆಭರಣಗಳು, ಬೇಗ ನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ. ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಮಾಡಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛ ಬಂಗಾರದ ಆಭರಣಗಳನ್ನು ಹೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—



ಜಡೆಕುಚ್ಚು

ಕ್ರಯ ರೂ ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾರದ ಆಭರಣದ ಹಾಗೆ ತಯಾರಿಸಲ್ಪಟ್ಟಿರುತ್ತೆ.



ಪಚ್ಚೆ ಕಲ್ಲು ಜಡೆಬಿಲ್ಲೆ.

ಬಂಗಾರದ ಗಿಲ್ಟುಮಾಡಿದ್ದು.

೧ಕ್ಕೆ ಸೆಟ್ ರೂ ೨-೪-೦

ಇದು ಮೇಲಾದ ನಾನಾ ಬಣ್ಣಗಳನ್ನು ನಾಜೂಕಾಗಿ ಕಲ್ಲಿನಿಂದ ಕೆತ್ತಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಉಪಯೋಗಿಸಿದರೂ ರಂಗು ಹೋಗದು, ನೋಡುವವರ ಕಣ್ಣಿಗೆ ಬಹಳ ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ, ಸಾಹುಕಾರ್ ಪೇಟೆ, ಮದ್ರಾಸು.

ನೋಟೀಸು.

131-1

ಶಿಡ್ಲಘಟ್ಟದ ಶುಭೋದಯ ಕಂಪೆನಿ, ಲಿಮಿಟೆಡ್.

ಈ ಕಂಪನಿ ವೈಂಡಪ್ಪಾಗುತ್ತಿರುವುದು ಸರಿಯಷ್ಟೆ. ಇದುವರಿಗು ಡಾಮಾಷಾಯಿ ಮೊಬಲಗು ಬಟವಾಡೆಹೊಂದಿರುವದು ಜಾತಾ ಬಾಕಿ ಮೆಂಬರುಗಳಿಗೆ ಸಲ್ಲಬೇಕಾದ ಡಾಮಾಷಾಯಿ ಮೊಬಲಗು ಈ ಲಾಗಾಯಿತು ಈ ಕೆಳಗೆ ರುಜುವತ್ತು ಮಾಡಿರುವವರಿಂದ ಹಂಚಲ್ಪಡುತ್ತೆ. ಸದರಿ ಮೆಂಬರುಗಳು ತಮ್ಮ ತಮ್ಮ ಸರ್ಟಿಫಿಕೇಟುಗಳ ಮತ್ತು ಕಾಲ್ಸರಶೀತಿಗಳೊಡನೆ ಬಂದು ಮೊಬಲಗು ತೆಗೆದುಕೊಳ್ಳಬಹುದು.

೧೭-೧೦-೧೯೦೬, ಎಚ್. ನಾರಾಯಣಯ್ಯ (ಅಡ್ವೋಕೇಟ್)
ಚಿಕ್ಕಬಳ್ಳಾಪುರ. ಅಫಿಷಿಯಲ್ ಲಿಕ್ವಿಡೇಟರ್, ಶುಭೋದಯ ಕಂಪನಿ

ಇಗೋ: ಕನ್ನಡ "ಮಾಡಲ್" ಪಾಕೆಟ್ ಡೈರಿ!

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!! 133-1

೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಮೈಸೂರು ದೇಶದ ಜನರು ಇದುವರಿವಿಗೂ ಇಂಥಾ ಉತ್ತಮವಾದ ಡೈರಿಗಳನ್ನು ಕಣ್ಣಿನಿಂದ ನೋಡಿಯೂ, ಕಿವಿಯಿಂದ ಕೇಳಿಯೂ ಇರಲಿಲ್ಲವೆಂದು ಸಂದೇಹವಿಲ್ಲದೆ ಅಭಿಪ್ರಾಯಪಡಬಹುದು. ಇವುಗಳಲ್ಲಿ ಅಡಕವಾಗಿರುವ ಸಂಗತಿಗಳು- ವರ್ತಕರು, ಲಾಯರುಗಳು, ಕಂಟ್ರಾಕ್ಟರುಗಳು, ಸಣ್ಣವರು, ದೊಡ್ಡವರು, ಗಂಡಸರು, ಹೆಂಗಸರು ಮುಂತಾದ ಎಲ್ಲಾ ಜನಗಳಿಗೂ ವಿಶೇಷ ಉಪಯೋಗಕರವಾಗಿದೆ ಎಂದು ನೀವೇ ತಿಳಿದುಕೊಳ್ಳುವಿರಿ. ಬೇರೆ ಡೈರಿಗಳಲ್ಲಿ ಅಡಕವಾಗಿರುವ ಸಂಗತಿಗಳಿಗಿಂತ ಇವುಗಳಲ್ಲಿ ಹೆಚ್ಚು ವಿಷಯಗಳಿರುವವು. ಜಾಗ್ರತೆ ಇವುಗಳನ್ನು ತರಿಸಿಕೊಳ್ಳದೆ ಹೋದರೆ ಮುಗಿದುಹೋದಾವು.

ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೮—೦; ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪ್ಪೋ, ಮೈಸೂರು.

ಅಥವಾ,

ಎಸ್. ಡಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೈನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

95-16

ಶೀತದ ಕೆಮ್ಮು, ಗಂಟಲು ಗೂರಲು ವುದು, ಉಬಸಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು- ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳುತ್ತ ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ಹಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೈನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಅಕ್ಟೋಬರ್ ತಾ॥ ೧೮ ನೇ ಗುರುವಾರ.

ವ್ಯವಸಾಯಾಭಿವೃದ್ಧಿಯು.

ಸುಮಾರು ಐವತ್ತು ವರುಷಗಳ ಕೆಳಗೆ ಈಸ್ಟ್ ಇಂಡಿಯಾ ಕಂಪನಿ ಡೈರೆಕ್ಟರುಗಳು ಹಿಂದುಸ್ಥಾನದ ಪ್ರಜಾಕೋಟಿಗಳಿಗೆ ವ್ಯವಸಾಯಾಭಿವೃದ್ಧಿಗೆ ಅವಶ್ಯವಾಗಿರುವಂಥಾ ತಿಳುವಳಿಕೆಯನ್ನು ಹೇಳಿ ಕಲಿಸಿಕೊಡುವುದೇ ಬಹು ಮುಖ್ಯವೆಂತಲೂ, ಇದಕ್ಕಿಂತಲೂ ಹೆಚ್ಚಿನ ಉಪಕಾರ ಮತ್ತಾವುದೂ ಇರಲಾರದೆಂತಲೂ ಅಭಿಪ್ರಾಯಪಟ್ಟಿದ್ದರು. ವಿಲಾಯತಿಯಲ್ಲಿ ನೂತನ ವ್ಯವಸಾಯೋಪಕರಣಗಳಿಂದ ಕೃಷಿ ಮಾಡಿ ಹಿಂದುಸ್ಥಾನದ ಬೆಳೆಗಿಂತಲೂ ಸುಮಾರು ಮೂರರಷ್ಟು ಫಸಲನ್ನು ಉತ್ಪತ್ತಿ ಮಾಡಿಕೊಳ್ಳುತ್ತಿದ್ದಾರೆ. ಮತ್ತು ಈಗ ಹಿಂದುಸ್ಥಾನದಲ್ಲಿ ಆಗುವ ಬೆಳೆಯನ್ನು ಹತ್ತನೇ ಒಂದು ಪಾಲಿನಷ್ಟು ಹೆಚ್ಚಿಸಿದಾಗ್ಯೂ ಇಲ್ಲಿನ ಭೂಕಂದಾಯವನ್ನೆಲ್ಲಾ ಆ ಹೆಚ್ಚು ಬೆಳೆಯಿಂದ ಸಂಪಾದಿಸಿಕೊಳ್ಳಬಹುದೆಂದು ಅಂದಾಜು ಕಟ್ಟಿವರು. ನಮ್ಮ ದೇಶದಲ್ಲಿ ಆಗಾಗ್ಗೆ ಮಳೆ ಆಗದೆ ತಪ್ಪಿಹೋಗುವುದನ್ನೂ ಭೂಗುಣವು ಉತ್ಕೃಷ್ಟವಲ್ಲದಿರುವುದನ್ನೂ ಪರಿಗಣಿಸಿದಾಗ್ಯೂ ಇಲ್ಲಿನ ರೈತ ಪ್ರಜೆಗಳು ಹೊಸ ತರಹಾ ವ್ಯವಸಾಯವನ್ನು ಕಲಿತು ಕೃಷಿ ಮಾಡುವ ಪಕ್ಷದಲ್ಲಿ ಈಗ್ಗಿಂತಲೂ ಹೆಚ್ಚಾದ ಮತ್ತು ಹುಲುಸಾದ ಬೆಳೆಯನ್ನು ಬೆಳೆಯಬಹುದೆನ್ನುವುದಕ್ಕೆ ಸಂಶಯವಿಲ್ಲ.

ಹಾಗಾದರೆ ವ್ಯವಸಾಯವನ್ನು ಅಭಿವೃದ್ಧಿ ಮಾಡಲು ಪ್ರತಿ ಬಂಧಕವಾಗಿರುವ ವಿಷಯಗಳ್ಯಾವವು? ಇಲ್ಲಿನ ರೈತ ಪ್ರಜೆಗಳ ಅಪನಂಬಿಕೆಯೂ ಅವರ ಮೌಢ್ಯ ಸ್ಥಿತಿಯೂ ಮೊದಲನೇ ದೊಡ್ಡ ಕಾರಣವೆಂದು ಹೇಳಬಹುದು. ಅನೇಕಾನೇಕ ರೈತರು ವ್ಯವಸಾಯವನ್ನು ಅಭಿವೃದ್ಧಿಪಡಿಸುವವುದು ಸಾಧ್ಯವೆಂದೇ ನಂಬುವವರಾಗಿಲ್ಲ. ತಲೆತಲಾಂತರದಿಂದಲೂ ಬಂದಿರುವ ಕ್ರಮಗಳನ್ನೇ ಕಣ್ಣು ಮುಚ್ಚಿಕೊಂಡು ಅನುಸರಿಸುವರು. ಮೊದಲು ಅವರ ಕಣ್ಣು ಬಿಡಿಸಿ ಬುದ್ಧಿ ಚುರುಕುಮಾಡಬೇಕಾಗಿದೆ. ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಒಕ್ಕಲಿಗರ ದೊಡ್ಡ ಸಂಘದ ವೃತ್ತಾಂತವನ್ನು ಪ್ರಕಟಿಸಿರುತ್ತೇವೆ. ಈ ಸಂಘದ ಉದ್ದೇಶ ಕಾರ್ಯಗಳು ಸಫಲವಾಗಲೆಂದು ಮನಃಪೂರ್ವಕವಾಗಿ ಕುತೂಹಲಪಡುವೆವು. ಒಕ್ಕಲಿಗರಲ್ಲಿ ಸಮರ್ಥರಾದ ಬಾಲಕರಿಗೆ ಇಂಗ್ಲಿಷಿನಲ್ಲಿ ಪ್ರೌಢ ವಿದ್ಯೆಯನ್ನು ಕಲಿಸಬೇಕೆಂಬುವುದೂ ಈ ಸಂಘದವರ ಉದ್ದೇಶವಾಗಿರುತ್ತದೆ. ಇದು ನ್ಯಾಯವಾದ ಮತ್ತು ಸ್ತೋತ್ರಾರ್ಹವಾದ ಉದ್ದೇಶವೇ ಹೌದು. ಆದರೆ ಈ ಸಂಘದವರು ಗ್ರಾಮಾಂತರಗಳಲ್ಲಿರುವ ಸಮಸ್ತರಿಗೂ ಸಾಮಾನ್ಯ ವಿದ್ಯೆಯನ್ನು ಕಲಿಸಿ, ಗ್ರಾಮ ಪಾಠಶಾಲೆಗಳಲ್ಲಿ ರೈತರಿಗೆ ಕೃಷಿ ವಿದ್ಯೆಯಲ್ಲಿ ಹೆಚ್ಚು ತಿಳುವಳಿಕೆಯೂ ಅಭಿರುಚಿಯೂ ಉಂಟಾಗುವಂತೆ ಸಾಹಸಪಟ್ಟು ಏರ್ಪಾಡು ಮಾಡಬೇಕಾದದ್ದು ಇನ್ನೂ ಅವಶ್ಯವಾಗಿರುತ್ತದೆ. ರೈತನ ಕೃಷಿಯು ಅಭಿವೃದ್ಧಿಯಾಗಬೇಕಾದರೆ ಅವನು ಮೊದಲು ವಿದ್ಯೆ ಕಲಿತು ವಿವೇಕಿಯಾಗಬೇಕು.

ಇತ್ತಲಾಗಿ ಮೈಸೂರು ಗವರ್ನಮೆಂಟನವರು ವ್ಯವಸಾಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಡಿಸ್ಟ್ರಿಕ್ಟುಗಳಲ್ಲಿ ಸಂಘಗಳನ್ನು ಸ್ಥಾಪಿಸಿ, ಅವುಗಳಿಗೆ ಬೇಕಾದ ಸಹಾಯ ಸಂಪತ್ತುಗಳನ್ನು ಒದಗಿಸಿಕೊಡಬೇಕೆಂದು ಅಭಿಲಾಷೆಪಟ್ಟು ಹೊಸದಾಗಿ ಮಾಡಿರುವ ಏರ್ಪಾಡುಗಳನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ಅದನ್ನು ವಾಚಕರು ಓದಿ ಚನ್ನಾಗಿ ಗ್ರಹಿಸಿಕೊಳ್ಳಬೇಕೆಂದು ಕೋರುವೆವು. ಆ ಸಂಘದವರು ಸಹಜವಾದ ರೀತಿಯಲ್ಲಿ ವ್ಯವಸಾಯೋಪಕರಣಗಳನ್ನೂ ಗೋಕಾಯಿಗಳನ್ನೂ ಆಗಾಗ್ಗೆ ಪ್ರದರ್ಶನ ಮಾಡಿಸುತ್ತಾ ಬಂದಲ್ಲಿ ಬಹಳ ಉಪಕಾರವಾದೀತೆನ್ನುವುದಕ್ಕೆ ಸಂಶಯವಿಲ್ಲ. ವಿಲಾಯತಿಯಲ್ಲಿ ಇಂಥಾ ಪ್ರದರ್ಶನಗಳು ವಿಶೇಷ ಉತ್ಸಾಹದೊಡನೆ ನಡಸಲ್ಪಡುವವು. ಅವುಗಳಿಂದ ರೈತರು ಒಳ್ಳೊಳ್ಳೇ ರಾಸುಗಳನ್ನು ಸಾಕಿ ಅಭಿವೃದ್ಧಿಪಡಿಸಬಹುದಾಗಿದೆ; ಕೃಷಿಕಾರ್ಯಗಳೂ ಸಮರ್ಪಕವಾಗಿ ನಡೆದು ಒಳ್ಳೇ ಬೆಳೆಗಳನ್ನು ಬೆಳೆಯಬಹುದು.

ಮಾದ್ರಿ ಅಥವಾ ಪರೀಕ್ಷಾರ್ಥವಾದ ಜಮೀನುಗಳನ್ನು ಏರ್ಪಾಡು ಮಾಡೋಣದರಿಂದ ಸದ್ಯದಲ್ಲಿ ಎಷ್ಟುಮಟ್ಟಿಗೆ ಪ್ರಯೋಜನವಾಗುವುದೋ ನಾವು ಹೇಳಲಾರೆವು. ಅಂಥಾ ಜಮೀನುಗಳನ್ನು ವ್ಯವಸಾಯ ಶಾಸ್ತ್ರ ಪಂಡಿತರು ಇಟ್ಟು ಕೃಷಿ ಮಾಡಿದರೆ ಉಪಯೋಗವೇ ಹೊರ್ತು ಅನ್ಯಥಾ ಫಲ ಕಾಣುವುದಿಲ್ಲ. ಪರೀಕ್ಷೆ ಮಾಡುವುದು ಹೇಗೆ? ಅದರ ಉದ್ದೇಶವೇನು? ಅದರಿಂದ ತಿಳಿಯತಕ್ಕ ಅಂಶಗಳೇನು? ಎಂಬೀ ವಿಶೇಷ ಸಂದರ್ಭಗಳನ್ನೆಲ್ಲಾ ಪರಿಷ್ಕಾರವಾಗಿಯೂ ಅನುಭವಪೂರ್ವಕವಾಗಿಯೂ ತಿಳಿದಿರತಕ್ಕವರೇ ಮಾಡಿ ತೋರಿಸಬೇಕಾಗಿದೆ. ಈಗ ಮೈಸೂರು ಸರ್ಕಾರದವರು ಏರ್ಪಡಿಸುವಂಥಾ ಸಣ್ಣದಾದ ಮಾದ್ರಿ ಜಮೀನುಗಳಿಂದ ಪ್ರಯೋಜನವಾಗುವುದು ಕಡಿಮೆಯೆಂತಲೂ ವೃಥಾ ದ್ರವ್ಯನಷ್ಟವಾಗುವುದೆಂತಲೂ ನಮಗೆ ತೋರುತ್ತಿದೆ.

ಈಗ ನಮ್ಮ ಸಂಸ್ಥಾನದಲ್ಲಿ ಸಂಭಾವಿಸ ಮಾಡುತ್ತಿರುವ ಮದರಾಸ್ ಗವರ್ನರವರು ಸುಮಾರು ಮೂರು ವರುಷಗಳ ಹಿಂದೆ ಕೊಯಮುತ್ತೂರಿನಲ್ಲಿ ವ್ಯವಸಾಯಾಭಿವೃದ್ಧಿಯ ಆಲಯವನ್ನು ಕಟ್ಟುವುದಕ್ಕೆ ಅಸ್ತಿಭಾರವನ್ನು ಹಾಕಿದರು. ಅದರ ವೃತ್ತಾಂತವೇನಂದರೆ—ಮದರಾಸ್ ಗವರ್ನಮೆಂಟನವರು ಅಲ್ಲಿ ೩೪೦ ಎಕರೆ ಜಮೀನನ್ನು ಕೊಂಡುಕೊಂಡಿದಾರೆ. ಅದರಲ್ಲಿ ೫೦ ಎಕರೆ ತರೀ ಜಮೀನು ೧೩೦ ಎಕರೆ ಕಪ್ಪು ಮಣ್ಣಿನ ಜಮೀನು ೨೫೦ ಎಕರೆ ಕೆಂಪು ಮಣ್ಣಿನ ಜಮೀನು ಇರುವುದು. ಇಷ್ಟು ವಿಸ್ತಾರವಾದ ಜಮೀನಿನಲ್ಲಿ ಆ ಆಲಯದ ಮುಖ್ಯಸ್ಥರು ವ್ಯವಸಾಯ ಕಾರ್ಯ ನಡಸುತ್ತಾರೆ. ಅವರು ಅನುಭವಪೂರ್ವಕವಾಗಿಯೂ ಶಾಸ್ತ್ರವತ್ತಾಗಿಯೂ ಕೃಷಿಯನ್ನು ಕಲಿತ ಪಂಡಿತರು. ಅವರ ಕೈ ಕೆಳಗೆ ವ್ಯವಸಾಯಕ್ಕೆ ಸಂಬಂಧಪಟ್ಟ ಬೇರೆ ಬೇರೆ ಶಾಸ್ತ್ರಗಳನ್ನು ಕಲಿತ ಪಂಡಿತರನ್ನು ನೇಮಿಸುತ್ತಾರೆ. ಅವರೂ ಹಿಂದುಸ್ಥಾನದ ವ್ಯವಸಾಯ ಶಾಸ್ತ್ರಜ್ಞರೂ ವಿದ್ಯಾರ್ಥಿಗಳನ್ನು ತರಬೇತು ಮಾಡುವರು. ಇವಕ್ಕೆಲ್ಲಾ ಸುಮಾರು ಮೂರು ಲಕ್ಷ ರೂಪಾಯಿನ ಕಟ್ಟಡ ಮುಂತಾದ ಉಪಕರಣಗಳೇ ಬೇಕಾಗುತ್ತವೆ. [illegible] ಸಿದ್ಧವಾದ ಮೇಲೆ ಗವರ್ನಮೆಂಟನವರು ಇತರ ಕಡೆಗಳಲ್ಲೂ ಪರೀಕ್ಷಾರ್ಥವಾದ ಜಮೀನುಗಳನ್ನು ಕಲ್ಪಿಸುವರು. ಹೀಗೆಲ್ಲಾ ಮಾಡೋಣದರಿಂದ ವ್ಯವಸಾಯವು ಅಭಿವೃದ್ಧಿಗೆ ಬರಬೇಕಾಗಿದೆ. ನಮ್ಮ ಸಂಸ್ಥಾನದ ಸಂಘಗಳವರು [illegible]ರಲ್ಲಿ ನಡೆಯುವ ಕಾರ್ಯಗಳನ್ನು ಗ್ರಹಿಸಿಕೊಳ್ಳುತ್ತ ಪ್ರದರ್ಶನ ಉಪನ್ಯಾಸಗಳ ಮೂಲಕ ಕೂಡಿದ ಮಟ್ಟಿಗೆ ಸಹಾಯ ಮಾಡುತ್ತಾ ಬರಬೇಕೆಂತಲೂ ಒಕ್ಕಲಿಗರ ಸಂಘದವರು ಪ್ರಜಾ ಕೋಟಿಗಳಿಗೆ ವಿದ್ಯೆ ಕಲಿಸುವುದರಲ್ಲಿ ಉದ್ಯುಕ್ತರಾಗಬೇಕೆಂತಲೂ ಕೋರುತ್ತೇವೆ.

ಬಾಬಾ ಪದ್ಮನಜಿಯವರು.

ಕೆಲವು ವಾರಗಳ ಕೆಳಗೆ ಮೃತಪಟ್ಟ ಈ ಮರಾಠಿ ಕ್ರೈಸ್ತನು ಬೊಂಬಾಯಿ ಮುಂತಾದ ಪ್ರದೇಶಗಳಲ್ಲಿ ಎಲ್ಲಾ ಜನಗಳಿಂದಲೂ ಗೌರವಿಸಲ್ಪಡುತ್ತಿದ್ದನು. ಮನಶ್ಶಾಂತಿಯನ್ನೂ ಸತ್ಯವನ್ನೂ ಕಂಡು [illegible]ಯುವ ನಿಮಿತ್ತವಾಗಿ ಯಾರು ಬಹಳವಾಗಿ ಪ್ರಯತ್ನವನ್ನು ಮಾಡು[illegible]ದ್ದಾರೆಯೋ ಅಂಥವರೆಲ್ಲರಿಗೆ ಈ ಸದ್ಭಕ್ತನ ವೃತ್ತಾಂತವು ಅತಿ [illegible]ವಾಗಿರುವದು. ಈತನ ತಂದೆಯು ವಿದ್ಯಾವಂತನಾಗಿಯೂ ಸರ್ಕಾರದ ದೊಡ್ಡ ಹುದ್ದೆದಾರನಾಗಿಯೂ ಇದ್ದನು. ಈತನ ತಾಯಿಯು [illegible] ಭಕ್ತಳಾಗಿ ತನ್ನ ಮತಾಚರಣೆಗಳನ್ನೂ ಹಬ್ಬ ಹರಿದಿನಗಳನ್ನೂ [illegible] ಶ್ರದ್ಧೆಯಿಂದ ನಡಸುವವಳಾಗಿದ್ದಳು. ಬಾಬಾ ಪದ್ಮನಜಿಯು ೧೬ ವ[illegible]ದವನಾಗಿರುವಾಗ್ಗೆ ಬೊಂಬಾಯಿನ ಫ್ರೀಚರ್ಚ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದನು. ಆಗ ಆ ಕಾಲೇಜಿಗೆ ಡಾಕ್ಟರ್ ವಿಲ್ಸನ್ ಎಂಬ [illegible]ದ್ಧ ಪಂಡಿತರು ಪ್ರಿನ್ಸಿಪಲ್‌ರಾಗಿದ್ದರು. ಈ ವಿಲ್ಸನರಿಯವರಲ್ಲದೆ [illegible]ಕ್ತರ್ ನಾರಾಯಣ ಶೇಷಾದ್ರಿ ಎಂಬುವರೂ ಆ ಕಾಲೇಜಿನ ಉಪಾಧ್ಯಾಯರಲ್ಲೊಬ್ಬರಾಗಿದ್ದರು. ಈ ನಾರಾಯಣ ಶೇಷಾದ್ರಿಯವರು ಮೊದಲು ಬ್ರಾಹ್ಮಣರಾಗಿದ್ದು ಅನಂತರ ಕ್ರೈಸ್ತಭಕ್ತರಾದವರು. [illegible] ಉಪಾಧ್ಯಾಯರಲ್ಲಿ ಶಿಕ್ಷಣವನ್ನು ಹೊಂದಿದ ಬಾಬಾ ಪದ್ಮನಜಿ[illegible] ಧರ್ಮ ಪ್ರವರ್ತನೆಯ ವಿಷಯದಲ್ಲಿ ಕೇವಲ ಆಸಕ್ತನಾದನೆಂ[illegible] ಹೇಳಬೇಕಾದ್ದಿಲ್ಲ. ಇದುವರೆಗೂ ಆತನು ನಡೆದುಕೊಂಡು ಬಂದ ವಿಧವನ್ನು ಕುರಿತು ಆತನು ಸ್ವಚರಿತ್ರ ಪುಸ್ತಕದಲ್ಲಿ ಹೇಳಿರುವ[illegible]ನಂದರೆ—ನಾನು ಜಾತಿ ಕಟ್ಟಳೆಯ ಪ್ರಕಾರ ನಿಷಿದ್ಧವಾದ ಆ[illegible] ಪಾನಗಳನ್ನು ಮುಟ್ಟದೆಯೂ ಬಹು ಶೀಲವಂತನಾಗಿಯೂ ನ[illegible] ಕೊಂಡರೂ ಆತ್ಮೀಯ ಶುದ್ಧತೆಯ ವಿಷಯದಲ್ಲಿ ಏನೂ ತಿಳಿಯದ[illegible]ಗಿದ್ದೆನು. ಸುಳ್ಳು ಹೇಳುವುದು ದುರ್ಭಾಷೆಯನ್ನಾಡುವದು ದು[illegible] ಚನೆಯನ್ನು ಮಾಡುವದು ಎಂಬಿವೇ ಮೊದಲಾದ ಕೃತ್ಯಗಳು [illegible]

ದೆಂದು ತಿಳಿದಿರಲಿಲ್ಲ. ಆತ್ಮಕ್ಕೆ ಭೂಷಣವಾಗಿರುವ ಸದ್ಗುಣಗಳನ್ನು ಧಂಧ್ವರ ದರಿಸದೆ ಇದ್ದರೂ ನಾನು ಪೂಜಿಸುತ್ತಿರುವ ಲಕ್ಷ್ಯವಾದ ಮತ್ತಾವುದೂ ಇಲ್ಲವೆಂಬುದೊಂದೂ ಗೊತ್ತಿರಲಿಲ್ಲ. ವರ್ಣತತ್ವಗಳನ್ನು ಪರೀಕ್ಷಿಸಿ ತಿಳಿಯುವುದು ಪ್ರಯೋಜನಕರವಾಗಿದೆಯೆಂದು ಯಾರೂ ನನಗೆ ಬೋಧಿಸಲಿಲ್ಲ. ನನಗೆ ಅಜ್ಞಾನವನ್ನೂ ಜಾತಿ ಕಟ್ಟಳೆಯನ್ನೂ ತಪ್ಪದೆ ನಡೆಸಬೇಕೆಂದು ಮಾತ್ರ ನನಗೆ ಹೇಳುತ್ತಿದ್ದರು. ಬ್ರಾಹ್ಮಣರನ್ನು ಗುರುಗಳನ್ನು ಅತಿ ಭಕ್ತಿಯಿಂದ ಪೂಜಿಸುತ್ತಿದ್ದೆನು. ಅವರ ಆಶೀರ್ವಾದವೇ ಎಂಥದಾಗಿದೆಯೆಂಬುದೇ ಒಂದೂ ನನ್ನ ಮನಸ್ಸಿಗೆ ಹತ್ತಲಿಲ್ಲ. ಅವರು ನನಗೆ ಮಂತ್ರಗಳ ಜಪಿಸುವುದನ್ನು ಹೇಳಿಕೊಟ್ಟರು. ನಿತ್ಯವಾಗಿಯೂ ನಿರ್ವಾಂಚಲ್ಯದಿಂದಲೂ ಭಕ್ತಿಯಿಂದಲೂ ಪೂಜಿಸುವ ಯಾವ ಕಾಲದಲ್ಲಾಗಲಿ ಹೇಳಿಕೊಡಲಿಲ್ಲ. ಇವರ ಪದ್ಧತಿಯನ್ನು ಅನುಸರಿಸಿ ನಡೆದವರು ಜಾತಿ ಪದ್ಧತಿಗಳನ್ನೂ ಪಟ್ಟಣಗಳನ್ನೂ ಪೂಜಾ ಕ್ರಮಗಳನ್ನೂ ಬಹು ಶ್ರದ್ಧೆಯಿಂದ ಆಚರಿಸುತ್ತಿದ್ದರು. ಅತ್ಯಂತ ಹೇಯವಾದ ದುಷ್ಕರ್ಮಗಳನ್ನು ಮಾಡುವವರು ಸಹ ಇರುತ್ತಿದ್ದರಲ್ಲದೆ, ನಾನು ಕಾಲೇಜನ್ನು ಸೇರಿದ ವೇಳೆ ಉಪಾಧ್ಯಾಯರು ಬೋಧನೆಯನ್ನು ಕೇಳಿ ಸರ್ವ ತತ್ವವನ್ನು ತಿಳಿದು ವಿಚಾರೇಲನಾನೆನು. ಜಗದೀಶ್ವರನಾದ ಪರಮಾತ್ಮನೊಬ್ಬನೇ ಹೊರತು ಬೇರೆ ದೇವರನ್ನು ಪೂಜಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿದೆನು. ಪ್ರಾಣ ಸಂಕಟಕ್ಕೀಡಾಗಿ ನಿಸ್ಸಾರವಾಗಿಯಿದ್ದರೂ ಸುಳ್ಳು ಜೂಜು ದುವ್ಯ್ಯಸನಗಳನ್ನು ಮಾಡುವುದಿಲ್ಲವೆಂದು, ಇದಲ್ಲದೆ ಜಗದೀಶ್ವರನನ್ನು ಪ್ರಮಾಣಗಳಿಂದಾಗಿ ಬೇಡಿಕೊಳ್ಳಬೇಕೆಂದೂ ಗೃಹವಾಗಿ ತೀರ್ಮಾನಿಸಿಕೊಂಡೆನು. ದೇವರ ಕೃಪೆಯ ಹೊರತಾಗಿ ಬೇರೆ ಯಾವ ವಿಧದಿಂದಲೂ ಮನುಷ್ಯನಾ ಸಿದ್ಧಿ ಹೊಂದುವದಿಲ್ಲವೆಂದು ನಾನು ತಿಳಿದಿದ್ದೆನು.

ಬ್ರಹ್ಮಸಮಾಜಿಯು ಈ ಪ್ರಕಾರ ಸಮಾಚಾರಿಯಾಗಿ ಬೆಳೆದು ಪ್ರಾಯಸನ ಹೊಂದಿದಾಗ ದೇವರಲ್ಲಿ ಮತ್ತು ಪರಿಶುದ್ಧನಾಗಿ ಸೇವಿಸಿಕೊಳ್ಳಬೇಕೆಂದು ಸ್ವಂತ ಮನೆಯಲ್ಲಿ ಯಾ ಸಹ ವಿಗ್ರಹಾರಾಧನೆಯನ್ನು ಬಿಟ್ಟುಬಿಟ್ಟನು. ನೂತನ ಈ ವಿಧ ಚರ್ಯೆಗಳನ್ನೆಲ್ಲಾ ಗುರುಗಳು ನೋಡಿ ಇವನು ಕ್ರೈಸ್ತ ಮತವನ್ನು ಸೇರಿಬಿಡುವನೋ ಏನೋ ಎಂದು ಹೆದರಿಕೊಂಡರು. ಆದರೆ ಈ ಬ್ರಹ್ಮಸಮಾಜಿಯು ತಾನು ಓದುತ್ತಿದ್ದ ಪುಸ್ತಕಗಳ ಮೂಲಕವಾಗಿ ತನಗೆ ಧರ್ಮತತ್ವ ಸಿಕ್ಕಿದ್ದರಿಂದ ಏನೂ ಭಯಪಡಬೇಕೆಂಬುದನ್ನು ಅರಿಯದೆ ಸಿದ್ಧನಾಗಿ ಸರಿಯಾಗಿ ತಿಳಿದು ಬಂದ ಪ್ರಕಾರವಾಗಿಯೇ ನಡತೆಯಲ್ಲಿ ವೃದ್ಧಿಪ್ರಜ್ಞೆಯುಳ್ಳವನೆಂಬುದನ್ನು ಆ ತಂದೆ ತಾಯಿಗಳು ಗಮನಿಸಲಿಲ್ಲ. ಬಳಿಕ ಎರಡು ವರ್ಷದವರೆಗೆ ಬ್ರಹ್ಮಸಮಾಜಿಯು ದಿಗ್ಭ್ರಾಂತನಾದವನನ್ನು ತೆಗೆದುಕೊಂಡು ಕ್ರೈಸ್ತಮತ ಸೇರಬೇಕೆಂದು ತನ್ನ ಮನಸ್ಸಿನಲ್ಲಿ ತಿಳಿದನು. ಇದನ್ನು ಕುರಿತು ಹೀಗೆ ಹೇಳುವದೇನೆಂದರೆ—ಈ ಪ್ರಕಾರ ನಾನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡ ಒಡನೆ ನನ್ನನ್ನು ಬೇರೆಯಾಗಿ ಬಾಳುವಾಗಿ ಸಂಕಟಪಡುತ್ತಿದ್ದ ಪಾಪಭಾರವು ಆಕಸ್ಮಿಕವಾಗಿ ನನ್ನಿಂದ ಉರುಳಿಹೋದಂತಾಯಿತು. ಹೇಳಲಶಕ್ಯವಾದ ಸಂತೋಷವು ಮನಸ್ಸನ್ನು ತುಂಬಿಕೊಂಡಿತು. ಕ್ರಿಸ್ತನೊಂದಿಗೆ ನಾನು ಆಳಿದ ತಾಯಿಯು ಬಹಳವಾಗಿ ಗೋಳಾಡಿ ಅವನ ಎದೆಯನ್ನು ಕರಗಿಸಬೇಕೆಂದು ಎಷ್ಟೋ ಪ್ರಯತ್ನಪಟ್ಟಳು. ಅವನು ತಾಯಿಯ ಸ್ನೇಹ ಎಷ್ಟೋ ಪ್ರೇಮವುಳ್ಳದ್ದಾಗಿದ್ದಾಗ್ಯೂ ತಾನು ದೇವರ ಆಜ್ಞೆಯನ್ನೇ ಮೊದಲು ನಡೆಸಬೇಕೆಂದು ತಿಳಿದನು. ಆಗಲೇ ಕ್ರೈಸ್ತಮತಾವಲಂಬಿಯಾದ ಮಗನನ್ನು ಆ ತಾಯಿಯು ನಿರಾಕರಿಸಿ ಬಿಡಲಿಲ್ಲ. ಅನ್ಯಮತಾವಲಂಬಿಯಾದ ಮಗನಿಗೆ ಅನ್ನವಿಲ್ಲವೆಂದು ತಿಳಿದು ಆತನನ್ನು ಮನೆಗೆ ಕೇವಲ ಗುಪ್ತದಿಂದ ಬರಮಾಡಿಕೊಳ್ಳುವವರಾಗಿದ್ದರು. ಹೀಗೆ ಯಾವ ಪ್ರಕಾರ ಸಂಕಟಗಳಿಗೆ ಮಾನ್ಯನಾಗಿದ್ದ ಈ ಬಾಬಾಪದ್ಮನಜಿಯು ಸುಮಾರು ೫೦ ವರ್ಷಗಳಿಂದ ಕ್ರೈಸ್ತಮತತತ್ವದಲ್ಲಿಯೂ ಅನ್ಯಮತಸ್ಥರ ಲ್ಲಿಯೂ ಅತಿ ವಿದ್ವಾಂಸ ಗೌರವಗಳನ್ನು ಸಂಪಾದಿಸಿ, ಮರಾಠಿ ಭಾಷೆಯಲ್ಲಿ ಅನೇಕ ಪುಸ್ತಕಗಳನ್ನು ರಚಿಸಿ ಯಶೋವಂತನಾಗಿ ಬದುಕಿದನು.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನಕ್ಕೆ ಅಸಿಸ್ಟೆಂಟ್ ರೆಸಿಡೆಂಟರಾಗಿ ನೇಮಕವಾದ ಮೆ॥ ರೆನ್ನಿ ಯವರು ಇನ್ನು ಎರಡು ವಾರಗಳಲ್ಲಿ ಬೆಂಗಳೂರಿಗೆ ಬಂದು ಕೆಲಸದ ಛಾರ್ಜನ್ನು ವಹಿಸಿಕೊಳ್ಳುವವರಾಗಿದ್ದಾರೆ

****

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಮೆ॥ ಮಹದೇವಯ್ಯನವರ ಮನೆಯಲ್ಲಿ ಸುಮಾರು ೩೦೦೦ ರೂಪಾಯಿನ ಭಂಗಾರದ ಒಡವೆಗಳನ್ನು ಕಳುವಾಗಿ ಪೋಲೀಸಿನವರು ಪತ್ತೆ ಮಾಡುತ್ತಿದ್ದಾರೆಂದು ತಿಳಿದುಬಂದಿದೆ

****

ಬೆಂಗಳೂರು ಸಿಟಿ ಲಂಡನ್ ಮಿಷನ್ ಹೈ ಸ್ಕೂಲಿನ ಕಾಂಪೌಂಡಿನಲ್ಲಿ ಪ್ರತಿ ವಾರ ಸಾಯಂಕಾಲ ಮೆ॥ ಜೆ ಕ್ಯಾಲ್ಡರವರು ಉಪನ್ಯಾಸ ಮಾಡುವವರಾಗಿದ್ದಾರೆ. ವಿದ್ಯಾವಂತರೆಲ್ಲಾ ಹೋಗಿ ಕೇಳಬಹುದಾಗಿದೆ

****

ರಾಜಧಾನಿಯಲ್ಲಿ ಸ್ವಾಲ್ಪ ದಿವಸದಿಂದ ಮಳೆ ಸುರಿಯುತ್ತಿದ್ದೂ ಸಹ ಇದುವರೆಗೆ ಕೃಷ್ಣರಾಜಪೇಟೆ ಜಿಲ್ಲಾದ ಕೆಲವು ಭಾಗಗಳಲ್ಲಿ ಪ್ಲೇಗ್ ಜಾಡ್ಯವು ಹರಡಿಕೊಳ್ಳುತ್ತಾ ಇದೆ. ಕಳೆದ ವಾರವೂ ನಾಲ್ಕಾರು ಮಂದಿ ಸತ್ತಿದ್ದಾರೆ

****

ಬೆಂಗಳೂರು ಪೇಟೆಯಲ್ಲಿ ಕೆಲವರು ಸೇರಿ ರಾಜದ್ರೋಹಕರವಾದ ಕೆಲವು ನೋಟೀಸುಗಳನ್ನು ಅಚ್ಚು ಹಾಕಿಸಿ ಪ್ರಕಟ ಮಾಡಿದರೆಂದು ಪೋಲೀಸಿನವರು ಸಂಶಯಪಟ್ಟದ್ದರಿಂದ ಸರ್ಕಾರದವರು ೩—೪ ಮಂದಿಯನ್ನು ಹಿಡಿದು ವಿಚಾರಣೆ ಮಾಡುತ್ತಾರೆ

****

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟೆರಿಯವರಾದ ಮೆ॥ ಎಸ್ ಎಂ ಫ್ರೆಸರವರು ಮುಂದಿನವಾರ ರಜಾಹೊಂದಿ ಸೀಮೆಗೆ ಪ್ರಯಾಣಮಾಡುವವರಾಗಿದ್ದಾರೆ. ಅವರ ಕೆಲಸವು ಸೂಪರಿಂಟೆಂಡಿಂಗ್ ಇಂಜನೀಯರ್ ಮೆ॥ ವೈಟ್ಲಿಯವರಿಗೆ ನೇಮಕವಾಗುವದೆಂದು ಕೇಳುತ್ತೇವೆ. ಇವರು ನಮ್ಮ ಮಹಾರಾಜರವರ ಬಾಲ್ಯವಯಸ್ಸಿನಲ್ಲಿ ಅವರ ಉಪಾಧ್ಯಾಯರಾಗಿದ್ದರು

ದಿವಾನ್ ಮೆ॥ ಮಾಧವರಾಯರೂ ಕೌನ್ಸಿಲ್ ಮೆಂಬರುಗಳೂ ಪರಿವಾರ ಸಹಿತ ಕಳೆದ ಶುಕ್ರವಾರ ಬೆಳಿಗ್ಗೆ ಮದರಾಸ್ ಗವರ್ನರವರ ಆತಿಥ್ಯಕ್ಕಾಗಿ ಬಂದು, ಮೊನ್ನೆ ಸೋಮವಾರ ರಾತ್ರಿ ಬೆಂಗಳೂರಿಗೆ ವಾಪಸು ಹೋದರು

****

ಕಳೆದ ವಾರ ಮದರಾಸ್ ಗವರ್ನರವರ ಆತಿಥ್ಯವು ರಾಜಧಾನಿಯಲ್ಲಿ ಬಹು ಸಂಭ್ರಮದಿಂದ ನೆರವೇರಿತು. ಗವರ್ನರವರು ಸೋಮವಾರ ಅಂತರಗಂಗೆಗೆ ದಯಮಾಡಿ ಒಂದು ಹುಲಿ ಶಿಕಾರಿ ಮಾಡಿ ಬಂದು, ಆ ರಾತ್ರಿಯೇ ಸ್ಪೆಷಲ್ ರೈಲು ಹತ್ತಿ ಶಿವಸಮುದ್ರದ ಕಡೆ ಪ್ರಯಾಣ ಮಾಡಿದರು

****

ಶಿವಮೊಗ್ಗೆಯ ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಜೆ ಜೆ ಮಾಂಟೇರೋಯವರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಸರ್ಕಾರದವರು ಇನ್ನೊಂದು ತಿಂಗಳು ಹೆಚ್ಚು ಮಾಡಿ, ಮೆ॥ ಪಿ ಎಸ್ ಗೋವಿಂದರಾಯರೇ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ಕೆಲಸ ನೋಡುತ್ತಿರುವಂತೆ ಹುಕುಂ ಕೊಟ್ಟಿದ್ದಾರೆ

****

ತುಮಕೂರಿನ ಬಳಿ ಬೆಳ್ಳಾವಿ ವಾಸಸ್ಥನಾದ ಗಫ್ರಾರ್‌ಸಾಬಿ ಎಂಬೊಬ್ಬನು ಮಾಗಡಿಯಲ್ಲಿ ವೆಂಕಟರಾಯನ ಜೊತೆಗೆ ಗಾಡಿ ಗೊತ್ತು ಮಾಡಿ ಮಧ್ಯಾಹ್ನದ ಬಳಿ ಶಿವಪುರದ ಹತ್ತಿರ ಹೋಗುತ್ತಿರುವಲ್ಲಿ ಅವರಿಬ್ಬರಿಗೂ ಜಗಳವಾಯಿತೆಂದಲೂ, ಆ ಸಾಬಿಯು ವೆಂಕಟರಾಯನನ್ನು ಕೊಂದುಹಾಕಿ ಹುಲಿಯೂರುದುರ್ಗದ ಬಳಿ ಒಂದು ಸೇತುವೆ ಬಿರುಕಿನಲ್ಲಿ ಶವವನ್ನು ಬಚ್ಚಿಟ್ಟು ಆ ಗಾಡಿ ಎತ್ತುಗಳನ್ನು ಬೆಂಗಳೂರಿನಲ್ಲಿ ವಿಕರಿಮಾಡುತ್ತಿದ್ದು ಸಿಕ್ಕಿಬಿದ್ದನೆಂತಲೂ, ಸರ್ಕಾರದವರು ಅವನನ್ನು ಹಿಡಿದು ತನಿಖೆಮಾಡುತ್ತಿರುವುದಾಗಿಯೂ ಕೇಳುತ್ತೇವೆ

****

ಸೋಸಲೆ ಮಠದ ಶ್ರೀ ವ್ಯಾಸರಾಯಸ್ವಾಮಿಗಳಿಗೆ ತುಂಬಾ ಕಾಯಿಲೆಯಾಗಿರೋಣದರಿಂದ ಆ ಪೀಠದ ಉತ್ತರಾಧಿಕಾರವನ್ನು ಈಗಿನ ಸ್ವಾಮಿಗಳ ಹಿರಿಯ ಸಾಹಿತ್ರ ಸಂತತಿಯವರಾದ ಸುಮಾರು ೬೮ ವಯಸ್ಸಿನ ಶ್ರೀ ಅಹೋಬಲಾಚಾರ್ಯರಿಗೆ ಕೊಟ್ಟು, ಕಳೆದ ೪ನೇ ತಾ ಸೋಮವಾರ ಆಶ್ರಮವನ್ನಿತ್ತರು. ತಂಜಾವೂರು ಜಿಲ್ಲಾ ತಿರುವಾದಿ ಸಂಸ್ಕೃತಪಾಠಶಾಲೆಯ ಅಧ್ಯಕ್ಷರಾಗಿರ ಬ್ರಹ್ಮಶ್ರೀ ಸೇತುಮಾಧವಾಚಾರ್ಯರಿಗೆ ಆ ಪೀಠವನ್ನು ವಹಿಸಬೇಕೆಂದು ಗೊತ್ತಾಗಿತ್ತೆಂತಲೂ, ಆದರೆ ಅವರು ಅಲ್ಲಿಂದ ಬರುವುದು ಒಂದು ದಿನ ಸಾವಕಾಶವಾಯಿತಾದ್ದರಿಂದ ತಪ್ಪಿಹೋಯಿತೆಂತಲೂ, ಸುಮಾರು ಮುನ್ನೂರು ವರುಷಗಳಿಂದಲೂ ಇವರ ಹಿರಿಯರ ವಂಶಕರೇ ಈ ಪೀಠವನ್ನಲಂಕರಿಸ ತ್ತಾ ಬಂದು ಈಗ ಆಕಸ್ಮಿಕವಾಗಿ ತಪ್ಪಿಹೋಯಿತೆಂತಲೂ ಕೇಳುತ್ತೇವೆ

****

ದೊಡ್ಡಬಳ್ಳಾಪುರದ ಮ್ಯಾಜಿಸ್ಟ್ರೇಟರು ಬರೆಯುವುದು—ದೊಡ್ಡಬಳ್ಳಾಪುರದ ಕಾಸಬಾ ಗೌಡಳ್ಳಿಯಲ್ಲಿ ಶಿವಾಚಾರದ ರೇವಣ್ಣನಿಗೂ ಅದೇ ಗ್ರಾಮದ ಆಳಿಯ ಮಲ್ಲಯ್ಯನೆಂಬುವನಿಗೂ ಹತ್ತಲು ಸರವದ್ದಿನ ವಿಷಯದಲ್ಲಿ ವ್ಯಾಜ್ಯಉಂಟಾಗಿ ಅವನು ಕಾಲಿ ದೊಣ್ಣೆಯಿಂದ ರೇವಣ್ಣನನ್ನು ಹೊಡೆಯಲು ಆ ಏಟು ತಲೆಗೆ ಬಿದ್ದು ಪ್ರಾಣ ಘಾಯವಾಯಿತು. ಅವನು ರಕ್ತ ಪರಿದು ಮೂರ್ಛೆಹೋಗಿ ಸುಮಾರು ೨—೩ ದಿನಗಳವರೆಗೆ ಕೊರಗಿ ಸಾವಾದನು. ಈ ಮರಣದ ಸಂಗತಿಯು ಯಾವಕಾಲದಿಂದಲೋ ಸರ್ಕಾರಕ್ಕೆ ರಿಪೋರ್ಟಾಗದೆ ಬರಲಾಗಿದಿದರು. ತರುವಾಯ ಪೋಲೀಸಿನವರು ಪತ್ತೆಮಾಡಿ, ಅಮಲ್ದಾರರಿಗೆ ತಿಳಿಸಿದರು. ಆಗ ಅಮಲ್ದಾರರು ಮೆಳೆ ಕೊಟೆಕಡೆ ಹೋಗಿದ್ದವರು ಕೂಡ್ಲೆ ಗೌಡಳ್ಳಿಗೆ ದಯಮಾಡಿ ದಾಕ್ತರಿಯಾಗಿದ್ದರೂ ಅದೆಲ್ಲವನ್ನು ತನಿಖೆಮಾಡಿ, ೩—೪ ದಿನದ ಹಿಂದೆ ಹೂಳಿದ್ದ ಹೆಣವನ್ನು ಕೀಳಿಸಿ, ನೋಡುವಲ್ಲಿ ಅನುಮಾನ ಉಂಟಾಯಿತು. ಕೂಡ್ಲೆ ಅದನ್ನು ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಿದರು. ತಾ ೯ನೇ ಮಂಗಳವಾರ ಸಾಯಂಕಾಲ ಡಾಕ್ಟರವರು ಶವವನ್ನು ಪರೀಕ್ಷಿಸಿ ನೋಡಿ, ಜಾಮೂಗಿ ಏಟು ಬಿದ್ದು ಮೃತನಾದ್ದಂತೆ ಹೇಳಿದರು. ಈಗ ಮಲ್ಲಯ್ಯನನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆ. ಮೃತಪಟ್ಟ ರೇವಣ್ಣನ ಎನೇ ಹೆಂಡತಿ ಬಾಲ್ಯವಯಸ್ಸಿನ ಹುಡುಗಿಯು ದುಃಖಕ್ಕೆ ಗುರಿಯಾಗಿದ್ದಾಳೆ

ಮೈಸೂರು ಗೆಜೆಟ್ ಸಂಗ್ರಹ.

ಕಡೂರ್ ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಅ॥ ಕಮಿಷನರ್ ಮೆ॥ ಟಿ ಚೊಕ್ಕಣ್ಣನವರಿಗೆ ಸವದತ್ತಿ ರಜ ಅನುಸರಿಸಿ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಹಾಸನದ ಅಮಲ್ದಾರ್ ಮೆ॥ ಎಂ ಲಕ್ಷ್ಮಣಶಾಸ್ತ್ರಿ ಯವರನ್ನು ಅ॥ ಕಮಿಷನರಾಗಿ ಬದಲಿ ನೇಮಿಸಿ, ಕಡೂರ್ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ

ಮುಳಬಾಗಲ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಎಸ್ ಭಟ್ಟಣ್ಣನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಪೊಲೀಸ್ ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರ್ ಪಿ ಸುಬ್ಬರಾಯರು ಮುಳಬಾಗಲ್ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಚಿಕ್ಕಮಗಳೂರ್ ಸಬ್ ಜಡ್ಜಿ ಮೆ॥ ಡಿ ಎಂ ನರಸಿಂಗರಾಯರಿಗೆ ಅಕ್ಟೋಬರ್ ೧ ರಿಂದ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಬೆಂಗಳೂರ್ ಪ್ರೊಸಿಪಲ್ ಮುನ್ಸಿಫ್ ಮೆ॥ ಟಿ ಆ ಜಯರಾಮ ಅಯ್ಯರವರನ್ನು ಚಿಕಮಗಳೂರ್ ಅಕ್ಟಿಂಗ್ ಅ॥ ಕಮಿಷನರಾಗಿ ನೇಮಿಸಿದೆ. ಇವರು ಚಿಕ್ಕಮಗಳೂರಿನ ಸಬ್ ಜಡ್ಜರಾಗಿ ಕೆಲಸ ನೋಡತಕ್ಕದ್ದು

ಬೆಂಗಳೂರ್ ಅಡಿಷನಲ್ ಮುನ್ಸಿಫ್ ಮೆ॥ ಡಿ ಕೆ ರಾಮರಾಯರು ಬೆಂಗಳೂರಿನ ಪ್ರಿನ್ಸಿಪಲ್ ಮುನ್ಸಿಫರಾಗಿಯೂ ಮೆ॥ ಬಿ ರಂಗೈಯ್ಯಂಗಾರ್ಯರು ಅಡಿಷನಲ್ ಮುನ್ಸಿಫರಾಗಿಯೂ ಕೆಲಸ ನೋಡತಕ್ಕದ್ದು. ಬೆಂಗಳೂರಿನಲ್ಲಿರುವ ಎರಡನೇ ಅಡಿಷನಲ್ ಮುನ್ಸಿಫ್ ಕೋರ್ಟನ್ನು ವಜಾಮಾಡಿದೆ

ಮೆ॥ ಎಫ್ ಇ ಸಿ ಕಾರ್ಯಯವರು ಪ್ರಿವಿಲೇಜ್ ರಜದ ಮೇಲಿರುವಾಗ್ಗೆ ಚೆಟ್ಟಿ ಕಮಿಷನರ್ ಮೆ॥ ಹೆಚ್ ಹೆಚ್ ಸ್ಪಾರ್ಕ್ಸ್ ಯವರು ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ರಾಗಿ ಬದಲಿ ನೋಡತಕ್ಕದ್ದು

ಅ॥ ಕಮಿಷನರ್ ಮೆ॥ ಕೆ ಆರ್ ಶ್ರೀನಿವಾಸಯ್ಯಂಗಾರ್ಯರು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೋಡತಕ್ಕದ್ದು

ಮುಂದೆ ಹೇಳುವ ಸಿವಿಲ್ ಸರ್ವಂಟರುಗಳ ಬಡ್ತಿ ಹುಕುಂ ಮಾಡಿದೆ —ಮೆ॥ ಟಿ ಎ ಆರಮುಗಂ ಮೊದಲಿಯಾರ್ರನ್ನು ೧ನೆ ಕ್ಲಾಸಿಗೂ, ವಿಎಸ್ ಆರ್ ಗೋವಿಂದರಾಜುಲು ಯವರನ್ನು ೨ನೆ ಕ್ಲಾಸಿಗೂ ಬಡ್ತಿ ಮಾಡಿದೆ

ಕೋಲಾನಹಳ್ಳಿ ತಾಲ್ಲೂಕು ಶಿರಸ್ತೇದಾರ್ ಬಿ ಚನ್ನರಾಜೇ ಅರಸಿನವರನ್ನು ಹಾಸನ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ಬದಲಿ ತರೀಖು ನೇಮಿಸಿದೆ

ಸಬ್ ಅ॥ ಇಂಜನಿಯರ್ ಮೆ॥ ವೈ ಅಶ್ವತ್ಥನಾರಾಯಣರಾಯರನ್ನು ಮೈಸೂರಿನಲ್ಲಿರುವ ಇಂಜನಿಯರ್ ಸ್ಕೂಲಿನ ಹೆಡ್ ಮಾಸ್ಟರಾಗಿ ಗೊತ್ತು ಮಾಡಿದೆ

ಮೆ॥ ಡಿ ದೇವರಾಜೇ ಅರಸಿನವರು ಮೆ॥ ಎಂ ತಂಗ್ಯೆಯ್ಯಚೆಟ್ಟಿಯವರಿಂದ ಸೆಪ್ಟೆಂಬರ್ ೨೦ರಲ್ಲಿ ಕಡೂರ್ ಡಿಸ್ಟ್ರಿಕ್ಟಿನ ಮತ್ತು ಟ್ರೆಜರಿಯ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಬಹುಮಾನ ಪಡೆದ ವರ್ತಮಾನಗಳು.

[ಈ ವಾರದ ಬಹುಮಾನವನ್ನು ಕೆಳಗಿನ ಎರಡು ವಾರ್ತೆಗಳಿಗೂ ಹಂಚಿಹಾಕಿ, ಒಂದು ರೂಪಾಯನ್ನು ಮೊದಲನೇದಕ್ಕೂ ಇನ್ನೊಂದನ್ನು ಎರಡನೇದಕ್ಕೂ ಕೊಟ್ಟಿದೆ ನೆ]

೧ ಆಕಸ್ಮಿಕ ಮರಣ

ಈ ಮಾಹೆ ತಾರೀಖು ೭ನೆ ಭಾನುವಾರ ಬಸರಾಳ್ ಹೋಬಳಿಗೆ ಸೇರಿದ ಚಲ್ಲಾಯ್ಯನಹಳ್ಳಿ ಗ್ರಾಮದ ಕಂಟಲಿಂಗಗೌಡ ಪಟೇಗೌಡನ ಮಗ ಲಿಂಗ, ಚೆಳವನ ಮಗ ಬೋರ ಇವರುಗಳು ಕೊಪ್ಪದ ಹೋಬಳಿ ಬಿದರಕೋಟೆ ಅನ್ನೆಗೌಡನ ಗದ್ದೆಗೆ ನಾಟಿಹಾಕಿ ತೆಗೆದುಕೊಂಡು ಕಳೆ ಕೀಳುವುದಕ್ಕೆ ಹೋಗಿದ್ದ ಮನುಷ್ಯರು ೧ ಗಂಟೆ ಪರ್ಯಂತ) ಅಲ್ಲಿ ಕೆಲಸಮಾಡಿ ನಂತರ ಕಂಟಲಿಂಗೇಗೌಡ ಬೋರ ಇವರಿಬ್ಬರೂ ಬಹಿರ್ದೇಶಕ್ಕೆ ಹೋದನಂತರ ಪಟೇಗೌಡನ ಮಗ ಸುಮಾರು ೧೬ ವರ್ಷದ ಲಿಂಗನೆಂಬುವನು ಕೆರೆಗೆ ಬಂದು ಕಲ್ಲಿನ ಮೇಲೆ ನಿಂತು ಮೈಕೈ ಬದಿ ತೊಳೆಯುತ್ತಿರುವಾಗ್ಯೆ ಹಠಾತ್ತನೆ ಕೆರೆಗೆ ಬಿದ್ದು ನೀರಿನ ಪಾಲಾದನು. ಮುಳುಗಿಹೋದ ಬಹಿರ್ದೇಶಕ್ಕೆ ಹೋಗಿದ್ದ ದೊಡ್ಡವರಿಬ್ಬರು ಬಂದು ನೋಡಿ ನೀರಿಗೆ ಬಿದ್ದನೆಂತ ತಿಳಿಯದೆ ಮುಂದಾಗಿ ತಮ್ಮ ಗ್ರಾಮಕ್ಕೆ ಹೊರಟುಹೋದನೆಂತ ಊಹಿಸಿ ಚಲ್ಲಾಯ್ಯನಹಳ್ಳಿಗೆ ಬಂದು ಅವರ ಮನೆಯಲ್ಲಿ ವಿಚಾರಿಸಿದರು. ಹುಡುಗನು ಬಂದಿರಲಿಲ್ಲ. ಅಷ್ಟರಲ್ಲೇ ಮಳೆ ಪ್ರಾರಂಭವಾಗಿ ರಾತ್ರಿಯ ವರಿಗೂ ಬಿಡಲಿಲ್ಲ. ಮಳೆ ಬಂದಕಾರಣ ಎಲ್ಲೋ ನಿಂತಿರಬಹುದೆಂತ ಯೋಚಿಸಿದರು. ತಾ ೮ನೇ ಸೋಮವಾರವು ಮಳೆ ಬಿಡಲಿಲ್ಲ. ಹುಡುಗನು ನೆಂಟರ ಮನೆಗೆ ಕುಲಿವಾನಕ್ಕೇನಾದರೂ ಹೋಗಿದ್ದಾನೇನೋ ಎಂತ ತಿಳಿದುಕೊಂಡಿದ್ದರು. ಬಿದರಕೋಟೆಯ ಕೆರೆಯಿಂದ ಶವವು ಕೆಳದ ನೀರಿನ ಮೇಲೆ ಕೊಚ್ಚಿ ಹೋಗಿ ಕೊಪ್ಪದ ಕೆರೆಗೆ ಸೇರಿ ತಾ ೯ನೇ ಸೋಮವಾರ ಸಾಯಂಕಾಲ ಶವ ಕಂಡದ್ದರಿಂದ ಪೋಲೀಸ್ ಸ್ಟೇಷನ್ನವರು ಕಡ್ಡೆ ಒಂದು ಕಾವಲಿಟ್ಟು ಮೃತಪಟ್ಟವನು ಚಲ್ಲಾಯ್ಯನಹಳ್ಳಿಯವನೆಂದು ತಿಳಿದುಬಂದದ್ದರಿಂದ ಪೋಲೀಸ್ ಕಾನ್ಸ್ಟೇಬಲ್ ತಾ ೯ನೇ ಮಂಗಳವಾರ ಪ್ರಾತಃಕಾಲ ೬ ಗಂಟೆಗೆ ಬಂದು ರೈತರನ್ನು ಕೊಪ್ಪಕ್ಕೆ ಬರಬೇಕೆಂತ ಕರೆಯುವಲ್ಲಿ ರೈತರು ಗ್ರಾಮ್ಯಭಾಷೆಯೊಳಗೆ ಏನೇನೋ ಕೇಳಿಕೊಂಡು ರೈತರೆಲ್ಲ ಹುರಿಸುರಿಯಂತೆ ಕೊಪ್ಪಕ್ಕೆ ಹೋಗಿ ಮಹಜರು ಕೈಫಿಯತ್ತು ಬರೆದುಕೊಟ್ಟು ಯಾವ ಗುಮಾನಿಗೂ ಆಸ್ಪದವಿಲ್ಲದೆ ಇದ್ದ ಕಾರಣ ಹುಕುಂಪಡೆದು ಶವವನ್ನು ತಮ್ಮ ಗ್ರಾಮಕ್ಕೆ ತಾ ೯ನೇ ಮಂಗಳವಾರ ಸಾಯಂಕಾಲ ೫ ಗಂಟೆಗೆ ತಂದು ದಹನಮಾಡಿದರು. ಈ ಪಟೇಗೌಡನಿಗೆ ಮೃತನಾಗಿಹೋದವನೇ ಹಿರಿಯ ಮಗ. ಇನ್ನೊಂದು ೫ ವರುಷದ ಗಂಡು ಇದೆ. ಹಿರೀ ಪುತ್ರನನ್ನು ಕಳೆದುಕೊಂಡ ತಂದೆತಾಯಿಗಳ ದುಃಖವನ್ನು ವಿವರಿಸಲಾರೆನು

ಎಚ್ ಕೃಷ್ಣಪ್ಪ, ಪಟ್ಲಗೆರೆ ಸ್ಕೂಲ್‌ಮಾಸ್ಟರ್, ಮಂಡ್ಯ ತಾಲ್ಲೂಕು.

೨ ಹಂದಿಗಳ ಕಾಟ

ಇಲ್ಲಿ ಇದೇ ಅಕ್ಟೋಬರ್ ತಾರೀಖು ೧೦ ರಲ್ಲಿ ನಾನು ನನ್ನ ಸ್ನೇಹಿತನು ರೈಲ್ವೆ ಸ್ಟೇಷನಿಗೆ ಹೋಗಿ ಬರುತಿದ್ದೆವು. ಹಗಲು ಮಧ್ಯಾಹ್ನ ೧—೨ ಗಂಟೆ ಸಮಯದಲ್ಲಿ ಪಟ್ಟಣಸೆಟ್ಟಿ ಮುದಿಯ ವ್ಯಸನದ ತೋಟದಲ್ಲಿ ಹುಲ್ಲು ಕೊಯ್ಯಲಿಕ್ಕೆ ಹೋಗಿದ್ದ ಆತನು ಹಂದಿಯನ್ನು ನೋಡಿ ಮಲಗಿದ್ದ ಹಂದಿಯನ್ನು ಎಬ್ಬಿಸಿದನು. ಅದು ಜೋಡಿಗರ ವಸೂರಪ್ಪನ ಕೇರಿ ಅಂಗಡಿ ಮುಂದೆ ನುಗ್ಗಿ ಅಲ್ಲಿಂದ ಹುಸೇನ್‌ಸಾಹೇಬರ ಕಣದ ಮುಂದೆ ಬಂದು ಮುಸಲ್‌ಮಾನರ ಹುಡುಗನನ್ನು ಕೆಡವಿತು. ಅವನಿಗೇನೂ ಅಪಾಯವಾಗಲಿಲ್ಲ. ಅಲ್ಲಿಂದ ಕವಳ್ಳಾರ ಕಾಳಿಪ್ಪನವರ ಮನೆ ಹತ್ತಲ್ಲಿ ನುಗ್ಗಿ ಅವನ ಕುಲುಮೆಯಲ್ಲಿ ಕೂಡು ಕಂಚಿಗಾರ ಕಾಳಪ್ಪನ ಮನೆ ಮುಂದೆ ನುಗ್ಗಿ ಒಂದು ಮಿಡ್ಡಿ ಕರುವನ್ನು ಕೋರೆಯಿಂದ ಕೊಡೆದು ಅಲ್ಲಿಂದ ಆಗಲ್ಲೇ ಮಲ್ಲಿ ಹಾದು ರೈಲ್ವೆ ಸ್ಟೇಷನಿಗೆ ಹೋಗತಕ್ಕ ರಸ್ತೆಯಲ್ಲಿ ನಾನೂ ನನ್ನ ಸ್ನೇಹಿತನು ಬರುತ್ತಿದ್ದೆವು. ಅದು ನಮ್ಮ ಎದುರಿಗೆ ಬಂತು ನಾವು ಅರುಗಾದೆವು ನನ್ನ ಹಿಂದೆ ಚಳಿಬೆಳಕಿನಿಂದ ಬ್ರಾಹ್ಮಣ ಮುದುಕಿ ಬರುತ್ತಿದ್ದಳು ಆ ಮುದುಕಮ್ಮನ ಎಡ ತೊಡೆ ಸಂಧಿನಲ್ಲಿ ನುಗ್ಗಿ ಎಡ ಮೊಣಕಾಲ ಒಳಭಾಗದಲ್ಲಿ ಕೋರೆಯಿಂದ ಹೊಡೆದಿತ್ತು. ಎಂಜಲು ಕೊಯಿದರಾಗ ಇತ್ತು. ಆ ಮುದುಕಮ್ಮ ಬಿಳಲು ಸಟದಿಂದ ಅಲ್ಲೆ ಮಲಗಿಕೊಂಡರು. ಆದಾಗ ಅವರ ಬಂಧುಗಳಾದ ಬ್ಯಾನುಭೋಗರ ಚಿಕ್ಕಣ್ಣನವರ ಮನೆಗೆ ನನ್ನ ಸ್ನೇಹಿತ ನನ್ನು ಕಳುಹಿಸಿದೆನು. ಅಲ್ಲಿಂದ ಅವರು ಗಾಡಿಯನ್ನು ತೆಗೆದುಕೊಂಡು ಬಂದು ಆ ಮುದುಕಮ್ಮನನ್ನು ಕರೆದುಕೊಂಡು ಹೋದರು. ಜೀವಕ್ಕೆ ಏನೂ ಅಪಾಯವಾಗುವದಾಗಿ ಇಲ್ಲ. ನೋವು ಜಾಸ್ತಿಯಾಗಿದೆ

ಜಿ ನರಸಿಂಗರಾವ್, ಮಾಯಕೊಂಡ, ದಾವಣಗೆರೆ ತಾಲ್ಲೂಕು

ಮೈಸೂರು ಸರ್ಕಾರವೂ ವ್ಯವಸಾಯಾಭಿವೃದ್ಧಿಯೂ.

ಗವರ್ನಮೆಂಟಿನವರು ಮಾಡುವ ಹೊಸ ಏರ್ಪಾಡುಗಳು

ಮೈಸೂರು ಸಂಸ್ಥಾನದಲ್ಲಿ ವ್ಯವಸಾಯವನ್ನು ಈಗಿನ ಕಾಲದ ಉಪಕರಣಗಳ ಸಹಾಯದಿಂದ ಅಭಿವೃದ್ಧಿಪಡಿಸಬೇಕೆಂದು ರೆವಿನ್ಯೂ ಕಮಿಷನರವರು ಪ್ರೋತ್ಸಾಹಕರಗಳಾದ ಕೆಲವು ಏರ್ಪಾಡುಗಳನ್ನು ಮಾಡಿ ರೂಢಿಸುವವರೆಂದು ತಿಳಿದು ಬಂದಿದೆ. ಪ್ರತಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಜಮೀನ್ದಾರರೂ ಮಾತುಬರರೂ ಆದ ಕೆಲವು ಮುಖಂಡರನ್ನು ಕೂಡಿಸಿ ಒಂದು ಸಂಘವನ್ನು ಮಾಡಿ, ಆ ಸಂಘಕ್ಕೆ ವ್ಯವಸಾಯಾಭಿವೃದ್ಧಿ ಸಂಘವೆಂಬ ಹೆಸರಿಡುವರು ಆ ಮೆಂಬರುಗಳು ಪ್ರತಿ ವರುಷವೂ ತಮ್ಮ ತಮ್ಮಲ್ಲೇ ಚಂದಾ ಕೂಡಿಸಿ ಒಂದು ಫಂಡು ಮಾಡುತ್ತಾರೆ. ಹೀಗೆ ಕೂಡಿದ ಹಣವೆಷ್ಟೋ ಇನ್ನಷ್ಟು ದ್ರವ್ಯವನ್ನು ಸರ್ಕಾರದವರು ಗ್ರಾಂಟು ದಯಪಾಲಿಸುವರು. ಆದರೆ ಇಂಥಾ ಸಹಾಯ ಪ್ರತಿ ವರುಷಕ್ಕೆ ೫೦೦ ರೂಪಾಯಿಗಿಂತ ಜೆಚ್ಚಾಗುವುದಿಲ್ಲ.

ಹೊಸ ತರಹಾ ಉಪಕರಣಗಳಿಂದ ವ್ಯವಸಾಯ ಮಾಡಬೇಕೆಂದು ಕುತೂಹಲ ಪಡತಕ್ಕ ದೊಡ್ಡ ದೊಡ್ಡ ಜಮೀನ್ದಾರರಿಗೆ ಅಂಥಾ ವ್ಯವಸಾಯಕ್ಕೆ ಆವಶ್ಯವಾದ ಆಯುಧಾದಿ ಉಪಕರಣಗಳನ್ನು ಗವರ್ನಮೆಂಟಿನವರು ಮುಫತ್ತಾಗಿಯೋ ಇಲ್ಲವೇ ಅರ್ಧ ಖರೀದಿ ತೆಗೆದುಕೊಂಡೋ ಕೊಡುತ್ತಾರೆ ಮತ್ತು ಪೈರಿಗೆ ಬೀಜವನ್ನು ಸರ್ಕಾರದವರು ಮುಫತ್ತಾಗಿಯೇ ಕೊಡಬಹುದು ಇದಲ್ಲದೆ ವ್ಯವಸಾಯ ಮಾಡತಕ್ಕ ಜಮೀನನಲ್ಲಿ ವ್ಯವಸಾಯ ಪರೀಕ್ಷಾ ಜಮೀನಾಗಿ ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದರೆ ಅಂಥಾ ಜಮೀನಿನ ಕಂದಾಯವನ್ನು ಮೂರು ಅಥವಾ ಐದು ವರುಷಗಳ ವರೆಗೆ, ಇಲ್ಲವೇ ಆ ಜಮೀನು ಆ ರೂಪದಲ್ಲಿರುವ ತನಕ ಮಾಫಿ ಬಿಡಬಹುದು ಅದರಲ್ಲಿ ರೈತನು ಚೆನ್ನಾಗಿ ವ್ಯವಸಾಯ ಮಾಡುತ್ತಿರಬೇಕು

ಗವರ್ನಮೆಂಟಿನ ವ್ಯವಸಾಯ ಇಲಾಖಾ ಪ್ರೊಫೆಸರರಾದ ಅಗ್ರಿಕಲ್ಚರಲ್ ಕೆಮಿಸ್ಟ್ ಎಂಬ ಅಧಿಕಾರಿಯನ್ನು ಸರ್ಕಾರದವರು ಅಂಥಾ ಜಮೀನುಗಳ ವ್ಯವಸಾಯ ಸ್ಥಿತಿಗತಿಗಳನ್ನು ಪರೀಕ್ಷೆ ಮಾಡಿಕೊಂಡು ಬರುವಂತೆ ಪ್ರತಿ ಎರಡು ಸಲವೂ ಕಳುಹಿಸಿ ಕೊಡುತ್ತಾರೆ. ಈ ಅಧಿಕಾರಿಯು ಅಂಥಾ ರೈತರಿಗೆ ಹೊಸ ಕ್ರಮಗಳನ್ನು ಆಗಾಗ್ಗೆ ಹೇಳಿಕೊಡುತ್ತಾ ಗವರ್ನಮೆಂಟಿಗೆ ಅವುಗಳ ವಿಷಯದಲ್ಲಿ ವಾರ್ಷಿಕ ರಿಪೋರ್ಟನ್ನು ಬರೆದು ತಿಳಿಸುವರು

ವ್ಯವಸಾಯವು ಅಭಿವೃದ್ಧಿ ಹೊಂದಬೇಕಾದರೆ ರೈತರೊಬ್ಬರೇ ಪ್ರಯತ್ನ ಪಟ್ಟಾಗಲಿ ಸರ್ಕಾರದವರೇ ಪ್ರಯತ್ನ ಪಟ್ಟಾಗಲಿ ಫಲಕಾರಿಯಾಗಲಾರದು ಆದ್ದರಿಂದ ಸರ್ಕಾರಿ ಅಧಿಕಾರಿಗಳೂ ರೈತ ಪ್ರಜೆಗಳೂ ಏಕೀಭವಿಸಿ ಪರಸ್ಪರ ಸಹಾಯ ಮಾಡಬೇಕು ಇದಕ್ಕೋಸ್ಕರ ಸರ್ಕಾರದವರು ಮೇಲ್ಕಂಡ ಡಿಸ್ಟ್ರಿಕ್ಟ್ ವ್ಯವಸಾಯಾಭಿವೃದ್ಧಿ ಸಂಘಕ್ಕೆ ಡೆಪ್ಯುಟಿ ಕಮಿಷನರು [illegible] ಪ್ರಜೆಗಳಲ್ಲಿ ಗಣ್ಯತೆಯನ್ನು ಪಡೆದವರಾಗಿಯೂ ಇರುವಂಥಾ ಒಬ್ಬ ದೊಡ್ಡ ಮನುಷ್ಯರನ್ನು ಚುನಾಯಿಸಿ ವೈಸ್ ಪ್ರೆಸಿಡೆಂಟ್ (ಉಪಾಧ್ಯಕ್ಷ) ರನ್ನಾಗಿ ನೇಮಕ ಮಾಡುತ್ತಾರೆ

ಈ ವ್ಯವಸಾಯಾಭಿವೃದ್ಧಿ ಸಂಘದವರು ಮುಂದಾಳುಗಳಾಗಿ ನಿಂತು ಆಯಾ ಡಿಸ್ಟ್ರಿಕ್ಟುಗಳಲ್ಲಿ ಬೇರೆ ಬೇರೆ ಮುಖ್ಯ ಸ್ಥಳಗಳಲ್ಲಿ ಗೋಶಾಲೆಗಳ ಪ್ರದರ್ಶನಗಳನ್ನು ನಡಸಿ, ಉತ್ಕೃಷ್ಟವಾಗಿ ದನಗಳನ್ನು ಸಾಕಿ ಬೆಳಸಿದವರಿಗೆ ಬಹುಮಾನಗಳನ್ನು ಕೊಡುವರು. ಈ ಬಹುಮಾನದ ಫಂಡಿಗೂ ಆ ಸಂಘದ ಮೆಂಬರುಗಳು ಎಷ್ಟು ಮೊಬಲಗನ್ನು ಕೂಡಿಸುವರೋ ಇನ್ನಷ್ಟು ಹಣವನ್ನು ಗವರ್ನಮೆಂಟಿನವರು ಗ್ರಾಂಟು ಕೊಡಬಹುದಾಗಿ ಕಾಣುತ್ತದೆ

ಮೇಲ್ಕಂಡ ಕ್ರಮಗಳನ್ನು ಅನುಸರಿಸಿ ರಾಜಧಾನಿಯಲ್ಲೂ ಕೋಲಾರದಲ್ಲೂ ಮೊದಲು ಎರಡು ವ್ಯವಸಾಯಾಭಿವೃದ್ಧಿ ಸಂಘಗಳನ್ನು ಏರ್ಪಡಿಸಬಹುದೆಂದು ತೋರುವುದು ಈ ಸಂಘಗಳಲ್ಲಿ ಹೊಸ ತರಹಾ ವ್ಯವಸಾಯದ ಉಪಕರಣಗಳನ್ನೂ ಉತ್ಕೃಷ್ಟವಾದ ನಾನಾ ಜಾತಿಯ ಬಿತ್ತನೇ ಬೀಜಗಳನ್ನೂ ಅವುಗಳಿಗೆ ಸಂಬಂಧಪಡುವ ಪುಸ್ತಕ ಭಂಡಾರವನ್ನೂ ಇಟ್ಟು ಪ್ರದರ್ಶನ ಮಾಡುವವರಾಗಿದ್ದಾರೆಂದು ಕೇಳುತ್ತೇವೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ಪ್ರಾರ್ಥನೆ—ರೈತರೂ ಜನರೂ ಗೋವುಗಳನ್ನು ಬಹಳ ಕ್ರೂರವಾಗಿ ಹಿಂಸಿಸಿ ದುಡಿಸುತ್ತಾರೆ. ಇಂಥಾ ಕ್ರೂರತನವನ್ನು ನಿಲ್ಲಿಸುವುದಕ್ಕೆ ಕಾನೂನು ಮಾಡಬೇಕು ಗೋವುಗಳನ್ನೂ ಎತ್ತುಗಳನ್ನೂ ಕೊಲ್ಲದಂತೆ ಮಾಡಬೇಕು

ದಿವಾನರವರು—ಇದು ಆಗುವುದಿಲ್ಲವೆಂದು ಹಿಂದಿನ ವರುಷಗಳಲ್ಲೇ ತೀರ್ಮಾನ ಹೇಳಿದ್ದೇವೆ.

ಪ್ರಾರ್ಥನೆ—ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್ ಎಂಬ ಕಾನೂನು ಕಾಫಿ ತೋಟಗಳಲ್ಲಿ ಕೆಲಸ ಮಾಡತಕ್ಕ ಕೂಲಿ ಆಳುಗಳಿಗೆ ಮಾತ್ರ ಲಗಾವು ಮಾಡಿದೆ ಇತರ ವ್ಯವಸಾಯಗಾರರ ಕೈಕೆಳಗೆ ಇರುವ ಜೀತಗಾರರೆಂಬ ಆಳುಗಳಿಗೂ ಇತರ ವಿಧದ ಕಾರ್ಯಗಾರರಿಗೂ ಆ ಕಾನೂನು ಅನ್ವಯಿಸುವಂತೆ ಮಾಡಿಕೊಡಬೇಕು

ದಿವಾನರವರು—ಆ ಕಾನೂನು ಇತರರಿಗೂ ಅನ್ವಯಿಸುವುದೋ ಇಲ್ಲವೋ ಒಂದು ಮೊಕದ್ದಮೆಯನ್ನು ಚೀಫ್ ಕೋರ್ಟಿನ ತನಕ ಅಪೀಲ್ ಮಾಡಿ ತಿಳಿಯಬೇಕು ಆದರೆ ಆ ಕಾನೂನಿನಲ್ಲಿ ಶಿಕ್ಷಾ ಪ್ರಕರಣಗಳಿರೋಣದರಿಂದ ಆತುರಪಟ್ಟು ಬದಲಾವಣೆ ಮಾಡುವುದು ಸಹಜವಾಗಿ ಕಾಣುವುದಿಲ್ಲ

ಪ್ರಾರ್ಥನೆ—ಇನಾಂದಾರರು ತಮ್ಮ ಇನಾಂ ಗ್ರಾಮಗಳ ರೈತರಿಂದ ಕಂದಾಯ ವಸೂಲ್ಮಾಡಿಕೊಳ್ಳುವ ವಿಷಯದಲ್ಲಿ ಈಚೆಗೆ ಚೀಫ್ ಕೋರ್ಟಿನ ಫುಲ್ಬೆಂಚು ಫೈಸಲನ್ನು ಕಳ್ಸಿಸಿರೋಣದರಿಂದ ರೈತರು ಕಂದಾಯ ಕೊಡದೆ ರೇಂಗರ ಪಡಿಸುತ್ತಾರೆ ಕಂದಾಯಕ್ಕೆ ಜಮೀನು ಬಾಧ್ಯವಾಗುವಂತೆ ಕಾನೂನ್ ಬದಲಾಯಿಸಿ ಕೊಡಬೇಕು ನಮ್ಮ ಚೀಫ್ ಕೋರ್ಟಿನವರು ಕಂದಾಯಕ್ಕೆ ಜಮೀನ್ ಈಡಾಗುವುದಿಲ್ಲವೆಂದು ಹೇಳಿದಾರೆ ಇದರಿಂದ ಈ ಸಂಸ್ಥಾನದಲ್ಲಿರುವ ಸುಮಾರು ೩,೦೦೦ ಇನಾಂದಾರರಿಗೂ ಕಷ್ಟವಾಗಿದೆ ಈ ಕಾನೂನ್ ಬದಲಾಯಿಸಿ ಕೊಡಬೇಕೆಂದು ೫೦ ಇನಾಂದಾರರು ರುಜು ಹಾಕಿ ಗವರ್ನಮೆಂಟಿಗೆ ಅರ್ಜಿ ಕೊಟ್ಟಿದಾರೆ ಯಾವದಾದರೂ ಒಂದು ಸಂದರ್ಭದಲ್ಲಿ ಇನಾಂ ಗ್ರಾಮವನ್ನು ಸರ್ಕಾರದವರು ವಹಿಸಿಕೊಂಡರೆ ಅಂಥಾ ಕಡೆ ಜಮೀನನ್ನು ಕಂದಾಯಕ್ಕೆ ಈಡುಮಾಡಿ ವಸೂಲ್ಮಾಡುತ್ತಾರೆ

ದಿವಾನರವರು—ಇನಾಂದಾರರು ರೈತರಿಂದ ಬಾಕಿ ಸಾಲಿನ ಕಂದಾಯವನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಹಕ್ಕುಳ್ಳವರಾಗಿದಾರೆ. ಇದನ್ನು ತಪ್ಪಿಸುವುದು ಅನ್ಯಾಯ. ಅಷ್ಟಕ್ಕೆ ಜಮೀನನ್ನು ಈಡುಮಾಡಬಹುದು. ಈ ವಿಷಯವನ್ನು ಗವರ್ನಮೆಂಟಿನವರು ಆಲೋಚನೆ ಮಾಡಿ ರೆವಿನ್ಯೂ ಕೋಡನ್ನೂ ಲಿಮಿಟೇಷನ್ ಆಕ್ಟನ್ನೂ ಬದಲಾವಣೆ ಮಾಡುತ್ತಾರೆ.

ಪ್ರಾರ್ಥನೆ—ಚಿನ್ನದ ಗಣಿಗಳ ವಿಷಯವಾದ ಹೊಸ ಕಾನೂನು ಬಹು ಹಿಂಸಕರವಾಗಿದೆ ಪ್ರಜೆಗಳು ಚಿನ್ನದ ಗಟ್ಟಿಯನ್ನು ಇಟ್ಟುಕೊಂಡಿದ್ದಲ್ಲಿ ಹಿಂಸೆಗೂ ಶಿಕ್ಷೆಗೂ ಗುರಿಯಾಗುವರು ಮೊದಲಿದ್ದ ಕಾನೂನು ಇಷ್ಟು ಹಿಂಸಕರವಾಗಿರಲಿಲ್ಲ. ಪೋಲೀಸಿನವರು ಚಿನ್ನವಿಟ್ಟುಕೊಂಡಿದ್ದವರನ್ನು ಹಿಡಿದಾಗ್ಯೂ ಆ ಚಿನ್ನವನ್ನು ಸರ್ಕಾರದ ಪರೀಕ್ಷಕರಿಗೆ ಕಳುಹಿಸಿ ಅವರು ಅದು ಗಣಿಯ ಚಿನ್ನವೆಂದು ಗೊತ್ತುಮಾಡಿ ತಿಳಿಸಿದ ಹೊರತು ಜನರನ್ನು ಹಿಂಸೆಪಡಿಸುತ್ತಿರಲಿಲ್ಲ. ಈಗ ಪರೀಕ್ಷೆ ಮಾಡಬೇಕಾದದ್ದೇ ಇಲ್ಲವೆಂದು ಆಗಿದೆ ಗಟ್ಟಿ ಚಿನ್ನ ಯಾರ ಬಳಿಯಲ್ಲಿ ಸಿಕ್ಕಿದರೂ ಶಿಕ್ಷೆಯಾಗಿಹೋಗುತ್ತೆ. ಗಣಿ ಚಿನ್ನವೆಂದು ಸಿದ್ಧಾಂತಪಡಿಸುವುದು ಗಣಿಯವರ ಕರ್ತವ್ಯವಾಗಿದ್ದರೂ ಇದನ್ನು ತಪ್ಪಿಸಿ, ಚಿನ್ನದ ಮಾಲೀಕರೇ ಅದು ಗಣಿಯ ಚಿನ್ನವಲ್ಲವೆಂಬುವುದಕ್ಕೆ ರುಜುವಾತು ಕೊಡಬೇಕೆಂದು ವಿಧಿಸಲ್ಪಟ್ಟದೆ ಇದರಿಂದ ಪ್ರಜೆಯ ಸ್ವಾತಂತ್ರ್ಯಕ್ಕೂ ಮಾನಕ್ಕೂ ಆಸ್ತಿಗೂ ಹಾನಿಯುಂಟಾಗುವುದು. ಈ ಕಾನೂನು ಗಣಿಗಳಲ್ಲಿ ಕೂಲಿ ಮಾಡತಕ್ಕವರಿಗೆ ಮಾತ್ರ ಅನ್ವಯಿಸುವಂತೆ ಮಾಡಿದರೆ ಯಾವ ಆಕ್ಷೇಪಣೆಯೂ ಇರುವುದಿಲ್ಲ ಆ ಪ್ರಾಂತ್ಯದಲ್ಲಿರುವ ೩೦೦ ಗ್ರಾಮಗಳೊಳಗೆ ಸಂಸಾರಸ್ಥರಿಗೂ ಮಾನಸ್ಥರಿಗೂ ಕಾರ್ಯಾರ್ಥವಾಗಿ ಅಲ್ಲಿಗೆ ಹೋಗಿ ಬರತಕ್ಕವರಿಗೂ ಕೂಡ ಅನ್ವಯವಾಗುತ್ತಾದ್ದರಿಂದ ಅವರಿಗೆ ಬಹಳ ಹಿಂಸೆಯಾಗಿದೆ ಅದಲ್ಲದೆ ಗಣಿಯವರು ತಮ್ಮ ಚಿನ್ನವನ್ನು ಕಾಪಾಡಿಕೊಳ್ಳುವದಕ್ಕೆ ಬೇಕಾದ ರೀತಿಯಲ್ಲೆಲ್ಲಾ ಬಂದೋಬಸ್ತು ಮಾಡಿಕೊಳ್ಳಲಿ. ಅದು ಅವರ ಕರ್ತವ್ಯವಾಗಿದೆ ಅದು ಬಿಟ್ಟು ಸರ್ಕಾರದವರು ಗಣಿಯವರಿಗೆ ಸಹಾಯಕರಾಗಿ ನಿಂತು, ಅವರಿಗೆ ಅನುಕೂಲವಾದ ಕಾನೂನ್ ಮಾಡಿಕೊಟ್ಟು, ಪ್ರಜೆಗಳನ್ನೆಲ್ಲಾ ಕಳ್ಳರೆಂದು ಮಾನ ಕಳೆಯುವುದೂ ಪೋಲೀಸಿನ ಮೂಲಕ ಹಿಂಸೆಪಡಿಸುವುದೂ ಧರ್ಮವಲ್ಲ ಪ್ರಜೆಗಳ ಕಷ್ಟವನ್ನು ಅರಿಕೆ ಮಾಡಿದೆಯೋ ಹೊರತು ಇದರಲ್ಲಿ ಆಕ್ಷೇಪಣೆಯೇನೂ ಇರುವುದಿಲ್ಲ ಆದರೂ ಸರ್ಕಾರದವರು ಕಾನೂನ್ ಜಾರಿ ಮಾಡಿದಲ್ಲಿ ಪ್ರಜೆಗಳ ಗತಿಯೇನಿದೆ? ಅಂತು ಪೋಲೀಸಿನವರ ಕಿರುಕುಳವೂ ನರಕದ ಹಿಂಸೆಯೂ ಎರಡು ಒಂದೇ ಆದಂತೆ ಪರಿಣಮಿಸಿದೆ

ದಿವಾನರವರು—ಈ ಕಾನೂನಿನ ವಿಷಯದಲ್ಲಿ ಪ್ರಜೆಗಳು ನಾನಾ ರೀತಿಯಾದ ತಪ್ಪು ಅಭಿಪ್ರಾಯಗಳನ್ನಿಟ್ಟುಕೊಂಡಿದಾರೆ ಅವರು ವಿಷಯವನ್ನು ಸರಿಯಾಗಿಯೂ ಸಾಂಗೋಪಾಂಗವಾಗಿಯೂ ತಿಳಿದುಕೊಂಡಿದ್ದರೆ ಈ ರೀತಿ ಆಕ್ಷೇಪಣೆ ಮಾಡುತ್ತಿರಲಿಲ್ಲ ಈ ಕಾನೂನು ಈ ೧೯೦೬ ನೆ ಇಸವಿಯಲ್ಲಿ ಮಾಡಿ ಹೊಸದಾಗಿ ಜಾರಿಗೆ ತಂದದ್ದಲ್ಲ ಇದು ೧೮೯೩ ರಲ್ಲೇ ಪ್ಯಾಸಾಗಿ ಅಂದಿನಿಂದಲೂ ಜಾರೀಲಿದೆ ಮೊದಲಿದ್ದ ಕಾನೂನಿನಲ್ಲಿ ಗಟ್ಟಿ ಚಿನ್ನವನ್ನು ಗಣಿಪದಾರ್ಥವೆಂದು ಮಾಡಲಿಲ್ಲ, ಈಗ ಅದನ್ನೂ ಸೇರಿಸಿರುವುದೊಂದೇ ಬದಲಾವಣೆ ಈಗ ನೀವು ವಿವರಿಸುವ ಕಷ್ಟಗಳೆಲ್ಲಾ ಏಳು ವರುಷಗಳಿಂದಲೂ ಆ ಪ್ರದೇಶದಲ್ಲಿತ್ತು ಇದುವರೆಗೆ ಯಾರೂ ಆಕ್ಷೇಪಿಸಲೇ ಇಲ್ಲ ಈ ಕಾನೂನು ಮೊದಲು ಯಾವ ಪ್ರದೇಶದಲ್ಲಿತ್ತೋ ಈಗಲೂ ಅದೇ ಪ್ರದೇಶದಲ್ಲಿ ಜಾರಿಯಲ್ಲಿದೆ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಲ್ಪಟ್ಟಿದೆ ಎಂಬುದು ತಪ್ಪು ತಿಳುವಳಿಕೆ ಆ ಪ್ರಾಂತ್ಯದಲ್ಲಿ ಗಟ್ಟಿ ಚಿನ್ನವನ್ನು ಮಾನಸ್ಥರೂ ಸಂಸಾರಿಗಳೂ ಯಾಕೆ ಇಟ್ಟುಕೊಂಡಿರಬೇಕು? ಒಂದು ವೇಳೆ ಇಟ್ಟುಕೊಂಡಿದ್ದರೂ ಮೊದಲೇ ಮ್ಯಾಜಿಸ್ಟ್ರೇಟರಿಗೆ ಆ ಸಂಗತಿಯನ್ನು ತಿಳಿಸಿ ಅವರಿಂದ ಅಪ್ಪಣೆ ಪಡೆದುಕೊಂಡರೆ ಸಾಕಾಗಿದೆ ಗಟ್ಟಿ ಚಿನ್ನವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿನ ಅಕ್ಕಸಾಲೆಗಳಿಂದಲೇ ಒಡವೆ ಮಾಡಿಸಬೇಕೇ? ಗಟ್ಟಿಯನ್ನು ಯಾವದಾದರೂ ಒಂದು ಆಭರಣವಾಗಿ ಮಾಡಿಟ್ಟುಕೊಂಡುಬಿಟ್ಟಲ್ಲಿ ಯಾರ ಹಿಂಸೆಯೂ ಇರುವುದಿಲ್ಲವಲ್ಲಾ. ಗಣಿ ಕಂಪನಿಯವರಿಂದ ನಮ್ಮ ಸರ್ಕಾರಕ್ಕೆ ವರುಷಕ್ಕೆ ೧೮ ಲಕ್ಷ ರೂಪಾಯಿ ಹಣ ಆದಾಯ ಬರುತ್ತಿದೆ ಆದ್ದರಿಂದ ಅವರ ಸ್ವತ್ತನ್ನೂ ಅಕ್ಷೋಭ್ಯ ರೀತಿಯಲ್ಲಿ ನಾವು ಕಾಪಾಡಿ ಕೊಡಬೇಕು ಗಣಿಗಳನ್ನು ನೋಡುವುದಕ್ಕೆ ಹೋಗತಕ್ಕವರು ಒಡವೆ ಹಾಕಿಕೊಂಡಿದ್ದರೂ ಇರಬಹುದೆಂತಲೂ ಅಂಥವರನ್ನು ಹಿಡಿದು ಕೂಡದೆಂತಲೂ ವಿಧಾಯಕವಾದಿದೆ ಇದಲ್ಲದೆ ಆಸ್ಟ್ರೇಲಿಯಾ ದ್ವೀಪದಲ್ಲಿ ಚಿನ್ನದ ಗಣಿಗಳಿರುವವು ನಮ್ಮ ಗಣಿಗಳಲ್ಲಿ ನಾವು ಮಾಡಿರುವ ಕಾನೂನಿಗಿಂತಲೂ ಆ ಗಣಿಗಳ ಕಾನೂನುಗಳು ಬಹಳ ಕಠಿಣವಾಗಿವೆ ಇಲ್ಲಿ ಮುನ್ನೂರು ಗ್ರಾಮಗಳಲ್ಲಿ ಮಾತ್ರ ನಮ್ಮ ಕಾನೂನು ಜಾರಿಯಲ್ಲಿದೆ ಆ ದ್ವೀಪದಲ್ಲಾದರೋ ಒಂದು ಕಡೆ ೩೯,೦೦೦ ಪ್ರಜಾಸಂಖ್ಯೆಯನ್ನೊಳಗೊಂಡ ೮೩,೦೦೦ ಚದರ ಮೈಲಿ ವಿಸ್ತೀರ್ಣದಲ್ಲಿ ಇನ್ನೊಂದು ಕಡೆ ೧,೬೦,೦೦೦ ಪ್ರಜೆಗಳನ್ನುಳ್ಳ ಇನ್ನೂ ವಿಸ್ತಾರವಾದ ಪ್ರದೇಶದಲ್ಲೂ ಜಾರಿಯಲ್ಲಿರುವುದು ಆ ಪ್ರಾಂತ್ಯಗಳು ಸ್ವತಂತ್ರವಾಗಿ ತಮ್ಮನ್ನು ತಾವೇ ಆಳಿಕೊಳ್ಳತಕ್ಕವು ತಮ್ಮ ತಮ್ಮಲ್ಲೇ ಮಹಾ ಕಠಿಣವಾದ ಕಾನೂನು ಮಾಡಿಟ್ಟುಕೊಂಡಿದಾರೆ [ಅವೆಂದು ಕಡೆಗಳಲ್ಲೂ ಜಾರಿಯಲ್ಲಿರುವಂಥಾ ಸರ್ಕಾರಿ ಕಾನೂನನ್ನು ದಿವಾನರವರು ಸೆಕ್ರೆಟರಿಯವರ ಮೂಲಕ ಓದಿಸಿ ಪ್ರತಿನಿಧಿಗಳಿಗೆಲ್ಲಾ ತಿಳಿಯಪಡಿಸಿದರು] ನಾವು ಮಾಡಿರುವ ಕಾನೂನು ಇನ್ನೂ ಸಂಪೂರ್ಣವಾದದ್ದಾಗಿಲ್ಲ ಪ್ರಜೆಗಳಿಗೆ ಯಾವ ಯಾವ ಭಾಗಗಳಲ್ಲಿ ಅದರಿಂದ ಯಾವ ಯಾವ ರೀತಿ ಕಷ್ಟವಾಗಿದೆಯೋ ತಿಳಿಸಬಂದರೆ ಗವರ್ನಮೆಂಟಿನವರು ಆಕ್ಷೇಪಣೆಗಳನ್ನೆಲ್ಲಾ ಗುರುತುಮಾಡಿಕೊಂಡು, ಅನುಭವಬಂದ ಹಾಗೆಲ್ಲಾ ತಿದ್ದಿ ಸರಿಪಡಿಸುವರು ಈ ಕಾನೂನು ಇನ್ನೂ ಹೊಸದಾಗಿ ಜಾರಿಗೆ ಬಂದಿದೆ ಕೆಲವು ದಿನ ಅದು ಜಾರಿಯಲ್ಲಿದ್ದರೆ ಅದರ ಕಷ್ಟ ಹಿಂಸೆಗಳು ಗೊತ್ತಾಗುವವು ಭಂಗಾರದ ಗಣಿಯು ಸಾಮಾನ್ಯವಾದ ಭೂಪ್ರದೇಶವಲ್ಲ ಅಲ್ಲಿಗೆ ಜಾರಿಗೆ ತಂದಿರುವ ಕಾನೂನು ವಿಶೇಷವಾದದ್ದು ನಾವು ಆ ಸಂದರ್ಭಗಳಿಗೆ ತಕ್ಕಹಾಗೆ ನಮ್ಮ ನಡವಳಿಕೆಗಳನ್ನು ಬದಲಾಯಿಸಿಕೊಳ್ಳುತ್ತಾ ಬರಬೇಕು. ಇದಲ್ಲದೆ ಈ ಕಾನೂನನ್ನು ಜಾರಿಗೆ ತರುವದಕ್ಕಿಂತ ಮುಂಚೆ ಮಸೋದೆ ರೂಪದಲ್ಲಿ ಸ್ವಲ್ಪ ಕಾಲ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಿ, ಪ್ರಜೆಗಳಿಗೆ ತಿಳಿಯಪಡಿಸದೆ ಹೋದದ್ದು ನ್ಯಾಯವಲ್ಲವೆಂದು ತೋರುತ್ತೆ ಹಾಗೆ ಪ್ರಕಟಿಸಿದ್ದರೆ ಈ ಆಕ್ಷೇಪಣೆಗಳೆಲ್ಲಾ ಹುಟ್ಟುತ್ತಲೇ ಇರಲಿಲ್ಲ ಇನ್ನು ಮುಂದೆ ಸರ್ಕಾರದವರು ಮಸೋದೆ ಪ್ರಕಟಿಸದೆ ಯಾವ ಕಾನೂನನ್ನೂ ಜಾರಿಗೆ ತರಲು ನೋಡಿಕೊಳ್ಳುವರು ಈ ಕಾನೂನ್ ಬದಲಾವಣೆ ಮಾಡುವಾಗ ನೀವು ಮಾಡಿರುವ ಆಕ್ಷೇಪಣೆಗಳನ್ನೆಲ್ಲಾ ಗಮನವಿಟ್ಟು ನೋಡಿ [illegible] ದಸುತ್ತೇವೆ

ಪ್ರಾರ್ಥನೆ—ಮದರಾಸ್, ಬೊಂಬಾಯಿ, ಅಲಹಾಬಾದ್, ಕಲ್ಕತ್ತಾ ಹೈಕೋರ್ಟುಗಳಲ್ಲಿ ಮೊಕದ್ದಮೆಗಳು ತೀರ್ಮಾನವಾದಾಗ ಅಂಥಾ ತೀರ್ಮಾನದ ಮೇಲೂ ಲಂಡನ್ ಪಟ್ಟಣದಲ್ಲಿರುವ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನಲ್ಲಿ ಅಪೀಲ್ ಮಾಡಿಕೊಳ್ಳಬಹುದಾಗಿದೆ. ನಮ್ಮ ಸಂಸ್ಥಾನದಲ್ಲಿ ಚೀಫ್ ಕೋರ್ಟ್ ಜಡ್ಜಿಗಳ ತೀರ್ಮಾನವೇ ಕಡೆಯ ತೀರ್ಮಾನ ಅದರ ಮೇಲೆ ಅಪೀಲೇ ಇಲ್ಲ ಆದ್ದರಿಂದ ಮೈಸೂರು ಕೌನ್ಸಿಲ್‌ನಲ್ಲಿ ಅಂಥಾ ಒಂದು ಜುಡಿಷಲ್ ಕಮಿಟಿ ಕೋರ್ಟನ್ನು ಏರ್ಪಡಿಸಿದರೆ ಚೀಫ್ ಕೋರ್ಟಿನಿಂದ ಆ ಕೋರ್ಟಿಗೆ ಅಪೀಲ್ ಹಾಕಬಹುದು. ಇಂಥಾ ಕೋರ್ಟ್ ಆಗಬೇಕೆಂದು ಬಹಳ ದಿನಗಳಿಂದ ಕೇಳಿಕೊಳ್ಳುತ್ತಾ ಇದ್ದೇವೆ

ದಿವಾನರವರು—೧೮೯೩—೯೪ ನೆ ಇಸವಿಯಲ್ಲೇ ಇದು ಅವಶ್ಯಕವಿಲ್ಲವೆಂದು ಜವಾಬು ಕೊಟ್ಟಿದೆ ನಮ್ಮ ಚೀಫ್ ಕೋರ್ಟಿನ ಮೂರು ಮಂದಿ ಜಡ್ಜಿಗಳೂ ಬಹಳ ಬುದ್ಧಿವಂತರಾಗಿಯೂ ಅನುಭವಸ್ಥರಾಗಿಯೂ ಇದಾರೆ ಇವರಿಗಿಂತ ಜುಡಿಷಲ್ ಕಮಿಟಿಯ ಕೌನ್ಸಿಲ್‌ನಲ್ಲಿರುವ ಜಡ್ಜಿಗಳಿಗೆ ಹೆಚ್ಚಾದ ಅನುಭವವಿರಲಾರದು. ಚೀಫ್ ಕೋರ್ಟ್ ಜಡ್ಜಿಗಳಿಗೆ ಮೊಕದ್ದಮೆಗಳನ್ನು ತೀರ್ಮಾನ ಮಾಡುವುದು ವಿನಹಾ ಇತರ ಯಾವ ಆತಂಕವೂ ಇಲ್ಲ ಕೌನ್ಸಿಲ್ ಮೆಂಬರುಗಳಿಗೆ ಇತರ ನಿರ್ವಾಹ ನಾನಾ ಕೆಲಸ ಕಾರ್ಯಗಳಿರುತ್ತವೆ [illegible] ಲ್ಲದೆ ಚೀಫ್ ಕೋರ್ಟಿನ ಮೇಲೂ ಅಪೀಲನ್ನು ಇಟ್ಟರೆ ಜನರಿಗೆ ಚೀಫ್ ಕೋರ್ಟಿನ ಮೇಲಣ ಗೌರವ ಕಡಿಮೆಯಾಗುವುದರಿಂದ ಪ್ರಯೋಜನವಿಲ್ಲ

ಪ್ರಾರ್ಥನೆ—ಜಪ್ತುಮಾಡಿದ ಚರಸ್ವತ್ತು ಜಮೀನ್ದಾರನ ವಶಕ್ಕೆ ಕೊಟ್ಟು ಕೇಳಿದಾಗ ಆ ಜಮೀನ್ದಾರ ಆ ಚರಸ್ವತ್ತನ್ನು ಹಾಜರುಪಡಿಸದೆ ತಪ್ಪಿದರೆ ಅಂಥಾ ಜಮೀನ್ದಾರನ ಮೇಲೆ ಜಾರಿ ನಡೆಯಿಸುವುದಕ್ಕೆ ಅಧಿಕಾರ ಕೊಡಬೇಕು

ದಿವಾನರವರು—ಇದೇ ವರುಷ ಜಾರೀಲಿ ತಂದಿರುವ ಕಾನೂನಿಂದ ಈ ಅಧಿಕಾರ ಕೊಡಲಾಗಿದೆ

ಪ್ರಾರ್ಥನೆ—ಜಡ್ಜ್ಮೆಂಟ್ ಸಮನ್ಸ್ ಜಪ್ತಿ ಜಮಾನತ್ತು ಸಿವಿಲ್ ಕೋರ್ಟಿನ ಸಮನ್ಸ್ ನ ವಾಯಿದೆಯನ್ನು ತೃಪ್ತಿಕರವಾಗಿಯೂ ಜಾರಿಯಿಂದಲೂ ಜಾರೀ ಮಾಡದೆ ಕಕ್ಷಿಗಾರರಿಗೆ ಬಹಳ ನಷ್ಟವೂ ಮೊಕದ್ದಮೆ ತೀರ್ಮಾನಕ್ಕೆ ಸಾವಕಾಶವೂ ಆಗುವುದು ಆದ್ದರಿಂದ ಜಾರಿ ಮಾಡಿದ ಪ್ರತಿ ಸಮನ್ಸಿಗೂ ಪಟೇಲ ಅಥವಾ ಗ್ರಾಮಭಾಗನ ಸಹಿ ಹಾಕಿಸಬೇಕೆಂದು ವಿಧಾಯಕವಾದಲ್ಲಿ ಅನುಕೂಲವಾಗುತ್ತೆ

ದಿವಾನರವರು—ಈ ವಿಷಯವನ್ನು ಚೀಫ್ ಕೋರ್ಟಿನವರ ಗಮನಕ್ಕೆ ತರುವೆವು ಅವರು ಸೂಕ್ತವಾದ ಏರ್ಪಾಡನ್ನು ಮಾಡಿಯಾರು

ಪ್ರಾರ್ಥನೆ—ಸಿವಿಲ್ ಕೋರ್ಟುಗಳ ಜಡ್ಜ್ಮೆಂಟು ಡಿಕ್ರಿಗಳನ್ನು ಇಂಗ್ಲಿಷಿನಲ್ಲಿ ಬರೆಯುತ್ತಾರೆ ಕನ್ನಡದಲ್ಲಿ ತರ್ಜುಮೆ ಮಾಡಿಕೊಡುವುದಿಲ್ಲ ಇದರಿಂದ ಕಕ್ಷಿಗಾರರಿಗೆ ಬಹಳ ಕಷ್ಟವಾಗುವುದು.

ದಿವಾನರವರು—ಕನ್ನಡದಲ್ಲೇ ಬರೆದು ಕೊಡಬೇಕೆಂದೂ [illegible] ಕಕ್ಕಾಗಿ ರುಸುಂ ಏನೂ ತೆಗೆದುಕೊಳ್ಳಕೂಡದೆಂದೂ ದಾಖಲಿನಲ್ಲಿರುತ್ತೆ ಹಾಗೇ ಕೊಡಿಸಬೇಕೆಂದು ಚೀಫ್ ಕೋರ್ಟಿಗೆ ತಿಳಿಸುತ್ತೇವೆ

ಪ್ರಾರ್ಥನೆ—ಸಿವಿಲ್ ಕೋರ್ಟಿನವರು ಜಪ್ತಿ ಅಥವಾ ಸುಪರ್ದು ಮೊದಲು ಖಾತೆ ಎಕ್ಸ್ಟ್ರಾಕ್ಟ್ ತರಿಸಿಕೊಳ್ಳುತ್ತಾರೆ ಇದಕ್ಕೆ ಕಾಲಕ್ಕೆಗೆ ಅರ್ಜಿ ಹಾಕಿದರೆ ಅದರ ಅನುಭೋಗರಿಗೆ ಕಳುಹಿಸ ವರುಷ ಅನುಭೋಗರೂ ಪ್ರತಿವಾದಿಯೂ ಒಂದಾಗಿ, ಸ್ವತ್ತನ್ನು ಪರಾಧೀನ ಮಾಡಿಬಿಡುತ್ತಾರೆ. ವಾದಿಗೆ ಬಹಳ ಕಷ್ಟವೂ ನಷ್ಟವೂ ಆಗುತ್ತೆ

ದಿವಾನರವರು—ಆ ಎಕ್ಸ್ಟ್ರಾಕ್ಟನ್ನು ಜಾಗ್ರತೆಯಾಗಿ ಕೊಡುತ್ತ ಅವರುಗಳಿಗೆ ಆಜ್ಞೆ ಕೊಡುವದಾಗಿ ರೆವಿನ್ಯೂ ಕಮಿಷನರ್ ಹೇಳುತ್ತಾರೆ

ಪ್ರಾರ್ಥನೆ—ಈಗ ಕೋರ್ಟುಗಳಲ್ಲಿ ಉಪಯೋಗಿಸುವ ೩ ಕಾಸಿನ ಕಾಗದ ಒಳ್ಳೇದಲ್ಲ ಕ್ರಯ ಹೆಚ್ಚು ಅದನ್ನು ತಪ್ಪಿಸಬೇಕು

ದಿವಾನರವರು—ಈಗ ಈ ಕಾಗದ ಸರ್ಕಾರದಲ್ಲಿ ಬಹಳ ಬಿದ್ದಿದೆ ಅದೆಲ್ಲಾ ಖರ್ಚಾದ ಮೇಲೆ ಈ ವಿಷಯವನ್ನು ಯೋಚಿಸುತ್ತೇವೆ,

ಪ್ರಾರ್ಥನೆ—ಸಿವಿಲ್ ಕೋರ್ಟುಗಳಿಗೆ ಸೆಂಟ್ರಲ್ ನಾಜರ್ ವಶದ ಮಾಡಿಟ್ಟಿರೋಣದರಿಂದ ಸಮನ್ಸ್, ವಾರಂಟು, ನೋಟೀಸುಗಳು ಕಕ್ಷಿಗಾರರಿಗೂ ತೃಪ್ತಿಕರವಾದಷ್ಟು ಬೇಗ ಜಾರೀ ಆಗದೆ ಮೊಕದ್ದಮೆಗಳು ಫೈಸಲಾಗದೆ ಬಹಳ ಸಾವಕಾಶವಾಗುತ್ತದೆ. ಇದನ್ನು ತಪ್ಪಿಸಿ ಮೊದಲಿದ್ದಂತೆ ಆಯಾ ಕೋರ್ಟಿಗೇ ಪ್ರತ್ಯೇಕವಾಗಿ ನಜರ್ ಮುಂತಾದ ಶಿಬ್ಬಂದಿಯನ್ನು ನೇಮಿಸಿಕೊಡಬೇಕು

ದಿವಾನರವರು—ಈಗಿರುವ ಏರ್ಪಾಡನ್ನು ಬದಲಾವಣೆ ಮಾಡಬೇಕಾದ್ದಿಲ್ಲವೆಂದು ಚೀಫ್ ಕೋರ್ಟಿನವರು ಅಭಿಪ್ರಾಯ ಪಡುತ್ತಾರೆ ಇದು ಈಗ ಆಗುವ ಕೆಲಸವಲ್ಲ ಈ ಸಂಗತಿಯನ್ನು ಚೀಫ್ ಕೋರ್ಟಿಗೆ ತಿಳಿಯಪಡಿಸುತ್ತೇವೆ ಮುಂದೆ ನೋಡೋಣ.

ಪ್ರಾರ್ಥನೆ—ಈಗ ೩೦೦ ರೂಪಾಯಿಗೆ ಮೇಲ್ಪಟ್ಟ ಮೊಕದ್ದಮೆಗಳನ್ನು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಬೇಕಾಗಿದ್ದರೆ ರಿಕಾರ್ಡುಗಳನ್ನು ಅಚ್ಚು ಹಾಕಿಸಿಕೊಡಬೇಕೆಂಬ ವಿಧಿ ಇರುತ್ತೆ ಇದರಿಂದ ಬಡವರಿಗೆ ಬಹಳ ನಷ್ಟವಾಗುತ್ತದೆ ಇದನ್ನು ತಪ್ಪಿಸಿ ೧,೦೦೦ ರೂಪಾಯಿಗೆ ಮೇಲ್ಪಟ್ಟ ಮೊಕದ್ದಮೆಗಳಿಗೆ ಆ ನಿರ್ಬಂಧವಿರಬೇಕೆಂದು ಬೇಡುತ್ತೇವೆ.

ದಿವಾನರವರು—ಹೀಗೆ ಬದಲಾಯಿಸಿದರೆ ಬಹಳ ಅನನುಕೂಲವಾಗುತ್ತೆಂದು ಚೀಫ್ ಕೋರ್ಟಿನವರು ಹೇಳುತ್ತಾರೆ ಒಳ್ಳೇದು ಯೋಚಿಸಿ ನೋಡೋಣ

ಪ್ರಾರ್ಥನೆ—ಜಿಲ್ಲರೆ ಸಾಲ ವಸೂಲ್ಮಾಡಿಕೊಳ್ಳುವುದಕ್ಕೂ ಸಕ್ಸೆಷನ್ ಸರ್ಟಿಫಿಕೇಟ್ ಪಡೆಯಬೇಕೆಂದು ವಿಧಿಸಿರುವುದರಿಂದ ಬಹಳ ತೊಂದರೆ ಬಹಳ ಕಷ್ಟವಾಗಿದೆ ವಸೂಲಾಗತಕ್ಕ ಸಾಲ ೫೦೦ ರೂಪಾಯಿ ಅಥವಾ ೨೦೦ ರೂಪಾಯಿಯೊಳಗೆ ಇದ್ದರೆ ಸರ್ಟಿಫಿಕೇಟ್ ಅವಶ್ಯವಿಲ್ಲವೆಂದು ವಿನಾಯತಿ ತೋರಿಸಬೇಕು ಮತ್ತು ಸರ್ಟಿಫಿಕೇಟಿಗೆ ಶೇಕಡಾ ೨ ರೂಪಾಯಿಯಂತೆ ಕೋರ್ಟಿಗೆ ರುಸುಂ ಕೊಡಬೇಕೆಂಬುದನ್ನು ಕಡಿಮೆ ಮಾಡಿಕೊಡಬೇಕು.

ಗನವರು—ಈಗ ಇದನ್ನು ಬದಲಾಯಿಸಲಿಕ್ಕಾಗುವುದಿಲ್ಲ. ಯೋಚನೆಮಾಡುತ್ತೇವೆ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡುವ ಷ್ಟು ಸ್ವಲ್ಪ ಕಡಿಮ್ಮೆ ಮಾಡುವ ಭಾಗದಲ್ಲಿ ಆಲೋಚನೆ ಮಾ

ಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದೀವಾನರವರು ಮಾಡಿದ ಉಪನ್ಯಾಸ

[ಕಳೆದ ವಾರದ ಶೇಷ]

ರಸ್ತೆಗಳು.

ಗಳ ಪೈಕಿ ಈ ಕೆಳಗಿನ ಕಾಂಗಾರಿಗಳು ನಡೆಯುತ್ತಿದ್ದವು— ಡಿಸ್ಟ್ರಿಕ್ಟಿನಲ್ಲಿ ಸಕಲೇಶಪುರ—ಅರೆಹಳ್ಳಿಯ ರಸ್ತೆಯ ಗವನ್ನು ನಾಕಿಸುವದು, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಆವಿನ ರು ರಸ್ತೆಯ ಬದಾವಣೆ, ಕಡೂರು ಡಿಸ್ಟ್ರಿಕ್ಟಿನಲ್ಲಿ ಕೊ —ಕಳಸದ ರಸ್ತೆಯನ್ನು ಅಗಲ ಮಾಡುವದು, ಮತ್ತು —ಮಂಗಳೂರು ರಸ್ತೆಯನ್ನು ಬಿಸಲೆಘಾಟ ರಸ್ತೆಯ ಪ್ರವೃದ್ಧಿಪಡಿಸುವದು ಪ್ರೆಂಚ್ ರಾಕ್ಸ್ ಸ್ಟೇಷನ್—ನಲ್ಲಿಗೆರೆ ಹಾಗನೆ ಹತ್ತಿರ ಲೋಕಪಾವನಿಯ ಸೇತುವೆ ಮುಗಿಯಿ ತು ಸಕಲೇಶಪುರ—ಮೂಡಗೆರೆ ರಸ್ತೆಯಲ್ಲಿ ಅಂಜೂರಿನ ಬಳಿ ಹದ ಸೇತುವೂ, ಕೆಟ್ಟಿನಗರ—ಬಾಳೆಹೊನ್ನೂರು ರಸ್ತೆ ಮಾಗುತಿಂಯ ಬಳಿ ಭದ್ರಾನದಿಯ ಸೇತುವೂ ಮುಗಿಸಲಾಯಿತು.

ಗತವರ್ಷದಲ್ಲಿ ಕಾನಕಾಲ್—ದೇವರಾಂಡ ರಸ್ತೆಯ ಉಳಿದ ಸಂಪೂರ್ಣವಾಗಿ ಮುಗಿಯಿತು. ಎಂದಿನಂತೆ ಗತವರ್ಷದಲ್ಲಿ ಮೈಲಿಗಳ ಪ್ರಾವಿನ್ಶಲ್ ರಸ್ತೆಗಳೂ, ೩,೪೯೩ ಮೈಲಿಗಳ ಫಂಡ್ ರಸ್ತೆಗಳ ಸರಾಸರಿ ಮೈಲಿಗೆ ೧೨೮ ರೂಪಾಯಿ ವೆಚ್ಚದ ದುರಸ್ತಿನಲ್ಲಿ ಇಡಲ್ಪಟ್ಟವು

ನಗರಾಭಿವೃದ್ಧಿಯ ಕಾಂಗಾರಿಗಳು

ನಗರಾಭಿವೃದ್ಧಿಯ ಕಾಂಗಾರಿಗಳ ಪೈಕಿ ಕೆಲಸ ನಡೆಯುತ್ತಿದ್ದ ದ ಕಾಂಗಾರಿಗಳು ಯಾವವೆಂದರೆ—ಬೆಂಗಳೂರು ನಗರದಲ್ಲಿ ದ ದೊಡ್ಡ ಚರಂಡಿಯನ್ನು ಅಗಲಮಾಡುವದು, ಮತ್ತು ಆ ಹೊಸ ಭಾಗಗಳಲ್ಲಿ ರಸ್ತೆಗಳನ್ನು ನಾಕಿಸುವದು, ಚರಂಡಿಗಳನ್ನು ಮು, ಮೈಸೂರಲ್ಲಿ ಕರ್ಜನ್ ಪಾರ್ಕನ್ನು ಏರ್ಪಡಿಸುವದು, ದ ಶ್ರೀಮನ್ಮಹಾರಾಜರವರ ಜ್ಞಾಪಕಾರ್ಥವಾಗಿ ಶ್ರೀರಂಗ ಣದಲ್ಲಿಯೂ ಕಟ್ಟುತ್ತಿರುವ ಕಟ್ಟಡಗಳು ಇವೇ.

ಕಾವೇರೀ ವೈದ್ಯುತಶಕ್ತಿಯ ಏರ್ಪಾಡು

ವರ್ಷದಲ್ಲಿ ಕಾವೇರೀ ವೈದ್ಯುತಶಕ್ತಿಯ ಏರ್ಪಾಡಿಗೆ ಸಂಬಂಧ ವ ಹೊಸ ಕಾಂಗಾರಿಗಳನ್ನೂ ಮಾಡಿಲ್ಲ. ನಾವು ಮೊದಲೇ ೨,೦೦೦ ಹೆಚ್ಚು ಅಶ್ವಶಕ್ತಿಗಾಗಿ ಮೂರನೆಯ ಸ್ಥಾಪನೆಯ ರ್ಪಡಿಸುವ ಆಲೋಚನೆ ಇದೆ. ಬೆಂಗಳೂರು ಮೈಸೂರು ನಗ ಶಿಪ ಉತ್ಪತ್ತಿಸುವದು, ಬೆಳಗೊಳದ ಬಳಿಯ ನೀರು ಸರಬ ಕೆಲಸಗಳು, ಇವೇ ಮೊದಲಾದ ಸರ್ಕಾರಿ ಉದ್ದೇಶಗಳಿಗೆ ಬೇ ಶಕ್ತಿಯನ್ನೂ ಪ್ರಧಾನತಃ ಒದಗಿಸಿಕೊಳ್ಳುವದೇ ಈ ಸ್ಥಾಪನೆಯ ಉದ್ದೇಶವಾಗಿದೆ. ಕಾವೇರೀ ವೈದ್ಯುತಶಕ್ತಿ ರ್ಪಡಿಸಿದ ಒಟ್ಟು ೧೬,೩೭,೫೭೨ ರೂಪಾಯಿ ಹುಟ್ಟುವಳಿ ಕೆಲಸ ನಡೆಸುವ ಖರ್ಚು ೨,೪೭,೨೮೯ ರೂಪಾಯಿ ಅಂದರೆ ನಿವ್ವಳ ಹುಟ್ಟುವಳಿಯು ೧೩,೯೩,೨೮೩ ರೂ ೧೯೦೬ನೆಯ ಮಾರ್ಚಿ, ಏಪ್ರಿಲ್, ಮೇ ಮತ್ತು ಜೂನ್ ನಲ್ಲಿ ನದಿಯ ನೀರು ಸರಬರಾಯಿ ಮಾತ್ರ ಕಡಿಮೆಯಾಗದಿದ್ದರೆ ೩೦,೦೦೦ ರೂ. ಹೆಚ್ಚು ಹುಟ್ಟುವಳಿಯಾಗುತ್ತಿತ್ತು.

ರೈಲ್ವೆಗಳು

ಈಗ ಉಪಯೋಗದಲ್ಲಿರುವ ಸರ್ಕಾರಿ ರೈಲ್ ಮಾರ್ಗಗಳಲ್ಲಿ ೧೯,೯೯,೭೪೩ ರೂ ನಿವ್ವಳ ಹುಟ್ಟುವಳಿಯಾಯಿತು. ಇದಕ್ಕೆ ಹಿಂದಿನ ವರ್ಷದಲ್ಲಿ ೮,೦೨,೧೦೨ ರೂ ಹುಟ್ಟುವಳಿಯಾ ೧೯೦೬ನೆಯ ಜೂನ್ ಆಖೈರು ವರೆಗೆ ೨ ೩೭,೪೦,೭೯೫ ರೂ ಖರ್ಚಾಗಿದೆ. ಈ ಮೊಬಲಗಿಗೆ ಗತವರ್ಷದಲ್ಲಿ ಶೇಕಡಾ ರಂತೆ ಬಡ್ಡಿ ಬಂದಂತಾಯಿತು. ಇದಕ್ಕೆ ಪ್ರತಿಯಾಗಿ ೧೯೦೪-೦೫ ರಂತೆ ಬಡ್ಡಿ ಬಂದಿತು. ಬೇರೆ ಬೇರೆ ರೈಲು ಮಾರ್ಗಗಳಲ್ಲಿ ಈ ಕೆಳಗೆ ತೋರಿಸಿರುವಂತೆ ಬಂದಿರುತ್ತದೆ—

	೧೯೦೪—೦೫	೧೯೦೫—೦೬
	ಶೇಕಡಾ	ಶೇಕಡಾ
ಮೈಸೂರು—ಹರಿಹರ	೩.೩೫	೭.೬೯
ಬೆಂಗಳೂರು—ಹಿಂದೂಪುರ	೫.೨೫	೬.೩೦
ಮೈಸೂರು—ನಂಜನಗೂಡು	೨.೧೫	೩.೬೩
ಬೀರೂರು—ಶಿವಮೊಗ್ಗ	೧.೦೩	೧.೩೦
ಕೋಲಾರದ ಚಿನ್ನದಗಣಿ ರೈಲ್ವೆ	೬.೩೯	೬.೬೩

ಬೆಂಗಳೂರು ಚಿಕ್ಕಬಳ್ಳಾಪುರದ ಸಣ್ಣ ರೈಲ್ವೆ

ಈ ರೈಲು ಮಾರ್ಗದ ಬಂಡವಾಳದ ಖರ್ಚಿಗೆ ಸರ್ಕಾರದವರು ವಹಿ ಕೊಡತಕ್ಕ ವಿಷಯವು ಪರ್ಯಾಲೋಚನೆಯಲ್ಲಿ ತ್ತು. ಬರೀ ಸು ಜನಗಳು ಆಕ ಸ್ತ್ಯದಿಂದ ನಡೆಸುವ ಭಾರೀ ವ್ಯಾಪಾರಕಾ ದಲ್ಲಿ ಇದೇ ಮೊದಲನೆಯದು ಎಂಬುದು ನಿಮಗೆಲ್ಲರಿಗೂ ತಿಳಿದೇ ಈಚೆಗೆ ಸರ್ಕಾರದವರು ಶೇಕಡಾ ೪ರಂತೆ ಬಡ್ಡಿಗೆ ಭರವಸೆಯ ನಿಯಮವಾಗಿ ಮುಂದುವರಿಸಿದಾರೆ ಎಂಬುದನ್ನು ಕೇಳಿ ನೀವು ತೋಷಪಡದೆ ಇರಲಾರಿರಿ

ಶಿವಮೊಗ್ಗೆಯಿಂದ ಕಾಂಸಿ ಸ್ಟೀಂ ಟ್ರಾಂವೆ ಮಾರ್ಗ

ಮದರಾಸು—ಮೈಸೂರು ಮೈನಿಂಗ್ ಸಿಂಡಿಕೇಟ್ ಸಂಘದವರು ಗಣಿಗಳಿಂದ ಶಿವಮೊಗ್ಗ ರೈಲ್ವೆ ಸ್ಟೇಷನಿಗೆ ಮ್ಯಾಂಗನೀಸ್ ಅದು ಸಾಗಿಸುವದಕ್ಕೆ ಅನುಕೂಲಿಸುವಂತೆ ಒಂದು ಸ್ಟೀಂ ಟ್ರಾಂವೆ ಮಾರ್ಗವನ್ನು ಏರ್ಪಡಿಸಿ ಕೆಲಸ ನಡೆಸುವದಕ್ಕಾಗಿ ರಿಯಾಯತಿಗೆ ದರ ಸ್ತು ಮಾಡಿರುತ್ತಾರೆ. ಇದಕ್ಕಾಗಿ ಸರ್ಕಾರದವರು ಸಂಸ್ಥಾನದಲ್ಲಿ ರುವ ರೆಗ್ಯುಲೇಷನನ್ನು ಜಾರಿಗೆ ತಂದಿರುತ್ತಾರೆ ಮತ್ತು ರೆಗ್ಯುಲೇಷನ್ ಪ್ರಕಾರ ಅವರು ಕೇಳಿಕೊಳ್ಳುವ ರಿಯಾಯತಿಯನ್ನು ಕೊಡುವ ವಿಷಯವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಧರ್ಮಪುರಿ—ಹೊಸೂರು—ಬೆಂಗಳೂರು ಸಣ್ಣ ರೈಲು ಮಾರ್ಗ

ರೈಲ್ವೆ ಬೋರ್ಡಿನವರು ಈ ನ್ಯಾರೋ ಗೇಜ್ ರೈಲು ಮಾರ್ಗದ ಸರ್ವೆಯನ್ನು ಮಾಡಲು ಮದರಾಸು ರೈಲ್ವೆ ಕಂಪೆನಿಗೆ ಅಧಿಕಾರ ಕೊಟ್ಟರು, ಶ್ರೀಮನ್ಮಹಾರಾಜರವರ ಸರ್ಕಾರದವರೂ ಒಪ್ಪಿರುತ್ತಾರೆ.

ಮೈಸೂರು ನಗರಾಭಿವೃದ್ಧಿ.

ಮೈಸೂರು ನಗರಾಭಿವೃದ್ಧಿಯ ಟ್ರಸ್ಟು ಬೋರ್ಡಿನವರು ನಾನಾ ಅಭಿವೃದ್ಧಿಯ ಕಾರ್ಯಗಳಿಗಾಗಿ ೩,೬೪,೪೦೬ ರೂಪಾಯಿಗಳನ್ನು ಖರ್ಚು ಮಾಡಿದರು. ಗತವರ್ಷದಲ್ಲಿ ನಗರಕ್ಕೆಲ್ಲಾ ಭೂಗತವಾದ ಚರಂಡಿಯ ಏರ್ಪಾಡು ಪೂರ್ತಿಯಾಯಿತು. ನಗರದ ಉತ್ತರಭಾಗಗಳಿಂದ ಬರುವ ಗ್ರಾಮಸಾಂಬದ ನೀರನ್ನು ಸಾಗುವಳಿಗೆ ಕೊಡುವದಕ್ಕಾಗಿ ಈದ್ಗಾ ಬಡಾವಣೆಯ ಹತ್ತಿರ ಒಂದು ದೊಡ್ಡ ಸೆಪ್ಟಿಕ್ ಎಂಬ ಗ್ರಾಮ ಸಾಂಬದ ನೀರಿನ ತೊಟ್ಟಿಯನ್ನೂ, ದೊಡ್ಡಪೇಟೆಯ ರೋಡಿನ ಬಳಿ, ನಿಂತು ನಿಂತು ಹರಿಯುವ ಶೋಧಕಯಂತ್ರದೊಡನೆ ಕೂಡಿದ ಸೆಪ್ಟಿಕ್ ಟ್ಯಾಂಕೆಂಬ ತೊಟ್ಟಿಯನ್ನೂ ಕಟ್ಟಿತು. ಹಾಲಾಪುರಿ ಬಡಾವಣೆಯಲ್ಲಿನ ಗ್ರಾಮಸಾಂಬದ ನೀರನ್ನು ಶೋಧಿಸುವದಕ್ಕಾಗಿ ಒಂದು ಸ್ಕಾಟ್ ಮನ್ ಯವರ ಏರೋಬಿಕ್ ಫಿಲ್ಟರ್ ಎಂಬ ಶೋಧಕ ಯಂತ್ರವನ್ನು ಕೂಡಾ ಏರ್ಪಡಿಸಿತು. ಗತವರ್ಷದಲ್ಲಿ ಹೊಸ ದೊಡ್ಡ ಹೊಲಗೇರಿಯನ್ನು ಮುಗಿಸಿ ಚರಂಡಿಯನ್ನು ಹಾಕಲಾಯಿತು. ಹಳೆ ದೊಡ್ಡ ಹೊಲಗೇರಿಯನ್ನು ಬಿಟ್ಟು ೩೪೦ ಸಂಸಾರಕ್ಕೆ ಹೊಸ ದೊಡ್ಡ ಹೊಲಗೇರಿಯಲ್ಲಿ ಸ್ಥಳವಸತಿ ಮಾಡಲಾಯಿತು. ಜಲಗಾರರು, ಬಿಡಬೊಗಳೆಯವರು ಮುಂತೆ ಹೊಲೆಯರು, ಈ ಜಾತಿಯವರನ್ನು, ಹೊಸ ಬಡಾವಣೆಯ ಭಾಗಗಳಲ್ಲಿ ಸರಿಯಾಗಿ ಏರ್ಪಡಿಸಿ ಚರಂಡಿ ಮಾಡಿರುವ ಪ್ರತ್ಯೇಕವಾದ ತಾಣಗಳಲ್ಲಿ ಇಟ್ಟಿತು. ಗತವರ್ಷದಲ್ಲಿ ಈ ಬಡಾವಣೆಯನ್ನು ಇನ್ನೂ ವಿಸ್ತರಿಸುವದಕ್ಕಾಗಿ ೫೦,೪೯೦ ರೂಪಾಯಿನ ಅಂದಾಜನ್ನು ಮಂಜೂರ್ ಮಾಡಿತು

ಪ್ಲೇಗು

ಗತವರ್ಷದಲ್ಲಿ ಮೈಸೂರು ನಗರದಲ್ಲಿ ೩ ಜನಗಳಿಗೆ ಮಾತ್ರ ಪ್ಲೇಗು ತಗಲಿ ಅವರಲ್ಲಿ ೫ ಜನಗಳು ಮಾತ್ರವೇ ಸತ್ತು ಹೋಗಿ ಮೈಸೂರು ನಗರದಲ್ಲಿ ಪ್ಲೇಗು ಕಾಯಿಲೆ ಇಲ್ಲದೆ ಹೋದ ವಿಷಯವು ನಿಮಗೆ ಸಂತೋಷಕರವಾಗಿರುವದು. ಈ ತೃಪ್ತಿಕರವಾದ ಸ್ಥಿತಿಗೆ ಟ್ರಸ್ಟು ಬೋರ್ಡಿನವರು ಮಾಡಿರುವ ಆರೋಗ್ಯಾಭಿವೃದ್ಧಿಯ ಕೆಲಸಗಳೇ ಬಹಳ ಮಟ್ಟಿಗೆ ಕಾರಣವಾಗಿರಬೇಕು. ೧೯೦೫ನೆಯ ಜುಲೈ ತಿಂಗಳಲ್ಲಿ ಜಾರಿಗೆ ತಂದ ಇಲಿ ಕೊಲ್ಲುವ ಏರ್ಪಾಡಿನ ಮೇರೆ, ಸುಮಾರು ೨,೬೯೦ ರೂಪಾಯಿ ಖರ್ಚುಮಾಡಿ ೨೩,೦೦೦ ಇಲಿಗಳನ್ನು ಕೊಲ್ಲಿಸಿತು. ಮೈಸೂರು ನಗರದಲ್ಲಿ ಮಾಡಿದಂತೆಯೇ ಬೆಂಗಳೂರು ನಗರದಲ್ಲಿಯೂ ಈ ರೀತಿ ಇಲಿ ಕೊಲ್ಲುವ ಏರ್ಪಾಡು ಮಾಡಲಾಯಿತು. ಗತವರ್ಷ ಸಂಸ್ಥಾನದಲ್ಲಿ ಒಟ್ಟು ೩,೦೩೦ ಜನಗಳಿಗೆ ಪ್ಲೇಗು ತಗಲಿ ೨,೧೩೫ ಜನಗಳು ಸತ್ತುಹೋದರು. ಇದೇ ಪ್ಲೇಗು ಆರಂಭವಾದ ಈಚೆಗೆ ಅತ್ಯಲ್ಪವಾದ ಸಂಖ್ಯೆಗಳಾಗಿವೆ. ಶಿವಮೊಗ್ಗಾ ಡಿಸ್ಟ್ರಿಕ್ಟು ಬಹಳವಾಗಿ ಪ್ಲೇಗಿನಿಂದ ಪೀಡಿಸಲ್ಪಟ್ಟಿತು. ಅಲ್ಲಿ ೮೦೭ ಜನಗಳಿಗೆ ಪ್ಲೇಗು ತಗಲಿ ೫೬೩ ಜನಗಳು ಮೃತಪಟ್ಟರು. ಗತವರ್ಷ ಸಂಸ್ಥಾನದಲ್ಲಿ ಪ್ಲೇಗು ನಿವಾರಣೆಯ ಏರ್ಪಾಡುಗಳಿಗಾಗಿ ಸುಮಾರು ಒಟ್ಟು ೧,೦೪,೯೬೫ ರೂಪಾಯಿ ಖರ್ಚಾಯಿತು. ಗುಡಿಸಿಲಿನ ಸಾಮಾನುಗಳನ್ನೂ ಸಂಬಳದ ಮುಂಗಡಗಳನ್ನೂ ಕೊಡುವದರ ಮೂಲಕ ಪ್ಲೇಗು ತಗಲಿದ ಪ್ರದೇಶಗಳನ್ನು ಬಿಟ್ಟು ಹೋಗುವದಕ್ಕೆ ಎಂದಿನಂತೆ ಪ್ರೋತ್ಸಾಹಪಡಿಸಿತು ಹತ್ತು ರೂಪಾಯಿ ಮತ್ತು ಅದಕ್ಕೆ ಕಮ್ಮಿ ಸಂಬಳಗಳುಳ್ಳ ಸರ್ಕಾರಿ ನೌಕರರಿಗೆ ಗುಡಿಸಿಲಿನ ಸಾಮಾನುಗಳನ್ನು ಮಾಫಿಯಾಗಿ ಕೊಡುವಂತೆ ಹುಕುಂ ಮಾಡಿತು

ಪ್ರಜಾ ಆರೋಗ್ಯ.

ಪ್ರಜಾ ಆರೋಗ್ಯವು ಸಾಮಾನ್ಯವಾಗಿ ಚನ್ನಾಗಿತ್ತು. ಆದರೆ ಗತವರ್ಷದ ಆಖೈರಿನಲ್ಲಿ ಕಾಲರಾ ಉಪದ್ರವವು ಬೇರೆ ಬೇರೆ ತಾಲ್ಲೂಕುಗಳಲ್ಲಿ ಹುಟ್ಟಿತು. ಈ ರೋಗವು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮೊದಲು ಕಾಣಿಸಿಕೊಂಡು ಬಹಳ ಸಾವಳಿಯನ್ನು ಮಾಡಿತು. ಅಲ್ಲಿಂದ ಈಚೆಗೆ ಚಿತ್ರದುರ್ಗಕ್ಕೂ ಮೈಸೂರಿಗೂ ಕೂಡ ಹರಡಿಕೊಂಡಿತು. ತರುವಾಯ ರೋಗ ತಗಲಿದವರ ಸಂಖ್ಯೆಯು ಒಹಳವಾಗಿ ಕಡಿಮೆಯಾಯಿತು. ಆರೋಗ್ಯಕರವಾದ ಏರ್ಪಾಡುಗಳನ್ನು ಮಾಡುತ್ತಾ ಇರುವದರಿಂದ ಸ್ವಲ್ಪ ಕಾಲದಲ್ಲಿಯೇ ಜಾಡ್ಯವು ನಿವಾರಣೆಯಾಗುವದೆಂದು ಸಂಪೂರ್ಣವಾಗಿ ಭರವಸೆ ಇದೆ. ಸಾಧಾರಣವಾಗಿ ಗ್ರಾಮಾಂತರಗಳಲ್ಲಿ ನೀರು ಸರಬರಾಯಿಯಾಗುವ ಕೊಳಗಳಿಗೂ ಕೋಳೆಗಳಿಗೂ ನೆಲದ ಮೇಲೆ ಉರುಳುವ ಮಳೆನೀರು ಬಂದು ಸೇರುವ ಕಾರಣ ಅಂಟುಜಾಡ್ಯಗಳು ಕಾಣಿಸಿಕೊಂಡ ಕಾಲದಲ್ಲಿ ಅವುಗಳನ್ನು ಶುಚಿಯಾಗಿ ಇಡುವದು ಸುಲಭವಲ್ಲ. ಸರಿಯಾದ ಸ್ಥಳಗಳಲ್ಲಿ ಏರ್ಪಡಿಸಿದ ಆಬಿಸೀನಿಯನ್ ಅಥವಾ ನಾರ್ಟನ್ನರವರ ಕೊಳಾಯಿ ಬಾವಿಗಳಲ್ಲಿ ರೋಗದ ಸೋಂಕು ತಗಲದ ನೀರು ಸರಬರಾಯಿಯಾಗುವದೆಂದು ಕೇಳುತ್ತಾರೆ. ಈ ಕೊಳಾಯಿ ಬಾವಿಗಳು ವಿಶೇಷ ಖರ್ಚಿಲ್ಲದೆ ಆಗುವದರಿಂದ ಇವುಗಳ ಉಪಯೋಗವನ್ನು ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಅವಧಾನಕ್ಕೆ ತಂದಿದೆ. ಇಚೆಗೆ ಮಂಡ್ಯದ ತಾಲ್ಲೂಕಿನಲ್ಲಿ ಇಂಥಾ ಕೊಳಾಯಿ ಬಾವಿಗಳನ್ನು ಇಡಲಾಯಿತು. ಇದರಿಂದ ಪ್ರಯೋಜನವಾದಂತೆ ತಿಳಿದುಬಂದಿದೆ. ಸಿಡುಬಿನ ವಿಷಯದಲ್ಲಿ ಇದುವರೆಗೆ ಇದ್ದದ್ದಕ್ಕಿಂತ ಗತವರ್ಷದಲ್ಲಿ ಇನ್ನೂ ಹೆಚ್ಚು ಜನಗಳು ಸಿಡುಬು ಹಾಕಿಸಿಕೊಂಡ ವಿಷಯವು ಸಂತೋಷಕರವಾಗಿದೆ. ಹಿಂದಿನ ವರ್ಷ ೬೦,೩೯೩ ಜನಗಳಿಗೆ ಸಿಡುಬು ಹಾಕಿದ್ದಕ್ಕೆ ಪ್ರತಿಯಾಗಿ ಗತವರ್ಷದಲ್ಲಿ ೯೪,೨೪೫ ಜನಗಳಿಗೆ ಸಿಡುಬು ಹಾಕಿತು. ಕಳೆದ ವರ್ಷದಲ್ಲಿ ಇನ್ಸ್ಪೆಕ್ಟರನು ಮಾಲೀಕ ನಿರ್ದೇಶಿಸುವ ಪ್ರದೇಶಗಳಲ್ಲಿ ಸಿಡುಬುಹಾಕಿಸಿಕೊಳ್ಳುವ ಜನ್ನು ಬಲಾತ್ಕರಿಸುವಂತೆ ನಿಯಮಮಾಡುವದಕ್ಕಾಗಿ ಸರ್ಕಾರದವರಿಗೆ ಅಧಿಕಾರವುಂಟಾಗುವ ಹಾಗೆ ಒಂದು ರೆಗ್ಯುಲೇಷನನ್ನು ಮಂಜೂರ್ ಮಾಡಲಾಯಿತು. ಇದನ್ನು ಬೆಂಗಳೂರು ನಗರದಲ್ಲಿಯೂ, ಕೋಲಾರದ ಚಿನ್ನದಗಣಿಯ ಸ್ಯಾನಿಟರಿ ಸರ್ಕಲಿನಲ್ಲಿಯೂ ಕಂಗಾಮಿಯಾಗಿ ಜಾರಿಗೆ ತಂದಿದೆ. ಜ್ವರಗಳಿಂದ, ತತ್ರಾಪಿ ಮಲೇರಿಯಾ ಜ್ವರದಿಂದ ಅತ್ಯಧಿಕವಾದ ಮರಣವುಂಟಾಯಿತು. ಡಿಸ್ಪೆನ್ಸರಿಗಳಿಂದ ನಾಲ್ಕು ಮೈಲಿಗೆ ಜಾಸ್ತಿ ದೂರದಲ್ಲಿರುವ ಗ್ರಾಮಸ್ಥರಿಗೆ ಸುಲಭವಾಗಿ ಕ್ವಿನಾಯಿನು ಸಿಕ್ಕುವಂತೆ ಮಾಡುವದಕ್ಕಾಗಿ ೫ ಗ್ರೇನಿನ ಚೂರ್ಣವುಳ್ಳ ಪೊಟ್ಟಣಗಳನ್ನು ೨ ಕಾಸಿಗೆ ಒಂದರ ಮೇರೆ ಮಾರುವಂತೆ ಈಚೆಗೆ ಏರ್ಪಾಡು ಮಾಡಿತು.

ಆಸ್ಪತ್ರೆಗಳೂ ಡಿಸ್ಪೆನ್ಸರಿಗಳೂ

ಹಿಂದಿನ ವರ್ಷದಲ್ಲಿ ೧೧,೬೫,೬೦೦ ರೋಗಿಗಳಿಗೆ ಚಿಕಿತ್ಸೆ ಮಾಡಿದ್ದಕ್ಕೆ ಪ್ರತಿಯಾಗಿ ಗತವರ್ಷದಲ್ಲಿ ಸಂಸ್ಥಾನದ ಎಲ್ಲಾ ಆಸ್ಪತ್ರೆಗಳಲ್ಲಿಯೂ ಡಿಸ್ಪೆನ್ಸರಿಗಳಲ್ಲಿಯೂ ಒಟ್ಟು ಸೇರಿ ೧೨,೪೯,೦೨೫ ರೋಗಿಗಳಿಗೆ ಚಿಕಿತ್ಸೆ ಮಾಡಲಾಯಿತು. ಹಿಂದಿನ ವರ್ಷದಂತೆಯೇ ಗತವರ್ಷದಲ್ಲಿ ಒಟ್ಟು ೧೩೫ ಆಸ್ಪತ್ರೆಗಳೂ ಡಿಸ್ಪೆನ್ಸರಿಗಳೂ ಇದ್ದವು. ೯೯ ಸೂಲಗಿತ್ತಿಯರು ಕೆಲಸದಲ್ಲಿದ್ದು ೫,೯೦೧ ಪ್ರಸವಗಳಿಗೆ ಹೋಗಿದ್ದರು.

ಜನನಮರಣದ ಲೆಕ್ಕಗಳು

ಗತವರ್ಷದಲ್ಲಿ ೯೫,೫೭೩ ಜನನಗಳೂ ೮೧,೪೯೫ ಮರಣಗಳೂ ಆದವು. ಇದಕ್ಕೆ ಪ್ರತಿಯಾಗಿ ಹಿಂದಿನ ವರ್ಷದಲ್ಲಿ ೬೯,೬೩೫ ಜನನಗಳೂ ೧,೦೯ ೦೨೫ ಮರಣಗಳೂ ಆದವು

ಗಣಿಯ ಕೆಲಸ.

೧೯೦೫-೦೬ ನೆಯ ವರ್ಷದಲ್ಲಿ ಸಂಸ್ಥಾನದ ಆಫೀಸರುಗಳಿಂದ ಮಾಡಲ್ಪಟ್ಟ ಭೂಗರ್ಭಶೋಧನೆಯ ಕೆಲಸಗಳಲ್ಲಿ ಮ್ಯಾಂಗನೀಸ್, ಕ್ರೋಮ್, ಮತ್ತು ಇತರ ಖನಿಜಗಳು ಇರುವ ಸ್ಥಳಗಳನ್ನು ಗೊತ್ತು ಮಾಡಿದ್ದೂ ಅವುಗಳ ವಿಷಯದಲ್ಲಿ ಅವಧಾನವನ್ನು ಒಳ್ಳೆಯಾಗಿ ಆಕರ್ಷಿಸಿದ್ದೂ ಮೈಸೂರಿನ ಗಣಿಯ ಕೆಲಸದ ಚರಿತ್ರದಲ್ಲಿ ವಿಶೇಷ ವಿಷಯವಾಗಿದೆ. ಗತವರ್ಷದಲ್ಲಿ ಒಟ್ಟು ೩೮ ಪ್ರಾಸ್ಪೆಕ್ಟಿಂಗ್ ಯಾ ಸರಿಶೋಧಿಸುವ ಲೈಸೆನ್ಸುಗಳನ್ನೂ ೧೧ ಎಕ್ಸ್ಪ್ಲೋರಿಂಗ್ ಯಾ ಹುಡುಕುವ ಲೈಸೆನ್ಸುಗಳನ್ನೂ ೭ ಗಣಿ ಕೆಲಸದ ಗುತ್ತಿಗೆಗಳನ್ನೂ ಕೊಟ್ಟಿತು. ಈ ಪೈಕಿ ಮ್ಯಾಂಗನೀಸ್, ಕ್ರೋಮ್, ಮತ್ತು ಮ್ಯಾಗ್ನಿಸೈಟ್ ಎಂಬ ಖನಿಜಗಳಿಗಾಗಿ ಒಹಳವಾಗಿ ಅಂದರೆ ೨೫ ಪ್ರಾಸ್ಪೆಕ್ಟಿಂಗ್ ಲೈಸೆನ್ಸುಗಳನ್ನೂ ೭ ಎಕ್ಸ್ಪ್ಲೋರಿಂಗ್ ಲೈಸೆನ್ಸುಗಳನ್ನೂ ಕೊಟ್ಟಿತು. ೨೫ ಪ್ರಾಸ್ಪೆಕ್ಟಿಂಗ್ ಲೈಸೆನ್ಸುಗಳ ಪೈಕಿ ೧೧ ದೇಶೀಯ ಸಾಹುಕಾರರಿಗೆ ಕೊಟ್ಟದ್ದು ವಿಶೇಷ ವಿಷಯವಾಗಿದೆ. ಶಿವಮೊಗ್ಗಾ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಮ್ಯಾಂಗನೀಸ್ ಮತ್ತು ಕ್ರೋಮ್ ಅದುರುಗಳಿಗಾಗಿ ಕೆಲಸ ಚುರುಕಾಗಿ ನಡೆಯುತ್ತಾ ಇದೆ. ಸ್ವಲ್ಪಮಟ್ಟಿಗೆ ಕಾರಂಗದ ಕಲ್ಲಿನ ಕೆಲಸವೂ ಕೂಡ ನಡೆಯುತ್ತಿದೆ. ಅಭ್ರಕ ಮತ್ತು ಕಲ್ನಾರು ಇವುಗಳಿಗಾಗಿ ಕೆಲವು ದರಖಾಸ್ತುಗಳು ಬಂದಿವೆ. ಗಾರು ಕ್ಯಾರ್ನೆಟ್ ಯಾ ಕೆಂಪಿಗಾಗಿ ಒಂದು ಪ್ರಾಸ್ಪೆಕ್ಟಿಂಗ್ ಲೈಸೆನ್ಸನ್ನು ಕೂಡ ಕೊಟ್ಟಿತು. ಮ್ಯಾಂಗನೀಸ್ ಮತ್ತು ಕ್ರೋಮ್ ಖನಿಜಗಳಿಗೆ ಲೈಸೆನ್ಸ್ ಕೊಡುವ ಸಂದರ್ಭದಲ್ಲಿ ದೇಶೀಯ ಸಾಹುಕಾರರು ಏರ್ಪಡಿಸಿರುವ ಒಂದು ಸಂಘದವರ ಕೋರಿಕೆಯ ಮೇರೆ ಒಬ್ಬ ಜಿಯಾಲಾಜಿಕಲ್ ಡಿಪಾರ್ಟ್ ಮೆಂಟ್ ಅಧಿಕಾರಿಯ ಸಹಾಯವನ್ನು ಸರ್ಕಾರದವರು ಕೊಟ್ಟಿರುವ ಅಂಶವು ನಿಮಗೆಲ್ಲಾ ಸಂತೋಷಕರವಾಗಿರುವದು.

ಚಿನ್ನದ ಗಣಿಯ ಕೆಲಸ

ಚಿನ್ನದ ಗಣಿಯ ಕೆಲಸವು ವೃದ್ಧಿ ಹೊಂದುತ್ತಿದೆ. ಗತವರ್ಷದಲ್ಲಿ ೨೩,೪೭,೨೮೬ ಪೌಂಡುಗಳು ಬೆಲೆಬಾಳುವ ೫,೯೩,೭೯೦ ಔನ್ಸುಗಳ ಚಿನ್ನ ಉತ್ಪತ್ತಿಯಾಯಿತು. ಇದಕ್ಕೆ ಪ್ರತಿಯಾಗಿ ೧೯೦೪-೦೫ನೆಯ ವರ್ಷದಲ್ಲಿ ೨೩,೪೭,೮೬೯ ಪೌಂಡುಗಳ ಬೆಲೆಬಾಳುವ ೬,೧೧,೩೩೩ ಔನ್ಸುಗಳು ಉತ್ಪತ್ತಿಯಾದವು. ೧೯೦೪-೦೫ ನೇ ವರ್ಷದಲ್ಲಿ ಮಾಮೂಲಾದ ೧,೧೮,೦೯೩ ಪೌಂಡುಗಳ ರಾಯಧನಕ್ಕೆ ಬದಲಾಗಿ ಗತವರ್ಷದ ಚಿನ್ನದ ಉತ್ಪತ್ತಿಯ ಮೇಲೆ ಸರ್ಕಾರಕ್ಕೆ ಬರಬೇಕಾದ ರಾಯಧನವು ೧,೧೩,೩೩೬ ಪೌಂಡುಗಳೆಂದು ಅಂದಾಜಾಗಿದೆ.

ಗಣಿಗಳ ನೌಕರರ ನೆಮ್ಮದಿಗೂ ಕ್ಷೇಮಕ್ಕೂ ಏರ್ಪಾಡು ಮಾಡುವ ಹಕ್ಕೋರವೂ ಗಣಿಯ ಕೆಲಸದ ಸಾಮಗ್ರಿಗಳ ಮತ್ತು ನಾನಾ ಸ್ಥಿತಿಯಲ್ಲಿರುವ ಗಣಿಯ ಚಿನ್ನದ ಕಳವನ್ನೂ ಕಳ್ಳವ್ಯಾಪಾರವನ್ನೂ ನಿಲ್ಲಿಸುವದಕ್ಕೋಸ್ಕರವೂ ಮೈಸೂರು ಗಣಿಗಳ ರೆಗ್ಯುಲೇಷನ್ ಎಂಬ ಒಂದು ರೆಗ್ಯುಲೇಷನನ್ನು ೧೮೯೭ ನೆಯ ಇಸವಿಯಲ್ಲಿ ಮಂಜೂರ್ ಮಾಡಿ ಇತ್ತು. ಇದು ಸರ್ಕಾರಕ್ಕೆ ಅಧಿಕಾರಕೊಡುವ ಕಾನೂನಾಗಿದ್ದುದರಿಂದ ಅದರ ಸ್ಥಳೀಯ ವಿಸ್ತೀರ್ಣದಲ್ಲಿ ಮೈಸೂರು ಸಂಸ್ಥಾನವೆಲ್ಲವೂ ಸೇರಿದೆಯೆಂದೂ ಹೇಳಿತ್ತು. ಆದರೆ ಅಕ್ಕಸಾಲಿಗರೇ ಮೊದಲಾದವರಿಗೆ ವಿಶೇಷ ನಿರ್ಬಂಧಗಳನ್ನು ವಿಧಿಸುವ ಕೆಲವು ಪ್ರಕರಣಗಳು, ಬೌರಿಂಗ್ ಪೇಟೆ ತಾಲ್ಲೂಕಿನಲ್ಲಿ ಚಿನ್ನದ ಗಣಿಯ ಸುತ್ತಲೂ ಕೆಲವು ಪ್ರದೇಶಕ್ಕೆ ಮಾತ್ರ ವ್ಯಾಪಿಸುವಂತೆ ಮಾಡಿತ್ತು. ಕೋಲಾರದ ಚಿನ್ನದ ಗಣಿಗಳಲ್ಲಿ ವಿನಾ, ಇಂಡಿಯಾ ದೇಶದಲ್ಲಿ ಇನ್ನೆಲ್ಲಿಯೂ ಚಿನ್ನದ ಗಣಿಯ ಕೆಲಸಗಳು ವಿಸ್ತಾರವಾಗಿ ನಡೆಯುವದಿಲ್ಲ. ಮತ್ತು ೧೮೯೭ ನೆಯ ಇಸವಿಯಲ್ಲಿ ಮಾಡಿದ ಕಾನೂನನ್ನು ಕಂಗಾಮಿಯಾಗಿಯೂ ಮತ್ತು ಪರೀಕ್ಷಾರ್ಥವಾಗಿಯೂ ಮಾಡಬೇಕಾದ ಆವಶ್ಯಕವಿತ್ತು. ಆ ರೆಗ್ಯುಲೇಷನು ಸಾಧ್ಯವಾದಷ್ಟು ಮಟ್ಟಿಗೆ ತೃಪ್ತಿಕರವಾಗಿತ್ತು. ಆದರೆ ಈ ಕೆಳಗೆ ಹೇಳುವ ವಿಷಯದಲ್ಲಿ ಮಾತ್ರ ಕೊರತೆಯುಳ್ಳದ್ದಾಗಿ ಇತ್ತು. ಅದೇನೆಂದರೆ, ಒಬ್ಬ ಚಿನ್ನದ ಕಳ್ಳನು ಗಸಿಯಿಂದಾದ ಅಥವಾ ಸ್ಪಾಂಜ್ ಚಿನ್ನವನ್ನು ಚಿನ್ನದ ಪಾಳೆಗಳಾಗಿ ಮಾಡಿದ ಕೂಡಲೆ ಆ ರೆಗ್ಯುಲೇಷನು ಅವನನ್ನು ಶಿಕ್ಷಿಸುವದಕ್ಕೆ ಶಕ್ತಿಯಿಲ್ಲದ್ದಾಗಿ ಇತ್ತು. ಹಾಗೆ ಪಾಳೆಗಳನ್ನು ಮಾಡುವದಕ್ಕೆ ಅಲ್ಲಿ ವಿಶೇಷ ಅನುಕೂಲವೂ ಇದೆ. ಕೆಲಸ ಮಾಡದ ಅಥವಾ ಪಾಳೆಗಳಾಗಿ ಮಾಡದ ಚಿನ್ನವನ್ನೂ ರೆಗ್ಯುಲೇಷನಿನ ಅವಕಾಶದೊಳಗೆ ತರುವ ಆವಶ್ಯಕತೆಯು ಸರ್ಕಾರದವರ ಜಾಹೀರಾತಿಗೆ ಬಂದದ್ದರಿಂದ ಕಳೆದ ವರ್ಷದಲ್ಲಿ ಒಂದು ಹೊಸ ರೆಗ್ಯುಲೇಷನಿನ ಮಸವಿದೆಯು ಇಂಡಿಯಾ ಸರ್ಕಾರಕ್ಕೆ ಕಳುಹಿಸಲ್ಪಟ್ಟಿತು. ಆ ರೆಗ್ಯುಲೇಷನನ್ನು ಇಂಡಿಯಾ ಸರ್ಕಾರದವರು ಕೆಲವು ಬದಲಾವಣೆಗಳೊಡನೆ ಮಂಜೂರ್ ಮಾಡಿದರು. ಸದರೀ ಬದಲಾವಣೆಗಳೊಡನೆ ಆ ಹೊಸ ರೆಗ್ಯುಲೇಷನು ಈಚೆಗೆ ಪ್ರಕಟಿಸಲ್ಪಟ್ಟಿತು. ಮತ್ತು ವಿಶೇಷವಾಗಿ ನಿರ್ಬಂಧಪಡಿಸುವ ಅದರ ಕಲಂಗಳು ಅವುಗಳಿಗೆ ಸದೃಶವಾದ ಹಳೇ ರೆಗ್ಯುಲೇಷನಿನ ನಿಯಮಗಳು ಎಲ್ಲಿ ಜಾರಿಯಲ್ಲಿದ್ದವೋ ಅದೇ ಕ್ಲುಪ್ತವಾದ ಪ್ರದೇಶದಲ್ಲಿ, ಜಾರಿಗೆ ತರಲ್ಪಟ್ಟವು. ಈಗ ವಿವರಿಸಿದಂತೆ ಈ ಹೊಸ ರೆಗ್ಯುಲೇಷನಿನಲ್ಲಿ ಮಾಡಿರುವ ಮುಖ್ಯವಾದ ಬದಲಾವಣೆ ಏನಂದರೆ—ಗಣಿಗಳಲ್ಲಿ ಮಾತ್ರವೇ ಸಿಕ್ಕತಕ್ಕ ಸ್ವತ್ತು, ಗಣಿಯ ಪ್ರದೇಶದಲ್ಲಿರುವ ಜನರ

ಸ್ವಾಧೀನದಲ್ಲಿ ಇರುವುದಾಗಿ ಕಂಡುಬಂದರೆ, ಅದು ಬೇರೆ ವಿಧವಾಗಿ ಬಂದಿತೆಂದು ರುಜುವಾತಾಗುವವರೆಗೆ ಅನ್ಯಾಯವಾಗಿ ಸಂಪಾದಿಸಲ್ಪಟ್ಟದ್ದೆಂಬ ಹಳೇ ರೆಗ್ಯುಲೇಷನ್ ವೇರೆಗೆ ಉಂಟಾಗುವ ಅನುಮಾನವನ್ನು ಕೆಲಸ ಮಾಡದ ಚಿನ್ನಕ್ಕೂ ಕೂಡ ವ್ಯಾಪಿಸುವಂತೆ ಮಾಡಲಾಯಿತು ಇದು ನಿಸ್ಸಂದೇಹವಾಗಿ ಹಳೇ ಕಾನೂನಿನ ವಿಶೇಷ ವ್ಯಾಪ್ತಿಯೇ ಸರಿ ಆದರೆ ಈ ಹೊಸ ಕಾನೂನನ್ನು ಮಾಡುವಾಗ ಶ್ರೀಮನ್ಮಹಾರಾಜರವರ ಸರ್ಕಾರದವರು ಬಹಳವಾಗಿ ಯೋಚಿಸಿದ ಬಳಿಕ ಇದರ ಅವಶ್ಯಕತೆಯನ್ನು ಒಪ್ಪಿಕೊಂಡರು ತಪ್ಪಿತವನ್ನು ಅಡಗಿಸುವದಕ್ಕಾಗಿ ಇದೇ ರೀತಿಯಾದ ನಿಯಮಗಳು ಜಾರಿಯಲ್ಲಿರುವ ಇತರ ದೇಶಗಳಲ್ಲಿ ಅವುಗಳಿಂದ, ಈಗ ಸರ್ಕಾರದವರಿಗೆ ತಿಳಿದುಬಂದಿರುವ ಪಟ್ಟಿಗೆ, ಸತ್ಯವಂತರಾಗಿಯೂ ನ್ಯಾಯಾನುಸಾರವಾಗಿ ನಡೆಯುವವರಾಗಿಯೂ ಇರುವ ಜನಗಳಿಗೆ ಅಪಾಯ ಉಂಟಾದಂತೆ ಕಂಡುಬಂದಿಲ್ಲ ಹಾಗೆಯೇ ಇಲ್ಲಿಯೂ ಕೂಡ ಅವುಗಳಿಂದ ಬಾಧೆಯುಂಟಾಗುವದೆಂದು ಊಹಿಸುವದಕ್ಕೆ ಯಾವ ಕಾರಣವೂ ಇಲ್ಲ ಹಿಂದಿನ ರೆಗ್ಯುಲೇಷನ್‌ಗಳು ಜಾರಿಯಲ್ಲಿದ್ದ ಪ್ರದೇಶದ ಜನರು ಅದು ವಿಶೇಷ ಶ್ರಮಕರವಾದದ್ದೆಂದು ತಿಳಿಸಿರಲಿಲ್ಲ ಆದರೆ ಪ್ರಕೃತದಲ್ಲಿ ಸ್ಥಳೀಯ ಮ್ಯಾಜಿಸ್ಟ್ರೇಟುಗಳೂ ಪೋಲೀಸು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟೂ ಸದರಿ ನಿಯಮಗಳನ್ನು ತಕ್ಕ ವಿವೇಕದಿಂದಲೂ ಜಾಗರೂಕತೆಯಿಂದಲೂ ಜಾರಿಗೆ ತರುವಂತೆ ನೋಡಿಕೊಳ್ಳುವರೆಂದು ಭರವಸೆ ಉಂಟು ಹಾಗೆ ಈ ರೆಗ್ಯುಲೇಷನನ್ನು ಕಾರ್ಯತಃ ಜಾರಿಗೆ ತರುವದರಿಂದ ನ್ಯಾಯಾನುಸಾರವಾಗಿ ನಡೆಯುವಂಥ ಜನಗಳಿಗೆ ಅವಶ್ಯವಾಗಿ ಹಾನಿಯುಂಟಾಗುವಂತೆ ಕಂಡುಬಂದರೆ,—ಅಂಥಾ ಸಂಭವವೇ ಉಂಟಾಗಲಾರದು.—ಆಗ್ಗೆ ಶ್ರೀಮನ್ಮಹಾರಾಜರವರ ಸರ್ಕಾರದವರು ಅನುಭವಾನುಸಾರವಾಗಿ ಕಾನೂನನ್ನು ತಕ್ಕಂತೆ ತಿದ್ದುಪಾಟುಮಾಡಲು ಕಾಲವಿಳಂಬ ಮಾಡಲಾರರು

ಚಿಲ್ಲರೆ ಖನಿಜಗಳನ್ನು ಕಂಡುಹಿಡಿದಿದ್ದರಿಂದಲೂ, ಅವುಗಳಿಗಾಗಿ ಬಹಳವಾಗಿ ದರಖಾಸ್ತು ಬಂದದ್ದರಿಂದಲೂ, ಲೈಸೆನ್ಸುಗಳಿಗೂ ಗುತ್ತಿಗೆಗಳಿಗೂ ಸಂಬಂಧಪಟ್ಟ ನಿಬಂಧನೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಿಬಂತು ಗಣಿ ನೆಯು ಹರ್ಷದ ನಿಬಂಧನೆಗಳು ಎಲ್ಲಾ ತರದ ಖನಿಜಗಳಿಗೂ ಅನ್ವಯವಾಗಬೇಕೆಂದು ಉದ್ದೇಶಿಸಲ್ಪಟ್ಟದ್ದಾಗ್ಯೂ, ಆ ಕಾಲದಲ್ಲಿ ಕಂಡುಹಿಡಿಯಲ್ಪಟ್ಟ ಚಿನ್ನಕ್ಕೆ ಮಾತ್ರವೇ ವಿಶೇಷವಾಗಿ ಅನ್ವಯಿಸುವಂತೆ ಆ ನಿಬಂಧನೆಗಳಲ್ಲಿಯೂ ಪರವಾನಗಿಗಳಲ್ಲಿಯೂ ಆಗಲೇ ಕೆಲವು ಬದಲಾವಣೆಗಳು ಪರ್ಯಾಲೋಚನೆಯಲ್ಲಿವೆ ಈಚೆಗೆ ಮ್ಯಾಂಗನೀಸ್ ಮತ್ತು ಕ್ರೋಂ ಎಂಬ ಅದುರುಗಳಲ್ಲಿ ಆಸಕ್ತಿಯುಳ್ಳವರ ಒಂದು ಸಭೆಯು ನಡೆದು ಅವಶ್ಯಕವಾಗಿ ಮಾಡಬೇಕಾಗಿಬಂದ ಬದಲಾವಣೆಗಳ ವಿಷಯದಲ್ಲಿ ಅವರ ಅಭಿಪ್ರಾಯಗಳನ್ನು ಸರ್ಕಾರದವರು ತಿಳಿದುಕೊಳ್ಳುವದಕ್ಕೆ ಅವಕಾಶವಾಯಿತು ಈ ಖನಿಜಗಳಿಗಾಗಿ ಲೈಸೆನ್ಸುಗಳ ವಿಷಯದಲ್ಲಿ ತಿದ್ದುಪಾಟಾದ ಷರತ್ತುಗಳನ್ನು ಅತಿಶೀಘ್ರದಲ್ಲಿಯೇ ಪ್ರಕಟಿಸಲಾಗುವದು [ಸಶೇಷ]

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು, ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಎಚ್ಚರಿಕೆ

ಅಯ್ಯಾ,

ಉತ್ತರಕನ್ನಡಾ ಜಿಲ್ಲಾ ಹೊನ್ನಾವರದಲ್ಲಿರುವ ಕಾಯಿ ಮಾಲಿಕ ಗಣಪತಿ ನಾಗಪ್ಪನೆಂಬುವರು ತನ್ನಲ್ಲಿ ಕಾಯಿ ಕಟ್ಟವನ್ನು ಕೊಳ್ಳುವವರಿಗೆ ಬಹಳ ಬಹುಮಾನ ಕೊಡುತ್ತೇನೆಂದು ವಿದ್ಯಾದಾಯಿನಿಯಲ್ಲೂ ಅಲಾಹಿದಾ ಕ್ಯಾಟ್‌ಲಾಗಿನಲ್ಲೂ ನಮೂದಿಸಿರುತ್ತಾರೆ ೬ ಆಣೆ ಕಾಯಿ ಕೊಂಡವರಿಗೆ ೧ ದರ್ಜೆ ಪ್ರೈಸ್ ಕೊಡುವದಾಗಿ ನಮೂದಿಸಿದ್ದರು ಈಗ ೬ ಆಣೆಗೆ ಕಾಯಿ ಕೊಂಡ ನನಗೂ, ಹಾರನಹಳ್ಳಿಯಲ್ಲಿರುವ ಬಾಗಡೆ ತಿಮ್ಮಪ್ಪಯ್ಯ ಎಂಬುವರಿಗೂ ತೀರ್ಮಾನಿಸಿ ೧ ದರ್ಜೆ ಬಿಳಿ ಪಾರ್ಸಲ್ (ಸುಮಾರು ೧। ಬೆಲೆ ಉಳ್ಳದ್ದು) ಕಳುಹಿಸಿ ಇದ್ದಾರೆ ಆರು ರೂಪಾಯಿಗೆ ಕೊಂಡವರಿಗೆ ಒಂದು ವಾಚನ್ನು ಕೊಡುತ್ತೇವೆಂದು ನಮೂದಿಸಿರುತ್ತಾರೆ ತರಿಸಿ ನೋಡಬೇಕಾಗಿದೆ ಸುಮಾರು ಮುರುಕಲು ವಾಚನ್ನು ಕಳುಹಿಸಬಹುದೆಂದು ತೋರುತ್ತೆ ಆದದ್ದರಿಂದ ಎಚ್ಚರಿಕೆಯಾಗಿರಿ

ಜೆ ಸೂರಪ್ಪ, ಜಾವಗಲ್

ಅರಸೀಕೆರೆ ತಾಲ್ಲೂಕ್

ಮನೆ ಕಟ್ಟಲು ನಿವೇಶನ ಬೇಕು

ಅಯ್ಯಾ,

ಈ ಊರಿನ ಕೆರೆಯು ಕೋಡಿ ಹರಿಯುತ್ತೆ ಈ ಕೆರೆಯು ಅಂಗಳಕ್ಕಿಂತಲೂ ಈ ಊರು ತಗ್ಗಿನಲ್ಲಿರುವದರಿಂದ ನೀರಿನ ಜೌಗು ಮನೆಗಳಿಗೆ ಹತ್ತಿ ಈ ಶೀತದಿಂದ ಊರಿನ ಎಲ್ಲಾ ಜನಗಳಿಗೂ ಕೆಮ್ಮು ಚಳಿ ಜ್ವರ ಮಗ್ಗಿಲು ಪ್ರಾಪ್ತವಾಗಿ ನರಳುತ್ತಿರುವರು ಕೋಡಿ ನೀರು ಸ್ವಲ್ಪ ಇನ್ನು ಸ್ವಲ್ಪ ಬಲವಾಗಿ ಬಂದರೆ ಮನೆಗಳ ಮೇಲೆ ನುಗ್ಗಿ ಸುಮಾರು ೩೦ ಮನೆಗಳವರಿಗೂ ಕೊಚ್ಚಿಹೋಗಿ ಹೆಸರಿಲ್ಲದಂತಾಗುವದು ಈ ಅಪಾಯವನ್ನು ತಾಲ್ಲೂಕು ಅಮಲ್ದಾರರಿಗೆ ರೂಬರೂಬ ಹೇಳಿದ್ದಲ್ಲದೆ ಅರ್ಜಿಯ ಮೂಲಕವೂ ಕೃತಪಡಿಸಿರುವದಾಗಿದೆ ದಯಾಳು ಸರ್ಕಾರದವರು ಈ ವಿಷಯವನ್ನು ಪರ್ಯಾಲೋಚಿಸಿ, ಊರಿಗೆ ಪೂರ್ವದಿಕ್ಕಿನಲ್ಲಿ ಖಾಲಿ ಇರುವ ಸರ್ಕಾರಿ ಜಮೀನನ್ನು ಕೊಡಿಸಿಕೊಟ್ಟಲ್ಲಿ ಬಹು ತೊಂದರೆ ಅನುಭವಿಸುವ ಮನೆಗಳವರು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳುವರು ಇನ್ನೂ ಮಳೆಗಾಲ ತುಂಬಾ ಇರುವದರಿಂದ ಇನ್ನೇನು ಅಪಾಯ ಸಂಭವಿಸೀತೋ ಎಂದು ಎಲ್ಲರೂ ಭಯಪಟ್ಟಿರುತ್ತಾರಾದ್ದರಿಂದ ಸರ್ಕಾರದವರು ಜಾಗ್ರತೆ ಈ ಕಷ್ಟವನ್ನು ಪರಿಹರಿಸುತ್ತಾರೆಂದು ಹಾರೈಸುತ್ತಿದ್ದಾರೆ

ದೇವರಾಯನದುರ್ಗ ಸುಬ್ಬರಾವ

ತಾಲ್ಲೋಕು ವರ್ತಮಾನಗಳು

ತಿಪಟೂರು —ಕಳೆದ ೧೫ ದಿನದಿಂದ ತಪ್ಪದೆ ಪ್ರತಿ ದಿನವೂ ಬಹಳ ಮಳೆಯಾಗುತ್ತಲೇ ಇದೆ ಕೆರೆಗಳ ಕೋಡಿ ಪ್ರವಾಹವಂತೂ ಹೇಳತೀರದು ಕೆರೆ ಸುತ್ತಲಿದ್ದ ಗಲೀಜು ಚೊಕ್ಕಟವಾಗಿ ಹೋಯಿತು ಅನೇಕ ಮನೆಗಳು ಮಲಗಿಕೊಂಡವು ಗೋಡೆಗಳು ಮುದುರಿಕೊಂಡವು ಪೈರಿಗೆ ನೀರಿಳಿಯತಲ್ಲಪ್ಪಾ ಎಂದು ರೈತರು ಹೇಳಾಡುತ್ತಾರೆ —ಚಿಕ್ಕನಾಯ್ಕನಹಳ್ಳಿಯಲ್ಲಿ ಪ್ಲೇಗ್ ಜೋರಾಗಿರುವದರಿಂದ ಅನೇಕರು ಇಲ್ಲಿಗೆ ಬಂದು ಸೇರಿಕೊಂಡರು ಆ ಸ್ತ್ರೀ ಒಬ್ಬಳಿಗೆ ಜ್ವರ ಕಾಣಿಸಿ ಗೆಡ್ಡೆ ಸಹ ಬಂದಿತ್ತೆಂದು ಡಾಕ್ಟರ ಪರೀಕ್ಷೆಯಿಂದ ಗೊತ್ತಾಯಿತು ಆಕೆಯು ಕಡೆಗೆ ಸತ್ತೇಹೋದಳು ನಮ್ಮ ಅಮಲ್ದಾರರು ತಕ್ಷಣ ಪ್ಲೇಗಿನ ಕ್ರಮಗಳನ್ನೆಲ್ಲಾ ಪೋಲೀಸಿನವರ ಮೂಲಕ ಮಾಡಿಸಿ ಜನರ ಭಯವನ್ನು ತಪ್ಪಿಸಿದರು —ಸಾಹುಕಾರ್ ಶಿಂಗ್ರಿ ನಂಜಪ್ಪನವರ ತಮ್ಮ ಚಿನ್ನಪ್ಪನವರ ಪತ್ನಿಯವರು ಹೆತ್ತು ಸತ್ತುಹೋದರು ಇವರ ಬಂಧುಗಳೆಲ್ಲ ಬಹಳ ದುಃಖಪಡುತ್ತಾರೆ —ತಿಪಟೂರು ತೆಂಗಿನಕಾಯಿ ಮೂರು ಕಾಸಿಗೆ ಒಂದು ಎಂಬುದು ಹೋಗಿ ಮೂರು ಬಿಲ್ಲೆಗೆ ಒಂದಾಗಿದೆ ಈಗ ದಾರಣೆ ೪೩ ರೂ ಆಯಿತಂತೆ ಚಟ್ನಿಗೆ ಬೇಳದಕಾಯೇ ಗತಿಯಾಯಿತು

ಕುಣಿಗಲ್ ಪೇಟೆ —ಕಳೆದ ೨ ತಿಂಗಳಿಂದ ವಾಂತಿಭೇದಿ ರೋಗವು ಈ ಸ್ಥಳದಲ್ಲಿ ವ್ಯಾಪಿಸಿ ೧೨೦ ಮಂದಿಗಿಂತ ಹೆಚ್ಚಾಗಿ ಸತ್ತಿರುತ್ತಾರೆ ರೋಗವು ಬಹು ಉಗ್ರವಾಗಿದೆ ಈ ರೋಗ ನಿವಾರಣಾರ್ಥವಾಗಿ ಜನರೆಲ್ಲ ತಮ್ಮ ತಮ್ಮ ದೇವರುಗಳನ್ನು ಮೆರವಣಿಗೆ ಮಾಡಿದರು ಗ್ರಾಮದೇವತೆಗಳಿಗೆ ಬೀದಿ ಬೀದಿಗಳಲ್ಲೂ ಮೆರವಣಿಗೆಯೂ ಬಲಿಗಳೂ ನಡೆದವು ಆದರೇನು, ರೋಗವು ಇನ್ನೂ ನಿವಾರಣೆಯಾಗಲಿಲ್ಲ —ಮಳೆಯ ಅವಾಂತ್ರ ಹೇಳತೀರದು ಒಂದು ವಾರದಿಂದ ದೊಡ್ಡ ಮಳೆ ಸುರಿದು ಕೆರೆ ಕಟ್ಟೆ ಹಳ್ಳ ನದಿಗಳು ತುಂಬಿ ಹರಿಯುತ್ತಿವೆ ಅನೇಕ ಮನೆಗಳ ಗೋಡೆಗಳೂ ಹಳೇ ಮನೆಗಳೂ ಬಿದ್ದು ಮುದುರಿಕೊಂಡವು ಎಲ್ಲಿ ನೋಡಿದರೂ ಜಲಸಮೃದ್ಧಿಯಾಗಿದೆ ಪೈರುಗಳು ಹುಲುಸಾಗಿವೆ —ಮುನಿಸಿಪಾಲಿಟಿಯವರೂ ಸ್ಥಳಿಕ ವೈದ್ಯರೂ ಇಲ್ಲಿನ ರೋಗವನ್ನು ನಿವಾರಿಸುವಂತೆ ತಮ್ಮಿಂದಾಗುವಷ್ಟು ಪ್ರಯತ್ನವನ್ನು ನಡಿಸುತ್ತಿದ್ದಾರೆ ಹೊಸದಾಗಿ ಬಂದಿರುವ ಮುನಿಸಿಪಲ್ ದರೋಗರು ತುಂಬಾ ಚಟುವಟಿಕೆಯಿಂದ ಕೆಲಸಮಾಡುವರು

ಸಕಲೇಶಪುರ —ಈ ಪ್ರಾಂತ್ಯ ಮಳೆ ವಿಶೇಷವಾಗಿ ಬೀಳುತ್ತಿದೆ ಬತ್ತದ ಪೈರು ಚೆನ್ನಾಗಿದೆ ಯಾಲಕ್ಕಿ ಕಟಾವಾಗಿ ಈ ಕಸೆ ಯಾವ ತೋಟಕ್ಕೆ ಹೋದರೂ ಯಾಲಕ್ಕಿ ಕಾಯಿ ಒಣಗಿಸುವದನ್ನು ನೋಡಬಹುದು ಆದರೆ ಕಾಫೀ ಫಸಲು ಈ ವರುಷ ಬಹು ಕಮ್ಮಿಯಾದಂತೆ ಕಾಣುತ್ತಲಿದೆ ಕಳೆದ ವಾರ ಮಂಜರಾಬಾದ್ ಪ್ರಾಂತ್ಯದ ಯೂರೋಪಿಯನ್ ಪ್ಲಾಂಟರುಗಳು ಸಕಲೇಶಪುರದಲ್ಲಿ ಸೇರಿ, ಕವಾಯಿತ್ ಮೊದಲಾದ ಸೈನ್ಯಸಂಬಂಧವಾದ ಅಭ್ಯಾಸಗಳನ್ನು ಮಾಡಿದ್ದಲ್ಲದೆ, ಕುದುರೆ ಮೇಲೆ ಬಿಟ್ಟರು ವಾಲಂಟಿಯರ ಕವಾತನ್ನು ಪರೀಕ್ಷಿಸುವಂತೆ ಮಡಕೇರಿಯಿಂದ ಕ್ಯಾಪ್ಟನ್ ಸಾಹೇಬರೂ ಬೆಂಗಳೂರಿನಿಂದ ಕರ್ನಲ್ ಸಾಹೇಬರೂ ಬಂದಿದ್ದರೆಂದು ವರ್ತಮಾನ ಸಕಲೇಶಪುರದ ಸುತ್ತಮುತ್ತಲೂ ಕೆಲವು ಗ್ರಾಮಗಳಲ್ಲಿ ಕಾಲರಾ ಪ್ಲೇಗ್ ಇದೆ ಎಂದು ವರ್ತಮಾನ ಈ ಪ್ರಾಂತ್ಯದ ಫಾರೆಸ್ಟ್ ರೇಂಜ್ ಆಫೀಸರವರು ಸರ್ಕೀಟು ಬಂದು ಅಬ್ಬೂರ್ ತೋಟದ ಮಿಡ್ಲ್ ಪಾಠಶಾಲೆಯನ್ನು ಪರೀಕ್ಷಿಸಿ ಸಂತೋಷಪಟ್ಟರು

ಚಿತ್ರದುರ್ಗ —೧—೩ ದಿನಗಳಿಂದ ಮಳೆ ಬಿಟ್ಟಿದೆ ರೈತರು ಬಹು ಆಸಕ್ತಿಯಿಂದ ಜೋಳದ ಕೊಯ್ಲನ್ನು ಪ್ರಾರಂಭಿಸಿದ್ದಾರೆ ಜಡಿಮಳೆಯಿಂದ ಕಟಾವಿಗೆ ಅವಕಾಶವಿಲ್ಲದೆ ತೆನೆಯ ಮೇಲೆ ಮೊಳಕೆ ಬಂದು ಚಿಂತೆಪಡುತ್ತಿದ್ದರು, ಟವನಿಗೆ ನೀರು ಸರಬರಾಯಿ ಮಾಡುವ ಬಾವಿಯಲ್ಲಿ ಏನೋ ಬಿದ್ದು ಸತ್ತುಹೋದ್ದರಿಂದಲೋ ಮತ್ಯಾವ ಕಾರಣದಿಂದಲೋ ನೀರು ದುರ್ವಾಸನೆ, ಮೇಲೆಣ್ಣೆ ಕೆರೆ ನೀರನ್ನು ಊರಿಗೆ ಬಿಟ್ಟಿದ್ದಾರೆ ಆದರೆ ಈ ನೀರು ಬಹಳ ಒಂದು ಮತ್ತು ಬೇರೆ ಬೇರೆ ತರದ ಹುಳ ಹುಪ್ಪಟೆ ಇವೆ ನಾಲಗ್ಗಕ್ಕೆ ಜನಗಳು ನಲ್ಲಿಯ ಬಳಿಯಲ್ಲಿ ಕೊಳಕು ಬಟ್ಟೆಗಳನ್ನು ಒಗೆಯುವರು ಮತ್ತು ತೊಳೆದು ಕಲ್ಲಿಜ್ಜಿ ಉಗಿಯುತ್ತಾರೆ ಮುನಿಸಿಪಾಲಿಟಿಯವರೂ ಪೋಲೀಸಿನವರೂ ಈ ವಿಷಯಕ್ಕೆ ಗಮನ ಕೊಡಬೇಕು ಹರಪನಹಳ್ಳಿಯಿಂದ ಒಂದು ಕುಟುಂಬದವರು ಪ್ಲೇಗ್ ರೋಗಿಯೊಬ್ಬಳನ್ನು ಸಾಗಿಸಿಕೊಂಡು ಬಂದು ಊರು ಸೇರಿದನಂತರ ಗೊತ್ತಾಗಿ ಅವರನ್ನು ಸಂತೇ ಬಾಗಲಿನ ಛತ್ರಕ್ಕೆ ಸಾಗಿಸಿದರು, ಆಕೆ ಅಲ್ಲಿಯೆ ಮೃತಪಟ್ಟಳು ಉಳಿದವರು ಈವರೆಗೂ ಕ್ಷೇಮವಾಗಿದ್ದಾರೆ ಊರ್ಕಡಗಳಲ್ಲಿ ತಕ್ಕ ಕಾವಲಿಟ್ಟು ಸೋಂಕು ಇರುವ ಕಡೆಯಿಂದ ಬರುವ ಜನಗಳನ್ನು ಊರ ಹೊರಗೆ ತಡೆಯುವ ಏರ್ಪಾಡು ಮಾಡಿದರೆ ಉತ್ತಮ ಆಗ್ಗೆ ೨—೩ ತಿಂಗಳಲ್ಲಿ ಸಂತೆ ಬಾಗಲಿನಲ್ಲಿ ವೈಶ್ಯರ ಮನೆಯಲ್ಲಿ ನಡದ ಹಂಜಿನ ದರೋಡೆ ಕಳ್ಳರು ಸಿಕ್ಕಿ ವಿಚಾರಣೆಯಾಗುತ್ತಲಿದೆ ಎಂದು ವರ್ತಮಾನ ಇಂಥಾದ್ದರಲ್ಲಿ ಮೊನ್ನೆ ಗುರುವಾರ ರಾತ್ರಿ ಇಲ್ಲಿ ಒಬ್ಬ ಲಾಯರ ಮನೆಗೆ ಐದಾರು ಮಂದಿ ಕಳ್ಳರು ಬಂದು ಹೊರಗಿನಿಂದಲೇ ಮೇಲಂತಸ್ತಿಗೆ ಹತ್ತಿ ಒಳಪ್ರವೇಶಕ್ಕೆ ದಾರಿ ನೋಡುತ್ತಿರುವಾಗ ಹೆಂಗಸರು ಎದ್ದು ಗಲಭೆ ಮಾಡಲು ನೆರೆಹೊರೆಯವರೂ ಕೆಲವರು ಅಧಿಕಾರಿಗಳೂ ಬಂದು ಓಡಿಹೋಗುತ್ತಿದ್ದ ಕಳ್ಳರಲ್ಲಿ ಒಬ್ಬಿಬ್ಬರನ್ನು ಹಿಡಿದು ವಿಚಾರಣೆಗೆ ಗುರಿಮಾಡಿದ್ದಾರೆ

ಹೊಸಕೋಟೆ —ಇಲ್ಲಿ ೧೫ ದಿವಸದಿಂದಲೂ ಮಳೆಯು ಸುರಿಯುತ್ತಿರುವುದರಿಂದ ಕೆರೆಗಳು ತುಂಬಿ ಕೋಡಿ ಹರಿಯುತ್ತಿವೆ ಇಲ್ಲಿಗೆ ಕ್ಯಾಂಪ ಬಂದಿದ್ದ ಬಳ್ಳಿ ಬಂಗ್ಲೆಯ ಮೈದಾನದಲ್ಲಿ ಇಳಿದಿತ್ತು ಅಂಗಡಿ ಪದಾರ್ಥಗಳು ಗ್ರಾಮಾಂತ್ರಗಳಿಂದ ಕರಿ ಕೋಳಿ ಮೊಟ್ಟೆಗಳೆಲ್ಲಾ ಹಾಜರಾಗಿದ್ದವು ನಮ್ಮ ಅಮಲ್ದಾರರು ಪೋಲೀಸ್ ಇನ್ಸ್‌ಪೆಕ್ಟರ ಸಮೇತ ಬಂದು ಇಟ್ಟಿದ್ದರೂ ಸಾಮಾನು ತಂದಿದ್ದವರು ಯಾವ ರೀತಿ ಬಟವಾಡೆ ಮಾಡಿದರೆಂದು ತಿಳಿಯಲಿಲ್ಲ ಕ್ಯಾಂಪಿನವರೇನೋ ಅಷ್ಟು ಕೇಳಿಕೊಳ್ಳಲಿಲ್ಲ ಮಾಲೀಕರೇನೋ ವಾಪಾಸ್ ತಕರಾರು ಮಾಡಲಿಲ್ಲ ಮಧ್ಯೆ ಏನಾಯ್ತೋ ಯಾರಿಗೂ ತಿಳಿಯದಂತೆ ಕೇಳಿಕೆ... ನಮ್ಮ ತಾಲ್ಲೋಕಿನ ೨—೩ ಗ್ರಾಮಗಳಲ್ಲಿ ಪ್ಲೇಗ್ ಆಗಲಿದೆ ಎಂದು ಕೇಳಿ ಅಮಲ್ದಾರರು ಡಾಕ್ಟರ ಸಹಿತ ಹೋಗಿ ಮಾಡಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ ಬಂದರು —ಇನ್ನೂ ಬೆಂಗಳೂರು ತಾಲ್ಲೂಕಿಗೆ ಸೇರಿದ ಕೃಷ್ಣರಾಜಪುರದಲ್ಲಿ ಪ್ರತಿ ಮಂಗಳವಾರ ಸಂತೆ ನೆರೆಯುತ್ತಲಿದೆ ಆ ಸಂತೆಗೆ ಇಲ್ಲಿಯ ವರ್ತಕರೂ ಹೋಗಿಬರುವ ವಾಡಿಕೆ ಇತ್ತು ಅಲ್ಲಿ (ಕೃಷ್ಣರಾಜಪುರ) ಪ್ಲೇಗ್ ಇದೆ ಎಂತ ಗೊತ್ತಾದ್ದರಿಂದ ಇಲ್ಲಿನವರು ಯಾರೂ ಆ ಸಂತೆಗೂ ಊರಿನೊಳಕ್ಕೂ ಹೋಗಬಾರದೆಂದು ಕಟ್ಟು ಮಾಡಿ ಹೋಗುವವರನ್ನು ೧೦ ದಿನ ಊರ ಹೊರಗೆ ಇಡಲು ನಿರ್ಣಯಿಸಿರುತ್ತಾರೆ ಮತ್ತು ಯಾರಾದರೂ ಹೋದರೆ ಅವರನ್ನು ತಡೆಯಲು ಪೋಲೀಸಿನವರನ್ನು ಅಲ್ಲಲ್ಲಿ ಇಟ್ಟಿರುತ್ತಾರೆ —ಮದ್ರಾಸ್ ಗವರ್ನರ್ ದೊರೆಗಳ ಸವಾರಿ ತಾ ೨೦ ಕ್ಕೆ ಈ ಊರ ಮಾರ್ಗವಾಗಿ ದಿನ ರಸ್ತೆಯಲ್ಲಿ ದಯಮಾಡಿಸಲಿಕ್ಕಿರುವದರಿಂದ ರಸ್ತೆ ಚೆನ್ನಾಗಿದೆಯೋ ಇಲ್ಲವೋ ನೋಡಲು ಡಿವಿಷನ್ ಸಾಹೇಬರೂ ಪಿ ಡಬ್ಲ್ಯು ಡಿ ಆಫೀಸರುಗಳೂ ಬಂದಿದ್ದರು ಈಗ ರಸ್ತೆಯ ಹೊಂಡಗಳನ್ನು ಸರಿಪಡಿಸಲು ಇಲ್ಲಿ ... ಸಾಹೇಬರೂ ವೆ॥ ಬರ್ ಸಾಹೇಬರೂ ಬಂದು ಮುಸಾಫರ್ ಬಂಗ್ಲೆಯಲ್ಲಿ ಇಳಿದು ಕೆಲಸನೋಡುತ್ತಿದ್ದಾರೆ

ತುಂಕೂರು —ಕಳೆದ ೨ ವಾರಗಳಲ್ಲಿ ಸಮೃದ್ಧಿಯಾಗಿ ಮಳೆ ಬಿದ್ದುದರಿಂದ ನಮ್ಮ ಟವನ್ ಕೆರೆಯು ತುಂಬಿದೆ ಸುತ್ತಮುತ್ತಲ ಕೆರೆಗಳೆಲ್ಲಾ ತುಂಬಿ ಕೋಡಿಬಿದ್ದವು ಬುಸ್ಸಿ ಫಸಲು ಬಹಳ ಚೆನ್ನಾಗಿದೆ ಕಳೆದ ವಾರ ಗುಂಡಲಗಿ ಎಂಬ ಜೈನ ಬಸ್ತಿಯಲ್ಲಿ ಒಬ್ಬ ಪುರೋಹಿತರು ತಮ್ಮ ಮನೆಯಲ್ಲಿ ಕಂಚಿ ಕೊಯಿಯುವನೊಬ್ಬನನ್ನು ಸಹಾಯಕ್ಕಾಗಿ ಇಟ್ಟುಕೊಂಡಿದ್ದರು ಆತನು ಮನೆಯ ಕಾರುಬಾರುಗಳನ್ನೆಲ್ಲಾ ತಿಳಿದಿದ್ದು ಪುರೋಹಿತರು ತುಂಕೂರಿಗೆ ಹೋದಾಗ ಸುಮಾರು ೧೦೦ ರೂಪಾಯಿ ನಗನಾಣ್ಯಗಳ ಪೆಟ್ಟಿಗೆ ಅಪಹರಿಸಿ ಪಲಾಯನ ಮಾಡಿದನು ಈ ಸಂಗತಿಯನ್ನು ಪುರೋಹಿತನು ಸರ್ಕಾರಕ್ಕೆ ತಿಳಿಸಿ ಆ ವಿಷಯವನ್ನು ಪತ್ತೆ ಮಾಡಲು ಹೊರಟು ಬಹಳ ಪ್ರಯಾಸದಿಂದ ... ಳ್ಳಿಯಲ್ಲಿ ಮಾಲು ಸಹಿತ ಹಿಡಿದು ವಿಚಾರಣೆ ಒಸ್ಗೆ ಇಲ್ಲಿಗೆ ಕರೆದುಕೊಂಡು ಬರಲು ತಪ್ಪು ಸಾಬೀತಾಗಿ ... ಅಂಗಸ್ವಿದ ವಿಧಿಸಿ ... ಟ್ಟನು —ಜೈನ ಮಹಾ ಸಭೆಯು ಈ ಕಾರ್ತೀಕ ಮಾಸದಲ್ಲಿ ನಡೆಯುತ್ತದೆಂದು ಪ್ರಕಟಿಸಿತ್ತಷ್ಟೆ ಮಳೆ ಮುಂತಾದ ಅನಿವಾರ್ಯ ಕಾರಣಗಳಿಂದ ಮುಂದೆ ಫಾಲ್ಗುಣ ಶುದ್ಧ ಅಷ್ಟಮಿಗೆ ನಿಶ್ಚಯ ಮಾಡಿದ್ದಾರೆ —ನಮ್ಮ ಮ್ಯುನಿಸಿಪಾಲಿಟಿಯವರೂ ಇತರ ಅಧಿಕಾರಿಗಳೂ "ಲೋಕಲ್ ಸಾಹುಕಾರ್ ಬರಿದಿರುವ ರೈಲುಗಳಲ್ಲಿ "ಮ್ಯುನಿಸಿಪಲ್ ಗವರ್ನ್ಮೆಂಟ್" ಎಂಬ ವಿಚಾರಸ್ಥಾನವನ್ನು ಏರ್ಪಡಿಸಿದರೆ ಬಹಳ ಅನುಕೂಲವೆಂಬುದಾಗಿ ಈ ಜನರು ನಿರೀಕ್ಷಿಸುತ್ತಾರೆ —ನಮ್ಮ ಮ್ಯುನಿಸಿಪಾಲಿಟಿ ನೌಕರರು ತಮ್ಮ ಜೀವಮಾನವನ್ನು ಇಲ್ಲಿಯೇ ಕಳೆಯಬೇಕಾಗಿದೆ ಇದರಿಂದ ಪ್ರಜೆಗಳಿಗೂ ಅವರಿಗೂ ತುಂಬಾ ಬೇಜಾರಾಗಿ ಕೆಲಸ ಕಾರ್ಯಗಳು ತೃಪ್ತಿಕರವಾಗಿ ಜರಗಲು ಅವಕಾಶ ಕಡಿಮೆಯಾದ್ದರಿಂದ ಅಧಿಕಾರಿಗಳು ಇವರುಗಳನ್ನು ಬೇರೆ ಕಡೆಗೆ ವರ್ಗಾಯಿಸಿ, ಸರ್ವೀಸು ಆಗಿರತಕ್ಕವರನ್ನು ರಿಟೈರ್ ಮಾಡಿಸಿ ಹೊಸಬರನ್ನು ತರುವದು ಎಷ್ಟೋ ಅನುಕೂಲ

ಹೊಸದುರ್ಗ —ಬೆಲಗೂರು, ಬಾಗಿಹಾಳ್ ಒಲ್ಲಾಳ ಸಮುದ್ರ ಮೊದಲಾದ ಪ್ರಾಂತ್ಯಗಳಲ್ಲಿ ತಾ ೫ ರ ಲಾಗಾಯತು ೧೧ ರ ವರೆಗೆ ವಿಪರೀತ ಮಳೆ ಸುರಿದು ಅನೇಕ ಕೆರೆಗಳು ಕೋಡಿ ಬಿದ್ದವು ಈ ಪ್ರಾಂತ್ಯದಲ್ಲಿ ಹರಿಯುವ ವೇದಾವತೀ ನದಿಯು ಎಂಟು ದಿವಸಗಳ ವರೆಗೆ ತುಂಬಿ ಹರಿಯುವದರಿಂದ ಕಡೂರಿಂದ ಬೆಲಗೂರಿಗೆ ಬರುವ ಟಪಾಲು ಎಂಟು ದಿವಸದ ಮೇಲಾದರೂ ಬಂದಿಲ್ಲ ಈ ಪ್ರವಾಹದ ದೆಸೆಯಿಂದ ಇನ್ನೂ ಒಂದು ವಾರ ನಷ್ಟವಾಗುತ್ತೆಂದು ತೋರುತ್ತೆ ಈ ಬೆಲಗೂರು ಕೆರೆಯು ಮುಕ್ಕಾಲುಪಾಲು ತುಂಬಿರುವದರಿಂದ ಏರಿ ಒಡೆಯುವ ಹಾಗೆ ತೋರುತ್ತಿದೆ ಸದರಿ ಗ್ರಾಮದ ಪಟೇಲ್ ತನ್ನ ಪದದ ಭಯದಿಂದ ಥರಥರ ನಡುಗುತ್ತಿರುವರು ಇದಕ್ಕೆ ಸರ್ಕಾರದವರು ಕಾಮಿಗಾರಿಯಿಂದ ಏರಿಗೆ ಮಣ್ಣು ಕೊಡುವದು ಒಳ್ಳೇದು ಬಾಗಿಹಾಳ್ ದೊಡ್ಡ ಕೆರೆಯು ಹಿಂದೆ ಒಡೆದು ತರೀ ಜಮೀನುಗಳೆಲ್ಲಾ ಕಂದಾಯ ತೆರಬಾರದೆ ರಾಜೀನಾಮೆ ಕೊಡಲ್ಪಟ್ಟಿದ್ದವು ಅನೇಕ ವರ್ಷಗಳಿಂದ ಈ ಕೆರೆಗೆ ನೀರಿಲ್ಲದೆ ಈ ವರ್ಷ ಅರ್ಧಭಾಗ ತುಂಬಿರುವದರಿಂದ ರಾಜೀನಾಮೆ ಕೊಟ್ಟವರೆಲ್ಲಾ ವ್ಯಾಕುಲಪಡುತ್ತಿದ್ದಾರೆ ಈ ಪ್ರಾಂತ್ಯ ಎಳ್ಳು ಜೋಳ, ನವಣೆ ಮುಂತಾದ ಬೆಳೆ ಕೊಯ್ಲು ಆಗುತ್ತಿದೆ ಇತರ ಬೆಳೆಗಳು ಚೆನ್ನಾಗಿವೆ ಧಾರಣೆ ಇಳಿಮುಖವಾಗಿರುವದರಿಂದ ಪ್ರಜೆಗಳು ಹರ್ಷಮುಖಿಗಳಾಗಿದ್ದಾರೆ ಕಳೆದ ತಾ ೪ ನೇ ಗುರುವಾರ ಅರ್ಸೀಕೆರೆಯಿಂದ ಅಮಲ್ದಾರರು ಹೊಸದುರ್ಗಕ್ಕೆ ಹೋಗುವ ಉದ್ದೇಶ್ಯ ಕಣಕಟ್ಟೆ ಮಾರ್ಗವಾಗಿ ಬರುತ್ತಾರೆಂದು ಬೆಲಗೂರು ವರ್ತಕಮಂಡಲಿಯವರು ತೋರಣಾದಿ ಶೃಂಗಾರದಿಂದ ಕಾದಿದ್ದರು ಅಮಲ್ದಾರರು ರೈಲ್ ಮಾರ್ಗವಾಗಿ ಹೊಸದುರ್ಗಕ್ಕೆ ಚಿತ್ತೈಸಿದವರಾದ್ದರಿಂದ ಕಸಬಾ ಶಾನುಭೋಗರು, ವರ್ತಕರು ಮೊದಲಾದವರು ಸೇರಿ ಬಹು ವಿಜೃಂಭಣೆಯಿಂದ ಎದುರುಗೊಂಡು ಇಲ್ಲಿಂದ ವರ್ಗವಾಗಿ ಶಿಡ್ಲಘಟ್ಟಕ್ಕೆ ಹೋದ ಅಮಲ್‌ದಾರ್ ಮ॥ ಹನುಮಂತರಾಯರು ಜನಾನುರಾಗಿಗಳಾಗಿಯೂ ನಿಷ್ಪಕ್ಷಪಾತಿಗಳಾಗಿಯೂ ಇದ್ದು ಕೀರ್ತಿ ಪಡೆದು ಹೋದಂತೆ ಈ ಹೊಸ ಅಮಲ್ದಾರರೂ ಹೆಚ್ಚು ಕೀರ್ತಿ ಸಂಪಾದಿಸ್ಯಾರೆಂದು ಕಾಣ್ಸುತ್ತೇವೆ

...ಕೆಲವು ನೌಕರರು ಬಹು ಹಳೆಬರಾಗಿ ಪ್ರಜೆಗಳಿಗೆ ಕೊ... ...ಷ್ಟವನ್ನು ಈಗಿನ ಹೊಸ ಅಮಲ್ದಾರರು ತಪ್ಪಿಸ್ಯಾರೆಂದು ...ತ್ತೇವೆ

...ದ್ದಬಳ್ಳಾಪುರ.— ಈ ಊರಿನಲ್ಲಿ ಮಳೆ ಬಹಳವಾಗಿ ಸುರಿದ ...ಕೆರೆಗಳು ತುಂಬಿ ಕೋಡಿಬಿದ್ದಿರುತ್ತವೆ. ಬೆಳೆಗಳು ಬಹಳ ...ಜನಸ್ಸಂತೋಷವನ್ನುಂಟುಮಾಡುತ್ತವೆ. ಧಾರಣೆಗಳು ಇಳಿ... ...ಇಲ್ಲಿ ಮಳೆಯಿಂದ ಕೆಲವು ಮನೆಗಳು ಬಿದ್ದುಹೋದವು. ...ಗಳು ೧ನೆ ತಾ. ಈ ಊರಿನ ನಾಗರ ಕೆರೆ ಕಟ್ಟೆ ಮೇಲೆ ಇಬ್ಬ... ...ನಗರ ಸಿಂಗನರು ಹುಲ್ಲು ಹೊರೆಗಳನ್ನು ಇಳಿಸಿ ಕಟ್ಟುತ್ತಾ... ...ಕಟ್ಟೆ ಬಳಿ ಇರುವ ಒಂದು ಬಿಲದಿಂದ ಹಾವು ಬಂದು ಒ... ...ಕಚ್ಚಿಬಿಟ್ಟಿತು. ಮತ್ತೊಬ್ಬಳು ಕೂಗಿಕೊಳ್ಳಲು ಸುತ್ತು... ...ವರು ಬಂದು ನೋಡಲಾಗಿ ಹಾವು ಸಿಕ್ಕಲಿಲ್ಲ. ಸದರಿಯವಳು ...ಪಾಯ ಮಾಡಿದಾಗ್ಯೂ ಬದುಕಲಿಲ್ಲ. —ಅರುಣಾಚಲೇಶ್ವರಸ್ವಾ... ...ಕ ಲಕ್ಷ್ಮೀಪತಿ ದೀಕ್ಷಿತರಿಗೆ ಒಂದು ತಿಂಗಳ ಕಾಲ ಸಜಾ ...ಂದು ಸಮಾಧಾನವಾಗಿತ್ತು. ಅವರಿಗೆ ಅದೇ ತಿಂಗಳು ...ನೆ ತಾ. ...ಕಮಿಷನರ ಕೋರ್ಟಿನಲ್ಲಿ ಖುಲಾಸಾಗಿ ಊರಿಗೆ ಬಂದಿ... ...ಮಳೆಯು ಆಗಾಗ್ಗೆ ಸುರಿಯುತ್ತಾ ಇದೆ ಕೆರೆಗಳು ತುಂಬಿ... ...ಸ್ಥಿತಿ ರಾಗಿ ರೂಪಾಯಿಗೆ ... ಸೇರು, ಅಕ್ಕಿ ... ...ಮಾರುತ್ತಾರೆ ... ತಿಂಗಳು ರಜಾ ಹೋಗಿದ್ದ ಅಮಲ್ದಾರ್ ...ಗನಾಥರಾವ್ ... ದಯಮಾಡಿ ಕೆಲಸ ನಡಿಸು... ...ಇಲ್ಲಿ ಬಹು ...ಷಗಳಿಂದಲೂ ಮಿಡ್ ವೈಫ್ ಆಗಿದ್ದ ಸುಂ... ...ವರು ಜಗಲೂರಿಗೆ ... ಅಲ್ಲಿದ್ದ ಪೊಕಟಪ್ಪನವರು ಇಲ್ಲಿಗೂ ...ದ್ದಾರೆ ಸಾರ್ಜಂಟ್ ಚಂಗಲ್ ನಾಯುಡರು ಮೈಸೂರು ಅರ... ...ವರ್ಗವಾಗಿ ... ಗುವರು ಇಲ್ಲಿಗೆ ಮಿ॥ ನಾಮಕಲ್ ನಾಯ... ...ಬರುತ್ತಾರೆ ... ಕಾಯಿಲೆಯಾಗಿದ್ದ ರುಮಾಲೆ ಕನ್ನಡಸಪ್ಪ ...ಕಾಲವಾದರು. ...ನೆ ತಾ ಸುಮಾರು ೩೦೦—೪೦೦ ಜನರಿಗೆ ...ಜನ್ನು ಅನೇಕರಿಗೆ ಗೋದಾನ ವಸ್ತ್ರದಾನ ಮುಂತಾದವು ...ಮಾಡಿದರು. ದೊಡ್ಡರಾಯಪ್ಪನ ಪಳ್ಳಿಯಲ್ಲಿ ... ಪ್ರಾಯ... ...ರಿನ ಹುಡುಗನಿಗೆ ಹಾವು ಕಡಿದು ಸತ್ತುಹೋದನು. ಲೇಟ್ ...ಮುನ್ಷಿ ವೆಂಕಪ್ಪನವರ ಮಗಳ ಹತ್ರ ಕಳವಿನ ಸುಮಾರು ... ...ಭಾರದ ನಗಗಳನ್ನು ಅವಳ ಬಂಧು ಒಬ್ಬನು ಮಾಡಗಿದ್ದ... ...ಪೋಲೀಸಿನವರು ... ತಿಂಗಳ ಹಿಂದೆ ಪತ್ತೆ ಮಾಡಿ, ಬೆಂಗಳೂರಿಗೆ ...ದರೆಂದು ತಿಳಿಯುತ್ತದೆ. ಈ ಸಲ ಪ್ರಜಾಪ್ರತಿನಿಧಿ ಸಭೆಯಲ್ಲಿ ...ದ್ದಬಳ್ಳಾಪುರದಲ್ಲಿ ನಲ್ಲಿ ಹಾಕಿಸುವ ವಿಷಯದಲ್ಲಿ ಇಲ್ಲಿಂದ ಮೆಂಬ... ...ರಾಗಿರುವವರು ಚರ್ಚಿಸಿ ಸಫಲಮಾಡಿಕೊಂಡು ಬರುವರೆಂದು ...ಜನರೂ ನಿರೀಕ್ಷಿಸುತ್ತಾರೆ ಈಗ ಇನ್ಸ್ಪೆಕ್ಟರ್ ಮೂರೆಲೆಯ ದೂ... ...ಇಲ್ಲಿ ಗ್ರಾಮಾಂತರದ ಸಂತೆ, ಸಂತೆ ದಾರಿಗಳಲ್ಲೂ ಬಹಳ ...ವಾಯಿತ್ತದೆ ತಿಳಿಯದ ...ದುಗರು, ಇವರು ತೋರಿಸುವ ...ಕೆಗೆ ಒಳಬಿದ್ದು, ಕೈಲಿರುವ ದುಡ್ಡು ಕಳೆಕೊಂಡು, ಗೋ... ...ಕೊಂಡು ... ದವರನ್ನು ನೋಡಲು ವ್ಯಸನವಾಗುತ್ತೆ. ಪೋಲೀ... ...ಈ ಆಟವನ್ನು ನಿಲ್ಲಿಸುವವರಾಗಿ ತೋರಿಸಿಕೊಂಡರೆ, ಆದು ...ಪ್ರಬಲಕ್ಕೆ ಬರಲಾರದು. ಚೆನರುಗಟ್ಟದ ಹೋಬಳಿ ಕಗಲಾಪು... ...ಪಟೇಲ್ ನಿರ್ವಾ ಬಿಕಡೂಪವರ ಜೋಡಿ ಗ್ರಾಮವಾಗಿದೆ ಈ ...ಳವಲ್ಲಿ ಆಂಜನೇಯನನ್ನು ನವರಾತ್ರಿ ಪಟ್ಟಕ್ಕೆ ಕೂರಿಸಬೇ... ...ಗ್ರಾಮದ ಚನ್ನದಗಣಿ ಮೇಸ್ತ್ರಿ ಮೋದಕಲ್ಲಪ್ಪನವರು ಸಾ... ...ವನ್ನು ದೇವರನ್ನೂ ತರಿಸಿ, ಪ್ರಯತ್ನ ಮಾಡುವಲ್ಲಿ ಪಟೇಲ್ ...ಮ್ಮೇಗೌಡರು ತಮ್ಮ ಗ್ರಾಮದಲ್ಲಿ ದೇವರನ್ನು ಪಟ್ಟಕ್ಕೆ ಕೂರಿ... ...ತಮ್ಮ ಪಟ್ಟವು ಹಾಳಾಗುತ್ತದೆಂದು ಹೇಳಿ, ವಿಘ್ನ ಮಾಡಿದರೆಂದು ...ರು. ಡಿಪ್ಟೀ ಕಗಲಾಪುರದಲ್ಲಿ ಹೊಸ ಚಿನ್ನದ ಗಣಿಯನ್ನು ...ಹಿಡಿದು, ಗಣಿ ಕೆಲಸವನ್ನು ಜೋಡಿದಾರ್ ಮಿ॥ ರಘುನಾಥರಾ... ...ಪ್ರಾರಂಭಿಸಿದಾರೆ ಮಧುರೆ ಹೋಬಳಿ ಕಾಡ್ನೂರಿನಲ್ಲಿ ಟಿ ಎ ...ಪ್ಪನವರು ನೇಟಿವ್ ವೈದ್ಯಶಾಲೆಯನ್ನಿಟ್ಟು ನಡಿಸುತ್ತಿದಾರೆ.

ಮೈಸೂರು ಸಂಸ್ಥಾನವು.

...೦೭ ನೆಯ ವರ್ಷದ ಜಮಾಖರ್ಚು ಅಂದಾಜಾಪಟ್ಟಿ (ಬಡ್ಜೆಟ್).

ಜಮಾ ಬಾಬುಗಳು.

...ಕಂದಾಯ	ರೂಪಾಯಿ	93,20,000
...ರಾಜಾಯ ಮತ್ತು ಗುತ್ತಿಗೆಗಳು		18,12,000
...ಗಳು		19,00,000
...		39,00,000
...ಗಳು		3,38,000
...		3,60,000
...		17,000
...ಗಳು		8,00,000
...ಷ್ಟ್ರೇಷನ್		1,50,000
...		1,49,000
...ಅಥವಾ ನಷ್ಟ		2,81,000
...ಯ ವಿಮರ್ಶೆ—(a) ಕೋರ್ಟುಗಳು		51,000
" (b) ಬಂದೀಖಾನೆಗಳು		33,000
...ಲೀಸು		22,000
...ಭ್ಯಾಸ		1,29,000
...		1,21,000
...ಯ ಮತ್ತು ಇತರ ಸಣ್ಣ ಇಲಾಖೆಗಳು		50,000
...ವೃದ್ಧಿಕಕ್ಕಾಗಿ ಕೊಡುವ ಪೆನಷನ್ನಿಗಾಗಿ ಜಮೆ		3,000
...ಡಿಲ್ವಾರ್ ಮತ್ತು ಛಾಪಖಾನೆ		6,000
...ಚಿಲ್ಲರೆ ಬಾಬುಗಳು		1,50,000
...		35,000
ಕಾವೇರೀ ವೈದ್ಯುತ ಶಕ್ತಿಯ ಏರ್ಪಾಡು	ರೂ.	18,60,000
ಸಂಸ್ಥಾನದ ರೈಲ್ವೆಗಳು—ಹುಟ್ಟುವಳಿಯ ಲೆಕ್ಕ		24,50,000
ಮರಾಮತ್ತು ಕಾಂಗಾರಿಗಳು		2,55,000
ಒಟ್ಟು ಜುಮ್ಲಾ		2,47,92,000

ಖರ್ಚು ಬಾಬುಗಳು.

ವಾಪಸ್ ಜಮಾ	ರೂಪಾಯಿ	2,40,000
ಜಮೀನ್ ಕಂದಾಯ		17,99,000
ಜಂಗಲು		7,21,000
ಅಬ್ಕಾರಿ		3,40,000
ಸಾಯರು		15,000
ಸ್ಟಾಂಪು		25,000
ರಿಜಿಸ್ಟ್ರೇಷನ್		90,000
ಸಾಧಾರಣ ಸಾಲದ ಬಡ್ಡಿ		1,000
ಇತರ ಸಾಲದ ಬಡ್ಡಿ		3,60,000
ಲಾಭ ಅಥವಾ ನಷ್ಟ		7,000
ಅರಮನೆ		19,40,000
ಮೇಲ್ವಿಚಾರಣೆಯ ಸಿಬ್ಬಂದಿ		6,40,000
ನ್ಯಾಯ ವಿಮರ್ಶೆ—ಲಾ ಕೋರ್ಟುಗಳು		9,49,000
" ಬಂದೀಖಾನೆಗಳು		1,26,000
ಪೋಲೀಸು		10,02,000
ವಿದ್ಯಾಭ್ಯಾಸ		8,34,000
ಮುಜರಾಯಿ ಸತ್ರ ದೇವಾಲಯಗಳು		3,41,000
ವೈದ್ಯ		6,80,000
ಶಾಸ್ತ್ರೀಯವಾದ ಮತ್ತು ಇತರ ಚಿಲ್ರೆ ಇಲಾಖೆಗಳು		3,05,000
ಖರಾರುಗಳ ಮೇಲೆ ಕೊಡುವ ವೇತನಗಳು		35,87,000
ವಯೋಧಿಕಕ್ಕಾಗಿ ಕೊಡುವ ಪೆನ್ಷನುಗಳು ಮತ್ತು ವೇತನಗಳು		5,14,000
ಸಾದಿಲ್ವಾರ್ ಮತ್ತು ಛಾಪಖಾನೆ		2,11,000
ಚಿಲ್ರೆ		5,97,000
ಸೈನ್ಯ		13,50,000
ಕ್ಷಾಮದ ಸಹಾಯ		2,00,000
ಕಾವೇರಿ ವೈದ್ಯುತಶಕ್ತಿಯ ಏರ್ಪಾಡು—		
ಹುಟ್ಟುವಳಿ ಲೆಕ್ಕ		3,00,000
ಅಸಲು ಖಾವತಿ ಬಗ್ಗೆ ಉಪಯೋಗಿಸಿದ ಮೊಬಲಗು		14,35,000
ಬೆಂಗಳೂರಿನಲ್ಲಿ ದೀಪ ಮತ್ತು ಶಕ್ತಿಯ ಸರಬರಾಯಿಗೆ ಬಂಡವಾಳದ ಖರ್ಚು		1,25,000
ಸಂಸ್ಥಾನದ ರೈಲ್ವೆಗಳ ಹುಟ್ಟುವಳಿ ಲೆಕ್ಕ		23,92,000
ನೀರಾವರಿ—ಭಾರೀ ಕಾಂಗಾರಿಗಳು		9,63,000
" ಸಣ್ಣ ಕಾಂಗಾರಿಗಳು		2,08,000
ಇತರ ಮರಾಮತ್ತ್ ಕಾಂಗಾರಿಗಳು—		
ಸಿವಿಲ್ ಕಾಮಗಾರಿಗಳು		19,85,000
ಸೈನ್ಯಕ್ಕೆ ಸಂಬಂಧಪಟ್ಟ ಕಾಂಗಾರಿಗಳು		33,000
ರೈಲ್ವೆಯ ಕಟ್ಟಡ		1,27,000
ಒಟ್ಟು ಖರ್ಚು		2,47,72,000
1906—07 ನೆ ಸಾಲಿನ ಶಿಲ್ಕು		20,000

ಮೈಸೂರು ಸಂಸ್ಥಾನದ ಜಮಾ ಖರ್ಚು.

೧೯೦೪—೦೫ನೆ ಸಾಲಿಗೆ

ಜಮಾ ಬಾಬುಗಳು

	1904-05 ನಿಶ್ಚಿತ.	1905-06. ಪ್ರಥಮ.
ಜಮೀನು ಕಂದಾಯ	ರೂ. 96,63,976	ರೂ. 91,03,999
ಉಪ್ಪು	16,402	11,414
ಸ್ಟಾಂಪುಗಳು	7,15,833	7,88,418
ಅಬ್ಕಾರಿ—(ಎ) ಸಾರಾಯಿ	20,02,692	18,78,325
(ಬಿ) ಕೇಂದಿ	16,60,632	18,49,500
(ಸಿ) ಚಿಲ್ಲರೆ ಬಾಬುಗಳು	1,32,418	1,14,196
ಸಾಯರು	3,63,873	3,25,550
ಮೊಹತರ್ಫ	3,06,140	3,24,154
ಜಂಗಲು—(ಎ) ಗಂಧದ ಮರ	12,19,012	12,64,790
(ಬಿ) ಚೌಬೀನೆ	6,85,312	7,09,181
(ಸಿ) ಇತರ ಜಂಗಲೀ ಬಾಬು	17,703	15,773
(ಡಿ) ಆನೆ ಬಂಗಡಿಗಳು	2,139	63,750
ಚಿನ್ನದಗಣಿ—(ಎ) ಶೇಕಡಾ 5 ರಂತೆ ರಾಜಾಯ	16,79,760	17,74,993
(ಬಿ) ಖನಿಜಾನ್ವೇಷಣದ ಲೈಸೆನ್ಸುಗಳ ರುಸುಂ, ಹೊಸ ಗುತ್ತಿಗೆಗಳ ಮೇಲಿನ ರುಸುಂ	25,353	16,884
ರಿಜಿಸ್ಟ್ರೇಷನ್	1,18,498	1,57,846
ಅಮೃತ ಮಹಲ್	23,553	48,409
ಬಡ್ಡಿಗೆ ಹಾಕಿರುವ ಸರ್ಕಾರಿ ಹಣ ಮತ್ತು ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣ—		
(ಎ) ಸರ್ಕಾರಿ ಪತ್ರಗಳ ಮೇಲಿನ ಬಡ್ಡಿ	2,29,677	2,30,060
(ಬಿ) ಮದರಾಸ್ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣದ ಮೇಲಿನ ಬಡ್ಡಿ	89,300	62,290
ಸಾಲಗಳ ಮತ್ತು ಕಂದಾಯದ ಬಾಕಿಗಳ ಮೇಲಿನ ಬಡ್ಡಿ	ರೂ. 85,078	86,010
ನ್ಯಾಯವಿಮರ್ಶೆ—(ಎ) ಕೋರ್ಟು	49,890	52,669
(ಬಿ) ಬಂದೀಖಾನೆ	27,564	19,404
ಪೋಲೀಸ್	21,138	32,144
ವಿದ್ಯಾಭ್ಯಾಸ	1,12,933	1,20,116
ವೈದ್ಯ	1,31,788	1,00,687
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	22,344	15,114
ಲೇಖನಸಾಮಗ್ರಿ ಮತ್ತು ಅಚ್ಚು ಹಾಕುವುದು	6,252	6,592
ಮರಾಮತ್ತು ಕೆಲಸಗಳು	74,749	2,28,758
ಇತರ ಬಾಬುಗಳು	1,71,214	3,00,972
ಸರ್ಕಾರಿ ರೇಲ್ವೆ ಹುಟ್ಟುವಳಿ	9,76,245	26,14,533
ಕಾವೇರೀ ಪ್ರವಾಹದ ವೈದ್ಯುತ ಶಕ್ತಿ ನಾಹೋಪಾಯದ ಹುಟ್ಟುವಳಿ	11,45,014	18,75,355
ಜುಮ್ಲಾ ಜಮಾ ರೂಪಾಯಿ	2,1796,483	2,41,17,877

ಖರ್ಚು ಬಾಬುಗಳು.

	1904-05. ನಿಶ್ಚಿತ.	1905-06. ಪ್ರಥಮ.
ಪೊಗದಿ	ರೂ. 35,00,000	ರೂ. 35,00,000
ಅರಮನೆಯ ಖರ್ಚು	16,00,000	16,00,000
ರಾಜವಂಶೀಯರ ಪೆನ್ಷನ್‌ಗಳು	3,40,000	3,40,000
ರಾಜಕೀಯ ಪೆನ್ಷನ್‌ವೇತನಗಳು ಜಹಗೀರಿಗಳಿಗೆ ಬದಲಾಗಿ ಕೊಟ್ಟವು ಸೇರಿ	85,343	84,642
ವಾಪಸ್ ಜಮಾ ವಗೈರೆ—		
ಜಮೀನು ಕಂದಾಯದಲ್ಲಿ ಸೇರಿಹೋದ ಇರ್ರಿಗೇಷನ್ ಸೆಸ್	1,56,444	1,56,441
ಇತರ ಬಾಬುಗಳು	59,808	78,119
ಜಮೀನು ಕಂದಾಯದ ಖರ್ಚುಗಳು—		
ಡೆಪ್ಯುಟಿ ಕಮಿಷನರುಗಳೂ ಅವರ ಸಿಬ್ಬಂದಿಗಳೂ	1,93,167	1,89,978
ಅಸಿಸ್ಟೆಂಟ್ ಕಮಿಷನರುಗಳೂ ಅವರ ಸಿಬ್ಬಂದಿಗಳೂ	1,14,186	1,14,925
ತಾಲ್ಲೂಕು ಸಿಬ್ಬಂದಿಗಳು	3,89,498	4,02,686
ಸಾದಿಲ್‌ವಾರ್ ವಗೈರೆ	31,518	28,942
ನಾನಾ ಚಿಲ್ಲರೆ ಬಾಬುಗಳು	34,575	26,859
ಪಟೇಲ ಶಾನಭೋಗರಿಗೆ ಪೋಟಿಗಿ	7,67,472	7,06,955
ಸರ್ವೆ ಮತ್ತು ಸೆಟ್ಲ್‌ಮೆಂಟ್	1,71,204	1,82,008
ಇನಾಮು	7,934	7,973
ರೆವಿನ್ಯೂ ಕಮಿಷನರ್	40,683	40,242
ಸ್ಟಾಂಪುಗಳು	26,756	26,280
ಅಬ್ಕಾರಿ	3,32,736	3,26,340
ಸಾಯರು	12,890	15,685
ಜಂಗಲು (ಆನೇಬಂಗಡಿ ಸಹ)	6,47,209	7,83,519
ಚಿನ್ನದಗಣಿ	15,385	16,401
ರಿಜಿಸ್ಟ್ರೇಷನ್	85,561	87,166
ಅಮೃತ ಮಹಲ್	32,389	33,387
ಬಡ್ಡಿ—ಮೈಸೂರು ಡಿಬೆಂಚರ್ 20 ಲಕ್ಷದ ಮೇಲಿನ ಬಡ್ಡಿ	50	50
ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಡಿಪಾಜಿಟ್ಟಿನ ಬಡ್ಡಿ	2,67,021	2,89,980
ಧರ್ಮದ ಫಂಡಿನ ಬಡ್ಡಿ	15,685	15,060
ಇನ್ಷೂರೆನ್ಸು ಫಂಡಿನ ಬಡ್ಡಿ	33,394	37,268
ವಾಪಸ್ ಜಮಾ	587	1,114
ಮೇಲ್ವಿಚಾರಣೆಯ ಸಿಬ್ಬಂದಿ	5,12,618	5,21,540
ನ್ಯಾಯವಿಮರ್ಶೆ { ಕೋರ್ಟುಗಳು	9,40,685	9,48,042
ನ್ಯಾಯವಿಮರ್ಶೆ { ಬಂದೀಖಾನೆಗಳು	1,02,510	1,21,751
ಪೋಲೀಸು	9,75,390	9,92,163
ವಿದ್ಯಾಭ್ಯಾಸ	7,72,365	7,70,710
ಮುಜರಾಯಿ	3,27,663	3,47,363
ವೈದ್ಯ	5,71,933	5,91,166
ಗವರ್ನಮೆಂಟ್ ಮನೆಗಳು	1,23,746	2,90,891
ಶಾಸ್ತ್ರೀಯ, ಇತರ ಸಣ್ಣ ಇಲಾಖೆಗಳು	2,58,248	3,01,572
ನಾನಾವಿಧವಾದ ಚಿಲ್ಲರೆ ಖರ್ಚುಗಳು—		
ವಯೋಧಿಕಕ್ಕಾಗಿ ಕೊಟ್ಟ ಪೆನ್ಷನ್ ಗ್ರಾಟ್ಯುಟಿ	4,21,598	4,60,401
ಲೇಖನಸಾಧನ ಮತ್ತು ಅಚ್ಚು	1,51,603	1,32,177
ಕೊಂಡುಕೊಂಡ ಸರ್ಕಾರಿ ಪತ್ರಗಳಿಗಾಗಿ ಕೊಟ್ಟ ನಷ್ಟ	8,974	6,293
ಇತರ ಬಾಬುಗಳು	6,00,941	5,34,815
ಪ್ಲೇಗು	1,21,559	1,04,965
ಕ್ಷಾಮಪರಿಹಾರ	...	5,000
ಮರಾಮತ್ತು ಕಾಂಗಾರಿಗಳೂ	36,15,370	34,01,149
ಸೈನ್ಯ	13,27,295	13,32,820
ಸರ್ಕಾರಿ ರೈಲ್ವೆಗಳು—ಮೈಸೂರು ಹರಿಹರ ಮಾರ್ಗದ ಬಂಡವಾಳದಲ್ಲಿ ಖರ್ಚಾದ ಭಾಗದ ಮೇಲಿನ ಬಡ್ಡಿ	8,92,853	7,16,203
ಹುಟ್ಟುವಳಿ ಲೆಕ್ಕ	...	17,30,974
ರೈಲ್ವೆಗಳ ಬಂಡವಾಳದ ಲೆಕ್ಕ	25,216	3,31,313
ಕಾವೇರಿ ಪ್ರವಾಹದ ವೈದ್ಯುತಶಕ್ತಿ ನಾಹೋಪಾಯ—ಹುಟ್ಟುವಳಿ ಲೆಕ್ಕ	2,16,630	2,40,249
ಬಂಡವಾಳದ ಖರ್ಚು	9,55,379	1,02,435
ಜುಮ್ಲಾ ಖರ್ಚು ರೂಪಾಯಿ	2,18,87,833	2,31,26,019

ಹಾಸನದ ಟೋಪಿಗಳು.

128·3

ಒಳ್ಳೇ ಸಮಯ ಬಿಡಬೇಡಿರಿ

ಮೊದಲು ಹಾಸನದಲ್ಲಿದ್ದು ಹೆಸರುವಾಸಿ ಹೊಂದಿರುವ ಟೋಪಿಗಳನ್ನು ಮಾಡಿ ಪ್ರಸಿದ್ಧ ಕಿಂಗ್ ದೊರೆಸಾನಿಯವರು, ಈಗ ತುಮುಕೂರಲ್ಲಿ ಶ್ರೇಷ್ಠತರವಾದ ಟೋಪಿಗಳನ್ನು ಮಾಡಿಸುತ್ತಿದ್ದಾರೆ ಇವರಲ್ಲಿ ಮಧ್ಯಮತರದ ಟೋಪಿಗಳು ಹೆಚ್ಚಾಗಿ ಉಳಿದಿರುವದರಿಂದ ಇವನ್ನು ಒಂದು ತಿಂಗಳ ವರೆಗೆ ಕಡಿಮೆ ಕ್ರಯಕ್ಕೆ ವಿಕರಿ ಮಾಡುತ್ತಾರೆ. ಹ್ಯಾಗಂದರೆ:—

ಮೊದಲಿದ್ದ ಕ್ರಯ ಡಜನ್ 1ಕ್ಕೆ 10½ ರೂಪಾಯಿ.
ಈಗ ಮಾರುವ ಕ್ರಯ „ 9 ರೂಪಾಯಿ

ಇನ್ನೊಂದು ತರದವುಗಳು.

ಮೊದಲಿದ್ದ ಕ್ರಯ ಡಜನ್‌ಗೆ 9 ರೂಪಾಯಿ.
ಈಗ ಮಾರುವ ಕ್ರಯ 7½ ರೂಪಾಯಿ

ಮಿಶ್ರವಾದ ಬಣ್ಣದವುಗಳು.

ವಿಳಾಸ:—ಕಿಂಗ್ ದೊರೆಸಾನಿಯವರು,

ಹಾಸನದ ಟೋಪಿ ಮ್ಯಾನೇಜರ್, ತುಮುಕೂರು.

ಹಿಂದುಸ್ಥಾನದಲ್ಲಿ ಮಕ್ಕಳು

ಬಿಳಿ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 57-31

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಮೀನುಮನುಷ್ಯ ಇರುವ ಈ ಔಷಧದ ಗುರುತು

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವದು

120 6

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ನೇವಾಗ್ರದ ಸ್ಥಿತಿಯ ಪೈಕಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರ.	ಸರ್ವೆ ನಂಬರು.	ಬೀಜವರಿ. ಎಕರೆ	ಗುಂಟೆ	ಆಕಾರ. ರೂ
ಕಾವೇರಿನಾಲೆ ಕೆಳಗಿನ ಗದ್ದೆಗಳು.	೭೦	೪	,,	೬೭
	೧೦೩	೬	೨೭	೪೭
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೬	೩೭	೪೮
ಜುಂಲಾ	೩೪	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರಡಿ ಕಂಡ ಜಮೀನನ್ನು ಸಹ ಒಳ್ಳೆ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಎಲ್ಲಾದರೆ ಒಳಗಾಗಿ ಆಲೋಚಿಸಲಾಗುತ್ತದೆ

ಜಮೀನಿನ ವಿವರ.	ಸರ್ವೆ ನಂಬರು.	ಬೀಜವರಿ. ಎಕರೆ	ಗುಂಟೆ	ಆಕಾರ. ರೂ.
ಕಾವೇರಿ ನಾಲೆ ಕೆಳಗಿನ ಗದ್ದೆಗಳು	೧೧೦	೩	೧೫	೨೪
	೧೧೧	೩	೯	೨೩
	೧೧೨	೩	೯	೨೩
	೩೦	೫	೩೭	೪೩
ಜುಂಲಾ	೪	೧೫	೩೦	೧೧೩
ಮೇಲೆ ಕಂಡ ಜಮೀನ್	೩೦	೩	೪	೭೮
ಗಳಿಗೆ ಹಟ್ಟಿ	೩೭	೪	೨೫	೪೭
ಥೃವಮೈರು ಬಾಗಾಯಿತು	೯೩	೪	೧೬	೪೦
	೫೯	೪	೩೪	೩೯
ಜುಂಲಾ	೪	೧೬	೩೯	೧೪೯
ಒಟ್ಟು ಜುಂಲಾ	೧೩	೬೦	೯	೪೬೭

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೭ನೇ ನಂಬರು ಮನೆಯಲ್ಲಿರುವ ಪಾರ್ಷ ಲಿಜಿಸ್ಲೇಟಿವ್ ಮ್ಯಾನೇಜರ್ ಎಸ್. ಬಿ. ಶ್ರೀನಿವಾಸಯ್ಯಂಗಾರ್ರಿಗೆ ತಲುಪಿಸಬೇಕು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜೆಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ. ೧—೦—೦

ಪತ್ರಿಕೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೧೪—೦

೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ತಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಯೆಣ್ಣೆ ಕೆಂಪು ಮತ್ತು ತಾಜಾ ಕಪ್ಪು.

ಹಾಸನ ಪ್ಲೂಲ್ ದಾರ.

215·4

೩,೦೦೦ ಹಾಸನದ ಟೋಪಿ ಹೊಲಿಯುವ ಸುಪೀರಿಯರ್ ಪ್ಲೂಲ್ ದಾರ ಮಾತ್ರ

	ರೂ	ಆ.	ಪೈ.
೧ ಟೋಪಿ ಆಗುವ ಪ್ಲೂಲ್ ದಾರದ ಕ್ರಯ	೦	೮	೦
೧೦ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦	
ಹಾಸನ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ ೦	೧	೯	
ಈ ದಾರದಲ್ಲಿ ಆದ ಟೋಪಿ ಡಜ಼ನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ. ರಘುನಾಥ ಕಾಮತ್,
ಪ್ಲೂಲ್ ಮರ್ಚಂಟ್,
ಬೋಳಾರ, ಮಂಗಳೂರು

ಸನ್ ೧೯೦೭ ನೇ ಇಸವಿಯ

130 2

ಎಂ. ನಂ॥ ಎಚ್ ನಂ॥ ಬಿ. ನಂ॥ ಸಿ. ನಂ॥ ಹೆಚ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡಮನುಷ್ಯರು, ಮುನ್ಷಿಬಾಬ್ ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಕಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಡೇಟಿ ಲೆಕ್ಕ, ಬಡ್ಡಿಯ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸೂರ್ನ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ

ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ
ಎಫ್. ,, ,, ೪ ,, ಎಚ್ ,, ,, ೭ ,,
ಬಿ ,, ಮುಚ್ಚಳವಿದ್ದ ೫ ,, ಡಿ. ,, ಮುಚ್ಚಳವಿದ್ದ ೮ ,,

ಪೋಸ್ಟ್ ಚಾರ್ಜ್ ಬೇರೆ. ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ. ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

122—5

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚಿಗೆ ಪ್ರಸಿಡ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಕೊಳ್ಳುವ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವ ಮಾಡಿರುವ ಚೀಫ್ ಏಜಂಟ್ರಿಗೆ ಪರಭಾರೆ ಮಾಡಿಕೊಳ್ಳಬೇಕು.

ಷೇರುಗಳನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸೈನ್) ಬಿ ವಿ. ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

28—9—1906 ರಿಂದ 5—10—1906 ರ ವರೆಗೆ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದ... ಈ ... ಸಂಖ್ಯೆ
ಬೆಂಗಳೂರು ಪಟ್ಟಣ	7	8	18
ಮೈಸೂರು ,,	0	0	0
ಬೆಂಗಳೂರು ಡಿಸ್ಟ್ರಿಕ್ಟು	31	15	8
ಮೈಸೂರು ,,	0	0	3
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	5
ತುಮಕೂರು ಡಿಸ್ಟ್ರಿಕ್ಟು	13	8	0
ಹಾಸನ ,,	58	38	0
ಚಿತ್ರದುರ್ಗ ,,	0	0	0
ಕಡೂರ್ ,,	63	46	27
ಶಿವಮೊಗ್ಗ ,,	0	0	5
ಜುಮ್ಲಾ	171	110	61

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ... ತ್ಸರದ ಕಾರ್ತೀಕ ಶುದ್ಧ ಪಾಡ್ಯಮಿ ಗುರುವಾರದಿಂದ ಕಾರ್ತೀಕ ... ಸಪ್ತಮಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ.

೧೯೦೬ ನೇ ಇಸವಿ ಅಕ್ಟೋಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
18	ಗುರು §	ಪಾಡ್ಯ	50 23	ಚಿತ್ತ	20 16
19	ಶುಕ್ರ †	ಬಿದಿಗೆ	44 58	ಸ್ವಾತಿ	16·58
20	ಶನಿವಾ ‡	ತದಿಗೆ	39·18	ವಿಶಾ	13·13
21	ರವಿವಾ *	ಚೌತಿ	33·13	ಅನು	9 2
22	ಚಂದ್ರ ¶	ಪಂಚಮಿ	27-35	ಜೇ	5 1
23	ಕುಜ ,,	ಷಷ್ಟಿ	21-38	ಮೂ	0 56
24	ಬುಧ .	ಸಪ್ತಮಿ	16·12	ಪೂ ಷಾ	53 58

§ ದೀಪಾವಳಿ, ಬಲೀಂದ್ರಪೂಜಾ, ಚಂದ್ರದೀಪದಾನಂ † ... ದ್ವಿತೀಯ ‡ ರಂಜಾನ್ ಚಂದು. * ಯುಗಚತುರ್ಥಿ. ¶ ಕಾರ್ತೀಕಸೋಮವಾರ. ,, ತಿಥಿದ್ವಯಂ. . ಅಷ್ಟಮಿ...

ಪೇಟೇ ಧಾರಣೆ.

ದಿನಸು.		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ಕ್ಕೆ	ರೂ.	೧೪-೦-೦	೧೩-...
ಕೆಂಬೂತಿ ಅಕ್ಕಿ ಅವಲ್ ..		೧೩-೮-೦	೧೨-...
,, ದುಯಂ	.	೧೩-೮-೦	೧೨-...
ಜುಪ್ರಾಣಿ ಅಕ್ಕಿ	.	೧೩-೪-೦	೧೩-...
ಸಣ್ಣಕ್ಕಿ ಅವಲ್	.	೧೫-೮-೦	೧೫-...
,, ದುಯಂ	.	೧೪-೦-೦	೦೪-...
ತೊಗರೀ ಬೇಳೆ ಪಲ್ಲ ೧ಕ್ಕೆ	..	೧೭-೦-೦	೧೭-...
,, ದುಯಂ	.	೧೦-೮-೦	೧೦-...
ಹೈನ ರಾಗಿ ಪಲ್ಲ ೧ಕ್ಕೆ	..	೭-೪-೦	೮
ಕಾರ್ರಾಗಿ	..	೭-೪-೦	೬-...
ಜೋಳ	..	೭-೮-೦	೯-...
ಹಲಸಂದೆ ಪಲ್ಲ ೧ಕ್ಕೆ	.	೧೨-೦-೦	೧೧-...
ಬಿಳೀ ಅವರೆ	..	೧೧-೦-೦	೧೧-...
ಕೆಸರು	..	೧೩-೦-೦	೧೩-...
ಉದ್ದು	.	೧೨-೪-೦	೧೨-...
ಕಡಲೆ	..	೧೨-೦-೦	೧೦-...
ಎಳ್ಳು ಸೆ ೧೨೭ ಕ್ಕೆ	..	೨೦-೮-೦	೨೦...
ಹುರುಳಿ	.	೮-೮-೦	೧೦-...
ಹರಳು ೧೨೭ ಸೇರಿಗೆ	..	೧೯-೦-೦	೧೩-...
ಸೀಗೇಕಾಯಿ ಮಣ ೧ಕ್ಕೆ	.	೨-೭-೦	...
ಮೆಣಸಿನಕಾಯಿ	..	೪ ೦-೦	೩-...
,, ದುಯಂ	..	೩-೪ ೦	೩-...
ಬೆಲ್ಲ ದೊಡ್ಡ ಅಚ್ಚು	.	೪-೪-೦	ಮ ೦-...
ಒಳ್ಳೆಣ್ಣೆ ಮಣ ೧ಕ್ಕೆ	.	೬-೮-೦	೫-...
ಹರಳೆಣ್ಣೆ ,,	..	೬-೦-೦	೫-...
ಕೊತ್ತುಂಬರಿ ಪಲ್ಲ ೧ಕ್ಕೆ .	..	೧೧-೦-೦	೯-...
ಉಪ್ಪು ,,	.	೬-೦-೦	೬-...
ಹುಣಸೇ ಹಣ್ಣು	..	೦ ೧೪-೦	೧೧-...
,, ಹಳೇದು	...	೦ ೮-೦	೦-...
ಹೊಪ್ಪ ಮಣ ೧ಕ್ಕೆ		೦೬-೮-೦	೦೫-...
ಸೀಮೆಯುಂಡೆ ಪಟ್ಟ ೧ಕ್ಕೆ	.	೨ ೪-೦	೪-...
ತೆಂಗಿನಕಾಯಿ ೧೦೦ ಕ್ಕೆ		೩-೮-೦	೪-...
ಅಳಲೇಕಾಯಿ ಮಣ ೧ಕ್ಕೆ		೧ ೦-೦	೦-...
ಅಂಟ್ವಾಳದ ಕಾಯಿ ಮಣ ೧ಕ್ಕೆ		೦-೧೨-೦	೦-...
ಚಿನ್ನ (ಪೌನ್) ಕೆಂಪು	.	೧೫ ೪-೦	೧೫-...
,, ,, ಪಸಿಮೆ	..	೧೫-೧೧-೦	೧೫-...
,, ,, ಗಟ್ಟಿ ತೊಲ ೧ಕ್ಕೆ	..	೨೩-೧೨-೦	೨೩-...
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	೮೫-...

Printed and published by the Rev. E. THOMPSON, M A, the Proprietor and Ma... Wesleyan Mission Press, Mysore. 15/10/190...

ಒಕ್ಕಲಿಗರ ಮಹಾ ಸಭೆ.

ಒಕ್ಕಲಿಗರ ಮೊದಲನೆಯ ಮಹಾ ಸಭೆಯು ಮೊದಲೇ ಏರ್ಪಾಡು ಮಾಡಿದ್ದಂತೆ ಇದೇ ತಿಂಗಳು ೬, ೭ ಮತ್ತು ೮ ನೆ ತಾರೀಖುಗಳ ದಿನ ಬೆಂಗಳೂರಿನಲ್ಲಿ ಸಾಹುಕಾರ್ ದೊಡ್ಡಣ್ಣ ಶೆಟ್ಟಿ ಸ್ಕೂಲ್ ಹಾಲ್‌ನಲ್ಲಿ ನಡೆಯಿತು. ಮೈಸೂರು ಸೀಮೆಯ ಪ್ರತಿ ಡಿಸ್ಟ್ರಿಕ್ಟಿನಿಂದಲೂ ಕೊಯಮತ್ತೂರು, ಕಡಪ, ಅನಂತಪುರ ಮುಂತಾದ ಬ್ರಿಟಿಷ್ ಡಿಸ್ಟ್ರಿಕ್ಟುಗಳಿಂದ ಮತ್ತು ಹೈದರಾಬಾದು ಸಂಸ್ಥಾನದಿಂದಲೂ ಸಾವಿರದ ಎಂಟು ನೂರಕ್ಕಿಂತ ಹೆಚ್ಚಾಗಿಯೇ ಒಕ್ಕಲಿಗರ ಗೌಡರ, ಶೆಟ್ಟಿಗಳು ಮೊದಲಾದವರು ಸಭೆ ಸೇರಿದ್ದರು. ಸಭಾಸ್ಥಾನವು ಬಹು ರಮಣೀಯವಾಗಿ ಅಲಂಕರಿಸಲ್ಪಟ್ಟು ತುಂಬಿದ ಒಕ್ಕಲಿಗರ ಮಹಾ ಜನರಿಂದ ಶೋಭಾಯಮಾನವಾಗಿ ಪ್ರಕಾಶಿಸುತ್ತಿತ್ತು.

ಮೊದಲನೆ ದಿವಸದ ನಡವಳಿಕೆ.

ಮಧ್ಯಾಹ್ನ ಎರಡು ಘಂಟೆ ಸಮಯ

ಸಭಿಕರೆಲ್ಲರೂ ತಮ್ಮ ತಮ್ಮ ಸ್ಥಾನವನ್ನಲಂಕರಿಸುತ್ತಲೇ ಮಿ॥ ಕ ... ಮಹಾಶಯ, ಬಿ. ಎ. ಯವರು ಎದ್ದು ಸಭಿಕರನ್ನು ನೋಡಿ ... ಮತ್ತು ಒಕ್ಕಲಿಗರ ಸಂಘದ ಮೆಂಬರುಗಳಿಗೂ ತಾವು ಮಾಡಿದ ಪ್ರಯತ್ನಗಳು ಸಾರ್ಥಕವಾದುದಕ್ಕೋಸ್ಕರ ಉಂಟಾದ ಅಪಾರ ಸಂತೋಷವನ್ನು ಸಭಿಕರಿಗೆ ತಿಳಿಯಪಡಿಸಿದರು. ಒಕ್ಕಲಿಗರ ಸಮುದಾಯವು ಒಂದು ಕಡೆ ಸೇರುವ ಅಪೂರ್ವ ಸಂಭವವು ಸಕ್ಕರೆ ಕಾಲಕ್ಕೆ ದಿಂದ ಲಭಿಸಿದುದರಿಂದ ಆ ದಿವಸದ ಕಾರ್ಯ ಪ್ರಾರಂಭಿಸುವದಕ್ಕಿಂತ ಮುಂಚೆ ಜಗದೀಶ್ವರನಾದ ಪರಮಾತ್ಮನ ಧ್ಯಾನವು ಪುರಸ್ಸರವಾಗುವಂತೆ ಮಾಡಿದರು.

ಸ್ವಾಗತ ರಿಸೆಪ್‌ಷನ್ ಕಮಿಟಿ ಪ್ರೆಸಿಡೆಂಟರಾದ ಮಿ॥ ಟಿ. ವೆಂಕಟಯ್ಯ ... ಸಭಾಸದರೆಲ್ಲರಿಗೂ ಸುಸ್ವಾಗತವನ್ನು ಬಯಸಿ ಉಪನ್ಯಾಸ ಮಾಡಿದರು. ಸಂಘದವರ ವಿಜ್ಞಾಪನೆಗಳನ್ನು ಲಾಲಿಸಿ, ಸಭಿಕರು ಬಂದಿರುವುದಕ್ಕಾಗಿ ಅವರಿಗೆ ಸಂಘದ ಪರವಾಗಿ ವಂದನೆಗಳನ್ನು ... ಇಂತಹ ಮಹಾ ಸಭೆಗಳು ಕೂಡುವುದಕ್ಕೆ ಕಾರಣಭೂತರಾದ ಪ್ರಭುತ್ವ ಸರ್ಕಾರದವರ ಅಪ್ಪಣೆಗೆ ಕೃತಜ್ಞತಾ ಭಾವವನ್ನು ... ಸವರ್ದಾರು ಸಭಿಕರ ಸೌಕರ್ಯಕ್ಕೋಸ್ಕರವಾಗಿ ಮಾಡಿದ ಏರ್ಪಾಡುಗಳೆಲ್ಲವೂ ಅವರಿಗೆ ತೃಪ್ತಿಕರವಾಗಿ ಇರುತ್ತವೆಂದು ... ತಮ್ಮ ಉಪನ್ಯಾಸವನ್ನು ಮುಗಿಸಿದರು.

ಆದ ಮೇಲೆ ಬ್ಯಾರಿಸ್ಟರ್ ಮಿ॥ ವಿ. ನಾಗಪ್ಪನವರು ಮಹಾ ... ಅಗ್ರಾಸನವನ್ನು ಮಿ॥ ಸಾಹುಕಾರ್ ವೀರಪ್ಪನವರು ವಹಿಸ ಬೇಕೆಂದು ಯುಕ್ತವಚನಗಳಿಂದ ಕೇಳಿಕೊಂಡರು. ಸಭಿಕರೆಲ್ಲರೂ ಕರತಾಡನವನ್ನು ಮಾಡುತ್ತಿರಲು ಮಿ॥ ವೀರಪ್ಪನವರು ಅಗ್ರಾಸನವನ್ನು ಸ್ವೀಕರಿಸಿ ಸಭಿಕರನ್ನು ಅಭಿನಂದಿಸಿ ತಮಗೆ ದೇಹಸ್ವಾಸ್ಥ್ಯವಿಲ್ಲದುದರಿಂದ ತಮ್ಮ ಉಪನ್ಯಾಸವನ್ನು ಮಿ॥ ಬಿ. ಪುಟ್ಟಯ್ಯ, ಬಿ. ಎ. ಯವರು ಓದುತ್ತಾರೆಂದು ಸೂಚಿಸಿದರು. ಅದರಂತೆ ಮಿ॥ ಬಿ. ಪುಟ್ಟಯ್ಯನವರು ಓದಿದ ಉಪನ್ಯಾಸವೇನೆಂದರೆ—

ಮಾನ್ಯರಾದ ಮಹಾಜನರೇ,

ನಮ್ಮ ಕುಲದ ಏಳಿಗೆಯಲ್ಲಿ ಆಸಕ್ತರಾಗಿ ದೂರದೇಶಗಳಿಂದ ಪ್ರಯಾಣಮಾಡಿ ಬಂದು ಇಲ್ಲಿ ನಡೆಸುವ ಕಾರ್ಯಗಳನ್ನು ಸಾರ್ಥಕಪಡಿಸಲು ನನಗೆ ಸಹಾಯಮಾಡುವುದರಲ್ಲಿ ಉತ್ಸಾಹಪಡುವ ನಿಮ್ಮೆಲ್ಲರನ್ನೂ ಕಂಡು, ನಿಮ್ಮ ಸಂದರ್ಶನ ಸುಖವನ್ನು ಅನುಭವಿಸಿ, ತಾವು ನಡೆಸುವ ವ್ಯವಹಾರಗಳಲ್ಲಿ ನನ್ನ ಪಾಲಿಗೆ ಬಂದಿರುವ ಉನ್ನತ ಪದವಿಯು ನನಗೆ ಸಹಕಾರಿಯಾಗುವ ಪೂರ್ವಪುಣ್ಯವು, ಈ ದಿವಸ ದೈವಾನುಗ್ರಹದಿಂದ ಲಭಿಸಿರುವುದರಿಂದ ನಾನು ಧನ್ಯನಾಗಿರುತ್ತೇನೆ. ಈ ಸಭೆಗೆ ಅಧ್ಯಕ್ಷನನ್ನಾಗಿ ಮಾಡಿ ಅಪೂರ್ವ ಮರ್ಯಾದೆಯನ್ನು ಕೊಟ್ಟಿದ್ದಕ್ಕಾಗಿ ತಮಗೆಲ್ಲರಿಗೂ ಅತ್ಯಂತ ಕೃತಜ್ಞನಾಗಿರುತ್ತೇನೆ. ಇಂಥ ಮಹಾಸಭೆಯು ನೆರೆದಿರುವದು ಇದೇ ಮೊದಲನೇ ವರ್ಷವಾಗಿ. ಮತ್ತು ಇದು ಸೇರಲು ಉಂಟಾದ ಕಾರಣವು ತುಂಬಾ ಸೂಚಕವಾಗಿರುತ್ತದೆ. ಹಿಂದೆ ಯಾವಾಗಲೂ ವಿದ್ಯಾಶೂನ್ಯರಾಗಿಯೇ ಇದ್ದ ಒಕ್ಕಲಿಗರ ಜನರಲ್ಲಿ ಕೆಲವರು ಇಂಗ್ಲೀಷಿನ ನಾಗರೀಕತೆಗಳು ಅತಿ ವಿಸ್ತಾರವಾಗಿ ಹರಡುತ್ತಿರುವ ಈ ಕಾಲದಲ್ಲಿ ವಿದ್ಯಾವಂತರಾಗಿ, ತಮ್ಮ ಕುಲದವರು ವಿದ್ಯೆಯಿಲ್ಲದೆ ಕಷ್ಟಪಡುತ್ತಿರುವುದನ್ನು ನೋಡಿ ಅದನ್ನು ವೃದ್ಧಿಪಡಿಸಬೇಕೆಂದು ಉತ್ಸಾಹವುಳ್ಳವರಾಗಿ ಒಂದು ಸಂಘವನ್ನು ಏರ್ಪಡಿಸಿಕೊಂಡಿರುವುದು ಒಕ್ಕಲಿಗರೆಲ್ಲರಿಗೂ ಹರ್ಷವನ್ನುಂಟುಮಾಡದಿರಲಾರದು. ... ಇಲ್ಲದೆ ಯಾವ ಕೆಲಸವನ್ನು ಮಾಡುವುದಕ್ಕೆ ತೊಡಗಿದರೂ ವಿದ್ಯೆಯಿಂದ ಹೊರತು ಸಾಧ್ಯವಾಗದು ನಿಶ್ಚಯವಾದುದರಿಂದ ಈ ಕಾಲದಲ್ಲಿ ಎಲ್ಲಾ ಜಾತಿಯ ಜನರೂ ವಿದ್ಯಾವಂತರಾಗುವುದರಲ್ಲೇ ತೊಡಗಿದ್ದಾರೆ. ಇಂಗ್ಲೀಷರು ತುಂಬಾ ವಿದ್ಯಾಪಾಂಡಿತ್ಯವನ್ನು ಹೊಂದಿರುವುದರಿಂದಲೇ ಈಗ ಸಕಲ ಸಾಮ್ರಾಜ್ಯಾಧಿಪತಿಗಳಾಗಿ ಶೋಭಿಸುತ್ತಿರುವರು. ಜಪಾನ್ ದೇಶವು ೫೦ ವರುಷಗಳ ಹಿಂದೆ ಪ್ರಪಂಚದ ರಾಜ್ಯಗಳಲ್ಲಿ ಬಹಳ ಕನಿಷ್ಠವಾದುದಾಗಿದ್ದರೂ ವಿದ್ಯೆಯನ್ನು ಪಡೆದುದರಿಂದ ಈಗ ನವನಾಗರೀಕತೆಗಳನ್ನು ಹೊಂದಿ ಅತ್ಯುನ್ನತಿಯನ್ನು ಪಡೆದಿರುವುದು. ವಿದ್ಯೆಯ ಮಹಿಮೆಯು ಅಪಾರವಾದುದು. ಇಂಗ್ಲೆಂಡ್, ಜರ್ಮನಿ, ಅಮೇರಿಕ, ಜಪಾನ್ ಮುಂತಾದ ರಾಜ್ಯಗಳಲ್ಲಿ ಪ್ರತಿಯೊಬ್ಬ ಮನುಷ್ಯನೂ ವಿದ್ಯೆಯನ್ನು ಕಲಿಯಬೇಕೆಂಬ ನಿರ್ಬಂಧವು ... ಆವಶ್ಯಕವಾಗಿರುವುದು. "ವಿದ್ಯಾವಿಹೀನಃ ಪಶುಃ" ಅಂದರೆ ವಿದ್ಯೆಯಿಲ್ಲದವನು ಪಶುವಿಗೆ ಸಮಾನನೆಂದು ನಮ್ಮಲ್ಲಿ ಹೇಳುವುದುಂಟು. ಈ ವಾಕ್ಯದ ಅರ್ಥವನ್ನು ಮಾತ್ರ ಗ್ರಾಹ್ಯಕ್ಕೆ ತಂದುಕೊಂಡು ಆ ವಾಕ್ಯವು ಬೋಧಿಸುವ ಭಾವವನ್ನು ಆಚರಣೆಗೆ ತರುವುದಕ್ಕೆ ಪ್ರಯತ್ನಪಡುವವರು ವಿರಳರಾಗಿದ್ದಾರೆ.

ನಮ್ಮ ಮೈಸೂರು ದೇಶದಲ್ಲಿ ಒಕ್ಕಲಿಗರ ಜನರು ೧೩ ಲಕ್ಷ ಪ್ರಜೆಗಳಿರುತ್ತಾರೆ. ಅಂದರೆ ಶೇಕಡಾ ೨೫ ಕ್ಕಿಂತ ಹೆಚ್ಚಾಗಿಯೇ ಇದ್ದಾರೆ. ಆದುದರಿಂದಲೇ ಸಂಸ್ಥಾನಕ್ಕೆ ಒಕ್ಕಲಿಗರು ಮುಖ್ಯ ಬೆಂಬಲರೆಂದು ನಮ್ಮ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದರು. ಸಂಸ್ಥಾನದ ಹುಟ್ಟುವಳಿಯಲ್ಲಿ ಜಮೀನಾ ಕಂದಾಯದ ಉತ್ಪತ್ತಿಯೇ ಹೆಚ್ಚಾದುದರಿಂದ ಈ ಬಾಬಿನಲ್ಲಿ ಸಂಸ್ಥಾನಕ್ಕೆ ಆಗುವ ಹುಟ್ಟುವಳಿಯೆಲ್ಲವೂ ಬಹುಳ ಮಟ್ಟಿಗೆ ಒಕ್ಕಲಿಗರಿಂದ ಉತ್ಪತ್ತಿಯಾಗುತ್ತದೆಂದು ಧಾರಾಳವಾಗಿ ಹೇಳಬಹುದು. ಸಂಸ್ಥಾನದ ಭದ್ರತೆಗೆ ಆಧಾರಭೂತರಾಗಿದ್ದರೂ ಒಕ್ಕಲಿಗರು ಬಲು ಕಷ್ಟಪಡುವ ಮೂಕಪ್ರಜೆಗಳಾಗಿ ಮಾನ ಪುರಸ್ಸರಕ್ಕೂ ಕಾರಣಭೂತರಾಗದ ಶೋಚನೀಯವಾದ ಸ್ಥಿತಿಯಲ್ಲಿರುತ್ತಾರೆ. ಸಜ್ಜನರಲ್ಲಿ ಹುಟ್ಟಿ ಯಾವ ಉತ್ತಮತರವಾದ ಆಶಯಗಳನ್ನೂ ಉಂಟಾಗಗೊಡದ ಅಜ್ಞಾನಾಂಧಕಾರದಲ್ಲಿ ತೊಳಲುತ್ತಾ ಕಾಲಪ್ರಯಾಣ ಮಾಡುತ್ತಿರುವ ನಮ್ಮ ಜನರ ಪಾಡು ಬಹಳ ದುಃಖಕರವಾಗಿರುತ್ತದೆ. ಧೈರ್ಯ, ಸ್ಥೈರ್ಯ, ದೃಢವಾದ ಕಾಯಶಕ್ತಿ, ಉದಾರಸ್ವಭಾವ, ಭಕ್ತಿವಿಶ್ವಾಸ, ಕೃತಜ್ಞತಾಭಾವ, ತಾಳ್ಮೆ ಮುಂತಾದ ಸುಗುಣಗಳು ನಮ್ಮ ಜನಗಳಲ್ಲಿದ್ದರೂ ಇವರು ವಿದ್ಯಾವಿಹೀನರಾಗಿರುವುದರಿಂದ ಈ ಸದ್ಗುಣಗಳನ್ನು ವಿನಿಯೋಗಿಸಬೇಕಾದ ಮಾರ್ಗಗಳಲ್ಲಿ ಉಪಯೋಗಿಸದೆ ತುಂಬಾ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ. ಸಮುದ್ರ ಮಧ್ಯಭಾಗದಲ್ಲಿ ಅಭಿರುಚಿಯುಳ್ಳ ಮನುಷ್ಯನು ಬರೀ ನೀರನ್ನು ಪಾನ ಮಾಡುವುದರಿಂದ ಉಂಟಾಗುವ ಸುಖವನ್ನು ಹೇಗೆ ಅರಿಯನೋ, ಯಾವಾಗಲೂ ವಿಸಾನಿಸ ವಾಸನೆಯನ್ನೇ ಆಘ್ರಾಣಿಸುತ್ತಿರುವ ಜೇನ್ನೊಣವು ಸುವಾಸನೆಯುಳ್ಳ ಪುಷ್ಪಗಳ ಗಂಧವನ್ನು ಹೇಗೆ ಅನುಭೋಗಿಸಲಾರದೋ ಹಾಗೆ ಚಿರಕಾಲ ಅಂಧಕಾರದಲ್ಲೇ ವಾಸಮಾಡಿಕೊಂಡಿರುವ ಜನರು ಬೆಳಕಿನ ಅಮೂಲ್ಯವಾದ ಪ್ರಯೋಜನವನ್ನು ಅರಿಯಲು ಸಮರ್ಥರಾಗುವುದು ಕಷ್ಟ. ಕತ್ತಲೆಯಲ್ಲಿ ಒಬ್ಬಂಟಿಗನಾಗಿರುವುದರಿಂದ ನಮಗೆ ಸಂಭವಿಸುವ ಕಷ್ಟಗಳು ಎಂದಿಗೆ ನಮ್ಮನ್ನು ಕಣ್ಣು ತೆರೆಯುವಂತೆ ಮಾಡಿ ಬೆಳಕನ್ನು ಹುಡುಕಿಕೊಂಡು ಹೋಗುವುದಕ್ಕೆ ಪ್ರೇರಿಸುವವೋ ಆಗ ಬೆಳಕಿನ ಪ್ರಯೋಜನಗಳು ನಮ್ಮ ಸ್ಫೂರ್ತಿಗೆ ಬರುತ್ತವೆ. ಹಾಗೆ ಅಜ್ಞಾನದಿಂದ ನಾವು ಈಗ ಅನುಭವಿಸುತ್ತಿರುವ ಕಷ್ಟಗಳು ಕಷ್ಟಗಳಾಗಿ ತೋರದಿದ್ದರೂ ಒಂದಲ್ಲೊಂದು ದಿವಸ ಕಷ್ಟಗಳಾಗಿ ಪರಿಣಮಿಸಿ ಅವುಗಳ ನಿವಾರಣೆಗೆ ಮಾರ್ಗವನ್ನು ಹುಡುಕುವಂತೆ ನಮ್ಮನ್ನು ಪ್ರೇರಿಸುವುದರಲ್ಲಿ ಸಂದೇಹವಿಲ್ಲ. ಆದರೂ ತನ್ನ ಕಷ್ಟಗಳನ್ನು ತಾನಾಗಿ ಅರಿತು ಬುದ್ಧಿವಂತನಾಗುತ್ತೇನೆಂದುಕೊಂಡು ಹೇಳಿದ ಬುದ್ಧಿವಾದಗಳನ್ನು ಉಲ್ಲಂಘಿಸುವ ಪ್ರತಿಯೊಬ್ಬ ಮನುಷ್ಯನಿಗೂ ಸನ್ಮಾರ್ಗದರ್ಶಕಗಳಾದ ಉಪನ್ಯಾಸಗಳೂ, ಸಭೆಗಳೂ, ಬುದ್ಧಿವಾದಗಳೂ ಪ್ರಯೋಜನಕಾರಿಗಳಾಗುವುದಿಲ್ಲ. ಆದುದರಿಂದ ಈ ಮಹಾ ಸಭೆಯ ಉದ್ದೇಶಗಳಲ್ಲಿ ಅನುರಾಗವಿಲ್ಲದವರ ಮೇಲೆ ನಮಗೇನೂ ವೈಷಮ್ಯವಿರುವುದಿಲ್ಲ. ಏಕೆಂದರೆ, ಅವರ ಅಭಿಪ್ರಾಯಗಳು ಈಗ ಭಿನ್ನವಾದವುಗಳಾಗಿದ್ದರೂ ಕ್ರಮೇಣ ಅವರಿಗೆ ಅಭಿಮಾನ ಹುಟ್ಟುತ್ತದೆಂದು ನಾವು ದೃಢವಾಗಿ ನಂಬಿದ್ದೇವೆ.

ವಿದ್ಯೆಯೆಂದರೆ ಬರೀ ಓದುಬರಹವೆಂದೇ ಅರ್ಥವಲ್ಲ. ಓದುಬರಹಗಳ ಮೂಲಕ ವೃದ್ಧಿಪಡಿಸಿದ ತಿಳುವಳಿಕೆಯೇ ವಿದ್ಯೆ. ಯಾವನು ಒಳ್ಳೇ ತಿಳುವಳಿಕೆಯುಳ್ಳವನೋ ಅವನೇ ವಿದ್ಯಾವಂತನು. ಅನೇಕ ಪುಸ್ತಕಗಳನ್ನು ಓದಿ ಅನೇಕ ಗ್ರಂಥಗಳನ್ನು ಬರೆದರೂ ತಿಳುವಳಿಕೆ ಇಲ್ಲದಿದ್ದರೆ ಓದಿದ ಓದೂ ಬರೆದ ಪುಸ್ತಕಗಳೂ ಪ್ರಯೋಜನಕಾರಿಗಳಾಗುವುದಿಲ್ಲ. ಓದುಬರಹವನ್ನು ಕಲಿತುಕೊಂಡರೆ ಬುದ್ಧಿವಂತರಾಗುವುದಕ್ಕೆ ಮಾರ್ಗವನ್ನು ಹಿಡಿದುಕೊಂಡ ಹಾಗಾಯಿತು. ಓದುಬರಹವನ್ನು ಕಲಿತುಕೊಂಡು ಕೆಟ್ಟ ಪುಸ್ತಕಗಳನ್ನೋದಿದರೆ, ಅನೇಕ ಕೆಟ್ಟ ಯೋಚನೆಗಳು ಮನಸ್ಸಿನಲ್ಲಿ ಹುಟ್ಟಿ ನಮ್ಮನ್ನು ದುಷ್ಟರನ್ನಾಗಿ ಮಾಡುತ್ತವೆ— ಅಂದರೆ, ನಮ್ಮ ಬುದ್ಧಿಯು ಕೆಟ್ಟ ಮಾರ್ಗದಲ್ಲಿ ಪ್ರವರ್ತಿಸುತ್ತದೆ; ಮತ್ತು ನಾವು ಕಲಿತ ಓದಿನಿಂದ ವಿದ್ಯಾವಂತರಾದಂತಾಗಲಿಲ್ಲ. ಯಾರು ಸದ್ಗ್ರಂಥಗಳನ್ನು ವ್ಯಾಸಂಗಮಾಡುತ್ತಾರೋ ಅವರ ಬುದ್ಧಿಯು ಸತ್ಪಥದಲ್ಲಿ ಪ್ರವರ್ತಿಸುತ್ತದೆ. ಒಳ್ಳೇ ಯೋಚನೆಗಳು ಹುಟ್ಟುತ್ತವೆ. ಮತ್ತು ಸತ್ಕಾರ್ಯಗಳನ್ನು ಮಾಡಲು ತೊಡಗುತ್ತೇವೆ. ಆಗ ನಾವು ಓದಿದ ಓದು ನಮ್ಮನ್ನು ವಿದ್ಯಾವಂತರನ್ನಾಗಿ ಮಾಡಿತು ಎಂದು ಹೇಳುವುದಕ್ಕಾಗುವುದು. ಓದುವುದಕ್ಕೆ ಬಂದಾಕ್ಷಣವೇ ವಿದ್ಯಾವಂತರಾದೆವೆಂದು ತಿಳಿದುಕೊಳ್ಳುವುದು, 'ರಾಮ, ಕೃಷ್ಣ' ಎಂದು ಅನ್ನುವುದಕ್ಕೆ ಕಲಿತುಕೊಂಡ ಗಿಣಿಗೆ ಮಾತನಾಡುವುದಕ್ಕೆ ಬರುತ್ತದೆಂದು ಹೇಳಿದಂತಾಗುತ್ತದೆ. ಈಗಿನ ಕಾಲದಲ್ಲಿ ಫೋನೋಗ್ರಾಫ್ ಎಂಬ ಮಾತನಾಡುವ ಯಂತ್ರಗಳೂ ಲೆಕ್ಕಗಳನ್ನು ಮಾಡುವ ಯಂತ್ರಗಳೂ ಬಂದಿವೆ. ಇವುಗಳಿಗೆ ವಿದ್ಯೆ ಬಂದಿದೆ ಎಂದು ಹೇಳುವುದಕ್ಕಾದೀತೇ? ಓದು ಬರಹವನ್ನು ಕಲಿತುಕೊಳ್ಳುವುದರಿಂದ ಅನೇಕಾನೇಕ ಮಹನೀಯರು ಬರೆದಿರತಕ್ಕಂಥಾ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವುದಕ್ಕೂ ತಿಳಿದುಕೊಂಡದ್ದನ್ನು ಇತರರ ಉಪಯೋಗಾರ್ಥವಾಗಿ ಪ್ರಚುರಪಡಿಸುವುದಕ್ಕೂ ಅನುಕೂಲವಾಗುತ್ತದೆ. ನಾವು ಒಳ್ಳೆಯವರಾಗಬೇಕಾದರೆ ಒಳ್ಳೇದನ್ನೇ ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೇವೆ. ಕೆಟ್ಟವರಾದರೆ ಕೆಟ್ಟದ್ದನ್ನು ತಿಳಿಯಲು ಬಯಸುತ್ತೇವೆ. ಈಗ ವಿದ್ಯಾವಿಹೀನರಾದ ಒಕ್ಕಲಿಗರ ಬಾಲಕರಿಗೆ ವಿದ್ಯೆಯನ್ನು ಒದಗಿಸಿಕೊಡಬೇಕೆಂಬುವುದು ನಮ್ಮ ಉದ್ದೇಶವಾಗಿದೆ. ಅಂದರೆ, ಅವರನ್ನು ಬುದ್ಧಿವಂತರು ಮತ್ತು ತಿಳುವಳಿಕೆಯುಳ್ಳವರನ್ನಾಗಿ ಮಾಡಬೇಕೆಂಬುವುದೇ ನಮ್ಮ ಆಶಯವು. ತಿಳುವಳಿಕೆ ಇಲ್ಲದೇ ಇರುವುದು ಒಂದು ದೊಡ್ಡ ನ್ಯೂನತೆಯಾದಾಗ್ಯೂ ಕೆಟ್ಟ ತಿಳುವಳಿಕೆಯಿಂದ ನ್ಯೂನತೆ ಹೋಗುವುದಿಲ್ಲ; ಒಳ್ಳೇ ತಿಳುವಳಿಕೆಯಿಂದ ಹೋಗುತ್ತದೆ. ಆದುದರಿಂದ ಒಳ್ಳೇ ತಿಳುವಳಿಕೆಯನ್ನು ಸಂಪಾದಿಸುವದೇ ವಿದ್ಯೆಯ ಮಹಾ ಪ್ರಯೋಜನ. ಈ ಕಾರಣದಿಂದಲೇ ವಿದ್ಯಾವಂತನು ಎಲ್ಲೆಲ್ಲಿಯೂ ಸುಗುಣಶಾಲಿ ಎಂದು ಭಾವಿಸಲ್ಪಟ್ಟು ಪೂಜ್ಯನಾಗುವನು. ಬರೀ ಪಾಂಡಿತ್ಯವಿದ್ದ ಮಾತ್ರಕ್ಕೇ ಒಬ್ಬನನ್ನು ವಿದ್ಯಾವಂತನೆಂದು ಹೇಳುವುದಕ್ಕಾಗುವದಿಲ್ಲ. ಅದರೊಂದಿಗೆ ಗುಣವೂ ಇರಬೇಕು.

ನಮ್ಮ ಜನರು ಓದುಬರಹವೇ ವಿದ್ಯೆ ಎಂದು ತಿಳಿದುಕೊಂಡು 'ಬೇಸಾಯ ಮಾಡುವವನಿಗೆ ಓದುಬರಹವೇತಕ್ಕೆ?' ಅನ್ನುವದುಂಟು. ಹಾಗಲ್ಲ. ಯಾವ ಯಾವ ದೇಶದವರು ಯಾವ ಯಾವ ರೀತಿಯಲ್ಲಿ ಬೇಸಾಯ ಮಾಡುತ್ತಾರೆ? ನಾವು ಈ ಕೆಲಸಕ್ಕೆ ಉಪಯೋಗಿಸುತ್ತಿರುವ ಸಾಮಗ್ರಿಗಳಿಗಿಂತಲೂ ಇನ್ನ್ಯಾರಾದರೂ ಉತ್ತಮವಾದವುಗಳನ್ನು ಉಪಯೋಗಿಸುತ್ತಾರೆಯೆ? ನಾವು ಒಂದು ವರ್ಷಕ್ಕೆ ಒಂದೇ ಫಸಲನ್ನು ತೆಗೆಯುತ್ತೇವಲ್ಲ. ಇನ್ನ್ಯಾರಾದರೂ ಹೆಚ್ಚು ಫಸಲುಗಳನ್ನು ತೆಗೆಯುತ್ತಾರೆಯೋ? ತೆಗೆಯುವುದಾದರೆ ಅವರು ಮಾಡುವ ಕ್ರಮಗಳೇನು? ನಾವು ಉಪಯೋಗಿಸುತ್ತಿರುವ ಗೊಬ್ಬರಕ್ಕಿಂತಲೂ ಒಳ್ಳೇದಾದ ಗೊಬ್ಬರವು ದೊರೆಯಬೇಕಾದರೆ ಏನು ಮಾಡಬೇಕು? ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ತಿಳಿದುಕೊಳ್ಳುವುದೇ ವಿದ್ಯೆಯಲ್ಲದೆ ನಮ್ಮ ಓದುವದನ್ನೂ ಬರೆಯುವುದನ್ನೂ ಕಲಿತುಕೊಳ್ಳುವುದು ಮಾತ್ರವೇ ವಿದ್ಯೆಯಲ್ಲ. ತಿಳುವಳಿಕೆಯನ್ನು ಉಂಟುಮಾಡುವುದಕ್ಕೆ ಓದುಬರಹಗಳೇ ಸಹಕಾರಿಗಳಾದುದರಿಂದ ಅವುಗಳನ್ನು ಕಲಿತುಕೊಳ್ಳಲು ಮೊದಲು ಅಭ್ಯಾಸಮಾಡಿ, ನಂತರ ನಮ್ಮ ಕಸುಬಿನ ವಿಚಾರವಾಗಿ ಬರೆದಿರತಕ್ಕಂಥಾ ಪುಸ್ತಕಗಳನ್ನು ಓದಿ ತಿಳುವಳಿಕೆಯನ್ನು ಪಡೆದುಕೊಳ್ಳಬೇಕು. ನಾವುಗಳು ಯಾವ ಯಾವ ಕಸುಬುಗಳನ್ನು ಮಾಡುತ್ತಿರುತ್ತೇವೋ ಆಯಾ ಕಸುಬುಗಳ ವಿಚಾರವಾಗಿ ಹೆಚ್ಚು ತಿಳುವಳಿಕೆಯನ್ನು ಸಂಪಾದಿಸಿ, ಈಗ ಬರುತ್ತಿರುವ ವರಮಾನಕ್ಕಿಂತಲೂ ಹೆಚ್ಚು ವರಮಾನವನ್ನು ಪಡೆಯಲಿಕ್ಕೆ ಬುದ್ಧಿಯನ್ನು ಉಪಯೋಗಿಸಬೇಕು. ಈಗಿನ ಸ್ಥಿತಿಗಿಂತಲೂ ಉನ್ನತಸ್ಥಿತಿಗೆ ಬಂದು ಉದರಭರಣವೇ ಮುಖ್ಯವಾದ ಕರ್ತವ್ಯವೆಂಬ ಅಭಿಪ್ರಾಯವನ್ನು ತ್ಯಜಿಸಿ, ಇತರರ ಕಷ್ಟ ಪರಿಹಾರಮಾಡುವುದರಲ್ಲಿ ತಮ್ಮ ವಿದ್ಯೆಯನ್ನೂ ದ್ರವ್ಯವನ್ನೂ ಉಪಯೋಗಿಸಿ ದೇವರಲ್ಲಿ ಭಕ್ತಿಯುಳ್ಳವರಾಗಿ ವರ್ತಿಸುವುದೇ ವಿದ್ಯಾವಂತರ ಲಕ್ಷಣವಾಗಿರುತ್ತದೆ.

ಈಗ ನಮ್ಮ ಒಕ್ಕಲಿಗರ ಜನರಲ್ಲಿ ಕೆಲವರು ಬೆಳಗಿನ ಸೂರ್ಯೋದಯದಿಂದ ಸೂರ್ಯಾಸ್ತಮಯದ ವರೆಗೂ, ಬಿಸಿಲಿನಲ್ಲೂ ಮಳೆಯಲ್ಲೂ ದುಡಿದು ಸಂಪಾದಿಸಿದ ದ್ರವ್ಯವನ್ನು ವಿನಿಯೋಗಿಸುವ ಉಪಾಯವು ತಿಳಿಯದೆ ದುರ್ವ್ಯಯ ಮಾಡುತ್ತಾರೆ. ಇಂತಹ ಅವ್ಯವಸ್ಥೆಗಳಿಗೆಲ್ಲಾ ಅವಿದ್ಯೆಯೇ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಓದಿ ತಿಳುವಳಿಕೆಯುಳ್ಳವರಾಗಿದ್ದರೆ ತಾವು ಮಾಡುವ ಕುಲಕಸುಬನ್ನು ಯಾವ ರೀತಿ ಅಭಿವೃದ್ಧಿಪಡಿಸಿಕೊಳ್ಳಬೇಕೆಂಬುವುದನ್ನು ಮತ್ತು ಸಂಪಾದಿಸಿದ ದ್ರವ್ಯವನ್ನು ಯಾವ ಬಗೆಯಾಗಿ ವ್ಯಯಮಾಡಬೇಕೆಂಬುದನ್ನು ತಿಳಿದುಕೊಂಡು ಸುಖಪಡುತ್ತಿದ್ದರು.

ಈಗಿನ ಕಾಲದಲ್ಲಿ ವಿದ್ಯೆಯನ್ನು ಪಡೆಯುವುದು ಸರ್ಕಾರಿ ಉದ್ಯೋಗ ಮಾಡುವುದಕ್ಕೋಸ್ಕರವೆಂದು ನಮ್ಮಲ್ಲಿ ತಿಳಿದುಕೊಂಡಿರುವುದು ರೂಢಿಯಾಗಿದೆ. ಆದರೆ ವಿದ್ಯಾವಂತರೆಲ್ಲರಿಗೂ ಕೊಡುವುದಕ್ಕೆ ಸರ್ಕಾರಿ ಉದ್ಯೋಗಗಳು ದೊರೆಯಲಾರವೆಂಬುವುದನ್ನು ನಾವು ಚೆನ್ನಾಗಿ ನೆನಪಿನಲ್ಲಿಡತಕ್ಕದ್ದಾಗಿರುತ್ತದೆ. ಅದರೂ ಎಲ್ಲರೂ ಸರ್ಕಾರಿ ಉದ್ಯೋಗಗಳನ್ನು ಮಾಡಿಕೊಳ್ಳುವುದಕ್ಕೇ ಪ್ರಯತ್ನಪಡುವುದು ನೋಡಿದರೆ ಕಸುಬುದಾರಿ ಕೆಲಸಗಳನ್ನು ಮಾಡುವುದು ನಿಕೃಷ್ಟವೆಂದು ತಿಳಿದುಕೊಂಡಿರುವುದು ಒಂದು ಕಾರಣವಿರಬಹುದೆಂದು ಊಹಿಸಬಹುದು. ಹೀಗೆ ತಿಳಿದುಕೊಳ್ಳುವುದು ಬಹಳ ತಪ್ಪು. ಕಸುಬುಗಳನ್ನು ಮಾಡುವುದು ಅಗೌರವವಲ್ಲವೆಂದು ವಿದ್ಯಾವಂತರು ತಿಳಿದುಕೊಂಡು ಅವುಗಳನ್ನು ಹೆಚ್ಚು ಬುದ್ಧಿಶಕ್ತಿಯಿಂದ ಮಾಡಿಕೊಂಡು ಬರುವದಕ್ಕೆ ಪ್ರಯತ್ನಪಡುವುದರಿಂದ ಆ ಕಸುಬುಗಳು ತುಂಬಾ ಅಭಿವೃದ್ಧಿಸ್ಥಿತಿಗೆ ಬರುವುದೂ ಅಲ್ಲದೆ ಅವುಗಳಿಂದ ಉತ್ಕೃಷ್ಟರಾದಂಥಾವರಿಗೆ ಲಾಭವೂ ಗೌರವವೂ ಲಭಿಸುವವು. ಇಂಗ್ಲೀಷರು ವಿದ್ಯಾವಂತರಾಗಿ ತಾವು ಕಲಿತ ವಿದ್ಯೆಯನ್ನು ಕಸುಬುದಾರಿ ಕೆಲಸಗಳಲ್ಲಿ ಉಪಯೋಗಿಸಿ ಅವುಗಳನ್ನು ವಿಶೇಷ ಅಭಿವೃದ್ಧಿಗೆ ತಂದು ಆ ಮೂಲಕ ಐಶ್ವರ್ಯವನ್ನೂ ಗಣನೆಯನ್ನೂ ಹೊಂದಿರುವುದರಿಂದಲೇ ಹೌಸ್ ಆಫ್ ಕಾಮನ್ಸ್ ಎಂಬ ಮಹಾಸಭೆಯು ಏರ್ಪಟ್ಟು ಅದರ ಮೂಲಕ ರಾಜ್ಯಭಾರದ ಏರ್ಪಾಟುಗಳು ನಡೆಸಲ್ಪಡುತ್ತಿರುತ್ತವೆ. ಮತ್ತು ಪ್ರತಿಮನುಷ್ಯನು ಮಾಡಲುಪಕ್ರಮಿಸಿದ ಕಸುಬಿನಲ್ಲಿ, ಅನೇಕಾನೇಕ ಹೊಸ ವಿಷಯಗಳು ಕಂಡು ಹಿಡಿಯಲ್ಪಟ್ಟು, ಜನರ ತಿಳುವಳಿಕೆ ಮತ್ತು ಸಂಪತ್ತುಗಳು ವಿಶೇಷವಾಗಿ ಅಭಿವೃದ್ಧಿಗೆ ತರಲ್ಪಟ್ಟಿವೆ. ಕೃಷಿಶಾಸ್ತ್ರ, ವೃಕ್ಷಶಾಸ್ತ್ರ, ಭೌತಿಕಶಾಸ್ತ್ರ, ಶರೀರಶಾಸ್ತ್ರ, ಮನಶ್ಶಾಸ್ತ್ರ, ಭೂಗರ್ಭಶಾಸ್ತ್ರ, ಕೈಗಾರಿಕೆ, ವ್ಯಾಪಾರ, ಕಾವ್ಯ ಮುಂತಾದ ಒಂದೊಂದು ವಿಷಯದಲ್ಲೂ ಮಹಾ ಆಶ್ಚರ್ಯಕರವಾದ ಅಭಿವೃದ್ಧಿಯುಂಟಾಗಿ ಜನರ ಮನಸ್ಸನ್ನು ಆಕರ್ಷಿಸುತ್ತಿದೆ. ದೇಶವು ಎಲ್ಲೆಲ್ಲಿಯೂ ಸುಭಿಕ್ಷವನ್ನು ಹೊಂದಿ ಜನರು ಸುಖಿಗಳಾಗಿ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿ ಉತ್ಸಾಹದಿಂದಿರುವರು. ಜಪಾನ್ ರಾಜ್ಯವು ಇಂಗ್ಲೆಂಡ್ ಮತ್ತು ಅಮೇರಿಕಾ ದೇಶದವರ ಮೇಲ್ಪಂಕ್ತಿಯನ್ನು ಹಾಕಿಕೊಂಡು, ವಿದ್ಯೆಯನ್ನು ಪಡೆದುದರಿಂದಲೇ ಈಗ ಆ ರಾಜ್ಯಗಳ ಸಮಾನಸ್ಥಿತಿಗೆ ಬಂದು ತನ್ನ ಕೀರ್ತಿಯನ್ನು ಎಲ್ಲೆಲ್ಲಿಯೂ ಹರಡುತ್ತಿರುವುದು.

ನಮ್ಮ ದೇಶದಲ್ಲಿ ಆಗಾಗ್ಗೆ ಕ್ಷಾಮ ರೋಗಾದಿ ಉಪದ್ರಗಳು ತಲೆದೋರುತ್ತಿರುವುದಕ್ಕೆ ಜನರ ಅಜ್ಞಾನವು ಒಂದು ಕಾರಣವಾಗಿರುತ್ತದೆಂದು ಹೇಳಬಹುದು. ಜನರು ತಿಳುವಳಿಕೆಯುಳ್ಳವರಾಗಿ ಅರ್ಥಶಾ

ಸ್ತ್ರಪರಿಜ್ಞಾನವನ್ನು ಪಡೆದು ತಾವು ಸುಭಿಕ್ಷಕಾಲದಲ್ಲಿ ಶೇಖರಿಸಿಟ್ಟ ಧನಧಾನ್ಯವನ್ನು ವಿನಿಯೋಗಪಡಿಸಿಕೊಳ್ಳುವ ರೀತಿಯನ್ನು ತಿಳಿದವರಾಗಿಯೂ ಆರೋಗ್ಯಶಾಸ್ತ್ರವನ್ನು ತಿಳಿದುಕೊಂಡು ತಮ್ಮ ತಮ್ಮ ಮನೆ, ಗ್ರಾಮ ಮತ್ತು ಪಟ್ಟಣಗಳನ್ನು ಶುಚಿಯಾಗಿಟ್ಟುಕೊಳ್ಳಲು ಅರಿತವರಾಗಿಯೂ ಇದ್ದರೆ ಪದೇ ಪದೇ ನಮ್ಮ ದೇಶದಲ್ಲಿ ತಲೆದೋರುತ್ತಿರುವ ಭಯಂಕರವಾದ ಕ್ಷಾಮ, ಪ್ಲೇಗ್, ಕಾಲರಾ ಮುಂತಾದ ಉಪದ್ರಗಳಿಗೆ ಈಗಿರುವಷ್ಟು ಅವಕಾಶವು ಇರುತ್ತಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಈ ಕಾರಣಗಳಿಂದ ವಿದ್ಯೆಯನ್ನು ಪಡೆಯುವದರಿಂದ ಉಂಟಾಗುವ ಪ್ರಯೋಜನಗಳು ಅಪಾರವಾದವುಗಳೆಂಬುವದನ್ನು ತಾವುಗಳು ತಿಳಿದುಕೊಂಡು ತಮ್ಮ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡಲು ಸರ್ವಪ್ರಯತ್ನವನ್ನು ಮಾಡುವಿರೆಂದು ದೃಢವಾಗಿ ನಂಬಿರುತ್ತೇನೆ. ನಮ್ಮ ಬಾಲಕರಿಗೆ ವಿದ್ಯೆಯನ್ನು ಒದಗಿಸಿಕೊಡುವುದಕ್ಕೆ ಅವರನ್ನು ಸ್ಕೂಲುಗಳಿಗೆ ಕಳುಹಿಸಿಕೊಡಲು ತಾವುಗಳೆಲ್ಲರೂ ಸಿದ್ಧರಾಗಬೇಕು. ಬಾಲಕರನ್ನು ಮಠಕ್ಕೆ ಕಳುಹಿಸಿಬಿಟ್ಟರೆ ಮನೆಯ ಕೆಲಸಗಳನ್ನು ಮಾಡುವವರ್ಯಾರು? ಎಂಬದಾಗಿ ತಾವು ಪ್ರಶ್ನೆಮಾಡಬಹುದು. ತಾವುಗಳು ವಿದ್ಯೆಯಿಂದ ಆಗುವ ಪ್ರಯೋಜನಗಳನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ತಮ್ಮ ಬಾಲಕರಿಗೆ ಕಲಿಸಲು ಕೇವಲ ಕುತೂಹಲಯುಕ್ತರಾಗಿದ್ದರೆ ಈ ಪ್ರಶ್ನೆಗಳಿಗೆ ಉತ್ತರ ದೊರೆವುದು. ಬಾಲಕರು ಹದಿನಾಲ್ಕು ವರ್ಷದವರಾಗುವ ಪರ್ಯಂತರ ಅವರಿಂದ ತಾವು ಪಡೆಯುವ ಅಲ್ಪಪ್ರಯೋಜನವನ್ನು ನಿರಾಕರಿಸಿ, ಅವರಿಗೆ ವಿದ್ಯೆಯನ್ನು ಕಲಿಸಿದ್ದೇ ಆದರೆ ನಂತರ ತಮಗೆ ಅವರಿಂದ ಉಂಟಾಗುವ ಪ್ರಯೋಜನವು ಈಗ ಕಳೆದುಕೊಂಡ ಪ್ರಯೋಜನಕ್ಕಿಂತಲೂ ಅಧಿಕವಾದ ಪ್ರಯೋಜನವನ್ನು ತಾವುಗಳು ಪಡೆಯುವಿರಿ ಎಂದು ಹೇಳಬೇಕಾದುದಿಲ್ಲ. ದೊಡ್ಡವರಾದವರು ವಿದ್ಯಾವಂತರಾಗಿದ್ದರೆ ಎಷ್ಟು ಕಷ್ಟವನ್ನಾದರೂ ಅನುಭವಿಸಿಕೊಂಡು ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸಿಕೊಡಲು ಪ್ರಯತ್ನಮಾಡುತ್ತಾರೆ. ಇದಕ್ಕೆ ನಿದರ್ಶನವಾಗಿ ವಿದ್ಯಾವಂತರಾಗಿರುವವರ ಮನೆಗಳಲ್ಲಿ ನೋಡಿದರೆ ಅಲ್ಲಿರುವ ಹೆಂಗಸರೂ ಗಂಡಸರೂ ಓದುಬರಹವನ್ನು ಕಲಿಯುತ್ತಿರುವುದನ್ನು ನೋಡಬಹುದು. ಅತ್ಯಲ್ಪ ಸಂಬಳ ದೊರೆವ ಬಡನೌಕರನೂ ತನ್ನ ಮಕ್ಕಳಿಗೆ ವಿದ್ಯೆ ಹೇಳಿಸುತ್ತಾನೆ. ಹೀಗಿದ್ದರೂ ಈ ಲೋಕದಲ್ಲಿ ಎಷ್ಟೋ ಧನಿಕರು ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸದೆ ತಮ್ಮ ಧನವೇ ಅವರ ಸುಖಕ್ಕೆ ಸಾಧಕವಾಗಿರುವದೆಂದು ಅಭಿಪ್ರಾಯಪಡುವದುಂಟು. ಅದರ ಇಂಥವರ ಮಕ್ಕಳು ಸ್ವತಂತ್ರರಾದಾಗ ತಂದೆ ಗಳಿಸಿಟ್ಟಿದ್ದ ಆಸ್ತಿಯನ್ನೆಲ್ಲಾ ದುರ್ವ್ಯಯಮಾಡಿ ಉತ್ತರಕ್ಷಣದಲ್ಲೇ ಹೀನಸ್ಥಿತಿಗೆ ಬಂದಿರುವುದು ಅನುಭವಸಿದ್ಧಾಂತವಾಗಿಯೇ ಇದೆ.

ವಿದ್ಯಾಮಹಿಮೆಯನ್ನು ಅರಿತವರು ಎಷ್ಟಾದರೂ ತೊಂದರೆಪಟ್ಟುಕೊಂಡು ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸಿಕೊಡಲು ಪ್ರಯತ್ನಪಡುತ್ತಾರೆ. ಇಲ್ಲಿ ಒಂದನ್ನು ಇರುತ್ತದೆಯೋ ಅಲ್ಲ ಮಾರ್ಗವೂ ತೋರುತ್ತದೆ. ತಾವುಗಳೆಲ್ಲರೂ ತಮ್ಮ ಬಾಲಕ ಬಾಲಿಕೆಯರಿಗೆ ವಿದ್ಯೆಯನ್ನು ಕಲಿಸುವುದಕ್ಕೆ ಮನಸ್ಸುಮಾಡಿದರೆ ಊರಿನಲ್ಲಿ ತೋರುವ ತೊಂದರೆಗಳೆಲ್ಲವೂ ತಾವಾಗಿಯೇ ನಿವಾರಣೆಯಾಗುವವು. ಆದುದರಿಂದ ಬಾಲಕ ಬಾಲಿಕೆಯರೆಲ್ಲರಿಗೂ ವಿದ್ಯೆ ಕಲಿಸುವುದು ತಮ್ಮಗಳ ಮುಖ್ಯ ಕರ್ತವ್ಯವೆಂದು ತಿಳಿದುಕೊಂಡು ತಮ್ಮ ಮಕ್ಕಳನ್ನು ಮಠಕ್ಕೆ ಕಳುಹಿಸಿಕೊಡುತ್ತೇವೆಂಬ ಮನೋನಿಶ್ಚಯವನ್ನು ಮಾಡಿ ಈ ದಿವಸವೇ ತಾವುಗಳೆಲ್ಲರೂ ಕಂಕಣಬದ್ಧರಾಗಬೇಕೆಂಬುವದೇ ನನ್ನ ಮುಖ್ಯ ಆಶಯವಾಗಿರುತ್ತದೆ.

ಗೃಹಕೃತ್ಯದ ತೊಂದರೆಗಳಿಂದ ಸ್ಕೂಲಿಗೆ ಹುಡುಗರನ್ನು ಕಳುಹಿಸುವದು ಕೇವಲ ಕಷ್ಟವಾದ ಸಂದರ್ಭಗಳಲ್ಲಿ ರಾತ್ರಿ ಮಠಗಳನ್ನು ಏರ್ಪಡಿಸಿಕೊಂಡು ಹಗಲುವೇಳೆ ಕೃಷಿಕಾರ್ಯಗಳ ಮೇಲೆ ಹೋಗುವ ಚಿಕ್ಕವರೂ ದೊಡ್ಡವರೂ ಅಂತಹ ರಾತ್ರಿಮಠಗಳಲ್ಲಿ ಒಂದು ಗಂಟೆಯಾದರೂ ವೇಳೆ ವ್ಯಾಸಂಗಮಾಡುತ್ತಾ ಬಂದರೆ ಬಹಳ ಪ್ರಯೋಜನವಾದೀತು. ಹಗಲುವೇಳೆ ಹನ್ನೆರಡು ತಾಸು ದೊಡ್ಡ ಕಾರ್ಖಾನೆಗಳಲ್ಲಿ ದುಡಿಯಬೇಕಾಗಿರುವ ಅನೇಕ ಕೂಲಿ ಜನಗಳ ಉಪಯೋಗಾರ್ಥವಾಗಿ ಎಲ್ಲಾ ದೊಡ್ಡ ಪಟ್ಟಣಗಳಲ್ಲಿಯೂ ರಾತ್ರಿ ಸ್ಕೂಲುಗಳನ್ನು ಏರ್ಪಡಿಸಿರುತ್ತಾರೆ. ಇಂಥಾ ರಾತ್ರಿ ಸ್ಕೂಲುಗಳನ್ನು ಗ್ರಾಮಾಂತರಗಳಲ್ಲಿ ಏರ್ಪಡಿಸಲು ತಕ್ಕ ಸನ್ನಾಹಗಳನ್ನು ಸಂಘದವರು ಮಾಡಲು ಉದ್ಯುಕ್ತರಾಗಿರುತ್ತಾರೆ. ತಾವುಗಳೆಲ್ಲರೂ ಇಂತಹ ಸ್ಕೂಲುಗಳನ್ನು ತಮ್ಮ ತಮ್ಮ ಗ್ರಾಮಾಂತರಗಳಲ್ಲಿ ಏರ್ಪಡಿಸಿಕೊಳ್ಳುವುದಕ್ಕೆ ಮುಂದಾಳುಗಳಾಗಿ ನಿಂತುಕೊಂಡು ಸಂಘಕ್ಕೆ ಸಹಾಯಕರಾಗುವಿರೆಂದು ನಂಬಿದ್ದೇವೆ.

ಬಾಲಕರನ್ನು ಅಕ್ಷರಸ್ಥರನ್ನಾಗಿ ಮಾಡಿದ ಬಳಿಕ ಅವರಿಗೆ ನಮ್ಮ ಕುಲಕಸಬನ್ನು ಹೆಚ್ಚು ತಿಳುವಳಿಕೆಯಿಂದ ಮಾಡಿಕೊಳ್ಳುವುದಕ್ಕೆ ಅರ್ಹರಾಗುವಂತೆ ಅವರಿಗೆ ವ್ಯವಸಾಯಶಾಸ್ತ್ರವನ್ನು ಬೋಧಿಸಬೇಕು. ಪುಸ್ತಕಗಳಲ್ಲಿ ಹೇಳಿರುವ ವಿಷಯಗಳನ್ನು ಆಚರಣೆಗೆ ತಾರದೆ ಬರೀ ತಿಳಿದುಕೊಂಡದ್ದರಿಂದ ಪ್ರಯೋಜನ ಉಂಟಾಗುವದಿಲ್ಲವಾದಕಾರಣ ಸಂಘದವರು ಏರ್ಪಡಿಸಬೇಕೆಂದಿರುವ ಫಂಡಿನಿಂದ ವಿಲಾಯತಿ, ಅಮೇರಿಕ, ಜಪಾನ್ ಮುಂತಾದ ರಾಜ್ಯಗಳಲ್ಲಿ ಉಪಯೋಗದಲ್ಲಿರುವ ವ್ಯವಸಾಯಸಂಬಂಧವಾದ ನೇಗಿಲು ಮುಂತಾದ ಯಂತ್ರಗಳನ್ನು ತರಿಸಿ ಅವುಗಳನ್ನು ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಏರ್ಪಡಿಸುವ ಮಾದ್ರಿ ಹೊಲಗಳು (ಮಾಡಲ್ ಫಾರಂಸ್) ಮಾಡಿಸುವುದರಲ್ಲಿ ಉಪಯೋಗಿಸಿ ಅವುಗಳ ಪ್ರಯೋಜನವನ್ನು ನಮ್ಮ ಬಾಲಕರಿಗೆ ತೋರ್ಪಡಿಸಬೇಕೆಂಬುದು ಸಂಘದ ತಾತ್ಪರ್ಯವಾಗಿದೆ. ಇವುಗಳನ್ನು ಉಪಯೋಗಿಸುವುದರಿಂದ ಉಂಟಾಗುವ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡವರು ಸದರಿ ಯಂತ್ರಗಳನ್ನು ತಾವಾಗಿ ತರಿಸಿಕೊಂಡು ಅವುಗಳಿಂದ ತಮ್ಮ ತಮ್ಮ ಸ್ವಂತ ಹೊಲಗಳನ್ನು ಮಾಡಿಕೊಂಡು ವಿಶೇಷವಾದ ಬೆಳೆಯನ್ನು ಪಡೆದು ಧನಿಕರಾಗಬಹುದು. ಅಲ್ಲದೆ ಸ್ವಂತವಾಗಿ ತರಿಸಿಕೊಳ್ಳಲು ಉಪಪತ್ತಿ ಇಲ್ಲದಂಥವರಿಗೆ ಸಂಘದವರು ಸಹಾಯಮಾಡುವಂತೆ ತಾವುಗಳೆಲ್ಲರೂ ಚೈತನ್ಯಕೊಡುವುದಾದರೆ ಅದನ್ನು ಮಾಡುವುದಕ್ಕೂ ಸಂಘದವರು ಬದ್ಧರಾಗುತ್ತಾರೆ. ವ್ಯವಸಾಯಶಾಸ್ತ್ರವನ್ನು ಪರಿಷ್ಕಾರವಾಗಿ ತಿಳಿದುಕೊಳ್ಳಲು ಬೇಕಾಗುವ ಸಮಸ್ತ ಪದಾರ್ಥಗಳನ್ನೂ ಬೇರೆ ಬೇರೆ ರಾಜ್ಯಗಳಿಂದ ತರಿಸಿ ನಮ್ಮ ಬಾಲಕರ ಉಪಯೋಗಾರ್ಥವಾಗಿ ಕಟ್ಟಲ್ಪಡುವ ಒಂದು ಪ್ರದರ್ಶನಶಾಲೆಯಲ್ಲಿ (ಮ್ಯೂಜಿಯಂ) ಇಡಿಸುವ ಯೋಚನೆ ಮಾಡಿರುತ್ತದೆ.

ಕಸುಬುದಾರಿ ವಿದ್ಯೆಗಳಲ್ಲಿ ನಮ್ಮ ಬಾಲಕರು ಪರಿಶ್ರಮವನ್ನು ಪಡೆಯಲು ಅನುಕೂಲಿಸುವಂತೆ ಒಂದು ಪುಸ್ತಕಭಂಡಾರವು (ಲೈಬ್ರರಿ) ಸ್ಥಾಪಿಸಲ್ಪಡುವುದಕ್ಕೆ ತರದೂದು ನಡೆಯುತ್ತಿದೆ. ಇದರಲ್ಲಿ ನೇಮಿಸಿಡುವ ಪುಸ್ತಕಗಳಲ್ಲಿ ಮುಖ್ಯವಾದವುಗಳನ್ನು ಸಾಧ್ಯವಾದ ಮಟ್ಟಿಗೆ ಒಕ್ಕಲಿಗರ ಜನರ ಉಪಯೋಗಕ್ಕೋಸ್ಕರ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತರ್ಜುಮೆ ಮಾಡಿಸಿಕೊಡಬೇಕಾಗಿ ಉದ್ದೇಶಿಸಿದೆ. ಮಾದ್ರಿ ಹೊಲ, ಪ್ರದರ್ಶನಶಾಲೆ ಮತ್ತು ಪುಸ್ತಕಭಂಡಾರಗಳನ್ನು ಸ್ಥಾಪಿಸುವುದರಿಂದ ನಮ್ಮ ಜನರಿಗೆ ವ್ಯವಸಾಯಶಾಸ್ತ್ರದ ಸಕಲ ನೂತನ ವಿಷಯಗಳನ್ನೂ ತಿಳಿದುಕೊಳ್ಳುವುದಕ್ಕೆ ಅನುಕೂಲಗಳು ಕಲ್ಪಿಸಿಕೊಟ್ಟಂತಾಗುತ್ತದೆಂದು ಹೇಳಬಹುದು.

ಓದನ್ನು ಕಲಿತುಕೊಂಡ ಮಾತ್ರಕ್ಕೇ ಕುಲಕಸಬನ್ನು ಬಿಟ್ಟುಬಿಡಬೇಕೆಂದು ಸರ್ವದಾ ತಿಳಿಯಬಾರದು. ಏಕೆಂದರೆ ಅನ್ಯದೇಶಗಳಲ್ಲಿ ಜನರು ಓದನ್ನು ಕಲಿತಿದ್ದರೂ ವ್ಯವಸಾಯವನ್ನೇ ಜೀವನವನ್ನಾಗಿ ಮಾಡಿಕೊಂಡು ವಿಧವಿಧವಾದ ನೂತನ ಪದಾರ್ಥಗಳನ್ನು ಕಂಡುಹಿಡಿದಿರುತ್ತಾರೆ. ಆ ಜನರು ಹಾಕಿದ ಮೇಲ್ಪಂಕ್ತಿಯಂತೆ ನಡೆದುಕೊಳ್ಳುವುದಕ್ಕೋಸ್ಕರ ಅವುಗಳನ್ನು ಕನ್ನಡ ಭಾಷೆಗೆ ತರುವುದಕ್ಕೆ ಮೇಲೆ ಹೇಳಿದ ಉಪಪತ್ತಿಗಳನ್ನು ಕಲ್ಪಿಸಿಕೊಳ್ಳಲು ಪ್ರಯತ್ನಪಡುವುದು ಸಾರ್ಥಕವಾದ ಕೆಲಸವೆಂದು ನಂಬಿದ್ದೇನೆ.

ಕೈಗಾರಿಕ, ವ್ಯಾಪಾರ ಮತ್ತು ಕಸುಬುದಾರಿ ವಿದ್ಯೆಯನ್ನು ಕಲಿಯುವುದರಲ್ಲಿ ಆಸಕ್ತರಾಗುವುದು ದೇಶಕ್ಕೆ ಕ್ಷೇಮಕರ. ಯಾವ ದೇಶದಲ್ಲಿ ಕೈಗಾರಿಕೆಗಳು ವಿಶೇಷವಾಗಿ ಪ್ರಬಲಸ್ಥಿತಿಗೆ ಬಂದಿರುವವೋ ಆ ದೇಶವು ಅತ್ಯುನ್ನತಸ್ಥಿತಿಯಲ್ಲಿರುತ್ತದೆ. ಕೈಗಾರಿಕೆಗಳ ಮೂಲಕ ದೇಶದೇಶಗಳ ಪರಸ್ಪರ ವ್ಯಾಪಾರಾದಿಗಳು ಹೆಚ್ಚಿ ಸ್ನೇಹಭಾವವು ಅಭಿವೃದ್ಧಿಗೆ ಬಂದು ನವನಾಗರಿಕತೆಗಳು ಪ್ರಸರಿಸಿ ಜನರು ವರ್ಧಿಸುವುದಕ್ಕೆ ಕಾರಣವಾಗುತ್ತವೆ. ಕ್ಷಾಮಾದಿ ಈತಿಬಾಧೆಗಳು ದೂರವಾಗುತ್ತವೆ. ದೇಶವು ಸುಭಿಕ್ಷವಾಗಿರುವುದಕ್ಕೆ ಸಹಕಾರಿಯಾಗುತ್ತದೆ. ಆದುದರಿಂದ ನಮ್ಮ ಜನರು ಒಳ್ಳೇ ಸ್ಥಿತಿಗೆ ಬರಬೇಕಾದರೆ ಕೈಗಾರಿಕ ವಿದ್ಯೆಯನ್ನು ಕಲಿಯುವುದಕ್ಕೆ ಪ್ರಯತ್ನಪಡಬೇಕು. ಮುಖ್ಯ ಹೊಲಬೆಳೆ ಕಾಲವಲ್ಲದ ಕಾಲದಲ್ಲಿ ಮತ್ತೇನಾದರೂ ಒಂದು ಕಸಬನ್ನು ಕಲಿತುಕೊಂಡಿಲ್ಲದಿದ್ದರೆ ನಮಗೆ ಜೀವನವಾಗುವುದೇ ಕಷ್ಟವಾಗಿ ಬರುತ್ತದೆ. ಪ್ರತ್ಯಕ್ಷವಾಗುವದರಿಂದ ಯಾವುದಾದರೂ ಒಂದು ಕಸುಬನ್ನು ಕಲಿಯುವದಕ್ಕೆ ಪ್ರಯತ್ನಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ. ಕೈಗಾರಿಕೆಗಳು ಇತರ ದೇಶಗಳಲ್ಲಿ ವಿಶೇಷ ಪ್ರಚಾರಕ್ಕೆ ಬಂದು ಈ ದೇಶದಲ್ಲಿ ಬಾರದಿರುವುದರಿಂದ ಸ್ವದೇಶದವರು ಈ ದೇಶಕ್ಕೆ ಬಾಧಕವಾದ ಸ್ಥಿತಿಯನ್ನು ಸಂಪಾದಿಸಿಕೊಂಡು ಹೋಗುತ್ತಾ ಇದ್ದಾರೆ. ಇಲ್ಲಿ ಸಿಕ್ಕುವ ಪದಾರ್ಥಗಳನ್ನು ಮಾತ್ರ ಬೇರೆ ದೇಶಕ್ಕೆ ಕಳುಹಿಸಿ ಅವುಗಳನ್ನು ಉಪಯೋಗಿಸಿಕೊಳ್ಳುವ ಉಪಾಯವ ತಿಳಿಯದೆ ಇರುವುದರಿಂದ ಅವುಗಳನ್ನು ಇತರ ದೇಶಗಳಿಗೆ ರಫ್ತುಮಾಡಿ ಅಲ್ಲಿಂದ ಮಾಡಿ ಬಂದ ವಸ್ತುಗಳಿಗೆ ಒಂದಕ್ಕೆ ಎರಡರಂತೆ ಹಣಕೊಟ್ಟು ಕೊಳ್ಳಬೇಕಾಗುತ್ತದೆ. ನಮ್ಮ ದೇಶದಲ್ಲಿ ಉತ್ಪತ್ತಿಯಾದ ಪದಾರ್ಥಗಳನ್ನು ನಾವೇ ಉಪಯೋಗಿಸಿಕೊಂಡು ಬೇಕಾದ ವಸ್ತುಗಳನ್ನು ಮಾಡಿಕೊಳ್ಳಲು ಸಮರ್ಥರಾದರೆ ಈ ದೇಶದ ಹಣವೆಲ್ಲವೂ ಇಲ್ಲಿಯೇ ನಿಂತು ಇಲ್ಲಿನ ಜನಗಳೇ ಐಶ್ವರ್ಯವಂತರಾಗುವುದಕ್ಕೆ ಕಾರಣವಾಗುತ್ತದೆ. ಈಗ ನಾವು ನಿತ್ಯವೂ ಉಪಯೋಗಿಸುವ ವಸ್ತುಗಳಲ್ಲಿ ಅನೇಕ ವಸ್ತುಗಳು ಅನ್ಯದೇಶಗಳಲ್ಲಿ ಮಾಡಿ ಬಂದವುಗಳಾಗಿರುತ್ತವೆ. ವಿಲಾಯತಿ ಅಮೇರಿಕ ಜರ್ಮನಿ ಜಪಾನ್, ಈ ಪ್ರಾಂತ್ಯಗಳಿಂದಲೇ ಅನೇಕ ಸಾಮಾನುಗಳು ಬರುತ್ತವೆ. ಈ ಸಾಮಾನುಗಳಲ್ಲವನ್ನೂ ನಾವೇ ತಯಾರು ಮಾಡಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಮಾಡತಕ್ಕದ್ದು ಯುಕ್ತವಾಗಿರುತ್ತದೆ. ಹೀಗೆ ಮಾಡದೇ ಇರುವುದರಿಂದ ವರ್ಷ ಒಂದಕ್ಕೆ ಸುಮಾರು ಅರವತ್ತು ಕೋಟಿ ರೂಪಾಯಿಗಳು ನಮ್ಮ ಇಂಡಿಯಾ ದೇಶದಲ್ಲೇ ನಿಲ್ಲುವುದಕ್ಕೆ ಕಾರಣವಾಗುತ್ತದೆ. ಈ ಕೈಗಾರಿಕೆ ವಿದ್ಯೆಗಳನ್ನು ಕಲಿತುಕೊಳ್ಳಬೇಕಾದರೆ ಅವು ಯಾವ ದೇಶದಲ್ಲಿ ವಿಶೇಷ ಪ್ರಚುರದಲ್ಲಿರುತ್ತವೋ ಅಲ್ಲಿಗೆ ಹೋಗಿ ಕಲಿತರೆ ಅವುಗಳ ವಿಷಯವಾಗಿ ತಿಳಿಯಬೇಕಾದ ಅಂಶಗಳೆಲ್ಲವೂ ಚೆನ್ನಾಗಿ ಗೊತ್ತಾಗುತ್ತವೆ. ಆದುದರಿಂದ ದೂರದೇಶಗಳಿಗೆ ಪ್ರಯಾಣ ಮಾಡಿ ಕೈಗಾರಿಕೆ ವಿದ್ಯೆಗಳನ್ನು ಕಲಿತುಕೊಂಡು ಬರುವುದು ನಮ್ಮ ದೇಶಕ್ಕೆ ಎಷ್ಟೋ ಕ್ಷೇಮವನ್ನುಂಟುಮಾಡುತ್ತದೆ.

ನಮ್ಮ ಒಕ್ಕಲಿಗರು ಜನರು ಕಲಿತುಕೊಳ್ಳಬಹುದಾದ ಕಸುಬುಗಳಲ್ಲಿ ರೇಷ್ಮೆ ತಯಾರುಮಾಡುವುದು ಒಂದು ಕಸುಬು ಅಮೂಲ್ಯವಾದದ್ದು. ವ್ಯವಸಾಯಕ್ಕೂ ಇದಕ್ಕೂ ಸ್ವಲ್ಪ ಸಂಬಂಧವಿರುವುದರಿಂದ ಈ ಕಸಬನ್ನು ನಮ್ಮ ಜನರು ಕಲಿಯುವುದು ಲಾಭಕರ. ರೇಷ್ಮೆ ತಯಾರುಮಾಡುವುದರಲ್ಲಿ ಜಪಾನ್ ದೇಶವು ಬಹಳ ಪ್ರಸಿದ್ಧಿಪಡೆದಿರುತ್ತದೆ. ಆ ದೇಶದಲ್ಲಿ ತಯಾರುಮಾಡುವ ಕ್ರಮವನ್ನು ಕಲಿತುಕೊಂಡರೆ ತುಂಬಾ ಉಪಯುಕ್ತವೆಂದು ತಿಳಿದು ಮೆ॥ ಟಾಟಾ ಎಂಬ ಘನಸಾಹುಕಾರರೊಬ್ಬರು ಆ ದೇಶದವರು ತಯಾರುಮಾಡುವ ರೀತಿಯನ್ನು ತೋರಿಸುವ ಒಂದು ಕಾರ್ಖಾನೆಯನ್ನು ಈ ಊರಲ್ಲಿ ಇಡಿಸಿರುತ್ತಾರೆ. ಆ ಕಾರ್ಖಾನೆಯಲ್ಲಿ ಸರ್ಕಾರದ ಪರವಾಗಿ ಅನೇಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ನಮ್ಮ ಒಕ್ಕಲಿಗರಲ್ಲಿ ಕೆಲವರು ಈ ಕಾರ್ಖಾನೆಯಲ್ಲಿ ತೆಗೆಯುವ ರೀತಿಯನ್ನು ಕಲಿತುಕೊಳ್ಳಲು ಪ್ರಯತ್ನಪಡುವುದು. ಅಂಥವರಿಗೆ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸಂಘದವರು ಸಾಹಸಪಡುವರು.

ಮರಕೆಲಸ, ಕಬ್ಬಿಣಕೆಲಸ, ಮಂಡಿವ್ಯಾಪಾರ ಮುಂತಾದ ಕಸಬುಗಳನ್ನು ನಮ್ಮ ಜನರು ಕೆಲವರು ಮಾಡುತ್ತಿದ್ದಾರೆ. ಇದಕ್ಕೆ ಇನ್ನೂ ಇನ್ನೂ ಹೆಚ್ಚು ಆಸಕ್ತಿಯನ್ನು ತೋರಿಸಿ ಅನೇಕ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಶ್ರಮಪಟ್ಟರೆ ಈ ಕಸುಬುಗಳಿಂದ ಎಷ್ಟೋ ಪ್ರಯೋಜನವನ್ನು ಪಡೆಯಬಹುದು. ಓದಿದ ಕೆಲವು ಬಾಲಕರ ಹುಡುಗರನ್ನು ಜಪಾನ್ ಮುಂತಾದ ದೇಶಗಳಿಗೆ ಮೋಂಬತ್ತಿ, ಕಾಗದ, ಬರೆಯುವ ಮುಳ್ಳು, ಪೆನ್ಸಲ್, ಗುಂಡು ಮುಂತಾದವುಗಳನ್ನು ತಯಾರುಮಾಡುವುದನ್ನು ಕಲಿತುಕೊಂಡು ಬರುವುದಕ್ಕೋಸ್ಕರ ಕಳುಹಿಸಿಕೊಟ್ಟು ಅವರು ಬಂದನಂತರ ಅವರು ಕಾರ್ಖಾನೆಗಳನ್ನು ಇಡಿಸಿ ನಡೆಸಿದರೆ ಬಹಳ ಪ್ರಯೋಜನವಾಗುವುದು. ವ್ಯಾಪಾರದಲ್ಲಿ ಪರಿಜ್ಞಾನ ಉಂಟಾಗುವುದಕ್ಕೋಸ್ಕರ ಹುಡುಗರಿಗೆ ಕಾಮರ್ಸ್ ಎಂಬ ವ್ಯಾಪಾರದ ವಿದ್ಯೆಯನ್ನು ಕಲಿಸಿಕೊಟ್ಟು ಅವರುಗಳಿಗೆ ಧನಸಹಾಯಮಾಡಿ ವ್ಯಾಪಾರಮಾಡಿಸಿದರೆ ಬಹಳ ಲಾಭವುಂಟು. ಆದುದರಿಂದ ಕೈಗಾರಿಕ ಕಸಬುಗಳ ವಿದ್ಯೆ ನಮ್ಮ ಬಾಲಕರಿಗೆ ಕಲಿಸಿಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅಲ್ಲದೆ ಅಂತಹ ಬಾಲಕರಲ್ಲಿ ಅತಿಸಮರ್ಥರಾದ ಬುದ್ಧಿಶಾಲಿಗಳು ಕಂಡುಬಂದರೆ ಅವರನ್ನು ದೂರದೇಶಗಳಿಗೆ ಕಳುಹಿಸಿಕೊಟ್ಟು ಬೇಕಾದ ಸಹಾಯವನ್ನು ಮಾಡಿಕೊಡುವುದು ಉತ್ತಮವಾದ ಕಾರ್ಯವಾಗಿರುತ್ತದೆ.

ಈ ಮಹಾಕಾರ್ಯಗಳನ್ನು ಜಾಗ್ರತೆ ನೆರವೇರಿಸುವುದಕ್ಕೆ ದೇಶದಲ್ಲಿರುವ ಒಕ್ಕಲಿಗರನ್ನೆಲ್ಲಾ ಕಂಡು ಅವರ ಬಾಲಕರನ್ನು ವಿದ್ಯಾವಂತರನ್ನಾಗಿ ಮಾಡಲು ಅವರಿಗೆ ಪ್ರೋತ್ಸಾಹಕೊಟ್ಟು ನಮಗೆ ಬೇಕಾದ ಸಹಾಯವನ್ನು ಮಾಡುವುದಕ್ಕೂ ಕೆಲವರು ದೊಡ್ಡವರು ತಮ್ಮ ಇತರೇ ಕೆಲಸಗಳನ್ನು ಬಿಟ್ಟು ಸಂಘದವರಾಗಿ ಬೇಕಾಗಿರುವುದಕ್ಕೆ ಒಪ್ಪಿಕೊಂಡಿರುವ ವಾರ್ತೆಯು ಆನಂದವನ್ನುಂಟುಮಾಡತಕ್ಕದ್ದಾಗಿರುತ್ತದೆ. ಆದುದರಿಂದ ಒಕ್ಕಲಿಗರ ಮಹಾಜನರುಗಳು ನಮ್ಮ ಈ ಪ್ರಯತ್ನದಲ್ಲಿ ತಮಗೆ ಸಾಧ್ಯವಾದ ಸಹಾಯವನ್ನು ಮಾಡಿ ಸಂಘದವರು ಕೈಕೊಂಡಿರುವ ಕಾರ್ಯಗಳು ಸಾರ್ಥಕವಾಗುವಂತೆ ಮಾಡುವಿರಿ ಎಂದು ದೃಢವಾಗಿ ನಂಬಿದ್ದೇನೆ.

ಸಂಘದವರು ಮಾಡಬೇಕೆಂದಿರುವ ಕಾರ್ಯಗಳೆಲ್ಲ ಪ್ರವರ್ತನೆಗೆ ಬರಬೇಕಾದರೆ ದ್ರವ್ಯಸಹಾಯವಿಲ್ಲದೇನೇ ಆಗುವುದಿಲ್ಲ. ನಮ್ಮಲ್ಲಿ ಧನವಂತರಾಗಿದ್ದರೂ ಸಂಘದಲ್ಲಿ ಕೆಲವರು ನಮ್ಮಲ್ಲಿ ಕೇವಲ ಬಡವರೂ ನಿರಕ್ಷರಸ್ಥರೂ ಇದ್ದರೂ ದಾನಶೀಲರಾದ ಅನೇಕ ಧನಿಕರು ಉಂಟು. ಇತರ ಸಹಾಯವನ್ನು ಮಾಡತಕ್ಕ ವಿದ್ಯಾವಂತರು ಬುದ್ಧಿಶಕ್ತಿಯೂ ಇಲ್ಲದಿದ್ದರೆ ಈ ದಿವಸ ನಮ್ಮ ಸರಿಯುತ್ತರವಿಲ್ಲ. ಒಕ್ಕಲಿಗರ ಜನರ ಸುಕೃತದ ಫಲದಿಂದ ಶ್ರೀಮಂತರಾದ ಕೆಲವರು ದೊಡ್ಡಮನಸ್ಸಿನಿಂದ ನಮ್ಮ ಜನರನ್ನು ಉದ್ಧಾರಮಾಡುವುದಕ್ಕೋಸ್ಕರ ಮಹಾಪ್ರಯತ್ನ ಮಾಡುತ್ತಿದ್ದಾರೆ. ತಾವುಗಳೆಲ್ಲರೂ ಏಕಮನಸ್ಕರಾಗಿ ಒಕ್ಕಲಿಗರ ಜನರ ಅಭಿವೃದ್ಧಿಯನ್ನು ಹೊಂದಬೇಕಾದರೆ ವಿದ್ಯೆಯು ಮುಖ್ಯವೆಂದು ತಿಳಿದು ಸಂಘದವರಾಗಿ ತಮ್ಮಗಳ ಬಾಲಕರಿಗೆ ವಿದ್ಯೆಯನ್ನು ಕಲಿಸುವ ದಿವಸದಿಂದ ಪ್ರಯತ್ನಪಡುತ್ತೇವೆಂದು ದೃಢಸಂಕಲ್ಪ ಮಾಡಿಕೊಳ್ಳಬೇಕು.

ಯಾವ ಮಹಾಕಾರ್ಯವೂ ಏಕಮತ್ಯವಿಲ್ಲದಿದ್ದರೆ ನೆರವೇರುವುದಿಲ್ಲ. ಏಕೆಂದರೆ, ಐಕಮತ್ಯವಿಲ್ಲದ ಕಡೆ ಬಲವಿಲ್ಲ. ಏಕಮತವು ಬೇಕಾದರೆ ಉದ್ದೇಶಿಸಿರುವ ಮಹಾಕಾರ್ಯದಲ್ಲಿ ಎಲ್ಲರ ಮನಸ್ಸೂ ಒಂದಾಗಿ ತೋರಬೇಕು. ಇವರೆಲ್ಲರ ನಡುವೆ ತಮ್ಮಲ್ಲಿರುವ ವ್ಯತ್ಯಾಸಗಳು ಬಿಟ್ಟುಹೋದ ಹೊರತು ಐಕಮತ್ಯ ಉಂಟಾಗುವುದಿಲ್ಲ. ನಮ್ಮೆಲ್ಲರ ಒಳ್ಳೆ ಅಭಿವೃದ್ಧಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಲು ಉದ್ಯುಕ್ತರಾಗಬೇಕು. ದುರಾಶೆ, ಸ್ವಾರ್ಥಪರತೆಗೆ ಅವಕಾಶವಿರುವುದಿಲ್ಲ.

ಆದುದರಿಂದ ಉದ್ದೇಶಿಸಿರುವ ಕಾರ್ಯವನ್ನು ನೆರವೇರಿಸಲು ನಾವೆಲ್ಲರೂ ಒಗ್ಗಟ್ಟಾಗಿ, ಸಣ್ಣ ಸಣ್ಣ ಕೊರತೆಗಳೇನಿದ್ದರೂ ಕಡೆಗಿಟ್ಟು ಈಗ ಒದಗಿರುವ ಅಮೋಘವಾದ ಸಂದರ್ಭದಲ್ಲಿ ಪರಸ್ಪರ ನಮ್ಮ ಏಳಿಗೆಯಲ್ಲಿ ಆಸಕ್ತರಾಗೋಣ. ಈ ಉದ್ದೇಶವು ನೆರವೇರಿಸುವುದಕ್ಕೆ ಸಾಧ್ಯವಾದಷ್ಟು ದ್ರವ್ಯಸಹಾಯಮಾಡುತ್ತೇವೆಂಬದಾಗಿ ಶುಭಕಾರ್ಯಗಳು ನಡೆಯುವಾಗಲೂ ಕಾಲದಲ್ಲಿಯೂ ಮತ್ತು ಹಬ್ಬ ಹುಣ್ಣಿಮೆಗಳಲ್ಲಿಯೂ ಈ ಕಾರ್ಯದ ಹೆಸರಿನಲ್ಲಿ ಅಲ್ಪಸ್ವಲ್ಪ ದ್ರವ್ಯವನ್ನು ಎತ್ತಿಡುತ್ತೇವೆ ಎಂಬ ಮತ್ತಿನಿಂದ ಸಂಕಲ್ಪಮಾಡಿಕೊಂಡು ಸ್ನೇಹಭಾವದಿಂದಲೂ ಚಿತ್ತದಿಂದಲೂ ಸಂಘದವರ ಉದ್ದೇಶಗಳನ್ನು ಸಾರ್ಥಕಪಡಿಸುವ ಸಕಲವಿಧವಾದ ಸಹಾಯವನ್ನು ಮಾಡಲು ಉದ್ಯುಕ್ತರಾಗಿ.

ನಾವುಗಳು ನಮ್ಮ ಏಳಿಗೆಗೋಸ್ಕರ ಮಾಡುತ್ತಿರುವ ಪ್ರಯತ್ನವನ್ನು ನೋಡಿ ನಮ್ಮ ಆಶಯಗಳಲ್ಲಿ ಅನುರಾಗವುಳ್ಳ ನಮಗೆ ಬೇಕಾದ ಸಹಾಯವನ್ನು ದಯಪಾಲಿಸಿ ನಮ್ಮನ್ನು ಮುಖ್ಯ ಕೃತಜ್ಞತೆಗೆ ಪಾತ್ರರನ್ನಾಗಿ ಮಾಡಿದುದಕ್ಕಾಗಿ ಈ ಸಂಸ್ಥಾನದ ಸಂಸ್ಥಾಪಕರಾದ ಮೆ॥ ವಿ ಪಿ ಮಾಧವರಾವ್ ಸಿ ಯವರನ್ನು ನಾವು ಎಷ್ಟು ವಂದಿಸಿದರೂ ಸಾಲದ್ದಾಗಿರುತ್ತದೆ.

ಒಕ್ಕಲಿಕ ಮಹಾ ಜನರೆಲ್ಲರೂ ತಮ್ಮ ಅಭಿವೃದ್ಧಿಯನ್ನು ಬಯಸಿ ನಾನಾ ಕಡೆಗಳಿಂದ ತಂಡತಂಡವಾಗಿ ಬಂದು ಈ ದಿವಸ ಮುದದಿಂದ ಕೂಟದ ಪರಮಾನಂದವು ಆಳುವ ಮಹಾಸ್ವಾಮಿ

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಶ್ರೇಷ್ಠವಾದ ಅಪ್ಪಣೆಯಲ್ಲಿ ನಮಗೆ ಲಭಿಸಿದುದರಿಂದ ನಾವುಗಳೆಲ್ಲ ನಮ್ಮ ಅಪಾರವಾದ ರಾಜಭಕ್ತಿ ವಿಶ್ವಾಸಗಳನ್ನು ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಎದ್ದು ನಿಂತು ಸಮರ್ಪಿಸೋಣ.

ಉಪನ್ಯಾಸವು ಓದಿ ಆದ ವೇಳೆ ಈ ಕೆಳಗೆ ಕಂಡ ದೊಡ್ಡ ಮನುಷ್ಯರು ಮಹಾಸಭೆಯನ್ನು ಏರ್ಪಡಿಸಿದ ಒಕ್ಕಲಿಗರ ಸಂಘದ ಮೆಂಬರು ವಂದನೆ ಅರ್ಪಿಸಿ ಮಹಾಸಭೆಯು ದುಃಖದಾಗುವ ಪ್ರಯೋಜನದ ಕುರಿತು ಸಂಕ್ಷೇಪವಾಗಿ ಉಪನ್ಯಾಸ ಮಾಡಿದರು — ಮೈ॥ ಗಳಾಪ್ಪನವರು ಮೈಸೂರು, ಗಿರಿಗೌಡರು ಅಂಕನಹಳ್ಳಿ ಚನ್ನಪಟ್ಟಣ ತಾಲ್ಲೂಕು, ಪಟೇಲ್ ನಿಂಗೇಗೌಡರು ಹ ... ನಂಜರಾಬಾದ್, ಕೂಂಟಯ್ಯ ರೆಡ್ಡಿಯವರು, ಚಿಕ್ಕ ಲಿಂಗಪ್ಪ ... ಎಂ ಆರ್ ಗಿರಿಯಪ್ಪಗೌಡರು, ನಾಲೂರು ಹಳ್ಳಿ, ತಿಮ್ಮರಾಮೇಗೌಡರು ಮೊಸ್ಸಳ್ಳಿ ಹುಂಕೂರು, ಸಿದ್ದೇಗೌಡರು ನಾರನಹಳ್ಳಿ, ಗ ...

ಇಷ್ಟೆಲ್ಲಾ ಆಗುವ ಹೊತ್ತಿಗೆ ರಾತ್ರಿ ೮ ಘಂಟೆ ಆದುದರಿಂದ ಸಭೆಯು ಮುಗಿಯಿತು. ಬಂದಿದ್ದ ಮಹಾಜನರೆಲ್ಲರಿಗೂ ... ಉಗಳು ... ಹೆ॥ ವಿ. ರಂಗಣ್ಣನವರು ... ತಮ್ಮ ಸ್ವಂತ ಖರ್ಚಿನಿಂದ ... ಕೊಂಡು ಮಹಾಜನರೆಲ್ಲರನ್ನೂ ... ಅಲ್ಲಿ ಬಹು ಸೊಗಸಾದ ಏರ್ಪಾಡು ಮಾಡಲ್ಪಟ್ಟಿತು. ಅಲ್ಲಿ ... ವಾಸ್ತು ... ಕ್ಯಾಂಪ್ ... ಪ್ರಕಾಶವಾದ ದೀಪಗಳು ಹಚ್ಚಲ್ಪಟ್ಟವು. ಮತ್ತು ... ಹಾಕಲ್ಪಟ್ಟವು ... ಸಕಲ ಏರ್ಪಾಡೂ ಮಾಡಲ್ಪಟ್ಟಿತ್ತು.

ಎರಡನೆ ದಿವಸದ ನಡವಳಿಕೆಗಳು.

ಶನಿವಾರ ಅಕ್ಟೋಬರು ೬ನೇ ತಾರೀಖು.

... ಕೆ ಎಸ್ ರಾಮಯ್ಯನವರು ... ವ್ಯಾಖ್ಯಾನ ಮಾಡಲು ... ಉದ್ದೇಶಗಳು ಮತ್ತು ಅನುಮೋದಕರನ್ನು ಗೊತ್ತುಮಾಡಿ ... ಬೆಂಗಳೂರು ... ಮಾನಗಳು ... ಉದ್ದೇಶ ... ಗೊತ್ತುಮಾಡಲ್ಪಟ್ಟವು.

೧ ಮೈಸೂರು ... ಸಿಂಹಾಸನಾಧೀಶ್ವರರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ... ಒಕ್ಕಲಿಗ ಮಹಾಸಭೆಯು ... ಉತ್ತರೋತ್ತರ ಅಭಿವೃದ್ಧಿ ... ಈ ... ಸಂದರ್ಭದಲ್ಲಿ ... ನಮ್ಮ ಅಪಾರವಾದ ಭಕ್ತಿ ಗೌರವಗಳನ್ನು ... ತಿಳಿಸುತ್ತದೆ ... ಇರುವ ... ಹಾರೈಸುತ್ತದೆ. ... ಶ್ರೀಮನ್ಮಹಾರಾಜರವರು ... ಒಕ್ಕಲಿಗರ ಏಳಿಗೆಯ ... ಅಪೇಕ್ಷಿಸ ...

೨ ಒಕ್ಕಲಿಗರ ಸಂಘದ ... ಮತ್ತು ಮೆಂಬರುಗಳು ... ವ್ಯಾಸಂಗಕ್ಕೋಸ್ಕರ ಬರುವ ಒಕ್ಕಲಿಗರ ವಿದ್ಯಾರ್ಥಿಗಳ ವಾಸಕ್ಕೆ ... ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ... ಒಕ್ಕಲಿಗರ ಮಹಾ ಜನರು ... ಒಂದು ... ಕಟ್ಟಿಸತಕ್ಕದ್ದು.

೩ ಒಕ್ಕಲಿಗರ ಸಂಘದವರು ನಡೆಸುತ್ತಿರುವ ಕಾರ್ಯಗಳನ್ನು ... ಜನರ ... ಏಳಿಗೆಗೆ ... ಅನುಕೂಲಿಸುವ ... ಒಕ್ಕಲಿಗರ ಜನರಲ್ಲರೂ ... ವಿಷಯಗಳನ್ನು ... ಉಪನ್ಯಾಸಗಳನ್ನು ... ಒಕ್ಕಲಿಗರ ಸಂಘದ ... ಒಂದು ಪತ್ರಿಕೆಯನ್ನು ಪ್ರಕಟಿಸತಕ್ಕದ್ದು, ಮತ್ತು ... ಮಾಸಪತ್ರಿಕೆ ... ಅನುಕೂಲಕ್ಕೆ ಸಂಘದವರು ಒಂದು ಛಾಪಾಖಾನೆಯನ್ನು ಏರ್ಪಡಿಸತಕ್ಕದ್ದು.

೪ ಒಕ್ಕಲಿಗರ ಸಂಘದ ಪರವಾಗಿ ಒಂದು ಪುಸ್ತಕ ಭಂಡಾರ (ಲೈಬ್ರರಿ) ಮತ್ತು ಕೈಗಾರಿಕೆ ವ್ಯವಸಾಯ ... ದೇಶಗಳಲ್ಲಿ ಉಪಯೋಗಿಸುತ್ತಿರುವ ನೂತನ ಸಾಮಗ್ರಿಗಳ ಪ್ರದರ್ಶನಶಾಲೆ ... ಒಂದು ಪ್ರದರ್ಶನಶಾಲೆಯನ್ನು (ಮ್ಯೂಸಿಯಂ) ಏರ್ಪಡಿಸತಕ್ಕದ್ದು.

೫ ಬೇರೆ ಬೇರೆ ರಾಜ್ಯಗಳಲ್ಲಿ ವ್ಯವಸಾಯಕ್ಕೆ ಉಪಯೋಗಿಸುವ ಯಂತ್ರಗಳನ್ನೂ ಪದಾರ್ಥಗಳನ್ನೂ ಉಪಯೋಗಿಸಿ ... ಎಂಬ ... ಹೂಳಿಗಳನ್ನು ಏರ್ಪಡಿಸಿ ... ವಿದ್ಯಾರ್ಥಿಗಳಿಗೆ ವ್ಯವಸಾಯ ಕ್ರಮವನ್ನು ವಿಶದಪಡಿಸತಕ್ಕದ್ದು.

೬ ಸಂಘದ ಉದ್ದೇಶಗಳು ಸಾಂಗವಾಗಿ ನಡೆಯುವುದಕ್ಕೋಸ್ಕರ ಒಕ್ಕಲಿಗರ ಮಂಡಲಿಯವರಿಂದ ಚಂದಾ ವಸೂಲುಮಾಡತಕ್ಕದ್ದು.

ಈ ತೀರ್ಮಾನವು ಅನುಮೋದಿಸಲ್ಪಟ್ಟ ಕೂಡಲೆ ಒಂದು ಚಂದಾ ಪಟ್ಟಿಯು ಸಭಿಕರಲ್ಲಿ ಕಳುಹಿಸಲ್ಪಟ್ಟಿತು. ಪ್ರೆಸಿಡೆಂಟರವರಾದ ಹೆ॥ ... ನಾರಪ್ಪನವರು ಒಕ್ಕಲಿಗರ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಮೂವತ್ತು ಸಾವಿರ ರೂಪಾಯಿಗಳ ... ವೆಚ್ಚಸಿ ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ... ಪ್ರಕಟಪಡಿಸಿದರು. ಇದನ್ನು ಕೇಳಿದ ಕೂಡಲೆ ಸಭಿಕರೆಲ್ಲರೂ ಆನಂದಸಾಗರದಲ್ಲಿ ಮುಳುಗಿ ಬಹಳ ಜಯಘೋಷವನ್ನು ಮಾಡಿದರು. ... ಹೆ॥ ಟಿ ... ಲಕ್ಷ್ಮಣ್ಣನವರು ... ಇಪ್ಪತ್ತು ಸಾವಿರ ರೂಪಾಯಿ ... ಕಟ್ಟಡ ... ರುವ ತಮ್ಮ ಮನೆಯನ್ನು ಸಂಘದ ಉಪಯೋಗಾರ್ಥವಾಗಿ ಬಿಟ್ಟುಕೊಡುವಂತೆ ವಾಗ್ದಾನ ಮಾಡಿದರು. ... ಗುರಿಕಾರ ... ಸಣ್ಣರ ... ಹೆ॥ ಪಟೇಲ್ ... ಗೌಡರು ಸಂಘಕ್ಕೆ ಒಂದು ಸಾವಿರ ರೂಪಾಯಿ ... ಒಪ್ಪಿಕೊಂಡರು. ಈ ಪ್ರೋತ್ಸಾಹಕರವಾದ ವಾಗ್ದಾನಗಳನ್ನು ಕೇಳಿದಾಗ ಸಭಿಕರ ಆನಂದಕ್ಕೆ ... ಎಲ್ಲರೂ ಜಯಧ್ವನಿಗಳನ್ನು ಮಾಡುವುದಕ್ಕೆ ಆರಂಭಿಸಿದರು. ಉತ್ಸಾಹದಿಂದ ಸಭೆಯಲ್ಲಿ ... ಒಕ್ಕಲಿಗ ... ಕಾರ್ಯ ... ಯಿತು ... ಈ ಕಾಲದಲ್ಲಿ ...

ಮೂರನೆ ದಿವಸದ ನಡವಳಿಕೆಗಳು.

ಸೋಮವಾರ, ಅಕ್ಟೋಬರು ೮ ನೇ ತಾರೀಖು.

ಮಾರನೇ ದಿನ ... ತಿಂದ ... ಮಧ್ಯಾಹ್ನ ೩ ಘಂಟೆಗೆ ಸಭೆ ಸೇರಿತು. ಈ ಕೆಳಕಂಡ ತೀರ್ಮಾನಗಳು ಅನುಮೋದಿಸಲ್ಪಟ್ಟವು. ಅವು ಯಾವುವೆಂದರೆ—

೭ ಮೈಸೂರು ... ನಮ್ಮ ಮೆಂಬರುಗಳನ್ನು ಚುನಾಯಿಸುವುದಕ್ಕೆ ... ಅಧಿಕಾರ ... ಕೊಡಬೇಕು ಎಂದು ... ಅಧಿಕಾರ ... ಸಂಘದ ... ಸಭೆಯು ... ಪ್ರಾರ್ಥಿಸತಕ್ಕದ್ದು.

೮ ಪ್ರತಿ ಡಿಸ್ಟ್ರಿಕ್ಟ್ ತಾಲೂಕು ಮತ್ತು ಹೋಬಳಿ ಹೆಡ್ ಕ್ವಾರ್ಟರುಗಳಲ್ಲಿ ಪ್ರತಿನಿಧಿಗಳಾದ ಒಕ್ಕಲಿಗರ ದೊಡ್ಡ ಮನುಷ್ಯರ ... ಕಮಿಟಿ ... ಒಕ್ಕಲಿಗರ ... ಸಭೆಯ ... ಸಭೆಯ ... ಒಕ್ಕಲಿಗರ ಏಳಿಗೆ ... ಸಹಾಯ ... ಮಾಡತಕ್ಕದ್ದು.

೯ ಒಕ್ಕಲಿಗರ ಸಂಘದ ಉದ್ದೇಶಗಳನ್ನು ... ಒಕ್ಕಲಿಗರ ... ಒಕ್ಕಲಿಗರ ಜನರನ್ನು ಪ್ರೋತ್ಸಾಹ ... ದ್ರವ್ಯವನ್ನು ... ಕಮಿಟಿಗಳನ್ನು ... ಸಂಘದ ... ಪುಸ್ತಕ ... ಸ್ಥಾಪಿಸತಕ್ಕದ್ದು.

೧೦ ಕಮಿಟಿ ಮೆಂಬರುಗಳು ಮತ್ತು ಪೋಷಕರು ಆಯಾಯ ಹೋಬಳಿ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್‌ಗಳಲ್ಲಿರತಕ್ಕ ಒಕ್ಕಲಿಗರ ... ಪ್ರತಿ ... ಸಹಾಯ ... ಸರ್ವರ ... ಪ್ರತಿ ಒಬ್ಬರೂ ಕಮಿಟಿಯವರು ... ಹಣವನ್ನು ... ಸಂಘಕ್ಕೆ ... ಮತ್ತು ... ಕಮಿಟಿ ... ಸಂಘಕ್ಕೆ ... ಕಳುಹಿಸಿಕೊಡಬೇಕು.

೧೧ ಇಂಡಿಯ ... ಸಂಘದ ಒಕ್ಕಲಿಗ ... ಮಾಡತಕ್ಕದ್ದು.

೧೨ ಒಕ್ಕಲಿಗರ ಮಹಾಸಭೆಯು ಬರುವ ... ಮೈಸೂರಿನಲ್ಲಿ ಸೇರತಕ್ಕದ್ದು.

ಮೇಲ್ಕಂಡ ಎಲ್ಲಾ ತೀರ್ಮಾನಗಳನ್ನೂ ಸಭಿಕರೆಲ್ಲರೂ ಏಕಮನಸ್ಸಿನಿಂದ ಒಪ್ಪಿಕೊಂಡರು.

ಮೈಸೂರು ಸಾಹುಕಾರ್ ಮರಿಯಪ್ಪನವರು ... ಸೇರುವ ಒಕ್ಕಲಿಗರ ಎಲ್ಲರಿಗೂ ಊಟ ಉಪಚಾರಗಳಿಗೆ ಆಗುವ ... ವನ್ನು ತಾವೇ ವಹಿಸಿಕೊಳ್ಳುವುದಾಗಿ ಒಪ್ಪಿಕೊಂಡರು. ಸಭಿಕರೆಲ್ಲರೂ ... ಘೋಷವನ್ನು ಮಾಡಿ ತಮ್ಮ ಸಂತೋಷವನ್ನು ಸೂಚಿಸಿದರು.

ಇಷ್ಟೆಲ್ಲಾ ಆಗುವಾಗ್ಗೆ ೫ ಘಂಟೆ ಆಗುತ್ತಾ ಬಂತು. ಇದಕ್ಕೆ ಮೊದಲು ... ಏರ್ಪಾಡು ಮಾಡಿದ್ದಂತೆ ಅನೇಕ ದೊಡ್ಡ ಮನುಷ್ಯರು ... ದಿವಾನ್ ಸಾಹೇಬರವರು ... ಸುತ್ತಾರೆಂದು ಗೊತ್ತಾಗಿದ್ದ ಪ್ರಕಾರ ... ವರು ... ಆ॥ ಘಂಟೆಗೆ ಸರಿಯಾಗಿ ಸೆಕ್ರೆಟರಿಯವರಾದ ಹೆ॥ ... ಎಚ್ ರಾಮಯ್ಯನವರು ಎದ್ದು ದಿವಾನ್ ಸಾಹೇಬರವರಿಂದ ಈ ದಿನ ಪ್ರೆಸಿಡೆಂಟರವರಿಗೆ ... ತಂತಿವರ್ತಮಾನವನ್ನು ಕಾಗದವನ್ನು ಇಂಗ್ಲೀಷಿನಲ್ಲಿ ಓದಿ ಕನ್ನಡದಲ್ಲಿ ತರ್ಜುಮೆಮಾಡಿ ಹೇಳಿದರು. ಏನೆಂದರೆ—

ತಂತಿ ವರ್ತಮಾನ — ದಸರಾ ಸಭೆಯು ಮುಗಿಯುವ ದಿವಸದ ಮುಂಚೆ ನಾನು ಬರುವುದಕ್ಕಾಗುವುದಿಲ್ಲವೆಂದು ... ವಿಷಾದಪಡುತ್ತೇನೆ. ... ಅಲ್ಲಿ ಇರಲು ನಾನು ನನ್ನ ಪ್ರಯತ್ನವನ್ನೆಲ್ಲಾ ಮಾಡಿದೆನು. ಸಂಘದ ಮೆಂಬರುಗಳಿಗೆ ನನ್ನ ನಿಜವಾದ ಕ್ಷಮಾಪಣೆಗಳನ್ನು ತಿಳಿಸಿ ... ನನ್ನ ಉಪನ್ಯಾಸವನ್ನು ಈ ದಿವಸ ಕಳುಹಿಸಿಕೊಟ್ಟಿರುತ್ತೇನೆ."

ಕಾಗದ — "ಒಕ್ಕಲಿಗರ ಸಂಘವನ್ನು ಸ್ಥಾಪಿಸುವ ತರುಣದಲ್ಲಿ ನಾನು ಇರಬೇಕೆಂದು ದಯವಿಟ್ಟು ನನ್ನನ್ನು ಕರೆದ ಮೆಂಬರುಗಳ ಮತ್ತು ... ಆಹ್ವಾನವನ್ನು ನೆರವೇರಿಸುವುದಕ್ಕೆ ಅವಕಾಶವಾಗಲಿಲ್ಲವಲ್ಲಾ ಎಂದು ಬಹಳವಾಗಿ ವಿಷಾದಿಸುತ್ತೇನೆ. ಮೈಸೂರು ಪ್ರಜಾಪ್ರತಿನಿಧಿ ಸಭೆಯು ನೆನ್ನೆಗೆ ಮುಗಿದು ಹೋಗಬಹುದೆಂದು ನಂಬಿದ್ದೆನು. ಆದರೆ ಇನ್ನೂ ಬುಧವಾರದ ವರಿವಿಗೂ ನಡೆಯುವಂತೆ ತೋರುತ್ತದೆ. ಸಂಘಕ್ಕೆ ನನ್ನ ಕ್ಷಮಾಪಣೆಗಳನ್ನು ದಯವಿಟ್ಟು ತಿಳಿಯಪಡಿಸಿ, ಸಭೆಯಲ್ಲಿ ಹೇಳಬೇಕೆಂದು ನಾನು ಉದ್ದೇಶಿಸಿದ್ದ ಉಪನ್ಯಾಸದ ನಕಲನ್ನು ಇದರೊಡನೆ ಕಳುಹಿಸಿಕೊಟ್ಟಿರುತ್ತೇನೆ."

ಸಂಸ್ಥಾನದ ಸೀನಿಯರ್ ಕೌನ್ಸಿಲರ ರವರಾದ ಮೆ॥ ಟಿ ಆನಂದರಾಯರವರಿಂದ ಬಂದ ತಂತಿವರ್ತಮಾನವನ್ನು ಸಹ ಹೆ॥ ರಾಮಯ್ಯನವರು ಓದಿ ಕನ್ನಡದಲ್ಲಿ ಹೇಳಿದರು. ಏನೆಂದರೆ—

"ಶ್ರೀಮನ್ ಮಹಾರಾಜರವರ ಪ್ರಜೆಗಳ ಪೈಕಿ ಬಹು ಪ್ರಜಾ ಸಂಖ್ಯೆಯುಳ್ಳ ಮತ್ತು ಸಂಸ್ಥಾನದ ಅಭ್ಯುದಯಕ್ಕೆ ಬೆಂಬಲರಾದ ಒಕ್ಕಲಿಗರ ಜನರ ಸ್ಥಿತಿಯನ್ನು ವೃದ್ಧಿಮಾಡಿ, ಅವರ ಏಳಿಗೆಯನ್ನು ಹೆಚ್ಚುಮಾಡಲು ಮಾಡುತ್ತಿರುವ ಪ್ರಯತ್ನಗಳು ಸಾರ್ಥಕವಾಗಲಿ ಎಂದು ಹಾರೈಸುವ ನನ್ನ ಅಭಿಲಾಷೆಗಳನ್ನು ತಾವು ಅಂಗೀಕರಿಸಿ."

ಒಕ್ಕಲಿಗರ ಸಂಘದ ರಿಪೋರ್ಟು.

ನಂತರ ಹೆ॥ ರಾಮಯ್ಯನವರು ಸಂಘದ ರಿಪೋರ್ಟನ್ನು ಓದಿದರು. ಅದೇನೆಂದರೆ—

ಸಭಾಧ್ಯಕ್ಷರಿಗೂ ಮತ್ತು ಸಭಿಕರೆಲ್ಲರಿಗೂ ವಿಜ್ಞಾಪಿಸುವುದೇನೆಂದರೆ— ಸನ್ ೧೯೦೬ ನೇ ಇಸವಿ ಸೆಪ್ಟಂಬರು ಮಾಹೆ ೩೦ನೇ ತಾರೀಖಿಗೆ ಆಖೈರಾದ ಆರು ತಿಂಗಳಲ್ಲಿ ಒಕ್ಕಲಿಗರ ಸಂಘವು ನಡೆಸಿದ ಕಾರ್ಯಗಳನ್ನೂ ಸಂಘದ ಚರಿತ್ರೆಯನ್ನೂ ನಿರೂಪಿಸುವ ಸಂಕ್ಷೇಪವಾದ ರಿಪೋರ್ಟನ್ನು ಈ ದಿನ ಒಪ್ಪಿಸಲು ಅಪ್ಪಣೆಯಾಗಿರುತ್ತೇನೆ.

ವಿದ್ಯಾಭಿವೃದ್ಧಿಯಿಂದ ಕೇವಲ ಹೀನಸ್ಥಿತಿಯಲ್ಲಿರುವ ಒಕ್ಕಲಿಗರ ಏಳಿಗೆಗೆ ಆವಶ್ಯಕವಾದ ಏರ್ಪಾಡುಗಳನ್ನು ಮಾಡತಕ್ಕದ್ದು ಮುಖ್ಯವೆಂದು ಕೆಲವರು ಒಕ್ಕಲಿಗರ ದೊಡ್ಡ ಮನುಷ್ಯರು ಯೋಚಿಸಿ ಬೆಂಗಳೂರು ... ಪ್ರಸ್ತಾಪ ... ಸನ್ ೧೯೦೬ ನೇ ಇಸವಿ ಏಪ್ರಿಲ್ ಮಾಹೆ ೧ ಮತ್ತು ... ಸಭೆಸೇರಿ ಆಲೋಚಿಸಿದರು. ಬಹುಪ್ರಜಾ ಸಂಖ್ಯೆಯುಳ್ಳ ಒಕ್ಕಲಿಗರು ಅಭಿವೃದ್ಧಿಗೆ ಬರಬೇಕಾದರೆ ವಿದ್ಯೆ ಕಲಿಯಬೇಕಾದುದರಿಂದ ಅವರ ವಿದ್ಯೆಗೆ ... ಮುಖ್ಯೋದ್ದೇಶವಾಗುಳ್ಳ ಒಂದು ಸಂಘವನ್ನು ಏರ್ಪಡಿಸಬೇಕೆಂದು ... ನಿರ್ಧರವಾಯಿತು.

ಒಕ್ಕಲಿಗರ ಎಂಬುದು ಧೈರ್ಯಶಾಲಿಗಳು ... ವ್ಯವಸಾಯಕ್ಕೆ ... ಬಂದಿರುವ ... ಅಭಿಮಾನದಿಂದ ... ಮಾಡಿಕೊಳ್ಳುವ ... ಒಂದು ಊರಿನಲ್ಲಿ ವಾಸಮಾಡುತ್ತಿರುವ ತಮ್ಮ ... ತಿಳಿದು ... ಒಕ್ಕಲಿಗರ ... ವೃದ್ಧಿಮಾಡಿ ... ಒಕ್ಕಲಿಗರ ... ಸಂಘದವರ ಮುಖ್ಯ ... ಒಕ್ಕಲಿಗರ ... ಉತ್ತಮರಾದ ... ಸ್ಥಿತಿಗೆ ... ಸಂಘದ ಮುಖ್ಯ ... ವು.

... ಒಕ್ಕಲಿಗರ ಸಂಘವು ಇತರ ಜಾತಿಯವರ ಸಂಘಗಳಿಗಾಗಲಿ ... ವರ್ಣಾಶ್ರಮದ ... ಎದುರುಪಕ್ಷವಾಗಿ ... ಒಕ್ಕಲಿಗರ ... ಸಂಘದ ಏಳಿಗೆಯು ... ಅವರ ... ಅಭಿವೃದ್ಧಿ ... ನಾವು ... ಸಂಘದ ... ಯಾವ ... ನಮ್ಮ ಯೋಚನೆ ... ಕಾರ್ಯಗಳ ... ಸಂದರ್ಭದಲ್ಲಿ ... ಉಪಪತ್ತಿಗಳೂ ... ಪ್ರದರ್ಶನ ... ನಮ್ಮ ... ಸಮಾಗಮಗಳನ್ನು ಏರ್ಪಡಿಸಿ ... ಪ್ರಥಮ ... ವಿನಿಯೋಗಿಸುವುದೇ ಮುಖ್ಯವಾದ ಮಾರ್ಗವೆಂದು ನಮಗೆ ತೋರುತ್ತದೆ.

... ಪ್ರಯತ್ನಗಳನ್ನು ... ಮಾಡುವುದಕ್ಕೋಸ್ಕರ ಬೆಂಗಳೂರು ಮತ್ತು ... ಸ್ಥಳಗಳ ... ಒಕ್ಕಲಿಗರು ಒಂದು ಸಭೆಯ ... ಸನ್ ೧೯೦೬ ನೆ ಇಸವಿ ಏಪ್ರಿಲ್ ೨೯ ತಾರೀಖಿನ ದಿವಸ ಸೇರಬೇಕೆಂದು ನಿಶ್ಚಯವಾಯಿತು. ಆದರೆ ಆ ದಿವಸ ... ಸಭೆಯಲ್ಲಿ ಒಕ್ಕಲಿಗರ ದೊಡ್ಡ ಮನುಷ್ಯರು ಅನೇಕರು ... ಒಕ್ಕಲಿಗರ ... ಇದ್ದುದರಿಂದ ... ತಾರೀಖಿನ ದಿವಸ ಅದೇ ಸ್ಥಳದಲ್ಲಿ ಮತ್ತೊಂದು ಸಭೆ ಸೇರಬೇಕೆಂದು ನಿಷ್ಕರ್ಷೆಯಾದುದಲ್ಲದೆ ... ದೊಡ್ಡ ಮನುಷ್ಯರು ಎಲ್ಲಾ ... ಒಕ್ಕಲಿಗರ ದೊಡ್ಡ ಮನುಷ್ಯರನ್ನೂ ಸಾಧ್ಯವಾದಮಟ್ಟಿಗೂ ಹೆಚ್ಚಾಗಿ ಕೂಡಿಸಲಿಕ್ಕೆ ಸಾಹಸಮಾಡಬೇಕೆಂದು,

ನಿಷ್ಕರ್ಷೆಯಾಯಿತು. ಅದೇ ಪ್ರಕಾರ ಆಹ್ವಾನಪತ್ರಿಕೆಗಳನ್ನು ಕಳುಹಿಸಿದ್ದಕ್ಕೆ ಮಾರಸು, ರಡ್ಡಿ, ಗಂಗಡಿಕಾರ, ಕುಂಚಿಟಿಗ ಮತ್ತು ಹಳ್ಳಿಕಾರ ಎಂಬ ಪಂಗಡಗಳ ಎಲ್ಲಾ ಕಡೆಯಿನ ದೊಡ್ಡ ಮನುಷ್ಯರೂ ನೂರು ಜನಕ್ಕಿಂತಲೂ ಹೆಚ್ಚಾಗಿ ನಿಷ್ಕರ್ಷೆಯಾದ ತಾರೀಖಿನ ದಿವಸ ನೆರೆದಿದ್ದರು.

ಆ ದಿವಸ ಈಗ ಕೊಡಗಿನಲ್ಲಿ ಸಬ್ ಜಡ್ಜರಾಗಿರುವ ಮೆ॥ ಹೆಚ್. ಚನ್ನಯ್ಯನವರನ್ನು ಸಭಾಧ್ಯಕ್ಷರನ್ನಾಗಿ ಮಾಡಲಾಯಿತು. ಮೆ॥ ಚನ್ನಯ್ಯನವರು ವಿದ್ಯೆಯ ಆವಶ್ಯಕತೆಯನ್ನೂ ವಿಶೇಷತೆಯನ್ನೂ ಸಭೆಗೆ ಬಂದಿದ್ದ ದೊಡ್ಡ ಮನುಷ್ಯರು ಒಗ್ಗಟ್ಟಾಗಿ ಸಾಹಸದಿಂದ ಕಾರ್ಯನಿರ್ವಹಕ್ಕೆ ಉದ್ಯುಕ್ತರಾಗಬೇಕಲ್ಲದೆ ಅನೇಕ ಮತಾಂತರ ಒಕ್ಕಲಿಗರ ಮಂಡಲಿಯವರೆಲ್ಲರೂ ಪರಸ್ಪರ ಅನ್ಯೋನ್ಯತೆಯಿಂದ ಕಾರ್ಯಸಾಧಿಸಬೇಕಾದ ಆವಶ್ಯಕತೆಯನ್ನೂ ಕುರಿತು ಸಭಿಕರ ಮನಸ್ಸಿಗೆ ಸಂತೋಷವುಂಟಾಗುವಂತೆ ಉಪನ್ಯಾಸಮಾಡಿದರು. ಕೈಗೊಂಡಿರುವ ಕಾರ್ಯವು ಸಾರ್ಥಕವಾಗಿ ನೆರವೇರಿಸಬೇಕಾದುದು ಯುಕ್ತವಾದದ್ದೆಂಬದು ಸಭಿಕರ ಮನಸ್ಸಿನಲ್ಲಿ ನಾಟುವಂತೆ ಇನ್ನೂ ಕೆಲವರು ದೊಡ್ಡ ಮನುಷ್ಯರು ಮಾತನಾಡಿದರು. ಆ ದಿವಸ ಸಭಿಕರು ತುಂಬಾ ಕುತೂಹಲಯುಕ್ತರಾಗಿದ್ದು ಇಲ್ಲಿ ಕಂಡ ಮುಖ್ಯವಾದ ತೀರ್ಮಾನಗಳನ್ನು ಮಾಡಿಕೊಂಡರು:—

(೧) ಒಕ್ಕಲಿಗರ ಬಾಲಕರು ವಾಸಮಾಡುವದಕ್ಕೂ ಅವರ ಊಟ ಮತ್ತು ವಿದ್ಯಾಭ್ಯಾಸಕ್ಕೆ ಅನುಕೂಲವನ್ನು ಕಲ್ಪಿಸಿಕೊಡುವದಕ್ಕೂ ಬೆಂಗಳೂರು ಮತ್ತು ಇತರ ಮುಖ್ಯ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸತಕ್ಕದ್ದು; ಮತ್ತು ಈ ನಿಲಯಗಳ ಮೇಲ್ವಿಚಾರಣೆಗೋಸ್ಕರ ಆಯಾ ಸ್ಥಳದ ಮುಖಂಡರಾದ ಒಕ್ಕಲಿಗರ ದೊಡ್ಡ ಮನುಷ್ಯರು ಒಂದು ಕಮಿಟಿಯನ್ನು ಏರ್ಪಡಿಸಿಕೊಳ್ಳತಕ್ಕದ್ದು; (೨) ಕೋಲಾರ್ ಚಿನ್ನದಗಣಿಯ ಕಂಟ್ರಾಕ್ಟರು ಮೆ॥ ಟಿ. ಬೈಯ್ಯಣ್ಣನವರು ಬೆಂಗಳೂರಲ್ಲಿ ಸಂಘದವರು ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸುವ ಪರ್ಯಂತರ ಅರಳೇ ಪೇಟೆಯಲ್ಲಿ ೩೦,೦೦೦ ರೂಪಾಯಿಗಿಂತಲೂ ಹೆಚ್ಚಾಗಿ ಬೆಲೆಬಾಳುವ ತಮ್ಮ ಹೊಸ ಕಟ್ಟಡವನ್ನು ವಿದ್ಯಾರ್ಥಿನಿಲಯವಾಗಿ ಉಪಯೋಗಿಸಿಕೊಳ್ಳಲು ತುಂಬಾ ಉದಾರ ಮನಸ್ಸಿನಿಂದ ಸಂಘದವರ ವಶಕ್ಕೆ ಬಿಟ್ಟುಕೊಡುವದಾಗಿ ಕೊಟ್ಟ ಒಪ್ಪಿಗೆಯನ್ನು ವಂದನಾಪೂರ್ವಕವಾಗಿ ಅಂಗೀಕರಿಸತಕ್ಕದ್ದು; (೩) ಮೇಲ್ಕಂಡ ಉದ್ದೇಶವು ಸಾರ್ಥಕವಾಗಬೇಕಾದರೆ ಒಕ್ಕಲಿಗರ ಮಂಡಲಿಯ ಪರಸ್ಪರಸಹಾಯವು ಆವಶ್ಯಕವಾದುದರಿಂದ ಮೈಸೂರು ಮತ್ತು ಬ್ರಿಟಿಷ್ ಸೀಮೆಯಲ್ಲಿರತಕ್ಕ ಮುಖಂಡ ಒಕ್ಕಲಿಗರ ದೊಡ್ಡ ಮನುಷ್ಯರ ಮಹಾಸಭೆಯೊಂದು ಸನ್ ೧೯೦೬ ನೆ ಇಸ್ವಿ ಅಕ್ಟೋಬರು ತಿಂಗಳಲ್ಲಿ ಬೆಂಗಳೂರಿನಲ್ಲಿ ಕೂಡುವಂತೆ ಏರ್ಪಾಡುಮಾಡತಕ್ಕದ್ದು; (೪) ಈ ಮಹಾಸಭೆಯನ್ನು ಕೂಡಿಸುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವದಕ್ಕೋಸ್ಕರ ೩೬ ಮಂದಿ ಮೆಂಬರುಗಳುಳ್ಳ ಒಂದು ಕಾರ್ಯನಿರ್ವಾಹಕ ಸಭೆಯನ್ನು (ಎಕ್ಸಿಕ್ಯೂಟಿವ್ ಕಮಿಟಿ) ಏರ್ಪಡಿಸತಕ್ಕದ್ದು; ಮತ್ತು ಸದರಿ ಮೆಂಬರುಗಳು ಮಾಡುವ ಮೀಟಿಂಗುಗಳಲ್ಲಿ ಕನಿಷ್ಟಪಕ್ಷ ೯ ಮೆಂಬರುಗಳು ಕೂಡಿ ಮಾಡಿದ ತೀರ್ಮಾನಗಳು ಸಭೆಯ ಮೆಂಬರುಗಳೆಲ್ಲರೂ ಸೇರಿ ಮಾಡಿದ ತೀರ್ಮಾನಗಳಂತೆ ಎಣಿಸತಕ್ಕದ್ದು; (೫) ಈ ಮಹಾಸಭೆಯನ್ನು ನಡೆಸುವದಕ್ಕೆ ಆಗಬೇಕಾದ ಖರ್ಚುವೆಚ್ಚಗಳಿಗೆ ಹಣವನ್ನು ಒದಗಿಸುವದಕ್ಕೋಸ್ಕರ ಒಂದು ಚಂದಾಪಟ್ಟಿಯನ್ನು ಹಾಕತಕ್ಕದ್ದು.

ಈ ತೀರ್ಮಾನಕ್ಕನುಸಾರವಾಗಿ ಒಂದು ಚಂದಾಪಟ್ಟಿಯನ್ನು ಕಳುಹಿಸಿದ್ದಕ್ಕೆ ಆ ಸಭೆಯಲ್ಲೇ ೧೬೦ ರೂಪಾಯಿ ಚಂದಾ ಹಾಕಲ್ಪಟ್ಟಿತು. ನಾಲ್ಕನೆ ನಂಬರು ತೀರ್ಮಾನಕ್ಕನುಗುಣವಾಗಿ ಕಾರ್ಯನಿರ್ವಾಹಕ ಸಭೆಯವರು ಸಂಘದ ಮಹಾ ಸಭೆಯು ಸನ್ ೧೯೦೬ ನೆ ಇಸ್ವಿ ಅಕ್ಟೋಬರು ಮಾಹೆ ೬, ೭ ಮತ್ತು ೮ ನೆ ತಾರೀಖುಗಳಲ್ಲಿ ನಡೆಯತಕ್ಕದ್ದೆಂದು ನಿಷ್ಕರ್ಷೆಮಾಡಿದರು.

ಕೋಲಾರದ ಚಿನ್ನದಗಣಿಯ ಕಂಟ್ರಾಕ್ಟುದಾರರಾದ ಮತ್ತು ಬೆಂಗಳೂರು ದಂಡಿನಲ್ಲಿ ಅನೇಕ ಧರ್ಮಕಾರ್ಯಗಳನ್ನು ಮಾಡಿರುವ ಮೆ॥ ವಿ ಎಸ್ ಮಾರಪ್ಪನವರೂ ಮೆ॥ ವಿ ಎಸ್ ಮುನಿಸ್ವಾಮಪ್ಪನವರೂ ಮಹಾಸಭೆಯು ನಡೆಯುವ ಮೂರು ದಿವಸಗಳೂ ಸದರೀ ಸಭೆಗೆ ದಯಮಾಡುವ ಒಕ್ಕಲಿಗರ ಮಹಾಜನರಿಗೆ ಔತನಾದಿಗಳನ್ನು ತಾವೇ ತಮ್ಮ ಸ್ವಂತಖರ್ಚಿನಿಂದ ನಡಸುವದಾಗಿ ಬಹು ಉದಾರವಾದ ತಮ್ಮ ಅಭಿಮತವನ್ನು ಸಂಘದವರಿಗೆ ತಿಳಿಯಪಡಿಸಿದರು. ಇದರ ಖರ್ಚು ೩ ಸಾವಿರ ರೂಪಾಯಿಗಿಂತ ಹೆಚ್ಚಾಗಿಯೇ ಆಗಬಹುದೆಂದು ಯೋಚಿಸಿದಲ್ಲಿ ಈ ಮಹನೀಯರ ಔದಾರ್ಯಗುಣಕ್ಕೋಸ್ಕರ ಸಂಘದವರು ತಮ್ಮ ಅಪಾರವಾದ ಕೃತಜ್ಞತೆಯನ್ನು ಅವರಿಗೆ ಅರ್ಪಿಸುತ್ತಾರೆ. ಈ ದೊಡ್ಡ ಮನುಷ್ಯರು ತಾವಾಗಿಯೇ ಮನಃಪೂರ್ವಕವಾಗಿ ಸಹಾಯಮಾಡಿದುದರಿಂದ ಸಂಘದವರು ವಸೂಲ್ಮಾಡಿದ ಚಂದಾಹಣವನ್ನು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ನೋಟೀಸು ಮತ್ತು ಸಣ್ಣ ಪುಸ್ತಕಗಳನ್ನು ಪ್ರಚುರಪಡಿಸಲಿಕ್ಕೂ, ಒಕ್ಕಲಿಗರ ಮಂಡಲಿಯವರಿಗೆ ಸಂಘದ ಉದ್ದೇಶಗಳನ್ನು ಉಪನ್ಯಾಸಗಳ ಮೂಲಕ ತಿಳಿಯಪಡಿಸಲು ಮೈಸೂರು ಸೀಮೆಯ ಗ್ರಾಮಾಂತರಗಳಿಗೆ ಬೋಧಕರನ್ನು ಕಳುಹಿಸಿಕೊಡಲಿಕ್ಕೂ, ಮಹಾಸಭೆಗೆ ಸೇರುವ ಜನರ ವಸತಿಗೋಸ್ಕರ ಸೌಕರ್ಯಗಳನ್ನು ಒದಗಿಸಿ ಕೊಡಲಿಕ್ಕೂ ವಿನಿಯೋಗಿಸಿಕೊಳ್ಳಲು ಅವಕಾಶವಾಯಿತು. ಕಳೆದ ಆರು ತಿಂಗಳಲ್ಲಿ ಎರಡು ಜನರಲ್ ಮೀಟಿಂಗುಗಳು ಹದಿಮೂರು ಕಾರ್ಯನಿರ್ವಾಹಕ ಸಭೆಯ [ಎಕ್ಸಿಕ್ಯೂಟಿವ್ ಕಮಿಟಿ] ಮೀಟಿಂಗುಗಳು ದೊಡ್ಡಣ್ಣ ಸೆಟ್ಟರ ಸ್ಕೂಲಿನಲ್ಲಿ ಜರುಗಿದವು. ನಮ್ಮ ಸಭೆಗಳನ್ನು ನಡೆಸುವದಕ್ಕೋಸ್ಕರ ತಮ್ಮ ಸ್ಕೂಲ್ ಕಟ್ಟಡವನ್ನು ಸಂಘದವರು ಉಪಯೋಗಿಸಿಕೊಳ್ಳಲು ಅನುಮತಿಕೊಟ್ಟಿದ್ದಕ್ಕಾಗಿ ಸಾಹುಕಾರ್ ದೊಡ್ಡಣ್ಣಶೆಟ್ಟರವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆಂಬದನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇವೆ.

ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದ ಜನಗಳ ಕೋರಿಕೆ ಮೇಲೆ ಒಕ್ಕಲಿಗರ ಸಂಘಕ್ಕೆ ಪೋಷಕರಾಗಿರುವ ದಿವಾನ್ ಸಾಹೇಬರವರು ಒಪ್ಪಿದ್ದಲ್ಲದೆ, ಇಂಥ ಸಂಘದ ಪೋಷಕರಾಗಿರಲು ಕೇಳಿಕೊಳ್ಳೋಣವು ತುಂಬಾ ಮರ್ಯಾದೆಕೊಟ್ಟಂತಾಯಿತೆಂದೂ ಹೇಳಿದರು. ಸಂಘದ ಕಾರ್ಯವನ್ನು ಜನಸಮ್ಮತವಾಗಿ ಮಾಡುವದಕ್ಕೋಸ್ಕರ ಗ್ರಾಮಾಂತರಗಳಲ್ಲಿ ಸಂಚಾರಮಾಡಲು ಯೋಗ್ಯರಾದ ಮೆಂಬರುಗಳನ್ನು ಕಳುಹಿಸಿಕೊಡುವದಕ್ಕೆ ಮಾಡಿರುವ ಏರ್ಪಾಡು ಈ ಸಂಘವು ಉದ್ದೇಶಿಸಿರುವ ಕಾರ್ಯಗಳಲ್ಲಿ ಬಹು ಮುಖ್ಯವಾದ್ದಾಗಿರುತ್ತದೆ. ಆದುದರಿಂದ ಇಲ್ಲಿ ಹೇಳಿರುವ ದೊಡ್ಡ ಮನುಷ್ಯರು, ಅಂದರೆ ಮೆ॥ ಗಳಾದ ಟಿ ಬೈಯ್ಯಣ್ಣನವರು ಬಿ. ಕೆಂಪಣ್ಣನವರು, ಬಿ ನಾಗಪ್ಪನವರು, ಬಿ ಟಿ. ಕೆಂಪಣ್ಣನವರು ಮತ್ತು ನಿಶಾನಿ ಮಾರಪ್ಪನವರು ಒಕ್ಕಲಿಗರ ಜನರ ಕ್ಷೇಮವನ್ನು ಬಯಸಿ ದೇಶದ ಮೇಲೆ ಪ್ರಯಾಣಮಾಡಲು ಉದ್ಯುಕ್ತರಾಗಿ ತಮಗಿರುವ ಅನೇಕ ತೊಂದರೆಗಳನ್ನು ಲಕ್ಷಿಸದೆ ಸಂಘಕ್ಕೋಸ್ಕರ ಕೆಲಸಮಾಡುವದಕ್ಕೆ ಸಂತೋಷಚಿತ್ತದಿಂದ ಒಪ್ಪಿಕೊಂಡ ವಿಷಯವು ತುಂಬಾ ಪ್ರೋತ್ಸಾಹವನ್ನು ಉಂಟುಮಾಡುವಂಥಾದ್ದಾಗಿದೆ. ನಮ್ಮ ಕಾರ್ಯ ಮತ್ತು ಆಶಯಗಳನ್ನು ಸರಿಯಾಗಿ ತೂಕಮಾಡಿ ದಿವಾನ್ ಸಾಹೇಬರವರು ಈ ಸಂಘಕ್ಕೆ ತಮ್ಮ ಘನವಾದ ಪೋಷಣೆಯನ್ನೂ ವಿಶೇಷರೀತಿಯಾದ ಸಹಾಯಸಂಪತ್ತಿಯನ್ನೂ ದಯಪಾಲಿಸದೇ ಹೋಗಿದ್ದರೆ ನಮ್ಮ ಸಂಘವನ್ನು ಕುರಿತು ಬೋಧನೆಮಾಡಲಿಕ್ಕೆ ನಾವು ಮಾಡಿದ ಅಲ್ಪಪ್ರಯತ್ನಗಳು ಈಗ ನೆರವೇರಿರುವಷ್ಟು ಸಮರ್ಪಕವಾಗುತ್ತಿರಲಿಲ್ಲ. ಈ ಸಂಘದ ಸೆಕ್ರೆಟರಿಯವರಲ್ಲಿ ಒಬ್ಬರಾದ ಮೆ॥ ಕೆ. ಹೆಚ್ ರಾಮಯ್ಯನವರಿಗೆ ದಿವಾನ್ ಸಾಹೇಬರವರು ಯಾವಾಗಲೂ ಮನಃಪೂರ್ವಕವಾಗಿಯೂ ಸಂತೋಷಚಿತ್ತರಾಗಿಯೂ ಅಪ್ಪಣೆಕೊಡಿಸಿದ ಬುದ್ಧಿವಾದಗಳೂ ಇದಲ್ಲದೆ ಮೆ॥ ರಾಮಯ್ಯನವರು ಮೈಸೂರು ತುಮಕೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ಸಂಘದ ಪರವಾಗಿ ಉಪನ್ಯಾಸಗಳನ್ನು ಮಾಡಲು ಹೊರಟಾಗ ಇಲ್ಲಿ ಉದಹರಿಸಿರುವ ಮಾತುಗಳಿಂದ ಗರ್ಭಿತವಾದ ಮತ್ತು ಪರಿಚಯವನ್ನುಂಟುಮಾಡಲು ಸಹಾಯಕರವಾದ ಪತ್ರಿಕೆಯೊಂದನ್ನು ದಯಪಾಲಿಸಿದರು. ಮೈಸೂರು ದೇಶಕ್ಕೆ ಬೆಂಬಲವಾದ ಒಕ್ಕಲಿಗರ ಮಂಡಲಿಯ ಕ್ಷೇಮಚಿಂತನೆಯಲ್ಲಿ ದಿವಾನ್ ಸಾಹೇಬರವರು ಎಷ್ಟು ಉದಾರ ಮನಸ್ಕರಾಗಿಯೂ ಅನುರಾಗಯುಕ್ತರಾಗಿಯೂ ಇರುತ್ತಾರೆಂಬುವದನ್ನು ಸದರಿ ಪತ್ರಿಕೆಯು ಕಂಠೋಕ್ತವಾಗಿ ಸೂಚಿಸುವುದನ್ನು ನೋಡಬಹುದು.—"ಒಕ್ಕಲಿಗರ ಸಂಘದ ಸೆಕ್ರೆಟರಿ ಮೆ॥ ಕೆ. ಎಚ್. ರಾಮಯ್ಯ, ಬಿ. ಎ. ಯವರು ಬರುವ ಅಕ್ಟೋಬರ ತಿಂಗಳಲ್ಲಿ ಸೇರಿಸಬೇಕೆಂದು ಉದ್ದೇಶಿಸಿರುವ ಒಕ್ಕಲಿಗರ ಮಹಾಸಭೆಗೆ ಜನರನ್ನು ಬರಹೇಳುವುದಕ್ಕೋಸ್ಕರ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಸಂಚಾರಮಾಡುವವರಾಗಿದ್ದಾರೆ. ಒಕ್ಕಲಿಗರ ಮಂಡಲಿಯ ವಿದ್ಯಾಭ್ಯಾಸಕ್ಕೋಸ್ಕರ ಒಂದು ಏರ್ಪಾಟನ್ನು ಮಾಡಬೇಕೆಂಬುವದೇ ಈ ಮಹಾಸಭೆಯ ಉದ್ದೇಶವೆಂದು ತಿಳಿಯಬರುತ್ತದೆ. ಅಮಲ್ದಾರ್ರುಗಳೂ ಇತರ ತಾಲ್ಲೂಕು ನೌಕರರೂ ಅವರವರ ತಾಲ್ಲೂಕುಗಳಲ್ಲಿರತಕ್ಕ ಮುಖಂಡ ಒಕ್ಕಲಿಗರಿಗೆ ಮೆ॥ ರಾಮಯ್ಯನವರನ್ನು ಗುರ್ತುಮಾಡಿಸತಕ್ಕ ವಿಚಾರದಲ್ಲಿ ಅವರಿಗೆ ಆಗಬೇಕಾದ ಎಲ್ಲಾ ಸಹಾಯವನ್ನೂ ಒದಗಿಸಿಕೊಡುತ್ತಾರೆಂದು ನಂಬಿದೆ."

ಸಂಘದ ಉದ್ದೇಶಗಳನ್ನು ವಿಸ್ತರಿಸುವದರಲ್ಲಿ ತುಂಬಾ ಶ್ರದ್ಧೆಯಿಂದ ಕೆಲಸಮಾಡಿದ ಮೆ॥ ಗಳಾದ ಎಚ್. ಚನ್ನಯ್ಯನವರು, ಬಿ. ಎನ್. ಚನ್ನಿಗಪ್ಪನವರು, ಬಿ. ಎ. ಬಿ. ಪುಟ್ಟಯ್ಯನವರು ಬಿ. ಎ., ಸಿ ನಂಜಪ್ಪನವರು, ಎಂ. ಬಿ. ಸಿ. ಎಂ., ಪಿ ತಾತಪ್ಪ ಮೇಸ್ತ್ರಿಗಳು, ಪಿ. ಹನುಮಂತನವರು, ಎಂ. ಡಿ. ರಾಮಣ್ಣನವರು, ಎಸ್. ರಾಮಪ್ಪ ನಾಯಕರು, ಬಿ. ಕೆ ಚಿಕ್ಕವೀರಪ್ಪನವರು, ಎಸ್. ಪುಟ್ಟಣ್ಣನವರು, ಎಂ. ಮುನಿಸ್ವಾಮಪ್ಪನವರು ಮತ್ತು ಪಿಳ್ಳೆ ಮುನಿಯಪ್ಪನವರು—ಈ ದೊಡ್ಡ ಮನುಷ್ಯರಿಗೆ ವಂದನೆಗಳನ್ನು ಸಮರ್ಪಿಸುತ್ತೇವೆ.

ಈ ರಿಪೋರ್ಟು ಮುಕ್ತಾಯ ಮಾಡುವದಕ್ಕಿಂತ ಮುಂಚೆ ನಮ್ಮ ಪ್ರೀತಿ ಗೌರವಗಳಿಗೆ ಪಾತ್ರರಾದ ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರರವರ ಸನ್ನಿಧಾನದಲ್ಲಿ ನಮ್ಮ ಅಪಾರವಾದ ರಾಜಭಕ್ತಿ ವಿಶ್ವಾಸಗಳನ್ನು ಪ್ರಕಾಶಗೊಳಿಸುವುದು ನಮ್ಮ ಕರ್ತವ್ಯವಾಗಿರುತ್ತದೆ. ಮತ್ತು ಶ್ರೀಮನ್ ಮಹಾರಾಜರವರ ಪ್ರಜೆಗಳಲ್ಲಿ ಹೆಚ್ಚು ಸಂಖ್ಯೆಯುಳ್ಳವರಾದರೂ ಕೇವಲ ಹೀನಸ್ಥಿತಿಯಲ್ಲಿರುವ ಒಕ್ಕಲಿಗಜನರ ಏಳಿಗೆಗೆ ನಾವು ಮಾಡುತ್ತಿರುವ ಅಲ್ಪಪ್ರಯತ್ನಗಳು ಶ್ರೀಮನ್ ಮಹಾರಾಜರವರ ದಯಾಪೂರಿತವಾದ ಅನುರಾಗವನ್ನೂ ಹೃದಯಂಗಮವಾದ ಸಹಾಯವನ್ನೂ ಪಡೆಯಲು ಅರ್ಹವಾಗುತ್ತವೆಂದು ನಂಬಿರುತ್ತೇವೆ

ಬಳಿಕ ಮೆ॥ ಬಿ ಪುಟ್ಟಯ್ಯನವರು ಸಭೆಯಲ್ಲಿ ಮಾಡಿದ ತೀರ್ಮಾನಗಳನ್ನು ಓದಿ ಹೇಳಿದರು. ಇದಾದ ಮೇಲೆ ದಿವಾನ್ ಸಾಹೇಬರವರು ಕಳುಹಿಸಿದ್ದ ಉಪನ್ಯಾಸವನ್ನು ಮೆ॥ ಎಂ. ಶ್ಯಾಮರಾವ್, ಎಂ. ಎ. ಯವರು ಓದಿ ಕನ್ನಡದಲ್ಲಿ ಅರ್ಥಮಾಡಿ ಹೇಳಿದರು.

ದಿವಾನ್ ಸಾಹೇಬರವರ ಉಪನ್ಯಾಸ.

"ಈ ದಿವಸ ಸ್ಥಾಪಿಸುವದಕ್ಕೋಸ್ಕರ ನೀವು ಕೂಡಿರುವ ಸಂಘದಂತಹ ಸಂಘವನ್ನು ಏರ್ಪಡಿಸುವ ಕಾರಣದಲ್ಲಿ ನಾನು ಇರಬೇಕಾಗಿ ಅನುಗ್ರಹಿಸಲ್ಪಟ್ಟಿರುವೆನಲ್ಲಾ ಎಂದು ಸಂತೋಷಪಡುತ್ತೇನೆ. ನಿಮ್ಮ ಕುಲದ ಜನರ ಸ್ಥಿತಿಯನ್ನು ವೃದ್ಧಿಪಡಿಸುವದಕ್ಕೋಸ್ಕರ ಏಕೀಭವಿಸುವ ಪರ ಆವಶ್ಯಕತೆಯನ್ನು ನಿಮ್ಮಂಥ ಜನಸಂಘದವರು ತಿಳಿದುಕೊಳ್ಳು… ದಕ್ಕೆ ಬಂದಿರುವದು ನಮ್ಮ ದೇಶಕ್ಕೆ ಮುಂದೆ ಉಂಟಾಗುವ ಅಭ್ಯು… ದಯ ಕ್ಷೇಮಲಾಭಗಳನ್ನು ಪೂರ್ತಿಯಾಗಿ ತೋರಿಸುವ ಶುಭಸೂಚನೆಯಾಗಿರುತ್ತದೆ. ಕಾಪು ಅಥವ ಒಕ್ಕಲಿಗರು ಇಂಡಿಯಾ ದೇಶದ … ಸಮುದಾಯಕ್ಕೆ ಮುಖ್ಯ ಬೆಂಬಲ ಪ್ರಾಯರು. ಮತ್ತು ಪ್ರಾರಂಭ… ಮಾನಸಿಕ, ಮತ್ತು ಧೈರ್ಯ ವಿಷಯಗಳಲ್ಲಿ ಅವರು ಹೊಂದ… ವೃದ್ಧಿಯು ಇಂಡಿಯಾ ದೇಶದ ಜನಾಂಗದ ಇತರ ಪಂಗಡದ… ಅಭಿವೃದ್ಧಿಗೆ ಉತ್ತೇಜನವನ್ನುಂಟುಮಾಡದೇ ಇರಲಾರದು. ನೀ… ನ್ಯಾಯಪರರೂ, ಕಷ್ಟಪಡುವವರೂ, ಮತ್ತು ಆತ್ಮಾಭಿಮಾನಿಗಳಾದ ಜನರು. ನಿಮ್ಮ ಜನರಲ್ಲಿ ಕೆಲವರು ಇಂಗ್ಲೀಷ್ ವಿದ್ಯಾಭ್ಯಾ…ಕ್ಕೋಸ್ಕರ ಒದಗಿಸಲ್ಪಟ್ಟಿರುವ ಅನುಕೂಲಗಳನ್ನು ಉಪಯೋಗಿ…ಕೊಂಡು, ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಜಯಪ್ರದ ಹೊಂದು… ಇತರರೊಡನೆ ಹೋರಾಡುವ ಸಾಮರ್ಥ್ಯವು ನಿಮಗೂ ಇದೆ… ವನ್ನು ನೀವು ತೋರಿಸಿಕೊಟ್ಟಿರುವದು ಸಂತೋಷವನ್ನುಂಟು ಮಾ… ತಕ್ಕದ್ದಾಗಿರುತ್ತದೆ. ಈ ಪ್ರಯೋಜನಗಳನ್ನು ನಿಮ್ಮ ಜೊತೆಯ… ರಿಗೆ ಲಭಿಸುವಂತೆ ಮಾಡಬೇಕೆಂದೂ ವಿದ್ಯಾವಿಹೀನರಾಗಿರುವ ನಿ… ಜನ ಸಾಮಾನ್ಯಕ್ಕೆ ಸಾಧಾರಣ ವಿದ್ಯೆಯ ಪ್ರಯೋಜನಗಳನ್ನಾದ… ಉಂಟುಮಾಡಿಕೊಡಬೇಕೆಂದೂ ಇಚ್ಛೈಸುವದು ನಿಮಗೆ ಕೀರ್ತಿಯ… ನ್ನುಂಟುಮಾಡುತ್ತದೆ. ಸಾಮಾನ್ಯ ಜನರ ವಿದ್ಯಾಭ್ಯಾಸಕ್ಕೋ… ಶ್ರೀಮನ್ ಮಹಾರಾಜಾ ಸರ್ಕಾರದವರು ವಿಶೇಷ ಅನುಕೂಲ… ಟಿರುವದು ನಿಮಗೆ ತಿಳಿದಿದೆಯಷ್ಟೆ. ಇನ್ನು ಮುಂದೆಯೂ ಈ … ರವಾಗಿ ಹೆಚ್ಚು ಅನುಕೂಲವನ್ನು ಉಂಟು ಮಾಡಬೇಕೆಂದಿರುತ್ತಾ… ಆದರೂ ಕುಲದ ಮುಖಂಡರು ತಮಗಿಂತಲೂ ವಿದ್ಯಾವಿಹೀನರಾ… ಸಹೋದರರಿಗೆ ವಿದ್ಯೆಯು ಲಭಿಸುವಂತೆ ಮಾಡುವ ಆವಶ್ಯಕತೆಯ… ತಿಳಿದು ತಮ್ಮ ಕುಲಸ್ಥರ ಸ್ಥಿತಿಯನ್ನು ವೃದ್ಧಿಪಡಿಸುವದಕ್ಕೋಸ್ಕರ ಏ… ಭವಿಸಿ ಕಾರ್ಯತಃ ಪ್ರಯತ್ನಪಟ್ಟಾಗ ಎಷ್ಟು ನೆರವೇರಿಸ ಬಹು… ದಕ್ಕಿಂತಲೂ ಸರ್ಕಾರದವರು ಮಾಡಬಹುದಾದದ್ದು ಕಡಿಮೆ ಎಂ… ಹೇಳಬೇಕು. ನಿಮಗೂ ನೀವು ಮಾಡುತ್ತಿರುವ ಪ್ರಯತ್ನಗಳಿ… ಎಲ್ಲಾ ವಿಷಯದಲ್ಲೂ ಜಯವುಂಟಾಗಲೆಂದು ಹಾರೈಸುತ್ತೇ… ನೀವು ಈ ದಿವಸ ತೋರಿಸಿರುವ ನಿದರ್ಶನವು ಇಂಡಿಯಾ ದೇಶದ … ಗಳ ಇತರ ಪಂಗಡದ ಜನರಿಗೆ ಅವರ ಅಭಿವೃದ್ಧಿಗೋಸ್ಕರ ನಿಮ್ಮ ಸ… ದಂತಹ ಸಂಘಗಳನ್ನು ಏರ್ಪಡಿಸಿಕೊಳ್ಳುವಂತೆ ಪ್ರೋತ್ಸಾಹವನ್ನು ಮಾಡುತ್ತದೆಂದೂ ನಂಬಿದ್ದೇನೆ. ತಮ್ಮ ಕ್ಷೇಮಕ್ಕೋಸ್ಕರ ಪ್ರಯ… ಪಡುತ್ತಿರುವ ಪ್ರತಿ ಒಂದು ಪಂಗಡದವರೂ ಇತರ ಪಂಗಡದ ಮೇಲೆ ವೈಷಮ್ಯವುಳ್ಳವರಾಗಿದ್ದಾರೆಂದು ಅರ್ಥಮಾಡಬಾರದು. ಬ… ಪ್ರಜಾಸಂಖ್ಯೆಯುಳ್ಳ ಇಂಡಿಯಾ ದೇಶದ ಜನರ ಬೇರೆ ಬೇರೆ ಪಂಗ… ವರು ಚಿಕ್ಕ ಚಿಕ್ಕದಾಗಿ ತಮ್ಮ ಕುಲದ ಸಮಾಜಗಳನ್ನು ಮಾಡಿ… ಡು ಕೆಲಸ ಮಾಡುವುದರಲ್ಲಿ ಗುಣವಿದೆ. ಆಗ ಒಂದಕ್ಕೊಂದು ವಿ… ಧವಾದ ಪ್ರಯೋಜನಗಳಲ್ಲಿ ಮನಸ್ಸು ಚದರಿಹೋಗುವುದು … ಸಂಘದ ಉದ್ದೇಶಗಳನ್ನು ಸಾರ್ಥಕಪಡಿಸುವದಕ್ಕೆ ಉಪಯೋಗಿ… ಸಾಧನಗಳು ಸಂಘದಲ್ಲಿ ಒಂದು ಕುಲಕ್ಕಿಂತ ಹೆಚ್ಚಾದ ಕುಲ… ಸೇರಿದ್ದರೆ ಉಪಯೋಗಿಸಲಾಗುವದಕ್ಕಿಂತ ಉತ್ತಮ ತರವಾಗಿ … ಮಾಡಿ ಉಪಯೋಗಿಸಲಾಗುತ್ತವೆ. ಹ್ಯಾಗಾದರೂ ಪ್ರತಿ ಸ… ವರೂ ತಾವು ಮಾಡಬೇಕೆಂದಿರುವ ಮುಖ್ಯವಾದ ಕರ್ತವ್ಯದ ಪ… ಲಕ್ಷ್ಯವನ್ನು ಎಂದಿಗೂ ತಪ್ಪಿಸ ಬಾರದು. ಜನಾಂಗದ ಕ್ಷೇಮವನ್ನೂ ಏಳಿಗೆಯನ್ನೂ ಅಭಿವೃದ್ಧಿಗೆ ತರುವದೇ ಈ ಕರ್ತವ್ಯವಾ… ತ್ತದೆ. ಈ ಉದ್ದೇಶವನ್ನು ನೆರವೇರಿಸುವದಕ್ಕೆ ಪ್ರಯತ್ನ ಪಡುವ ಪಂಗಡದವರು ತಮ್ಮ ತಮ್ಮ ವಿಶೇಷ ಗುಣಗಳನ್ನು ಬಿಟ್ಟುಬಿಡಬೇಕೆಂಬ ಅರ್ಥವಲ್ಲ. ತಮ್ಮ ಜಾತಿ ಮತ್ತು ಮತಪದ್ಧತಿಗಳಲ್ಲಿ ವಿಶೇಷ… ಯುಕ್ತವೂ ಆದವುಗಳನ್ನೆಲ್ಲಾ ಇಟ್ಟುಕೊಂಡು, ಅವರು ಜನದ ಕ್ಷೇಮಲಾಭವನ್ನು ವೃದ್ಧಿಪಡಿಸುವದಕ್ಕೆ ಯಾವಾಗಲೂ ಪ್ರಯತ್ನಪಡ… ಮತ್ತು ಎಲ್ಲಾ ಕುಲದವರೂ ಆಸಕ್ತಿ ತೋರಿಸುವ ವಿಷಯಗಳಲ್ಲಿ ಪಂಗಡದವರೊಡನೆ ಸೇರಿ ಕೆಲಸ ಮಾಡಬೇಕು. ದೊಡ್ಡ ಮನುಷ್ಯರಾದ ನೀವು ಕೈಗೊಂಡಿರುವ ಸಾಹಸ ಕಾರ್ಯಕ್ಕೆ ಜಯವುಂಟಾಗಲಿ ಎಂದು ಇನ್ನೊಂದು ಸಾರಿ ಕೋರುತ್ತೇನೆ"

ಸಮಾಪ್ತಿ ವಿಷಯಗಳು.

ಇದು ಮುಗಿದ ನಂತರ ಸಭಿಕರೆಲ್ಲ ಆನಂದವಾಗುವಂತೆ ಫೋನೋಗ್ರಾಫ್ ಎಂಬ ಯಂತ್ರದ ಮೂಲಕ ಸಂಗೀತವಾಯಿತು. …ದ್ದ ಸರ್ವರಿಗೂ ಹೂವಿನ ಹಾರಗಳು ಹಾಕಲ್ಪಟ್ಟವು. ಎಲ್ಲರೂ ಆ ಸಭೆ ಸೇರಿಸಿದ ಉದ್ದೇಶವು ಸಾರ್ಥಕವಾದದ್ದಕ್ಕೋಸ್ಕರ ಸಂತೋಷಚಿತ್ತರಾಗಿ ತೆರಳಿದರು

ಸಭೆಯವರೆಲ್ಲಾ ಸೇರಿ ದಿವಾನ್ ಸಾಹೇಬರವರು ಸಂಘ…ವಾಗಿ ತೋರಿಸಿದ ಅಸದೃಶವಾದ ಅಭಿಮಾನವನ್ನು ಕೃತಜ್ಞತಾ…ಕವಾಗಿ ಅಂಗೀಕರಿಸಿ, ಅವರಿಗೆ ಈ ಕೆಳಗೆ ಕಂಡ ತಂತಿವರ್ತಮಾನವನ್ನು ಕಳುಹಿಸಿದರು:—"ಒಕ್ಕಲಿಗರ ಸಂಘದ ಪರವಾಗಿ … ಅನುರಾಗವನ್ನು ತೋರಿಸಿದುದಕ್ಕೋಸ್ಕರ ಒಕ್ಕಲಿಗರ ಮಹಾಸ…ವರು ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರೆ; ಸ…ದ್ಧಾರವಾದ ತಮ್ಮ ಸಹಾಯವನ್ನು ಕೇಳಿಕೊಳ್ಳುತ್ತೇವೆ."

ಸಭೆ ಕೂಡಿದ್ದ ಜನರೆಲ್ಲ ಹತ್ತು ಸಾವಿರ ರೂಪಾಯಿ … ಚಂದಾ ಹಾಕಿರುವರು. ಇಷ್ಟು ಶುಭ ಸೂಚನೆಗಳಿಂದ ಒಕ್ಕಲಿಗರ ಮಹಾ ಸಭೆಯು ಸಾಂಗವಾಗಿ ದೇವರ ಕೃಪೆಯಿಂದ ನೆ…

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದು ಡ್ಡು —— ಕ್ರ ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ | ಮೈಸೂರು—ಸನ್ ೧೯೦೬ ನೇ ಇಸವಿ ಅಕ್ಟೋಬರ್ ತಾರೀಖು ೨೫ ನೇ ಗುರುವಾರ. | ಸಂಚಿಕೆ ೨೧

ಇಂಡಿಯದ ದೊಡ್ಡ ನೋವುಹರ.

86-22

ಕ್ಲಿಮೆಂಟ್ ಮ್ಯಾಜಿಕ್ ಬಾಂ.

ತರದ ವಾಯುನೋವು, ಆರತಲೆನೋವು, ನರಗಳ ಇರಿತ, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಕೀಲುಬೆನ್ನು ಎದೆಗಳ ನೋವು, ಅಸ್ತಮಾ ಈ ಪ್ರಕೆ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯಪಡ ಬೇಕಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲಿಮೆಂಟ್ ಯವರ ಮ್ಯಾಜಿಕ್ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡ್ಲೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾ ಬಾಟ್ಲ ಜೊತೆಯಲ್ಲಿ ಅಚ್ಚಾದ ಪಟ್ಟಗಳನ್ನಿಟ್ಟು ಕಳಿಸುತ್ತೇವೆ. ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗುವಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದೆವಲ್ಲಾ ಎವಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭ ಕ್ರಯ — ೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ, ರೂ. ೩॥ ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಮೂರು ಬಾಟ್ಲ ವರಿಗೆ ೩ ಆಣೆ.

ವಿಳಾಸ —ಎಫ್ ಡಬ್ಲ್ಯು. ಆರ್ಕ, ಸಿವ್ರಿ ರೋಡ್, ವೇಪೇರಿ, ಮದರಾಸ್

ಹೊ ೕ ಮೋ ೕ ಸಿ ಯಾ.

ತಗಲುತ್ತಲೇ ನೋವು ವಾಸಿಯಾಗುತ್ತೆ.

● ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ ಇದ್ದೇ ಇರಬೇಕು. ಇದಕ್ಕೆ ಸಮಾನವಾದ ಔಷಧ ಮತ್ತ್ಯಾವುದೂ ಇಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

● ತೈಲವು ತತ್ಕಾಲದಲ್ಲಿ ಜೀವಿಗಳಿಗೆ ಮಹತ್ತಾಗಿ ಸಿಕ್ಕ ಔಷಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟರು ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ವಾಸಿಯಾಗುವದು.

● ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾಯು, ಮೂಲವ್ಯಾಧಿ, ಉಬ್ಬಸ, ವಾಯುಗಳು, ಸಲ ಹೊರಳುವದು, ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮುಖ, ಊದುಗಳು, ಗಸ್ತೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ ಕೀಳು ಕಡಿದದ್ದು, ಚಿಪ್ಪಿರುವದು, ಬೆಂಕಿಯಲ್ಲಿ ಸುಟ್ಟದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ವಾಸಿಮಾಡುತ್ತದೆ. ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತರ ಬರುವದಿಲ್ಲ.

ಕ್ರಯ — ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ. —೮ ಆ., ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ಬಿಡುತ್ತಾರೆ ರೂ. ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ಡಬ್ಬಿದಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ ೨—೮ ಆ. ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ಮಾಫಿ ಬಿಡುತ್ತೆ.

❀❀❀❀❀❀❀❀❀

ಹೋಮಿಯೋಪತಿಯಾ ಯಂಗ್ರೋಕೇಷನ್.

● ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಒಡೆದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮಿಯೋಪತಿ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ. ಇದನ್ನು ಬಹು ಬೇಗನೆ ಸೇದಿಕೊಳ್ಳಬಲ್ಲದು. ಡಬ್ಬಿಗಳಲ್ಲಿ ತುಂಬಿ ೧ ರೂ ಗೂ ಒಂದರಂತೆ ವಿಕರಿ ಮಾಡಲ್ಪಡುವದು ತರಿಸಿಕೊಂಡರೆ ಟಪ್ಪಾಲ್ ಖರ್ಚು ಮಾಫಿ ಎಲ್ಲಾ ಊರುಗಳಲ್ಲೂ ದೊರೆಯುವದು.

● ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ಪಟ್ಟಿಗಳನ್ನು ಅಪೇಕ್ಷಿಸಿದರೆ ಕಳುಹಿಸುವೆವು.

ವಿಳಾಸ:—ಹೋಮಿಯೋಪತಿ ಕಂಪೆನಿ, ೨೩ ಸೇಂಟು ಬೀಚ್ ಸ್ಟ್ರೀಟ್, ಮದರಾಸ್

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು.

ಹುರಿಯುವ ಇರುವದು ಅಥವಾ ಆಗತಾನೆ ಹುರಿದದ್ದು.
ಕದವೂರಿದ ಸ್ಥಳದಿಂದಲೇ ನೆಟ್ಟಗೆ ರವಾನಿಸಲ್ಪಡುವದು.

85-37

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು. ಹೆಗ್ಗುರ್ತು ಇಲ್ಲ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಮೈಸೂರು.

ಜ್ವ ರ ಹ ರಿ.

101-13



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಛಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

❀❀❀❀❀❀❀❀❀

ಓ ಮ ಂ ಕ ಪೂ ರ್ ರ

● ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರೆಯುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತಿಪ್ಪಯ್ಯ ಒಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ.

● ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ:—

ತಯಾರಿಸುವವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಸೆಯಿಂಟ್ ಟೀಮ್ ಸ್ಟ್ರೀಟ್, ಮದ್ರಾಸ್.

ನೋಟೀಸು.

131-2

ಶಿಡ್ಲಘಟ್ಟದ ಶುಭೋದಯ ಕಂಪೆನಿ, ಲಿಮಿಟೆಡ್.

ಈ ಕಂಪೆನಿ ನೈಂಡಪ್ಪಾಗುತ್ತಿರುವುದು ಸರಿಯಷ್ಟೆ. ಇದುವರಿಗೂ ದಾಮಾಷಾಯಿ ಮೊಬಲಗು ಬಟವಾಡೆಹೊಂದಿರುವನು ಜಾಕಾ ಬಾಕಿ ಮೆಂಬರುಗಳಿಗೆ ಸಲ್ಲಬೇಕಾದ ದಾಮಾಷಾಯಿ ಮೊಬಲಗು ಈ ಲಾಗಾಯಿತು ಈ ಕೆಳಗೆ ರುಜುವು ಮಾಡಿರುವವರಿಂದ ಹಂಚಲ್ಪಡುತ್ತೆ. ಸದರಿ ಮೆಂಬರುಗಳು ತಮ್ಮತಮ್ಮ ಸರ್ಟಿಫಿಕೇಟುಗಳ ಮತ್ತು ಕಾಲ್ಸರೀತಿಗಳೊಡನೆ ಬಂದು ಮೊಬಲಗು ತೆಗೆದುಕೊಳ್ಳಬಹುದು.

೧೩-೧೦-೧೯೦೬, ಎಚ್ ನಾರಾಯಣಯ್ಯ (ಅಡ್ವೋಕೇಟ್)
ಚಿಕ್ಕಬಳ್ಳಾಪುರ. ಅಫಿಸಿಯಲ್ ಲಿಕ್ವಿಡೇಟರ್, ಶುಭೋದಯ ಕಂಪನಿ

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-21

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ—ಕ್ರಯ ೧೦ ಆಣೆ. ವಿ. ಪಿ ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲಿಸುವ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟ್ ಮಾಂಡ್ವಿ, ಮುಂಬಯಿ

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

102-2

ನವೀನ ಆಭರಣಗಳು; ಬೇಗ ನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ. ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಹಾಕಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛ ಬಂಗಾರದ ಆಭರಣಗಳನ್ನು ಹೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—



ಜಡೆಕುಚ್ಚು.

ಕ್ರಯ ರೂ ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾರದ ಆಭರಣವೆನ್ನುವ ಹಾಗೆ ತಯಾರಿಸಲ್ಪಟ್ಟಿರುತ್ತೆ.



ಪಚ್ಚೆ ಕಲ್ಲು ಜಡೆಬಿಲ್ಲೆ.
ಬಂಗಾರದ ಗಿಲ್ಟು ಮಾಡಿದ್ದು.
೧ಕ್ಕೆ ಬೆಲೆ ರೂ. ೨-೩-೦

ಇದು ನೇಲಾದ ಪಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು: ನೋಡುವವರ ಕಣ್ಣು ಚೆದರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ.
ಸಾವುಕಾರ್ ಪೇಟೆ, ಮದ್ರಾಸು.

ಕರೆನ್ಸಿ ನೋಟುಗಳು ಬದಲಾಗಿವೆ.

185-1

100 ರೂಪಾಯಿ ಬಾಬತು ನಂ TA-52-32162, ನಂ. TA-53-49192 ಇವೆರಡು ಅರ್ಧನೋಟುಗಳು ಪೂರಾನೋಟೆಂದು ಕಸ್ತಲಲ್ಲಿ 100 ರೂಪಾಯಿಗೆ ಪಾರ್ಸಲಾಗಿವೆ ಯಾರಾದರೂ ಕೈತಪ್ಪಿದ್ದರೆ ನೋಟುಗಳನ್ನೇ ಬದಲಾಯಿಸುವದಾಗಲಿ, ಇವೆರಡನ್ನು ತೆಗೆದುಕೊಂಡು ರೂಪಾಯಿಗಳನ್ನಾಗಲಿ ವಾಪಸು ಮಾಡಬಹುದು.

ಚನ್ನಪಟ್ಟಣದಲ್ಲಿರುವ ಸರಾಫ್ ತಿಮ್ಮರಾಯಶೆಟ್ಟಿ

ನೋಟೀಸ್.

134-2

ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ಕಸಬಾ ನಿವಾಸಿಯಾದ ತಿರಕಪ್ಪನವರ ಮಠದ ನಾಗರಿಗಯ್ಯನವರ ಮಕ್ಕಳಾದ ವೀರಯ್ಯನವರು ಈ ಮೂಲಕ ಸರ್ವ ಜನಗಳಿಗೆ ತಿಳಿಯಪಡಿಸುವದೇನಂದರೆ—ನನ್ನ ಸ್ವೀಕೃತ ಪುತ್ರನಾದ ಪಂಚಾಕ್ಷರಯ್ಯ, ಬಿನ್ ಸಿದ್ಧಯ್ಯ ಎಂಬುವವನು ಸುಮಾರು ಇಪ್ಪತ್ತೆರಡು ವರುಷ ವಯಸ್ಸಿನವನಾಗಿ ನಮ್ಮ ಗೌರವದ ಮನೆತನಕ್ಕೆ ಅಗೌರವವನ್ನುಂಟುಮಾಡಿ ನಷ್ಟಪಡಿಸಬೇಕೆಂಬ ದುರಾಲೋಚನೆಯಿಂದ ದುರ್ಜನರ ಸಹವಾಸಕ್ಕೆ ಬಿದ್ದು ಅವರುಗಳ ದುರ್ಬೋಧನೆಗೆ ಒಳಪಟ್ಟು ದುರ್ಮಾರ್ಗಪ್ರವರ್ತಕನಾಗಿ ನನ್ನ ಕಂತುಂಬದ ಬಾಬ್ತು ಸ್ಥಿರ ಮತ್ತು ಚರಾಸ್ತಿಗಳನ್ನು ದುರ್ವಿನಿಯೋಗ ಕೆಲಸಕ್ಕಾಗಿ ಅನ್ಯಾಕ್ರಾಂತ ಮಾಡಬೇಕೆಂದು ಸದರಿ ಪಂಚಾಕ್ಷರಯ್ಯನು ನನ್ನ ಇಷ್ಟಕ್ಕೆ ವಿರೋಧವಾಗಿ ಸ್ವೇಚ್ಛೆಯಿಂದ ಆಚರಿಸುತ್ತಾನಾದ್ದರಿಂದ ಈತನು ಸಾಲಾ ವಗೈರೆ ಮುಂತಾದ್ದು ಮಾಡಿ ನನ್ನ ಆಸ್ತಿಯನ್ನು ಅಡವು ಮುಂತಾದ್ದು ಮಾಡಿದ್ದಾದರೆ ಅಂಥಾ ಸಾಲಕ್ಕೆ ನನ್ನ ಬಾಬ್ತು ಸ್ಥಿರ ಚರಾಸ್ತಿಗಳು ಜವಾಬ್ದಾರಿಯಾಗಲಾರವು ನನ್ನ ತಿಳುವಳಿಕೆ ವಿನಹ ಯಾರೊಬ್ಬರೂ ಸದರಿ ಪಂಚಾಕ್ಷರಯ್ಯನಿಗೆ ಸಾಲ ಯಾರವು ಮುಂತಾದ್ದು ಕೊಡಕೂಡದು. ಇದಕ್ಕೆ ವಿರೋಧವಾಗಿ ಯಾರಾದರೂ ಸದರಿ ಪಂಚಾಕ್ಷರಯ್ಯನಿಗೆ ಸಾಲ ವಗೈರೆ ಕೊಟ್ಟಿದ್ದಾದರೆ ಸದರಿ ಪಂಚಾಕ್ಷರಯ್ಯನ ಸ್ವಂತ ಜವಾಬ್ದಾರಿಯಿಂದ ಸಾಲ ತೀರಿಸಿಕೊಳ್ಳಬೇಕೇ ಹೊರತು ನನ್ನ ಆಸ್ತಿ ಮೇಲೆ ಬರಲು ಯಾರಿಗೂ ಹಕ್ಕು ಇರುವದಿಲ್ಲವೆಂದು ಈ ಮೂಲಕ ಪ್ರಸಿದ್ಧಪಡಿಸಿರುತ್ತೇನೆ. ತಾ|| ೨೯—೯—೧೯೦೬, ದಾವಣಗೆರೆ

ತಿರಕಪ್ಪನವರ ಮಠದ ವೀರಯ್ಯನ ರುಜು

ಇಗೋ! ಕನ್ನಡ "ಮಾಡೆಲ್" ಪಾಕೆಟ್ ಡೈರಿ!

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!! 133-2

೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಮೈಸೂರು ದೇಶದ ಜನರು ಇದುವರಿವಿಗೂ ಇಂಥಾ ಉತ್ತಮವಾದ ಡೈರಿಗಳನ್ನು ಕಣ್ಣಿನಿಂದ ನೋಡಿಯೂ, ಕಿವಿಯಿಂದ ಕೇಳಿಯೂ ಇರಲಿಲ್ಲವೆಂದು ಸಂದೇಹವಿಲ್ಲದೆ ಅಭಿಪ್ರಾಯಪಡಬಹುದು. ಇವುಗಳಲ್ಲಿ ಅಡಕವಾಗಿರುವ ಸಂಗತಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರುಗಳು, ಸಣ್ಣವರು, ದೊಡ್ಡವರು, ಗಂಡಸರು, ಹೆಂಗಸರು ಮುಂತಾದ ಎಲ್ಲಾ ಜನಗಳಿಗೂ ವಿಶೇಷ ಉಪಯೋಗಕರವಾಗಿದೆ ಎಂದು ನೀವೇ ತಿಳಿದುಕೊಳ್ಳುವಿರಿ ಬೇರೆ ಡೈರಿಗಳಲ್ಲಿ ಅಡಕವಾಗಿರುವ ಸಂಗತಿಗಳಿಗಿಂತ ಇವುಗಳಲ್ಲಿ ಹೆಚ್ಚು ವಿಷಯಗಳಿರುವವು. ಜಾಗ್ರತೆ ಇವುಗಳನ್ನು ತರಿಸಿಕೊಳ್ಳದೆ ಹೋದರೆ ಮುಗಿದುಹೋದಾವು.

ಕ್ರಯ—

ನಂ|| ೧ ಸಣ್ಣ ಸೈಜು ಪೆನ್ಸಿಲ್ ಇದತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ|| ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ|| ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದದೇ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಡಿ. ನಥ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

CHAMBERLAIN'S PAIN BALM

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು.

95-17



ಬೆನ್ನು ಉಬಿನಲ್ಲಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ನಾಡಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ... ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇದೆಲ್ಲಾ ... ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

...ಕ್ಕೆಯಿಂದ ಮಾಟ್ಟದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಅಕ್ಟೋಬರ್ ತಾ|| ೨೫ ನೇ ಗುರುವಾರ

ಅರ್ಬತ್ನಾಟ್ ಕಂಪನಿಯ ದುರವಸ್ಥೆಯು.

ದಕ್ಷಿಣ ದೇಶದಲ್ಲೆಲ್ಲಾ ಸುಮಾರು ೧೦೬ ವರ್ಷಗಳಿಂದಲೂ ಬಹಳ ನಂಬಿಕೆಯುಳ್ಳ ಕಂಪನಿ ಎಂದು ಪ್ರಖ್ಯಾತಿಪಡೆದಿದ್ದ ಮದರಾಸ್ ಅರ್ಬತ್ನಾಟ್ ಕಂಪನಿ ಎಂಬ ಭಾರೀ ಬ್ಯಾಂಕು ಕಳೆದ ಶನಿವಾರದಿಂದ ಬಹಳ ಶೋಚನೀಯವಾದಸ್ಥಿತಿಗೆ ಬಂದಿದೆ ಎಂದು ತಿಳಿಸಲು ವಿಷಾದಿಸುತ್ತೇವೆ ಪಿ ಮ್ಯಾಕ್ಫೇಯರ್ ಕಂಪನಿಯವರು ಲಂಡನ್ ಪಟ್ಟಣದಲ್ಲಿ ಮದರಾಸ್ ಅರ್ಬತ್ನಾಟ್ ಕಂಪನಿಯ ಪಾಲುಗಾರರಾಗಿದ್ದರು ಕಳೆದ ೨೦ನೆ ತಾ ಶನಿವಾರ ಲಂಡನ್ ಕಂಪನಿಯವರು ಡಿಪಾಜಿಟ್‌ದಾರರಿಗಾಗಲಿ ಇತರರಿಗಾಗಲಿ ಹಣ ಕೊಡುವುದನ್ನು ನಿಲ್ಲಿಸಿ ಬಿಟ್ಟರು ಇದು ತಂತೀ ವರ್ತಮಾನದ ಮೂಲಕ ಮದರಾಸಿಗೆ ತಿಳಿಯಿತು ಸೋಮವಾರ ಅರ್ಬತ್ನಾಟ್ ಕಂಪನಿ ದಿವಾಳಿಯಾಯಿತೆಂದು ಮದರಾಸಿನಲ್ಲಿ ಗಲಭೆಯಾಯಿತು ಸೋಮವಾರ ಆ ಬ್ಯಾಂಕಿನ ಬಾಗಿಲು ತೆರೆಯಲೇ ಇಲ್ಲ ಸರ್ಕಾರಿ ನೌಕರರೂ ಪೋಲೀಸಿನವರೂ ಆ ಕಟ್ಟಡವನ್ನು ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ ಆ ಕಂಪನಿಯ ಪರವಾಗಿ ಆ ದಿನವೇ ಲಾಯರು ಕೋರ್ಟಿಗೆ ಅರ್ಜಿ ಕೊಟ್ಟು ಬ್ಯಾಂಕು ದಿವಾಳಿ ಆಯಿತೆಂದು ಗೊತ್ತುಪಡಿಸಿದರು ಇದಕ್ಕೆ ಅವರು ಕಾರಣ ಹೇಳಿರುವುದೇನೆಂದರೆ—(೧) ಲಂಡನ್ ಪಟ್ಟಣದ ಏಜಂಟ್ ಕಂಪನಿಯವರು ಹಣ ಕೊಡುವದನ್ನು ನಿಲ್ಲಿಸಿಬಿಟ್ಟರು, (೨) ಈ ಮದರಾಸ್ ಬ್ಯಾಂಕಿನಲ್ಲಿ ಹಣ ಇಟ್ಟಿದ್ದ ಡಿಪಾಜಿಟ್‌ದಾರರು ವಿಶೇಷವಾಗಿ ಬಂದು ಹಣವನ್ನು ಕೇಳಿ ವಾಪಸು ತೆಗೆದುಕೊಂಡರು, (೩) ಬ್ಯಾಂಕಿನ ಹಣವು ಕಾಫಿ ತೋಟಗಳೇ ಮೊದಲಾದ ಸ್ಥಿರಸ್ವತ್ತುಗಳ ಮೇಲೆ ಬಿದ್ದಿರುವುದರಿಂದ ಕೊಡ್ಲೆ ಹಣ ಒದಗುವ ಹಾಗಿಲ್ಲ, ಮತ್ತು ಈ ಸ್ಥಿರ ಆಸ್ತಿಗಳ ಬೆಲೆಯು ಈಗೀಗ ಬಹಳ ಕಡಿಮೆಯಾಗಿರುತ್ತವೆ ಇಂಥಾ ಅರ್ಜಿಯನ್ನು ಹೈಕೋರ್ಟ್ ಜಡ್ಜಿಗಳು ದಾಖಲ್‌ಮಾಡಿಕೊಂಡು ಆರು ವಾರಗಳ ವಾಯಿದೆ ಗೊತ್ತು ಮಾಡಿದಾರೆ ಇದಲ್ಲದೆ ಬ್ಯಾಂಕಿನ ಲೆಕ್ಕಪತ್ರಗಳನ್ನೂ ಆದಾಯನಷ್ಟಗಳನ್ನೂ ಗೊತ್ತು ಮಾಡುವುದಕ್ಕೆ ಸರ್ಕಾರಿಯಾಗಿ ಕೆಲವು ಅಧಿಕಾರಿಗಳನ್ನು ನೇಮಿಸಿರುವರು.

ಈ ಬ್ಯಾಂಕಿನ ದೆಸೆಯಿಂದ ಎಷ್ಟು ಜನರಿಗೂ ವರ್ತಕರಿಗೂ ಎಷ್ಟೆಷ್ಟು ಆಸ್ತಿ ನಷ್ಟವಾಗಿರುವುದೋ ಬ್ಯಾಂಕಿನ ಒಟ್ಟು ಸಾಲಗಳೆಷ್ಟೋ ಇನ್ನೂ ಪ್ರಕಟವಾಗಲಿಲ್ಲ ಆದರೂ ಬಹಳ ಹೆಚ್ಚು ಹಣವುಳ್ಳದಾಗಿರಬೇಕೆಂದು ಊಹಿಸಬಹುದಾಗಿದೆ ಈ ಬ್ಯಾಂಕಿನವರು ಸ್ವಲ್ಪ ಹೆಚ್ಚು ದರ ಬಡ್ಡಿಯನ್ನು ಕೊಡುತ್ತಿದ್ದ ಕಾರಣ ಅದರಲ್ಲಿ ಅನೇಕ ಧರ್ಮದ ಮತ್ತು ಪಬ್ಲಿಕ್ ಫಂಡುಗಳನ್ನು ಡಿಪಾಜಿಟ್ಟು ಇಟ್ಟಿದ್ದರು ನಮ್ಮ ಮೈಸೂರು ಸಂಸ್ಥಾನದಲ್ಲೂ ಅನೇಕ ಅಧಿಕಾರಿಗಳೂ ವರ್ತಕರೂ ಸಾಮಾನ್ಯಜನರೂ ಈ ಬ್ಯಾಂಕಿನಲ್ಲಿ ಬಹಳ ಹಣ ಇಟ್ಟಿದ್ದರೆಂದು ತಿಳಿದುಬಂದಿದೆ ಆದರೂ ಸರ್ಕಾರದವರ ತನಿಖೆಯೂ ಲೆಕ್ಕಾಚಾರಗಳೂ ಪೂರೈಸಿದ ತರುವಾಯ ಡಿಪಾಜಿಟ್‌ದಾರರಿಗೆ ವಿಶೇಷ ನಷ್ಟವಾಗದಂತೆ ಕೂಡಿದಷ್ಟು ಹಣವನ್ನು ನಷ್ಟಪಟ್ಟ ಡಿಪಾಜಿಟ್‌ದಾರರಿಗೆ ಹಂಚಿಕೊಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಈಚೆಗೆ ಈ ಬ್ಯಾಂಕಿನವರು ಕೆಲವು ಕಸಬುದಾರಿ ಉದ್ಯೋಗಗಳಲ್ಲಿ ಹಣ ಹಾಕಿ ಕೆಲಸ ಮಾಡಿಸುತ್ತಿದ್ದಾರೆ ಈ ಕಸಬುದಾರಿ ಕಾರ್ಖಾನೆಗಳ ಪನಿ ಹಣಕ್ಕೂ ಈಗ ಮುಳುಗಿಹೋದ ಬ್ಯಾಂಕಿನ ಹಣಕ್ಕೂ ಏನೇನೂ ಸಂಬಂಧವಿರುವುದಿಲ್ಲ ಈ ಕಸಬುಗಳೆಲ್ಲಾ ಬಹಳ ಒಳ್ಳೇ ಸ್ಥಿತಿಯಲ್ಲೇ ನಡೆಯುತ್ತಾ ಬರುವವು ಅವು ಯಾವವೆಂದರೆ—ಚಿತ್ತವಸಲ ಗನ್ನಿ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಬೆಂಗಳೂರ್ ಹಂಚು ಮತ್ತು ಇಟ್ಟಿಗೆ ಕಾರ್ಖಾನೆ, ತಂಜಾವೂರು ಜಿಲ್ಲೆಯಲ್ಲಿರುವ ರಿಲೈಯನ್ಸ್ ಫೌಂಡ್ರಿ ಮತ್ತು ಭತ್ತ ಕುಟ್ಟುವ ಎರಡು ಕಾರ್ಖಾನೆಗಳು ಇದಲ್ಲದೆ ಗೋಬಿಬಿದನೂರು ಸಕ್ಕರೆ ಕಾರ್ಖಾನೆಯನ್ನೊಳಗೊಂಡಿರುವ ಮೈಸೂರ್ ಸಕ್ಕರೆ ಕಂಪನಿಯೂ ಕೂಡ ಮೇಲ್ಕಂಡ ಬ್ಯಾಂಕಿನ ನಷ್ಟಕ್ಕೆ ಸಂಬಂಧಪಡುವುದಿಲ್ಲ. ಇವೆಲ್ಲಾ ಪ್ರತ್ಯೇಕವಾಗಿಯೇ ನಡಸಲ್ಪಡುತ್ತಲಿವೆ

ಮೊನ್ನೆ ಸೋಮವಾರ ವಿಲಾಯತಿಯಿಂದ ಬಂದಿರುವ ತಂತೀವರ್ತಮಾನವೇನೆಂದರೆ— ದಿವಾಳಿ ಬ್ಯಾಂಕಿನ ಮುಖ್ಯಸ್ಥನಾದ ಮಿ|| ಮ್ಯಾಕ್‌ಫೇರ್ ಎಂಬಾತನು ಶನಿವಾರ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಲಂಡನ್ ಪಟ್ಟಣದ ಮಾರ್‌ಗೇಟ್ ಸ್ಟೇಷನ್ ಬಳಿ ರೈಲ್ವೆ ಕಂಬಿಗಳ ಮೇಲೆ ಬಿದ್ದುಕೊಂಡನು ಅವನ ಮೇಲೆ ರೈಲ್ ಗಾಡಿ ಹರಿದದ್ದರಿಂದ ಅವನ ಪ್ರಾಣ ಹೋಗಿ ದೇಹವು ತುಂಡು ತುಂಡಾಗಿ ಛೇದಿಸಲ್ಪಟ್ಟಿತು ಆತನ ಸ್ಥಿತಿಗತಿ ಏನೋ, ಯಾಕೆ ಇಂಥಾ ಆತ್ಮಹತ್ಯವನ್ನು ಮಾಡಿಕೊಂಡನೋ ತಿಳಿದು ಬರಲಿಲ್ಲ ಹಿಂದುಸ್ಥಾನದಲ್ಲಿ ಇಂಥಾ ನಂಬಿಕೆಯಾಗಿದ್ದ ಈ ಅರ್ಬತ್ನಾಟ್ ಕಂಪನಿ ದಿವಾಳಿಯಾದದ್ದರಿಂದ ಸ್ವದೇಶೀಯರಾದ ಅನೇಕರಿಗೆ ನಷ್ಟವೂ ನಾನಾ ದುರಭಿಪ್ರಾಯಗಳೂ ಉಂಟಾಗುವದಕ್ಕೆ ಕಾರಣವಾಗಿದೆ ಎಂದು ಲಂಡನ್ ಪಟ್ಟಣದ ಟೈಂಸ್ ಪತ್ರಿಕೆಯು ಹೇಳಿರುವದು

ದೇವರು ಅವತರಿಸುವದುಂಟೇ?

ಅವತಾರವೆಂಬ ಸಂಸ್ಕೃತ ಪದಕ್ಕೆ ಇಳಿಯುವದು ಎಂದರ್ಥ ಮುಖ್ಯವಾಗಿ ಜಗದೀಶ್ವರನಾದ ಭಗವಂತನು ಪರಲೋಕದಿಂದ ಭೂಲೋಕಕ್ಕೆ ಪ್ರತ್ಯಕ್ಷರೂಪವಾಗಿ ಇಳಿದು ಬರುವ ಕಾರ್ಯಕ್ಕೆ ಅವತರಿಸುವದು ಎಂದರ್ಥವಾಗುತ್ತದೆ ಜಗದೀಶ್ವರನು ಬಹು ದೂರವಿದ್ದಾನೆಂತಲೂ ಆತನು ನಿರಾಕಾರಿಯಾಗಿಯೂ ಅಗೋಚರನಾಗಿಯೂ ಇದ್ದಾನೆಂತಲೂ ಅನೇಕರು ತಿಳಿದಿರುವದರಿಂದ ಆ ದೇವರು ಭೂಮಿಗಿಳಿದು ಬಂದು ಮನುಷ್ಯರ ಕಣ್ಣಿಗೆ ಕಾಣಿಸಿಕೊಂಡರೆ ಎಷ್ಟು ಒಳ್ಳೇದು! ಆಗ ಆತನನ್ನು ಆರಾಧಿಸುವದೂ ಪ್ರೀತಿಸುವದೂ ಆತನ ವಿಧೇಯರಾಗಿ ನಡೆಯುವದೂ ಎಷ್ಟು ಸುಲಭವಾಗಿರುವದು! ಎಂದು ಕೇಳುವರು. ದೇವರು ತನ್ನನ್ನು ಮನುಷ್ಯರು ತಿಳಿಯಬೇಕೆಂಬ ಉದ್ದೇಶದಿಂದ ಎಂದಾದರೂ ಭೂಲೋಕಕ್ಕೆ ಬಂದದುಂಟೇ? ಇದೀಗ ನಾವು ಸಂಕ್ಷೇಪವಾಗಿ ಆಲೋಚಿಸತಕ್ಕ ಪ್ರಶ್ನೆಯಾಗಿದೆ. ನಾವಾದರೋ ದೇವರು ಅವತರಿಸಿದ್ದುಂಟು ಎಂದು ಎಂದು ಖಂಡಿತವಾಗಿ ತಿಳಿದಿದ್ದೇವೆ ಆದರೆ ದೇವರು ಯಾವಪ್ರಕಾರ ಅವತರಿಸಿದ್ದಾನೆಂದು ನಾವು ತಿಳಿಯಬೇಕು. ದೇವರು ಅವತರಿಸಬೇಕಾದರೆ ಮನುಷ್ಯ ರೂಪವಾಗಿಯೇ ಅವತರಿಸತಕ್ಕದ್ದೆಂದು ಮೊದಲು ತಿಳಿಯಬೇಕಾಗಿದೆ ಯಾಕೆಂದರೆ, ಭೂಲೋಕದ ಪ್ರಾಣಿಕೋಟಿಗಳೊಳಗೆಲ್ಲಾ ಮನುಷ್ಯನೇ ಅತ್ಯಂತ ಶ್ರೇಷ್ಠನಾಗಿಯೂ ಬುದ್ಧಿಶಾಲಿಯಾಗಿಯೂ ಇದ್ದಾನೆ ದೇವರಿಗೆ ಅತ್ಯಂತ ಸಮೀಪನಾಗಿಯೂ ಅನುರೂಪನಾಗಿಯೂ ಇರುವವನು ಮನುಷ್ಯನೆ ಆದಕಾರಣ ಅವನೇ ಪ್ರಾಣಿಗಳೊಳಗೆಲ್ಲಾ ರಾಜನಂತಿದ್ದಾನೆ ಮನುಷ್ಯನಿಗಿಂತ ಆನೆಯು ಬಲು ದೊಡ್ಡದು, ಹುಲಿಯು ಅಧಿಕ ಬಲವುಳ್ಳದ್ದು, ಹದ್ದು ಅಧಿಕ ವೇಗಶಾಲಿಯು. ಆದರೂ ಮನುಷ್ಯನು ತನ್ನ ಅತಿಶಯವಾದ ಬುದ್ಧಿಯ ಬಲದಿಂದ ಈ ಪ್ರಾಣಿಗಳನ್ನೆಲ್ಲಾ ವಶಮಾಡಿಕೊಂಡು ನಡಸುವವನಾಗಿದ್ದಾನೆ. ಆದಕಾರಣ ದೇವರು ಭೂಲೋಕದಲ್ಲಿ ಪ್ರತ್ಯಕ್ಷನಾಗಬೇಕಾದರೆ ತನ್ನ ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಪ್ರಾಣಿಯ ರೂಪದಲ್ಲಿ ಪ್ರತ್ಯಕ್ಷನಾಗುವದೇ ಆತನಿಗೆ ಯೋಗ್ಯವಾದದ್ದು. ಆತನು ಮೀನು, ಕರಡಿ, ಸಿಂಹ ಮೊದಲಾದ ಯಾವ ಪ್ರಾಣಿಯ ರೂಪವನ್ನಾದರೂ ಧರಿಸಿ ಅವತರಿಸುವದು ಆತನಿಗೆ ತಕ್ಕದ್ದಲ್ಲವೆಂದು ಗ್ರಹಿಸಬೇಕು ದರ್ಪಣವನ್ನು ಮಾಡಬೇಕಾದರೆ ಮಣ್ಣನ್ನಾದರೂ ಕಲ್ಲನ್ನಾದರೂ ತೆಗೆದುಕೊಳ್ಳುವದುಂಟೇ? ಚಿನ್ನ ಬೆಳ್ಳಿ ಮೊದಲಾದ ಬೆಲೆಯುಳ್ಳಂಥ ಕಾಂತಿಯುಳ್ಳಂಥ ವಸ್ತುವನ್ನಲ್ಲವೇ ತೆಗೆದುಕೊಳ್ಳುವರು ಅದೇ ಪ್ರಕಾರವಾಗಿ ದೇವರ ಮಹಿಮೆಯು ಆತನ ಸೃಷ್ಟಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಪ್ರಾಣಿಯಲ್ಲಿ ಮಾತ್ರವೇ ಪ್ರಕಟವಾಗತಕ್ಕದ್ದು.

ಇದಲ್ಲದೆ ದೇವರು ಅವತರಿಸತಕ್ಕ ಮನುಷ್ಯನು ಪವಿತ್ರಪುರುಷನಾಗಿರತಕ್ಕದ್ದು. ದೇವರು ಸಂಪೂರ್ಣ ಪವಿತ್ರನಾಗಿದ್ದಾನೆ ಆತನು ಕೆಟ್ಟದ್ದನ್ನು ಕೇವಲ ಅಸಹ್ಯವಾಗಿ ಕಾಣುತ್ತಾನೆ, ಒಳ್ಳೆಯದನ್ನೇ ಪ್ರೀತಿಸುತ್ತಾನೆ ಆತನು ಪಾಪಿಷ್ಠನಾದ ಮನುಷ್ಯನಾಗಿ ಕಾಣಿಸಿಕೊಂಡು ದುಷ್ಕೃತ್ಯಗಳನ್ನು ನಡಸುವವನಾಗಿ ಅವತರಿಸುವವನೆಂದು ನಂಬುವದಕ್ಕೆ ಅವಕಾಶವೇ ಇಲ್ಲ ದುಷ್ಕೃತ್ಯಗಳನ್ನು ಮಾಡಿದಂಥ ಯಾವದರೊಬ್ಬ ಪುರುಷನನ್ನು ನೋಡಿ ಈತನೇ ನರಾವತಾರಿಯಾದ ದೇವರು ಎಂದು ಯಾರಾದರೂ ಹೇಳಿದರೆ ನಾವು ಏನೆಂದು ತಿಳಿಯಬೇಕು? ಆ ಪುರುಷನು ನಿಜವಾಗಿ ಅವತಾರಪುರುಷನಲ್ಲವೆಂದ ನಿಶ್ಚಯಿಸತಕ್ಕದ್ದು ಅಥವಾ ಆತನ ವಿಷಯವಾಗಿ ಹೇಳಿರುವದೆಲ್ಲಾ ಕಲ್ಪನೆಯೆಂದು ನಿರ್ಣಯಿಸತಕ್ಕದ್ದು.

ಹಾಗಾದರೆ ನಿಜವಾಗಿ ನರಾವತಾರ ಮಾಡಿದ ಆ ದಿವ್ಯಪುರುಷನು ಯಾರು? ಆತನು ಆ ಪಾಪರಹಿತನಾದ ಯೇಸುಕ್ರಿಸ್ತ ಸ್ವಾಮಿಯೇ ಒಂದಾನೊಂದು ದಿನ ಯೇಸುಸ್ವಾಮಿಯ ಶಿಷ್ಯರಲ್ಲೊಬ್ಬನು ಆತನನ್ನು ಕುರಿತು—ಸ್ವಾಮಿಾ, ಜಗದೊಡೆಯನಾದ ಆ ಭಗವಂತನನ್ನು ನಮಗೆ ತೋರಿಸಿಕೊಟ್ಟರೆ ಸಾಕು ಎಂದು ಕೇಳಿದನು. ಆದಕ್ಕಾತನು—ನನ್ನನ್ನು ನೋಡಿದವನೇ ಆ ಪರಮಪಿತನನ್ನು ಕಂಡಿದ್ದಾನೆ ಎಂದು ಪ್ರತ್ಯುತ್ತರ...

ತು. ಆ ಯೇಸುಸ್ವಾಮಿಯು ನುಡಿದ ವಾಕ್ಯಗಳನ್ನು ಕಿವಿಯಾರ ಕೇಳಿಯೂ ಆತನು ನಡಸಿದ ಕಾರ್ಯಗಳನ್ನು ಕಣ್ಣಿನಿಂದ ನೋಡಿಯೂ ಆದ ಶಿಷ್ಯರು ಆತನಲ್ಲಿ ನಿಜವಾಗಿ ದೇವರ ಲಕ್ಷಣಗಳು ತೋರಿಬಂದದ್ದನ್ನು ಗ್ರಹಿಸಿದರು

ಆತನ ಶಿಷ್ಯರಲ್ಲೊಬ್ಬನಾದ ಯೋಹಾನನು ಬರೆದಿರುವದೇನಂದರೆ - ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದನು ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿ… ದೇವರನ್ನು ಯಾರೂ ಎಂದೂ ಕಂಡಿಲ್ಲ, ಯಾವನು …ಪ್ತನಾಗಿದ್ದನೋ ಆತನೇ ತಿಳಿಯಪಡಿಸಿದನು

ಅಪೊಸ್ತಲನಾದ ಪೌಲನು ಬರೆದಿರುವದೇನಂದರೆ — "ಕ್ರಿಸ್ತನೇ ದೇವರ ಪ್ರತಿರೂಪ, ಆ ಯೇಸುಕ್ರಿಸ್ತನ ಮುಖದಲ್ಲಿ ದೇವರ ಪ್ರಭಾವವಿಷಯವಾದ ಜ್ಞಾನವು ಪ್ರಕಾಶಿಸುತ್ತದೆ"

ಇದನ್ನೋದುವವರೇ, ನಾಲ್ಕು ಸುವಾರ್ತಾ ಪುಸ್ತಕಗಳಲ್ಲಿ ಬರೆದಿರುವ ಆ ಯೇಸುಸ್ವಾಮಿಯ ಜೀವಿತ ಚರಿತ್ರೆಯನ್ನು ಓದಲಾರಿರಾ? …ಆ ಜಗದೀಶ್ವರನು ಯೇಸುಸ್ವಾಮಿಯ ರೂಪವಾಗಿ ಭೂಲೋಕದಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದಾನೆಂದು ತಿಳಿದುಕೊಳ್ಳುವಿರಿ

ಒಳದೇಶದ ವೃತ್ತಾಂತಗಳು.

ಮಿ। ರೆನ್ನಿಯವರು ಕಳೆದ ವಾರವೇ ಬೆಂಗಳೂರಿಗೆ ಬಂದು ಅಕೌಂಟ್ ಕೆಲಸದ ಛಾರ್ಜನ್ನು ಮಿ। ಮೂರ್ ಯವರಿಂದ ಪಡೆದಿರುತ್ತಾರೆ

****

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಕೆಲಸದ ಛಾರ್ಜ ಮಿ। ಆ। ವೆಂಕಾಟಕೃಷ್ಣಯ್ಯನವರು ಮಿ। ವೈಟ್ಲಿ ಸಾಹೇಬರಿಗೆ ವಹಿಸಿ, ಕಳೆದ ಸೋಮವಾರ ರಾತ್ರಿ ರಾಜಧಾನಿಯಿಂದ ಪ್ರಯಾಣ ಮಾಡಿದರು

****

ಶ್ರೀಮದ್ ಯುವರಾಜರವರು ತಮ್ಮ ವಿದ್ಯಾ ಗುರುಗಳ ಸಮೇತ …ಟೆ ಮಾಡುವುದಕ್ಕಾಗಿ ಅಂತರಸಂತೆಗೆ ಮೊನ್ನೆ ಸೋಮವಾರ ಹೊರಟಿದರು ಮುಂದಿನ ವಾರ ವಾಪಸು ಬರುವವರಾಗಿದಾರೆಂದು ಕೇಳುತ್ತೇವೆ

****

ಬರುವ ವಾರ ಶ್ರೀಮನ್ಮಹಾರಾಜರವರು ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡಿಸುವವರಾಗಿದಾರೆ ಅಲ್ಲಿ ಸುಮಾರು ೭-೫ ವಾರಗಳು ಕಳೆದು, ಹಾಗೇ ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿ, ವೈಸ್‌ರಾಯವರ ಭೇಟಿ ಮಾಡಿಕೊಂಡು, ವಾಪಸುಬರುತ್ತಾರೆಂದು [illegible]ಸಿವೆ.

****

…ಬರ್ಲಿ ಔಷಧಗಳ ಕಂಪನಿಯ ಏಜಂಟರಾದ ಮಿ। ಬಿ. ವಿ …ಯವರು ರಾಜಧಾನಿಗೆ ಬಂದು ಆ ಕಂಪನಿಯ ಔಷಧಿ ವಿವರಣೆಯ ಪುಸ್ತಕಗಳನ್ನು ಇಲ್ಲಿನ ಪ್ರಜೆಗಳಿಗೆಲ್ಲಾ ಹಂಚುತ್ತಿದಾರೆ ಇವರು ಇಲ್ಲಿಂದ ಕೊಡಗಿನ ಪ್ರಾಂತ್ಯ ಹೋಗಿ ಬರುವರೆಂದು ತಿಳಿಯುವದು

****

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯವರು ರಾಜಧಾನಿಯಲ್ಲಿರುವ ಸಾಹುಕಾರ್ … ಸೂರಪ್ಪನವರನ್ನೂ …ಲಕ್ಷ್ಮಯ್ಯಶೆಟ್ಟರನ್ನೂ ಇಲ್ಲಿನ ಏಜಂಟರಾಗಿ ನೇಮಿಸಿರುತ್ತಾರೆ ಅಪೇಕ್ಷೆಯುಳ್ಳವರು ಇವರಿಂದ ಕಂಪನಿಯ ಷೇರುಗಳನ್ನು ತೆಗೆದುಕೊಳ್ಳಬಹುದಾಗಿದೆ

****

ಮದರಾಸ್ ಗವರ್ನರವರು ಕಳೆದ ವಾರ ಕೋಟೆಗಲು, ಹೊಸೂ… ಚಿನ್ನದ ಗಣಿ ಮೊದಲಾದ ಸ್ಥಳಗಳನ್ನೆಲ್ಲಾ ಸಂದರ್ಶಿಸಿ ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ತಾತಾಯವರ … ಕಾರ್ಖಾನೆ, ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಕಾರ್ಖಾನೆಗಳನ್ನು ನೋಡಿಕೊಂಡು, ಭಾನುವಾರ ರಾತ್ರಿ ಮದರಾಸಿಗೆ ಪ್ರಯಾಣಮಾಡಿದರು ಕೋಟೆಗಲಿನಲ್ಲಿ ಅವರು ನಾಲ್ಕು ಕಂದರೆಗಳನ್ನು ಕೊಂದರು

****

ದಕ್ಷಿಣ ಕನಡಾ ಮೂಡಬಿದ್ರೆಯಲ್ಲಿ ಜಿನ ಮತದ ವಿದ್ಯಾರ್ಥಿಗಳಿಗೆ ಊಟದ ದಾನ ಸಮೇತವಾದ ಒಂದು ಪಾಠಶಾಲೆಯನ್ನು ಇಟ್ಟು ೧೯-೩ ವರ್ಷಗಳಿಂದ ನಡಸುತ್ತಾ ಬಂದಿದಾರೆ ಇದಕ್ಕೆ ತಕ್ಕ ಕಟ್ಟಡಗಳು, ಸಂಸ್ಕೃತ ಅಭ್ಯಾಸ, ಶಾಸ್ತ್ರೋಪದೇಶ, ಇಂಗ್ಲೀಷು ಮುಂತಾದ ವಿದ್ಯಾಭಿವೃದ್ಧಿಗೆ ದ್ರವ್ಯಾನುಕೂಲವಿಲ್ಲವಾದ್ದರಿಂದ ಸದ್ಧರ್ಮ ವಾತ್ಸಲ್ಯಶೀಲರಾದ ಸ್ವ ಜನಗಳು ಶಕ್ತ್ಯಾನುಸಾರ ಹಣ ಸಹಾಯ ಮಾಡಬೇಕೆಂದು ಆ ಶಾಲೆಯ ಅಧ್ಯಕ್ಷರು ಈ ಮೂಲಕ ತಿಳಿಸುತ್ತಾರೆ

****

ಮೊದಲು ಬೆಂಗಳೂರು ರೆಸಿಡೆಂಟರ ಆಫೀಸಿನಲ್ಲಿ ಮ್ಯಾನೇಜರಾಗಿದ್ದು ಅನೇಕ ರೆಸಿಡೆಂಟರುಗಳಿಂದ ಬಹಳ ಒಳ್ಳೇ ಹೆಸರು ಪಡೆದು ತರುವಾಯ ಮೈಸೂರು ಗವರ್ನಮೆಂಟಿನಲ್ಲಿ ಅಮಲ್ದಾರರಾಗಿಯೂ ರೈಲ್ವೆ ಪೋಲೀಸ್ ಸೂಪರಿಂಟೆಂಟರಾಗಿಯೂ ಇದ್ದು ಕಡೆಗೆ ಸರ್ವಿಸಿನಿಂದ ನಿವೃತ್ತರಾದ ಮಿ। ಸೋಲಮನ್ ಲೇಟರ್ ಎಂಬ ದೊಡ್ಡ ಮನುಷ್ಯರು ಕಳೆದ …ಗಳಲ್ಲಿ ಪಿಟ್ಟಾಪುರ ಸಂಸ್ಥಾನದ ಅಸಿಸ್ಟೆಂಟ್ ದಿವಾನರಾಗಿ ನೇಮಕ ಮಾಡಲ್ಪಟ್ಟರೆಂಬ ಸುದ್ದಿಯು ಅವರ ಸ್ನೇಹಿತರಿಗೆಲ್ಲಾ ಸಂತೋಷವನ್ನು ಉಂಟುಮಾಡುವುದು

****

ಈ ಸಲ ದಸರಾ ಮಹೋತ್ಸವಕ್ಕಾಗಿ ಮೈಸೂರಿಗೆ ಬಂದಿದ್ದ ದೊಡ್ಡ ಉದ್ಯೋಗಸ್ಥರಲ್ಲಿ ಕೆಲವರು ಇಲ್ಲಿನ ಮಿಷನ್ ಹೊಸ ಆಸ್ಪತ್ರೆಗೆ ದಯಮಾಡಿ ಅಲ್ಲಿ ನಡೆಯುವ ಪರೋಪಕಾರ ಕಾರ್ಯಗಳನ್ನು ಪರಾಂಬರಿಸಿ ಸಂತೋಷಭರಿತರಾಗಿ ಹೋದರು ಇವರಲ್ಲಿ ನಮ್ಮ ಸೀನಿಯರ್ ಕೌನ್ಸಿಲರ್ ಮಿ। ಟಿ ಆನಂದರಾಯರವರು ಮಹಾ ಸಂತೋಷಯುಕ್ತವಾದ ಒಂದು ಪತ್ರಿಕೆಯನ್ನು ಬರೆದು ಅದರ ಕೂಡ ಐದು ನೂರು ರೂಪಾಯಿಗಳನ್ನ ಘನ ಸಾಹೆ ದೊರೆಯವರಿಗೆ ಕಳುಹಿಸಿದ್ದಾರೆಂಬ ಶುಭವಾರ್ತೆಯು ನಮ್ಮ ವಾಚಕರಿಗೆಲ್ಲಾ ಮಹದಾನಂದವನ್ನು ಉಂಟು ಮಾಡದೆ ಇರಲಾರದೆಂದು ನಂಬುತ್ತೇವೆ ಧರ್ಮಿಷ್ಠರೆಲ್ಲರೂ ಈ ದೊಡ್ಡ ಮನುಷ್ಯರ ಮೇಲ್ಪಂಕ್ತಿಯನ್ನು ಅನುಸರಿಸಿ ಈ ಆಸ್ಪತ್ರೆಗೆ ಸಹಾಯಮಾಡುವುದಕ್ಕೆ ಒಳ್ಳೆ ಸಮಯವಾಗಿರುವುದು

****

ರಾಜಧಾನಿಯಲ್ಲಿರುವ ಸರ್ಕಾರಿ ಇಂಜನಿಯರ್ ಸ್ಕೂಲಿನಲ್ಲಿ ಸುಮಾರು ಮೂರು ವರುಷಗಳಿಂದ ಹೆಡ್ ಮಾಸ್ಟರಾಗಿದ್ದು ಇಂಜನಿಯರ್ ಇಲಾಖೆಗೆ ವರ್ಗ ಮಾಡಲ್ಪಟ್ಟ ಮಿ। ಟಿ ಲಕ್ಷ್ಮಣರಾಯರನ್ನು ಆ ಸ್ಕೂಲಿನ ವಿದ್ಯಾರ್ಥಿಗಳು ಕಳೆದ ಶುಕ್ರವಾರ ಸಾಯಂಕಾಲ ಇಲ್ಲಿನ ಟೌನ್ ಹಾಲ್ ಬಂಗಲೆಗೆ ಕರೆಸಿಕೊಂಡು ಅನೇಕ ಸಂತೋಷಯುಕ್ತವಾದ ಉತ್ಸವಗಳನ್ನು ಮಾಡಿ ತಮ್ಮ ಪ್ರೀತಿಗೌರವಕೃತಜ್ಞತೆಗಳನ್ನು ಪ್ರಕಾಶಪಡಿಸಿದರು ವಿದ್ಯಾಬೋಧಕರೂ ವಿದ್ಯಾರ್ಥಿಗಳೂ ಯಾವ ರೀತಿ ತಮ್ಮ ಕರ್ತವ್ಯಗಳನ್ನು ಮಾಡಬೇಕೆಂಬುವುದು ಈ ಸ್ಕೂಲಿನ ಹೆಡ್ ಮಾಸ್ಟರೂ ವಿದ್ಯಾರ್ಥಿಗಳೂ ಇತರರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದಾರೆ ಮಿ। ಲಕ್ಷ್ಮಣರಾಯರು ಈ ಸ್ಕೂಲನ್ನು ತುಂಬಾ ಅಭಿವೃದ್ಧಿಗೆ ತಂದು ವಿಶೇಷವಾದ ಹೆಸರುವಾಸಿಯನ್ನು ಪಡೆದುಕೊಂಡರೆಂದು ತಿಳಿಸಲು ಸಂತೋಷಪಡುತ್ತೇವೆ

****

ಚನ್ನರಾಯ ಪಟ್ಟಣದ ತಾಲ್ಲೂಕು ಆನೆಬಾಗೂರು ಹೋಬಳಿ ಶೇಕದಾರ್ ಮಿ। ಲಿಂಗಪ್ಪಯ್ಯನವರಿಗೆ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಗೆ ವರ್ಗವಾಯಿತು ಆನೆಬಾಗೂರು ಹೋಬಳಿಯ ಪ್ರಜೆಗಳೂ ಗ್ರಾಮಗಳ ಮುಖಂಡರೂ ಸ್ಕೂಲಿನಲ್ಲಿ ಸಭೆ ಸೇರಿ, ವಾದ್ಯಗಳೊಡನೆ ಶೇಕದಾರರನ್ನು ಬರಮಾಡಿಕೊಂಡು ಬಹು ಮರ್ಯಾದೆಮಾಡಿ ತಮ್ಮ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು ಸರ್ಕಾರಿ ಉದ್ಯೋಗಸ್ಥರು ಪ್ರಜೆಗಳಿಂದ ಈ ರೀತಿ ಸನ್ಮಾನಹೊಂದುವುದು ಅಪೂರ್ವ ಇದರಿಂದ ಆ ಶೇಕದಾರರು ಅಲ್ಲಿನ ಜನರಿಗೆ ಎಷ್ಟು ಅನುಕೂಲರಾಗಿದ್ದುಕೊಂಡು ಅವರ ಪ್ರೀತಿ ವಿಶ್ವಾಸಗಳನ್ನ ಸಂಪಾದಿಸಿಕೊಂಡಿದ್ದರೆಂಬುದು ಪ್ರಕಾಶವಾಗುವುದು ಸರ್ಕಾರದ ಸಣ್ಣ ನೌಕರರು ಗ್ರಾಮಾಂತರಗಳಲ್ಲಿ ಪ್ರಜೆಗಳ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗುವಂತೆ ಕೆಲಸ ಮಾಡಲು ಈ ವಿಷಯವು ತುಂಬಾ ಪ್ರೋತ್ಸಾಹವಾಗಿರುತ್ತದೆ

****

ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಆರ್ಯಧರ್ಮೋಜ್ಜೀವಿನಿ ಸಭಾ ಮೆಂಬರುಗಳು ಒಂದು ಸಭೆಯನ್ನು ನಡಿಸಿದರು ವೈದಿಕರೂ ಲೌಕಿಕರೂ ವಿಶೇಷವಾಗಿ ಸೇರಿ, ಈಗ ರೂಢಿಯಲ್ಲಿರುವ ಬಾಲ್ಯವಿವಾಹದ ದೆಸೆಯಿಂದ ಹಿಂದುಗಳು ನಾನಾ ಭಾಗಗಳಲ್ಲಿ ಕ್ಷೀಣಗತಿಗೆ ಬರುತ್ತಿದಾರೆಂತಲೂ ಆ ಪದ್ಧತಿಯನ್ನು ಶಾಸ್ತ್ರಸಮ್ಮತವಾದ ರೀತಿಯಲ್ಲಿ ಬದಲಾವಣೆ ಮಾಡಬೇಕಾದದ್ದು ಅವಶ್ಯವೆಂತಲೂ ತೀರ್ಮಾನ ಮಾಡಿಕೊಂಡರು. ಬಾಲಕರಿಗೆ ೨೦ ವರುಷ ತುಂಬಿದ ಮೇಲೆ ೩೦ ರ ವರೆಗೂ, ಬಾಲಕಿಯರಿಗೆ ೮ ವರುಷಗಳ ಮೇಲೆ ೧೬ ವರುಷಗಳ ವರೆಗೂ ವಿವಾಹ ಮಾಡಬಹುದೆಂತಲೂ ಇದನ್ನು ಶಾಸ್ತ್ರಗಳು ಒಪ್ಪುತ್ತವೆಂತಲೂ ಕೆಲವು ವೈದಿಕಶಿರೋಮಣಿಗಳು ತಿಳಿಸಿದರು. ಈ ವಿಷಯವನ್ನು ಇನ್ನೂ ಒಂದೆರಡು ಸಭೆಗಳಲ್ಲಿ ಚರ್ಚಿಸಿ ಅನಂತರ ತೀರ್ಮಾನ ಮಾಡಬೇಕೆಂದು ಗೊತ್ತುಮಾಡಿರುತ್ತಾರೆ

ಬಹುಮಾನ ಪಡೆದ ವರ್ತಮಾನಗಳು.

[(೧) ಪ್ರತಿ ಲೇಖನದ ಲಕೋಟೆಯ ಮೇಲೂ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಸರಿಯಾಗಿ ತಿಳಿಸಬೇಕು (೨) ಲೇಖನವು ಬರೆಯುವವರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧ ಕಾಲಮಿಗಿಂತ ಕಡಮೆಯಾಗಬಾರದು ಒಂದು ಕಾಲಮಿಗಿಂತ ಹೆಚ್ಚಾಗಬಾರದು. (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಶನಿವಾರ ಅಥವಾ ಸೋಮವಾರ ಮಧ್ಯಾಹ್ನದೊಳಗೆ ತಲುಪಬೇಕು ( ) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವೆವು, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನ ಸಿಕ್ಕುವ? ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಈ ಬಾತ್ಮಿ ಬರೆದ ಮಾಗಡಿ ತಾ। ಗೆಜ್ಜಗಾರಗುಪ್ಪ ಗ್ರಾ। ಸ್ಕೂಲ್ ಮಾಸ್ಟರ್ ಕೆ ರಂಗಪ್ಪ ಇವರಿಗೆ ಈ ವಾರದ ಬಹುಮಾನವನ್ನು ಕಳಿಸಿದ್ದೇವೆ.]

ಸಿಡಿಲು ಹೊಡೆದು ಅನಾಹುತವಾದುದು

ಮಾಗಡಿ ತಾಲ್ಲೂಕು ಮುಡಬಾಳ್ ಹೋಬಳಿ ಕೇಳಿಗೆ ಹಳ್ಳಿ ಗ್ರಾಮದಲ್ಲಿ ಇದೇ ಸೆಪ್ಟಂಬರ್ ತಾರೀಖು ಹನ್ನೊಂದನೇ ಗುರುವಾರ ರಾತ್ರಿ ಸುಮಾರು ೯ ಗಂಟೆ ಸಮಯದಲ್ಲಿ ಅತ್ಯಾರ್ಭಟವಾದ ಗುಡುಗು ಸಿಡಿಲುಗಳೊಡನೆ ಅಪೂರ್ವವಾದ ಮಳೆ ಹೊಯ್ಯುವದಕ್ಕೆ ಪ್ರಾರಂಭವಾಗಿ ಇದೇ ಗ್ರಾಮದಲ್ಲಿರುವ ಮಾದಿಗರ ಜಾತಿ ರಂಗ ಎಂಬುವನ ವಾಸದ ಹುಲ್ಲು ಮನೆಗೆ ಸಿಡಿಲು ಹೊಡೆಯಿತು ಅಟ್ಟದಲ್ಲಿ ಮಲಗಿದ್ದ ಸದರೀ ರಂಗನಿಗೂ ಕೆಳಗಡೆ ಕಟ್ಟಿಹಾಕಿದ್ದ ಅವನ ನಾಲ್ಕು ದನಗಳಿಗೂ ಸಹ ಸಿಡಿಲು ಬಡಿದು ತಕ್ಷಣ ಸತ್ತುಬಿದ್ದರು ಸ್ವಲ್ಪ ದೂರದಲ್ಲಿ ಕಟ್ಟಿದ್ದ ಇನ್ನು ಆರು ದನಗಳಿಗೆ ಅಪಾಯವಾಗಲಿಲ್ಲ ಕೂಡಲೆ ಸಿಡಿಲ ಜ್ವಾಲೆಯಿಂದ ಮನೆಯು ಹತ್ತಿಕೊಂಡಿತು ಅದೇ ಮನೆಯಲ್ಲಿದ್ದ ಸದರಿ ರಂಗನ ತಾಯಿ ಲಕ್ಕಿ ಮೂರು ಸಣ್ಣ ಮಕ್ಕಳ ಸಹಿತ ಸಿಡಿಲು ಎರಗಿದ ರಭಸಕ್ಕೆ ಮೂರ್ಛೆಹೋಗಿದ್ದು ಚೇತರಿಸಿಕೊಳ್ಳುತ್ತ ಇರುವಷ್ಟರಲ್ಲಿ ಮನೆ ಹತ್ತಿಕೊಂಡು ಇರುವದನ್ನು ಕಂಡು ಭಯಪಟ್ಟು ಕೆಟ್ಟೆವಲ್ಲಪ್ಪೋ ಎಂದು ಕೂಗಿಕೊಳ್ಳುತ್ತ ಈಚೆಗೆ ಓಡಿಬಂದಳು. ನಂತರ ಜನಗಳು ಸೇರಿ ರಂಗನನ್ನು ಈಚೆಗೆ ಎಳೆದುಹಾಕಿದರು ಅಷ್ಟರಲ್ಲಿಯೇ ಬೆಂಕಿ ಜ್ವಾಲೆಯು ಪಕ್ಕದಲ್ಲಿದ್ದ ಇನ್ನೊಂದು ಹುಲ್ಲು ಮನೆಗೂ ವ್ಯಾಪಿಸಿತು ಸುತ್ತಲೂ ಬಹಳ ಹುಲ್ಲುಮನೆಗಳೇ ಇರುವದರಿಂದ ಇತರ ಮನೆಗಳಿಗೆ ಬೆಂಕಿ ಬೀಳದಂತೆ ಜನಗಳು ಸಾಹಸಮಾಡಿ ಹತ್ತಿಕೊಂಡು ಉರಿಯುತ್ತಾ ಇದ್ದ ಎರಡು ಮನೆಗಳ ಛಾವಣಿಗಳನ್ನೂ ಕೆಳಕ್ಕೆ ಕೆಡವಿಬಿಟ್ಟರು. ಸಿಡಿಲುಬಡಿದಿದ್ದ ರಂಗನ ಮೈಮೇಲೆ ಬೊಕ್ಕೆಗಳಾಗಿದ್ದುವು ಅವನ ಎರಡು ಕೈಗಳ ಮತ್ತು ಮುಖದ ಚರ್ಮವು ಸಹ ಈಚೆ (ಜಾರಿ) ಹೋಗಿತ್ತು ಹೊಟ್ಟೆಯು ಕೊಂಚಮಟ್ಟಿಗೆ ಸೀಳಲ್ಪಟ್ಟು ಒಳಗಿನ ಕರಳು ಕಾಣಿಸುತ್ತಾ ಇತ್ತು ಮಾರನೇದಿನ ಗ್ರಾಮದ ಪಟೇಲನ ರಿಪೋರ್ಟು ಹೋಯಿತು ತಾರೀಖು ೨೨ನೇ ಶನಿವಾರ ಪೋಲೀಸ್ ಜಮಾದಾರರು ಬಂದು ವಿಷಯವನ್ನು ವಿವರವಾಗಿ ವಿಚಾರಿಸಿ ಗ್ರಾಮಸ್ಥರ ಮಹಜರು ತೆಗೆದುಕೊಂಡು ಹೆಣವನ್ನು ದಫನ ಮಾಡಿಕೊಳ್ಳಲು ಅಪ್ಪಣೆಕೊಟ್ಟರು. ಮೃತಪಟ್ಟ ರಂಗನಿಗೆ ೨೦ ವಯಸ್ಸು, ಮದುವೆಯಾಗಿ ೬ ತಿಂಗಳಾಗಿತ್ತು ವಿಧವೆಯಾಗಿದ್ದ ಇವನ ತಾಯಿ ಲಕ್ಕಿಗೂ ಮೂರು ಸಣ್ಣ ಮಕ್ಕಳಿಗೂ ದುಡಿದು ಹಾಕುತ್ತಿದ್ದ ಆ ಪ್ರಾಯದ ಮಗನೂ ಸತ್ತು ಮನೆಯೂ ಹೋದದ್ದಲ್ಲದೆ ಸಿಡಿಲ ಪೆಟ್ಟಿನಿಂದ ಸತ್ತುಹೋದ ನಾಲ್ಕು ರಾಸುಗಳು ಸುಟ್ಟುಹೋದ ದವಸ ಧಾನ್ಯ ಸಾಮಾನು ಸಹಿತ ನೂರು ರೂಪಾಯಿಗೆ ಕಡಿಮೆ ಇಲ್ಲದೆ ನಷ್ಟವಾಗಿರುತ್ತೆ ಅವಳ ದುಃಖಕ್ಕೆ ಪಾರವೇ ಇಲ್ಲ ಈ ಬಡ ಸಂಸಾರಿಗೆ ಗ್ರಾಮಸ್ಥರು ಸಹಾಯಮಾಡಿ ಪುಣ್ಯವನ್ನು ಪಡೆಯಲಿ ಎಂದು ಹಾರೈಸುತ್ತೇನೆ

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ

ಮಳೆಯಿಂದಾದ ಕಷ್ಟನಷ್ಟಗಳು

ಹೊನ್ನಾಳಿ ತಾಲ್ಲೂಕು ಹೊಸಹಳ್ಳಿಯಲ್ಲಿ ಮೊನ್ನೆ ಮಂಗಳವಾರ ಮಧ್ಯಾಹ್ನ ಕೆಲವರು ಸ್ನೇಹಿತರೊಡನೆ ನಾನು ವಿನೋದವಾಗಿ ಮಾತನಾಡುತ್ತಾ ಆಟಪಾಟಗಳನ್ನು ಮಾಡುತ್ತಾ ಇರುವಲ್ಲಿ ಮೋಡ ಕಟ್ಟಿಕೊಂಡು ಗುಡುಗು ಮಿಂಚುಗಳಿಂದ ಕೂಡಿ ಆಕಾಶದಿಂದ ಕಲ್ಲುರಳನ್ನು ಎಸೆದಂತೆ ಮಳೆ ಹನಿಗಳು ಬಿದ್ದು ಕೂಡಲೆ ಬೀದಿಯಲ್ಲಿ ನೀರು ನಿಂತುಕೊಂಡು ನಮ್ಮ ಹಟ್ಟಿಯ ಮನೆ ಹೊಸ್ತಿಲನ್ನು ದಾಟಿ ಬಂದು ನಮ್ಮನ್ನು ಎಬ್ಬಿಸಿತು. ಮೊಣಕಾಲುದ್ದ ನೀರು ಕೂತುಕೊಳ್ಳಲು ಕ್ಯಾಂಪಿನಲ್ಲಿ ಸ್ಥಳವಿಲ್ಲ ಹೊರಗೆ ಬಂದು ನೋಡುವಲ್ಲಿ ನದಿಯು ಪೂರ್ಣಪ್ರವಾಹದಂತೆ ನೀರೇ ಕಾಣುತ್ತೆ ಮಳೆ ಸ್ವಲ್ಪ ಸುಮಾರಾಗಲು ಅವರವರ ಮನೆಗೆ ಹೋದರು. ನಾನು ಕೈಲಿ ಛತ್ರಿ ಹಿಡಿದುಕೊಂಡು ಬೀದಿಯಲ್ಲಿ ಹೊರಟೆನು ಯಾರ ಮನೆಯಲ್ಲಿ ನೋಡಿದರೂ ನೀರೇ ನಿಂತಿದೆ (ಜಾಗ್ರತೆ ಪೆಡ್ಡುಗಳನ್ನು ಬಿಟ್ಟು ಊರು ಸೇರುವುದು ಒಳ್ಳೇದು) ಊರ ಮುಂದಣ ಬೀದಿಯಲ್ಲಿ ಗೋಕಾಯಿ … ಬಂದವು ಹೊರಗೆ ಹೋದವರ ಗೋಳಂತೂ ಹೇಳತೀರದು ಆ ದಿನ ನಾರ್ವೇಹಳ್ಳಿ ಸಂತೆಗೆ ನಮ್ಮ ಊರಿಂದಲೂ ಅನೇಕ ಜನರು ಹೋಗಿದ್ದರು ದೂರಸ್ಥಳದವರು ಜಾಗ್ರತೆಯಾಗಿ ಬಂದೂ ಕೂಡ ತಮ್ಮ ಸ್ಥಳಕ್ಕೆ ಹೋಗಲಾರದೆ ಇಲ್ಲಿಯೇ ನಿಂತರು ಇಂಥಾ ಮಳೆಯನ್ನು ಎಂದೂ ಕಂಡಿರಲಿಲ್ಲವೆಂದು ಬಹು ಜನಗಳು ಮಾತನಾಡಿದರು ಸಂತೆಗೆ ಹೋಗುವಾಗ ಮಾರಾಟಕ್ಕೆ ತೆಗೆದುಕೊಂಡು ಹೋಗಿದ್ದ ದವಸಧಾನ್ಯಗಳನ್ನು ಮಾರದೆ ಮತ್ತು ಕೊಂಡುಕೊಳ್ಳದೆ ಕಷ್ಟಪಟ್ಟು ಮಧ್ಯದಾರಿಯಲ್ಲಿ ಬೊಮ್ಮೇನಹಳ್ಳಿ ಸಮೀಪದ ಹಳ್ಳದಲ್ಲಿದ್ದ ನೀರನ್ನು ದಾಟುವುದಕ್ಕೆ ನಮ್ಮ ಊರಿನವರೂ ಹರಳಹಳ್ಳಿಯವರೂ ಮುಂತಾದ ಅನೇಕ ಜನಗಳು ಕೂಡಿಕೊಂಡು ನೆನೆದು ಬಹಳ ಕಷ್ಟಪಟ್ಟು ಕಗ್ಗತ್ತಲೆಯಲ್ಲಿ ಮುಳುಗುತ್ತಾ ತೇಲುತ್ತಾ ಬಂದು ಸುಮಾರು ೯-೧೦ ಗಂಟೆ ಸಮಯಕ್ಕೆ ಊರು ಸೇರಿದರು ನಾನು ಆದಿನ ಮೊದಲು ಮನೆಯಲ್ಲಿ ನೀರು ನಿಂತದ್ದರಿಂದ ಮಾರನೆ ವೀರಬಸಪ್ಪಯ್ಯನವರ ಮನೆಯಲ್ಲಿ ಊಟ ಮಾಡಿಕೊಂಡು ಮಲಗುವುದಕ್ಕೆ ಸ್ನೇಹಿತ ಲಕ್ಷ್ಮಣಪ್ಪನ ಮನೆಗೆ ಹೋದೆನು. ಅವರು ಇನ್ನೂ ಬಂದಿರಲಿಲ್ಲ ಏನಾದನೋ, ಎಲ್ಲಿ ಉಳಿಕೊಂಡನೋ ಎಂದು ಆತನ ತಾಯೂ ನಾನೂ ಮಾತನಾಡಿ ಮಲಗಿಕೊಂಡೆವು ಅಷ್ಟರಲ್ಲೇ ಲಕ್ಷ್ಮಣಪ್ಪನು ಬಂದು ಕರೆಯಲು ಎಲ್ಲರೂ ಎದ್ದು ಕೇಳುವಲ್ಲಿ ನಮ್ಮ ಕಲ್ಲಹಳ್ಳಿ ಮಾವ ರಂಗಪ್ಪ ಇನ್ನೂ ೭ ಜನ ಹಳ್ಳದ ಆಚೇ ದಡದ ಮೇಲೆ ಇದ್ದಾರೆ ನಾನು ನೀರು ಎಷ್ಟಿದೆಯೋ ನೋಡಬೇಕೆಂದು ಹಳ್ಳದಲ್ಲಿ ಇಳಿದೆನು ಒಂದೇ ಸಾರಿಗೆ ನನ್ನನ್ನ ಮುಳುಗಿಸಿಕೊಂಡು ಪ್ರವಾಹವು ಈಚೆ ದಡಕ್ಕೆ ಬಿಟ್ಟಿತು ಕತ್ತಲೆಯಾದ್ದರಿಂದ ನಾನು ಮುಳುಗಿದ್ದು ಅಲ್ಲಿದ್ದವರಿಗೆ ಕಾಣಲಿಲ್ಲ ಅನಂತರ ಊರಿಗೆ ಹೋಗಿ ಬರುತ್ತೇನೆಂದು ಹೇಳಿ ಬಂದೆ ಎಂದನು (ಅವನು ಹಳ್ಳದಾಟಿದ ಸ್ಥಳಕ್ಕೂ ನದಿಗೂ ಸುಮಾರು ೫೦ ಗಜ ಇರಬಹುದು ಅವನಿಗೆ ಈಜು ಬರುವುದಕ್ಕೆ ಕೂಡ ಬರುತ್ತಿರಲಿಲ್ಲ. ಇಂಥಾ ಅಪಾಯಕ್ಕೆ ಸಿಕ್ಕಿ ಅವನು ತಪ್ಪಿಸಿಕೊಂಡು ಬಂದದ್ದು ಆಶ್ಚರ್ಯ) ಆಗ ಒಂದು ಲಾಂದ್ರ ಹೊತ್ತಿಸಿಕೊಂಡು ಅವನ್ನೂ ಇಬ್ಬರನ್ನು ಸಹಾಯಕ್ಕೆ ಕರೆದುಕೊಂಡು ನಾನೂ ಲಕ್ಷ್ಮಣಪ್ಪನೂ ಹೋದೆವು ಕೊರಕಲು ಹಳ್ಳ, ನೀರು ವಿಪರೀತ, ಇದನ್ನು ಕಂಡು ಸಹಾಯಕರು … ಲಕ್ಷ್ಮಣಪ್ಪನಾದರೋ ಅಯ್ಯೋ, ಮಾವ, ಮೊದಲೇ ಅಪಾಯಕ್ಕೆ ಸಿಕ್ಕಿ ತಪ್ಪಿಸಿಕೊಂಡವನಾದ್ದರಿಂದ … ನನಗಲಾರಂಭಿಸಿದನು ನಾನು ಏನು ಮಾಡಲಿ! ರಂಗಪ್ಪನವರಿಗೂ ನನಗೂ ಬಹಳ ಪರಿಚಯ ಸದಾ ಮಿತ್ರ ಅವರು ಉಪವಾಸದಿಂದ ಇದ್ದಾರೆಂದು ಯೋಚಿಸಿ ಧೈರ್ಯದಿಂದ ಒಂದು ಆಳುದ್ದದ ದೋಣಿಯನ್ನು ಹೊರಿಕೊಂಡು ಹೋಗಿ ನಡುಮಧ್ಯದ ಹಳ್ಳದಲ್ಲಿ ಕೆಳಮುಖವಾಗಿ ದೋಣಿಯನ್ನ ಎದೆಗ ಒರಗಿಸಿಟ್ಟು ನಿಂತುಕೊಂಡು ಅವರ ಸಾಮಾನು, ಕುದುರೆ, ಜನಗಳನ್ನು ದಾಟಿಸಿದೆನು ಇಂಥಾ ಅಪಾಯದಿಂದ ಅವರನ್ನೆಲ್ಲಾ ಪಾರುಮಾಡಿದ ದೈವವನ್ನು ಎಷ್ಟು ಪ್ರಾರ್ಥಿಸಿದರೂ ತೀರದು

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

ಪ್ರಾರ್ಥನೆ—ಪಾಪರ್ ಅರ್ಜಿ ಹಿಡಿಯುವ ಅಧಿಕಾರವನ್ನು ಮುನ್ಸಿಫರಿಗೆ ತಪ್ಪಿಸಿ, ಮೊದಲಿದ್ದಂತೆ ಡಿಸ್ಟ್ರಿಕ್ಟ್ ಜಡ್ಜಿಗಳಿಗೇ ವಹಿಸಬೇಕು.

ದಿವಾನರವರು—ಈಗಿರುವ ಕ್ರಮವೇ ಸರಿಯಾಗಿದೆ; ಬದಲಾವಣೆ ಅಗತ್ಯವಿಲ್ಲ.

ಪ್ರಾರ್ಥನೆ—ಸಿವಿಲ್ ಕೋರ್ಟ್ ಜಡ್ಜ್‌ಮೆಂಟ್ ಡಿಕ್ರಿ ಹಣದ ಮೇಲೆ ಶೇಕಡಾ ೮ ಆಣೆ ಬಡ್ಡಿಯನ್ನು ಸ್ಯಾಂಕ್ಷನ್ ಮಾಡುತ್ತಾರೆ ಇದುಸಾಲದು; ಒಂದು ರೂಪಾಯಿ ಕೊಡುವಂತೆ ಮಾಡಿಕೊಡಬೇಕು.

ದಿವಾನರವರು—ಈಗಿರುವ ದರವೇ ಹೆಚ್ಚೆಂದು ಮೆಂಬರುಗಳು ಹೇಳುತ್ತಾರೆ ಇನ್ನೂ ಹೆಚ್ಚಿಸಲಾಗದು.

ಪ್ರಾರ್ಥನೆ—ಪತ್ರಗಳನ್ನು ರಿಜಿಸ್ಟರ್ ಮಾಡುವುದಕ್ಕೆ ಸರ್ಕಾರದ ರುಸುಂ ಹೆಚ್ಚಿಸಿದಾರೆ. ಮೊದಲಿದ್ದಂತೆ ಬದಲಾಯಿಸಿಕೊಡಬೇಕು.

ದಿವಾನರವರು—ಹಿಂದಿದ್ದ ರೂಲಿಸು ಪ್ರಕಾರ ಮೊದಲು ೩೦೦ ಮಾತಿಗೆ ರುಸುಂ ತೆಗೆದುಕೊಳ್ಳಕೂಡದೆಂತಲೂ ಅದಕ್ಕಿಂತ ಹೆಚ್ಚಾಗಿದ್ದರೆ ಪ್ರತಿ ೧೦೦ ಮಾತಿಗೂ ೬ ಆಣೆಯಂತೆ ವಸೂಲ್ಮಾಡಬೇಕೆಂತಲೂ ಹುಕುಂ ಕೊಡುತ್ತೇವೆ.

ಪ್ರಾರ್ಥನೆ—ಡಿಸ್ಟ್ರಿಕ್ಟ್ ಫಂಡಿನ ಹಣವೆಲ್ಲಾ ರಸ್ತೆಗಳನ್ನು ದುರಸ್ತು ಮಾಡುವುದಕ್ಕೇ ಖರ್ಚಾಗುವುದು. ಪ್ರಜೆಗಳಿಗೆ ಅನುಕೂಲವಾಗಿ ಹೊಸ ರಸ್ತೆ ಹಾಕುವುದಕ್ಕೂ ಭಾವಿ ಮುಸಾಫರಖಾನೆ ಮುಂತಾದ್ದನ್ನು ಕಟ್ಟಿಸುವುದಕ್ಕೂ ಹಣವೇ ಉಳಿಯುತ್ತದಿಲ್ಲ ಆದದ್ದರಿಂದ ಅಂಥಾ ರಿಪೇರಿಯಾದ ರಸ್ತೆಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು

ದಿವಾನರವರು—ಹಣಸಾಲದ ಸಂದರ್ಭಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳವರು ಟೋಲ್ ಗೇಟು ಮೊದಲಾದ್ದನ್ನು ಇಟ್ಟು ಹೊಸ ತರಹಾ ಹುಟ್ಟುವಳಿ ಕಲ್ಪಿಸಿಕೊಳ್ಳಬಹುದೆಂದು ತಿಳಿಸುತ್ತೇವೆ

ಪ್ರಾರ್ಥನೆ—ದೊಡ್ಡಿಗಳ ಮೇಲ್ವಿಚಾರಣೆಯನ್ನು ಪ್ರತಿ ಗ್ರಾಮದ ಲ್ಲೂ ಮೂರುಜನ ಮುಖಂಡರಿಗೆ ವಹಿಸಬೇಕು.

ದಿವಾನರವರು—ಗ್ರಾಮಗಳಲ್ಲಿ ಪಂಚಾಯತರನ್ನು ಏರ್ಪಡಿಸುವುದಕ್ಕೆ ಒಂದು ಕಾನೂನು ಮಾಡುತ್ತೇವೆ ಅದರಲ್ಲಿ ಆ ಪಂಚಾಯತರ ಅಧಿಕಾರಕ್ಕೆ ಇದನ್ನೂ ಸೇರಿಸುವೆವು

ಪ್ರಾರ್ಥನೆ—ಮಕ್ಕಳಿಗೆ ತಂದೆ ತಾಯಿಗಳು ವಿದ್ಯೆ ಕಲಿಸಲೇಬೇಕೆಂಬ ನಿರ್ಬಂಧವನ್ನು ಕಲ್ಪಿಸಬೇಕು. ಮೊದಲು ಈ ವಿಧಿಯನ್ನು ಪರೀಕ್ಷಾರ್ಥವಾಗಿ ಒಂದೆರಡು ಕಡೆ ಜಾರಿಗೆ ತರಬಹುದು ಅಮರಕೋಶವನ್ನು ಪಾಠಶಾಲೆಗಳಲ್ಲಿ ಮಕ್ಕಳಿಗೆ ಹೇಳಿಕೊಡಕೂಡದೆಂದು ಹುಕುಂ ಆಗಿದೆ ಇದನ್ನು ವಜಾಮಾಡಿ, ಅಮರಕೋಶವನ್ನು ಪಾಠದ ಪಟ್ಟಿಗೆ ಸೇರಿಸಬೇಕು ಕನ್ನಡ ಭಾಷಾ ಪರಿಚಯಕ್ಕೆ ಅವಶ್ಯವಾದ ಪುಸ್ತಕ.

ದಿವಾನರವರು—ಈ ವಿಷಯದಲ್ಲಿ ಅನುಕೂಲವಾದ ಹುಕುಂ ಕೊಡುತ್ತೇವೆ.

ಪ್ರಾರ್ಥನೆ—ಹುಡುಗರಿಗೆ ಮೊದಲು ಮೂರು ವರುಷ ಕನ್ನಡ ಕಲಿಸಿ ನಂತರ ಇಂಗ್ಲಿಷಿಗೆ ಹಾಕಬೇಕೆಂದು ವಿಧಿಸಿರುತ್ತಾರೆ. ಇದರಿಂದ ಇಂಗ್ಲಿಷ್ ವಿದ್ಯೆ ಕಲಿಯಲು ಹುಡುಗರಿಗೆ ಸಾಕಾದಷ್ಟು ಅವಕಾಶವಿಲ್ಲ,

ದಿವಾನರವರು—ಇದು ನಿಜ; ಕೂಡಲೇ ಸರಿಪಡಿಸುತ್ತೇವೆ

ಪ್ರಾರ್ಥನೆ—ವ್ಯವಸಾಯದಲ್ಲಿ ಹೊಸ ಕ್ರಮಗಳನ್ನು ರೈತರಿಗೆ ಹೇಳಿಕೊಡುವುದಕ್ಕೆ ತೃಪ್ತಿಕರವಾದ ಏರ್ಪಾಡುಮಾಡಬೇಕು.

ದಿವಾನರವರು—ಮಾಡುತ್ತೇವೆ ಈ ವಿಷಯದಲ್ಲಿ ರೆವಿನ್ಯೂ ಕಮಿಷನರು ಸರ್ಕಾರಿಯಾಗಿ ಒಂದು ಪತ್ರಿಕೆಯನ್ನು ಪ್ರಕಟಿಸುತ್ತಾ ಬರಬೇಕೆಂದು ಯೋಚಿಸಿದಾರೆ

ಪ್ರಾರ್ಥನೆ—ಅಡಿಕೆಯ ಮೇಲೆ ಹಾಕಿರುವ ಸ್ಕ್ವೇರ್ ಸುಂಕವನ್ನು ವಜಾಮಾಡಿಕೊಡಬೇಕೆಂದು ಅನೇಕ ವರುಷಗಳಿಂದ ಕೇಳಿಕೊಳ್ಳುತ್ತಿದೇವೆ ಈಗಲಾದರೂ ಅದನ್ನು ವಜಾಮಾಡಿ ಕೊಡಬೇಕು.

ದಿವಾನರವರು—ಸರ್ಕಾರಿ ಹುಟ್ಟುವಳಿಯಲ್ಲಿ ಸುಮಾರು ಮೂರು ಲಕ್ಷ ರೂಪಾಯಿ ಕಡಿಮೆಯಾಗುತ್ತಿದ್ದರಿಂದ ಅದನ್ನು ಹ್ಯಾಗೆ ಎತ್ತಿಕೊಳ್ಳಬಹುದೆಂದು ಗವರ್ನಮೆಂಟಿನವರು ಪರ್ಯಾಲೋಚಿಸುತ್ತಿದಾರೆ ಈ ವಿಷಯವನ್ನು ಅಗತ್ಯವಾಗಿ ಆದಷ್ಟು ಬೇಗ ಇತ್ಯರ್ಥಮಾಡುವೆವು.

ಪ್ರಾರ್ಥನೆ—ಜಮೀನನ್ನು ಆಧಾರ ಭೋಗ್ಯ ಮುಂತಾದ್ದು ಮಾಡಿಕೊಂಡಿರುವವರು ತಮ್ಮ ಹೆಸರು ತಾಲ್ಲೂಕ್ ಸ್ಪೆಷಲ್ ರಿಜಿಸ್ಟರಿನಲ್ಲಿ ದಾಖಲ್ ಮಾಡಿಸಿಕೊಳ್ಳುವುದಕ್ಕೆ ಕೆಲವು ಕಡೆ ಪ್ರತಿವರುಷವೂ, ಕೆಲವು ಕಡೆ ೩ ಅಥವಾ ೫ ವರುಷಕ್ಕೊಂದಾವರ್ತಿ ಒಂದೊಂದು ರೂಪಾಯಿನಂತೆ ರಿಜಿಸ್ಟರ್ ಫೀಜನ್ನು ಕೊಡಬೇಕಾಗಿದೆ

ದಿವಾನರವರು—ಇದು ತಪ್ಪು ತಿಳುವಳಿಕೆ. ಒಂದು ಸಲ ಮಾತ್ರ ಒಂದು ರೂಪಾಯಿ ಕೊಡತಕ್ಕದ್ದೆಂದು ರೂಲಿಸು ಇರುತ್ತೆ. ಅದರಂತೆ ಜಾರಿ ಮಾಡಬೇಕೆಂದು ತಾಲ್ಲೂಕುಗಳಿಗೆ ಹುಕುಂ ಕೊಡುವೆವು

ಪ್ರಾರ್ಥನೆ—ಗ್ರಾಮಾಂತರಗಳಲ್ಲಿ ಬಡಬಗ್ಗರು ತಮ್ಮ ಸ್ವಂತ ಜಮೀನಿನಲ್ಲಿ ಬೆಳೆಯುವ ತರಕಾರಿ, ಸೌದೆ, ಮುಂತಾದ ಪದಾರ್ಥಗಳನ್ನು ಸಂತೆಗೆ ಅಥವಾ ಬೇರೆ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ವಿಕ್ರಯಮಾಡಿ ಜೀವಿಸುತ್ತಾರೆ. ಇಂಥವರಿಂದಲೂ ಗ್ರಾಮಾಧಿಕಾರಿಗಳು ವ್ಯಾಪಾರದ ಕಂದಾಯವನ್ನು ವಸೂಲ್ಮಾಡುವರು ಇದು ಬಹಳ ಹಿಂಸೆಯಾಗಿದೆ ಬಡವರ ಜೀವನಕ್ಕೆ ಕಷ್ಟವಾಗಿದೆ ಇದನ್ನು ತಪ್ಪಿಸಿಕೊಡಬೇಕು

ದಿವಾನರವರು—ಒಳ್ಳೇದು. ಇನ್ನು ಮೇಲೆ ಯಾವ ಪ್ರಜೆಯಾಗಲಿ ತನ್ನ ಸ್ವಂತ ಜಮೀನಿನಲ್ಲಿ ಬೆಳೆದ ಫಸಲನ್ನೂ ತರಕಾರಿ ಸೌದೆ ಮುಂತಾದ್ದನ್ನೂ ತನ್ನ ಮನೆಯಲ್ಲಿ ಮಾಡಿದ ಕೈಕಸಬಿನ ಪದಾರ್ಥಗಳನ್ನೂ ಬೇರೆ ಸ್ಥಳದಲ್ಲಿ ವಿಕ್ರಯಮಾಡುವುದಕ್ಕೆ ಅವಕಾಶಕೊಡಬೇಕೆಂತಲೂ ಅಂಥಾ ಪ್ರಜೆಯಿಂದ ವ್ಯಾಪಾರದ ಕಂದಾಯ ವಸೂಲ್ಮಾಡಕೂಡದೆಂತಲೂ ಹುಕುಂ ಕೊಡುತ್ತೇವೆ.

ಪ್ರಾರ್ಥನೆ—ಹಿತ್ತಲು ೧೦ ಗುಂಟೆಗಿಂತ ಹೆಚ್ಚಿದ್ದರೆ ಕಂದಾಯ ಕೊಡಬೇಕೆಂದು ವಿಧಿಸಿರುತ್ತೆ. ಇದು ಸಾಲದು. ೨೦ ಗುಂಟೆ ವರಿಗೆ ವಿನಾಯತಿ ಮಾಡಿಕೊಡಬೇಕು.

ದಿವಾನರವರು—ಈ ರೂಲಿಸು ಎರಡು ವರುಷ ಅಜಮಾಯಿಷಿ ತರೀಕು ಜಾರಿಗೆ ತಂದಿದೆ. ಆ ಮಾಯಿದೆ ಕಳೆದ ಮೇಲೆ ಯೋಚಿಸೋಣ.

ಪ್ರಾರ್ಥನೆ—ರೈತರ ಕಣಗಳಿಗೂ ಕಂದಾಯ ದಾಖಲಾಗಿದೆ. ಇದನ್ನು ವಜಾಮಾಡಿಕೊಡಬೇಕು.

ದಿವಾನರವರು—ಈ ವಿಷಯದಲ್ಲಿ ಡೆಪ್ಟಿ ಕಮಿಷನರುಗಳ ಅಭಿಪ್ರಾಯವನ್ನು ಕೇಳಿದ್ದೇವೆ. ಅದು ಬಂದ ಮೇಲೆ ಗವರ್ನಮೆಂಟಿನವರು ನೋಡಿ ಇತ್ಯರ್ಥಮಾಡುವರು.

ಪ್ರಾರ್ಥನೆ—ರೈತನಿಗೆ ೩-೪ ಹಿತ್ತಲುಗಳಿದ್ದರೆ ಪ್ರತಿ ಒಂದಕ್ಕೂ ಅದು ಚಿಕ್ಕದಾದರೂ ದೊಡ್ಡದಾದರೂ ಒಂದೇ ರೀತಿ ೮ ಆಣೆ ಕಂದಾಯ ಕೊಡಬೇಕಾಗಿದೆ. ಇದು ದಸೂರಿ ಬಡವರಿಗೆ ತುಂಬಾ ಕಷ್ಟ ಹಿತ್ತಲಿನ ವಿಸ್ತೀರ್ಣ ಇದ್ದಂತೆ ದಾಮಾಷಾಯಿ ಪ್ರಕಾರ ೨, ೬, ೮ ಆಣೆ ದಾಖಲಾಗಬೇಕು.

ದಿವಾನರವರು—ಇದು ಅವಶ್ಯವಾದ ವಿಷಯ ಹಿತ್ತಲು ೧೦ ಗುಂಟೆ ಒಳಗೆ ಇದ್ದರೆ ೮ ಆಣೆಯೂ, ನಂತರ ಪ್ರತಿ ಹಿತ್ತಲಿಗೂ ೨ ಆಣೆಯೂ ದಾಖಲಾಗುವಂತೆ ಮಾಡಿದರೆ ಅನುಕೂಲವೆಂದು ತೋರುತ್ತೆ. ಆಲೋಚನೆಮಾಡಿ ಹುಕುಂ ಕೊಡುತ್ತೇವೆ.

ಪ್ರಾರ್ಥನೆ—ದಿವಾನ್ ರಂಗಾಚಾರ್ಯರ ಕಾಲದಲ್ಲಿ ಬಟಾಯಿ ವ್ಯವಸಾಯ ಜಾರಿಯಲ್ಲಿತ್ತು. ಕೆರೆ ತುಂಬಿರುವ ವರುಷಗಳಲ್ಲಿ ಅದರ ಕೆಳಗಿನ ಜಮೀನಿಗೆ ಕಂದಾಯ ವಸೂಲ್ಮಾಡುವುದು, ನೀರಿಲ್ಲದ ವರುಷ ಕಂದಾಯ ರಿಮಿಷನ್ ಮಾಡುವುದು ವಾಡಿಕೆಯಾಗಿತ್ತು. ಈಗ ಈ ಪದ್ಧತಿ ತಪ್ಪಿಹೋದ್ದರಿಂದ ರೈತರು ಕಂದಾಯ ತೆರಲಾರದೆ ಕೆರೆಕೆಳಗಣ ಜಮೀನುಗಳನ್ನು ಬಿಟ್ಟುಬಿಡುತ್ತಾರೆ ಇದು ಸರ್ಕಾರಕ್ಕೆ ನಷ್ಟ. ಬಟಾಯಿ ಸಾಗುವಳಿ ರೂಢಿಗೆ ತಂದರೆ ಜಮೀನುಗಳು ಪಾಳು ಬೀಳದೆ ರೈತರ ಹಿಡುವಳಿಯಲ್ಲಿರುವವು ಇದನ್ನು ಜಾರಿಗೆ ತರಬೇಕೆಂದು ಅನೇಕ ವರುಷಗಳಿಂದ ಕೇಳಿಕೊಳ್ಳುತ್ತೇವೆ ಈಗಲಾದರೂ ರೂಢಿಗೆ ತರಬೇಕು

ದಿವಾನರವರು—ಈ ವಿಷಯ ಬಹಳ ದಿವಸದಿಂದ ಚರ್ಚೆಯಲ್ಲೇ ಇದೆ. ಏಕಾಏಕಿ ಕೂತಿದ್ದ ಕಡೆ ತೀರ್ಮಾನ ಮಾಡುವುದು ಕಷ್ಟವಾಗಿದೆ ನಿದಾನವಾಗಿ ಮುಂದೆ ಯೋಚನೆಮಾಡುತ್ತೇವೆ.

ಪ್ರಾರ್ಥನೆ—ತರಿ ಬಾಗಾಯಿತು ವ್ಯವಸಾಯಕ್ಕೆ ಆಗಾಗ್ಗೆ ಹೊಸ ಮಣ್ಣನ್ನು ತಂದು ಹಾಕಿದಲ್ಲದೆ ಬೆಳೆ ಹುಲುಸಾಗುವುದಿಲ್ಲ ಸರ್ಕಾರಿ ಅಥವಾ ಹಿಡುವಳಿ ಕಾನುಗಳಿಂದಲೂ ಖರಾಬ್ ಜಮೀನು ಮತ್ತು ಸೊಪ್ಪಿನ ಬೆಟ್ಟಗಳಿಂದಲೂ ರೈತರು ಮಣ್ಣು ಸಾಗಿಸಿಕೊಂಡು ಹೋದರೆ ಅವರಿಗೆ ಜುಲ್ಮಾನೆ ಹಾಕುತ್ತಾರೆ ಇದು ತುಂಬಾ ಹಿಂಸೆಯಾಗಿದೆ ರೈತರಿಗಿರುವ ಈ ಅಡಚಣೆಯನ್ನು ತಪ್ಪಿಸಿಕೊಡಬೇಕು.

ದಿವಾನರವರು—ಹಾಗೆ ಅಪ್ಪಣೆ ಮಾಡಿದರೆ ಗವರ್ನಮೆಂಟಿಗೆ ತಿಳಿಸಿ; ಸರಿಪಡಿಸುತ್ತೇವೆ ಅರ್ಜಿ ಮಾಡಬೇಕೆಂದಾಗಲಿ, ಜುಲ್ಮಾನೆ ಹಾಕಬೇಕೆಂದಾಗಲಿ ರೂಲಿಸು ಇಲ್ಲ

ಪ್ರಾರ್ಥನೆ—ಮಲ್ನಾಡಿನಲ್ಲಿ ಮಳೆ ಇಲ್ಲದ್ದರಿಂದಲೂ ಕೊಳೆ ರೋಗದಿಂದಲೂ ಬಾಗಾಯಿತು ಫಸಲು ವಿಶೇಷವಾಗಿ ಕೆಟ್ಟು ರೈತರಿಗೆ ತುಂಬಾ ನಷ್ಟವಾಗಿದೆ ಅಡಿಕೆ, ಯಾಲಕ್ಕಿ, ಮೆಣಸು, ವಿಳ್ಯೇದೆಲೆ ಮೊದಲಾದ ಫಸಲುಗಳೆಲ್ಲಾ ಹಾಳಾದವು ಬಾಗಾಯಿತು ಕಂದಾಯದ ದರವನ್ನು ಕಮ್ಮಿ ಮಾಡಿಕೊಡಬೇಕು

ದಿವಾನರವರು—ಯಾವ ರೈತನಿಗೆ ಹಾಗೆ ನಷ್ಟವಾಗಿದೆಯೋ ಡೆಪ್ಟಿ ಕಮಿಷನರಲ್ಲಿ ಹೇಳಿಕೊಳ್ಳಲಿ. ಅವರು ರಿಮಿಷನ್ ಮಾಡಿಕೊಡುತ್ತಾರೆ ತರಿ ಬಾಗಾಯ್ತು ಜಮೀನುಗಳಿಗೆ ಕಂದಾಯ ರಿಮಿಷನ್ ಮಾಡುವುದಕ್ಕೆ ಅವಕಾಶವಿದೆ ಬಾಗಾಯಿತಿನ ಕಂದಾಯ ಕಮ್ಮಿ ಮಾಡುವುದಕ್ಕಾಗಲಿ ರಿಮಿಷನ್ ಮಾಡುವುದಕ್ಕಾಗಲಿ ಈಗಿರುವ ರೂಲಿಸು ಅಡ್ಡಿ ಮಾಡುವುದು. ಇನ್ನು ಆರು ತಿಂಗಳೊಳಗಾಗಿ ಮಲ್ನಾಡಿನ ಕಡೆ ಸರ್ವೆ ಸೆಟಲ್ಮೆಂಟು ಆರಂಭವಾಗುವುದು. ಆಗ ಕಂದಾಯವನ್ನು ಹೊಸದಾಗಿ ಠರಾವು ಮಾಡುವರು. ತೋಟಗಳ ಈಗಿನ ಸ್ಥಿತಿಯನ್ನು ಜ್ಞಾಪಕದಲ್ಲಿಟ್ಟುಕೊಂಡು ಆ ಇಲಾಖೆಯವರು ಕಂದಾಯ ದಾಖಲ್ ಮಾಡುತ್ತಾರೆ

ಪ್ರಾರ್ಥನೆ—ಒಂದೇ ಖಾತೆಯಲ್ಲಿರುವ ಸರ್ವೆ ನಂಬರುಗಳನ್ನು ಇತರರು ಆಧಾರ ಭೋಗ್ಯಾದಿಗಳ ಮೂಲಕ ಅನುಭವಿಸುತ್ತಾರೆ ಕಂದಾಯ ಬಾಕಿ ಆದಾಗ ಯಾವ ಜಮೀನಿನಿಂದ ವಸೂಲಾಗಬೇಕೋ ಅದನ್ನು ಜಪ್ತಿ ಹರಾಜು ಮಾಡಿಸದೆ ಪೂರಾ ಪಾವತಿ ಆಗಿರುವ ಇತರರ ಜಮೀನುಗಳನ್ನೂ ಸೇರಿಸಿ ಜಪ್ತಿ ಹರಾಜು ಮಾಡುತ್ತಾರೆ. ಇದನ್ನು ತಪ್ಪಿಸಿಕೊಡಬೇಕು.

ದಿವಾನರವರು—ಕಂದಾಯ ಬಾಕಿಯಲ್ಲಿರುವ ಜಮೀನನ್ನೇ ಜಪ್ತಿ ಹರಾಜಿಗೆ ತರಬೇಕೆಂದು ಹೋದ ವರುಷ ರೂಲಿಸು ಮಾಡಿದೆ. ಇದು ಅಮಲ್ದಾರರು ಮಾಡಬೇಕಾದ ಕೆಲಸ. ಅವರು ಹಾಗೆ ಮಾಡದೆಹೋದರೆ ಅಸಿ ಕಮಿಷನರಲ್ಲೂ ಡೆಪ್ಟಿ ಕಮಿಷನರಲ್ಲೂ ಹೇಳಿಕೊಳ್ಳಿ ಅವರು ಸರಿಪಡಿಸುತ್ತಾರೆ ಇದಲ್ಲದೆ ಇನ್ಯಾವ ರೀತಿಯಲ್ಲೂ ರೂಲಿಸನ್ನು ಬದಲಾಯಿಸಲಾಗದು

ಪ್ರಾರ್ಥನೆ—ರೆವಿನ್ಯೂ ಹರಾಜನ್ನು ಖಾಯಂಮಾಡುವುದು ಅಪರೂಪ ಇದರಿಂದ ಕೊಂಡುಕೊಂಡವನಿಗೆ ತುಂಬಾ ನಷ್ಟ. ಅವನು ಸರ್ಕಾರಕ್ಕೆ ಕೊಡುವ ಹರಾಜು ಮೊಬಲಗಿಗೆ ಬಡ್ಡಿಸುದಾ ಬರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಹರಾಜಿನಲ್ಲಿ ಜಮೀನ್ ಪಡಕೊಂಡವನು ಬಹಳ ಕಷ್ಟಪಟ್ಟು ಲಾಗೋಡು ಮುಟ್ಟಿಸಿ ಜಮೀನನ್ನು ಹಸನು ಮಾಡಿ ವ್ಯವಸಾಯಮಾಡಿಕೊಂಡಿದ್ದರೂ ಹರಾಜು ವಜಾ ಆಗಿ ಜಮೀನು ಬಿಟ್ಟುಬಿಡಬೇಕಾಗುತ್ತೆ. ಇಂಥಾ ಕಷ್ಟನಷ್ಟಗಳನ್ನು ತಪ್ಪಿಸಬೇಕು.

ದಿವಾನರವರು—ಸಾಧಾರಣವಾಗಿ ರೆವಿನ್ಯೂ ಹರಾಜನ್ನು ರದ್ದು ಮಾಡಲೇ ಕೂಡದೆಂದೂ, ಖಾಯಂ ಮಾಡಬೇಕೆಂದೂ, ಒಂದು ವೇಳೆ ವಜಾ ಮಾಡಬೇಕಾಗಿ ಬರುವ ಪಕ್ಷದಲ್ಲಿ ಹರಾಜಿನಲ್ಲಿ ಪಡೆದಿದ್ದವನಿಗೆ ಅವನ ಹಣಕ್ಕೆ ನ್ಯಾಯವಾದ ಬಡ್ಡಿಯನ್ನು ಕೊಡಿಸಬೇಕೆಂದೂ ಕಳೆದ ತಿಂಗಳಲ್ಲಿ ಹೊಸದಾಗಿ ರೂಲಿಸು ಮಾಡಿರುತ್ತೇವೆ. ಇದರಿಂದ ತುಂಬಾ ಅನುಕೂಲವಾಗುವುದು.

ಪ್ರಾರ್ಥನೆ—ಇನಾಂ ಗ್ರಾಮಗಳಲ್ಲಿ ಜೋಡಿ ಪಾವತಿಮಾಡದೆ ಇರುವ ವೃತ್ತಿವಂತರ ಜಮೀನ್ ಜಪ್ತಿ ಹರಾಜಿಗೆ ಬಾರದೆ ಒಟ್ಟು ಗ್ರಾಮವನ್ನೇ ಹರಾಜುಮಾಡುತ್ತಾರೆ ಜೋಡಿ ಕೊಟ್ಟವರೇ ಪುನಹಾ ಕೊಟ್ಟು ಬಿಡಿಸಿಕೊಳ್ಳಬೇಕಾಗಿದೆ ಇದನ್ನು ತಪ್ಪಿಸಿಕೊಡಬೇಕು.

ದಿವಾನರವರು—ಕಾಲ್ಲೂಕಿನಲ್ಲಿ ವೃತ್ತಿವಂತರ ಹೆಸರು ನಿಕೆ ಚಿಕ್ಕ ದಾಖಲ ಇದ್ದರೆ ಯಾರಿಂದ ಪಾವತಿ ಆಗಲಿಲ್ಲವೋ ಅಂಥವರ ಜಮೀನ್ ಜಪ್ತಿ ಹರಾಜಿಗೆ ಬರಬೇಕೆಂದು ರೂಲುಮಾಡಿದೆ ಹಾಗೆ ಲೆಕ್ಕ ಸರಿಯಾಗಿಲ್ಲದಿದ್ದರೆ ವೃತ್ತಿವಂತರು ಡೆಪ್ಟಿ ಕಮಿಷನರಿಗೆ ಅರ್ಜಿ ಕೊಟ್ಟಲ್ಲಿ ಅವರು ಕ್ರಮಪಡಿಸುತ್ತಾರೆ,

ಪ್ರಾರ್ಥನೆ—ಬಂಡೆಗಳಿಂದ ಕಲ್ಲು ಒಡೆದು ತಂದು ವಿಕ್ರಯಿಸಿ ಜೀವಿಸುವ ಒಡ್ಡರಿಗೆ ರುಸುಂ ವಿಧಿಸುವುದು ಬಹಳ ತೊಂದರೆ ಅವರು ಪಟೇಲ್ ಶ್ಯಾನುಭೋಗರನ್ನು ಅವರ ಸಮಯ ಕಾದು ಕರೆದುಕೊಂಡು ಹೋಗಿ, ಅವರಿಂದ ಅಳತೆ ಮಾಡಿಸಿ ರುಸುಂ ಪಾವತಿ ಮಾಡಬೇಕಾಗಿದೆ ಈ ತೊಂದರೆಯನ್ನು ತಪ್ಪಿಸಿ, ಅಂಥಾ ಕಲ್ಲೊಡ್ಡರಿಗೆ ಲೈಸನ್ಸು ಕೊಡುವಂತೆಯೋ ಇಲ್ಲವೇ ಅವರಿಂದ ಕಂದಾಯ ವರುಷೇ ವರುಷ ವಸೂಲ್ಮಾಡಿಕೊಳ್ಳುವಂತೆಯೋ ಏರ್ಪಾಡು ಮಾಡಿಕೊಡಬೇಕು.

ದಿವಾನರವರು—ಇದು ತುಂಬಾ ಅನುಕೂಲವಾದ ಏರ್ಪಾಡು ಗವರ್ನಮೆಂಟಿನವರು ಈ ವಿಷಯದಲ್ಲಿ ಆಲೋಚನೆಮಾಡಿ ಕೂಡಲೆ ಹುಕುಂ ಕೊಡುತ್ತಾರೆ.

ಪ್ರಾರ್ಥನೆ—ಕಾಫಿ ತೋಟಕ್ಕೆ ದರಖಾಸ್ತು ಮಾಡಿದರೆ ೧೫ ಎಕರೆಗಿಂತ ಕಮ್ಮಿ ಕೊಡುವುದಿಲ್ಲ. ಬಡರೈತರಿಗೆ ಅಷ್ಟು ಜಮೀನ್ ಮಾಡುವುದಕ್ಕೆ ಚೈತನ್ಯ ಸಾಲದು. ಮೊದಲು ೫ ಎಕರೆ ಕೊಡಬಹುದೆಂದು ವಿಧಿ ಇತ್ತು. ಕಂದಾಯದ ದರವನ್ನೂ ಎಕರೆಗೆ ೧೦ ರೂಪಾಯಿಂದ ೫ ರೂಪಾಯಿಗೆ ಇಳಿಸಿಕೊಡಬೇಕು

ದಿವಾನರವರು—ಈ ವಿಚಾರವನ್ನು ಹೋದ ವರುಷವಾನೇ ತೀರ್ಮಾನ ಮಾಡಿ, ೧೫ ಎಕರೆಗೆ ಕಮ್ಮಿ ಕೊಡಕೂಡದೆಂತಲೂ, ಒಂದು ತಾಕಿನಲ್ಲಿ ಅಷ್ಟು ಜಮೀನ್ ಸಿಕ್ಕದಿದ್ದರೆ ಸಿಕ್ಕಿದಷ್ಟು ಮಾತ್ರ ಕೊಡಬಹುದೆಂತಲೂ ತೀರ್ಮಾನ ಮಾಡಿದೆ. ಇಷ್ಟು ಬೇಗ ಅದನ್ನು ಬದಲಾಯಿಸುವ ಅವಶ್ಯ ಕಾಣುವುದಿಲ್ಲ. ಆದರೂ ಇನ್ನೆರಡು ಮೂರು ತಿಂಗಳಲ್ಲಿ ನಾವು ಮಲ್ನಾಡಿನ ಕಡೆ ಸರ್ಕೀಟು ಬರುತ್ತೇವೆ ಆಗ್ಗೆ ನೋಡಿ ಈ ವಿಷಯವನ್ನು ಅಲ್ಲೇ ವ್ಯವಸ್ಥೆಮಾಡುವೆವು.

ಪ್ರಾರ್ಥನೆ—ಮಣ್ಣು ಬಾಂದುಗಳನ್ನು ಆಗಾಗ್ಗೆ ದುರಸ್ತು ಮಾಡುವ ತೊಂದರೆ ರೈತರಿಗೆ ಬಹಳವಾಗಿದೆ. ಅದಕ್ಕೆ ಬದಲಾಗಿ ಕಲ್ಲು ಬಾಂದು ಹಾಕಿಕೊಳ್ಳುವುದಕ್ಕೆ ಹುಕುಂ ಆಗಬೇಕು.

ದಿವಾನರವರು—ಕಲ್ಲು ಬಾಂದು ಕಟ್ಟಿಹೋಗದೆ ಇದಿದ್ದ ಸಂಗತಿ ನನ್ನವೇ ತಿಳಿಯುವುದಿಲ್ಲ ಮಣ್ಣು ಬಾಂದು ಕಟ್ಟಿಹೋದರೂ ಅದು ಗುರ್ತಾದರೂ ಸಿಕ್ಕುತ್ತೆ ಆದದ್ದರಿಂದ ಕಲ್ಲುಬಾಂದು ಹಾಕುವುದು ಅನುಕೂಲವಲ್ಲ ಆದಾಗ್ಯೂ ಒಂದು ಗ್ರಾಮದವರು ಒಗ್ಗಟ್ಟಾಗಿ ಕಲ್ಲು ಬಾಂದನ್ನೇ ಹಾಕಿಕೊಳ್ಳುತ್ತೇವೆಂದು ಅರ್ಜಿ ಕೊಟ್ಟರೆ ಹಾಗೆ ಮಾಡಬಹುದೆಂದು ರೂಲಿಸು ಇದ್ದೇ ಇದೆ

ಪ್ರಾರ್ಥನೆ—ಕೋಂಡಿ ಇಳಿಸುವುದಕ್ಕಾಗದಂಥಾ ಸಣ್ಣ ಸಣ್ಣ ಕಲು ಗಿಡವಿದ್ದರೂ ಒಟ್ಟು ತಾಕನ್ನೇ ವ್ಯವಸಾಯಕ್ಕೆ ಕೊಡದೆ ರಿಸರ್ವ್ ಮಾಡುತ್ತಾರೆ ಗಿಡವಿರುವ ಸ್ವಲ್ಪ ಭಾಗವನ್ನು ಉಳಿಸಿಕೊಂಡು ಉಳಿದ ಭಾಗವನ್ನಾದರೂ ಕಂದಾಯಕ್ಕೆ ಕೊಡಿಸಬೇಕು.

ದಿವಾನರವರು—ಸರ್ಕಾರಕ್ಕೆ ನಷ್ಟವಾಗದ ರೀತಿಯಲ್ಲಿ ಅಂಥ ಜಮೀನ್ ವಿಂಗಡಿಸಿ ವ್ಯವಸಾಯಕ್ಕೆ ಕೊಡುವಂತೆ ಎಕ್ಸೈಸ್ ಮತ್ತು ರೆವಿನ್ಯೂ ಕಮಿಷನರುಗಳಿಗೆ ತಿಳಿಸುತ್ತೇವೆ

ಪ್ರಾರ್ಥನೆ—ಜಮೀನ್ ಬೇಕೆಂದು ದರಖಾಸ್ತು ಕೊಟ್ಟರೆ ಎಲ್ಲಾ ದರಖಾಸ್ತುಗಳನ್ನೂ ಜೂನ್ ಜುಲೈ ತಿಂಗಳ ತನಕ ಕೂಡಿಸಿಟ್ಟುಕೊಂಡು ಒಂದೇ ಸಲ ಇತ್ಯರ್ಥ ಮಾಡುತ್ತಾರೆ. ಇದರಿಂದ ಏಪ್ರೀಲ್ ಮೇ ತಿಂಗಳ ಫಸಲ್ ಇಡುವುದಕ್ಕೆ ಅವಕಾಶವಿಲ್ಲ.

ದಿವಾನರವರು—ಹಾಗೆ ದರಖಾಸ್ತುಗಳನ್ನು ಕೂಡಿಸಿಟ್ಟುಕೊಳ್ಳಬೇಕೆಂದೂ ಎಲ್ಲಾ ಒಂದೇ ಸಲ ಫೈಸಲ್ ಮಾಡಬೇಕೆಂದೂ ರೂಲು ಮಾಡಿಲ್ಲ ಹಾಗೆ ಮಾಡುವುದು ತಪ್ಪು. ಆಯಾ ದರಖಾಸ್ತು ಬಂದ ಒಡನೆಯೇ ಅದನ್ನು ವ್ಯವಸ್ಥೆಮಾಡದಿದ್ದರೆ ಡೆಪ್ಟಿ ಕಮಿಷನರಿಗೂ ರೆವಿನ್ಯೂ ಕಮಿಷನರವರಿಗೂ ತಿಳಿಸಿ. ಅವರು ಕೂಡಲೇ ಆ ಪದ್ಧತಿಯನ್ನು ತಪ್ಪಿಸುತ್ತಾರೆ

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದೀವಾನರವರು ಮಾಡಿದ ಉಪನ್ಯಾಸ.

[ಕಳೆದ ವಾರದ ಶೇಷ]

ಕಾನೂನುಗಳ ಏರ್ಪಾಡುಗಳು.

ಮೈಸೂರಿನಲ್ಲಿ ಸಿಡುಬು ಹಾಕಿಕೊಳ್ಳುವದನ್ನು ಬಲಾತ್ಕಾರಪಡಿಸುವದಕ್ಕಾಗಿ ಏರ್ಪಡಿಸಿದ ರೆಗ್ಯುಲೇಷನ್ ಅಲ್ಲದೆ ಮಿಲಿಟರಿ ರೆಗ್ಯುಲೇಷನ್, ಸರಕಿನ ಗುರುತುಗಳ ರೆಗ್ಯುಲೇಷನ್ ಲ್ಯಾಂಡು ರೆವಿನ್ಯೂ ಕೋಡು ಇವುಗಳನ್ನು ತಿದ್ದುಪಾಟುಮಾಡುವ ರೆಗ್ಯುಲೇಷನ್‌ಗಳು ಗತವರ್ಷದಲ್ಲಿ ಮಂಜೂರ್ಮಾಡಲ್ಪಟ್ಟವು. ಸಾಲ್ ಮುಡಕೂರು ಗುತ್ತಿಗೆದಾರರ ಎಕ್ಸೈಸು ರೆಗ್ಯುಲೇಷನನ್ನೂ ಸಿವಿಲ್ ಪ್ರೊಸೀಡ್ಯೂರ್ ಕೋಡ್ ರೆಗ್ಯುಲೇಷನನ್ನೂ ತಿದ್ದುಪಾಟು ಮಾಡುವ ರೆಗ್ಯುಲೇಷನ್‌ಗಳು, ಟ್ರಾಮ್‌ಗಳ ರೆಗ್ಯುಲೇಷನ್, ಗಣಿಗಳ ರೆಗ್ಯುಲೇಷನ್, ನಾವು ಮೊದಲೇ ಸೂಚಿಸಿದ ಲ್ಯಾಂಡ್ ರೆವಿನ್ಯೂ ಕೋಡನ್ನೂ ಇನ್ನೂ ತಿದ್ದುಪಾಟುಮಾಡುವ ರೆಗ್ಯುಲೇಷನ್—ಇವು ಮಂಜೂರ್ಮಾಡಲ್ಪಟ್ಟವು. ಗತವರ್ಷದಲ್ಲಿ ಕೋಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರೆಗ್ಯುಲೇಷನ್ ಮೇರೆ ಮಾಡಿದ ನಿಬಂಧನೆಗಳು ಏರ್ಪಡಿಸಲ್ಪಟ್ಟವು. ಮ್ಯುನಿಸಿಪಾಲಿಟಿಗಳ ರೆಗ್ಯುಲೇಷನ್ ಮೇರೆ ಮಾಡಿದ ಹೊಸ ನಿಬಂಧನೆಗಳು ಕೂಡ ಪ್ರಕಟಿಸಲ್ಪಟ್ಟವು. ಇವುಗಳಿಗೆ ಅನುಸಾರವಾಗಿ ಇತರ ವಿಷಯಗಳ ಜೊತೆಗೆ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರುಗಳು ಅಗ್ರಾಸನಾಧಿಪತಿಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದಕ್ಕಾಗಿ ಲೈಸೆನ್ಸುಗಳನ್ನು ಪಡೆಯುವದರಿಂದ ವಿನಾಯಿಸಲ್ಪಟ್ಟಿರುತ್ತಾರೆ.

ಜುಡಿಷಲ್.

ಗತವರ್ಷದಲ್ಲಿ ಕೋರ್ಟುಗಳ ಅಧಿಕಾರದಲ್ಲಿ ಬೇರೆ ಬೇರೆ ಬದಲಾವಣೆಗಳು ಆದವು. ಹಿಂದಿನ ವರ್ಷ ೧೮,೨೫೬ ಮೊಕದ್ದಮೆಗಳು ದಾಖಲಾಗಿ ಇದ್ದದ್ದಕ್ಕೆ ಪ್ರತಿಯಾಗಿ ಗತವರ್ಷದ ೧೯,೬೦೮ ಒರಿಜಿನಲ್, ಕ್ರಮವಾದ, ಮತ್ತು ಸ್ಮಾಲ್ ಕಾಜ್ ಮೊಕದ್ದಮೆಗಳು ದಾಖಲಾದ್ದರಿಂದ ಸಿವಿಲ್ ವ್ಯಾಜ್ಯವು ಕೊಂಚ ಹೆಚ್ಚಿತು ೧೯೦೬—೦೬ ರಲ್ಲಿ ೧೮,೬೩೬ ಮೊಕದ್ದಮೆಗಳು ಫೈಸಲ್ ಆದ್ದಕ್ಕೆ ಪ್ರತಿಯಾಗಿ, ಗತವರ್ಷ ೧೮,೬೦೬ ಮೊಕದ್ದಮೆಗಳು ಫೈಸಲ್ ಆದವು, ಒಟ್ಟು ೧,೧೯೯ ಕ್ರಮವಾದ ಮತ್ತು ಎರಡನೆಯ ಅಪೀಲುಗಳು ದಾಖಲ್ಮಾಡಲ್ಪಟ್ಟವು ಮತ್ತು ಹಿಂದಿನ ವರ್ಷ ೧,೩೧೧ ಅಪೀಲ್ ಮೊಕದ್ದಮೆಗಳು ಫೈಸಲಾದದ್ದಕ್ಕೆ ಪ್ರತಿಯಾಗಿ ಗತವರ್ಷ ೧,೧೨೬ ಮೊಕದ್ದಮೆಗಳು ಫೈಸಲಾದವು

ಪೊಲೀಸು.

ವರಿಗೆ ರಿಪೋರ್ಟಾದ ತಪ್ಪಿತಗಳು ಶೇಕಡಾ ೬೦ರಷ್ಟು ಯುವ ತಪ್ಪಿತಗಳು ಶೇಕಡಾ ೫೦ರಷ್ಟು ಹೆಚ್ಚಿದವು. ಗತ ಪೊಲೀಸು ಇನ್ಸ್ಪೆಕ್ಟರುಗಳು, ಜಮೇದಾರರೂ, ದಫೇದಾರ್ ದರ್ಜೆಗಳು ತಿದ್ದುಪಾಟು ಮಾಡಲ್ಪಟ್ಟವು. ೧೯೦೬ ಅಖೈರಿನಲ್ಲಿ ಕ್ರಮವಾದ ಪೋಲೀಸು ಫೌಜಿನಲ್ಲಿ ೪೪೪ ೫,೧೧೬ ಜವಾನರೂ ಇದ್ದದ್ದರಿಂದ ಹಿಂದಿನ ವರ್ಷಕ್ಕಿಂತ ೪ ಆಫೀಸರುಗಳೂ ೪ ಜವಾನರೂ ಕಡಿಮೆಯಾ ಮೊಗ್ಗ ಡಿಸ್ಟ್ರಿಕ್ಟಿಗೆ ತಾತ್ಕಾಲಿಕವಾಗಿ ಜಾರಿಗೆ ತಂದ ಇರ್ ಸೆಂಟರ್ ಸ್ಕೀಂ ಎಂಬ ಏರ್ಪಾಡಿಗೆ ಸಂಬಂಧಪಟ್ಟ ಶಿವ ಸ್ಟ್ರಿಕ್ಟಿನ ಪೋಲೀಸು ಫೌಜನ್ನು ಪುನಃ ಜಂಟಿಗೆಮಾಡಿ ಅಲ್ಲ ಮೇಲ್ಪಂಕ್ತಿ ಕಡಿಮೆಗೆ ಕಾರಣವಾಯಿತು. ಈ ಏರ್ಪಾಡಿನ ಲಕ್ಷಣವೇನಂದನೆ, ಪೊಲೀಸಿನವರಿಗೆ ರಿಪೋರ್ಟಾದ ವರೆಗೂ ಒಬ್ಬ ಜಮೇದಾರನಿಗೆ ಕನಿಷ್ಠ ದರ್ಜೆಯಲ್ಲಿ ೨೦ ರೂಪಾಯಿಗೆ ಕನಿಷ್ಠ ಸಂಬಳವುಳ್ಳ ಆಫೀಸರಿಂದ ವಿಚಾ ರಣೆಯಾಗಕ್ಕದ್ದಿಲ್ಲ.

ರಿಜಿಸ್ಟ್ರೇಷನ್

ಕಡಿಮೆಯಾದ್ದರಿಂದಲೂ ತತ್ಫಲರೂಪವಾಗಿ ವ್ಯಾಪಾರವು ರಿಜಿಸ್ಟ್ರೇಷನ್‌ಗಳ ಒಟ್ಟು ಸಂಖ್ಯೆಯು ೫೯,೯೪೯ ಕ್ಕೆ ಏರಿತು ಮತ್ತು ಆ ಇಲಾಖೆಯ ಹುಟ್ಟುವಳಿಯು ರೂಪಾಯಿಂದ ೧,೫೪,೩೧೭ ರೂಪಾಯಿಗೆ ಜಾಸ್ತಿ ತು. ಖರ್ಚು ೪೩,೯೦೦ ರೂಪಾಯಿ ಅಂದರೆ ಒಟ್ಟು ಹುಟ್ಟು ಶೇಕಡಾ ೨೮ರಷ್ಟು ಆದ್ದರಿಂದ ೩೦,೪೦೪ ರೂಪಾಯಿ ಉಳಿಯಿತು

ಅಬ್ಕಾರಿ

ಇಲಾಖೆಯಲ್ಲಿ ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿ ಎಕ್ಸೈಸು ಅಸಿಸ್ಟೆಂಟ್ ಕಮಿಷನರುಗಳ ಕೈಕೆಳಗೆ ಪ್ರತ್ಯೇ ಸು ಡಿವಿಜನ್‌ಗಳಾಗಿ ಮಾಡಿದ್ದರಿಂದ ಈಗ ಪ್ರತಿ ಡಿಸ್ಟ್ರಿ ಎಕ್ಸೈಸು ಅಸಿಸ್ಟೆಂಟ್ ಕಮಿಷನರು ಇರುತ್ತಾರೆ. ತೆಯಿಲ್ಲದ ಮಾರಾಟಕ್ಕೆ ನಿರ್ಬಂಧವನ್ನು ಮಾಡುವ ಅ ಬಂದು ಬಂದದ್ದರಿಂದ ಈ ಪದಾರ್ಥವನ್ನು ಎಕ್ಸೈಸು ನಿಯಮಗಳಿಗೆ ಒಳಪಡಿಸಿತು ಮತ್ತು ಅದನ್ನು ಸ್ವಾ ಕೊಳ್ಳೋಣವೂ ಅದರ ಮಾರಾಟವೂ ಈಗ ಲೈಸೆನ್ಸುಗ ಳಿಂದ ಕ್ರಮಪಡಿಸಲ್ಪಟ್ಟಿದೆ. ಗತವರ್ಷದಲ್ಲಿ ೧೭ ಅಂಗಡಿಗಳೂ ೧೯೩೩ ಶೇಂದಿ ಅಂಗಡಿಗಳೂ ಮುಚ್ಚಲ್ಪ ವರ್ಷ ಇದ್ದದ್ದಕ್ಕಿಂತ ಶೇಂದಿ ಹುಟ್ಟುವಳಿಯು ಬೆಳೆ ಆದರೆ ಸಾರಾಯಿದ ಹುಟ್ಟುವಳಿಯು ಕಂಡ ಹಾಗೆ ಕಡಿ ಅನ್ಯದೇಶದ ಮದ್ಯವನ್ನು ಮಾರುವದಕ್ಕೆ ಲೈಸೆನ್ಸು ಅಂಗಡಿಗಳ ಸಂಖ್ಯೆಯೂ ಕಳೆದ ೬೪ ರಿಂದ ೫೬ಕ್ಕೆ

ಪ್ರಾಚೀನ ಲೇಖನಾನ್ವೇಷಣ ಇಲಾಖೆ

ಪಿಗ್ರಾಫಿಯಾ ಕರ್ನಾಟಿಕಾ' ಎಂಬ ಶಾಸನದ ಪುಸ್ತಕಗಳನ್ನ ಈ ಸಂಸ್ಥಾನದಲ್ಲಿರುವ ಎಲ್ಲಾ ಮುಖ್ಯವಾದ ಶಾಸನಗಳ ಕಟಿಸಲಾಯಿತು. ಈ ಇಲಾಖೆಯ ಡೈರೆಕ್ಟರಾಗಿದ್ದ ಮಿ॥ ರೈಸಿ ಸಿ ಐ. ಇ. ಯವರು ಸಂಸ್ಥಾನದಲ್ಲಿ ೩೫ ವರ್ಷಗ ಕಾಲ ಅಧಿಕಾರ ಮಾಡಿ ಗತವರ್ಷದ ಅಂತ್ಯದಲ್ಲಿ ಕೆಲಸ ಬಿಟ್ಟಿದರು.

ವಿದ್ಯಾಭ್ಯಾಸ.

ನದಲ್ಲಿರುವ ವಿದ್ಯಾಶಾಲೆಗಳ ಸಂಖ್ಯೆಯು ೧೯೦೪–೦೫ ೩,೪೭೪ ಇದ್ದದ್ದು ೧೯೦೫–೦೬ರ ಅಖೈರಿನಲ್ಲಿ ಹೆಚ್ಚಿತು ಸ್ಕೂಲಿಗೆ ಹೋಗುತ್ತಿದ್ದ ಹುಡುಗರ ಸಂಖ್ಯೆಯು ರಿಂದ ೧,೬೩,೦೫೭ಕ್ಕೆ ಹೆಚ್ಚಿತು. ಈ ಸಭೆಯ ಕೆಲವು ಕೋರಿಕೆಯಂತೆ ಇಂಗ್ಲೀಷ್ ಭಾಷೆಯಲ್ಲಿ ಲೋವರ್ ಪರೀಕ್ಷೆಗೆ ಮನೆಯಲ್ಲಿ ಓದಿಕೊಂಡು ಹೋಗುವ ವಿದ್ಯಾರ್ಥಿ ೧೦ ರೂಪಾಯಿಂದ ೩ ರೂಪಾಯಿಗೆ ಇಳಿಸಿತು. ನಾ ಹೊಲೆಯರು, ಕೊರಚರು ಮೊದಲಾದ ಕೀಳುಜಾತಿಗೆ ಸೇರಿ ಗಳು ತಾಲ್ಲೂಕು ವರ್ನಾಕ್ಯುಲರ್ ಸ್ಕೂಲುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಹೋಬಳಿ ಸ್ಕೂಲುಗಳಲ್ಲಿಯೂ ಸ್ಕೂ ವನ್ನು ಕೊಡುವದರಿಂದ ಪಾಯವಾಗಿ ವಿನಾಯಿಸಲ್ಪಟ್ಟ ರ್ಥಶಾಸ್ತ್ರೀಯ ವಿಚಾರಕ್ಕಾಗಿಯೂ ಕಸಬುದಾರಿ ವಿ ಕ್ಕಾಗಿಯೂ ದಾಮೋದರ ದಾಸ್ ಧರ್ಮದ ವಿದ್ಯಾರ್ಥಿವೇತ ಕೊಡುವದಕ್ಕೆ ನಿಬಂಧನೆಗಳನ್ನು ಮಂಜೂರ್ಮಾಡಿತು. ಈ ವೇತನಗಳನ್ನು ೧೯೦೭ ನೆಯ ಜನವರಿಯಿಂದ ಕೊಡಲಾಗು ಸ್ತ್ರೀ ವಿದ್ಯಾಭ್ಯಾಸವು ವೃದ್ಧಿಯಾಗುತ್ತಲೇ ಇತ್ತು. ಕಳೆದ ಪ್ರಿ ಪರೀಕ್ಷೆಯಲ್ಲಿ ಮಹಾರಾಣಿಯವರ ಕಾಲೇಜಿನಿಂದ ಇ ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದನ್ನು ಕೇಳಿ ನೀವೆಲ್ಲರೂ ಸಂತೋಷಪಡುವಿರಿ. ಮಿ॥ ಭಾಭಾಭಾಯಿಯವರು ಫರ್ಲೋ ರಜಾದ ಮೇಲೆ ಗೆ ಹೋಗಿರುವದರಿಂದ ಮೈಸೂರು ಸರ್ಕಾರದವರು ಈ ಹೇ ಉಪಯೋಗಿಸಿಕೊಂಡು ಯೂರೋಪು ಮತ್ತು ಅಮೆ ಗಳಲ್ಲಿ ಹಸ್ತಕೌಶಲ ಶಿಕ್ಷಣವೆಂದು ಪ್ರಸಿದ್ಧವಾಗಿರುವ ಶಿಕ್ಷಣ ನ್ನು ಈ ದೇಶದ ಉಪಯೋಗಕ್ಕಾಗಿ ಚೆನ್ನಾಗಿ ತಿಳಿದುಕೊಂಡು ಏರ್ಪಡಿಸಿದ್ದಾರೆ

ಶಿಲ್ಪವೇ ಮೊದಲಾದ ವಿದ್ಯಾಭ್ಯಾಸ.

ಲ್ಪದ ಮತ್ತು ಕೈಗಾರಿಕೆಯ ವಿದ್ಯಾಭ್ಯಾಸವು ಗತವರ್ಷದಲ್ಲಿ ಹಿಂದಿಗಿಂತ ಚೆನ್ನಾಗಿ ಅಭಿವೃದ್ಧಿಯಾಯಿತು. ಮೈಸೂರಿನಲ್ಲಿ ಗಾರಿಕೆ ಮತ್ತು ಇಂಜನೀರಿಂಗ್ ಸ್ಕೂಲುಗಳಿಗೂ ಮತ್ತು ಸಂ ಸ್ವಲ್ಪಮಟ್ಟಿಗೆ ಗವರ್ನಮೆಂಟಿನವರಾಗಿರುವ ಆರು ಕೈಗಾರಿ ನಾಯಿಗೆಯ ಪಾಠಶಾಲೆಗಳಿಗೂ ಖರ್ಚುಬಗ್ಗೆ ಹೆಚ್ಚು ಹಣ ಮಂಜೂರ್ಮಾಡಲಾಯಿತು. ಬಾಗೇಪಲ್ಲಿಯಲ್ಲಿಯೂ ಶ್ರೀನಿವಾ ಪುರದಲ್ಲಿಯೂ ಇಟ್ಟಿರುವ ಸಾಹುಕಾರಿ ಕೈಗಾರಿಕೆ ಪಾಠಶಾಲೆಗಳಿಗೆ ತಿಂಗಳಿಗಷ್ಟಲೆ ಗ್ರಾಂಟನ್ನು ಮಂಜೂರ್ಮಾಡಲಾಯಿತು. ಲ್ಲಿ ಮೆಸ್ಲಿಯರ್ ವಿಷಯದಿಂದ ಒಂದು ಹೊಸ ವ್ಯಾಪಾರ ವಿದ್ಯಾ ಇಡಲ್ಪಟ್ಟಿತು. ಆ ಸ್ಕೂಲಿಗೆ ಬೇಕಾದ ಉಪಕರಣಗಳಿಗಾಗಿ ಸರ್ಕಾರದವರು ಒಟ್ಟಾಗಿ ೩,೦೦೦ ರೂಪಾಯನ್ನು ಒಂದೇ ಸಲ ಮಂಜೂರ್ಮಾಡಿದರು. ಮೈಸೂರು ಇಂಜನೀರಿಂಗ್ ಸ್ಕೂಲಿನ ವಿದ್ಯಾರ್ಥಿಗಳನ್ನು ಕಾರ್ಯತಃ ತರಬೇತುಮಾಡುವದಕ್ಕಾಗಿ ಮುಖ್ಯವಾದ ಇಂಜನೀರಿಂಗ್ ಕಾಂಗಾರಿಗಳಿಗೆ ಒಂದೊಂದು ವೇಳೆ ಅವರ ಉಪಾಧ್ಯಾಯರು ಅವರನ್ನು ಕರೆದುಕೊಂಡು ಹೋಗಿ ತೋರಿಸುವಂತೆ ಅಪ್ಪಣೆಮಾಡಿತು. ಬೊಂಬಾಯಿ ಮದರಾಸಿನಲ್ಲಿರುವ ಶಿಲ್ಪದ ಮತ್ತು ಕೈಗಾರಿಕೆಯ ಪಾಠಶಾಲೆಗಳಲ್ಲಿ ತರಬೇತಾಗುವದಕ್ಕೋಸ್ಕರ ಮೈಸೂರು ವಿದ್ಯಾರ್ಥಿಗಳಿಗೆ ೧೪ ವಿದ್ಯಾರ್ಥಿವೇತನಗಳನ್ನು ಕೊಟ್ಟಿತು. ದೊಡ್ಡ ಬಳ್ಳಾಪುರದ ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿನ ವಿದ್ಯಾರ್ಥಿಗಳಿಗೆ ವ್ಯವಸಾಯವನ್ನು ಕಾರ್ಯತಃ ಬೋಧಿಸುವದಕ್ಕಾಗಿ ಆ ಸ್ಕೂಲಿಗೆ ಸಂಬಂಧಪಟ್ಟ ಒಂದು ಸಣ್ಣ ಮಾದರಿ ಹೊಲದ ಕೆಲಸವನ್ನು ಉಪಕ್ರಮಿಸುವದಕ್ಕೋಸ್ಕರ ಸರ್ಕಾರದವರು ಪ್ರತ್ಯೇಕವಾಗಿ ೩೦೦ ರೂಪಾಯನ್ನು ಮಂಜೂರ್ಮಾಡಿದರು ಚಿತ್ರದುರ್ಗದಲ್ಲಿರುವ ಮಹಲ್ ತೋಟವನ್ನೂ ಅದಕ್ಕೆ ಪೂರ್ವದಲ್ಲಿರುವ ಎರಡು ಎಕರೆ ವಿಸ್ತೀರ್ಣವುಳ್ಳ ಜಮೀನನ್ನೂ ಮಾದರಿ ಮತ್ತು ಪರೀಕ್ಷೆಯ ಹೊಲದಂತೆ ಉಪಯೋಗಿಸಬೇಕೆಂಬ ಷರತ್ತಿನ ಮೇಲೆ ಕೈಗಾರಿಕೆ ಪಾಠಶಾಲೆಯ ಸೂಪರಿಂಟೆಂಡೆಂಟಿಗೆ ಗುತ್ತಿಗೆಗೆ ಕೊಡುವಂತೆ ಅಪ್ಪಣೆಕೊಟ್ಟಿತು. ಪ್ರಖ್ಯಾತರಾಗಿದ್ದು ಗತಿಸಿದ ಲೋಕಹಿತೈಷಿ ಮಿ॥ ಕಾತಾಯಾವರಿಂದ ಬೆಂಗಳೂರಲ್ಲಿ ಏರ್ಪಡಿಸಲ್ಪಟ್ಟ ಪರೀಕ್ಷೆ ರೇಷ್ಮೆ ತೋಟವನ್ನು ಯಾವ ಉತ್ಕೃಷ್ಟವಾದ ರೀತಿಯಲ್ಲಿ ಉಪಯೋಗಿಸಿಕೊಂಡು ಸ್ಥಳೀಯ ರೇಷ್ಮೆಯ ಸಾಗುವಳಿಯ ವಿಧಾನಗಳನ್ನು ಅಭಿವೃದ್ಧಿಪಡಿಸಬೇಕೆಂಬ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಮೊದಲು, ಅದನ್ನು ಸರ್ಕಾರಕ್ಕೆ ತೆಗೆದುಕೊಂಡು ಸಂಪೂರ್ಣವಾಗಿ ಸರ್ಕಾರದ ಆಡಳಿತದಲ್ಲಿ ಇಟ್ಟು ನಡೆಸಬೇಕೆಂಬ ಅಭಿಪ್ರಾಯವಿತ್ತು. ಆದರೆ ತಿರಿಗಿ ಯೋಚಿಸಿದ್ದರಲ್ಲಿ ಸದರಿ ತೋಟವನ್ನು ಈಗಿರುವ ಜನಗಳ ಕೈಕೆಳಗೆ ಇದೇ ಕ್ರಮದಲ್ಲಿ ನಡೆಸುವದು ಉತ್ತಮವೆಂದು ತೋರಿ ಬಂದದ್ದರಿಂದಲೂ ಅದರ ವಹಿವಾಟುದಾರರ ಮೇಲೆ ಹೆಚ್ಚು ಭಾರವನ್ನು ಹಾಕದೆ ರೇಷ್ಮೆಯ ಸಾಗುವಳಿಯಲ್ಲಿ ಆಸಕ್ತಿಯುಳ್ಳ ಜನಗಳಿಗೆ ಅದನ್ನು ಒಂದು ತರಬೇತಾಗತಕ್ಕ ಸ್ಥಳವಾಗಿ ಏರ್ಪಡಿಸಬೇಕೆಂದು ತೋರಿದ್ದರಿಂದಲೂ ಅದಕ್ಕೆ ಸಾಲಿಯಾನಾ ೩,೦೦೦ ರೂಪಾಯಿ ಕೊಡುವಂತೆ ಮಂಜೂರ್ಮಾಡಿತು

ಮುಜರಾಯಿ.

೬೩ ಮುಜರಾಯಿ ಸತ್ರ ದೇವಾಲಯಗಳಿಗೆ ೪೦,೦೦೦ ರೂಪಾಯಿ ಮುಟ್ಟಿಸಿ ದುರಸ್ತು ಮಾಡುವಂತೆ ಅಪ್ಪಣೆಕೊಟ್ಟಿತು ಈ ಮೊಕ್ತ ೧೯,೦೦೦ ರೂಪಾಯನ್ನು ಸಂಸ್ಥಾನದ ಹಣದಿಂದ ಕೊಟ್ಟರು ೭ ಆಲಯಗಳ ಪೋಷಣೆ ಬಗ್ಗೆ ಸಾಲೀಯಾನಾ ನಗದು ಗ್ರಾಂಟುಗಳನ್ನು ಮಂಜೂರ್ಮಾಡಿತು ಇತರ ನಾಲ್ಕು ಆಲಯಗಳ ಗ್ರಾಂಟುಗಳನ್ನು ಸಾಲೀಯಾನಾ ಒಟ್ಟು ೧,೯೬೭ ರೂಪಾಯಿ ಮುಟ್ಟುವಂತೆ ಹೆಚ್ಚಿಸಿತು. ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿನ ತಿರುಪತಿಯಲ್ಲಿ ಇರುವ ಶ್ರೀಮನ್ ಮಹಾರಾಜರವರ ಸತ್ರದಲ್ಲಿ ಕೆಲವು ಉತ್ಸವ ಕಾಲಗಳಲ್ಲಿ ಯಾತ್ರಿಕರಿಗೆ ಅನ್ನ ಸಂತರ್ಪಣೆ ಮಾಡಿಸುವದಕ್ಕೂ ದಸರಾ ಉತ್ಸವ ಕಾಲದಲ್ಲಿ ಮೈಸೂರಿನಲ್ಲಿ ಇರುವ ಶ್ರೀಮನ್ ಮಹಾರಾಜರವರ ಸತ್ರದಲ್ಲಿ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಿಸುವದಕ್ಕೂ ಈಗ ಏರ್ಪಡಿಸಿರುವ ಮೊಬಲಗು ಸಾಲದೆಂದು ಕಂಡುಬಂದಿರುವದರಿಂದ ಈ ಮೇಲ್ಕಂಡ ಪ್ರತಿ ಒಂದು ಸತ್ರಕ್ಕೂ ಸಾಲೀಯಾನಾ ೧,೫೦೦ ರೂಪಾಯಿ ಕೆಚ್ಚಾದ ಗ್ರಾಂಟನ್ನು ಮಂಜೂರ್ಮಾಡಿತು ಸತ್ರಗಳಲ್ಲಿ ಸೀದಾ ಕೊಡುವದಕ್ಕೆ ಬದಲಾಗಿ ಪಕ್ವ ಪದಾರ್ಥಗಳನ್ನೇ ಕೊಡುವುದನ್ನು ಪುನಃ ಏರ್ಪಡಿಸಿತು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸತ್ರಗಳಿರುವ ಸ್ಥಳಗಳ ವಿಷಯದಲ್ಲಿ, ರೈಲ್ವೆ ಹಾಕಿದ್ದರಿಂದ ಅವಶ್ಯಕವಾಗಿ ಕಂಡುಬಂದ ಕೆಲವು ಬದಲಾವಣೆಗಳನ್ನು ಮಾಡಿ, ಆ ಸತ್ರಗಳಿಗೆ ಕೊಡುತ್ತಿದ್ದ ಹಣಗಳನ್ನು ಈಗಿನ ಅವಶ್ಯಕತೆಗಳಿಗೆ ಅನುಸಾರವಾಗಿ ತಿದ್ದುಪಾಟು ಮಾಡಿತು. ಶ್ರೀ ಉತ್ತರಾದಿ ಮತ್ತು ಅಹೋಬಿಲ ಮಠಗಳ ಆಸ್ಥಾನಕ್ಕೆ ಬಂದ ಸ್ವಾಮಿಗಳವರ ಆಶ್ರಮ ಸ್ವೀಕಾರವನ್ನು ಸರ್ಕಾರದವರು ಒಪ್ಪಿದರು. ಹೊಸ ಸ್ವಾಮಿಗಳು ಪಟ್ಟಕ್ಕೆ ಬರುವವರೆಗೂ ಸರ್ಕಾರದವರ ಆಡಳಿತದಲ್ಲಿ ಇಟ್ಟುಕೊಂಡಿದ್ದ ಅಹೋಬಿಲ ಮಠದ ಸ್ವತ್ತನ್ನು ಆ ಮಠಕ್ಕೆ ವಾಪಸುಕೊಟ್ಟಿತು.

ಶ್ರೀಮಾನ್ ಪ್ರಿನ್ಸ್ ಆಫ್ ವೇಲ್ಸ್ ಮತ್ತು ಪ್ರಿನ್ಸೆಸ್ ಆಫ್ ವೇಲ್ಸ್‌ರವರ ಆಗಮನ.

ಕಳೆದ ಜನವರಿ ತಿಂಗಳಲ್ಲಿ ನಡೆದ ಮುಖ್ಯತಮವಾದ ವಿಷಯವನ್ನು—ಅಂದರೆ ಶ್ರೀಮಾನ್ ಪ್ರಿನ್ಸ್ ಆಫ್ ವೇಲ್ಸ್‌ರವರು ಸಕುಟುಂಬವಾಗಿ ಇಲ್ಲಿಗೆ ಸವಾರಿ ಚಿತ್ತೈಸಿದ್ದ ವಿಚಾರವನ್ನು—ಇಲ್ಲಿ ಪ್ರಸ್ತಾಪಿಸುವದಕ್ಕಾಗಿ ನಿಲ್ಲಿಸಿದ್ದೇವು ಅವರ ಸತ್ಕಾರಮಹೋತ್ಸವವು ಅಂಥಾ ಘನವಾದ ಸನ್ನಿವೇಶಕ್ಕೆ ಅನುರೂಪವಾಗಿತ್ತು ಆ ಮಹೋತ್ಸವಕ್ಕೆ ಸಂಬಂಧಪಟ್ಟಂತೆ ಏರ್ಪಡಿಸಿದ ಬಂದೋಬಸ್ತು ಕೆಲಸಗಳು ಎಲ್ಲಾ ವಿಧದಲ್ಲಿಯೂ ಸಮರ್ಪಕವಾಗಿದ್ದವೆಂದು ಸರ್ವರೂ ಅನುಮೋದಿಸಿದರು. ಮತ್ತು ಮೈಸೂರು ದೇಶದ ಕೈಗಾರಿಕೆಗಳನ್ನೂ ಸಂಪತ್ತನ್ನೂ ರಾಜದಂಪತಿಗಳು ಪರಾಂಬರಿಸಲು ಅವಕಾಶವಾಗುವಂತೆ ಮೈಸೂರಿನಲ್ಲಿ ಒಂದು ಕೈಗಾರಿಕೆಯ ಮತ್ತು ವ್ಯವಸಾಯದ ಪ್ರದರ್ಶನವನ್ನು ನಡೆಸಲಾಯಿತು. ಆ ಮಹನೀಯರು ಈ ಪ್ರದರ್ಶನಕ್ಕೆ ಇಟ್ಟಿದ್ದ ವಸ್ತುಗಳಲ್ಲಿ ವಿಶೇಷ ಕೌತೂಹಲವನ್ನು ತೋರ್ಪಡಿಸಿದರು. ಮೈಸೂರಿನಲ್ಲಿ ಶ್ರೀಚಾಮರಾಜೇಂದ್ರ ಶಿಲ್ಪವಿದ್ಯಾಲಯದ ಶಿಲಾ ಪ್ರತಿಷ್ಠೆಯ ಕಾಲದಲ್ಲಿ ಆ ಮಹನೀಯರು "ಇಂಡಿಯಾ ದೇಶದ ಜನಗಳಲ್ಲಿ ಮುಖ್ಯಅಂಶವಾಗಿಯೂ ಯೋಗ್ಯವಾಗಿಯೂ ಇರುವ ಒಂದು ಪಂಗಡದವರ ಪುರೋಭಿವೃದ್ಧಿಗೆ ಕಾರಣವಾಗಬಹುದಾದ ಇಂಥಾ ಶುಭಕಾರ್ಯದಲ್ಲಿ ನಾವು ಅನ್ವಯಿಸಿದ್ದರಿಂದ ಸಂತೋಷಿಸುತ್ತೇವೆ" ಎಂಬದಾಗಿ ಅಪ್ಪಣೆ ಕೊಡಿಸಿದ ಸೂಕ್ತಿಗಳು, ಆ ಮಹನೀಯರಿಗೆ ಈ ದೇಶದ ಕೈಗಾರಿಕೆಗಳಲ್ಲಿರುವ ಆಸಕ್ತಿಗೂ ಕೈಗಾರಿಕೆಯವರ ಪುರೋಭಿವೃದ್ಧಿಯಲ್ಲಿ ಅವರಿಗಿರುವ ಆದರಕ್ಕೂ ವಿಶೇಷ ದೃಷ್ಟಾಂತವಾಗಿವೆ ಆ ಮಹನೀಯರು, ನಮ್ಮ ವಿಶ್ವಸಕ್ಕೆ ಪಾತ್ರರಾಗಿಯೂ ಮಹಾ ಕರುಣಾಶಾಲಿಗಳಾಗಿಯೂ ಇದ್ದ ಶ್ರೀ ವಿಕ್ಟೋರಿಯಾ ಚಕ್ರವರ್ತಿನಿಯವರ ಜ್ಞಾಪಕಾರ್ಥವಾಗಿ ಬೆಂಗಳೂರಿನಲ್ಲಿ ಸ್ಥಾಪಿಸಿದ ಶಿಲಾಪ್ರತಿಮೆಯನ್ನೂ ಪ್ರತಿಷ್ಠೆಮಾಡಿದರು ರಾಜದಂಪತಿಗಳ ಆಗಮನ ಮಹೋತ್ಸವದ ವಿಷಯವಾಗಿ ಇಲ್ಲಿ ಇನ್ನೂ ವಿಶೇಷವಾಗಿ ಪ್ರಸ್ತಾಪಿಸುವ ಅವಶ್ಯಕವಿಲ್ಲ. ನಿಮ್ಮಲ್ಲಿ ಅನೇಕರಿಗೆ ರಾಜದಂಪತಿಗಳ ಸಂದರ್ಶನ ಲಾಭವು ಮೈಸೂರಿನಲ್ಲಾಗಲಿ ಬೆಂಗಳೂರಿನಲ್ಲಾಗಲಿ ದೊರಕಿರಬಹುದು. ಆ ಮಹನೀಯರ ಎಲ್ಲಾ ಸೂಕ್ತಿಗಳಿಂದಲೂ ಚರ್ಯೆಗಳಿಂದಲೂ ಪ್ರಕಟಿತವಾದ ಅವರ ದಯಾಶೀಲತೆಯೂ ಯಥಾರ್ಥವಾದ ಅನುಕಂಪನೆಯೂ ಪ್ರಜಾ ಕ್ಷೇಮದಲಿ ಔತ್ಸುಕ್ಯವೂ ಸಾಮ್ರಾಜ್ಯದ ಇತರ ಭಾಗಗಳಲ್ಲಿರುವ ಪ್ರಜೆಗಳ ಮನಸ್ಸನ್ನೂ ಆಕರ್ಷಿಸದೆ ಇದ್ದಿರಲಾರವು.

ಈ ಸಂಸ್ಥಾನಕ್ಕೆ ರಾಜದಂಪತಿಗಳನ್ನು ಬರಮಾಡಿಕೊಳ್ಳುವಾಗ ಅವರನ್ನು ಅಭಿನಂದಿಸುವದರಲ್ಲಿ ಸಂಸ್ಥಾನದ ನಾನಾ ಭಾಗಗಳ ಪ್ರಜೆಗಳು ಅಪ್ರೇರಿತವಾಗಿ ತೋರ್ಪಡಿಸಿದ ಆನಂದವೂ ಭಕ್ತಿಯೂ ಶ್ರೀಮಾನ್ ಮಹಾರಾಜರವರಿಗೆ ನಾಸ್ತವಾದ ಆಹ್ಲಾದಕ್ಕೆ ಕಾರಣವಾಗಿದ್ದವು. ಮೈಸೂರು ಸಂಸ್ಥಾನಕ್ಕೂ ಶ್ರೀಮನ್ ಮಹಾರಾಜರವರ ವಂಶಕ್ಕೂ ಪರಮೋಪಕಾರಕವಾದ ಬ್ರಿಟಿಷ್ ಸಾಮ್ರಾಜ್ಯದ ಯುವರಾಜರನ್ನು ಅಭಿನಂದಿಸಿ ಸತ್ಕರಿಸುವ ಈ ಮಹಾಭಾಗ್ಯವು ತಮ್ಮ ಮನೆತನದವರಲ್ಲಿ ತಮಗೇ ಪ್ರಥಮತಃ ಲಭಿಸಿದ್ದಕ್ಕಾಗಿ ಶ್ರೀಮನ್ ಮಹಾರಾಜರವರು ತಮಗೆ ವಿಶೇಷವಾದ ಗೌರವಾತಿಶಯವುಂಟಾದಂತೆ ಭಾವಿಸುತ್ತಾರೆ.

ವಿ. ಪಿ ಮಾಧವರಾವ್,
ಮೈಸೂರು ಸಂಸ್ಥಾನದ ದಿವಾನರವರು.

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಲಂಡನ್ ಪಟ್ಟಣದಿಂದ ಪಲವಾನ್ ಎಂಬ ಹಡಗು ಒಂದೂವರೆ ಕೋಟಿ ರೂಪಾಯಿನ ಚಿನ್ನ ಬೆಳ್ಳಿ ನಾಣ್ಯಗಳನ್ನು ಕಲ್ಕತ್ತೆಗೆ ಸಾಗಿಸಿಕೊಂಡು ಬಂದಿತು ಇದುವರೆಗೆ ಒಂದೇ ಹಡಗು ಇಷ್ಟು ಹೆಚ್ಚು ಹಣವನ್ನು ತಂದದ್ದಿಲ್ಲ.

****

ನೀಲಗಿರಿ ಬೆಟ್ಟದ ಮೇಲೆ ಹರಿಯುವ ಹೊಳೆಗಳಲ್ಲೂ ಕೆರೆ ಕೊಳಗಳಲ್ಲೂ ಭಾರಿಭಾರೀ ಮೀನುಗಳನ್ನು ತಂದು ಬಿಟ್ಟು ಸಾಕುವುದಕ್ಕೆ ಮದರಾಸ್ ಗವರ್ನಮೆಂಟಿನವರು ತಿಂಗಳಿಗೆ ೫೦೦ ರೂಪಾಯಿ ತಲಬುಳ್ಳ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದಾರೆ.

****

ಕಲ್ಕತ್ತಾ ಪಟ್ಟಣದ ನಾಯಿಕತ್ತಿ ನಾರಿನ ಕಾರ್ಖಾನೆಯ ೩,೫೦೦ ಮಂದಿ ಕೂಲಿಕಾರರು ತಮ್ಮ ಕೂಲಿ ದರವನ್ನು ಹೆಚ್ಚುಮಾಡಿ ಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ನಿಂತುಬಿಟ್ಟರು. ಕಾರ್ಖಾನೆ ಮುಚ್ಚಬೇಕಾಯಿತು ಸಾಹುಕಾರರಿಗೆ ದಿನಕ್ಕೆ ಸಾವಿರಾರು ರೂಪಾಯಿ ನಂತೆ ನಷ್ಟವಾಗುತ್ತಿದೆ.

****

ಬೊಂಬಾಯಿ ಪಟ್ಟಣದ ಫೋರ್ಟ್ ಎಂಬ ಭಾಗದಲ್ಲಿ ಫರ್ಗ್ಯುಸನ್ ರಸ್ತೆಯೊಳಗಿರುವ ಸ್ಟಾರ್ ಆಫ್ ಇಂಡಿಯಾ ಎಂಬ ದೊಡ್ಡ ಕಾರ್ಖಾನೆಗೆ ಬೆಂಕಿಬಿದ್ದು ಎಲ್ಲಾ ಬೂದಿಯಾಯಿತು. ಮಾಲೀಕರಾದ ಮಿ॥ ಅಹಮದ್‌ಭಾಯಿ ಹಬೀಬ್‌ಭಾಯಿ ಯವರಿಗೆ ಮೂರು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ನಷ್ಟವಾಗಿದೆ

****

ಹಿಂದಿನ ವಾರ ಉತ್ತರ ದೇಶದಲ್ಲಿ ಇನ್ನೂ ೧,೦೭,೦೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು ಅಂದರೆ, ಅಹೀ ವಾರದ ಸಂಖ್ಯೆಗಿಂತ ೩೩,೦೦೦ ಜನರು ಕಡಿಮೆ. ಬಂಗಾಳಾ ಆಧಿಪತ್ಯದಲ್ಲಿ ೫೬,೦೦೦ ಜನರೂ ಸಂಯುಕ್ತ ಆಧಿಪತ್ಯಗಳಲ್ಲಿ ೩೩,೧೦೦ ಜನರೂ ರಿಲೀಫ್ ಕಾಮಗಾರಿಗಳನ್ನು ಮಾಡಿ ಹೊಟ್ಟೆ ಹೊರಕೊಳ್ಳುತ್ತಿದ್ದಾರೆ.

****

ಹಿಂದುಸ್ಥಾನದಿಂದ ಇಂಗ್ಲಿಷ್ ಓರದವರ್ಯಾರೂ ಆಸ್ಟ್ರೇಲಿಯಾ ದ್ವೀಪಕ್ಕೆ ಹೋಗಕೂಡದೆಂತಲೂ, ಅಲ್ಲಿ ಹಡಗು ಇಳಿದ ಕೂಡಲೆ ಅಧಿಕಾರಿಗಳು ಬಂದು ೫೦ ಮಾತುಗಳನ್ನು ಪ್ರತಿ ಒಬ್ಬನಿಗೂ ಹೇಳಿ ಬರೆಸುತ್ತಾರೆಂತಲೂ, ಆ ಮಾತುಗಳನ್ನು ಬರೆಯಲಾರದೆ ಹೋದವರನ್ನು ಪಟ್ಟಣದೊಳಕ್ಕೆ ಬಿಡದೆ ವಾಪಸು ಕಳುಹಿಸುತ್ತಾರೆಂತಲೂ ಇಂಡಿಯಾ ಗವರ್ನಮೆಂಟಿನವರು ಇಲ್ಲಿನ ಪ್ರಜೆಗಳಿಗೆಲ್ಲಾ ಎಚ್ಚರಿಕೆ ಹೇಳಬೇಕೆಂದು ಪ್ರಕಟಿಸಿರುತ್ತಾರೆ

****

ಪೂನಾ ಪಟ್ಟಣದಲ್ಲಿ ಈ ಸಲ ಪ್ಲೇಗ್ ಉಪದ್ರವು ಬಹು ಕಠಿಣವಾಗಿತ್ತು ಹಿಂದುಸ್ಥಾನದ ಯಾವ ಪಟ್ಟಣದಲ್ಲೂ ಇದುವರೆಗೆ ಆ ಉಪದ್ರ ಇಷ್ಟು ನಷ್ಟವನ್ನುಂಟುಮಾಡಲಿಲ್ಲವೆಂದು ತಿಳಿಯುವುದು. ಅನೇಕ ದಿನಗಳ ತನಕ ಈ ವರುಷ ದಿನವಹಿ ೬೦೦ ಜನದಂತೆ ಮೃತಪಟ್ಟರು. ಈಗ ಅದು ಕಡಿಮೆಯಾಗಿದ್ದರೂ ಇನ್ನೂ ದಿನಾಲೂ ೪೦–೪೫ ಜನರು ಸಾಯುವುದು ತಪ್ಪಲಿಲ್ಲ. ಬಹು ಜನ ಯೂರೋಪಿಯನ್ನರೂ ಈ ಸಲ ಈ ರೋಗ ತಗಲಿ ಸತ್ತರು. ರೋಗವು ಈಗ ಅಲ್ಲಿನ ದಂಡಿನಲಿ ಹರಡಿಕೊಳ್ಳುತ್ತಿದೆ.

****

ಗುಂಟೂರಿನಲ್ಲಿ ಹೋದ ತಿಂಗಳು ವಾಂತಿಭೇದಿ ಉಪದ್ರ ಜೋರಾಗಿತ್ತು. ಅಲ್ಲಿರುವ ಅಂಕಮ್ಮನ ದೇವಸ್ಥಾನದ ಪೂಜಾರಿಗಳು ಕಾಣಿಕೆ ಕಪ್ಪಗಳ ಮೂಲಕ ದ್ರವ್ಯ ಸಂಪಾದನೆ ಮಾಡಬೇಕೆಂದು ಒಂದು ವಂದಿಯನ್ನು ಆ ದೇವಸ್ಥಾನದ ಹತ್ತಿರ ಹೂಳಿಸಿದರಂತೆ. ಅರು ಜನರಿಗೆ ಗೊತ್ತಾದ ಕೂಡಲೆ ಪೂಜಾರಿಗಳ ಮೋಸಕೃತ್ಯವನ್ನು ಅರಿಯದೆ ಆ ಮಾರಮ್ಮನಿಗೆ ಅಪಾರವಾದ ಆಹುತಿಯನ್ನು ಕೊಟ್ಟು ಕಪ್ಪಕಾಣಿಕೆಗಳನ್ನು ಒಪ್ಪಿಸಿದರು. ಈ ಬಲಿಗೆ ೫೦೦ ಕೋಳಿ, ೬೦೦ ಕುರಿ, ಕೆಲವು ಎಮ್ಮೆಕೋಣ ಮೊದಲಾದ ಪ್ರಾಣಿಗಳು ಸಿಕ್ಕಿ ಮಾರಮ್ಮನಿಗೆ ತೃಪ್ತಿಪಡಿಸಿದವು.

****

ರಂಗೂನ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಆ ಪಟ್ಟಣವನ್ನು ಆರೋಗ್ಯಸೂತ್ರಗಳಿಗನುಸಾರವಾಗಿ ಬಚ್ಚಲು ರಸ್ತೆ ಮುಂತಾದ್ದನ್ನು ಕ್ರಮಪಡಿಸಿ ಕಟ್ಟಿಸುವುದಕ್ಕೋಸ್ಕರ ಬಹು ಸಮರ್ಥನಾದ ಮಿ॥ ಬಾಲ್ಟ್ ಎಂಬ ಇಂಜನಿಯರನ್ನು ತಿಂಗಳಿಗೆ ೩,೦೦೦ ರೂಪಾಯಿ ಸಂಬಳ ಕೊಟ್ಟು ನೇಮಿಸಿಕೊಂಡಿದಾರೆ ಆ ಇಂಜನಿಯರ ಕೆಲಸದ ವಾಯಿದೆ ೧೯೦೭ ನೆ ಮಾರ್ಚ್ ಅಖೈರಿಗೆ ಮುಗಿದುಹೋಗುವುದು. ಅಲ್ಲಿಂದ ಮುಂದಕ್ಕೂ ಇನ್ನೆರಡು ವರುಷಗಳ ತನಕ ಅತನನ್ನೇ ಇನ್ನೂ ೧,೦೦೦ ರೂಪಾಯಿ ತಲಬು ಜಾಸ್ತಿಮಾಡಿ ನೇಮಿಸಿಕೊಳ್ಳಬೇಕೆಂದು ಕಚೇರಿ ನಡೆಯುತ್ತಿದೆ.

ಅಫ್ಘಾನಿಸ್ಥಾನದ ಅಮೀರ್ ಹಬಿಬುಲ್ಲಾಖಾನರವರು ಮುಂದಿನ ಜನವರಿಯಲ್ಲಿ ಹಿಂದುಸ್ಥಾನಕ್ಕೆ ಬಂದು ಎರಡು ತಿಂಗಳ ತನಕ ಉತ್ತರ ದೇಶದಲ್ಲೆಲ್ಲಾ ಸಂಚಾರ ಮಾಡುವರು. ಅವರು ಹೋಗುವ ಪಟ್ಟಣಗಳೂ ತಾರೀಖುಗಳೂ ಯಾವವಂದರೆ—ಲಂಡಿಕೋಟಾಲ್ ಜನವರಿ ೪, ಪಿಷಾವರ್ ೫, ಆಗ್ರಾ (ದೊಡ್ಡ ದರ್ಬಾರು ನಡೆಯುವುದು) ೭ ರಿಂದ ೧೬, ಅಲಿಘಡ ೧೬, ಕಾನ್ಪುರ ೧೭, ಗ್ವಾಲಿಯರ್ ೧೯ ರಿಂದ ೨೦, ಡೆಹಲಿ ೨೧ ರಿಂದ ೨೭, ಸಾಹಿರ್ಹಿಂದ್ ೨೮, ಅಜ್ಮೀರ ೨೯-೩೦, ಷೋಹಾಗ್ಪುರ (ಷಿಕಾರಿ ಕ್ಯಾಂಪು) ಫೆಬ್ರುವರಿ ೧ ರಿಂದ ೬, ಬೊಂಬಾಯಿ ೭ ರಿಂದ ೧೧, ಸಮುದ್ರಯಾನ ೧೨-೧೩, ಕರಾಚಿ ೧೪-೧೫, ಕ್ವೆಟ್ಟಾ ೧೬ ರಿಂದ ೨೦, ಸಕ್ಕರ್ ೨೧, ಭಾವಲ್ಪುರ ೨೨-೨೩, ಪಿಷಾವರ್ ೨೫ ರಿಂದ ೨೭, ಲಂಡಿಕೋಟಾಲ್ ೨೭, ಕಾಬೂಲ್ ವಾಪಸು ಸೇರುವುದು ಫೆಬ್ರುವರಿ ೨೮.

●●●●

ಮದರಾಸಿನಲ್ಲಿದ್ದ ಇಬ್ಬರು ಗುಜರಾತಿ ಬ್ರಾಹ್ಮಣರು ಸಮುದ್ರಯಾನ ಮಾಡಿ ವಿಲಾಯತಿಗೆ ಹೋಗಿ ಬಂದು, ಹಿರಿಯರೂ ಪುರೋಹಿತರೂ ಹೇಳಿದ ಪ್ರಕಾರ ವಿಧಿ ಪೂರ್ವಕವಾಗಿ ಪ್ರಾಯಶ್ಚಿತ್ತ ಮಾಡಿಕೊಂಡು ಮನೆ ಸೇರಿದರು. ಆ ಪೈಕಿ ಒಬ್ಬ ಹುಡುಗನು ಮದರಾಸಿನಲ್ಲೇ ನಾರಾಯಣದಾಸನೆಂಬೊಬ್ಬ ಗುಜರಾತಿ ಬ್ರಾಹ್ಮಣನ ಕುಮಾರ್ತೆಯನ್ನು ಮದುವೆ ಮಾಡಿಕೊಂಡನು. ಆದರೆ ಕೆಲವು ಗುಜರಾತಿ ಜನರು ಆ ಹುಡುಗ ಪ್ರಾಯಶ್ಚಿತ್ತ ಮಾಡಿಕೊಂಡದ್ದರಲ್ಲಿ ತೃಪ್ತರಾಗದೆ, ಮದುವೆಯೆಲ್ಲಾ ಆದ ಮೇಲೆ ನ್ನೂರಾರು ಮಂದಿ ಸೇರಿ ಸಭೆ ನಡಿಸಿ ಅವನನ್ನು ಜಾತಿಯಿಂದ ಹೊರಗೆ ಹಾಕಿದೆ ಎಂತಲೂ ಅವನ ಸಂಗಡ ಯಾರೂ ಸವ್ಯವಹಾರ ಮಾಡಕೂಡದೆಂತಲೂ ವಿಧಿಸಿದ್ದಲ್ಲದೆ ಈ ಅರ್ಥಕ್ಕೆ ನೋಟೀಸ್ ಛಾಪಿಸಿ ಪ್ರಕಟಿಸಿದರು. ಈಗ ಆ ಹುಡುಗನು ಅವರ ಪೈಕಿ ೫ ಮಂದಿ ಮುಖಂಡರ ಮೇಲೆ ಮಾನನಷ್ಟದ ದಾವಾ ತಂದಿದ್ದಾನೆ. ಮೊಕದ್ದಮೆ ಇನ್ನೂ ಇತ್ಯರ್ಥವಾಗಲಿಲ್ಲ.

ಶ್ರೀಕೃಷ್ಣ ಗಾಯನ ಸಮಾಜ

ರಾಜಧಾನಿಯಲ್ಲಿ ಹೊಸ ಸಂಗೀತ ಸಭೆ ಸ್ಥಾಪನೆಯಾದದ್ದು

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಬಹು ಅಪೂರ್ವವಾದ ಸಭೆ ನಡೆಯಿತು. ಮೈಸೂರು ಪಟ್ಟಣದಲ್ಲಿ ಗಾಯನಸಮಾಜವನ್ನು ಸ್ಥಾಪನೆ ಮಾಡಿದ್ದೇ ಆ ಸಭೆಯ ಉದ್ದೇಶವು. ಮೈಸೂರು ಡಿಸ್ಟ್ರಿಕ್ಟಿನ ಡೆಪ್ಟಿ ಕಮೀಷನರಾದ ಮೆ॥ ಎಂ. ಕಾಂತರಾಜೇ ಅರಸಿನವರು ಅಗ್ರಾಸನವನ್ನು ವಹಿಸಿದ್ದರು. ರಾಜಬಿಂದೆಯವರೂ ಸಮಸ್ತ ಉದ್ಯೋಗಸ್ಥರೂ ವೈದಿಕ ಲೌಕಿಕ ದೊಡ್ಡ ಮನುಷ್ಯರೂ ಬಹು ಜನ ಪ್ರಸಿದ್ಧ ಸಂಗೀತಗಾರರೂ ಬಂಗಲೆಯ ತುಂಬಾ ಸೇರಿದ್ದರು. ಸಂಗೀತವಿದ್ವಾನ್ ಮೆ॥ ವಾಸುದೇವಾಚಾರ್ಯರು—ಭಗವನ್ನಾಮಸಂಕೀರ್ತನೆ ಮಾಡುವ ಸ್ಥಳಗಳಲ್ಲೆಲ್ಲಾ ಪರಮಾತ್ಮನು ಸಾಕ್ಷಾತ್ಕಾರಿಯಾಗಿರುವನೆಂದೂ, ಸಂಗೀತದಿಂದ ಪ್ರಾಣಿಕೋಟಿಗೆ ಉಂಟಾಗುವಷ್ಟು ಪರಮಾನಂದವು ಇನ್ನಾವದರಿಂದಲೂ ಆಗುವುದಿಲ್ಲವೆಂದೂ, ಇಂಥಾ ಸಂತೋಷವನ್ನು ಹೆಚ್ಚಿಸುವುದಕ್ಕಾಗಿಯೇ ಪ್ರಕೃತ ಸಭೆಯನ್ನು ಸ್ಥಾಪಿಸಬೇಕಾಗಿದೆ ಎಂದೂ ಅರ್ಥ ಕೊಡುವ ಕೆಲವು ಸಂಸ್ಕೃತ ಶ್ಲೋಕಗಳನ್ನು ಹೇಳಿದರು. ವೈಣಿಕಶಿಖಾಮಣಿ ಮೆ॥ ಶೇಷಣ್ಣನವರೂ ಭಕ್ಷಿ ಮೆ॥ ಸುಬ್ಬಣ್ಣನವರೂ ಜೋಡಿ ವೀಣೆಗಳನ್ನು ಹಿಡಿದು ಇಂಪಾದ ರಾಗ ಮತ್ತು ಪದ್ಯಗಳನ್ನು ನುಡಿಸಿ ಕಾಡಿ ಸಭಿಕರನ್ನು ಸಂತೋಷಪಡಿಸಿದರು. ಆಗ್ರಾ ಪಟ್ಟಣದ ಗವಾಯಿ ಮೆ॥ ಗುಲಾಂ ಅಬ್ಬಾಸ್‌ಯವರ ಹಾಡುಗಾರಿಕೆಯು ಆಹ್ಲಾದಕರವಾಗಿತ್ತು. ಮೆ॥ ಎಂ. ಪುಟ್ಟಸ್ವಾಮಿ, ಬಿ. ಎ. ಯವರು ಮೆ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದ ಬಹು ಮನೋರಂಜಕವಾದ ಹತ್ತು ಕನ್ನಡ ವೃತ್ತ ಕಂದಗಳನ್ನು ಹತ್ತು ವಿಧ ರಾಗಗಳಿಂದ ಹೇಳಿ ಸಭಿಕರಿಗೆ ಮಹದಾನಂದವನ್ನುಂಟುಮಾಡಿದರು.

ತರುವಾಯ ಮೆ॥ ಎಸ್. ಶ್ರೀನಿವಾಸಮೂರ್ತಿ, ಬಿ. ಎ. ಯವರು ಇಂಗ್ಲೀಷಿನಲ್ಲೂ, ಮೆ॥ ಎಂ. ವೆಂಕಟಕೃಷ್ಣಯ್ಯನವರು ಕನ್ನಡದಲ್ಲೂ ಸಂಕ್ಷೇಪವಾದ ಉಪನ್ಯಾಸ ಮಾಡಿ, ಗಾಯನಸಮಾಜಸ್ಥಾಪನೆಯ ಕಾರಣ ಉದ್ದೇಶ ಫಲ ಮುಂತಾದವುಗಳನ್ನು ತಿಳಿಯಪಡಿಸಿದರು. ಹೊರಗಿನಿಂದ ಬರತಕ್ಕ ಪ್ರಸಿದ್ಧ ಸಂಗೀತಗಾರರ ವಿನಿಕೆಯನ್ನು ಸಕಲ ಪ್ರಜೆಗಳೂ ಕೇಳಿ ಸಂತೋಷಪಡುವಂತೆ ಅವಕಾಶವನ್ನು ಕಲ್ಪಿಸುವುದು, ಒಳದೇಶದ ಸಂಗೀತಗಾರರಿಗೆ ಪ್ರೋತ್ಸಾಹ ಕೊಡುವುದು, ಗಾನವಿದ್ಯಾ ಪ್ರಚಾರವನ್ನು ಹೆಚ್ಚಿಸುವುದು, ಸಚ್ಚರಿತ್ರರಾದವರನ್ನೇ ಮೆಂಬರುಗಳಾಗಿ ಸೇರಿಸಿಕೊಳ್ಳುವುದು, ಇವೇ ಮೊದಲಾದ ಕಾರ್ಯಗಳನ್ನು ನಡಿಸುವದಕ್ಕಾಗಿ ಈ ಸಭೆಯನ್ನು ಪ್ರಾರಂಭ ಮಾಡಿದ್ದಾರೆ. ಈಗಿನ ಸಂಗೀತಗಾರರಲ್ಲಿ ಕೆಲವರು ದುರ್ನಡತೆಯಲ್ಲಿ ಬಿದ್ದು ಆ ವಿದ್ಯಕ್ಕೆ ಕೆಟ್ಟ ಹೆಸರು ತಂದಿರುವುದರಿಂದ ಅಂಥಾ ಕೆಟ್ಟ ಹೆಸರನ್ನು ಹೋಗಲಾಡಿಸಿ, ಸಕಲ ಪ್ರಜೆಗಳೂ ಸಚ್ಚರಿತ್ರರಾಗಿದ್ದುಕೊಂಡೇ ಇಂಥಾ ಆನಂದಮಯ ವಿದ್ಯೆಯನ್ನು ಕೇಳುವುದರಲ್ಲೂ ಅಭ್ಯಾಸ ಮಾಡುವುದರಲ್ಲೂ ಆಸಕ್ತರಾಗುವಂತೆ ಈ ಸಭೆಯು ಸಹಾಯ ಮಾಡುವುದು. ಮನುಷ್ಯರು ಜೀವನಾರ್ಥವಾಗಿ ನಾನಾ ವಿಧ ದುಃಖ ಕಷ್ಟಗಳನ್ನು ಅನುಭವಿಸಬೇಕಾಗಿದೆ. ಇಂಥವರಿಗೂ ಈ ಸಂಗೀತ ವಿದ್ಯೆಯು ಮಹದಾನಂದವನ್ನು ಕೊಟ್ಟು ಉತ್ಸಾಹಶೀಲರನ್ನಾಗಿ ಮಾಡುವುದು. ಇಂಥಾ ಅವಶ್ಯವೂ ಉತ್ತಮೋತ್ತಮವೂ ಆದ ವಿದ್ಯವನ್ನು ನಮ್ಮ ಸರ್ಕಾರದವರು ಸಮಸ್ತ ಪಾಠಶಾಲೆಗಳಲ್ಲೂ ಮಕ್ಕಳಿಗೆ ಕಲಿಸುವಂತೆ ಏರ್ಪಾಡು ಮಾಡಿರುವುದು ಸ್ತೋತ್ರಾರ್ಹವಾಗಿರುತ್ತದೆ ಎಂಬೀ ರೀತಿಯಾಗಿ ಹೇಳಿದರು.

ಅನಂತರ ಸಭಾಧ್ಯಕ್ಷರು ತಿಳಿಸಿದ ಅಭಿಪ್ರಾಯವೇನೆಂದರೆ—ನಮ್ಮನ್ನಾಳುವ ಮಹಾರಾಜರವರು ಅವರ ಹಿರಿಯರಂತೆಯೇ ಪರದೇಶಗಳಿಂದ ಇಲ್ಲಿಗೆ ಬರುವ ಸಂಗೀತಗಾರರಿಗೆ ಬಹುಮಾನಗಳನ್ನು ದಯಪಾಲಿಸುತ್ತಿರುವುದರಿಂದಲೂ ಇಲ್ಲಿನ ಸಂಗೀತವಿದ್ವನ್ಮಂಡಲಿಯವರನ್ನು ಪೋಷಿಸಿ ಪ್ರೋತ್ಸಾಹಪಡಿಸುತ್ತಿರುವುದರಿಂದಲೂ ಅವರಿಗೂ ಈ ಗಾನವಿದ್ಯೆಯಲ್ಲಿ ತುಂಬಾ ಅಭಿರುಚಿ ಇರುವುದೆಂದು ಖಂಡಿತವಾಗಿ ಹೇಳಬಹುದು. ಈಗ ಸಲಕರಣಗಳು ಇಲ್ಲದಿರೋಣದರಿಂದಲೂ ಸಂಗೀತಗಾರರು ಸಮರ್ಪಕವಾದ ವೃತ್ತಿಗಳಲ್ಲಿ ಇಲ್ಲದಿರುವುದರಿಂದಲೂ ಈ ವಿದ್ಯೆಯು ಹೀನಸ್ಥಿತಿಗೆ ಬಂದಿದೆ. ಇದನ್ನು ತಪ್ಪಿಸುವುದಕ್ಕಾಗಿಯೇ ಈ ದಿನ ರಾಜಧಾನಿಯಲ್ಲಿ ಈ ಸಮಾಜವನ್ನು ಸ್ಥಾಪಿಸಿರುತ್ತೇವೆ. ಇದು ಅಭಿವೃದ್ಧಿ ಹೊಂದು ಫಲಕಾರಿಯಾಗಲೆಂದು ಹಾರೈಸುವೆನು. ಈ ರೀತಿಯಾಗಿ ಕೆಲವು ಮಾತಾಡಿ ಸಭೆಯನ್ನು ಸ್ಥಾಪಿಸಿದರು.

ಈ ಸಮಾಜಕ್ಕೆ ದಿವಾನ್ ಮೆ॥ ವಿ. ಪಿ. ಮಾಧವರಾಯರು ಪೋಷಕರಾಗಿಯೂ, ಮೆ॥ ಎಂ. ಕಾಂತರಾಜೇ ಅರಸಿನವರು ಪ್ರೆಸಿಡೆಂಟರಾಗಿಯೂ, ಮೆ॥ ಎಂ. ಪುಟ್ಟಸ್ವಾಮಯ್ಯನವರು ಸೆಕ್ರಟೆರಿಯಾಗಿಯೂ ಇರುವಂತೆ ಒಪ್ಪಿಕೊಂಡಿರೋಣದರಿಂದ ಸಮಾಜದ ಉದ್ದೇಶಕಾರ್ಯಗಳು ತೃಪ್ತಿಕರವಾಗಿಯೇ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲವೆಂದು ನಿರೀಕ್ಷಿಸಬಹುದಾಗಿದೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ

ಕರೆಸ್‌ಪಾಂಡೆನ್ಸ್.

ಪೋಲೀಸಿನವರ ಖಾಲಿಮಾರಿಕೆ.

ಅಯ್ಯಾ,

ಮಡಿಕೇರಿಗೆ ಸೇರಿದ ಯಡವನಾಡು ತಾಲ್ಲೋಕು ಸೋಮವಾರಪೇಟೆಯಲ್ಲಿ ಇರುವ ಬ್ರಾಹ್ಮಣರು ಕೊಣ್ಣೂರು ಸಂತೆಗೆ ಹೋಗುವುದಕ್ಕೆ ಗುರುವಾರ ಹೊರಟು ಆರು ಜನರು ಹೋಗುತ್ತಾ ಇದ್ದರು. ಅವರಲ್ಲಿ ಇಬ್ಬರು ಹೆಂಗಸರು, ನಾಲ್ಕು ಜನ ಗಂಡಸರು. ಇವರು ಜೊತೆಯಲ್ಲಿ ತಣ್ಣೀರು ಹಳ್ಳದ ವರಿಗೆ ಹೋದರು. ಹಿಂದಿನಿಂದ ಪಾಪಿಗಳು ಯಾರೂ ಆರು ಜನರು ಅವರನ್ನು ಚನ್ನಾಗಿ ಹೊಡೆದು ಅವರ ಕೈಯಲ್ಲಿದ್ದ ಅರವತ್ತೂ ಚಿಲ್ಲರೆ ರೂಪಾಯಿ ಕಿತ್ತುಕೊಂಡು ಕಾಡು ಬಿದ್ದರಂತೆ. ಅವರು ಹಿಂದಕ್ಕೆ ಬಂದು ಪೋಲೀಸಿನವರಿಗೆ ತಿಳಿಸುವಲ್ಲಿ—ನಾವು ಮಾಡುವುದು ಏನು? ಸುಬೇದಾರರ ಜಮಾಬಂದಿಗೆ ಹೋಗಿರುತ್ತಾರೆ. ನಾವು ತಿಳಿಸುತ್ತೇವೆ ಎಂಬದಾಗಿ ಹೇಳಿದರು.

ಯಾಚಕ

ಗೋರೀಬಿದನೂರು ಸ್ಕೂಲ್ ಮುಂತಾದ್ದು

ಅಯ್ಯಾ,

ಕೆಲವು ವರುಷಗಳ ಹಿಂದೆ ಆಸ್ಪತ್ರೆ ದಾಯಿಯು ಮಗಳನ್ನು ತೋಡೆ ಮೇಲೆ ಕೂಡಿಸಿಕೊಂಡು ಆಗಿನ ಮಾಸ್ಟರು ಮುದ್ದು ಇಟ್ಟ ಸಬಬಿಯಿಂದ ಬಾಲಿಕಾ ಪಾಠಶಾಲೆಯಿಂದ ನನ್ನ ಮಕ್ಕಳನ್ನು ಶಾಲೆಗೆ ಕಳುಹಿಸದೆ ನಿಲ್ಲಿಸಿ ಬಿಟ್ಟೆನು. ಆ ಮಾಸ್ಟರು ಹೋಗಿ ಪುರಾತನ ಮಾಸ್ಟರು ಬಂದ ಮೇಲೆ ಪ್ರಸಹಾ ಕಳುಹಿಸಿ ಓದಲು ಪ್ರಾರಂಭ ಮಾಡಿದೆನು. ಯಾರದೋ ಒಂದು ಒಡವೆ ಹೋದದ್ದಕ್ಕಾಗಿ ನನ್ನ ಮಕ್ಕಳನ್ನು ಶೋಧನೆ ಮಾಡಿದ ವಿಷಯವನ್ನು ಡಿಪುಟಿ ಇನ್ಸ್‌ಪೆಕ್ಟರಿಗೂ ಮತ್ತು ಇನ್ಸ್‌ಪೆಕ್ಟರ್ ಜನರಲ್‌ರಿಗೂ ಹವಾಲು ಮಾಡಿಕೊಂಡೆನು. ಹೆಣ್ಣುಮಕ್ಕಳ ಸ್ಕೂಲಿಗೆ ಹೆಂಗಸರನ್ನೇ ಜವಾನಿ ಹಾ ಪ್ರಥಮೋಪಾಧ್ಯಾಯಿನಿ ವರಿವಿಗೂ ಇಡುವದೇ ಉತ್ತಮವೆಂದು ಸೂಚಿಸಿದೆನು. ಇನ್ನೂ ಆ ವಿಷಯದಲ್ಲಿ ಯಾವ ಏರ್ಪಾಟೂ ಮಾಡಲಿಲ್ಲವು. ನನ್ನ ಮಕ್ಕಳಿಗಂತೂ ಬಾಲಿಕಾ ಪಾಠಶಾಲೆಯ ಆಸೆಯೇ ತಪ್ಪಿ ಹೋಯಿತು.

ಮತ್ತು ಮುಂಬಯಿ ಎಗ್ಜಿಬಿಷನ್‌ಗೆ ಕಳುಹಿಸಿದ ನನ್ನ ಸಾಮಾನುಗಳ ಪೈಕಿ ಕೆಲವು ಕಾಣದೇ ಹೋದದ್ದಕ್ಕೆ ಅದರ ಖರೀದಿ ದಯವಿಟ್ಟು ಕೊಡಿಸಬೇಕೆಂದು ಕೇಳಿಕೊಂಡದ್ದಕ್ಕೆ ಇದುವರಿಗೂ ತಕ್ಕ ಜವಾಬಿಲ್ಲ.

ಎ. ವಿ. ಸ್ಕೂಲಿನಲ್ಲಿ ಒಂದು ಹೆಣ್ಣುಮಗು ಓದುತ್ತಿರುತ್ತೆ. ಅಕೆಯನ್ನು ತುಂಬಾ ಅವಮಾನ ಮಾಡಿರುತ್ತಾರೆಂದು ವ್ಯಸನಪಡುತ್ತೇನೆ. ಇನ್ಸ್‌ಪೆಕ್ಟರ್ ಜನರಲ್ ಯವರು ತಮ್ಮ ಮನಸ್ಸಿಗೆ ಇವುಗಳನ್ನು ನಾಟಿಸಿಕೊಳ್ಳುವರೆಂದು ಕೋರುವ

ಸಿ. ಇ. ವೆಂಕಟಸುಬ್ಬಯ್ಯ.

ಹೊಸಕೋಟೆ ಭಾವಿಯ ನೀರಿನ ದುರುಪಯೋಗ

ಅಯ್ಯಾ,

ಈ ಹೊಸಕೋಟೆ ಉತ್ತರಕ್ಕೆ ಚಿಕ್ಕ ಕೆರೆ ಇದೆ. ಇದರ ಪಕ್ಕದಲ್ಲಿಯೇ ಸೀನೀರಿನ ಭಾವಿಯೊಂದಿದೆ. ಈ ಭಾವಿಯ ನೀರನ್ನು ಊರಿನ ಎಷ್ಟೋ ಜನಗಳು ಕುಡಿಯಲಿಕ್ಕೂ ಅಡಿಗೆಗೂ ಉಪಯೋಗಿಸುವರು. ಇಂಥಾ ಭಾವಿಯಲ್ಲಿ ಈ ಊರ ಅನೇಕ ಮಹಾನುಭಾವರು ಬಟ್ಟೆ ಒಗೆಯುವದೂ ಮೈ ತೊಳೆಯುವದೂ ಮಾಡುತ್ತಾರೆ. ಮೈ ತೊಳೆಯಲಿಕ್ಕೂ ಬಟ್ಟೆ ಬರೆ ಒಗೆಯಲಿಕ್ಕೂ ನೀರು ಕೆರೆ ತುಂಬಿ ಭರ್ತಿಯಾಗಿದೆ. ಅಲ್ಲದೆ ಇನ್ನೂ ಎರಡು ಭಾವಿಗಳೂ ಇವೆ. ಊರಿನ ಜನರೇ ತಾವು ಕುಡಿಯುವ ನೀರನ್ನೇ ಗಲೀಜು ಮಾಡುವದು ಸರಿಯೇ? ಈ ಊರು ಅನಾರೋಗ್ಯ ಸ್ಥಳವೆಂದು ಮೊದಲಿನಿಂದ ಖ್ಯಾತಿಯಾಗಿದೆ. ಇಂಥಾದ್ದರಲ್ಲಿ ಈ ಭಾವಿಯ ನೀರನ್ನು ಕೊಳಕು ಮಾಡಿ ಕುಡಿಯುವದಕ್ಕೂ ಅಡಿಗೆಗೂ ಉಪಯೋಗಿಸಿದರೆ ಇಲ್ಲದ ಕಾಯಿಲೆ ಬರಲಾರದೇನು? ಇಂಥಾ ಕಾರ್ಯಗಳನ್ನು ನಿಲ್ಲಿಸುವದು ಸರ್ಕಾರದವರ ಕೆಲಸವಲ್ಲ; ಊರ ಕ್ಷೇಮಚಿಂತನೆಯು ಪ್ರತಿಯೊಬ್ಬ ಪ್ರಜೆಯ ಮೇಲೆಯೂ ಬಿದ್ದ ಸಂಗೂ ಭಾರವೂ ಆಗಿದೆ. ಮೈಲಿಗೆಯಾಯಿತೆಂದು ಮತ್ತೆ ಮತ್ತೆ ಸ್ನಾನಮಾಡುವಂಥಾ ಜನಗಳೇ ಕೊಳಕು ಮಾಡಿದರೆ ತಮ್ಮ ಮೈಲು ಕೊಳೆ ಸೇರಿದ ನೀರನ್ನು ಎರಡನೆಯವರು ಕುಡಿದರೆ ಅವರ ಮನಸ್ಸಿಗೆ ಎಷ್ಟು ಅಸಹ್ಯವಾಗುತ್ತದೆ? ಚನ್ನಾಗಿ ಬುದ್ಧಿ ಬಲ್ಲವರೇ ಇಂಥಾ ಅನುಚಿತ ಕಾರ್ಯ ನಡಿಸಿದರೆ ಬೇರೆಯವರು ಇದಕ್ಕಿಂತಲೂ ವಿಪರೀತವಾಗಿ ಮಾಡುತ್ತಾರೆ. ಆದ್ದರಿಂದ ಪ್ರಿಯ ಮಹಾನುಭಾವರೇ, ಇದಕ್ಕೆ ಆಸ್ಪದ ಕೊಳ್ಳದೆ ಜನರ ಹಿತವನ್ನು ತಿಳಿದು ಕೆಲಸ ನಡಿಸಿರಿ.

ಪ್ರಜಾ ಹಿತಚಿಂತಕ

ಮೈಸೂರು ವೆಸ್ಲಿಯನ್ ಮಿಷನ್ ಹಳೇ ದೇವಸ್ಥಾನ

ಅಯ್ಯಾ,

ಮೈಸೂರು ವೆಸ್ಲಿಯನ್ ಮಿಷನ್ ಹಳೇ ದೇವಾಲಯವು ಈ ಕ್ರೈಸ್ತಮಂಡಲಿಯವರ ಆರಾಧನೆಗೆ ಬಹಳ ಕಿಷ್ಕಿಂಧವಾದದರಿಂದ ಸಭಿಕರು ದೇವಾರಾಧನೆ ಮಾಡುತ್ತಿರುವಾಗ್ಗೆ ಸ್ಥಳವಿಲ್ಲದೆ ಅನೇಕರು ಹೊರಗೆ ನಿಲ್ಲಬೇಕಾಗಿದೆ. ಈ ಕೊರತೆಯನ್ನು ನೀಗಮಾಡಿ, ಸಭಿಕರೆಲ್ಲರೂ ದೇವಸ್ಥಾನದಲ್ಲಿ ಸೇರಿ ಧಾರಾಳವಾಗಿಯೂ ಸಂತೋಷಚಿತ್ತರಾಗಿಯೂ ದೇವಾರಾಧನೆ ಮಾಡುವಂತೆ ಈಗ ಆ ಆಲಯವನ್ನು ವಿಸ್ತರಿಸಿ ಕಟ್ಟುವದಕ್ಕೆ ಪ್ರಾರಂಭವಾಗಿದೆ. ಇದನ್ನು ಪೂರೈಸುವದಕ್ಕೆ ೬,೫೦೦ ರೂಪಾಯಿ ಬೇಕಾಗಿದೆ. ಈ ಪೈಕಿ ... ರೂಪಾಯಿ ಕೂಡಿಸಲ್ಪಟ್ಟಿರುವದು. ಬಾಕಿ ೩,೫೦೦ ರೂ ಭಾರವನ್ನು ಘನ ಸಾಡೆ ಬೋಧಕರು ಹೊತ್ತುಕೊಂಡಿದ್ದಾರೆ. ಈಗ ಇಲ್ಲಿರುವ ಕ್ರೈಸ್ತಮಂಡಲಿಯವರು ತಮ್ಮ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡುತ್ತಿರುವರು. ಆದರೂ ಅವು ಸಾಲದು. ಆದ್ದರಿಂದ ಹೊರಗಿನವರ ಸಹಾಯವನ್ನು ಅಪೇಕ್ಷಿಸಬೇಕಾಯಿತು. ಸದರಿ ದೇವಾಲಯದಲ್ಲಿ ಬಹು ಕಾಲ ದೇವಾರಾಧನೆ ಮಾಡುತ್ತಿದ್ದ ಭಕ್ತರೂ ಇತರ ಕ್ರೈಸ್ತರೂ ಈ ದೇವರ ಮಂದಿರವನ್ನು ದೊಡ್ಡದಾಗಿ ಕಟ್ಟಿಸುವದಕ್ಕೆ ತಮ್ಮ ಶಕ್ತ್ಯಾನುಸಾರ ಹಣ ಸಹಾಯ ಮಾಡಿ, ಸ್ಥಾನಗಳ ಮೇಲಿರುವ ತಮ್ಮ ಪ್ರೇಮಾಸಕ್ತಿಯನ್ನು ಪ್ರಕಾಶಪಡಿಸುವರೆಂದೂ, ಖಾಲಿ ಮಾಡುವದಿಲ್ಲವೆಂದೂ ನಂಬಿ ನಿರೀಕ್ಷಿಸುತ್ತೇವೆ. ಈ ದೇವಾಲಯವು ಬುನಾದಿಯಾದ ಮೇಲೆ ಮೊದಲಿದ್ದದಕ್ಕಿಂತ ಎಷ್ಟು ದೊಡ್ಡದಾಗುವದು. ಸಹಾಯ ಮಾಡುವವರು ಬೆಂಗಳೂರಿನ ನಮ್ಮ ಚೇರ್ಮನ್ ಘನ ರೀಸ್ ದೊರೆಯವರಿಗಾದರೂ ಅಥವಾ ಮೈಸೂರಲ್ಲಿರುವ ಘನ ಸಾಡೆ ದೊರೆಯವರಿಗಾದರೂ ಕಳುಹಿಸಬಹುದು.

ಟ.

ನಾಗರಕೆರೆ ಕಟ್ಟೆಯ ಬಳಿ ಹಾವು ಕಚ್ಚಿದವಳು ಸಾಯಲಿಲ್ಲ

ಅಯ್ಯಾ,

ದೊಡ್ಡಬಳ್ಳಾಪುರಕ್ಕೆ ಮುಕ್ಕಾಲು ಮೈಲಿ ಫಾಸಲೆಯ ಮಾಸಗೊಂಡಳ್ಳಿ ವಾಸಸ್ಥರು ಮಾದಿಗರ ಮುನಿ, ಕದರಿ ಎಂಬ ಗಿಯರಿಬ್ಬರು ಹಗಲು ೩ ಗಂಟೆಯಲ್ಲಿ ಹುಲ್ಲು ಹೊರೆಗಳನ್ನು ಕೊಂಡು ಮಾರುವ ಉದ್ದೇಶ್ಯ ಟವನ್ನಿಗೆ ಬರುತ್ತಾ ಮಾರ್ಗದಲ್ಲಿ ಕೆರೆ ಕಟ್ಟೆ ಹತ್ತರ ಹೊರೆಗಳನ್ನು ಇಳಿಸುತ್ತಿರಲು, ಮುನಿ ಎಂಬುವಳ ಎಡದ ಕಾಲು ಮಧ್ಯದ ಬೆರಳನ್ನು ಹಾವು ಕಚ್ಚಿ ಏರಿ ಸಂದಿಗೆ ಹೊರಟುಹೋಯಿತು. ಹಾವು ಸಿಕ್ಕಲಿಲ್ಲ. ಕೂಡಲೆ ರಂಗಿಯಾದ ಕದರಿ ಎಂಬುವಳು ರೋಧನ ಮಾಡಿಕೊಂಡು ಹೋಗಿ ತನ್ನ ತಂದೆ ತಾಯಿ ಅಣ್ಣತಮ್ಮಂದಿರಿಗೆ ತಿಳಿಸಿದಳು. ಗಳೆಲ್ಲ ಮಹಾ ಶೋಕದಿಂದ ಬರುವಾಗ್ಗೆ ಇಲ್ಲಿ ಬಿದ್ದಿದ್ದವಳನ್ನು ಮತಸ್ಥರು ಪಂಡಿತರಾದ ಯದ್ದಳ್ಳಿ ಪಾಪಯ್ಯನವರ ಮನೆಗೆ ಇಲಾಜು ಮಾಡಿಸುವದಕ್ಕೆ ತೆಗೆದುಕೊಂಡು ಹೋಗಲು ಬಿಷದ ಕೆಳ್ಳುತ್ತಿರಲು ಸದರಿ ಬಂಧುಗಳೆಲ್ಲ ಬಂದರು. ಹಾವು ಕಚ್ಚಿ ಕಣ್ಣುಗಳು ಕಾಣದೆಯೂ ಸ್ಮರಣೆ ಇಲ್ಲದೆಯೂ ಅಲ್ಲಿ ಬಿದ್ದಳು. ಬಾಯಲ್ಲಿ ಶ್ಲೇಷ್ಮ ಬಂತು. ಪುನಃ ಸ್ವಲ್ಪ ವಸ್ತ್ರದವರು. ಆ ಮೇಲೆ ರಂಗಣ್ಣ ಎಂಬುವರು ತಮ್ಮಲ್ಲಿ ಔಷಧವಿದೆ ಏನೋ ಒಂದು ಮೂಲಿಕೆಯನ್ನು ತಂದು ಅರದು ಸ್ವಲ್ಪ ಹಾಕಿದರು, ಕಚ್ಚಿದ ಗಾಯಕ್ಕೆ ಕೊಂಚ ಹಚ್ಚಿದರು; ಹೊಟ್ಟೆಗೂ ಕೊಟ್ಟರು. ಕೂಡಲೆ ಕಣ್ಣುಗಳು ಕಾಣಬಂದವು. ಯಲ್ಲಿ ಶ್ಲೇಷ್ಮ ಕೊಂಚ ತಗ್ಗಿತು. ಸ್ಮರಣೆ ಚನ್ನಾಗಿ ಬಂತು. ಜೊತ್ತನ ಮೇಲೆ ಶಾಂತಿಯಾಯಿತು. ನಂತರ ಅವಳ ಬಂಧು ಬಂಧು ನಂತರ ಅವಳನ್ನು ಹಳ್ಳಿಗೆ ತೆಗೆದುಕೊಂಡು ಹೋದರು. ಆರೋಗ್ಯವಾಗಿದ್ದಾಳೆ. ಕಚ್ಚಿದ ಘಾಯ ಇನ್ನೂ ಇದೆ. ಸಾಯದ ಈಕೆ ಸತ್ತುಹೋದಳೆಂದು ಹಿಂದಿನ ವಾರದ ಪತ್ರಿಕೆಯಲ್ಲಿ ಪ್ರಕಟವಾಗುತ್ತೇರಿ. ಬದುಕಿದವಳನ್ನು ಸತ್ತಳೆಂದು ನಿಮಗೆ ತಿಳಿಸಿದವರು ವಿಚಾರಮಾಡದೆ ಬರೆದಂತೆ ಕಾಣುತ್ತದೆ.

ಬಾತ್ಮಿದಾರ

ದೇವಿ ಹಾಕಿಸಿಕೊಳ್ಳುವದರ ಅವಶ್ಯಕತೆ

ಅಯ್ಯಾ,

ದೊಡ್ಡಬಳ್ಳಾಪುರದ ತಾಲ್ಲೂಕ್ ಕಸಬಾ ಟವ್ನ ಮತ್ತು ಗ್ರಾಮಾಂತ್ರಗಳಲ್ಲಿರುವ ಸಮಸ್ತ ಪ್ರಜೆಗಳಿಗೂ ತಿಳಿಯಪಡಿಸುವದೇನಂದರೆ—ಕಸಬಾ ಟವ್ನನಲ್ಲಿಯೂ ಕೋಬಳಿಯ ಗ್ರಾಮಗಳಲ್ಲಿಯೂ ಮಕ್ಕಳಿಗೆ ದೇವಿ, ಶಿಡಬು ಹಾಕಿಸದೆ ಬಹಳ ತೊಂದರೆಪಡಿಸುವದೇನಂದು ಮತ್ತು ಜನನವಾದ ೨೫ ದಿನಗಳ ಲಾಗಾಯ್ತು ೩ ತಿಂಗಳ ಒಳಗಾಗಿ ದೇವಿ ಹಾಕಿಸದೆ ಇರುವದು ಈ ಕಾರಣ ಮಕ್ಕಳಿಗೆ ಮುಂದೆ ಸಂಭವಿಸುವ ರೋಗಗಳು ಯಾವ್ಯಾವೆಂದರೆ ಗಜ್ಜಿ, ಕರ್ಮಾಣಿ ವಿಷಪ್ರರಿ, ಅಮ್ಮ, ಹಲವು ಪಿಡುಬುಗಳು, ... ವಿಷಸಂಬಂಧವಾದ ಅಂಟು ರೋಗಗಳಿಗೆ ಗುರಿಯಾಗಬೇಕಾಗುವುದು. ಆದ್ದರಿಂದ ಇದಕ್ಕಾಗಿ ಮಕ್ಕಳಿಗೆ ಜನನವಾದ ೨೫ ದಿನಗಳ ಲಾಗಾಯ್ತು ೩ ತಿಂಗಳ ಒಳಗಾಗಿ ದೇವಿ ಅಂದರೆ ವ್ಯಾಕ್ಸಿನೇಷನ್ ಮಾಡಿಸಿದರೆ ಮೇಲ್ಕಂಡ ರೋಗಗಳು ನಿವಾರಣೆಯಾಗಲು ಏನೇನೂ ಸಂಶಯವಿಲ್ಲ. ಇವಲ್ಲದೆ ಬಾಲಕರಿಗೆ ಸಿಡುಬು ಅಂದರೆ ಸ್ಮಾಲ್ ಪಾಕ್ಸ್ ಬರುವದು ಮತ್ತು ತಾಯಿತಂದೆಗಳ ಗರ್ಭ ಉಷ್ಣದಿಂದ ಸಂಭವಿಸುವ ರೋಗಗಳನ್ನು ತಪ್ಪಿಸಿ ಗುಣಪಡಿಸುತ್ತೆ. ಮೇಲಾಗಿ ಮೊದಲಿನ ಮನುಷ್ಯನನ್ನು ಆರೋಗ್ಯ ಸ್ಥಿತಿಗೆ ತರಲು ಇದು ಮುಖ್ಯ ಕಾರಣ. ದೊಡ್ಡವರಿಗೆ ಉಷ್ಣಾದಿಗಳಿಂದ ಸಂಭವಿಸುವ ಕೈಕಾಲು ಉರಿ

...ಗು ೫—೬ ವರುಷಗಳಿಗೊಂದಾವರ್ತಿ ದೇವಿ ಹಾಕಿಸಿ ...ಥಾ ಉಷ್ಣಾದಿಗಳು ನಿವಾರಣೆಯಾಗಿ ಶರೀರದಲ್ಲಿ ರಕ್ತ ...ಯಾಗಿ ಗಜ್ಜ ಕರ್ಸಾಣಿ ವಿಷಜ್ವರ ತುರಿ ಜಲವು ಕಿಡುಬು ಗ ...ಶಟ್ಟ ವ್ಯಾಧಿಗಳು ಸಂಭವಿಸದೆ ಶರೀರವು ಒಳ್ಳೆ ಆರೋಗ್ಯ ...ಲು ಏನೇನೂ ಸಂಶಯ ಇರುವುದಿಲ್ಲ ಇದಕ್ಕಾಗಿ ಪ್ರಜೆಗಳ ...ಳ್ಳೆ ಆರೋಗ್ಯ ಸ್ಥಿತಿಗೆ ತಂದು ಅಭಿವೃದ್ಧಿ ಪಡಿಸಬೇಕೆಂದು ...ದ ನಮ್ಮ ಗವರ್ನಮೆಂಟಿನವರು ತಾಲ್ಲೂಕುಗಳಲ್ಲಿ ...ಟರುಗಳನ್ನು ಇಟ್ಟು ಇರುತ್ತಾರೆ ಆದ್ದರಿಂದ ದೇವಿ ಹಾ ...ಕೊಳ್ಳುವ ವಿಷಯದಲ್ಲಿ ಆಯಾ ಗ್ರಾಮಗಳಲ್ಲಿರುವ ಪ ...ಭಾಗದವರೆಲ್ಲ ತಮ್ಮ ತಮ್ಮ ರೈತರನ್ನು ವರುಷಕ್ಕೊಂದಾವರ್ತಿ ...ಸಿ ಈ ಸಂಗತಿಯನ್ನು ಪ್ರಚುರ ಪಡಿಸಿ ಖಂಡಿತ ವ್ಯಾಕ್ಸಿ ...ಮಾಡಿಸಿ ಮಕ್ಕಳನ್ನು ಒಳ್ಳೇ ಆರೋಗ್ಯ ಸ್ಥಿತಿಯಲ್ಲಿ ತಂದು ...ಬುದ್ಧಿಯುಳ್ಳ ಮಾನವರಿಗೆ ಮಮತೆ ಹುಟ್ಟಿಸಿ ಮಹಾ ಮಾರೀ ...ಗೆ ಅವಕಾಶಕೊಡದಂತೆ ಮಾಡಬೇಕು

ಎನ್. ಕೆಂಪಯ್ಯ, ವ್ಯಾಕ್ಸಿನೇಟರ್, ದೊಡ್ಡಬಳ್ಳಾಪುರ

ಬೆಲಗೂರು ನೀರಿನ ಕ್ಷಾಮ

...ರ್ಗ ತಾಲ್ಲೂಕು ಬೆಲಗೂರು ೬೫೦—೭೦೦ ಮನೆಗಳು ...ಟಿ ಕೋಟೆಗಳೆಂಬ ೨ ತುಕಡಾ ಉಳ್ಳ ಒಂದು ದೊಡ್ಡ ಗ್ರಾಮವಾಗಿದೆ ಈ ಗ್ರಾಮದಲ್ಲಿ ೨,೦೦೦ ಪ್ರಜಾ ಜ ...ಸಂಖ್ಯೆ ೪,೦೦೦—೫,೦೦೦ ಅಸ್ ಮಾಸ್ ೮—೧೦ ಚಿಕ್ಕ ಗ್ರಾಮವೂ ಅಡಕೊಂಡಿದೆ ಈ ಎಲ್ಲಾ ಗ್ರಾಮಕ್ಕೂ ಮತ್ತೆ ಈ ...ಸಹಾ ಮಧ್ಯೆ ಒಂದು ಕೆರೆಯೂ ೩೦೦ ಎಕರೆ ವಿಸ್ತೀರ್ಣ ...ತಲಾವು ಇದೆ ಈ ತಲಾವಿಗೆ ಅನಾದಿಯಾಗಿ ನೀರು ...ವದಕ್ಕಾಗಿ ಕಡೂರು ತಾಲ್ಲೂಕು ಗಂಗ್ಯನಹಳ್ಳಿ ಕೆರೆ ಕೆಳ ...ಪ್ರಾಂತ್ಯದಿಂದ ಬರತಕ್ಕ ನೀರಿನ ಹಳ್ಳಕ್ಕೆ ಅಣೆ ಕಟ್ಟಿ ...ಮೂಲಕ ಬರುವ ಹಾಲೆ ನೀರಿನಿಂದಲೂ ಇತರ ಬೀಳು ...ವು ಬರತಕ್ಕ ನೀರಿನಿಂದಲೂ ಸಾಲಿಸಾಲ್ ಈ ಕೆರೆಯು ನೀ ...ಭರ್ತಿಯಾಗಿ ಈ ತಲಾವು ಹಿಂದೆ ಇರತಕ್ಕ ೧೦೦ ಎಕರೆ ಅಚ ...ಗೂ ಈ ಪ್ರಾಂತ್ಯ ವಾಸಿಸುವ ಪ್ರಜಾ ಕೋಟೆಗಳಿಗೂ ಕಾಲ್ನ ...ಡ ಅನುಕೂಲವಾಗಿತ್ತು ಈಚೆಗೆ ಅಂದರೆ ಸುಮಾರ ...ವರುಷದ ಕೆಳಗೆ ಮೇಲ್ಕಂಡ ಅಣೆ ಕಟ್ಟೆಡ ಒಡೆದು ಹೋಗಿ ...ಳಿನ ಮ. ಖೇನ ಕಾಡು ಸೇರುತ್ತಾ ಕೆಲವು ಬೇರೆ ಹೊಂದು ಹೋಗುತ್ತಾ ಇದೆ ಅಂದಿನಿಂದೀವರಿಗೆ ಈ ಕೆರೆಗೆ ಸುವರ್ಣ ...ದೆ ಕೆರೆ ಹಿಂದಿನ ತರಿ ಜಮೀನ್ದಾರರು ಸಾಲೀಸಾಲು ಪಾಳು ...ಡುವದಲ್ಲದೆ ಈ ದರಬ್ಬ ಪ್ರಜಾ ಕಾಲ್ನಡೆಗಳೂ ಕ...ದ ...ಕೊಂದರೆಯು ಎಷ್ಟು ಹೇಳಿದಾಗ್ಯೂ ಅಪಾರವಾಗಿಯೇ ಇದೆ ...ತೊಂದರೆಯ ನಿವಾರಣೆ ಬಗ್ಗೆ ಈ ಗ್ರಾಮವು ಕಡೂರು ...ಗೆ ಸೇರಿದ್ದ ವೇಳೆ ಅನೇಕ ಪಿರ್ಯಾದುಗಳು ಗವರ್ನಮೆಂ ...ಟ್ರಿಕ್ಟ್ ಆಫೀಸಿಗೂ ತಾಲ್ಲೂಕು ಮತ್ತು ಇಂಜನೀರ್ ...ಕೊಟ್ಟಿರಲಾಗಿ ಗವರ್ನಮೆಂಟಿನವರ ಮನಸ್ಸಿಗೆ ತಾಕಿ ಈ ...ತ್ತು ಸಾಲಗಳ ಅಳತೆಯಿಂದ ೨೦ ಸಾವಿರ ಬೆಲೆ ಹಾಂಗಾರಿ ...ಮಾಡಿದ್ದರು ಈಚೆಗೆ ಈ ಗ್ರಾಮವು ಹೊಸದುರ್ಗ ತಾ ...ಸೇರಿದ ನಂತರ ಇದರ ವಿಚಾರವು ನಿಂತು ಹೋಯಿತು ...ಕೂಡ ಈ ವಿಷಯವಾಗಿ ಅರ್ಜಿ ಮಾಡಿಕೊಂಡಾಗ್ಯೂ ಸ ...ರ ಚಿತ್ತಕ್ಕೆ ಬರಲಿಲ್ಲ. ಪ್ರಜೆಗಳ ತೊಂದರೆ ನಿವಾರಣೆಯಾ ...ದ್ದರಿಂದ ಈಗ ಈ ನ್ಯೂಸ್ ಪೇಪರಿಗೆ ನಮ್ಮ ಮೆ॥ ಎ. ಪಿ ...ಸರವರ ದಿವಾನಗಿರಿಯಲ್ಲಿಯಾದರೂ ಅವರ ಚಿತ್ತಕ್ಕೆ ...ದಲ್ಲಿ ಈ ವಿಷಯವಾಗಿ ಪ್ರಜೆಗಳಿಗೆ ಉಂಟಾಗಿರತಕ್ಕ ...ವಾರಣೆ ಆಗಲೆಂದು ಪ್ರಾರ್ಥಿಸುವ

ಪ್ರಜಾ ಹಿತಚಿಂತಕ

ತಾಲ್ಲೂಕು ವರ್ತಮಾನಗಳು.

...ರೆ —ಕಳೆದ ಶನಿವಾರ ನಾನು ಚಂಪಾಪುರಕ್ಕೆ ಹೋಗಿ ...ಸ್ಟಾಫೀಸು ಜಗಲಿಯ ಮೇಲೆ ಜನಗಳು ಸೇರಿ ಮಾತನಾಡು ...ಆಶ್ಚರ್ಯಪಡುತ್ತಿದ್ದರು ವಿಚಾರಿಸುವಲ್ಲಿ ತಿಳಿಯಬಂದ ...ಸಬ್ ರಿಜಿಸ್ಟ್ರಾರವರ ತಾಯಿ ೬೦—೬೫ ವರ್ಷದ ...ತಮ್ಮ ದೇಶದಲ್ಲಿದ್ದ ರೋಗದ ಬಾಧೆಯನ್ನು ತಡೆಯ ...ರದಲ್ಲಿ ತಾವು ವಾಸಮಾಡುವ ಮನೆಯೊಳಗಿನ ಭಾವಿಗೆ ...ದ್ದೆ ಸಬ್ ರಿಜಿಸ್ಟ್ರಾರವರು ಕುಟುಂಬ ಸಹಿತ ಬೀದಿಗೆ ...ಗಿಕೊಂಡು ಗಲಾಟೆ ಮಾಡಿದರು ಜನಗಳು ಕೂಡಿದರೂ ...ಬ್ಬರು ನೋಡುತ್ತಾ ನಿಂತರೇ ಹೊರತು ಯಾರೂ ...ಯಲು ಧೈರ್ಯಮಾಡಲಿಲ್ಲ ಅಷ್ಟರಲ್ಲಿ ಪೂಜಾರೀ ನಾರ ...ಸುಬ್ರಾಯನೆಂಬುವನು ಭಾವಿಯೊಳಕ್ಕೆ ಧುಮಿಕಿದನು ...ದ್ದ ಮುದುಕಿಯು ಅಷ್ಟು ಹೊತ್ತಿಗೆ ಮುಳುಗಿ ಮೇಲಕ್ಕೆ ...ಇವರನ್ನು ಮೇಲ್ಕಂಡ ಸುಬ್ರಾಯನು ಹಿಡಿದುಕೊಂಡಿರು ...ದವಾರ್ ಚಿಕ್ಕನೆಂಬುವನು ಇಳಿದು ಮೇಲಕ್ಕೆ ತಂದನು ...ಹಿಂ ಅಡಿ ನೇಲೆ ನೀರು ತುಂಬಿದೆ ಈ ಹೆಣ್ಣು ಮದು ...ದು ಘಾಯವೂ ಆಗಿರಲಿಲ್ಲ ಇದರಲ್ಲಿ ಇನ್ನೊಂದು ಆಶ್ಚ ...ಂದರೆ—ಈಕೆ ಹಸೆಯಲ್ಲಿ ಬಿಟ್ಟಿದ್ದ ತುಂಕಮ ಸಹಾ ಅಳಿಸಿ ...ಲ್ಲ ವಯಸ್ಸಾಗಿದ್ದ ಮುದುಕಿ ಕಾಯಿಲೆ ಇದ್ದವರು ಭಾವಿ ...ಬಾಗಿಲು ಸಹಾ ಇದೆ ಇಂಥಾ ಆಳವಾದ ಭಾವಿಗೆ ಬೀಳಲು ...ಗೆ ಬಂತೋ ಭಾವಿ ಕಲ್ಲೇ ಬಲ್ಲದು ಈ ಸಂಗತಿಗಳು ...ಗೂ ಕೇಳಿದವರಿಗೂ ಆಶ್ಚರ್ಯವನ್ನೂ ಈಕೆಯ ವೃದ್ಧ ...ಮಕ್ಕಳಿಗೆ ಸಹಾ ಸಂತೋಷವನ್ನೂ ಪೋಲೀಸಿನವರಿಗೆ ...ವನ್ನೂ ಉಂಟುಮಾಡಿದವು

...ನರಸೀಪುರ —ಕಳೆದ ತಾ ೨೦ನೆ ಶನಿವಾರ ಬೆಳಗ್ಗೆ ನಾನು ...ಗುತ್ತಾ ಪೇಟೆಯನ್ನು ಪ್ರವೇಶ ಮಾಡುವುದರೊಳಗಾಗಿ ...ನರಸೀಪುರದ ತಾಲ್ಲೂಕು ಹೆಡ್ ಮುನಷಿ ವೆಂಕಟಾಚಾ

ರ್ಯರ ಮಗ ಸುಮಾರು ೯ ವರ್ಷ ವಯಸ್ಸುಳ್ಳ ಹುಡುಗನು ಚಿಟ್ಟನ ಹಳ್ಳಿ ಬೀದಿಗೆ ಸಮೀಪವಾದ ದಕ್ಷಿಣ ನಾಲಾಕ್ಕೆ ಈಜುವುದಕ್ಕೆ ಹೋಗಿ ಜವನ ತಪ್ಪಿ ನೀರಿನಲ್ಲಿ ಮುಳುಗಿಹೋದದ್ದನ್ನು ಆ ಹುಡುಗನ ಜೊತೆಯಲ್ಲಿ ಈಜುವುದಕ್ಕೆ ಹೋಗಿದ್ದ ಆ ಮಗುವಿನ ಅಣ್ಣನು ಘಟ್ಟಿಯಾಗಿ ಕೂಗಿ ಅಳಲಾರಂಭಿಸಿದ್ದನ್ನು ಹತ್ತಿರದಲ್ಲಿ ಬಟ್ಟೆಯೊಗೆಯುತ್ತಿದ್ದ ಹೆಂಗಸರು ನಾಲೆಯಿಂದ ಮೇಲಕ್ಕೆ ಓಡಿಬಂದು ಮಗು ನೀರಿನಲ್ಲಿ ಮುಳುಗಿದ ಸಂಗತಿಯನ್ನು ಘಟ್ಟಿಯಾಗಿ ಕೂಗಲು ನನಗೂ ಕೇಳಿಬರಲು ಆ ಕೂಡಲೇ ಬೇಗನೆ ಅಲ್ಲಿಗೆ ಹೋಗಿ ನೋಡುವಲ್ಲಿ ಇದೇ ಕಸಬಾದಲ್ಲಿ ವಾಸಮಾಡುವ ತಟ್ಟೆ ಕೆರೆ ಜೋಡಿದಾರ್ ಸೂರಪ್ಪನೆಂಬುವರು ಆ ಮಗುವನ್ನು ನೀರಿನಲ್ಲಿ ಹುಡುಕುತ್ತಾ ಒಂದು ಪುರುಷಪ್ರಮಾಣ ನೀರಿನಲ್ಲಿ ಮುಳುಗಿ ನೆಲವನ್ನು ಹಿಡಿದಿದ್ದ ಮಗುವನ್ನು ಮೇಲಕ್ಕೆ ಎತ್ತಿ ದಡಕ್ಕೆ ತಂದುಹಾಕಿ ನೋಡಿದಾಗ ಮಗುವು ಸ್ವಲ್ಪವೂ ಉಸಿರಾಡುವಂತೆ ಕಾಣಲಿಲ್ಲ ಶರೀರವೆಲ್ಲ ಆನೆಕಲ್ಲಿನಂತೆ ಶೀತವಾಗಿ ಕೊರೆಯುತ್ತಾ ನಾಡಿಗಳ ಗತಿ ನಿಂತುಹೋಗಿ ಕಾಲಿನ ಹಿಮ್ಮಡಿಯ ನಾಡಿ ಮಾತ್ರ ಸ್ವಲ್ಪ ಆಡುತ್ತಿತ್ತು ಇದನ್ನು ನೋಡಿದ ತಾಯಿಯ ಗೋಳಾದರೋ ಹೇಳಲಸದಳವಾಗಿದ್ದಿತು ಆ ಮಗುವು ಬಹಳ ನೀರು ಕುಡಿದು ಅದರಿಂದಲಾದ ಹೊಟ್ಟೆಯುಬ್ಬರವು ಚಿಕಿತ್ಸೆಯ ಮೂಲಕ ನೀರು ಹೊರಕ್ಕೆ ಬರಲು ಹೊಟ್ಟೆಯುಬ್ಬರವು ಇಳಿದು ೧೦ ನಿಮಿಷ ತಡವಾಯಿ ಮಗುವಿನ ಅಂಗಾಂಗಗಳಿಗೆಲ್ಲಾ ಚನ್ನಾಗಿ ವಿರಣಿ ಬೂದಿಯನ್ನು ಉಜ್ಜಲಾರಂಭಿಸಿದ ನಾಲ್ಕು ನಿಮಿಷಗಳ ನಂತರ ಪಟ್ಟಿಯಾಗಿ ನರಳಿ ಅಳಲಾರಂಭಿಸಿದನು ಆಗ ಮಗುವನ್ನು ಎತ್ತಿಕೊಂಡು ಮನೆಗೆ ಕರೆದುಕೊಂಡು ಹೋದರು ಹೊತ್ತು ಹೊತ್ತಿಗೆ ಸ್ವಲ್ಪ ಗುಣಮುಖವಾಗುತ್ತಲಿದೆ. ಇಂಥಾ ಮಹದುಪಕಾರ ಮಾಡಿದ ಆ ಜೋಡಿದಾರ್ ಮೆ॥ ಸೂರಪ್ಪನವರ ಸಾಹಸವನ್ನು ಎಲ್ಲರೂ ಕೊಂಡಾಡತಕ್ಕದ್ದಾಗಿದೆ.

ಆನೆಕಲ್ಲು —ಈ ತಾಲ್ಲೂಕಿನಲ್ಲಿ ಮಳೆ ಚನ್ನಾಗಿ ಆಗಿ ಕೆರೆ ಕುಂಟೆಗಳು ತಕ್ಕ ಮಟ್ಟಿಗೆ ಭರ್ತಿಯಾಗಿ ಪೈರುಗಳು ಸಾಧಾರಣವಾಗಿ ಚನ್ನಾಗಿರುತ್ತೆ ಆದರೆ ದಾರಿಗಳು ಮಾತ್ರ ಮಾಮೂಲು ಮೇರೆ ಇರುತ್ತೆ —ಇದೇ ತಾಲ್ಲೂಕು ಚಂದಾಪುರದ ಸಂತೆಯು ಹೊಸೂರು ರೋಡು ೧೫ ನೆ ಮೈಲಿಯಲ್ಲಿ ಒಂದು ತೋಪಿನಲ್ಲಿ ನಡೆಯುವದು ಆ ದಿನವೂ ಶನಿವಾರ ಇಲ್ಲಿಗೆ ಸಂತೆ ಕೂಡುವದಕ್ಕೆ ಮೊದಲು ಗಂಟುಕಳ್ಳರು ಕಾದಿದ್ದರು ಎಂಬಂತೆ ದಾರಿಯಲ್ಲಿ ದಾಗಿ ವಗ್ಗೆರೆ ದಿವಸಿ ತೆಗೆಯುವವರು ಸಂತೆಗೆ ಅರ್ಧ ಮೈಲಿಯಿಂದ ಒಂದೂವರೆ ಮೈಲಿ ಫಾಸಲೆಯಲ್ಲಿ ಹಳ್ಳಿ ಹೆಂಗಸರು ಬರುವದನ್ನೇ ಎದುರು ನೋಡುತ್ತಾ ಇರುತ್ತಾರೆ ಇವರಲ್ಲಿರುವ ಅಳತೆ ಸೇರುಗಳು ೫ ಪಾವಿಗೆ ಮೀರಿದ್ದಾಗಿರುತ್ತೆ ಸಂತೆಯಲ್ಲಿ ಅಳೆಯುವ ಸೇರುಗಳು ತೂಗುವ ಬಚ್ಚುಗಳು ಕ್ರಮವಾಗಿಟ್ಟು ವ್ಯಾಪಾರ ಮಾಡುವವರು ಅಪರೂಪ ಸೇರಿಗೆ ೩ ಪಾವು ಮೀಣವಿಗೆ। ಮಣ ಕೊಟ್ಟು ಮೋಸಮಾಡತಕ್ಕ ಮಹನೀಯರು ಅನೇಕರು ಈ ಸಂತೆಯ ವರ್ತಕಮಂಡಲಿಯ ಎರಾಗಿರುತ್ತಾರೆ ಅಲ್ಲದೆ ಇಲ್ಲಿ ಜಾನವಾರುಗಳೂ ಮಾರಾಟಕ್ಕೆ ಜಮಾಯಿಸಲ್ಪಡುವವು ಇದ ಪ್ರತಿ ವಾರವೂ ೨೦೦ರ ಮೇಲೆ ಗಾಯಕಸಾಬ್ ಸಾಹೇಬರುಗಳು ಹಿಡಿಸುಕೊಳ್ಳುವರು ಈ ತೋಪಿನಲ್ಲಿ ಸಂತೆ ಸಾಯಂಕಾಲದೊಳಗಾಗಿ ೧೫ ಗೋಕಾಯಿಗಳು ಭಕ್ಷಕರಪಾಲಾಗುವದು ಹೀಗೆ ನಡೆಯುವದು ಈ ಸ್ಥಳಕ್ಕೆ ಹಾನಿಕರವೆಂದು ಕೆಲವರು ಮಾತಾಡಿಕೊಳ್ಳುತ್ತಾರೆ — ಕಿವಾಯಿ ಸಂತೆಗೆ ಕೇವಲ ಸಮೀಪದಲ್ಲಿ ರಸ್ತೆ ಪಕ್ಕದಲ್ಲಿ ಚರ್ಮದ ವ್ಯಾಪಾರಸ್ತರು ಚರ್ಮಗಳನ್ನು ಜಮಾಯಿಸಿ ರಾಶಿ ಹಾಕುತ್ತಾರೆ ಇದರಿಂದ ರಸ್ತೆಯಲ್ಲಿ ತಿರುಗುವ ಜನಗಳಿಗೆ ಬಹಳ ಅಸಹ್ಯವೂ ಅನಾರೋಗ್ಯವೂ ಉಂಟಾಗುತ್ತೆ ಇದಕ್ಕೆ ಪೋಲೀಸಿನವರು ನಿಗಾ ಕೊಟ್ಟರೆ ಚನ್ನಾಗಿದ್ದೀತು ಅಲ್ಲದೆ ಈ ಸಂತೆಯಿಂದ ಆನೆಕಲ್ಲು ಟವನಿನಲ್ಲಿ ಸೇರುವ ಪಟ್ಟಣವಳಿಯು ಕಮ್ಮಿಯಾಗಿ ವರ್ತಕರಿಗೆ ವ್ಯಾಪಾರವಿಲ್ಲದೆ ಕ್ಷೀಣಗತಿಗೆ ಬಂದು ಕಡೆಗೆ ಟವನ್ ಬಹಳ ಕ್ಷೀಣಿಸಬಹುದೆಂದು ಯೋಚಿಸಬೇಕಾಗಿರುತ್ತೆ ಈ ಸಂತೆಯು ರೈತರಿಗೆ ಬಹು ತೊಂದರೆಕೊಡುತ್ತಾ ಇರುತ್ತೆ. ಹೊಲಗಳಲ್ಲಿ ಆಗುವ ಸಣ್ಣ ಸಣ್ಣ ಕಳುವುಗಳನ್ನು ಯಾರಲ್ಲಿಯೂ ಹೇಳಿಕೊಳ್ಳಲು ಆಗದೆ "ತಿನ್ನಮ್ಮನ್ಮಗಾರ ತಮಲೋ ತಾನೇ ಲೆಂಜಲೈರಿ" ಎಂಬಂತೆ ಸುಮ್ಮನಿರಬೇಕಾಗಿರುತ್ತೆ ಇದಲ್ಲದೆ ಸ್ವಲ್ಪ ಊಹಿಸಿದರೆ "ಸೊಮ್ಮೊಕ್ಕ ವಾಯಾ, ಶನಿಯೂ ಪೋಂದೆ" ಎಂಬ ಗಾಥೆಗೆ ಸರಿಯಾಗುತ್ತೆ ಇದಕ್ಕಾಗಿ ಸಂತೆಯಿಂದ ಇಜಾ ಉಂಟಾಗಿದೆ ಎಂದು ಕೆಲವು ರೈತರು ಅರ್ಜಿ ಕೊಟ್ಟರುವದಾಗಿಯೂ, ಅದಕ್ಕಾಗಲೇ ಈ ಸಂತೆಯಲ್ಲಿ ವ್ಯಾಪಾರಿಗಳಾದ ಕೆಲವರು ಉಪಾಯವಾಗಿ ಸಂತೆ ಇರುವಂತೆ ಮಹಜರು ಮಾಡುವ ಏರ್ಪಾಟು ನಡಿಸುತ್ತಾ ಇರುತ್ತಾರೆ ಚನ್ನಾಗಿ ಹಲ್ಲು ಹತ್ತಿದ ಈ ಮಹನೀಯರು "ಊರಿಗೊಂದು ಕರಡಿ ಬಂದರೆ ಮನೆಗೊಂದು ಕೂದಲು" ಎಂದು ಮಾತಾಡಿಕೊಳ್ಳುತ್ತಾ ಇರುತ್ತಾರೆ ಇಂಥಾ ಕಡೆ ಆಗುವ ಸಂತೆಗಳು ನಷ್ಟಾ ಮಾಡಿದರೆ ಇಲ್ಲಿನ ರೈತರಿಗೆ ಬಹಳ ಮೇಲಾದೀತೆಂದು ಎಲ್ಲರೂ ಹಾರೈಸುತ್ತಾರೆ

ಚಿಕ್ಕನಾಯಕನಹಳ್ಳಿ —ಇಲ್ಲಿ ೮—೧೦ ದಿವಸಗಳಿಂದ ವಿಶೇಷ ಮಳೆಯಾಗಿ ಕೆರೆ ಕಟ್ಟೆಗಳೆಲ್ಲಾ ತುಂಬಿ ಹರಿಯುವದಲ್ಲದೆ ಬಾಡುತ್ತಿದ್ದ ಪೈರುಗಳು ನಗೆಮುಖದಿಂದ ಇರುವದಲ್ಲದೆ ಎಲ್ಲಾ ಪೈರುಗಳೂ ಹೊಡಕೆಗೆ ಬಂದಿರುತ್ತವೆ. ಇನ್ನು ಮುಂದೆ ಒಂದೆರಡು ಹದ ಮಳೆಯಾದರೆ ಬುಷ್ಕಿ ಬೆಳೆ ಸಂಪೂರ್ಣವಾಗಿ ಆಗುವದೆಂದು ಎಲ್ಲರೂ ಹರ್ಷಚಿತ್ತರಾಗಿರುವರು —ಇಲ್ಲಿನ ಮ್ಯುನಿಸಿಪಾಲಿಟಿಯು ತೃಪ್ತಿಕರವಾಗಿಲ್ಲ ಎಲ್ಲಿ ನೋಡಿದರೂ ಕಸ ಕುಪ್ಪೆಗಳು ತುಂಬಿದೆ ಲಾಂದ್ರ ಕಂಭಗಳಾದರೋ ಕೆಲವು ತೇಜೋಹೀನವಾಗಿ ಇರುವದಲ್ಲದೆ ಉಳಿದ ಕೆಲವು ಹುಣ್ಣಿಮೆಯ ದಿನ ರಾತ್ರಿ ಸಂಚರಿಸುವ ಮಿಣುಕು ಹುಳುಗಳಂತೆ ಕಾಂತಿಯುಕ್ತವಾಗಿ ಕಾಣುವವು —ಪೇಟೆಯಲ್ಲಿ ಕೆಲವು ಬವಳಿ ಅಂಗಡಿಗಳಲ್ಲಿ ಇಲಿಗಳು ಸತ್ತವೆಂದು ಅನೇಕರು ಜವಳಿ ವಗ್ಗೆರೆ ಬೇರೆ ಎತ್ತಿಸಿ ಅಂಗಡಿಗಳನ್ನು ಮುಚ್ಚಿದರು ನಮ್ಮ ಅಮಲ್ದಾರರು ಪ್ರತಿ ಮನೆ ಬಳಿಗೂ ಬಂದು ಗ್ರಾಮಸ್ಥರ ಆರೋಗ್ಯವನ್ನು ವಿಚಾರಿಸಿ ಎಲ್ಲರಿಗೂ ಧೈರ್ಯ ಹೇಳಿದ್ದಲ್ಲದೆ ಮೂರು ದಿವಸದೊಳಗಾಗಿ ಎಲ್ಲರೂ ಊರು ಬಿಡುವಂತೆ ದಂಡೂರೆ ಮೂಲಕ ತಿಳಿಸಿರುತ್ತಾರೆ. ಈ ಶೀತಕಾಲದಲ್ಲಿ ಊರು ಬಿಟ್ಟರೆ ತುಂಬಾ ತೊಂದರೆ ಹಿಂದೆ ಊರು ಬಿಟ್ಟಾಗ ಅನೇಕ ಮನೆಗಳಲ್ಲಿ ಕಳ್ಳತನ ವಗ್ಗೆರೆ ನಡೆದವು ಈಗ ಬಿಟ್ಟು ಹೋಗಿರುವ ಪೇಟೆಯಲ್ಲಿ ಸೋಮೈಯ್ಯನ ಅಕ್ಕ ಯಲ್ಲಮ್ಮನ ಮನೆಯಲ್ಲಿ ೨—೩ ದಿನಗಳ ಮುಂದೆ ಕಳ್ಳತನ ನಡೆದು ಕೆಲವು ಸಾಮಾನು ವಗ್ಗೆರ ಹೋದವೆಂದು ಆಕೆ ಪೇಟೆಯಲ್ಲೆಲ್ಲಾ ಹೊಡೆದುಕೊಂಡು ತಿರುಗುತ್ತಾಳೆ ಈ ಕಳ್ಳತನವಾಗುತ್ತೆಂಬ ಭಯದಿಂದಲೂ, ಕೂಲಿ ವಗ್ಗೆರೆ ಮಾಡುವ ಜನರಿಗೆ ಗುಡಿಸಲುಗಳಲ್ಲಿ ಕೆಲಸವಿಲ್ಲದೆ ಹೋಗುವುದರಿಂದಲೂ, ದವಸಗಳ ಧಾರಣೆ ಜಾಸ್ತಿಯಾಗಿರುವದರಿಂದಲೂ, ಹಿಂದೆ ಪೇಟೆಯಿಂದ ೩೦ ಗುಡಿಸಲು ಸಾಮಾನು ಸಹಿತ ಬೆಂದುಹೋದದ್ದರಿಂದಲೂ ಜನರು ಭಯಪಟ್ಟು ಜೀವನ ಮಾಡಲು ಯುಕ್ತವಿಲ್ಲವೆಂದು ಅನುಮಾನಿಸುತ್ತಾರೆ. ಈ ಊರಿನ ಮಧ್ಯರಾಷ್ಟ್ರವಲ್ಲಿಯೇ ಶೇಂದಿ ಅಂಗಡಿಯೂ ಕಸಾಯಿ ಅಂಗಡಿಗಳೂ ಚರ್ಮದ ಮಂಡಿಗಳೂ ಇಟ್ಟಿರುವದರಿಂದ ಇದರ ವಾಸನೆಯು ತುಂಬಾ ವ್ಯಾಪಿಸಿ ೨—೩ ವರ್ಷಗಳಾದಾಗ್ಯೂ ಈ ರೋಗದ ಹಾವಳಿ ತಪ್ಪಲೇ ಇಲ್ಲ. ದಯಾಳು ಸರ್ಕಾರದವರು ಇವುಗಳನ್ನು ಬೇರೆ ಇಡಿಸಿ ಆರೋಗ್ಯವನ್ನುಂಟುಮಾಡಬೇಕು —ಈ ಊರಿನ ದೇವಾಂಗದವರಲ್ಲಿ ಮುಖ್ಯಸ್ಥರಾದ ಜವಳಿ ಅಂಗಡಿ ಕಲಸೈಯ್ಯನವರು ಹಾರ್ಟ್ ಫಾಯಿಲಿನಿಂದ ಕಾಲವಾದದ್ದಕ್ಕೆ ಇಲ್ಲಿನ ಎಲ್ಲಾ ಜನಗಳೂ ತುಂಬಾ ಸಂಕಟಪಟ್ಟರು ಇವರು ಬಡವರಿಗೆ ಅನೇಕ ಸಹಾಯಗಳನ್ನು ಮಾಡಿ ಧರ್ಮಾತ್ಮರೆಂದು ಹೆಸರು ಪಡೆದಿದ್ದರು ಇವರ ಮನೆಯವರು ಇವರಿಗೆ ಉತ್ತರ ಕ್ರಿಯೆಗಳನ್ನು ಮಾಡಿದಾಗ ಪರಸ್ಥಳದಿಂದ ಪುರೋಹಿತರನ್ನು ಕರೆಸಿ ಶಾಸ್ತ್ರೋಕ್ತವಾದ ದಶದಾನಗಳನ್ನು ಮಾಡಿದ್ದಲ್ಲದೆ ಈ ಊರಿನ ಎಲ್ಲಾ ಬ್ರಾಹ್ಮಣರು, ಜಂಗಮರು, ದಾಸರು, ಫಕೀರರು, ಗೋಸಾಯಿಗಳು, ಇವರಿಗೆಲ್ಲ ಬಟ್ಟೆಗಳನ್ನೂ ಪಾತ್ರೆಗಳನ್ನೂ ದವಸ ಧಾನ್ಯಗಳನ್ನೂ ಅನೇಕವಾಗಿ ಕೊಟ್ಟು ಸಂತುಷ್ಟಿ ಪಡಿಸಿದ್ದಲ್ಲದೆ ದೊಡ್ಡ ಸಮಾರಾಧನೆ ಸಹಾ ಮಾಡಿಸಿದರು ಇವರಿಂದ ಸಹಾಯ ಪಡೆಯುತ್ತಿದ್ದ ಅನೇಕ ಬಡಬಗ್ಗರು ಇವರಿಗೆ ಪ್ರಾಪ್ತವಾದ ಪರಲೋಕ್ಕೆ ಈಶ್ವರ ಇಂಥಾ ಪುಣ್ಯಾತ್ಮರನ್ನು ಕಳೆದುಕೊಂಡೆವೆಂದು ತುಂಬಾ ಸಂಕಟಪಟ್ಟರು

ಮಂಡ್ಯ —ಈ ತಿಂಗಳು ಪ್ರಾರಂಭದಿಂದ ಈ ವರೆಗೂ ಮಳೆ ಬಹಳವಾಗಿ ಬರುತ್ತಾ ಇದೆ ಸದ್ಯ ಪ್ಲೇಗ್ ಪಿಂಚ ಹಾಗೆ ಕಾಣುತ್ತದೆ ಆದರೂ ಕಲ್ಲಹಳ್ಳಿ, ಕೋಣನಹಳ್ಳಿ ತಂಪ್ಪನಹಳ್ಳಿ ಮುಂತಾದ ಚಿಕ್ಕ ಗ್ರಾಮಗಳಲ್ಲಿ ಪ್ಲೇಗ್ ತಲೆದೋರಿ ಈ ವರೆಗೂ ೧೦—೧೨ ಜನರು ಮೃತಪಟ್ಟಿರುತ್ತಾರೆ ಗ್ರಾಮದವರೆಲ್ಲಾ ಊರು ಬಿಟ್ಟು ಗುಡಿಸಲುಗಳಲ್ಲಿ ವಾಸಮಾಡುತ್ತಾರೆ ಇಲ್ಲಿನ ಜನರು ಪ್ಲೇಗ್ ಪ್ರಾರಂಭವಾದ ೭—೮ ತಿಂಗಳಿಂದ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರಷ್ಟೆ ಈ ಸಮಯದಲ್ಲಿ ಕಳ್ಳರ ಕಾಟ ಬಹಳವಾಗಿದೆ ಜನರು ತಮ್ಮ ತಮ್ಮ ಮನೆಗಳಿಗೆ ಭದ್ರವಾಗಿ ಬೀಗ ಹಾಕಿಕೊಂಡಿದ್ದಾಗ್ಯೂ ಬೀಗಗಳನ್ನು ಕಿತ್ತುಕೊಂಡು ಹೋಗುವದು ಇಲ್ಲವೇ ಮುರಿಯುವದು, ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾಗ್ಯೂ ಗುಡಿಸಲನ್ನು ಅನಾಮತ್ತಾಗಿ ರಾತ್ರಿ ಹೊತ್ತು ಎತ್ತುಬಿಡುವದು, ಹೀಗೆ ಮಾಡುತ್ತಾರೆ ಪೋಲೀಸಿನವರ ಉಸ್ತುವಾರಿ ಕಮ್ಮಿ ಆಗಿರುವುದರಿಂದ ಮುಖ್ಯವಾದವರೆಲ್ಲಾ ಊರಲ್ಲಿ ನಿಲ್ಲದಿರುವುದೇ ಕಷ್ಟ ಇದಿರ ವಿಷಯ ನಮ್ಮ ಅಮಲ್ದಾರರೂ, ಇನ್ಸ್‌ಪೆಕ್ಟರೂ ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇವೆ.—ಇಲ್ಲಿಗೆ ೧। ಮೈಲಿ ದೂರದಲ್ಲಿರುವ ಕೋಣನಹಳ್ಳಿ ಎಂಬ ಗ್ರಾಮದಲ್ಲಿ ಒಬ್ಬ ಗಂಡಸು ಪ್ಲೇಗ್‌ನಲ್ಲಿ ಮೃತಪಟ್ಟು ೩ ದಿನಗಳಾದ ಮೇಲೆ ಅವನ ಹೆಂಡತಿಯೂ ಅದೇ ವ್ಯಾಧಿಯಲ್ಲಿ ಮೃತಪಟ್ಟಳೆಂತಲೂ, ಇವರ ಒಂದು ಚಿಕ್ಕ ಮಗುವು ಜೀವಸಹಿತ ಇದ್ದಾಗ್ಯೂ ತಾಯಿ ಸತ್ತ ಮಾರನೆ ದಿನ ಬೆಸ್ತರು ಸ್ಮಶಾನದ ಭೂಮಿಗೆ ಆ ಶವವನ್ನು ಮಣ್ಣುಮಾಡುವದಕ್ಕೆ ಹೋದಾಗ ಅಳುತ್ತಿದ್ದ ಚಿಕ್ಕ ಮಗುವನ್ನು ಬೆಸ್ತರು ತಮ್ಮ ಹತ್ರ ಇಟ್ಟುಕೊಳ್ಳುವದಕ್ಕೆ ಭಯಪಟ್ಟು ಅದನ್ನೂ ಶವದೊಂದಿಗೆ ಜೀವ ಸಹಿತ ಹಾಕಿಬಿಟ್ಟು ಮಣ್ಣು ಮಾಡಿದರೆಂತಲೂ, ಇದನ್ನು ಒಬ್ಬ ಮುಸಲ್ಮಾನರವರು ನೋಡಿ ಪೋಲೀಸಿಗೆ ರಿಪೋರ್ಟ್ ಮಾಡಿದರೆಂತಲೂ, ಅವರನ್ನು ಗ್ರಾಮದ ಪಟೇಲನ ಸಮೇತ ಕಳೆದ ಶುಕ್ರವಾರ ಹಿಡಿದು ತರಿಸಿದರೆಂತಲೂ ವರ್ತಮಾನವಿದೆ —ಈ ತಾಲ್ಲೂಕಿಗೆ ೮ ಮೈಲಿ ದೂರದಲ್ಲಿರುವ ಹೂಲಿಕೆರೆ ಗ್ರಾಮದಲ್ಲಿ ೧೬ನೇ ತಾರೀಖಿನಿಂದ ೨೦ರ ವರಿಗೂ ಮಹಾದೇಶ್ವರಸ್ವಾಮಿಯ್ಯನ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯಿತು ಜನರು ತಂಡೋಪತಂಡವಾಗಿ ಸುತ್ತುಮುತ್ತಲು ಇರುವ ಗ್ರಾಮಗಳಿಂದ ಬಂದು ಇದ್ದರು. ಆ ಜಾತ್ರೆಯಲ್ಲಿ ನಡೆದ ವಿಶೇಷವೇನಂದರೆ—ಸರಗೂರಯ್ಯ ಎಂಬ ಮಹಾ ಭಕ್ತನು ಜಾತ್ರೆಗೆ ಬಂದು ಆ ದೇವತೆಯ ಪಕ್ಕದಲ್ಲಿ ಆಗ್ರಾಸನವನ್ನು ವಹಿಸಿ ಜನರು ತಂದ ಕಾಣಿಕೆ, ಮುಡುಪುಗಳನ್ನು ದೇವತೆಗೆ ಸಲ್ಲಿಸಿದಾಗ್ಯೂ ಮುಖ್ಯವಾಗಿ ತನಗೆ ಸಲ್ಲಿಸಬೇಕೆಂತಲೂ ಅವಕ್ಕೆ ಅಡ್ಡಬಿದ್ದಾಗ್ಯೂ ತನಗೆ ಅಡ್ಡಬೀಳಬೇಕೆಂತಲೂ ಜನರಲ್ಲಿ ಯಾರಾದರೂ ಕಟ್ಟಿಕೊಂಡಿದ್ದ ಹರಕೆಗಳನ್ನಾಗಲಿ, ಮುಡುಪುಗಳನ್ನಾಗಲಿ ಕೊಡುವದಕ್ಕೆ ಮರೆತುಬಿಟ್ಟು ಹಣ್ಣು ಹಂಪಲು ಮಾತ್ರ ಅರ್ಪಿಸಿದರೆ, ನೀವು ಕಟ್ಟಿದ್ದ ಮುಡುಪು ಎಲ್ಲಿ ಎಂದು ಪ್ರಶ್ನೆ ಹಾಕುತ್ತಾ, ಹರಕೆ ಮುಡುಪಿನ ಮೊಬಲಗು ಇಷ್ಟೆಂದು ಹೇಳುತ್ತಾ ಅವುಗಳನ್ನು ತಂದು ಸಲ್ಲಿಸುವ ವರಿಗೂ ಅವರನ್ನು ಬಹಳವಾಗಿ ಪೀಡಿಸುತ್ತಾ ಇದ್ದನು ಇದನ್ನು ನಾನು ಆ ಜಾತ್ರೆಗೆ ಹೋದಾಗ ನೋಡಿ ಸಂಗತಿಗಳನ್ನೆಲ್ಲಾ ಕೇಳಿ, ಜನರು ಆ ಭಕ್ತನ ಮಾತಿಗೆ ಮರುಳಾಗಿ ತಂದ ಕಾಣಿಕೆಗಳನ್ನು ಅವನಿಗೆ ಸಲ್ಲಿಸುತ್ತಾ ಇರಲ್ಲಾ ಎಂದು ಆಶ್ಚರ್ಯಪಟ್ಟೆನು. ಇದರಿಂದ ಜನರ ಮೌಢ್ಯವು ಎಷ್ಟರ ಮಟ್ಟಿಗೆ ಇದೆ ಎಂದು ಬಹಳ ವ್ಯಸನದಿಂದ ತಿಳಿಸಬೇಕಾಗಿದೆ —ಕಳೆದ ಗುರುವಾರ ಬೆಳಗ್ಗೆ ದೊಡ್ಡಪೇಟೆಯಲ್ಲಿ ಸೂರಕೆಟ್ಟಿ ತಮ್ಮ ಅಂಗಡಿ ಬಾಗಲು ತೆರೆದಾಗ ಶುನಕ ಬೆಕ್ಕು ಹಿಂದೆ ಮೊರಬ್ಬಾ ಹಾಕಿಟ್ಟ ಜಾಡಿಯಲ್ಲಿ ತಲೆ ಹಾಕಿಕೊಂಡಿದ್ದದ್ದನ್ನು ನೋಡಿ ಕೆಲವರನ್ನು ಅಂಗಡಿಗೆ ಕರೆದುಕೊಂಡುಹೋಗಿ ಮೆಲ್ಲಗೆ ಹಗ್ಗದಿಂದ ಕಟ್ಟಿ ಜಾಡಿ ಸಮೇತ ಹೊರಗೆ ತಂದು ಜಾಡಿಯನ್ನು ಒಡೆದುಹಾಕಿದ ಮೇಲೆ ಅದಕ್ಕೆ ಜೀವ ಬಂತು ಇದನ್ನು ನೋಡುವದಕ್ಕೆ ಜನರು ಬಹಳವಾಗಿ ನೆರೆದಿದ್ದರು.

ಹಾಸನದ ಟೋಪಿಗಳು.

128-4

ಒಳ್ಳೇ ಸಮಯ, ಬಿಡಬೇಡಿರಿ.

ಮೊದಲು ಹಾಸನದಲ್ಲಿದ್ದು ಹೆಸರುವಾಸಿ ಹೊಂದಿರುವ ಟೋಪಿಗಳನ್ನು ಮಾಡಿಸುತ್ತಿದ್ದ ಕಿಂಗ್ ದೊರೆಸಾನಿಯವರು, ಈಗ ತುಮಕೂರಲ್ಲಿ, ಶ್ರೇಷ್ಠತರವಾದ ಟೋಪಿಗಳನ್ನು ಮಾಡಿಸುತ್ತಿದ್ದಾರೆ. ಇವರಲ್ಲಿ ಮಧ್ಯಮತರದ ಟೋಪಿಗಳು ಹೆಚ್ಚಾಗಿ ಉಳಿದಿರುವದರಿಂದ ಇವನ್ನು ಒಂದು ತಿಂಗಳ ವರಿಗೆ ಕಡಿಮೆ ಕ್ರಯಕ್ಕೆ ಬಿಕರಿ ಮಾಡುತ್ತಾರೆ. ಹ್ಯಾಗಂದರೆ:—

ಮೊದಲಿದ್ದ ಕ್ರಯ ಡಜನ್ 1ಕ್ಕೆ 10½ ರೂಪಾಯಿ.
ಈಗ ಮಾರುವ ಕ್ರಯ ,, 9 ರೂಪಾಯಿ.
ಇನ್ನೊಂದು ತರದವುಗಳು.
ಮೊದಲಿದ್ದ ಕ್ರಯ ಡಜನ್‌ಗೆ 9 ರೂಪಾಯಿ.
ಈಗ ಮಾರುವ ಕ್ರಯ 7½ ರೂಪಾಯಿ.
ಮಿಶ್ರವಾದ ಬಣ್ಣದವುಗಳು.

ವಿಳಾಸ:—ಕಿಂಗ್ ದೊರೆಸಾನಿಯವರು,

ಹಾಸನದ ಟೋಪಿ ಮ್ಯಾನೇಜರ್, ತುಮಕೂರು.

೧೮೭೯ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು; ನಾನಾ ತರದ ಕೆಮ್ಮಲು,

ಸಕಲವಿಧ ಕೃಶ್ಯಗಳು; ಮಾಂಸಖಂಡಗಳ ಕ್ಷೀಣತೆ;

ಆಹಾರದಲ್ಲಿ ಅರುಚಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ. 57-32

ಕೈ ಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವದು.

120-7

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎಡಗಡೆಯಾಗಿ ಒಂದು ಫರ್ಲಾಂಗಿನೊಳಗೆ ಇರುವ ದೇವಾಗ್ರದ ಸ್ಥಿತಿಯು ಪೈಕಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರಣೆ	ಸರ್ವೆ ನಂಬರು.	ಬೀಜವರಿ.		ಆಕಾರ.
ಕಾವೇರಿನಾಲೆ ಕೆಳಗಿನ		ಎಕರೆ–ಗುಂಟೆ		ರೂ.
ಗದ್ದೆಗಳು	೩೦	೭	,,	೨೩
	೧೦೩	೬	೨೨	೩೭
	೧೦೭	೫	೧೩	೩೯
	೧೦೫	೫	೨೮	೩೯
	೧೦೬	೬	೩೨	೪೮
ಜುಂಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇದರಡಿ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಮಾದರಿ ಒಳಗಾಗಿ ಆಲೋಚಿಸಲಾಗುತ್ತದೆ

ಜಮೀನಿನ ವಿವರಣೆ	ಸರ್ವೆ ನಂಬರು.	ಬೀಜವರಿ		ಆಕಾರ.
ಕಾವೇರಿ ನಾಲೆ ಕೆಳಗಿನ		ಎಕರೆ–ಗುಂಟೆ		ರೂ.
ಗದ್ದೆಗಳು	೧೦೦	೩	೧೫	೨೭
	೧೦೧	೩	೯	೨೩
	೧೦೨	೩	೯	೨೩
	೬೦	೫	೩೨	೪೩
ಜುಂಲಾ	೪	೧೫	೩೧	೧೧೩
ಮೇಲೆ ಕಂಡ ಜಮೀನು	೨೧	೩	೪	೨೮
ಗಳಿಗೆ ಹತ್ತಿರುವ	೭೨	೪	೨೭	೪೨
ಧೃವಮೈಲು ಬಾಗಾಯಿತು	೭೩	೪	೧೬	೪೦
	೫೯	೪	೨೪	೩೯
ಜುಂಲಾ	೪	೧೬	೩೯	೧೪೯
ಒಟ್ಟು ಜುಂಲಾ	೧೩	೩೧	೯	೪೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ಪಬ್ಲಿಕ್ ಪ್ರಾಸಿಕ್ಯೂಟರು — — — ಎಸ್. ಟಿ. ವೆಂಕಟಾದ್ರಿಯಯ್ಯಂಗಾರ್ರಿಗೆ ತಲಪಿಸಬೇಕು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . . . ರೂ. ೧—೧೪—೦

,, ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಯೋಗ್ಯ ಕೆಂಪು ಮತ್ತು ತಾಜಾ ಕಪ್ಪು.

ಹಾಸನ ಪೂಲನ್‌ದಾರ.

315-5

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್‌ದಾರ ಮಾತ್ರ.

	ರೂ.	ಆ.	ಪೈ.
೧೦ ಟೋಪಿ ಆಗುವ ಪೂಲನ್ ದಾರದ ಕ್ರಯ	೦	೮	೦
೧ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦	
ಹಾಸನ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ ೦	೧	೯	
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ. ಯಿಂದಲೂ ರವಾನಿಸುತ್ತೇವೆ.

ವಿಳಾಸ— ಸಿ. ರಘುನಾಥ ಕಾಮತ್,

ಪೂಲನ್ ಮರ್ಚಂಟ್.

ಬೋಳಾರ, ಮಂಗಳೂರು.

ಸನ್ ೧೯೦೭ ನೇ ಇಸವಿಯ

130-3

ಎಂ. ನಂ॥ ಎಫ್. ನಂ॥ ಬಿ. ನಂ॥ ಸಿ. ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಖುಷ್‌ಬಾಷ್‌ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು — ಪ್ಲವಂಗ ಸಂ॥ ಪಂಚಾಂಗ, ಗ್ರಹ ಕಾಂಪಲಿ ಸಹಿತ, ಕ್ಯಾಲೆಂಡರು, ಪಟ್ಟಿಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಶೀಘ್ರುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ ಪ್ರಶ್ನೆ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ನೋಟಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ. ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೇಮ ಕಾನರ್ಸ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ.

ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ.
ಎಫ್. ,, ,, ೪ ,, ಎಚ್ ,, ,, ೭ ,,
ಬಿ ,, ಮುಚ್ಚಳದ್ದು ೫ ,, ಡಿ. ,, ಮುಚ್ಚಳದ್ದು ೮ ,,

ಪೋಸ್ಟ್ ಚಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಶ್ರೀ ಕೃಷ್ಣವಿಲಾಸ ಪ್ರೆಸ್, ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—6

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಎರ್ಚುಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಪ್ರಸಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು— ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾಂಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸೈನ್) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ ಎ.,

ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರಂ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜೆಂಟ್.

ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

5—10—1906 ರಿಂದ 12—10—1906 ರ

ಸ್ಥಳ.	ಪ್ಲೇಗ್ ಆಗಿದ್ದು.	ಪ್ಲೇಗ್ ಸತ್ತದ್ದು.	ಕೊ…
ಬೆಂಗಳೂರು ಪಟ್ಟಣ	5	6	0
ಮೈಸೂರು ,,	18	4	0
ಬೆಂಗಳೂರು ಡಿಸ್ಟ್ರಿಕ್ಟು	98	15	30
ಮೈಸೂರು ,,	3	1	5
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	1
ತುಂಕೂರು ಡಿಸ್ಟ್ರಿಕ್ಟು	20	16	3
ಹಾಸನ ,,	48	58	0
ಚಿತ್ರದುರ್ಗ ,,	4	1	0
ಕಡೂರ್ ,,	104	84	7
ಶಿವಮೊಗ್ಗ ,,	0	0	8
ಜುಮ್ಲಾ.	332	179	64

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಕಾರ್ತೀಕ ಶುದ್ಧ ಅಷ್ಟಮಿ ಗುರುವಾರದಿಂದ ಕಾರ್ತೀಕ ಚತುರ್ದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ, ೧೯೦೬ ನೇ ಇಸವಿ ಅಕ್ಟೋಬರು

ತಾ.	ವಾರ.	ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.
25	ಗುರು	ಅಷ್ಟಮಿ	11-10	ಶ್ರ	51 20
26	ಶುಕ್ರ	ನವಮಿ	7-7	ಧ	49-42
27	ಶನಿವಾ ‡	ದಶಮಿ	3-56	ಶ	48-56
28	ರವಿವಾ *	ಏಕಾದಶಿ	1-50	ಪೂಭಾ	49-29
29	ಚಂದ್ರ ¶	ದ್ವಾದಶಿ	0-52	ಉಭಾ	51-32
30	ಕುಜ ,,	ತ್ರಯೋ	1-12	ರೇ	51 2
31	ಬುಧ	ಚತುರ್ದಶಿ	2-58	ಕ್ವಿ	57-59

‡ ಮಹಾವ್ಯತೀಪಾತ, ಮೇಲುಕೋಟೆಯಲ್ಲಿ ಅಷ್ಟತೀರ್ಥೋ… * ಸರ್ವತ್ರಪ್ರಬೋಧನ್ಯೇಕಾದಶಿ. ¶ ಉತ್ಥಾನದ್ವಾದಶಿ, ನಂಜನಗೂಡಲ್ಲಿ ರುದ್ರಾಕ್ಷಿ ಮಂಟಪೋತ್ಸವ, ಶ್ರೀರಂಗಪಟ್ಟಣದ ಪ್ಲವಂಗನ…ವ, ಕಾರ್ತೀಕಸೋಮವಾರ ;, ವೈಕುಂಠಚತುರ್ದಶಿ, ಮೇಲುಕೋಟೆಯಲ್ಲಿ ಅಷ್ಟತೀರ್ಥರಥ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗ…
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೪-೦-೦	
ಕೆಂಬೂತಿ ಅಕ್ಕಿ ಅವಲ್	.	೧೩-೮-೦	
,, ದುಯಂ	.	೧೩-೮-೦	
ಜಾವಾಳಿ ಅಕ್ಕಿ	. .	೧೩-೪-೦	
ಸಣ್ಣಕ್ಕಿ ಅವಲ್	. .	೧೫-೮-೦	
,, ದುಯಂ	. .	೧೪-೦-೦	
ತೊಗರೀ ಬೇಳೆ ಪಲ್ಲಾ ೧ಕ್ಕೆ	.	೧೭-೬-೦	
,, ದುಯಂ	.	೧೧-೮-೦	
ಹುರಿ ರಾಗಿ ಪಲ್ಲಾ ೧ಕ್ಕೆ	. .	೭-೪-೦	
ಹಾರಾಗಿ	. .	೭-೪-೦	
ಜೋಳ	. .	೭-೮-೦	
ಹಲಸಂದೆ ಪಲ್ಲಾ ೧ಕ್ಕೆ	. .	೧೭-೦-೦	
ಬಿಳೀ ಅವರೆ	. .	೧೧-೦-೦	
ಹೆಸರು	. .	೧೩-೦-೦	
ಉದ್ದು	. .	೧೧-೪-೦	
ಕಡಲೆ	. .	೧೭-೦-೦	
ಎಳ್ಳು ಸೆ ೧೨೩ಕ್ಕೆ	. .	೨೦-೮-೦	
ಹುರುಳಿ	. .	೮-೮-೦	
ಹರಳು ೧೨೩ ಸೇರಿಗೆ	. .	೧೯-೦-೦	
ಸೀಗೇಕಾಯಿ ಮಣ ೧ಕ್ಕೆ	. .	೨-೨-೦	
ಮೆಣಸಿನಕಾಯಿ	. .	೪-೦-೦	
,, ದುಯಂ	. .	೩-೪-೦	
ಬೆಲ್ಲ ದೊಡ್ಡ ಅಚ್ಚು	. .	೪-೪-೦	
ಒಳ್ಳೆಣ್ಣೆ ಮಣ ೧ಕ್ಕೆ	. .	೬-೮-೦	
ಹರಳೆಣ್ಣೆ ,,	. .	೬-೦-೦	
ಕೊತ್ತುಂಬರಿ ಪಲ್ಲಾ ೧ಕ್ಕೆ	. .	೧೧-೦-೦	
ಉಪ್ಪು ,,	. .	೬-೦-೦	
ಮೆಣಸೇ ಹಣ್ಣು	. .	೦-೧೪-೦	
,, ಹಳೇದು	. .	೦-೮-೦	
ತುಪ್ಪ ಮಣ ೧ಕ್ಕೆ	. .	೧೬-೮-೦	
ಸೀಮೆಯೆಂಣೆ ಪೆಟ್ಟಿ ೧ಕ್ಕೆ	. .	೫-೪-೦	
ತೆಂಗಿನಕಾಯಿ ೧೦೦ಕ್ಕೆ	. .	೬-೮-೦	
ಅಳಲೇಕಾಯಿ ಮಣ ೧ಕ್ಕೆ	. .	೧-೦-೦	
ಅಂಟುವಾಳದ ಕಾಯಿ ಮಣ ೧ಕ್ಕೆ	. .	೦-೧೨-೦	
ಚಿನ್ನ (ಪೌನ್) ಕೆಂಪು	. .	೧೫-೪-೦	
,, ,, ಪಸಿಮೆ	. .	೧೫-೧೦-೦	
,, ,, ಗಟ್ಟಿ ತೊಲ ೧ಕ್ಕೆ	. .	೨೩-೧೦-೦	
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	. .	೮೫-೦-೦	

Printed and published by the Rev. E. THOMPSON, M.A., the Proprietor and Man… Wesleyan Mission Press, Mysore. 25/10/19…

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸರ್ ೧೯೦೬ ನೇ ಇಸವಿ ನವಂಬರ್ ತಾರೀಖು ೧ ನೇ ಗುರುವಾರ. ಸಂಚಿಕೆ ೨೨

ಇಂಡಿಯದ ದೊಡ್ಡ ನೋವುಹರ.

86 24

...ವನೋವಿಗಾವರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ. ...ತರದ ಪಾಯುನೋವು, ಅರತಲೆನೋವು, ನರಗಳ ಇರಿತ, ...ತ, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ...ಮ್ಮು, ಕೀಲುಬೇನೆ, ಎದೆಗಳ ನೋವು, ಆಸ್ತ್ಮ, ಈ ಪ್ರಕಾರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡ... ...ದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿ... ...ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡ್ಲೆ ...ವ್ಯಾಟಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿ ...ವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾ... ...ಬಾಟ್ಲಿ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ...ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗಿ ...ಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿ ...ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರ್ಲ್ಲಾ ...ದಿಗೆ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭ... ...ಕ್ರಯ —೧ ಬಾಟ್ಲಿಗೆ ೧೨ ಆಣೆ, ೩ ಕ್ಕೆ ೨ ರೂಪಾಯಿ, ...೩ ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ...ದ ಮೂರು ಬಾಟ್ಲಿ ವರಿಗೆ ೩ ಆಣೆ.

...ನ್ನ ವಿಳಾಸ —ಎಫ್. ಪಟ್ಟಿಯಮ ಆರ್ಗ, ಸಿವೆಂಟ್ರ ರೋಡ್, ವೇಪೇರಿ, ಮದರಾಸ್.

ಹೋ ಮೋ ಸಿ ಯಾ

ತಗಲುತ್ತಲೇ ನೋವು ವಾಸಿಯಾಗುತ್ತೆ

ಔಷಧಿಯು ಮನೆ, ಅರಮನೆ, ಕಾರ್ಖಾನೆ, ಆಸ್ಪತ್ರೆ, ...ಶಾಲಾ, ವಿದ್ಯಾಶಾಲೆ, ಕೋರ್ಟು, ಕಛೇರಿ, ಮುಂತಾದ ಸ್ಥಳ... ...ಇದ್ದೇ ಇರಬೇಕು ಇದಕ್ಕೆ ಸಮಾನವಾದ ಔಷಧ ಮತ್ಯಾ... ...ಲ್ಲವೆಂಬುವದು ಲೋಕಪ್ರಸಿದ್ಧವಾಗಿದೆ.

...ತೈಲವು ತಕ್ಷಣದಲ್ಲಿ ಜೀವರಾಶಿಗಳಿಗೆ ಮಹತ್ತಾಗಿ ಸಿಕ್ಕ... ...ಧ ಇದನ್ನು ಉಪಯೋಗಿಸಿದ ದೊಡ್ಡ ಮನುಷ್ಯರು, ಡಾಕ್ಟ... ...ಮುಂತಾದವರು ಅದರ ಗುಣವನ್ನು ಹೊಗಳಿ ಸರ್ಟಿಫಿಕೇ... ...ಕೊಟ್ಟಿದ್ದಾರೆ. ನೋವು ಕಂಡರೆ ಇದನು ಹಚ್ಚಿದ ಕೂಡಲೇ ...ಗುವದು

...ತೈಲವು ಅರೆ ತಲೆನೋವು, ಸೊಂಟನೋವು, ಪಾರ್ಶ್ವವಾ... ...ಶೂಲವ್ಯಾಧಿ, ಉಬ್ಬಸ, ವಾಯುಗಳು, ನರ ಹೊರಳುವದು, ...ಕೀಲುವಾಯು, ಗುಳ್ಳೆಗಳು, ಹಲ್ಲುನೋವು, ಮು... ...ಊದುಗಳು, ಗಡ್ಡೆಗಳು, ರಣಗಳು, ಹುಳುಕಡ್ಡಿ, ಸೊಳ್ಳೆ... ...ಳು ಕಡಿದದ್ದು ಚಿಪ್ಪಿರುವವು, ಬೆಂಕಿಯಲ್ಲಿ ಸುಟ್ಟ... ...ದ್ದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾಧೆಗಳನ್ನು ...ಸುತ್ತದೆ ರಾತ್ರಿ ಹಚ್ಚಿಕೊಂಡು ಮಲಗಿದರೆ ಸೊಳ್ಳೆ ಹತ್ತಿರ ...ಲ್ಲ

...ಯ—ಸಣ್ಣ ಡಬ್ಬಿ ೧ ಕ್ಕೆ ೧ ರೂ., ದೊಡ್ಡದಕ್ಕೆ ರೂ ...೧, ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪ್ಪಾಲ್ ಖರ್ಚು ...ಡುತ್ತಾರೆ ರೂ ೨—೮ ಆಣೆ ಬಾಬ್ತು ಡಬ್ಬಿದಲ್ಲಿ ೧ ...ಡಬ್ಬಿದಲ್ಲಿರುವದಕ್ಕಿಂತ ೩ ರಷ್ಟು ಹೆಚ್ಚು ಔಷಧವಿರುತ್ತೆ. —೮ ಆ ಈ ಡಬ್ಬಿವನ್ನು ತರಿಸಿಕೊಳ್ಳುವವರಿಗೆ ಟಪ್ಪಾಲ್ ...ಮಾಫಿ ಬಿಡುತ್ತೆ.

****

ಹೋಮೋಸಿಯಾ ಯಂಬ್ರೋಕೇಷನ್.

...ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ...ಹಿದ ಕಡೆ ಇದನ್ನು ಹಚ್ಚಕೂಡದು ಇದರಲ್ಲಿ ಹೋಮೋ... ...ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದಕ್ಕಿಂತಲೂ ...ಇನ್ನೆರಡು ಗುಣಗಳುಳ್ಳ ಹೊಸ ಭಾಗವಿರುತ್ತದೆ ಇದನ್ನು ...ಬಹು ಬೇಗನೆ ಸೇರಿಸಿಕೊಳ್ಳಬಲ್ಲದು ಡಬ್ಬಿಗಳಲ್ಲಿ ತುಂಬಿ ...೨, ೧ ರೂ. ಗೂ ಒಂದರಂತೆ ಬಿಕರಿ ಮಾಡಲ್ಪಡುವದು. ೧೨ ...ಸಿಕೊಂಡರೆ ಟಪ್ಪಾಲ್ ಖರ್ಚು ಮಾಫ್ ಎಲ್ಲಾ ದಾಸ್ತಗಳ ...ದೊರೆಯುವದು

...ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ...ಟುಗಳನ್ನು ಅಪೇಕ್ಷಿಸಿದವರ ಕಳುಹಿಸುವೆವು

...ಸ:—ಹೋಮೋಸಿಯಾ ಕಂಪೆನಿ, ೨೩ ಸೆಕಂಡು ಬೀಚ್ ...ಮದ್ರಾಸ್

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ತಯಾರುಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85-38

ವ್ಯಾಪಾರದ C C B C ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಹಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವ ರ ಹ ರಿ.

101.14



ಇದು ಸಾಧಾರಣ ಜ್ವರ, ಹಳೇಜ್ವರ, ಮರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ. ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ.

ಕ್ರಯ:—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ.; ರೂ. ೨—೧೨ ಆ., ೧೧ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓ ಮಂ ಕ ರ್ಪೂ ರ.

Omum Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ್ಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ತೆವ್ರಿಯವರ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ತೆವ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್

ನೋಟೀಸು.

131 3

ಶಿಡ್ಲಘಟ್ಟದ ಶುಭೋದಯ ಕಂಪೆನಿ, ಲಿಮಿಟೆಡ್.

ಈ ಕಂಪೆನಿ ಮೈಂಡಪ್ಪಿಗೆ ತ್ತಿರುವುದು ಸರಿಯಷ್ಟೆ. ಇದುವರಿಗು ದಾಮಾಷಾಯಿ ಮೊಬಲಗು ಬಟವಾಡೆಹೊಂದಿರುವದು ಜಾತಾ ಬಾಕಿ ಮೆಂಬರುಗಳಿಗೆ ಸಲ್ಲಬೇಕಾದ ದಾಮಾಷಾಯಿ ಮೊಬಲಗು ಈ ಲಾಗಾಯಿತು ಈ ಕೆಳಗೆ ರುಜುವು ಮಾಡಿರುವವರಿಂದ ಹಂಚಲ್ಪಡುತ್ತೆ. ಸದರಿ ಮೆಂಬರುಗಳು ತಮ್ಮ ತಮ್ಮ ಸರ್ಟಿಫಿಕೇಟುಗಳ ಮತ್ತು ಕಾಲ್ಸರಶೀತಿಗಳೊಡನೆ ಬಂದು ಮೊಬಲಗು ತೆಗೆದುಕೊಳ್ಳಬಹುದು.

೧೩-೧೦-೧೯೦೬, ಎಚ್. ನಾರಾಯಣಯ್ಯ (ಅಡ್ವೋಕೇಟ್)

ಚಿಕ್ಕಬಳ್ಳಾಪುರ. ಆಫಿಷಿಯಲ್ ಲಿಕ್ವಿಡೇಟರ್, ಶುಭೋದಯ ಕಂಪನಿ

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-22

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ.—ಕ್ರಯ ೧೦ ಆಣೆ. ವಿ. ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ. ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಚಲೋ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟ ಮಾಂಡ್ವಿ, ಮುಂಬಯಿ

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

128 3

ನವೀನ ಆಭರಣಗಳು; ಬೇಗ ನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಭಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಹಾಕಲ್ಪಟ್ಟಿರುತ್ತೆ ಇದರ ಕೆಲಸದ ನಾಜೂಕು, ಸ್ವಚ್ಛ ಭಂಗಾರದ ಆಭರಣಗಳನ್ನು ಸೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—

ಜಡೆಕುಚ್ಚು.

ಕ್ರಯ ರೂ ೩—೮—೦.

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾರದ ಆಭರಣವೆನ್ನುವ ಹಾಗೆ ತಯಾರಿಸಲ್ಪಟ್ಟಿರುತ್ತೆ.

ಪಚ್ಚೆ ಕಲ್ಲು ಜಡೆಬಿಲ್ಲೆ.

ಭಂಗಾರದ ಗಿಲ್ಟುಮಾಡಿದ್ದು.

೧ಕ್ಕೆ ಬೆಲೆ ರೂ. ೨—೩—೦

ಇದು ಮೇಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ನೋಡುವವರ ಕಣ್ಣು ಚದರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪ್ಪೋ, ಸಾವುಕಾರ್ ಪೇಟೆ, ಮದ್ರಾಸು.

ಸುಭಾಷಿತ ಸಮುದಾಯ.

137-1

ಆಚ್ಚಾಗಿ ಇನ್ನೂ ಸ್ವಲ್ಪ ಕಾಲದಲ್ಲಿ ನೂರಾರು ಪ್ರತಿಗಳು ಬಿಕರಿಯಾಗಿದೆ ಸ್ವಲ್ಪ ಪ್ರತಿಗಳೇ ಉಳಿದಿವೆ ಅದ್ದರಿಂದ ಬೇಗ ಬರೆಯಿರಿ! ಬೇಗಬರೆಯಿರಿ! ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿ ನೋಡಿರಿ! ಶ್ರೀಮನ್ ಮಹಾಭಾರತ, ಭರ್ತೃಹರಿ, ವಿಕ್ರಮಾರ್ಕ ಚರಿತ್ರೆ, ಭೋಜಚರಿತ್ರೆ, ಹಿತೋಪದೇಶ, ಮೊದಲಾದ ದೊಡ್ಡ ದೊಡ್ಡ ಸಂಸ್ಕೃತ ಗ್ರಂಥಗಳಿಂದ, ನೀತಿ, ವಿವೇಕ, ಮತ್ತು ವಿನೋದ ಪ್ರದಗಳಿಂದ, ಐನೂರು ಶ್ಲೋಕಗಳನ್ನು ಸಂಗ್ರಹಿಸಿ ವಿವಿಧ ವೃತ್ತಗಳಾಗಿಯೂ, ಆರ್ಯಗಳಾಗಿಯೂ, ಅನುಷ್ಟುಪ್ಪುಗಳಾಗಿಯೂ, ಮೂರು ಭಾಗ ಮಾಡಿ ಇವುಗಳಿಗೆ ಈಗಿನ ಕಾಲಕ್ಕೆ ತಕ್ಕಂತೆ ಸ್ಪಷ್ಟವಾದ ಇಂಗ್ಲಿಷ್, ಮತ್ತು ಕನ್ನಡ ಭಾಷೆಗಳಲ್ಲಿ ಅರ್ಥವನ್ನು ಬರೆದು ಪ್ರತಿ ಭಾಗವನ್ನೂ ವರ್ಣಮಾ ಕ್ರಮದಂತೆ ಸಂಗ್ರಹಿಸಿ ಬರದಿದೆ ಜಾಗ್ರತೆ ಬಿಕರಿಯಾಗುತ್ತಿರುವದರಿಂದ ೨ನೇ ಛಾಪೆಗೆ ಪ್ರಾರಂಭಿಸಿದೆ. ಜಾಗ್ರತೆ! ಬರೆಯಿರಿ! ಸ್ವಲ್ಪವೇ ಉಳಿದಿರುವದರಿಂದ ಪುಸ್ತಕ ದೊರೆಯದೇ ಹೋದೀತು.

ಇಂಗ್ಲೀಷ್ ಸಾರಸಂಗ್ರಹ.

ಈ ಪುಸ್ತಕವು ಅಚ್ಚಿಗೆ ಕೊಟ್ಟಿರುತ್ತೆ. ಅದ್ದರಿಂದ ಸಾವಕಾಶ, ಇನ್ನು ೨ ತಿಂಗಳೊಳಗೆ ಪುಸ್ತಕ ಬಿಕರಿಗೆ ಸಿದ್ಧವಾಗುತ್ತೆ. ಮೊದಲೇ ಆರ್ಡರನ್ನೂ ಜೊತೇಲಿ ಹಣ ೧—೦—೦ ಮನಿಆರ್ಡರು ಮಾಡುವವರಿಗೆ ಹೆಚ್ಚು ಕ್ರಯ ವಿಲ್ಲದೇನೆ ಕಳುಹಿಸುವೆವು. ಅಚ್ಚಾದನಂತರ ೧—೯—೦ ಕ್ರಯವಾಗುತ್ತೆ!

ಸುಲಭಕ್ರಯದ ಗಡಿಯಾರಗಳು.

೧ ಮೆಟಲ್, ಓಪನ್‌ಫೇಸ್, ಕೀಲೆಸ್, ಲಿವರ್, ೧೮ ಲೈನ್ ವಾಚು ೧ಕ್ಕೆ ವಿ. ಪಿ ಖರ್ಚು ಸಹಿತ ೨—೧—೦—೦

೨ ಡಿಟೋ ವಾಚು ಸಿಲಿಂಡರ್ ಫೈನ್ ರೆಗ್ಯುಲೇಟರ್ ಫಾರ್ಮ ವಿ. ಪಿ ಖರ್ಚು ಸಹಿತ ೭—೦—೦

೩ ಸಿಲ್ವರ್, ಓಪನ್‌ಫೇಸ್, ಸಿಲಿಂಡರ್ ೧೩ಲೈನ್ ಕೈಗೆ ಕಟ್ಟುವ ಗಡಿಯಾರ ೫—೦—೦

ವಿಳಾಸ — ಬಿ ಕೆ. ಮೂರ್ತಿ ಕಂಪೆನಿ, ಲಕ್ಕೂರು ಪೋಸ್ಟು,
ಕೋಲಾರ್ ಡಿಸ್ಟ್ರಿಕ್ಟ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

35-18



ಕಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮ ಗುಣಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ಒಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಇಗೊ! ಕನ್ನಡ "ಮಾಡಲ್" ಪಾಕೆಟ್ ಡೈರಿ!

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!! 13-3

೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಮೈಸೂರು ದೇಶದ ಜನರು ಇದುವರಿವಿಗೂ ಇಂಥಾ ಉತ್ತಮವಾದ ಡೈರಿಗಳನ್ನು ಕಣ್ಣಿನಿಂದ ನೋಡಿಯೂ, ಕಿವಿಯಿಂದ ಕೇಳಿಯೂ ಇರಲಿಲ್ಲವೆಂದು ಸಂದೇಹವಿಲ್ಲದೆ ಅಭಿಪ್ರಾಯಪಡಬಹುದು. ಇವುಗಳಲ್ಲಿ ಅಡಕವಾಗಿರುವ ಸಂಗತಿಗಳು—ವರ್ತಕರು, ಲಾಯರುಗಳು, ಕಂಟ್ರಾಕ್ಟರುಗಳು, ಸಣ್ಣವರು, ದೊಡ್ಡವರು, ಗಂಡಸರು, ಹೆಂಗಸರು ಮುಂತಾದ ಎಲ್ಲಾ ಜನಗಳಿಗೂ ವಿಶೇಷ ಉಪಯೋಗಕರವಾಗಿದೆ ಎಂದು ನೀವೇ ತಿಳಿದುಕೊಳ್ಳುವಿರಿ. ಬೇರೆ ಡೈರಿಗಳಲ್ಲಿ ಅಡಕವಾಗಿರುವ ಸಂಗತಿಗಳಿಗಿಂತ ಇವುಗಳಲ್ಲಿ ಹೆಚ್ಚು ವಿಷಯಗಳಿರುವವು ಜಾಗ್ರತೆ ಇವುಗಳನ್ನು ತರಿಸಿಕೊಳ್ಳದೆ ಹೋದರೆ ಮುಗಿದುಹೋದಾವು.

ಕ್ರಯ.—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇದತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪಾಕೆಟ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇದತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪಾಕೆಟ್ ಡೈರಿ ೦—೮—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಚ್. ಎಸ್ ಬುಕ್‌ಡಿಪೋ, ಮೈಸೂರು

ಅಥವಾ,

ಎಸ್. ಡಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ ಮೈಸೂರು.

"ಪ್ರಕಟಣೆ"

126-1

ಅಮೃತ ಮಹಲ್ ಇಲಾಖಾ ಬಾಬತು ಕೆಲವು ಗಂಡು ಮತ್ತು ಕೆಲವು ಹೆಣ್ಣು ದನಗಳನ್ನು ೧೯೦೬ನೆ ಇಸವಿ ನವಂಬರು ಮಾಹೆ ತಾರೀಖು ೨೨ರ ಲಾಗಾಯತು ಚಳ್ಳಕೆರೆ ಮೊಕ್ಕಾಂ ನಲ್ಲೂ ಅದೇ ತಿಂಗಳು ೨೭ನೆ ತಾರೀಖು ಲಾಗಾಯತು ಕೋಳಲಕೆರೆ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಛಡಸಾಲಿನಿಂದ ಪಡೆಯಬಹುದು

ಮೊಕ್ಕಾಂ ಬೀರೂರು. }
ತಾ. ೨೩—೧೦—೦೬ }

H. NANJUNDRAJ URS,
Superintendent
Amrit Mahal Depart.

ನೋಟೀಸು.

138-1

ಇದರಡಿ ರುಜುಮಾಡುವ ನಾರಾಯಣನಾಯಕನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನನ್ನ ಅಕ್ಕ ನರಸಮ್ಮನು ನನ್ನ ಪಿತ್ರಾರ್ಜಿತವಾದ ದೇವರಾಜಮೊಹಲ್ಲಾ ಒಳಬಾಗಲ್ ಮಿಸಲ್‌ನಲ್ಲಿರುವ ಮುನಸಿಪಲ್ ನಂ॥ ೬೩೯ ನೆ ಮನೆಯಲ್ಲಿ ವಾಸಮಾಡಿಕೊಂಡಿರುತ್ತಾಳೆ. ಸದರೀ ಮನೆಯಲ್ಲಿ ಜೀವಂತಳಾಗಿರುವ ವರೆವಿಗೂ ವಾಸವಾಗಿದ್ದುಕೊಂಡು ನಂತರ ನನಗೆ ಸೇರತಕ್ಕದ್ದೆಂದು ಮೈಸೂರು ಸಿಟಿ ೧ ನೇ ಕ್ಲಾಸ್ ಮಾಜಿಸ್ಟ್ರೇಟರವರ ಕೋರ್ಟಿನ ೧೮೯೮—೯೯ ನೆ ಇಸವಿ ಕ್ರಿಮಿನಲ್ ೩೨೪ ನೆ ಮೊಕದ್ದಮೆಯಲ್ಲಿ ಉಭಯತ್ರರ ರಾಜೀನಾಮೆಯಿಂದ ಫೈಸಲಾಗಿದೆ. ಇದರ ಕ್ರಯ, ದಾನ, ಭೋಗ್ಯ, ಆಧಾರ ವಗೈರೆ ಯಾವವಿಧವಾದ ಪರಭಾರಿಗೆ ಇವಳಿಗೆ ಹಕ್ಕು ಇರುವದಿಲ್ಲವಾದ್ದರಿಂದ ಹಾಗೆ ಪರಭಾರಿಮಾಡಿಕೊಂಡವರು ನಷ್ಟಪಟ್ಟಾರೆಂದು ಸೂಚಿಸಿದೇನೆ.

ನಾರಾಯಣನಾಯ್ಕನ ರುಜು.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ನವಂಬರ್ ತಾ॥ ೧ ನೇ ಗುರುವಾರ.

ಸ್ತ್ರೀಯರ ವಿದ್ಯಾಭ್ಯಾಸವೂ ವಿವಾಹವೂ.

ಬಾಲಕರ ಮತ್ತು ಬಾಲಕಿಯರ ವಿವಾಹಕಾಲದ ವಿಷಯದಲ್ಲಿ ಈಚೆಗೆ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲೂ ಮೊನ್ನೆ ಇಲ್ಲಿನ ಆರ್ಯಧರ್ಮೋಜ್ಜೀವಿನೀ ಸಭೆಯಲ್ಲೂ ಚರ್ಚೆ ನಡೆದಿರುವ ವಿಚಾರಗಳನ್ನು ಕಳೆದ ವಾರ ತಿಳಿಸಿರುತ್ತೇವಷ್ಟೆ. ಈ ಸಂದರ್ಭದಲ್ಲಿ ಫ್ರೇಜರ್‌ಪೇಟೆಯ ಶ್ರೀ॥ ಪದ್ಮಾವತಮ್ಮನೆಂಬ ವಿದ್ಯಾವತಿಯು ಒಳದೇಶದ ಪತ್ರಿಕೆಗೆ ಬರೆದಿರುವ ಬಾತ್ಮಿಯನ್ನು ಇನ್ನೊಂದು ಕಡೆ ಪ್ರಕಟಿಸಿರುವೆವು. ಇದನ್ನು ವಾಚಕರು ಸಾವಧಾನವಾಗಿ ಓದಿ ಗ್ರಹಿಸಿಕೊಂಡಾರೆಂದು ಕೋರುತ್ತೇವೆ. ಈಗ ಮೇಲುಜಾತಿಯವರಲ್ಲಿ ಇನ್ನೂ ವಿದ್ಯಾಭ್ಯಾಸ ಮಾಡುತ್ತಿರುವಂಥಾ ಬಾಲಕರಿಗೂ ಶೈಶವಾವಸ್ಥೆ ದ್ವಾದಶ ವರುಷಗಳೊಳಗಿನ ಬಾಲಕಿಯರಿಗೂ ವಿವಾಹ ಮಾಡುತ್ತಿದ್ದಾರೆ. ಈ ಪದ್ಧತಿಯಿಂದ ನಾನಾ ವಿಧವಾದ ಕಷ್ಟನಷ್ಟಗಳುಂಟಾಗುತ್ತಿವೆ ಎನ್ನುವುದಕ್ಕೆ ಸಂಶಯವೇ ಇಲ್ಲ. ಇದರಿಂದ ಜನಾಂಗದ ಕಾಯಪುಷ್ಟಿಯೇ ಹಾಳಾಗುವುದು. ಯಾಕಂದರೆ ಬಾಲ್ಯದಲ್ಲೇ ವಿವಾಹಿತರಾದ ಗಂಡಹೆಂಡರು ಬಹುಬೇಗ ತಮ್ಮ ದೇಹಶಕ್ತಿಯನ್ನು ನೀಗಿಕೊಳ್ಳುವರು. ಅಂಥವರ ಹೊಟ್ಟೆಯಲ್ಲಿ ಜನಿಸುವ ಶಿಶುಗಳು ಬಹು ಬಲಹೀನವಾಗಿದ್ದು ನಾನಾ ರೋಗಾದಿಗಳನ್ನನುಭವಿಸುವವು. ಬಾಲ್ಯವಿವಾಹವು ದಂಪತಿಗಳ ಮೇಧಾಶಕ್ತಿಯನ್ನು ಅಭಿವೃದ್ಧಿಯಾಗದಂತೆ ತಡೆದು ಕೆಡಿಸುವುದು. ಅಷ್ಟು ಚಿಕ್ಕವಯಸ್ಸಿನಲ್ಲೇ ಬಾಲ ಬಾಲಕಿಯರು ಸಂಸಾರ ಸಂಗಕ್ಕೂ ಅದರಿಂದ ಜನಿಸುವ ತಾಪತ್ರಯಗಳಿಗೂ ಸಿಕ್ಕಿಕೊಂಡರೆ ಅವರ ಕಾಯಪುಷ್ಟಿಯಾಗಲಿ ಬುದ್ಧಿಶಕ್ತಿಯಾಗಲಿ ಚೆ… ಳಿಗೆ ಹೊಂದುವುದು ಹ್ಯಾಗೆ? ಇದಲ್ಲದೆ ಅವರ ಗುಣ… ಸತ್ಯತೆಗಳಿಗೂ ಕುಂದಕವಾಗುವುದು ಚಿಕ್ಕತನದಲ್ಲೇ… ಸ್ಸನ್ನು ಹಿಡಿಯಬಾರದಂಥಾ ಯೋಚನೆಗಳೂ ಊಹೆಗ… ಪ್ರಾಪ್ತವಾಗಿ ಬಾಲಕಬಾಲಕಿಯರನ್ನು ಕೆಡಿಸಿಬಿಡುತ್ತ…

ಈಗ ಈ ಬಾಲ್ಯವಿವಾಹವೆಂಬ ಪದ್ಧತಿಯು … ಕಾಲದಿಂದ ನಡೆದು ಬರುತ್ತಿದೆಯಲ್ಲಾ. ಇಂಥಾದ್ದ… ಯಾವ ರೀತಿಯಲ್ಲಿ ಬದಲಾವಣೆ ಮಾಡತಕ್ಕದ್ದು? … ದಾಗಿ ಪ್ರಶ್ನೆ ಹುಟ್ಟಿ ಚರ್ಚೆಯಾಗುತ್ತಿದೆ. ಈ ಸಲ … ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವು ಪ್ರತಿನಿಧಿಗಳು … ದಿವಾನರವರನ್ನು ಕುರಿತು—ಗವರ್ನಮೆಂಟಿನವರು ವಿ… ಮಾಡಬೇಕಾದ ವಯಸ್ಸನ್ನು ನಿಶ್ಚಯಿಸಿ ಒಂದು ಕಾ… ಮಾಡಿ ಜಾರಿಗೆ ತರಬೇಕೆಂದು ಕೇಳಿಕೊಂಡರು. ಮ॥ … ಬಳೇ ಅಣ್ಣಯ್ಯ ಪಂಡಿತರು ಬಾಲಕರಿಗೆ ೨೦ ವ… ತುಂಬುವುದಕ್ಕೆ ಮುಂಚೆ ವಿವಾಹವಾಗದಂತೆ ನಿರ್ಬಂಧ… ಸಬೇಕೆಂದು ಸೂಚಿಸಿದರು. ಬಾಲಕರಿಗೆ ೨೦ ವರುಷ… ಬಾಲಕಿಯರಿಗೆ ೧೬ ವರುಷವೂ ವಿವಾಹಕ್ಕೆ ಕಾಲಾತೀತ… ಅವಧಿಯೆಂದು ನಾವು ಊಹಿಸಲಾರೆವು. ಆದರೆ ಕೆಲವು … ದಿಕ ಲೌಕಿಕ ದೊಡ್ಡ ಮನುಷ್ಯರು ಈ ಭಾಗದಲ್ಲಿ ಗವ… ಮೆಂಟಿನವರು ಕಾನೂನು ಮಾಡಿ ಜಾರಿಗೆ ತರುವುದು … ಗ್ಯವಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಇದು … ಅಭಿಪ್ರಾಯವೆಂದೇ ನಾವೂ ಒಪ್ಪಿಕೊಳ್ಳುವೆವು. ಯ… ದರೆ ಇದು ಸಂಘಪರಿಷ್ಕರಣವಿಚಾರಕ್ಕೆ ಸಂಬಂಧಪಟ್ಟ… ವುದು. ಪ್ರತಿ ಸಂಘದವರೂ ಈ ವಿಚಾರವನ್ನು … ತಮ್ಮೊಳಗೇ ಚನ್ನಾಗಿ ಚರ್ಚೆಮಾಡಬೇಕು; ಮುಖ… ರಾದ ವೈದಿಕ ಲೌಕಿಕ ದೊಡ್ಡ ಮನುಷ್ಯರು ಸಾಹಸ… ತಮ್ಮ ಸಂಘದಲ್ಲೆಲ್ಲಾ ಜನರಿಗೆ ವಿವೇಕ ಹೇಳಿಕೊಟ್ಟು … ದಲಾವಣೆಯನ್ನು ರೂಢಿಗೆ ತರಬೇಕಾಗಿದೆ. ಈ ಮು… ಡರು ತಮ್ಮ ತಮ್ಮ ಗುರು ಹಿರಿಯರ ಬಳಿಗೆ ಹೋ… ತಮ್ಮ ಅಭಿಮತವನ್ನು ಅವರಿಗೆ ತಿಳಿಸಿ, ಕಾಲಾನುಗು… ವಾಗಿ ಇಂಥಾ ದುಷ್ಟವಾದ ಆಚಾರ ವ್ಯವಹಾರಗಳನ್ನು … ದಲಾವಣೆ ಮಾಡಿಕೊಂಡು, ಸಂಘವನ್ನು ಎಲ್ಲಾ ಭಾಗ… ಲೂ ಅಭಿವೃದ್ಧಿಗೆ ತರಬೇಕಾಗಿದೆ ಎಂದೂ ಇಲ್ಲ… ಈ ಭರತಖಂಡವು ಏಳಿಗೆಗೆ ಬರುವುದಿಲ್ಲವೆಂದೂ ಸ… ವಾಗಿಯೂ ವಿಶದವಾಗಿಯೂ ಹೇಳಲಿ. ಅವರು ದೇ… ವೃದ್ಧಿಗೆ ಎಷ್ಟುಮಾತ್ರವೂ ಅಡ್ಡಿ ಹಾಕದೆ ಪ್ರೋತ್ಸಾಹ… ಡಿಯಾರೆಂದು ನಿರೀಕ್ಷಿಸುವೆವು

ಇದಲ್ಲದೆ ಆರ್ಯಧರ್ಮೋಜ್ಜೀವಿನಿಯ ವಾರ್ಷಿ… ತ್ಸವದ ದಿನ ಸಭಾನಾಯಕರಾಗಿದ್ದ ದಿವಾನ್ ಮ॥ ವಿ… ಮಾಧವರಾಯರು ಸಂಘಸಂಸ್ಕರಣ ವಿಚಾರವನ್ನು ಕು… ಮಾತನಾಡುವಾಗ್ಗೆ ಬಿ. ಎ. ಪರೀಕ್ಷೆಗೆ ಉಮೇದುವಾ… ಗಿ ಅರ್ಜಿ ಕೊಡತಕ್ಕ ವಿದ್ಯಾರ್ಥಿಗಳು ಬ್ರಹ್ಮಚಾರಿಗ… ರುವಂತೆಯೂ ವಿವಾಹಿತರಾದ ಹುಡುಗರನ್ನು ಆ ಪರೀ… ಸೇರಿಸಿಕೊಳ್ಳದಂತೆಯೂ ಯೂನಿವರ್ಸಿಟಿ ಎಂಬ ವಿದ್ಯಾ… ಘದವರು ಕಟ್ಟುಮಾಡುವುದು ಒಳ್ಳೇದೆಂದು ಸೂಚಿ… ನ್ನು ನಮ್ಮ ವಾಚಕರು ಮರೆತಿರಲಾರರು. ಆದರೆ … ಯಾದ ಬದಲಾವಣೆಯು ಏಕಕಾಲದಲ್ಲಿ ರೂಢಿಗೆ ಬರು… ಸಾಧ್ಯವಲ್ಲವೆಂದು ಅವರು ಅಭಿಪ್ರಾಯಪಟ್ಟದ್ದನ್ನು…

ಬ್ಬಿಕೊಳ್ಳವೆವು. ಆದಾಗ್ಯೂ ವಿದ್ಯಾಬೋಧಕರೂ ಧ್ಯಾಯರೂ ಈ ವಿಷಯದಲ್ಲಿ ಹುಡುಗರ ಸಂಗಡ ವರ ತಂದೆತಾಯಿಗಳ ಸಂಗಡಲೂ ಆಗಾಗ್ಗೆ ಚರ್ಚೆ ತ್ತಾ ಬಂದು, ಅವರು ವಿದ್ಯಾಸಂಪೂರ್ಣತೆ ಹೊಂದು ತನಕ ವಿವಾಹಮಾಡದಂತೆಯೂ ಮಾಡಿಕೊಳ್ಳದಂತೆ ತಡೆಯ ಬಹುದೆಂದು ನಮಗೆ ತೋರುತ್ತದೆ. ಯಾ ವಿದ್ಯಾಸಂಪೂರ್ಣತೆಯನ್ನು ಹೊಂದುವ ತನಕ ಬಾಲ ಬ್ರಹ್ಮಚರ್ಯವ್ರತವನ್ನು ಆಚರಿಸಿಕೊಂಡಿರಬೇಕಾ ಅತ್ಯಾವಶ್ಯಕವಾಗಿರುತ್ತದೆ.

ಬಾಲಕರ ವಿವಾಹ ಕಾಲವನ್ನು ೨೦ ವರುಷಕ್ಕೆ ಇಟ್ಟ ಹುಡುಗಿಯರಿಗೆ ವರಗಳು ಸಿಕ್ಕುವುದು ಕಷ್ಟವೆಂತಲೂ ವಾಗುತ್ತೆಂತಲೂ ಹೆಣ್ಣು ಮಕ್ಕಳ ತಂದೆ ತಾಯಿಗಳಿಗೆ ಅನಾನುಕೂಲವಾಗುವುದೆಂತಲೂ ಕೆಲವರು ಆಕ್ಷೇ ಪಬಹುದು. ಇವಕ್ಕೆ ಪರಿಹಾರವೇನೆಂದರೆ, ಬಾಲಕಿ ಯೌವನ ವಯಸ್ಸಾದಮೇಲೆಯೇ ವಿವಾಹ ಮಾಡಬೇಕೆಂ ಅಥವಾ ವಿವಾಹವನ್ನು ಐಚ್ಛಿಕವಾಗಿ ಮಾಡೋಣ ಲೋ, ಈ ಕಷ್ಟವು ತಪ್ಪಿಹೋಗುವುದು. ಗಂಡು ಹುಡುಗರಿಗೆ ವಯಸ್ಸಾಗುವಾಗ್ಗೆ ಮದುವೆ ಮಾಡದಿ ಅವರು ದುಷ್ಕಾರ್ಯಪ್ರವರ್ತಕರಾಗಿ ಕೆಟ್ಟುಹೋಗು ದ್ದರಿಂದ ಮೊದಲೇ ಮದುವೆ ಮಾಡಿರಬೇಕು ಎಂಬ ಕೆಲವರು ಹೇಳುವರು ಇಂಥವರು ಸ್ತ್ರೀಪುರುಷರ ಶುಗಳಂತೆ ಭಾವಿಸಿಕೊಂಡಿರುವುದಾಗಿ ಊಹಿಸುವೆ ಈ ಸಂದರ್ಭದಲ್ಲಿ ನಾವು ಬಂಡಿಸಿ ಹೇಳುವ ಭಾಗವೇ ಈಗ ಹೆಂಗಸರನ್ನು ಬಹು ನಿಕೃಷ್ಟವಾಗಿ ಕಾಣು ಮಕ್ಕಳನ್ನು ಹೆತ್ತುಕೊಂಡು ಗುಲಾಮಗಿತ್ತಿಯರಾ ವೆ ಮಾಡಿಕೊಂಡಿರಬೇಕಾದದ್ದೇ ಹೆಂಗಸರ ಲಕ್ಷಣ ಅನೇಕಾನೇಕರು ತಿಳಿದುಕೊಂಡಿದ್ದಾರೆ. ಆದ್ದರಿಂದ ವರಿಗೆ ಬಾಲ್ಯವಯಸ್ಸಿನಲ್ಲೇ ಮದುವೆ ಮಾಡಿಬಿಡು ಹೆಂಗಸಿನ ವಿವಾಹದ ವಯಸ್ಸನ್ನು ಹೆಚ್ಚಿಸುವುದರ ಆಕೆಯ ಸ್ಥಿತಿಗತಿಗಳನ್ನೂ ಆಕೆಯ ವಿಷಯದಲ್ಲಿ ವ ನೀಚವಾದ ಅಭಿಪ್ರಾಯಗಳನ್ನೂ ಬಹಳಮಟ್ಟಿ ಮಾಯಿಸಿ, ಆಕೆಯನ್ನು ಮೇಲಂತಸ್ತಿಗೆ ಎತ್ತಬೇ ಆಕೆಗೆ ಸಹಜವಾದ ಗೌರವ ಸ್ಥಾನವನ್ನು ಕೊಡಬೇ ಪುರುಷನಿಗ ಇರುವಂಥಾ ಸ್ವತಂತ್ರ್ಯಾದಿಗಳನ್ನು ಗೂ ವಹಿಸಬೇಕು. ಪಶ್ಚಿಮ ರಾಜ್ಯಗಳಲ್ಲಿ ಹೆಂಗಸಿ ವರುಷ ತುಂಬುವುದರೊಳಗಾಗಿ ಮದುವೆ ಮಾಡು ವಾಡಿಕೆಯಾಗಿದೆ. ಆದರೂ ಅವಿವಾಹಿತೆಯರಾದ ಯರು ಸಾವಿರಗಟ್ಟಲೆ ಸಿಕ್ಕುವರು. ಹೀಗಿರುವುದು ಜ ರ ಸತ್ಯತೆ ಸಚ್ಚರಿತ್ರೆಗಳಿಗೆ ಕುಂದಕವಲ್ಲವೋ ಎಂದು ಬಹುದು ಎಂದಿಗೂ ಕುಂದಕವಲ್ಲ. ಅಲ್ಲಿ ಸ್ತ್ರೀಯ ಚನ್ನಾಗಿ ವಿದ್ಯೆ ಕಲಿಸುತ್ತಾರೆ. ಅವರಿಗೆ ನಾನಾ ವಿಧ ಹವ್ಯಾಸಗಳು ಇರುತ್ತವೆ. ಸಂಸಾರ ಸುಖವನ್ನನು ಬೇಕೆಂಬುವರಲ್ಲಿ ಅವರಿಗೆ ಯೋಚನೆಯೇ ಹುಟ್ಟು ಲ್ಲ ಬಹುಮಂದಿ ಮಹಾ ಪುಣ್ಯಕಾರ್ಯಗಳಲ್ಲಿ ಅನು ಯರಾಗಿರುತ್ತಾರೆ. ವೈದ್ಯ, ರೋಗಿಗಳ ಶೈತ್ಯೋಪ ರ, ಸಂಕಟಪಡುವವರ ಆದರಣೆ ಮತ್ತು ಪೋಷಣೆ, ಮೊದಲಾದ ಪರೋಪಕಾರ ಕೆಲಸಗಳನ್ನು ಮಾಡುತ್ತ ರೆ. ಆದವರಿಂದ ಹೆಂಗಸು ಮದುವೆ ಮಾಡಿಕೊಳ್ಳ ದರೂ ಬ್ರಹ್ಮಚಾರಿಣಿಯಾಗಿದ್ದರೂ ಆಕೆಗೆ ಚನ್ನಾಗಿ ಕಲಿಸಬೇಕಾದದ್ದು ಪರಮಾವಶ್ಯವಾಗಿರುವುದು. ವಿ ದ ವಯಸ್ಸನ್ನು ಹೆಚ್ಚಿಸುವುದಾದರೂ ವಿದ್ಯೆ ಕಲಿಸಬೇ ಕು. ಇದರಿಂದ ಹೆಂಗಸು ತನ್ನ ಸಕಲ ಧರ್ಮಗಳನ್ನೂ ಕರವಾಗಿಯೂ ಸ್ತೋತ್ರಾರ್ಹವಾಗಿಯೂ ಆಚರಿಸಿ ಕೊಳ್ಳಲು ಯಾವ ಅಡ್ಡಿಯೂ ಇರುವುದಿಲ್ಲ.

ಒಳದೇಶದ ವೃತ್ತಾಂತಗಳು.

ಬರೋಡಾ ಸಂಸ್ಥಾನದ ಅರಮನೆಯ ಕಾರ್ಭಾರಿಗಳೆಂಬ ಒಬ್ಬ ರಿಯು ನಮ್ಮ ಅರಮನೆಯಲ್ಲಿ ಲೆಕ್ಕ ಪತ್ರಗಳನ್ನಿಡುವ ಕ್ರಮ ಮುಂತಾದ ಸಂಗತಿಗಳನ್ನು ತಿಳಿದುಕೊಂಡು ಹೋಗುವುದಕ್ಕಾ ಧಾನಿಗೆ ಬಂದಿದ್ದಾರೆ.

****

ಶ್ರೀಮನ್ಮಹಾರಾಜರವರೂ ಯುವರಾಜರವರೂ ಪರಿವಾರಸಮೇ ಮುಂದಿನ ಗುರುವಾರವೋ ಶುಕ್ರವಾರವೋ ರಾಜಧಾನಿಯಿಂದ ಬೆಂಗ ಗೆ ಚಿತ್ತೈಸುವವರಾಗಿದ್ದಾರೆ ಅವರ ಕಲ್ಕತ್ತಾ ಪ್ರಯಾಣದ ವಿಚಾ ಮುಂದಿನ ವಾರ ತಿಳಿಸುವೆವು.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಇದುವರೆಗೆ ಅಷ್ಟೇನೂ ಹೆಚ್ಚಲೂ ಇಳಿಯಲೂ ಇಲ್ಲ. ಕೃಷ್ಣರಾಜಮೊಹಲ್ಲಾ ಒಂದರಲ್ಲೇ ದಿನಾ ೧೦-೧೨ ಕಾಯಿಲೆಗಳು ಕಂಡುಬರುತ್ತಿವೆ ಆದರೂ ಇದುವರೆಗೆ ೨೫ ಜನರಿಗೆ ಕಮ್ಮಿ ಇಲ್ಲದೆ ಕಾಲವಾದರು

****

ಅಂತರಸಂತೆ ಕ್ಯಾಂಪಿಗೆ ದಯಮಾಡಿದ್ದ ಶ್ರೀಮನ್ ಯುವರಾಜರ ವರು ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಗೆ ವಾಪಸು ಬಂದರು ಈ ಷಿಕಾರಿಯಲ್ಲಿ ಒಂದು ದೊಡ್ಡ ಹುಲಿ, ಒಂದು ಆನೆಸ ಲಗ, ಮೂರು ಕಾಡುಕೋಣ, ಒಂದು ಕಾಡುಹಂದಿ, ಈ ಮೃಗಗಳು ಸಿಕ್ಕಿ ಹತವಾದವೆಂದು ತಿಳಿದು ಬಂದಿದೆ

****

ಕೋಲಾರದಲ್ಲೂ ಚಿನ್ನದ ಗಣಿಗಳಲ್ಲೂ ಕುಡಿಯುವ ನೀರಿನ ಸರ ಬರಾಜು ವಿಷಯದಲ್ಲೂ ಕೆರೆಗಳ ಕಾಮಗಾರಿ ವಿಷಯದಲ್ಲೂ ಬಂದಿ ರುವ ಕೆಲವು ಆಕ್ಷೇಪಣೆಗಳನ್ನು ಮೊಖ್ತಾ ನೋಡಿ ತಿಳಿದುಕೊಂಡು ಬರುವುದಕ್ಕೋಸ್ಕರ ದಿವಾನ್ ಮ॥ ಮಾಧವರಾಯರು ಮೊನ್ನೆ ಸೋಮ ವಾರ ಕೋಲಾರಕ್ಕೆ ದಯಮಾಡಿದರು ಅವರು ಇಷ್ಟರಲ್ಲೇ ಮಲೆನಾ ಡಿನ ಕಡೆಯೂ ಸರ್ಕೀಟು ದಯಮಾಡುವರೆಂದು ತಿಳಿದುಬಂದಿದೆ.

****

ದಕ್ಷಿಣಮಹಾರಾಷ್ಟ್ರ ಸೀಮೆಗೆ ಸೇರಿದ ಜಂಖಂಡಿ, ಮುಧೋಳ್, ಸಾಂಗ್ಲಿ, ಮಿರಜ್, ಜತ್, ಈ ಸಂಸ್ಥಾನಗಳ ದೊರೆಗಳು ಕೋ ಲಾರ್ ಚಿನ್ನದಗಣಿ, ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆಗಳ ನ್ನು ನೋಡಿಕೊಂಡು ಕಳೆದ ವಾರ ರಾಜಧಾನಿಗೆ ಬಂದು, ಇಲ್ಲೂ ಚಾಮುಂಡಿಬೆಟ್ಟ ಶ್ರೀರಂಗಪಟ್ಟಣದಲ್ಲೂ ವಿಶೇಷವೂ ಚರಿತ್ರಾರ್ಹವೂ ಆದ ಸಂಗತಿಗಳನ್ನು ನೋಡಿ ತಿಳಿದು, ಶ್ರೀಮನ್ಮಹಾರಾಜರವರ ಆತಿ ಥ್ಯವನ್ನು ಸ್ವೀಕರಿಸಿ ಅರಮನೆ ಆಸ್ಥಾನಾದಿಗಳನ್ನು ನೋಡಿಕೊಂಡು ತಂತಮ್ಮ ಸಂಸ್ಥಾನಗಳನ್ನು ಕುರಿತು ವಾಪಸು ಪ್ರಯಾಣಮಾಡಿದರು.

****

ಮೈಸೂರು ಸಂಸ್ಥಾನದಲ್ಲಿ ವಿಶೇಷ ಲಾಭಕರವಾದ ಗಂಧದ ಮ ರಗಳು ಈಚೆಗೆ ಹುಳುಹಿಡಿದು ಕೆಟ್ಟುಹೋಗುತ್ತಿರುವುದನ್ನು ನಿಲ್ಲಿಸ ಬೇಕೆಂದು ಸರ್ಕಾರದವರು ಇದುವರೆಗೆ ನಾನಾ ಪ್ರಯತ್ನಗಳನ್ನು ಮಾ ಡಿದರು. ಎಲ್ಲಾ ನಿಷ್ಫಲವಾಯಿತು ಈಗ ಈ ಹುಳು ಅಥವಾ ರೋಗ ವನ್ನು ಕಂಡುಹಿಡಿದು ಪರಿಹರಿಸಿಕೊಡತಕ್ಕವರಿಗೆ ವಿಶೇಷವಾದ ಬಹು ಮಾನ ಕೊಡುತ್ತೇವೆಂದು ಪ್ರಪಂಚದ ಸಕಲ ದಿಗ್ದೇಶಗಳಿಗೂ ತಿಳಿಯ ಪಡಿಸಿರುತ್ತಾರೆ ಇದು ತುಂಬಾ ಸ್ತೋತ್ರಾರ್ಹವಾದ ಏರ್ಪಾಡೇ ಸರಿ ಆದರೆ ಆ ಬಹುಮಾನವು ಎಷ್ಟೋ ಯಾವ ರೂಪವಾದದ್ದೋ ಅದನ್ನೂ ಪ್ರಕಟಿಸಿದ್ದರೆ ಬುದ್ಧಿವಂತರು ಪ್ರಯತ್ನ ಪಡುವುದಕ್ಕೆ ತುಂಬಾ ಸಹಾಯ ವಾಗುತ್ತಿತ್ತೆಂದು ಅನೇಕರು ಅಭಿಪ್ರಾಯಪಡುತ್ತಾರೆ.

ಅರ್ಬತ್ನಾಟ್ ಕಂಪನಿಯ ದುರವಸ್ಥೆಯು.

ಮದರಾಸ್ ಪಟ್ಟಣದ ಅರ್ಬತ್ನಾಟ್ ಕಂಪನಿಯು ದಿವಾಳಿ ಆಯಿ ತೆಂಬ ವಿಚಾರವನ್ನು ಕಳೆದ ವಾರ ತಿಳಿಸಿರುತ್ತೇವಷ್ಟೆ ಆ ಬ್ಯಾಂಕಿನ ಲೆಕ್ಕ ಪತ್ರಗಳನ್ನು ತನಿಖೆಮಾಡುವುದಕ್ಕೆ ನೇಮಕವಾದ ಸರ್ಕಾರಿ ತಿ ಫಿನ ಅಧಿಕಾರಿಯು ಲೆಕ್ಕಾಚಾರದಲ್ಲಿ ನಿಪುಣನಾದ ಒಬ್ಬ ನೌಕರನನ್ನು ನೇಮಕಮಾಡಿದ್ದಾರೆ ಇನ್ನು ಕೆಲವು ದಿನಗಳಲ್ಲೇ ಈ ನೌಕರನು ಬ್ಯಾಂಕಿನ ಖಂಡಿತವಾದ ಸ್ಥಿತಿಗತಿಯನ್ನೆಲ್ಲಾ ತಿಳಿಯಪಡಿಸುವನು ಇ ದಲ್ಲದೆ ಆ ಬ್ಯಾಂಕಿಗೆ ಹಣ ಹಾಕಿ ಕೆಟ್ಟುಹೋದವರೆಲ್ಲಾ ಮದರಾಸ್ ಪಟ್ಟಣದಲ್ಲಿ ಈ ದಿನ ಸಭೆಸೇರಿ ಬ್ಯಾಂಕಿನ ವಿಷಯವನ್ನೂ ನಷ್ಟಪ ಟ್ಟ ಬಡಬಗ್ಗರಿಗೆ ಸಹಾಯಮಾಡುವ ವಿಷಯವನ್ನೂ ಕುರಿತು ಚರ್ಚೆ ಮಾಡುವರು ಮದರಾಸ್ ಗವರ್ನರವರೇ ಅಧ್ಯಕ್ಷರಾಗಿ ನಿಂತು ಈ ದಿನದ ಸಭೆಯನ್ನು ನಡಸುವುದಕ್ಕೆ ಒಪ್ಪಿಕೊಂಡಿರುವುದರಿಂದ ಸಭೆಯ ತೀರ್ಮಾನಗಳು ಸರ್ವಸಮರ್ಪಕವಾಗಿಯೂ ಫಲದಾಯಕವಾಗಿಯೂ ಪರಿಣಮಿಸುವದೆಂದು ಹೇಳಬಹುದು.

ಬಹುಮಾನ ಪಡೆದ ವರ್ತಮಾನವು.

{(೧) ಪ್ರತಿ ಮೇಲಾಟದ ಲೇಖನದ ಮೇಲೂ "ಬಹುಮಾನದ ಮೇಲಾ ಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯ ಲ್ಲಿ ಎಂಟು ಹತ್ತು ದಿನಗಳೊಳಗ ನಡೆದ ವಿಷಯವಾಗಿರಬೇಕು. ಅರ್ಧಕಾ ಲಮಗಿಂತ ಕಡಮೆಯಾಗಬಾರದು ಒಂದು ಕಾಲಮಗಿಂತ ಹೆಚ್ಚಾಗಬಾರದೂ ಇರಲಾಗದು. (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲಪಿರಬೇಕು. (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುತ್ತಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು. (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆ ದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾ ಭಾವಿಸಲ್ಪಡುವುವು. ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು }

[ಈ ಬಾತ್ಮಿ ಕಳುಹಿಸಿದ ಮ॥ ಶೆ ಚಂದ್ರಶೇಖರಯ್ಯ, ಯಡೆ ಹಳ್ಳಿ, ಕೊಪ್ಪ ತಾಲ್ಲೂಕು, ಇವರಿಗೆ ಈ ವಾರದ ಬಹುಮಾನವನ್ನು ಕೊಟ್ಟಿದ್ದೇವೆ]

ಯಡೇಹಳ್ಳಿ—ಕೊಲೆ, ಕೋರ್ಟುಕಚೇರಿಗಳು.

ಕೊಪ್ಪದ ತಾಲ್ಲೋಕು ಬೆಳ್ಳಿ ಮಾಗಣಿ ಹಿಮ್ಮನಹಳ್ಳಿ ಎಂಬ ಒಂದು ಗ್ರಾಮವಿದೆ. ಆ ಗ್ರಾಮದ ನಿವಾಸಿಯಾದ ಚಂ ಶೇಷೈಯ್ಯ ಎಂಬ ಬ್ರಾಹ್ಮಣನು ತಾ ೨೩—೧೦—೦೬ ನೇ ದಿವ ೧೧ ಗಂಟೆಯಲ್ಲಿ ಯಡೇಹಳ್ಳಿ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಜರಾಗಿ ಸಿ ವಲ್ ಕೇಸಿನಲ್ಲಿ ಸಾಕ್ಷಿ ನುಡಿಯಬೇಕಾಗಿ ಇದ್ದ ಪ್ರಯುಕ್ತ ತಾ. ೨೫ ನೇ ಗುರುವಾರ ಬೆಳಿಗ್ಗೆ ಯಡೇಹಳ್ಳಿಗೆ ಬರುವದಕ್ಕೋಸ್ಕರ ಊಟಾ ಮಾಡಿ ತನ್ನ ಮನೆಯಿಂದ ಹೊರಟು ರಸ್ತೆ ಹಿಡಿದು ದಾಸನ ಕೊಡಗಿ ಎಂಬ ಗ್ರಾಮದ ಸರಹದ್ದಿನಲ್ಲಿ ಬರುತ್ತಾ ಇರಲು ಸುಮಾರು ಬೆಳಗಿನ ೯ ಗಂಟೆ ಸಮಯದಲ್ಲಿ ಯಾರೋ ಬೇಡಿಗರು ಮೃಗದ ಷಿಕಾರಿಗೆ ಕಾದಿದ್ದು ಗುಂಡಿನಿಂದ ಹೊಡೆದ ಕಾರಣ ಸದರಿ ಶೇಷೈಯ್ಯ ಗುಂಡು ತಗಲಿ ಮೃತಪಟ್ಟನೆಂತ ಈ ದಿನ ಇಲ್ಲಿಗೆ ವರ್ತಮಾನ ತಲಪಿ ತು. ಇವನಿಗೆ ದ್ವೇಷಿಗಳಾಗಿದ್ದವರು ಯಾರಿದ್ದರೋ! ಪ್ರಾಣವನ್ನು ತೆಗೆಯುವಷ್ಟು ಕ್ರೋಧ ಉಳ್ಳವ ಯಾವಾತನೋ! ಇದನ್ನು ಸಮ ರ್ಥರಾದ ಕೊಪ್ಪದ ತಾಲ್ಲೋಕ್ ಅಮಲ್ದಾರರು ಪೋಲೀಸ್ ಇನ್ಸ್ಪೆ ಕ್ಟರು ಸಹ ಕ್ಷಿಪ್ರದಲ್ಲಿ ಪತ್ತೆ ಮಾಡುವರೆಂತಾ ನಂಬಿದ್ದೇವೆ ಸಂಪ್ರ ತ ನಮ್ಮ ಮೈಸೂರು ಗೌರ್ನಮೆಂಟಿನವರು ಈ ಯಡೇಹಳ್ಳೀ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆಗೆದುಹಾಕುವರೆಂತಾ ಪತ್ರಿಕೆಗ ಳಲ್ಲಿ ಉದ್ಘೋಷಿತವಾಗಿದೆ ಈ ಮಲ್ನಾಡು ಪ್ರದೇಶದಲ್ಲಿ ಸಮೀಪ ದಲ್ಲಿ ಕೋರ್ಟು ಮತ್ತು ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಇರು ತ್ತಾ ಇರಲಾಗಿ ಆಗಾಗ್ಗೆ ಇಂಥಾ ಕೊಲೆಗಳು ನಡೆಯುತ್ತಿರುವಲ್ಲಿ ಕೋರ್ಟು ಹೋದ ಮಾತ್ರೆ ಮನುಷ್ಯರ ಗತಿ ಏನಾಗುವುದೋ ಎಂಬ ವಿಷಯವನ್ನು ಮೈಸೂರು ಸರ್ಕಾರದವರು ಪರ್ಯಾಲೋಚಿಸಬೇಕಾ ಗಿದೆ ಈ ಯಡೇಹಳ್ಳಿಯಲ್ಲಿ ೧೮೮೩ ನೇ ಜನವರಿ ೬ ನೇ ತಾ. ಈ ಕೋರ್ಟು ಸ್ಥಾಪಿತವಾಗಿ ತದಾರಭ್ಯ ಇದುವರಿಗೂ ಪ್ರಜೆಗಳು ನಿಶ್ಚಿಂ ತರಾಗಿ ಜೀವಿಸುತ್ತಾ ಇದ್ದಾರೆ ಅದಕ್ಕೆ ಪೂರ್ವ ಇಲ್ಲಿನವರೆಲ್ಲಾ ದೂ ರ ಫಾಸಲೆಯಾದ ಚಿಕ್ಕಮಗಳೂರು ಮತ್ತೂ ಕಡೂರಲ್ಲಿದ್ದ ಕೋ ರ್ಟುಗಳಿಗೆ ಹೋಗಿ ವ್ಯವಹರಿಸುತ್ತಾ ಇದ್ದ ಸಮಯದಲ್ಲಿ ಅನ್ಯಾಯ ವಾಗಿ ಒಬ್ಬನ ಮೇಲೆ ದಾವೇ ತರುವುದು, ಅವನಿಗೆ ಖುದ್ದು ಸಮ್ಮ ಜಾರಿ ಆದಂತೆ ಕಲ್ಪಿಸಿ ಎಕ್ಸ್‌ಪಾರ್ಟಿ ಡಿಕ್ರಿ ಪಡೆಯುವುದು, ಅಥವ ಆಸಾಮಿ ಹೊರಳಿಕೆಯಿಂದ ಕಬೂಲಿ ಡಿಕ್ರಿ ಪಡೆದುಕೊಳ್ಳುವುದು, ಒ ಬ್ಬನ ಮೇಲೆ ನಿಜವಾದ ಡಿಕ್ರಿ ಪಡೆದಾಗ್ಯೂ ಆತನ ಮೇಲಿನ ಡಿಕ್ರೀ ಅ ಮಲ್ ಜಾರಿಯಲ್ಲಿ ಅನೇಕರ ಮನೆ ಚರಸ್ವತ್ತುಗಳು ಜಪ್ತು ಮಾಡಿ ಒಂದು ವೇಳೆ ಬಾಧ್ಯತೆ ಮುಂಜೂರಾದರೆ ಒಳ್ಳೊಳ್ಳೇ ಲಾಟ್ ನಂಬರು ಗಳಿಗೆ ಪ್ರತಿಯಾಗಿ ಮುರುಕು ಪರಕು ಸ್ವತ್ತನ್ನು ಸಿದ್ಧಪಡಿಸಿ ಜಪ್ತೀ ನಾಲನ್ನು ಅಪಹರಿಸುವುದು, ಮತ್ತು ವಿಧವೆಯರನ್ನು ಬಲಾತ್ಕಾರ ದಿಂದ ಹೊತ್ತುಕೊಂಡು ಹೋಗಿ ಮತ್ತೊಬ್ಬನಿಗೆ ಸೀರುಟಿಕೆ ಮಾಡಿ ಅದರಿಂದ ದುಡ್ಡು ಸಂಪಾದಿಸುವುದು, ಈ ರೀತಿ ಅನ್ಯಾಯ ಹೆಚ್ಚಾಗು ತ್ತಾ ಇರಲು, ಇಂಥಾ ಕೃತ್ಯಗಳನ್ನು ನಿರೋಧಿಸುವುದಕ್ಕೆ ದೂರಫಾಸ ಲೆಯಲ್ಲಿರತಕ್ಕ ಕೋರ್ಟುಗಳಿಂದ ಸಾಧ್ಯವಾಗಲಾರದು ಎಂದು ಯೋ ಚಿಸಿ, ಶಿವಮೊಗ್ಗ ಸೆಷನ್ಸ್ ಜಡ್ಜಿಯಾಗಿದ್ದ ಮ॥ ಕ್ಲಾರ್ಕ್ ಸಾಹೇಬ ರವರು ಕಡೂರಲ್ಲಿದ್ದ ಮುನ್ಸಿಫ್ ಕೋರ್ಟನ್ನು ಯಡೇಹಳ್ಳಿಯಲ್ಲಿ ನೆಲೆಗೊಳಿಸಿದರೆಂಬ ಪ್ರವಾದವಿದೆ. ಈ ಪ್ರಾಂತ್ಯದ ಸ್ಥಿತಿಯನ್ನು ಯೋ ಚಿಸಿದರೆ ಆ ಪ್ರವಾದವೇ ನಿಜವೆಂದು ತೋರುತ್ತೆ. ಆದ್ದರಿಂದ ನಮ್ಮ ದಿವಾನ್‌ಬಹದ್ದೂರರವರು ಈ ಕೋರ್ಟು ತೆಗೆಯುವ ವಿಷಯದಲ್ಲಿ ಪುನ ಹ ಸಾವಧಾನ ಚಿತ್ತದಿಂದ ಪರ್ಯಾಲೋಚಿಸಿ, ಈ ಕೋರ್ಟಿಗೆ ಅಪಾ ಯ ಬರದಂತೆ ಈ ಸ್ಥಳದಲ್ಲೇ ಇಟ್ಟು ಮಲ್ನಾಡು ಪ್ರಜೆಗಳ ಪ್ರಾಣ, ಮಾನ, ಧನಗಳನ್ನು ಕಾಪಾಡಬೇಕೆಂಬುದಾಗಿ ಅತ್ಯಂತ ವಿಧೇಯರಾಗಿ ಪ್ರಾರ್ಥಿಸುವೆವು

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ.

ಒಂದು ಪ್ರಾಣಿಗೆ ತುತ್ತ ನೀಡಿದ್ದು.

ಮಳವಳ್ಳಿ ತಾಲ್ಲೂಕು ಕಸಬೆಗೆ ಸೇರಿದ ಪಂಡಿತಹಳ್ಳಿ ಎಂಬ ಗ್ರಾ ಮದಲ್ಲಿ ಇರುವ ವೀರಶೈವ ಮ॥ ಬಾಳಪ್ಪನ ಮಕ್ಕಳು ವೀರತ್ತಪ್ಪ ಎಂ ಬುವರ ಮನೆ ಜೀತಗಾರ ಬಲಗೈಜಾತಿ ಮಾದನೆಂಬುವನು ಇವರ ಕು ರಿಗಳನ್ನು ಮೇಯಿಸುವದಕ್ಕೆ ಈ ಗ್ರಾಮಕ್ಕೆ ಅರ್ಧ ಮೈಲಿ ದೂರದಲ್ಲಿ ರುವ ಕೊಂದೂರು ಬೆಟ್ಟಕ್ಕೆ ಹೊಡೆದುಕೊಂಡು ಹೋದನು. ಆ ಕಾ ಲದಲ್ಲಿ ಮೇಲ್ಕಂಡ ಬೆಟ್ಟದಲ್ಲಿ ಇವನು ಕುರಿಗಳನ್ನು ಮೇಯಿಸುತ್ತಾ ಇರುವಾಗ್ಗೆ ಸುಮಾರು ಒಂದೂವರೆ ಅಡಿ ಎತ್ತರವಾಗಿಯೂ ಮನುಷ್ಯ ರಂತೆ ಮುಖ ಕೈಕಾಲು ಬೆರಳುಗಳು ಉಳ್ಳದ್ದಾಗಿಯೂ ಇರುವ ಒಂದು ಪ್ರಾಣಿಯು ಇವನ ಕುರಿಗಳ ಸಮೀಪದಲ್ಲಿ ಓಡಿಹೋಗುತ್ತಿರಲು ಇವ ನು ಕುರಿಗಳನ್ನು ಕಾಯುವ ದೊಣ್ಣೆಯನ್ನು ತೆಗೆದುಕೊಂಡು ಹೊಡೆ ಯುವದಕ್ಕೆ ಅದನ್ನು ಅಟ್ಟಿಕೊಂಡುಹೋದನು. ಆಗ ಆ ಬಡಪ್ರಾಣಿ ಯು ಹೊಡೆಯಬೇಡವೆಂದು ಸೂಚನೆ ತೋರುವಹಾಗೆ ನಮ್ಮಂತೆ ಮಾ ತನಾಡುವದಕ್ಕೆ ಬಾರದೆ ಕೈಗಳನ್ನು ಮುಗಿದು ತನ್ನ ಹೊಟ್ಟೆಯನ್ನು ತನ್ನ ಕೈಗಳಿಂದ ತಟ್ಟಿ ತೋರಿಸಿತು ಆದಾಗ್ಯೂ ಅದು ತೋರಿಸಿದ ಸೂಚನೆಯನ್ನು ತಿಳಿಯದೆ ಅವನು ತನ್ನ ದೊಣ್ಣೆಯನ್ನು ಎಸೆಯಲು ಆ ದೊಣ್ಣೆ ಪೆಟ್ಟು ತಗಲಿ, ಅದಕ್ಕೆ ತುಂಬಾ ನೋವಾಗಿ ಬಿದ್ದುಕೊಂಡಿ ತು ಆಗ ಅವನು ಅದರ ಸೋಲು ಇರುವದನ್ನು ನೋಡಿ, ಅದನ್ನು ಎ ತ್ತಿಕೊಂಡು ತನ್ನ ಒಡೆಯನಾದ ಮ॥ ವೀರತ್ತಪ್ಪನವರ ಮನೆಗೆ ತಂದು ಕಾಲು ಕಾಪಿಸಿದರು. ಅಷ್ಟರಲ್ಲಿ ಈ ಗ್ರಾಮದ ಜನಗಳೆಲ್ಲರೂ ಈ ವ ರ್ತಮಾನವನ್ನು ಕೇಳಿ ಹೋಗಿ ನೋಡಿ ಕೆಲವರು ಕಾಡು ಮನುಷ್ಯ ನೆಂದೂ ಕೆಲವರು ಬಿದರುಮೆಳೆ ಚದರೆಯೆಂದೂ ಹೇಳುವರು. ಮ॥ ವೀರತ್ತಪ್ಪನವರು ಎಷ್ಟು ಉಪಚರಿಸಿದಾಗ್ಯೂ ಅದು ಮೂರು ದಿವಸ ಮಾತ್ರ ಬದುಕಿದ್ದು ಸತ್ತುಹೋಯಿತು. ಆಗ ಆ ಪುಣ್ಯಪುರುಷರು ಬಹ ಳ ವ್ಯಸನಪಟ್ಟು ಅಂಗಡಿಯಲ್ಲಿ ಹೊಸ ಬಟ್ಟೆಯನ್ನು ತರಿಸಿ ಅದರ ಶವ ವನ್ನು ಶೃಂಗಾರಮಾಡಿ ಮನುಷ್ಯರಿಗೆ ಕರ್ಮ ಕ್ರಿಯಾದಿಗಳನ್ನು ಮಾಡು ತ್ತಾರೋ ಅದೇ ರೀತಿಯಲ್ಲಿ ಅದನ್ನು ಸ್ಥಾಪನೆಮಾಡಿ ಅಲ್ಲಿಗೆ ಬಂದಿ ದ್ದ ಬಡಬಗ್ಗರಿಗೆ ದವಸ ಧಾನ್ಯ ದಾನಮಾಡಿ ನಿನ್ನೆ ಅದಕ್ಕೆ ಶ್ರಾದ್ಧವ ನ್ನು ಮಾಡಿ ಜನಗಳಿಗೆ ಅನ್ನ ಹಾಕಿಸಿದರು.

ಮೈಸೂರು ಸರ್ಕಾರಿ ಹುಕುಮು.

ಬಂದೂಕು ಮುಂತಾದ ಅಗ್ನಿ ಆಯುಧಗಳ ಲೈಸನ್ಸ್

ಸಂಸ್ಥಾನದ ಮಲೆನಾಡು ಮತ್ತು ಅರ್ಧ ಮಲೆನಾಡು ಪ್ರದೇಶಗಳಲ್ಲಿ ಇರುವ ಎಲ್ಲಾ ಅಗ್ನಿ ಆಯುಧಗಳ ಲೆಕ್ಕವನ್ನು ಎತ್ತಿಸುವುದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ಯುಕ್ತವಾಗಿ ತೋರುವುದರಿಂದ, ಅವರು ೧೮೯೦ ನೆ ವರ್ಷದ ೬ ನೆಯದಾದ ಮೈಸೂರು ಆಯುಧದ ರೆಗ್ಯುಲೇಷನಿನ ೨೩ ಮತ್ತು ೨೨ನೆ ಎ. ಪ್ರಕರಣಗಳಿಂದ ಕೊಡಲ್ಪಟ್ಟ ಅಧಿಕಾರಗಳನ್ನೂ ಮತ್ತು ಈ ವಿಷಯವಾಗಿ ಅವರನ್ನು ಬಲಪಡಿಸುವ ಇತರ ಎಲ್ಲಾ ಅಧಿಕಾರಗಳನ್ನೂ ನಡೆಸುವುದರಲ್ಲಿ ಈ ಕೆಳಗಿನ ನಿಯಮಗಳನ್ನು ಪ್ರಕಟಿಸುತ್ತಾರೆ:—

೧. ೧೯೦೬ ನೆಯ ನವಂಬರು ತಿಂಗಳಲ್ಲಿ ಮೈಸೂರು ಸಂಸ್ಥಾನದ ಈ ಕೆಳಗೆ ನಮೂದಾಗುವ ಮಲೆನಾಡು ಮತ್ತು ಅರ್ಧ ಮಲೆನಾಡು ತಾಲ್ಲೂಕುಗಳಲ್ಲಿರುವ ಎಲ್ಲಾ ಅಗ್ನಿ ಆಯುಧಗಳ ಲೆಕ್ಕವು ಎತ್ತಲ್ಪಡುವುದು ಮೈಸೂರು, ಶಿವಮೊಗ್ಗ, ಕಡೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳ ಮ್ಯಾಜಿಸ್ಟ್ರೇಟುಗಳಿಗೂ ಮತ್ತು ಅಂಥಾ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟುಗಳ ತಾಬೆಯಲ್ಲಿರುವ ಇದಕ್ಕೆ ಸಂಬಂಧಪಟ್ಟ ತಾಲ್ಲೂಕುಗಳ ಅಮಲ್ದಾರರಿಗೂ ಪೊಲೀಸು ಇನ್ಸ್‌ಪೆಕ್ಟರುಗಳಿಗೂ ಅಂಥಾ ಲೆಕ್ಕವನ್ನು ಎತ್ತುವುದಕ್ಕೂ ಅದಕ್ಕೆ ಸಂಬಂಧಪಟ್ಟ ಅವಶ್ಯವಾದ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೂ ಅಧಿಕಾರಕೊಟ್ಟಿದೆ.

೧. ಮೈಸೂರು ಡಿಸ್ಟ್ರಿಕ್ಟು:—ಹೆಗ್ಗಡದೇವನಕೋಟೆ, ಹುಣಸೂರು ತಾಲ್ಲೂಕುಗಳು ೨ ಶಿವಮೊಗ್ಗ ಡಿಸ್ಟ್ರಿಕ್ಟು—ನಗರ, ಸಾಗರ, ಸೊರಬ, ಶಿವಮೊಗ್ಗ, ತೀರ್ಥಹಳ್ಳಿ, ಶಿಕಾರಿಪುರ, ಕುಂಸಿ ಸಬ್ ತಾಲ್ಲೂಕುಗಳು ೩ ಕಡೂರು ಡಿಸ್ಟ್ರಿಕ್ಟು —ಮೂಡಗೆರೆ, ಕೊಪ್ಪ, ಚಿಕ್ಕಮಗಳೂರು, ತರೀಕೆರೆ, ಯಡಹಳ್ಳಿ ಸಬ್ ತಾಲ್ಲೂಕುಗಳು. ೪. ಹಾಸನ ಡಿಸ್ಟ್ರಿಕ್ಟು —ಮಂಜರಾಬಾದ್, ಬೇಲೂರು, ಆಲೂರು ಸಬ್ ತಾಲ್ಲೂಕುಗಳು

೨. ಒಂದು ಲೈಸೆನ್ಸಿನ ಮೇರೆಯಾಗಲಿ ಅಥವಾ ಅನ್ಯಥಾ ಆಗಲೀ ಮೇಲ್ಕಂಡ ತಾಲ್ಲೂಕುಗಳಲ್ಲಿ ಅಗ್ನಿ ಆಯುಧಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಎಲ್ಲಾ ಮನುಷ್ಯರೂ ತಾವು ವಾಸಮಾಡುವ ಸ್ಥಳೀಯ ಸರಹದ್ದಿನೊಳಗಿರುವ ಪೊಲೀಸು ಸ್ಟೇಷನಿನಲ್ಲಿ ತಮ್ಮ ಅಗ್ನಿ ಆಯುಧಗಳನ್ನು ಹಾಜರುಮಾಡಿ ರಿಜಿಸ್ಟರು ಮಾಡಿಸತಕ್ಕದ್ದು. ೧೯೦೬ನೆ ನವಂಬರ್ ೧ನೆ ಮತ್ತು ೩೦ ನೆ ತಾರೀಖುಗಳ ಮಧ್ಯೆ ಯಾವ ತಾರೀಖಿನಲ್ಲಿಯಾದರೂ ಪೂರ್ವಾಹ್ನ ೧೧ ಘಂಟೆಗೂ ಸಾಯಂಕಾಲ ೪ ಘಂಟೆಗೂ ಮಧ್ಯೆ ರಿಜಿಸ್ಟ್ರೇಷನ್ ಮಾಡಬೇಕು

೩ ಪ್ರತಿ ಅಗ್ನಿ ಆಯುಧವೂ, ಹಾಜರುಮಾಡಲ್ಪಟ್ಟಾಗ ಅದೇ ಎಂತ ನಿಶ್ಚಯಿಸುವುದಕ್ಕೋಸ್ಕರ ಸಾಕಾದಷ್ಟು ಗುರುತಿನಿಂದ ಬರೆ ಹಾಕಲ್ಪಡುವುದು ಹಾಗೆ ಬರೆ ಹಾಕೋಣವು ಆಯುಧವು ಕೆಟ್ಟುಹೋಗದಂತೆ ಮಾಡಲ್ಪಡುವುದು. ತಯಾರುಮಾಡಿದವನ ಹೆಸರು, ನಂಬರು ಯಾ ಸಂಖ್ಯೆಯು ಉಳ್ಳ ಆ ಕಾರಣದಿಂದಲೇ ಅವೇ ಎಂದು ನಿಶ್ಚಯಿಸಬಹುದಾದ ಆಯುಧಗಳೂ ಹಾಗೆ ಬರೆ ಹಾಕಲ್ಪಡುವುದಿಲ್ಲ.

೪. ರಿಜಿಸ್ಟ್ರೇಷನ್ ಬಗ್ಗೆ ಯಾವ ರುಸುಮನ್ನೂ ಹಾಕುವುದಿಲ್ಲ

೫ ಮೇಲ್ಕಂಡ ತಾಲ್ಲೂಕುಗಳಲ್ಲಿ ಲೈಸೆನ್ಸು ಇಲ್ಲದೆ ಅಗ್ನಿ ಆಯುಧಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಮತ್ತು ಈ ಇಷ್ತಿಹಾರ್‌ನ ಮೊಯ್ (೧) ನೆಯ ಕಲಂ ಮೇರೆ ಲೆಕ್ಕ ಎತ್ತುವುದಕ್ಕೆ ಅಧಿಕಾರ ಹೊಂದಿರುವ ಒಬ್ಬ ಆಫೀಸರು ಕೇಳಿದಾಗ ಅಂಥಾ ಎಲ್ಲಾ ಅಗ್ನಿ ಆಯುಧಗಳನ್ನು ಕುರಿತು ನಿಜವಾದ ಮತ್ತು ಪೂರ್ತಿಯಾದ ವರ್ತಮಾನವನ್ನು ಕೊಡದವ, ಮತ್ತು ಅಂಥಾ ಆಫೀಸರ ಬಳಿ ಅಂಥಾ ಎಲ್ಲಾ ಅಗ್ನಿ ಆಯುಧಗಳನ್ನೂ ಹಾಜರುಮಾಡುವ ಪ್ರತಿ ಮನುಷ್ಯನೂ ಲೈಸೆನ್ಸು ಇಲ್ಲದೆ ಅಗ್ನಿ ಆಯುಧಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಕ್ಕೆ ಕಾನೂನಿನಲ್ಲಿ ವಿಧಿಸಿರುವ ಎಲ್ಲಾ ದಂಡನೆಗಳಿಂದಲೂ ಈ ಮೂಲಕವಾಗಿ ವಿನಾಯಿಸಲ್ಪಟ್ಟಿರುತ್ತಾನೆ

೬. ಮೇಲ್ಕಂಡ ಆಫೀಸರುಗಳಿಗೆ ಪ್ರತಿ ಸಂದರ್ಭದಲ್ಲಿಯೂ (೫) ನೆಯ ಕಲಂನಲ್ಲಿ ಯೋಚಿಸಿರುವಂತೆ ಒಂದು ಹಂಗಾಮಿ ಲೈಸೆನ್ಸನ್ನು ಕೊಡುವುದಕ್ಕೆ ಅಧಿಕಾರ ಕೊಟ್ಟಿದೆ ಅಂಥಾ ಲೈಸೆನ್ಸು ಆರು ತಿಂಗಳ ಪರ್ಯಂತ ಜಾರಿಯಲ್ಲಿರುವುದು ಆ ಆರು ತಿಂಗಳ ಕಾಲದ ಒಳಗೆ ಅಗ್ನಿ ಆಯುಧದ ಮಾಲೀಕನು ಮೈಸೂರು ಆಯುಧದ ರೆಗ್ಯುಲೇಷನಿನ ಮೇರೆ ವಿಧಿಸಿರುವ ಲೈಸೆನ್ಸನ್ನು ಪಡೆಯುವುದಕ್ಕೆ ಅವಶ್ಯವಾದ ಕ್ರಮಗಳನ್ನು ಜರುಗಿಸತಕ್ಕದ್ದು.

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕಮಿಷನರು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಗಟ್ಟಲೆಯ ಮೀಟಿಂಗನ್ನು ನಡಿಸಿದರು. ಮೊದಲು ಸೆಪ್ಟಂಬರ್ ತಿಂಗಳ ಮ್ಯುನಿಸಿಪಲ್ ಜಮಾಖರ್ಚು ಮುಂತಾದ ಲೆಕ್ಕಗಳು ಓದಲಾದವು ಆ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ೧೧,೬೯೦ ಚಿಲ್ಲರೆ ರೂಪಾಯಿ ಜಮಾ ಬಂದಿತು, ಒಟ್ಟು ಖರ್ಚು ೧೧,೧೯೨ ಚಿಲ್ಲರೆ ರೂಪಾಯಿ. ಜನನ ೧೨೨. ಮರಣ—ಪ್ಲೇಗ್ ೧, ವಾಂತಿಭೇದಿ ೬೮, ಜ್ವರ ೨೫, ಇತರ ಕಾರಣಗಳು ೧೩೮, ಜುಮ್ಲಾ ೨೩೨ ಮರಣಗಳಾದವು.

ತರುವಾಯ ಆಡಿಟರ ರಿಪೋರ್ಟು ಓದಲಾಯಿತು. ಮೊಹತರ್ಫ ಬಾಬಿನ ಕಂದಾಯ ಇನ್ನೂ ೩೩,೦೦೦ ರೂಪಾಯಿ ತನಕ ಬಾಕಿ ಉಳಿದಿದೆ. ಇದನ್ನು ವಸೂಲ್ಮಾಡುವುದಕ್ಕೆ ತೃಪ್ತಿಕರವಾದ ಏರ್ಪಾಡು ಮಾಡಬೇಕೆಂದೂ, ಮ್ಯುನಿಸಿಪಲ್ ಕಾಮಗಾರಿ ನಡೆವುದಕ್ಕೆ ಬಿಲ್ಲಿಗೂ ಬರೀಬಿನ ಪಟ್ಟಿಗೂ ಇಂಜನಿಯರ್ ಇಲಾಖೆಯಲ್ಲಿರುವಂತೆ ಕಂಟ್ರಾಕ್ಟರ ರುಜು ಮಾಡಿಸಬೇಕೆಂದೂ ಆಡಿಟರು ತಿಳಿಸಿದರು. ಇನ್ನು ಮುಂದೆ ಅವಸರವಾಗಿ ಆಗಬೇಕಾದ ಕಾಮಗಾರಿ ವಿನಹಾ ಉಳಿದ ಯಾವ ಕಾಮಗಾರಿ ನಡೆಯಬೇಕಾದರೂ ೧೦೦ ರೂಪಾಯಿಗಿಂತ ಹೆಚ್ಚಿನದಾಗಿದ್ದರೆ ಅಂಥಾದ್ದಕ್ಕೆ ಟೆಂಡರ್ ಕೇಳಿ ಪಡೆಸಿಕೊಂಡು ಆಯಾ ಮೊಹಲ್ಲಾ ಮ್ಯುನಿಸಿಪಲ್ ಕಮಿಷನರ ಮೊಖ್ತಾ ಕಂಟ್ರಾಕ್ಟು ಕೊಟ್ಟು ಮಾಡಿಸಬೇಕೆಂದೂ ಗೊತ್ತುಮಾಡಿದರು.

ಮೆ॥ ಸುಬ್ಬಕೃಷ್ಣಯ್ಯರ ಬಾಬತು ಕಾಲೇಜ್ ರೋಡಿನಲ್ಲಿರುವ ಭಾವಿಗೆ ಪ್ರತಿಫಲವನ್ನು ಕೊಡುವ ವಿಚಾರದಲ್ಲಿ ಬೋರ್ಡಿನವರು ಅವರನ್ನೂ ಮೊಖ್ತಾ ಕರೆಸಿಕೊಂಡು, ಅವರಿಗೆ ಸಬ್ ಕಮಿಟಿಯವರ ತೀರ್ಮಾನದ ಪ್ರಕಾರ ೫೦೦ ರೂಪಾಯಿ ಪ್ರತಿಫಲ, ೩೦ ರೂಪಾಯಿ ಬಡ್ಡಿ ಜಮಾ ಮಾಡಬಹುದೆಂತಲೂ ಆ ಭಾವಿಯ ಕಲ್ಲುಗಳನ್ನೂ ಅವರಿಗೇ ಕೊಡಬಹುದೆಂತಲೂ ತೀರ್ಮಾನಮಾಡಿದರು.

ರಾಜಧಾನಿಯ ಸಾಯರ್ ಹುಟ್ಟುವಳಿಯನ್ನು ಕ್ರಮಪಡಿಸುವುದಕ್ಕೆ ಒಂದು ಸಬ್ ಕಮಿಟಿ ಏರ್ಪಡಿಸಿತ್ತು ಅವರು ರಿಪೋರ್ಟು ಮಾಡಿದ್ದದ್ದೇನೆಂದರೆ—೧೮೯೨ ರಿಂದ ೧೯೦೬ ರ ವರೆಗೆ ಸಾಯರ್ ಹುಟ್ಟುವಳಿಯನ್ನು ತಾಳೇ ನೋಡಿದ್ದರಲ್ಲಿ ಉತ್ಪತ್ತಿಯು ಸರಾಸರಿ ಒಂದೇ ರೀತಿಯಾಗಿದೆ ತಂಬಾಕು (ಹೊಗೇಸೊಪ್ಪು) ಬಾಬಿನಲ್ಲಿ ಹುಟ್ಟುವಳಿ ಕಡಿಮೆಯಾಗಿದೆ. ಸಾಯರ್ ಕಛೇರಿಯಲ್ಲೇ ಪೈರುದಾರರಿಗೆ ಸ್ಥಳಕೊಟ್ಟು ತಂಬಾಕು ಇಡಿಸಿಕೊಳ್ಳಬೇಕು. ಬಾರಾಮಾರ್ಗಕ್ಕೆ ಮಾಫಿ ಲೈಸೆನ್ಸು ಕೊಡಬೇಕು. ಮ್ಯುನಿಸಿಪಲ್ ಸರಹದ್ದಿನ ಆಚೆ ಪೈರುದಾರರು ಹಳ್ಳಿಗಳಲ್ಲಿ ತಂಬಾಕು ತಂದು ಬಚ್ಚಿಡುತ್ತಿರುವ ಈಗಿನ ಪದ್ಧತಿಯನ್ನು ತಪ್ಪಿಸಿದರೆ ಹುಟ್ಟುವಳಿ ಜಾಸ್ತಿಯಾಗುತ್ತೆ. ಮೆಂಬರುಗಳು ಇದನ್ನು ಒಪ್ಪಿಕೊಂಡು, ಇನ್ನು ಮುಂದೆ ಪೈರುದಾರರಿಗೆ ಸಾಯರ್ ಕಛೇರಿಯಲ್ಲಿ ಸ್ಥಳಕೊಟ್ಟು, ತಂಬಾಕು ಇಡಿಸಿಕೊಳ್ಳಬೇಕೆಂತಲೂ, ಅದಕ್ಕಾಗಿ ಅವರಿಂದ ಬಹಳ ಸ್ವಲ್ಪ ದರದ ಸ್ಥಳ ಬಾಡಿಗೆ ವಸೂಲ್ಮಾಡಬಹುದೆಂತಲೂ ಗೊತ್ತುಮಾಡಿದರು

ಕರ್ಜನ್ ಪಾರ್ಕಿನ ಪಶ್ಚಿಮ ಆವರಣದಲ್ಲಿರುವ ಲ್ಯಾನ್ಸ್‌ಡೌನ್ ಬಜಾರ್ ಎಂಬ ಕಟ್ಟಡವನ್ನು ಇಂಜನಿಯರ್ ಇಲಾಖೆಯವರೇ ಇಟ್ಟುಕೊಂಡು ಜನರಿಗೆ ಬಾಡಿಗೆಗೆ ಕೊಡುತ್ತಿದ್ದರು ಈಚೆಗೆ ಬಾಡಿಗೆದಾರರಿಂದ ಹಣ ವಸೂಲ್ಮಾಡುವುದು ಅವರಿಗೆ ಕಷ್ಟವಾಯಿತು. ಅನೇಕರು ಬಹಳ ಬಾಕಿ ಇಟ್ಟುಕೊಂಡಿದ್ದಾರೆ ದಾವಾ ಮುಂತಾದ್ದು ಮಾಡುವುದು ತಮಗೆ ಅನಾನುಕೂಲವೆಂತಲೂ ಆ ಕಟ್ಟಡವನ್ನೆಲ್ಲಾ ಮ್ಯುನಿಸಿಪಾಲಿಟಿಗೆ ವಹಿಸಿಬಿಡಬೇಕೆಂತಲೂ ಇಂಜನಿಯರ್ ಇಲಾಖೆಯವರು ಬರೆದು ತಿಳಿಸಿದರು ಬೋರ್ಡಿನವರು ಆ ಕಟ್ಟಡವನ್ನು ಅವರ ಅಭಿಪ್ರಾಯದಂತೆ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದಾಗಿಯೂ ಬಾಡಿಗೆ ಮುಂತಾದ್ದು ತಾವೇ ನೋಡಿಕೊಳ್ಳುವುದಾಗಿಯೂ ತೀರ್ಮಾನಮಾಡಿದಾರೆ

ಮಂಡಿ ಮಾರ್ಕೆಟ್ಟಿನೊಳಗೆ ವ್ಯಾಪಾರಸ್ಥರ ಸೌಕರ್ಯಕ್ಕಾಗಿ ಎರಡು ಸಾಲು ಮೇಲ್ಛಾವಣಿ ಕಟ್ಟಿಸಿ ಜಿಂಕ್ ತಗಡುಗಳನ್ನು ಹೊದ್ದಿಸಬೇಕೆಂದು ಮೆ॥ ಮಾದಪ್ಪನವರು ಸೂಚಿಸಿದರು; ಮೆ॥ ರಂಗೈಯ್ಯಂಗಾರ್ರೇ ಮುಂತಾದ ಕೆಲವು ಮೆಂಬರುಗಳು—ದೇವರಾಜ ಮಾರ್ಕೆಟ್ಟಿನಲ್ಲಿ ತರಕಾರಿ ಮುಂತಾದ್ದನ್ನು ವಿಕರಿ ಮಾಡತಕ್ಕವರು ಬರೀ ನೆಲದ ಮೇಲೆ ಇಟ್ಟುಕೊಳ್ಳುವುದನ್ನು ತಪ್ಪಿಸಿ ಸರಿಯಾದ ಜಗಲಿಗಳನ್ನು ಕಟ್ಟಿಸಿ ಅನುಕೂಲಪಡಿಸಿಕೊಡಬೇಕೆಂತಲೂ ಈಗಿನ ಅಸಹ್ಯವನ್ನೂ ಕೊಳಕನ್ನೂ ತಪ್ಪಿಸಬೇಕೆಂತಲೂ ಒಂದೂವರೆ ವರುಷದ ಹಿಂದೆಯೇ ಬೋರ್ಡಿನಲ್ಲಿ ತೀರ್ಮಾನವಾಗಿದ್ದರೂ ಇದುವರೆಗೆ ಆ ಭಾಗದಲ್ಲಿ ಏನೂ ನಡೆದಿಲ್ಲವೆಂತಲೂ ಸೂಚಿಸಿದರು ಈ ವಿಷಯಗಳೆಲ್ಲಾ ಚರ್ಚೆಯಾಗಿ ಎರಡು ಬಾಬುಗಳನ್ನೂ ಏಕ ಕಾಲದಲ್ಲಿ ನಡಿಸಿ ಕ್ರಮಪಡಿಸಬೇಕೆಂದು ತೀರ್ಮಾನವಾಯಿತು

ಯಾವಾಗಲೂ ಪ್ಲೇಗ್ ಉಪದ್ರವು ಲಷ್ಕರ್ ಮಂಡಿಮೊಹಲ್ಲೆಗಳಲ್ಲಿ ಪ್ರಾರಂಭವಾಗುತ್ತಲಿತ್ತು ಅಲ್ಲಿ ಟ್ರಸ್ಟ್ ಬೋರ್ಡಿನವರು ಆರೋಗ್ಯಾಭಿವೃದ್ಧಿಯ ಏರ್ಪಾಡುಗಳನ್ನು ಮಾಡಿದ್ದರಿಂದ ಉಪದ್ರವು ಆ ಮೊಹಲ್ಲೆಯನ್ನು ಬಿಟ್ಟು, ಈಗ ಕೃಷ್ಣರಾಜಮೊಹಲ್ಲೆಯಲ್ಲಿ ತಲೆಹಾಕಿದೆ ಆಗಲೇ ೧೦—೧೨ ಜನರು ಆ ರೋಗಕ್ಕೆ ತುತ್ತಾದರು ಆ ಭಾಗದಲ್ಲಿ ಮನೆಗಳು ಬಹಳ ಒತ್ತಾಗಿವೆ. ಕೊಳಕು ವಿಶೇಷವಾಗಿದೆ. ಆದ್ದರಿಂದ ಪ್ರೆಸಿಡೆಂಟರೂ ಟ್ರಸ್ಟ್ ಬೋರ್ಡಿನ ಚೇರ್ಮೆನರವರೂ ಮಾತ್ರವೂ ಸೇರಿ ಮೊದಲು ಆ ಮೊಹಲ್ಲೆಯ ಕೊಳಕಾದ ಭಾಗಗಳನ್ನು ಒಡೆದು ಬೈಲುಮಾಡಿ ಆರೋಗ್ಯವನ್ನು ಕಾಪಾಡಿಕೊಡಬೇಕಾಗಿದೆ ಎಂಬೀ ರೀತಿಯಾಗಿ ಮೆ॥ ಪಂಡಿತರೂ ಮೆ॥ ಶ್ರೀಕಂಠೈಯ್ಯನವರೂ ಸೂಚಿಸಿದರು ಈ ವಿಷಯ ಸ್ವಲ್ಪಹೊತ್ತು ಚರ್ಚೆ ನಡೆದು, ಆದ್ದರಿಂದು ಮೊಹಲ್ಲೆಯನ್ನು ಮಾತ್ರ ಅಭಿವೃದ್ಧಿಮಾಡಿದರೆ ಸಾಲದೆಂತಲೂ, ಕೋಟೆ, ಕೃಷ್ಣರಾಜ, ದೇವರಾಜ ಮೊಹಲ್ಲೆಗಳನ್ನು ಏಕ ಕಾಲದಲ್ಲಿ ಟ್ರಸ್ಟ್ ಬೋರ್ಡಿನವರು ಪ್ರವೇಶಿಸಿ ಕೊಳಕಾದ ಭಾಗಗಳನ್ನೆಲ್ಲಾ ಮೊದಲು ಒಡೆದು ಬೈಲು ಮಾಡುವಂತೆಯೂ, ತರುವಾಯ ಅವರಿಗೆ ಅನುಕೂಲವಾದಾಗ ಅಭಿವೃದ್ಧಿ ಕಾರ್ಯಗಳನ್ನು ನಡಸಬಹುದೆಂತಲೂ ಗವರ್ನಮೆಂಟಿಗೆ ಅರಿಕೆಮಾಡಿ, ಅವರು ಟ್ರಸ್ಟ್ ಬೋರ್ಡಿಗೆ ಈ ಕಾರ್ಯಗಳನ್ನು ಕೂಡ್ಲೆ ಮಾಡಬೇಕೆಂಬ ಹುಕುಂಕೊಡುವಂತೆ ಕೇಳಿಕೊಳ್ಳಬೇಕೆಂತಲೂ ಗೊತ್ತುಮಾಡಿದಾರೆ.

ಕಡೆಯಲ್ಲಿ ಮೆ॥ ಸರಸುಂಪಸ್ವಾಮಿ ಯವರು—ಪೋದ್ದಾ ಕೆರೆಗೆ ಜನರನ್ನು ಬಟ್ಟೆ ಒಗೆಯುವುದಕ್ಕೆ ಬಿಡುವುದಿಲ್ಲ. ಇದರಿಂದ ಬಹಳ ಕಷ್ಟವೂ ನಷ್ಟವೂ ಆಗುತ್ತಿದೆ. ನಾಲ್ಕೈದು ತಿಂಗಳಿಂದ ಪೊಲೀಸ್ ಬಂದೋಬಸ್ತು ಇಟ್ಟು ಜನರನ್ನು ತಡೆಯುತ್ತಿದಾರೆ. ಈ ತೊಂದರೆಯನ್ನು ಕೂಡ್ಲೆ ತಪ್ಪಿಸಿಕೊಡಬೇಕು ಎಂದು ಸೂಚಿಸಿದರು ಪ್ರೆಸಿಡೆಂಟರು—ತೊಂದರೆಯೇನೋ ಬಹಳವಾಗಿದೆ ಅಗಸರನ್ನು ಮಾತ್ರ ಬಿಡುವಂತೆ ಹುಕುಂ ಕೊಡಲಾಗಿದೆ ಜನರನ್ನು ಬಿಡುವ ಭಾಗದಲ್ಲಿ ನಮ್ಮ ಅಧಿಕಾರವೇನೂ ಇಲ್ಲ ಡಾಕ್ಟರುಗಳು ಬಿಡಬಾರದೆಂದು ಹೇಳುತ್ತದೆ ಎಂದೇ ಅಸ್ತಿ ಎಂದು ತಿಳಿಸಿದರು. ಡಾಕ್ಟರು—ನನ್ನ ಅಸ್ತಿ ಏನೂ ಇಲ್ಲ. ಬಿಡಬಹುದೆಂತಲೇ ನನಗೂ ತೋರುತ್ತೆ ಆದರೆ ಸೀನಿಯರ್ ಸರ್ಜನ್‌ರಿಂದ ಅಪ್ಪಣೆ ಬರಬೇಕಾಗಿದೆ. ಅವರ ಅಭಿಪ್ರಾಯವನ್ನು ತಿಳಿಯುವುದಕ್ಕೆ ಕೂಡ್ಲೆ ಬರೆಯುತ್ತೇನೆ ಎಂದು ಹೇಳಿದರು ಮೆ॥ ರಂಗೈಯ್ಯಂಗಾರರು—ಈ ರೀತಿ ತಿಂಗಳುಗಟ್ಲೆ ತಡೆಯುವುದು ಧರ್ಮವಲ್ಲ ಸರ್ಕಾರದವರಿಗೆ ಹಾಗೆ ತಡೆಯುವುದಕ್ಕೆ ಅಧಿಕಾರವೂ ಇಲ್ಲ. ಎರಡು ತಿಂಗಳ ತನಕ ಅಪ್ಪಿ ಮಾಡಬಹುದು. ಅದರ ಮೇಲೆ ತಡೆಯುವುದು ನ್ಯಾಯವೆಂದು ತೋರುವುದಿಲ್ಲ. ಈ ತೊಂದರೆಯನ್ನು ಸರ್ಕಾರದವರು ಕೂಡ್ಲೆ ನಿವೃತ್ತಿ ಮಾಡಿಕೊಟ್ಟಾರೆಂದು ನಿರೀಕ್ಷಿಸುತ್ತೇನೆ ಎಂದು ಹೇಳಿದರು,

ವಿತಂತುಗಳ ಹೀನ ಸ್ಥಿತಿ.

ಫ್ರೇಜರ್‌ಪೇಟೆ ನಿವಾಸಿಯಾದ ಸೌ॥ ಪದ್ಮಾವತಿ ಬಾಯಿ ನೆಂಬ ವಿದ್ಯಾವತಿಯು ಈ ಬಾತ್ಮಿಯನ್ನು ಒಳದೇಶದ ಪತ್ರಿಕೆಗೆ ಬರೆದಿದ್ದಾರೆ.—

ಯಾವ ದೇಶದಲ್ಲಿ ಸ್ತ್ರೀಯರು ವ್ಯಸನವಿಲ್ಲದೆ ಇರುವರೋ ಆ ದೇಶವು ಅಭಿವೃದ್ಧಿಗೆ ಬರುವುದು ಸಾಮಾನ್ಯ ಜ್ಞಾನವಿರುವವರೆಲ್ಲರಿಗೂ ತಿಳಿದವಿಷಯವಷ್ಟೆ. ಇತರ ದೇಶಗಳನ್ನು ನೋಡಿದರೆ ಸ್ತ್ರೀಯರಿಗೆ, ಆ ಭಾಗದಲ್ಲಿಯೂ ಎಷ್ಟು ಸುಖಸಂತೋಷಗಳಿವೆಯೋ ಅದರಿಂದ ಆ ದೇಶ ಎಷ್ಟು ಉನ್ನತಸ್ಥಿತಿಗೆ ಬಂದಿದೆಯೋ ತಿಳಿಯುವುದು ಲೋಕಕ್ಕೆ ಸ್ಥಾನವಾಗಿರುವ ನಮ್ಮನ್ನು ಈ ದೇಶದಲ್ಲಿ ಇಷ್ಟು ಹೀನಸ್ಥಿತಿಗೆ ಇಳಿಸಿ ನಾನಾ ವಿಧವಾದ ಸಂಕಟಗಳನ್ನು ನಮಗೆ ಇಟ್ಟು, ನಮ್ಮನ್ನೇ ನಾಶ ಮಾಡಲು ಪ್ರಯತ್ನಪಡುತ್ತಿರುವ ನೀವು ವೃದ್ಧಿಯಾಗುವ ಬಗೆ ಹೇಗೆ? ... ನ ಸ್ತ್ರೀ ಹಿಂದುಸ್ಥಾನದಲ್ಲಿ ಜನರು ದೇಶಭಕ್ತಿಯಲ್ಲಿಯೂ ಬುದ್ಧಿಯಲ್ಲಿಯೂ ದಿನೇದಿನೇ ಕ್ಷಯಿಸಿ ಪರರಾಯರ ಗುಲಾಮರಾಗಿ ... ನಮ್ಮ ಗತಿಯು ಹೀಗೆ ಏಂದಿತು? ಇಂತಹ ದುಸ್ಸಹವಾದ ದುರ್ಗತಿ ನಿಮಗೆ ಪ್ರಾಪ್ತವಾಗಿದ್ದರೂ ಅದಕ್ಕೆ ಕಾರಣವನ್ನು ತಿಳಿದುಕೊಂಡು ಬುದ್ಧಿವಂತರಾದ ನೀವು ಮಂದವನ್ನು ಮೇಲೆ ಕೆಡವಿಕೊಳ್ಳಲು ನಾನಾ ಪ್ರಯತ್ನವನ್ನು ಮಾಡುತ್ತಲೇ ಇರುವಿರಿ ಅಯ್ಯೋ! ಈ ನಿಮ್ಮ ಸ್ವಾರ್ಥಬುದ್ಧಿಯನ್ನು ದೇವರು ಎಂದಿಗೂ ಸೈರಿಸುವುದಿಲ್ಲ! ನಾಗರಿಕ ಜನಾಂಗಕ್ಕಿಂತಲೂ ಬಹಳ ತುಚ್ಛವಾಗಿಯೇ ಕಾಣುವಿರಿ! "ಸತಿ"ಯು ಸರ್ಕಾರದವರು ನಿಲ್ಲಿಸಿದ್ದರಿಂದ ಸ್ತ್ರೀಯರು ಕಷ್ಟ ಪರಂಪರೆಗಳ ಜನ್ಮಾವಧಿ ಅನುಭವಿಸುವಂತಾಯಿತು. ನಮಗೆ ದಿಕ್ಕಿಲ್ಲ, ನಿಮಗೆ ... ರಿಲ್ಲ! ಸರ್ಕಾರದವರು ಈ ತಂಟೆಗೆ ಬರುವದಿಲ್ಲ ದೇಶಹಿತಾರ್ಥ ಪ್ರಾಣವನ್ನಾದರೂ ಒಪ್ಪಿಸುತ್ತೇವೆಂದು ಕಂಕಣಕಟ್ಟಿಕೊಂಡು ವ್ಯಾಸದ ಜಗಲಿಗಳಮೇಲೆ ಕೂಗಾಡುತ್ತಿರುವ ಗೋಖಲೆಯವರು ಸರ್ಜಿಗಳು ತಿಲಕರೇ ಮುಂತಾದ ಅನೇಕ ನಮ್ಮ ಸಹೋದರರು ... ಗೆ ಯಾದ ಇತರ ದಾಹಗಳಿಂದ ಕೂಡಿ ನಮ್ಮ ಕಡೆಗೇ ನೋಡುವುದಿಲ್ಲ ಲೋಕಕ್ಕೆಲ್ಲಾ ಒಂದೇ ಮತವನ್ನು ಬೋಧಿಸಲು ತೊಡಗಿ ದೇಶ ... ಮಾಡುತ್ತಿರುವ ಪರಮಹಂಸರ ಶಿಷ್ಯರಂತೂ ನಿಜವಾದ ಸನ್ಯಾಸಿಗಳು ಆನಿಬೆಸೆಂಟ್ ಅಮ್ಮನವರಾದರೂ ತಮ್ಮ ಸಹೋದರಿಯರ ಕಷ್ಟ ... ದಾಶೆ ಮಾಡಿಯಾರೋ ಎಂದು ನಿರೀಕ್ಷಿಸಿ ಸಾಕಾಯಿತು! ಅವರು ಕಾಲೇಜಿನ ಕೆಲಸದಲ್ಲಿಯೇ ಮಗ್ನರಾಗಿರುವರು. ಸೋಷಿಯಲ್ ಸಭೆಗಳವರು ಇನ್ನೂ ಬಾಲ್ಯಾವಸ್ಥೆಯಲ್ಲಿ ಇದ್ದಾರೆ ನಮ್ಮ ಪ್ರಲೌಕಿಕ ಮಹಾ ಜನಗಳು 'ನ ಸ್ತ್ರೀಸ್ವಾತಂತ್ರ್ಯಮರ್ಹತಿ' (ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ.) ಎಂಬ ಮಹಾ ಮಂತ್ರವನ್ನು ಜಪಿಸುತ್ತಲೇ ಇದ್ದಾರೆ. ಪುತ್ತ್ಯಾರಲ್ಲಿ ಮೊರೆಯಿಡೋಣ? ಆದರಲ್ಲ ... ಮವರ್ಣದವರೆಂತ ಹೇಳಿಕೊಂಡೂ ಇತರ ವರ್ಣದವರೂ ಸಹ ಅನುಭವಿಸುವ ಅನಿರ್ವಚನೀಯವಾದ ವಿಪತ್ಪರಂಪರೆಗಳು ಬ್ರಾಹ್ಮಣ ವಿಧವೆಯರ ನಿತ್ಯಾನುಭವವಾಗಿದೆ. ಬಾಲ್ಯದಲ್ಲಿ ನಮಗೆ ಸ್ವಲ್ಪವೂ ತಿಳಿವಳಿಯಿಲ್ಲದಿರುವ ಕಾಲದಲ್ಲಿ ಕನ್ಯಾದಾನವೆಂಬ ನೆವಮಾಡಿಕೊಂಡು ನಿಮ್ಮ ಇಷ್ಟಬಂದವರಿಗೆ ನಮ್ಮನ್ನು ಬಲಿಯನ್ನರ್ಪಿಸುತ್ತೀರಿ ಮುಂದೆ ಅನುಭವಿಸುವವರು ನಾವೋ, ನೀವೋ? ನಮಗೆ ಸಾಧಾರಣ ವಯಸ್ಸು ಪ್ರಾಪ್ತವಾಗಿ ಸಂಸಾರವನ್ನು ಪ್ರಾರಂಭಿಸಿದಾಗ ಅಂತಹ ಪತಿಗಳನ್ನೇ ಕಟ್ಟಿ ಸ್ವತಂತ್ರಜೀವನವಾಡಲು ಶಕ್ತಿಯಿಲ್ಲದೆ ತಾವೂ ಕೆಟ್ಟು ನಮ್ಮನ್ನೂ ಕಾಪಾಡಲು ಮಾಡುವರು ಅನೇಕ ದಂಪತಿಗಳು ಪ್ರಥಮದಲ್ಲಿಯೇ ಅಂತಃಕಲಹದಲ್ಲಿ ಮಗ್ನರಾಗುವರು ಒಬ್ಬರನ್ನೊಬ್ಬರು ನಿಜವಾಯೂ ಪ್ರೀತಿಸರು ಅನೇಕರು ಕಷ್ಟದಿಂದ ಪ್ರೀತಿಯನ್ನು ನಟಿಸುವರು ಈ ವಿಧವಾಗಿ ಉಭಯತ್ರರ ಮನಸ್ಸೂ ಒಂದಾಗಿರದೆ ಇದ್ದರೆ ಅವರಿಗೆ ಅನೇಕ ವಿಪತ್ತು ಬರುವುದು. ದೇಹವು ಚನ್ನಾಗಿ ಬೆಳೆದು ಬಲಿಯುವುದಕ್ಕೆ ಮುಂಚೆಯೇ ಸಂಸಾರಿಕರಾಗುವದರಿಂದ ಎಳೇ ಗಿಡದಲ್ಲಿ ಬಿಡುವ ಹುಸಿಫಲದಂತೆ ನಮ್ಮ ಮಕ್ಕಳು ಬಹಳ ದುರ್ಬಲರಾಗಿ ಅತ್ಯಲ್ಪಕಾಲ ಜೀವಿಸುವರು ಒಂದು ವೇಳೆ ಕೆಲಕಾಲ ಜೀವಿಸಿದರೂ ನಾನಾ ವಿಧ ವ್ಯಾಧಿಗಳಿಗೆ ಗುರಿಯಾಗಿ ಬದುಕುವಿಕೆಯೇ ಬಹು ಕಷ್ಟವಾಗಿ ಪರಿಣಮಿಸುವದು ಈ ಭಯಂಕರವಾದ ಫಲವನ್ನು ಕೊಡುವ ಬಾಲ್ಯವಿವಾಹವನ್ನು ತಪ್ಪಿಸಿ, ನಮ್ಮ ದೇಹವು ಚನ್ನಾಗಿ ಬಲಿತು ಬುದ್ಧಿಬಂದ ನಮಗಿಷ್ಟವಿರುವವರನ್ನು ಹಿರಿಯರ ಅನುಮತಿ ಪಡೆದು ವರಿಸುವ ಅನುಗ್ರಹಿಸಿ, ನಿಮ್ಮ ತಾತ್ಕಾಲಿಕ ಭಯಂಕರ ವಿಧಿಯನ್ನು ಬದಲಾಯಿಸಬಾರದೇ? ಮೃತಪತಿಯರಾಗುವ ವರಿಗೂ ನಮ್ಮನ್ನು ಯಮ... ಮಾರದೆ ನಿಮ್ಮ ಶಾಸ್ತ್ರದಂತೆ ನಮ್ಮ ಕಣ್ಣುಗಳನ್ನು ಕಟ್ಟಿ ಕಾಡಿಗೆ ಬಿಟ್ಟರೂ ಅಲ್ಲಿಯಾದರೂ ಹೋಗಿ ಕ್ರೂರ ಮೃಗಗಳಿಗಾದರೂ ಆಹಾರವಾಗುವೆವು ಯಾರೋ ಕೂರಬುದ್ಧಿಯೂ ಅಸೂಯೆಯೂ ಉಳ್ಳವರು ಮನುಚಕ್ರವರ್ತಿಯ ಮತ್ತು ಮಹರ್ಷಿಗಳ ಹೆಸರನ್ನು ಕೆಡಿಸಿ ಅವರನ್ನು ಲೋಕನಿಂದೆಗೆ ಗುರಿಮಾಡಲೋಸುಗ ಪ್ರಪಂಚನಾಶಕವಾದ ಬಾಲ್ಯವಿವಾಹವನ್ನೂ, ತನ್ಮೂಲಕ ಉಂಟಾಗುವ ವೈಧವ್ಯ ಮುಂಡನವೇ ಮೊದಲಾದ ಅನೇಕ ಯಮಹಿಂಸೆಗಳನ್ನೂ ನಮಗೆ ಲೋಕದಲ್ಲಿ ಸ್ಥಾಪಿಸಿ, ತಾವು ತೃಪ್ತರಾಗಲು ಅಸ್ತಿಭಾರ ಹಾಕಿಟ್ಟಿದಾರೆ ಇದು ಯಾವ ಶಾಸ್ತ್ರಸಮ್ಮತವೋ? ಯಾವ ನ್ಯಾಯವೋ? ನೀವೇ ಹೇಳಬೇಕು ಈ ವಿಧವಾಗಿ ಮಾಡಿದ್ದರಿಂದ ಆದ ... ಸಲ್ಪಟ್ಟ ಫಲಿತಾಂಶವು ಒದಗಿತೋ? ಇಂದ್ರಿಯನಿಗ್ರಹವಾಯಿತೋ? ಎಲ್ಲರೂ ಸನ್ಯಾಸಿನಿಯರಾದರೋ? ಭ್ರೂಣಹತ್ಯಾದಿ ಮಹಾ ದೋಷಗಳಿಗೆ ನಮ್ಮಲ್ಲಿ ಅನೇಕರು ತೌರುಮನೆಯಾಗಿ ಪರಿಣಮಿಸಿದ್ದಾರೆ ನಿಮ್ಮಲ್ಲಿ ಅನೇಕರು ಅದಕ್ಕೆ ಆಯುಧರಾದರು. ನೀವೆ ... ತಪ್ಪಿತ ನಿಮಗೆ ತಿಳಿಯದೆ, ನವನಾಗರಿಕರೆಂದೆಯೂ ಮಹಾ ದಯ...

...ವಂತೆಯೂ ನಟಿಸುತ್ತಾ, ಸ್ವತಂತ್ರ ರಾಜ್ಯಭಾರ ಬೇಕೆಂ ... ಸರ್ಕಾರದವರು ಬಹಳ ಹಿಂಸಿಸುತ್ತಾರೆಂತಲೂ ಗಲಭೆ ಮಾಡು ... ನಿಮಗೆ ನಾಚಿಕೆಯಾಗುವದಿಲ್ಲವೇ ? ಮನೆಯ ಹೆಂಗಸರನ್ನು ... ವಾಗಿ ಕಾಪಾಡಿ ಆಳದವರು ರಾಜ್ಯವಾಳುವುದು ನಿಜವೇ ? ಇಂ ... ರಾಜ್ಯಭಾರವು ಪ್ರಜೆಗಳಿಗೆ ಸುಖವಾಗುವುದೇ ? ಮಹಾ ಜನಗಳು ... ಕಾಲಕ್ಕೆ ತಕ್ಕಂತೆ ಆಚಾರವ್ಯವಹಾರಗಳನ್ನು ಬದಲಾಯಿಸಿಕೊ ... ಯಂತೆ ಧರ್ಮಶಾಸ್ತ್ರದಲ್ಲಿ ಕೊಟ್ಟಿರುವ ಕಟ್ಟಳೆಯು ವೈದಿಕ ... ಜನಗಳ ಮತ್ತು ಮಠಾಧಿಪತಿಗಳ ದೃಷ್ಟಿಪಥಕ್ಕೆ ಬೀಳುವದೇ ... ಯಾಕೆಂದರೆ ಸ್ವಾಭಾವಿಕವಾಗಿ ನಾವು ಅಬಲೆಯರು ನಾವು ... 'ಬಡವನ ಕೋಪ ದವಡೆಗೆ ಮೂಲ" ಎಂಬಂತಾಗುತ್ತೆ ... ಎಷ್ಟು ವರ್ತಿಯಾದರೂ ಎಷ್ಟು ಜನರನ್ನಾದರೂ ವಿವಾಹ ... ಕೊಳ್ಳಲು ಅನುಕೂಲವಿದೆ ಇವರು ಎಕ್ಕದ ಗಿಡ ಬಾಳೇಗಿಡಗಳ ... ಈ ನಡುವೆ ಮಾಡಿಕೊಳ್ಳಲು ಅವಕಾಶವುಂಟಂತೆ ! ನ ವು ... ಒಬ್ಬ ಗಂಡನನ್ನು ನೀಗಿಕೊಂಡರೆ ನಮ್ಮ ಜನ್ಮವೇ ಕೊನೆ ... ಯಂತೆ ! ಇದು ಯಾವ ನ್ಯಾಯವೋ ಕನಿಕರವುಳ್ಳ ವಾಚಕರೇ ... ನೀರಿ ! ನಮ್ಮಂತೆಯೇ ಪತ್ನಿಯನ್ನು ಕಳೆದುಕೊಂಡ ಕೂಡ ... ತಲೆ ಹಾಕಿ ಸನ್ಯಾಸವನ್ನು ಸ್ವೀಕರಿಸಿ ನಮ್ಮಂತೆ ಕಷ್ಟಕ್ಕೆ ... ಗುರಿಯಾಗಬಾರದು ? ಇದು ದರ್ಮವೋ ?

ಮುಖ್ಯವಾಗಿ ನಾವು ಕೋರುವುದು ಇಷ್ಟೇ —(೧) ಋತುಮತಿ ... ಯಾದಕ್ಕೆ ಮುಂಚೆ ವಿವಾಹವಾಗಬೇಕೆಂಬ ನಿರ್ಬಂಧವನ್ನು ವಜಾ ... ಬೇಕು (೨) ಪತಿಯ ವಿಯೋಗವಾದರೆ ಮುಂಡನಾದಿ ಕ ... ವನ್ನು ತೆಗೆದುಹಾಕಬೇಕು (೩) ಪ್ರತಿಯೊಬ್ಬ ಹುಡುಗಿಗೂ ... ವರ್ಷದ ಲಾಗಾಯತು ೧೫ ವರ್ಷ ವಯಸ್ಸಾಗುವ ವರೆಗೂ ... ವಿದ್ಯಾಭ್ಯಾಸವಾದರೂ ಕಡ್ಡಾಯವಾಗಿ ಮಾಡಿಸ " ಕು

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಸಾಮಾನ್ಯ ವಿಷಯಗಳು.

...ರ್ಥನೆ—ದೊಡ್ಡ ಮತ್ತು ಸಣ್ಣ ಕೆರೆಗಳ ನಾಲಾಬಂದು ಕೆಲಸ ... ವನ್ನು ರೈತರು ಮಾಡಬೇಕಾಗಿದ್ದರೂ ಅವರು ಮಾಡುವುದಿಲ್ಲ ... ಈ ಕೆಲಸ ಗುರಿಯು ಹಿಂಸೆ ಬಹಳವಾಗಿದೆ ಈ ಭಾರವನ್ನು ... ತಪ್ಪಿಸಿ, ಇದಕ್ಕಾಗಿ ಒಂದು ವರಿಯನ್ನು ಹಾಕಿ ಸರ್ಕಾರದವ ... ಮುಖಾಂತರ ಮಾಡಿಸಿದರೆ ಅನುಕೂಲ ಈಗಿನ ಪದ್ಧತಿಯಿಂದ ... ಹಿಂಸೆ ತಪ್ಪುವುದಿಲ್ಲ, ಕೆರೆಗಳು ಕೆಟ್ಟು ಸರ್ಕಾರಕ್ಕೂ ನಷ್ಟ ... ವು

...ರ್ಾರವರು—ಈ ನಾಲಾಬಂದು ಕಾಮಗಾರಿ ವಿಷಯದಲ್ಲಿ ... ಹನರು ಒಂದು ಹೊಸ ಏರ್ಪಾಡು ಮಾಡುವವರಾದಾರೆ ಅದು ... ದಲ್ಲಿ ಸಣ್ಣ ಕೆರೆಗಳನ್ನೆಲ್ಲಾ ಸಮರ್ಪಕವಾದ ರೀತಿಯಲ್ಲಿ ... ಮಾಡಿಸುವುದಕ್ಕೆ ಅನುಕೂಲಿಸುವುದು. ಸರ್ವೆ ಆಗುವಾಗ್ಗೆ ... ಷಯವನ್ನು ಇತ್ಯರ್ಥಮಾಡುವೆವು

...ರ್ಥನೆ—ಗ್ರಾಮ ಗಳಲ್ಲಿ ಬಿಟ್ಟಿರುವ ಗೋಮಾಳದ ಜಮೀನುಗ ... (ಆಗಿ ವಿಂಗಡಿಸಿ, ಒಂದಕ್ಕೆ ಮಾತ್ರ) ದನಗಳನ್ನು ಬಿಟ್ಟು ... ಯುವಂತೆಯೂ, ಅದರಲ್ಲಿ ಹುಲ್ಲು ಮುಗಿದ ಮೇಲೆ ಇನ್ನೊಂ ... ಭಾಗದಲ್ಲಿ ಮೇಯಿಸುವಂತೆಯೂ, ಹುಲ್ಲಿಲ್ಲದ ಭಾಗವನ್ನು ವ್ಯವ ... ಮಾಡಿಸಿ ಒಳ್ಳೇ ಗರಿಕೆ ಬೆಳೆಯುವಂತೆ ಬೀಜ ಹಾಕಿಸಿ ಕಾಪಾ ... ಯೂ ಏರ್ಪಾಡು ಮಾಡಿಕೊಡಬೇಕು ಈಗ ಏಕ ಕಾಲದಲ್ಲಿ ... ಭಾಗಗಳಲ್ಲಾ ದನಗಳನ್ನು ಬಿಟ್ಟು ಮೇಯಿಸುವುದರಿಂದ ಎಲ್ಲಾ ... ಲ್ಲೂ ಒಂದೇ ಸಲ ಹುಲ್ಲು ಮುಗಿದುಹೋಗಿ ಮೇವಿಗೆ ಅವಕಾ ... ವಿಲ್ಲದಂತೆ ಆಗುತ್ತಿದೆ ಒಂದೊಂದು ವರುಷ ಒಂದೊಂದು ಭಾಗದಲ್ಲಿ ... ಬಿಟ್ಟು ಮೇಯಿಸುವಂತಾದರೆ ಇನ್ನೊಂದು ಭಾಗದಲ್ಲಿ ಹುಲ್ಲು ... ಬೆಳೆಯುವದಕ್ಕೆ ಅವಕಾಶವಾಗುವುದು

...ರ್ಾರವರು—ಇದು ಬಹಳ ಒಳ್ಳೇ ಯೋಚನೆ ಈ ವಿಚಾರ ... ರೆವಿನ್ಯೂ ಕಮಿಷನರ ಗಮನಕ್ಕೆ ತಂದಿರುತ್ತೇವೆ ಅವರು ... ಮಾಡಿಸುತ್ತಾರೆ ರೈತರು ಅಂಥಾ ಗೋಮಾಳದ ಜಮೀನ ... ಆಗಾಗ್ಗೆ ಉತ್ತು ಸಹಾಯ ಮಾಡಬೇಕು

...ರ್ಥನೆ—ಭೂಮಿಯೊಳಗೆ ಧ್ವಜಲ ಸಿಕ್ಕುವಂಥಾ ಕಡೆಗಳನ್ನು ... ಮಾಡಿಸಿ ನಲ್ಲಿಗಳ ಮೂಲಕ ನೀರು ಮೇಲಕ್ಕೆ ಬರುವಂತೆ ... ಕೊಡಬೇಕು ಈ ನೀರಿನಿಂದ ವ್ಯವಸಾಯವೇ ಮುಂತಾದ ಕೆಲ ... ಗೆ ತುಂಬಾ ಸಹಾಯವಾಗುವುದು ಒಂದೆರಡು ಕಡೆ ಸರ್ಕಾರದ ... ನಿಂದಲೇ ಮಾಡಿಸಿಕೊಟ್ಟಲ್ಲಿ ಅದನ್ನು ನೋಡಿ ಪ್ರಜೆಗಳು ಅದ ... ಇತರ ಕಡೆಗಳಲ್ಲಿ ಭಾವಿಗಳನ್ನು ತಮ್ಮ ಸ್ವಂತ ಲಾಗೋಡಿನಿಂ ... ಮಾಡಿಸಿಕೊಳ್ಳುತ್ತಾರೆ

...ರ್ಾರವರು—ರೆವಿನ್ಯೂ ಕಮಿಷನರವರು ಅಲ್ಲಲ್ಲಿ ಪರೀಕ್ಷಾರ್ಥ ... ಅಂಥಾ ಒಂದೊಂದು ಬಾವಿಯನ್ನು ತೆಗೆದು ತೋರಿಸಿಕೊಡಬೇ ... ಗವರ್ನಮೆಂಟಿನಿಂದ ಆರ್ಡರಾಗಿದೆ ಕೋಲಾರದ ಫಾರೆಸ್ಟ್ ... ಕನ್ಸರ್ವೇಟರ್ ಮಿ॥ ಎಸ್ ಎ ಬಾಪೂರಾಯರು ಭಾವಿಗಳಿಂದ ... ಎತ್ತುವುದಕ್ಕೆ ಬಹು ಸುಲಭವಾದ ಒಂದು ಯಾತವನ್ನು ಕಂಡು ... ದಾರೆ ಈ ಯಾತಕ್ಕೆ ಮೊನ್ನೆ ಮೈಸೂರಿನಲ್ಲಿ ನಡೆದ ಪ್ರದರ್ಶನ ... ದಲ್ಲಿ ಚಿನ್ನದ ಮೆಡಲ್ ಸಹಾ ಕೊಡಲಾಗಿದೆ ಅದನ್ನೇ ಜನ ... ದಲ್ಲಿ ಇಟ್ಟು ತೋರಿಸುತ್ತಾರೆ

...ರ್ಥನೆ—ರೈತರಿಗೆ ಅಮೃತಮಹಲ್ ಗೂಳಿಗಳನ್ನು ಅರ್ಧ ... ಕ್ಕೆ ಕೊಡಬೇಕೆಂಬ ಹಾಗೆ ಸರ್ಕಾರದ ರೂಲುಸೇನೋ ಇದೆ ... ಕೊಡುವುದು ಮಾತ್ರ ಇಲ್ಲ ರೈತರು ಚುನಾಯಿಸಿದ ರಾಸನ್ನು ... ಟಕ್ಕೆ ಕೊಡಿ ಎಂದು ಕೇಳಿದರೆ ಇಲಾಖೆಯವರು ಆ ರಾಸುಗಳೇ ... ಮೆಂಟಿಗೆ ಬೇಕಾಗಿವೆ ಎಂದು ಹೇಳಿ ಕೊಡುವುದಿಲ್ಲ ಇದಲ್ಲದೆ ... ದೇಶದ ಗೋಸಂತಾನಗಳನ್ನು ಒಳ್ಳೇ ಸ್ಥಿತಿಗೆ ತರುವುದಕ್ಕೆ ಗ ದ ... ಕಡೆಯಿಂದ ಕೆಲವು ಗೂಳಿ ಕರುಗಳನ್ನು ತರಿಸಿಕೊಡಬೇಕು ... ಕ್ರಯವನ್ನು ರೈತರೇ ಕೊಡಲು ಸಿದ್ಧರಾಗಿದ್ದಾರೆ

ದಿವಾನರವರು—ಅಮೃತಮಹಲ್ ಬೀಜದ ರಾಸುಗಳನ್ನು ರೈತರು ಚುನಾಯಿಸಿ ಕ್ರಯಕ್ಕೆ ಕೇಳಿದರೆ ಅಂಥವುಗಳನ್ನೇ ಯಾವ ಅಡ್ಡಿಯೂ ಹೇಳದೆ ಆ ಕೂಡಲೇ ಅರ್ಧ ಕ್ರಯಕ್ಕೆ ಕೊಡಬೇಕೆಂದು ಹುಕುಂ ಮಾಡುತ್ತೇವೆ ಗುಜರಾತಿನಿಂದ ರಾಸುಗಳನ್ನು ತರಿಸುವ ಭಾಗದಲ್ಲಿ ಸರ್ಕಾರದವರು ಪರ್ಯಾಲೋಚನೆ ಮಾಡುತ್ತಾರೆ

ಪ್ರಾರ್ಥನೆ—ಜಮೀನ್ ಅಬಾದು ಮಾಡಿಕೊಳ್ಳುವುದಕ್ಕೂ ಇತರ ವ್ಯವಸಾಯ ಕಾರ್ಯಗಳಿಗೂ ಸರ್ಕಾರದವರು ರೈತರಿಗೆ ತಕಾವಿ ಹಣ ವನ್ನು ಅಡ್ವಾನ್ಸು ಕೊಡಿಸುವುದಾಗಿ ಅಪ್ಪಣೆ ಆಗಿದೆ ಆದರೆ ಈ ಹಣ ರೈತನಿಗೆ ಸಕಾಲಕ್ಕೆ ಸಿಕ್ಕುವುದಿಲ್ಲ ಬಹಳ ಸಾವಕಾಶವಾಗುತ್ತೆ. ಆದ್ದರಿಂದ ಅಮಲ್ದಾರರೇ ಅಂಥಾ ಅಡ್ವಾನ್ಸ್ ಹಣವನ್ನು ೧೦೦ ಅಥವಾ ೫೦ ರೂಪಾಯಿ ತನಕ ಸ್ಯಾಂಕ್ಷನ್ ಮಾಡಿಕೊಡಿಸುವಂತೆ ಅವರಿಗೆ ಅಧಿಕಾರ ವಹಿಸಬೇಕು

ದಿವಾನರವರು—ಅಮಲ್ದಾರರಿಗೆ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಮಟ್ಟಿನ ಅಧಿಕಾರ ಕೊಡಬಹುದೆಂದು ಸರ್ಕಾರದವರು ಪರ್ಯಾಲೋಚಿಸಿ ರೂಲುಸನ್ನು ಬದಲಾವಣೆ ಮಾಡುತ್ತಿದರಲ್ಲಿದ್ದಾರೆ ಆಗ್ಗೆ ಈ ವಿಷಯವನ್ನೂ ಇತ್ಯರ್ಥಪಡಿಸುವರು ಇದನ್ನು ಜಾಗ್ರತೆಪಡಿಸಬೇಕೆಂದು ತಿಳಿಸುತ್ತೇವೆ

ಪ್ರಾರ್ಥನೆ—ಖರಾಬ್ ಜಮೀನುಗಳಲ್ಲಿ ಜನರು ತೋಪುಗಳನ್ನು ಹಾಕಿದಾರೆ ಅವರೇ ಅಂಥಾ ತೋಪುಗಳ ಫಸಲನ್ನು ಲಾಗಾಯತಿನಿಂದ ಅನುಭವಿಸುತ್ತಲೂ ಬಂದಿರುವರು ಈಚೆಗೆ ಈ ಸಂಗತಿಯನ್ನು ಸರ್ವೆ ಸೆಟ್ಲು ಆದಾಗ್ಗೆ ಲೆಕ್ಕಗಳಲ್ಲಿ ಕಾಣಿಸಿಲ್ಲವೆಂದು ಹೇಳಿ ಈ ಮಾಮೂಲನ್ನು ಅಮಲ್ದಾರು ಇಜಾರೆದಾರರು ತಪ್ಪಿಸುತ್ತಾರೆ ಅಂದಾ ಇಜಾರೆದಾರರ ತೊಂದರೆಯನ್ನು ತಪ್ಪಿಸಿಕೊಡಬೇಕು

ದಿವಾನರವರು—ಈ ಸಂಗತಿಯನ್ನು ರೆವಿನ್ಯೂ ಕಮಿಷನರಿಗೆ ಹೇಳಿ ಅವರ ಅಭಿಪ್ರಾಯವನ್ನು ತಿಳಿದು ಅನಂತರ ಇತ್ಯರ್ಥಮಾಡುವೆವು

ಪ್ರಾರ್ಥನೆ—ಶಾನುಭೋಗರು ಇಡುವ ಪಹಣೆ ತಖ್ತೆಯಲ್ಲಿ ಒಂದು ಹೊಸ ಕಲಮನ್ನು ಮಾಡಿ ಆ ಕಲಂನಲ್ಲಿ ಆಯಾ ಜಮೀನಿನಲ್ಲಿ ಎಷ್ಟೆಷ್ಟು ಫಸಲು ಆಗಬಹುದೆಂಬುವುದನ್ನು ಬರೆಸಬೇಕು

ದಿವಾನರವರು—ಇದು ಒಳ್ಳೇ ಸಲಹೆ ರೆವಿನ್ಯೂ ಕಮಿಷನರಿಗೆ ಈ ವಿಷಯವನ್ನು ತಿಳಿಸಿದ್ದೇವೆ ಅವರು ತನಿಖೆಮಾಡಿ ಹುಕುಂ ಕೊಡುತ್ತಾರೆ

ಪ್ರಾರ್ಥನೆ—ಹೊಸ ಶೇಕ್ದಾರಿ ಕಿಸ್ತಿನ ಪ್ರಕಾರ ಒಂದು ಹೋಬಳಿಗೆ ಹೆಚ್ಚು ಗ್ರಾಮಗಳನ್ನು ಸೇರಿಸಿದಾರೆ ಇದರಿಂದ ಪ್ರತಿ ತಾಲ್ಲೂಕಿನಲ್ಲೂ ಹೋಬಳಿಗಳ ಸಂಖ್ಯೆ ಕಡಿಮೆಯಾದವು ಮೊದಲಿದ್ದ ಪ್ರಕಾರವೇ ಶೇಕ್ದಾರರಿಗೆ ಸುತ್ತುವುದಕ್ಕೆ ಅವಕಾಶವಾಗುತ್ತಿರಲಿಲ್ಲ ಕಾಗದಗಳು ಬೇಗನೆ ಇತ್ಯರ್ಥವಾಗುತ್ತಲಿರಲಿಲ್ಲ ಈಗ ಗ್ರಾಮಗಳನ್ನು ಇನ್ನೂ ಹೆಚ್ಚು ಮಾಡಿದ್ದರಿಂದ ಕೆಲಸ ತೃಪ್ತಿಕರವಾಗಿಯೂ ಜಾಗ್ರತೆಯಿಂದಲೂ ನಡೆಯಲಾರದು ಶೇಕ್ದಾರರ ಸಂಖ್ಯೆಯನ್ನು ಕಡಿಮೆಮಾಡದೆ ಮೊದಲಿದ್ದದ್ದಕ್ಕಿಂತಲೂ ಜಾಸ್ತಿ ಮಾಡಿಕೊಡಬೇಕು

ದಿವಾನರವರು—ಹೊಸ ಶೇಕ್ದಾರಿ ಕಿಸ್ತು ಇನ್ನೂ ಹೊಸದು, ಅದು ಇನ್ನೂ ಅನೇಕ ಕಡೆಗಳಲ್ಲಿ ಸರಿಯಾಗಿ ಜಾರಿಗೆ ಬಂದೇ ಇಲ್ಲ ಸಂಪೂರ್ಣವಾಗಿ ಸಂಸ್ಥಾನಾದ್ಯಂತ ಜಾರಿಗೆ ಬಂದು ಕೆಲವು ಕಾಲ ನಡೆಯಲಿ ಅದರ ಬಾಧಕ ಬಾಧಕಗಳನ್ನು ಆ ತರುವಾಯ ಯೋಚಿಸಿ ಸರಿಪಡಿಸೋಣ ಈಗಲೇ ಸರ್ಕಾರಿ ಸಿಬ್ಬಂದಿಯು ಹೆಚ್ಚಾಗಿದೆ ಎಂಬ ಅಭಿಪ್ರಾಯವಿದೆ ಮೇಲ್ದರ್ಜೆ ಅಧಿಕಾರಿಗಳನ್ನು ಇನ್ನೂ ಹೆಚ್ಚಿಸಲಾಗದು

ಪ್ರಾರ್ಥನೆ—ಕೆಲವು ಕಡೆ ಪಟೇಲರೇ ಸರ್ಕಾರ್ ಮತ್ತು ಲೋಕಲ್ ಸೆಸ್ಸು ಹಣಗಳನ್ನು ವಸೂಲ್ಮಾಡಿ ಲೆಕ್ಕ ಮುಂತಾದ್ದು ಇಟ್ಟು ತಾಲ್ಲೂಕಿಗೆ ಇರಸಾಲ್ ಮಾಡಬೇಕಾಗಿದೆ ಇದು ಪಟೇಲರ ನ್ಯಾಯವಾದ ಕೆಲಸವಲ್ಲ ಆದದ್ದರಿಂದ ಈ ಜವಾಬ್ದಾರಿಯನ್ನು ವಹಿಸಿರತಕ್ಕವರಿಗೆ ಎಕ್ಸೈಸ್ ಇಲಾಖೆಯಿಂದ ಸ್ವಲ್ಪ ರುಸುಂ ಕೊಡಿಸಬೇಕು

ದಿವಾನರವರು—ಈ ಭಾಗದಲ್ಲಿ ಕೌನ್ಸಿಲರುಗಳ, ರೆವಿನ್ಯೂ ಮತ್ತು ಎಕ್ಸೈಸ್ ಕಮಿಷನರುಗಳ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ ಅಂಥಾ ಪಟೇಲರಿಗೆ ಏನಾದರೂ ರುಸುಂ ಕೊಡಬೇಕೆಂಬ ಆಲೋಚನೆ ಇದೆ ಇದನ್ನು ಶೀಘ್ರ ವ್ಯವಸ್ಥೆ ಮಾಡುವೆವು

ಪ್ರಾರ್ಥನೆ—ಶ್ಯಾನುಭೋಗರು ಅವರವರ ಫಿರ್ಕಾದಲ್ಲೇ ವಾಸ ಮಾಡಬೇಕೆಂಬದಾಗಿ ಈಚೆಗೆ ರೂಲುಮಾಡಲಾಗಿದೆ ಇದರಿಂದ ಅನೇಕರಿಗೆ ನಾನಾ ವಿಧವಾದ ತೊಂದರೆಗಳುಂಟಾಗಿರುವವು ಈ ವಿಷಯದಲ್ಲಿ ಸ್ವಲ್ಪ ರಿಯಾಯತಿ ತೋರಿಸಬೇಕು

ದಿವಾನರವರು—ದಿಗರು ತಾಲ್ಲೂಕುಗಳಲ್ಲಿ ವಾಸ ಮಾಡತಕ್ಕ ಶಾನುಭೋಗರಿಗಾಗಿ ಆ ರೂಲುಸು ಮಾಡಲಾಯಿತು ಇನ್ನು ಮುಂದೆ ಆಯಾ ಸಂದರ್ಭಾನುಸಾರ ಹುಕುಂ ಕೊಡಬೇಕೆಂದು ತಿಳಿಸುತ್ತೇವೆ ಹ್ಯಾಗೂ ಶ್ಯಾನುಭೋಗರು ಅವರವರ ಹೋಬಳಿಗಳಲ್ಲಾದರೂ ವಾಸನಾಗಿದ್ದೇ ತೀರಬೇಕು

ಪ್ರಾರ್ಥನೆ—ಒಂದೊಂದು ಫಿರ್ಕಾಕ್ಕೆ ಒಬ್ಬೊಬ್ಬ ಶ್ಯಾನುಭೋಗನನ್ನು ನೇಮಕಮಾಡಿರುವ ಪ್ರಕಾರ ಪಟೇಲರನ್ನೂ ಒಬ್ಬೊಬ್ಬರನ್ನೇ ನೇಮಿಸಬೇಕು ಪ್ರತಿ ಗ್ರಾಮಕ್ಕೂ ಒಬ್ಬೊಬ್ಬ ಪಟೇಲನಿರಬೇಕಾದ ಅಗತ್ಯವಿಲ್ಲ.

ದಿವಾನರವರು— ಅದು ಬಹಳ ಅನಿಷ್ಟ. ಹಾಗೆ ಬದಲಾಯಿಸುವದಕ್ಕಾಗದು

ಪ್ರಾರ್ಥನೆ—ಗ್ರಾಮಗಳಲ್ಲಿ ತೋಟಿಗಳಿಗೆ ಇನಾಮತಿಗಳಿರುತ್ತವೆ ಇದಲ್ಲದೆ ಅವರಿಗೆ ರೈತರು ಎಕರೆಗೆ ಮೂರು ಸೇರಿನಂತೆ ದವಸ ಕೊಡಬೇಕೆಂದು ವಿಧಾಯಕವಾಗಿದೆ ಇದರಿಂದ ಅವರಿಗಿರುವಷ್ಟು ಜೀವನ ಸೌಖ್ಯ ಕಂದಾಯದಾರರಾದ ರೈತರಿಗೂ ಇಲ್ಲ ಈ ವಿಧಾಯನನ್ನು ಕಡಿಮೆಮಾಡಿಕೊಡಬೇಕು

ದಿವಾನರವರು— ವಿಧಾಯಸು ಸ್ವಲ್ಪ ಹೆಚ್ಚಾಗಿರಬಹುದು ಆಲೋಚನೆಮಾಡಿ ಹುಕುಂ ಕೊಡುತ್ತೇವೆ

ಪ್ರಾರ್ಥನೆ—ಹಿಡುವಳಿ ಜಮೀನುಗಳಲ್ಲಿರುವ ಗಂಧದ ಮರಗಳನ್ನು ಸರ್ಕಾರದವರು ವಿಕ್ರಿ ಮಾಡುತ್ತಾರೆ ಆ ಕ್ರಯದ ಹಣದಲ್ಲಿ ಅಲ್ಪಸ್ವಲ್ಪವಾದರೂ ಜಮೀನ್ದಾರನಿಗೆ ಕೊಡಬೇಕು ಆ ಗಿಡಗಳನ್ನು ರೈತನು ಬಹಳ ಕಷ್ಟಪಟ್ಟು ಸಾಕಿ ಬೆಳೆಸುತ್ತಾನೆ ಅದೇನಾದರೂ ಸತ್ತುಹೋದರೆ ಸರ್ಕಾರದವರು ರೈತನಿಂದ ಜುಲ್ಮಾನೆ ತೆಗೆದುಕೊಳ್ಳುವರು. ಆದ್ದರಿಂದ ಜಮೀನ್ದಾರನಿಗೆ ಅಂಥಾ ಸಂದಲ್ ಗಿಡದ ಕ್ರಯದಲ್ಲಿ ಸ್ವಲ್ಪ ಹಣ ಸಿಕ್ಕುವಂತಾದರೆ ಅವನು ಆ ಗಿಡವನ್ನು ಇನ್ನೂ ಚನ್ನಾಗಿ ಕಾಪಾಡಲು ಪ್ರೋತ್ಸಾಹವಾಗುವುದು.

ದಿವಾನರವರು—ಇದು ಹೊಸ ವಿಷಯವಲ್ಲ ಅನೇಕ ವರುಷಗಳಿಂದ ರೈತರು ಕೇಳುತ್ತಲೇ ಇದಾರೆ ಈ ಭಾಗವನ್ನು ಗವರ್ನಮೆಂಟಿನವರು ಇನ್ನೂ ಇತ್ಯರ್ಥಪಡಿಸಿಲ್ಲ ಮುಂದೆ ನೋಡೋಣ

ಪ್ರಾರ್ಥನೆ—ಸ್ಟೇಟ್ ಫಾರೆಸ್ಟುಗಳಲ್ಲಿ ದನಗಳ ಮೇವಿಗೆ ಇಟ್ಟಿರುವ ರುಸುಂ ಬಹಳ ಹೆಚ್ಚು ಪ್ರತಿ ರಾಸಿಗೂ ನಾಲ್ಕು ಆಣೆ ಕೊಡಬೇಕಾಗಿದೆ ಒಂದು ವರುಷದೊಳಗಿರುವ ಕರುಗಳಿಗೆ ಮಾಫಿ ಬಿಡಬೇಕು, ಮತ್ತು ಮೂರು ವರುಷದೊಳಗಿರುವ ಕರುಗಳಿಗೆ ಅರ್ಧ ರುಸುಂ ತೆಗೆದುಕೊಳ್ಳಬೇಕು.

ದಿವಾನರವರು ಒಂದು ವರುಷ ತುಂಬದೆ ಇರುವಂಥಾ ಕರುಗಳಿಗೆ ರುಸುಂ ವಜಾಮಾಡಿದೆ ಹೆಚ್ಚು ಬದಲಾವಣೆ ಮಾಡಲು ಆಗುವುದಿಲ್ಲ.

ಪ್ರಾರ್ಥನೆ —ಕಾಡು ಬಿದರನ್ನು ತಂದು ಗೂಡೆ ಚಾಪೆಗಳನ್ನು ಹೆಣೆದು ಮಾರಿ ಜೀವಿಸತಕ್ಕವರಿಗೆ ಫಾರೆಸ್ಟ್ ಇಲಾಖೆಯಿಂದ ಲೇಸನ್ಸು ಸಿಕ್ಕುವುದು ತುಂಬಾ ಕಷ್ಟ ಪಟೇಲರಾಗಲಿ ಫಾರೆಸ್ಟಿನ ಚಿಲ್ಲರೆ ನೌಕರರಾಗಲಿ ಲೇಸನ್ಸು ಕೊಡುವಂತೆ ಅಧಿಕಾರ ವಹಿಸಬೇಕು

ದಿವಾನರವರು—ಈಗಿನ ರೂಲುಸು ಪ್ರಕಾರ ಅಕ್ಷರಸ್ಥರಾದ ಪಟೇಲರನ್ನೇ ಕಮಿಷನ್ ಏಜಂಟರಾಗಿ ನೇಮಿಸಬೇಕೆಂತಲೂ ಅವರೇ ಲೇಸನ್ಸು ಕೊಡಬಹುದೆಂತಲೂ ಮಾಡಿದೆ

ಪ್ರಾರ್ಥನೆ—ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಕಡಿದು ಉಪಯೋಗಿಸಿಕೊಳ್ಳುವುದಕ್ಕೆ ಮಾಫಿ ಲೇಸನ್ಸು ಸುಲಭವಾಗಿ ಸಿಕ್ಕುವುದಿಲ್ಲ ಮಾಫಿ ಲೇಸನ್ಸನ್ನು ಪಟೇಲರು ಕೊಡುವಂತೆ ಆದರೆ ಅನುಕೂಲ

ದಿವಾನರವರು—ಆ ರೀತಿ ರೂಲುಸು ಮಾಡಿದೆ ಇನ್ನು ಮೇಲೆ ಜಾರಿಗೆ ಬರುವುದು

ಪ್ರಾರ್ಥನೆ— ಕಚ್ಚಾದ ಸವಕಲಾದ ನಾಣ್ಯಗಳನ್ನು ವರ್ತಕರೂ ಇತರರೂ ತೆಗೆದುಕೊಳ್ಳುವುದಿಲ್ಲ ಇದರಿಂದ ಬಹಳ ಕಷ್ಟನಷ್ಟಗಳಾಗುತ್ತಿವೆ ಅಂಥಾ ನಾಣ್ಯಗಳನ್ನು ತೆಗೆದುಕೊಳ್ಳುವಂತೆ ಸರ್ಕಲರ್ ಅಪ್ಪಣೆ ಆಗಬೇಕು

ದಿವಾನರವರು—ಸವಕಲಾದ ನಾಣ್ಯಗಳನ್ನು ಕೂಡ ತೆಗೆದುಕೊಳ್ಳಬೇಕೆಂದು ಕಾನೂನೇ ಇದೆ ಕಚ್ಚಾದ ನಾಣ್ಯಗಳನ್ನು ಹಿಡಿಯುವುದಿಲ್ಲ ಗವರ್ನಮೆಂಟನವರು ಸವಕಲಾಗಿರುವ ತಾಂಬ್ರದ ನಾಣ್ಯಗಳನ್ನೆಲ್ಲಾ ಖಜಾನೆಗಳಿಗೆ ಪಾವತಿ ಮಾಡಬೇಕೆಂದು ಆಗಾಗ್ಗೆ ಇಸ್ತಿಹಾರು ಕೊಡುತ್ತಾರೆ ಅಂಥಾ ಕಾಲದಲ್ಲಿ ವಾಪಸು ಕೊಡಬಹುದು.

ಪ್ರಾರ್ಥನೆ—ಕೆರೆ ದುರಸ್ತು ಮಾಡುವ ಕಂಟ್ರಾಕ್ಟನ್ನು ಸ್ಥಳದವರಿಗೆ ಕೊಡುವುದಿಲ್ಲ ಇತರ ಕಡೆಗಳ ಕಂಟ್ರಾಕ್ಟುದಾರರನ್ನು ಕರೆದು ತಂದು ಅವರಿಗೆ ವಹಿಸುತ್ತಾರೆ ಅವರು ಮಾಡುವ ಕೆಲಸ ಸಮರ್ಪಕವಾಗಿರುವುದಿಲ್ಲ ಹಣ ತೆಗೆದುಕೊಂಡು ಹೋದ ಮೇಲೆ ಮತ್ತೆ ಕೆರೆ ಕೆಟ್ಟು ರೈತರಿಗೆ ತೊಂದರೆಯೂ ಸರ್ಕಾರಕ್ಕೆ ನಷ್ಟವೂ ಆಗುವುದು

ದಿವಾನರವರು—ಸ್ಥಳದವರ ಪೈಕಿ ಯೋಗ್ಯರಾಗಿಯೂ ಐವಜುಳ್ಳವರಾಗಿಯೂ ಇರತಕ್ಕವರಿಗೆ ಅಂಥಾ ಕಂಟ್ರಾಕ್ಟು ಕೊಡಬೇಕೆಂದೂ ಪರಸ್ಥಳದವರಿಗೆ ಕೊಡಕೂಡದೆಂದೂ ಖಂಡಿತವಾದ ಹುಕುಂ ಕೊಡುತ್ತೇವೆ

ಪ್ರಾರ್ಥನೆ—ಮೈಸೂರ್ ಸ್ಟೇಟ್ ರೈಲ್ವೆಯಲ್ಲೆಲ್ಲಾ ಮೆಯಿಲ್ ಗಾಡಿಗಳಲ್ಲಿ ಥರ್ಡ್ ಗಾಡಿಗಳನ್ನು ಹಾಕುವಂತೆ ಏರ್ಪಾಡಾಗಬೇಕು ಇದರಿಂದ ಮಧ್ಯಮಧ್ಯೆ ಪ್ರಯಾಣಸ್ಥರು ಇಳಿದು ಬೇರೆ ಗಾಡಿಗೆ ಸಾಮಾನ್ ಹೇರುವ ಶ್ರಮ ತಪ್ಪುತ್ತೆ. ಬೀರೂರ್ ಸ್ಟೇಷನ್ನಲ್ಲಿ ಎರಡು ಕಡೆಗಳಲ್ಲೂ ರೈಲ್ ನಿಲ್ಲುವಂತಾಗಬೇಕು ಅದಕ್ಕೆ ಹೊಸ ಕಟ್ಟಡಗಳನ್ನು ಕಟ್ಟಿಸಿದರೆ ಬರುವ ರೈಲು ಇದು, ಹೋಗುವ ರೈಲು ಇದು ಎಂಬ ಸಂಗತಿ ಪ್ರಯಾಣಿಕರಿಗೆ ಗೊತ್ತಾದೀತು ಮತ್ತು ಆ ಸ್ಟೇಷನ್ನಲ್ಲಿ ಫಲಾರದ ಅಂಗಡಿಯೊಂದನ್ನು ಇಡಿಸಿಕೊಡಬೇಕು

ದಿವಾನರವರು—ಈ ಮೂರು ವಿಷಯಗಳೂ ಅವಶ್ಯವಾಗಿ ಆಗಬೇಕಾಗಿವೆ ರೈಲ್ವೆ ಕಂಪನಿಯವರಿಗೆ ತಿಳಿಸುತ್ತೇವೆ ಅವರು ಸರಿಪಡಿಸ್ಯಾರು

ಪ್ರಾರ್ಥನೆ—ಶಿವಮೊಗ್ಗೆಯಿಂದ ಕೊಪ್ಪಕ್ಕೆ ಲೈಟ್ ರೈಲ್ವೆಯನ್ನು ಮಾಡಿಸಿಕೊಟ್ಟರೆ ಆಮದು ರಫ್ತು ಬಹಳವಾಗಿರುವುದರಿಂದ ಸರ್ಕಾರಕ್ಕೂ ತುಂಬಾ ಫಾಯಿದೆ ಆದೀತು

ದಿವಾನರವರು—ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಪೂರ್ಣವಾಗಿ ಸಮರ್ಪಕವಾಗಿ ನಡೆದಲ್ಲಿ ಈ ರೈಲನ್ನೂ ಸಾಹುಕಾರರಿಯಾಗಿಯೇ ಹಾಕಿಸುವುದಕ್ಕೆ ಪ್ರಯತ್ನಪಡುವೆವು

ಪ್ರಾರ್ಥನೆ—ನಂಜನಗೂಡಿನಿಂದ ಈರೋಡಿಗೆ ರೈಲ್‌ಹಾಕಬೇಕು

ದಿವಾನರವರು—ನಮ್ಮ ಸಂಸ್ಥಾನದಿಂದ ನಮ್ಮ ಸರಹದ್ದಿನ ತನಕ ಸುಲಭವಾಗಿ ಏರ್ಪಾಡು ಮಾಡಬಹುದು ಮದರಾಸ್ ರೈಲ್ವೆ ಯವರು ಅಲ್ಲಿನ ತನಕ ಮೊದಲು ಹಾಕಲಿ ಆವರದೇ ಸ್ವಲ್ಪಕಷ್ಟ

ಪ್ರಾರ್ಥನೆ—ಮದ್ದೂರಿನಿಂದ ಶಿವಸಮುದ್ರದ ಮೇಲೆ ಕೊಳ್ಳೇಗಾಲದ ತನಕ ಒಂದು ಟ್ರಾಂವೇ ಏರ್ಪಾಡು ಮಾಡಿಕೊಡಬೇಕು

ದಿವಾನರವರು—ಖರ್ಚಿಗೆ ತಕ್ಕಷ್ಟು ಹುಟ್ಟುವಳಿ ಆದೀತೇ ? ಅಷ್ಟು ಆಮದು ರಫ್ತು ಇರುವುದೇ ? ಯೋಚಿಸೋಣ

ಪ್ರಾರ್ಥನೆ—ಚಿತ್ರದುರ್ಗ, ಹಿರಿಯೂರು, ಶಿರಾ, ಗೌರಿಬಿದನೂರು, ಚಳ್ಳಕೆರೆ, ಮೊಳಕಾಲ್ಮೂರು, ಈ ಪೈಕಿ ಯಾವ ಊರುಗಳ ಮೇಲಾದರೂ ರೈಲ್ ಹಾಕಿ ಮಾರಿಕಣಿವೆಗೆ ಸೇರಿಸಿದರೆ ಆ ಕೆರೆ ಅಬಾದಾಗುವುದಕ್ಕೆ ಸಹಾಯವಾಗುತ್ತೆ

ದಿವಾನರವರು—ಆ ಕೆರೆ ಅಭಿವೃದ್ಧಿಗೆ ಬಂದರೆ ರೈಲ್ ಹಾಕೋಣ

ಪ್ರಾರ್ಥನೆ—ದೇವಸ್ಥಾನದ ಕ್ಷೇತ್ರಪಟ್ಟಿನ ಹಣಗಳನ್ನು ಅನೇಕರು ತಿಂದುಹಾಕಿದಾರೆ ಅದೆಲ್ಲಾ ವಸೂಲ್ಮಾಡುವುದು ಕಷ್ಟವಾಗಿದೆ ಈ ಬಾಬತು ಲೆಕ್ಕಗಳನ್ನು ಪರಿಶೋಧಿಸಿ, ಕ್ಷೇತ್ರಪಟ್ಟಿನ ಹಣಗಳನ್ನೆಲ್ಲಾ ವಸೂಲ್ಮಾಡುವಂತೆ ಹುಕುಂ ಆಗಬೇಕು

ದಿವಾನರವರು—ಆಮಲ್ದಾರರು ಈ ವಿಷಯದಲ್ಲಿ ಅಷ್ಟು ಚಟುವಟಿಕೆಯಾಗಿಯೂ ಮುತುವರ್ಜಿಯಿಂದಲೂ ಕೆಲಸಮಾಡುತ್ತಾ ಇಲ್ಲ. ಆದ್ದರಿಂದಲೇ ಇಷ್ಟು ಅವ್ಯವಸ್ಥೆಗೆ ಕಾರಣವಾಗಿದೆ ನಮೂಲುಗಳ ನಿಲ್ಲ ತಕ್ಕ ಹಣಗಳಿಗೆಲ್ಲಾ ಅವರನ್ನೇ ಜವಾಬ್ದಾರರನ್ನಾಗಿ ಮಾಡಬೇಕೆಂದು ಯೋಚಿಸಿರುತ್ತೇವೆ

ಪ್ರಾರ್ಥನೆ—ಮುಜರಾಯಿಗೆ ಸೇರಿದ ಕೆಲವು ದೇವಸ್ಥಾನಗಳ ಇನಾಂತಿ ಜಮೀನುಗಳು ಸಾಗುವಳಿ ಆಗುವುದಿಲ್ಲವಾದ್ದರಿಂದ ಪೂಜೆ ಮುಂತಾದದ್ದೇ ನಿಂತು ಹೋಗುವುದು ಇದಕ್ಕೆ ಬದಲಾಗಿ ಇನಾಂತಿ ತಪ್ಪಿಸಿ, ದೇವಸ್ಥಾನಗಳಿಗೆ ಹಣವನ್ನೇ ಕೊಡಿಸುವಂತೆ ಹುಕುಂ ಆಗಬೇಕು.

ದಿವಾನರವರು—ಅಂಥಾ ದೇವಸ್ಥಾನಗಳ ವಿಷಯವನ್ನು ಮುಜರಾಯಿ ಸೆಕ್ರೆಟರಿಯವರಿಗೆ ತಿಳಿಸಿದರೆ ಅವರು ಅವಶ್ಯವಾದ ಏರ್ಪಾಡನ್ನು ಮಾಡುವರು. ಸಂಪೂರ್ಣ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಸಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

"ಹಳ್ಳಿಯ ವಾಸದ ಕ್ರಮ" ಎಂಬ ವಿಚಾರವನ್ನು ಓದಿ ವಿಷಾದಿಸುತ್ತೇವೆ. ಈ ಬಾತ್ಮಿದಾರರಿಗೆ ಅದರದೆಸೆಯಿಂದಾದ ಪತ್ನೀವಿಯೋಗವು ಸಂತಾಪಯುಕ್ತವಾದುದಾದರೂ ಅದು ಪತ್ರಿಕಾಪ್ರಕಟನೆಗೆ ಅರ್ಹವಾದದ್ದಲ್ಲವೆಂದು ಸೂಚಿಸುವೆವು—ಎಡಿ]

ಕರೆಸ್‌ಪಾಂಡೆನ್ಸ್.

ಮೂಡಿಕಣಿವೆ ಹಲಾವಿನ ಕೆಳಗೆ ಸಾಗುವಳಿ ಜಮೀನು ಬೇಕು

ಅಯ್ಯಾ,

ನಿಮ್ಮ ವೃತ್ತಾಂತ ಪತ್ರಿಕೆ ೧೧—೧೦—೦೬ ನೆ ಸಂಚಿಕೆಯಲ್ಲಿ ಮಾರಿಕಣಿವೆ ಕೆರೆ ಕೆಳಗಿನ ಜಮೀನು ವಿಷಯವಾಗಿ ಓದಿದೆವು. ಅದರಲ್ಲಿ ೧,೯೦೩ ಎಕರೆ ಜಮೀನು ರೈತರಿಗೆ ಸಾಗುವಳಿಗೆ ಕೊಡುವರೆಂದು ತಾವು ತಿಳಿಸಿದ್ದೀರಿ ಅಲ್ಲೇ ಬಂದು ವಾಸಮಾಡುವಂಥಾ ವಿದೇಶೀಯರಿಗೆ ಎಷ್ಟು ಜಮೀನು ಒಬ್ಬೊಬ್ಬರಿಗೆ ಕೊಡುವರು ? ಅದಕ್ಕಾಗಿ ಯಾರಿಗೆ ಅರ್ಜಿ ಬರೆದುಕೊಳ್ಳಬೇಕು ? ಏನೇನು ನಿಬಂಧನೆಗಳು ? ತಿಳಿಯದೇ ಇರುವದರಿಂದ ಸಂಕಟಪಡುತ್ತಿದ್ದೇವೆ. ಅದರ ವಿಷಯ ಚೆನ್ನಾಗಿ ತಿಳಿದುಬಂದರೆ ಇಲ್ಲಿ ಇರತಕ್ಕಂಥಾ ಬಡಬಗ್ಗರು ರೈತರು ಅನೇಕರು ಅಲ್ಲಿ ಬಂದು ಸೇರಿಕೊಂಡು ಜಮೀನು ಸಾಗುವಳಿ ಮಾಡುವರು. ಇಲ್ಲಿ ಅನೇಕರು ಅದರ ವಿಷಯ ತಿಳಿದುಕೊಳ್ಳುವದಕ್ಕೆ ನನ್ನನ್ನು ಬಾಧಿಸುತ್ತಾರೆ ಆದ್ದರಿಂದ ಇದರ ಎಲ್ಲಾ ವಿಷಯಗಳನ್ನೂ ಬರುವ ವಾರ ಪೇಪರಿನಲ್ಲಿ ಸರ್ವರಿಗೆ ತಿಳಿಯುವಂತೆ ಪ್ರಕಟಿಸಬೇಕೆಂದು ಬೇಡಿಕೊಳ್ಳುತ್ತೇನೆ ನಿಮ್ಮ ಮಿತ್ರ

ತರೀಮಲ, ಪಾವಿನ ಪೋಸ್ಟ್, ಗುತ್ತಿ ತಾಲ್ಲೂಕು.

[ಗವರ್ನಮೆಂಟಿನವರಿಂದ ನಮಗೆ ಈ ವಿಚಾರ ತಿಳಿದುಬಂದಿಲ್ಲ ಇನ್ನು ಮುಂದೆ ತಿಳಿದು ಪ್ರಕಟಿಸುವೆವು—ಎಡಿ]

ಎಚ್ಚರಿಕೆ !

ಅಯ್ಯಾ,

ಮದ್ರಾಸ್ ಸೌಕಾರ್‌ಪೇಟೆಯಲ್ಲಿರುವ ಮ್ಯಾನೇಜರ್ ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ ಇವರ ಕಂಪೆನಿಯಿಂದ ಛಡಿ, ಚಿರಿ ಬೋಲ್ ಕಾಲ್ ಗೊಲಸು ಮತ್ತು ಜರ್ಮನ್ ಸಿಲ್ವರ್ ಪಟ್ಟೆ ಕಾಲ್ಕಡಗ ಇವುಗಳನ್ನು ತರಿಸಿಕೊಂಡವರಿಗೆ ಕಮೀಷನ್ ಕೊಡುವದಾಗಿ ಕ್ಯಾಟಲಾಗು ಕಳುಹಿಸಿದ್ದರು ಅದೇ ಮೇರೆಗೆ ನಾನು ಆ ಕಂಪೆನಿಯಿಂದ ಸುಮಾರು ೪—೧೦ ಜೊತೆ ಗೊಲಸು ಮತ್ತು ಕಾಲ್ಕಡಗಗಳನ್ನು ತರಿಸಿದೆನು ಅವುಗಳಲ್ಲಿ ಕೆಲವಕ್ಕೆ ಕಮೀಷನ್ ಕಳೆದು ಕೆಲವಕ್ಕೆ ಕಮೀಷನ್ ಕಳೆಯದೆ ಹಾಗೆ ಕಳುಹಿಸಿದರು. ಕಮೀಷನ್ ಕಳುಹಿಸಿ ಎಂದು ಬರೆದೆ ಈ ವರಿಗೂ ಕಳುಹಿಸಲಿಲ್ಲ ಅಲ್ಲದೆ ಕಳೆದ ತಾರೀಖು ೧೩-೯-೦೬ ರಲ್ಲಿ ೧ ಜೊತೆ ರುಳಿ ೩ ಜೊತೆ ೩ ನೇ ನಂಬರು ಕಾಲ್ಕಡಗ ತರಿಸಿದೆನು ಇವುಗಳಿಗೆ ೩ ಆಣೆ ಮಾತ್ರ ಕಮೀಷನ್ ಕಳೆದದ್ದಲ್ಲದೆ ೩ ನೇ ನಂಬರು ೩ ಜೊತೆ ಕಾಲ್ಕಡಗಕ್ಕೆ ೨ ನೇ ನಂಬರು ಕ್ರಯ ನಮೂದಿಸಿ ೧-೦ ಆಣೆ ಜಾಸ್ತಿಯಾಗಿ ವಿ ಪಿ ಮಾಡಿ ರವಾನಿಸಿರುತ್ತಾರೆ. ಜಾಸ್ತಿಯಾದ ೧-೦ ಆಣೆಯನ್ನು ಕಮೀಷನನ್ನೂ ಮನಿಯಾರ್ಡರ ಮೂಲಕ ರವಾನಿಸಿ ಎಂದು ಈ ವರಿಗೆ ಅನೇಕ ಕಾಗದ ಬರೆದಾಗ್ಯೂ ರವಾನಿಸಿಕೊಡಲಿಲ್ಲ. ಆದ್ದರಿಂದ ಇನ್ನು ಮೇಲೆ ಆ ಕಂಪೆನಿಯಿಂದ ಸಾಮಾನು ತರಿಸಿಕೊಳ್ಳುವವರು ಎಚ್ಚರದಿಂದಿರಬೇಕಾಗಿ ಪ್ರಾರ್ಥನೆ

ಶ್ಯಾಂಭಟ್ಟ, ಮೇಗರವಳ್ಳಿ, ತೀರ್ಥಹಳ್ಳಿ ತಾಲ್ಲೋಕು

ಬಂದೂಕಿನ ಲೈಸೆನ್ಸು.

ಅಯ್ಯಾ,

ಮಂಜರಾಬಾದು ತಾಲ್ಲೂಕಿನ ರೈತರಿಗೆ ಈ ಹೋಬಳಿಯಲ್ಲಿ ಸುಮಾರು ೫೫ ಬಂದೂಕು ಲೈಸೆನ್ಸ್ ಇದ್ದುವು. ನನಗೂ ಆತ್ಮಸಂರಕ್ಷಣೆ ಬಗ್ಗೆ ಸ್ವತ್ತು ರಕ್ಷಣೆ ಬಗ್ಗೆ ಒಂದು ನಳ್ಳಿ ಬಂದೂಕಿಗೆ ಲೈಸೆನ್ಸು ಇತ್ತು ಕಳೆದ ೧೯೦೫ ನೆ ಡಿಸೆಂಬರು ಆಖೈರಿನಲ್ಲಿ ಹೊಸ ಲೈಸೆನ್ಸಿಗೆ ದರಖಾಸ್ತು ಪಟೇಲರ ಮೂಲಕ ಸಕಲೇಶಪುರದ ೧ ನೆ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕೊಟ್ಟೆನು. ಈ ತಾರೀಖು ವರಿಗೂ ಈ ಸಾಲಿಗೆ ಹೊಸ ಲೈಸೆನ್ಸು ಕೊಡಲಿಲ್ಲ. ನಾನು ಗರೀಬು, ಈ ಗ್ರಾಮದಲ್ಲಿ ಭಾರಿ ತರಿ ಜಮೀನು ಮಾಡಿಸುತ್ತೇನೆ ನನ್ನ ಮನೆಯಲ್ಲಿ ನಾನು ಒಬ್ಬ. ಗದ್ದೆಗೆ ಬಾಜು ಬಂಜರು ಬಿದ್ದು ಇರುವ ಕಾಫಿ ತೋಟಗಳಲ್ಲಿ ಹೇರಳ ಹಂದಿ ಕಾಡು ಜಾನುವಾರುಗಳು ಸೇರಿ ಬಾಜು ಇರುವ ತರಿ ಫಸಲನ್ನು ತುಳಿದು ರಾತ್ರಿ ವೇಳೆ ನಾಶ ಮಾಡುತ್ತವೆ ನಾನು ರಾತ್ರಿ ವೇಳೆ ಒಬ್ಬನೇ ಕಾಯಲು ಭೀತಿ ಆಗುತ್ತೆ. ದಾರಿಯಲ್ಲಿ ಕ್ರೂರ ಜಂತುಗಳ ಸಿಕ್ಕೀತೆಂಬ ಪ್ರಾಣಭೀತಿ ಇದೆ ಯಾತಕ್ಕೋಸ್ಕರ ಲೈಸೆನ್ಸು ಕೊಡಲಿಲ್ಲವೆಂದು ಈ ಹೋಬಳಿಯಲ್ಲಿ ಅನೇಕರು ಸೇರಿ ಮೈಸೂರು ದಿವಾನಸಾಹೇಬರವರಿಗೆ ಅರ್ಜಿ ಕೊಟ್ಟದ್ದಕ್ಕೆ ಡಿಪ್ಟಿ ಕಮಿಷನರ ಇವರಿಂದ ತಿಳಿದು ಬರೆಯಬೇಕಾಗಿ ಹುಕುಂ ಆಯಿತು ಆ ಕಮಿಷನರಿಗೆ ಅರ್ಜಿ ಕೊಟ್ಟದ್ದಕ್ಕೆ ಇತಃಪರ ಗರೀಬರ ಇನಸಾಫ಼ ಇಲ್ಲ ಈ ಡಿಸ್ಟ್ರಿಕ್ಟಿನಂತೆ ಎಲ್ಲಾ ಕಡೆಯೂ ಲೈಸೆನ್ಸು ಕೊಟ್ಟಿಲ್ಲವೋ ಅಥವಾ ನಮ್ಮಗಳ ದುರಾದೃಷ್ಟವೋ ಎಂಬದಾಗಿ ಯೋಚಿಸುತ್ತೇನೆ ಈ ವಿಚಾರ ತಮ್ಮ ಘನ ಪತ್ರಿಕೆಗೆ ವರ್ತಮಾನವಿದ್ದರೆ ನಾಳೆ ವಾರ ಪ್ರಚುರಪಡಿಸುವಿರಾಗಿ ನಂಬುತ್ತೇನೆ ನನಗಂತೂ ಹೇರಳ ತರಿಯಿಂದ ನಷ್ಟವಾಗುತ್ತೆ. ಮುಂದೆ ಕಾಫಿ ತೋಟದ ಉಸ್ತುವಾರಿ ಕಟ್ಟಿ ಅದು ನಷ್ಟವಾಗುತ್ತೆ ಎಂಬದಾಗಿ ಬೇಡುತ್ತೇನೆ.

ಹಂ. ಚನ್ನಪ್ಪ, ಅಚ್ಚರಡಿ.

[ಬಂದೂಕುಗಳ ಸೆನಸಸ್ ಲೆಕ್ಕವೆತ್ತುವುದಕ್ಕಾಗಿ ಸರ್ಕಾರದವರು ಲೈಸೆನ್ಸು ಕೊಡದೆ ತಡೆದಿದ್ದರೋ ಏನೋ ಎಂದು ಅನುಮಾನವಾಗಿದೆ ಆದರೂ ಹೀಗೆ ವರುಷಗಟ್ಲೆ ತಡೆದು ರೈತರಿಗೆ ತೊಂದರೆ ಪಡಿಸುವುದು ಸರಿಯಲ್ಲ ಈ ವಿಷಯದಲ್ಲಿ ಸರ್ಕಾರದವರು ಖಂಡಿತವಾದ ಕ್ರಮವನ್ನು ಜಾರಿಗೆ ತರಬೇಕು ಬಂದೂಕುಗಳ ಸೆನಸಸ್ ವಿಷಯದಲ್ಲಿ ಸರ್ಕಾರದವರು ಕೊಟ್ಟಿರುವ ಹುಕುಮನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ—ಎಡಿ]

ಮೈಸೂರು—ಯಡತೊರೆ ಮಾರ್ಗದಲ್ಲಿ ಕಳ್ಳರ ಅವಾಂತ್ರ.

ಅಯ್ಯಾ,

ಇದೇ ತಾ ೨೦ ನೆ ಶನಿವಾರ ಮೈಸೂರಿಗೆ ಬತ್ತಾ ಮಾರುವದಕ್ಕಾಗಿ ನಮ್ಮ ಊರಿಂದ ಹನ್ನೆರಡು ಗಾಡಿಗಳು ಬಂದಿದ್ದುವು. ತಾ ೨೧ ನೆ ಭಾನುವಾರ ಮೈಸೂರಿನಲ್ಲಿ ಬತ್ತಾ ಸುರಿದು ಹಣ ಕಟ್ಟಿಸಿಕೊಂಡು ಪ್ರಾಮಾಣಿಗಳನ್ನು ತೆಗೆದುಕೊಂಡು ಸಾಯಂಕಾಲ ೬॥ ಗಂಟೆಯಲ್ಲಿ ಗಾಡಿಗಳನ್ನೆಲ್ಲಾ ಕಟ್ಟಿಕೊಂಡು ವಾಪಸು ಊರಿಗೆ ಬರುತ್ತಿರುವಾಗ್ಗೆ ನಮ್ಮ ಗುಂಪಿನಲ್ಲಿದ್ದ ಆನಂದೂರು ಕಡೆ ೭—೫ ಗಾಡಿಗಳು ಮಾತ್ರ ಗುಂಪು ಬಿಟ್ಟು ಮುಂದಾಗಿ ಓಡಿಸಿಕೊಂಡು ಹೋದರು ನಮ್ಮ ಕಡೆ ಒಂದು ಎತ್ತಿಗೆ ಕಾಲು ನೋವಾಗಿದ್ದರಿಂದ ನಿಧಾನವಾಗಿ ಗಾಡಿ ಬಿಟ್ಟುಕೊಂಡು ರಾತ್ರಿ ಸುಮಾರು ೯॥ ಗಂಟೆ ಸಮಯಕ್ಕೆ ಇಲ್ವಾಲಕ್ಕೆ ೨ ಮೈಲಿ ದೂರದಲ್ಲಿರುವ ಕೂಡುರಸ್ತೆ ಬಳಿಗೆ ಬಂದೆವು ಮುಂದುಗಡೆ ಬರುತ್ತಿದ್ದ ನಮ್ಮ ಊರು ಕೃಷ್ಣೇಗೌಡನ ಗಾಡಿಯಲ್ಲೇ ನಾನು ಕೂತಿದ್ದೆನು ನಮ್ಮ ಗಾಡಿಯ ಪಕ್ಕದ ರಸ್ತೆ ಒತ್ತಿನಲ್ಲಿ ದಂಪಥರಾಗಿ ನಿಂತಿದ್ದ ೪—೧೦ ಜನಗಳಿದ್ದ ಒಂದು ಕಳ್ಳರ ಗುಂಪು ನಮ್ಮ ಗಾಡಿಗೆ ಬೀಳುವದಕ್ಕೆ ಬರಲು ಗಾಡಿಯ ಎತ್ತುಗಳು ಬೆದರಿ ಗಾಬರಿಯಾದವು ಅಷ್ಟರಲ್ಲಿ ಗಾಡಿಯವನು ಎಚ್ಚರವಾಗಿ ಕಳಿತು ಈ ಕಳ್ಳರ ಗುಂಪನ್ನು ಕಂಡು ಹಿಂದಿನ ಗಾಡಿಯವರಿಗೆಲ್ಲಾ—ಹುಷಾರಾಗಿರಿ, ಕಳ್ಳರ ಜಾಡು ಗೊತ್ತಾಗಿದೆ ಎಂದು ಕೂಗಿ ಹೇಳಿದನು ಈ ಶಬ್ದವನ್ನು ಕೇಳಿದ ಕೂಡಲೆ ಹಿಂದಿದ್ದ ಒಂದು ಕಳ್ಳರ ಗುಂಪು ಬಂದಿದ್ದ ಹಾಸ್ಯದ ಕಡೆಯವರ ೫ ಗಾಡಿಗಳನ್ನು ಅಡ್ಡಗಟ್ಟಿ ಗಾಡಿಯವರನ್ನು ಹೊಡೆದು ಲೂಟಿಗೆ ಶುರುಮಾಡಿದರು ನಮ್ಮ ಗಾಡಿ ಬಳಿ ಇದ್ದ ಕಳ್ಳರೂ ಅದೇ ಗುಂಪಿಗೆ ಸೇರಿ ಕೆಲವು ಗಾಡಿಯವರ ಬಟ್ಟೆಬರೆಗಳನ್ನೆಲ್ಲಾ ಕಿತ್ತುಕೊಂಡು ಗಂಟು ಕೊಡಿ ಎಂಬದಾಗಿ ಗಾಡಿಯವರಿಗೆ ಬಹಳ ಏಟುಗಳನ್ನು ಹೊಡೆಯುತ್ತಿರುವಾಗ್ಗೆ ಮುಂದಾಗಿ ೫—೬ ಗಾಡಿಗಳನ್ನು ಓಡಿಸಿಕೊಂಡು ಬಂದಿದ್ದ ಆನಂದೂರು ಕಡೆ ಗಾಡಿಯವರು ಈ ಕಳ್ಳರಿಂದ ಬಹಳ ಪೆಟ್ಟು ತಿಂದು ಹಣಕಾಸು ಬಟ್ಟೆಬರೆಗಳನ್ನೆಲ್ಲಾ ಕಳೆದುಕೊಂಡು ಗಾಯಪಟ್ಟ ಒಬ್ಬ ಮನುಷ್ಯನನ್ನು ಕಳೆದುಕೊಂಡು ಓಡಿಹೋಗಿ ಇಲ್ವಾಲದ ಪೊಲೀಸು ಸ್ಟೇಷನಿಗೆ ತಿಳಿಸಲು ಪೊಲೀಸಿನವರು ಹತ್ಯಾರು ಸಹಿತ ಸುಮಾರು ೩೦ ಜನ ತಮ್ಮ ಜೊತೆನೊಡನೆ ಜಾಗ್ರತೆಯಾಗಿ ಅಲ್ಲಿಗೆ ಓಡಿಬಂದರು. ಇವರು ಸಮೀಪಕ್ಕೆ ಬರುವ ವರಿಗೂ ಕೈಗೆ ಸಿಕ್ಕಿದ್ದನ್ನೆಲ್ಲಾ ಕಳ್ಳರು ದೋಚಿಕೊಂಡು ಚದರಿ ಓಡಿಹೋದರು. ಈ ಕಳ್ಳರ ಗುಂಪು ಸುಮಾರು ೩೦ ಜನದ ವರಿಗೂ ಇತ್ತು ಪತ್ತೆಗೆ ಸಿಕ್ಕಲಿಲ್ಲ ಕಳ್ಳರ ಕೈಗೆ ಸಿಕ್ಕಿ ಘಾಸಿಯಾಗಿದ್ದ ಆನಂದೂರು ಗಾಡಿಯವನೊಬ್ಬನು ಅಲ್ಲೇ ಮೆಳೆ ಸಂದಿನಲ್ಲಿ ಪತ್ತೆಯಾದನು ಜೀವ ಮಾತ್ರ ಇತ್ತು ದೇವರ ದಯದಿಂದ ನಮಗೆ ಯಾವ ಅಪಾಯವೂ ಆಗಲಿಲ್ಲ ೧೦॥ ಗಂಟೆಗೆ ಇಲ್ವಾಲಕ್ಕೆ ಬಂದು ಬೆಳಗಿನ ವರಿಗೂ ನಮ್ಮ ಗುಂಪಿನ ಗಾಡಿಯನ್ನೆಲ್ಲಾ ಅಲ್ಲಿ ಬಿಟ್ಟುಕೊಂಡಿದ್ದು ಬೆಳಿಗ್ಗೆ ನಮ್ಮ ಊರಿಗೆ ತಲಪಿದೆವು ಬಹಳ ದಿವಸದಿಂದ ಈ ದಾರಿಯಲ್ಲಿ ಇಂಥಾ ಲೂಟಿ ಕಳ್ಳರ ಕಾಟವು ಆದಗ ರೈತರಿಗೆ ನಿರ್ಭಯವಾಗಿತ್ತು. ಈಗ ಇಂಥಾ ಕಳ್ಳರು ಪ್ರಬಲಿಸುತ್ತಾ ಬಂದಿರುವದರಿಂದ ಇನ್ನು ವೈರುದಾರಿಗೂ ಪ್ರಯಾಣಿಕರಿಗೂ ಮುಂದೆ ನಾನಾ ಅಪಾಯಗಳು ಸಂಭವಿಸುವವರಲ್ಲೇನೂ ಸಂದೇಹವಿಲ್ಲ ಇಂಥಾ ದಾರಿಕಂಟಕರನ್ನು ಸರ್ಕಾರದವರು ನಿಗಾ ಇಟ್ಟು ಅಡಗಿಸಿ ಮೊದಲಿನಂತೆ ಪ್ರಜೆಗಳು ನಿರ್ಭಯವಾಗಿ ಸಂಚರಿಸುವಂತೆ ಕೊಡ್ಡೆ ಮಾಡ್ಯಾರೆಂದು ಹಾರೈಸುತ್ತೇನೆ ಪ್ರಯಾಣಿಕ

[ಆರು ತಿಂಗಳ ಒಳಗೆ ಮೆ॥ ಎಚ್. ಎಚ್. ಸ್ಪಾರ್ಕ್ಸ್ ರವರು ಮೈಸೂರು ಡೆಪ್ಟಿ ಕಮಿಷನರಾಗಿದ್ದಾಗ್ಗೆ ರಾಜಧಾನಿಗೆ ಬಂದು ಹೋಗತಕ್ಕ ಪ್ರಜೆಗಳ ಮತ್ತು ಆಮದು ರಫ್ತಿನ ಸಂರಕ್ಷಣೆಗೋಸ್ಕರ ಇಲವಾಲ, ಚಟ್ಟನಹಳ್ಳಿ, ನರಸೀಪುರ, ಶ್ರೀರಂಗಪಟ್ಟಣಗಳ ರಸ್ತೆಗಳ ಮೇಲೆ ದಿನವಹಿ ರಾತ್ರಿ ಹೊತ್ತು ಕುದುರೆ ಸವಾರರ ಟಪ್ಪಾಲನ್ನು ಇಡಿಸಿದ್ದರು ಇದು ಈಚೆಗೆ ಯಾವ ಕಾರಣದಿಂದಲೋ ನಿಂತುಹೋಗಿರಬೇಕೆಂದೂ ಇದರಿಂದಲೇ ರಸ್ತೆಗಳು ಕಳ್ಳಕಾಕರಿಗೆ ಆಶ್ರಯವಾಗಿರಬೇಕೆಂದೂ ಕಾಣುವುದು ಈಗಿನ ಡೆಪ್ಟಿ ಕಮಿಷನರಾದ ಮೆ॥ ಕಾಂತರಾಜೇ ಅರಸಿನವರು ಈ ವಿಚಾರವನ್ನು ಗಮನಕ್ಕೆ ತಂದುಕೊಂಡು ಮೇಲ್ಕಂಡ ರಸ್ತೆಗಳನ್ನು ನಿರುಪಾಧಿಕವಾಗಿ ಮಾಡಿಯಾರೆಂದು ನಿರೀಕ್ಷಿಸುತ್ತೇವೆ—ಎಡಿ]

ತಾಲ್ಲೋಕು ವರ್ತಮಾನಗಳು.

ಚಿತ್ರದುರ್ಗ.—ಈ ಊರಲ್ಲಿ ಕಿಡುಬು ನೆಗಡಿ ಚಳಿಜ್ವರ ಆಮಶಂಕೆ ರೋಗಾದಿಗಳು ಬಾಧಿಸುತ್ತಲಿವೆ ಇದಕ್ಕೆ ನಲ್ಲಿಗಳಲ್ಲಿ ಬರುವ ಮಣ್ಣು ಮಿಶ್ರವಾದ ಕೆಂಪುನೀರು ಜನರು ಮಾಡುವ ಹೇಸಿಕೆಗಳೇ ಕಾರಣಗಳು. ಒಬ್ಬ ದರ್ಜಿಯ ಸೊಸೆ ಸುಮಾರು ೨೦ ವರ್ಷದವಳು ಸಣ್ಣ ಕೂಸು ಬಿಟ್ಟು ಸೀಹೋ ಭಾವಿಯಲ್ಲಿ ಬಿದ್ದು ಸತ್ತಿದ್ದಾಳೆ ಈಕೆಯ ಬಂಧುಗಳು ಬಹಳ ಸಂಕಟಪಡುತ್ತಿದ್ದಾರೆ. ಕೆಲವು ದಿನಗಳಿಂದ ಪ್ರತಿ ರಾತ್ರಿಯೂ ಕಳ್ಳರು ಬಂದರೆಂದು ಪುಕಾರು ಆಗುತ್ತಲೇ ಇದೆ ಆಫೀಸರುಗಳು ಊರೆಲ್ಲಾ ತುಂಬಿದ್ದರೂ ಈ ಪುಕಾರು ಇನ್ನೂ ಅಡಗಿಲ್ಲ. ಡಿಪ್ಟಿ ಕಮಿಷನರ್ ಮೆ॥ ರಾಮಾನುಜೈಯ್ಯಂಗಾರ್‌ರವರು ರಜಾ ನವಂಬರ್ ತಿಂಗಳು ರಜಾ ಹೋಗುತ್ತಾರೆಂಬ ವದಂತಿ ಇದೆ. ಉಪಚರಿಸಿ ಮರ್ಯಾದೆಯಿಂದ ಕಳುಹಿಸಲು ಮೆ॥ ರಾಘವೇಂದ್ರರಾವ್, ಮೆ॥ ತಿರುಮಲರಾವ್ ಇವರು ಮುಂದಾಳಾಗಿ ನಿಂತು ದ್ರವ್ಯ ಸಹಾಯದಿಂದ ಏರ್ಪಾಡು ಮಾಡುತ್ತಿದ್ದಾರೆ ಸಾಹುಕಾರ್ ಮೆ॥ ... ನವರು ಬಹಳ ಉದಾರದಿಂದ ಬಡವರಿಗೆ ಧಾನ್ಯವನ್ನು ಉಚಿತ ಹಂಚಿದರೆಂದು ತಿಳಿದುಬಂದಿದೆ

ಶಿಕಾರಿಪುರ.—ಇದೇ ಮಾಹೆ ತಾರೀಖು ೨೬ ನೆ ಶುಕ್ರವಾರ ರಾತ್ರಿ ದವಳಗಿ ಗುರುಮೂರ್ತಪ್ಪನ ಮನೆಗೆ ಯಾರೋ ಕಳ್ಳರು ಹಿಂಬಗಿಲಿಯಿಂದ ಕನ್ನ ಹಾಕಿ ಚಿಲ್ಲರೆ ಸುಮಾರು ೨೦೦ ರೂ ನಗನಾಣ್ಯಗಳನ್ನು ದೋಚಿಕೊಂಡು ಪರಾರಿಯಾದರು ಮನೆಯವರೆಲ್ಲರೂ ಮಲಗಿದ್ದರು ಆಗ ಸದರಿ ಗುರುಮೂರ್ತಪ್ಪನು ಕೆಳಗೆ ಏನೋ ಶಬ್ದವಾಗುತ್ತದೆ ಎಂದು ಮಾತನಾಡಿಕೊಳ್ಳುವಾಗ ಯವರು ಎಚ್ಚರಿಕೆಯಾದರೆಂದು ಕಳ್ಳರು ಗೋಡೆ ಧುಮುಕಿ ಹೋದರು ಇನ್ನು ಸ್ವಲ್ಪ ನಿಧಾನವಾಗಿದ್ದರೆ ಪೆಟ್ಟಿಗೆಗಳ ಬೀಗ ಒಡೆದು ನೂರಾರು ರೂಪಾಯಿಗಳ ಒಡವೆಗಳು ಹೋಗುತ್ತಾ ಇದ್ದವು. ಸೌಕರ್ಯದಿಂದ ಮನೆ ಸುತ್ತಾಮುತ್ತಲೂ ಹಾಳು ಮನೆಗಳು ಬಿದ್ದಿರುವದರಿಂದ ಕಳ್ಳರು ಬರಲು ಬಹಳ ಆಸ್ಪದವಿದೆ ಇಂಥಾ ಹಾಳು ಮನೆಗಳು ಈ ನಲ್ಲಿ ಇನ್ನೂ ಅನೇಕ ಕಡೆ ಇವೆ ಸರ್ಕಾರದವರು ಅಂಥಾ ಮನೆಗಳ ಯಜಮಾನರಿಗೆ ರಿಪೇರಿ ಮಾಡಿಸುವ ಹಾಗೆ ಇಲ್ಲವೇ ಗವರ್ನ್ಮೆಂಟಿಗೆ ಒಪ್ಪಿಸಿ ನ್ಯಾಯವಾಗಿ ಪಾವತಿಸುವ ಹಾಗೆ ಹುಕುಂ ಕೊಟ್ಟರೆ ಕಳ್ಳರ ಎಷ್ಟೋ ತೊಂದರೆಗಳು ತಪ್ಪುತ್ತವೆ ಇಲ್ಲವಾದರೆ ಇಂಥಾ ಮನೆಗಳ ದೆಸೆಯಿಂದ ಕಳ್ಳರು ಅಡಗುವದಕ್ಕೆ ಅನುಕೂಲವೂ ಹಾವು ಮೊದಲಾದ ಕೆಟ್ಟ ಹುಳಗಳು ಸೇರಿಕೊಂಡು ಜನರಿಗೆ ತೊಂದರೆಪಡಿಸುವವರಲ್ಲೂ ಏನೂ ಆಕ್ಷೇಪವಿಲ್ಲ

ಫ್ರೇಜರ್‌ಪೇಟೆ.—ನಮ್ಮ ಶಿರಂಗಾಲ ಗ್ರಾಮದಲ್ಲಿ ನಮ್ಮ ನಾಂಗದ ಮಠದ ಅಣ್ಣಯ್ಯಶೆಟ್ಟಿ ಮಗ ಅಣ್ಣಯ್ಯಮಾಸ್ತರ ಮನೆಯಲ್ಲಿ ನಿರ್ಮಾಣ ಮಾಡುವ ದೇವರ ಉತ್ಸವವನ್ನು ಈ ಮಾಹೆ ೧೯ ನೇ ಮಂಗಳವಾರ ಮಾಡಲಿಕ್ಕೆ ಶುರು ಮಾಡಿದರು. ಕೆಲಸಗಳು ತೀರಿದ ನಂತರ ದೇವರನ್ನು ಒಳಗೆ ಕರೆದೊಯ್ಯುವ ಉತ್ಸವಕ್ಕೆ ಪೆಟ್ಟಿಗೆಯ ಮುಚ್ಚಳವನ್ನು ತೆಗೆದು ನೋಡುವಲ್ಲಿ ದೇವರೂ ಚಿನ್ನಾಭರಣಗಳೂ ಒಂದೂ ಇರಲಿಲ್ಲ ಆಗ ಮನೆಯವರೆಲ್ಲಾ ತುಂಬಾ ವ್ಯಸನವುಳ್ಳವರಾಗಿದ್ದರು ಆಗ್ಗೆ ಉತ್ಸವಕ್ಕೋಸ್ಕರವಾಗಿ ಸೇರಿದ್ದ ಇಷ್ಟರೆಲ್ಲರೂ ಆ ಮನೆಯವರಿಗೆ ಧೈರ್ಯ ಹೇಳಿದರು ಆದರೆ ಆ ಪೆಟ್ಟಿಗೆಯಲ್ಲಿ ಸುಮಾರು ೩೦೦—೩೫೦ ರೂಪಾಯಿ ಬೆಲೆಯ ಚಿನ್ನದ ಒಡವೆ ನಗಗಳು ಇತ್ತು ಆದಾಗ್ಯೂ ಮುಂದಿನ ಕೆಲಸವನ್ನು ಜರುಗಿಸುವದಕ್ಕೆ ಆ ಕೂಡ್ಲೆ ಪುನಃ ಚಿನ್ನದಿಂದ ದೇವರ ಪ್ರತಿಮೆ ಪ್ರತಿಷ್ಠೆ ಮಾಡಿಸಿ ಉತ್ಸವದ ಕೆಲಸವನ್ನು ಜರಿಸಿದರು ಆದರೆ ಆ ಜನಗಳು ಇಷ್ಟು ದಿವಸ ಕಳವಾಯಿತು ಎಂಬುದು ಗೊತ್ತಿಲ್ಲ ಮತ್ತು ಆ ಕೆಲಸ ಮಾಡಿದ ಕಳ್ಳರು ಪತ್ತೆ ಇಲ್ಲ—ನಮ್ಮ ಊರಿಗೆ ಕಾಣಿಗಲ ಎಂಬ ಗ್ರಾಮದ ೩ ಜನ ಮುಸಲ್ಮಾನರು ಪಂಡಿತರು ಬಂದು ಮೂಲವ್ಯಾಧಿಗೂ ಕಣ್ಣಿನ ವ್ಯಾಧಿಗೂ ಔಷಧಿ ಕೊಡುತ್ತೇವೆಂಬದಾಗಿ ಹೇಳಿದರು ಇಲ್ಲಿ ಮೂಲವ್ಯಾಧಿ ರೋಗವುಳ್ಳವರು ಅವರಿಂದ ಔಷಧಿ ತೆಗೆದುಕೊಳ್ಳಲಿಕ್ಕೆ ಶುರು ಮಾಡಿದರು. ಆದರೆ ಆ ರೋಗಕ್ಕೆ ಮೊಳಗಳು ಇರುತ್ತವಷ್ಟೆ ಮೊಳೆಗಳಿಗೆ ಸೂಜಿಯಿಂದ ದಳಿದು ಘಾರ ಪೋಣಿಸಿ ೩ ದಿವಸದ ಯಂತ್ರ ಅದಕ್ಕೆ ಔಷಧಿ ಹಾಕಿ ಮಾಗಿದ ನಂತರ ಆ ದಾರಗಳಿಗೆ ಕಾದ ಕೊಂಡಿಯನ್ನು ತಗಲಿಸಿ ಯಳೆದು ಮೊಳೆಗಳನ್ನು ಹೊರಡಿಸಿ ಹೀಗೆ ನಾಲ್ಕು ಜನರಿಗೆ ಮೊಳೆಗಳನ್ನು ಹರಿದಿರುತ್ತಾರೆ

ತುಂಕೂರು ತಾ. ಹೊನ್ನುಡಿಕೆ.—ಇಲ್ಲಿ ಮಳೆ ಸಮೃದ್ಧಿಯಾಗಿ ಕೆರೆ ಕಟ್ಟೆಗಳೆಲ್ಲಾ ತುಂಬಿವೆ ಇನ್ನೂ ಚಿಕ್ಕಕೆರೆ ಕೋಡಿ ಬಿದ್ದಿಲ್ಲ ಬೆಳೆಗಳು ಬಹಳ ಚೆನ್ನಾಗಿವೆ ಈ ವರ್ಷ ಅಡಿಕೆ ಕಾಯಿ ಸಹ ಬಹಳ ಕಷ್ಟ ಬಂತು ರಾಗಿ ರೂಪಾಯಿಗೆ ೧೭—೧೪ ಸೇರೂ ಅ ೩ ಸೇರೂ ಮಾರುತ್ತಿದೆಯೇ ಹೊರತು ಅಗ್ಗವಾಗಲಿಲ್ಲ. ಇಲ್ಲಿ ಆಗುವ ಭಾನುವಾರದ ಸಂತೆಯಲ್ಲಿ ಪಸಿಗೆ ಬಹಳ ಜೋರಾಗಿದೆ ಇಲ್ಲಿ ಸ್ವಲ್ಪ ವಿಶೇಷ ವ್ಯಾಪಾರಸ್ಥಳವಾದ್ದರಿಂದ ಕಾಗದಗಳು ಬಹಳ ಓಡಾಡುತ್ತವೆ. ಆದರೂ ವಾರಕ್ಕೆ ೨ ಸಲ ಟಪ್ಪಾಲು ಬರುವದರಿಂದ ಕಾಗದಗಳು ಬಹಳ ಸುಸ್ತಾಗುತ್ತವೆ ಮೇಲ್ಪಟ್ಟ ಆಫೀಸರು ಮೊದಲಿನಂತೆ ವಾರಕ್ಕೆ ೩ ಸಲವಾದರೂ ಏರ್ಪಡಿಸಿ ಕೊಡಬೇಕಾಗಿದೆ ಇಲ್ಲಿ ಸ್ಕೂಲು ಕಟ್ಟಡವು ಮೊನ್ನೆ ಮಳೆಯಲ್ಲಿ ಸಂಪೂರ್ಣವಾಗಿ ಬಿದ್ದುಹೋಯಿತು. ಆದರೆ ಸ್ಕೂಲು ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿದೆ ಈ ಕಟ್ಟಡವನ್ನು ಸರ್ಕಾರಿಯಾಗಿ ತಯಾರುಮಾಡಿಸಲು ಅಂದಾಜುಪಟ್ಟಿ ರವಾನಿಸಿರುವಂತೆ ತಿಳಿದೆವು—ಈ ಗ್ರಾಮದಲ್ಲಿ ಮ್ಯೂನಿಸಿಪಾಲಿಟಿ ಏರ್ಪಾಡಾಗುತ್ತಿದೆ ತುಂಕೂರಿಂದ ಇಲ್ಲಿಗೆ ಆಗಿರುವ ರಸ್ತೆಯನ್ನು ಸರ್ಕಾರದವರು ಮುಂದಕ್ಕೆ ಬೆಳೆಯಿಸಿದರೆ ವ್ಯಾಪಾರಕ್ಕೆ ಅನುಕೂಲವಾಗುವುದು ಇಲ್ಲಿ ಒಂದು ವರ್ನಾಕ್ಯುಲರ್ ಗರ್ಲ್ಸ್ ಸ್ಕೂಲನ್ನು ಇಡಬೇಕೆಂದು ತಪಶೀಲು ನಡೆಯುತ್ತಿದೆ ಮೊದಲು ವಿಜೃಂಭಣೆಯಿಂದ ನಡೆಯುತ್ತಾ ಇದ್ದು ನಿಂತುಹೋಗಿದ್ದ ಹೊನ್ನಾದೇವಿ ಮುರಿಗಪ್ಪನವರ ಉತ್ಸವಗಳು ಈ ಕಾರ್ತೀಕದಲ್ಲಿ ಬಹಳ ಆಟ್ಟಹಾಸದಿಂದ ನಡೆಯುವದಾಗಿ ತೋರುತ್ತೆ

ಗುಂಡ್ಯ ತಾ. ಬೇಗೂರು—ಈ ಗ್ರಾಮಕ್ಕೆ ೩ ಮೈಲಿ ಫಾಸಲೆಯಲ್ಲಿರುವ ಕೋಟೆಕೆರೆ ಗ್ರಾಮದ ಸಂತೆಗೆ ಹೋಗಿದ್ದೆನು ಆ ಸಂತೆಗೆ ಅನೇಕ ಜನ ವರ್ತಕರೂ ವ್ಯಾಪಾರಕ್ಕಾಗಿ ಅನೇಕ ಮಂದಿ ಜನಗಳೂ ಬಂದಿದ್ದರು ಇಂಥಾ ಸಂತೆಗೆ ಚಕ್ಕಳದ ಆಟವೆಂಬ ಜೂಜಾಟವ ಕೆಲವು ಪುಂಡು ಜನಗಳು ಸಹ ಬಂದು ತಮ್ಮ ಕೆಲಸಕ್ಕೆ ಆರಂಭ ಮಾಡಿದರು ಆ ಸಂತೆಯಲ್ಲಿ ನೆರೆದಿದ್ದ ವರ್ತಕರೂ ಜನಗಳೂ ಈ ಆಟದ ಸಮೀಪಕ್ಕೆ ಬಂದರು. ಆ ಆಟದವರು ಮೊದಲು ಮೊದಲು ಕೆಲವು ಜನಗಳಿಗೆ ಸ್ವಲ್ಪ ಸ್ವಲ್ಪ ಫಾಯಿದೆ ತೋರುವಹಾಗೆ ನಟಿಸಿದರು ಆ ಮೋಸದ ಫಾಯಿದೆಗೆ ಎಲ್ಲರೂ ಭ್ರಾಂತರಾಗಿ ಮೋಸ ಹೋಗಲು ಪ್ರಯತ್ನ ಪಟ್ಟರು ಆ ಆಟವು ಮಧ್ಯಾಹ್ನ ೨ ಘಂಟೆಗೆ ಪ್ರಾರಂಭ

ಸಾಯಂಕಾಲ ೫ ಘಂಟೆ ವರೆವಿಗೂ ನಡೆಯುತು ಈ ಮೋಸದ ಆಟದಲ್ಲಿ ಅನೇಕ ಜನಗಳು ನೂರಾರು ರೂಪಾಯಿಗಳ ವರೆಗೂ ಸೋತು ಕಷ್ಟಸ್ವಯಾದ ಮುಖದಿಂದ ವ್ಯಾಪಾರ ಸಹ ತೆಗೆದುಕೊಳ್ಳಲು ಇಲ್ಲದೆ ತಮ್ಮ ತಮ್ಮ ಊರಿಗೆ ಹಿಂತಿರುಗಿ ಹೋದರು ಈ ಸಂತೆಯು ಸಣ್ಣದು ಈ ಚಿಕ್ಕ ಸಂತೆಯಲ್ಲಿ ಸಾಧಾರಣವಾಗಿ ೫೦ ರೂಪಾಯಿ ವ್ಯಾಪಾರ ನಡೆಯದೆ ಇದ್ದಾಗ್ಯೂ ನೂರಾರು ರೂಪಾಯಿ ಜೂಜು ನಡೆದದ್ದಕ್ಕೆ ಬಹಳ ಆಶ್ಚರ್ಯ ಪಡತಕ್ಕದ್ದಾಗಿರುತ್ತೆ ಈ ನಮ್ಮ ಊರು ಸುಮಾರು ೧೦೦ ವರುಷಗಳಿಂದಲೂ ನಾಗರಿಕ ಉಳಿತ ಇಂಗ್ಲಿಷ್ ನವರ ಬೋಧನೆಗೆ ಒಳಪಟ್ಟಾಗ್ಯೂ ಇಂಥಾ ಕೆಲಸಕ್ಕೆ ಹೋಗಿ ದುರುಪಯೋಗವಾದ ಪ್ರಯವನ್ನು ನಿಗೆ ಪಶ್ಚಾತ್ತಾಪ ಹೊಂದುವ ಈ ಜನಗಳ ನಾಗರೀಕವ ವರ್ತನೆ ಊಹಿಸಿಕೊಳ್ಳತಕ್ಕದ್ದಾಗಿರುತ್ತೆ ಆದ್ದರಿಂದ ಸರ್ಕಾರದವರು ಈ ಸಂತೆಯಲ್ಲಿ ಇನ್ನು ಮುಂದೆ ಇಂಥಾ ದುರ್ನಡತೆಯಾದ ಜೂಜಿಗೆ ಅವಕಾಶಕೊಡದೆ ಈ ಜೂಜಾಟವನ್ನು ತಪ್ಪಿಸುತ್ತಾರೆಂತ ನಂಬಿರುತ್ತೇನೆ ಇದರ ಮೇಲೆ ಜೂಜಾಟದವರ ಬೆಸೆ ಹೇಗಿದೆಯೋ!

ಚಿಕ್ಕಮಗಳೂರು.—ಒಂದು ವಾರದಿಂದ ಮಳೆ ನಿಂತಿದೆ ಪೈರು ಚೆನ್ನಾಗಿದೆ ದಿನಸಿ ಧಾರಣೆ ಕೊಂಚ ಮಟ್ಟಿಗೆ ಇಳಿದಿದೆ ಪ್ಲೇಗ್ ರೋಗವು ಈ ಚಳಿನವಟ್ಟ ಜಾಸ್ತಿ ಇಲ್ಲದೆ ಇದ್ದರೂ ತಪ್ಪಲಿಲ್ಲ ಮೊದಲು ೫—೬ ಜನಗಳು ಸಾಯ ತೊಡಗಿದಾಗ ಪ್ರಾರಂಭವಾಯಿತು ಇಲ್ಲಿನ ವರಿಗೂ ಸಾವಿರ ಜನರಿಗಿಂತ ಹೆಚ್ಚಾಗಿಯೇ ಪ್ಲೇಗಿನಲ್ಲಿ ಸತ್ತಿದಾರೆಂದು ತೋರುತ್ತಿದೆ ಈಗ ಈ ಊರಿನ ಸುತ್ತ ಇರುವ ಹಳ್ಳಿಗಳಲ್ಲಿಯೂ ಇಲ್ಲಿನ ಕೋಟೆಯಲ್ಲಿಯೂ ಉಪದ್ರವಾಗಿದೆ ಸುಮಾರು ೨ ಮೈಲಿ ದೂರದಲ್ಲಿರುವ ಬೀಕನಹಳ್ಳಿ ಗ್ರಾಮದಲ್ಲಿ ಸುಮಾರು ೬೦ ಜನರು ಪ್ಲೇಗಿನಿಂದ ಸತ್ತರೆಂದು ವರ್ತಮಾನ—ನಮ್ಮ ಹೊಸ ಡೆಪ್ಯುಟಿ ಕಮಿಶನರ್‌ರು ೩ ದಿನ ಕೆಲಸ ನಡೆಸುತ್ತಿದಾರೆ ಅವರು ಈ ಊರಿನಲ್ಲಿ ಇಷ್ಟು ಜನರು ಸತ್ತಿರುವದನ್ನು ತಿಳಿದು ವ್ಯಸನಪಟ್ಟು ಪ್ಲೇಗಿನ ರೋಗಿಗಳು ಇರುವ ಮನೆಗಳಿಗೆ ತಾವೇ ಖುದ್ದಾಗಿ ಹೋಗಿ ರೋಗಿಗಳನ್ನು ಅವರ ಸ್ಥಿತಿಯನ್ನು ವಿಚಾರಿಸಿ ಬಡವರಿಗೆ ದ್ರವ್ಯಸಹಾಯ ಮಾಡುತ್ತಾ ಬಡವರಿಂದವರು ಗುಡಸಲು ಕಟ್ಟಿಕೊಳ್ಳುವಂತೆ ಎಲ್ಲಾ ಜನಗಳನ್ನು ಮುಖಪತ್ತಾಗಿ ಅವರು ಇರುವ ಇಲವೆ ಕಟ್ಟಿಕೊಳ್ಳ ಸ್ಥಳಕ್ಕೆ ಸಾಗಿಸಿಕೊಡುತ್ತಾ ಗುಡಸಲು ಕಟ್ಟಿಕೊಳ್ಳಲೂ ಶಕ್ತಿ ಇಲ್ಲದವರಿಗೆ ಒಂದೆರಡು ಆಳುಗಳನ್ನು ಬಿಟ್ಟು ಕಟ್ಟಿಸಿಯೂ ಕೊಡುವುದು ಸಹಾಯ ಮಾಡುತ್ತಿದಾರೆ ಸಾಧ್ಯವಾದರೆ ಈಗ ಊರಿನವರೆಲ್ಲರನ್ನು ಹೊರಗೆ ಷೆಡ್ಡುಗಳಿಗೆ ಕಳುಹಿಸಿ ಊರನ್ನು ದಿನಗಳ ಮಟ್ಟಿಗೆ ಖಾಲೀ ಮಾಡಿ ಅನಂತರ ಊರನ್ನು ಸಂಪೂರ್ಣ ಡಿಸಿನ್‌ಫೆಕ್ಟ್ ಮಾಡಿಸ ಬೇಕೆಂಬ ತಾತ್ಪರ್ಯವು ನಮ್ಮ ಡೆಪ್ಯುಟಿ ಕಮಿಶನರ್‌ರ ವರಾಗಿ ವರ್ತಮಾನ—ಇಲ್ಲಿನ ಸ್ಕೂಲುಗಳು ತೆರೆದಿದ್ದರೂ ದೇಶಕ್ಕೆ ಹೋಗುವ ಕೆಲವು ವಿದ್ಯಾರ್ಥಿಗಳು ಬರುತ್ತಾರಲ್ಲದೆ ಹುಡುಗರು ಬರುವದಿಲ್ಲ.

ತುಂಕೂರು — ಪ್ಲೇಗು ಶಾಂತವಾಗಿದೆ ಕೆಲ ಕೇರಿ ಬಿಟ್ಟು ಜನರು ಊರೊಳಗೆ ಬಂದಿವೆ ಈಗ ಮಳೆ ಇಲ್ಲದಿರುವದರ ಪ್ರಕ್ಷೇಪ ಪದಾರ್ಥಗಳು ದಿನದಿನಕ್ಕೆ ಇಳಿಯುತ್ತಿವೆ ಮ್ಯುನಿಸಿಪಾಲಿಟಿಯು ಈಗ ಹೊಸದಾಗಿ ಕೆಲವು ಕಡೆಗಳಿಗೆ ಲಾಂದ್ರಗಳನ್ನು ಹಾಕಿಸುತ್ತಿದೆ ಆದಾಗ್ಯೂ ಲಾಂದ್ರಗಳ ಅವಶ್ಯಕತೆ ಇರುವ ಭಾಗಗಳು ಕೋಟೆಗಳಲ್ಲಿ ಬಾಕಿ ಇರುವದರಿಂದ ಅವುಗಳನ್ನು ವಿಚಾರದಿಂದ ಹಾಕುವದು ಅವಶ್ಯವಾಗಿದೆ—ಕಳೆದ ವಾರ ಇಲ್ಲಿನ ಪೋಸ್ಟಾಫೀಸಿನ ಒಬ್ಬ ಪೋಸ್ಟ್ ಮಾಸ್ಟರ್ ವೆಳಗಿನ ಡೆಲಿವರಿಗಾಗಿ ಕಾಗದಗಳನ್ನು ತೆಗೆಯುವಾಗ (ಗುಪ್ತರೂಪವಾಗ ರಿಜಿಸ್ಟರ್ ಲಕೋಟೆ (೩೫೦ ರೂ ನೋಟುಗಳು ಇರುವ) ಎಲ್ಲೋ ಬಿದ್ದು ಹೋದ್ದರಿಂದ ಆತನಿಗೆ ನೌಕರಿಯನ್ನು ಸಸ್ಪೆಂಡ್ ಮಾಡಿರುತ್ತಾರೆಂದು ತಿಳಿದುಬಂದಿದೆ ಈಗ ಅನೇಕ ಜನ ಸಂಗೀತ ವಿದ್ವಾಂಸರೂ ಕಲಾವಿದರುಗಳೂ ಬಂದು ಎಲ್ಲಿ ನೋಡಿದರೂ ಸಂಗೀತ ಆನಂದವಾಗಿದೆ ಮೂರು ನಾಲ್ಕು ತಿಂಗಳಲ್ಲಿ ಇಲ್ಲಿನ ಸ್ಟುಡೆಂಟ್ಸ್ ಹೋಂ ವಿಚಾರ ಅದರ ಆಡಳಿತಗಳು ಅಕ್ರಮವಾಗಿವೆ ಎಂದು ತಿಳಿಸಿದ್ದೆವಷ್ಟೆ ಈಗ ಅಲ್ಲಿನ ಮ್ಯಾನೇಜರವರು ನಾರ್ಮಲ್ ಸ್ಟುಡೆಂಟ್ಸ್ ಹೋಂ ನಲ್ಲಿ ಇದನ್ನು ಅಸೂಯೆಯಿಂದ ಸುಳ್ಳು ವರದಿ ಸರಿಯಲ್ಲವೆಂದು ದೀರ್ಘಲೇಖನವನ್ನು ಇದೇ ಪತ್ರಿಕೆಯಲ್ಲಿ ತಿಳಿಸಿದರು ಆದರೆ ಅವರ ಮೋಸ ಕೃತ್ಯಗಳನ್ನು ನಮ್ಮ ಸ್ಕೂಲ್ ಹೆಡ್ ಮಾಸ್ಟರವರು ಪರಿಶೀಲಿಸಿ ಅವರನ್ನು ವಜಾಮಾಡಿದರು ನಮ್ಮ ಊರಿನ ಸಂತೆಯಲ್ಲಿ ವ್ಯಾಪಾರ ನಡಿಸುವರು ಗಲಾಟೆ ಗಲಾಟೆ ಎಂಬಂತೆ ತಮ್ಮ ಬಿಚ್ಚು ಸೇರುಗಳು ತೂಕದ ಬಟ್ಟು ಪ್ರದರ್ಶನಮಾಡಿ ಬಡ ಜನರಿಗೆ ಹೆಚ್ಚು ಲುಕ್ಸಾನ್ ಮಾಡುತ್ತಿದೆ ಈ ವಿಷಯವಾಗಿ ಎಷ್ಟು ಬಾರಿ ಸೂಚಿಸಿದಾಗ್ಯೂ ಪೋಲೀಸಿನವರು ಗಮನಕ್ಕೆ ಬರಲಿಲ್ಲ ಈಗಲಾದರೂ ಸಂತೆಯಲ್ಲಿ ಈ ವಿಷಯ ಕನಿಕರದಿಂದ ಕ್ರಮಬದ್ಧಿಸಿ ಬಡವರಿಗೆ ಅನುಕೂಲಪಡಿಸುವರೆಂದು ನಿರೀಕ್ಷಿಸುತ್ತೇವೆ

ಶೀರ್ಘಹಳ್ಳಿ —ಆಮಶಂಕೆ ಉಪದ್ರದಿಂದ ಬಹಳ ಜನರು ಸಂಕಟಪಡುತ್ತಿದ್ದಾರೆ ಕೆಲವರು ತೀರಿಹೋದರು ಇನ್ನೂ ಅಲ್ಲಲ್ಲಿ ಅವರ ಕಷ್ಟ ಇದೆ ನಾಮಧಾರಿ ಜನಗಳು ಕಾಡುಗಳ ಮಧ್ಯೆ ವಾಸಿಸುತ್ತಿರುವವರಿಂದ ಏನಾದರ ಖಾಯಿಲೆ ಪ್ರಾಪ್ತವಾದರೆ ಚಿಕಿತ್ಸೆ ಬಹು ಪ್ರಯಾಸಪಟ್ಟು ಅಲ್ಪ ಖಾಯಿಲೆಗಳಲ್ಲೇ ಅನೇಕರು ಸಾಯುತ್ತಾರೆ ಮಲ್ನಾಡಿನಲ್ಲಿ ಇವರನ್ನು ಬಿಟ್ಟರೆ ಬೇಸಾಯಮಾಡಲಿಕ್ಕೆ ಯಾರಿಂದಲೂ ಆಗದು ಈ ನಾಮಧಾರಿ ಗೌಡರುಗಳು ನಾಡ ತೋಟಗಳಿಂದ ಸರ್ಕಾರಕ್ಕೆ ತುಂಬಾ ಕಂದಾಯ ವಸೂಲಾಗುತ್ತಿದೆ ಸರ್ಕಾರದವರು ಇವರ ಗದ್ದೆ ತೋಟಗಳಿಗೆ ಏನಾದರೂ ಬದಲಾವಣೆ ಮಾಡಿರುವದಿಲ್ಲ ಆದ್ದರಿಂದ ಇವರುಗಳಿಗೆ ತಕ್ಕ ಔಷಧೋಪಚಾರ ಸಮೀಪದಲ್ಲಿ ಏರ್ಪಡಿಸಿಕೊಟ್ಟರೆ ಉಪಕಾರವಾದೀತು —ಏಶೇಹಳ್ಳಿಗೆ ಸಮೀಪ ಕಣಿವೆಗಳ್ಳಿಯಲ್ಲಿ ನಡೆದ ಸಂಗತಿ ಏನಂದರೆ—ಕಣಿವೆ ನಾಗಪ್ಪಗೌಡನ ಮಗಳು ಯಲ್ಲಿ ಎಂಬುವಳು ಕೆಲವು ದಿನಗಳಿಂದ ಗರ್ಭಿಣಿಯಾಗಿರುವದಾಗಿ ತೋರಿಬಂದಾಗ್ಯೂ ಹಡಿಯಲೇ ಇಲ್ಲ ಈ ವ್ಯಥ್ಯೆ ನೆರಮನೆಯ ಕೇಶಣ್ಣನ ಹೆಂಡತಿ ಕಾಳಿ ಎಂಬುವಳು ಒಂದೆರಡು ತಿಂಗಳ ಹಿಂದೆ ತಾನು ಹಡೆದಿದ್ದ ಕೂಸನ್ನು ತೊಟ್ಟಿಲಲ್ಲಿ ಮಲಗಿಸಿ ಗಂಡನನ್ನು ಮನೆಯಲ್ಲಿ ಬಿಟ್ಟು ಗದ್ದೆ ಕೆಲಸಕ್ಕೆ ಹೋಗಿದ್ದಳು ಗಂಡನು ಹೊರಗೆ ಹೋಗಿರುವಲ್ಲಿ ತೊಟ್ಟಿಲಲ್ಲಿ ಮಲಗಿದ್ದ ಕೂಸನ್ನು ಮೇಲ್ಕಂಡ ಯಲ್ಲಿ ಎಂಬುವಳು ಇಟ್ಟಿರು ಸೂಲಗಿತ್ತಿಯರ ಸಹಾಯದಿಂದ ತನ್ನ ಮನೆಗೆ ತರಿಸಿಕೊಂಡು ಆ ಕೂಸಿನ ಹೊಕ್ಕಳನ್ನು ಗಾಯಮಾಡಿ ತಾನು ಬಾಣಂತಿಯಂತೆ ನಟಿಸಿ ತನ್ನ ಗಂಡನಿಗೆ ಸಹ ವರ್ತಮಾನ ಕಳುಹಿಸಿದಳು ಗಂಡನು ಬರುವಾಗ್ಗೆ ನೆರಮನೆ ಕೇಶಣ್ಣನ ಹೆಂಡತಿ ಮನೆಗೆ ಬಂದು ತೊಟ್ಟಿಲಲ್ಲಿ ಕೂಸನ್ನು ಕಾಣದೆ ಗಾಬರಿಬಿದ್ದು ಗಂಡನನ್ನು ವಿಚಾರಿಸಿದರೂ ಗೊತ್ತಾಗದ್ದರಿಂದ ಹುಡುಕಿಕೊಂಡು ಹೋಗಿ ನೋಡುವಲ್ಲಿ ಕೂಸು ಪತ್ತೆಯಾಯ್ತು ತಕ್ಷಣವೇ ನಡದ ಸಂಗತಿಯೂ ಪತ್ತೆಯಾಗಿ ಯಲ್ಲಿ ಎಂಬುವಳ ಗಂಡನು ನಾಚಿಕೊಂಡು ತನ್ನ ಹೆಂಡತಿಯನ್ನು ಸಿಟ್ಟಿನಿಂದ ಹೊಡೆದು ಮನೆಗೆ ಹೋದನು. ಈ ತಂತ್ರವು ಆಶ್ಚರ್ಯವಾಗಿದೆ—ಆರಗದ ಅಗ್ರಹಾರದ ಸ್ಕೂಲಿಗೆ ಒಬ್ಬ ಸಂಸ್ಕೃತ ಉಪಾಧ್ಯಾಯರನ್ನು ನೇಮಿಸಿದೆ ಎಂದು ತಿಳಿದುಬಂದಿದೆ ಅಲ್ಲಿ ಕನ್ನಡದಲ್ಲಿ ಹುಡುಗರು ವ್ಯಾಸಂಗವು ಹೀನಸ್ಥಿತಿಗೆ ಬರುತ್ತಿದೆ ಇನ್ನು ಮೇಲೆ ಕನ್ನಡ ನೋಡಬೇಕು ಅಲ್ಲಿಗೆ ಅನೇಕ ಇತರ ಜಾತಿ ಹುಡುಗರು ವಿದ್ಯಾಭ್ಯಾಸಕ್ಕೆ ಸೇರುತ್ತಾರೆ ಅವರನ್ನು ಪ್ಯಾಸ್ ಮಾಡಿಸುವ ಹಾಗೆ ಹೆಡ್ ಮಾಸ್ಟರು ಪ್ರಯತ್ನಪಟ್ಟರೆ ಒಳ್ಳೇ ಹೆಸರು ಬಂದೀತು

ತಿಪಟೂರು — ಈಗ ಮಳೆ ನಿಂತಿರುತ್ತದೆ ಬೆಳೆಯು ಸಮೃದ್ಧಿಯಾಗಿ ರೈತರೆಲ್ಲರೂ ಸಸನ್ಮುಖಿಗಳಾಗಿರುತ್ತಾರೆ ಕಳೆದ ಸಂತೆಯಲ್ಲಿ ಒಬ್ಬನು ಕಟ್ಟಿ ಊದುವ ಪಿಂಗಿಯನ್ನು ತಂದಿದ್ದನು ಪೋಲೀಸಿನವರು ವಿಚಾರಿಸುತ್ತಿದ್ದರು ಆದರೆ ಯಾರಿಗೇನಾಯಿತೋ ಇನ್ನೂ ಗೊತ್ತಿಲ್ಲ ಈಗ ಚಳಿಜ್ವರಗಳು ಕಡಿಮೆಯಾಗುತ್ತಾ ಬರುತ್ತಿವೆ ಈಗ ಬಂದಿರುವ ಡಾಕ್ಟರು ಒಳ್ಳೇ ಹೆಸರು ಪಡೆಕೊಳ್ಳುತ್ತಿದಾರೆ ನಮ್ಮ ಹೊಸ ಅಮಲ್ದಾರರು ಊರಿನ ಜೋಡಿಗೆ ಎರಡು ಕಕ್ಕಸುಗಳನ್ನು ಕಟ್ಟಿಸ್ಯಾರೆಂದು ಜನರು ನಿರೀಕ್ಷಿಸುತ್ತಿದಾರೆ ಮಾಂಸದ ಅಂಗಡಿಗಳಿಗೆ ಸೋಗೆ ಮರೆಯನ್ನು ಮಾಡಿಸಿದ್ದು ಬಹಳ ಒಳ್ಳೇದಾಯಿತು ಆದರೆ ಮಾಂಸವನ್ನು ಪರೀಕ್ಷೆಯಿಂದ ಬಿಕರಿ ಮಾಡಿಸುವದಕ್ಕೆ ಅಪ್ಪಣೆ ಕೊಟ್ಟರೆ ಮತ್ತೂ ಒಳ್ಳೇದು—ಅರಸೀಕೆರೆಯಲ್ಲಿ ತಾ ೨೪ ರಲ್ಲು ಶ್ರೀಕೃಷ್ಣರಾಜವಡೆಯರವರ ಹೆಸರಿನ ಮೇಲೆ ಒಂದು ರೀಡಿಂಗ್ ರೂಮ್ ಸ್ಥಾಪನೆ ಆಯಿತು ಬೆಳಿಗ್ಗೆ ರೀಡಿಂಗ್ ರೂಮ್ ಬಳಿ ಫೋಟೋ ತೆಗೆದರು ಮಧ್ಯಾಹ್ನ ಸ್ಥಳದ ಮತ್ತು ಪರಸ್ಥಳದ ದೊಡ್ಡ ಮನುಷ್ಯರಿಗೆ ಸುಭೋಜನವಾಯಿತು ಸಾಯಂಕಾಲ ಮೆ॥ ವೈದಾಲ್ ಸಾಹೇಬರೂ ಇತರ ಯೂರೋಪಿಯರ್ ಆಫೀಸರೂ ನೇಟಿವ್ ದೊಡ್ಡ ಮನುಷ್ಯರೂ ದಳೀ ರೀಡಿಂಗ್ ರೂಮ್ ಬಳಿ ಹಾಕಿದ್ದ ಪೆಂಡಾಲಿನಲ್ಲಿ ಸೇರುವಂತೆ ಏರ್ಪಡಿಸಿ, ಮೆ॥ ತಳಸಿದಾಸವಾಗ್ಣಿಯವರು ಎಲ್ಲರನ್ನೂ ಪ್ರೀತಿಯಿಂದ ಬರಮಾಡಿಕೊಂಡು, ಜನರ ಪ್ರಯೋಜನಕ್ಕಾಗಿ ಮಾಡಿರುವ ಕಾರ್ಯವನ್ನು ಹಿಂದುಸ್ಥಾನಿಯಲ್ಲಿ ತಿಳಿಸಿದ ಮೇಲೆ, ಮೆ॥ ವೈದಾಲ್ ಸಾಹೇಬರು ಕಾಲೋಚಿತವಾಗಿ ಕೆಲವು ಮಾತುಗಳನ್ನಾಡಿ, ರೀಡಿಂಗ್ ರೂಮ್ ತೆರೆಯುವದಕ್ಕೆ ಹೋದರು ಎಲ್ಲರೂ ಪಡಸಾಲೆಯಲ್ಲಿಯೇ ನಿಂತಿರಲು, ಬಾಗಲಿನ ಮೇಲ್ಗಡೆ ರೇಷ್ಮೆ ಪರದೆಯನ್ನು ಮುಚ್ಚಿ ಕಟ್ಟಿದ್ದ ದಾರವನ್ನು ಎಳೆಯಲು ಮೇಲಿನ ಹೆಸರಿದ್ದ ಬಿಳೀ ಶಿಲಾಶಾಸನವು ಹೊಳೆಯುತ್ತಿತ್ತು ಒಳಕ್ಕೆ ಸಕಲರೂ ಒಳಗೆ ಹೋಗಿ ಉಚಿತಾಸನಗಳಲ್ಲಿ ಕಾಳಿತ ಮೇಲೆ ಅಗ್ರಾಸನರಾದ ಮೆ॥ ವೈದಾಲ್ ಸಾಹೇಬರು ರೀಡಿಂಗ್ ರೂಮನ್ನು ನೋಡಿ, ಜನರ ಪ್ರಯೋಜನ ಜ್ಞಾನವೃದ್ಧಿ ಐಕ್ಯತೆಗಳಿಗೆ ಮೆ॥ ತುಳಸಿದಾಸವಾಗ್ಣಿಯವರು ಮಾಡಿರುವ ಕಾರ್ಯವು ಸ್ತೋತ್ರಾರ್ಹವಾದದ್ದು ಮತ್ತು ಇಂಥಾ ಕಾರ್ಯಗಳಿಂದಲೇ ನಮ್ಮ ನೈಸರು ದೇಶವು ಕೆಟ್ಟಿಲಿ ಎಂಬ ರೀತಿ ಉಪನ್ಯಾಸ ಮಾಡಿ, ತಾವೂ ದ್ರವ್ಯಸಹಾಯ ಮಾಡಿದರು ಸೆಕ್ರೆಟರಿಯವರು ಇಂಗ್ಲಿಷಿನಲ್ಲೂ ಮೆಂಬರೊಬ್ಬರು ಕನ್ನಡದಲ್ಲೂ ರಿಪೋರ್ಟು ಓದಿದರು ಸ್ಟೇಷನ್‌ಮಾಸ್ಟರ ಗ್ರಾಮಫೋನ್ ಎಂಬ ವಾದ್ಯದಿಂದ ಸಂತೋಷಪಡಿಸಿದರು ಹಾಸನದ ಸ್ಕೂಲ್ ಮಾಸ್ಟರು ವಿದ್ಯೆ ಮತ್ತು ಐಕ್ಯಗಳ ವಿಷಯ ಉಪನ್ಯಾಸ ಮಾಡಿದರು ಒಬ್ಬ ವಿದ್ಯಾರ್ಥಿಯು ಸಂಗೀತ ಹಾಡಿ ಸಂತೋಷಪಡಿಸಿದನು ಕಿಕ್ಕಿರಿಯುತ್ತಿದ್ದ ಸಭೆಯು ತರುವಾಯ ಬರಖಾಸ್ತಾಯಿತು

ಬೆಂಗಳೂರು —ಶನಿವಾರ ಬೆಳಿಗ್ಗೆ ಮಧ್ಯಾಹ್ನ ವೆಸ್ಲಿಯನ್ ಹೈ ಸ್ಕೂಲ್ ಹುಡುಗರು ಸದರಿ ಸ್ಕೂಲ್ ಕಾಂಪೌಂಡಿನಲ್ಲಿ ಓಡುವದು ಎಗರುವದು ಜಾಟುವದು ಉರಳ ಗಸ್ತಿಗಳನ್ನು ಓಡುತ್ತಾ ಆರಿಸಿಕೊಂಡು ಬರುವದು ಮೊದಲಾದ ಆಟಗಳು ಆಡ ಪಂತೆ ಸದರಿ ಸ್ಕೂಲ್ ಪ್ರಿನ್ಸಿಪಲ್‌ರಾದ ಘನ ಎ ಆರ್ ಸ್ಲೇಟರ್ ಸಾಹೇಬರು ಏರ್ಪಡಿಸಿದ್ದರು ಈ ವಿನೋದಗಳನ್ನು ನೋಡಲು ಕೆಲವು ದೊಡ್ಡ ಮನುಷ್ಯರನ್ನು ಕರೆಸಿದ್ದರು ಸ್ಕೂಲ್ ಕಾಂಪೌಂಡಿನಲ್ಲಿ ಡೇರೆ ಹಾಕಿಸಿ ಬಾವುಟ ತೋರಣಗಳಿಂದ ಅಲಂಕರಿಸಿದ್ದರು ಗೇಟ್ ಹೊರಗಡೆ ಅನೇಕರು ತಮ್ಮ ಗಾಡಿಗಳಲ್ಲಿಯೇ ಕೂತುಕೊಂಡು ನೋಡುತ್ತಿದ್ದರು ಅಲ್ಲದೆ ಲಾಲ್‌ಬಾಗಿಗೆ ಹೋಗ ತ್ತಾ ಇದ್ದವರು ಸಹಾ ಒಳಗೆ ಬಂದು ನೋಡುತ್ತ ನಿಂತಿದ್ದರು ೧೩ ತರ ವಿನೋದವಾದ ಆಟಗಳು ನಡೆದವು ಅವದಲ್ಲ ೧೧ನೇ ಉರಳಗಸ್ತಿ ವಿಷಯವಂತು ಬಹಳ ತಮಾಷೆಯಾಗಿತ್ತು ಈ ತಮಾಷೆಗಳನ್ನು ನೋಡಲು ಮೆ॥ ಗಳಾದ ಎಸ್ ವರದರಾಜಯ್ಯಂಗಾರ್ರು, ಸಂಪತ್ತೈಯ್ಯಂಗಾರ್ರು, ಬಿ ರಂಗಯ್ಯಂಗಾರ್ರು, ಅಡ್ವೊಕೇಟ್ ಎಸ್ ಸುಬ್ಬರಾಯರು, ಎಲ್ ಬಿಷ್ಟೋಪಂತ್ ಒಡೆಯರು, ಟಿ ಶ್ಯಾಮರಾವ್ ಸಾಹೆಬರು, ಎಂ ಡಬ್ಲಿಯು ವಾಕರ್ ಸಾಹೇಬರು ಘನ ಜಿ ಸಿ ವಾಕರ್ ಸಾಹೇಬರು, ಘನ ರೀಸ್ ಸಾಹೇಬರು, ಘನ ಜಾನ್ ಸಾಹೇಬರು, ಇನ್ನೂ ಅನೇಕ ಯೂರೋಪಿಯರ್ ದೊಡ್ಡ ಮನುಷ್ಯರೂ ಹೊಸಿನಗಳೂ ದಯಮಾಡಿದ್ದರು ಪೋಲೀಸು ಬಸ್ತುವಾರಿ ಕ್ರಮವಾಗಿತ್ತು ಆದರೆ ಮೆ॥ ಶ್ಯಾಮರಾವ್ ಸಾಹೇಬರು ಗಾಡಿಯಿಂದ ಇಳಿದು ಡೇರೆಯೊಳಗೆ ಪ್ರವೇಶಿಸಿದ ನಂತರ ಅವರ ಗಾಡಿಯ ಕುದುರೆಯು ಸ್ವಲ್ಪ ಗಾಬರಿಯಾಗಿ ಗಾಡಿಯ ಮೇಲೆ ಕೂತಿದ್ದ ಕೋಚ್‌ಮಾನನನ್ನು ಕೆಳಗೆ ಕೆಡವಿತು ಗಾಡಿಯ ಉರುಳಿತು ಕುದುರೆಗೂ ಮತ್ತು ಕೋಚ್‌ಮಾನನಿಗೂ ಗಾಡಿಗೂ ವಿಶೇಷ ಅಪಾಯಗಳು ಸಂಭವಿಸಲಿಲ್ಲ. ಮೇಲ್ಕಂಡ ತಮಾಷೆಗಳು ಮುಗಿದ ಮೇಲೆ ೬ ಘಂಟೆಗೆ ಎಲ್ಲಾ ದೊಡ್ಡ ಮನುಷ್ಯರೂ ಕೂತುಕೊಂಡಿರುವ ಡೇರಾದಲ್ಲಿಯೇ ರೀಸ್ ದೊರೆಸಾನಿಯವರು ದಯವಿಟ್ಟು ಅಗ್ರಾಸನವನ್ನು ವಹಿಸಿ ಗೆದ್ದ ಹುಡುಗರಿಗೆಲ್ಲಾ ಬಹುಮಾನಗಳನ್ನು ದಯಪಾಲಿಸಿದರು ಅಡ್ವೊಕೇಟ್ ಮೆ॥ ಹೂವರ್ ಸಾಹೇಬರ ಮಗ ಹೂವರ್ ಎಂಬ ವಿದ್ಯಾರ್ಥಿಯು ೧೩ ತರದ ಆಟಗಳ ಪೈಕಿ ೧೨ ಸಲ ಗೆದ್ದು ಬಹುಮಾನವನ್ನು ಹೊಂದಿದ್ದು ಬಹಳ ಆಶ್ಚರ್ಯವನ್ನು ಉಂಟುಮಾಡಿರುತ್ತೆ. ಬಹುಮಾನಗಳನ್ನು ಹಂಚಿದ ಮೇಲೆ ಒಬ್ಬ ಬಾಲಕನು ಸದರಿ ಅಗ್ರಾಸನವನ್ನು ವಹಿಸಿದ್ದ ರೀಸ್ ದೊರೆಸಾನಿಯವರಿಗೆ ತುರಾಯಿ ಒಪ್ಪಿಸಿದನು. ಆ ಮೇಲೆ ಸಭೆ ಮುಕ್ತಾಯವಾಯಿತು —ಶ್ರೀಮತು ತಿರುವಾಲಂಗಾಡು ಇಮ್ಮಡಿ ಅಘೋರಧರ್ಮ ಶಿವಾಚಾರ್ಯ ಸ್ವಾಮಿಗಳವರು ಈಗ ಸುಮಾರು ೨ ತಿಂಗಳ ಮುಂಚೆ ಬೆಂಗಳೂರಿಗೆ ವಿಜ್ಞಯ ಮಾಡಿ ತನ್ನ ಶಿಷ್ಯಮಂಡಲಿ ಎಂದರೆ ಕುಬೇರಕುಲ ಅಯೋಧ್ಯಾನಗರದ ಸನಸ್ರು ಋಷಿ ಗೋತ್ರದ ವೈಶ್ಯರಾದ ಚಿಟ್ಟಯಜಮಾನ ಮುಂತಾದವರು ಶ್ರೀಸ್ವಾಮಿಗಳವರಿಗೆ ಪಾದಪೂಜೆ ಭಿಕ್ಷ ಬ್ರಾಹ್ಮಣರ ಸಂತರ್ಪಣೆಯೂ ನವರಾತ್ರಿ ಉತ್ಸವವೂ ಶ್ರೀಸ್ವಾಮಿಗಳವರಿಗೆ ಈ ಕಲ್ಯಾಣಪುರಿಯಲ್ಲಿ ಮೆರವಣಿಗೆ ಉತ್ಸವವನ್ನೂ ಸಮಸ್ತ ಜನಗಳೂ ಸೇರಿ ಬಹಳ ವಿಜೃಂಭಣೆಯಾಗಿ ನಡಸಿದ್ದನ್ನು ಶ್ರೀಸ್ವಾಮಿಗಳವರು ನೋಡಿ ಶಿಷ್ಯಮಂಡಲಿಗೆ ಆಶೀರ್ವಾದ ಮಾಡಿದರು ಈ ಉತ್ಸವವನ್ನು ಈ ಕಲ್ಯಾಣಪುರಿಯಲ್ಲಿ ವಾಸವಾಗಿರುವ ಸಮಸ್ತ ಜನಗಳೂ ನೋಡಿ ಬಹಳ ಸಂತೋಷಪಟ್ಟರು

ಇಂಡಿಯಾ ದೇಶದ ವೃತ್ತಾಂತಗಳು.

ಭೂಪಾಲ್‌ಪುರದ ನವಾಬರವರು ಮಕ್ಕಾ ಮದೀನಾ ಎಂಬ ಯಾತ್ರಾ ಸ್ಥಾನಗಳಿಗೆ ಈ ತಿಂಗಳ ೧೯ನೆ ತಾ ಹೊರಡುವರು ಫೆಬ್ರುವರಿ ೧೯ಕ್ಕೆ ವಾಪಸು ಬರುವುದಾಗಿ ಏರ್ಪಾಡಾಗಿದೆ ಫೆಬ್ರುವರಿ ೨೩ಕ್ಕೆ ಅಫ್ಘಾನಿಸ್ಥಾನದ ಅಮೀರರು ಭೂಪಾಲ್‌ಪುರ ಸಂಸ್ಥಾನದಲ್ಲಿ ಷಿಕಾರಿಗೋಸ್ಕರ ದಯಮಾಡುವರು

✦✦✦✦

ಕಳೆದ ಶನಿವಾರ ರಾತ್ರಿ ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕತ್ತರ್ ಎಂಬ ಊರಿನ ಬಳಿ ರೈಲ್ ಗಾಡಿಯು ಅಕಸ್ಮಾತ್ತಾಗಿ ಕಂಬಿ ಬಿಟ್ಟು ಕಳ್ಳಕ್ಕೆ ಮಗುಚಿಕೊಂಡಿತು ಈ ಅನಾಹುತದಲ್ಲಿ ೧೦ ಜನರು ಮೃತಪಟ್ಟರು ೧೫ ಮಂದಿಗೆ ಜಖಂ ಆಗಿದೆ ಇವರೆಲ್ಲಾ ತಮಿಳು ಕೂಲಿಗಳೆಂದು ತಿಳಿದುಬಂದಿದೆ

✦✦✦✦

ಬೊಂಬಾಯಿನಲ್ಲಿ ಗೋವಿಂದಜಗ್ ಬಾಲ ಲಲ್ಲೂಭಾಯಿ ಫಾನಾವಾಲಾ ಎಂಬ ಹಿಂದುವು ರಾಜದ್ರೋಹಕರವಾದ ಚಾತ್ರೆಯನ್ನು ತನ್ನ ಪತ್ರಿಕೆಯಲ್ಲಿ ಬರೆದು ಪ್ರಕಟಿಸಿದ್ದರಿಂದ ಮ್ಯಾಜಿಸ್ಟ್ರೇಟರು ಆತನನ್ನು ದರ್ಯಾಫ್ತು ಮಾಡಿ, ಆರು ತಿಂಗಳ ತನಕ ನೇಕಚಾಲಿಗೆ ನೂರು ಜಾಮೀನುಗಳನ್ನು ತೆಗೆದುಕೊಂಡು ಖುಲಾಸ್ ಮಾಡಿದರು

✦✦✦✦

ಸಿಂಧೂನದಿಯ ದಡದಲ್ಲಿರುವ ಡೇರಾ ಇಸ್ಮೈಲ್‌ಖಾನ್ ಎಂಬ ಪಟ್ಟಣದಲ್ಲಿ ಮೆ॥ ತವಲ್‌ರಾಂ ಗಂಗಾರಾಂ ಎಂಬೊಬ್ಬ ಪರೋಪಕಾರಿಯು ಒಂದು ವೈದ್ಯಶಾಲೆಯನ್ನು ಸ್ಥಾಪಿಸಿ, ಅದರಲ್ಲಿ ಸಾಧುಗಳನ್ನೂ ಬೈರಾಗಿಗಳನ್ನೂ ಇಟ್ಟು ಅವರಿಗೆ ಸಾಧಾರಣವಾದಷ್ಟು ವೈದ್ಯವನ್ನು ಕಲಿಸಿ, ಹಿಂದುಸ್ಥಾನದ ಪ್ರಜಾಕೋಟಿಗಳಿಗೆ ಸಹಾಯ ಮಾಡಬೇಕೆಂದು ಪ್ರಯತ್ನಪಟ್ಟಿದಾನೆ ಈ ಸಾಧುಗಳೂ ಬೈರಾಗಿಗಳೂ ಈಗ ಊರೂರುಗಳ ಮೇಲೆ ಅಲೆದು ಜನರಿಂದ ಭಿಕ್ಷವೆತ್ತಿ ಹೊಟ್ಟೆಹೊರಕೊಳ್ಳುವುದೇ ಅವರ ಉದ್ಯೋಗವಾಗಿದೆ ಇದನ್ನು ತಪ್ಪಿಸಿ ಅವರಿಂದಲೂ ಪ್ರಜೆಗಳಿಗೆ ಪ್ರಯೋಜನವಾಗುವಂತೆ ಮಾಡಬೇಕೆಂದು ಆ ಪುಣ್ಯಾತ್ಮನು ಪ್ರಯತ್ನಪಟ್ಟಿರುವನು

✦✦✦✦

ಕಲ್ಕತ್ತೆಯ ಪ್ರಾವಿಡೆಂಟ್ ಇನ್‌ಸ್ಟಿಟ್ಯೂಷನ್ ಎಂಬ ಕಂಪನಿ ಮ್ಯಾನೆಜರ್ ಕೆ ಕೆ ಬೋಸ್ ಯವರ ಮೇಲೆ ಕೊಡಗಿನಲ್ಲಿ ಮೋಸ ಮಾಡಿದರೆಂಬ ಮೊಕದ್ದಮೆ ನಡೆಯುತ್ತಿರುವುದು ಇನ್ನೂ ಇತ್ಯರ್ಥವಾಗಲಿಲ್ಲ ಈಚೆಗೆ ರಾಜಮಂಡ್ರಿಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವರ ಮೇಲೆ ನಂಬಿಕೆದ್ರೋಹ ಮೋಸವೆಂಬ ಅಪರಾಧಗಳಿಗಾಗಿ ಮೊಕದ್ದಮೆ ದಾಖಲಾಗಿದೆ ಅವರನ್ನು ಮಡಕೇರಿಯಿಂದ ಹಿಡಿದುತರುವುದಕ್ಕೆ ವಾರಂಟೂ ಹುಟ್ಟಿದೆ ಆ ಕಂಪನಿ ಫಂಡಿನಿಂದ ಯಾರ್‍ಯಾರಿಗೆ ಹಣ ಬರಬೇಕಾಗಿದೆಯೋ ಅಂಥಾ ಚಂದಾದಾರರೆಲ್ಲಾ ಅದರ ವಿಷಯವಾಗಿ ಮದರಾಸ್ ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ಪಾಪಾರಾವ್ ನಾಯ್ಡುಯವರಿಗೆ ಬೇಗ ಬೇಗನೆ ಬರೆದು ತಿಳಿಸಿದಲ್ಲಿ ಅವರು ಏರ್ಪಾಡು ಮಾಡುವವರಾಗಿದಾರೆ

✦✦✦✦

ಅಜ್ಮೀರದ ಬಳಿ ಇರುವ ಹಿಂದುಗಳ ಯಾತ್ರಾಸ್ಥಾನವಾದ ಪುಷ್ಕರವೆಂಬ ಕೆರೆಯೊಳಗೆ ಸುಮಾರು ೨೦೦ ಮೊಸಳೆಗಳು ಸೇರಿಕೊಂಡು ಸ್ನಾನಮಾಡುವವರಿಗೆ ಪ್ರಾಣಕಂಟಕವಾಗಿವೆ ಈ ಮೊಸಳೆಗಳನ್ನು ಹಿಡಿದು ಸಮುದ್ರಕ್ಕೋ ಗಂಗಾ ನದಿಗೋ ಬಿಡಬೇಕೆಂತಲೂ ಆ ಕೆರೆಯಲ್ಲಿರುವ ಕೊಳಕನ್ನೆಲ್ಲಾ ತೆಗೆದು ನಿರ್ಮಲೋದಕ ನಿಲ್ಲುವಂತೆ ಮಾಡಬೇಕೆಂತಲೂ ಕೆಲವು ದೊಡ್ಡಮನುಷ್ಯರು ಪ್ರಯತ್ನಪಟ್ಟಿದಾರೆ ಇದಕ್ಕೆಲ್ಲಾ ಸುಮಾರು ಎರಡು ಲಕ್ಷ ರೂಪಾಯಿ ಬೇಕಾಗುತ್ತದೆ ಇದರಲ್ಲಿ ಮೂರನೇ ಒಂದು ಪಾಲು ಹಣವನ್ನು ಸರ್ಕಾರದಿಂದಲೂ, ಉಳಿದ ಎರಡು ಭಾಗವನ್ನು ಚಂದಾ ಮೂಲಕವೂ ಕೂಡಿಸಿ ಕೆಲಸ ಮುಗಿಸಬೇಕೆಂದಿದಾರೆ ಈ ಕೆಲಸವನ್ನು ಕಿಶನಗಢ ಸಂಸ್ಥಾನದ ಮಾಜಿ ದಿವಾನರಾದ ರಾವ್ ಬಹದೂರ್ ಶ್ಯಾಮಸುಂದರಲಾಲ್ ಯವರು ಮುಖಂಡರಾಗಿ ನಿಂತು ಮಾಡಿಸುತ್ತಾರೆಂದು ತಿಳಿಯುವುದು.

ಹಾಸನದ ಟೋಪಿಗಳು.

128 5

ಒಳ್ಳೇ ಸಮಯ, ಬಿಡಬೇಡಿರಿ

ಮೊದಲು ಹಾಸನದಲ್ಲಿದ್ದು ಹೆಸರುವಾಸಿ ಹೊಂದಿರುವ ಟೋಪಿಗಳನ್ನು ಮಾಡಿಸುತ್ತಿದ್ದ ಕಿಂಗ್ ದೊರೆಸಾನಿಯವರು, ಈಗ ತುಮುಕೂರಲ್ಲಿ ಶ್ರೇಷ್ಠತರವಾದ ಟೋಪಿಗಳನ್ನು ಮಾಡಿಸುತ್ತಿದ್ದಾರೆ ಇವರಲ್ಲಿ ಮಧ್ಯಮತರದ ಟೋಪಿಗಳು ಹೆಚ್ಚಾಗಿ ಉಳಿದಿರುವದರಿಂದ ಇವನ್ನು ಒಂದು ತಿಂಗಳ ವರೆಗೆ ಕಡಿಮೆ ಕ್ರಯಕ್ಕೆ ವಿಕ್ರಿ ಮಾಡುತ್ತಾರೆ. ಹ್ಯಾಗಂದರೆ —

ಮೊದಲಿದ್ದ ಕ್ರಯ ಡಜನ್ 1ಕ್ಕೆ 10½ ರೂಪಾಯಿ.
ಈಗ ಮಾರುವ ಕ್ರಯ ,, 9 ರೂಪಾಯಿ
ಇನ್ನೊಂದು ತರದವುಗಳು
ಮೊದಲಿದ್ದ ಕ್ರಯ ಡಜನ್‌ಗೆ 9 ರೂಪಾಯಿ
ಈಗ ಮಾರುವ ಕ್ರಯ 7½ ರೂಪಾಯಿ
ಮಿಶ್ರವಾದ ಬಣ್ಣದವುಗಳು.

ವಿಳಾಸ.—ಕಿಂಗ್ ದೊರೆಸಾನಿಯವರು,
ಹಾಸನದ ಟೋಪಿ ಮ್ಯಾನೇಜರ್, ತುಮುಕೂರು.

ಮಕ್ಕಳ ಹಿತಕಾರಿ
ಎಂದು

SCOTT'S EMULSION 57-33

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕ್ರಿಯಾಗುತ್ತೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

ಕ್ರಯಕ್ಕೆ ಚಿಲ್ಲರೆಯಾಗಿ ಆಗಲಿ ಒಟ್ಟಾಗಿ ಆಗಲಿ ದೊರೆಯುವದು

120 8

ಮೈಸೂರು ತಾಲ್ಲೂಕು ಕಳಸ್ತವಾಡಿ ಗ್ರಾಮಕ್ಕೆ ಸೇರಿದ ಮತ್ತು ಮೈಸೂರು ಶ್ರೀರಂಗಪಟ್ಟಣಕ್ಕೆ ಮಧ್ಯೆ ಮೈಸೂರು ಪಾಲಹಳ್ಳಿ ರಸ್ತೆಗಳು ಸೇರುವ ಕಡೆಗೆ ಎದುರಾಗಿ ಒಂದು ಫರಲಾಂಗಿನೊಳಗೆ ಇರುವ ದೇವಾಗ್ರದ ಸ್ಥಿತಿಯು ಪೈಕಿ ಈ ಕೆಳಗೆ ಕಂಡ ಜಮೀನುಗಳಿಗೆ ಖರೀದಿ ಸವಾಲುಗಳು ೧೯೦೬ನೆ ಇಸವಿ ನವಂಬರು ೩೦ನೇ ತಾರೀಖಿನ ಪರ್ಯಂತ ಬರಮಾಡಿಕೊಳ್ಳಲ್ಪಡುತ್ತವೆ

ಜಮೀನಿನ ವಿವರಣೆ.	ಸರ್ವೆ ನಂಬರು	ಬೀಜವರಿ.		ಆಕಾರ
ಕಾವೇರಿನಾಲ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು	೩೦	೭	,,	೨೭
	೧೦೩	೬	೨೨	೪೭
	೧೦೪	೫	೧೩	೩೯
	೧೦೫	೫	೨೮	೩೯
	೧೦೬	೬	೩೩	೪೮
ಜುಮ್ಲಾ	೫	೨೮	೨೦	೨೦೦

ಮೇಲೆ ನಮೂದಿಸಿರುವ ಜಮೀನುಗಳಲ್ಲದೆ ಇವರದಿ ಕಂಡ ಜಮೀನನ್ನು ಸಹ ಉಳ್ಳ ಸದರಿ ಒಟ್ಟು ಸ್ಥಿತಿಗೆ ಬರುವ ಸವಾಲುಗಳನ್ನೂ ಮೇಲೆ ಕಂಡ ಮಾಯನೆ ಒಳಗಾಗಿ ಆಲೋಚಿಸಲಾಗುತ್ತದೆ

ಜಮೀನಿನ ವಿವರಣೆ	ಸರ್ವೆ ನಂಬರು	ಬೀಜವರಿ		ಆಕಾರ
ಕಾವೇರಿ ನಾಲೆ ಕೆಳಗಿನ		ಎಕರೆ	ಗುಂಟೆ	ರೂ
ಗದ್ದೆಗಳು	೧೦೦	೩	೧೫	೨೪
	೧೦೧	೩	೯	೨೩
	೧೦೨	೩	೯	೨೩
	೬೦	೫	೩೨	೪೩
ಜುಮ್ಲಾ	೪	೧೫	೩೦	೧೦೩
ಮೇಲೆ ಕಂಡ ಜಮೀನು	೩೧	೩	೪	೨೮
ಗಳಿಗೆ ಹತ್ತಿರುವ	೨೨	೬	೨೫	೪೨
ಧ್ವನಪ್ಪರ ಬಾಗಾಯಿತು	೨೩	೪	೧೬	೪೦
	೨೯	೪	೩೪	೩೯
ಜುಮ್ಲಾ	೬	೧೬	೩೯	೧೪೯
ಒಟ್ಟು ಜುಮ್ಲಾ	೧೩	೬೧	೯	೪೬೨

ಸವಾಲುಗಳು ಬೆಂಗಳೂರು ಚಾಮರಾಜಪೇಟೆಯ ಅಪ್ಪಾಜಪ್ಪನ ಅಗ್ರಹಾರದ ೧೨ನೇ ನಂಬರು ಮನೆಯಲ್ಲಿರುವ ಕೋರ್ಟ್ ಆಫ್ ವಾರ್ಡ್ಸ್ ಮ್ಯಾನೇಜರ್ ಎಸ್ ಬಿ. ಶ್ರೀನಿವಾಸ ಅಯ್ಯಂಗಾರರಿಗೆ ತಲುಪಿಸಬೇಕು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . ರೂ ೧—೦—೦
ಪೋಸ್ಟ್ ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. .. ರೂ. ೧—೧೪—೦
,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಣ್ಣೆ ಕೆಂಪು ಮತ್ತು ಹಾಜಾ ಕಪ್ಪು

ಹಾಸನ ಪೂಲನ್ ದಾರ.

215 6

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್ ದಾರ ಮಾತ್ರ

	ರೂ	ಆ	ಪೈ
೧೦ ಟೋಪಿ ಆಗುವ ಪೂಲನ್ ದಾರದ ಕ್ರಯ	೦	೮	೦
೧ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩	೦
ಹಾಸನ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ ೦	೧	೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ. ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ ರಘುನಾಥ ಕಾಮತ್,
ಪೂಲನ್ ಮರ್ಚಂಟ್,
ಬೋಳಾರ, ಮಂಗಳೂರು

ಸನ್ ೧೯೦೭ ನೇ ಇಸವಿಯ

130 1

ಎಂ ನಂ॥ ಎಫ್ ನಂ। ಬಿ ನಂ॥ ಸಿ. ನಂ। ಹೆಚ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು

ಈ ಡೈರಿಗಳು ವರ್ತಕರು, ಲಾಯರುಗಳು ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಪುಸ್ತಕಾಪ್ಪನವರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಪ್ಲವಂಗ ಸಂ। ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋನೋಟ್ ರಸೀದಿ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು ಗೌರಿ ಪಂಚಾಂಗ, ಪ್ರಶ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ಪರಶೂಲೆ, ದಿನ ಸಂಬಳದ ಪಟ್ಟಿ, ಬಡ್ಡಿ ಲೆಕ್ಕ, ಜಮಾಖರ್ಚುಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೆಂಪು ಸಾವರಿನ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ
ಎಫ್ ,, ,, ೪ ,, ಎಚ್ ,, ,, ೭ ,,
ಬಿ ,, ಮುಚ್ಚಳದ್ದು ೫ ,, ಡಿ ,, ಮುಚ್ಚಳದ್ದು ೮ ,,

ಪೋಸ್ಟ್ ಚಾರ್ಜ್ ಜೊತೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,
ಜನಾರ್ದನ್ ಪ್ರೆಸ್, ಬೆಂಗಳೂರು ಸಿಟಿ | ಅಥವಾ | ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

123—7

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಕೇಳಿದ ಸಾಲ್ಯದಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೬೮ ಸಾವಿರ ಷೇರುಗಳಿಂದಾಗುವ ೧೭ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರ ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟ್, ಬೆಂಗಳೂರು ಬ್ಯಾಂಕ್ ಆಫ್ ಮದ್ರಾಸ್ ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ರಾಜಧಾನಿ ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವ) ಬಿ ವಿ. ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ

12—10—1906 ರಿಂದ 19—10—1906 ರ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಹೋ...
ಬೆಂಗಳೂರು ಪಟ್ಟಣ	3	2	7
ಮೈಸೂರು ,,	4	8	0
ಬೆಂಗಳೂರು ಡಿಸ್ಟ್ರಿಕ್ಟ್	44	18	7
ಮೈಸೂರು ,,	2	1	24
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	1	0	0
ತುಂಕೂರು ಡಿಸ್ಟ್ರಿಕ್ಟ್	6	9	1
ಹಾಸನ ,,	30	28	0
ಚಿತ್ರದುರ್ಗ ,,	0	0	0
ಕಡೂರ್ ,,	63	54	22
ಶಿವಮೊಗ್ಗ ,,	3	1	1
ಜುಮ್ಲಾ.	158	118	62

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ. ನಾಮ ಸಂವತ್ಸರದ ಕಾರ್ತೀಕ ಶುದ್ಧ ಪೌರ್ಣಮಿ ಗುರುವಾರದಿಂದ ಕಾ. ಬಹುಳ ಷಷ್ಟಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ನವಂಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ.
1	ಗುರು ¸	ಪೌರ್ಣಮಿ	5 56	ಭ	60 0
2	ಶುಕ್ರ	ಪಾಡ್ಯ	9 48	ಭ	2-56
3	ಶನಿವಾ ‡	ಬಿದಿಗೆ	14 36	ಕೃ	8 16
4	ರವಿವಾ *	ತದಿಗೆ	19 56	ರೋ	15 12
5	ಚಂದ್ರ ¶	ಚೌತಿ	52 5	ಮೃ	21 46
6	ಕುಜ ,,	ಪಂಚಮಿ	29-49	ಆರ್ದ್ರಾ	27 56
7	ಬುಧ	ಷಷ್ಟಿ	34 2	ಪುನ	33-12

¸ ವ್ಯಾಸಪೂರ್ಣಿಮಾ, ದಾತ್ರಿಪೂಜ
‡ ತೃತೀಯಾತಿಥಿ * ಶೂನ್ಯತಿಥಿ, ಸಂಕಷ್ಟಚತುರ್ಥಿ
¶ ಕಾರ್ತೀಕಸೋಮವಾರ
ದಗ್ಧಯೋಗ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗ...
ಕಪ್ಪೇ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೪-೦	೧೩
ಕೆಂಬತಿ ಅಕ್ಕಿ ಅವಲ್ ..		೧೩-೪-೦	೧೩
,, ದಾಯಂ		೧೩-೦-೦	೧೨
ಜೀರಾಸಾಲೆ ಅಕ್ಕಿ		೧೩-೦-೦	೧೩
ಸಣ್ಣಕ್ಕಿ ಅವಲ್		೧೫-೦-೦	೧೫
,, ದಾಯಂ		೧೪-೦-೦	೧೪
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨ ೬-೦	೧೨
,, ದಾಯಂ		೧೧-೮-೦	೧೧
ಕೈನ ರಾಗಿ ಪಲ್ಲಾ ೧ಕ್ಕೆ		೬-೮ ೦	೫.
ಕಾರಾಗಿ . ..		೬-೦-೦	೬
ಜೋಳ . .		೩-೦-೦	೯
ಹಲಸಂದೆ ಪಲ್ಲಾ ೧ಕ್ಕೆ ..		೧೧ ೮-೦	೧೧-೮
ಬಿಳೀ ಅವರೆ . ..		೯-೦-೦	೧೦
ಹೆಸರು		೧೧ ೮ ೦	೧೧
ಉದ್ದು		೧೨-೪-೦	೧೨
ಕಡಲೆ		೧೨ ೦ ೦	೧೦
ಎಳ್ಳು ಸೆ ೧೨೩ ಕ್ಕೆ ..		೧೮-೮-೦	೨೦
ಹುರುಳಿ .		೭-೧೨-೦	೮
ಹರಳು ೧೨೩ ಸೇರಿಗೆ . .		೧೯-೦-೦	೧೩
ಸೀಗೇಕಾಯಿ ಮಣ ೧ಕ್ಕೆ .		೨-೨ ೦	೨
ಮೆಣಸಿನಕಾಯಿ ..		೪ ೧-೦	೩-೮
,, ದಾಯಂ		೩ ೪-೦	೩
ಬೆಲ್ಲ ದೊಡ್ಡ ಅಚ್ಚು		೩-೧೨ ೦	ಮ ೧-೧೨
ಬಳ್ಳೆಕ್ಕೆ ಮಣ ೧ಕ್ಕೆ		೫-೮-೦	೫
ಹರಳೆಣ್ಣೆ ,, ..		೬-೧೨ ೦	೫
ಕೊತ್ತುಂಬರಿ ಪಲ್ಲಾ ೧ಕ್ಕೆ .		೧೧-೦-೦	೯
ಉಪ್ಪು ,,		೩ ೦-೦	೩
ಹುಣಸೇ ಹಣ್ಣು		೦-೧೪ ೦	೦
,, ಹಳೇದು ..		೦ ೮ ೦	೦
ತುಪ್ಪ ಮಣ ೧ಕ್ಕೆ		೧ ೧-೦	೪
ಸೀವೆ ಯೆಣ್ಣೆ ಪೆಟ್ಟಿ ೧ಕ್ಕೆ		೫-೪ ೦	೪
ತೆಂಗಿನಕಾಯಿ ೧೦೦ ಕ್ಕೆ		೬-೮ ೦	೪
ಅಳಲೇಕಾಯಿ ಮಣ ೧ಕ್ಕೆ		೧ ೦ ೦	೧
ಅಂಟ್ವಾಳದ ಕಾಯಿ ಮಣ ೧ಕ್ಕೆ ..		೦-೧೨ ೦	೦
ಚಿನ್ನ (ಪೌನ್) ಕೆಂಪು .		೧೫-೪-೦	೧೫-೪
,, ,, ಪಸಿಮೆ .		೧೫-೧೦-೦	೧೫
,, ,, ಗಟ್ಟಿ ತೊಲ ೧ಕ್ಕೆ ..		೨೩-೧೨-೦	೨೩
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ ..		೮೫-೦-೦	೮೫

Printed and published by the Rev E THOMPSON, M A the Proprietor and Manager Wesleyan Mission Press, Mysore 1/11/1906.

ವೃತ್ತಾಂತ ಪತ್ರಿಕೆ.

REGISTERED M 20

ಕ್ರಯ ೧ ದುಡ್ಡು　　　　ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦　　ಮೈಸೂರು—ಸನ್ ೧೯೦೬ ನೇ ಇಸವಿ ನವಂಬರ್ ತಾರೀಖು ೮ ನೇ ಗುರುವಾರ.　　ಸಂಚಿಕೆ ೨೩

ನೋಟೀಸು.

140 1

ಪಡಶಲಗಿಯಲ್ಲಿರುವ ದಜೇ ಹಂಜಾತೆ ವೆಂಕಟ ರಾವ್ ವಂಗ ... ರಾವ್ ಎಂಬೀ ನಾನು ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ —

ನನ್ನ ಚಿಕ್ಕಪ್ಪನಾದ ಗೋವಿಂದ ರಾವ್ ವಂಗ ವೆಂಕಟರಾವ್ ... ಚಿನ್ನಾಜಿ ರಾವ್ ಎಂಬುವವನು ಈಗ ಸುಮಾರು ಒಂದು ... ವರ್ಷದಲ್ಲಿ ಮೈಸೂರಿನಲ್ಲಿ ಶಾಂತಿಯಾದನು ಇವರ ಪಿತ್ರಾರ್ಜಿತದ ... ಲಷ್ಕರ್ ಮೊಹಲ್ಲಾದಲ್ಲಿ ಡೋರ್ ನಂ ೩೯ರ ಒಂದು ಮನೆ ... ಈತನಿಗೆ ಗಂಡು ಸಂತತಿ ಇಲ್ಲದೆ ನಾನೇ ಖಾಸಾ ವಾರಸುದಾರನಾಗಿದ್ದೇನೆ ನನ್ನ ಅನುಮತಿ ಇಲ್ಲದೆ ವೆಂಕಟರಾವ್ ಹೆಂಡತಿ ಗಿರಿಜಾ ... ಎಂಬುವಳು ಸದರಿ ಮನೆಯನ್ನು ಯಾರಿಗಾದರೂ ಗಿರವಿ ಭೋಗ್ಯ ... ಸಾಧನ ... ಸ್ವಾಧೀನ ಮಾಡಿದ್ದರೆ ಹಾಗೆ ಯಾರಾದರೂ ಪಡೆದವರಿಗೆ ಸದರಿ ಮನೆಯ ಮೇಲೆ ಏನೊಂದು ಹಕ್ಕಿರುವದಿಲ್ಲ ... ಸದರಿ ಗಿರಿಜಾ ... ಎಂಬುವಳು ಯಾವ ವಿಧವಾದ ... ಕ್ಕೆ ... ಬದ್ಧ ಸಂಬಂಧ ಇರುವದಿಲ್ಲ ಎಂತ ಇದರಿಂದ ತಿಳಿಸಿರುತ್ತೇನೆ

೩ ೩೦ ೧೦ ೦೬　　ವಂಗ ಯಶವಂತ ರಾವ್ ರುಜು

ಹಿಂದೂದೇಶಪ್ರದಕ್ಷಿಣ

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಶಾಕಿ ... ಅಥವಾ ನಾಲ್ಕು ತಿಂಗಳೊಳಗಾಗಿ ನಡೆಯಾರು ಪ್ರತಿ ... ಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸುವವರಿಗೆ ... ದೊರಿಯುವದೆ ವ್ಯಸನಕ್ಕೊಳಗಾಗುವರು ಈಗಲಾದರೂ ... ಎರಡು ವಿ ಪಿ ಮೂಲಕ ತರಿಸಿಕೊಳ್ಳಿ ಇದರ ... ರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ ... ದೇಶದಲ್ಲಿ ... ನ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವು ... ಸ್ಥಾನಗಳ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವು ... ಗಳೂ ಇದರಲ್ಲಿ ಅಡಗಿವೆ ಇದರಲ್ಲಿ ಸುಮಾರು ತೊಂಭತ್ತು ... ವಾದ ... ಗಳಿರುತ್ತವೆ ನೂರಾರು ರೂಪಾಯಿಗಳನ್ನು ... ಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ಪುಸ್ತಕ ... ವನ್ನು ಓದಿದರೆ ಬಹು ಪ್ರಯೋಜನವಾದೀತೆನ್ನುವದ ... ರವ ಸಂಶಯವೂ ಇರಲಾರದು ಪುಸ್ತಕದ ಕ್ರಯ ಎಂಟೇ ಆಣೆ ... ಮೂಲಕ ತರಿಸಿಕೊಂಡರೆ ... ದಾಸೆಯಾಗುವದು

ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

ಇಗೋ ನೋಡಿರಿ

ಒಂದು ಆಶ್ಚರ್ಯಕರವಾದ ಪುಸ್ತಕವು ಹೊರಟಿದೆ!!!

ಎಲ್ಲರೂ ಓದತಕ್ಕದ್ದು

ಬೇಗ ತರಿಸಿಕೊಳ್ಳಿ　　141-1

ಮೊದಲನೇ ಮುದ್ರಣದ ಪ್ರತಿಗಳು ಮುಗಿದುಹೋದಾವು.

ಅರೇಬಿಯನ್ ನೈಟ್ಸ್

ಅಥವಾ

ಯವನಯಾಮಿನೀ ವಿನೋದ ಕಥೆಗಳು'

ಈ ಮಹಾ ಪ್ರಸಿದ್ಧವಾದ ಪುಸ್ತಕವು ... ಈಗತಾನೇ ... ಲ್ಪಟ್ಟಿದೆ ... ಸುಮಾರು ಎಪ್ಪತ್ತು ಪುಟಗಳು ... ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ ... ಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ... ಸ್ವಾನುಭವದಿಂದಲೇ ಗ್ರಹಿಸಿ ತಿಳಿದುಕೊಳ್ಳುವರು ಭಾಷೆಯು ... ರವಾಗಿರುವುದು ಮತ್ತು ಇದನ್ನು ಬರೆಯುವುದಕ್ಕೆ ಸುಮಾರು ... ವರ್ಷಗಳು ಹಿಡಿದಿವೆ ಪುಸ್ತಕವನ್ನು ಒಂದಾವರ್ತಿ ಓದಿದ ... ದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು ... ಎರಡು ರೂಪಾಯಿ ಮಾತ್ರವೇ ವಿ ಪಿ ಮೂಲಕ ತರಿಸಿ ... ಎರಡು ರೂಪಾಯಿ ಮೂರು (೨ ೩ ೧) ಆಣೆಗಳಾಗುವವು ... ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ... ಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ... ಮಾರುತ್ತೇವೆ ನಮ್ಮ ವಿಳಾಸ —

ಮ್ಯಾನೇಜರ್, ಸಿ ಎಲ್. ಎಸ್ ಬುಕ್ ಡಿಪೋ ಮೈಸೂರು

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಉತ್ಪಾದಿಸಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು

85 39

ವ್ಯಾಪಾರದ　C C E C　ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಉಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು ಇಂಥವರಿಗೆ ಆಲಾಯಿದ ದರ ಬರೆಯುವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ—ಮ್ಯಾನೇಜರ್, ಮ್ಯಾಫಿರ್ಸ್ ಕಾಫಿ ವರ್ಕ್ಸ್, ಹುಣಸೂರು

ಜ್ವರಹರಿ

142 2

ಇದು ಸಾಧಾರಣ ಜ್ವರ, ಚಳೀಜ್ವರ ಮರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯನವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡಜನಿನ ಸೀಸೆಗಳು ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧಿನಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡಜನಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ

Omum-Carpoor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕಡಪದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ಪಿಯವರ ಓಮಂ ಕರ್ಪೂರವನ್ನು ನಾನೂ ನನ್ನ ಕಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣಭೇದಿ, ಅಜೀರ್ಣ ರೋಗಿಷ್ಟರಿಗೆ ನೋಡುತ್ತೇನೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಅಂಗಡಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹೆಪ್ಪಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ನೋಟೀಸು.

131 4

ಶಿಡ್ಲಘಟ್ಟದ ಶುಭೋದಯ ಕಂಪೆನಿ, ಲಿಮಿಟೆಡ್

ಈ ಕಂಪೆನಿ ವೈಂಡಪ್ಪಾಗುತ್ತಿರುವುದು ಕರಿಯಪ್ಪ ಇದುವರಿಗ್ಯೂ ದಾಮಾಷಾಯಿ ಮೊಬಲಗು ಬಟವಾಡೆ ಹೊಂದಿರುವದು ಜಾತಾ ಬಾಕಿ ಮೆಂಬರುಗಳಿಗೆ ಸಲ್ಲಬೇಕಾದ ದಾಮಾಷಾಯಿ ಮೊಬಲಗು ಈ ಭಾಗಾಯಿತು ಈ ಕೆಳಗೆ ರುಜುವು ಮಾಡುವವರಿಂದ ಹಂಚಲ್ಪಡುತ್ತೆ ಸದರಿ ಮೆಂಬರುಗಳು ತಮ್ಮ ತಮ್ಮ ಸರ್ಟಿಫಿಕೇಟುಗಳ ಮತ್ತು ಕಾಲ್ಸರೇತಿಗಳೊಡನೆ ಬಂದು ಮೊಬಲಗು ತೆಗೆದುಕೊಳ್ಳಬಹುದು

೧೩ ೧೦ ೧೯೦೬,　　ಎಚ್ ನಾರಾಯಣಯ್ಯ (ಅಡ್ವೋಕೇಟ್)
ಚಿಕ್ಕಬಳ್ಳಾಪುರ　ಅಫಿಷಿಯಲ್ ಲಿಕ್ವಿಡೇಟರ್, ಶುಭೋದಯ ಕಂಪೆನಿ

ಮುಂಬಯಿ ವ್ಯಾಪಾರಮಾಡಬಿಚ್ಛೈಸುವವರು

85 23

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಕೂಕ ಆಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಹಲವು ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

112 4

ನವೀನ ಆಭರಣಗಳು, ಬೇಗ ನೋಡಿ

ಇದರಿಂದ ಸರ್ವರಿಗೂ ತಿಳಿಸುವದೇನಂದರೆ ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಭಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಹಾಕಲ್ಪಟ್ಟಿರುತ್ತೆ ಇದರ ಕೆಲಸದ ನಾಜೂಕು ಸ್ವಚ್ಛ ಭಂಗಾರದ ಆಭರಣಗಳನ್ನು ಸೋಲಿಸುತ್ತೆ ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—



ಜಡೆಕುಚ್ಚು

ಕ್ರಯ ರೂ ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಭಂಗಾರದ ಆಭರಣವೆನ್ನುವಹಾಗೆ ತಯಾರಿಸಲ್ಪಟ್ಟಿರುತ್ತೆ.



ಪಚ್ಚೆ ಕಲ್ಲು ಜಡೆಬಿಲ್ಲೆ.

ಭಂಗಾರದ ಗಿಲ್ಟುಮಾಡಿದ್ದು.

೧ಕ್ಕೆ ಬೆಲೆ ರೂ ೨—೮—೦

ಇದು ಮೇಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ನೋಡುವವರ ಕಣ್ಣು ಚದರುವಷ್ಟು ಪ್ರಕಾಶವುಳ್ಳದ್ದು

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ,

ಸಾಹುಕಾರ್ ಪೇಟೆ, ಮದರಾಸು.

"ಪ್ರಕಟನೆ"

136-2

ಅಮೃತ ಮಹಲ್ ಇಲಾಖಾ ಬಾಬತು ಕೆಲವು ಗಂಡು ಮತ್ತು ಕೆಲವು ಹೆಣ್ಣು ದನುಗಳನ್ನು ೧೯೦೬ನೆ ಇಸವಿ ನವಂಬರು ಮಾಹೆ ತಾರೀಖು ೧೨ರ ಲಾಗಾಯಿತು ಚಳ್ಳಕೆರೆ ಮೊಕ್ಕಾಂ ನಲ್ಲೂ ಅದೇ ತಿಂಗಳು ೨೨ನೆ ತಾರೀಖು ಲಾಗಾಯಿತು ಹೊಳಲಕೆರೆ ಮೊಕ್ಕಾಂನಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಖುದಸ ವಾಲಿನಿಂದ ಪಡೆಯಬಹುದು.

ಮೊಕ್ಕಾಂ ಬೀರೂರು. | ತಾ. ೨೭—೧೦—೦೬.

H. Nanjundraj Urs,
Superintendent
Amrit Mahal Depart.

ವಿದ್ಯುಚ್ಛಕ್ತಿಯೇ ಪ್ರಾಣವಾಯು!

ವೈದ್ಯ ವಿದ್ಯುಚ್ಛಕ್ತಿ. 141-1

ಡಾಕ್ಟರ್ ಸಾಂಡೋಯವರ ವಿದ್ಯುಚ್ಛಕ್ತಿಯ ಹಳ್ಟ್ಯರ್ಲೇ ಎಂಬ ಚಿಕಿತ್ಸೆಯು ಕೀಲುಗಳ ವಾಯುನೋವು, ನರಗಳ ದುರ್ಬಲ, ಅಸ್ವಾಸ್ಥ್ಯ, ಧಾತು ಹೀನತೆಯೇ ಮೊದಲಾದವುಗಳನ್ನು ಖಂಡಿತವಾಗಿ ನಾಶಮಾಡುವುದು. ಮೈಸೂರು ಸಿಟಿ ಗಾರ್ಡನ್ ಹೋಟೇಲಿನಲ್ಲಿ ಇಳಿದುಕೊಂಡಿರುವ ಯೂರೋಪಿಯನ್ ಏಜಂಟರು ಕುತೂಹಲವುಳ್ಳ ಗಂಡಸರಿಗೂ ಹೆಂಗಸರಿಗೂ ಈ ವಿದ್ಯುಚ್ಛಕ್ತಿ



ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡುತ್ತಾರೆ. ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೬ ಗಂಟೆಯ ತನಕ ಅಪೇಕ್ಷೆಯುಳ್ಳವರೆಲ್ಲಾ ಬಂದು ರುಸುಂ ಏನೂ ಕೊಡದೆ ಕಾಯಿಲೆ ವಿಚಾರವನ್ನು ಅವರಿಗೆ ತಿಳಿಸಬಹುದಾಗಿದೆ. ಕಾಗದ ಬರೆದಲ್ಲಿ ಅವರೇ ಮನೆಗೆ ಬರುತ್ತಾರೆ, ಇಲ್ಲವೇ, ಕೊಡ್ಲೆ ಜವಾಬು ಕೊಡುವರು ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಪರರಿಗೆ ಗೋಚರವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡಸುವರು

ಇಗೊ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133-4

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!
ಉತ್ಕೃಷ್ಟವಾದ ಡೈರಿಗಳು!!!

೧೯೦೬ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಬನಾಬರ್ಡಿನ ಪಟ್ಟಿ, ಡೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪುಷ್ಪಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ.

ಕ್ರಯ:—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇದತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಬ್ ಡೈರಿ ೦—೬—೦; ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇದತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦; ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಳ್ಳಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಪಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

CHAMBERLAIN'S COUGH REMEDY.

ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

95-19



ಶೀತದ ಕೆಮ್ಮು, ಗಂಟಲು ಗೂರೆನ್ನುವುದು, ಜುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು, ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವ ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟಸ್ಥಿತಿಯ ಸಂಪೂರ್ಣವಾಗಿ ನಾಶಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನ ಉಲ್ಲಾಸಕೊಡುತ್ತದೆ.

ಚೇಂಬರ್ಲೆನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕ್ರಯಿಂದಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೬ ನೇ ಇಸವಿ ನವಂಬರ್ ತಾ॥ ೮ ನೇ ಗುರುವಾರ.

ಬಿನ್ನಿ ಕಂಪನಿಯ ಸ್ಥಿತಿಯು.

ಅನೇಕ ಸಂದರ್ಭಗಳಲ್ಲಿ ಭಾರೀ ವ್ಯಾಪಾರ ಲೇವಾದೇವಿ ಕಸಬುಗಳನ್ನು ನಡಿಸುವಂಥಾ ಒಂದು ದೊಡ್ಡ ಕಂಪನಿಯು ದುರವಸ್ಥೆಗೆ ಬಂದರೆ ಅದರಿಂದ ಇತರ ಕಂಪನಿಗಳಿಗೂ ಕೆಡುಕು ಪ್ರಾಪ್ತವಾಗುವುದು ರೂಢಿಯಾಗಿದೆ. ಕಳೆದ ವಾರ ಬಿನ್ನಿ ಕಂಪನಿ ಎಂಬ ಪ್ರಸಿದ್ಧ ಕಂಪನಿಯವರು ಲೇವಾದೇವಿಯನ್ನು ನಿಲ್ಲಿಸಿರುತ್ತೇವೆಂದು ಪ್ರಕಟಿಸಬೇಕಾಯಿತು ಆದರೆ ಈ ಕಂಪನಿಯು ಅರ್ಬತ್ನಾಟ್ ಕಂಪನಿಯಂತೆ ಪಾಪರಾಗಲಿಲ್ಲ ಬಿನ್ನಿ ಕಂಪನಿಯವರ ಆಸ್ತಿಯು ಹೆಚ್ಚಾಗಿರುವುದು. ತಮ್ಮಲ್ಲಿ ಹಣ ಹಾಕಿರುವವರಿಗೆ ಈ ಆಸ್ತಿಯಿಂದ ಪೂರಾ ಹಣವನ್ನೇ ಪಾವತಿ ಮಾಡಬಹುದಾಗಿದೆ ಎಂದು ತಿಳಿಸಿರುವರು. ಡಿಪಾಜಿಟ್‌ದಾರರಿಗೆ ನಷ್ಟವೇನೂ ಆಗಲಾರದೆಂದು ಧೈರ್ಯ ಹೇಳುವರು ಯಾಕಂದರೆ, ಈ ಕಂಪನಿಯವರ ದೇಣಿಯು ನಾಲ್ವತ್ತೊಂಬತ್ತು ಲಕ್ಷ ರೂಪಾಯಿಗಳಿಗಿಂತಲೂ, ಅವರ ಆಸ್ತಿಯೆಲ್ಲಾ ಒಟ್ಟು ನಾಲ್ವತ್ತೈದೂ ಕಾಲು ಲಕ್ಷ ರೂಪಾಯಿಗಳಾಗುತ್ತವೆಂತಲೂ ಸರಿಸುಮಾರಾಗಿ ಲೆಕ್ಕಾಚಾರಮಾಡಿ ಪ್ರಕಟಿಸಿರುತ್ತಾರೆ. ಆದಕಾರಣ ಈ ಬ್ಯಾಂಕಿನಿಂದ ಯಾರಿಗೂ ನಷ್ಟವೇನೂ ಆಗಲಾರದೆಂದು ನಿರೀಕ್ಷಿಸಬಹುದಾಗಿದೆ.

ನಡೆದ ಸಂಗತಿ ಏನೆಂದರೆ, ಅರ್ಬತ್ನಾಟ್ ಕಂಪನಿ ದಿವಾಳಿಯಾಯಿತೆಂದು ಕೇಳಿದ ಕೂಡಲೇ ಬೇರೆ ಬೇರೆ ಬ್ಯಾಂಕುಗಳಲ್ಲಿ ಹಣ ಹಾಕಿದ್ದ ಡಿಪಾಜಿಟ್‌ದಾರರು ಬೇಗ ಬೇಗನೆ ಹೋಗಿ ತಮ್ಮ ಡಿಪಾಜಿಟ್ ಹಣವನ್ನು ವಾಪಸು ಕೇಳುತ್ತಾ ಬಂದರು. ಬಿನ್ನಿ ಕಂಪನಿ, ಮದರಾಸ್ ಬ್ಯಾಂಕು, ಬೆಂಗಳೂರು ಬ್ಯಾಂಕು, ಪ್ಯಾರಿ ಕಂಪನಿ ಈ ಮೊದಲಾದ ಬ್ಯಾಂಕುಗಳಿಗೆ ಜನರು ಹೋಗಿ ಮುತ್ತಿಕೊಂಡರು. ಮದರಾಸ್ ಮತ್ತು ಬೆಂಗಳೂರು ಬ್ಯಾಂಕುಗಳಿಗೆ ಯಾವ ಕುಂದಕವೂ ಉಂಟಾಗಲಿಲ್ಲ ಬ್ಯಾಂಕುಗಳ ನಡವಳಿಕೆ ಹ್ಯಾಗಂದರೆ, ಡಿಪಾಜಿಟ್‌ದಾರರು ಕೊಡತಕ್ಕ ಹಣದಲ್ಲಿ ವಿಶೇಷ ಭಾಗವನ್ನು ವ್ಯಾಪಾರಾದಿಗಳಿಗೆ ಉಪಯೋಗಿಸಿ, ಅಲ್ಪಸ್ವಲ್ಪವನ್ನು ಮಾತ್ರ ಚಲಾವಣೆಗಾಗಿ ಇಟ್ಟುಕೊಂಡು ಆ ವ್ಯಾಪಾರಾದಿಗಳಿಂದ ಬರುವ ಲಾಭದಲ್ಲಿ ಡಿಪಾಜಿಟ್‌ದಾರರಿಗೆ ಬಡ್ಡಿ ಪಾವತಿ ಮಾಡುವರು ಬ್ಯಾಂಕಿಗೆ ಬರುವ ಬಡ್ಡಿಯಲ್ಲಿ ಅಲ್ಪ ಭಾಗವನ್ನು ಬ್ಯಾಂಕಿನ ಆಸ್ತಿಯಾಗಿ ಇಟ್ಟುಕೊಂಡು, ವಿಶೇಷ ಭಾಗವನ್ನು ಹಂಚುತ್ತಾರೆ ಹೀಗಿರುವಲ್ಲಿ ಡಿಪಾಜಿಟ್‌ದಾರರೆಲ್ಲಾ ಏಕಕಾಲದಲ್ಲಿ ತಮ್ಮ ಹಣ ವಾಪಸು ಪಡೆಯಬೇಕೆಂದು ನುಗ್ಗಿದರೆ ಬ್ಯಾಂಕಿನವರು ಎಲ್ಲರಿಗೂ ಕೊಡುವುದಕ್ಕೆ ಹಣವೆಲ್ಲಿಂದ ತಂದಾರು? ಬ್ಯಾಂಕಿನವರು ಆಸ್ತಿ ವ್ಯಾಪಾರಾದಿಗಳ ಮೇಲೆ ಹಾಕಿರುವ ಅಸಲನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಅವಕಾಶವೆಲ್ಲಿದೆ? ಇದೇ ಬಿನ್ನಿ ಕಂಪನಿಯವರಿಗೂ ಆದ ಪಾಡೆಂದು ತಿಳಿಯುವುದು ಆದರೆ ಅವರು ವಿವೇಕ ತಂದುಕೊಂಡು—ಇದುವರೆಗೆ ಹಣ ಕೊಡುತ್ತಿದ್ದಂತೆ ಇನ್ನು ಮುಂದೆ ಹಣ ಕೊಡಲಾರೆವೆಂದು ಪ್ರಸಿದ್ಧಪಡಿಸಿದರು. ಇದೇ ಒಳ್ಳೆದಾಯಿತು ಅವರೂ ಕೇಳಿದವರಿಗೆಲ್ಲಾ ಹಣ ಕೊಡಲಾರಂಭಿಸಿದ್ದಲ್ಲಿ ಅವರು ನಡೆಸುತ್ತಿರುವ ವ್ಯಾಪಾರಾದಿ ಕಸಬುದಾರಿ ಕೆಲಸಗಳಿಗೆ ಹಣವೇ ಉಳಿಯುತ್ತಿರಲಿಲ್ಲ. ಮೊನ್ನೆ ಸೋಮವಾರ ಈ ಕಂಪನಿಯ ದೇಣೇದಾರರ ಮೀಟಿಂಗ್ ಆಯಿತು. ಈ ಕಂಪನಿಯನ್ನು ಸರ್ಕಾರಿ ಜವಾಬ್ದಾರಿ ಉಳ್ಳ ಲಿಮಿಟೆಡ್ ಕಂಪನಿಯಾಗಿ ಮಾಡಿದಬೇಕೆಂಬ ಏರ್ಪಾಡು ನಡಿಯುತ್ತಿದೆ. ಹ್ಯಾಗೂ ಈ ಕಂಪನಿಯಲ್ಲಿ ಹಣ ಹಾಕಿರುವವರ ಪೈಕಿ ಯಾರಿಗೂ ನಷ್ಟವೇನೂ ಆಗದಂತೆ ಇತ್ಯರ್ಥವಾಗುವುದೆಂದು ಹೇಳಬಹುದಾಗಿದೆ.

ಕುಡಿಕತನವೆಂಬ ಮಹಾ ಪಾತಕೃತ್ಯ.

ಪಶ್ಚಿಮ ದಿಗ್ದೇಶಗಳಲ್ಲಿ ಕುಡಿಕತನದಿಂದ ಮಹದನರ್ಥಗಳು ಸಂಭವಿಸುತ್ತಲಿವೆ ಯೆಂಬುದು ಸಕಲರಿಗೂ ಗೊತ್ತಿರುವುದಷ್ಟೆ. ಆದಕಾರಣ ಆ ದೇಶಗಳಲ್ಲಿರುವ ಕ್ರೈಸ್ತ ಮಂಡಲಿಯವರೂ ಕಾಯಿದೆ ಕಾನೂನುಗಳನ್ನು ಏರ್ಪಡಿಸುವ ಸಾಮಾಜಿಕರೂ ಈ ದುರಭ್ಯಾಸವನ್ನು ಬುಡದೊಂದಿಗೆ ಕಿತ್ತುಹಾಕಬೇಕೆಂದು ಬಹಳ ಪ್ರಯತ್ನ ಮಾಡುತ್ತಲಿರುವರು. ಇವರಿಂದ ಈಚೀಚೆಗೆ ಬಹಳ ಫಲವುಂಟಾಗಿದೆ. ಮದ್ಯಪಾನ ಮಾಡುವುದು ನಾಚಿಕೆಗೇಡಾದ ಕೃತ್ಯವೆಂದು ಮಾನವಂತರಾದ ಜನಗಳು ತಿಳಿದಿದ್ದರ ವಿಲಾಯತಿಯಲ್ಲಿ ಮದ್ಯಪಾನವನ್ನು ಸಂಪೂರ್ಣವಾ ಪರಿಸಿಬಿಟ್ಟಿರುವ ಜನರು ಲಕ್ಷಾಂತರವಿಂದಿಯಾಗಿರುವರು.

ಯೂರೋಪ್ ಮೊದಲಾದ ಪಶ್ಚಿಮ ರಾಜ್ಯಗಳು ಶೀತ ದೇಶಗಳಾಗಿವೆ. ಅಲ್ಲಿ ಮದ್ಯಪಾನದಿಂದ ಎಷ್ಟೋ ಕೇಡುಂಟಾಗಿರುವಲ್ಲಿ ಉಷ್ಣದೇಶವಾದ ನಮ್ಮ ಇಂಡಿಯಾ ಮೊದಲಾದ ದೇಶಗಳಲ್ಲಿ ಇಂಥ ದುರ್ವ್ಯಸನವನ್ನು ನಡಿಸುವದರಿಂದ ಎರಡರಷ್ಟು ಕೇಡುಂಟು ದೇಹಶಕ್ತಿಗೂ ಬಲು ಬೇಗನೆ ಅಳಿವುಂಟಾಗುತ್ತದೆ. ಹೀಗಿರಲಾಗಿ ನಮ್ಮ ದೇಶದಲ್ಲಿ ಸಾರಾಯಿ ಹೆಂಡ ಮೊದಲಾದ ನಿಷಾ ಪದಾರ್ಥಗಳನ್ನು ರು ಹೆಚ್ಚು ಹೆಚ್ಚಾಗಿ ಸೇವಿಸುತ್ತಾ ಬರುತ್ತಿರುವದನ್ನು ಕಂಡು, ಭಯವೂ ವ್ಯಸನವೂ ಉಂಟಾಗಿದೆ. ಈ ದುರಭ್ಯಾಸವು ಹರಡಿ ಮಾಡುವುದಕ್ಕೆ—ಅದರ ಹುಟ್ಟೇ ಅಡಗಿ ಹೋಗುವಂತೆ ಮಾಡುವುದಕ್ಕೂ ಸರ್ಕಾರದವರೂ ಪ್ರಜೆಗಳೂ ಸೇರಿಕೊಂಡು ಪ್ರಯತ್ನಿಸಬೇಕೆಂಬುದಾಗಿ ನಾವು ಕೋರುತ್ತೇವೆ ಇಂಗ್ಲಾಂಡಿನಲ್ಲಿರುವ ಪ್ರೆಸ್ಟನ್ ಎಂಬೂರಿನ ಮ್ಯುನಿಸಿಪಾಲಿಟಿಯವರು ಕೆಲವು ದಿನಗಳ ಹಿಂದೆ ಪ್ರಸಿದ್ಧ ಪತ್ರಿಕೆಯಲ್ಲಿ ಈ ದುರಭ್ಯಾಸವನ್ನು ಕುರಿತು ತಿಳಿಯಪಡಿಸಿದರು. ಅದನ್ನು ಇಲ್ಲಿ ಪರಿವರ್ತನೆ ಮಾಡಿ ಮುದ್ರಿಸಿದ್ದೇವೆ. ಇದನ್ನು ವಾಚಕರು ಕೇವಲ ಲಕ್ಷ್ಯವಿಟ್ಟು ಓದಿಕೊಳ್ಳುವರೆಂದು ನಂಬಿ ಪ್ರೆಸ್ಟನ ಮ್ಯುನಿಸಿಪಾಲಿಟಿಯವರನ್ನು ನೋಡಿಕೊಂಡು ಇಂದಿನ ಇತರ ಊರಿನ ಮ್ಯುನಿಸಿಪಾಲಿಟಿಯವರೂ ಇಂಥ ಪ್ರಸಿದ್ಧ ಪ ಗಳನ್ನು ಜನರಲ್ಲಿ ಹಂಚುತ್ತಿದ್ದಾರೆ:—

ಸಾರ್ವಭೌಮರಾದ ಎಡ್ವರ್ಡ್ ರಾಜರ ಅಪ್ಪಣೆಯ ಪ್ರಕಾರ ಪಾರ್ಲಿಮೆಂಟಿನಿಂದ ನೇಮಿಸಲ್ಪಟ್ಟ ಕಮಿಟಿಯವರು ರಿಪೋರ್ಟ್ ಬರೆದಿರುವದನ್ನು ಪ್ರೆಸ್ಟನ ಮ್ಯುನಿಸಿಪಾಲಿಟಿಯವರು ಸೂಚಿಸಿರುವಂತೆ ತಂದರೆ —

ನಿಷಾ ಪದಾರ್ಥಗಳನ್ನು ದುರುಪಯೋಗಪಡಿಸಿಕೊಳ್ಳುವದರಿಂದ ದೇಹವು ಕ್ಷೀಣದೆಸೆಯನ್ನು ಹೊಂದುವದಕ್ಕೆ ಪ್ರಮುಖ್ಯವಾದ ಕಾರಣವಾಗಿರುತ್ತದೆ.

ನಿಷಾ ಪದಾರ್ಥವನ್ನು ಉಪಯೋಗಿಸುವವರಿಗೆ ಕ್ಷಯವೇ ಮೊದಲಾದ ರೋಗಗಳು ಬರುವವು.

ದೇಶದಲ್ಲಿ ಬಲವೂ ಚಟುವಟಿಕೆಯೂ ದೊರಕಬೇಕಾದರೆ ಮದ್ಯವಿಸರ್ಜನೆಯೇ ತಕ್ಕ ಉಪಾಯವೆಂದು ಕಮಿಟಿಯವರ ಮುಂದೆ ಈ ಕಾರಣಗಳಿಂದ ಸಿದ್ಧಾಂತಕ್ಕೆ ಬಂದಿವೆ.

ಹುಚ್ಚರ ಆಸ್ಪತ್ರೆಗಳಲ್ಲಿ ಸೇರತಕ್ಕವರ ಸಂಖ್ಯೆಯನ್ನು ಪರಿಶೀಲಿಸುವಲ್ಲಿ ಮದ್ಯಪಾನವನ್ನು ಮಾಡಿದುದರಿಂದಲೇ ಹುಚ್ಚು ಹಿಡಿದ ಗಂಡಸರೂ ಹೆಂಗಸರೂ ಹೆಚ್ಚಾಗುತ್ತಲಿದ್ದಾರೆಂದು ತಿಳಿಸುಬರುವದು.

ಫ್ರಾಂಸ್ ದೇಶದಲ್ಲೆಲ್ಲಾ ವೈದ್ಯರು ನಿಜವೆಂದು ಒಪ್ಪಿರುವ ಈ ಕೆಳಗಿನ ಸಂಗತಿಗಳನ್ನು ಸರ್ಕಾರದವರ ಅಪ್ಪಣೆಯಪ್ರಕಾರ ಆ ದೇಶದ ಎಲ್ಲ ಭಾಗಗಳಲ್ಲಿಯೂ ಪ್ರಜೆಗಳಿಗೆಲ್ಲಾ ತಿಳಿಯಪಡಿಸುವ ನಿಮಿತ್ತ ಪ್ರಸಿದ್ಧ ಪತ್ರಿಕೆಗಳನ್ನು ಗೋಡೆಗಳಿಗೆ ಹಚ್ಚಿದ್ದಾರೆ ಈ ಕಮಿಟಿಯ ಸಲಹೆಗಳನ್ನು ಸ್ವದೇಶೀಯರಾದ ಗಂಡಸರೂ ಹೆಂಗಸರೂ ಮನ ತಂದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಮುದ್ರಿಸಿರುತ್ತಾರೆ—

(೧) ಮದ್ಯವನ್ನು ಸ್ವಲ್ಪ ಸ್ವಲ್ಪವಾಗಿ ಪಾನಮಾಡಿದರೂ ಅದರಲ್ಲಿರುವ ವಿಷವು ದೇಹದಲ್ಲಿ ನಿಂತು ಅನುದಿನಕ್ಕೆ ಅದರ ಕೆಟ್ಟ ಫಲ ಹೆಚ್ಚುತ್ತಲೇ ಇರುವದು.

(೨) ಕಷ್ಟವಾದ ಕೆಲಸವನ್ನು ಮಾಡುವವರಿಗೆ ಮದ್ಯವು ಬಲ ಕೊಡುತ್ತದೆ ಎಂದು ಹೇಳುವದು ತಪ್ಪು ಮದ್ಯವು ದೇಹ ಪೋಷಣೆಗೆ ಯೋಗ್ಯವಾದ ಆಹಾರವೂ ಅಲ್ಲ, ದೇಹಾರೋಗ್ಯವನ್ನು ಕಟ್ಟ ಔಷಧ ಮೊದಲೇ ಅಲ್ಲ.

(೩) ಮದ್ಯವು ನರಗಳಲ್ಲಿರುವ ಉತ್ಸಾಹ ಶಕ್ತಿಯನ್ನು ಅದುಮುವದರಿಂದ ಅಸ್ಥಿರವಾದ ಗುಣವನ್ನುಳ್ಳದ್ದಾಗಿದೆ. ಆದರೆ ನಿಜವಾಗಿ ಅದಕ್ಕಿಂತಲೂ ಕೆಟ್ಟದಾದ ಕೆಡಕು ಇದರಲ್ಲಿ ಉಂಟು. ಮದ್ಯವನ್ನು ಸೇವಿಸಿದ ಮನುಷ್ಯನು ಶೀತೋಷ್ಣಗಳಿಗೆ ಬೇಗ ವಶನಾಗುತ್ತಾನೆ. ದೆಸೆಯಿಂದ ಅನೇಕ ಪಾಪಕೃತ್ಯಗಳು ಉಂಟಾಗುತ್ತವೆ

(೪) ಬಲವಾದ ಮದ್ಯವನ್ನು ಸೇವಿಸಿದರೆ ಮನುಷ್ಯನಿಗೆ ಕ್ಷೀಣೆಯು ಬೇಗನೆ ಬರುತ್ತದೆಂದು ಹೇಳುವದುಂಟು. ಬೀರ್ ವೈನ್ ಮೊದಲಾದಂಥ ಸಾಧಾರಣವಾದ ಮದ್ಯಗಳನ್ನೂ ನಿತ್ಯವೂ ಕ್ರಮವಾಗಿ ಸೇವಿಸುವದರಿಂದ ದೇಹದಲ್ಲಿ ವಿಷವು ಸೇರಿ ಹಾನಿಯುಂಟಾಗುವದು

(೫) ಮದ್ಯಪಾನವೆಂಬ ದುರಭ್ಯಾಸದಿಂದ ಅನೇಕ ಸಂಸಾರಗಳು ನಾಶವಾಗಿವೆ; ಸಾಮಾಜಿಕ ಕರ್ತವ್ಯಗಳನ್ನು ಅಲಕ್ಷ್ಯಮಾಡ

ಕರವಾಗಿದೆ, ಕೆಲಸದ ಮೇಲೆ ಇಚ್ಛೆಯಿರುವದಿಲ್ಲ, ದುಃಖಪರಂಪರೆಗೆ ಕಾರಣವಾಗಿದೆ, ಕಳ್ಳತನವೂ ಘೋರ ಪಾತಕವೂ ಹುಟ್ಟಿಸುತ್ತದೆ ಮೂರ್ಛಾವಾಯು, ಹುಚ್ಚು, ಅನ್ನಕೋಶಕ್ಕೂ ಪಿತ್ಥಕೋಶಕ್ಕೂ ಸಂಬಂಧಪಟ್ಟ ರೋಗಗಳು ಪಾಂಡುರೋಗ ಮೊದಲಾದ ಅನೇಕ ವಿಧ ರೋಗಗಳು ಹುಟ್ಟುವದಕ್ಕೆ ಕಾರಣವಾಗಿದೆ ಕ್ಷಯರೋಗವು ಖಂಡಿತವಾಗಿ ಬರುತ್ತದೆ ಸಹಾ ಸಂಕಟಕರವಾದ ಇನ್ನು ಅನೇಕ ರೋಗಗಳನ್ನು ಹುಟ್ಟಿಸುತ್ತದೆ ವಿಷಜ್ವರ, ಶ್ವಾಸಕೋಶಕ್ಕೆ ಸಂಬಂಧಪಟ್ಟ ಜ್ವರ, ಇವುಗಳಲ್ಲಿ ಮದ್ಯಪಾನದಿಂದ ಬೇಗನೆ ಮೃತ್ಯುಬರುತ್ತದೆ

(೬) ಮದ್ಯಪಾನಾಸಕ್ತರಾದ ತಂದೆತಾಯಿಗಳಿಂದ ಅವರ ಸಂತಾನಕ್ಕೆ ಹಾನಿಯುಂಟು ಇವರ ಮಕ್ಕಳು ಚಿಕ್ಕತನದಲ್ಲಿಯೇ ಸಾಯುವರು ಒಂದು ವೇಳೆ ಉಳಿದರೂ ದೊಡ್ಡವರಾಗುತ್ತ ಹುಚ್ಚು, ಮೂರ್ಛಾರೋಗ, ಕ್ಷಯ ಮೊದಲಾದ ರೋಗಗಳಿಗೆ ತುತ್ತಾಗುತ್ತಾರೆ

(೭) ಮದ್ಯಪಾನವು ದೇಹಾರೋಗ್ಯಕ್ಕೂ ಕುಟುಂಬ ಸುಖಕ್ಕೂ ರಾಜ್ಯಾಂಗ ಶ್ರೇಯಸ್ಸಿಗೂ ಮಹಾ ಭಯಂಕರವಾದ ವೈರಿಯಾಗಿರುತ್ತದೆ

ಬಳದೇಶದ ವೃತ್ತಾಂತಗಳು.

ಇಂಗ್ಲಿಷ್ ಗವರ್ನಮೆಂಟಿನ ಪ್ರಜೆಯಲ್ಲದಂಥಾ ಪರರಾಜ್ಯಗಳವರಾದಗೂ ಈ ಸಂಸ್ಥಾನದಲ್ಲಿ ಇರುವುದಾದರೂ ಹೊಸದಾಗಿ ಬರುವವರೂ ಅಂಥಾವರನ್ನೆಲ್ಲಾ ಹೊರಪಡಿಸುವುದಕ್ಕೆ ಹಿಡಿದು ಬಂಧನದಲ್ಲಿಡುವುದಕ್ಕೆ ಇಂಡಿಯಾ ಗವರ್ನಮೆಂಟಿನವರು ನಮ್ಮ ರೆಸಿಡೆಂಟರಿಗೆ ಅಧಿಕಾರ ಕೊಟ್ಟಿದ್ದಾರೆ

*****

ಶಿವಸಮುದ್ರದ ವಿದ್ಯುಚ್ಛಕ್ತಿಯ ಕಾರ್ಖಾನೆ ನೌಕರರಾದ ಇಬ್ಬರು ಯೂರೋಪ್ಯರು ಒಬ್ಬ ಕೆಲಸಿಯನ್ನು ವಿಷ ಹಾಕಿ ಕೊಂದರು ಎಂದು ಮೊಕದ್ದಮೆ ಆಗುತ್ತಿತ್ತು ಬೆಂಗಳೂರು ಡೆಪ್ಯುಟಿ ಕಮಿಶನರ್ ಮಿಸ್ಟರ್ ಸ್ಪಾರ್ಕ್ಸ್ ಅವರು ವಿಚಾರಣೆ ಮಾಡಿ, ಅವರ ಮೇಲೆ ವಿಚಾರಣೆ ನಡೆಯುವದಕ್ಕೆ ಸರಿಯಾದ ರುಜುವಾತು ಬರಲಿಲ್ಲವೆಂದು ಹೇಳಿ, ಅವರನ್ನು ಖುಲಾಸೆ ಮಾಡಿಸಿದರು

****

ಮೊನ್ನೆ ಭಾನುವಾರ ಚಿತ್ರದುರ್ಗದ ಡೆಪ್ಯುಟಿ ಕಮಿಶನರ್ ಮಿ॥ ರಾಮಾನುಜೈಯ್ಯಂಗಾರ್ಯರಿಗೆ ಅಲ್ಲಿನ ಪ್ರಜೆಗಳು ದೊಡ್ಡ ಔತಣವನ್ನು ಮಾಡಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು ಮುಖ್ಯ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಅವರ ಸಂಗಡ ಫೋಟೋ ತೆಗಿಸಿಕೊಂಡರು ಈ ಔತಣಾದಿಗಳು ಬಹಳ ಸಮರ್ಪಕವಾಗಿಯೂ ವಿಘ್ನವಿಲ್ಲದೆಯೂ ನಡೆದುವೆಂದು ತಿಳಿದುಬಂದಿದೆ

****

ಮೈಸೂರು ಸರ್ಕಾರದವರು ಮೇಜರ್ ಟಿ ಡಬ್ಲ್ಯು ಇರ್ವಿನ್ ಅವರನ್ನು ಈ ಸಂಸ್ಥಾನದ ಸೀನಿಯರ್ ಸರ್ಜನ್ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಇಂಡಿಯಾ ಗವರ್ನಮೆಂಟಿನವರು ಸ್ವೀಕಾರ ಮಾಡಿದರು ಇವರು ರಜಾ ಪಡೆದು ಸೀಮೆಗೆ ಹೋಗಿದ್ದರು ನಾಳಿದ್ದು ದಿವಸ ಅವರು ಬೊಂಬಾಯಿನಲ್ಲಿ ಹಡಗು ಇಳಿದು ಸೀದಾ ಬೆಂಗಳೂರಿಗೆ ಬಂದು ಮುಂದಿನ ಸೋಮವಾರ ಕೆಲಸದ ಛಾರ್ಜನ್ನು ವಹಿಸಿಕೊಳ್ಳುವದಾಗಿದ್ದಾರೆಂದು ಕೇಳುತ್ತೇವೆ

****

ಕಲ್ಕತ್ತಾ ಪಟ್ಟಣದ ಕಾಳೀಘಾಟಿನಲ್ಲಿ ಲೇಟ್ ಮಹಾರಾಜರವರ ಸ್ಮಾರಕಾರ್ಥವಾಗಿ ಮೈಸೂರು ಗವರ್ನಮೆಂಟಿನವರು ಒಂದು ಸ್ನಾನಘಟ್ಟವನ್ನೂ ಧರ್ಮಸತ್ರವನ್ನೂ ಕಳೆದ ೧೮೯೭ ನೇ ಇಸವಿಯಿಂದಲೂ ಕಟ್ಟಿಸುತ್ತಲೇ ಇದ್ದಾರಷ್ಟೆ ಅದಕ್ಕೆ ಕಳೆದ ವರುಷದ ವರೆಗೆ ಒಂದು ಲಕ್ಷ ರೂಪಾಯಿ ತನಕ ಖರ್ಚಾಯಿತು ಇನ್ನೂ ಪೂರೈಸಲಿಲ್ಲವೆಂದು ಈಗ ಅದಕ್ಕಾಗಿ ಮತ್ತೆ ೫೦ ಸಾವಿರ ರೂಪಾಯಿ ಸ್ಯಾಂಕ್ಷನ್ ಆಗಿದೆ ಅಂತು ಅದು ಮುಕ್ತಾಯವಾಗುವಷ್ಟರಲ್ಲಿ ಒಂದೂವರೆ ಲಕ್ಷ ರೂಪಾಯಿ ಖರ್ಚಾಗಬಹುದೆಂದು ಹೇಳಬಹುದಾಗಿದೆ

****

ಬೆಂಗಳೂರು ದಂಡಿನಲ್ಲಿ ರೆಸಿಡೆಂಟರ ಮೇಲೂ ಮ್ಯುನಿಸಿಪಲ್ ಕಮಿಟಿ ಮೆಂಬರರ ಮೇಲೂ ಮುಂತಾದ ಹಿಂದೂ ಯೂರೋಪಿಯನ್ ದೊಡ್ಡ ಮನುಷ್ಯರ ಮೇಲೂ ರಾಜದ್ರೋಹಕರವಾದ ವಿಷಯಗಳನ್ನು ಬರೆದು ನೋಟೀಸ್ ಪ್ರಿಂಟುಮಾಡಿ, ಜನರಿಗೆಲ್ಲಾ ಹಂಚಿದರೆಂದು ಪೋಲೀಸಿನವರು ಮೂರು ಜನರನ್ನು ಹಿಡಿದು ದರ್ಯಾಫ್ತಿಗೆ ಗುರಿಮಾಡಿದ್ದರು ಈ ಮೊಕದ್ದಮೆಯು ಬಹಳ ಗಲಭೆಯನ್ನುಂಟುಮಾಡಿತ್ತು ಮ್ಯಾಜಿಸ್ಟ್ರೇಟರು ದರ್ಯಾಫ್ತಿ ಮಾಡಿ ಅಪರಾಧಿಗಳಲ್ಲಿ ಇಬ್ಬರನ್ನು ಖುಲಾಸೆ ಮಾಡಿ ದಡಗೋಪಾಲಪಿಳ್ಳೆ ಎಂಬ ಮೊದಲನೇ ಅಪರಾಧಿಗೆ ಆರು ವಾರ ಕಠಿಣ ಸಜಾ ವಿಧಿಸಿರುತ್ತಾರೆ

****

ರಾಜಧಾನಿಯ ಬಳಿ ಇಲವಾಲದ ಬಂಗಲೆಯ ಅಜೂಬಾಜೂ ಪ್ರದೇಶದಲ್ಲಿ ಬಹುಕಾಲದಿಂದ ಒಂದು ಭಾರೀ ಕಿರುಬನು ಸೇರಿಕೊಂಡು ಅನಾಹುತಗಳನ್ನುಂಟುಮಾಡುತ್ತಿತ್ತು ಶ್ರೀಮನ್ ಮಹಾರಾಜರವರು ಶಿಕಾರಿ ಮಾಡಬೇಕೆಂದು ಅನೇಕ ವೇಳೆ ಹೋಗಿ ಪ್ರಯತ್ನ ಮಾಡಿದ್ದು ಅದು ಸಿಕ್ಕಲಿಲ್ಲ. ಮೊನ್ನೆ ಮಂಗಳವಾರ ಸಾಯಂಕಾಲ ಮಹಾರಾಜರವರ ವಿದ್ಯಾ ಬೋಧಕರಾದ ಕ್ಯಾಪ್ಟನ್ ಹೀಲ್ ಅವರು ಮೋಟಾರ್ ಗಾಡಿಯಲ್ಲಿ ಅಲ್ಲಿಗೆ ಹೋಗಿ ಆ ಕಿರುಬನನ್ನು ಸಂಧಿಸಿ ಗುಂಡಿನಿಂದ ಹೊಡೆದು ಕೊಂದುಹಾಕಿ, ಶವವನ್ನು ತಮ್ಮ ಗಾಡಿಯಲ್ಲಿ ಹಾಕಿಕೊಂಡು ಬಂದರೆಂದು ತಿಳಿದು ಬಂದಿದೆ

****

ಬೆಂಗಳೂರು ಸೆಂಟ್ರಲ್ ಕಾಲೇಜಿನ ಹೆಡ್ ಕ್ಲಾರ್ಕ್ ಆಗಿದ್ದ ಲಕ್ಷ್ಮೀನಾರಸಿಂಹಮೂರ್ತಿ ರಾಯನು ಆ ಕಾಲೇಜಿನ ಪ್ರಿನ್ಸಿಪಲ್ ಮಿ॥ ಟೇಟ್ ಅವರ ರುಜುವನ್ನು ತಾನೇ ಹಾಕಿ ಬ್ಯಾಂಕಿನಿಂದ ಹಣ ತರಿಸಿಕೊಂಡು ದುರುಪಯೋಗ ಪಡಿಸಿದನೆಂದು ಪೋಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದಾರೆ ಅವನ ಮನೆಯನ್ನು ಜಪ್ತಿಮಾಡಿ ಲೆಕ್ಕ ವಗೈರೆ ಮೊದಲಾದದ್ದನ್ನು ತೆಗೆದುಕೊಂಡರು. ಇದುವರೆಗೆ ಲೆಕ್ಕ ನೋಡಿದ್ದರಲ್ಲಿ ಅವನು ಖಜಾನೆಯಿಂದ ೮,೦೦೦ ರೂಪಾಯಿ ಜಾಸ್ತಿಯಾಗಿ ತರಿಸಿಕೊಂಡಿರುವಂತೆ ಗೊತ್ತಾಗಿದೆ ಈ ಮೊಕದ್ದಮೆಯನ್ನು ಮುಂದಿನ ಬುಧವಾರ ತನಿಖೆ ಮಾಡುವರೆಂದು ಕೇಳುತ್ತೇವೆ

****

ಈ ದಿನ ಮಧ್ಯಾಹ್ನ ೧೨ ಗಂಟೆಗೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಗಳಲ್ಲಿ ಪರಿವಾರ ಸಹಿತ ರಾಜಧಾನಿಯಿಂದ ಬೆಂಗಳೂರಿಗೆ ಚಿತ್ತೈಸುವರು ಇವರು ಇನ್ನು ಸುಮಾರು ೬ ವಾರಗಳ ತನಕ ಬೆಂಗಳೂರಿನಲ್ಲಿದ್ದು ಡಿಸೆಂಬರ್ ೧೬ ರಲ್ಲಿ ಲೇಟ್ ಮಹಾರಾಜರವರ ವೈದಿಕವನ್ನು ತೀರಿಸಿಕೊಂಡು, ಬಹುಶಹಾ ೨೦ನೆ ತಾರೀಖಿಗೆ ಅಲ್ಲಿಂದ ರೈಲ್ ಹತ್ತಿ ಕಲ್ಕತ್ತೆಗೆ ದಯಮಾಡಿ, ಮೂರು ವಾರಗಳ ತನಕ ಅಲ್ಲಿನ ಹೇಸ್ಟಿಂಗ್ಸ್ ಹೌಸ್ ಎಂಬ ರಾಜಭವನದಲ್ಲಿ ವೈಸ್‌ರಾಯರವರ ಆತಿಥ್ಯವನ್ನು ಸ್ವೀಕರಿಸುತ್ತಲಿದ್ದು, ಅನಂತರ ಸುಮಾರು ಜನವರಿ ಎರಡನೆ ವಾರದಲ್ಲಿ ರಾಜಧಾನಿಗೆ ವಾಪಸು ಬರುವವರಾಗಿದ್ದಾರೆ ಮಹಾ ಮಾತೋಶ್ರೀಯವರೂ ದಿವಾನ್‌ರೇ ಮುಂತಾದವರೂ ಮಹಾರಾಜರವರ ಸಂಗಡ ಉತ್ತರದೇಶದಲ್ಲಿ ಸಂಚಾರ ಮಾಡಿಕೊಂಡು ಬರುತ್ತಾರೆಂದು ತಿಳಿದು ಬಂದಿದೆ

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಲೇಖನದ ಲಕೋಟೆಯ ಮೇಲೂ "ಬಹುಮಾನದ ಲೇಖನ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮಿದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧಕಾಲಮಿಗಿಂತ ಕಡಿಮೆಯಾಗಿಯೂ ಒಂದು ಕಾಲಮಿಗಿಂತ ಹೆಚ್ಚಾಗಿಯೂ ಇರಬಾರದು (೩) ಪ್ರತಿಯೊಂದು ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಬೇಕು (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರವೂ ಪ್ರಕಟಿಸುವುದಲ್ಲದೆ, ಹಣವನ್ನು ಮಣಿಯಾರ್ಡರಿನ ಮೂಲಕ ರವಾನಿಸುವೆವು (೫) ಬಹುಮಾನ ನಿಮಿತ್ತವಾಗಿ ನಮ್ಮಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯಲಾರದು]

[ಇದನ್ನು ಬರೆದ ಮಾ॥ ಎಂ ಗೋವಿಂದಭಟ್ಟರು, ಸೂಜಿಬೈಲ್, ಕೋಲ್ನಾಡ್ ಕಸಬಾ, ವಿಟ್ಲ್, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ]

ಹುಲಿಯ ಬೇಟೆ

ದಕ್ಷಿಣ ಕನರಾಜಿಲ್ಲಾ ಮಂಗ್ಳೂರು ತಾಲ್ಲೂಕು ಸಜೀಪ ಮಾಗಣೆ ಮಂಚಿಗ್ರಾಮದಲ್ಲಿರುವ ಬಡ ಒಕ್ಕಲಿಗರು ಬಹಳ ದಿವಸಗಳಿಂದೀಚೆಗೆ ಹುಲಿಗಳ ಕಾಟದಿಂದ ದನಕರಗಳನ್ನು ಗುಡ್ಡೆಗಳಿಗೆ ಬಿಡುವುದಕ್ಕೂ ಮನೆಯಲ್ಲಿ ಬೆಂಕಿ ಉರಿಸುವದಕ್ಕೆ ಕಾಡುಗಳಿಂದ ಕಟ್ಟಿಗೆ ತರುವುದಕ್ಕೂ ಹೆದರಿ, ತಮ್ಮ ತಮ್ಮ ಗೋಕಾಡುಗಳನ್ನು ಅವುಗಳ ಹಟ್ಟಿಯಲ್ಲೇ ಕಟ್ಟಿಹಾಕಿದರು ಒಕ್ಕಲಿಗರ ಪೈಕಿ ರಾಮಣ್ಣಶೆಟ್ಟಿಯು—ಬಂದದ್ದು ಬರಲಿ! ದೇವರ ದಯ ನಮಗಿರಲಿ! ಎಷ್ಟು ದಿವಸ ಹೀಗೆ ದನಗಳನ್ನು ಕಟ್ಟಿಹಾಕಬಹುದು? ಅವುಗಳ ಕಾಲು ಮರಕಟ್ಟಿಹೋಯಿತು ಎಂದುಕೊಂಡು ತನ್ನ ಮಗನನ್ನು ಕರೆದು—ಮಗೂ, ಹೆದರಬೇಡ, ನಮ್ಮ ದನಗಳನು ಗುಡ್ಡೆಗೆ ಹೊಡೆದುಕೊಂಡು ಹೋಗು ಎಂದು ಹೇಳಿದ ಕೂಡಲೇ ಮಗನು ತಂದೆಯ ಅಪ್ಪಣೆ ಮೇರೆಗೆ ಗುಡ್ಡೆಗೆ ದನಗಳನ್ನು ಹೊಡೆದುಕೊಂಡು ಹೋದನು

ದನಗಳನ್ನು ಹುಲ್ಲುಗಾವಲಲ್ಲಿ ಮೇಯಿಸಿ ಹತ್ತಿರವಿದ್ದ ಒಂದು ದೊಡ್ಡ ಪೊದರಿನ ಬಳಿಗೆ ಹೋಗಿ, ಅಲ್ಲಿ ಬಗ್ಗಿಕೊಂಡಿದ್ದ ಮರಗಳ ಕೊಂಬೆಗಳಲ್ಲೊಂದನ್ನು ಹಿಡಿದು ಬಗ್ಗಿಸಿ ಕೈಯಲ್ಲಿದ್ದ ಕತ್ತಿಯಿಂದ ಕಡಿಯುತ್ತಿದ್ದ ಶಬ್ದವನ್ನು ಕೇಳಿ ಅದೇ ಪೊದರಡಿಯಲ್ಲಿ ಮಲಗಿ ನಿದ್ರೆಮಾಡುತ್ತಿದ್ದ ಹುಲಿಯು ಅದರ ಬಾಲವನ್ನೆತ್ತಿದ್ದನ್ನು ಈ ಹುಡುಗನು ನೋಡಿ ಅದು ಹಂದಿಯೆಂದು ಭಾವಿಸಿ ಕೂಡಲೇ ಅವನ ನೆರೆಯ ಮನೆಯಲ್ಲಿದ್ದ ಬೇಟೆಗಾರ ಸಂಕರನಿಗೆ ಹೋಗಿ ಹೇಳಿದನು ಆಗ ಸಂಕರನು ತಮ್ಮನನ್ನು ಕರೆದು—ತಮ್ಮಾ, ಬೇಗ ಒಳಗೆ ಹೋಗಿ ಕೋವಿಗೆ ಮದ್ದು ಜಡಿದು ಕೋವಿ ಇದು ನನ್ನ ವಸ್ತ್ರ ತಕ್ಕೊಂಡು ಬಾ ನೀನು ಬಾ ಕಾಡಿನಲ್ಲಿ ಹಂದಿಯುಂಟಂತೆ ಊಟಕ್ಕೆ ಬಗೆಯಾಯಿತು ಆ ನಾಯಿಯನ್ನು ಕಟ್ಟಿಹಾಕು ಎಂದು ಹೇಳುತ್ತಲೇ ತಮ್ಮ ಅಣ್ಣನ ಅಪ್ಪಣೆಯಂತೆ ಅವನು ಸಹ ಒಂದು ಕೋವಿಯನ್ನು ತಕ್ಕೊಂಡು, ನಾಯಿಯನ್ನು ಕಟ್ಟಲಿಕ್ಕೆ ಸಂಕೋಲೆ ಕಾಣದೆ ಹಗ್ಗದಿಂದ ಕಟ್ಟಿಹಾಕಿ, ಸಂಕರನೂ ಆತನ ತಮ್ಮನೂ, ಶೆಟ್ಟಿ ಮಗನೂ ಕೂಡಾ ಆ ಸ್ಥಳಕ್ಕೆ ಹೋದರು.

ತಮ್ಮನು ಮರ ಹತ್ತಿದನು ತಮ್ಮ ಗುಂಡು ಹೊಡೆದನು ಅಣ್ಣನು ಕೆಳಗೆ ನಿಂತನು ತಮ್ಮನ ಗುಂಡು ಗುರಿ ತಪ್ಪಿತು ಅಣ್ಣ ಗುಂಡು ಹೊಡೆದನು ಈ ಪೆಟ್ಟನ್ನು ಸಹಿಸಲಾರದೆ ರೋಷದಿಂದ ಕಣ್ಣು ಕಾಣದೆ ಮುಂದಕ್ಕೆ ಓಡಿತು ಓಡುವಾಗ ಅದು ಹುಲಿಯೆಂದು ಎಲ್ಲರಿಗೂ ಗೊತ್ತಾಯಿತು ಈ ವರ್ತಮಾನ ಗ್ರಾಮದಲ್ಲಿ ಹರಡಿಕೊಂಡಿತು ಜನಗಳು ಓಡಿಹೋಗುವದಕ್ಕೆ ಶುರು ಮಾಡಿದರು ಗುಂಡಿನ ಶಬ್ದ ಕೇಳುತ್ತಲೇ ಸಂಕರನ ಮನೆಯಲ್ಲಿದ್ದ ನಾಯಿ ಬಿಚ್ಚಿಕೊಂಡು ಓಡುವುದಕ್ಕೆ ಪ್ರಯತ್ನ ಮಾಡಿತು ಬೇಟೆಗಾರನ ಮನೆಯಲ್ಲಿ ಕಟ್ಟಿಗೆ ಒಡೆಯುತ್ತಿದ್ದ ಐತ್ತನೆಂಬುವವನು ಕೈಯಲ್ಲಿದ್ದ ಕೊಡಲಿಯನ್ನು ಹೆಗಲ ಮೇಲೆ ಇರಿಸಿಕೊಂಡು—ನಾನು ಕೊಲ್ಲುತ್ತೇನೆಂದು ಬಾಯಿಬಿಡುತ್ತ ಗುಡ್ಡೆಗೆ ಓಡಿದನು

ತನ್ಮಧ್ಯೆ ಹುಲಿಯು ಗುಂಡಿನ ಪೆಟ್ಟನ್ನು ಸಹಿಸಲಾರದೆ ಕೋಪದಿಂದ ಮುಂದಕ್ಕೆ ಬರುವದೂ ಈ ಐತ್ತನು ಅತ್ತ ಓಡುವದೂ ಗುಡ್ಡೆಯ ಬದಿಯ ಕಣಿಯಲ್ಲಿ ಸಮವಾಯಿತು ಹುಲಿಯನ್ನು ನೋಡಿದ ಕೂಡಲೇ ಹೆಗಲ ಮೇಲೆ ಇದ್ದ ಕೊಡಲಿ ನೆಲಕ್ಕೆ ಬಿತ್ತು ಅವನು ಕೊಡಲೀ ಮೇಲೆ ಬಿದ್ದ ಅವನ ಮೇಲೆ ಹುಲಿ ಬಿತ್ತು ಮೇಲಿನಿಂದ ಹುಲಿಯ ಕಾಟದಿಂದಲೂ ಅಡಿಯಿಂದ ಕೊಡಲಿಯ ಬಾಧೆಯಿಂದಲೂ ಐತ್ತನು ಸಾಕಷ್ಟು ಕಷ್ಟಪಟ್ಟನು.

ಏನೋ ದೈವಗತಿಯಿಂದ ಬೇಟೆಗಾರರ ಮನೆಯಲ್ಲಿದ್ದ ನಾಯಿಯು ಹ್ಯಾಗಾದರೂ ಹೋರಾಡಿ ಹಗ್ಗವನ್ನು ಕಡಿದುಕೊಂಡು ಈ ರಣರಂಗಕ್ಕೆ ಓಡಿಬಂತು. ಹುಲಿಯ ಹಿಂದೆ ಹೋಗಿ ಹುಲಿಯನ್ನು ಬಾಲದಲ್ಲಿ ಕಚ್ಚಿ ಸ್ವಲ್ಪ ಎಳೆದು ಕಚ್ಚಲಿಕ್ಕೆ ಹತ್ತಿತು ಹುಲಿಯು ನಾಯಿಯನ್ನು ಹಿಡಿಯುವದಕ್ಕಾಗಿ ಐತ್ತನನ್ನು ಬಿಟ್ಟು ಹಿಂದಕ್ಕೆ ನಾಯಿಯನ್ನು ಹಿಂಬಾಲಿಸಿಕೊಂಡು ಹೋಯಿತು ಈ ಸಂಗತಿಯು ನಡೆಯುವಾಗ ಜನ ಈ ಸ್ಥಳಕ್ಕೆ ಬಂದು ಈ ಐತ್ತನ ಮುಖವನ್ನೂ ಶರೀರವನ್ನೂ ನೋಡಿ ಕೆಂಪಗಿರುವ ಸ್ಥಿತಿಯಲ್ಲಿ ಕಂಡದ್ದರಿಂದ ಅವನನ್ನು ಹಿಡಿದು ಮನೆಗೆ ತೆಗೆದುಕೊಂಡು ಹೋಗಿ ಹಾಕಿದರು "ಎರಡು ದಾಸರದ ನಂಬಿ ಕೆಟ್ಟ ದಾಸ ಕೆಟ್ಟ" ನೆಂಬಂತೆ ನಾಯಿಯೂ ಪಾರಾಯಿತು, ಐತ್ತನೂ ತಪ್ಪಿಸಿಕೊಂಡನು ಹುಲಿಯು ಹಿಂತಿರಿಗಿ ಮುಂಚೆ ಹೋಗುತ್ತಿದ್ದ ದಾರಿಯಲ್ಲೇ ಹೋಯಿತು ಮುಂಚಿನ ರಣರಂಗವನ್ನು ದಾಟ ಹತ್ತು ಹನ್ನೆರಡು ಅಡಿ ದೂರ ಓಡಲು ದಾರಿಯಲ್ಲಿದ್ದ ದನದ ಕೊಂಬಿನ ಹಾಗೆ ಎಗಬಿಟ್ಟ ಮರದ ಕೊಂಬೆಗಳ ನಡುವೆ ಸಿಕ್ಕಿಬಿತ್ತು ಮುಂದಕ್ಕೂ ಓಡಲು ಅಶಕ್ಯ ಹಿಂದಕ್ಕೆ ಶರೀರವನ್ನು ತೆಗೆಯಲೂ ಉಪಾಯವಿಲ್ಲ ಗುಂಪಿನಲ್ಲಿ ಒಬ್ಬನು ಒಂದು ದೊಡ್ಡ ಕಬ್ಬಿಣದ ಶೂಲದಿಂದ ಬಾಯಿಯಲ್ಲಿ ತಿವಿದನು ಬಾಯಿಂದ ರಕ್ತವು ಸುರಿಯಿತು ಜನರ ಸಂತೋಷವು ಹೆಚ್ಚಿತು ಹುಲಿಯ ದುಃಖವು ನಿಂಗಿಲಾಯಿತು ಎಲ್ಲರೂ ಸಂಕರನಿಗೆ ಮೊರೆಯಿಟ್ಟರು ಸಂಕರನು ಬಂದು ಎರಡು ಗುಂಡುಗಳನ್ನು ಹಾಕಲು ಹುಲಿಯು ಗರ್ಜನೆ ಮಾಡಿ ಪ್ರಾಣಬಿಟ್ಟಿತು ಆದರೆ ಮನುಷ್ಯರಿಗೆ ಹತ್ತಿರ ಹೋಗಲು ಧೈರ್ಯ ಬರಲಿಲ್ಲ ಮಕ್ಕಳು ಕಲ್ಲು ಎಸೆಯಲು ಹತ್ತಿದರು ದೊಡ್ಡವರು ಕೋಲುಗಳಿಂದ ಕಣ್ಣಿಗೆ ಬಾಯಿಗೆ ಕುಟ್ಟಲಿಕ್ಕೆ ಶುರುಮಾಡಿದರು ಹುಲಿಯು ಸತ್ತಿತು ಎಂಬ ಶಬ್ದಗಳು ಇಡೀ ಗ್ರಾಮದಲ್ಲಿ ಮರು ಧ್ವನಿಗಳಾದವು ಎಲ್ಲರಿಗೂ ಸಂತೋಷವಾಯಿತು ಸಂತೋಷದಿಂದ ಸಂಕರನಿಗೆ "ಹುಲಿ ಸಂಕರ" ನೆಂದೂ, ಹಾಸ್ಯದಿಂದ ಐತ್ತನಿಗೆ "ಪಿಲಿ ಐತ್ತ" ನೆಂದೂ ಕರೆಯ ತೊಡಗಿದರು ಹೇಗಾದರೂ ಊರಿನ ಮಾರಿ ಹೋಯಿತು

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಟಿಪ್ಪಣಿ

ಸತ್ತವನು ಮಾತನಾಡಿದ್ದು

ಕಳೆದ ತಿಂಗಳು ೨೨ ನೇ ಸೋಮವಾರ ಕುಣಿಗಲ್ ತಾಲ್ಲೂಕು ಹೇರೂರಿನಿಂದ ಕುಣಿಗಲಿಗೆ ಹೋಗುತ್ತಾ ಇದ್ದೆನು ದಾರಿಯ ಪಕ್ಕದಲ್ಲಿ ಮತ್ತು ಕುಣಿಗಲಿಗೆ ಸಮೀಪವಾಗಿರುವ ಮಕ್ಕಾನಲ್ಲಿ ನೂರಾರು ಜನ ಮುಸಲ್ಮಾನರು ಗುಂಪು ಗುಂಪಾಗಿ ನೆರೆದಿದ್ದರು ಮುಸಲ್ಮಾನರಲ್ಲಿ ಯಾರಾದರೂ ಸತ್ತರೆ ಆ ಶವದ ಹಿಂದೆ ಬಹು ಜನ ಹೋಗಿ ಗೋರಿಮಾಡಿ ಬರುವುದು ಉಂಟಷ್ಟೆ ಅದರಂತೆ ಯಾರೋ ಸತ್ತಿರಬಹುದೆಂದು ನಾನು ಯೋಚಿಸಿ, ಅಲ್ಲಿ ಇದ್ದವರಲ್ಲಿ ಕೆಲವರನ್ನು ವಿಚಾರಿಸಲಾಗಿ ಅವರು ಹೇಳಿದ್ದೇನೆಂದರೆ—ಕಾಲರಾ ರೋಗದಲ್ಲಿ ಈಗ ಮೂರು ತಿಂಗಳ ಸತ್ತ ಬೇಗೂರು ಹಕೀಂ ಬುಡ್ಡಾಸಾಬಿ ಎಂಬುವನು ಈಗ ಗೋರಿಯಲ್ಲಿ ಮಾತಾಡಿದನಂತೆ ಇದನ್ನು ರಸಾಕ್ ಸಾಹೇಬ್ ಎಂಬವನು ಕೇಳಿ ನಮ್ಮೆಲ್ಲರಿಗೂ ಹೇಳಿದನು ಆದ್ದರಿಂದ ನಾವೆಲ್ಲರೂ ಆಶ್ಚರ್ಯದಿಂದ ಇಲ್ಲಿ ಬಂದೆವು ನಾಳೇ ದಿವಸ ಇದನ್ನು ಪರೀಕ್ಷೆ ಮಾಡುತ್ತಾರೆ ಎಂದರು ಆಗ ನಾನು—ಹಕೀಂ ಬುಡ್ಡಾಸಾಬಿಯು ಏನು ಮಾತನಾಡಿದನಂತೆ? ಎಂದು ಕೇಳಲು, ಅವರು ಪ್ರತ್ಯುತ್ತರವಾಗಿ ಹೇಳಿದ್ದೇನೆಂದರೆ—ನನಗೆ ಕೆಲವರು ಮಾಟಮಾಡಿಸಿದರು ಆದ್ದರಿಂದ ನನಗೆ ಒಂದು ಪಾರ್ಶ್ವ ಹೋಗಿಬಿಟ್ಟಿದೆ ನನಗೆ ಪ್ರತ್ಯಹವೂ ಒಪ್ಪೊತ್ತೇ ಅನ್ನ ಸಿಕ್ಕುತ್ತದೆಯಾದ್ದರಿಂದ ನನಗೆ ಹಸಿವು ಆಗುತ್ತದೆ ನನ್ನ ತಾಯಿಯನ್ನು ಕರೆಸಿದರೆ ನಾಳೆ ಎಲ್ಲರ ಎದುರಿಗೂ ಮಾತಾಡುತ್ತೇನೆ ನಂತರ ನನ್ನ ಗೋರಿಗೆ ಮುಚ್ಚಿರುವ ಕಲ್ಲನ್ನು ತೆಗೆದರೆ ಮೇಲಕ್ಕೆ ಎದ್ದು ಬರುತ್ತೇನೆ ಎಂಬದಾಗಿ ಹೇಳಿದನಂತೆ ಎಂದು ಹೇಳಿದರು ಇದರಿಂದ ನನಗೆ ತುಂಬಾ ಆಶ್ಚರ್ಯ ಉಂಟಾಯಿತು ಅಷ್ಟರಲ್ಲೇ ಅಲ್ಲಿದ್ದ ಜನಗಳೆಲ್ಲರೂ ನಾಳೇ ಬರೋಣ ಎಂಬದಾಗಿ ಹೇಳಿಕೊಂಡು ಒಟ್ಟೊಟ್ಟಾಗಿ ಆ ಸ್ಥಳವನ್ನು ಬಿಟ್ಟರು ನಂತರ ನಾನೂ ಹೇರೂರಿಗೆ ಬಂದೆನು ಮಾರನೆಯ ದಿವಸ ಅಲ್ಲಿ ಏನೇನು ನಡೆಯುತ್ತದೋ ನೋಡಬೇಕೆಂಬ ಅಭಿಲಾಷೆಯಿಂದ ಆ ಮಕ್ಕಾನ ಬಳಿಗೆ ಜಾಗ್ರತೆಯಾಗಿ ಹೋದೆನು ಸ್ವಲ್ಪ ಹೊತ್ತಿನಲ್ಲಿಯೇ ಬಡೇ ಸಾಹೇಬರುಗಳೂ, ಫಕೀರು ಸಾಹೇಬರುಗಳೂ ಅಧಿಕವಾಗಿ ಎಲ್ಲರೂ ಅಲ್ಲಿಗೆ ಜಮಾಯಿಸಿದರು ಅವರೆಲ್ಲರೂ ಸೇರಿದ ಸಮಯದಲ್ಲಿ ಏನೇನು ನಡೆಯುವುದೋ ಎಂದು ತುಂಬಾ ಕುತೂಹಲವುಳ್ಳವನಾಗಿದ್ದೆನು ಅಷ್ಟರಲ್ಲೇ ಮುಖ್ಯಮುಖ್ಯರಾದವರು ಸಮೀಪದಲ್ಲಿದ್ದ ಕೆರೆಯಲ್ಲಿ ಕೈಕಾಲುಗಳನ್ನು ತೊಳೆದುಕೊಂಡು ಗೋರಿಯ ಸುತ್ತಲೂ ನಿಂತು—ಹೇ! ಹೋ! ಹಕೀಂ ಬುಡ್ಡಾ ಸಾಬ್ ಎಂಬದಾಗಿ ಗಟ್ಟಿಯಾಗಿ ನಾಲ್ಕೈದು ಸಲ ಕೂಗಿಕೊಂಡರು ಮತ್ತೆ ಕೆಲವರು ಉತ್ತರವೇನಾದರೂ ದೊರಕೀತೋ ಎಂಬ ಆಸೆಯಿಂದ ಆ ಗೋರಿಗೆ ಕಿವಿಗೊಟ್ಟು ಕೇಳಿದರು ನಿಶ್ಶಬ್ದ! ನೀರವ! ಪುನಃ ಕೂಗಿದರು ಅದೇ ಗತಿ ಮತ್ತೊಂದಾವರ್ತಿ ಕೂಗಿದರು ಆದರೆ ಇವರ ದುರದೃಷ್ಟಕ್ಕೆ ಮುಖ್ಯನೋಡನೆ ಬೆರತು ಮಣ್ಣಾಗಿ ಹೋಗುತ್ತಿರುವ ಹಕೀಂ ಬುಡ್ಡಾಸಾಬರಿಗೆ ದಯವೇ ಬರಲಿಲ್ಲ ನಂತರ ಈ ಮಾತನ್ನು ಕಲ್ಪಿಸಿದವನನ್ನು ಸುಳ್ಳು ಕಲ್ಪಿಸಿದನೆಂದು ಬೈಯುತ್ತಲೂ, ಮೂರು ತಿಂಗಳ ಕೆಳಗೆ ಸತ್ತವನು ಈಗ ಮಾತಾಡುತ್ತಾನೆಯೆ? ಗೋರಿಯೊಳಗೆ ಗಾಳಿಹೋಗುವುದಕ್ಕೂ ಅವಕಾಶವಿಲ್ಲ ಅಂಥದ್ದರಲ್ಲಿ ಅವನು ಬದುಕುವ ಬಗೆ ಹೇಗೆ? ಎಂದು ಮಾತನಾಡಿಕೊಳ್ಳುತ್ತಲೂ ತಮ್ಮ ಸಾಮರ್ಥ್ಯವನ್ನು ಹೊಗಳಿಕೊಳ್ಳುತ್ತಲೂ ಹೊರಟುಹೋದರು.

ಎಚ್ಚರದೇ! ಈಗ್ಗೆ ಸುಮಾರು ನೂರಾರು ವರ್ಷಗಳ ಹಿಂದೆ ನಮ್ಮ ದೇಶವು ಬಹಳ ಹೀನಸ್ಥಿತಿಯಲ್ಲಿ ಇತ್ತೆಂದು ಚರಿತ್ರೆಗಳಿಂದ ತಿಳಿಯಬರುತ್ತಿತ್ತು ಈಗ ಇಂಗ್ಲೀಷರ ರಾಜ್ಯಭಾರದಿಂದ ಬಹಳ ಮಟ್ಟಿಗೆ ಉತ್ಕೃಷ್ಟಸ್ಥಿತಿಗೆ ಬಂದಿರುತ್ತೆ ಆದರೂ ಇನ್ನೂ ಪೂರ್ವವಾಸನೆಯು ಸಂಪೂರ್ಣವಾಗಿ ನಾಶವಾಗಿಲ್ಲದಿರುವುದಕ್ಕಾಗಿ ನಾಗರಿಕರೆಲ್ಲರೂ ತುಂಬಾ ವಿಷಾದ ಪಡಬೇಕಾಗಿದೆ

ಕೆ ಎಸ್

ದಕ್ಷಿಣ ಮಹಾರಾಷ್ಟ್ರ ರೇಲ್ವೆಯಲ್ಲಿ ಅತ್ಯವಶ್ಯಕವಾದ ಏರ್ಪಾಡುಗಳು.

ಲಾರ್ಡ್ ಕರ್ಸನ್ ಸಾಹೇಬರವರು ಹಿಂದುಸ್ಥಾನದಲ್ಲಿ ವೈಸ್‌ರಾಯರಾಗಿದ್ದಾಗ ಮೂರು ಮಂದಿ ಯೂರೋಪ್ಯನ್ ಚತುರರನ್ನು ಕರೆದು ತಂದು "ರೇಲ್ವೆ ಬೋರ್ಡ್" ಎಂಬ ಹೊಸ ಕಚೇರಿಯನ್ನು ಹುಟ್ಟಿಸಿದರು. ಹಿಂದುಸ್ಥಾನದೊಳಗಿನ ಯಾವತ್ತು ರೇಲ್ವೆ ಕಂಪನಿಯವರ ಕೆಲಸವೂ ಸರಿಯಾಗಿ ನಡೆಯುವ ಹಾಗೆ ಈ ಬೋರ್ಡಿನವರಿಗೆ ಅಧಿಕಾರಕೊಟ್ಟರು. ಪ್ರಯಾಣಸ್ಥರಿಗೆ ಸಾಧಿಸಿದಷ್ಟು ಅನುಕೂಲವಾಗುವ ಹಾಗೆ ರೇಲ್ವೆ ಗಾಡಿಗಳಲ್ಲಿ ಹೊಸ ಅನುಕೂಲಗಳನ್ನು ಮಾಡಿಡುವ ಅಧಿಕಾರವೂ ಈ ಬೋರ್ಡಿನವರಿಗೆ ಕೊಡಲ್ಪಟ್ಟಿರುತ್ತದೆ ಆದರೆ ಈ ಬೋರ್ಡು ನೇಮಿಸಲ್ಪಟ್ಟು ಮೂರು ವರ್ಷವಾದಾಗ್ಯೂ ಇವರ ಕರ್ತೃತ್ವವೇನೂ ದೃಷ್ಟಿಗೆ ಗೋಚರವಾಗಿರಲಿಲ್ಲ. ಈ ವರ್ಷ ಎರಡು ಮೂರು ತಿಂಗಳಿನ ಈಚೆಯಲ್ಲಿ ಸಂಯುಕ್ತ ಆಧಿಪತ್ಯದ ರೇಲ್ವೆಯಲ್ಲಿ ಪ್ರಯಾಣಸ್ಥರಿಗೆ ರೇಲ್ವೆ ಗಾಡಿಯೊಳಗೇ ಸ್ನಾನ, ಉಪಹಾರ, ಮುಂತಾದ ನಿತ್ಯಕೃತ್ಯಗಳಿಗೆ ಅನುಕೂಲವಾಗುವ ಹಾಗೆ ಹೊಸ ವ್ಯವಸ್ಥೆಯನ್ನು ಮಾಡಿದ ಸುದ್ದಿಯನ್ನು ಕೇಳುತ್ತಿದ್ದೆವು ಆ ಸುದ್ದಿಯನ್ನು ಕೇಳಿ ನಮ್ಮ ದಕ್ಷಿಣ ಮಹಾರಾಷ್ಟ್ರದ ನಿವಾಸಿಗಳು "ನೆರೆಯೋ ಬಾವಿ ನೋಡಿ ನಾಯಿ ಸಂತೋಷ ಪಟ್ಟಂತೆ" ಸಂತೋಷಪಡಬೇಕಾಗಿತ್ತು

ಆದರೆ ನಮ್ಮ ಕನ್ನಡ ಜನರ ಸುದೈವದಿಂದ ದಕ್ಷಿಣ ಮಹಾರಾಷ್ಟ್ರ ರೇಲ್ವೆಯಲ್ಲಿಯೂ ಮೇಲೆ ಹೇಳಿದಂಥಾ ಏರ್ಪಾಡುಗಳು ಮಾಡಲ್ಪಟ್ಟಿರುತ್ತವೆ ಪ್ರತ್ಯಕ್ಷ ಅನುಭವದ ಸಲುವಾಗಿ ಮೇಲ್ ಟ್ರೇನಿನಲ್ಲಿ ಮಾತ್ರ ಊಟ ಉಡಿಗೆಯ ತರ್ತೂದು ಮಾಡಿರುವರು ಈ ಕೆಲಸಕ್ಕೆ ಒಂದು ಸ್ವತಂತ್ರ ಗಾಡಿಯನ್ನು ಹಚ್ಚುವರು, ಅದರಲ್ಲಿ ಅಡಿಗೆ, ಊಟ, ಸ್ನಾನ, ಈ ಮೂರಕ್ಕೆ ಬೇರೆ ಬೇರೆ ಭಾಗಗಳನ್ನು ಗೊತ್ತು ಮಾಡಿದ್ದಾರೆ ಹೆಂಗಸರ ಊಟ, ಸ್ನಾನಾದಿಗಳಿಗಾಗಿ ಬೇರೆ ಭಾಗಗಳನ್ನು ನೇಮಿಸಿರುವರು ಗಂಡಸರು ಹೆಂಗಸರು ಒತ್ತಟ್ಟಿಗೆ ಕೂಡುವ ಅವಶ್ಯವಿಲ್ಲ ಹುಡುಗರ ಸಲುವಾಗಿಯೂ ಕೆಲವು ವ್ಯವಸ್ಥೆಗಳನ್ನು ಮಾಡಿರುವರು. ಊಟಕ್ಕೆ ಹೋಗದೆ ಉಪಹಾರವನ್ನೇ ಅಪೇಕ್ಷಿಸುವವರಿಗೆ ಅದೂ ದೊರೆಯುವುದು ಪುಣೆ, ಬೆಂಗಳೂರು, ಬೆಳಗಾವಿ, ಮುಂತಾದ ಪಟ್ಟಣಗಳಲ್ಲಿ ಉಪಹಾರ ಪದಾರ್ಥಗಳನ್ನು ಮಾಡಿಕೊಡುವ ಗುತ್ತಿಗೇದಾರರನ್ನು ನೇಮಿಸಿದ್ದಾರೆ. ಅವರಿಂದ ತೆಗೆದುಕೊಂಡ ಖಾದ್ಯಗಳನ್ನು ಊಟದ ಗಾಡಿಯಲ್ಲಿ ಸಂಗ್ರಹಿಸಿಡುವರು ಈ ಪ್ರಕಾರವಾದ ಶಿಸ್ತು ಪುಣೆಯಿಂದ ಬೆಂಗಳೂರಿನ ವರೆಗೆ ನಡೆಯುವುದು.

ಕಂಪನಿಯವರು ದಾರಿಕಾರರಿಗೆ ಇದೊಂದು ದೊಡ್ಡ ಉಪಕಾರ ಮಾಡಿದರೆಂದೆನ್ನಬಹುದು ಹಣ ಖರ್ಚುಮಾಡಲಿಕ್ಕೆ ಅನುಕೂಲವಿದ್ದವರು ಸಹ ಇದುವರೆಗೆ ಮಲಮೂತ್ರಗಳನ್ನು ಬಿಗಿಹಿಡಿದು ಅನ್ನಪಾನಗಳಿಲ್ಲದೆ ಉಪವಾಸದಿಂದ ದೂರ ದೂರದ ಪ್ರವಾಸ ಮಾಡಬೇಕಾಗುತ್ತಿತ್ತು ಈ ತೊಂದರೆಗಳನ್ನು ಕಂಪನಿಯವರು ತೆಗೆದುಹಾಕಿದ್ದರಿಂದ ಪ್ರಯಾಣಸ್ಥರ ಸಂಖ್ಯೆಯು ಬಹಳ ಹೆಚ್ಚುವುದಲ್ಲದೆ, ಆಹಾರ ಪದಾರ್ಥಗಳ ಕ್ರಯವಿಕ್ರಯದಲ್ಲಿಯೂ ಅವರಿಗೆ ಒಳಿತಾಗಿ ಲಾಭವಾಗುವುದು. ಆದರೆ ಆ ಪದಾರ್ಥಗಳ ಕ್ರಯವನ್ನು ಹೆಚ್ಚಿಸಿಟ್ಟರೆ ಬಡಬಗ್ಗರಿಗೆ ಅಸಾಧ್ಯವಾಗಬಹುದು, ಸ್ವಲ್ಪ ಮಾತ್ರ ಲಾಭವಿಟ್ಟರೆ ಎಲ್ಲಾ ಪ್ರಕಾರದ ಜನರಿಗೂ ಅನುಕೂಲವಾಗಿ ಗಿರಾಕಿಗಳು ಹೆಚ್ಚುವವು ಈ ಮಾತು ಇಂಗ್ಲಿಷ್ ಕಂಪನಿಯವರಿಗೆ ನಮ್ಮಂಥವರು ಹೇಳತಕ್ಕ ಅವಶ್ಯವಿಲ್ಲ. ಆದರೆ ಕಂಪನಿಯವರು ಅನುಭವ ಬಲ್ಲಂಥಾ ದೇಶೀಯ ಜನರ ಅಭಿಪ್ರಾಯ ಕೇಳಿಕೊಂಡು, ಅವಶ್ಯವಾದ ಅನುಕೂಲತೆಗಳನ್ನು ಮಾಡಬೇಕೆಂದು ಸೂಚಿಸುತ್ತೇವೆ ಅಡಿಗೆಯ ಕೆಲಸಕ್ಕೆ ಕಂಪನಿಯವರು ಬ್ರಾಹ್ಮಣರನ್ನೇ ನೇಮಿಸುವರೆಂದು ತಿಳಿದಿದೆ ಬ್ರಾಹ್ಮಣರ ಅಡಿಗೆಯನ್ನು ಬೇರೆ ಜಾತಿಗಳ ಜನರು ಉಣ್ಣುವರು, ಸರಿ ಆದರೆ ಲಿಂಗವಂತರೂ ಜೈನರೂ ಬ್ರಾಹ್ಮಣರ ಕೈಲಿ ನೀರು ಸಹ ತೆಗೆದುಕೊಳ್ಳುವದಿಲ್ಲ. ದಕ್ಷಿಣ ಮಹಾರಾಷ್ಟ್ರದಲ್ಲಿಯೂ ಮೈಸೂರು ಸೀಮೆಯಲ್ಲಿಯೂ ಲಿಂಗವಂತರ ಜನಸಂಖ್ಯೆಯು ಬಹಳವಾಗಿರುತ್ತದೆ ಅವರ ಅನುಕೂಲಕ್ಕಾಗಿ ಕಂಪನಿಯವರು ಏನು ವ್ಯವಸ್ಥೆಯನ್ನು ಮಾಡಿರುವರೋ ಅಥವಾ ಮಾಡುವರೋ ತಿಳಿದಿಲ್ಲ ಬುದ್ಧಿವಂತರಾದ ಲಿಂಗವಂತರ ಅನುಮತಿಯನ್ನು ಕೇಳಿಕೊಂಡೇ ಈ ವಿಷಯವನ್ನು ನಿರ್ಣಯ ಮಾಡಬೇಕು ಜಾತಿಭೇದವು ಇಂಥಾ ಸಾಮಾಜಿಕ ಕಾರ್ಯಗಳಲ್ಲಿ ಅಪರಿಹಾರ್ಯವಾದಂಥಾ ತೊಂದರೆಗಳನ್ನುಂಟುಮಾಡುತ್ತದೆ

ಆದರೆ ರೇಲ್ ಗಾಡಿಗಳಲ್ಲಿ ಎಲ್ಲಾ ಜಾತಿಗಳ ಜನರೂ ಎಗ್ಗಿಲ್ಲದೆ ಒತ್ತಟ್ಟಿಗೆ ಕೂಡುತ್ತಿರುವುದರಿಂದ ಜಾತಿಭೇದದ ಒಗರು ಕ್ರಮವಾಗಿ ಮುರಿಯುತ್ತಾ ಬಂದಿರುವುದಲ್ಲದೆ, ಭಿನ್ನ ಜಾತಿಗಳಲ್ಲಿ ಸಹಾನುಭೂತಿಯೂ ಮೆಲ್ಲಗೆ ಬೆಳೆಯುತ್ತಲಿದೆ. ಊಟಕ್ಕೆ ಗಾಡಿಯೊಳಗೇ ಅನುಕೂಲವಾದ ಬಳಿಕ ಜಾತಿಭೇದವು ಪೂರಾ ನಷ್ಟವಾಗುವ ಮಾರ್ಗ ಪ್ರಾರಂಭವಾಯಿತೆಂದೆನ್ನಬಹುದು. ಒಳಜಾತಿಗಳಂತೂ ಅತಿ ಸ್ವಲ್ಪಕಾಲದೊಳಗೇ ನಾಮಶೇಷವಾಗುವವು. ಉದಾಹರಣಾರ್ಥವಾಗಿ ರಾಮಾನುಜ ಬ್ರಾಹ್ಮಣರು ಬೇರೆ ಬ್ರಾಹ್ಮಣರ ಕೈಯಿಂದ ಅನ್ನಪಾನಗಳನ್ನು ತೆಗೆದುಕೊಳ್ಳುವುದಿಲ್ಲ. ರೇಲಿನಿಂದ ಪ್ರವಾಸ ಮಾಡುವ ರಾಮಾನುಜರು ಮೊದಲು ಕದ್ದು ಮುಚ್ಚಿ, ಆ ಮೇಲೆ ಬರಬರುತ್ತಾ ತೆರೆದು ರೇಲ್ ಗಾಡಿಯಲ್ಲಿ ಬ್ರಾಹ್ಮಣರ ಅಡಿಗೆ ಉಣ್ಣುವರು. ಹೀಗೆ ಜಾತಿಭೇದದ ಕಸವು ಮುರಿಯುತ್ತಾ ಬಂದ ಹಾಗೆ ಸಹಾನುಭೂತಿಯೂ ವಿಸ್ತಾರವಾಗಿ ಬೆಳೆಯುವುದೆಂಬದಕ್ಕೆ ಸಂದೇಹವಿಲ್ಲ. ಈ ಸುಧಾರಣೆಗೆ ಯಾರೂ ಅಗ್ರಹ ಮಾಡುವ ಸಂಭವವಿಲ್ಲ. ಇದು ತನಗೆ ತಾನೇ ಸದ್ದಿಲ್ಲದೆ ಬೆಳೆಯುತ್ತ ನಡೆಯುವುದು.

ಒಟ್ಟಿಗೆ ರೇಲ್ವೆ ಕಂಪನಿಯವರು ಆರಂಭಿಸಿದ ಸುಧಾರಣೆಯು ಆ ಕಂಪನಿಯವರಿಗೂ ಸ್ವದೇಶದವರಿಗೂ ಪರದೇಶದವರಿಗೂ ಭಿನ್ನ ಭಿನ್ನ ಜಾತಿಗಳಿಗೂ ಎಲ್ಲರಿಗೂ ಸರಿಯಾಗಿ ಪ್ರಯೋಜನಕರವಾಗಿರುತ್ತದೆಂಬುವುದಕ್ಕೆ ಸಂದೇಹವಿಲ್ಲ.—ಕ. ಪ.

ಇಂಡಿಯಾ ದೇಶದ ವೃತ್ತಾಂತಗಳು.

ಬರ್ಮಾ ದೇಶದಲ್ಲಿ ಸೊಳ್ಳೆಗಳ ಕಾಟ ಬಹಳವಾಗಿರುವುದರಿಂದ ಬಿರಾಯಿತಿನ ದನಗಳಿಗೂ ರೈತರು ಸೊಳ್ಳೆ ಪರದೆಗಳನ್ನು ರಾತ್ರಿಹೊತ್ತು ಕಟ್ಟಿ ಕಾಪಾಡಿಕೊಳ್ಳುತ್ತಿದ್ದಾರೆ.

****

ಕಲ್ಕತ್ತೆಯಲ್ಲಿ ಬಾರ್ಟನ್ ಎಂಬುವನು ಮೋಟರ್ ಗಾಡಿಯಲ್ಲಿ ಹೋಗುತ್ತಿದ್ದಾಗ ಚಂದ್ರದೇವನೆಂಬ ಹಿಂದುವು ಅದರ ಕೆಳಗೆ ಸಿಕ್ಕಿ ಮೃತಪಟ್ಟನು. ಅವನನ್ನು ಹಿಡಿದು ದರ್ಯಾಫ್ತು ಮಾಡಿ ಅವನಿಗೆ ಒಂದು ವರುಷದ ಕಠಿಣ ಸಜಾ ಹಾಕಿದರು.

****

ಕಲ್ಕತ್ತಾ ಡಿಸ್ಟ್ರಿಕ್ಟಿನಲ್ಲಿ ೧೩ ಜನರುಳ್ಳ ಒಂದು ಕಳ್ಳರ ಗುಂಪನ್ನು ಪೋಲೀಸಿನವರು ಹಿಡಿದಿರುತ್ತಾರೆ. ಇವರು ಹತ್ತಾರು ಕಡೆ ಕಳವು ಮಾಡಿದ್ದಾರೆಂದು ೧೨೦ ಜನರು ಅವರ ಮೇಲೆ ಸಾಕ್ಷಿ ಕೊಟ್ಟಿದ್ದಾರೆ. ಮೊಕದ್ದಮೆಯು ಇನ್ನೂ ತೀರ್ಮಾನವಾಗಲಿಲ್ಲ

****

ಹಿಂದುಸ್ಥಾನದಲ್ಲಿರುವ ದೇಶೀಯ ಸಂಸ್ಥಾನಗಳ ಪೈಕಿ ೧೦೦ ಚದರ ಮೈಲಿ ವಿಸ್ತಾರಕ್ಕಿಂತಲೂ ಹೆಚ್ಚಾಗಿರತಕ್ಕವು ೨೪೨ ಇರುತ್ತವೆಂತಲೂ, ಈ ಪೈಕಿ ೬೩ ಸಂಸ್ಥಾನಗಳಲ್ಲಿ ರಾಜರು ಬಾಲ್ಯವಯಸ್ಸಿನವರಾಗಿರುವುದರಿಂದ ಅವನ್ನು ಅಲ್ಲಲ್ಲಿರುವ ಇಂಗ್ಲಿಷ್ ಅಧಿಕಾರಿಗಳೇ ರಕ್ಷಿಸುತ್ತಿದ್ದಾರೆಂತಲೂ ತಿಳಿದುಬಂದಿದೆ.

****

ರಂಗೂನ್ ಪಟ್ಟಣದ ಹತ್ತರ ಕಯಾಂಗ್ಟನ್ ಎಂಬ ಊರಿನಲ್ಲಿ ನಾಲ್ವರು ಬರ್ಮಾ ಕಳ್ಳರು ಒಬ್ಬ ಭಾರೀ ಸಾಹುಕಾರನ ಮನೆಗೆ ನುಗ್ಗಿ ಗಂಡ ಹೆಂಡಿರನ್ನು ಹಿಂಸೆಮಾಡಿ ೧ ಲಕ್ಷವೂ ೨೧ ಸಾವಿರ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು ಪೋಲೀಸಿನವರು ಅವರನ್ನು ಹಿಡಿಯುವ ಪ್ರಯತ್ನ ಮಾಡಿದ್ದಾರೆ.

****

ಬಹಳ ಆಜಾನುಬಾಹುವೂ ಕಾಯ ಪುಷ್ಟಿಯೂ ಉಳ್ಳ ಒಬ್ಬ ಪಂಜಾಬಿ ಹೆಂಗಸು ಈಚೆಗೆ ತಿರುವಾಂಕೂರಿಗೆ ಬಂದು, ಅಲ್ಲಿ ಅನೇಕರ ಮೇಲೆ ಕುಸ್ತಿ ಮಾಡಿ ಎಲ್ಲರನ್ನೂ ಕೆಡವಿ ಸೋಲಿಸಿ ಪ್ರಸಿದ್ಧಿ ಪಡೆದಿರುತ್ತಾಳೆ. ಆಕೆಯನ್ನು ನೋಡುವುದಕ್ಕಾಗಿಯೇ ಸಾವಿರಾರು ಜನರು ಬರುತ್ತಿದ್ದಾರೆಂದು ಪ್ರಕಟವಾಗಿದೆ.

****

ಕಾನ್ಪುರಕ್ಕೆ ಇತರ ಕಡೆಗಳಿಂದ ರೈಲಿನ ಮೇಲೆ ಬರುತ್ತಿದ್ದ ಬಟ್ಟೆಬರೆಗಳ ಗಟ್ಟುಗಳನ್ನು ಬಹು ಯುಕ್ತಿಯಿಂದ ಅಪಹರಿಸಿ ಲಕ್ಷಾಂತರ ರೂಪಾಯಿ ವರೆಗೆ ವರ್ತಕರನ್ನು ಮೋಸ ಪಡಿಸುತ್ತಿದ್ದ ಒಂದು ಗುಂಪಿನ ಕಳ್ಳರನ್ನು ಈಗವಾನೇ ಅಲ್ಲಿನ ಪೋಲೀಸಿನವರೂ ರೈಲ್ವೆ ನೌಕರರೂ ಸೇರಿ ಹಿಡಿದಿರುತ್ತಾರೆ.

****

ಲಾಹೋರ್ ಪಟ್ಟಣದಲ್ಲಿ ಪಂಜಾಬಿ ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಹಿಂದುಗಳಿಗೂ ಯೂರೋಪ್ಯನ್ನರಿಗೂ ಪರಸ್ಪರ ವೈಮನಸ್ಯಗಳನ್ನು ಕಲ್ಪಿಸುವಂಥಾ ವಾರ್ತೆಗಳನ್ನು ಕಳೆದ ಏಪ್ರಿಲ್ ೧೯ ರಲ್ಲಿ ಪ್ರಕಟಿಸಿದರೆಂದು ಆ ಪತ್ರಿಕೆಯ ಕರ್ತರಾದ ಜಸವಂತರಾಯ, ಅತ್ತರವಲೇ ಎಂಬುವರನ್ನು ಸರ್ಕಾರದವರು ಹಿಡಿದು ದರ್ಯಾಫ್ತು ಮಾಡುತ್ತಿದ್ದಾರೆ.

****

ರಂಗೂನ್ ಪಟ್ಟಣದ ಭಾರೀ ದನಗಳ ಕೊಟ್ಟಿಗೆಯಲ್ಲಿ ಮ್ಯುನಿಸಿಪಲ್ ಎತ್ತುಗಳಿಗೆ ಪ್ಲೇಗ್ ತಗಲಿದೆ ಇದುವರೆಗೆ ೧೩ ದನಗಳು ಕಾಯಿಲೆಯಾಗಿ ಆ ಪೈಕಿ ೬೨೩ ಮೃತಪಟ್ಟವು. ಕೊಟ್ಟಿಗೆಗಳನ್ನೂ ಮನೆ ಆವರಣಗಳನ್ನೂ ಶುದ್ಧಿ ಮಾಡಿಸಿದರು. ದನಗಳು ಮೊದಲು ಆಹಾರವನ್ನು ತಿನ್ನಲೊಲ್ಲದೆ ಹೋದವು. ತರುವಾಯ ನೆಲದ ಮೇಲೆ ಬಿದ್ದುಕೊಂಡು ಸದ್ದಿಲ್ಲದೆ ಪ್ರಾಣಬಿಟ್ಟವು

****

ಸಿಲೋನ್ (ಲಂಕಾ) ದ್ವೀಪದ ಸಮುದ್ರತೀರದಲ್ಲಿ ಮುತ್ತಿನ ಚಿಪ್ಪುಗಳನ್ನು ಹುಡುಕಿ ತೆಗೆದುಕೊಳ್ಳುವುದನ್ನು ಅಲ್ಲಿನ ಗವರ್ನರವರು ಲಂಡನ್ ಪಟ್ಟಣದ ಒಂದು ಕಂಪನಿಯವರಿಗೆ ಕಂಟ್ರಾಕ್ಟು ವಹಿಸಿದ್ದರಷ್ಟೆ ಈ ಕಂಪನಿಯವರು ಹೋದ ವರುಷ ಅಲ್ಲಿ ತೆಗೆದ ಮುತ್ತಿನ ಚಿಪ್ಪು ಮುತ್ತುಗಳಿಂದ ಎಲ್ಲಾ ಖರ್ಚು ಕಳೆದು ಸುಮಾರು ಎಂಟು ಲಕ್ಷ ರೂಪಾಯಿ ಲಾಭಸಂಪಾದನೆ ಮಾಡಿರುತ್ತಾರೆ

****

ಕಳೆದ ವಾರ ಹಿಂದುಸ್ಥಾನದಲ್ಲಿ ೭,೨೩೦ ಜನರು ಪ್ಲೇಗ್ ತಗಲಿ ಮೃತಪಟ್ಟರು ಈ ಪೈಕಿ ಬೊಂಬಾಯಿ ೨,೭೯೪, ಮಧ್ಯ ಇಂಡಿಯಾ ೩೨೪, ಪಂಜಾಬ್ ೬೬೦, ಮಧ್ಯಪ್ರಾಂತ್ಯಗಳು ೪೧೩, ಸಂಯುಕ್ತ ಆಧಿಪತ್ಯಗಳು ೩೩೧, ಮೈಸೂರು ಸಂಸ್ಥಾನ ೧೪೨, ಬರ್ಮಾ ೮೦, ಬಂಗಾಳಾ ೪೮, ಮದರಾಸ್ ೧೭, ಕಾಶ್ಮೀರ ೧೦, ಹೈದರಾಬಾದು ೮. ಕಳೆದ ವಾರ ಒಟ್ಟು ಪ್ಲೇಗ್ ತಗಲಿದವರ ಸಂಖ್ಯೆ ೩,೧೬೭.

****

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಗಾರ್ಡನ್ ರೀಚ್ ಎಂಬ ಭಾಗದಲ್ಲಿ ಕೂಲೀ ಜನರ ವಾಸದ ಜೋಪಡಿಗಳಿಗೆ ಬೆಂಕಿಬಿದ್ದು ನಾಲ್ವತ್ತು ಜೋಪಡಿಗಳು ಸಾಮಾನ ಸಹಿತ ಸುಟ್ಟುಹೋದವು. ೫೦ ಸಂಸಾರಗಳ ಗಂಡಸರು, ಹೆಂಗಸರು, ಮಕ್ಕಳು ಮನೆಮಾರ ಮೊದಲಾದ ಸರ್ವಸ್ವವನ್ನೂ ಕಳೆದುಕೊಂಡು ಅಲೆಯುತ್ತಿದ್ದಾರೆ ಅಲ್ಲಿನ ಕೆಲವು ಪುಣ್ಯವಂತರು ಅವರಿಗೆ ಅನ್ನ ಬಟ್ಟೆ ಕೊಟ್ಟು ಸಾಕುತ್ತಿರುವಂತೆ ತಿಳಿದುಬಂದಿದೆ

****

ಕಲ್ಕತ್ತಾ ಪಟ್ಟಣದ ವೈದ್ಯ ವಿದ್ಯಾಶಾಲೆಯಲ್ಲಿ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಮನಸ್ತಾಪಗಳುಂಟಾಗಿ ೧೬೦ ಮಂದಿ ವಿದ್ಯಾರ್ಥಿಗಳು ಏಕಕಾಲದಲ್ಲಿ ಪಾಠಶಾಲೆಗೆ ಹೋಗದೆ ನಿಂತುಬಿಟ್ಟಿದ್ದಾರೆ. ಇವರನ್ನು ಅಲ್ಲಿನ ಆಸ್ಪತ್ರೆಯಲ್ಲಿ ರೋಗಿಗಳನ್ನು ಉಪಚರಿಸುವುದಕ್ಕೂ ಔಷಧ ಕೊಡುವುದಕ್ಕೂ ಗೊತ್ತುಮಾಡಿದ್ದರು ಅಲ್ಲಿರುವ ಐನೂರು ಜನ ರೋಗಿಗಳಿಗೆ ಈಗ ಕಾಲಕ್ಕೆ ತಕ್ಕ ಔಷಧ ಚಿಕಿತ್ಸೆಗಳು ದೊರಕದೆ ತೊಂದರೆಯಾಗಿದೆ.

****

ಅಮೃತಸಾರ ಪಟ್ಟಣದಲ್ಲಿ ಹತ್ತಿ, ರೇಷ್ಮೆ, ಕೂದಲು ಮೊದಲಾದವುಗಳಿಂದ ಸನಗುಗಳನ್ನೂ ಬಟ್ಟೆಬರೆಗಳನ್ನೂ ತಯಾರು ಮಾಡುವಂಥಾ ಒಂದು ಸ್ವದೇಶೀ ಕಾರ್ಖಾನೆಯನ್ನು ಸ್ಥಾಪನೆಮಾಡುವರು. ಇದರ ಮೂಲಧನ ೫೦,೦೦೦ ರೂಪಾಯಿ. ಈ ಪೈಕಿ ೨೯,೦೦೦ ರೂಪಾಯಿನ ಷೇರುಗಳನ್ನು ಆ ಕಂಪನಿಯ ಡೈರೆಕ್ಟರುಗಳೇ ವಹಿಸಿಕೊಂಡಿದ್ದಾರೆ. ಉಳಿದ ಷೇರುಗಳು ಬಹುಬೇಗ ಬಿಕರಿಯಾಗುತ್ತಿರುವವು.

****

ರಂಗೂನ್ ಪಟ್ಟಣದ ಸಮುದ್ರತೀರದಲ್ಲಿ ಹಡಗುಗಳ ಉಪಯೋಗಾರ್ಥವಾಗಿ ೧೨ ಲಕ್ಷ ರೂಪಾಯಿ ಮುಟ್ಟ ಕಟ್ಟಲ್ಪಟ್ಟಿರುವ ಲೈಟ್ ಹೌಸ್ ಎಂಬ ಗೋಪುರವು ಕಳಚಿ ಬೀಳುವ ಸಂಭವ ಉಂಟಾಗಿದೆ. ಅದರ ಅಸ್ತಿಭಾರದಲ್ಲಿ ಕಾಣುವ ಒಂದು ಭಾರೀ ಚಪ್ಪಡಿಯು ಇದ್ದದ್ದು ಹಾಗೆಯೇ ಕೆಳಿಕೆ ಹೋಗಿರುವುದು ಈಗ ಅದನ್ನು ತೆಗೆದು ಬೇರೊಂದು ಕಲ್ಲನ್ನು ಸೇರಿಸಬೇಕೆಂದು ಇಂಜನಿಯರುಗಳು ಯೋಚಿಸುತ್ತಿರುವರು

****

ಕಲ್ಕತ್ತಾ ಪಟ್ಟಣದ ಪೋಲೀಸ್ ಕಮಿಷನರಾದ ಮಿ॥ ಹಾಲ್ಲಿಡೆಯವರು ಭಾಗಲ್‌ಪುರದಿಂದ ಕಲ್ಕತ್ತೆಗೆ ಹೋಗುತ್ತಿದ್ದಾಗ ಕಳ್ಳರು ಬಿದ್ದು ಅವರ ಕೈಪೆಟ್ಟಿಗೆಯನ್ನು ಅಪಹರಿಸಿಕೊಂಡು ಹೋದರು ನೂರಾರು ರೂಪಾಯಿನ ನಗನಾಣ್ಯಗಳೂ ನಾನಾ ಮುಖ್ಯವಾದ ಕಾಗದ ಪತ್ರಗಳೂ ಪ್ರಿನ್ಸ್ ಆಫ್ ವೇಲ್ಸ್‌ರವರಿಂದ ಬಹುಮಾನವಾಗಿ ಕೊಡಲ್ಪಟ್ಟಿದ್ದ ಬಹು ಅಮೌಲ್ಯವಾದ ಸಣ್ಣ ಪೆಟ್ಟಿಗೆಯೂ ಎಲ್ಲಾ ಹೋದವು.

****

ಕಳೆದ ಶನಿವಾರ ಅಂಬಾಲಾ ಪಟ್ಟಣದ ಸದ್ದರ್ ಬಜಾರ್ ಎಂಬ ಬೀದಿಯಲ್ಲಿದ್ದ ಧಾನ್ಯವನ್ನು ಬೀಸಿ ಹಿಟ್ಟುಮಾಡುವ ಗಣೇಶದಾಸ್ ಎಂಬ ಭಾರೀ ಕಾರ್ಖಾನೆಗೆ ಬೆಂಕಿಬಿದ್ದು ಸುಮಾರು ಎರಡು ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ಸಾಮಾನು ನಷ್ಟವಾಯಿತು ಕಟ್ಟಡವು ೮೨೦೦ ಅಂತಸ್ತುಗಳದು, ಒಳಗೆ ನಾನಾ ತರದ ಯಂತ್ರಗಳು ಇದ್ದವು ಈ ಪೈಕಿ ಕಟ್ಟಡವಾಗಲಿ ಯಂತ್ರಗಳಾಗಲಿ ಉಳಿಯಲಿಲ್ಲ ಸಾಹುಕಾರರು ಬಹಳ ದುಃಖಕ್ಕೆ ಗುರಿಯಾದರು.

****

ಕಾನ್ಪುರದಲ್ಲಿ ಚಕ್ಕಳದಿಂದ ನಾನಾ ವಸ್ತುಗಳನ್ನು ತಯಾರುಮಾಡುತ್ತಿರುವ ಕಾರ್ಖಾನೆಗಳಲ್ಲಿ ಚಕ್ಕಳಕ್ಕೇ ಕ್ಷಾಮ ಉಂಟಾಗಿ ಕೆಲಸ ನಿಲ್ಲುವಂತಾಗಿದೆ ಕೆಲವು ಸಣ್ಣ ಕಾರ್ಖಾನೆಗಳನ್ನು ಆಗಲೇ ಮುಚ್ಚಿಬಿಟ್ಟಿರು ಇದಕ್ಕೆ ಕಾರಣವೇನೆಂದರೆ, ಹಿಂದುಸ್ಥಾನದಲ್ಲಿ ಸಿಕ್ಕುವ ಚಕ್ಕಳವನ್ನು ಬಹಳವಾಗಿ ಅಮೇರಿಕಕ್ಕೂ ಯೂರೋಪಿಗೂ ರಫ್ತುಮಾಡುವರು. ಈ ರಫ್ತನ್ನು ಸರ್ಕಾರದವರು ನಿಲ್ಲಿಸದೆ ಹೋದರೆ ಆ ಕೆಲಸ ಬೇಗ ಕೆಡುವುದರಲ್ಲಿ ಅಡ್ಡಿಯಿಲ್ಲವೆಂದು ಅನೇಕ ವರ್ತಕರು ಹೇಳಲಾರಂಭಿಸಿದ್ದಾರೆ.

****

ಬರ್ಮಾ ಆಧಿಪತ್ಯದಲ್ಲಿ ಭತ್ತದ ಬೆಳೆ ಆಗುವ ಹದಿನೈದು ಡಿಸ್ಟ್ರಿಕ್ಟುಗಳಲ್ಲಿ ಈ ವರುಷ ಪ್ರವಾಹ ಮುಂತಾದ ಅಸಂಭವಗಳ ದೆಸೆಯಿಂದ ೨,೩೧,೩೮೦ ಎಕರೆ ತರೀ ಜಮೀನು ಹಾಳುಬಿದ್ದಾಗ್ಯೂ ಹೋದ ವರುಷಕ್ಕಿಂತಲೂ ಬಹಳ ಹೆಚ್ಚು ಜಮೀನಿನಲ್ಲಿ ತರೀ ಪಸಲಾಗಿದೆ. ಒಟ್ಟು ೬೯,೯೦,೩೮೪ ಎಕರೆ ಜಮೀನಿನಲ್ಲಿ ಈ ಸಲ ಭತ್ತವನ್ನು ಬೆಳೆದಿದ್ದಾರೆ. ಅಂದರೆ ಹೋದ ವರುಷಕ್ಕಿಂತ ೨,೨೮,೬೩೦ ಎಕರೆಯಷ್ಟು ಹೆಚ್ಚಿತು ಆದ್ದರಿಂದ ಈ ವರುಷ ಅಪಾರವಾದಷ್ಟು ಭತ್ತ ಇತರ ಕಡೆಗಳಿಗೆ ಅಲ್ಲಿಂದ ರಫ್ತಾಗುವುದು

****

ಜುನಾಘಡ ಸಂಸ್ಥಾನದ ಮಾಜಿ ನಾಯಬ್ ದಿವಾನ್ ಪುರುಷೋತ್ತಮರಾಯ ಸುಂದರಜೀ ಝಾಲಾಯವರು ಕಾರಣಾಂತರದಿಂದ ಆ ಸಂಸ್ಥಾನದ ೧,೭೩,೦೦೦ ರೂಪಾಯನ್ನು ದುರುಪಯೋಗ ಪಡಿಸಿದರೆಂದು ಅವರ ಮೇಲೆ ಮೊಕದ್ದಮೆ ಆಗಿತ್ತಷ್ಟೆ. ಅವರ ಮೇಲೆ ಅಪರಾಧ ರುಜುವಾತಾದ್ದರಿಂದ ಆ ಸಂಸ್ಥಾನದ ನ್ಯಾಯಾಧೀಶರು ಅವರ ಆಸ್ತಿಯಲ್ಲಿ ೧,೫೩,೦೦೦ ರೂಪಾಯಿನ ಆಸ್ತಿಯನ್ನು ಸರ್ಕಾರಕ್ಕೆ ತೆಗೆದುಕೊಳ್ಳಬೇಕೆಂತಲೂ, ಇದಲ್ಲದೆ ಅವರು ೨೫,೦೦೦ ರೂಪಾಯಿ ದಂಡವನ್ನು ಕೊಡಬೇಕೆಂತಲೂ ಹುಕುಂ ಮಾಡಿ, ಆ ರೀತಿ ಜಾರಿಯಾಗಿಸಿರುತ್ತಾರೆ.

****

ಬೊಂಬಾಯಿ ಪಟ್ಟಣದಲ್ಲಿ ೮೦ ಕಾರ್ಖಾನೆಗಳಿರುತ್ತವೆ. ಇವುಗಳೆಲ್ಲಾ ಯಂತ್ರಗಳನ್ನು ನಡೆಸುವುದಕ್ಕೆ ಸಾಹುಕಾರರು ಹಬೆಯ ಇಂಜಿನುಗಳನ್ನು ಇಟ್ಟುಕೊಂಡಿದ್ದಾರೆ ಈಗ ಇದಕ್ಕೆ ಪ್ರತಿಯಾಗಿ ವಿದ್ಯುಚ್ಛಕ್ತಿಯನ್ನು ಪ್ರಯೋಗ ಮಾಡಿಕೊಂಡು ಕಸಬುಗಳನ್ನು ಮಾಡಬೇಕೆಂದು ಅವರೆಲ್ಲಾ ಸೇರಿ ಚರ್ಚೆಮಾಡಿ ಇಂಜನಿಯರುಗಳ ಅಭಿಪ್ರಾಯವನ್ನು ತೆಗೆದುಕೊಂಡರು ೫೦ ಸಾವಿರ ಕುದುರೆ ಬಲದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿದರೂ ಅಷ್ಟೂ ಆ ಕಾರ್ಖಾನೆಗಳ ಕೆಲಸಕ್ಕೇ ವಿನಿಯೋಗವಾಗುವುದು. ಇದರಿಂದ ಉತ್ಪತ್ತಿಯೂ ಕಾರ್ಖಾನೆಗಳ ಲಾಭವೂ ತುಂಬಾ ಹೆಚ್ಚುವುವೆಂದು ಗೊತ್ತುಮಾಡಲಾಗಿದೆ.

****

ಉತ್ತರ ದೇಶದಲ್ಲಿ ಕ್ಷಾಮಬಾಧೆಯು ಬಹು ಮಟ್ಟಿಗೆ ಕಡಿಮೆಯಾಗಿದ್ದರೂ ಇನ್ನೂ ಸಂಪೂರ್ಣವಾಗಿ ನಿವಾರಣೆಯಾಗಲಿಲ್ಲ ಕಳೆದ ವಾರ ೧,೦೧,೯೦೦ ಜನರು ಕ್ಷಾಮಪೀಡಿತರಾಗಿ ಸರ್ಕಾರದವರ ಪೋಷಣೆಯಲ್ಲಿದ್ದರು. ಈ ವಾರ ೮೯,೫೦೦ ಜನರು ಕ್ಯಾಂಪುಗಳಲ್ಲಿ ಸೇರಿಕೊಂಡಿದ್ದಾರೆ ಈ ಪೈಕಿ ೧೧,೩೫೦ ಜನರು ಮಾತ್ರ ರಿಲೀಫ್ ಕಾಮಗಾರಿಗಳಲ್ಲಿದ್ದರು. ಉಳಿದವರಿಗೆಲ್ಲಾ ಸರ್ಕಾರದವರು ಸತ್ರ

ಹಾಗುತ್ತಾರೆ. ಈ ಕ್ಷಾಮ ಪೀಡಿತರಲ್ಲಿ ೬೬,೮೦೦ ಜನರು ಬಂ... ಮತ್ತು ೭೮,೩೦೦ ಜನರು ಸಂಯುಕ್ತ ಆಧಿಪತ್ಯಕ್ಕೆ ಸೇರಿದವ... ೩,೦೦೦ ಜನರು ಬೊಂಬಾಯಿ ಆಧಿಪತ್ಯಕ್ಕೆ ಸೇರಿದವರು.

****

...ಕತ್ತಾ ಪಟ್ಟಣದಲ್ಲಿ ಕಮಲಾ ಕೃಷ್ಣಬೋಸ್ ಎಂಬಾತನು ...ಮಿಟ್ ಫಂಡ್ ಎಂಬ ಒಂದು ಕಳ್ಳ ಕಂಪನಿಯನ್ನು ಮಾಡಿ ...ತ್ತು ಮದರಾಸ್ ಮತ್ತು ಮಧ್ಯ ಪ್ರಾಂತ್ಯಗಳಲ್ಲಿ ಪತ್ರಿಕೆಗಳ ಮೂ... ...ಕಟಮಾಡಿ, ೮–೧೦ ವರುಷಗಳೊಳಗಿನ ಜನರನ್ನು ಮೋಸಪಡಿಸಿ ...ಮಾಡಿಕೊಂಡು ಸುಮಾರು ಎರಡು ಲಕ್ಷ ರೂಪಾಯಿ ತನಕ ...ಡಿದನೆಂದು ಈತನನ್ನು ಕಲ್ಕತ್ತೆಯ ಪೋಲೀಸಿನವರು ಕಳೆದ ...ಬಟನಿಂದ ಹಿಡಿದು ರಾಜಮಾಂಧರಿಗೆ ದರ್ಯಾಫ್ತಿ ಬಗ್ಗೆ ಕರೆ...ದು ಹೋಗಿದ್ದಾರೆ. ಈಚೆಗೆ ಈತ ಏರ್ಪಡಿಸಿದ ಕಂಪನಿಯನ್ನು ...ಮದರಾಸಿನಲ್ಲಿ ಕೆಲವರು ಅದೇ ತರದ ೨೦೦ ನಿಧಿಗಳನ್ನು ಮಾ...ಡಿದ್ದಾರೆ. ಇವುಗಳ ಗತಿ ಏನಾಗುವುದೋ ಮುಂದೆ ತಿಳಿಯುವು... ಕಲ್ಕತ್ತೆಯ ಬಾತ್ಮಿದಾರರು ಬರೆದಿದ್ದಾರೆ.

****

...ಕತ್ತಾ ಪಟ್ಟಣದ ಜಾಯಿಂಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ...ನರೇಂದ್ರನಾಥ...ದೇವ ಎಂಬ ಮ್ಯಾಜಿಸ್ಟ್ರೇಟರು ಕಳೆದ ...ಒಂದು ಮೊಕದ್ದಮೆ ದರ್ಯಾಫ್ತಿ ಮಾಡುತ್ತಿದ್ದಾಗ್ಗೆ ಅವ... ಲಾಯರು ಮೊಕದ್ದಮೆಯನ್ನು ವಿವರಿಸುತ್ತಿದ್ದರು. ...ಮಾತಿನಲ್ಲಿ ಮ್ಯಾಜಿಸ್ಟ್ರೇಟರು ತಪ್ಪು ಕಂಡುಹಿಡಿದು, ಬಂಗಾ...ಯಲ್ಲೇ ವಿವರ... ವಿವೇಕವಾದ ಸಂಗತಿಯನ್ನು ಹೇಳಿ ಕೇಳಿ...ದು ಕೇಳಿದರು. ಲಾಯರು ಇಂಗ್ಲಿಷಿನಲ್ಲಿ ಬಿ. ಎಲ್ ಪರೀಕ್ಷೆ ...ಪಾದ್ದರಿಂದ ಬಂಗಾಳಿ ಭಾಷೆಯಲ್ಲಿ ಕೇಳುವುದಕ್ಕಾಗದು ...ನಲ್ಲೇ ವಿವರಿಸು...ವೆನೆಂದು ಹೇಳಿದರು. ಮ್ಯಾಜಿಸ್ಟ್ರೇಟರು ...ಳಿದ್ದನ್ನು ಕೇಳದೆ ...ಹೋದರು. ಆಗ ಲಾಯರು ಬಿಟ್ಟುಗೊಂಡು ...ನಿಂದ ಹೊರಟು ...ದರು. ಮ್ಯಾಜಿಸ್ಟ್ರೇಟರು ತರುವಾಯ ...ಕ್ಷತಿಯನ್ನು ...ವಿಚಾರಿಸಿ, ಅಪರಾಧಿಗೆ ವಿರೋಧವಾಗಿ ಜಡ್ಜ ...ಕೊಟ್ಟರು.

****

...ರೋಡಾ ಸಂಸ್ಥಾನದ ಗಾಯಕವಾಡಿ ಮಹಾರಾಜರವರು ಪತ್ನಿ ...ಸಹಿತ ಕಳೆದ ...ಂಗಳಲ್ಲಿ ಶೀಮೆಯಿಂದ ಹಿಂತಿರುಗಿ... ...ಬರಬೇಕಾ... ...ಸಾವಕಾಶವಾದದ್ದಕ್ಕೆ ಕಾರಣವೇನೆಂದರೆ, ...ಸ್ಕಾಟ್‌ಲೆಂಡ್ ಸೇರಿದ ಇವರ್ನೆಸ್ ಪಟ್ಟಣದಲ್ಲಿ ಪತ್ನಿ ...ಯ ಮೋಟಾರ್ ಗಾಡಿಯಲ್ಲಿ ಕುಳಿತು ಬಹು ವೇಗವಾಗಿ ...ಹೋಗುವಾಗ ಒಂದ ಸಣ್ಣ ಸಂದಿನ ತಿರುವಿನಲ್ಲಿ ಎದುರಿಗೆ ...ಬಂದ ಮೋಟಾರ್ ಗಾಡಿಯು ವೇಗವಾಗಿ ಎದುರಿಗೆ ಬಂದು ಎರ...ಡಕ್ಕೂ ಡಿಕ್ಕಿ ಹೊಡೆಯಿತು. ಆ ಗಾಡಿಯು ಮುರಿದು ಚೂ... ಅದರಲ್ಲಿ ಕುಳಿತಿದ್ದ ಇಬ್ಬರು ಗಂಡಸರೂ ಒಬ್ಬ ಹೆಂಗಸೂ ...ಎಸೆಯಲ್ಪಟ್ಟು ಒಂದು ಬಚ್ಚಲಲ್ಲಿ ಬಿದ್ದುಬಿಟ್ಟರು. ಒಬ್ಬ... ಆ ಹೆಂಗಸಿಗೂ ಸ್ವಲ್ಪ ಜಖಂ ಆಯಿತು. ಆದರೆ ಮಹಾರಾ... ಮಹಾರಾಣಿಯವರಿಗಾಗಲಿ ಸ್ವಲ್ಪವೂ ಅಪಾಯವಾಗಲಿಲ್ಲ. ಮಹಾರಾಜರವರು ಆ ಎದುರು ಗಾಡಿಯವರ ಮೇಲೆ ಅಲ್ಲಿನ ...ನಲ್ಲಿ ಫಿರ್ಯಾದು ಮಾಡಿದ್ದಾರೆ. ಈ ಮೊಕದ್ದಮೆ ತೀರ್ಮಾ...ವಾದ ಹೊರತು ಇವರು ...ದುಸ್ಥಾನಕ್ಕೆ ಬರುವಹಾಗಿಲ್ಲ.

****

...ಕ್ಷಿಣ ದೇಶಕ್ಕೆ ಸೇರಿದ ಮದರಾಸ್ ಆಧಿಪತ್ಯ, ಕೊಡಗು, ...ರು, ತಿರುವಾಂಕೂರು, ಕೊಚ್ಚಿ, ಈ ಭಾಗಗಳ ವಿಸ್ತೀರ್ಣ ...ಎಷ್ಟು ಕಾಡುಗಳಿವೆ, ಆ ಕಾಡುಗಳಲ್ಲಿ ಕಳೆದ ವರುಷ ಆದ ...ವೆ ಏನು ಎಂಬೀ ಸಂಗತಿಗಳನ್ನು ಕೆಳಗಿನ ಪಟ್ಟಿಯಿಂದ ತಿಳಿ...ಬಹುದಾಗಿದೆ —

	ಒಟ್ಟು ವಿಸ್ತೀರ್ಣ ಚ. ಮೈ	ವ್ಯಕಿ ಕಾಡು ಚ ಮೈ	ಉತ್ಪತ್ತಿ ರೂ.
...ಸ್ ಆಧಿಪತ್ಯ	೯೩,೫೯೦	೧೯,೭೨೬	೭೮,೩೦,೫೪೭
...ಡಕೇಮ	೧,೫೮೧	೫೭೭	೧,೯೬,೭೩೬
...ರು ಸಂಸ್ಥಾನ	೨೯,೪೧೩	೩,೬೬೬	೧೯,೭೮,೭೫೦
...ಕೂರು ,,	೭,೧೨೯	೭,೭೬೫	೬,೩೮,೫೭೩
...ಚ್ಚಿ ಸಂಸ್ಥಾನ	೧,೩೬೧	೭೦೫	೮,೮೬,೦೩೭

...ಈ ಪಟ್ಟಿಯಿಂದ ಮದರಾಸ್ ಆಧಿಪತ್ಯದ ಕಾಡಿನಲ್ಲಿ ಪ್ರತಿ ...ಗೂ ವರುಷಕ್ಕೆ ಒಂದಾಣೆಯಂತೆಯೂ, ಕೊಡಗು ಸೀಮೆಯ ...ಲ್ಲಿ ೬ ಆಣೆ ೯ ಪೈನಂತೆಯೂ, ಮೈಸೂರು ಸಂಸ್ಥಾನದ ಕಾಡಿ... ...ಆಣೆ ೧೮ ಪೈಸಂತೆಯೂ, ತಿರುವಾಂಕೂರಿನ ಕಾಡಿನಲ್ಲಿ ೧ ...ಪೈ ಸಂತೆಯೂ, ಕೊಚ್ಚಿ ಸಂಸ್ಥಾನದ ಕಾಡಿನಲ್ಲಿ ೧೩ ಆಣೆ ...ಸಂತೆಯೂ ಉತ್ಪತ್ತಿಯಾಗಿರುವದೆಂದು ಗೊತ್ತಾಗುತ್ತದೆ.

ವಿದೇಶ ವರ್ತಮಾನಗಳು.

—✦—

...ಡಿವೋಸ್ಟಾಕಿನಲ್ಲಿರುವ ಯೆಹೂದ್ಯ ಪ್ರಜೆಗಳನ್ನೆಲ್ಲಾ ಜಪಾನ ...ಅಲ್ಲಿಂದ ಓಡಿಸಿಬಿಡುತ್ತಿದ್ದಾರೆಂದು ಅಲ್ಲಿನ ಪತ್ರಿಕೆಯು ತಿಳಿ...ಸು.

****

...ವೆ ಅಂಡ್ರು ಕಾರ್ನೆಗಿ ಎಂಬ ಪ್ರಸಿದ್ಧ ಕೋಟ್ಯಾಧೀಶ್ವರನು ...ಸೇರಿದ ತಂಪೀ ಪಟ್ಟಣದ ವಿದ್ಯಾನಿಲಯಕ್ಕೆ ಒಂದು ಪುಸ್ತಕ ...ಲಯವನ್ನು ಕಟ್ಟಿಸಿ ಕೊಡುತ್ತೇನೆಂದಾಗಿ ವಾಗ್ದಾನ ಮಾಡಿ ಅದಕ್ಕಾಗಿ ೫,೦೦೦ ರೂಪಾಯಿ ಧರ್ಮ ಕೊಟ್ಟನು.

****

ಅಮೇರಿಕದ ಕೆಲವು ಸಂಸ್ಥಾನಗಳಲ್ಲಿ ಹೋದ ತಿಂಗಳು ಅಪೂ...ವಾದ ಬಿರುಗಾಳಿ ಬೀಸಿ ನಂಟು ಅಂಗುಲ ಹಿಮಗಡ್ಡೆಗಳು ಭೂಮಿ... ಮೇಲೆ ಸುರಿದವು. ಸಾವಿರಾರು ಎಕರೆಗಳ ತಿವಿಯಾನಗಳಲ್ಲಿ ಮಾಡಿದ್ದ ಬೆಳೆಗಳೂ ಹಣ್ಣು ಹಂಪಲ ತೋಟಗಳೂ ಹಾಳಾದವು. ಅನೇಕ ವರ್ತಕರಿಗೂ ರೈತರಿಗೂ ತುಂಬಾ ನಷ್ಟವಾಯಿತು.

****

ರಷ್ಯಾ ರಾಜ್ಯದ ಸೆಂಟ್ ಪೀಟರ್ಸ್ ಬರ್ಗ ಪಟ್ಟಣದಲ್ಲಿ ೬೦ ಸಾವಿರ ವಿದ್ಯಾರ್ಥಿಗಳೂ ಇತರರೂ ವಿದ್ಯಾನಿಲಯದಲ್ಲಿ ಸಭೆ ಸೇರಿ ಗವರ್ನಮೆಂಟನ್ನು ತಲೆಕೆಳಗು ಮಾಡಬೇಕೆಂದು ಗೊತ್ತು ಮಾಡಿಕೊಂಡರು. ವಿದ್ಯಾನಿಲಯದ ಬಾಗಿಲು ಮುಚ್ಚಲ್ಪಟ್ಟಿದೆ. ಅದೇ ಪಟ್ಟಣದಲ್ಲಿ ಕಳೆದ ೨೭ ನೆ ತಾ ನಡೆದ ಒಂದು ಕ್ರೂರ ಕೃತ್ಯಕ್ಕಾಗಿ ಸರ್ಕಾರದವರು ೨೩ ಜನರನ್ನು ಹಿಡಿದು ಕತ್ತು ಕಡಿದುಹಾಕಿಸಿದರು.

****

ಅರೇಬಿಯಾಕ್ಕೆ ಸೇರಿದ ಅಜೇರ್ ಎಂಬ ಡಿಸ್ಟ್ರಿಕ್ಟಿನಲ್ಲಿ ಬೆನಿಬಾರ್ ಎಂಬ ಜನರಿಗೂ ತುರ್ಕಿ ಸೈನಿಕರಿಗೂ ದೊಡ್ಡ ಕದನಗಳಾದವೆಂತಲೂ, ತುರ್ಕಿ ಸೈನಿಕರ ಪೈಕಿ ೧೦೦ ಮಂದಿ ಕೊಲ್ಲಲ್ಪಟ್ಟರೆಂತಲೂ, ೬೦ ಜನರು ಗಾಯಪಟ್ಟರೆಂತಲೂ, ಅರಬ್ಬಿಯವರ ಕಡೆ ೨೦೦ ಜನಕ್ಕಿಂತಲೂ ಹೆಚ್ಚಾಗಿಯೇ ನಷ್ಟಪಟ್ಟರೆಂತಲೂ, ಆದರೂ ಕಡೆಯಲ್ಲಿ ತುರ್ಕಿ ಸೈನಿಕರನ್ನು ಅವರು ಸೋಲಿಸಿ ಓಡಿಸಿಬಿಟ್ಟರೆಂತಲೂ ತಿಳಿದುಬಂದಿದೆ.

****

ಅಮೇರಿಕದಿಂದ ಅಟ್ಲಾಂಟಿಕ್ ಸಿಟಿಯಿಂದ ಭೂಖಂಡವನ್ನು ಸೇರುವುದಕ್ಕೆ ವಿದ್ಯುಚ್ಛಕ್ತಿಯ ರೈಲು ಹಾಕಲ್ಪಟ್ಟಿದೆ. ಈ ರೈಲ್ ಗಾಡಿಯು ಆ ಅಂತರಾಳದ ಸೇತುವೆಯ ಮೇಲೆ ವೇಗವಾಗಿ ಬರುತ್ತಿದ್ದಾಗ ಕಂಬಿ ತಪ್ಪಿ ೩೦ ಆಳುದ್ದ ನೀರಿದ್ದ ಸಮುದ್ರಭಾಗದಲ್ಲಿ ಮಗುಚಿಕೊಂಡಿತು. ಈ ಅನಾಹುತದಿಂದ ಸುಮಾರು ಎಪ್ಪತ್ತು ಪ್ರಯಾಣಿಕರು ಮೃತಪಟ್ಟರು. ಇದುವರೆಗೆ ೫೦ ಶವಗಳನ್ನು ನೀರಿನಿಂದ ಮೇಲಕ್ಕೆ ಹಾಕಿ, ಉಳಿದ ಹೆಣಗಳನ್ನು ಹುಡುಕುತ್ತಿದ್ದಾರೆ.

****

ತುರ್ಕಿಗೆ ಸೇರಿದ ಆಸ್ಯಾಖಂಡದ ಭಾಗದಲ್ಲಿ ತುರ್ಕಿ ಸರ್ಕಾರದವರು ಪಾರ್ಸಿ ಪ್ರಜೆಗಳನ್ನು ನಾನಾ ಪ್ರಕಾರವಾಗಿ ಹಿಂಸಿಸುತ್ತಲೂ ಅವರ ಮೇಲೂ ಅವರ ಹೆಂಗಸರ ಮೇಲೂ ತಲೆ ತೆರಿಗೆಗಳನ್ನು ಹಾಕಬೇಕೆಂತಲೂ ಪ್ರಯತ್ನಪಡುತ್ತಿದ್ದಾರೆ. ಹತ್ತಾರು ಸಾವಿರ ಪಾರ್ಸಿ ಜನರು ಈ ಹಿಂಸೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರದವರ ಮೇಲೆ ತಿರುಗಿಬಿದ್ದು ಅಲ್ಲಿರುವ ಇಂಗ್ಲಿಷ್ ರಾಯಭಾರಿಯ ಸಹಾಯವನ್ನು ಅಪೇಕ್ಷಿಸಿದರು. ಇದು ಅಷ್ಟಕ್ಕೇ ಶಮನವಾಗದಿದ್ದರೆ ಪ್ರಜಾ ನೆಮ್ಮದಿಗೆ ಭಂಗ ಉಂಟಾಗಬಹುದೆಂದು ಅಲ್ಲಿನ ಬಾತ್ಮಿದಾರರು ತಂತೀ ವರ್ತಮಾನ ಕೊಟ್ಟಿದ್ದಾರೆ.

****

ರಷ್ಯಾ ರಾಜ್ಯದಲ್ಲಿ ಪ್ರಜಾ ನೆಮ್ಮದಿಗೆ ಭಂಗ ಉಂಟಾಗಿರುವುದರಿಂದ ಹಾಲಿ ಸಾಲಿನ ರಾಜಾದಾಯವು ೨೩ ಕೋಟಿಯೂ ೭೫ ಲಕ್ಷ ರೂಪಾಯಿ ಕಡಿಮೆಯಾಗುತ್ತೆಂತಲೂ ಇದಕ್ಕಾಗಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಖರ್ಚು ಬಾಬನ್ನು ಬಹಳ ಮಟ್ಟಿಗೆ ಕಡಿಮೆ ಮಾಡಲಾರಂಭಿಸಿದ್ದಾರೆಂತಲೂ ತಿಳಿದು ಬಂದಿದೆ. ದಂಗೇ ಕೋರರು ರೈಲ್ ಗಾಡಿಗಳನ್ನೇ ನುಗ್ಗಿ ಲೂಟಿ ಮಾಡಿ, ಮೂರೂವರೆ ಕೋಟಿ ರೂಪಾಯಿ ತನಕ ದೋಚಿಕೊಂಡು ಹೋದರು. ಇದಲ್ಲದೆ ಯುದ್ಧದಲ್ಲಿ ಸೆರೆ ಹಿಡಿಯಲ್ಪಟ್ಟ ರಷ್ಯಾ ಸೈನಿಕರನ್ನು ಜಪಾನಿನವರು ಸಾಕಿದ್ದಕ್ಕೆ ರಷ್ಯಾ ಸರ್ಕಾರದವರು ಜಪಾನ ಸರ್ಕಾರಕ್ಕೆ ಏಳು ಕೋಟಿ ರೂಪಾಯಿ ಪಾವತಿ ಮಾಡಬೇಕಾಗಿರುವುದು.

****

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಹೋದ ವಾರ ಬಹು ಅಪೂರ್ವವೂ ಆಶ್ಚರ್ಯವೂ ಆದ ಕಳ್ಳತನ ನಡೆಯಿತು. ಕಳ್ಳನು ಸೈನ್ಯಾಧಿಪತಿಯಂತೆ ವೇಷ ಹಾಕಿಕೊಂಡು, ಕವಾತು ತೀರಿಸಿಕೊಂಡು ರಾಜಧಾನಿಗೆ ಹೋಗುತ್ತಿದ್ದ ಸರ್ಕಾರಿ ಸೈನ್ಯವನ್ನು ತಡೆದು ನಿಲ್ಲಿಸಿ, ತನ್ನ ಸಂಗಡ ಕರೆದುಕೊಂಡು ಹೋಗಿ ಟವರ್ನ ಹಾಲ್ ಬಂಗಲೆಯನ್ನು ನುಗ್ಗಿ ಪುರಾಧ್ಯಕ್ಷನನ್ನೂ ಖಜಾಂಚಿಯನ್ನೂ ದಸ್ತಗಿರಿ ಮಾಡಿ, ಅವರನ್ನು ಸೈನಿಕರ ವಶವೆ ಸಹಿತ ಜೈಲಿಗೆ ಕಳುಹಿಸಿ, ಖಜಾನೆಯಲ್ಲಿ ಸಿಕ್ಕಿದ ೬,೦೦೦ ರೂಪಾಯಿಯನ್ನು ತಾನು ತೆಗೆದುಕೊಂಡು, ಉಳಿದ ಸೈನಿಕರಿಗೆಲ್ಲಾ ಟವರ್ನ ಹಾಲ್ ಬಂಗಲೆಯ ಸುತ್ತಲೂ ಪಹರೆ ಕೊಡಬೇಕೆಂದು ನೇಮಿಸಿ, ಮೋಟಾರ್ ಕಾರ್ ಎಂಬ ಗಾಡಿಯಲ್ಲಿ ಕುಳಿತು ಹೊರಟು ಹೋದನು. ಈ ಕಳ್ಳನನ್ನು ಹಿಡಿಯಬೇಕೆಂದು ಅಧಿಕಾರಿಗಳು ತುಂಬಾ ಪ್ರಯಾಸಪಡುತ್ತಿದ್ದಾರೆ.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಹೊಸದುರ್ಗದ ತಾಲ್ಲೂಕು ಬೆಲಗೂರಿನಲ್ಲಿ ಗ್ರಾಮಸ್ಥರು ಕಟ್ಟಿಸಿಕೊಟ್ಟಿರುವ ಸ್ಕೂಲ್ ಮನೆಯು ಬಿದ್ದು ಹೋಗುವಂತಿದೆ ಎಂತಲೂ ಸರ್ಕಾರದವರು ಅದನ್ನು ದುರಸ್ತು ಮಾಡಿಸಿ ಬಾಗಲು ಕಿಟಕಿ ಮುಂತಾದ್ದನ್ನು ಇಡಿಸಿಕೊಡಬೇಕೆಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ವಿದ್ಯಾಭ್ಯಾಸದ ಇಲಾಖೆಯವರು ಈ ವಿಷಯಕ್ಕೆ ಗಮನ ಕೊಟ್ಟಾರೆಂದು ನಿರೀಕ್ಷಿಸುತ್ತೇವೆ. ಎಡಿ]

****

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿಗೆ ಸೇರಿದ ಬೋವಿಹಾಳು ಕಸಬಾ ಸಣ್ಣ ಕೆರೆಯೂ ಅಗ್ರಹಾರದ ಹಿರಿ ಕೆರೆಯೂ ತುಂಬಿ ಒಡೆದು ಹೋಗಿರುವುದರಿಂದ ಆ ಗ್ರಾಮಗಳ ಜನ ಜಾನುವಾರುಗಳಿಗೂ ಕೆರೆ ಹಿಂದಣ ಅಚ್ಚುಕಟ್ಟು ಬಾಗಾಯಿತು ಜಮೀನುದಾರರಿಗೂ ತುಂಬಾ ತೊಂದರೆಯಾಗಿದೆ ಎಂತಲೂ ಇವೆರಡನ್ನೂ ಸರ್ಕಾರದವರು ಕೂಡಲೇ ದುರುಸ್ತು ಮಾಡಿಸಬೇಕಾಗಿದೆ ಎಂತಲೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಡೆಪ್ಯುಟಿ ಕಮೀಷನರ್ ಇಂಜನಿಯರ್ ಇಲಾಖೆಯವರೂ ತನಿಖೆಯಿಂದ ಪ್ರಜೆಗಳಿಗೆ ಅನುಕೂಲಪಡಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ.—ಎಡಿ.]

ಕರೆಸ್‌ಪಾಂಡೆನ್ಸ್.

—✦—

ಆತ್ಮಹತ್ಯಕ್ಕೆ ವಿಚಿತ್ರ ಕಾರಣ.

ಅಯ್ಯಾ,

ಅರಸೀಕೆರೆ ತಾಲ್ಲೂಕು ಯಳ್ಳಂಬಳಸೆ ಗ್ರಾಮದ ಕೃಷ್ಣಭಟ್ಟರ ಮಗಳು ಪುಟ್ಟಮ್ಮನೆಂಬಾಕೆಯನ್ನು ಗಂಡನ ಮನೆಯಿಂದ ಕರೆದುಕೊಂಡು ಬಂದಿದ್ದರು. ಈಕೆ ಒಂದು ದಿನ ಬಾಗಿಲು ಸಾರಿಸುತ್ತಾ ಇರುವಾಗ್ಗೆ ಒಬ್ಬ ಕುಟುಮುರವನು ಟುಮುಕಿ ಬಾರಿಸುತ್ತಾ ಎಲ್ಲರ ಮನೆ ಬಾಗಿಲಲ್ಲಿಯೂ ಭಿಕ್ಷ ಎತ್ತಿಕೊಂಡು ಈಕೆ ಮನೆ ಬಾಗಲಿಗೆ ಬಂದು ಸದರಿ ಪುಟ್ಟಮ್ಮನನ್ನು ನೋಡಿ—ಅಮ್ಮಾ, ನಿಮಗೆ ಎಷ್ಟು ಮಕ್ಕಳು? ಎಂದು ಕೇಳಿದನು. ಅದಕ್ಕೆ ಆಕೆ—ಒಬ್ಬನೇ ಮಗನಪ್ಪಾ ಎಂದು ಉತ್ತರ ಕೊಡಲು ಸದರಿ ಕುಟುಮುರವನು—ಅಮ್ಮಾ, ನಿನ್ನ ಮಗನಿಗೆ ೧೬ ನೆ ವರ್ಷ ತುಂಬುವದೂನೂ ಒಂದು ಕಂಟಕವಿದೆ ಎಚ್ಚರವಾಗಿರಿ ಎಂದು ಹೇಳಿ ಹೊರಟುಹೋದನು. ನಂತರ ಸದರಿ ಪುಟ್ಟಮ್ಮನು—ನನ್ನ ಮಗನಿಗೆ ಇನ್ನು ೩ ದಿನಕ್ಕೆ ೧೬ ವರ್ಷ ಪೂರ್ತಿಯಾಗುತ್ತೆ. ನಾನು ಇದ್ದು ಇನ್ನು ಮಗನ ಮರಣವನ್ನು ನೋಡುವದಕ್ಕಿಂತಲೂ ನಾನೇ ಮರಣಹೊಂದುವದು ಲೇಸೆಂದು ದುರಭಿಪ್ರಾಯ ಮಾಡಿಕೊಂಡು, ಯಾರಿಗೂ ತಿಳಿಯದಂತೆ ಹೋಗಿ ಸೆರಗಿಗೆ ಕಲ್ಲು ಕಟ್ಟಿಕೊಂಡು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಾವಿಯಲ್ಲಿ ಬಿದ್ದಳು. ಆಕೆಯ ತಂದೆಯು ಮಗಳು ಸಿಟ್ಟುಮಾಡಿಕೊಂಡು ಗಂಡನ ಮನೆಗೆ ಹೋಗಿರಬಹುದೆಂದು ಯೋಚಿಸಿ ಅಲ್ಲಲ್ಲಿ ಹುಡುಕಿಸುತ್ತಾ ಇದ್ದರು. ಆದರೂ ಸಿಕ್ಕಲಿಲ್ಲ. ನಿನ್ನೆ ದಿನ ಬಾವಿಯಲ್ಲಿದ್ದ ಶವವು ಪತ್ತೆಯಾಯ್ತು. ಈಕೆಯ ತಾಯಿ ತಂದೆಗಳ, ಗಂಡ ಮತ್ತು ಮಗನ ದುಃಖವನ್ನು ಹೇಳಲಶಕ್ಯವಾಗಿದೆ. ಹೆಂಗಸರಿಗೆ ಇಂಥಾ ಕಠಿಣ ಮನಸ್ಸು ಯಾಕೋ! ಒಬ್ಬ ಅಲ್ಪ ಮನುಷ್ಯನ ಮಾತಿಗೋಸ್ಕರ ಪ್ರಾಣತ್ಯಾಗ ಮಾಡಿಕೊಂಡದ್ದಕ್ಕೆ ಬಹಳ ಆಶ್ಚರ್ಯವೂ ವಿಷಾದವೂ ಪಡಬೇಕಾಗಿದೆ. ಬಾತ್ಮಿದಾರ.

ಶಾಸ್ತ್ರ ಕೇಳುವ ಪದ್ಧತಿ.

ಅಯ್ಯಾ,

ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿ ಜೈನರ ನಾಗರಾಜಯ್ಯನವರ ಮನೆಯವರು ಐದಾರು ದಿವಸದಲ್ಲಿ ೭೫ ರೂಪಾಯಿನ ಒಂದು ಗೆಜ್ಜೆ ಸುತ್ತಿದ ನಡುವಿನ ಬೆಳ್ಳಿ ಡಾಬನ್ನು ಕಳೆಕೊಂಡದ್ದಕ್ಕಾಗಿ ಅವರು ಒಬ್ಬ ಜೋಯಿಸರಲ್ಲಿ ಶಾಸ್ತ್ರ ಕೇಳುವಲ್ಲಿ ಅವರು—ಇದು ಒಬ್ಬ ಗಂಡಸಿನ ಕೈಗೆ ಸಿಕ್ಕಿದೆ. ನೀವು ಏನೂ ಅನುಮಾನಪಡಬೇಡಿ. ತಕ್ಷಣವೇ ಸಿಕ್ಕುತ್ತೆ ಎಂದು ಹೇಳಿದರು. ಅನಂತರ ಆ ಮನೆಯವರು ಇನ್ನೊಬ್ಬ ಜೋಯಿಸರ ಬಳಿಗೆ ಹೋಗಿ ಕೇಳುವಲ್ಲಿ ಕಾಯಿಮುಟ್ಟಿಸಬೇಕೆಂತ ಹೇಳಿ ಕಾಯಿ ಹಣ್ಣು ಧೂಪ ಕಾಣಿಕೆ ಫಲಗಳು ಮೊದಲಾದವುಗಳನ್ನು ತರಿಸಿಕೊಂಡು ಕಾಯನ್ನು ಮಂತ್ರಿಸಿ ನೆಲ ಸಾರಿಸಿ ರಂಗವಲ್ಲಿ ಬಿಟ್ಟು ಕಾಯನ್ನು ಮಧ್ಯದಲ್ಲಿ ಇಟ್ಟು ಹೂವು ಪತ್ರೆ ಸಾಮಾನುಗಳಿಂದ ಅಲಂಕರಿಸಿ ಮಾಲು ಚೋರಿಯಾದ ಸ್ಥಳದಲ್ಲಿದ್ದ ಜನರನ್ನೆ ಕರಿಸಿ ಕಾಯನ್ನು ಅವರಿಂದ ಪುರೋಹಿತರು ಮುಟ್ಟಿಸಿದರು. ಕಾಯನ್ನು ಮುಟ್ಟಿಸಿದ್ದರಿಂದ ಮುಟ್ಟಿದವರಿಗೆ ಯಾವದೊಂದು ಅಪಾಯವೂ ಸಂಭವಿಸಲಿಲ್ಲ. ಹೋದ ಪದಾರ್ಥವೂ ಮನೆಯವರಿಗೆ ಸಿಕ್ಕಲಿಲ್ಲ. ಅನಂತರ ಮತ್ತೊಬ್ಬ ಪುರೋಹಿತರನ್ನು ವಿಚಾರಿಸುವಲ್ಲಿ ಅವರು ಹಂಚೀ ಕಡ್ಡಿಯನ್ನೂ ಒಂದು ಧಾರವನ್ನೂ ಸಮಭಾಗವಾಗಿ ಕತ್ತರಿಸಿ ಮೇಲ್ಕಂಡ ಜನಗಳಿಗೆಲ್ಲಾ ಅಂದರೆ ಕಾಯಿ ಮುಟ್ಟಿದವರಿಗೆ ಒಂದು ತುಂಡು ಧಾರವನ್ನೂ ಒಂದು ತುಂಡು ಹಂಚೀ ಕಡ್ಡಿಯನ್ನೂ ಕೊಟ್ಟರು. ಕಡ್ಡಿಯನ್ನೂ ಧಾರವನ್ನೂ ಬೆಳಿಗ್ಗೆ ತರಿಸಿ ಪುರೋಹಿತರು ನೋಡುವಲ್ಲಿ ಅವು ಇದ್ದ ಹಾಗೇ ಸರಿಯಾಗಿದ್ದವು. ಕಳುವಾದ ಪದಾರ್ಥವೇನೋ ಸಿಕ್ಕಲೇ ಇಲ್ಲ. ಪುರೋಹಿತರುಗಳಿಗೆ ಖರ್ಚುಮಾಡಿದ್ದು ೨–೩ ರೂಪಾಯಿ ಆದವು. ಈ ಜನಗಳಿಗೆ ಅಜ್ಞಾನವು ಯಾವಾಗ ನಾಶವಾಗುತ್ತೋ ತಿಳಿಯದು. ಜ್ಞಾನಾಭಿಮಾನಿ.

ಕಳ್ಳತಕ್ಕಡಿ ವರ್ತಕನ ಮೋಸ

ಅಯ್ಯಾ,

ಶಿವಮೊಗ್ಗಾ ಡಿಸ್ಟ್ರಿಕ್ಟು ನಗರದಲ್ಲಿ ಪ್ರತಿ ಭಾನುವಾರವೂ ಸಂತೆ ನಡೆಯತಕ್ಕದ್ದಾಗಿರುತ್ತದೆ. ನಿನ್ನೆ ಭಾನುವಾರವೆಂದರೆ ತಾ. ೨೮ ರಲ್ಲು ಇಲ್ಲಿಗೆ ವ್ಯಾಪಾರದ ಉದ್ಯೋಗಾರ್ಥವಾಗಿ ಬಂದಿದ್ದ ಆಯನೂರ ವಾಸಿ ಲಿಂಗಾಯತರ ಮತಸ್ಥ ಸಂಗಪ್ಪಾ ಬಿನ್ ವೀರಪ್ಪಾ ಎಂಬ ವರ್ತಕನು ಆ ಸಂತೆಯಲ್ಲಿ ಆಲೂಗಡ್ಡೆ ವಗೈರೆ ಜಿನಸುಗಳನ್ನು ಮಾರುತ್ತಾ ಇದ್ದನು. ಅನೇಕ ಜನರು ಸದರಿ ವ್ಯಾಪಾರವನ್ನು ತೆಗೆದುಕೊಂಡು ಹೋಗುತ್ತಲೂ ಇದ್ದರು. ಸದರಿ ವ್ಯಾಪಾರಸ್ಥರಿಗೆ ಈತನು ತಕ್ಕಡಿಯಲ್ಲಿ ಪೇರುಕೊಂಡು ಜಾಸ್ತಿ ಕಲ್ಲು ಎಂತ ಹೇಳಿ ಕಡಿಮೆ ಕಲ್ಲಿನಿಂದ ಸದರಿ ತಕ್ಕಡಿಯಲ್ಲೇ ತೂಕ ಮಾಡಿ ವ್ಯಾಪಾರ ಮಾಡುತ್ತಾ ಇದ್ದ ಕಾಲದಲ್ಲಿ ನಗರ ತಾಲ್ಲೂಕು ರೆವಿನ್ಯು ಜವಾನ ಲಕ್ಕಪ್ಪನು ಆ ಮೋಸ್ಯಾಚಾರವನ್ನು ಕಂಡು ಹಿಡಿದು ತಕ್ಕಡಿ, ಸೇರು ಮತ್ತು ಅಚ್ಚೇರು ಕಲ್ಲು ಮತ್ತು ಸೇರುತೂಕಕ್ಕೆ ಬಂದ ಏಳು ಆಲೂಗಡ್ಡೆಗಳೊಂದಿಗೆ ಶೇಕದಾರರಿಗೆ ರಿಪೋರ್ಟು ಮಾಡಲಾಗಿ ಅವರು ಬಂದು ಮಹಜರು ಮಾಡಿ ಕ್ರಮದಂತೆ ಜರುಗಿಸಿದರು. ಆ ತಕ್ಕಡಿ ಕಲ್ಲುಗಳನ್ನು ಮಹಜರು ಮಾಡುವ ಕಾಲದಲ್ಲಿ ಕಂಡುಬಂದ ವಿಶೇಷ ಸಂಗತಿ ಏನೆಂದರೆ—ತಕ್ಕಡಿಯ ಪೇರು ಒಂದು ರೂಪಾಯಿ ಎರಡಾಣೆ ತೂಕ ಸೇರುಕಲ್ಲಿನ ಮೇಲೆ ಇಪ್ಪತ್ತೆರಡು ರೂಪಾಯಿ ಎಂತ ಅಂಕೆ ಇದ್ದರೂ ಸರಿಯಾಗಿ ತೂಕ ಮಾಡಿದಲ್ಲಿ ಹತ್ತೊಂಭತ್ತು ರೂಪಾಯಿ ಚಿಲ್ಲರೆ ತೂಕವಿತ್ತು. ಸೇರು ಎಂತ ಕೊಟ್ಟ ಏಳು ಆಲೂಗಡ್ಡೆಗಳು ಹದಿನೆಂಟು ರೂಪಾಯಿಗಳ

ತೂಕಮಾತ್ರವಿದ್ದವು ಆತನು ತೂಕಮಾಡುವಾಗ ಜೋಕಿನಿಂದ ಒಂದೊಂದು ಮುಕ್ಕಾಲು ರೂಪಾಯಿ ಮಟ್ಟಿಗೆ ಹೊಡೆದಿದ್ದನು ಬಟ್ಟಿನ ಮೇಲೆ ನೋಡಲಾಗಿ ಸೇರಿಗೆ ಮೂರೇ ಪಾವಾಗಿತ್ತು ಚಿಕ್ಕದಾದ ರೊಟ್ಟಿ ತುಂಡಿನಾಸೆಗೆ ಇಲಿ ಬೋನಿನಲ್ಲಿ ಬೀಳುವಂತೆ ಈತನು ಅಲ್ಪಲಾಭದ ಆಸೆಗಾಗಿ ಅನೇಕ ಬಡಬಗ್ಗರನ್ನು ಕೂಡ ಮೋಸಮಾಡಿ ಕೊನೆಗೆ ಯಾವ ವಿಧವಾದ ಪ್ರಯೋಜನವನ್ನೂ ಹೊಂದದೆ, ಅವಮಾನಕ್ಕೂ ಜನಗಳ ನಿಂದೆಗೂ ಸರ್ಕಾರದವರ ಆಗ್ರಹಕ್ಕೂ ಪಾತ್ರನಾದನಲ್ಲದೆ ಇನ್ನಾವ ವಿಧವಾದ ಕೀರ್ತಿಯನ್ನೂ ಸಂಪಾದನೆ ಮಾಡಲಿಲ್ಲ ಅದರಲ್ಲೂ ಈ ಕ್ಷಾಮದಲ್ಲಿ ಬಡಬಗ್ಗರು ಜೀವನ ಮಾಡುವದೇ ದುಸ್ತರವಾಗಿರುವಲ್ಲಿ ಎಲ್ಲಾ ವರ್ತಕರೂ ಇಂಥಾ ಮೋಸಕೃತ್ಯಗಳನ್ನು ಮಾಡಿದರೆ ಬಡವರ ಗೋಳು ಭಗವಂತನಿಗೇ ಗೊತ್ತು ಇನ್ನು ಮುಂದೆ ಯಾರೂ ಇಂಥಾ ದುಷ್ಟಮಾರ್ಗಗಳನ್ನು ಅನುಸರಿಸದಂತೆ ಭಗವಂತನು ಬುದ್ಧಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ ಇಂಥಾ ಮೋಸಕೃತ್ಯಗಳನ್ನು ನಡಿಸುವಂಥವರಿಗೆ "ಅನ್ಯಾಯಾರ್ಜಿತಂ ವಿತ್ತಂ ಅಸದ್ವ್ಯಯಂ(?) ವಿನಶ್ಯತಿ" ಎಂಬಂತೆ ಫಲಲಭಿಸುತ್ತದೆಯೇ ವಿನಹಾ ಅನ್ಯಥಾ ಇಲ್ಲ

ಪ್ರತ್ಯಕ್ಷದರ್ಶಿ

ವ್ಯಾಕ್ಸಿನೇಟರು ಆರು ತಿಂಗಳಿಂದ ಬರಲಿಲ್ಲ

ಅಯ್ಯಾ,

ಹೊಸದುರ್ಗ ತಾಲ್ಲೂಕು ಬೆಲಗೂರು ಗ್ರಾಮದಲ್ಲಿ ಅಕ್ಟೋಬರ್ ತಿಂಗಳಲ್ಲಿ ಸುಮಾರು ೮-೧೦ ಸಣ್ಣ ಮಕ್ಕಳು ಮೃತಪಟ್ಟರು ಈ ಗ್ರಾಮದಲ್ಲಿ ಜನರು ತಮ್ಮ ಮಕ್ಕಳಿಗೆ ದೇವೀ ಪಂಡಿತನಿಂದ ಸಿಡುಬನ್ನು ಹಾಕಿಸಲು ಭಯ ಪಡುವರು ಇನ್ನು ಕೆಲವರು ತಿಳುವಳಿಕೆ ಉಳ್ಳವರಾಗಿ ತಮ್ಮ ಮಕ್ಕಳಿಗೆ ಸಿಡುಬನ್ನು ಹಾಕಿಸಬೇಕೆಂಬ ಕುತೂಹಲ ಇದ್ದಾಗ್ಯೂ ಸುಮಾರು ಆರು ತಿಂಗಳಿಂದ ಈ ಗ್ರಾಮಕ್ಕೆ ತಾಲ್ಲೂಕಿನಿಂದ ವ್ಯಾಕ್ಸಿನೇಟರು ಬಂದಿಲ್ಲ ಈಗ ಗ್ರಾಮದಲ್ಲಿ ಸುಮಾರು ಮೂವತ್ತು ಹುಡುಗರಿಗೆ ಸಿಡುಬು ಎದ್ದಿದೆ ಕೆಲವರಿಗೆ ಕಣ್ಣು ಮೂಗು ಮೊದಲಾದ ಆಯ ಸ್ಥಳಗಳಲ್ಲೆಲ್ಲಾ ಬಹಳವಾಗಿ ಎದ್ದು ವಿಕಾರವನ್ನು ಮಾಡಿರುತ್ತೆ. ಕೆಲವರು ಗುಣವಾದವರು ಇದೇ ಕಾರಣದಿಂದಲೇ ಸುಮಾರು ೮-೧೦ ಮಕ್ಕಳು ಮೃತರಾದರು ವ್ಯಾಕ್ಸಿನೇಟರು ಯಾವ ಗ್ರಾಮಕ್ಕೆ ಹೋಗಿರಲಿಲ್ಲವೆಂಬ ಸಂಗತಿ ಸರ್ಕಾರದವರ ನಿಗಾ ತಪ್ಪಿದೆ ಎಂದು ತೋರುತ್ತೆ.

ಕೆ ವೆಂಕಟರಾಯಶೆಟ್ಟಿ, ವೆಂಡರ್

ಸ್ಥಳ ಬದಲಾವಣೆಗೆ ಶಕುನ ಕೇಳುವುದು

ಅಯ್ಯಾ,

ಕಡೂರು ತಾಲ್ಲೂಕು ಬಿದ್ರೆ ಸಮ್ಮತು ಉಪ್ಪನಹಳ್ಳಿಯ ಗ್ರಾಮದಲ್ಲಿ ಸುಮಾರು ೩೦ ಮನೆಗಳಿವೆ ಈ ಗ್ರಾಮಸ್ಥರು ತಮಗೆ ಈ ಗ್ರಾಮದಲ್ಲಿ ಶ್ರೇಯಸ್ಸು ಇಲ್ಲವೆಂತಲೂ ಈಚೀಚೆ ಬಹು ಹೀನಸ್ಥಿತಿಗೆ ಬರುತ್ತಿದೆ ಎಂತಲೂ ಊರಿನವರೆಲ್ಲಾ ಸೇರಿ ಆಲೋಚಿಸುವಾಗ್ಗೆ ಸುಮಾರು ೨ ಮೈಲು ಫಾಸಲೆಯಲ್ಲಿರುವ ಬಟ್ಟೀನಹಳ್ಳಿಗೆ ಬಂದಿದ್ದ ಪಾಲ್ಕುರಿಕೆ ಸಿದ್ಧಲಿಂಗಯ್ಯ ಎಂಬ ಒಬ್ಬ ಜಂಗಮಯ್ಯನವರನ್ನು ತಮ್ಮ ಗ್ರಾಮಕ್ಕೆ ಕರಸಿ ಪತ್ತೆಗೆ ತೆಗೆಯಿಸಿ ಕೇಳುವಲ್ಲಿ—ಊರು ಮುಂದೆ ಒಬ್ಬ ರುಷಿ ಓಡಾಡುತ್ತಾನೆ ಜನರಿಗೆ ಅಗೋಚರವಾಗಿದೆ ಊರಿನವರೆಲ್ಲಾ ಈಗ ಇರುವ ಸ್ಥಳವನ್ನು ಬಿಟ್ಟು ಬೇರೇ ಸ್ಥಳದಲ್ಲಿ ಮನೆ ಕಟ್ಟಬೇಕೆಂತಲೂ ಹೇಳಿ ಆತನು ಪತ್ತೆಗೆಯ ಮೂಲಕ ತೋರಿಸಿದ ಉಪ್ಪಹಳ್ಳಿ ಗ್ರಾಮದ ಪೂರ್ವದಿಕ್ಕಿನ ಒಂದು ಹೊಲವನ್ನು ಮಾರೇಕನಿಂದ ೧೦೦ ರೂಪಾಯಿಗೆ ತೆಗೆದುಕೊಂಡಿರುತ್ತಾರೆ ಗ್ರಾಮಸ್ಥರೆಲ್ಲಾ ಸದರಿ ಸ್ಥಳದಲ್ಲಿ ಮನೆ ಕಟ್ಟಬೇಕೆಂದಿರುವರು ಈ ಪತ್ತೆಗೆಯಿಂದ ಗ್ರಾಮಸ್ಥರಿಗೆ ಸುಮಾರು ೩,೦೦೦ ರೂಪಾಯಿಗಿಂತ ಹೆಚ್ಚು ನಷ್ಟವೆಂದು ಹೇಳಬಹುದು

ವೆಂಕಟರಾಯಶೆಟ್ಟಿ, ವೆಂಡರ್

[ಗ್ರಾಮಸ್ಥರು ಶಕುನ ಮನೋಜಯಗಳನ್ನು ವೃಥಾ ಕೇಳಿ ಕಳವಳ ಪಡುವದಕ್ಕಿಂತಲೂ ತಾವೇ ಆಲೋಚಿಸಿ ಮುಂದರಿದು ಕಾರ್ಯಭಾಗ ನಡಿಸುವುದು ಉತ್ತಮ —ಎಡಿ]

ಶಿವಸಮುದ್ರದ ಜಹಗೀರೀ ರೈತರು

ಅಯ್ಯಾ,

ಕೊಳ್ಳೆಗಾಲಂ ತಾಲ್ಲೂಕು ಶಿವಸಮುದ್ರಂ ಜಹಗೀರಿಗೆ ಸೇರಿದ ಸತ್ಯಾಗಾಲಂ ಗ್ರಾಮದ ರೈತರಿಗೆ ಧನಿಗೆರೆ ಅನೇಕಪಟ್ಟ ದೆಸೆಯಿಂದಾದ ಕಷ್ಟನಷ್ಟಗಳೇನೆಂದರೆ — ಈ ಗ್ರಾಮದಲ್ಲಿ ಸರಿಯಾಗಿ ತರೀ ಬೆಳೆಸಾಗಿ ೧೦ ವರುಷಗಳಿಗೆ ಮೇಲಾಗುತ್ತಾ ಇದ್ದರಿಂದ ೬-೭ ಏರುಗಳನ್ನು ಕಟ್ಟಿ ವ್ಯವಸಾಯ ಮಾಡುತ್ತಿದ್ದವರು ಈಗ ಸ್ವಲ್ಪ ಖರ್ಚುಬಟ್ಟು ೧-೨ ಏರನ್ನೇ ಇಟ್ಟರು ಸಾವಿರಾರು ರೂಪಾಯಿ ಲೇವಾದೇವಿ ಮಾಡುತ್ತಿದ್ದವರು ಅದೇ ರೀತಿ ಸಾಲಾ ಮಾಡಿಕೊಂಡು, ಬಾರದಿರದೆಂದು ಸಾಲಕ್ಕೋಸ್ಕರ ಭೂಮಿಗಳನ್ನು ಮಾರಿ ಬದ್ಧಿ ಸಲ್ಲಿಸುತ್ತಾ ಬಂದರು ಈಚೆಗೆ ಮಳೆ ಹೋಗಿ ಬಿಟ್ಟಿದ್ದರಿಂದಲೂ ಏಜಂಟರವರು ನೀರಿಲ್ಲದ್ದರಿಂದ ಬೆಳಸು ಕೆಡವುದೆಂದರೇನು ? ಎಂದು ರೈತರ ರೂಪು ರೂಪು ಅಪ್ಪಣೆ ಕೊಡಿಸಿದ್ದರಿಂದಲೂ ಈಗ ನೀರು ಹೋಗಿಬಿಟ್ಟಿತು ನೀರು ಕೊಡಿಸಿಕೊಡಬೇಕೆಂದು ಜಹಗೀರುದಾರ್ರವರಿಗೆ ಎಲ್ಲರೂ ಸೇರಿ ಖಂಡಿತವಾಗಿ ನೀರು ಕೊಡಿಸುತ್ತಾರೆಂದು ನಂಬಿ, ಒಂದರ್ಜಿಯನ್ನು "ಎಲ್ಲರ ರುಜುಮಾಡಿ ಬರೆದರು ಅದಕ್ಕೆ ಜವಾಬು ಬರಲಿಲ್ಲ ಅನಂತರ ನಿಷ್ಠುರವಾಗಿಯೇ ೮ ದಿವಸ ಪಾಯಿದೆ ಒಳಗೆ ನೀರು ಕೊಡದಿದ್ದರೆ ಕಂದಾಯ ಕೊಡದಿರುವುದು ಅಲ್ಲದೆ ಕ್ರಮಪ್ರಕಾರ ನಡವಳಿಕೆ ನಡಿಸಿದರೆ ನಷ್ಟಕ್ಕೂ ಬಾಧ್ಯರಾಗುತ್ತೀರೆಂತಲೂ ರಿಜಿಸ್ಟರು ಮಾಡಿದ ಅರ್ಜಿಯನ್ನು ಅವರಿಗೇನೇ ಕೊಟ್ಟರು ಅದಕ್ಕೂ ಮೊದಲಿನಂತೆ ಮದ್ರಾಸಿನಲ್ಲೇ ಇದ್ದುಬಿಟ್ಟರೆಂದು ರೈತರು ಬಹಳ ಕಾತರ ಮನಸ್ಕರಾಗಿ ನಿನ್ನೆ ತಿಂಗಳು ತಾ ೨೯ ರಲ್ಲಿ ಕಾಲ್ವೆ ಒಣಗಿಹೋಯಿತು ಪೈರು ಒಣಗುತ್ತೆ ಜಾಗ್ರತೆಯಲ್ಲಿ ನೀರು ಬೇಕು ಎಂದು ಟೆಲಿಗ್ರಾಫ್ ಕೊಟ್ಟರು ಅದಕ್ಕೂ ಕರಲ್(?) ವರಿಗೆ ಜವಾಬೇ ಇಲ್ಲದ್ದರಿಂದ ರೈತರು ಬಹಳ ವ್ಯಸನ ಪಡುತ್ತಾರೆ ಮತ್ತು ಮುಂದೆಯೂ ಕ್ರಮಪ್ರಕಾರ ಕಂದಾಯ ವಸೂಲ್ ಮಾಡುವರೆಂದೇ ಯೋಚಿಸಬೇಕಾಗಿದೆ ಮದ್ರಾಸಿನಿಂದ ಈ ವಳಿಕೆ(?) ೧ ನೆ ತಾ ಏಜಂಟು ಮಾತ್ರಾ ಬೆಳಕವಾಡಿಗೆ ದಯಮಾಡಿಸಿದರಂತೆ. ಮುಂದೇನು ನಡಿಯುವುದೋ ತಿಳಿಯಲಿಲ್ಲ ಈಗ್ಗೆ ಹತ್ತು ವರುಷಗಳ ಕೆಳಗೆ ಧನಿಕರಾಗಿದ್ದವರು ಈಗ ೮ ಮೈಲು ದೂರದಲ್ಲಿರುವ ಕೊಳ್ಳೆಗಾಲಕ್ಕೆ ತಲೆ ಹೊರೆ ಸೌದೆ ಹೊತ್ತು ಜೀವನಮಾಡತಕ್ಕ ಕಾಲ ಪ್ರಾಪ್ತವಾದ ವಿಷಯಕ್ಕೆ ಎಂಥಾ ನಿರ್ದಯಾಳುಗಳು ತಾನೇ ವಿಷಾದಪಡಲಾರರು

ಮರೀಗೌಡ, ಸತ್ಯಾಗಾಲಂ

ಹೆಜ್ಜೇನು ಕೊಯಿದದ್ದು

ಅಯ್ಯಾ,

ತಾರೀಖು ೩೧ ರಲ್ಲಿ ನಾನು ತೀರ್ಥಹಳ್ಳಿ ತಾಲ್ಲೂಕು ಆಗುಂಬೆಗೆ ೩ ಮೈಲಿ ಈಚೆ ಇರುವ ಮಾಲ್ತೇಸರಿ ಎಂಬಲ್ಲಿಗೆ ಕಾರ್ಯಾಂತರದಿಂದ ಒಬ್ಬ ಆಳನ್ನು ಕರೆದುಕೊಂಡು ಹೋಗುತ್ತಿರುವಾಗ ಮಧ್ಯದಾರಿಯಾದ ಹೊಸೂರೆನ್ನುವಲ್ಲಿ ನಮ್ಮ ಊರಿನವನೊಬ್ಬನು ಸಿಕ್ಕಿದನು ನಾನು—ಕೃಷ್ಣಾ, ಎಲ್ಲಿಗೆ ಹೋಗುವಿ ಎಂದು ಕೇಳಿದ್ದಕ್ಕೆ—ಮಾಲ್ತೇಸರಿಗೆ ಹೋಗುತ್ತೇನೆ ಎಂದು ಹೇಳಿದನು ಅದಕ್ಕೆ—ನಾನೂ ಅಲ್ಲಿಗೆ ಹೋಗುತ್ತೇನೆ, ನನ್ನ ಜೊತೆಯಲ್ಲಿ ಬಾ ಎಂದು ಅವನನ್ನು ಸಂಗಡ ಕರೆದುಕೊಂಡು ಮುಂದೆ ಹೋಗುವಾಗ್ಗೆ ಗಿಳಿಗಿನ ಮನೆ ಎಂಬಲ್ಲಿ ಹೆಜ್ಜೇನು ಬಿಡು ಎದ್ದಿತ್ತು ಅದನ್ನು ನೋಡಿ ನನ್ನ ಆಳಿನ ಕೈಲಿ—ಅದು ಏನು ನೋಡಿ ಬಾ ಎಂದಾಗ ಅವನು ಗುರಿಗಿ ಗಿಜರಿನೊಳಕ್ಕೆ ನುಗ್ಗಿ ನೋಡಿ ಬಂದು—ಅಯ್ಯಾ, ಅದು ಹೆಜ್ಜೇನು ಸುಮಾರು ೧೫ ರಷ್ಟು(?) ಇರಬಹುದು ಕೆಳಗೇನೇ ಕಟ್ಟಿದೆ ಎಂದು ಹೇಳಿದನು ನಾನು ಆಗ ಸುಮ್ಮನಿದ್ದು ಮಾಲ್ತೇಸರಿಗೆ ಹೋಗಿ ರಾವ ಕೃಷ್ಣಯ್ಯನವರಲ್ಲಿ ಸ್ವಲ್ಪ ಮಾತನಾಡಿಕೊಂಡು ಹೊರಟೆನು ನನ್ನ ಜೊತೆಯಲ್ಲಿ ಬಂದ ಕೃಷ್ಣ ಎಂಬವನು ಅಂಗಡಿಯಲ್ಲಿ ಸ್ವಲ್ಪ ಸಾಮಾನು ತೆಗೆದುಕೊಂಡು ಕೂಡ್ಲೆ ಹೊರಟನು ಹಿಂದಕ್ಕೆ ಬರುವಾಗ್ಗೆ ಆ ಜೇನು ಕಂಡಲ್ಲಿ ಕೆಲ ತ್ರಿಂಶ(?) ಗರು ಇನಾ ಕಾದಿರುವದನ್ನು ನಾನು ನೋಡಿ—ಎಲಾ ಹುಡುಗರಿರಾ, ಈ ಕಾಲದಲ್ಲಿ ಹೆಜ್ಜೇನು ಉಂಟೇನ್ರೋ! ಎಂದು ಹೇಳಿ ಮನೆಗೆ ೭-೦(?) ಬಂದೆನು ಇದನ್ನೆಲ್ಲಾ ಕೇಳಿದ ನಮ್ಮ ಜೊತೆಯಲ್ಲಿ ಬಂದ ಕೃಷ್ಣನು ತನ್ನ ಮನೆಗೆ ಹೋಗಿ ನೆರೆಹೊರೆ ಮನೆಯವರಾದ ಸೆ ಬೊಮ್ಮಣ್ಣಗೌಡ, ನಂ ಗಿಡ್ಡಣ್ಣಗೌಡ, ಜೈ ಸಿದ್ದಣ್ಣಗೌಡ, ಇವರೇ ಮೊದಲಾದ ೧೪ ಜನರು ಕೂಡಿಕೊಂಡು ಆ ದಿನ ರಾತ್ರಿಯಲ್ಲೇ ಕುಯ್ಯುವದಕ್ಕಾಗಿ ಗಿಳಿಗಿನ ಮನೆ ದಾರೀ ಹಿಡಿದು ಹೋಗವಾಗ್ಗೆ ಹಾಲಕೊಟಗೆ ಎಂಬಲ್ಲಿ ಹತ್ತು ದೊಂದಿಬೇಕು ಎಂದು ಕೇಳಿದ್ದಕ್ಕೆ ಆ ಮನೆಯವರು ಯಾತಕ್ಕೆಂದಾಗ ಆಗುಂಬೆಗೆ ಹೋಗಿ ಒರುವ(?) ದುರದು(?) ಕೆಲಸವಿದೆ ಎಂದು ಹೇಳಿ, ೧೦ ದೊಂದಿಗಳನ್ನು ಮಾಡಿಸಿಕೊಂಡು ಮನೆಯಿಂದ ತಂದಿದ್ದ ಎರಡು ಪಾರಿಗಗಳನ್ನು ತಲೆಗೆ ಕವಚ ಹಾಕಿಕೊಂಡು ಹೊರಟು ಧನಿಕನಿಗೆ ಹಣದ ಮೇಲೇ ಕಣ್ಣಿರುವಂತೆ ಇವರ ಮನಸ್ಸೆಲ್ಲಾ ಜೇನಿನ ಮೇಲೇ ಇದ್ದು, ಜೇನು ಜೇನು ಎಂಬ ಶಬ್ದವನ್ನೇ ಬಾಯಿಯಲ್ಲಿ ಕಾರುತ್ತಾ ಹೋಗಿ ಆ ಜೇನಿರುವ ಹೊಲವನ್ನು ನುಗ್ಗಿ ಸಣ್ಣ ಒಣಿಯೋ ಮಾಡಿಯುದ್ದ(?) ನೀರು ಕಾಲುವೆಯಲ್ಲಿ ಹೋಗಿ ಜೇನು ಕಟ್ಟಿದ್ದ ಮರದ ಹತ್ತಿರಕ್ಕೆ ನುಗ್ಗಿ ಹೋಗುತ್ತಾ ಸೆ ಬೊಮ್ಮಣ್ಣಗೌಡನು ಮುಸುಕುಹಾಕುತ್ತೇನೆಂತ ತುಂಗೆಸೊಪ್ಪು ಮುಕ್ಕಡಕನ ಸೊಪ್ಪು ಮೊದಲಾದ ಹೂವಿಗೆ ಸಂಕಟವೇರುವ ಸೊಪ್ಪನ್ನು ದೊಂದಿಗೆ ಹಾಕಿ ಬೆಂಕಿ ಹಚ್ಚಿ ಮರದ ಹತ್ತಿರಕ್ಕೆ ಹೋಗಿ—ಕೃಷ್ಣಾ, ಜೇನು ಇಲ್ಲೆ ಎಲ್ಲಿ? (ರಾತ್ರಿ ವೇಳೆಯಾದ್ದರಿಂದ) ಆಗೋ ಅಲ್ಲಿ ಬೆಳ್ಳಗೆ ಕಾಣುತ್ತೆ ಎಂದು ಗುರಿಗಿ ಕೋಲನ್ನು ತೋರಿಸಲು, ಇವನು ಅದಕ್ಕೆ ದೊಂದಿ ಹಿಡಿಯುವದಕ್ಕೆ ಮುಂದೆ ಹೆಜ್ಜೆ ಇಡಲು ಮೇಲೆ ಹೇಳಿದ ಮೋರೆ ದನಾಕಾಯುವ ಹುಡುಗರಿಗೆ ನಾನು ಹೇಳಿದ ಕೂಡ್ಲೆ ಯಾರನ್ನೋ ಕರೆದುಕೊಂಡು ಬಂದು ಕುಯ್ದದ್ದರಿಂದ ಜೇನುತುಪ್ಪವು ನೆಲದಲ್ಲಿ ಬಹಳವಾಗಿ ಬಿದ್ದ ಕಾರಣ ಜೇನು ಹುಳಗಳು ಅದಕ್ಕೆ ಮುತ್ತಿಗೆ ಕೊಟ್ಟಿದ್ದವು ಈತನ ಕಾಲು ಜೇನು ಹುಳುಗಳ ಮೇಲೆ ಇಟ್ಟನಾದ ಕಾರಣ ಹುಳುಗಳು ೧೦—೧೫ ರ ವೇಲೆ ಹೊಡೆಯಲು—ಅಯ್ಯೋ, ಅಪ್ಪಾ, ನಡೀರೋ, ಹೊಡೀತಾವೇ, ಸತ್ತೇಕಾಣೆ, ಓಡ್ರೋ, ಎಂದು ಬೊಬ್ಬೆ ಇಡಲು ಪೂರಾ ಎದ್ದು ಬಂದು ಜನಗಳಿಗೆಲ್ಲಾ ಗಾಢವಾದ ೫೪ ಗಳಾದ್ದರಿಂದ ತಲಾ ೧೦—೧೨ ಏಟುಗಳನ್ನು ಪಲಾರಕ್ಕೆ ಕಾರಕಾರವಾಗಿ ಕೊಟ್ಟವು ಇವರು ಜಾಗ್ರತೆಯಾಗಿ ಓಡೋಣವೆಂದರೆ ಗುರ್ಗಿ ಗಿಜರು ಹೋಗಲು ದಾರಿ ಇಲ್ಲ ಸಣ್ಣ ನೀರು ಕಾಲುವೆ ಮಾತ್ರ ಇತ್ತು ಇದರಲ್ಲೇ ಹುಳಗಳೆಲ್ಲಾ ಹೊಡೆದಾಗ ಇವರು ಒಬ್ಬರ ಮೇಲೆ ಒಬ್ಬರು ಬೀಳುತ್ತಾ ಪ್ರಲಾಪಿಸಿದ್ದು—ಮುಂದೆ ನಡೀರೋ, ಓ ಕೃಷ್ಣಾ! ಓಡೆ, ಕಾಲು ಹೋಯ್ತೋ! ಕೈಗೆ ಹೊಡೀತೋ! ಮುಖಕ್ಕೆ ಎರಡು ಹೊಡದವಲ್ಲೋ! ಓ ಗಿಡ್ಡಣ್ಣ, ಓಡೆ, ಅಪ್ಪಾ, ಯಾಕೆ ಶನಿ ಹಿಡಿದು ಬಂದೆನೋ! ಎಂದು ಒಬ್ಬರ ದುಃಖವನ್ನು ಒಬ್ಬರ ಹತ್ತಿರ ಹೇಳುತ್ತಾ ಕೂಗುವಾಗ್ಗೆ ಸಮೀಪದಲ್ಲಿದ್ದ ಕೆಲವು ಮನೆ ಯಜಮಾನರು ಈ ಗುಲ್ಲನ್ನು ನೋಡಿ ಓಡಿ ಬರುವಾಗ್ಗೆ ಇವರು ಗೋಳಾಡುತ್ತಾ ಮಾನ ಹೋಗುವ ಸಂಭವದಲ್ಲಿ ಕಾಲಿಗೆ ಬುದ್ಧಿ ಹೇಳಿದರು ಆಗ ಮುಂದೆ ಬಂದು ಕೆಸರು ಗಳ್ಳದಲ್ಲಿ ಬರುವಾಗ್ಗೆ ಅವರಲ್ಲೊಬ್ಬನು ಗುಂಟಿ ಬಿದ್ದು ಕಾಲು ಬಲ್ಲವನಾದ್ದರಿಂದ ಕರೆಕೊಂಡು ಬಂದು ದವಾ ಸೇರಿದನು ನಂತರ ಎಲ್ಲರೂ ಮನೆಗೆ ಬಂದು ಈಗ ಹುಳುವಿನ ಪೆಟ್ಟಿನಿಂದಾದ ವೈಪರೀತ್ಯಕ್ಕೆ ಚಿಕಿತ್ಸೆಯನ್ನು ಮಾಡಿ ಮಾಡಿಕೊಳ್ಳುತ್ತಾ, ರಾತ್ರಿಗೆ ಹಿಂದಿರುವರು ಇವರು ಇಷ್ಟು ಆತುರ ಪಟ್ಟದ್ದೇತಕ್ಕೆಂದರೆ ದನಾಕಾಯುವ ಹುಡುಗರ ವಶ ನಾನು ಹೇಳಿದ್ದೇ ಕಾರಣ ಗುಲ್ಲಾಯಿತು ಯಾರಾದರೂ ಕುಯ್ದಾರು ಎಂದು ರಾತ್ರಿಯೇ ಬಂದು ಈ ಕಷ್ಟವನ್ನು ಅನುಭೋಗಿಸಿದ್ದು ಯಾವ ಕೆಲಸವನ್ನಾದರೂ ತಾಳ್ಮೆಯಿಂದ ಮಾಡಬೇಕೆಂದು ಈ ದೃಷ್ಟಾಂತದಿಂದ ಪ್ರಸಿದ್ಧವಾಗಿದೆ

ಎನ್ ಎಸ್ ಟ

ವ್ಯಾಕ್ಸಿನೇಟರುಗಳ ಕರ್ತವ್ಯ —೧

ಅಯ್ಯಾ,

ತಮ್ಮ ಅಕ್ಟೋಬರ್ ೨೫ನೇ ತಾ ಪತ್ರಿಕೆಯಲ್ಲಿ ಪ್ರಕಟಪಡಿಸಿದ ಮೊ॥ ಎಚ್ ಕೆಂಪಯ್ಯ, ವ್ಯಾಕ್ಸಿನೇಟರ್, ದೊಡ್ಡಬಳ್ಳಾಪುರ, ಇವರ ವಿಷಯದಲ್ಲಿ ತುಂಬಾ ಸಂತೋಷ ಪಡಬೇಕಾಗಿದೆ ಹೀಗೆಯೇ ಮೈಸೂರು ದೇಶದ ವ್ಯಾಕ್ಸಿನೇಟರುಗಳೆಲ್ಲಾ ತಮ್ಮ ಕೈಲಾಗುವ ಮಟ್ಟಿಗೂ ವ್ಯಾಕ್ಸಿನೇಷನ್ ವಿಷಯಗಳನ್ನು ಪ್ರಕಟಿಸುತ್ತಾ ಬರ ಡುತ್ತೇವೆ ಆದರೆ ಮೇಲ್ಕಂಡವರು ಬರೆದಿರುವ ವಿಷಯ ಪಟೇಲ್ ಶ್ಯಾನುಭೋಗರು ಗ್ರಾಮಾಂತ್ರಗಳಲ್ಲಿ ಮಾರಕ ರೈತರನ್ನೆಲ್ಲಾ ಸಭೆ ಸೇರಿಸಿ ವ್ಯಾಕ್ಸಿನೇಷನ್ ವಿಷಯಗಳನ್ನು ಪಡಿಸಬೇಕೆಂದು ಹೇಳುತ್ತಾರೆ ಈ ಆಲೋಚನೆ ಮಾತ್ರ ಗಿದೆ ಇದು ನಡಿಯುವದು ದುಸ್ತರವಾಗಿದೆ ಮತ್ತು ಪಟೇಲ್ ಶ್ಯಾನುಭೋಗರುಗಳಿಗೆ ವ್ಯಾಕ್ಸಿನೇಷನ್ ವಿಷಯವಾಗಿ ಯಾವ ತಿಳಿದಿರಲಾರದು ಮತ್ತು ವ್ಯಾಕ್ಸಿನೇಷನ್ ಮಾಡಿಸುವದೂ ಸ್ಮಾಲ್ ಪಾಕ್ಸ್ ವಿಷಯದಲ್ಲಿ ಎಲ್ಲಾ ಸಂಗತಿಗಳೂ ಜನರು ಳ್ಳಬೇಕಾಗಿದೆ ಇದಕ್ಕಾಗಿ ವ್ಯಾಕ್ಸಿನೇಟರುಗಳು ಗ್ರಾಮಕ್ಕೆ ಹೋದಾಗ್ಗೆ ಗ್ರಾಮದ ಪಟೇಲ್ ಶ್ಯಾನುಭೋಗರ ಸಹಿತ ಗ್ರಾ ಲ್ಲಾ ಸೇರಿಸಿ (ಸ್ಕೂಲ್ ಇದ್ದರೆ ಸ್ಕೂಲ್ ಉಪಾಧ್ಯಾಯರನ್ನು) ಸ್ಮಾಲ್ ಪಾಕ್ಸ್‌ನ್ನು ಉಪಚಾರಮಾಡುವ ವಿಧಾನ, ಸ್ಮಾಲ್ ಪಾ ಕಡೆಗೆ ಹಬ್ಬದಂತೆ ಮಾಡಬೇಕಾದದ್ದು, ವ್ಯಾಕ್ಸಿನೇಷನ್ ಮಾ ದುಂಟಾಗುವ ಗುಣಗಳು ಈ ವಿಷಯಗಳನ್ನೂ ಮದ್ರಾಸ್ ಇಂಗ್ಲೆಂಡ್ ದೇಶಗಳಲ್ಲಿ ವ್ಯಾಕ್ಸಿನೇಷನ್ ಪದ್ಧತಿಯನ್ನು ಯದ ಮುಂಚೆ ಸ್ಮಾಲ್ ಪಾಕ್ಸಿನಿಂದ ಎಷ್ಟು ಜನ ಸಾಯು ಕಂಡು ಹಿಡಿದು ವ್ಯಾಕ್ಸಿನೇಷನ್ ಪದ್ಧತಿಯನ್ನು ಜಾರಿಗೆ ಎಷ್ಟು ಜನ ಸಾಯುತ್ತಿದ್ದಾರೆ ? ಎಂಬೀ ವಿಷಯಗಳನ್ನು ಮೂಲಕವಾಗಿ ತಿಳಿಯಪಡಿಸಬೇಕು ಮತ್ತು ವ್ಯಾಕ್ಸಿನೇ ಸುವದಕ್ಕೆ ತಕ್ಕ ಪ್ರೋತ್ಸಾಹವನ್ನು ಮಾಡಬೇಕು. ಇ ಲ್ಲಾ ವ್ಯಾಕ್ಸಿನೇಟರ ಕರ್ತವ್ಯವಾಗಿರುತ್ತೆ ಇದಕ್ಕಾಗಿ ಪ ನುಭೋಗರುಗಳಿಗೆ ಜನಗಳನ್ನು ಸೇರಿಸುವದು ಮತ್ತು ರುಗಳಿಗೆ ತಕ್ಕ ಕಾಮ್ಕ್ರಾಕು ಮಾಡುವದು, ಇವುಗಳು ಅವ ವಾಗಿರುತ್ತೆ ಈ ರೀತಿ ನನ್ನ ಸಹೋದರರಾದ ಪ್ರತಿಯೊ ನೇಟರೂ ಪ್ರಯತ್ನಮಾಡುತ್ತಾ ಬಂದಲ್ಲಿ ಈ ಇಲಾಖೆಗೆ ಕೀ ವ್ಯಾಕ್ಸಿನೇಟರುಗಳಿಗೆ ತಕ್ಕ ಗೌರವವೂ ಬರುವದಲ್ಲದೆ ವ್ಯಾಕ್ಸಿನೇಷನ್ ವಿಷಯವಾದ ಅನೇಕ ಸಂಗತಿಗಳು ತಿಳಿಯ

ಗೊಲ್ಲಹಳ್ಳಿ ಕ್ಯಾಂಪ್, ಟಿ ಆರ್ ಗೋಪಿ
ನೆಲಮಂಗಲ ತಾಲ್ಲೂಕು ದೇಸೀ

ವ್ಯಾಕ್ಸಿನೇಟರುಗಳ ಕರ್ತವ್ಯ —೨

ಅಯ್ಯಾ,

ತಮ್ಮ ಅಕ್ಟೋಬರ್ ೨೫ನೇ ತಾ ಪತ್ರಿಕೆಯ ೬ನೇ ದೊಡ್ಡಬಳ್ಳಾಪುರದ ತಾಲ್ಲೂಕು ವ್ಯಾಕ್ಸಿನೇಟರ್ ಎಚ್ ಕೆ ವರು ವ್ಯಾಕ್ಸಿನೇಷನ್ ವಿಷಯವಾಗಿ ಕೆಲವು ವಿಷಯಗಳನ್ನು ತಿಳಿಸಿರುವುದು ನೋಡಲಾಗಿ ಮುಖ್ಯ ಸಿಡುಬಿನಿಂದ ಉಂಟಾಗ ಹಾನಿಯು ಅಂಗಹೀನತೆಗಳನ್ನು ತಿಳಿಸದೆ ಕೂಸುಗಳಿಗೆ ದ ಲಾಗಾಯಿತು ಮೂರು ತಿಂಗಳು ವಯಸ್ಸಿನ ಒಳಗಾಗಿ ವಾ ಮಾಡಿಸಿದ್ದೇ ಆದಲ್ಲಿ ಮುಂದೆ ಸಂಭವಿಸುವ ಕಜ್ಜಿ, ಕರಪಾ ರಿ, ತುರಿಗಳು ಸಂಭವಿಸುವದಿಲ್ಲ ತಾಯಿ ತಂದೆಗಳ ಗರ್ಭ ಕಾರಕಸಂಬಂಧವಾದ ರೋಗಗಳು ತಕ್ಷಣ ಗುಣಪಡಿಸುತ್ತ ದೊಡ್ಡವರು ೫ ೬ ವರುಷಕ್ಕೊಂದಾವರ್ತಿ ವ್ಯಾಕ್ಸಿನೇಷನ್ ಕೊಂಡರೆ ಕೈಕಾಲು, ಕಣ್ಣುಗಳ ಉರಿ ಉಷ್ಣ ಕಜ್ಜಿ ಕರ ಪುರ ಹಲವು ಇಡುಬುಗಳು ಸಂಭವಿಸವೆ, ದೇಹದಲ್ಲಿ ರಕ್ತವು ಆರೋಗ್ಯಸ್ಥಿತಿಗೆ ತರಲು ಯಾವ ಸಂಶಯವಿಲ್ಲವೆಂದು ತಿಳಿ ಸರಿಯಷ್ಟು ಈ ಕಾಯಿಲೆಗಳು ವ್ಯಾಕ್ಸಿನೇಷನ್‌ನಿಂದ ಗುಣ ಯಾವ ಸಂಬಂಧವೂ ಇಲ್ಲ ಖಂಡಿತ ತಿಳಿಯುವದು ವೆ ವ್ಯಾಕ್ಸಿನೇಟರು ಸರಿಯಾದ ವಿಷಯವನ್ನು ತಿಳಿಸದೆ ಬರೆದ ರಿಂದ ನಮ್ಮ ವ್ಯಾಕ್ಸಿನೇಟರುಗಳ ಸಮೂಹಕ್ಕೆ ನಾಚಿಕೆಯು ಮಾಡಿದಂತಾಯಿತು ಮುಖ್ಯ ಇವರು ಪ್ರಜೆಗಳನ್ನು ಪ್ರೋ ಸಲ ಈ ಪ್ರಕಾರ ಬರೆದಂತ ಕಾಣುತ್ತೆ ಇವರು ನಮ್ಮ ವ ಷನಲ್ಲಿರುವ ಯೋಗ್ಯತ ಶಕ್ತಿಯನ್ನು ವಿವರಿಸಿದ್ದರೆ ಪ್ರಜೆ ಷ್ಟು ಅನುಭವವಾಗುತ್ತಿತ್ತು

ವ್ಯಾಕ್ಸಿನೇಷನ್ ಮಾಡಬೇಕಾದ ಅವಶ್ಯವೇನಂದರೆ—ಸ್ಮಾ ದೊಡ್ಡಮ್ಮ ಅಥವ ಸಿಡುಬು, ಮನುಷ್ಯನಿಗೆ ಏಳಲು ನೇಮಕ ಗೊತ್ತಾಗಿರುವದಿಲ್ಲ ಮನುಷ್ಯನ ಜೀವಮಾನದಲ್ಲಿ ಒಂದೆರ ಏಳುವದುಂಟು ಇದು ಎದ್ದಾಗ್ಗೆ ಆಗತಕ್ಕ ನಷ್ಟ ಇಂಥಾದ್ದು ದ್ದು ಎಂದು ಹೇಳಲು ಅಸಾಧ್ಯ ಆದರೆ ಮುಖ್ಯ ಪ್ರಾಣಹಾನಿ, ಗಳು ಕಳೆದುಕೊಳ್ಳುವದು, ಕಿವುಡತನ ಉಂಟಾಗುವದು, ಕೆ ಮಾತು ಉಂಟಾಗುವುದು, ಅಂಗಹೀನತೆಯಾಗುವದು, ಮುಖದ ಯನ್ನು ಕೆಡಿಸುವದು, ಇನ್ನೂ ಅನೇಕ ವಿಧವಾದ ನಷ್ಟಗಳನ್ನು ಉಂಟುಮಾಡಿ ಮನುಷ್ಯನ ಜೀವಮಾನದಲ್ಲಿ ಯಾವ ಕೆಲಸವನ್ನು ಮಾಡಿ ಜೀವಿಸಲು ಮಾರ್ಗವಿಲ್ಲದೆ ಕಷ್ಟಪಡುವಂತೆ ಎಷ್ಟೋ ಜನ ಸಾಕ್ಷಾತ್ತಾಗಿ ಇದ್ದಾರೆ ಇದರ ವಿಷಯದಲ್ಲಿ ಯಾವ ಸಾಕ್ಷಿಯೂ ಗಿರುವದಿಲ್ಲ ವ್ಯಾಕ್ಸಿನೇಷನ್ ಮಾಡಿಸಿದ್ದೇ ಆದಲ್ಲಿ ಸಿಡುಬು ನ್ನೂ ಅದರಿಂದ ಉಂಟಾಗುವ ನಷ್ಟಗಳನ್ನೂ ತಡೆಯಿಸುವ ಶಕ್ತಿ ಟಾಗಿದೆ ಈ ವಿಷಯದಲ್ಲಿ ಅನೇಕ ಸರ್ಕಾರಿ ಪಾಖಲೆಗಳು ಇರು ವ್ಯಾಕ್ಸಿನೇಷನ್ ಮಾಡದೆ ಇರುವಂಥಾ ಒಂದು ವರುಷದ ವಯ ಮಕ್ಕಳಿಗೆ ಸಿಡುಬು ಎದ್ದರೆ ಶೇಕಡ ೧—೨ ಉಳಿಯುವುದು ಕಷ್ಟ ಚಿಕ್ಕವರು ದೊಡ್ಡವರು ಶೇಕಡ ೪೦—೪೫ ಜನವು ಳಿಯುವದಿಲ್ಲ ವ್ಯಾಕ್ಸಿನೇಷನ್ ಮಾಡಿಸುವದರಲ್ಲಿ ಹಾಗಲ್ಲ ನೇಷನ್ ಮಾಡಿದ ಒಂದು ವರುಷದ ವಯಸ್ಸಿನವರಲ್ಲಿ ಸಿಡುಬು ಅಪರೂಪವಾಗಿ ೩—೪ ಜನಗಳಿಗೆ ಏಳಬಹುದು ಚಿಕ್ಕವರು ವರು ಶೇಕಡ ಒಬ್ಬಿಬ್ಬರಿಗೆ ಏಳುವದು ಅಪರೂಪ ಹಾಗೆ ಬಂದಾ ಖಂಡಿತ ಯಾವ ನಷ್ಟಗಳೂ ಆಗಲಾರವು

ವ್ಯಾಕ್ಸಿನೇಷನ್ ಮಾಡಿಸಬೇಕಾದ ಕಾಲ.—ಅಯ್ಯಾ ಪ್ರಜೆ ದಯವಿಟ್ಟು ತಮ್ಮ ಮಕ್ಕಳಿಗೆ ೩ ತಿಂಗಳು ವಯಸ್ಸು ಆಗುವ ಗಾಗಿ ವ್ಯಾಕ್ಸಿನೇಷನ್ ಅಥವಾ ದೇವಿ ಹಾಕಿಸುವುದು ತುಂಬಾ

ಆವರೆ ಆಮೂಬಾಜು ೩ ಮಬೆನಲ್ಲಿ ಉಪದ್ರವೇನಾದರೂ ಇದ್ದಲ್ಲಿ ೧೪ ದಿವಸದ ಕೂಸಿಗೂ ಕೂಡ ದೇವಿ ಹಾಕಿಸಬಹುದು ಹೀಗೆ ಹಾಕಿಸುವದರಿಂದ ಮಕ್ಕಳಿಗೆ ಯಾವ ಕೆಡಕೂ ಉಂಟಾಗುವದಿಲ್ಲ ಹೀಗೆ ನೇರಿ ೨ ವರುಷ ವಯಸ್ಸಾಗುವ ವರೆಗೆ ಮಕ್ಕಳಿಗೆ ಹಲ್ಲು ಮೊಳೆಯುವದರಿಂದ ಜ್ವರ, ಭೇದಿ, ಕೆಮ್ಮು, ವಮನ, ತುರಿ ಕೆಲವು ಕಾಯಿಲೆಗಳು ಸಂಭವಿಸುತ್ತೆ ೬ ತಿಂಗಳೊಳಗಾಗಿಯೇ ಹಾಕಿಸಿಬಿಡುವುದು ತುಂಬಾ ಉತ್ತಮ ಹಾಗೆ ಮಾಡಿಸನೆ ಅನೇಕ ಜನರು ತಮ್ಮ ಮಕ್ಕಳನ್ನು ತಾವಾಗಿಯೇ ಅನ್ಯಾಯವಾಗಿ ಮಾರೀ ಉಪದ್ರಕ್ಕೆ ಆಹುತಿಯಾಗಿ ಒಪ್ಪಿಸಿ ಅದರಲ್ಲಿ ಜೀವ ಉಳಿದಂಥ ಮಕ್ಕಳನ್ನು ಅವರ ಜೀವಮಾನದಲ್ಲಿ ಯಾವ ಕೆಲಸ ಮಾಡಿ ಜೀವಿಸಲು ಮಾರ್ಗವಿಲ್ಲದೆ ತುಂಬ ನಷ್ಟಗಳಿಗೆ ಗುರಿಯಾಗುವ ಇಂಥಾ ಅನೇಕರನ್ನು ಕಣ್ಣಾರ ನೋಡಿಯೂ ಕೂಡ ತಂದೆ ತಾಯಿಗಳೂ ಪೋಷಕರೂ ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಿಸದೆ ಸುಂಮ್ಮನೆ ಉಳ್ಳವರಾಗಿರುವುದು ತುಂಬ ವ್ಯಸನಕರವೇ ಈ ನವನಾಗರೀಕ ಕಾಲದಲ್ಲಿಯೂ ಪ್ರಜೆಗಳು ವ್ಯಾಕ್ಸಿನೇಷನ್ ಪದ್ಧತಿಯನ್ನು ಆಚರಿಸದೆ ಇರುವದು ತುಂಬಾ ನಷ್ಟಕರವಲ್ಲವೇ? ಸಕಲರೂ ಓದುಬರಹ ಬಲ್ಲವರೇ ಎಂದು ಹೇಳಲಸಾಧ್ಯ ಮೇಲ್ಕಂಡ ಪದ್ಧತಿಯನ್ನು ಆಚರಿಸುವವರನ್ನಾದರೂ ನೋಡಿ ಅವರಂತೆ ಇತರರೂ ತಮ್ಮ ಮಕ್ಕಳಿಗೆ ಈ ಉಪದ್ರವನ್ನು ತಪ್ಪಿಸಲು ದೇವಿ ಹಾಕಿಸಿ ಮಕ್ಕಳನ್ನು ಕಾಪಾಡಿಕೊಳ್ಳಬೇಕೆಂದು ಬೇಡುತ್ತೇನೆ

ವೆಂಕಟ ರಾವ್,
ಬೆಂಗಳೂರು ಸಿಟಿ ವ್ಯಾಕ್ಸಿನೇಟರ್

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗಾ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಬಿ. ಎಸ್ ...ಜರಾಯರಿಗೆ ಅಕ್ಟೋಬರ್ ೧೦ ರಿಂದ ೧೫ ದಿನಗಳ ಪ್ರಿವಿಲೆಜ್ ಕೊಟ್ಟಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರಜರಿ ಅ॥ ಕಮಿಷನರು ಪೊಲೀಸ್ ...ಕ್ಟ್ ಆಫಿಸ್ ಛಾರ್ಜನ್ನು ವಹಿಸಿರುವರು

ಬೆಂಗಳೂರು ಡ॥ ಪೊಲೀಸ್ ಸೂಪರಿಂಟೆಂಡೆಂಟ್ ಮೆ॥ ಎಲ್ ...ರಾಯರಿಗೆ ಅಕ್ಟೋಬರ್ ೨೫ ರಿಂದ ಒಂದು ತಿಂಗಳ ಪ್ರಿವಿಲೆಜ್ ಕೊಟ್ಟಿದೆ

ಪೊಲೀಸ್ ಪ್ರೊ॥ ಅ॥ ಸೂಪರಿಂಟೆಂಡೆಂಟ್ ಮೆ॥ ಜೆ ಬಿ ...ಯವರು ಬೆಂಗಳೂರು ಅ॥ ಸೂಪರಿಂಟೆಂಡೆಂಟಾಗಿ ಬದಲಿಸಿರುವರು

ಚಿತ್ರದುರ್ಗದ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ॥ ಆರ್ ರಘು...ಯರಿಗೆ ಸೆಪ್ಟಂಬರ್ ೧ ರಿಂದ ಅರ್ಧ ಸಂಬಳದ ಮೇಲೆ ೧೦ ದಿನ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಕೋಲಾರ್ ಡಿಸ್ಟ್ರಿಕ್ಟ್ ಟ್ರಜರಿ ಪ್ರೊ॥ ಎಕ್ಸ್ಟ್ರಾ ಅ॥ ಕಮಿಷನರ್ ಮೆ॥ ... ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿದೆ

ಮಾಲೂರ್ ಸಬ್ ಡಿವಿಜನ್ ಅ॥ ಕಮಿಷನರು ಕೋಲಾರ್ ಡಿಸ್ಟ್ರಿಕ್ಟ್ ಟ್ರಜರಿ ಛಾರ್ಜನ್ನೂ ವಹಿಸಿರತಕ್ಕದ್ದು

ಮುಂದೆ ಹೇಳುವ ಪ್ರೊಬೆಷನರ ಪರ್ಮನೆಂಟ್ ...ಕ್ಕಂ ಮಾಡಲ್ಪಟ್ಟಿದೆ (೧) ಮೆ॥ ಎಂ ನರಸ್ಸಿಂಹಯ್ಯನವರ — ಸಾಗರದಿಂದ ಕೋಳೆ...ಕ್ಕೆ, (೨) ಮೆ॥ ಎಸ್ ವೆಂಕಟಕೃಷ್ಣಯ್ಯನವರು— ...ನರಸೀಪುರದಿಂದ ಸಾಗರಕ್ಕೆ.

ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ವೈ ಶ್ರೀನಿವಾಸರಾಯರನ್ನು ...ಟೋಬರ್ ೧೬ ರಿಂದ ಪೂರ್ವಸ್ಥಳದಲ್ಲೇ ಸ್ಯಾನಿಟರಿ ಬೆಂಗಳೂರ್ ಇಂಜನಿಯರಾಗಿ ನೇಮಿಸಿದೆ ಆ ತಾರೀಖಿನಲ್ಲಿ ಮೆ॥ ಜೆ ಜೆ ವೈಟ್ಲೆಯವರಿಗೆ ಆ ಕೆಲಸದ ಛಾರ್ಜನ್ನು ವಹಿಸಿದರು.

ಫಾರೆಸ್ಟ್ ಅ॥ ಕನ್ಸರ್ವೇಟರ್ ಮೆ॥ ಜೆ ಜೆ ಮಾಂಟೇರೋಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ

ಮೆ॥ ಪಿ ಎಸ್ ಗೋವಿಂದರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟ್ ...ಆಫಿಸ್ ಛಾರ್ಜನಲ್ಲೇ ಇರತಕ್ಕದ್ದು

ಮೆ॥ ಎ ಎಸ್ ನಂಜುಂಡಯ್ಯನವರನ್ನು ಬೆಂಗಳೂರು ...ರಿಯಾ ಆಸ್ಪತ್ರೆಯಿಂದ ಚಿಕ್ಕಮಗಳೂರು ಸಿವಿಲ್ ಆಸ್ಪತ್ರೆಗೆ ಹಾಕಿದೆ

ಹಾಸನ ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮೆ॥ ಬಿ ರಾಮಸ್ವಾಮೈಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ... ಪ್ರಿವಿಲೆಜ್ ರಜಾ ಕೊಟ್ಟಿದೆ

...ಜದ ಮೇಲಿರುವ ಅ॥ ಕಮಿಷನರ್ ಮೆ॥ ಎಂ ಎ ನಾರಾಯಣಸ್ವಾಮಿ ...ರವರು ಕೊಡೆತ್ಸ್ ಕೆಲಸದ ಮೇಲೆ ಹಾಜರಾಗಿ ಚನ್ನರಾಯಪಟ್ಟಣದ ... ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು

...ರೀಕೆರೆ ಸಬ್ ಡಿವಿಜನ್ ಅ॥ ಕಮಿಷನರ್ ಮತ್ತು ೧ ನೆ ಕ್ಲಾಸ್ ...ಜಿಸ್ಟ್ರೇಟ್ ಮೆ॥ ಕೆ ವೈಲಾರಿರಾಯರು ಕಡೂರ್ ಡಿಸ್ಟ್ರಿಕ್ಟಿನಲ್ಲಿ ...ನಕ್ ಎರಡು ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳ ...ಕ್ಕಿಂತ ಮೇಲೆ ಅಪೀಲ್ ಹಿಡಿದು ತನಿಖೆಮಾಡಿ ತೀರ್ಮಾನಮಾಡುವ ಅಧಿಕಾರವನ್ನು ಚಲಾಯಿಸತಕ್ಕದ್ದು

ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಮೆ॥ ಎಂ ಪಿ ವಿಶ್ವನಾಥರಾಯರಿಗೆ ಕೊಟ್ಟಿದ್ದ ನಾಲ್ಕು ತಿಂಗಳ, ನಾಲ್ಕು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಂಡು, ಸೆಪ್ಟಂಬರ್ ೨೦ ರಲ್ಲಿ ಕೆಲಸದ ಮೇಲೆ ಹಾಜರಾಗಿರುವದರಿಂದ ಅವರು ಉಪಯೋಗಿಸಿಕೊಳ್ಳದ ರಜ ರದ್ದುಮಾಡಿದೆ

ಚಿತ್ರದುರ್ಗದ ಡೆಪ್ಟಿ ಕಮಿಷನರ್ ಮೆ॥ ಎಚ್ ರಾಮಾನುಜೈಯ್ಯಂಗಾರ್ರಿಗೆ ನೊವೆಂಬರ್ ೧ ರಿಂದ ಡಿಸಂಬರ್ ೩೦ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ ರಜಾ ಪೂರೈಸಿದ ಮೇಲೆ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ — ಈ ಸೀಮೆಯಲ್ಲಿ ಒಳ್ಳೇ ಮಳೆಗಳು ಬಂದು ಎಲ್ಲಾ ಕೆರೆಗಳೂ ಕೋಡಿ ಹರಿದು ಬೆಳೆಗಳೆಲ್ಲಾ ಒಳ್ಳೇ ಸ್ಥಿತಿಯಿಂದ ಕೊಯ್ಲಿಗೆ ಬಂದು ರಾಗಿ ರೂಪಾಯಿಗೆ ೨೩—೨೪ ಸೇರಿನಂತೆ ಮಾರುತ್ತಿರುವದರಿಂದ ಸರ್ವರೂ ಆನಂದಭರಿತರಾಗಿ ಮುಂದೆ ಸುಗ್ಗಿಕಾಲದಲ್ಲಿ ೩೦—೩೨ ಸೇರು ರಾಗಿ ಮಾರಬಹುದೆಂದು ಹಾರೈಸುತ್ತಿರುತ್ತಾರೆ — ಇಲ್ಲಿಗೆ ಉಡುಪಿ ಸ್ವಾಮಿಗಳವರ ಸವಾರಿಯು ದಯಮಾಡಿಸಿರುತ್ತೆ ಇಲ್ಲಿನ ಶಿಷ್ಯವರ್ಗದವರಿಂದ ಸೇವಾರ್ಚನಾದಿಗಳು ತೀರಿಸಿಕೊಂಡು ಮುಂದೆ ಬೆಂಗಳೂರು ಪ್ರಾಂತ್ಯ ದಯಮಾಡಿಸುವುದಾಗಿ ತಿಳಿಯಬರುತ್ತೆ

ಗುಬ್ಬಿ — ಗುಬ್ಬಿ ಟವ್ನ ಮುನಿಸಿಪಾಲಿಟಿ ಈ ಗ್ರಾಮದ ಜವಳಿ ಪೇಟೆ, ತಿಗಳರ ಬೀದಿ, ಮಂಡಿ ಬೀದಿ, ನಾಯಕರ ಬೀದಿ, ಈ ಬೀದಿಗಳನ್ನು ಕೆಲವು ಭಾಗಗಳನ್ನೂ ಮುನಿಸಿಪಾಲಿಟಿಗೆ ಸೇರಿಸಿದಂತೆ ತೋರುವದಿಲ್ಲ ಹ್ಯಾಗಂದರೆ, ಈ ಸ್ಥಳಗಳಲ್ಲಿ ಲಾಂದ್ರಗಳು ಇಲ್ಲ ಚರಂಡಿಗಳು ಇಲ್ಲದೆ ನೀರು ನಿಂತು ತುಂಬಾ ತೊಂದರೆ ಆಗುತ್ತೆ ಮತ್ತು ಜಾಡಮಾಲಿಗಳ ಮುಖವೇ ತೋರುವದಿಲ್ಲ ನೌಕರರೇ ಎಲ್ಲಾ ಸಾಕ್ಷೇಬರುಗಳೇ ಹೊರ್ತು ಚಿಲ್ಲರೆ ಇಲ್ಲವೇ ಇಲ್ಲವಾದ್ದರಿಂದ ಯಾರಾದರೂ ದೊಡ್ಡ ಸಾಹೇಬರು ದಯಮಾಡಿಸಿ ನಮ್ಮ ಕಷ್ಟಗಳನ್ನು ಪರಿಹರಿಸಿ ಮುನಿಸಿಪಾಲಿಟಿಗೆ ಈಗಲಾದರೂ ಸೇರಿಸಿಕೊಳ್ಳಬೇಕೇಂಬುವದೇ ನನ್ನ ಪೂರ್ಣ ವಿಜ್ಞಾಪನೆಗಳು ಇಲ್ಲಿನ ಗಲೀಜಿನ ವಿಷಯ ಬರೆಯಲು ಅಸಾಧ್ಯ — ಈ ಸಾರಿ ಗುಬ್ಬಿ ಕೆರೆ ತುಂಬಿ ಇರುತ್ತೆ ಇನ್ನೂ ಗದ್ದೆಗಳನ್ನು ಉತ್ತಲು ಪ್ರಾರಂಭಿಸಿಲ್ಲ ಇಲ್ಲಿನ ಮಾಮೂಲಿ ರೈತರು ನೀರು ಇರುವಾಗ್ಗೆ ಸುಮ್ಮನೆ ಗೂಬೆಗಳಂತೆ ಕಾಲ ಹಾಕುವರು ನೀರು ಕಡಿಮೆಯಾದಾಗ್ಗೆ ಪ್ರಾರಂಭಿಸಿ ವ್ಯಾಜ್ಯಗಳನ್ನಾಡಿ ನಷ್ಟಹೊಂದುವರೇ ಹೊರ್ತು ಚಟುವಟಿಕಸ್ಥರಲ್ಲ ಆದ್ದರಿಂದ ರೈತರೇ ಎಚ್ಚರವಾಗಿ ಜಾಗ್ರತೆ ಉಳುಮೆಯನ್ನು ಪ್ರಾರಂಭಿಸಬೇಕೆಂದು ತೋರುತ್ತೇನೆ

ಹುಂಕೆರೆ — ತರೀಕೆರೆ ತಾಲ್ಲೋಕು ಲಿಂಗದಹಳ್ಳಿಗೆ ಸುಮಾರು ೨ ಮೈಲಿಯಲ್ಲಿರುವ ಹೂಲಿ ತಿಮ್ಮಾಪುರದಲ್ಲಿ ಕಳೆದ ೨೪ ನೆ ತಾ ರಾತ್ರಿ ಒಂದು ಸ್ತ್ರೀಹತ್ಯ ನಡೆಯಿತು ಆ ಸ್ತ್ರೀಯಳ ಹೆಸರು ರುದ್ರಮ್ಮ ಪತಿಹೀನಳು ಒಬ್ಬನೇ ಒಬ್ಬ ಮಗನು ಅವನಿಗೆ ೮—೧೦ ವರುಷ ಅವನೂ ಮನೆಯಲ್ಲಿಲ್ಲ ಅವನು ಕಡೂರು ತಾಲ್ಲೋಕು ಬಳಿಗನೂರಲ್ಲಿ ತನ್ನ ಅಜ್ಜಿಯ ಮನೆಯಲ್ಲಿ ಇದ್ದಾನೆ ರಾತ್ರಿ ವೇಳೆ ಎಲ್ಲರಿಗೂ ನಿದ್ರೆ ಮಳೆ ಸಹ ಧಾರಾರೂಪವಾಗಿ ಸುರಿಯುತ್ತಿದೆ ಶುಕ್ಲಪಕ್ಷವಾದಾಗ್ಯೂ ಚಂದ್ರನು ಮೇಘಾಚ್ಛನ್ನನಾಗಿದ್ದನು ಮನೆಯಲ್ಲಿ ರುದ್ರಮ್ಮ ಒಬ್ಬಳೇ ಒಬ್ಬಳು. ಉತ್ತರ ಕ್ಷಣದಲ್ಲಿ ತನಗೆ ವ್ಯತ್ಯಾಸವಾಗುವದನ್ನು ಹೇಗೆ ತಿಳಿದಾಳು! ಎಂದಿನಂತೆ ಎಲ್ಲರಂತೆ ಬೆಳಿಗ್ಗೆ ಸುಖವಾಗಿ ಏಳುತ್ತೇನೆಂದೇ ಭಾವನೆ ಸುಖನಿದ್ರೆ ಮಾಡುತ್ತಿದ್ದಾಳೆ ದಿನ ಮಳೆ ಘೋರವಾಗಿ ಸುರಿಯುತ್ತಿತ್ತು ಈ ಮಧ್ಯೆ ರಾತ್ರಿ ಸಹ ಕಾಲಕ್ಕೆ ಎರಗಿದಂತೆ ಅವಳ ಕುತ್ತಿಗೆಯ ಮುಂಭಾಗಕ್ಕೆ ಹರಿತವಾದ ಚಾಕು ನುಗ್ಗಿ ಪಾರಾಗಿ ಆ ಕಡೆ ಹೊರಟು ಹಿಂದಕ್ಕೆ ಬಂದಿತು ಆಹಾ! ಆ ಕಾಲದ ಸಂಕಟವನ್ನು ವಾಚಕರೇ ಊಹಿಸಲಿ! ಆ ಘಾತುಕನ್ಯಾರೋ ತಿಳಿಯದು ತನ್ನ ಘೋರ ಕೃತ್ಯದ ಪ್ರಥಮ ಭಾಗಕ್ಕೆ ತೃಪ್ತನಾಗದೆ ಆಕೆ ಎದೆಯ ಉಭಯ ಪಾರ್ಶ್ವಗಳಿಗೂ ಇರಿದು ಅಷ್ಟಕ್ಕೂ ತೃಪ್ತಿ ಹೊಂದದೆ ಹೊಟ್ಟೆಯ ಮೇಲೆ ಕಡಿದು ಗಾತಕನು ಅಲ್ಲಿಂದ ಮಾಯವಾಗಿರುತ್ತಾನೆ ಪ್ರಾಣ ಸಂಕಟದಲ್ಲಿ ಎಷ್ಟು ಕೂಗಿರಬಹುದು! ತುಂಬಿದ ಕೇರಿ ಯಾರಿಗೂ ಕೇಳಿಸಲಿಲ್ಲವೇ! ಅವಳ ಮೈಮೇಲಿನ ಆಭರಣಾದಿಗಳು ಹಾಗೆಯೇ ಇವೆ ಅವಳು ಸ್ವಲ್ಪ ಅನುಕೂಲಸ್ಥಳೆಂದೂ ಲೇವಾದೇವಿ ನಡಿಸುತ್ತಿದ್ದಳೆಂದು ಹೇಳುತ್ತಾರೆ ಮರುದಿನವೇ ಪೊಲೀಸರೂ ಡಾಕ್ಟರೂ ಬಂದು ಪಂಚನಾಮಾ ಕ್ರಮ ಜರಗಿ ಎರಡು ದಿನಗಳ ಮೇಲೆ ಮೃತಳ ದೇಹವು ಭೂಗತಮಾಡಲ್ಪಟ್ಟಿತು ಕೆಸರಿನಲ್ಲಿ ಆ ಘಾತುಕನು ಹೆಜ್ಜೆಯಿಟ್ಟು ಹೋಗಿದ್ದದ್ದರಿಂದ ಅವನು ಹೋದ ಮಾರ್ಗವನ್ನನುಸರಿಸಿ ಪೊಲೀಸರು ಆ ಹೆಜ್ಜೆಗಳನ್ನು ತೆಗೆದಿಟ್ಟಿದ್ದಾರೆ ಆಗಲೇ ಇಬ್ಬರನ್ನು ಹಿಡಿದಿರುವರು ಯಾವ ಕಾರಣದಿಂದ ಈ ಸ್ತ್ರೀಹತ ನಡೆಯಿತೋ ಮುಂದಿನ ವಿದ್ಯಮಾನಗಳು ಪ್ರಕಟಿಸಬೇಕಾಗಿದೆ

ಹುಣಸೂರು — ಹುಣಸೂರು ತಾಲ್ಲೋಕಿಗೆ ಸೇರಿದ ದೇವರಾಜಪುರದ ಪೊಲೀಸ್ ಸ್ಟೇಷನ್ ಸಮೀಪದಲ್ಲಿರುವ ಒಂದಾನೊಂದು ಗ್ರಾಮದಲ್ಲಿ ಇಬ್ಬರು ರೈತರ ಒಂದು ಹುಣಸೇ ಮರದ ಫಸಲಿನ ವಿಚಾರವಾಗಿ ವ್ಯಾಜ್ಯವಾಡುತ್ತಿದ್ದು, ಒಬ್ಬನು ಮತ್ತೊಬ್ಬನ ಮೇಲೆ ಆ ಮರದ ಫಸಲನ್ನು ಕಳುವು ಮಾಡಿದನೆಂಬದಾಗಿ ಕಳುವು ಮೊಕದ್ದಮೆ ಮಾಡಿದನು ಆ ಇಬ್ಬರನ್ನೂ ದಸ್ತಗಿರಿ ಮಾಡಿ ಪೊಲೀಸಿನವರು ಅಮಲ್ದಾರರಲ್ಲಿ ಹಾಜರ್ಮಾಡಿದರು ಈ ಜನಗಳು ಲಾಕಪ್ಪಿನಲ್ಲಿರುವ ಸಂಗತಿಯನ್ನು ಇವರ ವಾರಸ್ದಾರರು ಕೇಳಿ ಜಾಮೀನ್ ಮೇಲೆ ಬಿಡಬೇಕೆಂದು ಎಷ್ಟೋ ವಿಧವಾಗಿ ಬೇಡಿಕೊಂಡಾಗ್ಯೂ ಅಮಲ್ದಾರರು ಬಿಡಲಿಲ್ಲ ಲಾಕಪ್ಪಿನಲ್ಲಿ ಹ್ಯಾಗೋ ಸತ್ತು ಹೋದನು ಇದರ ವಿಚಾರಣೆ ಇಲ್ಲಿನ ಅಮಲ್ದಾರರು ಸರಿಯಾಗಿ ಮಾಡಲಿಲ್ಲವೆಂದು ಕಳೆದ ತಾ ೩೦ ರಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ದಯಮಾಡಿ ಲಾಕಪ್ ಆಫೀಸನ್ನೂ ಅಪಾಸ್ಥಿಯವರನ್ನೂ ಅಮಲ್ದಾರರನ್ನೂ ಖುದ್ದು ವಿಚಾರ ಮಾಡಿಕೊಂಡು ಮೈಸೂರಿಗೆ ಹೋದರು ಇದರ ಫಲಿತಾಂಶ ಮುಂದೆ ತಿಳಿಯಬಹುದು — ಈ ಊರಿಗೆ ಸುಮಾರು ೩ ಮೈಲಿ ದೂರದಲ್ಲಿರುವ ಬೆಲ್ಲೂರು ಬಾಲ ಎಂಬ ಕಾಡಿನಲ್ಲಿ ಒಂದು ಪೆಟ್ಟಿಗೆ ಬಿದ್ದಿತ್ತು ಆ ಪೆಟ್ಟಿಗೆಯೊಳಗಿಂದ ಸಹಿಸಲಾರದ ದುರ್ವಾಸನೆ ಬರುತ್ತಿದ್ದದನ್ನು ನೋಡಿ ದಾರಿಯಲ್ಲಿ ಹೋಗುತ್ತಿದ್ದ ಜನರಿಗೆ ತುಂಬಾ ಅನುಮಾನವಾಗಿ ಯಾರನ್ನೋ ಕೊಂದು ಪೆಟ್ಟಿಗೆಯಲ್ಲಿ ಹಾಕಿ ಬಿಸಾಡಿದಾರೆ ಎಂದು ಹುಣಸೂರಿನಲ್ಲಿ ಪ್ರಕಾರೆಯಾಯಿತು ಕೆಲವರು ಹೋಗಿ ಅದನ್ನು ಪರೀಕ್ಷಿಸಿ ನೋಡಲಾಗಿ ಅದರೊಳಗೆ ೧೨ ಕೋತಿಗಳು ಸತ್ತು ಬಿದ್ದಿದ್ದವಂತೆ. ನಿಷ್ಕರುಣಿಗಳಾದ ತುಂಟರು ಯಾರೋ ಇದನ್ನು ಮಾಡಿರುವ ಹಾಗೆ ಕಾಣುತ್ತದೆ — ಇಲ್ಲಿಗೆ ಸಬ್ ಡಿವಿಜನ್ ಕೋರ್ಟು ಬರುತ್ತದೆಂದು ಈಗ ಒಂದು ವರ್ಷದಿಂದಲೂ ವದಂತಿ ಕೇಳಿ, ಹೆಗ್ಗಡದೇವನಕೋಟೆ, ಯಡತೊರೆ, ಹುಣಸೂರು ತಾಲ್ಲೋಕುಗಳ ಮತ್ತು ಪಿರ್ಯಾಪಟ್ಟಣ, ಬೆಟ್ಟದಪುರ ಮುಂತಾದ ಸ್ಥಳಗಳ ರೈತಾಪಿ ಜನಗಳೆಲ್ಲಾ ಹರ್ಷಮುಖಿಗಳಾಗಿದ್ದರು ಆದರೆ ಈ ವರಿಗೂ ಸರ್ಕಾರದವರ ದಯೆ ಈ ಕಡೆ ಬೀಳಲಿಲ್ಲ ಈಗಲಾದರೂ ಪ್ರಜೆಗಳ ಅರ್ಧಕಷ್ಟವಾದರೂ ನೀಗಿಸುವಂತೆ ದಯಾಳುಗಳಾದ ಸರ್ಕಾರದವರು ಈ ತಾಲ್ಲೋಕಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಉಳ್ಳ ಒಬ್ಬ ಅಮಲ್ದಾರರನ್ನು ಕಳುಹಿಸಿಕೊಟ್ಟರೆ ಎಷ್ಟೋ ಉಪಕಾರವಾಗಿರುವದು — ಕಳೆದ ತಿಂಗಳಿಂದಲೂ ಈ ಊರಿನಲ್ಲಿ ವಾಂತಿಭೇದಿ ರೋಗ ಶುರುವಾಗಿ ಸುಮಾರು ೧೨—೧೫ ಜನರು ತೀರಿ ಹೋದರು ಇಂಥಾ ಕಾಲದಲ್ಲಿ ಮ್ಯುನಿಸಿಪಾಲಿಟಿ ಬಹು ಜಾಗ್ರತೆಯಿಂದ ಗಮನಿಸತಕ್ಕದ್ದು ತುಂಬಾ ಅವಶ್ಯಕ ಆದರೆ ಊರಿನ ಸಂದುಗೊಂದುಗಳನ್ನು ನೋಡಿ ಅಲ್ಲಿರುವ ಗಲೀಜನ್ನು ತೆಗೆಸುವದಕ್ಕೆ ನಿಗಾ ಕೊಡುವವರನ್ನು ಕಾಣೆವು — ಈ ಊರಿನಲ್ಲಿ ಆಗಾಗ್ಗೆ ಕಳ್ಳತನಗಳು ಹೆಚ್ಚಾಗಿ ನಡೆಯುತ್ತವೆ ಪೊಲೀಸ್ ಬೀಟ್ ಸರಿಯಾಗಿ ನಡೆಯುವದಿಲ್ಲವೆಂದು ತೋರುತ್ತದೆ ನಮ್ಮ ಪೊಲೀಸ್ ಇನ್ಸ್ಪೆಕ್ಟರು ಈ ವಿಷಯ ಹೆಚ್ಚಾಗಿ ನಿಗಾ ಕೊಟ್ಟು ಪ್ರಜೆಗಳನ್ನು ಕಾಪಾಡುವದು ಅವಶ್ಯವಾಗಿದೆ

ಹೊಳೇನರಸೀಪುರ. — ಈಚೆಗೆ ಮಳೆಯು ನಿಂತದ್ದರಿಂದ ಕಿರಾಣಿ ಫಸಲಿಗೆ ಜೀವ ಬಂದಂತಾಯಿತು ಹಾಸನದಲ್ಲಿ ಪ್ಲೇಗ್ ಗಲಾಟೆ ಬಹಳವಾದ್ದರಿಂದ ಈ ಊರಿಗೆಲ್ಲಿ ಬರುವದೋ ಎಂದು ಜನಗಳು ಬಹು ತಲ್ಲಣಿಸುತ್ತಿದಾರೆ ಮುನಿಸಿಪಾಲಿಟಿಯವರು ಬಹು ಮುತುವರ್ಜಿ ವಹಿಸಿ ಊರು ಪಾಕೀಜಾ ವಿಷಯದಲ್ಲಿ ಶ್ರಮಪಡುಸುವರೆಂದು ನಂಬಿದ್ದೇವೆ ಈ ಊರು ಕುಂಬಾರಗೇರಿ ಪಕ್ಕದಲ್ಲಿ ಚಿಕ್ಕ ನಾಲಾ ಇದೆ ಅದರಲ್ಲಿ ಆ ಭಾಗದ ಜನರು ನೀರನ್ನು ಬಳಸುವರು ಇಷ್ಟು ಚಿಕ್ಕ ನಾಲೆಯಲ್ಲಿ ಅಗಸರು ಬಟ್ಟೆ ಒಗೆದು ನೀರು ಬಹಳ ಕೆಡಿಸುತ್ತಾರೆ. ಈ ನೀರನ್ನು ಉಪಯೋಗಿಸುವದರಿಂದ ಜನಗಳಿಗೆ ರೋಗ ಬಾರದೇ ಇರುವದೇ? ನಮ್ಮ ಅಮಲ್ದಾರರು ಇದರ ವಿಷಯ ನಿಗಾ ಕೊಡುವದು ಬಹು ಅಗತ್ಯ ಈ ಊರು ಮಾದಿಗ್ಗೇರಿಯು ಊರಿನ ಎಡಬಲ ಪಕ್ಕಗಳಲ್ಲಿದೆ ಇದರಿಂದ ಊರಿಗೆ ದುರ್ವಾಸನೆ ಬಹಳವಾಗಿ ಬರುವದು ಅಲ್ಲದೆ ಕೆಲವು ಮಾದಿಗ ಹುಡುಗರು ಅಂಗಡಿ ಮನೆಗಳ ಬಳಿ ಬೇಡುತ್ತಿರುವರು ಹಿಂದಿನ ಅಮಲ್ದಾರರು ಈ ಮಾದಿಗರ ಕೇರಿಯನ್ನು ಊರಾಚೆ ಸಾಗಿಸುವ ಪ್ರಯತ್ನ ಮಾಡಿದ್ದರು ಅಷ್ಟರಲ್ಲಿ ಅವರು ವರ್ಗವಾಗಿ ಹೋದರು ಈಗ ಬಂದಿರುವ ನಮ್ಮ ಅಮಲ್ದಾರರು ಇದನ್ನು ದೂರ ಸಾಗಿಸಿದರೆ ಊರಿಗೆ ಬರುವ ದುರ್ವಾಸನೆಯು ತಪ್ಪುವದು — ಗೌಪ್ಯ ಜೂಜಾಟವು ಇನ್ನೂ ನಡೆಯುತ್ತಲೇ ಇತ್ತು ಪೊಲೀಸಿನವರು ಎಷ್ಟು ಸಾಹಸ ಮಾಡಿದರೂ ಅವರ ಕೈಯಲ್ಲಿ ಆಗದೇಹೋಯಿತು! ನಂತರ ಜನಗಳೇ ಒಟ್ಟು ಸೇರಿ ಯಾರೂ ಜೂಜಾಡಬಾರದೆಂದು ಕಟ್ಟುಮಾಡಿದರು ಈಗ ಕೆಲವು ದಿನಗಳಿಂದ ಜೂಜಾಟವು ಕಣ್ಮರೆಯಾಗಿದೆ ಪೊಲೀಸಿನವರ ಶಕ್ತಿ ಎಷ್ಟರಮಟ್ಟಿಗೆ ಇದೆ ನೋಡಿದಿರಾ! ಕಟುಕರು ೩ ಆಣೆ ಸೇರ ಮಾಂಸ ಮಾರುತ್ತಿದ್ದದನ್ನು ೪ ಆಣೆ ಮಾಡಿದ್ದರು ಮುಸಲ್ಮಾನರೆಲ್ಲಾ ಒಗ್ಗಟ್ಟಾಗಿ ಕಾಸಿಂ ಸಾಹೇಬರಲ್ಲಿ ಹೊಸ ಅಂಗಡಿಯನ್ನಿಡಿಸಿ ೩ ಆಣೆಯಂತೆ ಮಾಂಸ ಮಾರಿಸುತ್ತಾ ಜನಗಳಿಗೆ ಬಹಳ ಉಪಕಾರ ಮಾಡುತ್ತಿದಾರೆ ಎಲ್ಲಾ ವ್ಯಾಪಾರವೂ ಕೇಳುವವರಿಲ್ಲದೆ ಇದೇ ರೀತಿ ನಡೆಯುತ್ತಾ ಇದೆ ರಾಗಿ ಇನ್ನೂ ರೂಪಾಯಿಗೆ ೧೪—೧೫ ಸೇರು ಮಾರುತ್ತಾರೆ! ಈ ಸಂತೆಯ ದುರಾದೃಷ್ಟವು ಇನ್ನೂ ತಪ್ಪಲಿಲ್ಲ — ಇದೇ ಹೊಳೇನರಸೀಪುರದ ಬಳಿ ಹಾರೋಬ್ಯಾಗಡನಹಳ್ಳಿ ಗ್ರಾಮಸ್ಥರಾದ ಸಂಕೇತಿ ಬ್ರಾಹ್ಮಣ ಸಣ್ಣಪ್ಪನೆಂಬುವನು ಕಳೆದ ಅಕ್ಟೋಬರ್ ತಾ ೨೦ ನೆ ಸೋಮವಾರ ಈ ಊರು ಸಂತೆಗೆ ಬಂದಿದ್ದವನು ಪುನಹಾ ಊರು ಕಾಣಲು ವಿಧಿಯು ಅವಕಾಶ ಕೊಡಲಿಲ್ಲ ಈತನನ್ನು ಯಾರೋ ವಿಕಾರವಾದ ಸ್ವರೂಪದಿಂದ ಪ್ರಾಣಹತ್ಯಮಾಡಿದ್ದಲ್ಲದೆ ಚಾಪೆಯಲ್ಲಿ ಸುತ್ತಿ ಬಂದೋಬಸ್ತಾಗಿ ಕಟ್ಟಿ ಹೊಳೆಯಲ್ಲಿ ಹಾಕಿದ್ದರು ಹೊಳೆಯಲ್ಲಿ ಹೆಚ್ಚಾಗಿ ಪ್ರವಾಹವಿಲ್ಲದ್ದರಿಂದ ಆ ಶವವು ತಾ. ೨೫ ನೆ ಶನಿವಾರ ಚತ್ರದ ಕಡುವಿನ ಬಳಿ ಸಿಕ್ಕಿ ಜನಗಳ ಗೋಚರಕ್ಕೆ ಬಂದದ್ದಾಯಿತು ಆ ದಿನ ಸಾಯಂಕಾಲ ಪೊಲೀಸಿನವರು ಅಂಗಶೋಧನೆ ಮಾಡಿ ಊರಲ್ಲಿ ಡಾಕ್ಟರು ಇರಲಿಲ್ಲವಾದ್ದರಿಂದ ಅರಕಲಗೂಡು ಆಸ್ಪತ್ರೆಗೆ ಡಾಕ್ಟರ ಇನ್ಸ್ಪೆಕ್ಷನ್ ಬಗ್ಗೆ ಕಳುಹಿಸಿದರು ಸದರಿ ಹೆಣದ ಜೊತೆಯಲ್ಲಿಯೋ ಆತನ ಹೆಂಡತಿ ಮಗು ಸಹಾ ಹೋಗಿದ್ದರು ಈ ಹೆಣವು ಕೊಲೆಯಿಂದ ಮೃತಪಟ್ಟದ್ದಾಗಿ ಗೊತ್ತಾಯಿತು ನಂತರ ಪೊಲೀಸಿನವರು ಮೃತನ ಹೆಂಡತಿಯ ಮಾತಿನ ಮೇಲೆ ಗುಮಾನಿಯಿಂದ ಇದೇ ಊರಿನ ತೆಲುಗು ಬಣಜಿಗರ ಸುಬ್ಬಣ್ಣನೆಂಬುವನನ್ನೂ ಅವನ ಮನೆಯವರನ್ನೂ ಹಿಡಿದು ಲಾಕಪ್ಪಿನಲ್ಲಿ ಕಾಪಿಡುತ್ತಾರೆ ತಾ ೩ ನೆ ಶನಿವಾರ ಪೊಲೀಸ್ ಸೂಪರೆಂಟ್ ಸಾಹೇಬರು ದಯಮಾಡಿಸಿದರು ಮುಂದಿನ ಸಂಗತಿ ವಿಚಾರದಿಂದ ತಿಳಿಯಲಾಗುತ್ತೆ ಈ ಮೃತಪಟ್ಟವನಿಂದ ಅನೇಕ ಬಡ ಜನಗಳಿಗೆ ಜೀವನೋಪಾಯವಾಗುತ್ತಾ ಇತ್ತು ಇಂಥಾ ದಯಾಳುವಿಗೆ ಈ ಕ್ರೂರ ವಿಪತ್ತು ಸಂಭವಿಸಿತೆಂದು ಬಹಳ ಜನಗಳು ವಿಷಾದಿಸುತ್ತಾರೆ ಈತನಿಗೆ ೩ ವರುಷದ ಒಂದು ಗಂಡು ಮಗು ಮಾತ್ರ ಇರುತ್ತೆ. ಈತನ ಹೆಂಡತಿಗೆ ಮಗುವಿನೊಂದಿಗೆ ಪ್ರತಿ ದಿನವೂ ಅಚೇರಿಯ ಮುಂದೆ ಎದೆ ಬಡಿದುಕೊಂಡು ಗೋಳಾಡುವದೇ ಕೆಲಸವಾಗಿದೆ ಇದರಲ್ಲಿ ಈಗ ಪೊಲೀಸಿನವರ ಶಕ್ತಿ ಸಾಹಸ ಚಾತುರ್ಯಗಳು ಗೊತ್ತಾಗಬೇಕು

ಇಂಡಿಯದ ದೊಡ್ಡ ನೋವುಹರ.

86 24

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ತಲೆನೋವು, ತಲಭಾರ, ಕೆಮ್ಮುಗಳು, ಎದೆನೋವು, ಶೀತ, ಒಣಗೆಮ್ಮು, ಗಂಟ್ಲುಹುಣ್ಣು, ಕೀಲುಬೇನು ಎದೆಗಳ ನೋವು, ಆಸ್ತ್ಮ, ಈ ಪ್ರಕಿ ಯಾವ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಅಧೈರ್ಯಪಡ ಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡಲೆ ಒಳಕ್ಕೆ ವ್ಯಾಪಿಸಿ, ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿಯೂ ನಿವಾರಣೆ ಮಾಡುವುದು. ಉಪಯೋಗಿಸುವ ವಿಧಾನ ಮುಂತಾದ್ದನ್ನು ಬಾಟ್ಲಿ ಜೊತೆಯಲ್ಲಿ ಅಚ್ಚಾದ ಪಟ್ಟಿಗಳನ್ನಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಮುಖವು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬಾಧೆಯನ್ನನುಭವಿಸುವವರಾಗಿದ್ದಲ್ಲಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವರೆಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಷ್ಟು ಅನುಭವಪ್ರಸಿದ್ಧ. ಕ್ರಯ —೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ, ೬ಕ್ಕೆ ರೂ. ೩॥ ರೂಪಾಯಿ, ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ.

ನಮ್ಮ ವಿಳಾಸ —ಎಫ್. ಡಬ್ಲಿಯು. ಆರ್ನ, ಸಿಮೆಟ್ರಿ ರೋಡ್, ವೇಪೇರಿ, ಮದರಾಸ್.

ಔಷಧಿ ತೆಗೆದುಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 57-34

(ಸ್ಕೊಟ್ಸ್ ಇಮಲ್‌ಷನ್)

ಘಟ್ಟ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನು ಬಲತ್ವಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ಅಭ್ಯಾಗಾವದ್ದು.

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ನೋಟೀಸ್.

139-1

ಬೆಂಗಳೂರು ಅಡಿಷನಲ್ ಮುನ್ಸಿಫ್ ಕೋರ್ಟಿನಲ್ಲಿ.

ಸನ್ ೧೯೦೫—೦೬ನೆ ಇಸವಿ ಅಸಲ್ ನಂಬರು—೬೪೦.

ಸನ್ ೧೯೦೬—೦೭ನೆ ಇಸವಿ ಮಿಸ್ ನಂಬರು ೬೪.

ವಾದಿಗಳು	ಪ್ರತಿವಾದಿಗಳು
ರಾಮಾಚಾರ್ರು ವಗೈರೆ	ರಾಮಾಚಾರ್ರು ವಗೈರೆ

ಹೊಸಕೋಟೆ ತಾಲ್ಲೂಕು ಕಲ್ಲುಕುಂಟೆ ಅಗ್ರಹಾರದಲ್ಲಿ ಇರುವ ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ಈ ಕೆಳಗೆ ಕಂಡ ದಾವಾ ಷೆಡ್ಯೂಲಿನಲ್ಲಿ ವಿವರಿಸಿ ಇರುವ ಸ್ವತ್ತು ಸೇರಬೇಕಾಗಿ ಇರುವದರಿಂದ ಸದರಿಸ್ವತ್ತಿಗೂ ಮತ್ತು ಇತರೆ ಪರಿಹಾರಗಳಿಗೂ ಪ್ರತಿವಾದಿಗಳ ಮೇಲೆ ಡಿಕ್ರಿ ಆಗಬೇಕೆಂದು ವಾದಿಗಳು ದೇವಸ್ಥಾನದ ಪರವಾಗಿ ದಾವಾ ಹಾಕಿ ಇರುವದರಿಂದ ಸದರಿ ದಾವೆಯಲ್ಲಿ ಯಾರಾದರೂ ವಾದಿಗಳಾಗಿಯಾಗಲಿ ಪ್ರತಿವಾದಿಗಳಾಗಿಯಾಗಲಿ ಸೇರಿ ವ್ಯಾಜ್ಯವನ್ನು ನಡಿಸಬೇಕಾದ ಕುತೂಹಲವುಳ್ಳವರಾಗಿದ್ದರೆ ಅಂಥಾವರು ತಾ. ೨೮—೧೧—೦೬ ನೆ ದಿವಿ ೧೧ ಘಂಟೆಗೆ ಈ ಕೋರಟು ರೂಬರೂಬು ಹಾಜರಾಗಬೇಕೆಂದು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸಿ ಇರುತ್ತೆ.

ತಾ. ೨೩—೧೦—೧೯೦೬.

(Sd.) B. Ranga Iyengar,
ಅಡಿಷನಲ್ ಮುನ್ಸಿಫ್

ಷೆಡ್ಯೂಲ್

ಹೊಸಕೋಟೆ ತಾಲ್ಲೂಕು ಕಲ್ಲುಕುಂಟೆ ಅಗ್ರಹಾರದಲ್ಲಿ ಇರುವ ದಾವಾ ಸ್ವತ್ತಿನ ವಿವರ.—ಪೂರ್ವಕ್ಕೆ ಶ್ರೀನಿವಾಸಾಚಾರ್ರು ಮತ್ತು ಅಯ್ಯಾಸ್ವಾಮಿ ಮನೆ, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ದಾರಿ; ದಕ್ಷಿಣಕ್ಕೆ ೧ ನೆ ಪ್ರತಿವಾದಿ ಮನೆ ಈ ಮಧ್ಯೆ ಇರುವ ಸುಮಾರು ೧೫ ರೂಪಾಯಿ ಬಾಳುವ ಪೂರ್ವಪಶ್ಚಿಮ ೧೬ ಅಡಿ, ಉತ್ತರದಕ್ಷಿಣ ೩ ಅಡಿ ಉಳ್ಳ ಜಮೀನು, ಇದರಲ್ಲಿ ಇರತಕ್ಕ ಕಟ್ಟಡ ಸಹಾ

(Sd.) B. R.
ಎ. ಮುನ್ಸಿಫ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . . . ರೂ. ೧—೧೪—೦

" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ.—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಯೆಸ್ಲೆ ಕೆಂಪು ಮತ್ತು ತಾಜಾ ಕಪ್ಪು

ಹಾಸರ್ ಪೂಲ್‌ದಾರ.

215-7

೩,೦೦೦ ಹಾಸನದ ಟೋಪಿ ಹೊಲಿಯುವ

ಸುಪೀರಿಯರ್ ಪೂಲನ್‌ದಾರ ಮಾತ್ರ.

	ರೂ.	ಆ.	ಪೈ
೧೦ ಟೋಪಿ ಆಗುವ ಪೂಲ್‌ದಾರದ ಕ್ರಯ	೦	೮	೦
೧ ಟೋಪಿ ಆಗುವ ಒಂದು ಬಂಡಲ್ ದಾರದ ಕ್ರಯ ೩	೧೩		೦
ಹಾಸರ್ ಟೋಪಿ ಹೊಲಿಯುವ ಕೊಕ್ಕೆ ಸೂಜಿ ೧ಕ್ಕೆ ೦	೧		೯
ಈ ದಾರದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ. ಪಿ. ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ. ರಘುನಾಥ ಕಾಮತ್,
ಪೂಲ್ಸ ಮರ್ಚಂಟ್,
ಜೋಳಾರ, ಮಂಗಳೂರು.

ಸನ್ ೧೯೦೭ ನೇ ಇಸವಿಯ

130 1

ಎಂ. ನಂ॥ ಏಫ್ ನಂ॥ ಬಿ ನಂ॥ ಸಿ ನಂ॥ ಕೆಚ್ ನಂ॥ ಲ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು ಲಾಯರುಗಳು, ಕಂಟ್ರ್ಯಾಕ್ಟರು, ದೊಡ್ಡ ಮನುಷ್ಯರು, ಮುನಿಸಿಪಲ್ ಕಮೀಷನರುಗಳಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ ಪ್ರಶ್ನ ಶಾಸ್ತ್ರ, ಪಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ಬಡ್ಡಿಪಟ್ಟಿ, ದಿನಸಂಬಳದ ಪಟ್ಟಿ, ಮೋಟಿ ಲೆಕ್ಕ, ಜಮಾಖರ್ಚು ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾಮಾನ್ ಬೈಂಡು, ಚಿನ್ನದ ಎಳ್ಳ ನಮೂನೆ ಗಿಲೀಟುಮಾಡಿದೆ.

ಎ ನಂಬರ್ ಚಿಕ್ಕಸೈಜು ೩ ಆ. ಸಿ ನಂಬರು ದೊಡ್ಡಸೈಜು ೬ ಆ

ಎಫ್. " " ೭ " ಎಚ್. " " ೭ "

ಬಿ " ಮುಚ್ಚಳದ್ದು ೫ " ಟ್ " ಮುಚ್ಚಳದ್ದು ೮ "

ಪೋಸ್ಟು ಚಾರ್ಜ್ ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡವರೆ ೧ ಡೈರಿ ಇನಾಂ ವಿ. ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಜಾರ್ಡನ್ ಪ್ರೆಸ್, ಬೆಂಗಳೂರು ಸಿಟಿ	ಅಥವಾ	ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

123—8

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಥಾಪನೆ ಮಾಡುವ ಕಂಪೆನಿಯವರು ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಸ್ಪೆಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೩೮ ಸಾವಿರ ಷೇರುಗಳೆಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಬೇಕಾದವರು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ ವಿ. ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೋಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.
ನಗರ್ತಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

19—10—1906 ರಿಂದ 26—10—1906 ರ ವ[illegible]

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಹೋ[illegible] ಈ ವ[illegible] ಸಂ[illegible]
ಬೆಂಗಳೂರು ಪಟ್ಟಣ	4	4	45
ಮೈಸೂರು "	7	7	0
ಬೆಂಗಳೂರು ಡಿಸ್ಟ್ರಿಕ್ಟ್	87	40	18
ಮೈಸೂರು "	0	0	9
ಕೋಲಾರ್ "	0	0	0
ಕೋಲಾರ್ ಚಿನ್ನದ ಗಣಿಗಳು	3	2	0
ತುಮಕೂರು ಡಿಸ್ಟ್ರಿಕ್ಟ್	14	7	2
ಹಾಸನ "	40	28	0
ಚಿತ್ರದುರ್ಗ "	0	0	0
ಕಡೂರ್ "	47	32	3
ಶಿವಮೊಗ್ಗ "	0	0	0
ಜುಮ್ಲಾ.	199	117	47

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಕಾರ್ತೀಕ ಬಹುಳ ಸಪ್ತಮಿ ಗುರುವಾರದಿಂದ ಕಾ[illegible] ಬಹುಳ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂ[illegible] ೧೯೦೬ ನೇ ಇಸವಿ ನವಂಬರ್.

ತಾ.	ವಾರ		ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ
8	ಗುರು	§	ಸಪ್ತಮಿ	37-12	ಪು	37-37
9	ಶುಕ್ರ	†	ಅಷ್ಟಮಿ	35 48	ಪ್ಲೆ	10 58
10	ಶನಿವಾ	‡	ನವಮಿ	39 39	ಮ	13 23
11	ರವಿವಾ	*	ದಶಮಿ	39 0	ಪು	13 53
12	ಚಂದ್ರ	¶	ಏಕಾದಶಿ	37-18	ಉ	13 23
13	ಕುಜ		ದ್ವಾದಶಿ	34-18	ಹ	11-58
14	ಬುಧ		ತ್ರಯೋ	30 26	ಚಿ	39-38

§ ಅಮೃತಸಿದ್ಧಿಯೋಗ † ಮಹಾವ್ಯತಿಪಾತ, ದಗ್ಧಯೋಗ, ಷ[illegible] ಯೋಗ ‡ ದಗ್ಧಯೋಗ * ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥ[illegible]ತ್ಸವ ¶ ಸರ್ವತ್ರ ಏಕಾದಶಿ, ದಗ್ಧಯೋಗ, ಕಾರ್ತೀಕಸೋಮ[illegible] ಪ್ರದೋಷ, ಮಾಸಶಿವರಾತ್ರಿ

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಿಷ್ಟೇ ಅಕ್ಕಿ ಪಲ್ಲ ೧ಕ್ಕೆ	ರೂ. ೧೩-೭-೦	[illegible]
ಕೆಂಬೂತಿ ಅಕ್ಕಿ ಅವಲ್	೧೩-೪-೦	[illegible]
" ದುಯಂ	೧೩-೦-೦	[illegible]
ಜುಪಾನ್ಯ ಅಕ್ಕಿ	೧೩-೦-೦	[illegible]
ಸಣ್ಣಕ್ಕಿ ಅವಲ್	೧೫-೦-೦	[illegible]
" ದುಯಂ	೧೪-೮-೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ	೧೨-೦-೦	[illegible]
" ದುಯಂ	೧೧-೮-೦	[illegible]
ಕರ್ರ ರಾಗಿ ಪಲ್ಲ ೧ಕ್ಕೆ	೬-೮-೦	[illegible]
ಕಾಡ್ರಾಗಿ	೬-೦-೦	[illegible]
ಜೋಳ	೭-೦-೦	[illegible]
ಹಲಸಂದೆ ಪಲ್ಲ ೧ಕ್ಕೆ	೧೧-೮-೦	[illegible]
ಬಿಳೀ ಅವರೆ	೯-೦-೦	[illegible]
ಹೆಸರು	೧೧-೮-೦	[illegible]
ಉದ್ದು	೧೨-೪-೦	[illegible]
ಕಡಲೆ	೧೨-೦-೦	[illegible]
ಎಳ್ಳು ಸೆ ೧೨೭ಕ್ಕೆ	೧೮-೮-೦	[illegible]
ಹುರುಳಿ	೩-೧೨-೦	[illegible]
ಹರಳು ೧೨೭ ಸೇರಿಗೆ	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೨-೦	[illegible]
ಮೆಣಸಿನಕಾಯಿ	೪-೦-೦	[illegible]
" ದುಯಂ	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು	೩-೧೨-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦	[illegible]
ಹರಳೆಣ್ಣೆ "	೬-೧೨-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ	೧೧-೦-೦	[illegible]
ಉಪ್ಪು "	೬-೦-೦	[illegible]
ಹುಣಿಸೇ ಹಣ್ಣು	೧-೧೪-೦	[illegible]
" ಹಳೇದು	೦-೯-೦	[illegible]
ತುಪ್ಪ ಮಣ ೧ಕ್ಕೆ	೧೭-೦-೦	[illegible]
ಸೀಮೆಯೆಣ್ಣೆ ಪಟ್ಟ ೧ಕ್ಕೆ	೫-೪-೦	[illegible]
ತೆಂಗಿನಕಾಯಿ ೧೦೦ಕ್ಕೆ	೬-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೧-೨-೦	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	೦-೧೨-೦	[illegible]
ಚಿನ್ನ (ಪೌನ್) ಕೆಂಪು	೧೫-೪-೦	[illegible]
" " ಪಸಿಮ	೧೫-೧೦-೦	[illegible]
" " ಗಟ್ಟಿ ತೊಲ ೧ಕ್ಕೆ	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೫-೦-೦	[illegible]

Printed and published by the Rev E. Thompson, M.A., the Proprietor and Man[ager], Wesleyan Mission Press, Mysore. 8/11/1906.

ವೃತ್ತಾಂತ ಪತ್ರಿಕೆ

REGISTERED M. 20.

ಘ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸರ್ ೧೯೦೬ ನೇ ಇಸವಿ ನವಂಬರ್ ತಾರೀಖು ೧೫ ನೇ ಗುರುವಾರ. ಸಂಚಿಕೆ ೨೮

ಯಷ್ಟ್ ಶಿಂಪು ಮತ್ತು ತಾಜಾ ಕಪ್ಪು.

ಹಾರ್ಸ್ ಪ್ಲಾಲ್ಕ್ ದಾರ.

215 8

೩,೦೦೦ ಪಾಸನದ ಟೋಪಿ ಕೋರಿಯುವ

ಸುಪೀರಿಯರ್ ಪ್ಲಾಲಿನ್ ದಾರ ಮಾತ್ರ.

	ರೂ.	ಆ.	ಪೈ
೩೦೦ ಆಗುವ ಪ್ಲಾಲ್ ದಾರದ ಕ್ರಯ	೦	೮	೦
೩೦೦ ಆಗುವ ಒಂದು ಬಂಡಲ್ ದಾರದ ಕ್ರಯ	೩	೧೩	೦
ಟೋಪಿ ಕೋರಿಯುವ ಕೊಕ್ಕೆ ಸೂಜಿ ಒಂದ್ಕೆ	೦	೧	೯
ಜವಳಿ ಆದ ಟೋಪಿ ದರ್ಜ ಒಂದ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ. ರಘುನಾಥ ಕಾಮತ್,

ಪ್ಲಾಲ್ ಮರ್ಚೆಂಟ್,

ಬೋಳಾರ, ಮಂಗಳೂರು.

ಹಿಂದೂ ದೇಶ ಪ್ರದಕ್ಷಿಣ

ಈ ಮೊತನ ಪುಸ್ತಕದ ಒಂದನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿದೆ. ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿ ಖರ್ಚು ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸುವವರಿಗೆ ಇದು ದೊರೆಯದೆ ವ್ಯಸನಕ್ಕೊಳಗಾದರು. ಈಗಲಾದರೂ ಜಾಗ್ರತೆಯಿಂದ ಬರೆದು ವಿ. ಪಿ ಮೂಲಕ ತರಿಸಿಕೊಳ್ಳಿ. ಇದರಲ್ಲಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಈ ದೇಶದಲ್ಲಿರುವ ಅನೇಕ ಪಟ್ಟಣಗಳು ಚಿತ್ರಗಳೂ ಮತ್ತು ಅನೇಕ ವರ್ಣನೆಗಳೂ ಪ್ರಾಚೀನ ಚರಿತ್ರಾರ್ಹವಾದ ಕಟ್ಟಡಗಳೂ ಅನೇಕ ವಿಷಯಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ತೊಂಭತ್ತು ಮೂರು ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ವೆಚ್ಚಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ಪುಸ್ತಕವನ್ನು ತರಿಸಿ ಓದಿದರೆ ಅದೇ ಪ್ರಯೋಜನವಾದೀತೆನ್ನುವುದರಲ್ಲಿ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. [illegible] ಮೂಲಕ ತರಿಸಿಕೊಂಡರೆ ಒಂಬತ್ತಾಣೆಯಾಗುವುದು.

ಶೆಣೈ ಸಿ. ಎಲ್. ಎಸ್. ಬುಕ್ ಡಿಪ್ಪೋ ಮೈಸೂರು.

ಇಗೋ ನೋಡಿರಿ

ಇಂದು ಆಶ್ಚರ್ಯಕರವಾದ ಪುಸ್ತಕವು ಹೊರಟಿದೆ !!!

ಎಲ್ಲರೂ ಓದತಕ್ಕದ್ದು.

ಬೇಗ ತರಿಸಿಕೊಳ್ಳಿ. 141-2

ತಡಮಾಡಿದರೆ ಪ್ರತಿಗಳು ಮುಗಿದುಹೋದಾವು.

"ಅರೇಬಿಯನ್ ನೈಟ್ಸ್

ಅಥವಾ

ಸಹಸ್ರಯಾಮಿನೀ ವಿನೋದ ಕಥೆಗಳು"

ಈ ಮಹಾ ಪ್ರಸಿದ್ಧವಾದ ಪುಸ್ತಕವು ಕನ್ನಡದಲ್ಲಿ ಈಗ ತಾನೇ ಪ್ರಕಟಿಸಲ್ಪಟ್ಟಿದೆ. ಡೆಮ್ಮಿ ಅಷ್ಟ ಪತ್ರ. ನಾನೂರ ಎಪ್ಪತ್ತು ಪುಟಗಳುಳ್ಳದ್ದೂ ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ [illegible] ರಚಿತವಾಗಿರುವ ಈ ಪುಸ್ತಕದ ಅಭಿಪ್ರಾಯವನ್ನು ಸ್ವಾನುಭವದಿಂದಲೇ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ಸರಳವಾಗಿರುವುದು ಮತ್ತು ಇದನ್ನು ಬರೆಯುವುದಕ್ಕೆ [illegible] ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದರೆ ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು. ಬೆಲೆ ಎರಡು ರೂಪಾಯಿ ಮಾತ್ರವೇ. ವಿ ಪಿ ಮೂಲಕ ತರಿಸಿದರೆ ಎರಡು ರೂಪಾಯಿ ಮೂರು (೨-೩-೦) ಆಣೆಗಳಾಗುತ್ತೆ. ಈ ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಹೊಂದಬೇಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಕೊಡುತ್ತೇವೆ. ನಮ್ಮ ವಿಳಾಸ.—

ಶೆಣೈ, ಸಿ ಎಲ್. ಎಸ್ ಬುಕ್ ಡಿಪ್ಪೋ, ಮೈಸೂರು

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು ಕಡವನಾಡಿನ ಸ್ಥಳದಿಂದಲೇ ನೆಟ್ಟಗೆ ರವಾನಿಸಲ್ಪಡುವದು.

85-40

ವ್ಯಾಪಾರದ ಹೆಗ್ಗುರುತು

ಕಾಡುಕೋಣದ ತಲೆಯ ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೇ ಸಿದ್ಧಪಡಿಸಿದ್ದು ಹೆಗ್ಗುರುತು ಉಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜೆಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿರ್ಸನ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ 142 3

ಇದು ಸಾಧಾರಣ ಜ್ವರ, ಹಳೇಜ್ವರ, ಮೈರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ., ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕಪೂರ

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು [illegible] ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು.

[illegible] ಗಣಪತಿಯವರು—ಹೆಪ್ರಿಯ [illegible] ನನ್ನ ತಾಬೇದಾರರ ಮ್ಯುನಿಸಿಪಲ್ ಆಸ್ಪತ್ರೆಗಳಲ್ಲಿ ಅನೇಕ ರೋಗಗಳಿಂದಲೂ ಕಾಲರಾ, ಅಜೀರ್ಣ ಭೇದಿ, [illegible] ಕೊಡುತ್ತೇವೆ ಕೊಟ್ಟ ಕೂಡಲೇ [illegible] ಇದು ಬಹು ಒಳ್ಳೇ ಔಷಧ [illegible]

ಈ ನಾಲ್ಕು ಔಷಧಗಳು ಊರೂರುಗಳಲ್ಲಿರುವ ವೈದ್ಯರುಗಳ [illegible] ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. [illegible] ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಕೆಸ್ತುರಿ ರಂಗ [illegible] ಇಂಡಿಯನ್ ಔಷಧಗಳ ಕಂಪೆನಿ,

ಸೆಕಂಡ್ ಬೀಚ್ ರೋಡ್, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

123—9

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಶೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಶೇರು ಮೊಬಲಗು ಶೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು [illegible] ನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು [illegible] ಲೈನ್ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪೆನಿಯ [illegible] ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವ [illegible] ಅಥವಾ ಸಬ್ ಏಜೆಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜೆಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸ್ವ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪನಿಯ ಚೀಫ್ ಏಜಂಟ್

ನಗರ್ತಪೇಟೆ, ಬೆಂಗಳೂರು ಸಿಟಿ.

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

132 5

ನವೀನ ಆಭರಣಗಳು; ಬೇಗ ನೋಡಿ.

ಇದರಿಂದ ಸರ್ವರಿಗೂ ತಿಳಿಸುವುದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವದರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ. ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟ್ ಹಾಕಲ್ಪಟ್ಟಿರುತ್ತೆ. ಇದರ ಕೆಲಸದ ನಾಜೂಕು, ಸ್ವಚ್ಛ ಬಂಗಾರದ ಆಭರಣಗಳನ್ನು ಸೋಲಿಸುತ್ತೆ. ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—

ಜಡೆಕುಚ್ಚು.

ಕ್ರಯ ರೂ. ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಬಂಗಾರದ ಆಭರಣವೆನ್ನುವ ಹಾಗೆ ತಯಾರಿಸಲ್ಪಟ್ಟಿರುತ್ತೆ.

ಪಚ್ಚೆ ಕಲ್ಲು ಜಡೆಬಿಲ್ಲೆ.

ಬಂಗಾರದ ಗಿಲ್ಟು ಮಾಡಿದ್ದು.

ಒಂದ್ಕೆ ಬೆಲೆ ರೂ. ೨—೦

ಇದು ನೋಡಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳು ಪರ್ಯಂತರ ಇಟ್ಟುಕೊಳ್ಳ್ಯೊ ರಂಗು ಹೋಗದು; ನೋಡುವವರ ಕಣ್ಣು ಚೆದರುವಷ್ಟು ಪ್ರಕಾಶವುಳ್ಳದ್ದು

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪ್ಪೋ,

ಸಾಹುಕಾರ್ ಪೇಟೆ, ಮದ್ರಾಸು.

ಬೇಕಾಗಿದೆ.

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿರ್ಷ ಪ್ರೆಸ್, ಮೈಸೂರು.

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85-24

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ.—ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಜಲದಿ ಅಕ್ಷರದಿಂದ ಬರೆಯಿರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ಪಾರದ, ಪೋಸ್ಟು ಮಾಂಡ್ವಿ, ಮುಂಬಯಿ.

ಶಾವಾಗಿ ಇಂಗ್ಲಿಷ್ ಕಲಿಯುವಿಕೆ.

144-1

೧ ಶಾವಾಗಿ ಇಂಗ್ಲಿಷ್ ಕಲಿಯುವಿಕೆ ಮೂಲ.-ಭಾರತಿ ಸಂಪಾದಕರ ಸಹಾಯದಿಂದ ತಯಾರಾದದ್ದು ಪ್ರತಿ ೧ ಕ್ಕೆ ವಿ. ಪಿ. ಖರ್ಚು ಸಹಿತ ೧—೬—೦. ಇಂಗ್ಲಿಷ್ ಅಚ್ಚು, ಬರವಣಿಗೆ ಅಕ್ಷರಗಳನ್ನು ಗುರುತು ಹಿಡಿಯುವದು, ಅವುಗಳ ಉಚ್ಚಾರ, ಅರ್ಥ, ಮತ್ತು ಈಗ ವಾಡಿಕೆಯೊಳಗೆ ಇರುವ ಡಿಕ್ಷನೇರಿ, ವಕಾಬ್ಲೇರಿಗಳಲ್ಲಿ ಇಲ್ಲದ ಅನೇಕ ಶಬ್ದಗಳು, ಕ್ಷೇಮಸಮಾಚಾರ, ಸಾಹುಕಾರಿ, ರೈತಾಬಿ, ಜನರು, ಬರೆಯುವ ಕಾಗದಗಳ ಕರಾರುಗಳು, ತಂತಿ ವರ್ತಮಾನಗಳ ನಕಲುಗಳು ಮೊದಲಾದವುಗಳನ್ನು ಸೇರಿಸಿ ಕನ್ನಡ ಓದು ಬರೆಯುವವರು ಕೂಡ ಸುಲಭವಾಗಿ ಇಂಗ್ಲಿಷ್ ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಮಾತಾಡುವದಕ್ಕೂ ಕಲಿಯುವ ಹಾಗೆ ವಿವರಿಸಿದೆ. ಇಂಗ್ಲಿಷ್ ಭಾಷೆಯನ್ನು ಕಲಿತು ಬಗೆಬಗೆ ಲಾಭ ಹೊಂದಬೇಕೆಂಬ ಬಯಕೆ ಉಳ್ಳ ವ್ಯಾಪಾರಿ ಜನರು, ರೈತರು, ಶಾನುಭೋಗ, ಪಟೇಲರು, ಠೇಕೆದಾರ್, ಕಂಟ್ರಾಕ್ಟುದಾರ್ರು, ಲಾಯರ್ ಗುಮಾಸ್ತೆಯರು, ಮೊದಲಾದ ಎಲ್ಲಾ ಜನರಿಗೂ ಅತ್ಯುಪಯೋಗವಾದ ಪುಸ್ತಕವಿದು. ಮುಗಿದುಹೋಗುತ್ತ ಬಂದಿತ ಸಿಕ್ಕಲಾರದು ಬೇಗ ಬರೆಯಿರಿ ಪ್ರತಿ ೧ ಕ್ಕೆ ೧—೬—೦ ಮಾತ್ರ!

ಸುಭಾಷಿತ ಸಮುದಾಯ.

ಇದೊಂದು ಹೊಸ ಗ್ರಂಥವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ ಆಗಲೇ ಬಹಳ ಪ್ರತಿಗಳು ಖರ್ಚಾಗುತ್ತಿವೆಯಾದ್ದರಿಂದ ೨ ನೆ ಛಾಪೆಗೆ ಪ್ರಾರಂಭಿಸುವ ಯೋಚನೆಯಲ್ಲಿದೆ. ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿ ನೋಡಿ -ಶ್ರೀಮನ್ಮಹಾಭಾರತ, ಭೋಜಚರಿತ್ರೆ, ಹಿತೋಪದೇಶ, ವಿಕ್ರಮಾರ್ಕ ಚರಿತ್ರೆ, ಈ ಗ್ರಂಥಗಳಿಂದ ಆರಿಸಿ ನೀತಿ ವಿನೋದ ವಿಚಿತ್ರಪದ್ಯಗಳಾಗಿ ಈಗಿನ ಕಾಲಕ್ಕೆ ತಕ್ಕಂತೆ ಸ್ವಚ್ಛವಾದ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಅರ್ಥ ಬರೆದಿರುತ್ತೆ. ಗೀರ್ವಾಣಭಾಷಾಭಿಮಾನಿಗಳಾದ ದೇಶಭಾಂದವರೆಲ್ಲಾ ಒಂದೊಂದು ಪ್ರತಿಯನ್ನು ಸಂಗ್ರಹಿಸಬೇಕಾದ್ದು. ವಿ. ಪಿ. ಖರ್ಚು ಸಹಿತ ಪ್ರತಿ ೧ ಕ್ಕೆ ೧—೬—೦ ಮಾತ್ರವೇ. ವಿಳಾಸ:—

ಬಿ. ಕೆ. ಮೂರ್ತಿ ಕಂಪನಿ,

ಲಕ್ಕೂರು ಪೋಸ್ಟು, ಕೋಲಾರ ಡಿಸ್ಟ್ರಿಕ್ಟು.

CHAMBERLAIN'S PAIN BALM

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

95-20



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತರಚಿ ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲಿನ್ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುವುದು ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುತ್ತದೆ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ವೃತ್ತಾಂತ ಪತ್ರಿಕೆ.

—:೦:—

೧೯೦೬ ನೇ ಇಸವಿ ನವಂಬರ್ ತಾ॥ ೧೫ನೇ ಗುರುವಾರ.

"ರೆವಿನ್ಯೂ ಮತ್ತು ವ್ಯವಸಾಯಕ ಗೆಜೆಟ್."

ಮೈಸೂರು ಸಂಸ್ಥಾನದ ದಿವಾನರವರು ಈ ಸಲ ಪ್ರತಿನಿಧಿ ಸಭೆಯಲ್ಲಿ ಅಪ್ಪಣೆ ಕೊಡಿಸಿದ ಪ್ರಕಾರ ರೆವಿನ್ಯೂ ಕಮಿಷನರವರು ಮೇಲ್ಕಂಡ ಗೆಜೆಟ್ಟನ್ನು ಪ್ರಕಟಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ. ಇದು ಎರಡು ವಾರಕ್ಕೊಮ್ಮೆ ಪ್ರಕಟವಾಗುವುದು. "ರೈತಾಬಿ ಜನಗಳನ್ನೂ ಗ್ರಾಮಾಧಿಕಾರಿಗಳನ್ನೂ ತಿಳುವಳಿಕಸ್ಥರನ್ನಾಗಿ ಮಾಡಿ, ಅವರನ್ನು ಕ್ರಮೇಣ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾದ ವಿಶಿಷ್ಟ ಪ್ರಯತ್ನಗಳನ್ನೂ ಮಾಡಬೇಕೆಂಬುವುದು ಈ ಗೆಜೆಟ್ಟಿನ ಉದ್ದೇಶ" ಎಂಬುದಾಗಿ ಕಂಡು ಬರುವುದು.

ನಮ್ಮ ಮುಂದಿರುವ ಮೊದಲನೇ ಸಂಚಿಕೆಯು ಅಷ್ಟು ಸಂತೋಷಕರವಾದದ್ದಾಗಿಲ್ಲವು. ಇದರಲ್ಲಿ ದಿವಾನರವರು ಪ್ರತಿನಿಧಿ ಸಭೆಯಲ್ಲಿ ಉಪನ್ಯಾಸ ಮಾಡಿದ ಅಂಶಗಳೂ ಕೆಲವು ಹಳೇ ಸರ್ಕಾರಿ ಹುಕುಮುಗಳೂ ವಿಶೇಷವಾಗಿ ಕಾಣಬರುವವು. ವ್ಯವಸಾಯ ವಿಷಯವಾದ ಹೊಸ ಬರವಣಿಗೆ ಯೇನೂ ಪ್ರಕಟವಾಗಿಲ್ಲ. ಮದರಾಸ್ ಸೆಂಟ್ರಲ್ ಅಗ್ರಿಕಲ್ಚರಲ್ ಕಮಿಟಿ ಯವರು ಪ್ರಕಟಿಸಿರುವಂಥಾ "ಪಾಪಾಸು ಕತ್ತಾಳೆಯ ಉಪಯೋಗ" "ಬತ್ತದ ಪೈರನ್ನು ನಾಟಿ ಹಾಕುವುದು," "ಸ್ವೀಡ್ ದೇಶದ ನೇಗಲುಗಳು" ಎಂಬೀ ಮೂರು ವಿಷಯಗಳನ್ನು ತೆಗೆದು ಭಾಷಾಂತರಮಾಡಿ ಪ್ರಕಟಿಸಿದಾರೆ. ಅವರೂ ಈ ಮೊದಲನೇ ಸಂಚಿಕೆಯ ವಿಚಾರವನ್ನು ಇಲ್ಲಿಗೆ ನಿಲ್ಲಿಸಿ, ಮುಂದಿನ ಸಂಚಿಕೆಗಳಲ್ಲಿ ರೈತರಿಗೆ ಸಹಾಯವಾಗುವಂಥಾ ಹೊಸ ಹೊಸ ವಿಷಯಗಳನ್ನು ಈ ಸಂಸ್ಥಾನದವರೇ ಹೆಚ್ಚು ಹೆಚ್ಚಾಗಿ ಬರೆದು ಪ್ರಕಟಿಸುತ್ತಾ ಬಂದಾರೆಂದು ನಿರೀಕ್ಷಿಸುತ್ತೇವೆ. ಈ ಸಂಚಿಕೆಯಲ್ಲಿ ಉಪಯೋಗಿಸಿರುವ ಅಕ್ಷರಗಳೂ, ಅದರ ಕಾಗದವೂ, ಅದರ ಅಚ್ಚಿನ ಕ್ರಮವೂ ಮೈಸೂರು ಗವರ್ನಮೆಂಟಿನವರ ಘನತೆಗೆ ಯೋಗ್ಯವಾದವುಗಳಾಗಿರುವುವೆಂದು ನಮಗೆ ತೋರುವುದಿಲ್ಲ. ಇವರ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧॥ ರೂಪಾಯಿ ಎಂತಲೂ ಈ ಸೀಮೆಯ ಶ್ಯಾನುಭೋಗರಿಗೂ ಪಟೇಲರಿಗೂ ೮ ಆಣೆ ಎಂತಲೂ ವಿಧಿಸಿದಾರೆ. ಆದ್ದರಿಂದ ಬೆಲೆಗೆ ತಕ್ಕಂತೆ ಇನ್ನು ಮುಂದಾದರೂ ಈ ಗೆಜೆಟ್ಟನ್ನು ಪ್ರಕಟಮಾಡಿಯಾರೆಂದು ನಿರೀಕ್ಷಿಸುತ್ತೇವೆ.

ಚಿಗಟಗಳೂ ಪ್ಲೇಗ್ ಉಪದ್ರವೂ.

ಪ್ಲೇಗ್ ಉಪದ್ರವು ಇಲಿ ಹೆಗ್ಗಣ ಸತ್ತ ಸ್ಥಳಗಳಲ್ಲಿ ಕಾಣಿಸಿಕೊಳ್ಳುತ್ತದೆಂಬುವುದು ಎಲ್ಲರಿಗೂ ತಿಳಿದಿರುವುದಷ್ಟೆ. ಇದೇ ರೀತಿ ಪೂರ್ವ ಕಾಲದಲ್ಲೂ ಆಗುತ್ತಿತ್ತೆಂಬುವುದಕ್ಕೆ ಅನೇಕ ಚರಿತ್ರೆಯ ಆಧಾರಗಳು ಸಿಕ್ಕಿರುತ್ತವೆ. ಈಗ ರೂಢಿಯಲ್ಲಿರುವ ಕೆಲವು ಸಾಮತಿಗಳೂ ಆ ಅರ್ಥವನ್ನೇ ಕೊಡುವವು. ಡಾಕ್ಟರುಗಳು ಕೂಡ ರೈಲಿನ ಮೇಲೂ ಗಾಡಿಗಳಲ್ಲೂ ಸಾಗಿ ಹೋಗುವ ಧಾನ್ಯಗಳಲ್ಲಿ ಇಲಿ ಹೆಗ್ಗಣಗಳು ಸುಂಕನ್ನು ತೆಗೆದುಕೊಂಡು ಹೋಗಿ ಊರಿಂದೂರಿಗೆ ಈ ಉಪದ್ರವನ್ನು ಹರಡುತ್ತವೆಂದು ಹೇಳುತ್ತಾ ಬಂದಿದಾರೆ. ಆದರೆ ಈ ರೋಗವು ಒಂದು ಇಲಿಯಿಂದ ಇನ್ನೊಂದು ಇಲಿಗೆ ಹ್ಯಾಗೆ ಅಂಟುವುವೋ, ಅದು ಇಲಿಯಿಂದ ಮನುಷ್ಯನಿಗೆ ಹ್ಯಾಗೆ ವ್ಯಾಪಿಸಿಯಾಗುವುದೋ, ಇವು ಮಾತ್ರ ಸ್ಪಷ್ಟವಾಗಿ ಗೊತ್ತಾಗಿರಲಿಲ್ಲ.

ಪ್ಲೇಗ್ ಉಪದ್ರವು ಷಾಂತಿಭೇದಿ ರೋಗದಂತೆ ಜಲದೋಷದಿಂದ ಬರುವ ಜಾತ್ಯವಲ್ಲವೆಂದು ನಂಬುತ್ತಾರೆ. ಷಾಂತಿಭೇದಿ ಉಪದ್ರವ ಕ್ರಿಮಿಗಳು ನೀರಿನಲ್ಲಿದ್ದುಕೊಂಡು, ಹೊಟ್ಟೆಗೆ ಸೇರಿ ರೋಗವನ್ನುಂಟುಮಾಡುವವು ಕ್ಷಯರೋಗವೂ ಕಿಡುಬೂ ಗಾಳಿಯಲ್ಲಿ ಚಲಿಸುವ ಆಯಾ ಕ್ರಿಮಿಗಳು ಮೂಗು ಬಾಯಿಗಳ ಮೂಲಕ ಶ್ವಾಸಕೋಶಕ್ಕೂ ಹೊಟ್ಟೆಗೂ ಸೇರೋಣದಿಂದ ಆಯಾ ರೋಗಗಳು ಉಂಟಾಗುತ್ತವೆಂದು ಹೇಳುವರು. ಆದರೆ ಪ್ಲೇಗ್ ಕ್ರಿಮಿಗಳು ಆ ರೀತಿ ಗಾಳಿಯ ಅಥವಾ ನೀರಿನ ಮೂಲಕ ಪ್ರಾಣಿಗಳಿಗೆ ವ್ಯಾಪನೆಯಾಗತಕ್ಕ ರೋಗವಲ್ಲವೆಂದು ಗೊತ್ತುಮಾಡಿರುವರು. ಈ ರೋಗದ ಕ್ರಿಮಿಗಳು ರಕ್ತದೊಳಗೇ ಪ್ರವೇಶಮಾಡಿ ರೋಗವನ್ನು ಹುಟ್ಟಿಸಬೇಕಾಗಿದೆ. ಈ ವಿಧಾನವನ್ನು ಡಾಕ್ಟರುಗಳು ಈಗ ಕಂಡುಹಿಡಿದಿರುತ್ತಾರೆ. ಚಿಗಟವೇ ಈ ರೋಗವನ್ನು ಹರಡತಕ್ಕ ಪ್ರಾಣಿಯು; ಅದು ಪ್ಲೇಗ್ ತಗಲಿದ ಇಲಿ ಹೆಗ್ಗಣಗಳ ದೇಹವನ್ನು ಕಚ್ಚಿ ರಕ್ತವನ್ನು ಹೀರಿ ಪ್ಲೇಗಿನ ಕ್ರಿಮಿಯನ್ನು ಸಂಪಾದನೆಮಾಡಿಕೊಂಡು ಹೋಗಿ ಜನರ ಮೈ ಮೇಲೆ ಕುಳಿತು ಅವರ ರಕ್ತವನ್ನು ಹೀರುವಾಗ್ಗೆ ತನ್ನಲ್ಲಿರುವ ಪ್ಲೇಗ್ ಕ್ರಿಮಿಯನ್ನು ಅವರ ರಕ್ತಕ್ಕೆ ಕೊಡುವುದು. ಇದೇ ರೀತಿಯಲ್ಲಿ ಈ ಚಿಗಟವು ಒಂದು ಇಲಿ ಹೆಗ್ಗಣದಿಂದ ಇನ್ನೊಂದು ಇಲಿ ಹೆಗ್ಗಣಕ್ಕೂ ಪ್ಲೇಗ್ ಉಪದ್ರವನ್ನು ತಂದುಬಿಡುತ್ತದೆ. ಇವಲ್ಲದೆ ಚಿ... ಗಳೂ ಕೂಡ ಮನುಷ್ಯರಂತೆಯೇ ಪ್ಲೇಗ್ ತಗಲಿ ಸಾ... ತ್ತವೆಂದೂ ಸಿದ್ಧಾಂತವಾಗಿದೆ.

ಈ ಕಾರಣಗಳಿಂದ ಮನೆಗಳೊಳಗೆ ಎಲ್ಲಾ ಭಾ... ಳೂ ಚೊಕ್ಕಟವಾಗಿಯೂ ಬೆಳಕು ಧಾರಾಳವಾಗಿ ಬೀ... ವಂತೆಯೂ ಇರಬೇಕಾದದ್ದು ಬಹು ಅವಶ್ಯ. ಕತ್ತಲ... ನೆಗಳೂ ಕೋಣೆಗಳೂ ಧೂಳು ಕುಳತೆ ಗೋಡೆಗ... ಇರುವ ಕಡೆಗಳಲ್ಲೆಲ್ಲಾ ಚಿಗಟಗಳು ಸೇರಿಕೊಂಡು ... ಬೇಗನೆ ಹೆಚ್ಚುವವೆಂದು ಖಂಡಿತವಾಗಿ ಹೇಳಬಹುದು. ... ಳ್ಳೆ ಕಡಿವರೆ ಹ್ಯಾಗೆ ಮಲೇರಿಯಾ ಎಂಬ ವಿಷಮಜ್ವರ ಉ... ಗುವುದೋ ಅದೇ ರೀತಿ ಚಿಗಟಗಳ ದೆಸೆಯಿಂದಲೇ ಪ್ಲೇ... ಉಪದ್ರ ಪ್ರವೃತ್ತವಾಗುತ್ತದೆಂದು ಗೊತ್ತು ಮಾಡಿ... ಆದದರಿಂದ ಸಮಸ್ತರೂ ತಮ್ಮ ಮನೆಗಳ ಒಳಗೂ ಹ... ಭಾಗದಲ್ಲೂ ಸ್ವಲ್ಪವೂ ಕೊಳಕೂ ಧೂಳೂ ಕ... ಸೇರದಂತೆಯೂ ಗಾಳಿ ಬೆಳಕು ಧಾರಾಳವಾಗಿ ಬೀ... ತೆಯೂ ಬಹು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿ... ಕೆಂದು ಈ ಮೂಲಕ ತಿಳಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್ ಎಂ ಫ್ರೇಸರ್ ಯ... ಮುಂದಿನ ಬುಧವಾರ ಬೆಂಗಳೂರಿಂದ ಶಿವಮೊಗ್ಗೆಯ ಕಡೆ ಸ... ಪಯಣಮಾಡುವವರಾಗಿದಾರೆ.

*****

ಕೋಲಾರದ ನೈರ್ ರೀಫ್ಸ್ ಎಂಬ ಚಿನ್ನದ ಗಣಿ ಕಂಪನಿ... ಆಸಾಮಾತ್ತಾಗಿ ಬಾಲಘಾಟ್ ಕಂಪನಿಯವರು ಒಂದುವಾದ ... ಪಾಯಿಗೆ ಕೊಂಡುಕೊಂಡರು

*****

ರಜದ ಮೇಲಿದ್ದ ಮೆ॥ ಎಂ. ಚಂಗೈಯ್ಯ ಚೆಟ್ಟಿಯವರು... ಕಾರದವರು ಕರೆಸಿಕೊಂಡು, ಅವರಿಗೆ ಚಿತ್ರದುರ್ಗದ ಡೆಪ್ಯ... ಮಿರ್ಷನರ ಕೆಲಸವನ್ನು ವಹಿಸಿರುತ್ತಾರೆ.

*****

ಶಿವಸಮುದ್ರದ ನೆಲ್ಲರ್, ಪಾರ್ಡ್ ಎಂಬಿಬ್ಬರ ಮೇಲೆ ... ಕೊಲೆಯ ಮೊಕದ್ದಮೆಯನ್ನು ಮದರಾಸ್ ಹೈ ಕೋರ್ಟಿನಲ್ಲಿ ... ವಿಚಾರಣೆ ಮಾಡಿಸುತ್ತಾರೆಂದು ವರ್ತಮಾನವಿದೆ.

*****

ಸರ್ಕಾರದವರು ಮೆ॥ ಕೆ. ವೆಂಕಟರಾಯರನ್ನೂ ಮೆ॥ ... ಡಾವ್ ಸಿಟಿ ಯವರನ್ನೂ ಅ॥ ಕಮಿಷನರ ದರ್ಜೆಯಲ್ಲಿ ... ೬ ನೆ ಕ್ಲಾಸಿಗೆ ಜುಲೈ ೧ ರ ಲಾಗಾಯತು ಬಡ್ತಿ ಮಾಡಿರುತ್ತಾ...

*****

ಬೆಂಗಳೂರು ಸಿಟಿ ವೆಸ್ಲಿಯನ್ ಹೈ ಸ್ಕೂಲ್ ಅಧ್ಯಕ್ಷರಾ... ಎ. ಆರ್. ಫುಲ್ಲರ್ ಯವರು ವಿಲಾಯಿತಿಗೆ ಹೋಗಿ ಬರುವ... ನೆನ್ನೆ ಪ್ರಯಾಣ ಮಾಡುವವರಾಗಿದ್ದರು. ಮುಂದಿನ ಜನವರಿ... ಲ್ಲಿ ಅವರು ವಾಪಸು ಬರುವಂತೆ ತಿಳಿಯುವುದು.

*****

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಧಿಕಾರಿಗಳ ವಿಷಯ... ಕಾರದವರು ಒಂದು ಮಸೂದೆ ಕಾನೂನ್ ಮಾಡಿ ಸರ್ಕಾರಿ ... ನಲ್ಲಿ ಮುಂದಿನ ವಾರ ಪ್ರಕಟಿಸುವವರಾಗಿದಾರೆ ಆದರ ವಿಷಯ... ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಮೂರು ತಿಂಗಳೊಳಗೆ ... ಪಡಿಸಬೇಕಾಗಿರುವುದು

*****

ಮೈಸೂರು ಸಂಸ್ಥಾನದಲ್ಲಿರುವ ವೈಶ್ಯಮಂಡಲಿಯವರೂ ... ವೀಯರೂ ತಮ್ಮ ತಮ್ಮ ಜನರನ್ನು ಅಭಿವೃದ್ಧಿಗೆ ತರುವ ವಿ... ಏರ್ಪಾಡು ಮಾಡುವುದಕ್ಕೋಸ್ಕರ ರಾಜಧಾನಿಯಲ್ಲಿ ಸಮಾ... ನಡಿಸುವವರಾಗಿದಾರೆಂದು ಕೇಳಿ ಸಂತೋಷಪಟ್ಟು, ಅವರು ... ಕವು ಸಾರ್ಥಕವಾಗಲೆಂದು ಹಾರೈಸುತ್ತೇವೆ.

ರಾಜಧಾನಿಯಲ್ಲಿ ವಿದ್ಯಾವಂತರಿಗೂ ವಿದ್ಯಾರ್ಥಿಗಳಿಗೂ ಉಪನ್ಯಾಸ ಮೂಲಕ ಸಹಸ್ರೋಪದೇಶ ಮಾಡುತ್ತಾ ಇದ್ದ ಮಿ॥ ನಾಯರ್ ಯವರಿಗೆ ಮೊನ್ನೆ ಸೋಮವಾರ ಸಾಯಂಕಾಲ ಅವರೆಲ್ಲ ಸೇರಿ ಒಂದು ಅಡ್ರೆಸ್ಸನ್ನು ಕೊಟ್ಟು ತಾವು ಚಂದಾ ಮೂಲಕ ಕೂಡಿಸಿದ್ದ ೩೧೦ ಚಿಲ್ಲರೆ ರೂಪಾಯನ್ನು ಬಹುಮಾನಮಾಡಿದರು

****

ರಾಜಧಾನಿಯಲ್ಲಿ ಸ್ಥಾಪನೆಯಾಗಿರುವ ಶ್ರೀಕೃಷ್ಣ ಗಾಯನ ಸಮಾಜಕ್ಕೆ ಒಂದು ಭಾರೀ ಕಟ್ಟಡವನ್ನು ಕಟ್ಟಿಸಬೇಕೆಂದು ಆಲೋಚಿಸಲ್ಪಡುತ್ತಿರುವುದರಿಂದ ಸಾಹುಕಾರ್ ಗಂಜಿ ನರಸುಂಹಯ್ಯನವರು ಆ ಕಟ್ಟಡಕ್ಕೆ ಬೇಕಾಗುವ ಸುಮಾರು ೩—೪ ಸಾವಿರ ರೂಪಾಯಿನ ನಾರಮುಟ್ಟನ್ನು ಧರ್ಮಾರ್ಥವಾಗಿ ಕೊಡುವಂತೆ ವಾಗ್ದಾನ ಮಾಡಿರುವುದಾಗಿ ಕೇಳುತ್ತೇವೆ

****

ಮಂಗಳೂರು ತಾ॥ ಬಳಕುಂಜಗ್ರಾಮದಲ್ಲಿ ಕಳೆದ ೫ ರ ವಾರ ದಲ್ಲಿ ಎರಡು (ಗಂಡು, ಹೆಣ್ಣು) ಹುಲಿಗಳು ಬಂದು ಇಬ್ಬರಿಗೆ ತುಂಬಾ ಘಾಯ ಮಾಡಿತು ಆದರೆ ಅವರ ಪ್ರಾಣಕ್ಕೇನೂ ಅಪಾಯವಾಗುವಂತಿಲ್ಲ ಆ ಎರಡು ಹುಲಿಗಳನ್ನೂ ಕರಿಂದ್ರೆ ಕೊಸ್ಲ ಜೋಸೆ ಪೂಜಾರಿ ಯವರು ಹೋಗಿ ಅದೇ ದಿನ ಕೊಂದುಹಾಕಿದರೆಂದು ಒಬ್ಬ ವರ್ತಮಾನದಾರರು ಬರೆಯುವರು

****

ಮಾರಿಕಣಿವೆ ಪ್ಲಾನ್ ಕಾವ ಗಾರಿಗಾಗಿ ಇಂಜನಿಯರ್ ಇಲಾಖೆಯವರು ಕುನ್ನಿಕೆರೆಯಲ್ಲಿ ಮದ್ದನ್ನು ತಯಾರು ಮಾಡಿಸುತ್ತಿದ್ದರು. ಮದ್ದಿನ ಮನೆಯು ಅಕಸ್ಮಾತ್ತಾಗಿ ಹತ್ತಿಕೊಂಡದ್ದರಿಂದ ಒಂಬತ್ತು ಜನರು ಪೈಸುಟ್ಟು ಪ್ರಾಣಬಿಟ್ಟರು ಇಬ್ಬರು ಹೆಂಗಸರು ಸ್ವಲ್ಪ ಗಾಯವಾಗಿ ಬದುಕಿಕೊಂಡಿದ್ದಾರೆ ಅಂದಿನಿಂದ ಸರ್ಕಾರದವರು ಮದ್ದು ತಯಾರಿ ವಿಷಯದಲ್ಲಿ ಹೊಸ ಕ್ರಮಗಳನ್ನು ರೂಪಿಸುತ್ತಿದ್ದಾರೆಂದು ತಿಳಿದುಬಂದಿದೆ

****

ಹೊಸದುರ್ಗದ ತಾಲ್ಲೂಕಿಗೆ ಸೇರಿದ ಮತ್ತೋಡು ಗ್ರಾಮದಲ್ಲಿ ರಾತ್ರಿಯೊಳಗೆ ಕಿರುಬನು ಬಂದು ಒಂದು ಕುರಿಯನ್ನು ಹಿಡಿದು ಹೋಗುವಾಗ ಕೆಲವು ನಾಯಿಗಳು ಸೇರಿ, ಕಿರುಬನ ಅಂಗಗಳನ್ನು ಹಿಡಿದುಕೊಂಡವಂತಲ್ಲ, ಅದರ ಕೂಗಿಗೆ ಸಮೀಪದಲ್ಲಿದ್ದ ರಾಮ ಸಿದ್ದಪ್ಪ ಇಬ್ಬರು ಹೋಗಿ ಅದನ್ನು ಕೊಡಲಿಯಿಂದ ಹೊಡೆದು ಕತ್ತರಿಸಿದರು ಹೊತ್ತುಕೊಂಡು ಹೋಗಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದರೆಂತಲೂ ಒಬ್ಬ ವರ್ತಮಾನದಾರರು ಬರೆಯುತ್ತಾರೆ

****

ಮೈಸೂರು ದೊಡ್ಡಕೆರೆಯ ನೀರನ್ನು ಉಪಯೋಗಿಸಕೂಡದೆಂದು ಸರ್ಕಾರದವರು ತಡೆದಿರೋಣದರಿಂದ ಇಲ್ಲಿನ ಜನರ ಮನಾಚರಣೆಗೂ ಆರೋಗ್ಯಕ್ಕೂ ಅನೇಕ ತೊಂದರೆಗಳುಂಟಾಗಿವೆ ಎಂತಲೂ ಮುಂದಾದರೂ ಜನರಿಗೆ ಆ ನೀರನ್ನು ಉಪಯೋಗಿಸುವಂತೆ ಅಪ್ಪಣೆ ಕೊಡಿಸಬೇಕೆಂತಲೂ ಶ್ರೀಮನ್ಮಹಾರಾಜರವರಿಗೂ, ಸೀನಿಯರ್ ಸರ್ಕಾರದವರಿಗೂ, ಡೆಪ್ಯುಟಿ ಕಮೀಷನರಿಗೂ ಅರ್ಜಿ ಕೊಟ್ಟುಕೊಳ್ಳಬೇಕೆಂಬದಾಗಿ ಮೊನ್ನೆ ಭಾನುವಾರ ಬೆಳಗ್ಗೆ ಆ ಕೆರೆಯ ಬಳಿ ಸುಮಾರು ೨೦೦ ಜನರು ಸಭೆ ನಡಿಸಿ ಗೊತ್ತು ಮಾಡಿದ್ದಾರೆ

****

ಗ್ರಾಮಾಂತರಗಳಲ್ಲಿರುವ ಜನರಿಗೆ ವಿದ್ಯೆ ಕಲಿಸುವುದು, ದೇಶೀಯ ಕಸುಬುಗಳನ್ನು ಜೀರ್ಣೋದ್ಧಾರ ಮಾಡುವುದು ಯೌವನಸ್ಥರನ್ನು ಹೊಸ ಹೊಸ ಕಸಬುಗಳನ್ನು ಕಲಿತು ಬರುವುದಕ್ಕಾಗಿ, ಕಳುಹಿಸುವುದು —ಈ ಉದ್ದೇಶಗಳನ್ನುಳ್ಳ ಒಂದು ಫಂಡು ಕಳೆದ ವಾರ ರಾಜಧಾನಿಯಲ್ಲಿ ಪ್ರಾರಂಭವಾಯಿತು ಈ ಫಂಡಿಗೆ ಶ್ರೀಮನ್ಮಹಾರಾಜರವರು ಪೇಟ್ರನ್, ದಿವಾನ್ ಮಿ॥ ಮಾಧವರಾಯರು ಪ್ರೆಸಿಡೆಂಟರು ಮಿ॥ ಎಂ ಕಾಂತರಾಜೇ ಅರಸಿನವರೂ, ಬಿ. ರಾಮಕೃಷ್ಣರಾಯರು ಎಚ್ ನಂಜುಂಡರಾಜೇ ಅರಸಿನವರೂ ವೈಸ್ ಪ್ರೆಸಿಡೆಂಟರುಗಳಾದ ವಿ ರಾಘವಾಚಾರ್ರು ಸಿ. ಕೃಷ್ಣರಾಯರೂ ಎಂ ವೆಂಕಟಕೃಷ್ಣಯ್ಯನವರೂ ಸೆಕ್ರೆಟರಿಗಳು, ಮತ್ತು ಮಿ॥ ವಿ ರಾಮಸ್ವಾಮಿ ಟ್ರೆಜರರು, ಈ ರೀತಿ ಏರ್ಪಾಡಾಗಿದೆ

****

ಒಬ್ಬ ವರ್ತಮಾನದಾರರು ಬರೆಯುವದೇನಂದರೆ —ಫ್ರೇಜರ್ ಪೇಟೆಯ ನಂ॥ ೫ ಪದ್ಮಾವತಿ ಬಾಯಮ್ಮನವರು, ನಾಗರೀಕರಹಿತರಾದ ಮಹಾತ್ಮರ ನಾಗರೀಕ ಮಾರ್ಗವನ್ನು ತಮ್ಮ ಪತ್ರಿಕೆಯ ಮೂಲಕ ತೋರಿಸಿದ್ದರಿಂದ ಇವರಿಗೆ ನಾನು ವಿಧೇಯನಾಗಿರುವೆನು ಮಹಾ ಸ್ಥಾಪಿಸಿಕೊಂಡಿರುವ ಲೋಕರಕ್ಷಣಾವಿಷಯದ ಈ ನಾಗರೀಕ ಸರ್ವರಿಗೂ ಸಮ್ಮತವಾದುದುದ್ದರಿಂದ ಪ್ರಜಾಹಿತಕ್ಕೆಂದು ಈ ನಮ್ಮ ಮೈಸೂರು ಸಂಸ್ಥಾನದ ದಿವಾನ್ ಸಾಹೇಬ್ ಬಹದ್ದೂರರವರ ನಾಗರೀಕ ವಿಬಿಧ ಹೃದಯಕ್ಕೆ ಒಪ್ಪಿ, ಕ್ಷಿಪ್ರವಲ್ಲಿಯೇ ಪದ್ಮಾವತಿ ಬಾಯಮ್ಮನವರ ಮನವು ಆನಂದಾಬ್ಧಿಯಲ್ಲಿ ಮುಳುಗಲೆಂದೂ, ದಿವಾನರ ಕಟಾಕ್ಷದಿಂದ ಸಕಲರೂ ನಿರುತ ಸುಖಾನುಭವಿಗಳಾಗಲೆಂದೂ, ತನ್ಮೂಲಕ ನಾನೂ ಕೃತಾರ್ಥನಾಗಬೇಕೆಂದೂ ಹಾರೈಸುತ್ತೇನೆ ಈ ವಿಷಯವು ಮಾನ್ಯರ ಸಭೆಯಲ್ಲಿ ಅತ್ಯುತ್ತಮವಾದ್ದು ವಿಸ್ತರಿಸಲ್ಪಟ್ಟ ತದನುಸಾರವಾಗಿ ನಡೆಯುವಂತೆ ತಕ್ಕ ನಿರ್ಬಂಧಗಳು ಆಗಲು ದೀರ್ಘ ಕಾಲಾತೀತವಾಗಬಹುದು ಆದ ಪರಿಮಿತಿ ಇರದೆ ಮುಂದುವರಿಯುತ್ತಲಿರುವ ನಮ್ಮ ಸರ್ಕಾರ ಅನುಗ್ರಹಿಸಿ ಕೃತಾರ್ಥರನ್ನಾಗಿ ಮಾಡಬೇಕೆಂದು ಕೇಳುತ್ತೇನೆ

****

ಒಬ್ಬ ವರ್ತಮಾನದಾರರು ಬರೆಯುವದೇನಂದರೆ —ಈ ಗ್ರಾಮದಲ್ಲಿ ಹಳೆ ಮೊದಲಾದ ವ್ಯಾಪಾರಗಳನ್ನು ಮಾಡಿ ಜೀವನ ಮಾಡುತ್ತಿದ್ದ ಜಮಾಯಿಸದ ಜಾತಿ ಇಮಾಂ ಸಾಬಿ ಎಂಬವನು ಎಂದಿನ ತೆ ತನ್ನ ವ್ಯಾಪಾರಕ್ಕಾಗಿ ಹಳ್ಳಿಗಳ ಕಡೆಗೆ ಮಡಿಕೆಗಳನ್ನು ತೆಗೆದುಕೊಂಡು ಹೋಗಿ ಎಲ್ಲವನ್ನೂ ಮಾರಿ ಅದರಿಂದ ಬಂದ ರಾಗಿಯನ್ನು ಊರಿಗೆ ತಂದು ಬೀಸಿ ಹಿಟ್ಟು ಮಾಡಿ ಅವರ ಮನೆಯಲ್ಲಿದ್ದ ೪—೫ ಜನಗಳು ಊಟ ಮಾಡಿದರು ತರುವಾಯ ಊಟ ಮಾಡಿದ ಒಂದು ಗಂಟೆಯೊಳಗಾಗಿ ಎಲ್ಲರಿಗೂ ಹೊಟ್ಟೆಯಲ್ಲಿ ಗುಡುಗುಗಳಂತೆ ಉಬ್ಬರಿಸಿಕೊಂಡು ಉಸಿರಾಡುವುದಕ್ಕೆ ಯತ್ನವಿಲ್ಲದೆ ಇದ್ದರು ಅವನ ಸೊಸೆಯು ಗರ್ಭಿಣಿಯಾಗಿದ್ದದ್ದರಿಂದ ಈ ಯಾತನೆಯಲ್ಲಿಯೇ ಹೆಣ್ಣು ಮಗುವನ್ನು ಪ್ರಸವಿಸಿದಳು ಆದರೂ ಅವಳಿಗೂ ಉಬ್ಬರವು ಹಾಗೆಯೇ ಇದ್ದದ್ದು ೩ ದಿನಗಳ ನಂತರ ೩ ಜನಕ್ಕೆ ಇಳಿದಿರುತ್ತೆ ಬಾಕಿ ಇಬ್ಬರು ಗಂಡಸರಿಗೆ ಈ ನೋವಿನಲ್ಲೇ ಕಾಯಿಲೆಯಂತೆ ರೋಗ ಸಂಭವಿಸಿರುತ್ತೆ ಇಂಥಾ ರಾಗಿಯನ್ನು ಯಾವ ಮಹಾಪಾಪಿಯನು ಇಟ್ಟುಕೊಂಡು ಮೋಸದಿಂದ ಜನಗಳಿಗೆ ಕೊಡುವನೋ ಅವನೇ ಸದ್ಯಕ್ಕೆ ಎಲ್ಲರಿಗೂ ಯಮ ಸಂತೆ ಆಗಿರುವನು

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ॥ ಎಫ್ ಇ ಸಿ ಕಾರ್ ಯವರಿಗೆ ಅಕ್ಟೋಬರ್ ೩ ರಿಂದ ೨೬ ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಚಿಕ್ಕಬಳ್ಳಾಪುರದ ಮುನ್ಸೀಫ್ ಮಿ॥ ಎ ನರಸಿಂಹ ಐಯ್ಯಂಗಾರ್ರು ಸೆಪ್ಟಂಬರ್ ೨೦ ರಿಂದ ೨೫ ರ ವರೆಗೆ ಕಾಯಿಲೆ ರಜದ ಮೇಲಿದ್ದರು ಆ ಕಾಲದಲ್ಲಿ ಮಿ॥ ಮಹದೇವೈಯ್ಯನವರು ಚಿಕ್ಕಬಳ್ಳಾಪುರದ ಮುನ್ಸೀಫ್ ಕೋರ್ಟಿನ ಛಾರ್ಜನ್ನು ವಹಿಸಿರುತ್ತಾರೆ

ಶಿವಮೊಗ್ಗೆಯ ಸಬ್ ಅ॥ ಸರ್ಜನ್ ಮಿ॥ ಎಸ್ ಕೆ ಹನುಮಂತರಾಯರಿಗೆ ಜುಲೈ ೨೪ರಿಂದ ಇಪ್ಪತ್ತೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಸಬ್ ಅ॥ ಸರ್ಜನ್ ಮಿ॥ ರಾಜಗೋಪಾಲ ಮೊದಲಿಯಾರ್ರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಹೋಗಿ ಶಿವಮೊಗ್ಗ ಆಸ್ಪತ್ರೆಯಲ್ಲಿ ಕೆಲಸ ಮಾಡಿದರು

ಮಿ॥ ಎಂ ಪಿ ವಿಶ್ವನಾಥ ರಾಯರು ಸೆಪ್ಟಂಬರ್ ೨೦ರಲ್ಲಿ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇದ್ದ ಒಂದು ತಿಂಗಳು ಹತ್ತು ದಿನಗಳ ರಜವನ್ನು ರದ್ದು ಮಾಡಿದೆ

ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮಿ॥ ಎಂ ಜಿ ಕೃಷ್ಣಸ್ವಾಮಿ ರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಪ್ರೊಬೇಷನರಿ ಎಕ್‌ಸ್ಟ್ರಾ ಅ॥ ಕಮಿಷನರ್ ಮಿ॥ ಹರ್ಸ್ ಅಲಿಯವರಿಗೆ ಕೊಟ್ಟಿರುವ ರಜವನ್ನು ಅವರ ಇಷ್ಟ ಪ್ರಕಾರ ರದ್ದು ಮಾಡಿದೆ

ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಮಿ॥ ಎಚ್ ರಾಮಾನುಜೈಯ್ಯಂಗಾರ್ರಿಗೆ ನವಂಬರ್ ೪ರಿಂದ ಡಿಸೆಂಬರ್ ೩೧ರ ವರೆಗೆ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ತರುವಾಯ ಅವರು ಕೆಲಸದಿಂದ ನಿವೃತ್ತರಾಗತಕ್ಕದ್ದು

ಅಮಲ್ದಾರ್ ಮಿ॥ ಬಿ ಎನ್ ಚನ್ನಿಗಪ್ಪನವರು ಜೂನ್ ೧೧ ರಲ್ಲಿ ತಿ ನರಸೀಪುರ ತಾಲ್ಲೂಕಿನ ಛಾರ್ಜನ್ನು ವಹಿಸಿಕೊಂಡಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ಇದ್ದ ರಜವನ್ನು ರದ್ದು ಮಾಡಿದೆ

ಆಸ್ಪತ್ರೆ ಅಸಿಸ್ಟೆಂಟ್ ಕೆ ನಾರಾಯಣೈಯ್ಯಂಗಾರ್ರನ್ನು ಅಕ್ಟೋಬರ್ ೨ರ ಲಾಗಾಯತು ಒಂದನೇ ದರ್ಜೆಗೆ ಬಡ್ತಿ ಮಾಡಿದೆ

ಮಿ॥ ಎಫ್ ಇ ಸಿ ಕಾರ್ ಯವರು ಮಿ॥ ಎಚ್ ಎಚ್ ಸ್ಪಾರ್ಕ್ಸ್ ಯವರಿಂದ ಅಕ್ಟೋಬರ್ ೨೯ ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸ್ ಛಾರ್ಜನ್ನು ವಹಿಸಿಕೊಂಡರು

ಮಿ॥ ಎಚ್ ಎಚ್ ಸ್ಪಾರ್ಕ್ಸ್ ಯವರು ಮಿ॥ ಕೆ ಆರ್ ಶ್ರೀನಿವಾಸೈಯ್ಯಂಗಾರ್ರಿಂದ ಬೆಂಗಳೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಅಕ್ಟೋಬರ್ ೨೯ರಲ್ಲಿ ವಹಿಸಿಕೊಂಡರು

ಮೈಸೂರು ಸಂಸ್ಥಾನದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾದ ಲೆಫ್ಟಿನೆಂಟ್ ಕರ್ನಲ್ ಜೆ ಸ್ಮಿತ್ ಯವರಿಗೆ ಇಂಡಿಯಾ ಗವರ್ನಮೆಂಟಿನವರು ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಅದರ ಜೊತೆಗೆ ಒಂಬತ್ತು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದ್ದಾರೆ ಇವರ ಬದಲಿಗೆ ಬೊಂಬಾಯಿನ ಮೇಜರ್ ಟಿ ಡಬ್ಲಿಯು ಇರ್ವಿನ್ ಯವರು ಸೀನಿಯರ್ ಸರ್ಜನ್‌ರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಅರಮನೆ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮಿ॥ ಬಿ ಪಿ ರಾಘವಲ್ಲಾಯಿಡ್ಡಿಯವರಿಗೆ ಐದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಭೂಗರ್ಭಶೋಧನಾ ಇಲಾಖೆಯ ಅ॥ ಸೆಕ್ರೆಟರಿ ಮಿ॥ ಇ ಡಬ್ಲಿಯು ವೆದರಲ್ ಯವರಿಗೆ ಮೂರು ತಿಂಗಳ ಪ್ರಿವಿಲೆಜ್ ರಜವನ್ನೂ ಹದಿನೆಂಟು ತಿಂಗಳ ಫರ್ಲೋ ರಜವನ್ನೂ ಕೊಟ್ಟಿದೆ

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಮೇಲ್ಭಾಗದ ಲೇಖನದ ಮೇಲೂ "ಬಹುಮಾನದ ಮೇಲಾಟ" ಎಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ಬರೆಯಬೇಕು (೨) ಲೇಖನವು ವರ್ತಮಾನದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಎಂಟು ದಿವಸಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧ ಕಾಲಮಿಗೆ ಹೆಚ್ಚಿರಬಾರದು. ಒಂದು ಗಾಬರಿಯಂತ ಪೇಟ್ರಾಸವರೂ ಬರಬಹುದು (೩) ಪ್ರತಿಸೋಮವಾರ ಲೇಖನವು ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಿರಬೇಕು (೪) ಬಹುಮಾನ ಪಡೆದವರ ಹೆಸರನ್ನು ವಾರ ವಾರ ಪ್ರಕಟಿಸುವದಲ್ಲದೆ, ಹಣವನ್ನು ಮನಿಯಾರ್ಡರ ಮೂಲಕ ರವಾನಿಸುವೆವು (೫) ಬಹುಮಾನ ನಿಮಿತ್ತವಾಗಿ ನಮಗಲ್ಲಿಗೆ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ೩ ನೇ ತಿಂಗಳಲ್ಲಿ ಒಬ್ಬ ಲೇಖಕನಿಗೇ ಎರಡು ಸಾರಿ ಬಹುಮಾನ ದೊರೆಯದು]

[ಈ ವರ್ತಮಾನ ಕಳುಹಿಸಿದ ಮಿ॥ ಎನ್ ಆರ್ ಗುರುಮೂರ್ತಿ, ಎಂ ಇ ವಿಭಾಗ, ಕಿಸಾನ್ ಜಿ ಐ ಪಿ ರೈಲ್ವೆ, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೆ]

ಕೃಷ್ಣಾ ರೈಲ್ ಸ್ಟೇಷನ್ ಬಜಾರಿನಲ್ಲಿ ಬಾರಿ ಕಳುವು

ಇದೇ ತಿಂಗಳು ೩ ನೇ ತಾ॥ ಮಾರವಾಡಿ ಧರ್ಮಸಾಲೆಯಲ್ಲಿ ಆ ದಿನ ಅಂಗಡಿ ಮಾರ್ವಾಡಿ ಶ್ರೀ ಕಾಣಿಕೆ ಸಾಹುಕಾರ ಗಂಗಪ್ಪನಾಗಪ್ಪನ ಬಾಬತು ಸಾವಿರ ರೂಪಾಯಿನ ಎರಡು ಥೈಲಿಗಳು ಅದೇ ರಾತ್ರಿ ಕಳುವಾದವು ಸಾಹುಕಾರ ಗಂಗಪ್ಪನಾಗಪ್ಪನು ಆ ಸಾಯಂಕಾಲ ಸಾವಿರ ರೂಪಾಯಿಗಳನ್ನು ಎರಡು ಚೀಲದಲ್ಲಿ ತುಂಬಿ ಪೆಟ್ಟಿಗೆಯಲ್ಲಿ ಹಾಕಿ ಬೀಗದ ಕೈಯನ್ನು ಮಗನ ವಶಕ್ಕೆ ಕೊಟ್ಟು, ತಾನು ಗ್ರಾಮಕ್ಕೆ ಅದೇ ರಾತ್ರಿ ಹೋದನು ಈಗ್ಗೆ ಹತ್ತು ಹನ್ನೆರಡು ದಿನಗಳಿಂದಲೂ ರಾಯಚೂರಿನಿಂದ ಬಂದು ತಾನು ಒಬ್ಬ ವ್ಯಾಪಾರಿ ಎಂದುಕೊಂಡು ತಿರುಗುತ್ತಿದ್ದ ಒಬ್ಬ ಯೌವನಸ್ಥ ಲಿಂಗಾಯತನು ಗಂಗಪ್ಪನಾಗಪ್ಪನನ್ನು ವಾಚಾಲತೆಯಿಂದ ನಂಬಿಸಿ, ಅಲ್ಲೇ ಊಟ ಮಾಡುತ್ತಾ ಸಹಾಯ ಮಾಡುತ್ತಾ ಅಕ್ಕ ನಂಬಿಕೆಯನ್ನು ತೋರಿಸಿ, ಸಮಯವನ್ನು ಕಾಯುತ್ತಾ ಇದ್ದನು ಕಳುವು ಆದ ದಿನ ರೂಪಾಯಿಗಳ ಥೈಲಿಯನ್ನು ನೋಡಿದ್ದನು ಸಾಹುಕಾರನು ಇಲ್ಲದ್ದು ಕಂಡು ಊಟ ಪಸ್ತ್ಯರೆ ತೀರಿಸಿಕೊಂಡು ಸಾಹುಕಾರನ ಮಗನ ಪಕ್ಕದಲ್ಲಿ ಮಲಗಿದನು ಮಧ್ಯರಾತ್ರಿ ಎಲ್ಲರೂ ನಿದ್ರೆ ಮಾಡುವಾಗ ಅಕ್ಕ ವ್ಯಾಪಾರಿಯು ಪಕ್ಕದಲ್ಲಿ ಮಲಗಿದ್ದ ಸಾಹುಕಾರನ ಮಗನ ಸೊಂಟದಲ್ಲಿದ್ದ ಬೀಗವನ್ನು ಮೆಲ್ಲಗೆ ಬಿಚ್ಚಿ ಬೀಗ ತೆರೆದು ಒಳಗೆ ನುಗ್ಗಿ ಪೆಟ್ಟಿಗೆಯಲ್ಲಿದ್ದ ಸಾವಿರ ರೂಪಾಯಿನ ಥೈಲಿಗಳೆರಡನ್ನೂ ಅಪಹರಿಸಿಕೊಂಡು, ಸಮೀಪದಲ್ಲಿರುವ ಒಂದು ಹಳ್ಳದಲ್ಲಿ ಮರಳಿನಲ್ಲಿ ಹೂಳಿಟ್ಟು, ತಾನು ವಾಪಸು ಬಂದು ತಾನು ಮಲಗಿದ್ದಲ್ಲಿ ತಿಳಿಯದಂತೆ ಮಲಗಿಕೊಂಡನು. ಉದಯವಾಗುತ್ತಲೇ ಸಾಹುಕಾರನು ಬಂದು ನೋಡುವಾಗ ರೂಪಾಯಿಗಳ ಥೈಲಿ ಇಲ್ಲದೆ ಇದ್ದು ನಂತರ ಗಾಬರಿಯಾಗಿ ಆ ಕಡೆ ಈ ಕಡೆ ಹುಡುಕುತ್ತಾ ಅವರಿವರನ್ನು ನೋಡುತ್ತಾ ಕೇಳುತ್ತಾ ಇರುವಾಗ, ಕಳ್ಳನು ಮೆಲ್ಲಗೆ ಹಳ್ಳದ ಕಡೆಗೆ ಹೋಗುವದನ್ನು ತಿಳಿದು ಹಿಂದಿನಿಂದ ಸಾಹುಕಾರನ ಮಗನು ಹಿಂಬಾಲಿಸಿದನು ಕಳ್ಳನು ಹಳ್ಳದಲ್ಲಿ ಕೂತು ನೆಲವನ್ನು ಬಗೆಯುತ್ತಾ ಮುಚ್ಚುತ್ತಾ ಇದ್ದ ಹಾಗೂ ತಾನು ಬಹಿರ್ಭೂಮಿಗೆ ಕೂತವನ ಹಾಗೂ ಕಳ್ಳನ ಸುಳಿವು ನೋಡಿಕೊಂಡು ಓಡಿ ಹೋಗಿ ತಂದೆಗೆ ತಿಳಿಸಿದನು ಸಾಹುಕಾರನು ಮತ್ತಿಬ್ಬರನ್ನು ಸಂಗಡ ಕರಕೊಂಡು ಕಳ್ಳನಿರುವಲ್ಲಿಗೆ ಹೋಗಿ ನೋಡುತ್ತಾ ಇರುವಾಗ! ಕಳ್ಳನು ಇವರಿಗೆ ತೋರದಂತೆ ಮರೆಮಾಡಿಕೊಂಡು ನಿಂತಿದ್ದನು ಅಲ್ಲಿಗೆ ಸಾಹುಕಾರನು ಹೋಗಿ ಹಲವು ಬಗೆಯಿಂದ ಮಾತಾಡಿ—ಥೈಲಿಗಳನ್ನು ಕೊಡು ನಿನಗೆ ನೂರು ರೂಪಾಯಿ ಕೊಟ್ಟು ಈ ಸಂಗತಿ ಸರಕಾರಕ್ಕೆ ತಿಳಿಸುವದಿಲ್ಲ ಮಾನದಿಂದ ಕಳುಹಿಸುತ್ತೇನೆಂದು ವಾಗ್ದಾನ ಮಾಡಿದ್ದಕ್ಕೆ ವಂಚನೆಗಾರನು ಮೆಲ್ಲಗೆ ಬಂದು ಗಂಟು ಇರುವಲ್ಲಿ ಮಣ್ಣು ತೋರಿ ನಂತರ ಥೈಲಿಗಳೆರಡನ್ನೂ ಕೊಟ್ಟನು ಆದರೆ ಮಾತಿನಲ್ಲಿ ನಂಬಿಕೆ ಕೊಟ್ಟ ಸಾಹುಕಾರನು ಆಸಾಮಿಯನ್ನು ಸರ್ಕಾರಕ್ಕೆ ಕೊಡದೇ ಬಿಟ್ಟದ್ದಲ್ಲದೆ ಅವನನ್ನು ಕೇಳಿ ದಾರಿ ಖರ್ಚಿಗೆ ಕೊಟ್ಟು ರೈಲು ಹತ್ತಿಸಿ ಕಳುಹಿಸಿದನು ಸಾಹುಕಾರರೇ, ವರ್ತಕರೇ, ಎಚ್ಚರವಾಗಿರಿ, ಇಂಥಾ ಠಕ್ಕುಗಾರರನ್ನು ನಂಬಿ ಸೇರಿಸಿಕೊಂಡು ಬಹಳ ತೊಂದರೆಗೆ ಒಳಗಾಗಬೇಡಿರಿ

ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ವರ್ತಮಾನ

ಹುಲಿ ಮನುಷ್ಯನನ್ನು ಕೊಂದಿತು

ಯಳಂದೂರು ಕಸಬಾ ಹಲ್ಲೂರ ವ ಬೆಸ್ತರ ಜಾತಿಯಲ್ಲಿ ಕೆಲವರು ಬಿಳಿಗಿರಿರಂಗಸ್ವಾಮಿ ಬೆಟ್ಟದ ಜಂಗಲಿಗೆ ಹೋಗಿ ಸೌದೆಯನ್ನು ಹೊತ್ತುಕೊಂಡು ಬಂದು ಜೀವನ ಮಾಡುವ ಪದ್ಧತಿ ಉಂಟು ತಾ॥ ೩ ನೇ ಭಾನುವಾರ ಪ್ರಾತಃಕಾಲದಲ್ಲಿ ಬೆಸ್ತರ ಜಾತಿ ಬಿಳಿಗಿರಿ ಮಗ ನಂಜ ಮತ್ತು ಲಿಂಗನ ಮಗ ವೆಂಕಟರಮಣ ಈ ಎರಡು ಜನಗಳೂ ಜಂಗಲಿಗೆ ಸೌದೆ ತರತಕ್ಕ ಉದ್ದಿಶ್ಯ ಹೊರಟರು ಆ ದಿವಸ ಯಾರೂ ಜೊತೆಯಲ್ಲಿ ಸೌದೆಗೆ ಬರಲಿಲ್ಲವಾದ್ದರಿಂದ ಇವರಿಬ್ಬರೂ ಕೃಷ್ಣಯ್ಯನ ಕಟ್ಟೆ ಗುಡ್ಡದಿಂದಲೇ ಸೌದೆ ತರಬೇಕೆಂದು ಅಲ್ಲಿಗೆ ಹೋಗಿ ಒಂದೊಂದು ಕಡೆ ಒಬ್ಬೊಬ್ಬನು ಮಚ್ಚುಗಳಿಂದ ಸೌದೆಯನ್ನು ಕಡಿಯುತ್ತಿದ್ದರು ಸಮೀಪದ ಪೊದೆಯಲ್ಲಿದ್ದ ಹುಲಿಯು ಆ ಶಬ್ದವನ್ನು ಕೇಳಿ ಇವರನ್ನು ಹೊಂಚು ಹಾಕುತ್ತಿತ್ತು ಇವರುಗಳು ಮಾತ್ರ ಹುಲಿಯನ್ನು ಕಾಣದೆ ಸೌದೆ ಆಸೆಯಿಂದ ನಂಜನೆಂಬುವನು ಮುಂದಕ್ಕೆ ಹೋಗಿ ಇನ್ನೊಂದು ಪೊದೆಯಲ್ಲಿ ಸೌದೆಯನ್ನು ಕಡಿಯುತ್ತಿದ್ದನು ಆಗ ಹುಲಿಯು ಹಿಂದುಗಡೆಯಲ್ಲಿಯೇ ಬಂದು ನಂಜನನ್ನು ಕಚ್ಚಿಕೊಂಡಿತು ಆಗ ಅವನು ಗಾಬರಿಯಾಗಿ ನೋಡಲು ಹುಲಿಯಾದ್ದರಿಂದ ಕೂದಲಿ ಕೂಗಿಕೊಂಡನು ಆ ಶಬ್ದವನ್ನು ಕೇಳುತ್ತಲೇ ಇವನ ಜೊತೆಯಲ್ಲಿದ್ದವನು ಹಿಂತಿರಿಗಿ ನೋಡಿ, ಹೆದರಿಕೊಂಡು ಒಂದು ಸಣ್ಣ ಪೊದೆಯಲ್ಲಿ ಅಡಗಿಕೊಂಡು ನೋಡುತ್ತಿರಲು, ಹುಲಿಯು ನಂಜನನ್ನು ಹಿಡಿದು ಕೆಳಕ್ಕೆ ಕುಕ್ಕಿ ಅವನ ಮೇಲೆ ಕೂತುಕೊಂಡು ರಕ್ತವನ್ನು ಹೀರಿ, ಮಾಂಸವನ್ನು ತಿನ್ನುತ್ತಾ ಅವನನ್ನು ಎಳೆದುಕೊಂಡು ಹೋಗುತ್ತಿರಲು, ಆಗ ವೆಂಕಟರಮಣನು ಹುಲಿಯು ಮರೆಯಾದ ಮೇಲೆ ಮೆಲ್ಲಮೆಲ್ಲನೆ ಪೊದೆಗಳ ಸಂದಿಯಿಂದ ಬಂದು ಊರ್ಕಾಡದ ಪಾಚರಿಗೆ ತಿಳಿಸಿದನು ಅನಂತರ ಅವನು ನಮ್ಮ ಪೊಲೀಸ್ ಇನ್ಸ್‌ಪೆಕ್ಟರಿಗೆ ತಿಳಿಸಲು ಆವಾಗ ಸಾಯಂಕಾಲವಾದ್ದರಿಂದ ಅವರು ಹೊರಡಲು ಶಕ್ಯವಾಗಲಿಲ್ಲ ಮಾರನೇ ದಿನ ಇನ್ಸ್‌ಪೆಕ್ಟರು ಜಮಾದಾರರು ಕೆಲವು ಜನಗಳನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಆ ಸ್ಥಳದಲ್ಲಿ ನೋಡುವಲ್ಲಿ ಹುಲಿಯು ಇರಲಿಲ್ಲ ನಂಜನ ಶರೀರದಲ್ಲಿ ಅರ್ಧವನ್ನು ತಿಂದುಕೊಂಡು, ಬಾಕಿ ಅರ್ಧ ಉಳಿದಿತ್ತು ಅದನ್ನು ಅಜಮಾಯಿಷಿ ಮಾಡಿ, ಅಲ್ಲಿಯೇ ದಫನ್ ಮಾಡಿಸಿಬಿಟ್ಟರು ಸತ್ತು ಹೋದ ನಂಜನಿಗೆ ಸುಮಾರು ೩೦ ವರ್ಷ ವಯಸ್ಸಾಗಿತ್ತು ಇವನ ತಂದೆತಾಯಿಗಳ ವ್ಯಸನವನ್ನು ಹೇಳಲಸಾಧ್ಯವಾಗಿದೆ

ಈ ಪ್ರಾಂತ್ಯ ಅನೇಕ ಬಡಜನಗಳು ಜಂಗಲಿಗೆ ಹೋಗಿ ಸೌದೆಯನ್ನು ತೆಗೆದುಕೊಂಡು ಬಂದು ಮಾರಿ ಜೀವನ ಮಾಡುತ್ತಿದ್ದರು ಈ ಹುಲಿಯು ಕಾಟದಿಂದ ಗುಡ್ಡಿಗಳಿಗೆ ದನಕರುಗಳನ್ನು ಬಿಡುವದಕ್ಕೂ ಮನೆಗಳಲ್ಲಿ ಬೆಂಕಿ ಉರಿಸುವದಕ್ಕೂ ಕಾಡುಗಳಿಂದ ಸೌದೆ ತರುವದಕ್ಕೂ ಹೆದರಿ ಜೀವನ ಮಾಡಲು ತುಂಬಾ ತೊಂದರೆ ಪಡುತ್ತಿದ್ದಾರೆ ಸಮರ್ಥರಾದ ನಮ್ಮ ತಾಲ್ಲೂಕು ಅಮಲ್‌ದಾರರು ಮತ್ತು ಪೊಲೀಸ್ ಇನ್ಸ್‌ಪೆಕ್ಟರವರು ಈ ತೊಂದರೆಯನ್ನು ತಪ್ಪಿಸಿಯಾರೆಂದು ನಂಬಿದ್ದೇವೆ

ನಂಜನಾಯಕ

ಗತಿಸಿದ "ಪಂಡಿತರತ್ನಂ" ಸೇ॥ ಕಸ್ತೂರಿರಂಗಾಚಾರ್ಯರು.

ನಮ್ಮ ಅರಮನೆಯ ಧರ್ಮಾಧಿಕಾರಿಗಳಾಗಿದ್ದ ಪಂಡಿತರತ್ನಂ ವೇ॥ ಕಸ್ತೂರಿ ರಂಗಾಚಾರ್ಯರು ಕಳೆದ ಗುರುವಾರ ಸಾಯಂಕಾಲ ಕಾಲಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಕಳೆದ ಎರಡು ತಿಂಗಳಿಂದ ಇವರ ದೇಹಸ್ಥಿತಿಯು ಅನುಕೂಲವಾಗಿರಲಿಲ್ಲ. ಸರಿಯಾದ ಚಿಕಿತ್ಸೆಯನ್ನು ಹೊಂದಿ ಗುಣಮುಖವಾಗುತ್ತಲಿತ್ತು. ಅಷ್ಟರಲ್ಲಿಯೇ ಹಠಾತ್ತಾಗಿ ಈ ಮಹನೀಯರಿಗೆ ಅಕಾಲಮರಣವು ಸಂಭವಿಸಿತು. ಇದು ಬಹಳ ಶೋಚನೀಯವಾದದ್ದು. ಈ ಪಂಡಿತರು ನಿಜವಾಗಿ ಪಂಡಿತರಲ್ಲಿ ರತ್ನಪ್ರಾಯರಾಗಿದ್ದರು. ಇವರು ಈ ಸಂಸ್ಥಾನದಲ್ಲಿಯೂ ಕಾಶಿ, ನವದ್ವೀಪ, ಕಲ್ಕತ್ತೆ ಮುಂತಾದ ಪ್ರಸಿದ್ಧಸ್ಥಳಗಳಲ್ಲೂ ಸಂಸ್ಕೃತ ವಿದ್ಯೆಯನ್ನು ವ್ಯಾಸಂಗಮಾಡಿ ಅದ್ವಿತೀಯ ಪಂಡಿತರಾಗಿದ್ದರು. 'ಪಂಡಿತರತ್ನಂ' ಎಂಬ ಅಸಾಧಾರಣವಾದ ಬಿರುದು ಈ ಮಹನೀಯರಲ್ಲಿ ಅನ್ವರ್ಥವಾಗಿ ಪರಿಣಮಿಸಿತ್ತು. ಇವರು ಈಚೆಗೆ ರಾಜಧಾನಿಯಲ್ಲಿರುವ ಜೂಬಿಲೀ ಪುಸ್ತಕಭಂಡಾರದಲ್ಲಿ ಮುಖ್ಯ ಪಂಡಿತರಾಗಿ ಸೇರಿ ವೇದಶಾಸ್ತ್ರಪುರಾಣೇತಿಹಾಸಗಳಿಗೆ ಸಂಬಂಧಪಟ್ಟ ಜೀರ್ಣವಾಗಿದ್ದ ಅನೇಕ ಗ್ರಂಥಗಳನ್ನು ಉದ್ಧರಿಸಿದರು. ರಾಜಧಾನಿಯ ಸಂಸ್ಕೃತಕಾಲೇಜಿನಲ್ಲಿ ಬೋಧಕರಾಗಿಯೂ ಶ್ರೀಪರಕಾಲಮಠದಲ್ಲಿ ಪಂಡಿತರಾಗಿಯೂ ಇದ್ದರು. ಈಗ್ಗೆ ಕೆಲವು ದಿವಸಗಳಲ್ಲಿ ನಮ್ಮ ಶ್ರೀಮನ್ಮಹಾರಾಜರವರು ಸರ್ವತೋಮುಖವಾಗಿಯೂ, ಅನ್ಯಾದೃಶವಾಗಿಯೂ ಇದ್ದ ಇವರ ಪರಿಣತ ಪಾಂಡಿತ್ಯಮಹಿಮೆಯನ್ನು ನೋಡಿ, ಇವರಿಗೆ ಅರಮನೆಯ ಧರ್ಮಾಧಿಕಾರವನ್ನು ವಹಿಸಿದರು. ಇವರ ಮರಣವು ಮೈಸೂರು ವಿದ್ವನ್ಮಂಡಲಿಗೆ ಮಾತ್ರವೇ ಅಲ್ಲದೆ ಇಂಡಿಯಾದೇಶದ ವಿದ್ವನ್ಮಂಡಲಿಗೂ ಅಪಾರವಾದ ಕ್ಲೇಶವನ್ನುಂಟುಮಾಡಿರುವುದು. ಉತ್ತರದೇಶದ ಶ್ರೀಮದ್ಬಹಾರಾಜರವರ ಗುರುಪದವಿಗೆ ಪಾಂಡಿತ್ಯದಲ್ಲಿಯೂ, ಗುಣದಲ್ಲಿಯೂ ಇವರು ಸರ್ವೋತ್ತಮರೆಂದು ಸಕಲ ವಿದ್ವಜ್ಜನರಿಂದಲೂ ಭಾವಿಸಲ್ಪಟ್ಟಿದ್ದರು. ಇಂಥಾ ಮಹಾ ವಿದ್ವಾಂಸರಿಗೆ ಈ ಅಕಾಲಮರಣವು ಪ್ರಾಪ್ತವಾದುದಕ್ಕೋಸ್ಕರ ಎಷ್ಟು ಕ್ಲೇಶಪಟ್ಟರೂ ಸ್ವಲ್ಪವೇ ಆಗಿರುತ್ತದೆ. ಇವರಿಗೆ ಮರಣಕಾಲದಲ್ಲಿ ೪೩ ವರುಷ ವಯಸ್ಸಾಗಿತ್ತು. ಇವರಿಗೆ ಮೂರು ಜನ ಗಂಡುಮಕ್ಕಳೂ, ಇಬ್ಬರು ಹೆಣ್ಣುಮಕ್ಕಳೂ ಇರುವರು.

ಮೋಸಗಾರನ ವೃತ್ತಾಂತವು.

ಜೋಧಪುರದ ಮಹಾರಾಜನೆಂದು ಹೇಳಿಕೊಂಡು ಬರೋಡಾ ಸಂಸ್ಥಾನದಲ್ಲಿ ರಾಜಯೋಗ್ಯವಾದ ಸತ್ಕಾರಗಳನ್ನು ಅನುಭೋಗಿಸಿ ಕಡೆಗೆ ಬೊಂಬಾಯಿನಲ್ಲಿ ಸಿಕ್ಕಿಬಿದ್ದ ಸರ್ದಾರ್‌ಸಿಂಗ್ ಜಸವಂತ್‌ಸಿಂಗ್ ಎಂಬ ರಜಪುತ್ರ ಯೌವನಸ್ಥನಿಗೆ ಬರೋಡಾ ಸಂಸ್ಥಾನದ ಸೆಷನ್ಸ್ ಜಡ್ಜಿಯವರು ಈಗತಾನೇ ಎರಡು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ. ಆದರೆ ಈ ರಜಪುತ್ರನ ಪೂರ್ವಚರಿತ್ರೆಯು ಇದೇ ರೀತಿ ಪ್ರಸಿದ್ಧವಾದದ್ದಾಗಿರುವುದು. ಹ್ಯಾಗೆಂದರೆ, ಅವನು ಈಗ್ಗೆ ಸುಮಾರು ಇನ್ನೊಂದು ವರುಷಗಳ ಕೆಳಗೆ ಅಹಮ್ಮದನಗರಕ್ಕೆ ಹೋಗಿ ತಾನು ನಂದಾಡ್ ರಾಜನ ಸಮೀಪಬಂಧುವೆಂದೂ ತನ್ನನ್ನು ಒಬ್ಬ ಪುರೋಹಿತನು ಕಾರಣಾಂತರದಿಂದ ಕರೆದುಕೊಂಡು ಬಂದುಬಿಟ್ಟನೆಂದೂ ಹೇಳಿಕೊಂಡು, ಅಲ್ಲಿ ವಿಶೇಷವಾದ ಮಾನಮರ್ಯಾದೆಗಳನ್ನೂ ಸತ್ಕಾರಗಳನ್ನೂ ಅನುಭೋಗಿಸಿ, ಅಲ್ಲಿಂದ ಚೋಟಾ ಉದಯಪುರಕ್ಕೆ ಹೋಗಿ ಅಲ್ಲೂ ಒಂದು ತರಹಾ ಮೋಸದ ಕಥೆಯನ್ನು ಹೇಳಿ, ಬಹು ಅಪೂರ್ವವಾದ ಬಹುಮಾನಗಳನ್ನು ಸಂಪಾದಿಸಿಕೊಂಡದ್ದಲ್ಲದೆ ಅಲ್ಲಿನವರಿಂದ ದ್ರವ್ಯ ಮತ್ತು ಧನಸಹಾಯಗಳನ್ನು ಪಡೆದು, ದಾರಿಯಲ್ಲೇ ಆ ಜನರಿಗೆ ಮೋಸಮಾಡಿ ಅವರನ್ನು ವಾಪಸು ಕಳುಹಿಸಿ, ನಂದಾಡಿಗೆ ಹೋದನು. ಆದರೆ ಅಲ್ಲಿ ಅವನನ್ನು ಹಿಡಿದು ಒಂದು ತಿಂಗಳ ಸಜಾ ಹಾಕಿಬಿಟ್ಟರು. ಜೈಲಿನಿಂದ ಬಿಡುಗಡೆ ಹೊಂದಿದ ಕೂಡಲೇ ಅವನು ಮತ್ತೆ ಪೂರ್ವದಂತೆಯೇ ಕಥೆಗಳನ್ನು ಹುಟ್ಟಿಸಿಕೊಂಡು ಸಂದರ್ಭ ದೊರೆತ ಕಡೆಗಳಲ್ಲಿ ಅಮೂಲ್ಯವಸ್ತ್ರಾಭರಣಗಳನ್ನು ಅಪಹರಿಸಿದನು. ಅಲ್ವಾರ್ ಸೆಷನ್ಸ್ ಜಡ್ಜರು ಇವನನ್ನು ದಸ್ತಗಿರಿ ಮಾಡಿ ೧೮೯೮ ರಲ್ಲಿ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿದರು. ಆ ಶಿಕ್ಷೆಯನ್ನು ಅನುಭವಿಸಿ ಮುಗಿದ ಒಡನೆಯೇ ಅವನು ನೆಟ್ಟಗೆ ಹೋಷಿಯಾರ್‌ಪುರಕ್ಕೆ ಹೋಗಿ ತಾನು ಜೋಧಪುರದ ಮಹಾರಾಜನೆಂತಲೂ ಅಲ್ವಾರದ ರಾಜನೆಂತಲೂ ಕಂಡಕಂಡವರಿಗೆಲ್ಲಾ ತಿಳಿಸುತ್ತಾ ಜನರನ್ನು ಮೋಸಪಡಿಸುತ್ತಾ ಬಂದಾಗ ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿದರು. ಆದರೇನು? ಕೂಡಲೇ ಉಪಾಯಾಂತರದಿಂದ ಅಂದರೆ ಜಾಮೀನುಕೊಟ್ಟು ಬಂದು ತಿರಿಗಿ ಸಿಕ್ಕದೆ ತಪ್ಪಿಸಿಕೊಂಡು, ಅಲ್ಲಿಂದ ಅಲ್ವಾರಕ್ಕೆ ಹೋಗಿ ಅಲ್ಲಿ ದುಃಖಕರವಾದ ಒಂದು ಕಥೆಯನ್ನು ಹುಟ್ಟಿಸಿ ಹೇಳಿಕೊಂಡು, ಹಣಸಂಪಾದನೆಮಾಡಿ ದ್ವಾರಕೆಗೆ ಹೋಗುವುದಾಗಿ ಹೇಳಿ ಹೊರಟು, ಮೆಸಾನಾ ಎಂಬಲ್ಲಿಗೆ ಹೋಗಿ ತಾನೇ ಜೋಧಪುರದ ಮಹಾರಾಜನೆಂದು ಮತ್ತೆ ನಟಿಸಿದನು. ಆದರೆ ಆ ಕೂಡಲೇ ಅಲ್ಲಿಂದ ತಲೆತಪ್ಪಿಸಿಕೊಂಡು ಹೋಗುತ್ತಿರುವಾಗ ಸಿಕ್ಕಿಬಿದ್ದನು. ಅಹಮದಾಬಾದ್ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ತಿಂಗಳ ಸಜಾ ವಿಧಿಸಿದರು. ಈ ಶಿಕ್ಷೆಯು ಮುಕ್ತಾಯವಾದ ಕೂಡಲೇ ಪೋಲೀಸಿನವರು ಅವನನ್ನು ಬೊಂಬಾಯಿಗೆ ಸಾಗಿಸಿಕೊಂಡು ಹೋಗಿ ಮಹಾರಾಜನೆಂದು ನಟಿಸಿದ್ದಕ್ಕಾಗಿ ಅಲ್ಲಿ ಎರಡು ವರುಷ ಕಠಿಣ ಸಜಾ ಹಾಕಿಸಿದರು. ತರುವಾಯ ಕಳೆದ ವರುಷ ಜನವರಿ ತಿಂಗಳಲ್ಲಿ ಇವನು ಸೂರತ್ತಿನಲ್ಲಿರು ತ್ತೇನೆಂತಲೂ ತಾನು ಅಲ್ವಾರ್ ಸಂಸ್ಥಾನದ ರಾಜವಂಶಕ್ಕೆ ಸೇರಿದವನೆಂತಲೂ ಸಿರೋಹಿಯ ದಿವಾನರವರಿಗೆ ಹೇಳಿ, ಅವರಿಂದ ಕೆಲವು ದ್ರವ್ಯವನ್ನು ತೆಗೆದುಕೊಂಡನು. ಆದರೆ ಈ ಮೋಸಕೃತ್ಯವು ಪತ್ತೆ ಆಗಿ ಅಲ್ಲಿ ಮತ್ತೆ ಹದಿನೆಂಟು ತಿಂಗಳ ಕಠಿಣ ಸಜಾ ಅನುಭವಿಸಿದನು. ಈ ಸಜವನ್ನು ಅನುಭವಿಸಿದ ಮೇಲೆಯೇ ಅವನು ಬರೋಡಾ ಸಂಸ್ಥಾನಕ್ಕೆ ಹೋಗಿ ತಾನೇ ಜೋಧಪುರದ ಮಹಾರಾಜನೆಂದು ಹೇಳಿಕೊಂಡು ಸತ್ಕಾರಹೊಂದಿದನು. ಈಗ ವಿಧಿಸಲ್ಪಟ್ಟಿರುವ ಎರಡು ವರುಷದ ಶಿಕ್ಷೆಯನ್ನು ಅನುಭವಿಸಿ ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ಅವನು ಇನ್ನೇನು ಮಾಡುವನೋ ನೋಡಬೇಕಾಗಿದೆ.

ಭಾರೀ ನೀರಾವರಿ ಕಾಮಗಾರಿಯು.

ಈ ಸಲ ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಕಾಶ್ಮೀರಕ್ಕೆ ದಯಮಾಡಿದಾಗ್ಗೆ ದಾರಿಯಲ್ಲಿ ಜೇಲಂ ನದಿಯ ಕಣಿವೆಯಲ್ಲಿ ಭಾರೀ ಅಣೆ ಕಟ್ಟಿರುವ ಖಾಂಕಿ ಎಂಬ ರಾಜ್ಯದಲ್ಲಿ ಸ್ವಲ್ಪ ಹೊತ್ತು ಇಳಿದು, ಅಲ್ಲಿ ವ್ಯವಸಾಯಾಭಿವೃದ್ಧಿಗಾಗಿ ಸರ್ಕಾರಿ ಇಂಜನಿಯರುಗಳು ಮಾಡಿರುವ ಏರ್ಪಾಡುಗಳನ್ನು ಸ್ವಲ್ಪ ಮಟ್ಟಿಗೆ ಪರಾಂಬರಿಸಿದರು. ಈ ಅಣೆಕಟ್ಟಿನಿಂದ ಚೇನಾಬ್, ರಾವಿ ನದಿಗಳ ನಡುವೆ ಇರುವ ವಿಸ್ತಾರವಾದ ಮತ್ತು ಇದುವರೆಗೆ ಬರೀ ಬಂಜರಾಗಿ ಬಿದ್ದಿದ್ದ ಭೂಪ್ರದೇಶವೆಲ್ಲಾ ತರೀ ವ್ಯವಸಾಯವಾಗುವುದು. ಆ ಪ್ರದೇಶವು ಇದುವರೆಗೆ ನಿರ್ಜನವಾದ ಅರಣ್ಯವಾಗಿತ್ತು. ೪೦ ಅಡಿಯಿಂದ ೧೫೦ ಅಡಿಯವರಿಗೂ ಕೊರೆದರೂ ನೀರು ಸಿಕ್ಕುವ ಸ್ಥಳವಲ್ಲ. ಮಳೆ ಬೀಳುವುದೇ ಬಹಳ ಸ್ವಲ್ಪ. ಬರುವುದೂ ಖಂಡಿತವಲ್ಲ. ಆ ಪ್ರಾಂತ್ಯದಲ್ಲಿ ಒಂದು ನಾಲೆಯನ್ನು ತೋಡಿ ನೀರು ತಂದು ವ್ಯವಸಾಯ ನಡಸಬೇಕೆಂದು ಗವರ್ನಮೆಂಟಿನವರು ಕಳೆದ ೧೮೭೦ ನೆ ಇಸವಿಯಲ್ಲಿ ಯೋಚನೆ ಮಾಡಲಾರಂಭಿಸಿದರು. ಆದರೆ ಈ ನೀರಾವರಿ ಕಾಮಗಾರಿಗೆ ಅಂದಾಜಾಪಟ್ಟಿ ತಯಾರಾಗಲೆಂದು ಗವರ್ನಮೆಂಟ್ ಹುಕುಂ ಹುಟ್ಟುವುದಕ್ಕೆ ಹತ್ತು ವರುಷಗಳಾದವು. ೧೮೭೯ರಲ್ಲಿ ಅಂದಾಜಾಪಟ್ಟಿಯು ಸಿದ್ಧವಾಯಿತು. ಆದರೆ ಆಗ ಅದು ಸ್ಯಾಂಕ್ಷನ್ ಆಗದೆ ಹೋಯಿತು. ೧೮೮೦ ನೆ ಇಸವಿಯ ವರೆಗೆ ಈ ವಿಷಯ ಏನಾಯಿತೋ ಯಾರಿಗೂ ಗೋಚರಕ್ಕೆ ಬರಲಿಲ್ಲ. ಆ ವರುಷ, ಪ್ರಾಂತ ಕಾಲದಲ್ಲಿ ಬರುವ ಕೆಲವು ಅಪಾರವಾದ ನೀರನ್ನು ಕಟ್ಟಿಸಿ ವ್ಯವಸಾಯಕ್ಕೆ ತಿರುಗಿಸುವ ಏರ್ಪಾಡು ಮಾಡಬೇಕೆಂದು ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದರು. ಇದರಂತೆ ಕಾಮಗಾರಿ ನಡೆದು ೧೮೮೭ ರಲ್ಲಿ ಅಲ್ಲಿ ಒಂದು ನಾಲೆಯನ್ನು ತೋಡಿದರು. ಆದರೇನು? ಮಳೆಯು ಮಿತವಾದ್ದರಿಂದ ಬೇಡ ತರಿಗೆ ಕೊಂಡು ನಾಲೆಯನ್ನು ನಿರಾಕರಿಸಿ ಮಾಡಿತು. ಆ ನದಿಗೆ ಸರಿಯಾದ ಅಣೆ ಕಟ್ಟಿ ತುಂಬ ಮುಂತಾದ್ದನ್ನು ಕ್ರಮವಾಗಿಟ್ಟು ನಾಲೆಗಳನ್ನು ತೆಗೆಯುವುದೇ ಅವಶ್ಯವೆಂದು ಕಂಡ ಬಂದದ್ದರಿಂದ ೧೮೮೯ ರಲ್ಲಿ ಅದಕ್ಕೆ ಆಗಬೇಕಾದಂತೆ ಕಾಮಗಾರಿ ಪಟ್ಟಿಯನ್ನು ತಯಾರುಮಾಡಿದರು. ಇದು ವಿಲಾಯತಿಗೆ ಹೋಗಿ ಇಂಡಿಯಾ ಸ್ಟೇಟ್ ಸೆಕ್ರಟರಿಯವರ ಬಳಿ ಸಿಕ್ಕಿಕೊಂಡು, ಕಡೆಗೆ ೧೮೯೦ ರಲ್ಲಿ ಅವರ ಒಪ್ಪಿಗೆಯನ್ನೂ ಸ್ಯಾಂಕ್ಷನನ್ನೂ ಪಡೆದು ಬಂದಿತು. ಅದರಂತೆ ೧೮೮೯ ರಲ್ಲಿ ಚೇನಾಬ್ ನದಿಯ ಅಡ್ಡಲಾಗಿ ಅಣೆಯೂ ತೂಬೂ ಕಟ್ಟಲಾರಂಭವಾಗಿ ೧೮೯೨ ರಲ್ಲಿ ಅವೆರಡೂ ಮುಕ್ತಾಯವಾದವು. ಆದರೂ ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳೂ ನಾಲೆಗಳೂ ಎಲ್ಲಾ ಸಿದ್ಧವಾಗುವಲ್ಲಿಗೆ ೧೯ ಎನೆ ವರುಷವು ಕಂಡಿತು. ಅದುವರೆಗೆ ಅಷ್ಟು ಕಾಮಗಾರಿಗಳಿಗೂ ೨,೫೬೧,೭೯,೨೪೫ ರೂಪಾಯಿ ಖರ್ಚಾಯಿತು. ಈಚೆಗೆ ೧೯೦೫ನೆ ಇಸವಿಯ ವರೆಗೆ ಅನೇಕ ಉಪನಾಲೆಗಳನ್ನು ಹೊಸ ಕಾಮಗಾರಿಗಳನ್ನು ಮಾಡಿಸಿರುತ್ತಾರೆ. ಇದರ ಖರ್ಚು ಸೇರಿಕೊಂಡರೆ ಈ ನೀರಾವರಿ ಕಾಮಗಾರಿಗೆಲ್ಲಾ ಒಟ್ಟಾಗಿ ಎರಡು ಕೋಟಿಯೂ ಎಂಬತ್ತೊಂದು ಲಕ್ಷ ರೂಪಾಯಿ ಮಟ್ಟಿಗೆ ವೆಚ್ಚವೆಂತೆ ಗೊತ್ತಾಗುವುದು.

ಇಂಡಿಯಾ ಗವರ್ನಮೆಂಟಿನವರು ಮಾಡಿರುವ ಈ ಅಪಾರವಾದ ನೀರಾವರಿ ಕಾಮಗಾರಿಯಿಂದ ೧೯೦೪-೦೫ನೆ ಸಾಲಿನಲ್ಲಿ ಇಪ್ಪತ್ತು ಲಕ್ಷ ಎಕರೆ ಜಮೀನು ತರೀ ಸಾಗುವಳಿಗೆ ಬಂದು, ಅದರಿಂದ ಸರ್ಕಾರಕ್ಕೆ ಖರ್ಚು ಜಾತಾ ೭೮,೬೯,೫೨೬ ರೂಪಾಯಿ ನಿವ್ವಳ ಉಟ್ಟುವಳಿ ಆಗಿರುತ್ತದೆ. ಇನ್ನೂ ನಾಲಾ ಕಾಮಗಾರಿಗಳೆಲ್ಲಾ ಪೂರೈಸಿ ಸರಿಯಾಗಿ ನೀರು ಸರಬರಾಜಾದಲ್ಲಿ ಈಗ್ಗಿಂತಲೂ ಬಹಳ ಹೆಚ್ಚು ಜಮೀನು ತರೀ ವ್ಯವಸಾಯಕ್ಕೆ ಬಂದೀತೆನ್ನುವುದಕ್ಕೆ ಸಂಶಯವಿಲ್ಲ. ಅಣೆಕಟ್ಟೆಯಿಂದ ತಂದಿರುವ ದೊಡ್ಡ ನಾಲೆಯು ೩೦೦ ಅಡಿ ಅಗಲವಾಗಿಯೂ ೧೦ ಅಡಿ ಆಳವಾಗಿಯೂ ೪೦ ಮೈಲಿ ಉದ್ದವಾಗಿಯೂ ಇರುವುದು. ಇದರ ಕೆಳ ನಾಲೆಗಳು ೪೦೦ ಮೈಲಿ ದೂರ ಹೋಗಿರುವುವು. ಮತ್ತೆ ಆ ಕೆಳ ನಾಲೆಗಳಿಂದ ಇನ್ನೂ ಸಣ್ಣ ನಾಲೆಗಳು ೨,೦೦೦ ಮೈಲಿ ಉದ್ದವಿರುತ್ತವೆ. ಇದಲ್ಲದೆ ೧೨,೦೦೦ ಮೈಲಿ ವಿಸ್ತಾರಕ್ಕೆ ನೀರು ಮಡುವಾಯಿಗಳಿಂದ ಹಾಯಿಸಲ್ಪಡುವುದು. ಆ ಎರಡು ನದಿಗಳ ನಡುವೆಯೂ ಉದ್ದಕ್ಕೂ ಒಂದು ರೈಲ್ ರಸ್ತೆಯನ್ನು ಹಾಕಿರುತ್ತಾರೆ. ಮೇಜರ್ ಪೊಫಾಂ ಯಂಗ್‌ಎಂಬುವರು ಹೊಸದಾಗಿ ಪ್ರಜೆಗಳನ್ನು ಕರೆದುತಂದು ಆ ಪ್ರಾಂತ್ಯದಲ್ಲಿ ನಿಲ್ಲಿಸಿ ಮನೆಮಠಗಳನ್ನು ಅವರಿಂದ ಕಟ್ಟಿಸಿ ವ್ಯವಸಾಯ ಮಾಡಿಸಲಾರಂಭಿಸಿದರು. ಇದುವರೆಗೆ ಪಾಳುಬಿದ್ದಿದ್ದ ೩,೫೦೦ ಚದರ ಮೈಲಿ ವಿಸ್ತಾರವುಳ್ಳ ಈ ಪ್ರದೇಶವು ಈಗ ಜನಭರಿತವಾಗಿಯೂ ಫಲಭರಿತವಾಗಿಯೂ ಆಗಿರುವುದು.

ಇಂಥಾ ಅಪಾರವಾದ ನೀರಾವರಿ ಕಾಮಗಾರಿಯನ್ನೂ ಅದರಿಂದ ಆ ಪ್ರಾಂತ್ಯಕ್ಕೆ ಉಂಟಾದ ಫಲಪ್ರಯೋಜನಾಧಿಕ್ಯವನ್ನೂ ವೈಸ್‌ರಾಯಿ ಪ್ರಭುಗಳು ಪರಾಂಬರಿಸಿ ತುಂಬಾ ಸಂತೋಷಪಟ್ಟು ಅಲ್ಲಿಂದ ಮುಂದಕ್ಕೆ ತೆರಳಿದರು.

ಇಂಡಿಯಾ ದೇಶದ ವೃತ್ತಾಂತಗಳು.

ಫೈಜಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಅಯೋಧ್ಯೆಯಲ್ಲಿ ಅಯೋಧ್ಯಾ ಮಹಾರಾಜರವರು ಕಾಲವಾದರೆಂದು ಕಳೆದ ಶುಕ್ರವಾರದ ದಿನ ತಂತೀ ವರ್ತಮಾನ ಬಂದಿದೆ.

✱✱✱✱

ಗಂಜಾಂ ಡಿಸ್ಟ್ರಿಕ್ಟಿಗೆ ಸೇರಿದ ರಸೂಲ್‌ಕೊಂಡೆಯಲ್ಲಿ ಕೆಲವು ಜನರು ಸೇರಿ ಭೂಸ್ಥಾಪನೆಯಾದ ನಿಧಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಒಬ್ಬ ಸಣ್ಣ ಹುಡುಗನನ್ನು ಬಲಿ ಕೊಟ್ಟರೆಂದು ವರ್ತಮಾನ ಬಂದಿದೆ.

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಗೋರಖ್‌ಪುರದ ಜ್ಯಾಪ್ಟಾನ ತಾಲೂಕಿನೊಳಗೆ ಒಂದು ತರಹಾ ಜೇಡಿಮಣ್ಣು ಸಿಕ್ಕಿದ್ದು ಇದರಿಂದ ಸಿಮೆಂಟ್ ಎಂಬ ಉತ್ಕೃಷ್ಟವಾದ ಗಾರೆ ಪುಡಿ ತಯಾರುಮಾಡಬಹುದೆಂದು ಹೇಳುವರು.

✱✱✱✱

ಘನ ಎಂಸ್ಟರ್ ಜಿ ಯು ಪೋಪ್ ಎಂಬ ಮಿಷನರಿಯವರು ಒಂದು ಅಪೂರ್ವವಾದ ತಮಿಳು ನಿಘಂಟನ್ನು (ಡಿಕ್ಷನರಿ)ಪ್ರಕಟಿಸುವವರಾಗಿದ್ದಾರೆ. ಈ ಗ್ರಂಥರಚನೆಗೆ ಮದರಾಸ್ ಗವರ್ನಮೆಂಟಿನವರು ಅವರಿಗೆ ೩೦,೦೦೦ ರೂಪಾಯಿ ಸಹಾಯಮಾಡುವರೆಂದು ತಿಳಿದು ಬಂದಿದೆ.

✱✱✱✱

ಕಲ್ಕತ್ತಾ ಪಟ್ಟಣದಲ್ಲಿ ಪೋಲೀಸಿನವರು ೨೦ ಮಂದಿ ಭಿಕ್ಷುಕರನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಇವರಲ್ಲಿ ಕೆಲವರಿಗೆ ಮ್ಯಾಜಿಸ್ಟ್ರೇಟರು ಹಿಂದೆಯೇ ಒಂದು ಸಲ ಒಂದು ಸಜವನ್ನು ವಿಧಿಸಿದ್ದರಾದ್ದರಿಂದ ಈಗ ತಲಾ ೭-೩-೪ ದಿನ ಕಠಿಣ ಸಜಾ ಹಾಕಿದರು.

✱✱✱✱

ಲಾ 'ಇರ್—ವಿಯರ್ಜ ವಿಯರ್ ರೋಡಿನಲ್ಲಿ ಕಳೆದ ಕೆಲವು ರೈತರು ಗಾಜಿನಂತೆ ಸ್ವಚ್ಛವಾದ ಬಿಳಿಯ ಬಣ್ಣದ ಏಡು ಪ್ರಮಾಣವುಳ್ಳ ಒಂದು ನಾಗರ ಹಾವನ್ನು ಕಂಡು ಕೊಂದರು. ತ್ವಾರ ಕಿರಿಯ ಹಾವುಗಳಲ್ಲಿ ಇಂಥಾದ್ದನ್ನು ಇದುವರೆಗೆ ಯಾರೂ ನೋಡಿಲ್ಲವೆಂದು ಹೇಳಲಾಗಿದೆ.

✱✱✱✱

ಕಲ್ಕತ್ತೆಯಲ್ಲಿರುವ ಮಿಕ್ಡೊನಲ್ಡ್ ಎಂಬೊಬ್ಬ ಸ್ತ್ರೀಯು ಬಾಬು ೧೫॥ ಲಕ್ಷ ರೂಪಾಯಿನ ಆಸ್ತಿಯನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಬಾಬಿನ ಮೇಲೆ ರಂಗೂನ್ ಪಟ್ಟಣಕ್ಕೆ ಕಳುಹಿಸಿದಳು. ಆ ಪೆಟ್ಟಿಗೆಯನ್ನು ಯಾರೋ ಮಾರ್ಗದಲ್ಲೇ ಎತ್ತಿಹಾಕಿಬಿಟ್ಟರು. ಪೋಲೀಸಿನವರು ಪತ್ತೆಯಾದ ಮನಸಾಗುತ್ತಿದ್ದಾರೆ.

✱✱✱✱

ಹಿಂದೂಸ್ಥಾನದ ಉತ್ತರದೇಶದಲ್ಲಿ ಕೆಲವು ಕಡೆ ಕ್ಷಾಮಪೀಡಿತರಿಗೋಸ್ಕರ ಕೆಲವು ಕಡೆ ರಿಲೀಫ್ ಕ್ಯಾಂಪುಗಳನ್ನು ಮಾಡಿದರು. ಪೂರ್ವ ಬಂಗಾಳದಲ್ಲಿ ೧೩,೦೭೯ ಜನರೂ, ಬಿಹಾರದಲ್ಲಿ ೪೬,೯೫೩ ಜನರೂ, ಬೊಂಬಾಯಿ ಆಧಿಪತ್ಯದಲ್ಲಿ ೧,೧೯೦ ರೂ ಸರ್ಕಾರದವರ ಪೋಷಣೆಯಲ್ಲಿದ್ದರು.

✱✱✱✱

ಬಿಕಾನೀರ್ ಸಂಸ್ಥಾನದ ಮಹಾರಾಜರವರು ಅಲ್ಲಿನ ಕೆಲವು ದ್ವಮಹೇಶರನ್ನು ಹಿಡಿಸಿ ಬಂದೀಖಾನೆಯಲ್ಲಿ ಹಾಕಿಸಿದರು. ಅನಂತರ ಇಂಡಿಯಾ ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಗವರ್ನಮೆಂಟಿನವರು ಅದಕ್ಕೆ ಗಮನಕೊಡಲಿಲ್ಲವಾದಕಾರಣ ಅವರು ವಿಲಾಯತಿಯಲ್ಲಿರುವ ಸ್ಟೇಟ್ ಸೆಕ್ರಟರಿಯವರಿಗೆ ಅರ್ಜಿ ಹಾಕಿಕೊಂಡಿದ್ದಾರೆ.

✱✱✱✱

ಹಿಂದೂಸ್ಥಾನದ ಪ್ರಜೆಗಳ ಪೈಕಿ ಯಾರಾದರೂ ಟ್ರಾನ್ಸ್‌ವಾಲಕ್ಕೆ ಹೋಗಬೇಕಾದರೆ ಅವರು ಮೊದಲು ಇಲ್ಲಿನ ಇಂಡಿಯಾ ಗವರ್ನಮೆಂಟಿನ ಅಧಿಕಾರಿಗಳಿಂದಾಗಲಿ ಬ್ರಿಟಿಷ್ ರೆಸಿಡೆಂಟರಿಂದಾಗಲಿ ಸರಿಯಾದ ಸರ್ಟಿಫಿಕೇಟುಗಳನ್ನು ಪಡೆದು ಹೋಗಬೇಕೆಂತಲೂ ಇಲ್ಲವಾದರೆ ಟ್ರಾನ್ಸ್‌ವಾಲ್ ಗವರ್ನಮೆಂಟಿನವರು ಅಲ್ಲಿಗೆ ಸೇರಿಸಿಕೊಳ್ಳುವುದಿಲ್ಲವೆಂತಲೂ ಇಷ್ತಿಹಾರು ಹಾಕಿಸಿರುತ್ತಾರೆ.

✱✱✱✱

ಮದ್ರಾಸ್ ಆಧಿಪತ್ಯಕ್ಕೆ ಸೇರಿದ ತಾಡಿ ಎಂಬ ಗ್ರಾಮದಲ್ಲಿ ಕಳ್ಳರು ಒಬ್ಬ ಸಾಹುಕಾರನ ಲಕ್ಷಾಂತರ ರೂಪಾಯಿಗಳನ್ನು ಕಳುವು ಮಾಡಿದರೆಂದು ತಿಳಿಸಿದ್ದೆವಷ್ಟೆ. ಕಳ್ಳರನ್ನು ಹಿಡಿದುಕೊಡುವವರಿಗೆ ೧೫ ಸಾವಿರ ರೂಪಾಯಿ ಇನಾಂ ಕೊಡುವಂತೆ ಆ ಸಾಹುಕಾರನು ತಿಳಿಸಿದ್ದನು. ಪೋಲೀಸಿನವರು ನಾಲ್ವರನ್ನು ದಸ್ತಗಿರಿ ಮಾಡಿ, ಇದುವರೆಗೆ ೫೯ ರೂಪಾಯಿನ ಮಾಲುಗಳನ್ನು ಪತ್ತೆಮಾಡಿದ್ದಾರೆ.

✱✱✱✱

ಬಿಹಾರ್ ಆಧಿಪತ್ಯಕ್ಕೆ ಸೇರಿದ ಬ್ಯಾಂಕಾಕ್ ಪಟ್ಟಣದಲ್ಲಿ ರಘು ಎಂಬೊಬ್ಬ ಆಸಾಮಿಯು ಪೈಕಿಯು ಪೋಲೀಸಿನವರ ಪಹರೆಯಲ್ಲಿ ಮನೆಗೆ ಹೋಗಿ ಬೇರೆ ಬಟ್ಟೆಗಳನ್ನು ಹಾಕಿಕೊಂಡು ಬರುತ್ತೇನೆಂದು ತನ್ನ ಕೊಠಡಿಯೊಳಗೆ ನಿಂತು ಪೆಟ್ಟಿಗೆಯಲ್ಲಿಟ್ಟಿದ್ದ ಬಂದೂಕು ತೆಗೆದು ತಮ್ಮನ್ನು ತಾನೇ ಗುಂಡು ಹೊಡೆದುಕೊಂಡು ಪ್ರಾಣ ಬಿಟ್ಟನು. ಪೋಲೀಸಿನವರು ಶವವನ್ನು ಸಾಗಿಸಿಕೊಂಡು ಹೋದರು.

✱✱✱✱

ಮಿ॥ ಜಹಂಗೀರ್ ಹೊರ್ಮಜಿ ಪಟೇಲ್ ಎಂಬ ಪಾರ್ಸಿ ದೊಡ್ಡಮನುಷ್ಯನು ಬೊಂಬಾಯಿನಲ್ಲಿ ಅನೇಕ ಭಾರೀ ಕಾರ್ಖಾನೆಗಳನ್ನು ನಡಸುತ್ತಾ ಕೋಟ್ಯಾಧೀಶ್ವರನಾಗಿರುತ್ತಾನೆ. ಈತನು ಕೆಲವು ದಿವಸಗಳ ಕೆಳಗೆ ವಿಲಾಯತಿಗೆ ಹೋಗಿ ಬಂದನು. ಈಗ ಈತನು ನಾಲ್ಕು ಲಕ್ಷ ರೂಪಾಯಿ ಬಂಡವಾಳ ಹಾಕಿ ಒಂದು ಇಂಗ್ಲಿಷ್—ಗುಜರಾತಿ ವರ್ತಮಾನ ಪತ್ರಿಕೆಯನ್ನು ನಡಸಬೇಕೆಂದು ಗೊತ್ತುಮಾಡಿರುತ್ತಾನೆ.

✱✱✱✱

ಮಧ್ಯ ಪ್ರಾಂತ್ಯಗಳಲ್ಲಿ ಜನರು ವಿಸ್ಕಿ ಬ್ರಾಂದಿ ಮೊದಲಾದ ಮದ್ಯಗಳನ್ನು ಕುಡಿಯುತ್ತಿದ್ದರೆ ಪ್ಲೇಗ್ ತಗಲುವುದಿಲ್ಲವೆಂದು ತಿಳಿದು ಅದರ ಅಭ್ಯಾಸವೇ ಕಾಣದಿದ್ದವರು ಕೂಡ ಕುಡಿಯಲಾರಂಭಿಸಿದ್ದಾರೆ. ಸರ್ಕಾರದವರಿಗೆ ಮದ್ಯಗಳ ಹುಟ್ಟುವಳಿ ಬಹಳ ಹೆಚ್ಚುತ್ತಿದೆ. ಆದರೆ ಮದ ದ್ರಾವಕಗಳನ್ನು ಕುಡಿದವರೂ ಕುಡಿಯದವರಂತೆ ಪ್ಲೇಗ್ ಉಪದ್ರದಲ್ಲಿ ಮೃತಪಟ್ಟದ್ದರಿಂದ ಇದಕ್ಕೆ ಸಾಕ್ಷಿಯಿಲ್ಲ. ಬೊಂಬಾಯಿನಲ್ಲೂ ಆ ಉಪದ್ರ ಪ್ರಾರಂಭವಾದಾಗ್ಗೆ ಹೆಚ್ಚಾಗಿ ವಿಸ್ಕಿ ಎಂಬ ಮದ್ಯವನ್ನು ಸೇವಿಸುತ್ತಾ ಬಂದು ಅದರಿಂದ ಪ್ರಯೋಜನವಿಲ್ಲವೆಂದು ತಿಳಿದುಕೊಂಡು ಈಗ ನಿಲ್ಲಿಸಿಬಿಟ್ಟರು. ಮಧ್ಯಪ್ರಾಂತ್ಯಗಳಲ್ಲೂ ಈಗೀಗ ಜನರಿಗೆ ವಿವೇಕ ಬರುತ್ತಿದೆ.

ಕ್ರೈಸ್ತಧರ್ಮಯವರ ಧರ್ಮ ಪತ್ನಿಯವರಾದ ಲೇಡಿ ಮಿಂಟೋ ಯವರು ಯೂರೋಪ್ಯರ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಶೈತ್ಯೋಪಚಾರ ಮಾಡುವಂಥಾ ನರ್ಸ್ ಎಂಬ ದಾದಿಯರನ್ನು ತರಪೇತುಮಾಡುವುದಕ್ಕಾಗಿ ಒಂದು ಫಂಡನ್ನು ಕೂಡಿಸುತ್ತಿದ್ದರಷ್ಟೆ. ಈ ಫಂಡಿಗೆ ಹಣವು ಜಲದಾ ವಸೂಲಾಗುತ್ತಲೇ ಇರುವುದು. ಇದುವರೆಗೆ ಕೂಡಿರುವುದು ಎರಡು ಲಕ್ಷ ರೂಪಾಯಿನ ಹತ್ತಿರಕ್ಕೆ ಬಂದಿರುವಂತೆ ತಿಳಿಯುವುದು.

****

ಹಿಂದುಸ್ಥಾನದಲ್ಲಿರುವ ಸಮಸ್ತ ಕಸಬುದಾರಿ ಕಾರ್ಖಾನೆಗಳನ್ನೂ ತಪಾಸಣೆ ಮಾಡಿ, ಕೂಲಿ ಆಳುಗಳು ದಿನವಹಿ ಎಷ್ಟು ಗಂಟೆಗಳ ವರೆಗೆ ಕೆಲಸ ಮಾಡುತ್ತಾರೋ ಕೂಲಿಕಾರರ ಸ್ಥಿತಿಗತಿಗಳೇನೋ ಈ ಸಂಗತಿಗಳನ್ನು ತಿಳಿದುಕೊಂಡು ರಿಪೋರ್ಟು ಬರೆದುಕೊಡುವುದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಸರ್ ಹಾರ್ವಿ ಎಂಬುವ ಅಧಿಕಾರಿಯನ್ನು ವಿಲಾಯತಿಯಿಂದ ಕಳುಹಿಸಿದ್ದಾರೆ.

****

ಅಲಿಸ್ ವಾನಿಂಗ್ ಎಂಬ ಸ್ತ್ರೀ ಡಾಕ್ಟರು ಆಫ್ಘಾನಿಸ್ಥಾನದ ಅಮೀರರ ಬಳಿ ವೈದ್ಯ ಮಾಡುವಳು. ಅಮೀರರು ಈಗ ತಮ್ಮ ರಾಜಧಾನಿಯಾದ ಕಾಬೂಲ್ ನಗರದಲ್ಲಿ ಒಂದು ಹೆಂಗಸರ ಆಸ್ಪತ್ರೆ ಯಲ್ಲಿ ವೈದ್ಯ ಮಾಡುವುದಕ್ಕೂ ರೋಗಿಗಳನ್ನು ಉಪಚರಿಸುವುದಕ್ಕೂ ಕೆಲವು ನರ್ಸ್ ಎಂಬ ದಾದಿಯರೂ ಬೇಕಾಗಿದೆ ಎಂದು, ಅವರುಗಳನ್ನು ಕರೆದುಕೊಂಡು ಬರುವಂತೆ ಅಪ್ಪಣೆಕೊಟ್ಟು ಸ್ತ್ರೀ ಡಾಕ್ಟರನ್ನು ಹಿಂದುಸ್ಥಾನಕ್ಕೆ ಕಳುಹಿಸಿದಾರೆ.

****

ಟರ್ಕಿ ಸಂಸ್ಥಾನದಲ್ಲಿ ಕ್ಷಾಮದ ನಿಮಿತ್ತ ಆ ಸಂಸ್ಥಾನದ ಜನರು ತುಂಬ ಕಷ್ಟ ಪಡುತ್ತಿದ್ದಾರೆಂದು ಯೂರೋಪ್ ನಿಂದ ಸರ್ಕಾರ ಮಾಡುತ್ತಿರುವ ಸುಲ್ತಾನರವರು ಕೇಳಿದ ಕೂಡಲೇ ಸರ್ಕಾರವರು ೫೦ ರೂಪಾಯಿಯೊಳಗೆ ತಲಬುಳ್ಳ ಸಮಸ್ತ ನೌಕರರಿಗೂ ಕ್ಷಾಮ ನಿವಾರಣೆಯಾಗುವ ತನಕ ಪ್ರತಿ ತಿಂಗಳ ಅರ್ಧ ತಲಬನ್ನು ಜಾಸ್ತಿಯಾಗಿ ಕೊಡುತ್ತಾ ಬರಬೇಕೆಂದು ಸಂಸ್ಥಾನದ ಮುಖ್ಯಾಧಿಕಾರಿಗೆ ತಂತೀ ವರ್ತಮಾನ ಕೊಟ್ಟಿದ್ದಾರೆ.

****

ಪಂಡಿತ ವಿಷ್ಣು ದಿಗಂಬರನೆಂಬಾತನು ಮರಾಠಿಯವನು. ಈತನು ಲಾಹೋರಿನಲ್ಲಿರುವ ಒಂದು ಸಂಗೀತ ವಿದ್ಯಾಶಾಲೆಯ ಅಧ್ಯಕ್ಷ ಉಪಾಧ್ಯಾಯನಾಗಿದ್ದಾನೆ. ಕಳೆದ ಐದು ವರುಷಗಳಲ್ಲಿ ಈತನ ಕೈಕೆಳಗೆ ನೂರು ವಿದ್ಯಾರ್ಥಿಗಳು ಸಂಗೀತವನ್ನು ಕಲಿತು ಪಂಡಿತರೆನಿಸಿಕೊಂಡಿದ್ದಾರೆ. ಈಗ ಈತನು ತನ್ನ ವಿದ್ಯಾಶಾಲೆಗೆ ಹಣ ಸಂಪಾದನೆ ಮಾಡಿಕೊಂಡು ಎರಡುವದಕ್ಕಾಗಿಯೂ ಸಾಧ್ಯವಾದರೆ ಕಲ್ಕತ್ತೆಯಲ್ಲೂ ಒಂದು ಸಂಗೀತದ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂತಲೂ ಅಲ್ಲಿಗೆ ಬಂದಿರುವನು.

****

ಕಲ್ಕತ್ತಾ ಪಟ್ಟಣದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರು ಗಳು ೧೦ ನಿಮಿಷಗಳಿಗಿಂತ ಹೆಚ್ಚಾಗಿ ಮಾತನಾಡಕೂಡದೆಂತಲೂ ಸಭೆಯಲ್ಲಿ ವಿಷಯವನ್ನು ಸೂಚಿಸತಕ್ಕ ಮೆಂಬರು ಮಾತ್ರ ಐದು ನಿಮಿಷ ಮಾತನಾಡಬಹುದೆಂತಲೂ ಕಟ್ಟು ಮಾಡಿದಾರೆ. ಕೆಲವು ಮೆಂಬರುಗಳು, ಹೀಗೆ ತಮ್ಮ ಬಾಯಿಯನ್ನು ಕಟ್ಟಕೂಡದೆಂದು ಮೊದಲಿನಂತೆ ಪ್ರತಿ ಒಬ್ಬ ಮೆಂಬರೂ ತನಗೆ ಇಷ್ಟಬಂದಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವಿರಬೇಕೆಂತಲೂ ಹೋರಾಡಿದರು. ಆದರೆ ಅವರ ಹೋರಾಟವೆಲ್ಲಾ ನಿಷ್ಫಲವಾಯಿತು.

****

ಬೊಂಬಾಯಿ ಪಟ್ಟಣದಲ್ಲಿ ಪ್ರಸಿದ್ಧ ಸಾಹುಕಾರನಾದ ಮೆ॥ ವಿಟ್ಟಲ್ ದಾಮೋದರ ಠಾಕರ್ಸೆ ಎಂಬಾತನು ಅಲ್ಲಿ ಇಂಡಿಯನ್ ಸ್ಪೆಸಿ ಬ್ಯಾಂಕ್ ಎಂಬೊಂದು ಹೊಸ ಬ್ಯಾಂಕನ್ನು ಏರ್ಪಾಡು ಮಾಡಿದನು. ಈ ಬ್ಯಾಂಕಿನ ಸಮಸ್ತ ಜಾಬುಗಳನ್ನೂ ದೇಶೀಯರುಗಳೇ ಮುಂದಾಳಾಗಿ ನಿಂತು ನಡಸುವರೆಂದೂ ಪ್ರಕಟಿಸಿದೆ. ಈ ಬ್ಯಾಂಕಿನ ಮೂಲಧನ ಒಂದು ಕೋಟಿ ರೂಪಾಯಿ. ಈ ಅರ್ಧ ಮೊಬಲಗನ್ನು ಬ್ಯಾಂಕಿನ ಪ್ರೈವೇಟುಗಳೇ ಮುಂತಾದವರು ವಹಿಸಿಕೊಳ್ಳುವರು. ಉಳಿದ ೫೦ ಲಕ್ಷ ರೂಪಾಯಿಯನ್ನು ಸೇರುಗಳಾಗಿ ವಿಂಗಡಿಸಿ ಹಾಕಿ ಷೇರು ಒಂದಕ್ಕೆ ೧೦೦ ರೂಪಾಯಿನಂತೆ ಕೊಡಿಸುವುದಾಗಿ ತಿಳಿದು ಬಂದಿದೆ.

****

ಒಬ್ಬ ಕಕ್ಷಿಗಾರನು ಕಲ್ಕತ್ತೆಯಿಂದ ೧೫೦ ರೂಪಾಯಿ ಫೀಜು ಕೊಡಬೇಕೆಂದು ಒಬ್ಬ ಲಾಯರನ್ನು ತನ್ನ ಮೊಕದ್ದಮೆಯನ್ನು ನಡೆಸುವುದಕ್ಕೆ ಸಮೀಪದಲ್ಲಿರುವ ಒಂದೂರಿಗೆ ಕರೆದುಕೊಂಡು ಹೋದನು. ಲಾಯರು ಮೊಕದ್ದಮೆಯನ್ನು ನಡಸಿದ್ದರಿಂದ ಅಪರಾಧಿಗೆ ಬಿಡುಗಡೆಯಾಯಿತು. ಅವನು ಸಂತೋಷವಪಟ್ಟು ಲಾಯರಿಗೆ ಇನ್ನೂ ೫೦ ರೂಪಾಯಿ ಹೆಚ್ಚಾಗಿ ಕೊಟ್ಟನು. ಲಾಯರು ಹಣವನ್ನೆಲ್ಲಾ ತೆಗೆದುಕೊಂಡು ಬಂದು ಮನೆಯಲ್ಲಿ ನೋಡ ವಾಗ್ಗೆ ಆ ೧೫೦ ರೂಪಾಯಿಗಳಲ್ಲಿ ಒಂದಾದರೂ ಸಾಚಾ ರೂಪಾಯಿ ಇರಲಿಲ್ಲ. ಎಲ್ಲಾ ಖೋಟಾ ರೂಪಾಯಿಗಳಾಗಿದ್ದವು. ಈಗ ಅವನು ಆ ಕಕ್ಷಿಗಾರನ ಮೇಲೆ ಮೋಸ ಮಾಡಿದನೆಂತಲೂ ಖೋಟಾ ನಾಣ್ಯಗಳನ್ನು ಕೊಟ್ಟನೆಂತಲೂ ಫಿರ್ಯಾದು ತಂದಿದಾನೆ.

****

ಸಿಂಧು ದೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ವಿಶಾರ್ ಫತೆ ಮಹಮದ್ ಖಾನ್ ಎಂಬ ದೊಡ್ಡ ಮನುಷ್ಯನು ಒಂದು ಫೋರ್ಜರಿ ಕಾಗದವನ್ನು ಸರ್ಕಾರದ ಅಧಿಕಾರಿಗೆ ತೋರಿಸಿ ಅದರಲ್ಲಿ ಕಂಡ ಹಾಗೆ ಸರ್ಕಾರ ತನಗೆ ಕೆಲವು ಜಮೀನುಗಳು ಬರಬೇಕಾಗಿವೆ ಎಂದು ಕೇಳಿದನು. ಸರ್ಕಾರದವರು ಅವನ ಮೋಸವನ್ನು ಕಂಡುಹಿಡಿದು ಅವನ ಮೇಲೆ ಮೊಕದ್ದಮೆ ತಂದರು. ಸರ್ಸನ್ ಜಡ್ಜರು ಆ ದೊಡ್ಡ ಮನುಷ್ಯನಿಗೆ ಮೂರು ತಿಂಗಳ ಸಾಧಾರಣ ಸಜಾ, ೧,೦೦೦ ರೂಪಾಯಿ ಜುಲ್ಮಾನೆ ಎಂಬೀ ಶಿಕ್ಷೆಯನ್ನು ವಿಧಿಸಿದರು. ಅದರ ಮೇಲೆ ಅವನು ಜುಡಿಷಲ್ ಕಮಿಷನರ ಕೋರ್ಟಿನಲ್ಲಿ ಅಪೀಲ್ ದಾಖಲ್‌ಮಾಡಿ, ಜಾಮೀನ್ ಮೇಲೆ ಬಿಡಿಸಿಕೊಂಡು ಬಂದಿದಾನೆ. ಈ ಮೊಕದ್ದಮೆಯು ಆ ಪ್ರಾಂತ್ಯದಲ್ಲೆಲ್ಲಾ ತುಂಬಾ ಕುತೂಹಲವನ್ನೂ ಕಳವಳವನ್ನೂ ಉಂಟುಮಾಡಿದೆ.

****

ಬೊಂಬಾಯಿ ಪಟ್ಟಣದ ಕೋಟೆಬೈಲಿಗೆ ಹೋಲಿ ಚಕ್ಲಾ ಎಂಬ ಬೀದಿಯಲ್ಲಿ ಲಕ್ಷ್ಮೀಬಾಯಿಯೆಂಬೊಬ್ಬ ಹಿಂದೂ ಸ್ತ್ರೀಯು ತನ್ನ ಮಗನ ಸಂಗಡ ಒಂದು ಮನೆಯಲ್ಲಿ ಬಾಡಿಗೆಗೆ ವಾಸಮಾಡುತ್ತಿದ್ದಳು. ಅವಳು ಕಳೆದ ವಾರ ಒಂದು ದಿನ ತನ್ನ ಮಗನಾದ ೧೬ ವಯಸ್ಸಿನ ಲಾಲ್‌ಜಿ ಲಕ್ಷ್ಮೀದಾಸನೆಂಬ ಹುಡುಗನನ್ನು ತನ್ನ ಕೊಠಡಿಯಲ್ಲಿರುವಂತೆ ಹೇಳಿ ತಾನು ವೈದ್ಯನ ಮನೆಗೆ ಹೋದಳು. ಅವಳು ವಾಪಸು ಬರುವಷ್ಟರೊಳಗಾಗಿ ಆ ಪುತ್ರರತ್ನವು ಅವಳ ಕೈ ಪೆಟ್ಟಿಗೆಯನ್ನು ತೆರೆದು ಸುಮಾರು ೩,೦೦೦ ರೂಪಾಯಿ ಬಾಳುವ ನಗನಾಣ್ಯಾದಿಗಳನ್ನೆಲ್ಲಾ ಎತ್ತಿಹಾಕಿ ಕೊಂಡು ಬಾಗಿಲಿಗೆ ಬೀಗ ಹಾಕಿಕೊಂಡು ಬೀಗದ ಕೈಯನ್ನು ನೆರೆಮನೆಯ ಹೆಂಗಸಿನ ವಶಕ್ಕೆ ಕೊಟ್ಟು ಪರಾರಿಯಾದನು. ಅವಳು ಬಂದು ಬಾಗಿಲು ತೆರೆದು ಒಳಗೆ ನೋಡುವಾಗ್ಗೆ ಮಗನ ಕೃತ್ಯವು ಗೊತ್ತಾಯಿತು. ಕೂಡಲೇ ಅವಳು ಅತ್ತು ಕರೆದು ಪೋಲೀಸಿಗೆ ತಿಳಿಸಿದಳು. ಅವರು ಈಗ ಅವನನ್ನು ಹುಡುಕುತ್ತಿದ್ದಾರೆ.

****

ಮೆ॥ ಥಾಮಸ್ ಲಾರಿಮರ್ ಎಂಬೊಬ್ಬ ಅಮೇರಿಕಾ ದೇಶಸ್ಥನು ೧೯೦೩ ನೆ ಇಸವಿಯಿಂದೀಚೆಗೆ ಅಮೇರಿಕದಲ್ಲಿ ಕಾಲುಡಿಗೆಯ ಪಂಥದಲ್ಲಿ ಜಯಶಾಲಿಯಾಗಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾನೆ. ಇವನು ಕರಾಚಿ ಪಟ್ಟಣದಿಂದ ಪ್ರಪಂಚವನ್ನೆಲ್ಲಾ ಕಾಲ್ನಡಿಗೆಯಲ್ಲೇ ಸುತ್ತಿಕೊಂಡು ಬರುವುದಾಗಿಯೂ ಹಾಗೆಲ್ಲಿ ತನಗೆ ೧೦,೦೦೦ ರೂಪಾಯಿ ಐದಕ್ಕಾಗಿ ಬಹುಮಾನ ಕೊಡಬೇಕೆಂತಲೂ ಅಲ್ಲಿನವರಿಂದ ಭಾಷೆ ತೆಗೆದುಕೊಂಡು ಕಳೆದ ತಿಂಗಳ ಮಧ್ಯಭಾಗದಲ್ಲಿ ಅಲ್ಲಿಂದ ಹೊರಟಿರುತ್ತಾನೆ. ಇದುವರೆಗಾಗಲೇ ಅವನು ೧,೪೦೦ ಮೈಲಿ ಭೂಪ್ರದೇಶವನ್ನು ನಡೆದದ್ದಾಯಿತು. ಹಗಲು ಹೊತ್ತೆಲ್ಲಾ ಊಟ ಉಪಚಾರ ನಿದ್ರಾದಿಗಳಲ್ಲಿ ಕಳೆದು ರಾತ್ರಿಹೊತ್ತೇ ಊರಿಂದೂರಿಗೆ ದಿನಾ ೩೫ ಮೈಲಿಗೆ ಕಡಿಮೆ ಇಲ್ಲದಂತೆ ನಡೆದು ಹೋಗುವನು. ಇಷ್ಟರೊಳಗೆ ಒಂದೇ ದಿನ ರಾತ್ರಿ ೬೫ ಮೈಲಿ ದೂರ ನಡೆದಿರುವಂತೆ ತಿಳಿದು ಬಂದಿದೆ. ಗ್ರಾಮಾಂತರಗಳಲ್ಲಿ ಜನರ ಮಾತೇ ಅತನಿಗೆ ಬಾರದಿರುವುದರಿಂದ ಅನೇಕ ಕಡೆಗಳಲ್ಲಿ ತುಂಬಾ ಕಷ್ಟಪಟ್ಟನೆನ್ನುವುದಕ್ಕೆ ಸಂಶಯವಿಲ್ಲ.

****

ಲಾಹೋರ್ ಪಟ್ಟಣದಲ್ಲಿದ್ದ ಸ್ವಾಮಿ ತೀರ್ಥರಾಂ, ಎಂ. ಎ. ಯವರು ಟೆಹರಿ ಎಂಬ ಸ್ಥಳದಲ್ಲಿ ನೀರಿನಪಾಲಾದರೆಂದು ಪ್ರಕಟವಾಗಿದೆ. ಇವರು ಚಿಕ್ಕಂದಿನಿಂದಲೂ ಲಾಹೋರ್ ಪಟ್ಟಣದ ಕ್ರೈಸ್ತ ವಿದ್ಯಾಶಾಲೆಯಲ್ಲಿ ಓದಿ ಎಂ. ಎ. ಪರೀಕ್ಷೆಯ ತನಕ ವ್ಯಾಸಂಗ ಮಾಡಿ ಪ್ರತಿ ಒಂದು ಪರೀಕ್ಷೆಯಲ್ಲೂ ಮೊದಲನೆಯವರಾಗಿಯೇ ತೇರ್ಗಡೆ ಹೊಂದಿ, ಅದೇ ವಿದ್ಯಾಶಾಲೆಯಲ್ಲಿ ಕೆಲವು ಕಾಲ ಗಣಿತ ವಿದ್ಯಾಬೋಧಕರಾಗಿ ಕೆಲಸ ಮಾಡುತ್ತಿದ್ದು, ಕಡೆಗೆ ಇಹಲೋಕ ವ್ಯಾಪಾರಗಳಲ್ಲಿ ವಿರಕ್ತಿಯನ್ನು ಹೊಂದಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಹಿಮಾಚಲ ಪರ್ವತಕ್ಕೆ ಹೋಗಿ ಹಿಂದೂ ಮತ ಸಿದ್ಧಾಂತಗಳನ್ನು ಓದಿ ಅನುಷ್ಠಾನಮಾಡುತ್ತಾ ಕೆಲವು ವರುಷಗಳನ್ನು ಕಳೆದರು. ಆ ತರುವಾಯ ಸ್ವಾಮಿ ರಾಮತೀರ್ಥರವರು ಜಪಾನ್ ನಲ್ಲೂ ಅಮೇರಿಕದಲ್ಲೂ ಸಂಚಾರ ಮಾಡಿ ವೇದಾಂತ ಮತವನ್ನು ಅಲ್ಲಲ್ಲಿ ಬೋಧನೆ ಮಾಡಿ, ಹಿಂದುಸ್ಥಾನಕ್ಕೆ ವಾಪಸು ಬಂದು ಮೂರು ವರುಷಗಳಾದವು. ಅಂದಿನಿಂದಲೂ ಟೆಹರಿ ಎಂಬ ಹಿಮಾಚಲ ತಪ್ಪಲಲ್ಲೇ ಒಂದು ಆಶ್ರಮದಲ್ಲಿ ಇದ್ದುಕೊಂಡು ತತ್ವಶಾಸ್ತ್ರವನ್ನು ಸಂಪೂರ್ಣವಾಗಿ ರಚಿಸುತ್ತಿದ್ದರು.

****

ಒಬ್ಬ ಕೂಲಿ ಕಂಟ್ರಾಕ್ಟರು ಮದರಾಸಿನಿಂದ ಕರೆದುಕೊಂಡು ಹೋದ ಕೂಲಿಕಾರರ ಪೈಕಿ ಹತ್ತು ಮಂದಿ ಗಂಡಸರನ್ನೂ ಒಬ್ಬ ಹೆಂಗಸನ್ನೂ ರಂಗೂನ್ ಪಟ್ಟಣದಲ್ಲಿ ಗುಲಾಮ ಕೆಲಸಕ್ಕೆ ವಿಕರಿ ಮಾಡುತ್ತಿದ್ದನು. ಅವರಲ್ಲಿ ರಾಮು, ಅರಪ್ಪಲಿ ಎಂಬ ಇಬ್ಬರು ಹುಡುಗರು ಆ ಕಂಟ್ರಾಕ್ಟರ ಮೇಲೆ ಕೋಪಿಸಿಕೊಂಡು, ಅವನ ಮೇಲೆ ಬಿದ್ದು ಹೊಡೆದು ಕೊಂದುಬಿಟ್ಟರು. ಆದರಿಂದ ಸರ್ಕಾರದವರು ಹಿಡಿದು ದಸ್ತಾಕ್ತು ಮಾಡಿಸಿದರು. ಸೆಷನ್ಸ್ ಜಡ್ಜರು ಆವರಿಬ್ಬರಿಗೂ ಮರಣ ದಂಡನೆಯನ್ನೇ ವಿಧಿಸಿದರು. ಅದರ ಮೇಲೆ ಅವರು ಸ್ಥೈಸರ್‌ರಾಯ್ ಪ್ರಭುಗಳಿಗೆ ಅರ್ಜಿ ಬರೆದುಕೊಂಡಾಗ ವೈಸರಾಯರು ಗಲ್ಲಿಗೆ ಹಾಕಿಸುವ ಹುಕುಂ ಕಳುಹಿಸಿ ತಡೆದು, ಆ ಮೊಕದ್ದಮೆಯ ಕಡತವನ್ನು ತರಿಸಿಕೊಂಡು ಪರಾಂಬರಿಸಿದ್ದರಲ್ಲಿ ಸೆಷನ್ ವಿಚಾರಣೆಯ ಅಷ್ಟರಿನಲ್ಲಿ ಪಂಚಾಯಿತರು ಆ ಇಬ್ಬರು ಹುಡುಗರು ಇನ್ನೂ ಚಿಕ್ಕವಯಸ್ಸಿನವರಾಗಿದ್ದಾ ರಾದಕಾರಣ ಅವರ ವಿಷಯದಲ್ಲಿ ಕರುಣೆ ತೋರಿಸಬೇಕೆಂದು ಅಭಿಪ್ರಾಯಪಟ್ಟಿದ್ದನ್ನು ತಿಳಿದು ಆಮೇಲೆ ಸೆಷನ್ಸ್ ಜಡ್ಜರು ವಿಧಿಸಿದ್ದ ಮರಣದಂಡನೆಯನ್ನು ತಪ್ಪಿಸಿ, ಅವರಿಬ್ಬರಿಗೂ ಬಂಧಕೈಲ್ ಶಿಕ್ಷೆಯನ್ನು ವಿಧಿಸುವಂತೆ ಅಜ್ಞೆ ಮಾಡಿದಾರೆ.

ವಿದೇಶ ವರ್ತಮಾನಗಳು.

ಲಾರ್ಡ್ ಕರ್ಸನರವರು ಅಮೇರಿಕಕ್ಕೆ ಪ್ರಯಾಣ ಮಾಡಿರುತ್ತಾರೆ.

****

ಚೀನಾ ಚಕ್ರವರ್ತಿಗಳವರು ತಮ್ಮ ರಾಜ್ಯಭಾರ ಕ್ರಮಗಳನ್ನು ಈಗಿನ ಕಾಲಕ್ಕೆ ತಕ್ಕಹಾಗೆ ಬದಲಾವಣೆ ಮಾಡಬೇಕೆಂದು ಇಷ್ಟಿಹಾರ್ನಾಮೆ ಕೊಟ್ಟಿದಾರೆ.

****

ನ್ಯೂಜೀಲ್ಯಾಂಡೆಂಬ ಇಂಗ್ಲಿಷ್ ರಾಜ್ಯಾಂಗದಲ್ಲಿ ಸರ್ಕಾರದವರು ಶಾಲೆಗಳೊಳಗೆ ೧,೯೯,೦೦೦ ಹುಡುಗರಿಗೆ ಸಾಮಾನ್ಯ ವಿದ್ಯೆಯನ್ನು ಹೇಳಿಕೊಡುವುದಲ್ಲದೆ ಸೈನಿಕರನ್ನಾಗಿಯೂ ತರಪೇತು ಮಾಡುತ್ತಿದಾರೆ.

ಚೀನಾ ಚಕ್ರಾಧಿಪತ್ಯಕ್ಕೆ ಸೇರಿದ ಉತ್ತರ ಕಿಯಾಂಗ್ಸು ಎಂಬ ಆಧಿಪತ್ಯದಲ್ಲಿ ಬಹಳ ಕಠಿಣವಾದ ಕ್ಷಾಮವು ಪ್ರಾಪ್ತವಾಗಿದೆ ಎಂತಲೂ ಒಂದು ಕೋಟಿ ಪ್ರಜೆಗಳು ಹೊಟ್ಟೆಗಿಲ್ಲದೆ ಅಲೆಯುತ್ತಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ.

****

ಬೆಲಿಸಿಯೋಸ್ ಎಂಬೊಬ್ಬ ಯೆಹೂದ್ಯ ಧನಾಢ್ಯನು ಹಾಂಕಾಂಗಿನಲ್ಲಿರುವ ತನ್ನ ೩೩॥ ಲಕ್ಷ ರೂಪಾಯಿ ಆಸ್ತಿಯನ್ನು ಕಲ್ಕತ್ತೆಯಲ್ಲಿ ಯೆಹೂದ್ಯ ಜನರಿಗಾಗಿ ಒಂದು ಧರ್ಮದ ವಿದ್ಯಾಶಾಲೆಯನ್ನು ಇಟ್ಟು ನಡಸುವುದಕ್ಕೆ ವಿನಿಯೋಗಿಸಬೇಕೆಂದು ಉಯಿಲು ಬರೆದಿಟ್ಟಿರುತ್ತಾನೆ.

****

ಚೀನಾ ರಾಜ್ಯಕ್ಕೆ ಸೇರಿದ ಕ್ಯಾಂಟನ್ ಪಟ್ಟಣದಲ್ಲಿ ಕಳೆದ ವಾರ ಬೆಂಕಿಬಿದ್ದು ಐದುನೂರು ಭಾರೀ ಮನೆಗಳೂ ಅಂಗಡಿ ಮಳಿಗೆಗಳೂ ಹೋಟೇಲುಗಳೂ ಜೂಜಾಟದ ಮನೆಗಳೂ ಸುಟ್ಟುಹೋದವೆಂತಲೂ ಮೂರು ಕೋಟಿ ರೂಪಾಯಿ ತನಕ ನಷ್ಟವಾಯಿತೆಂತಲೂ ಆದರೆ ಪ್ರಾಣನಷ್ಟವೇನೂ ಆಗಲಿಲ್ಲವೆಂತಲೂ ತಂತೀ ವರ್ತಮಾನ ಬಂದಿದೆ.

****

ಜರ್ಮನಿಯ ಒಬ್ಬ ರಾಜಕುಮಾರನಾದ ಪ್ರಿನ್ಸ್ ಜೋಕಿಂ ಆಲ್ಬ್ರೆಟ್ ಎಂಬಾತನು ಚಕ್ರವರ್ತಿಯವರ ಅನುಮತಿಯನ್ನು ಪಡೆದುಕೊಳ್ಳದೆ ತಾನಾಗಿಯೇ ಮುಂದರಿದು ಅಶ್ಲೀಲವಾದ ಒಬ್ಬ ನಾಟಕಗಾತಿಯನ್ನು ಮದುವೆಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿದ್ದುದನ್ನು ಚಕ್ರವರ್ತಿಯವರು ಕೇಳಿ ಶಿಕ್ಷಾರ್ಥವಾಗಿ ಆ ರಾಜಕುಮಾರನನ್ನು ದವಲಾಪ್ರಾಂತಿನಲ್ಲಿ ನೌಕರಿಮಾಡುವಂತೆ ಕಳುಹಿಸುವುದಾಗಿ ಹುಕುಂ ಕೊಟ್ಟಿದಾರೆಂದು ತಂತೀ ವರ್ತಮಾನ ಬಂದಿದೆ.

****

ವಿಲಾಯತಿಯಲ್ಲಿ ಕಳೆದ ತಿಂಗಳು ಕಾಲವಾದ ಮುಂದೆ ಹೇಳುವ ಸ್ತ್ರೀಪುರುಷರು ಪರೋಪಕಾರಕ್ಕಾಗಿ ತಮ್ಮ ಆಸ್ತಿಯನ್ನು ಹಂಚಿಕೊಟ್ಟಿರುವ ಕ್ರಮವೇನೆಂದರೆ.— ಲಂಡನ್ ಪಟ್ಟಣದ ಲೂಯಿ ಹಿಲ್ ಎಂಬಾಕೆ ಒಂದೂವರೆ ಕೋಟಿ ರೂಪಾಯಿ ಕೊಟ್ಟಳು, ಹಾರೋಗೇಟಿನ ಕಾರ್ಪೆಲ್ ಎಂಬಾಕೆ ೩,೩೩,೫೦೦ ರೂಪಾಯಿ; ಪೇರೋಬಗ್‌ನ ಮಿಸ್ ಕ್ಯಾಥರೈನ್ ಕಿಡ್‌ಸ್ಟನ್ ಎಂಬಾಕೆ ೧೫ ಲಕ್ಷ ರೂಪಾಯಿ; ಮೆ॥ ಜೆ ಹೆಲ್ಲಿಂಗ್ ಎಂಬಾತನು ೧೦ ಲಕ್ಷ ರೂಪಾಯಿ.

****

ರಷ್ಯಾ ರಾಜ್ಯಕ್ಕೆ ಸೇರಿದ ರೋಗೊ ಎಂಬ ಪಟ್ಟಣದಲ್ಲಿ ರೈಲ್‌ಗಾಡಿಯು ಸ್ಟೇಷನಿನೊಳಕ್ಕೆ ಬರುತ್ತಿದ್ದಾಗ್ಗೆ ಸುಮಾರು ಎಪ್ಪತ್ತು ಜನ ಆಯುಧಪಾಣಿಗಳಾಗಿ ನುಗ್ಗಿ ಗಾಡಿಯನ್ನು ನಿಲ್ಲಿಸಿ, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿಹಾಕಿ, ಜನರನ್ನು ಪಹರೆ ಇಟ್ಟು ಅಂಚೆ ಬಸ್ತುಗಳಿದ್ದ ಗಾಡಿಗೆ ಮದ್ದಿನ ಗುಂಡಿಟ್ಟು ಒಡೆದು ಅದರಲ್ಲಿ ಕಾವಲುಗಾರರಾಗಿದ್ದ ೧೬ ಜನ ಶಿಪಾಯಿಗಳನ್ನು ಕೊಂದು, ಖಜಾನೆಯನ್ನೆಲ್ಲಾ ಲೂಟಮಾಡಿ ಅತಿ ಜಾಗ್ರತೆಯಾಗಿ ಹೊತ್ತುಕೊಂಡು ಹೋದರೆಂತಲೂ ಅದೆಲ್ಲಾ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳಾಗಬಹುದೆಂತಲೂ ತಂತೀ ವರ್ತಮಾನ ಬಂದಿದೆ.

****

ಕಳೆದ ತಿಂಗಳ ೨೩ನೇ ತಾ॥ ಮಧ್ಯಾಹ್ನ ವಿಲಾಯತಿಯ ಪಾರ್ಲಿಮೆಂಟು ತೆರೆಯಲ್ಪಟ್ಟಿತು. ಮಂತ್ರಿಶ್ರೇಷ್ಠರಾದ ಸರ್ ಹೆನ್ರಿ ಕ್ಯಾಂಬೆಲ್ ಬ್ಯಾನರ್‌ಮನ್‌ರವರು ಸಭೆಗೆ ದಯಮಾಡಿದರು. ಆ ದಿವಸವೇ ಸುಮಾರು ಮೂವತ್ತು ಮಂದಿ ಸ್ತ್ರೀಯರು ಒಳಗೆ ನುಗ್ಗಿ—ಇನ್ನು ಮುಂದೆ ಸ್ತ್ರೀಯರನ್ನು ಪಾರ್ಲಿಮೆಂಟಿಗೆ ಮೆಂಬರಾಗಿ ಚುನಾಯಿಸುವಂತೆ ಕಾನೂನ್ ಬದಲಾವಣೆ ಮಾಡಿಕೊಡಬೇಕೆಂದು ಕೂಗಿ ಕೇಳಿದರು. ಕೂಡಲೇ ಮಂತ್ರಿಗಳು ಪೋಲೀಸಿನವರನ್ನು ಕರೆಯಿಸಿ, ಅವರಿಂದ ಆ ಸ್ತ್ರೀಯರನ್ನೆಲ್ಲಾ ಬಲಾತ್ಕಾರವಾಗಿ ಹಿಡಿಸಿ ಹೊರಕ್ಕೆ ಕಳುಹಿಸಿದರು. ಸ್ತ್ರೀಯರಾದರೋ ಕೂಗುತ್ತಾ ಗದ್ದಲಮಾಡುತ್ತಾ ಬಹಳ ಪೇಚಾಡಿದರು.

****

ಕ್ಯಾಪ್ಟನ್ ಪಿಯರಿ ಎಂಬಾತನು ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ನಗರದಿಂದ ಕಳೆದ ೧೯೦೫ನೆ ಜೂಲೈ ೧೬ ರಲ್ಲಿ ಉತ್ತರ ಧ್ರುವವನ್ನು ನೋಡಿ ಬರಬೇಕೆಂದು ಪ್ರಯಾಣಮಾಡಿದನು. ಈಗ ಈತನು ೮೭.೬ ಡಿಗ್ರಿಯ ತನಕ ಹೋಗಿದ್ದನೆಂತಲೂ ಅಲ್ಲಿಂದ ಮುಂದಕ್ಕೆ ನುಗ್ಗಲು ಸಾಧ್ಯವಾಗದೆ ಹೋಯಿತಾದ್ದರಿಂದ ವಾಪಸು ಬರುತ್ತಿದಾನೆಂತಲೂ ತಂತೀ ವರ್ತಮಾನ ಬಂದಿದೆ. ಆದರೆ ಇದುವರೆಗೆ ಇಷ್ಟುದೂರ ಯಾರೂ ಹೋಗಿಬಂದಿದ್ದಿಲ್ಲವಾದ್ದರಿಂದ ಆತನೊಂದು ಜಯಪ್ರದವನ್ನೇ ಮಾಡಿಕೊಂಡು ಬಂದಹಾಗಾಯಿತು. ಆತನ ಸಂಗಡಿಗರಲ್ಲಿ ಯಾರೂ ಖಾಯಿಲೆ ಬೀಳಲಿಲ್ಲವು. ಆದರೆ ಅವರು ಹಿಮಗಡ್ಡೆಗಳನ್ನು ದಾಟುತ್ತಿದ್ದರಲ್ಲೂ ಚಳಿಗಾಳಿಯನ್ನು ಸಹಿಸಿಕೊಳ್ಳುವುದರಲ್ಲೂ ಅನೇಕಾವೇಳೆ ತುಂಬಾ ಕಷ್ಟಕ್ಕೆ ಸಿಕ್ಕಿದರು. ಕೆಲವು ಸಂದರ್ಭಗಳಲ್ಲಿ ಆಹಾರ ಸಿಕ್ಕದೆ ಹಸಿವು ತಡೆಯಲಾರದೆ ತಮ್ಮ ಸಂಗಡ ಕರೆದುಕೊಂಡು ಹೋಗಿದ್ದ ನಾಯಿಗಳನ್ನೇ ಕೊಂದು ತಿಂದುಬಿಡಬೇಕಾಯಿತು.

ಶಾಲೂಕು ವರ್ತಮಾನಗಳು.

ಚನ್ನಪಟ್ಟಣ.—ಚನ್ನಪಟ್ಟದ ತಾಲ್ಲೂಕಿನಲ್ಲಿ ಈ ವರುಷ ಕಾಲಕಾಲಕ್ಕೆ ಮಳೆಗಳು ಬಂದು ರೈತರು ಹಸನ್ಮುಖಿಗಳಾಗಿರುತ್ತಾರೆ. ಬಾರನೆ ಪಾಸಿಗಳು ಯಥಾಪ್ರಕಾರವಾಗಿದೆ. ಈ ಊರು ಕಸಬಾದಲ್ಲಿ ೧—೦ ಕಲರಾ ಕೇಸು ಆಗಿ ಈಗ ದೇವರ ದಯದಿಂದ ನಿಂತಿದೆ. ಚಳಿಜ್ವರಗಳು ಮಾತ್ರ ಮನೆಮನೆಗೂ ಇದೆ. ಈ ಊರು ಭಾರಿ ಟವನ್. ಇಲ್ಲಿ ಕಕ್ಕಸುಗಳಿಲ್ಲದೆ ಜನಗಳು ಬಹಳ ತೊಂದರೆಪಡುತ್ತಾರೆ. ಇದನ್ನು ನಮ್ಮ ಅಮಲ್ದಾರರು ಜಾಗ್ರತೆ ಕ್ರಮಪಡಿಸಿದರೆ ತುಂಬಾ ಅನುಕೂಲ.— ಈ ಊರಿಗೆ ನೀರು ಸಪ್ಲೈ ಆಗುವ ಕಣ್ವನೀರುಕಟ್ಟೆ ಎಂಬ ಕೆರೆಯಿಂದ ಕೋಟೆಗೆ ಬರುವ

ನೀರಿನ ಕಾಲ್ವೆ ಛೇರಿ ಹೊಡದುಹೋಗಿ ನೀರೆಲ್ಲಾ ಚರಂಡಿಗಳ ಪಾಲಾಗುತ್ತಾ ಇದೆ ಇದನ್ನು ಜಾಗ್ರತೆ ಸರ್ಕಾರದವರು ಕ್ರಮಪಡಿಸದಿದ್ದರೆ ಮುಂದೆ ಇನ್ನೂ ವಿಶೇಷ ನೀರು ನಷ್ಟವಾಗುವದಕ್ಕೆ ಕಾರಣವಾಗುತ್ತೆ. ಅಂಬಳೆ ನೊಡ್ಡಿ ಬಳಿಯಲ್ಲಿ ಪಂಚಾಯಿತಿ ನಡೆದಿರುತ್ತೆಂದು ತಾಲ್ಲೂಕು ಮಚಕೂರು ಕೋಡಿಶ್ರೀರದಲ್ಲಿರುವ ಮೂರು ಜನ ಪ್ಲೀಡರ್‍ವಾರರನ್ನು ಹಿಡಿದು ಕ್ಲೋಸ್‌ಪ್ಯಾಟಿ ರೇಂಜ್ ಅ॥ ಕಮಿಷನರ ಕೋರ್ಟಿನಲ್ಲಿ ದರ್ಯಾಪ್ತು ನಡಿಯುತ್ತಾ ಇದೆ.

ಮೂಡಿಗೆರೆ ತಾ. ಹಿರೆಹಳ್ಳಿ.—ಈ ಪ್ರಾಂತ್ಯ ಒಂದು ವಾರದಿಂದ ಮಳೆ ಇಲ್ಲ. ಕಾಪೀ ತೋಟಗಳಲ್ಲಿ ಕಾಪೀ ಹಣ್ಣುಗಳನ್ನು ಬಿಡಿಸುವ ಸಮಯ ಸಮೀಪಿಸುತ್ತಲಿದೆ. ಕೆಲವು ತೋಟಗಳಲ್ಲಿ ಈಗಾಗಲೇ ಆಗಿರುವ ಹಣ್ಣುಗಳನ್ನು ಬಿಡಿಸುತ್ತಲಿದ್ದಾರೆ. ಮೂಡಿಗೆರೆ ತಾಲ್ಲೋಕಿನಲ್ಲಿರುವ ಅಣಜೂರು ಮಾಗುಂಡಿ ಸೇತುವೆಗಳು ಕಟ್ಟ ತಯಾರಾಗಿದ್ದರೂ ಇನ್ನೂ ಬಂಡಿಗಳು ಅವುಗಳ ಮೇಲೆ ಹೋಗುವದಕ್ಕೆ ಅನುಕೂಲ ಮಾಡಿಲ್ಲವೆಂದು ಹೇಳುತ್ತಾರೆ. ಕಾಪೀ ಕಟಾವು ಸಮೀಪಿಸಿರೋಣದರಿಂದ ಶೀಘ್ರದಲ್ಲಿ ಸೇತುವೆಗಳ ಮೇಲೆ ಬಂಡಿ ಬಿಡಲು ಅನುಕೂಲ ಮಾಡುವದಾದರೆ ಕಾಪಿಯ ಭರ್ತಿ ಗಾಡಿಗಳನ್ನು ಎಳೆಯುವ ಎತ್ತುಗಳಿಗೆ ಉಪಕಾರ ಮಾಡಿದಂತಾಗುವದು.—ಮೂಡಗೆರೆಯಲ್ಲಿ ಪ್ಲೇಗ್ ಪ್ರಾರಂಭವಾದಾಗಲಿಂದ ಇದುವರಿಗೂ ಸುಮಾರು ೨೦ ಜನರು ಸತ್ತರೆಂದು ವರ್ತಮಾನ. ಜನರೆಲ್ಲಾ ಷೆಡ್ಡುಗಳಲ್ಲಿದ್ದರು. ಅಲ್ಲಿಯೂ ರೋಗ ತಪ್ಪಲ್ಲವೆಂದು ಹೇಳುತ್ತಾರೆ.

ಚಿಕ್ಕಬಳ್ಳಾಪುರ—ಈ ಊರಿನಲ್ಲಿ ಮಳೆ ವಿಶೇಷವಾಗಿ ಸುರಿದು ಪೂರಾ ಬೆಳೆಗಳು ಆದರೂ ರಾಗಿ ಇನ್ನೂ ರೂಪಾಯಿಗೆ ೧೬ ಸೇರೂ ಅಕ್ಕಿ ೭ ಸೇರೂ ಮಾರುತ್ತಾರೆ.—ಕಳೆದ ಆಕ್ಟೋಬರ್ ತಾ. ೩೧ ರಲ್ಲಿ ಸರ್ಕಲ್ ಇನ್ಸ್‌ಪೆಕ್ಟರೂ, ಈ ಮಾಹೆ ತಾ. ೩ ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರೂ ಈ ಊರಿಗೆ ಬಂದು ಇಲ್ಲಿನ ಸ್ಕೂಲುಗಳನ್ನು ಪರೀಕ್ಷೆ ಮಾಡಿಕೊಂಡು ಹೋದರು ಹುಡುಗರಿಗೆ ಫುಟ್ ಬಾಲ್ ಇಲ್ಲದೆ ಸಾಯಂಕಾಲದ ಹೊತ್ತು ಸೋಮಾರಿಗಳಾಗಿ ಕಾಲ ಕಳೆಯುತ್ತಾರೆ ಇದನ್ನು ಹೆಡ್ ಮಾಸ್ಟರು ಜಾಗ್ರತೆ ನೆರವೇರಿಸುವರೆಂದು ನಂಬಿದ್ದೇನೆ.—ಇಲ್ಲಿನ ಪೊಲೀಸ್ ಇನ್ಸ್‌ಪೆಕ್ಟರು ಸಬ್ ಸ್ಟೇಷನ್‌ಗಳ ಸಂಬಳಗಳನ್ನು ಜಾಗ್ರತೆ ಬಟವಾಡೆ ಮಾಡುವದಿಲ್ಲವೆಂದು ಹೇಳುತ್ತಾರೆ. ಆಯಾ ಸ್ಟೇಷನ್ ದಫೇದಾರ್ರೇ ಆಗಲಿ ಕಾನ್ಸ್‌ಟೇಬಲ್‌ರೇ ಆಗಲಿ ತಾವೇ ಕಸಬೆಗೆ ಬಂದು ತೆಗೆದುಕೊಂಡು ಹೋಗಬೇಕು. ಈ ಬಡ ನೌಕರರಿಗೆ ಇಷ್ಟು ನಿಧಾನವಾಗಿ ಸಂಬಳ ಪಾವತಿ ಮಾಡಿದರೆ ಅವರು ಬದುಕುವುದು ಹ್ಯಾಗೆ? ತಿಂಗಳಾಗುತ್ತಲೇ ಸಾಲಗಾರರು ಮನೆ ಮುಂದೆ ಬಂದು ಕೂತುಕೊಂಡಾಗ ಇವರು ಎಲ್ಲಿಂದ ತಂದು ಕೊಟ್ಟಾರು? ನಮ್ಮ ಪೊಲೀಸ್ ಸೂಪರಿಂಟೆಂಡೆಂಟರು ಘನವಾದ ಚಿತ್ತಕ್ಕೆ ತಂದುಕೊಂಡು ಈ ಕೊರತೆಯನ್ನು ಜಾಗ್ರತೆಯಾಗಿ ನೆರವೇರಿಸುವರೆಂದು ನಂಬಿದ್ದೇನೆ.—ಇಲ್ಲಿ ಹೊಸದಾಗಿ ಒಂದು ಮಿಷನ್ ಆಸ್ಪತ್ರೆ ತಯಾರಾಗುತ್ತೆಂದು ವದಂತಿ ಇದೆ ಇದು ಯಾವಾಗ ಆಗುವದೋ ತಿಳಿಯಲಿಲ್ಲ.

ಚಿತ್ರಮಗರ್ಗ.—ಈ ಊರಿನಲ್ಲಿ ಚಳಿ, ಜ್ವರ, ಆಮಶಂಕೆ, ಮುಂತಾದ ರೋಗಗಳಿಂದ ಸಾಯಕಃ ಪ್ರತಿ ಮನೆಯಲ್ಲಿಯೂ ಒಬ್ಬಿಬ್ಬರು ನರಳುತ್ತಲೇ ಇದ್ದಾರೆ ಮನೆಗಳ ಮುಂದೆ ಬಿರಣ ತಟ್ಟ ಸುತ್ತುಮುತ್ತಲೂ ಗೋಡೆಗಳಿಗೆ ಹಚ್ಚುವದರಿಂದ ಸಂದುಗೊಂದುಗಳಲ್ಲಿನ ದುರ್ವಾಸನೆಯನ್ನು ತಾಳಲಾಗದು ಕಂದಕಗಳಲ್ಲಿ ಊರು ಸುತ್ತಲೂ ನೀರು ನಿಂತು ತಂಡತಂಡವಾದ ಸೊಳ್ಳೆಗಳಿಗೆ ಆಶ್ರಯವಾಗಿದೆ.—ಡೆಪ್ಯುಟಿ ಕಮಿಷನರ್ ಮಿ॥ ರಾಮಾನುಜೈಯ್ಯಂಗಾರ್ರು ಕೋರ್ಟು ಕಚೇರಿಗಳ ಆಫೀಸರುಗಳಿಂದಲೂ ಊರಿನ ಮಹಾ ಜನಗಳಿಂದಲೂ ಪ್ರೀತಿಪೂರ್ವಕವಾದ ಮುಯ್ಯಾದೆಯನ್ನು ಹೊಂದಿ ಮೊನ್ನೆ ೧ ನೆ ತಾ ಬೃಹಸ್ಪತಿವಾರ ಸಂಸಾರಸಹಿತ ಇಲ್ಲಿಂದ ತಮ್ಮ ಸ್ಥಳಕ್ಕೆ ರಿಟೈರಾಗಿ ಪ್ರಯಾಣಮಾಡಿದರು.—ಊರಲ್ಲಿ ದನಗಳ ಅವಾಂತ್ರ ಬಹಳವಾಗಿದೆ ಸಂಜೆವೇಳೆಯಿಂದ ಬೆಳಗಿನವರಿವಿಗೂ ಚೌಕಗಳಲ್ಲಿ ಮಂದೆಹಾಕಿಕೊಂಡು ನಿಂತಿರುವವು ಇವುಗಳನ್ನು ಯಾರೂ ಕಟ್ಟಹಾಕುವಹಾಗೆ ಕಾಣುವುದಿಲ್ಲ. ಈಗ ಕೆಲವು ದಿನಗಳ ಕೆಳಗೆ ಒಬ್ಬ ಹೆಂಗಸು ದಾರಿಯಲ್ಲಿ ಎದುರಾದ ಹೋರಿಯಿಂದ ತಿವಿಯಲ್ಪಟ್ಟ ಕಾರಣ ಹೊಟ್ಟೆ ಸೀಳಿ ಕರುಳುಗಳೆಲ್ಲಾ ಹೊರಗೆ ಬಂದದ್ದರಿಂದ ಅವಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕಾಯಿತು ಆಗ ಡಾಕ್ಟರು ಈ ಊರಲ್ಲಿಲ್ಲದೆಹೋದಾಗ್ಯೂ ಆಸ್ಪತ್ರೆ ಅಸಿಸ್ಟೆಂಟರು ತುಂಬಾ ಮುತುವರ್ಜಿಯಿಂದ ಅವಳಿಗೆ ಇಲಾಜು ಮಾಡಿದ್ದರಿಂದ ಅವಳು ಬದುಕಿಕೊಂಡಳು.

ಮಳವಳ್ಳಿ.—ಮಳವಳ್ಳಿ ತಾಲ್ಲೋಕು ಶಿವನಸಮುದ್ರಂ ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ದೊಡ್ಡ ಮನುಷ್ಯರಿಗಾಗಿ ನಮ್ಮ ಮೈಸೂರು ಸರ್ಕಾರಿ ಟ್ರಾನ್ಸಿಟ್ ಗಾಡಿಗಳನ್ನು ಇಟ್ಟಿದ್ದರು ಅದನ್ನು ತೆಗೆದುಬಿಟ್ಟು ಮೋಟಾರ್ ಕಾರ್ ಎಂಬ ಗಾಡಿಯನ್ನು ಇಡುತ್ತಾರೆಂದು ವದಂತಿಯಾಗಿದೆ ಆದರೆ ನಮ್ಮ ಸರ್ಕಾರದವರು ಉದ್ಯೋಗಸ್ಥರ ಮೇಲೆ ಇಟ್ಟಿರುವ ಪ್ರೀತಿಯಂತೆ ಟೂವಿಸಿ, ಸರಿಯಾದ ರೂಲ್ಸು ಮಾಡಿ ಪ್ರಯಾಣ ಮಾಡುವ ಜನಗಳಿಗೂ ಅನುಕೂಲ ಪಡಿಸಿದರೆ ಬಹಳ ಉತ್ತಮವಾಗಿರುವದು ಅಲ್ಲದೆ ನಮ್ಮ ಮಹಾ ಘನವನ್ನು ಹೊಂದಿದ ಮದ್ರಾಸು ಗವರ್ನರ್ ಸಾಹೇಬರವರ ಸವಾರಿಯು ಶಿವನಸಮುದ್ರಕ್ಕೆ ಚಿತ್ತೈಸುವಾಗ್ಗೆ ಸರ್ಕಾರಿಯಾಗಿ ಒಬ್ಬರನ್ನು ಮಳವಳ್ಳಿಯಿಂದ ಬೆಂಗಳೂರಿಗೆ ಕಳುಹಿಸಬೇಕಾದ ಕೆಲಸ ಬಿತ್ತು ಆದರೆ ಅವರ ಗೋಳಾಟವೂ ಜಟ್ಕಗಾಡಿಯವರ ಸಂತೋಷವೂ ನೆನಪಿಗೆ ಬಂದರೆ ದುಃಖಕ್ಕೆ ಕಾರಣ.—ಸರ್ವಮಾನ್ಯ ಹೊಸಳ್ಳಿ ಎಂಬ ಗ್ರಾಮದಲ್ಲಿ ತಳವಾರು ಸಿದ್ದೆಗೌಡನ ಚಿಕ್ಕಗೌಡನ ಜಮೀನಿನಲ್ಲಿ ಒಂದು ಭಾರಿ ಚಿರತೆಯು ಬಂದು ಸೇರಿಕೊಂಡು ಭಾರಿ ಸಲಗನಾದ ಹಂದಿಯನ್ನು ಕಡಿದು ಕೆಲವನ್ನು ತಿಂದು ಹಾಕಿ ಮಿಕ್ಕದ್ದನ್ನು ಅಲ್ಲೇ ಬಿಟ್ಟು ಸಮೀಪದಲ್ಲಿದ್ದ ಪೊದೆಯಲ್ಲಿ ಸೇರಿಕೊಂಡಿತ್ತು. ಮಾರನೆದಿನ ಬೆಳಗ್ಗೆ ಮೇಲ್ಕಂಡ ಜಮೀನುದಾರ ಮತ್ತು ಇತರರು ಸೇರಿ ಜಮೀನನ್ನು ನೋಡಲು ಹೊರಟರು. ಒಂದು ನಾಯಿ ಅವರ ಜೊತೆಯಲ್ಲಿ ಹೋಗುತ್ತಿದ್ದದ್ದನ್ನು ಬಿಟ್ಟು ಹಂದಿಯನ್ನು ಕೆಡವಿದ್ದ ಸ್ಥಳಕ್ಕೆ ಹೋಗಲು ಇವನ್ನು ಕಂಡ ಚಿರತೆಯು ನಾಯಿಯ ಮೇಲೆ ಬಿದ್ದು ಕಚ್ಚಿಕೊಂಡಿತು. ಅಷ್ಟರಲ್ಲೇ ನಾಯಿಯ ಕಿರುಚುವನ್ನು ಕೇಳಿದ ಜನರು ಓಡಿಹೋಗಿ ನೋಡುವಾಗ್ಗೆ ಪ್ರಾಣವನ್ನು ತೆಗೆದು ಬಿಟ್ಟು ಹೊದ್ದೆ ಪೊದೆಯಲ್ಲಿ ಸೇರಿ ಕೊಂಡಿತ್ತು ನೋಡುವದಕ್ಕೆ ಹೋಗಿದ್ದ ಜನಗಳು ಗಾಬರಿಬಿದ್ದು ಊರಿಗೆ ಓಡಿಬಂದು ಸಂಗತಿಯನ್ನು ತಿಳಿಯಪಡಿಸಿದರು. ಆದಾಗ್ಯೂ ಅದನ್ನು ಹೊಡೆಯುವಂಥಾ ಧೈರ್ಯಶಾಲಿಗಳ್ಯಾರೂ ಇರಲಿಲ್ಲ.

ಹೊಸಕೋಟೆ.—ಈ ಟೌನ್ ಬಳಿ ೭–೮ ಮೈಲಿ ದೂರದಲ್ಲಿರುವ ಮಾಸ್ತಂದ್ರದ ಸರಹದ್ದಿನ ಹೊಲದಲ್ಲಿ ಎರಡು ಹೆಣಗಳು ಬಿದ್ದವೆಂತ ಕಳೆದ ತಿಂಗಳು ತಾ. ೩೦ ನೇ ಬೆಳಿಗ್ಗೆ ತೋಟಿಯೊಬ್ಬನು ಇಲ್ಲಿನ ಪೊಲೀಸ್ ಸ್ಟೇಷನ್‌ಗೆ ತಿಳಿಸಿದನು. ಅವನ ಮಾತಿನ ಮೇಲೆ ಇಲ್ಲಿಯ ಅಮಲ್ದಾರರೂ, ಪೊಲೀಸ್ ಇನ್ಸ್‌ಪೆಕ್ಟರೂ, ಜಮಾದಾರರೂ, ೭–೮ ಕಾನ್ಸ್‌ಟೇಬಲುಗಳೂ ಆ ಸ್ಥಳದ ಸುತ್ತಲಿನ ೩ ಗ್ರಾಮಸ್ಥರಲ್ಲಿ ಕೆಲವರನ್ನು ಕರೆಯಿಸಿ, ಅವರೊಂದಿಗೆ ಹೆಣಗಳು ಬಿದ್ದ ಸ್ಥಳಕ್ಕೆ ಹೋಗಿ ತೆಗೆಯಿಸಿ ನೋಡುವಲ್ಲಿ ೪೦–೪೫ ಪ್ರಾಯದವನೂ, ೧೫ ವರ್ಷದ ಒಬ್ಬ ಹುಡುಗನೂ ಅಂತ ಗೊತ್ತಾಯಿತು. ಸತ್ತವರಿಬ್ಬರೂ ತಂದೆ ಮಗನಿರಬಹುದೆಂತ ಅನ್ನುತ್ತಾರೆ ಹುಡುಗನ ತಲೆಯಲ್ಲಿ ಪೂರಾ ಏಟಿನ ಘಾಯಗಳಿದ್ದು ಕೈಗಳಲ್ಲಿ ಒಂದು ಕತ್ತರಿಸಿ ಸ್ವಲ್ಪ ಅಂಟಿಕೊಂಡಿತ್ತಂತೆ. ಮತ್ತೊಬ್ಬ ಪ್ರಾಯದವನಿಗೆ ತಲೆಯ ಮಟ್ಟಿಗೆ ಏಟುಗಳಿಂದ ಘಾಯ ಖೂನಿಯಾದವರಿಬ್ಬರೂ ಸುತ್ತಲಿನ ಗ್ರಾಮಗಳಲ್ಲಿ ಒಂದಕ್ಕೂ ಸೇರಿದವರಲ್ಲವಂತೆ. ನಂತರ ಮಹಜರು ಮಾಡಿ, ಡಾಕ್ಟರ ಅಜಮಾಯಿಷಿಗೆ ತಂದರು. ಡಾಕ್ಟರು ಹೆಣಗಳನ್ನು ಕೊಯ್ದು, ಅಜಮಾಯಿಷಿ ಮಾಡಿ, ಖೂನಿಯಾದದ್ದೇ ನಿಜವೆಂದು ಸರ್ಟಿಫಿಕೇಟ್ ಕೊಟ್ಟು ದಫನ್ ಮಾಡುವದಕ್ಕೆ ಹುಕುಂ ಕೊಟ್ಟರು ಇಷ್ಟರಲ್ಲಿ ಇದರ ತಕ್ಷಣದ ವರ್ತಮಾನ ಬೆಂಗಳೂರಲ್ಲಿರುವ ಪೊಲೀಸ್ ಸೂಪರಿಂಟೆಂಡೆಂಟರಿಗೆ ಕೊಡಲು, ಅವರು ಒಬ್ಬ ಜವೇರಿಯಾರ ಫೋಟೊಗ್ರಫರ್ ಸಹಿತ ಇದೇ ತಿಂಗಳು ೧ ನೆ ತಾ ಗೆ ಇಲ್ಲಿಗೆ ಬಂದು ಸಾಯಂಕಾಲ ದಫನಾಗಿದ್ದವರ ಹೆಣಗಳನ್ನು ಕೀಳಿಸಿ ಮರದ ಬುಡದಲ್ಲಿ ಕೂಡಿಸಿ, ಫೋಟೋ ತೆಗೆದರು. ಇವರು ಇಲ್ಲಿ ಕೆಲ ಯಾವ ಗ್ರಾಮಕ್ಕೂ ಸಂಬಂಧಿತರಲ್ಲವೆಂತ ಮೊದಲೇ ಜನರಿಂದ ಗೊತ್ತಾಯಿತು ಈಗ ಸತ್ತವರ ವಾರಸುದಾರರು ಯಾರಾದರೂ ಎಲ್ಲಿಯಾದರೂ ಇದ್ದರೆ, ಅವರು ಆ ಫೋಟೋವಿನಿಂದ ಗುರ್ತು ಹಿಡಿದು ಬರಲಿ ಎಂಬ ಉದ್ದೇಶದಿಂದ ಫೋಟೋ ತೆಗೆದು ಅದರ ಪ್ರತಿಗಳನ್ನು ಎಲ್ಲಾ ತಾಲ್ಲೋಕುಗಳಿಗೂ ಕಳುಹಿಸುತ್ತಾರಂತೆ ಇಲ್ಲಿಯ ವರಿವಿಗೂ ವಾರಸುದಾರರಾಗಲೀ, ಖೂನಿ ಮಾಡಿದವರಾಗಲೀ ಪತ್ತೆಯಾಗಿಲ್ಲ. ಈ ಖೂನಿ, ಹೆಣಗಳು ಬಿದ್ದಿದ್ದ ಸ್ಥಳದಲ್ಲೇ ನಡೆಯಿತೋ ಇನ್ನು ಬೇರೆ ಕಡೆ ನಡಿಸಿ, ಹೆಣಗಳನ್ನು ಆ ಸ್ಥಳಕ್ಕೆ ತಂದು ಹಾಕಿದರೋ ಅದು ತಿಳಿಯದು ಖೂನಿಯ ಕಾರಣವೂ ತಿಳಿದಿಲ್ಲ ಪೊಲೀಸಿನವರು ಅಕಾರ್ಯ ನಡೆದ ಸ್ಥಳದ ಅಜುಬಾಜಿನ ೩ ಗ್ರಾಮಸ್ಥರಲ್ಲಿ ಕೆಲವರನ್ನು ಹಿಡಿದು ತನಿಖೆ ನಡಿಸುತ್ತಲಿದ್ದಾರೆ.

ತುಮಕೂರು.—ರೈತರು ನೊಂದ ಕೈಯನ್ನು ಹಿಡಿದಿರುವರಲ್ಲದೆ ತಲೆ ಸಾಗುವಳಿಯನ್ನು ಬೇಗನೆ ಮಾಡುತ್ತಿರುವರು ಹೋದ ವಾರ ಇಲ್ಲಿಗೆ ಪರಸ್ಥಳದಿಂದ ಬಂದಿದ್ದ ಇಬ್ಬರು ಪ್ಲೇಗಿನಿಂದ ಕಾಲವಾದದ್ದು, ಕೋಟೆಯಲ್ಲಿ ಒಬ್ಬ ಲಾಯರ ಮನೆಯಲ್ಲಿ ಇಲಿ ಸತ್ತದ್ದು ಜನರಲ್ಲಿ ಗಾಬರಿಯಾಗಿದ್ದಾಗ್ಯೂ ಸದ್ಯದಲ್ಲಿ ಅಂಥಾ ಅನುಮಾನವೇನೂ ಅಂಕುರಿಸಲಿಲ್ಲ ಇಲ್ಲಿನ ಸಂಪೇಟೆಯಲ್ಲಿದ್ದ ಪೊಲೀಸ್ ದಾಸಾ ಚಿಕ್ಕಪೇಟೆಗೆ ವರ್ಗಾಯಿಸಲ್ಪಟ್ಟಿದೆ ಆದರೂ ಆ ಪೇಟೆಯಲ್ಲೇ ಒಬ್ಬ ತೆಲುಗರವನು ಊರಲ್ಲಿರದಿದ್ದಾಗ ಕಳ್ಳರು ನುಗ್ಗಿ ಮನೆಯಲ್ಲಿ ಕಳುವು ಮಾಡಿರುವಂತೆ ವರ್ತಮಾನವಿದೆ ಒಬ್ಬ ಕೋಂಗರವನು ಸಂತೇಪೇಟೆಯಲ್ಲಿ ನಂಬಿಕೆಯಿಂದ ಇದ್ದ ಮನೆಯವರು ರಾತ್ರಿ ನಿದ್ರೆ ಮಾಡುತ್ತಿರುವಾಗ ಕೈಪೆಟ್ಟಿಗೆ ಹೊಡದುಕೊಂಡು ರೈಲಿನಲ್ಲಿ ಪೇಲೂರಿಗೆ ಹೋಗಿದ್ದನು ಇವನನ್ನು ಸರ್ಕಾರದವರು ಹಿಡಿದು ತಂದು ವಿಚಾರಣೆಯಿಂದ ಆರು ತಿಂಗಳ ಕೈದು ವಿಧಿಸಿದ್ದಾರೆ.—ತುರುವೆಕೆರೆಯಲ್ಲಿ ಅಲ್ಲಿನ ಪಟೇಲ ನಾಗಪ್ಪನೆಂಬುವನೂ ಬೆಂಗಳೂರಿಂದ ಹೋಗಿ ವಾಸವಾಗಿದ್ದ ಕೆ ಜಿ ರಾಮರಾಯನೆಂಬುವನೂ ಸೇರಿ ಅಲ್ಲಿ ಸ್ಕೂಲ್ ಮಾಸ್ಟರು ಇಬ್ಬರಿಗೆ ಉಂಗುರ ತೆಗೆದುಕೊಂಡಿರುತ್ತಾರೆಂದು ನಂಬಿಕೆ ದ್ರೋಹಮಾಡಿ ಅವರಿಗೆ ಬಹಳ ತೊಂದರೆ ಕೊಟ್ಟದ್ದಾಗಿ ಡಿಟೋ ಮಾಸ್ಟರುಗಳಿಂದ ಸರ್ಕಾರಕ್ಕೆ ತಿಳಿದು ಇಲ್ಲಿ ತಾ. ೧೦ ನೇ ಶನಿವಾರ ಫೈಸಲು ೧ ಕ್ಕೆ (ನಾಗಪ್ಪ, ಕೆ ಜಿ ರಾಮರಾವ್ ಎಂಬುವರಿಗೆ) ಮೂರು ವಾರ ಸಜಾ ೩೦ ರೂ ಜುಲ್ಮಾನೆ ವಿಧಿಸಲ್ಪಟ್ಟಿತು ಹಿಂದೆ ಆಗಸ್ಟ ತಿಂಗಳಿನಲ್ಲಿ ಇಲ್ಲಿ ನಡೆದ ಸೆಷನ್ ಮೊಕದ್ದಮೆ ಪೈಕಿ ಪಾವಗಡದ ಶೀನಪ್ಪ ಎಂಬುವನಿಗೆ ಫಾಸೀ ಶಿಕ್ಷೆಯೂ ಆತನ ಆಳು ರಂಗ ಎಂಬುವನಿಗೆ ಮರಣಾಂತ್ಯ ಸಜವೂ ಆಗಿವೆ. ಎಂದು ಪ್ರಕಟಿಸಿತ್ತಷ್ಟೆ. ಈಚೆಗೆ ಶೀನಪ್ಪನು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರಿಂದ ಕೆಳಕೋರ್ಟಿನ ಕಟ್ಟು ಪರಾಂಬರಿಸಿ ಜಡ್ಜಿಯವರು ಅಪಾದಿಗಳಿಬ್ಬರನ್ನೂ ಖುಲಾಸ್ ಮಾಡಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇನೆ.—ಇದೇ ತಿಂಗಳು ತಾ ೪ ನೇ ಭಾನುವಾರ ಪೈಟಿಲ್ ಕಿರಾಣಿ ಮಿ॥ ಕೇಶವಣ್ಣನವರು ಕಾರ್ಯಾಂತರವಾಗಿ ಇಲ್ಲಿಗೆ ಬಂದಿದ್ದರು ಇಲ್ಲಿನ ಜನರ ಪ್ರಾರ್ಥನೆಯಂತೆ ವೀಣೆಯ ವಿನಿಕೆಯನ್ನು ನಡಿಸಿ ಎಲ್ಲರಿಗೂ ತುಂಬಾ ಆನಂದವನ್ನುಂಟು ಮಾಡಿದರು.—ಈ ಊರಿನ ಕೋಟೆಯಲ್ಲಿರುವ ಸಿದ್ಧಲಿಂಗೇಶ್ವರ ದೇವಸ್ಥಾನವನ್ನು ಜವಳಿ ಅಂಗಡಿ ಸಾ॥ ಮಲ್ಲಪ್ಪನವರು ನಾಲ್ಕೈದು ಸಾವಿರ ರೂಪಾಯಿ ಮುಟ್ಟಿಸಿ ಜೀರ್ಣೋದ್ಧಾರಮಾಡಿಸಿ ಈ ವಾರ ಒಂದು ಸಾವಿರ ರೂಪಾಯಿ ಖರ್ಚಿನಿಂದ ಪ್ರತಿಷ್ಠೆ, ಆರಾಧನೆ, ನಡಿಸಿರುತ್ತಾರೆ.—ಈ ವಾರ ಡೆಪ್ಯುಟಿ ಇನ್ಸ್‌ಪೆಕ್ಟರು ಸ್ಕೂಲುಗಳನ್ನು ಪರೀಕ್ಷೆಮಾಡಲಾರಂಭಿಸಿರುತ್ತಾರೆ ಇವರ ಪರೀಕ್ಷೆಯಲ್ಲಿ ಹುಡುಗರಿಗೆ ಪಟ್ಟನ ಗಾಬರಿ ವಿಶೇಷವಾಗಿರುವದರಿಂದ ಕೆಲವು ಹುಡುಗರಲ್ಲೆಲ್ಲಾ ಇದೇ ವಿಧವಾದ ಹಂಬಲಿಕೆಯುಂಟಾಗಿದೆ ನಮ್ಮ ಇನ್ಸ್‌ಪೆಕ್ಟರು ಹುಡುಗರಿಗೆ ಗಾಬರಿ ಉಂಟಾಗದಂತೆ ಪರೀಕ್ಷೆ ನಡಿಸಬೇಕಾಗಿ ಬಹು ಜನ ಉಪಾಧ್ಯಾಯರು ಕೋರುತ್ತಾರೆ.—ತಾ ೧ ನೇ ಗುರುವಾರ ಹೊರಪೇಟೆಯಲ್ಲಿ ಒಬ್ಬ ಶಿಪಾಯಾರದ ಹೆಂಗಸು ಭಾವಿಯಲ್ಲಿ ಬಿದ್ದು ೩ ಆಳುದ್ದ ನೀರು ಇದ್ದಾಗ್ಯೂ ಯಾವದೊಂದು ಅಪಾಯವೂ ಆಗದೆ ಕಾಣುವ ಪರಿಗ್ಗದದ ಮೇಲೆ ಕೂತಿದ್ದು ಹೊರಕ್ಕೆ ತೆಗೆಯಲ್ಪಟ್ಟಳು.—ತುಮಕೂರು ಟೌನಿಗೆ ಸೇರಿದ ದೊಡ್ಡಜ್ಯೋತಿಲ್ಲಾಯ್ಯನ ದ ಮುಂಭಾಗದಲ್ಲಿ ಒಂದು ಭಾರಿ ಕಟ್ಟೆ ಇರುತ್ತೆ. ಇದರ ನೀರು ದಾ, ಮದ್ದಗಿರಿ ರೋಡಿನ ಜನರಿಗೂ ಸುತ್ತಲೂ ಪಾಳ್ಯದ ಜನರಿಗೂ ಜಲಾಧಾರವಾಗಿರುತ್ತೆ, ಇಂಥಾ ನೀರನ್ನು ಜನರು ಅಸಹ್ಯಕರವಾಗಿ ಕೆಡಿಸುತ್ತಲೂ ಅದೇ ನೀರನ್ನು ಪಾನ ಮಾಡುತ್ತಲೂ ಬಂದಿರುವದರಿಂದ ರೋಗಗಳಿಗೆ ವಶರಾಗಿರುತ್ತಾರೆ ನಮ್ಮ ಮ್ಯುನಿಸಿಪಾಲಿಟಿಯವರು ಕಟ್ಟೆಯ ನೀರು ಕೆಡದಂತೆ ತಕ್ಕ ಉಸ್ತುವಾರಿ ಇಡಿಸಿದಲ್ಲಿ ಮುದಾಯಕ್ಕೆ ತುಂಬಾ ಅನುಕೂಲವಾಗುತ್ತೆ.—ನಮ್ಮ ಟೌನ ಲಾಂದ್ರ ಕಂಭಗಳು ಹೆಚ್ಚದಷ್ಟು ಬೆಳಕು ಕಡಮೆಯಾಗುತ್ತಾ ಇದೆ ಈ ವಿಷಯದಲ್ಲಿ ತಕ್ಕ ಇಲಾಜು ಅವಶ್ಯಕವಾಗಿರುವದು.

ಖಾತ್ರಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಕೊಡಲಾರೆವು. ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗಾಗಿ ಸ್ಪಷ್ಟ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸಿದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಅಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದ "ಆತ್ಮಹತ್ಯಕ್ಕೆ ವಿಚಿತ್ರ ಕಾರಣ" ಎಂಬ ಖಾತ್ರಿಯು ನಿಜವರ್ತಮಾನವನ್ನು ತಿಳಿಸಲಿಲ್ಲವೆಂತಲೂ, ಮೃತಪಟ್ಟ ಫುಟ್ಟಮ್ಮನೆಂಬಾಕೆಯು ಪತಿಗೃಹದಲ್ಲಿ ಇದ್ದು ಅವರ ತೋಟದ ಭಾವಿಯಲ್ಲಿ ಕಾಲುಜಾರಿಯೋ ಕ್ಯಾ... ಬಿದ್ದು ಮೃತಪಟ್ಟಂತೆಯೂ ಒಬ್ಬ ಖಾತ್ರಿದಾರರು ಬರೆಯುತ್ತಾರೆ.

ಶಿವಸಮುದ್ರಂ ಜಹಗೀರು ರೈತರ ಪೈಕಿ ಸತ್ಯಾಗಾಲಂ ರೈತರು ಕೂಡಿ ವ್ಯವಸಾಯದ ನೀರಿಗಾಗಿ ಉಂಟಾಗಿರುವ ತಮ್ಮ ಕಷ್ಟಗಳ ಕುರಿತು ಅಲ್ಲಿಗೆ ಈಗ ಬಂದಿರುವ ಏಜಂಟರನ್ನು ಸಂಧಿಸಿ ಕೇಳಿದ್ದಕ್ಕೆ ಅವರು ರೈತರ ಮನವಿಯನ್ನು ಸ್ವಲ್ಪವೂ ಲಾಲಿಸದೆ ಪರಿಹಾರ ಹೇಳದೆ ಹೋದರೆಂದು ಒಬ್ಬ ಖಾತ್ರಿದಾರರು ಬರೆದಿರುವ ಈ ಖಾತ್ರಿಯಲ್ಲಿ ರೈತರ ಕೊರತೆಗಳಿಗೆ ಸೇರದೆ ಇರುವ ಇತರ ಆಕ್ಷೇಪಣೆಗಳನ್ನೂ ಬರೆದಿರುವರು ಇದನ್ನೆಲ್ಲಾ ಪ್ರಕಟಿಸಲು ಅವಕಾಶವಿಲ್ಲವೆಂದು ವಿಷಾದಿಸುತ್ತೇವೆ. ಮುಖ್ಯ ಜಹಗೀರುದಾರರೂ ಏಜಂಟರೂ ಏಕೀಭವಿಸಿ ರೈತರಿಗಿರುವ ಕಷ್ಟನಷ್ಟಗಳನ್ನು ಆದಷ್ಟು ಬೇಗನೆ ಯಿಂದ ಪರಿಹರಿಸಿಕೊಟ್ಟಾರೆಂದು ನಿರೀಕ್ಷಿಸುತ್ತೇವೆ.

ಹೋಬಳಿ ಸ್ಕೂಲ್ ಮಾಸ್ಟರುಗಳ ಸಂಬಳವನ್ನು ೭ ರಿಂದ ೧೦ ರೂಪಾಯಿಗೆ ಇಜಾಫೆ ಮಾಡಿಕೊಡುತ್ತೇವೆಂದು ಈ ಸಲ ನಡೆದ ಪ್ರತಿನಿಧಿ ಸಭೆಯಲ್ಲಿ ದಿವಾನರವರು ಹೇಳಿರುವುದು ನಿಜವೇ. ಈ ಇಜಾಫೆಯು ಯಾವಾಗಿನಿಂದ ಜಾರಿಗೆ ಬಂದೀತೋ ನಮಗೆ ತಿಳಿಯದು. ಸರ್ಕಾರದವರು ಕೆಲವು ಇಲಾಖೆಗಳ ಲವಾಜಮೆಯನ್ನು ಕೋತಾಮಾಡಬೇಕೆಂದು ತನಿಖೆಮಾಡುತ್ತಿದ್ದಾರೆ ಅದು ಗೊತ್ತಾಗುವ ತನಕ ಈ ಹೋಬಳಿ ಸ್ಕೂಲ್ ಮಾಸ್ಟರುಗಳಿಗೆ ಇಜಾಫೆ ಕೊಡುವ ವಿಚಾರ ಇತ್ಯರ್ಥವಾದೀತೋ ಇಲ್ಲವೋ ಹೇಳಲಾಗದು.

ಕರೆಸ್‌ಪಾಂಡೆನ್‌ಸ್.

ಅಜ್ಜಂಪುರದ ಸ್ಕೂಲ್

ಅಯ್ಯಾ,

ಈ ಸ್ಕೂಲಿನಲ್ಲಿ ಮೊದಲು ಬಾಳಾಜಿರಾಯರು ಹೆಡ್ ಮಾಸ್ಟರಾಗಿ ಇಲ್ಲಿಗೆ ಬರುವಾಗ್ಗೆ ೪ ಜನ ಉಪಾಧ್ಯಾಯರು ಇದ್ದು ಅವರು ಬಿಟ್ಟು ಹೋಗುವಾಗ್ಗೆ ಅವರು ಸೇರಿ ಇಬ್ಬರು ಮಾತ್ರ ಉಳಿದರು. ವಿದ್ಯಾರ್ಥಿಗಳ ಸಂಖ್ಯೆಯು ೩೦ ರ ಮಟ್ಟಿಗೆ ಇದ್ದಂತೆ ಕಾಣುತ್ತಾ... ಈಚೆಗೆ ಈ ಸ್ಕೂಲಿಗೆ ಅವರ ಬದಲಿನಲ್ಲಿ ಹೆಡ್ ಮಾಸ್ಟರಾಗಿ ಬಂದ ಶಂಕರಪ್ಪನವರ ಬೋಧನಾ ಬಲದಿಂದ ೧೨೦ ರ ವರಿಗೆ ವಿದ್ಯಾರ್ಥಿಗಳು ಸೇರಿರುವದಲ್ಲದೆ ಇನ್ನೂ ಸೇರುವದರಲ್ಲಿದ್ದಾರೆ. ಪರಿಕ್ಷೆ ತರಗತಿಗಳು ಪ್ರಾರಂಭವಾಗಿ ಒಂದು ಎಲ್ಲಾ ತರಗತಿಗಳೂ ಏರ್ಪಟ್ಟಿವೆ. ನಾಲ್ಕು ಜನ ವಿದ್ಯಾರ್ಥಿಗಳು ಪರಿಕ್ಷೆಗೆ ಹೋಗಿರುತ್ತಾರೆ ಇಷ್ಟು ಜನಗಳಿಗೂ ಎರಡು ಉಪಾಧ್ಯಾಯರುಗಳೇ ಬೋಧಿಸುವದು ಅಸಾಧ್ಯವೆಂದು ಗ್ರಾಮಸ್ಥರೂ ಕಮಿಟಿ ಮೆಂಬರುಗಳೂ ಇನ್ಸ್‌ಪೆಕ್ಟರ ಆಫೀಸಿಗೆ ಅರ್ಜಿ ಬರಕೊಂಡದ್ದಕ್ಕೆ ಪ್ರಯೋಜನವೇನೂ ಕಂಡು ಬರಲಿಲ್ಲ. ನಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ಅನುಕೂಲಿಸುವಂತೆ ಇಲಾಖಾ ಅಧಿಕಾರಿಗಳು ಜಾಗ್ರತೆ ಸಹಾಯಮಾಡಬೇಕೆಂದು

ವಂದನೆ.

ತೀರ್ಥಹಳ್ಳಿ ಎ. ವಿ. ಸ್ಕೂಲಿನ ಅವಸ್ಥೆಯು

ಅಯ್ಯಾ,

ಈ ಸ್ಕೂಲಿನ ಸ್ಥಿತಿಯು ಹೋದವರ್ಷಕ್ಕೂ ಈ ವರ್ಷಕ್ಕೂ ಬಹಳ ಬದಲಾವಣೆಗಳಾಗಿವೆ. ಇಲ್ಲಿನ ಸ್ಕೂಲಿನ ಮಾಸ್ಟರುಗಳೆಲ್ಲ ಸ್ಥಳದವರು ಮತ್ತು ಜಮೀನ್ದಾರರಾಗಿಯೂ ಇರುತ್ತಾರೆ ಒಬ್ಬಿಬ್ಬರು ಬೇರೆ ಊರಿನವರು ಸದರಿ ಸ್ಥಳೀಕರಾದ ಉಪಾಧ್ಯಾಯರು ಜಮೀನಿಗೆ ಸಂಬಂಧಪಟ್ಟ ಕೆಲಸಗಳು ಮತ್ತು ಅರ್ಚಕ ಕೆಲಸ ಇವುಗಳಲ್ಲೆ ಆಸಕ್ತರಾಗಿರುತ್ತಾರೆಯೋ ಹೊರತು ಸ್ಕೂಲು ಕೆಲಸದಲ್ಲಿ ಬಹಳ ಸಡಿಲಮಾಡಿರುತ್ತಾರೆ ಇದರಲ್ಲಿ ೨–೩ ಜನರು ೭–೮ ವರ್ಷಗಳಿಂದ ಇದ್ದು ಸರಿಯಾಗಿ ಬಾಲಕರಿಗೆ ಬೋಧಿಸದಿರುವುದರಿಂದ ಹುಡುಗರು ಬಹಳ ಹೀನಸ್ಥಿತಿಯುಳ್ಳವರಾಗಿರುತ್ತಾರೆ. ಆದ್ದರಿಂದ ಇಲಾಖಾ ಮೇಲಿನ ಆಫೀಸರು ಬಹಳ ವರ್ಷಗಳಿಂದ ಕೆಲಸಮಾಡುತ್ತಿರುವ ಮಾಸ್ಟರುಗಳನ್ನು ಬೇರೆ ಕಡೆಗೆ ವರ್ಗಾಯಿಸಿ ಸರಿಯಾದವರನ್ನು ಹಾಕುವುದರಿಂದ ಸ್ಕೂಲು ಅಭಿವೃದ್ಧಿಸ್ಥಿತಿಗೆ ಬರುತ್ತೆಂದು ಹಾರೈಸುತ್ತೇನೆ.

ವಿದ್ಯಾರ್ಥಿಗಳ ಹಿತಚಿಂತಕ.

ಶೀವರ್ಸ್ ಲೈನು, ಮೈಸೂರು

ಸ್ವಾಮಿ,

ಮೈಸೂರು ಚಾಮರಾಜ ಮೊಹಲ್ಲಾಕ್ಕೆ ಸೇರಿದ ಶೀವರ್ಸ್ ಲೈನಿಗೆ ಕೆಲವು ದಿನಗಳ ಹಿಂದೆ ಒಂದು ಪೋಲೀಸ್ ಸ್ಟೇಷನ್ ಮತ್ತು ಒಂದು ಆಸ್ಪತ್ರೆಯೂ ಬಂದದ್ದರಿಂದ ಇಲ್ಲಿನ ಜನಗಳಿಗೆ ಬಹಳ ಪ್ರಯೋಜನವಾಯಿತು ಇಲ್ಲಿಗೆ ಬಂದಿರುವ ಆಸ್ಪತ್ರೆ ಅಸಿಸ್ಟೆಂಟರು ತಮ್ಮ ರೋಗಿಗಳು ಬಹಳ ಆದರದಿಂದಲೂ, ವಿಶ್ವಾಸದಿಂದಲೂ ರೋಗಿಗಳನ್ನು ವಿಚಾರಿಸಿ ಔಷಧಿ ಕೊಡುತ್ತಿದ್ದಾರೆ ಇಲ್ಲಿಗೂ ಪೋಸ್ಟಾಫೀಸಿಗೂ ಬಹಳ ದೂರವಾದ್ದರಿಂದ ಸರ್ಕಾರದವರು ದಯವಿಟ್ಟು ಒಂದು ಬ್ರಾಂಚು ಆಫೀಸನ್ನು ಇಲ್ಲಿ ಏರ್ಪಡಿಸಿದರೆ ಜನಗಳಿಗೆ ತುಂಬಾ ಉಪಕಾರವಾಗುತ್ತದೆ ಇದೇ ಆಸ್ಪತ್ರೆ ಬೀದಿಯಲ್ಲಿರುವ ಒಂದು ನಲ್ಲಿಯ ಬಾಯನ್ನು ಯಾರೋ ತೆಗೆದು ಆ ನಲ್ಲಿಯಿಂದ ನೀರು ಬಾರದ ಹಾಗೆ ಮಾಡಿಬಿಟ್ಟಿದಾರೆ ಈ ಬೀದಿಯಲ್ಲಿರುವ ಜನಗಳಿಗೆ ನೀರಿಗೆ ತುಂಬಾ ತೊಂದರೆಯಾಗಿದೆ ಸುಮಾರು ೩ ತಿಂಗಳಾದಾಗ್ಯೂ ಅಧಿಕಾರಿಗಳ ಗಮನಕ್ಕೆ ಬಾರದೇ ಇರುವದು ಆಶ್ಚರ್ಯ ಸರ್ಕಾರದವರು ನೋಡಿ ಮೇಲ್ಕಂಡ ನಲ್ಲಿಗೆ ತಿರುಪನ್ನು ಇಡಿಸಿ ಜನಗಳ ಕಷ್ಟವನ್ನು ತಪ್ಪಿಸುವರೆಂದು ಪ್ರಾರ್ಥನೆ

ಗ್ರಾಮಶೋಧಕ

[ಸ್ಥಳಿಕ ನಿವಾಸಿಗಳು ಸೇಂ ಪೋಸ್ಟ್ ಸೂಪರಿಂಟೆಂಡೆಂಟರಿಗೆ ಅರ್ಜಿ ಬರೆದುಕೊಂಡರೆ ಒಂದು ಬ್ರಾಂಚ್ ಆಫೀಸನ್ನು ಇಡಿಸುತ್ತಾರೆ ಈ ವಿಷಯಕ್ಕೆ ಸಂಶಯವಿಲ್ಲ — ಎಡಿ]

ಆಕ್ಷೇಪಣೆಗೆ ಉತ್ತರ

ಸ್ವಾಮಿ,

ಬಿ ಸೂರಪ್ಪ, ಪೋಸ್ಟ್ ಜಾವಗಲ್, ಅರಸೀಕೆರೆ ತಾಲ್ಲೂಕ್, ಇವರು ನಮ್ಮ ಕಂಪನಿಯ ಅರಾಣೆಯ ಬಾಯಿಬೇಡಿ ಬರದ ಕಾರ್ಡಿಗೆ ಜವಾಬು ನಮ್ಮ ಜಾಹೀರಾತ ಪ್ರಕಾರ ೬ ಆಣೆಯ ೧೨ ಬಗೆ ಶಾಯಿ ಪುಟ್ಟಿಗಳನ್ನೂ ಬಹುಮಾನದ ಬಗ್ಗೆ ಒಂದು ಡಜನ್ ಎಚ್ ಬಿ ಪೆನ್ಸಲು ಸಹ ಅವರಿಗೆ ಹೆಚ್ಚು ಖರ್ಚು ಬೀಳಬಾರದೆಂಬುದರಿಂದ ಪ್ಯಾಕಿಂಗ್ ವಗೈರೆ ಯಾವ ತರದ ಚಾರ್ಜನ್ನಾದರೂ ಕೂಡಿಸದೆ ಫಕ್ತು ಆರ್ಡರ್ ಫೀ ಒಂದೇ ಆಣೆ, ಟಪಾಲ ಕೂಲಿ ೧ ಆಣೆ ಮಾತ್ರ ಬರಬೇಕಾದ ಎಂಟಾಣೆಯ ಬಗ್ಗೆ ವಿ ಪಿ ಮಾಡಿದ್ದೆವು ಆ ವಿ ಪಿ ಯನ್ನು ಅವರು ಕಬೂಲಮಾಡುತ್ತಾರೆ "ವಿ ಪಿ ಯೊಳಗಿನ ಸಾಮಾನಿನ ಬಗ್ಗೆ ಏನಾದರೂ ಸಂಶಯ ಬಂದರೆ ಕೂಡಲೇ ನಮಗೆ ತಿಳಿಸಬೇಕು' ಎಂಬದಾಗಿ ನಾವು ವಿ ಪಿ ಮೇಲೆ ಛಾಪಿ ಲೇಬಲ ಹಚ್ಚಿದ್ದರೂ ಅವರು ಆ ಪ್ರಕಾರ ಮಾಡದೆ ಮನಃಪೂರ್ವಕವಾಗಿ ಅಪಕೀರ್ತಿ ತರುವ ಉದ್ದೇಶದಿಂದ ಈ ಪತ್ರಿಕೆಯ ೪೦ನೇ ಸಂಚಿಕೆಯಲ್ಲಿ ಎಚ್ಚರಿಕೆ ಎಂಬ ಅವಿಚಾರದ ಲೇಖನವನ್ನು ಬರೆದು ತಮ್ಮ ಬುದ್ಧಿಯ ಪ್ರದರ್ಶನ ಮಾಡಿದ್ದು ಮಾತ್ರವಲ್ಲ, ಅವರ ಕುಹಕತನವನ್ನು ಪ್ರಕಟಿಸುತ್ತಾರೆ ಬೇರೆ ಕಂಪನಿಯವರಿಗಿಂತ ನಾವು ನಮ್ಮ ಗ್ರಾಹಕರಿಗೆ ಸೋವಿಯಾಗಿ ಅಲ್ಪ ಖರ್ಚಿನಿಂದ ತಕ್ಕ ಸಾಮಾನುಗಳನ್ನು ರವಾನಿಸುತ್ತಿರುತ್ತೇವೆಂಬದನ್ನು ಸುಜ್ಞರಾದ ಸದ್ಗೃಹಸ್ಥರು ಆಲೋಚಿಸದೆ ಇರುವಂತಿಲ್ಲ ಮೇಲಿನ ವಿಷಯದ ಕುರಿತು ಬಿ ಸೂರಪ್ಪ, ಜಾವಗಲ್, ಇವರಿಗೆ ರಿಜಿಸ್ಟ್ರಿ ನೋಟೀಸು ಕೊಡಬೇಕಾಗಿರುತ್ತದೆ

ಹೊನ್ನಾವರ, ಗಣಪತಿ ನಾಗಪ್ಪ, ತಾರೀಬಾಗಲ್,
೬—೧೧—೦೬ ಕಾರ್ಯನಿರ್ವಾಹಕ

ಕಳುವಿನಿಂದ ಹೆಣ್ಣು ತಂದು ಮದುವೆಯಾದದ್ದು.

ಸ್ವಾಮಿ,

ಚನ್ನರಾಯಪಟ್ಟಣದ ತಾಲ್ಲೂಕು ಹಿರೇಸಾವೆ ಸಮ್ಮತು ಊಗೇಹಳ್ಳಿ ತೋಪೇಗೌಡನ ಮಗಳು ಅಕ್ಕಮ್ಮನೆಂಬ ಸುಮಾರು ೧೪ ವರ್ಷದ ಹುಡುಗಿಯನ್ನು ತುರುವೇಕೆರೆ ಸಬ್ ತಾಲ್ಲೂಕು ಜೋಡಿ ಗಂಗನಕೆರೆ ಗ್ರಾಮಕ್ಕೆ ೩—೪ ಮೈಲಿ ಫಾಸಲೆಯಲ್ಲಿರುವ ಹಳ್ಳದ ಹೊಸಹಳ್ಳಿಯಲ್ಲಿರುವ ಅಂಧಾನಿ ಎಂಬ ೪೦ ವರ್ಷದ ದೊಡ್ಡಪನಿಗೆ ಆ ಊರಿನವರು ಮತ್ತು ಅವಕ್ಕೆ ಒಂದು ಮೈಲಿ ಫಾಸಲೆಯಲ್ಲಿರುವ ಹೋಬಳಿ ಗಟ್ಟದ ಜನರು ಕೆಲವರು ಮತ್ತು ಆ ಹೆಣ್ಣಿನ ಊರಾದ ಊಗೇಹಳ್ಳಿ ಜನಗಳು ಕೆಲವರು ಸೇರಿ ಇದೇ ತಿಂಗಳು ತಾ ೭ನೆ ಬುಧವಾರ ದಿವಸ ಮೇಲ್ಕಂಡ ಊರಿನವರು ಮಾತನಾಡಿಕೊಂಡು ನಂತರ ಮದುವೆಗೆ ಹೋದವರಂತೆ ಹೋಗಿ ಸಾಯಂಕಾಲ ೬ ಗಂಟೆ ಸಮಯದಲ್ಲಿ ಬಹಿರ್ದೆಶೆಗೆಲ್ಲಾ ಹೋಗಿ ಬರುವಂತೆ ಹೇಳಿ ಸಂಚು ಮಾಡಿಕೊಂಡು ಮೇಲ್ಕಂಡ ಅಕ್ಕಮ್ಮನೆಂಬ ಹುಡುಗಿಯನ್ನು ಕದ್ದು ತೆಗೆದುಕೊಂಡು ಬಂದು ತಂದೆತಾಯಿಗಳಿಗೆ ತಿಳಿಯದಂತೆ ರಾತ್ರಿ ೧೨ ಗಂಟೆ ಸಮಯದಲ್ಲಿ ಎಲ್ಲರೂ ಸೇರಿ ಬಹಳ ವೈಭವದಿಂದ ಬೆಸಕನ ಕೆರೆಯ ಶಾನುಭೋಗ ಸದರಿ ಊರಾಗಳ ಜೋಯಿಸರಾದ ನರಸಿಂಹಭಟ್ಟನನ್ನು ರಾತ್ರಿ ೧೦ ಗಂಟೆ ಸಮಯದಲ್ಲಿ ಕರೆದುಕೊಂಡು ಬಂದು ಮದುವೆ ಮಾಡಿದರು ಮೇಲ್ಕಂಡ ತೋಪೇಗೌಡನೆಂಬುವನು ಏನೂ ತಿಳಿಯದವನಾಗಿರುತ್ತಾನೆ ಈ ಮೇಲ್ಕಂಡ ಅಕ್ಕಮ್ಮನೆಂಬ ಹುಡುಗೀಗೆ ತುರುವೇಕೆರೆ ಸಬ್ ತಾಲ್ಲೂಕು ಮಾಯಸಂದ್ರದ ಹೋಬಳಿ ಹಿಂದುಗಡೆ ಹಳ್ಳಿ ಬೋರೇಗೌಡನ ಮಗ ನಂಜನೆಂಬುವನಿಗೆ ಕೊಟ್ಟು ನಿಶ್ಚಯವಾಗಿರುತ್ತೆ ಮುಂದೆ ಇಂಥಾ ವಿಷಯಗಳನ್ನು ಸರ್ಕಾರದವರು ಗಮನಕ್ಕೆ ತಂದುಕೊಳ್ಳುವರೆಂದು ನಂಬಿರುತ್ತೇನೆ

ವೆಂಕಟರಮಣಯ್ಯ

ಆನೇಕಲ್ಲು ಟವ್ನ ವ್ಯಾಪಾರಸ್ಥರ ಮತ್ತು ಅಕ್ಕಪಕ್ಕದ ಗ್ರಾಮಗಳ ರೈತರ ಪ್ರಾರ್ಥನೆ

ಸ್ವಾಮಿ,

ಆನೇಕಲ್ ತಾಲ್ಲೂಕಿನಲ್ಲಿ ೬—೭ ವರ್ಷಗಳಿಂದ ಪ್ಲೇಗ್ ರೋಗದಿಂದ ೫—೬ ಸಾವಿರ ಪ್ರಜೆಗಳು ಸತ್ತಿರುವುದು ಅನೇಕರಿಗೆ ತಿಳಿದಿರಬಹುದು ಅಲ್ಲದೆ ಇಲ್ಲಿ ಪ್ಲೇಗ್ ನಲೆಯಾಗಿ ನಿಂತ ಹಾಗೆ ಇನ್ನು ಯಾವ ಊರಲ್ಲಿಯೂ ನಿಲ್ಲಲಿಲ್ಲ ಇದರಿಂದ ಈ ಊರು ಸುತರಾಂ ಹೀನದೆಸೆಗೆ ಬಂದಿದ್ದು, ಹೋದ ವರುಷವೂ ಈ ವರುಷವೂ ಪ್ಲೇಗಿನ ಗಲಾಟೆ ಇಲ್ಲದ್ದರಿಂದ ಸ್ವಲ್ಪ ಉತ್ತಮಸ್ಥಿತಿಗೆ ಬರಲು ಕಾರಣವಾಯಿತು. ಮುಂದೆಯೂ ಸಹ ಇದೇ ಮೇರೆಗೆ ಅಭಿವೃದ್ಧಿಗೆ ಬರಲೆಂದು ಪ್ರಾರ್ಥನೆ.

ಈ ಟವ್ನಗೆ ೬—೭ ಮೈಲಿ ಫಾಸಲೆಯಲ್ಲಿ ಚಂದಾಪುರದಖಾನೆಯಲ್ಲಿ ಇಲ್ಲಿ ಪ್ಲೇಗಿನ ಗಲಾಟೆಯಿಂದ ಜನಗಳ ಸೌಖ್ಯಕ್ಕಾಗಿ ಹಂಗಾಮಿಯಾಗಿ ಸಂತೆ ಏರ್ಪಾಟು ಮಾಡಿದರು ಅದು ಆಗ್ಗೆ ಅನುಕೂಲವಾಗಿತ್ತು ಈಗ್ಗೆ ಪ್ರತಿಕೂಲವಾಗಿಯೇ ಇದೆ ಈ ಸಂತೆಯಲ್ಲಿ ಸುಂಕವಿಲ್ಲದ್ದರಿಂದ ಅನೇಕ ಜೀವರಾಶಿಗಳೂ, ಅಂಗಡಿಗಳೂ ಬಂದು ಅಭಿವೃದ್ಧಿಯಾಗಿ ಟವ್ನ ಸಂತೆಯೂ, ಅಕ್ಕಪಕ್ಕದ ಕೆರಿಗೆಯೂ ಕಮ್ಮಿಯಾಯಿತು ಇಲ್ಲಿ ಬೆಳೆಯುವ ಪ್ರತಿ ಒಂದು ಸಾಮಾನಿನ ಬೆಲೆಯೂ ಬಹಳ ಹೆಚ್ಚಾಯಿತು ಯಾಕೆಂದರೆ ಮೇಲ್ಕಂಡ ಸಂತೆಗೆ ಬೆಂಗಳೂರಿನ ವ್ಯಾಪಾರಸ್ಥರು ಬಂದು ಧಾರಣೆ ಹೆಚ್ಚಿಸಿ ಸಾಮಾನು ತೆಗೆದುಕೊಂಡು ಹೋಗುತ್ತಾರೆ ಅದೇ ಸಂತೆಯಿಂದ ನಾವೂ ತಂದು ಮಾರುವದಕ್ಕೆ ಪ್ರಯೋಜನವಾಗಿ ಇಲ್ಲಿ ಖರ್ಚಾಗುವದಿಲ್ಲ ಆದ್ದರಿಂದ ನಷ್ಟವೇ ಹೊರ್ತು ಆದಾಯವಿಲ್ಲ ಅಲ್ಲದೆ ಸುತ್ತುಮುತ್ತಲಿರುವ ರೈತರ ದನ ಕರುಗಳು ಖಲಲ್ ಆಗಲು ಕಾರಣವಾಗಿದೆ ಕ್ಯಾಗಂದರೆ, ಬೆಂಗಳೂರಿಂದ ಗಾಯಕಸಾಬ್ ಜನಗಳು ಬಂದು ಇಲ್ಲಿ ಕಳುವಾಗಿ ಬರುವ ಮತ್ತು ಸಾಟಾ ಮಾರುವದಕ್ಕೆ ಬರುವ ದನಗಳನ್ನು ಕಡಿಯುವದಕ್ಕೆ ತೆಗೆದುಕೊಂಡು ಹೋಗುತ್ತಾರೆ ಉದಾಹರಣೆಗಾಗಿ ಹೋದ ಶುಕ್ರವಾರ ರಾತ್ರಿ ಬಲಗೈ ಮುನಿಗಾನೆಂಬುವನು ಮತ್ತಿಗೆರೆ ರಿವುನ್ಯೂನಿಂದ ಒಂದು ಎತ್ತನ್ನು ಚೋರಿ ಮಾಡಿಕೊಂಡು ಹೋಗುತ್ತಿದ್ದವನನ್ನು ಬಿದರಗೆರೆ ಸರದಿಯವರು ಹಿಡಿದು ಬೆಳಿಗ್ಗೆ ಈ ಆನೇಕಲ್ ಸ್ಟೇಷನ್‌ಗೆ ತಂದು ವಿಚಾರಿಸಿ ಇಲ್ಲಿಗೆ ಸಂಬಂಧಪಟ್ಟದ್ದಲ್ಲವೆಂದು ಹೊಸೂರಿಗೆ ರವಾನಿಸಿದರು ಬಿದರಗೆರೆಯವರು ಎಚ್ಚರಿಕೆಯಾಗಿಲ್ಲದೆ ಇದ್ದಿದ್ದರೆ ಎತ್ತಿನ ಪ್ರಾಣ ಹೋಗುವದಲ್ಲದೆ ಮಾಲೀಕನಿಗೆ ನುಕ್ಸಾನೂ ಆಗುತ್ತಿತ್ತು ಇದನ್ನು ಸರದಿಯವರು ತಪ್ಪಿಸಿದಹಾಗಾಯಿತು ಅವರು ತಮಗೆ ನೇಮಿಸಿದ ಕೆಲಸದಲ್ಲಿ ಪೂರ್ತಿಯಾದ ಆಸಕ್ತಿಯುಳ್ಳವರೆಂದು ತೋರುತ್ತೆ ಮೇಲ್ಕಂಡ ಸರದಿಯವರ ಮೇಲ್ಪಂಕ್ತಿಯನ್ನು ಎಲ್ಲಾ ಗ್ರಾಮದ ಸರದಿಯವರೂ ಅನುಸರಿಸಿದರೆ ಕಳ್ಳರಿಗೆ ಅವಕಾಶವಿಲ್ಲದಂತೆ ಆಗುವದರಲ್ಲಿ ಸಂಶಯವಿಲ್ಲ ಆದ್ದರಿಂದ ಈ ಖಾನೆ ಸಂತೆಯನ್ನು ವಜಾ ಮಾಡಿಸಿಕೊಡಬೇಕೆಂದು ನಮ್ಮ ಶ್ರೀಮನ್ ದಿವಾನ್ ಸಾಹೇಬ್ ಬಹದ್ದೂರವರಿಗೆ ಅರ್ಜಿ ಬರೆದುಕೊಂಡಿದ್ದೆವು ಇದುವರವಿಗೆ ಯಾವ ಇತ್ಯರ್ಥವೂ ಆಗಲಿಲ್ಲ ಇದರಿಂದ ನಾವು ಜೀವನ ಮಾಡುವದು ಕಷ್ಟವಾದ್ದರಿಂದ ಖಾವಂದರು ಘನವಾದ ಚಿತ್ತದಲ್ಲಿ ಆಲೋಚಿಸಿ, ಈ ಹಂಗಾಮಿಯಾದ ಖಾನೆ ಸಂತೆಯನ್ನು ವಜಾ ಮಾಡಿಸಿ, ಆನೇಕಲ್ಲಿನ ಸಂತೆಯನ್ನು ಹೆಚ್ಚಿಸಿ, ವ್ಯಾಪಾರಸ್ಥರ ಮತ್ತು ಬಡ ರೈತರ ಕಷ್ಟನಷ್ಟಗಳನ್ನು ತಪ್ಪಿಸಿ, ಕೀರ್ತಿ ಪಡೆಯಬೇಕೆಂದು ಅನುದಿನವೂ ಪ್ರಾರ್ಥಿಸುತ್ತಿದ್ದೇವೆ.

ಬಿ ಎಚ್ ಶ್ರೀನಿವಾಸರಾವ್

ಮಂತ್ರವಾದ.

ಅಯ್ಯಾ,

ದಕ್ಷಿಣ ಕನಡ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕು ಕೌಳಿನಾಡು ಕಸಬಾ ಗ್ರಾಮಕ್ಕೆ ಎಲ್ಲಿಂದಲೋ ಒಬ್ಬ ಬೈರಾಗಿಯು ಬಂದು—ತಾನು ದೊಡ್ಡ ಮಂತ್ರವಾದಿಯು, ಎಂಥಾ ಭೂತಗಳನ್ನು ಪಿಶಾಚಿಗಳನ್ನಾದರೂ ಉಚ್ಚಾಟನೆ ಮಾಡುತ್ತೇನೆಂದು ಇಬ್ಬರು ಶಿಷ್ಯರೊಡನೆ ಬಂದು ಗ್ರಾಮದ ಪಟೇಲರ ಮನೆಯ ಹತ್ತಿರ ಸುಮಾರು ೧೫ ದಿವಸಕ್ಕೆ ಮಂಚ ಊಳಿಕೊಂಡನು ಅನೇಕ ಜನರು ಅವನ ಬಿಡಾರಕ್ಕೆ ಹೋಗತೊಡಗಿದರು. ಯಾರು ಹೇಳಿದರೂ ಈಗ ನಾನು ಕೊಡುವ ಈ ಬೂದಿಯನ್ನು ಸೌಖ್ಯವಿಲ್ಲದವರ ಮೇಲೆ ಹಾಕಿ ನವಂಬರ ತಾ ೭ ನೇ ಭಾನುವಾರದ ಮಧ್ಯಾಹ್ನಕ್ಕೆ ಒಂದು ಹೋಮ ಮಾಡುತ್ತೇನೆ ಆಗ ನೀವು ಪ್ರತಿ ಒಬ್ಬರೂ ಭಂಗಾರದ ತಾತಿಯೊಂದನ್ನು ಕಾಣಿಕೆಗೆ ತಕ್ಕ ರೊಕ್ಕವನ್ನು ತಕ್ಕೊಂಡು ಬನ್ನಿ ನಾನು ತಾತಿ ಬರೆದು ಪೂಜೆಮಾಡಿ ಕೊಟ್ಟ ಮೇಲೆ ಪೂರಾ ಸೌಖ್ಯವಾದೀತು ಈಗ ನನ್ನ ದೈವಕ್ಕೆ ಏನಾದರೂ ಕಾಣಿಕೆ ಹಾಕಿರಿ ಎಂಬೀರೀತಿಯಾಗಿ ಹೇಳುತ್ತಿದ್ದದರಿಂದ ಅವನಿಗೆ ಒಂದು ರೂಪಾಯಿ ಕೆಲವು ವೇಳೆ ಎರಡು ರೂಪಾಯಿ ಸಹ ಸಿಕ್ಕುತ್ತಿತ್ತು ನವಂಬರ ತಾ ೩ ನೇ ಸಾಯಂಕಾಲ ಶಿಷ್ಯರೂ ಬೈರಾಗಿಯೂ ಮಾರಣೇದಿನದ ಹೋಮಕ್ಕೆ ಕಟ್ಟಿಗೆ, ತುಪ್ಪ, ಎಳ್ಳು, ಮೇಣಸು, ಕಬ್ಬು, ಮುಂತಾದ ಎಲ್ಲಾ ಸಾಹಿತ್ಯಗಳನ್ನೂ ತಯಾರುಮಾಡುವದರಲ್ಲಿಯೂ ಬಿಡಾರವನ್ನು ಶುದ್ಧಮಾಡುವದರಲ್ಲಿಯೂ ಬಿದ್ದಿದ್ದರು ಮಾರಣೇದಿನ ಕೋಳಿ ಕೂಗುವಾಗಲೇ ಎದ್ದು ಬೈರಾಗಿಯು ಮಿಂದು ಮೈಯೆಲ್ಲಾ ತುಂಬಾ ಬೂದಿ ಬಡಿದುಕೊಂಡು ಜಪಸರ ಹಿಡಿದುಕೊಂಡು ಹೋಮಮಾಡತಕ್ಕ ಸ್ಥಳದ ಹಿಂದೆ ಮೌನವಾಗಿ ಕುಳಿತುಕೊಂಡನು ಶಿಷ್ಯರಿಬ್ಬರು ಸಾಹಿತ್ಯಗಳನ್ನೆಲ್ಲಾ ಬೈರಾಗಿಯ ಎಡಬಲಪಕ್ಕಗಳಲ್ಲಿಯೂ ತಂದಿರಿಸಿದರು. ಹೋಮ ಮಾಡತಕ್ಕ ಸ್ಥಳದ ಮುಂದೆ ಎರಡು ಜಮಖಾನವನ್ನು ಹಾಸಿರಿಸಿದರು ಬರಬೇಕೆಂದು ನಿಶ್ಚಯಿಸಿದ ಜನರು ಮುಂಜಾನೆಯೇ ಎದ್ದು ಸುಮಾರು ೮ ಗಂಟೆಯೊಳಗೆ ಬಂದು ಬೈರಾಗಿಯ ಬಿಡಾರವನ್ನು ಮುಟ್ಟಿದರು ಬಂದವರೆಲ್ಲಾ ಒಂದು ಜರಿವಾಣದಲ್ಲಿ ತಾತಿಯನ್ನೂ ಮತ್ತೊಂದರಲ್ಲಿ ರೊಕ್ಕವನ್ನೂ ಹಾಕಿದರು ಯಾವನೊಬ್ಬನೂ ನಾಲ್ಕಾಣೆಗಿಂತ ಕಡಿಮೆ ಹಾಕಲಿಲ್ಲ ಒಟ್ಟಾಗಿ ನೂರು ತಾತಿಗಳೂ ಸುಮಾರು ೫೦ ರೂಪಾಯಿ ರೊಕ್ಕವೂ ಕೂಡಿತ್ತು ಚಿನ್ನದ ಕ್ರಯವೂ ರೊಕ್ಕವೂ ಕೂಡಿ ಸುಮಾರು ೬೦೦ ರೂಪಾಯಿ ಸೊತ್ತುಗಳು ಕೂಡಿದವು. ಇದೆಲ್ಲಾ ೧೨ ಗಂಟೆಯ ಒಳಗೆ ತೀರಿತು ಇನ್ನೂ ಹೋಮ ಶುರು ಆಗಲಿಲ್ಲ ಬಂದವರೆಲ್ಲಾ ಚಾವಡಿಯಲ್ಲಿ ಎಲೆ ಜಗಿಯುತ್ತಾ ಕುಳಿತರು ಹೋಮ ಶುರುವಾಯಿತು. ಬಂದವರೆಲ್ಲಾ ಹೋಮದ ಸುತ್ತಲೂ ಕುಳಿತರು

ಆಹುತಿಗಳಾದವು ಎಲ್ಲಾ ಸಾಹಿತ್ಯಗಳೂ ಬೆಂಕಿಗೆ ಬೈರಾಗಿ ಹಾಕಿದ ಸ್ವಲ್ಪ ಸಮಯದಲ್ಲೇ ಎಲ್ಲಾ ಬೂದಿಯಾಯಿತು ಬೈರಾಗಿಗೆ ಸುಮಾರು ೩ ಗಂಟೆ ಸಮಯಕ್ಕೆ ನಡುಗು ಹತ್ತಿತು ನಡುಗು ಹೆಚ್ಚಾಯಿತು ದರಿಸಿದನು ಸುಮಾರು ಒಂದು ತಾಸು ವರೆಗೆ ದರಿಸಿದ ಕಡೆಗೆ ಸ್ಮೃತಿತಪ್ಪಿದ ಹಾಗೆ ನೆಲದ ಮೇಲೆ ಬಿದ್ದನು ಆಗ ಅವನ ಶಿಷ್ಯರಲ್ಲೊಬ್ಬನು ಜನರನ್ನು ಕುರಿತು—ಸ್ವಾಮಿ, ಈಗ ಅವರಿಗೆ ಸ್ಮೃತಿತಪ್ಪಿತು ಚೇತರಿಸಿಕೊಳ್ಳಬೇಕಾದರೆ ಇನ್ನೂ ೩ ಗಂಟೆ ಬೇಕು ನೀವು ಈ ಹೊತ್ತು ಹೋಗಿ ನಾಳೆ ಮುಂಜಾನೆ ಬಂದರೆ ತಾತಿಯನ್ನೂ ಪ್ರಸಾದವನ್ನೂ ದಯಪಾಲಿಸುವರು ಎಂದು ಹೇಳಿದನು. ಆದನ್ನು ಕೇಳುತ್ತಲೇ ಅವರೆಲ್ಲಾ ಗೌಜಿಮಾಡುತ್ತಾ ಅವರವರ ದಾರಿಹಿಡಿದು ಹೋದರು. ಎಲ್ಲರೂ ಹೋದ ಮೇಲೆ ಬೈರಾಗಿ ಎದ್ದ.

ರಾತ್ರಿ ವೇಳೆ ಯಾರಿಗೂ ಗೊತ್ತಿಲ್ಲದ ಹಾಗೆ ತಾತಿಗಳನ್ನೂ ರೊಕ್ಕವನ್ನೂ ತನ್ನ ಸಂಚಿಯಲ್ಲಿ ಹಾಕಿಕೊಂಡು ಬೈರಾಗಿಯು ಶಿಷ್ಯರೊಡಗೂಡಿ ಪಲಾಯನ ಮಾಡಿದನು.

ಜನರೆಲ್ಲಾ ಮುಂಜಾನೆ ಬಿಡಾರಕ್ಕೆ ಬಂದು ನೋಡುವಾಗ್ಗೆ ಯಾರೂ ಕಾಣಲಿಲ್ಲ ಬೈರಾಗಿ ಎಲ್ಲಿಂದ ಬಂದ? ಎಲ್ಲಿಗೆ ಹೋದ? ಎಂಬ ಸಂಗತಿ ಯಾರಿಗೂ ತಿಳಿಯದು. "ಎಂಥಾ ಮೋಸ!" ಎಂದು ಎಲ್ಲರೂ ಗೌಜಿ ಮಾಡಿದರು ಯಾರಿಗೆ ಗೌಜಿ ಮಾಡುವದೆಂದು ಅವರವರಿಗೇ ಅವರು ಹೇಳಿಕೊಳ್ಳುತ್ತಾ ಮನೆಗೆ ದಾರಿಹಿಡಿದು ಹೋದರು

ಎಂ ಗೋವಿಂದಭಟ್ಟ.

ಕಪಲೆ ಬಸವಣ್ಣನ ವಿವರಣೆಗೆ

ಅಯ್ಯಾ,

ನಾನು ಈ ದಿನ ಬೆಳಿಗ್ಗೆ ಸ್ವಲ್ಪ ಬರವಣಿಗೆ ಕೆಲಸದ ಉದ್ದಿಶ್ಯ ಸ್ಕೂಲಿಗೆ ಬಂದಿದ್ದೆನು, ಸ್ಕೂಲಿಗೆ ಸಂಬಂಧಪಟ್ಟ ಕೆಲಸಗಳನ್ನು ಮುಗಿಸಿಕೊಂಡು ಮನೆಗೆ ಹೋಗುತ್ತಿರುವಾಗ್ಗೆ ಸುಬ್ಬರಾಯ ಮೊದಲಿಯಾರ್ರ ಮನೆ ಬಳಿ ಬಹು ಜನಗಳು ಗುಂಪು ಕೂಡಿಕೊಂಡು ಕೋಲಾಹಲ ಧ್ವನಿ ಮಾಡುತ್ತಿದ್ದರು ಆ ಸ್ಥಳವು ಸ್ಕೂಲಿಗೆ ಬಹಳ ದೂರವಿಲ್ಲ ಆದ್ದರಿಂದ ಕೆಲವು ಮಂದಿ ವಿದ್ಯಾರ್ಥಿಗಳೂ ಅಲ್ಲಿ ನಿಂತಿದ್ದು, ನಾನು ಬರುವದನ್ನು ಕಂಡು ಮರಳಿ ಸ್ಕೂಲಿಗೆ ಹೋಗಲು ನನಗೆ ಎದುರಾಗಿ ಬಂದರು ನಾನು ಅವರನ್ನು ಅದೇನು ಗದ್ದಲವೆಂದು ಪ್ರಶ್ನೆ ಮಾಡಿದ್ದಕ್ಕೆ— 'ಒಂದು ಕಪಲೆ ಬಸವಣ್ಣ ಬಂದಿದೆ ಅದಕ್ಕೆ ಬೆನ್ನಿನ ಮೇಲೆ ಒಂದು ನಾಲಿಗೆ ಇದೆ" ಎಂದು ಹೇಳಿದರು ನಾನು ಅದನ್ನು ಪರೀಕ್ಷಿಸಬೇಕೆಂದು ಅಲ್ಲಿಗೆ ಹೋಗುವಷ್ಟರಲ್ಲೇ ಬಸವಣ್ಣನು ಆ ಮನೆಯ ಪೂಜೆಗಳನ್ನೆಲ್ಲಾ ಅಂಗೀಕರಿಸಿ, ಮುಂದಿನ ಮನೆಗೆ ಹೋಗಿತ್ತು ಜನಸ್ತೋಮವೂ ಅದನ್ನೇ ಅನುಸರಿಸಿತ್ತು ನಾನು ನುಗ್ಗಿಕೊಂಡು ಬಸವಣ್ಣನ ಬಳಿಗೆ ಹೋಗಿ ನಿಂತೆನು ಅಲಂಕಾರಗಳನ್ನು ಬಿಟ್ಟರೆ ಸಾಧಾರಣ ಎತ್ತಿಗೂ ಅದಕ್ಕೂ ಏನೂ ವ್ಯತ್ಯಾಸವಿಲ್ಲ ಆದರೆ ಅದರ ನಾಲ್ಕು ಕಾಲುಗಳಿಗೂ ಗೆಜ್ಜೆಯನ್ನು ಕಟ್ಟಿತ್ತು ಕೊಂಬುಗಳಿಗೆ ಪಂಚರಂಗಿ ಬಟ್ಟೆಯನ್ನು ಸುತ್ತಿ ಮೇಲೆ ಕಳಸವನ್ನು ಹಾಕಿತ್ತು ಮೈ ಮೇಲೆ ಬೋಟಾ ಕಲಾಬತ್ತಿನ ಜೂಲು (ಗವಸು) ಹಾಕಿತ್ತು ಈ ಬಸವಣ್ಣನಿಗೆ ಹಗ್ಗ ಹಾಕಿ ಹಿಡಿದಿರಲಿಲ್ಲ ಜೊತೆಯಲ್ಲಿ ಒಬ್ಬನು ಉರಿ ಚಂಡು (ವಾದ್ಯವಿಶೇಷ) ಬಾರಿಸುತ್ತಿದ್ದನು ಈತನು ಆಗಾಗ್ಗೆ ನಿಲ್ಲಿಸುತ್ತಲೂ ಮತ್ತೊಬ್ಬನು ಬಸವಣ್ಣನನ್ನು ಕುರಿತು ಕೆಳಗೆ ಹೇಳುವಂತೆ ಪ್ರಶ್ನೆ ಮಾಡುತ್ತಲೂ ಇದ್ದನು ಅದಕ್ಕೆ ಬಸವಣ್ಣನು ತಲೆಹಾಕುತ್ತಿದ್ದಿತು

ಕೈಲಾಸದಿಂದ ಬಂದ್ಯಾ ಬಸವಣ್ಣ (ತಲೆ ಅಲ್ಲಾಡಿಸಿದ ಒಡನೆ), ಧರ್ಮ ಬೋಧೆ ಕೊಡುತ್ತೀಯಾ ಬಸವಣ್ಣ (ತಲೆ ಹಾಕಿದ ಒಡನೆ), ಮುತ್ತೈದೆ ಕೈ ಬಿಕ್ಷಾ ಕೇಳುತ್ತೀಯಾ ಬಸವಣ್ಣ (ತಲೆ ಹಾಕಿದ ಒಡನೆ) ಹಾಗಾದರೆ ಹೋಗು ಎಂದನು ಬಸವಣ್ಣನು ಹಾಸಿಗೆಯೇ ಬಾಗಿಲ ಬಳಿ ಹೋಗಿ ಒಂದಾವರ್ತಿ ಅರಚಿತು

ಆ ಕ್ಷಣವೇ ಒಬ್ಬ ಯುವತಿಯು ಒಳಕ್ಕೆ ಹೋಗಿ ಒಂದು ಮೊರದಲ್ಲಿ ಅಕ್ಕಿ ಬಾಳೇಹಣ್ಣು ಸಹ ತಂದಿಟ್ಟು ಸ್ವಲ್ಪ ಕುಂಕುಮವನ್ನು ಅದರ ಮುಖಕ್ಕೆ ಹಚ್ಚಿದಳು ಬಸವಣ್ಣನು ಮೊರವನ್ನು ಮೂಸಿ ನೋಡಿತೇ ಹೊರತು ಏನನ್ನೂ ಮುಟ್ಟಲಿಲ್ಲ ಸಂಗಡಿದ್ದವನು ಬಾರೆಯಲ್ಲಿದ್ದ ಸ್ವಲ್ಪ ಅಕ್ಕಿ ತೋರಿಸಲು, ಅದನ್ನು ತಿಂದಿತು ಅನಂತರ ಉರಿ ಚಂಡು ಹೊಡೆದು, ಅಭಯ ಹಸ್ತ ತೋರೋ ಬಸವಣ್ಣ ಎನ್ನಲು ಮುಂದಿನ ಬಲಗಾಲನ್ನು ಮೇಲಕ್ಕೆ ಎತ್ತಿತು ಅನಂತರ ಆ ಯುವತಿಯು ಬೆನ್ನಿನ ಮೇಲಿದ್ದ ನಾಲಿಗೆಯನ್ನು ಕಣ್ಣಿಗೆ ಒತ್ತಿಕೊಂಡು ಅದನ್ನು ಆಡಿಸುವವನನ್ನು ಕುರಿತು—ಅಂತ್ರ ಕಟ್ಟಿಸಿಕೊಳ್ಳೋಕೆ ಸಂಜೆಗೆ ಎಲ್ಲಿ ಬರಬೇಕು? ಎಂದಳು ಅವನು ಕುಮಾವತಿ ಹಳ್ಳಕ್ಕೆ ಎಂದು ಹೇಳಿ ಅಕ್ಕಿ ಮುಂತಾದ್ದನ್ನು ಕಂಟಲೆಗೆ ಹಾಕಿಕೊಂಡನು

ಮುಂದಕ್ಕೆ ಹೋಗುವಷ್ಟರಲ್ಲೇ ನಾನು ಬೆನ್ನಿನ ಮೇಲಿನ ನಾಲಿಗೆಯನ್ನು ಮುಟ್ಟಿ ನೋಡಿದೆನು ಅದು ನಾಲಿಗೆಯ ಆಕಾರವಾಗಿ ಹಿಣಿಲಿನ ಹಿಂಭಾಗದಲ್ಲಿ ಒಂದೂವರೆ ಗೇಣುದ್ದವಾಗಿ ಸುಮಾರು ೪—೫ ಅಂಗುಲ ಅಗಲವಾಗಿ ಬೆಳೆದಿದ್ದ ದುರ್ಮಾಂಸವು ಅದರ ಮೇಲೆಲ್ಲಾ ಕೂದಲು ಬೆಳೆದಿತ್ತು ಅನಂತರ ನಾನು ಮನೆಗೆ ಹೋದೆನು ಬಸವಣ್ಣನೂ ದಾರಿ ಹಿಡಿಯಿತು

ಇದೇ ಸಾಯಂಕಾಲ ಕುಮಾವತಿ ನದೀ ಕಡೆ ಹೋಗುತ್ತಿದ್ದಾಗ್ಗೆ ಇಲ್ಲಿಯೂ ಬಸವಣ್ಣನೂ ಜನಸಮುದಾಯವೂ ಇತ್ತು ಇದರಲ್ಲಿ ನೀಚ ಕೃತ್ಯ ಮಾಡುವವರೇ ಹೆಚ್ಚಾಗಿದ್ದರು ತೆಂಗಿನಕಾಯಿ, ಬಾಳೇಹಣ್ಣು ಧೂಪ ಇವುಗಳನ್ನೂ ಎಲೆ, ಅಡಿಕೆ, ದಕ್ಷಿಣೆಗಳನ್ನೂ ಸಾಲಾಗಿ ಇಟ್ಟಿದ್ದರು ಇವೆಲ್ಲಾ ಯಾಕೆಂದು ನಾನು ವಿಚಾರಿಸುವಲ್ಲಿ—ಈ ಬಸವಣ್ಣನ ಬೆನ್ನಿನ ಮೇಲಿನ ನಾಲಿಗೆ ಕೂದಲನ್ನು ಹಾಕಿಸಿ, ಅಂತ್ರ ಕಟ್ಟಿಸಿಕೊಂಡರೆ ಮಕ್ಕಳಿಗೂ ಹೆಂಗಸರಿಗೂ ಎಲ್ಲಾ ಭಯ ಸಂಕಟ ಹೋಯ್ತದಂತೆ ಎಂಬ ಉತ್ತರ ಬಂತು. ಇದನ್ನು ಕೇಳಿ ನಾನೂ, ನನ್ನ ಜೊತೆಯಲ್ಲಿದ್ದವರೂ—ನಮ್ಮ ಜನಗಳ ಮೌಢ್ಯವು ನಾಶವಾಗಲು ಇನ್ನೂ ಎಷ್ಟು ಶತಮಾನಗಳು ಬೇಕೋ? ಎಂದು ಮಾತನಾಡುತ್ತಾ ಹೊರಟು ಹೋದೆವು

ಎನ್ ವಿ ಶಿಂಗ್ರಾಚಾರ್.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು
ಮುಖಾಂತರ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. ರೂ ೧—೦—೯
ಪತ್ರಿಕೆಯವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪಾಸಲ್
ಸೇರಿ .. .. ರೂ. ೧—೧೪—೦
" ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.
ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಇಂಡಿಯದ ದೊಡ್ಡ ನೋವುಹರ.

86-25

ಯಾವನೋವಿಗಾದರೂ ಕ್ಲೆಮೆಂಟ್ ಮ್ಯಾಜಿಕ್ ಬಾಂ.

ಎಲ್ಲಾ ತರದ ವಾಯುನೋವು, ಅರತಲೆನೋವು, ನರಗಳ ಇರಿತ, ತಲೆನೋವು, ತಲೆಭಾರ, ಕೆಮ್ಮುಗಳು, ಎದೆನೋವು, ಶೀತ, ಬಾಗಿಗನ್ನು, ಗಂಟಲುಹುಣ್ಣು, ಕೀಲುಬೆನ್ನು ಎದೆಗಳ ನೋವು, ಅಸ್ತ್ಮ, ಈ ಪ್ರಕೃತಿಯ ತರದ ಬಾಧೆ ಇದ್ದಾಗ್ಯೂ ಅಂಥಾ ರೋಗಿಗಳು ಆಶ್ಚರ್ಯಪಡಬೇಕಾದದ್ದಿಲ್ಲ. ಈ ದೇಹಬಾಧೆಗಳಿಗೆಲ್ಲಾ ಕ್ಲೆಮೆಂಟ್ ಯವರ ಮ್ಯಾಜಿಕ್ ಬಾಂ ಎಂಬ ಔಷಧವನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ, ಕೂಡ್ಲೆ ಒಳಕ್ಕೆ ವ್ಯಾಪಿಸಿ ನೋವನ್ನು ಎರಡು ನಿಮಿಷಗಳಲ್ಲೇ ಖಂಡಿತವಾಗಿಯೂ ನಿವಾರಣೆ ಮಾಡುತ್ತದೆ. ಉಪಯೋಗಿಸುವ ವಿಧಾನ ಮುಂತಾದ್ದನ್ನು ಬಾಟ್ಲ ಜೊತೆಯಲ್ಲಿ ಅಚ್ಚಾದ ಪಟ್ಟಗಳನ್ನಿಟ್ಟು ಕಳಿಸುತ್ತೇವೆ. ಇದನ್ನು ಹಚ್ಚಿದ ಮಾತ್ರಕ್ಕೇ ದುಃಖಕರವಾದ ರೋಗಗಳುಬಿಟ್ಟು ತೊಲಗಿ ಸುಖಸಂತೋಷಗಳುಂಟಾಗುತ್ತೆ. ಬುಧಿಯನ್ನ ನುಭವಿಸುವವರಾಗಿದ್ದಲ್ಲಿ ಕೂಡಲೇ ಬರೆದು ಈ ಔಷಧವನ್ನು ತರಿಸಿಕೊಳ್ಳಿ. ತರಿಸಿದವಲ್ಲಾ ಎಂದು ಎಂದಿಗೂ ವ್ಯಸನಪಡುವುದಿಲ್ಲ. ಇದರ ಗುಣವು ಅಮ್ಮ ಅನುಭವವುಳ್ಳದ್ದು. ಕ್ರಯ ...೧ ಬಾಟ್ಲಿಗೆ ೧೨ ಆಣೆ; ೩ಕ್ಕೆ ೨ ರೂಪಾಯಿ; ೬ಕ್ಕೆ ರೂ. ೩½ ರೂಪಾಯಿ; ೧೨ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲ ವರಿಗೆ ೩ ಆಣೆ.

ನಮ್ಮ ವಿಳಾಸ.—ಎಫ್. ಡಬ್ಲ್ಯು. ಆರ್ಗ, ಸಿವೆಟ್ರು ರೋಡ್, ವೇಪೇರಿ, ಮದರಾಸ್.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133-5

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!
ಉತ್ಕೃಷ್ಟವಾದ ಡೈರಿಗಳು!!!



೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ. ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲೆಯನ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿರುತ್ತೇವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಏಮಾಚರ್ಣಿನ ಪಟ್ಟಿ, ಡೋಟಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಪರಿಮಾಣಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ.

ಕ್ರಯ.—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೩—೦; ಎನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಕ್ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦; ಹನ್ನೆರಡು ಡೈರಿಗಳಿಗೆ ೧ ಇನಾಮು

. ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ. ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೊ, ಮೈಸೂರು.
ಅಥವಾ,
ಎಸ್. ಡಿ. ನತ್‌ಮಲ್ ಕಂಪೆನಿ ದೊಡ್ಡಪೇಟೆ, ಮೈಸೂರು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಶಿಶುವಿನ ಮೇಲೆ ಬಿದ್ದ ಭಾರವಾಗಿದೆ ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 57-35

(ಸ್ಕೊಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿನ್ಹೆ ತೋರಿಸುವದು

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರಾಟಗಾರರಲ್ಲೂ ಸಿಕ್ಕುತ್ತದೆ
ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧ ನ್ನೇ ಕೊಂಡುಕೊಳ್ಳಿ.

ವಿದ್ಯುಚ್ಛಕ್ತಿಯೇ ಪ್ರಾಣವಾಯು!

ವೈದ್ಯ ವಿದ್ಯುಚ್ಛಕ್ತಿ 141-2

ಡಾಕ್ಟರ್ ಸಾಂಡರ್ಸನಿ ವಿದ್ಯುಚ್ಛಕ್ತಿಯ ಚಕ್ರವಾರ್ಲೇ ಎಂಬ ಚಿಕಿತ್ಸೆಯು ಕೀಲುಗಳ ವಾಯುನೋವು, ನರಗಳ ದುರ್ಬಲ, ಅಸ್ವಾಸ್ಥ್ಯ ಧಾತು ಹೀನತೆಯೇ ಮೊದಲಾದವುಗಳನ್ನು ಖಂಡಿತವಾಗಿ ವಾಸಿಮಾಡುವುದು ಮೈಸೂರು ಸಿಟಿ ಗಾರ್ಡನ್ ಕೋಟೆಲಿನಲ್ಲಿ ಇಳುಕೊಂಡಿರುವ ಯೂರೋಪ್ಪಿಯನ್ ಏಜಂಟರು ಕುತ ಹಲತಕ್ಕ ಗಂಡಸರಿಗೂ ಹೆಂಗಸರಿಗೂ ಈ ವಿದ್ಯುಚ್ಛಕ್ತಿ ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡುತ್ತಾರೆ. ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೭ ಗಂಟೆಯ ತನಕ ಅಪೇಕ್ಷಿಯುಳ್ಳವರೆಲ್ಲಾ ಬಂದು ನೋಡಬಹುದು ಈ ಕೊಡದೆ ಕಾಯಿಲೆ ವಿಚಾರವನ್ನು ಅವರಿಗೆ ತಿಳಿಸಬೇಕಾದ್ದಾಗಿದೆ ಕಾಗದ ಬರೆದಲ್ಲಿ ಅವರೇ ಮನೆಗೆ ಬರುತ್ತಾರೆ, ಇಲ್ಲವೇ, ಕೂಡ್ಲೆ ಜವಾಬು ಕೊಡುವರು ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಪರರಿಗೆ ಗೋಚರವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡಸುವರು

ಸನ್ ೧೯೦೭ ನೇ ಇಸವಿಯ

130 6

ಎಂ ನಂ॥ ಎಫ್ ನಂ॥ ಬಿ. ನಂ॥ ಸಿ ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಋಷ್ಯಾದಿ ಸಮಸ್ತರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಪರಿಮಾಣಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಡೋಟಿ ಲೆಕ್ಕ, ಏಮಾಚರ್ಣಿನ ಪಟ್ಟಿ, ಇನ್ನೂ ಅನೇಕ ವಿಷಯಗಳನ್ನೂ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಶೀಮೆ ಸಾಮಾನ್ ಬೈಂಡು, ಚಿನ್ನದ [illegible]
ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ — [illegible] ಸೈಜು ೬ ಆ.
ಎಫ್. " " ೪ " ಎಚ್ " " ೭ "
ಬಿ " ಮುಚ್ಚಳವುಳ್ಳದ್ದು ೫ " ಡಿ. " [illegible]ಳವುಳ್ಳದ್ದು ೮ "
ಪೋಸ್ಟ್ ಚಾರ್ಜ್ [illegible] ಡೈರಿ ಕೊಂಡುಕೊಂಡರೆ ೧ ಡೈರಿ ಇನಾಮು. ವಿ. ಪಿ. [illegible] ತರಿಸಿಕೊಳ್ಳಬಹುದು

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,
ಜಾರ್ಡನ್ ಪ್ರೆಸ್, ಬೆಂಗಳೂರು ಸಿಟಿ } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

26—10—1906 ರಿಂದ 2—11—1906 ರ ವರೆ[illegible]

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದವಾರ ... ಸಂಖ್ಯೆ	[illegible]
ಬೆಂಗಳೂರು ಪಟ್ಟಣ	11	6	3	[illegible]
ಮೈಸೂರು "	1	6	5	[illegible]
ಬೆಂಗಳೂರು ಡಿಸ್ಟ್ರಿಕ್ಟು	141	104	31	[illegible]
ಮೈಸೂರು "	2	8	11	[illegible]
ಕೋಲಾರ್ "	0	0	0	[illegible]
ಕೋಲಾರ್ ಚಿನ್ನದ ಗಣಿಗಳು	0	0	5	[illegible]
ತುಂಕೂರು ಡಿಸ್ಟ್ರಿಕ್ಟು	10	10	5	[illegible]
ಹಾಸನ "	40	27	2	[illegible]
ಚಿತ್ರದುರ್ಗ "	0	0	5	[illegible]
ಕಡೂರ್ "	39	29	19	[illegible]
ಶಿವಮೊಗ್ಗ "	0	0	0	[illegible]
ಜುಮ್ಲಾ	254	186	91	[illegible]

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಕಾರ್ತೀಕ ಬಹುಳ ಚತುರ್ದಶಿ ಗುರುವಾರದಿಂದ ಮಾರ್ಗಶಿರ ಶುದ್ಧ ಷಷ್ಟಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ,
೧೯೦೬ ನೇ ಇಸವಿ ನವಂಬರ್.

ತಾ	ವಾರ.		ತಿಥಿ	ಘಳಿಗೆ.	ನಕ್ಷತ್ರ.	ಘಳಿಗೆ.	[illegible]
15	ಗುರು	§	ಚತುರ್ದಶಿ	25-48	ಸ್ವಾ	36 36	[illegible]
16	ಶುಕ್ರ	†	ಅಮಾ	20 32	ವಿಶಾ	33-42	[illegible]
17	ಶನಿವಾ	‡	ಪಾಡ್ಯಮಿ	14-48	ಅನೂ	29-2	[illegible]
18	ರವಿವಾ	*	ಬಿದಿಗೆ	8 46	ಜ್ಯೇ	24-44	[illegible]
19	ಚಂದ್ರ		ತದಿಗೆ	2-46	ಮೂಲ	54-32	[illegible]
20	ಕುಜ	¶	ಪಂಚಮಿ	52-2	ಪೂಷಾ	16 41	[illegible]
21	ಬುಧ	"	ಷಷ್ಟಿ	47-20	ಉಷಾ	13-19	[illegible]

§ ಸುಬ್ರಹ್ಮಣ್ಯದಲ್ಲಿ ಲಕ್ಷದೀಪೋತ್ಸವ. † ತಿಥಿದ್ವಯಂ, ಸ[illegible]ತ್ರ ಅಮಾವಾಸ್ಯೆ, ವಿಷ್ಣುಪದ ಪುಣ್ಯಕಾಲ. ‡ ಚಂದ್ರೋದಯ[illegible] * ಷವ್ವಾಲ್ ಚಂದು ೧. ¶ ಬದರೀಗೌರೀವ್ರತಂ, ದಗ್ಧಯೋಗ, [illegible]ಟಕರ ಪಂಚಮಿ. ;, ಚಂಪಾಷಷ್ಟಿ, ಸುಬ್ರಹ್ಮಣ್ಯದಲ್ಲಿ ರಥೋತ್ಸವ[illegible]

ಪೇಟೇ ಧಾರಣೆ.

ದಿನಸಿ.		ಮೈಸೂರು.	ಬೆಂಗಳೂರು
ಕಸ್ತೂರೀ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೩-೪-೦	[illegible]
ಚಂಪಕತಿ ಅಕ್ಕಿ ಅವಲ್ ..	..	೧೩-೪-೦	[illegible]
" ದುಯಂ	..	೧೩-೦-೦	[illegible]
ಜಾವಾಣಿ ಅಕ್ಕಿ ..	..	೧೩-೦-೦	[illegible]
ಸಣ್ಣಕ್ಕಿ ಅವಲ್ ..	..	೧೫-೦-೦	[illegible]
" ದುಯಂ ..	..	೧೪-೦-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ	..	೧೨-೬-೦	[illegible]
" ದುಯಂ ..	..	೧೧-೮-೦	[illegible]
ಕೈರ್ ರಾಗಿ ಪಲ್ಲಾ ೧ಕ್ಕೆ ..	..	೬-೮-೦	[illegible]
ಕಾರ್ರಾಗಿ	..	೬-೦-೦	[illegible]
ಜೋಳ	..	೭-೦-೦	[illegible]
ಹಲಸಂದೆ ಪಲ್ಲಾ ೧ಕ್ಕೆ ..	..	೧೧-೮-೦	[illegible]
ಬಿಳೀ ಅವರೆ ..	..	೯-೦-೦	[illegible]
ಹೆಸರು	..	೧೧-೮-೦	[illegible]
ಉದ್ದು	..	೧೨-೪-೦	[illegible]
ಕಡಲೆ	..	೧೨-೬-೦	[illegible]
ಎಳ್ಳು ಸೆ. ೧೨೭ ಕ್ಕೆ ..	..	೧೮-೮-೦	[illegible]
ಹುರುಳಿ	..	೭-೧೨-೦	[illegible]
ಹರಳು ೧೨೭ ಸೇರಿಗೆ ..	..	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ ..	..	೨-೨-೦	[illegible]
ಮೆಣಸಿನಕಾಯಿ ..	..	೪-೦-೦	[illegible]
" ದುಯಂ ..	..	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು ..	..	೩-೧೨-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ ..	..	೫-೮-೦	[illegible]
ಹರಳೆಣ್ಣೆ " ..	..	೩-೧೨-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ ..	..	೧೧-೦-೦	[illegible]
ಉಪ್ಪು " ..	..	೬-೦-೦	[illegible]
ಹುಣಸೇ ಹಣ್ಣು ..	..	೦-೧೪-೦	[illegible]
" ಹಳೇದು ..	..	೦-೮-೦	[illegible]
ತುಪ್ಪ ಮಣ ೧ಕ್ಕೆ ..	..	೧೩-೦-೦	[illegible]
ಸೀಮೆಯೆಂಣೆ ಪೆಟ್ಟಿ ೧ಕ್ಕೆ ..	..	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ ..	..	೬-೮-೦	[illegible]
ಅಳಲೇಕಾಯಿ ಮಣ ೧ಕ್ಕೆ ..	..	೧-೦-೦	[illegible]
ಅಂತುವಾಳದ ಕಾಯಿ ಮಣ ೧ಕ್ಕೆ	..	೦-೧೨-೦	[illegible]
ಚಿನ್ನ (ಪೌನ್) ಕೆಂಪು ..	..	೧೫-೪-೦	[illegible]
" " ಪಸಿಮೆ ..	..	೧೫-೧೧-೦	[illegible]
" " ಗಟ್ಟಿ ತೊಲ ೧ಕ್ಕೆ	..	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	[illegible]

Printed and published by the Rev. E. [illegible] THOMPSON, M.A., the Proprietor and Man[illegible] Wesleyan Mission Press, Mysore. 15/11/190[illegible]

ವೃತ್ತಾಂತ ಪತ್ರಿಕೆ.

REGISTERED M. 20

ಋ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸರ್ ೧೯೦೬ ನೇ ಇಸವಿ ನವಂಬರ್ ತಾರೀಖು ೨೨ ನೇ ಗುರುವಾರ. ಸಂಚಿಕೆ ೪೫

ಹೊಸ್ಸ ಕೆಂಪು ಮತ್ತು ತಾಜಾ ಕಪ್ಪು.

ಹಾಸ್ಗ ಫ್ಲೋರ್ ದಾರ.

215 9

೩,೦೦೦ ಕಾಸ ನದ ಟೋಪಿ ಹೊಲಿಯುವ

ಟೀರಿಯರ್ ಫ್ಲೋಸ್ ದಾರ ಮಾತ್ರ.

	ರೂ	ಅ	ಪೈ
೩೧೮ ಆಗುವ ಫ್ಲೋಸ್ ದಾರದ ಕ್ರಯ	೦	೮	೦
೩೦೯ ಆಗುವ ಒಂದು ಬಂಡಲ್ ದಾರದ ಕ್ರಯ	೩	೧೩	೦
ಟೋಪಿ ಹೊಲಿಯುವ ಪೊಕ್ಕೆ ಸೂಜಿ ೧ಕ್ಕೆ	೦	೧	೯
...ದಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ

ವಿಳಾಸ— ಸಿ. ರಘುನಾಥ ಕಾಮತ್,
ಫ್ಲೋಸ್ ಮರ್ಚಂಟ್,
ಬೋಳಾರ, ಮಂಗಳೂರು

ಹಿಂದೂದೇಶಪ್ರದಕ್ಷಿಣ

ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಶಾಕಿನಿ ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸುವವರಿಗೆ ಇದ ದೊರೆಯದೆ ವ್ಯಸನಕ್ಕೊಳಗಾದರು ಈಗಲಾದರೂ ಕ್ರಯ ೧ ರೂ ವಿ ಪಿ ಮೂಲಕ ತರಿಸಿಕೊಳ್ಳಿ ಇದರ ಲ್ಲಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ ದೇಶದಲ್ಲಿರುವ ಅನೇಕ ಪಟ್ಟಣಗಳು ಚಿತ್ರಗಳೂ ಮತ್ತು ಅವುಗಳ ಸ್ಥಾನಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವುಗಳೂ ಇವರಲ್ಲಿ ಅಡಗಿವೆ ಇವರಲ್ಲಿ ಸುಮಾರು ಶೋಭಿತವಾದ ಚಿತ್ರಗಳಿರುತ್ತವೆ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುತ್ತಿರುವದಕ್ಕೆ ಬದಲಾಗಿ ಈ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು ಪುಸ್ತಕದ ಕ್ರಯ ಎಂಟೇ ಆಣೆ ವಿ ಪಿ ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವುದು

ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು.

ಇಗೋ ನೋಡಿರಿ

ಬಹಳ ಆಕರ್ಷಣೀಯವಾದ ಪುಸ್ತಕವು ಹೊರಟಿದೆ !!!

ಎಲ್ಲರೂ ಓದತಕ್ಕದ್ದು,

ಬೇಗ ತರಿಸಿಕೊಳ್ಳಿ. 141 3

ಮುದ್ರಿಸಿದ ಪ್ರತಿಗಳು ಮುಗಿದುಹೋದಾವು.

"ಅರೇಬಿಯನ್ ನೈಟ್ಸ್

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಇದೇ ಮಹಾ ಪ್ರಸಿದ್ಧವಾದ ಪುಸ್ತಕವು ತೆಲಗನ್ನಡದಲ್ಲಿ ಈಗತಾನೇ ಮುದ್ರಿಸಲ್ಪಟ್ಟಿದೆ ಡೆಮ್ಮಿ ಅಷ್ಟಪತ್ರ ನಾನೂರು ಎಪ್ಪತ್ತು ಪುಟಗಳುಳ್ಳದ್ದಾಗಿಯೂ ಆಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ ನಾನಾ ಕಥೆಗಳಾಗಿಯೂ ಉಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ಓದುವವರು ಸ್ವಾನುಭವದಿಂದಲೇ ಗ್ರಹಿಸಿ ತಿಳಿದುಕೊಳ್ಳುವರು ಭಾಷೆಯು ಬಹು ಸರಳವಾಗಿರುವುದು ಮತ್ತು ಇದನ್ನು ಬರೆಯುವುದಕ್ಕೆ ಸುಮಾರು ಎರಡು ವರ್ಷಗಳು ಹಿಡಿದಿವೆ ಪುಸ್ತಕವನ್ನು ಒಂದಾವರ್ತಿ ಓದಿದವರು ಅದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು ಇದರ ಬೆಲೆ ಎರಡು ರೂಪಾಯಿ ಮಾತ್ರವೇ ವಿ ಪಿ ಮೂಲಕ ತರಿಸಿದರೆ ಎರಡು ರೂಪಾಯಿ ಮೂರು (೨-೩-೦) ಆಣೆಗಳಾಗುವವು ಬಡವರೂ ಬಲ್ಲವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ಹೊಂದಬೇಕೆಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಬೆಲೆಗೆ ಮಾರುತ್ತೇವೆ. ನಮ್ಮ ವಿಳಾಸ —

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಕೊಡಗು ದೇಶದ ಶ್ರೇಷ್ಠವಾದ

ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು.

ಕೆಲಸಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು

85 41

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತುಳ್ಳ ವಿಳಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ನಮ್ಮದಲ್ಲ ಏಜಂಟರುಗಳು ಬೇಕು. ಇಂಥವರಿಗೆ ಅಲುಯದ ದರ ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್
ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 142-4

ಇದು ಸಾಧಾರಣ ಜ್ವರ, ಚಳೀಜ್ವರ, ಮೂರೇಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಓವರ್‌ಸಿಯರ್ ಆಫ್ ಸರ್ ಎಸ್ ಟಿ ವೆಂಕಟಪತಿ ಅಯ್ಯರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಔನ್ಸಿನ ಸೀಸೆಯೂ ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ಪ್ರಯುಕ್ತ ದಯವಿಟ್ಟು ಇನ್ನೊಂದು ೨೦ ಔನ್ಸಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದಾರೆ

ಕ್ರಯ.—ಸೀಸೆ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, ರೂ ೨—೧೨ ಆ, ೧೦ ರೂ, ಡಜನ್ನ ರಹು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು

****

ಓಮಂಕರ್ಪೂರ



ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ಚುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೇನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ಕ್ರಯವು ದಂಪ್ತ ಬ್ರಂದಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ದೊರಕುವದು

ಕೊಳ್ಳದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಓಮ್ಯಂಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೇ ಔಷಧವೆಂತ ಬರೆದಿದಾರೆ

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಸಾಹುಕಾರರಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಹನುಮಂತರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,
ಕೋಂಡ್ ಚೀಫ್ ಸ್ಟ್ರೀಟ್, ಮದ್ರಾಸ್.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

122—10

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್‌ಗಳ ಖರ್ಚುಗಳ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈನಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಶೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಶೇರು ಮೊಬಲಗು ಶೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲಿ ಪಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಶೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ. ಪಿ. ರಾಮಸ್ವಾಮಿ ಶೆಟ್ಟಿ, ಬಿ. ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಜಡೆಕುಚ್ಚು, ಪಚ್ಚೆಯ ಜಡೆಬಿಲ್ಲೆ.

137 6

ನವೀನ ಆಭರಣಗಳು, ಬೇಗ ನೋಡಿ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ—ನಮ್ಮಲ್ಲಿ ಬಹಳ ಶ್ರೇಷ್ಠವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟಿನಿಂದ ತಯಾರಿಸಲ್ಪಟ್ಟ ಬಂಗಾರದ ಆಭರಣಗಳು ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ. ಇದರಲ್ಲಿ ಕಂಡ ಆಭರಣಗಳನ್ನು ಚಿನ್ನದ ಕೆಲಸ ಮಾಡುವವರಲ್ಲಿ ಬಹಳ ಸಮರ್ಥರಾದ ಅಕ್ಕಸಾಲಿಗರಿಂದ ತಯಾರಿಸಲ್ಪಟ್ಟಿರುತ್ತೆ ಇದು ಬಹಳ ಕಾಲಗಳ ವರಿವಿಗೂ ರಂಗು ಹೋಗದ ಹಾಗೆ ಬಲವಾದ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಹಾಕಲ್ಪಟ್ಟಿರುತ್ತೆ ಇದರ ಕೆಲಸದ ನಾಜೂಕು, ಸ್ವಚ್ಛ ಭಂಗಾರದ ಆಭರಣಗಳನ್ನು ಸೋಲಿಸುತ್ತೆ ಈ ಕೆಳಗೆ ಕಂಡ ಆಭರಣಗಳಲ್ಲಿ ಯಾವದಾದರೂ ಒಂದನ್ನು ತರಿಸಿ ಪರೀಕ್ಷಿಸಿರಿ—

ಜಡೆಕುಚ್ಚು

ಕ್ರಯ ರೂ ೩—೮—೦

ಇದರ ಪ್ರತಿಯೊಂದು ಕುಚ್ಚುಗಳ ಸುತ್ತಲೂ ಸುಂದರವಾದ ಗೆಜ್ಜೆಗಳನ್ನು ಸುತ್ತಲ್ಪಟ್ಟು ನಾಜೂಕಾಗಿ ಗೊಂಡೆಗಳನ್ನು ಕಟ್ಟಿ ನೋಡುವವರಿಗೆ ನಿಜವಾದ ಭಂಗಾರದ ಆಭರಣವೆನ್ನುವಹಾಗೆ ತಯಾರಿಸಲ್ಪಟ್ಟಿರುತ್ತೆ

ಪಚ್ಚೆ ಕಲ್ಲು ಜಡೆಬಿಲ್ಲೆ.
ಭಂಗಾರದ ಗಿಲ್ಟುಮಾಡಿದ್ದು.
೧ಕ್ಕೆ ಬೆಲೆ ರೂ. ೨-೪-೦



ಇದು ಮೇಲಾದ ನಕಾಸು ಕೆಲಸಗಳನ್ನು ಮಾಡಲ್ಪಟ್ಟು ಪಚ್ಚೆ ಕಲ್ಲಿನಿಂದ ಬಿಗಿಯಲ್ಪಟ್ಟಿರುತ್ತೆ. ಎಷ್ಟು ವರ್ಷಗಳ ಪರ್ಯಂತರ ಇಟ್ಟಾಗ್ಯೂ ರಂಗು ಹೋಗದು, ನೋಡುವವರ ಕಣ್ಣು ಚದರುವಷ್ಟು ಪ್ರಕಾಶವುಳ್ಳದ್ದು.

ನಮ್ಮ ವಿಳಾಸ—ಜರ್ಮನ್ ಸಿಲ್ವರ್ ಜ್ಯೂಯಲ್ ಡಿಪೋ,
ಸಾವುಕಾರ್ ಪೇಟೆ, ಮದ್ರಾಸು.

೧೯೦೭ ನೆ ಇಸವಿ ಡೈರಿ ಮತ್ತು ಕ್ಯಾಲೆಂಡರು.

145 1

ಈ ಕ್ಯಾಲೆಂಡರಿನಲ್ಲಿ ಅನೇಕ ಸಂಗತಿಗಳು ಬರೆಯಲ್ಪಟ್ಟು ನೋಡು ವವರಿಗೆ ನೇತ್ರಾನಂದವಾಗಿ ಮಹಾರಾಜರ ಫೋಟೋ ಒಳಗೊಂಡಿದೆ ಕ್ರಯ ೬ ಪೈ ಮಾತ್ರ ಒಂದು ಡೈರಿಗೆ ಒಂದು ಕ್ಯಾಲೆಂಡರೂ ೧೦ ಕ್ಯಾಲೆಂಡರಿಗೆ ಒಂದು ಕ್ಯಾಲೆಂಡರೂ ಉಚಿತವಾಗಿ ಕೊಡಲಾದೀತು ವಿ ಪಿ ಮೂಲಕವೂ ಕಳಿಹಿಸುತ್ತೇವೆ ಡೈರಿ ಬರೀದಿ ಆಣೆ ೮ ೩ ೬ ೫ ೪ ೩ (೬ ತರಹಗಳು ಇರುತ್ತವೆ)

ವಿಳಾಸ— ನಂಜುಂಡಪ್ಪ, ಬುಕ್ ಬೈಂಡರು, ಮೈಸೂರು ಕೋಟೆ

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು

85 25

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬುಕ್ಕು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಟಪಾಲು ಅಷ್ಟರಿಂದ ಬರಿಯಿರಿ ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ ಪೋಷ್ಟು ಮಾಂಡ್ವಿ, ಮುಂಬಯಿ

ವಿದ್ಯುಚ್ಛಕ್ತಿಯೇ ಪ್ರಾಣವಾಯು!

ವೈದ್ಯ ವಿದ್ಯುಚ್ಛಕ್ತಿ 147—1

ಡಾಕ್ಟರ್ ಸ್ಯಾಂಡರ್ಡನವರ ವಿದ್ಯುಚ್ಛಕ್ತಿಯ ಪಟ್ಟೆ ಎಂಬ ಚಿಕಿತ್ಸೆಯು ಶರೀರಕ್ಕೆ ಉಂಟಾಗುವ ನೋವು, ನರಗಳ ದುರ್ಬಲ, ಆಸ್ತ್ರ ಧಾತು ಹೀನತೆಯೇ ಮೊದಲಾದವುಗಳನ್ನು ಖಂಡಿತವಾಗಿ ವಾಸಿಮಾಡು ವುದು ಮೈಸೂರು ಸಿಟಿ ಗಾರ್ಡನ್ ಕಾಟೇಜಿನಲ್ಲಿ ಇಳಿದುಕೊಂಡಿರುವ ಯೂರೋಪಿಯನ್ ಏಜಂಟರು ಕೇತ ಕಲ್ಪನೆಗಳ ರೋಗಸ್ತರಿಗೂ ಹೆಂಗಸರಿಗೂ ಈ ವಿದ್ಯುಚ್ಛಕ್ತಿ ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡು ತ್ತಾರೆ ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆ ಯಿಂದ ರಾತ್ರಿ ೭ ಗಂಟೆ ಯವರೆಗೆ ಅಪೇಕ್ಷೆಯು ಳ್ಳವರೆಲ್ಲಾ ಬಂದು ರು ಪಾಯಿ ಕೊಡದೆ ಕಾಯಿಲೆ ವಿಚಾರವನ್ನು ಅವರಿಗೆ ತಿಳಿಸಬಹುದು



ಗಿದೆ ಕಾಗದ ಬರೆದಲ್ಲಿ, ಉಚಿತ ಮನಗೆ ಬರುತ್ತಾರೆ, ಇಲ್ಲವೆ, ಹಳ್ಳಿ ದಿವಾಬು ಕೊಡುವರು ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಬರುಗ ಗೋಚರ ವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡೆಸುವರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಕಡಿತ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

95 21



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉದರ, ಕೀಲು ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮ ಯೋಗ್ಯತಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಿಸಿ ರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಪ್ಲಾಸಿನಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲನಮಾಡಿ ನಿಲ್ಲಿಸುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ಮನಸ್ಸಿಗೆಳೆದಲೇ ತಯಾರಾದ ಔಷಧ

ಕ್ರಯದಿಂದ ಸ್ವಲ್ಪವೂ ಮುಟ್ಟದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ವೃತ್ತಾಂತ ಪತ್ರಿಕೆ

೧೯೦೬ ನೇ ಇಸವಿ ನವಂಬರ್ ತಾ ೨೨ನೇ ಗುರುವಾರ

ಅರ್ಬತ್ನಾಟ್ ಕಂಪೆನಿಯ ಅಂತ್ಯವು

ಮದರಾಸ್ ಪಟ್ಟಣದ ಅರ್ಬತ್ನಾಟ್ ಕಂಪನಿಯು ದಿವಾಳಿಯಾ ಯಿತು ಅವರ ಆಸ್ತಿ ಮತ್ತು ಸಾಲಗಳನ್ನು ಕುರಿತು ಸರ್ಕಾರಿ ಅಧಿ ಕಾರಿಯು ಕಳೆದ ಶನಿವಾರ ಪ್ರಕಟಿಸಿರುವ ರಿಪೋರ್ಟಿನ ಮುಖ್ಯಾಂಶ ಗಳನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ವಿವರಿಸಿರುತ್ತೇನೆ ನಮ್ಮ ವಾಚಕರಲ್ಲಿ ಅನೇಕರಿಗೆ ಬ್ಯಾಂಕಿನ ಕಾರುಬಾರುಗಳು ತಿಳಿದಿ ಲ್ಲವಾದ್ದರಿಂದ ಅವನ್ನು ಸ್ವಲ್ಪಮಟ್ಟಿಗೆ ಸ್ಪಷ್ಟವಾಗಿ ಹೇಳುವೆವು ಅರ್ಬ ತ್ನಾಟ್ ಕಂಪನಿಯವರು ೨೫ ಕೋಟಿ ರೂಪಾಯಿಗಳನ್ನು ಒಂದಾ ವರುಷಕ್ಕೆ ನೇಮಿಸಲ್ಪಟ್ಟ ನಾಯಿದೆ ಉಳ್ಳಂಥಾ ಖಾಯಂ ಡಿಪಾಜಿಟ್ಟನ್ನು ಜನರಿಂದ ಅಂಗೀಕರಿಸಿದರು ಈ ಹಣಕ್ಕೆ ಕಂಪನಿಯವರು ಡಿಪಾಜಿಟ್ ದಾರರಿಗೆ ಶೇಕಡಾ ವರುಷಕ್ಕೆ ೫ ರೂಪಾಯಿಯಂತೆ ಬಡ್ಡಿ ಕೊಡುತ್ತಿದ್ದರು ಇಷ್ಟು ಹೆಚ್ಚು ಬಡ್ಡಿಯನ್ನು ಮದರಾಸ್ ಬ್ಯಾಂಕಿನವರಾಗಲಿ ಹಿಂದುಸ್ಥಾನದ ಇನ್ಯಾವ ಭಾರೀ ಬ್ಯಾಂಕಿನವರಾಗಲಿ ಕೊಡುವುದಿಲ್ಲ ಈ ಹೆಚ್ಚು ಬಡ್ಡಿಯ ಆಸೆಯಿಂದಲೂ ಕಂಪನಿಯ ಅತ್ಯಂತ ಮಹತ್ತಾದ ಹಿಂದಣ ಘನತೆಯಿಂದಲೂ ಅನೇಕಾನೇಕ ಯೂರೋಪಿಯನ್ನರೂ ಸ್ವದೇಶೀಯರೂ ಆ ಕಂಪನಿಯಲ್ಲಿ ತಮ್ಮ ಹಣವನ್ನು ಡಿಪಾಜಿಟ್ ಹಾಕಿದರು ಈಗ ಇಷ್ಟು ಹಣವೂ ಏನಾಯಿತೆನ್ನುವಿರೋ? ಸ್ವಲ್ಪ ನೋಡಿ ಕಂಪನಿಯನ್ನು ನಡೆಸುತ್ತಿದ್ದ ಪಾಲುದಾರರು ತಮ್ಮ ಸ್ವಂತವಲ್ಲದ ಈ ಹಣವನ್ನು ಬಹಳ ಜಾಗರೂಕತೆಯಿಂದಲೂ ನಷ್ಟವಾಗದ ರೀತಿ ಯಲ್ಲೂ ವಿನಿಯೋಗಿಸಿ ಲೇವಾದೇವಿ ನಡಿಸಬೇಕಾಗಿತ್ತು ಯಾವ ವಿಧವಾದ ಲೇವಾದೇವಿಯಲ್ಲೂ ಖಂಡಿತವಾಗಿ ಲಾಭವೇ ಉಂಟೆಂದು ಹೇಳು ವುದಕ್ಕಾಗದಷ್ಟೆ ಆದರೆ ಅರ್ಬತ್ನಾಟ್ ಕಂಪನಿಯವರು, ಅದರಲ್ಲೂ ಅವರ ಲಂಡನ್ ಪಟ್ಟಣದ ಪಾಲುದಾರರು ಅಪಾರ ಲಾಭ ಸಂಪಾದನೆ ಮಾಡುವ ಯೋಚನೆಯಿಂದ ಕಂಪನಿಯ ಹಣವನ್ನು ಖಂಡಿತವಲ್ಲದ ಅನುಮಾನಾಸ್ಪದವಾದ ವ್ಯಾಪಾರಂಗಳಲ್ಲಿ ಹಾಕಿಬಿಟ್ಟರು. ಹಣವೆಲ್ಲಾ ನಷ್ಟವಾಯಿತು ಈ ನಷ್ಟವನ್ನು ಎತ್ತಿಕೊಳ್ಳೋಣವೆಂದು ಇನ್ನೊಂದು, ಮತ್ತೊಂದು ವಿಧದಲ್ಲಿ ಹಣ ಹಾಕಿದರು ಅದೂ ಹಾಳಾ ಯಿತು ಅಂತು ಅವರು ೬ ವರುಷಗಳಲ್ಲಿ ೬೦ ಲಕ್ಷ ರೂಪಾಯಿ ಕಳೆ ದುಬಿಟ್ಟರು ಇತ್ತಲಾಗಿ ಮದರಾಸ್ ಕಂಪನಿಯವರು ಕೂಡ ಲೇವಾ ದೇವಿಯಲ್ಲಿ ಹಣ ಹಾಳುಮಾಡಿದರು ಆದರೆ ಕಾಫಿ ಮತ್ತು ನೀಲಿ ವ್ಯಾಪಾರವು ಬಹಳ ಹೀನಸ್ಥಿತಿಗೆ ಬಂದಿದೆ ಇದಕ್ಕೆ ಈ ಕಂಪನಿಯವ ರನ್ನು ಗುರಿಮಾಡತಕ್ಕದ್ದಲ್ಲ ಆದರೆ ಇವರು ಲಂಡನ್ ಬ್ಯಾಂಕಿನ ಪಾಲುದಾರರು ನಡಿಸಿದ ಕಾರ್ಯಗಳನ್ನು ಆಗಾಗಲೇ ತಿಳಿದು ನಿಲ್ಲಿಸಬೇಕಾಗಿತ್ತು ಇದಕ್ಕಾಗಿ ಮದರಾಸ್ ಕಂಪನಿಯವರನ್ನು ದೂರಬೇಕಾಗಿದೆ ಇದಲ್ಲದೆ ಈ ಕಂಪನಿಯಲ್ಲಿ ಕೆಲವು ವರುಷಗಳಿಂದ ಕ್ರಮವಾದ ಲೆಕ್ಕಪತ್ರಗಳನ್ನೇ ಬರೆದಿಟ್ಟಿಲ್ಲ ಆರು ತಿಂಗಳಿಗೊ, ವರುಷಕ್ಕೊಂದಾವರ್ತಿ ಕಂಪನಿಯ ಲೇವಾದೇವಿಗಳನ್ನು ಗೊತ್ತುಮಾಡಿ ಪ್ರಕಟಿಸಲಿಲ್ಲ ವಾದ್ದರಿಂದ ಅವರ ಸ್ಥಿತಿಗತಿ ಏನೆಂಬುದು ಅವರಿಗೇ ಗೊತ್ತಿರಲಿಲ್ಲ

ಸರಿಯಾದ ಸ್ಥಿತಿಯನ್ನು ತಿಳಿದ ಮೇಲೆ ಯಾರನ್ನು ದಂಡ ನೆಗೆ ಗುರಿಮಾಡುವದು ಯೋಗ್ಯವಲ್ಲವೆಂದ ಇದ ವರಗೆ ನಾವು ತಿಳಿದಿದ್ದೆವು ಈಗ ಕಂಪನಿಯ ಪಾಲುದಾರರಗಳ ಸರ್ಕಾರಿ ಅಧಿಕಾರಿಯ ಮೂಲಕ ನೋಡಲ್ಪಟ್ಟದ್ದರಿಂದ ಕಂಪನಿಯವರು ಬಹು ಅಪ್ರಾಮಾಣಿಕತೆಯ ನ್ನು ನಡಿಸಿದ್ದರೆಂದೂ ಕಂಪನಿ ಮುಳುಗಲು ಅವರೇ ಕಾರಣರಾದರೆಂದೂ ಖಚಿತಪಡಿಸಲಾಗಿದೆ ಆದರೆ ಅವರ ಮೇಲೆ ಸ್ಪೆಷಲ್ ಆಗಿ ಕಠಿಣ ದಂಡನೆ ಆಗಲಿ, ಇದಕ್ಕಾಗಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ತರಬೇಕೆಂದಾಗಲಿ ಇನ್ನೂ ಅಷ್ಟು ಖಂಡಿತವಾಗಿ ಹೇಳಲಾರೆವು

ಈ ಕಂಪನಿ ನಷ್ಟದಿಂದ ನಾವು ಕಲಿಯಬೇಕಾದ್ದೇನೆಂದರೆ ಸರ್ಕಾರಿ ಜವಾಬ್ದಾರಿಯಿಲ್ಲದ ಪ್ರೈವೇಟ್ ಬ್ಯಾಂಕುಗಳಲ್ಲಿ ವಿಶೇಷ ಲಾಭಕರವಾಗಿ ಕಂಡರೂ ಯಾರೂ ಒಂದು ಕಾಸಾದರೂ ಹಾಕಬಾರದು ಬ್ಯಾಂಕಿಗೆ ಹಾಕುವಷ್ಟು ಹಣವಿದ್ದಲ್ಲಿ ಆದಾಯವನ್ನು ಗಳನ್ನು ಪಂಪ್ಸ್ ದ ಕಟಿಕೊಳ್ಳುವಂತಾ ಜಾಯಿಂಟ್ ಸ್ಟಾಕ್ ಕಂಪನಿ ಬ್ಯಾಂಕುಗಳನ್ನು ಮಾ ಕೊಡುವ ಆವುಗಳಲ್ಲಿ ಹಾಕಿಕೊಳ್ಳುದ್ದು ವರುಷಕ್ಕೊ ಆರು ತಿಂಗಳಿಗೋ ಒಂದಾವರ್ತಿ ಕ್ರಮವಾಗಿ ಬ್ಯಾಂಕಿನ ಸ್ಥಿತಿಗತಿಯನ್ನು ಪ್ರಕಟಿಸುವಂಥಾದ್ದಾಗಿರಬೇಕು ಇನ್ನೇ ಅಲ್ಲ "ನಮ್ಮ ವಾಚಕರು ಇನ್ನೊಂದು ವಿಷಯವನ್ನು ಚನ್ನಾಗಿ ತಿಳಿದುಕೊಳ್ಳಬೇಕಾಗಿದೆ ಅದೇನೆಂದರೆ, ಬ್ಯಾಂಕಿನಲ್ಲಿ ಹಣ ಹಾಕುವುದಕ್ಕಿಂತಲೂ ಮನೆಯಲ್ಲಿ ಕಟ್ಟಿಟ್ಟುಕೊಳ್ಳುವುದೇ ಉತ್ತಮವೆಂದು ಯಾರೂ ಯೋಚಿಸಬಾರದು ಮನೆಯವರಗಳಲ್ಲಿಟ್ಟುಕೊಳ್ಳುವದು ಕಳ್ಳಕಾಕರರಿಗೆ ಅಕರವಾದೀತು ಸ ರಕ್ಷಣೆಯಾಗಲಿ, ಉಪಯೋಗವಾಗಲಿ ಬಡ್ಡಿಯಾಗಲಿ ಏನು ಇರು ವದಿಲ್ಲ ಈಗ ಹಿಂದುಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರು ವುದಕ್ಕೆ ಅಪಾರವಾದ ಹಣ ಬೇಕಾಗಿದೆ ಒಸರು ಬ್ಯಾಂಕುಗಳ ಮೂಲಕ ಈ ಹಣವನ್ನು ಒದಗಿಸಿಕೊಡತಕ್ಕ ಏರ್ಪಾಟಾಗಬೇಕು ನಮ್ಮ ವಾಚಕರಲ್ಲಿ ಯಾರಾದರೂ ಹಣವಂತರ ಗಿದ್ದರೆ ತಮ್ಮ ಹಣವನ್ನು ಸೇವಿಂಗ್ಸ್ ಬ್ಯಾಂಕಿನಲ್ಲೋ ಕೆಟ್ಟು ಹಣವಿದ್ದರೆ ಮದರಾಸ್ ಬ್ಯಾಂಕಿನಂಥಾ ನಂಬಿಕೆಯುಳ್ಳ ಬಡಿ ಬ್ಯಾಂಕುಗಳಲ್ಲೋ ಹಾಕಲಿ

ತಾ, ತಾ ಎನ್ನುವದಕ್ಕಿಂತ ದ, ದ ಎನ್ನುವದುತ್ತಮ.

ನಮ್ಮ ಈ ಕಾಲವು ಅಭಿವೃದ್ಧಿಯ ಕಾಲವಾಗಿದೆ ನಮ್ಮ ಸುತ್ತು ಮುತ್ತಲೂ ನಡೆಯುತ್ತಿರುವ ಕಾರ್ಯಗಳನ್ನು ನೋಡಲಾಗಿ ಇದು ಪರಿಷ್ಕಾರವಾಗಿ ತಿಳಿದು ಬರುತ್ತದೆ ಕೆಲವು ಜಾತಿಯವರು ತಮ್ಮ ತಮ್ಮ ಜನಗಳು ಮುಂದಕ್ಕೆ ಬರಬೇಕೆಂಬ ಅಭಿಲಾಷೆಯಿಂದ ತಮ್ಮವರನ್ನು ವಿದ್ಯೆಯಲ್ಲಿ ಅಭಿವೃದ್ಧಿ ಪಡಿಸಬೇಕೆಂದು ಸಂಘಗಳನ್ನು ಏರ್ಪಡಿಸಿಕೊಂಡಿದ್ದಾರೆ ಇನ್ನೂ ಕೆಲವರು ಇಂಥ ಸಂಘಗಳನ್ನು ಮುಂದಕ್ಕೆ ಏರ್ಪ ಡಿಸುವದರಲ್ಲಿದ್ದಾರೆ ಇದುವರೆಗೂ ಅನೇಕ ಶತಮಾನಗಳಿಂದ ನಮ್ಮ ಈ ಹಿಂದೂದೇಶೀಯರು ಇದ್ದ ಪ್ರಕಾರವಾಗಿಯೇ ಇರುತ್ತಾ ಬಂದಿರು ವದಕ್ಕೆ ಕಾರಣವೇನು? ಜಡತ್ವವೆಂಬ ನಿದ್ರೆಯಿಂದ ಕೂಡಿಸಿರುತ್ತಾ ಇದುವರೆಗೂ ಹೀಗೆ ಇರಲು ಕಾರಣವೇನೆಂದು ಕೇಳುವದಾದರೆ ಜನ ರಲ್ಲಿ ಅಸಹಭಾವವೂ ಸ್ವಾರ್ಥತ್ವವೂ ಐಕಮತ್ಯವಿಲ್ಲದಿರುವಿಕೆಯೂ ಇವೇ ಎಂದು ನಾವು ಹೇಳಬೇಕಾಗುತ್ತದೆ ಈ ದುಷ್ಫಲಗಳು ಜಾತಿ ಭೇದವಿಂದುಂಟಾದವುಗಳೆಂದು ಎಂದು ಧಾರಾಳವಾಗಿ ಹೇಳಬಹುದು

ಪ್ರತಿಯೊಂದು ಹಳ್ಳಿಯಲ್ಲಿಯೂ ಊರ ಹೊರಗಡೆ ಮಾದಿಗರ ಹಟ್ಟಿಯಿದ್ದೇ ಇರುತ್ತದೆ ಊರ ಒಳಗಡೆ ಉತ್ತಮ ಜಾತಿಯವರೆನಿಸಿ ಕೊಳ್ಳುವವರು ಇರುತ್ತಾರಷ್ಟೆ ಇವರಲ್ಲಿ ಕೆಲವರು ಬ್ರಾಹ್ಮಣರೂ ಇರುತ್ತಾರೆ ಈ ಶ್ರೇಷ್ಠ ಜಾತಿಯವರೆನಿಸಿಕೊಳ್ಳುವವರ ಧರ್ಮ ವೇನು? ಇವರು ಬುಟಿಕ್ಕರ್ಮರಾಗಿ ವೇದಾಧ್ಯಯನದಲ್ಲಿ ರತ್ತರಾಗಿಕೊಂಡು ಜ್ಞಾನಸಂಪಾದನೆ ಮಾಡುವರಾಗಿರಬೇಕು ಇವರು ಎಷ್ಟೋ ತಲಾಂ ತರಗಳಿಂದ ಆಸ್ತಿಯಾಗಿ ಬಂದಿರುವ ಮಾನ್ಯ ಮಠಗಳಲ್ಲಿ ವಾಸಿಸುತ್ತಾ ಸರ್ಕಾರದವರು ಕೊಟ್ಟಿರುವ ಸರ್ವಮಾನ್ಯಗಳನ್ನು ಅನುಭವಿಸುತ್ತಾ ಬಂದಿರುತ್ತಾರೆ ಇವರ ಕರ್ತವ್ಯವೇನೆಂಬುದನ್ನು ಅವರೇ ತಿಳಿಯತಕ್ಕದ್ದಾಗಿದೆ ಇದು ಹಾಗಿರಲಿ ಮುಖ್ಯ ವಿಷಯವೇನೆಂದರೆ—ವಿದ್ಯಾವಂತರು ಕೆಲವರ, ವಿದ್ಯಾಹೀನರು ಅನೇಕರು ಬರಿ ದೂ ವಿದ್ಯಾಹೀನರೆಂದಿಗೂ ಅದೇ ಸ್ಥಿತಿಯಲ್ಲಿ ಬಿದ್ದಿರಬೇಕೆಂಬ ದಬ್ಬಾಳಿಕೆ ನಿಲ್ಲತಕ್ಕ ಸ್ಥಿತಿಯಲ್ಲಿ ಮಾದಿಗರು ಊರ ಹೊರಗೂ ಶ್ರೇಷ್ಠ ಜಾ ತರೆಂಬುವವರ ಊರ ಒಳಗೂ ಜೀವಿಸುತ್ತಿರಬೇಕೆಂಬ ನೀ ಧಿ ಇನ್ನೂ ಎಷ್ಟು ಕಾಲ ಸಾಗಿ ಇದ್ದೀತು?

ಮನುಷ್ಯನಿಗೆ ಪರಮ ಧರ್ಮವು ಯಾವುದು? ಆತನ ತಿಳಿದು ಇತರರಿಗೆ ತಿಳಿಸುವದೇ ಅಲ್ಲವೇ? ನೀಚ ಸ್ಥಿತಿಯಲ್ಲಿರುವ ಜೀವಿ ರನ್ನು ಉತ್ತಮಸ್ಥಿತಿಗೆ ತರ ವದಕ್ಕಿಂತ ಪುಣ್ಯಸಂಪಾದನೆಗೆ ಬೇ ರೆ ಕಾರ್ಯವು ಮತ್ತೇನಿದೆ? ಹಿಂದೂ ದೇಶವು ಅಭಿ ಯನ್ನು ಹೊಂದದೆ, ಇದ್ದ ಸ್ಥಿತಿಯಲ್ಲೇ ಇರುವದಕ್ಕೆ ಕಾರಣವೇ ನು, ಉತ್ತಮನು ಬೆಳೆಯುವವನು, ಅವನು ನೀಚ ಜಾತಿಯವನು ಕೀಳೆಂದು ಒಟ್ಟುಗೊಟ್ಟಿರುವ ದುರಾಚಾರವಲ್ಲವೇ? ಅಲ್ಲವೇ ಈ ಇವು? ಐಶ್ವರ್ಯವಂತರೂ ವಿದ್ಯಾವಂತರೂ ಸದ್ಗುಣವಂತರೂ ಜನಾಂಗದಲ್ಲಿರುವ ಅತಿ ನೀಚರೂ ದುಷ್ಟರೂ ಆದವರನ್ನು ಉತ್ತಮ ಸ್ಥಿತಿಗೆ ಬರುವ ಹಾಗೆ ಮಾಡುವ ಕಾರ್ಯದಲ್ಲಿ ಏನಿಬಿದರೆ ಆಕ ಗದೆ ಕೆಳಗಿನ ಯಾವ ನೀಚರಾದರೂ ಮನಸ್ಸಿಲ್ಲದೆ ಉಳಿಯಲಾರರು

ಶ್ರೇಷ್ಠಜಾತಿಯವರೆನಿಸಿಕೊಳ್ಳುವವರಲ್ಲಿ ಅನೇಕರು ಇತರರ ತಮಗೆ ಏನಾದರೂ ಕಾರಣಗಳಿಲ್ಲ ಅಕ್ಕರಾಗಿ ನಡೆಯಬೇಕೆಂಬ ಆ ಪೇಕ್ಷಾಂಗ ತುಂಬಿದ್ದಾರೆಯೇ ವಿನಾ ತಾವು ಇತರರಿಗೆ ಯಾವ ವಿಧ ಪ್ರಯೋಜನಕಾರಿಗಳಾಗಬೇಕೆಂಬ ದನ್ನು ಯೋಚಿಸುವದೇ ಇಲ್ಲ ಮಾ ಧರ್ಮಶಾಸ್ತ್ರವನ್ನು ಬರೆದವರು ಬ್ರಾಹ್ಮಣರಿಗೆ ಶೂದ್ರರು ಸಲ್ಲಿಸ ಬೇಕಾದ ಧರ್ಮವನ್ನು ಮಾತ್ರ ಬಹಳವಾಗಿ ವಿವರಿಸಿದ್ದಾರೆ ಬ್ರಾಹ್ಮ ಶೂದ್ರರಿಗೆ ಸಲ್ಲಿಸತಕ್ಕ ವಿಷಯವನ್ನು ಮಾತ್ರ ಕೊಂಚವಾಗಿ ಹೇ ತ್ತಾರೆ

ಬ್ರಾಹ್ಮಣರನ್ನು ಬಿಡು ಇತರ ಜಾತಿಯವರ ವಿಷಯವನ್ನು ಕೆ ದರೆ ಅವರಲ್ಲೂ ಇದೇ ಗತಿ ನಾವು ತೋರುತ್ತದೆ ತಮ್ಮ ತಮ್ಮ ಶ್ರೇಷ್ಠತ್ವವನ್ನು ಆಚಾರಮಾಡಿಕೊಂಡು ತಮಗ ಇತರರು ನಮ್ಮ ನನ್ನು ಮಾಡಬೇಕೆಂದು ಸಾರಿಸಿ ಸೋತಿರುವುದನ್ನೇ ಕೇಳುತ್ತಾರೆ ದ ಇತರ ಜಾತಿಯವರಿಗೆ ಯಾವ ಭಾಗದಲ್ಲಿ ಪ್ರಯೋಜನವು ಬೇಕೋ ತಿಳಿಯೋಣ ಎಂಬುವದನ್ನು ಚಿಂತಿಸುವದು ಅಪೂ

ನಮ್ಮ ಈ ಹಿಂದೂದೇಶದಲ್ಲಿ ಜನರೊಳಗೆ ನೂತನ ಸ್ಥಿತಿ ಹುಟ್ಟುವ ಕಾಲವು ದೂರವಾಗಿಲ್ಲ ತೆಗೆದುಕೊಳ್ಳುವದಕ್ಕಿಂತ (ಅ ತಾನು ಮೇಲನ್ನು ಹೊಂದುವದಕ್ಕಿಂತ) ಕೊಡ ವದು (ಅವರ ಇ ರಿಗೆ ಮೇಲನ್ನು ಮಾಡುವದು) ಉತ್ತಮವೆಂದೂ ನಿಮ್ಮಲ್ಲಿ ಎಲ್ಲರಿ ದೊಡ್ಡವನೆನಿಸಿಕೊಳ್ಳುವವನು ಎಲ್ಲರಿಗೆ ಆಳಾಗಿರಲಿ ಎಂದೂ ಹೇ ಯೇಸು ಪ್ರಭುವಿನ ಮಾತು ನಿಜವೆಂದು ನಂಬಿ ಅದೇ ಗ್ರಾಹ್ಯವಾ ನ ಕೆದುಕೊಳ್ಳುವಂಥ ಕುಲೀನರ ಕಾಲವು ಬೇಗ ಬರುವದು!

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಈಗೀಗ ರೋಗದಮುಸುಕಿಕೊಳ್ಳುತ್ತಿದೆ ಯೂ ಪ್ರಾರಂಭವಾಗಿರುವುದು ಪ್ಲೇಗ್ ಉಪದ್ರವು ಆರಂಭಿಸುತ್ತಿ ರೂ ಕೃಷ್ಣರಾಜಪೇಟೆಯಿಂದ ಇನ್ನೂ ಬಿಟ್ಟುಹೋಗಿಲ್ಲ ವಾಸಿಗಳು ಬಹಳ ಭೀತಿಯುಳ್ಳವರಾಗಿಯೇ ಇರುವರು

****

ಇದೇ ತಿಂಗಳು ತಾ ೨೪ನೆ ಬುಧವಾರ ಅರಮನೆ ಕಲ್ಯಾಣ ಮಂಟಪದಲ್ಲಿ ಚಾಮರಾಜೇಂದ್ರ ಒಡೆಯರವರ ಜಯಂತಿ ಸಮಾರಾಧನೆಯು ಇಲ್ಲಿ ನಡೆಯುವಂತೆ ಏರ್ಪಾಟಾಗಿದೆ ಆ ದಿನ ರಾಜಧಾನಿಯ ಎಲ್ಲಾ ಕೋರ್ಟು ಕಛೇರಿ ಮತ್ತು ಸ್ಕೂಲುಗಳಿಗೂ ರಜಾ ಕೊಡಲ್ಪಡುತ್ತದೆ.

****

ರಾಜಧಾನಿಯ ಕೋಟೆ, ಕೃಷ್ಣರಾಜ, ಮತ್ತು ದೇವರಾಜ ಮೊಹಲ್ಲಾಗಳಲ್ಲಿ ಅನಾರೋಗ್ಯಕರವಾದ ಮನೆಗಳನ್ನೆಲ್ಲಾ ಒಡೆದು ಹಾಕುವ ವಿಚಾರವಾಗಿ ಈ ದಿನ ಬೆಳಿಗ್ಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಮುನಿಸಿಪಲ್ ಕಮಿಷನರು ಸಭೆಸೇರಿ ಚರ್ಚೆಮಾಡುವರಾಗಿದ್ದಾರೆ

****

ಮಾಗಡೀ ತಾಲ್ಲೂಕ್ ಸಂತೆಪೇಟೆಯ ಒಂದು ತೋಟದಲ್ಲಿ ತೆಂಗಿನಕಾಯಿಗೆ ೬-೮ ಅಂಗುಲ ಉದ್ದವಾದ ಕೊಂಬು ಹುಟ್ಟಿರುವ ತಲೂ, ಅದನ್ನು ತೋಟಗಾರರು ಬೆಂಗಳೂರು ಸರ್ಕಾರದ ಪ್ರದರ್ಶನ ಶಾಲೆಗೆ ಕಳುಹಿಸಬೇಕೆಂದು ಯೋಚಿಸುತ್ತಿದ್ದಾರೆಂತಲೂ ಒಬ್ಬ ವರದಿಗಾರರು ತಿಳಿಸುವರು

...ಪಟ್ಟಣದ ಹೈಸ್ಕೂಲ್ ಹೆಡ್ ಮಾಸ್ಟರ್ ಮೆ॥ ಕೆ. ನಾರಾಯಣಯ್ಯನವರು ಪ್ರಯತ್ನಪಟ್ಟು ಆ ಟವರ್ನಲ್ಲಿ ವರ್ತಕ ಮಹಾಜನರ ಸಹಾಯದಿಂದ ಒಂದು ವಾಚಕ ಶಾಲೆಯನ್ನು (ರೀಡಿಂಗ್ ರೂಂ) ಇದೇ ನವಂಬರ್ ... ರ ದಿವಸ ಪ್ರಾರಂಭಮಾಡಿ ನಡೆಸುತ್ತಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ

****

ಚಿನ್ನ ಬೆಳ್ಳಿ ಕೆಲಸಮಾಡುವ ಅಕ್ಕಸಾಲಿ ಜಾತಿಯ ಜನಗಳ ಈಗಿನ ಸ್ಥಿತಿಯನ್ನು ಕುರಿತು ಒಬ್ಬ ಬಾತ್ಮಿದಾರರು ತುಂಬಾ ಪರಿತಾಪಪಟ್ಟು ಬರೆದಿರುವ ಬಾತ್ಮಿಯನ್ನು ಇದೇ ಪತ್ರಿಕೆಯ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ ಆ ಮತಸ್ಥರು ಅದನ್ನು ನೋಡಿ ಗ್ರಹಿಸಿಕೊಂಡು, ತಮ್ಮ ಜನರ ಅಭಿವೃದ್ಧಿಗೆ ತಕ್ಕ ಸಲಕರಣೆಗಳನ್ನು ಒದಗಿಸಿಕೊಂಡಾರೆಂದು ನಿರೀಕ್ಷಿಸುವೆವು

****

ಹೊನ್ನಾಳಿ ತಾಲ್ಲೂಕು ಸಾಸ್ವೆಹಳ್ಳಿ ಗ್ರಾಮದಲ್ಲಿ ಕಳೆದ ತಾ ... ನೆ ಗುರುವಾರ ಅಲ್ಲಿನ ಬಸವೇಶ್ವರ ಮತ್ತು ನರಸಿಂಹದೇವರ ರಥೋತ್ಸವವಾಯಿತು ಈ ರಥವನ್ನು ಎಳೆಯುತ್ತಿದ್ದ ಜನಗಳ ಪೈಕಿ ಮೂರು ಹುಡುಗರು ಕಾಲುಜಾರಿ ರಥದ ಗಾಲಿ ಕೆಳಗೆ ಸಿಕ್ಕಿದರೆಂತಲೂ, ಅವರುಗಳಿಗೂ ಪ್ರಾಣಾಪಾಯವಿಲ್ಲದೆ ಸ್ವಲ್ಪ ಸ್ವಲ್ಪ ಜಖಂ ಆಗಿದೆ ಎಂತ ಒಬ್ಬ ಬಾತ್ಮಿದಾರರು ಬರೆದಿದ್ದಾರೆ

****

ಅರ್ಬತ್ನಾಟ್ ಕಂಪನಿಯಲ್ಲಿ ಹಣ ಹಾಕಿ ನಷ್ಟಪಟ್ಟು ತಿನ್ನುವುದಕ್ಕೆ ಗತಿ ಇಲ್ಲದಂತೆ ಆಗಿರುವ ಡಿಪಾಜಿಟ್‌ದಾರರಿಗೆ ಧನಸಹಾಯ ಮಾಡುವುದಕ್ಕೋಸ್ಕರ ಬೆಂಗಳೂರಿನಲ್ಲಿ ರೆಸಿಡೆಂಟರೂ ದಿವಾನರೇ ಮೊದಲಾದವರೆಲ್ಲಾ ಮೊನ್ನೆ ಸೋಮವಾರ ಸಾಯಂಕಾಲ ಸಭೆ ಸೇರಿ, ಚರ್ಚಿಸಿದರು ಶ್ರೀಮನ್ಮಹಾರಾಜರವರು ೨,೦೦೦ ರೂಪಾಯಿ ಕೊಡಿಸಿದರೆಂತಲೂ, ಆ ದಿನ ಕೆಲವು ದೊಡ್ಡ ಮನುಷ್ಯರು ೪,೦೦೦ ರೂಪಾಯಿಗಳಷ್ಟು ಚಂದಾ ಹಾಕಿದರೆಂತಲೂ ತಿಳಿದುಬಂದಿದೆ

****

ಗೌರಿಬಿದನೂರು ತಾಲ್ಲೂಕು ಇಡಗೂರು ಗ್ರಾಮದಲ್ಲಿ ಈಚೆಗೆ ಒಂದು ಸಭೆ ನಡೆದು, ಒಂದು ರೀಡಿಂಗ್ ರೂಂ (ವಾಚಕಮಂದಿರ) ಸ್ಥಾಪನೆ ಮಾಡಲ್ಪಟ್ಟಿದೆ ಈಗ ಸದ್ಯಕ್ಕೆ ಐದು ಕನ್ನಡ ವರ್ತಮಾನ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿದ್ದಾರೆ ಜನರಿಗೆ ಪ್ರಾಪಂಚಿಕ ವ್ಯವಹಾರಗಳು ತಿಳಿದು ಬುದ್ಧಿ ಕುಶಲತೆ ಹೊಂದುವುದಕ್ಕೆ ಇದು ಸಹಾಯವಾಗುವುದು. ಇತರ ಗ್ರಾಮಗಳವರೂ ಇದೇ ರೀತಿ ವಾಚಕಶಾಲೆಗಳನ್ನು ಸ್ಥಾಪಿಸಿಕೊಂಡು, ಪ್ರಯೋಜನಪಡೆದಾರೆಂದು ಹಾರೈಸುತ್ತೇವೆ

****

ಬ್ರಿಟಿಷ್ ರೆಸಿಡೆಂಟ್ ಮೆ॥ ಎಸ್ ಎಂ ಫ್ರೇಸರ್ ಯವರು ಮೊನ್ನೆ ... ವಾರ ರಾತ್ರಿ ಬೆಂಗಳೂರಿಂದ ಸರ್ಕೀಟು ದಯಮಾಡಿದರು ಹೊಸದುರ್ಗ, ಮಾರಿಕಣಿವೆ, ಬೀರೂರು, ತರೀಕೆರೆ, ಸುಬ್ಬನ ... ಕಟ್ಟೆ, ಯಲ್ಲಂದೂರು, ಚಿಕ್ಕಮಗಳೂರು, ಸಕ್ರೆಪಟ್ಟಣ ... ಈ ಪ್ರಾಂತ್ಯ ಸಂಚಾರ ಮಾಡಿಕೊಂಡು, ಡಿಸೆಂಬರ್ ೯ ನೆ ... ಬೆಂಗಳೂರನ್ನು ತಲಪುವವರಾಗಿದ್ದಾರೆ. ಈ ಮಧ್ಯೆ ಸುಬ್ಬನ ಕಟ್ಟೆಯಲ್ಲಿ ಎರಡು ದಿನ, ಹೆಬ್ಬೆಯಲ್ಲಿ ನಾಲ್ಕು ದಿನ, ಸಕ್ರೆಪಟ್ಟಣ ... ದು ದಿನ, ಈ ರೀತಿ ಕ್ಯಾಂಪು ನಿಲ್ಲುವರೆಂದು ಗೊತ್ತಾಗಿದೆ

****

ನಗರ ತಾಲ್ಲೂಕು ಶರಾವತಿ ಗ್ರಾಮದಲ್ಲಿ ಅನಂತನಾಯಕರ ಮನೆಯೊಳಗೆ ಕಳೆದ ೧೩ನೆ ತಾ. ಮಂಗಳವಾರ ರಾತ್ರಿ ಶೇಂದಿಯನ್ನಿಟ್ಟಿದ್ದ ಕೋಣೆಯಲ್ಲಿ ದೀಪದ ಕಿಡಿ ಯೆಣ್ಣೆಗೆ ಬಿದ್ದು ಒಡೆದು ಹೋಯಿತು. ಆ ಕೋಣೆಯಲ್ಲಿ ಈ ಅನಾಹುತಕ್ಕೆ ಸಿಕ್ಕಿದ ... ವರುಷದ ಒಬ್ಬ ಮುದುಕಿ, ೧೬ ವರುಷದ ಒಬ್ಬ ಹುಡುಗಿ, ೧೦ ವರುಷದ ಒಂದು ಹುಡುಗಿ, ೯ ವರುಷದ ಒಬ್ಬ ಹುಡುಗ, ಈ ರೀತಿ ... ಗಾಯಪಟ್ಟು ಅಕಾಲಮರಣ ಹೊಂದಿದರೆಂತಲೂ, ಅವರ ... ಸುಮಾರು ೪೦೦ ರೂಪಾಯಿನ ಮಾಲು ಸುಟ್ಟುಹೋಯಿತೆಂದೂ ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ

****

ಕಳೆದ ಶನಿವಾರ ಮಧ್ಯಾಹ್ನದ ರೈಲಿನಲ್ಲಿ ಫ್ರೆಂಚ್ರಾಕ್ಸಿನಿಂದ ... ಗೆ ಬಂದ ಒಬ್ಬ ಸ್ಕೂಲ್ ಉಪಾಧ್ಯಾಯನನ್ನು ರೈಲ್ವೆ ಪ್ಲೇಗ್ ... ರು ಹಿಡಿದು ಆತನಿಗೆ ಪ್ಲೇಗ್ ಎಂದು ಹೇಳಿ ಮನೆಗೆ ಬಿಡದೆ ... ಕ್ಯಾಂಪಿಗೆ ಕಳುಹಿಸಿದರು ಆತನು ಕ್ಯಾಂಪಿನಲ್ಲಿ ಹೋಗಿ ... ಗಂಟೆ ಹೊತ್ತು ಇದ್ದು ತಾನು ಎಂದಿನಂತೆ ಆರೋಗ್ಯ ದೃಢವಾಗಿದ್ದೇನೆಂದೂ ತನ್ನನ್ನು ಮನೆಗೆ ಬಿಡಬೇಕೆಂದೂ ಕೇಳಿಕೊಂಡ ... ಆಗ ಕ್ಯಾಂಪಿನವರು ಆತನನ್ನು ಬಿಟ್ಟುಬಿಟ್ಟರು ರೈಲ್ ಸ್ಟೇಷನ್ನಿನಲ್ಲಿ ಈ ರೀತಿ ಅನೇಕ ಅಚಾತುರ್ಯಗಳು ನಡೆಯುತ್ತವೆಂದು ... ಹೀಗೆ ಮಾಡುವುದರಿಂದ ಸರ್ಕಾರದವರ ನಿರ್ಬಂಧವು ... ಕ್ಕೆ ಗುರಿಯಾದರೂ ಆಗಬಹುದು

****

ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯ ಶ್ರೀಮನ್ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ನೂರಾರು ಮಹಾ ಜನರು ಸೇರಿ ಸಭೆ ... ದರು ಅರಮನೆ ಧರ್ಮಾಧಿಕಾರಿ ವೇ॥ ರಾಮ ಶಾಸ್ತ್ರಿಗಳು ಆ ಸಭೆಯನ್ನಲಂಕರಿಸಿದ್ದರು ಮಹಾ ವಿದ್ವಾನ್ ವೇ॥ ವಿಭಾಗ ಶ್ರೀಕಂಠ ಶಾಸ್ತ್ರಿಗಳು ಸ್ತ್ರೀ ಪುರುಷರ ವಿವಾಹ ಕಾಲ ನಿರ್ಣಯ ವಿಷಯದಲ್ಲಿ ... ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಅಂತು ವೈದಿಕ ಲೌಕಿಕರೂ ಏಕೀಭವಿಸಿ ಬಾಲ್ಯ ವಿವಾಹವೆಂಬ ದುಷ್ಟ ಪದ್ಧತಿಯನ್ನು ತೊಡೆದುಬಿಡಲು ಪ್ರಯತ್ನಪಡುತ್ತಿರುವುದಕ್ಕಾಗಿ ಸಂತೋಷಪಡಬೇಕಾಗಿದೆ ಅವರ ಶ್ರೇಷ್ಠವಾದ ಈ ಉದ್ದೇಶವು ಕಾರ್ಯಗತವಾಗಿ ಬಂದೀತೆಂದು ನಿರೀಕ್ಷಿಸುತ್ತೇವೆ

****

ರಾಜಧಾನಿಯಲ್ಲಿರುವ ಮರಿಮಲ್ಲಪ್ಪನವರ ಹೈಸ್ಕೂಲ್ ವಿದ್ಯಾರ್ಥಿಗಳು ಇಲ್ಲಿನ ದೊಡ್ಡಮನುಷ್ಯರನ್ನು ಮೊನ್ನೆ ಶನಿವಾರ ಸಾಯಂಕಾಲ ... ಬಂಗಲೆಗೆ ಕರೆಸಿಕೊಂಡು ಬಹು ಅಪೂರ್ವವೂ ಸಂಭ್ರಮಯುಕ್ತವೂ ಆದ ಸಂತೋಷ ಸಭೆಯನ್ನು ನಡೆಸಿದರು. ಲೇಟ್ ಮರಿಮಲ್ಲಪ್ಪನವರ ತಸ್ವೀರನ್ನು ತೆರೆಸಿ ಅವರ ರಕ್ತಸಂಬಂಧಿಗಳು ಸ್ಕೂಲಿಗೆ ಒಪ್ಪಿಸಿದರು ಈ ಸ್ಕೂಲಿನ ಪೂರ್ವಚರಿತ್ರೆಯೂ, ಈಗಿನ ಸ್ಥಿತಿಯೂ, ಹೆಡ್‌ಮಾಸ್ಟರ್ ಮೆ॥ ಎಂ ವೆಂಕಟಕೃಷ್ಣಯ್ಯನವರ ಸಂಕಲ್ಪ ಸಾಹಸಾದಿಗಳೂ ವಿವರಿಸಲ್ಪಟ್ಟವು ಸಕಲವಿಧವಾದ ದಾನಗಳಲ್ಲೂ ವಿದ್ಯಾದಾನವೇ ಪ್ರಧಾನವಾದ್ದರಿಂದ ಪರೋಪಕಾರಿಗಳಾದ ಪ್ರಭುತ್ವಸ್ಥರು ಮೆ॥ ಮರಿಮಲ್ಲಪ್ಪನವರಂತೆ ತಮ್ಮ ಐಶ್ವರ್ಯವನ್ನು ವಿದ್ಯಾಭಿವೃದ್ಧಿಗೆ ವಿನಿಯೋಗಿಸಬೇಕೆಂದು ಅಡ್ವೊಕೇಟ್ ಮೆ॥ ರಾಮಣ್ಣನವರೂ, ಸಭಾಧ್ಯಕ್ಷರಾಗಿದ್ದ ಅರಮನೆ ಆಫಿಸರ್ ಮೆ॥ ಟಿ. ರಾಮಕೃಷ್ಣರಾಯರೂ ಸಭಿಕರನ್ನು ಕುರಿತು ಹೇಳಿದರು ಆ ದಿನ ಟೌನ್‌ಹಾಲಿನಲ್ಲಿ ಈ ಉತ್ಸವಕ್ಕೆ ಸೇರಿದ್ದಷ್ಟುಮಂದಿ ದೊಡ್ಡಮನುಷ್ಯರೂ ವಿದ್ಯಾರ್ಥಿಗಳೂ ಹಿಂದೆ ಯಾವಾಗಲೂ ಸೇರಿರಲಿಲ್ಲ

ಅರ್ಬತ್ನಾಟ್ ಕಂಪನಿಯ ಸ್ಥಿತಿಗತಿ.

ಕಳೆದ ಅಕ್ಟೋಬರ್ ೨೨ ನೇ ತಾ ಮದರಾಸ್ ಅರ್ಬತ್ನಾಟ್ ಕಂಪನಿಯವರು ಲೇವಾದೇವಿಯನ್ನು ನಿಲ್ಲಿಸಿಬಿಟ್ಟಂತೆ ಪ್ರಕಟಮಾಡಿದ್ದರಿಂದ ದಕ್ಷಿಣ ದೇಶದಲ್ಲೆಲ್ಲಾ ಅನೇಕಾನೇಕ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರ ಮತ್ತು ಬಡಬಗ್ಗರ ಡಿಪಾಜಿಟ್ ಹಣಗಳು ಅಪಾರವಾಗಿ ಮುಳುಗಿಹೋಯಿತೆಂದೂ, ಕೂಡಲೇ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸಿ ಆ ಕಂಪನಿಯ ಆದಾಯವ್ಯಯಗಳ ಸ್ಥಿತಿಗತಿಗಳನ್ನು ಚೆನ್ನಾಗಿ ಪರೀಕ್ಷಿಸಿ ನಮಗೆ ತಿಳಿಸಲು ಏರ್ಪಾಡು ಮಾಡಿದಾರೆಂದೂ ಪ್ರಕಟಿಸಿದ್ದೆವಷ್ಟೆ ಈ ಅಧಿಕಾರಿಯೂ ಲೆಕ್ಕಾಚಾರದಲ್ಲಿ ಪ್ರವೀಣರೆನಿಸಿಕೊಂಡ ಇನ್ನಿಬ್ಬರೂ ಸೇರಿ ಒಂದು ತಿಂಗಳಿಂದಲೂ ಕಂಪನಿಯ ಆದಾಯ ವ್ಯಯಗಳನ್ನೂ ಇತರ ಎಲ್ಲಾ ಬಾಬುಗಳನ್ನೂ ತನಿಖೆ ಮಾಡಿರುತ್ತಾರೆ ಕಳೆದ ಶನಿವಾರ ಸಾಯಂಕಾಲ ಮದರಾಸ್ ಪಟ್ಟಣದ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಎಂಬ ಬಂಗಲೆಯಲ್ಲಿ ಈ ಕಂಪನಿಗೆ ಹಣ ಹಾಕಿದವರನ್ನೆಲ್ಲಾ ಕೂಡಿಸಿ, ಮೇಲ್ಕಂಡ ಸರ್ಕಾರಿ ಅಧಿಕಾರಿಯಾದ ಮೆ॥ ಆರ್ಚಿಬಲ್ಡ್ ರೇಡ್ ಯವರು ಆ ತಾರೀಖಿನವರೆಗೆ ತಮಗೆ ಕಂಡುಬಂದ ವಿಷಯಗಳನ್ನೆಲ್ಲಾ ಅಂದರೆ ಆ ಕಂಪನಿಯ ಪೂರ್ವ ಚರಿತ್ರೆ, ಲಂಡನ್ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟದ್ದು ಈ ಕಂಪನಿ ಶಾಖೆಯ ಚರಿತ್ರೆ, ಕಂಪನಿ ಪಾಲುದಾರರು ಹಣವನ್ನು ನಾನಾಪ್ರಕಾರವಾಗಿ ವ್ಯಾಪಾರಾದಿಗಳಿಗೆ ವಿನಿಯೋಗಿಸಿ ಕಳೆದುಕೊಂಡ ವಿವರ ಕಂಪನಿಯ ಈಗಿನ ಆಸ್ತಿ ಮತ್ತು ಸಾಲಗಳು, ಈ ಮೊದಲಾದ ವಿಷಯಗಳನ್ನೆಲ್ಲಾ ಸಭಿಕರಿಗೆ ತಿಳಿಯಪಡಿಸಿದರು. ಇವುಗಳಲ್ಲಿ ಮುಖ್ಯವಾದ ಭಾಗಗಳನ್ನು ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸುವೆವು

ಕಂಪನಿಯ ಚರಿತ್ರೆಯು.

ಮದರಾಸಿನಲ್ಲಿ ಅರ್ಬತ್ನಾಟ್ ಕಂಪನಿಯು ನೂರು ವರ್ಷಗಳ ಕೆಳಗೆ ಸ್ಥಾಪಿಸಲ್ಪಟ್ಟಿತು. ಕಳೆದ ೧೮೮೬ ನೆ ಇಸವಿಯ ವರೆಗೆ ಈ ಕಂಪನಿಯು ಒಳ್ಳೇ ಸ್ಥಿತಿಯಲ್ಲೇ ಇತ್ತು ಲಂಡನ್ ಪಟ್ಟಣದಲ್ಲಿ ಒಂದು ತಿಂಗಳ ಹಿಂದೆ ರೈಲ್ ಗಾಡಿ ಕೆಳಗೆ ಬಿದ್ದು ಆತ್ಮಹತ್ಯಮಾಡಿಕೊಂಡ ಮೆ॥ ಮ್ಯಾಕ್ಫೇಡಿಯನ್ ಎಂಬಾತನು ೮೬ ನೆ ಇಸವಿ ತನಕ ಮದರಾಸಿನಲ್ಲೇ ಈ ಕಂಪನಿಯ ಪಾಲುದಾರನಾಗಿದ್ದುಕೊಂಡು ಕೆಲಸ ಮಾಡುತ್ತಿದ್ದು, ಆ ವರುಷ ಲಂಡನ್ ಪಟ್ಟಣಕ್ಕೆ ಹೋಗಿ ಇದರ ಶಾಖೆಯನ್ನು ಅಲ್ಲಿ ಸ್ಥಾಪಿಸಿದನು ಇದೇ ಈ ಕಂಪನಿ ದಿವಾಳಿಯಾಗುವುದಕ್ಕೆ ಮೂಲಕಾರಣವಾಯಿತು ಲಂಡನ್ ಮತ್ತು ಮದರಾಸ್ ಕಂಪನಿಗಳಿಗೆ ಆಗಾಗ್ಗೆ ಕ್ರಮವಾದ ಲೆಕ್ಕಾಚಾರಗಳು ಫೈಸಲಾಗುತ್ತಿರಲಿಲ್ಲ ಎರಡೂ ಏಕವಾಗಿಯೇ ನಡಸಲ್ಪಡುತ್ತಿದ್ದವು ವಾರ್ಷಿಕ್ಕೊಮ್ಮೆ ಒಟ್ಟು ಜಮಾಖರ್ಚನ್ನು ತಂತೀ ವರ್ತಮಾನದ ಮೂಲಕ ತಿಳಿಸಿಕೊಳ್ಳುತ್ತಿದ್ದರು ಮದರಾಸ್ ಕಂಪನಿಯ ಹಣವೇ ಲಂಡನ್ ಪಟ್ಟಣದ ಕಂಪನಿಗೂ ಕೊಡಲ್ಪಟ್ಟಿತು ಆದ್ದರಿಂದ ಈಗ ಸಾಲಗಾರರಿಗೆ ಈ ಎರಡು ಕಂಪನಿಗಳ ಆಸ್ತಿಯೂ ಸೇರಾಗುವುದು.

ಲಂಡನ್ ಕಂಪನಿಯ ನಡವಳಿಕೆಗಳು

ಪ್ರಾರಂಭದಲ್ಲಿ ಲಂಡನ್ ಮತ್ತು ಮದರಾಸ್ ಕಂಪನಿಗಳವರು ವ್ಯಾಪಾರ ಸರಕುಗಳನ್ನು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸಾಗಿಸಿ ಬಿಕರಿ ಮಾಡುತ್ತಿದ್ದರು ಇಷ್ಟೇ ಆಗಿದ್ದಲ್ಲಿ ಕಂಪನಿ ಎಂದಿಗೂ ದಿವಾಳಿಯಾಗುತ್ತಿರಲಿಲ್ಲ ಆದರೆ ಮೆ॥ ಮ್ಯಾಕ್ಫೇಡಿಯನ್ ಎಂಬಾತನು ಕಂಪನಿಯ ಹಣವನ್ನು ಪಶ್ಚಿಮ ಇಂಡಿಯಾ ದ್ವೀಪಗಳಲ್ಲಿ ಕಟ್ಟಿನ ಪ್ಲಾಂಟರುಗಳಿಗೆ ಬಹಳ ಸಾಲ ಕೊಟ್ಟನು ಬೀಟ್ ರೂಟ್ ಎಂಬ ಗೆಡ್ಡೆಯಿಂದ ಸಕ್ಕರೆ ತಯಾರಾಗುತ್ತಿರುವುದರಿಂದ ಕಬ್ಬಿನ ಸಕ್ಕರೆ ಕಾಫಿ ಬೆಳೆಯಂತೆ ಬಹಳ ಹಿಂದಕ್ಕೆ ಬಿದ್ದುಹೋಗಿ ತುಂಬಾ ನಷ್ಟವಾಯಿತು ಕೊಟ್ಟ ಹಣ ಅಲ್ಲಲ್ಲೇ ಹಾಳಾಯಿತು ತರುವಾಯ ಆತನು ಅಲ್ಲಿಗೆ ಸುಮ್ಮನಾಗದೆ ಚಾನಾ ದ್ವೀಪಕ್ಕೆ ವ್ಯಾಪಾರ ಸರಕನ್ನು ಸಾಗಿಸಿ ಬಿಕರಿ ಮಾಡಿ ಲಾಭಸಂಪಾದಿಸುವುದಕ್ಕೆ ಹೊರಟನು ಇದರಲ್ಲೂ ಬಹಳ ಹಣ ನಷ್ಟವಾಗಿಹೋಯಿತು. ಅಲ್ಲಿಗೂ ಆತ ಬಿಡದೆ ಅಮೇರಿಕದಲ್ಲಿ ರೈಲ್ ಕಂಪನಿಗಳ ವ್ಯಾಪಾರಕ್ಕೆ ಹಣ ಹಾಕಿ ಅದರಲ್ಲಾದರೂ ಲಾಭ ಸಂಪಾದಿಸುತ್ತೇನೆಂದು ಪ್ರಯತ್ನಪಟ್ಟನು ಲಾಭಕ್ಕೆ ಪ್ರತಿಯಾಗಿ ತಾನು ಹಾಕಿದ ಮೂಲಧನವೇ ಮುಳುಗಿಹೋಯಿತು ಹೀಗೆ ಲಂಡನ್ ಕಂಪನಿ ಏರ್ಪಟ್ಟಂದ ಹಲವು ವರುಷಗಳೊಳಗಾಗಿ ಅಂದರೆ ೧೮೯೩ ನೆ ಇಸವಿ ತನಕ ಆ ಕಂಪನಿಯು ಮುಂದಾಲೋಚನೆಯಿಲ್ಲದ ಮೇಲ್ಕಂಡ ವ್ಯಾಪಾರಾದಿಗಳಿಂದ ೬೦ ಲಕ್ಷ ರೂಪಾಯಿ ಮುಳುಗಿಹೋಯಿತು. ಇದೆಲ್ಲಾ ಮದರಾಸ್ ಕಂಪನಿಯವರಿಗೆ ಚೆನ್ನಾಗಿಯೇ ತಿಳಿದಿತ್ತೆಂದು ಸ್ಪಷ್ಟವಾಗಿ ಹೇಳಬಹುದು

ಮದರಾಸ್ ಕಂಪನಿಯ ನಡವಳಿಕೆಗಳು

೧೮೯೩ ನೆ ಇಸವಿ ವರೆಗೆ ಬಹಳ ಹಣ ನಷ್ಟವಾಗಿದೆ ಎಂದು ತಿಳಿದಿದ್ದರೂ ಮದರಾಸ್ ಕಂಪನಿಯವರು ೧೯೦೦ ನೆ ಇಸವಿಯ ತನಕ ಇನ್ನೂ ನಷ್ಟಕರವಾದ ಕಾರ್ಯಗಳಲ್ಲಿ ಕಂಪನಿ ಹಣವನ್ನು ಹಾಕಿ ಹಾಳುಮಾಡಿಕೊಂಡರು ಹ್ಯಾಗಂದರೆ, ಅವರು ಕಾಫಿ ತೋಟಗಳಿಗೂ ನೀಲಿ ತೋಟಗಳಿಗೂ ಕಂಪನಿಯ ಹಣವನ್ನು ಹಾಕಿದರು. ಬ್ರೆಜಿಲ್ ದೇಶದ ಕಾಫಿ ಬೆಳೆಯು ಹಿಂದುಸ್ಥಾನದ ಕಾಫಿಯನ್ನೂ, ಕೃತಕವಾದ ನೀಲಿಯು ನ್ಯಾಯವಾದ ನೀಲಿಯನ್ನೂ ಹಿಂದಕ್ಕೆ ಹಾಕಿಬಿಟ್ಟಿವೆ ಎನ್ನುವುದೂ ಇವೆರಡು ಕಸಬುಗಳೂ ಸದ್ಯದಲ್ಲಿ ಸ್ವಲ್ಪವೂ ಲಾಭಕರವಲ್ಲವೆಂಬುವುದೂ ಪ್ರಪಂಚಕ್ಕೆಲ್ಲಾ ಗೊತ್ತೇ ಇದೆ. ಆದ್ದರಿಂದ ಈ ಕಂಪನಿಯವರು ಇವೆರಡಕ್ಕೂ ಹಣ ಹಾಕಿ ತುಂಬಾ ನಷ್ಟಪಟ್ಟರೆಂಬುವುದು ಆಶ್ಚರ್ಯವಲ್ಲ. ಇದಲ್ಲದೆ ಉಪ್ಪಿನ ಮೋರೆಗಳ ಕಂಟ್ರಾಕ್ಟಿನಲ್ಲಿಯೂ ಕೂಡ ಕಂಪನಿಯ ಹಣ ಮುಳುಗಿಹೋಯಿತು. ಸರ್ಕಾರಿ ಪತ್ರಗಳ ಲೇವಾದೇವಿಯಲ್ಲೂ ೩ ಲಕ್ಷ ರೂಪಾಯಿ ನಷ್ಟವಾಯಿತು. ಇಷ್ಟೆಲ್ಲಾ ನಷ್ಟವಾದದ್ದಲ್ಲದೆ ಈ ಕಂಪನಿಯ ಒಬ್ಬ ನೌಕರನು ಬಹಳ ಹಣವನ್ನು ತಿಂದುಹಾಕಿಬಿಟ್ಟನೆಂದೂ ಗೊತ್ತಾಗುವುದು. ೧೮೯೬ ನೆ ಇಸವಿಯಿಂದೀಚೆಗೆ ಈ ಕಂಪನಿಯವರ ಕಾರ್ಯಗಳಲ್ಲಿ ಲಾಭವೇನೂ ಉತ್ಪತ್ತಿಯಾಗಲೇ ಇಲ್ಲ.

ಮದರಾಸ್ ಕಂಪನಿಯ ದೇಣೆಗಳು

ಕರೆಂಟ್ ಡಿಪಾಜಿಟ್‌ದಾರರಿಗೆ ಸಲ್ಲಬೇಕಾದ ಹಣ		೨೬,೧೫,೦೬೬
ಫಿಕ್ಸೆಡ್ „ „ „ „		೭,೪೩,೬೨,೯೦೫
ಇತರ ಚಿಲ್ಲರೆ ಸಾಲಗಾರರಿಗೆ „ „		೩,೬೭,೫೩೧
	ಜುಮ್ಲಾ ರೂಪಾಯಿ	೭,೭೩,೪೫,೫೦೨
ಲಂಡನ್ ಬ್ಯಾಂಕಿನ ದೇಣೆಗಳು „ „ „		೩೦,೫೦,೦೦೦

ಮದರಾಸ್ ಕಂಪನಿಯ ಆಸ್ತಿಗಳು

ವಸೂಲಾಗುವಂಥಾ ಖಾತರಿಯ ಸಾಲದ ಹಣ „		೨,೦೪,೧೫೯
ಡಿಪಾಜಿಟ್ ದಾರರು ಜಾಸ್ತಿ ತೆಗೆದುಕೊಂಡದ್ದು		೬೩,೭೦೬
ಕಾಫಿ ತೋಟಗಳಿಂದ ಬರಬೇಕಾದ್ದು		೧೫ ೩೩,೧೮೯
ಇತರ ಸರಕುಗಳು		೯,೧೦,೩೪೫
ಷೇರುಗಳು, ಸರ್ಕಾರಿ ಪತ್ರಗಳು, ಕಸಬುಗಳು, ಸಕ್ಕರೆ ಕಾರ್ಖಾನೆ ಷೇರು ಮುಂತಾದದ್ದು ,		೪೦ ೫೪,೬೩೩
ಕ್ಯಾಷ್ ಹಾಜರಿರುವುದು „ „ „		೩೫,೭೦೪
	ಜುಮ್ಲಾ ರೂಪಾಯಿ	೭೫,೮೩,೯೭೮
ಲಂಡನ್ ಬ್ಯಾಂಕಿನ ಆಸ್ತಿ		೩,೪೫,೦೦೦

ಮೇಲ್ಕಂಡ ಲೇಣೆ ದೇಣೆಗಳಿಂದ ಈ ಕಂಪನಿಯ ಸಾಹುಕಾರರುಗಳಿಂದ ಒಟ್ಟು ೭,೬೮,೬೬,೫೨೪ ರೂಪಾಯಿ ನಷ್ಟವಾಗಿರುತ್ತದೆಂದು ಗೊತ್ತಾಗುವುದು. ಈ ಲೆಕ್ಕಾಚಾರಗಳು ಖಂಡಿತವಾದವುಗಳಲ್ಲ ಆತುರಪಟ್ಟು ನೋಡಿದ್ದರಲ್ಲಿ ಈ ರೀತಿ ಕಂಡುಬಂದಿದೆ ಇನ್ನು ಮುಂದೆ ನಿಧಾನವಾಗಿ ಎಲ್ಲಾ ಸರಿಯಾಗಿಯೂ ಬಾಬುವಾರಾಗಿಯೂ ವಿಂಗಡಿಸಿ ನೋಡುತ್ತಾರೆ

ಬಹುಮಾನ ಪಡೆದ ವರ್ತಮಾನವು

[ಈ ಬಾತ್ಮಿ ಕಳುಹಿಸಿದ ಮ॥ ಮದ್ದು ವೆಂಕೋಬಾಚಾರ್, ಆನವಟ್ಟಿ, ಸೊರಬ ತಾಲ್ಲೂಕು, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿರುತ್ತೇವೆ.]

ಬೆಂಕಿಯಿಂದಾದ ಅನಾಹುತ

ಸೊರಬ ತಾಲ್ಲೂಕು ಆನವಟ್ಟಿ ಹೋಬಳಿಗೆ ಸೇರಿದ ಕಾತವಳ್ಳಿ ಎಂಬ ಗ್ರಾಮದಲ್ಲಿ ಇದೇ ನವಂಬರ್ ತಾ ೧೪ ನೇ ಬುಧವಾರ ಹಗಲು ಸುಮಾರು ೧ ಘಂಟೆ ಸಮಯದಲ್ಲಿ ಕುಬ್ಬೇರ ಜಾತಿ ಪದ್ಮಲದ ಹೊಳೆಯ ಎಂಬುವನ ಮನೆಗೆ ಬೆಂಕಿ ಹತ್ತಿತೆಂದು ಆ ಮನೆಯ ಹೆಂಗಸರೂ ಅಜೂ ಬಾಜೂ ಮನೆಯವರೂ ಕೂಗಲಾರಂಭಿಸಿದರು ಈ ಧ್ವನಿಯನ್ನು ಕೇಳಿ ಗದ್ದೆ ಬೈಲಿನಲ್ಲಿ ಕೆಲಸ ಮಾಡುತ್ತಿದ್ದವರೆಲ್ಲಾ ಕೆಲಸ ಬಿಟ್ಟು ಓಡಿ ಬಂದರು ಇವರು ಬರುವ ಹೊತ್ತಿಗೆ ೩—೪ ಮನೆಗಳಿಗೆ ಅತ್ಯಾರ್ಭಟವಾಗಿ ಉರಿಯು ಹತ್ತಿತ್ತು ಸದರಿ ಜನಗಳು ಬಂದ ಒಡನೆಯೇ ಕೊಡಗಳನ್ನು ತೆಗೆದುಕೊಂಡು ನೀರು ತಂದು ಬೆಂಕಿ ಹತ್ತಿದ ಮನೆಗಳಿಗೆ ಎರಚುತ್ತಾ ಬಂದರು. ಬೆಂಕಿ ಹತ್ತಿದ ಮನೆಗಳಿಗೂ ನೀರು ಇರುವ ಬಳಗಟ್ಟೆ ಕೆರೆಗೂ ಸುಮಾರು ೧—೧½ ಫರ್ಲಾಂಗ್ ದೂರವಿರುವುದರಿಂದಲೂ, ನೀರು ತರುವುದು ತಡವಾದ್ದರಿಂದಲೂ, ಬಹಳ ಬಿಸಲಾಗಿ ಹೊತ್ತಾದ್ದರಿಂದಲೂ ಅದರ ಸೆಕೆಯಿಂದಲೂ, ಬಹು ಅರ್ಭಟವಾಗಿ ಉರಿಯುತ್ತಿದ್ದ ಬೆಂಕಿ ಸೆಕೆಯಿಂದಲೂ, ಸಮೀಪದಲ್ಲಿ ನಿಂತು ನೀರು ಎರಚುವದಕ್ಕೆ ಸಾಧ್ಯವಿಲ್ಲದಂತೆ ಆದ್ದರಿಂದಲೂ, ಅದೇ ಹೊತ್ತಿನಲ್ಲಿ ಬಹು ಪ್ರಚಂಡವಾದ ಗಾಳಿಯು ಬೀಸಲಾರಂಭಿಸಿದ್ದರಿಂದಲೂ, ಬಹು ಜನಗಳು ಕೂಡಿದಾಗ್ಯೂ ಅವರ ಪ್ರಯತ್ನಗಳು ಸಫಲವಾಗದೆ ಅಗ್ನಿಯು ಸುಮಾರು ೧೪—೧೫ ಮನೆಗಳನ್ನು ಆಹುತಿ ತೆಗೆದುಕೊಂಡುಬಿಟ್ಟಿತು

ಈ ಸುಟ್ಟ ಮನೆಗಳೆಲ್ಲಾ ಹುಲ್ಲಿನವು ಇವುಗಳಲ್ಲಿ ವಾಸವಾಗಿರತಕ್ಕವರು ಕೆಲವರು ಬಡವರಾಗಿಯೂ, ಮತ್ತೆ ಕೆಲವರು ಅನುಕೂಲಸ್ಥರಾಗಿಯೂ ಇದ್ದವರು ಇವರೆಲ್ಲರೂ ಮುಖ್ಯವಾಗಿ ಜೇಸಾಯದ ಕಸಬಿನಿಂದ ಜೀವನ ಮಾಡತಕ್ಕವರು ಇವರುಗಳು ಮಳೆಗಾಲದಲ್ಲಿ ಭತ್ತದ ಮತ್ತು ಮುಂಘಲದ ಭತ್ತದ ಪೈರು ಈಗ ಒಂದು ತಿಂಗಳ ಮುಂಚೆಯೇ ಕಟಾವು ಮಾಡಿಕೊಂಡು, ಹೋದ ವರ್ಷ ದುರ್ಭಿಕ್ಷವಾದ್ದರಿಂದಲೂ, ಕಳ್ಳ ಕಾಕರ ಭೀತಿಯಿಂದಲೂ, ಎಲ್ಲಾ ಪೈರುಗಳನ್ನೂ ಮನೆಯಲ್ಲಿ ತಂದು ಜಮಾಯಿಸಿಟ್ಟುಕೊಂಡಿದ್ದರು ಸದರಿಯವರ ಜಿದ್ದಾಯಿತ ಸಾಮಾನು ಮತ್ತು ಹಳೇ ಭಂಡಿ ಬಳದಿಗಳೂ. ಎಲ್ಲಾ ಧಾನ್ಯಗಳೂ ಸುಟ್ಟು ಬೂದಿಯಾದವು ಎಲ್ಲಾ ಮನೆಯ ಸಾಮಾನುಗಳೂ, ಅರಿವೆ ಅಂಚಡಿಗಳೂ ಸೇರಿ ಸುಟ್ಟದ್ದು ಸುಮಾರು ೩೦೦—೩೦೦ ರೂಪಾಯಿಗಳು ನಷ್ಟವಾಯಿತು ಹಗಲು ಹೊತ್ತು ಆದ್ದರಿಂದ ಜಾನವಾರುಗಳನ್ನೆಲ್ಲಾ ಮೇಯಲಿಕ್ಕೆ ಬಿಟ್ಟಿದ್ದರು ಇದೇ ಅನಾಹುತವು ರಾತ್ರಿಯಲ್ಲಿ ಆಗಿದ್ದರೆ ಎಷ್ಟು ಜನಗಳೂ ಜಾನುವಾರುಗಳೂ ನಾಶವಾಗುತ್ತಿತ್ತೋ ಗೊತ್ತಿಲ್ಲ ಕ್ಯಾವ ಸಾಯಂಕಾಲಕ್ಕೆ ಜಾನುವಾರುಗಳು ತಮ್ಮ ತಮ್ಮ ಮನೆಗೆ ಬಂದು ಬೆಂಕಿ ಹತ್ತಿದ್ದನ್ನು ಕಂಡು ಬೆದರಿ ಓಡಲಾರಂಭಿಸಿದವು ಸದರಿ ಜಾನುವಾರುಗಳನ್ನು ಕಟ್ಟಲು ಸಹಾ ಸ್ಥಳವಿಲ್ಲದೆ ಹೋಯಿತು ಈ ವರ್ಷ ಸುಭಿಕ್ಷಕಾಲವಾದರೂ ಈ ಅನಾಹುತದಿಂದ ಈ ರೈತರುಗಳಿಗೆ ದುರ್ಭಿಕ್ಷಕಾಲವೇ ಒದಗಿದಂತಾಯಿತು ಧಾನ್ಯಗಳು ಸುಟ್ಟುಹೋದ್ದರಿಂದ ಹೊಟ್ಟೆಗೆ ಮಾರ್ಗವಿಲ್ಲದೆಯೂ, ಅರಿವೆ ಅಂಚಡಿಗಳು ಸುಟ್ಟು ಈ ಛಳಿಗಾಲದಲ್ಲಿ ಹೊದ್ದುಕೊಳ್ಳುವದಕ್ಕೆ ವಸ್ತ್ರವಿಲ್ಲದೆಯೂ, ವಾಸ ಮಾಡಲಿಕ್ಕೆ ಮನೆ ಇಲ್ಲದೆಯೂ ಬಹು ಕಷ್ಟ ಪಡುತ್ತಾರೆ ಇಂಥ ಆಕಸ್ಮಿಕ ವಿಪತ್ತನ್ನು ನೋಡಿ ಎಷ್ಟು ಪಶ್ಚಾತ್ತಾಪಪಟ್ಟರೂ ಸಾಲದು

ವಿಶೇಷವಾರ್ತೆಗಳು.

ಮಧ್ಯ ಆಫ್ರಿಕಕ್ಕೆ ಸೇರಿದ ಅನೇಕ ಪ್ರಾಂತ್ಯಗಳಲ್ಲಿ ಬೀರ್, ಬ್ರಾಂದಿ, ಸಾರಾಯಿ, ಅಫೀಮು ಈ ಮೊದಲಾದ ಅಮಲೇರುವ ದ್ರಾವಕಗಳೂ ಪದಾರ್ಥಗಳೂ ಹೆಚ್ಚು ಹೆಚ್ಚಾಗಿ ವಿಕರಿಯಾಗುತ್ತಾ, ಅವುಗಳ ವಾಸನೆಯನ್ನೇ ಕಾಣದ ಅನೇಕ ಸ್ವದೇಶಿಗಳು ಅದರ ಅಭ್ಯಾಸದಲ್ಲಿ ಬಿದ್ದು ಕೆಟ್ಟು ಹೋಗುತ್ತಿದ್ದಾರೆ. ಆದ್ದರಿಂದ ಮದ್ಯ ಪದಾರ್ಥಗಳನ್ನು ಆ ಪ್ರಾಂತ್ಯಕ್ಕೆ ಯೂರೋಪ್ ಖಂಡದಿಂದ ರಫ್ತು ಮಾಡದಂತೆ ತಡೆಯಬೇಕೆಂದು ಕೆಲವು ಮಾನ್ಯರು ಪ್ರಯತ್ನ ಪಡುತ್ತಿದ್ದಾರೆ. ಇದೇ ಅರ್ಥಕ್ಕೆ ಅನೇಕಮಂದಿ ಇಂಗ್ಲೀಷರು ಒಂದು ಅರ್ಜಿಯನ್ನು ಬರೆದು ಕೊಟ್ಟಿರುವರು. ಇದಲ್ಲದೆ ಆ ಪ್ರಾಂತ್ಯದಲ್ಲಿರುವ ಸುಮಾರು ಎರಡು ಕೋಟಿ ಪ್ರಜೆಗಳ ಪರವಾಗಿ ಅಮೆರಿಕದ ಸಂಸ್ಥಾನಗಳವರು ಒಂದು ಅರ್ಜಿಯನ್ನು ಬರೆದು ಆ ದ್ರಾವಕಾದಿಗಳನ್ನು ಆ ಪ್ರಾಂತ್ಯಕ್ಕೆ ಕಳುಹಿಸಕೂಡದೆಂದು ತಿಳಿಸಿರುವರು. ಈ ಅರ್ಜಿಗೆ ಲಕ್ಷಾಂತರ ಜನರು ರುಜು ಮಾಡಿರುವರು.

ಸ್ವೀಡನ್ ರಾಜ್ಯದಲ್ಲಿ ಸ್ತ್ರೀಸಂಘದವರು ಒಂದು ದಿನ ಆ ರಾಜ್ಯದ ರಾಜಕೀಯ ಕೌನ್ಸಿಲ್ ಸಭೆಗೆ ಹೋಗಿ ಆ ಸಭಾ ಜನರಿಗೂ, ಮಾರನೆದಿನ ಆಸ್ಕಾರ್ ದೊರೆಯವರ ಬಳಿಗೆ ಹೋಗಿ ದೊರೆಯವರಿಗೂ ವಂದನೆ ಮಾಡಿ, ಅವರನ್ನು ಕುರಿತು—ಇನ್ನು ಮೇಲೆ ನಮ್ಮ ರಾಜ್ಯದಲ್ಲಿ ಯೋಗ್ಯತಾಸಿದ್ಧಿಯನ್ನು ಪಡೆದಿರುವ ಸ್ತ್ರೀಯರಿಗೂ ಇಲ್ಲಿನ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸತಕ್ಕ ಹಕ್ಕನ್ನೂ, ಸ್ತ್ರೀಯರು ಮೆಂಬರಾಗಬಹುದೆಂಬ ಹಕ್ಕನ್ನೂ ದಯಪಾಲಿಸಬೇಕು ಎಂಬುದಾಗಿ ಬೇಡಿಕೊಂಡರು. ದೊರೆಯವರು ಅವರನ್ನು ಬಹು ಪ್ರೀತಿಯಿಂದ ಕಂಡು—ನಿಮ್ಮ ಉದ್ದೇಶದ ವಿಷಯದಲ್ಲಿ ನಾನು ಒಳ್ಳೇ ಅಭಿಪ್ರಾಯವುಳ್ಳವನಾಗಿರುತ್ತೇನೆ. ನಾನು ಕಾಲವಾಗುವದಕ್ಕೆ ಮುಂಚೆ ನೀವು ಕೇಳುವ ಈ ಉತ್ಕೃಷ್ಟವಾದ ಬದಲಾವಣೆಯನ್ನು ಮಾಡಿಕೊಳ್ಳಲು ಸಾಧ್ಯವಾಗಬಹುದೆಂದು ನಿರೀಕ್ಷಿಸುತ್ತೇನೆ. ಮುಂದಿನ ಪರಿಷತ್ತು ಒಂದರಲ್ಲೇ ಬದಲಾವಣೆ ಮಾಡಲಾಗುವುದಿಲ್ಲ ಎಂಬದಾಗಿ ಉತ್ತರ ಕೊಟ್ಟು ಕಳುಹಿಸಿದನು.

ಲಂಡನ್ ಪಟ್ಟಣದಲ್ಲಿ ಪೋಲೀಸಿನವರು ಎಷ್ಟು ಮಟ್ಟಿಗೆ ಸತ್ಯವಂತರಾಗಿದ್ದಾರೆ, ಪ್ರಜೆಗಳು ಎಷ್ಟು ಮಟ್ಟಿಗೆ ಸತ್ಯವಂತರಾಗಿರುವರು, ಇದನ್ನು ತಿಳಿಯುವ ... ವಿಷಯಗಳನ್ನು ಗೊತ್ತು ಮಾಡುವುದಕ್ಕೋಸ್ಕರ ಸರ್ಕಾರದವರ ... ಕಮಿಟಿ ... ಅವರಿಂದ ತನಿಖೆ ಮಾಡಿಸುತ್ತಿದ್ದಾರೆ. ಈ ಕಮಿಟಿಯವರು ಪ್ರಜೆಗಳನ್ನು ಕರೆತಂದು ಅವರಿಂದ ಪೋಲೀಸಿನವರ ನಡವಳಿಕೆಯನ್ನು ಕೇಳಿ ಬರೆದುಕೊಳ್ಳುತ್ತಿರುವರು. ಅಪರಾಧವೇನು ಕಂಡುಬಂದಾಗ್ಯೂ ಅಂಥಾ ಪ್ರಜೆಗಳನ್ನು ಶಿಕ್ಷಿಸುವುದಿಲ್ಲವೆಂದು ಧೈರ್ಯಪಡಿಸಿರುವುದರಿಂದ ಜನರು ಯಾವ ಪೋಲೀಸಿನವರಿಗೆ ಎಷ್ಟು ಲಂಚ ಕೊಟ್ಟರೋ, ಪೋಲೀಸಿನವರು ಯಾವ ಯಾವ ಪ್ರಕಾರ ಪ್ರಜೆಗಳನ್ನು ಹಿಂಸೆಪಡಿಸುತ್ತಾರೋ, ಇವೇ ಮೊದಲಾದ ವಿಷಯಗಳನ್ನೆಲ್ಲಾ ಹೇಳಿ ವಿವರಿಸುವರು. ಇವರ ಕೈಯಿಂದ ಅನೇಕಮಂದಿ ಪೋಲೀಸಿನವರ ತಂತ್ರೋಪಾಯಗಳು ಹೊರಪಡುತ್ತಿರುವುವು. ನಮ್ಮ ದೇಶದಲ್ಲೂ ಇದೇ ರೀತಿ ತನಿಖೆ ಮಾಡಿಸಿದಲ್ಲಿ ಪೋಲೀಸಿನವರ ಕೃತ್ಯಗಳೂ ಪ್ರಜೆಗಳ ಪ್ರಾಮಾಣಿಕತೆಯೂ ಚೆನ್ನಾಗಿ ಗೊತ್ತಾಗುತ್ತದೆಂಬುದಕ್ಕೆ ಸಂಶಯವಿಲ್ಲ.

ಲಂಡನ್ ಪಟ್ಟಣದಲ್ಲಿ ಹೋಮಿಯೋಪತಿ ಎಂಬ ವೈದ್ಯಕ್ರಮದ ಪ್ರಕಾರ ರೋಗಿಗಳಿಗೆ ಚಿಕಿತ್ಸೆ ಮಾಡುವುದಕ್ಕೆ ಒಂದು ದೊಡ್ಡ ಆಸ್ಪತ್ರೆ ಇದೆ. ಈ ಆಸ್ಪತ್ರೆಯ ಸೆಕ್ರೆಟರಿ ಮಿ॥ ಎಡ್ವರ್ಡ್ ಎ ಆಟ್‌ವುಡ್ ಎಂಬಾತನು ಒಂದು ಪಾರಿವಾಳಪಕ್ಷಿಗೆ ರೋಗ ವಾಸಿಮಾಡಿದ ವಿಚಿತ್ರ ವಿಚಾರವನ್ನು ಕುರಿತು ಬರೆಯುವುದೇನೆಂದರೆ—ಒಂದು ಪಾರಿವಾಳಪಕ್ಷಿಯು ನಮ್ಮ ಆಸ್ಪತ್ರೆಯ ಕಿಟಕಿಯೊಳಗೆ ನುಗ್ಗಿ ಒಳಕ್ಕೆ ಹಾರಿಬಂದಿತು. ಅದನ್ನು ಹಿಡಿದು ಪರೀಕ್ಷೆ ಮಾಡಿದಾಗ ಅದರ ಕಾಲು ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಕೂಡಲೆ ಅದಕ್ಕೆ ಚಿಕಿತ್ಸೆ ಮಾಡಿ ವಾಸಿಯಾದ ಮೇಲೆ ಅದನ್ನು ಹಾರಿಸಿದೆವು. ಆದರೆ ಅದು ಹೊರಕ್ಕೆ ಹೋಗದೆ ಹೋಯಿತು. ಇದೇ ಪ್ರಕಾರ ಅನೇಕ ರೋಗಿಗಳು ನಮ್ಮ ಆಸ್ಪತ್ರೆಯನ್ನು ಬಿಟ್ಟು ಹೋಗಲು ಇಷ್ಟಪಡುವದಿಲ್ಲ. ಈ ಆಸ್ಪತ್ರೆಯನ್ನು ಹನ್ನೊಂದು ವರುಷಗಳಿಂದ ನಡಸುತ್ತಾ ಬಂದಿದ್ದೇವೆ. ರೋಗಿಗಳ ಸಂಖ್ಯೆ ಹೆಚ್ಚಾದ್ದರಿಂದ ಈಗಿರುವ ಕಟ್ಟಡದಲ್ಲಿ ಸ್ಥಳ ಸಾಲದು. ಅದನ್ನು ವಿಸ್ತರಿಸಿ ಕಟ್ಟುವುದಕ್ಕೆ ನಾಲಕ್ಕುವರೆ ಲಕ್ಷ ದ್ರವ್ಯ ಬೇಕಾಗಿದ್ದರೂ ಈ ಪೈಕಿ ಆಗಲೇ ಸುಮಾರು ಎರಡು ಲಕ್ಷ ರೂಪಾಯಿ ಕೊಡುವುದಾಗಿ ಕೆಲವು ಪುಣ್ಯಾತ್ಮರು ವಾಗ್ದಾನ ಮಾಡಿದ್ದಾರೆ. ಧರ್ಮಾತ್ಮರ್ಯಾರಾದರೂ ಮೇಲ್ಕಂಡಂಥಾ ಪಕ್ಷಿಯ ಕಾಲಿಗೆ ಒಂದು ನೋಟನ್ನು ಕಟ್ಟಿ ನಮ್ಮಲ್ಲಿಗೆ ಕಳುಹಿಸಿಕೊಟ್ಟು ಸಹಾಯ ಮಾಡಬಾರದೇ ಎಂದು ಕೃತಪಡುತ್ತೇನೆ ಎಂಬುದೇ.

ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಜಪಾನವರು, ಚೀನಿಯವರು, ಕೊರಿಯಾದವರು ನಾನಾ ಉದ್ಯೋಗಗಳನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಈಚೆಗೆ ಮಹಾ ಭೂಕಂಪವೇ ಮೊದಲಾದ ಅನಾಹುತಗಳು ಆ ಪಟ್ಟಣಕ್ಕೆ ಪ್ರಾಪ್ತವಾದವಷ್ಟೆ. ಕೆಲವು ದಿನಗಳಿಂದ ಹೊಸದಾಗಿ ಪಟ್ಟಣವನ್ನು ಜನರು ಕಟ್ಟಿಕೊಳ್ಳುತ್ತಿದ್ದಾರೆ. ಜಪಾನವರೂ ಕೂಡ ಬಿಳಿಯ ಜನರ ಮಧ್ಯೆ ಮನೆಮಠಗಳನ್ನು ಕಟ್ಟಿಕೊಂಡು ಅದೇ ಮನೆಗಳಲ್ಲೇ ವಾಸಿಸಲಾರಂಭಿಸುತ್ತಾ ಬಂದರು. ಇದುವರೆಗೆ ಬಿಳಿಯ ಜನರು ಜಪಾನವರನ್ನು ಸ್ನೇಹಭಾವದಿಂದಲೇ ಕಾಣುತ್ತಾ ಅವರ ಮಕ್ಕಳನ್ನು ತಮ್ಮ ಸ್ಕೂಲುಗಳಲ್ಲಿ ಸೇರಿಸಿಕೊಂಡು ವಿದ್ಯೆ ಕಲಿಸುತ್ತಾ ಇದ್ದರು. ಈಗೀಗ ಆ ಬಿಳೀ ಜನರಲ್ಲಿ ಜಪಾನವರ ಮೇಲೆ ದ್ವೇಷಾಸೂಯೆಗಳುಂಟಾಗಿ, ಅವರ ಮಕ್ಕಳನ್ನು ತಮ್ಮ ಪಾಠಶಾಲೆಗಳಿಗೆ ಸೇರಿಸುವುದಿಲ್ಲವೆಂದು ಕಟ್ಟುಮಾಡಿದರು. ಚೀನಿಯವರೂ ಕೊರಿಯಾದವರೂ ಅದರಂತೆ ಒಪ್ಪಿ ತಮ್ಮ ಮಕ್ಕಳನ್ನು ತಮ್ಮ ಸ್ವಂತ ಮಠಗಳಲ್ಲೇ ಇಟ್ಟು ವಿದ್ಯೆ ಕಲಿಸುತ್ತಿದ್ದಾರೆ. ಆದರೆ ಜಪಾನವರು ಹಾಗೆ ಮಾಡಲು ಒಪ್ಪದೆ ತಮ್ಮ ಮಕ್ಕಳನ್ನು ಮನೆಗಳಲ್ಲೇ ನಿಲ್ಲಿಸಿಕೊಂಡು ಬಿಳೀ ಜನರ ಅಧಿಕಾರಿಗಳಿಗೂ ತಮ್ಮ ಕಡೆಯ ರಾಯಭಾರಿಗೂ ಬಿಳಿಯ ಜನರ ಮೇಲೆ ದೂರು ಹೇಳಿಕೊಂಡರು. ಅಮೆರಿಕದ ರಾಜ್ಯಾಧಿಕಾರಿಗಳು ಜಪಾನವರನ್ನು ಆ ಪಟ್ಟಣದವರು ಆ ರೀತಿ ತೊಂದರೆಪಡಿಸಕೂಡದೆಂದು ಅಭಿಪ್ರಾಯಪಟ್ಟರು. ಅದೇ ರೀತಿ ನಡೆದ ಸಂಗತಿಗಳನ್ನು ಕುರಿತು ತನಿಖೆ ಮಾಡಿಕೊಂಡು ಬರುವುದಕ್ಕೆ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿದರು. ಈ ಅಧಿಕಾರಿಯು ಜಪಾನವರ ಪರವಾಗಿಯೇ ತೀರ್ಮಾನ ಮಾಡಿರುತ್ತಾನೆ. ಇತ್ತಲಾಗಿ ಜಪಾನ್ ರಾಜ್ಯದಲ್ಲಿ ಜಪಾನವರು ತಮ್ಮ ಜನರನ್ನು ಅಮೇರಿಕದವರು ಕಷ್ಟನಷ್ಟಗಳಿಗೆ ಗುರಿಮಾಡುವುದನ್ನು ನಿಲ್ಲಿಸಬೇಕೆಂದು ಗಲಭೆ ಮಾಡಿದರು. ಮೊದಲು ಮೊದಲು ಜಪಾನವರಿಗೂ ಅಮೇರಿಕದವರಿಗೂ ಹುಟ್ಟಿದ ಅಸಮಾಧಾನವು ಅವರವರಿಗೆ ಯುದ್ಧವನ್ನುಂಟುಮಾಡುವುದೋ ಎಂಬಂತೆ ಕಾಣುತ್ತಿತ್ತು. ಈಗ ಅಷ್ಟಕ್ಕೆ ಅವಕಾಶ ಕೊಡದಂತೆ ಅಮೇರಿಕದವರು ಎಲ್ಲಾ ಸರಿಪಡಿಸಿಕೊಂಡು, ಜಪಾನ್ ಪ್ರಜೆಗಳ ಕೊರತೆಗಳನ್ನು ನಿವಾರಣೆ ಮಾಡುವವರಾಗಿದ್ದಾರೆಂದು ಕಂಡುಬರುವುದು.

ಆಸ್ಟ್ರಿಯಾ ರಾಜ್ಯದ ಜೋಸೆಫ್ ನ... ಎಂಬೊಬ್ಬ ಪ್ರಸಿದ್ಧ ಪಂಡಿತನು ವಿಚಿತ್ರವಾದ ಒಂದು ಗಿಡವನ್ನು ಕಂಡುಹಿಡಿದಿದ್ದಾನೆ. ಈ ಗಿಡಗಳು ಆಫ್ರಿಕಾ ... ಕ್ಯೂಬಾ ಎಂಬೀ ಪ್ರಾಂತ್ಯಗಳಲ್ಲಿ ಬೆಳೆಯುವುವು. ಇತ್ತೀಚಿನ ಕಾಲದಲ್ಲಿ ಬಂದ ಸ್ಥಳದಲ್ಲಿ ಬೆಳೆಯುತ್ತಿದ್ದುವು. ... ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ... ಅಂಥಾ ಒಂದು ಸಾವಿರ ಗಿಡಗಳನ್ನು ... ಪಂಡಿತನು ... ರಂಭಿಸಿರುವನು. ... ವ್ಯತ್ಯಾಸಗಳು ... ಈ ಗಿಡದ ಎಲೆಗಳ ಚಲನೆಯಿಂದ ಗೊತ್ತುಮಾಡಬಹುದೆಂತಲೂ, ... ನಡೆಯುವ ... ಗುರುತುಗಳನ್ನು ... ದಿನಗಳಿಗೆ ಮುಂಚಿತವಾಗಿಯೇ ತಿಳಿದು ಪ್ರಕಟಿಸಬಹುದೆಂತಲೂ ... ಈತನ ಉದ್ದೇಶವೇನೆಂದರೆ, ಈ ಗಿಡಗಳನ್ನು ... ಸ್ಯಾನ್ ಫ್ರಾನ್ಸಿಸ್ಕೋ, ಈ ಮೊದಲಾದ ... ಗಳಲ್ಲಿ ಬೆಳೆಸುತ್ತಾ ಅವುಗಳ ಚಲನೆಯನ್ನು ಪರೀಕ್ಷಿಸುತ್ತಾ ಬರಬೇಕು. ಆ ಗಿಡಗಳು ಇರುವ ಪ್ರದೇಶದ ಸುತ್ತಲೂ ೩೦೦ ಮೈಲಿಯ ಭೂಪ್ರದೇಶದಲ್ಲಿ ಸಂಭವಿಸಬಹುದಾದ ಮಳೆಯ ದಿನಗಳು, ನಿರ್ಮಲವಾದ ದಿನಗಳು, ಮೋಡವಾದ ದಿನಗಳು, ಭೂಕಂಪಾದಿಗಳು, ಬಿರುಗಾಳಿಯ ದಿನಗಳು, ಅಗ್ನಿಪರ್ವತಗಳ ಉದ್ಭವ ಕಾಲಗಳು, ಈ ಮೊದಲಾದ ಅಂಶಗಳನ್ನೆಲ್ಲಾ ಒಂದು ವಾರಕ್ಕೆ ಮುಂಚಲೇ ತಿಳಿಯಬಹುದಾಗಿದೆ. ಆ ... ಪಟ್ಟಣದಲ್ಲಿ ಇಂಥಾ ಗಿಡಗಳುಳ್ಳ ಒಂದು ತೋಟವನ್ನು ಸ್ಥಾಪಿಸಿರುತ್ತಾರೆ. ಈ ಪಂಡಿತನು ಬಹುಕಾಲದಿಂದಲೂ ಶೋಧಿಸಲ್ಪಟ್ಟು ಆ ರಾಜ್ಯದಲ್ಲಿ ಪರೀಕ್ಷೆಗಳನ್ನು ನಡಸಿ, ಮೇಲ್ಕಂಡ ಸಂಗತಿಗಳನ್ನು ಸಿದ್ಧಾಂತ ಮಾಡಿರುತ್ತಾನೆಂತಲೂ, ಈ ಮಹಾಲೋಕೋಪಕಾರವಾದ ಕಾರ್ಯಕ್ಕೆ ಆಸ್ಟ್ರಿಯಾ ಚಕ್ರವರ್ತಿಯವರೂ ಅವರ ಸರ್ಕಾರದವರೂ ವಿಶೇಷವಾದ ಸಹಾಯಗಳನ್ನು ಮಾಡಿ ಪ್ರೋತ್ಸಾಹಪಡಿಸುತ್ತಿದ್ದಾರೆಂತಲೂ ತಿಳಿದುಬಂದಿದೆ. ಈಗ ಅದೇ ಪಂಡಿತನು ಲಂಡನ್ ಪಟ್ಟಣದಲ್ಲೂ ಒಂದು ತೋಟವನ್ನು ಕಲ್ಪಿಸಿ ಆ ಗಿಡಗಳ ಎಲೆ ಕೊಂಬೆಗಳ ಚಲನೆಯಿಂದ ಅಂತರಿಕ್ಷದಲ್ಲೂ ಭೂಮಿಯೊಳಗೆ ನಡೆಯುವ ವಿದ್ಯಮಾನಗಳನ್ನು ಹ್ಯಾಗೆ ತಿಳಿದುಕೊಳ್ಳಬಹುದೋ ಅದರ ವಿಧಾನಗಳನ್ನೆಲ್ಲಾ ಸಿದ್ಧಾಂತಪಡಿಸಿ ತೋರಿಸುವವನಾಗಿದ್ದಾನೆ. ಇಂಥಾ ಅದ್ಭುತ ಶಕ್ತಿಯುಳ್ಳ ಗಿಡಗಳನ್ನು ಈತನು ಕಂಡುಹಿಡಿದಿರುವುದಕ್ಕಾಗಿ ಪ್ರಪಂಚದವರೆಲ್ಲಾ ಆತನ ಬುದ್ಧಿಚತುರತೆಯನ್ನು ಕೊಂಡಾಡಬೇಕಾಗಿದೆ.

ಜರ್ಮನಿ ರಾಜ್ಯದಲ್ಲಿ ಕ್ರುಪ್ ಎಂಬ ಹೊಸ ತರಹಾ ಬಂದೂಕು ಫಿರಂಗಿಗಳನ್ನು ತಯಾರುಮಾಡಿ ಸಮಸ್ತ ರಾಜ್ಯಗಳಿಗೂ ವಿಕರಿಮಾಡಿ ಪ್ರಖ್ಯಾತಿಪಡೆದ ಆಲ್‌ಫ್ರೆಡ್ ಕ್ರುಪ್ ಎಂಬಾತನ ಸಾಹಸವನ್ನು ಹಿಂದೆಯೇ ಪ್ರಕಟಿಸಿರುತ್ತೇವಷ್ಟೆ. ಆತನ ಮಗಳು ಫ್ರೌಲೀನ್ ಬರ್ಥಾ ಕ್ರುಪ್ ಎಂಬಾಕೆಯೇ ಆತ ಕಾಲವಾದಂದಿನಿಂದ ಆ ಫಿರಂಗಿ ಕಾರ್ಖಾನೆಯನ್ನು ನಡಸುತ್ತಾ ಬಂದಿದ್ದಾಳೆ. ಈಕೆಗೆ ಕಳೆದ ತಿಂಗಳಲ್ಲಿ ವಿವಾಹವಾಯಿತು. ಎಸ್ಸೆನ್ ಎಂಬ ಆವಳ ಗ್ರಾಮದ ಬಳಿ ಈ ವಿವಾಹವನ್ನು ಬೆಳೆಯಿಸುವದಕ್ಕಾಗಿಯೇ ಹೊಸದಾಗಿ ಒಂದು ದೇವಾಲಯವನ್ನು ಕಟ್ಟಿದರು. ಈ ವಿವಾಹಕ್ಕೆ ಜರ್ಮನಿಯ ಚಕ್ರವರ್ತಿಯವರೂ ಪರರಾಜ್ಯಗಳ ರಾಯಭಾರಿಗಳೂ ಪ್ರತಿನಿಧಿಗಳೂ ಹಾಜರಾಗಿದ್ದರು. ಚಕ್ರವರ್ತಿಯವರು ನೂತನ ದಂಪತಿಗಳನ್ನು ಆಶೀರ್ವಾದ ಮಾಡುವಾಗ್ಗೆ ಅವರಿಗೆ ಹೇಳಿದ್ದೇನೆಂದರೆ—ಜನರಿಗೆ ಸ್ವಾತಂತ್ರ್ಯ ಗೌರವಾದಿಗಳು ಬೇಕೆಂದು ಅಪೇಕ್ಷಿಸುತ್ತಾರೆ. ಆದರೆ ಅವುಗಳಲ್ಲಿ ಎಷ್ಟು ಕರ್ತವ್ಯಗಳೂ ಅಡಕವಾಗಿವೆ ಎಂದು ಗ್ರಹಿಸುವುದಿಲ್ಲ. ಸ್ವಾತಂತ್ರ್ಯ ಗೌರವಗಳನ್ನು ಕಾಪಾಡಿಕೊಳ್ಳುವುದಕ್ಕೆ ಅವರು ಸ್ವಾರ್ಥವನ್ನು ಬಿಟ್ಟು ಪರಾರ್ಥವನ್ನೇ ಬಯಸಿ ಪರರಿಗೆ ನಾನಾ ಭಾಗಗಳಲ್ಲೂ ಉಪಕಾರ ಮಾಡಬೇಕಾಗಿದೆ. ಕಷ್ಟದ ಬಾಧೆಗಳನ್ನು ಪರಿಹರಿಸಬೇಕಾಗಿದೆ. ನೂತನ ದಂಪತಿಗಳೇ, ನೀವು ನಿಮ್ಮ ಕರ್ತವ್ಯಗಳನ್ನು ಕ್ಲಪ್ತವಾಗಿ ನಡಸುತ್ತಾ ಈ ಕಾರ್ಖಾನೆಯನ್ನೂ ಅದರಲ್ಲಿ ಕೆಲಸ ಮಾಡುವ ನೌಕರರನ್ನೂ ಮತ್ತು ಕೂಲಿಕಾರರನ್ನೂ ತುಂಬಾ ಅಭಿವೃದ್ಧಿಗೆ ತಂದು ಜರ್ಮನಿ ರಾಜ್ಯವನ್ನು ಪರರಾಜರುಗಳಿಂದ ಕಾಪಾಡಿಕೊಳ್ಳುವುದಕ್ಕೂ ಶತೃಗಳ ಮೇಲೆ ನುಗ್ಗಿ ಯುದ್ಧ ಮಾಡುವುದಕ್ಕೂ ಪರಮ ಸಹಾಯಕಗಳಾದ ಯುದ್ಧ ಸಾಮಗ್ರಿಗಳನ್ನು ತಯಾರುಮಾಡಿ ಒದಗಿಸುತ್ತಾ ಬಂದ ಆಲ್‌ಫ್ರೆಡ್ ಕ್ರುಪ್ ಎಂಬಾತನಿಗೂ ನಮಗೂ ಬಹಳ ಇದ್ದ ಸ್ನೇಹವಾತ್ಸಲ್ಯಾದಿಗಳು ಇನ್ನು ಮುಂದೆ ನಿಮ್ಮ ವಿಷಯ ಇಟ್ಟು ಕಾಪಾಡಿಕೊಂಡು ಬರುತ್ತೇವೆ. ನಮ್ಮ ಕೈಲಾಗುವವರೆಗೂ ನಿಮಗೆ ಬೆಂಬಲವಾಗಿದ್ದುಕೊಂಡು ನಿಮ್ಮನ್ನು ಪ್ರೋತ್ಸಾಹಪಡಿಸುವೆವು ಎಂಬೀ ರೀತಿಯಾಗಿ ಅಪ್ಪಣೆಕೊಡಿಸಿದರು. ಕಸಬುಗಳನ್ನು ಬಿಸತಕ್ಕವರಿಗೆ ಎಷ್ಟು ಮಟ್ಟಿನ ಗೌರವವೂ ಸನ್ಮಾನವೂ ದೊರೆ... ದ್ಯೋಗಗಳಲ್ಲಿ ದೊರಕುವುವೋ ಮೇಲ್ಕಂಡ ಸಂಗತಿಯಿಂದ ತಿಳಿಯುವುದು. ಬರ್ಥಾ ಕ್ರುಪ್ ಎಂಬಾಕೆಯು ತನ್ನ ಕಾರ್ಖಾನೆಯ ಮಾನೇಜರಿಗೆ ಈ ವಿವಾಹದ ಜ್ಞಾಪಕಾರ್ಥವಾಗಿ ನಾಲ್ಕು ಸಾವಿರ ಪೌಂಡುಗಳನ್ನು ಬಹುಮಾನವಾಗಿ ಹಂಚಿಕೊಟ್ಟಳು. ಇದಲ್ಲದೆ ... ದಂಪತಿಗಳು ಆದೇ ನೌಕರಮಾನೇಜರುಗಳ ರೋಗಿಷ್ಟ... ಪಿಂಚನೆ ... ಪೌಂಡನ್ನು ಧರ್ಮ ಮಾಡಿದರು. ... ದಲ್ಲಿರುವ ಬಡ ಬಗ್ಗರ ಕಷ್ಟ ನಿವಾರಣಾರ್ಥವಾಗಿ ... ಮಾಡುವದಕ್ಕೆ ಆ ಧರ್ಮಾತ್ಮಳು ... ಲಕ್ಷ ದ್ರವ್ಯವನ್ನಿಟ್ಟಿದ್ದಾಳೆ.

ಇಂಡಿಯಾ ದೇಶದ ವೃತ್ತಾಂತಗಳು

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರವರು ೧೯ ನೇ ... ಕಳೆದ ಶನಿವಾರ ಬೊಂಬಾಯಿಗೆ ಬಂದು ಸೇರಿದರು.

◆◆◆◆

ಕಲ್ಕತ್ತೆಯಲ್ಲಿ ಇಂದ್ರಚಂದ್ ಮತ್ತು ಜವಾಹರ್ ಲಾಲ್ ... ಮಾರ್ವಾಡಿಗಳ ... ಕಾರ್ಖಾನೆಗೆ ಕಳೆದ ವಾರ ಬೆಂಕಿಬಿದ್ದು ಸುಮಾರು ರೂ ೫,೦೦ ... ನಷ್ಟವಾಯಿತು.

◆◆◆◆

ಕಲ್ಕತ್ತೆಯ ಬಳಿ ಗಂಗಾನದಿಯಲ್ಲಿ ಹಿಂದೂ ಸ್ತ್ರೀಯರಿಗೋಸ್ಕರ ಒಂದು ಸ್ನಾನಘಟ್ಟವನ್ನು ಕಟ್ಟಿಸುತ್ತಿದ್ದಾರೆ. ಅದು ಮೇಲೆ ತಯಾರಾಗುವುದಕ್ಕೆ ... ಖರ್ಚಾಗಿಯೂ ... ಬರಬಹುದು.

◆◆◆◆

ಆಕ್ಟ್ ... ಅವನ್ನು ಇನ್ನೂ ಇಟ್ಟು ನಡೆಸುವುದು ನ್ಯಾಯವೇ ಎಂಬೀ ವಿಷಯಗಳನ್ನು ಕುರಿತು ಇಂಡಿಯಾ ಗವರ್ನಮೆಂಟಿನವರು ಆಲೋಚನೆ ಮಾಡಲಾರಂಭಿಸಿದ್ದಾರೆ.

◆◆◆◆

ಮೈಸೂರು ರೆಸಿಡೆಂಟ್ ... ರವರು ಪತ್ನೀ ಸಹಿತ ಸಂಸ್ಥಾನದಲ್ಲಿ ಸಂಚಾರ ಮಾಡುತ್ತಾ ಕಳೆದ ವಾರ ಶಿಕಾರಿಗೆ ಹೋಗಿ ಎರಡು ದಿನಗಳಲ್ಲಿ ೩೬ ... ಗಳನ್ನೂ ನಾಲ್ಕು ... ನ್ನೂ ಶಿಕಾರಿ ಮಾಡಿದರು. ಅವರ ಪತ್ನಿಯವರು ಎರಡು ... ಎರಡು ... ಗಳನ್ನೂ ಕೊಂದಿರುತ್ತಾರೆ.

◆◆◆◆

ದಕ್ಷಿಣ ಆರ್ಕಾಟಿನಲ್ಲಿ ಕೆಲವು ವರುಷಗಳ ಕೆಳಗೆ ಕಲೆಕ್ಟರಾಗಿದ್ದ ಮಿ॥ ಜೆ ... ಎಂಬಾತನು ಕಡಲೂರ್ ಮ್ಯುನಿಸಿಪಾಲಿಟಿಗೆ ಸೇರಿದ ತಿರುಪ್ಪಾಪುಲಿಯೂರೆಂಬ ಊರಲ್ಲಿ ಒಂದು ಮಾರ್ಕೆಟ್ ಕಟ್ಟಿಸಿಕೊಡುವುದಕ್ಕೆಂದು ಮದರಾಸ್ ಸರ್ಕಾರದವರ ವಶಕ್ಕೆ ... ರೂಪಾಯಿ ಕೊಟ್ಟಿರುತ್ತಾನೆ. ಗವರ್ನಮೆಂಟಿನವರು ಆ ಹಣ ತೆಗೆದುಕೊಂಡು ಆತನನ್ನು ... ವಂದಿಸಿರುತ್ತಾರೆ.

◆◆◆◆

ಕಲ್ಕತ್ತಾ ಪಟ್ಟಣದಲ್ಲಿ ಇಬ್ಬರು ಮಾರ್ವಾಡಿಗಳು ತಮ್ಮ ... ಸರ್ಕಾರಿ ವಿದ್ಯುಚ್ಛಕ್ತಿಯ ತಂತಿ ... ತಮ್ಮ ಸ್ವಂತ ತಂತಿಗಳನ್ನು ಕಟ್ಟಿ ತಮ್ಮ ಮನೆಯೊಳಕ್ಕೆ ತೆಗೆದುಕೊಂಡುಹೋಗಿ ಆ ಮೂಲಕ ವಿದ್ಯುಚ್ಛಕ್ತಿಯನ್ನು ಕದ್ದು ಉಪಯೋಗಿಸಿಕೊಳ್ಳುತ್ತಿದ್ದರು. ಇದು ಮೊಕದ್ದಮೆ ಆಯಿತು. ಅವರಿಬ್ಬರಿಗೂ ... ರೂಪಾಯಿನಂತೆ ಜುಲ್ಮಾನೆ ಹಾಕಿದರು.

◆◆◆◆

ಆಫ್ಘಾನಿಸ್ಥಾನದ ಅಮೀರರಿಗೆ ಇಂಡಿಯಾ ಗವರ್ನಮೆಂಟು ಸಲ್ಲಬೇಕಾದ ಹಣದಲ್ಲಿ ಬಾಕಿ ಉಳಿದಿರುವ ೨೦ ಲಕ್ಷ ರೂಪಾಯನ್ನು ಅವರು ಈ ಸಲ ಹಿಂದೂಸ್ಥಾನದಲ್ಲಿ ಸಂಚಾರ ಮಾಡುವಾಗ್ಗೆ ಉಪಯೋಗಿಸಿಕೊಳ್ಳುತ್ತಾರೆ. ಗವರ್ನಮೆಂಟಿನವರು ಆ ಹಣವನ್ನು ಪೇಷಾವರ್ ಪಟ್ಟಣದ ಸರ್ಕಾರಿ ಖಜಾನೆಯಿಂದ ಅಮೀರರಿಗೆ ಬೇಕಾದಂತೆ ಏರ್ಪಾಡು ಮಾಡಿದ್ದಾರೆ.

◆◆◆◆

ದೆಹಲಿ ಪಟ್ಟಣದಲ್ಲಿರುವ ಲಡ್ಲೋ ಕ್ಯಾಸಲ್ ಎಂಬ ದಿವ್ಯ ಬಂಗಲೆಯಲ್ಲಿ ಆಫ್ಘಾನಿಸ್ಥಾನದ ಅಮೀರರನ್ನು ಇಳಿಸಬೇಕೆಂದು ಗವರ್ನಮೆಂಟಿನವರು ಏರ್ಪಾಡು ಮಾಡುತ್ತಿದ್ದಾರೆ. ಲಾರ್ಡ್ ಕರ್ಜನ್‌ರು ನಡಸಿದ ದೆಹಲಿ ದರ್ಬಾರ್ ಕಾಲದಲ್ಲಿ ಹೈದರಾಬಾದ್ ಸಂಸ್ಥಾನದವರು ಇದೇ ಬಂಗಲೆಯಲ್ಲಿ ಹೋಗಿ ಇಳಿದು ಒಂದು ತಿಂಗಳಿಗೆ ೪೫,೦೦೦ ರೂಪಾಯಿ ಬಾಡಿಗೆ ಕೊಟ್ಟಿರುತ್ತಾರೆ.

◆◆◆◆

ಸ್ವದೇಶೀ ಎಂಬ ಬಂಗಾಳಿ ಪತ್ರಿಕೆಯಲ್ಲಿ ರಾಜ ಕೃಷ್ಣ ... ಎಂಬೊಬ್ಬ ಬಂಗಾಳಿಯು ನೇಪಾಳ ಸಂಸ್ಥಾನದ ಗೂರ್ಖಾ ... ನಲ್ಲಿ ಕ್ಯಾಪ್ಟನ್ ಎಂಬ ಹುದ್ದೆದಾರನಾಗಿರುತ್ತಾನೆಂತಲೂ, ... ಮದ್ದು ಗುಂಡು ಬಂದೂಕು ಮೊದಲಾದ ಯುದ್ಧಸಾಮಗ್ರಿಗಳು ತನ್ನ ವಶದಲ್ಲಿ ಕೊಡಲ್ಪಟ್ಟಿವೆ ಎಂತಲೂ, ಈತನು ಆಫ್ಘಾನಿಸ್ಥಾನದ ರಾಜಧಾನಿಯಾದ ಕಾಬೂಲ್ ಪಟ್ಟಣದ ಕಾರ್ಖಾನೆಯಲ್ಲಿ ... ಗಳ ತಯಾರಿ ನಡಸುವುದನ್ನು ಕಲಿತು ಬಂದಿರುತ್ತಾನೆ ಎಂದು ಪ್ರಕಟವಾಗಿದೆ.

ವಾದರುಗಳಲ್ಲಿ ಕೆಲವು ಹಿಂದು ದೊಡ್ಡ ಮನುಷ್ಯರೇ ಸೇರಿಕೊಂಡು ೫೦ ಲಕ್ಷ ರೂಪಾಯಿ ಮೂಲಧನವಾಗುಳ್ಳದ್ದೊಂದು ಹಿಂದೂ ವ್ಯಾಪಾರ ಬ್ಯಾಂಕನ್ನು ಸ್ಥಾಪಿಸಬೇಕೆಂತಲೂ, ಷೇರು ಒಂದಕ್ಕೆ ೫೦೦ ರೂಪಾಯಿಯಂತೆ ಹತ್ತು ಸಾವಿರ ಷೇರುಗಳನ್ನು ಕೊಡಿಸಬೇಕೆಂತಲೂ ಆಲೋಚಿಸಿಕೊಂಡಿದ್ದಾರೆ. ಅನೇಕ ಜನ ನಾಟುಕೋಟಿ ಚೆಟ್ಟಿಗಳು ಈ ಒಂದೊಂದು ಲಕ್ಷ ರೂಪಾಯಿನ ಷೇರುಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

****

ಸಿಲೋನ್ (ಲಂಕಾ) ದ್ವೀಪದಲ್ಲಿ ರಬ್ಬರ್ ವ್ಯವಸಾಯವನ್ನು ಜನರುಗಳು ಬಹು ಆತುರ ಪಟ್ಟು ಮಾಡುತ್ತಿರುವಂತೆ ತಿಳಿದು ಬಂದಿದೆ. ಸರ್ಕಾರದವರು ಹರಾಜು ಹಾಕಿದ ೧೦,೦೦೦ ಎಕರೆ ಜಮೀನನ್ನು ಜನರುಗಳು ನಾಮುಂದು ತಾಮುಂದು ಎಂದು ಮೇಲೆ ಬಿದ್ದು ೫,೦೦೦ ರೂಪಾಯಿಗೆ ಕೊಂಡುಕೊಂಡಿದ್ದಾರೆ. ಪ್ರತಿ ಎಕರೆಗೂ ಸರ್ಕಾರದವರು ಗೊತ್ತುಮಾಡಿದ್ದ ಕ್ರಯಕ್ಕಿಂತಲೂ ಮೂರರಷ್ಟು ಹಣ ಹೆಚ್ಚಾಯಿತು.

****

ಪೂನಾ ಪಟ್ಟಣದಲ್ಲಿ ಕಳೆದ ಭಾನುವಾರ ಒಬ್ಬ ಬ್ರಾಹ್ಮಣನು ವಿಧವೆಯಾಗಿದ್ದ ತನ್ನ ಮಗಳಿಗೆ ದ್ವಿತೀಯ ವಿವಾಹವನ್ನು ಮಾಡಿದನು. ವಿಧವೆಯು ಮುಂದಾಳಾಗಿ ನಿಂತು ವೇದೋಕ್ತ ಪ್ರಕಾರವಾಗಿ ಲಗ್ನ ನಡೆಯಿತು. ಸುಮಾರು ೩೦೦-೪೦೦ ಮಂದಿ ವಿದ್ಯಾವಂತರು ಪತ್ನಿ ಸಹಿತ ವಿವಾಹಮಂಟಪವನ್ನು ಅಲಂಕರಿಸಿ ವಧೂವರರನ್ನು ಆಶೀರ್ವಾದ ಮಾಡಿ ಅವರಿಗೆ ಉಡುಗೊರೆಗಳನ್ನು ಕೊಟ್ಟರು. ನಾಲ್ಕಾರು ಮಂದಿ ವಿದ್ವಾಂಸರಲ್ಲೇ ಪಟುಕರನ್ನು ಕುರಿತು ವಿಧವಾ ಪುನರ್ವಿವಾಹ, ವಿದ್ಯಾಭ್ಯಾಸ, ಈ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು.

****

ಕಳೆದ ವರುಷ ಪರದೇಶಗಳಿಂದ ಹಿಂದುಸ್ಥಾನಕ್ಕೆ ೫ ಲಕ್ಷವೂ ೯೯ ಸಾವಿರ ತಕರದ ಸಕ್ಕರೆ ಒಂದು ಬಿಕರಿ ಆಗಿರುತ್ತದೆ. ಈ ಭಾಗ ಆಮದಾಗುತ್ತಾ ನಮ್ಮ ಜನರಿಗೆ ಸ್ವದೇಶಾಭಿಮಾನವೆಷ್ಟಿದೆಯೋ ಇದರಿಂದ ಗೊತ್ತಾಗುವದು. ಬಂಗಾಳದಲ್ಲಿ ಮಾತ್ರ ಸ್ವದೇಶೀ ಸಕ್ಕರೆಯನ್ನೇ ಕೊಂಡುಕೊಳ್ಳುವದು ಉತ್ತಮವೆಂದು ಹೇಳುವರಲ್ಲದೆ, ಕಬ್ಬಿನ ಬೆಳೆಯನ್ನು ಕುರಿತು ಸಕ್ಕರೆ ಕಾರ್ಖಾನೆಗಳನ್ನಿಟ್ಟು ಈ ದೇಶಕ್ಕೆ ಬೇಕಾಗುವಷ್ಟು ಸಕ್ಕರೆ ತಯಾರುಮಾಡಲು ಉತ್ತೇಜನವನ್ನು ಯಾರೂ ಮಾಡಿ ತೋರಿಸುವುದಿಲ್ಲ. ವಿಜಯನಗರದ ಸಂಸ್ಥಾನಿಕರುಗಳು ಈ ವಿಷಯಕ್ಕೆ ಕೊಡಬೇಕೆಂದು ಗಮನಕೊಡಬೇಕು.

****

ಮಹಾಮಹೋಪಾಧ್ಯಾಯ ಸತೀಶಚಂದ್ರವಿದ್ಯಾಭೂಷಣ, ಎಂ. ಎ. ಯವರು ಟಿಬೆಟ್ ದೇಶದಲ್ಲಿ ಹಿಂದೂ ತರ್ಕಶಾಸ್ತ್ರದ ಅನೇಕ ಪ್ರಾಚೀನಗ್ರಂಥಗಳನ್ನು ಕಂಡು ಹಿಡಿದು ಅದರ ವಿಷಯವಾಗಿ ಪಂಡಿತ ಸಭೆಯಲ್ಲಿ ಉಪನ್ಯಾಸ ಮಾಡಿದರು. ಹಿಂದೂ ತರ್ಕಶಾಸ್ತ್ರವು ಮಿಥಿಲಾ, ನವದ್ವೀಪ ಎಂಬೀ ಸ್ಥಳಗಳಲ್ಲೇ ಅಭ್ಯಾಸಮಾಡಿದರೆಂದು ತಿಳಿದಿದ್ದರು. ಮೇಲ್ಕಂಡ ವಿದ್ವಾಂಸರು ಆ ಶಾಸ್ತ್ರವನ್ನು ತಕ್ಷಶಿಲಾ, ನಳಂದ, ಈ ಮೊದಲಾದ ಅನೇಕ ಕಡೆಗಳಲ್ಲಿ ಬೌದ್ಧರು ಪುರಾತನ ಕಾಲದಲ್ಲಿ ಅಭ್ಯಾಸ ಮಾಡುತ್ತಿದ್ದರೆಂತಲೂ, ರಚಿಸಿರುವ ೨೨ ಗ್ರಂಥಗಳು ಈಗ ಸಿಕ್ಕಿರುತ್ತವೆಂತಲೂ ತಿಳಿಸುತ್ತಾರೆ.

****

ಕಳೆದ ಬಾನುವಾರ ಬೆಳಗಿನ ಝಾಮದಲ್ಲಿ ಜಲಂಧರದ ರೈಲ್ವೆ ಸ್ಟೇಷನ್ನಿನಲ್ಲಿ ಮಿ. ಸಿ. ಬೇಕರ್ ಪಟ್‌ಮನ್ ಎಂಬೊಬ್ಬ ಬ್ಯಾರಿಸ್ಟರರು ಗಾಡಿಯೊಳಗೆ ಮಲಗಿರುವಾಗ್ಗೆ ಒಬ್ಬ ದೊಡ್ಡ ಮನುಷ್ಯನು ಗಾಡಿ ಒಳಕ್ಕೆ ನುಗ್ಗಿ ಆ ಬಾರಿಸ್ಟರ ಕೈಪೆಟ್ಟಿಗೆಯನ್ನು ಎತ್ತಿಕೊಂಡು ಹೋಗುತ್ತಿದ್ದನು. ಕೂಡಲೆ ಬ್ಯಾರಿಸ್ಟರರು ಕೂಗಿಕೊಂಡಿದ್ದರಿಂದ ರೈಲ್ ಪೋಲೀಸಿನವರು ಓಡುತ್ತಿದ್ದ ಆ ದೊಡ್ಡ ಮನುಷ್ಯನನ್ನು ಹಿಡಿದು ಆತನ ಮೈ ಶೋಧನೆ ಮಾಡಿದಾಗ ಆ ಬ್ಯಾರಿಸ್ಟರ ಬಾಬತು ರೂಪಾಯಿ ಸಿಕ್ಕಿತು. ಆ ದೊಡ್ಡ ಮನುಷ್ಯನ ಹೆಸರು ವ... ಲಾ ... ಸೈನ್ಯದ ಆಫೀಸಿನಲ್ಲಿ ೧೮ ವರುಷದ ಸರ್ವಿಸ್ ಮಾಡಿ ಈಗ ... ರೂಪಾಯಿ ಸಂಬಳಗಾರನಾಗಿರುತ್ತಾನೆ.

****

ಮಿ ಆರ್. ಟಿ. ಎಚ್. ಗ್ರಿಫಿತ್ಸ್, ಸಿ. ಐ. ಇ. ಯವರು ಕಳೆದ ನೀಲಗಿರಿ ಬೆಟ್ಟಕ್ಕೆ ಸೇರಿದ ಕೋಟಗಿರಿ ಎಂಬಲ್ಲಿ ಕಾಲವಾದ ವರ್ತಮಾನ ಬಂದಿದೆ. ಸಂಸ್ಕೃತ ವಿದ್ಯೆಯಲ್ಲಿ ಇವರು ಹಿಂದೆ ... ಸಂಪಾದಿಸಿಕೊಂಡು ಪ್ರಖ್ಯಾತರಾಗಿದ್ದದ್ದಲ್ಲದೆ ಬನಾರಸ್ ಕಾಲೇಜಿನಲ್ಲಿ ೨೫ ವರುಷ ಅಧ್ಯಕ್ಷರಾಗಿದ್ದು, ತರುವಾಯ ೧೮೭೮ ನೇ ಇಸವಿ ತನಕ ವಾಯವ್ಯಪ್ರಾಂತ್ಯ ಮತ್ತು ಅಯೋಧ್ಯಾ ದೇಶದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾಗಿದ್ದರು. ಇವರು ಕೆಲವು ಸಂಸ್ಕೃತ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಬರೆದು ಹೆಸರುವಾಸಿಯಾಗಿದ್ದರು. ಮರಣಕಾಲದಲ್ಲಿ ಇವರಿಗೆ ೮೦ ವರುಷ ವಯಸ್ಸಾಗಿತ್ತೆಂದು ತಿಳಿಯುತ್ತದೆ.

****

ಬನಾರಸಿನ ಪಟ್ಟಣದಲ್ಲಿದ್ದ ಅನಿರುದ್ಧಲಾಲ್ ಎಂಬ ಒಬ್ಬ ಸರ್ದಾರನು ಈಗಚಿನ ಕಾಲವಾದನು. ಈತನು ಏಕೋದರಾಗಿ ಬಂದ ಒಂದು ಬಾರಿ ಪವನ್ನು ಯಾವಾಗಲೂ ತಿರುವದ ಮೇಲೆಯೇ ಬಚ್ಚಿಟ್ಟುಕೊಂಡಿದ್ದನು. ಇವನಿಗೆ ಲಂಡನ್ ಮತ್ತು ಪ್ಯಾರಿಸ್ ಪಟ್ಟಣಗಳ ಜವಾಹಿರಿ ವರ್ತಕರು ೪೦ ಸಾವಿರದಿಂದ ಒಂದು ಲಕ್ಷ ರೂಪಾಯಿ ತನಕ ಕ್ರಯಕೊಡುವದಾಗಿ ಕೇಳಿದ್ದರೂ ಕೊಡದೆ ಇಟ್ಟುಕೊಂಡಿದ್ದನು. ಈಗ ಆ ರತ್ನದ ವಿಚಾರವಾಗಿ ಅವನ ಸಂಬಂಧಿಗಳಲ್ಲಿ ವ್ಯಾಜ್ಯ ಹುಟ್ಟಿರುವದು. ಬಹುಶಃ ಅದರ ಬೆಲೆಯಲ್ಲಿ ಅರ್ಧ ಮುಕ್ಕಾಲುಪಾಲಿನಷ್ಟು ಲಾಯರುಗಳಿಗೂ ಸಾಕ್ಷಿಗಳಿಗೂ ಕೋರ್ಟು ಖರ್ಚಿಗೂ ರೈಲ್ ಕಂಪನಿಯವರಿಗೂ ವಿನಿಯೋಗವಾಗಬಹುದು.

****

ಷೇಕ್ ಅಹಮದ್ ಮಜದಾಬ್ ಅಲೀಫ್ ಸಾಹಿ ಎಂಬ ಮುಸಲ್ಮಾನ ಶಾಸ್ತ್ರಿಯು ಹಿಜರಿ ೧೧೦೦ ನೆ ವರುಷದಲ್ಲಿ ಆಫ್ಘಾನಿಸ್ಥಾನದಿಂದ ಪಾಟಿಯಾಲಾ ಸಂಸ್ಥಾನದಲ್ಲಿರುವ ಸಾಹರಿಂದ್ ಎಂಬ ಊರಿಗೆ ಬಂದಿದ್ದು, ಸುಮಾರು ೩೦೦ ಮಹಮದೀಯ ಮತಗ್ರಂಥಗಳನ್ನು ಬರೆದು, ಅಲ್ಲೇ ಕಾಲವಾದನು. ಮಹಮದೀಯರು ಈಗಲೂ ಆತನನ್ನು ಮಹಾಪುರುಷನೆಂದು ಭಾವಿಸಿ, ಅಲ್ಲಿಗೆ ತಂಡತಂಡವಾಗಿ ಹೋಗಿ ಆತನ ಸಮಾಧಿಯನ್ನು ಪೂಜೆಮಾಡಿ ಬರುತ್ತಾರೆ. ಆಫ್ಘಾನಿಸ್ಥಾನದ ಅಮೀರರು ಕೂಡ ಈ ಸಲ ಹಿಂದುಸ್ಥಾನಕ್ಕೆ ಬಂದಾಗ್ಗೆ ಆತನ ಗೋರಿಗೆ ಹೋಗಿ ಬರುವವರಾಗಿರುವುದರಿಂದ ಅವರು ಬರುವಷ್ಟರೊಳಗಾಗಿ ಆ ಗೋರಿಯ ತನಕ ರೈಲ್ ರಸ್ತೆಯನ್ನು ಹಾಕಿ ಸಿದ್ಧಪಡಿಸಬೇಕೆಂದು ಪಾಟಿಯಾಲಾ ಸಂಸ್ಥಾನದವರು ಕಾನುಗಾರಿ ಮಾಡಿಸುತ್ತಿದ್ದಾರೆ.

****

ಕಲ್ಕತ್ತೆಯಲ್ಲಿ ಒಬ್ಬ ಬಂಗಾಳಿ ದೊಡ್ಡಮನುಷ್ಯನ ಮನೆಯಲ್ಲಿ ಆತನ ಚಿಕ್ಕ ವಯಸ್ಸಿನ ಮಗಳಿಗೆ ಹುಟ್ಟಿದ ಹಬ್ಬ ಮಾಡಬೇಕೆಂದು ಪ್ರಯತ್ನಪಟ್ಟು ಅನೇಕ ಜನರಿಗೆ ಔತಣಕ್ಕೆ ಹೇಳಿಸಿದರು. ಆ ಹುಡುಗಿ ತನ್ನ ತಾಯಿಯನ್ನು ಕುರಿತು—ಅಮ್ಮಾ, ನನ್ನ ಹುಟ್ಟಿದ ಹಬ್ಬಕ್ಕೆ ಎಷ್ಟು ಖರ್ಚು ಮಾಡುತ್ತೀರಿ? ಎಂದು ಕೇಳಿದ್ದಕ್ಕೆ ತಾಯಿ ೧೦೦೦ ರೂಪಾಯಿಗೆಂದು ಹೇಳಿದಳು. ಆಗ ಆ ಹುಡುಗಿಯು ಅಮ್ಮಾ, ಔತಣ ಮಾಡುವುದಕ್ಕೆ ಬದಲಾಗಿ ಆ ಹಣವನ್ನು ನನಗೆ ಕೊಡುತ್ತೀಯಾ? ಆದನ್ನು ಕೇಳಿ ತಾಯಿ ಆಶ್ಚರ್ಯಪಟ್ಟು, ಆ ಹಣವನ್ನು ನೀನು ಏನು ಮಾಡುತ್ತೀಯೆ? ಎಂದು ಕೇಳಿದಳು. ಹುಡುಗಿಯು—ನಮ್ಮ ದೇಶದ ಒಂದು ಭಾಗದಲ್ಲಿ ಜನರು ಕ್ಷಾಮಪೀಡಿತರಾಗಿದ್ದಾರೆಂತಲ್ಲಾ! ಅವರಿಗೆ ಆ ಹಣವನ್ನು ಕಳುಹಿಸಬೇಕೆಂದು ಉದ್ದೇಶಿಸುತ್ತೇನೆ ಎಂದು ಹೇಳಿದಳು. ಕೂಡಲೆ ತಂದೆತಾಯಿಗಳು ಇಂಥಾ ಧರ್ಮಬುದ್ಧಿಯುಳ್ಳ ಚಿಕ್ಕ ಮಗಳ ಉದ್ದೇಶವನ್ನು ತಿಳಿದು, ಔತಣ ಮಾಡುವುದನ್ನು ನಿಲ್ಲಿಸಿಬಿಟ್ಟು, ಅಷ್ಟು ಹಣವನ್ನು ಆ ಹುಡುಗಿ ಅಪೇಕ್ಷೆಪಟ್ಟಂತೆ ಕ್ಷಾಮನಿವಾರಣಾ ಫಂಡಿಗೆ ಕಳುಹಿಸಿಕೊಟ್ಟರು.

****

ಬರ್ಮಾ ಅಧಿಪತ್ಯಕ್ಕೆ ಸೇರಿದ ಬೆಸ್ಸೀನ್ ಪಟ್ಟಣದ ಬಳಿ ಒಂದು ಗ್ರಾಮದಲ್ಲಿ ಒಬ್ಬ ಮುದುಕನು ತನ್ನ ಸಂಸಾರವನ್ನೆಲ್ಲಾ ಅಗಿನ ದಾಗ್ಗೆ ಕಾಪಾಡಿಸುವ ನಿಮಿತ್ತ ರಾತ್ರಿಯಲ್ಲಿ ತನ್ನ ಜಮೀನಿಗೆ ತೆರಳಿ ಕೊಂಡು ಹೋಗಿ ಅಲ್ಲಿ ಬೆಳೆದಿರುವ ಒಂದು ಆಲದಮರದ ಮೇಲೆ ಹತ್ತಿ ಅದರ ಕೊಂಬೆಯಲ್ಲಿದ್ದ ಒಂದು ಡೊಗರಿನಲ್ಲಿ ಸುರಿದುಬಂದು, ತನ್ನ ಮಗನಿಗೂ ತಿಳಿಸದೆ ಗುಟ್ಟಾಗಿದ್ದು, ಅಕಸ್ಮಾತ್ತಾಗಿ ಸತ್ತುಹೋದನು. ಅವನ ಮಗನು ಆ ಜಮೀನನ್ನು ಇನ್ನೊಬ್ಬ ಬರ್ಮಾದವನಿಗೆ ೧೦೦ ರೂಪಾಯಿಗೆ ಬಿಕರಿಮಾಡಿಬಿಟ್ಟನು. ತರುವಾಯ ಕ್ರಯಕ್ಕೆ ಕೊಂಡುಕೊಂಡವನಿಗೆ ಆ ಮರದ ಪೊಟರೆಯಲ್ಲಿ ಆ ಮುದುಕ ಬಚ್ಚಿಟ್ಟಿದ್ದ ೩,೦೦೦ ರೂಪಾಯಿ ನಗ ನಾಣ್ಯಗಳು ಸಿಕ್ಕಿದವು. ಈ ವಿಚಾರ ಅವನಿಗೆ ತಿಳಿದಕೂಡಲೇ ಅವನು ಹೋಗಿ ತಮ್ಮ ತಂದೆ ಬಚ್ಚಿಟ್ಟಿದ್ದ ಚಿಂದಗಿಯನ್ನು ಕ್ರಯಕ್ಕೆ ಕೊಡಲಿಲ್ಲವೆಂತಲೂ ಬರೀ ಜಮೀನನ್ನು ಮಾತ್ರ ವಿಕ್ರಯ ಮಾಡಿದ್ದಾಗಿಯೂ ಹೇಳಿ, ಆ ಹಣವನ್ನು ಕೇಳಿದನು. ಅವನ ಕೊಡದೆ ಹೋದ್ದರಿಂದ ಈಗ ಈ ವ್ಯಾಜ್ಯ ಕೋರ್ಟಿಗೆ ಬಂದಿದೆ. ನ್ಯಾಯಾಧಿಪತಿಯು ನ್ಯಾಯಕ್ಕೆ ಈ ಹಣವು ವಿಚಾರ ಇತ್ಯರ್ಥ ಮಾಡುವರೋ ಎಂದು ಎಲ್ಲರೂ ಆಶ್ಚರ್ಯಪಡುತ್ತಿರುವರು.

****

ಕಳೆದ ಬಾನುವಾರ ಮಧ್ಯಾಹ್ನ ಕಲ್ಕತ್ತಾ ಪಟ್ಟಣದ ಹ್ಯಾರಿಸನ್ ರಸ್ತೆಯಲ್ಲಿ ನೂರಾರು ಕಾಬೂಲ್ ಜನರಿಗೂ ಅಲ್ಲಿನ ಪೋಲೀಸಿನವರಿಗೂ ಬಹು ಭಯಂಕರವಾದ ಮಾರಾಮಾರಿ ನಡೆಯಿತು. ರಸ್ತೆಗಳ ಪಕ್ಕಗಳಲ್ಲಿ ಜನಸಂಚಾರಕ್ಕೆ ಮಾಡಿರುವ ಕಾಲುದಾರಿಗಳ ಮೇಲೆ ಕಾಬೂಲ್ ಜನರು ತಮ್ಮ ಸಾಮಾನು ಮಂತಾದ ಗಂಟು ಮೂಟೆಗಳನ್ನು ಇಟ್ಟುಕೊಂಡು, ಜನರು ತಿರುಗುವುದಕ್ಕೆ ಅಡ್ಡಿ ಮಾಡುತ್ತಿದ್ದರು. ಪೋಲೀಸಿನವರು ಹೋಗಿ ಆ ಮೂಟೆಗಳನ್ನು ತೆಗೆಯುವಂತೆ ಹೇಳಿದಾಗ ಕಾಬೂಲಿಗಳಿಗೂ ಅವರಿಗೂ ವಾಗ್ವಾದ ನಡೆದು ಕಡೆಗೆ ಬಡಿದಾಟ ವಾಯಿತು. ದೊಣ್ಣೆಗಳನ್ನು ಎರಾಬಿರಾ ಉಪಯೋಗಿಸಿದರು. ಪೋಲೀಸಿನವರು ಸೋತು ಓಡಿಹೋಗಿ ಸ್ಟೇಷನ್ನಿನಿಂದ ಹೆಚ್ಚು ಜನರನ್ನು ಕರೆದುಕೊಂಡು ಬಂದರು. ಆದರೆ ಕಾಬೂಲಿಗಳು ಜಗ್ಗಲೇ ಇಲ್ಲ. ಆಗ ಡೆಪ್ಯುಟಿ ಕಮಿಷನರಾದ ಮಿ. ಓಬಂಟರು ಅವರಲ್ಲಿ ಮುಖಂಡರಾದವರನ್ನು ಬೇರೆ ಕರೆದು ಅವರಿಗೆ ಸಮಾಧಾನ ಹೇಳಿದರು. ಆಗ ಅವರೆಲ್ಲಾ ತಮ್ಮ ಗಂಟು ಮೂಟೆಗಳನ್ನು ಸಾಗಿಸಿಕೊಂಡು ಹೋದರು. ಈ ಸುದ್ದಿಯು ಪಟ್ಟಣದಲ್ಲೆಲ್ಲಾ ಹರಡಿಕೊಂಡಿತು. ಪೋಲೀಸಿನವರ ಗೌರವವು ಐದಬೂ ಇಷ್ಟೇನೇ ಎಂದು ಎಲ್ಲರೂ ಹೇಳುವಹಾಗಾಯಿತು.

****

ಹೈದರಾಬಾದ್ ಪಟ್ಟಣದಲ್ಲಿ ಒಬ್ಬ ಜವಳಿ ಸಾಹುಕಾರನ ಸೊಸೆಯು ಹನ್ನೊಂದು ವರುಷದವಳಾಗಿದ್ದವಳು ಭಕ್ತಿಯುತಳಾಗಿ ಅರ್ಧರಾತ್ರಿಯಲ್ಲಿ ಮನೆಯಿಂದ ಹೊರಟು ಒಂದು ದೇವಸ್ಥಾನಕ್ಕೆ ಹೋಗಿ ತನ್ನ ಮೈಮೇಲಿದ್ದ ಸುಮಾರು ಎರಡು ಸಾವಿರ ರೂಪಾಯಿನ ಆಭರಣಗಳನ್ನು ಕಳಚಿ ಅಲ್ಲಿ ಮಲಗಿದ್ದ ಪೂಜಾರಿಯ ತಲೆದಿಂಬಿನ ಕೆಳಗೆ ಗಂಟು ಕಟ್ಟಿ ಇಟ್ಟುಬಿಟ್ಟು, ಸಮೀಪದಲ್ಲಿದ್ದ ಕೊಳದಲ್ಲಿ ಸ್ನಾನಮಾಡಿಕೊಂಡು ಬಂದು ದೇವರ ಪ್ರಾರ್ಥನೆ ಪೂಜೆ ಮುಂತಾದ್ದನ್ನು ಮಾಡಿ ಅಲ್ಲಿಂದ ಹೊರಟು ಗಂಗಾ ನದಿಯನ್ನು ಕುರಿತು ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಒಬ್ಬ ಪೋಲೀಸಿನವನು ಆ ಹುಡುಗಿಯನ್ನು ತಡೆದು ಒಬ್ಬಳೇ ನಡುಹೊತ್ತಿನಲ್ಲಿ ಎಲ್ಲಿಗೆ ಹೋಗುವೆ ಎಂದು ಪ್ರಶ್ನೆಮಾಡಿದನು. ಅವನಿಗೆ ಶಾಸ್ತ್ರ ಪರಿಜ್ಞಾನಕ್ಕೆ ಹೋಗುವದಾಗಿಯೂ ಅಲ್ಲಿ ಪ್ರಾಣ ಕೇಳಬೇಕುಗುತ್ತೇನೆಂತಲೂ ಹೇಳಿದಳು. ಆಗ ಪೋಲೀಸಿನವನು ಹಾಗೆ ಹೋಗಕೂಡದೆಂದು ಹೇಳಿ ಅವಳನ್ನು ಠಾಣಾಕ್ಕೆ ಹಿಡಿದುಕೊಂಡು ಹೋಗಿ ಇಟ್ಟು ಮರುದಿನ ಬೆಳಗ್ಗೆ ಅವಳ ಮನೆಯವರಿಗೆ ತಿಳಿಸಿದನು. ತಂದೆ ಮೊದಲಾದವರು ಹೋಗಿ ಮಗಳನ್ನು ಕರೆದುತಂದು ಒಡವೆ ನಾಯಿತೆಂದು ಕೇಳಿದಾಗ ಅವಳು ಪೂಜಾರಿಯ ತಲೆ ಕೆಳಗೆ ಇಟ್ಟನೆಂದು ಹೇಳಿದಳು. ಅವನನ್ನು ವಿಚಾರಿಸಿದಾಗ ತನಗೇನೂ ಗೊತ್ತೇ ಇಲ್ಲವೆಂದು ಹೇಳಿದನು. ಈಗ ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ.

****

ಸೈಯದ್ ಅಹಮದ್ ಎಂಬೊಬ್ಬ ಮಹಮದೀಯನು ಅಲಹಾಬಾದ್ ಪಟ್ಟಣದ ಬಳಿ ಕೆಲವು ಗ್ರಾಮಗಳಿಗೆ ಹೋಗಿ ಅಲ್ಲಿನ ಜಮೀನ್ದಾರರನ್ನು ಕುರಿತು—ತುರ್ಕಿ ಸುಲ್ತಾನರು ನನ್ನನ್ನು ಅಧಿಕಾರ ಕೊಟ್ಟು ಕಳುಹಿಸಿದ್ದಾರೆ. ಬೊಂಬಾಯಿನಲ್ಲಿರುವ ತುರ್ಕಿ ರಾಯಭಾರಿಗಳ ಹುಕುಂ ಅನುಸರಿಸಿ ಬಂದಿರುತ್ತೇನೆ. ಪ್ರತಿ ಒಬ್ಬ ಜಮೀನ್ದಾರನಿಂದಲೂ ೫೦ ಆನೆಗಳ ಪ್ರಕಾರ ವಸೂಲ್ಮಾಡಬೇಕೆಂತಲೂ, ಇದು ಅವರು ಕೊಡುವ ಕಾಣಿಕೆಯದಲ್ಲಿ ಸಜಾ ಆಗುವುದೆಂತಲೂ, ಇಲ್ಲವಾದರೇ ತಾವೇ ಕೈಯಿಂದ ಹಾಕುತ್ತೇನೆಂತಲೂ ಅಲಹಾಬಾದಿನ ಕಲೆಕ್ಟರವರು ನನಗೆ ಅಪ್ಪಣೆಕೊಟ್ಟಿದ್ದಾರೆ ಎಂಬೀ ರೀತಿಯಾಗಿ ಹೇಳಿ ಗ್ರಾಮಸ್ಥರಿಂದ ಇಟ್ಟಿರುವ ೬,೫ ಆನೆಗಳನ್ನು ವಸೂಲ್ಮಾಡಿದನು. ಇದು ಪ್ರಕಾರವಾಯಿತು. ಪೋಲೀಸಿನವರು ಅವನನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ದರ್ಯಾಫ್ತಿಯಲ್ಲಿ ಅವನು ಹೇಳಿದ್ದೇನೆಂದರೆ—ನನಗೆ ಹಣ ಬೇಕಾಗಿದ್ದದರಿಂದ ವಸೂಲ್ಮಾಡಿರುತ್ತೇನೆ. ಇದರಲ್ಲಿ ನಾನೇನೂ ಮೋಸಮಾಡಲಿಲ್ಲ. ನಾನು ತುರ್ಕಿ ರಾಜ್ಯದವನನ್ನು ತುರ್ಕಿ ರಾಜ್ಯದ ಸುಲ್ತಾನರಾದ ಅಬ್ದುಲ್ ಹಮೀದ್ ಖಾನರವರಿಗೂ, ಬೊಂಬಾಯಿ ಗವರ್ನರವರಿಗೂ, ಪ್ರಿನ್ಸ್ ಆಫ್ ವೇಲ್ಸರವರಿಗೂ, ಬೊಂಬಾಯಿನಲ್ಲಿರುವ ತುರ್ಕಿ ರಾಯಭಾರಿಗಳಾದ ಹಬೀಬ್ ಮುನ್ಸೀ ಯೆಫೆಂಡಿಯವರಿಗೂ ಸಾಕ್ಷಿಭತ್ಯ ಕಟ್ಟುತ್ತೇನೆ. ಅವರನ್ನೆಲ್ಲಾ ಕರೆಸಿ ಕೇಳಬೇಕು. ನಾನ್ಯಾರೆಂಬುದನ್ನು ಅವರೇ ತಿಳಿಸುವರು ಎಂಬುದಾಗಿ ಹೇಳಿದನು. ಮ್ಯಾಜಿಸ್ಟ್ರೇಟರು ಅವರಿಗೆಲ್ಲಾ ಸಮನ್ಸು ಕಳುಹಿಸುವುದರಿಂದ ಏನೊಂದೂ ಪ್ರಯೋಜನವಿಲ್ಲವೆಂದೂ ಇವನ ಮೇಲಿನ ಕೇಸು ಸುಳ್ಳಾಗಿ ವ್ಯರ್ಥವಾಗುವದೊಂದಲ್ಲದೆ ಪ್ರಯೋಜನವೇನೂ ಕಾಣುವುದಿಲ್ಲವೆಂದು ಯೋಚಿಸಿ, ಅವನು ಹಣ ವಸೂಲ್ಮಾಡಿದ್ದು ಸರಿಯಾಗಿ ರುಜುವಾತಾದದ್ದರಿಂದ ಅವನಿಗೆ ನಾಲ್ಕು ವರುಷಗಳ ಕಠಿಣ ಸಜಾ ವಿಧಿಸಿರುತ್ತಾರೆ.

ವಿದೇಶ ವರ್ತಮಾನಗಳು

ಲಂಡನ್ ಪಟ್ಟಣದಲ್ಲಿ ಧರ್ಮಸತ್ರಗಳಲ್ಲಿ ಧರ್ಮಫಂಡುಗಳಿಂದಲೂ ಜೀವಿಸಿಕೊಂಡಿರುವ ಪಾಪರ್ (ನಿರ್ಗತಿಕರು) ಪ್ರಜೆಗಳು ೧,೨೬,೩೦೦ ಮಂದಿ ಎಂದು ಪ್ರಕಟವಾಗಿದೆ. ಅಂದರೆ ೧೯೦೫ನೆ ಇಸವಿಗಿಂತ ೫,೪೬೦ ಮಂದಿ ಕಡಿಮೆ.

****

ಸ್ಪೇಯಿನ್ ರಾಜ್ಯದ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದಲ್ಲಿ ಕೆಲವು ದುಷ್ಟರು ಸೇರಿ ಮಾರ್ಗವನ್ನು ಕಾದು ತಮ್ಮ ದೊರೆಯನ್ನು ಕೊಂದು ಹಾಕಬೇಕೆಂದು ಸನ್ನಾಹ ಮಾಡಿಕೊಂಡಿದ್ದರೆಂತಲೂ, ದೇವರ ದಯೆಯಿಂದ ದೊರೆಯವರು ಆ ದಿನ ಆ ಮಾರ್ಗವಾಗಿ ಹೋಗದೆ ಇನ್ನೊಂದು ರಸ್ತೆಯಲ್ಲಿ ಸವಾರಿ ಹೋದರೆಂತಲೂ ತಿಳಿದು ಬಂದಿದೆ.

****

ರಷ್ಯಾ ರಾಜ್ಯಕ್ಕೆ ಸೇರಿದ ಪೆರಿಯಾಗ್ ಎಂಬೊಂದು ಜಹಜು ವ್ಲಾಡಿವೊಸ್ಟಾಕ್ ಪಟ್ಟಣದ ಸಮುದ್ರ ತೀರವನ್ನು ಬಿಟ್ಟು ಹೊರಟ ಕೂಡಲೆ ಸಮುದ್ರದೊಳಗಿದ್ದ ಒಂದು ಮದ್ದಿನ ಗುಂಡಿಗೆ ತಗಲಿದ್ದರಿಂದ ಆ ಜಹಜು ಒಂದೂವರೆ ನಿಮಿಷದೊಳಗಾಗಿ ಮುಳುಗಿಹೋಯಿತು. ಅಗ್ಗಿ ಅದರಲ್ಲಿ ೩೦೦ ಜನರು ಪ್ರಯಾಣ ಮಾಡುತ್ತಿದ್ದರು. ಸಮೀಪದಲ್ಲಿದ್ದ ಬೆಸ್ತರ ದೋಣಿಗಳು ಹೋಗಿ ಮುಳುಗಿದವರ ಪೈಕಿ ೩೦ ಮಂದಿಯನ್ನು ಮಾತ್ರ ಎತ್ತಿ ಕಂಡರಿಸಿಕೊಂಡು ಬಂದು ಬದುಕಿಸಿದವು.

****

ಅನ್ನಾಂ ರಾಜ್ಯದ ಚಕ್ರವರ್ತಿಯಾದ ಥಾನ್ ತಾಯಿ ಎಂಬಾತನು ತನ್ನ ಪ್ರಜೆಗಳನ್ನೂ ರಾಣೀವಾಸದ ಜನರನ್ನೂ ನಾನಾ ತರವಾದ ಕ್ರೂರ ಹಿಂಸೆಗಳಿಗೆ ಗುರಿಯಾಗಿ ಕೊಲ್ಲಿಸುತ್ತಿದ್ದಾನೆಂದು ಅಲ್ಲಿನ ಫ್ರೆಂಚ್ ಅಧಿಕಾರಿಗಳು ತಿಳಿದು, ಆತನ ದೇಹಸ್ಥಿತಿಯನ್ನು ಪರೀಕ್ಷಿಸಿ, ಆತನಿಗೆ ಬುದ್ಧಿ ಸ್ಥಿಮಿತವಾಗಿಲ್ಲವೆಂದು ತೀರ್ಮಾನಿಸಿ ಆತನನ್ನು ಅರಮನೆಯಲ್ಲೇ ಇಟ್ಟಿರಬೇಕೆಂತಲೂ ಹೊರಕ್ಕೆ ಬಿಡಕೂಡದೆಂತಲೂ ಕಟ್ಟುಮಾಡಿದ್ದಾರೆ. ಈತನಿಗೆ ಕಳೆದ ೧೮೮೯ ರಲ್ಲಿ ಪಟ್ಟವಾಯಿತೆಂದು ತಿಳಿಯುವದು.

****

ಚೀನಾ ರಾಜ್ಯದಲ್ಲಿ ಬೌದ್ಧ ಮತವು ಅನೇಕ ದುರಾಚಾರಗಳಿಗೆ ಬಿದ್ದು ವಿಲವಾಗುತ್ತಿರುವುದನ್ನು ನೋಡಿ, ಜಪಾನ್ ರಾಜ್ಯದ ಬೌದ್ಧ ಸನ್ಯಾಸಿಗಳು ಅದನ್ನು ಶ್ರುನಃ ಪಾಪಿಸಿ ವೃದ್ಧಿಗೆತರಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಜಪಾನ್ ರಾಜ್ಯದ ಯುವರಾಜರವರ ಪತ್ನಿಯವರೂ ಅಲ್ಲಿನ ಬೌದ್ಧ ಮಹಾ ಗುರುವಾದ ಕೌಂಟ್ ಒಟಾನಿ ಎಂಬುವರೂ ಅನೇಕ ಸನ್ಯಾಸಿಗಳೊಡನೆ ಚೀನಾ ರಾಜ್ಯಕ್ಕೆ ಬಂದು, ಜನರಿಗೆ ಬೌದ್ಧಮತ ತತ್ವಗಳನ್ನು ಬೋಧಿಸುತ್ತಲೂ, ಪಾಠಶಾಲೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಲೂ, ಜನರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಲೂ ಇದ್ದಾರೆ.

****

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ವಿಮಾನ (ಆಕಾಶಬುಟ್ಟಿ)ಗಳನ್ನು ಕಂಡುಹಿಡಿದ ೨೫ನೇ ಸಂವತ್ಸರದ ಉತ್ಸವವನ್ನು ಮಾಡಿದರು. ಅಗ್ಗೆ ವಿಮಾನಗಳ ಪಂಜು ಸಹಾ ನಡೆಸಲ್ಪಟ್ಟಿತು. ಸ್ವಿಟ್ಸರ್ಲೆಂಡ್, ಬೆಲ್ಜಿಯಂ, ಆಸ್ಟ್ರಿಯಾ, ಜರ್ಮನಿ, ಈ ದೇಶಗಳಲ್ಲಿ ಅಂತರಿಕ್ಷದಲ್ಲಿ ಸಂಚರಿಸುವುದಕ್ಕೆ ಯೋಗ್ಯವಾದಂಥಾ ವಿಮಾನಗಳನ್ನು ತೆಗೆದುಕೊಂಡು ಹೋಗಿದ್ದವರು ಪಾಲು ಬೆಟ್ಟರು. ಬೇಗನ್

ಎಂಬ ಮೈದಾನದಲ್ಲಿ ಹದಿನೇಳು ವಿಮಾನಗಳು ಜೂಜು ಹೊರಟವು ಈ ಆಶ್ಚರ್ಯಕರವಾದ ವಿನೋದವನ್ನು ೫೦ಸಹಸ್ರ ಪ್ರಜೆಗಳು ಸೇರಿ ಸಂಭ್ರಮದಿಂದ ನೋಡಿ ಆನಂದಪಟ್ಟರು ಯಾವ ವಿಮಾನವು ಅಂತರಿಕ್ಷದಲ್ಲೇ ಬಹಳ ಹೆಚ್ಚುಕಾಲದವರೆಗೆ ಸಂಚರಿಸುತ್ತಲೇ ಇರುವುದೋ ಅಂಥಾದ್ದಕ್ಕೆ ಮೊದಲನೆಯ ಬಹುಮಾನವನ್ನು ಕೊಡುವುದಾಗಿ ಜರ್ಮನಿ ಚಕ್ರವರ್ತಿಯವರು ಅಪ್ಪಣೆ ಕೊಟ್ಟಿದ್ದರು ಡಾಕ್ಟರ್ ಬ್ರೂಕ್ಮೆರ್ ಎಂಬಾತನ ವಿಮಾನವೇ ಆ ಚಕ್ರವರ್ತಿಯವರ ಬಹುಮಾನವನ್ನು ಸಂಪಾದಿಸಿಕೊಂಡಿತು

****

ಅಮೇರಿಕಕ್ಕೆ ಸೇರಿದ ಲಾಂಗ್ ಐಲೆಂಡ್ ಎಂಬ ದ್ವೀಪದಲ್ಲಿ ಮೋಟಾರ್ ಕಾರ್ ಎಂಬ ಗಾಡಿಗಳನ್ನು ಜೂಜುಬಿಟ್ಟರು ಸುಮಾರು ೩೦ ಮೈಲಿ ದೂರವಾಗುಳ್ಳ ಚಕ್ರಾಕಾರವಾದ ರಸ್ತೆಯನ್ನು ಆ ಗಾಡಿಗಳು ಹತ್ತಾವರ್ತಿ ಸುತ್ತಿಕೊಂಡು ಬರಬೇಕೆಂದು ಗೊತ್ತಾಯಿತು ಅದರಲ್ಲಿ ಮೊದಲನೆಯದಾಗಿ ಬರತಕ್ಕ ಗಾಡಿಗಳಿಗೆ ಬಹುಮಾನ ದೊರಕುವುದೆಂದು ಪ್ರಕಟಿಸಿದರು ಈ ಸಂತೋಷಕರವಾದ ಜೂಜನ್ನು ನೋಡುವುದಕ್ಕೆ ಆ ರಸ್ತೆಯ ಸುತ್ತಲೂ ಎರಡು ಲಕ್ಷ ಪ್ರಜೆಗಳಿಗೆ ಕಮ್ಮಿ ಇಲ್ಲದೆ ನಿಂತು ನಾನಾ ಪ್ರಕಾರವಾದ ಸಂತೋಷ ಧ್ವನಿಗಳನ್ನು ಮಾಡುತ್ತಿದ್ದರು ಫ್ರಾನ್ಸಿನ ವಾಗ್ನರ್ ಎಂಬುವನು ೪ ಗಂಟೆ ೫೦ ನಿಮಿಷಗಳಲ್ಲಿ ಆ ರಸ್ತೆಯನ್ನು ೧೦ ಸಲ ಸುತ್ತಿಕೊಂಡುಬಂದು ಮೊದಲನೆಯ ಬಹುಮಾನವನ್ನು ಪಡೆದಿರುತ್ತಾನೆ ಆದರೆ ನೋಟಕರ ಮೇಲೆ ಈ ಗಾಡಿಗಳು ಹರಿದು ಕೆಲವರಿಗೆ ತುಂಬಾ ಗಾಯಗಳನ್ನು ಮಾಡಿದವು ಸರ್ಕಾರದವರು ಅನಾಹುತಗಳಾಗದಂತೆ ತಡೆಯಬೇಕೆಂದು ಇನ್ನು ಮುಂದೆ ಅಂಥಾ ಜೂಜು ಬಿಡಲೇಕೂಡದೆಂದು ಅಪ್ಪಣೆಕೊಟ್ಟಿರುತ್ತಾರೆ

ಖಾತ್ರಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಮಳೆಯಾಳಿದ ಮಂತ್ರವಾದಿಯ ಮೋಸ

ಅಯ್ಯಾ,

ದೊಡ್ಡ ಬಳ್ಳಾಪುರದಲ್ಲಿ ರಾಮಸ್ವಾಮಿನಾಯುಡು ಎಂದು ಹೆಸರು ಇಟ್ಟುಕೊಂಡು, ದೆವ್ವ, ಪೀಡೆ, ಪಿಶಾಚಿಗಳನ್ನು ಬಿಡಿಸುತ್ತೇನೆಂದು ಹೇಳುತ್ತಾ ಸುಮಾರು ೩೦ ವರುಷ ವಯಸ್ಸುಳ್ಳ ಸ್ವಲ್ಪ ಕುಳ್ಳಾದ ಕಪ್ಪು ಬಣ್ಣವುಳ್ಳ ನಾಮದ ಜುಟ್ಟು ಇದ್ದ ಮಂತ್ರವಾದಿಯು ಈ ಟವುನ್ ಪಟೇಲ್ ಕಂದೆಗೌಡರ ಮನೆಯಲ್ಲಿ ಅನ್ನ ಪಾನಾದಿಗಳನ್ನು ಮಾಡಿಕೊಂಡು ಅವರ ನಿಶಪಲ್ಲಿಯೇ ೧ ತಿಂಗಳು ಬಾಗಿಲಲ್ಲಿ ಇದ್ದು ಒಂದೆರಡು ಸ್ಥಳಗಳಲ್ಲಿ ದೆವ್ವ ವಗೈರೆಗಳನ್ನು ಬಿಡಿಸುತ್ತೇನೆಂದು ನಟಿಸಿ, ಜನಗಳಲ್ಲಿ ಸ್ವಲ್ಪ ದುಡ್ಡು ಕಾಸು ಜಮಾವತಿ ಮಾಡಿಕೊಂಡು, ತನಗೆ ಅಡಿಗೆ ಮಾಡಿಕೊಳ್ಳುವದಕ್ಕೆ ಕೊಟ್ಟಿದ್ದ ಪಾತ್ರೆ ಸಾಮಾನುಗಳು ಸಾಗಿಸಿಕೊಂಡು ತಾ ೬ ನೇ ರಾತ್ರಿ ಮಲಗಿದವನು ಬೆಳಗ್ಗೆ ನೋಡಲು ಪತ್ತೆಯೇ ಇಲ್ಲ ಇದುವರೆಗೂ ಪಾತ್ರೆ ಸಾಮಾನು ಕಳೆದುಕೊಂಡವರು ಪತ್ತೆ ಹಚ್ಚದೆ ಕಾದಿದ್ದಾರೆ ಮಹಾಶಯರೇ, ಇಂಥಾ ಕರುಹುಗಳುಳ್ಳ ಅವನಾಗಲಿ, ಮಂತ್ರವಾದಿಗಳಾದ ಮತ್ಯಾರಾಗಲಿ ಬಂದರೆ ಅಂಥವರನ್ನು ಸ್ವಲ್ಪ ಎಚ್ಚರದಿಂದ ನೋಡಬೇಕೆಂದು ಈ ಮೂಲಕ ತಿಳಿಸಿರುತ್ತೇನೆ

ಡಿ ಪಿ ನಂಜುಂಡಪ್ಪ

ಹಾಸನ ತಾಲ್ಲೂಕು ಗ್ರಾಮ

ಅಯ್ಯಾ,

ಮೂರು ವರುಷಗಳ ಲಾಗಾಯ್ತು ಕೆರೆ ತುಂಬದೇ ಪೈರಿಗೆ ಅನಾನುಕೂಲವಾಗಿ ನಾವು ಪಡುತ್ತಿದ್ದ ಶ್ರಮವನ್ನು ಹೇಳಲಸಾಧ್ಯವಾಗಿದೆ ಈ ವರುಷ ಪೂರಾ ಮಳೆ ಆಗಿ ಈ ಗ್ರಾಮದ ಕೆರೆ ತುಂಬಿ ಜನಗಳು ೨೦ ರೂಪಾಯಿ ಕೊಟ್ಟು ಅಂಗಡಿಯಿಂದ ಬೀಜದ ಭತ್ತ ತಂದಿದ್ದರು, ಕಳೆದ ತಾ ೪ ನೆ ಭಾನುವಾರದ ರಾತ್ರಿ ಕೆರೆ ಮಧ್ಯಭಾಗದಲ್ಲಿ ಮಣ್ಣೆಲ್ಲಾ ಕುಸಿದು ಬಿದ್ದು ಸದರಿ ಮಣ್ಣೆಲ್ಲಾ ಎರಡು ಮಾರು ದೂರ ಬಿದ್ದ ಆಶ್ಚರ್ಯವನ್ನು ಈ ಮೂಲಕ ವಿವರಿಸಲವಶ್ಯವಾಗಿದೆ ಮಾರನೇ ಬೆಳಗ್ಗೆ ನಾವುಗಳು ಕೆರೆ ಬಳಿಗೆ ಹೋಗಿ ಈ ಆಶ್ಚರ್ಯವನ್ನು ನೋಡಿದೆವು ಯಾರಿಗೂ ಏನೂ ತೋಚದೆ ಅಲ್ಲೋಲ ಕಲ್ಲೋಲವಾಗಿದ್ದೆವು ಆದರೆ ನೀರು ಒಂದು ತೊಟ್ಟೂ ಅಲ್ಲಾಡಿರಲಿಲ್ಲ ನಂತರ ನಮ್ಮ ಅಮಲ್ದಾರ್ರಿಗೆ ರಿಪೋರ್ಟ್ ಮಾಡಿದಲಾಗಿ ಅವರು ದಯಮಾಡಿಸಿ ನಾಲ್ಕೈದು ದಿವಸಗಳ ವರೆಗೆ ಬಹು ಮುತುವರ್ಜಿ ವಹಿಸಿ ಪಡುವನ್ನೆಲ್ಲಾ ಅರ್ಧಮಟ್ಟಿಗೆ ಮುಚ್ಚಿಸಿ ದಯಮಾಡಿಸಿದರು ಇವರು ಮಾಡಿದ ಸಹಾಯ ಇಷ್ಟಿಷ್ಟೆಂದು ಹೇಳುವದಕ್ಕಾಗುವದಿಲ್ಲ

ಗ್ರಾಮಸ್ಥ

ಹುಣಸೂರಲ್ಲಿ ಖೈದಿಗಳ ಪರಿತಾಪವಾದ ಸ್ಥಿತಿ

ಅಯ್ಯಾ,

ಇಲ್ಲಿನ ಅಮಲ್ದಾರ್ರವರು ಇದೇ ತಿಂಗಳು ೧ ನೇ ತಾ ಗುರುವಾರ ಹುಣಸೂರು ಟವುನ್ನಲ್ಲಿರುವ ಒಕ್ಕನೊಬ್ಬನಿಗೆ ಒಂದು ಮೊಕದ್ದಮೆಯಲ್ಲಿ ೨೦ ರೂ ಜುಲ್ಮಾನೆ ವಿಧಿಸಿ, ಸದರಿ ಜುಲ್ಮಾನೆ ಹಣವನ್ನು ಕೊಡದಪಕ್ಷಕ್ಕೆ ೭ ದಿನ ಕಠಿಣಸಜಾ ಎಂಬುದಾಗಿ ತೀರ್ಪು ಕೊಟ್ಟರು ಅಪರಾಧಿಯು ಜುಲ್ಮಾನೆ ಹಣವನ್ನು ಕೊಡಲು ತುಂಬಾ ಗರೀಬನಾದ್ದರಿಂದ ಸಜಾವನ್ನೇ ಅನುಭವಿಸಬೇಕಾಯಿತು ಸದರಿ ಖೈದಿಗೆ ಕಣ್ಣು ನೋವಿನ ಬಾಧೆ ಬಂದು ಇತ್ತ ಕಡೆ ಅನ್ನ ನೀರು ಇಲ್ಲದ್ದು ಮತ್ತೊಂದು ಈ ಕಷ್ಟಗಳನ್ನು ಆ ರಾತ್ರಿಯಲ್ಲಾ ಅನುಭವಿಸಬೇಕಾಯಿತು ಮೂರನೇ ದಿನ ಈತನಿಗೆ ಆಹಾರ ಸಿಕ್ಕಿದ್ದಾಗ್ಯೂ ಕಣ್ಣಿನ ಬಾಧೆಯೋ ಜೋರಾಗಿತ್ತು ಕಣ್ಣು ತೆರೆಯಲೂ ಬಿಸಿಲು ನೋಡಲೂ ತುಂಬಾ ಅಸಾಧ್ಯವಾಗಿತ್ತು ಇದನ್ನು ನೋಡಿ ಡಾಕ್ಟರವರು—ಈ ಖೈದಿಯು ಬಿಸಿಲಿಗೆ ಹೋಗಬಾರದೆಂದು ಸರ್ಟಿಫಿಕೇಟ್ ಹಾಜರ್ ಮಾಡಿದಾಗ್ಯೂ ಸ್ವಲ್ಪವೂ ಕನಿಕರವಿಲ್ಲದೆ ಖೈದಿಯನ್ನು ಉರಿ ಬಿಸಿಲಿನಲ್ಲಿ ಕೆಲಸ ಮಾಡಿಸಿದರು ಕಣ್ಣು ಮುಚ್ಚಿಕೊಂಡಿದ್ದ ಖೈದಿಯನ್ನು ಈ ರೀತಿಯಲ್ಲಿ ಪೋಲೀಸಿನವರು ಹೊರಗೆ ತಂದದ್ದನ್ನು ಆ ಜವಾಬಂದಿ ಕಾಲದಲ್ಲಿ ನೆರದಿದ್ದ ಬೇರೆ ಬೇರೆ ಗ್ರಾಮದ ಜನರು ನೋಡಿ ತುಂಬಾ ಪರಿತಾಪಪಟ್ಟರು ದಯಾಳುಗಳಾದ ಅಧಿಕಾರಿಗಳೇ ಇಷ್ಟು ನಿರ್ದಯ ಶಿಖಾಮಣಿಗಳಾಗಿದ್ದರೆ ಮುಂದೆ ಇಂಥಾ ಬಡಖೈದಿಗಳ ಪಾಡೇನು ! ಹಿಂದೆ ಒಬ್ಬ ಖೈದಿಯು ಕಾರಣಾಂತರದಿಂದ ಲಾಕಪ್ಪಿನಲ್ಲೇ ಸತ್ತುಹೋದದ್ದು ಸರ್ಕಾರದವರಿಗೆ ತಿಳಿದೇ ಇದೆ

ಪ್ರಜಾ ಹಿತಚಿಂತಕ

ಮಾಸ್ಟರುಗಳ ವರ್ಗಾವರ್ಗಿ

ಅಯ್ಯಾ,

ಹೀನಸ್ಥಿತಿಯಲ್ಲಿರುವ ಸ್ಕೂಲ್‌ಗಳನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ಅಪ್ಪರ್ ಸೆಕೆಂಡರಿ ಮತ್ತು ಪಂಡಿತಪರಿಕ್ಷೆ ಪ್ಯಾಸ್‌ಮಾಡಿರುವ ಹೆಡ್‌ಮಾಸ್ಟರುಗಳನ್ನು ವರ್ಗಮಾಡುವ ವಾಡಿಕೆ ಇದೆ ಇಷ್ಟು ಮಾತ್ರಕ್ಕೇ ಫಲಕಾರಿಯಾಗುವುದಿಲ್ಲ ಅಂಥಾ ಹೀನಸ್ಥಿತಿಯಲ್ಲಿರುವ ಪ್ರತಿಯೊಂದು ಸ್ಕೂಲಿನಲ್ಲಿಯೂ ಅದೇ ಸ್ಥಳದಲ್ಲಿ ದೀರ್ಘಕಾಲದಿಂದ ಸರ್ವೀಸು ಮಾಡಿರುವ ಒಬ್ಬರು ಇಬ್ಬರು ಹಳಬರಾದ ಮಾಸ್ಟರುಗಳು ತಪ್ಪದೆ ಇರುತ್ತಾರೆ ಆ ಸ್ಕೂಲು ಹೀನಸ್ಥಿತಿಗೆ ಬರಲು ಇದೇ ಮುಖ್ಯಕಾರಣ ಆದ್ದರಿಂದ ಅಂಥವರನ್ನೆಲ್ಲಾ ಪರಸ್ಥಳಗಳಿಗೆ ವರ್ಗ ಮಾಡುವ ಏರ್ಪಾಡು ಇಲಾಖೆಯವರು ಜಾರಿ ಮಾಡಬೇಕಲ್ಲದೆ, ಪ್ರತಿ ವರುಷವಲ್ಲಿಯೂ ೧೦ ವರುಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಇರುವ ಮಾಸ್ಟರುಗಳನ್ನು ವರ್ಗಾ ಮಾಡುವುದನ್ನು ಕಡ್ಡಾಯವಾಗಿಟ್ಟುಕೊಳ್ಳುವುದರಿಂದ ಎಲ್ಲಾ ಸ್ಕೂಲುಗಳೂ ಉತ್ತಮಸ್ಥಿತಿಯಲ್ಲೇ ಇರುತ್ತೆ ಕಷ್ಟಪಡುವ ಮಾಸ್ಟರುಗಳಿಗೆ ಒಳ್ಳೇ ಹೆಸರು ಬರುತ್ತೆ ಮತ್ತು ಸೋಮಾರಿ ಮಾಸ್ಟರುಗಳಿಗೆ ಕೆಲಸ ಕಲಿಸಿಕೊಟ್ಟಂತೆ ಆಗುತ್ತೆ ಇದನ್ನು ಇಲಾಖೆಯವರ ಗಮನಕ್ಕೆ ತಂದಾರೆಂದು ನಂಬಿರುವ

ಒಬ್ಬ ವಿದ್ಯಾಭಿಲಾಷಿ

ಸಂತೆಯಲ್ಲಿ ಜೂಜು ನಿಲ್ಲಿಸುವ ಉಪಾಯ

ಅಯ್ಯಾ,

ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ನಮೂದಿಸಿರುವ ಕೋಟೆಕೆರೆ ಸಂತೆಗೆ ೩ ಎಲೆ ಆಟದವರ ವಿಷಯ ನವಂಬರು ೯ ನೇ ತಾ ನೆನ್ನೆ ದಿವಸ ೨೫ ಆಟದವರು ಬಂದು ಇದ್ದರು ಡಿಟೋ ಸಂತೆಗೆ ಪೋಲೀಸು ದಫೇದಾರು ೪—೫ ಜನ ಕಾನಿಸ್ಟೇಬಲ್ ಸಹ ಬಂದಿದ್ದರು ಸದರಿ ಆಟದವರು ಇವರ ಸಹಾಯ ಅಪೇಕ್ಷಿಸುತ್ತಿರುವ ಸಂಗತಿ ವರ್ತಕ ಮುಂತಾದ ದೊಡ್ಡ ಮನುಷ್ಯರೆಲ್ಲಾ ಸೇರಿ ಆಲೋಚನೆ ಪಟ್ಟು ದೇಶದ ಪಂತಗಾರನಿಂದ ಸದರಿ ಸಂತೆಯಲ್ಲಿ ಯಾರಾದರೂ ೩ ಎಲೆ ಆಟದವರೊಂದಿಗೆ ಆಡಿದ್ದಾದರೆ ಅವರವರ ಮತಕ್ಕೆ ೧ ರೂಪಾಯಿ, ಮಹಾನಾಡು ದೇಶಕ್ಕೆ ೧ ರೂಪಾಯಿಯಂತೆ ತಪ್ಪುಕೊಡಬೇಕೆಂದು ಸಾರಿಸಿ ಮಾಡಿಸಿದ್ದರ ಮೇಲೆ ಯಾರೊಬ್ಬರೂ ಅವರಲ್ಲಿ ಆಡಲಿಲ್ಲ ಅವರ ಸಹಾಯವು ಯಾವುದೂ ನಡೆಯದೆ ಸದರಿ ಆಟಗಾರರು ಪೆಚ್ಚುಮುಖ ಬಿದ್ದು ಹೊರಟು ಹೋದರು ಈ ಸಂತೆ ದಿನೇ ದಿನೇ ಅಭಿವೃದ್ಧಿಗೆ ಬಂದು ೨—೩ ಸಾವಿರ ರೂಪಾಯಿ ವ್ಯಾಪಾರ ನಡೆಯುತ್ತೆ ಹಿಂದಣ ವಾರದ ಪತ್ರಿಕೆಯಲ್ಲಿ ಇದು ಸಾಧಾರಣ ಸಂತೆ ೫೦ ರೂಪಾಯಿ ವ್ಯಾಪಾರ ನಡೆಯದೆ ಇದ್ದಾಗ್ಯೂ ೧೦೦ ರೂಪಾಯಿನ ವರೆಗೆ ಆಟಗಾರ್ರಿಗೆ ಪ್ರಯೋಜನವೆಂದು ಖಾತ್ರಿ ಕೊಟ್ಟಿರುವದು ಮಾತ, ನಿಜವಲ್ಲ ಮುಖ್ಯವಾಗಿ ಪೋಲೀಸಿನವರು ಮುಂದೆಯಾದರೂ ಇಂಥಾ ಕಾರ್ಯಕ್ಕೆ ಮನ ಕೊಡದೆ ಇದ್ದರೆ ಆ ಇಲಾಖೆಗೆ ಒಳ್ಳೇ ಹೆಸರು ಬರುತ್ತೆ

ಜನೋಪಕಾರಿ

ಹಂದಿಗಳ ಕಾಟ

ಅಯ್ಯಾ,

ಮಂಜರಾಬಾದು ತಾಲ್ಲೂಕು ಕೆಂಚಮ್ಮನಹೊಸಕೋಟೆ ಹೋಬಳಿ ಮುತ್ತಿಗೆ ಗ್ರಾಮದಲ್ಲಿ ಪಟೇಲ್ ರಾಮೇಗೌಡರ ಕಾಫೀ ತೋಟದಲ್ಲಿ ಕಳೆದ ತಾ ೨೫ನೆ ಶನಿವಾರ ಸಾಯಂಕಾಲ ೪ ಗಂಟೆ ಸಮಯದಲ್ಲಿ ಕಾಫಿ ತೋಟದ ಆಳುಗಳು ಕೆಲಸಮಾಡುತ್ತಿದ್ದಾಗ ಆಳುಗಳ ಗಲಾಟೆಯನ್ನು ಕೇಳಿದ ಕೂಡಲೆ ತೋಟದಲ್ಲಿ ಮಲಗಿದ್ದ ಒಂದು ಹಂದಿ ಗಾಬರಿಬಿದ್ದಪ್ಪ ಬೇಲಿಯಿಂದ ಆಚೆ ಹೋಗುತ್ತಾ ಬೇಲಿ ಹೊರಗಡೆ ಕರಡಿಬೆಟ್ಟದಿಂದ ಒಬ್ಬ ಮಾದಿಗರ ಜಾತಿ ಚಲುವನೆಂಬುವನು ಬರುತ್ತಾ ಇದ್ದದ್ದನ್ನು ಕಂಡು, ಹಂದಿ ಅವನ ಬಲಗೈ ಕಚ್ಚಿ ಮೂಳೆ ತುಂಡುಮಾಡಿ ಕೆಡವಿಕೊಂಡು ಇತ್ತು ಅಷ್ಟರಲ್ಲಿ ಸದರಿಯವನು—ಕೆಟ್ಟೆನಲ್ಲಾ ! ಎಂದು ಕೂಗಿದ್ದಕ್ಕೆ ತೋಟದ ಆಳುಗಳೆಲ್ಲಾ ಬಂದು ನೋಡುವಲ್ಲಿ ಜನರನ್ನು ಕಾಣುತ್ತಲೇ ಹಂದಿ ಓಡಿಹೋಯಿತು ಗಾಯಪಟ್ಟವನಾದ ಮಾದಿಗರ ಚಲುವನೆಂಬುವನನ್ನು ಕೂಡಲೆ ಕರಡಿಬೆಟ್ಟಕ್ಕೆ ಕರೆದುಕೊಂಡು ಹೋಗಿ ತಾ ೪ನೆ ಬಾನುವಾರ ಹಾಸನದ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಇಂಥಾ ಅನಾಹುತಗಳು ಈ ಪ್ರಾಂತ್ಯ ಹಂದಿಗಳಿಂದ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುವದು ನೋಡಿದರೆ ಸರ್ಕಾರದವರು ಬೇಟೆಯಾಡುವದನ್ನು ತಪ್ಪಿಸಿರುವದರಿಂದ ಈ ರೀತಿ ಜನಗಳ ಮೇಲೂ ಪೈರು ಫಲಗಳ ಮೇಲೂ ಬಿದ್ದು ಹಾಳುಮಾಡುತ್ತವೆ ಮತ್ತು ಈ ಪ್ರಾಂತ್ಯ ರೈತರಿಗೆ ತರಿ ಫಸಲು ಈ ಸಾಲಿನಲ್ಲಿ ಕೈಗೆ ಸಿಕ್ಕುವ ಹಾಗೆ ಕಾಣುವದಿಲ್ಲ ನಷ್ಟಪಡಿಸಿ ಹೋಗುತ್ತವೆ ಕಾವಲು ಕಾಯುವದಕ್ಕೆ ಸಣ್ಣ ಸಣ್ಣ ಗ್ರಾಮದಲ್ಲಿ ಒಂದು ಅಥವಾ ಎರಡು ಮನೆಗಳಿದ್ದವರು ಹೋದರೆ ಮನೆ ಕಡೆ ಕಳ್ಳರ ಕಾಟ ಒಂದು ಕಡೆ, ಹೋಗದೆ ಬಿಟ್ಟರೆ ಈ ಸಾಲಿನ ಕಂದಾಯ ಕೊಡಲಿಕ್ಕೂ ತಿನ್ನುವ ಅನ್ನಕ್ಕೂ ಇಲ್ಲದ ಹಾಗೆ ಆಗುತ್ತೆ ಬಡ ರೈತರಾದವರಿಗೆ ಯಾವ ಯೋಚನೆಯೂ ತೋರುವದಿಲ್ಲ ಆದ್ದರಿಂದ ದಯಾಳುವಾದ ಸರ್ಕಾರದವರು ಪ್ರತಿ ಒಂದು ಗ್ರಾಮದಲ್ಲಿ ಬೇಟೆಯಾಡಿ ಹಂದಿಗಳನ್ನು ನಿರ್ಮೂಲಮಾಡಿಸಿದರೆ ರೈತರಿಗೆ ಬಹಳ ಉಪಕಾರ ಮಾಡಿದಂತೆ ಆಗುತ್ತೆ

ಮುತ್ತಿಗೆ ವಾಸಿ

ತಪ್ಪು ತಿದ್ದುವುದು

ಅಯ್ಯಾ,

ನಿಮ್ಮ ಇದೇ ಮಾಹೆ ೧೫ ನೇ [illegible] ಪತ್ರಿಕೆಯಲ್ಲಿ ಪಕೀರ ಮೊಕದ್ದಮೆ ವಿಷಯ ಬರೆದಿರುವದರಲ್ಲಿ ನಿಮ್ಮ ಖಾತ್ರಿ ಸರಿಯಾದ ವರ್ತಮಾನ ಬರದಂತೆ ತೋರುವದಿಲ್ಲ ಕೆ ಬ ರಾಮಿನಲ್ಲಿ ಸ್ಕೂಲ್ ಮಾಸ್ಟರುಗಳು ಇಬ್ಬರ ಪೈಕಿ ಒಬ್ಬರು ಒಂದು ಉಂಗುರವನ್ನು ಎರವಲಾಗಿ ತೆಗದುಕೊಂಡು ಹೋಗಿ ಲ್ಲಿ ಕಳೆದ್ದಕ್ಕೋಸ್ಕರ ಪಂಚಾಯತಿ ನಡದು, ಅದರ ಕ್ರಯ ಹಣವು ಕೊಡಬೇಕೆಂತ ಕೆ ಬಿ ರಾಮರಾಯರೂ, ೨೪ ದು ತೆಗದುಕೊಳ್ಳಬೇಕೆಂತ ಗ್ರಾಮಸ್ಥರು ಹೇಳಿದ ಪ್ರಕಾರ ರಾಮ ಒಪ್ಪದೆ ಹೋದ್ದರಿಂದ ಸ್ಕೂಲ್ ಮಾಸ್ಟರುಗಳನ್ನು ಎ ಧ್ಯಾನ್ಹ ಲಾಗಾಯಿತು ೫ ಘಂಟೆ ವರಿಗೂ ಅಕ್ರಮ ಖೈದುಮಾಡಿ, ಉಂ ಳುವುಮಾಡಿದ್ದೇವೆಂತ ಹೇಳಿ, ಕೆ ಬಿ ರಾಮರಾವ್ ಸ ಲಿಗೆ ಮಾ ಡದಂತಲೂ ನಾಗಪ್ಪ ವೆಂಕಟೇಶಯ್ಯ ಇವರಿಗೆ ಸಹಾಯ ಲೂ ಫಿರ್ಯಾದು ಬಂತು ಸುಲಿಗೆ ಅಲ್ಲ ಎರವಲು ತೆಗದು ಹೋಗಿ ಕಳದ ಉಂಗುರದ ಕ್ರಯ ಎಂತ ಅಪರಾಧಿಗಳು ಉಭಯತ್ರರ ಕಡೇಲೂ ವಿವಾದ ನಡದು, ಕಡೆಗೆ ಕೋರ್ಟು ೧ ನೇ ರಾಮರಾಯನಿಗೆ ೩ ವಾರ ಸಾದಾ ಸಜಾ, ೩೦ ರೂಪಾಯಿ ಜುಲ್ಮಾನೆ ೨ ನೇ ನಾಗಪ್ಪನಿಗೆ ೨ ವಾರ ಸಾದಾ ಸಜಾ, ೨೦ ರೂ ಜುಲ್ಮಾನೆ, ೩ ನೇ ವೆಂಕಟೇಶಯ್ಯನಿಗೆ ೨೦ ರೂಪಾಯಿ ಜು ತೀರ್ಪು ವಿಧಿಸಿದರು ಮ್ಯಾಜಿಸ್ಟ್ರೇಟರವರು ಸರ್ಟಿಫಿಕೇಟು ಪ ಬ್ಬಿಗೆ ಜಮಾಬಂದಿಗೆ ಹೊರಟುಹೋದರು ನಂತರ ಬಹಳ ಕ್ರಮ ಅಪರಾಧಿಗಳ ಕಡೆ ಜನಗಳು ಜಡ್ಜಮೆಂಟು ಕಾಪಿ ಪಡೆದು, ಕೋರ್ಟಿಗೆ ಅಪ್ಪೀಲ್ ದಾಖಲ ಮಾಡಿದ್ದರ ಮೇಲೆ ಅಪೀಲ್ ಗ್ ನಿರೀಕ್ಷಣೆಯಿಂದ ಅಪರಾಧಿಗಳಿಗೆ ಜಾಮೀನುಮೇಲೆ ಬಿಟ್ಟಿದ್ದಾರೆ.

ಸತ್ಯಾಭಿಲಾಷಿ

ಅರ್ಕಸಾಲೆಯವರ ಹೀನಸ್ಥಿತಿ

ಅಯ್ಯಾ,

ಈ ನಮ್ಮ ಮೈಸೂರು ಸೀಮೆಯಲ್ಲಿ ಮೇಲ್ಕಂಡ ಮತ ಅನೇಕ ಜನಗಳು ಇದ್ದಾರೆ ಪೂರ್ವದಿಂದಲೂ ಒಂದೇ ಉದ್ಯೋಗ ಇರುತ್ತಾರಲ್ಲದೆ ತಮ್ಮ ಬುದ್ಧಿ ಚಮತ್ಕಾರದಿಂದ ಯಾವ ಉ ನ್ನೂ ಕಂಡು ಹಿಡಿಯಲಿಲ್ಲ ಮತ್ತು ಬಹು ಮಟ್ಟಿಗೆ ಬುದ್ಧಿ ರಾಗಿ ಜೀವನೋಪಾಯವಿಲ್ಲದೆ ಶ್ರಮಪಡುತ್ತಾ ಇದಾರೆ ಇಂ ದೇಶವಾದ ಕಾಲದಲ್ಲೂ ಕೂಡ ಮೇಲ್ಕಂಡ ಜನಗಳು ಬೇರೆ ಯಾ ಪಾಯವೂ ತೋಚದೆ ಪಾರಂಪರ್ಯವಾಗಿ ಅಂದರೆ ಪೂರ್ವದಿಂದ ದು ಬಂದ ಕಸಬಿನಲ್ಲೇ ಕಾಲಕ್ಷೇಪ ಕಳೆಯುತ್ತಾ ಇದಾರಲ್ಲ ಥಾ ಧನಿಕರಾಗಿ ತಕಲ್‌ನವರಿಗೂ ಕಾಣಲಿಲ್ಲ ಮತ್ತು ಇವರು ಮಾ ಕೆಲಸವಾದರೂ ಈಗ ಅನೇಕ ದೇಶದಿಂದ ಯಂತ್ರ ಮೂಲಕ ರಾಗಿ ಬರುವ ಕೆಲಸಕ್ಕೂ ಈ ನಮ್ಮ ದೇಶದಲ್ಲಿ ತಯಾರಾಗುವ ಸರಕ್ಕೂ ಹೋಲಿಸಿ ನೋಡಿದರೆ ಅರುವಾರು ಭಾಗದಲ್ಲಿ ಒಂದು ಭಾ ದರೂ ಹೋಲುವದಿಲ ಈ ದೇಶದಲ್ಲಿ ಅನೇಕ ವರ್ತಕರು ಯಿಂದ ಲಕ್ಷಾಂತ್ರ ಗಟ್ಟಲೆ ಆಭರಣಗಳನ್ನು ತರಿಸಿ ಮಾರಾಟ ಲಾಭಹೊಂದಿ ಸುಖಪಡುತ್ತಾ ಇದಾರೆ ಈ ಮೇಲ್ಕಂಡ ಮ ನಿರುದ್ಯೋಗಿಗಳಾಗಿ ವೃಥಾ ಕಾಲಹರಣಮಾಡುವದಕ್ಕೆ ಯಾವ ಸ ವೂ ಇರುವದಿಲ್ಲ ಸೋಮಾರಿಯಾದ ಜನಗಳಿಗೆ ಆಕಸ್ಮಾತ್ತಾ ಲಾ ವಗೈರೆ ಬಂದರೆ ಗ್ರಾಸಕ್ಕೆ ಅನಾನುಕೂಲ ಆಗದೆ ಇರು ಕಷ್ಟ ಕಾಲದಲ್ಲಿ ಬಡ್ಡಿ ಸಾಲ ವಗೈರೆ ಮಾಡಿ ಚೇತರಿಸಿಕೊಂಡು ಮುಕ್ತರಾಗುವದರಲ್ಲಿಯೇ ಮೃತ್ಯುವಿಗೆ ಈಡಾಗುವರು ಇವರ ಪುತ್ರರು ಸಹ ಋಣ ಭಾರಕ್ಕೆ ಪಾತ್ರರಾಗಿ ಗ್ರಾಸವಿಲ್ಲದೆ ದಾರಿದ್ರ್ಯ ತೌರುಮನೆಯಾಗಿರುವರು ಮೇಲ್ಕಂಡ ಮತದವರು ಕಾಲ ಎನ್ನುವದಾಗಿ ಮೂಢತೆಯಿಂದ ಮಕ್ಕಳಿಗೂ ಸಹ ಇದನ್ನೇ ಕಲಿಸುತ್ತಾ ಇರುತ್ತಾರೆ ಇನ್ನು ಮೇಲಾದರೂ ಈ ನಮ್ಮ ಅರ್ಕಸಾಲೆಯವರು ಸಣ್ಣ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ ಒಳ್ಳೇ ಮಾರ್ಗಕ್ಕೆ ಕಲ್ಲದೆ ಬರೇ ಉದ್ಯೋಗದಲ್ಲಿ ಮಾತ್ರ ಎಂದಿಗೂ ಅಭಿವೃದ್ಧಿಗೆ ಬಾರರು ವಿದ್ಯೆ ಎನ್ನತಕ್ಕದ್ದು ಸಮಸ್ತ ಕೈಗಾರಿಕೆ ಕೆಲಸಕ್ಕೂ ಮೂಲವಾದದ್ದು ಬುದ್ಧಿಕುಶಲತೆಗಳನ್ನು ಉಂಟು ಮಾಡತಕ್ಕ ಆಪತ್ಕಾಲಕ್ಕೂ ಸಹ ಬಂಧು ಪ್ರಾಯವಾದದ್ದು, ಕಾಮಧೇನುವಿನಂತೆ ಸಕಲ ಇಷ್ಟಾರ್ಥಗಳನ್ನೂ ಕೊಡುವಂಥಾದ್ದು ಆದ್ದರಿಂದ ಎಂ ಪ್ರಯಾಸವಾಗಲಿ ಮಕ್ಕಳಿಗೆ ವಿದ್ಯವನ್ನು ಬೋಧಿಸಿ ಮಾಡಿ, ಸೌಖ್ಯ ಯಾತಕ್ಕೆ ಹೊಂದಬಾರದು ? ಮತ್ತು ಮೈಸೂರು ಸರ್ಕಾರ ನಮ್ಮ ಸೀಮೆಯಲ್ಲಿ ಎಲ್ಲಾ ಮತದವರೂ ವಿದ್ಯೆ ಕಲಿಯುವ ಸ್ಕರ ವಿದ್ಯಾಶಾಲೆಯನ್ನಿಟ್ಟು ಜನರು ಸುಲಭವಾಗಿ ವಿದ್ಯೆ ಐಶ್ವರ್ಯ ಹೊಂದಲೆನ್ನುವದಾಗಿ ಕೋಟ್ಯಂತರ ರೂಪಾಯಿ ಮಾಡುವದು ಮೇಲ್ಕಂಡ ಅಜ್ಞಾನಿಗಳಿಗೆ ತಿಳಿಯದೆ ಇಲ್ಲ ಷ್ಯವನ್ನು ಕಲಿಸಿ, ಇನ್ನೂ ಭೂಶಿಲ್ಪ ಮೊದಲಾದ ಅನೇಕ ಸ್ತ್ರಗಳನ್ನು ಓದಿ ಭೂಮಿಯಲ್ಲಿ ಇರುವಂಥಾ ವಸ್ತುಗಳನ್ನು ಹಿಡದು ಸರ್ಕಾರಿ ಸಹಾಯದಿಂದಲೂ ಸಾಹುಕಾರಿ ಸಹಾಯದಿಂ ಭಾರಿ ಸಂಘಗಳನ್ನು ಏರ್ಪಡಿಸಿ, ಯಂತ್ರ ಮೂಲಕ ಮಾಡತಕ್ಕ ನ್ನು ತಿಳಿದು ಧನಲಾಭ ಹೊಂದಿ ಮರ್ಯಾದೆಯನ್ನು ಪಡೆಯ ಮೇಲ್ಕಂಡ ಅರ್ಕಸಾಲೆ ಮತಸ್ಥರು ಅಂಧಕಾರದಲ್ಲಿ ಸಬು ಎಂಬುವ ಅಭಿಮಾನವನ್ನು ಹಿಡದು ತಾವೂ ಕೆಟ್ಟು ಕ್ಕಳನ್ನೂ ಕ್ಷೀಣಗತಿಗೆ ತರುತ್ತಿದ್ದಾರೆ ಆದ್ದರಿಂದ ವಿದ್ಯೆ ದದ್ದು ಸರ್ವರೂ ಮಕ್ಕಳಿಗೆ ಚನ್ನಾಗಿ ವಿದ್ಯೆ ಕಲಿಸಿ, ನಂತರ ಕೈಗಾರಿಕೆಯನ್ನೂ ತಿಳಿಸುವದು ಅವಶ್ಯವಾಗಿದೆ

ಅಕ್ಕಸಾಲಿ

ವಿತಂತುಗಳ ಹೀನಸ್ಥಿತಿ—ಜವಾಬು

ವಿತಂತುಗಳ ಹೀನಸ್ಥಿತಿಯ ವಿಚಾರದಲ್ಲಿ ನನ್ನ ಸಹೋದರಿಯಾದ ...ದ್ಮಾವತಿ ಬಾಯಮ್ಮನೆಂಬ ವಿದ್ಯಾವತಿಯು ಬರೆದಿರುವ ಬಾಕ್ತಿ ...ಬು ಶ್ಲಾಘನೀಯವಾಗಿದೆ ನಮ್ಮ ಗಂಡಸರನ್ನು ಆಕ್ಷೇಪಿಸಿ ...ವಿಷಯದಲ್ಲಿ ಮಾತ್ರ ನಾನು ಒಪ್ಪಲಾರೆನು ಏಕೆಂದರೆ ನಮ್ಮ ...ಮಗೆ ಸ್ವಾತಂತ್ರ್ಯ ಕೊಡದೇನೇ ಎಷ್ಟೋ ಅನಾಹುತಕ್ಕೆ ...ದಾಗಿದ್ದೇವೆ ಆದುದರಿಂದಲೇ "ನಸ್ತ್ರೀ ಸ್ವಾತಂತ್ರ್ಯ ಮರ್ಹ ...ಎಂಬ ಪ್ರಮಾಣವಚನ ಹುಟ್ಟಿದೆ ಪ್ರಕೃತ ವಿದ್ಯಾಭ್ಯಾಸ ವಿಷ ...ನಮ್ಮ ಗಂಡಸರು ನಮ್ಮಗಳನ್ನು ವಿದ್ಯಾವತಿಯರನ್ನಾಗಿ ಏಕೆ ...ಮಾಡಲಿಲ್ಲವೆಂಬುವದಕ್ಕೆ ಈ ಕಾರಣವಿರಬಹುದು ನಾವು ಸ್ವಲ್ಪ ವಿದ್ಯೆಯನ್ನು ಕಲಿತ ಒಡನೆಯೇ ನಮ್ಮ ಸಹೋದ್ರರು ...ಏನು ಬುದ್ಧಿವಂತರು? ಅವರೇನು ಬಲ್ಲರು ಎಂಬಿವೇ ...ಗಿ ಆಕ್ಷೇಪಿಸಲು ಪ್ರಾರಂಭಿಸುತ್ತೇವೆ ಒಂದು ವೇಳೆ ಕಾಲೇ ...ಸ್ಕೂಲುಗಳಲ್ಲಿ ಓದಿ ಯಾವದಾದರೊಂದು ಪರೀಕ್ಷೆಯಲ್ಲಿ ...ಯನ್ನು ಹೊಂದಿದ್ದೇಯಾದರೆ ಗಂಡಂದಿರ, ತಂದೆ ತಾಯಿಗಳ, ...ಮಾವಂದಿರ ಮತ್ತೂ ಸಹೋದರರ ವಿಷಯದಲ್ಲಿ ನಮಗುಂಟಾ ...ಲಕ್ಷ್ಯವನ್ನು ಏನೆಂದು ಹೇಳಲೀ! ನಮ್ಮ ಸಹೋದ್ರಿಯರಲ್ಲಿ ...ಯುನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ರಷ್ಟ ...ಅನೇಕರು ತಮ್ಮ ಗಂಡಂದಿರ, ತಂದೆ ತಾಯಿಗಳ, ಅತ್ತೆ ಮಾ ...ಮತ್ತು ಸಹೋದರರ ವಿಷಯದಲ್ಲಿ ಮೈಸೂರ್ ಮತ್ತು ಬೆಂಗ ...ಪಟ್ಟಣಗಳಲ್ಲಿ ನಡೆದುಕೊಳ್ಳುತ್ತಿರುವ ವಿಚಾರವನ್ನು, ಸಹೋ ...ವರ್ತಮಾನ ಪತ್ರಿಕೆಗಳಿಂದಾಗಲೀ, ಯಾ ಯಾರಿಂದಲೂ ...ದಿಂದಾಗಲೀ ಕೇಳಿರುವೆನಷ್ಟೆ ಅಲ್ಲದೆ ಯಾರಿಗಾದರೂ ...ಬೇಕಾಗಿದ್ದರೆ ಮೈಸೂರಿನಲ್ಲಿ ಇಂತಾ ಸ್ಥಳದಲ್ಲಿ ಕೇಳ್ಬದೆ ...ಮಾಡಿಕೊಳ್ಳಿ ಎಂದು ಹೇಳಿದ ಕೂಡಲೇ, ಅಯ್ಯೋ! ...ಕೆಟ್ಟೆ! ನಮ್ಮ ಕುಲ ಗಸು ಗಂಡಸಿಗೆ ಗುಲಾಮನಾಗ ಬೇಕೆ! ...ನಮಗೆ ಬೇಡ, ನನಗೆ ಬೇಡ ಎನ್ನುವರು ಹೀಗೆಲ್ಲಾ ಹೇಳು ...ವೇ ಕಾರಣ ನಾವು ಕಲಿತ ವಿದ್ಯೆಯನ್ನು ಒಳ್ಳೇ ರೀತಿಯಲ್ಲಿ ...ಉಪಯೋಗಿಸುವದಿಲ್ಲ ನಾವು ವಿದ್ಯಾವತಿಯರಾಗಿ ನಮ್ಮ ಗಂಡಂದಿರ, ...ತಾಯಿಗಳ ಮತ್ತೂ ಅಣ್ಣ ತಮ್ಮಂದಿರ, ಕಾರ್ಯಗಳಲ್ಲಿ ಸಹಾಯ ...ಬೇಕಾದ್ದೇ ಧರ್ಮ ಹಾಗೆ ನಾವು ಸಹಾಯಕರಾಗಿರದೇ ಅವ ...ಲಕ್ಷ್ಯದಿಂದ ಕಾಣುವದರಿಂದ ನಮ್ಮ ವಿದ್ಯಾಭ್ಯಾಸ ವಿಷಯದಲ್ಲಿ ...ಆಸಕ್ತಿಯುಳ್ಳವರಾಗಿಲ್ಲ ನಾವು ಅವರ ವಿಷಯದಲ್ಲಿ ಸರಿಯಾ ...ನಡೆದುಕೊಳ್ಳುವ ಯೋಗ್ಯತೆಯು ಉಂಟಾದ ಒಡನೆಯೇ ನಮಗೆ ...ಮಾಡಿಸಬೇಕೆಂದು ಇಚ್ಛೆಯು ಮಾಡಬಹುದು ನಮಗೆ ...ಯೋಗ್ಯತೆಯನ್ನು ಸಂಪಾದಿಸುವ ಸ್ಥಿತಿಯು ಒದಲಿಲ್ಲ ...ಘನವನ್ನು ಹೊಂದಿದ ಬಾನರ್ಜಿ, ಗೋಕಲೆ ಮತ್ತು ತಿಲ ...ಕರೆ ನಿಂದಿಸಬೇಕು? ನಾವು ಅಂಥಾ ಯೋಗ್ಯತೆಯನ್ನು ...ಹೊಂದುವದಕ್ಕೆ ಇನ್ನೂ ಅರ್ಹರಾಗಿಲ್ಲವೆಂದು ಅವರೆಲ್ಲರಿಗೆ ತಿಳಿದಿ ...ಹೊಂದಲೇ ನಮ್ಮನ್ನು ಕಂಡರೆ ಅಲಕ್ಷ್ಯವಾಗಿರುವರು ಇದು ...ಇದು ಕೆಟ್ಟದ್ದು ಎಂಬುವುಗಳನ್ನು ಗ್ರಾಹ್ಯಮಾಡುವ ಶಕ್ತಿ ...ಇನ್ನೂ ಉಂಟಾಗಿಲ್ಲ ಅಂಥಾ ಗ್ರಾಹ್ಯಶಕ್ತಿಯು ಇಲ್ಲದಿರೋ ...ಬಾಲ್ಯವಿವಾಹಕ್ಕೆ ಕಾರಣವು ಪತಿಯ ವಿಯೋಗವಾದರೆ ...ಆದಿ ಅನರ್ಥಗಳಿಗೂ ಕಾರಣ ಇಂಥಾ ನಮಂತಹವರೇ ಮೊದ ...ಹಿಂಸೆಗಳನ್ನೆಲ್ಲಾ ಗ್ರಾಹ್ಯ ನಮ್ಮ ವಿತಂತುಗಳೇ ಇಂದ್ರಿಯ ...ಮಾಡದೇಲೂ, ಸನ್ಯಾಸಿನಿಯರಾಗದೇಲೂ, ಭ್ರೂಣ ಹ ...ಮಹಾ ಪಾತಕಗಳಿಗೆ ಕಾರಣರಾಗಿದ್ದಾರೆ ಹಾಗೆ ಒಂದು ವೇಳೆ ...ವೇದಲಾದ ಹಿಂದೆಗಳನ್ನಿಡದೆ ನಮ್ಮ ಇಷ್ಟಾನುಸಾರ ನಡೆ ...ಬಿಟ್ಟನಂತೆ ನಮ್ಮನ್ನು ಬಿಟ್ಟರೆ ನಮ್ಮ ಸ್ವಭಾವವನ್ನು ತೋರಿ ...ಸುಖವುಂಟೇನಿದೆ? ಆದುದರಿಂದ ಸಹೋದರಿಯರೇ! ನಾವು ...ನ್ನು ಕಲಿತು, ಈ ರೀತಿ ನಡೆದ ಕೊಳ್ಳಬೇಕು ಈ ರೀತಿ ...ಕೊಳ್ಳಬಾರದು ಎಂಬ ತಾರತಮ್ಯ ಶಕ್ತಿಯು ಉಂಟಾಗುವವ ...ನಾವು ಸುಮ್ಮನಿರ ಪ್ರಭು ಒಳ್ಳೇಯದಲ್ಲವೇ!

ಕೋಲಾರದ ಪದ್ಮಾವತಿ ಬಾಯಮ್ಮ

ತಾಲ್ಲೂಕು ವರ್ತಮಾನಗಳು.

ಆನೇಕಲ್—ಆನೇಕಲ್ ತಾಲ್ಲೂಕು ಸರ್ಜಾಪುರದಲ್ಲಿ ಈ ತಿಂಗ ...ಳ ಆರಂಭದಿಂದ ೨ ನೇ ತೇದಿ ವರೆಗೆ ೨ ಜಡ ಮಳೆ ಆಗಿದೆ. ಇಲ್ಲಿನ ...ಸುಭಿಕ್ಷವಾಗಿದೆ ಪ್ಲೇಗು ಗಲಾಟೆ ನಿಂತು ಹೋಯಿತು ಊ ...ಬಿಟ್ಟ ಜನರು ಊರು ಸೇರಿದರು ಚಳಿಜ್ವರಗಳು ವಿಶೇಷವಾ ...ನವಂಬರು ೪ ನೇ ತೇದಿಯಲ್ಲಿ ಒಬ್ಬ ಪಿಂಜಾರದ ಹುಡುಗನು ...ಪಠಾಣದ ಕುಂಟೆಯಲ್ಲಿ ಎಮ್ಮೆಗಳನ್ನು ನೀರಿನಲ್ಲಿ ಹೊಡೆಯು ...ಹೋಗಿ ಎಮ್ಮೆಯ ಬಾಲವನ್ನು ಹಿಡಿದುಕೊಂಡು ನೀರಿನ ಮಾ ...ಇದ್ದನು ಒಬ್ಬ ಪುಣ್ಯಾತ್ಮನು ಆ ಹುಡುಗನನ್ನು ಮೇಲ ...ತೆಗೆದು ಹಾಕಿದನು ಅವನಿಗೆ ಏನೂ ಅಪಾಯವಾಗಲಿಲ್ಲ ತಾ ೬ ...ನಮ್ಮ ತಾಲ್ಲೂಕು ಅಮಲ್ದಾರರು ಬಂದು ೩—೪ ದಿನಗಳು ...ಜಮಾಬಂದಿ ತಾಲ್ಲೂಕು ಜಮಾಬಂದಿ ನೋಡಿಕೊಂಡು ಹೋದ ...ಈ ಊರಿಗೆ ಬಂದು ಮೈಲಿ ಫಾಸಲೆ ತಿಂಡ್ಲುಗ್ರಾಮದಲ್ಲಿ ಪ್ಲೇ ...ಗಿ ಹತ್ತು ಜನ ಮೃತಪಟ್ಟರು ಗಲಾಟೆ ಸಾಧಾರಣವಾಗಿದೆ. ತಿಂ ...ಸಮೀಪದಲ್ಲಿ ಬಟ್ಟೆ ಒಗೆಯುವ ಕುಂಟೆಯ ಹತ್ತಿರ ಒಂದು ಮ ...ಅಸಾಧ್ಯವಾದ ದೊಡ್ಡ ಜೇನು ಇತ್ತು ಸರ್ಜಾಪುರದಿಂದ ಆಗ ...ಬಟ್ಟೆ ಒಗೆಯುವದಕ್ಕೆ ಹೋಗಿರುವಾಗ ಅಂತರಿಕ್ಷದಲ್ಲಿ ಸಂಚಾರ ...ಕಂತಿ ಎಂಬ ಪಕ್ಷಿಯು ಬಂದು ಆ ಜೇನನ್ನು ಗಾಬರಿ ...ಜೇನು ಹುಳುಗಳು ಎದ್ದು ಜನಗಳನ್ನು ಬಾಧಿಸಿತು ಹನ್ನೆ ...ರಿಗೆ ಕಚ್ಚಿತು ಅಲ್ಲಿದ್ದವರು ನಾಲ್ಕು ಜನ ಮಾತ್ರ. ...ಅಪಾಯವೇನೂ ಸಂಭವಿಸಲಿಲ್ಲ ನಮ್ಮ ಗ್ರಾಮದ ಪೈಕಿ ...ಕತ್ತೆಗಳು ಮೃತಪಟ್ಟವು ತಿಂಡ್ಲು ಗ್ರಾಮದ ಕತ್ತೆಗಳ ಪೈಕಿ ...ಸತ್ತವು ಮಿಕ್ಕ ಕತ್ತೆಗಳೂ ಸಾಯುವ ಸ್ಥಿತಿಯಲ್ಲಿವೆ

ಹೊಳೆನರಸಿಪುರ—ಈಚೆಗೆ ಮಳೆಯು ನಿಂತದ್ದರಿಂದ ಕಿರಾ ಣಿ ಫಸಲಿಗೆ ಜೀವ ಬಂದಂತಾಯಿತು ಊರು ಪಾಕೀದು ವಿಷಯ ದಲ್ಲಿ ತೃಪ್ತಿಕರವಾಗಿದೆ ಧಾರಣೆವಾಸಿಗಳು ಬರ ಬರ ತಗ್ಗಾಗುತ್ತಲಿವೆ ಅಲ್ಲದೆ ಸಂತೆಯು ಊರಾಚೆ ಇರುವದರಿಂದ ಜನಗಳ ಕಷ್ಟಗಳು ಎಷ್ಟು ಹೇಳಿದರೂ ತೀರದು—ಕಟುಕರ ಅದ್ಭುತವಾದ ತಕ್ಕಡಿಯಿಂದ ಜನ ಗಳಿಗೆ ಬಹು ಮೋಸವುಂಟು ತಕ್ಕಡಿಯ ಮೇಲ್ಭಾಗದ ಮುಳ್ಳುಗಳು ಇದರ ಪಕ್ಕಗಳ ತಗಡಿಗೂ ಸೇರಿದೆ ಕಡಿಮೆಯಿದ್ದರೂ ಕೈಯನ್ನು ತಿರುಗಿಸಿ ಹಿಡಿದರೆ ಸರಿಯಾಗಿಯೇ ನಿಲ್ಲುವದು ಆದ್ದರಿಂದ ಅಮಲ್ದಾರರು ಈ ತಕ್ಕಡಿಗಳನ್ನು ವಜಾ ಮಾಡಿಸಿ ವರ್ತಕರು ತೂಗುವ ತಕ್ಕಡಿಗಳನ್ನು ಇಡುವ ಹಾಗೆ ಅಪ್ಪಣೆ ಮಾಡಬೇಕೆಂದು ಪ್ರಾರ್ಥನೆ—ಹಿಂದೆ ನಡೆದ ಕೊಲೆಯ ಪತ್ತೆಯು ಸ್ವಲ್ಪ ಕಣ್ಣು ತೆರೆದ ಹಾಗೆ ಕಾಣುವದು ಈಚೆಗೆ ಗುಮಾನಿಯಿಂದ ತಿರುಮಲಿ, ಗೋವಿಂದ, ಅಳಗಿ, ವೆಂಕಟರಮಣ, ಕಂಬದನರಸಮ್ಮಯ್ಯ, ಚಲುವಯ್ಯ, ಮಗ್ಗರೆ ಆರು ಜನಗಳನ್ನು ತನಿ ಖೆ ಮಾಡುತ್ತಾ ಇದಾರೆ ಇಷ್ಟರಲ್ಲೇ ಪತ್ತೆ ಆಗಬಹುದೆಂದು ನಿರೀಕ್ಷಿ ಸಲ್ಪಟ್ಟಿದೆ ಊರಲ್ಲಿ ಯಾವ ಬೀದಿಯಲ್ಲಿ ನೋಡಿದರೂ ಇದೇ ಸುದ್ದಿ ಯೇ ಆಗಿದೆ. ಪತ್ತೆ ಮಾಡಲು ಕಷ್ಟಪಡುವವರಿಗೆ ಬಹುಮಾನವನ್ನು ಕೊಡುವದಾದರೆ ಮುಂದೆ ಇಂಥಾ ಸಂದರ್ಭಗಳಲ್ಲಿ ಬಹಳ ಆಸಕ್ತಿ ಹುಟ್ಟುವದು ಆದ್ದರಿಂದ ಮೇಲಿನ ಅಧಿಕಾರಿಗಳು ಈ ವಿಷಯವನ್ನು ಗಮನಕ್ಕೆ ತಾರುವರೆಂದು ನಂಬಿದ್ದೇನೆ

ತೀರ್ಥಹಳ್ಳಿ ತಾ—ನಾಲೂರು ಬಾಕ್ಕಿದಾರರು ಬರೆಯುವ ದು—ಹೊನ್ನೆತಾಳು ಗ್ರಾಮದ ಬಿಳಗಾರೆ ತಿಮ್ಮಪ್ಪಗೌಡರೆಂಬುವರು ತಮ್ಮ ಅಡಿಕೆತೋಟದ ಕೆಲಸ ಮಾಡುವದಕ್ಕೆ ಒಬ್ಬರು ಗಟ್ಟದ ಕೆಳಗಿ ನ ಪೇರೆಗಾರರಿಗೆ ಮುಂಗಡ ಕೊಟ್ಟಿದ್ದರು ಸದರಿ ಪೇರೆಗಾರರು ಇದೇ ತಿಂಗಳು ಕಳೆದ ತಾ ೧೨ ನೇ ಸೋಮವಾರ ಕೆಲವು ದಿವಸಗಳ ಲಾಗಾ ಯ್ತು ಮಾಡುತ್ತಿರುವ ಕೆಲಸವನ್ನೇ ಎಂದರೆ ಬಂದರೆಯಲ್ಲಿ ಬಹಳ ಮಣ್ಣನ್ನು ತೆಗೆದಿದ್ದರಿಂದ ಕಾರಣ ಅದೇ ಸ್ಥಳದಲ್ಲಿ ಸ್ವಲ್ಪ ಒಳಗಡೆಯಿಂ ದ ಮಣ್ಣನ್ನು ಸಾಗಿಸುತ್ತಾ ಐದು ಜನ ಕೆಲಸ ಮಾಡುತ್ತಿರುವ ಕಾಲ ದಲ್ಲಿ ಆಕಸ್ಮಿಕವಾಗಿ ಮೇಲಿನಿಂದ ಧರೆಯು ಕುಸಿದುಬೀಳಲು, ಅವರ ಪೈಕಿ ಕೆಲವರು ಚದರಿ ಹಾರಿದರು. ಈ ಪೈಕಿ ಎರಡು ಜನರು ಒಳಗೆ ಸಿಕ್ಕಿದರು ಇವರ ಪೂರಾ ದೇಹವು ಮಣ್ಣು ಕಲ್ಲಿನಿಂದ ಮುಚ್ಚಿಯೇ ಹೋಗಿ ಒಬ್ಬನ ಮುಖಮಾತ್ರ ಕಾಣುತ್ತಿತ್ತು ಕೂಡಲೆ ಅಲ್ಲಿದ್ದ ಬೇ ರೆಯವರೆಲ್ಲಾ ಓಡಿಬಂದು ಹಾರೆಯಿಂದ ಮಣ್ಣನ್ನು ಕೆರೆಯುತ್ತಾ ಬರುವಲ್ಲಿ ಇವರಿಬ್ಬರಿಗೂ ಪ್ರಾಣವೇ ಹೋಯಿತೆಂದು ಯೋಚಿಸಿದ್ದ ರು ಅದೇ ರೀತಿ ಇವರು ಶ್ವಾಸ ಸಹಾ ಬಿಡುತ್ತಿರಲಿಲ್ಲ ನಂತರ ಕಾಲು ಘಂಟೆಯ ಮೇಲೆ ಶ್ವಾಸಬಿಡಲು ಶುರುಮಾಡಿದರು ನಂತರ ತೆಗೆದುಗೆ ದು ನೋಡುವಲ್ಲಿ, ಬೀಕರ ನೆಂಬುವನ ಒಂದು ಎಡದ ತೊಡೆಯೇ ಮುರಿದುಹೋಗಿತ್ತು ಇನ್ನೊಬ್ಬ ಸಬ್ಬ ಎಂಬುವನಿಗೆ ದೇಹವೆಲ್ಲಾ ಬಹಳ ಜಖಂ ಆಗಿರುತ್ತದಲ್ಲದೆ ಎದೆಗೆ ಪೂರಾ ಪೆಟ್ಟಾಗಿರುತ್ತದೆ ದೇವ ರ ದಯದಿಂದ ಪ್ರಾಣಮಾತ್ರ ಉಳಿದಿರುತ್ತೆ ಎರಡನೆಯವನು ಪೂರೈಸು ವದೇ ಬಹಳ ಕಷ್ಟವಾಗಿರುತ್ತೆ ಮೊದಲನೆಯವನ ತೊಡೆಯು ಕೆಲ ಸಕ್ಕೆ ಪ್ರಯೋಜನವಿಲ್ಲದೆಹೋಯಿತು ನಂತರ ಈ ಊರ ಪಟೇಲರು ರಿಪೋರ್ಟು ಮಾಡಿದ್ದ ರಮೇರೆ ಆಗುಂಬೆ ಪೋಲೀಸ್ ಸ್ಟೇಷನ್ ದಫೇ ದಾರರು ತನಿಖೆ ತೆಗೆದುಕೊಂಡರು ಅಯ್ಯೋ! ಈ ಬಡವರಾದ ಕೆಲ ಸಗಾರರ ಕಷ್ಟವನ್ನು ಎಷ್ಟೆಂದು ಹೇಳೋಣ! ಇವರಿಗೆ ಒಬ್ಬನು ಒಂದು ದಿವಸ ಪೂರಾ ಕೆಲಸಮಾಡಿದರೆ ಏರಾಸೆಯೂ ಒಂದು ಸೇರು ಅಕ್ಕಿಯೂ ಬರುತ್ತೆ ಇಂಥಾವರು ಇಂಥಾ ಕಾರಣದಿಂದ ಮಲಗಿದರೆ ಇವರ ದುಃಖ ಯಾರಿಗೆ ಹೇಳಬೇಕು! ದಿಕ್ಕಿಲ್ಲದವರಿಗೆ ದೇವರೇ ಕಾವ ಲು ಎಂಬುದಕ್ಕೆ ಸರಿಯಾಗಿ ಕಾಣುತ್ತೆ

ಹೊಸದುರ್ಗ—ಈ ಪ್ರಾಂತ್ಯ ಮಳೆ ಇಲ್ಲದೆ ಒಂದು ತಿಂಗ ಳಾಯಿತು ಫಸಲುಗಳೆಲ್ಲಾ ಚನ್ನಾಗಿವೆ ಕೆಲವು ಕಡೆ ರಾಗೀ ಕೊಯ್ಲು ಆಗುತ್ತಿದೆ ಕಳೆದ ಸಂತೆಯಲ್ಲಿ ಧಾರಣೆ ರಾಗಿ ೧೭ ಸೇರು, ಅಕ್ಕಿ ೮— ೯ ಸೇರು—ತಾಲ್ಲೂಕು ಅಮಲ್ದಾರರು ತಾ ೯ ರ ಲಾಗಾಯ್ತು ಕಿರ ಸ್ತೇದಾರರಿಗೆ ಚಾರ್ಜು ಕೊಟ್ಟು ರಜಾ ಹೋಗಿದ್ದರು ಹತ್ತು ದಿವಸ ಗಳನಂತರ ಚಾರ್ಜಿಗೆ ಬರಬಹುದು ಬಲ್ಲಾಳಸಮುದ್ರ, ಮಾದಿಹಾ ಲ್, ಬೆಲಗೂರು ಕೆರೆಗಳ ಹಿಂಭಾಗದ ತರೀ ಜಮೀನುಗಳಲ್ಲಿ ಭತ್ತದ ಬಿತ್ತನೆಗೆ ಅನುಕೂಲಿಸುತ್ತಿರುವರು ಬೆಲಗೂರು ಕೆರೆಯಲ್ಲಿ ಕಳೆದ ತಾ ೭ ನೇ ಮಧ್ಯಾಹ್ನ ಒಬ್ಬ ಕುಂಬಾರ್ರ ಹುಡುಗನು ಕಾಲು ಜಾ ರಿ ಬಿದ್ದು ಮೃತಪಟ್ಟನು ಮಾದಿಹಾಲ್ ದಫೇದಾರನೂ ಬೆಲಗೂರಿನ ದಫೇದಾರನೂ ವಿಚಾರಣೆಯಿಂದ ಶವವನ್ನು ದಿರ್ಹ ಮಾಡಿಸಿದರು ಮಕ್ಕಳಿಲ್ಲದೆ ಸಾಕುತ್ತಿದ್ದ ಈ ಮಗನು ಸತ್ತದ್ದರಿಂದ ಬೆಲಗೂರು ಕುಂಬಾರ್ರ ಸಿದ್ದಪ್ಪನ ಮನೆಯವರಿಗೆ ಬಹು ದುಃಖ ಪ್ರಾಪ್ತಿಯಾಯಿತು ಮಾದಿಹಾಲ್‌ನಲ್ಲಿ ಹೊಸದಾಗಿ ತಯಾರು ಮಾಡಿರುವ ನಾಟಕದ ಕಂ ಪನಿಯು ಸದ್ಯದಲ್ಲಿಯೇ ಬೆಲಗೂರಿಗೆ ಬರುತ್ತದೆಂದು ವಾಹಿನಿ ಇದೆ ಕಡೂರಿನಲ್ಲಿ ಪ್ಲೇಗ್ ಶುರು ಆಗಿದೆ ಬೆಲಗೂರು ಗ್ರಾಮದಲ್ಲಿ ಅಲ್ಲಲ್ಲಿ ಕಸ, ಕಡ್ಡಿ, ಹೇಸಿಗೆಯಿಂದ ದುರ್ವಾಸನೆಯು ಹೊಡೆಯುತ್ತಿದೆ ಪೇಟೆಯಿಂದ ಕೋಟೆಗೆ ಹೋಗುವ ರಸ್ತೆ ಮಧ್ಯೆ ಕುಳುವಾಡೀ ಹಟ್ಟಿ ಯಲ್ಲಿ ಜನ ಕುರಿಗಳ ಮಾಂಸಾದಿಗಳು ದುರ್ವಾಸನೆ ಕೊಡುತ್ತಿದೆ ತಾಲ್ಲೂಕು ಆಫೀಸರರು ಈ ಗ್ರಾಮಕ್ಕೆ ಬಂದ ವೇಳೆ ಈ ಕಸ ಕಡ್ಡಿ ಗಳು ಮರೆಯಲ್ಲಿದ್ದು ಅವರು ಊರು ಬಿಟ್ಟ ಕೂಡಲೆ ಬೈಲಿಗೆ ಬರುತ್ತ ವೆ ಈ ವಿಷಯ ಗ್ರಾಮದ ಪಟೇಲ್ ಮತ್ತು ಪೋಲೀಸಿನವರು ಚನ್ನಾಗಿ ನಿಗಾ ಕೊಡಬೇಕಾಗಿದೆ

ದೊಡ್ಡಬಳ್ಳಾಪುರ—ಕೆಲವು ದಿನಗಳ ಹಿಂದೆ ನಾಗದಾನಹಳ್ಳಿ ಗೌರಯ್ಯ ಎಂಬುವರು ಗಂಗಾನಹಳ್ಳಿ ಹೇಲೆಯರಿಗೆ ಹೊಟ್ಟೆ ಊದು ವ ರಾಗಿಯನ್ನು ಮಾರಿದರು ೧೦ ಜನರು ಹೊಟ್ಟೆ ಊದಿ ಕಷ್ಟಪಡು ವದನ್ನು ತಿಳಿದು ಡಾಕ್ಟರವರು ಹೋಗಿ ಇಲಾಜು ಮಾಡಿದರು ಎಲ್ಲ ರೂ ಬದುಕಿದರು—ಮಧುರೆ ಹೋಬಳಿ ಕೋಡೀಹಳ್ಳಿ ಮಜರೆ ಬೀರ ನ ಪಾಳ್ಯದಲ್ಲಿ ಬೆಲುವಂಗಲದಿಂದ ಬಂದವರಿಂದ ಪ್ಲೇಗ್ ಕಾಣಿಸಿಕೊಂ ಡಿದೆ ವೀರಣ್ಣನಪಾಳ್ಯದಲ್ಲಿ ೬ ಜನರಿಗೆ ಪ್ಲೇಗ್ ಬಂತು ಡಾಕ್ಟರವರು ಚಿಕಿತ್ಸೆ ಮಾಡಿದ್ದರಿಂದ ೪ ಜನ ಬದುಕಿ ಇಬ್ಬರು ಸತ್ತರು ಮಧುರೆ ಹೋಬಳಿ ನಾಗೇನಹಳ್ಳಿಯಲ್ಲಿ ಹೊಟ್ಟೆ ಊದುವ ರಾಗಿ ತಿಂದು ೧೧ ಜ ನರು ಕಷ್ಟಪಟ್ಟರು ತರುವಾಯ ಎಲ್ಲರಿಗೆ ಗುಣವಾದಂತೆ ಕೇಳಿದೆವು. ಕಾಡತಿಪ್ಪೂರಲ್ಲಿ ಮಾದಿಗರ ಬಸವಿಯನ್ನು ಕತ್ತೆ ತಿಮ್ಮನು ರಖಾವ್ ಮಾಡಿಕೊಂಡಿದ್ದನಂತೆ ಇನ್ನೊಬ್ಬ ಚಿಕ್ಕ ತಿಮ್ಮನು ನನ್ನಲ್ಲಿ ಬಾ ಎಂದು ಕರೆಯಲು ಬಾರದ್ದರಿಂದ ಬಸವಿಯನ್ನು ಮೊಚ್ಚಿನಿಂದ ಬಹಳ ಕಡಿದು ಇದಾನೆ ಬಸವಿಯನ್ನು ಆಸ್ಪತ್ರೆಯಲ್ಲಿ ಇಟ್ಟದಾರೆ. ಬದು ಕುವುದು ಕಷ್ಟವಾಗಿ ತೋರುತ್ತೆ—ಮುಕ್ತಿಹೊಳೆಯಲ್ಲಿ ನವಂಬರ್ ತಾ ೪ ರಲ್ಲಿ ಅರಳಪ್ಪನೆಂಬ ಒಳ್ಳೆ ಯವ್ವನಸ್ಥನು ಕಾಲು ಜಾರಿ ಭಾ ವಿಯಲ್ಲಿ ಬಿದ್ದು ಸತ್ತನು ತಾ ೧೨ ರಲ್ಲಿ ನಗರ್ತರ ನಂಜನೆಂಬುವ ೧೩ ವರ್ಷದವನು ಅರಳ ಮಲ್ಲಿಗೆ ಕೆರೆಯ ತೂಬಿನ ಗುಂಡಿಯಲ್ಲಿ ಸತ್ತನು ತಾ ೧೬ ರಲ್ಲಿ ದೇವಾಂಗದ ೨೪ ಪ್ರಾಯದ ನರಸಿಂಹಯ್ಯ ನೆಂಬುವವನು ನಾಗರ ಕೆರೆಯಲ್ಲಿ ಸ್ನಾನ ಮಾಡುವಾಗ ಕಾಲು ಜಾರಿ ಬಿದ್ದು ಸತ್ತುಹೋದನು ತಾ ೧೬ ರಲ್ಲಿ ನಾಗದೇವನಹಳ್ಳಿಯ ಒಂದು ಕುಂಟೆಯಲ್ಲಿ ಬಣಜಿಗರ ೪೦ ವರ್ಷದ ಒಬ್ಬ ಹೆಂಗಸು ಜ್ಞಾನ ಸ್ವಾ ಧೀನವಿಲ್ಲದೆ ಬಿದ್ದು ಸತ್ತಳು ಹೀಗೆ ೧೩—೧೪ ದಿನದಲ್ಲಿ ೪ ಜನರು ನೀರಿನ ಪಾಲಾದರು. ದೊಡ್ಡಬಳ್ಳಾಪುರದಲ್ಲಿ ಸುಮಾರು ೧ ತಿಂಗಳ ಲಾಗಾಯ್ತು ಶ್ರೀ ಪ್ರಾಣನಾಥವರಪ್ರಸಾದ ಗಾನಮನೋರಂಜನಿ ನಾಟ ಕ ಸಭೆಯು ಶುರುವಾಗಿ ಇನ್ನು ೧೫ ದಿನಗಳಲ್ಲಿ ಆಡುತ್ತಾರೆಂದು ಹೇಳುತ್ತಾರೆ

ತರೀಕೆರೆ—ಈ ಸಾಲಿನಲ್ಲಿ ಒಳ್ಳೇ ಮಳೆ ಬಂದು ಎಲ್ಲಾ ಕೆರೆಗ ಳೂ ಕೋಡಿ ಹರಿದು ಬೆಳೆಗಳೆಲ್ಲಾ ಒಳ್ಳೇ ಸ್ಥಿತಿಯಿಂದ ಕೊಯ್ಲಿಗೆ ಬಂದಿರುವದರಿಂದ ರೈತರೆಲ್ಲರೂ ಹಸನ್ಮುಖಿಗಳಾಗಿರುತ್ತಾರೆ ಜಿನಸಿ ಧಾರಣೆ ಕೊಂಚಮಟ್ಟಿಗೆ ಇಳಿದಿದೆ ಇದರಿಂದ ಸರ್ವರೂ ಆನಂದ ಭರಿತರಾಗಿ ಸುಗ್ಗಿಯಲ್ಲಿ ಇನ್ನೂ ಅಗ್ಗವಾಗಿ ಮಾಂಬಹುದೆಂತಾ ಆ ಲೋಚಿಸುತ್ತಾರೆ ಈಚೆಗೆ ಸ್ವಲ್ಪ ಶೀತವಾಗಿರುತ್ತೆ ಇಲ್ಲಿ ಮುನಸಿಪಾಲಿಟಿಗೆ ಹೊಸದಾಗಿ ಸ್ಯಾನಿಟರಿ ಇನ್ಸ್‌ಪೆಕ್ಟರು ಬಂದಿರು ತ್ತಾರೆ ಇವರು ಟವನ್ ಪಾಕೀಜಾ ವಿಷಯದಲ್ಲಿ ಬಹಳ ಮುತುವರ್ಜಿ ವಹಿಸುವಂತೆ ತಿಳಿಯ ಬರುತ್ತದೆ—ಇದೇ ತಾಲೂಕು ಬೆಕ್ಕಾತೂರು ಗ್ರಾಮದಲ್ಲಿ ಮಾದಿಗರ ಹಟ್ಟಿ ಮುಂಬಾಗದಲ್ಲಿರುವ ಒಂದು ಬೇವಿನ ಮರದ ಕೊನೆಯಲ್ಲಿ ೮—೧೦ ದಿನಗಳಿಂದ ಹಾಲು ಸುರಿಯುತ್ತಿರುವು ದೆಯೂ, ಇದನ್ನು ನೋಡಿದವರು ಆ ಹಾಲನ್ನು ಕುಡಿದು ಪರೀಕ್ಷೆ ಮಾ ಡಿದ್ದರಲ್ಲಿ ಸೀಯಾಗಿರುತ್ತೆಂತ ಇದರಿಂದ ಆ ಗ್ರಾಮಕ್ಕೆ ಬಹು ಒಳ್ಳೇದಾ ಗಿದೆ ಎಂತಲೂ ಹೇಳಿಕೊಳ್ಳುತ್ತಾರೆ—ಇಲ್ಲಿನ ಎ ವಿ ಸ್ಕೂಲ್ ಸ್ಥಿತಿ ಯು ಹೊಸ ಹೆಡ್ ಮಾಸ್ಟರು ಬಂದ ಲಾಗಾಯ್ತು ಕ್ರಮಕ್ಕೆ ಬಂದಿರು ವದಾಗಿ ಕಾಣಬರುತ್ತೆ

ಮಂಡ್ಯ—ಕಳೆದ ತಿಂಗಳು ಇಲ್ಲಿ ಪ್ಲೇಗ್ ವ್ಯಾಧಿಯು ನಿಂತ ಹಾಗೆ ಇದೆ ಎಂದು ತಿಳಿಸಿದ್ದೆವಷ್ಟೆ ಆದರೆ ಈಚೆಗೆ ಅಂದರೆ ಕಳೆದ ಸೋಮವಾರ ೨೨ನೇ ತಾ ಶಿವಾಪುರದ ಮತಸ್ಥರಲ್ಲಿ ಕೆಲವರು ಭಾರಿ ವರ್ತಕರು ಇಲ್ಲಿಗೆ ಒಂದು ಮೈಲಿ ದೂರದಲ್ಲಿರುವ ತಾವರೆಕೆರೆ ಎಂಬ ಚಿಕ್ಕ ಗ್ರಾಮದಲ್ಲಿ ಪ್ಲೇಗಿನ ಭೀತಿಗಾಗಿ ಮನೆ ಮತ್ತು ಜೋಪಡಿಗಳ ನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದರು ಗ್ರಾಮದಲ್ಲಿಯೂ ವರ್ತ ಕರ ಮನೆಯಲ್ಲಿ ಇಲಿ ಬಿದ್ದದರಿಂದಲೂ ಅವರ ಅಳಿಯನಿಗೆ ಸ್ವಲ್ಪ ಅಸೌಖ್ಯ ಉಂಟಾದ್ದರಿಂದಲೂ ಅಲ್ಲಿದ್ದವರೆಲ್ಲ ಗ್ರಾಮವನ್ನು ಬಿಟ್ಟು ಊರಿನಲ್ಲಿರುವ ತಂತಮ್ಮ ಮನೆಗೆ ವಾಪಸು ಬಂದರು ಮಾರನೆ ದಿನ ವರ್ತಕರ ಅಳಿಯನಿಗೆ ಜ್ವರವು ಹೆಚ್ಚಿ ಗಡ್ಡೆಗಳು ಕಾಣಿಸಿಕೊಂಡು ೩—೪ ದಿನಗಳಲ್ಲಿ ಮೃತಪಟ್ಟನು ಹೀಗೆ ಆದ ಮಾರಣೆದಿನ ಇನ್ನೊ ಬ್ಬರಿಗೆ ಪ್ಲೇಗ್ ತಗಲಿ ಅವರು ಸಹಾ ಮೃತಪಟ್ಟರು ವರ್ತಕರು ಊ ರಿಗೆ ಆಚೆ ಇರುವ ಒಂದು ಮೈದಾನದಲ್ಲಿ ಸ್ವಲ್ಪ ದಿವಸಗಳವರೆಗೂ ವಾಸಮಾಡಿ ಪುನಃ ತಾವು ಮುಂಚೆ ವಾಸವಾಗಿದ್ದ ಗ್ರಾಮದಲ್ಲಿರುವ ಮ ನೆಗೆ ಹೋದರು ಈಚೆಗೆ ಅವರ ತಾಯಿಯೂ ಮೃತಪಟ್ಟರು ವರ್ತ ಕರಿಗೆ ಸಂಭವಿಸಿದ ದುಃಖ ಇಷ್ಟೆಂದು ಹೇಳಲು ಅಸಾಧ್ಯ ಕಳೆದ ಮಂಗಳವಾರ ಅಲ್ಲಿನ ಗೌಡರೂ ವರ್ತಕ ಮಂಡಲಿಯವರೂ ಸೇರಿ ಪ್ಲೇಗ್ ವ್ಯಾಧಿಯ ನಿವಾರಣೆಗಾಗಿ ಗ್ರಾಮದೇವತೆಯನ್ನು ಪೂಜಿಸಿ, ಇನ್ನು ೧೫—೨೦ ದಿನಗಳಲ್ಲಿ ತಂತಮ್ಮ ಮನೆಗಳಿಗೆ ಬರಬೇಕೆಂದು ಪ್ರಯತ್ನಪಟ್ಟಿರುತ್ತಾರೆ—ಈ ಊರಿನಲ್ಲಿ ಕಳ್ಳರ ಅವಾಂತರ ಇನ್ನೂ ತಪ್ಪಿಲ್ಲ ಕಳೆದ ಬುಧವಾರ ರಾತ್ರಿ ಒಂದು ಗಂಟೆ ಸಮಯದಲ್ಲಿ ಇಲ್ಲಿ ನ ಕೊಳದ ಹತ್ರ ಜೋಪಡಿ ಹಾಕಿಕೊಂಡಿರುವ ಸುಂದರರಾಜಾಚಾರ್ರ ಗುಡಿಸಲಿಗೆ ಕಳ್ಳರು ಇಳಿಬಿದ್ದು ಅಡಿಗೆ ಮಾಡುವ ಹಿತ್ತಾಳೆ ಪಾತ್ರೆಗಳ ನ್ನು ಕದ್ದುಕೊಂಡು ಹೋದರು ಅಷ್ಟರೊಳಗೆ ಮನೆಯವರು ನೆರೆ ಹೊರೆಯವರೂ ನಿದ್ದೆಯಿಂದ ಎಚ್ಚತ್ತು ಕಳ್ಳನನ್ನು ಹಿಡಿಯಬೇಕೆಂ ದು ಓಡಿಹೋದಾಗ್ಯೂ ಕಳ್ಳನು ಸಿಕ್ಕಲಿಲ್ಲ ಪೋಲೀಸಿನವರು ಕಳ್ಳನ ನ್ನು ಹಿಡಿಯುವ ತರದೂದಿನಲ್ಲಿ ಇದ್ದಾರೆ—ಕಳೆದ ಮಂಗಳವಾರ ಮೈಸೂರಿಂದ ಕೋ ಆಪರೇಟಿವ್ ಸೊಸೈಟಿ ರಿಜಿಸ್ಟ್ರರ್ ಮಿ॥ ಎಂ. ಶ್ಯಾಮರಾಯರು ಇಲ್ಲಿಗೆ ದಯಮಾಡಿಸಿ, ಮೂರು ದಿನಗಳ ವರಿಗೂ ಇದ್ದು ಶ್ರೀಮನ್ ಮಹಾರಾಜಾ ಸರ್ಕಾರದವರು ಹೊಸದಾಗಿ ಎಲ್ಲಾ ಕಡೆಗಳಲ್ಲಿಯೂ ಜಾರಿಗೆ ತರಬೇಕೆಂದು ಉದ್ದೇಶಿಸಿರುವ "ಪರಸ್ಪರ ಸಹಾಯಕ ಸಂಘ" ದ ವಿಷಯದಲ್ಲಿ ಇಲ್ಲಿನ ಉದ್ಯೋಗಸ್ಥರಿಗೂ, ಸ್ಥಳಿಕರಿಗೂ, ವರ್ತಕರಿಗೂ ತಕ್ಕ ಸಲಹೆಯನ್ನು ಕೊಟ್ಟರು ಈ ವಿಷಯದಲ್ಲಿ ಇಲ್ಲಿನವರೆಲ್ಲ ಕಳೆದ ಬೃಹಸ್ಪತಿವಾರ ಸಾಯಂಕಾಲ ಗೌರ್ನಮೆಂಟ್ ಕನಡಾ ಸ್ಕೂಲಿನಲ್ಲಿ ಸಭೆ ಸೇರಿ ತಮ್ಮಲ್ಲಿಯೇ ಒಬ್ಬರ ನ್ನು ಅಧ್ಯಕ್ಷರನ್ನಾಗಿ ನೇಮಿಸಿಕೊಂಡು ಸಂಘದ ಕಾರ್ಯಗಳನ್ನು ಚ ನ್ನಾಗಿ ಚರ್ಚೆಮಾಡಿ ಸಂಘಕ್ಕೆ ತಕ್ಕ ಹೆಸರನ್ನೂ ಅದಕ್ಕೆ ತಕ್ಕ ಮೆಂ ಬರುಗಳನ್ನೂ ತೀರ್ಮಾನ ಮಾಡಿಕೊಂಡದ್ದಲ್ಲದೆ ಇದನ್ನು ಆ ದಿನ ಸಾಯಂಕಾಲವೇ ರಿಜಿಸ್ಟ್ರರಿಗೆ ವಿಜ್ಞಾಪನೆ ಮಾಡಿಕೊಂಡರು ಈ ವರಿಗೂ ಮೇಲ್ಕಂಡ ಸಂಘಕ್ಕಾಗಿ ೩೦೦ ಷೇರುಗಳು ಇಲ್ಲಿನವರು ಹಾಕಿ ರುತ್ತಾರೆ ಇನ್ನೂ ಅನೇಕರು ಸಂಘಕ್ಕೆ ಸೇರಬೇಕೆಂದು ಇರುತ್ತಾರೆ ಇಲ್ಲಿನವರ ಅಂದಾಜು ೨,೦೦೦ ಷೇರು, ಅಂದರೆ ಷೇರು ಒಂದಕ್ಕೆ ೧೦ ರೂಪಾಯಿ ಪ್ರಕಾರ ೨೦,೦೦೦ ರೂಪಾಯಿ ಡಿಪಾಜಿಟ್ ಮಾಡಿದರೆ ಸಾಕೆಂತಲೂ, ಅಷ್ಟಕ್ಕೆ ಹಿಂದ ಮೇಲೆ ರಿಜಿಸ್ಟರ್ ಮಾಡಿಸಿ ಸಂಘವನ್ನು ಅಭಿವೃದ್ಧಿಗೆ ತರಬೇಕೆಂದೂ ಪ್ರಯತ್ನಪಟ್ಟದಾರೆ ಇದನ್ನು ರಿಜಿಸ್ಟ್ರ ರವರು ಕೇಳಿ ಸಂತೋಷಪಟ್ಟು ಇದಕ್ಕಾಗಿ ತಾವು ಸರ್ಕಾರದಿಂದ ೧೦೦೦ ರೂಪಾಯಿ ಮುಂದಾಗಿ ಸಹಾಯ ಮಾಡುವಂತೆ ತಿಳಿಸಿ ಶುಕ್ರವಾ ರ ಬೆಳಿಗ್ಗೆ ಮೈಸೂರು ಕಡೆ ವಾಪಸು ದಯಮಾಡಿದರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೨—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಟಪಾಲ್
ಸೇರಿ .. .. ರೂ. ೧—೧೪—೦
" ೬ " " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.
ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ತಾವಾಗಿ ಇಂಗ್ಲಿಷ್ ಕಲಿಯುವಿಕೆ.

146 1

೧ ತಾವಾಗಿ ಇಂಗ್ಲಿಷ್ ಕಲಿಯುವಿಕೆ ಮಂಗಲ-ಭಾರತಿ ಸಂಪಂಗಿರಾಮಯ್ಯನವರಿಂದ ತಯಾರಾದದ್ದು ಪ್ರತಿ ೧ ಕ್ಕೆ ವಿ ಪಿ ಖರ್ಚು ಸಹಿತ ೧—೪—೦

ಸುಭಾಷಿತ ಸಮುದಾಯ.

ಇದೊಂದು ಹೊಸ ಗ್ರಂಥವು ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ ಆಗಲೇ ಬಹಳ ಪ್ರತಿಗಳು ಖರ್ಚಾಗುತ್ತಿವೆಯಾದ್ದರಿಂದ ೨ನೆ ಛಾಪೆಗೆ ಪ್ರಾರಂಭಿಸುವ ಯೋಚನೆಯಲ್ಲಿದೆ ಪುಸ್ತಕದಲ್ಲಿರುವ ಸಂಗತಿಯನ್ನು ದಯವಿಟ್ಟು ಓದಿ ನೋಡಿ —ಶ್ರೀಮನ್ಮಹಾಭಾರತ, ಭೋಜಚರಿತ್ರೆ, ಹಿತೋಪದೇಶ, ವಿಕ್ರಮಾರ್ಕ ಚರಿತ್ರೆ, ಈ ಗ್ರಂಥಗಳಿಂದ ಆರಿಸಿ ನೀತಿ ವಿನೋದ ವಿಚಿತ್ರಪದಗಳಾಗಿ ಈಗಿನ ಕಾಲಕ್ಕೆ ತಕ್ಕಂತೆ ಸ್ವಚ್ಛವಾದ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಅರ್ಥ ಬರೆದಿರುತ್ತೆ ಗೀರ್ವಾಣಭಾಷಾಭಿಮಾನಿಗಳಾದ ದೇಶಭಾಂಧವರೆಲ್ಲಾ ಒಂದೊಂದು ಪ್ರತಿಯನ್ನು ಸಂಗ್ರಹಿಸಬೇಕಾದ್ದು. ವಿ. ಪಿ ಖರ್ಚು ಸಹಿತ ಪ್ರತಿ ೧ ಕ್ಕೆ ೦—೬—೦ ಮಾತ್ರವೇ ವಿಳಾಸ —

ಬಿ ಕೆ. ಮೂರ್ತಿ ಕಂಪನಿ,
ಲಕ್ಕೂರು ಪೋಸ್ಟು, ಕೋಲಾರ ಡಿಸ್ಟ್ರಿಕ್ಟು.

ಇಗೋ! ಕನ್ನಡ "ಮಾಡೆಲ್" ಪಾಕೆಟ್ ಡೈರಿ!

133-6

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!
ಉತ್ಕೃಷ್ಟವಾದ ಡೈರಿಗಳು!!!



೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ದಿನವಾಖರ್ಚಿನ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಚಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗನಾಮ ಸಂವತ್ಸರದ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ
ಕ್ರಯ.—
ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು.
ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಷ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು
ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.
ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.
ಮ್ಯಾನೇಜರ್, ಸಿ ಎಲ್. ಎಸ್. ಬುಕ್‌ಡಿಪ್ಪೊ, ಮೈಸೂರು.
ಅಥವಾ,
ಎಸ್. ಡಿ ಸತ್‌ಮಲ್ ಕಂಪೆನಿ ದೊಡ್ಡಪೇಟೆ ಮೈಸೂರು.

ಬೆಲಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 26

ಕ್ಲಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನುಳಿಯುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ನಡೆತ, ಇವುಗಳಿಗೆ ಕ್ಲಿಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು. ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ. ಆ ಕೆಲಸವನ್ನು ಅದು ಮಾಡುವದು. ಕೀಳಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲಿಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ, ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ.—ಎಫ್. ಡಬ್ಲಿಯು. ಆರ್ನ,
ಸಿಮೆಟ್ರಿ ರೋಡ್, ಪೆರಂಬೂರು?, ಮದರಾಸ್

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಆವಶ್ಯಕ

SCOTT'S EMULSION. 37-36
(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತವೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸನ್ ೧೯೦೭ ನೇ ಇಸವಿಯ

130 7

ಎಂ. ನಂ॥ ಎಫ್ ನಂ॥ ಬಿ. ನಂ॥ ಸ್ಪ್ರಿಂಗ್ ನಂ॥ ಕೆಟ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಮುಂತಾದವರೆಲ್ಲರಿಗೂ ಉಪಯೋಗವಾಗಿರುತ್ತವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು.—ಪ್ಲವಂಗ ಸಂ॥ ಪಂಚಾಂಗ, ಗ್ರಹಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸು ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನಸಂಬಳದ ಪಟ್ಟಿ, ದೋಬಿ ಲೆಕ್ಕ, ದಿನವಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಕೇಮ ಸೊಮಾರ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ.
ಎ. ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ
ಎಫ್. " " ೨ " ಎಚ್ " " ೭ "
ಬಿ. " ಮುಚ್ಚಳದ್ದು ೫ " ಡಿ. " ಮುಚ್ಚಳದ್ದು ೮ "
ಪೋಸ್ಟು ಚಾರ್ಜು ಬೇರೆ ಒಂದೇ ಸಮಯದಲ್ಲಿ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ ಪಿ. ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ:—ಎಂ ಆರ್, ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,
ಜಾರ್ಡನ್ ಪ್ರೆಸ್, ಬೆಂಗಳೂರು ಸಿಟಿ } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೩—11—1906 ರಿಂದ 9—11—1906 ರ ವ[illegible]

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೊಸ[illegible]
ಬೆಂಗಳೂರು ಪಟ್ಟಣ	13	6	18
ಮೈಸೂರು "	9	8	0
ಬೆಂಗಳೂರು ಡಿಸ್ಟ್ರಿಕ್ಟು	64	55	17
ಮೈಸೂರು "	2	1	17
ಕೋಲಾರ್ "	0	0	0
ಕೋಲಾರ್ ಚಿನ್ನದ ಗಣಿಗಳು	0	0	4
ತುಂಕೂರು ಡಿಸ್ಟ್ರಿಕ್ಟು	15	14	10
ಹಾಸನ "	16	17	2
ಚಿತ್ರದುರ್ಗ "	0	0	4
ಕಡೂರ್ "	66	33	5
ಶಿವಮೊಗ್ಗಾ "	0	2	3
ಜುಮ್ಲಾ.	185	136	78

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸ್ವರದ ಮಾರ್ಗಶಿರ ಶುದ್ಧ ಸಪ್ತಮಿ ಗುರುವಾರದಿಂದ ಮಾರ್ಗಶಿರ ತ್ರಯೋದಶಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ನವಂಬರ್.

ತಾ	ವಾರ.	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.
22	ಗುರು §	ಸಪ್ತಮಿ	43-22	ಶ್ರ	10 30
23	ಶುಕ್ರ †	ಅಷ್ಟಮಿ	40-20	ಧ	8-32
24	ಶನಿವಾ ‡	ನವಮಿ	38 16	ಶ	7-36
25	ರವಿವಾ	ದಶಮಿ	37-37	ಪೂಭಾ	7 50
26	ಚಂದ್ರ *	ಏಕಾದಶಿ	38-2	ಉತ್ತಭಾ	9-14
27	ಕುಜ ¶	ದ್ವಾದಶಿ	39-52	ರೇ	11-55
28	ಬುಧ "	ತ್ರಯೋದಶಿ	42 50	ಕೃ	15-28

§ ಮಹಾನ್ಯಪ್ರತಿ, ನಂದಸಪ್ತಮಿ. † ದಗ್ಧಯೋಗಃ. ‡ ರಾಯನಗತೋರವಿಃ, ದಗ್ಧಯೋಗಃ * ದಗ್ಧಯೋಗಃ, ಸರ್ವೈಕಾದಶಿ ¶ ಮತ್ಸ್ಯದ್ವಾದಶಿ. ;; ಹನುಮಜ್ಜಯಂತಿ, ಪ್ರದೋಷ, ವ್ಯತೀಪಾತಯೋಗಃ

ಪೇಟೇ ಧಾರಣೆ.

ದಿನಸು		ಮೈಸೂರು.	ಬೆಂಗಳೂರು
ಕಬ್ಬೀ ಅಕ್ಕಿ ಪಲ್ಲ ೧ಕ್ಕೆ	ರೂ	೧೩-೪-೦	[illegible]
ಕೆಂಬೂತಿ ಅಕ್ಕಿ ಅವಲ್ ..	..	೧೩-೪-೦	[illegible]
" ದುಯಂ	..	೧೩-೦-೦	[illegible]
ಜವಾಡಿ ಅಕ್ಕಿ ..	..	೧೩-೦-೦	[illegible]
ಸಣ್ಣಕ್ಕಿ ಅವಲ್ ..	..	೧೫-೦-೦	[illegible]
" ದುಯಂ ..	..	೧೪-೦-೦	[illegible]
ತೊಗರೀ ಬೇಳೆ ಪಲ್ಲ ೧ಕ್ಕೆ ..	..	೧೭-೬-೦	[illegible]
" ದುಯಂ .	.	೧೧-೮-೦	[illegible]
ಹೈನ್ ರಾಗಿ ಪಲ್ಲ ೧ಕ್ಕೆ .	..	೪-೮-೦	[illegible]
ಕಾಡ್ರಾಗಿ . ..	..	೪-೦-೦	[illegible]
ಜೋಳ .. .	..	೫-೮-೦	[illegible]
ಹಲಸಂದೆ ಪಲ್ಲ ೧ಕ್ಕೆ ..		೧೧-೮-೦	[illegible]
ಬಿಳೀ ಅವರೆ .	..	೯-೦-೦	[illegible]
ಹೆಸರು ..	..	೧೧-೮-೦	[illegible]
ಉದ್ದು	..	೧೭-೪-೦	[illegible]
ಕಡಲೆ . ..	..	೧೭-೦-೦	[illegible]
ಎಳ್ಳು ಸೆ ೧೭೩ ಕ್ಕೆ . ..	..	೧೮-೮-೦	[illegible]
ಹುರುಳಿ	.	೭-೧೭-೦	[illegible]
ಹರಳು ೧೭೩ ಸೇರಿಗೆ ..	..	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ ..	..	೨-೭-೦	[illegible]
ಮೆಣಸಿನಕಾಯಿ	..	೪-೦-೦	[illegible]
" ದುಯಂ ..	.	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು ..	..	೩-೧೭-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ ..	..	೫-೮-೦	[illegible]
ಹರಳೆಣ್ಣೆ " ..	..	೪-೧೭-೦	[illegible]
ಕೊತ್ತುಂಬರಿ ಪಲ್ಲ ೧ಕ್ಕೆ ..	..	೧೦-೭-೦	[illegible]
ಉಪ್ಪು " ..	..	೪-೦-೦	[illegible]
ಹುಣಸೇ ಹಣ್ಣು .	..	೦-೧೪-೦	[illegible]
" ಹಳೇದು ..	..	೦-೮-೦	[illegible]
ತುಪ್ಪ ಮಣ ೧ಕ್ಕೆ .	.	೧೩-೦-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	..	೫-೬-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೪-೮-೦	[illegible]
ಅಳಲೇಕಾಯಿ ಮಣ ೧ಕ್ಕೆ	..	೧-೭-೦	[illegible]
ಅಂಟುವಾಳದ ಕಾಯಿ ಮಣ ೧ಕ್ಕೆ	.	೦-೧೭-೦	[illegible]
ಚಿನ್ನ (ಪವನ್) ಕೆಂಪು	..	೧೫-೩-೦	[illegible]
" " ಪಸಿಮೆ	..	೧೫-೧೦-೦	[illegible]
" " ಗಟ್ಟಿ ತೊಲ ೧ಕ್ಕೆ	..	೨೩-೧೭-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೧-೦	[illegible]

Printed and published by the Rev. E. THOMPSON, M A, the Proprietor and Ma[illegible] Wesleyan MissionPress, Mysore. 22/11/1[illegible]

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದು ಡ್ಡು —— ೩ ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ನವಂಬರ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೨೬

ಯಣ್ಣೆ ಕೆಂಪು ಮತ್ತು ತಾಜಾ ಕಪ್ಪು.

ಹಾಸ್ಟ ಫ್ಲೋಲ್ಡಾರ.

215-10

೩,೦೦೦ ಊ ಗ ನ ದ ಟೋಪಿ ನೊಲಿಯುವ

ಟೇರಿಯರ್ ಫ್ಲೋಲನ್ ದಾರ ಮಾತ್ರ.

	ರೂ.	ಆ.	ಪೈ
...ಪಿ ಆಗುವ ಫ್ಲೋಲ್ ದಾರದ ಕ್ರಯ	೦	೮	೦
...ಟ ಆಗುವ ಒಂದು ಬಂಡಲ್ ದಾರದ ಕ್ರಯ	೩	೧೩	೦
ಟೋಪಿ ಹೊಲಿಯುವ ಕೋಕ್ಕೆ ಸೂಜಿ ೧ಕ್ಕೆ	೦	೧	೯
...ಲ್ಲಿ ಆದ ಟೋಪಿ ಡಜನ್ ೧ಕ್ಕೆ	೧೩	೩	೦

ವಿ ಪಿ ಯಿಂದಲೂ ರವಾನಿಸುತ್ತೇವೆ.

ವಿಳಾಸ— ಸಿ. ರಘುನಾಥ ಕಾಮತ್,

ಫ್ಲೋಲ್ ಮರ್ಚಂಟ್,

ಬೋಳಾರ, ಮಂಗಳೂರು.

ಹಿಂದೂದೇಶಪ್ರದಕ್ಷಿಣ.

...ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿ... ಮೂರು ಅಥವಾ ನಾಲ್ಕು ತಿಂಗಳ ಒಳಗಾಗಿ ನೂರಾರು ಪ್ರತಿ... ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿ...ವರಿಗೆ ಇದು ದೊರೆಯದೆ ವ್ಯಸನಕ್ಕೊಳಗಾದರು. ಈಗಲಾದ...ಗತೆಯಿಂದ ಬರೆದು ವಿ. ಪಿ. ಮೂಲಕ ತರಿಸಿಕೊಳ್ಳಿ. ಇದರ...ರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ...ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವು...ನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವು...ಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ತೊಂಭತ್ತು...ದ ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ...ಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದ...ನ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. ...ಮೂಲಕ ತರಿಸಿಕೊಂಡರೆ ಪೋಸ್ಟೇಜು ಬೇರೆ.

...ಜರ್ ಸಿ. ಎಲ್. ಎಸ್. ಬುಕ್ ಡಿಪ್ಪೋ ಮೈಸೂರು.

ಇಗೋ ನೋಡಿರಿ

...ಂದು ಆಶ್ಚರ್ಯಕರವಾದ ಪುಸ್ತಕವು ಹೊರಟಿದೆ !!!

ಎಲ್ಲರೂ ಓದತಕ್ಕದ್ದು.

ಬೇಗ ತರಿಸಿಕೊಳ್ಳಿ. 111-1

...ಡಿದರೆ ಪ್ರತಿಗಳು ಮುಗಿದುಹೋದಾವು.

'ಅರೇಬಿಯನ್ ನೈಟ್ಸ್

ಅಥವಾ

...ಸಯಾಮಿನೀ ವಿನೋದ ಕಥೆಗಳು"

...ಮಹಾ ಪ್ರಸಿದ್ಧವಾದ ಪುಸ್ತಕವು ತಿಳಿಗನ್ನಡದಲ್ಲಿ ಈಗತಾನೇ ...ಟ್ಟಿದೆ. ಡೆಮ್ಮಿ ಅಷ್ಟಪತ್ರ ನಾನೂರು ಎಪ್ಪತ್ತು ಪುಟಗಳು ...ಬಾಲವೃದ್ಧರಿಗೆ ಪ್ರೋತ್ಸಾಹಕರವಾಗಿಯೂ ಮಹಾ...ಗಿಯೂ ರಚಿತವಾಗಿರುವ ಈ ಪುಸ್ತಕದ ಅಭಿರುಚಿಯನ್ನು ...ಸ್ವಾನುಭವದಿಂದಲೆ ಗ್ರಹಿಸಿ ತಿಳಿದುಕೊಳ್ಳುವರು. ಭಾಷೆಯು ...ಳವಾಗಿರುವುದು ಮತ್ತು ಇದನ್ನು ಬರೆಯುವುದಕ್ಕೆ ಸುಮಾ...ರು ವರ್ಷಗಳು ಹಿಡಿದಿವೆ. ಪುಸ್ತಕವನ್ನು ಒಂದಾವರ್ತಿ ಓದಿದ...ದನ್ನು ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು ...ರೆ ಎರಡು ರೂಪಾಯಿ ಮಾತ್ರವೇ. ವಿ. ಪಿ. ಮೂಲಕ ತರಿಸಿ...ರೆ ಎರಡು ರೂಪಾಯಿ ಮೂರು (೨-೩-೦) ಆಣೆಗಳಾಗುವವು ...ಬಡವರೂ ಎಲ್ಲರೂ ಕೊಂಡು ಓದಿ ಪ್ರಯೋಜನವನ್ನು ...ಹೊಂದು ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ...ಕ್ಕೆ ಮಾರುತ್ತೇವೆ. ನಮ್ಮ ವಿಳಾಸ —

...ಜರ್, ಸಿ. ಎಲ್. ಎಸ್. ಬುಕ್ ಡಿಪ್ಪೋ, ಮೈಸೂರು.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

...ಯಿಸಿ ಇರುವದು ಅಥವಾ ಆಗತಾನೆ ಹುರಿದದ್ದು.

...ಗವಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

86 42

ವ್ಯಾಪಾರದ C C E C ಹೆಗ್ಗುರ್ತು

...ಕಾಡುಕೋಣದ ತಲೆಯು ಮುದ್ರೆ ಇದೆ.

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಉಳ್ಳ ವಿಲಾಸದ ಚೀಟ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್

ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 142-5

ಇದು ಸಾಧಾರಣ ಜ್ವರ, ಚಳಿಜ್ವರ, ಮರುಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮಧ್ಯಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯಂಗಾರವರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವುದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ. ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ.

ಕ್ರಯ.—ಸೀಸೆ ೧ ಕ್ಕೆ ೮ ಆಣೆ. ೧ ರೂ., ೧—೮ ರೂ.; ರೂ ೨—೧೨ ಆ., ೧೦ ರೂ.; ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳ...ಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕೊಡಗಿನ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಗಳು ಓಮಂ ಕರ್ಪೂರವನ್ನು ನಾನೂ ನನ್ನ ಹಾಜೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ವೆಂದು ಬರೆದಿದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ —

ಕೆಪ್ರಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-26

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ:—ಕ್ರಯ ೧೦ ಆಣೆ. ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ. ಬುಕ್ ಸೆಲರರಿಗೆ ಯೋಗ್ಯ ಕಮಿಷನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವೀರ ಶೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ. ಹಲಹೊ ಅಕ್ಷರದಿಂದ ಬರೆಯುರಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾಲದ, ಪೋಷ್ಟು ಮಾಂಡ್ವಿ, ಮುಂಬಯಿ

ವಿದ್ಯುಚ್ಛಕ್ತಿಯೇ ಪ್ರಾಣವಾಯು !

ವೈದ್ಯ ವಿದ್ಯುಚ್ಛಕ್ತಿ 148—1

ಡಾಕ್ಟರ್ ಸಾಂಡರ್ಸನವರ ವಿದ್ಯುಚ್ಛಕ್ತಿಯ ಪಟ್ಟಿಗಳೇ ಎಂಬ ಚಿಕಿತ್ಸೆಯು ಕೀಲುಗಳ ವಾಯುನೋವು, ನರಗಳ ದುರ್ಬಲ, ಅಸ್ಥಾ... ಧಾತು ಹೀನತೆಯೇ ಮೊದಲಾದವುಗಳನ್ನು ಖಂಡಿತವಾಗಿ ವಾಸಿಮಾಡುವುದು. ಮೈಸೂರು ಸಿಟಿ ಗಾರ್ಡನ್ ಹೋಟೇಲಿನಲ್ಲಿ ಇಳುಕೊಂಡಿರುವ ಯೂರೋಪಿಯನ್ ಏಜಂಟರು ಕಾತೂಹಲವುಳ್ಳ ಗಂಡಸರಿಗೂ ಹೆಂಗಸರಿಗೂ ಈ ವಿದ್ಯುಚ್ಛಕ್ತಿ



ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡುತ್ತಾರೆ. ಪ್ರತಿ ದಿನ ಪೂರ್ವಾಹ್ನ ೩ ಗಂಟೆಯಿಂದ ರಾತ್ರಿ ೩ ಗಂಟೆಯ ತನಕ ಅಪೇಕ್ಷೆಯುಳ್ಳವರೆಲ್ಲಾ ಬಂದು ದುಡ್ಡು ಏನೂ ಕೊಡದೆ ಶಾಯಿಲೆ ವಿಚಾರವನ್ನು ಅವರಿಗೆ ತಿಳಿಸಬಹುದಾಗಿದೆ. ಕಾಗದ ಬರೆದಲ್ಲಿ ಅವರೇ ಮನೆಗೆ ಬರುತ್ತಾರೆ, ಇಲ್ಲವೇ, ಕೂಡಲೆ ಜವಾಬು ಕೊಡುವರು. ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಪರರಿಗೆ ಗೋಚರವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡಸುವರು.

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

123—11

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ವಾಂಕ್ಷನ್ ಮಾಡುವ ಕಂಡಿಷನ್‌ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ.

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಮೊದಲಿಗೆ ಷೇರು ಒಂದಕ್ಕೆ ಒಂದು ರೂಪಾಯಿಯಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸೈನ್) ಬಿ. ಪಿ ರಾಮಸ್ವಾಮಿ ಶೆಟ್ಟಿ, ಬಿ. ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್

ನಗರ್ತಪೇಟೆ, ಬೆಂಗಳೂರು ಸಿಟಿ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೬ ನೇ ಇಸವಿ ನವಂಬರ್ ತಾ॥ ೨೯ನೇ ಗುರುವಾರ.

ಪರಸ್ಪರ ಸಹಾಯ ಸಂಘಗಳು.

ಮೈಸೂರು ಸಂಸ್ಥಾನದಲ್ಲಿ ಪರಸ್ಪರ ಸಹಾಯ ಸಂಘಗಳ ಪ್ರಯೋಜನಾದಿಗಳನ್ನು ಪ್ರಜೆಗಳಿಗೆ ತಿಳಿಯಪಡಿಸಿ, ಅಂಥಾ ಸಂಘಗಳನ್ನು ಸ್ಥಾಪನೆಮಾಡಲು ಸರ್ಕಾರದವರು ಮೆ॥ ಎಂ. ರಾಮರಾವ್, ಎಂ. ಎ. ಯವರನ್ನು ನೇಮಿಸಿದರು. ಇವರು ಕಳೆದ ಏಪ್ರಿಲ್ ತಿಂಗಳಿಂದ ಆ ಕೆಲಸವನ್ನು ಕೈಗೊಂಡು ಈ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಸಂಚಾರ ಮಾಡುತ್ತಾ, ಪರಸ್ಪರ ಸಹಾಯ ಸಂಘಗಳನ್ನು ಪ್ರಜೆಗಳು ಸ್ಥಾಪಿಸಿಕೊಂಡು ನಡಸುತ್ತಾ ಬರುವಂತೆ ಉಪನ್ಯಾಸಗಳ ಮೂಲಕ ಪ್ರೋತ್ಸಾಹಪಡಿಸುತ್ತಾ ಬಂದಿರುತ್ತಾರಷ್ಟೆ. ಈಗ ಮೆ॥ ರಾಮರಾಯರು ಜೂನ್ ಅಖೈರುವರೆಗೆ ನಡಿಸಿದ ಸಂಗತಿಗಳನ್ನು ಕುರಿತು ಒಂದು ರಿಪೋರ್ಟನ್ನು ಬರೆದು ಗವರನ್‌ಮೆಂಟಿಗೆ ಕಳುಹಿಸಿದಾರೆ. ಇದಲ್ಲದೆ ಅವರು ಈ ಸಂಸ್ಥಾನದಲ್ಲಿ ಪ್ರಜೆಗಳು ನಡಸುವ ನಾನಾ ಕಸುಬುಗಳನ್ನು ಗ್ರಹಿಸಿಕೊಂಡು, ಅವುಗಳನ್ನು ಅಭಿವೃದ್ಧಿಗೆ ತರುವುದಕ್ಕೆ ಮಾರ್ಗಗಳನ್ನು ತಿಳಿದುಕೊಳ್ಳುತ್ತಾ, ಇದುವರೆಗೆ ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುವ ಮೇಲ್ಕಂಡ ಸಂಘಗಳ ನಡವಳಿಕೆ ಮುಂತಾದದ್ದನ್ನು ಮೇಲ್ವಿಚಾರಣೆ ತೆಗೆದುಕೊಳ್ಳುತ್ತಾ ಬಂದಿರುವರು.

ಮೆ॥ ರಾಮರಾಯರು ಸಂಚಾರಮಾಡಿರುವ ಪ್ರದೇಶಗಳಲ್ಲಿ ಜನರು ಅವರನ್ನು ಆದರಪೂರ್ವಕವಾಗಿ ಕಂಡು ಅವರ ಪ್ರೋತ್ಸಾಹಕರವಾದ ಉಪನ್ಯಾಸಗಳನ್ನು ಕೇಳುತ್ತಿರುವುದನ್ನು ನೋಡಿದರೆ ರೈತಪ್ರಜೆಗಳೂ ಇತರರೂ ಪರಸ್ಪರ ಸಹಾಯಸಂಘಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಕುತೂಹಲಪಡುತ್ತಿದ್ದಾರೆಂದು ಕಾಣುವುದು. ಕಳೆದ ಜೂನ್ ಅಖೈರುವರೆಗೆ ಅಂದರೆ ಮೆ॥ ರಾಮರಾಯರು ಕೆಲಸದ ಮೇಲೆ ಬಂದ ಮೂರು ತಿಂಗಳಲ್ಲಿ ಬೆಂಗಳೂರು, ಮೈಸೂರು, ಹೊಳೆನರಸೀಪುರ, ಕೊಪ್ಪ, ಈ ನಾಲ್ಕು ಸ್ಥಳಗಳಲ್ಲಿ ಪರಸ್ಪರ ಸಹಾಯಸಂಘಗಳು ಸ್ಥಾಪಿಸಲ್ಪಟ್ಟಿರುತ್ತವೆ.

ಈ ಸಂಘಗಳ ಉದ್ದೇಶಗಳನ್ನು ಪ್ರಜೆಗಳು ಸರಿಯಾಗಿ ತಿಳಿದುಕೊಂಡು ನಡಸುತ್ತಾ ಬರುವಪಕ್ಷದಲ್ಲಿ ಅವುಗಳಿಂದ ತುಂಬಾ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಆದರೆ ಈ ಏರ್ಪಾಡು ಈ ಸಂಸ್ಥಾನದಲ್ಲಿ ಇನ್ನೂ ನೂತನವಾದದ್ದು. ಇಷ್ಟುಬೇಗ ಈ ಸಂಘಗಳಿಂದ ಉಂಟಾಗಬಹುದಾದ ಫಲಾಫಲಗಳನ್ನು ಕುರಿತು ವಿಶೇಷವಾಗಿ ಬರೆಯುವುದು ಹಿತಕರವೆಂದು ತೋರುವುದಿಲ್ಲ.

CHAMBERLAIN'S COUGH REMEDY.
ಚೇಂಬರ್ಲೇನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.

95-122

ಶೀತದ ಕೆಮ್ಮು, ಗಂಟಲು ಗೂರೆನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಳ ಶ್ರೇಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಬಿಗಿಯುವಂಥಾ ಕೆಟ್ಟಸ್ಥಿತಿಯ ಸಂಪೂರ್ಣವಾಗಿ ವಾಸಿಮಾಡಬಲ್ಲನು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿ ವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ವಿತಂತುಗಳ ಸ್ಥಿತಿ.

ಬಿ. ರಾಮಯ್ಯ, ಬಿ. ಎ., ಹಲಸೂರು ಪೇಟೆ, ಬೆಂಗಳೂರು ಸಿಟಿ, ಇವರು ಬರೆಯುವುದೇನೆಂದರೆ —

೧೯೦೬ನೆ ಇಸವಿ ನವಂಬರ್ ೧ನೆ ತಾ. ಮತ್ತು ೨೨ನೆ ತಾ. "ವೃತ್ತಾಂತ ಪತ್ರಿಕೆ"ಯಲ್ಲಿ ಫ್ರೇಜರ್‌ಟ್ಯಾಟಿ ಮತ್ತು ಕೋಲಾರದ ಸ್ತ್ರೀ॥ ಗಳಾದ ಪದ್ಮಾವತಿ ಬಾಯಮ್ಮನೆಂಬುವರುಗಳ ಲೇಖನಗಳು ನನ್ನ ಮನಸ್ಸಿನಲ್ಲಿ ಎಷ್ಟು ಸಂತೋಷವನ್ನುಂಟುಮಾಡಿದವೋ, ನವಂಬರ್ ೧೯ನೆ ತಾ "ಸೂರ್ಯೋದಯ"ದಲ್ಲಿ ಪ್ರಚುರವಾದ ಮ॥ ವೆಂಕಟಾದ್ರಿಶಾಸ್ತ್ರಿಗಳ ಲೇಖನವು ಅಷ್ಟು ಖೇದವನ್ನುಂಟುಮಾಡಿರುತ್ತದೆ. ವೆಂಕಟಾದ್ರಿಶಾಸ್ತ್ರಿಗಳು ತಮ್ಮ ಲೇಖನವನ್ನು ಶ್ರೀಮತಿ ಪದ್ಮಾವತಿಬಾಯಿ ಅಮ್ಮನವರ ವಿಳಾಸಕ್ಕೆ ಬರೆದಿರುತ್ತಾರೆ ಸ್ತ್ರೀಯರ ವಿಷಯದಲ್ಲಿ ತುಂಬಾ ಅವಾಚ್ಯವಾದ ಅಥವಾ ಬರೆಯಬಾರದಂಥಾ ಅನೇಕ ಸಂಗತಿಗಳನ್ನು ಸ್ವಲ್ಪವೂ ಸಂಕೋಚವಿಲ್ಲದೆ ಬರೆದಿರುವದು ನೋಡಿದರೆ ನನಗೆ ಬಹಳ ನಾಚಿಕೆಯೂ ವ್ಯಸನವೂ ಉಂಟಾಗಿರುತ್ತೆ.

ಮದುವೆ ಎಂಬುದರ ಅರ್ಥವೇನೆಂದು ಕೇಳಿದರೆ ಒಳ್ಳೇ ಶೀರೆ ಕುಪ್ಪಸಗಳನ್ನು ಉಡಿಸಿ ಅನೇಕ ಜನಗಳನ್ನು ಕರೆದು ಊಟ ಉಪಚಾರಗಳನ್ನು ಮಾಡಿ, ಲಾಡು, ಚಿರೋಟಿ, ಚಕ್ಕುಲಿ, ಮಾತ್ಸೋರಿ, ಕಳ್ಳೇಕಾಯಿ ಉಂಡೆ ಮುಂತಾದ ಮನೋಹರವಾದ ತಿಂಡಿಗಳನ್ನು ಮಾಡಿಸುವದು, ರಾತ್ರಿಹೊತ್ತು ಬಹಳ ಹೊತ್ತು ಒಳ್ಳೊಳ್ಳೇ ತಮಾಷೆಗಳನ್ನು ನೋಡುವದು, ಈ ರೀತಿಯಾಗಿ ಮುದ್ದು ಮುದ್ದು ಮಾತುಗಳನ್ನಾಡುವ ೭—೮ ವರುಷದ ಹೆಣ್ಣುಮಗುವಿಗೆ ಅಪರಿಚಯಸ್ಥನಾದ ೧೦-೧೨ ವರುಷದ ಬಾಲಕನಿಗೆ ಅಕೆಯನ್ನು ಕೊಟ್ಟು ಮದುವೆಮಾಡಿ, ಆ ಬಾಲಕನು ಮೃತಹೊಂದಿದರೆ ಏನೂ ತಿಳಿಯದ ಆ ಹಸುಮಗುವಿಗೆ ಮುಂಡನಮಾಡಿಸಿ ಹೋದ ಕಡೆಗಳಲ್ಲೆಲ್ಲಾ ಅವಮಾನಪಡಿಸಿ, ನೂರು ವರುಷ ಬದುಕತಕ್ಕ ಆ ಮಗುವನ್ನು ಜೀವವಿರುವ ಪರ್ಯಂತರ ನಾನಾ ವಿಧವಾದ ಅಚಿಂತನೀಯವಾದ ಹಿಂಸೆಗಳಿಗೆ ಗುರಿಪಡಿಸಿ ಹೊಟ್ಟೆ ಉರಿಸುತ್ತಿರುವದರಿಂದುಂಟಾಗುವ ಸಂಕಟದಿಂದ "ಸತಿ"ಯನ್ನು ಅನ್ಯಾಯವಾಗಿ ತೆಗೆದುಹಾಕಿಬಿಟ್ಟರಲ್ಲಾ ಎಂಬತಕ್ಕ ಬಾಲವಿಧವೆಯರ ಪ್ರಲಾಪವು "ಈಗಿನ ಸ್ತ್ರೀಸಮಾಜಕ್ಕೆ ಇದೊಂದು ಡಂಭದ ಮಾತೇ ಸರಿ", ಎಂದು ಅಪ್ಪಣೆ ಕೊಡಿಸುವ ವೆಂಕಟಾದ್ರಿಶಾಸ್ತ್ರಿಗಳ ದಯಾರ್ದ್ರ ಹೃದಯವನ್ನು ನಾವು ಎಷ್ಟು ಕೊಂಡಾಡಿದರೂ ಸಾಲದು! ಸ್ತ್ರೀಯರಿಗಿಂತ ಹೆಚ್ಚಾದ ಕಾಯಪುಷ್ಟಿಯನ್ನೂ ವಿದ್ಯಾಪಾರಂಗತೆಯನ್ನೂ ಮನೋಧಾರ್ಢ್ಯವನ್ನೂ ಸಹಜವಾಗಿ ಹೊಂದಿರುವ ಗಂಡಸು ೬೦ ವರುಷ ವಯಸ್ಸಿನಲ್ಲಿಯೂ ಕೂಡ ಹೆಂಡತಿಯನ್ನು ಕಳಕೊಂಡರೆ ಇಂದ್ರಿಯನಿಗ್ರಹಮಾಡುವದಕ್ಕೆ ಶಕ್ತಿಯಿಲ್ಲದೆ ಇರುವಲ್ಲಿ, ಅಪ್ರಬುದ್ಧೆಯಾಗಿರುವ ಅಬಲೆಯಾದ ವಿಧವೆಯು ಸನ್ಯಾಸಿನಿಯಾಗಿ ಪ್ರಪಂಚವನ್ನು ತ್ಯಾಗಮಾಡಬೇಕೆಂದು ಹೇಳುವದು ತುಂಬಾ ಶೋಚನೀಯವಾಗಿಯೂ ಅಸಮಂಜಸವಾಗಿಯೂ ಇದೆ "ನಾಲ್ಕು ಮಂದಿ ಹೆಂಡಂದಿರೊಡನೆ ಒಬ್ಬ ಮನುಷ್ಯನು ಸಂತೋಷದಿಂದ ಸಂಸಾರಮಾಡುತ್ತಿರುವನು." ಈ ರೀತಿಯಾಗಿ ಸ್ತ್ರೀಯು ಮಾಡಲಾರಳು! ಆದಕಾರಣ ಹೆಂಡತಿಯನ್ನು ಕಳಕೊಂಡ ಗಂಡಸು ಎಷ್ಟು ಸಲವಾದರೂ ಮಾಡಿ ಪುನರ್ವಿವಾಹಮಾಡಿಕೊಳ್ಳಬಹುದು. ಗಂಡಸರ ತಪ್ಪಿತದಿಂದ ಗಂಡನನ್ನು ಕಳೆದುಕೊಂಡ ಸಣ್ಣ ಹುಡುಗಿಯು ಪುನರ್ವಿವಾಹಮಾಡಿಕೊಳ್ಳಕೂಡದು. ಇತ್ಯಾದಿಯಾಗಿ ಶಾಸ್ತ್ರಿಗಳು ಹೇಳಿರುವದನ್ನು ಸಾಮಾನ್ಯಜ್ಞಾನವಿರುವವರ್‍ಯಾರೂ ಒಪ್ಪಲಾರರು ಇವರು ಹೇಳತಕ್ಕ ಮಾತು ವಿಷಯಕ್ಕೆ ಅಸಂಗತವಾಗಿರುವದಲ್ಲದೆ ನಿಶ್ಚಯತ್ವದಲ್ಲಿಯೂ ಕೊರತೆಯುಳ್ಳದ್ದಾಗಿರುತ್ತೆ ಯಾಕೆಂದರೆ ೩—೪ ಹೆಂಡಂದಿರನ್ನು ಉಂಟಾಗಿದ್ದು ಸುಖವಾಗಿ ಸಂಸಾರಮಾಡತಕ್ಕ ಯಾವ ಗಂಡಸು ಇರುವನೋ ನನಗೆ ತಿಳಿಯದು ಅವರು ಈ ವಿಚಾರದಲ್ಲಿ ಕೆಲವು ದೃಷ್ಟಾಂತಗಳನ್ನು ಕೊಟ್ಟಿದ್ದರೆ ಸಮರ್ಪಕವಾಗಿರುತ್ತಲಿತ್ತು.

ನಿತ್ಯಸುಮಂಗಲಿಗಳ ಮತಕ್ಕೆ ಸೇರಬೇಕೆಂದು ಶ್ರೀಮತಿ ಪದ್ಮಾವತಿಬಾಯಿಯವರಿಗೆ ಶಾಸ್ತ್ರಿಗಳು ಬರೆದಿರುವದು ನೋಡಿದರೆ ಅವರಲ್ಲಿ ವಿಷಯವಿಚಾರಕ್ಕಿಂತಲೂ ಕ್ರೋಧವೇ ಪ್ರಬಲಹೊಂದಿರುವಂತೆ ಕಾಣುತ್ತೆ. ಹೀಗೆ ಹೇಳಿರುವದರಿಂದ ನಿರಪರಾಧಿಯಾದ ಶ್ರೀಮತಿಯವರಿಗೆ ಮನಃಪೂರ್ವಕವಾಗಿ ಉಂಟುಮಾಡಿದ ಅವಮಾನವು ಇಂಡಿಯನ್ ಪೆನಲ್ ಕೋಡಿನ ಯಾವ ಸೆಕ್ಷನ್‌ಗೆ ಲಗಾವಾಗುತ್ತೆಂಬುದನ್ನು ಪಾಠಕಮಹಾಶಯರಾದ ಯಾವ ಅಡ್ವೋಕೇಟ್ ಪ್ರಭೃತಿಗಳಾದರೂ ತೋರಿಸಿಕೊಡಬಾರದೇ ?

'ನೂತನ ಮತಬುದ್ಧಿ ಮಿಷನರಿಗಳ ನೂತನವಿಧಿಯನ್ನು ಅನುಸರಣೆ ಮಾಡಿದರೆ ಇನ್ನೂ ಅನರ್ಥಭಾಜನರಾಗುವೆವು." ಈ ಮಾತನ್ನು ಅಜ್ಞಾನಿಗಳಾಗಿಯೂ ಅವಿದ್ಯಾವಂತರಾಗಿಯೂ ಗ್ರಾಮವಾಸಿಗಳಾಗಿಯೂ ಇರುವವರು ಹೇಳತಕ್ಕ ಮಾತೇ ಹೊರತು ವಿದ್ಯೆ ನಾಗರಿಕ ಮುಂತಾದವುಗಳನ್ನು ಹೊಂದಿರತಕ್ಕ ಈ ವೆಂಕಟಾದ್ರಿ ಶಾಸ್ತ್ರಿಗಳವರು ಹೇಳತಕ್ಕದ್ದಲ್ಲ. ಶ್ರೀಮತಿಯವರು ಕೇಳುವ ಅಂಶಗಳು ಮಿಷನರಿಯವರ ಪ್ರೇರಣೆಯಿಂದ ಕೇಳತಕ್ಕವುಗಳಲ್ಲ ಈಗಿನ ನವನಾಗರಿಕ, ವಿದ್ಯೆ, ಪುರಾತನಾರ್ಯರ ಚರಿತ್ರೆಯ ಜ್ಞಾನ, ಈಗಿನ ಹೀನಸ್ಥಿತಿಯ ಪರಿಜ್ಞಾನ, ಇವುಗಳ ಫಲಿತಾಂಶವೇ ಎಂದು ತಿಳಿಯಬೇಕು.

ಶ್ರೀಮತಿ ಪದ್ಮಾವತಿಬಾಯಿಯವರು ಹೇಳಿರುವ ಸಂಗತಿಗಳಿಗೆ ಸಂಬಂಧಪಡದೆ ಇರುವ ಇನ್ನೂ ಅನೇಕ ಅವಮಾನಕರವಾದ ಇತರ ಸಂಗತಿಗಳನ್ನೂ ಶಾಸ್ತ್ರಿಗಳವರು ಬರೆದಿರುತ್ತಾರೆ ಅವುಗಳನ್ನೆಲ್ಲಾ ನಾನು ಚರ್ಚೆಗೆ ಅರ್ಹವಾದವುಗಳಲ್ಲವೆಂದು ಈ ಲೇಖನದಲ್ಲಿ ತಾತ್ಸಾರದಿಂದ ತ್ಯಜಿಸಬೇಕಾಗಿದೆ

ಈಗ ಶ್ರೀಮತಿ ಪದ್ಮಾವತಿಬಾಯಿಯವರ ಲೇಖನವನ್ನು ಸ್ವಲ್ಪ ಚರ್ಚಿಸಬೇಕಾಗಿದೆ ಅಕೆಯವರು ಕೇಳುವ ಅಂಶಗಳ್ಯಾವವೆಂದರೆ.—

(೧) ಋತುಮತಿಯಾಗುವದಕ್ಕೆ ಮುಂಚೆ ವಿವಾಹವಾಗಬೇಕೆಂಬ ನಿರ್ಬಂಧವನ್ನು ವಜಾಮಾಡಬೇಕು; (೨) ಪತಿಯು ವಿಯೋಗವಾದರೆ ಮುಂಡನಾದಿ ಕರ್ಮಗಳನ್ನು ತೆಗದುಹಾಕಬೇಕು; (೩) ಪ್ರತಿಯೊಬ್ಬ ಹುಡುಗಿಗೂ ೬ ವರುಷದ ಲಾಗಾಯತು ೧೦ ವರುಷ ವಯಸ್ಸಾಗುವವರಿವಿಗೂ ಪ್ರೈಮರಿ ವಿದ್ಯಾಭ್ಯಾಸವಾದರೂ ಕಡ್ಡಾಯವಾಗಿ ಮಾಡಿಸಬೇಕು ಪದ್ಮಾವತಿಬಾಯಿಯವರು ಚರ್ಚಿಸತಕ್ಕ ವಿಷಯವು ಮುಖ್ಯವಾಗಿ ವಿತಂತುಗಳ ಹೀನಸ್ಥಿತಿ ಎಂಬುವದು. ಈ ಹೀನಸ್ಥಿತಿಯು ನಿವಾರಣೆಯಾಗತಕ್ಕದ್ದಕ್ಕೆ ವಿತಂತುಗಳ ಮುಂಡನಾದಿ ಕರ್ಮಗಳನ್ನು ತೆಗದುಹಾಕುವದು ಸಾಕಾದ ಸಲಕರಣೆಯಾಗುವಂತೆ ಕಾಣುವದಿಲ್ಲ. ಆದುದರಿಂದ ಅವರು ಕೇಳುವ ೩ ಅಂಶಗಳಿಗೆ ನಾನು ಇನ್ನೆರಡು ಅಂಶಗಳನ್ನು ಸೇರಿಸಬೇಕಾಗಿದೆ ಅವು ಯಾವವೆಂದರೆ.—(೪) ಪತಿಯು ವಿಯೋಗವಾದರೆ ಪತ್ನಿಯು ಇಷ್ಟಬಂದರೆ ಪುನರ್ವಿವಾಹ ಮಾಡಿಕೊಳ್ಳಬಹುದು, (೫) ಪತ್ನೀ ವಿಯೋಗವಾದಂಥಾ ೩೫ ವರುಷ ವಯಸ್ಸಿಗೆ ಮೇಲ್ಪಟ್ಟ ಗಂಡಸರು ೧೮ ವರುಷಕ್ಕೆ ಮೇಲ್ಪಟ್ಟ ಹೆಂಗುಸರನ್ನೇ ವಿವಾಹ ಮಾಡಿಕೊಳ್ಳಬೇಕು.

ಶ್ರೀಮತಿಯವರು ಗಂಡಸರ ವಿಚಾರದಲ್ಲಿ ಉಪಯೋಗಿಸಿರುವ ಷೆಯು ಸ್ವಲ್ಪ ಕಠಿಣವಾಗಿದ್ದರೂ ಅವರು ಕೇಳಿರತಕ್ಕ ೩ ಅಂ ಈಗಿನ ನಾಗರಿಕ ಸ್ಥಿತಿಯಲ್ಲಿ ಅಷ್ಟು ಭಾರಿಯಾದವುಗಳಲ್ಲ ವಿ ಗೌರವವನ್ನು ಆಲೋಚಿಸಬೇಕೇ ಹೊರತು ಭಾಷಾ ಕಾಠಿಣ್ಯ ಗಣಿಸಬಾರದು

ಸ್ತ್ರೀವಿದ್ಯಾಭಿವೃದ್ಧಿ, ಸ್ತ್ರೀಸ್ವಾತಂತ್ರ್ಯ ಮುಂತಾದ ಸ್ತ್ರೀ ಗಳ ಸ್ಥಿತಿಯ ಅಭಿವೃದ್ಧಿ ವಿಷಯವಾಗಿ ಶ್ರೀಮತಿಯವರು ಗಂಡ ಆಕ್ಷೇಪಿಸಿರುವದು ಅಷ್ಟು ಸಮರ್ಪಕವಾಗಿಲ್ಲ. ಯಾಕೆಂದರೆ ಹಿಂದೂಸ್ಥಾನವು ಸಾವಿರಾರು ವರ್ಷಗಳ ವರಿವಿಗೆ ಮುಸಲ್ಮಾನರ ನದಲ್ಲಿದ್ದು ಪ್ರತಿಯೊಬ್ಬ ಗಂಡಸೂ ತನ್ನ ಮತ, ಸೂತಾವಿ ಹೆಂಡತಿಮಕ್ಕಳು, ಮುಂತಾದವರ ಪ್ರಾಣಗಳನ್ನು ಕಾಪಾಡಿಕೊ ದರಲ್ಲಿ ಉದ್ಯುಕ್ತನಾಗಿರಬೇಕಾಗಿತ್ತೇ ಹೊರತು ದೇಶೋನ್ನ ದ್ಯಾಭಿವೃದ್ಧಿ, ಇತ್ಯಾದಿಯಾದ ಸದಾಚಾರ ವ್ಯವಹಾರಗಳಿಗೆ ಮ ಕೊಡಲು ಅವಕಾಶವಿರಲಿಲ್ಲ. ಮುಸಲ್ಮಾನರ ಹಾವಳಿಯಿಂದ ಗಳೆಲ್ಲರೂ ದರಿದ್ರರಾಗಿಹೋದರು ಪರಂತು ಬ್ರಿಟಿಷ್ ಸರ್ಕಾರ ಹಿಂದೂದೇಶದ ರಾಜ್ಯಾಡಳಿತವನ್ನು ವಹಿಸಿದ ಕಾಲದಿಂದೀಚೆಗ ಳ ಅಂದರೆ ಗಂಡಸರ ವಿದ್ಯಾಭ್ಯಾಸವು ಪ್ರಾರಂಭವಾಯಿತು. ವಿದ್ಯಾಭ್ಯಾಸವು ಪ್ರಾರಂಭವಾಗಿ ಒಂದು ಶತಮಾನವು ಕೂಡ ಯಾಗಿ ಆಗಲಿಲ್ಲ. ಸಾವಿರಾರು ವರ್ಷಗಳಿಂದ ಕವಿದುಕೊಂಡಿದ್ದ ಧಕಾರವು ಒಂದೇ ಒಂದು ಶತಮಾನದಲ್ಲಿ ಚದರಿಹೋಗಲಿಲ್ಲವ ದು ಶ್ರೀಮತಿಯವರು ಪ್ರಲಾಪಿಸಿದಂತಾಗಿದೆ. ಈ ಒಂದು ಶತ ಲ್ಲಿಯೂ ಇಂಡಿಯಾ ದೇಶದ ೩೦ ಕೋಟಿ ಜನರಲ್ಲಿ ಎಷ್ಟು ವಿದ್ಯಾವಂತರಾಗಿರುವರು ? ಬಹಳ ಸ್ವಲ್ಪವೇ. ಆದರೂ ಈ ಸ್ವ ದಿ ವಿದ್ಯಾವಂತರು ತಮ್ಮ ಅರ್ಧ ದೇಹಗಳಾದ ಹೆಂಗಸರ ಪಕ್ಷ ಹಿಸಿ ಅವರ ಸ್ಥಿತಿಯನ್ನು ವೃದ್ಧಿಪಡಿಸಬೇಕೆಂದು ಕಂಕಣಬದ್ಧ ದುವರಿವಿಗೂ ಮಾಡಿರುವ ಸಾಹಸಕ್ಕೆ ಸಾವಿರಾರು ಜನರು ಓದು ತ್ತಾಂತ ಪತ್ರಿಕೆಯಲ್ಲಿ ಶ್ರೀಮತಿಯವರು ಸ್ವತಃ ಬರೆದಿರುವ ಅ ನೀಯವಾದ ಲೇಖನವೇ ಸಾಕ್ಷೀಭೂತವಾಗಿದೆ ಮತ್ತು ಈ ದಿಂದಲ ಸಾಹಸವು ಸಫಲಗೊಂಡಿತೆಂಬುದು ಹಾಗೆ ಈಗ ಸಾಹಸ ರುವ ನೂರಾರು ಮಂದಿ ವಿದ್ಯಾವಂತರಿಗೆ ತುಂಬಾ ಸಂತೋಷ ಟುಮಾಡದಿರಲಾರದು. ವರ್ಷ ವರ್ಷ ದೊಡ್ಡ ಯೂನಿವರ್ಸಿಟಿ ಕ್ಷೆಗಳಲ್ಲಿ ತೇರ್ಗಡೆಹೊಂದಿ ವೃದ್ಧಿಗೆ ಬರುವ ವಿದ್ಯಾವಂತರಲ್ಲಿ ೯೯ ಮಂದಿ, ಹೆಂಗಸರ ಸ್ಥಿತಿಯ ಅಭಿವೃದ್ಧಿ ವಿಷಯದಲ್ಲಿ ಪಡುವದಾಗಿ ನಮ್ಮಗಳೆಲ್ಲರಿಗೂ ವಿದಿತವಾಗಿಯೇ ಇದೆ. ಆದು ಈ ವಿಚಾರದಲ್ಲಿ ಗಂಡಸರನ್ನು ಆಕ್ಷೇಪಿಸುವದಕ್ಕೆ ಸಾಕಾದದ್ದು ಗಳಿಲ್ಲವೆಂದು ಕಾಣುತ್ತದೆ.

ಹೀಗಿದ್ದರೂ ವಿತಂತುಗಳ ಸ್ಥಿತಿಯನ್ನು ನಾವುಗಳೆಲ್ಲರೂ ವಿತಕ್ಕೆ ಒಂದೇ ಸಲ ಸರಿಪಡಿಸಬಾರದು ಎಂದು ಶ್ರೀಮತಿಯವ ಕ್ಷೇಪಿಸಬಹುದು. ನವನಾಗರಿಕವನ್ನೂ ಈಗಿನ ವಿದ್ಯಾಭ್ಯಾಸ ನ್ನೂ ಹೊಂದಿರುವ ಗಂಡಸರು ಒಟ್ಟಿಗೆ ಸೇರಿ ಯಾರನ್ನೂ ಲಕ್ಷ್ಯ ದೆ ಎಂಥಾ ಕೆಲಸವನ್ನಾದರೂ ಮಾಡಲು ಶಕ್ತರಾಗಿರುವರು ಮ॥ ವೆಂಕಟಾದ್ರಿಶಾಸ್ತ್ರಿಗಳಂತೆ ಶಾಸ್ತ್ರಾರ್ಥವಿಚಾರದಲ್ಲಿ ದಾಗ್ರೇಸರರು ಅನೇಕರಿರುವರು ಈಗಿನ ವಿದ್ಯಾಭ್ಯಾಸದ ಉ ನೆಂದರೆ—ಯಾವ ಅಭಿವೃದ್ಧಿಯನ್ನೇ ಆಗಲಿ ನಮ್ಮ ಹಿಂದೂ ಸ್ತ್ರಗಳಿಗನುಸಾರವಾಗಿ ಮಾಡಬೇಕೆಂಬುವದೇ. ಶಾಸ್ತ್ರ ಮತಾಧಿಕಾರಿಗಳನ್ನೂ ಉಲ್ಲಂಘಿಸದೆ ಅವರ ಅಧಿಕಾರವನ್ನು ಒಪ್ಪಿ ಡು ಅವರಿಂದಲೇ ಶಾಸ್ತ್ರಗಳಲ್ಲಿ ಅಭಿವೃದ್ಧಿಗೆ ಅಡಚಣೆಯಾದ ನಾದರೂ ಉಂಟೇ ? ಹಾಗಿದ್ದರೆ ಅವುಗಳಿಗೆ ಮಾಡತಕ್ಕ ಪ ನಾದರೂ ಉಂಟೇ ? ಎಂಬೀ ಸಂಗತಿಗಳನ್ನು ತಿಳಿದು ನಮ್ಮ ಪ್ರಾಯಗಳನ್ನು ಅವರುಗಳಿಗೆ ತಿಳಿಯಪಡಿಸಿ ಸಾಧ್ಯವಾದಷ್ಟು ಅ ನ್ನೂ ನಮ್ಮ ದಾರಿಗೆ ತಿರುಗಿಸಿ, ಒಂದೇ ಜನಾಂಗದಲ್ಲಿ ಕಕ್ಷಿ ಗುವದಕ್ಕೆ ಅವಕಾಶಕೊಡದೆ ಅವರ ಅನುಮೋದನದಿಂದ ಅ ರ್ಯಗಳನ್ನು ನೆರವೇರಿಸಬೇಕೆಂದು ನಾವು ಪ್ರಯತ್ನಿಸು ನಮ್ಮ ಸಾಧನಗಳನ್ನೆಲ್ಲಾ ಖರ್ಚುಮಾಡಿ ನಮ್ಮ ಕೈಲಾದ ಪ್ರಯಾಸಪಟ್ಟು ಅವರುಗಳು ನಮ್ಮ ಮಾರ್ಗಕ್ಕೆ ಬಾರದೆ ಮುಂದೆ ಮಾಡತಕ್ಕ ಕಾರ್ಯವು ತಿಳಿಯದೇ ಇರುವದು. ಆ ಶ್ರೀಮತಿಯವರು ಅಪೇಕ್ಷಿಸುವ ಅಭಿವೃದ್ಧಿಯು ಉಂಟಾಗುವ ಲ್ಪಕಾಲವಿಳಂಬವಾದುದಕ್ಕಾಗಿ ಅವರು ಆತುರವೂ ಆಗ್ರಹವೂ ಮಾತ್ರದಿಂದಲೇ ಕಾರ್ಯವು ಕೈಗೂಡುವದಿಲ್ಲ.

...ಸ್ವಾತಂತ್ರ್ಯದ ವಿಚಾರದಲ್ಲಿ ತುಂಬಾ ಬರೆಯಲು ಅನಾವಶ್ಯಕ ...ಸ್ವಾತಂತ್ರ್ಯವನ್ನು ಶ್ರೀಮತಿಯವರು ಅಪೇಕ್ಷಿಸಿರುವದೋ ವ್ಯ... ಅವರವರ ಸಂಸಾರದಲ್ಲಿ ಅಯಾ ಹೆಂಗಸರು ಸಾಕಾದಷ್ಟು ...ತಂತ್ರ್ಯವನ್ನು ಅನುಭವಿಸುತ್ತಲೇ ಇರುವರು ಆದರೆ ಪದ್ಮಾವತೀಬಾಯಿ ...ಸೂಚಿಸಿರುವದು ಅವರು ಕೇಳುವ ೩ ಅಂಶಗಳಲ್ಲಿನ ಸ್ವಾತಂ... ಸರಿ ಅರ್ಥವಾಗುತ್ತದೆ ಈ ಪಕ್ಷದಲ್ಲಿ ಮೇಲೆ ಬರೆದಿರು... ಸಾಗಿರುವೆನು

...ರಾದ ಪದ್ಮಾವತಿಬಾಯಿ ಯವರು ಗಂಡಸರ ಪಕ್ಷದಲ್ಲಿ ...ವಾದ್ದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞನಾಗಿರುವೆನು ಆ... ಕೆಲವು ಸಂಗತಿಗಳನ್ನು ನಾನು ಅನುಮೋದಿಸುವದಿಲ್ಲ ಹೆಂಗಸ... ಯಾರೂ ಅಲಕ್ಷ್ಯಮಾಡುವದಿಲ್ಲ "ಗೃಹಿಣೀ ಗೃಹ...ಮ್" ಎಂಬ ಪಂಡಿತೋಕ್ತಿಯನ್ನು ಯಾವನು ತಾನೇ ಮರೆ... ಹೆಂಗಸರ ಅಭಿವೃದ್ಧಿಯೇ ನಮ್ಮಗಳ ಅಭಿವೃದ್ಧಿ, ಅವರ ...ಷವೇ ನಮ್ಮ ಸಂತೋಷ, ಅವರ ದುಃಖವೇ ನಮ್ಮ ದುಃಖ ...ಜ್ಞಾದ ಗೋಖಲೆ ಬಾನರ್ಜಿ ಮುಂತಾದವರ ತರಬಿಯತ್ತು ಮೊ... ರಾಜಕೀಯ ವಿಷಯದಲ್ಲಿಯೇ ಪ್ರಸರಿಸಿರುವದರಿಂದ ಇತ...ಗಳಲ್ಲಿ ಅವರ ಗಮನವು ಓಡುವದಿಲ್ಲ ಅಭಿವೃದ್ಧಿಯು ...ಗಳಲ್ಲಿಯೂ ಉಂಟಾಗಬೇಕು ಕೆಲವರು ರಾಜಕೀಯ ...ದಲ್ಲಿಯೂ, ಕೆಲವರು ಮತಾಚಾರ ಮುಂತಾದ ವಿಷಯದಲ್ಲಿ ಮತ್ತೆ ಕೆಲವರು ಸಾಂಸರ್ಗಿಕ ವಿಚಾರದಲ್ಲಿಯೂ ಅವರವರ ...ಯೂ ಸಾಹಸವೂ ಯಾವ ಯಾವ ವ್ಯಾಪಾರದಲ್ಲಿ ಓಡುವದೋ ...ವಿಚಾರಗಳಲ್ಲಿ ತಿದ್ದುಪಾಟುಮಾಡಲು ಪ್ರಯತ್ನಿಸುವರು ಅದು ...ಅವರುಗಳನ್ನು ನಿಂದಿಸಬಾರದು

ಮೈಸೂರು ಹೆಣ್ಣುಗಳ ವಿಚಾರದಲ್ಲಿ ಪದ್ಮಾವತಿಬಾಯಿ ಯವರ... ಅಷ್ಟು ಸಮರ್ಪಕವಾಗಿಲ್ಲ ಯಾಕೆಂದರೆ ಮೈಸೂರಿನಲ್ಲಿ ...ಎಲ್ಲಿಯೋ ಕೋಗಿಲೆಯ ವಸ್ಯವಲ್ಲಿ ಕಾಗೆಯು ಸೇರಿದಂ...ಸ್ವಲ್ಪವು ಕೆಟ್ಟ ಹೆಂಗಸರಿರುವ ಮಾತ್ರಕ್ಕೇನೇ ಮೈಸೂರು ಹೆಂಗ... ನಿಂದಿಸಬಹುದೇ? ವಿದ್ಯಾಭ್ಯಾಸದಿಂದ ಹೆಂಗಸರಲ್ಲಿ ರತಕ ...ವು ಹೋಗಿ ನಾಗರೀಕರಾಗುವದರಲ್ಲಿ ಸಂಶಯವಿಲ್ಲ ...ಉಭಯಪದ್ಮಾವತಿಬಾಯಿಯವರುಗಳೂ ಬರೆದಿರುವ ಲೇಖ...ನಗಳು ಶ್ಲಾಘನೀಯಗಳಾಗಿವೆ ಎಂಬುವದಕ್ಕೆ ಸಂದೇಹವೇ ಇಲ್ಲ ...ನಮ್ಮ ಹಿಂದುಸ್ಥಾನದ ಹೆಂಗಸರೆಲ್ಲಾ ವಿದ್ಯಾಭಿವೃದ್ಧಿಯು ನಾಗರೀಕತೆಯನ್ನೂ ಹೊಂದಿ ಅವರುಗಳಿಗಾಗಿ ಗಂಡಸರು ಮಾ...ವ ಸಾಹಸಗಳನ್ನು ಸಫಲಗೊಳಿಸಲೆಂದು ಭಗವಂತನನ್ನು ಪ್ರಾ...ರ್ಥಿಸುತ್ತೇನೆ

ಒಳದೇಶದ ವೃತ್ತಾಂತಗಳು

ಮುಂದಿನ ತಿಂಗಳು ಕಲ್ಕತ್ತೆಯಲ್ಲಿ ನಡೆಯುವ ಭಾರೀ ಕಾಂಗ್ರೆ... ನಮ್ಮ ಮಹಾರಾಜರವರೂ ಕರ್ನಲ್ ದೇಶರಾಜೇ ಅರಸಿನವ... ಉವು ಕುದುರೆಗಳನ್ನು ಕಳುಹಿಸಿದಾರೆ

◆◆◆◆

ಬ್ರಿಟಿಷ್ ರೆಸಿಡೆಂಟರಾದ ಮೆ॥ ಎಸ್ ಎಂ ಫ್ರೇಸರ್ ಯವರು ...ತಿಂಗಳಲ್ಲಿ ವೈಸ್‌ರಾಯಿ ಯವರ ಭೇಟಿಗಾಗಿ ಕಲ್ಕತ್ತೆಗೆ ...ಬರುವವರಾಗಿದ್ದಾರೆಂದು ತಿಳಿದು ಬಂದಿದೆ

◆◆◆◆

ಮೇಜರ್ ಡ್ರೇಕ್ ಬ್ರಾಕ್‌ಮೆನ್ ಎಂಬೊಬ್ಬ ಯೂರೋಪಿಯನ್ನರನ್ನು ನಮ್ಮ ಸರ್ಕಾರದವರು ಸೀನಿಯರ್ ಸರ್ಜನ್ ಕೆಲಸಕ್ಕೆ ...ಕೊಳ್ಳುವವರಾಗಿದಾರೆಂದು ತಿಳಿಯುವುದು

◆◆◆◆

ಮೈಸೂರು ಒಕ್ಕಲಿಗರ ಸಂಘದವರು ಬೆಂಗಳೂರಿನಲ್ಲಿ ಒಂದು ...ನಿಲಯವನ್ನು ಕಟ್ಟುವುದಕ್ಕೆ ಪ್ರಯತ್ನಪಟ್ಟು, ಸ್ಥಳಬೇಕಾ...ದು ದಿವಾನರವರನ್ನು ಕೇಳಿರುವುದಾಗಿ ವರ್ತಮಾನಬಂದಿದೆ

◆◆◆◆

...ದಿವಾನರವರು ಈಗ ಸದ್ಯದಲ್ಲಿ ಮಲ್ನಾಡಿನ ಕಡೆ ಸರ್ಕೀಟು ...ಹೋಗುವುದನ್ನು ನಿಲ್ಲಿಸಿರುತ್ತಾರೆಂತಲೂ, ಅವರೂ ಶ್ರೀಮನ್ ಮಹಾ...ರಾಜರ ಸಂಗಡ ಕಲ್ಕತ್ತೆಗೆ ಪ್ರಯಾಣ ಮಾಡುವವರಾಗಿದ್ದಾರೆಂತಲೂ ...ಗಿದೆ

◆◆◆◆

ಮೈಸೂರು ಸಂಸ್ಥಾನದ ಸರ್ಕಾರಿ ಕೈಗಾರಿಕೆ ಪಾಠಶಾಲೆಗಳಲ್ಲಿ ...ಗುವ ಸುಮಾರು ೨೦೦ ಪದಾರ್ಥಗಳನ್ನು ದಿಸೆಂಬರ್ ಆಖೈ... ಕಲ್ಕತ್ತೆಯಲ್ಲಿ ನಡೆಯುವ ಸರ್ವವಸ್ತು ಪ್ರದರ್ಶನಶಾಲೆಗೆ ಕಳು...ಡುವಂತೆ ಆ ಸ್ಕೂಲುಗಳ ಸೂಪರಿಂಟೆಂಡೆಂಟರು ಏರ್ಪಾಡು ...ದ್ದಾರೆ

◆◆◆◆

ಈ ಸಲ ರಾಜಧಾನಿಯಲ್ಲಿ ಲೋಯರ್ ಸೆಕಂಡರಿ ಪರೀಕ್ಷೆ ನಡೆಯು... ಕಟ್ಟಡದ ಮೇಲ್ಭಾಗದಲ್ಲಿ ಜೇನು ಹುಳಗಳು ಗೂಡು ಕಟ್ಟಿ... ಹುಡುಗನ್ಯಾರೋ ಆ ಗೂಡನ್ನು ಕೆದಕಿದ್ದರಿಂದ ಹುಳುಗಳೆದ್ದು ...ಬಾಲಕರನ್ನು ಕಚ್ಚಿ ಬಾಧೆಪಡಿಸಿತು ಆ ಹುಡುಗರು ಪರೀ...ಕ್ಷೆಬರದೆ ನಿಲ್ಲಬೇಕಾಯಿತು

◆◆◆◆

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವ ಹಾವಳಿಯನ್ನು ನಿಲ್ಲಿಸುವಂತೆ ...ಬೇಕೆಂದು ಸರ್ಕಾರದವರು ಕಾಯಿಲೆಯವರನ್ನು ಗೊತ್ತು ...ಪಡಿಸುವದಕ್ಕಾಗಿ ಬಲಾತ್ಕಾರದ ಕಾನೂನನ್ನು ಜಾರಿಗೆ ತಂದಿರುತ್ತಾ... ಪ್ಲೇಗ್ ಕಾಯಿಲೆಯಾದವರ ಮನೆಯವರು ಕೂಡಲೆ ಆ ಸಂಗತಿ...ಯನ್ನು ಸರ್ಕಾರಿ ಅಧಿಕಾರಿಗಳಿಗೆ ತಿಳಿಸಬೇಕೆಂದು ವಿಧಿಸಿರುವರು

◆◆◆◆

ಮಳವಳ್ಳಿಯಿಂದ ಲಿಂಗೇಗೌಡನೆಂಬೊಬ್ಬ ಉಪಾಧ್ಯಾಯರು ಈ ...ಮೈಸೂರು ಲೋಯರ್ ಸೆಕಂಡರಿ ಪರೀಕ್ಷೆಗೆ ಒಂಬತ್ತು ಜನ ಸ್ಕೂಲಿ... ಬಾಲಕರನ್ನು ತರಪೇತುಮಾಡಿ ರಾಜಧಾನಿಗೆ ಕರೆದುಕೊಂಡು ... ಈ ಪೈಕಿ ಮೂರು ನಾಲ್ಕು ಮಂದಿ ತೇರ್ಗಡೆಹೊಂದ ಬಹುದೆಂದು ತೋರುವುದು ಆ ಉಪಾಧ್ಯಾಯರ ಸಾಹಸವು ಸ್ತೋತ್ರಾರ್ಹವಾಗಿರುತ್ತದೆ

◆◆◆◆

ಮಹಾರಾಜರವರ ಬಾಡಿಗಾರ್ಡ್ ಕಮ್ಯಾಂಡೆಂಟರಾಗಿದ್ದು ರಾಜಧಾನಿಯಲ್ಲಿ ಪೆನ್ಷನ್ ಪಡೆಯುತ್ತಿರುವ ವೃದ್ಧ ಮಹಮದೀಯರಾದ ಮಹಮದ್ ಬಡ್ರುದ್ದೀನ್ ಸಾಹೇಬ್, ಖಾನ್ ಬಹದೂರ್, ಯವರು ೫೦೦೦ ರೂಪಾಯಿಗಳನ್ನು ಮೈಸೂರು ಗವರ್ನಮೆಂಟಿನವರ ವಶಕ್ಕೆ ಒಪ್ಪಿಸಿ, ಅದರ ಬಡ್ಡಿ ಹಣದಿಂದ ಈ ಸಂಸ್ಥಾನದ ಹೈಸ್ಕೂಲುಗಳಲ್ಲಿ ಪ್ರತಿ ವರುಷವೂ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದತಕ್ಕ ಇಬ್ಬರು ಮಹಮದೀಯ ವಿದ್ಯಾರ್ಥಿಗಳಿಗೆ ಎರಡು ಬಹುಮಾನಗಳನ್ನು ತಮ್ಮ ಹೆಸರಿನ ಮೇಲೆ ಕೊಡುತ್ತಾ ಬರಬೇಕೆಂದು ತಿಳಿಸಿರುತ್ತಾರೆ. ಅವರ ಧರ್ಮಬುದ್ಧಿಯೂ ವಿದ್ಯಾಪ್ರೋತ್ಸಾಹಾಭಿಲಾಷೆಯೂ ಸ್ತೋತ್ರಾರ್ಹವಾಗಿರುತ್ತವೆ ಇದಲ್ಲದೆ ಈ ಮಹನೀಯರು ಕೆಲವು ದಿನಗಳ ಕೆಳಗೆ ರಾಜಧಾನಿಯಲ್ಲಿ ಸ್ಥಾಪಿಸಲ್ಪಟ್ಟಿರುವ ವಿಂಡ್ಸರ್ ಆಸ್ಪತ್ರೆಗೂ ಎರಡು[illegible] ದ್ರವ್ಯ ಸಹಾಯ ಮಾಡಿರುವುದನ್ನು ಹಿಂದೆಯೇ ತಿಳಿಸಿರುವೆವು

◆◆◆◆

ರಾಜಧಾನಿಯ ಕೃಷ್ಣರಾಜ ಮೊಹಲೆಯಲ್ಲಿ ಇನ್ನೂ ದಿನವಹಿ ಪ್ಲೇಗ್ ಕಾಯಿಲೆಗಳು ಕಂಡು ಬರುತ್ತಲೇ ಇವೆ ಆ ಮೊಹಲೆಯಲ್ಲೂ ದೇವರಾಜ ಮತ್ತು ಕೆಲವು ಮೊಹಲೆಗಳಲ್ಲೂ ಕೊಳಕಾದ ಮನೆಗಳನ್ನು ಒಡೆದುಹಾಕಬೇಕೆಂದು ರಾಜಧಾನಿಯ ಮ್ಯುನಿಸಿಪಲ್ ಕಮಿಷನರು ಟೌನ್ ಹಾಲ್ ಬಂಗಲೆಯಲ್ಲೂ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಅವರ ಆಫೀಸಿನಲ್ಲೂ ಸಭೆ ಸೇರಿ ಚರ್ಚೆಮಾಡಿ, ಈ ಕಾರ್ಯಕ್ಕೆ ಗವರ್ನಮೆಂಟಿನವರು ಕೂಡಲೇ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ ಕೊಟ್ಟಲ್ಲಿ ಉಪದ್ರವನ್ನು ಇತರ ಮೊಹಲೆಗಳಿಗೆ ಹರಡಿಕೊಳ್ಳದಂತೆ ತಪ್ಪಿಸಬಹುದಾಗಿದೆ ಎಂದು ತೀರ್ಮಾನಿಸಿ ಗವರ್ನಮೆಂಟಿಗೆ ಅರಿಕೆ ಮಾಡಿರುತ್ತಾರೆ ಈ ಹಣ ಇಷ್ಟರಲ್ಲೇ ಸ್ಯಾಂಕ್ಷನ್ ಆಗಬಹುದೆಂದು ನಿರೀಕ್ಷಿಸುತ್ತೇವೆ ತರುವಾಯ ಯಾವ ಯಾವ ಮನೆಗಳನ್ನು ಒಡೆಯಬೇಕೋ ಒಂದು ಕಮಿಟಿಯವರು ಸೇರಿ ಅಜಮಾಯಿಷಿ ಮಾಡಿ ತೀರ್ಮಾನಿಸುವರು

◆◆◆◆

ಒಬ್ಬ ಬಾತ್ಮೀದಾರರು ಬರೆಯುವುದು —ನೆನ್ನೆ ದಿವಸ ತಾ ೨೦ನೇ ನವಂಬರ್ ಮಂಗಳವಾರ ಗಂಟೆ ೧೦ ಕ್ಕೆ ರತ್ನಗಿರಿಯಲ್ಲಿ ರಾಜೂರ ಎಂಬ ಊರಲ್ಲಿ ಮೀನು ಹಿಡಿಯುವ ಮುಸಲ್ಮಾನ ದಾಲ್ದಿ ಜಾತಿಯವರ ಮನೆಗಳಿಗೆ ಬೆಂಕಿಬಿದ್ದು ೭೧ ಮನೆಗಳು ಸುಟ್ಟುಹೋದವು ಸುಮಾರು ೭೫ ಸಾವಿರ ರೂಪಾಯಿ ನಷ್ಟವಾಯಿತು ಈ ಪೈಕಿ ಬಡವರಾದ ಕೆಲವು ಜನಗಳು ಕೂಡಿ ಎರಡನೆ ಮನೆ ಕಟ್ಟುವ ಉದ್ದೇಶ ಸರಕಾರದವರಿಗೆ ಕರಾರು ಬರಕೊಟ್ಟು ಬೇಕಾದಷ್ಟು ರೂಪಾಯಿ ತೆಗೆದುಕೊಳ್ಳುವ ಆಲೋಚನೆಯಲ್ಲಿ ಇರುತ್ತಾರೆ ಸನ್ ೧೯೦೫ ನೆ ಇಸವಿ ಏಪ್ರೆಲ್ ತಿಂಗಳಲ್ಲಿ ಇದೇ ಪ್ರಕಾರ ರತ್ನಗಿರಿ ಬಾಟಿಯ್ಯಂ ಎಂಬ ಊರಿನಲ್ಲಿ ಇದೇ ಜಾತಿಯವರ ೩೫ ಮನೆಗಳಿಗೆ ಬೆಂಕಿಬಿದ್ದು ಸುಟ್ಟುಹೋಗಿತ್ತು ಅವರೆಲ್ಲರೂ ಮಹಾ ಬಡವರು ಇವರೆಲ್ಲರಿಗೂ ಸರಕಾರದವರು ಇವರಿಂದ ಕರಾರು ಬರಿಸಿಕೊಂಡು ಒಬ್ಬೊಬ್ಬರಿಗೆ ೫೦, ೭೫, ೧೦೦ ೧೫೦, ರೂಪಾಯಿ ಪ್ರಕಾರ ಕೊಟ್ಟಿದ್ದರು ಈಗಿನವರಿಗೆ ಸಹಾ ಸರಕಾರದವರು ದಯಮಾಡಿ ಕೊಟ್ಟಾರು ಎಂಬದಾಗಿ ನಂಬುತ್ತೇನೆ

ಬಹುಮಾನ ಪಡೆದ ವರ್ತಮಾನವು.

[(೧) ಪ್ರತಿ ಮೇಲಾಟದ ಲೇಖನದ ಮೇಲೂ "ಬಹುಮಾನದ ಮೇಲಾಟ" ವೆಂದು ಬರೆದು ಲೇಖಕರ ಹೆಸರನ್ನೂ ವಿಳಾಸವನ್ನೂ ಪರಿಷ್ಕಾರವಾಗಿ ತಿಳಿಸಬೇಕು. (೨) ಲೇಖನವು ಬಾತ್ಮೀದಾರರು ವಾಸಿಸುವ ಸ್ಥಳದ ಬಳಿಯಲ್ಲಿ ಹಿಂದೆ ಹತ್ತು ದಿನಗಳೊಳಗೆ ನಡೆದ ವಿಷಯವಾಗಿರಬೇಕು ಅರ್ಧ ಕಾಲಮಿಗಿಂತ ಕಡಿಮೆಯಾಗಿರದೂ ಒಂದು ಕಾಲಮಿಗಿಂತ ಹೆಚ್ಚಾಗಿರದೂ ಇರಬೇಕು (೩) ಪ್ರತಿಯೊಂದು ಲೇಖನವೂ ನಮ್ಮ ಆಫೀಸಿಗೆ ಪ್ರತಿವಾರವೂ ಸೋಮವಾರ ಪ್ರಾತಃಕಾಲವೇ ತಲುಪಿರಬೇಕು (೪) ಬಹುಮಾನ ಪಡೆದವರ ಹೆಸರನ್ನು ಪ್ರತಿ ವಾರವೂ ಪ್ರಕಟಿಸುವೆವಲ್ಲದೆ, ಹಣವನ್ನು ಮನಿಯಾರ್ಡರಿನ ಮೂಲಕ ರವಾನಿಸುವೆವು (೫) ಬಹುಮಾನದ ನಿಮಿತ್ತವಾಗಿ ನಮ್ಮಲ್ಲಿ ಬರೆದು ಬರುವಂಥ ಲೇಖನಗಳೆಲ್ಲಾ ವೃತ್ತಾಂತ ಪತ್ರಿಕಾ ಕರ್ತರ ಸೊತ್ತಾಗಿ ಭಾವಿಸಲ್ಪಡುವವು ಒಂದೇ ತಿಂಗಳಲ್ಲಿ ಒಬ್ಬ ಲೇಖಕನಿಗೇನೇ ಎರಡು ಸಾರಿ ಬಹುಮಾನ ದೊರೆಯಲಾರದು.]

[ಈ ಬಾತ್ಮಿ ಬರೆದ ಮಾ॥ ಕಲ್ಲೂರದ ಶ್ರೀನಿವಾಸಾಚಾರ್ಯ, ಹೊಳೆಹೊನ್ನೂರು, ಶಿವಮೊಗ್ಗಾ ಡಿ, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೆ]

ಕಳವುದಕ್ಕೆ ಹೋಗಿ ಪ್ರಾಣಬಿಟ್ಟದ್ದು.

ಹೊಳೆಹೊನ್ನೂರು ಶಿವಮೊಗ್ಗಾ ತಾಲ್ಲೂಕಿಗೆ ಸೇರಿದ್ದಾಗಿ ಸಮೀಪದಲ್ಲಿದೆ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪ್ಲೇಗ್ ಮಹಾಮಾರಿಯು ಸಂಚರಿಸಿ ಹಾಗೆಯೇ ಇಲ್ಲಿ ೪—೫ ಸಂವತ್ಸರಗಳು ವಾಸಿದ್ದಂ ಮೇಲೆ ಪುರ ನಿವಾಸಿಗಳು ತಮ್ಮ ತಮ್ಮ ಪ್ರಾಣರಕ್ಷಣೆಗೋಸ್ಕರ ನೆರೆಯ ಗ್ರಾಮಗಳಿಗೆ ಹೋಗುತ್ತಾ ಪುನಃ ಸೇರುತ್ತಾ ಇದ್ದು, ಊರಿನ ಭಾಗವಾದ ಕೋಟೆ, ಪೇಟೆ, ಇವುಗಳಲ್ಲಿ ಕೋಟೆಯವರು ಹಾಗೆ ಪ್ಲೇಗ್ ವ್ಯಾಪಿಸಿದ ಕೂಡಲೇ ಹೊರಗೆ ಹೋದವರು ಕೆಲವು ಬ್ರಾಹ್ಮಣರು ಬರುತ್ತಲೂ, ಉಳಿದವರು ಅಲ್ಲಿಯೇ ನಿಲ್ಲುತ್ತಲೂ ಇದ್ದು, ನಾಡಿಗರ ಬೀದಿಯವರು ಮಾತ್ರ ಕುದ್ದಿಂಗೆ ಸ್ವಗೃಹಾಪೇಕ್ಷೆಯನ್ನೇ ಮರೆತಿದ್ದರು ಕೇರಿಯು ಲಾಂಟಾನಾದಿಂದ ಕೂಡಿ ಮನೆಗಳ ಗುರ್ತು ಸಿಕ್ಕುವುದು ದುಸ್ತರವಾಗಿತ್ತು ಅಡವಿ ಮೃಗಗಳು ವಾಸ ಸ್ಥಳ ಪ್ರತಿ ಇರುತ್ತಿದ್ದವು ಪ್ಲೇಗ್ ಇಲ್ಲದೆ ಇರುವುದರಿಂದ ಈಚೆಗೆ ಜನರು ಬರುವುದಕ್ಕಾರಂಭಿಸಿ, ಅದರಂತೆ ನಾಡಿಗ ಬನಪ್ಪನವರ ಮಕ್ಕಳು ತಾವೂ ಬರಬೇಕೆಂದು ೪ ೫ ದಿನಗಳ ಮುಂಚೆ ಬಂದು ಲಾಂಟಾನಾ ವ್ಯಾಪ್ತವಾದ ಮನೆಯೊಳ ಪ್ರವೇಶಿಸಿ, ದುರಸ್ತು ಮಾಡಿಸಲು ಸ್ಥಳಗಳನ್ನು ಚನ್ನಾಗಿ ಪರೀಕ್ಷಿಸುತ್ತಾ ಧಾನ್ಯಸಂಗ್ರಹದ ಪಣತವನ್ನು ಮೇಲಿನ ಹಲಗೆ ಇಲ್ಲದ್ದನ್ನು ಕಂಡು, ಅದರ ಒಳಭಾಗದಲ್ಲಿ ಇಣಿಕಿ ನೋಡಲು, ಕತ್ತಲಿನಿಂದ ಮನುಷ್ಯನೊಬ್ಬನು ಅಡಗಿಕೊಂಡಹಾಗೆ ಕಾಣಿಸಿತು. ಬಿಟ್ಟು ಬಹಳ ದಿನಗಳಾಗಿರಲು ದೆವ್ವವೋ ಭೂತವೋ ಆಗಿರಬಹುದೆಂದು ಆಶ್ಚರ್ಯಪಟ್ಟು, ಪಟಾಯಿ ನಸೂಳ್ತವನ್ನು ಪರಿಸಲಾರಂಭಿಸಲು, ಜನಗಳು ಆಶ್ಚರ್ಯದಿಂದ ಏನೆಂದು ಕೇಳಲು, ನಮ್ಮ ಪಣತದಲ್ಲಿ ಏನೋ ಇದೆ ಎಂದು ಹೇಳಿದರು.

ಊಟತೀರಿಸಿ ಮಧ್ಯಾಹ್ನ ಕೆಲವರನ್ನು ಕರೆದುಕೊಂಡು ಮತ್ತೆ ಮನೆಗೆ ಹೋಗಲು, ಯಾರೂ ಆ ಪಣತದ ಬಳಿ ಹೋಗಲು ಹಿಂಜರಿಯಲಾರಂಭಿಸಿದರು ಅನಂತರ ಮನೆಯವರಿಗೆ ಬಿಟ್ಟದ್ದಲ್ಲವೆಂದು ಅವರೇ ಪಣತದಲ್ಲಿ ದೀಪದೊಂದಿಗೆ ಇಳಿದು ನೋಡಿದಾಗ, ಸರಿಯಾದ ಅವಯವಗಳಿಂದ ಯುಕ್ತವಾದ ರಕ್ತ ಮಾಂಸ ಚರ್ಮ ರಹಿತ ದೇಹವು ಇತ್ತು ಅಲ್ಲದೆ ಹಾಕಿಕೊಂಡ ಅಂತಯೂ ಉಟ್ಟುಕೊಂಡ ಕಚ್ಚೆಯೂ ಪಕ್ಕದಲ್ಲಿಯೇ ಮುದಿರಿಸಿಟ್ಟದ್ದ ಧೋತ್ರವೂ ಇತ್ತು ಈ ಕಾರಣಗಳಿಂದ ಗಂಡಸಿನದೆಂದು ಹೇಳಲು ನಿಸ್ಸಂದೇಹವಾಗಿತ್ತು ಇದನ್ನು ಕೇಳಿದವರೆಲ್ಲರೂ ಕಳ್ಳತನಕ್ಕೆ ಬಂದು ಅಕಸ್ಮಾತ್ತು ಮೃತಪಟ್ಟಿರುವನೆಂತಲೂ, ಹುಲಿ ಗಿಲಿ ತಿಂದುಹಾಕಿರಬೇಕೆಂದೂ ವಗೈರೆ ಮನಸ್ಸಿಗೆ ಊಹಿಸಲಾರಂಭಿಸಿದರು ೫—೬ ತಿಂಗಳ ತತ್ಪೂರ್ವವೇ ಆ ಕೇರಿಯಲ್ಲಿ ಓಡಾಡತಕ್ಕವರು ದುರ್ವಾಸನೆ ಎನ್ನುತ್ತಿದ್ದರೂ ಯಾರೂ ಅಷ್ಟು ಗಮನಿಕೆಯನ್ನು ಕೊಡದೆ ಇದ್ದಷ್ಟು ಹೋಗಿ, ಜೀವವೆಂಬ ಅಮೂಲ್ಯ ರತ್ನವನ್ನು ಕಳೆದುಕೊಂಡವರೂ ಇದುವರಿಗೂ ಪುಕಾರು ಮಾಡದೆ ಇರುವುದೂ ಆಶ್ಚರ್ಯ! ಹಿಂದೆ ಕಳ್ಳರ ಅಪಾಂತ್ರ ಪ್ರಬಲವಾಗಿ ಈ ಸ್ಥಳವು ನಿರ್ಜನವಾಗಿದ್ದದ್ದರ ಮೇಲೆ ತನ್ನ ಕೆಲಸಕ್ಕೆ ಅನುಕೂಲವೆಂದು ಪ್ರಯತ್ನಿಸಿ ಗತಪ್ರಾಣನಾಗಿರಬಹುದು

ಮನುಷ್ಯನಿಗೆ ಭಗವಂತನಿಂದ ದತ್ತವಾದ ಬುದ್ಧಿಯು ಆಗಾವಿನಿಂದ ಅವಯವಗಳನ್ನು ಸರಿಯಾದ ದಾರಿಯಲ್ಲಿ ಉಪಯೋಗಿಸುವುದು ಬಿಟ್ಟು ಅಲ್ಪ ಲಾಭಕ್ಕೆ ಆಶೆ ಪಟ್ಟು ಪ್ರಾಣವನ್ನೇ ಬಿಡುವುದು ಹುಚ್ಚುತನವಲ್ಲವೇ! ಸರ್ಕಾರದವರು ಎಷ್ಟೇ ನಿರ್ಬಂಧವಿಟ್ಟರೂ ಅವರ ತಿಳುವಳಿಕೆಗೆ ಎಡೆಗೊಡದೆ ದುರ್ವರ್ತನದಲ್ಲಿರುವುದಕ್ಕೆ ಈ ಕಾಲದ ಮಹತ್ತೆಂದು ಊಹಿಸಬೇಕು ಕೊನೆಗೆ ಮನೆಯವರು ಆ ಅಸ್ಥಿಯ ದೇಹವನ್ನು ಕ್ರಮಪ್ರಕಾರ ತೆಗಿಸಿ ಹೊರಗೆ ಹಾಕಿಸಿದರು ಸದರಿ ಮನೆಯವರು ಮಹಾಪದ್ಧತಿಯನ್ನನುಸರಿಸಿ ಸಂತರ್ಪಣೆ ವಗೈರೆ ಸ್ಥಳ ಶುದ್ಧ್ಯತೆಯಿಂದ ಗೃಹಪ್ರವೇಶ ಮಾಡಲು ನಿಶ್ಚಯಿಸಿದರು ಇತರ ಬ್ರಾಹ್ಮಣರು, ಪೂರ್ವದಲ್ಲಿ ಇವರಿಗೂ ಈ ಮನುಷ್ಯನಿಗೂ ಸಂಬಂಧವಿದ್ದು ಇಲ್ಲಿಯೇ ಮೃತಪಟ್ಟು ಇವರಿಂದ ಮುಕ್ತಿಯನ್ನು ಹೊಂದಬೇಕೆಂದೂ, ಬ್ರಾಹ್ಮಣರಿಂದ ಅನ್ನೋದಕಗಳನ್ನು ಎಂದು ಹೊಂದಬೇಕಾಗಿತ್ತು ಎಂದೂ ಹೇಳಿದರು. ಇವೆಲ್ಲಾ ನಮ್ಮ ಹಿಂದುಗಳ ಮೌಢ್ಯವಲ್ಲವೇ? ದೇಶವು ನಾಗರಿಕತೆಗೆ ಇನ್ನೂ ಬರಲಿಲ್ಲ

[ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ಬಾತ್ಮಿ]

ಭಾವಿಯಲ್ಲಿ ಬಿದ್ದ ಹುಡುಗರ ಚರಿತ್ರೆ

ಈ ಮಾಹೆ ೮ ನೇ ತಾ ಗುರುವಾರ ದೇವನಹಳ್ಳಿ ತಾಲ್ಲೂಕ್ ಕಾಂಡಾಣದ ಹೋಬಳಿಗೆ ಸೇರಿದ ಯುಂಬ್ರಹಳ್ಳಿ ಸಮೀಪದಲ್ಲಿರುವ ತಿಮ್ಮರಾಯಸ್ವಾಮಿ ದೇವಾಲಯಕ್ಕೆ ದರ್ಶನಾರ್ಥವಾಗಿ ನಾನೂ ಪೋಸ್ಟ್ ಮಾಸ್ಟರ್ ಶೇಷಗಿರಿರಾಯರೂ ಹೋಗಿ ವಾಪಸು ನಂದೀಗೆ ಬರುತ್ತಿದ್ದೆವು ದಾರಿಯಲ್ಲಿ ಯುಂಬ್ರಹಳ್ಳಿಗೆ ೧॥ ಫರ್ಲಾಂಗ್ ಫಾಸಲೆಯಲ್ಲಿರುವ ಭಾವಿಯ ಬಳಿ ಒಂದು ಶವವನ್ನು ಮಲಗಿಸಿಕೊಂಡು ಇಬ್ಬರು ಕುಳಿತು ಇದ್ದದ್ದನ್ನು ನೋಡಿ ಇದೇನೆಂದು ಕೇಳುವಾಗ್ಗೆ ಅವರು ಹೇಳಿದ್ದೇನೆಂದರೆ—ಯುಂಬ್ರಹಳ್ಳಿಯಲ್ಲಿರುವ ನಗರ್ತರ ಮುನಿಯಪ್ಪಗೆ ಅರಸಪ್ಪ, ಕುಮಾರ, ಪುಟ್ಟರಸ, ಎಂಬೀ ಮೂರು ಜನ ಮಕ್ಕಳಿದ್ದರು ಆ ಪೈಕಿ ಅರಸಪ್ಪನೆಂಬ ದೊಡ್ಡ ಮಗನು ಈಗ್ಗೆ ೧॥ ವರುಷದ ಕೆಳಗೆ ಮೃತನಾದನು ಬಾಕಿ ಇಬ್ಬರು ಹುಡುಗರು ಕಾರಹಳ್ಳಿಯಲ್ಲಿರುವ ವಿಲೇಜ್ ಸ್ಕೂಲಿಗೆ ಹೋಗಿ ಬರುತ್ತಾ ಈ ದಿನ ೧೦ ಗಂಟೆಲಿ ಸ್ಕೂಲ್ ಬಿಡುತ್ತಲೇ ತಮ್ಮ ಊರಿಗೆ ಬರುವ ದಾರಿಯಲ್ಲಿರುವ ಈ ಭಾವಿಯಲ್ಲಿ ದಾಹದಿಂದಲೋ ಮತ್ಯಾವ ಕಾರಣದಿಂದಲೋ ಪುಟ್ಟರಸನೆಂಬ ಹುಡುಗನು ನೀರಿನಲ್ಲಿ ಇಳಿಯುತ್ತಲೇ ಪವನತಪ್ಪಿ ಭಾವಿಯಲ್ಲಿ ಬಿದ್ದನೆಂತಲೂ, ತಮ್ಮನನ್ನು ಮೇಲಕ್ಕೆ ಎತ್ತಬೇಕೆಂಬ ಆಶೆಯಿಂದಲೂ ಅಣ್ಣನಾದ ಕುಮಾರನು ಹಿಂದೆ ಬರುತ್ತಿದ್ದ ತಮ್ಮ ಜೊತೆಗಾರರನ್ನು ಕೂಗಿಕೊಂಡು, ತಮ್ಮನನ್ನು ಹಿಡಿದುಕೊಳ್ಳಲು ನೀರಿನಲ್ಲಿ ಗಾಬರಿಯಿಂದ ಧುಮುಕಿದನು ಅವರಿಬ್ಬರಿಗೂ ಈಜು ಬರುತ್ತಿರಲಿಲ್ಲವೆಂತಲೂ, ಹಿಂದೆ ಬರುತ್ತಿದ್ದ ಹುಡುಗರು ಈ ಭಾವಿಯ ಬಳಿಗೆ ಒಂದು ನೀರಿನ ಮೇಲೆ ತೇಲುತ್ತಿದ್ದ ಕ್ಯಾಪ್ ನೋಡಿ, ಅತಿ ಜಾಗ್ರತೆಯಿಂದ ಈ ಹುಡುಗರ ಮನೆಯಲ್ಲಿ— ನಿಮ್ಮ ಮಕ್ಕಳು ಭಾವಿಯಲ್ಲಿ ಬಿದ್ದರೆಂದು ಹೇಳಿದ ಕೂಡಲೆ ಗ್ರಾಮಸ್ಥರೂ ತಂದೆ ತಾಯಿಗಳೂ ಇಲ್ಲಿಗೆ ಬಂದು ಈ ಭಾವಿಯಲ್ಲಿ ಹುಡುಕಲಾಗಿ ಈ ಒಂದು ಶವವು ಸಿಕ್ಕಿತು ಮತ್ತೊಂದು ಶವವನ್ನು ತೆಗೆಯುವದಕ್ಕೆ ಹೋಗುವಾಗ್ಗೆ ಗ್ರಾಮದ ಶ್ಯಾನುಭೋಗರು ಬಂದು ಅಡ್ಡಿ ಪಡಿಸಿದ್ದರಿಂದಲೂ ಸ್ಟೇಷನ್‌ಗೆ ರಿಪೋರ್ಟ್ ಮಾಡಿರುವದ್ದರಿಂದಲೂ ಮೇಲಿನ ಹುಕುಂ ನಿರೀಕ್ಷಿಸಿಕೊಂಡು ಕಾದು ಇರುತ್ತೇವೆಂದು ವಗೈರೆ ಸಂಗತಿ ತಿಳಿಸಿದರು ಈ ಹುಡುಗರ ತಂದೆ ಹತ್ತು ಸಾವಿರ ರೂಪಾಯಿ ಆಸ್ತಿವಂತನಾಗಿದ್ದೂ, ಈತನಿಗೆ ಇನ್ನು ಗಂಡುಮಕ್ಕಳು ಇಲ್ಲದೇಲೂ, ಈತನಿಗೆ ಸಂಭವಿಸಿರುವ ಈ ಪುತ್ರಶೋಕವು ಅಪಾರವಾಗಿಯೂ ಇರುವದಕ್ಕಾಗಿ ಪ್ರಜೆಗಳು ವಿಷಾದಿಸುವರು ೯ ನೇ ತಾರೀಖಿನ ದಿನ ಇಬ್ಬರು ಹುಡುಗರನ್ನೂ ಏಕಕಾಲದಲ್ಲಿ ದಹನ ಮಾಡಿದರೆಂದು ತಿಳಿಯಬಂತು ಏಕಕಾಲದಲ್ಲಿ ಈ ಭಾವಿಗೆ ಬಲಿಯಾದ ಈ ಇಬ್ಬರು ಹುಡುಗರ ತಂದೆತಾಯಿಗಳ ಮನಸ್ಸಂಕಟವನ್ನು ನಾವಾರೇ ಊಹಿಸಲಿ

ಮೈಸೂರು ಸರ್ಕಾರಿ ಹುಕುಮುಗಳು.

ರಿಜಿಸ್ಟ್ರೇಷನ್ ಇಲಾಖೆಯ ರಿಪೋರ್ಟು.

ಕಳೆದ ೧೯೦೫—೦೬ನೆ ಸಾಲಿನ ಮೈಸೂರು ರಿಜಿಸ್ಟ್ರೇಷನ್ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ. ಇದರಲ್ಲಿ ಕಂಡು ಬರುವ ಮುಖ್ಯ ವಿಷಯಗಳೇನೆಂದರೆ—ಆ ವರುಷ ರಿಜಿಸ್ಟ್ರರ್ ಆಫೀಸುಗಳ ಸಂಖ್ಯೆಯು ಮೊದಲಿದ್ದಷ್ಟೇ ಇತ್ತು. ಹೆಚ್ಚಲೂ ಕಡಿಮೆಯಾಗಲೂ ಇಲ್ಲ. ಒಟ್ಟು ೩೪,೧೭೯ ಪತ್ರಗಳು ರಿಜಿಸ್ಟರಾದವು. ಅಂದರೆ, ಹಿಂದಿನ ಸಾಲಿಗಿಂತ ೧೪,೧೩೦ ಪತ್ರಗಳು ಹೆಚ್ಚು. ಇದರಿಂದ ಜನರು ಪತ್ರಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳುವುದರಲ್ಲಿ ಹೆಚ್ಚು ಅಭಿಲಾಷೆಯುಳ್ಳವರಾಗಿದ್ದರೆಂತಲೂ, ಪ್ಲೇಗಿನ ಉಪಾಂತ್ರ ಬಹಳ ಮಟ್ಟಿಗೆ ಕಡಿಮೆಯಾಗಿ ಲೇವಾದೇವಿಯೂ ವ್ಯಾಪಾರಾದಿಗಳೂ ಅಭಿವೃದ್ಧಿಗೆ ಬರುತ್ತಿವೆ ಎಂತಲೂ ಗೊತ್ತಾಗುವುದು. ಹೀಗೆ ಪತ್ರಗಳ ಸಂಖ್ಯೆ ಹೆಚ್ಚಾದ್ದರಿಂದಲೂ ಕಾಪಿ ಬರೆಯುವ ರುಸೂಂ ಬದಲಾವಣೆಯಾದ್ದರಿಂದಲೂ ಈ ಇಲಾಖೆಯ ಉತ್ಪತ್ತಿಯು ಹಿಂದಿನ ಸಾಲಿನಲ್ಲಿ ೧,೧೯,೩೦೬ ಇದ್ದದ್ದು ಈ ಸಾಲಿನಲ್ಲಿ ೧,೫೭,೨೨೮ ರೂಪಾಯಿಗೆ ಏರಿತು. ಈ ಇಲಾಖೆಗೆ ಕಳೆದ ಸಾಲಿನಲ್ಲಿ ೭೬,೫೦೭ ರೂಪಾಯಿ ಖರ್ಚಾಗಿದೆ. ಅಂದರೆ ೧೯೦೪—೦೫ನೆ ಸಾಲಿನ ಖರ್ಚಿಗಿಂತ ೧,೬೩೬ ರೂಪಾಯಿ ಜಾಸ್ತಿ. ಹೀಗೆ ಖರ್ಚು ಜಾಸ್ತಿ ಆಗಲು ಕೆಲವು ಸಬ್ ರಜಿಸ್ಟ್ರರುಗಳಿಗೆ ಜಾಸ್ತಿ ಸಂಬಳ ಬಾಪತಿ ಆದದ್ದೇ ಕಾರಣವೆಂದು ತಿಳಿಯುವುದು. ಮೋಸಮಾಡಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ಮೂರು ಸಂದರ್ಭಗಳಲ್ಲಿ ಪ್ರಯತ್ನ ನಡೆಯಿತು. ಆ ಮೂರು ಮೊಕದ್ದಮೆ ಆಗಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಇನ್ನೊಂದು ಮೊಕದ್ದಮೆಯಲ್ಲಿ ಸಬ್ ರಿಜಿಸ್ಟ್ರರ ರುಜು ಹಾಕಿ ಆಫೀಸ್ ಮೊಹರನ್ನೂ ಫೋರ್ಜರಿ ಮಾಡಿದಂತೆ ಅಪರಾಧ ಹೊರಿಸಲ್ಪಟ್ಟಿತು. ಆದರೆ ಈ ಮೊಕದ್ದಮೆ ರುಜುವಾತಾಗಲಿಲ್ಲವೆಂದು ವಜಾ ಆಯಿತು. ಈಚೆಗೆ ಅದನ್ನು ಪುನರ್ವಿಮರ್ಶೆ ಮಾಡುವಂತೆ ತಿಳಿದು ಬಂದಿದೆ. ಇದು ಇತ್ಯರ್ಥವಾದ ಮೇಲೆ ಅದರ ಕಟ್ಟನ್ನು ಗವರ್ನ್ಮೆಂಟಿನವರು ನೋಡಬೇಕೆಂದು ಕುತೂಹಲಪಟ್ಟಿದ್ದಾರೆ. ಡೆಪ್ಯುಟಿ ಕಮೀಷನರೂ ಅಸಿಸ್ಟೆಂಟ್ ಕಮೀಷನರೂ ಈ ಸಂಸ್ಥಾನದಲ್ಲಿ ಐದು ವಿನಹಾ ಉಳಿದ ಎಲ್ಲಾ ಸಬ್ ರಿಜಿಸ್ಟ್ರರ್ ಆಫೀಸುಗಳನ್ನೂ ಆ ಸಾಲಿನಲ್ಲಿ ಇಜಮಾಯಿಷಿ ಮಾಡಿದರೆಂತಲೂ ಇನ್ಸ್ಪೆಕ್ಟರ್ ಜನರಲ್‌ರವರು ೧೫ ಆಫೀಸುಗಳನ್ನು ಪರಾಂಬರಿಸಿ ತನಿಖೆ ಮಾಡಿದರೆಂತಲೂ ತಿಳಿದು ಬರುವುದು. ಆದರೂ ರಿಜಿಸ್ಟರ್ ಕೆಲಸ ಕಾರ್ಯಗಳು ರೂಲಸಿನನುಸಾರವಾಗಿ ನಡೆಯುವುದನ್ನೂ, ಜನರಿಗೆ ರಿಜಿಸ್ಟರ್ ಆಫೀಸಿನಲ್ಲಿ ಯಾವ ವಿಧವಾದ ಅನಾನುಕೂಲಗಳೂ ಇಲ್ಲದೆ ಇರುವ ಭಾಗವನ್ನು ಡೆಪ್ಯುಟಿ ಕಮೀಷನರು ತನಿಖೆ ತೆಗೆದುಕೊಳ್ಳುತ್ತಿರಬೇಕೆಂದು ಸರ್ಕಾರದವರು ಅಭಿಪ್ರಾಯಪಟ್ಟಿದ್ದಾರೆ.

ಸೇವಾರ್ಥದ ರುಸೂಂ ಹೆಚ್ಚಿಸಿದ್ದು.

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಪಂಚಾಂಗ ಹೇಳಿ ಪೌರೋಹಿತ್ಯವನ್ನು ಮಾಡಿಸುವವರಿಗೆ ಸೇವಾರ್ಥಗಳಲ್ಲಿ ರುಸೂಂ ಸಲ್ಲುವಂತೆ ಏರ್ಪಾಡಾಗಬೇಕೆಂದೂ, ಇನ್ನು ಕೆಲವು ಸೇವಾರ್ಥಗಳಿಗೆ ಗೊತ್ತು ಮಾಡಿರುವ ಮೊಬಲಗನ್ನು ಹೆಚ್ಚಿಸಬೇಕೆಂದೂ ಚರ್ಚೆ ನಡೆದು, ಸರ್ಕಾರದವರು ಮುಂದೆ ಹೇಳುವಂತೆ ದರಗಳನ್ನು ಬದಲಾವಣೆ ಮಾಡಿ, ಇದು ಇದೇ ನವಂಬರ್ ೧ರಿಂದ ಜಾರೀಲಿ ಬರಬೇಕೆಂದು ಹುಕುಂ ಕೊಟ್ಟಿದ್ದಾರೆ.

ಸೇವಾರ್ಥ.	ಮೊದಲು.	ಈಗ.
ಏಕವಾರ	ರೂ. ೨—೯—೦	ರೂ. ೨—೭—೦
ಏಕಾದಶವಾರ	೧೦—೦—೦	೧೦—೦—೦
ಅರಿಸಿನಸೇವೆ	೨—೦—೦	೨—೦—೦
ಕುಂಕುಮಸೇವೆ	೧—೦—೦	೧—೨—೦
ಚಿಕ್ಕ ಉತ್ಸವ.	೯—೦—೦	೧೦—೮—೦
ದೊಡ್ಡ ಉತ್ಸವ.	೧೬—೦—೦	೧೬—೦—೦
ಸಹಸ್ರನಾಮ (ಸ್ವಾಮಿ)	೦—೮—೦	೦—೭—೦
ಅಷ್ಟೋತ್ತರ.	೦—೪—೦	೦—೫—೦

ಗ್ರಾಮನೌಕರರ ಇನಾಂ ಜಮೀನುಗಳ ಪರಿವರ್ತನೆ.

ಮೈಸೂರು ಸಂಸ್ಥಾನದಲ್ಲಿ ಗ್ರಾಮನೌಕರರು ಸರ್ಕಾರಿ ಕೆಲಸಗಳನ್ನು ಮಾಡುವ ನಿಮಿತ್ತ ಇನಾಮತಿಗಳನ್ನು ಅನುಭವಿಸುತ್ತಾರೆ. ಈ ಇನಾಮತಿಗಳು ಪರಾಧೀನವಾಗಿ ಕಂದಾಯದ ಜಮೀನಾಗಿವೆಯೋ ಹಾಗಾಗಲು ಕಾರಣವೇನು ಎಂಬುದಾಗಿ ಗವರ್ನ್ಮೆಂಟಿನವರು ಕಳೆದ ೧೯೦೩ನೆ ನವಂಬರ್ ತಿಂಗಳಲ್ಲಿ ಸರ್ಕ್ಯುಲರ್ ಕೊಟ್ಟು ಡೆಪ್ಯುಟಿ ಕಮೀಷನರುಗಳನ್ನು ಕೇಳಿದರು. ಇದಕ್ಕೆ ಚಿತ್ರದುರ್ಗದ ಮತ್ತು ಶಿವಮೊಗ್ಗೆಯ ಡೆಪ್ಯುಟಿ ಕಮೀಷನರುಗಳು ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಸರ್ವಿಸ್ ಇನಾಂ ಜಮೀನುಗಳು ಕಂದಾಯದ ಜಮೀನಾಗಿಲ್ಲವೆಂತಲೂ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ಅಂಥಾ ಜಮೀನುಗಳು ಯಾವೂ ಪರಾಧೀನವಾಗಿಲ್ಲವೆಂತಲೂ ತಿಳಿಸಿದರು. ಆದರೆ ಚನ್ನಗಿರಿ ತಾಲ್ಲೂಕಿನಲ್ಲಿ ಚಿಕ್ಕ ಹುಲಿಕೆರೆಯ ೨೦ನೆ ಸರ್ವೆ ನಂಬರಿನ ಶಾನುಭೋಗಿ ಇನಾಂ ಜಮೀನು ನಾಲಕ್ಕು ಪರಾಧೀನವಾಗಿರುವುದನ್ನು ಶಿವಮೊಗ್ಗ ಡೆಪ್ಯುಟಿ ಕಮೀಷನರು ನಮೂದು ಮಾಡಿಲ್ಲ. ಇವನ್ನು ಈಚೆಗೆ ಸರ್ಕಾರದವರು ಇತ್ಯರ್ಥ ಮಾಡಿರುತ್ತಾರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಅಂಥಾ ಸರ್ವಿಸ್ ಇನಾಂತಿಗಳು ಕೆಲವು ಪರಾಧೀನಮಾಡಲ್ಪಟ್ಟವೆಯಾದರೂ ಅಂಥವುಗಳಿಗೆ ಕಂದಾಯ ದಾಖಲಾಗಿಲ್ಲವೆಂದು ಡೆಪ್ಯುಟಿ ಕಮೀಷನರು ತಿಳಿಸುತ್ತಾರೆ. ಇತರ ಡೆಪ್ಯುಟಿ ಕಮೀಷನರು ಕಳುಹಿಸಿರುವ ಪಟ್ಟಿಗಳಿಂದ ಸರ್ವಿಸ್ ಇನಾಂ ಜಮೀನುಗಳು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೨೪೬, ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ೫೬, ತುಮಕೂರಿನಲ್ಲಿ ೬೬, ಹಾಸನದಲ್ಲಿ ೧೭, ಕಡೂರು ಡಿಸ್ಟ್ರಿಕ್ಟಿನಲ್ಲಿ ೧೪೦, ಈ ರೀತಿ ಪರರ ಸ್ವಾಧೀನಾನುಭವದಲ್ಲಿರುತ್ತವೆ ಎಂದು ಕಂಡು ಬರುವುದು. ಬೆಂಗಳೂರು ಡಿಸ್ಟ್ರಿಕ್ಟಿನ ೨೪೬ ಜಮೀನುಗಳ ಪೈಕಿ ಸರ್ಕಾರಿ ಬಾಕಿಗಾಗಿ ೩೮, ಸಿವಿಲ್ ಕೋರ್ಟ್ ಡಿಕ್ರಿಗಾಗಿ ೨ ಜಮೀನುಗಳು ಹರಾಜಾದವೆಂತಲೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ೬೫ ಜಮೀನುಗಳು ರಾಜಿ ಖಬಾಲೆಯಿಂದಲೂ, ೫ ಜಮೀನುಗಳು ರೆವಿನ್ಯೂ ಬಾಕಿಗಾಗಿಯೂ ಪರಾಧೀನವಾದವೆಂದು ಗೊತ್ತಾಗುತ್ತೆ. ಜಮಾಬಂದಿ ಆಫೀಸರುಗಳು ಸರಿಯಾಗಿ ತನಿಖೆ ಮಾಡುತ್ತಿದ್ದಲ್ಲಿ ಈ ರೀತಿ ಸರ್ವಿಸ್ ಇನಾಂತಿಗಳು ಪರಾಧೀನವಾಗುತ್ತಿದ್ದದ್ದನ್ನು ತಪ್ಪಿಸಬಹುದಾಗಿತ್ತು. ಹಾಸನದ ಡೆಪ್ಯುಟಿ ಕಮೀಷನರು ಹುಕುಂ ಕೊಟ್ಟಿರುವ ಪ್ರಕಾರ ಕ್ರಯ ಆಧಾರ ಭೋಗ್ಯಾದಿಗಳ ಮೂಲಕ ಪರಾಧೀನವಾಗಿರತಕ್ಕ ಸರ್ಕಾರಿ ಇನಾಮತಿಗಳನ್ನು ಅವರವರಿಂದ ವಾಪಸು ಪಡೆಯುವುದಕ್ಕೆ ಪ್ರಯತ್ನಪಡಬೇಕಾಗಿದೆ.

ಅಮೃತಮಹಲ್ ಇಲಾಖೆಯ ರಿಪೋರ್ಟು.

ಮೈಸೂರು ಸಂಸ್ಥಾನದ ಅಮೃತಮಹಲ್ ಇಲಾಖೆಯ ೧೯೦೫—೦೬ ನೆ ಸಾಲಿನ ರಿಪೋರ್ಟು ಪ್ರಕಟವಾಗಿದೆ. ಇದರಲ್ಲಿ ಕಂಡು ಬರುವ ಮುಖ್ಯ ವಿಚಾರಗಳೇನೆಂದರೆ—ವರುಷಾಂತ್ಯದಲ್ಲಿ ಈ ಇಲಾಖೆಯೊಳಗೆ ೩,೬೭೯ ಗೋಕಾಯಿಗಳಿದ್ದವು. ಅಂದರೆ ಹಿಂದಿನ ಸಾಲಾಖೈರಿನಲ್ಲಿದ್ದ ಸಂಖ್ಯೆಗಿಂತ ೧,೧೯೭ ಕಡಿಮೆಯಾದವು. ಹೀಗೆ ಕಡಿಮೆಯಾಗಲು ಆ ವರುಷ ೭೩೭ ಕರುಗಳು ಮಾತ್ರ ಹುಟ್ಟಿದ್ದೂ, ೧,೦೯೯ ಗೋಕಾಯಿಗಳು ಸತ್ತುಹೋದದ್ದೂ, ೯೬೯ ರಾಸುಗಳು ಬಿಕರಿಯಾದದ್ದೂ ಕಾರಣಗಳೆಂದು ತಿಳಿಯುವುದು. ಮುಂದೆಯೂ ಅಂಟುಜಾಡ್ಯಾದಿಗಳೇನೂ ಪ್ರಾಪ್ತವಾಗಲಿಲ್ಲ. ವಯೋಮೀರಿದ ಮತ್ತು ದುರ್ಬಲವಾದ ರಾಸುಗಳೇ ಸತ್ತುಹೋದವು. ಮೇವಿಗೆ ಕಷ್ಟವಾದೀತೆಂದು ಹೇಳಿ ಸೂಪರಿಂಟೆಂಡೆಂಟರು ಈ ಸಲ ೯೬೯ ರಾಸುಗಳನ್ನು ಬಿಕರಿಮಾಡಿಬಿಟ್ಟರು. ಆ ಪೈಕಿ ವಿಶೇಷವಾಗಿ ಎಲ್ಲಾ ಕರಗಳೇ ಆಗಿದ್ದವು. ಇವು ಸರಿಯಾಗಿ ಬೆಳೆಯಲಾರವೆಂದೂ, ರೈತರ ದನಗಳ ಜಾತಿಯನ್ನು ಉತ್ತಮಸ್ಥಿತಿಗೆ ತಂದುಕೊಳ್ಳುವುದಕ್ಕೆ ಅನುಕೂಲವಾಗುತ್ತೆಂದೂ ಕಂಡುಬಂದದ್ದರಿಂದ ಅವನ್ನು ಬಿಕರಿ ಮಾಡಿದರು. ಮತ್ತು ಇನ್ನು ಮುಂದೆಯೂ ವರುಷೇ ವರುಷ ೨—೩ ವರುಷಗಳ ಕರಗಳನ್ನೇ ವಿಶೇಷವಾಗಿ ಹರಾಜು ಹಾಕುವುದು ಬಹಳ ಅನುಕೂಲವೆಂಬುದಾಗಿ ಸೂಪರಿಂಟೆಂಡೆಂಟರು ತಿಳಿಸಿರುತ್ತಾರೆ. ಈ ಇಲಾಖೆಯಲ್ಲಿ ಕಳೆದ ಸಾಲಿನಲ್ಲಿ ೫೩,೨೬೭ ರೂಪಾಯಿ ಉತ್ಪತ್ತಿಯೂ, ೩೧,೩೯೩ ರೂಪಾಯಿ ಖರ್ಚು ಆಗಿರುತ್ತದೆ. ಹಿಂದಿನ ಸಾಲಿನಲ್ಲಿ ೨೭,೩೪೨ ರೂಪಾಯಿ ಉತ್ಪತ್ತಿಯೂ, ೩೧,೦೧೬ ರೂಪಾಯಿ ಖರ್ಚೂ ಆಗಿತ್ತು. ಉತ್ಪತ್ತಿಯು ಹೆಚ್ಚಿದ್ದಕ್ಕೆ ಬಹಳ ರಾಸುಗಳನ್ನು ಬಿಕರಿಮಾಡಿದ್ದೇ ಕಾರಣ. ಮಳೆಯಿಲ್ಲದೆ ಹುಲ್ಲುನೀರಿಗೆ ಅಭಾವವಾದ್ದರಿಂದ ಬಹಳಮಟ್ಟಿಗೆ ಹೆಚ್ಚು ಹುಲ್ಲುಬನ್ನಿಯನ್ನು ರೈತರಿಗೆ ಮಾಫಿ ಬಿಡಲಾಯಿತು. ಈ ವರುಷಾಂತ್ಯದಲ್ಲಿ ಅಮೃತಮಹಲ್ ಇಲಾಖೆಯೊಳಗೆ ೩೫೬ ಹೋರಿಗಳಿದ್ದವು. ಕಳೆದ ವರುಷ ಜನನ ೨೪, ಮರಣ ೫೯, ಬಿಕರಿಮಾಡಿದ್ದು ೬೬ ಎಂದು ತಿಳಿಯುವುದು. ರೈತರು ರುಸೂಂ ಏನೂ ಕೊಡದೇನೇ ಅಮೃತಮಹಲ್ ಇಲಾಖೆಯ ಹೋರಿಗಳನ್ನು ತಮ್ಮ ಬಳಿ ಇರುವ ಹಸುಗಳ ಜಾತಿಯನ್ನು ಒಳ್ಳೇದಾಗಿ ಮಾಡಿಕೊಳ್ಳುವುದಕ್ಕೆ ಉಪಯೋಗಿಸಿಕೊಂಡರೆಂತಲೂ ಸೂಪರಿಂಟೆಂಡೆಂಟರು ಅವರಿಗೆ ಸಹಾಯಮಾಡಿ ಪ್ರೋತ್ಸಾಹಪಡಿಸಿದರೆಂತಲೂ ಕೇಳಿ ಸಂತೋಷಪಡಬೇಕಾಗಿದೆ.

ಟ್ರಾವೆಲರ್ಸ್ ಬಂಗಲೆ ರುಸೂಂ ದುರುಪಯೋಗ.

ಚಿತ್ರದುರ್ಗದ ಟ್ರಾವೆಲರ್ಸ್ ಬಂಗಲೆಯ ಕೊತ್ವಾಲ್ ಮಲ್ಲಿಕ್ ರಹಿಮಾನ್ ಎಂಬುವನು ೧೯೦೨ನೆ ಏಪ್ರಿಲ್ ೫ರ ಲಾಗಾಯಿತು ೧೯೦೫ನೆ ಜೂಲೈ ೯ ರವರೆಗೆ ಆ ಟ್ರಾವೆಲರ್ಸ್ ಬಂಗಲೆಯಲ್ಲಿ ಬಂದು ಇಳುಕೊಂಡಿದ್ದ ಆಫೀಸರುಗಳಿಂದ ವಸೂಲಾದ ರೂ. ೬೭೦—೨—೦ ಫೀಜನ್ನು ತನ್ನ ವಶದಲ್ಲಿಟ್ಟುಕೊಂಡಿದ್ದು, ಆ ಪೈಕಿ ರೂ. ೪೯೨—೭—೦ ಯನ್ನು ಮಾತ್ರ ಖಜಾನೆಗೆ ಭಾವತಿಮಾಡಿ, ಉಳಿದ ರೂ. ೧೯೭—೧೦—೦ ಯನ್ನು ತಿಂದುಹಾಕಿ ತಲೆತಪ್ಪಿಸಿಕೊಂಡನು. ಅವನು ಖಜಾನೆಗೆ ಹಣ ಭಾವತಿ ಮಾಡಿದಾಗ ಅಧಿಕಾರಿಗಳು ಆ ಬಂಗಲೆಯ ವಿಜಿಟರ್ಸ್ ಪುಸ್ತಕವನ್ನು ತರಿಸಿ, ಎಷ್ಟು ಹಣ ವಸೂಲಾಗಿದೆ, ಎಷ್ಟು ಭಾವತಿ ಆಗಿದೆ ಎಂಬುದನ್ನು ಗೊತ್ತುಮಾಡಿ, ಹಣ ಜಮಾ ತೆಗೆದುಕೊಳ್ಳುತ್ತಿದ್ದರೆ ಈ ರೀತಿ ಖುರ್ದುಬುರ್ದು ನಡೆಯಲು ಅವಕಾಶವಿರುತ್ತಿರಲಿಲ್ಲ. ಅವನು ತಿಂದುಹಾಕಿರುವ ಹಣವು ಅವನಿಂದ ವಸೂಲಾಗದೆಹೋಗುವ ಪಕ್ಷಕ್ಕೆ ಸರಿಯಾಗಿ ನೋಡಿಕೊಳ್ಳದೆ ತಪ್ಪಿದ ಅಧಿಕಾರಿಗಳಿಂದ ವಸೂಲ್ಮಾಡಬೇಕಾಗುವುದು. ಆ ಅಧಿಕಾರಿಗಳ್ಯಾರು, ಯಾರಿಂದ ಎಷ್ಟು ವಸೂಲ್ಮಾಡಬೇಕು ಎಂಬೀ ಅಂಶಗಳನ್ನು ಡೆಪ್ಯುಟಿ ಕಮೀಷನರು ರಿಪೋರ್ಟು ಕೊಡಬೇಕಾಗಿದೆ. ಆ ಕೊತ್ವಾಲನಿಗೆ ೫೦೦ ರೂಪಾಯಿ ಬಾಳುವ ಮನೆ ಇದೆ ಎಂದು ತಿಳಿಯುವುದು. ಡೆಪ್ಯುಟಿ ಕಮೀಷನರು ಅದರಿಂದ ಬರುವಷ್ಟು ಹಣವನ್ನು ವಿಲೆಮಾಡಿಕೊಳ್ಳುವ ಏರ್ಪಾಡು ನಡಸಬೇಕು. ಇನ್ನು ಮುಂದೆ ಕೊತ್ವಾಲರ ಬಳಿ ಇರುವ ರಿಸೀಟ್ಸ್ ಪುಸ್ತಕವನ್ನು ತನಿಖೆಮಾಡಬೇಕಾದ ಅಗತ್ಯವಿಲ್ಲ. ವಸೂಲಾತಿಯನ್ನು ಖಜಾನೆಗೆ ತಂದ ಕೂಡಲೆ ಪ್ರತಿಸಲವೂ ಅಮಲ್ದಾರರಾಗಲಿ ಶಿರಸ್ತೇದಾರರಾಗಲಿ ವಿಜಿಟರ್ಸ್ ಪುಸ್ತಕವನ್ನು ತರಿಸಿಕೊಂಡು, ಆಯಾ ತಾರೀಖಿನವರೆಗೆ ಅದರಲ್ಲಿ ಕಂಡುಬರುವ ಮೊಬಲಗು ಸಂಪೂರ್ಣವಾಗಿ ಭಾವತಿ ಆಗಿರುವ ಅಂಶವನ್ನು ಗೊತ್ತುಮಾಡಿಕೊಳ್ಳಬೇಕು.

ಇನಾಂ ಗ್ರಾಮಗಳ ಸಾಲ್‌ಯಾನಾ ಲೆಕ್ಕಗಳು.

ಇನಾಂಗ್ರಾಮಗಳ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಎಷ್ಟು ಒತ್ತಾಯಮಾಡಿದರೂ ಇನಾಂದಾರರು ಹಾಜರ್ಮಾಡದೇ ಕಾಲಹರಣ ಮಾಡುತ್ತಾರೆಂತಲೂ, ಇದಕ್ಕಾಗಿ ಬೇರೆ ಖಂಡಿತವಾದ ರೂಲಸು ಆಗಬೇಕೆಂತಲೂ ಬೆಂಗಳೂರು ಮತ್ತು ಮೈಸೂರು ಡೆಪ್ಯುಟಿ ಕಮೀಷನರುಗಳು ಗವರ್ನ್ಮೆಂಟಿಗೆ ತಿಳಿಸಿದರು. ಅಂಥಾ ಗ್ರಾಮಗಳಿಗೆ ಸರ್ವೆಸೆಟ್ಲ್‌ಮೆಂಟು ನಡೆದು ಇನಾಂದಾರರೇ ಲೆಕ್ಕಗಳಿಗೆ ಜವಾಬ್ದಾರರೆಂದು ಮಾಡಿಬಿಟ್ಟರೆ ಆಗ್ಗೆ ಸುಲಭವಾಗಿ ಲೆಕ್ಕಗಳನ್ನು ತರಿಸಿಕೊಳ್ಳಬಹುದೆಂದು ಶಿವಮೊಗ್ಗ ಮತ್ತು ತುಮಕೂರು ಡೆಪ್ಯುಟಿ ಕಮೀಷನರುಗಳು ಅಭಿಪ್ರಾಯಪಡುತ್ತಾರೆ. ಈಗಿನ ರೆವಿನ್ಯೂ ಕಮೀಷನರಾದರೋ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿರುವ ವಿಧಿಗಳೇ ಸಾಕಾಗಿವೆ ಎಂತಲೂ ಇದರ ಜೊತೆಗೆ ಗವರ್ನ್ಮೆಂಟಿನಿಂದ ಪ್ರತ್ಯೇಕವಾದ ಒಂದು ಹುಕುಮನ್ನೂ ಕೊಡಬಹುದಾಗಿ ಎಂತಲೂ ತಿಳಿಸುವರು. ಆದಕಾರಣ ಪ್ರತಿ ತಾಲ್ಲೋಕ್ ಅಮಲ್ದಾರರಿಗೂ ೫೦ ರೂಪಾಯಿ [illegible]ಕೊಟ್ಟು, ಯಾವ ಇನಾಂದಾರರು ಕಾಲಕ್ಕೆ ಸರಿಯಾಗಿ ಲೆಕ್ಕಪತ್ರಗಳು ಹಾಜರ್ಮಾಡಲ್ಪಡುವುದಿಲ್ಲವೋ ಅಂಥಾ ಇನಾಂ ಗ್ರಾಮಗಳ ಲೆಕ್ಕಗಳನ್ನು ತಾವೇ ಕೂಲಿಕೊಟ್ಟು ತಯಾರ್ಮಾಡಿಸಿಕೊಂಡು, ಹಾಗೆ ಖರ್ಚಾಗುವ ಹಣವನ್ನು ರೆವಿನ್ಯೂ ಬಾಕಿಯಂತೆ ಇನಾಂದಾರರಿಂದ ವಸೂಲ್ಮಾಡಬೇಕಾಗಿದೆ ಎಂಬುದಾಗಿ ಗವರ್ನ್ಮೆಂಟಿನವರು ಹುಕುಂಕೊಟ್ಟು, ಲೆಕ್ಕಗಳ ತಯಾರಿಕ್ಕೆ ವರುಷ ಮಾಯಿಗೆ ಗೊತ್ತುಮಾಡಿ, ಅನಂತರ ಗವರ್ನ್ಮೆಂಟಿಗೆ ರಿಪೋರ್ಟುಮಾಡಬೇಕೆಂದು ತಿಳಿಸಿರುವರು.

"ರೆವಿನ್ಯೂ ಮತ್ತು ವ್ಯವಸಾಯಕ ಗೆಜೆಟ್."

ಗ್ರಾಮಾಂತರಗಳಲ್ಲಿರುವ ರೈತರಿಗೂ ಗ್ರಾಮನೌಕರರಿಗೂ ಉಪಯೋಗವಾಗುವಂಥಾ ಅನೇಕ ವಿಷಯಗಳನ್ನು ಹದಿನೈದು ದಿನಕ್ಕೊಂದಾವರ್ತಿ ಪ್ರಕಟಪಡಿಸುವ ಈ ಪತ್ರಿಕೆಯಲ್ಲಿ ಛಾಯಿಷ್ ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸಿರುತ್ತಾರೆ. ಈ ಪತ್ರಿಕೆಯನ್ನು ಮೆಸರ್ಸ್ ವಿ. ಬಿ ಸುಬ್ಬೈಯ್ಯ ಅಂಡ್ ಸನ್ಸ್ ಇವರ ಅಚ್ಚುಕಾರ್ಖಾನೆಯಲ್ಲಿ ಪ್ರಿಂಟು ಮಾಡಿಸಿ, ೫೫೦ ಪ್ರತಿಗಳಿಗೆ ವರುಷಕ್ಕೆ ೬೦೦ ರೂಪಾಯಿ ಅವರಿಗೆ ರಸುಂ ಕೊಡತಕ್ಕದ್ದೆಂದು ಗೊತ್ತು ಮಾಡಲಾಗಿದೆ. ಈ ಪ್ರತಿಗಳನ್ನು ಡೆಪ್ಯುಟಿ ಕಮೀಷನರಿಗೂ, ಅ॥ ಕಮೀಷನರಿಗೂ, ಅಮಲ್ದಾರ್, ಡೆಪ್ಯುಟಿ ಅಮಲ್ದಾರ್, ಶೇಕದಾರರುಗಳಿಗೂ, ತಾಲ್ಲೂಕ್ ಮತ್ತು ಹೋಬಳಿ ಸ್ಕೂಲುಗಳಿಗೂ ಮಾಫಿಯಾಗಿ ಕಳುಹಿಸಲಾಗುವುದು. ಇದಲ್ಲದೆ ಆ ಕಾರ್ಖಾನೆಯವರು ಬೇರೆ ೨೦೦ ಪ್ರತಿಗಳನ್ನು ಅಚ್ಚು ಹಾಕಿ ವರುಷಕ್ಕೆ ಅಂಚೆ ಹಾಸಲು ಸೇರಿ ೧॥ ರೂಪಾಯಿನಂತೆ ಚಂದಾದಾರರಿಗೆ ಬಿಕರಿ ಮಾಡಿಕೊಳ್ಳಬಹುದಾಗಿ ಮತ್ತು ರೆವಿನ್ಯೂ ಕಮೀಷನರ ಆಫೀಸ್ ಮೂಲಕ ಚಂದಾದಾರರಾಗುವ ಗ್ರಾಮನೌಕರರಿಂದ ವರುಷಕ್ಕೆ ೮ ಆಣೆಯಂತೆ ಚಂದಾ ತೆಗೆದುಕೊಂಡು ಕಳುಹಿಸಬಹುದು. ಸದ್ಯ ಪರೀಕ್ಷಾರ್ಥವಾಗಿ ಈ ಏರ್ಪಾಟು ಎರಡು ವರುಷ ನಡೆದ ಮೇಲೆ ಬೇರೆ ಹುಕುಂ ಕೊಡಲಾಗುತ್ತದೆ. ರೆವಿನ್ಯೂ ಕಮೀಷನರು ಶಿಫಾರಸಿನಂತೆ ವರುಷಕ್ಕೆ ೫೦೦ ರೂಪಾಯಿ ಖರ್ಚನ್ನು ಇದಕ್ಕಾಗಿ ಸ್ಯಾಂಕ್ಷನ್ ಮಾಡಿದೆ.

ರೆವಿನ್ಯೂ ಹರಾಜು ಖಾಯಮಾಗಿದ್ದರೆ ಬಡ್ಡಿ.

ಕಂದಾಯದ ಬಾಕಿಗೋಸ್ಕರವಾಗಿ ಕ್ರಮಪ್ರಕಾರ ನಡೆದಿರುವ ಹರಾಜುಗಳನ್ನು ಮೋಸ ಮುಂತಾದ ಕೇಡನ್ನು ಸೂಚಿಸುವ ದುಷ್ಟವಾದ ಕಾರಣ ತೋರಿಬಂದ ಹೊರತು ಸಾಧಾರಣವಾಗಿ ರದ್ದು ಮಾಡುವುದಿಲ್ಲ. ಆದರೆ ಹರಾಜಿನ ಕ್ರಮಗಳನ್ನು ಬಾಧಿಸುವಂಥಾ ಕಾರಣಗಳಲ್ಲದೆ, ಬೇರೆ ಯಾವದಾದರೂ ಕಾರಣಗಳಿದ್ದು, ಹರಾಜನ್ನು ರದ್ದು ಮಾಡುವುದು ಯುಕ್ತವೆಂದು ತೋರಿದಲ್ಲಿ ಹರಾಜಿನಲ್ಲಿ ಕೊಂಡುಕೊಂಡಿದ್ದವರಿಗೆ ಅವರು ಡಿಪಾಜಿಟ್ ಕಟ್ಟಿರುವ ಹಣದ ಮೇಲೆ ನ್ಯಾಯವಾದ ಬಡ್ಡಿಯನ್ನು ಕೊಡಬೇಕು.

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬ್ ಆಧಿಪತ್ಯದಲ್ಲಿ ಕಳೆದ ೧೯೦೫—೦೬ ನೇ ಸಾಲಿನಲ್ಲಿ ಸರ್ಕಾರದವರು ೩,೯೯೬ ಪ್ರೈಮರಿ (ಪ್ರಥಮ) ಪಾಠಶಾಲೆಗಳನ್ನು ಹೆಚ್ಚಾಗಿ ಸ್ಥಾಪಿಸಿರುತ್ತಾರೆಂದು ತಿಳಿದುಬಂದಿದೆ.

****

ಮದರಾಸ್ ಪಟ್ಟಣದ ಸ್ಟ್ರಿಂಗರ್ ಬೀದಿಯಲ್ಲಿ ವಾಸವಾಗಿರುವ ವಿಲ್ಕಿನ್ಸ್ ಎಂಬೊಬ್ಬ ವೈದ್ಯನ ಮನೆಗೆ ಕಳ್ಳರು ಬಿದ್ದು ಆತನ ಕೈಪೆಟ್ಟಿಗೆಯನ್ನೇ ಅಪಹರಿಸಿದರು. ಅದರಲ್ಲಿ ೪೦,೦೦೦ ರೂಪಾಯಿನ ನಾಣ್ಯಗಳಿದ್ದವೆಂದು ತಿಳಿದು ಬಂದಿದೆ.

****

ಕಲ್ಕತ್ತಾ ಪಟ್ಟಣದ ಧರ್ಮತೋಲಾ ಬ್ರಾಂಚ್ ಪೋಸ್ಟ್ ಆಫೀಸಿನ ಇಬ್ಬರು ಹಿಂದುಗಳೂ ಒಬ್ಬ ಚೆಟ್ಟೀಗಾರನೂ ೨,೪೦೦ ರೂಪಾಯಿನ ೪ ಮನಿಆರ್ಡರುಗಳನ್ನು ಭಾವತಿ ತೆಗೆದುಕೊಂಡು ಮೋಸ ಮಾಡಿದರೆಂದು ಮೊಕದ್ದಮೆ ಆಗಿ ಸೆಷನ್ ವಿಚಾರಣೆಗೆ ಗುರಿಯಾಗಿದ್ದಾರೆ.

****

ಕಳೆದ ವಾರ ಹಿಂದುಸ್ಥಾನದಲ್ಲೆಲ್ಲಾ ಒಟ್ಟು ೪,೫೫೬ ಜನ ಪ್ಲೇಗ್ ಉಪದ್ರದಲ್ಲಿ ಮೃತಪಟ್ಟರು. ಈ ಪೈಕಿ ಬೊಂಬಾಯಿ ಆಧಿಪತ್ಯ ೩,೦೪೨, ಸಂಯುಕ್ತ ಆಧಿಪತ್ಯಗಳು ೪೬೯, ಪಂಜಾಬ್ ೯೪೯, ಮಧ್ಯಪ್ರಾಂತ್ಯಗಳು ೩೨೫; ಮಧ್ಯ ಇಂಡಿಯಾ ೪೪೯, ಈ ರೀತಿ ಹಂಚಿಕೆಯಾಗಿದೆ. ಲೂಧಿಯಾನಾ ಪಟ್ಟಣ ಒಂದರಲ್ಲೇ ೩೦೫ ಮರಣಗಳಾಗಿರುತ್ತವೆ.

****

ಕಾಶ್ಮೀರ ಸಂಸ್ಥಾನದ ರಾಜಧಾನಿಯಲ್ಲಿ ಊರೆಲ್ಲಾ ಈ ಸಲ ಜಲಪ್ರವಾಹಗಳಿಂದ ಕೊಚ್ಚಿ ಹೋಗಬೇಕಾಗಿದ್ದದ್ದು ಹ್ಯಾಗೋ ತಪ್ಪಿಹೋಯಿತು. ಅದಕ್ಕೆ ಬದಲಾಗಿ ಕಳೆದ ವಾರ ವರ್ತಕರ ಬೀದಿಗೆ ಬೆಂಕಿ ಬಿದ್ದು ಅನೇಕ ಮನೆಗಳೂ ಭಾರೀ ಮಳಿಗೆಗಳೂ ಕಟ್ಟಡಗಳೂ ಸುಟ್ಟುಹೋಗಿ ಲಕ್ಷಾಂತರ ರೂಪಾಯಿ ನಷ್ಟವಾಯಿತೆಂದು ತಂತೀ ವರ್ತಮಾನ ಬಂದಿದೆ. ಅನೇಕ ಗೋಕಾಯಿಗಳು ಬೆಂಕಿಯಲ್ಲಿ ಸಿಕ್ಕಿ ಮೃತಪಟ್ಟವು.

****

ಸಾವಿರಾರು ಹುಡುಗರು ಇತರ ಕಡೆಗಳಿಂದ ಲಾಹೋರ್ ಪಟ್ಟಣಕ್ಕೆ ಹೋಗಿ ಅಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ಶಾಲೆಗಳಲ್ಲಿ ಓದುತ್ತಿದ್ದರೆ. ಇವರಿಗೆ ಕಾಯಿಲೆ ಮುಂತಾದ್ದು

...ಗಳನ್ನು ಮಾಡಲು ಅವಕಾಶವಿರಲಿಲ್ಲ. ಈಗ ಸ... ಯಾಗಿಯೇ ಒಂದು ದೊಡ್ಡ ಆಸ್ಪತ್ರೆಯನ್ನು ...ಕೊಡಬೇಕೆಂದು ಸನ್ನಾಹಮಾಡುತ್ತಿದಾರೆ.

****

...ದಲ್ಲಿ ಜನರಲ್ ಪ್ಲೇಗ್ ಆಸ್ಪತ್ರೆಯೊಳಗೆ ಕಳೆದ ...ಕ್ಕೆ ಲೇಡಿ ಸೂಪರೇಂಟರು ವಾಸವಾಗಿದ್ದ ಬಂಗಲೆಗೆ ...ದು ಹೋದದ್ದಲ್ಲದೆ, ಆಸ್ಪತ್ರೆಯ ಸಾಮಾನುಗಳೂ ...ಗಳೂ ಹಾಸಿಗೆ ಬಟ್ಟೆಗಳೂ ರಿಕಾರ್ಡುಗಳೂ ...ಗಳಿಗೂ ಬೆಂಕಿಯು ವ್ಯಾಪಿಸಿ ಎಲ್ಲವನ್ನೂ ಅರ್ಧ ...ಸುಟ್ಟು ಬೂದಿಮಾಡಿತು ಎಂದು ತಂತೀ ವರ್ತಮಾನ

****

...ದೇಶದ ಕೆಲವು ಕಡೆಗಳಲ್ಲಿ ಹಿಂದಿನ ವಾರ ಅಪಾರ ಮಳೆ ...ಕೆರೆ ಕಟ್ಟೆಗಳು ತುಂಬಿ ಒಡೆದುಹೋಗಿ ಘುಲ..ಜೂರಿ ...ನಡುವೆ ಮೂರು ಮೈಲಿ ದೂರ ರೈಲ್ ರಸ್ತೆಯು ...ಕೊಚ್ಚಿಕೊಂಡುಹೋಗಿದೆ ಇನ್ನು ಹದಿನೈದು ದಿನ ...ಲ್ಲಿ ರೈಲು ಸಂಚರಿಸುವ ಹಾಗಿಲ್ಲವೆಂದೂ, ಇಂಥಾ ಮಳೆ ...ಕಳೆದ ಐವತ್ತು ವರುಷಗಳಿಂದ ಆ ಪ್ರಾಂತ್ಯದಲ್ಲಿ ...ಲೂ ಅಲ್ಲಿನವರು ಹೇಳುತ್ತಾರೆ

****

...ದಲ್ಲಿ ಕಳೆದ ವಾರ ೬೧,೮೬೫ ಜನರು ಕ್ಷಾಮ ...ಕಾರದವರ ಪೋಷಣೆಯಲ್ಲಿದ್ದರು ಅಂದರೆ ಹಿಂದಿನ ...ಗಿಂತ ೬೮೭ ಜನರು ಕಡಿಮೆ. ಈ ಸೈಕಿ ಪೂರ್ವ ಬಂ...ದಲ್ಲಿ ೧೬,೩೯೬ ಜನರು, ಬಂಗಾಳ ೫೩೬,೯೦೨ ಜನರು, ...ಆಧಿಪತ್ಯಗಳಲ್ಲಿ ೧,೫೩೩ ಜನರು, ಬೆಳ್ಗಾವ ಡಿಸ್ಟ್ರಿಕ್ಟಿ...ರು ಇದ್ದರೆಂದೂ, ಆದರೆ ದೇಶೀಯ ಸಂಸ್ಥಾನಗಳಲ್ಲೆಲ್ಲಾ ...ರಕೆಯಾಗಿದೆ ಎಂದೂ ಪ್ರಕಟವಾಗಿದೆ.

****

...ಯ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಕಳೆದ ...ಲೀ ನಿವೇಶನವನ್ನು ಹರಾಜುಮೂಲಕ ಬಿಕರಿಮಾಡಿ ...ಇಬ್ರಾಹಿಂ ಎಂಬೊಬ್ಬ ಸಾಹುಕಾರನು ಚದರಗಜ ಒಂದ...ರೂಪಾಯಿನಂತೆ ಬೀಟ್ ಮಾಡಿ, ಆ ನಿವೇಶನವನ್ನು ...ರೂಪಾಯಿ ಕೊಟ್ಟು ಕೊಂಡುಕೊಂಡನು ಇದರಿಂದ ...ಜಮೀನಿನ ಬೆಲೆಯು ಎಷ್ಟು ಪ್ರಿಯವಾಗಿದೆ ಎಂಬುದು ...ದೆ ಆ ಸಾಹುಕಾರರು ಆ ಸ್ಥಳದಲ್ಲಿ ಒಂದು ಕಾರ್ಖಾನೆ ...ಸುವವರಾಗಿದಾರೆ.

****

...ಡೇಶಕ್ಕೆ ಸೇರಿದ ಹೈದರಾಬಾದ್ ಪಟ್ಟಣದಲ್ಲಿ ಸರ್ಕಾರಿ ...ಕಛೇರಿಗಳಿದ್ದ ಭಾರೀ ಕಟ್ಟಡಕ್ಕೆ ಬೆಂಕಿ ಬಿದ್ದು ಎಲ್ಲಾ ಸಂ...ಸುಟ್ಟು ಹೋಯಿತು. ಅದು ದಿನಗಳ ತನಕ ಬೆಂಕಿಯು ...ರಿ ಕಾಗದ ಪತ್ರಗಳೂ [illegible]ಗಳೂ ಸಾಮಾನುಗ...ದವು. ಆದರೆ ಖಜಾನೆಯಲ್ಲಿದ್ದ ಎರಡು ಲಕ್ಷ ರೂಪಾಯಿನ ...ಟು ನಾಣ್ಯ ಮುಂತಾದ್ದು ಮಾತ್ರ ಸ್ವಲ್ಪವೂ ಪೋಲಾಗದೆ ...ಕರೂ ಸರ್ಕಾರಿ ಅಧಿಕಾರಿಗಳೂ ಮುವಿರಾದು ಪ್ರಜೆಗ...ಕೆಯನ್ನು ಆರಿಸಿದರೆಂದು ತಿಳಿಯುವುದು.

****

...ನಕಾಲದ ಅಂದರೆ ಮೊಗಲಾಯರ ಆಳ್ವಿಕೆಯಲ್ಲಿ ಆಗ್ರಾ ...ಕಟ್ಟಲ್ಪಟ್ಟು ಲೋಕಪ್ರಸಿದ್ಧವಾಗಿರುವಂಥಾ ಹರಿತ್ರಾ ...ನೇಕ ಕಟ್ಟಡಗಳನ್ನು ಇಂಡಿಯಾ ಗವರ್ನಮೆಂಟಿನವರು ...ಡಿಸಿ ಶಾಶ್ವತವಾಗಿ ಇರುವಂತೆ ಏರ್ಪಾಡು ಮಾಡಬೇ...ದು ಕಾನೂನು ಸಹ ಮಾಡಿರುತ್ತಾರಷ್ಟೆ ಅದರಂತೆ ಕಳೆದ ...ದಲೂ ಅಲ್ಲಿರತಕ್ಕ ಫಿಘಾನಿ ಆಂ, ಅಕ್ಬರನ ಗೋರಿ, ಈ ...ಕಟ್ಟಡಗಳನ್ನು ೧,೪೧,೦೦೦ ರೂಪಾಯಿಮುಟ್ಟಸಿ ರಿಪೇರಿ ...ಕಾನಬಾರಿ ಮಾಡಿಸಿ ಪೂರೈಸಿರುತ್ತಾರೆ.

****

...ರ್ಧ್ಯ ಮಹಾರಾಜರವರು ಕಾಲವಾದ ದುಃಖಕರವಾದ ವರ್ತ...ಶ್ರೀ ಬಹು ಮಂದಿ ಯೂರೋಪ್ಯರ್ ಸರ್ದಾರರೂ ...ಮಹಾರಾಜರುಗಳೂ ದೊಡ್ಡ ಮನುಷ್ಯರೂ ತಮ್ಮ ಸಂತಾಪವ...ಪತ್ನೀಯಾದ ಶ್ರೀಮತಿ ಮಹಾರಾಣೀ ಜಗದಾಂಬಾ ದೇವಿಯವ...ಮೂಲಕವೂ ಕಾಗದ ಪತ್ರಗಳ ಮೂಲಕವೂ ತಿಳಿಸಿರುತ್ತಾರೆ. ...ಕಾಶಿ, ದರ್ಭಾಂಗ, ಬಲರಾಂಪುರ, ಬೀರಟಾ, ಧಾತಿಯಾ, ...ಈ ಮೊದಲಾದ ಸಂಸ್ಥಾನಗಳ ಮಹಾರಾಜರುಗಳೂ, ಲೆಫ್ಟಿ...ನೆಂಟರು, ಮೈಸೂರುಯಾಪ್ರಭುಗಳು, ಈ ಮೊದಲಾದ ದೊಡ್ಡ...ತಂತೀವರ್ತಮಾನಕೊಟ್ಟರುವರು.

****

...ಕೂರು (ಅನಂತಶಯನ) ಸಂಸ್ಥಾನದಲ್ಲಿ ಲಂಡನ್ ಮಿ...ಷನವರು ಅನೇಕ ಸ್ಕೂಲುಗಳನ್ನೂ ವಿದ್ಯಾಶಾಲೆಗಳನ್ನೂ ಇ...ಟ್ಟು ಬಂದಿದಾರೆ. ಆ ಸಂಘದವರು ಮೂಲಧನವನ್ನೆಲ್ಲಾ ...ಪಟ್ಟಣದಲ್ಲಿ ಮುಳುಗಿ ಹೋದ ಅರ್ಬತ್ನಾಟ್ ಕಂಪನಿಯ ...ದು. ಆದಕಾರಣ ಮೇಲ್ಕಂಡ ಸ್ಕೂಲುಗಳನ್ನೂ ವಿದ್ಯಾಶಾಲೆ ...ಮೊದಲಿನಂತೆಯೇ ನಡಸುವುದಕ್ಕೆ ಚೈತನ್ಯ ಸಾಲದೆ, ಅವುಗ...ದ ಮಾಡುತ್ತಿರುವ ಉಪಾಧ್ಯಾಯರಿಗೆಲ್ಲಾ ಇನ್ನು ಮುಂದೆ ...ರ್ಧ ಸಂಬಳವನ್ನೇ ಕೊಡುತ್ತೇವೆ. ಆದರಂತೆ ಒಪ್ಪಿ ಕೆಲಸಮಾಡ...ಎಂದು ನೋಟೀಸ್ ಕೊಟ್ಟು ಕೇಳಿರುವುದಾಗಿ ಪ್ರಕಟವಾಗಿದೆ.

****

...ಎಂಬ ಸಣ್ಣ ಸಂಸ್ಥಾನದ ರಾಜರು ಹೋದ ವರುಷ ...ಕ್ಷಾಮಪೀಡಿತರಾಗಿ ಕಷ್ಟಪಡುತ್ತಿದ್ದದ್ದನ್ನು ನೋಡಿ ...ಟ್ಟು, ರೈತಪ್ರಜೆಗಳಿಂದ ವಸೂಲಾಗದೆ ಬಾಕಿ ಇದ್ದ ನಾಲ್ಕು ಲಕ್ಷ ರೂಪಾಯಿ ಕಂದಾಯ ಕೌಳಿಗೆಗಳನ್ನು ರಿಮಿಷನ್ ಮಾಡಿಬಿಟ್ಟರು ಈಗ ಅವರಿಗೆ ಯುವರಾಜರು ಜನಿಸಿದ ಸಂತೋಷೋತ್ಸವವನ್ನು ಶಾಶ್ವತ ಪಡಿಸುವುದಕ್ಕಾಗಿ ಮೂರು ಲಕ್ಷ ರೂಪಾಯಿ ಕಂದಾಯ ಮುಂತಾದ್ದನ್ನು ಮಾಫ್ ಬಿಟ್ಟು, ಜೈಲ್ ಖಾನೆಯಿಂದ ಒಂಬತ್ತು ಮಂದಿ ಖೈದಿಗಳನ್ನು ಬಿಡುಗಡೆ ಮಾಡಿರುತ್ತಾರೆಂದು ತಿಳಿದುಬಂದಿದೆ.

****

ಬಿಕನೀರ್ ಮಹಾರಾಜರು ಇಟಲಿದೇಶಕ್ಕೆ ಹೋಗಿದ್ದಾಗ್ಗೆ ಅಲ್ಲಿ ಭಾನುವಾರದ ದಿನ ಕ್ರೈಸ್ತ ದೇವಸ್ಥಾನಕ್ಕೆ ಹೋದರು, ಅಲ್ಲಿನ ಕಾವಲುಗಾರರು ಮಹಾರಾಜರಿಗೆ ನಿಮ್ಮ ತಲೆಯ ಮೇಲಿರುವ ರುಮಾಲನ್ನು ತೆಗೆಯದಿದ್ದರೆ ಒಳಕ್ಕೆ ಬಿಡುವುದಿಲ್ಲವೆಂದು ಹೇಳಿದರು. ಜೋಡು ಬಿಡುವುದು ಹಿಂದುಗಳಿಗೆ ಧರ್ಮವೆಂತಲೂ ರುಮಾಲು ತೆಗೆಯಬಾರದೆಂತಲೂ ಮಹಾರಾಜರು ಕಾವಲುಗಾರರಿಗೆ ಎಷ್ಟು ಹೇಳಿದಾಗ್ಯೂ ಅವರು ಒಪ್ಪಲಿಲ್ಲ ಆಗ ಮಹಾರಾಜರು ರುಮಾಲನ್ನು ತೆಗೆದುಬಿಡುವುದು ಅವಮಾನಕರವೆಂದು ಹೇಳಿ ಒಳಕ್ಕೆ ಹೋಗದೆ ವಾಪಸು ಬಂದುಬಿಟ್ಟರು. ಯೂರೋಪಿನಲ್ಲಿ ಟೋಪಿ ತೆಗೆಯುವುದೂ, ಹಿಂದೂಸ್ಥಾನದಲ್ಲಿ ಜೋಡು ಬಿಡುವುದೂ ಸನ್ಮಾನಕಾರ್ಯಗಳೆಂಬುವುದು ಆ ಕಾವಲುಗಾರರಿಗೆ ತಿಳಿಯದೆಹೋಯಿತು.

****

ಮದರಾಸ್ ಯೂನಿವರ್ಸಿಟಿ ವಿದ್ಯಾಸಂಘದವರು ಕಳೆದ ಶುಕ್ರವಾರ ಸಭೆ ಸೇರಿ ಮೆಟ್ರಿಕ್ಯುಲೇಷನ್ ಪರೀಕ್ಷೆಯ ವಿಷಯವಾಗಿ ತೀರ್ಮಾನಿಸಿರುವುದೇನೆಂದರೆ— ಇನ್ನು ಮೇಲೆ ವಿದ್ಯಾರ್ಥಿಯು ಮೂರು ಸಲಕ್ಕಿಂತ ಹೆಚ್ಚಾಗಿ ಆ ಪರೀಕ್ಷೆಗೆ ಹಣ ಕಟ್ಟಕೂಡದು ವಿದ್ಯಾರ್ಥಿಯು ೧೫ ವರುಷ ತುಂಬಿದವನಾಗಿರಬೇಕು ಪ್ರತಿವರುಷವೂ ಆ ಪರೀಕ್ಷೆಯು ಮಾರ್ಚಿ ತಿಂಗಳ ನಾಲ್ಕನೇ ಸೋಮವಾರ ಪ್ರಾರಂಭವಾಗುವುದು. ಡಿಸೆಂಬರ್ ೨೦ರೊಳಗಾಗಿ ವಿದ್ಯಾರ್ಥಿಯು ಹಣ ಕಟ್ಟಬೇಕು. ಡಿಸೆಂಬರ್ ೨೦ಕ್ಕೆ ಮುಂಚೆ ೧೨೦ ದಿನಗಳಿಗಿಂತ ಕಡಿಮೆ ಇಲ್ಲದೆ ಪಾಠಶಾಲೆಯಲ್ಲಿ ಓದುತ್ತಿದ್ದನೆಂದೂ, ಆ ಪರೀಕ್ಷೆಗೆ ಓದಬೇಕಾದ ಪುಸ್ತಕಗಳನ್ನೆಲ್ಲಾ ಸಂಪೂರ್ಣವಾಗಿ ಓದಿ ಮುಗಿಸುತ್ತಾನೆಂದೂ, ಅವನ ಗುಣನಡತೆಗಳೂ ವಿದ್ಯಾಭಿವೃದ್ಧಿಯೂ ತೃಪ್ತಿಕರವಾಗಿವೆ ಎಂದೂ ಪಾಠಶಾಲೆಯ ಹೆಡ್ ಮಾಸ್ಟರಿಂದ ಸರ್ಟಿಫಿಕೇಟನ್ನು ಪಡೆದು ಹಾಜರುಮಾಡಬೇಕು.

****

ಉತ್ತರದೇಶಕ್ಕೆ ಸೇರಿದ ಪಾಂಡುಪುರದಲ್ಲಿ ಪ್ರತಿ ವರುಷವೂ ಎರಡು ಮೂರು ಜಾತ್ರೆಗಳೂ ಉತ್ಸವಗಳೂ ನಡೆಯುವವು ಆಗ್ಗೆ ಇತರ ಕಡೆಗಳಿಂದ ಲಕ್ಷೋಪಲಕ್ಷ ಯಾತ್ರಾರ್ಥಿಗಳು ಸಂಸಾರ ಸಹಿತ ಅಲ್ಲಿಗೆ ಹೋಗುತ್ತಾರೆ. ಇಂಥಾ ಪರಸ್ಥಳದವರನ್ನು ಅಲ್ಲಿ ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಇದ್ದುದರಿಂದ ಅವರಲ್ಲಿ ಅನೇಕರು ಪ್ರಾಣನಷ್ಟಕ್ಕೂ ಕಳ್ಳತನಕ್ಕೂ ಸಿಕ್ಕಿ ಕೆಟ್ಟುಹೋಗುತ್ತಿದ್ದರು ಇದನ್ನು ತಪ್ಪಿಸಬೇಕೆಂದು ಅಲ್ಲಿನ ಮ್ಯುನಿಸಿಪಲ್ ಸ್ಕೂಲ್ ಹೆಡ್ ಮಾಸ್ಟರಾದ ಬಾಬೂ ಬಂದೋಪಾಧ್ಯಾಯ ಎಂಬಾತನು ತನ್ನ ಸ್ಕೂಲಿನಲ್ಲಿ ದೊಡ್ಡವರಾಗಿರುವ ವಿದ್ಯಾರ್ಥಿಗಳನ್ನು ಸೇರಿಸಿ ಒಂದು ಸೇವಕಸಂಘವನ್ನು ಮಾಡಿ ಅನ್ಯಸ್ಥಳದವರಿಗೆ ಅನೇಕ ಸೌಕರ್ಯಗಳು ದೊರಕುವಂತೆ ಏರ್ಪಾಡು ಮಾಡಿರುತ್ತಾರೆ ಮ್ಯುನಿಸಿಪಾಲಿಟಿಯವರು ಆತನ ಸಾಹಸವನ್ನು ನೋಡಿ ತುಂಬಾ ಸಂತೋಷಪಟ್ಟು, ಇಂಥಾ ಉತ್ಕೃಷ್ಟವಾದ ಪರೋಪಕಾರ ಕಾರ್ಯಕ್ಕೆ ಬೇಕಾಗುವ ಸಹಾಯ ಸಂಪತ್ತುಗಳನ್ನು ತಾವೂ ಒದಗಿಸಿ ಕೊಡುವುದಾಗಿ ಒಪ್ಪಿದ್ದಾರಾಗಿರುವರು.

****

ಮದರಾಸ್ ಪಟ್ಟಣದಲ್ಲಿ ಇಬ್ಬರು ವಿದ್ಯಾರ್ಥಿಗಳು ಈ ವರುಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಪ್ರಶ್ನ ಪತ್ರಿಕೆಗಳನ್ನು ಅಚ್ಚುಹಾಕುವ ಆಫೀಸಿನಿಂದ ಮೊದಲೇ ಸಂಪಾದಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟು, ಆ ಅಚ್ಚು ಆಫೀಸಿನ ಮ್ಯಾನೇಜರಿಗೆ ಅದಕ್ಕಾಗಿ ೮೦೦ ರೂಪಾಯಿ ಲಂಚಕೊಟ್ಟರು ಆ ಮ್ಯಾನೇಜರು ಹಣಸಹಿತ ಆ ಹುಡುಗರನ್ನು ಪೋಲೀಸಿಗೆ ಹಿಡಿದು ಒಪ್ಪಿಸಿದರು. ಮೊದ್ದಮೆ ದರ್ಯಾಫ್ತಿ ಆಗಿ ಕಡೆಗೆ ಮಾಜಿಸ್ಟ್ರೇಟರು ಆ ೮೦೦ ರೂಪಾಯನ್ನು ಬ್ಯಾಂಕ ತರೀಖು ತೆಗೆದುಕೊಂಡು, ಅವರಿಂದ ನೇಕಚಾಲಿಗೆ ಜಾಮೀನ್ ತೆಗೆದುಕೊಂಡು ಬಿಟ್ಟು ಬಿಟ್ಟರು ಇವರಿಬ್ಬರಿಗೆ ಆ ಲಂಚದ ಹಣಕೊಟ್ಟಿದ್ದ ಲಕ್ಷ್ಮಣರೆಡ್ಡಿ ಎಂಬವನನ್ನು ಈಗ ಹಿಡಿದು ದರ್ಯಾಫ್ತಿ ಮಾಡುತ್ತಿದಾರೆ. ಇವನು ಅನೇಕ ವರುಷಗಳಿಂದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಣಕಟ್ಟುತ್ತಾ ತೇರ್ಗಡೆಹೊಂದದೆ ಇದ್ದು, ಈ ಸಲ ಪ್ರಶ್ನ ಪತ್ರಿಕೆಗಳನ್ನು ಪಡೆದುಕೊಳ್ಳುವುದಕ್ಕಾಗಿ ಆ ಲಂಚದ ಹಣ ಅವರಿಬ್ಬರ ಮೂಲಕ ಕೊಟ್ಟು ಕಳುಹಿಸಿದನೆಂದು ತಿಳಿಯುವುದು.

****

ಹಿಂದುಸ್ಥಾನದಲ್ಲಿರುವ ದೊಡ್ಡ ವಂಶೀಕರಲ್ಲೂ ಭಾರೀ ಜಮೀನ್ದಾರರಲ್ಲೂ ವಿಶೇಷ ಸಾಮರ್ಥ್ಯಗಳನ್ನು ಪಡೆದಿರುವಂಥಾ ಕೆಲವರನ್ನು ಚುನಾಯಿಸಿ ಒಂದು ಸಂಘವನ್ನು ಏರ್ಪಡಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಪರ್ಯಾಲೋಚನೆ ಮಾಡುತ್ತಿದಾರೆ. ಈ ಸಂಘಕ್ಕೆ ಹಿಂದುಸ್ಥಾನದ ದೇಶೀಯ ರಾಜರುಗಳನ್ನು ಮೆಂಬರಾಗಿ ಸೇರಿಸಿಕೊಳ್ಳಬೇಕೆಂಬ ಆಲೋಚನೆ ಇಲ್ಲ. ಈ ಸಂಘದ ಮೆಂಬರುಗಳು ಗವರ್ನಮೆಂಟಿನವರಿಗೂ ಪ್ರಜಾಕೋಟಿಗಳಿಗೂ ಮಧ್ಯಸ್ಥರಾಗಿರಲು ಅನುಕೂಲಿಸುವುದು. ಪ್ರಜೆಗಳಲ್ಲಿ ಸರ್ಕಾರಿ ಕಾರ್ಯಕರ್ತರುಗಳ ಮೇಲೆ ಈಗ ನಾನಾತರದ ತಪ್ಪು ಅಭಿಪ್ರಾಯಗಳಿರುವವು ಯಥಾರ್ಥವಾದ ಸಂಗತಿಗಳನ್ನು ತಿಳಿದು ನ್ಯಾಯವಾದ ರೀತಿಯಲ್ಲಿ ಆಕ್ಷೇಪಣೆ ಮಾಡುವುದಿಲ್ಲ. ನಿಷ್ಕಾರಣವಾಗಿ ಗವರ್ನಮೆಂಟಿನವರನ್ನೂ ಅವರ ಕೆಲಸಗಳನ್ನೂ ದೂರುತ್ತಾರೆ, ಅವರ ವಿಷಯದಲ್ಲಿ ಸಂಶಯ ಹೆದರಿಕೆಗಳನ್ನು ಉಳ್ಳವರಾಗಿದಾರೆ ಪ್ರಜಾಕೋಟಿಗಳಲ್ಲಿರುವ ಇಂಥಾ ವಿಷಯಗಳನ್ನು ನಿರ್ಮೂಲಮಾಡುವುದಕ್ಕೂ ಸದ್ಬೋಧನೆ ಸದಭಿಪ್ರಾಯಗಳನ್ನು ತಿಳಿಸುವುದಕ್ಕೂ ಪ್ರಜೆಗಳ ಇಂಗಿತಗಳನ್ನು ತಿಳಿದು ಅವರ ಸೌಕರ್ಯಕ್ಕೆ ಸಹಕಾರಿಯಾದ ಏರ್ಪಾಡುಗಳನ್ನೂ ಆಲೋಚನೆಗಳನ್ನೂ ಗವರ್ನಮೆಂಟಿನವರಿಗೆ ಅರಿಕೆ ಮಾಡುವುದಕ್ಕೂ ಮೇಲ್ಕಂಡ ಮಧ್ಯಸ್ಥಗಾರರ ಸಂಘವು ಏರ್ಪಾಡಾದಲ್ಲಿ ತುಂಬಾ ಸಹಾಯವಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

****

ರಂಗೂನ್ ಪಟ್ಟಣದಲ್ಲಿ ಪರಪು ಹತ್ತಿ ಇತರ ಕಡೆಗಳಿಗೆ ಪ್ರಯಾಣ ಹೊರಡುವಂಥಾ ಪ್ರಾಯದ ಗಂಡಸರಿಗೆ ತಲೆ ತೆರಿಗೆಯನ್ನು ಜಾಕಿ ವಸೂಲ್ಮಾಡಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ತೀರ್ಮಾನಿಸಿ, ಆ ತೀರ್ಮಾನವನ್ನು ಗವರ್ನಮೆಂಟಿಗೆ ಕಳುಹಿಸಿಕೊಟ್ಟರು. ಲೆಫ್ಟಿನೆಂಟ್ ಗವರ್ನರವರು ಅದನ್ನು ಅಂಗೀಕರಿಸದೆ, ಅದಕ್ಕೆ ಬದಲಾಗಿ ರಂಗೂನ್ ಪಟ್ಟಣದಲ್ಲಿ ಯಾವವಿಧವಾದ ಕಂದಾಯಗಳನ್ನೂ ಕೊಡದೆ ಇರುವಂಥಾ ಪ್ರಾಯದ ಗಂಡಸರಿಗೆ ಸುಲಭವಾದ ತಲೆ ತೆರಿಗೆಯನ್ನು ಜಾಕಿ ವಸೂಲ್ಮಾಡುವುದಕ್ಕೆ ಮ್ಯುನಿಸಿಪಾಲಿಟಿಯವರು ಒಪ್ಪುವುದಾದರೆ ಗವರ್ನಮೆಂಟಿನವರು ಅದನ್ನು ಸ್ಯಾಂಕ್ಷನ್ ಮಾಡಬಹುದೆಂದು ಜವಾಬು ದಯಪಾಲಿಸಿರುತ್ತಾರೆ

****

ಬರ್ಮಾ ಆಧಿಪತ್ಯದಲ್ಲಿ ಕೆಲವು ತಿಂಗಳ ಕೆಳಗೆ ಮಾಂಗ್ ಓನ್ ಗ್ಯೆ ಎಂಬೊಬ್ಬ ದೊಡ್ಡ ಮನುಷ್ಯನ ಮಗಳನ್ನು ಯಾರೋ ಅಪಹರಿಸಿಕೊಂಡು ಹೋಗಿದ್ದ ಪತ್ತೆಯಾಗಿ ಮೊಕದ್ದಮೆ ನಡೆದಾಗ್ಗೆ ಆ ಹುಡುಗಿಯ ಕಡೆ ವಕೀಲರಾಗಿದ್ದ ಮಿ॥ ಕವಾಸ್ಜಿ ಎಂಬೊಬ್ಬ ಬ್ಯಾರಿಸ್ಟರು ಕೆಲವು ಅಕ್ರಮಗಳನ್ನು ನಡಿಸಿದರೆಂದು ಹೇಳಿ ಅಲ್ಲಿನ ಛೀಫ್ ಕೋರ್ಟ್ ಜಡ್ಜಿಗಳು ತೀರ್ಮಾನಿಸಿ ಆ ಬ್ಯಾರಿಸ್ಟರನ್ನು ಇನ್ನು ಮುಂದೆ ವಕಾಲತ್ತು ನಡಸದಂತೆ ಹುಕುಂ ಕೊಟ್ಟು ತಡೆದಿದ್ದರು. ಆತನು ಆದರ ಮೇಲೆ ವಿಲಾಯತಿಯಲ್ಲಿ ಅಪೀಲ್ ಮಾಡಿಕೊಂಡಿದ್ದನು ಅಲ್ಲಿನ ಪ್ರಿವಿ ಕೌನ್ಸಿಲ್ ಎಂಬ ಕೋರ್ಟಿನ ಜಡ್ಜಿಗಳು ಆತನ ಮೇಲೆ ಆಪಾದನೆಯಾಗಿದ್ದ ಅಪರಾಧವನ್ನು ತನಿಖೆಮಾಡಿ, ತಪ್ಪೇನೂ ಇಲ್ಲವೆಂತಲೂ, ಆತನು ವಕಾಲತ್ತನ್ನು ಎಂದಿನಂತೆ ನಡೆಸಬಹುದೆಂತಲೂ ತೀರ್ಮಾನ ಹೇಳಿದರು. ಈ ವಿಷಯವು ಬರ್ಮಾ ಆಧಿಪತ್ಯದಲ್ಲಿ ತುಂಬಾ ಸಂತೋಷವನ್ನುಂಟುಮಾಡಿರುವುದು.

****

ಸರ್ ಆರ್ಥರ್ ಪಷ್ಟನ್ ಫಾನ್ಷಾ, ಕೆ. ಸಿ. ಐ. ಇ., ಸಿ. ವಿ. ಒ., ಸಿ. ಎಸ್. ಐ, ಎಂಬುವರು ಹಿಂದುಸ್ಥಾನದ ಪೋಸ್ಟ್ ಆಫೀಸ್ ಇಲಾಖೆಯಲ್ಲಿ ಕಳೆದ ೧೮೮೦ ರಿಂದ ನೌಕರಿಮಾಡಿ, ೧೮೮೯ ನೇ ಇಸವಿಯಿಂದ ಡೈರೆಕ್ಟರ್ ಜನರಲ್‌ರವರಾಗಿ ಕೆಲಸಮಾಡಿ, ಕಳೆದ ವಾರ ಪೆನ್ಷನ್ ಪಡೆದು ಸೀಮೆಗೆ ತೆರಳಿದರು. ಇವರು ಪೋಸ್ಟ್ ಆಫೀಸಿನ ಡೈರೆಕ್ಟರ್ ಜನರಲ್‌ರಾಗಿದ್ದ ಕಳೆದ ಹದಿಮೂರು ವರುಷಗಳಲ್ಲಿ ಆ ಇಲಾಖೆಯಲ್ಲಿ ಅನೇಕವಾದ ಬದಲಾವಣೆಗಳನ್ನು ಮಾಡಿಟ್ಟು, ಪ್ರಜೆಗಳ ಮತ್ತು ಗವರ್ನಮೆಂಟಿನವರ ಪ್ರೀತಿ ವಿಶ್ವಾಸ ಗೌರವಗಳನ್ನು ಸಂಪಾದಿಸಿಕೊಂಡಿರುತ್ತಾರೆ. ಇವರಿಗೆ ಡೈರೆಕ್ಟರ್ ಜನರಲ್ ಕೆಲಸ ನೇಮಕವಾದ ೧೮೮೯ ನೇ ಇಸವಿಯಲ್ಲಿ ಹಿಂದುಸ್ಥಾನದ ಪೋಸ್ಟ್ ಆಫೀಸುಗಳ ವರಮಾನವೆಷ್ಟಿತ್ತೋ ಈಗ ಅದಕ್ಕಿಂತಲೂ ದ್ವಿಗುಣವಾಗಿರುವುದು. ಆ ವರುಷ ಅಂಚೆ ಇಲಾಖೆಯ ಒಟ್ಟು ಉತ್ಪತ್ತಿಯು ಒಂದುಕೋಟಿ ಮೂವತ್ತು ಲಕ್ಷ ರೂಪಾಯಿ ಆದರೂ ಖರ್ಚಿಗಿಂತ ಸಲೊವರೆ ಲಕ್ಷ ರೂಪಾಯಿ ಕಡಿಮೆಯಾಗಿತ್ತು ಈಗ ಕಳೆದ ವರುಷದ ಜಮಾಖರ್ಚನ್ನು ನೋಡಲಾಗಿ ಈ ಇಲಾಖೆಯಿಂದ ೨ ಕೋಟಿ ೪೭ ಲಕ್ಷದ ೫೦ ಸಾವಿರ ರೂಪಾಯಿ ಗವರ್ನಮೆಂಟಿಗೆ ಉತ್ಪತ್ತಿಯಾಗಿದೆ ಎಂತಲೂ, ಅದರಲ್ಲಿ ಖರ್ಚು ವಜಾಮಾಡಿದರೂ ೧೧,೩೦,೦೦೦ ರೂಪಾಯಿ ಲಾಭ ಕಂಡು ಬಂದಿದೆ ಎಂತಲೂ ತಿಳಿದುಬರುವುದು. ಇವರ ಕಾಲದಲ್ಲಿ ಈ ಇಲಾಖೆಯು ಅಭಿವೃದ್ಧಿಗೆ ಬಂದಷ್ಟು ಇನ್ಯಾರ ಕಾಲದಲ್ಲೂ ಆಗಲಿಲ್ಲವೆಂದು ಹೇಳಬಹುದು

****

ಕಾಶೀ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಗೆ ಅಲ್ಲಿನ ಪ್ರಜೆಗಳು ಮೆಂಬರುಗಳನ್ನು ಚುನಾಯಿಸುತ್ತಾರೆ. ತಾವು ಚುನಾಯಿಸಿದ ಮೆಂಬರುಗಳು ಕಳೆದ ವರುಷ ತಮಗೆ ತೃಪ್ತಿಕರವಾಗಿ ಕೆಲಸ ನಡಿಸಿರುವರೋ ಇಲ್ಲವೋ ಎಂಬದನ್ನು ಕುರಿತು ಚರ್ಚೆಮಾಡುವುದಕ್ಕೆ ಕಳೆದ ವಾರ ಅಲ್ಲಿನ ಪ್ರಜೆಗಳು ಸಭೆಸೇರಿದ್ದರು. ಆ ದಿನ ಈ ಸಭೆಯವರು ಹನ್ನೊಂದು ತೀರ್ಮಾನಗಳನ್ನು ಮಾಡಿದರು. ಮ್ಯುನಿಸಿಪಲ್ ಕಮಿಷನರುಗಳು ವಿದ್ಯಾಭ್ಯಾಸ, ಆರೋಗ್ಯವಿಚಾರ, ನೀರಿನ ಸರಬರಾಯಿ, ವೈದ್ಯ, ಬಚ್ಚಲು ಚರಂಡಿಗಳು, ಆಹಾರ ಪದಾರ್ಥಗಳು, ಈ ಮೊದಲಾದ ಸಂಗತಿಗಳಿಗೆ ಮುತುವರ್ಜಿಯಿಂದ ಗಮನಕೊಟ್ಟು ಪ್ರಜೆಗಳಿಗೆ ಅನುಕೂಲವಾಗುವಂತೆ ಕೆಲಸ ಮಾಡಲಿಲ್ಲವೆಂದು ತಪ್ಪುಹೊರಿಸಿದರು. ಇಷ್ಟಲ್ಲದೆ ಅಂಥಾ ಮೆಂಬರುಗಳಿಗೆ ಮತ್ತೆ ಚುನಾವಣೆಯ ಕಾಲದಲ್ಲಿ ಪ್ರಜೆಗಳು (ಓಟ್) ಸಮ್ಮತಿಗಳನ್ನು ಕೊಡಕೂಡದೆಂತಲೂ ಗೊತ್ತುಮಾಡಿಕೊಂಡರು ಪ್ರಿನ್ಸ್ ಆಫ್ ವೇಲ್ಸ್‌ರವರು ಕಾಶೀಪಟ್ಟಣಕ್ಕೆ ದಯಮಾಡಿದ್ದ ಸಂದರ್ಭದಲ್ಲಿ ಮಿ॥ ರೇಡಿಸ್ ಯವರು ಮಾಡಿದ್ದ ಏರ್ಪಾಡುಗಳು ತುಂಬಾ ಶ್ಲಾಘನೀಯಗಳಾಗಿದ್ದವೆಂದು ಹೇಳಿ ಅವರನ್ನು ಹೊಗಳಿದರು. ಮ್ಯುನಿಸಿಪಲ್ ಕಮಿಷನರುಗಳ ಪೈಕಿ ಮೂವರು ಮಾತ್ರ ತಮ್ಮ ಕರ್ತವ್ಯಗಳನ್ನು ಸ್ತೋತ್ರಾರ್ಹವಾಗಿ ನಡಿಸಿರುತ್ತಾರೆಂದು ಒಪ್ಪಿ ಅವರನ್ನು ವಂದಿಸಿ, ಉಳಿದ ಒಂಬತ್ತು ಮಂದಿ ಮೆಂಬರುಗಳೂ ತೃಪ್ತಿಕರವಾಗಿಯೂ ಪ್ರಜಾರಂಜಕವಾಗಿಯೂ ನೆರವೇರಿಸಲಿಲ್ಲವೆಂದು ಅವರನ್ನು ನಿಂದಿಸಿದರು. ಪ್ರಜೆಗಳು ಇತರ ಕಡೆಗಳಲ್ಲೂ ಇಷ್ಟುಮಟ್ಟಿಗೆ ನಿಷ್ಠೆಯ ತಂದುಕೊಂಡ ಪಕ್ಷದಲ್ಲಿ ಮ್ಯುನಿಸಿಪಲ್ ಏರ್ಪಾಡುಗಳು ಇನ್ನೂ ಬಹಳ ಚನ್ನಾಗುವುವೆಂದು ಧಾರಾಳವಾಗಿ ಹೇಳಬಹುದಾಗಿದೆ ಕಾಶೀಪಟ್ಟಣದ ಪ್ರಜೆಗಳು ಈ ಭಾಗದಲ್ಲಿ ತಮ್ಮ ಕರ್ತವ್ಯವನ್ನು ನೆರವೇರಿಸಿದ್ದು ಹಿಂದುಸ್ಥಾನದಲ್ಲೆಲ್ಲಾ ಅಪೂರ್ವವಾಗಿರುವುದೆಂತಲೂ, ಮೇಲ್ಕಂಡ ಅವರ ನಡವಳಿಕೆಯು ಇತರರಿಗೆ ಮೇಲ್ಪಂಕ್ತಿಯಾಗಿದೆ ಎಂತಲೂ ಸಂತೋಷದಿಂದ ತಿಳಿಸುವೆವು.

ಮೈಸೂರು ಗೆಜೆಟ್ ಸಂಗ್ರಹ.

ಸೀನಿಯರ್ ಆ॥ ಕಮಿಷನರ್ ಮೆ॥ ಎಂ ಚಂಗೈಯ್ಯ ಚೆಟ್ಟಿಯವರನ್ನು ರಜದಿಂದ ವಾಪಸು ಕರೆಸಿ ಚಿತ್ರದುರ್ಗದ ಡೆಪ್ಯು ಕಮಿಷನರಾಗಿ ಕೆಲಸನೋಡುವಂತೆ ಕಳುಹಿಸಲ್ಪಟ್ಟದೆ

ಎಕ್ಸ್ಟ್ರಾ ಆ॥ ಕಮಿಷನರುಗಳಾದ ಮೆ॥ ಕೆ. ಮೈಲಾರಿರಾಯರನ್ನೂ ಮೆ॥ ಅನಂದರಾವ್ ಸಿರ್ಸಿಯವರನ್ನೂ ಜುಲೈ ೧ ರಿಂದ ೪ನೆ ಕ್ಲಾಸಿಗೆ ಬಡ್ತಿ ಮಾಡಿದೆ.

ಮೈಸೂರು ಅರಮನೆ ಡಿವಿಜನ್ ಸಬ್ ಆ॥ ಇಂಜನಿಯರ್ ಮೆ॥ ಸಿ. ವಿಜಯರಂಗಂ ನಾಯ್ಡುಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ಆನೆಕಲ್ ತಾಲ್ಲೂಕು ಅಮಲ್ದಾರ್ ಮೆ॥ ಸಿ. ಎಸ್. ಕುಪ್ಪುಸ್ವಾಮಿ ಐಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ಅವರು ರಜದ ಮೇಲಿರುವಾಗ್ಗೆ ಆ ಶಿರಸ್ತೇದಾರರು ಆ ತಾಲ್ಲೂಕ್ ಚಾಲ್ತಿ ಕೆಲಸಗಳ ಭಾರ್ವನ್ನು ವಹಿಸತಕ್ಕದ್ದು

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸಮಾಡುವ ಸಿವಿಲ್ ಸರ್ಜನ್ ಮಿಸ್ ಐಯ್ಯಾಚಮ್ಮಾಳ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟದೆ

ತುಂಕೂರು ಡಿಸ್ಟ್ರಿಕ್ಟ್ ಟ್ರೆಜರಿ ಭಾರ್ವನ್ನು ವಹಿಸಿರುವ ಆ॥ ಕಮಿಷನರ್ ಮೆ॥ ಎಂ ಶ್ರೀನಿವಾಸಮೂರ್ತಿಯವರಿಗೆ ಅಕ್ಟೋಬರ್ ೨೩ ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟತ್ತು

ಎಕ್ಸ್ಟ್ರಾ ಆ॥ ಕಮಿಷನರ್ ಮೆ॥ ಎಚ್ ಸೀತಾರಾಮೈಯ್ಯನವರು ತಾ. ೨೩ ರಿಂದ ೩೦ರ ವರೆಗೂ, ಆ॥ ಕಮಿಷನರ್ ಮೆ॥ ಸಿ ನಾರಾಯಣರಾಯರು ವಿಕ್ಕ ಕಾಲದಲ್ಲೂ ಡಿಸ್ಟ್ರಿಕ್ಟ್ ಟ್ರೆಜರಿ ಭಾರ್ವನ್ನು ವಹಿಸಿದ್ದರು

ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮೆ॥ ಜೆ ಜೆ ಮಾಂಟೀರೋಯವರು ನೊವೆಂಬರ್ ೧ರಲ್ಲಿ ಕೆಲಸದ ಭಾರ್ವನ್ನು ವಹಿಸಿದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇದ್ದ ರಜವನ್ನು ರದ್ದು ಮಾಡಿದೆ

ಸ್ಯಾನಿಟರಿ ಕಮಿಷನರವರ ಪರ್ಸನಲ್ ಅಸಿಸ್ಟೆಂಟ್ ಮೆ॥ ಬಿ. ಪಲ್ಪುಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸೀನಿಯರ್ ಸರ್ಜನರವರ ಪರ್ಸನಲ್ ಅಸಿಸ್ಟೆಂಟರಾಗಿಯೂ ಇರತಕ್ಕದ್ದು.

ಮೆ॥ ಎಫ್. ಸೊರೋನಾಯರವರನ್ನು ಖಾಯಂ ಶಿಬ್ಬಂದಿಗೆ ಸೇರಿಸಿಕೊಂಡಿರುವುದರಿಂದ ಮೆ॥ ಎಫ್ ಫರ್ನಾಂಡಿಸ್‌ಯವರನ್ನು ಹಂಗಾಮಿಯಾಗಿ ಸಬ್ ಆ॥ ಸರ್ಜನ್ ಕೆಲಸಕ್ಕೆ ನೇಮಕಮಾಡಿದೆ.

ಪೂರ್ವ ಸರ್ಕಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ॥ ಜೆ ಜೆ ವೈಟ್ಲಿಯವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀಮನ್ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿ ಬದಲಿ ನೋಡುವಂತೆ ನೇಮಿಸಲ್ಪಟ್ಟಿದಾರೆ

ಮೆ॥ ವೈಟ್ಲಿಯವರು ಅಕ್ಟೋಬರ್ ೨೬ರಲ್ಲಿ ಮೆ॥ ಮೆಕಾನಕಿಯವರಿಂದ ಭಾರ್ವನ್ನು ವಹಿಸಿಕೊಂಡರು

ಮುಂದೆ ಹೇಳುವ ನ್ಯಾಸಿಫರ ಬಡ್ತಿಗಳೂ ಖಾಯಂ ಬರಾವರ್ಗಳೂ ಜುಲೈ ೧ರಿಂದ ನಂಜೂರು ಮಾಡಲಾಗಿದೆ—ಮೆ॥ ಟಿ ಇ. ಜಯರಾಮ ಐಯ್ಯರು—೬ರಿಂದ ೧ನೆ ಕ್ಲಾಸಿಗೆ, ಮೆ॥ ಟಿ ಎಸ್. ಎ ಡಿಕ್ರೂಸ್, ಮೆ॥ ಎಂ ಎಲ್ ಶ್ರೀಕಂಠೇಗೌಡರು—೩ರಿಂದ ೨ನೆ ಕ್ಲಾಸಿಗೆ, ಮೆ॥ ಕೆ ಲಕ್ಷ್ಮೀನಾರಸೈಯ್ಯನವರು, ಮೆ॥ ಟಿ ಕೃಷ್ಣೈಯ್ಯಂಗಾರು—೪ನೆ ಕ್ಲಾಸ್ ಖಾಯಂ, ಮೆ॥ ಎಸ್ ಕೃಷ್ಣರಾಯರು, ಮೆ॥ ಟಿ ವೆಂಕೋಬರಾಯರು—೫ರಿಂದ ೪ನೆ ತರಗತಿಗೆ.

ಪಶ್ಚಿಮ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಕ್ಯಾಪ್ಟನ್ ಡಬ್ಲಿಯು ಎಸ್. ಟ್ರಯಲ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಅರವತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟದೆ

ಮೈಸೂರ್ ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್ ಮೆ॥ ಬಿ. ಸುಬ್ಬರಾಯರು ತಮ್ಮ ಇತರ ಕೆಲಸಗಳೊಂದಿಗೆ ಪಶ್ಚಿಮ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸಿನ ಚಾಲ್ತಿ ಕೆಲಸಗಳ ಭಾರ್ವನ್ನು ವಹಿಸತಕ್ಕದ್ದು

ಸಾಗರ್ ತಾಲ್ಲೂಕ್ ಅಮಲ್ದಾರ್ ಮೆ॥ ಎಂ ಕೃಷ್ಣಸ್ವಾಮಿ ಐಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟದೆ.

ಅವರು ರಜದ ಮೇಲೆ ಇರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಬಿ ನುರುಡಪ್ಪನವರು ಸಾಗರದ ಅಮಲ್ದಾರರಾಗಿಯೂ, ಶಿವಮೊಗ್ಗ ಡಿಸ್ಟ್ರಿಕ್ಟ್ ಕಮಿಷನರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಎ ರಾಜಾರಾಯರು ಕುಂಸಿಯ ಡೆಪ್ಯುಟಿ ಅಮಲ್ದಾರರಾಗಿಯೂ ಬದಲಿ ನೋಡುವಂತೆ ಗವರ್ನಮೆಂಟಿನವರು ಛ್ಯಾಂಜ್ಮಾನ್ ಮಾಡಿರುತ್ತಾರೆ.

ತಾಲ್ಲೂಕು ವರ್ತಮಾನಗಳು

ಚನ್ನಪಟ್ಟಣ.—ಈ ಊರಿಗೆ ತಾ ೧೯ರಲ್ಲಿ ಡಿಸ್ಟ್ರಿಕ್ಟ್ ಹುಜೂರು ಜಮಾಬಂದಿಗೋಸ್ಕರ ಡೆಪ್ಯು ಕಮಿಷನರ್ ಸಾಹೇಬರು ದಯಮಾಡಿದರು ಇಲ್ಲಿ ಟವನ್ ಇನ್ಸ್ಪೆಕ್ಷನ್ ಮಾಡಿ ಜಮಾಬಂದಿಯೂ ಕೆಲವು ಗ್ರಾಮಗಳು ಪೂರೈಸಿಕೊಂಡು, ತಾ ೨೨ರಲ್ಲಿ ಬೆಪ್ಪೂರು ಮೊಕ್ಕಾಂಗೆ ದಯಮಾಡಿದರು—ಇಲ್ಲಿ ಕಳೆದ ಫಾಲ್ಗುಣ ಮಾಸದಲ್ಲಿ ನಡಿಯಬೇಕಾದ ಕಾಮಣ್ಣನ ಉತ್ಸವದ ವಿಷಯದಲ್ಲಿ ಮುಸಲ್ಮಾನರಿಗೂ ಹಿಂದುಗಳಿಗೂ ಕೆಲವು ಮನಸ್ತಾಪದಿಂದ ಉತ್ಸವ ನಡಿಯದಂತೆ ಅಡ್ಡಿಪಡಿಸಿ ತಹಲ್‌ವರಿವಿಗೂ ಉತ್ಸವದ ವಿಗ್ರಹಗಳು ನಿಂತಿರುವ ಕಡೆ ಮಳೆಯಲ್ಲಿ ನೆನಿಯುವದು, ಬಿಸಲಿನಲ್ಲಿ ಒಣಗುವದು ಈ ರೀತಿ ಇರುವ ವಿಚಾರದಲ್ಲಿ ತಾ. ೨೮ರಲ್ಲಿ ಡೆಪ್ಯು ಕಮಿಷನರವರು ವಿಚಾರಣೆಯು ಪೂರೈಸಿ ಅರ್ಡರಿಗೆ ಇಟ್ಟುಕೊಂಡು ಇರುತ್ತಾರೆ—ಕ್ಲೋಸ್‌ಪೇಟೆ ರೇಂಜ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕೋಡಿಪುರದ ೩ ಜನ ಪೈಲ್‌ವಾನರ ಮೇಲೆ ನಡಿಯುತ್ತಿದ್ದ ದಕಾಯಿತಿ ಮೊಕದ್ದಮೆ ವಿಚಾರಣೆಯೂ ಪೂರೈಸಿ ತಾ ೨೦ರಲ್ಲಿ ಸದರಿಯವರನ್ನು ಖುಲಾಸೆ ಮಾಡಿರುತ್ತಾರೆ

ಕ್ಲೋಸ್‌ಪೇಟೆ.—ಕಳೆದ ಭಾನುವಾರ ರಾತ್ರಿ ಈ ಊರಲ್ಲಿ ಬೀದಿ ಗುಡಿಸುವ ಪಡ್ಡ ರಾಮನೆಂಬುವವನು ತನ್ನ ಹೆಂಡತಿ ವೆಂಕಟಿಯು ತನಗೆ ಊಟಕ್ಕೆ ಸಿದ್ಧಮಾಡಲಿಲ್ಲವೆಂತ ಆಗ್ರಹಗೊಂಡು ಹಸಿವೆಯ ವೇದನೆಯಿಂದಲೂ ಅಮಲೇರಿದ ಬುದ್ಧಿವಿಕಲ್ಪದಿಂದಲೂ ತನ್ನ ಹೆಂಡತಿಯಾದ ವೆಂಕಟಿಯನ್ನೂ ಈ ಮಧ್ಯದಲ್ಲಿ ಬಂದ ತನ್ನ ಮಗುವನ್ನೂ ಹತಮಾಡಿ ತಾನೂ ಸ್ವಲ್ಪಮಟ್ಟಿಗೆ ಕತ್ತಿಗೆ ಕೊಯಿದುಕೊಂಡನೆಂತ ತಿಳಿದು ಗ್ರಾಮಾಧಿಕಾರಿಗಳು ವಿಚಾರಣೆ ನಡಿಸಿದರು ಹೆಂಡತಿಯನ್ನು ಮಚ್ಚಿನಿಂದ ತಲೆ ಸೀಳಿ ಕರುಳನ್ನು ಹೊರತೆಗೆದನೆಂತಲೂ ಮಗು ಮಧ್ಯ ಬಂದದ್ದರಿಂದ ಅದನ್ನು ಭೂಮಿಯ ಮೇಲೆ ಬಡಿದು ಅಪ್ಪಳಿಸಿದನೆಂತಲೂ ಕೇಳಲಾಗಿದೆ. ಸ್ಥಳಿಕ ವೈದ್ಯರು ತಹಶೀಲದಾರ್ ಇನ್ಸ್ಪೆಕ್ಟರು ಹೋಗಿ ವಾಙ್ಮೂಲ ತಕ್ಕೊಳ್ಳುವಮಟ್ಟಿಗೂ ವೆಂಕಟಿ ಜೀವಂತಳಾಗಿದ್ದಳೆಂತೆ ಖೂನಮಾಡಿರುವ ರಾಮನಿಗೆ ಪ್ರಾಣಭಯವೇನಿಲ್ಲವಂತೆ ಮತ್ತು ಇವನು ಈ ಕೃತ್ಯವನ್ನು ಹುಚ್ಚುಧೆಯಿಂದಲೂ ಮತ್ತೇರಿದ್ದರಿಂದಲೂ ಮಾಡಿದನೆಂತಲೂ ತಿಳಿಸುತ್ತಾನೆಂತ ಕೇಳಲಾಗಿದೆ—ಮಳೆ ಬೆಳೆ ಚನ್ನಾಗಿದೆ. ಕಲರಾ ನಿಂತಿದೆ ಧಾರಣೆ—ಅಕ್ಕಿ ೬—೭ಸೇರು, ರಾಗಿ ೧೪ ಸೇರು ಮಾರುತ್ತೆ

ಬೆಂಗಳೂರು ತಾ. ಗೊಟ್ಟಿಗೆರೆ.—ಈ ಗ್ರಾಮ ನಿವಾಸಿಗಳಾದ ವೆಂಕಟರಾಮಾಭಟ್ಟರು, ಹೆಡ್ ಮಾಸ್ಟರ್ ಕೆ ರಂಗೈಯ್ಯನವರು, ಅ॥ ಮಾಸ್ಟರ್ ಬಿ ಅನಂತರಾಮೈಯ್ಯನವರು, ಪ್ಯಾ॥ ಲಕ್ಷ್ಮೀನಾರಣಪ್ಪನವರು, ಪ॥ ನಂಜುಂಡಪ್ಪನವರು, ಮಂಡಿ ವರ್ತಕರಾದ ವೆಂಕಟರಾಮಪ್ಪನವರು, ಮುನಿರಾಮಪ್ಪನವರೇ ಆದಿಯಾಗಿ, ಅನೇಕ ವೈದಿಕ ಲೌಕಿಕ ದೊಡ್ಡ ಮನುಷ್ಯರು, ವರ್ತಕರು ಮತ್ತು ರೈತ ಪ್ರಜೆಗಳು ಸೇರಿ, ನಮ್ಮ ಘನವನ್ನೈದಿದ ಮೈಸೂರ್ ಸಂಸ್ಥಾನದ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಮೆ॥ ವಿ ಪಿ ಮಾಧವರಾಯರನ್ನು ತಮ್ಮ ಮುಖ್ಯಾಮಾತ್ಯರನ್ನಾಗಿ ನಿಯಮಿಸಿಕೊಂಡಿರುವದರಿಂದ ತಮ್ಮಗಳಿಗೆ ಉಂಟಾಗಿರುವ ಅಪಾರ ಸಂತೋಷವನ್ನು ಪ್ರದರ್ಶನಪಡಿಸಲು, ಇಲ್ಲಿನ ಸರ್ಕಾರಿ ಸ್ಕೂಲ್ ಕಟ್ಟಡದಲ್ಲಿ ಕಳೆದ ೨೦ನೇ ತಾ ಮಂಗಳವಾರ ಸಭೆ ಸೇರಿದ್ದರು ಇದಕ್ಕಾಗಿಯೇ ಸದರಿ ಸಭಾಮಂದಿರವು ಕದಳೀ ತೋರಣಾದಿಗಳಿಂದ ಯುಕ್ತವಾದ ಚಪ್ಪರದಿಂದ ನೋಟಕರ ಕಣ್ಮನಗಳನ್ನು ಕರ್ಷಿಸುವಂತೆ ಅಲಂಕರಿಸಲ್ಪಟಿತ್ತು ಈ ದಿವ್ಯ ಸಭಾಸ್ಥಾನಕ್ಕೆ ನೆರಹೊರೆ ಗ್ರಾಮಗಳ ದೊಡ್ಡ ಮನುಷ್ಯರುಗಳೂ ಸ್ಕೂಲ್ ಮಾಸ್ತರುಗಳೂ ತಮ್ಮ ತಮ್ಮ ಮೋದಾನಂದವನ್ನು ಪ್ರಕಾಶಪಡಿಸಲು ಹಾಜರಾಗಿದ್ದರು ನಮ್ಮ ವೈದೀಕ ಶಿಖಾಮಣಿಗಳೂ ಈ ಗ್ರಾಮದ ದೊಡ್ಡ ಮನುಷ್ಯರೂ ಆದ ಮ॥ ವೆಂಕಟರಾಮಾಭಟ್ಟರು ಸಭಿಕರ ಪ್ರಾರ್ಥನೆಯಂತೆ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭಿಕರನ್ನು ಕುರಿತು—ನಮ್ಮ ಮಂತ್ರಿವರ್ಯರಾದ ಮೆ॥ ವಿ ಪಿ ಮಾಧವರಾಯರು ಪ್ರಜೆಗಳಿಗೆ ಎಷ್ಟು ಉಪಕಾರಿಗಳಾಗಿದ್ದರೆಂಬುದನ್ನೂ ಅವರ ಔದಾರ್ಯ ಗುಣಾತಿಶಯಗಳನ್ನೂ ವಿವರಿಸುವ ಒಂದು ಸರಳವಾದ ಉಪನ್ಯಾಸವನ್ನೂ ಓದಿ ಹೇಳಿದರು ಸದರಿ ಉಪನ್ಯಾಸವನ್ನು ಎಲ್ಲರೂ ಕೇಳಿದ ಬಳಿಕ ತಮ್ಮ ತಮ್ಮ ಸಂತೋಷವನ್ನು ಸೂಚಿಸಲು ಕರತಾಡನವನ್ನು ಮಾಡಿದರು ನಂತರ ನಮ್ಮ ಗಾನ ವಿಶಾರದರಾದ ಮ॥ ರಾಮಕೃಷ್ಣಪ್ಪನವರಿಂದ ಭಕ್ತಿಪೂರ್ವಕವಾಗಿ ನಡೆಸಲ್ಪಟ್ಟ ಸಂಗೀತ ಮಹಾತ್ಮ್ಯೆಯೂ ಗ್ರಾಮೋಫೋನ್ ಎಂಬ ಗಾನ ವಿನೋದಿನೀ ಯಂತ್ರವೂ ವಾದ್ಯಘೋಷಗಳೂ ಸಭಿಕರಿಗೆ ಕರ್ಣಾನಂದವನ್ನುಂಟುಮಾಡುತ್ತಲಿದ್ದವು ತದನಂತರ ಎಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು, ಸಕಲರೂ ಶ್ರೀಮನ್ ಮಹಾರಾಜರವರ ಮತ್ತು ದಿವಾನರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದ ಮೇಲೆ ಸಭೆಯು ಬರಖಾಸ್ತು ಮಾಡಲ್ಪಟ್ಟು ಎಲ್ಲರೂ ಸ್ವಸ್ಥಾನಗಳಿಗೆ ತೆರಳಿದರು. ಇಂಥಾ ಸಣ್ಣ ಗ್ರಾಮದಲ್ಲಿ ಪ್ರಜೆಗಳೆಲ್ಲರೂ ಸೇರಿ ದಿವಾನರವರ ವಿಷಯದಲ್ಲಿ ತಮಗಿರತಕ್ಕ ಸಂತೋಷಾತಿಶಯವನ್ನು ಮೇಲ್ಕಂಡ ರೀತಿಯಲ್ಲಿ ಪ್ರಕಟಪಡಿಸಿರುವುದು ರಾಜ್ಯಾಭಿವೃದ್ಧಿಗೆ ಕಾರಣವಾಗಿದೆ

ಕೊಪ್ಪ.—ಕೊಪ್ಪದ ತಾಲ್ಲೂಕು ಮೇಗುಂದದ ಹೋಬಳಿ ಹಿರೇಗದ್ದೆ ಗ್ರಾಮದಲ್ಲಿ ತಿಮ್ಮನೆಂಬ ಸುಮಾರು ೧೪ ವರ್ಷದ ಹುಡುಗನು ೧೪ನೇ ತಾ. ಬೆಳಿಗ್ಗೆ ದನಗಳನ್ನು ಕಾಯುವದಕ್ಕಾಗಿ ಹೊಡೆದುಕೊಂಡು ಗ್ರಾಮಕ್ಕೆ ಸುಮಾರು ಒಂದೆರಡು ಮೈಲಿ ದೂರದಲ್ಲಿದ್ದ ಗುಡ್ಡಕ್ಕೆ ಹೋದನು ಸುಮಾರು ಮಧ್ಯಾಹ್ನ ೨ ಘಂಟೆ ಸಮಯದಲ್ಲಿ ಸಮೀಪದಲ್ಲಿದ್ದ ಕಾಡಿನಿಂದ ಒಂದು ಘೋರ ಹುಲಿಯು ಬಂದು ಮೇಯುತ್ತಿದ್ದ ದನಗಳ ಪೈಕಿ ಒಂದು ಎತ್ತನ್ನು ಹಿಡಿದು ಕೆಡವಿಕೊಂಡು ರಕ್ತ ಕುಡಿಯುವ ಸಮಯದಲ್ಲಿ ದನಾ ಕಾಯುತ್ತಿದ್ದ ಸದರಿ ತಿಮ್ಮನೆಂಬ ಹುಡುಗನು ಆ ಎತ್ತನ್ನು ಹುಲಿಯ ಕೈಯಿಂದ ಬಿಡಿಸುವಂತೆ ಕೂಗಿಕೊಂಡು ಹುಲಿಯ ಸಮೀಪಕ್ಕೆ ಬರಲು, ಹುಲಿಯು ಎತ್ತನ್ನು ಬಿಟ್ಟು ಹುಡುಗನನ್ನು ತನ್ನ ಪಂಜಾದಿಂದ ಹೊಡೆಯಲು, ಹುಡುಗನಿಗೆ ತಲೆ ಬೆನ್ನುಗಳಲ್ಲಿ ಘಾಯಮಾದದ್ದಲ್ಲದೆ ಮುಂಭಾಗದಲ್ಲಿ ಹುಲಿಯ ಪಂಜದ ಉಗುರು ಹೊಟ್ಟೆಗೆ ಬಿದ್ದು ಹೊಟ್ಟೆಯು ಸ್ವಲ್ಪಮಟ್ಟಿಗೆ ಸೀಳಿ ಒಳಗಿನಿಂದ ಕರುಳು ಹೊರಗೆ ಮೊದಲು ಸ್ವಲ್ಪವಾಗಿ ಬಂದು, ಬರಬರುತ್ತಾ ದೊಡ್ಡದಾಗಿ ಉಬ್ಬಿಕೊಳ್ಳಲು, ಸುಮಾರು ನಾಲ್ಕು ಮೈಲಿ ದೂರದಲ್ಲಿದ್ದ ಸೊಳ್ಳೆಬೈಲಿನ ಆಸ್ಪತ್ರೆಗೆ ೧೫ನೇ ತಾರೀಖಿನಲ್ಲಿ ತಂದರು ಅಲ್ಲಿನ ಆಸ್ಪತ್ರೆ ಅಸಿಸ್ಟೆಂಟರು ಸಾಧಾರಣ ಘಾಯಗಳಿಗೆ ಔಷಧಿ ಹಾಕಿ, ಹೊಟ್ಟೆಯ ಘಾಯವನ್ನು ಮಾತ್ರ ಏನೂ ಮಾಡದೆ, ಇದು ಇಲ್ಲಿ ಆಗುವದಿಲ್ಲ, ಚಿಕ್ಕಮಗಳೂರಿಗಾದರೂ ಇಲ್ಲವೇ ಆ ಆಸ್ಪತ್ರೆಗೆ ಸುಮಾರು ಮೂರು ಮೈಲಿ ದೂರದಲ್ಲಿರುವ ಪ್ಲಾಂಟರುಗಳ ಡಾಕ್ಟರ ಬಳಿಗಾದರೂ ಹೋಗುವಂತೆ ಹೇಳಲು, ಜನರು ಬಂದು ಮಾರ್ಗಮಧ್ಯೆ ತೋಟದಲ್ಲಿದ್ದ ಡಾಕ್ಟರ್ ಸಾಹೇಬರಿಗೆ ತಿಳಿಸಲು, ಅವರು ಹೊರಡುವದಕ್ಕೆ ಸಿದ್ಧಮಾಡಿಕೊಂಡು ಹೊರಡುವ ಸಮಯದಲ್ಲಿ ಸೊಳ್ಳೆಬೈಲಿನ ಆಸ್ಪತ್ರೆಯಿಂದ ಆಳು ಬಂದು ಹುಡುಗನು ಸತ್ತುಹೋದನೆಂದು ಹೇಳಿದನು ಈ ಹುಲಿಗಳು ಆಗಿಂದಾಗ್ಗೆ ದನಗಳನ್ನು ಹಿಡಿದು ಕೊಲ್ಲುವದುಂಟು ಎತ್ತಿಗಾಗಿ ಪ್ರಾಣಕೊಟ್ಟ ಹುಡುಗನನ್ನು ಇಲಾಜು ಮಾಡಿ ಬಂದಿದ್ದ ಕರುಳನ್ನು ಒಳಗೆ ಹಾಕಿ ಹೊಲಿಯುವದು ಆಸ್ಪತ್ರೆ ಸ್ಟೆಂಟರಿಂದ ಆಗದೆಹೋಯಿತೆಂದು ಇಲ್ಲಿನವರು ಚಿಂತಿಪಡ

ತುಮಕೂರು.—ಈ ವಾರ ಒಂದು ಹದ ಮಳೆಯಾ ಇದರಿಂದ ಬಿಳ್ಳೀ ಫಸಲಿಗೆ ಕೊಂಚ ತೊಂದರೆಯುಂಟಾಯಿ ಈಗ ಕಟಾವು ಎಲ್ಲವೂ ಪೂರೈಸುತ್ತಾ ಬಂದಿದೆ ಹಾಲಿ ಕಟಾವು ವಾದ್ದರಿಂದ ದಿನಸಿ ಗಾಡಿಗಳು ಮಂಡೀಗೆ ವಿಶೇಷ ಬಾರದಿರುವ ಧಾರಣೆಗಳು ಜಾಸ್ತಿಯಾಗಿಯೇ ಇವೆ. —ಈ ಸಾರಿ ಲೋವರ್ ಡರಿ ಪರೀಕ್ಷೆಗಾಗಿ ಈ ಟವನಿಗೆ ತಾಲ್ಲೋಕಾಮಲೆ ಬಂದಿದ್ದ ವಿ ಗಳ ಪೈಕಿ ಒಬ್ಬ ಮುಸಲ್ಮಾನರ ಹುಡುಗನು ಇಲ್ಲಿಗೆ ಬಂದ ದಿನವೇ ಜ್ವರ ಮಾಂತಾದ ಖಾಯಿಲೆಯಾಗಿ ಕಾಲವಾದನು. ಸೆಕಂಡರಿ ಪಶ್ನ ಪತ್ರಗಳೆಲ್ಲವೂ ವಿದ್ಯಾರ್ಥಿಗಳ ಯೋಗ್ಯತಾ ಅನುಸಾರವಾಗಿದ್ದವು ಅದರಲ್ಲಿ "ಕೈ ಬರವಣಿಗೆ" ಪತ್ರವು ಕೊಟ್ಟದ್ದು ಕಾಲಕ್ಕಿಂತ ಮಿಗಿಲಿತ್ತಾದ್ದರಿಂದ ಬಹು ಮಂದಿ ವಿ ಗಳು ಸಂಪೂರ್ಣವಾಗಿಯೂ ನೀಟಾಗಿಯೂ ಬರೆದಿಲ್ಲವೆಂದು ಬಂದಿದೆ—ಈ ತಿಂಗಳಲ್ಲಿ ಇಲ್ಲಿಗೆ ಬಂದಿದ್ದ ಸೆಷನ್ಸ್ ನಲ್ಲಿ ನಡೆದ ಮೊಕದ್ದಮೆಗಳ ವಿಚಾರದಲ್ಲಿ ಕೋರದಲ್ಲಿ ಹುಡು ಖೂನಿ ಮಾಡಿದ್ದವನಿಗೆ ಬಂಕೋಲ್ ಸಜವೂ, ಉರುಳು ಗದ್ದೆ ಮಾಡಿದ್ದವನಿಗೆ ಆರು ತಿಂಗಳ ಕೈದೂ ವಿಧಿಸಿದಂತೆ ತಿಳಿಯ ಹೋದ ವಾರದಲ್ಲಿ ತಮ್ಮ ಪತ್ರಿಕೆಯಲ್ಲಿ ಕರೆಸ್‌ಪಾಂಡೆನ್ಸ್ ರುವ "ಸತ್ಯಾನಿಲಾಷಿ" ಎಂಬುವದು ತುರುವೇಕೆರೆ ಮೊಕದ್ದಮೆ ದಲ್ಲಿ "ತಪ್ಪು ತಿದ್ದುವುದು" ಎಂದು ಬರೆದಿದ್ದಾರಷ್ಟೆ ಅವರ ವಾದ ಲೇಖನವೂ ನಮ್ಮ ಲೇಖನವನ್ನೂ ಹೋಲಿಸಿದರೆ ಗೊಂ ಹಾಸಿದರೆ ಸ್ಯಾಗೆ ವ್ಯತ್ಯಾಸ ಕಾಣುವುದಿಲ್ಲವೋ ಅದರಂತೆಯೇ ಹೊರ್ತು ಅತಿಶಯವೇನೂ ಇಲ್ಲ—ಈ ಊರು ಹೊರಪೇಟೆ ರಿಯಲ್ಲಿ ಬೈಲಿನಲ್ಲಿ ರಂಗಸ್ಥಳ ಕಟ್ಟಿ ನಾಟಕವಾಡತಕ್ಕವರು ಆಟಗಳನ್ನು ಮಾಡಿಕೊಂಡು ಆಗಾಗ್ಗೆ ಆ ತುಂಬಿದ ಬೀದಿಯಲ್ಲಿ ಮಾಡುವದರಿಂದ ಸುತ್ತು ಮುತ್ತಲೂ ಜನರಿಗೆ ನಿದ್ರಾಭಂಗವೇ ಲಾದ ಅನೇಕ ತೊಂದರೆಗಳುಂಟಾಗುತ್ತವೆ ಆದ್ದರಿಂದ ಮ್ಯುನಿಸಿ ಯವರು ಆ ಆಟಗಾರರಿಗೆ ಊರ ಹೊರಗಡೆ ಆಡುವಂತೆ ಸ್ಥಳ ಲೈಸೆನ್ಸನ್ನೂ ಸಹ ಕೊಡುವದು ಉತ್ತಮವೆಂದು ಕೋರು ಹಳೆ ಮಾಂತಾದ ಅನಿವಾರ್ಯಗಳಿಂದ ಆರು ತಿಂಗಳಿಂದಲು ಇಲ್ಲಿ ಇರುವ ಯಳಂದೂರು ನಾಟಕದವರು ಈ ವಾರದಲ್ಲಿ ನಾಟಕವ ಪ್ರಾರಂಭಿಸುವಂತೆ ವರ್ತಮಾನ ಕೇಳುತ್ತೇವೆ—ಟವನ್ ಮಾಂಸದ ಕೇಟ್ಟು ರಿಪೇರಿಯಾಗುತ್ತಿದೆ. ಕಾಯಿ ಪಲ್ಯ ಬಿಕರಿ ಮಾ ಮಾರ್ಕೆಟ್ಟು ಸ್ಥಳ ಸಾಲದೆ ಇರುವದರಿಂದ ಮ್ಯುನಿಸಿಪಾಲಿಟಿಯ ಆ ಕಡೆ ಕೊಂಚ ಗಮನಕೊಡುವದು ಅನುಕೂಲ ಕೆಂದು ಸುತ್ತೇವೆ

ಹಾಸನ:—ಈಗ ಹಾಸನದಲ್ಲಿ ಪ್ಲೇಗ್ ರೋಗವು ದಿನೇ ಕಡಮೆಯಾಗುತ್ತಾ ಜನಗಳಲ್ಲಿರುವ ಭೀತಿಯನ್ನು ಹೋಗ ತ್ತಾ ಬರುತ್ತದೆ ಇಂಥಾ ಪ್ಲೇಗ್ ಕಾಲದಲ್ಲಿ ಇಲ್ಲಿ ಡೆಪ್ಯು ಕಮಿ ರು, ವೈಸ್ ಪ್ರೆಸಿಡೆಂಟರು, ಡಾಕ್ಟರು, ಇವರೆಲ್ಲಾ ಪ್ರತಿ ದಿನವೂ ದ ಟವನ್ ಸುತ್ತಿ ಖಾಯಿಲೆಯವರನ್ನು ಕ್ಯಾಂಪುಗಳಿಗೂ ಅಂಥಾ ಕಿನ ಸ್ಥಳದಲ್ಲಿರುವವರನ್ನು ಷೆಡ್ಡುಗಳಿಗೂ ಕಳುಹಿಸುತ್ತಾ ಟ್ಲಾ ಇಲಿಗಳು ಸತ್ತ ಕಡಲ ಸರ್ಕಾರಕ್ಕೆ ವಹಿಸಿ ಮನೆಗಳನ್ನು ಕೆಂದು ಸಮಾಧಾನ ಹೇಳುತ್ತಾ ಬಡಜನಗಳಿಗೆ ಸಹಾಯ ಷೆಡ್ಡುಗಳಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡುತ್ತಾ, ಮೊದಲಾದ ಜನೋಪಕಾರವಾದ ಉಪಕಾರಗಳನ್ನು ಮಾಡಿರು ಹಾಸನದ ಟವನಲ್ಲಿದ್ದ ಕಾಫಿ ಪ್ಲಾಂಟರು ಸೈದ್ ಅಮೀರಲ್ಲಿ ಬರ ಸಂಬಂಧಿಕರಾದ ಮೀರ್ ಖಾಜಾ ಸಾಹೇಬರು ಪ್ಲೇಗಿನಿಂದ ಟ್ಟ ಬಡಜನಗಳನ್ನು ಇತರ ವರ್ಣದವರು ಇದುವರಿವಿಗೆ ದಫನ ತ್ತಾ ಇದ್ದದ್ದನ್ನು ನೋಡಿ ಹಾಗೆ ಮಾಡುವದು ಸರಿಯಲ್ಲವೆಂದು ಟಿಸಿ ಮೇಲ್ಕಂಡವರು ತಮ್ಮ ಸ್ವಂತ ಖರ್ಚಿನಿಂದ ಆಯಾ ಮ ದಫನಮಾಡುವ ಹಾಗೆ ಸಹಾಯಮಾಡಲು ಒಪ್ಪಿ ಇಸ್ತಿಹಾರನ್ನು ಕಾರ್ಯವನ್ನು ಮುಂದರಿಸುತ್ತಾ ಇದ್ದಾರೆ—ಈಗ ಜನರೆಲ್ಲಾ ಲ್ಲಿರುವದು ಕಳ್ಳಕಾಕರಿಗೆ ಬಹಳ ಸಹಾಯಮಾಡಿದಂತಾಗಿದೆ ವಿನ ಟವನಲ್ಲಿಯೂ ಕೋಡಿಮಾರ್ಗದ ಹತ್ತಿರ ಘಾರೆಸ್ಟು ಆಫೀ ಕೆಲಸಮಾಡುತ್ತಾ ಇರುವ ರಾಘವೇಂದ್ರರಾಯರು ತಮ್ಮ ಪುತ್ರನು ಗಿನಲ್ಲಿ ಕಾಲವಾದನಂತರ ಬೇರೆ ಷೆಡ್ಡು ವಿರ್ಮಿಸಿರುವ ಕಾಲದಲ್ಲಿ ರು ರಾತ್ರಿ ೧೦ ಘಂಟೆ ಸಮಯದದಲ್ಲಿ ನುಗ್ಗಿ ಕೈಗೆ ಸಿಕ್ಕಿದ ಗಳನ್ನು ದೋಚಿಕೊಂಡು ಹೋಗಿರುತ್ತಾರೆ—ಇಲ್ಲಿ ಪರೀಕ್ಷೆ ರ ಇತರ ತಾಲ್ಲೂಕುಗಳಿಂದ ಬಂದಿರುವ ವಿದ್ಯಾರ್ಥಿಗಳಿಗೆ ಇಳಿ ಳ್ಳುವದಕ್ಕೆ ಸ್ಥಳವಿಲ್ಲದೆ ತುಂಬಾ ತೊಂದರೆಯಾಗಿದೆ—ಹಾಸನದಲ್ಲಿ ಟ್ಟಿಸಿರುವ ರಡ್‌ಫರ್ನ ಮೆಮೋರಿಯಲ್ ಆಸ್ಪತ್ರೆಯಲ್ಲಿ ಔಷಧ ನ್ನು ಕೊಡಲು ಶುರುಮಾಡಿ ಸುಮಾರು ಒಂದು ತಿಂಗಳ ಮೇಲಾಯ ಅನೇಕ ಜನಗಳು ಬಹಳ ದೂರದಿಂದ ಬಂದು ಔಷಧಗಳನ್ನು ಕೊಂಡುಹೋಗುತ್ತಾ ಇದಾರೆ ಇಲ್ಲಿನ ಲೇಡಿ ಡಾಕ್ಟರಾದ ಸ್ಮಿತ್‌ಯವರು ಔಷಧ ಉಪಚಾರಗಳಲ್ಲಿ ಬುದ್ಧಿವಂತರಾಗಿಯೂ ಗಳನ್ನು ಆದರಪೂರ್ವಕವಾಗಿ ಕಾಣುತ್ತಾ ಪ್ರಜೆಗಳ ಅನುರಾಗ ಪಾತ್ರರಾಗಿಯೂ ಇದಾರೆ.

ಚಿಕ್ಕಮಂಗಳೂರು.—ಈ ಊರಿನಲ್ಲಿ ೨—೩ ದಿವಸ ಮೋಡವಾಡುತ್ತಾ ಗಾಳಿ ಬೀಸುತ್ತಾ ಸಣ್ಣ ಸೋನೆ ಮಳೆಯು ಒಂದೆರಡುದಿನ ಬಿದ್ದಿತು ಪ್ಲೇಗಿನ ಹಾವಳಿಯು ಕಮ್ಮಿಯಾದ ಗುತ್ತಲಿದೆ. ಒಂದೆರಡು ದಿನಗಳಿಂದ ಮರಣವೇನೂ ಇಲ್ಲ ಹೇಳುತ್ತಾರೆ. ನಮ್ಮ ಡೆಪ್ಯುಟಿ ಕಮಿಷನರು ಊರಿನಲ್ಲಿರುವವರೆ ಕೆಲವು ದಿನಗಳ ಮಟ್ಟಿಗೆ ಊರನ್ನು ಬಿಟ್ಟು ಹೊರಗೆ

...ಗುವಾಕೆ ಅಪ್ಪಣೆ ಕೊಟ್ಟದ್ದರೂ ಜನರು ಈಗಿನ ಛಳಿ ಗಾಳಿ ...ಹೊರಗೆ ಹೋಗಲಾರದೆಯೂ ಇನ್ನುಮೇಲೆ ಕಾಫಿ ಕಸುಬಾದ ...ವ್ಯಾಪಾರಕ್ಕೆ ಅಡ್ಡಿಯಾಗದಂತೆಯೂ ಊರಿನಲ್ಲಿಯೇ ಇರುವ ...ಕಷ್ಟ ಪಡುತ್ತಾರೆಂದು ತೋರುತ್ತಿದೆ ಡೆಪ್ಯುಟಿ ಕಮಿಷನರರೂ ...ಯೂ ಇಂಜಿನಿಯರೂ ರಸಿಡೆಂಟರನ್ನು ಇದಿಗೊಂಡು ಅವರ ...ಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಲು ಹೊರಟರು ...ದ ಜನರಲ್ ಕಮಿಷನರರೂ ಫಾರೆಸ್ಟು ಆ॥ ಕನ್ಸರ್ವೇಟರೂ ...ಶೀಕರ ಪ್ರಾಂತ್ಯಕ್ಕೆ ಹೋಗಿದಾರೆ —ಇಲ್ಲಿಗೆ ಒಂದು ಮೈಲಿ ...ದೂರವ ಚಿಕ್ಕ ಕುರುಬರ ಹಳ್ಳಿಯಲ್ಲಿ ಶಿವಾಚಾರದ ಕಾಡೇಗೌ... ಒಂದು ತಿಂಗಳ ಕೆಳಗೆ ಪ್ಲೇಗಿನಿಂದ ಮೃತಪಟ್ಟನು ಅವನು ...ವಾಗ ೧೨ ವರುಷದ ತನ್ನ ಮಗನಿಗೆ ಮನೆಯ ಚಿಕ್ಕ ಕೋಣೆ ...ಹಣವನ್ನು ಹೂಣಿಟ್ಟದ್ದೇನೆಂದು ಹೇಳಿ ಸತ್ತನೆಂತಲೂ ಈ ...ರವನ್ನು ಆ ಹುಡುಗನು ತನ್ನ ಬಂಧುವಾದ ಸಣ್ಣಕ್ಕಿ ಗೌಡ ...ಳಿದಂತೆಯೂ ಬಿಟ್ಟದ್ದ ಮನೆಯನ್ನು ಕಾರಣಾಂತರದಿಂದ ತೆಗ...ಕಾಗಿ ಬಂದಾಗ ಸಣ್ಣಕ್ಕಿ ಎಂಬವನು ಹುಡುಗನ ಕಡೆಯಿಂದ ...ಕ್ಕೆ ತೆಗದುಕೊಂಡುಹೋಗಿ ಬಾಗಿಲು ತೆಗೆದು ಬೇಕಾದ ಸಾಮಾ... ತೆಗದುಕೊಂಡು ಬೀಗಹಾಕಿ ಪುನಃ ಬೀಗದಕೈಯನ್ನು ಹುಡು...ಕೊಟ್ಟುಬಿಟ್ಟನು ಮಾರನೇ ವೇಳೆಗೆ ಮನೆ ಬಾಗಲು ತೆರದಿತ್ತು. ...ಗನು ಗಾಬರಿಯಾಗಿ ಒಳಗೆ ಹೋಗಿ ನೋಡುವಲ್ಲಿ ತಂದೆ ಹೇಳಿದ ...ಯಲ್ಲಿ ಒಂದು ಗುಂಡಿಯಂತೆ ಕಂಡಿತು ಇದನ್ನು ಪಟೇಲರೇ ...ದವರಿಗೆ ಹೇಳಿ ಚಿಕ್ಕಮಗಳೂರು ಪೊಲೀಸಿಗೆ ಇದೇ ೧೭ ನೇ ...ರಿಪೋರ್ಟು ಮಾಡಿದ್ದರ ಮೇಲೆ ಜಾಲ್ಬೋಳು ಜಮೂದಾರರು ...ಗಿ ಸಣ್ಣಕ್ಕಿ ಎಂಬುವನನ್ನು ತನಿಖೆ ಮಾಡಿದ್ದರಲ್ಲಿ ೫೦೪ ರೂಪಾಯಿ ...ಇದ್ದ ಒಂದು ಮಡಕೆಯನ್ನು ಆಸಾಮಿಯು ತೋರಿಸಿದನು. ...ಅವನ ಮೇಲೆ ಮೊಕದ್ದಮೆ ಮಾಡಿರುತ್ತಾರೆ ಇದರ ಫಲಿತಾಂಶವು ...ಗೊತ್ತಾಗಬೇಕಾಗಿದೆ —ಇದೇ ತಿಂಗಳು ೧೭ನೇ ತಾ॥ ಗಾಣಿಗರ ...ಎಂಬವಳು ಒಂದು ಹೆಣ್ಣು ಮಗುವನ್ನು ಹೆತ್ತು ಈ ಊರಿನ ...ಗದಲ್ಲಿ ಹರಿಯುವ ನಾಲಾದಲ್ಲಿ ಬಿಸಾಡಿದ ಸಂಗತಿಯು ಪೊಲೀ... ...ರು ಆಸಾಮಿಯನ್ನು ಪತ್ತೆಮಾಡಿ ವಿಚಾರಿಸಿದ್ದರಲ್ಲಿ ಸದರೀ ...ಒಪ್ಪಿಕೆ ಇಂದಳೆಂತಲೂ ಆಕೆಯ ಗಂಡನು ಅವಳನ್ನು ಕಾರ...ದಿಂದ ಬಿಟ್ಟು ಎಂಟು ವರುಷವಾಯಿತೆಂದೂ ತಿಳಿಗಾಬಂದಿದೆ. ...ಫಲಿತಾಂಶ ಮುಂದೆ ತಿಳಿಯಬೇಕಾಗಿದೆ

ಬಾತ್ಮಿದಾರರಿಗೆ ನೋಟೀಸು.

...ಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ...ಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋ... ...ನ್ನು ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕ... ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆ...ಬಾರದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

...ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾ...ಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಮಂಗಳೂರು ರೈಲು

ಅಯ್ಯಾ,

ನಮ್ಮ ದಕ್ಷಿಣ ಕನಡಾ ಜಿಲ್ಲೆಯಲ್ಲಿ ರೈಲು ಗಾಡಿಗಳು ಬರುವರೆ ೨... ...ವರ್ಷದಿಂದ ಕೆಲಸನಡೆಯುತ್ತಿದ್ದರೂ ಮಂಗಳೂರು ನೇತ್ರಾವತಿ ...ಹೊಳೆಯಲ್ಲಿ ೧ ಕಲ್ಲಿನ ಕಂಬದವು ಬಹಳ ಸರ್ತಿ ಕಟ್ಟಿದರೂ ಅವಿಗೇ ...ಬೀಳುತ್ತಿದ್ದರಿಂದ ನಮ್ಮ ಮಂಗಳೂರು ಸ್ಟೇಷನ್ನಾಫೀಸಿಗೆ ಬರುವದೇ ಸಾವ...ಕಾಶವಾಯಿತು ಆದರೂ ಇದೇ ಕಳೆದ ತಾ॥ ೧—೧೦—೦೬ ರಲ್ಲು ...ಪಟ್ಟಣದಿಂದ ಕಾಸ್ರುಗೋಡಿಗೆ ಬಂದು, ಇದೇ ತಾ॥ ೦೬ ಕ್ಕೆ ...ಸ್ರುಗೋಡಿನಿಂದ ೫ ಮೈಲು ಈಚೆ ಕಾಂಬ್ಳೆಗೆ ಬಂಡಿಗಳು ಬಂದು ...ಹೋಗುತ್ತವೆ ಬರುವ ಜನವರಿಯಲ್ಲಿ ಮಂಗಳೂರಿಗೆ ಬರುತ್ತದೆ ...ಕನಡಾ ಜಿಲ್ಲೆಯ ಜನರಾದ ನಾವು ಬಹಳ ವರ್ಷದಿಂದ ಹಾರೈ...ಸಿದ್ದೆವು ಈಗ ರೈಲು ಗಾಡಿಗಳು ಪ್ರತ್ಯಕ್ಷ ನೋಡಲಾಯಿತು

ರಾಮಣ್ಣ

ಪರೋಪಕಾರ ಮಾಡಿದ್ದು

ಅಯ್ಯಾ,

ಅಯಾ, ಬೆಂಗಳೂರು ತಾಲ್ಲೂಕು ಉತ್ತರಹಳ್ಳಿ ಹೋಬಳಿ ದೊಡ್ಡ...ಸಂದ್ರ]ದಲ್ಲಿ ಇರುವ ಒಕ್ಕಲಿಗರ ತಮ್ಮಣ್ಣ ಉರುಫ್ ಪಿಳ್ಳೈಯ ...ಬನು ಹೆಂಡತಿ ಸಮೇತವಾಗಿ ಇದ್ದನು ಸುಮಾರು ಒಂದು ...ವರ್ಷದ ಕೆಳಗೆ ಈತನ ಹೆಂಡತಿ ದೈವಾಧೀನವಾದಳು ಮೇಲ್ಕಂಡ ...ಪಿಳ್ಳಯ್ಯನೆಂಬುವನು ತನ್ನ ಆಸ್ತಿಯನ್ನೆಲ್ಲಾ ಮಾರಿಬಿಟ್ಟು ಜನಗಳ ...ಉಪಯೋಗಾರ್ಥವಾಗಿ ಕಲ್ಲು ಕಟ್ಟಡದ ಭಾವಿಯನ್ನುಕಟ್ಟಿಸಿ ಮತ್ತು ...ಭಾವಿಯ ಬಾಜೂದಲ್ಲಿ ಒಂದು ಕಲ್ಲಿನ ನಂಟಿಪವನ್ನು ಕಟ್ಟಿಸಿ ...ಆ ಕಲ್ಲನ್ನು ಪ್ರತಿಷ್ಠೆ ಮಾಡಿಸಿ ಇರುತ್ತಾನೆ. ಈ ಊರು ಹುಟ್ಟಿದ ...ಮೊದಲು ಜನಗಳಿಗೆ ಕುಡಿಯುವದಕ್ಕೆ ನೀರು ಇಲ್ಲದೆ ಕ್ಯಾನ ...ತೊಂದರೆಯಾಗಿತ್ತು ಮೇಲ್ಕಂಡ ಪಿಳ್ಳೈಯನಿಂದ ಗ್ರಾಮಸ್ಥರಿಗೂ ...ಹೋಗುವವರಿಗೂ ಕ್ಯಾನೆ ಉಪಯೋಗವಾಗಿ ಇರುತ್ತೆ ಆ ಗ್ರಾಮದಲ್ಲಿ ...ಶ್ರೀಮಂತರು ಇರುತ್ತಾರೆ ಇಂಥಾ ಧರ್ಮದ ಕೆಲಸವನ್ನು ಯಾರೂ ...ಮಾಡಿಸಲಿಲ್ಲ ಇನ್ನೂ ಧರ್ಮದ ಕೆಲಸವನ್ನು ಮಾಡಬೇಕೆಂದು ...ನೆ

ಬಿ ಅಬ್ದುಲ್ ಕರೀಂ ಸಾಬ್

ಮೇವಿಗೂ ಜನಸಂಚಾರಕ್ಕೂ ಅವಕಾಶಬೇಕು.

ಅಯ್ಯಾ,

...ಇದೇ ಬಿರದಾಳುಬೋರೆ ಬಂಗಲಬಾಬ್ತು ರಸ್ತೆ ಬಾಜು ಕಪ್ಪನ ...ಹೊಟ್ಟೆನವರು ತಮ್ಮ ಹಿಡುವಳಿಗೆ ಸೇರಿಸಿಕೊಂಡು ಇರುತ್ತಾರೆ ...ಪ್ರಕಾರ ಈ ಪೈರೋಡು ಮೈಸೂರು ಮಂಗಳೂರಿಗೂ ಇರುತ್ತೆ. ...ಬಾಜು ಎರಡು ಕಡೆ ಬಾಜು ಮತ್ತು ಜನ ತಿರುಗುವದಕ್ಕೆ ಬಹಳ ಚನ್ನಾಗಿ ಗೋಕಾಯಿಗಳು ಅನೇಕ ತಿರುಗುತ್ತಾರೆ ಇವುಗಳಿಗೆ ಮೇವು ಅನಾನುಕೂಲವಾಗಿ ಇದೆ ಆದರೆ ಚನ್ನರಾಯಪಟ್ಟಣದ ತಾಲ್ಲೂಕು ಕಾಳೆನಹಳ್ಳಿ ಸೋರಪ್ಪನವರು ಇದೇ ಪೈರೋಡಿನಲ್ಲಿ ಎಂಟು ಹತ್ತು ಜೊತೆ ಎತ್ತುಗಳನ್ನು ಹೊಡೆದುಕೊಂಡು ಹಾಸನ ಮಾರ್ಗವಾಗಿ ಬಂದರು ಗೋಕಾಯಿಗಳಿಗೆ ಮೇವು ಇಲ್ಲದೆ ಬಹಳ ಸಂಕಟಪಡುತ್ತ ಇರುವಲ್ಲಿ ಗೋವಿಂದ ಗೌಡನಾದ ನಾನು ಗೋಕಾಯಿಗಳಿಗೆ ಮೇವು ಕೊಡಿಸಿ ಇವರನ್ನು ಕಳುಹಿಸಿಕೊಟ್ಟೆನು ಈ ರಸ್ತೆಯ ಬಾಜುದಲ್ಲಿ ಗಾಡಿಗಳು ಬಿಟ್ಟುಕೊಂಡು ಇರುವದಕ್ಕೆ ಗೋಕಾಯಿಗಳಿಗೂ ಮೇವಿಗೂ ಬಹಳ ಸಂತೋಷವಾಗಿದೆ ಆದ್ದರಿಂದ ಇದನ್ನು ಕಾವ್ರಿ ದಯವಿಟ್ಟು ಹಾಸನ ಡಿಸ್ಟ್ರಿಕ್ಟು ಸಾಹೇಬರಿಗೆ ತಿಳಿಸಿ ವಜಾಮಾಡಿಸಿ ಕೊಡುತ್ತೀರೆಂದು ನಂಬಿದೇನೆ

ಗೋವಿಂದೇಗೌಡ

ಉಪಕಾರಸ್ಮರಣೆ

ಅಯ್ಯಾ,

ಸಾಗರದ ಮಾ॥ ಬೇಪಪ್ಪನವರು ತಮ್ಮ ಊರಿನ ಪರಿಕ್ಷಾವಿದ್ಯಾರ್ಥಿಗಳ ಊಟ ಉಪಚಾರಾದಿಗಳ ಖರ್ಚನ್ನು ತಾವೇ ವಹಿಸಿ ಉದಾರತ್ವವನ್ನು ತೋರ್ಪಡಿಸಿದಂತೆಯೇ ಬೆಂಗಳೂರಿನ ಜವಳೀ ಅಂಗಡಿ ಸಾಹುಕಾರ್ ಮಾ॥ ದೇವಾಂಗಂ ಓ ಆದೆಪ್ಪನವರು ಈ ಸಾರಿಯ ದೇಶೀಯ ಲೋವರ್ ಸೆಕೆಂಡರಿ ಪರಿಕ್ಷೆಗಾಗಿ ದೊಡ್ಡಬಳ್ಳಾಪುರದಿಂದ ಬೆಂಗಳೂರಿಗೆ ಹೋಗಿದ್ದ ೨೦ ವಿದ್ಯಾರ್ಥಿಗಳಿಗೂ, ಇವರುಗಳ ಉಸ್ತುವಾರಿಗಾಗಿ ಹೋಗಿದ್ದ ಉಪಾಧ್ಯಾಯರುಗಳಿಗೂ ಸ್ಥಳವಸತಿಯನ್ನೂ ಅವರವರ ವರ್ಣಾಶ್ರಮಗಳಿಗನುಗುಣವಾಗಿ ಸಕಾಲ ಭೋಜನಾದಿಗಳನ್ನೂ ತಮ್ಮ ಸ್ವಂತ ಖರ್ಚಿನಿಂದ ಏರ್ಪಾಡು ಮಾಡಿಕೊಟ್ಟಿದ್ದರು. ಸಣ್ಣ ವಯಸ್ಸಿನ ಪರಿಕ್ಷಾವಿದ್ಯಾರ್ಥಿಗಳಿಗೆ ಇಂತಹ ಸಹಾಯಗಳನ್ನು ಕಲ್ಪಿಸಿಕೊಟ್ಟುದರಿಂದ ಬಹಳ ಉಪಕಾರವಾಯಿತು. ಇದಕ್ಕಾಗಿ ಈ ಊರಿನ ಸಾರ್ವಜನಿಕ ಉಪಾಧ್ಯಾಯರುಗಳೂ ಪರಿಕ್ಷಾವಿದ್ಯಾರ್ಥಿಗಳೂ ಸೇರಿ ಕೃತಜ್ಞತೆಯೊಡನೆ ಉದಾರ ವಿದ್ಯಾಪಕ್ಷ ಪಾತಿಗಳಾದ ಮಾ॥ ಆದೆಪ್ಪನವರಿಗೆ ತಮ್ಮ ವಂದನೆಗಳನ್ನು ತಮ್ಮ ಪತ್ರಿಕಾಮುಖೇನ ಅರ್ಪಿಸಲು ಅಪೇಕ್ಷಿಸುತ್ತಾರೆ

ದೊಡ್ಡಬಳ್ಳಾಪುರ — ಡಿ ಸಿ ಸುಬ್ರಾಯಪ್ಪ, ಬಿ ಎ.

ಪ್ರಯಾಣಿಕರ ಕಷ್ಟ.

ಅಯ್ಯಾ,

ಪ್ರಯಾಣಿಕರಿಗಾಗಿ ಗವರ್ನಮೆಂಟಿನವರು ಅಲ್ಲಲ್ಲೇ ಛತ್ರಗಳನ್ನು ಕಟ್ಟಿಸಿರುವುದರಿಂದ ಬಹಳ ದೂರ ಪ್ರಯಾಣಮಾಡಿ ದಣಿದುಹೋಗಿರುವ ಪ್ರಯಾಣಿಕರು ಛತ್ರಗಳಲ್ಲಿ ಸ್ವಲ್ಪ ಹೊತ್ತು ಇದ್ದು ತಮ್ಮ ಕಷ್ಟವನ್ನು ಸ್ವಲ್ಪಮಟ್ಟಿಗೆ ಪರಿಹರಿಸಿಕೊಳ್ಳೋಣವೆಂದು ತುಂಬಾ ಆಶೆಯೊಡನೆ ಛತ್ರದ ಸಮೀಪಕ್ಕೆ ಬಂದರೆ ಅಲ್ಲಿ ಸರ್ಕಾರದ ದೊಡ್ಡ ಮನುಷ್ಯರು ಛತ್ರವನ್ನು ಆಕ್ರಮಿಸಿಕೊಂಡಿರುವುದನ್ನು ನೋಡಿ ತುಂಬಾ ನಿರಾಶೆಯಿಂದ ನಿಟ್ಟುಸಿರುಬಿಡುತ್ತಾ ಬೇರೆ ಸ್ಥಳವನ್ನು ಹುಡುಕಬೇಕಾಗಿದೆ. ಸರ್ಕಾರದ ಅಧಿಕಾರಿಗಳಿಗೆ ಬೆತ್ತ ದೊರೆಕಾಗ್ಯೂ ಟ್ರಾವಲರ್ಸ್ ಬಂಗಲೆಗಳಿದ್ದಾಗ್ಯೂ ಈ ಬಡ ಪ್ರಯಾಣಿಕರಿಗೆ ಕಟ್ಟಿಸಿರುವ ಸ್ಥಳವನ್ನು ಯಾಕೆ ಆಕ್ರಮಿಸಿಕೊಳ್ಳಬೇಕೋ ತಿಳಿಯದು ಆದ್ದರಿಂದ ಇನ್ನು ಮುಂದೆಯಾದರೂ ಛತ್ರವನ್ನಾಳುವ ಅಧಿಕಾರಿಗಳೂ ಧರ್ಮಛತ್ರವಿನಲ ಆ ಬಂಗಲೆಯಲ್ಲಾಗಲೀ ಬೇರೆ ಎಲ್ಲಿಯಾದರೂ ಸ್ಥಳ ಅನುಕೂಲವಮಾಡಿಕೊಳ್ಳುವಂತೆ ಮೇಲ್ಪಟ್ಟ ಅಧಿಕಾರಿಗಳು ಹುಕುಂ ಕೊಟ್ಟರೆ ಬಡ ಪ್ರಯಾಣಿಕರ ಕಷ್ಟ ಬಹಳಮಟ್ಟಿಗೂ ನಿವಾರಣೆಯಾಗುತ್ತದೆಂಬುವದರಲ್ಲಿ ಯಾವ ಸಂದೇಹವೂ ಇರಲಾರದು

ಹುಣಸೂರು — ಪ್ರಜಾ ಹಿತಚಿಂತಕ

ಕೊಳ್ಳೇಗಾಲದ ಸ್ಕೂಲಿಗೆ ವಿದ್ಯಾರ್ಥಿಗಳು ಬೇಕು.

ಅಯ್ಯಾ,

ಕೊಯಮುತ್ತೂರು ಡಿಸ್ಟ್ರಿಕ್ಟಿಗೆ ಸೇರಿದ ಕೊಳ್ಳೇಗಾಲದಲ್ಲಿ ಒಂದು ಲೋವರ್ ಸೆಕೆಂಡರಿ ಸ್ಕೂಲು ಇದೆ ಆ ಸ್ಕೂಲಿನಲ್ಲಿ ೩ ನೆ ಫಾರಮ್ಮಿನಲ್ಲಿ ಓದಿದ ಬಳಿಕ ಮುಂದಕ್ಕೆ ವಿದ್ಯಾಭ್ಯಾಸಂಗ ಮಾಡಲು ಅನುಕೂಲ ಇಲ್ಲದಿರುವದ್ದರಿಂದ ಅಲ್ಲಿನ ಜನಗಳು ಅದೇ ಲೋವರ್ ಸೆಕೆಂಡರಿ ಸ್ಕೂಲನ್ನೇ ಹೈಸ್ಕೂಲ್ ಮಾಡಬೇಕೆಂದು ಕೇಳಿಕೊಳ್ಳಲು, ಮಹಾರಾಜಶ್ರೀ ಪ್ರಸಿಡೆಂಟರು ೪ ನೇ ಫಾರಮ್ಮಿನಲ್ಲಿ ಓದುವದಕ್ಕೆ ಅರ್ಹರಾದ ಹನ್ನೆರಡು ಹುಡುಗರನ್ನು ಕೊಟ್ಟರೆ ೧೯೦೭ ನೆ ಜನವರಿಯಲ್ಲಿ ಸ್ಕೂಲ್ ನೇಮಿಸುವುದಾಗಿ ಹುಕುಂ ಮಾಡಿರುತ್ತಾರೆ. ಈಗ ಸದರಿ ಕೊಳ್ಳೇಗಾಲದಲ್ಲಿ ೪ ನೆ ಫಾರಮಿನಲ್ಲಿ ಓದುವದಕ್ಕೆ ಅರ್ಹರಾದ ೭ ಜನ ವಿದ್ಯಾರ್ಥಿಗಳು ಇರುತ್ತಾರೆ ಬಾಕಿ ೫ ಜನ ವಿದ್ಯಾರ್ಥಿಗಳು ಬೇಕಾಗಿರುತ್ತೆ ಆದ್ದರಿಂದ ಲೋವರ್ ಸೆಕೆಂಡರಿ ಪ್ಯಾಸಾಗಿರತಕ್ಕಂಥಾ ವಿದ್ಯಾರ್ಥಿಗಳೂ ಇಂಗ್ಲಿಷ್ ಲೋವರ್ ಸೆಕೆಂಡರಿ ಕ್ಲಾಸಿನಲ್ಲಿ ಓದಿ ಆ ಸ್ಕೂಯಲ್ ಯೋಗ್ಯತೆ ವಿನೇಷನ್ನಲ್ಲಿ ತೇರ್ಗಡೆ ಹೊಂದಿ ೪ ನೆ ಫಾರಮ್ಮಿಗೆ ಸರ್ಟಿಫಿಕೆಟ್ ಪಡೆದಿರುವ ವಿದ್ಯಾರ್ಥಿಗಳು ಯಾರು ಬೇಕಾದರೂ ಬಂದು ವಿದ್ಯಾಭ್ಯಾಸಂಗ ಮಾಡಬಹುದು ಹೀಗೆ ಬರತಕ್ಕಂಥಾ ಹುಡುಗರು ಡಿಸೆಂಬರು ೧೫ ನೇ ತಾ॥ ಒಳಗಾಗಿ ನಮಗೆ ತಿಳಿಸಿದರೆ ನಮ್ಮ ಕೈಲಾದ ಅನುಕೂಲವನ್ನು ಮಾಡಿಕೊಡುತ್ತೇನೆ.

ಕೊಳ್ಳೇಗಾಲ. — ಎಸ್. ಕೆ ಸುಬ್ಬಯ್ಯ, ಬಂಗಾರಚೆಟ್ಟಿ ಬೀದಿ

ಎಚ್ಚರಿಕೆ !

ಅಯ್ಯಾ,

ಪಂಜಾಬು ದೇಶದ ಸಯಲ್ ಕೋಟ್ ಸಿಟಿಯಲ್ಲಿ ಬಿ. ಅರ್ಜನ್ ಸಿಂಗ್ ಚಟ್ಟಿಪ್ರಿಕ್ ಎಂಬುವರು ಲಾಟ್ರೀ ಕಂಪನಿಯನ್ನು ಇಟ್ಟು ರೂ. ೧—೧೦—೦ಗೆ ೪ ಕೂಪರ್ಗಳನ್ನು ಕಳುಹಿಸುವದೂ ನಂತರ ಆ ನಾಲ್ಕು ಟಿಕೆಟುಗಳನ್ನೂ ಗಿರಾಕಿದಾರನಿಂದ ಇತರರು ತೆಗೆದುಕೊಂಡು, ಅವುಗಳನ್ನು ಸದರಿ ಕಂಪನಿಗೆ ತಮ್ಮ ಅಡ್ರೆಸ್ ಬರೆ ಕಳುಹಿಸಿ ಪುನಃ ವಿ ಪಿ ದ್ವಾರ ಬರುವ ನಾಲ್ಕು ಕೂಪರ್ಗಳ ಬ್ಯಾಕಿಗೆ ರೂ ೧—೧೦—೦ ಯಂತೆ ಪ್ರತಿ ಒಬ್ಬನೂ ಪಾವತಿ ಮಾಡುವದರಿಂದ ಮೊದಲನೇ ಗಿರಾಕೀದಾರನ ಹೆಸರಿಗೆ ರೂ ೬—೮—೦ ಬೆಲೆಯುಳ್ಳ ಸದರಿ ಕಂಪನಿಯವರು ನಮುಂಚಿತವಾಗಿಯೇ ಪ್ರಕಟಿಸಿರುವ ಕೆಲವು ಇನಾಂ ಮಾಲುಗಳಲ್ಲಿ ಗಿರಾಕಿದಾರನಿಂದ ಚುನಾಯಿಸಲ್ಪಡುವ ಮಾಲನ್ನು ಕಳುಹಿಸುತ್ತಿದ್ದರು. ಆ ಮಾಲು ಸುಮಾರು ರೂ.೪—೦—೦ ಬಾಳಬಹುದಾಗಿದ್ದಾಗ್ಯೂ ತಮಗೆ ರೂ.೧—೧೦—೦ಗೆ ಬೀಳುವದಲ್ಲಾ ಎಂಬ ಕುತೂಹಲದಿಂದ ನಮ್ಮ ಕೆಳೆಯ ಅನೇಕರು ತರಿಸಿ ಕಂಪನಿಗೆ ಬಹು ಸಂಪಾದನೆ ಮಾಡಿಕೊಟ್ಟರು. ಈ ಕಂಪನಿಗೆ ಒಂದೇ ವರ್ಷದಲ್ಲಿ ಸಾವಿರಾರು ರೂಪಾಯಿ ಫಾಯದೇ ಆದ್ದನ್ನು ಸಯಲ್ ಕೋಟ್ ಸಿಟಿಯ ಇನ್ನುಕೆಲವರು ತಮಗೂ ಫಾಯದೇ ಸಿಕ್ಕಲೆಂದು ನಾಲ್ಕಾರು ಕಂಪನಿಗಳನ್ನು ತಯಾರಿಸಿದರು. ಇವರ ಪೈಕಿ „ಬಿ ಸಾವರ್ ಅಂಡ್ ಕೋ” ಎಂಬ ಕಂಪನಿಗೆ ನಾನು ಕೆಲವು ಗಿರಾಕಿದಾರರಿಂದ ನನ್ನ ಹೆಸರಿಗೆ ಮಾಲು ಬರುವಂತೆ ಹಣ ರವಾನಿಸಿದೆನು ಹಣ ರವಾನಿಸಿ ಈಗ ಆರು ತಿಂಗಳಾಗುತ್ತಾ ಬಂತು ಮಾಲಿಗೋಸ್ಕರ ಸುಮಾರು ಒಂದು ರೂಪಾಯಿನ ಕಾರ್ಡು ಕವರುಗಳನ್ನು ಖರ್ಚು ಮಾಡಿದಾಗ್ಯೂ ಜವಾಬಿಲ್ಲದೆ ೪ ನಷ್ಟ ಸೈಡುಗಳನ್ನು ಒಂದೇ ಸಲ ಪಾಕಲು ಆ ಪೈಕಿ ಒಂದು ಮಾತ್ರ ಟೀಕಿಲ್ಲವೆಂದು ಷರಾ ಬರೆ ವಾಪಸು ಹಾಕಿರುತ್ತಾರೆ ಇತರ ಜವಾಬಿಲ್ಲ ನಾನೂ ಅಲ್ಲದೆ ಈ ಬೆಲಗೂರು ಗ್ರಾಮದಲ್ಲಿ ೪ ಜನ ಹಣಕಳುಹಿಸಿ ಮೋಸಪಟ್ಟಿರುತ್ತಾರೆ ನಾನು ಮೊನ್ನೆ ಬೀದೀಕಾಲ್‌ಗೂ ಹೊಸದುರ್ಗಕ್ಕೂ ಹೋದಾಗ್ಗೆ ಅಲ್ಲಿ ನನ್ನ ಸ್ನೇಹಿತರು ಕೂಡಾ ಇದೇ ರೀತಿ ತಮಗೂ ನಷ್ಟವಾಯಿತು ಎಂದರು. ಈ ರೀತಿ ಮೋಸದಿಂದ ಅನೇಕರ ಹಣವನ್ನು ಅಪಹರಿಸಿರುವ ಈ ಮೋಸಗಾರ ಕಂಪನಿಗೆ ಇನ್ನು ಮುಂದೆ ಯಾರೂ ಹಣ ಕಳುಹಿಸಬಾರದೆಂತಲೂ ಇತರರಿಂದ ಕೂಪರ್ಗಳನ್ನೂ ಕ್ರಯಕ್ಕೆ ತಕ್ಕೊಳ್ಳಬಾರದೆಂತಲೂ ಈ ಮೂಲಕ ಸೂಚಿಸುತ್ತೇನೆ

ಕೆ. ವೆಂಕಟರಾಮಶೆಟ್ಟಿ, ಬೆಲಗೂರು.

[ಈ ವಿಧವಾದ ವ್ಯಾಪಾರಮಾಡುವದು ಯೋಗ್ಯವಾದದ್ದಲ್ಲ. ಬೇಕಾದ ಪದಾರ್ಥಗಳಿಗೆ ನ್ಯಾಯವಾದ ಕ್ರಯಕೊಟ್ಟು ಕೊಂಡುಕೊಳ್ಳುವುದು ಸರ್ವೋತ್ತಮ. ಅಲ್ಪವಾದ ಆಸೆಗೆ ಕೈಹಾಕಿದರೆ ಹೀಗೆ ನಷ್ಟಪ್ರಾಪ್ತವಾದೀತು ನಮ್ಮ ವಾಚಕರ್ಯಾರೂ ಇಂಥಾ ಅಲ್ಪ ವಿಷಯಗಳಿಗೆ ಗಮನಕೊಡಲಾರರೆಂತಲೂ ತುಂಬಾ ಎಚ್ಚರಿಕೆಯುಳ್ಳವರಾಗಿದ್ದಾರೆಂತಲೂ ನಿರೀಕ್ಷಿಸುತ್ತೇವೆ —ಎಡಿ]

ವಿದೇಶ ವರ್ತಮಾನಗಳು.

ರಷ್ಯಾಜಪಾನ್ ಯುದ್ಧದಲ್ಲಿ ರಷ್ಯಾ ಸರ್ಕಾರದವರಿಗೆ ೨೮೦॥ ಕೋಟಿ ರೂಪಾಯಿ ಖರ್ಚಾಯಿತೆಂದು ರಷ್ಯಾ ಮಂತ್ರಿಗಳ ಸಭೆಗೆ ಒಪ್ಪಿಸಿದ ರಿಪೋರ್ಟಿನಲ್ಲಿ ಕಾಣಿಸಿದೆ.

****

ಫ್ರಾನ್ಸ್ ಸರ್ಕಾರದವರು ತಮ್ಮ ರಾಜ್ಯದಲ್ಲಿರುವ ಕುದುರೆ ಸವಾರರ ಸೈನ್ಯವನ್ನು ಇನ್ನೂ ಹೆಚ್ಚಿಸಬೇಕೆಂದು ತೀರ್ಮಾನಿಸಿ, ೧೫,೦೦೦ ಹೊಸ ಕುದುರೆಗಳನ್ನು ಕೊಂಡು ತರಿಸುವ ಏರ್ಪಾಡು ಮಾಡಿದಾರೆ.

****

ಫ್ರಾನ್ಸಿನಲ್ಲಿ ನಾರುಹುಣ್ಣಿನ ಕಾರಣ ಪರಿಹಾರಗಳನು ಪರೀಕ್ಷೆಗೆ ಕ್ರಮೂಲಕ ತಿಳಿದುಕೊಳ್ಳುವುದಕ್ಕಾಗಿ ಒಂದು ಪ್ರತ್ಯೇಕವಾದ ವೈದ್ಯಶಾಲೆಯು ಸ್ಥಾಪಿಸಲ್ಪಡುವುದು ಇದಕ್ಕೆ ರಾಕ್ಸ್‌ಛೈಲ್ಡ್ ಎಂಬೊಬ್ಬ ವೈದ್ಯನು ೬೦,೦೦೦ ರೂಪಾಯಿ ಮೂಲಧನ ಕೊಟ್ಟಿರುತ್ತಾನೆ

****

ಪ್ರಷ್ಯಾರಾಜ್ಯದ ಪಶ್ಚಿಮ ಪ್ರಾಂತ್ಯದಲ್ಲಿ ವ್ಯವಸಾಯಾಭಿವೃದ್ಧಿಯ ಒಂದು ದೊಡ್ಡ ಸಂಘವು ಏರ್ಪಾಡಾಗಿದೆ ಈ ಸಂಘದವರು ಚೀನಾದವರನ್ನು ಅಲ್ಲಿಗೆ ಕರೆದುತಂದು, ಅವರಿಂದ ಭೂವ್ಯವಸಾಯ ಮಾಡಿಸಬೇಕೆಂದು ಪ್ರಯತ್ನಪಡುತ್ತಿದಾರೆ ಅದನ್ನು ಪ್ರಷ್ಯಾ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡುವವರಾಗಿದ್ದಾರೆಂದೂ ತಿಳಿಯುವುದು.

****

ಚೀನಾರಾಜ್ಯದವರು ತಮ್ಮ ಪ್ರಜೆಗಳಲ್ಲಿ ಅಫೀಂ ತಿನ್ನುವ ದುರಭ್ಯಾಸವನ್ನು ಕಡಿಮೆಮಾಡುತ್ತಾ ಬಂದು ಹತ್ತು ವರುಷಗಳಲ್ಲಿ ಅದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ಈಗತಾನೆ ಒಂದು ಇಸ್ತಿಹಾರ್ನಾಮೆಯನ್ನು ಕೊಟ್ಟಿರುತ್ತಾರೆಂದು ತಂತಿವರ್ತಮಾನಬಂದಿದೆ ಈ ಇಸ್ತಿಹಾರ್ನಾಮೆಯ ಮುಖ್ಯಾಭಿಪ್ರಾಯವೇನಂದರೆ—ಚೀನಾಚಕ್ರಾಧಿಪತ್ಯದಲ್ಲಿ ಅಫೀಂಬೆಳೆಯುವ ಪ್ರದೇಶವನ್ನೂ ಉತ್ಪತ್ತಿಯನ್ನೂ ಹತ್ತನೇ ಒಂದಂಶದಷ್ಟು ಪ್ರತಿವರುಷವೂ ಕಡಿಮೆಮಾಡುತ್ತಾ ಬರಬೇಕು ಅಫೀಂ ಬಿಕರಿಮಾಡುವ ಅಂಗಡಿಯವರೂ ಅದನ್ನುಕೊಂಡು ತಿನ್ನುವವರೂ ತಮ್ಮ ಹೆಸರು ವಿಳಾಸಮುಂತಾದ್ದನ್ನು ಸರ್ಕಾರಕ್ಕೆಹೇಳಿ ಬರಿಸಿಡಬೇಕು ೬೦ ವರುಷಕ್ಕಿಂತ ಕಡಿಮೆ ವಯಸ್ಸಾದವರು ಪ್ರತಿವರುಷವೂ ತಾವು ಉಪಯೋಗಿಸುವ ಅಫೀಂನು ಹಿಂದಿನ ವರುಷದಲ್ಲಿ ಉಪಯೋಗಿಸಿದ್ದಕ್ಕಿಂತ ಶೇಕಡ ೨೦ ರಷ್ಟು ಕಡಿಮೆ ಆಗಬೇಕು. ಹೊಸದಾಗಿ ಅಫೀಂ ಬಿಕರಿ ಅಂಗಡಿಗಳನ್ನು ಇಡಕೂಡದು, ಹೊಸದಾಗಿ ಯಾರೂ ಅಫೀಂ ಉಪಯೋಗಿಸುವುದನ್ನು ಪ್ರಾರಂಭಿಸಕೂಡದು ಈ ಕಾನೂನಿನಂತೆ ನಡೆಯದೆ ಇಪ್ಪಿದವರನ್ನು ಶಿಕ್ಷೆಗೆ ಗುರಿಮಾಡಲಾಗುವುದು. ಹಿಂದುಸ್ಥಾನದಿಂದ ಚೀನಕ್ಕೆ ರಫ್ತಾಗಿ ಬರುವ ಅಫೀಮನ್ನು ಪ್ರತಿವರುಷವೂ ಕಡಿಮೆಮಾಡುತ್ತಾ ಬಂದು, ಹತ್ತು ವರುಷದ ಮೇಲೆ ಆ ಪದಾರ್ಥವೇ ಅಲ್ಲಿಗೆ ಹೋಗದಂತೆ ತಡೆದುಬಿಡಬೇಕು ಇದಕ್ಕಾಗಿ ಇಂಡಿಯಾ ಗವರ್ನಮೆಂಟಿನವರು ಅಫೀಮಿನ ಮೇಲೆ ಹಾಕಿರುವ ಸುಂಕದ ದರವನ್ನು ಬಹಳವಾಗಿ ಹೆಚ್ಚಿಸುತ್ತಾ ಬರಬೇಕು ಎಂಬೀ ರೀತಿಯಾಗಿ ಚೀನಾ ಸರ್ಕಾರದವರು ಪ್ರಕಟಿಸಿದಾರೆಂದು ತಿಳಿಯುವುದು. ಆದರೆ ಅವರು ಈ ಕಾನೂನನ್ನು ಖಂಡಿತವಾಗಿ ಜಾರಿಗೆ ತರುತ್ತಾರೋ ಇಲ್ಲವೋ ಮುಂದೆ ಗೊತ್ತಾಗಬೇಕು.

ಬರ್ಮಾ ರಾಜ್ಯದ ದಕ್ಷಿಣ ಸಮುದ್ರ ತೀರದಲ್ಲಿ ಅಪೂರ್ವವಾದ ಪ್ರಚಂಡಗಾಳಿಯು ಪ್ರಾಪ್ತವಾಗಿ ನೂರಾರು ಹಡಗುಗಳೂ ದೋಣಿಗಳೂ ಸಮುದ್ರದಲ್ಲಿ ಮುಳುಗಿಹೋದವು ೩೦೦–೬೦೦ ಜನರು ಪ್ರಾಣಗಳೆ ದುಕೊಂಡರೆಂದು ತಿಳಿದುಬಂದಿದೆ

❦❦❦❦

ಆಸ್ಟ್ರೇಲಿಯಾ ದ್ವೀಪದಲ್ಲಿ ಪಾರ್ಲಿಮೆಂಟಿನವರು ಜೂಜಾಟವನ್ನು ನಿಲ್ಲಿಸುವುದಕ್ಕೆ ಕಳೆದ ವಾರ ಒಂದು ಕಾನೂನನ್ನು ಜಾರಿಗೆ ತಂದರು ಇದಕ್ಕೆ ವಿರೋಧವಾಗಿ ಕೆಲವು ಪಂಗಡಗಳು ಬಹಳ ಹೊತ್ತು ತರ್ಕಮಾಡಿದಾಗ್ಯೂ ಪ್ರಯೋಜನವಾಗದೆ ಹೋಯಿತು

❦❦❦❦

ಉತ್ತರ ಅಮೇರಿಕಕ್ಕೆ ಪಶ್ಚಿಮ ಭಾಗದಲ್ಲಿರುವ ರಾಕಿ ಪರ್ವತಗಳಿಗೆ ಪ್ರಾಚೀನ ಶಾಸ್ತ್ರ ಪರೀಕ್ಷಕರು ಹೋಗಿ ಅಲ್ಲಿ ಸಿಕ್ಕಿದ ೩೦೦ ಪ್ರಾಣಿಗಳ ಅಸ್ತಿಪಂಜರ(ಎಲುವು)ಗಳನ್ನು ಸಂಗ್ರಹಿಸಿಕೊಂಡು ಬಂದಿದ್ದಾರೆ ಈ ಪ್ರಾಣಿಗಳಲ್ಲಿ ಒಂದು ಜಾತಿಯಾದರೂ ಈಗ ಪ್ರಪಂಚದಲ್ಲಿ ಇರುವುದಿಲ್ಲವೆಂದು ಹೇಳುವರು

❦❦❦❦

ಅಮೇರಿಕಕ್ಕೆ ಸೇರಿದ ಕ್ಯಾನ್ಸಾಸ್ ಪಟ್ಟಣದಲ್ಲಿ ಒಂದು ಭಾರೀ ವ್ಯಾಪಾರದ ಬಂಗಲೆಯು ಸುಟ್ಟು ಹೋಯಿತು ಆಗ್ಗೆ ಅದರ ಮೇಲು ಪ್ಪರಿಗೆಗಳಲ್ಲಿ ೨೦೦ ಜನರು ಮಲಗಿ ನಿದ್ದೆ ಮಾಡುತ್ತಿದ್ದರು ಆ ಪೈಕಿ ೨೦ ಮಂದಿಗೆ ಕಡಮೆಯಿಲ್ಲದೆ ಮೃತಪಟ್ಟರೆಂತಲೂ ೫೦ ಮಂದಿಗಿಂತಲೂ ಹೆಚ್ಚಾಗಿಯೇ ಮೈಸುಟ್ಟುಕೊಂಡರೆಂತಲೂ ತಿಳಿದುಬಂದಿದೆ

❦❦❦❦

ಆಸ್ಟ್ರೇಲಿಯಾ ದೇಶಕ್ಕೆ ಸೇರಿದ ನ್ಯೂ ಸೌತ್ ವೇಲ್ಸ್ ಎಂಬ ಭಾಗದಲ್ಲಿ ಕಾಡುಪ್ರದೇಶಗಳನ್ನು ಆಬಾದು ಮಾಡಿ ಗ್ರಾಮಗಳನ್ನು ಕಟ್ಟಬೇಕೆಂದು ಅಲ್ಲಿನ ಸರ್ಕಾರದವರು ಪ್ರಯತ್ನಪಟ್ಟು ಈಗ ಸುಮಾರು ನಾಲ್ಕು ಕೋಟಿ ರೂಪಾಯಿ ಖರ್ಚಿಟ್ಟು ೩೧೦ ಮೈಲಿ ದೂರ ರೈಲ್ ರಸ್ತೆ ತಯಾರುಮಾಡಿಸುತ್ತಿದ್ದಾರೆ ಆ ಪ್ರಾಂತ್ಯವು ಒಂದೂವರೆ ಕೋಟಿ ಪ್ರಜೆಗಳು ಸುಖವಾಗಿರುವಷ್ಟು ವಿಸ್ತಾರವಾಗಿಯೂ ಅನುಕೂಲವಾಗಿಯೂ ಇರುವುದು

❦❦❦❦

ಜರ್ಮನೀ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಒಬ್ಬನು ಸೈನ್ಯಾಧಿಪತಿಯಂತೆ ವೇಷಹಾಕಿಕೊಂಡು ಸರ್ಕಾರಿ ಸೈನಿಕರನ್ನೇ ಬಿಟ್ಟು ಮ್ಯುನಿಸಿಪಲ್ ಆಫೀಸಿನ ನೌಕರರನ್ನು ಹಿಡಿಸಿ ಬೈದಿನಲ್ಲಿ ಹಾಕಿಸಿ, ಅಲ್ಲಿ ಸಿಕ್ಕಿದ ೩,೦೦೦ ರೂಪಾಯಿಯನ್ನು ಅಪಹರಿಸಿ ತಲೆ ತಪ್ಪಿಸಿಕೊಂಡು ಹೋಗಿ ಪಟ್ಟಣದಲ್ಲೆಲ್ಲಾ ಬಹಳ ಆಶ್ಚರ್ಯವನ್ನೂ ಗಾಬರಿಯನ್ನೂ ಉಂಟುಮಾಡಿದ್ದ ನಾಯಿಗಟ್ ಎಂಬುವವನನ್ನು ಪೋಲೀಸಿನವರು ಪತ್ತೇ ಮಾಡಿ ಹಿಡಿದರು ಅವನಿಗೆ ೬೦ ವರುಷ ವಯಸ್ಸಾಗಿದ್ದರೂ, ೨೭ ವರುಷಗಳ ತನಕ ಜೈಲಿನಲ್ಲಿ ಸಜಾ ಅನುಭವಿಸಿದವನಾದರೂ ಇನ್ನೂ ನಡುಪ್ರಾಯದವನಂತೆ ಕಟ್ಟಾಮಟ್ಟಾ ಇರುತ್ತಾನೆ

❦❦❦❦

ಪ್ರಪಂಚದಲ್ಲಿ ಪ್ರಜಾಪಾಲಕರು ಇರಬೇಕೂಡದೆಂಬದಾಗಿಯೂ, ಅಂಥವರನ್ನು ಪರಿಹರಿಸಬೇಕೆಂಬದಾಗಿಯೂ ಅಭಿಮತವುಳ್ಳ ಗುಂಪಿನವರು ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಕೈಸೆರೆ ಹಿಡಿಯಲ್ಪಟ್ಟರು ಇವರ ಗುಂಪಿಗೆ ಸೇರಿದವನೇ ಹಿಂದೆ ಅಮೇರಿಕದ ಪ್ರೆಸಿಡೆಂಟ್ ಮೆಕಿನ್ಲೆ ಯವರನ್ನು ಕೊಂದುಹಾಕಿದನು ಆ ಗುಂಪಿನವರು ಒಂದುಕಡೆ ಸಭೆಯಲ್ಲಿ ಉಪನ್ಯಾಸ ಮಾಡಿ ಮೇಲ್ಕಂಡ ಕೊಲೆಯು ನ್ಯಾಯವಾದದ್ದೆಂದು ಮುಂತಾಗಿ ಹೇಳಿದರು ಈ ಗುಂಪಿನಲ್ಲಿ ಗಂಡಸರೂ ಹೆಂಗಸರೂ ಸೇರಿರುತ್ತಾರೆ ಇವರನ್ನು ಹಿಡಿಯುವಾಗ್ಗೆ ಪೋಲೀಸಿನವರಿಗೂ ಅವರಿಗೂ ತುಂಬಾ ಜಗಳಕದಿದಾಟಗಳು ಆದವು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರು
ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ
(ಅಡ್ವಾನ್ಸು) .. .. .. ರೂ. ೧—೦—೦
ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿ
ಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಪೋಸಲ್
ಸೇರಿ .. .. . . ರೂ. ೧—೧೪—೦
, . ೬ ,, ,, ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು
ನಮ್ಮ ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಬೆಲೆಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 27

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ

ಸೊಂಟನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ಸೆಳೆಯುವದು, ತಲೆನೋವು, ಕೆಮ್ಮು ಕಿಬ್ಬುಗಳು, ಗಾಯಗಳು, ಕತ್ತರಿಸುವದು, ಬಿಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಸೆಳೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು. ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ. ಆ ಕೆಲಸವನ್ನು ಆದು ಮಾತಾಪದು ಶೀಶಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಒಂದೆಯನ್ನು ಪಕಮಾನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರಿಗೆ ೩ ಆಣೆ

ನಮ್ಮ ವಿಳಾಸ —ಎಫ್. ಡಬ್ಲಿಯು ಆರ್ಗ,
ಸಿಮೆಟ್ರಿ ರೋಡ್, ವೆಪೆರಿ, ಮದರಾಸ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 57-37

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡು ಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಮೀನುಮನುಷ್ಯ ಇರುವ — ಔಷಧಗಳ ಕಾರ್ಖಾನೆ,
ಈ ಔಷಧದ ಗುರುತು — ಲಂಡನ್, ಇಂಗ್ಲೆಂಡ್

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133 7

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!
ಉತ್ಕೃಷ್ಟವಾದ ಡೈರಿಗಳು !!!

೧೯೦೭ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಬಡ್ಡಿಲೆಕ್ಕದ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನ ಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಸ್ಪಷ್ಟಗಸಹಿತ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ

ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಪಡಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟವೆ

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು

ಅಥವಾ,

ಎಸ್. ಡಿ. ನತ್‌ಮಲ್ ಕಂಪೆನಿ ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

9—11—1906 ರಿಂದ 16—11—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಹೋದ... ಸಂಖ್ಯೆ
ಬೆಂಗಳೂರು ಪಟ್ಟಣ	3	5	3
ಮೈಸೂರು ,,	6	7	0
ಬೆಂಗಳೂರು ಡಿಸ್ಟ್ರಿಕ್ಟ್	55	48	11
ಮೈಸೂರು ,,	0	0	14
ಕೋಲಾರ್ ,,	0	0	0
ಕೋಲಾರ್ ಚಿನ್ನದ ಗಣಿಗಳು	0	0	6
ತುಂಕೂರು ಡಿಸ್ಟ್ರಿಕ್ಟ್	9	8	0
ಹಾಸನ ,,	17	15	0
ಚಿತ್ರದುರ್ಗ ,,	0	0	0
ಕಡೂರ್ ,,	39	36	8
ಶಿವಮೊಗ್ಗ ,,	0	0	18
ಜುಮ್ಲಾ	132	113	64

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾರ್ಗಶಿರ ಶುದ್ಧ ಚತುರ್ದಶಿ ಗುರುವಾರದಿಂದ ಮಾರ್ಗಶಿರ ಬಹುಳ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ನವಂಬರ್ ಮತ್ತು ಡಿಸೆಂಬರ್.

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ
29	ಗುರು ⚹	ಚತುರ್ದಶಿ	46 53	ಭ	20 36
30	ಶುಕ್ರ †	ಪೌರ್ಣಮಿ	51 46	ಕೃ	26-18
1	ಶನಿವಾ	ಪಾಡ್ಯಮಿ	56 58	ರೋ	32 42
2	ರವಿವಾ	ಬಿದಿಗೆ	60 0	ಮೃ	39 12
3	ಚಂದ್ರ	ಬಿದಿಗೆ	2 22	ಆರ್ದ್ರಾ	45 12
4	ಕುಜ ¶	ತದಿಗೆ	7-23	ಪು	51 5
5	ಬುಧ ,,	ಚೌತಿ	11 30	ಪು	55 42

⚹ ಪಾಷಾಣಭಕ್ಷಣಗೌರೀವ್ರತಂ, ಕೃತ್ತಿಕಾದೀಪೋತ್ಸವ, ... ಶಿರಲಕ್ಷ್ಮೀವ್ರತಂ † ದತ್ತಾತ್ರೇಯಜಯಂತಿ, ಕೃತ್ತಿಕಾದೀಪ...
¶ ಸಂಕಷ್ಟಚತುರ್ಥಿ
,, ಪಾತಾಭನ

ಪೇಟೇ ಧಾರಣೆ.

ದಿಸಸು		ಮೈಸೂರು.	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲ ೧ ಕ್ಕೆ	ರೂ	೧೩-೪-೦	[illegible]
ಕೆಂಬೂತಿ ಅಕ್ಕಿ ಅವಲ್ ..	.	೧೩-೪-೦	[illegible]
,, ದುಯಂ	.	೧೩-೦-೦	[illegible]
ಜೂಪ್ರಾಣಿ ಅಕ್ಕಿ ..	..	೧೩-೦-೦	[illegible]
ಸಣ್ಣಕ್ಕಿ ಅವಲ್	.	೧೫-೦-೦	[illegible]
,, ದುಯಂ	.	೧೪-೦-೦	[illegible]
ತೊಗರೀ ಬೇಳೆ ಪಲ್ಲ ೧ ಕ್ಕೆ	.	೧೨-೬-೦	[illegible]
,, ದುಯಂ .	..	೧೧-೮-೦	[illegible]
ಹೈದ ರಾಗಿ ಪಲ್ಲ ೧ ಕ್ಕೆ	..	೬-೮-೦	[illegible]
ಕಾರ್‌ರಾಗಿ	.	೬-೦-೦	[illegible]
ಜೋಳ . ..	..	೫-೮-೦	[illegible]
ಹಲಸಂದೆ ಪಲ್ಲ ೧ ಕ್ಕೆ ..		೧೧-೮-೦	[illegible]
ಬಿಳೀ ಅವರೆ .	.	೯-೦-೦	[illegible]
ಹೆಸರು	.	೧೧-೮-೦	[illegible]
ಉದ್ದು . .	..	೧೨-೪-೦	[illegible]
ಕಡಲೆ .	..	೧೨-೦-೦	[illegible]
ಎಳ್ಳು ಸೆ. ೧೨೬ ಕ್ಕೆ ..	..	೧೮-೮-೦	[illegible]
ಹುರುಳಿ ..	..	೬-೧೨-೦	[illegible]
ಹರಳು ೧೨೬ ಸೇರಿಗೆ ..	..	೧೯-೦-೦	[illegible]
ಸೀಗೇಕಾಯಿ ಮಣ ೧ ಕ್ಕೆ ..	.	೨-೨-೦	[illegible]
ಮೆಣಸಿನಕಾಯಿ	..	೪-೦-೦	[illegible]
,, ದುಯಂ ..	..	೩-೪-೦	[illegible]
ಬೆಲ್ಲ ದೊಡ್ಡ ಅಚ್ಚು ..	..	೩-೧೨-೦	ಮ ೧...
ಬೆಳ್ಳುಳ್ಳಿ ಮಣ ೧ ಕ್ಕೆ .	..	೫-೮-೦	[illegible]
ಹರಳೆಣ್ಣೆ ,, ..	.	೬-೧೨-೦	[illegible]
ಕೊತ್ತುಂಬರಿ ಪಲ್ಲ ೧ ಕ್ಕೆ ..	..	೧೧-೦-೦	[illegible]
ಉಪ್ಪು ,, .	..	೬-೦-೦	[illegible]
ಹುಣಸೇ ಹಣ್ಣು	..	೦-೧೪-೦	[illegible]
,, ಹಳೇದು ..	.	೦-೮-೦	[illegible]
ತುಪ್ಪ ಮಣ ೧ ಕ್ಕೆ .	..	೧೭-೦-೦	[illegible]
ಸೀಮೆಯೆಣ್ಣೆ ಪೆಟ್ಟಿ ೧ ಕ್ಕೆ	.	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	..	೬-೮-೦	[illegible]
ಅಳಲೇಕಾಯಿ ಮಣ ೧ ಕ್ಕೆ	.	೧-೦-೦	[illegible]
ಅಂಟ್ವಾಳದ ಕಾಯಿ ಮಣ ೧ ಕ್ಕೆ		೦-೧೨-೦	[illegible]
ಚಿನ್ನ (ಪೌನ್) ಕೆಂಪು	..	೧೫-೪-೦	[illegible]
,, ,, ಪಸಿಮೆ	..	೧೫-೧೦-೦	[illegible]
,, ,, ಗಟ್ಟಿ ತೊಲ ೧ ಕ್ಕೆ	..	೨೩-೧೨-೦	[illegible]
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	[illegible]

Printed and published by the Rev. E. [illegible] THOMPSON, M A, the Proprietor and Man[illegible] Wesleyan Mission Press, Mysore 29/11/1[illegible]

ವೃತ್ತಾಂತ ಪತ್ರಿಕೆ

REGISTERED M. 20.

ಕ್ರಯ ೧ ದುಡ್ಡು ——— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೦ ವೈಸೂರು—ಸರ್ ೧೯೦೬ ನೇ ಇಸವಿ ಡಿಸೆಂಬರ್ ತಾರೀಖು ೬ ನೇ ಗುರುವಾರ. ಸಂಚಿಕೆ ೪೯

೧೯೦೭ ನೆ ಇಸವಿ ಡೈರಿ ಮತ್ತು ಕ್ಯಾಲೆಂಡರು

145-3

ಈ ಕ್ಯಾಲೆಂಡರಿನಲ್ಲಿ ಅನೇಕ ಸಂಗತಿಗಳು ಸೇರಿಸಲ್ಪಟ್ಟು ನೋಡುವುಕ್ಕೆ ನೇತ್ರಾನಂದವಾಗಿ ಮಹಾರಾಜರ ಫೋಟೋ ಒಳಗೊಂಡಿದೆ ಕ್ರಯ ೩ ಪೈ ಮಾತ್ರ. ಒಂದು ಡೈರಿಗೆ ಒಂದು ಕ್ಯಾಲೆಂಡರೂ ೧೨ ಕ್ಯಾಲೆಂಡರಿಗೆ ಒಂದು ಕ್ಯಾಲೆಂಡರು ಉಚಿತವಾಗಿ ಕೊಡಲಾದೀತು ವಿ ಪಿ ಮೂಲಕವೂ ಕಳುಹಿಸುತ್ತೇವೆ ಡೈರಿ ಖರೀದಿ ಆಣೆ ೮ ... ೧೨ (೨ ವರ್ತಕರಿಗೆ ಇರುತ್ತವೆ)

ವಿಳಾಸ— ನಂಜುಂಡಪ್ಪ, ಬುಕ್ ಸೆಲ್ಲರು, ಮೈಸೂರು ಕೋಟೆ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲಿ ಇಂತ ಕಡೆಗಳಲ್ಲಿ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) .. .. .. ರೂ. ೧—೦—೦

ಚಂದಾದಾರರು ಸ್ಟಾಂಪಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸಹ .. .. ರೂ. ೧—೧೪—೮

" " " " ೦—೧೫

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

"ಅರೇಬಿಯನ್ ನೈಟ್ಸ್"

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಈ ಪುಸ್ತಕ ಬಹಳ ಸರಳವಾಗಿದೆ. ಪುಸ್ತಕವನ್ನು ಒಂದು ಸರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವುದು. ಇದರ ಕ್ರಯ ಎರಡೇ ರೂಪಾಯಿ. ವಿ ಪಿ ಮೂಲಕ ೨—೨—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಅಚ್ಚಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ಬರೆಯಿರಿ.

ನಮ್ಮ ವಿಳಾಸ —

ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು

ಹಿಂದೂದೇಶ ಪ್ರದಕ್ಷಿಣ.

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿಸುತ್ತೇವೆ. ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ಸುಮಾರು ಪ್ರತಿಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸಿದ ಅನೇಕರಿಗೆ ಇದು ದೊರೆಯದೆ ವ್ಯಸನಕ್ಕೊಳಗಾದರು. ಈಗಲಾದರೂ ಜಾಗ್ರತೆಯಿಂದ ಬರೆದು ವಿ ಪಿ ಮೂಲಕ ತರಿಸಿಕೊಳ್ಳಿ. ಇದರಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವುಗಳ ವರ್ಣನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವುಗಳ ಚಿತ್ರಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ತೊಂಭತ್ತು ಶ್ರೇಷ್ಠವಾದ ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. ವಿ ಪಿ ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವುದು.

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು.

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು.

ಹುರಿಯದೆ ಇರುವದು ಅಥವಾ ಆಗತಾನೆ ಹುರಿದದ್ದು. ಉತ್ಪತ್ತಿಮಾಡಿದ ಸ್ಥಳದಿಂದಲೆ ನೇರ್ಪಾಗಿ ರವಾನಿಸಲ್ಪಡುವದು.

85 13

ವ್ಯಾಪಾರದ [ಮುದ್ರೆ] ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತುಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅವು ನಮ್ಮದಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ಬರೆಯುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ

112 6



ಇದು ಸಾಧಾರಣ ಜ್ವರ, ಚಳೀಜ್ವರ, ಮಲೇರಿಯಜ್ವರ, ಪಿತ್ಥಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನೂ ಬೇಗ ನೀಗಿಸಿ ವಾಸಿಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮರಾಮತ್ ಇಲಾಖಾ ಸಬ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯಂಗಾರರು—ನೀವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ ಡೋಸಿನ ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ನಿಮ್ಮ ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣ ಹೊಂದಿರುವರು. ಇನ್ನೂ ಜನಗಳು ಔಷಧಿ ಕೇಳುತ್ತಿರುವದರಿಂದ ದಯವಿಟ್ಟು ಇನ್ನೊಂದು ೨೦ ಡೋಸಿನ ಸೀಸೆಯನ್ನು ವಿ ಪಿ. ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆದಿದ್ದಾರೆ

ಕ್ರಯ —ಸೀಸೆ ೧ ಕ್ಕೆ ೮ ಆಣೆ, ೧ ರೂ , ೧—೮ ರೂ , ರೂ ೨—೧೨ ಆ , ೧೧ ರೂ. , ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

****

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಶೂಲೆ, ವಮನ, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದವುಗಳಲ್ಲೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ಸಿಕ್ಕುವದು

ಕಡಪದ ಅಸಿಸ್ಟೆಂಟ್. ಸರ್ಜನ್ ಗಣಪತಿಯವರು—ನಿಮ್ಮ ಓಮಂ ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಭೇದಿ, ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧವೆಂತ ಬರೆದಿದ್ದಾರೆ

ಈ ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಷಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇವಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ:—

ಕೆನ್ನಿಯವರ ಗ್ರೇಟ್ ಇಂಡಿಯನ್ ಔಷಧಗಳ ಕಂಪನಿ, ಸೆಕೆಂಡ್ ಬೀಚ್ ಲೈನ್, ಮದ್ರಾಸ್.

ಮುಂಬಯಿ ವ್ಯಾಪಾರಮಾಡಲಿಚ್ಛೈಸುವವರು.

85-27

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ಠಿಕಾಣೆ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ ಯಿಂದ ಕಳಿಸುವೆವು. ಟಪಾಲು ಖರ್ಚು ಬೇರೆ ಬುಕ್ಕು ಸೆಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಪ್ರದಾಯ ವಿಶೇಷ ಕೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ಮೂಲ್ಯ ೮ ಆಣೆ ಹಳೇ ಅಕ್ಷರದಿಂದ ಬರೆಯುವಿ. ಪತ್ತಾ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಷ್ಟು ಮಾಂಡ್ವಿ, ಮುಂಬಯಿ

ವಿದ್ಯುಚ್ಛಕ್ತಿಯೇ ಪ್ರಾಣವಾಯು !

ವೈದ್ಯ ವಿದ್ಯುಚ್ಛಕ್ತಿ. 148—2

ಡಾಕ್ಟರ್ ಸಾಂಡನ್ ಯವರ ವಿದ್ಯುಚ್ಛಕ್ತಿಯ ಹರ್ಕ್ಯುಲೀ ಎಂಬ ಚಿಕಿತ್ಸೆಯು ಕೀಲುಗಳ ವಾಯುನೋವು, ನರಗಳ ದುರ್ಬಲ, ಅಸ್ಥಿ ಧಾತು ಹೀನತೆಯೇ ಮೊದಲಾದವುಗಳನ್ನು ಖಂಡಿತವಾಗಿ ವಾಸಿಮಾಡುವುದು. ಮೈಸೂರು ಸಿಟಿ ಗಾರ್ಡನ್ ಹೋಟೇಲಿನಲ್ಲಿ ಇಳುಕೊಂಡಿರುವ ಯೂರೋಪ್ಯಿಯನ್ ಏಜಂಟರು ಕೆಲವು ಕಾಲವುಳ್ಳ ಗಂಡಸರಿಗೂ ಹೆಂಗಸರಿಗೂ ಈ ವಿದ್ಯುಚ್ಛಕ್ತಿ ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡುತ್ತಾರೆ ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೭ ಗಂಟೆಯ ತನಕ ಅಪೇಕ್ಷೆಯುಳ್ಳವರೆಲ್ಲಾ ಬಂದು ರುಜುವಾತು ಏನೂ ಕೊಡದೆ ಕಾಯಿಲೆ ವಿಚಾರವನ್ನು ಅವರಿಗೆ ತಿಳಿಸಬಹುದಾಗಿದೆ. ಕಾಗದ ಬರೆದಲ್ಲಿ ಅವರೇ ಮನೆಗೆ ಬರುತ್ತಾರೆ, ಇಲ್ಲವೇ, ಕಾಗದಕ್ಕೆ ಜವಾಬು ಕೊಡುವರು. ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಪರರಿಗೆ ಗೋಚರವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡಸುವರು.



ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ ಲಿಮಿಟೆಡ್.

122—13

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಫೈಸಲ್ ಮಾಡಿರುತ್ತಾರೆ

ನಿಯಮಿತ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಶೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಶೇರು ಮೊಬಲಗು ಶೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸು ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪೆನಿಯ ಶೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು.

ಶೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು.

(ಸೈ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ.,

ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್.

ಸರ್ಕಾರ್ ಪೇಟೆ ಬೆಂಗಳೂರು ಸಿಟಿ.

ಮಹಿಳಾಸಖೀ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮಧುಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು ಒಗಟುಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ:—೧ ಸಂಚಿಕೆಗೆ ೬ ಕಾಸು.

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು:—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು

CHAMBERLAIN'S PAIN BALM
ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

95-23



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ಕರಿಸೊಂಟದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ರೆಹತ್ತದೆ ಇರುವುದು—ಇದೇ. ಇದೆಲ್ಲಾ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾ॥ ೬ನೇ ಗುರುವಾರ.

ದಕ್ಷಿಣ ಆಫ್ರಿಕವೂ ಹಿಂದೂಸ್ಥಾನದ ಪ್ರಜೆಗಳೂ

ಹಿಂದೂಸ್ಥಾನದ ಪ್ರಜೆಗಳು ದಕ್ಷಿಣ ಆಫ್ರಿಕದಲ್ಲಿ ಕೆಲವು ಸಾವಿರ ಮಂದಿ ಇರುತ್ತಾರೆ ಇವರಿಗೆ ಈಗ ಅಲ್ಲಿ ನಾನಾ ಕಷ್ಟಗಳಿರುವವು. ಟ್ರಾನ್ಸ್‌ವಾಲ್ ಸರ್ಕಾರದವರು ನಿರ್ಬಂಧಪಡಿಸಿರುವ ವಿಷಯಗಳ್ಯಾವವೆಂದರೆ—ಹಿಂದುಸ್ಥಾನದವರು ಅಲ್ಲಿ ಜಮೀನು ಸಂಪಾದಿಸಿಕೊಳ್ಳಕೂಡದು, ಸ್ವಂತ ಮನೆಗಳನ್ನು ಕಟ್ಟಕೂಡದು; ದೊಡ್ಡ ಪಟ್ಟಣಗಳಲ್ಲಿ ಕೆಲವು ಬೀದಿಗಳೊಳಗೂ ಪ್ರದೇಶಗಳೊಳಗೂ ವ್ಯಾಪಾರ ಸಾಹುಕಾರಗಳನ್ನು ಮಾಡಕೂಡದು, ಈ ಮೊದಲಾದ ನಿರ್ಬಂಧಗಳಿರುತ್ತವೆ ಇಂಥಾ ಕ್ರೂರವೂ ಕಷ್ಟಕರವೂ ಆದ ಕಾನೂನನ್ನು ವಜಾಮಾಡಿಕೊಡಬೇಕೆಂದು ಅವರಲ್ಲಿ ಮುಖಂಡರಾದ ಕೆಲವು ಜನರು ಸೇರಿ ವಿಲಾಯಿತಿಗೆ ಹೋಗಿ ಇಂಗ್ಲಿಷ್ ಗವರ್ನಮೆಂಟಿನ ಸೆಕ್ರೆಟರಿಯಾದ ಲಾರ್ಡ್ ಎಲ್ಗಿನ್ ರವರನ್ನು ಕಂಡು ಅವರಿಗೆ ಒಂದು ಅರ್ಜಿಯನ್ನು ಒಪ್ಪಿಸಿದರು ಹಿಂದುಸ್ಥಾನದಲ್ಲಿದ್ದು ಇಲ್ಲಿನ ಪ್ರಜಾ ಪಕ್ಷಪಾತಿಗಳೆನಿಸಿಕೊಂಡು ವಿಲಾಯತಿಯಲ್ಲಿ ಪೆನ್ಷನ್ ಪಡೆಯುತ್ತಿರುವ ಸರ್ ಹೆನ್ರಿ ಕಾಟನ್, ಸರ್ ಲಿಪಲ್ ಗ್ರಿಫಿನ್ ಮುಂತಾದ ಪ್ರಸಿದ್ಧ ದೊಡ್ಡಮನುಷ್ಯರು ಆ ಪ್ರತಿನಿಧಿಗಳ ಪಕ್ಷವನ್ನು ವಹಿಸಿ ಸೆಕ್ರೆಟರಿಯವರ ಸಂಗಡ ಮಾತನಾಡಿದರು. ಆ ಸೆಕ್ರೆಟರಿಯವರಿಗೆ ಒಂದು ಕಷ್ಟವುಂಟಾಗಿದೆ. ಇಂಗ್ಲಿಷ್ ಗವರ್ನಮೆಂಟಿನವರು ಟ್ರಾನ್ಸ್‌ವಾಲ್ ಸ್ವಾಸ್ಥ್ಯಕ್ಕೆ ಸ್ವತಂತ್ರಾಧಿಕಾರವನ್ನು ವಹಿಸಿಬಿಡಬೇಕೆಂದು ತೀರ್ಮಾನ ಮಾಡಿರುತ್ತಾರೆ ಇದು ಇನ್ನು ಕೆಲವು ವಾರಗಳೊಳಗಾಗಿ ಜಾರಿಗೆ ಬರುವುದು ಆಗ್ಗೆ ಟ್ರಾನ್ಸ್‌ವಾಲ್ ಗವರ್ನಮೆಂಟಿನವರೂ ಆಸ್ಟ್ರೇಲಿಯಾ, ಕನಡಾ ಸ್ವಾಸ್ಥ್ಯಗಳಂತೆ ಒಳದೇಶದ ಆಡಳಿತಗಳನ್ನೆಲ್ಲಾ ತಾವೇ ನಡಿಸಿಕೊಳ್ಳುವ ಹಾಗಾಗುವುದು ವಿಲಾಯತಿ ಗವರ್ನಮೆಂಟಿನವರು ಒಳದೇಶದ ಕಾರುಬಾರುಗಳ ವಿಷಯದಲ್ಲಿ 'ಸ್ವಾಸ್ಥ್ಯಗಳಿಗೆ ಹೀಗೆ ಹೀಗೇ ನಡೆದುಕೊಳ್ಳಬೇಕೆಂದು ಆಜ್ಞೆಮಾಡುವುದಕ್ಕಿಲ್ಲ. ಈ ರೀತಿ ಮಾಡಿದರೆ ಚನ್ನಾಗಿರುತ್ತೆಂದು ಅವರಿಗೆ ಸಲಹೆ ಕೊಡಬಹುದಾಗಿದೆ ಈ ಹಿಂದೂಸ್ಥಾನದ ಪ್ರಜೆಗಳ ಕಷ್ಟನಿವಾರಣೆಯ ವಿಷಯವನ್ನು ಟ್ರಾನ್ಸ್‌ವಾಲಿನ ಪಾರ್ಲಿಮೆಂಟಿನವರು ಚರ್ಚಿಸಿ ಇತ್ಯರ್ಥಪಡಿಸಬೇಕಾಗುವುದು ಆದರೂ ನಮ್ಮ ರಾಷ್ಟ್ರದ ಪ್ರಜೆಗಳ ಮೇಲೆ ಸಂಪೂರ್ಣವಾದ ಪ್ರೀತಿವಿಶ್ವಾಸಗಳನ್ನಿಟ್ಟಿರುವಂಥಾ ಲಾರ್ಡ್ ಕರ್ಜನ್, ಲಾರ್ಡ್ ಲ್ಯಾನ್ಸ್‌ಡೌನ್, ಈ ಮೊದಲಾದ ಬಹುಮಂದಿ ಪ್ರಜಾಪಾಲಕರು ವಿಲಾಯಿತಿಯಲ್ಲಿರುತ್ತಾರಾದಕಾರಣ ಅವರು ಈ ವಿಷಯವನ್ನು ಕ್ರಮಪಡಿಸುವುದಕ್ಕೆ ಸಾಹಸಪಟ್ಟಾರೆಂದು ನಿರೀಕ್ಷಿಸಬಹುದಾಗಿದೆ ಅಂತು ನಮ್ಮ ದೇಶದ ಜನರಿಗೆ ಆ ಸ್ವಾಸ್ಥ್ಯದಲ್ಲಿರುವ ಕಷ್ಟಗಳೆಲ್ಲಾ ಬೇಗನೆ ನಿವಾರಣೆಯಾಗಿ ಸುಖವಾಗಿದ್ದಾರೆಂದು ಹಾರೈಸುತ್ತೇವೆ.

ಮತವನ್ನು ಕುರಿತು ಹ್ಯಾಗೆ ಚರ್ಚಿಸಬೇಕು —೧.

ಕೆಲವು ದಿನಗಳಿಂದ ಈ ದೇಶೀಯರು ಸಾರ್ವಜನಿಕವಾದ ಕೂಟಗಳಲ್ಲಿಯೂ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಒಂದು ವಿಷಯವನ್ನು ಕುರಿತು ಬಹಳವಾಗಿ ಚರ್ಚಿಸುತ್ತಲಿರುವರು ಮಿಷನರಿಗಳು ಬ್ರಾಹ್ಮಣ ಜಾತಿಯವರಿಗೆ ಕೇವಲ ಅವಮಾನಕರವಾದ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆಂತಲೂ ಆದಕಾರಣ ಮಿಷನ್ ಸ್ಕೂಲುಗಳು ಹಿಂದೂಮಕ್ಕಳ ವಿದ್ಯಾಭ್ಯಾಸಕ್ಕೆ ತಕ್ಕವುಗಳಲ್ಲವಾದುದರಿಂದ ಗವರ್ನಮೆಂಟಿನವರು ಮಿಷನ್ ಸ್ಕೂಲುಗಳಿಗೆ ಕೊಡುತ್ತಿರುವ ಗ್ರ್ಯಾಂಟನ್ನೇ ನಿಲ್ಲಿಸಿಬಿಡುವದು ಉತ್ತಮವೆಂತಲೂ ಸಾಧಿಸುತ್ತಲಿರುವರು ಈ ವಿಷಯದಲ್ಲಿ ನಮಗೆ ತಿಳಿದಿರುವುದನ್ನು ಸಂಕ್ಷೇಪವಾಗಿ ಇಲ್ಲಿ ವಾಚಕರ ಅವಗಾಹನೆಗೆ ತರಬೇಕೆಂದಪೇಕ್ಷಿಸುತ್ತೇವೆ.

ನಮ್ಮ ದೇಶೀಯರ ಕೋಪಕ್ಕೆ ಕಾರಣವಾದ ಈ ಪುಸ್ತಕದ ಹೆಸರು "ಬ್ರಾಹ್ಮಣನನ್ನು ಕುರಿತದ್ದು" ಎಂಬುದೇ ಇದರಲ್ಲಿ ಮುಖ್ಯವಾಗಿ ಪ್ರತಿಪಾದಿಸಿರುವ ಸಂಗತಿಯೇನಂದರೆ—ಬ್ರಾಹ್ಮಣ್ಯವು ಜನ್ಮಮಾತ್ರದಿಂದ ಬರುವಂಥದಲ್ಲ. ಅಂದರೆ ಒಬ್ಬನು ಈ ದೇಶದಲ್ಲಿ ಅತ್ಯಂತ ಶ್ರೇಷ್ಠವೆನಿಸಿಕೊಳ್ಳುವ ಜಾತಿಯಲ್ಲಿ ಹುಟ್ಟಿದಾಗ್ಯೂ ಪರಮಾರ್ಥಜ್ಞಾನವಿಲ್ಲದವನಾದರೆ ಅಥವಾ ಒಳ್ಳೇ ನಡತೆಯುಳ್ಳವನಾದರೆ ಬ್ರಾಹ್ಮಣನೆಂಬ ಹೆಸರನ್ನು ಹೊಂದುವುದಕ್ಕೆ ಯೋಗ್ಯನಲ್ಲವೆಂಬುದೇ ಈ ಅಭಿಪ್ರಾಯವನ್ನು ಸ್ಥಾಪಿಸುವದಕ್ಕೆ ಗ್ರಂಥಕರ್ತನು ಹಿಂದೂ ಮತಗ್ರಂಥಗಳಿಂದಲೇ ಅನೇಕ ವಚನಗಳನ್ನು ಉದಾಹರಿಸುವದಲ್ಲದೆ ಹಿಂದೂ ಧರ್ಮೋಪದೇಶಕರಲ್ಲನೇಕರು ಇದೇ ಅಭಿಪ್ರಾಯವನ್ನುಳ್ಳವರಾಗಿದ್ದರೆಂದು ತೋರಿಸುತ್ತಾನೆ ಈ ಗ್ರಂಥಕಾರನು ನ್ಯಾಯಗಳನ್ನು ಕೊಟ್ಟು ಹೇಳುವದೇನಂದರೆ—ಜನ್ಮಮಾತ್ರದಿಂದ ಬ್ರಾಹ್ಮಣವಾಗುವದು ನಿಜವಾದರೆ ಬ್ರಾಹ್ಮಣರಾದವರು ಇತರ ಜಾತಿಯವರಲ್ಲಿ ಜಾರತ್ವವನ್ನು ನಡಸುವದರ ಮೂಲಕ ಹುಟ್ಟುವ ಸಂತಾನವೂ ಬ್ರಾಹ್ಮಣವರ್ಗಕ್ಕೆ ಸೇರಿದುದೇ ಎಂದು ಸಾಧಿಸಬೇಕಾಗುವದು ಅನ್ನುತ್ತಾನೆ ಈ ನ್ಯಾಯವನ್ನು ಹೇಳುವ ಸಂದರ್ಭದಲ್ಲಿ ಉಪಯೋಗಿಸಿರುವ ಒಂದೆರಡು ಪದಗಳನ್ನು ನೋಡಿದರೆ ಇಂಥ ಜಾರತ್ವವು ಬ್ರಾಹ್ಮಣ ಸ್ತ್ರೀಯರಲ್ಲಿ ಪ್ರಬಲವಾಗಿದೆಯೆಂಬ ಅಭಿಪ್ರಾಯಕ್ಕೆ ಅವಕಾಶ ಉಂಟಾಗಬಹುದು ಆಕ್ಷೇಪಣೆಗೆ ಗುರಿಯಾಗಿರುವ ಪುಸ್ತಕಭಾಗದಲ್ಲಿ ಇಂಥ ಅಭಿಪ್ರಾಯವುಂಟಾಗುವದಕ್ಕೆ ಮುದ್ರಣದಲ್ಲಿ ತಪ್ಪು ಬಿದ್ದಿದ್ದರೂ ಬಿದ್ದಿರಬಹುದು ಅಥವಾ, ಇಲ್ಲಿ ತೋರಪಡುವ ಅಭಿಪ್ರಾಯವು ಭಾಷಾಂತರಕಾರನು ಉದ್ದೇಶಿಸಿದ ಅಭಿಪ್ರಾಯವಲ್ಲವಾಗಿಯೂ ಇರಬಹುದು ಇದಂತಿರಲಿ. ಆ ಪುಸ್ತಕದಲ್ಲಿ ಇಂಥ ಪದಗಳನು ಉಪಯೋಗಿಸಿರುವದಕ್ಕಾಗಿ ನಾವು ವಿಷಾದಿಸುತ್ತೇವೆ ಇದಲ್ಲದೆ ಬ್ರಾಹ್ಮಣಸ್ತ್ರೀಯರ ಮೇಲಣ ಈ ಆರೋಪಣೆಯು ಎಷ್ಟುಮಾತ್ರಕ್ಕೂ ಸ್ಥಾಪಿಸಲ್ಪಡಲಾಗದೆಂದೂ ಅಭಿಪ್ರಾಯಪಡುತ್ತೇವೆ. ಅವರಲ್ಲಿ ಅನೇಕಭಾಗ ಮಂದಿ ಪಾತಿವ್ರತ್ಯಕ್ಕೆ ಒಳ್ಳೇ ಮಾದಿರಿಗಳಾಗಿದ್ದಾರೆಂದು ಸಂತೋಷವಾಗಿ ಒಪ್ಪಿಕೊಳ್ಳುತ್ತೇವೆ

ಈ ಪುಸ್ತಕವು ಬೆಂಗಳೂರು ಟ್ರಾಕ್ಟ್ ಅಂಡ್ ಬುಕ್ ಸೊಸೈಟಿ ಎಂಬ ಸಮಾಜದವರಿಂದ ಪ್ರಕಟಿಸಲ್ಪಟ್ಟಿದೆ ಈ ಸಮಾಜದ ಕಾರ್ಯಗಳನ್ನು ನಡಸುವದಕ್ಕಾಗಿ ಬೆಂಗಳೂರಿನಲ್ಲಿ ಕೆಲವು ದೊಡ್ಡ ಮನುಷ್ಯರೂ ಮಿಷನರಿಗಳೂ ನಿಯಮಿತವಾಗಿದ್ದಾರೆ ಈ ಕಮಿಟಿಯ ಪ್ರೆಸಿಡೆಂಟರವರು ಬೆಂಗಳೂರಿನಲ್ಲಿಯೇ ವಾಸವಾಗಿರುವ ದೊಡ್ಡ ಮನುಷ್ಯರೊಬ್ಬರು ಆದರ ಸೆಕ್ರೆಟರಿ ಕೆಲಸವನ್ನು ಮಿಷನರಿಗಳಲ್ಲಿ ಒಬ್ಬರು ನಡಸುತ್ತಾರೆ ಈ ಪುಸ್ತಕವನ್ನು ಮೊದಲು ತಮಿಳುಭಾಷೆಯಲ್ಲಿ ಸುಮಾರು ೪೦ ವರ್ಷಗಳ ಹಿಂದೆ ಬರೆದಿತ್ತು ಇದರ ಕನ್ನಡ ಭಾಷಾಂತರವೂ ಬಹುದಿನಗಳ ಹಿಂದೆ ಉಂಟಾದದ್ದು. ಅದನ್ನು ಕಡೇಸಾರಿ ಮುದ್ರಿಸಿದ್ದು ೧೮೯೫ನೇ ಇಸ್ವಿಯಲ್ಲಿ ಆಗಿನಿಂದ ಅಂದರೆ ಈಗ ೧೧ ವರ್ಷಗಳಿಂದ ಮಾರಿರುವ ಪ್ರತಿಗಳು ಕೆಲವೇ ಆಗಿವೆ. ಮೇಲ್ಕಂಡ ಸಾಮಾಜಿಕರು ಈ ಪುಸ್ತಕದಲ್ಲಿ ಆಕ್ಷೇಪಣೀಯವಾದ ಇಂಥ ವಾಕ್ಯವುಂಟೆಂದು ತಿಳಿದಿರಲೇ ಇಲ್ಲ. ಇದು ಬಹುಕಾಲದ ಹಳೇ ಪುಸ್ತಕವಾದದರಿಂದಲೂ ಹೆಚ್ಚಾಗಿ ಮಾರಾಟಕ್ಕೇ ಬಾರದಿದ್ದ ಪುಸ್ತಕವಾಗಿದ್ದುದರಿಂದಲೂ ಅದನ್ನು ಪರೀಕ್ಷಿಸಬೇಕಾದ ಅವಶ್ಯಕತೆಯೇ ಬೀಳಲಿಲ್ಲ. ಆದರೆ ಈ ಪುಸ್ತಕದಲ್ಲಿ ಇಂಥ ನಿಂದ್ಯವಾದ ವಾಕ್ಯವಿದೆಯೆಂಬ ಸಂಗತಿಯು ಒಬ್ಬ ಮಿಷನರಿಯ ಮುಖಾಂತರವಾಗಿ ಅವರಿಗೆ ತಿಳಿದು ಬಂದ ಕೂಡಲೆ ಅವರು ಬಹಳವಾಗಿ ವಿಷಾದಿಸಿದರು ಈ ಪುಸ್ತಕವನ್ನು ಮೊದಲು ಬರೆದ ಕಾಲದಲ್ಲಿಯೇ ಆಗಲಿ ಬರೆದ ಸ್ಥಳದಲ್ಲಿಯೇ ಆಗಲಿ ಇದರಲ್ಲಿ ಹೇಳಿರುವ ಪ್ರಕಾರವಾಗಿ ಬ್ರಾಹ್ಮಣರು ನಡೆದುಕೊಳ್ಳುತ್ತಾ ಇದ್ದರೋ ಇಲ್ಲವೋ ಈಗ ಅದನ್ನು ತೀರ್ಮಾನಿಸಿ ಹೇಳಲು ಆಧಾರವೇನೂ ಸಿಕ್ಕುವದಿಲ್ಲವೆಂದು ತಿಳಿದರು ಈಗಲಾದರೋ ನಮ್ಮ ಈ ಕರ್ನಾಟಕ ಸೀಮೆಯಲ್ಲಿ ಇಂಥ ದೋಷಾರೋಪಣೆಯನ್ನು ಮಾಡುವದು ಯುಕ್ತವಲ್ಲವೆಂದು ಮೇಲ್ಕಂಡ ಸಾಮಾಜಿಕರು ಗ್ರಹಿಸಿದರು. ಬಳಿಕ ಇದೇ ನಿಮಿತ್ತವಾಗಿ ಕಳೆದ ಆಗಸ್ಟ್ ೧ನೇ ತಾರೀಕಿನಲ್ಲಿ ಅವರು ಒಂದು ವಿಶೇಷ ಕೂಟವಾಗಿ ಕೂಡಿ ಕೆಳಗೆ ಕಾಣಿಸಿರುವ ರೆಜಲ್ಯೂಷನನ್ನು ಏಕವಾಕ್ಯತೆಯಿಂದ ಅನುಮೋದಿಸಿದರು. ಅದು ಯಾವದೆಂದರೆ.—

'ಬ್ರಾಹ್ಮಣನನ್ನು ಕುರಿತದ್ದು' ಎಂಬ ಹೆಸರುಳ್ಳ ಪುಸ್ತಕದ ವಿಷಯದಲ್ಲಿ ಈ ಸಾಮಾಜಿಕರಾದ ನಾವು ಕೇಳಿ, ನಮ್ಮ ಸಮಾಜದಿಂದ ಪ್ರಕಟಿಸಲ್ಪಡುವ ಯಾವ ಪುಸ್ತಕದಲ್ಲಾದರೂ ಹಿಂದೂ ಜನಗಳಲ್ಲಿ ಯಾರ ಮನಸ್ಸನ್ನಾಗಲಿ ಅನ್ಯಾಯವಾಗಿ ನೋಯಿಸುವ ಎಂಥ ಸಂಗತಿಯನ್ನಾಗಲಿ ಬರೆದಿರುವದಕ್ಕಾಗಿ ಬಹಳ ವಿಷಾದಿಸುತ್ತೇವೆ ಇಂಥ ಸಂಗತಿಯು ಬರೆದಿರುವದನ್ನು ನೋಡಿ ಅವರು ಆಕ್ಷೇಪಿಸುವದು ನ್ಯಾಯವೇ ಎಂದು ಒಪ್ಪಿಕೊಳ್ಳುತ್ತೇವೆ ಧರ್ಮಸಂಬಂಧದಲ್ಲಿ ನಡೆಯತಕ್ಕ ಯಾವ ಚರ್ಚೆಯಲ್ಲೇ ಆಗಲಿ ಯಾವ ಸೂತ್ರಗಳನ್ನು ಅನುಸರಿಸಬೇಕೋ ಅಂಥ ಸೂತ್ರಗಳಿಗೆ ಈ ಪುಸ್ತಕದಲ್ಲಿ ಆಕ್ಷೇಪಣೆಗೆ ಗುರಿಯಾಗಿರುವ ಮಾತು ಕೇವಲ ವಿರುದ್ಧವಾಗಿರುತ್ತದೆ, ಮತ್ತು ಈ ಸಮಾಜದವರು ಗ್ರಂಥ ಪ್ರಕಟನೆಯ ಕಾರ್ಯದಲ್ಲಿ ಯಾವ ಭಾವದಿಂದ ನಡೆದುಕೊಳ್ಳುತ್ತಾರೋ, ಯಾವ ರೀತಿಯನ್ನನುಸರಿಸುತ್ತಾರೋ ಆ ಭಾವಕ್ಕೂ ರೀತಿಗೂ ಈ ಪುಸ್ತಕದ ಆ ಮಾತು ಒಪ್ಪುವದಿಲ್ಲವೆಂದೂ ಅಭಿಪ್ರಾಯಪಡುತ್ತೇವೆ ನಮ್ಮ ತಾತ್ಪರ್ಯವು ಹೀಗಿರುವದರಿಂದ ಆಕ್ಷೇಪಣೆಗೆ ಗುರಿಯಾದ ಈ ಪುಸ್ತಕವನ್ನು ಇನ್ನು ಮುಂದೆ ಮಾರಲಾಗದೆಂದು ಈಗ ವಿಧಿಸಿದ್ದೇವೆ" ಎಂಬುದೇ.

ಮೇಲ್ಕಂಡ ಸಾಮಾಜಿಕರು ವಿಷಾದಕರವಾದ ಈ ಕಾರ್ಯದಲ್ಲಿ ಕೇವಲ ಘನತೆಯಿಂದ ನಡೆದುಕೊಂಡಿದ್ದಾರೆಂದು ಸಂದೇಹವಿಲ್ಲದೆ ನಂಬಿದ್ದೇವೆ. ಪುಸ್ತಕದಲ್ಲಿರುವ ತಪ್ಪಿನ ವಿಷಯವು ಅವರ ಗಮನಕ್ಕೆ ಬಂದಕೂಡಲೆ ಆ ತಪ್ಪನ್ನು ಯಥೋಚಿತವಾಗಿ ಒಪ್ಪಿಕೊಂಡು ಅದರಿಂದುಂಟಾಗಿರುವ ವೈಮನಸ್ಯವನ್ನು ಪರಿಹರಿಸುವದಕ್ಕೆ ಸಾಧ್ಯವಾದಷ್ಟಗೂ ಪ್ರಯತ್ನ ಮಾಡಿದ್ದಾರೆ. ಅವರು ಬೇಕಾಗಿ ದೋಷವನ್ನು ಕಲ್ಪಿಸಿ ಬರೆಯಿಸಿದ್ದಾರೆಂದು ಹೇಳಲು ಯಾವ ಅವಸರವೂ ಇಲ್ಲವೆಂದು ನಾವು ದೃಢವಾಗಿ ಹೇಳಬಲ್ಲೆವು

ಪುಸ್ತಕದಲ್ಲಿ ಆಕ್ಷೇಪಣೀಯವಾದ ಮಾತು ಇರುವುದನ್ನು ತಿಳಿದ ದೊಡ್ಡ ಮನುಷ್ಯರು ಆ ಕ್ಷಣವೇ ಈ ವಿಷಯದಲ್ಲಿ ಪುಸ್ತಕಕಾರರಿಗೆ ಇದ ಆ ಸಾಮಾಜಿಕರಿಗೆ ತಿಳಿಯಪಡಿಸಿದ್ದರೆ ಎಷ್ಟು ಒಳ್ಳೆಯದಾಗಿತ್ತು! ಅವರು ಹಾಗೆ ಆ ಸಾಮಾಜಿಕರನ್ನು ಕೇಳಿದ್ದರೆ ಅವರು ದೊಡ್ಡ ಮನುಷ್ಯರಿಗೆ ತಕ್ಕ ಸಮಾಧಾನವನ್ನು ಹೇಳುತ್ತಿದ್ದರೆಂಬುದಕ್ಕೆ ಸಂದೇಹವೇ ಇಲ್ಲ. ದೊಡ್ಡವರಿಗೆ ಸ್ವಭಾವವಾಗಿಯೂ ನ್ಯಾಯವಾಗಿಯೂ ಸಲ್ಲುವ ಈ ಮಾರ್ಗವನ್ನು ಬಿಟ್ಟು ಕೆಲವರು ಕೂಡಿಕೊಂಡು ಈ ಆಕ್ಷೇಪಣೀಯವಾದ ವಿಷಯವನ್ನು ಆಧಾರಮಾಡಿಕೊಂಡು ಮಿಷನ್ ಸ್ಕೂಲುಗಳ ಮೇಲೆ ಪ್ರಜೆಗಳಿಗೆ ಅಸೂಯೆಯುಂಟಾಗುವಂತೆ ಪ್ರಕಟಿಸಿರುವದು ಶೋಚನೀಯವಾಗಿದೆ ಈ ಪುಸ್ತಕದಲ್ಲಿ ಹೇಳಿರುವದಕ್ಕೂ ಮಿಷನ್ ಸ್ಕೂಲುಗಳಿಗೂ ಯಾವ ಸಂಬಂಧವಿರುವದೋ ನಮಗೆ ತಿಳಿಯದು ಈ ಪುಸ್ತಕವನ್ನು ಮಿಷನ್ ಸ್ಕೂಲುಗಳಲ್ಲಿ ಉಪಯೋಗಿಸಬೇಕೆಂಬ ಉದ್ದೇಶ ಇದ್ದಿಲ್ಲ, ಇದು ಮಕ್ಕಳು ಓದುವ ಪಾಠಪುಸ್ತಕವಾಗಿಯಾಗಲಿ ಉಪಾಧ್ಯಾಯರ ಉಪಯೋಗಾರ್ಥವಾದ ಪುಸ್ತಕವಾಗಿಯಾಗಲಿ ಇರುವದಿಲ್ಲ ಅಥವಾ ಅದರಲ್ಲಿರುವ ತಾತ್ಪರ್ಯವನ್ನಾದರೂ ಮಿಷನ್ ಸ್ಕೂಲುಗಳಲ್ಲಿ ಬಾಯಿಮಾತಿನಿಂದಾಗಲಿ ಹೇಳಿಕೊಡುತ್ತಾರೆಯೋ? ಅದೂ ಇಲ್ಲ. ನಮ್ಮ ಈ ಪತ್ರಿಕಾ ವಾಚಕರಲ್ಲಿ ಎಷ್ಟೋ ಮಂದಿ ಮಿಷನ್ ಸ್ಕೂಲುಗಳಲ್ಲಿ ಓದಿದವರಾಗಿರುತ್ತಾರೆ ಸ್ಕೂಲುಗಳಲ್ಲಿ ಧರ್ಮ ಸಂಬಂಧವಾದ ಪಾಠಗಳನ್ನು ಯಾವ ರೀತಿಯಾಗಿ ಹೇಳಿಕೊಡುತ್ತಾರೆಂಬ ವಿಷಯದಲ್ಲಿ ಅವರೇ ಸಾಕ್ಷಿಗಳಾಗಿದ್ದಾರೆ ಬ್ರಾಹ್ಮಣ ಸ್ತ್ರೀಯರು ವ್ಯಭಿಚಾರಿಣಿಯರೆಂಬದಾಗಿ ಸ್ಕೂಲುಗಳಲ್ಲಿ ಸೂಚಿಸುವಷ್ಟಕ್ಕಾದರೂ ಯಾವ ಮಿಷನರಿ ಮ್ಯಾನೇಜರಾಗಲಿ ಅವಕಾಶ ಕೊಟ್ಟದ್ದುಂಟೇ?

ಮತವಿಷಯಗಳನ್ನು ಚರ್ಚಿಸುವದರಲ್ಲಿ ಯಾವ ಸೂತ್ರಗಳನ್ನು ಅನುಸರಿಸಬೇಕು ಎಂಬೀ ಘನತರವಾದ ಸಂಗತಿಯನ್ನು ಮುಂದೆ ಮೂರು ನಾಲ್ಕು ಸಂಚಿಕೆಗಳಲ್ಲಿ ಚರ್ಚಿಸಬೇಕೆಂದು ಅಪೇಕ್ಷಿಸುತ್ತೇವೆ. ವಾಚಕರು ಈ ಕಾರ್ಯದಲ್ಲಿ ನಮಗೆ ಸಹಾಯ ಮಾಡುವರೆಂದು ನಂಬಿದ್ದೇವೆ ಅವರು ತಮಗೆ ತೋರಿದ ಅಭಿಪ್ರಾಯಗಳನ್ನು ಪತ್ರಮುಖವಾಗಿ ತಿಳಿಯಪಡಿಸಿದರೆ ಸಂತೋಷವಾಗಿ ಸ್ವೀಕರಿಸುವೆವು

ಬಾಲ್ಯವಿವಾಹ ಮತ್ತು ವಿತಂತುಗಳ ಸ್ಥಿತಿ.

"ಸರ್ವಪ್ರಜಾಭಿಮಾನಿ" ಎಂಬ ಒಬ್ಬ ಬಾತ್ಮಿದಾರರು ಮೇಲ್ಕಂಡ ವಿಷಯವಾಗಿ ಬರೆಯುವುದೇನೆಂದರೆ.—ಅಯ್ಯಾ, ತಮ್ಮ ತಾ. ೨೯ನೇ ಸಂಚಿಕೆಯಲ್ಲಿ ವಿತಂತುಗಳ ವಿಷಯವಾಗಿ ಬಾತ್ಮಿಯನ್ನು ಬರೆದಿರುವ ಶ್ರೀ ಬಿ ರಾಮಯ್ಯ, ಬಿ ಎ. ಯವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ಇವರು ಬರೆದಿರುವ ಬಾತ್ಮಿಯು ತುಂಬಾ ಶ್ಲಾಘನೀಯವಾಗಿದೆ. ಶ್ರೀ ಪದ್ಮಾವತಿ ಬಾಯಮ್ಮನವರು ಬರೆದಿರುವ ಮೂರು ಸಂಗತಿಗಳಿಗೆ ಇವರು ಹೊಸದಾಗಿ ಎರಡು ಹೆಚ್ಚು ಸಂಗತಿಗಳನ್ನು ಬರೆದದ್ದರ ಜೊತೆಗೆ ಈ ವಿಷಯವನ್ನು ಕುರಿತು ಮುಕ್ತಾಯ ಮಾಡಿದ್ದರೆ ಚನ್ನಾಗಿತ್ತು. ಬಹುಕಾಲದಿಂದ ಅನೇಕ ಪಟ್ಟಣಗಳಲ್ಲಿ ದೊಡ್ಡ ಸಭೆಗಳು ಸೇರಿ, ವಿದ್ವಾಂಸಹೆಸರು ಪಡೆದ ಮಿ॥ ಬಾನರ್ಜಿ, ಮಿ॥ ಗೋಖಲೆ, ಮಿ॥ ಕರೇ ಮೊದಲಾದ ಪ್ರಮುಖರು ಬಾಲ್ಯವಿವಾಹವೆಂಬ ಮಹಾ ರಾಕ್ಷಸನಿಗ್ರಹಾರ್ಥವಾಗಿ ಅಹರ್ನಿಶಿಯಲ್ಲೂ ಕೂಡ ತಮ್ಮ ಘನವಾದ ಬುದ್ಧಿಕೌಶಲ್ಯವನ್ನು ಉಪಯೋಗಿಸುತ್ತಾ ಸಾವಿರಾರು ರೂಪಾಯಿ ಖರ್ಚು ಇಟ್ಟುಕೊಂಡು ಹೋಗಿ ಮಹಾ ಮಹಾ ಸಭೆ ಸೇರಿಸಿ ಲೆಕ್ಚರುಗಳನ್ನು ಕೊಡುತ್ತಾ ಇರುವದು ಈ ಸಂಸ್ಥಾನದ ಕರ್ನಾಟಕದ ಆಬಾಲವೃದ್ಧರಿಗೂ ತಿಳಿದಿದ್ದಾಗ್ಯೂ ಕೂಡ ಈ ೬—೭ ವರುಷದ ಹುಡುಗನಿಗೆ ೬—೪ ವರುಷದ ಹುಡುಗಿಯನ್ನು ಕೊಟ್ಟು ಮಾಡಿ, ದೊಡ್ಡ ವೈಶ್ಯಪ್ರಸ್ತವೆಂದರೆ ಅರ್ಧಭಾಗ ಮದುವೆ ಖರ್ಚನ್ನೆಲ್ಲಾ ಮುಕ್ತಾಯ ಮಾಡಿಬಿಡುತ್ತಾರೆ. ಮೊದಲನೆ ದಿನ ಎಲ್ಲಾ ಸೇರಿ, ಬಾಜಾಬಜಂತ್ರಿಯಿಂದ ಗಂಡನ್ನು ಹೆಣ್ಣಿನ ಮನೆಗೆ ಕೊಂಡುಹೋಗುತ್ತಾರೆ. ನಂತರ ಗಂಡಿನವರು ಹೆಣ್ಣಿಗೆ ಅವರ ಅನುಸಾರ ೧೦೦ ರಿಂದ ೧,೦೦೦ ರೂಪಾಯಿಯ ತನಕ ಒಡವೆ

ಗಂಡು ಹೆಣ್ಣನ್ನು ಹಸೆಯಮೇಲೆ ಕೂರಿಸಿ, ಶಾಸ್ತ್ರಗಳನ್ನೆಲ್ಲಾ ಪೂರೈಸಿದ ನಂತರ ಆ ದಿನ ಕುಲಸ್ಥರಿಗೆಲ್ಲಾ ಹೆಣ್ಣಿನ ಕಡೆಯವರ ಊಟವೂ ಮಾರನೆದಿನ ಗಂಡಿನವರ ಕಡೆ ಊಟ ಉಪಚಾರಗಳೂ ನಡೆದು, ಸಭಿಕರ ಮುಂದೆ ಲಗ್ನಕ್ಕೆ ೩—೪ ವರುಷದ ಅವಧಿಯನ್ನು ಗೊತ್ತುಮಾಡಿಕೊಂಡು, ನಂತರ ಹಬ್ಬ ವಗೈರೆ ವಿಶೇಷ ದಿನಗಳಲ್ಲಿ ಹೆಣ್ಣಿನವರ ಮನೆಗೆ ಗಂಡಿನವರು ಗಂಡಿನವರ ಮನೆಗೆ ಹೆಣ್ಣಿನವರು ಊಟ ಉಪಚಾರಗಳಿಗೆ ಕರೆಯುವದು ಉಂಟು ಈ ಮಧ್ಯೆ ಲಗ್ನಕಾಲಕ್ಕೆ ಮುಂಚೆಯೇ ಗಂಡು ಕುರುಡನಾಗಲಿ, ಹೆಣ್ಣು ಕುಂಟಿಯಾದರೂ ಅವರವರ ಅದೃಷ್ಟ ಬಿಡುವಂತೆ ಇಲ್ಲ ಇಷ್ಟಕ್ಕೆ ಗಂಡಹೆಂಡತಿ ಬ್ರಹ್ಮ ನಿಯಾಮಕ ಲಗ್ನಕ್ಕೆ ಮುಂಚೆ ಇಂತವರಲ್ಲಿ ಅನೇಕ ಗಂಡುಗಳು ಮೃತಪಟ್ಟು ಸಂಬಂಧ ಹುಡುಗಿಯರಿಗೆ ಬೇರೆ ವರನನ್ನು ಗೊತ್ತುಮಾಡಲು ಹೋದರೆ ಅಯ್ಯೋ, ಇಂತವರ ಮನೆಗೆ ಕೊಟ್ಟದ್ದು ಹೆಣ್ಣು! ಇಂತವನ ಹೆಂಡತಿ ಯಲ್ಲವೇ? ಪಾಪಾತ್ಮಳು! ಮದುವೆಗೆ ಮುಂಚೆಯೇ ಗಂಡನನ್ನು ಘಾತಮಾಡಿದವಳು! ಇಂತವಳು ಮನೆಗೆ ಬಂದರೆ ಏನೇನೋ ಹಾಳು! ಎಂದು ಜರಿದು ನಾವಲ್ಲ ತಾವಲ್ಲ ಎಂದು ತಿರಸ್ಕರಿಸುತ್ತಾರೆ ಬಾಲ್ಯದಲ್ಲಿಯೇ ಈ ಗತಿಯಾದ ಮೇಲೆ ಮುಂದೆ ಇವರ ಪರಿಣಾಮವು ಹ್ಯಾಗೆ? ಅನೇಕ ಸೇವರುಗಳು ಬರೆಯೂ ಕೇಳಿಯೂ ಕೆಲವು ಪತ್ರಿಕೆಗಳಲ್ಲಿ ಹಂಗಸರು ಸಹಾ ಹೋರಾಡುತ್ತಿರುವ ಸಂಗತಿಯನ್ನರಿತು ಸಭ್ಯರ್ಕ್ಕೆ ಅಪವೇಲ್ಪಟ್ಟಿಯನ್ನು ಸಹಾ ಲಕ್ಷ್ಯಕ್ಕೆ ತಾರದೆ ಈ ನವನಾಗರೀಕ ಕಾಲದಲ್ಲೂ ಕೂಡ ತಮ್ಮ ಮೌಢ್ಯವನ್ನು ಬಿಡದೆ ಇರುವ ಈ ನಮ್ಮ ಕರ್ನಾಟಕಕ್ಕೆ, ಇನ್ನೆಷ್ಟು ಕಾಲಕ್ಕೆ ಅಂಧಕಾರ ತೊಲಗೀತೋ ವಿಷಾದಕರವಾಗಿದೆ ಮುಂದಾದರೂ ಇಂಥಾ ದುಷ್ಟ ಪದ್ಧತಿಗೆ ಅವಕಾಶ ಕೊಡದ ಹಾಗೆ ಆಯಾ ತಾಲ್ಲೂಕಿನಲ್ಲಿ ಮೇಲ್ಪಟ್ಟವರು ನಿಗಾ ಇಡುವ ಮೇರೆಗೆ ನಮ್ಮ ಘನ ಮೈಸೂರು ಮಹಾರಾಜಾ ಗವರ್ನಮೆಂಟಿನವರು ಮಾಡಿರುವ ಬಾಲ್ಯವಿವಾಹದ ಕಾನೂನಿಗನುಸರಿಸಿ ಈ ಒಂದು ಕಲಮನ್ನು ಶೀಘ್ರದಲ್ಲೇ ಜಾರಿಗೆ ತಂದರೆ ತುಂಬಾ ಅನುಕೂಲವಲ್ಲವೇ? ತನ್ನಿಮಿತ್ತ "ಬಡವಟ ಕೊಡಿಸದಿದ್ದರೆ ನಾವೋಗದಾಸಯ್ಯನೇ" ಎಂಬ ಗಾದೆಗೆ ಸಮನಾಗಿ ನಮ್ಮ ಶಾಸ್ತ್ರಗಳಂಥಾ ಪ್ರಮುಖರು ವಿರಳವಾದರೆ ಯಾವದಕ್ಕೆ ತಾನೇ ತೋರತೆ?

ಒಳದೇಶದ ವೃತ್ತಾಂತಗಳು.

ಸಬ್ ಅ॥ ಸರ್ಜನ್ ಮೆ॥ ಟಿ ಎಸ್ ಸಿದ್ಧಪ್ಪನವರನ್ನು ಸರ್ಕಾರದವರು ಮೂಡಿಗೆರೆಯಿಂದ ಶಿವಸಮುದ್ರಕ್ಕೆ ವರ್ಗಮಾಡಿರುತ್ತಾರೆ

*****

ಮೊನ್ನೆ ಭಾನುವಾರ ಶ್ರೀಮದಿಂಡಿಯಾಮಹಾರಾಜ್ಞಿ ಚಕ್ರವರ್ತಿನಿ ಅಲೆಗ್ಜಾಂಡ್ರಾ ಮಹಾರಾಣಿಯವರ ಜನ್ಮದಿನದಿಂದ ಬೆಂಗಳೂರು ದಂಡಿನವರು ೩೧ ತೋಫುಗಳನ್ನು ಹಾರಿಸಿ ಸೈನಿಕರ ಕವಾತು ನಡಿಸಿದರು

*****

ಶೃಂಗೇರಿ ಜಹಗೀರಿಯ ಡಿಪ್ಟಿ ಅಮಲ್ದಾರ್ ಮೆ॥ ಆರ್ ಕಾಮಯ್ಯನವರಿಗೆ ಒಂದು ತಿಂಗಳ ರಜವನ್ನೂ ಭೂಗರ್ಭ ಇಲಾಖೆಯ ಮೆ॥ ಎ ಎಸ್ ನಾಂಬಿಶಿ ಐಯ್ಯರಿಗೆ ಒಂದೂವರೆ ತಿಂಗಳ ರಜವನ್ನೂ ಕೊಟ್ಟಿರುತ್ತಾರೆ

*****

ಮೆ॥ ಟಿ ತಂಬೂಚೆಟ್ಟಿಯವರು ಬೇರೆ ಕೆಲಸದ ಮೇಲಿರುವಾಗ್ಗೆ ಮೆ॥ ಎ ಕೃಷ್ಣಸ್ವಾಮೈಯ್ಯಂಗಾರ್ರವರು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಫಸ್ಟ್ ಅ॥ ಕಮೀಷನರಾಗಿ ಬದಲಿ ನೋಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

*****

ಮೈಸೂರು ಸರ್ಕಾರಿ ಸೇವಿಂಗ್ಸ್ 'ಬ್ಯಾಂಕುಗಳ ಉದ್ದೇಶ, ಬಡ್ಡಿ ದರ, ಹಣಹಾಕಿ ತೆಗೆದುಕೊಳ್ಳುವ ವಿಧಾನ, ಈ ಮೊದಲಾದ ಭಾಗಗಳ ಮೇಲ್ಲಾ ಸೆಕ್ಷನ್‌ಗಳ ಪ್ರಕಾರ ವಿವರಣೆ ಮಾಡಿ ರೂಲಸನ್ನು ಕಳೆದ ವಾರದ ಗೆಜೆಟ್ಟಿನಲ್ಲಿ ಫಾರಿಂಸ್ ಮಾಡಿರುತ್ತಾರೆ

*****

ಒಂದನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟ್ ಮೆ॥ ವೈ ನರಸಿಂಹೈಯ್ಯನವರು ಚಿಕ್ಕಮಗಳೂರಲ್ಲಿ ಪ್ಲೇಗ್ ಡ್ಯೂಟಿಯಲ್ಲಿದ್ದಾಗ್ಗೆ ರಜಾ ಪಡೆದು ಕೇಳದೇನೆ ಊರುಬಿಟ್ಟು ಹೊರಟುಹೋದಕಾರಣ ಗವರ್ನಮೆಂಟಿನವರು ಅವರನ್ನು ಎರಡನೇ ಕ್ಲಾಸಿಗೆ ಕಂಸರಾ ಮಾಡಿರುತ್ತಾರೆ

*****

ಮೈಸೂರು ಸಂಸ್ಥಾನದಲ್ಲಿ ಈ ಸಲ ಕ್ರಿಸ್ಮಸ್ ಹಬ್ಬದ ಉದ್ದಿಶ್ಯ ಸರ್ಕಾರದ ಎಲ್ಲಾ ಕೋರ್ಟುಕಚೇರಿಗಳಿಗೂ ಸ್ಕೂಲು ಪಾಠಶಾಲೆಗಳಿಗೂ ಇದೇ ಡಿಸೆಂಬರ್ ೨೪ನೆ ತಾ ಸೋಮವಾರ ಲಾಗಾಯಿತು ಮುಂದಿನ ಜನವರಿ ತಾ ೨ನೆ ಬುಧವಾರದ ವರೆಗೆ ಉಭಯದಿನಗಳೂ ಸೇರಿ ರಜಾ ಕೊಡಲ್ಪಡುವುದು

*****

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಇನ್ನೂ ಪ್ಲೇಗ್ ಉಪದ್ರ ಇದ್ದೇ ಇದೆ ಚಾಮರಾಜಮೊಹಲೆಯ ಕೆಲವು ಭಾಗಗಳಲ್ಲೂ ಈಚೆಗೆ ಇಲಿಗಳು ಸಾಯುತ್ತಲಿವೆ ಎಂದು ತಿಳಿಯುವದು ಈಗ ಚಳಿಗಾಲ ಪ್ರಾರಂಭವಾಗಿರೆ ಕ್ಷಣದರಿಂದ ಈ ಉಪದ್ರ ಎಲ್ಲಿ ಹರಡಿಕೊಳ್ಳುವದೋ ಎಂದು ಜನರು ಕಳವಳಪಡುತ್ತಿದ್ದಾರೆ

*****

ಕಳೆದ ಬುಧವಾರ ರಾಜಧಾನಿಯ ಚಾಮರ್ನಪಟ್ಟ ತೋಟದಲ್ಲಿ ಅರಮನೆಕಟ್ಟೆಯ ಛತ್ರಪತಿ ಸಮಾರಾಧನೆ ಮಂತಾದ್ದು ಎಂದಿನಂತೆ ಉಭಯರೂ ನಡೆಯುವ ಬಹಳ ವಿತರಣೆಯಿಂದ ನೆರವೇರಿತು ಅರಮನೆ ಆಫೀಸರೂ ಇತರ ಉದ್ಯೋಗಸ್ಥರೂ ಮುಂದಾಳುಗಳಾಗಿ ನಿಂತು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ್ದರೆಂದು ತಿಳಿದುಬಂದಿದೆ

*****

ಕೊಪ್ಪ ತಾಲ್ಲೂಕು ಬೆಳ್ಳ ಮಾಗಣೆ ಭಂಡಿಗಡಿಗ್ರಾಮದ ಮುನಿಯೂರು ಎಂಬ ಸ್ಥಳದಲ್ಲಿ ಲೋಕಪರಮೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಕಳೆದ ತಾ ೨೨ನೆ ಗುರುವಾರ ರಾತ್ರಿ ಕಳ್ಳರು ಬಿದ್ದು ೧೦೦ ರೂ ಬಾಳುವ ಮಾಲುಗಳನ್ನೂ ಕಾಣಿಕೆಗಳನ್ನೂ ಅಮ್ಮನವರ ಪಂಚಲೋಹದ ಮೂರ್ತಿಯನ್ನೂ ಕಳವು ಮಾಡಿದರೆಂದೂ ಪೋಲೀಸಿನವರು ಪತ್ತೆ ಮಾಡುತ್ತಿದ್ದಾರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ

ಮುಂದಿನ ಸೋಮವಾರ ಮಧ್ಯಾಹ್ನ ೧—೧ ಗಂಟೆಗೆ ಮಹಾ ಮಾತೃಶ್ರೀಯವರೇ ಮುಂತಾದ ಜನಾನಿಯವರು ಸ್ಪೆಷಲ್ ರೈಲಿನಲ್ಲಿ ಬೆಂಗಳೂರಿಗೆ ಚಿತ್ತೈಸಿ, ತಾ ೧೬ನೆ ಭಾನುವಾರ ಅಲ್ಲಿ ಲೇಟ್ ಮಹಾರಾಜರವರ ವರ್ಷಾಬ್ದಿಕವನ್ನು ನೆರವೇರಿಸುತ್ತಾರೆಂದು ತಿಳಿದುಬಂದಿದೆ ಮೂರನೇ ಮಹಾರಾಜ ಕುಮಾರ್ತಿಯವರು ಕಲ್ಕತ್ತಾ ಮುಂತಾದ ಕಡೆ ಹೊರಡದೆ ರಾಜಧಾನಿಯಲ್ಲೇ ಇರುವರೆಂದು ಕೇಳುತ್ತೇವೆ

*****

ಚನ್ನರಾಯಪಟ್ಟಣದ ತಾ ಹಿರಿಸಾವೆ ಹೋಬಳಿ ದಿಡಗದ ಗ್ರಾಮದಲ್ಲಿ ಹಿರಣ್ಣಯ್ಯನವರ ಮಗ ಸುಮಾರು ೧೯ ವರುಷದ ಸುಬ್ಬೈಯ್ಯ ನೆಂಬುವನು ಕಳೆದ ಗುರುವಾರ ವೆಂಕಟರಮಣ ಜೋಯಿಸರ ಮನೆಯಲ್ಲಿ ಸಂತರ್ಪಣೆ ಊಟಕ್ಕಾಗಿ ಬಹುಜನರ ಮಧ್ಯೆ ಕುಳಿತು ಭೋಜನಮಾಡುತ್ತಿದ್ದಾಗ್ಗೆ ಅಕಸ್ಮಾತ್ತಾಗಿ ಕುತ್ತಿಗೆನೀಡಿ ಅಲ್ಲೇ ಪ್ರಾಣಬಿಟ್ಟನೆಂದೂ, ಇದರಿಂದ ಸಮಾರಾಧನೆಗೇ ಆಭಾಸವಾಯಿತೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ

*****

ಸರ್ಕಾರದವರು ಪೋಲೀಸ್ ಇಲಾಖೆಯ ನೌಕರರ ಉದ್ಯೋಗ, ಅವರ ಜವಾಬ್ದಾರಿ, ಅವರ ಕೆಲಸಕಾರ್ಯಗಳು, ಈ ಮೊದಲಾದ ಸಂಗತಿಗಳನ್ನು ಕುರಿತು ಒಂದು ಮುಸೋದೆ ಕಾನೂನನ್ನು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ ಇದರ ವಿಷಯದಲ್ಲಿ ಪ್ರಜೆಗಳು ಚರ್ಚೆಮಾಡಿ ಅದರ ಸಾಧಕಬಾಧಕಗಳನ್ನು ಕುರಿತು ತಮ್ಮ ಆಕ್ಷೇಪಣೆಗಳನ್ನು ಎರಡು ತಿಂಗಳು ಅಂದರೆ ಜನವರಿ ೧೩ನೆ ತಾರೀಖಿನೊಳಗೆ ಗವರ್ನಮೆಂಟಿಗೆ ತಿಳಿಸಬೇಕಾಗಿದೆ

*****

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀರಾಮೇಶ್ವರ ದೇವಸ್ಥಾನದೊಳಗೆ ಕಳೆದ ವಾರ ಕೃತ್ತಿಕೋತ್ಸವ ನಡೆದಾಗ್ಗೆ ದಿವಾನರು, ಕೌನ್ಸಿಲ್ ಮೆಂಬರುಗಳು, ಮೆ॥ ನಂಜುಂಡೈಯ್ಯನವರೇ ಮೊದಲಾದ ಉದ್ಯೋಗಸ್ಥರೂ ದೊಡ್ಡಮನುಷ್ಯರೇ ಮುಂತಾದವರೂ ದಯಮಾಡಿದ್ದರೆಂತಲೂ ಅಗ್ನಿ ಉತ್ಸವಾದಿಗಳೂ ಭಜನೆಗಳೂ ಹರಿಕಥೆಗಳೂ ನಡೆದವೆಂತಲೂ, ಎಲ್ಲಾ ಬಹು ತೃಪ್ತಿಕರವಾಗಿ ನಡೆದು ಎಲ್ಲರೂ ತುಂಬಾ ಸಂತೋಷಪಟ್ಟುಕೊಂಡು ತೆರಳಿದರೆಂತಲೂ ತಿಳಿದುಬಂದಿದೆ

*****

ಬೆಂಗಳೂರು ಸೆಂಟ್ರಲ್ ಕಾಲೇಜಿನ ರೈಟರಾಗಿದ್ದು ೧೯೦೩-೦೪ನೆ ಇಸವಿಯಿಂದ ಸರ್ಕಾರದ ಹಣವನ್ನು ಸುಮಾರು ೪,೦೦೦ ರೂಪಾಯಿ ತನಕ ದುರುಪಯೋಗಪಡಿಸಿದ ಡಿ ನಾರಾಯಣಮೂರ್ತಿಯ ಮೇಲೆ ಮೊನ್ನೆ ಸೋಮವಾರ ಅಲ್ಲಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಪ್ರಾರಂಭವಾಗಿ ನಡಿಯುತ್ತಿದೆ ಸರ್ಕಾರ (ಫಿರ್ಯಾದಿ) ಪರವು ಆ ಕಾಲೇಜಿನ ಪ್ರಿನ್ಸಿಪಲ್ ಮೆ॥ ಜೆ ಕುಕ್‌ಯವರು, ಗವರ್ನಮೆಂಟ್ ಕಂಟ್ರೋಲರು ಮುಂತಾದವರು ಸಾಕ್ಷಿಕೊಡುವರು

*****

ಬರುವ ಜನವರಿ ಎರಡನೇ ವಾರದ ಕೊನೆಯಲ್ಲಿ ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ದೊಡ್ಡ ಜಾತ್ರೆ ನಡೆಯುವಾಗ್ಗೆ ಅಲ್ಲಿ ಸರ್ಕಾರದವರು ಗೋಕಾಯಿಗಳ ಪ್ರದರ್ಶನವನ್ನು ಮಾಡಿಸಬೇಕೆಂದು ಗೊತ್ತುಮಾಡಿದಾರೆ ಉತ್ಕೃಷ್ಟವಾಗಿ ಸಾಕಿರುವ ಉಳುವೆ ಎತ್ತುಗಳಿಗೂ ಬೀಜದ ಹೋರಿಗಳಿಗೂ ಗಂಡು ಕರಗಳಿಗೂ ಅಂದರೆ ಒಟ್ಟು ಹತ್ತು ರಾಸುಗಳಿಗೆ ೧೦೦ ರೂಪಾಯನ್ನು ೨೦ ರೂಪಾಯಿಗಳ ಮೊದಲು ೫ ರೂಪಾಯವರೆಗೆ ಹತ್ತು ಬಹುಮಾನಗಳನ್ನೂ, ಅವುಗಳ ಜೊತೆಗೆ ಸರ್ಟಿಫಿಕೇಟುಗಳನ್ನೂ ಕೊಡುತ್ತಾರೆ ಈ ಪ್ರದರ್ಶನವು ೧೬ನೆ ತಾ ನಡೆಯುವದರಿಂದ ರಾಸುಗಳನ್ನು ತೆಗೆದುಕೊಂಡು ಹೋಗತಕ್ಕವರು ಅದಕ್ಕೆ ಹಿಂದಿನ ದಿನವೇ ಯಡತೊರೆ ಅಮಲ್ದಾರರಿಗೆ ತಮ್ಮ ಹೆಸರನ್ನು ಹೇಳಿ ಬರೆಸಬೇಕು

ಬಹುಮಾನ ಪಡೆದ ವರ್ತಮಾನವು

[ಈ ವರ್ತಮಾನ ಕಳುಹಿಸಿದ ಮ॥ ಸಿ ಎಸ್ ಡೇವಿಡ್, ಲಾಲ್ ಬಾಗ್, ಬೆಂಗಳೂರು ಸಿಟಿ, ಇವರಿಗೆ ಈ ವಾರದ ಬಹುಮಾನ ಕಳುಹಿಸಿದೆ]

ಒಬ್ಬ ತಂತ್ರ ಮಹಮದೀಯನು ವಿಷಯುಕ್ತ ಸಕ್ಕರೆಯನ್ನು ಕೊಟ್ಟು ಹಣವನ್ನು ಅಪಹರಿಸಲು ಪ್ರಯತ್ನಪಟ್ಟದ್ದು

ಇದೇ ಬೆಂಗಳೂರು ಸಿಟಿ ಪಾಚ್ಚಣ್ಣನ ಭಾವಿ ಹತ್ತಿರ ಒಂದು ಸಣ್ಣ ಮಂಟಪವಿದೆ ಆ ಮಂಟಪದ ಸುತ್ತಲೂ ಕೆಲವು ಮಹಮದ್‌ಮತ ಗೋರಿಗಳಿವೆ ಈ ಸ್ಥಳದಲ್ಲಿ ನಾನಾ ದೇಶಗಳಿಂದ ಕುದುರೆಗಳನ್ನು ತಂದು ಬಿಕರಿಮಾಡುತ್ತಾ ಅಲ್ಲಿರುವ ಮಂಟಪದಲ್ಲಿ ವಾಸಮಾಡುತ್ತಾ ಇರುತ್ತಾರೆ ಹೀಗಿರುವಲ್ಲಿ ಕಳೆದ ತಿಂಗಳು ೨೭ ನೇ ತಾ ಮಂಗಳವಾರ ರಾತ್ರಿ ಸುಮಾರು ೧೦—೧೧ ಗಂಟೆ ಸಮಯದಲ್ಲಿ ಒಬ್ಬ ಕಳ್ಳ ಮಹಮ್ಮದೀಯನು ಸ್ವಲ್ಪ ಸಕ್ಕರೆಯನ್ನು ತಂದು ಅದರಲ್ಲಿ ಮತ್ತೇರುವ ಪದಾರ್ಥವನ್ನು ಬೆರಸಿ, ಅಲ್ಲಿರುವ ಗೋರಿಗಳಿಗೆ ಜಪಿಸುವ ಹಾಗೆ ಜಪಿಸಿ, ಸೇಲಂನಿಂದ ಕುದುರೆಗಳನ್ನು ತಂದು ಬಿಕರಿಮಾಡಲು ಬಂದಿದ್ದ ನಾಲ್ಕು ಜನಗಳಿಗೆ ಸ್ವಲ್ಪ ಸ್ವಲ್ಪ ಕೊಟ್ಟು ಆ ಕಳ್ಳನು ಸಹಾ ಅವನ ಪಕ್ಕದಲ್ಲೇ ಮಲಗಿಕೊಂಡಿದ್ದನಂತೆ ಇವರು ತಿಂದ ಸ್ವಲ್ಪ ಹೊತ್ತಿಗೆ ಮತ್ತೇರಿ ಜ್ಞಾನವಿಲ್ಲದೆ ನಾಲ್ವರಲ್ಲಿ ಇಬ್ಬರು ದಿಕ್ಕಾಪಾಲಾಗಿ ಓಡಲು ಪ್ರಯತ್ನಪಟ್ಟರು ೧ ನೆಯವನನ್ನು ಹಿಡಿದು ತರುತ್ತೇನೆಂದು ೨ನೆಯವನು ಹೇಳಿ ಓಡಿದನು ಆದರೆ ೩ನೇ, ೪ ನೆಯವರು ಸ್ವಲ್ಪ ಹುಷಾರಾಗಿದ್ದ ಕಾರಣ ೨ನೆಯವನನ್ನು ಬಹು ಪ್ರಯಾಸದಿಂದ ಹಿಡಿದುತಂದು ಸ್ವಲ್ಪ ಗಲಾಟೆಮಾಡಿದ ನಂತರ ಆ ಕಳ್ಳ ಪರಾರಿಯಾದನು ಆದರೆ ೧ ನೆಯವನನ್ನು ರಾತ್ರಿಯೆಲ್ಲಾ ಹುಡುಕಿದರೂ ಅವನು ಪತ್ತೆ ಆಗದೆಹೋದಕಾರಣ ಪೋಲೀಸಿಗೆ ತಿಳಿಸಿದರು ಅವರು ಸಹಾ ಹುಡುಕಿದರು ಪತ್ತೆಯಾಗಲಿಲ್ಲ ಬಾಕಿ ಮೂರು ಮಂದಿ ಬುಧವಾರ, ಗುರುವಾರವೆಲ್ಲಾ ಅನ್ನನೀರಿಲ್ಲದೆ ಹುಡುಕಿ ಶುಕ್ರವಾರದ ದಿನ ತಮ್ಮ ದೇಶದ ಕಡೆ ದುಃಖದಿಂದ ತೆರಳಿದರು ಆದರೆ ತಪ್ಪಿಸಿಕೊಂಡ ೧ ನೆಯವನು ಪಕ್ಕದಲ್ಲೇ ಒಂದು ಗುಡಿಯೊತದ(?) ಭಾವಿಯಲ್ಲಿ ಬಿದ್ದಿದದ್ದನ್ನು ನಿನ್ನೆ ಶನಿವಾರ ಯಾರೋ ನೋಡಿ ಪೋಲೀಸಿಗೆ ತಿಳಿಸಲು ಪೋಲೀಸಿನವರು ಶನಿವಾರ ರಾತ್ರಿಯೆಲ್ಲಾ ಕಾವಲಿದ್ದರು ಈ ದಿನ ಅಂದರೆ ಭಾನುವಾರ ಮ್ಯಾಜಿಸ್ಟ್ರೇಟರು ಬಂದರು ಆಜಮಾಯಿಷಿ ಮಾಡಿ ರೂಲ್ಸು ಮೇರಿಗೆ ಆಸ್ಪತ್ರೆಗೆ ಕಳಿಸಿದರು ೨ನೆ ಯವನನ್ನು ಅವರು ತಡೆದು ಹಿಡಿಯದೆ ಹೋಗಿದ್ದರೆ ಅವನು ಸಹಾ ಭಾವಿಯಲ್ಲಿ ಬೀಳುತ್ತಿದ್ದನು ಎರಡು ವರ್ಷಗಳ ಕೆಳಗೆ ಇದೇ ರೀತಿಯಲ್ಲಿ ಸಕ್ಕರೆಯನ್ನು ತಿಂದು ಒಬ್ಬ ಕಾಡುರೆಯವನು ಸಂಪಿಗೆಳ್ಳ ಕೆರೆಗೆ ಆಹುತಿಯಾದನು ಆ ಕಳ್ಳ ಮಹಮದೀಯನಿಗೆ ಎರಡಾಪತ್ತಿಯೂ ಒಂದು ಕಾಸು ಸಹಾ ದೊರೆಯಲಿಲ್ಲ. ದೂರದೇಶದಲ್ಲಿರುವ ಇವನ ಹೆಂಡತಿ ಮಕ್ಕಳ ಮತ್ತು ಬಂಧುಗಳ ಗೋಳಾಟವು ಎಷ್ಟಿರಬಹುದೋ ವಾಚಕರೇ ಊಹಿಸಲಿ! ಇದರಿಂದ ಸಕಲರಿಗೂ ತಿಳಿಯಪಡಿಸುವದೇನೆಂದರೆ—ಗುರ್ತು ಪರಿಚಿತಿ ಇಲ್ಲದೆ ಇರುವವರು ಏನು ಕೊಟ್ಟರೂ ಯಾರೂ ತಿನ್ನಬಾರದು ಅನೇಕ ಮಹಮ್ಮದೀಯರು ಹಿಂದುಗಳು ಸಹಾ ತಿನ್ನುತ್ತಾರೆ ಆದರೆ ಬಹಳ ಎಚ್ಚರಿಕೆಯಾಗಿರಬೇಕೆಂದು ನನ್ನ ಕೋರಿಕೆಯಾಗಿದೆ.

[ಬಹುಮಾನದ ಪೋಟಾಟಕ್ಕಾಗಿ ಬಂದ ಇನ್ನೊಂದು ವರ್ತಮಾನ]

ಸತ್ತುಹೋದವಳನ್ನು ಬದುಕಿಸಲು ಪ್ರಯತ್ನಿಸಿ ಔಷಧ ಪ್ರಯೋಗಮಾಡಿದ್ದು

ಕಳೆದ ನವಂಬರ್ ೨೬ ನೆ ಸೋಮವಾರ ಸೊರಬ ತಾಲ್ಲೂಕು ಕವಡಿ ಗ್ರಾಮದಲ್ಲಿ ವಾಸಿಸುತ್ತಿದ್ದ ಕುರುಬರ ನಿಂಗಮ್ಮ ಎಂಬುವಳು ಮಧ್ಯಾಹ್ನ ಸುಮಾರು ೨ ಘಂಟೆಯ ಸಮಯದಲ್ಲಿ ತನ್ನ ಗದ್ದೆಯನ್ನು ಕೊಯ್ಯುವದಕ್ಕೆ ಹೋದಳು ಆಕೆಯು ತನ್ನ ಗದ್ದೆಗೆ ಸಮೀಪಿಸಿದ ಕೂಡಲೇ ಅದರ ಬದುವಿನ ಹುಲ್ಲಿನಲ್ಲಿದ್ದ ಒಂದು ದೊಡ್ಡ ಸರ್ಪವು ಆಕೆಯ ಕಾಲನ್ನು ಹಲ್ಲುಗಳು ಇಳಿಯುವಂತೆ ಬಲವಾಗಿ ಕಚ್ಚಿತು ಕೂಡಲೇ ಆಕೆಯು ತನ್ನ ಕಾಲನ್ನು ಝಾಡಿಸಿದಳು ಪುನಃ ಆ ಸರ್ಪವು ಆಕೆಯನ್ನು ಅಟ್ಟಿಕೊಂಡೇ ಬಂತು ೫೦ ವರ್ಷ ಪ್ರಾಯದವಳಾದ ಈಕೆಯು ಓಡಲಾರದೆ ಕಿರಚಿಕೊಂಡಳು ತಕ್ಷಣವೇ ಸಮೀಪದ ಗದ್ದೆಗಳಲ್ಲಿದ್ದವರು ಓಡಿಬಂದರು ಅಷ್ಟರೊಳಗಾಗಿ ಆ ಸರ್ಪವು ಮಾಯವಾಗಿಹೋಗಿತ್ತು ಅನೇಕ ಕಡೆ ಹುಡುಕಿದರೂ ಅದು ಸಿಕ್ಕಲೇ ಇಲ್ಲ ಅಷ್ಟರಲ್ಲಿ ಆಕೆಗೆ ಪಾನೆ ಸುಸ್ತಾಗುವದಕ್ಕೆ ಪ್ರಾರಂಭಿಸಿತು ಕೂಡಲೇ ಬಂದಿದ್ದವರು ಬೇಲಿಗಳ ಮೇಲೆ ಬೆಳೆದಿರುವ ಹಿಂಡ್ಲಿಕಾಯಿ ಎಂಬುವದನ್ನು ತಿನ್ನಿಸಿದರು ಅದು ತುಂಬಾ ವಿಷ ಪದಾರ್ಥವಾದ್ದರಿಂದ ತಂದುಹೋಗಿದ್ದ ಅನ್ನವೆಲ್ಲಾ ವಾಂತಿಯಾಯಿತು ಆಕೆಯು ನಡಿಯಲಾರದೆಹೋದಳು ಕೂಡಲೇ ಕೆಲವರು ಆಕೆಯನ್ನು ಹೊತ್ತುಕೊಂಡು ಬಂದು ಆಕೆಯ ಮನೆಯ ಜಗಲಿಯ ಮೇಲೆ ಇಳಿಸಿದರು ಅಷ್ಟರಲ್ಲಿ ಆಕೆಗೆ ಬುದ್ಧಿಯು ತಪ್ಪಿಹೋಯಿತು ಇದನ್ನು ಕಂಡ ಆಕೆಯ ೬ ವರುಷದ ಕೊನೆಯ ಮಗನು ಕರಿಯಣ್ಣನೆಂಬುವ ತನ್ನ ಭಾವನ ಕಾಲಿಗೆ ಬಿದ್ದು—ಅಯ್ಯೋ ಭಾವಾ, ನಮ್ಮಮ್ಮ ಸಾಯುತ್ತಾಳಲ್ಲೋ! ಬದುಕಿಸಿ ಕೊಡೋ! ಎಂದು ಅತ್ತನು ಅದಕ್ಕವನು—ಯಾಕೆ ಅಂಜುತ್ತೀ, ಸುಮ್ಮನಿರು, ನಾನೀಗ ವೈದ್ಯ ಮಾಡ್ತೇನೆ, ಜಾಸ್ತಿ ಔಷಧಿ ಕೊಡುವದು ನನಗ್ಗೊತ್ತು ಎಂದು ತನ್ನಲ್ಲಿದ್ದ ಔಷಧಗಳನ್ನೆಲ್ಲಾ ಕೊಟ್ಟರೂ ಗುಣವಾಗಲಿಲ್ಲ ಅಷ್ಟರಲ್ಲಿ ಆಕೆಯು ತನ್ನ ಜೀವಮಾನದ ಕೊನೇಸ್ಥಾನ ಸೇರಿದಳು ನಾಲಿಗೆಯು ಬಿದ್ದುಹೋಯಿತು ಇದನ್ನು ಕಂಡ ಆಕೆಯ ಹಿರೀಮಗಳು—ಅಯ್ಯಯ್ಯೋ, ನನಗ್ಯಾರು ಗತಿ! ಅಣ್ಣಯ್ಯಾ, ನೀನಾದರೂ ಅವ್ವನ ಜೀವ ಕೊಡೋ ಎಂದು ಹೇಳುತ್ತಿರುವಲ್ಲಿ ಆಕೆಯ ಪ್ರಾಣವೇ ಹೋಯಿತು ಅವನು ಕೂಡಲೇ—ಎಲೆಲಾ, ಒಂದು ಲಿಂಬೇಕಾಯಿ ತನ್ನಿ ನನ್ನದೊಂದು ಬುಲೌಸ್ತೇ ಹಾಕ್ತೀನಿ ಎಂದು ನಿಂಬೆಹಣ್ಣನ್ನು ಕೊಯ್ದು, ಅದರಲ್ಲಿ ಒಂದು ಗುಳಿಗೆಯನ್ನು ತೇದು ಬಗ್ ಬಗ್ನೇ ಸುಳಿಗೇಟು, ಕಣ್ಣಿಗೇಟು ತೀಕ್ಷ್ಣಲಾ ಅಂದನು ಜೀವವೇ ಹೋಗಿದ್ದ ಆ ಪ್ರಾಣಿಯ ಸುಳಿಗೂ ಕಣ್ಣಿಗೂ ಹಾಕಿದರೂ ಯಾವ ಪ್ರಯೋಜನವೂ ತೋರಲಿಲ್ಲ ಬಳಿಕ ಅವಳ ಹಿರೀಮಗನು—ಅಯ್ಯೋ, ನಮ್ಮವ್ವ! ಮನೆ ವೈಪಟ್ಯಾರೇ ನಡಿಸುತ್ತಾರೆ! ಎಂದು ಎದೆ ಬಡಿದುಕೊಂಡು, ಗಾಡ ಬಾಬಣ್ಣನನ್ನು ಕರೆಯಿರಿ ಅಂದನು ಗೌಳಿ ಬಾಬಣ್ಣನು ಬಂದು—ನಾನು ಮಂತ್ರಿಸಿದೇನೆ ಎಂದು ಮಂತ್ರಿಸಿದ ನೀರನ್ನು ಕೊಟ್ಟನು. ಅದನ್ನು ಹೆಣದ ಬಾಯಿಗೆ ಹಾಕಿದರು ಎಲ್ಲಾ ಈಚೆಗೇ ಸುರಿದುಹೋಯಿತು ಬಳಿಕ ನೋಡುವದಕ್ಕೆ ಬಂದಿದ್ದ ಗುಂಪಿನವರಲ್ಲಿ ಕೆಲವರು—ಎಲೆಲಾ ಯಾಕ್ರಲೇ, ಸೂರ್ನ್ಕಳ್ಗ ತಂದ್ರಿ! ಹಿಡಿದೀಟ್ನ ಹಾಕ್ರಿ, ಬಿಸಿಲ್ಗೆ ಬಂದ್ರೆ ಜೀಂವ ಬರ್ತಾದ್ರೆ ಅಂದರು ಮತ್ತೆ ಕೆಲವರು ಆಕೆಯ ಮೈಯ್ಯನ್ನು ಮುಟ್ಟಿ ನೋಡಿ— ಅಂಗೈಯಲ್ಲಿ ಬಡಿತಯ್ತೆ ಜೀಂವ, ಬೇಗ ರಾಗಿ ಕಲ್ಲನ್ನು ತಂದು ತಲ್ಗೇರಿರಿ ಅಂದರು ಅದರಂತೆ ಸುಮಾರು ೫ ಮಣ ತೂಕವಾದ ರಾಗಿ ಕಲ್ಲನ್ನು ತಂದು ಹೆಣದ ತಲೆಯ ಮೇಲೆ ಇಡಲು, ಕುತ್ತಿಗೆಯು ಫಳಕ್ಕನೇ ತಿರಿಚಿಕೊಂಡಿತು ಇಬ್ಬರು ಕುತ್ತಿಗೆಗೆ ಕೈಕೊಟ್ಟು ಆ ಹೆಣವನ್ನು ೨೦ ನಿಮಿಷಗಳವರಿಗೂ ಹಿಡಿದಿದ್ದರೂ ಯಾವ ಜೀವವಾದರೂ ಬರಲೇ ಇಲ್ಲ. ಬಳಿಕ ಎಲ್ಲರೂ ಬಾಯಿಬಡಿದುಕೊಂಡು ಆಕೆಯನ್ನು ಮಲಗಿಸಿ ಕಾಲುಗಳನ್ನು ಮಡಚಿದರು

ಜನರು ಇನ್ನಾದರೂ ತಮ್ಮ ಮೌಢ್ಯದ ನಂಬಿಕೆಯನ್ನು ಬಿಡದೆ ಇರುವದಕ್ಕೆ ತುಂಬಾ ವ್ಯಸನ ಪಡುತ್ತೇನೆ ಪಟ್ಟವೆಲ್ಲಾ ಹಾಳಾದ ಮೇಲೆ ಕೋಟೆ ಕಾಪರೆಂಬ ನಾಮತಿಯು ಇವರಲ್ಲಿ ನೆರವೇರಿದ್ದರಿಂದ ಆಶ್ಚರ್ಯ ಪಡುತ್ತೇನೆ ಇವರು ವರ್ತಿಸಿದ ರೀತಿಯು ಹಾಸ್ಯಾಸ್ಪದವಾಗಿದ್ದರೂ ಆ ಮನೆಯವರ ವಿಷಯದಲ್ಲಿ ನಾನು ಬಹಳವಾಗಿ ಚಿಂತಿಸುತ್ತೇನೆ ಯಾಕೆಂದರೆ ಇದಕ್ಕೆ ೨ ವರ್ಷಗಳ ಕೆಳಗೆ ಆ ಮನೆಯ ಯಜಮಾನನು ತೀರಿಹೋದನು ಈಗ ಈ ಯಜಮಾನಿಯು ತೀರಿಹೋದಳು. ಮನೆಯಲ್ಲಿ ಮೂವರು ಸಣ್ಣ ಪುಟ್ಟ ಗಂಡು ಮಕ್ಕಳೂ ಒಬ್ಬ ಹೆಣ್ಣುಮಗಳೂ ಇದ್ದಾರೆ ಅವರ ದುಃಖವನ್ನು ವಿವರಿಸುವದಕ್ಕೆ ಆಗುವದಿಲ್ಲ. ಇವರಿಗೆ ಯಾವ ಪಿತ್ರಾರ್ಜಿತ ಸ್ಥಿತಿಯೂ ಇಲ್ಲ ಅವರ ಗೋಳನ್ನು ಭಗವಂತನೇ ಪರಿಹರಿಸಿ ಅವರನ್ನೂ ಅವರ ಮನೆಯವರನ್ನೂ ಕಾಪಾಡಬೇಕಾಗಿದೆ

ವಿಶೇಷ ವಿಷಯಗಳು.

ರಾಜಕುಮಾರರೂ ಪತ್ರಿಕಾಕರ್ತರೂ

ಕಲ್ಕತ್ತಾ ಪಟ್ಟಣದಲ್ಲಿ ಪ್ರಕಟವಾಗುವ "ಅಮೃತ ಬಜಾರ್ ಪತ್ರಿಕೆಯ" ಅಧ್ಯಕ್ಷ್ಯರು ಪ್ರಿನ್ಸ್ ಆಫ್ ವೇಲ್ಸ್‌ರವರು ಈ ದೇಶಕ್ಕೆ ದಯಮಾಡಿಸಿದ್ದಾಗ ಸದರಿ ರಾಜರ ಪುತ್ರರನ್ನು ಭೇಟಿಮಾಡಬೇಕೆಂದು ಕೇಳಿಕೊಂಡರು. ಇದಕ್ಕೆ ರಾಜಪುತ್ರರು ಸಮ್ಮತಿಸಿ, ಪತ್ರಿಕಾಧಿಪತಿಗಳು ಹೋಗಿ ಕಾಣಿಸಿಕೊಂಡ ಕೂಡಲೆ ತಮ್ಮ ಸ್ಥಾನದಿಂದೆದ್ದು ಪತ್ರಿಕಾಧ್ಯಕ್ಷರಿಗೆ ಹಸ್ತಲಾಘವಕೊಡುವುದಕ್ಕೆ ಕೈಯನ್ನು ನೀಡಿದರು. ಆಗ ಪತ್ರಿಕಾಕರ್ತರು ರಾಜಪುತ್ರರನ್ನು ಕುರಿತು—ಮಹಾಸ್ವಾಮಿ, ತಾವು ಮುಂದಕ್ಕೆ ನಮ್ಮನ್ನಾಳುವ ದೊರೆಯಾಗಿದ್ದೀರಿ. ತಮ್ಮಂಥವರಿಗೆ ನಾವು ನಮ್ಮ ಕೈನೀಡಿ ತಮ್ಮ ಹಸ್ತಸ್ಪರ್ಶನವನ್ನು ಮಾಡುವುದು ನಮಗೆ ಯೋಗ್ಯವಾದುದಲ್ಲವೆಂದು ಹೇಳಿ ರಾಜಪುತ್ರರ ಇದಿರಿಗೆ ಮೊಣಕಾಲೂರಿ ಕೈಜೋಡಿಸಿಕೊಂಡು ಮಹಾಸ್ವಾಮಿ, ನಾನು ಅಲ್ಪಮನುಷ್ಯನು, ತಾವು ಈ ರೀತಿ ನನಗೆ ತಮ್ಮ ಭೇಟಿಯನ್ನು ದಯಪಾಲಿಸಿದ್ದು ನನಗೆ ಎಷ್ಟೋ ಸನ್ಮಾನ ಮಾಡಿದಂತಾಯಿತು. ಯಾವಜ್ಜೀವವೂ ನಾನು ಇದನ್ನು ಸ್ಮರಿಸುತ್ತಿರುವೆನು. ನಮ್ಮ ಭವಿಷ್ಯತ್ ಚಕ್ರವರ್ತಿ ಮಹಾರಾಜರವರ ಸಾನ್ನಿಧ್ಯವು ದೊರೆತಿರುವ ಇಂಥ ಅಪೂರ್ವ ಸಮಯದಲ್ಲಿ ನಾನು ಭಯಭಕ್ತಿ ವಿನಯಪೂರ್ವಕವಾಗಿ ಮಹಾಸ್ವಾಮಿಯನ್ನು ಬೇಡಿಕೊಳ್ಳುವುದೇನೆಂದರೆ—ಈ ದರಿದ್ರ ಹಿಂದುಸ್ಥಾನವು ಬಹಳ ಹೀನಸ್ಥಿತಿಯಲ್ಲಿದೆ. ಇದು ತಮ್ಮಿಂದ ಸಂರಕ್ಷಿತವಾಗಬೇಕು. ತಾವೇ ನಮ್ಮ ಭವಿಷ್ಯತ್ ಚಕ್ರವರ್ತಿ ಸಾರ್ವಭೌಮರಾಗಿದ್ದೀರಿ. ನಮ್ಮನ್ನು ಮರೆಯಕೂಡದೆಂದೂ, ವಿಲಾಯತಿಯಲ್ಲಿರುವ ನಾಲ್ಕು ಕೋಟಿ ಪ್ರಜೆಗಳಂತೆಯೇ ನಮ್ಮನ್ನೂ ಭಾವಿಸಿ, ನಮ್ಮ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕೆಂದೂ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ ಎಂಬೀ ರೀತಿಯಾಗಿ ಬೇಡಿಕೊಂಡರು. ಇಂಥ ಪ್ರಾರ್ಥನೆಯನ್ನು ಲಾಲಿಸಿ ಪ್ರಿನ್ಸ್ ಆಫ್ ವೇಲ್ಸರವರು ಕರುಣಾದ್ರ್ರಹೃದಯರಾಗಿ, ಮೊಣಕಾಲೂರಿ ನಿಂತಿದ್ದ ಪತ್ರಿಕಾಕರ್ತರನ್ನು ಎಬ್ಬಿಸಿ, ಅವರನ್ನು ಕುರಿತು—ನಿಮ್ಮನ್ನು ಕಂಡದ್ದರಿಂದ ನಮಗೆ ಬಹಳ ಸಂತೋಷವಾಯಿತು. ನಾನು ಹಿಂದುಸ್ಥಾನದವರನ್ನು ಮರೆತುಬಿಡುವದಿಲ್ಲವೆಂಬ ಭರವಸವನ್ನು ಪಡೆಯಬೇಕೆಂದಪೇಕ್ಷಿಸುತ್ತೀರಲ್ಲವೇ. ಅವರನ್ನು ಖಂಡಿತವಾಗಿ ಮರೆಯುವುದಿಲ್ಲವೆಂದು ದೃಢವಾಗಿ ತಿಳಿದುಕೊಳ್ಳಿ. ಸರ್ವದಾ ನಾನು ಅವರನ್ನು ಸ್ಮರಿಸಿಕೊಳ್ಳುತ್ತೇನೆ. ಇದಲ್ಲದೆ ಹಿಂದುಸ್ಥಾನದ ಪ್ರಜೆಗಳು ನನ್ನನ್ನು ಮಹಾ ಆಟ್ಟಹಾಸಪೂರ್ವಕವಾಗಿಯೂ ಅತ್ಯಂತ ವೈಭವಯುಕ್ತವಾಗಿಯೂ ಇದಿರುಗೊಂಡು ಸತ್ಕಾರಮಾಡಿದರೆಂಬೀ ವೃತ್ತಾಂತವನ್ನು ನಮ್ಮ ತಂದೆಯವರಾದ ಮಹಾರಾಜಾ ಚಕ್ರವರ್ತಿಯವರಿಗೆ ಖಂಡಿತವಾಗಿಯೂ ಅರಿಕೆ ಮಾಡುವೆನು ಎಂಬೀ ರೀತಿ ಉತ್ತರವನ್ನು ದಯಪಾಲಿಸಿ ಅಪ್ಪಣೆಕೊಟ್ಟು ಕಳುಹಿಸಿದರು. ಪತ್ರಿಕಾಕರ್ತರು ಇಂಥ ಅಪೂರ್ವವಾದ ಪ್ರತ್ಯುತ್ತರವನ್ನು ಪಡೆದು ಬಹಳ ತೃಪ್ತಿಹೊಂದಿದವರಾಗಿ ಹೊರಟುಹೋದರು.

ಸ್ವದೇಶೀ ಕಾರ್ಯಗಳು

ಈಗ ಸುಮಾರು ೩೦ ವರ್ಷಗಳಿಂದ ಸ್ವದೇಶಾಭಿಮಾನ ಸಾಹಸಗಳೆಂಬ ಕೆಂಡವು ಬೂದಿಯಲ್ಲಿ ಮುಚ್ಚಿಕೊಂಡಿದ್ದು ಆಗಿಂದಾಗ್ಗೆ ಹೊಗೆಯಾಡುತ್ತಿದ್ದಿತು. ಈಚೆಗೆ ಬಂಗಾಳಾ ಆಧಿಪತ್ಯವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟ ಮೇಲೆ ಕೆಂಡವು ಸ್ಫೋಟಿಸಿ ಜೋರಾಗಿ ಕಾಣಿಸಿತು. ಅಂದಿನಿಂದೀಚೆಗೆ ಅದು ಚೆನ್ನಾಗಿ ಉರಿಯುವುದಕ್ಕಾರಂಭಿಸಿ ಬಂಗಾಳಾ ಆಧಿಪತ್ಯದಲ್ಲಿ ವಿಶೇಷ ಪಟಾಟೋಪದಿಂದಲೂ, ಬೊಂಬಾಯಿ ಆಧಿಪತ್ಯದಲ್ಲಿ ಸದ್ದಿಲ್ಲದೆಯೂ ಬಹಳ ಕೆಲಸಗಳನ್ನು ಮಾಡಿತು. ಮದರಾಸ್ ಆಧಿಪತ್ಯದಲ್ಲಿ ಬರಿಯ ಮಾತುಗಳು ಮಾತ್ರ ಸ್ವಲ್ಪ ಉತ್ಸಾಹದಿಂದ ಹೊರಟವೇ ಹೊರತು ಈ ಭಾಗದಲ್ಲಿ ಕಾರ್ಯವು ಮಾತ್ರ ವಿಶೇಷವಾಗಿ ನಡೆಯಲಿಲ್ಲ. ಮಿಕ್ಕ ಕಡೆಗಳಲ್ಲಿ ಅದರ ಪ್ರಸಕ್ತಿ ಕೂಡ ಇಲ್ಲದೆ ಹೋಯಿತು. ಮೈಸೂರು ದೇಶದಲ್ಲಿಯಂತೂ ಈ ವಾಸನೆಯೇ ಇಲ್ಲ. ಅನೇಕರು ಇದರಿಂದ ಸರ್ಕಾರಕ್ಕೆ ವಿರೋಧವಾಗಿ ನಡೆದಂತಾಗುತ್ತದೆಂದು ಬೆದರಿ ಅದರ ಸುದ್ದಿಯನ್ನೇ ಹಚ್ಚಿಕೊಳ್ಳಲಿಲ್ಲ. ಇದು ತಪ್ಪು. ಇದರಿಂದ ನಮ್ಮ ಮಾತೃಭೂಮಿಯಾದ ಹಿಂದೂದೇಶವನ್ನು ಅಭಿವೃದ್ಧಿಗೆ ತಂದು ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರವರ ದೇಶಭಾಗಗಳಲ್ಲಿ ಒಂದಾದ ಹಿಂದೂ ದೇಶವು ಉನ್ನತಪದವಿಗೆ ಬರುತ್ತಿದೆಯೆಂದು ಬ್ರಿಟಿಷ್ ಸರ್ಕಾರಕ್ಕೆ ಬಹಳ ಸಂತೋಷವುಂಟಾಗುವುದರಲ್ಲಿ ಸಂದೇಹವಿಲ್ಲ. ಬಂಗಾಳಾಧಿಪತ್ಯವು ಎರಡಾಗಿ ವಿಂಗಡಿಸಲ್ಪಟ್ಟು ಈಗತಾನೆ ಒಂದು ವರ್ಷವಾಗಿದೆ. ಅಷ್ಟು ಸ್ವಲ್ಪಕಾಲದಲ್ಲಿಯೇ ನಮ್ಮ ಹಿಂದೂದೇಶದಲ್ಲಿ ಸ್ವದೇಶಾಭಿಮಾನವನ್ನು ಪ್ರಕಟಗೊಳಿಸುವ ಅನೇಕ ಕಾರ್ಯಗಳು ನಡೆದಿವೆ. ನಮ್ಮ ಹಿಂದೂ ದೇಶದಲ್ಲಿ ಈಗ ಸುಮಾರು ೯೦೦ ಕಡೆಗಳಲ್ಲಿ ವಿಧವಿಧವಾದ ಬೆಂಕಿಯ ಕಡ್ಡಿಗಳ ಪೆಟ್ಟಿಗೆಗಳು ತಯಾರಾಗುತ್ತಿವೆ. ೪—೫ ಗಾಜಿನ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಮೇಣದ ಬತ್ತಿಗಳ ಕಾರ್ಖಾನೆಗಳು ಎರಡು ಇವೆ. ಕತ್ತಿ, ಚಾಕು, ಕತ್ತರಿ ಮೊದಲಾದ ಉಕ್ಕಿನ ಆಯುಧಗಳು ತಯಾರಾಗುವ ೫—೬ ಕಾರ್ಖಾನೆಗಳಿವೆ. ಲೇಖನಿಗಳೂ, ನಿಬ್ಬು (ಮುಳ್ಳು)ಗಳೂ ನಮ್ಮ ಹಿಂದೂ ದೇಶದಲ್ಲಿ ತಯಾರಾಗುತ್ತಿವೆ. ಕಾಗದಗಳು, ಸೀಸದ ಕಡ್ಡಿಗಳೂ ತಯಾರಾಗುವ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಬಟ್ಟೆಗಳನ್ನು ನೇಯುವ ಯಂತ್ರಗಳು ಲೆಕ್ಕವಿಲ್ಲದಷ್ಟು ಸ್ಥಾಪಿಸಲ್ಪಟ್ಟಿವೆ. ಬಟ್ಟೆಗೂ, ಮೈಗೂ ಉಪಯೋಗವಾಗುವ ಸಾಬೂನುಗಳ ಕಾರ್ಖಾನೆಗಳೂ ೩೦—೩೫ ಇವೆ. ಅಲ್ಲದೆ ಬ್ರಷ್, ಬೂಜಾಗಳಿಗೆ ಹಾಕುವ ವರ್ಣದ ಪಾಲಿಷ್‌ಗಳೂ, ಫ್ಲಾನೆಲ್‌ಗಳೂ, ಚಕ್ಕಬಟ್ಟೆಗಳೂ ಇವೇ ಮೊದಲಾದ ಸ್ವದೇಶವಸ್ತುಗಳನ್ನು ತಯಾರುಮಾಡುವ ಕೈಗಾರಿಕೆ ಮತ್ತು ಯಂತ್ರಗಾರಿಕೆಗಳು ದಿನೇದಿನೇ ಅಭಿವೃದ್ಧಿ ಹೊಂದುತ್ತಾ ಬರುತ್ತಿರುವುದು ಬಹು ಸಂತೋಷಸೂಚಕವಾಗಿದೆ. ಇದೇ ಸ್ಥಿತಿಯು ವೃದ್ಧಿಯಾಗುತ್ತಾ ಬಂದಲ್ಲಿ ನಮ್ಮ ಹಿಂದೂದೇಶವು ಶೀಘ್ರದಲ್ಲಿಯೇ ಉನ್ನತಪದವಿಗೆ ಬಂದು ನಮ್ಮ ದೇಶದ ಹಣವು ನಮ್ಮಲ್ಲಿಯೇ ನಿಂತು, ನಮ್ಮಲ್ಲಿರುವ ಬಡಬಗ್ಗರಿಗೆ ಸುಲಭವಾಗಿ ಜೀವನ ದೊರೆಯಲು ಅವಕಾಶವಾಗುವದು. ಯಂತ್ರಗಾರಿಕೆ ಮೊದಲಾದುವುಗಳನ್ನು ಕಲಿತುಕೊಳ್ಳುವುದಕ್ಕಾಗಿ ಈಗ ಜರ್ಮನಿ ದೇಶಕ್ಕೆ ಹೋಗಿರುವ ಹಿಂದೂದೇಶದ ವಿದ್ಯಾರ್ಥಿಗಳ ಸಂಖ್ಯೆಯು ೫೦. ಇದಲ್ಲದೆ ಇಂಗ್ಲೆಂಡ್ ಅಮೇರಿಕಾ ಜರ್ಮನಿ ಮುಂತಾದ ದೇಶಗಳಿಗೆ ನಮ್ಮ ದೇಶದ ವಿದ್ಯಾರ್ಥಿಗಳು ಹೋಗಿರುತ್ತಾರೆ. ಇವರು ಸಮರ್ಥರಾಗಿ ಹಿಂತಿರುಗಿದ ಮೇಲೆ ನಮ್ಮ ಹಿಂದೂ ದೇಶದಲ್ಲಿ ಬಹಳ ಒಳ್ಳೆಯ ಕೈಗಾರಿಕೆ ಯಂತ್ರಗಾರಿಕೆ ಕೆಲಸಗಳು ನಡೆಯುವದರಲ್ಲಿ ಸಂಶಯವಿಲ್ಲ. ಮುಖ್ಯ ಇಂಥ ವಿದ್ಯಾರ್ಥಿಗಳು ಓದುವುದಕ್ಕೆ ಹೋಗಲು ತಕ್ಕ ದ್ರವ್ಯಸಹಾಯವನ್ನು ನಮ್ಮ ದೇಶದ ಧನವಂತರು ಒದಗಿಸಿಕೊಡಬೇಕು. ಮತ್ತು ಯಂತ್ರಸ್ಥಾಪನಾ ವಿಷಯದಲ್ಲಿ ಹಿಂತೆಗೆಯದೆ ಹಣವನ್ನು ಖರ್ಚುಮಾಡಬೇಕು. ಇದರಿಂದ ಬಹಳ ಲಾಭವಿದೆ. ಇಷ್ಟುಮಾತ್ರವೇ ಅಲ್ಲ, ನಮ್ಮ ದೇಶವು ಅಭಿವೃದ್ಧಿಗೆ ಬರಬೇಕಾದರೆ ಸಾಮಾನ್ಯ ಜನಗಳಾದಿಯಾಗಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಲು ಪ್ರಯತ್ನಿಸಬೇಕು. ಈ ವಿಷಯದಲ್ಲಿ ನಮ್ಮ ಮೈಸೂರು ದೇಶದಲ್ಲಿ ಈಗ ಉದ್ದೇಶಿಸಲ್ಪಟ್ಟಿರುವ ಒಕ್ಕಲಿಗರ ಸಂಘವು ಬಹಳ ಪ್ರೋತ್ಸಾಹಕರವಾಗಿದೆ. ಮತ್ತು ನಮ್ಮ ಮೈಸೂರು ದೇಶದ ಸ್ತ್ರೀವಿದ್ಯಾಭ್ಯಾಸವು ಬಹಳ ಶ್ರದ್ಧೆಯಿಂದ ನಡೆಯುತ್ತಾ ಈಚೀಚೆಗೆ ಅದರ ಫಲಗಳು ಕೂಡ ಹೊರಕ್ಕೆ ಕಂಡುಬಂದಿವೆ. ಇನ್ನೂ ವ್ಯವಸಾಯ ಶಾಸ್ತ್ರದ ವಿಷಯದಲ್ಲಿಯೂ, ಆರೋಗ್ಯವಿಷಯದಲ್ಲಿಯೂ, ವ್ಯಾಪಾರವಿಷಯದಲ್ಲಿಯೂ, ವಿದೇಶಸಂಚರಣದ ವಿಷಯದಲ್ಲಿಯೂ ಅನೇಕ ಪ್ರೋತ್ಸಾಹಗಳು ನಡೆಯಬೇಕಾಗಿರುವುವು.

ಕಾಶ್ಮೀರದಲ್ಲಿ ದೇಶೀಯ ವರ್ತಕರೆಲ್ಲರೂ ಸೇರಿ ಒಂದು ಬೀಟುಯಾದ ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪಿಸಿ ಅದರ ಕೆಲಸವನ್ನು ಪ್ರಾರಂಭಮಾಡಿದಾರೆ. ದಿನ ಒಂದಕ್ಕೆ ಇದರಲ್ಲಿ ೩೩ ಟನ್ ಸಕ್ಕರೆಯು ತಯಾರಾಗುವುದು. ಟನ್ ಎಂದರೆ ಸುಮಾರು ೯೩ ಮಣ್ಣು ಅಥವಾ ೩೦ ದೊಡ್ಡ ಮಣ (ಅಥವಾ ೩೦ ದೊಡ್ಡ ಮಣ ತೂಕ) ಪಂಜಾಬಿಗೆ ಮನಿಮ್ಮಪಪ್ಪನಾಲ್ಕು ತೆಯಂತೆ ಬೆಲೆಯನ್ನು ಕಟ್ಟಿದರೂ ೫೦೦ ರೂಪಾಯಿಗಳ ಬೆಲೆ ಬಾಳುವ ಸಕ್ಕರೆಯು ಪ್ರತಿನಿತ್ಯದಲ್ಲಿಯೂ ತಯಾರಾಗುತ್ತದೆ, ಎಂದರೆ ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿಗಳ ಸಕ್ಕರೆಯು ತಯಾರಾಗುವದಾಗುವುದು. ಇಂಥ ಕಾರ್ಖಾನೆಗಳು ಉತ್ತರದೇಶದಲ್ಲಿ ವಿಶೇಷವಾಗಿರುವುದಕ್ಕೆ ಬಹಳ ಅವಕಾಶವಿದೆ. ಇಂಡಿಯಾದೇಶಕ್ಕೆ ಬೇಕಾದ ಸಕ್ಕರೆಯು ಈ ದೇಶದಲ್ಲಿ ಸಾಲದೆ ಅನ್ಯದೇಶದಿಂದ ತರಿಸಬೇಕಾಗಿರುವುದು. ಆದುದರಿಂದ ಮೇಲೆ ಹೇಳಿದಂಥ ದೇಶೀಯ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟರೆ ರಾಜ್ಯಕ್ಕೆ ಅನೇಕ ವಿಧದಲ್ಲಿ ಉಪಯೋಗವಾದೀತು.

ಫಲಾಹಾರದ ವಿಷಯ

ಫಲಾಹಾರವೆಂದರೆ ಉಪ್ಪಿಟ್ಟು ತಿನ್ನುವುದಲ್ಲ. ಹಣ್ಣುಗಳನ್ನು ತಿನ್ನುವುದು. ಫಲಾಹಾರವು ದೇಹಕ್ಕೆ ಹಿತಕರವೆಂದು ಪೂರ್ವದಲ್ಲಿ ಎಲ್ಲರೂ ತಿಳಿದಿದ್ದರು. ಈಚೀಚೆಗೆ ಅದನ್ನು ಹೆಚ್ಚಾಗಿ ಉಪಯೋಗಿಸುವುದರಿಂದ ಬಹಳ ಕೆಟ್ಟದ್ದೆಂದು ನಿಶ್ಚಯಮಾಡಿದರು. ಗಂಡುಹಿಟ್ಟು (starch) ಹೆಚ್ಚಾಗಿರುವ ಪದಾರ್ಥಗಳನ್ನು ಅಲಕ್ಷ್ಯಮಾಡುತ್ತಾ ಇದರಿಂದ ವಾಯು ಹೆಚ್ಚಾಗಿ ಕೆಟ್ಟ ವಾಯು ನೆಗಡಿ, ಕೆಮ್ಮು ಮುಂತಾದ ಜಾಡ್ಯಗಳು ಪ್ರಬಲವಾಗುತ್ತವೆಂದು ಕೆಲವರು ಹೇಳಲಾರಂಭಿಸಿದರು. ಹೀಗೆಂದು ಆಲ್‌ಫ್ರೆಡ್ ಕ್ರಿಸ್ಟೋಫರ್ ಹೇಳುತ್ತಾನೆ. ಕಾರ್ಖಾನೆಗಾರರು ಈ ಗಂಡುಹಿಟ್ಟನ್ನು ಕಡಮೆಮಾಡಲು ಏನೇನೋ ಯುಕ್ತಿಗಳನ್ನು ಮಾಡಿ ಒಂದಕ್ಕೆ ಹತ್ತರಷ್ಟು ಬೆಲೆಯನ್ನು ಜನಗಳಿಂದ ಕಸುಕೊಳ್ಳುತ್ತಾರೆ. ಮೇಲಿನ ಪದಾರ್ಥಗಳಿಂದ ಉಂಟಾಗುವ ವ್ಯಾಧಿಗಳನ್ನು ಹಣ್ಣುಗಳು ಹೋಗಲಾಡಿಸುತ್ತವೆಂಬುದು ನಿಶ್ಚಯವಾದ ಪಕ್ಷಕ್ಕೆ ಹಣ್ಣುಗಳನ್ನು ಕೂಡ ಕಾಲಕ್ಕೆ ತಕ್ಕಂತೆ ಉಪಯೋಗಿಸುತ್ತ ಬರಬೇಕು. ಹಣ್ಣುಗಳನ್ನು ಯಾವ ಪ್ರಕಾರದಲ್ಲಿ ತೆಗೆದುಕೊಳ್ಳಬೇಕು, ಎಷ್ಟು ಮಿತವಾಗಿ ಉಪಯೋಗಿಸಬೇಕು ಎಂಬೀ ಅಂಶಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಹಣ್ಣುಗಳನ್ನು ಕೂಡ ಹೆಚ್ಚಾಗಿ ಉಪಯೋಗಿಸಿದರೆ ಆದರೆ ದೇಹಕ್ಕೆ ಬಹಳ ಅನಾರೋಗ್ಯವನ್ನುಂಟುಮಾಡುವುದು. ವಿಶೇಷ ಅಭ್ಯಾಸಗಳನ್ನಿಟ್ಟುಕೊಳ್ಳದೆ, ಸಾಧಾರಣ ಆಹಾರದಲ್ಲಿ ನಿರತರಾಗಿರುವವರು ಕೂಡ ದಿನವೊಂದಕ್ಕೆ ತೂಕದ ಒಂದುಕಾಲು ಅಥವಾ ಒಂದೂವರೆ ಸೇರಿಗಿಂತ (ಎಂದರೆ ೩೦ ಅಥವಾ ೩೬ ತೊಲೆಗಳಿಗಿಂತ) ಹೆಚ್ಚಾದ ಹಣ್ಣುಗಳನ್ನು ಉಪಯೋಗಿಸಕೂಡದು. ಮಾಂಸಾಹಾರಿಗೆ ಮಾತ್ರ ಹಣ್ಣುಗಳು ವಿಶೇಷವಾಗಿ ಬೇಕಾಗುತ್ತವೆ. ಹಣ್ಣುಗಳನ್ನು ಅನ್ನ, ರೊಟ್ಟಿ, ಮೇಲಿನ ದಿನಸುಗಳು ಇವೇ ಮೊದಲಾದವುಗಳೊಡನೆ ಉಪಯೋಗಿಸಿದ ದಾದರೆ ಏನೂ ಪ್ರಕೃತಿಯುಂಟಾಗುವುದಕ್ಕೆ ಅನೇಕ ಕಾರಣಗಳಿವೆ. ಆದುದರಿಂದ ಹಣ್ಣುಗಳನ್ನು ಪ್ರತ್ಯೇಕವಾಗಿ ತಿನ್ನಬೇಕು. ಅದೂ ಅಲ್ಲದೆ ಹಣ್ಣುಗಳನ್ನು ಇತರ ಪದಾರ್ಥಗಳೊಂದಿಗೆ ತಿನ್ನದೆ ಕೊಂಡರೆ ಆದರೆ ಜೀರ್ಣಶಕ್ತಿಯು ಕಡಮೆಯಾಗುವುದು. ಆದರೆ ಕಾಯಿಪಲ್ಯಗಳನ್ನು ಅನ್ನ ರೊಟ್ಟಿಗಳೊಂದಿಗೆ ಸೇವಿಸಿದರೆ ಯಾವ ಬಾಧಕವೂ ಇಲ್ಲ. ಸರಿಯಾದ ಜೀರ್ಣಶಕ್ತಿ ಇಲ್ಲದವರು ಮೇಲ್ಕಂಡ ವಿಧಿಗಳನ್ನನುಸರಿಸಬೇಕು. ಜೀರ್ಣಶಕ್ತಿ ಇಲ್ಲದವರಿಗೆ ಉಪಯೋಗವಾಗುವುದಕ್ಕೋಸ್ಕರ ಮೊದಲೆಯೆ ಪಚನಮಾಡಿದ ಪ್ರಕೃತಿಗೆ ವಿರೋಧವಾದ ಆಹಾರ ವಸ್ತುಗಳನ್ನು ಕೆಲವರು ತಯಾರುಮಾಡಿ ವಿಕ್ರಯ ಮಾಡುತ್ತಾರೆ. ಇದರಿಂದ ಜನಗಳ ಆರೋಗ್ಯವು ಇನ್ನೂ ಹೆಚ್ಚಾಗಿ ಕೆಡಲು ಅವಕಾಶವಿದೆ. ಇದಕ್ಕೆ ಬದಲಾಗಿ ಹಣ್ಣುಗಳನ್ನು ಆಗಿಂದಾಗ್ಗೆ ಉಪಯೋಗಿಸುತ್ತ ಬರುವುದು ಎಷ್ಟೋ ಮೇಲು. ಮಧ್ಯಾಹ್ನದ ಭೋಜನ ಅಥವಾ ರಾತ್ರಿ ಭೋಜನಕ್ಕೆ ಒಂದು ಗಂಟೆ ಮುಂಚಿತವಾಗಿ ಒಂದೆರಡು ಕಿತ್ತಲೆಯ ಹಣ್ಣಿನ ರಸವನ್ನು ಉಪಯೋಗಿಸುತ್ತ ಬಂದಲ್ಲಿ ದೇಹಕ್ಕೆ ಎಷ್ಟು ಪುಷ್ಟಿಕರವೆಂಬುದು ಸ್ವಲ್ಪ ಕಾಲದಲ್ಲಿಯೇ ವ್ಯಕ್ತವಾಗುವುದು. ಇದರಿಂದ ದೇಹಕ್ಕೆ ಶಕ್ತಿ ಹೆಚ್ಚುವುದಲ್ಲದೆ ಕಾಲಾನುಕಾಲಕ್ಕೆ ಕಾಲಪ್ರವೃತ್ತಿಯಾಗಿ ಶರೀರವು ಬಹಳ ಹಗುರವಾಗುವುದು. ಕಿತ್ತಲೆಯ ಹಣ್ಣುಗಳೇ ಆಗಬೇಕೆಂಬ ನಿಯಮವಿಲ್ಲ. ಯೋಗ್ಯವಾದ ಯಾವ ಹಣ್ಣುಗಳನ್ನಾದರೂ ಸರಿ ಅನ್ನದೊಂದಿಗೆ ಬೆರಸದೆ ಊಟಕ್ಕೆ ೧ ಗಂಟೆ ಮುಂಚಿತವಾಗಿಯೇ ಉಪಯೋಗಿಸಬೇಕು. ಹಣ್ಣುಗಳೊಡನೆ ತುಪ್ಪ ಮುಂತಾದ ಜಿಡ್ಡು ಪದಾರ್ಥಗಳನ್ನು ಸೇವಿಸಬಾರದು.

ಇಂಡಿಯಾ ದೇಶದ ವೃತ್ತಾಂತಗಳು.

ಮದರಾಸ್ ಪಟ್ಟಣದ ಬಿನ್ನಿ ಕಂಪನಿಯವರು ಈಗ ಸಹಜವಬ್ದಾರಿಯ ಒಳ್ಳೆ ಬ್ಯಾಂಕು ಮಾಡಿಕೊಂಡು, ಮೊದಲಿನಂತೆಯೇ ಸಕಾರ್ಯಗಳನ್ನು ನಡೆಸುತ್ತಿದಾರೆ.

****

ಅಮೃತಸಾರ ಪಟ್ಟಣದಲ್ಲಿ ಕಳೆದ ತಿಂಗಳು ಕೆಲವು ದೇಶೀಯ ವರ್ತಕರ ಬ್ಯಾಂಕುಗಳು ದಿವಾಳಿಯಾದವು. ಇದರಿಂದ ಆ ಪ್ರಾಂತ್ಯ ಪ್ರಜೆಗಳಿಗೆ ಸುಮಾರು ೫೦ ಲಕ್ಷ ರೂಪಾಯಿನ ತನಕ ನಷ್ಟವಾಗಿದೆ.

****

ರಂಗೂನ್ ಪಟ್ಟಣದಲ್ಲಿ ಪ್ಲೇಗ್ ಉಪದ್ರವನ್ನು ನಿಲಿಸುವದಕ್ಕಾಗಿ ಮ್ಯುನಿಸಿಪಾಲಿಟಿಯವರಿಗೆ ೩॥ ಲಕ್ಷ ರೂಪಾಯಿ ಖರ್ಚಾಯಿತು. ಸರ್ಕಾರದವರು ಆ ಪೈಕಿ ಒಂದು ಲಕ್ಷವನ್ನು ತಾವು ಕೊಡುವುದಾಗಿ ತಿಳಿಸಿದಾರೆ.

****

ಅಲ್ವಾರ್ ಸಂಸ್ಥಾನದ ಮಹಾರಾಜರವರು ಪೋಲೋ ಎಂಬ ಚಂಡಿನ ಮೇಲೆ ಕುಳಿತು ಆಡುವ ಚಂಡಾಟದ ಸಂಧ್ಯದಲ್ಲಿ ಕುದುರೆಯ ದ ಬಿದ್ದು ಕತ್ತಿನ ಮೂಳೆಯನ್ನು ಮುರುಕೊಂಡು ಚಿಕಿತ್ಸೆ ಹೊಂದುತ್ತಿರುವುದಾಗಿ ತಂತಿ ವರ್ತಮಾನ ಬಂದಿದೆ.

****

ಪಂಜಾಬ್ ಪ್ರಾಂತ್ಯಗಳಲ್ಲಿ ಕಳೆದ ೧೯೦೪—೦೫ ನೆ ಸಾಲಿನ ಸಮಸ್ತ ಮ್ಯುನಿಸಿಪಲ್ ಟವುನುಗಳಲ್ಲೂ ಮ್ಯುನಿಸಿಪಾಲಿಟಿಗಳವರು ಬಹುಮಾನ ಕೊಟ್ಟು ೧೦ ಲಕ್ಷ ಇಲಿ ಹೆಗ್ಗಣಗಳಿಗಿಂತಲೂ ಹೆಚ್ಚಾಗಿಯೇ ಹಿಡಿಸಿ ಕೊಲ್ಲಿಸಿದರೆಂದು ಪ್ರಕಟವಾಗಿದೆ.

****

ಆಫ್ಘಾನಿಸ್ಥಾನದ ಅಮೀರರು ಬೊಂಬಾಯಿಗೆ ದಯಮಾಡುವಾಗ ಅವರನ್ನು ಮಲಬಾರ್ ಹಿಲ್ ಎಂಬಲ್ಲಿರುವ ಮಿ॥ ಆದಂಜಿ ಪೀರ್‌ಭಾಯಿ ಎಂಬ ಸಾಹುಕಾರರ ಬಂಗಲೆಯಲ್ಲಿ ಇಳಿಸಬೇಕೆಂದು ಗೊತ್ತುಮಾಡಿ, ಆ ಬಂಗಲೆಯನ್ನು ತಕ್ಕ ಹಾಗೆ ಅಲಂಕರಿಸುತ್ತಿದಾರೆ.

****

ಸಾಕ್ಷಿಗಾರನು ಸಿವಿಲ್ ಮೊಕದ್ದಮೆಯಲ್ಲಿ ಸಾಕ್ಷಿ ಹೇಳುವದಕ್ಕಾಗಿ ಭತ್ಯವನ್ನು ಅಂಗೀಕರಿಸಿ ಕೋರ್ಟಿಗೆ ಬಾರದೆ ಹೋದರೆ ಆ ಭತ್ಯದ ಮೊಬಲಗನ್ನು ಕಟ್ಟಿದ ಕಕ್ಷಿಗಾರನು ಆ ಸಾಕ್ಷಿಗಾರನಿಂದ ವಸೂಲು ಮಾಡಿಕೊಳ್ಳಬಹುದೆಂದು ಮದರಾಸ್ ಹೈಕೋರ್ಟಿನವರು ತೀರ್ಮಾನಮಾಡಿದಾರೆ.

****

ಲಾಹೋರ್ ಡಿಸ್ಟ್ರಿಕ್ಟಿಗೆ ಸೇರಿದ ರಾಯವಿಂಡ್ ಎಂಬ ಗ್ರಾಮದಲ್ಲಿ ಒಬ್ಬ ಮಹಮದೀಯ ಜಮೀನ್‌ದಾರನು ತನ್ನ ಬಾಬತು ಹೊಲಗದ್ದೆಗಳನ್ನು ಹಂಚಿಕೊಟ್ಟು ೩೦ ಕ್ರೈಸ್ತ ಸಂಸಾರಗಳನ್ನು ಮಹಮದೀಯ ಮತಕ್ಕೆ ಸೇರಿಸಿಕೊಂಡನೆಂದು ರೆ॥ ಸಿ ಎ ಗ್ರಾಫ್ ಎಂಬುವರು ತಿಳಿಸುತ್ತಾರೆ.

****

ಕಲ್ಕತ್ತಾ ಪಟ್ಟಣದಲ್ಲಿ ಈ ತಿಂಗಳ ಆಖೈರ್ ಭಾಗದಲ್ಲಿ ನಡೆಯುವ ಕೈಗಾರಿಕೆಗಳ ಸರ್ವವಸ್ತು ಪ್ರದರ್ಶನೋತ್ಸವಕ್ಕಾಗಿ ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ನಾನಾ ವಸ್ತುಗಳು ರವಾನೆಯಾಗುತ್ತಲಿವೆ. ಈ ಪ್ರದರ್ಶನಶಾಲೆಯನ್ನು ವೈಸ್‌ರಾಯಿ ಲಾರ್ಡ್ ಮಿಂಟೋ ಪ್ರಭುಗಳು ಮುಂದಾಳಾಗಿ ನಿಂತು ಪ್ರಾರಂಭಿಸುವವರಾಗಿದಾರೆ.

****

ಭಾವಲ್‌ಪುರದ ನವಾಬರು ಪರಿವಾರ ಸಹಿತ ಕಳೆದ ವಾರ ಹಿಂದುಸ್ಥಾನದಿಂದ ಅರೇಬಿಯಾಕ್ಕೆ ಯಾತ್ರೆ ಹೊರಟರು. ಅವರು ಮೊದಲು ಮದೀನಾಕ್ಕೆ ಹೋಗಿ ಅಲ್ಲಿಂದ ಪವಿತ್ರ ಕ್ಷೇತ್ರವಾದ ಮಕ್ಕಾ ಪಟ್ಟಣವನ್ನು ಸೇರಿ, ಯಾತ್ರೆ ಕೆಲಸಗಳನ್ನು ತೀರಿಸಿಕೊಂಡ, ಉದ್ದಕ್ಕೂ ದೊಡ್ಡ ದೊಡ್ಡ ಪಟ್ಟಣಗಳನ್ನೂ ನೋಡುತ್ತಾ ಸಂಚಾರ ಮಾಡಿಕೊಂಡು ವಾಪಸು ಬರುವವರಾಗಿದಾರೆ.

****

ಬರ್ಮಾ ಆಧಿಪತ್ಯಕ್ಕೆ ಸೇರಿದ ರಂಗೂನ್ ಪಟ್ಟಣದಲ್ಲಿ ೪೦ ಗ್ಯಾಲನ್ ಪ್ರಮಾಣದ ೬ ಪೆಟ್ರೋಲ್ ಪೀಪಾಯಿಗಳನ್ನು ಭೂಮಿಯೊಳಗೆ ಹೂಳಬೇಕೆಂದು ಕಳೆದ ವಾರ ಗುಂಡಿಗಳನ್ನು ತೋಡುತ್ತಿರುವಾಗ್ಗೆ ಮೇಲ್ಭಾಗದ ಮಣ್ಣುಗಡ್ಡೆಗಳು ಅಕಸ್ಮಾತ್ತಾಗಿ ಗುಂಡಿಯೊಳಕ್ಕೆ ಕಳಚಿ ಬಿದ್ದುಕೊಂಡಕಾರಣ ಕೂಲಿಕಾರರಲ್ಲಿ ನಾಲ್ಕು ಮಂದಿ ಒಳಗೆ ಸಿಕ್ಕಿ ಸತ್ತುಹೋದರು.

****

ಉತ್ತರ ದೇಶದಲ್ಲಿ ಕಳೆದ ವಾರ ಕ್ಷಾಮ ಪೀಡಿತರ ಸಂಖ್ಯೆಯು ೫೧,೦೩೯ ಜನರು, ಕಡಮೆಯಾದರೂ ಬಂಗಾಳಾದಲ್ಲಿ ೬,೩೦೯ ಜನರು ಹೊಸದಾಗಿ ಆ ಸಂಖ್ಯೆಗೆ ಬಂದು ದಾಖಲಾದರು. ಈಗ ಪೂರ್ವ ಬಂಗಾಳಾ ಮತ್ತು ಆಸಾಂನಲ್ಲಿ ೮,೩೬೫ ಜನರೂ, ಸಂಯುಕ್ತ ಆಧಿಪತ್ಯಗಳಲ್ಲಿ ೧೩೬೫ ಜನರೂ, ಬಂಗಾಳಾದಲ್ಲಿ ೫೧,೦೩೦ ಜನರು ಕ್ಷಾಮ ಪೀಡಿತರಾಗಿ ಸರ್ಕಾರಿ ರಿಲೀಫ್ ಕಾಮಗಾರಿಗಳಲ್ಲಿರುತ್ತಾರೆ.

****

ಕಾಶ್ಮೀರ ಸಂಸ್ಥಾನದಲ್ಲಿ ಶ್ರೀನಗರದಿಂದ ೧೩ ಮೈಲು ದೂರದಲ್ಲಿರುವ ಸೂರ್ಜಾಂ ಎಂಬ ಸ್ಥಳದಲ್ಲಿ ಪಚ್ಚೆಗಳ ಗಣಿ ಇರುವುದು. ಈ ಗಣಿಯು ಸಮುದ್ರಮಟ್ಟದಿಂದ ೧೩,೦೦೦ ಅಡಿ ಮೇಲಿರುತ್ತದೆ. ಕಳೆದ ಹದಿನಾರು ಸಂವತ್ಸರಗಳಿಂದಲೂ ಸರ್ಕಾರದವರು ಆ ಗಣಿಯನ್ನು ಬಸಿರೆ ಇಟ್ಟಿದ್ದರು. ಈಗ ಅಲ್ಲಿ ಪಚ್ಚೆ ತೆಗೆಯುವುದಕ್ಕಾಗಿ ಒಂದು ಕಂಪನಿ ಏರ್ಪಡಾಗಿದೆ. ದಿನಕ್ಕೆ ೬ ಆಣೆಯಂತೆ ಕೂಲಿಕೊಟ್ಟು ಜನರಿಂದ ಕೆಲಸಮಾಡಿಸುತ್ತಿದಾರೆ. ಆ ಗಣಿಯ ಉತ್ಪತ್ತಿಯಲ್ಲಿ ನೂರಕ್ಕೆ ೩೦ ರಂತೆ ಕಂಪನಿಯವರು ಮಹಾರಾಜರವರಿಗೆ ಕೊಡಬೇಕು.

ಚಕ್ರವರ್ತಿ ಜಾರ್‌ಯವರ ಬಳಿ ಏಡಿಕಾಂಗ್ ಎಂಬ ಅಧಿಕಾರಿಯಾಗಿರುವ ಎಂ. ಅಲೆಗ್ಸಾಂಡೆರ್ ಬೆಸಾಕ್ ಎಂಬಾತನು ಉತ್ತರ ದೇಶದಲ್ಲಿ ಸಂಚರಿಸುತ್ತಿದ್ದಾಗ ಆಗ್ರಾ ಪಟ್ಟಣದ ಕೋಟೆ ರೈಲ್ ಸ್ಟೇಷನ್ನಿನಲ್ಲಿ ಒಬ್ಬ ದೈರ್ಯ ಜವಾನನು ಆತನ ರೈಲ್ ಚೀಲವನ್ನೇ ಕಳುವುಮಾಡಿದನು. ಅದರಲ್ಲಿ ೭,೦೦೦ ರೂಪಾಯಿನ ನಗನಾಣ್ಯಗಳಿದ್ದವು. ಪೊಲೀಸಿನವರು ಅದನ್ನು ಎರಡು ವಾರಗಳ ಮೇಲೆ ಪತ್ತೆಮಾಡಿ ಆ ಕಳ್ಳನ ಮಾಲ್ ಸಹಿತ ಹಿಡಿದಿರುತ್ತಾರೆ.

❖❖❖❖

ಹೋದ ವಾರ ಹಿಂದುಸ್ಥಾನದಲ್ಲೆಲ್ಲಾ ೬,೪೭೪ ಜನರಿಗೆ ಪ್ಲೇಗ್ ತಗಲಿತು, ಆ ಉಪದ್ರದಲ್ಲಿ ೪,೯೨೪ ಜನರು ಕಾಲವಾಗಿದಾರೆ. ಈ ಪೈಕಿ ಬೊಂಬಾಯಿ ಮತ್ತು ಸಿಂಧುವಿನಲ್ಲಿ ೨,೧೩೮ ಜನರು; ಮದರಾಸ್ ೩; ಬಂಗಾಳಾ ೧೨೦; ಸಂಯುಕ್ತ ಆಧಿಪತ್ಯಗಳು ೬೫೩; ಪಂಜಾಬ್ ೧,೧೨೫, ಬರ್ಮಾ ೪೦ ಮಧ್ಯಪ್ರಾಂತ್ಯಗಳು ೩೪೨, ಮೈಸೂರು ೧೪೧, ಮಧ್ಯ ಇಂಡಿಯಾ ೩೬೧, ರಾಜಪುಟಾನಾ ೪, ಕಾಶ್ಮೀರ ೨೦, ಈ ರೀತಿ ಮರಣಗಳಾಗಿವೆ.

❖❖❖❖

ಆಗ್ರಾ ಪಟ್ಟಣದ ಕೋಟೆಯಲ್ಲಿ ಗವರ್ನಮೆಂಟಿನವರು ಇದುವರೆಗೆ ಯೂರೋಪಿಯನ್ ಬೈದಿಗಳನ್ನಿಟ್ಟು ಬಂದೀಖಾನೆಯಾಗಿ ಮಾಡಿಕೊಂಡಿದ್ದರು. ಈಗ ಪ್ರಾಚೀನ ಕಾಲದ ಕಟ್ಟಡಗಳನ್ನು ಮರುಸ್ತು ಮಾಡಿ ಪ್ರತ್ಯೇಕವಾಗಿಡಬೇಕೆಂದು ವಿಧಿಸಲ್ಪಟ್ಟಿರುವುದರಿಂದ ಆ ಬಂದೀಖಾನೆಯನ್ನು ಅಲ್ಲಿಂದ ತೆಗೆದುಹಾಕಿ ಕೋಟೆಯನ್ನೂ ಅದರೊಳಗಿರುವ ಅಕ್ಬರನ ಅರಮನೆಯನ್ನೂ ರಿಪೇರಿ ಮಾಡಿಸಿ ಬಣ್ಣ ಮುಂತಾದ್ದನ್ನು ಹಾಕಿಸಿ, ಚರಿತ್ರಾರ್ಹವಾದ ಕಟ್ಟಡವೆಂದು ಪ್ರತ್ಯೇಕಿಸಿಡುವರು.

❖❖❖❖

ಕಲ್ಕತ್ತೆಯ ಉತ್ತರ ಫಕೀರರ ಪಟ್ಟಿ ಎಂಬ ಗ್ರಾಮದಲ್ಲಿ ಇಬ್ಬರು ಅಣ್ಣತಮ್ಮಂದಿರು ನೆರೆಯವನ ತೋಟಕ್ಕೆ ಇಳಿಬಿದ್ದು ಬದನೇಕಾಯಿಗಳನ್ನು ಕದ್ದು ಕೊಯ್ದುಕೊಳ್ಳುತ್ತಿದ್ದರು. ತೋಟದವರು ಹಲವರು ನೇರಿಕೊಂಡು ಅವರನ್ನು ಹಿಡಿಯುವುದಕ್ಕೆ ಪ್ರಯತ್ನ ಪಟ್ಟಾಗ ಒಬ್ಬನು ತಪ್ಪಿಸಿಕೊಂಡನು. ಇನ್ನೊಬ್ಬನು ಸಿಕ್ಕಿಬಿದ್ದು ತುಂಬಾ ಪೆಟ್ಟು ತಿಂದು ಅಲ್ಲೇ ಬಿದ್ದು ಪ್ರಾಣಬಿಟ್ಟನು. ತೋಟದವರು ಶವವನ್ನು ಹುಲ್ಲಿನಲ್ಲಿ ಬಚ್ಚಿಟ್ಟು ಪರಾರಿಯಾದರು. ಪೋಲೀಸಿನವರಿಗೆ ಶವ ಸಿಕ್ಕಿತು. ಕೊಲೆಗಾರರು ಇನ್ನೂ ಪತ್ತೆ ಆಗಲಿಲ್ಲ.

❖❖❖❖

ಹೈದರಾಬಾದಿನಲ್ಲಿ ಕುಷ್ಠರೋಗಿಗಳ ಸಂಖ್ಯೆ ಬಹಳ ಹೆಚ್ಚಾಗಿರುವಂತೆ ಕಾಣುತ್ತದೆ. ಆ ರೋಗಪೀಡಿತರು ಬಹಿರಂಗವಾಗಿ ಇಟ್ಟು ಹೊಡೆಯುತ್ತಾರೆ; ಅವರು ತಿಂಡೀ ಸಾಮಾನುಗಳನ್ನು ಹೊತ್ತು ಬೀದಿಯಲ್ಲಿ ಹೊರಟು ವಿಕ್ರಯ ಮಾಡುತ್ತಾರೆ; ಬಡುಡನ ಕುಷ್ಠರೋಗಿಗಳು ಕೆಲ ಬೀದಿ ಚಾಟ್ಪಾಗಳನ್ನು ಇಟ್ಟುಕೊಂಡು ಅಂಗಡಿಗಳಲ್ಲಿ ಮಾರುತ್ತಾರೆ, ಇದಲ್ಲದೆ ಭಿಕ್ಷುಕರಲ್ಲಿ ಅನೇಕರು ಕುಷ್ಠರೋಗಪೀಡಿತರಾಗಿದಾರೆ. ಆದಕಾರಣ ಇಂಥವರನ್ನೆಲ್ಲಾ ಪ್ರತ್ಯೇಕವಾಗಿ ಬೇರೆ ಇರಿಸಿಡುವುದು ಕ್ಷೇಮಕರವೆಂದು ಅಲ್ಲಿನ ಪತ್ರಿಕೆದಾರರು ತಿಳಿಸುತ್ತಾರೆ.

❖❖❖❖

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯು ಈ ಸಲ ಕಲ್ಕತ್ತಾ ಪಟ್ಟಣದಲ್ಲಿ ನಡೆಯುವುದು. ಆ ಸಭೆಯ ಅಧ್ಯಕ್ಷತೆಯನ್ನು ಮಾ॥ ದಾದಾಭಾಯಿ ನವರೋಜಿ ಯವರು ವಹಿಸುವುದಕ್ಕಾಗಿ ವಿಲಾಯತಿಯಿಂದ ಈ ವಾರ ಪ್ರಯಾಣ ಮಾಡುವರು. ಅಲ್ಲಿನ ಕೆಲವು ದೇಶದ ಮನುಷ್ಯರು ಅವರಿಗೆ ಔತಣ ಮಾಡಿದರು. ಬೊಂಬಾಯಿ ಪಟ್ಟಣದಲ್ಲಿ ಅವರು ಬಂದು ಹಡಗು ಇಳಿಯುವಾಗ ಬಹಳ ಮರ್ಯಾದೆಯಿಂದ ಎದುರುಗೊಂಡು ಅವರಿಗೆ ಸುಖಾಗಮನ ಬಯಸುವದಕ್ಕೋಸ್ಕರ ಆ ಪಟ್ಟಣದ ಕೆಲವು ಮುಖಂಡರು ಏರ್ಪಾಟುಗಳನ್ನು ಮಾಡಲಾರಂಭಿಸಿದಾರೆ.

❖❖❖❖

ಹಿಂದೂಸ್ಥಾನದ ಸರ್ವ ಸೇನಾ ಪತಿಯಾದ ಲಾರ್ಡ್ ಕಿಚ್ನರ್ ರವರು ಎರಡು ವಾರಗಳ ಹಿಂದೆ ನೇಪಾಳ ಸಂಸ್ಥಾನಕ್ಕೆ ಹೋಗಿದ್ದರು. ಅಲ್ಲಿ ಮಹಾರಾಜರವರೂ ಅಧಿಕಾರಿಗಳೂ ಪ್ರಜೆಗಳೂ ಅವರನ್ನು ಬಹು ವಿಶ್ವಾಸಪೂರ್ವಕವಾಗಿಯೂ ಸಗೌರವವಾಗಿಯೂ ಕಂಡು ಮಾಡಿ ಸಂತೋಷ ಪಡಿಸಿದರು. ರಾಜಧಾನಿಯಾದ ಖಟ್ಮಂಡೂವಿನಲ್ಲಿ ಮಹಾರಾಜಾಧಿರಾಜರವರು ಒಂದು ದರ್ಬಾರ್ ನಡಿಸಿ ಲಾರ್ಡ್ ಕಿಚ್ನರ್ ಯವರನ್ನು ಕರೆಸಿಕೊಂಡು, ಅವರೆದುರಿಗೆ ಆ ಸಂಸ್ಥಾನದ ೧೯,೫೦೦ ಮಂದಿ ಸೈನಿಕರನ್ನು ನಿಲ್ಲಿಸಿ ಕವಾತು ಮುಂತಾದ್ದುಗಳನ್ನು ನಡಿಸಿದರು. ದರ್ಬಾರಿನಲ್ಲಿ ಮಂತ್ರಿ ಶ್ರೀಷ್ಮರಾಗ ಚಂದ್ರ ಸೋಮೇಶ್ವರರು ಉಪನ್ಯಾಸ ಮಾಡಿ ಲಾರ್ಡ್ ಕಿಚ್ನರ್ ರವರಿಗೆ ಸುಖಾಗಮನವನ್ನು ಬಯಸಿದರು.

❖❖❖❖

ಅಫ್ಘಾನಿಸ್ಥಾನದ ಅಮೀರರ ರಾಜಧಾನಿಯಾದ ಕಾಬೂಲ್ ಪಟ್ಟಣದಲ್ಲಿ ಹಿಂದುಗಳು ವಾಸ ಮಾಡುವುದಕ್ಕಾಗಿಯೇ ಎರಡು ಭಾಗಗಳನ್ನು ಬಿಟ್ಟು ಕೊಟ್ಟಿದಾರೆ. ಅವರಿಗಾಗಿ ಎರಡು ಸ್ಮಶಾನಗಳನ್ನೂ ಧರ್ಮಶಾಲೆಗಳನ್ನೂ ಕಟ್ಟಿಸಿ ಕೊಟ್ಟಿದಾರೆ. ಹಿಂದೂ ಸ್ತ್ರೀಯರು ಬೀದಿಗಳಲ್ಲಿ ಸಂಚರಿಸುವಾಗ್ಗೆ ಮಹಮದೀಯ ಸ್ತ್ರೀಯರಂತೆ ಮುಸುಕು ಹಾಕಿಕೊಳ್ಳುವರು. ಸರ್ಕಾರಿ ಖಜಾನೆ ಇಲಾಖೆಯಲ್ಲೂ ಕೆಲಸ ಮಾಡುವ ಪ್ರತಿ ನೌಕರರಿಗೂ ಹಿಂದುಗಳೇ ನೇಮಿಸಲ್ಪಟ್ಟಿರುವರು. ಹಿಂದುಗಳು ತಮ್ಮ ಮತಾಚಾರ ಕಾರ್ಯಗಳನ್ನು ಯಾವ ಅಡ್ಡಿ ಇಲ್ಲದೆ ಮಾಡಿಕೊಳ್ಳುವರು. ಅಮೀರರ ದರ್ಬಾರುಗಳಲ್ಲಿ ಅವರಿಗೂ ಮಹಮದೀಯರಿಗಿರುವ ಗೌರವ ಸನ್ಮಾನಾದಿಗಳೇ ದೊರೆಯುವುವು. ಗವರ್ನಮೆಂಟಿನವರು ಮತಪಕ್ಷಪಾತವನ್ನು ಇಟ್ಟಿಲ್ಲ.

ವಿಲಾಯತಿ ರಾಜ್ಯದ ಎಡ್ವರ್ಡ್ ಮಹಾರಾಜಾ ಚಕ್ರವರ್ತಿಯವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್ ಯವರು ಪತ್ನಿಸಹಿತ ಮುಂದಿನ ವರುಷ ಫೆಬ್ರುವರಿ ಎರಡನೇ ವಾರದಲ್ಲಿ ಬರ್ಮಾ ಆಧಿಪತ್ಯಕ್ಕೆ ದಯಮಾಡುವವರಾಗಿದಾರೆ. ಮಾರ್ಚಿ ೨ರ ವರೆಗೆ ಆ ಪ್ರಾಂತ್ಯ ಸಂಚಾರ ಮಾಡಿಕೊಂಡು, ಆ ದಿನ ರಂಗೂನಿಂದ ಹೊರಟು ತಾ. ೫ಕ್ಕೆ ಕಲ್ಕತ್ತೆಗೆ ದಯಮಾಡಿ, ವೈಸ್‌ರಾಯಿ ಯವರ ಆತಿಥ್ಯವನ್ನು ಸ್ವೀಕರಿಸಿ, ತಾ ೧೪ ರಲ್ಲಿ ಕಲ್ಕತ್ತೆಯಿಂದ ಹಡಗು ಹತ್ತಿ ಹೊರಟು ಸಿಲೋನ್ (ಲಂಕಾ) ದ್ವೀಪವನ್ನು ತಲಪಿ ಹಾಗೇ ವಾಪಸು ದಯಮಾಡುವರು. ಹಿಂದುಸ್ಥಾನದ ಅನೇಕ ಪಟ್ಟಣಗಳವರು ಅವರ ಆಗಮನವನ್ನು ಕೇಳಿ ತಮ್ಮ ಊರಿಗೂ ದಯಮಾಡಿ ದರ್ಶನ ಕೊಡಬೇಕೆಂದು ಅವರಿಗೆ ಆಹ್ವಾನ ಪತ್ರಿಕೆಗಳನ್ನು ಬರೆದು ಕೇಳಿಕೊಂಡರು. ಆದರೆ ಆ ರಾಜದಂಪತಿಗಳಿಗೆ ಸಮಯವಾಗಲಾರದೆಂದು ಜವಾಬು ಕೊಟ್ಟದಾರೆ.

❖❖❖❖

ಬೊಂಬಾಯಿ ಪಟ್ಟಣದಲ್ಲಿ ನರಿಮಾನ್‌ಜಿ ಫ್ರಾಂಜಿ ಲಿಂಬುವಾಲಾ ಎಂಬ ೧೮ ವರುಷದ ಪಾರ್ಸಿ ಹುಡುಗನು ಬಹಳ ಬುದ್ಧಿಶಾಲಿಯಾಗಿದ್ದು ಬಿ. ಎ, ಎಲ್‌ಎಲ್, ಬಿ. ಎಂಬ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಮೊಕದ್ದಮೆಗಳನ್ನು ಹಿಡಿದು ವಾದಿಸುತ್ತಿದ್ದನು. ಇವನು ತನ್ನ ಬುದ್ಧಿಕುಶಲತೆಯನ್ನು ಫೋರ್ಜರಿ ಪತ್ರಗಳನ್ನು ಕಲ್ಪನೆ ಮಾಡುವುದರಲ್ಲಿ ಪ್ರಯೋಗಿಸಿದ್ದರಿಂದ ಹೈಕೋರ್ಟ್ ಸೆಷನ್ಸ್ ಜಡ್ಜರು ಅವನನ್ನು ದರ್ಯಾಪ್ತಿ ಮಾಡಿ, ಅವನಿಗೆ ಐದು ವರುಷಗಳ ಕಠಿಣಸಜಾ ವಿಧಿಸಿದರು. ಆದರ ಮೇಲೆ ಅವನ ತಂದೆತಾಯಿಗಳೂ ಸ್ನೇಹಿತರೂ ಸೇರಿ ಅವನ ಸ್ಥಿತಿಗತಿಯನ್ನು ವಿವರಿಸಿ, ಆ ಶಿಕ್ಷೆಯನ್ನು ಮಾಫ್ ಮಾಡಿಕೊಡಬೇಕೆಂದು ಗವರ್ನಮೆಂಟಿಗೆ ಅರ್ಜಿ ಬರೆದುಕೊಂಡರು. ಬೊಂಬಾಯಿ ಗವರ್ನರವರು ತುಂಬಾ ಕನಿಕರಪಟ್ಟು ಆ ಐದು ವರುಷಗಳ ಶಿಕ್ಷೆಯನ್ನು ಒಂದು ವರುಷಕ್ಕೆ ಇಳಿಸಿದೆ ಎಂದು ಅಪ್ಪಣೆ ಕೊಟ್ಟದಾರೆ.

❖❖❖❖

ಅಫ್ಘಾನಿಸ್ಥಾನದ ಅಮೀರ್ ಹಬೀಬುಲ್ಲಾ ಖಾನ್ ಬಹದ್ದೂರವರು ಹಿಂದುಸ್ಥಾನಕ್ಕೆ ಬಂದು ಇಲ್ಲಿನ ಕೆಲವು ಸ್ಥಳಗಳನ್ನು ನೋಡಿಕೊಂಡು ಹೋಗುವ ವಿಷಯದಲ್ಲಿ ಈಗ ಪ್ರಕಟವಾಗಿರುವ ಖಂಡಿತವಾದ ಕಾಲ ಸ್ಥಳಗಳು ಯಾವುವೆಂದರೆ—ಲಂಡಿಕೋಟಾಲ್ ಜನವರಿ ೨, ಪಿಷಾವರ್ ೩—೪, ಜಮ್ರೂದ್ ೮, ಆಗ್ರಾ ೯—೧೬, ಅಲಿಘರ್ ೧೬, ಕಾನ್ಪುರ ೧೭, ಗ್ವಾಲಿಯರ್ ೧೮—೨೦ ದೆಹಲಿ ೨೧—೨೨, ಅಜ್ಮೀರ್ ೨೩, ಡೆಹಲಿ ೩೦—ಫೆಬ್ರುವರಿ ೩; ಪೋಕಾಗ್‌ಪುರ ೫—೧೦, ಬೊಂಬಾಯಿ ೧೧—೧೩, ಕರಾಚಿ ೧೬—೧೩, ಸಕ್ಕರ್ ೨೮, ಭಾವಲ್‌ಪುರ ೧೮—೨೧, ಲಾಹೋರ್ ೩೨—೨೫, ಪಿಷಾವರ್ ೨೬—೨೮, ಲಂಡಿಕೋಟಾಲ್ ೨೮ ಮಾರ್ಚಿ ೧ರಲ್ಲಿ ವಾಪಸು ಕಾಬೂಲ್ ಪಟ್ಟಣವನ್ನು ಕುರಿತು ಪ್ರಯಾಣ ಮಾಡುತ್ತಾರೆ. ಇದಲ್ಲದೆ ಅಮೀರರು ಕಲ್ಕತ್ತೆಯಲ್ಲಿ ೫ ದಿನಗಳೂ, ಲಾಹೋರಿನಲ್ಲಿ ೩ ದಿನಗಳೂ ಇರುತ್ತಾರೆಂತಲೂ ತಿಳಿಯುವುದು.

❖❖❖❖

ಬೊಂಬಾಯಿ ಪಟ್ಟಣದ ಪದ್ಧರ್ ಎಂಬ ಬೀದಿಯಲ್ಲಿರುವ ಮಾ॥ ಮಹಮದ್ ಬಾಯಿ ನಾಸಿ ಬೈರಾಜ್ ಎಂಬೊಬ್ಬ ಭಾರೀ ಸಾಹುಕಾರನು ತನ್ನ ೨೩ ವರುಷದ ಮಗನಾದ ಕರೀಂ ಮಹಮದ್ ಎಂಬ ಸಾಹುಕಾರನ ಮಗನು ಕೆಟ್ಟ ಸಹವಾಸದಲ್ಲಿ ಬಿದ್ದು ಸಾಲ ಸೋಲ ಮಾಡಿಕೊಂಡು, ಕಡೆಗೆ ತನ್ನ (ತಂದೆಯ) ಪೆಟ್ಟಿಗೆಗೆ ಬೇರೆ ಬೀಗದ ಕೈ ಹಾಕಿ ತೆಗೆದು ಅದರೊಳಗಿದ್ದ ಸುಮಾರು ೬,೦೦೦ ರೂಪಾಯಿನ ನಗ ನಾಣ್ಯಗಳನ್ನು ಅಪಹರಿಸಿರುತ್ತಾನೆಂದು ಆ ಮಗನ ಮೇಲೆ ಫಿರ್ಯಾದು ತಂದನು. ವಿಚಾರಣೆಯಲ್ಲಿ ಮಗನು ತಾನು ಮಾಡಿದುಂಟೆಂದು ಒಪ್ಪಿಕೊಂಡನು. ಆಗ ಮ್ಯಾಜಿಸ್ಟ್ರೇಟರು—ಇವನು ಕೆಟ್ಟ ಸಹವಾಸಕ್ಕೆ ಬಿದ್ದು ಈ ರೀತಿ ಆಗಿದಾನೆ, ಇಂಥವನಿಗೆ ಕಠಿಣ ಶಿಕ್ಷೆ ವಿಧಿಸುವುದರಿಂದ ಇನ್ನೂ ಕೆಡಬಹುದು. ಆದ್ದರಿಂದ ಸದ್ಯಕ್ಕೆ ೧೨ ತಿಂಗಳ ಸಾದಾ ಸಜವನ್ನು ವಿಧಿಸುತ್ತೇನೆ ಅಷ್ಟರಲ್ಲಿ ಅವನು ಒಳ್ಳೆಯವನಾಗಬಹುದೆಂದು ಪರೀಕ್ಷಿಸುತ್ತೇನೆ ಎಂದು ತಿಳಿಸಿ ಆ ರೀತಿ ಶಿಕ್ಷೆ ವಿಧಿಸಿದರು.

❖❖❖❖

ತಿರುವಾಂಕೂರು (ಅನಂತಶಯನ) ಸಂಸ್ಥಾನದ ರಾಜಧಾನಿಯಾದ ತಿರುವಂದರಂ ಪಟ್ಟಣದಲ್ಲಿ ಕುಸ್ತಿಯ ಉತ್ಸಾಹ ಬಹು ವಿಶೇಷವಾಗಿರುವಂತೆ ವರ್ತಮಾನ ಬಂದಿದೆ. ಈಚೆಗೆ ಪಂಜಾಬಿನ ಕಡೆಯಿಂದ ಗಂಗಾಬಾಯಿ ಎಂಬೊಬ್ಬ ಜಟ್ಟಿಗರವಳು ಅಲ್ಲಿಗೆ ಬಂದು ಊರಿನಲ್ಲೆಲ್ಲಾ ಸಾರಿಸಿ ಗಂಡಸಾಗಲಿ ಹೆಂಗಸಾಗಲಿ ಬಂದು ನನ್ನ ಮೇಲೆ ಕುಸ್ತಿ ಮಾಡಬಹುದು ಎಂದು ತಿಳಿಸಿದಳು. ಕೆಲವು ದಿನಗಳ ವರೆಗೆ ಯಾರೂ ಅವಳಿಗೆ ಎದುರುಬಿದ್ದು ನಿಲ್ಲಲಿಲ್ಲ. ಕಳೆದ ವಾರ ಒಬ್ಬ ಮಹಮದೀಯನು ಅವಳ ಮೇಲೆ ಕುಸ್ತಿ ಮಾಡುವುದಾಗಿ ಒಪ್ಪಿದನು. ಒಂದು ಸರ್ಕಸ್ ಡೇರಾದಲ್ಲಿ ಟಿಕೆಟ್ ಹಾಕಿ ಕುಸ್ತಿ ಮಾಡಿಸಿದರು. ನೂರಾರು ಜನರು ಬಹು ಉತ್ಸಾಹದಿಂದ ನೋಡುವುದಕ್ಕೆ ಕುಳಿತ ಉತ್ತರ ಕ್ಷಣದಲ್ಲೇ ಕುಸ್ತಿ ಪ್ರಾರಂಭವಾಗಿ ಒಂದೇ ನಿಮಿಷದಲ್ಲಿ ಗಂಗಾಬಾಯಿಯು ಆ ಮಹಮದೀಯನನ್ನು ಕೆಡಹಿಕೊಂಡು ಬೆನ್ನುಮಾಡಿ ಸೋಲಿಸಿಬಿಟ್ಟಳು. ದುಡ್ಡುಕೊಟ್ಟು ಬಂದವರೆಲ್ಲಾ ನೋಟವೇನೂ ನೋಡಲಿಲ್ಲವೆಂದು ಹೇಳಿ, ಅವರಿಬ್ಬರ ಮೇಲೂ ಬಿದ್ದು ಜಗಳ ಮಾಡಲಾರಂಭಿಸಿದರು. ಕಡೆಗೆ ಪೋಲೀಸಿನವರು ಬಂದು ಕೆಲವು ಮುಖಂಡರನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿದಾರೆ.

❖❖❖❖

ಬರೋಡಾ ಸಂಸ್ಥಾನದ ಗಾಯಕವಾಡ್ ಮಹಾರಾಜರವರು ಪತ್ನಿ ಪುತ್ರಾದಿಗಳೊಡನೆ ವಿಲಾಯತಿಯಿಂದ ವಾಪಸು ದಯಮಾಡಿದ್ದಾರೆಂದು ತಿಳಿಸಿದೆವಷ್ಟೆ. ಇವರು ಬೊಂಬಾಯಿನಲ್ಲಿ ಹಡಗು ಇಳಿದ ದಿನ ಅವರ ಪತ್ನಿಯಾದ ಮಹಾರಾಣಿ ಚಿಮ್ನಾಬಾಯಿ ಸಾಹೇಬರವರನ್ನು ಬೊಂಬಾಯಿ ಪಟ್ಟಣದಲ್ಲಿರುವ ಆರ್ಯ ಮಹಿಳೆಯರ ಸಮಾಜ, ಹಿಂದೂ ಸ್ತ್ರೀ ಸಂಘ, ಗುಜರಾತಿ ಹಿಂದೂ ಸ್ತ್ರೀ ಮಂಡಲ ಎಂಬೀ ಮೂರು ಸಂಘಗಳ ಪ್ರತಿನಿಧಿಗಳಾದ ಸ್ತ್ರೀಯರು ಅಲ್ಲಿನ ಸೇಠ್ ನರಸೀ ಮೊರಾರ್ಜಿ ಗೋಕುಲದಾಸ್ ಯವರ ಬೈನಾ ಬಾಗ್ ಎಂಬ ಬಂಗಲೆಯ ಆವರಣಕ್ಕೆ ಕರೆಸಿಕೊಂಡು, ಮಹಾರಾಣಿಯವರಿಗೆ ಸನ್ಮಾನಮಾಡಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಈ ಸಭೆಯಲ್ಲಿ ೭೦೦ ಮಂದಿ ಸ್ತ್ರೀಯರು ಸೇರಿದ್ದರು. ಕಡೆಯಲ್ಲಿ ಮಹಾರಾಣಿಯವರು ಸಭಿಕರನ್ನು ಬಹಳ ಸಂತೋಷದೊಡನೆ ವಂದಿಸಿ ಅವರನ್ನು ಕುರಿತು—ಗಂಡಸರೂ ಹೆಂಗಸರೂ ಹಿಂದೂ ಸ್ತ್ರೀಯರ ಸ್ಥಿತಿ ಗತಿಗಳನ್ನು ಉತ್ತಮ ಸ್ಥಿತಿಗೆ ತರುವುದಕ್ಕೆ ಏಕೀಭವಿಸಿ ಕಾರ್ಯ ಸಾಧನೆ ಮಾಡಬೇಕಾಗಿದೆ ಹೀಗೆ ಮಾಡಿದಲ್ಲಿ ಈಗಿನ ಸ್ತ್ರೀಯರನ್ನೂ ಪ್ರಾಚೀನ ಕಾಲದ ಪ್ರಸಿದ್ಧ ಸ್ತ್ರೀಯರಂತೆ ಪ್ರಖ್ಯಾತೆಯರನ್ನಾಗಿ ಮಾಡಬಹುದು ಎಂಬುದಾಗಿ ತಿಳಿಸಿದರು.

❖❖❖❖

ಮದರಾಸಿನಲ್ಲಿ ದಿವಾಳಿಯಾದ ಅರ್ಬತ್ನಾಟ್ ಕಂಪನಿಯ ದೆಸೆಯಿಂದ ೮,೦೦೦ ಜನ ಡಿಪಾಜಿಟ್ ದಾರರಿಗೂ ಅವರ ಸಂಸಾರಕ್ಕೂ ಅಪಾರವಾದ ಕಷ್ಟಗಳು ಪ್ರಾಪ್ತವಾಗಿವೆ. ಇವರ ಕಷ್ಟ ಪರಿಹಾರಕ್ಕಾಗಿ ಒಂದು ಫಂಡು ಕೂಡಿಸುತ್ತಿದಾರೆ. ಈ ಫಂಡಿಗೆ ಇದುವರೆಗೆ ಬಹು ಮಂದಿ ಧರ್ಮಾತ್ಮರು ೫೦,೦೦೦ ರೂಪಾಯಿ ನಗದು ಚಂದಾ ಕೊಟ್ಟದಾರೆ ಇನ್ನೂ ವಸೂಲಾಗುತ್ತಲೇ ಇದೆ. ಮೇಲ್ಕಂಡ ಫಂಡಿನಿಂದ ಸಹಾಯವನ್ನು ಅಪೇಕ್ಷಿಸುವ ಜನಗಳು ಸದರಿ ಫಂಡಿನ ಡಿಸ್ಟ್ರಿಕ್ಟ್ ಕಮಿಟಿ ಮೆಂಬರುಗಳಿಗೆ ಆಗಲಿ ಅಥವಾ ಸೆಕ್ರೆಟರಿಗಳಿಗೆ ಆಗಲಿ ಈ ಕೆಳಗೆ ವಿವರಿಸುವ ಅಂಶಗಳನ್ನು ನಮೂದಿಸಿ ಅರ್ಜಿಮಾಡಿಕೊಳ್ಳಬಹುದು (೧) ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಪಡುವವರ ಹೆಸರು, ವಿಳಾಸ, ವಾಸಮಾಡತಕ್ಕ ಬೀದಿ ಮತ್ತು ಡೋರ್ ನಂಬರು ವಗೈರೆ (೨) ತಾವು ನಷ್ಟಹೊಂದಿದ ಮೊಬಲಗು ಮತ್ತು ಹಾಗೆ ನಷ್ಟ ಹೊಂದಿದ ಮೊಬಲಗು ವಿನಾ ಜೀವನಕ್ಕೆ ಮತ್ಯಾವ ಮಾರ್ಗವೂ ಇಲ್ಲವೆಂಬುವದಕ್ಕೆ ಸಾಕಾದಷ್ಟು ರುಜುವಾತು. ಹಾಗೆ ಬರತಕ್ಕ ಅರ್ಜಿಗಳನ್ನು ಕಮಿಟಿಯವರು ಬಹಿರಂಗ ಪಡಿಸುವದಿಲ್ಲ. ಬೆಂಗಳೂರು ಸಿಟಿಯಲ್ಲಿ ವಾಸಮಾಡತಕ್ಕ ಜನಗಳು ಸದರಿ ಕಂಪೆನಿ ಸೆಕ್ರೆಟರಿಗಳಾದ ಅವೆನ್ಯೂರೋಡಿನಲ್ಲಿರುವ ಡಾಕ್ಟರ್ ಪಿ. ಯಸ್. ಅಚ್ಯುತರಾಯರವರಿಗೆ, ದಂಡಿನಲ್ಲಿ ವಾಸಮಾಡತಕ್ಕವರು ಜೈಲ್ ರೋಡಿನಲ್ಲಿರುವ ಡಾಕ್ಟರ್ ಲ್ಯೂನರ್ ಸಾಹೇಬರವರಿಗೆ ಬರೆದುಕೊಳ್ಳಬಹುದು.

❖❖❖❖

ಮದರಾಸ್ ಪಟ್ಟಣದಲ್ಲಿ ಎಸ್. ಪಾಲನೇಶಂ, ಚಾರ್ಲಸ್ ಪಾರಿಸ್ ಎಂಬಿಬ್ಬರು ಸೇರಿ ಸ್ತ್ರೀಯರ ಕಸಬುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಸಂಘವನ್ನು ಮಾಡಿಕೊಂಡಿದ್ದೇವೆಂದು ಜನರಿಗೆ ಸುಳ್ಳು ಹೇಳಿ ಈ ಕಂಪನಿಗೆ ಅನೇಕರನ್ನು ಸೇರಿಸಿ ತಲಾ ಒಂದೊಂದು ರೂಪಾಯಿನಂತೆ ಪ್ರತಿ ಷೇರಿಗೂ ವಸೂಲ್ಮಾಡಿಕೊಂಡು, ಷೇರು ಒಂದಕ್ಕೆ ೪ ಆಣೆ ಚಂದಾವನ್ನೂ ಕೂಡಿಸುತ್ತಾ ಬಂದರು. ಇವರಿಗೆ ಈ ಮೋಸದಿಂದ ತುಂಬಾ ಹಣ ಕೂಡಿತು. ೧೯೦೫ನೇ ಸೆಪ್ಟಂಬರ್ ೧೫ರಲ್ಲಿ ಅವರಿಬ್ಬರೂ ಷೇರುದಾರರಿಗೆಲ್ಲಾ ನೋಟಿಸ್ ಕೊಟ್ಟು ಕರೆಸಿಕೊಂಡು ದೊಡ್ಡ ಮೀಟಿಂಗ್ ನಡಿಸಿ, ೩೬,೦೦೦ ರೂಪಾಯಿ ಜಮಾಯಿಸಿದೆ ಎಂತಲೂ, ಅದೇ ತಿಂಗಳ ೧೮—೧೯ನೆ ತಾರೀಖುಗಳಲ್ಲಿ ಆ ಹಣವನ್ನು ಎಲ್ಲರಿಗೂ ಹಂಚುತ್ತೇವೆಂತಲೂ ಹೇಳಿ, ಎಲ್ಲರೂ ತಲಾ ಒಂದೊಂದು ರೂಪಾಯಿನಂತೆ ಆಗಲೇ ಕೊಟ್ಟು ಬಿಡಬೇಕೆಂತಲೂ ಕೇಳಿದರು. ಷೇರುದಾರರಲ್ಲಿ ಕೆಲವರಿಗೆ ಸಂಶಯ ಉಂಟಾಗಿ ಪೋಲೀಸಿಗೆ ತಿಳಿಸಿದರು. ಅವರಿಬ್ಬರನ್ನೂ ಹಿಡಿದು ಸೆಷನ್ ವಿಚಾರಣೆಗೆ ಗುರಿ ಮಾಡಿದರು. ಈ ಮೊಕದ್ದಮೆ ಆರು ದಿನ ಒಂದೇ ಸಮನಾಗಿ ನಡೆದು, ಕಡೆಗೆ ಅವರಿಬ್ಬರ ಮೋಸವೂ ಚನ್ನಾಗಿ ಗೊತ್ತಾಯಿತು. ಈಗ ಮೊದಲನೆಯವನಿಗೆ ೧೮ ತಿಂಗಳೂ, ಎರಡನೆಯವನಿಗೆ ೬ ತಿಂಗಳೂ ಕಠಿಣ ಸಜಾ ವಿಧಿಸಲ್ಪಟ್ಟದೆ.

❖❖❖❖

ಕಲ್ಕತ್ತಾ ಪಟ್ಟಣಕ್ಕೆ ಸೇರಿದ ಅಲಿಪುರದ ಮ್ಯಾಜಿಸ್ಟ್ರೇಟರಾದ ಸಾಹೇಬ್ ಜಾದಾ ಅಲಿ ಮಹಮ್ಮದ್ ಸಾಹೇಬ್ ಯವರು ತುಂಬಾ ಕರುಣಾಳುಗಳೆಂಬುದು ಮುಂದಿನ ಸಂಗತಿಯಿಂದ ಗೊತ್ತಾಗುವುದು. ಹನ್ನೆರಡು ವರುಷದ ಒಬ್ಬ ಮಹಮದೀಯ ಹುಡುಗನು ಒಂದು ಅಂಗಡಿಯಲ್ಲಿ ಒಂದು ಬನೀತಿನ ಅಂಗಿಯನ್ನು ಕದ್ದನೆಂದು ಪೋಲೀಸಿನವರು ಹಿಡಿದು ತಂದು ಆ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ದರ್ಯಾಪ್ತಿ ಮಾಡುವಾಗ್ಗೆ ಆ ಹುಡುಗನು ಕೋರ್ಟಿನಲ್ಲಿ ಗೋಳೋ ಎಂದು ಅಳುವುದಕ್ಕಾರಂಭಿಸಿ—ನಾನು ಅಂಗಿಯನ್ನು ಕದ್ದದ್ದುಂಟು. ನನಗೆ ಯಾರೂ ದಿಕ್ಕಿಲ್ಲ. ತುಂಬಾ ಛಳಿಯಾಗುತ್ತಿತ್ತು ತಡೆಯಲಾರದೆ ಅಂಗಡಿಯಲ್ಲಿ ಅಂಗಿಯನ್ನು ಕದ್ದುತಂದು ರಾತ್ರಿ ಮೈಗೆ ಹೊದ್ದುಕೊಳ್ಳುತ್ತಿದ್ದೆನು ಎಂದು ಹೇಳಿದನು. ಆಗ ಮ್ಯಾಜಿಸ್ಟ್ರೇಟರು ಅವನಿಗೆ ಒಂದು ರೂಪಾಯಿ ಜುಲ್ಮಾನೆ ಹಾಕಿ, ಕಳ್ಳತನದಿಂದ ಬರುವ ನಾನಾ ಕೇಡುಗಳನ್ನು ಕುರಿತು ಆ ಹುಡುಗನಿಗೆ ಸ್ವಲ್ಪಹೊತ್ತು ಬುದ್ಧಿ ಹೇಳಿ, ತಮ್ಮ ಜೇಬಿನಿಂದ ಒಂದು ರೂಪಾಯಿ ತೆಗೆದುಕೊಟ್ಟು, ಸಾಯಂಕಾಲ ಮನೆಗೆ ಬರಮಾಡಿಕೊಂಡು ಕೆಲವು ಕಂಬಳಿ ಬಟ್ಟೆಬರೆಗಳನ್ನು ಕೊಟ್ಟು ಕಳುಹಿಸಿದರು. ಮೊದಲನೇ ಸಲ ಅಲ್ಪಮಾದ ಅಪರಾಧಗಳನ್ನು ಮಾಡಿ ಬರುವ ಅಪರಾಧಿಗಳಿಗೆ ಮ್ಯಾಜಿಸ್ಟ್ರೇಟರು ಕಠಿಣವಾದ ಶಿಕ್ಷೆಯನ್ನು ವಿಧಿಸಿ ಅವರ ಸ್ವಭಾವವನ್ನೇ ಹಾಳುಮಾಡುವುದಕ್ಕೆ ಬದಲಾಗಿ ಅವರನ್ನು ಮೇಲ್ಕಂಡ ರೀತಿಯಲ್ಲಿ ದಯಾರ್ದ್ರಭಾವದಿಂದ ಕಂಡು ಬುದ್ಧಿ ಕಲಿಸಿದರೆ ಅಪರಾಧಗಳು ಸವೆಯುವುವೇ ಕಡಿಮೆಯಾಗುತ್ತವೆಂದು ಹೇಳಬೇಕಾಗಿಲ್ಲ.

ತಾಲ್ಲೋಕು ವರ್ತಮಾನಗಳು

ಮಂಡ್ಯ:—ಕಳೆದ ಗುರುವಾರ ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮಾ॥ ವೆಂಕೋಬರಾಯರು, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಮಾ॥ ಕಾಂತರಾಜೇ ಅರಸಿನವರು ಮತ್ತು ಸಿವಿಲ್ ಸರ್ಜನ್ ಮಾ॥ ನಂಜಪ್ಪನವರು ಇಲ್ಲಿಗೆ ದಯಮಾಡಿ ಗ್ರಾಮದ ಆರೋಗ್ಯವನ್ನು ಪರಾಂಬರಿಸಿ ಅಗ್ರಹಾರದಬೀದಿಯಲ್ಲಿ ಶಿಥಿಲವಾದ ಕೆಲವು ಮನೆಗಳನ್ನು

ಒಡೆದು ರಸ್ತೆ ಹಾಕಬೇಕೆಂದು ಅಪ್ಪಣೆ ಕೊಟ್ಟದ್ದಲ್ಲದೆ, ಹೊಸಳ್ಳಿ ಸಮೀಪದಲ್ಲಿರುವ ಷೆಡ್ಡುಗಳನ್ನು ಪರಾಂಬರಿಸಿ ಆ ಸ್ಥಳವು ಆರೋಗ್ಯವಾದದ್ದಲ್ಲವೆಂದು ಅಭಿಪ್ರಾಯಪಟ್ಟು ಟ್ರಾವಲರ್ಸ್ ಬಂಗಲೆ ಹಿಂದುಗಡೆ ಸ್ಥಳವನ್ನು ಚುನಾಯಿಸಿ ಮನೆಗಳನ್ನು ಕಟ್ಟಿಕೊಳ್ಳಬಹುದೆಂದು ಅಪ್ಪಣೆಕೊಡಿಸಿ ಆ ದಿನ ಬೆಳಗ್ಗೆ ರೈಲಿನಲ್ಲಿ ವಾಪಸು ದಯಮಾಡಿದರು ಆದರೆ ಸಿವಿಲ್ ಸರ್ಜನರು ಆ ದಿನವೆಲ್ಲಾ ಇದ್ದು ಆಸ್ಪತ್ರೆಯ ಕಾರ್ಯಗಳನ್ನೆಲ್ಲಾ ಪರಾಂಬರಿಸಿ ಶುಕ್ರವಾರ ಬೆಳಗ್ಗೆ ಮೈಸೂರಿಗೆ ಪ್ರಯಾಣಮಾಡಿದರು —ಕಳೆದ ವಾರದ ಪತ್ರಿಕೆಯಲ್ಲಿ ಶ್ರೀಮನ್ ಮಹಾರಾಜರ ಸರ್ಕಾರದವರು ಜನರ ಪ್ರಯೋಜನಾರ್ಥವಾಗಿ ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿಸಬೇಕೆಂದು ಉದ್ದೇಶಿಸಿರುವ ಪರಸ್ಪರ ಸಹಾಯ ಸಂಘವನ್ನು ಇಲ್ಲಿನ ಜನರು ಜಾರೀಗೆ ತರಬೇಕೆಂದು ಪ್ರಯತ್ನಪಟ್ಟಿರುತ್ತಾರೆಂದು ತಿಳಿಸಿದ್ದೇವಷ್ಟೆ ಈ ಪ್ರಯತ್ನವನ್ನು ಮಾಡಿದಾಗ ಇಲ್ಲಿನ ಅಮಲ್ದಾರರು ಮದ್ದೂರ ಕಡೆ ಜಮಾಬಂದಿಗಾಗಿ ದಯಮಾಡಿಸಿದ್ದರು. ಅವರು ಬಂದ ಮಾರನೆ ದಿನ ಅಂದರೆ ಕಳೆದ ಶುಕ್ರವಾರ ಬೆಳಗ್ಗೆ ಮೇಲ್ಕಂಡ ಸಂಘಕ್ಕೆ ಪ್ರಯತ್ನಮಾಡಿದವರು ತಮ್ಮ ವಿಚಾರವನ್ನು ತಿಳಿಸಿ ಅವರನ್ನು ಅದಕ್ಕೆ ಪ್ರೆಸಿಡೆಂಟರಾಗಿರಬೇಕೆಂದು ಕೇಳಿಕೊಂಡರು ನಮ್ಮ ಅಮಲ್ದಾರರು ಸಮ್ಮತಿಪಟ್ಟದ್ದರಿಂದ ಇಲ್ಲಿನವರು ಜನರಿಗೆಲ್ಲಾ ನೋಟೀಸ್ ಕಳುಹಿಸಿ ವರ್ತಕ ಮಂಡಲಿಯವರನ್ನೂ ಉದ್ಯೋಗದಾರರನ್ನೂ ಆ ದಿನ ಸಾಯಂಕಾಲವೇ ಇಲ್ಲಿನ ಗವರ್ನಮೆಂಟ್ ಕನ್ನಡ ಸ್ಕೂಲಿಗೆ ಬರಮಾಡಿಕೊಂಡರು ಸಭೆಗೆ ಅಮಲ್ದಾರರೇ ಬಂದು ಅಗ್ರಾಸನವನ್ನು ವಹಿಸಿ, ಸಂಘದ ಉದ್ದೇಶವನ್ನೂ ಅದರ ಪ್ರಯೋಜನವನ್ನೂ ವಿಶದವಾಗಿ ಸಭಿಕರಿಗೆ ತಿಳಿಯಪಡಿಸಿ, ತಾವು ಹೊಳೆನರಸೀಪುರದಲ್ಲಿನ ಇಂಥಾ ಸಂಘಕ್ಕೆ ಪ್ರೆಸಿಡೆಂಟರಾಗಿದ್ದದ್ದಾಗಿಯೂ ಇಲ್ಲಿಗೆ ಬಂದನಂತರ ತಮ್ಮನ್ನು ಇಲ್ಲಿನ ಸಂಘಕ್ಕೆ ಅಧ್ಯಕ್ಷರಾಗಿ ಮಾಡಿದ್ದಕ್ಕೆ ತುಂಬಾ ಕೃತಜ್ಞರಾಗಿರುವದಾಗಿಯೂ ಸಂಘವನ್ನು ಅಭಿವೃದ್ಧಿಗೆ ತರಬೇಕೆಂದಿರುವವರೆಲ್ಲ ಸಂಪೂರ್ಣವಾದ ಸತ್ಯತೆಯುಳ್ಳವರಾಗಿಯೂ ಕಾರ್ಯಾನುಭವ ಉಳ್ಳವರಾಗಿಯೂ, ಒಳ್ಳೆ ಮರ್ಯಾದೆ, ತಾಳ್ಮೆಯನ್ನು ಹೊಂದಿದವರಾಗಿಯೂ, ಸಾಕಾದಷ್ಟು ದ್ರವ್ಯಸಹಾಯ ಉಳ್ಳವರಾಗಿಯೂ ಇರಬೇಕೆಂದು ಉಪನ್ಯಾಸಮಾಡಿದರು ಸಭಿಕರೆಲ್ಲ ಸಂತೋಷದಿಂದ ಜಯಘೋಷವನ್ನು ಮಾಡಿದರು ನಂತರ ಕಾರ್ಯನಿರ್ವಾಹಕ ಸಭೆಯವರನ್ನು, ಖಜಾಂಚಿಯವರನ್ನು ಮತ್ತು ಸೆಕ್ರೆಟರಿಯವರನ್ನು ಗೊತ್ತುಮಾಡಿ ಸಂಘದ ನಿಬಂಧನೆಗಳನ್ನೆಲ್ಲಾ ತಿಳಿಸಿ ಅವರುಗಳ ಸಮ್ಮತಿ ಪಡೆದು ಸಂಘವನ್ನು ರಿಜಿಸ್ಟರ್ ಮಾಡಲು ಕಳುಹಿಸತಕ್ಕದ್ದೆಂದು ತೀರ್ಮಾನಿಸಿದರು ಈ ವರೆಗೂ ೫೯೦ ಷೇರುಗಳು ಬಿಕರಿ ಆಗಿರುತ್ತವೆ

ಗುಬ್ಬಿ.—ಮುನಿಸಿಪಾಲಿಟಿಯವರು ತಮ್ಮ ಪತ್ರಿಕೆಯ ದಯದಿಂದ ನಿದ್ರೆಯಿಂದ ಎಚ್ಚರಿಕೆ ಹೊಂದಿ ಚರಂಡಿಗಳು ಆಗಬೇಕಾದ ಕಡೆಗಳಲ್ಲಿ ಅಳತೆ ಮಾಡುತ್ತಾ ಇದ್ದಾರೆ ಚರಂಡಿಗಳು ತಯಾರಾಗಬೇಕಾದರೆ ಯಾವ ಬ್ರಹ್ಮನಿಗೆ ಗೊತ್ತೋ ನೋಡಬೇಕು ಇಲ್ಲಿನ ದೊಡ್ಡ ಪೇಟೆಯಲ್ಲಿ ನಸ್ಯದ ಅಂಗಡಿ ಬಳಿ ಚರಂಡಿಗಳ ದುರ್ವಾಸನೆಯಿಂದಲೂ ಜವಳಿ ಪೇಟೆಯಲ್ಲಿ ಇರುವ ಗದ್ದೆ ರಸ್ತೆ ಸಮೀಪದಲ್ಲಿ ಖಾಲಿ ಇರುವ ಗೊಬ್ಬರದ ದುರ್ವಾಸನೆಗಳಿಂದಲೂ, ಜನರು ಈ ಬೀದಿಗಳಲ್ಲಿ ಚಳಿಜ್ವರದಿಂದ ನರಳುತ್ತಾ ಇದ್ದಾರೆ ಪ್ರೆಸಿಡೆಂಟರು ಪರಾಂಬರಿಸಿದಲ್ಲಿ ನಾವು ಧನ್ಯರಾಗುತ್ತೇವೆ —ಇಲ್ಲಿ ಅಳತೆ ಸೇರು ತೂಕದ ಬಟ್ಟುಗಳು ಕಮ್ಮಿ ಅಳತೆಗೆ ರೈತರಿಗೆ ಕೊಡಲು ಉಪಕ್ರಮಿಸಿರುತ್ತಾರೆ ಕಳ್ಳನ ಹೆಂಡತಿ ಯಾವಾಗಿದ್ದರೂ ಮುಂಡೆಯೇ ಆಗುತ್ತಾಳೆಂಬ ಗಾದೆಯೇ ಇದೆ ಸರ್ಕಾರದವರು ಮಾತ್ರ ವಹಿಸಿ ಕೃಪೆ ಇಡಬೇಕು —ಕಳೆದ ವಾರ ಗುಬ್ಬಿ ತಾಲ್ಲೂಕು ಬಿಟ್ಟಹಳ್ಳಿ ಸಮ್ಮತು ಶಿಂಕ್ರಸಾಗರದ ಲಕ್ಷ್ಮೀನರಸಪ್ಪನವರ ತಾಯಿಯು ತಿವಿನಲ್ಲಿದ್ದ ಜಾವಲಿಯವರು ಭಂಗಾರದಷ್ಟು ಹಳೇ ಕಟ್ಟಿದ ೧೭ ಹೆಂಪು ಹಾಕಿರುತ್ತೆ ? ಘಟ್ಟ ಒಳ್ಳೇ ಮುತ್ತುಗಳು ಹಾಕಿ ಇರುತ್ತೆ ಸುಮಾರು ೧೨೦೦ ರೂ ಬಾಳುವಂಥಾದ್ದು ಗೈರಲೆಯಾಗಿರುತ್ತೆ ಇದನ್ನು ಪತ್ತೆಮಾಡಿ ಕೊಟ್ಟವರಿಗೆ ೫೦ ರೂ ಬಹುಮಾನ ಕೊಡುತ್ತೇವೆಂದು ಹೇಳುತ್ತಾರೆ ವಾಚಕರೇ, ಪರಾಂಬರಿಸಬೇಕು

ತಿಪ್ಟೂರು —ಟವನ್ನಲ್ಲಿದ್ದ ರೋಗವು ಈಗ ಗ್ರಾಮಗಳನ್ನು ವ್ಯಾಪಿಸಿರುತ್ತದೆ ರಾಗಿ ಕಟಾವು ಮುಗಿಯುತ್ತಾ ಬಂತು ರೂಪಾಯಿಗೆ ೧೩ ಸೇರು ರಾಗಿಯನ್ನು ಮೇಲ್ಪಟ್ಟು ತೆಗೆದುಕೊಳ್ಳಬೇಕಾಗಿದೆ ೩ ವರ್ಷದ ದವಸವು ಈ ಒಂದೇ ಸಂವತ್ಸರದಲ್ಲಿ ಬಂದಿದೆ ಎಂದು ಹೇಳುತ್ತಾರೆ —ಕೆರೆಯಲ್ಲಿ ಗಲೀಜು ಮುಂತಾದ್ದು ಮಾಡಬಾರದೆಂದು ನಮ್ಮ ಅಮಲ್ದಾರರು ಟಾಂಟಾಂ ಹೊಡಿಸಿದರು ಪುನಃ ಬಟ್ಟೆ ಮುಂತಾದ್ದು ಒಗೆಯುವದಕ್ಕೆ ಪೋಲೀಸು ಅಪ್ಪಣೆಯನ್ನು ಕೊಟ್ಟರು — ಕೋರಿ ಮುತ್ಸದ್ದಿಯು ಒಬ್ಬನಿಗೆ ಗಾಂಜಾವನ್ನು ಕ್ರಯಕ್ಕೆ ಕೊಟ್ಟರೆಂದು ದುಕಾನದಾರನು ರಿಪೋರ್ಟು ಮಾಡಿದ್ದರ ಮೇಲೆ ಮುತ್ಸದ್ದಿಯು ತಮ್ಮ ಲೆಕ್ಕ ಮುಂತಾದ್ದರಲ್ಲಿ ಸರಿಯಾಗಿದಾರೆಂದು ತಿಳಿಯಬರಲು ಕೈಯಲ್ಲಿ ಭಂಗಿಯನ್ನು ಹಿಡುಕೊಂಡಿದ್ದ ಕುಡುಕನಿಗೆ ಹತ್ತು ರೂ ಜುಲ್ಮಾನೆಯಾಯಿತು ಕಡೆಗೆ ಮಂಗನಾಗಿ ಮನೆಗೆ ಹೋದನೆಂದು ತಿಳಿಯಿತು —ಹಿಂದೆ ಕೋಣನಕಾವಲಲ್ಲಿ ದಫೇದಾರನಾಗಿದ್ದು, ಒಂದು ಕುರುಬನನ್ನು ಕೊಂದಿದ್ದ, ಸೈಯದ್ ಮಹಮ್ಮದ್ ಸಾಬರನ್ನು ಟವನ್ ದಫೇದಾರಿಗೆ ವರ್ಗ ಮಾಡಿದಾರೆ —ರೈಲ್ವೆ ಪೋರ್ಟರ ಪೈಕಿ ಇಬ್ಬರು ೬॥ ಸೇರು ಅಕ್ಕಿ ಕದ್ದು ಕೆಲಸ ಕಳಕೊಂಡರೆಂದು ತಿಳಿಯಿತು — ಕೆಲವರು ಬೇರೆ ಬೇರೆ ಅರಸದ ಕೆಲಸಗಳನ್ನು ಹಂಬಿಟ್ಟುಕೊಂಡು, ಗಣಿ ಕಾರ್ಖಾನೆಗೆ ಲೈಸೆನ್ಸು ಬೇಕೆಂದು ಬೆಂಗಳೂರಲ್ಲಿ ಕೇಳಿದ ಹಾಗೂ ಯಾರ್‍ಯಾರೋ ಸೇಟರು ಮಾಡಿಕೊಂಡರು ಎಂದು ಆ ಇಲಾಖೆಯವರು ಹೇಳಿದ ಹಾಗೂ ಜನರು ಮಾತಾಡುತ್ತಾರೆ ಮತ್ತು ಯಾರೋ ಒಬ್ಬರು ಒಂದು ಹಸರು ಕಲ್ಲನ್ನು ಬೊಂಬಾಯಿಗೆ ಕಳುಹಿಸಿರುತ್ತಾರಂತೆ ಶೃಂಗೇರಿ ಜಹಗೀರಿಯಲ್ಲಿ ಸಿಕ್ಕುತ್ತದೆಂದು ಜನರು ಮಾತಾಡುತ್ತಾರೆ ಇದನ್ನು ತೆಗೆದುಕೊಂಡು ಬರಬೇಕೆಂದು ಹೋಗಿದ್ದ ಕೆಲವರು ಅಲ್ಲಿನ ಕಾವಲುಗಾರರನ್ನು ಕಂಡು ಹೋದ ದಾರಿಯನ್ನೇ ಹಿಡುಕೊಂಡು ನೆಟ್ಟಗೆ ಮನೆಗೆ ಬಂದು ಸೇರಿಕೊಂಡರೆಂದು ತಿಳಿಯಿತು

ಚಿಕ್ಕನಾಯಕನಹಳ್ಳಿ —ಈ ಊರಿಗೆ ಪ್ಲೇಗ್ ಮಹಾಮಾರಿಯು ಮೂರನೇ ಸಲ ಪ್ರವೇಶಿಸಿ ನಾಲ್ಕು ತಿಂಗಳುಗಳಾದವು ಇದುವರೆಗೆ ಸುಮಾರು ೧೫೦ ಜನರ ವರಿಗೂ ತೀರಿ ಹೋದರು ಎಲ್ಲಾ ಜಾತಿಯವರಲ್ಲಿಯೂ ರೋಗವು ವ್ಯಾಪಿಸಿತ್ತು ಊರು ಬಿಡುವದಿಲ್ಲವೆಂತ ಹಟಮಾಡಿ ಕೊನೆಯವರಿಗೂ ನಿಂತ ಜನರಿಗೆಲ್ಲಾ ಬಹಳ ಕಷ್ಟಸಂಭವಿಸಿತು ಈಗ ಊರೆಲ್ಲಾ ಖಾಲಿಯಾಗಿರುತ್ತೆ ಊರ ಬಾಗಿಲಿಗೆ ಮುಳ್ಳು ಹಾಕಿಸಿರುತ್ತಾರೆ ಇಂಥಾದ್ದರಲ್ಲಿಯೂ ಕೂಡ ಕೆಲವರು ತರಕಾರಿ ಮಾರತಕ್ಕವರು ಊರಲ್ಲಿ ಹಿತ್ತಲುಗಳಿಗೆ ನುಗ್ಗಿ ಕಾಯಿಸೊಪ್ಪುಗಳನ್ನು ಕದ್ದುತಂದು ಮಾರುತ್ತಿದಾರೆ ಈಗ ೧೦-೧೫ ದಿವಸಗಳಿಂದಲೂ ರೋಗವು ಸ್ವಲ್ಪ ಶಮನವಾಗುತ್ತಿರುವಂತೆ ಕಾಣುತ್ತೆ ಇಂಥಾದ್ದರಲ್ಲಿ ರೋಗದ ಸೋಂಕು ತರಕಾರಿ ಮೂಲಕ ಗುಡಿಸಲುಗಳಿಗೆ ವ್ಯಾಪಿಸದಂತೆ ನಮ್ಮ ಅಮಲ್ದಾರರು ಏರ್ಪಾಡು ಮಾಡುತ್ತಾರೆಂತ ನಂಬುತ್ತೇನೆ —ವಿದ್ಯಾಭ್ಯಾಸದ ಇಲಾಖೆಯವರು ಈ ಊರಿನ ಪ್ಲೇಗಿನ ಸ್ಥಿತಿಯನ್ನು ಇಲ್ಲಿನ ಗರ್ಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್ಸರ ಮೂಲಕ ತಿಳಿದುಕೊಂಡು ಸ್ಕೂಲಿಗೆ ರಜಾ ಕೊಟ್ಟಿರುತ್ತಾರೆ ಈಗ ಪುನಃ ೭—೮ ದಿವಸಗಳಿಂದಲೂ ಮೋಡಮಾಡುತ್ತದೆ ಬಿಸಿಲು ಚೆನ್ನಾಗಿ ಕಾಯುವುದಿಲ್ಲ ಇದರಿಂದ ಭಯಕ್ಕೆ ಅವಕಾಶವಾಗಿರುತ್ತೆ —ಈ ಪ್ರಾಂತ್ಯ ಬೆಳೆ ಚೆನ್ನಾಗಿ ಆಗಿದೆ ಇನ್ನೂ ಧಾರಣೆ ಬಹಳ ಹೆಚ್ಚಾಗಿಯೇ ಇರುತ್ತೆ ಮ್ಯುನಿಸಿಪಾಲಿಟಿಯವರು ಲಾಂದ್ರಗಳ ವಿಷಯದಲ್ಲೂ ಸಂದುಗೊಂದುಗಳ ಕಸದ ವಿಷಯದಲ್ಲೂ ತಕ್ಕ ಗಮನ ಕೊಡಬೇಕಾಗಿರುತ್ತೆ —ಈ ಊರಲ್ಲಿರುವ ಕೆರೆಯ ನೀರೇ ಸಮಸ್ತರೂ ಕುಡಿಯತಕ್ಕದ್ದು ಇಂಥಾ ಕುಡಿಯುವ ನೀರಿನಲ್ಲಿ ಅನೇಕ ಕೆಟ್ಟ ಕೆಲಸಗಳೆಲ್ಲಾ ನಡಿಯುತ್ತವೆ ಇದನ್ನೆಲ್ಲಾ ಸರ್ಕಾರದವರು ತಕ್ಕ ನಿಗಾವಣೆಯಿಂದ ತಪ್ಪಿಸುತ್ತಾರೆಂತ ನಿರೀಕ್ಷಿಸುತ್ತೇನೆ

ಅರಸೀಕೆರೆ —ಈ ವಾರ ಸ್ವಲ್ಪ ಸ್ವಲ್ಪ ಮಳೆ ಹನಿ ಬೀಳುವದು ಇದ್ದರೂ ರೈತರು ಜಾಗ್ರತೆ ಜಾಗ್ರತೆಯಾಗಿ ರಾಗಿ ಪೈರನ್ನೆಲ್ಲಾ ಕಟಾವು ಮಾಡುತ್ತಾ ಇದಾರೆ ಮುಕ್ಕಾಲು ಭಾಗ ಕಟಾವು ಪೂರೈಸುತ್ತಾ ಬಂತು ಈ ದಫಾ ಕೆರೆ ಕಟ್ಟೆ ತುಂಬಿರುವದರಿಂದ ರೈತರು ತರಿ ಫಸಲಿಗೆ ಷುರು ಮಾಡಿರುತ್ತಾರೆ ಹಾಸನದಲ್ಲಿ ಇನ್ನು ದಿನವಹಿ ೨—೩ ಪ್ಲೇಗ್ ಆಗುತ್ತಾ ಇದೆ —ಊರಿಗೆ ಜನ ಸೇರುವದು ೨ ತಿಂಗಳು ಆಗಬಹುದೆಂತ ಜನಗಳು ಮಾತನಾಡಿಕೊಳ್ಳುತ್ತಾರೆ —ಈ ಊರಿನ ಪ್ರತಿ ಶುಕ್ರವಾರದ ಸಂತೆಗೆ ದೂರ ಸ್ಥಳಗಳಿಂದ ಜನರು ತಮ್ಮ ಜೀವನೋಪಾಯಕ್ಕಾಗಿ ಅನೇಕ ಸಾಮಾನುಗಳನ್ನು ತೆಗೆದುಕೊಂಡು ಬರುತ್ತಾರೆ ಅದರಲ್ಲಿ ಇಲ್ಲಿನ ಸರಕಾರದ ಅಪ್ಪಣೆ ಇಲ್ಲದ ನೌಕರನು ಅವರನ್ನು ಹೆದರಿಸಿ ಅವರಿಂದ ಅಲ್ಪ ಪ್ರಯೋಜನಕ್ಕೆ ಆಶೆಪಟ್ಟು ವ್ಯಾಪಾರಸ್ಥರನ್ನ ಪೀಡಿಸುತ್ತಾನೆ.—ಇಲ್ಲಿನ ರೈಲ್ವೆ ಗುಡ್ಸ್ ಷೆಡ್ಡಿನಿಂದ ಊರಿಗೆ ಬರುವ ಸಮೀಪದಲ್ಲಿಯೇ ಸುಮಾರು ೨೦—೩೦ ನೋಗ ಜೋಪಡಿಗಳನ್ನು ಕಟ್ಟಿಕೊಂಡು ಜನಗಳು ವಾಸ ಮಾಡುತ್ತಾ ಇದಾರೆ ಈ ಜೋಪಡಿಗಳು ಊರಿಗೆ ಅತಿ ಸಮೀಪವಾಗಿರುತ್ತೆ ಮತ್ತು ಈಗಿನ ಸ್ಯಾನಿಟರಿ ರೂಲ್ಸಿಗೆ ವಿರೋಧವಾಗಿರುವದಲ್ಲದೆ ಅಲ್ಲಿನ ಗಲೀಜು ಹೇಳಲು ಅಸಾಧ್ಯವಾಗಿರುತ್ತೆ ಇಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರು ಇದ್ದರೂ ಆ ಸ್ಥಳವನ್ನು ಗಮನಿಸಿ ನೋಡುವದೇ ಇಲ್ಲ ಈಗ ಬರುವ ಬೇಸಿಗೆಯಲ್ಲಿ ಅಕಸ್ಮಾತ್ತು ಅಗ್ನಿ ಸೋಂಕಿದರೆ ಸುತ್ತು ಮುತ್ತಲೂ ಇರುವ ಮನೆಗಳಿಗೂ ಅಪಾಯ ಉಂಟಾಗುವದರಲ್ಲಿ ಸಂದೇಹವಿಲ್ಲ ಆದ್ದರಿಂದ ಅಮಲ್ದಾರರು ಕೃಪೆ ಮಾಡಿ ಈ ಬಾಧೆಗಳನ್ನು ನಿವಾರಣೆ ಮಾಡುವರೆಂದು ನಂಬಿರುತ್ತೇನೆ —ಇಲ್ಲಿಗೆ ಹಾಸನದಿಂದ ಅ॥ ಸರ್ಜನ್ ಮ॥ ರಾಜಾರಾಮಾಚಾರ್ಯರು ನಾಳೆ ಬರದಿದ್ದರಲ್ಲಿ, ಇಲ್ಲಿನ ಡಿಸ್ಪೆನ್ಸರಿ ಇನ್ಸ್‌ಪೆಕ್ಷನ್‌ಗೆ ಬರುವವರಾಗಿದಾರೆ ಜನಗಳಿಗೆ ಸಕಾಲಕ್ಕೆ ಔಷಧ ಸಿಕ್ಕುವ ಹಾಗೂ ದುಡ್ಡಿನ ವ್ಯಯವಿಲ್ಲದೆ ಹಾಗೇ ಔಷಧ ಸಿಕ್ಕುವ ಹಾಗೂ ಅವರು ಡಾಕ್ಟರಿಗೆ ಆರ್ಡರು ಮಾಡಿ ಕೀರ್ತಿ ಪಡೆಯಾರೆಂದು ನಂಬಿರುತ್ತೇನೆ —ಇಲ್ಲಿನ ಟವನ್ ಮಧ್ಯದಲ್ಲಿ ೧,೫೦೦ ರೂಪಾಯಿ ವೆಚ್ಚಿಸಿ ಒಂದು ರೀಡಿಂಗ್ ರೂಮನ್ನು ಮೆ। ತುಳಸಿದಾಸ್ ಪಾಗ್‌ಜೆ ಯವರು ಶ್ರೀ ಕೃಷ್ಣರಾಜ ಒಡೆಯರ ಹೆಸರಿನ ಮೇಲೆ ಧರ್ಮಾರ್ಥವಾಗಿ ಕಟ್ಟಿಕೊಟ್ಟಿರುತ್ತಾರೆ ಇಂಥಾ ಕಟ್ಟಡ ಹಾಸನದ ಡಿಸ್ಟ್ರಿಕ್ಟಿನಲ್ಲಿಯೇ ಇಲ್ಲ

ಚಿತ್ರದುರ್ಗ — ಡೆಪ್ಯುಟಿ ಕಮಿಷನರ್ ಎಚ್ ಮೆ। ರಾಮಾನುಜಯ್ಯಂಗಾರರು ರಿಟೈರ್ ಆದ್ದರಿಂದ ಅವರಿಗೆ ಬದಲಾಗಿ ಮೆ॥ ಚಂಗೈಯ್ಯಶೆಟ್ಟರು ಅವರ ಕೆಲಸದ ಮೇಲೆ ಬಂದಿದ್ದಾರೆ ಊರ ಹವಾ ಸಂಪೂರ್ಣವಾಗಿ ಆರೋಗ್ಯವಾಗಿಲ್ಲ ಈ ಬೆಟ್ಟಗಳ ಸಾಲಿನಲ್ಲಿ ರಾತ್ರಿವೇಳೆ ಅಗಲೀ ಚಳಿ ಕೊರೆತ ತಾಳಲಾಗದು ಸಾಲದ್ದಕ್ಕೆ ಒಂದು ತರಹ ಶೀತಗಾಳಿ ಬೀಸುತ್ತಲೇ ಇರುವುದು. ಒಬ್ಬರಿಬ್ಬರು ಖಾಯಿಲೆ ಇಲ್ಲದೆ ಇರುವ ಮನೆಯು ಅಪರೂಪವಾಗಿದೆ ಯಾರು ನೋಡಿದರೂ ಕಂಬಳಿಗಳನ್ನು ಹೊದ್ದುಕೊಂಡು ಚಳಿಜ್ವರದಿಂದ ನಡುಗುತ್ತ ಆಸ್ಪತ್ರೆಗೂ ಮನೆಗೂ ತಿರುಗಾಡುತ್ತಿದಾರೆ ಡಾಕ್ಟರ್ ಮೆ॥ ಅಪ್ಪಾದೊರೆ ಮೊದಲಿಯಾರ್‌ರು ಆಸ್ಪತ್ರೆಗೆ ಬರುವ ರೋಗಿಗಳನ್ನು ಬಹು ಶ್ರದ್ಧೆಯಿಂದ ಪರಾಂಬರಿಸುವದಲ್ಲದೆ ರೋಗಿಗಳ ಮನೆ ಮನೆಗೂ ಹೋಗಿ ವಿಚಾರಿಸಿಕೊಂಡು ಬಡಬಗ್ಗರಿಗೆ ಸಹಾ ತುಂಬಾ ಸಹಾಯಕರಾಗಿದಾರೆ ಮ್ಯುನಿಸಿಪಾಲಿಟಿಯವರು ಹೋದ ವರುಷ ಅಕ್ಕಸಾಲಿಗರ ಕೇರಿ ಒಂದು ಚೌಕದಲ್ಲಿದ್ದ ಲಾಂದ್ರವನ್ನು ಕಂಬಸಹಿತ ಕಿತ್ತುಹಾಕಿದ್ದು ಹಿಂದೆ ಒಂದು ವೇಳೆ ಪ್ರಸ್ತಾಪ ಮಾಡಿದ್ದಾಯ್ತು ಆದರೆ ಈಗ ಅದು ಸಾಲದು ಎಂದೋ ಮತ್ತಾವ ಕಾರಣದಿಂದಲೋ ಪೂರ್ವದಿಕ್ಕಿನ ಅದೇ ಬೀದಿಯಲ್ಲಿದ್ದ ಒಂದೇ ಲಾಂದ್ರವನ್ನು ಎರಡು ಮೂರು ತಿಂಗಳಿಂದ ತೆಗೆದುಬಿಟ್ಟಿದಾರೆ ಕೀಳುಕಂಬ ಮಾತ್ರ ನಿಂತಿದೆ ಅದು ವಿಸ್ತಾರವಾದ ಚೌಕ ಹೆಂಗಸರು ಮಕ್ಕಳು ಬಹಳವಾಗಿ ತಿರುಗುವ ಜಾಗ ವಿದ್ಯಾರ್ಥಿಗಳು ಹಾಸ್ಟೆಲಿಗೂ ಟವನ್ ಹಾಲ್ ಹೈಸ್ಕೂಲುಗಳಿಗೂ ತಿರುಗುವ ರಸ್ತೆಯೂ ಇದೇ ಲಾಂದ್ರಗಳು ಅವಶ್ಯವಾಗಿರುವ ಕಡೆ ಹಾಕಿಸಿಕೊಡಬೇಕೆಂದು ಪ್ರಾರ್ಥನೆ ಮಾಡುವಲ್ಲಿ ನಡು ಊರಿನಲ್ಲಿ ಬಹಳ ದಿನಗಳಿಂದಲೂ ಇದ್ದ ಲಾಂದ್ರಗಳನ್ನು ತೆಗೆಯುವ ಬಗೆ ಯಾವದೋ ಗೊತ್ತಾಗಲಿಲ್ಲ ಯಾರಿಗೆ ಹೇಳಿಕೊಳ್ಳಬೇಕೆಂತ ಆ ಚೌಕಗಳ ಪ್ರಜೆಗಳು ಅಂಗಲಾಚಿಕೊಳ್ಳುತ್ತಲಿರುವರು ಮ್ಯುನಿಸಿಪಾಲಿಟಿಯವರಿಗೆ ಯಾವಾಗ ಕರುಣಬರುವದೋ ನೋಡಬೇಕಾಗಿದೆ.

ಕೃಷ್ಣಾ ಜಿ ಐ. ಪಿ ರೈಲ್ವೆ —ಕಳೆದ ಮೂರು ದಿನಗಳ ಕೆಳಗೆ ದೇವಸೂಗೂರದ ಬಳಿ ಒಂದು ಕೊಪ್ಪಲಲ್ಲಿ ಭಯಂಕರವಾದ ಚಿತ್ರಹಿಂಸೆ ನಡೆಯಿತು ಪೋಲೀಸು ಠಾಣಾಕ್ಕೆ ರಿಪೋರ್ಟು ಕೊಡಲ್ಪಟ್ಟಿತು ದೇವಸೂಗೂರ ಠಾಣಾದಿಂದ ಜಮಾದಾರ, ಮೂವರು ಕಾನಿಸ್ಟೇಬಲ್ಲರು ಸಹಾ ಹಾತುಬೇಡಿಸಹ ಸದರಿ ಕೊಪ್ಪಲಿಗೆ ಹೋಗಿ ಗೌಡನಿಂದಲೂ ಕುಳವಾದ ಮಾಲೀಕರಿಂದಲೂ ಕಾರ್ಯವನ್ನು ರಿಸಿ, ಪಂಚನಾಮೆ ಬರಿಸಿ, ಇಬ್ಬರನ್ನು ಹಿಡಿದು ಲಾಕೋಪಿಗೆ ರು ತರುವಾಯ ಜಮಾದಾರ ಮುಂತಾದ ಮೂವರು ಜವಾನರು ಟ ಉಪಚಾರ ಮಾಡಿಕೊಂಡಿರುವಾಗ ಗ್ರಾಮದ ಜನರೆಲ್ಲರೂ ಟ್ಟಾಗಿ ಹೋಗಿ ಜಮಾದಾರ ಮತ್ತು ಮೂವರು ಜವಾನರನ್ನೂ ಕಟ್ಟಿ ತಮಗೆ ಇಷ್ಟಬಂದಷ್ಟು ನಾನಾ ರೀತಿ ಹೊಡೆದು ಮರ್ದನ ಪ್ರಾಣ ಮಾಡಿಬಿಟ್ಟರು ಆ ದುರ್ಬಲರಾದ ಪೋಲೀಸಿನವರು ಬಾದ. ದೇವಸೂಗೂರ ಗ್ರಾಮಕ್ಕೆ ಹೋಗಿ, ಛಂಡಿಮಾಡಿ ರಾಯಚೂರು ಸಿವಿಲ್ ದವಾಖಾನೆಗೆ ದಾಖಲಾದರೂ ಮಾರನೆ ಜವಾನರ ಪೈಕಿ ಪೆಟ್ಟು ತಿಂದವರಲ್ಲಿ ಒಬ್ಬನು ಸತ್ತು ಹೋದನು. ದವರು ಅರೆ ಪ್ರಾಣದಿಂದಿದಾರೆ ಅವರಲ್ಲಿ ಇನ್ನಿಬ್ಬರು ಬ ಸಂಭವವಿಲ್ಲ ನೋಡಿದಿರಾ, ಹೊಲದ ಉಸ್ತುವಾರಿಗಾಗಿ ಟಾಯಿತು ಆದರೆ ಕಾರಣಾಂತರದಿಂದ ಇವೆರಡಕ್ಕೂ ಅನು ಬೆಳೆಯುತ್ತಾ ಇದ್ದು ಕಡೆಗೆ ಬೇಲಿಯ ಹಾಗೆ ಇರುವ ಪೋಲೀಸ ಏಳದಿದ್ದಾಗ್ಯೂ, ಹೊಲದ ಹಾಗಿರುವ ಗ್ರಾಮದ ರೈತರೇ ಎದ್ದು ಮೇಲೆ ಬಿದ್ದು ಇಂಥಾ ದಾಂಧಲೆ ಮಾಡಿದರು ! ವಿಚಾರವಿಲ್ಲ ಕಾರಕ್ಕೆ ಬುದ್ಧಿಗೆಟ್ಟ ಮಂತ್ರಿಗಳಿಂದ ರಾಜ್ಯವೇ ಹಾಳಾಗುವ ಆಸ್ಪತ್ರೆಯಲ್ಲಿ ಸತ್ತು ಹೋದ ಜವಾನ ವಿವರವಾಗಿ ವರ ವಿಷಯವಾಗಿಯೂ ಬಹಳವಾಗಿ ಗದ್ದಲ ಉಂಟಾಗಿ, ಕ್ಟರು, ಪೋಲೀಸು ಜನರಲ್‌ರವರು ಬಂದು ಕೃತ್ಯವನ್ನು ವಿಚಾರಿ ಇದಾರೆ ರಾಯಚೂರಿನಿಂದ ಸವಾರಿ ಸಿಪಾಯಿಗಳು, ಪೋಲೀಸು ದಿಗಳು ೧ ಗುಂಪುಕೂಡಿ ದೇವಸೂಗೂರಕ್ಕೆ ಬಂದು ಕೃತ್ಯನಡೆ ಸ್ಥಳ ನಿವಾಸಿಗಳನ್ನು ಹಿಡಿದು ಲಂಕೋಪು ಮಾಡಿದಾರೆ ಗ್ರಾಮ ಪೋಲೀಸು ಗೌಡನೂ ಕುಲಕರ್ಣಿಯೂ ಪರಾರಿಯಾಗಿದಾರೆ. ಹ್ಯಾಗಾಗುವದೋ ವ್ಯವಧಾನದಲ್ಲಿ ತಿಳಿಯಬಂದೀತು ಪೋಲೀ ರೇ, ಗ್ರಾಮಸ್ಥರೇ, ಇಂಥಾ ಅನಾಹುತಕ್ಕೆ ಎಚ್ಚರದಿಂದಿರಿ

ಚಾಮರಾಜನಗರ —ತಾ ೧೩ ನೇ ಸೋಮವಾರ ಮ ನಮ್ಮ ಡೆಪ್ಯುಟಿ ಕಮಿಷನರ್ ಮೆ॥ ಕಾಂತರಾಜೇ ಅರಸಿನವರ ಯು ನಮ್ಮ ಸ್ಥಳಕ್ಕೆ ದಯಮಾಡಿಸಿತು ಇಲ್ಲಿನ ಸಮಸ್ತ ಅಧಿಕಾರಿಗಳೂ, ಮ್ಯುನಿಸಿಪಲ್ ಮೆಂಬರುಗಳೂ, ವರ್ತಕರೇ ಆದಿಯಾ ಕರೂ, ವೈದಿಕಶಿರೋಮಣಿಗಳೂ ಊರ ಹೊರಗೆ ಕಾದಿದ್ದು ಹಾ ರಾಯಿಗಳನ್ನು ಫಲಮಂತ್ರಾಕ್ಷತೆಗಳನ್ನೂ ಅರ್ಪಿಸಿ ಅವರನ್ನು ಗೆ ಕಂಡರು ಸವಾರಿಯು ರಾಜಬೀದಿಗಳಲ್ಲಿ ಹೊರಟು ಟ್ರಾವ ಬಂಗ್ಲೆಗೆ ದಯಮಾಡಿ ಸಾಯಂಕಾಲ ಊರಿನ ಮುಖ್ಯ ಭಾ ನ್ನು ಈಕ್ಷಿಸಿ ಮರುದಿನ ಬೆಳಗಿಗೆ ಹೋಗಿದ್ದು ಪುನಃ ವಾಪ ಯಮಾಡಿಸಿದರು ಚಾಮರಾಜೇಶ್ವರನ ಗುಡಿಯಲ್ಲಿ ಕೃತ್ತಿಕೋ ವನ್ನು ಪರಾಂಬರಿಸಿದರು ನಂತರ ಟೌನ್ ಇನ್ಸ್‌ಪೆಕ್ಷನ್ ಮಾಡಿ ತೆರಳಿದರು — ಊರನ್ನೆಲ್ಲಾ ಕಸ, ಕಚ್ಚಲು, ಗೊಬ್ಬರದ ಗಂಧ ನಾರುತ್ತಲೂ, ಬೀದಿಗಳಲ್ಲಿ ಬೆರಳೆ ಸಗ್ಗರೆ ಹಬ್ಬುತ್ತಲೂ, ಗಿಹಾಕುತ್ತಿರುವುದರಿಂದಲೂ ಹವಾ ಬಹು ಕೆಟ್ಟುಹೋಗಿರುತ್ತೆ ಡುವವರೇ ಇಲ್ಲದಿರುವಾಗ ಹೇಳತಕ್ಕದ್ದೇನು ? ನೌಕರರು ಮೊ ಗೊಂಡು ಮೆಂಬರುಗಳ ವರೆಗೂ ಅಧಿಕಾರಿಗಳ ಪ್ರೀತಿಯನ್ನೇ ನೋಡುವವರಾಗಿರುತ್ತಾರೆ ಯಾವ ಲಾಂದ್ರದಲ್ಲಿ ನೋಡಲಿ ಚಿಮ್ನಿ, ಬುಡ್ಡಿ, ಕಸಕಡ್ಡಿಗಳು ಕಂಗೊಳಿಸುತ್ತಿರುವುದೇ ವಿನಾ ಮಾತ್ರ ಕಡಮೆ ದೀಪವಂತೂ ಬೆಳಗಿನವರಿಗೂ ಉರಿಯುತ್ತ ಶವೇನೋ ಕಡಮೆ ಊರಲ್ಲಿ ಹಾಳು ಗಿಡಗಳು ಬೆಳೆದು ದುಷ್ಟ ಗಳಿಗೆ ಆವಾಸವಾಗಿರುತ್ತೆ ಅಲ್ಲದೆ ಪಾಪಾಸುಕಳ್ಳಿಯೂ ಬೆಳೆ ತ್ತಿದೆ ನಮ್ಮ ಅಮಲ್ದಾರರ ಗಮನ ಈ ವಿಷಯಗಳಿಗೆ ಯಾಕೆ ಇದೆಯೋ —ಊರಲ್ಲಿ ಕಾಲರಾ ಷುರು ಆಗಿ ೧೦-೧೧ ಜನ ಮು ಹೋದರು ೧ ಕೆಟ್ಟುಹೋಗಿರುವುದರಿಂದ ಕೆಮ್ಮು, ಜ್ವರ, ರೋಗವು ಬಹಳವಾಗಿರುತ್ತೆ ಕಾಲರಾ ವಿಚಾರದಲ್ಲಿ ಸ್ಯಾನಿಟರಿ ದಿಗೆ ನಮ್ಮ ಅಮಲ್ದಾರರು ಗಮನಕೊಡಬಾರದೇ ಊರು ಹೇ ಅವರಿಗೆ ತಿಳಿದಿರುವುದೇ ಎಂಬ ಸಂಶಯ ಉಂಟಾಗಿದೆ —ಹಳೆ ಯು ಮರೆಯದಿರುವಲ್ಲಿ ಈಗತಾನೇ ಒಂದು ಹೊಸ ಕೇನಿ ನದು ಹೆಗ್ಗೋಠಿ ಗ್ರಾಮದ ಶಿವಾಚಾರದ ಚನ್ನಬಸವಯ್ಯ ಯಾರೋ ತುಂಟರು ಹೊಡೆದು ಕಾಡೇರು ಬಾವಿಯಲ್ಲಿ ಹಾಕಿ ಡಾಕ್ಟರು ಅಟಾಪ್ಸಿ ಮಾಡಿದಲ್ಲಿ ೧೮ ಏಟು ಬಿದ್ದು ಖೂ ದಿರುವಂತೆ ತಿಳಿಯಬರುತ್ತೆ ನಮ್ಮ ಪೋಲೀಸಿನವರು ಚತುರರಾ ಲ್ಲಾ ಕೊಲೆಯೂ ಹೆಚ್ಚುತ್ತಿದೆ —ರಾಮಸಮುದ್ರದಲ್ಲಿ ಶಿವ ಹೆಂಗಸು ತನ್ನ ಮಗುವಿನೊಡನೆ ಭಾವಿಗೆ ಬಿದ್ದುಬಿಟ್ಟಳು ಗೊತ್ತಾಗದಿದ್ದರೆ ಕಾಲುಜಾರಿ ಬಿದ್ದಳೆಂದೇ ಭಾವಿಸಬೇಕು

ಬೆಂಗಳೂರು ತಾ ದೊಮ್ಮಸಂದ್ರ —ಇಲ್ಲಿ ಮಳೆ ಚನ್ನಾಗಿರುವುದನ್ನು ನೋಡಿ ರೈತರು ಸಂತೋಷವೆಂಬ ಸಾ ಮುಳುಗಿರುತ್ತಾರೆ ಈ ಊರಿನಲ್ಲಿ ಮುನಿಸಿಪಾಲಿಟಿ ಇದ್ದಾಗ್ಯೂ ದಂತೆ ಇರುವುದನ್ನು ನೋಡಿ ತುಂಬಾ ವಿಷಾದಿಸಬೇಕಾಗಿದೆ ಮಧ್ಯೆ ಮತ್ತು ಛಂದಿಗಳು ಹೆಚ್ಚಾಗಿ ತಿರುಗತಕ್ಕ ರಸ್ತೆಗಳು ವಾಗಿ ಹಳ್ಳ ಕೊಳ್ಳಗಳಾಗಿರುವುದರಿಂದ ಎತ್ತುಗಳೂ ಗಾಡಿ ಪಡತಕ್ಕ ಕಷ್ಟವು ವಿವರಿಸಲಸಾಧ್ಯವಾಗಿದೆ ಕೆಲವು ಸಂದುಗಳಲ್ಲಿ ಯ ಮಧ್ಯ ಭಾಗದಲ್ಲಿ ಬಚ್ಚಲು ನೀರು ನಿಂತು ತುಂಬಾ ಗಲೀಜು ವಾಸನೆಯೂ ಅಧಿಕವಾಗಿರುತ್ತೆ ಮುನಿಸಿಪಲ್ ಲಾಂದ್ರಗಳು ಕೆಲವು ಅರೆ ಪ್ರಾಣದಲ್ಲಿ ಕೊರಗುತ್ತಲೂ ಕೆಲವು ಅಂಧಕಾ ಹೆದರಿಸುವ ಭೂತಗಳೋಪಾದಿಯಲ್ಲಿ ಇರುತ್ತೆ ಈ ಪಥ ಮತ್ತು ಸುಣ್ಣ ಕಲ್ಲಿನವರ ಕತ್ತೆಗಳ ಕಾಟ ಇಲ್ಲಿಗೆ ಮುನಿಸಿ ಉಸ್ತುವಾರಿಗೋಸ್ಕರ ಸರ್ಕಾರದಿಂದ ಒಬ್ಬ ಓವರ್ಸಿಯರು ತಾರೆಂದು ಕೇಳುತ್ತೇನೆ ಆದರೆ ಅವರ ದರ್ಶನವು ಎಷ್ಟು ತಿಂ ದಾವರ್ತಿ ಆಗುತ್ತೋ ನಾನರಿಯೆ ಇದು ದೊಡ್ಡ ಊರು ಇಲ್ಲಿ ಮತ್ತು ಸರ್ಕಾರಿ ಸ್ಕೂಲುಗಳು ಇರುತ್ತವೆ ಇಂಥಾ ಸ್ಥಳದಲ್ಲಿ

ಉಸ್ತುವಾರಿಗೋಸ್ಕರ ಒಬ್ಬ ಸಣ್ಣ ಅಧಿಕಾರಿಯನ್ನು ನೇಮಿಸೋಣದರಿಂದ ಪ್ರಜೆಗಳಿಗೆ ಅನೇಕ ಕಷ್ಟಗಳಿಗೂ ಅನಾರೋಗ್ಯಕ್ಕೆ ಕಾರಣವಾಗಿರುತ್ತೆ ಆದದ್ದರಿಂದ ದಯಾರಸಭರಿತರಾದ ನಮ್ಮ ಅಮಲ್ದಾರರು ಮೇಲ್ಕಂಡ ಸಂಗತಿಗಳ ವಿಷಯವನ್ನು ಲಕ್ಷ್ಯವಾದ ಚಿತ್ತಕ್ಕೆ ತೆಗೆದುಕೊಂಡು ಇಲ್ಲಿ ಮುನಿಸಿಪಾಲಿಟಿಯ ಕಮಿಟಿಯನ್ನು ನೀಗಿಸುತ್ತಾರೆಂದು ನಂಬಿರುತ್ತೇನೆ —ಇಲ್ಲಿಗೆ ಆಸ್ಪತ್ರೆ ಸುಮಾರು ಐದು ಮೈಲಿಗಳ ದೂರದಲ್ಲಿರುವ ಪರ್ತೂರೆಂಬ ಊರಲ್ಲಿತ್ತು ಅದನ್ನು ಯಾವ ಕಾರಣದಿಂದಲೋ ವೈಟ್ ಫೀಲ್ಡಿಗೆ ಸರ್ಕಾರದವರು ಸಾಗಿಸಿರುತ್ತಾರೆ ಸದರಿ ಆಸ್ಪತ್ರೆಯು ಇಲ್ಲಿಗೆ ಹತ್ತು ಮೈಲಿ ಫಾಸಲೆಯಾಗುತ್ತೆ ಆನೇಕಲ್ಲಾದರೋ ಹದಿನೇಳು ಆಗುತ್ತೆ ಗರೀಬರು ತಮ್ಮ ಕಾಯಿಲೆ ಅವಸ್ಥೆಗಳಲ್ಲಿ ಅಷ್ಟು ದೂರ ಹೋಗಲು ಅಸಾಧ್ಯ ವೈಟ್ ಫೀಲ್ಡಿನಲ್ಲಿ ಒಬ್ಬ ಯೂರೋಪ್ಯರ್ ಡಾಕ್ಟರು ಸ್ವಂತ ಔಷಧಿಶಾಲೆಯನ್ನಿಟ್ಟುಕೊಂಡು ಇಲಾಜು ಮಾಡುತ್ತಾರೆ ಇಂಥಾದ್ದರಲ್ಲಿ ಬಡ ಜನಗಳಿಗಿದ್ದ ಆಸ್ಪತ್ರೆಯನ್ನು ಪರ್ತೂರಿನಿಂದ ತೆಗೆದು ಹಣವಂತರೂ ಅನುಕೂಲಸ್ಥರೂ ಇರುವ ಸ್ಥಳಕ್ಕೆ ಹಾಕಿರುವುದರಿಂದ ಬಡವರ ದುಃಖಕ್ಕೆ ಪಾರವೇ ಇಲ್ಲ ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ನಾವೆಲ್ಲರೂ ಕೂಡ ಆಸ್ಪತ್ರೆ ಅಸಿಸ್ಟೆಂಟರು ಇಲ್ಲಿಗೆ ಬರುವ ಹಾಗೆ ಏರ್ಪಾಡು ಮಾಡಲು ಪ್ರಾರ್ಥಿಸುತ್ತೇವೆ —ನೂರಾರು ಮಕ್ಕಳಿರತಕ್ಕ ಈ ಊರಿಗೆ ಲಸಿಕೆಯವರ ದರ್ಶನವೇ ಇಲ್ಲ ಮಕ್ಕಳಿಗೆ ಅಮ್ಮ ಎದ್ದು ಬಾಧೆಗಳು ವಿಕಾರವಾಗುವದನ್ನು ನೋಡಲು ತುಂಬಾ ವಿಷಾದವಾಗುತ್ತಿದೆ ಈ ಸರ್ಕಲ್ ದೇವಿ ಇನ್ಸ್ಪೆಕ್ಟರಾಗಲೀ ನಮ್ಮ ತಾಲ್ಲೋಕು ಡಾಕ್ಟರಾಗಲಿ ಸದರಿ ದೇವಿ ಪಂಡಿತರನ್ನ ತನಿಖೆ ಮಾಡಿ ಆಗಿಂದಾಗ ಸವಾರಿ ಇಲ್ಲಿಗೆ ದಯಮಾಡುವ ಹಾಗೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ

ಚಿಂತಾಮಣಿ.—ಈ ಚಿಂತಾಮಣಿ ಟವನಿನಲ್ಲಿ ಪೂರ್ವದಲ್ಲಿ ನೀರಿನ ಬವಳ ಕಷ್ಟವಾಗಿತ್ತು ಅದರ ಮೇಲೆ ಇದೇ ಊರಲ್ಲಿ ಎಸಿಸ್ಟೆಂಟ್ ಈಗ್ಗೆ ೮—೧೦ ವರ್ಷಗಳ ಕೆಳಗೆ ಮೃತಪಟ್ಟ ಅಶ್ವತ್ಥ ಶೆಟ್ಟಿ ಎಂಬುವರು ಈ ಊರಿಗೆ ನೀರಿನ ಅನುಕೂಲವನ್ನು ಒದಗಿಸುವದಕ್ಕೋಸ್ಕರ ಸರ್ಕಾರದವರ ವಶಕ್ಕೆ ಧರ್ಮಾರ್ಥವಾಗಿ ಕೊಟ್ಟಿದ್ದ ಹಣದ ಜೊತೆಗೆ ವಿಶೇಷ ಹಣವನ್ನು ದಯಾಳುಗಳಾದ ಸರ್ಕಾರದವರು ಸೇರಿಸಿ ಆ ಹಣದಿಂದ ಎರಡು ವರ್ಷಗಳ ಹಿಂದೆ ಈ ಊರಿಗೆ ಧರ್ಮಾರ್ಥ ಸುಮಾರು ೬೦ ಕಡೆ ನಲ್ಲಿಗಳನ್ನು ಇಡಿಸಿದರು ಈ ನಲ್ಲಿಗಳಿಗೆ ಊರಿಗೆ ೧॥ ಮೈಲಿ ದೂರದಲ್ಲಿರುವ ಕನ್ನಂಪಲ್ಲಿ ಕೆರೆಯಿಂದ ನೀರು ಸರಬರಾಯಿ ಆಗುತ್ತದೆ ಆ ಲಾಗಾಯಿತು ಈ ಊರಿಗೆ ನೀರಿನ ಕ್ಷಾಮವು ತಪ್ಪಿ ಮತ್ತು ಕಷ್ಟವು ತಪ್ಪಿ, ಸಕಲರಿಗೂ ಅನುಕೂಲವಾಗಿದೆ ಸ್ವಲ್ಪ ದಿವಸಗಳಿಂದೀಚೆಗೆ ಈ ನಲ್ಲಿಗಳಿಗೆ ನೀರು ಬರತಕ್ಕ ಕೊಳಾಯಿಯಲ್ಲಿ ಉಂಟಾಗುವ ತೊಂದರೆಗಳಿಂದ ಆ ಕೊಳಾಯಿಗಳನ್ನು ಸರಿಪಡಿಸುವದಕ್ಕಾಗಿ ಒಂದೆರಡು ದಿನಗಳು ನೀರು ಬಿಡದೆ ಇರುವುದೂ ಉಂಟು ಆ ಒಂದೆರಡು ದಿನಗಳು ಮಾತ್ರ ಈ ಊರಿನವರು ನೀರಿನ ಉಪಯೋಗಕ್ಕೋಸ್ಕರ ಪೂರ್ವ ಪದ್ಧತಿಯನ್ನನುಸರಿಸುವರು ಅಂದರೆ ಸಣ್ಣದಾದವರು ಸಣ್ಣ ಸಣ್ಣ ಕೈ ಗಾಡಿಗಳಲ್ಲಿ ಸುಮಾರು ಕೊಡ ನೀರು ಹಿಡಿಸತಕ್ಕ ಪೀಪಾಯಿಯನ್ನಿಟ್ಟುಕೊಂಡು ಜಲಾಶಯವಿರುವ ಕಡೆಗೆ ಹೋಗಿ ಆ ಪೀಪಾಯಿ ತುಂಬಾ ನೀರನ್ನು ಭರ್ತಿ ಮಾಡಿ ಎಳೆದುಕೊಂಡು ಬರುವರು ಬಡವರು ಕೊಡಗಳಲ್ಲಿಯೋ ಬಿಂದಿಗೆಗಳಲ್ಲಿಯೋ ನೀರನ್ನು ಹೊತ್ತು ತರುವರು ಈ ರೀತಿ ಇರುವಲ್ಲಿ ನವಂಬರು ೩೦ ನೇ ತಾ ಶುಕ್ರವಾರ ನಲ್ಲಿಗಳಿಗೆ ನೀರು ಬಿಡಲಿಲ್ಲ ಆ ದಿನ ೧೧ ಗಂಟೆಗೆ ಸ್ಕೂಲು ಬಿಟ್ಟ ಕೂಡಲೇ ಏ ವಿ ಸ್ಕೂಲಿನಲ್ಲಿ ಓದುತ್ತಿದ್ದ ಸುಮಾರು ೧೦ ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣ ಹುಡುಗನು ತನ್ನ ಮನೆಗೆ ಹೋದನು ಆ ಕೂಡಲೇ ಆತನ ಅಪ್ಪನು ಊಟಕ್ಕೆ ಎಬ್ಬಿಸಿದರು ಆಗ ಆತನು ಮತ್ತೊಬ್ಬ ದೊಡ್ಡ ಮನುಷ್ಯನ ಮನೆಗೆ ಹೋಗಿರುವ ತನ್ನ ಅಣ್ಣನನ್ನು ಕರೆತಂದು ಅನಂತರ ಊಟಕ್ಕೆ ಏಳುವೆನೆಂದು ಹೇಳಿ, ಅಣ್ಣನನ್ನು ಕರೆತರಲು ಹೋದನು ಆ ದೊಡ್ಡ ಮನುಷ್ಯರ ಮನೆಗೆ ಗಾಡಿಯ ಮೂಲಕ ನೀರನ್ನು ತರಿಸುತ್ತಿದ್ದರು ಆ ಪೀಪಾಯಿಗೆ ಎಲ್ಲಿಯೋ ಸ್ವಲ್ಪ ಛಿದ್ರವಿದ್ದು ಆದ ಕಾರಣ ನೀರು ಸ್ರವಿಸುತ್ತಿತ್ತು ಆಗ ನೀರು ತರತಕ್ಕವರು ದಾರಿಯಲ್ಲಿ ನಿಲ್ಲಿಸಿದ್ದ ಈ ಹುಡುಗನನ್ನು ಕರೆದು—ಪೀಪಾಯನ್ನು ಸಲ್ಪ ಹಿಡಿದು ಕೋ ನಾನು ಛಂಡಿ ಹತ್ತಿ ಆ ಛಿದ್ರವನ್ನು ಮುಚ್ಚುತ್ತೇನೆ ಎಂದು ಹೇಳಿದಂತೆ ಅದರಂತೆ ಈ ಬಡ ಹುಡುಗನು ಬಂಡಿಯ ಹಿಂಭಾಗದಲ್ಲಿ ನಿಂತು ಪೀಪಾಯನ್ನು ಹಿಡಿದುಕೊಂಡಿರುವಾಗ ಆ ಪೀಪಾಯಿಗೆ ಹಿಂಭಾಗಕ್ಕೆ ಜಗ್ಗಿ ಛಂಡಿ ಹಿಂದಕ್ಕೆ ಬಾಗಿ ಆ ನೀರಿನಿಂದ ಭರ್ತಿಯಾಗಿದ್ದ ಪೀಪಾಯಿ ಬಿದ್ದು ಉರುಳಿ ಬಂದು ಈ ಹುಡುಗನ ಕಾಲಿನ ಮೇಲೆ ಬಿದ್ದು ಬಲಗಾಲಿನ ಮೂಳೆಯು ಸಂಪೂರ್ಣವಾಗಿ ಕತ್ತರಿಸಿ ಬಿದ್ದು ಹೋಯಿತು ದೂರದಲ್ಲಿದ್ದ ಇವನನ್ನು ನೋಡಿದ ಅವನ ಅಣ್ಣನು ಕೂಡಲೆ ಓಡಿಬಂದು ಆ ಪೀಪಾಯನ್ನು ಕತ್ತರಿಸಿ ಹೋಗಿದ್ದ ಬಿಟ್ಟನ್ನು ಮರೆತು ಜಾಗ್ರತೆಯಾಗಿ ಆ ಹುಡುಗನನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿ ಔಷಧವನ್ನು ಮಾಡಿಸಿದನು ಅಯ್ಯೋ ಪಾಪ ಆ ಹುಡುಗನ ಬಾಧೆಯನ್ನು ಎಷ್ಟು ಹೇಳಿದರೂ ತೀರದು

ಗುಂಡ್ಲುಪೇಟೆ.—ನವಂಬರ್ ೨೬ನೇ ತಾ ೯ ಘಂಟೆಯಲ್ಲಿ ಚಿಕ್ಕಕೆರೆ ಹಾಬಲಿ ಬೋಗೈಯ್ಯನ ಹುಂಡಿ ಗ್ರಾಮದಲ್ಲಿ ಇರುವ ಸಾಹುಕಾರ ಬಸವಯ್ಯನ ಗುಡಿ ಕಟ್ಟೆಗೆ ಇದೇ ಬೋಗೈಯ್ಯನ ಹುಂಡಿ ಗ್ರಾಮದ ಶಿವಾಚಾರದ ಬಿದ್ರಪ್ಪನ ಮಗ ನಿರ್ವಯ್ಯನೆಂಬುವನು ಹೊಟ್ಟೆಯ ಛಂಡಿ ಎರಡು ಎತ್ತು ಹೂಟ್ಟಕೊಂಡು ಕಟ್ಟೆಯಲ್ಲಿ ನೀರು ಕುಡಿಸಿದ ಎತ್ತು ಛಂಡಿ ಹೊಡೆದುಕೊಂಡು ತಾನು ನೀರಿನ ಕಡೆಗೆ ಹೋಗಿದ್ದಾಗ್ಗೆ ಎತ್ತುಗಳು ಹಠಾತ್ತ ತಪ್ಪಿ ಆಳವಾಗಿದ್ದ ನೀರಿಗೆ ಬೀಳುವಾಗ ಇದ್ದಾಗ್ಗೆ ಮೇಲೆ ಕೂತಿದ್ದ ನಿರ್ವಯ್ಯನು ನೀರಿಗೆ ಬಿದ್ದು ಬಂಡಿ ಇವನ ಮೇಲುಭಾಗಕ್ಕೆ ಆಯಿತು ಇವನ ತೊಡೆ ಎರಡು ಗಾಲಿಗಳ ಮಧ್ಯ ಭದ್ರವಾಗಿ ತಗುಲಿಕೊಂಡು, ಇವನು ಮೇಲಕ್ಕೆ ಏಳುವುದಕ್ಕೆ ಅವಕಾಶವಿಲ್ಲದೆ ಎತ್ತುಗಳು ನೇಣುಹಾಕಿಕೊಂಡು ಎತ್ತು ಇವ ಸಹ ಸಾಯುವುದಕ್ಕೆ ಅವಕಾಶವಾಯಿತು ಅಷ್ಟರಲ್ಲಿ ಗ್ರಾಮದ ಪಟೇಲ್ ಅನಂತೈಯ್ಯನವರು, ಯಜಮಾನ ನಲ್ಲಪ್ಪ, ಇವರ ಅಣ್ಣನ ಮಗ ಮಾದಪ್ಪ, ಇವರೇ ಮುಂತಾದವರು ಉದ್ದವಾದ ಕುಡಗಳ ದಲ್ಲೆಯಿಂದ ಉಪಾಯವಾಗಿ ಕರೆಗೆ ಎಳೆದುಕೊಂಡು ಸದರಿ ನಿರ್ವಯ್ಯನ ಮತ್ತು ಎರಡು ಎತ್ತುಗಳ ಪ್ರಾಣವನ್ನು ಬದುಕಿಸಿದ್ದಕ್ಕಾಗಿ ತುಂಬಾ ಆಶ್ಚರ್ಯ ಪಡಬೇಕಾಗಿದೆ ಈ ಹಳ್ಳಿ ಜನರಲ್ಲಿ ಇನ್ನೂ ಪ್ರಕೃತನ ಬಿಟ್ಟಿಲ್ಲ ತಾನು ಬಂಡೀಮೇಲೆ ಕೂತುಕೊಂಡು ಆಳವಾದ ನೀರಿಗೆ ಹೊಡೆದುಕೊಂಡು ಹೋದರೆ ಅಪಾಯ ಬರುತ್ತೆಂಬ ವಿಷಯ ತಿಳಿಯದೆ ಹೋದ್ದಕ್ಕಾಗಿ ಅನೇಕರು ಇವನನ್ನು ಬೈದು ಮನೆಗೆ ಕಳುಹಿಸಿಕೊಟ್ಟರು ಅಂತು ಈ ೩ ಪ್ರಾಣಗಳನ್ನೂ ಬದುಕಿಸಿದಂಥ ಧರ್ಮಕ್ಕೆ ಪಾರವೇ ಇಲ್ಲ.—ತಾ ೨೦ ನೇ ಗುರುವಾರ ಹಗಲು ಸುಮಾರು ೧೧ ಘಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೋಕು ಬೇಗೂರು ಹೋಬಳಿ ತಗ್ಗಲೂರು ಗ್ರಾಮದಲ್ಲಿರುವ ಶಿವಭಕ್ತರ ನಂಜೇಗೌಡನ ಹೆಂಡತಿ ಮಾದಮ್ಮ ಎಂಬುವಳು ಆ ಗ್ರಾಮಕ್ಕೆ ವಾಯವ್ಯ ದಿಕ್ಕಿನಲ್ಲಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿರುವ ಪುಟ್ಟಕಟ್ಟರ ಭಾವಿಗೆ ಸಿಹಿನೀರು ತರುವುದಕ್ಕೆ ಹೋದಳು ಈಕೆಯು ನೀರುಸೇದಿ ಭಾವಿ ಕರೇ ಮೇಲಿಟ್ಟು ಬಿಟ್ಟೆ ಬಿಂದಿಗೆಯನ್ನ ತಲೆಗೆ ಹಾಕಿಕೊಳ್ಳುವುದಕ್ಕೆ ಪಕ್ಕಕ್ಕೆ ತಿರುಗಿದ ಕೂಡಲೆ ಆಕಸ್ಮಾತ್ ಭಾವಿಗೆ ಬಿದ್ದುಬಿಟ್ಟಳು ಅವಳ ಸಂಗಾತಿ ಬಂದಿದ್ದ ೬—೩ ಹುಡುಗರು ಗ್ರಾಮಕ್ಕೆ ಆಳುತ್ತಾ ಓಡಿಹೋದರು ಆಗ್ಗೆ ಅಲ್ಲಿಗೆ ಸ್ಕೂಲಿನ್ಸ್ಪೆಕ್ಟರ ಜೊತೆಗಿದ್ದ ಬಾನುಭೋಗರ ತಮ್ಮ ಅಣ್ಣೇಸ್ವಾಮಿ ಎಂಬುವರು ಮತ್ತು ಕೋಟೆಕೆರೆ ಗ್ರಾಮದ ಸ್ಕೂಲ್ ಮಾಸ್ಟರ್ ಶ್ರೀನಿವಾಸೈಯ್ಯನವರನ್ನ ಗುಂಡ್ಲುಪೇಟೆಗೆ ಸವಾರಿ ಛಂಡಿ ಮೇಲೆ ಕೂಡಿಸಿಕೊಂಡು ಹೋಗುತ್ತಿದ್ದ ಕೃಷ್ಣಶೆಟ್ಟಿ ಎಂಬುವನು ಮೇಲ್ಕಂಡ ಅಣ್ಣೇಸ್ವಾಮಿ ಎಂಬುವರು ಸಹ ಧೈರ್ಯದಿಂದ ೩೦ ಅಡಿ ಆಳವುಳ್ಳ ನೀರುಳ್ಳ ಭಾವಿಗೆ ಇಳಿದು, ಆಕೆಯು ಒಂದು ದಫ ಮುಳುಗಿ ಏಳುವಷ್ಟರಲ್ಲಿ ಅವಳ ತಲೆಯನ್ನು ಹಿಡಿದು ಮೇಲಕ್ಕೆ ಎತ್ತಿಕೊಂಡರು ಅಷ್ಟರಲ್ಲೇ ಗ್ರಾಮಕ್ಕೆ ಓಡಿಹೋದ ಹುಡುಗರ ಮಾತಿನಿಂದ ಆವಳ ಗಂಡ ನಂಜೇಗೌಡನೇ ಆದಿಯಾಗಿ ಕೆಲವು ಜನ ಗ್ರಾಮಸ್ಥರು ಸಹ ಓಡಿಬಂದ , ಒಂದು ತೊಟ್ಟಿಲ ಕಟ್ಟಿ ಬಿಟ್ಟು ಅವಳನ್ನು ಮೇಲಕ್ಕೆ ಸೇದಿಕೊಂಡರು. ಭಾವಿಗೆ ಬಿದ್ದವಳಿಗೆ ದೈವನಾತ್ ಏನೂ ಜಖಂ ಆಗಲಿಲ್ಲ ಮನೆಗೆ ನಡೆದುಕೊಂಡೇ ಹೋದಳು. ಮೇಲ್ಕಂಡ ಪುಣ್ಯಾತ್ಮರು ಇವಳಿಗೆ ಪ್ರಾಣದಾನ ಕೊಟ್ಟಂತಾಯಿತು ಅವಳ ಪತಿ ಪುತ್ರಾದಿಗಳ ಸಂತೋಷಕ್ಕೆ ಪಾರವೇ ಇಲ್ಲ ಗ್ರಾಮಾಂತ್ರಗಳಲ್ಲಿ ಹಗ್ಗದಿಂದ ಸೇದುವ ಇಂಥಾ ನೆಲಬಾವಿಗಳಿಗೆ ರಾಟೆ ಇಟ್ಟು ಸೇದುವ ಪಕ್ಷಕ್ಕೆ ಇಂಥಾ ಅಪಾಯ ಬರಲರಿಯದು

ವಿದೇಶ ವರ್ತಮಾನಗಳು.

ತುರ್ಕಿ ಸುಲ್ತಾನರಿಗೆ ಮತ್ತೆ ಕಾಯಿಲೆ ಪ್ರಾಪ್ತವಾಗಿದೆ ಎಂದು ತಂತೀ ವರ್ತಮಾನ ಬಂದಿದೆ

*****

ರಷ್ಯಾ ರಾಜ್ಯಕ್ಕೆ ಸೇರಿದ ಒಲ್ಗಾ ಎಂಬ ಆಧಿಪತ್ಯದಲ್ಲಿ ನೀರಕ್ಷಾಮ ಪ್ರಾಪ್ತವಾಗಿದೆ ಎಂತಲೂ ಪ್ರಜೆಗಳ ಕಷ್ಟಗಳು ಬಹು ಭಯಂಕರವಾಗಿವೆ ಎಂತಲೂ ತಂತೀ ವರ್ತಮಾನ ಬಂದಿದೆ

*****

ರಷ್ಯಾ ರಾಜ್ಯಕ್ಕೆ ಸೇರಿದ ಸಿಬಸ್ಟಪೂಲ್ ಎಂಬ ರೇವುಪಟ್ಟಣದಲ್ಲಿ ದಂಗೆ ಮಾಡಿದ ರಷ್ಯಾ ಸೈನಿಕರ ಪೈಕಿ ೨೦೮ ಜನರನ್ನು ಸರ್ಕಾರದವರು ದರ್ಯಾಫ್ತು ಮಾಡಿ, ಎಲ್ಲರಿಗೂ ಸಜಾ ವಿಧಿಸಿರುತ್ತಾರೆ

*****

ಬಳ್ಳಲ್ಲಿ ಎಂಬೊಬ್ಬ ಗಟ್ಟಿಗನು ಆಕಾಶಬುಟ್ಟಿಯಲ್ಲಿ ಕುಳಿತು ಲಂಡನ್ ಪಟ್ಟಣದಿಂದ ಹೊರಟು ಇಂಗ್ಲಿಷ್ ಛಾನಲ್ ಎಂಬ ಸಮುದ್ರ ಶಾಖೆಯನ್ನು ದಾಟಿಕೊಂಡು ಮೇವೆ ಎಂಬ ಪಟ್ಟಣದಲ್ಲಿ ಇಳಿದನು ಅಲ್ಲಿಂದಲ್ಲಿಗೆ ೩೦೦ ಮೈಲಿ ದೂರವಿದೆ

*****

ಚೀಣಾ ರಾಜ್ಯದ ಚಕ್ರವರ್ತಿಯವರು ತಮ್ಮ ಚಕ್ರಾಧಿಪತ್ಯದ ಸರ್ಕಾರಿ ನೌಕರರಿಗೆಲ್ಲಾ ಇನ್ನು ಆರು ತಿಂಗಳೊಳಗಾಗಿ ಅಫೀಮ್ ಸೇದುವುದನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದು ಸರ್ಕಿಲರ್ ಹುಕುಂ ಕಳುಹಿಸಿರುತ್ತಾರೆಂದು ತಂತೀ ವರ್ತಮಾನ ಬಂದಿದೆ

*****

ಅಮೇರಿಕಕ್ಕೆ ಸೇರಿದ ಫಿಲಡೆಲ್ಫಿಯಾ ಪಟ್ಟಣದಲ್ಲಿ ಕಳೆದ ವಾರ ಮೋಟಾರ್ ಕಾರ್ ಎಂಬ ಗಾಡಿಗಳ ಬಾಜಿ ನಡೆಯಿತು ಆ ಪೈಕಿ ಒಂದು ಗಾಡಿ ನೋಟಕ್ಕಾಗಿ ನಿಂತಿದ್ದ ಜನರ ಗುಂಪಿನ ಮೇಲೆ ನುಗ್ಗಿ ೮ ಜನರಿಗೆ ಜಖಂ ಆಗಿದೆ ಈ ಪೈಕಿ ಮೂವರು ಮಂದಿ ಮೃತಪಟ್ಟರು

*****

ದಕ್ಷಿಣ ಆಫ್ರಿಕಕ್ಕೆ ಸೇರಿದ ಪ್ರೆಟೋರಿಯ ಎಂಬ ಊರಿನಲ್ಲಿ ಪ್ರಜೆಗಳ ಪ್ರಯೋಜನಾರ್ಥವಾದ ಒಂದು ಪಬ್ಲಿಕ್ ಸರಸ್ವತಿ ಭಂಡಾರವನ್ನು ಸ್ಥಾಪಿಸಬೇಕೆಂದು ಪ್ರಸಿದ್ಧ ಕೋಟ್ಯಾಧೀಶ್ವರನಾದ ಮಿ॥ ಆಂಡ್ರು ಕಾರ್ನೆಗಿ ಎಂಬ ಪುಣ್ಯಾತ್ಮನು ೨೫,೦೦೦ ರೂಪಾಯಿ ಕೊಟ್ಟಿರುತ್ತಾನೆ

*****

ಫ್ರಾನ್ಸಿಗೆ ಸೇರಿದ ರೈಲ್ ಗಾಡಿಯಲ್ಲಿ ಬಿಂಡರ್ ಬ್ಲಿಡ್ ಎಂಬೊಬ್ಬ ಇಂಗ್ಲಿಷ್ ಸ್ತ್ರೀಯು ಕುಳಿತು ಕಳೆದ ವಾರ ಸಂಚಾರ ಮಾಡುತ್ತಿರುವಾಗ್ಗೆ ಮಾರ್ಸೇಲ್ಸಿಗೂ ಟೌಲೂಸಿಗೂ ನಡುವೆ ಯಾರೋ ಆಕೆಯ ೬೫,೦೦೦ ರೂಪಾಯಿ ನಗನಾಣ್ಯಗಳನ್ನು ಅಪಹರಿಸಿದರೆಂದು ತಂತೀ ವರ್ತಮಾನ ಬಂದಿದೆ

ಕುಷ್ಟರೋಗವು ಅರ್ಜಂಟೈನಾ ಸೀಮೆಯಲ್ಲಿ ದಿನೇ ದಿನೇ ಪ್ರಬಲವಾಗುತ್ತಿರುವದೆಂದು ಸಿದ್ಧಾಂತ ಪಟ್ಟದ್ದರಿಂದ ಆ ರೋಗವು ಇತರ ಕಡೆಗಳಿಗೆ ಹಬ್ಬದಂತೆ ಬಲಾತ್ಕಾರವಾದ ಏರ್ಪಾಡುಗಳನ್ನು ಕೂಡಲೇ ಮಾಡಿ ರೂಢಿಗೆ ತರಬೇಕೆಂದು ಕೆಲವು ವೈದ್ಯಶಿಖಾಮಣಿಗಳು ಬ್ಯೂನಸ್ ಐರಸ್ ನಗರದಲ್ಲಿ ಸಭೆ ಸೇರಿ ಚರ್ಚೆ ಮಾಡಿ ತೀರ್ಮಾನಿಸಿರುತ್ತಾರೆ.

*****

ಸ್ಕಾಟ್ಲಾಂಡಿಗೆ ಸೇರಿದ ಗ್ಲಾಸ್ಗೋ ಪಟ್ಟಣದಲ್ಲಿ ವಿಸ್ಕಿ ಎಂಬ ಮದ್ಯವನ್ನು ತಯಾರುಮಾಡುವ್ವೊಂದು ಭಾರೀ ಕಾರ್ಖಾನೆಯಲ್ಲಿ ದೊಡ್ಡ ಅಗ್ನಿಪಾತವಾಯಿತು ೭೦,೦೦೦ ಗ್ಯಾಲನ್‌ಗಳ ಬಿಸಿಯಾದ ಮದ್ಯವು ಚೆಲ್ಲಿ ಹೋಗಿ ಪಟ್ಟಣದ ರಾಜಬೀದಿಗಳಲ್ಲಿ ಎರಡು ಅಡಿ ಪ್ರಮಾಣಕ್ಕೆ ಕೆರೆಯಂತೆ ನಿಂತುಕೊಂಡಿತು ಒಬ್ಬ ಸತ್ತು ಹೋದನು, ೧೦ ಮಂದಿಗೆ ಗಾಯಗಳಾದವು

*****

ಲಂಡನ್ ಪಟ್ಟಣದ ಗೋವರ್ ಬೀದಿಯಲ್ಲಿರುವ ಯೂನಿವರ್ಸಿಟಿ ಕಾಲೇಜಿನ ಆಸ್ಪತ್ರೆಯ ಕಟ್ಟಡವನ್ನು ಚಿಹಾವಣಿ ಮಾಡುವುದಕ್ಕೆ ಸರ್ ಜೆ ಬ್ಲಂಡೆಲ್ ಮ್ಯಾಪಲ್ ಎಂಬ ಪುಣ್ಯಾತ್ಮನು ತನ್ನ ಆಸ್ತಿಯಲ್ಲಿ ೩೦ ಲಕ್ಷ ರೂಪಾಯಿ ಕೊಟ್ಟಿದರಿಂದ ಈಗ ಆ ಕಟ್ಟಡವು ಪೂರೈಸಿತು ಚಕ್ರವರ್ತಿ ಸಾರ್ವಭೌಮರವರ ಸಹೋದರರಾದ ಡ್ಯೂಕ್ ಆಫ್ ಕನ್ನಾಟ್‌ರವರು ಆ ಕಟ್ಟಡವನ್ನು ಪ್ರತಿಷ್ಠೆ ಮಾಡಿದಾರೆ

*****

ಅಮೇರಿಕಕ್ಕೆ ಸೇರಿದ ಸ್ಯಾನ್‌ಫ್ರಾನ್ಸಿಸ್ಕೊ ನಗರದ ಮ್ಯುನಿಸಿಪಲ್ ಬೋರ್ಡಿನ ಅಧ್ಯಕ್ಷನಾಗಿದ್ದು ಪ್ರಜೆಗಳಿಂದ ವಸೂಲಾದ ಆದಾಯದ ಹಣವನ್ನು ದುರುಪಯೋಗ ಪಡಿಸಿದ ಮಿ॥ ಶ್ಮಿಡ್ಸ್ ಎಂಬಾತನನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ ಮ್ಯುನಿಸಿಪಲ್ ಆಫೀಸಿನ ಕಾರಬಾರುಗಳು ಬಹು ಅತೃಪ್ತಿಕರವಾಗಿವೆ ಎಂತಲೂ, ನೌಕರರು ಮ್ಯುನಿಸಿಪಲ್ ಹಣವನ್ನು ನೀರಿನಂತೆ ಖರ್ಚುಮಾಡಿಬಿಟ್ಟಿದ್ದಾರೆಂತಲೂ ತಂತೀ ವರ್ತಮಾನ ಬಂದಿದೆ

*****

ವಿಲಾಯತಿಯಲ್ಲಿ ಅನೇಕ ಪರೋಪಕಾರ ಕಾರ್ಯಗಳನ್ನು ಮಾಡಿ ಸಕಲ ಪ್ರಜೆಗಳಿಂದಲೂ ಹೊಗಳಿಸಿಕೊಳ್ಳುತ್ತಿದ್ದ ಮಿ॥ ಜಾರ್ಜ್ ಹೆರಿಂಗ್ ಎಂಬಾತನು ಕಾಲವಾದನು ಈತನು ತನ್ನ ಆಸ್ತಿಯಲ್ಲಿ ಸ್ವಲ್ಪ ಭಾಗವನ್ನು ಮಾತ್ರ ತನ್ನ ಬಂಧುಮಿತ್ರಾದಿಗಳಿಗೆ ಹಂಚಿಕೊಟ್ಟು ಉಳಿದ ಸುಮಾರು ಒಂದೂವರೆ ಕೋಟಿ ರೂಪಾಯಿಯನ್ನು ದ್ರವ್ಯವನ್ನು ನಾನಾ ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಮರಣಶಾಸನವನ್ನು ಬರೆದಿರುತ್ತಾನೆ

*****

ಸರ್ವಿಯಾ ರಾಜ್ಯದಲ್ಲಿ ಈಗತಾನೇ ಸ್ಥಾಪಿಸಲ್ಪಟ್ಟ ಪ್ರಜಾಪ್ರತಿನಿಧಿ ಸಮಾಜದ ವಿಷಯದಲ್ಲಿ ಅಲ್ಲಿನ ಪ್ರಜೆಗಳಿಗೆ ಆಗಲೇ ಕೆಲವು ಸಂಶಯಗಳುಂಟಾಗಿರುತ್ತವೆ ಪ್ರತಿನಿಧಿಗಳ ಪೈಕಿ ಪ್ರಧಾನ ಮೆಂಬರುಗಳು ಪ್ರಜೆಗಳ ಕ್ಷೇಮಾಭ್ಯುದಯಗಳನ್ನು ಬಯಸುವುದಕ್ಕೆ ಬದಲಾಗಿ ತಮ್ಮ ಏಳಿಗೆಯನ್ನೇ ಮುಂದಿಟ್ಟುಕೊಂಡು ಸ್ವಾರ್ಥಪರರಾಗಿ ಕಾರ್ಯಭಾಗ ನಡೆಸುತ್ತಾ ಬಂದಿರುವಂತೆಯೂ ಇದರಿಂದ ಜನರು ಅವರಲ್ಲಿ ನಂಬಿಕೆ ಇಡದೆ ಸಂಶಯ ಪಡುತ್ತಿದ್ದಾರೆಂತಲೂ ತಿಳಿಯುವುದು

*****

ಈಜಿಪ್ಟ್ ಒಡೆಯದ ರಾಜಧಾನಿಯಾದ ಕೈರೋ ಪಟ್ಟಣದಲ್ಲಿ ಮುಸ್ತಫಾ ಕಮಾಲ್ ಎಂಬಾತನು ಮತ್ತೆ ಇಂಗ್ಲಿಷರ ಮೇಲೆ ಕ್ರೋಧವನ್ನುಂಟುಮಾಡುವ ಕಾರ್ಯಗಳನ್ನು ನಡೆಸುತ್ತಿದ್ದಾನೆ. ಆ ರಾಜ್ಯವನ್ನು ಆಳಿ ಅಭಿವೃದ್ಧಿ ಪಡಿಸುತ್ತಿರುವ ಇಂಗ್ಲಿಷರನ್ನು ಅಲ್ಲಿಂದ ಓಡಿಸಿಬಿಡಬೇಕೆಂದು ವರ್ತಮಾನ ಪತ್ರಿಕೆಗಳ ಮೂಲಕವೂ ಉಪನ್ಯಾಸಗಳ ಮೂಲಕವೂ ಪ್ರಜೆಗಳಿಗೆ ದುರ್ಬೋಧನೆ ಮಾಡಿ ಅವರನ್ನು ಎತ್ತಿಕಟ್ಟುತ್ತಿರುವನು ಈತನಿಗೂ ಅಲ್ಲಿ ಪ್ರಕಟವಾಗುವ ಒಂದು ಫ್ರೆಂಚ್ ವರ್ತಮಾನ ಪತ್ರಿಕೆಗೂ ಈಜಿಪ್ಟಿನ ಖೆಡೈವ್ ರಾಜನು ದ್ರವ್ಯಸಹಾಯ ಮಾಡುವನೆಂತಲೂ ಇದನ್ನು ಕೂಡಲೇ ನಿಲ್ಲಿಸದೆಹೋದರೆ ಮುಂದಕ್ಕೆ ತುಂಬಾ ಕೆಡುಕಾದೀತೆಂತಲೂ ಲಂಡನ್ ಪಟ್ಟಣದ ಟೈಂಸ್ ಪತ್ರಿಕೆಯು ಗವರ್ನಮೆಂಟಿನವರನ್ನು ಎಚ್ಚರಿಸಿರುತ್ತದೆ.

*****

ಅಸ್ಸಾಂ ರಾಜ್ಯದ ಚಕ್ರವರ್ತಿಯಾದ ತಾತಾಯಿ ಎಂಬಾತನಿಗೆ ರಾಜ್ಯಾಧಿಕಾರ್ಯವನ್ನು ತಪ್ಪಿಸಬೇಕೆಂತಲೂ, ಆತನನ್ನು ಅರಮನೆ ಒಂದು ಏಕಾಂತ ಸ್ಥಳದಲ್ಲಿಟ್ಟು ಪಹರೆ ನೇಮಿಸಬೇಕೆಂತಲೂ, ಚಕ್ರವರ್ತಿ ಪದವಿಗೆ ಆತನ ನಂಟರಲ್ಲಿ ಯೋಗ್ಯರಾದವರನ್ನು ಆರಿಸಿ ನೇಮಿಸಬೇಕೆಂತಲೂ ಮಂತ್ರಿ ಸಭಿಕರು ತೀರ್ಮಾನ ಮಾಡಿರುತ್ತಾರೆ. ಈ ಸಭೆಯಲ್ಲಿ ಪರರಾಜ್ಯಗಳ ರಾಯಭಾರಿಗಳೂ ಹಾಜರಾಗಿದ್ದರು. ಆ ಚಕ್ರವರ್ತಿಯು ಈಚೆಗೆ ನಡೆಸಿರುವ ಕ್ರೂರಕೃತ್ಯಗಳು ಬಹು ಘೋರವಾದವುಗಳಾಗಿವೆ ಆತನು ಒಂದುಸಲ ತನ್ನ ರಾಣಿವಾಸದಲ್ಲಿದ್ದ ಕೆಲವು ರಾಣೀರನ್ನು ಹಿಡಿಸಿ ಮೃಗಗಳ ಬೋನುಗಳೊಳಗೆ ದೊಬ್ಬಿಸಿ ಕೊಲ್ಲಿಸಿದನು ಇನ್ನೊಂದು ವೇಳೆ ತನ್ನ ಆಸ್ಥಾನಿಕರನ್ನೆಲ್ಲಾ ಅರಮನೆಗೆ ಔತಣಕ್ಕೆ ಕರೆಸಿಕೊಂಡು, ಪರಮಾನ್ನ ಭಕ್ಷ್ಯಭೋಜ್ಯಗಳಲ್ಲಿ ನಂಜು ಹಾಕಿಸಿ ಬಡಿಸಿ ತಿನ್ನಿಸಿಬಿಟ್ಟನು ಇಂಥಾ ಮನುಷ್ಯನಿಗೆ ಬುದ್ಧಿ ವಿಕಲ್ಪವಾಗಿಲ್ಲವೆಂದು ಹೇಳುವದಕ್ಕಾದೀತೇ?

ರಷ್ಯಾ ರಾಜ್ಯಕ್ಕೆ ಸೇರಿದ ರೈಗಾಪಟ್ಟಣದಲ್ಲಿ ಕಳವು ಮಾಡಿದರೆಂದು ಸರ್ಕಾರದವರು ೩ ಜನ ದೊಡ್ಡವರನ್ನೂ ೩ ಮಂದಿ ಚಿಕ್ಕ ಹುಡುಗರನ್ನೂ ಗುಂಡಿನಿಂದ ಹೊಡಿಸಿ ಕೊಲ್ಲಿಸಿದರು. ಗುಂಡು ಹೊಡೆದ ಶಿಪಾಯಿಗಳಿಗೇನೇ ಆ ಬಾಲಕರನ್ನು ಹೊಡೆದು ಕೊಲ್ಲುವುದಕ್ಕೆ ಮನ ಒಗ್ಗದೆ ಎಲ್ಲಾ ಸಲ ಅವರು ಹೊಡೆದ ಗುಂಡು ಗುರಿ ತಪ್ಪಿ ಹೋಗಿ ಕಡೆಗೆ ಗುಂಡು ತಗಲಿ ಹುಡುಗರು ಪ್ರಾಣ ಬಿಟ್ಟರು ಇಂಥಾ ಮಕ್ಕಳನ್ನು ಕೊಲ್ಲಿಸಿದರಲ್ಲಾ ಎಂದು ಆ ಪಟ್ಟಣದ ಪ್ರಜೆಗಳೆಲ್ಲಾ ಅಲ್ಲಿನ ಅಧಿಕಾರಿಗಳ ಮೇಲೆ ನಾನಾ ಪ್ರಕಾರವಾಗಿ ಅಸಹ್ಯ ಪಟ್ಟುಕೊಂಡಿರುತ್ತಾರೆ

****

ಜರ್ಮನಿ ರಾಜ್ಯದಲ್ಲಿ ಜನರು ಕಪ್ಪೆಗಳ ಚರ್ಮವನ್ನು ಕೂಡಿಸಿ ಯೂರೋಪ್ ಖಂಡದ ರಾಜ್ಯಗಳಿಗೆ ಬಹಳವಾಗಿ ರಫ್ತು ಮಾಡಿ ತುಂಬಾ ಲಾಭ ಸಂಪಾದಿಸಲಾರಂಭಿಸಿದಾರೆ ಈ ಕಪ್ಪೆಗಳ ಚರ್ಮದಲ್ಲಿ ಬಹು ಸುಂದರವಾದ ಸಣ್ಣ ಸಣ್ಣ ಜೇಬಿನಲ್ಲಿಟ್ಟುಕೊಳ್ಳುವಂಥಾ ಚೀಲ (ಪಾಕೆಟ್)ಗಳನ್ನು ತಯಾರುಮಾಡುವರು ಪರ್ಷಾ ರಾಜಧಾನಿಯಾದ ಟೋಕಿಯೋ ನಗರದಲ್ಲಿ ಈ ಕಪ್ಪೆಗಳ ಚರ್ಮದ ವ್ಯಾಪಾರಕ್ಕಾಗಿಯೇ ಒಬ್ಬ ವರ್ತಕನಿರುತ್ತಾನೆ ಅವನು ಹೋದ ವರುಷ ೧ ಲಕ್ಷದ ೩೦ ಸಾವಿರ ಚರ್ಮಗಳನ್ನು ಕೊಂಡು ಪರರಾಜ್ಯಗಳಿಗೆ ರವಾನೆಮಾಡಿದನೆಂದು ತಿಳಿಯುವುದು

****

ಕುರುಡರು ಓದುವುದಕ್ಕೆ ಪುಸ್ತಕಗಳನ್ನು ಮಾಡಿರುತ್ತಾರಷ್ಟೆ ಈಗ ಪ್ರಪಂಚದ ಸಮಾಚಾರಗಳನ್ನೆಲ್ಲಾ ಬ್ರೈಲ್ ಅಕ್ಷರದಲ್ಲೇ ಪ್ರತಿ ತಿ ವಾರವೂ ಒಂದೆರಡು ಅಚ್ಚು ಹಾಕಿ ಪ್ರಕಟಿಸಿ ಕುರುಡರಿಗೂ ವರ್ತಮಾನಕಾಲದ ಸಮಾಚಾರಗಳನ್ನು ತಿಳಿಸಬೇಕೆಂಬ ಪ್ರಯತ್ನವು ನಡೆದಿರುವುದು ಲಂಡನ್ ಪಟ್ಟಣದಲ್ಲಿ ಪ್ರಕಟವಾಗುವ ಡೇಲಿ ಮೇಯಿಲ್ ಎಂಬ ವರ್ತಮಾನ ಪತ್ರಿಕೆಯ ಆಫೀಸಿನಲ್ಲಿ ಈ ಕುರುಡರ ಪತ್ರಿಕೆಯು ಹೊರಡುವುದು ಅದು ವಾರ ಪತ್ರಿಕೆ ಅದರ ಕ್ರಯ ಒಂದು ಪ್ರತಿಗೆ ಒಂದೇ ಆಣೆ ಇದೇ ಡಿಸೆಂಬರ್ ೧ ರಿಂದ ಪ್ರಕಟವಾಗುತ್ತದೆಂದು ತಂತೀ ವರ್ತಮಾನ ಬಂದಿದೆ

****

ಫಿಲಿಪ್ಪೈನ್ ದ್ವೀಪಗಳ ಜೈಲುಖಾನೆಯಲ್ಲಿ ಪಾಂತೀಯ ರೋಗ ತಗಲದಂತೆ ಡಾಕ್ಟರುಗಳ ಸಲಹೆ ಪ್ರಕಾರ ಸರ್ಕಾರದವರು ೨೪ ಮಂದಿ ಖೈದಿಗಳಿಗೆ ಒಂದು ತರಹ ಔಷಧದ ಕಾಲನ್ನು ಉಪಯೋಗಿಸಿ ಇನಾಕ್ಯುಲೇಷನ್ (ಶಿಪಡು ಹಾಕುವಂತೆ) ಮಾಡಿದರು ಆ ಪೈಕಿ ೧೦ ಜನರು ಕಾಯಿಲೆ ಬಿದ್ದು ಸತ್ತುಹೋದರು ಗವರ್ನರ್ ಜನರಲ್‌ರವರು ಯಾರ ಮೇಲೂ ಯಾವ ವಿಧವಾದ ಅಪರಾಧವನ್ನೂ ಹೊರಿಸದೆ, ಆ ಮೃತರಾದವರ ಸಂಸಾರ ರಕ್ಷಣೆಗಾಗಿ ಸರ್ಕಾರದಿಂದ ಪೆನ್ಷನ್ ಮಾಡುವುದಾಗಿ ಪ್ರಕಟಿಸಿರುತ್ತಾರೆ ಆ ಶಿಪ ಹಾಕಿದವರು ಆ ಕಾಲಿನಲ್ಲಿ ಪ್ಲೇಗಿನ ಕ್ರಿಮಿ ಇತ್ತೆಂದು ಹೇಳಿದರು

****

ಚೀನಾ ಚಕ್ರಾಧಿಪತ್ಯಕ್ಕೆ ಸೇರಿದ ಕ್ವೆಯಾಂಗ್ಸು ಎಂಬ ಪ್ರಾಂತ್ಯದ ಉತ್ತರ ಭಾಗದಲ್ಲಿ ದೊಡ್ಡ ಕ್ಷಾಮವು ಪ್ರಾಪ್ತವಾಗಿದೆ ಎಂದೂ ಅಲ್ಲಿನ ಅಧಿಕಾರಿಗಳು ಪ್ರಜೆಗಳನ್ನು ಇತರ ಊರುಗಳಿಗೆ ಹೋಗದಂತೆ ತಡೆಯುತ್ತಲೂ ಕ್ಷಾಮ ನಿವಾರಣೆಗೆ ಸಾಕಾದ ಯಾವ ಏರ್ಪಾಡನ್ನೂ ಮಾಡದೆಯೂ ಇದ್ದಾರೆಂದೂ ತಿಳಿಸಿದ್ದೇವಷ್ಟೆ ಈಗ ಪ್ರಜೆಗಳು ಬಹು ಹಾಹಾಕಾರ ಪಡುತ್ತಿರುವರೆಂದೂ ಸುಮಾರು ೪ ದೇಶದಿಂದ ಸುಮಾರು ಐದಾರು ಲಕ್ಷ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವರೆಂದೂ ... ಒಂದು ಕೋಟಿ ಜನರು ಕ್ಷಾಮದ ... ದುರ್ಭಿಕ್ಷದಿಂದ ಎಷ್ಟು ಜನ ಸಾಯುವರೋ ... ಅಲ್ಲಿರುವ ಪರದೇಶೀಯರು ಯೂರೋಪಿನ ರಾಜ್ಯಗಳಿಗೆ ತಿಳಿಸಿ ಸಹಾಯ ಕೇಳಿರುತ್ತಾರೆ

****

ಸೋಮಾರಿತನವೆಂಬುದು ಮನುಷ್ಯನ ಹೊಟ್ಟೆಯಲ್ಲಿರುವ ಕರುಳುಗಳಲ್ಲಿ ಒಂದು ವಿಧವಾದ ಕ್ರಿಮಿಯಿಂದ ಉಂಟಾಗುವ ರೋಗವೆಂಬುದಾಗಿ ಕೆಲವು ಡಾಕ್ಟರುಗಳು ತಿಳಿಸುತ್ತಾರೆ ಹ್ಯಾಗೆಂದರೆ ಅಮೆರಿಕಾ ಸಂಸ್ಥಾನದ ದಕ್ಷಿಣ ಪ್ರಾಂತ್ಯಗಳಲ್ಲಿ ತಮ್ಮ ತೋಟಗಳಲ್ಲಿ ಕೂಲಿ ಕೆಲಸ ಮಾಡುವುದಕ್ಕೆ ಬಹಳ ಆಲಸ್ಯ ಮಾಡಿ ಪ್ರೋಟೋರಿಕೋದಿಂದ ಅನೇಕ ಕೂಲೀ ಜನರನ್ನು ಕರೆದು ತಂದು ಹೋದರು ಕೆಲವು ದಿನಗಳಿಗೆಲ್ಲಾ ಇವರೆಲ್ಲಾ ಬಹು ಸೋಮಾರಿಗಳಾಗಿ ತೋರಿಬಂದು ಕೆಟ್ಟುಹೋಗುತ್ತಾ ಬಂದರು ಆಗ ಪ್ಲಾಂಟರುಗಳು ಅವರಲ್ಲಿ ಕೆಲವರನ್ನು ಡಾಕ್ಟರುಗಳ ಬಳಿಗೆ ಕಳುಹಿಸಿ ಪರೀಕ್ಷೆ ಮಾಡಿಸಿದರು ಡಾಕ್ಟರುಗಳು ಪರೀಕ್ಷೆ ಮಾಡಿದ್ದರಲ್ಲಿ ಆ ಜನರ ಹೊಟ್ಟೆ ಕರುಳುಗಳೊಳಗೆ ಒಂದು ವಿಚಿತ್ರವಾದ ಕ್ರಿಮಿ ಇರುವುದು ಗೊತ್ತಾಯಿತು ಇದರಿಂದ ಜನರನ್ನು ಹಿಡಿಯುವ ನಾನಾ ರೋಗಗಳಲ್ಲಿ ಸೋಮಾರಿತನವೂ ಒಂದು ರೋಗವೇ ಸರಿ ಎಂದು ಕಂಡುಹಿಡಿದಿದಾರೆ

ಪ್ರಕಟನೆಗಳು.

ಬೆಲೆಗ ಬೆಳ್ಳಿ—ಗುಣಕ್ಕೆ ಬಂಗಾರ.

86 28

ಕ್ಲೆಮೆಂಟ್ಸ್‌ರವರ ಗಾರಿಡಿಂಬಾಧಾ ನಿವಾರಿಣಿ

ಪಾರ್ಶ್ವಶೂಲೆ, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನೆಳೆಯುವದು, ತಲೆನೋವು, ಕಮ್ಮತ್ತಿ ಕೀಲುಬಿಗಿತ, ಕೀಲುಗಳು, ಕತ್ತರಿಸುವದು, ಬಿಗ್ಗಿರುವ ಬೆನ್ನು ಗಳು, ಕೊರಳು, ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ವಡೆತ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚೆನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವವು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂಬ ಹುಟ್ಟಿ ಇದೆ. ಆ ಕೆಲಸವನ್ನು ಅದು ಮಾಡುವದು ಕೀಲಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಪಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂಬನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೦ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ

ನಮ್ಮ ವಿಳಾಸ —ಎಫ್ ಡಬ್ಲಿಯು ಆರ್ಚ,
ಸಿನ್ನೆಟ್ರಿ ರೋಡ್, ವೇಪರಿ, ಮದರಾಸ್

೧೯೯೯ ರಿಂದ ೧೯೦೬ ವರೆಗೆ

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 57 38

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದಿನ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಳ್ಳುಮಾರಿಗಳು, ನಾನಾ ತರದ ಕೆಮ್ಮಲು,

ಸಕಲವಿಧ ಕ್ಷೈತ್ಯಗಳು ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ದಂಡಿಗೂ ಮಗುವಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವು ಇದೇ

ಕೈಸೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ
ಲಂಡನ್ ಇಂಗ್ಲೆಂಡ್

ಈ ಮನುಷ್ಯ ಇರುವ ಔಷಧವನ್ನೇ ಕೊಂಡ ಕೊಳ್ಳಿ

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133 8

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!!



೧೯೦೭ ನೇ ವರ್ಷದ ಕನ್ನಡ ಡೈರಿಗಳು. ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುದ್ರಿಸಲ್ಪಟ್ಟ ಅಕ್ಷರಗಳಿಂದ ಬ್ರಾಂಚಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲೇಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳ —ಜಮಾಖರ್ಚಿನ ಪಟ್ಟಿ, ಗೋಚಿ ಲೆಕ್ಕ, ದಿನ ಸೂಚಿನ ಪಟ್ಟಿ, ವಾರಶೂಲೆ ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪುಷ್ಕರ ಗಾತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜು ಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಚಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮೊದಲಾದ ಅನೇಕ ವಿಷಯಗಳು ಅಡಗಿರುತ್ತವೆ

ಕ್ರಯ —

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇದ್ದತಕ್ಕ ಡೈರಿ ೦—೪—೦, ಡಜನ್ನೆರಪ್ಪ ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಟ್ಲಾಕ್ ಡೈರಿ ೦—೬—೦ ಡಜನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇದ್ದತಕ್ಕ ಡೈರಿ ೦—೬—೦, ಡಜನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಡಜನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗುಣದಲ್ಲಿ ಭ್ರಾಂತಿಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನ್ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್ ಬುಕ್‌ಡಿಪೋ, ಮೈಸೂರು

ಅಥವಾ,

ಎಸ್. ಟಿ ನರ್ತಮಲ್ ಕಂಪೆನಿ ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

16—11—1906 ರಿಂದ 23—11—1906 ರ

ಸ್ಥಳ	ಪ್ಲೇಗ್ ತಗಲಿದ್ದು	ಸತ್ತದ್ದು	ಚೇ
ಬೆಂಗಳೂರು ಪಟ್ಟಣ	8	8	1
ಮೈಸೂರು ,,	18	16	0
ಬೆಂಗಳೂರು ಡಿಸ್ಟ್ರಿಕ್ಟು	37	12	1
ಮೈಸೂರು ,,	2	1	1
ಕೋಲಾರ್ ,,	0	0	1
ಕೋಲಾರ್ ಚಿನ್ನದ ಗಣಿಗಳು	1	1	3
ತುಮಕೂರು ಡಿಸ್ಟ್ರಿಕ್ಟು	7	5	0
ಹಾಸನ ,,	23	16	0
ಚಿತ್ರದುರ್ಗ ,,	1	1	0
ಕಡೂರ್ ,,	54	46	13
ಶಿವಮೊಗ್ಗಾ ,,	9	6	8
ಜುಮ್ಲಾ	164	132	51

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಮಾರ್ಗಶಿರ ಬಹುಳ ಪಂಚಮಿ ಗುರುವಾರದಿಂದ ಏಕಾದಶೀ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ ೧೯೦೬ ನೇ ಇಸವಿ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ
6	ಗುರು	ಪಂಚಮಿ	14 34	ಶ್ಲೇ	59 20
7	ಶುಕ್ರ	ಷಷ್ಟಿ	16 26	ಮ	60 0
8	ಶನಿ	ಸಪ್ತಮಿ	17 17	ಮ	2 2
9	ರವಿ	ಅಷ್ಟಮಿ	16 30	ಪು	3 3
10	ಚಂದ್ರ	ನವಮಿ	14 10	ಉ	2 58
11	ಕುಜ	ದಶಮಿ	11-42	ಹ	1 36
12	ಬುಧ	ಏಕಾದಶಿ	7 38	ಸ್ವಾ	59 46

೯ ಮಾರ್ಗಶಿರಕೃಷ್ಣಾಷ್ಟಮಿ ... ಕಾಲಭೈರವಾಷ್ಟಮಿ ... ಸರ್ವತ್ರ.

ಪೇಟೇ ಧಾರಣೆ.

ದಿನಸು		ಮೈಸೂರು ರೂ.	
ಕ್ಯಾರ್ ಅಕ್ಕಿ ಪಲ್ಲಾ ಒಕ್ಕೆ		೧೩ ೬ ೦	
ಶೆಂಬೀರ ಅಕ್ಕಿ ಅವಲ್		೧೩-೮-೦	
,, ದುಯಂ		೧೩ ೦-೦	
ಜಿಪ್ರಾಣ ಅಕ್ಕಿ		೧೩ ೦-೦	
ಸಣ್ಣಕ್ಕಿ ಅವಲ್		೧೪ ೦ ೦	
,, ದುಯಂ		೧೪ ೬-೦	
ತೊಗರೀ ಬೇಳೆ ಪಲ್ಲಾ ಒಕ್ಕೆ		೧೨-೦ ೦	
,, ದುಯಂ		೧೨ ೦-೦	
ಪೈರ ರಾಗಿ ಪಲ್ಲಾ ಒಕ್ಕೆ		೩ ೪ ೦	
ಕಾಳ್ರಾಗಿ		೩ ೦-೦	
ಜೋಳ		೫-೪ ೦	
ಹಲಸಂದೆ ಪಲ್ಲಾ ಒಕ್ಕೆ		೧೧ ೪ ೦	
ಬಿಳೀ ಅವರೆ		೯-೦-೦	
ಹೆಸರು		೧೧ ೪ ೦	
ಉದ್ದು		೧೦-೮-೦	
ಕಡಲೆ		೧೦-೦-೦	
ಎಳ್ಳು ಸೇ ೧೦೭ ಕ್ಕೆ		೧೪ ೪-೦	
ಹುರುಳಿ		೭ ೦ ೦	
ಹರಳು ೧೦೭ ಸೇರಿಗೆ		೧೯-೦-೦	
ಸೀಗೇಕಾಯಿ ಮಣ ಒಕ್ಕೆ		೨ ೦ ೦	
ಮೆಣಸಿನಕಾಯಿ		೪ ೦ ೦	
,, ದುಯಂ		೩ ೮-೦	
ಬೆಲ್ಲ ದೊಡ್ಡ ಅಚ್ಚು		೩-೦-೦	
ಒಳ್ಳೆಣ್ಣೆ ಮಣ ಒಕ್ಕೆ		೫ ४-೦	
ಹರಳೆಣ್ಣೆ		೩-೦-೦	
ಕೊತ್ತುಂಬರಿ ಪಲ್ಲಾ ಒಕ್ಕೆ		೧೧ ೦ ೦	
ಉಪ್ಪು ,,		೩ ೦ ೦	
ಹುಣಸೇಹಣ್ಣು		೦ ೧೦-೦	
,, ಹಳೇದು		೦-೪-೦	
ತುಪ್ಪ ಮಣ ಒಕ್ಕೆ		೧೩-೦-೦	
ಸೀಮೆಯೆಣ್ಣೆ ಪೆಟ್ಟಿಗೆಗೆ		೫-೮-೦	
ತೆಂಗಿನಕಾಯಿ ೧೦೦ ಕ್ಕೆ		೩-೪-೦	
ಅಡಕೆ ಕಾಯಿ ಮಣ ಒಕ್ಕೆ		೧-೦-೦	
ಅಂಟ್ವಾಳದ ಕಾಯಿ ಮಣ ಒಕ್ಕೆ		೨-೦-೦ ೦	
ಚಿನ್ನ (ಪೌನ್) ಕೆಂಪು		೧೪ ೬-೦	
,, ,, ಪಸಿಮೆ		೧೫-೦-೦ ೦	
,, ,, ಗಟ್ಟಿ ತೊಲ ಒಕ್ಕೆ		೨೩-೦-೦ ೦	
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ		೪೫-೦ ೦	

Printed and published by the Rev. E. Thompson, M.A., the Proprietor and Manager, Wesleyan Mission Press, Mysore 6/12/1906

ವೃತ್ತಾಂತ ಪತ್ರಿಕೆ.

REGISTERED No. 20

ಕ್ರಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಸಂಪುಟ ೧೦ | ಮೈಸೂರು—ಸನ್ ೧೯೦೭ ನೇ ಇಸವಿ ಡಿಸೆಂಬರ್ ತಾರೀಖು ೧೭ ನೇ ಗುರುವಾರ. | ಸಂಚಿಕೆ ೨೮

ಕೊಡಗು ದೇಶದ ಶ್ರೇಷ್ಠವಾದ ಉತ್ಕೃಷ್ಟ ಕಾಫಿಯು

ನಿಯಮದ ಇರುವಪು ಅಥವಾ ತಗತ ನೆ ಹುಡಿವದು ಶ್ರಮಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು

85 14

ವ್ಯಾಪಾರದ ಹೆಗ್ಗುರ್ತು F C

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ಳ್ಳ ವಿಲಾಸದ ಚೀಟಿ ಸುತ್ತಿಲ್ಲದಿರುವವು ಸ್ವಚ್ಛನಾದವುಗಳಲ್ಲ. ಅವು ಇತರಲ್ಲ. ಏಜಂಟರುಗಳು ಬೇಕು. ಇಂಥವರಿಗೆ ಅಲೂಯದ ವರ ತಯುವವರ ದಯಮಾಡಿ ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ — ಮ್ಯಾನೇಜರ್, ಪ್ರಾಪ್ರೈಟರ್ಸ್
ಕಾಫಿ ವರ್ಕ್ಸ್, ಹುಣಸೂರು

ಜ್ವರಹರಿ

1427

ಇದು ಸಾಧಾರಣ ಜ್ವರ ಹಳೆಜ್ವರ ಮೇಲೆಜ್ವರ, ಪಿತ್ತಜ್ವರ, ಚಳಿಜ್ವರ, ಪಾಳಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ಜ್ವರಗಳನ್ನು ಬಹು ಬೇಗನೆ ಗುಣಮಾಡುವದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುನಸೀಫ್ ಕೋರ್ಟು ಸಬ್ ಡಿವಿಷನ್ ಆಫಿಸರ್ ಎಸ್ ಟಿ ವೆಂಕಟಪತಿ ಅಯ್ಯ ರು—ನೀವು ಕಳಿಸಿದ ಔಷಧಗಳ ಹಿಂದೆ ಕಳುಹಿಸಿಕೊಟ್ಟ ... ಔಷಧಿಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ... ವಿಥದಿಂದ ಅನೇಕ ಜನರು ಉಗ್ರಜ್ವರ ಪೀಡಿತರು ಚೆನ್ನಾಗಿ ಗುಣಹೊಂದಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ ದಯವಿಟ್ಟು ಇನ್ನೊಂದು ... ಡಜನಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ ದಿರ

ಕ್ರಯ — ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., ... ೧೧ ರೂ., ಜನರಿಗೆ ಸೀಸೆ ತರಿಸಿಕೊಂಡರೆ ಕಮ್ಮಿಯಾಗಿ ಕೊಡಲಾಗುವದು

****

ಅಮೃತಾಂಜನ ಕರ್ಪೂರ

Amrutanjan-Camphor

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆ ಮಹೌಷಧವಾಗಿ ಪರಿಣಮಿಸಿ ಕೂಡಲೇ ಗುಣಕೊಡು ವ ಇದು ಹೆಂಗಸರ ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಶಮನ ಗುಣಪಡಿಸುತ್ತ ಇದು ದರವು ಬ್ಯರಳು ಎಂಬ ಔಷಧದಂತೆಯೇ ಸೀಸೆಗಳಲ್ಲಿ ಮಾರಲಾಗುವದು

ಶಿವಪುರ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹೆಪ್ರಿಯ ಡು ಕರ್ಪೂರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ದ್ವೈಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ ಕಿ ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ. ಹೊಟ್ಟೆ ಕೂಡಲೆ ಈ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ಬರೆದಿರುವರು

ಈ ವಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳು ದೊಡ್ಡ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ ಕ್ಕೆ ಸಿಕ್ಕುವವು. ಅದಿಲ್ಲದೆ ಕೆಳಗಿನ ವಿಳಾಸದುದ್ದರಲ್ಲಿ ವಿಶೇಷ — ದೊರೆಯುವ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ
ಸೆಕೆಂಡ್ ಲೈನ್ ಬೀಚ್, ಮದ್ರಾಸ್.

ಮುಂಬಯಿ ವ್ಯಾಪಾರವಾಡಲಿಚ್ಛೈಸುವವರು

85 28

ಮುಂಬಯಿಯಲ್ಲಿ ... ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ — ಕ್ರಯ ೧೦ ಆಣೆ ವಿ ಪಿ ಯಿಂದ ಕಳುಹಿಸು ವೆವು ... ಬುಕ್ಕ ಸೇಲರರಿಗೆ ಯೋಗ್ಯ ಕ ಮಿಷನ್ ದೊರೆಯುವದು. ಮತ್ತು ... ಧರ್ಮಸಂಬಂಧ ವಿದ ಕೋತ್ಪತ್ತಿ ಕ್ರಿಯಾಲಕ್ಷಣ ... ಪುಸ್ತಕ—ನಾಲ್ಕು ಆಣೆ ... ಪತ್ರ ... ಬರೆಯಿರಿ ... ಪೋಷ್ಟು ಬಾಕ್ಸ್, ಮುಂಬಯಿ.

ವಿದ್ಯುಚ್ಛಕ್ತಿಯೇ ಪ್ರಾಣವಾಯು !

ವೈದ್ಯ ವಿದ್ಯುಚ್ಛಕ್ತಿ 115—3

ಡಾಕ್ಟರ್ ಸಾ ... ವಿದ್ಯುಚ್ಛಕ್ತಿಯ ಪಕ್ಸ್ಪರ್ಟರೇ ಎಂಬ ಚಿಕಿತ್ಸೆಯಿಂದ ... ನರಗಳ ದುರ್ಬಲ ... ಧಾತು ಹೀನತೆಯಿಂದ ... ವರನ್ನು ಖಂಡಿತವಾಗಿ ಗುಣಪಡಿಸುವರು. ಮೈಸೂರು ಸಿಟಿ ಗಾರ್ಡನ್ ಹೋಟೆಲಿನಲ್ಲಿ ಇಳಿದುಕೊಂಡಿರುವ ಯೂರೋಪಿಯನ್ ವಿದ್ವಾಂಸರು ... ಹಲವು ... ರಿಗೂ ಈ ವಿದ್ಯುಚ್ಛಕ್ತಿ ಚಿಕಿತ್ಸೆಯ ಮಾದರಿಗಳನ್ನು ತೋರಿಸಿಕೊಡುತ್ತಾರೆ. ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೯ ಗಂಟೆಯ ತನಕ ಅಪೇಕ್ಷೆಯುಳ್ಳವರೆಲ್ಲಾ ಬಂದು ... ನೋಡಬಹುದು. ಕಾಯಿಲೆ ವಿಚಾರವನ್ನು ಅವರಿಗೆ ತಿಳಿಸಬೇಕಾಗಿದೆ. ಹಾಗೆ ಬರೆದಲ್ಲಿ ಅವರು ಅವೆ ... ತಾರೆ, ಇಲ್ಲವೇ, ಕಾಗದಕ್ಕೆ ಜವಾಬು ಕೊಡುವರು. ಅಂಥಾ ಕಾಗದ ಪತ್ರಗಳ ವಿಷಯವನ್ನೆಲ್ಲಾ ಪರರಿಗೆ ಗೋಚರವಾಗದಂತೆ ಬಹಳ ಗುಟ್ಟಾಗಿಯೂ ನಂಬಿಕೆಯಾಗಿಯೂ ನಡಸುವರು.



ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್

123—13

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ ಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರು ತ್ತೇವೆಂದು ಈಚಿಗೆ ಫೈಸಲ್ ಮಾಡಿರುತ್ತಾರೆ

ನಿಯಮಕ ಮೂಲಧನ ಶೇರು ಒಂದಕ್ಕೆ ೫೦ ರೂಪಾಯಿಗಳ ಬೆಲೆಯುಳ್ಳ ೬೦ ಸಾವಿರ ಶೇರುಗಳಿಂದಾಗುವ ೩೦ ಲಕ್ಷ ರೂಪಾಯಿ ಗಳು—ಈ ಶೇರು ಕೊಳ್ಳಲು ಶೇರು ಒಂದಕ್ಕೆ ಒಂದು ರೂಪಾಯಿ ನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ... ರೂಪಾಯಿಗಳನ್ನು ಶೇರುಗಳು ಕೊಟ್ಟನಂತರ ೧೦ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ರೈಲಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪೆನಿಯ ಶೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳ ಗೆ ರುಜು ಮಾಡಿರುವವರಿಗೆ ಅಥವಾ ಸಬ್ ಏಜಂಟರಿಗೆ ಅರಜಿ ಮಾಡಿಕೊಳ್ಳಬೇಕು

ಶೇರ ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೂಕು ಡಿಸ್ಟ್ರಿಕ್ಟ್ ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವ) ಬಿ ವಿ ರಾಮಸ್ವಾಮಿ ಶೆಟ್ಟಿ, ಬಿ ಎ,
ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ
ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್
ನಗರ್ತಪೇಟೆ, ಬೆಂಗಳೂರು ಸಿಟಿ

ಬೆಲಗೆ ಬೆಳ್ಳಿ ಗುಣಕ್ಕೆ ಭಂಗಾರ.

86 29

ಕ್ಲೆಮೆಂಟ್ಸ್ ರವರ ಗಾರಿಡಿಬಾಧಾ ನಿವಾರಿಣಿ

ಪಾರ್ಶ್ವವಾಯು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನು ನೋವು, ಕಟಿನೋವು, ಕೆಮ್ಮು ಕೆಲ ಬಗೆಗಳು, ಕೀಲುಗಳು ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂ ದ ಉಂಟಾಗುವ ಬಾಧೆಗಳ, ಕೈಕಾಲು ವಡೆತ, ಇವುಗಳಿಗೆ ಕ್ಲೆಮೆಂಟ್ಸ್ ರವರ ಗಾರಿಡಿ ... ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾ ಧೆಗಳೆಲ್ಲಾ ಪರಿಹಾರವಾಗವದು. ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್ ರವರ ಮ್ಯಾಜಿಕ್ ಒಂದು ... ಇದೆ. ಆ ಕೆಲಸವನ್ನು ಅದು ಮಾಡುವದು. ಕೀಲುಗಳಲ್ಲಿ ಹಾಳ ಮಾಡುವ ರೋಗಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್ ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು. ಕ್ರಯ — ೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ

ನಮ್ಮ ವಿಳಾಸ — ಎಫ್ ಡಬ್ಲ್ಯು ಆರ್
ಸಿವೆಟ್ಟಿ ರೋಡ್, ವೆಪರಿ, ಮದರಾಸ್

"ಅರೇಬಿಯನ್ ನೈಟ್ಸ್

1502

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿ ನೋದ ಕಥೆಗಳು ಈ ಗ್ರಂಥವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನಾರು ... ಪುಟಗಳುಳ್ಳವು ಭಾರಿ ಗ್ರಂಥ ಛಾಪಯು ಬಹು ಸರಳವಾಗಿದೆ. ಪುಸ್ತಕವನ್ನು ಒಂ ದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಆದು ಮನ ಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ ಪಿ ಮೂಲಕ ೨—೩ ... ಅಂಚೆ ... ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ... ಗೊ ತ್ತು ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ... ಕ್ರಯಕ್ಕೆ ಮಾರುತ್ತೇವೆ. ಜನರು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ. ಜಾಗ್ರತೆ ನೋಡಿ. ನಮ್ಮ ವಿಳಾಸ —

ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು.

ಹಿಂದೂದೇಶಪ್ರದಕ್ಷಿಣ

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂ ರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿ ಸಿರುತ್ತೇವೆ. ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿ ಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿ ಸಿದ ಅನೇಕರಿಗೆ ಇದು ದೊರಿಯದೆ ವ್ಯಸನಕ್ಕೊಳಗಾದರು. ಈಗಲಾದ ರೂ ಜಾಗ್ರತೆಯಿಂದ ಬರೆದು ವಿ ಪಿ ಮೂಲಕ ತರಿಸಿಕೊಳ್ಳಿ. ಇದರ ಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವು ಗಳ ವರ್ಣನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವು ಗಳ ಚಿತ್ರಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ೩೦ ಭತ್ತು ಪ್ರಸಿದ್ಧವಾದ ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದ ರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ೨ ಟ. ಆಣೆ ವಿ ಪಿ ಮೂಲಕ ತರಿಸಿಕೊಂಡರೆ ಅಂಚೆಯೂ ಸೇರಿ ... ದವು

ಮ್ಯಾನೇಜರ್ ಸಿ ಎಲ್ ಎಸ್ ಬುಕ್ ಡಿಪೋ ಮೈಸೂರು

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾ॥ ೧೩ನೇ ಗುರುವಾರ.

ಪ್ರೈಮರಿ ಪಾಠಶಾಲೆಗಳಲ್ಲಿ ಫೀಜನ್ನು ತೆಗೆದುಹಾಕುವುದು.

ಲಾರ್ಡ್ ಕರ್ಜನ್‌ರವರು ಹಿಂದುಸ್ಥಾನದ ವೈಸ್‌ರಾಯಿ ಪದವಿಯಲ್ಲಿದ್ದಾಗ್ಗೆ ಕೆಲವು ದೊಡ್ಡ ಮನುಷ್ಯರನ್ನು ಒಂದು ಕಮಿಟಿ ಮಾಡಿ, ಈ ಕಮಿಟಿಯವರಿಂದ ಈ ರಾಷ್ಟ್ರದ ವಿದ್ಯಾಭ್ಯಾಸದ ಲೋಪದೋಷಗಳನ್ನು ತನಿಖೆ ಮಾಡಿಸಿದರು. ಈ ದೊಡ್ಡ ಮನುಷ್ಯರು ಪ್ರಥಮ (ಪ್ರೈಮರಿ) ವಿದ್ಯಾಭ್ಯಾಸವನ್ನು ತುಂಬಾ ವಿಸ್ತಾರವಾಗಿ ಕೂಡಲೇ ಮಾಡಿಸಬೇಕಾದದ್ದು ಅವಶ್ಯವಾಗಿದೆ ಎಂದು ಗವರ್ನಮೆಂಟಿಗೆ ತಿಳಿಯಪಡಿಸಿದರು. ಗವರ್ನಮೆಂಟಿನವರು ಹೈ ಸ್ಕೂಲುಗಳಿಗೂ ಕಾಲೆಜ್ಜುಗಳಿಗೂ ತುಂಬಾ ಹಣವನ್ನು ಖರ್ಚುಮಾಡುತ್ತಾರೆ. ಪ್ರತಿ ವರುಷವೂ ಹಿಂದುಸ್ಥಾನದ ವಿದ್ಯಾಪರೀಕ್ಷಕ ಸಂಘ (ಯೂನಿವರ್ಸಿಟಿ) ಗಳಿಂದ ಅನೇಕ ಮಂದಿ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುತ್ತಿರುವರು. ಆದ್ದರಿಂದ ಪ್ರಥಮಾನಂತರ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಈಗಿರುವ ಸೌಕರ್ಯಗಳೂ ಪ್ರೋತ್ಸಾಹಗಳೂ ಸಾಕಾಗಿರುತ್ತವೆ. ಮತ್ತು ಬಿ ಎ ಪರೀಕ್ಷೆ ಕೊಟ್ಟರತಕ್ಕವರು ಈಗಿರುವಷ್ಟು ಮಂದಿಯೇ ಸಾಕಾಗಿರುವುದು. ಆದರೆ ಈ ರಾಷ್ಟ್ರದಲ್ಲಿ ವ್ಯವಸಾಯಾದಿ ಕಸಬುಗಳನ್ನು ಮಾಡತಕ್ಕ ಪ್ರಜೆಗಳೇ ಬಹು ವಿಶೇಷವಾಗಿರುತ್ತಾರಾದ್ದರಿಂದ ಅವರ ಮಕ್ಕಳಿಗೆ ಓದುಬರಹವನ್ನು ಈಗ್ಗಿಂತಲೂ ತುಂಬಾ ಹೆಚ್ಚಾಗಿ ಕಲಿಸುವುದಕ್ಕೆ ಏರ್ಪಾಡು ಮಾಡಬೇಕಾಗಿದೆ. ಬ್ರಿಟಿಷ್ ಇಂಡಿಯಾದಲ್ಲಿ ಈಗ ಓದುಬರಹ ಬಲ್ಲವರ ಸಂಖ್ಯೆಯು ಬಹಳ ಕಡಿಮೆಯಾಗಿರುವುದು. ಪಾಠಶಾಲೆಗಳಿಗೆ ಹೋಗುವಂಥಾ ವಯಸ್ಸಿನಲ್ಲಿರುವ ಪ್ರತಿ ೫ ಹುಡುಗರಲ್ಲಿ ಒಬ್ಬನೂ, ೪೦ ಹುಡುಗಿಯರಲ್ಲಿ ಒಬ್ಬ ಹುಡುಗಿಯೂ ವ್ಯಾಸಂಗ ಮಾಡುತ್ತಿದ್ದಾರೆ. ಈ ಭಾಗದಲ್ಲಿ ನಮ್ಮ ಮೈಸೂರು ಸಂಸ್ಥಾನವೇ ಸ್ವಲ್ಪ ವಾಸಿ ಎಂದು ಹೇಳಬಹುದಾಗಿದೆ. ಹ್ಯಾಗೆಂದರೆ ನಾಲ್ವರಲ್ಲಿ ಒಬ್ಬ ಹುಡುಗನೂ ೨೦ ರಲ್ಲಿ ಒಬ್ಬ ಹುಡುಗಿಯೂ ಈ ಸಂಸ್ಥಾನದಲ್ಲಿ ಪಾಠಶಾಲೆಗೆ ಹೋಗುತ್ತಾರೆ. ಆದಕಾರಣ ಪ್ರೈಮರಿ ವಿದ್ಯೆಯನ್ನು ಇನ್ನೂ ಬಹಳ ಹೆಚ್ಚಾಗಿ ಕಲಿಸಬೇಕೆಂಬುದು ಅವಶ್ಯವಾಯಿತು. ವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡೋಣದರಿಂದ ಪ್ರಜೆಗಳಲ್ಲಿ ಆಚಾರ ವ್ಯವಹಾರಗಳು ಬದಲಾವಣೆಯಾಗುವುದಕ್ಕೂ, ಐಶ್ವರ್ಯಾಭಿವೃದ್ಧಿಯಾಗುವುದಕ್ಕೂ ಅವಕಾಶವಾದೀತು. ಜನರು ವಿದ್ಯಾವಂತರಾದ ಪಕ್ಷದಲ್ಲಿ ತಾವಾಗಿಯೇ ಒಳ್ಳೊಳ್ಳೇ ಬದಲಾವಣೆಗಳನ್ನು ಮಾಡಿಕೊಳ್ಳುವರು; ವ್ಯವಸಾಯ ಕೈಗಾರಿಕೆಗಳಲ್ಲಿ ನೂತನವೂ ಲಾಭಕರವೂ ಆದ ಮಾರ್ಗಗಳನ್ನು ಕಂಡುಹಿಡಿದು ರೂಢಿಗೆ ತಂದುಕೊಳ್ಳುವರು.

ಇಂಡಿಯಾ ಗವರ್ನಮೆಂಟಿನವರು ತಮ್ಮ ರಾಜಾದಾಯದಿಂದ ಪ್ರೈಮರಿ ವಿದ್ಯಾಭಿವೃದ್ಧಿಗೆ ಬಹಳ ಹೆಚ್ಚಾಗಿ ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಈಗ ಅಷ್ಟು ಹೆಚ್ಚು ಹಣ ಕೊಡುವುದೇ ಸಾಲದೆಂದೂ ಪ್ರಜೆಗಳಿಗೆ ಇನ್ನೂ ಹೆಚ್ಚಾಗಿ ವಿದ್ಯೆ ಕಲಿಸುವುದಕ್ಕೆ ಪ್ರೋತ್ಸಾಹ ಮಾಡಬೇಕೆಂದೂ ಯೋಚಿಸಿ, ಬಡ ಬಗ್ಗರಾದ ತಂದೆ ತಾಯಿಗಳಿಗೆ ಸಹಾಯವಾಗಲೆಂದು ಅವರ ಮಕ್ಕಳಿಂದ ಫೀಜನ್ನು ವಸೂಲ್ಮಾಡಕೂಡದೆಂದು ವಿಧಿಸುವವರಾಗಿದ್ದಾರೆ. ಸ್ವಭಾಷೆಯನ್ನು ಎಲ್ಲರೂ ಒಂದು ಕಾಸೂ ಖರ್ಚಿಲ್ಲದೆ ಕಲಿತುಕೊಳ್ಳುವುದಕ್ಕೆ ಇದರಿಂದ ತುಂಬಾ ಪ್ರೋತ್ಸಾಹವಾದೀತೆನ್ನುವುದಕ್ಕೆ ಸಂಶಯವಿಲ್ಲ.

ಬರೋಡಾ ಸಂಸ್ಥಾನದಲ್ಲಿ ತಾಯಿತಂದೆಗಳು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸದಿದ್ದರೆ ಶಿಕ್ಷೆಗೆ ಗುರಿಯಾಗುತ್ತಾರೆಂಬ ಕಾನೂನ್ ಮಾಡಿಕೊಂಡಿದ್ದಾರೆ. ಹೀಗೆ ಬಲಾತ್ಕಾರ ಮಾಡತಕ್ಕ ಕಾಲ ಹಿಂದುಸ್ಥಾನದಲ್ಲಾಗಲಿ, ಮೈಸೂರು ಸಂಸ್ಥಾನದಲ್ಲಾಗಲಿ ಇನ್ನೂ ಪ್ರಾಪ್ತವಾಗಿಲ್ಲವೆಂದು ನಮಗೆ ತೋರುವುದು. ಆದರೆ ಪ್ರೈಮರಿ ವಿದ್ಯೆಯನ್ನು ಕಲಿಸುವುದಕ್ಕೆ ಈ ಸಂಸ್ಥಾನದಲ್ಲಿ ಇನ್ನೂ ಹೆಚ್ಚು ಹಣವನ್ನು ವಿನಿಯೋಗಿಸಬೇಕೆಂದೂ, ಸಾಧ್ಯವಾಗುವ ಪಕ್ಷಕ್ಕೆ ಪ್ರೈಮರಿ ಪಾಠಶಾಲೆಗಳಲ್ಲಿ ಫೀಜನ್ನೇ ತೆಗೆದುಹಾಕಿದರೆ ಉತ್ತಮವೆಂದೂ ಹೇಳುತ್ತೇವೆ.

ಮತವನ್ನು ಕುರಿತು ಹ್ಯಾಗೆ ಚರ್ಚಿಸಬೇಕು — ೨.

ಈ ಲೇಖನದಲ್ಲಿ ನಾವು ಹೇಳತಕ್ಕದ್ದರ ಸಾರಾಂಶವೆಲ್ಲಾ ಒಂದೇ ಒಂದು ವಾಕ್ಯದಲ್ಲಿ ಅಡಗಿದೆ. ಆ ವಾಕ್ಯವನ್ನು ಪೌಲನೆಂಬುವನು ಎಫೆಸವೆಂಬ ಊರಿನಲ್ಲಿ ವಾಸಿಸುತ್ತಿದ್ದ ಕ್ರೀಸ್ತ ಭಕ್ತರಿಗೆ ಹೇಳಿದನು. ಈ ಪೌಲನು ಮಿಷನರಿಗಳಲ್ಲಿ ಅಗ್ರಗಣ್ಯನು. ಈತನು ಕ್ರೀಸ್ತ ಮತ ಪ್ರಸಾರಕ ಕಾರ್ಯದಲ್ಲಿ ಆಸಕ್ತನಾಗಿ ಪಾಲಸ್ತೀನ್ ದೇಶದಲ್ಲಿಯೂ ಚಿಕ್ಕ ಏಷ್ಯ, ಗ್ರೀಸ್ ಇಟಲಿ ದೇಶಗಳಲ್ಲಿಯೂ ಬಹು ದೂರವಾಗಿ ಸಂಚರಿಸಿ ಯೇಸು ಸ್ವಾಮಿಯಲ್ಲಿ ದೊರಕುವಂಥ ಆತ್ಮ ರಕ್ಷಣೆಯನ್ನು ಕುರಿತು ಸಾರಿ ಹೇಳಿದವನು. ಚಿಕ್ಕ ಏಷ್ಯವೆಂಬ ಪ್ರಾಂತ್ಯದಲ್ಲಿ ಎಫೆಸವೆಂಬ ಬಹು ಪ್ರಸಿದ್ಧವಾದ ಪಟ್ಟಣವಿರುವದು. ಅಲ್ಲಿ ಸ್ಥಾಪಿತವಾಗಿದ್ದ ಕ್ರೀಸ್ತ ಭಕ್ತ ಮಂಡಲಿಗೆ ಪೌಲನು ಪತ್ರಿಕೆಯನ್ನು ಬರೆದು ಅವರ ನಡತೆಗೆ ಸಂಬಂಧಪಟ್ಟ ಹಲವು ಬುದ್ಧಿವಾದಗಳನ್ನು ಹೇಳುವಾಗ್ಯೆ "ಪ್ರೀತಿಯಿಂದ ಸತ್ಯವನ್ನನುಸರಿಸತಕ್ಕದ್ದು" ಎಂದು ನುಡಿದನು. ಪೌಲನು ಹೇಳಿದ ಈ ಸಂಕ್ಷೇಪ ವಾಕ್ಯವು ಮತಸಂಬಂಧವಾದ ಚರ್ಚೆಯಲ್ಲಿ ನಾವು ಅನುಸರಿಸಬೇಕಾದ ಮಹಾ ಸೂತ್ರವನ್ನು ಒಳಗೊಂಡಿದೆ. ಸತ್ಯವು ಏನೆಂದು ತಿಳಿಯುವ ಬಗ್ಗೆ ಮೊದಲು ಅತ್ಯಂತ ಜಾಗ್ರತೆಯುಳ್ಳವರಾಗಿರತಕ್ಕದ್ದು, ಮತ್ತು ಯಾವದು ಅಸತ್ಯವೆಂದು ತಿಳಿದಿದ್ದೇವೋ ಅದನ್ನು ನುಡಿಯದಂತೆ ಎಚ್ಚರಿಕೆಯಾಗಿರಬೇಕು. ಇದು ಚರ್ಚೆಯಲ್ಲಿ ಗಮನಿಸತಕ್ಕ ವಿಷಯಗಳಲ್ಲಿ ಒಂದು ಮಾತ್ರವಾದರೆ ಇನ್ನೊಂದೇನಂದರೆ—ಚರ್ಚೆಯಲ್ಲಿ ನಮಗೆ ಪ್ರತಿಪಕ್ಷಿಗಳಾದವರನ್ನು ಸೋಲಿಸಿ ನಾವೇ ಕೀರ್ತಿಯನ್ನು ಪಡೆಯಬೇಕೆಂಬ ಕಪಟ್ಮಯಿಂದ ತುಂಬಿದವರಾಗಿರಕೂಡದು. ಚರ್ಚೆಯ ಮುಖ್ಯೋದ್ದೇಶವೇನಂದರೆ—ಯಾವಲ್ಲಿ ನಾವು ಚರ್ಚೆ ಮಾಡಿದರೂ ಸಕಲರಿಗೂ ಶ್ರೇಯಸ್ಸು ಫಲವೇ ಉಂಟಾಗಬೇಕೆಂಬ ಭಾವವಿರತಕ್ಕದ್ದು. ಇವೆರಡು ಅಂಶಗಳನ್ನು ಒಂದೊಂದಾಗಿ ವಿಚಾರ ಮಾಡೋಣ.

೧. ಸತ್ಯವು ಯಾವದೆಂದು ವಿಚಾರಿಸುವದರಲ್ಲಿ ಬಹು ಶ್ರದ್ಧೆಯಿರಬೇಕು, ಮತ್ತು ಯಾವದನ್ನು ಸತ್ಯವೆಂದು ತಿಳಿದಿದ್ದೇವೋ ಅದನ್ನೇ ಮಾತಾಡತಕ್ಕದ್ದು.

ಮತಸಂಬಂಧವಾದ ಚರ್ಚೆಯಲ್ಲಿ ನಾವು ಮೊದಲು ವಿಚಾರಿಸತಕ್ಕ ಅಂಶವು ಇದುವೇ. ಆತ್ಮಸಂಬಂಧವಾದ ಸಂಗತಿಗಳಲ್ಲಿ ಸತ್ಯವಾದ ಅಂಶವನ್ನು ಕಂಡು ಹಿಡಿಯುವುದೇ ಮತಸಂಬಂಧವಾದ ಚರ್ಚೆಯ ಪ್ರಧಾನವಾದ ಉದ್ದೇಶವು. ದೇವರನ್ನು ಕುರಿತೂ ನಮ್ಮ ಆತ್ಮವನ್ನು ಕುರಿತೂ ರಕ್ಷಣೋಪಾಯವನ್ನು ಕುರಿತೂ ನಮಗೆ ತಿಳಿದಿರುವುದಕ್ಕಿಂತಲೂ ಹೆಚ್ಚಾಗಿ ತಿಳಿಯಪಡಿಸದ ಚರ್ಚೆಯಿಂದ ಪ್ರಯೋಜನವೇನು? ಅಂಥ ಚರ್ಚೆಯು ಒಣಕಲಹವೇ ಹೊರತು ಬೇರೇನೂ ಅಲ್ಲ. ಹಾಗೆ ಕಾಲವನ್ನು ನೀಗಿಸಿಕೊಳ್ಳುವದಕ್ಕಿಂತ ಅಥವ ಅಂಥ ವಾಗ್ವಾದವನ್ನು ಕುರಿತು ಪ್ರಸ್ತಾಪಿಸುವ ಲೇಖನಗಳಿಂದ ಕೈಯನ್ನು ನೋಯಿಸಿಕೊಳ್ಳುವದಕ್ಕಿಂತ ಸುಮ್ಮನಿದ್ದರೆ ಉತ್ತಮವಲ್ಲವೇ? ಅದಿರಲಿ. ಸತ್ಯವನ್ನು ತಿಳಿಯದೆ ಇರುವದಕ್ಕೂ ಅಥವಾ ಸತ್ಯವೆಂದು ತಿಳಿದದ್ದನ್ನು ಬಹಿರಂಗವಾಗಿ ಒಪ್ಪಿಕೊಳ್ಳದೆ ಇರುವದಕ್ಕೂ ಹಲವು ಕಾರಣಗಳುಂಟು. ಎದುರಾಳಿಯು ಹೇಳುವದು ನಿಜವೆಂದು ಮನಸ್ಸಿನಲ್ಲಿ ತಿಳಿದಿದ್ದಾಗ್ಯೂ ತಾನು ಹಿಡಿದಿರುವ ಅಭಿಪ್ರಾಯವನ್ನು ತಪ್ಪೆಂದು ಒಪ್ಪಿಕೊಳ್ಳಲು ಮನಸ್ಸು ಒಡಂಬಡದು. ತಪ್ಪನ್ನು ಒಪ್ಪಿಕೊಂಡರೆ ತನಗೆ ಅಪಜಯವೂ ಅದರಿಂದ ಮಾನಭಂಗವೂ ಉಂಟಾಗುವದೆಂದು ಭಾವಿಸಿ ಒಳಗೆ ಮನಸ್ಸು ಕೊರೆಯುತ್ತಿದ್ದರೂ ಹೊರಗೆ ತನ್ನ ಮಾತೇ ನಿಜವೆಂದು ಸ್ಥಾಪಿಸುತ್ತ ಅಬದ್ಧವನ್ನೇ ನುಡಿಯುವದುಂಟು.

ಇವಲ್ಲದೆ ಸತ್ಯವನ್ನು ಒಪ್ಪಿಕೊಂಡರೆ ಮೊದಲು ತಮಗೆ ಬರುತ್ತಿದ್ದ ಲಾಭವೆಲ್ಲಾ ತಪ್ಪಿಹೋಗುವದೆಂದು ತಿಳಿದು ಸತ್ಯವನ್ನು ಒಪ್ಪದವರಾಗಿದ್ದಾರೆ. ಪಾಪಕೃತ್ಯಗಳಲ್ಲಿ ಬಿದ್ದು ಹೊರಳಾಡುತ್ತಿರುವವನಿಗೆ ಭಗವಂತನು ಪವಿತ್ರರೂಪನೆಂದೂ ಆತನು ಪಾಪವನ್ನು ಸಂಪೂರ್ಣವಾಗಿ ದ್ವೇಷಿಸುತ್ತಾನೆಂದೂ ಪಾಪಿಷ್ಠನನ್ನು ಆತನು ದಂಡಿಸದೆ ಬಿಡುವದಿಲ್ಲವೆಂದೂ ತಿಳಿಸಿದರೆ ಅವನು ಒಪ್ಪುವನೇ? ಒಂದುವೇಳೆ ಅಂತರಾತ್ಮವು ಅವನನ್ನು ತಿವಿದು ಸಂಕಟ ಪಡಿಸಿದರೂ ಅದನ್ನು ಸುಮ್ಮನಿರಿಸುವದಕ್ಕೆ ಪ್ರಯತ್ನಿಸುವನು. ನನ್ನಲ್ಲಿ ನಡೆಯುವ ಕಾರ್ಯಗಳನ್ನೆಲ್ಲಾ ದೇವರೇ ಅಲ್ಲದೆ ಬೇರೆ ಯಾರು ನಡಸುವವನು? ನಾನು ಬೇರೆಯಲ್ಲ, ಆತನು ಬೇರೆಯಲ್ಲ. ನಾನೂ ಪರಬ್ರಹ್ಮವೂ ಒಂದೇ ಎಂದು ಬೆರೆತು ನಡೆಯುವನು. ಜ್ಞಾನಿಯಾದವನಿಗೆ ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಅವನು ದ್ವಂದ್ವಾತೀತನೆಂದು ಹೇಳಿಕೊಂಡು ಸ್ವೇಚ್ಛೆಯಾಗಿರುವನು. ಇನ್ನು ಕೆಲವು ಸಂದರ್ಭಗಳಲ್ಲಿ ತಾನು ಹಿಡಿದಿರುವ ಮತಾಭಿಪ್ರಾಯದಿಂದ ಧನಲಾಭವಿರಲಾಗಿ ಅದಕ್ಕೆ ವ್ಯತಿರಿಕ್ತವಾದಂಥಾ ಸತ್ಯವನ್ನು ಯಾರಾದರೂ ಹೇಳಿದರೆ ಅಂಥ ಸತ್ಯವನ್ನು ಅನುಸರಿಸುವದನ್ನು ಬಿಟ್ಟು ಹೇಳಿದವರ ಮೇಲೆ ತಿರುಗಿಬೀಳುವದೂ ಉಂಟು. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇವೆ. ಮೇಲೆ ಹೇಳಿದ ಆ ಎಫೆಸವೆಂಬ ಊರಿನಲ್ಲಿ ಡಯಾನ ಎಂಬ ದೇವತೆಯ ಗುಡಿಯಿತ್ತು. ಅಲ್ಲಿ ಸ್ಥಾಪಿತನಾಗಿದ್ದ ದೇವತೆಯ ಪೂಜೆಯು ಬಹು ದೂರದವರೆಗೂ ಪ್ರಸಿದ್ಧವಾಗಿತ್ತು. ಆ ದೇವತೆಯ ವಿಗ್ರಹಗಳನ್ನು ಚಿನ್ನ ಬೆಳ್ಳಿಗಳಿಂದ ಮಾಡಿ ಅಕ್ಕಸಾಲಿಗರು ಬಹಳ ಲಾಭವನ್ನು ಪಡೆಯುತ್ತಿದ್ದರು. ಪೌಲನು ಆ ಊರಿಗೆ ಹೋಗಿ ರುವಾಗ್ಗೆ ವಿಗ್ರಹಾರಾಧನೆಯು ತಕ್ಕದ್ದಲ್ಲವೆಂದು ಬೋಧಿಸಿದನು. ಆತನ ಬೋಧನೆಯನ್ನು ಕೇಳಿದ ಜನರು ವಿಗ್ರಹಾರಾಧನೆಯನ್ನೇ ಬಿಟ್ಟುಬಿಟ್ಟರೆ ತಮ್ಮ ಜೀವನವು ತಪ್ಪುವದೆಂದು ಆ ಅಕ್ಕಸಾಲಿಗರು ಭಾವಿಸಿ ಒಂದಾಗಿ ಕೂಡಿಕೊಂಡು ಊರೊಳಗೆ ಬಹಳ ದೊಂಬಿ ಮಾಡಿದರು. ಪೌಲನು ಹೇಳಿದ ಮಾತು ನಿಜವೋ ಸುಳ್ಳೋ ಎಂದು ಅವರು ವಿಚಾರಿಸಲಿಲ್ಲ. ಆ ಡಯಾನ ದೇವತೆಯಲ್ಲಿ ನಿಜವಾಗಿ ಮಹಿಮೆಯುಂಟೋ ಇಲ್ಲವೋ ಎಂದಾದರೂ ಪರೀಕ್ಷಿಸಲಿಲ್ಲ. ಜೀವನೋಪಾಯಕ್ಕೆ ಹಾನಿಯುಂಟಾದೀತೆಂದು ಯೋಚಿಸಿ ಕಲಹಮಾಡಿದರು. ಈಗಲಾದರೋ ಆ ದೇವತೆಯಾಗಲಿ ಆ ಗುಡಿಯಾಗಲಿ ಇಲ್ಲದ ಎಲ್ಲವೂ ಅಳಿದುಹೋಗಿರುವದು. ಸತ್ಯವು ನಿಲ್ಲುವದೇ ಹೊರತು ಅಸತ್ಯವು ನಿಲ್ಲಲಾರದು. ಆದರೂ ಅಸತ್ಯದ ಪಕ್ಷವನ್ನು ಹಿಡಿದರೆ ಹೊಟ್ಟೆಪಾಡು ನಡೆಯುವದೆಂದು ತಿಳಿದಿರುವದರಿಂದ ಅನೇಕರು ಸತ್ಯವನ್ನು ಒಪ್ಪದೆಹೋಗುತ್ತಾರೆ.

ಇನ್ನೂ ಅನೇಕರು ತಾವು ಜನರಂಟವನ್ನು ಕಳೆದುಕೊಳ್ಳುವೆವೆಂದು ಭಾವಿಸಿ ಸತ್ಯವನ್ನು ಒಪ್ಪದವರಾಗಿರುತ್ತಾರೆ. ಸತ್ಯದ ಪಕ್ಷವನ್ನು ಹಿಡಿದರೆ ಜನರ ಹಗೆತನಕ್ಕೂ ಹಿಂಸೆಗೂ ಗುರಿಯಾಗಬೇಕೆಂದು ತಿಳಿದು ಹೆದರು ಹೇಡಿಗಳಾಗಿ ಅಸತ್ಯವನ್ನೇ ನುಡಿಯುತ್ತಾರೆ. ಇವರಿಗೂ ಅಮೇರಿಕದೇಶದಲ್ಲಿ ಗುಲಾಮ ವ್ಯಾಪಾರವನ್ನು ನಿಲ್ಲಿಸುವದರಲ್ಲಿ ಕಂಕಣಬದ್ಧನಾಗಿದ್ದ ಗ್ಯಾರಿಸನ್ ಎಂಬುವ ಮಹಾಶಯನಿಗೂ ಎಷ್ಟು ಅಂತರವಿದೆ! ಆ ಗ್ಯಾರಿಸನ್ ಹೇಳಿದ್ದೇನಂದರೆ—ನಾನು ಸತ್ಯವನ್ನು ಕಂಠವಾಗೇ ಹೇಳುವೆನು, ನಾನು ಅಸ್ಪಷ್ಟಗೋಪ್ಯವಾಗಿಯೂ ಮೃದುವಾಗಿಯೂ ಇರಲಾರೆನು. ನಿಜವನ್ನು ಹೇಳುವದಕ್ಕೆ ಅವಕಾಶವನ್ನೇ ಬಿಡೆನು. ನಾನು ಹಿಡಿದ ಪಟ್ಟನ್ನು ಕಿಂಚಿನ್ಮಾತ್ರವಾದರೂ ಬಿಡೆನು. ನಾನು ಆಡಿಸುವದು ಸರ್ವರ ಮನಸ್ಸಿಗೂ ತಗಲುವ ತನಕ ಸುಮ್ಮನಿರೆನು! ಎಂದು ಘೋಷಿಸಿದನು. ಸತ್ಯಾರ್ಥಿಗಳಲ್ಲಿರಬೇಕಾದ ಲಕ್ಷಣಗಳು ನಮ್ಮ ಈ ದೇಶದಲ್ಲಿ ಎಷ್ಟರಮಟ್ಟಿಗೆ ಇದೆಯೆಂಬುವದನ್ನು ಮುಂದಣ ಸಂಚಿಕೆಯಲ್ಲಿ ವಿಚಾರಿಸುವೆವು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ್ ರವರ ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

95-24



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಶೀತ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮ ಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಬಹಳ ಕಠಿಣವಾದ ಭೇದಿಯೂ ಕೂಡ ಮೂರೇ ಹೊತ್ತು ಈ ಔಷಧದಿಂದ ನಿರ್ಮೂಲಮಾಡಿ ನಿಲ್ಲಿಸುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಒಳದೇಶದ ವೃತ್ತಾಂತಗಳು.

ಬ್ರಿಟಿಷ್ ರೆಸಿಡೆಂಟರಾದ ಮಿ॥ ಎಸ್ ಎಂ ಫ್ರೇಜರ್ ರವರು ಸರ್ಕೀಟು ತೀರಿಸಿಕೊಂಡು ಬೆಂಗಳೂರಿಗೆ ವಾಪಸು ದಯಮಾಡಿದರು.

****

ಮೈಸೂರಿನ ಮಹಾರಾಜ ಕುಮಾರ್ತೆಯವರು ಮಕ್ಕಳ ಸಮೇತ ರಾಜಧಾನಿಯಲ್ಲೇ ಇರುತ್ತಾರೆ. ಇವರು ಕಲ್ಕತ್ತೆಗೆ ಪ್ರಯಾಣ ಮಾಡುವವರಾಗಿಲ್ಲವೆಂದು ತಿಳಿಯುವುದು.

****

ಅರಮನೆ ಮಿಲಿಟರಿ ಭಕ್ಷಿ ಬಸಪ್ಪಾಜಿ ಅರಸಿನವರು ಶ್ರೀಮನ್ಮಹಾರಾಜರವರ ಸಂಗಡ ಕಲ್ಕತ್ತೆಗೆ ಹೋಗಿ ಬರುವರೆಂದು ಕೇಳುತ್ತೇವೆ.

****

ಮೈಸೂರು ತಾಲ್ಲೂಕ್ ಅಮಲ್ದಾರ್ ಮಿ॥ ಟಿ ವೆಂಕಟರಮಣಯ್ಯನವರನ್ನು ಇನ್ನೂ ಆರು ತಿಂಗಳ ತನಕ ಅಂದರೆ ಜೂನ್ ಆಖೈರುವರೆಗೆ ಕೆಲಸದಲ್ಲಿಟ್ಟಿರಬೇಕೆಂದು ಗವರ್ನಮೆಂಟಿನವರು ಹುಕುಂ ಕೊಟ್ಟಿದ್ದಾರೆ.

****

ದಿವಾನ್ ಮಿ॥ ಮಾಧವರಾಯರು ಕಳೆದ ವಾರ ಅನಂತಶಯನ ಮಹಾರಾಜರನ್ನು ಕಂಡು ಬರುವುದಕ್ಕಾಗಿ ಮದರಾಸಿಗೆ ಹೋಗಿದ್ದರು. ಅವರು ಮುಂದಿನ ಸೋಮವಾರ ಕಲ್ಕತ್ತೆಗೆ ಪ್ರಯಾಣ ಮಾಡುವರೆಂದು ತಿಳಿದು ಬಂದಿದೆ.

****

ಬಹುಮಾನಕ್ಕಾಗಿ ಈ ವಾರ ನಮ್ಮಲ್ಲಿಗೆ ಬಂದಿದ್ದ ಬಾತ್ಮಿಗಳನ್ನೆಲ್ಲಾ ಪರೀಕ್ಷಿಸಿ ನೋಡಲಾಗಿ ಆ ಪೈಕಿ ಯಾವುದೂ ಬಹುಮಾನ ಪಡೆಯಲು ಅರ್ಹವಾಗಿರಲಿಲ್ಲವೆಂದು ಕಂಡುಬಂದಿದೆ. ಆದಕಾರಣ ಈ ವಾರ ಯಾವ ಬಾತ್ಮಿಗೂ ಬಹುಮಾನವನ್ನು ಕೊಡಲಿಲ್ಲವು.

****

ಕಳೆದ ನೊವೆಂಬರ್ ೩೦ ತಕ್ಕೆ ಆಖೈರಾದ ಒಂದು ವಾರದಲ್ಲಿ ಮೈಸೂರು ಸಂಸ್ಥಾನದಲ್ಲಿ ೧೧೦ ಜನರಿಗೆ ವಾಂತಿಭೇದಿ ಉಪದ್ರ ಕಂಡು ೭೯ ಜನರು ಕಾಲವಾದರು. ಈ ಪೈಕಿ ಮೈಸೂರು ಪಟ್ಟಣ ೩, ಮೈಸೂರು ಡಿಸ್ಟ್ರಿಕ್ಟು ೨೬ ಬೆಂಗಳೂರು ೩, ಈರೀತಿ ಮರಣಗಳಾದವು.

****

ಶಿಕಾರಿಪುರಕ್ಕೆ ೫ ಮೈಲಿ ದೂರದಲ್ಲಿರುವ ಸಾಲೂರು ಗ್ರಾಮದಲ್ಲಿ ಹಿಂದಿನ ಭಾನುವಾರ ಮಧ್ಯಾಹ್ನ ಲಿಂಗಾಯತರ ಕೇರಿಗೆ ಬೆಂಕಿಬಿದ್ದು ಸುಮಾರು ೪೦—೫೦ ಮನೆಗಳು ಸುಟ್ಟು ತುಂಬಾ ನಷ್ಟವಾಯಿತ್ತೆಂತಲೂ, ಕೆಲವು ಕೋಳಿಗಳು ಉರಿಯಲ್ಲಿ ಸಿಕ್ಕಿ ಮೃತಪಟ್ಟವೆಂತಲೂ ತಿಳಿಯುವುದು.

****

ಕನ್ನಾನೂರಿನಲ್ಲಿ ಮುಂದಿನ ಫೆಬ್ರವರಿ ಪ್ರಾರಂಭದಲ್ಲಿ ಕೈಗಾರಿಕೆಗಳ ಮತ್ತು ವ್ಯವಸಾಯೋಪಕರಣಗಳ ಪ್ರದರ್ಶನವು ನಡೆಯುವುದು. ನಮ್ಮ ಸಂಸ್ಥಾನದ ಕಸಬುದಾರರು ಅಲ್ಲಿಗೆ ವಸ್ತುಗಳನ್ನು ಕಳುಹಿ ಪ್ರದರ್ಶನ ಮಾಡಿ ಬಹುಮಾನ ಪಡೆಯುವುದಕ್ಕೆ ಒಳ್ಳೇ ಅವಕಾಶ ದೊರಕಿರುವುದು.

****

ಪ್ಲೇಗ್ ಉಪದ್ರವು ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯಲ್ಲಿ ಹುಟ್ಟಿ ಚಾಮರಾಜ ಮತ್ತು ಮಂಡಿ ಮೊಹಲ್ಲೆಗಳಿಗೆ ಹಬ್ಬಿರುವಾಗ

...ವು ಏಂದಿದೆ ದಿನವೂ ಮರಣ ಸಂಖ್ಯೆಯು ೪—೧೦ ರೊಳಗೆ ಇರು ...ವು ಒಂದೊಂದು ದಿನ ೧೨—೧೩ ರ ವರೆಗೂ ಆಗುವುದು ಈಗ ...ತ ಚಳಿ ಶೋರತಗಳುಳ್ಳ ಕಾಲವಾದ್ದರಿಂದ ಜನರು ಈ ರೋಗವೆಲ್ಲಿ ...ಚ್ಚುವುದೋ ಎಂದು ಗಾಬರಿಪಡುತ್ತಿದ್ದಾರೆ.

****

ಕಳೆದ ೬ನೇ ತಾ ಮಂಗಳವಾರ ಚಿತ್ರದುರ್ಗದ ಟರ್ವ ಉದ್ಯಾನ ...ದಲ್ಲಿ ಅಲ್ಲಿನ ಸುಮಾರು ೩೦—೪೦ ಮಂದಿ ಹಿಂದೂ ಸ್ತ್ರೀಯರು ...ರಿ ಭೋಜನಾದಿಗಳನ್ನು ಮಾಡಿ ಸಂತೋಷದಿಂದ ಕಾಲ ಕಳೆದು ...ದರೆಂದೂ, ಇದು ವಿದ್ಯೆ ನಾಗರಿಕಾದಿಗಳು ಹೆಚ್ಚಿದ ಹಾಗೆಲ್ಲಾ ವಿವೇಕ ...ರಿ ವಾತ್ಸಲ್ಯಾದಿಗಳು ಹೆಚ್ಚುತ್ತಾ ಬರುವುದಕ್ಕೆ ದೃಷ್ಟಾಂತವಾಗಿದೆ ...ತಲೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

****

ಕಳೆದ ಗುರುವಾರ ಮಧ್ಯಾಹ್ನ ಶ್ರೀಮನ್ಮಹಾರಾಜರವರು ಮೋ... ...ರ್ ಗಾಡಿಯಲ್ಲಿ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಮೊನ್ನೆ ...ನ ವಾರ ಮಹಾ ಮಾತೃಶ್ರೀ ಯವರ ಸಮೇತ ಚಾಮುಂಡಿ ಬೆಟ್ಟದ ... ಕುಲದೇವತಾ ಪೂಜೆ ಮುಂತಾದ್ದನ್ನು ನೆರವೇರಿಸಿಕೊಂಡು ಮೊನ್ನೆ ...ವಾರ ಮಧ್ಯಾಹ್ನ ಸ್ಪೆಷಲ್ ರೈಲಿನಲ್ಲಿ ದಿವಾನರವರ ಕೂಡ ...ಗಳೂರಿಗೆ ಚಿತ್ತೈಸಿದರು ಇವರೆಲ್ಲಾ ಮುಂದಿನ ಬುಧವಾರ ಬೆಂಗ... ...ರಿಂದ ಕಲ್ಕತ್ತೆಗೆ ಪ್ರಯಾಣಮಾಡುವವರಾಗಿದ್ದಾರೆಂದು ತಿಳಿಯುವುದು

****

ನೆಲಮಂಗಲದ ತಾಲ್ಲೂಕ್ ಕಸಬಾ ಸಮ್ಮತಿ ತ್ಯಾಗದಳ್ಳಿ ಬಳಿ ...ದು ಹಳ್ಳದಲ್ಲಿ ೯ ಅಡಿ ಉದ್ದವೂ ೩ ಅಡಿ ಎತ್ತರವೂ ಇದ್ದ ಒಂದು ...ದೆ ಮೊಸಳೆಯನ್ನು ಗ್ರಾಮಸ್ಥರು ಕಳೆದ ವಾರ ನೂರಾರು ಮಂದಿ ...ರಿ ೫೦೦—೬೦೦ ಕಲ್ಲುಗಳಿಂದ ಸಾಯಂಕಾಲ ೩ ಗಂಟೆಯ ತನಕ ...ಹೊಡೆದು ಕೊಂದುಹಾಕಿದರೆಂದು ಒಬ್ಬ ಬಾತ್ಮೀದಾರರು ತಿಳಿಸಿರು ...ರೆ. ಇದರಿಂದ ಆ ಗ್ರಾಮಸ್ಥರ ಹೃದಯವು ಎಷ್ಟು ಕಠಿಣವಾಗಿತ್ತೆಂ ...ದು ಗೊತ್ತಾಗುವುದು ಅದು ಕ್ರೂರ ಪ್ರಾಣಿಯೇ ಹೌದಾದಾಗ್ಯೂ ...ನ್ನು ಅಷ್ಟು ದೀರ್ಘಕಾಲ ಬಾಧೆಪಡಿಸಿದರಲ್ಲಾ ಎಂದು ವಿಷಾದಿಸು ...ವೆ.

****

...ಲರು ಇನ್ನು ಮೇಲೆ ಓದು ಬರಹ ಕಲಿಯದಿದ್ದರೆ ಮೈಸೂ ...ಸಂಸ್ಥಾನದಲ್ಲಿ ಅವರಿಗೆ ಪಟೇಲಿ ಉಳಿಯುವುದಿಲ್ಲ ಇನ್ನು ...ರು ವರುಷಗಳೊಳಗಾಗಿ ಪಟೇಲರೆಲ್ಲಾ ವಿದ್ಯೆ ಕಲಿತು, ಜನನ ...ಣದ ರಿಜಿಸ್ಟರು ಬರೆಯುವುದು, ಕಂದಾಯ ಪಾವತಿ ಆದದ್ದಕ್ಕೆ ...ಗೆ ರಶೀತಿ ಬರೆದು ಕೊಡುವುದು, ಗ್ರಾಮ ಸರಹದ್ದಿನೊಳಗೆ ನಡೆ ...ದ ಸಾಮಾನ್ಯ ವಿಷಯಗಳಲ್ಲಿ ರಿಪೋರ್ಟು ಬರೆಯುವುದು, ಈ ...ದು ಭಾಗಗಳಲ್ಲಿ ಸರಿಯಾದ ಪರಿಶ್ರಮವನ್ನು ಪಡೆಯಬೇಕು ...ದರೆ ಅವರ ವಂಶದಲ್ಲಿ ಯಾರು ಅಕ್ಷರಸ್ಥರಾಗಿರುತ್ತಾರೋ ...ರಿಗೆ ಪಟೇಲಿ ಕೆಲಸ ನೇಮಿಸಲ್ಪಡುತ್ತೆ ಎಂಬುದಾಗಿ ಗವರ್ನ ...ಮೆಂಟು ಸರ್ಕಲರ್ ಕೊಟ್ಟಿದ್ದಾರೆ ಈ ಮೂರು ವರುಷಗಳೊಳ ...ಗೆ ಎಲ್ಲಾ ಪಟೇಲರೂ ವಿದ್ಯೆ ಕಲಿತು ಮೇಲ್ಕಂಡ ಯೋಗ್ಯತೆಯನ್ನು ...ಪಡಿಸಿಕೊಳ್ಳುವರೆಂದು ನಿರೀಕ್ಷಿಸಲ್ಪಟ್ಟಿದೆ.

ಪ್ರಾಣಾಪಾಯದ ಸುದ್ದಿಗಳು.

೧. ಗೋಡೆ ಬಿದ್ದ ಅಪಾಯವು

...ಕನಾದಳ್ಳಿ ಜಿಲ್ಲಾ ಶ್ರೀರಂಗದ ಪೂರ್ವ ಉತ್ತರ ಬೀದಿ ...ವಾಸೀ ಕೃಷ್ಣಯ್ಯಂಗಾರ್ರು ಕಟ್ಟಿಸುತ್ತಿದ್ದ ಮನೆ ಪಕ್ಕದಲ್ಲಿ ...ಅನಂತರಾಮೈಯ್ಯಂಗಾರ್ರು ಮನೆ ಗೋಡೆಗೆ ಸೇರಿದ ಹಾಗೆ ...ಹಾಕುವದಕ್ಕೆ ಡಿಸೆಂಬರು ೬ನೇ ತಾ ಬುಧವಾರ ಸುಮಾರು ...ಟೆ ಹೊತ್ತಿನಲ್ಲಿ ಕೂಲಿಯವರು ಸುಮಾರು ೧೭—೧೮ ವಯ ...ದ ಪಾಯಾ ತೆಗೆಯುತ್ತಾ ಇರುವಾಗ ಮಳೆ ಬಂದಕಾರಣದಿಂ ...ಪಾಯಾಕ್ಕೆ ಸೇರಿದ ಅನಂತರಾಮಯ್ಯಂಗಾರ್ರ ಮನೆ ಗೋಡೆ ...ಕ್ಕಿಂತ ಹೆಚ್ಚಾಗಿ ತೆಗೆದಿದ್ದರಿಂದಲೂ ಸದರೀ ಅನಂತರಾಮೈ ...ಗಾರ್ರು ಮನೆ ಗೋಡೆ ಬಿದ್ದು ಇಬ್ಬರು ಕೂಲಿಯವರು ತೋಡು ...ದಲ್ಲೇ ಸಿಕ್ಕಿ ಹತವಾದರು. ಇನ್ನಿಬ್ಬರಿಗೆ ಘಾಯವಾ ... ಗೋಡೆ ಬಿದ್ದ ಕೂಡಲೆ ಮೇಲಿನ ಕಟ್ಟದಿಂದ ಸದರೀ ಅನಂ ...ತೈಯ್ಯಂಗಾರ್ರು ಸುಮಾರು ೭೦ ವಯಸ್ಸಿನವರು ನೆರಮನೇಲಿ ...ಮಲಗಿದ್ದವರ ಮೇಲೆ ಸ್ವಲ್ಪ ಗಾರೆ ಮೇಲಿಂದ ಉದು ... ಬೀಳುತ್ತಾ ಇದ್ದ ಹೆಂಡತೀ ಕೂಡಾ ಮೇಲಿಂದ ಏನೇ ...ಉದುರುತ್ತೆ ಎಂದು ಹೇಳಿದ್ದಕ್ಕೆ ಇಲಿ ಏನೋ ಸೇರಿರಬಹುದು ...ಹೇಳಿ ಆಕೆ ಆಹಿಗೆ ಮನೆಗೆ ತಿರುಗಿದ ಕೂಡ್ಲೆ ಮೇಲಿನ ಕಟ್ಟದ ...ಊಟಾ ಮಾಡುತ್ತಿದ್ದ ಅನಂತರಾಮೈಯ್ಯಂಗಾರ್ರು ಅಲ್ಲೇ ಮೃತ ... ಹೆಂಡತಿ ಉಳುಕೊಂಡಳು. ಮೃತಪಟ್ಟವರ ವಾರಸುಗಳು ...ರೋಧನೆ ಮಾಡಿ, ತೇಂದರೆ ಮಾಡಿದ್ದರಿಂದ ಮೃತಪಟ್ಟ... ...ಕಾವಲುಗಾರ ಜಾತಿಯವರಿಗೆ ತಲಾ ೫೦ ರೂಪಾಯಿ ಕೊಟ್ಟು ...ನ ಮಾಡಿದರು. ಸದರಿ ಮೃತಪಟ್ಟ ಅನಂತರಾಮೈಯ್ಯಗಾರ್ರ ...ಬಿದ್ದದ್ದು ಕಟ್ಟಿಸಿ ಕೊಡುವದಾಗಿಯೂ ಹೇಳಿ ಸಂಜಾಯಿಷಿ ...ರು. ನೆರಮನೆ ಪಾಯಕ್ಕಿಂತ ಜಾಸ್ತಿಯಾಗಿ ತೋಡದಿದ್ದರೆ ...ಣಗಳು ಹೋಗುತ್ತಿರಲಿಲ್ಲ, ನಷ್ಟವೂ ಆಗುತ್ತಿರಲಿಲ್ಲ.

ಬಾತ್ಮೀದಾರ್

೨. ಆತ್ಮಹತ್ಯೆಗಳು

...ಡೂರು ತಾಲ್ಲೂಕು ದೇವನೂರಿಗೆ ಸೇರಿರುವ ಚಿಕ್ಕ ದೇವ ...ಗ್ರಾಮದಲ್ಲಿರುವ ಬ್ರಹ್ಮಯ್ಯನ ಹೆಂಡತಿ ಶಿವಾಚಾರದ ಜಾತಿ ...ಎಂಬುವಳು ಕಳೆದ ತಾ. ೨ನೇ ಭಾನುವಾರ ಬೆಳಿಗ್ಗೆ ಸುಮಾರು ...ಘಂಟೆ ಸಮಯದಲ್ಲಿ ತನ್ನ ಸುಮಾರು ಹತ್ತು ವರುಷದ ಗಂಡು ...ನನ್ನೂ ಸುಮಾರು ೪ ವರುಷದ ಹೆಣ್ಣು ಮಗುವನ್ನೂ ಕರೆ ...ದು ಅದೇ ಊರಿನ ಕಪ್ಪಣ್ಣನ ತೋಟದ ಉತ್ತರ ದಿಕ್ಕಿನಲ್ಲಿ ತನ್ನ ೨ ಮಕ್ಕಳನ್ನೂ ನೀರಿಗೆ ನೂಕಿ ತಾನು ಸಹ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು ಅಷ್ಟರಲ್ಲಿ ದಾರಿಕಾರರ್‍ಯಾರೋ ಕಂಡು ಮುಳುಗಿ ಏಳುತ್ತಿದ್ದ ಹೆಣ್ಣು ಮಗುವನ್ನು ಮೇಲಕ್ಕೆ ತೆಗೆದು ಹಾಕಿದ್ದರು ಆ ಹುಡುಗಿ ಸಹ ನೀರು ಕುಡಿದು ಪ್ರಾಣಬಿಟ್ಟಿತ್ತು. ಆ ಹುಡುಗಿಯನ್ನು ಮೇಲಕ್ಕೆಳೆದವರು ಯಾರು ಎಂಬುವದು ಇದುವರಿವಿಗೂ ಪತ್ತೆಯಿಲ್ಲ ಅನಂತರ ಸದರಿ ಗ್ರಾಮದ ಪಟೇಲರಿಗೆ ತಿಳಿದು, ಬಂದು ನೋಡಿ ಪೋ ಲೀಸಿಗೆ ರಿಪೋರ್ಟು ಮಾಡಿದರು ಕೂಡಲೆ ಕಡೂರು ಪೋಲೀಸ್ ಜಮಾದಾರ್ರು ಸಾಯಂಕಾಲ ಬಂದು, ಅಜಮಾಯಿಷಿ ಮಾಡಿದ್ದರಲ್ಲಿ ನೀರಿನಲ್ಲಿ ಮುಳುಗಿದ್ದ ಬಾಕಿ ೨ ಹೆಣಗಳು ಎದ್ದಿರಲಿಲ್ಲ. ಇದು ಆದ ಮಾರನೇ ದಿನಸ ಅಂದರೆ ೩ನೇ ತಾ. ಪೋಲೀಸ್ ಇನ್ಸ್‌ಪೆಕ್ಟರೂ ಮತ್ತು ಆಸ್ಪಿಟಲ್ ಅಸಿಸ್ಟೆಂಟರೂ ಬಂದು ಸ್ಥಳವನ್ನು ಅಜಮಾಯಿಷಿ ಮಾಡಿ ನೀರಿನಲ್ಲಿ ಮುಳುಗಿದ್ದ ಹೆಣಗಳನ್ನು ತೆಗಿಸಿ ಮಹಜರು ಮಾಡಿ ಕೊಂಡು ಯಾವ ಅನುಮಾನವೂ ಕಾಣಬರಲಿಲ್ಲವೆಂಬ ಅಭಿಪ್ರಾಯ ದಿಂದ ಎರಡುಹುಡುಗರ ದಫನ್ ಮಾಡಿಕೊಳ್ಳುವ ಬಗ್ಗೆ ಆರ್ಡರ ಕೊಟ್ಟರು ಈ ರೀತಿಯಾಗಿ ಏಕಕಾಲದಲ್ಲಿ ೩ ಜನಗಳು ಮೃತಪಟ್ಟಿದ್ದು ಬಹಳ ದುಃಖ ಕರವಾಗಿರುತ್ತೆ ಮೂರ್ಖರಾದ ಹೆಂಗಸರು ಅಲ್ಪ ವಿಷ ಯಕ್ಕೆಲ್ಲಾ ತಾವೆ ಕೆಡುವುದಲ್ಲದೆ ಮುಂದೆ ಬದುಕಿ ಬಾಳುವ ಅಲ್ಪ ವಯಸ್ಕರಾದ ಹುಡುಗರನ್ನು ಸಹ ಕೆಡಿಸುತ್ತಾರೆ ಇದು ಅಲ್ಲದೆ ಏಕ ಕಾಲದಲ್ಲಿ ತನ್ನ ಮಕ್ಕಳನ್ನು ನೀರಿಗೆ ನೂಕಿ ತಾನೂ ಆತ್ಮಹತ್ಯ ಮಾಡಿಕೊಳ್ಳುವದಕ್ಕೆ ಕಾರಣವೇನೋ ತಿಳಿಯಲಿಲ್ಲ ಅವಳ ಗಂಡ ನು ಸನ್ಯಾಸಿಯಾಗಿರುತ್ತಾನೆಂದು ತಿಳಿಯಬರುತ್ತೆ

ಬಾತ್ಮೀದಾರ್

ಮೋಸಕೃತ್ಯವು

ಇದೇ ಮಾಹೆ ೨ ನೆ ತಾ ಭಾನುವಾರ ದೊಡ್ಡಬಳ್ಳಾಪುರದ ಚೆನ್ನ ಸೋಮಪ್ಪನ ಮನೆಗೆ ಒಬ್ಬ ಮೋಸಗಾರನು ರೈಲ್ವೇ ರೋಡು ಕಂಟ್ರಾಕ್ಟ ದಾರನೆಂದು ಹೆಸರಿಟ್ಟುಕೊಂಡು ಬಹಳ ದಂಭದ ಉಡುಪನ್ನು ಧರಿಸಿ ಬಂದು—ಚೆನ್ನಸೋಮಪ್ಪ, ನನಗೆ ವಾಸಮಾಡುವದಕ್ಕೆ ಒಂದು ಮನೆ ಬಾಡಿಗ್ಗೆ ಕೊಡಿ ಎಂದು ಅವರಲ್ಲೇ ಖಾಲಿಯಾಗಿ ಇದ್ದ ಒಂದು ಮನೆಯ ನ್ನು ಬಾಡಿಗ್ಗೆ ತೆಗೆದುಕೊಂಡು, ಬಳ್ಳಾರಿಯಿಂದ ಯಶವಂತಪುರದವರಿವಿ ಗೂ ರೈಲ್ವೆ ರೋಡು ಕಂಟ್ರಾಕ್ಟು ಮಾಡಿಕೊಂಡು ಇಧೀವಿ ೪೦ ಸಾವಿ ರ ರೂಪಾಯಿನ ಜಲ್ಲಿ ಸಪ್ಲಾಯಿ ಆಗಬೇಕಾಗಿದೆ. ಸಪ್ಲಾಯಿ ಮಾಡಿ ಕೊಡಿ ನಿಮ್ಮನ್ನು ನೋಡಿದರೆ ಬಹಳ ಯೋಗ್ಯರಾಗಿದೀರಿ ನಿಮ್ಮನ್ನು ಪಾಲು ವ್ಯಾಪಾರಕ್ಕೆ ಸೇರಿಸಿಕೊಳ್ಳುತ್ತೇನೆ ಈ ಪ್ರಾಂತ್ಯ ಜಲ್ಲಿ ಸಪ್ಲಾಯಿ ಮಾಡತಕ್ಕ ಪ್ರದೇಶದ ಜನಗಳ ಬಳಿಗೆ ಹೋಗಿ ನಮ್ಮ ರೂ ಪಾಯಿಗಳಿಗೆ ಲೋಪವಿಲ್ಲದೆ ಇರತಕ್ಕ ಮನುಷ್ಯರಿಗಲ್ಲಾ ಸಪ್ಲಾಯಿಗೆ ಒಪ್ಪಿಸಿ ರೂಪಾಯಿಗಳು ಕೊಟ್ಟು ಕರಾರು ಬರಿಸಿ ಕೊಡಿ ಎಂದು ಹೇಳಿದ್ದರಿಂದ ಚೆನ್ನಸೋಮಪ್ಪನು ಇವರಿಂದ ತನಗೂ ಸಹಾಯವಾಗು ತ್ತೆಂದು ಬಹಳ ಸಂತೋಷದಿಂದ ವಿಶೇಷ ಮರ್ಯಾದೆಯಿಂದ ಒಂದು ರಾತ್ರಿ ಆತನ ಮನೆಯಲ್ಲಿ ಇಟ್ಟುಕೊಂಡು, ತಾ ೩ ನೆ ಸೋಮವಾರ ಬೆಳಿಗ್ಗೆ ೪ ಘಂಟೆಗೆ ಕಣಿವಾಲೆ ಎಂಬ ನಮ್ಮ ಊರಿಗೆ ಬಂದು ೪೦ ಸಾ ವಿರ ಗಜ ಜಲ್ಲಿ ಸಪ್ಲಾಯಿ ಮಾಡಿಕೊಡಿ ಎಂದು ಹೇಳಿದರು ನಾನು ನಂಬಿದ್ದರಿಂದ ಚೆನ್ನಸೋಮಪ್ಪನು—ಇವರು ಭಾರೀ ಕಂಟ್ರಾಕ್ಟುದಾ ರರು. ಬಹಳ ಯೋಗ್ಯರು ಇವರದು ಧರ್ಮವಾರದಲ್ಲಿ ಕಂಪನಿ ಇದೆ ಯಂತೆ ಇವರ ಆಳಿಯನನ್ನು ಕರೆದುಕೊಂಡು ರೂಪಾಯಿ ತರುವದ ಕ್ಕೆ ನಾನು ಈ ದಿನ ಗಾಡಿಗೆ ಹೋಗುತ್ತೇನೆ ಇವರ ಆಳಿಯನ ಕೈಲಿ ರೂಪಾಯಿ ತೆಗಸಿಕೊಂಡು ಬುಧವಾರ ಮಧ್ಯಾಹ್ನ ೧೨ ಘಂಟೆಯ ಗಾಡಿಗೆ ದೊಡ್ಡಬಳ್ಳಾಪುರಕ್ಕೆ ಬರುತ್ತೇನೆ ಆ ಬಳಿಕ ಎಲ್ಲಾ ವಿಷಯ ಮಾತನಾಡುವೆನು ನೀವು ಬನ್ನಿ ಎಂದು ಹೇಳಿ, ಈ ದಿನ ಸಾಯಂತ್ರ ೭ ಘಂಟೆ ಗಾಡಿಗೆ ದೊಡ್ಡಬಳ್ಳಾಪುರದ ರೈಲ್ವೆಸ್ಟೇಷನ್ ಬಳಿಗೆ ಹೋಗಿ ಮೋಸಗಾರನಾದ ಕಂಟ್ರಾಕ್ಟರು—ನಮ್ಮ ಕಂಪನಿಗೆ ಹೋಗಿ ನಮ್ಮ ಆಳಿಯನನ್ನು ಕರೆದುಕೊಂಡು ೯ ಸಾವಿರ ರೂಪಾಯಿನ ನೋಟು ತೆಗೆದುಕೊಂಡು ನಮ್ಮ ಪೈಕಿ ಆಳುಗಳನ್ನು ಕರದುಕೊಂಡು ಬರುವಂ ತೆ ಅವರ ಆಳಿಯನಿಗೆ ಕಾಗದ ಬರದು, ನೀವು ಅಲ್ಲಿ ನಿಲ್ಲದೆ ಜಾಗ್ರತೆ ಯಾಗಿ ಕರೆದುಕೊಂಡು ಬನ್ನಿ ನಾನು ತೊಂಬೆಭಾವಿ, ಗೋರಬಿದ ನೂರು, ಈ ಪ್ರಾಂತ್ಯ ಜಲ್ಲಿ ಸಪ್ಲಾಯಿ ಮಾಡತಕ್ಕ ಜನಗಳನ್ನು ತಲಾ ಷು ಮಾಡಿಕೊಂಡು ಬರುವಾಗ್ಗೆ ದೊಡ್ಡಬಳ್ಳಾಪುರಕ್ಕೆ ಬರುತ್ತೇನೆಂದು ಹೇಳಿ ರೈಲ್ ಹತ್ತಿಸಿ ಕಳುಹಿಸಿದವನು ಚೆನ್ನಸೋಮಪ್ಪನ ಮನೆಗೆ ಬಂದು ಮನೆಯವರಿಗೆ ನಿಮ್ಮ ಕೈಲಿ ಯಾವದೋ ಕೊಂಚ ರೂಪಾಯಿ ಕೊಟ್ಟಿದ್ದಾರಂತೆ ೨೫ ರೂಪಾಯನ್ನು ಈಸುಕೊಂಡು, ನಮ್ಮ ಹುಡುಗನನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿ ಸಾಮಾನ್ ತೆಗೆದುಕೊಂಡು ಬನ್ನಿ ಎಂದು ಹೇಳಿದರು ಎಂದು ಹೇಳಲು ಮನೆಯ ವರು ನಿಜ್ಜಯವೇ ಇರಬಹುದೆಂದು ನಂಬಿ ೨೫ ರೂಪಾಯಿ ಕೊಟ್ಟು ಹುಡುಗನನ್ನು ಅವನ ಸಂಗಡ ಕಳುಹಿಸಿದರು ಮೋಸಗಾರ ಕಂಟ್ರಾ ಕ್ಟರು ೧೫ ವರುಷದ ಹುಡುಗನನ್ನು ಕರೆದುಕೊಂಡು ಬೆಂಗಳೂರಿಗೆ ರೈಲು ಹತ್ತಿ ಹೊರಟುಹೋದನು ಸದರಿ ಚೆನ್ನಸೋಮಪ್ಪನು ಧರ್ಮ ವಾರಕ್ಕೆ ಹೋಗಿ ಈ ವಿಷಯ ವಿಚಾರಿಸಲು ಎಲ್ಲಾ ಸುಳ್ಳಾಗಿ ಕಂಡು ಬಂತು ಗಾಬರಿಪಟ್ಟು ಮೋಸಗಾರನೆಂದು ತಿಳಿದು, ಅಲ್ಲಿಂದ ರೈಲ್ ಹತ್ತಿ ದೊಡ್ಡಬಳ್ಳಾಪುರಕ್ಕೆ ಬಂದು ಮನೆಗೆ ಹೋಗಿ ಕಂಟ್ರಾಕ್ಟದಾರನೆ ಲ್ಲಿ ಎಂದು ಕೇಳಲು ಮನೆಯವರು—ನೀವು ೨೫ ರೂಪಾಯಿ ಈಸು ಕೊಂಡು ಹುಡುಗನನ್ನು ಕರೆದುಕೊಂಡು ಸಾಮಾನು ತೆಗೆದುಕೊಂಡು ಬನ್ನಿ ಎಂದು ಕೇಳಿದಿರಂತೆ. ಸಾಮಾನು ತರುವದಕ್ಕೆ ಹುಡುಗನನ್ನು ಕರದುಕೊಂಡು ಹೋದರೆಂದು ಹೇಳಲು, ನಿಮ್ಮನ್ನು ಯಾರು ಹಣ ಕೊಡು ಎಂದು ಹೇಳಿದರು ಎಂಬದಾಗಿ ಮನೆಯವರ ಮೇಲೆ ಕೂಗಾ ಡಿ ಅನ್ನ ತಿನ್ನದೆ ರೂಪಾಯಿ ಕಳೆದುಕೊಂಡದ್ದೂ ಅಲ್ಲದೆ ಅನ್ಯಾಯ ವಾಗಿ ಹುಡುಗನನ್ನು ಎಲ್ಲಿ ತಪ್ಪಿಸಿ ಹೋಗುತ್ತಾನೋ ಎಂದು ಬಹಳ ಸಂಕಟಪಟ್ಟು, ವಾಸಮಾಡುವದಕ್ಕೆ ಊರಿಗೇನಾದರೂ ಬಂದಿದಾನೋ ಎಂದು ಬಂದು, ನನಗೆ ಈ ವರ್ತಮಾನವೆಲ್ಲಾ ಹೇಳಿ ವ್ಯಸನ ಪಟ್ಟು ಕೊಂಡು ರಾಜಾನಗುಂಟೆ ರೈಲಿಗೆ ತಾ ೫ ನೆ ಬೃಹಸ್ಪತಿವಾರ ಹೋಗಿ ಬೆಂಗಳೂರಿಗೆ ಅವರುಗಳನ್ನು ತಲಾಷು ಮಾಡುವದಕ್ಕಾಗಿ ಹೊರಟು ಹೋಗಿದಾನೆ

ಕಂಟ್ರಾಕ್ಟರ್ ರಾಮಣ್ಣ.

ಉತ್ತರಧ್ರುವಪರಿಶೋಧನೆ.

ಪೆರಿಯವರ ಸಾಹಸ ಕಾರ್ಯಗಳು.

ಉತ್ತರ ಧ್ರುವವನ್ನು ಹೋಗಿ ನೋಡಿ ಅಲ್ಲಿರತಕ್ಕ ವಿಶೇಷಾಂಶಗ ಗಳನ್ನು ಪರಿಶೋಧನೆ ಮಾಡಿಕೊಂಡು ಬರಬೇಕೆಂದು ಇದುವರೆಗೆ ಅನೇಕ ಸಾಹಸವಂತರು ನಾನಾ ಪ್ರಯತ್ನಗಳನ್ನು ಮಾಡಿ, ಕೆಲಕೆಲ ವು ಭಾಗ ಜಯಪ್ರದರಾಗಿ ಬಂದು ಯಶೋವಂತರಾಗಿರುತ್ತಾರೆ. ಆದರೆ ಯಾರೂ ಇದುವರೆಗೆ ಉತ್ತರಧ್ರುವದ ಅಂತ್ಯವನ್ನು ಹೋಗಿ ನೋಡಿ ಬಂದದ್ದಿಲ್ಲ ಅಲ್ಲಿನ ಹವಾ ಮುಂತಾದ್ದು ವಿಶೇಷ ಪ್ರಾಣಾಪಾ ಯಕರವಾಗಿರುತ್ತದೆ ಕೆಲವರು ಈ ಪ್ರಯತ್ನದಲ್ಲಿ ಪ್ರಾಣವನ್ನೇ ಕಳೆದುಕೊಂಡಿರುವರು ಆದಾಗ್ಯೂ ಈ ಪ್ರಯತ್ನವನ್ನು ಇನ್ನು ಕೆಲ ವರು ಬಿಡದೆ ಪ್ರಾಣದ ಮೇಲೂ ಅಭಿಮಾನವನ್ನು ತ್ಯಜಿಸಿ ಆ ಪ್ರಾಂತ್ಯ ವನ್ನು ನೋಡಿ ಬರಲೇಬೇಕೆಂದು ಮತ್ತೆಮತ್ತೆ ಸಾಹಸಪಡುತ್ತಿದ್ದಾರೆ. ಇದೇ ಉದ್ದೇಶದಿಂದ ಪೆರಿ ಎಂಬಾತನು ರೂಸ್‌ವೆಲ್ಟ್ ಎಂಬ ಹಡಗನ್ನು ಕಟ್ಟಿ ಬೇಕಾದ ಸಲಕರಣೆಗಳನ್ನೆಲ್ಲಾ ಒದಗಿಸಿಕೊಂಡು, ಕಳೆದ ೧೯೦೫ನೆ ಆಗೀಷ್ಟು ೧೬ ರಲ್ಲಿ ಅಮೇರಿಕದಿಂದ ಪ್ರಯಾಣಮಾಡಿದನು. ಕೆಲವು ಜನ ಜೊತೆಗಾರರೂ ಆತನನ್ನು ಹಿಂಬಾಲಿಸಿದರು ಇವರು ೭೦ ಮಂದಿ ಎಸ್ಕಿಮೋ ಎಂಬ ಸ್ವದೇಶಿಗಳನ್ನೂ ೧೦೦ ನಾಯಿಗಳನ್ನೂ ಕರದುಕೊಂಡು ಹೋದರು ದಾರಿಯಲ್ಲಿ ಹಿಮಗಡ್ಡೆಯ ಪ್ರಸಾರದಿಂ ದಲೂ, ಬಹು ಕಠಿಣವಾದ ಶೀತ ಹವಾದಿಂದಲೂ ಅವರೆಲ್ಲಾ ೧೯೦೬ನೆ ಫೆಬ್ರವರಿ ತನಕ ಒಂದೇ ಕಡೆಯಲ್ಲಿರಬೇಕಾಯಿತು. ಷರಿಡನ್ ಎಂಬ ಭೂಶಿರದ ಬಳಿ ಅವರ ಹಡಗು ಮಂಜುಗಡ್ಡೆಯಲ್ಲಿ ಬಲವಾಗಿ ಸಿಕ್ಕಿ ಕೊಂಡಿತು ಅದನ್ನು ಬಿಡಿಸಿಕೊಳ್ಳುವುದಕ್ಕೆ ಅವರು ಕೆಲವು ದಿನಗಳ ವರೆಗೆ ಸಾಹಸ ಪಟ್ಟರು ಅಲ್ಲಿಂದ ಮುಂದೆ ಒಂದು ರಾಣ್ಯಕ್ಕೆ ಹೋಗಿ ಹಡಗನ್ನು ಬಿಟ್ಟು, ಅವರೆಲ್ಲಾ ಬೇರೆ ಬೇರೆ ಗುಂಪಾಗಿ ಹೊರಟು ಬಿಟ್ಟರು ದಾರಿಯಲ್ಲಿ ಅವರು ಅನುಭವಿಸಿದ ಕಷ್ಟಗಳು ಅಷ್ಟಿಷ್ಟಲ್ಲ. ಉದ್ದಕ್ಕೂ ಮಂಜುಗಡ್ಡೆಯ ಮೇಲೆಯೇ ನಡೆದು ಹೋಗಬೇಕಾಗಿತ್ತು. ಅದರಲ್ಲೂ ಮಧ್ಯೆ ಮಧ್ಯೆ ಹೊಳೆಗಳಂತೆ ನೀರು ಕಾಣಿಸಿಕೊಂಡು ದಾಟುವುದು ಕಷ್ಟವಾಯಿತು ಈ ಹೊಳೆಗಳ ಮೇಲೆ ಮಂಜು ಬಿದ್ದು ಸುಮಾರಾಗಿ ಹೆಪ್ಪು ಕಟ್ಟಿಕೊಂಡ ಕೂಡಲೇ ಅದರ ಮೇಲೆ ನಡೆದು ಆಚೇ ದಡವನ್ನು ಸೇರಿದರು ಆ ಹೆಪ್ಪು ಕಟ್ಟಿದ್ದ ಮಂಜು ಬಹು ತೆಳು ವಾದ ಕಾರಣ ಇವರ ಭಾರಕ್ಕೆ ಅದು ತಗ್ಗುತ್ತಲೂ ಎತ್ತಿ ಹಾಕುತ್ತಲೂ ಇತ್ತು ಕೆಲವು ಕಡೆಗಳಲ್ಲಿ ಅವರಲ್ಲಿ ಕೆಲವರು ಹಿಮಗಡ್ಡೆಗಳನ್ನು ಗುಹೆಯಾಗಿ ತೋಡಿ ಅದರೊಳಗೆ ಇರಬೇಕಾಯಿತು

ಇವರು ತೆಗೆದುಕೊಂಡು ಹೋಗಿದ್ದ ನಾಯಿಗಳು ಕೆಟ್ಟ ಆಹಾರ ವನ್ನು ತಿಂದು ಸತ್ತುಹೋದವು ಅವರಿಗೆ ಆಹಾರಕ್ಕೆ ಸುಮಾರು ಆ ಪ್ರಾಂತ್ಯಗಳಲ್ಲಿ ಸಿಕ್ಕಿದ ೫೦ ಜಿಂಕೆಗಳನ್ನೂ ೩೦೦ ಒಂದು ತರಹಾ ಎತ್ತುಗಳನ್ನೂ ಶಿಕಾರಿಮಾಡಿದರೂ ಅಷ್ಟೂ ಸಾಲದೇಹೋಯಿತು ಕಡೆ ಕಡೆಗೆ ತಮ್ಮ ಬಳಿಯಲ್ಲಿದ್ದ ನಾಯಿಗಳನ್ನೇ ಕೊಂದು ಬೇಯಿಸಿ ತಿಂ ದುಬಿಟ್ಟರು ಇಷ್ಟಾದರೂ ಒಂದು ಗುಂಪಿನವರು ಹೊಟ್ಟೆಗಿಲ್ಲದೆ ಅಲ್ಲ ಲ್ಲೇ ಬಿದ್ದುಕೊಂಡಿದ್ದರು ಮುಖ್ಯಸ್ಥನಾದ ಪೆರಿ ಎಂಬಾತನೇ ಹುಡುಕಿ ಕೊಂಡು ಹೋಗಿ ಅವರನ್ನು ಪತ್ತೆಮಾಡಿ ಸಾಗಿಸಿಕೊಂಡು ಬರಬೇಕಾ ಯಿತು. ಅಂತೂ ಈ ಗುಂಪಿನವರು ಉತ್ತರಧ್ರುವವನ್ನು ತಲಪುವುದಕ್ಕೆ ಇನ್ನು ೧೫೦ ಮೈಲಿ ದೂರ ಮಾತ್ರ ಇತ್ತು ಇಷ್ಟು ಸಮೀಪಕ್ಕೆ ಇದು ವರೆಗೆ ಯಾರೂ ಹೋಗಿಬಂದಿರುವುದಿಲ್ಲ ಇಷ್ಟಕ್ಕೇ ಅವರಿಗೆ ಸಾಕಾ ಯಿತು. ಆಹಾರ ಸಾಮಗ್ರಿಗಳು ಮುಗಿದುಹೋದವು ನಾಯಿಗಳನ್ನೂ ಕೊಂದುತಿಂದದ್ದಾಯಿತು ಇಂಥಾ ಸಂದರ್ಭದಲ್ಲಿ ಅವರು ತಲಪಿದ ಕಡೆಯ ಠಾಣ್ಯದೊಳಗೆ ಹೆಗ್ಗುರುತಿಗಾಗಿ ಒಂದು ಬಾವುಟವನ್ನು ನೆಟ್ಟು, ಅಲ್ಲಿಂದ ಸುಮಾರು ನೂರಡಿ ಆಚೆ ಹೋಗಿ ತಮ್ಮ ವೃತ್ತಾಂತವನ್ನೆಲ್ಲಾ ಬರೆದು ಒಂದು ಶೀಸೆಯಲ್ಲಿ ಹಾಕಿ ಆ ಶೀಸೆಯನ್ನು ಆ ಸ್ಥಳದಲ್ಲಿಟ್ಟು ಹಿಂತಿರುಗಿದರು. ಹೋಗುವಾಗಲ್ಯಾಗೋ ಹಾಗೆಯೇ ವಾಪಸು ಬರು ವಾಗಲೂ ಹಿಮಗಡ್ಡೆಯ ಮೈದಾನಗಳ ನಡುವೆ ಅಗಲವಾದ ಹೊಳೆಗ ಳೂ ಬಿರುಕುಗಳೂ ಸಿಕ್ಕಿದವು. ದಾಟುವುದಕ್ಕೆ ಸಾಧ್ಯವಿಲ್ಲದೆ ಅಲ್ಲಲ್ಲಿ ನೀರಿನ ಮೇಲೆ ಮಂಜು ಹೆಪ್ಪುಕಟ್ಟಿಕೊಳ್ಳುವ ತನಕ ಕಾದಿದ್ದು ಬಹು ಜಾಗರೂಕತೆಯಿಂದ ಅದರ ಮೇಲೆ ನಡೆದುಕೊಂಡು ಬಂದರು. ಬೇರೆ ಬೇರೆಯಾಗಿ ಹೋಗಿದ್ದ ಗುಂಪಿನವರು ಕೆಲವು ವೇಳೆ ತಪ್ಪಿಸಿಕೊಂಡಿ ದ್ದರು. ಎಸ್ಕಿಮೋ ಎಂಬ ಮೇಲ್ಕಂಡ ಸಹಾಯಕ ಜನರಿಂದ ಅವರನ್ನು ಕಂಡುಹಿಡಿದು ಬಹಳ ಸಾಹಸಪಟ್ಟು ಕರೆತರಬೇಕಾಯಿತು ಹೀಗೆ ಬರುತ್ತಿರುವಲ್ಲಿ ಒಂದುಕಡೆ ದೊಡ್ಡ ಬಿರುಕು ಸಿಕ್ಕಿತು ಅದನ್ನು ದಾ ಟುವುದಕ್ಕಾಗದೆಹೋದ್ದರಿಂದ ಅವರು ಅದರ ಬಳಿ ಕಾದಿದ್ದು ಮಂಜು ಬಿದ್ದು ಹೆಪ್ಪು ಕಟ್ಟುವುದನ್ನೇ ನಿರೀಕ್ಷಿಸಬೇಕಾಯಿತು ಹೀಗೆ ಅವರು ಕಾದಿರುವಾಗ್ಗೆ ಆಕಸ್ಮಿಕವಾಗಿ ಬಹು ರಭಸವಾದ ಗಾಳಿ ಹುಟ್ಟಿ ಅವರು ಟಿಕಾಣಿಮಾಡಿಕೊಂಡಿದ್ದ ಹಿಮಗಡ್ಡೆಯೆಲ್ಲಾ ನದೀ ಪ್ರವಾಹದಂತೆ ಪೂ ರ್ವ ದಿಕ್ಕಿಗೆ ಬಿದುಕೊಂಡುಹೋಯಿತು ಐದು ದಿನಗಳ ತನಕ ಅವ ರು ನಾನಾ ಕಷ್ಟಗಳನ್ನನುಭವಿಸಿ ಆ ಬಿರುಕನ್ನು ದಾಟಿಕೊಂಡು ಬಂದರು ಅಲ್ಲಿಂದ ಸರಿಯಾದ ಸಮುದ್ರನೇ ಸಿಕ್ಕಿದಾಗ್ಯೂ ಶೀತಗಾಳಿ ಯ ದೆಸೆಯಿಂದಲೂ ಸುಂಟರಗಾಳಿಯಿಂದಲೂ ಅವರು ಪ್ರಾಣಾಪಾಯ ಕ್ಕೆ ಸಿಕ್ಕಿ ಬಹಳ ಗಾಬರಿಬಿದ್ದು ಬರಬೇಕಾಯಿತು ಈಗ ಈ ಗುಂಪಿ ನವರೆಲ್ಲಾ ಕಳೆದ ನವಂಬರ್ ತಾ ೧೫ಕ್ಕೆ ನ್ಯೂಯಾರ್ಕ್ ಪಟ್ಟಣವ ನ್ನು ತಲಪಿ ಆಶ್ರಯಮಾಡಿಕೊಂಡು ಚೇತರಿಸಿಕೊಳ್ಳುತ್ತಿದ್ದಾರೆ.

ಮೈಸೂರ್ ಸಂಸ್ಥಾನದ ರೆಗ್ಯುಲರ್ ಪೊಲೀಸು

ಜಮಾದಾರ್ ದಫೇದಾರ್ರುಗಳ ಕಷ್ಟಕೋರತೆಗಳು

"ಇಲಾಖಾಭಿಮಾನಿ" ಎಂಬೊಬ್ಬ ಪತ್ರಿಕಾರರು ಬರೆಯುವು ದೇನೆಂದರೆ—ಅಯ್ಯಾ, ಈ ಮೈಸೂರು ಸಂಸ್ಥಾನದ ರೆಗ್ಯುಲರ್ ಪೊಲೀಸ್ ಫೋರ್ಸಿನಲ್ಲಿ ಇರತಕ್ಕ ಇನ್ಸ್‌ಪೆಕ್ಟರ್ ದರ್ಜೆಗೆ ಕೀಳ್ಪಟ್ಟ ಜಮಾದಾರ್ ಮತ್ತು ದಫೇದಾರ್ ಗ್ರೇಡಿನವರ ಸಂಕಟವನ್ನು ಕೇಳತಕ್ಕ ಪ್ರಭುಗಳು ಇದುವರೆವಿಗೂ ಇಲ್ಲವಾಗಿದೆ. ಪ್ರತಿ ವರುಷ ಇಲಾಖೆಯಲ್ಲಿಯೂ ತಿದ್ದುಪಾಟು ಮಾಡಲ್ಪಟ್ಟು ಇರುತ್ತೆ. ಕಳೆದ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ನಮ್ಮ ದಿವಾನರವರು ಮಾಡಿರುವ ಉಪನ್ಯಾಸದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಜಮಾದಾರ್ರುಗಳ ಗ್ರೇಡುಗಳ ವಿಚಾರವಾಗಿ ಬದಲಾವಣೆ ಮಾಡಿರುವದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಜಮಾದಾರ್ರ ಗ್ರೇಡುಗಳ ವಿಚಾರವಾಗಿ ಯಾವ ಬದಲಾವಣೆಯನ್ನೂ ಇದುವರೆವಿಗೆ ಮಾಡಿರುವದಿಲ್ಲ. ಜಮಾದಾರ್ರುಗಳಿಗೆ ಹಾಲಿ ಇರತಕ್ಕ ೩ ಗ್ರೇಡುಗಳನ್ನೂ ಮತ್ತು ಸಂಬಳವನ್ನೂ ಹಾಲಿ ದಿವಾನ್‌ಸಾಹೇಬರವರಾಗಿ ಇರುವ ಮೆ|| ಮಾಧವರಾಯರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾಗಿ ಇದ್ದಾಗ್ಗೆ ಏರ್ಪಾಡು ಮಾಡಿದ್ದರು. ಅದರಿಂದೀಚಗೆ ಬಂದ ಪ್ರಭುಗಳೆಲ್ಲರೂ ಪೊಲೀಸಿನವರು ಮಾಡತಕ್ಕ ಕೆಲಸಗಳನ್ನು ಹೆಚ್ಚು ಮಾಡುತ್ತಾ ಬರುತ್ತಾರೆಯೇ ಹೊರತು [illegible] ಕೆಲಸವನ್ನು ಮಾಡಿ [illegible] ದಿಲ್ಲ. ಪೊಲೀಸ್ ಜಮಾದಾರ್ರುಗಳಿಗೆ ೨೦—೩೫ ರೂಪಾಯಿಗಳ ಸಂಬಳವನ್ನು ಏರ್ಪಾಡು ಮಾಡಿದಾಗ ರೆವಿನ್ಯೂ ಶೇಕದಾರ್ರುಗಳಿಗೆ ೧೦ ರೂಪಾಯಿ ತಲುಪು ಮಾತ್ರ ಇತ್ತು. ಹಾಲಿ ರೆವಿನ್ಯೂ ಶೇಕದಾರ್ರುಗಳಿಗೆ [illegible] ರೂಪಾಯಿ ವರೆಗೆ ಸಂಬಳ ಮಾಡಿ[illegible] ರೂಪಾಯಿನಂತೆ ಕುದುರೆಯ ಅಲವೆನ್ಸ್ [illegible] ಕುದುರೆ ಅಲವೆನ್ಸ್ ವಿಚಾರ ಬಂದನ್ನೇ ಪ್ರಸ್ತಾಪ ಮಾಡಿದಾಗ್ಯೂ ಒಂದು ಹೋಬಳಿಯನ್ನು ಮಾತ್ರ ನೋಡತಕ್ಕ ಶೇಕದಾರ್ರುಗಳಿಗೆ ೧೦ ರೂಪಾಯಿ [illegible] ನಮ್ಮ ತಾಲ್ಲೂಕನ್ನು ನೋಡತಕ್ಕ ಜಮಾದಾರ್ರುಗಳಿಗೆ [illegible] ರೂಪಾಯಿ ಮಾತ್ರವೂ ಅಲವೆನ್ಸ್ ಕೊಡುವದೂ, ಶೇಕದಾರ್ರಂತೆ ಒಂದು ಹೋಬಳಿಯ ಗ್ರಾಮಗಳನ್ನೆಲ್ಲಾ ಪ್ರತಿ ತಿಂಗಳೂ ತಪ್ಪದೆ ಗಸ್ತು ಮಾಡಬೇಕಾದ ದಫೇದಾರ್ರುಗಳಿಗೆ ಅಲವೆನ್ಸ್ ಎಂಬುವದೇ ಇಲ್ಲದೆ ಇರುವದೂ ಇವೆರಡೂ ಎಷ್ಟರಮಟ್ಟಿಗೆ ನ್ಯಾಯವಾಗಿ ಇದೆಯೋ ವಾಚಕರೇ ಯೋಚಿಸಿ. ಶೇಕದಾರ್ರುಗಳು ಏನು ಕೆಲಸ ಬಿದ್ದಾಗ್ಯೂ ತಮ್ಮ ಹೋಬಳಿಯಲ್ಲಿ ಮಾಡಬೇಕಾಗುತ್ತದೆಯೋ ವಿನಹ ಬಾಹ್ಯ ಹೋಬಳಿ ಅಥವಾ ತಾಲ್ಲೂಕಿಗೆ ಸ್ಪೆಷಲ್ ಡ್ಯೂಟಿಗೆ ಹೋಗತಕ್ಕಷ್ಟು ಪ್ರಯೋಜನ ಇಲ್ಲ. ಈ ಸಾಗು ಜಮಾದಾರ್ ದಫೇದಾರರುಗಳೋ ಬೇರೆ ತಾಲ್ಲೂಕ್ ಡಿಸ್ಟ್ರಿಕ್ಟ್‌ಗಳ ವಿಗರ [illegible] ಸಂಸ್ಥಾನದಿಂದ ಆಚೆಗೂ ಹೋಗಿ ಕೆಲಸ ಮಾಡಬೇಕೆಂದು ಬರತಕ್ಕ ಸಂಭವವು ಪದೇ ಪದೇ ಒದಗುತ್ತದೆ. ಇಂಥದ್ದರಲ್ಲಿ ಜಮಾದಾರ್ರುಗಳಿಗೆ ಮಾಹೆಯಾನಾ ಎಂಟೇ ರೂಪಾಯಿ ಅಲವೆನ್ಸು ಕೊಟ್ಟು ಶೇಕದಾರ್ರುಗಳಿಗೆ ೧೦ ರೂಪಾಯಿ ಕೊಡತಕ್ಕದ್ದು ಯಾವ ನ್ಯಾಯ? [illegible] ರೂಪಾಯಿ ಅಲವೆನ್ಸ್ ತೆಗೆದುಕೊಳ್ಳುವ ಒಬ್ಬ ಇನ್ಸ್‌ಪೆಕ್ಟರಿನಂತೆ ಒಬ್ಬ ಜಮಾದಾರನು ಪ್ರತಿ ತಿಂಗಳಲ್ಲಿಯೂ ಎಲ್ಲಾ ತಾಲ್ಲೂಕಿನ ಎಲ್ಲಾ ಸಬ್ ಸ್ಟೇಷನ್‌ಗಳನ್ನೂ ಮತ್ತು ಔಟ್ ಪೋಸ್ಟ್‌ಗಳನ್ನೂ ಸುತ್ತಿಕೊಂಡು ಬಾರದೆ ಇದ್ದರೆ ಮತ್ತು ದೊಡ್ಡ ಅಧಿಕಾರಿಗಳು ಬಂದಾಗ ತಾಲ್ಲೂಕ್ ಸರಹದ್ದು ಹಿಂದ್ಬಿಡುವವರೆಗೂ ಎಸ್ಕಾರ್ಟ್ ಮಾಡದೆ ಇದ್ದರೆ ಕುದುರೆ ಅಲವೆನ್ಸನ್ನು ವಿಲ್ಲಿಸಿಬಿಡುತ್ತಾರೆ. ಪ್ರಾಯಶಃ ಶೇಕದಾರ್ರುಗಳಿಗಿಂತಲೂ ಜಮಾದಾರ್ರುಗಳು ಉತ್ತಮವಾದ ಕುದುರೆ, ಜೀನು, ಮುಂತಾದವುಗಳನ್ನು ಇಟ್ಟುಕೊಂಡು ಸರಿಯಾದ ಸವಾರರಾಗಿ ಇರತಕ್ಕ ವಿಚಾರ ಗವರ್ನಮೆಂಟಿನವರಿಗೆ ವೇದ್ಯವೇ ಇರಬಹುದು. ಹಾಗು ಪೊಲೀಸಿನವರಿಗೆ ಜನಗಳಿಂದ ವೃಥಾ ಅಪ್ರೀತಿಯನ್ನು ಹೊತ್ತುಕೊಳ್ಳುವದು ವಿನಹ ಇನ್ನಾವ ಸುಖವೂ ಸಿಕ್ಕುವದಿಲ್ಲವೆಂದು ಬರೆಯಬಹುದು. ಇವರ ಕೆಲಸಕ್ಕೆ ಕಾಲ ಮಾತ್ರ ನಿಗದಿ ಇಲ್ಲ.

ಯಾವ ತಾಲ್ಲೂಕಿನಲ್ಲಿಯಾದರೂ ಬಂದ ನೋಡದ್ದಾ ನಡೆದರೆ ಡಿಸ್ಟ್ರಿಕ್ಟಿನಲ್ಲಿ ಎಲ್ಲಿಯಾದರೂ ಇರತಕ್ಕ ಪೊಲೀಸ್ ಆಫೀಸರನ್ನೇ ಸ್ಪೆಷಲ್ ಡ್ಯೂಟಿಗೆ ನೇಮಿಸಿ, ಅವರ ಯಾವ ಅನಿವಾರ್ಯವನ್ನೂ ವಿಚಾರಿಸದೆ, ಕೊಂಚ ಸಾವಕಾಶ ಮಾಡಿದರೆ ತ್ವರಿತವಾದ ದಂಡನೆ ವಿಧಿಸುತ್ತಾರಲ್ಲಾ. ಸಂದರ್ಭಾನುಸಾರ ನೋಡದ್ದಾಗಳಲ್ಲಿ ಜಮಾದಾರ್ ಅಥವಾ ದಫೇದಾರರು ಸಾಹೇಬರು ಕೊಂಚ ಸಸ್ತಿ ತಿಳಿಯಲಿಕ್ಕೆ ವಗೈರೆ ಕಾರಣಗಳಿಂದ [illegible] ಮಾಡಿದ್ದಾದರೆ ಮ್ಯಾಜಿಸ್ಟ್ರೇಟರು ಜಡ್ಜಮೆಂಟಿನಲ್ಲಿ ಬರೆಯತಕ್ಕ ರಿಮಾರ್ಕ್ಸುಗಳಿಗೆ ತಲೆಕೊಡಬೇಕು. ಅನೇಕ ನೋಡದ್ದಾಗಳಲ್ಲಿ ಪ್ರೊಸಿಕ್ಯೂಷನ್ ಮಾಡಿದರೂ ಮ್ಯಾಜಿಸ್ಟ್ರೇಟರು ಬ್ಬೀ ರಿಮಾರ್ಕ್ಸನ್ನು ಬರೆಯತಕ್ಕದ್ದು ಮತ್ತು ಇಲಾಖಾ ಅಧಿಕಾರಿಗಳು ಕಣ್ಣುಬಿಟ್ಟು ನೋಡಿ ಇನಾಮ ಕೊಡತಕ್ಕ ಗೆ ಕನಿಷ್ಟ ಒಂದು ಗುಡ್ ಮಾರ್ಕ್ ಸಹಾ ಕೊಡತಕ್ಕದ್ದು ಬಿಟ್ಟು [illegible] ದಾಗ್ಯೂ ಜುಜುಬಿ ಒಂದು ವೋಬದ್ದನಾದಲ್ಲಿ ಬಹಳ ಅಲ್ಪವಾದ ಲೋಪ ಕಂಡುಬಂದಲ್ಲಿ ಆಗ ಈ ಪೊಲೀಸಿನವರ ತಲೆಯನ್ನು ತೆಗೆಯುವದರಲ್ಲಿ ಎಲ್ಲಾ ಆಫೀಸರುಗಳೂ ಬಹಳ ಹುಷಾರಿ ಗಿರುತ್ತಾರೆ. ಇಷ್ಟಲ್ಲ [illegible] ಗಳನ್ನು ತಪ್ಪಿಸಿಕೊಂಡು ಒಳ್ಳೇ ಹೆಸರನ್ನು ಹಡೆಯಬೇಕಾದರೆ ಪ್ರಾಂಕ್ಮನಲ್ಲಿ ರೇ [illegible] ವನ್ನು ಪಡೆದಿರಬೇಕು ಎಷ್ಟು ಕಷ್ಟವಿದ್ದಾಗ್ಯೂ ಹೊಟ್ಟೆ ತುಂಬಾ ಉಂಡು ಕಷ್ಟ ಪಡೆಯಲೇನೆ ನಡೆ ಕಷ್ಟಕ್ಕೆ ತಕ್ಕಂತೆ ಲೆಂಚ್ಚಿಗೆ ನ ಕರಾ ಸಾಲದು.

ಈ ಇಲಾಖೆಯು ನ್ಯೂಕೆಮಾನೇಜರನ್ನು ತಯಾರ್‌ಮಾಡುವದಕ್ಕೋಸ್ಕರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಪೊಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಓದಿ ಪ್ಯಾಸ್ ಮಾಡಿ ತಾಲ್ಲೂಕುಗಳಲ್ಲಿ ಅನೇಕ ನೋಡದ್ದಾಗಳನ್ನು ಹಿಡಿದು ಒಳ್ಳೇ ಹೆಸರನ್ನು ಸಂಪಾದಿಸಿದಾಗ್ಯೂ ಈಗಿನ ಧರ್ಮಾನುಸಾರ [illegible] ನಡವತಕ್ಕ ಸಾಧ್ಯವಿಲ್ಲವಾದರೆ ಯಾವ ಪ್ರಯೋಜನವೂ ಇಲ್ಲದೆ, ಯಾವ ಯೋಗ್ಯತೆಯೂ ಇಲ್ಲದಿದ್ದರೂ ಕೆಳ[illegible] ರಪ್ ಮೂಲಕ ಏಕಾ ಏಕಿ ಮೇಲ್ಪಟ್ಟ ಅಧಿಕಾರಕ್ಕೆ ಬರತಕ್ಕ [illegible] ಬರ ತಾಕೀದಾರಿ ಮಾಡಬೇಕಾಗು[illegible] ಅಂಥವರ ತಾಕೀದಾರಿ ಮಾಡುವದರಿಂದ ಆಗತಕ್ಕ ಸಂಕಟವನ್ನು ಹೇಳಲಾಗುವದಿಲ್ಲ. [illegible] ಕೆಲಸವು ಸಾತರಾಂ ತಿಳಿಯುವದಿಲ್ಲ. [illegible] ಬೇಧಾರರನ್ನು ಕೇಳಿ ತಿಳಿದುಕೊಳ್ಳುವದು ಕೇವಲ ಅವಮಾನಕರವಾದ್ದೆಂಬ ಅಭಿಪ್ರಾಯದಿಂದ ಅವರನ್ನು ಹೊಣೆಗಾರಿಯದೂ, ಅಯೋಗ್ಯರೆಂದು ಹೇಳುವದೂ, "ಲಘಿಕ ಪ್ರಸಂಗ" ಎಂದು ಬೋಲ್ಪಟ್ಟವರಲ್ಲಿ ದೋಷಾರೋಪಣೆಗಳನ್ನು ಮಾಡುವದೇ ಅವರು ಇವರ ಮಾತನ್ನೇ ಕೇಳಬೇಕೆಂದು ನಂಬಿ ಬಂಬನೆ ಮಾಡುವದು, ಅದರಿಂದ ಸವಲ್ಲ.

ನಮ್ಮ ಮೆ|| ಮಾಧವರಾಯರು ಇವರ ಕಡೆಗೆ ಬಂದೀಚಗೆ ಅನೇಕ ಬದಲಾವಣೆಗಳನ್ನು ಮಾಡಿಲ್ಲವೇ? ಇಂಥಾದ್ದರಲ್ಲಿ ಪದೇ ಪದೇ ಗಲಾಟೆಗಳಿಗೆ ಸಿಕ್ಕಿ ನರಳುವ ಈ ಪೊಲೀಸ್ ಇಲಾಖೆಯ ಜಮಾದಾರ್, ದಫೇದಾರ್ ವಗೈರೆ ಎಲ್ಲಾ ನೌಕರರ ಸಂಬಳವನ್ನು ಹೆಚ್ಚಿಸತಕ್ಕ ವಿಚಾರದಲ್ಲಿ ಇನ್ನೂ ತಮ್ಮ ಚಿತ್ತವನ್ನು ಹರಿಸಲಿಲ್ಲವಲ್ಲ! ಜಮಾದಾರ್ ದಫೇದಾರ್ರುಗಳಿಗೆ ಸಂಬಳವನ್ನು ಹೆಚ್ಚುಮಾಡಿ ಜಮಾದಾರ್ರುಗಳ ಕುದುರೆ ಅಲವೆನ್ಸನ್ನು ಆಫೀಸರುಗಳ [illegible] ರೂಪಾಯಿನಂತೆಯೂ ದಫೇದಾರ್ರುಗಳಿಗೆ [illegible] ರೂಪಾಯಿ ನಂತೆಯೂ ಕೊಡುವ ಹಾಗೆ [illegible] ಇಲಾಖೆಯನ್ನೇ ನಂಬಿಕೊಂಡು ಇರ[illegible] ಕಷ್ಟವು ಕೊಂಚ ಕಮ್ಮಿಯಾದೀತು!

ಇಂಡಿಯಾ ದೇಶದ ವೃತ್ತಾಂತಗಳು

ಭೂಪಾಲ್ ಸಂಸ್ಥಾನದ [illegible] ಬೇಗಂ ರಾಣಿಯವರು ಆಗ್ರಾ ಪಟ್ಟಣದಲ್ಲಿ ಮಹಮದೀಯರ ಕಾಲೇಜೊಂದನ್ನು ಕಟ್ಟಿಸಿಡತಕ್ಕ ಬಗ್ಗೆ ವ್ಯವಸ್ಥೆಯನ್ನು ಮಾಡಿದರು.

❖❖❖❖

ಕಳೆದ ಸೋಮವಾರ ರಾತ್ರಿ ಕಲ್ಕತ್ತಾ ಪಟ್ಟಣದ ಬಳಿ ಒಂದು ಗ್ರಾಮಕ್ಕೆ ಬೆಂಕಿ ಬಿದ್ದು ಕಾಲೀ ಜನರು ವಾಸವಾದ ಸುಮಾರು ೩೦೦ ಜೋಪಡಿಗಳು ಸಂಪೂರ್ಣವಾಗಿ ಸುಟ್ಟುಹೋದವು.

❖❖❖❖

ಬರ್ದ್ವಾನ್ ಸಂಸ್ಥಾನದ ಮಹಾರಾಜಾಧಿರಾಜರವರು ಪರಿವಾರ ಸಹಿತ ವಿಲಾಯಿತಿಯ ಪ್ರಯಾಣವನ್ನು ಪ್ರಾರಂಭಿಸಿಕೊಂಡು ಕಳೆದ ಮಂಗಳವಾರ ಬಾಂಬಾಯಿನಿಂದ ಹೊರಟರು [illegible]

❖❖❖❖

ಕಳೆದ ಶನಿವಾರ [illegible] ಒಬ್ಬನೇ ಒಂದು ಮುತ್ತು ಹೊಂದಾಗಿ [illegible] ರೂಪಾಯಿಗೆ ಬಿಕರಿ [illegible] ಭಾರಿ ಮುತ್ತು ಇದುವರೆಗೆ ಒಂದು ಮುತ್ತಿಗೆ ಯಾವ [illegible] ಕೊಟ್ಟಿರಲಿಲ್ಲ.

❖❖❖❖

ಕಳೆದ ಸೆಪ್ಟೆಂಬರ್ [illegible] ಪತ್ರಿಕೆ [illegible] ರೂಪಾಯಿನ ಚಿನ್ನ ಬೆಳ್ಳಿಯು ಹಿಂದೂಸ್ಥಾನಕ್ಕೆ ಬಂದಿದೆ. ಆದರೆ ಕಳೆದ ಆರು ತಿಂಗಳಲ್ಲಿ [illegible] ಚಿನ್ನ ಬೆಳ್ಳಿ [illegible] ಹೋಗಿದೆ.

❖❖❖❖

ಉತ್ತರ ದೇಶದಲ್ಲಿ ಕಳೆದ [illegible] ಇನ್ನೂ [illegible] ಜನರು ಕ್ಷಾಮಪೀಡಿತರಾಗಿದ್ದಾರೆ. ಇವರೆಲ್ಲಾ ಬಂಗಾಳ ಅಧಿಪತ್ಯಕ್ಕೆ ಸೇರಿದವರೆಂದು ತಿಳಿಯುವುದು. ಪೂರ್ವ ಬಂಗಾಳದಲ್ಲೂ ಇನ್ನೂ [illegible] ಜನರು ಸರ್ಕಾರದವರ ರಿಲೀಫ್ ಕಾಮಗಾರಿಗಳಲ್ಲಿ ಜೀವನವಾಡುತ್ತಿದ್ದರು.

❖❖❖❖

ಕಳೆದ ವಾರ ಹಿಂದೂಸ್ಥಾನದಲ್ಲಿ [illegible] ಜನರು ಪ್ಲೇಗ್ ಉಪದ್ರವದಲ್ಲಿ ಮೃತಪಟ್ಟರು. ಇದು ವಿವರ—ಬೊಂಬಾಯಿ ಅಧಿಪತ್ಯ [illegible], ಬಂಗಾಳ [illegible], ಮದ್ರಾಸ್ [illegible], ಸಂಯುಕ್ತ ಅಧಿಪತ್ಯಗಳು [illegible], ಇತರ ಪ್ರಾಂತ್ಯಗಳು [illegible] ಮಧ್ಯ ಇಂಡಿಯಾ [illegible], ಪಂಜಾಬ್ ಅಧಿಪತ್ಯ [illegible]

❖❖❖❖

ದೆಹಲಿ ಪಟ್ಟಣದಲ್ಲಿ ಆಸ್ಪತ್ರೆಯ ಎದುರಿಗೆ ಎರಡು ಗೂಳಿಗಳು ಕಳೆದ ವಾರ ಜಗಳವಾಡುತ್ತಿದ್ದಾಗ ಅಲ್ಲಿ ಒಂದು ಮ್ಯಾನಾ [illegible] ಕೊಂಡು ಆಸ್ಪತ್ರೆಯಿಂದ ಒಬ್ಬ ರೋಗಿಯನ್ನು ಹೊತ್ತುತರುತ್ತಿದ್ದರು. ಗೂಳಿಗಳು ಆ ಮ್ಯಾನಾದ ಮೇಲೆ ನುಗ್ಗಿ ಹೊತ್ತಿದ್ದವರನ್ನು ತಿವಿದು ಕೆಡವಿ ಗಾಯಮಾಡಿದವು. ಒಬ್ಬ ಓಡಲಾರದೆ ಕಷ್ಟ ಈ ಗಾಬರಿಗೆ ಒಳಗಿದ್ದ ರೋಗಿಯು ಕೆಳಕ್ಕೆ ಬಿದ್ದು ಪ್ರಾಣಕಳೆದುಕೊಂಡನು.

❖❖❖❖

ತಿರುವಾಂಕೂರು (ಟ್ರಾವಂಕೂರ್) ಸಂಸ್ಥಾನದ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರ ದಿವಾನ್‌ರವರ ಪರಿವಾರ ಸಹಿತ ಕಳೆದ ಗುರುವಾರ ಬಿಳಿಗ್ಗೆ ಗವರ್ನರವರ [illegible] ಒಟ್ಟಾಗಿ ದರ್ಬಾರಿಗೆ ಬಿದರು. ಆ ದಿನ ಮಧ್ಯಾಹ್ನ ಒಂದು ಗಂಟೆಗೆ ಗವರ್ನರವರು [illegible] ಮಾಡಿಕೊಂಡು ಬಿದರು. ಗವರ್ನರವರು [illegible] ಮಹಾರಾಜರು ಈ [illegible] ಮಾಡಿಸಿದರು.

❖❖❖❖

[illegible] ಸಂಸ್ಥಾನದ [illegible] ಗ್ರಾಮಗಳಲ್ಲಿರುವ ಎಲ್ಲಾ ಸ್ತ್ರೀ ಕೆಲಸಗಾರರು [illegible] ಶಿವಾಜಿಯರ [illegible] ಅವರ ಮೊಕದ್ದಮೆಗಳನ್ನು [illegible] ಗಟ್ಟಿ ಗವಾದ ಚುಚ್ಚಿಕ್ಕೆ ಸಾರ್ವಜನಿಕ [illegible] ಕೆಂದು ಮದರಾಸ್ ಮಾಸಿಕ [illegible] ಅರ್ಕಾಟ್ ರಾಜಕುಮಾರರು ವೈಸ್‌ರಾಯ್ ಪ್ರಭುಗಳ ಮೂಲಕ [illegible] ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಂಡಿದ್ದಾರೆ.

ಉತ್ತರ ಗುರುಪಟ್ಟಿನ್ನಿಗೆ ಸೇರಿದ ರಾಜಪಾಡ ಎಂಬ ಗ್ರಾಮದ ಮಹಮದೀಯರ ಪೆಕ್ಕಿರ ಮನೆಗಳಿಗೆ ಬೆಂಕಿಬಿದ್ದು ಸುಮಾರು ಮನೆಗಳು ಸುಟ್ಟುಹೋಗಿ ಈ ಸಂಸಾರದವರು ಸರ್ವಸ್ವವನ್ನೂ ಕಳೆದುಕೊಂಡು ಜೀವನಕ್ಕೆ [illegible] ಕಷ್ಟಪಡುತ್ತಿದ್ದದ್ದನ್ನು ಅಲ್ಲಿನ [illegible] ರು ನೋಡಿ ಸುಮಾರು [illegible] ನಾವಿರ ರೂಪಾಯಿಗಳ ಧನ ಸಂಗ್ರಹ ಎತ್ತಿ ಅವರಿಗೆಲ್ಲಾ ಹಂಚಿ ಮನೆಗಳನ್ನು ಕಟ್ಟಿಸಿಕೊಳ್ಳಿರೆಂದು ಪ್ರಕಟವಾಗಿದೆ.

❖❖❖❖

ಗತಿಸಿದ ಅಯೋಧ್ಯಾ ಮಹಾರಾಜರವರು ೧೯೦೧ನೆ ಸವಂಬರ್ ತಿಂಗಳಲ್ಲೇ ಬರೆದಿಟ್ಟರುವ ಉಯಿಲು ಈಗ ಸಿಕ್ಕಿತು. ಅದರಲ್ಲಿ ರು ತನ್ನ ಹಿರಿಯ ಪತ್ನಿಯವರಿಗೆ ತಮ್ಮ ಆಸ್ತಿಯನ್ನೆಲ್ಲಾ ಬಿಟ್ಟು, ಕಿರಿಯ ಮಹಾರಾಣಿಗೆ ಜೀವನಾಂಶ ಕಲ್ಪಿಸಬೇಕೆಂತಲೂ, ಯಾರಾದರೂ ದತ್ತು ಮಾಡಿಕೊಂಡು ಆಸ್ತಿಯನ್ನು ರಾಧಿಸಬಾರದೆಂತಲೂ ಗವರ್ನಮೆಂಟಿನವರು ಆಕೆಯ ಸಹಾಯಕ್ಕೆ ಬೇಕಾಗುವ ಅಧಿಕಾರಿಯನ್ನು ನೇಮಿಸಿಕೊಡಬೇಕೆಂತಲೂ ಬರೆದಿರುತ್ತಾರೆ.

❖❖❖❖

ಕಲ್ಕತ್ತಾ ಪಟ್ಟಣದಲ್ಲಿ ಭಿಕ್ಷುಕರ ಕಾಟ ಹೆಚ್ಚಾಗಿದ್ದು ಆದರೂ ಭಿಕ್ಷುಕರು ಅಷ್ಟೇನೂ ಬಡವರಾಗಿಲ್ಲ. ಪೊಲೀಸಿನವರು ಕಳೆದವಾರ ಒಂದೇ ದಿನ [illegible] ಭಿಕ್ಷುಕರನ್ನು ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ವಿಚಾರಿಸಿದಲ್ಲಿ ಪ್ರತಿ ಒಬ್ಬನ ಹತ್ತಿರದಲ್ಲೂ ೧೦ ರೂಪಾಯಿ ಹಣವು ಇದ್ದು ಆ ಹಣವು ತನಗೆ ಸಾಲದೆ ಎಂದು ಗೊತ್ತಾಯಿತು. ಆ ಸ್ವಕೀಯರಿಗೆ ತಲಾ ಎಂಟು ದಿನಗಳಂತೆ ಕಠಿಣ ಸಜಾವನ್ನೂ, ಉಳಿದವರಿಗೆ ಒಂದು ದಿನದ ಕಠಿಣ ಸಜಾವನ್ನೂ ವಿಧಿಸಿದರು.

❖❖❖❖

ಕಲ್ಕತ್ತಾ ಪಟ್ಟಣದ ಅನೇಕ ಭಾಗಗಳಲ್ಲಿ ಕೆಟ್ಟ ಗುಂಡಿಗಳು ಅನೇಕ ಇರುವದರಿಂದ ಅಲ್ಲಿನ ಸೊಳ್ಳೆಗಳು ಬೆಳೆದು ಪ್ರಜೆಗಳನ್ನು ಹಿಂಸೆ ಪಡಿಸುತ್ತವೆ. ಈ ಕಷ್ಟವನ್ನು ಪರಿಹರಿಸುವುದಕ್ಕಾಗಿ ಅಲ್ಲಿನ ಹೆಲ್ತ್ ಆಫೀಸರು ತಿಂಗಳಿಗೆ [illegible] ರೂಪಾಯಿ ಸಂಬಳದ ಒಬ್ಬ ಇನ್ಸ್‌ಪೆಕ್ಟರನ್ನು ನೇಮಿಸಿ ಅಂಥಾ ಕೆಟ್ಟ ಗುಂಡಿಗಳ ವಿವರವನ್ನು ಅವರಿಂದ ಪಡೆಯುತ್ತಿದ್ದಾರೆ. ಇದುವರೆಗೆ ಪರ್ವೇಕ್ಷಣೆ ಆದ ಭಾಗದ ಪ್ರಜೆಗಳು ಸೊಳ್ಳೆಗಳ ಕಾಟ ಕಡಿಮೆಯಾಗಿರುವುದೆಂದು ಹೆಲ್ತ್ ಆಫೀಸರವರಿಗೆ ತಿಳಿಸಿರುವರು.

❖❖❖❖

ಪ್ಲೇಗ್ ರೋಗ ತಗಲದಂತೆ ಡಾಕ್ಟರ್ ಹಾಫ್‌ಕೀನರವರು ಬೊಂಬಾಯಿಯಲ್ಲಿ ಒಂದು ತರಹ ಚುಚ್ಚುಮದ್ದಿನ ಹಾಲನ್ನು ತಯಾರ್‌ಮಾಡುತ್ತಿದ್ದುದು ನಮ್ಮ ವಾಚಕರಲ್ಲಿ ಅನೇಕರಿಗೆ ಅನುಭವಪೂರ್ವಕವಾಗಿ ಗೊತ್ತಿರಬಹುದು. [illegible] ಒಂದು ಚುಚ್ಚುಮದ್ದಿನ ಹಾಲನ್ನು ತಯಾರ್‌ಮಾಡಿರುತ್ತಾರೆ. ಈ ಹಾಲನ್ನು [illegible] ಜೈಲ್‌ಖಾನೆಯಲ್ಲಿರುವ ಬಂದೀಖಾನೆಗಳಿಗೆ ಚುಚ್ಚಿದ್ದರಲ್ಲಿ ಅದರ ಫಲವು ತುಂಬಾ ತೃಪ್ತಿಕರವಾಗಿತ್ತೆಂತಲೂ, ಚುಚ್ಚಿಸಿಕೊಂಡವರಲ್ಲಿ ಸತ್ತವರು ಒಬ್ಬರೂ [illegible] ಆ ಉಪದ್ರವು ಆವರ ಆನಂತರ [illegible] ತಿಳಿಸುತ್ತಾರೆ.

❖❖❖❖

ಪ್ಲೇಗ್ ಉಪದ್ರವನ್ನು ಅಡಗಿಸಬೇಕೆಂದು ರಂಗೂನ್ ಪಟ್ಟಣದ ಅಧಿಕಾರಿಗಳು ಕಳೆದ ವಾರ ಕೆಲವು ಕಠಿಣವಾದ ಕಾನೂನುಗಳನ್ನು ಮಾಡಿ ಪ್ರಕಟಿಸಿದರು. ಅದನ್ನು ನೋಡಿ ಆ ಕಾನೂನನ್ನು ಅನುಸರಿಸಿ ತಂದರೆ ಪ್ರಜೆಗಳಿಗೆಲ್ಲಾ ನಾನಾ ತರದ ಕಷ್ಟ ನಷ್ಟಗಳು ಸಂಭವಿಸುವುದೆಂತಲೂ ಜಾರಿಗೆ ತರಕೂಡದೆಂತಲೂ ಸುಮಾರು [illegible] ಪ್ರಜೆಗಳು ಸೇರಿ ಸಭೆಯಲ್ಲಿ ತೀರ್ಮಾನ ಮಾಡಿ ಗವರ್ನಮೆಂಟಿಗೆ ತಿಳಿಸುತ್ತಾರೆ. ಈ ಸಭೆಗೆ ಆ ಪಟ್ಟಣದಲ್ಲಿರುವ ಬರ್ಮೀಯರು, ಚೀಣರು, ಪಾರ್ಸಿಗಳು, ಕ್ರೈಸ್ತರು, ಚೆಟ್ಟಿಗಳು, ಪಾರ್ಸಿಗಳು, ಮಹಮದೀಯರು, ಹಿಂದುಗಳು, ಇವೇ ಮೊದಲಾದ ಕೋಮುಗಳ ಪ್ರತಿನಿಧಿಗಳು ಹೋಗಿದ್ದರು.

❖❖❖❖

ಲಾಹೋರ್ ಪಟ್ಟಣದ ಮುಸಲ್ಮಾನ್ ಪ್ರಜೆಗಳು ತಮ್ಮ ಜಾತಿಗಳ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಸ್ಕೂಲು, ಪಾಠಶಾಲೆಗಳು, ಅನಾಥಾಲಯ, ವಿದ್ಯಾರ್ಥಿ ನಿಲಯ, ಈ ಮೊದಲಾದವನ್ನು ಏರ್ಪಡಿಸುತ್ತಾ ಬಂದಿದ್ದಾರೆ. ಈ ಏರ್ಪಾಡಿಗೆ ಅಲ್ಲಿನ ಸಿಸ್ಟ ಅಮಾರವರು ತಿಂಗಳಿಗೆ [illegible] ರೂಪಾಯಿನಂತೆ ಪ್ರನ್ಯಸದಾಯ ಕೊಡುತ್ತಿರುವರು. ಈಗ ಅಲ್ಲಿನ ಮಹಮದೀಯ ಮುಖಂಡರು [illegible] ಸಂಸ್ಥೆಯ ತಮಗೆ ತಮ್ಮ ಹುಡುಗರು ಓದುವದಕ್ಕೆ ಅನುಕೂಲಿಸುವಂಥಾ ಒಂದು ಕಾಲೇಜನ್ನು ಕಟ್ಟಬೇಕೆಂದು ಗೊತ್ತುಮಾಡಿದ್ದಾರೆ. ಈ ಕಟ್ಟಡಕ್ಕೆ ಒಂದೂವರೆ ಲಕ್ಷ ರೂಪಾಯಿ ಬೇಕಾಗುತ್ತೆ. ಅಮಾರರ ಕೈಯಿಂದಲೇ ಈ ವಿದ್ಯಾಲಯಕ್ಕೆ ಅಸ್ತಿಭಾರವನ್ನು ಹಾಕಬೇಕೆಂದು ಕೇಳಿಕೊಂಡಿದ್ದಾರೆ.

❖❖❖❖

ಪಶ್ಚಿಮ ಆಸ್ಟ್ರೇಲಿಯಾ ಎಂಬ ಇಂಗ್ಲೀಷ್ ಸ್ವಾಸ್ಥ್ಯದಿಂದ ಹಿಂದೂಸ್ಥಾನಕ್ಕೆ [illegible] ಬಂದಿದ್ದ ಒಬ್ಬನು ಕಲ್ಕತ್ತಾ ಪಟ್ಟಣಕ್ಕೆ ಬಂದಿದ್ದಾನೆ. ಆ ಗವರ್ನಮೆಂಟಿನವರು [illegible] ಒಂಟೆಗಳನ್ನು ಹಿಂದೂಸ್ಥಾನದಿಂದ ಕೊಂಡು ತೆಗೆದುಕೊಂಡು ಬರುವಂತೆ ಈತನಿಗೆ ಅಪ್ಪಣೆ ಕೊಟ್ಟಿರುತ್ತಾರೆ. ಒಂದೊಂದು ಒಂಟೆಗೆ ಅವರು ಆತನಿಗೆ [illegible] ರೂಪಾಯಿ ಕೊಡ ಪ್ರದಾನಿಸುವರು. ಈಗ ಈತನು ಸುಮಾರು [illegible] ಒಂಟೆಗಳನ್ನು ಕೊಂಡು ಜನವರಿ ತಿಂಗಳಿಗೆ ಹಡಗಿನ ಮೇಲೆ ಆಸ್ಟ್ರೇಲಿಯಾಕ್ಕೆ ಕಳುಹಿಸಬೇಕೆಂದು ಹೋಗುವನು. ದೇಶದಲ್ಲಿ ಒಂಟೆಗಳು ಬಹಳ ಸವಳತ್ತಿಗೆ ಇದೆ. [illegible] ರೂಪಾಯಿಗೆ ಒಂದರಂತೆ ಸಿಕ್ಕುತ್ತವೆಯಾದ್ದರಿಂದ ಈ ವ್ಯಾಪಾರದಲ್ಲಿ ಆತನಿಗೆ ತುಂಬಾ ಸಂಪಾದನೆಯಾಗಬಹುದೆನ್ನುವುದಕ್ಕೆ ಸಂಶಯವಿಲ್ಲ.

[illegible]ಅಮೇರಿಕದಲ್ಲಿ ವಿಮಾನ (ಆಕಾಶಬುಟ್ಟಿ)ಗಳಲ್ಲಿ ಸಂಚಾರ ಮಾ[illegible]ವ ಒಂದು ಸಂಘವಿರುವುದು. ಈ ಸಂಘದ ಮೆಂಬರುಗಳ ಪೈಕಿ [illegible] ಮಿ॥ ಜೆ. ಡಬ್ಲಿಯು ಪ್ರೈಸ್ ಎಂಬಾತನು ಒಂದು ಆಕಾ[illegible] ಈಗ ಸಿಂಗಪುರದಿಂದ ರಂಗೂನ ಪಟ್ಟಣಕ್ಕೆ ಬಂದಿ[illegible] ಈತನು ಆ ಆಕಾಶಬುಟ್ಟಿಯಲ್ಲಿ ಕುಳಿತು ಅಂತರಿಕ್ಷದಲ್ಲಿ [illegible] ಸಾವಿರ ಅಡಿ ಮೇಲಕ್ಕೆ ಹೋಗಿ ಸಂಚಾರ ಮಾಡಿಕೊಂಡು [illegible]ವನು. ಈ ವಾರ ಈತನ ಸಾಹಸವನ್ನು ಅಲ್ಲಿನ ಪ್ರಜೆ[illegible] ನೋಡುವವರಾಗಿದ್ದಾರೆ. ಮಿ॥ ಪ್ರೈಸ್ ಎಂಬಾತನು ಇದುವರೆಗೆ [illegible] ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬಂದು ಈಗ ಏಳನೆಯ [illegible]ಪ್ರದಕ್ಷಿಣವನ್ನು ಮಾಡುತ್ತಿರುವನೆಂತಲೂ ಇದುವರೆಗೆ ೧,೦೦೦ [illegible] ವಿಮಾನದಲ್ಲಿ ಕುಳಿತು ಅಂತರಿಕ್ಷಕ್ಕೆ ಹೋಗಿ ಬಂದು ತನ್ನ [illegible] ಚಮತ್ಕಾರಗಳನ್ನು ಪ್ರದರ್ಶನಮಾಡಿರುತ್ತಾನೆಂತಲೂ ತಿಳಿದು [illegible]ದೆ.

****

ರಂಗೂನ ಪಟ್ಟಣದಲ್ಲಿ [illegible]ವರು ಬರ್ಮಾದವರೂ ಪ್ರಸಿದ್ಧ [illegible] ಚಟ್ಟಗಾರನೂ [illegible] ಎಂಬ [illegible] ಹೋಗಿ ಒಬ್ಬ ಸಾಹುಕಾರನ ಮನೆಯನ್ನು ನುಗ್ಗಿ ಅವನನ್ನು [illegible] ಕಟ್ಟಿಹಾಕಿ [illegible] ಕೊಡದಿದ್ದರೆ ಕೊಂದುಬಿಡುತ್ತೇ[illegible] ಆವನ ಬಳಿ ಇದ್ದ ಸುಮಾರು ೧೫,೦೦೦ ರೂಪಾಯಿ [illegible] ಸಾಮಾನುಗಳನ್ನು ಅಪಹರಿಸಿಕೊಂಡು, ಹೋಗುವಾಗ್ಗೆ ಒಂ[illegible] ಬಂದೂಕನ್ನು ಹಾರಿಸಿ, ಸಾಹುಕಾರನನ್ನು ಮನೆಯಿಂದ ೨೦೦ [illegible]ದೂರಕ್ಕೆ ಹೊತ್ತುಕೊಂಡು ಹೋಗಿ ಮೈದಾನದಲ್ಲಿ ಬಿನ್ನ [illegible] ಕೈಗಳನ್ನು ತಿರುಚಿ ಕಟ್ಟಿ ಕೆಡವಿ ಪರಾರಿಯಾದರು. ಈನಾಲ್ಕು [illegible] ಅಪರಾಧಿಗಳನ್ನು ಪೊಲೀಸಿನವರು ಪತ್ತೆ ಮಾಡಿ ಹಿಡಿದರು. ಸೆ[illegible] ಜಡ್ಜರು ಅವರಿಗೆಲ್ಲಾ ಜೀವವಿರುವ ತನಕ ಟ್ರಾನ್ಸ್ ಪೋರ್ಟು ಶಿಕ್ಷೆ ವಿಧಿ[illegible]ತ್ತಾರೆ.

****

ಬಂಗಾಳಾ ಸರಕಾರದ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು [illegible] ಸ್ತ್ರೀಯರ ವಿದ್ಯಾಭ್ಯಾಸವನ್ನು ಪ್ರೋತ್ಸಾಹಪಡಿಸುವುದಕ್ಕೆ [illegible] ಸ್ತುತ್ಯಾರ್ಹವಾದ ವಿಚಾರವನ್ನು ಮಾಡಿರುತ್ತಾರೆ. ಜನಾನಾ [illegible] ಇದ್ದುಕೊಂಡು ವಿದ್ಯಾಭ್ಯಾಸ ಮಾಡತಕ್ಕ ಸ್ತ್ರೀಯರಿಗಾಗಿ [illegible] ಪರೀಕ್ಷೆಗಳನ್ನು ಇಟ್ಟಿದ್ದಾರೆ. ಅವುಗಳಲ್ಲಿ ಮಾತೃಭಾಷೆಯನ್ನು [illegible] ಪರೀಕ್ಷೆ ಕೊಡುವುದು ಒಂದು ಭಾಗ, ಮಾತೃಭಾಷೆಯ[illegible] ಸ್ವಲ್ಪ ಇಂಗ್ಲೀಷನ್ನು ಕಲಿತು ಪರೀಕ್ಷೆ ಕೊಡುವುದು ಎರಡನೆಯ [illegible] ಈ ಎರಡು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವಂಥಾ ಸ್ತ್ರೀಯ[illegible] ಸರ್ಟಿಫಿಕೇಟುಗಳನ್ನೂ ವೇತನಗಳನ್ನೂ ಕೊಡುತ್ತಾರೆ. ಇಂಥಾ [illegible] ವಿದ್ಯಾರ್ಥಿನಿಯರ ವಿದ್ಯಾಭಿವೃದ್ಧಿಯನ್ನು ನೋಡ್ಕೊಂಡಾದರೆ [illegible] ಕೊಳ್ಳುವುದಕ್ಕೂ ಅವರನ್ನು ಪರೀಕ್ಷೆ ಮಾಡುವುದಕ್ಕೂ ಕೆಲವು [illegible] ನ್ನು ಸೇರಿಸಿ ಒಂದು ಕಮಿಟಿ ಮಾಡುವರು. ಇದರಿಂದ [illegible] ಸ್ತ್ರೀಯರ ವಿದ್ಯಾಭ್ಯಾಸವು ತುಂಬಾ ಅಭಿವೃದ್ಧಿಗೆ ಬಂದೀ[illegible] ನಿರೀಕ್ಷಿಸಲ್ಪಟ್ಟಿದೆ.

****

ಜಟಜೂಲಾ ಸಂಸ್ಥಾನದಲ್ಲಿ ಮಹಾರಾಜಾ ಸರಕಾರದವರು [illegible] ಇದೇ ಏಪ್ರಿಲ್ ತಾ ೧೫ ರಲ್ಲಿ ಮೊದಲನೆಯ ಪಂಚಾಯತಿ [illegible] ಪರೀಕ್ಷಾರ್ಥವಾಗಿ ಸ್ಥಾಪನೆ ಮಾಡಿದರು. ಈ ಕೋರ್ಟಿ[illegible] ಪ್ರಯೋಜನವು ಬಹಳ ತೃಪ್ತಿಕರವಾಗಿದ್ದು ಪ್ರಜೆಗಳು ಅಪೇಕ್ಷಿಸಿದ [illegible] ಅಭಿಪ್ರಾಯ ಕಂಡುಬಂದದ್ದರಿಂದ ಸರಕಾರದವರು ಅಂಥಾ ಕೋ[illegible]ಗಳನ್ನು ಹೆಚ್ಚುಮಾಡುತ್ತಾ ಬಂದರು. ಈಗ ಅಂದರೆ ಕಳೆದ [illegible] ೧೫ ರಲ್ಲಿ ಅಲ್ಲಿ ೫೬ ಪಂಚಾಯತಿ ಕೋರ್ಟುಗಳಿದ್ದುವು. [illegible] ಈ ಕೋರ್ಟುಗಳಲ್ಲಿ ೬೩,೫೦೦ ಮೊಕದ್ದಮೆಗಳು ದಾಖ[illegible] ೬೩,೦೮೫ ಮೊಕದ್ದಮೆಗಳು ಇತ್ಯರ್ಥವಾಗಿರುತ್ತವೆ. ಇದುವರೆ[illegible] ಈ ಕೋರ್ಟುಗಳಿಗೆ ಬಂದ ಮೊಕದ್ದಮೆಗಳ ಪೈಕಿ ೫೬ ಮಾತ್ರ [illegible] ಕೋರ್ಟುಗಳಿಗೆ ಹೋಗಿರುತ್ತವೆ. ಪಂಚಾಯತದಾ[illegible] ಸಾಕ್ಷಿಗಾರರ, ಮತ್ತು ವ್ಯಾಜ್ಯದ ನಿಜಾಂಶಗಳನ್ನು ಬಹು ಪರಿ[illegible]ವಾಗಿ ತಿಳಿದು ತುಂಬಾ ಅಭಿಮಾನವಿಟ್ಟು ತನಿಖೆಮಾಡಿ ತೀರ್ಮಾ[illegible]ತ್ತಾರೆ. ಕಕ್ಷಿಗಾರರು ಅವರ ತೀರ್ಮಾನಗಳನ್ನು ಒಪ್ಪಿ ತೃಪ್ತಿ[illegible]ಕೊಂಡು ಆ ಪ್ರಕಾರ ನಡೆದುಕೊಳ್ಳುವರು.

****

ಪೂನಾ ಪಟ್ಟಣಕ್ಕೆ ೨೦ ಮೈಲಿ ದೂರದಲ್ಲಿರುವ ಪುರಂಧರವೆಂಬಿ[illegible] ಸರಕಾರದವರು ಕೆಲವು ಇಂಗ್ಲೀಷ್ ಸೈನ್ಯಗಳನ್ನು ಇಟ್ಟಿದ್ದಾರೆ. [illegible] ಸೈನಿಕರಲ್ಲಿ ಲೆಫ್ಟಿನೆಂಟ್ ಎಂಬ ಹುದ್ದೆಯಲ್ಲಿರುವ ಪ್ಲೆಂಟ್, [illegible] ಎಂಬಿಬ್ಬರು ಬಂದೂಕನ್ನು ಹಿಡಿದು ಶಿಕಾರಿ ಮಾಡುವುದ[illegible] ಸಿಪ್ಪೆ ಎಂಬ ಗ್ರಾಮದ ಕಡೆ ಹೋಗಿದ್ದಾಗ್ಗೆ ಕೆಲವು ಹೆಂಗಸ[illegible] ಪಾದರಿಗೆ ಬಂದರು. ಆಗ ಅವರು ಹೆಂಗಸರಿಗೆ ನಿಮ್ಮ ಗಂಡ[illegible] ಬರಬೇಡಿ, ರಸ್ತೆ ಕಡೆ ಓಡಿ ಹೋಗಿ ಎಂದು ಹೇಳಿದ್ದಕ್ಕೆ [illegible] ಹೆಂಗಸರು ಗಟ್ಟಿಯಾಗಿ ಕೂಗಿಕೊಂಡು ಓಡಿ [illegible] ಗ್ರಾಮಸ್ಥರಲ್ಲಾ ದೊಣ್ಣೆಗಳನ್ನು ಹಿಡಿದು [illegible] ಹೋಗಿ ಆ ಇಬ್ಬರು ಹುದ್ದೆದಾರರ ಮೇಲೂ ಬಿದ್ದು ಹೊಡಿ[illegible] ತುಂಬಾ ಗಾಯ ಮಾಡಿದರೆಂತಲೂ, ಅದರೂ [illegible] ಆತ್ಮ ಸಂರಕ್ಷಣೆಗಾಗಿ ತಮ್ಮ ಬಂದೂಕುಗಳನ್ನು [illegible] ಬಹು ಜಾಗ್ರತೆಯಿಂದಿದ್ದು ಪಟ್ಟಿಂದು ಈಗ ಆ[illegible] ಚಿಕಿತ್ಸೆ ಹೊಂದ ಹತ್ತಿರುವರೆಂತಲೂ, ಆಸ್ಪತ್ರೆ [illegible] ಎಂಬ [illegible] ಬದಿಯ ಹಳ್ಳಿಗಳವರೆಂತಲೂ, ಪೊಲೀಸಿನವರು ಪತ್ತೆ [illegible] ನಡೆಸುತ್ತಿದ್ದಾರೆಂತಲೂ ಪ್ರಕಟವಾಗಿದೆ.

****

ಹಿಂದುಸ್ಥಾನದಲ್ಲಿ ಸರಕಾರದವರು ಬೀನಾರಿನಲ್ಲಿ ಕಾಕೀ [illegible] ಅಫೀಮನ್ನು ಬೆಳೆ ಮಾಡಿಸುವರು. ಕಳೆದ ೧೯೦೦ ನೆ ಇಸವಿ [illegible] ಬೀನಾರಿನಲ್ಲಿ ೬೦,೬೦೭ ಮಣಗಳನ್ನು ಅಫೀಂ ತಯಾರಾಯಿತು. ೧೯೦೩–೦೫ ನೆ ಸಾಲಿನಲ್ಲಿ ಆ ವ್ಯವಸಾಯ[illegible]ವನ್ನು ಹೆಚ್ಚಿಸಿ ೧೦,೬೯,೩೩೦ ಬೈಗಾ ಜಮೀನಿನಲ್ಲಿ ೧,೦೧,೫೫೦ ಮಣಗಳ ಅಫೀಮನ್ನು ಬೆಳೆಮಾಡಿದರು. ಈಗ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈ ದುಷ್ಟವಾದ ಮಾದಕ ಪದಾರ್ಥವನ್ನು ಅಷ್ಟು ಹೆಚ್ಚುಕಟ್ಟಾಗಿ ಬೆಳೆ ಮಾಡಕೂಡದೆಂತಲೂ ಚೀನಾರಾಜ್ಯಕ್ಕೆ ರಫ್ತು ಮಾಡುವುದನ್ನು ಕಮ್ಮಿ ಮಾಡುತ್ತಾ ಬರಬೇಕೆಂತಲೂ ಇಂಡಿಯಾ ಗವರ್ನ್ಮೆಂಟಿನವರಿಗೆ ತಿಳಿಸಿದ್ದಾರೆ. ಆದಕಾರಣ ಈ ಬೆಳೆಯು ಇನ್ನು ಮುಂದೆ ದುಂಬಾ ಕಡಿಮೆಯಾಗುವುದೆಂದು ನಿರೀಕ್ಷಿಸಬಹುದಾಗಿದೆ.

****

ಕಲ್ಕತ್ತಾ ಪಟ್ಟಣದಲ್ಲಿ ಈ ತಿಂಗಳ ೨೬ ನೆ ತಾರೀಖಿನಿಂದ ೩೦ ನೆ ತಾರೀಖಿನವರೆಗೆ ರಾಜಕೀಯ ಸಮಾಜಗಳೂ ಸಂಘಸಭೆಗಳೂ ಪ್ರದರ್ಶನಗಳೂ ನಡೆಯುವವು. ತಾ ೨೬ ನೆ ಶುಕ್ರವಾರ ಗಾಯಕವಾಡಿ ಮಹಾರಾಜರವರು ಕೈಗಾರಿಕೆಗಳ ಮತ್ತು ವ್ಯವಸಾಯಗಳ ಸರ್ವವಸ್ತುಪ್ರದರ್ಶನಶಾಲೆಯಲ್ಲಿ ಪ್ರಾರಂಭದ ಉಪನ್ಯಾಸವನ್ನು ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ತಾ ೨೭, ೩೦ ರಲ್ಲಿ ಸಭೆಗಳು ನಡೆಯುವುವು. ತಾ ೫೩, ೨೬, ೨೮, ೩೦ ಈ ಮೂರು ದಿನಗಳಲ್ಲಿ ಹಿಂದೂಸ್ಥಾನದ ರಾಜಕೀಯ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಮಾಜವು ಕೂಡಿ, ದೇಶಾಭ್ಯುದಯಕ್ಕೆ ಸಂಬಂಧಿಸಿದ ವಿಷಯಗಳನ್ನು ಕುರಿತು ಚರ್ಚೆಮಾಡುವರು. ಈ ಸಮಾಜದ ಅಧ್ಯಕ್ಷ [illegible] ವಹಿಸಿ ಕಾರ್ಯಭಾಗವನ್ನು ನಡಸುವುದಕ್ಕೆ ವಿಲಾಯತಿಯಿಂದ ಮಿ॥ ದಾದಾಭಾಯಿ ನವರೋಜಿ ಎಂಬ ವೃದ್ಧ ಪಾರ್ಸಿ ದೊಡ್ಡ ಮನುಷ್ಯರು ಬರುವವರಾಗಿದ್ದಾರೆ. ತಾ ೨೯ ನೆ ಶನಿವಾರ ಬೆಳಿಗ್ಗೆ ಹಿಂದುಸ್ಥಾನದ ಮಧ್ಯನಿಷೇಧಾ ಸಂಘದವರ ದೊಡ್ಡ ಸಮಾಜವು ಜರುಗಿಸಲ್ಪಡುವುದು. ಈ ಸಮಾಜವನ್ನು ನಡಸುವುದಕ್ಕಾಗಿ ವಿಲಾಯತಿಯಿಂದ ಸ್ವಾಮ್ಯುಯಲ್ ಸ್ಮಿತ್ ಎಂಬ ಪ್ರಸಿದ್ಧ ದೊಡ್ಡ ಮನುಷ್ಯರು ಬಂದಿರುತ್ತಾರೆ. ತಾ ೩೦ ನೆ ಭಾನುವಾರ ಕಾಂಗ್ರೆಸ್ ಸಭಾ ಮಂದಿರದಲ್ಲಿ ಹಿಂದುಸ್ಥಾನದ ಸಂಘಸಂಸ್ಕರಣ ಸಮಾಜವು ನಡೆಯುವದು. ಸರ್ ಚಂದ್ರ ಮಾಧವ ಘೋಷ್ ಎಂಬ ಪ್ರಸಿದ್ಧ ಬಂಗಾಳಿ ದೊಡ್ಡ ಮನುಷ್ಯರು ಈ ಸಮಾಜದ ಅಧ್ಯಕ್ಷತೆಯನ್ನು ವಹಿಸುತ್ತಾರೆ.

****

ನೇಪಾಳ ಸಂಸ್ಥಾನದಲ್ಲಿ ಕೆಲವು ದಿನಗಳ ಕೆಳಗೆ ಒಬ್ಬ ಬ್ರಾಹ್ಮಣ ಸ್ತ್ರೀಯು ಸಹಗಮನ ಮಾಡಿ ಪ್ರಾಣ ಕಳೆದುಕೊಂಡಳು. ಆ ಸಂಸ್ಥಾನದಲ್ಲಿ ಈ ಪದ್ಧತಿಯು ವಿಶೇಷವಾಗಿ ರೂಢಿಯಲ್ಲಿದೆ. ಆವಳ ಗಂಡನಿಗೆ ೯೦ ವರ್ಷವಾಗಿತ್ತು. ಇವನು ಲಕ್ಷ ರೂಪಾಯಿನ ಆಸ್ತಿವಂತನಾಗಿಯೂ ಇದ್ದನು. ಇವನು ಕಾಲವಾದ್ದನ್ನು ನೋಡಿ, ಅವನ ಹೆಂಡತಿಯು ೫೦ ವರುಷದವಳಾಗಿದ್ದರೂ ಆತನ ದೇಹಯ ಸಂಗಡಲೇ ಸಹಗಮನ ಮಾಡಿಕೊಳ್ಳಬೇಕೆಂದು ನಿರ್ಧರಿಸಿ, ತನ್ನ ಆಸ್ತಿಯನ್ನೆಲ್ಲಾ ದಾನ ಧರ್ಮ ಮಾಡಿಬಿಟ್ಟು, ೫೦೦ ರೂಪಾಯಿನ ಕರ್ಪೂರ, ೧,೦೦೦ ರೂಪಾಯಿನ ಶ್ರೀಗಂಧದ ಕೊರಡುಗಳು, ೧೦೦ ರೂಪಾಯಿನ ತುಪ್ಪ, ೧೦೦ ರೂಪಾಯಿನ ಹೊಸ ಬಟ್ಟೆಗಳನ್ನು ಕೊಂಡುಕೊಂಡಳು, ಚಿತೆಗೆ ಬೇಕಾಗುವ ಸಿದ್ಧತೆಯಾದ ಮೇಲೆ ಸುಮಾರು ೧೫,೦೦೦ ಜನ ಜನರು ಸೇರಿದ್ದರು. ಬ್ರಾಹ್ಮಣರು ಪೂಜೆ ಮಾಡಿದರು. ಸರಕಾರದ ಅಪ್ಪಣೆಯನ್ನು ನಿರೀಕ್ಷಿಸುತ್ತಾ ಗಂಡನ ಶವವನ್ನು ಸಾಯಂಕಾಲದ ತನಕ ಸುಡದೆ ಕಾದಿದ್ದಳು. ಮಧ್ಯಾಹ್ನ ೨ ಗಂಟೆಗೆ ಅರಮನೆಯಿಂದ ಅಧಿಕಾರಿಗಳು ಬಂದು, ಆ ಹೆಂಗಸನ್ನು ಕುರಿತು ನಿನಗೆ ಜೀವನಕ್ಕಾಗಿ ಮನೆ ಬಟ್ಟೆ ಬರೆಗಳಿಗೆ ಕಷ್ಟವೇ, ಹಾಗಿದ್ದರೆ ಎಲ್ಲಾ ಕೊಡುತ್ತೇವೆಂದು ಮಹಾರಾಜರವರು ಹೇಳುತ್ತಾರೆ ಎಂದು ತಿಳಿಸಿದರು. ಕೋರ್ಟುಗಳಲ್ಲಿ ನಿನ್ನ ಮೊಕದ್ದಮೆ ಏನಾದರೂ ನಡೆಯುತ್ತಿದ್ದರೆ ಅದರ ವಿಷಯದಲ್ಲಿ ನಿನಗೆ ಸಹಾಯ ಮಾಡುತ್ತೇವೆಂತಲೂ ಆಕೆಗೆ ತಿಳಿಸಿದರು. ಅದಕ್ಕೆ ಆಕೆಯು ತನಗೆ ಯಾವುದಕ್ಕೂ ಕೊರತೆಯಾಗಿಲ್ಲವೆಂತಲೂ ತನ್ನ ಐದು ಲಕ್ಷ ರೂಪಾಯಿನ ಆಸ್ತಿಯನ್ನು ದಾನ ಧರ್ಮ ಮಾಡಿದ್ದೇನೆಂತಲೂ, ಸಹಗಮನವೇ ಬೇಕಾದ್ದೆಂದೂ ತನ್ನ ಅಪೇಕ್ಷೆಯೆಂತಲೂ ಇದಕ್ಕೆ ಅಪ್ಪಣೆ ಕೊಟ್ಟರೆ ಸಾಕೆಂತಲೂ ಹೇಳಿಕಳುಹಿಸಿದಳು. ಆದರೆ ಆಕೆಗೆ ಅಪ್ಪಣೆ ದೊರಕಲಿಲ್ಲ. ಗಂಡನ ಶವ ಒಂದನ್ನೇ ಸುಡಬೇಕಾಯಿತು. ಇಷ್ಟಲ್ಲಾ ಮನೋವ್ಯಥೆಯಾಯಿತಲ್ಲಾ ಎಂದು ಅವಳು ಒಂಬತ್ತು ದಿನಗಳ ತನಕ ಕೊರಗಿ ಅನ್ನಪಾನಗಳನ್ನು ತ್ಯಜಿಸಿ, ಗಂಡನ ಹಿಂದೆಯೇ ಪ್ರಾಣಬಿಟ್ಟಳು.

****

ಆಫ್ಘಾನಿಸ್ಥಾನದ ಅಮೀರರನ್ನು ಸತ್ಕರಿಸುವುದಕ್ಕೋಸ್ಕರ ವೈಸ್‌ರಾಯಿ ಲಾರ್ಡ್ ಮಿಂಟೋ (ರಿಮು ಆಗ್ರಾ) ಪಟ್ಟಣದಲ್ಲಿ ವಿಶೇಷವಾದ ದರ್ಬಾರು ನಡಸುವಂತೆ ಏರ್ಪಾಡಾಗುತ್ತಿದೆ. ಅಲ್ಲಿನ ಉದ್ಯಾನ ವನದೊಳಗೆ ವೈಸ್‌ರಾಯಿ ಯವರೇ ಮೊದಲಾದವರಿಗೆಲ್ಲಾ ಕ್ಯಾಂಪುಗಳನ್ನು ಮಾಡಿ ರಸ್ತೆ, ದೀಪ, ಕಾಲುವೆಗಳು, ಸಾಮಾನುಗಳು, ನೀರು, ಈ ಮೊದಲಾದ ವಿಷಯಗಳಿಗೆ ಸರಿಯಾದ ಏರ್ಪಾಡುಗಳನ್ನು ಬಹಳ ಸುಂದರವಾಗಿಯೂ ಅಮೀರರ ಕ್ಯಾಂಪು ಬಹು ನೇತ್ರಾನಂದಕರವಾಗಿ ತಯಾರಾಗುವುದು. ಈ ಸಭೆಗೆ ಇಂಪೀರಿಯಲ್ ಕ್ಯಾಡೆಟ್ ಕೋರ್ ಎಂಬ ಹಿಂದುಸ್ಥಾನದ ರಾಜಕುಮಾರರುಗಳ ಸೈನ್ಯವು ಹಾಜರಾಗುವುದು. ಗ್ವಾಲಿಯರಿನ ಸಿಂಧ್ಯಾ ಮಹಾರಾಜರು, ಬಿಕಾನೀರ್ ಮಹಾರಾಜರು, ಕಾಶಿ, ತಿರು [illegible], ಭೂಪಾಲದ ನವಾಬರು, ಬರೋಡಾ [illegible], ಹೈದರಾಬಾದ್, [illegible] ಪ್ರತಾಪಘಡ, ಮೈಸೂರ್ ಸರ್ಕಾರ, [illegible] ಎಂಬೀ ಸಂಸ್ಥಾನಗಳ [illegible], ಸರ್ [illegible] ಅಲ್ಲಿ ಹಾಜರಾಗುವಂತೆ ಗೊತ್ತಾಗಿದೆ. ಅಮೀರರೊಡನೆ ಅನೇಕ ಕಾಬೂಲ್ ದೊರೆ[illegible] ಬರುವರಿಗಾಗುವರು. ಈ ದರ್ಬಾರಿನ ವಿನೋದದಲ್ಲಿ ನೆರೆಯುವುದಕ್ಕಾಗಿ ಅನೇಕ ದೊಡ್ಡ ಮನುಷ್ಯರೂ ಯೂರೋಪಿಯನ್ ಸರದಾರರು ನಾನಾ ದೇಶದಿಂದಲೂ ಹಿಂದೂಸ್ಥಾನದ ನಾನಾ ಭಾಗಗಳಿಂದಲೂ ಅಲ್ಲಿಗೆ ಹೋಗುವುದರಿಂದ ಇಂಪೀರಿಯಲ್ ಪ್ರತ್ಯೇಕವಾದ ಕ್ಯಾಂಪುಗಳನ್ನು ಮಾಡಿರುತ್ತಾರೆ. ಈ ದರ್ಬಾರಿನಲ್ಲಿ ನಡೆಯುವ ಮುಖ್ಯ ಕಾರ್ಯಗಳೇನೆಂದರೆ—ವೈಸ್‌ರಾಯಿಯವರು ದೇಶೀಯ ರಾಜರುಗಳನ್ನು ಕರೆಸಿಕೊಂಡು ದರ್ಬಾರು ನಡಸುವರು; ತರುವಾಯ ಅವರು ಸಮಸ್ತ ಮಂತ್ರಿಯಾದಿಗಳೊಡನೆ ಅಯಾ ರಾಜರುಗಳ ಕ್ಯಾಂಪಿಗೆ ಹೋಗಿ ಅವರಿಗೆ ಮರುಭೇಟಿ ಕೊಡುವರು. ಆಗ್ರಾ ಕೋಟೆಯಲ್ಲಿರುವ ಷಹಜಹಾನ್ ಚಕ್ರವರ್ತಿಯ ರಾಜಭವನದಲ್ಲಿ ವೈಸ್‌ರಾಯಿಯವರು ದರ್ಬಾರ್ ಮಾಡಿ, ದೊಡ್ಡ ಮನುಷ್ಯರಿಗೂ ಅಧಿಕಾರಿಗಳಿಗೂ ರಾಜರಿಗೂ ಬಿರುದುಗಳನ್ನು ವಹಿಸುವರು. ತರುವಾಯ ಸಕಲರೂ ಮೈದಾನಿಗೆ ಹೋಗಿ ನಿಂತು ಹಿಂದುಸ್ಥಾನದ ಸೈನ್ಯದ ಪೈಕಿ ೩೦,೦೦೦ ಸವಾರರೂ ಪದಾತಿಗಳೂ ಮಾಡುವ ಕಸರತ್ತು ಮುಂತಾದ ಸಾಹಸ ಕಾರ್ಯಗಳನ್ನು ನೋಡುವರು. ಅಂತು ಅಮೀರರಿಗೆ ಆ ಪಟ್ಟಣದಲ್ಲಿ ಏಳು ದಿನ ಬಹು ಮನೋರಂಜಕವಾದ ಆತಿಥ್ಯಗಳು ನಡೆಯುವವು. ಹಿಂದುಸ್ಥಾನದಲ್ಲಿರುವ ಹದಿನಾರು ಭಾರೀ ಅರಸುಗಳು ಈ ದರ್ಬಾರಿಗಾಗಿ ಆಗ್ರಾ ಪಟ್ಟಣಕ್ಕೆ ದಯಮಾಡುವರೆಂದು ತಿಳಿದು ಬಂದಿದೆ.

ಬಾಲ್ಯವಿವಾಹ ಮತ್ತು ವಿಕಂತುಗಳ ಹೀನಸ್ಥಿತಿ.

“ಭ ಕಿ” ಕಾಲೀಸ್‌ಪೇಟೆ ಎಂಬೀ ಪತ್ರಿಕಾದಾರರು ಬರೆಯುವುದೇನಂದರೆ—ಅಯ್ಯಾ, ವಿವಾಹವೆಂಬ ಕಾರ್ಯದಲ್ಲಿ ಅನೇಕ ವಿಷಯಗಳಿದ್ದರೂ “ಕ್ರಮ ವಿವಾಹ,” “ಅಕ್ರಮ ವಿವಾಹ” ಎಂಬೀ ಎರಡು ಮಾರ್ಗಗಳಲ್ಲಿ ಫಲಿತಾಂಶವನ್ನು ಪ್ರಕಟಿಸಬಹುದು. ಕ್ರಮ ವಿವಾಹವೆಂದರೆ ವಿವಾಹ ಶಬ್ದಾರ್ಥವು ಯಾವ ರೀತಿಯಲ್ಲಿ ಸಂತೃಪ್ತಿಯಾಗುತ್ತದೋ ಅದು. ವಿವಾಹ ಕಾರ್ಯಗಳಲ್ಲಾ ಯಾವ ರೀತಿ ಸಫಲವಾಗುವದಿಲ್ಲವೋ ಆ ಮಾರ್ಗವು ಅಕ್ರಮ ವಿವಾಹವಾಗುವದು.

ಕ್ರಮ ವಿವಾಹಕ್ಕೆ ಅವಶ್ಯ ಕರ್ತವ್ಯಗಳ್ಯಾವವೆಂದರೆ—ಮೊದಲನೇದು ದೇಹದಾರ್ಢ್ಯ, ಎರಡನೇದು ದೇಹಧಾರಾಢ್ಯ, ಮೂರನೇದು ಪ್ರಾಪ್ತ ವಯಸ್ಸು, ಅಂದರೆ ಯತುಮತಿಯಾಗಿ ಗೃಹಕೃತ್ಯಗಳನ್ನು ಚನ್ನಾಗಿ ತಿಳಿದುಕೊಳ್ಳುವವರಾಗ್ಯಾನವಿದ್ದು ಪುತ್ರವತಿಯಾಗಲಿಕ್ಕೆ ತಕ್ಕ ಇಂದ್ರಿಯಗಳ ಪಟುತ್ವ ಉಳ್ಳವಳಾಗಿರುವದು. ಸರ್ವ ವಿಷಯಗಳಲ್ಲೂ ಅರ್ಧಾಂಗಿ ಸಾಧವಿಗಳು ಆಗಿರುವಂತೆ ಕನಿಷ್ಠಪಕ್ಷ ೧೬ ವರ್ಷ ವಯಸ್ಸಾಗಲೀ ಆಗಿರಬೇಕು. ಅದರಂತೆ ವರನಿಗೆ ೨೫ ವರ್ಷವಾಗಿರಬೇಕು. ಈ ರೀತಿ ಅನುಸರಿಸುವದು ಇಹಪರ ಸಾಧನೆಗೆ ಎಲ್ಲಾ ವಿಷಯಗಳಲ್ಲೂ ಅಂದರೆ ಧರ್ಮ ಅರ್ಥ ಕಾಮ ಮೋಕ್ಷಗಳಲ್ಲಿ ತುಂಬಾ ಅನುಕೂಲವೇ ಸರಿ. ಇದರಿಂದ ಉಭಯತ್ರರ ಪ್ರೇಮ ಮಾನ ಧನ ಸುಖ ಸಂತಾನ ಆಯುಷ್ಯ ಪ್ರಪಂಚಜ್ಞಾನ ಬುದ್ಧಿಕುಶಲತೆಗಳಿಗೆ ಎಷ್ಟೋ ಅನುಕೂಲವಾಗಿರುವದು. ಮುಂದೆ ಕಾಲದ ಪರಿಗೂ ಮೇಲ್ಕಂಡ ವಿಷಯಗಳಲ್ಲಿ ತುಂಬಾ ಎಚ್ಚರಿಕೆಯಿಂದಲೂ ವಿವೇಕದಿಂದಲೂ ನಡೆದುಕೊಂಡರೆ ಅವರಿಗೂ ದೇಶಕ್ಕೂ ಎಷ್ಟೋ ಮೇಲುಂಟಾಗುವದು. ಇಲ್ಲವಾದರೆ ಕೇಡೂ ಕಷ್ಟ ನಷ್ಟಗಳೂ ಈಗಿನಂತೆ ಉಂಟಾಗುವವು.

ಈ ಕ್ರಮವಿವಾಹವೆಂಬುವದರಲ್ಲಿ ವಿಧವಾ ವಿವಾಹವನ್ನು ಸೇರಿಸಬೇಕಾಗಿದೆ. ಯಾಕೆಂದರೆ ಪತ್ನಿಯ ಮರಣಾನಂತರ ಯಾವ ಗಂಡಸು ಪುನಹಾ ಮದುವೆಯಾಗುವದಿಲ್ಲವೋ ಅಂಥವನು ವಿಧವಾ ವಿವಾಹ ನಿಷೇಧ ಮಾಡಬಹುದು. ಯಾವ ಪರಿಗೂ ಗಂಡನು ತನ್ನ ಹೆಂಡತಿ ಸತ್ತಮೇಲೆ ತಾನು ಒಂಟಿಯಾಗಿರಲಾರದೆ ಸರ್ವ ವಿಷಯಗಳಲ್ಲೂ ತನಗೆ ಸಮಾನವಾದ ಮತ್ತೊಬ್ಬ ಸಹಾಯಕಳನ್ನು ಅಪೇಕ್ಷಿಸುವನೋ ಆ ವರೀತಿ ಸ್ತ್ರೀಯರಿಗೂ ಪುನರ್ವಿವಾಹ ಆಗತಕ್ಕದಾಗಿ ಬೇಕೇಬೇಕು. ಗಂಡಸಿಗೂ ಹೆಂಗಸಿಗೂ ಒಂದೇ ವಿಧ ಶರೀರವೂ, ಇಂದ್ರಿಯಗಳೂ ಇರುವಲ್ಲಿ, ಗಂಡಸು ತಾನು ಪುನಹಾ ಹೆಂಡತಿಯನ್ನು ಅಗತ್ಯವಾಗಿ ಹೊಂದುವವನಾದರೆ ವಿಧವೆಯು ತಾನು ಸರ್ವ ವಿಷಯಗಳಲ್ಲೂ ಸಹಾಯರಹಿತಳಾಗಿರುವದನ್ನು ಕೋರುವದು ಅನ್ಯಾಯವು. ಆದ್ದರಿಂದ ಹೆಂಡತಿಯನ್ನು ಕಳೆದುಕೊಂಡವರು ತಮ್ಮ ಸ್ಥಿತಿಗೆ ಸರಿಯಾದ ನ್ಯಾಯವಾದ ವಯಸ್ಸಿನ ದೇಹಶಕ್ತಿಯುಳ್ಳ ವಿಧವೆಗಳನ್ನು ಪುನರ್ವಿವಾಹವಾಗುವದು ಯೋಗ್ಯವೇ ಹೊರತು ಕನ್ನಿಕೆಗಳನ್ನು ಮಾಡಿಕೊಳ್ಳುವದು ಸರ್ವಥಾ ನ್ಯಾಯವಾಗಿರಲಾರದು.

ಅಕ್ರಮವಿವಾಹವೆಂದರೆ—ವಧುವರರಲ್ಲಿ ಪ್ರೇಮವಿಲ್ಲದೆ ದೀರ್ಘರೋಗವಿರುವದು, ವಯಸ್ಸಿನಲ್ಲಿ ಅಧಿಕ ವ್ಯತ್ಯಾಸ, ದೇಹ ಸ್ಥಿತಿಗಳಲ್ಲಿ ವಿಪರೀತ ತಾರತಮ್ಯವಿರುವದು, ವೃದ್ಧರು ಬಾಲಕಿಯರನ್ನು ವರಿಸುವದು, ವಿಧವೆಗಳು ಪುನರ್ವಿವಾಹವಾಗದೆ ವ್ಯಭಿಚಾರ ಶಿಶುಹತ್ಯೆಗಳನ್ನು ನಡಿಸುವದು, ಸೂಳೆಗಾರಿಕೆ, ಹೆಂಡತಿಯನ್ನು ಇಟ್ಟುಕೊಂಡು ಅಲ್ಲಲ್ಲಿ ಅನ್ಯ ಸ್ತ್ರೀಯರ ಸಂಗಡ ಬಾಳ್ವೆ ಮಾಡುವದು, ತಕ್ಕ ಕಾರಣವಿಲ್ಲದೆ ಹೆಂಡತಿಯು ಗಂಡನನ್ನೂ ಗಂಡನು ಹೆಂಡತಿಯನ್ನೂ ಬಿಡುವದು. ಈ ಮುಂತಾದ ದೋಷಗಳೂ ಕೆಟ್ಟತನಗಳೂ ಅಕ್ರಮವಿವಾಹದ ಫಲಗಳಾಗಿವೆ. ಗಂಡಿಂದಿರೂ ಹೆಂಡತಿಯರ ಸಂಗಡ ಸರ್ವ ವಿಷಯಗಳಲ್ಲೂ ಸಂಪೂರ್ಣ ಅನ್ಯೋನ್ಯತೆ ಪ್ರೀತಿ ನಂಬಿಕೆಗಳನ್ನು ಸ್ಥಿರವಾಗಿ ರಡಿಕೇಕು. ಗಂಡಸರು ವ್ಯಭಿಚಾರಮಾಡಿದರೆ ಬಹಿಷ್ಕಾರಹೊಂದುವದಿಲ್ಲ. ಆದರೆ ಹೆಂಗಸರು ವ್ಯಭಿಚಾರಿಣಿಗಳಾದರೆ ತಕ್ಷಣವೇ ಜಾತಿಯಿಂದ ಹೊರಗೆ ಹಾಕುವದು ದುರ್ಮಾರ್ಗವಲ್ಲವೇ? ಗಂಡಸರು ತಾವು ಬಲಿಷ್ಠರೆಂದು ಬಲಹೀನರನ್ನು ಬಲತ್ಕಾರ ಮಾಡುವದು ಸರಿಯೇ? “ಹಸಿಗೆ ಪವಿತ್ರವಾಗಿರಲಿ” “ನಡತೆ ನಿಷ್ಕಳಂಕವಾಗಿರಲಿ,” ಯಾವ ಜಾತಿಯವರಿಗಾಗಲೀ ದೇವರ ರಾಜ್ಯದಲ್ಲಿ ಪಾಲಿಲ್ಲ; ಅಂದರೆ ಅವನು ಮೋಕ್ಷಕ್ಕೆ ಅನರ್ಹನು.

“ಜನಾಭಿಮಾನಿ,” ಯತೀ[illegible]ಲ್ಲ ಎಂಬೀ ಪತ್ರಿಕಾದಾರರು ಬರೆಯುವುದೇನಂದರೆ—ಅಯ್ಯಾ, ಈಚಿಗೆ ಕೆಲವು ದಿವಸಗಳಿಂದ ನಮ್ಮ ಸರಕಾರದವರೂ ಪುರಜನರೂ ವಿದ್ಯಾವಂತರೂ ನಮ್ಮ ಸಹೋದರಿಯರಾದ ಭಾರತೀಯರ ಪ್ರೇಮವಂಚನೆಯ ವಿಷ್ಣುಕೃತಕವಾಗಿ ತಮ್ಮ ಪ್ರೇಮದಲ್ಲಿ ಪ್ರಲಾಪಿಸುವದನ್ನು ನೋಡಿ ನಾವು ಬಹಳ ವಿಷಾದ ಪಡುತ್ತೇವೆ. ವಿದ್ಯಾವಾಂಡಿಸ್ಥ ಧರ್ಮಾಂಧರಾದರೂ ಹೀಗೆ ಈ ರೀತಿ ಅಪಲಾಪ ಪಡುವುದಕ್ಕೆ ಕಾರಣವೇನೋ ತಿಳಿಯಲಾರೆವು.

"ನಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂಬ ವಾಕ್ಯಕ್ಕೆ ವಿಕಲ್ಪನಾ ಅರ್ಥ ಕಲ್ಪನೆಯಿಂದ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆನ್ನುವರು. ಆ ವಾಕ್ಯದ ಅರ್ಥವು ಅವರ ನಿಳುವಳಿಗೆಗೆ ಬಂದಿರುವಂತೆ ಅಲ್ಲವು. ಅದು ಸ್ತ್ರೀಯರ ಸಂರಕ್ಷಣೆಗಾಗಿ ಹಾಗೆ ಹೇಳಲ್ಪಟ್ಟಿದೆ. ಸ್ತ್ರೀಯರಿಗೆ ಪುರುಷ ಸಹಾಯವಿಲ್ಲದೆ ಏಕಾಂಗಿಯಾಗಿದ್ದರೆ ಬಹಳ ಅನರ್ಥಗಳುಂಟಾಗುವವು. ಇದಕ್ಕೆ ಸೀತಾ, ದ್ರೌಪತಿ, ಇವರುಗಳೇ ಉದಾಹರಣೆಯಾಗಿರುತ್ತಾರೆ. ಮನು ಶ್ಲೋಕ— ಸದಾಪ್ರಹೃಷ್ಟಯಾಭಾವ್ಯಂ ಗೃಹಕಾರ್ಯೇಷು ದಕ್ಷಯಾ ॥ ಸುಸಂಸ್ಕೃತೋಪಸ್ಕರಯಾ ವ್ಯಯೇಚಾಮುಕ್ತಹಸ್ತಯಾ ॥ ಈ ಅರ್ಥದಿಂದ ಸ್ತ್ರೀಯರಿಗೆ ಸರ್ವಸ್ವಾತಂತ್ರ್ಯವೂ ಉಂಟಾಗಿಲ್ಲವೇ! ಇದಕ್ಕಿಂತಲೂ ಹೆಚ್ಚಾಗಿ ಮತ್ಯಾವ ಸ್ವಾತಂತ್ರ್ಯಕ್ಕೆ ಮತ್ಯಾವ ಸ್ವತಂತ್ರವನ್ನು ನಮ್ಮ ಬಂಧುಗಳು ಅಪೇಕ್ಷಿಸುವರೋ ತಿಳಿಯದು.

ಬಾಲ್ಯವಿವಾಹದ ದೆಸೆಯಿಂದ ಪತಿವಿಯೋಗ ಉಂಟಾಗುತ್ತೆಂಬುವುದು ಅಸಂಭವವು. ಪ್ರಾಣಿಕೋಟಿಯ ಜೀವಮಾನವು ಭಗವದಾಧೀನವಾದ್ದು. ಹೆಣ್ಣು ಮಕ್ಕಳನ್ನು ಪಡೆದ ತಾಯಿತಂದೆಗಳು ಆ ಮಕ್ಕಳ ಕ್ಷೇಮ ಚಿಂತಕರಲ್ಲದಿದ್ದರೆ ಹ್ಯಾಗೆತಾನೇ ಸಾಕಿ ಸಲಹುತ್ತಿದ್ದರು? ಹೆಣ್ಣು ಮಕ್ಕಳ ವಿಷಯದಲ್ಲಿ ಅವರವರ ತಾಯಿತಂದೆಗಳಿಗೆ ಇರುವ ಅಭಿಮಾನಕ್ಕಿಂತಲೂ ಅನ್ಯರಾದಿಗಳ ಅಭಿಮಾನವು ಅಷ್ಟು ದೊಡ್ಡದಾಗಿರಲಾರದು. ಆದ್ದರಿಂದ ಅವರವರ ಮಕ್ಕಳ ಸಮಸ್ತ ಶ್ರೇಯೋಭಿವೃದ್ಧಿ ಭಾರವನ್ನೂ ತಂದೆತಾಯಿಗಳೇ ಭರಿಸತಕ್ಕದ್ದಾಗಿರುವಲ್ಲಿ ಇತರರ ಪಕ್ಷಪಾತದಿಂದ ಪ್ರಯೋಜನವೇನು?

ಚಿಕ್ಕ ವಯಸ್ಸಿನಲ್ಲಿ ಉಂಟಾಗುವ ನಿಷೇಕ ಪ್ರಸ್ತದಿಂದ ಜನಿಸುವ ಮಕ್ಕಳು ದುರ್ಬಲರಾಗುತ್ತಾರೆಂಬುವುದೂ ದಂಪತಿಗಳು ಬಲಹೀನರಾಗುತ್ತಾರೆಂಬುವುದೂ, ಶಾಸ್ತ್ರಸಮ್ಮತವಲ್ಲವು. ಸ್ತ್ರೀಯರು ಋತುಮತಿಯರಾದ ಕೂಡಲೇ ಪ್ರಾಯಸ್ಥೆಯರನ್ನಿಸಿಕೊಳ್ಳುವರು. ಪುರುಷರು ೧೬ ವರುಷ ಆದ ಒಡನೆ ಪ್ರಾಯಸ್ಥರೆನಿಸಿಕೊಳ್ಳುವರು. ಅಂಥವರ ಸಂಯೋಗಕರ್ಮವನ್ನು ಮಿತಪಡಿಸುವುದು ಉತ್ತಮವಾಗಿದೆ.

ಸ್ತ್ರೀ ವಿದ್ಯಾಭ್ಯಾಸ ವಿಷಯದಲ್ಲಿ ಅವರಿಗೆ ಅಗತ್ಯವಾಗಿ ವಿದ್ಯ ಕಲಿಸಬೇಕು. ವಿದ್ಯವೆಂದರೆ ಸ್ಕೂಲಿಗೆ ಹೋಗಿ ಓದು ಬರಹ ಕಲಿಯುವದು ಮಾತ್ರವಲ್ಲ. ಶ್ಲೋಕ—ಸದ್ವಿದ್ಯಾಯದಿಚಿಂತಾಚಿಂತಾ ಪರಾಕ್ಷ್ಯೋದರಪೋಷಣೇ ॥ ಶುಕೋಪ್ಯಶನಮಾಪ್ನೋತಿ ರಾಮರಾಮೇತಿಬ್ರುವನ್ ॥ ಎಂಬಂತೆ ಸ್ಕೂಲಿನಲ್ಲಿ ಓದಿ ವಿದ್ಯಾವತಿಯಾದ ನಮ್ಮ ಭಗಿನಿ ಶ್ರೀಮತಿ ಪದ್ಮಾವತಿಬಾಯಿಯಂತೆ ಕಲಿತ ವಿದ್ಯವು ವಿದ್ಯವಲ್ಲ. "ವಿತ್" ಧಾತು ಜ್ಞಾನ. ಪರಮೇಶ್ವರ ಸಮ್ಮಂಧವಾದ ಜ್ಞಾನವನ್ನು ನಮ್ಮ ಬಾಲಕಿಯರು ಹೊಂದಬೇಕು. ಹಾಗೆ ಜ್ಞಾನ ಸಂಪಾದನೆಗೆ ಮನೆಯಲ್ಲಿ ತಾಯಿ ತಂದೆ ಮೊದಲಾದ ಬಂಧುಗಳು ಅಥವಾ ಅವರ ಪತಿಗಳು ಬೋಧಿಸಬಹುದಾಗಿದೆ.

ಪುನರ್ವಿವಾಹ ವಿಷಯದಲ್ಲಿ ನಿರ್ಬಂಧವೇನೂ ತೋರುವದಿಲ್ಲ. "ಲೋಕೋ ಭಿನ್ನರುಚಿಃ" ಎಂದಿರುವದ್ದರಿಂದ ಕರ್ಮಬದ್ಧರಾದ ಬ್ರಾಹ್ಮಣರ ವಿಧವೆಯರು ಶಾಸ್ತ್ರಾನುಸಾರ ಮುಂಡನಾದಿ ಕರ್ಮ ಕೊಳ್ಳಲಿ ಪಟ್ಟು, ಏಕಪತಿವ್ರತಾಧರ್ಮಾಚರಣೆಯಲ್ಲಿ ಇರಲಾರದವರು ಬೇಕಾದ ವರನನ್ನು ವರಿಸುವದಕ್ಕೆ ಶಾಸ್ತ್ರಾಧಾರವಿದೆ. ಅವರ ತಂದೆಯು ಒಬ್ಬ ವರನಿಗೆ ದಾನಪೂರ್ವಕವಾಗಿ ಕೊಟ್ಟಮೇಲೆ, ಅವನಿಗೆ ಆ ಸ್ವತ್ತಿನಲ್ಲಿ ಪುನಹಾ ಹಕ್ಕು ಬರುವದಿಲ್ಲ. ಅದೇ ಕನ್ಯೆಯನ್ನು ಮತ್ತೊಬ್ಬನಿಗೆ ಎರಡನೇ ಧಾರೆಯೆರೆಯುವುದು ಶಾಸ್ತ್ರೋಕ್ತವಾಗಿಲ್ಲ. ಆದ್ದರಿಂದ ಎಂಟು ವಿಧವಾದ ವಿವಾಹಗಳ ಪೈಕಿ ತಾನಾಗಿಯೇ ಒಬ್ಬ ಪುರುಷನನ್ನು ವರಿಸುವದಕ್ಕೆ ಯಾರೂ ಅಡ್ಡಿ ಮಾಡಲಾರರು. ಹೀಗೆ ಮಾಡುವುದರಿಂದ ಅನೇಕ ಬ್ರೂಣಹತ್ಯಗಳು ನಿಂತು ಜಗತ್ತಿಗೆ ಕ್ಷೇಮ ಉಂಟಾಗಿ ರಾಷ್ಟ್ರದಲ್ಲಿ ಪ್ರಜಾವೃಧಿಯಾಗಿ ಐಶ್ವರ್ಯ ಹೆಚ್ಚುವುದು. ಇದು ಈಗಲೇ ಅಲ್ಲ. ೬ ವಿನಿಂದಲೂ ವಿಧವಾ ವಿವಾಹ ಇತ್ತೆಂತ ತೋರುತ್ತೆ. "ಮೃತೇ ಭರ್ತರಿ ಗೋಳಕಾ" ಗೋಳಕಾ ಎಂಬ ಒಂದು ಪಂಗಡದ ಜನ ಸಮುತ್ಪನ್ನರಾಗುವುದು ಉಚಿತವೇ ಸರಿ. ಅಂಥವರಿಗೆ ಬ್ರಾಹ್ಮಣಿಕೆಯಾಗಲೀ, ಕರ್ಮಲೋಪವೇ ಆಗಲಿ ಹೋಗಲಾರದು. ಈಗಲೂ ಬ್ರಾಹ್ಮಣರಲ್ಲಿ ಸಹಪಙ್ತ್ತಿ ವಿಚಾರರಾದ ಅನೇಕ ಬ್ರಾಹ್ಮಣರು ಇದ್ದೇ ಇದಾರೆ. ಅವರುಗಳ ಚರಿತ್ರೆಯು "ಸಹ್ಯಾದ್ರಿ" ಎಂಬ ಗ್ರಂಥದಲ್ಲಿ ಸ್ವಲ್ಪ ಮಟ್ಟಿಗೆ ಉದಾಹೃತವಾಗಿದೆ. ಗೋಳಕರಾದವರೂ ಕೂಡ ಒಂದು ಪಂಗಡದ ಬ್ರಾಹ್ಮಣರಾಗಿಯೇ ಇರಬಹುದು.

ಈ ವಿಷಯಗಳಿಗೆಲ್ಲಾ ನಮ್ಮನ್ನಾಳುವ ಮಹಿಸೂರ್ ಗವರ್ನಮೆಂಟಿನವರು ಹೊಸದಾಗಿ ಕಾನೂನು ಮಾಡಿಕೊಡಬೇಕೆಂತ ಯಾತಕ್ಕೆ ಅರಿಕೆಮಾಡಿಕೊಳ್ಳಬೇಕು? ಸ್ವತಸ್ಸಿದ್ಧವಾದ ಸ್ವತಂತ್ರವಿರುವಾಗ ಮತ್ತೊಂದಪೇಕ್ಷೆಯನ್ನು ನಮ್ಮ ಬಂಧುಗಳು ನಿಲ್ಲಿಸುವದು ಉತ್ತಮವಲ್ಲವೇ? ವರ್ತಮಾನ ಪತ್ರಿಕಾಪಾಲಕರು ಈ ವಿಷಯದಲ್ಲಿ ಪ್ರವರ್ತಿಸುವುದಿಲ್ಲವೆಂದು ನಮಗೆ ತಿಳಿದಿದ್ದಾಗ್ಯೂ ಅವರನ್ನು ಬತ್ತಾಯ ಮಾಡುವುದು ನಮಗೆ ಸರಿಯಾಗಿರಲಾರದು.

ಬಾತ್ಮಿದಾರರಿಗೆ ನೋಟೀಸು

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್‌ಪಾಂಡೆನ್ಸ್.

ಭಕ್ಷಿನರಸಪ್ಪನವರ ಸತ್ರ ದೇವಸ್ಥಾನಗಳ ಜವಾಬಿ ನೌಕರರ ತಲಬು

ಅಯ್ಯಾ,

ಲೇಟ್ ಭಕ್ಷಿ ನರಸಪ್ಪನವರ ಮನೆವಾರ್ತೆಯಲ್ಲಿದ್ದ ದೇವಸ್ಥಾನ ಸತ್ರಗಳು ಸರ್ಕಾರದವರ ಮ್ಯಾನೇಜಮೆಂಟಿಗೆ ಸೇರಿದ ಲಾಗಾಯ್ತು ದೇವಸ್ಥಾನದ ಕೆಲವು ನೌಕರಿಯವರಿಗೆ ಪಡಿ, ತಲಬು ಕೊಟ್ಟು, ಮುಖ್ಯವಾದ ಇನ್ನು ಕೆಲವರಿಗೆ ಬರೀ ಸಂಬಳವನ್ನೇ ಕೊಟ್ಟು, ಪಡಿ ತರದ ಅಕ್ಕಿಯನ್ನು ಆ ವೇಳೆ ಕೊಡಿಸುತ್ತೇವೆ ಎಂದು ಬಿಟ್ಟಿದ್ದು ಮುಜರಾಯಿ ಗವರ್ನಮೆಂಟಿನಿಂದ ಬರುವವರೆಗೆ ಕೆಲವು ತಿಂಗಳದು ಇನ್ನೂ ಕೊಡಿಸಲಿಲ್ಲ. ಏನು ಕಾರಣವೋ ತಿಳಿಯದು. ಅಲ್ಲದೆ ಸರ್ಕಾರಕ್ಕೆ ಸೇರುವದಕ್ಕಿಂತ ಮುಂಚೆ ಮನೆವಾರ್ತೆಯಲ್ಲಿ ಇದ್ದಾಗ ಕೆಲವು ತಿಂಗಳು ತಲಬು ಪಡಿಯು ಸಹ ನಿಂತು ಇರುತ್ತೆ. ಅದು ಕೂಡ ಇಷ್ಟು ದಿವಸವಾದಾಗ್ಯೂ ಏನುಕಾರಣ ಆ ಬಡ ಜವಾಬಿ ತಲಬು ನೌಕರಿಯವರ ಮೇಲೆ ಸರ್ಕಾರದವರ ಕರುಣೆಬರಲಿಲ್ಲವೋ. ಈಗ ಕ್ಷಾಮಕಾಲ. ಸತ್ರದೇವಸ್ಥಾನಗಳಿಗೆ ಬಿಟ್ಟು ಇರತಕ್ಕ ಗ್ರಾಮದಿಂದ ವರ್ಷ ಒಂದಕ್ಕೆ ೩೦೦೦ ರೂಪಾಯಿ ಮೇರೆ ಸುಮಾರು ಈಗ ೪—೫ ವರುಷದ ಬಾಬ್ತು ಹಣಗಳು ಬಂದು ಇರುವ ಹಾಗೆ ಕಾಣಿಸುತ್ತೆ. ಅದನ್ನು ದಯವಿಟ್ಟು ಸರ್ಕಾರದವರು ತರಿಸಿ ಆ ಬಡ ಜವಾಬಿ ನೌಕರಿಯವರಿಗೆ ಕೊಡಿಸುತ್ತಾರೆಂದು ನಂಬಿದ್ದೇನೆ.

ಕೃಷ್ಣದೀಕ್ಷಿತ

ಗೌರೀಬಿದನೂರು ರೀಡಿಂಗ್ ರೂಂ

ಅಯ್ಯಾ,

ಗೌರಿಬಿದನೂರು ಸ್ಕೂಲ್ ವಿದ್ಯಾರ್ಥಿಗಳ ಪುರೋಭಿವೃದ್ಧಿಗಾಗಿ ಏರ್ಪಾಡು ಮಾಡಿರುವ ರೀಡಿಂಗ್ ರೂಂ (ವಾಚಕಮಂದಿರ)ವನ್ನು ಕಳೆದ ನವಂಬರ್ ತಾ ೧೩ರಲ್ಲಿ ಸ್ಥಾಪನೆ ಮಾಡಿ ಒಂದು ವಾರದಲ್ಲಿ ಕನ್ನಡದಲ್ಲಿ ಮೂರು ಪೇಪರುಗಳನ್ನೂ ಇಂಗ್ಲೀಷಿನಲ್ಲಿ ಒಂದು ಪೇಪರನ್ನೂ ಕೆಲವು ಜನ ಸ್ಕೂಲ್ ಹುಡುಗರು ಚಂದಾ ಹಾಕಿಕೊಂಡು ತರಿಸುತ್ತಾ ಇರುತ್ತಾರೆ. ಈ ರೀಡಿಂಗ್ ರೂಮಿನ ಚಂದಾ ಹಣವು ಇನ್ನೂ ಜಮಾಯಿಸಲಿಲ್ಲವಾದ್ದರಿಂದ ಇನ್ನೂ ಕೆಲವು ಪತ್ರಿಕೆಗಳನ್ನು ತರಿಸಲು ದುರ್ಲಭವಾಗಿದೆ. ಇದೇ ಊರು ಎ ವಿ ಸ್ಕೂಲಿನಲ್ಲಿದ್ದ ರೀಡಿಂಗ್ ರೂಂ ಇನ್ನು ಕೆಲವು ಕ್ಲಬ್ಬುಗಳು ಈಗ ಆರು ತಿಂಗಳಿಂದ ನಿಂತುಹೋಗಿರುತ್ತದೆ. ಏನುಕಾರಣವೋ ತಿಳಿಯದು. ಇದಕ್ಕಾಗಿ ಸ್ಕೂಲ್ ಹುಡುಗರಿಂದಲೂ ಇತರ ಎಲ್ಲಾ ಆಫೀಸರುಗಳಿಂದಲೂ ಚಂದಾ ಎತ್ತಿದ ಮೇಲೆ ಬಂದ ೭೫ ರೂಪಾಯಿಗಳು ಖಜಾನೆಯಲ್ಲಿ ಇಟ್ಟಿರುತ್ತಾರೆ. ಇದರಿಂದ ಏನು ಫಾಯಿದೆಯೋ ನಮಗೆ ಬ್ಯಾರೆ ತಿಳಿಯದು. ಸಬ್ ರಿಜಿಸ್ಟ್ರಾರ್, ಸೂಪರ್ವೈಸರು, ಎಕ್ಸೈಸ್ ಇನ್ಸ್‌ಪೆಕ್ಟರು, ಶ್ಯಾನುಭೋಗರ ಮುಖ್ಯ ... ವೆಂಕಟರಾಮಯ್ಯನವರು, ಡಾಕ್ಟರು ವಿದ್ಯಾರ್ಥಿಗಳ ರೀಡಿಂಗ್ ರೂಮಿಗೆ ಸಹಾಯ ಮಾಡಿ ಪೇಪರುಗಳನ್ನು ತರಿಸಿಕೊಡಬೇಕೆಂದು ಕೋರುವ

ವಿದ್ಯಾಭಿಲಾಷಿಗಳ

ಯಡತೊರೆಯ ಬಡಾವಣೆ ಮುಂತಾದ್ದು

ಅಯ್ಯಾ,

ಪುರಾಣಪ್ರಸಿದ್ಧ ಕ್ಷೇತ್ರವಾದ ದಿವ್ಯ ದೇವಾಲಯಗಳಿಂದಲೂ ರಮಣೀಯ ಸೋಪಾನಗಳಿಂದಲೂ ಕಠಿನ ಸ್ನಾನಘಟ್ಟಗಳುಳ್ಳ ಕಾವೇರೀ ನದಿಯ ತೀರದಲ್ಲಿರುವ ಯಡತೊರೆಯನ್ನು ಈಗ ಅನಾರೋಗ್ಯದ ದೆಸೆಯಿಂದ ಬಿಟ್ಟು ಹೊಸದಾಗಿ ಊರು ಕಟ್ಟಿಕೊಳ್ಳುವುದಕ್ಕೆ ಇಲ್ಲಿಗೆ ಒಂದು ಮೈಲಿ ದೂರದಲ್ಲಿ ಮೈಸೂರು ರಸ್ತೆಯಲ್ಲಿ ಕಿಂಗ್ಸ್ ಲಾಡ್ಜ್ ಎಂಬ ಕಟ್ಟಡದ ಬಳಿಯಲ್ಲಿನ ಹೋದೆಯಲ್ಲಿ ಕೆಲವು ಹಣಸ್ಥರು ನಿವೇಶನಗಳನ್ನು ಕಟ್ಟಿಕೊಂಡಿದ್ದಾರೆ. ಸಾಹುಕಾರ್ ಅಚ್ಚಳಸೆಟ್ಟರು ಅಲ್ಲಿ ಮನೆಯನ್ನು ಕಟ್ಟಿ ಪೂರೈಸಿದ್ದಾರೆ. ವೆಂಡರ್ ಸುಬ್ರಾಯರೂ ಧನಿಕರಾದ ಕೆಲವು ವೈಶ್ಯರೂ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭಿಸಿದ್ದಾರೆ. ಸರ್ಕಾರದವರೂ ಸಹ ಒಂದು ಪೋಲೀಸ್ ಸ್ಟೇಷನ್ ಕಟ್ಟಿದ್ದಾರೆ. ಆದರೆ ಅಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಿಕೊಳ್ಳುವದಕ್ಕೆ ಚೈತನ್ಯಸಾಲದ ಬಡವರಿಗೆ ಸರ್ಕಾರದವರೇ ಆಗಲಿ ಅಥವಾ ಇಲ್ಲಿನ ಸಾಹುಕಾರರೇ ಆಗಲಿ ಸಹಾಯ ಮಾಡುವರೆಂದು ನಂಬಿದ್ದೇನೆ.

ಇಲ್ಲಿನ ಸರ್ಕಾರಿ ಅನ್ನ ಛತ್ರದ ವಿಷಯದಲ್ಲಿ ನನಗೆ ತಿಳಿದ ಮಟ್ಟಿಗೆ ಸೂಚಿಸುತ್ತೇನೆ. ಈ ಛತ್ರಕ್ಕೆ ಪಾರುಪತ್ತೇಗಾರರೇ ಇರುವ ಹಾಗೆ ಕಾಣುವದಿಲ್ಲ. ಇಲ್ಲಿಯ ಧರ್ಮದರ್ಶಿಗಳು ಛತ್ರದ ಉಗ್ರಾಣವನ್ನು ತಮ್ಮ ಸ್ವಂತ ಮನೆಯಲ್ಲಿ ಇಟ್ಟುಕೊಂಡು ಕೆಲಸ ನಡಿಸುತ್ತಿದ್ದಾರೆ. ಮಧ್ಯಾಹ್ನ ಒಂದು ಘಂಟೆಯಾದ ಹೊರತು ಭೋಜನವಾಗುವುದಿಲ್ಲ. ಈ ದುರವಸ್ಥೆಗಳನ್ನೆಲ್ಲಾ ನಮ್ಮ ಅಮಲ್ದಾರರು ಹೋಗಲಾಡಿಸುವರೆಂದು ನಂಬಿದ್ದೇನೆ.

ಎಡಿಟರವರೇ, ಯಡತೊರೆಯು ಹಿಂದಿನ ಪೂರ್ವದಲ್ಲಿ ಆರೋಗ್ಯಸ್ಥಿತಿಯಲ್ಲಿದ್ದದ್ದಕ್ಕೂ ಈಗ ಅನಾರೋಗ್ಯಸ್ಥಿತಿಯಲ್ಲಿರುವುದಕ್ಕೂ ಕಾರಣಗಳನ್ನು ತಾವಾಗಲೀ, ತಮ್ಮ ಪತ್ರಿಕಾ ವಾಚಕರಾಗಲೀ, ಯಡತೊರೆಯ ನಿವಾಸಿಗಳಾಗಲೀ ತಿಳಿಸುವರೆಂದು ನಂಬಿರುವ

ಬಾತ್ಮಿದಾರ

[ಊರಿನ ಸುತ್ತಲೂ ನೀರು ಹರಿಯುವಂಥಾ ಹೊಳೆ ಕಾಲುವೆ ನಾಲೆಗಳು ಗದ್ದೆಗಳು ಇರೋಣದರಿಂದ ಅನಾರೋಗ್ಯಕ್ಕೆ ಕಾರಣ—ಎಡಿ]

ಹೆಣ್ಣುಮಕ್ಕಳನ್ನು ಅಪಹರಿಸಿದ್ದು

ಅಯ್ಯಾ,

ಸೆಪ್ಟಂಬರ್ ೧೩ನೆ ತಾ ತಮ್ಮ ಪತ್ರಿಕೆ ೬ನೆ ಪೇಜಿನಲ್ಲಿ ದಾಖಲಾಗಿರುವ ಹೆಣ್ಣುಮಕ್ಕಳ ಅಪಹರಿಸಿದರೆಂಬ ವಾರ್ತೆಯ ೨ ಸುಳ್ಳೆಂದು ಬೇರೆ ಬಾತ್ಮಿದಾರರಿಂದ ತಿಳಿಯಬಂದದ್ದಾಗಿ ಅದೇ ೨೦ನೆ ತಾ ಪತ್ರಿಕೆ ೩ನೆ ಪೇಜಿನಲ್ಲಿ ಬರೆದಿರುತ್ತೀರಿ. ತಮಗೆ ೨ನೆ ಬಾತ್ಮಿ ಕೊಟ್ಟವರು ತುಂಬಾ ಸುಳ್ಳುಗಾರರು. ಅದರ ನಿಜಾಂಶ ತಿಳಿಯದೆ ಪ್ರಕಟಿಸಿದ್ದು ಪ್ರಯೋಜನವಿಲ್ಲ. ಈ ಮೊಕದ್ದಮಾದಲ್ಲಿ ಹಿರಿಸಾವೆ ದೇವಣ್ಣನ ಚಿಕ್ಕನ ಹೆಣ್ಣುಮಕ್ಕಳು ಜವರಿ, ಮರಿ ಎಂಬವರನ್ನು ಕಿರಿಸಾವೆ ಪಟೇಲ್ ಬೋರೇಗೌಡ ವಗೈರೆರು ಸೇರಿ ತಂದೆಯಾದ ಚಿಕ್ಕನಿಗೆ ಮೋಸಪಡಿಸಿ ಅಪಹರಿಸಿದರೆಂಬ ವಿಷಯ ಹಿಂದೆ ನಡವಳಿಕೆ ನಡದು ಇರುವದಲ್ಲದೆ, ಈಚೆಗೆ ಸ್ಥಳವಿದ್ಯಮಾನ ತಿಳಿಯಲು ಹಿರಿಸಾವೆ ಪೋಲೀಸ್ ಸ್ಟೇಷನ್ದಾರ್ರಿಗೆ ಹುಕುಂ ಬಂದು ಅದರಂತೆ ತನಿಖೆ ಮಾಡುವೋಸ್ಕರ ಚಿಕ್ಕ, ಇವನ ಹೆಂಡತಿ, ಇವರನ್ನು ಸ್ಟೇಷನಿಗೆ ಹಾಜರು ಪಡಿಸಿಕೊಳ್ಳಲಿಕ್ಕೆ ಬಹು ಪ್ರಯಾಸಪಟ್ಟಿದ್ದರಲ್ಲಿ ಚಿಕ್ಕನನ್ನು ಸಿಕ್ಕದಂತೆ ಮರೆಮಾಡಿಸಿದರು. ಇವನ ಹೆಂಡತಿ ಮಾತ್ರ ಸಿಕ್ಕಿದವಳನ್ನು ಕೃಷಿಯತ್ತು ಮಾಡಿದ್ದರಲ್ಲಿ ತನಗೆ ಮೋಸಪಡಿಸಿ ಹೆಣ್ಣುಮಕ್ಕಳನ್ನು ಕರಕೊಂಡು ಹೋದರೆಂಬ ಭಾಗ ಬರೆಸಿರುತ್ತಾಳೆ. ಚಿಕ್ಕನನ್ನು ಅಲಾಹಿದಾ ಚನ್ನರಾಯಪಟ್ಟಣಕ್ಕೆ ಕರೆದುಕೊಂಡುಹೋಗಿ ಪೋಲೀಸ್ ಇನ್ಸ್‌ಪೆಕ್ಟರಲ್ಲಿ ಕೃಷಿಯತ್ತು ಮಾಡಿಸಿರುತ್ತಾರೆ. ಅಲ್ಲದೆ ಈ ಹೆಣ್ಣುಗಳ ಸಂಬಂಧವಾಗಿ ಹಾಸನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿರುವ ಸಿವಿಲ್ ವ್ಯಾಜ್ಯದ ಶ್ರೀಪರಿರಾಯಣೂ ಕಿ... ಪಟೇಲ್ ಬೋರೇಗೌಡ ಇವನ ಮಗನಿಗೆ ಸಹಾ ನಡದಿರುವ ಕೇಸಿನ ಕಾರ್ಡು ಸಹಾ ಹಾಜರಾಗಿರುವದಲ್ಲದೆ ಚಿಕ್ಕನ ಹೆಸರಿನಿಂದ ... ಗೌಡನ ಮಗ ಶಿವನಂಜೇಗೌಡ ಬರದಿರತಕ್ಕ ಒಂದು ಭಾಷಾ ಪತ್ರವು ಈ ಸಂಬಂಧವಾದ್ದೇ ಹಾಜರಾಗಿರುತ್ತೆ. ಈ ಎಲ್ಲಾ ಅಸಲಿ ಫಿರ್ಯಾದಿ ಸಮಕ್ಷಮ ನಡಿಸಲಿಲ್ಲ. ಇದಕ್ಕಾಗಿ ಜವರಿ ಮಾಕಾಳೇಗೌಡನು ವಿವಾದ ನಡಿಸುತ್ತಲೇ ಇದಾನೆ. ಪೋಲೀಸಿನವರು ಇನ್ನೂ ಪೂರೈಸಿಲ್ಲ.

ಹರಿಸಾ...

ರಾಮನಾಥಪುರದಲ್ಲಿ ನಡೆಯುವ ಜಾತ್ರೆ ಸ್ಥಿತಿಯು

ಅಯ್ಯಾ,

ನವಂಬರ್ ತಾ ೨೧ನೇ ಬುಧವಾರ ಈ ಸ್ಥಳದಲ್ಲಿ ನಡೆಯಿತು. ಸುಮಾರು ೪—೫ ಸಹಸ್ರ ಜನರು ಹಾಜರಿದ್ದರು. ಉತ್ಸವ ನಡೆಯಿತು. ಅನೇಕ ಜನರು ಗೋಕಲ್ಲು ಸ್ಥಾನವನ್ನು ... ನಿಂದ ಸಾಯಂಕಾಲದವರೆಗೆ ಎಡೆಬಿಡದೆ ಮಾಡಿದ್ದಲ್ಲದೆ ಮಾ... ಸಹ ಮಾಡುತ್ತಾ ಇದ್ದರು. ಕಲವು ಜನರು ಪಿಶಾಚ ಹಿಡಿದ ಹೆಣ್ಣುಗಳಿಯುತ್ತಾ ಇದ್ದರು. ಈ ಸಂಗತಿಯನ್ನು ವಿಚಾರ ಮಾಡಲಾಗಿ ... ರದಲ್ಲಿ ಗುಳಿ ಯಾ ಪಿಶಾಚಿಗಳು ಹಿಡಿದಿದ್ದಲ್ಲಿ ಗೋಕಲ್ಲು ನು ... ಅವು ಮೈ ತುಂಬಿ ಬರುತ್ತವೆ ಎಂದು ಹೇಳಿಕೊಳ್ಳುತ್ತಿದ್ದರು. ಸ್ಥಳದಲ್ಲಿ ಇದೊಂದು ವಿಶೇಷವಾದ ನೋಟವಾಗಿರುತ್ತೆ. ಈ ಗ... ಲ್ಲಿನ ಸ್ಥಳದಲ್ಲಿಯೂ ಕಾವೇರಿ ಪ್ರವಾಹದ ಇತರ ಕಡೆಗಳ ಸ್ನಾನವನ್ನು ತೀರಿಸಿಕೊಂಡು ದೇವಸ್ಥಾನಗಳಿಗೆ ಪೂಜೆ ಮಾಡಿಸ... ಹೋದರೆ ಅಲ್ಲಿ ಪೂಜಾರಿಗಳ ಕಾಟವು ಸುಲಿಗೆಯೂ ವಿಪರೀತವಾಗಿರುವದರಿಂದ ಈ ಜಾತ್ರೆಗೆ ಬರುವ ಬಡ ಜನರು ತರುವ ಅಲ್ಪ ದ್ರವ್ಯದಲ್ಲಿ ಈ ಪೂಜಾರಿಗಳ ಕಾಟ ಕಳೆದುಕೊಂಡು ತಮ್ಮ ಸ್ಥಳಕ್ಕ್ಯಾಗೆ ತೆರಳ್ಯಾರು?

ಇದೂ ಅಲ್ಲದೆ ಮಾಲಮುತ್ತಾದಿಗಳನ್ನು ಜನರು ಎಲ್ಲಿ ಕಳೆದುಕೊಳ್ಳುವರೋ ಎಂದು ಪೋಲೀಸಿನವರು ನಾಲ್ಕು ಕಣ್ಣುಗಳಿಂದ ದೃಷ್ಟಿ ನೋಡುತ್ತಲೇ ಇರುತ್ತಾರೆ. ಇಂಥ ತಪ್ಪು ಮಾಡಿದವರು ಅವರ ಸಿಕ್ಕಿಬಿದ್ದಲ್ಲಿ ೧ ಆಣೆಯಿಂದ ೧ ರೂಪಾಯಿವರೆಗೆ ರುಸುಂ ತೆಗೆದುಕೊಳ್ಳುತ್ತಾರೆ. ಈ ರುಸುಂ ದೇವರ ಭಂಡಾರಕ್ಕೋ ಯಾ ತಮ್ಮ ... ಗೋ ಎಂಬುವದು ಗೊತ್ತಾಗುವದಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದರು. ಇಂಥಾ ಸ್ಥಳದಲ್ಲಿ ಮಾಲಮುತ್ತುಗಳನ್ನು ಮಾಡಕೂಡದೆಂದು ಡಂಗೂರ ಮೂಲಕವಾಗಲಿ ನೋಟಿಸ್ ಮೂಲಕವಾಗಲಿ ಪ್ರಜನರಿಗೆ ಅರುಹುಗೊಳಿಸಿದ್ದರೆ ಒಬ್ಬ ಒಬ್ಬರು ಇಂಥ ಕಷ್ಟಕ್ಕೆ ಒಳಪಡುತ್ತಿರಲಿಲ್ಲವಾಗಿ ನಂಬುತ್ತೇನೆ.

ಅನೇಕ ಜನ ಸ್ತ್ರೀಯರು ಮನೆಸ್ನಾನವೆಂಬುದಾಗಿ ಗು... ಸುತ್ತಲ ೩ ಉರುಳಿಕೆಯಿಂದು ಬರುತ್ತಾರೆ. ಇಂಥ ಸ್ತ್ರೀಯರು ಶರೀರದಲ್ಲಿ ಧರಿಸಿರುವ ಆಭರಣಗಳನ್ನು ಕಳ್ಳರ ಕಾಕರ ಭಯ ... ಸ್ಕರ ಬಿಚ್ಚದ ಅವಯವಗಳಲ್ಲಿಯೇ ಧರಿಸಿಕೊಂಡು ಉರುಳುತ್ತಾರೆ. ಇಂಥಾ ಸಮಯದಲ್ಲಿ ಅನೇಕ ನಗಗಳು ಬಿದ್ದು ಹೋಗುವೆ. ಅಂಥಾ ಜಾಗಗಳಲ್ಲಿ ತಕ್ಕ ಪೋಲೀಸ್ ಪಹರೆ ಇರಲಿಲ್ಲ. ಒಬ್ಬ ಬ್ರಾಹ್ಮಣ ಸ್ತ್ರೀಯು ಈ ಹರಿಕೆಯನ್ನು ಮಾಡಿಕೊಂಡು ಒರು... ತನ್ನ ಕಿವಿಯಲ್ಲಿದ್ದ ಸುಮಾರು ೫೦—೬೦ ರೂಪಾಯಿ ಬಾಳುವ ವಾಲೆಯು ಕಳಚಿಕೊಂಡು ಬಿದ್ದಿತು. ಅಷ್ಟರಲ್ಲಿ ಆ ತಾಲೂಕ ಆಫೀಸರ ಜವಾನನು ಅದನ್ನು ಇರಿಸಿಕೊಂಡು ತನ್ನ ಜೇಬಿನಲ್ಲಿ ಕೊಂಡನು. ಈ ನಗವನ್ನು ಯಾಕೆ ತೆಗೆದುಕೊಂಡೆ ಎಂದು ಅವನ ಕೇಳುವಾಗ್ಗೆ ಅವನು—ಏನ್ರಿ, ಯಾರಿಗೆ ಕೊಡಬೇಕು? ಎ... ಸೇರುತ್ತಹೋಗಲಿ! ಎಂಬ ಕಾರಣಗಳ ಮೇಲೆ ತೆಗೆದನೆಂದು ಹೇಳಿದನು. ಸಂಭಾಷಣೆಗಳೆಲ್ಲಾ ಆಫೀಸರ ಸಮಕ್ಷಮ ನಡೆಯುತ ... ಇವರು ಯಾವ ಉತ್ತರವೂ ಕೊಡಲಿಲ್ಲ. ಇದು ನೋಡುವಾಗ್ಗೆ ಇವರು ದೇವರ ಸ್ಮರಣೆಯಲ್ಲಿದ್ದರೋ ಯಾ ತಮ್ಮ ಹಿಂಬಾಲಕನ ಕಾರ್ಯ ತಪ್ಪಿತವಲ್ಲವೆಂಬ ಯೋಚನೆಯಲ್ಲಿದ್ದರೋ ಎಂಬುವದು ಗೊತ್ತಾಗಲಿಲ್ಲ. ಈ ವಾಲೆ ಬಿದ್ದ ಸ್ಥಳಕ್ಕೂ ಅಮಲ್ದಾರರು ಇದ್ದ ಸ್ಥಳಕ್ಕೂ ಸುಮಾರು ೫ ಅಡಿ ದೂರ ಇರಬಹುದು.

ಜೂಗಾರ್ ಆಟವು ಎಲ್ಲಾ ಕಡೆಯಲ್ಲೂ ನಿರ್ಭಯವಾಗಿಯೇ ನಡೆಯುತ್ತಿತ್ತು. ಇಂಥ ಸಂಗತಿಗಳು ಪೋಲೀಸಿನವರ ಗಮನಕ್ಕೆ ಬರಹೋಗಲಿಲ್ಲ. ಇಂಥ ಸಂಗತಿಗಳನ್ನು ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರೂ ದಿವಾನರವರೂ ದಯಪಾಲಿಸಿ ಗಮನಕ್ಕೆ ತೆಗೆದುಕೊಂಡು, ಇನ್ನು ಮುಂದೆಯಾದರೂ ಬಡ ಜನರ ಮೇಲ್ಪಡುವ ಕಷ್ಟ ನಷ್ಟಗಳನ್ನು ಪರಿಹರಿಸುವರೆಂದು ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಲೋಕಾಭಿಮಾನಿ

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ—ಊರಿನಲ್ಲಿ ೨—೩ ದಿನಗಳಿಂದ ಮೋಡ ಕಿರುಗಾಡುತ್ತಾ ಇರುವದರಿಂದ ತುಂತುರುಗಳು ಬೀಳುತ್ತಿವೆ. ಚಳಿ ಜೋರಾಗಿರುವದರಿಂದ ಇಬ್ಬನಿಯು ಬೆಳಗಿನ ಹೊತ್ತು ಜೋರಾಗಿ ಬೀಳುತ್ತಿದೆ. ಹವಾ ಬದಲಾವಣೆಯಿಂದ ಜನರಿಗೆ ತಲೆನೋವು ಜ್ವರ ಮುಂತಾದ ರೋಗಗಳು ಇವೆ —ನಮ್ಮ ಸ್ಥಳದ ಪೋಲೀಸು ಕೆಲಸವು ಚೆನ್ನಾಗಿ ನಡೆಯುತ್ತಿದೆ. ವೇಳೆವೇಳೆಗೆ ಬೀಟು ಸರಿಯಾಗಿ ಕೊಡುತ್ತಿರುವದರಿಂದ ಕಳ್ಳತನದ ಸುಳಿವು ಕಂಡು ಬಂದಿಲ್ಲ. ನಮ್ಮ ಟೌನಿಗೆ ಪೋಲೀಸು ಸಿಬ್ಬಂದಿ ಸಾಲದು. ಇನ್ನೂ ಹೆಚ್ಚಿಸಿ ಕೊಡಬೇಕು. ಮುರಸಭೆಯಲ್ಲಿ ಈಗಿನ ಜಮಾದಾರ್ ರಾಮಸ್ವಾಮಯ್ಯರಿಂದ ಸಲ್ಪಮಟ್ಟಿಗೆ ಉಸ್ತುವಾರಿಯು ಚನ್ನಾಗಿದೆ ಎಂದು ಕೇಳುತ್ತೇನೆ. ಸುಳ್ಳು ...

...ದಲ್ಲಿ ಒಂದೆರಡು ... ಸಂದಿರಬೇಕು ಆದರೂ ಈಗಿನ ...ವನ್ನು ಇನ್ನು ಕಡಿಮೆಮಾಡಿ ಯೋಗ್ಯತಾನುಸಾರ ನಮ್ಮ ಪೋಲೀ... ಮುತುವರ್ಜಿ ವಹಿಸಿ ನಡೆದುಕೊಂಡರೆ ಅನು... —ಎಲ್ಲಾ ವಿಧದಲ್ಲೂ ನಮ್ಮ ಸ್ಕೂಲಿಗೆ ಸೇರಿದ ಹಾಗೆ ಅಂಗ... ಏರ್ಪಾಡು ಯಾವದೂ ಇಲ್ಲ ಬಾಲಕರಿಗೆ ಅಂಗಸಾಧನೆ ...ದ ಅಭಿರುಚಿ ಹೇಗೆ ಹುಟ್ಟುವದು ? ಮೊದಲು ಊರಿನ ದಕ್ಷಿಣ ...ಮೈದಾನದಲ್ಲಿ ಬಾಲಕರು ಫುಟ್‌ಬಾಲ್, ಕ್ರಿಕೆಟ್ ಆಡುತ್ತಿ... ಆದರೆ ಮೈದಾನವೂ ಸುತ್ತಲೂ ಬಹು ಮಾಲೀಕರ ಕಳ್ಳಿಗಳಿಂದ ...ಟ್ಟು ತೊಂದರೆ ಕೊಡುತ್ತಿದ್ದದ್ದರಿಂದ ಆಡುವುದನ್ನು ನಿಲ್ಲಿಸಿ... ಸ್ಥಳಾಧಿಕಾರಿಗಳು ಆಕ್ಕ ಸ್ಥಳವನ್ನು ಏರ್ಪಾಡುಮಾಡಿ ...ಪ್ರಯೋಜನಕರ —ನೆನ್ನೆ ನಮ್ಮ ಆಮಲ್ದಾರರೂ ಮೆಡಿಕ ...ಸ್ಯಾನಿಟರಿ ಆಫೀಸರೂ, ಸಬ್ ರಿಜಿಸ್ಟ್ರಾರರೂ, ಇತರ ...ಳೊಡನೆ ಊರಿನ ಎಲ್ಲಾ ಭಾಗಗಳನ್ನೂ ನೋಡಿಕೊಂಡು ... ಸ್ಯಾನಿಟರಿ ವಿಚಾರವನ್ನು ಪರೀಕ್ಷಿಸಿದ್ದಕ್ಕಾಗಿಯೂ, ನಮ್ಮ ...ರು ಜನರ ಕಷ್ಟಕಾಲದಲ್ಲಿ ಯೋಗಕ್ಷೇಮವಿಚಾರಿಸುವುದನ್ನು ...ದ್ದಕ್ಕಾಗಿಯೂ ಸಂತೋಷಪಡುತ್ತೇನೆ —ನಮ್ಮ ದೇವಸ್ಥಾ... ...ರ ವಿಷಯದಲ್ಲಿ ಕೆಲವರ ನಾನಾ ವಿಧವಾಗಿ ಜಗಳಾಡು... ...ಕೊಳ್ಳುತ್ತಿರುವರು ... ಮೇಲ್ಪಟ್ಟವರು ವಿಚಾರಿಸಬೇಕಾಗಿದೆ ...ನದ ಸಮಾರಾಧನೆ ಚನ್ನಾಗಿ ನಡೆಯಿತೆಂದು ತಿಳಿಡಿದೆ

...ಮಗಳೂರು.—ಇಲ್ಲಿ ೩—೪ ದಿನಗಳಿಂದ ಮೋಡ... ...ಕೊಂಡು ಗಾಳಿ ಬೀಸುತ್ತಾ ಸಣ್ಣಗೆ ಸೋನೆ ಮಳೆಯು ಉದು... ಇದೆ ವಿಪರೀತವಾಗಿದ್ದ ಛಳಿಯು ಮೋಡದ ದೆಸೆಯಿಂದ ...ಯಾದರೂ ತೊಗರಿ ಅವರೆ ಫಸಲಿಗೆ ನಷ್ಟವಾಯಿತು ಬತ್ತದ ...ಕಟಾವಾಗುತ್ತಿದೆ ಧಾರಣೆವಾಸಿ ಸ್ವಲ್ಪ ಇಳಿದಂತೆ ಇದೆ — ...೪ ನೆ ತಾ ರಸಿಡೆಂಟರವರ ಸವಾರಿಯು ಈ ಊರಿಗೆ ... ಆ ದಿನ ರಾತ್ರಿಯ ಭೋಜನವು ಇಲ್ಲಿನ ಯೂರೋ... ...ಕ್ಲಬ್ಬಿನಲ್ಲಿ ನಡೆಯಿತು ಮಾರನೆ ದಿನ ಬೆಳಿಗ್ಗೆ ರಸಿಡೆಂಟರು ...ಪ್ಲೇಗ್ ಕ್ಯಾಂಪನ್ನು ನೋಡಿಕೊಂಡು ಪೇಟೆಯಲ್ಲಿ ಜನ ...ಸುತ್ತಿರುವ ಗುಡಿಸಲುಗಳನ್ನು ಪರಿಶೀಲಿಸಿ ಪೇಟೆಯ ರಸ್ತೆ... ...ದು ಬರುವಾಗ ಕೆಲವು ಮಹಮ್ಮದೀಯರು ಅವರನ್ನು ...ನ್ನು ಹೊಸ ಡೆಪ್ಯುಟಿ ಕಮಿಷನರ್ ಸಾಹೇಬರು ಬಂದನಂತರ ...ವರಿಗೆ ಒಳ್ಳೇದನ್ನು ಮಾಡಿದಾನೆ ಉಪದ್ರವೇನೂ ಇಲ್ಲ ...ದಲ್ಲಿ ತಿರುಗಿ ನಾವು ಊರನ್ನು ಬಿಟ್ಟು ಪಡ್ಡುಗಳಿಗೆ ಹೋಗು... ...ಥವನ್ನು ಮನ್ನಾ ಮಾಡಿಸಿ ಕೊಡಬೇಕೆಂದು ಕೇಳಿಕೊಂ... ...ಅದಕ್ಕೆ ರಸಿಡೆಂಟರು ಡೆಪ್ಯುಟಿ ಕಮಿಷನರ ಕಡೆಗೆ ತೋರಿಸಿ ...ಹೇಳಿಕೊಳ್ಳುವಂತೆ ಅಪ್ಪಣೆ ಕೊಟ್ಟರೆಂದೂ ಕೇಳುತ್ತೇನೆ. ...ಜೆಂಗಸರ ಆಸ್ಪತ್ರೆಯನ್ನು ನೋಡಿಕೊಂಡು ತಮ್ಮ ಬಿಡಾ... ...ರು ಆ ದಿನ ಸಾಯಂಕಾಲ ಕೆಲವು ಊರಿನ ಮುಖಂಡರು ...ಹೋಗಿ ಅವರನ್ನು ಕಾಣಿಸಿಕೊಂಡಾಗ ಅವರ ಸಂಗಡ ಸ್ವಲ್ಪ ...ಉಚಿತವಾದ ಮಾತುಗಳನ್ನಾಡಿದರೆಂದು ವರ್ತಮಾನ ...ನ ಸಾಯಂಕಾಲ ಸಕ್ಕರೆಪಟ್ಟಣಕ್ಕೆ ಹೊರಟರು ರಸಿಡೆಂಟರು ...ಪ್ರಾಂತ್ಯ ಒಂದು ಭಾರೀ ಹುಲಿಯನ್ನು ಷಿಕಾರಿ ಮಾಡಿದ ...ಕೇಳುತ್ತೇನೆ —ಊರಿಗೇನೋ ಜನರು ಬಂದು ಸೇರಿಕೊಳ್ಳು... ...ಆದರೆ ಊರು ಇನ್ನು ಪಾಕಾಗಿಲ್ಲ ಬಹುಕಡೆ ಗಲೀಜು ಹೆಚ್ಚು... ...ಸಿಪಾಲಿಟಿಯವರು ಊರಿನ ಪಾಕೀಜಿನ ವಿಷಯ ನಿಗಾ ...ವದು ಒಳ್ಳೇದು —ಈಗ ಸಂತೆ ನಡೆಯುವ ಸ್ಥಳವು ತುಂಡೇರಿ... ...ಗಳಲ್ಲಿರುವವರಿಗೆ ಅನಕೂಲವಾಗಿದ್ದರೂ ಗವನಳ್ಳಿ ಕೋಟೆಕಡೆ... ...ವರಿಗೆ ದೂರವಾದ್ದರಿಂದ ಮೊದಲಿದ್ದ ಸ್ಥಳದಲ್ಲಿಯೇ ಇದ್ದರೆ ...ನೂ ಇಲ್ಲವೆಂದುತೋರುತ್ತದೆ —ಕೆಲವು ವರ್ತಕರು ಅಂಗ... ...ನ್ನು ಮುಚ್ಚಿಕೊಂಡು ಹೊರಗೆ ಹೋಗಿದ್ದರಷ್ಟೆ ತಿರುಗಿ ಬಂದು ...ಅಂಗಡಿಗಳಲ್ಲಿದ್ದ ನಾತಬಡಿಯುವ ಹಾಪ್ಪ ಜೀನುತುಪ್ಪ ಇವುಗ... ...ಕಮ್ಮಿ ಖರೀದಿಗೆ ಬಿಕರಿ ಮಾಡುತ್ತಾರೆಂದು ಕೇಳುತ್ತೇನೆ ...ಕ್ಟರ ಡಾಕ್ಟರಿಗೆ ತೋರಿಸಿ ಅವರ ಅಭಿಪ್ರಾಯ ಪಡೆದು ಅಂಥಾ ...ಗಳಿಂದ ಕೆಡಕಿಲ್ಲವೆಂದು ತಿಳಿದ ನಂತರ ಬಿಕರಿ ಮಾಡುವದು ...ದು

ದೊಡ್ಡಬಳ್ಳಾಪುರ.—ಇಲ್ಲಿ ನಾಲ್ಕು ವರ್ಷಗಳಿಂದ ಇದ್ದ ...ರ್ ಮೆ॥ ಚಂಗಲ್ ನಾಯಡ್ಡರ ಮೈಸೂರಿಗೆ ಹೋದರು ಈಗ ...ಅಗರಿಮಾನಡಲು ನಾಯಡ್ಡರವರು ಬಂದಿದಾರೆ ಇವರು ಕಾ... ...ಯವರನ್ನು ಬಹು ಆಶ್ಚರ್ಯದಿಂದ ನೋಡುತ್ತಾರೆ ಇವರು ...ಮುಂದೆ ಜನರ ಪ್ರೀತಿ ಗೌರವಗಳನ್ನು ಬಹುಮಟ್ಟಿಗೆ ಸಂಪಾದಿ... ...ಡು ತೋರುತ್ತೆ —ಈಗ ಕೊಡಗಳ್ಳಿಯಲ್ಲಿ ಪಟೇಲ್ ಅರಸೇ... ...ಸ್ಕೂಲ್ ಮಾಸ್ಟರೂ ಸೇರಿ ಒಂದು ರೀಡಿಂಗ್ ರೂಂ ಮಾಡು... ...ಸಿದ್ಧ ಮಾಡಿದಾರೆ.—ಇಲ್ಲಿ ಕ್ಯಾಂಪು ಕೂಡುತ್ತಾ ಇದೆ. ನಾಗ... ...ಳ್ಳಿಯಲ್ಲಿ ನೇಟಿವ್ ಸಿಪಾಯಿಗಳು ಕೋಳಿಯ ವ್ಯಾಜ್ಯದಿಂದ ...ಅ ಹಳ್ಳಿಯವರನ್ನು ಹೊಡೆದು ತಲೆಗಳಲ್ಲಿ ಗಾಯ ಮಾಡಿದರು ...ನ್ನು ಆಸ್ಪತ್ರೆಯಲ್ಲಿಟ್ಟು ಅವರನ್ನು ವಿಚಾರಣೆಗೆ ಗುರಿಮಾಡಿ ...—ಇಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ರಾಧ್ರಪ್ಪನವರನ್ನು ಒಂದು ...ಮೊಕದ್ದಮೆಯಲ್ಲಿ ಸಸ್ಪೆಂಡ್ ಮಾಡಿದ್ದರು ಈಗ ಇವರನ್ನು ...ಕೆಲಸ ನಡೆಯುವಂತೆ ಮಾಡುತ್ತಾರಂತೆ ಇವರಿಗೆ ಬದ್ಲಿ ಮೆ॥ ಕೃ... ...ಸ್ವಾಮಿಯಪ್ಪ ಬಂದಿದಾರೆ ಮೆ॥ ಕಾರ್ ಸಾಹೇಬರ ಸವಾರಿಯು ...ಕಡೆಯಿಂದ ಮೋಟಾರ್ ಕಾರ್ ಗಾಡಿಯಲ್ಲಿ ತಾ ೬ ರಲ್ಲಿ ...ಟು ತೂಬಗೆರೆ ಪೋಲೀಸ್ ಸ್ಟೇಷನನ್ನು ಹೆಗ್ಗಡಿಹಳ್ಳಿಗೆ ವರ್ಗ... ...ರು —ತಾ. ೩ ರಲ್ಲಿ ಗವರ್ನಮೆಂಟ್ ಸ್ಕೂಲಿನಲ್ಲಿ ಒಂದು ಸಭೆ... ...ಮೆ॥ ಕಾರ್ ದೊರೆ ದೊರಸಾನಮ್ಮನವರು ಆಗ್ರಾಸನವನ್ನು ವಹಿ... ...ಮೆ॥ ಕೊಂಗಾಡಿಯಪ್ಪನವರು ಸ್ಕೂಲ್ ರಿಪೋರ್ಟ್ ಓದಿ... ...ತರುವಾಯ ಲೇಡಿ ಕಾರ್‌ಯವರು ಸ್ವಹಸ್ತದಿಂದ ಹುಡುಗರಿ... ...ಹುಡುಗಿಯರಿಗೂ ಪುಸ್ತಕಗಳನ್ನೂ ಕೈಗಾರಿಕೆ ಸ್ಕೂಲ್ ಹುಡುಗ... ...ಗಳನ್ನೂ ಬಹುಮಾನ ಕೊಟ್ಟರು. ಮೆ॥ ಕಾರ್ ಸಾಹೇಬ...

...ರು ಸ್ಕೂಲಿನ ಅಭಿವೃದ್ಧಿಯನ್ನು ತಿಳಿದು ತುಂಬಾ ಸಂತೋಷಪಟ್ಟು ಇನ್ನೂ ಅಭಿವೃದ್ಧಿ ಹೊಂದುವದಕ್ಕೆ ಸಂದೇಹವಿಲ್ಲವೆಂದು ಅಪ್ಪಣೆ ಕೊಡಿಸಿದರು ಅನಂತರ ಶತಾವಧಾನಿ ಮೆ॥ ಶ್ರೀನಿವಾಸಯ್ಯಂಗಾರರು ತಮ್ಮ ವಿದ್ಯೆಯನ್ನು ತೋರ್ಪಡಿಸಿ ಎಲ್ಲರನ್ನೂ ತುಂಬಾ ಆನಂದಪಡಿಸಿದರು ಮಾರನೇ ದಿನ ಸ್ಕೂಲಿನವರಿಗೆಲ್ಲಾ ಮಿಠಾಯಿ ಕೊಟ್ಟರು ಮೆ॥ ಕಾರ್ ಸಾಹೇಬರು ಕೈಗಾರಿಕೆ ಸ್ಕೂಲಿಗೆ ಹೋಗಿ ಎಲ್ಲವನ್ನೂ ನೋಡಿ ಸಂತೋಷಪಟ್ಟರು —ಇಲ್ಲಿ ತಾ ಮೇಸ್ತ್ರಿ ಮೆ॥ ವೀರಪ್ಪನವರು ಕಾಲಿನಲ್ಲಿ ಹುಣ್ಣು ಎದ್ದು, ಅದೇ ಕಾಯಿಲೆಯಿಂದ ಸತ್ತುಹೋದರು ಇವರು ಜನರಲ್ಲಿ ಪ್ರೀತಿಯುಳ್ಳವರಾಗಿದ್ದರು ಇವರಿಗೆ ಬಹುಮಂದಿ ಸಣ್ಣಮಕ್ಕಳು ಇದಾರೆ ಇವರ ಸಂಸಾರ ಮಕ್ಕಳಿಗೆ ದೇವರು ಒಳ್ಳೇದನ್ನು ಮಾಡಲಿ ಎಂದು ಎಲ್ಲರೂ ಕೋರುತ್ತಾರೆ —ಮೆಳೆಕೋಟೆಯಲ್ಲಿ ಜಿರಾಯತಿ ಕೋಡಹಳ್ಳಿ ರಾಮಣ್ಣನವರು ಸುಮಾರು ೨॥ ಸಾವಿರ ರೂಪಾಯಿಗೆ ಒಂದು ಛತ್ರವನ್ನೂ ೩-೪ ಸಾವಿರ ರೂಪಾಯಿಗೆ ರಾಮ ದೇವರ ದೇವಸ್ಥಾನವನ್ನೂ ಕಟ್ಟಿಸುತ್ತಾ ಇದಾರೆ ಛತ್ರವು ಪೂರೈಸ ತ್ತಾ ಬಂದಿದೆ ಇವರು ಛತ್ರ, ದೇವಸ್ಥಾನದ ಫಂಡಿಗಾಗಿ ೨೪ ಸಾವಿರ ರೂಪಾಯಿ ಹಾಕಿ ಇದರ ಬಡ್ಡಿಯಿಂದ ಅದರ ಖರ್ಚು ನಡೆಯುವ ಹಾಗೆ ಯತ್ನಮಾಡಿರುವದು ಇಲ್ಲಿರುವವರಿಗೆ ತುಂಬಾ ಸಂತೋಷವೂ ಪ್ರೋತ್ಸಾಹವೂ ಆಗಿದೆ

ಹೊಸಕೋಟೆ —ಇದೇ ತಿಂಗಳು ತಾ ೩ ರಲ್ಲು ಇಲ್ಲಿಯ ಎ ವಿ ಸ್ಕೂಲಿನಲ್ಲಿ ಶತಾವಧಾನವೂ ಹರಿಕಥೆಯೂ ನಡೆದವು ಇವೆರಡನ್ನೂ ನೋಡಲು ಇಲ್ಲಿಯ ದೊಡ್ಡ ದೊಡ್ಡ ಆಫೀಸರುಗಳೂ, ಮುನಿಸಿಪಾಲಿಟಿ ಮೆಂಬರುಗಳೂ, ವರ್ತಕರೂ, ಬೇರೆ ಜನರೂ, ಇನ್ನೂ ಸುತ್ತಲಿನ ಗ್ರಾಮಗಳ ಮುಖ್ಯಸ್ಥರೂ ನೇರೆಯವರೂ ನೆರೆದಿದ್ದರು ಶತಾವಧಾನಿಗಳು ದೊಡ್ಡವರ ಶಿಫಾರಸು ಪತ್ರಹೊಂದಿ ಬಂದಿದ್ದರಿಂದ ನಮ್ಮ ಅಮಲ್ದಾರರು ಇವರನ್ನು (ಶತಾವಧಾನಿಯನ್ನು) ಕಾಳಿದವರೆಲ್ಲಾ ಕೇಳಿ ವಿಸ್ಮಯಾನಂದಗಳನ್ನು ಪಡೆಯುವಂತೆ ಏರ್ಪಡಿಸಿದ್ದರು ಶತಾವಧಾನಿಗಳು ಸಭಾ ಮಧ್ಯೆ ಕೂತಿರಲು, ಕನ್ನಡ, ಲತೀನ, ಮಹಾರಾಷ್ಟ್ರ, ಫಾರ್ಸಿ, ಸಂಸ್ಕೃತ, ಈ ಭಾಷೆಗಳಲ್ಲಿಯೂ ಗಣಿತ, ಜ್ಯೋತಿಷ್ಯಗಳಲ್ಲಿಯೂ ಕೇಳಿದ್ದಾಯಿತು ಈ ಐದು ಭಾಷೆಗಳಲ್ಲಿ ತಯಾರು ಮಾಡಿ ಬಂದವರು ೧೦—೧೪ ಶಬ್ದಗಳುಳ್ಳ ಒಂದು ವಾಕ್ಯವನ್ನು ರಚಿಸಿರಬೇಕಾಯಿತು ಪ್ರಶ್ನೆಯು ಐದು ಭಾಷೆಯಲ್ಲಿರುವ ವಾಕ್ಯಗಳಿರುವರು ಈ ಶಬ್ದ ಇಷ್ಟನೇದು, ಇನ್ನೊಂದು ಶಬ್ದ ಈ ನಂಬ್ರದು ಅಂತ ಹೇಳಬೇಕಾಯಿತು ವಾಕ್ಯಗಳಲ್ಲಿರುವ ಶಬ್ದ ತೀರಿದನಂತರ ಪಂಚ ಭಾಷೆಯವರು ಮಿಶ್ರಿತ ಶಬ್ದಗಳಿರುವ ತಮ್ಮ ತಮ್ಮ ವಾಕ್ಯಗಳಿಗೆ ಶಬ್ದ ಕ್ರಮವಿರುವ ತಮ್ಮ ವಾಕ್ಯಗಳು ಇಂಥವೇ ಎಂತ ಉತ್ತರ ಕೊಂಡಿದರು ಗಣಿತ, ಜ್ಯೋತಿಷ್ಯ ಇತ್ಯಾದಿಯವರೂ ತಮ್ಮ ತಕ್ಕ ಉತ್ತರ ಹೊಂದಿದರು ಬೇರೆ ಭಾಷೆ ಬಲ್ಲವರು ಕೇಳಲಿಕ್ಕೆ ಹೋದರೆ ಪಂಚ ಭಾಷೆಗಳಿರುವದೇ ಸಾಕೆಂತ ಶತಾವಧಾನಿಗಳು ಉತ್ತರವಿತ್ತರು —ಇವರದು ತೀರಿದನಂತರ ಹರಿಕಥೆಯಾಯಿತು ಬೆಳಿಗ್ಗೆ ಇಬ್ಬರಿಗೆ ಅವರವರ ಯೋಗ್ಯತಾನುಸಾರ ಬಹುಮಾನ ಕೊಟ್ಟು ಕಳುಹಿಸಿದರು.—ನಮ್ಮ ಆಮಲ್ದಾರ್ರು ಸವಾರಿ ಆಗಾಗ್ಗೆ ಊರೊಳಗೆ ಹೊರಟರೂ ಇಲ್ಲಿಯ ಮ್ಯುನಿಸಿಪಾಲಿಟಿ ಬಹಳ ಅನಸ್ಯವಾಗಿರುತ್ತೆ ಬೀದಿ ರಸ್ತೆ ಗುಡಿಸುವ ಜಾಡಮಾಲಿಗಳು ರಸ್ತೆ ಕೆಲ ಕಡೆ ಚೆನ್ನಾಗಿ ಗುಡಿಸಿದರೂ, ಕೆಲ ಕಡೆ ಸರಿಕೆ ಕಡ್ಡಿಯನ್ನೇ ಮೈಲಿಗೆ ಪರಕೆಗಳಲ್ಲಿ ಹತ್ತುವದೋ ಎಂತ ಗುಡಿಸುವದೇ ಇಲ್ಲ ಕೆಲ ಕಡೆ ಅಲ್ಲಲ್ಲಿ ಪರಿಕೆ ಕಡ್ಡಿ ಮುಟ್ಟಿಸಿ ಓಡುತ್ತಾರೆ ಈ ಊರಿನ ಅನೇಕ ಕಡೆಗಳಲ್ಲಿ ಸಂದು ಗೊಂದುಗಳಲ್ಲಿ ಬಹಳ ಗಲೀಜು, ಚರಂಡಿಗಳೆಲ್ಲಾ ಹಾಯು ಹೋಗುವ ಜನಗಳಿಗೆ ನಮ್ಮಲ್ಲಿ ದುರ್ವಾಸನೇ, ಶುಚಿ ಮಾಡುವವರಿಲ್ಲ, ಇಲ್ಲಿ ಹಾದುಹೋಗಬೇಡಿರಿ ಅನ್ನುತ್ತವೆ ಉತ್ತಮರೆನ್ನಿಸಿಕೊಳ್ಳುವವರ ಬೀದಿಯಲ್ಲಿಯೂ ಬಹು ಗಲೀಜು, ದುರ್ವಾಸನೆಯಿಂದ ಕೂಡಿರುತ್ತದೆ. ಸಂದುಗೊಂದುಗಳಲ್ಲಿ ಹೇಳುವದೇನದೆ ? ಲಾಂದ್ರಗಳು ರಾತ್ರಿಯಲ್ಲಿ ಅನೇಕ ಸಲ ಮಿಣುಕು ದೀಪಗಳಂತೆ ಉರಿಯುತ್ತವೆ ಕೆಲಸಲ ಕೆಲಕಡೆಯ ಲಾಂದ್ರಗಳನ್ನು ಹಚ್ಚುವದೇ ಇಲ್ಲ ಬೇರೆ ಟೌನಿನ ಮುನ್ಸಿಪಾಲಿಟಿ ಮೆಂಬರುಗಳು ಈ ಊರ ಮುನ್ಸಿಪಾಲಿಟಿ ನೋಡಿ ನಗುತ್ತಾರೆ ಈ ಊರು ಅನಾರೋಗ್ಯ ಸ್ಥಳವೆಂತ ಮೊದಲೇ ಪ್ರಖ್ಯಾತಿಯಾಗಿದ್ದಕ್ಕೂ ಈಗ ಗಲೀಜಾಗಿರುವದಕ್ಕೂ ಸರಿಹೋಗಿದೆ ಆದ್ದರಿಂದ ಮುನ್ಸಿಪಾಲಿಟಿ ಮೆಂಬರುಗಳು ಚಿತ್ತವಿಟ್ಟು ಊರು ಆರೋಗ್ಯಸ್ಥಿತಿಗೆ ಬರುವಂತೆ ಮಾಡಿದರೆ ಪ್ರಜೆಗಳಮೇಲೆ ತುಂಬಾ ಉಪಕಾರ ತೋರಿಸಿದಂತಾಗುತ್ತೆ

ವಿದೇಶ ವರ್ತಮಾನಗಳು

ಪರ್ಷಿಯಾ ರಾಜ್ಯದ ಷಾ ಸುಲ್ತಾನರಿಗೆ ಕಾಯಿಲೆಯಾಗಿದೆ ಎಂತಲೂ ಯುವರಾಜರಿಗೆ ಜರ್ಮನಿಯಿಂದ ಕೂಡಲೆ ಹೊರಟು ಬರುವಂತೆ ತಂತೀ ವರ್ತಮಾನಕೊಟ್ಟು ಕರೆಸಿಕೊಂಡಿದಾರೆಂತಲೂ ತಿಳಿಯುವುದು

****

ಯುದ್ಧಕಾಲದಲ್ಲಿ ಸೈನಿಕರಿಗೆಲ್ಲಾ ಹೊಗೆಸೊಪ್ಪನ್ನು (ಸಿಗರೆಟ್, ಬೀಡಿ, ಚುಟ್ಟಾ) ಕ್ರಯವಿಲ್ಲದೆ ಸರ್ಕಾರದಿಂದ ಬಿಟ್ಟಿ ಸರಬರಾಯಿ ಮಾಡುವಂತೆ ಇಂಗ್ಲಿಷ್ ಯುದ್ಧದ ಇಲಾಖೆಯವರು ಗೊತ್ತು ಮಾಡಿದಾರೆ

****

ಆಸ್ಟ್ರೇಲಿಯಾ ಎಂಬ ಬ್ರಿಟಿಷರ ಸ್ವತಂತ್ರಸಂಸ್ಥಾನದಲ್ಲಿ ಸ್ತ್ರೀಯರು ಅಲ್ಲಿನ ಪಾರ್ಲಿಮೆಂಟಿಗೆ ಮೆಂಬರುಗಳನ್ನು ಆರಿಸುವ ಹಕ್ಕನ್ನು ಪಡೆಯಬೇಕೆಂದು ತುಂಬಾ ಸಾಹಸಪಟ್ಟರು ಅಲ್ಲಿನ ಪಾರ್ಲಿಮೆಂಟ್ ಮೆಂಬರುಗಳು ಅದನ್ನು ಒಪ್ಪದೇ ಹೋದರು.

****

ಲಂಡನ್ ಪಟ್ಟಣದಿಂದ ಮ್ಯಾಂಚಸ್ಟರ್ ಪಟ್ಟಣಕ್ಕೆ ಒಂದೇ ದಿನಕ್ಕೆ ಹೋಗಿ ತಲಪುವಂಥಾ ವಿಮಾನವನ್ನು ಕಟ್ಟಿ ಅದರಲ್ಲಿ ಹೋಗಿಬಂದು ಪ್ರದರ್ಶನಮಾಡುವಂಥಾ ಮನುಷ್ಯನಿಗೆ ೧೫,೦೦೦ ರೂಪಾಯಿ ಬಹುಮಾನ ಕೊಡುತ್ತೇವೆಂದು ಡೇಲಿ ಮೇಯಿಲ್ ಎಂಬ ವರ್ತಮಾನ ಪತ್ರಿಕೆಯ ಅಧ್ಯಕ್ಷರು ತಿಳಿಸುತ್ತಾರೆ

ಕಳೆದ ನೋವೆಂಬರ್ ೩ ರಲ್ಲಿ ಅಫ್ಘಾನ್ ತುರ್ಕಿಸ್ಥಾನ್ ಎಂಬ ಪ್ರಾಂತ್ಯದಲ್ಲಿ ಬಹು ಭಯಂಕರವಾದ ಭೂಕಂಪವಾಯಿತು ಐದು ನಿಮಿಷಗಳ ತನಕ ನೆಲವು ನಡುಗುತ್ತಿದ್ದದ್ದರಿಂದ ಟಾಷ್‌ಕರ್ಗಾನ ಲ್ಲೂ ಹೈಬಾಕಿನಲ್ಲೂ ಐದನೇ ಒಂದು ಪಾಲಿನಷ್ಟು ಮನೆಗಳು ನಾಶವಾದವು ಅನೇಕಾನೇಕರು ಅಕಾಲಮರಣವನ್ನು ಹೊಂದಿದರೆಂದು ತಿಳಿಸಲು ವಿಷಾದಿಸುವೆವು

****

ಅಮೇರಿಕಕ್ಕೆ ಸೇರಿದ ವರ್ಜೀನಿಯಾ ದಿಸ್ಟ್ರಿಕ್ಟಿನಲ್ಲಿ ರೈಲ್ ಗಾಡಿಗಳು ಲಿಂಚ್‌ಬಾರ್ ಎಂಬ ಊರಿನ ಬಳಿ ಉರುಳಿಕೊಂಡು ಅನಾಹುತವಾಯಿತು. ಐದು ಜನರು ಅಲ್ಲೇ ಮೃತಪಟ್ಟರು. ಗಾಡಿಗಳೆಲ್ಲಾ ಹತ್ತಿಕೊಂಡು ಉರಿದು ಹೋದವು ಆ ರೈಲ್ವೆ ಬೋರ್ಡಿನ ಪ್ರಸಿಡೆಂಟಾಗಿದ್ದ ಮೆ॥ ಸ್ಪೆನ್ಸರ್ ಎಂಬಾತನು ಉರಿಯಲ್ಲಿ ಸಿಕ್ಕಿ ಬೆಂದು ಸತ್ತನು

****

ಪರ್ಷಿಯಾ ಗವರ್ನಮೆಂಟಿನವರು ಪರರಾಜ್ಯಗಳಿಂದ ನಾಲ್ಕು ಕೋಟಿ ರೂಪಾಯಿಯನ್ನು ಬಡ್ಡಿಗೆ ಸಾಲ ತರಬೇಕೆಂದು ಗೊತ್ತು ಮಾಡಿದ್ದರು. ಆದರೆ ಆ ರಾಜ್ಯದಲ್ಲಿ ಈಗತಾನೆ ಪ್ರಾರಂಭವಾದ ಹೊಸ ಪಾರ್ಲಿಮೆಂಟಿನಲ್ಲಿ ಈ ವಿಷಯವು ಚರ್ಚೆಯಾಗಿ ಪರರಾಜ್ಯಗಳಿಂದ ಸಾಲ ತರಕೂಡದೆಂತಲೂ ಸ್ವದೇಶದ ಬ್ಯಾಂಕುಗಳಲ್ಲೂ ಸಾಹುಕಾರರಿಂದಲೂ ಆ ಸಾಲವನ್ನು ತೆಗೆದುಕೊಳ್ಳಬೇಕೆಂತಲೂ ತೀರ್ಮಾನ ಮಾಡಿರುತ್ತಾರೆ

****

ವಿಲಾಯತಿಗೆ ಸೇರಿದ ಲಿವರ್ಪೂಲ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು ಪ್ರಜೆಗಳ ಬಟ್ಟೆಬರೆಗಳನ್ನು ಒಗೆಯುವುದಕ್ಕೆ ಚೀನಾ ಅಗಸರನ್ನು ನೇಮಕಮಾಡಿದರು ಅಲ್ಲಿನ ಸ್ವದೇಶೀ ಅಗಸರು ಆ ಚೀನಿಯವರು ಇಳಿದುಕೊಂಡಿದ್ದ ಕ್ಯಾಂಪಿಗೆ ನುಗ್ಗಿ ಅವರನ್ನು ಹಿಡಿದು ಹೊಡಿಯುವದಕ್ಕಾರಂಭಿಸಿದರು ಕಲ್ಲುಗಳನ್ನು ಅವರ ಮನೆಗಳಿಗೆ ಬೀರಿ ಕಿಟಕಿ ಕದಗಳನ್ನು ಒಡೆಯುತ್ತಿದ್ದರು ಅಷ್ಟರಲ್ಲೇ ಪೋಲೀಸಿನವರು ಹೋಗಿ ಗಲಭೆಯನ್ನೂ ಜಗಳವನ್ನೂ ತಪ್ಪಿಸಿದರು

****

ಪ್ರಪಂಚದ ಎಲ್ಲಾ ಕಡೆಗಳಿಗೂ ಹತ್ತಿ ಬಟ್ಟೆಗಳು ತಯಾರಾಗಿ ರವಾನೆಯಾಗುವ ಲಾಂಕಾಷೀರಿನ ಕಾರ್ಖಾನೆಗಳ ಯಜಮಾನರು ಅಮೇರಿಕಕ್ಕೆ ಸೇರಿದ ಲೌಸಿಯಾನಾ, ಮಿಸಿಸಿಪಿ ಎಂಬ ದಿಸ್ಟ್ರಿಕ್ಟುಗಳಲ್ಲಿ ೧೦,೦೦೦ ಎಕರೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡು, ಆ ಜಮೀನುಗಳಲ್ಲೆಲ್ಲಾ ಉತ್ಕೃಷ್ಟವಾದ ಹತ್ತಿಯನ್ನು ಬೆಳೆಯಬೇಕೆಂತಲೂ, ಆ ಹತ್ತಿಯನ್ನೇ ವಿಲಾಯತಿಗೆ ತಂದು ತಮ್ಮ ಕಾರ್ಖಾನೆಗಳಲ್ಲಿ ಬಟ್ಟೆಗಳನ್ನು ತಯಾರುಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕೆಂತಲೂ ತೀರ್ಮಾನಿಸಿ ಕೊಂಡಿದಾರೆ.

****

ದಕ್ಷಿಣ ಆಫ್ರಿಕಕ್ಕೆ ಸೇರಿದ ನಟಾಲಿನಲ್ಲಿ ಸ್ವದೇಶಿಗಳು ಸರ್ಕಾರದವರ ನಿರಂಕುಶವನ್ನು ತಪ್ಪಿಸಿಕೊಂಡು ಕೆಲವು ಸ್ವಾತಂತ್ರ್ಯಗಳನ್ನು ಸಂಪಾದಿಸಿಕೊಳ್ಳಬೇಕೆಂದು ಈಗೀಗ ಸಾಹಸ ಪಡಲಾರಂಭಿಸಿದಾರೆ. ಅವರು ಕೇಳುವುದೇನೆಂದರೆ—ಪಿಸ್ತೂಲು ಬಂದೂಕಗಳನ್ನು ಕೊಂಡು ಇಟ್ಟುಕೊಳ್ಳುವುದು, ತಮ್ಮತಮ್ಮ ಮುಖಂಡರೊಡನೆ ಕಲೆತು ಸಭೆಗಳನ್ನು ನಡಿಸಿಕೊಳ್ಳುವುದು, ಈಗಿರುವ ಮನೆತೆರಿಗೆಯನ್ನು ವಜಾ ಮಾಡಿ ಇನ್ಯಾವದಾದರೂ ಒಂದು ಕಂದಾಯವನ್ನು ತೆಗೆದುಕೊಳ್ಳಬೇಕೆಂಬುವುದು, ತಾವು ಒಪ್ಪಿ ಚುನಾಯಿಸಿದ ಬಿಳೀ ಜನರನ್ನು ಪಾರ್ಲಿಮೆಂಟಿಗೆ ಮೆಂಬರಾಗಿ ಸೇರಿಕೊಳ್ಳಬೇಕೆಂಬುವುದು ಈ ಮೊದಲಾದ ಕೆಲವು ಸ್ವಾತಂತ್ರ್ಯಗಳನ್ನು ಇಂಗ್ಲಿಷ್ ಸರ್ಕಾರದವರು ತಮಗೆ ವಹಿಸಬೇಕೆಂದು ಅಲ್ಲಿನ ಜನರು ಕೇಳಿದಾರೆ

****

ವಿಲಾಯತಿಯಲ್ಲಿ ಸರ್ಕಾರದವರು ಪ್ರಜೆಗಳ ಆದಾಯದ ಮೇಲೆ ತೆರಿಗೆ ಹಾಕಿ ವಸೂಲ್ಮಾಡುತ್ತಿದಾರಷ್ಟೆ. ಈ ತೆರಿಗೆಯನ್ನು ಎಷ್ಟುಮಟ್ಟಿಗೆ ಪ್ರಜೆಗಳಿಗೆ ಅನುಕೂಲವಾಗುವಂತೆ ಕ್ರಮಪಡಿಸಬಹುದೆಂದು ತನಿಖೆ ಮಾಡಿ ರಿಪೋರ್ಟ್ ಕೊಡಬೇಕೆಂಬದಾಗಿ ಸರ್ಕಾರದವರು ಕೆಲವು ದೊಡ್ಡ ಮನುಷ್ಯರನ್ನು ನೇಮಿಸಿದರು ಈ ಕಮಿಟಿಯವರು ವಿಚಾರಣೆಯನ್ನೆಲ್ಲಾ ಪೂರೈಸಿ ತಿಳಿಸಿರುವುದೇನೆಂದರೆ—ವರ್ಷಕ್ಕೆ ೧೫,೦೦೦ ರೂಪಾಯಿ ವರಮಾನಕ್ಕಿಂತ ಕಮ್ಮಿ ಬರತಕ್ಕವರಿಗೆ ಈ ತೆರಿಗೆಯನ್ನು ವಜಾ ಮಾಡಬೇಕು ಸಂವತ್ಸರಕ್ಕೆ ೭೫,೦೦೦ ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚು ವರಮಾನ ಇರತಕ್ಕವರಿಗೆ ಹೆಚ್ಚು ದರದ ತೆರಿಗೆಯನ್ನು ಹಾಕಿ ವಸೂಲ್ಮಾಡಬಹುದು ಎಂಬುದೇ ಗವರ್ನಮೆಂಟಿನವರು ಇದರ ಮೇಲೆ ಹ್ಯಾಗೆ ತೀರ್ಮಾನ ಮಾಡುವರೋ ಮುಂದೆ ಗೊತ್ತಾಗಬೇಕು

****

ರಷ್ಯಾ ರಾಜ್ಯದ ಪೋಲ್ಯಾಂಡ್ ಎಂಬ ಅಧಿಪತ್ಯದಲ್ಲಿ ಭಯಂಕರವಾದ ಕ್ಷಾಮ ಪ್ರಾಪ್ತವಾಗಿದೆ ಎಂದು ತಿಳಿಸಿದ್ದೇವಷ್ಟೆ ಸರ್ಕಾರದವರು ಎಂ. ಗುರ್ಕೊ ಎಂಬೊಬ್ಬ ಉದ್ಯೋಗಸ್ಥರನ್ನು ಕ್ಷಾಮ ನಿವಾರಣೆಯ ಕಾರ್ಯಕ್ಕೆ ನೇಮಕ ಮಾಡಿ ಕಳುಹಿಸಿಕೊಟ್ಟರು ಈತನು ಸಾಮಾನು ಮುಂತಾದ್ದನ್ನು ಬಿಕರಿ ಮಾಡುವಂಥಾ ಒಬ್ಬ ವರ್ತಕನಿಗೆ ೬೦ ಲಕ್ಷ ರೂಪಾಯಿನ ಗೋಧಿಯನ್ನು ತಂದು ಸರಬರಾಯಿ ಮಾಡಬೇಕೆಂದು ಕಂಟ್ರಾಕ್ಟು ವಹಿಸಿ, ಅಡ್ವಾನ್ಸಿಗಾಗಿ ೧೦ ಲಕ್ಷ ರೂಪಾಯನ್ನು ಅವನಿಗೆ ಪಾವತಿ ಮಾಡಿದನು ಗೋಧಿಯನ್ನು ಅವನು ತಂದು ಒದಗಿಸಲಿಲ್ಲ. ಇತರ ವರ್ತಕರು ಕಾಲಕ್ಕೆ ಸರಿಯಾಗಿ ದವಸ ಒದಗಲಿಲ್ಲವಾದ್ದರಿಂದ ಕ್ಷಾಮ ಪೀಡಿತರಿಗೆ ತಾವು ದವಸವನ್ನು ಬಿಕರಿ ಮಾಡುವದು ಅಸಾಧ್ಯವಾಗಿದೆ ಎಂದು ಗೋಣಗುಟ್ಟುತ್ತಿದಾರೆ. ಈ ವಿಷಯದಲ್ಲಿ ಆ ಅಧಿಕಾರಿಯನ್ನು ಯಾಕೆ ಹೀಗಾಯಿತೆಂದು ಮಂತ್ರಿಗಳು ಕೇಳಿದ್ದಕ್ಕೆ ಅತನು ಅವರಿಗೆ ಸಮಾಧಾನ ಹೇಳುವುದಿಲ್ಲವೆಂತಲೂ ಚಕ್ರವರ್ತಿಯವರೇ ತನ್ನನ್ನು ಕರೆಸಿ ಕೇಳಿದಾಗ ಉತ್ತರ ಕೊಡುತ್ತೇನೆಂತಲೂ ತಿರಸ್ಕಾರ ಮಾಡಿಬಿಟ್ಟನು ಹೀಗಾದರೆ ಕ್ಷಾಮ ಪೀಡಿತರ ಕಷ್ಟ ನೀಗುವುದೆಂದಿಗೆ ?

ಜರ್ಮನಿ ರಾಜ್ಯಕ್ಕೆ ಸೇರಿದ ವೆಸ್ಟ್ ಫೇಲಿಯಾ ಎಂಬ ಭಾಗದಲ್ಲಿ ವಿಟ್ಟೆನ್ ಎಂಬೀಂದು ಗ್ರಾಮವಿದೆ ಈ ಗ್ರಾಮದಲ್ಲಿ ಒಂದು ವಿಸ್ತಾರವಾದ ಕಾರ್ಖಾನೆಯಲ್ಲಿ ಜಬೆ ತಯಾರಾಗುವ ಎಂಜಿನ್‌ಗಳು ಮಹಾ ಶಬ್ದದೊನೆ ಒಡೆದು ಅನಾಹುತವಾಯಿತು ಈ ಅನಾಹುತದಿಂದ ಅನ್ನೆನ್ ಎಂಬ ಗ್ರಾಮವೇ ಹಾಳಾಯಿತು ಡಾರ್ಟ್‌ಮಂಡ್ ಎಂಬೊಂದು ಸಮೀಪದ ಗ್ರಾಮದಲ್ಲಿ ಮನೆಗಳ ಕಿಟಕಿ ಕದಗಳೆಲ್ಲಾ ಒಡೆದುಹೋದವು ಆ ಕಾರ್ಖಾನೆ ಇದ್ದ ಸ್ಥಳಕೆಲ್ಲಾ ನೀರು ತುಂಬಿಕೊಂಡಿತು ಈ ಅನಾಹುತದಲ್ಲಿ ೪೦ ಜನರು ಹತರಾದರು ೨೫೦ ಮಂದಿಗೆ ನಾನಾ ಗಾಯಗಳಾಗಿವೆ ೩೦ ಜನರು ಬದುಕುವ ಹಾಗಿಲ್ಲ. ೨,೦೦೦ ಜನರು ಮನೆ ಮಠಗಳನ್ನು ಕಳೆದುಕೊಂಡು ಅಲೆಯುವಂತಾಗಿದೆ ಇದರಿಂದ ೨—೩ ಕೋಟಿ ದ್ರವ್ಯ ನಷ್ಟವಾಯಿತೆಂದು ತಿಳಿಯುವುದು ಕಷ್ಟ ಪಡುವ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಅಲ್ಲಿನವರು ಒಂದು ರಿಲೀಫ್ ಫಂಡನ್ನು ಕೂಡಿಸುತ್ತಿರಲು ಜರ್ಮನಿ ಚಕ್ರವರ್ತಿಯವರು ತುಂಬಾ ಕನಿಕರಪಟ್ಟು ಆ ಫಂಡಿಗೆ ೨೫,೦೦೦ ದ್ರವ್ಯವನ್ನು ಕಳುಹಿಸಿಕೊಟ್ಟರು

ಪ್ರಕಟನೆಗಳು.

ಮಹಿಳಾಸಖೀ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149-2

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮದ್ದಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು.

ಒಗಟಿಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ.—೧ ಸಂಚಿಕೆಗೆ ೭ ಕಾಸು

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದ್ರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು.—

ಮ್ಯಾನೇಜರ್, ಸಿ. ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಗೋ! ಕನ್ನಡ "ಮಾಡೆಲ್" ಪಾಕೆಟ್ ಡೈರಿ!

133-9

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!!



೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್‌ನಲ್ಲಿ ಅಚ್ಚು ಹಾಕಿಸಿರುತ್ತೇವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಜಮಾಬರ್ತಿನ ಪಟ್ಟಿ, ಹೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜು, ರಜಾ ದಿನಗಳು, ಕಟ್ಟುಗಳು, ಕ್ಯಾಲೆಂಡರು, (ಗ್ರಹಕುಂಡಲಿ ಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ.

ಕ್ರಯ.—

ನಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦, ಪನ್ನೆರಡು ಡೈರಿಗಳಿಗೆ ೯ ಇನಾಮು.

ನಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೦—೭—೦, ಪನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೭—೦; ಪನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಪನ್ನೆರಡು ಡೈರಿಗಳಿಗೆ ೧ ಇನಾಮು

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಗೊಂಡಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ. ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಪಿ. ನತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ (ಅಡ್ವಾನ್ಸು) . . . . . ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ . . . . . ರೂ. ೧—೧೪—

" " ೬ " " ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ನಮ್ಮ ವಿಳಾಸ:—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 57-39

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ಒಂಟೂ ರುಚಿಯಾಗಿರುವುದರಿಂದ ಮಕ್ಕಳು ಬಹು ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯವಾಗಿಸುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು.

ಈ ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಸನ್ ೧೯೦೭ ನೇ ಇಸವಿಯ

151-1

ಎಂ ನಂ॥ ಎಫ್. ನಂ॥ ಬಿ ನಂ॥ ಸಿ. ನಂ॥ ಹೆಚ್. ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಖುಷ್‌ಬಾಷ್‌ಸಮಸ್ತರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಹೋಬಿ ಲೆಕ್ಕ, ಜಮಾಬರ್ತಿನಪಟ್ಟಿ ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಆಮೆ ಸಾಪ್ರಾನ್ ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ

ಎ ನಂಬರ್ ಚಿಕ್ಕಸೈಜು ೩ ಆಣೆ ಸಿ ನಂಬರು ದೊಡ್ಡಸೈಜು ೬ ಆ

ಎಫ್. " " ೪ " ಎಚ್ " " ೭ "

ಬಿ. " ಮುಚ್ಚಳದ್ದು ೫ " ಡಿ. " ಮುಚ್ಚಳದ್ದು ೮ "

ಪೋಸ್ಟು ಚಾರ್ಜು ಬೇರೆ. ಒಂದೇ ನಮೂನೆಯ ೧೦ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ. ವಿ. ಪಿ. ಮೂಲಕವೂ ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಜಾರ್ಡನ್ ಪ್ರೆಸ್, ಬೆಂಗಳೂರು ಸಿಟಿ. } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

23—11—1906 ರಿಂದ 30—11—1906 ರ

ಸ್ಥಳ.	ಪ್ಲೇಗ್ ತಗಲಿದ್ದು.	ಸತ್ತದ್ದು.	ಕೋ...
ಬೆಂಗಳೂರು ಪಟ್ಟಣ	7	8	3
ಮೈಸೂರು "	20	1.	0
ಬೆಂಗಳೂರು ಡಿಸ್ಟ್ರಿಕ್ಟು	21	9	3
ಮೈಸೂರು "	2	1	4
ಕೋಲಾರ್ "	0	0	0
ಕೋಲಾರ್ ಚಿನ್ನದ ಗಣಿಗಳು	1	1	6
ತುಂಕೂರು ಡಿಸ್ಟ್ರಿಕ್ಟು	6	3	3
ಹಾಸನ "	36	32	2
ಚಿತ್ರದುರ್ಗ "	0	0	1
ಕಡೂರ್ "	14	13	6
ಶಿವಮೊಗ್ಗ "	3	3	3
ಜುಮ್ಲಾ.	115	76	34

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಮಾರ್ಗಶಿರ ಬಹುಳ ದ್ವಾದಶಿ ಗುರುವಾರದಿಂದ ಪುಷ್ಯ ಚೌತಿ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಡಿಸೆಂಬರ್

ತಾ.	ವಾರ.		ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ
13	ಗುರು	§	ದ್ವಾದಶಿ	3 2	ಅನುರಾ	54 42
14	ಶುಕ್ರ	¶	ಚತುರ್ದಶಿ	52-2	ಜ್ಯೇ	49-4
15	ಶನಿವಾ	†	ಅಮಾವಾಸ್ಯ	46-16	ಮೂ	45-13
16	ರವಿವಾ	‡	ಪಾಡ್ಯ	40-22	ಪೂ	40-38
17	ಚಂದ್ರ	*	ಬಿದಿಗೆ	34-29	ಪೂಷಾ	36-42
18	ಕುಜ	.	ತದಿಗೆ	29-29	ಉತ್ತಾ	33 20
19	ಬುಧ	;,	ಚೌತಿ	24-50	ಶ್ರ	30-28

§ ಪ್ರದೋಷ, ಸಾಧನದ್ವಾದಶಿ. ¶ ಮಾಸಶಿವರಾತ್ರಿ † ಪುಣ್ಯಕಾಲ, ಸರ್ವತ್ರಅಮಾವಾಸ್ಯ ‡ ಶೂನ್ಯಮಾಸಾರಂಭ, ಸಿದ್ಧಿಯೋಗ. ಧನುರ್ಮಾಸಪೂಜಾ * ಚಂದ್ರೋದಯ, ಯೋಗ ಬಿಲ್‌ಕಾಪ್ ಚಂದು ೧. ,, ದೂರ್ವಾಗಣಪತೀ ಪ್ರ

ಪೇಟೇ ಧಾರಣೆ.

ದಿನಸಿ.	ಮೈಸೂರು.
ಕಟ್ಟೀ ಅಕ್ಕಿ ಪಲ್ಲಾ ೧ಕ್ಕೆ ರೂ.	೧೩-೮-೦
ಕೆಂಬೂತಿ ಅಕ್ಕಿ ಅವಲ್	೧೨-೮-೦
" ದುಯ್ಯಂ	೧೩-೦-೦
ಜಾದ್ರಣ ಅಕ್ಕಿ	೧೩-೦-೦
ಸಣ್ಣಕ್ಕಿ ಅವಲ್	೧೫-೦-೦
" ದುಯ್ಯಂ	೧೪-೦-೦
ತೊಗರೀ ಬೇಳೆ ಪಲ್ಲಾ ೧ಕ್ಕೆ	೧೨-೮-೦
" ದುಯ್ಯಂ	೧೨-೬-೦
ಹುರುಳಿ ಪಲ್ಲಾ ೧ಕ್ಕೆ	೬-೮-೦
ಕಾದ್ರಾಗಿ	೬-೦-೦
ಜೋಳ	೫-೮-೦
ಹಲಸಂದೆ ಪಲ್ಲಾ ೧ಕ್ಕೆ	೧೧-೮-೦
ಬಿಳೀ ಅವರೆ	೯-೦-೦
ಹೆಸರು	೧೧-೮-೦
ಉದ್ದು	೧೨-೪-೦
ಕಡಲೆ	೧೨-೦-೦
ಎಳ್ಳು ಸೆ. ೧೨೩ ಕ್ಕೆ	೧೮-೮-೦
ಹುರುಳಿ	೩-೧೨-೦
ಹರಳು ೧೨೩ ಸೇರಿಗೆ	೧೯-೦-೦
ಸೀಗೇಕಾಯಿ ಮಣ ೧ಕ್ಕೆ	೨-೨-೦
ಮೆಣಸಿನಕಾಯಿ	೪-೦-೦
" ದುಯ್ಯಂ	೩-೪-೦
ಬೆಲ್ಲ ದೊಡ್ಡ ಅಚ್ಚು	೩-೧೨-೦
ಒಳ್ಳೆಣ್ಣೆ ಮಣ ೧ಕ್ಕೆ	೫-೮-೦
ಹರಳೆಣ್ಣೆ "	೬-೧೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೧೧-೦-೦
ಉಪ್ಪು "	೬-೦-೦
ಹುಣಿಸೇ ಹಣ್ಣು	೦-೧೨-೦
" ಸಳೇದು	೦-೮-೦
ತುಪ್ಪ ಮಣ ೧ಕ್ಕೆ	೧೩-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೪-೦
ತೆಂಗಿನಕಾಯಿ ೧೦೦ ಕ್ಕೆ	೬-೮-೦
ಅಡಿಕೇಕಾಯಿ ಮಣ ೧ಕ್ಕೆ	೧-೦-೦
ಅಂಟ್ವಾಳದ ಕಾಯಿ ಮಣ ೧ಕ್ಕೆ	೦-೧೨-೦
ಚಿನ್ನ (ಪೌನ್) ಕೆಂಪು	೧೫-೪-೦
" " ಪಸುಮೆ	೧೫-೧೦-೦
" " ಗಟ್ಟಿ ತೊಲ ೧ಕ್ಕೆ	೨೩-೧೨-೦
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	೮೫-೦-೦

Printed and published by the Rev. E. THOMPSON, M.A., the Proprietor and M... Wesleyan Mission Press, Mysore. 13/12/...

ವೃತ್ತಾಂತ ಪತ್ರಿಕೆ.

REGISTERED M. 20

ಯ ೧ ದು ಡ್ಡು ——— ತ್ರ ಯ ೧ ದು ಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ ಮೈಸೂರು—ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೨೯

ಕೊಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

ಬೇಯಿಸಿ ಇರುವದು ಅಥವಾ ಆಗತಾನೆ ಹುರಿದದ್ದು ಕಾರ್ಖಾನೆಯ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು.

85 45

ವ್ಯಾಪಾರದ ಹೆಗ್ಗುರ್ತು

ಕಾಡುಕೋಣದ ತಲೆಯ ಮುದ್ರೆ ಇದೆ

ಸಂಪೂರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು ಹೆಗ್ಗುರ್ತು ಇಲ್ಲದ ಬೇರೆ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ ಅವು ಬೇಕಿಲ್ಲ ಏಜಂಟರುಗಳು ಬೇಕು ಇಂಥವರಿಗೆ ಅಲಾಯದ ದರ ಕೊಡುವವರು ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ

ವಿಳಾಸ.—ಮ್ಯಾನೇಜರ್, ಮ್ಯಾಥಿಸನ್ಸ್ ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ 112 8

ಸಾಧಾರಣ ಜ್ವರ, ಹಳೇಜ್ವರ, ಮೊರೇಜ್ವರ, ಪಿತ್ಥಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ [illegible] ಬಹು ಬೇಗನೆ ವಾಸಿಮಾಡುವದು

[illegible] ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುದಾಮತ್ [illegible]ಟ್ ಡಿವಿಜನ್ ಆಫೀಸರ್ ಎಸ್ ಟಿ ವೆಂಕಟಪತಿ ಅಯ್ಯ[illegible] ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ೨೦ [illegible] ಸೀಸೆಯೂ ತೀರಿಹೋಯಿತು ಇಷ್ಟು ಸ್ವಲ್ಪ ಕಾಲದಲ್ಲೇ [illegible] ಔಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ [illegible] ಹೊಂದಿರುವರು ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವ[illegible] ದಯವಿಟ್ಟು ಇನ್ನೊಂದು ೨೦ ಡಜನಿನ ಸೀಸೆಯನ್ನು ವಿ ಪಿ ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ[illegible]

ಕ್ರಯ —ಸೀಸ ೧ ಕ್ಕೆ ೮ ಆಣೆ, ೧ ರೂ, ೧—೮ ರೂ, [illegible] ೨—೧೨ ಆ, ೧೧ ರೂ, ಹನ್ನೆರಡು ಸೀಸ ತರಿಸಿಕೊಂಡರೆ [illegible] ಮಾಫಿ ಬಿಡಲಾಗುವದು.

****

ಬಿ ಮು ೦ ಕ ಪೂ ರ ರ.

* ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳ್ಳಿ[illegible], ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾ[illegible] ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡ[illegible] ಕಟ ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ [illegible]ನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ [illegible] ಅವು ಜ್ವರಹರಿ ಎಂಬ ಔಷಧದವಂತೆಯೇ ಸೀಸೆಗಳಲ್ಲಿ [illegible]

[illegible] ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಬೆನ್ನಿಯ [illegible] ಕರ್ಪೂರವನ್ನು ನಾನು ನನ್ನ ಡಾಕ್ಟರುಗಳ ಮ್ಯುನಿಸಿಪಲ್ [illegible]ಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅಜೀರ್ಣ[illegible], ಅಜೀರ್ಣ ರೋಗಿಷ್ಟರಿಗೆ ಕೊಡುತ್ತೇವೆ ಕೊಟ್ಟ [illegible] ರೋಗವು ಗುಣವಾಗುತ್ತಲಿದೆ ಇದು ಬಹು ಒಳ್ಳೆ ಔಷಧ [illegible]

* ನಾಲ್ಕು ಔಷಧಗಳೂ ಊರುಗಳಲ್ಲಿರುವ ವೈದ್ಯಶಾಲೆಗ[illegible] ದೊಡ್ಡ ಡಾಕ್ಟರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ[illegible] [illegible] ಇಲ್ಲದೆ ಕೆಳಗಿನ ವಿಳಾಸದಾರರಲ್ಲಿ ವಿಶೇಷ [illegible] ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ,

[illegible] ಟೌನ್, ಮದ್ರಾಸ್.

ಬೇಕಾಗಿದೆ.

153 1

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು

ಮುಂಬಯಿ ವ್ಯಾಪಾರಮಾಡಲಿಚ್ಛಿಸುವವರು.

85 29

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯುಳ್ಳ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ ಯಿಂದ ಕಳುಹಿಸುವೆವು ಟಪಾಲು ಖರ್ಚು ಬೇರೆ ಬಾಳಷ್ಟು ಸೇಲರರಿಗೆ ಯೋಗ್ಯ ಕಮಿಷನ್ ದೊರೆಯುವದು ಮತ್ತು ಲಿಂಗಾಯತ ಧರ್ಮಸಂಬಂಧ ವಿರಕ್ತೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ—ನಾಲ್ಕು ಆಣೆ ಚಲೋ ಅಕ್ಷರದಿಂದ ಬರೆಯಿರಿ ಪತ್ತಾ ಚನ್ನಬಸಪ್ಪ ಎಲ್ಲಪ್ಪ ಪಾರದ, ಪೋಷ್ಟ್ ಮಾಂಡ್ವಿ, ಮುಂಬಯಿ.

ಒಂದು ಪುಡಿಗೆ ೩ ಪೈ. ನೋಡಿರಿ!
ಒಂದು ಪುಡಿಗೆ ೩ ಪೈ.

152 1

ಸ್ವದೇಶಿ ಕಾಯಿ ಡಿಪೋ!

ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧಪಟ್ಟ ನಮ್ಮ ಉತ್ತಮವಾದ ನೀಲಿ, ಕಪ್ಪು, ಕೆಂಪು, ಜಾಂಬಳಿ, ಹಸರು ಕಾಯಿಪುಡಿಯ ಗ್ರಾಹಕರಿಗೆ ೬ ಆಣೆಯ ಕಾಯಿಮೇಲೆ ೧೦೦ ಪಸ್ಸೀಕಾರ್ಡುಗಳು, ೬ ಆಣೆಯ ಮೇಲೆ ತಾಂಬೆ-ಲಖಿಸಾರ ಡಬ್ಬಿ ೧, ಇಲ್ಲವೆ H B ಪೇನಸಿಲ ಡಜನ ೧, ೮ ಆಣೆಯಮೇಲೆ ೧೦೦ ಫೆನ್ಸಿ ಕವರು ಅರಾ ಗಂಧದ ಚದುರಂಗದ ಬೋರ್ಡ ೧೨ ಆಣೆಯ ಮೇಲೆ ನಿಬ್ಬುಗಳ ಪೇನ (ಒಮ್ಮೆ ಕಾಯಿ ತುಂಬಿದರೆ ೩೦,೦೦೦ ಶಬ್ದ ಬರೆಯುತ್ತದೆ) ೧ ರೂಪಾಯಿಯಮೇಲೆ ಶ್ರೀಗಂಧದ ಗಿಳಿಯ ಆಕಾರದ ಬೀಸಣಿಗೆ ೨ ರೂಪಾಯಿಯಮೇಲೆ ಕಿಶಿಯೊಳಗಿನ ಓಡಾವ್ನ (ಬೇಕಷ್ಟು ಅಚ್ಚುಗಳನ್ನು ಛಾಪಿಸಿಕೊಳ್ಳಬಹುದು) ೨ ರೂಪಾಯಿ ೧೨ ಆಣೆಯ ಮೇಲೆ ಟಕಾವು ಟಾಯಿಮ ಪೀಸ ಘಡಿಯಾರ, ೬ ರೂಪಾಯಿಯ ಮೇಲೆ ಪುಣೆ ಮನೋವೇಧಕ ಪ್ರೆಸ್ಸಿನ ೧೨೫ ಸುಂದರ ಚಿತ್ರಗಳು, ೬ ರೂಪಾಯಿಯ ಮೇಲೆ ಸುಂದರ ಪೆಟ್ಟಿಗೆ ಫುಕಟ!! ಟಪಾಲ ಖರ್ಚು ಬೇರೆ

ವಿಶೇಷ ಮಾಹಿತಿ ಪತ್ರದ್ವಾರ, ನಮ್ಮ ವಿಳಾಸ —

ಗಣಪತಿ ನಾಗಪ್ಪ ತಾರೀಬಾಗಿಲ, ಮ್ಯಾನೇಜರ,

ಪೋಸ್ಟ ಹೊನ್ನಾವರ, ಜಿಲ್ಲಾ ಕಾನಡಾ

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್

122—14

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನು ಸ್ಯಾಂಕ್ಷನ್ ಮಾಡುವ ಕಂಡಿಷನ್ನಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಸ್ಪೆಸಲ್ ಮಾಡಿರುತ್ತಾರೆ

ನಿಯಮಿಕ ಮೂಲಧನ ಶೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೪೮ ಸಾವಿರ ಷೇರುಗಳಿಂದಾಗುವ ೧೨ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನು ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಭಾವತಿ ಮಾಡತಕ್ಕದ್ದು ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ

ಈ ಕಂಪನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥಾವರು ಈ ಕೆಳಗೆ ರುಜುವ ಮಾಡಿರುವ ನನಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರ ಹಣವನ್ನು ಈ ಕೆಳಗೆ ರುಜು ಮಾಡಿದ ನನಗೆ, ಇವರಿಂದ [illegible] ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರ [illegible] ಮದ್ರಾಸು ಬ್ಯಾಂಕಿಗೆ (ಈ ಕಂಪನಿಯ ಕ್ರೆಡಿಟ್ಟಿಗೆ) ಅಥವಾ ಮೈಸೂರು [illegible] ತಾಲ್ಲೂಕು [illegible] ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ಹಿ) ಬಿ ವಿ [illegible]ಸ್ವಾಮಿ ಶೆಟ್ಟಿ, ಬಿ ಎ,

ಅಡ್ವೋಕೇಟ್ ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ

ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್

ನಗರ್ತಪೇಟೆ ಬೆಂಗಳೂರು ಸಿಟಿ

ಬೆಳಗೆ ಬೆಳ್ಳಿ—ಗುಣಕ್ಕೆ ಭಂಗಾರ.

86 30

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನುಳುಕುವದು, ತಲೆನೋವು, ಕೆಮ್ಮು ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂದುಂಟಾಗುವ ಬಾಧೆಗಳು, ಕೈಕಾಲು ಮಡಕ, ಇವುಗಳಿಗೆ ಕ್ಲೆಮೆಂಟ್ಸ್‌ರವರ ಗಾರಿಡಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು ಬಾಧೆಯನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟಿ ಇದೆ ಆ ಕೆಲಸವನ್ನು ಅದು ಮಾಡುವದು ಕೀಲುಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ ೩ ಕ್ಕೆ ೨ ರೂಪಾಯಿ ೬ ಕ್ಕೆ ೩॥ ರೂಪಾಯಿ ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ

ನಮ್ಮ ವಿಳಾಸ —ಎಫ್ ಡಬ್ಲ್ಯು ಆರ್ಮ,

ಪಿಮೆಂಟ್ರು ರೋಡ್, ವೇಪರಿ, ಮದರಾಸ್

"ಅರೇಬಿಯನ್ ನೈಟ್ಸ್

150 3

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದುದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು ಛಾಪಿ ಪುಸ್ತಕ ಟಾಪಿಯೂ ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ ಮೂಲಕ ೨—೩—೦ ಹತ್ತು ಅಥವಾ ಹದಿನೈದು ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು ಇದನ್ನು ಬಡವರೂ ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾಡುತ್ತೇವೆ ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ ನಮ್ಮ ವಿಳಾಸ —

ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು

ಹಿಂದೂದೇಶಪ್ರದಕ್ಷಿಣ.

ಈ ನೂತನ ಪುಸ್ತಕದ ೧ನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿಸಿರುತ್ತೇವೆ ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸಿದ ಅನೇಕರಿಗೆ ಇದು ದೊರೆಯದೆ ವ್ಯಸನಕ್ಕೀಡಾದರು ಈಗಲಾದರೂ ಜಾಗ್ರತೆಯಿಂದ ಒಡನೆ ವಿ ಪಿ ಮೂಲಕ ತರಿಸಿಕೊಳ್ಳಿ ಇದರಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವುಗಳ ವರ್ಣನೆಗಳೂ ಪುರಾತನ ಚರಿತ್ರೆಯುಳ್ಳ ಕಟ್ಟಡಗಳೂ ಅವುಗಳ ಚಿತ್ರಗಳೂ ಇದರಲ್ಲಿ ಅಡಗಿವೆ ಇದರಲ್ಲಿ ಸುಮಾರು [illegible] ಪ್ರಸಿದ್ಧವಾದ ಚಿತ್ರಗಳಿರುತ್ತವೆ ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವದಕ್ಕಿಂತಲೂ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಹೆಚ್ಚು ಪ್ರಯೋಜನವಾಗುವದರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ ವಿ ಪಿ ಮೂಲಕ ತರಿಸಿದರೆ ೧೧ ಆಣೆ [illegible]

ಮ್ಯಾನೇಜರ್ ಸಿ ಎಲ್. ಎಸ್ ಬುಕ್ ಡಿಪೋ ಮೈಸೂರು.

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಕ್ಯಾಲೆಂಡರ್ ಕಾಗದ, ಐದು ದೊಡ್ಡ ಚಿತ್ರಗಳು.

೧೯೦೭ನೆ ವರ್ಷದ ಕ್ಯಾಲೆಂಡರನ್ನು ದೊಡ್ಡ ಸೈಜಿನಲ್ಲಿ ಬಹು ನೇತ್ರಾನಂದಕರವಾಗಿ ಪ್ರಿಂಟುಮಾಡುತ್ತಿದ್ದೇವೆ. ಇದರಲ್ಲಿ ಶ್ರೀಮತ್ ಮಹಾರಾಜರವರು ಕೃಪೆಯಿಟ್ಟು ಕಳುಹಿಸಿರುವ ಅವರ ಬಹಳ ದೊಡ್ಡದಾದ ಭಾವಚಿತ್ರವೂ, ದಿವಾನರವರ, ಛೀಫ್ ಜಡ್ಜರ ಫೋಟೋಗಳೂ ಇತರ ಚಿತ್ರಗಳೂ ಇರುತ್ತವೆ. ಈ ಕ್ಯಾಲೆಂಡರನ್ನು ಬಹಳ ಕೊಂಚವಾಗಿಯೇ ಪ್ರಿಂಟುಮಾಡುತ್ತೇವಾದ್ದರಿಂದಲೂ, ಮುಂದಿನ ಜನವರಿ ಆಖೈರಿನೊಳಗಾಗಿ ನಮ್ಮ ಪತ್ರಿಕೆಗೆ ಚಂದಾ ಕಳುಹಿಸಿರತಕ್ಕವರಿಗೆ ಮಾತ್ರವೇ ಒಂದೊಂದನ್ನು ಪುಗಸಟ್ಟೆ ಕೊಡುತ್ತೇವಾದ್ದರಿಂದಲೂ ವಾಚಕರು ಜಾಗ್ರತೆಮಾಡಿ ಒಂದೊಂದು ಕ್ಯಾಲೆಂಡರನ್ನು ಪಡೆಯಬೇಕೆಂದು ಕೋರುತ್ತೇವೆ.

ಎಚ್ಚರಿಕೆ:—ನಿಮಗೆ ಒಂದು ಕ್ಯಾಲೆಂಡರು ಬೇಕಾಗಿದ್ದರೆ ಜನವರಿ ಆಖೈರಿನೊಳಗಾಗಿ ಖಂಡಿತವಾಗಿ ಚಂದಾ ಕಳಿಸಿಕೊಡಿ. ಆ ತರುವಾಯ ಅದು ಸಿಕ್ಕಲಾರದು.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾ॥ ೨೦ನೇ ಗುರುವಾರ.

ಹಿಂದುಸ್ಥಾನದ ನ್ಯಾಷನಲ್ ಕಾಂಗ್ರೆಸ್.

ಈ ಭರತಖಂಡದ ರಾಜಕೀಯ ವಿಚಾರಗಳನ್ನು ಕುರಿತು ಚರ್ಚಿಸಿ ಗವರ್ನಮೆಂಟಿಗೆ ಅರಿಕೆ ಮಾಡುವುದಕ್ಕಾಗಿ ವಿದ್ಯಾವಂತರಾದ ದೇಶೀಯ ದೊಡ್ಡ ಮನುಷ್ಯರು ಕಳೆದ ಇಪ್ಪತ್ತು ವರ್ಷಗಳಿಂದಲೂ ಪ್ರತಿ ವರುಷವೂ ಒಂದೊಂದು ಪಟ್ಟಣದಲ್ಲಿ ಸೇರಿ ಸಭೆಯನ್ನು ನಡಸುತ್ತಿರುವರಷ್ಟೆ. ಈ ಮಹಾಸಭೆಯು ಈ ಸಲ ಕಲ್ಕತ್ತಾ ಪಟ್ಟಣದಲ್ಲಿ ತಾ. ೨೬ನೆ ಬುಧವಾರದಿಂದ ಪ್ರಾರಂಭವಾಗಿ ಮೂರು ದಿನ ನಡೆಯುವುದು ಈ ವರುಷ ಈ ಸಭೆಗೆ ಮೆ॥ ದಾದಾಭಾಯಿ ನವರೋಜಿ ಎಂಬ ಪಾರ್ಸಿ ದೊಡ್ಡ ಮನುಷ್ಯರು ಪ್ರೆಸಿಡೆಂಟರಾಗಿ ನೇಮಕವಾಗಿದಾರೆ. ಇವರು ವಿಲಾಯತಿಯಲ್ಲೇ ಇದ್ದುಕೊಂಡು ಕೆಲವು ಕಾಲ ಪಾರ್ಲಿಮೆಂಟ್ ಮೆಂಬರಾಗಿಯೂ ಅಲ್ಲಿನ ಪ್ರಜೆಗಳಿಂದ ಚುನಾಯಿಸಲ್ಪಟ್ಟು ಕೆಲಸಮಾಡಿ, ಹಿಂದುಸ್ಥಾನದ ಏಳಿಗೆಯನ್ನೇ ಬಯಸುವವರಾಗಿದಾರೆ. ಎಂಬತ್ತು ವರುಷದ ಮುದುಕರಾಗಿದ್ದಾಗ್ಯೂ ಅವರ ಉತ್ಸಾಹವೂ ಚಟುವಟಿಕೆಯೂ ಸ್ವಲ್ಪವೂ ಕುಂದದೆ ಹೆಚ್ಚಾಗಿರುವವು ಇವರು ವಿಲಾಯತಿಯಿಂದ ಕಳೆದ ಶುಕ್ರವಾರ ಮಧ್ಯಾಹ್ನ ಬೊಂಬಾಯಿ ಪಟ್ಟಣಕ್ಕೆ ಬಂದರು. ಆ ದಿನ ಅವರಿಗೆ ಅಲ್ಲಿನ ದೊಡ್ಡ ಮನುಷ್ಯರೂ ಪ್ರಜೆಗಳೂ ಮಾಡಿದ ಸತ್ಕಾರ ಸನ್ಮಾನಗಳು ಇಷ್ಟಿಷ್ಟೆಂದು ವಿವರಿಸಲಾಗದು. ಅವರನ್ನು ಮೋಟಾರ್ ಎಂಬ ಗಾಡಿಯಲ್ಲಿ ಕೂರಿಸಿ ಮೆರವಣಿಗೆಯಾಗಿ ಕರೆದುಕೊಂಡು ಹೋದರು. ದೇಶೀಯ ವರ್ತಕರು ಅಂಗಡಿಗಳನ್ನು ಮುಚ್ಚಿ ಅವರಿಗೆ ಅನೇಕ ಕಡೆ ಅಡ್ರೆಸ್ಸುಗಳನ್ನು ಓದಿ ಕೈಪೆಟ್ಟಿಗೆಗಳಲ್ಲಿಟ್ಟು ಒಪ್ಪಿಸಿದರು. ಪ್ರಜೆಗಳು ತಂಡತಂಡವಾಗಿ ನಿಂತು ಜಯಘೋಷಗಳನ್ನು ಮಾಡಿದರು. ಕೆಲವು ದೂರ ಅವರ ಮೇಲೆ ಚಿನ್ನ ಬೆಳ್ಳಿಯ ಹೂಗಳನ್ನೂ, ಒಂದು ಕಡೆ ಮುತ್ತುಗಳನ್ನೂ ಎರಚಿ ಸನ್ಮಾನಮಾಡಿದರು.

ಈಚೆಗೆ ಈ ಮಹಾಸಭೆಯಲ್ಲಿ ಮೂರು ಪಂಗಡಗಳು ಹುಟ್ಟಿರುವವು. ಮೊದಲನೆ ಪಂಗಡದವರು—ಪ್ರಜೆಗಳ ಕಷ್ಟ ಕೊರತೆಗಳನ್ನು ಗವರ್ನಮೆಂಟಿನವರಿಗೆ ಅರಿಕೆ ಮಾಡಿ, ಇಂಥಾ ಸ್ವಾತಂತ್ರ್ಯಗಳನ್ನು ಕೊಡಿ ಎಂದು ಕೇಳಿಕೊಳ್ಳುತ್ತಾ ಬಂದರೆ ಸಾಕು ಎಂದು ಹೇಳುವರು. ಎರಡನೆಯ ಪಂಗಡದವರು—ಗವರ್ನಮೆಂಟಿನವರು ಮೇಲ್ತನಿಖೆ ಮಾಡಿಕೊಳ್ಳುತ್ತಿದ್ದು ಇಲ್ಲಿನ ಪ್ರಜೆಗಳಿಗೆ ಆಳುವ ಸ್ವತಂತ್ರಾಧಿಕಾರವನ್ನು ಇನ್ನೂ ಹೆಚ್ಚಾಗಿ ವಹಿಸಿಕೊಡಬೇಕು ಎಂದು ಕೇಳತಕ್ಕವರಾಗಿದಾರೆ. ಮತ್ತೊಂದು ಪಂಗಡದವರಾದರೋ—ಇಂಗ್ಲಿಷ್ ಗವರ್ನಮೆಂಟಿನವರು ಕನಡಾ, ಆಸ್ಟ್ರೇಲಿಯಾ ಮೊದಲಾದ ಸ್ವಾಸ್ಥ್ಯಗಳಿಗೆ ವಹಿಸಿರುವಂಥಾ ಸರ್ವಾಧಿಕಾರಗಳನ್ನೆಲ್ಲಾ ಹಿಂದುಸ್ಥಾನಕ್ಕೂ ಕೊಟ್ಟುಬಿಡಬೇಕು ಎಂದು ಕೇಳುವರು. ಈ ರೀತಿಯಾದ ವಾಗ್ವಾದಗಳು ಹುಟ್ಟಿರುವುದನ್ನು ನೋಡಿದರೆ ಈ ಸಭೆಯು ಒಡೆದು ಹೋಗುವ ಹಾಗೆ ಕಾಣುತ್ತಿದೆ. ಮೆ॥ ದಾದಾಭಾಯಿ ನವರೋಜಿಯವರು ಅವರಿಗೆಲ್ಲಾ ಸಮಾಧಾನ ಹೇಳಿ, ಎಲ್ಲರೂ ಏಕಾಭಿಪ್ರಾಯದಿಂದ ಕಾರ್ಯನಡಿಸುವ ಭಾಗದಲ್ಲೂ, ನಲ್ಲದ ವಿಚಾರಗಳನ್ನು ಕುರಿತು ಅವರು ಚರ್ಚಿಸದಂತೆಯೂ, ದೇಶೋನ್ನತಿಗೆ ಸಹಕಾರಿಯೂ ಅವಶ್ಯಕವೂ ಆದ ಸುಸಹಮಾರ್ಗಗಳನ್ನು ಅನುಸರಿಸುತ್ತಾ ಬರುವಂತೆಯೂ ವಿವೇಕ ಹೇಳಿಕೊಟ್ಟು ಕೃತಕೃತ್ಯರಾದಾರೆಂದು ಹಾರೈಸುತ್ತೇವೆ.

CHAMBERLAIN'S COUGH REMEDY.

ಚೇಂಬರ್ಲೆನ್ ಯವರು ಕಂಡು ಹಿಡಿದ ಕೆಮ್ಮಿನ ಔಷಧವು.



95-25

ಶೀತದ ಕೆಮ್ಮು, ಗಂಟಲು ಗಾರೆಸುಪುದು, ಜುಬಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲು ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಿದರೆ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತ ಬೀಳು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡ ಪರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿ ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮ ಉಲ್ಲಾಸಕೊಡುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿ ವುದಿಲ್ಲ

ಈ ಔಷಧವು ನನಸ್ಪತಿಗಳ ತಯಾರಿ.

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ. ಕೈಯಿಂದಮುಟ್ಟದೆ ತಯಾರಾಗಿದೆ ದೊಡ್ಡ ಶೀಸೆಗೆ ೨ ರೂಪಾಯಿ.

ಮತವನ್ನು ಕುರಿತು ಹ್ಯಾಗೆ ಚರ್ಚಿಸಬೇಕು?—೩.

ಮತಸಂಬಂಧವಾದ ಚರ್ಚೆಯಲ್ಲಿ ತನಗೆ ಯಾವುದು ಸತ್ಯವೆಂದು ತಿಳಿಸಿದೆಯೋ ಅದನ್ನು ಮಾತ್ರವೇ ಮಾತಾಡಬೇಕೆಂತಲೂ ಆ ಸತ್ಯವನ್ನು ಕಂಡು ಹಿಡಿಯುವದರಲ್ಲಿ ಅತ್ಯಾಸಕ್ತನಾಗಿರಬಹುದಲ್ಲದೆ ಅದನ್ನು ಕಂಡಮೇಲೆ ಜನಾಪವಾದಕ್ಕೆ ಹೆದರಿ ಅದನ್ನೇ ಮಾತಾಡಬೇಕೆಂದಲೂ ಹಿಂದಿನ ಸಂಚಿಕೆಯಲ್ಲಿ ನೋಡಿದೆವಷ್ಟೆ. ಕೆಲವು ದಿನಗಳ ಹಿಂದೆ ಒಬ್ಬ ಹಿಂದೂ ಸ್ನೇಹಿತರಿಂದ ನಮಗೊಂದು ಕಾಗದವು ಬಂತು. ಅದರಲ್ಲಿ ಅವರು ಕೇಳುವದು—ಕ್ರೈಸ್ತಮತಪ್ರಸಾರಕರಾದ ಮಿಷನರಿಗಳು ಜನರಂಜಿತವಾದ ಮಾರ್ಗವನ್ನು ಯಾತಕ್ಕೆ ಅನುಸರಿಸುವದಿಲ್ಲ? ಹಿಂದು ಮತಸ್ಥರು ಯೇಸುಕ್ರೈಸ್ತನನ್ನೂ ದೇವರ ಅವತಾರವೆಂದು ತಿಳಿದಿದ್ದಾರೆ ದೇವರು ರಾಮಾವತಾರದಲ್ಲಿಯೂ ಕೃಷ್ಣಾವತಾರದಲ್ಲಿಯೂ ಪ್ರತ್ಯಕ್ಷನಾದಂತೆಯೇ ಕ್ರಿಸ್ತಾವತಾರದಲ್ಲಿಯೂ ಪ್ರತ್ಯಕ್ಷನಾಗಿದ್ದಾನೆ ಹೀಗಿರುವಲ್ಲಿ ಕ್ರಿಸ್ತನೊಬ್ಬನೇ ದೇವರ ಅವತಾರವೆಂದು ಬೋಧಿಸುತ್ತ ಸಂಚರಿಸಿ ಜನರಲ್ಲಿ ತಂದೆ ಮಕ್ಕಳಿಗೂ ಅಣ್ಣತಮ್ಮಂದಿರಿಗೂ ವೈಮನಸ್ಯವನ್ನು ಕಲ್ಪಿಸುವುದು ಅಧರ್ಮವಲ್ಲವೇ? ಎಂದು ಬರೆದಿರುವರು.

ಕೇಳುವವರ ಕಿವಿಗಿಂಪಾದ ಸಂಗತಿಯನ್ನು ಮಾತ್ರ ತಿಳಿಯಪಡಿಸಬೇಕೇ ಹೊರತು ಮನೋವ್ಯಸನೆಯನ್ನು ಹುಟ್ಟಿಸತಕ್ಕ ಕಾರ್ಯವನ್ನು ಕುರಿತು ಮಾತಾಡಬಾರದೆಂದು ಅನೇಕರು ಹೇಳುವರು. ಇವರ ಅಭಿಪ್ರಾಯವನ್ನು ನೋಡಿದರೆ ಜನರಂಜಿತವಲ್ಲದ ಯಾವ ವಿಷಯವೇ ಆಗಲಿ ಅದು ಸತ್ಯವಾಗಿದ್ದರೂ ಮಾತಾಡಬಾರದೆಂತಲೂ ಜನರಂಜಿತವಾದ ವಿಷಯವು ಅಸತ್ಯವಾಗಿದ್ದರೂ ಕೂಡ ಅದನ್ನು ಮಾತಾಡಬಹುದೆಂತಲೂ ತಿಳಿದುಬರುತ್ತದೆ ಈ ಅಭಿಪ್ರಾಯವು ಎಷ್ಟು ಮಾತ್ರಕ್ಕೂ ಸರಿಯಲ್ಲ ಇದರಿಂದ ಕೇಡಿಗೆ ಕಾರಣವುಂಟೇ ಹೊರತು ಬೇರೇನೂ ಅಲ್ಲವೆಂದು ನಾವು ದೃಢವಾಗಿ ತಿಳಿದಿದ್ದೇವೆ ಕ್ರೈಸ್ತಭಕ್ತನಾದವನು ಕಾದಾಡುವ ಮಾತಿನಿಂದ ಜನರ ಮನಸ್ಸು ನೋಯುವ ಹಾಗೆ ನಡೆದುಕೊಳ್ಳಬೇಕು ಸರಿಯೇ. ನಿಷ್ಕಾರಣವಾಗಿ ಕೋಪ ಹುಟ್ಟುವ ಹಾಗೆ ಮಾಡಬಾರದೆಂಬುದನ್ನು ನಾವು ಒಪ್ಪುತ್ತೇವೆ. ಹೀಗಿದ್ದರೂ ಕೆಲವು ಸಂದರ್ಭಗಳಲ್ಲಿ ನಾವು ಮಾತಾಡಬೇಕಾದ ವಿಷಯಗಳು ಅಂಥವುಗಳಾದದರಿಂದ ಕೇಳುವಂಥವರ ಮನಸ್ಸಿಗೆ ವ್ಯಥೆಯು ಹುಟ್ಟಲೇ ಬೇಕಾಗುತ್ತೆ. ಮನಸ್ಸಿಗೆ ವ್ಯಥೆಯನ್ನುಂಟುಮಾಡುವದು ಹ್ಯಾಗೆ ಎಂದು ಯೋಚಿಸಿದರೆ ಸತ್ಯವನ್ನು ಬಿಟ್ಟು ಅಸತ್ಯವನ್ನೇ ಹೇಳಬೇಕಾಗುತ್ತೆ. ಕೆಟ್ಟ ಕೆಲಸವನ್ನು ಮಾಡುತ್ತಿರುವಂಥ ಒಬ್ಬ ಮನುಷ್ಯನನ್ನು ನೋಡಿ ಗದರಿಸಿದರೆ ಅವನು ತನ್ನ ಅಕೃತ್ಯಕ್ಕಾಗಿ ಪಶ್ಚಾತ್ತಾಪವನ್ನು ಹೊಂದಿ ಇವರು ನನ್ನನ್ನು ಗದರಿಸಿದ್ದು ನ್ಯಾಯ ಎಂದು ಒಪ್ಪಿಕೊಂಡರೆ ಒಳ್ಳೇದಾಗುತ್ತೆ ಹಾಗೆ ಮಾಡುವದನ್ನು ಬಿಟ್ಟು ಅವನು ಗದರಿಸಿದವರ ಮೇಲೆ ತಿರುಗಿಬಿದ್ದು ಕೋಪಮಾಡಿಕೊಂಡರೆ ಆ ತಪ್ಪು ಯಾರದು? ಅದು ಬುದ್ಧಿ ಹೇಳಿದವರ ತಪ್ಪೋ, ಕೋಪಿಸಿಕೊಂಡವನ ತಪ್ಪೋ?

ಯೇಸುಸ್ವಾಮಿಯು ಪರಮಸಾಧುವಾಗಿಯೂ ಪ್ರೀತಿಸ್ವರೂಪವಾಗಿಯೂ ಇದ್ದನು. ಅಂಥ ಪರಮಪುರುಷನೇ ಆ ಫರಿಸಾಯರನ್ನು ಎಷ್ಟು ಕಠಿಣವಾಗಿ ಗದರಿಸಿದನು! ಅವರಲ್ಲಿದ್ದ ಮಹಾ ಧುರಹಂಕಾರವನ್ನೂ ಜನಮೆಚ್ಚಿಕೆಯ ಮೇಲಣ ಆಶೆಯನ್ನೂ ಅವರು ದೇವರಿಂದ ಸನ್ಮಾನವನ್ನು ಹೊಂದುವದಕ್ಕೆ ಪ್ರಯತ್ನಿಸುವದನ್ನು ಬಿಟ್ಟು ಜನರಿಂದ ಮಾನಮರ್ಯಾದೆಗಳನ್ನು ಅಪೇಕ್ಷಿಸಿ ನಡೆದುಕೊಂಡ ರೀತಿಯನ್ನೂ ಸ್ವಾಮಿಯು ನೋಡಿ ಹ್ಯಾಗೆ ಖಂಡಿಸಿದನೋ? ಅವರು ನೇಮನಿಷ್ಠೆಗಳಲ್ಲಿ ತಪ್ಪಿಲ್ಲದವರಾಗಿದ್ದರು. ಆದರೆ ಅವರ ಮನಸ್ಸಿನ ಉದ್ದೇಶಗಳೋ ಬಹು ದುಷ್ಟತ್ವದಿಂದ ಕೂಡಿದವುಗಳಾಗಿದ್ದವು ದಾನಧರ್ಮಗಳನ್ನು ಮಾಡುತ್ತಿದ್ದರು, ಯಜ್ಞಹೋಮಾದಿಗಳನ್ನು ನಡಸುತ್ತಿದ್ದರು, ದೀರ್ಘವಾಗಿ ದೇವರಪ್ರಾರ್ಥನೆಗಳನ್ನು ಮಾಡುತ್ತಿದ್ದರು. ಆದರೆ ಅವರು ಅನಾಥರನ್ನು ಸುಲಿದುತಿನ್ನುವ ರಕ್ಕಸರಾಗಿದ್ದರು ಮಾನೆಮುರುಕರಾಗಿದ್ದರು. ಹೀಗೆ ಅವರ ದುಷ್ಕೃತ್ಯಗಳನ್ನು ಸ್ವಾಮಿಯು ನೋಡಿ ತನ್ನ ಒಂದೊಂದು ಮಾತು ಅವರ ಹೃದಯಕ್ಕೆ ಶೂಲದಂತೆ ತಾಗುವಹಾಗೆ ನುಡಿದನು ಫರಿಸಾಯರಿಗೆ ಸ್ವಾಮಿಯ ಮಾತು ಇಂಪಾಗಿರಲಿಲ್ಲ ಆದರೂ ಆತನು ಅದನ್ನು ಹೇಳದೇಬಿಟ್ಟನೇ? ಸತ್ಯವಾದ್ದನ್ನೇ ಹೇಳಿದನು. ಹೇಳಬೇಕಾದದ್ದನ್ನೇ ಹೇಳಿದನು. ಹೀಗೆ ಸತ್ಯವನ್ನಾಡುವದರಲ್ಲಿ ಹೆದರದೆ ನಡೆದುಕೊಂಡದರಿಂದಲೇ ಈಗಲೂ ಜನರು ಯೇಸುಸ್ವಾಮಿಯನ್ನು ಘನಪಡಿಸುತ್ತಾರೆ ಆದರೆ ಆ ದುಷ್ಟರ ನಡವಳಿಕೆಯನ್ನು ನೋಡಿ ಬಾಯಿಮುಚ್ಚಿಕೊಂಡು ಸುಮ್ಮನೆ ಇದ್ದರೆ ಆತನನ್ನು ಕ ಯೆಂದು ಕರೆಯುತ್ತಿದ್ದರು. ಜನರಿಗೆ ಇಂಪಾಗಿರುವ ಘಟನ್ನೇ ಹೇಳುತ್ತಿದ್ದವನಾದರೆ ಆತನನ್ನು ನಾವು ಅಸತ್ಯವಂತನೆಂದೂ ವ ನೆಂದೂ ಹೇಳುತ್ತಿದ್ದೆವು

ನಮ್ಮ ಈ ಹಿಂದೂದೇಶವು ನಿಕೃಷ್ಟಗತಿಗೆ ಬಂದಿರುವುದೇತಕ್ಕೆ ಸತ್ಯವಾದದ್ದನ್ನು ಮಾತಾಡುವದಕ್ಕೆ ಜನರು ಹೆದರುತ್ತಾ ಬಂದುದೇ ಇಂಥ ದುರವಸ್ಥೆಗೆ ಅಧಿಕವಾದ ಕಾರಣವುಂಟಾಗಿರುತ್ತದೆ. ದೇಶಸ್ಥರನ್ನು ಅನೇಕ ದುಷ್ಪದ್ಧತಿಗಳೂ ಅಸತ್ಯದೇವತಾರಾಧನೆ ಹಿಡಿಸುತ್ತಲಿವೆಯೆಂದು ಮಹನೀಯರು ಒಪ್ಪಿಕೊಳ್ಳುತ್ತಾರೆ. ಉಂಟಾದ್ದನ್ನು ಹೇಳಿದರೆ ಜನರ ಕೋಪಕ್ಕೆ ಗುರಿಯಾಗಬೇಕು ಯಲ್ಲ ಎಂದು ಹೇಳಿ ಕೆಟ್ಟದ್ದನ್ನು ಕಣ್ಣಿನಿಂದ ನೋಡಿದರೂ ನ ವವರಂತೆ ಸುಮ್ಮನೆ ಇರುತ್ತಾರೆ ತಾವು ಯಾವದನ್ನು ಸತ್ಯ ಅಸತ್ಯವೆಂದೂ ತಿಳಿದಿದ್ದಾರೋ ಅದನ್ನೇ ಮಾಡುತ್ತಲೂ ಹೇಳುತ್ತ ಇರುವರು. ಇಂಥವರಿಂದ ದೇಶಕ್ಕೆ ಕ್ಷೇಮವಿಲ್ಲ. ಏನೇಬರಲಿ ಹೆ ಸತ್ಯವನ್ನು ಮಾತಾಡತಕ್ಕಂಥ ಸತ್ಪುರುಷರೇ ನಮ್ಮ ದೇಶದಲ್ಲಿ ಅ ವಶ್ಯಕವಾಗಿದ್ದಾರೆ.

ಒಳದೇಶದ ವೃತ್ತಾಂತಗಳು.

ಕಳೆದ ಭಾನುವಾರ ರಾತ್ರಿ ದಿವಾನ್ ವಿ॥ ಮಾಧವರಾಯರು ಪರಿವಾರ ಸಹಿತ ಬೆಂಗಳೂರಿನಲ್ಲಿ ರೈಲ್ ಹತ್ತಿ ಮದರಾಸಿಗೆ ಪಯಣ ರು. ಅವರು ಅಲ್ಲಿಂದ ಹಾಗೇ ಕಲ್ಕತ್ತೆಗೆ ಪ್ರಯಾಣ ಮಾಡುವರು

****

ನೆನ್ನೆ ರಾತ್ರಿ ಸುಮಾರು ೯ ಗಂಟೆಗೆ ಶ್ರೀಮತ್ ಮಹಾರಾಜರವರು ಮಹಾಮಾತೃಶ್ರೀಯವರೂ ಯುವರಾಜರವರೂ ಪರಿವಾರಸಹಿತ ಬೆ ಳೂರಿಂದ ಸ್ಪೆಷಲ್ ರೈಲಿನಲ್ಲಿ ಕಲ್ಕತ್ತಾ ಪಟ್ಟಣವನ್ನು ಕುರಿತು ಯಾಣ ಮಾಡಿದರು.

****

ಸರ್ಕಾರದವರು ಇಲ್ಲಿನ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋ ನ ಶಿರಸ್ತೆದಾರ್ ಮೆ॥ ವೆಂಕಟರಾಯರನ್ನು ಪೆನ್ಷನ್ ಮೇಲೆ ಬಿಡಿಸಿ, ಅವರ ಕೆಲಸಕ್ಕೆ ಬೆಂಗಳೂರಿಂದ ಮೆ॥ ಸುಬ್ಬರಾಯ ವರ್ಗ ಮಾಡಿರುತ್ತಾರೆ.

****

ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯಲ್ಲಿ ಒಂದು ಹದ ಮಳೆ ಆಯಿತು ಪ್ಲೇಗ್ ಉಪದ್ರವು ಇನ್ನೂ ವಿಶೇಷವಾಗಿ ಕಡಿ ದಿಲ್ಲ. ದಿನಕ್ಕೆ ೩—೪ ಜನರಿಗೆ ತಗಲುತ್ತಿದೆ. ಪ್ರತಿ ದಿನವೂ ಮ ಸಂಖ್ಯೆ ೧೦—೧೨ರ ವರೆಗೆ ಕಡಿಮೆರುವುದು.

****

ಬೆಂಗಳೂರು ಪಟ್ಟಣದ ಕೋಟೆಯ ಪೂರ್ವದಿಕ್ಕಿನ ಗೋಡೆ ಯನ್ನು ಕೆಡವಿಸಿ ಕಂದಕವನ್ನು ಭರ್ತಿ ಮಾಡುವುದಕ್ಕೆ ೧೦ ಸಾ ರೂಪಾಯಿ ಖರ್ಚು ಮಾಡಬೇಕೆಂದು ಮ್ಯುನಿಸಿಪಾಲಿಟಿಯ ಯೋಚಿಸಿದಾರೆ ಈ ದಿನ ನಡೆಯುವ ಮೀಟಿಂಗಿನಲ್ಲಿ ಈ ಸ ಯು ಇತ್ಯರ್ಥವಾಗುವುದು.

****

ಈ ಸಲ ನವರಾತ್ರಿ ಉತ್ಸವ ಕಾಲದಲ್ಲಿ ಅಮಲ್ದಾರ್ ಮೆ॥ ಎಸ್. ಕೃಷ್ಣಣ್ಣನವರ ಕುಮಾರರನ್ನು ಕಳುವು ಮಾಡಿದರೆಂದು ನ ಪೋಲೀಸಿನವರು ಹಿಡಿದು ಹಿಂಸೆಪಡಿಸಿದರೆಂದು ಮೊಕದ್ದಮೆ ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಯಾರ್ಜಿ ತು ಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯನ್ನು ಕಳೆದ ವಾರ ಸ್ ವಿಚಾರಣೆಗೆ ಗುರಿ ಮಾಡಿದಾರೆ.

****

ದರ್ಬಾರ್ ಭಕ್ಷೀಯಾಗಿದ್ದು ಪೆನ್ಷನ್ ಪಡೆದು ಇದುವರೆಗೆ ಳೂರಲ್ಲಿದ್ದ ಮೆ॥ ಎ. ನರಸಿಂಹಯ್ಯಂಗಾರು ಈ ವಾರ ರಾ ಯಲ್ಲಿ ವಾಸ ಮಾಡುವುದಕ್ಕಾಗಿ ಬರುವವರಾಗಿದಾರೆ. ಮಹಾ ಕಾಲೇಜನ್ನು ಇನ್ನೂ ಅಭಿವೃದ್ಧಿ ಸ್ಥಿತಿಗೆ ತರುವುದಕ್ಕಾಗಿ ಅವರು ಒಂದು ವಿದ್ಯಾರ್ಥಿನಿಯರ ನಿಲಯವನ್ನು ಒಂದು ವಿಧವಾ ಸದನ ಕಟ್ಟಿಸುವವರಾಗಿದಾರೆಂದು ಕೇಳುತ್ತೇವೆ

****

ಅಮೇರಿಕದಿಂದ ಡಾಕ್ಟರ್ ಕತ್ಬರ್ಟ್ ಹಾಲ್ ಎಂಬ ಪ್ರ ತತ್ವಶಾಸ್ತ್ರ ಪಂಡಿತರು ಈಗ ಬೆಂಗಳೂರಿಗೆ ಬಂದು ಕಳೆದ ದಿಂದ ತತ್ವಶಾಸ್ತ್ರ ವಿಚಾರದಲ್ಲಿ ಉಪನ್ಯಾಸ ಮಾಡುತ್ತಿದಾರೆ ಲನೆಯ ದಿನ ದಿವಾನರವರು ಅವರನ್ನು ತಮ್ಮ ಭವನಕ್ಕೆ ಕರೆ

...ಬಹಳ ಆದರದಿಂದ ಸತ್ಕಾರ ಮಾಡಿ, ಆ ದಿನ ಅವರು ಕೇಳಿದ ಉಪನ್ಯಾಸ ಕಾಲದಲ್ಲಿ ಅಗ್ರಾಸನವನ್ನು ವಹಿಸಿದ್ದರು.

****

...ಪಟ್ಟದ ಪುರನಿವಾಸಿಗಳ ಪುರೋಭಿವೃದ್ಧಿಗಾಗಿ ಅಲ್ಲಿನ ಪೇಟೆಯಲ್ಲಿ ಏರ್ಪಡಿಸಿರುವ ವಿದ್ಯಾರ್ಥಿಗಳ ರೀಡಿಂಗ್ ರೂಂ ಎಂಬ ವಾಚನಾಲಯ ಪ್ರವೇಶೋತ್ಸವವನ್ನು ಕಳೆದ ಶುಕ್ರವಾರ ಮ॥ ಶ್ರೀ ...ರಾಯರ ಅಧ್ಯಕ್ಷತೆಯಿಂದ ನೆರವೇರಿಸಿದರು. ಅಲ್ಲಿ ಯೋಗ್ಯವಾದ ...ಗಳನ್ನು ಶೇಖರಿಸಿರುವದಲ್ಲದೆ ಕನ್ನಡ ವರ್ತಮಾನಪತ್ರಿಕೆಗಳನ್ನು ...ಸಕಲರೂ ಓದುವುದಕ್ಕೆ ಸೌಕರ್ಯವನ್ನುಂಟುಮಾಡಿದಾರೆ.

****

ಮಂಜರಾಬಾದು ತಾಲ್ಲೂಕು ಕೆಂಚಮ್ಮನ ಹೊಸ ಕೋಟೆ ...ಬಳಿ ಅರಬಿಬೈಲ್ ಎಸ್ಟೇಟಿನಿಂದ ಒಬ್ಬ ಕೂಲಿ ಆಳು ತಾ॥ ೧ ನೆ ...ವಾರ ಕೆಲವು ಹಣವನ್ನು ಅದ್ರುವಳ್ಳಿಗೆ ತೆಗೆದುಕೊಂಡು ಹೋಗು ...ಗ ನಂದಿಪುರದ ಹಳ್ಳದ ಬಳಿ ಇಬ್ಬರು ಅವನನ್ನು ಹೊಡೆದು ಹಣವನ್ನು ಅಪಹರಿಸಿಕೊಂಡು ಹೋದರಂತೆ, ಮ॥ ...ಬಿಗಲಿಂಗ್ ಸಾಹೇಬರು ಈ ಸಂಗತಿಯನ್ನು ಪೊಲೀಸಿಗೆ ತಿಳಿಸಿ...ರುವರೂ ಕೇಳುತ್ತೇವೆ.

****

ಮೊನ್ನೆ ಭಾನುವಾರ ಮಧ್ಯಾಹ್ನ ಬೆಂಗಳೂರು ಪಂಡಿತನಲ್ಲಿರುವ ...ಯೋ ಹಾಲ್ ಎಂಬ ಬಂಗಲೆಯಲ್ಲಿ ದೇಶೀಯ ದೊಡ್ಡ ಮನುಷ್ಯರ ...ದೊಡ್ಡ ಸಭೆ ನಡೆದು, ಮ॥ ಗಳಾದ ಬೈಯಣ್ಣನವರು, ಲಕ್ಷ್ಮೀ...ಗೌಡರು, ಚಲುವಾದಿಯ ಮೊದಲಿಯಾರ್‌ರು, ಪುಟ್ಟಣ್ಣಶೆಟ್ಟರ ಮೊದ...ರು, ಎಸ್. ಕೆ. ನಾಯುಡ್ ಯವರು, ಎ. ರಾಮಣ್ಣನವರು, ...ಮೊದಲಿಯಾರವರು, ಬಿ. ವೆಂಕಟರಾಯರು, ಜಲೀಲ್ ರಸೂಲ್‌ರವರು ಈ ಸಲ ಕಲ್ಕತ್ತೆಯಲ್ಲಿ ನಡೆಯುವ ಕಾಂಗ್ರೆಸ್ ಮಹಾ ಸಭೆ ...ಯುಗಳಾಗಿ ಹೋಗಿಬರುವಂತೆ ಚುನಾಯಿಸಲ್ಪಟ್ಟರು.

****

...ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಶ್ರೀಕೃಷ್ಣ ಗಾಯನ ಸಮಾಜದ ...ಕಾರ್ಯದರ್ಶಿಗಳೂ ಮೆಂಬರುಗಳೂ ಮೊನ್ನೆ ಮಂಗಳವಾರ ರಾತ್ರಿ ...ದಲ್ಲಿ ಸಂಗೀತ ಸಭೆಯನ್ನು ಮಾಡಿದ್ದರು. ಆಗ ...ಭಕ್ತ ಸುಬ್ಬಣ್ಣನವರ ವಿದ್ಯಾಕೌಶಲ್ಯವು ಸಭಿಕರಿಗೆ ಪರಮಾನಂದ...ವನ್ನುಂಟುಮಾಡಿತು. ಸಭೆಯಲ್ಲಿ ದೊಡ್ಡ ಮನುಷ್ಯರೂ ವಿದ್ವಾಂಸರೂ ಸುಮಾರು ೨೫೦ ಮಂದಿಯವರೆಗೂ ಸೇರಿ ತುಂಬಾ ಸಂತೋಷಪಟ್ಟ... ಸಭೆಯು ಉಪಸಂಹಾರವಾಗುವುದಕ್ಕೆ ಮುಂಚೆ ಮ॥ ಗೋವಿಂದಾ...ಚಾರ್ಯರು ಗಾನ ವಿದ್ಯೆಯಲ್ಲಿಯೂ ಸುಪ್ರಸಿದ್ಧರಾಗಿದ್ದ ಭರತ ಖಂಡದ ...ಪುರಾತನ ಸ್ಥಿತಿಯ ವಿಷಯದಲ್ಲಿಯೂ ಸಂಗೀತವು ದೇವಧ್ಯಾನದ ...ವಿಶೇಷವಾದ ಸಹಾಯವುಳ್ಳದ್ದಾಗಿದೆಯೆಂಬ ವಿಷಯದಲ್ಲಿಯೂ ...ಸಭೆಗಳಿಗೆ ಸಕಲರೂ ಪ್ರೋತ್ಸಾಹಕರಾಗಿರತಕ್ಕ ವಿಷಯದಲ್ಲಿ ...ಉಚಿತವಾದ ಉಪನ್ಯಾಸ ಮಾಡಿದ್ದಲ್ಲದೆ ಈ ಸಭಾ ಸೆಕ್ರೆ...ಟರಿ ಪುಟ್ಟಸ್ವಾಮಯ್ಯನವರನ್ನು ಕೊಂಡಾಡಿದರು. ಮುಖ್ಯವಾಗಿ ...ಸುಬ್ಬಣ್ಣನವರು ಬಂದು ಸಭಿಕರನ್ನು ಸಂತೋಷಪಡಿಸಿದಕ್ಕಾಗಿ ...ಯೂ ಅವರಿಗೆ ತುಂಬಾ ಕೃತಜ್ಞರಾಗಿದಾರೆ.

ಬಹುಮಾನ ಪಡೆದ ವರ್ತಮಾನವು.

[...ಬರೆದ ಮ॥ ಎಸ್. ರಾಮಯ್ಯಂಗಾರ್, ಆ॥ ಸೆಕ್ರೆಟರಿ, ರೀಡಿಂಗ್ ರೂಂ, ಮೇಲುಕೋಟೆ, ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ.]

ಮೇಲುಕೋಟೆಯ ವಾಚಕಶಾಲೆಯಲ್ಲಿ ನಡೆದ ಉಪನ್ಯಾಸದ ಸಾರಾಂಶ.

ಈಗಿನ ನಾಗರಿಕತೆಗೆ ಅನುಸಾರವಾಗಿ ಅನೇಕ ಉಪಯುಕ್ತಾಂಶ...ವನ್ನು ತಿಳಿದುಕೊಳ್ಳಲು ಅನುಕೂಲವಿಲ್ಲದಿರುವ ಇಲ್ಲಿನ ನಿವಾಸಿಗಳಿ...ಗೆ ಸಾಮಾಜಿಕ, ನೈತಿಕ, ರಾಜಕೀಯ, ವಿದ್ಯಾವಿಷಯ, ನಾಗರಿಕತೆ, ...ವಾಣಿಜ್ಯ, ವಿಜ್ಞಾನ, ಕೃಷಿ, ಕಲಾಕೌಶಲ್ಯ, ವೈದ್ಯಕ, ಇವೇ ಮೊದ...ಲಾದ ವಿಷಯಜ್ಞಾನವನ್ನುಂಟುಮಾಡತಕ್ಕ ಉಪಯುಕ್ತಾಂಶಗಳು ...ಭರತಖಂಡದ ಸಹೋದರ ಭಾರತೀಯರಲ್ಲಿಯೂ ಪರದೇಶದ ...ಜನರಲ್ಲಿಯೂ ಹ್ಯಾಗೆ ವೃದ್ಧಿಯನ್ನೈದುತ್ತಲಿವೆಯೆಂದು ಅರಿತು ...ಪ್ರದರ್ಶಕ ಮಹನೀಯರ ಜೀವನಚರಿತ್ರೆಗಳನ್ನೂ, ನೀತಿಬೋಧಕವಾದ ಕಾದಂಬರಿಗಳನ್ನೂ, ಐತಿಹಾಸಿಕಗಳನ್ನೂ ತಿಳಿದುಕೊಳ್ಳು...ವುದಕ್ಕೆ ಅನುಕೂಲಿಸುವಂತೆ ಇಲ್ಲಿ ಕೆಲವರು ಸೇರಿ ೧೯೦೬ ನೇ ...ಬರ್ ತಾ॥ ೨೫ ನೆ ಭಾನುವಾರ ಒಂದು ವಾಚಕಶಾಲೆ (ರೀಡಿಂಗ್ ರೂಂ) ಯನ್ನು ಸ್ಥಾಪಿಸಿದರು.

ಆದರೆ ಇಲ್ಲಿನ ಕೆಲವು ಮಹನೀಯರು ಈ ವಾಚಕಶಾಲೆಯ ಉ...ದ್ದೇಶವೇನು? ಇದರಿಂದ ಉಪಯೋಗವೇನು? ಇತರ ನಮ್ಮ ಪುರಾತನ ...ಗ್ರಂಥಗಳನ್ನು ಓದಿದರೆ ಸಮಾಚಾರಪತ್ರಿಕೆಗಳಿಂದ ಉಂಟಾಗುವ ಉ...ಪಯೋಗ ಉಂಟಾಗಲಾರದೇ? ಇವೇ ಮೊದಲಾದ ಕೆಲವು ಪ್ರಶ್ನೆಗಳ ಕೇಳಿದರು.

ಆದಕ್ಕಾಗಿ ನವಂಬರ್ ತಾ॥ ೩೦ ನೇ ಶುಕ್ರವಾರ ಈ ಶಾಲೆಯಲಿ ...ಒಂದು ಸಭೆಯು ಸೇರಿಸಲ್ಪಟ್ಟಿತು. ಈ ಸಭೆಗೆ ಗವರ್ನಮೆಂಟ್ ಟ್ರಾನ್ಸ್...ಲೇಟರಾದ ಮ॥ ಎಸ್. ಜಿ. ನರಸಿಂಹಾಚಾರ್ಯರೂ, ಇಲ್ಲಿನ ವೈದಿಕ ...ಮಹನೀಯರಾದ ಸಂಸ್ಕೃತ ಕಾಲೇಜ್ ವಿದ್ವಾನ್ ಶ್ರೀನಿವಾಸ ಪಕ್ಷ್ಯೆ ತಿ...ರುನಾರಾಯಣಯ್ಯಂಗಾರ್ಯರೂ, ತಿರುಪತಿ ಪೇಷ್ಕಾರರವರೂ ಎ ವಿ. ಸ್ಕೂಲ್ ಹೆಡ್‌ಮಾಸ್ಟರ್ ಮ॥ ಯಂ ಜೆ ರಾಮಯ್ಯಂಗಾರ್ಯರೂ, ದೇವ...ಸ್ಥಾನದ ಪೇಷ್ಕಾರರೂ ಮತ್ತು ಪ್ಲೀಡರ್ ಶ್ರೀನಿವಾಸಾಚಾರ್ಯರೇ ಆದಿಯಾಗಿ ಅ...ನೇಕ ವೈದಿಕ, ಲೌಕಿಕ ಮಹನೀಯರು ಈ ಶಾಲೆಯನ್ನು ಸ್ಥಾಪಿಸಿ...ದ ತಮ್ಮಗಳಿಗೆ ಉಂಟಾದ ಮಹದಾನಂದವನ್ನು ಪ್ರದರ್ಶನಪಡಿಸ...ಲು ದಯಮಾಡಿಸಿದ್ದರು. ಅನೇಕ ವಿದ್ಯಾರ್ಥಿಗಳೂ, ಇತರ ಮಹನೀ...ಯರೂ ಸಹ ನೆರೆದಿದ್ದರು. ಆನಂತರ ಈ ಶಾಲೆಯ ಕಾರ್ಯ...ದರ್ಶಿ ಸಭಿಕರ ಮತ್ತು ಶಾಲೆಯ ಸಾಮಾಜಿಕರ ಪ್ರಾರ್ಥನೆಯಂತೆ ಮ॥ ಎಸ್ ಜಿ ನರಸಿಂಹಾಚಾರ್ಯರನ್ನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವಂತೆ ವಿಜ್ಞಾಪಿಸಿದ್ದರ ಮೇಲೆ ಅವರು ಅಗ್ರಾಸನವನ್ನು ವಹಿಸಿ, ದೇಶಾಟನ ಮಾಡುವದರಿಂದ ಎಷ್ಟು ಉಪಯೋಗವಾಗುತ್ತೋ ಆದ ಕ್ಕೆಂತ ವರ್ತಮಾನಪತ್ರಿಕೆಗಳನ್ನು ಓದುವದರಿಂದ ತ್ರಿಗುಣಾಧಿಕವಾದ ಉಪಯೋಗವಾಗುತ್ತದೆಂದೂ, ಇತರ ದೇಶದ ನಾಗರೀಕತೆ, ಅಭಿವೃದ್ಧಿಗಳಿಗೆ ಕಾರಣ, ಇವೇ ಮೊದಲಾದಂಶಗಳು ತಿಳಿದು, ನಾವೂ ಅವರಂತೆ ವರ್ತಿಸಿದರೆ ಏಳಿಗೆಗೆ ಬರುತ್ತೇವೆಂಬ ವಿಷಯವನ್ನು ಅನೇಕ ಉದಾಹರಣೆಗಳಿಂದ ವಿಸ್ತಾರವಾಗಿ ವಿಶದಪಡಿಸಿ, ಈ ಶಾಲೆಯು ಉತ್ತರೋತ್ತರಾಭಿವೃದ್ಧಿಯನ್ನು ಹೊಂದಬೇಕೆಂದು ಅಪ್ಪಣೆಕೊಡಿಸಿದ್ದಲ್ಲದೆ "ಸಾಮಾನ್ಯವಿದ್ಯಾಭ್ಯಾಸ ಮತ್ತು ಪ್ರೌಢವಿದ್ಯಾಭ್ಯಾಸ" ಎಂಬ ವಿಷಯವಾಗಿ ಒಂದು ರಮಣೀಯವಾದ ಉಪನ್ಯಾಸವನ್ನು ಮಾಡಿದರು. ನಂತರ ಇಲ್ಲಿನ ಶ್ರೀಯವರ ದೇವಸ್ಥಾನದ ಪೇಷ್ಕಾರ್‌ರು ಮ॥ ಬಿ. ವೆಂಕಟರಮಣಯ್ಯನವರು ಎಲ್ಲರೂ ಏಕಮತ್ಯದಿಂದ ಈ ಶಾಲೆಯನ್ನು ಅಭಿವೃದ್ಧಿಸ್ಥಿತಿಗೆ ತರುವದಕ್ಕೆ ಪ್ರಯತ್ನಪಟ್ಟು ಕೈಲಾದನಾಟ್ಟಿಗೆ ಪ್ರೋತ್ಸಾಹಿಸಬೇಕೆಂದು ಹೇಳಿದರು. ಆ ಮೇಲೆ ಸಂಸ್ಕೃತ ವಿದ್ವಾನ್ ತಿರುನಾರಾಣಯ್ಯಂಗಾರ್ಯರ— ಸಮಾಚಾರಪತ್ರಿಕೆಗಳನ್ನು ಓದುವದರಿಂದ ಕೇವಲ ಐಹಿಕಜ್ಞಾನ ಉಂಟಾಗುತ್ತೆಯೇ ಹೊರತು ಪಾರಲೌಕಿಕಜ್ಞಾನವನ್ನು ಪಡೆಯುಕೊಳ್ಳುವದಕ್ಕೆ ಆಗಲಾರದು ಆದ್ದರಿಂದ ಇದರ ಜೊತೆಗೆ ಪಾರಲೌಕಿಕಜ್ಞಾನವನ್ನೂ ಉಂಟುಮಾಡಿಕೊಳ್ಳುವುದು ಆವಶ್ಯಕವೆಂದು ಹೇಳಿ, ಶಾಲೆಯು ಚಿರಸ್ಥಾಯಿಯಾಗಿರಲೆಂದು ಉಪನ್ಯಸಿಸಿದರು. ಆ ಮೇಲೆ ಇಲ್ಲಿನ ಎ. ವಿ ಸ್ಕೂಲ್ ಹೆಡ್ ಮಾಸ್ಟರ್ ಮ॥ ಎಂ. ಜೆ ರಾಮಯ್ಯಂಗಾರ್ಯರು ಅಪ್ಪಣೆಕೊಡಿಸಿದ್ದೇನಂದರೆ— ನಾವು ಇಂಥಾ ಶಾಲೆಯೊಂದನ್ನು ೨೫ ವರ್ಷಗಳ ಹಿಂದೆ ಸ್ಥಾಪಿಸಿದ್ದ ಹಾಗೂ, ಆದರೆ ಸಾಕಾದ ಸಲಕರಣೆಗಳು ಒದಗಲಿಲ್ಲವಾದ್ದರಿಂದ ಶಾಲೆಯು ನಿಲ್ಲಿಸಲ್ಪಟ್ಟಿತು ಆದರ ಸ್ಥಿತಿಯು ಇದಕ್ಕೆ ಬರದೆ ಒಳ್ಳೇ ಅಭಿವೃದ್ಧಿಸ್ಥಿತಿಗೆ ಬರಲಿ ಎಂದು ಆಶೀರ್ವದಿಸಿದರು. ಮತ್ತು ಈ ಶಾಲೆಗೆ ವಿದ್ಯಾರ್ಥಿಗಳೂ, ಆ ಬಾಲರೂ ವೃದ್ಧರೂ ಕಳಸೇರಿರುತ್ತಾರೆ ಪಾರಲೌಕಿಕಜ್ಞಾನವನ್ನುಂಟುಮಾಡತಕ್ಕ ವಿದ್ಯೆಯನ್ನು ಕೆಲವರು ಅಭ್ಯಸಿಸುತ್ತಲೇ ಇದಾರೆ ಮತ್ತೆ ಕೆಲವರಿಗೆ ಈ ಜ್ಞಾನವು ತಿಳಿಯುವಂತೆ ಇಲ್ಲಿನ ವಿದ್ವಚ್ಛಿರೋಮಣಿಗಳಲ್ಲಿ ಯಾರಾದರೂ ಕನಿಷ್ಠಪಕ್ಷ ತಿಂಗಳಿಗೊಂದಾವರ್ತಿಯಾದರೂ ಉಪನ್ಯಸಿಸಿ, ಈ ಶಾಲೆಗೆ ಇರತಕ್ಕ ಕೊರತೆಯನ್ನು ನಿವಾರಣೆಮಾಡಬೇಕೆಂದು ಅಪ್ಪಣೆಕೊಡಿಸಿದರು

ತದನಂತರ ಶ್ರೀಮದ್ರಾಮಾನುಜಾಚಾರ್ಯರ ಅಭಿಮತಸ್ಥಲವಾದ ಈ ಯಾದವಕ್ಷೇತ್ರದಲ್ಲಿ ಲೌಕಿಕಜ್ಞಾನವನ್ನು ಪ್ರಚಾರಪಡಿಸಲು ಪ್ರವೃತ್ತವಾದ ಈ ಶಾಲೆಗೆ ಅಭ್ಯುದಯವಾಗಲಿ ಎಂದೂ, ಎಲ್ಲರೂ ವೈಷಮ್ಯಗಳನ್ನು ಬಿಟ್ಟು ಈ ಶಾಲೆಯನ್ನು ಪ್ರೋತ್ಸಾಹಿಸಬೇಕೆಂದೂ ನಮ್ಮ ಮುಖ್ಯಪೋಷಕರು ತಿರುಪತಿ ಪೇಷ್ಕಾರ್‌ರು ಅಪ್ಪಣೆಕೊಡಿಸಿದರು

ಕೊನೆಯಲ್ಲಿ ಅಗ್ರಾಸನಾಧಿಪತಿಗಳಿಗೂ ಸಭಿಕರಿಗೂ ಕೃತಜ್ಞತಾಪೂರ್ವಕ ವಂದನೆಗಳು ಅರ್ಪಿಸಿದ್ದರ ಮೇಲೆ ಸಭಿಕರೆಲ್ಲರೂ ಆನಂದಭರಿತರಾಗಿ ಈ ಶಾಲೆಯು ಉತ್ತರೋತ್ತರಾಭಿವೃದ್ಧಿಯಾಗಬೇಕೆಂದು ಆಶೀರ್ವದಿಸಿ ಸಭಾವಿಸರ್ಜನವಾಗಿ ಸ್ವಸ್ಥಾನಗಳಿಗೆ ತರಳಿದರು

ಪ್ರಪಂಚದ ನಡವಳಿಕೆಗಳು.

೧. ವ್ಯಾಲ್ಯೂ ಪೇಬಿಲ್ ಪಾರ್ಸಲ್ಲಿನ ಕಳ್ಳತನ.

ಸೊರಬ ತಾಲ್ಲೂಕ ಆನವಟ್ಟಿ ಗ್ರಾಮಕ್ಕೆ ೩ ಮೈಲಿ ಫಾಸಲೆಯಲ್ಲಿರುವ ಹಿರಿವಳ್ಳಿಯಲ್ಲಿ ಕೇಶವಭಟ್ಟನೆಂಬಾತನು ಅಲ್ಲಿಯ ಸ್ಕೂಲ್ ಟೀಚರಾದ ಸಿಂಗಾಭಟ್ಟರಿಗೆ—ನನಗೆ ಪೂನಾ ಬುಕ್ ಡಿಪೋದಿಂದ ಕೆಲವು ಪುಸ್ತಕಗಳು ಬೇಕಾಗಿವೆ. ನಾನು ೨—೩ ದಫಾ ಆ ಬುಕ್ ಡಿಪೋವಿಗೆ ಆರ್ಡರ್ ಮಾಡಿ ವಾಪಸು ಬಿಟ್ಟದೇನೆ. ಆದ್ದರಿಂದ ನನ್ನ ಹೆಸರಿಗೆ ಪುಸ್ತಕಗಳನ್ನು ಕಳುಹಿಸುವದಿಲ್ಲ ನಿನ್ನ ಹೆಸರಿಗೆ ವಿ ಪಿ. ಬರುವಂತೆ ಬರೆದು ಹಾಕು ಎಂದು ಹೇಳಿ, ಆತನ ಕೈಯಿಂದ ಬರಸಿ ಹಾಕಿಸಿದನು. ಅದೇ ಮೇರ ೬ ದಿವಸಕ್ಕೆ ಸದರಿ ಸಿಂಗಾಭಟ್ಟರ ಹೆಸರಿಗೆ ಪಾರ್ಸಲ್ ಬಂದಿತು ಮಾರನೆದಿವಸ ಅಲ್ಲಿಯ ಸ್ಕೂಲ್ ಹೆಡ್ ಮಾಸ್ಟರಾದ ಪೋಸ್ಟ್ ಮಾಸ್ಟರು ಸ್ಕೂಲಿಗೆ ಬಂದನಂತರ—ಸಿಂಗಾಭಟ್ಟರೇ ನಿಮ್ಮ ಹೆಸರಿಗೆ ಒಂದು ವಿ. ಪಿ. ಪಾರ್ಸಲ್ ಬಂದಿದೆ ತೆಗೆದು ಕೊಳ್ಳುವಿರಾ? ಎಂದು ಕೇಳಿದ್ದಕ್ಕೆ, ಅವರು—"ಕೇಶವ ಭಟ್ಟರು ಹೇಳಿ ಬರಸಿದ್ದರು. ತೆಗೆದು ಕೊಳ್ಳುತ್ತೇನೆ" ಎಂದು ಹೇಳಿದರು. "ಹಾಗಾದರೆ ನಮ್ಮ ಮನೆಯಲ್ಲಿ ಪೆಟ್ಟಿಗೆಯಲ್ಲಿ ಪಾರ್ಸಲ್ ಇದೆ. ತೆಗೆದುಕೊಂಡು ಹೋಗಲಿಕ್ಕೆ ಕೊಡು" ಎಂದು ಹೇಳಿ ಕೀಲಿ ಕೈ ಕೊಟ್ಟು ಮನೆಗೆ ಕಳಿಸಿದರು. ಸಿಂಗಾಭಟ್ಟರು ಅವರ ಮನೆಗೆ ಹೋಗಿ ಪಾರ್ಸಲ್ ತೆಗೆದುಕೊಂಡು ಬರುವ ದಾರಿಯಲ್ಲಿ ಕೇಶವಭಟ್ಟರ ಮನೆ ಇದ್ದದ್ದರಿಂದ ಅವರ ಮನೆಗೆ ಹೋಗಿ— ಕೇಶವಭಟ್ಟರೇ, ನಿಮ್ಮ ಪಾರ್ಸಲ್ ಬಂದಿದೆ. ದುಡ್ಡು ಕೊಡಿರಿ ಎಂದು ಕೇಳಿದ್ದಕ್ಕೆ—ಸ್ವಲ್ಪ ತಡದು ದುಡ್ಡು ಕೊಡುತ್ತೇನೆ. ಪಾರ್ಸಲ್ ಇಟ್ಟು ಹೋಗು ಎಂದು ಹೇಳಿದ್ದರಿಂದ ಪಾರ್ಸಲ್ ಇಟ್ಟು ಸಿಂಗಾಭಟ್ಟರು ಸ್ಕೂಲಿಗೆ ಬಂದರು, ಅವರು ಬಂದ ಒಡನೆ—ಪಾರ್ಸಲ್ ತೆಗೆದುಕೊಂಡಿರಾ? ದುಡ್ಡು ಕೊಡು ಎಂದು ಹೆಡ್‌ಮಾಸ್ಟರು ಕೇಳಿದ್ದಕ್ಕೆ— ಕೇಶವಭಟ್ಟರ ಕೈಗೆ ಕೊಟ್ಟದೇನೆ. ದುಡ್ಡು ಈಗ ಕೊಡುತ್ತಾರಾಗಿ ಹೇಳಲು, ಪೋಸ್ಟ್ ಮಾಸ್ಟರು—ಹಾಗಾಗುವದಿಲ್ಲ. ದುಡ್ಡಾಗಲಿ ಪಾರ್ಸಲ್ ಆಗಲಿ ಈಸಿಕೊಂಡು ಬಾ ಎಂದು ಕಳಿಸಿದರು. ಕಾಲ್ಪೆ ಬಂದು ನೋಡುವಲ್ಲಿ ಕೇಶವಭಟ್ಟರು—ಮನೆಯಲ್ಲಿರದೆ ಇರಲು ಕೆಲವು ಹೊತ್ತು ತಡದು ಬಂದು—ಕೇಶವಭಟ್ಟರೇ ದುಡ್ಡಾಗಲಿ, ಪಾರ್ಸಲ್ಲಾಗಲಿ ಕೊಡಿರಿ; ಪೋಸ್ಟ್ ಮಾಸ್ಟರು ಗಲಾಟೆಮಾಡುತ್ತಾರೆ ಎಂದು ಕೇಳಿದ್ದಕ್ಕೆ, ಅವರು—ಈಗ ದುಡ್ಡು ಇಲ್ಲ. ವಾಪಸು ಮಾಡು ಎಂದು ಪಾರ್ಸಲ್ ಕೊಟ್ಟುಬಿಟ್ಟರು. ಆ ಮೇಲೆ ಸಿಂಗಾಭಟ್ಟರಿಂದ ಅದು ಪೋಸ್ಟ್ ಮಾಸ್ಟರಿಗೆ ಕೊಡಲ್ಪಟ್ಟು, ವಾಪಸುಮಾಡಲ್ಪಟ್ಟಿತು. ಸದರಿ ಪಾರ್ಸಲ್ ಪೂನಾ ಬುಕ್ ಡಿಪೋ ಕೀಪರಿಗೆ ವಾಪತಿಗೆ ಹೋಗಲು, ಅವರಿಗೆ ಅನುಮಾನ ಬಂದು ನಾಲ್ಕು ಜನಗಳ ಸಮಕ್ಷಮ ಅದನ್ನು ಒಡೆಯಲು ಅದರಲ್ಲಿ ಹರಕು ವರ್ತಮಾನ ಪತ್ರಿಕೆಗಳ ವಿನಹಾ ಏನೂ ಇರಲಿಲ್ಲ. ಆದರಂತೆ ಮಹಜರ್ ಮಾಡಿಸಿ, ಪೋಸ್ಟ್ ಇನ್ಸ್‌ಪೆಕ್ಟರಿಗೆ ಡಿಪೋ ಕೀಪರು ಅರ್ಜಿ ಬರೆಯಲು, ಇನ್ಸ್‌ಪೆಕ್ಟರು ತಲವಳ್ಳಿಗೆ ಬಂದು. ಆಪ್ರಿಸಿಪಾದ ಸಿಂಗಾಭಟ್ಟನ ಸ್ಟೇಟ್‌ಮೆಂಟ್ ಮಾಡಿಕೊಂಡು, ಪಟೇಲ ಪೊಲೀಸಿನವರು ಮತ್ತು ಗ್ರಾಮಸ್ಥರ ಸಮಕ್ಷಮ ಕೇಶವಭಟ್ಟನ ಮನೆ ಝಡತಿ ಮಾಡಲು, ಮೊದಲು ಪಾರ್ಸಲ್‌ನಲ್ಲಿ ಕಳಿಸಿದ ಬುಕ್ಕುಗಳೂ ತೆರೆದ ಪಾರ್ಸಲ್ಲಿನಲ್ಲಿ ಹಾಕಿ ಕಳಿಸಿದ್ದ ಹರಕು ವರ್ತಮಾನ ಪತ್ರಿಕೆಗಳ ಉಳಿದ ಚೂರುಗಳೂ ಸಿಕ್ಕಿದವು. ಆ ಮೇಲೆ ಕೇಶವಭಟ್ಟನನ್ನು ದಸ್ತಗಿರಿ ಮಾಡಿಕೊಂಡು, ಸದರಿ ಕೇಸು ಮ್ಯಾಜಿಸ್ಟ್ರೇಟರವರಿಗೆ ಪೊಲೀಸಿನವರಿಂದ ದರ್ಯಾಫ್ತು ಮಾಡಲ್ಪಟ್ಟಿತು. ಮ್ಯಾಜಿಸ್ಟ್ರೇಟರು ಬುಕ್ ಡಿಪೊ ಕೀಪರ ಮತ್ತು ಸಾಕ್ಷಿಗಳ ವಿಚಾರಣೆ ಮಾಡಿ, ಸದರಿ ಅಪರಾಧಿ ಕೇಶವಭಟ್ಟನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಿದರು. ಈ ಕೇಸಿನ ಪರಿಣಾಮಸ್ಥಿತಿಯನ್ನು ತಿಳಿದುಕೊಂಡು, ವಿ. ಪಿ ಪಾರ್ಸಲುಗಳಿಗೆ ಆರ್ಡರ್ ಮಾಡಿ ವಾಪಸು ಮಾಡುವವರೂ ಮೋಸ ಪಡಿಸುವವರೂ ಬಹು ಎಚ್ಚರವಾಗಿರಬೇಕು

ನಾರದ.

೨. ಇಬ್ಬರಿಗೆ ಬದಲು ಇಬ್ಬರನ್ನು ಕೊಲೆ ಮಾಡಿದ್ದು.

ಸುಮಾರು ೩ ಯಾ ೪ ವರುಷಗಳಿಗೆ ಮುಂಚೆ ವಿಷ್ಣುಶಾಸ್ತ್ರಿ, ಕೃಷ್ಣಶಾಸ್ತ್ರಿ ಎಂಬಿಬ್ಬರು ಉಡುಪಿ ಬ್ರಾಹ್ಮಣರು ಕೇರಳಕ್ಕೆ ಹೋಗಿ ಅಲ್ಲಿ ಹಣ ಸಂಪಾದನೆ ಮಾಡುತ್ತಾ ಇದ್ದರು ಮೊನ್ನೆ ತ್ಪಲಾಗಿ ಅಂದರೆ ಸುಮಾರು ೮ ದಿವಸಗಳ ಮುಂಚೆ ಅವರು ಅಲ್ಲಿ ಸಂಪಾದಿಸಿದ ಹಣವನ್ನು ಗಂಟು ಕಟ್ಟಿ ಹೊತ್ತುಕೊಂಡು ಹೊಸದುರ್ಗಕ್ಕಾಗಿ ಬರಬೇಕೆಂದು ನಿಶ್ಚಯಿಸಿ ಹೊರಟರು ಹೊರಟು ೨ ದಿವಸಗಳಾದ ನಂತರ ನೀಲೇಶ್ವರಕ್ಕೆ ಬಂದು ಮುಟ್ಟಿದರು. ನೀಲೇಶ್ವರದಿಂದ ಹೊಸದುರ್ಗಕ್ಕೆ ೧೨ ಮೈಲಿ ಇರುವುದು ನೀಲೇಶ್ವರಕ್ಕೆ ಬರುವಾಗ್ಗೆ ಸಾಯಂಕಾಲ ನಾಲ್ಕು ಘಂಟೆ ಸಮಯವಾಗಿತ್ತು. "ನಡೆದು ನಡೆದು ಹೋಗುವ. ಇಲ್ಲಿ ಈ ದಿವಸ ಕೂತುಕೊಳ್ಳುವದು ಬೇಡ. ಮುಂದೆ ಹೋಗುವ" ಎಂದು ಅವರಿಬ್ಬರೂ ನಿಶ್ಚಯಿಸಿ, ಹೊಸದುರ್ಗಕ್ಕೆ ೪ ಮೈಲಿ ಇರುವಲ್ಲಿಗೆ ಬರುವಾಗ ನಡೆದು ಹೋಗುವ ಹಾದಿ ಕಾಣದು ಹೀಗಾದ್ದರಿಂದ ಅಲ್ಲೇ ಎಲ್ಲಾದರೂ ರಾತ್ರಿ ಉಳುಕೊಳ್ಳುವುದಕ್ಕೆ ಜಾಗ ಹುಡುಕಬೇಕಾಯಿತು, ಅತ್ತಿತ್ತ ನೋಡುವಾಗ್ಗೆ ಸ್ವಲ್ಪ ದೂರದಲ್ಲಿ ಒಂದು ಬೆಳಕು ಕಣ್ಣಿಗೆ ಕಾಣಿಸಿತು. ಆ ಬೆಳಕಿದ್ದ ಸ್ಥಳಕ್ಕೆ ಹೋಗಿ ಆ ಮನೆ ಯಾರದೆಂಬದಾಗಿ ವಿಚಾರಿಸುವಾಗ್ಗೆ ಆದು ಒಬ್ಬ ಕಣ್ಣನಾಯರ್ ಎಂಬುವನದು ಎಂಬದಾಗಿ ತಿಳಿಯಬಂತು.

ರಾತ್ರಿ ಉಳುವುದಕ್ಕೆ ಜಾಗ ಸಿಕ್ಕುವದೋ ಎಂದು ಕೇಳಲಾಗಿ ಸಿಕ್ಕೀತು ಎಂದು ಪ್ರತ್ಯುತ್ತರವಾದ್ದರಿಂದ ಅವರ ಚಾವಡಿಯಲ್ಲಿ ಅವರ ಕೊಡೆ ವಸ್ತ್ರ ಇಟ್ಟು ಕೈಯಲ್ಲಿದ್ದ ಗಂಟನ್ನು ಕೆಳಗಿಡದೆ ಕೈಯಲ್ಲೇ ಹಿಡುಕೊಂಡು ಬೇಲಿಬದಿಯಲ್ಲಿ ಹರಿದು ಹೋಗುವ ಹಳ್ಳಕ್ಕೆ ಕೈಕಾಲು ತೊಳೆಯುವದಕ್ಕೆ ಹೋದರು.

ಗಂಟನ್ನು ಕೈಯಲ್ಲೇ ಹಿಡಿದುಕೊಂಡು ಹೋದ್ದರಿಂದ ಏನೋ ಹಣವಿರಬಹುದೆಂದು ಕಣ್ಣನಾಯರ್‌ನ ಮನಸ್ಸಿಗೆ ಆಲೋಚನೆಯಾಯಿತು. ಆದ್ದರಿಂದ ಮನೆಯ ಹಿಂದೆ ಹೋಗಿ ಎರಡು ಪಾಣಾರಿಗೆ ಕರೆದು ಒಳಗೆ ಸುಮ್ಮನೆ ಕೂತುಕೊಳ್ಳುವುದಕ್ಕೆ ಹೇಳಿದನು. ಕೈಕಾಲು ತೊಳೆಯುವದಕ್ಕೆ ಹೋದ ಬ್ರಾಹ್ಮಣರು ಕಾಲು ತೊಳೆದು ತಿರಿಗಿ ಮನೆಗೆ ಬಂದಾಗ ಅವರಿಗೆ ಮಲಗಲಿಕ್ಕೆ ಚಾಪೆ ಕೊಟ್ಟನು. ಅವರು ಚಾಪೆ ಬಿಚ್ಚಿ ಗಂಟನ್ನು ತಲೆಯಡಿ ಇಟ್ಟುಕೊಂಡು ಬೆಳ್ಳಗಿನ ವಸ್ತ್ರ ಮುಸುಕು ಹಾಕಿಕೊಂಡು ಮಲಗಿದರು ಹಗಲೆಲ್ಲಾ ನಡೆದದ್ದರಿಂದ ಬಹಳ ಆಯಾಸವಾದ್ದರಿಂದ ಬೇಗನೆ ನಿದ್ದೆಬಿತ್ತು.

ಆ ದಿನ ರಾತ್ರೆ ಹೊಸದುರ್ಗದಲ್ಲಿ ಮೂಡಬಿದ್ರೆ ನಾಟಕ ಕಂಪನಿಯವರ ನಾಟಕವನ್ನು ನೋಡಲಿಕ್ಕಾಗಿ ಕಣ್ಣನಾಯರ್‌ನ ಅಳಿಯ ಹೋಗಿದ್ದನು. ಅವನ ಸಂಗಡ ಒಬ್ಬ ಸೇವಕನೂ ಇದ್ದನು.

ಈ ಬ್ರಾಹ್ಮಣರಿಗೆ ನಿದ್ದೆ ಬೀಳುತ್ತಲೇ ಪಾಣಾರ‍್ರು ಬಂದು ತಲೆಯಡಿಯಲ್ಲಿದ್ದ ಗಂಟುಗಳನ್ನು ಎಳೆದು ತಕ್ಕೊಂಡು ಹೋಗಿ ಒಳಗೆ ಇಟ್ಟು ಬಾಗಿಲು ಮುಚ್ಚಿ ಮಲಗಿದರು. ಗಂಟು ಎಳೆಯುವಾಗ ಈ ಬ್ರಾಹ್ಮಣರು ಎಚ್ಚರಿಕೆಯಾದಾಗ್ಯೂ ಮಾತಾಡದೆ ಸುಮ್ಮನೆ ಮಲಗಿದ್ದರು ಯಾಕೆಂದರೆ—"ನಾವಿಬ್ಬರೇ, ಇವರು ನಮ್ಮನ್ನು ಮಾತಾಡಿದರೆ ಕೊಂದಾರು" ಎಂದು ಅವರು ಮತ್ತೆ ಹೇಳಿದರು. ಇದೆಲ್ಲಾ ಆದ ಮೇಲೆ ಆ ಬ್ರಾಹ್ಮಣರು ಆ ಚಾವಡಿಯ ಮೂಲೆಯಲ್ಲಿಟ್ಟಿದ್ದ ಭತ್ತ ಹಾಕುವ ಮರದ ದೊಡ್ಡ ಪೆಟ್ಟಿಗೆಯ ಹಿಂದೆ ಅವಿತುಕೊಂಡರು.

ಸ್ವಲ್ಪ ಸಮಯದ ತರುವಾಯ ಕಣ್ಣನಾಯರ್‌ನ ಅಳಿಯನೂ ಸೇವಕನೂ ನಾಟಕ ತೀರಿದ ನಂತರ ಮಲಗಿಕೊಳ್ಳುವುದಕ್ಕೆ ಬಂದರು. ಚಾವಡಿ ನೋಡುವಾಗ್ಗೆ—ಚಾವಡಿಯಲ್ಲಿ ಚಾಪೆ ಬಿಚ್ಚಿಟ್ಟದೆ ನಾವು ಇನ್ನು ಒಳಗಿನವರಿಗೆ ಉಪದ್ರ ಕೊಡುವದು ಬೇಡವೆಂದು ಅವರು ಆಲೋಚನೆ ಮಾಡಿ ಕೈಯಲ್ಲಿದ್ದ ಬೆಳ್ಳಗಿನ ವಸ್ತ್ರವನ್ನು ಮುಸುಕು ಹಾಕಿಕೊಂಡು ಮಲಗಿದರು ಇವರು ಬಂದದ್ದು ಯಾರಿಗೂ ಗೊತ್ತಿಲ್ಲ ಇವರಿಗೆ ನಿದ್ದೆ ಬಿತ್ತೆಂಬುವಾಗ್ಗೆ ಒಳಗಿನಿಂದ ಸ್ವಲ್ಪ ಶಬ್ದಗಳು ಕೇಳಿಸಿದವು. ಬಾಗಿಲು ಮೆಲ್ಲಗೆ ತೆರೆಯಲ್ಪಟ್ಟಿತು. ಕತ್ತಲೆಯಲ್ಲಿ ಇಬ್ಬರು ಬಂದು ಇವರನ್ನು ಕತ್ತಿಯಿಂದ ಕುತ್ತಿಗೆ ಕತ್ತರಿಸಿ, ಅವರು ಮಲಗಿದ ಚಾಪೆಯಲ್ಲೇ ಕಟ್ಟಿ ಹಟ್ಟಿಯಲ್ಲಿ ಗೊಬ್ಬರದ ಅಡಿಯಲ್ಲಿ ಹೂಳಿಟ್ಟು ಬಾಗಿಲು ಹಾಕಿ ಮುಂಚಿನಂತೆಯೇ ಎಲ್ಲರೂ ಮಲಗಿಕೊಂಡರು. ಇದೆಲ್ಲಾ ನಡೆದ ೧ ಘಳಿಗೆ ತರುವಾಯ ಆ ಬ್ರಾಹ್ಮಣರು ಹೊರಟು ಸುಮಾರು ೫ ಘಂಟೆ (ಬೆಳಿಗ್ಗೆ) ಸಮಯಕ್ಕೆ ಹೊಸದುರ್ಗ ಪೊಲೀಸ್ ಸ್ಟೇಷನಿಗೆ ಬಂದು, ಅಲ್ಲಿ ನಡೆದ ವರ್ತಮಾನವೆಲ್ಲಾ ಪೊಲೀಸಿನವರಿಗೆ ತಿಳಿಸಿದರು. ಅವರು ಕೂಡ್ಲೇ ೬ ಘಂಟೆಗೆ ಕಣ್ಣನಾಯರ್‌ನ ಮನೆಗೆ ಬಂದು ಹಟ್ಟಿ ತನಿಖೆ ಮಾಡಿಸಿದಾಗ ಹೆಣಗಳು ಕಂಡವು. ಹೆಣಗಳನ್ನು ನೋಡಿದ ಕೂಡಲೇ ಕಣ್ಣನಾಯರ್ ಮೂರ್ಛೆ ಹೋದನು. ಮನೆ ಜಡತಿ ಮಾಡಿ ಬ್ರಾಹ್ಮಣರ ಹೇಳಿಕೆಗೆ ಅನುಸಾರವಾಗಿ ಎರಡು ಹಣದ ಗಂಟುಗಳು ಸಿಕ್ಕಿದವು. ಕೂಡಲೇ ಕಣ್ಣನಾಯರನೂ ಬಾಕಿ ೨ ಮಂದಿಯನ್ನು ಕೋಳ ಹಾಕಿ ಸ್ಟೇಷನಿಗೆ ಕಳುಹಿಸಿದರು. ಫಿರ್ಯಾದು ಬಾಕಿ ಇದೆ

ಎಂ. ಬಿ. ಜಿ.

ಒಬ್ಬ ದೊರೆಯ ಕರ್ತವ್ಯಗಳು.

ಜರ್ಮನಿ ಚಕ್ರವರ್ತಿಯವರ ಅನುಭವವು

ಜರ್ಮನಿ ರಾಜ್ಯದ ಚಕ್ರವರ್ತಿಯವರಿಗೂ ಒಬ್ಬ ಗ್ರಂಥ ಕರ್ತನಿಗೂ ಸುಮಾರು ಮೂರು ವಾರಗಳ ಕೆಳಗೆ ರಾಜಭವನದಲ್ಲಿ ಸಂಧಿಯಾದಾಗ ಚಕ್ರವರ್ತಿಯವರು ಆತನ ಸಂಗಡ ಹೇಳಿದ ಕೆಲವು ವಿಷಯಗಳು ಬಹು ಸ್ವಾರಸ್ಯವಾಗಿಯೂ ಪಾಶ್ಚಾತ್ಯ ರಾಜ್ಯಗಳ ಪ್ರಜಾಪಾಲಕರಲ್ಲಿರುವ ಕರ್ತವ್ಯಜ್ಞಾನ ಜವಾಬ್ದಾರಿ ಎಂತಾದ್ದು ಅಪಾರವಾಗಿಯೂ ಇರುತ್ತವೆ ಎಂಬುವುದನ್ನು ತಿಳಿಸಿಕೊಳ್ಳಬಹುದಾಗಿದೆ. ಚಕ್ರವರ್ತಿಯವರು ಆತನ ಸಂಗಡ ಹೇಳಿದ್ದೇನಂದರೆ—ನಾನು ಮಾಡತಕ್ಕ ಕಾರ್ಯಗಳಿಂದ ನನ್ನ ಪ್ರಜೆಗಳಿಗೆ ಒಳ್ಳೇದೇ ಆಗುತ್ತದೆಂದು ನಂಬಿ ಮಾಡುತ್ತೇನಲ್ಲದೆ ಎಲ್ಲಿ ನನ್ನ ಕೆಲಸಗಳು ಫಲಕಾರಿಯಾಗುವುದಿಲ್ಲವೋ ಎಂಬ ಅನುಮಾನವನ್ನಿಟ್ಟುಕೊಂಡು ನಾಡುವವನಾಗಿಲ್ಲ. ಕೆಲಸ ಮಾಡುವುದರಲ್ಲೇ ನಾನು ಸರ್ವದಾ ಮಗ್ನನಾಗಿರುತ್ತೇನೆ ನನ್ನ ಪದವಿಯು ಬಹು ಕಠಿಣವಾದದ್ದು. ಪ್ರಜೆಗಳು ನನ್ನ ಮನೋಗತವನ್ನು ತಿಳಿದು ನನಗೆ ಸಹಾಯಕರಾದಲ್ಲಿ ನಾನು ತುಂಬಾ ಸಂತುಷ್ಟನಾಗುವೆನು ದೇಷ್ಟನವರು ಹೇಳಿರುವಂತೆ ಅನುಮಾನವುಳ್ಳಂಥಾ ಮನುಷ್ಯನು ಇತರರಿಗೆ ಕೇಡಕಿಯಾಗುತ್ತಾನೆ; ತಾನೂ ನೊಂದುಕೊಂಡು ಕೆಡುತ್ತಾನೆ ಒಳ್ಳೇದಾಗುತ್ತೆಂಬ ಉದ್ದೇಶವಿಟ್ಟುಕೊಂಡು ಕೆಲಸ ಮಾಡುತ್ತೇನಾದ್ದರಿಂದ ನನಗೆ ಎಲ್ಲಾ ಕಾರ್ಯಗಳೂ ಸಾಧ್ಯವಾಗಿರುತ್ತವೆ ನಾನು ಸಂಶಯ ಪಡುವುದಿಲ್ಲ, ಅಧೈರ್ಯವೆಂಬುವದನ್ನು ಕಾಣೆನು ನನ್ನ ಜವಾಬ್ದಾರಿಯನ್ನು ತಿಳಿದುಕೊಂಡು ಅದಕ್ಕೆ ತಕ್ಕಹಾಗೆ ನಾನು ಕೆಲಸ ಮಾಡುತ್ತಾ ಬರುವಾಗ್ಗೆ ನನಗೆ ತುಂಬಾ ಜುಗುಪ್ಸೆಯುಂಟಾಗಿ ವಿರಾಮವೂ ವಿಶ್ರಾಂತಿ ಸುಖವೂ ಬೇಕಾಗುವುದು ನನ್ನನ್ನು ತಿರುಗುವ ಚಕ್ರವರ್ತಿ ಎಂದು ನನ್ನ ಪ್ರಜೆಗಳು ಕರೆಯುತ್ತಾರೆ ನನ್ನ ರಾಜ್ಯದೊಳಗೆ ಎಷ್ಟೋ ಪ್ರದೇಶಗಳನ್ನು ಹೋಗಿ ನೋಡಿಕೊಂಡು ಬರಬೇಕಾಗಿರುವುದು. ನನಗೆ ಕೆಲಸ ಮಾಡಿ ಸಾಕಾದಾಗ ಊರುಗಳ ಮೇಲೆ ಸಂಚಾರ ಹೊರಡುತ್ತೇನೆ ನನ್ನ ಉದ್ಯೋಗವು ಸ್ತುತಿಯನ್ನು ಕೊಡತಕ್ಕದ್ದಲ್ಲ ಯಾಕಂದರೆ ನನಗೆ ಸ್ವಾತಂತ್ರ್ಯವೇ ಇಲ್ಲವು ನಾನು ಮಾಡುವ ಕಾರ್ಯವ್ಯಾವದಾದರೂ ಫಲಕಾರಿಯಾದರೆ ಪ್ರಜೆಗಳು ಅದನ್ನು ನೋಡಿ—"ಚಕ್ರವರ್ತಿಗೆ ಆ ರೀತಿ ವಿವೇಕ ಹೇಳಿಕೊಟ್ಟವರ್ಯಾರು?" ಎಂದು ಕೇಳುವರು ಹಾಗಿಲ್ಲದೆ ನಾನು ಮಾಡಿದ ಕೆಲಸವು ಕೆಟ್ಟುಹೋದ ಪಕ್ಷದಲ್ಲಿ ಅದೇ ಜನರು—"ಅಯ್ಯೋ ಪಾಪ, ಚಕ್ರವರ್ತಿಗೆ ಆ ವಿಚಾರದಲ್ಲಿ ಮಾರ್ಗ ತಿಳಿಯದೆ ಹೋಯಿತು" ಎನ್ನುವರು. ಇತರ ರಾಜ್ಯಗಳ ಪ್ರಜಾ ಪಾಲಕರು ಎಂಥಾ ಕೆಲಸ ಮಾಡಿದರೂ ಅವರ ಪ್ರಜೆಗಳು ಆ ವಿಷಯವನ್ನು ಸಹಜವೆಂದು ಗಣಿಸುವರಲ್ಲದೆ ಚರ್ಚೆ ಮಾಡುವುದಿಲ್ಲವು ನಾನು ಯಾವ ಕಾರ್ಯವನ್ನು ಮಾಡಿದಾಗ್ಯೂ ನನ್ನ ಪ್ರಜೆಗಳು ಸುಮ್ಮನಿರುವುದಿಲ್ಲ ಅದ್ಯಾಕೆ? ಅದೇನು? ಎಂಬೀ ರೀತಿಯಲ್ಲಿ ಪ್ರಶ್ನೆಗಳನ್ನು ಹಾಕಿ ಚರ್ಚೆ ಮಾಡುವರು ಅಂಥವರಿಗೆಲ್ಲಾ ನಾನು ನನ್ನ ಮನಸ್ಸಿನಲ್ಲಿ ಅಂದುಕೊಳ್ಳುವ ಸಮಾಧಾನವೇನಂದರೆ—ಜರ್ಮನಿ ಚಕ್ರಾಧಿಪತ್ಯವು ಅಭಿವೃದ್ಧಿಗೆ ಬರಬೇಕೆಂಬುದೂ ನನ್ನ ಪ್ರಜೆಗಳು ಸಕಲ ಭಾಗಗಳಲ್ಲೂ ಶ್ರೇಯಸ್ಸನ್ನು ಪಡೆಯಬೇಕೆಂಬುದೂ ನನ್ನ ಉದ್ದೇಶವಾಗಿರುತ್ತದೆ ನಾನು ಪ್ರಯಾಣಮಾಡುವ ವಿಷಯದಲ್ಲಿ ನನ್ನ ಪ್ರಜೆಗಳೆಲ್ಲಾ ಅಸಮಾಧಾನಪಡುತ್ತಾರಾದಾಗ್ಯೂ ನಾನು ಹೋಗುವ ಕಡೆಗಳಲ್ಲೆಲ್ಲಾ ಅವರೇ ನನ್ನನ್ನು ವಿಶೇಷ ಆದರಪೂರ್ವಕವಾಗಿ ಸತ್ಕರಿಸಿ ನನ್ನನ್ನು ಆನಂದ ಪಡಿಸುವರು ಎಂಬುದೇ

ಇಂಡಿಯಾ ದೇಶದ ವೃತ್ತಾಂತಗಳು.

ಕಲ್ಕತ್ತೆಗೆ ಉತ್ತರದಲ್ಲಿರುವ ಡಾರ್ಜಿಲಿಂಗ್ ಡಿಸ್ಟ್ರಿಕ್ಟಿನಲ್ಲಿ ಒಂದಾನೊಂದು ಟೀ ಕಾರ್ಖಾನೆಗೆ ಬೆಂಕಿಬಿದ್ದು, ಸುಮಾರು ಮೂವತ್ತು ಸಾವಿರ ರೂಪಾಯಿನ ಸಾಮಾನು ನಷ್ಟವಾಯಿತೆಂದು ತಿಳಿದುಬಂದಿದೆ

◆◆◆◆

ಕಳೆದ ಅಕ್ಟೋಬರ್ ತಿಂಗಳಲ್ಲಿ ಇಗ್ಲಾಂಡಿನಿಂದ ಹಿಂದೂಸ್ಥಾನಕ್ಕೆ ಒಟ್ಟು ೩೯೩ ಲಕ್ಷ ರೂಪಾಯಿಗಳು ರವಾನೆಯಾಯಿತು ಅದರಲ್ಲಿ ೨೧೫॥ ಕೋಟಿ ರೂಪಾಯಿನಷ್ಟು ಚಿನ್ನವೂ ೧೮೦॥ ಕೋಟಿ ರೂಪಾಯಿನಷ್ಟು ಬೆಳ್ಳಿಯೂ ಇದ್ದವು

◆◆◆◆

ಸಿಲೋನಿನಿಂದ ಮೇಜರ್ ಪರೀರವರು ದೇಶೀಯ ಖೈದಿಗಳನ್ನು ಬಹಿರಂಗವಾಗಿ ಛಡಿ ಹೊಡಿಯುವದಕ್ಕೆ ಅನುಮತಿ ಕೊಡಬೇಕೆಂದು ಲಾರ್ಡ್ ಎಲ್ಗಿನರವರಿಗೆ ಬರೆದುಕೊಂಡ ರಿಪೋರ್ಟಿನಲ್ಲಿ ನಮೂದಿಸಿದರು ಅದಕ್ಕೆ ಅವರು ಇಷ್ಟಪಡಲಿಲ್ಲ.

◆◆◆◆

ಕಾನ್ಪುರದ ಕ್ಲೇರ್ಟ್ ಮತ್ತು ಸ್ಮಿತ್ ಕಂಪನಿಯವರಿಬ್ಬರು ಫತ್ತೇಪುರ್ ಡಿಸ್ಟ್ರಿಕ್ಟಿನಲ್ಲಿ ಬೇಟೆಗೆ ಹೋಗಿದ್ದರು ೨೬ ದಿನಗಳ ವರೆಗೆ ಬೇಟೆಯಾಡಿ ೮೨ ಮೊಸಳೆಗಳನ್ನು ಹಿಡಿದಿರುತ್ತಾರೆ. ಇದು ಬಹಳ ಭಾರಿ ಬೇಟೆಯಾಗಿರುತ್ತದೆ

◆◆◆◆

ಲಕ್ನೋ ಪಟ್ಟಣದಲ್ಲಿ ಮಹಮ್ಮದೀಯ ವೈದ್ಯವಿದ್ಯಾಶಾಲೆಯನ್ನು ಕಟ್ಟುವದಕ್ಕೆ ೧೩ ಲಕ್ಷ ರೂಪಾಯಿ ಬೇಕೆಂದು ಅಂದಾಜು ಹಾಕಿದರು ಅದರ ಪೈಕಿ ಸುಮಾರು ೮ ಲಕ್ಷವೂ ೧೯ ಸಾವಿರ ರೂಪಾಯಿ ಈಗಾಗಲೇ ವಸೂಲಾಗಿರುತ್ತದೆ ಉಳಿದ ನಾಲ್ಕು ಲಕ್ಷವನ್ನೂ ಚಂದಾ ಕೊಡುವದಾಗಿ ವಾಗ್ದಾನವಾಗಿದೆ

◆◆◆◆

ಹಿಂದೂಸ್ಥಾನದ ಮಹಮ್ಮದೀಯರೆಲ್ಲರೂ ತಮ್ಮಲ್ಲಿ ಮುಖಂಡರಾಗಿರುವವರನ್ನು ಚುನಾಯಿಸಿ ಆಗ್ರಾಪಟ್ಟಣದಲ್ಲಿ ಸೇರುವ ಮಹಮ್ಮದೀಯ ಸಮಾಜಕ್ಕೆ ಕಳುಹಿಸುವರು ಆ ಸಭೆಯು ಮುಂದಿನವಾರ ಸೇರಿ ತಮ್ಮ ಮುಡುಗರನ್ನು ಯಾವ ವಿಧದಲ್ಲಿ ಮುಂದಕ್ಕೆ ತರಬಹುದೆಂದು ತೀರ್ಮಾನಿಸುತ್ತಾರೆ.

◆◆◆◆

ಬಂಗಾಳ ಆಧಿಪತ್ಯದ ದರ್ಭಾಂಗ ಡಿಸ್ಟ್ರಿಕ್ಟಿನಲ್ಲಿ ಕ್ಷಾಮಬಾಧೆಯಿಂದ ಶ್ರಮಪಡುವ ಜನಗಳ ಪೈಕಿ ೬೩,೩೬೫ ಜನರನ್ನು ಸರ್ಕಾರದವರು ಧರ್ಮಾರ್ಥವಾಗಿ ಪೋಷಿಸುತ್ತಿದ್ದಾರೆ. ಉಳಿದವರಲ್ಲಿ ಸುಮಾರು ೧೫,೪೦೦ ಜನರು ಸರ್ಕಾರಿ ಕಾಮಗಾರಿಗಳಲ್ಲಿ ಕೆಲಸಮಾಡುತ್ತಾರೆ. ಅಲ್ಲಿ ಈಚಗೆ ಅಕ್ಕಿಯ ಧಾರಣೆ ಕಮ್ಮಿಯಾಗುತ್ತಿರುವುದು

◆◆◆◆

ಮದರಾಸ್ ಗವರ್ನರ್ ಸರ್ ಆರ್ಥರ್ ಲಾಲಿಯವರ ಸಹೋದರಾದ ಲಾರ್ಡ್ ವೆಲಾಕ್‌ವವರು ಮುಂದಿನ ಸೋಮವಾರ ಇಂಡಿಯಾಕ್ಕೆ ಬಂದು, ಅಮೀರರು ಬರುವಾಗ್ಗೆ ಆಗ್ರಾದಲ್ಲಿ ಸೇರುವ ಸಭೆಯಲ್ಲಿ ವೈಸ್‌ರಾಯರವರ ಅತಿಥಿಗಳಾಗಿ ಕೆಲವು ಕಾಲವಿದ್ದು, ಆ ಮೇಲೆ ತಮ್ಮ ಸಹೋದರರ ಆತಿಥ್ಯವನ್ನು ಸ್ವೀಕರಿಸುವದಕ್ಕೆ ಮದರಾಸಿಗೆ ಬರುತ್ತಾರೆ

◆◆◆◆

ಸಿಂಧೂ ದೇಶದ ಹೈದರಾಬಾದಿನಲ್ಲಿ ಕಲೆಕ್ಟರವರ ಕಚೇರಿಗೆ ಬೆಂಕಿಬಿದ್ದು ರಿಕಾರ್ಡುಗಳೆಲ್ಲಾ ಸುಟ್ಟುಹೋದವಷ್ಟೆ ಇದಕ್ಕೆ ಬೆಂಕಿ ಹಾಕಿದವರು ಇಂಥಾವರೆಂದು ಯಾರಾದರೂ ವರ್ತಮಾನಕೊಟ್ಟಲ್ಲಿ ಅವರಿಗೆ ೨,೦೦೦ ರೂಪಾಯಿ ಇನಾಮು ಕೊಡುತ್ತೇವೆಂದು ಹೈದರಾಬಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಬಾಸಿರವರು ಪ್ರಸಿದ್ಧಪಡಿಸಿದಾರೆ.

◆◆◆◆

ಬೊಂಬಾಯಿನ ಅಬ್ದುಲ್ ರಹಮಾನ್ ಎಂಬ ಬೀದಿಯಲ್ಲಿ ಕಳೆದ ಶುಕ್ರವಾರ ಮಧ್ಯಾನ್ಹ ಒಂದು ಮನೆಯು ಬಿದ್ದು ಒಳಗಿದ್ದ ನಾಲ್ಕು ಜನರೂ ಮೃತರಾದರು ಅಷ್ಟರಲ್ಲೇ ಅದರ ಪಕ್ಕದ ಮನೆಯೂ ಉರುಳುತ್ತಿತ್ತು ಆದರೆ ಒಳಗಿದ್ದವರು ಬಹಳ ಪ್ರಯಾಸಪಟ್ಟು ಕಿಟಕಿಗಳ ಮಾರ್ಗವಾಗಿ ಹೊರಕ್ಕೆ ಬಂದರು ಎರಡನೇ ಮನೆಯಲ್ಲಿ ಪ್ರಾಣನಷ್ಟವೇನೂ ಆಗಲಿಲ್ಲ

◆◆◆◆

ಇಗ್ಲೆಂಡಿನಲ್ಲಿರುವ ಒಂದಾನೊಂದು ಕಂಪನಿಯವರು ಚಿಟ್ಟಗಾಂಗ್ ಪಟ್ಟಣದಲ್ಲಿ ಒಂದು ಷಾಪನ್ನು ಹೊಸದಾಗಿ ತೆಗೆದಿರುತ್ತಾರೆ ಆ ಕಂಪೆನಿಯವರು ಚಿಟ್ಟಗಾಂಗ್ ಪಟ್ಟಣದ ಸುತ್ತುಮುತ್ತಲೂ ಸಿಕ್ಕುವ ಒಂದು ತರಹಾ ಹುಲ್ಲಿನಿಂದ ನಾರನ್ನು ತಯಾರುಮಾಡುವರು ಆ ನಾರು ಕಾಗದ ಮಾಡುವದಕ್ಕೆ ಉಪಯೋಗವಾಗುತ್ತದೆ ಆ ನಾರು ಕೊಬ್ಬಿಗಿಂತಲೂ ತ್ರಾಣವುಳ್ಳದ್ದಾಗಿರುವದೆಂದು ತಿಳಿದುಬರುತ್ತದೆ

◆◆◆◆

ಮೊಗಲ್ ಸರಾಯಿ ಪಟ್ಟಣದಿಂದ ಸೀತಾರಾಮಪುರದ ವರೆಗೆ ಹೊಸದಾಗಿ ರೈಲನ್ನು ಹಾಕಿರುವರು ಈ ರೈಲ್ವೆಯು ಸುಮಾರು ೨೮೧ ಮೈಲಿ ಉದ್ದವಾಗಿದೆ ಅದಕ್ಕೆ ೪೦೫ ಲಕ್ಷ ರೂಪಾಯಿ ಖರ್ಚಾಗಿರುವದು ಈ ರಸ್ತೆಯಲ್ಲಿ ಥೆರಿ ಪಟ್ಟಣದ ಹತ್ತಿರವಿರುವ ಪ್ರಸಿದ್ಧವಾದ ಶೋಣಾನದಿಯ ಸೇತುವೆಯೂ ವಿಂಧ್ಯಪರ್ವತವನ್ನು ದಾಟುವ ಕಣಿವೆಯೂ ಇವೆ

◆◆◆◆

ಪ್ಲೇಗು ರೋಗವು ನಾಣ್ಯಗಳ ಮೂಲಕ ಜನರಿಂದ ಜನರಿಗೆ ಹರಡುವದೆಂದು ಅನೇಕರಲ್ಲಿ ಇದುವರೆಗೆ ಅಭಿಪ್ರಾಯವಿತ್ತು ಈಚಗೆ ಬೊಂಬಾಯಿನಲ್ಲಿ ಇಂಡಿಯಾದಲ್ಲಿ ಚಲಾವಣೆಯಲ್ಲಿರುವ ಎಲ್ಲಾ ತರದ ನಾಣ್ಯಗಳನ್ನೂ ಪರೀಕ್ಷಿಸಿ ಪ್ಲೇಗು ರೋಗದ ಕ್ರಿಮಿಗಳು ನಾಣ್ಯಗಳ ಮೇಲೆ ಕೂತರೆ ಅವು ಬದುಕಲಾರವೆಂದು ಅನೇಕ ಪರೀಕ್ಷೆಗಳಿಂದ ತೀರ್ಮಾನಿಸಿರುವರು

◆◆◆◆

ಸಿಲೋನ್ (ಲಂಕಾ) ದ್ವೀಪಕ್ಕೆ ಸೇರಿದ ಕೊಲಂಬೋ ಪಟ್ಟಣದಲ್ಲಿ ಭಾರೀ ವರ್ತಕರಾದ ಸರ್ ಸ್ಟ್ಯಾನ್ಲೆ ಬಾಯಿಸ್ ಎಂಬುವರು ಕೈಲರ್ ಪಟ್ಟಣದ ಹತ್ತಿರ ಸಿಕ್ಕುವ ಮುತ್ತುಗಳ ಕಂಟ್ರಾಕ್ಟನ್ನು ಮದರಾಸ್ ಗವರ್ನಮೆಂಟಿನವರಿಂದ ಪಡೆಯಬೇಕೆಂದು ಮದರಾಸಿನಲ್ಲೇ ಇರುತ್ತಾರೆ ಗವರ್ನಮೆಂಟಿನವರು ಕಳೆದ ವರುಷವೇ ಮುತ್ತುಗಳ ಅಂದಾಜನ್ನು ಜೇಂಸ್ ಹಾರ್ನೆಲ್ ಎಂಬುವರಿಂದ ತಿಳಿದಿರುವರು.

◆◆◆◆

ಬೊಂಬಾಯಿ ಮುನಿಸಿಪಾಲಿಟಿಯಲ್ಲಿ ಉಗ್ರಾಣದ ಅಧಿಕಾರಿಯಾದ ವಾಲ್ಟರ್ ಟ್ರೆಡ್ ಎಂಬುವನು ಮುನಿಸಿಪಾಲಿಟಿಗೆ ಸೇರಿದ ಕೆಲವು ಸಾಮಾನುಗಳನ್ನು ಮಾರಿ, ಸುಮಾರು ಹನ್ನೊಂದು ಸಾವಿನ ರೂಪಾಯನ್ನು ತನ್ನ ಹೆಸರಿನಲ್ಲಿ ಬ್ಯಾಂಕಿಗೆ ಹಾಕಿಕೊಂಡು ರಜಾ ಪಡೆದು ತಿರಿಗಿ ಕೆಲಸದ ಮೇಲೆ ಬರಲೇ ಇಲ್ಲ ಈಚಗ ಅವನು ಕಲ್ಕತ್ತೆಯಲ್ಲಿ ಸಿಕ್ಕಿದ್ದರಿಂದ ಅವನನ್ನು ವಿಚಾರಣೆಗೆ ಗುರಿಮಾಡಿರುತ್ತಾರೆ ಇವನಿಗೆ ಎರಡು ವರುಷ ಕಠಿಣಸಜಾ ವಿಧಿಸಲ್ಪಟ್ಟಿತೆಂದು ತಿಳಿದು ಬಂದಿದೆ

◆◆◆◆

ಬರ್ದ್ವಾನ್ ಡಿಸ್ಟ್ರಿಕ್ಟಿನ ಕಟ್ವಾ ಎಂಬ ಪಟ್ಟಣದಲ್ಲಿ ಬಾಬು ಭೈರವ ಚಂದ್ರಧರನೆಂಬುವನು ವಾಸಿಸುತ್ತಿದ್ದು ಕಳೆದ ೨೯ನೇ ತಾ. ಅವನು ಮೃತಪಟ್ಟನು ಅವನ ಶವವನ್ನು ಸುಗಿಸುವದಕ್ಕೆ ಮೊದಲೇ ಆಕಸ್ಮಾತ್ತಾಗಿ ಅವನ ಹೆಂಡತಿಯೂ ಸತ್ತುಹೋದಳು ಅವಳಿಗೆ ಏನೂ ರೋಗವಿಲ್ಲದಿದ್ದರೂ ತನಗೆ ವೈಧವ್ಯ ಬಂತೆಂದು ತಿಳಿದ ತಕ್ಷಣವೇ ಅವಳು ಜೀವಬಿಟ್ಟಳು ಅನಂತರ ಎರಡು ಹೆಣಗಳನ್ನೂ ಒಂದೇ ಚಿತಿಯ ಮೇಲೆ ಇಟ್ಟು ಸುಟ್ಟುಬಿಟ್ಟರು

◆◆◆◆

ಹಿಂದೂಸ್ಥಾನದಲ್ಲಿ ಬೊಂಬಾಯಿ, ಮದ್ರಾಸು, ಮೈಸೂರು ಮತ್ತು ರಾಜಪುಟಾನ ಭಾಗಗಳು ಹೊರತು ಉಳಿದ ಪ್ರದೇಶಗಳಲ್ಲಿ ಕಳೆದ ವಾರ ಪ್ಲೇಗಿನಿಂದ ೫,೯೯೭ ಜನರು ಮೃತಪಟ್ಟಿರುತ್ತಾರೆ ಅವರ ಪೈಕಿ ವಾಯವ್ಯ ಪ್ರಾಂತ್ಯಗಳಲ್ಲಿ ೧,೭೮೦ ಜನರೂ, ಪಂಜಾಬಿನಲ್ಲಿ ೧,೫೩೬ ಜನರೂ, ಬೊಂಬಾಯಿ ಮತ್ತು ಸಿಂಧು ದೇಶಗಳಲ್ಲಿ ೨,೦೦೦ ಜನರೂ ಮೃತಪಟ್ಟರು. ಬೊಂಬಾಯಿನ ಕೈರಾ ಮತ್ತು ಸತಾರ ಡಿಸ್ಟ್ರಿಕ್ಟುಗಳಲ್ಲಿ ರೋಗವು ಬಹಳ ಪ್ರಬಲವಾಗಿರುವದು.

◆◆◆◆

ಇಂಡಿಯಾ ದೇಶದಲ್ಲಿ ಹೊಸದಾಗಿ ಚಲಾವಣೆಗೆ ತರಬೇಕೆಂದು ಒಂದಾಣೆ ನಾಣ್ಯವನ್ನು ನಿಕ್ಕಲ್ ಎಂಬ ಲೋಹದಿಂದ ಮಾಡಬೇಕೆಂದು ಗವರ್ನಮೆಂಟಿನವರು ನಿಶ್ಚಯಿಸಿದಾರೆ. ಕಲ್ಕತ್ತೆಯ ಟಂಕಸಾಲೆಯಲ್ಲಿ ಈ ತರಹಾ ನಾಣ್ಯಗಳನ್ನು ಅಚ್ಚುಹಾಕಿ ನೋಡಿದರು ಎಲ್ಲಾ ವಿಧದಲ್ಲಿಯೂ ತೃಪ್ತಿಕರವಾಗಿದ್ದವು ಎಡ್ವರ್ಡ್ ಚಕ್ರವರ್ತಿಯವರು ಈ ನಾಣ್ಯವನ್ನು ಅಚ್ಚು ಹಾಕುವದಕ್ಕೆ ಯಾವಾಗ ಸಮ್ಮತಿಪಡುವರೋ ಆಗ ಅಂದರೆ ಬಹುಶಃ ಮುಂದಿನ ತಿಂಗಳಲ್ಲಿ ಅದನ್ನು ಇಂಡಿಯಾ ದೇಶದಲ್ಲಿ ಚಲಾವಣೆಗೆ ತರುತ್ತಾರೆ

◆◆◆◆

ಜಾಂನಗರದ ಮಹಾರಾಜರು ತೀರಿಹೋದರಷ್ಟೆ ಅವರ ಅಸ್ಥಿಯನ್ನೂ ಜನ್ಮಪತ್ರಿಕೆಯನ್ನೂ ತೆಗೆದುಕೊಂಡು ಗಂಗಾನದಿಗೆ ಹೋಗುವದಕ್ಕೆ ರಾಜಪುರೋಹಿತನನ್ನೂ ಇನ್ನೂ ಕೆಲವರನ್ನು ನೇಮಿಸಿದರು. ಅಸ್ಥಿಯನ್ನು ತೆಗೆದುಕೊಂಡು ಹೋಗುವ ಬ್ರಾಹ್ಮಣನೂ ಪುರೋಹಿತನೂ ನಡೆದು ಪ್ರಯಾಣಮಾಡುವರು ಇತರರು ರೈಲಿನಲ್ಲಿ ಹೋಗುವರು. ಶ್ರಾದ್ಧಕರ್ಮಗಳಿಗೆ ಗವರ್ನಮೆಂಟಿನಿಂದ ಸುಮಾರು ೬,೦೦೦ ರೂಪಾಯಿ ಸ್ಯಾಂಕ್ಷನ್ ಆಗಿರುತ್ತದೆ ಅದೂ ಅಲ್ಲದೆ ರಾಣಿಯವರೂ ಹೆಚ್ಚು ಹಣ ಕೊಟ್ಟಿರುವರು

◆◆◆◆

ಲಾಹೋರ್ ಪಟ್ಟಣದಲ್ಲಿ ಸೆಕ್ರೆಟರಿ ಮತ್ತು ಕೆಲವು ಮುಖ್ಯ ನೌಕರರ ಸಂಬಳವನ್ನು ಹೆಚ್ಚಿಸಿದರು ಈ ಹೆಚ್ಚಾದ ಹಣವನ್ನು ವಸೂಲ್ಮಾಡುವದಕ್ಕೆ ಗವರ್ನಮೆಂಟಿನವರು ಆಕ್ಟ್ರಾಯಿ ಸುಂಕವನ್ನು ಮೊದಲಿದ್ದದ್ದಕಿಂತಲೂ ಎರಡರಷ್ಟು ಹೆಚ್ಚಿಸಿದರು ಜನಗಳು ದುರಭಿಮಾನದಿಂದ ಬಟ್ಟೆ, ಕಬ್ಬಿಣ ಮತ್ತು ಲೋಹದ ಪಾತ್ರೆಗಳು ಮತ್ತು ಇತರ ಸಾಮಾನ ಗಳನ್ನು ತಯಾರುಮಾಡುವ ಕಾರಖಾನೆಗಳಿಗೆ ಕೆಲಸಕ್ಕೆ ಹೋಗದೇ ನಿಂತಿರುತ್ತಾರೆ ಅಂಗಡಿಗಳನ್ನು ಮುಚ್ಚಿರುತ್ತಾರೆ. ಆದ್ದರಿಂದ ಜನಗಳಿಗೆ ಬಹಳ ಅಸಮಾಧಾನವೂ ತೊಂದರೆಯೂ ಉಂಟಾಗಿದೆ

◆◆◆◆

ಪೂರ್ವಬಂಗಾಳಾ ಆಧಿಪತ್ಯದಲ್ಲಿರುವ ಮಹಮ್ಮದೀಯರು ಸರ್ಕಾರಿ ಕ್ಷಾಮಪೀಡಿತರಾದವರ ಕಷ್ಟವನ್ನು ನಿವಾರಣೆಮಾಡಬೇಕೆಂದು ಯೋಚಿಸಿ ತಮ್ಮ ಸ್ವಂತ ಖರ್ಚಿನಿಂದ ಸುಮಾರು ಎರಡು ಸಾವಿರ ಮಣ ಅಕ್ಕಿಯನ್ನು ಕೊಂಡು ಬಡಬಗ್ಗರಿಗೆ ಹಂಚಿಸಿದರು ಇದೂ ಅಲ್ಲದೆ ಆ ಸಭೆಯವರು ಕಲ್ಕತ್ತಾದಲ್ಲಿರುವ ಮಹಮ್ಮದೀಯ ವರ್ತಕರನ್ನೆಲ್ಲಾ ಪ್ರೇರೇಪಿಸಿ, ೨೫ ಸಾವಿರ ಮಣ ಅಕ್ಕಿಯನ್ನು ಬಹಳ ಕಡಿಮೆ ಖರೀದಿಗೆ ಮಾರುವಂತೆ ಮಾಡಿದರು ಇನ್ನೂ ಅನೇಕ ರೀತಿಗಳಿಂದ ಆಹಾರ ಪದಾರ್ಥಗಳ ಧಾರಣೆಗಳನ್ನು ಹೆಚ್ಚದಂತೆ ಮಾಡಿಸಿರುತ್ತಾರೆ

◆◆◆◆

ಕಳೆದ ಗುರುವಾರ ಕಲ್ಕತ್ತೆಯಲ್ಲಿ ಭೂಕಂಪವಾಯಿತು ಒಂದು ಮನೆಯ ಮೂರನೆ ಅಂತಸ್ತಿನಲ್ಲಿದ್ದ ಒಬ್ಬ ಹಿಂದೂ ವಿದ್ಯಾರ್ಥಿಯ ಮೇಲೆ ಗೋಡೆಯು ಮೇಲೆ ಬಿದ್ದುದರಿಂದ ಅವನಿಗೆ ಪ್ರಜ್ಞೆ ತಪ್ಪಿ ಮತ್ತೊಬ್ಬ ವೇದಾಂತಿಯು ಎತ್ತರವಾದ ಜಗಲಿಯಿಂದ ನೆಲಕ್ಕೆ ಬಿದ್ದು ಅವನ ಕುತ್ತಿಗೆಗೆ ಪೂರಾ ಏಟುಬಿತ್ತು ಇನ್ನೊಂದು ಕಡೆ ಒಬ್ಬನು ಮೂರನೇ ಅಂತಸ್ತಿನಿಂದ ದಾರಿಯಲ್ಲಿ ಹೋಗುತ್ತಿದ್ದವನ ಮೇಲೆ ಬಿದ್ದರೂ ಇಬ್ಬರಿಗೂ ಪೆಟ್ಟಾಗಲಿಲ್ಲ ಕೆಲವು ಮನೆಗಳು ಬಿರುಕುಬಿಟ್ಟಿರುತ್ತವೆ ಮಾರುದಿನವೂ ರಾತ್ರಿಯಲ್ಲಿ ಅಲ್ಪಸ್ವಲ್ಪ ಭೂಕಂಪವಾಯಿತು

◆◆◆◆

ಕಲ್ಕತ್ತೆಯಲ್ಲಿ ಹೆಣಗಳನ್ನು ದಹನಮಾಡುವದಕ್ಕೆ ಒಂದು ಯಂತ್ರವನ್ನು ಏರ್ಪಡಿಸಿರುತ್ತಾರಷ್ಟೆ ಆದರಲ್ಲಿ ಯಾವ ಜಾತಿಯ ಹೆಣವನ್ನಾಗಲೀ ಸುಡುವರು. ಈಗಾಗಲೇ ಒಬ್ಬ ಹಿಂದೂ ಹೆಂಗಸು ಆ ಯಂತ್ರದಲ್ಲಿ ದಹನಮಾಡಿದರು ಒಂದು ಹೆಣವನ್ನು ಸುಡುವುದಕ್ಕೆ ೩೦ ರೂಪಾಯಿ ರುಸುಂ ಕೊಡಬೇಕೆಂದು ಮೊದಲೇ ನಿಯಮ ಮಾಡಿರುತ್ತಾರೆ. ಆದರೆ ಆ ಯಂತ್ರಾಧಿಕಾರಿಯು ತನಗೆ ಸೂಕ್ತವೆಂದು ತೋರಿದಾಗ ಈ ರುಸುಮನ್ನು ಇನ್ನೂ ಕಡಮೆಮಾಡಬಹುದು ದಿಕ್ಕಿಲ್ಲದವರ ಮತ್ತು ಗತಿಯಿಲ್ಲದವರ ಹೆಣಗಳನ್ನೂ ಹೂಳುವದಕ್ಕೆ ಬದಲು ಇದೇ ರೀತಿಯಲ್ಲಿ ಸುಡುವದೇ ಒಳ್ಳೇದೆಂದು ಗವರ್ನಮೆಂಟಿನವರು ಈಚಗೆ ಆಲೋಚಿಸಿರುತ್ತಾರೆ.

◆◆◆◆

ಪೂನಾ ಪಟ್ಟಣದಲ್ಲಿ ಪ್ಲೇಗ್ ರೋಗವು ಜೋರಾಗಿದ್ದಾಗ ಸಾಹುಕಾರರೆಲ್ಲರೂ ಅಂಗಡಿಯಿಂದ ದೂರವಾಗಿ ಡೇರೆಗಳನ್ನು ಹಾಕಿಕೊಂಡು ವಾಸಿಸುತ್ತಿದ್ದರು ಒಂದು ದಿನ ಇಬ್ಬರು ಸೋಜರುಗಳು ಒಂದು ಅಂಗಡಿಗೆ ಹಿಂಭಾಗದಿಂದ ನುಗ್ಗಿದಾಗ ಇಬ್ಬರು ಪೋಲೀಸಿನವರು ಅವರನ್ನು ಹಿಡಿಯುವದಕ್ಕೆ ಹೋದರು ಒಬ್ಬ ಸೋಜರು ಪೋಲೀಸಿನವನನ್ನು ಜ್ಞಾನತಪ್ಪುವಂತೆ ಹೊಡೆದನು ಇನ್ನೊಬ್ಬ ಪೋಲೀಸಿನವನು ಒಬ್ಬ ಸೋಜರನ್ನು ಗುಂಡಿನಿಂದ ಹೊಡೆದನು. ಈ ಅಪರಾಧಿಗಳನ್ನು ವಿಚಾರಣೆಗೆ ಗುರಿಮಾಡಿ ಪ್ರತಿ ಒಬ್ಬನಿಗೂ ಎರಡು ವರುಷ ಕಠಿಣ ಸಜಾವನ್ನು ವಿಧಿಸಿದರು ಗುಂಡಿನಿಂದ ಏಟುತಿಂದ ಸೋಜರನು ತಾನೆ ಗುಣಹೊಂದಿದನು

◆◆◆◆

ಹುಗ್ಲೀ ಪಟ್ಟಣದ ಹತ್ತಿರ ಇರುವ ಬೆರಾಸುರಾದಲ್ಲಿ ಪೋಸ್ಟಾಫೀಸಿನ ಮುಖ್ಯ ಜವಾನನು ಪೋಸ್ಟು ಮಾಸ್ಟರ ರುಜುವನ್ನು ಹಾಕಿ ಖಜಾನೆಯಿಂದ ಸುಮಾರು ಹನ್ನೆರಡು ಸಾವಿರ ರೂಪಾಯನ್ನು ತೆಗೆದುಕೊಂಡು ಒಂದು ಪರಾರಿಯಾದನು ಅವನು ಕಲ್ಕತ್ತೆಯಲ್ಲಿ ಒಬ್ಬ ಮಹಮ್ಮದೀಯನ ವೇಷಹಾಕಿಕೊಂಡು ಒಂದು ಹೋಟೇಲಿನಲ್ಲಿದ್ದಾಗ ಒಂದು ಸಂದರ್ಭದಲ್ಲಿ ಸಿಕ್ಕಿಬಿದ್ದನು. ಆಗಲೇ ಮೂರು ಸಾವಿರ ರೂಪಾಯನ್ನು ತಮಾಷೆಗಳಿಗಾಗಿ ಖರ್ಚುಮಾಡಿ ಬಿಟ್ಟನೆಂದೂ ಉಳಿದ ಹಣವನ್ನು ಹುಗಿದಿಟ್ಟಿರುವದಾಗಿಯೂ ಹೇಳಿದನು. ಅಲ್ಲಿ ಹುಡುಕಿದಾಗ್ಗೆ ಏನೂ ಸಿಕ್ಕಲಿಲ್ಲ. ಅವನನ್ನು ಹಿಡಿದವರಿಗೆ ಇನಾಮು ಕೊಟ್ಟು ಅವನನ್ನು ಜೈಲಿನಲ್ಲಿಟ್ಟಿರುವರು

ಕಲ್ಕತ್ತೆಯ ಹತ್ತಿರ ಇರುವ ಹೌರಾ ಪಟ್ಟಣದಲ್ಲಿ ರಾಮಸರೂಪ ಸಿಂಗ್ ಎಂಬುವನು ಹತ್ತು ವರುಷದ ಒಬ್ಬ ಹುಡುಗಿಯನ್ನು ಬಲಾತ್ಕಾರವಾಗಿ ಮದುವೆ ಮಾಡಿಕೊಳ್ಳಬೇಕೆಂದು ಹೊತ್ತುಕೊಂಡು ಹೋದನು. ವಿಚಾರಣೆಯಾದನಂತರ ಆ ಹುಡುಗಿಯು ತಾಯಿಗೆ ಇದ್ದ ೨೫೦ ರೂಪಾಯಿ ಸಾಲವನ್ನು ತೀರಿಸುವದಾಗಿಯೂ ಮತ್ತು ಅವಳ ಜೀವನಕ್ಕಾಗಿ ತಿಂಗಳಿಗೆ ೫ ರೂಪಾಯಿ ಕೊಡುವದಾಗಿಯೂ ಗೊತ್ತುಮಾಡಿ ಆ ಮುದುಕನು ಹುಡುಗಿಯನ್ನು ಕರೆದುಕೊಂಡು ಹೋದಂತೆ ತಿಳಿದು ಬಂತು. ಜಡ್ಜಿಯವರು ಈ ಮೊಕದ್ದಮೆಯನ್ನು ವಜಾಮಾಡಿ ಹುಡುಗಿಯನ್ನು ಅವಳ ತಾಯಿಯ ವಶಕ್ಕೆ ಕೊಟ್ಟರು. ಇಂಥಾ ಆಶ್ಚರ್ಯಕರವಾದ ನ್ಯಾಯವು ಎಲ್ಲಿಯಾದರೂ ಉಂಟೇ!

****

ಹೈದರಾಬಾದಿನಲ್ಲಿ ಅಫ್‌ಸಲ್ ಗಂಜ್ ಎಂಬ ಭಾರೀ ಆಸ್ಪತ್ರೆ ಇರುತ್ತದೆ. ಅದರ ಖರ್ಚನ್ನೆಲ್ಲಾ ನೈಜಾಮರು ಗವರ್ನಮೆಂಟಿನಿಂದಲೇ ಕೊಡುತ್ತಿದ್ದರು. ಮುಂಚೆ ಹೈದರಾಬಾದಿನ ಸೈನಿಕರಿಗೆ ಡಾಕ್ಟರಾಗಿದ್ದು ಈಗ ಕೆಲಸದಿಂದ ನಿವೃತ್ತರಾಗಿರುವ ಜಾನ್ ಲಾ ಎಂಬುವರು ಬಡಜನರ ರಕ್ಷಣೆಯಲ್ಲಿ ಬಹಳ ಆಸಕ್ತಿಪಟ್ಟು ೫೦ ಸಾವಿರ ರೂಪಾಯಿನ ಪ್ರಾಮಿಸರಿ ನೋಟುಗಳನ್ನು ಈ ಆಸ್ಪತ್ರೆಯ ಮೂಲಧನಕ್ಕೆ ಕೊಟ್ಟಿದ್ದಾರೆ. ಈ ಹಣದಿಂದ ಬರುವ ಬಡ್ಡಿಯಲ್ಲಿ ಬಡರೋಗಿಗಳಿಗೆ ಚಿಕಿತ್ಸೆಗಳನ್ನೂ ಇತರ ವಿಧವಾದ ಸಹಾಯಗಳನ್ನೂ ಮಾಡಬೇಕೆಂದು ಡಾಕ್ಟರ್ ಜಾನ್‌ಲಾರವರು ಇಷ್ಟಪಡುತ್ತಾರೆ. ಈ ಮೂಲಧನದಿಂದ ವರ್ಷಕ್ಕೆ ೨,೫೦೦ ರೂಪಾಯಿ ಬಡ್ಡಿ ಬರುವದು.

****

ಪಂಜಾಬಿನ ಲಾರ್‌ಖಾನಾ ಡಿಸ್ಟ್ರಿಕ್ಟಿನಲ್ಲಿ ಕಳೆದ ಆಗಸ್ಟ್ ತಿಂಗಳ ಕೊನೆಯಲ್ಲಿ ಒಂದು ಭಾರೀ ದರೋಡೆಯು ನಡೆಯಿತು. ಕೆಲವುಜನ ದುಷ್ಟವಾಣಿಗಳು ಬಹಳ ಐಶ್ವರ್ಯವಂತನಾದ ಕಿಸುಮತ್ರಿ ಎಂಬುವನ ಮನೆ ನುಗ್ಗಿದರು. ಮನೆಯವರಿಗೂ ಕಳ್ಳರಿಗೂ ಬಹಳ ಹೊಡೆದಾಟವಾಯಿತು. ಅದರಲ್ಲಿ ಸಾಹುಕಾರನ ಮಗನು ಸತ್ತುಹೋದನು. ೭ ಜನಗಳಿಗೆ ಗಾಯಗಳಾದವು. ಕೊನೆಗೆ ಕಳ್ಳರು ೩೦ ಸಾವಿರ ರೂಪಾಯಿ ಬೆಲೆಬಾಳುವ ಒಡವೆಗಳನ್ನೂ ಹಣವನ್ನೂ ಅಪಹರಿಸಿಕೊಂಡು ಹೊರಟುಹೋದರು. ಈಚೆಗೆ ಗುಪ್ತಾನಿಯ ನೋಲೆ ಎಂಟು ಜನರನ್ನು ಹಿಡಿದು ವಿಚಾರಣೆಮಾಡಿ ಅವರಲ್ಲಿ ಐದು ಜನರಿಗೆ ತಲಾ ಹತ್ತು ವರುಷದಂತೆ ಕಠಿಣ ಸಜಾ ವಿಧಿಸಿ, ಉಳಿದ ಮೂವರನ್ನು ಖುಲಾಸೆ ಮಾಡಿರುತ್ತಾರೆ.

****

ಪ್ರಿನ್ಸ್ ಆಫ್ ವೇಲ್ಸ್‌ರವರು ಹಿಂದುಸ್ಥಾನದಲ್ಲಿ ಸಂಚಾರ ಮಾಡಿದಂದಿನಿಂದ ಅವರ ಗಮನವು ಹಿಂದುಸ್ಥಾನದ ಆಡಳಿತದಲ್ಲೇ ನೆಲಸಿದೆ. ಈಗ ನಮ್ಮ ವೈಸ್‌ರಾಯಿಯವರ ಸಮ್ಮತಿಯನ್ನು ಹೊಂದಿ ಗವರ್ನರುಗಳಿಗೂ ಮತ್ತು ಲೆಫ್ಟಿನೆಂಟು ಗವರ್ನರುಗಳಿಗೂ ಕಾಗದಗಳನ್ನು ಬರೆಯುತ್ತಾರೆ. ಹಿಂದೂಸ್ಥಾನದ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ವಿಶೇಷ ಸಂಗತಿಗಳನ್ನೆಲ್ಲಾ ವಿಸ್ತಾರವಾಗಿ ಬರೆದು ತಮಗೆ ತಿಳಿಸಬೇಕೆಂಬುವದೇ ಆ ಕಾಗದಗಳ ಮುಖ್ಯಾಭಿಪ್ರಾಯವಾಗಿದೆ. ದಕ್ಷಿಣ ಹಿಂದುಸ್ಥಾನದ ಐಶ್ವರ್ಯಾಭಿವೃದ್ಧಿಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಬಹಳ ಕುತೂಹಲವುಳ್ಳವರಾಗಿದ್ದಾರೆ. ಇದರಿಂದ ಯುವರಾಜರು ಹಿಂದುಸ್ಥಾನದ ಜನರಲ್ಲಿ ತಮಗೆ ಇರುವ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿರುತ್ತಾರೆ.

****

ಕಲ್ಕತ್ತೆಗೆ ಉತ್ತರದಲ್ಲಿರುವ ಹುಗ್ಲಿ ಡಿಸ್ಟ್ರಿಕ್ಟಿನಲ್ಲಿ ಫುಲ್‌ಜಾನ್‌ಬಿ ಎಂಬೊಬ್ಬ ಹದಿನಾರು ವರುಷದ ಮಹಮ್ಮದೀಯ ಹೆಂಗಸು ಮಗುವನ್ನು ಹೆತ್ತು ಬಿದಿರು ಮೆಳೆಗಳಲ್ಲಿ ಹಾಕಿ ಬಿಟ್ಟಿದ್ದಳು. ಪೋಲೀಸಿನವರು ಮಗುವಿನ ತಾಯಿಯನ್ನು ಕಂಡುಹಿಡಿದು ವಿಚಾರಣೆಗೆ ತಂದರು. ಆಗ ಅವಳು ಆ ಮಗುವನ್ನು ಎತ್ತಿಕೊಂಡು ಗೋಳಾಡುತ್ತಾ — ನನಗೆ ಇದೇ ಮೊದಲನೇ ಮಗು. ಯಾರೂ ಇಂಥಾ ಮಗುವನ್ನು ಬಿಸಾಡಲಾರರು. ಈ ಮಗುವು ಹುಟ್ಟುವ ಮೊದಲೇ ನನ್ನ ಗಂಡನಿಗೆ ಮರಣವಾಗಿ ನನಗೆ ತಿನ್ನುವದಕ್ಕೆ ಗತಿಯಿಲ್ಲದೇ ಹೋಯಿತು. ಇಂಥಾ ಸ್ಥಿತಿಯಲ್ಲಿ ಈ ಮಗುವಿಗೂ ನಾನು ಆಹಾರವನ್ನು ಎಲ್ಲಿಂದ ತರಲಿ ಎಂದು ಅತ್ತಳು. ಆದರೂ ಅವಳು ತಪ್ಪಿತಸ್ಥಳೆಂದು ಪಂಚಾಯಿತರು ಹೇಳಿದ್ದರಿಂದ ಅವಳಿಗೆ ಒಂದು ತಿಂಗಳ ಕಠಿಣ ಸಜಾ ವಿಧಿಸಿದರು.

*****

ಬೊಂಬಾಯಿನಲ್ಲಿ ಒಂದಾನೊಂದು ಹಡಗಿನ ಕಂಪನಿಯವರು ಬೊಂಬಾಯಿನಿಂದ ಅರೇಬಿಯಾದಲ್ಲಿನ ಜೆಡ್ಡಾ ಪಟ್ಟಣಕ್ಕೆ ಹನ್ನೆರಡು ರೂಪಾಯಿಗೆ ಟಿಕೇಟು ಕೊಟ್ಟು ಮಹಮ್ಮದೀಯ ಯಾತ್ರಾರ್ಥಿಗಳನ್ನು ಪ್ರಯಾಣ ಮಾಡಿಸುವದಾಗಿ ಪ್ರಕಟಿಸಿದರು. ಇದನ್ನು ತಿಳಿದು ಸುಮಾರು ಐನೂರು ಮಂದಿ ಮಹಮ್ಮದೀಯರೂ ತಮ್ಮ ಆಸ್ತಿಯನ್ನು ಮಾರಿ ಉತ್ತರ ದೇಶದಿಂದ ಬಂದು ಬೊಂಬಾಯಿ ಸೇರಿದರು. ವಿಚಾರಿಸುವಾಗ್ಗೆ ಐವತ್ತು ರೂಪಾಯಿಗೆ ಕಡಮೆಯಾಗಿ ಟಿಕೇಟು ಕೊಡಲಾರೆವೆಂದು ಆ ಕಂಪನಿಯವರು ತಿಳಿಸಿದರು. ಅವರೆಲ್ಲಾ ಪೋಲೀಸ್ ಕಮಿಷನರಿಗೆ ಈ ವಿಷಯವನ್ನು ತಿಳಿಸಿದರು. ಅವರು ಈ ವಿಷಯದಲ್ಲಿ ತನಿಖೆ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಈಚೆಗೆ ಗವರ್ನರವರೂ ಅವರನ್ನು ಕಂಡು, ಅವರ ಪ್ರಯಾಣಕ್ಕೆ ಅನುಕೂಲ ಮಾಡಿಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

****

ಇಂಡಿಯಾ ಗವರ್ನಮೆಂಟಿನವರು ಕಳೆದ ವರುಷದ ಜೈಲುಖಾನೆ ರಿಪೋರ್ಟನ್ನು ಈಗತಾನೇ ಪ್ರಕಟಿಸಿರುತ್ತಾರೆ. ಅದರ ಮುಖ್ಯಾಂಶವೇನೆಂದರೆ, ಕಳೆದ ವರುಷ ಹಿಂದೂಸ್ಥಾನದ ಜೈಲುಗಳಲ್ಲಿ ದಾಖಲಾದ ಖೈದಿಗಳು ೪,೬೪,೬೬೦ ಮಂದಿ. ಬೇರೆ ಬೇರೆ ಬಂದೀಖಾನೆಗಳಿಂದ ಸುಮಾರು ೭೫ ಜನರು ತಪ್ಪಿಸಿಕೊಂಡು ಹೋದರು. ಜೈಲುಖಾನೆಗೆ ಸೇರಿದ್ದವರಲ್ಲಿ ಪ್ರತಿ ಐದು ಜನರಲ್ಲೂ ನಾಲ್ವರು ವಿದ್ಯೆ ಬಾರದವರು. ಎಳೆ ವಯಸ್ಸಿನ ಅಪರಾಧಿಗಳು ಕಳೆದ ವರ್ಷಕ್ಕಿಂತ ಸ್ವಲ್ಪ ಕಮ್ಮಿ. ಜೈಲುಗಳ ಒಟ್ಟು ಖರ್ಚು ಹಿಂದಿನ ವರ್ಷಕ್ಕಿಂತಲೂ ೩,೫೬,೨೮೭ ರೂಪಾಯಿ ಜಾಸ್ತಿಯಾಯಿತು. ಬೇರೆ ಬೇರೆ ಭಾಗಗಳಲ್ಲಿ ಒಬ್ಬೊಬ್ಬ ಖೈದಿಗೆ ಒಂದು ವರುಷಕ್ಕೆ ಆಗುವ ಖರ್ಚು ವ್ಯತ್ಯಾಸವಾಗಿದೆ. ಹೇಗೆಂದರೆ, ಕೊಡಗು ದೇಶದಲ್ಲಿ ಒಬ್ಬ ಖೈದಿಗೆ ಒಂದು ವರ್ಷಕ್ಕೆ ಸುಮಾರು ೧೦೩ ರೂಪಾಯಿ ಖರ್ಚಾಗುತ್ತದೆ. ಬರ್ಮಾದಲ್ಲಿ ೫೫ ರೂಪಾಯಿ ಮಾತ್ರವೇ ಖರ್ಚಾಗುವದು. ಖೈದಿಗಳ ಆರೋಗ್ಯಸ್ಥಿತಿಯು ಸಾಧಾರಣವಾಗಿ ಚನ್ನಾಗಿತ್ತು.

****

ಅಫ್ಘಾನಿಸ್ಥಾನದ ಅಮೀರರು ಹಿಂದೂಸ್ಥಾನದ ಬೇರೆ ಬೇರೆ ಭಾಗಗಳನ್ನು ನೋಡಬೇಕೆಂದು ಸಂಚಾರ ಹೊರಟಿರುವರಷ್ಟೆ. ಅವರು ಆಗ್ರಾ ಪಟ್ಟಣಕ್ಕೆ ಬಂದಾಗ್ಗೆ ಅಲ್ಲಿ ಅವರನ್ನು ಸತ್ಕರಿಸುವದಕ್ಕೆ ಒಂದು ಸಭೆ ಸೇರುವದು. ಗ್ವಾಲಿಯರ್ ರಾಜ್ಯದ ಸಿಂಧ್ಯ ಮಹಾರಾಜರು, ಧಾತಿಯ, ಬಿಕ್ಯಾನಿಯರ್, ಜಯಪುರ, ಇಡಾರ್ ಮತ್ತು ಕೃಷ್ಣಘಡದ ಮಹಾರಾಜರುಗಳು, ರಾಂಪುರದ ನವಾಬರು, ಭೂಪಾಲ್ ಸಂಸ್ಥಾನದ ಬೇಗಂಯವರು, ಟೆರಿ ಮಹಾರಾಜರು, ಸಿರೋಹಿಯ ಮಹಾರಾವ್ ಸಾಹೇಬರು, ಧೋಲ್‌ಪುರದ ರಾಣಾ ಮಹಾರಾಜರು, ಕಾಶಿಯ ಮಹಾರಾಜರು ಮತ್ತು ಓಛೆಟ್‌ನ ರಾಣಿಯವರು ಇವರೇ ಮೊದಲಾದ ಧೊರೆಗಳು ಆ ಸಭೆಗೆ ಹೋಗುತ್ತಾರೆ. ಆ ಕಾಲದಲ್ಲಿ ಚಿತ್ರವಿಚಿತ್ರವಾದ ಬಾಣ ಬಿರುಸುಗಳನ್ನು ತಯಾರುಮಾಡಿ ಹತ್ತಿಸುವದಕ್ಕೆ ಪ್ರಸಿದ್ಧರಾದ ವಿಡ್‌ಲೇಕ್ ಎಂಬುವರನ್ನು ಲಂಡನ್ ಪಟ್ಟಣದಿಂದ ಕರೆಸಿರುತ್ತಾರೆ. ಆಗ್ರಾದಲ್ಲಿನ ಸೈನಿಕರು ಅಮೀರರ ಮುಂದೆ ಕವಾತು ಕಸರತ್ತುಗಳನ್ನು ಮಾಡಿ ಅವರನ್ನು ಸಂತೋಷಪಡಿಸಬೇಕೆಂದಿರುತ್ತಾರೆ. ಜನಗಳ್ಯಾರಾದರೂ ನೋಡಬೇಕೆಂದು ಇಷ್ಟಪಟ್ಟರೆ ಕುರ್ಚಿ ಒಂದಕ್ಕೆ ನಾಲ್ಕು ರೂಪಾಯಿನಂತೆಯೂ ಬೆಂಚಿನಲ್ಲಿ ಕೂತುಕೊಳ್ಳುವದಕ್ಕೆ ತಲೆ ಒಂದಕ್ಕೆ ೨ ರೂಪಾಯಿನಂತೆಯೂ ಕೊಟ್ಟು ಟಿಕೇಟು ಪಡೆದು ಹೋಗಬಹುದು.

****

ಲಪಶಂಕರ ಲಕ್ಷ್ಮೀದಾಸ್ ಎಂಬಾತನು ಗವರ್ನರ್ ಜನರಲ್‌ರಾದ ಅರಲ್ ಮಿಂಟೋರವರಿಗೆ ಒಂದು ಅರ್ಜಿಯನ್ನು ಬರೆದಿರುತ್ತಾನೆ. ಅದರ ಸಾರಾಂಶವೇನೆಂದರೆ, ತೆಲುಗು ದೇಶದ ಅನೇಕ ಭಾಗಗಳಲ್ಲಿ ಜನರು ತಮ್ಮ ಮತದ ಹಬ್ಬಗಳಿಗೋಸ್ಕರ ಹಂದಿಗಳನ್ನೂ, ಕೋಳಿಗಳನ್ನೂ ಹರಿತವಾಗಿರುವ ಕಡ್ಡಿಗಳ ಮೊನೆಗಳ ಮೇಲೆ ಜೀವಸಹಿತ ನಿಲ್ಲಿಸಿ ಅವುಗಳ ಪ್ರಾಣ ತೆಗೆಯುತ್ತಾರೆ. ಪೂಜಾರಿಗಳು ಅವುಗಳ ರಕ್ತವನ್ನು ಕುಡಿಯುತ್ತಾರೆ. ಒಂದುವೇಳೆ ಪೂಜಾರಿಗಳಲ್ಲೊಬ್ಬನು ಕಿರುಬನಂತೆ ಮೈಗೆ ಬಣ್ಣ ಬಳಿದುಕೊಂಡು ಆ ಮೂಗ ಪ್ರಾಣಿಗಳನ್ನು ಕತ್ತಿನ ಮೇಲೆ ಹಲ್ಲಿನಲ್ಲಿ ಕಚ್ಚಿ ಕೊಂದುಹಾಕುವನು. ಇದೂ ಅಲ್ಲದೆ ಕೊಯಮುತ್ತೂರು ಮುಂತಾದ ಪ್ರದೇಶಗಳಲ್ಲಿ ಮೈಲಿಗಳ ವರೆಗೂ ಜೀವವಿರುವ ಕುರಿಗಳನ್ನು ಮಲಗಿಸಿ ಅವುಗಳ ಶರೀರದ ಮೇಲೆ ರಥವನ್ನು ಎಳೆದು ಸಾವಿರಾರು ಪ್ರಾಣಿಗಳನ್ನು ಕೊಲ್ಲುತ್ತಾರೆ. ಈ ರೀತಿಯಲ್ಲಿ ಲೆಕ್ಕವಿಲ್ಲದಷ್ಟು ಮೂಗ ಪ್ರಾಣಿಗಳನ್ನು ಜನಗಳು ತಮ್ಮ ಮತಕೃತ್ಯವೆಂದು ಕೊಲ್ಲುತ್ತಿದ್ದರು. ಗವರ್ನಮೆಂಟಿನವರೂ ಸುಮ್ಮನಿದ್ದಾರೆ. ಈ ವಿಷಯದಲ್ಲಿ ಜನರ ಮುಖಂಡರ ಅಭಿಪ್ರಾಯವನ್ನು ತಿಳಿದು ಈ ಘೋರವಾದ ಹಿಂಸೆ ಕೆಲಸಗಳನ್ನು ನಿಲ್ಲಿಸಬೇಕೆಂಬುವದೇ ನನ್ನ ಪ್ರಾರ್ಥನೆ ಎಂಬುದು

ಮೈಸೂರು ಸರ್ಕಾರಿ ಹುಕುಮುಗಳು.

ವೀರಶೈವಮತ ಸಂವರ್ಧಿನೀ ಸಭಾ.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಮುಡಕತೊರೆಯಲ್ಲಿ ೧೯೦೬ ನೆ ಫೆಬ್ರವರಿಯಲ್ಲಿ ಕೆಲವು ವೀರಶೈವರು ಸೇರಿ, ವೀರಶೈವ ಮತ ಸಂವರ್ಧಿನಿ ಸಭಾ ಎಂಬ ಸಂಘವನ್ನು ಸ್ಥಾಪಿಸಿಕೊಂಡರು. ಅಲ್ಲಿನ ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನದಲ್ಲಿ ಪೂಜೆ ಪುನಸ್ಕಾರಾದಿಗಳನ್ನು ನಡಸುವುದಕ್ಕೆ ಲಿಂಗಾಯತ ಪುರೋಹಿತರನ್ನು ತಯಾರು ಮಾಡಿಕೊಳ್ಳುತ್ತಿದ್ದಾರೆ. ಪ್ರತಿ ವರ್ಷವೂ ತಯಾರಾದವರನ್ನು ವಿದ್ವತ್ ಪರೀಕ್ಷೆಗಳನ್ನು ಮಾಡಿ ತೇರ್ಗಡೆಹೊಂದಿಸುತ್ತಾ ಬಂದಿದ್ದಾರೆ. ಹೀಗೆ ತೇರ್ಗಡೆ ಹೊಂದಿದವರಿಗೆ ಬಹುಮಾನಗಳನ್ನೂ ಕೊಡುತ್ತಿರುವರು. ಈ ಸಭೆಯನ್ನು ನಡಸುವುದಕ್ಕೂ ಅದರ ಎಲ್ಲಾ ಕಾರ್ಯಗಳಿಗೂ ಸಹಾಯವಾಗುವುದಕ್ಕೋಸ್ಕರ ಆ ಲಿಂಗಾಯತರಲ್ಲೇ ಅನೇಕರು ಚಂದಾ ಹಾಕಿ ೩,೦೦೦ ರೂಪಾಯಿ ಹಣ ಕೂಡಿಸಿ ಕೊಡುವುದಾಗಿ ವಾಗ್ದಾನ ಮಾಡಿದ್ದಾರೆ. ಆದ್ದರಿಂದ ಈ ಸಂಘದ ಉದ್ದೇಶವು ಶ್ಲಾಘನೀಯವಾದದ್ದು. ಅವರಲ್ಲೇ ಪರಸ್ಪರ ಸಹಾಯ ಮಾಡಿ ತಮ್ಮ ಅಭಿಪ್ರಾಯವನ್ನು ನೆರವೇರಿಸಿಕೊಳ್ಳಬೇಕೆಂಬ ಕುತೂಹಲವುಳ್ಳವರಾಗಿದ್ದಾರೆ. ಆದಕಾರಣ ಈ ಸಭೆಗೆ ಸಹಾಯ ಮಾಡುವುದರಲ್ಲಿ ಗವರ್ನಮೆಂಟಿನವರಿಗೆ ತುಂಬಾ ಸಂತೋಷ ಉಂಟಾಗಿರುವುದು. ಪ್ರತಿ ವರುಷವೂ ಅಲ್ಲಿ ಜಾತ್ರೆ ನಡೆಯುವಾಗ್ಗೆ ಅಂಗಡಿ ಮುಂಗಟ್ಟುಗಳಿಂದ ಉತ್ಪತ್ತಿಯಾಗುವ ಹಣದಲ್ಲಿ ಶೇಕಡಾ ೧೦ ರಂತೆ ಈ ಸಭೆಯವರಿಗೆ ದ್ರವ್ಯ ಸಹಾಯ ಕೊಡುವಂತೆಯೂ, ಈ ಸಹಾಯವು ಯಾವ ವರುಷವೂ ೫೦ ರೂಪಾಯಿಗೆ ಮೀರಿದ್ದಾಗಿರಕೂಡದೆಂತಲೂ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ. ಈ ಸಭೆಯ ಕಾರ್ಯಾಭಿವೃದ್ಧಿಯನ್ನು ಸರ್ಕಾರಕ್ಕೆ ತಿಳಿಸುತ್ತಾ ಬರಬೇಕು.

ಜೈಲ್‌ಖಾನಗಳ ರಿಪೋರ್ಟು.

ಕಳೆದ ೧೯೦೫ ನೆ ಇಸವಿಯಲ್ಲಿ ಮೈಸೂರು ಸಂಸ್ಥಾನದೊಳಗೆ ಜೈಲ್‌ಖಾನೆಗಳ ಮತ್ತು ಲಾಕಪ್ಪುಗಳ ಸಂಖ್ಯೆಯು ಹೆಚ್ಚಲೂ ಇಲ್ಲ, ಕಡಮೆಯಾಗಲೂ ಇಲ್ಲ. ಆ ವರುಷ ಒಟ್ಟು ೧೧,೩೧೫ ಖೈದಿಗಳು ಹೊಸದಾಗಿ ದಾಖಲಾದರು. ವರುಷಾಂತ್ಯದಲ್ಲಿ ೧,೨೬೭ ಮಂದಿ ಬಂದೀವಾನರು ಎಲ್ಲಾ ಜೈಲುಗಳಲ್ಲೂ ಇದ್ದರು. ಮತ್ತು ೬೦ ಮಂದಿ ಬಾಲ ಅಪರಾಧಿಗಳು ಖೈದಿಗಳಾಗಿ ದಾಖಲಾದರು. ಹೋದ ವರುಷ ಜೈಲಿನಿಂದ ೬ ಮಂದಿ ತಪ್ಪಿಸಿಕೊಂಡು ಓಡಿಹೋದರು. ಈ ಪೈಕಿ ಇಬ್ಬರಿಗೆ ಮರಣ ದಂಡನೆ ವಿಧಿಸಲ್ಪಟ್ಟಿತ್ತು. ಇವರು ತಮ್ಮ ಮೇಲೆ ಪಹರೆ ಇದ್ದ ಸಂತ್ರಿಯನ್ನು ಕೊಂದುಹಾಕಿರುತ್ತಾರೆ. ಇವರು ಇನ್ನೂ ಪತ್ತೆ ಆಗಲಿಲ್ಲ. ಉಳಿದ ನಾಲ್ವರಲ್ಲಿ ಇಬ್ಬರನ್ನು ಹಿಡಿದು ಶಿಕ್ಷೆ ವಿಧಿಸಿದ್ದಾಯಿತು. ಈ ಎಲ್ಲಾ ಬಂದೀಖಾನೆಗಳಿಗಾಗಿಯೂ ಆ ವರುಷದಲ್ಲಿ ಒಟ್ಟು ೧,೦೭,೩೪೯ ರೂಪಾಯಿ ಖರ್ಚಾಯಿತು. ಅಂದರೆ ಪ್ರತಿ ಒಬ್ಬ ಖೈದಿಯನ್ನೂ ಸಾಕುವುದಕ್ಕೆ ರೂ. ೯೧—೧೧—೧ ಪೈ ಖರ್ಚಾಗಿರುವುದು. ೧೯೦೫ ನೆ ವರುಷದಲ್ಲಿ ೭೧೧ ಬಂದೀವಾನರು ಜೈಲುಗಳಲ್ಲಿ ಕಸಬು ಕೆಲಸಗಳನ್ನು ಮಾಡುತ್ತಿದ್ದರು. ಅವರು ತಯಾರುಮಾಡಿದ ಪದಾರ್ಥಗಳಿಂದ ೧೯,೦೩೧ ರೂಪಾಯಿ ಉತ್ಪತ್ತಿಯಾಗಿರುತ್ತದೆ.

ಪ್ಲೇಗ್ ಇಲಾಖೆಯ ರಿಪೋರ್ಟು.

ಕಳೆದ ೧೯೦೫-೦೬ ನೆ ಸಾಲಿನ ಮೈಸೂರು ಸಂಸ್ಥಾನದ ಪ್ಲೇಗ್ ಇಲಾಖೆಯ ರಿಪೋರ್ಟು ಪ್ರಕಟವಾಗಿದೆ. ೧೯೦೪-೦೫ ನೆ ಸಾಲಿನಲ್ಲಿ ಈ ಸಂಸ್ಥಾನದಲ್ಲಿ ೨೪,೩೩೦ ಮಂದಿಗೆ ಪ್ಲೇಗ್ ತಗಲಿ ೧೩,೬೭೭ ಜನರು ಕಾಲವಾದರು. ಆದರೆ ಕಳೆದ ವರುಷ ಆ ಉಪದ್ರವು ಅಷ್ಟು ಕಠಿಣವಾಗಿರಲಿಲ್ಲ. ೩,೦೩೩ ಜನರಿಗೆ ಆ ಉಪದ್ರ ತಗಲಿದ್ದರ ಪೈಕಿ ೨,೧೩೭ ಮಂದಿ ಕಾಲವಾಗಿರುತ್ತಾರೆ. ಮೈಸೂರು ಪಟ್ಟಣದಲ್ಲಿ ೬ ಮಂದಿ ಹೊರಗಿನಿಂದ ಪ್ಲೇಗ್ ತಗಲಿ ಬಂದಾಗ್ಯೂ ಆ ಉಪದ್ರವು ಅಲ್ಲಿ ತಲೆಹಾಕಲಿಲ್ಲ. ಮೈಸೂರು ರೈಲ್ವೆ ಸ್ಟೇಷನ್ ಮುಂತಾದ ಕಡೆಗಳಲ್ಲಿ ಪ್ರಯಾಣಿಕರನ್ನು ಪರೀಕ್ಷೆ ಮಾಡತಕ್ಕ ಅಧಿಕಾರಿಗಳು ಬಹಳ ತೃಪ್ತಿಕರವಾಗಿ ಕೆಲಸ ಮಾಡಿರುತ್ತಾರೆಂಬುವುದು ಇದರಿಂದ ಗೊತ್ತಾಗುತ್ತದೆ. ಇದಲ್ಲದೆ ಟ್ರಸ್ಟ್ ಬೋರ್ಡಿನವರು ನಡಸಿದ ಆರೋಗ್ಯಾಭಿವೃದ್ಧಿಯ ಕಾರ್ಯಗಳೂ ತುಂಬಾ ಸಮರ್ಪಕವಾಗಿರುತ್ತವೆಯಾದ್ದರಿಂದಲೂ ಪ್ಲೇಗ್ ಉಪದ್ರವು ಅಲ್ಲಿಗೆ ತಲೆಹಾಕಲಿಲ್ಲ. ಮೊದಲು ಮೈಸೂರು ಪಟ್ಟಣದಲ್ಲಿ ವಿಷ ಹಾಕಿ ಇಲಿ ಹೆಗ್ಗಣಗಳನ್ನು ಕೊಲ್ಲಬೇಕೆಂದು ಪ್ರಯತ್ನ ಮಾಡಲಾಯಿತು. ಈಚೆಗೆ ಅದನ್ನು ತಪ್ಪಿಸಿ ಬೋನುಗಳನ್ನಿಟ್ಟು ಹಿಡಿಯುವ ಕ್ರಮವನ್ನು ಜಾರಿಗೆ ತಂದಿರುತ್ತದೆ. ಬೆಂಗಳೂರು ಪಟ್ಟಣದಲ್ಲೂ ಈ ಕ್ರಮವನ್ನೇ ಜಾರಿಗೆ ತರುವಂತೆ ಹುಕುಂ ಮಾಡಲಾಗಿದೆ. ಬೆಂಗಳೂರಿನ ಮತ್ತು ಕೋಲಾರ್ ಚಿನ್ನದ ಗಣಿಗಳ ಪ್ಲೇಗ್ ಆಸ್ಪತ್ರೆಗಳಲ್ಲಿ ಶೇಕಡಾ ೬೦ ಮತ್ತು ೬೩ ರಂತೆ ಪ್ಲೇಗ್ ಖಾಯಿಲೆಯವರು ಬದುಕಿಕೊಂಡದ್ದು ತೃಪ್ತಿಕರವಾಗಿದೆ. ಈ ಇಲಾಖೆಗೆ ಹಿಂದಿನ ವರುಷ ೧,೭೧,೫೪೯ ರೂಪಾಯಿ ಖರ್ಚಾಗಿತ್ತು. ಕಳೆದ ಸಾಲಿನಲ್ಲಿ ೧,೦೬,೯೬೫ ರೂಪಾಯಿ ಖರ್ಚಾಗಿರುವುದು. ಈ ಸಂಸ್ಥಾನದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಇಲಿ ಹೆಗ್ಗಣಗಳನ್ನು ಕೊಂದುಹಾಕಿದರೋ ಈ ರಿಪೋರ್ಟಿನಲ್ಲಿ ಕಾಣಿಸಿರುವುದಿಲ್ಲ. ಇದನ್ನು ಸೀನಿಯರ್ ಸರ್ಜನರವರು ಕೂಡಲೇ ತಿಳಿಸಬೇಕಾಗಿದೆ. ಸಾಮಾನ್ಯವಾಗಿ ಆರೋಗ್ಯವು ತೃಪ್ತಿಕರವಾಗಿರಬೇಕಾದರೆ ಮನೆಗಳಲ್ಲಿ ಹೆಚ್ಚು ಜನರು ಇರದಂತೆ ನೋಡಿಕೊಂಡರೆ ಎಷ್ಟೋ ಅನುಕೂಲವಾದೀತೆಂದು ಸೀನಿಯರ್ ಸರ್ಜನರವರು ತಿಳಿಸಿರುತ್ತಾರೆ. ಈ ವಿಷಯವನ್ನು ಮ್ಯುನಿಸಿಪಾಲಿಟಿಯವರೂ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಗಮನಕ್ಕೆ ತಂದುಕೊಂಡು ತಕ್ಕ ಏರ್ಪಾಡು ಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.

ವೈದ್ಯ ಮತ್ತು ಸ್ಯಾನಿಟರಿ ರಿಪೋರ್ಟು.

ಮೈಸೂರು ಸಂಸ್ಥಾನದಲ್ಲಿ ವೈದ್ಯ ಮತ್ತು ಸ್ಯಾನಿಟರಿ ಇಲಾಖೆಯ ೧೯೦೫ ನೆ ಇಸವಿಯ ರಿಪೋರ್ಟನ್ನು ಪ್ರಕಟಿಸಿದ್ದಾರೆ. ಆ ವರುಷ ಈ ಸಂಸ್ಥಾನದಲ್ಲಿ ೬೬೬ ಮಂದಿ ವಾಂತಿಭೇದಿ ಉಪದ್ರ ತಗಲಿ ಕಾಲವಾದರು. ಈ ಪೈಕಿ ೬೩೭ ಮರಣಗಳು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಆದವು. ೧೯೦೫ ನೆ ಜುಲೈ ಒಂದು ತಿಂಗಳಲ್ಲಿ ೧೭೦ ಜನರು ಈ ರೋಗದಲ್ಲಿ ತೀರಿಹೋದರು. ಸಿಡುಬಿನ ಉಪದ್ರದಲ್ಲಿ ೫,೬೩೯ ಮರಣಗಳಾಗಿವೆ. ಅಂದರೆ ಹಿಂದಿನ ಸಾಲಿಗಿಂತ ೬,೩೬೭ ಹೆಚ್ಚು. ಈ ಉಪದ್ರ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಹರಡಿಕೊಂಡಿತ್ತು. ಈ ಪೈಕಿ ಮೈಸೂರು ಡಿಸ್ಟ್ರಿಕ್ಟು ಒಂದರಲ್ಲೇ ೩,೩೨೫ ಮರಣಗಳಾಗಿರೋಣದರಿಂದ ಎಷ್ಟು ಕಠಿಣವಾಗಿತ್ತೆಂಬುದು ಗೊತ್ತಾಗುವುದು. ಆದರೆ ಜ್ವರಾದಿಗಳಲ್ಲಿ ೧೯೦೬ನೆ ಇಸವಿಯಲ್ಲಿ ೫೭,೦೦೨ ಜನರು ಕಾಲವಾದರು. ೧೯೦೫ರಲ್ಲಿ ೬೦,೩೬೦ ಮರಣಗಳಾಗಿರುತ್ತವೆ. ಪ್ಲೇಗ್ ಉಪದ್ರದಲ್ಲೂ ಬಹಳ ಕೊಂಚ ಅಂದರೆ ೩,೯೫೯ ಮಂದಿ ತೀರಿಹೋದರು. ಆ ವರುಷ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಸ್ಯಾನಿಟರಿ ಕಾಮಗಾರಿಗಳು ಬಹಳ ತೃಪ್ತಿಕರವಾಗಿ ನಡೆದಿರುತ್ತವೆ. ಈ ಕಾಮಗಾರಿಗಳಿಗೆ ಒಟ್ಟು ೬,೦೫,೯೨೭ ರೂಪಾಯಿ ಖರ್ಚುಮಾಡಲಾಯಿತು. ವೈದ್ಯ ಇಲಾಖೆಯವರು ಮೇಲ್ವಿಚಾರಣೆ ಮಾಡಿಕೊಂಡು ಬಂದಿರುವ ಕಾರ್ಯಗಳು ತೃಪ್ತಿಕರವಾಗಿರುವವು.

ಮಲ್ನಾಡ್ ಅಲೋವೆನ್ಸು ವಜಾ ಆದದ್ದು.

ಸರ್ಕಾರದವರು ಮಲ್ನಾಡು ಮತ್ತು ಅರ್ಧ ಮಲ್ನಾಡು ಡಿಸ್ಟ್ರಿಕ್ಟುಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಅಲೋವೆನ್ಸು ಕೊಡುತ್ತಿದ್ದಾರಷ್ಟೆ. ಇದನ್ನು ವಜಾ ಮಾಡಬೇಕೆಂದು ಕೆಲವು ಕಾಲದಿಂದ ಅವರ ಆಲೋಚನೆಯಲ್ಲಿತ್ತು. ಈಗ ಕೊಟ್ಟಿರುವ ಹುಕುಮಿನ ಸಾರಾಂಶವೇನೆಂದರೆ-ಇನ್ನು ಮೇಲೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅಂದರೆ, ಡೆಪ್ಯುಟಿ ಕಮಿಷನರು, ಡಿಸ್ಟ್ರಿಕ್ಟ್ ಜಡ್ಜಿಗಳು, ಪೋಲೀಸ್ ಸೂಪರಿಂಟೆಂಡೆಂಟರು ಮತ್ತು ಅಸಿಸ್ಟೆಂಟರು, ಮತ್ತು ಎಲ್ಲಾ ಇಲಾಖೆಗಳಲ್ಲೂ ಇರುವ ಇದೇ ದರ್ಜೆಯ ಅಧಿಕಾರಿಗಳು, ಇವರಿಗೆಲ್ಲಾ ಕೊಡುತ್ತಿರುವ ಮಲ್ನಾಡು ಮತ್ತು ಅರ್ಧಮಲ್ನಾಡು ಅಲೋವೆನ್ಸುಗಳನ್ನು ವಜಾ ಮಾಡಿರುತ್ತೆ. ಆದರೆ ಈಗ ಅಧಿಕಾರಿಗಳಾಗಿ ಪಡೆಯುತ್ತಿರುವವರಿಗೆ ಈ ಹುಕುಂ ಅನ್ವಯಿಸುವದಿಲ್ಲ. ಇನ್ನು ಮುಂದೆ ಆವರ ಕೆಲಸಕ್ಕೆ ನೇಮಕವಾಗತಕ್ಕವರಿಗೆ ಸಲ್ಲಲಾರದು. ಅಮಲ್ದಾರು, ಡಿಪ್ಟಿ ಅಮಲ್ದಾರು, ತಾಲ್ಲೂಕ್ ಶಿಬ್ಬಂದಿ, ಇತರ ಇಲಾಖೆಗಳ ಚಿಲ್ಲರೆ ನೌಕರರುಗಳಿಗೇನೂ ಈ ಹುಕುಮು ಅನ್ವಯವಾಗುವುದಿಲ್ಲ. ಎಂದಿನಂತೆಯೇ ಅವರಿಗೆಲ್ಲಾ ಅಲೋವೆನ್ಸುಗಳು ಸಲ್ಲುವವು. ಈಗ ಅಲೋವೆನ್ಸು ಪಡೆಯದೆ ಇರತಕ್ಕ ನೌಕರರಿಗೂ ಸರ್ಕಾರದಿಂದ ಇದು ಇನ್ನು ಮುಂದೆ ಸಲ್ಲಲಾರದು.

ವ್ಯವಸಾಯದ ಇಲಾಖಾ ರಿಪೋರ್ಟ್.

ಮೈಸೂರು ಸಂಸ್ಥಾನದ ೧೯೦೫—೦೬ ನೆ ಸಾಲಿನ ವ್ಯವಸಾಯದ ಇಲಾಖಾ ರಿಪೋರ್ಟ್ ಈಗತಾನೇ ಪ್ರಕಟವಾಗಿದೆ ಇದರಲ್ಲಿ ಕಂಡುಬರುವ ಮುಖ್ಯ ವಿಚಾರಗಳೇನಂದರೆ—ವ್ಯವಸಾಯದ ಇಲಾಖೆಯ ಅಧಿಕಾರಿಯು ಮೂಳೆ ಗೊಬ್ಬರವನ್ನು ಜಮೀನಿಗೆ ಉಪಯೋಗಿಸುವುದನ್ನು ಪರೀಕ್ಷೆ ಮಾಡಿದ್ದಾರೆ ಈ ಗೊಬ್ಬರವನ್ನು ಜಮೀನಿಗೆ ಬಹಳ ಆಳವಾಗಿ ಉತ್ತು ಹಾಕಬಾರದೆಂತಲೂ, ಒಂದೆರಡು ಅಂಗುಲ ಆಳಕ್ಕೊಳಗಾಗಿ ಉತ್ತು ಹಾಕಿದರೆ ಫಲವು ಬಹಳ ಹುಲುಸಾಗುತ್ತೆಂತಲೂ ಹೇಳುತ್ತಾರೆ. ಇದು ರೈತ ಪ್ರಜೆಗಳಿಗೆ ಉಪಯೋಗಕರವಾದ ಭಾಗವು ಇದಲ್ಲದೆ ಲಾಂಟಾನಾ ಎಂಬ ಮೆಳೆಗಳು ಅನೇಕ ಊರುಗಳಲ್ಲಿ ಹಬ್ಬಿ ಪಾಳು ಕೆಡುವುತ್ತಿವೆಯಷ್ಟೆ. ಈ ಗಿಡದ ಎಲೆಯನ್ನೂ ಕೊಂಬೆ ತಾಳೆಗಳನ್ನೂ ಉರಿಸಿ ಅದರ ಬೂದಿಯ ಗುಣಗಳನ್ನು ಮೇಲ್ಕಂಡ ಅಧಿಕಾರಿಯು ಪರೀಕ್ಷೆ ಮಾಡಿರುತ್ತಾರೆ. ಇದು ಬಹಳ ಅನುಕೂಲವಾದ ಗೊಬ್ಬರವಾಗುತ್ತೆಂದು ಪ್ರಕಟಿಸಿರುವರು. ಆದಕಾರಣ ಆ ಮೆಳೆಗಳನ್ನು ಜನರು ತರಿದು ಬೆಂಕಿ ಹಾಕಿ ಉರಿಸಿ ಆ ಬೂದಿಯನ್ನು ಜಮೀನುಗಳಿಗೆ ಉಪಯೋಗಿಸಿದ ಪಕ್ಷದಲ್ಲಿ ಆ ಗಿಡಗಳು ಹಬ್ಬುವುದನ್ನು ತಡೆಯಬಹುದು; ಇದಲ್ಲದೆ ಈ ಗೊಬ್ಬರದಿಂದ ಹುಲುಸಾದ ಬೆಳೆಯನ್ನು ಪಡೆಯಬಹುದು. ರೈತರು ಕಣದಲ್ಲಿ ಧಾನ್ಯವನ್ನು ಬಡಿದು ತೂರುವುದರಲ್ಲಿ ಬಹಳ ಧಾನ್ಯ ಪೋಲಾಗಿ ಕೈಗೆ ಸಿಕ್ಕದೆ ಹೋಗುವುದು ಹೀಗೆ ಪೋಲಾಗದಂತೆ ವ್ಯವಸಾಯದ ಅಧಿಕಾರಿಯು ಕೆಲವು ಹೊಸ ಯಂತ್ರಗಳನ್ನು ಉಪಯೋಗಿಸಿ ಧಾನ್ಯವನ್ನು ರೇಖೆ ಮಾಡಿ ತೋರಿಸುತ್ತಾರೆ. ಇದು ನಮ್ಮ ರೈತರಿಗೆ ಬಹಳ ಅವಶ್ಯವಾದ ವಿಷಯ ಈ ಯಂತ್ರವನ್ನೂ ಅದರ ಪ್ರಯೋಜನವನ್ನೂ ಅವರು ರೈತ ಪ್ರಜೆಗಳಿಗೆ ತೋರಿಸಿಕೊಡಬೇಕಾಗಿದೆ ವ್ಯವಸಾಯದ ಇಲಾಖಾ ಅಧಿಕಾರಿಯು ಪ್ರದರ್ಶನಗಳ ಸಂಬಂಧವಾಗಿಯೂ ದೇಶೀಯ ವ್ಯವಸಾಯ ಸಾಧನಗಳ ಪರಿಕ್ಷಾರ್ಥವಾಗಿಯೂ ಇದುವರೆಗೆ ಸಂಚಾರ ಮಾಡಿರುತ್ತಾರಲ್ಲದೆ ಮತ್ತೆ ಬೇರೆ ಇಲ್ಲವು ಇನ್ನು ಮುಂದೆಯಾದರೂ ಅವರೂ ಅವರ ಕೈ ಕೆಳಗಿನ ನೌಕರರೂ ಗ್ರಾಮಾಂತರಗಳ ಮೇಲೆ ಹೆಚ್ಚಾಗಿ ಸಂಚಾರ ಮಾಡುತ್ತಾ ರೈತ ಪ್ರಜೆಗಳ ಸಂಗಡ ಕಲೆತು ವ್ಯವಸಾಯಾಭಿವೃದ್ಧಿಯಲ್ಲಿ ರೈತರಿಗಿರುವ ತೊಂದರೆ ಅನುಮಾನಾದಿಗಳನ್ನು ಪರಿಹರಿಸಿಕೊಡಲು ಪ್ರಯತ್ನ ಮಾಡಬೇಕಾಗಿದೆ

ರಿಜಿಸ್ಟ್ರೇಷನ್ ಇಲಾಖೆಯ ಲವಾಜಮೆ.

ಮೈಸೂರು ಸಂಸ್ಥಾನದಲ್ಲಿ ರಿಜಿಸ್ಟ್ರೇಷನ್ ಆಫೀಸುಗಳನ್ನೂ ಅವುಗಳ ಶಿಬ್ಬಂದಿಯನ್ನೂ ಸಾದಿಲ್ವಾರು ಮುಂತಾದ ಖರ್ಚನ್ನೂ ಎಷ್ಟುಮಟ್ಟಿಗೆ ಕಡಿಮೆ ಮಾಡಬಹುದೆಂದು ಸರ್ಕಾರದವರು ಪರ್ಯಾಲೋಚನೆ ಮಾಡಿ ಹುಕುಂ ಕೊಟ್ಟಿರುವುದೇನೆಂದರೆ—ಈ ಸಂಸ್ಥಾನದಲ್ಲಿ ಸೊರಬ, ನಗರ, ಶಿಕಾರಿಪುರ, ಆಲೂರು, ಹರಿಹರ, ಹೊನ್ನಾಳಿ, ಸಾಗರ, ಮೂಡಿಗೆರೆ, ಕೊಪ್ಪ—ಈ ಒಂಭತ್ತು ಕಡೆಗಳಲ್ಲಿರುವ ರಿಜಿಸ್ಟ್ರರ್ ಆಫೀಸುಗಳನ್ನು ೧೯೦೭ ನೆ ಜನವರಿ ೧ರು ಲಾಗಾಯಿತು ವಜಾ ಮಾಡಿದೆ ಒಂದೊಂದು ಆಫೀಸಿಗೆ ವರುಷಕ್ಕೆ ೯೦೦ ರೂಪಾಯಿ ಖರ್ಚಾಗುವುದು. ಈ ಆಫೀಸುಗಳಲ್ಲಿ ವರುಷಕ್ಕೆ ೫೦೦ ಪತ್ರಗಳೂ ರಿಜಿಸ್ಟರಾಗದೆ ಇರೋಣದರಿಂದ ಉತ್ಪತ್ತಿಗಿಂತಲೂ ಖರ್ಚೇ ಜಾಸ್ತಿಯಾಗುತ್ತಿದೆ. ಈ ಒಂಭತ್ತು ಆಫೀಸುಗಳಲ್ಲೂ ವರುಷಕ್ಕೆ ೨,೬೯೨ ರೂಪಾಯಿ ಖರ್ಚುಳ್ಳ ಗುಮಾಸ್ತರೇ ಮೊದಲಾದ ಶಿಬ್ಬಂದಿಯನ್ನು ಆ ಲಾಗಾಯಿತು ವಜಾ ಮಾಡಲ್ಪಟ್ಟಿದೆ ಇನ್ನು ಮುಂದೆ ಆ ಸ್ಥಳಗಳಲ್ಲಿ ರೆವಿನ್ಯೂ ಅಧಿಕಾರಿಗಳು ಅಂದರೆ ಆಲೂರು, ಹರಿಹರದಲ್ಲಿ ಡೆಪ್ಯುಟಿ ಅಮಲ್ದಾರರೂ ಇತರ ಏಳು ಊರುಗಳಲ್ಲಿ ತಾಲ್ಲೂಕ್ ಶಿರಸ್ತೇದಾರರೂ ತಮ್ಮ ಇತರ ಕೆಲಸಗಳೊಂದಿಗೆ ಸಬ್ ರಿಜಿಸ್ಟ್ರಾರ್‍ಗಳಾಗಿಯೂ ಇದ್ದು ಪತ್ರಗಳನ್ನು ರಿಜಿಸ್ಟರ್ ಮಾಡುತ್ತಾ ಬರಬೇಕು ಇದಕ್ಕಾಗಿ ಡಿಪ್ಟಿ ಅಮಲ್ದಾರರುಗಳಿಗೆ ತಲಾ ೧೫ ರೂಪಾಯಿನಂತೆಯೂ ತಾಲ್ಲೂಕ್ ಶಿರಸ್ತೇದಾರರಿಗೆ ೧೦ ರೂಪಾಯಿನಂತೆಯೂ ರುಸುಂ ಸಲ್ಲಿಸಲ್ಪಡುವುದು ಇದಲ್ಲದೆ ರಿಜಿಸ್ಟ್ರೇಷನ್ ಮುತ್ಸದ್ದಿಯೊಬ್ಬನನ್ನು ೧೦ ರೂಪಾಯಿ ತಲಬಿನ ಮೇಲೆ ಪ್ರತಿ ಒಂದು ತಾಲ್ಲೂಕಿಗೂ ನೌಕರರ್ಮಾಡಲ್ಪಡುವುದು. ಇನ್ನು ಮುಂದೆ ನಾಲ್ಕು ತರಗತಿಗಳ ಸಬ್ ರಿಜಿಸ್ಟ್ರಾರುಗಳು ಇರುವರು ಮೊದಲನೆ ತರಗತಿಗೆ ತಲಬು ೭೫ ರೂಪಾಯಿ, ೨ ನೆ ತರಗತಿಗೆ ೬೦ ರೂ, ೩ ನೆ ತರಗತಿಗೆ ೫೦ ರೂ, ೪ ನೆ ತರಗತಿಗೆ ೪೦ ರೂಪಾಯಿ ಮೊದನೇ ತರಗತಿಯಲ್ಲಿ ೬ ಮಂದಿ ೨ ನೇದರಲ್ಲಿ ೧೬ ಮಂದಿ, ೩ ನೇದರಲ್ಲಿ ೧೬ ಮಂದಿ, ೪ ನೇದರಲ್ಲಿ ೧೪ ಮಂದಿ ಸಬ್ ರಿಜಿಸ್ಟ್ರಾರುಗಳು ಇರುವರು ಈಗ ಮಾಡಿರುವ ಇನ್ನೊಂದು ಹೊಸ ಬದಲಾವಣೆ ಏನೆಂದರೆ—ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲೆ ನೋಡಬೇಕೆನ್ನುವವರು ಈಗ ಒಂದು ರೂಪಾಯಿ ರುಸುಂ ಕೊಟ್ಟಲ್ಲಿ ಅಲ್ಲಿರುವ ಪುಸ್ತಕಗಳನ್ನೆಲ್ಲಾ ಶೋಧಿಸುವುದಕ್ಕೆ ಕೊಡುವುದೂ, ಎಲ್ಲಾ ನೋಡಿ ಆದ ನಂತರ ಪುಸ್ತಕವನ್ನು ಶೋಧನೆ ಮಾಡುವುದಕ್ಕೆ ಕೊಡಲ್ಪಟ್ಟಿತ್ತೆಂದು ಅವರಿಗೆ ಸಬ್ ರಿಜಿಸ್ಟ್ರಾರು ಸರ್ಟಿಫೈ ಮಾಡಿಕೊಡುವುದೂ ರೂಢಿಯಾಗಿದೆ ಇದು ತೃಪ್ತಿಕರವಾಗಿಲ್ಲ. ಇನ್ನು ಮೇಲೆ ಮದರಾಸ್ ಆಧಿಪತ್ಯದಲ್ಲಿ ಜಾರಿಯಲ್ಲಿರುವಂಥಾ ಕ್ರಮಗಳನ್ನು ಇಲ್ಲೂ ರೂಢಿಸುವುದು ಅನುಕೂಲವಾಗಿದೆ ಇನ್ನು ಮುಂದೆ ಅರ್ಜಿದಾರರು ಸಬ್ ರಿಜಿಸ್ಟ್ರಾರಿಗೆ ಹಿಂದಿನ ದಾಖಲೆ ನೋಡಿ ಕೊಡಬೇಕೆಂದು ಅರ್ಜಿ ಹಾಕಬೇಕು ಅರ್ಜಿದಾರರ ವಶಕ್ಕೆ ಪುಸ್ತಕಗಳನ್ನು ಕೊಡದೆ ಸಬ್ ರಿಜಿಸ್ಟ್ರಾರುಗಳೇ ಶೋಧನೆ ಮಾಡಬೇಕು. ಒಂದೇ ವರುಷದ ದಾಖಲೆ ನೋಡಬೇಕಾಗಿದ್ದಲ್ಲಿ ಅರ್ಜಿದಾರನು ಒಂದು ರೂಪಾಯಿಯನ್ನೂ, ಅದು ಸಾಲದೆ ಹೆಚ್ಚು ವರುಷಗಳ ದಾಖಲೆ ನೋಡಬೇಕಾದರೆ ಅಂಥಾ ಪ್ರತಿ ಹೆಚ್ಚು ವರುಷಕ್ಕೂ ನಾಲ್ಕಾಣೆಯಂತೆಯೂ ಅರ್ಜಿದಾರನು ರುಸುಂ ಕಟ್ಟಬೇಕಾಗಿದೆ ಇದರಿಂದ ಅರ್ಜಿದಾರರಿಗೆ ಶೋಧನೆ ಮಾಡುವ ಜವಾಬ್ದಾರಿ ತಪ್ಪಿತು ಸಬ್ ರಿಜಿಸ್ಟ್ರಾರುಗಳೇ ಪರಿಕ್ಷೆ ಮಾಡಿ ಸರಿಯಾದ ಸರ್ಟಿಫಿಕೇಟನ್ನು ಕೊಡುವಂತಾಯಿತು ಈ ಬಾಬಿನಲ್ಲಿ ಸರ್ಕಾರಕ್ಕೂ ರುಸುಂ ಸ್ವಲ್ಪ ಜಾಸ್ತಿ ಉತ್ಪತ್ತಿಯಾಗುವುದು ಈ ರೀತಿ ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಲವಾಜಮೆ ಕಡಿಮೆ ಮಾಡಿದ್ದರಿಂದ ಗವರ್ನಮೆಂಟಿಗೆ ವರುಷ ಒಂದಕ್ಕೆ ೪,೦೩೬ ರೂಪಾಯಿನಂತೆ ಉಳಿಕೆಯಾಗುತ್ತದೆ ಈ ಲವಾಜಮೆಯ ದೆಸೆಯಿಂದ ಯಾರ್ಯಾರಿಗೆ ಕೆಲಸ ತಪ್ಪಿಹೋಗುವುದೋ ಅಂಥವರ ಹೆಸರು, ಸರ್ವಿಸು ಮುಂತಾದ್ದನ್ನು ಕಾಣಿಸಿದ ಒಂದು ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಿದಲ್ಲಿ ಅವರಿಗೆಲ್ಲಾ ಕೂಡಲೆ ಬೇರೆ ಬೇರೆ ಕೆಲಸಗಳು ಖಾಲಿ ಆಗುವಂತೆ ಹುಕುಂ ಕೊಡಲಾಗುವುದು. ಇತರ ಕೆಲಸಕ್ಕೆ ಲಾಯಖಿಲ್ಲದೆಯೂ, ಕೆಲಸ ಸಿಕ್ಕದೆಯೂ ಇರುವಂಥಾವರನ್ನು ಕಂಪೆನ್ಸೇಷನ್, ಪೆನ್ಷನ್, ಅಥವಾ ಗ್ರಾಂಟು ಮುಂತಾದ್ದು ಕೊಟ್ಟು ಬಿಡಿಸಲಾಗುತ್ತೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಛೀಫ್ ಕೋರ್ಟ್ ರಿಜಿಸ್ಟ್ರಾರ್ ಮೆ॥ ವಿ ಎ. ರಾಜರತ್ನ ಮೊದಲಿಯಾರ್ರಿಗೆ ಡಿಸೆಂಬರ್ ೩ ರಿಂದ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಡೆಪ್ಯುಟಿ ರಿಜಿಸ್ಟ್ರಾರ್ ಮೆ॥ ಟಿ ಬಸವರಾಧ್ಯರವರು ತಮ್ಮ ಇತರ ಕೆಲಸಗಳೊಂದಿಗೆ ರಿಜಿಸ್ಟ್ರಾರವರ ಚಾಲ್ತಿ ಕೆಲಸಗಳನ್ನು ನೋಡತಕ್ಕದ್ದು

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮೆ॥ ಎಂ ರಾಮಸ್ವಾಮಿ ಐಯ್ಯಂಗಾರ್ರಿಗೆ ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರ ಕೊಟ್ಟಿದೆ.

ಮುಂದೆ ಹೇಳುವ ಆಸ್ಪತ್ರೆ ಅಸಿಸ್ಟೆಂಟರನ್ನು ಅಕ್ಟೋಬರ್ ೨೯ ರಿಂದ ೧ನೇ ಕ್ಲಾಸಿಗೆ ಬಡ್ತಿ ಮಾಡಿದೆ.—ವಿ ಎಸ್ ಸುಬ್ರಾಯರ್, ಟಿ ರಾಮಚಂದ್ರರಾವ್, ಪಿ ರಾಜೇಂದ್ರ ಪಿಳ್ಳೆ, ಜೆ ಎಸ್ ಮರಿಯಪ್ಪಪಿಳ್ಳೆ.

ಲೆಫ್ಟಿನೆಂಟ್ ಕರ್ನಲ್ ಜೆ ಸ್ಮಿತ್ ಯವರು ರಜೆಯ ಮೇಲಿರುವಾಗ್ಗೆ ಮೇಜರ್ ಎಚ್ ಇ ಡ್ರೇಕ್ ಬ್ರಾಕ್‌ಮನ್‌ರವರನ್ನು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿಯೂ ಬಂದೀಖಾನೆಗಳ ಇನ್ಸ್ಪೆಕ್ಟರ್ ಜನರಲ್‌ರಾಗಿಯೂ ನೇಮಕಮಾಡಿದೆ

ಕಾಂಸಿ ಸಬ್ ತಾಲ್ಲೂಕಿನ ಡಿಪ್ಟಿ ಅಮಲ್ದಾರ್ ಎ ರಾಜಾರಾಯರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಕಳೆದ ನವಂಬರ್ ತಿಂಗಳಲ್ಲಿ ನಡೆದ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಮುಂದೆ ಹೇಳುವವರು ತೇರ್ಗಡೆ ಹೊಂದಿದ್ದರಿಂದ ಅವರನ್ನು ಎ ದರ್ಜೆಯ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರನ್ನಾಗಿ ನೇಮಕ ಮಾಡಿದೆ —ಮೆ॥ ಪಿ ಎಸ್. ರಾಜಗೋಪಾಲಾಚಾರಿ, ಬಿ ಎ., ಬಿ ಎಲ್., ಮೆ॥ ಬಿ ಶ್ರೀನಿವಾಸೈಯ್ಯಂಗಾರ್, ಬಿ ಎ

ಹಾಸನ ಡಿವಿಜನ್ ಅ॥ ಇಂಜನಿಯರ್ ಮೆ॥ ವೆಂಕಟರಾವ್ ನಿಜಗಲ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚಿತ್ರದುರ್ಗದ ಡಿವಿಜನ್ ಅ॥ ಇಂಜನಿಯರ್ ಮೆ॥ ಕೆ. ಪಾಪತ್ತಾಯಿ ಧುಂಗರ್ಷಿ ಯವರಿಗೆ ಒಂದು ವರುಷದ ಕಾಯಿಲೆ ರಜವನ್ನೂ ಒಂದು ತಿಂಗಳು ಹನ್ನೆರಡು ದಿನಗಳ ಪ್ರಿವಿಲೆಜ್ ರಜವನ್ನೂ ಕೊಟ್ಟಿದೆ

ಮೈಸೂರ್ ಆಡಿಷನಲ್ ಮುನ್ಸಿಫ್ ಮೆ॥ ಎಸ್ ಹಿರಿಯಣ್ಣಯ್ಯನವರಿಗೆ ಡಿಸೆಂಬರ್ ೧೦ ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಜುಡಿಷಲ್ ಪ್ರೊಬೇಷನರ್ ಮೆ॥ ಎ ಕೆ. ಶ್ರೀನಿವಾಸ ರಾಘವಾಚಾರ್ರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರ್ ಅಡಿಷನಲ್ ಮುನ್ಸಿಫರಾಗಿ ಬದಲಿ ನೋಡತಕ್ಕದ್ದು

ಮೆ॥ ಟಿ ಚೆನ್ನಕೃಷ್ಣನವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೇಳು ದಿನಗಳಿಗೆ ಜಾಸ್ತಿ ಮಾಡಿದೆ

ಆಸ್ಪತ್ರೆ ಅಸಿಸ್ಟೆಂಟ್ ಪಿ ಎ ಮಾಸಿಲ್ಲ ಪಿಳ್ಳೆಯವರನ್ನು ೧೯೦೫ ನೆ ಜುಲೈ ೨೮ ರಿಂದ ೨ ನೆ ತರಗತಿಯಿಂದ ೧ ನೆ ತರಗತಿಗೆ ಬಡ್ತಿ ಮಾಡಿದೆ.

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮೆ॥ ಜಿ ಕೃಷ್ಣಮೂರ್ತಿನಾಯ್ಡು ಯವರನ್ನು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬೇಗೂರಿನಿಂದ ಹುಣಸೂರು ರೇಂಜಿಗೆ ವರ್ಗಮಾಡಿದೆ

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಎಡಿ

ಕರೆಸ್ಪಾಂಡೆನ್ಸ್.

ವೈದ್ಯಶಾಲೆ ಬೇಕು.

ಅಯ್ಯಾ,

ಮಾಗಡಿ ತಾಲ್ಲೂಕು ಮಲೆನಾಡೆಂಬುವದು ಪ್ರಸಿದ್ಧವಾಗಿದ್ದರೂ ಈ ತಾಲ್ಲೂಕಿನ ದಕ್ಷಿಣಭಾಗವೇ ವಿಶೇಷವಾದ ಮಲೆನಾಡಾಗಿರುವದರಿಂದ ಅನಾರೋಗ್ಯಸ್ಥಳವೆಂದು ಸರ್ಕಾರಕ್ಕೂ ವೇದ್ಯವಾಗಿ, ಈ ತಾಲ್ಲೂಕಿನ ಪೋಲೀಸ್ ನೌಕರರಿಗೆ ಮಲೆನಾಡು ಭತ್ಯ ಸಹಾ ದೊರೆಯುತ್ತಿದೆ ಈ ಪ್ರಾಂತ್ಯದ ಜನಗಳು ಸರ್ವ ಸಾಧಾರಣವಾಗಿ ಮಲೆನಾಡು ರೋಗಗಳನ್ನು ಅನುಭವಿಸುತ್ತಾ ಇದ್ದರೂ ಈ ಮಾಗೀಕಾಲದಲ್ಲಿ ಛಳಿ ಜ್ವರಾದಿಗಳು ವಿಶೇಷವಾಗಿ, ಜನಗಳನ್ನು ಪೀಡಿಸುತ್ತಾ ಬಹು ಕಷ್ಟನಷ್ಟಗಳಿಗೆ ಗುರಿಪಡಿಸುತ್ತಿವೆ ಈಗ ಈ ಪ್ರಾಂತ್ಯದ ಗ್ರಾಮಗಳಲ್ಲಿ ಮನೆದಪ್ಪದೆ ಛಳಿ ಜ್ವರಾದಿ ರೋಗಗಳಿಂದ ಜನಗಳು ಬಾಧೆಪಡುತ್ತಿದ್ದಾರೆ ಕೆಲವರ ಮನೆಗಳಲ್ಲಂತು ಅನ್ನೋದಕಗಳನ್ನು ಕೊಡುವವರು ಇಲ್ಲದ ಹಾಗೆ ಎಲ್ಲರೂ ರೋಗದಲ್ಲಿ ಬಿದ್ದುಕೊಂಡಿದ್ದಾರೆ ಹೊಲಗಳ ಕೊಯ್ಲುಕಾಲವಾಗಿ, ಕಾಯಿಲೆ ಕಾರಣ, ಆಳುಗಳು ದೊರೆಯದೆ, ಒಂದಾಳಿಗೆ ಒಪ್ಪೊತ್ತಿಗೆ ಎಂಟಾಣೆ ಕೂಲಿ ಪ್ರಕಾರ ಸೀಮೆಬದ್ದರೂ ದೂರಗ್ರಾಮಗಳವರೂ ಬಂದು ಹೊಲಗಳನ್ನು ಕೊಯ್ಯುತ್ತಿ ಈ ಪ್ರಾಂತ್ಯ ಯಾವ ಊರಿನಲ್ಲಿ ನೋಡಿದರೂ ಬಿಳುಪಾದ ಮು ಕೃಶವಾದ ದೇಹವೂ ಉಳ್ಳ ಬಲಹೀನವಾದ ರೋಗಿಷ್ಟರೇ ಕಾಣು ಈ ಪ್ರಾಂತ್ಯವು ಕೇವಲ ಸಣ್ಣ ಗ್ರಾಮಗಳೇ ಆಗಿರುವದರಿಂದ ಯೋ ತರವಾದ ವೈದ್ಯರು ದೊರೆಯುವದಿಲ್ಲ. ರೋಗ ಬಂದಾಗ ಆಯುಸ್ಸು ಯಾಗಿದ್ದರೆ ಬದುಕುತ್ತಾರೆ! ಔಷಧವೇನು ಮಾಡೀತು ? ಎಂದು ಈ ಗಾಡಿನವರು ಸಿದ್ಧಾಂತ ಮಾಡಿಕೊಂಡಿದ್ದಾರೆ ಕೃಪಾಳು ಸರ್ಕಾರದ ಸಮೀಪವಾದ ಕ್ಲೋಸ್‌ಪೇಟೆ ತಾಲ್ಲೂಕಿನ ಗ್ರಾಮಾಂತರ ಜ ಕ್ಷೇಮಾರೋಗ್ಯಕ್ಕೋಸ್ಕರ ಒಬ್ಬ ಕರ್ಣಾಟಕ ವೈದ್ಯರನ್ನು ಇ ವಂತೆ ಈ ಪ್ರಾಂತ್ಯಕ್ಕೂ ಒಬ್ಬ ವೈದ್ಯರನ್ನು ನೇಮಿಸಿಕೊಟ್ಟು ಪ್ರ ಳ ಆರೋಗ್ಯಭಾಗ್ಯವನ್ನು ಕಾಪಾಡುವರೆಂದು ಪ್ರಾರ್ಥಿಸುತ್ತೇನೆ

ಕ್ಷೇಮ ಹಿತಚಿಂತಕ

ವಿದುರಾಶ್ವತ್ಥದ ಯಾತ್ರಾರ್ಥಿಗಳ ಎರಡು ಕೊರತೆಗಳು.
ಅಂಚೆ—ಧರ್ಮಸತ್ರ.

ಅಯ್ಯಾ,

ಗೌರಿಬಿದನೂರು ತಾಲ್ಲೂಕು ವಿದುರಾಶ್ವತ್ಥದಲ್ಲಿ ಶ್ರೀ ಲಕ್ಷ್ಮೀನಾರಾಯಣಸ್ವಾಮಿಯವರ ಮಹಿಮೆಯಿಂದ ಪ್ರತಿ ದಿವಸದಲ್ಲಿಯೂ ಸುಮಾರು ನೂರು ಜನದ ವರೆವಿಗೆ ಭಕ್ತಾದಿಗಳು ಅಲ್ಲಿ ಸೇವೆ ಮಾಡುತ್ತಾ ಇರುತ್ತಾರೆ ಹೀಗೇ ಸದಾ ಕಾಲವೂ ನಡಿಯುತ್ತದೆ ಆದರೆ ಈ ಬಹಳ ದೂರಫಾಸಲೆ ಜನಗಳು ಬರುತ್ತಾರೆ ಇವರಿಗೆ ತಮ್ಮ ಸ್ಥಳದ ಸಂಗತಿಗಳು ತಿಳಿಯಬೇಕಾಗಿದ್ದರೆ ಇಲ್ಲಿ ಬರತಕ್ಕ ಟಪ್ಪಾಲಿನ ಕಾಗದಗಳು ಇಲ್ಲಿಂದ ಹೋಗತಕ್ಕ ಕಾಗದಗಳು ಪ್ರತಿ ಒಂದೂ ಗೌರಿಬಿದನೂರಿಗೆ ಬಂದು ಒಂದು ದಿವಸ ಇದ್ದು ಮುಂದಕ್ಕೆ ಹೋಗುತ್ತದೆ ಆದ್ದರಿಂದ ಭಕ್ತಾದಿಗಳಾದ ನಮ್ಮಗಳಿಗೆ ಕ್ಷೇಮ ಸಮಾಚಾರಗಳು ಗೃಹಕೃತ್ಯಗಳು ತಿಳಿಯಬೇಕಾಗಿದ್ದರೆ ತುಂಬಾ ಸಾವಕಾಶವಾಗುತ್ತದೆ ಆದ್ದರಿಂದ ಮಹಾರಾಜಶ್ರೀ ಪೋಸ್ಟ್ ಸೂಪರಿಂಟೆಂಡೆಂಟರು ಇದಕ್ಕೆ ನಿಗಾ ಕೊಟ್ಟು ಗೌರಿಬಿದನೂರಿಗೆ ಹೋಗದೆ ಇಲ್ಲಿಗೆ ಬರುವಂತೆ ಮಾಡಿದರೆ ಜನಗಳಿಗೆ ತುಂಬಾ ಸಹಾಯವಾಗುತ್ತದೆ ಇದನ್ನು ಕ್ಷಿಪ್ರದಲ್ಲಿಯೇ ಅನುಕೂಲ ಪಡಿಸುತ್ತಾರೆಂದು ನಂಬಿರುತ್ತೇನೆ.

ಮತ್ತು ಇಲ್ಲಿ ಚಿಕ್ಕಬಳ್ಳಾಪುರದ ಬಟ್ಲೂಕ ರಾಮಯ್ಯಶೆಟ್ಟವರು ಧರ್ಮಛತ್ರ ಒಂದನ್ನು ಕಟ್ಟಿಸಿರುತ್ತಾರೆ ಇದರಿಂದ ಜನ ತುಂಬಾ ಅನುಕೂಲವಾಗಿರುತ್ತದೆ ಆದರೆ ಇಲ್ಲಿ ಇಳಿದಂಥಾ ಪರಊರ ಜನರನ್ನು ದೊಡ್ಡ ಕುರುಗೋಡು ಪಟೇಲ್ ಶಾನುಭೋಗರೂ ಪೋಲೀಸ್ ನೌಕರರೂ ಆಗಾಗ್ಗೆ ಬಂದು—ಸರ್ಕಾರದ ಉದ್ಯೋಗಸ್ಥರು ಬರುತ್ತಾರೆ ಕೊಠಡಿಗಳು ಖಾಲಿ ಮಾಡಿಕೊಡಬೇಕೆಂದು ತುಂಬಾ ಹಿಂಸೆ ಪಡಿಸುತ್ತಾರೆ ಆದರಲ್ಲಿ ಇಳಿದಿರುವ ಜನಗಳು ಬಿಟ್ಟು ಹೋಗುವದಕ್ಕೆ ಬೇರೆ ಎಲ್ಲಿಯೂ ಜಾಗ ದೊರಕುವದಿಲ್ಲ ಇದರಿಂದ ಜನ ತುಂಬಾ ಹಿಂಸೆಯಾಗಿರುತ್ತದೆ. ಈ ಸಂಗತಿಯನ್ನು ಸೊತ್ತುದಾರರಿಗೆ ತಿಳಿಸಿದಲ್ಲಿ ಅವರು ಮನಸ್ಸಿಗೆ ತಂದುಕೊಳ್ಳುವದಿಲ್ಲ. ಆದ್ದರಿಂದ ಮೇಲಿನ ಅಧಿಕಾರಿಗಳಾದರೂ ನಿಗಾಕೊಟ್ಟು, ಜನರಿಗೆ ತೊಂದರೆ ಪಡದಂತೆ ಏರ್ಪಾಟು ಮಾಡಿದರೆ ತುಂಬಾ ಕ್ಷೇಮವಾಗಿರುತ್ತದೆ

ಭಕ್ತಾದಿಗಳಲ್ಲಿ ಒಬ್ಬ

ಮೇಲುಕೋಟೆ ಪ್ರಯಾಣಿಕರಿಗೆ ಎಚ್ಚರಿಕೆ.

ಅಯ್ಯಾ,

ಮೇಲುಕೋಟೆಯಿಂದ ಫ್ರೆಂಚ್‌ರಾಕ್ಸ್ ರೈಲ್‌ಸ್ಟೇಷನ್‌ಗೂ ಸ್ಟೇಷನ್ನಿಂದ ಮೇಲುಕೋಟೆಗೂ ಪ್ರಯಾಣಿಕರಿಗೆ ಸಕಲ ವಿಧದಲ್ಲಿಯೂ ಅನುಕೂಲವಾದ ಒಂದು ಟ್ರಾನ್ಸಿಟ್ (ಟಪಾಲ್ ಗಾಡಿ) ಏರ್ಪಡಿಸಲ್ಪಟ್ಟಿತು ಅದು ಕಳೆದ ೧೩ ವರುಷಗಳಿಂದಲೂ ನಡೆಯುತ್ತಿದೆ. ಆದರೆ ವಿವೇಕಶಾಲಿಗಳಾದ ಪಾಶ್ಚಾತ್ಯರು ನಮ್ಮ ವಿಷಯದಲ್ಲಿ ಅಭಿಪ್ರಾಯಪಡುವಂತೆಯೂ, "ದರಿದ್ರಕ್ಕೆ ಕೂಡೆ ಹುಟ್ಟಿತು" ಎಂಬಂತೆಯೂ ಈಗ ಒಂದಕ್ಕೆ ಮೂರು ಟಪಾಲ್ ಗಾಡಿಯಾಯಿತು ಇವುಗಳಲ್ಲಿ ಪ್ರಯಾಣಿಕರಿಗೆ ಸಂಭವಿಸುವ ತೊಂದರೆಗಳನ್ನು ಬರೆಯಲು ಸ್ಥಳ ಸಂಕೋಚದಿಂದ ಸ್ವಲ್ಪ ಮಟ್ಟಿಗೆ ವಿಶದಪಡಿಸುತ್ತೇನೆ. ನಾನು ಕಳೆದ ನವಂಬರ್ ೨೮ನೇ ತಾ॥ ಮೇಲುಕೋಟೆಗೆ ದೇವರ ಸೇವೆಗಾಗಿ ಫ್ರೆಂಚ್‌ರಾಕ್ಸ್ ರೈಲ್ವೆಸ್ಟೇಷನ್ನಲ್ಲಿ ಮೆಯಿಲ್ ಟ್ರೈನಿನಲ್ಲಿ ಬಂದು ಇಳಿದೆನು. ನಾನು ಗಾಡಿಯಿಂದ ಕೆಳಕ್ಕೆ ಇಳಿಯುವದಕ್ಕಿಂತ ಮುಂಚೆ ನೂತನ ಟ್ರಾನ್ಸಿಟ್ ಗುಮಾಸ್ತೆಯು ಟಿಕೆಟ್ ಕೊಟ್ಟು ಗಾಡಿಯ ಬಳಿಗೆ ಕರೆದುಕೊಂಡು ಹೋದನು ಗಾಡಿಯ ಎತ್ತುಗಳು ಬಲರಾಮಗೋವಾಗಿದ್ದವು. ಅನಂತರ ಗಾಡಿಯಲ್ಲಿ ಕೂತುಕೊಂಡೆನು ೯ ಮೈಲಿ ದೂರ ಬರುವಷ್ಟರಲ್ಲಿ ಸಾಯಂಕಾಲವಾಯಿತು. ಅಲ್ಲಿಂದ ಮುಂದೆ ಎತ್ತುಗಳು ಗಾಡಿಯನ್ನು ಎಳೆಯುವುದಕ್ಕೆ ಬದಲಾಗಿ, ಅವುಗಳನ್ನು ನಾನು ಎಳೆಯಬೇಕಾಯಿತು ಮೇಲುಕೋಟೆಗೆ ರಾತ್ರಿ ೧೧॥ ಘಂಟೆಗೆ ಬಂದು ಸೇರಿದೆನು ದಾರಿಯಲ್ಲಿ ದೇವರನ್ನು ಧ್ಯಾನಿಸುವ ಹೊತ್ತು ಬಂತು ಆದ್ದರಿಂದ ಪ್ರಯಾಣಿಕರು ಈ ತೊಂದರೆಯನ್ನು ಅನುಭವಿಸುವದಕ್ಕಿಂತ ಬೇರೆ ಟ್ರಾನ್ಸಿಟ್ ಅಂದರೆ, ಕಳೆದ ೧೩ ವರ್ಷಗಳಿಂದಲೂ ನಡೆಯುತ್ತಿರುವ ಟ್ರಾನ್ಸಿಟ್ಟಿನಲ್ಲಿ ಪ್ರಯಾಣಮಾಡಲಿ. ಈ ಟ್ರಾನ್ಸಿಟ್ಟಿಗೆ ೪ ಜೊತೆ ಎತ್ತುಗಳಿವೆ. ೪ ಮೈಲಿಗೊಂದಾವರ್ತಿ ಬದಲಾಯಿಸಲ್ಪಡುತ್ತವೆ ಗಾಡಿಯು ವೇಗವಾಗಿ ಪ್ರಯಾಣಿಕರಿಗೆ ತುಂಬಾ ಅನುಕೂಲವಾಗಿ ಹೋಗುತ್ತೆ. ಇನ್ನು ಮೇಲೆ ಮೇಲುಕೋಟೆಗೆ ಬರತಕ್ಕ ಪ್ರಯಾಣಿಕರೆಲ್ಲರೂ ಮೋಸದಿಂದ ರೈಲ್ ಇಳಿಯುತ್ತಲೇ ಸ್ಟೇಷನ್ ಬಳಿಗೆ ಟಿಕೆಟ್ ತೆಗೆದುಕೊಳ್ಳಿ ಎಂದು ಹಿಂಸಿಸುವವರ ಮಾತಿಗೆ ಮರುಳಾಗದೆ ಸ್ಟೇಷನ್ನಿಂದ ಹೊರಕ್ಕೆ ಬಂದು ಸಮರ್ಪಕವಾದ ಏರ್ಪಾಡುಗಳನ್ನು ಮಾಡುವ ಮತ್ತು ಮೇಲುಕೋಟೆಯನ್ನು ೫॥ ಘಂಟೆಗೆ ಸೇರುವ ಶ್ರೀ ಯದುಗಿರಿ ರಮಾವಿಲಾಸ ಟ್ರಾನ್ಸಿಟ್ನಲ್ಲಿ ಪ್ರಯಾಣಮಾಡಲಿ. ನಾನು ಪಟ್ಟ ಕಷ್ಟಗಳನ್ನು ಏನೆಂದು ಹೇಳಲಿ! ಇನ್ನು ಮೇಲೆಯಾದರೂ ನನ್ನ ಸಹೋದರರಾದ ಇತರ ಪ್ರಯಾಣಿಕರು ಜಾಗರೂಕರಾಗಿರುವರೆಂದು ನಂಬಿದೇನೆ.

ಒಬ್ಬ ಪ್ರಯಾಣಿಕ.

ಕೋಲಾರದ ಪದ್ಮಾವತಿ ಬಾಯಮ್ಮನವರೂ ಸ್ತ್ರೀ ವಿದ್ಯಾಭ್ಯಾಸವೂ.

...ನ್ನ ನವಂಬರ್ ೨೦ ನೆ ತಾ. ಪತ್ರಿಕೆಯಲ್ಲಿ ಕೋಲಾರದ ...ವತಿ ಬಾಯಮ್ಮನೆಂಬುವರು ಬರೆದಿರುವ ಲೇಖನವನ್ನು ನೋಡಿ ... ಸಹೋದರಿಯರಲ್ಲಿ ಇವರೂ ಒಬ್ಬರು ಪತ್ರಿಕೆಗೆ ಬಾತ್ಮಿ ಬರೆ...ವಷ್ಟು ವಿದ್ಯಾವತಿಯರಾದರಲ್ಲಾ ಎಂಬುವದರಲ್ಲಿ ಬಹು ಸಂತೋಷ...ಯಿತು. ಇವರ ಲೇಖನದಲ್ಲಿ ಕೆಲವು ಚರ್ಚನೀಯಾಂಶಗಳಿದ್ದರೂ ...ಗಳನ್ನು ತೆಗೆದುಕೊಳ್ಳದೆ ಇರುವುದೇ ಯುಕ್ತವಾದುದೆಂದು ಬಿಟ್ಟ...ನೆ. ಆದರೆ ವಿದ್ಯಾ ವಿಷಯಕವಾಗಿಯೂ ಚರ್ಚಿಸದೇ ಇರುವು...ಧರ್ಮವಾದುದಲ್ಲವೆಂದು ತಿಳಿದು, ಆ ಒಂದು ಅಂಶವನ್ನು ಮಾತ್ರ ...ದುಕೊಂಡಿದೇನೆ

...ಅಸು ವಿದ್ಯದ ವಿಷಯವನ್ನು ಕುರಿತು ಹೇಳುವಾಗ್ಗೆ " ವಿದ್ಯಾ...ಯುದಾಗುವದಕ್ಕಿಂತಲೂ ವಿದ್ಯಾ ವಿಹೀನೆಯರಾಗಿದ್ದರೆ ಅನೇಕ ...ಕ್ಕೆ ಗುರಿಯಾಗದೇ ಇರುವೆವು ನಾವು ಕಲಿತ ವಿದ್ಯೆಯನ್ನ... ರೀತಿಯಲ್ಲಿ ಉಪಯೋಗಿಸುವುದಿಲ್ಲ " ಎಂಬ ಅಭಿಪ್ರಾಯ...ವಂತೆ ಬರೆದಿರುವರು ಇದನ್ನು ನಾನು ಖಂಡಿತವಾಗಿಯೂ ...ಮೋದಿಸುವದಿಲ್ಲ.

ವಿದ್ಯೆಯು ಬೆಂಕಿಗೆ ಸಮಾನವಾದದ್ದು ಅಂಥಾ ಬೆಂಕಿಯನ್ನೇ ... ವಿದ್ಯೆಯನ್ನೇ ನೀತಿ ಸದುಪಯೋಗಕ್ಕಾದರೂ ದುರುಪಯೋಗ...ದರೂ ವಿನಿಯೋಗಿಸಬಹುದು ವಿದ್ಯಾರ್ಥಿನಿಯರನ್ನು ಸದ್ಧರ್ಮ...ರ್ಗಕಿಯರನ್ನಾಗಿ ಮಾಡುವುದಕ್ಕೆ ಲೋಕ ವಿಖ್ಯಾತರಾದ ಉಪಾ...ರು, ಮಾತಾಪಿತೃಗಳು, ಸಹೋದರರೇ ಮೊದಲಾದವರು ದೀಕ್ಷಿ...ಗಿರದೇ ಇರುವರು.

ಪ್ರಪಂಚದಲ್ಲಿ ಎಲ್ಲಿ ನೋಡಿದಾಗ್ಯೂ ಇಂಥಾ ವಿದ್ಯೆಯನ್ನು ...ಪಯೋಗ ಪಡಿಸುವವರು ಅತ್ಯಂತ ವಿರಳವಾಗಿಯೇ ಕಾಣುವರು ...ಇಷ್ಟ ಇಂಥಾ ಲೋಪಗಳಿದ್ದರೆ ಶೋಧಿಸಿಕೊಟ್ಟಲ್ಲಿ ವಿದ್ಯಾ...ಬಲದಿಂದ ನಿರ್ದಿಷ್ಟವಾಗುವ ಮಾರ್ಗವನ್ನು ಸುವ್ಯಗ್ರವಾಗಿ ...ಸಾಧಿಸಿಕೊಳ್ಳುತಕ್ಕ ಶಕ್ತಿಯುಳ್ಳವರಾಗುವರು ಆದರೆ ವಿದ್ಯಾ...ನಯರಾಗಿಯೂ, ಮಹಾ ಹಂತೆಯರಾಗಿಯೂ ಇರುವ ಸ್ತ್ರೀಯರು ...ದುಷ್ಪ್ರವರ್ತಕಿಯರಾಗಿದ್ದರೆ ಅಂಥವರನ್ನು ಸನ್ಮಾರ್ಗಾವಲಂಬ...ಯರನ್ನಾಗಿ ಮಾಡುವದು ಆ ಭಗವಂತನಿಗಾದರೂ ಸಾಧ್ಯವೇ? ...ಗೂ ಅಸಾಧ್ಯ

ವಿದ್ಯಾ ಶಕ್ತಿಯಿಲ್ಲದ ವಿನಃ ಯಾವ ತಾರತಮ್ಯ ಜ್ಞಾನವೂ ...ವುದಿಲ್ಲ ವಿವೇಕವನ್ನುಂಟುಮಾಡುವುದು ವಿವೇಕವು ...ಯಾದಿ ಸದ್ಗುಣಗಳನ್ನು ಪ್ರದಾನಿಸುವದು ವಿನಯಾದಿಗುಣಗಳು ...ಸಾಧನೆಗಳಿಗೆ ಮುಖ್ಯ ಆಧಾರಭೂತಗಳಾಗುವವು ಆದುದರಿಂ...ವು ಎಂಬುವ ಮಹಿಮಾರಾಶಿಯನ್ನು ಸಮಸ್ತ ಸಹೋದರಿಯರೂ ...ಐಹಿಕಾಮುಷ್ಮಿಕ ಸುಖಪ್ರದಗಳನ್ನು ಸಂಪೂರ್ಣವಾಗಿಯೂ ...ಪಡಿಸಲೆಂದು ಪ್ರಾರ್ಥಿಸುತ್ತೇನೆ

ವಿದ್ಯಾಭಿಮಾನಿ.

ತಾಲ್ಲೋಕು ವರ್ತಮಾನಗಳು

ಚಿತ್ರದುರ್ಗ.—ಪದಾರ್ಥಗಳು ಈಗ ಸ್ವಲ್ಪ ಇಳಿತರವಾಗಿವೆ. ...೬ ಸೇರಿನಿಂದ ೯ ಸೇರಿನವರಿಗೂ ಮಾರುತ್ತೆ ರಾಗಿ ೧೮–೨೦ ...ದೋಳ ೨೦ ಸೇರು ಹೀಗೆ ಇವೆ. ಆದರೂ ಈಗಲೂ ಬಡ...ರು ಕಾಯಿಲೆಯಾಗಿದ್ದು ಕೂಲಿನಾಲಿ ಇಲ್ಲದೆ ತೊಂದರೆಪಡುತ್ತಾರೆ.—ಕಳೆದ ವಾರ ದಾವಣಗೆರೆ ಮಾರ್ಗವಾಗಿ ಇಂಗ್ಲಿಷ್ ಸಿಪಾ...ಗಳ ಸೈನ್ಯ ಒಂದು ಇಲ್ಲಿಗೆ ಬಂದು, ಸಿಡುಬು ಬ್ಯರೋಪದ್ರಗಳು ...ಇಲ್ಲಿ ಹೆಚ್ಚಾಗಿರುವದರಿಂದ ಇಲ್ಲಿ ನಿಲ್ಲದೆ ನಾಲ್ಕು ೪–೬ ಮೈಲಿ ...ದೂರ ಒಂದು ದಿನ ತಂಗಿದ್ದು ಹಿರಿಯೂರು ಮಾರ್ಗವಾಗಿ ಮುಂ...ದೆಳೆತು. ಇದು ದಕ್ಷಿಣ ಆಫ್ರಿಕದಿಂದ ಈಗಲೇ ಈ ದೇಶಕ್ಕೆ ಬಂದ ...ನ್ಯವೆಂದು ಅಂದುಕೊಳ್ಳುತ್ತಾರೆ —ಈಗ ೨ ತಿಂಗಳಿಗೆ ಮುಂಚೆ ...ಮಧ್ಯೆ ಹಂಪಿನ ದರೋಡೆಮಾಡಿದ ಕಳ್ಳರು ಸಿಕ್ಕಿಬಿದ್ದಿರುವದನ್ನು ...ಕುರಿತಾಗಿ ಪೋಲೀಸು ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ

ದೊಡ್ಡ ಬಳ್ಳಾಪುರ.—ಕಳೆದ ವಾರ ಸ್ಕೂಲ್ ಡೆಪ್ಟಿ ಇನ್ಸ್ಪೆಕ್ಟ...ರ್ ಮ॥ ವೀರಭದ್ರಯ್ಯನವರು ಇಲ್ಲಿನ ಸ್ಕೂಲುಗಳನ್ನು ಪರೀಕ್ಷೆ ಮಾ...ಡಿ. ತಾ॥ ೧೫ ರಲ್ಲಿ ಸ್ಕೂಲುಗಳ ಇನ್ಸ್ಪೆಕ್ಟರ್ ಜನರಲ್ ಮ॥ ...ಟ್ ಸಾಹೇಬರು ಕೆಲವು ಸ್ಕೂಲುಗಳನ್ನು ನೋಡಿದರು. ಇಲ್ಲಿ ...ಕರಿ ಪರವಾಗಿ ಪರೀಕ್ಷಾರ್ಥವಾಗಿ ಹೊಲವನ್ನೂ ತೋಟವನ್ನೂ ...ಯಾ ಮಾಡಿಸಿ, ಜನರಿಗೆ ಕಲಿಸಬೇಕೆಂದು ಉದ್ದೇಶಪಟ್ಟಿದ್ದಾರೆ ...ಕ್ಕೆ ಜಮೀನು ನೋಡುವದಕ್ಕಾಗಿ ಮ॥ ವಿಂಟರ್ ಸಾಹೇಬರು ...ಬಿದ್ದರಂತೆ ಇದೇ ದಿನ ಬೆಂಗಳೂರಿಗೆ ಹೋದರು —ಬರುವ ...ತಿಂಗಳಿನಿಂದ ಇಲ್ಲಿನ ಮುನ್ಸೀಫ್ ಕೋರ್ಟನ್ನು ತೆಗೆಯು...ಪುದು ವರ್ತಮಾನವಿದೆ ಈ ಕೋರ್ಟು ವಜಾ ಆಗುವದೆಂಬ ...ದು ಎಲ್ಲಾ ಜನರಿಗೆ ಬಹು ವ್ಯಸನವನ್ನುಂಟುಮಾಡುವದು.

ಯಡತೊರೆ.—ಇದೇ ೧೬ನೇ ತಾ. ರಾತ್ರಿ ಸುಮಾರು ೮॥ ಘಂ...ಟೆಯಲ್ಲಿ ರೆವಿನ್ಯೂ ಗುಮಾಸ್ತೆ ರಾಮಸ್ವಾಮಯ್ಯನವರ ಮನೆ ...ಹೊಕ್ಕಿದ್ದ ಒಬ್ಬ ಕಳ್ಳನು ಸಿಕ್ಕಿಬಿದ್ದು ಈಗ ಪೊಲೀಸ್ ವಿಚಾರಣೆ...ಯಲ್ಲಿದಾನೆ. ಇದೇ ತಾಲ್ಲೋಕು ಮಾಧುವನಹಳ್ಳಿ ಕೊಪ್ಪಲಿನಲ್ಲಿರುವ ...ಗೌಡನ ಮನೆಗೆ ಇದೇ ೧೫ನೇ ಶನಿವಾರ ರಾತ್ರಿ ಸುಮಾರು ೮ ...ಯಲ್ಲಿ ನುಗ್ಗಿ ೯ ಕುರಿಗಳನ್ನು ಹೊತ್ತುಕೊಂಡು ಹೋದರು ...ಗೌಡನ ದುಃಖವನ್ನು ವರ್ಣಿಸಲಸಾಧ್ಯ. ಇದನ್ನು ಅಲ್ಲಿನ ಪಟೇ...ಲ ಪತ್ತೆಮಾಡುವರೆಂದು ನಂಬಿದೇನೆ.—ಇಲ್ಲಿನ ಛತ್ರದಿಂದ ಅನ್ನವ...ಗತಿಕರೂ ಲವಿಲ್ಲದ ಕೆಲವು ವಿತಂತುಗಳಿಗೆ ತಿಂಗಳಿಗೆ ೩೦ ಸೇರು ...ಕೊಡುತ್ತಿದ್ದರೆ ಅವರ್ಯಜನಿ ಕಾಲಕ್ಷೇಪ ಮಾಡುವ ಬಡವರ ವಿಷ...ದಲ್ಲಿಯೂ ಆ ಛತ್ರದ ಧರ್ಮದರ್ಶಿಗಳು ಮೇಲ್ಪಟ್ಟ ಅಧಿಕಾರಿಗ...ಳು ಯೋಚಿಸಿ ಮಾಡುವರೆಂದು ನಂಬಿದೇನೆ —ಮ॥ ವೈ ಕೆ. ಸುಬ್ರ...ಹ್ಮಣ್ಯನವರು ಮುಂದಿನ ಜನವರಿ ತಿಂಗಳಿನಿಂದ ಒಂದು ವಾಚಕ ಶಾಲೆಯನ್ನು ಏರ್ಪಡಿಸುವರೆಂದು ಕೇಳಿ ಸಂತೋಷಿಸುತ್ತೇನೆ.—ಈಗ ೩–೪ ದಿನಗಳಲ್ಲಿ ಒಬ್ಬ ಅಗಸನು ಒಂದು ಹಾವಿನಿಂದ ಕಚ್ಚಲ್ಪಟ್ಟು ಕೆಲವು ಚಿಕಿತ್ಸೆ ಮಾಡಿದ್ದರ ಮೇಲೆ ಬದುಕಿಕೊಂಡನು.— ಈ ಊರು ನದಿಯಲ್ಲಿ ಸುಮಾರು ೫–೬ ಅಡಿ ಉದ್ದವಾದ ಒಂದು ಮೊಸಳೆ ಇದೆ. ಇದನ್ನು ಗ್ರಾಮಸ್ಥರು ಬೇಗ ನಾಶಮಾಡುವರೆಂದು ನಂಬಿದೇನೆ —ಈಗ ಸರ ಕತ್ತೆಗಳ ಜಮಾಂತ್ರು ಬಹಳವಾಗಿರುವುದರಿಂದ ಬೀದಿಗಳಲ್ಲಿ ತಿರುಗುವ ಜನರಿಗೆ ತುಂಬಾ ತೊಂದರೆಯಾಗಿದೆ. ಮಾಲೀಕರು ಅವುಗಳನ್ನು ಪೋಲೀ ಬಿಡದೆ ಮನೆಗಳಲ್ಲಿ ಕಟ್ಟುವುದು ಒಳ್ಳೇದು.

ಹೊಸದುರ್ಗ.—ಇಲ್ಲಿನ ಕಳೆದ ಸಂತೆಯಲ್ಲಿ ರಾಗಿ ೧೯ ಸೇರು, ಅಕ್ಕಿ ೯ ಸೇರು ಮಾರಿತು. ಸಂತೆಯಲ್ಲಿ ಮುನಸಿಪಲ್ ಮುತ್ಸದ್ದಿ, ಕೆಲವು ಇತರ ಸಮ್ಮತು ಶೇಕದಾರರು ಮತ್ತು ಕೆಲವು ಪೊಲೀಸಿನವರೂ ಇತರ ಅನೇಕರೂ ಪಸಿಗೇ ಎತ್ತುತ್ತಿರುವದರಿಂದ ಬಡಜನರ ಗೋಳು ಹೇಳತೀರದು ಈ ವಿಷಯ ತಾಲ್ಲೂಕು ಆಫೀಸರರು ಗಮನಕ್ಕೆ ತರಬೇಕಾಗಿದೆ —ಅಮಲ್ದಾರರು ತಾಲ್ಲೂಕಾ ಮಳೆ ಜಮಾಬಂದಿಗೆ ಹೊರಟಿರುತ್ತಾರೆ. ಆಲ್ಲೂಕಿನ ಕೆಲವು ಹಳ್ಳೀ ಶೇಕದಾರರು ಬಡಜನರಿಗೆ ಕೊಡುವ ಕಷ್ಟಗಳು ತಪ್ಪಲಿಲ್ಲ.—ಬೂದಿಹಾಳನಲ್ಲಿ ಹೊಸದಾಗಿ ಕಟ್ಟುತ್ತಿದ್ದ ಪೇಟೆಯ ಸ್ಕೂಲ್ ಕಟ್ಟಡವು ಕಟ್ಟಿ ಮುಗಿಯಿತು —ಗನ್ನೇರಂಗಸ್ವಾಮಿ ಗುಡ್ಡಕ್ಕೆ ಬಂದಿದ್ದ ಅಮಲ್ದಾರರು ದೇವಸ್ಥಾನದ ಒಡವೆಗಳನ್ನು ನೋಡುವಲ್ಲಿ ಕೊಂಚ ಕಲಾಲು ವ್ಯತ್ಯಾಸ ಕಂಡುಬಂದದ್ದರಿಂದ ಒಡವೆಗಳನ್ನೆಲ್ಲಾ ಕಚೇರಿಗೆ ತೆಗೆದುಕೊಂಡು ಹೋದರೆಂದು ವಾಹಿನಿ ಇದೆ.—ಬೆಲಗೂರು ಪ್ರಾಂತ್ಯ ಕಳೆದ ತಾ. ೮ನೇ ಮಧ್ಯಾಹ್ನ ಒಳ್ಳೇ ಜಡಮಳೆ ಆಯಿತು ಈ ಗ್ರಾಮದ ತೆಂಗಿನ ತೋಟಗಳಲ್ಲಿ ಆಗಾಗ್ಗೆ ಕಾಯಿ ಕಳುವು ನಡೆಯುತ್ತಲೇ ಇರುವದು. ಇದಕ್ಕೆ ಪೊಲೀಸಿನವರ ನಿಗಾ ಬೇಕು —ಈ ಗ್ರಾಮಕ್ಕೆ ೧೯೦೫ನೆ ಇಸ್ವಿಯಲ್ಲಿ ಸರ್ಕಾರದವರು ತಯಾರು ಮಾಡಿಸಿದ ಪೇಟೆ ರಸ್ತೆಗೆ ಆಚೆ, ಈಚೆ ಎರಡು ಕಾಲ್ವೆಗಳು ಪಿಸ ಪಾಳೀ ಜೆಸೆಯಿಂದ ಮಧ್ಯಭಾಗದಲ್ಲಿ ವಂಕಾದಾಗಿರುವ ಮೋಣಕಾಲುದ್ದ ಕಾಲ್ವೆಯಲ್ಲಿ ರಾತ್ರಿ ವೇಳೆ ಮುದುಕರು, ಸ್ತ್ರೀ ಮಕ್ಕಳು ಬೀಳುವದಲ್ಲದೆ ಹಗಲು ವೇಳೆ ಗಾಡಿಗಳು ತಿರುಗುವದಕ್ಕೆ ತೊಂದರೆ ಆಗಿದೆ. ಇಲ್ಲಿಗೆ ಮುನಸಿಪಾಲಿಟಿಯು ಎಂದಿಗೆ ಬರುವದೋ ಎಂಬ ನಿರೀಕ್ಷಣೆಯಲ್ಲಿದೆ. ಇಲ್ಲಿನ ಕಳೆದ ಭಾನುವಾರದ ಸಂತೆಯಲ್ಲಿ ರಾಗಿ ೧೬ ಸೇರು, ಅಕ್ಕಿ ೮ ಸೇರು ಮಾರಿತು. ಕೊಯ್ಲು ಕಾಲವಾದ್ದರಿಂದ ಸಂತೆ ಚನ್ನಾಗಿ ಸೇರಲಿಲ್ಲ.—ಈ ಗ್ರಾಮದ ಪೋಬಳಿ ಸ್ಕೂಲಿನಲ್ಲಿ ೩ ನೇ ತರಗತಿಗೆ ಹೆಚ್ಚು ಇಲ್ಲದಿರುವದರಿಂದ ಕೋಟೆ ಭೀಮಪ್ಪನವರ ಮನೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಪರಸ್ಥಳಕ್ಕೆ ಹೋಗಿ ವಿದ್ಯೆ ಕಲಿತು ಈ ವರ್ಷ ಲೋವರ್ ಸೆಕೆಂಡ್ರೀ ಪರೀಕ್ಷೆಗೆ ಹೋಗಿಬಂದರು. ಈ ಊರು ಸ್ಕೂಲಿನಲ್ಲಿ ಲೋವರ್ ಸೆಕೆಂಡ್ರೀ ಕ್ಲಾಸಿನವರಿಗೂ ಇಟ್ಟರೆ ಪರೀಕ್ಷೆಗೆ ಹೋಗುವ ಅನೇಕ ಉಮೇದುವಾರರಿಗೆ ಉಪಕಾರವಾದೀತು. ಈ ಗ್ರಾಮದ ಅನೇಕ ದೊಡ್ಡಮನುಷ್ಯರು ತಮ್ಮ ಮಕ್ಕಳನ್ನು ಸ್ಕೂಲಿಗೆ ಬದಲು ವ್ಯಾಪಾರಾದಿಗಳಿಗೂ, ತೋಟ ಕಾಯುವದಕ್ಕೂ ನೇಮಿಸುವರು. ವಿದ್ಯದ ವಿಷಯವಾಗಿ ವಿದ್ಯೆಯಿಂದುಂಟಾಗುವ ಪ್ರಯೋಜನವನ್ನು ಸೂಚಿಸಿ ಪ್ರೋತ್ಸಾಹಗೊಳಿಸತಕ್ಕವರು ಇಲ್ಲದಿರುವದೇ ಕಾರಣ.—ಸಿಡುಬಿನ ಹಾವಳಿಯು ಇನ್ನೂ ತಪ್ಪಲಿಲ್ಲ. ಈಗ್ಗೆ ೭೦–೮೦ ಮಕ್ಕಳಿಗೆ ಸಿಡುಬು ಎದ್ದಿದ್ದಂತಾಯಿತು. ಸೇಕಡಾ ೧೦ ಮಕ್ಕಳಂತೆ ಮೃತರಾದರು ಈ ಗ್ರಾಮದ ಕುಳವಾಡೀ ಹಟ್ಟಿಯ ದುರ್ಮಾನಸನೆ ತಪ್ಪಲಿಲ್ಲ.

ತೀರ್ಥಹಳ್ಳಿ.—ಇಲ್ಲಿ ಫಸಲ್ ಕಟಾವಿನ ಹಂಗಾಮಿ ಕಾಲವಾಗಿದೆ ಈ ಕಾಲದಲ್ಲಿಯೇ ದೊಡ್ಡ ಗಟ್ಟ ಮಳೆ ಬರುವಂತೆ ಇದೆ ರೈತರು ಭಯಪಟ್ಟು ಕಟಾವಿನ ಕೆಲಸವನ್ನು ಅಷ್ಟು ಕೆಚ್ಚಾಗಿ ನಡಿಸುತ್ತಾ ಇಲ್ಲ. ಇಲ್ಲಿ ಎಲ್ಲೆಲ್ಲಿಯೂ ಮೈಲೆ ಉಪದ್ರವು ನಡದುಕೊಂಡಿರುತ್ತೆ. ದೇವರ ದಯದಿಂದ ಇದರಿಂದ ಯಾರೂ ಖಾಲಿ ಆಗಲಿಲ್ಲ. ಆದರೂ ಮುಂಜಾಗ್ರತೆಯಲ್ಲಿ ಸಿಡಬು ಹಾಕಿಸಿಕೊಳ್ಳುವದು ಒಳ್ಳೇದು —ಟವರ್ನಲ್ಲಿ ಮ॥ ಅಂಗಡಿ ಎಡೆಹಳ್ಳಿ ಶೇಷಪ್ಪನವರ ಮಹಡಿ ಮೇಲೆ ಬ್ರಹ್ಮಸಮಾಜ ಮತ್ತು ಸ್ವದೇಶಿ ಸಂಬಂಧವಾದ ಉಪನ್ಯಾಸಗಳು ಈ ತಿಂಗಳು ತಾ ೧೦ನೇ ಸಂಧ್ಯಾಕಾಲ ೬ ಘಂಟೆ ಸಮಯದಲ್ಲಿ ಪ್ರಾರಂಭವಾಗಿ ೯ ಘಂಟೆಗೆ ಮುಕ್ತಾಯವಾಯಿತು. ಈ ಸಭೆಗೆ ಮೆ॥ ಉಡ್ಪಿ ರಾಘವಾಚಾರ್ಯರೇ ಮೊದಲಾದವರು ಬಂದಿದ್ದರು. ಸಭೆಯವರ ಅಪೇಕ್ಷೆಯಂತೆ ಮೆ॥ ಉ. ರಾಘವಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು ಪ್ರಾರಂಭದಲ್ಲಿ ಬ್ರಹ್ಮ ಸಮಾಜದ ಮತತತ್ವ ಉಪನ್ಯಾಸಕರಾದ ಮೆ॥ ಬೆಂಗಳೂರು ಅರಳೇಪೇಟೆ ಯಜಮಾನ ಪಂಡಿತ ಬಸಪ್ಪನವರು ದೇವತಾ ಪ್ರಾರ್ಥನೆಯನ್ನು ಮಾಡಿ, ಹಿಂದೂ ಮತಗಳು ಎಂಬ ವಿಷಯವನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸಮಾಡಿದರು ಅನಂತರ ಇದೇ ಸಮಾಜದವರಾದ ಮೆ॥ ಸುಬ್ಬಣ್ಣನವರು ಬ್ರಹ್ಮ ಧರ್ಮದ ಕೆಲವು ಸೂತ್ರಗಳನ್ನು ವಿವರಿಸಿ ಹೇಳಿದರು. ಅಗ್ರಾಸನಾಧಿಪತಿಗಳು ಮ॥ ಪಂಡಿತ ಬಸಪ್ಪನವರು ಮ॥ ಸುಬ್ಬಣ್ಣನವರು ಉಪನ್ಯಾಸದ ಮೂಲಕ ಪ್ರಾಚೀನಾರ್ಯರ ಮೂಲಕ ಬ್ರಹ್ಮ ಸಮಾಜದ ಅಭಿಪ್ರಾಯವು ಬಹು ಶ್ರೇಷ್ಠವಾದ್ದಾಗಿದೆ ಎಂತಲೂ ಈ ಬೋಧೆಯನ್ನು ಕೇಳಿದ ನಾವುಗಳೆಲ್ಲಾ ತುಂಬಾ ಸಂತೋಷಪಡುತ್ತೇವೆ ಎಂತಲೂ ಈ ಅಭಿಪ್ರಾಯಗಳನ್ನು ಈ ಪ್ರಾಂತ್ಯದ ಎಲ್ಲಾ ಜನಗಳೂ ತಿಳಕೊಳ್ಳುವದಕ್ಕೆ ತಕ್ಕ ಸಹಾಯವನ್ನು ಸಮಾಜದಲ್ಲಿ ಆಗಿಂದಾಗ್ಗೆ ತಪ್ಪದೆ ನಡಿಸಿದರೆ ಶೀಘ್ರದಲ್ಲಿಯೇ ನಮ್ಮ ಜನಗಳಲ್ಲಿರುವ ಭಿನ್ನಾಭಿಪ್ರಾಯಗಳು ಮತ್ತು ಇತರ ಮತಾವಲಂಬನಾಭಿಪ್ರಾಯಗಳು ತೊಲಗಿಹೋಗಿ ವಿವೇಕಜ್ಞಾನವೂ ಸಹೋದರ ಪ್ರೀತಿಯೂ ಐಕಮತ್ಯವೂ ಉಂಟಾಗುವದರಲ್ಲಿ ಸಂಶಯವಿಲ್ಲವೆಂತಲೂ ಇಂಥಾ ಸಹಾಯವನ್ನು ಪರಮೇಶ್ವರನು ಶೀಘ್ರವಾಗಿ ಅನುಗ್ರಹಿಸಲಿ ಎಂತ ಸಹಾ ಹೇಳಿದ್ದಲ್ಲದೆ, ದೇಶೋನ್ನತಿಯ ವಿಷಯದಲ್ಲಿ ದೇಶಾಭಿಮಾನಿಗಳಾದವರು ಸ್ವದೇಶೀಯ ಪದಾರ್ಥಗಳನ್ನು ಕೊಂಡುಕೊಳ್ಳುವದರಿಂದಲೂ, ಉಪಯೋಗಿಸುವದರಿಂದಲೂ ದೇಶಕ್ಕೆ ಉಂಟಾಗುವ ಪ್ರಯೋಜನವನ್ನು ಜನಸಾಮಾನ್ಯಕ್ಕೆ ತಿಳಿಸಿ ಸ್ಪಷ್ಟವಾದ ಮಾರ್ಗ ಪ್ರಯತ್ನ ಮಾಡದ ದೇಶೀಯ ಪದಾರ್ಥ ಆವುದು ರಷ್ಟು ಹೆಚ್ಚು ಈ ಮೂಲಕ ದೇಶೀಯ ಕೈಗಾರಿಕೆ ಸಂಘಗಳು ಅಭಿವೃದ್ಧಿ ಹೊಂದಿ ವಿಶೇಷ ಸಂಪತ್ತೂ ಅನ್ಯೋನ್ಯಭಾವವೂ ಉಂಟಾಗುವದರಲ್ಲಿ ಸಂಶಯವಿಲ್ಲವೆಂತ ಪಗ್ಗೈರ ತಿಳಿಸಿದರು ಸಮಾಜದ ದೇವತಾಪ್ರಾರ್ಥನೆಯಿಂದ ಸಭೆ ಬರಖಾಸ್ತಾಯಿತು. ಇಂಥಾ ವಿಚಾರಗಳು ಆಗಾಗ್ಗೆ ನಡಿಯುವದಕ್ಕೆ ದೇಶಾಭಿಮಾನಿಗಳಾದ ದೊಡ್ಡಮನುಷ್ಯರು ತಮ್ಮಿಂದಾಗುವಷ್ಟು ಸಹಾಯವನ್ನು ಮನಃಪೂರ್ವಕವಾಗಿ ಮಾಡಿದರೆ ಶೀಘ್ರದಲ್ಲಿಯೇ ನಮ್ಮದೇಶವು ಉನ್ನತಸ್ಥಿತಿಗೆ ಬರಲು ಅಡ್ಡಿಯಿಲ್ಲ.

ವಿದೇಶ ವರ್ತಮಾನಗಳು.

ದೂರದರ್ಶಕ ಯಂತ್ರದ ಸಹಾಯವಿಲ್ಲದೆ ಮನುಷ್ಯರ ಕಣ್ಣಿಗೆ ೬,೪೧೦,೮೪೮,೩೫೭ ನಕ್ಷತ್ರಗಳು ಕಾಣುತ್ತವೆಯೆಂದು ಗೋರ್ ಎಂಬೊಬ್ಬ ಖಗೋಳ ಸಿದ್ಧಾಂತಿಯು ಈಚೆಗೆ ಕಂಡು ಹಿಡಿದಿರುತ್ತಾನೆ.

❖❖❖❖

ಜರ್ಮನ್ ಚಕ್ರವರ್ತಿಯವರು ತಮ್ಮ ಕುಮಾರರಲ್ಲಿ ಒಬ್ಬರಾದ ಸಂದನಾರು ಫ್ರೋಪಿಮ ಎಂಬುವರನ್ನು ಪರಿವಾರ ಸಹಿತ ವಿಲಾಯತಿ ರಾಜ್ಯಕ್ಕೆ ಹೋಗಿ ದೊರೆಯವರನ್ನು ಕಂಡು ಬರುವಂತೆ ಆಜ್ಞೆ ಮಾಡಿದ್ದಾರೆ.

❖❖❖❖

ಅಮೇರಿಕಕ್ಕೆ ಹೋಗಿದ್ದ ಲಾರ್ಡ್ ಕರ್ಜನರವರು ಹಿಂತಿರುಗಿ ಇಂಗ್ಲಾಂಡಿನ ಲಿವರ್ಪೂಲ್ ರೇವಿಗೆ ಬಂದು ಇಳಿದರು ಸಮಯ ಸಿಕ್ಕಿದಾಗ ಪಾರ್ಲಿಮೆಂಟಿಗೆ ಮೆಂಬರಾಗಬೇಕೆಂದಿರುವನೆಂದು ಅವರು ತಿಳಿಸಿರುತ್ತಾರೆ.

❖❖❖❖

ವಿಲಾಯತಿಯಲ್ಲಿ ಕಾಲವಾದ ಆವಾ ಮಾಯಿಹಿಲ್ ಎಂಬ ಪ್ರಖ್ಯಾ ಸ್ತ್ರೀಳು ತನ್ನ ಆಸ್ತಿಯಲ್ಲಿ ೩೫ ಲಕ್ಷ ರೂಪಾಯನ್ನು ತನ್ನ ಅಕ್ಕಿಯೇ ಮೊದಲಾದ ಬಂಧು ವರ್ಗದವರಿಗೂ ೫೮॥ ಲಕ್ಷ ರೂಪಾಯನ್ನು ನಾನಾ ಧರ್ಮ ಕಾರ್ಯಗಳಿಗೂ ಹಂಚಿಕೊಟ್ಟಳು.

❖❖❖❖

ಕಪ್ಪುಸಮುದ್ರದ ಹತ್ತಿರ ಇರುವ ರಷ್ಯಾ ರಾಜ್ಯಕ್ಕೆ ಸೇರಿದ ಒಡೆಸ್ಸಾ ಪಟ್ಟಣದಲ್ಲಿ ಒಂದಾನೊಂದು ಬ್ಯಾಂಕಿಗೆ ಕೆಲವು ಜನರು ಆಯುಧಪಾಣಿಗಳಾಗಿ ನುಗ್ಗಿ ಕಟ್ಟಡವನ್ನು ಕೆಡವಿ ಒಳಗಿದ್ದ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋದರೆಂದು ತಿಳಿದುಬಂದಿದೆ.

❖❖❖❖

ಅನ್ಯೋನ್ಯ ರಾಜ್ಯಗಳ ಪಶ್ಚಿಮ ಭಾಗದಲ್ಲಿರುವ ಕ್ಯಾಲಿಫೋರ್ನಿಯಾ ಡಿಸ್ಟ್ರಿಕ್ಟಿನಲ್ಲಿ ಫ್ರೆಸ್ನೊ ಎಂಬ ಒಂದು ತಾಂಬ್ರದ ಗಣಿಯಲ್ಲಿ ಆ ಲೋಹ ಸಿಕ್ಕುವದು ನಿಂತುಹೋಗಿ ಸುಮಾರು ೯೦ ಲಕ್ಷ ರೂಪಾಯಿ ನಷ್ಟವಾಗಿದೆ ಇದರಿಂದ ಅನೇಕ ಷೇರುದಾರರು ಬಹಳ ಕಷ್ಟಕ್ಕೆ ಗುರಿಯಾಗಿರುವರು.

❖❖❖❖

ರಷ್ಯಾ ರಾಜ್ಯಕ್ಕೆ ಸೇರಿದ ಕ್ರಾನ್ಸ್ಟಾಡ್ ಪಟ್ಟಣದಲ್ಲಿ ಸರ್ಕಾರದವರು ಒಬ್ಬ ಬಸುರು ಹೆಂಗಸನ್ನು ಕತ್ತರಿಸಿ ಹಾಕಿಸಿದರು. ಆವಳ ಗಂಡನು ಜೈಲಿನಲ್ಲಿ ಈ ಸುದ್ದಿಯನ್ನು ಕೇಳಿ ಹುಚ್ಚು ಹಿಡಿದವನಂತಾಗಿರುತ್ತಾನೆ. ಈ ಕ್ರೂರತರವಾದ ಕೊಲೆಯು ಆ ರಾಜ್ಯದಲ್ಲೆಲ್ಲಾ ಸರ್ಕಾರದವರ ಮೇಲೆ ಬಹಳ ಅಸಮಾಧಾನವನ್ನುಂಟುಮಾಡಿರುವುದು.

❖❖❖❖

ಯೂರೋಪಿನಲ್ಲಿ ಸಂಚಾರ ಮಾಡುವದಕ್ಕೆ ಹೋಗಿದ್ದ ಕೂಚ್ ಬೀಹಾರ್ ಮಹಾರಾಣಿಯವರು ಬೊಂಬಾಯನ್ನು ಬಂದು ತಲಪಿದರು. ಅವರು ಮಾರ್ಸೇಲ್ಸ್ ಎಂಬ ಪಟ್ಟಣದಿಂದ ಏಡನ್ ಪಟ್ಟಣಕ್ಕೆ ಬರುತ್ತಿದ್ದಾಗ ಅವರ ಕುಮಾರ್ತೆಯ ಕೈಯಲ್ಲಿದ್ದ ಸುಮಾರು ೩,೫೦೦ ರೂಪಾಯಿ ಬಾಳುವ ಒಂದು ಉಂಗುರವು ಎಲ್ಲೋ ಬಿದ್ದುಹೋಯಿತು.

❖❖❖❖

ದಕ್ಷಿಣ ಆಫ್ರಿಕಾ ಯುದ್ಧ ಕಾಲದಲ್ಲಿ ಇಂಗ್ಲಿಷ್ ಗವರ್ನಮೆಂಟಿನವರು ಬೋಅರರ ಸಂಸಾರ ಮಕ್ಕಳನ್ನು ಹಿಡಿದು ಕ್ಯಾಂಪುಗಳಲ್ಲಿ ಇಟ್ಟು ಸಾಕುತ್ತಾ ಬಂದರು. ಅವುಗಳಲ್ಲಿ ಬಹು ಜನ ಬೋಅರ್ ಹೆಂಗಸರೂ ಮಕ್ಕಳೂ ಸತ್ತುಹೋದರು. ಹೀಗೆ ಮೃತಪಟ್ಟವರ ಹೆಸರುಗಳನ್ನು ಶಾಶ್ವತಪಡಿಸುವುದಕ್ಕೆ ಏನಾದರೂ ಮಾಡಬೇಕಾಗಿದೆ ಎಂದು ಮಾಜಿ ಪ್ರೆಸಿಡೆಂಟ್ ಸ್ಟೇಯ್ನಯವರು ಮುಂದಿನ ಫೆಬ್ರವರಿ ತಿಂಗಳಲ್ಲಿ ಬೋಅರರ ಮುಖಂಡರನ್ನು ಸಭೆ ಸೇರಿಸಿ ಗೊತ್ತುಮಾಡುವುದಾಗಿ ತಿಳಿಸಿದ್ದಾರೆ.

❖❖❖❖

ಕಳೆದ ನವಂಬರಿನಲ್ಲಿ ಬಿಸಲಿನ ಏಟಿಗೆ ತಾಳಲಾರದೆ ಶ್ರಮಪಡುತ್ತಿದ್ದ ಅಗಸ್ಟ್ ಬ್ರೋರ್ ಎಂಬುವನನ್ನು ಪೊಲೀಸಿನವರು ಫ್ರಾನ್ಸಿಗೆ ಸೇರಿದ ಮಾರ್ಸೇಲ್ಸ್ ದ್ವೀಪದಲ್ಲಿನ ಒಂದಾನೊಂದು ಆಸ್ಪತ್ರೆಗೆ ತೆಗೆದುಕೊಂಡು ಹೋದರು ಅಲ್ಲಿ ಸ್ವಲ್ಪ ಕಾಲ ಉಪಚರಿಸಲ್ಪಟ್ಟ ಮೇಲೆ ಅವನು ಗುಣಹೊಂದಿದನು. ಈಚೆಗೆ ಅವನು ಸತ್ತು ಹೋಗುವ ಕಾಲದಲ್ಲಿ ತನಗಿದ್ದ ಸುಮಾರು ತೊಂಭತ್ತು ಸಾವಿರ ರೂಪಾಯಿನ ಆಸ್ತಿಯನ್ನು ಆ ಪಟ್ಟಣದ ಆಸ್ಪತ್ರೆಗಳ ಉಪಯೋಗಾರ್ಥವಾಗಿ ಕೊಟ್ಟಿದೇನೆಂದು ಉಯಿಲು ಬರೆದಿಟ್ಟಿರುವನು.

❖❖❖❖

ಚೈನಾ ರಾಜ್ಯಕ್ಕೆ ಮುಖ್ಯ ಪಟ್ಟಣವಾದ ಪೀಕಿಂಗ್ ನಗರದಲ್ಲಿರುವ ರಷ್ಯಾ ರಾಯಭಾರಿಯು ತಿಳಿಸಿರುವದೇನಂದರೆ—ರಷ್ಯಾದವರಿಗೂ ಜಪಾನಿನವರಿಗೂ ಯುದ್ಧವಾದಾಗ ಚೈನಾ ರಾಜ್ಯದವರು ಬಹಳ ನಷ್ಟಹೊಂದಿರುವದು ಸರಿಯಷ್ಟೆ. ಇದಕ್ಕೆ ಬದಲಾಗಿ ಆಮೂರ್ ನದಿಯ ತೀರದಲ್ಲಿದ್ದು ಇದುವರೆಗೂ ರಷ್ಯಾದವರಿಗೆ ಸೇರಿದ್ದ ಚಿನ್ನದ ಗಣಿಗಳನ್ನು ಈಗ ಚೈನಾದವರಿಗೆ ಬಿಟ್ಟುಕೊಟ್ಟಿದೇವೆ ಎಂಬುವರ್ದೇ ಕೆಲವು ವರುಷಗಳ ಕೆಳಗೆ ಆಮೂರ್ ನದಿಯ ದಡದಿಂದ ಓಡಿಸಲ್ಪಟ್ಟ ಚೈನಾ ಜನಗಳು ಇನ್ನು ಮೇಲೆ ಅಲ್ಲಿ ಸೇರುವದಕ್ಕೆ ಮೊದಲುಮಾಡುವರು.

ಅಮೇರಿಕದಲ್ಲಿರುವ ನಯಾಗರಾ ಫಾಲ್ಸ್ ಎಂಬ ಲೋಕೋತ್ತರವಾದ ಜಲಪಾತದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಅಲ್ಲಿಂದ ೮೦ ಮೈಲಿ ದೂರದಲ್ಲಿರುವ ಟೋರಾಂಟೋ ಪಟ್ಟಣಕ್ಕೆ ತಂತಿಗಳ ಮೂಲಕ ಸಾಗಿಸಿಕೊಂಡು ಹೋಗಿದ್ದಾರೆ ಅದರಲ್ಲಿ ೪೦,೦೦೦ ಕುದುರೆ ಬಲದಷ್ಟು ವಿದ್ಯುಚ್ಛಕ್ತಿಯು ದೊರಕುವದೆಂದು ತಿಳಿಯುತ್ತದು.

****

ಕೂಚ್ ಬಿಹಾರ್ ಮಹಾರಾಣಿಯವರೂ ಇಬ್ಬರು ರಾಜ ಕುಮಾರಿಯರೂ ಯುವರಾಜರೂ ಇದುವರೆಗೆ ವಿಲಾಯತಿಯಲ್ಲಿ ದೇಶಾಟನೆ ಮಾಡುತ್ತಿದ್ದು ಕಳೆದ ವಾರ ಅಲ್ಲಿಂದ ಹೊರಟು ಯೂರೋಪ್ಪಿಗೆ ಬಂದಿರುತ್ತಾರೆ. ಅಲ್ಲಿನ ಮುಖ್ಯ ರಾಜ್ಯಗಳನ್ನು ನೋಡಿಕೊಂಡು ವಾಪಸು ಹಿಂದುಸ್ಥಾನವನ್ನು ಕುರಿತು ಪ್ರಯಾಣ ಮಾಡುವರೆಂದು ತಿಳಿಯುತ್ತದು

****

ದಕ್ಷಿಣ ಆಫ್ರಿಕಕ್ಕೆ ಸೇರಿದ ಟ್ರಾನ್ಸ್ವಾಲಿನಲ್ಲಿ ಏನುಸ್ ಮಾಟಬಿ ಎಂಬ ಸ್ಥಳದಿಂದ ಮೂವರು ದಂಗೇಕೋರರನ್ನು ಹಿಡಿದು ಓಡಿಸಬೇಕೆಂದು ಅಲ್ಲಿನ ಮ್ಯಾಜಿಸ್ಟ್ರೇಟರು ಪ್ರಯತ್ನಪಟ್ಟಾಗ ಆ ಗ್ರಾಮದ ಸುಮಾರು ೩೦೦ ಜನರು ಮ್ಯಾಜಿಸ್ಟ್ರೇಟರ ಮೇಲೆ ಬಿದ್ದು ಹೊಡೆಯಲಾರಂಭಿಸಿದರು ಕೂಡಲೇ ಪೋಲೀಸಿನವರು ಹೋಗಿ ಆ ಪೈಕಿ ೨೦೦ ಜನರನ್ನು ಹಿಡಿದು ಲಾಕಪ್ಪಿನಲ್ಲಿ ಹಾಕಿರುತ್ತಾರೆ.

ಪ್ರಕಟನೆಗಳು.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ರೋಗಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುವದು ಉತ್ತಮ.

SCOTT'S EMULSION. 57-40

(ಸ್ಕಾಟ್ಸ್ ಇಮಲ್ಷನ್)

ಘಟ್ಟ ಶರೀರವುಳ್ಳವರಿಗೆ ಪ್ಲೇಗ್, ಮಹಾಮಾರಿರೋಗ, ವಾಂತಿ ಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ.

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿಕೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ.

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌರ್ನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೇಳಿ ತೆಗೆದುಕೊಳ್ಳಿ

ಸನ್ ೧೯೦೭ ನೇ ಇಸವಿಯ

151-2

ಎಂ. ನಂ॥ ಎಫ್ ನಂ॥ ಬಿ ನಂ॥ ಸಿ ನಂ॥ ಹೆಚ್. ನಂ॥ ಡಿ. ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು.

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಖುಷ್‌ಖಾಸ್‌ಗವರ್ತಕರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕಾಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜ್, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ಬಡ್ಡಿ ಲೆಕ್ಕ, ಜಮಾಖರ್ಚಿನಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಅಮೆ ಸೊವರ್ನ್ ಬೈಂಡು, ಚೆನ್ನಾಗಿ ಬಳ್ಳ ನಮೂನೆ ಗಿಲೀಟುಮಾಡಿದೆ

ಎ. ನಂಬರು ಚಿಕ್ಕಸೈಜು ೩ ಆಣೆ ಸಿ. ನಂಬರು ದೊಡ್ಡಸೈಜು ೬ ಆ

ಎಫ್ „ „ ೪ „ ಎಚ್ „ „ ೩ „

ಬಿ „ ಮುಚ್ಚಳವಿದ್ದ ೫ „ ಡಿ. „ ಮುಚ್ಚಳವಿದ್ದ ೮ „

ಪೋಸ್ಟ್ ಛಾರ್ಜ್ ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಜಾರ್ಡನ್ ಪ್ರೆಸ್, ಬೆಂಗಳೂರು ಸಿಟಿ. } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನನ್ನ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. ರೂ. ೧—೦—೦

ವರಷ್ಕಡವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್ ಸೇರಿ .. .. ರೂ. ೧—೦೪—೦

„ „ ೬ „ „ ೦—೧೪—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ನಮ್ಮ ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಿಳಾ ಸಖೀ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149-3

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮದ್ದುಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು.

ಒಗಟೆಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ—೧ ಸಂಚಿಕೆಗೆ ೬ ಕಾಸು

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದ್ರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು —

ಮ್ಯಾನೇಜರ್, ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133 10

ಸೊಗಸಾದ ಡೈರಿಗಳು !! ಉತ್ತಮವಾದ ಡೈರಿಗಳು !!

ಉತ್ಕೃಷ್ಟವಾದ ಡೈರಿಗಳು !!!



೧೯೦೭ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುತ್ತಿನಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿರುತ್ತೇವೆ. ಇವುಗಳಲ್ಲಿ ಅಡಕವಾಗಿರುವ ವಿಷಯಗಳು:—ಜಮಾಖರ್ಚಿನ ಪಟ್ಟಿ, ಬಡ್ಡಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲ್ ಛಾರ್ಜ್, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ

ಕ್ರಯ —

ನಂ॥ ೧ ಸಣ್ಣ ಸೈಜು ಪೆನಸಿಲ್ ಇರತಕ್ಕ ಡೈರಿ ೦—೪—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ನಂ॥ ೨ ಸಣ್ಣ ಸೈಜು ಪೆನಸಿಲ್ ಇಟ್ಟು ಮುಚ್ಚಳ ಹಾಕಿರುವ ಪ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೩ ದೊಡ್ಡ ಸೈಜು ಪೆನಸಿಲ್ ಇರತಕ್ಕ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ನಂ॥ ೪ ದೊಡ್ಡ ಸೈಜ ಪೆನಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿ ಪಡದೆ ಉತ್ತಮವಾದವುಗಳಿಗೆ ಕಣ್ಣನ್ನು ಪ್ರಯೋಗಿಸಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು. ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಡಿ. ನರಸಮ್ಮ ಕಂಪೆನಿ, ದೊಡ್ಡಪೇಟೆ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

30—11—1906 ರಿಂದ 7—12—1906 ರ ವ

ಸ್ಥಳ.	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಹೋ...
ಬೆಂಗಳೂರು ಪಟ್ಟಣ	1[illegible]	[illegible]	1[illegible]
ಮೈಸೂರು „	11	10	0
ಬೆಂಗಳೂರು ಡಿಸ್ಟ್ರಿಕ್ಟು	30	22	1
ಮೈಸೂರು „	1	0	11
ಕೋಲಾರ್ „	0	0	0
ಕೋಲಾರ್ ಚಿನ್ನದ ಗಣಿಗಳು	1	0	1
ತುಂಕೂರು ಡಿಸ್ಟ್ರಿಕ್ಟು	0	1	3
ಹಾಸನ „	15	7	0
ಚಿತ್ರದುರ್ಗ „	1		0
ಕಡೂರ್ „	27	22	3
ಶಿವಮೊಗ್ಗ „	0	0	1
ಜುಮ್ಲಾ.	105	76	45

ಶಾಲಿವಾಹನ ಶಕ ವರುಷಂಗಳು ೧೮೨೯ ನೇ ಪರಾಭವ ಸಂವತ್ಸರದ ಪುಷ್ಯ ಶುದ್ಧ ಪಂಚಮಿ ಗುರುವಾರದಿಂದ ಪುಷ್ಯ ಶುದ್ಧ ಏ... ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಡಿಸೆಂಬರ್.

ತಾ	ವಾರ	ತಿಥಿ.	ಘಳಿಗೆ.	ನಕ್ಷತ್ರ.	ಘಳಿಗೆ.	...
20	ಗುರು §	ಪಂಚಮಿ	31 0	ಧ	28 16	
21	ಶುಕ್ರ ¶	ಷಷ್ಟಿ	18 12	ಶ	27-18	
22	ಶನಿವಾ T	ಸಪ್ತಮಿ	16-16	ಪೂಭಾ	27-7	
23	ರವಿವಾ	ಅಷ್ಟಮಿ	15 40	ಉಭಾ	28-44	
24	ಚಂದ್ರ ‡	ನವಮಿ	16 27	ರೇ	30-22	1
25	ಕುಜ *	ದಶಮಿ	18 8	ಅ	33 53	1
26	ಬುಧ	ಏಕಾದಶಿ	22 20	ಭ	38-40	1

§ ಮಾರ್ಗಶಿರ ಲಕ್ಷ್ಮೀವ್ರತಂ ¶ ತಿಥಿದ್ವಯಂ, ತುಳಸೀ ಸುಬ್ರಹ್ಮಣ್ಯೋತ್ಸವಃ T ಅಷ್ಟಮಿತಿಥಿಃ. ‡ ಪಾರಾಯಣ ಗಣ ರವಿಃ * ಶೂನ್ಯತಿಥಿಃ, ಕ್ರಿಸ್‌ಮಸ್ ಹಬ್ಬ. ಸರ್ವತ್ರ ಮುಕ್ಕೋಟಿ ಏಕಾದಶಿ

ಪೇಟೇ ಧಾರಣೆ.

ದಿನಸಿ.	ಮೈಸೂರು	ಬೆಂಗಳೂ...
ಹಿಟ್ಟೀ ಅಕ್ಕಿ ಪಲ್ಲಾ ೧ಕ್ಕೆ ರೂ.	೧೩-೪-೦	[illegible]
ಕೆಂಬತಿ ಅಕ್ಕಿ ಅವಲ್	೧೩-೪-೦	[illegible]
„ ದುಯ್ಯಂ .	೧೩-೦-೦	[illegible]
ಜಾವಾ್ರಣಿ ಅಕ್ಕಿ	೧೩-೦-೦	[illegible]
ಸಣ್ಣಕ್ಕಿ ಅವಲ್ . ..	೧೫-೦-೦	[illegible]
„ ದುಯ್ಯಂ .. .	೧೪-೦-೦	[illegible]
ತೊಗರೀ ಬೇಳೆ ಪಲ್ಲಾ ೧ಕ್ಕೆ .	೧೨-೮-೦	[illegible]
„ ದುಯ್ಯಂ .	೧೨-೬-೦	[illegible]
ಹ್ಯರಾಗಿ ಪಲ್ಲಾ ೧ಕ್ಕೆ	೬-೮-೦	[illegible]
ಕಾರಾಗಿ	೬-೦-೦	[illegible]
ಜೋಳ	೫-೮-೦	೮-೮
ಹುಸುಂಡೆ ಪಲ್ಲಾ ೧ಕ್ಕೆ	೧೦-೧೨-೦	[illegible]
ಬಿಳೀ ಅವರೆ	೯-೪-೦	[illegible]
ಹೆಸರು	೧೦-೮-೦	[illegible]
ಉದ್ದು ..	೧೨-೦-೦	[illegible]
ಕಡಲೆ . ..	೧೧-೮-೦	[illegible]
ಎಳ್ಳು ಸೆ. ೧-೨೩ ಕ್ಕೆ	೧೩-೦-೦	[illegible]
ಹುರುಳಿ . ..	೩-೬-೦	[illegible]
ಹರಳು ೧-೨೩ ಸೇರಿಗೆ	೧೯-೦-೦	[illegible]
ಸೀಗೇಕಾಯಿ ಮಣ ೧ಕ್ಕೆ	೨-೨-೦	[illegible]
ಮೆಣಸಿನಕಾಯಿ ..	೩-೪-೦	[illegible]
„ ದುಯ್ಯಂ ..	೩-೦-೦	[illegible]
ಬೆಲ್ಲ ದೊಡ್ಡ ಅಚ್ಚು	೪-೪-೦	[illegible]
ಒಳ್ಳೆಣ್ಣೆ ಮಣ ೧ಕ್ಕೆ ..	೪-೮-೦	[illegible]
ಹರಳೆಣ್ಣೆ „ ..	೬-೧೨-೦	[illegible]
ಕೊತ್ತುಂಬರಿ ಪಲ್ಲಾ ೧ಕ್ಕೆ	೯-೦-೦	[illegible]
ಉಪ್ಪು „ ..	೫-೧೧-೦	[illegible]
ಹುಣಸೇ ಹಣ್ಣು ..	೦-೧೨-೦	[illegible]
„ ಕಳ್ಳೇದು . ..	೦-೮-೦	[illegible]
ತುಪ್ಪ ಮಣ ೧ಕ್ಕೆ .	೧೬-೦-೦	[illegible]
ಸೀಮೆಯೆಣ್ಣೆ ಪಟ್ಟಿ ೧ಕ್ಕೆ ..	೫-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ .	೬ ೮-೦	[illegible]
ಅಳಲೇಕಾಯಿ ಮಣ ೧ಕ್ಕೆ	೦-೦-೦	[illegible]
ಅಂಟ್ವಾಳದ ಕಾಯಿ ಮಣ ೧ಕ್ಕೆ ..	೦-೧೨-೦	[illegible]
ಚನ್ನಾ (ಪಾರ್ಮ) ಕೆಂಪು	೧೫ ೪-೦	[illegible]
„ „ ಪಸಿಮೆ	೧೫-೧೦-೦	[illegible]
„ „ ಗಟ್ಟಿ ತೊಲ ೧ಕ್ಕೆ ..	೨೩-೧೨-೦	[illegible]
ಸಿಕ್ಕಗಟ ತೊಲ ೧೦೦ ಕ್ಕೆ ..	೮೫-೦-೦	[illegible]

Printed and published by the Rev. E THOMPSON, M A, the Proprietor and Manager, Wesleyan Mission Press, Mysore. 20/12/1906.

ವೃತ್ತಾಂತ ಪತ್ರಿಕೆ.

REGISTERED M. 20.

ಯ ೧ ದುಡ್ಡು — ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೨೦ — ಮೈಸೂರು—ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾರೀಖು ೨೭ ನೇ ಗುರುವಾರ. — ಸಂಚಿಕೆ ೩೦

...ಡಗು ದೇಶದ ಸ್ವಚ್ಛವಾದ ಉತ್ಕೃಷ್ಟ ಕಾಫಿಯು

...ಯದೆ ಇರುವದು ಅಥವಾ ಆಗತಾನೆ ಹುರಿದದ್ದು ...ಮಾಡಿದ ಸ್ಥಳದಿಂದಲೆ ನೆಟ್ಟಗೆ ರವಾನಿಸಲ್ಪಡುವದು. 35 16

ವ್ಯಾಪಾರದ ಹೆಗ್ಗುರ್ತು

...ಕಾಡುಕೋಣದ ತಲೆಯ ಮುದ್ರೆ ಇದೆ. ...ರ್ಣವಾಗಿ ಯಂತ್ರದಿಂದಲೆ ಸಿದ್ಧಪಡಿಸಿದ್ದು. ಹೆಗ್ಗುರ್ತು ...ಸದ ಜೇಟಿ ಸುತ್ತಿಲ್ಲದಿರುವವು ಸ್ವಚ್ಛವಾದವುಗಳಲ್ಲ. ಅಧಿ... ...ಏಜಂಟರುಗಳು ಬೇಕು. ಇಂಥವರಿಗೆ ಅಲಾಯಿದ ದರ. ...ದಯವಿಟ್ಟು ಈ ಪತ್ರಿಕೆಯ ಹೆಸರನ್ನು ಸೂಚಿಸಿ.

ವಿಳಾಸ.—ಮ್ಯಾನೇಜರ್, ಮೈಸೂರು ಕಾಫಿ ವರ್ಕ್ಸ್, ಹುಣಸೂರು.

ಜ್ವರಹರಿ. 142 9

...ಸಾಧಾರಣ ಜ್ವರ, ಸನ್ನಿಜ್ವರ, ಮೋರೇಜ್ವರ, ಪಿತ್ಥಜ್ವರ, ..., ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲವಿಧವಾದ ...ನ್ನು ಬಹು ಬೇಗನೆ ವಾಸಿಮಾಡುವದು.

...ದುರ್ಗದ ಡಿಸ್ಟ್ರಿಕ್ಟ್ ಚಳ್ಳಕೆರೆಯಲ್ಲಿರುವ ಮುಜುಮಾ... ...ಟ್ ಡಿವಿಜನ್ ಆಫೀಸರ್ ಎಸ್. ಟಿ. ವೆಂಕಟಪತಿ ಅಯ್ಯ... ...ನಿವು ಕೆಲವು ದಿವಸಗಳ ಹಿಂದೆ ಕಳುಹಿಸಿಕೊಟ್ಟ ...೦ ...ಸೀಸೆಯು ತೀರಿಹೋಯಿತು. ಇಷ್ಟು ಸ್ವಲ್ಪ ಕಾಲದಲ್ಲೇ ...ಷಧದಿಂದ ಅನೇಕ ಮಂದಿ ಉಗ್ರಜ್ವರ ಪೀಡಿತರು ಚನ್ನಾಗಿ ...ಗಿರುವರು. ಇನ್ನೂ ಜನಗಳು ಕಾಹಿಲೇ ಬೀಳುತ್ತಿರುವು... ...ದಯವಿಟ್ಟು ಇನ್ನೊಂದು ೨೦ ಗ್ರೋಸಿನ ಸೀಸೆಯನ್ನು ವಿ ...ಮೂಲಕ ಕಳುಹಿಸಿದರೆ ಉಪಕಾರವಾಗಿದೆ—ಎಂದು ಬರೆ...

...ಮ.—ಸೀಸೆ ೧ ಕ್ಕೆ ೮ ಆಣೆ, ೧ ರೂ., ೧—೮ ರೂ., —೧೨ ೮, ೧೧ ರೂ., ಹನ್ನೆರಡು ಸೀಸೆ ತರಿಸಿಕೊಂಡರೆ ...ಮಾಫಿ ಬಿಡಲಾಗುವದು.

****

ಓಮಂಕರ್ಪೂರ.

Omum-Carpoor

...ಶಿಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆಕಳೆ ...ವಾಂತಿಭೇದಿ, ವಾಸಾತರದ ಹೊಟ್ಟೆನೋವುಗಳು—ಮುಂತಾ... ...ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡು... ...ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ...ದ ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ ...ದವು ಪ್ರಸರರಿ ಎಂಬ ಔಷಧದಂತೆಯೇ ಸೀಸೆಗಳಲ್ಲಿ ...ವು.

...ದ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಕೆಸ್ರಿಯು ...ರವನ್ನು ನಾನೂ ನನ್ನ ತಾಬೇದಾರರೂ ಮ್ಯುನಿಸಿಪಲ್ ...ಲ್ಲಿ ಅನೇಕ ಪರುಷರಿಗೆಂದಲೂ ಕಾಲರಾ, ಅಜೀರ್ಣ ...ಅಜೀರ್ಣ ರೋಗಿಸ್ಥರಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ...ಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧ ...ಗಿದೆ.

...ನ್ನು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗ... ...ಳ್ಳು ಔಷಧವಾರಿಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯ... ...ವೆ. ಇಲ್ಲದೆ ಕೆಳಗಿನ ವಿಳಾಸದವರಲ್ಲಿ ವಿಶೇಷ — ...ಗ್ರೇಟ್ ಇಂಡಿಯನ್ ಔಷಧಗಳ ಕಾರಖಾನೆ, ...ಕೋರ್ ಬೀಚ್ ರೋಡ್, ಮದ್ರಾಸ್.

ಬೇಕಾಗಿದೆ.

153-2

ಇಂಗ್ಲಿಷ್ ಮತ್ತು ಕನ್ನಡ ಅಕ್ಷರ ಜೋಡಿಸುವವರು (ಕಂಪಾಜಿಟರುಗಳು) ಬೇಕಾಗಿದೆ. ಚನ್ನಾಗಿ ಕಲಿತಿರುವವರು ಮಾತ್ರ ಖುದ್ದಾಗಿ ಬಂದು ಮಾತನಾಡಬಹುದು.

ಮ್ಯಾನೇಜರ್, ಮಿಷನ್ ಪ್ರೆಸ್, ಮೈಸೂರು.

ಮುಂಬಯಿ ವ್ಯಾಪಾರವಮಾಡಲಿಚ್ಛೈಸುವವರು.

85-30

ಮುಂಬಯಿಯಲ್ಲಿ ಪ್ರತಿಯೊಂದು ಮಾಲಿನ ತೂಕ ಅಳತೆ ಮತ್ತು ಮಾಲಿನ ವರ್ಣನೆ ಹಾಗೂ ಅನೇಕ ಉಪಯುಕ್ತ ಮಾಹಿತಿಯಿರುವ ಕನ್ನಡ ಪುಸ್ತಕ —ಕ್ರಯ ೧೦ ಆಣೆ ವಿ. ಪಿ. ಯಿಂದ ಕಳುಹಿಸುವೆವು. ಟಪಾಲು ಖರ್ಚು ಬೇರೆ ಬುಕ್ಸೆಲ್ಲರರಿಗೆ ಯೋಗ್ಯ ಕಮಿಶನ್ ದೊರೆಯುವದು. ಮತ್ತು ಲಿಂಗಾಯತ ಧರ್ಮಸಂಬಂಧ ವಿರಶೈವೋತ್ಪತ್ತಿ ಕ್ರಿಯಾಲಕ್ಷಣವೆಂಬುವ ಕನ್ನಡ ಪುಸ್ತಕ —ನಾಲ್ಕು ಆಣೆ ಚಲೂ ಅಕ್ಷರದಿಂದ ಬರೆಯಲು. ಪತ್ತೆ ಚನ್ನಬಸಪ್ಪ ಮಲ್ಲಪ್ಪ ವಾರದ, ಪೋಸ್ಟು ಮಾಂಡ್ವಿ, ಮುಂಬಯಿ.

ಒಂದು ಪುಡಿಗೆ ೩ ಪೈ. ನೋಡಿರಿ!
ಒಂದು ಪುಡಿಗೆ ೩ ಪೈ.

152-2

ಸ್ವದೇಶಿ ನಾಮಿ ಡಿಪೋ!

ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧಪಟ್ಟ ನಮ್ಮ ಉತ್ತಮವಾದ ನೀಲಿ, ಕಪ್ಪು, ಕೆಂಪು, ಜಾಂಬಳಿ, ಹಸುರು ನಾಮಿಪುಡಿಯು ಗ್ರಾಹಕರಿಗೆ ೩ ಆಣೆಯ ಖರಿದಿಮೇಲೆ ೧೦೦ ಫೆನ್ಸಿಕಾರ್ಡುಗಳು, ೬ ಆಣೆಯ ಮೇಲೆ ತಾಂಬೂಲಬಹಾರ ಡಬ್ಬಿ ೧, ಇಲ್ಲವೆ H. B. ಪೇನಸಿಲ ಡಜನ ೧; ೮ ಆಣೆಯಮೇಲೆ ೧೦೦ ಫೆನ್ಸಿ ಕವರು ಅಥವಾ ಗಂಧದ ಚದುರಂಗದ ಬೋರ್ಡು; ೧೨ ಆಣೆಯಮೇಲೆ ನಿಮ್ಮುಣಸೇನ (ಒಮ್ಮೆ ಶಾಯಿ ತುಂಬಿದರೆ ೩,೦೦೦ ಶಬ್ದ ಬರೆಯುತ್ತದೆ.) ೧ ರೂಪಾಯಿಯಮೇಲೆ ಶ್ರೀಗಂಧದ ಗಿಳಿಯ ಆಕಾರದ ಬೀಸಣಿಗೆ, ೨ ರೂಪಾಯಿಯಮೇಲೆ ಕಿಸೆಯೊಳಗಿನ ಛಾಪಸಾನೆ (ಬೇಕಾದಷ್ಟು ಮುದ್ರೆಯ ಛಾಪಿಸಿಕೊಳ್ಳಬಹುದು) ೨ ರೂಪಾಯಿ ೧೨ ಆಣೆಯ ಮೇಲೆ ಟಕಾವು ಟೊಪ್ಪಿಯ ಮೇಲಿನ ಘಡಿಯಾರ, ೩ ರೂಪಾಯಿಯ ಮೇಲೆ ಪುಣೆ ಮನೋವೇಧಕ ಪ್ರಸಿದ್ಧ ೧೨ ಸುಂದರ ಚಿತ್ರಗಳು, ೬ ರೂಪಾಯಿಯ ಮೇಲೆ ಸುಂದರ ಪೋಟೋ ಫುಕಟ!!! ಟಪಾಲ ಖರ್ಚು ಬೇರೆ

ವಿಶೇಷ ಮಾಹಿತಿ ಪತ್ರದ್ವಾರ, — ನಮ್ಮ ವಿಳಾಸ — ಗಣಪತಿ ನಾಗಪ್ಪ ಕಾರೀಬಾಗಿಲ, ಮ್ಯಾನೇಜರ, ಪೋಸ್ಟ ಹೊನ್ನಾವರ, ಜಿಲ್ಲಾ ಕಾನಡಾ

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿ ಲಿಮಿಟೆಡ್.

122—15

ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರು ಈ ರೈಲನ್ನ ಸ್ಯಾಂಕ್ಷನ್ ಮಾಡುವ ಕಂಪೆನಿಯಮೇಲೆ ಖರ್ಚಾಗುವ ಮೂಲಧನಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಡಲು ಜಾಮೀನಾಗಿರುತ್ತೇವೆಂದು ಈಚೆಗೆ ಪ್ರಕಟಿಸಿರುತ್ತಾರೆ.

ಎಯಿಮಕ ಮೂಲಧನ ಷೇರು ಒಂದಕ್ಕೆ ೨೫ ರೂಪಾಯಿಗಳ ಬೆಲೆಯುಳ್ಳ ೩೮ ಸಾವಿರ ಷೇರುಗಳಿಂದಾಗುವ ೯.೫ ಲಕ್ಷ ರೂಪಾಯಿಗಳು—ಈ ಷೇರು ಮೊಬಲಗು ಷೇರು ಒಂದಕ್ಕೆ ಒಂದು ರೂಪಾಯಿನಂತೆ ಅಪ್ಲಿಕೇಷನ್ ಜೊತೆಯಲ್ಲಿ ಅಡ್ವಾನ್ಸಾಗಿ ಕೊಟ್ಟು ಬಾಕಿ ೨೪ ರೂಪಾಯಿಗಳನ್ನ ನೋಟೀಸ್ ಕೊಟ್ಟನಂತರ ೧೨ ಕಿಸ್ತುಗಳಲ್ಲಿ ಪಾವತಿ ಮಾಡತಕ್ಕದ್ದು. ಈ ಲೈನಿನ ಸರ್ವೆ ಪೂರೈಸಲ್ಪಟ್ಟಿದೆ.

ಈ ಕಂಪೆನಿಯ ಷೇರುಗಳನ್ನು ಅಪೇಕ್ಷಿಸತಕ್ಕಂಥವರು ಈ ಕೆಳಗೆ ರುಜುವು ಮಾಡಿರುವವರಿಗೆ ಅಥವಾ ಸಬ್ ಏಜಂಟ್ರಿಗೆ ದರಖಾಸ್ತು ಮಾಡಿಕೊಳ್ಳಬೇಕು

ಷೇರು ಹಣವನ್ನು ಈ ಕೆಳಗೆ ರುಜು ಮಾಡಿರುವವರಿಗೆ, ಇವರಿಂದ ಲಿಖಿತ ಮೂಲಕ ಹಣ ವಸೂಲು ಮಾಡಲು ಅಧಿಕಾರ ಹೊಂದಿರುವ ಸಬ್ ಏಜಂಟರಿಗೆ, ಬೆಂಗಳೂರು ಬ್ರಾಂಚು ಮದ್ರಾಸು ಬ್ಯಾಂಕಿಗೆ (ಈ ಕಂಪೆನಿಯ ಕ್ರೆಡಿಟ್ಟಿಗೆ), ಅಥವಾ ಮೈಸೂರು ಸೀಮೆಯ ತಾಲ್ಲೋಕು ಡಿಸ್ಟ್ರಿಕ್ಟು ಖಜಾನೆಗಳಿಗಾಗಲಿ ಪಾವತಿ ಮಾಡಬೇಕು

(ಸ್ವ) ಬಿ. ವಿ. ರಾಮಸ್ವಾಮಿ ಶೆಟ್ಟಿ, ಬಿ. ಎ., ಅಡ್ವೊಕೇಟ್, ಮತ್ತು ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪೆನಿಯ ಚೀಫ್ ಏಜಂಟ್ ನಗರ್ತಪೇಟೆ, ಬೆಂಗಳೂರು ಸಿಟಿ

ಬೆಲಗೆ ಬೆಳ್ಳಿ—ಗುಣಕ್ಕೆ ಬಂಗಾರ.

86-31

ಕ್ಲೆಮೆಂಟ್ಸ್‌ರವರ ಗಾರಿಡಿಬಾಧಾ ನಿವಾರಿಣಿ.

ಪಾರ್ಶ್ವನೋವು, ಕೀಲುಗಳ ನೋವುಗಳು, ಕಿಬ್ಬೊಟ್ಟೆನೋವು, ಬೆನ್ನುಳಿಯುವದು, ತಲೆನೋವು, ಕೆನ್ನುಮ್ಮ ಕಿಲುಬುಗಳು, ಕೀಲುಗಳು, ಕತ್ತರಿಸುವದು, ಬಗ್ಗಿರುವ ಬೆನ್ನುಗಳು, ಕೊರಳು ಊತ, ಇವುಗಳಿಂ ದುಂಟಾಗುವ ಬಾಧೆಗಳು, ಕೈಕಾಲು ಪಡೆತ, ಇವುಗಳಿಗೆ ಕ್ಲೆಮೆಂಟ್‌ಸ ವರ ಗಾರಿದಿ ಬಾಧೆ ನಿವಾರಿಣಿ ತೈಲವನ್ನು ಚನ್ನಾಗಿ ತಿಕ್ಕಿದರೆ ಈ ಬಾಧೆಗಳೆಲ್ಲಾ ಪರಿಹಾರವಾಗುವದು. ಬಾಧೆಗಳನ್ನು ನಿಲ್ಲಿಸುವದಕ್ಕಾಗಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂ ಹುಟ್ಟ ಇದೆ ಆ ಕೆಲಸವನ್ನು ಇದು ಮಾಡುವದು. ಶೀತಾಯಿಗಳಲ್ಲಿ ಹಾಕಿ ಮಾರುವ ಔಷಧಗಳಲ್ಲಿ ಬಾಧೆಯನ್ನು ಶಮನಮಾಡುವದರಲ್ಲಿ ಕ್ಲೆಮೆಂಟ್ಸ್‌ರವರ ಮ್ಯಾಜಿಕ್ ಬಾಂನಂತಹದು ಬೇರೊಂದಿಲ್ಲವು ಕ್ರಯ —೧ ಬಾಟ್ಲಿಗೆ ೧೨ ಆಣೆ. ೩ ಕ್ಕೆ ೨ ರೂಪಾಯಿ ೬ ಕ್ಕೆ ೩ ರೂಪಾಯಿ, ೧೨ ಕ್ಕೆ ೬ ರೂಪಾಯಿ ಅಂಚೆ ವೆಚ್ಚ ಒಂದರಿಂದ ಮೂರು ಬಾಟ್ಲಿ ವರೆಗೆ ೩ ಆಣೆ.

ನಮ್ಮ ವಿಳಾಸ:—ಎಫ್. ಡಬ್ಲ್ಯು. ಆರ್ನ, ಸಿಮೆಟ್ರಿ ರೋಡ್, ವೆಪೆರಿ, ಮದರಾಸ್

"ಅರೇಬಿಯನ್ ನೈಟ್ಸ್

150-4

ಅಥವಾ

ಯವನಯಾಮಿನೀ ವಿನೋದ ಕಥೆಗಳು"

ಅರೇಬಿಯನ್ ನೈಟ್ಸ್ ಅಥವಾ ಯವನಯಾಮಿನೀ ವಿನೋದ ಕಥೆಗಳು "ಈ ಪುಸ್ತಕವು ಲೋಕಪ್ರಸಿದ್ಧವಾದದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ನಾನೂರು ಎಪ್ಪತ್ತು ಪುಟಗಳುಳ್ಳದ್ದು. ಭಾರಿ ಪುಸ್ತಕ ಭಾಷೆಯು ಬಹು ಸರಳವಾಗಿದೆ. ಪುಸ್ತಕವನ್ನು ಒಂದಾವರ್ತಿ ಓದಿದ ಮೇಲೆ ಅದನ್ನು ಪುನಃ ಪುನಃ ಓದುವಂತೆ ಅದು ಮನಸ್ಸನ್ನು ಆಕರ್ಷಿಸುವದು. ಇದರ ಕ್ರಯ ಎರಡೇ ರೂಪಾಯಿ ವಿ. ಪಿ. ಮೂಲಕ ೨—೩—೦. ಮತ್ತು ಅಥವಾ "ಡಿನ್ನೈಮ ವರ್ಷಗಳ ಹಿಂದೆ ಇದರ ಕ್ರಯ ಎಂಟು ರೂಪಾಯಿ ಎಂದು ಅನೇಕರಿಗೆ ಗೊತ್ತು. ಇದನ್ನು ಬಡವರೂ, ಐಶ್ವರ್ಯವಂತರೂ ಓದುವಂತೆ ಪುನಃ ಛಾಪಿಸಿ ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಸುಲಭ ಕ್ರಯಕ್ಕೆ ಮಾರುತ್ತೇವೆ. ಹನ್ನೆರಡು ಪುಸ್ತಕಗಳನ್ನು ಒಟ್ಟಿಗೆ ತರಿಸಿಕೊಂಡರೆ ಪುಸ್ತಕಕ್ಕೆ ಎರಡು ಆಣೆಯಂತೆ ಕಮಿಷನ್ ಕೊಡುತ್ತೇವೆ ಜಾಗ್ರತೆ ನೋಡಿ. — ನಮ್ಮ ವಿಳಾಸ —

ಮ್ಯಾನೇಜರ್, ಸಿ. ಎಲ್. ಎಸ್ ಬುಕ್ ಡಿಪೋ, ಮೈಸೂರು

ಹಿಂದೂದೇಶಪ್ರದಕ್ಷಿಣ.

ಈ ನೂತನ ಪುಸ್ತಕದ ಒನೇ ಮುದ್ರಣದ ಪ್ರತಿಗಳೆಲ್ಲಾ ಸಂಪೂರ್ಣವಾಗಿ ಮುಗಿದುಹೋದ್ದರಿಂದ ಎರಡನೇ ಮುದ್ರಣವನ್ನು ಹಾಕಿಸಿರುತ್ತೇವೆ. ಮೂರು ಅಥವಾ ನಾಲ್ಕು ತಿಂಗಳೊಳಗಾಗಿ ನೂರಾರು ಪ್ರತಿಗಳು ಬಿಕರಿ ಮಾಡಲ್ಪಟ್ಟದ್ದರಿಂದ ಅನಂತರ ಈ ಪುಸ್ತಕವನ್ನು ಅಪೇಕ್ಷಿಸಿದ ಅನೇಕರಿಗೆ ಇದು ದೊರೆಯದೆ ವ್ಯಸನಕ್ಕೀಡಾಗಿದ್ದಾರೆ. ಈಗಲಾದರೂ ಜಾಗ್ರತೆಯಿಂದ ಬರೆದು ವಿ. ಪಿ. ಮೂಲಕ ತರಿಸಿಕೊಳ್ಳಿ. ಇದರಲ್ಲಿ ಅಡಗಿರುವ ಸಂಗತಿಗಳನ್ನು ವಿವರಿಸಲು ಸ್ಥಳ ಸಂಕೋಚವಾಗಿದೆ. ಹಿಂದೂ ದೇಶದಲ್ಲಿರುವ ಅನೇಕ ಪಟ್ಟಣಗಳ ಚಿತ್ರಗಳೂ ಮತ್ತು ಅವುಗಳ ವರ್ಣನೆಗಳೂ ಪುರಾತನ ಚರಿತ್ರಾರ್ಹವಾದ ಕಟ್ಟಡಗಳೂ ಅವುಗಳ ಚಿತ್ರಗಳೂ ಇದರಲ್ಲಿ ಅಡಗಿವೆ. ಇದರಲ್ಲಿ ಸುಮಾರು ತೊಂಭತ್ತು ಪ್ರಸಿದ್ಧವಾದ ಚಿತ್ರಗಳಿರುತ್ತವೆ. ನೂರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶಸಂಚಾರ ಮಾಡುವುದಕ್ಕೆ ಬದಲಾಗಿ ಈ ದೊಡ್ಡ ಪುಸ್ತಕವನ್ನು ತರಿಸಿ ಓದಿದರೆ ಬಹು ಪ್ರಯೋಜನವಾದೀತೆನ್ನುವುದರಲ್ಲಿ ಯಾವ ಸಂಶಯವೂ ಇರಲಾರದು. ಪುಸ್ತಕದ ಕ್ರಯ ಎಂಟೇ ಆಣೆ. ವಿ. ಪಿ. ಮೂಲಕ ತರಿಸಿಕೊಂಡರೆ ಹನ್ನೊಂದಾಣೆಯಾಗುವವು.

ಮ್ಯಾನೇಜರ್ ಸಿ. ಎಲ್. ಎಸ್. ಬುಕ್ ಡಿಪೋ ಮೈಸೂರು.

The Place for Hassan Caps is Hassan.

ನಿಮ್ಮ ತಲೆಯ ಮೇಲಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ.

154-1

ಒಳ್ಳೇ ಟೋಪಿಗಳು ಯಾವವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ!

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ.—(೧)ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ ನಮಗೇ ಸೀದಾ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S PAIN BALM

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು

95-26



ಬೆನ್ನೆಲುಬಿನಲ್ಲಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ಕಲಸಿ ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳಯುವ ... ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ. ಇದೆಲ್ಲಾ ... ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೆಲ್ಲಾ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತು ಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಬಾರದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ವೃತ್ತಾಂತ ಪತ್ರಿಕೆ.

ಸನ್ ೧೯೦೬ ನೇ ಇಸವಿ ಡಿಸೆಂಬರ್ ತಾ|| ೨೭ನೇ ಗುರುವಾರ.

ಮೈಸೂರು ಪಟ್ಟಣಕ್ಕೆ ವಿದ್ಯುಚ್ಛಕ್ತಿಯ ದೀಪವನ್ನಿಡುವುದು.

ಶಿವಸಮುದ್ರದಲ್ಲಿ ಉತ್ಪತ್ತಿಮಾಡುವ ವಿದ್ಯುಚ್ಛಕ್ತಿಯನ್ನು ಕೋಲಾರದ ಗಣಿಗಳಲ್ಲಿ ಚಿನ್ನತೆಗೆಯುವ ಕೆಲಸಗಳಿಗೂ ಬೆಂಗಳೂರು ಪಟ್ಟಣದಲ್ಲಿ ಒಂದೆರಡು ಕಾರ್ಖಾನೆಗಳ ಯಂತ್ರಗಳನ್ನು ಓಡಿಸುವುದಕ್ಕೂ ರಾತ್ರಿ ಹೊತ್ತು ಆ ಪಟ್ಟಣದಲ್ಲೆಲ್ಲಾ ದೀಪಗಳನ್ನಿಟ್ಟು ಉರಿಸುವುದಕ್ಕೂ ಮೈಸೂರು ಸರ್ಕಾರದವರು ಏರ್ಪಾಡು ಮಾಡಿ ಆ ರೀತಿ ನಡೆಯುತ್ತಿರುವುದಷ್ಟೆ. ಈ ವರುಷ ಶಿವಸಮುದ್ರದ ಕಾರ್ಖಾನೆಯಲ್ಲಿ ಇನ್ನೂ ಎರಡು ಸಾವಿರ ಕುದುರೆ ಬಲದಷ್ಟು ವಿದ್ಯುಚ್ಛಕ್ತಿನ್ನು ಹೊಸದಾಗಿ ಉತ್ಪತ್ತಿಮಾಡುವವರಾಗಿದ್ದಾರೆ. ಅದರಲ್ಲಿ ಕೆಲವು ಭಾಗದಷ್ಟು ವಿದ್ಯುಚ್ಛಕ್ತಿಯನ್ನು ರಾಜಧಾನಿಗೆ ಸಾಗಿಸಿಕೊಂಡು ಬಂದು, ಈ ಪಟ್ಟಣದಲ್ಲಿ ರಾತ್ರಿ ಹೊತ್ತು ದೀಪಗಳನ್ನುರಿಸಬೇಕೆಂತಲೂ ಬಳಗೊಳದಲ್ಲಿ ನೀರು ಎತ್ತುವ ಯಂತ್ರಗಳನ್ನೂ ನಡಿಸಬೇಕೆಂತಲೂ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದರು. ಈ ವಿಷಯವನ್ನು ಇಲ್ಲಿನ ಮ್ಯುನಿಸಿಪಲ್ ಕಮಿಷನರಿಗೆ ತಿಳಿಯಪಡಿಸುವುದಕ್ಕಾಗಿ ಇಂಜನಿಯರ್ ಮೆ|| ಗಿಬ್ಸ್ ಯವರು ಕಳೆದ ಶನಿವಾರ ರಾಜಧಾನಿಗೆ ಬಂದು, ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಒಂದು ಮೀಟಿಂಗ್ ನಡಿಸಿ, ತೀರ್ಮಾನಮಾಡಿಕೊಂಡು ಹೋಗಿದ್ದಾರೆ. ಈಗ ರಾಜಧಾನಿಯಲ್ಲಿ ರಾತ್ರಿಹೊತ್ತು ಸ್ವಲ್ಪ ಹೆಚ್ಚು ಕಡಿಮೆ ೯೫೦ ಲಾಂದ್ರಗಳನ್ನು ಉರಿಸುವುದಕ್ಕಾಗಿ ಮ್ಯುನಿಸಿಪಾಲಿಟಿಯವರು ವರ್ಷಕ್ಕೆ ಸುಮಾರು ೧೧,೦೦೦ ರೂಪಾಯಿ ಖರ್ಚುಮಾಡುವರು. ಆದರೆ ಮೆ|| ಗಿಬ್ಸ್ ಯವರು ಪಟ್ಟಣವನ್ನೆಲ್ಲಾ ಅಜಮಾಯಿಷಿಮಾಡಿ ಹೇಳಿದ ಪ್ರಕಾರ ೪೫೦ ವಿದ್ಯುಚ್ಛಕ್ತಿಯ ದೀಪಗಳು ಸಾಕಾಗುವುವು. ಆದರೂ ಮ್ಯುನಿಸಿಪಲ್ ಕಮಿಷನರುಗಳು ಕೇಳಿದಂತೆ ೬೦೦ ದೀಪಗಳವರಿಗೂ ಇಟ್ಟುಕೊಡುವುದಾಗಿ ಮೆ|| ಗಿಬ್ಸ್ ಯವರು ಮಾತುಕೊಟ್ಟಿದ್ದಾರೆ ಇದರ ಖರ್ಚಿಗೆ ಮ್ಯುನಿಸಿಪಾಲಿಟಿಯಿಂದ ವರುಷಕ್ಕೆ ೧೧,೦೦೦ ರೂಪಾಯಿ ಕೊಡುತ್ತಾ ಬರುವುದಾಗಿ ಆ ದಿನ ಕಮಿಷನರುಗಳು ಒಪ್ಪಿ ತೀರ್ಮಾನಮಾಡಿದರು

ಮೆ|| ಗಿಬ್ಸ್ ಯವರು ಮುಂದಿನ ಕೆಲಸಗಳನ್ನು ನಡಿಸುವುದಕ್ಕಾಗಿ ವಾಪಸು ಹೋಗಿರುತ್ತಾರೆ. ಇವರು ಮತ್ತೆ ಜನವರಿ ಎರಡನೆ ವಾರದಲ್ಲಿ ರಾಜಧಾನಿಗೆ ಬಂದು, ಮ್ಯುನಿಸಿಪಲ್ ಕಮಿಷನರುಗಳ ಸಂಗಡ ಪಟ್ಟಣವನ್ನೆಲ್ಲಾ ಸುತ್ತಿ ವಿದ್ಯುಚ್ಛಕ್ತಿಯ ದೀಪಗಳನ್ನಿಡಬೇಕಾದ ಸ್ಥಳಗಳನ್ನು ಗೊತ್ತುಮಾಡುವರು. ಈಗಿರುವ ದೀಪದ ಕಂಬಗಳು ಸುಮಾರು ೧೦೧—೧೫೦ ಅಡಿ ದೂರಕ್ಕೆ ಒಂದರಂತೆ ನೆಡಲ್ಪಟ್ಟಿವೆ. ವಿದ್ಯುಚ್ಛಕ್ತಿಯ ದೀಪದ ಪ್ರಕಾಶವು ಈಗಿನ ಎಣ್ಣೆಯ ದೀಪಕ್ಕಿಂತಲೂ ೮೦ ರಷ್ಟು ಹೆಚ್ಚು ಪ್ರಕಾಶ ಕೊಡುವುದಾದ್ದರಿಂದ ಸುಮಾರು ಒಂದೊಂದು ಸಾವಿರ ಅಡಿ ದೂರಕ್ಕೆ ಒಂದೊಂದು ದೀಪವನ್ನಿಟ್ಟರೆ ಸಾಕೆಂದು ತಿಳಿಯುವುದು.

ಶಿವಸಮುದ್ರದಿಂದ ತಂತಿಗಳ ಮೂಲಕ ಸಾಗಿಸಿಕೊಂಡು ಬರುವ ವಿದ್ಯುಚ್ಛಕ್ತಿಯನ್ನು ರಾಜಧಾನಿಯಲ್ಲಿ ಮಧ್ಯರಾಷ್ಟ್ರದಲ್ಲಿ ಒಂದು ಸಣ್ಣ ಮನೆ ಕಟ್ಟಿ ಅದರಲ್ಲಿ ಶೇಖರ ಮಾಡುವರು. ಈ ವಿದ್ಯುಚ್ಛಕ್ತಿಯ ಉಗ್ರಾಣವೆಂಬ ಮನೆಯಿಂದ ಸುತ್ತಲೂ ಒಂದು ಮೈಲಿ ಫಾಸಲೆ ತನಕ ಜೋಡಿ ಕಂಬಿಗಳನ್ನು ಹಾಕಿ ಕಂಭಗಳನ್ನು ನೆಟ್ಟು ದೀಪ ಉರಿಯುವಂತೆ ಮಾಡುತ್ತಾರೆ. ಇದೆಲ್ಲಾ ಪೂರೈಸಿ ದೀಪಗಳನ್ನು ಇಡುವುದಕ್ಕೆ ಇನ್ನೂ ಹದಿನೆಂಟು ತಿಂಗಳಾಗುವುದೆಂದು ಮೆ|| ಗಿಬ್ಸ್ ಯವರು ತಿಳಿಸಿದರು. ಅಂದರೆ, ೧೯೦೮ನೆ ಇಸವಿಯಲ್ಲಿ ನಡೆಯುವ ನವರಾತ್ರಿ ಉತ್ಸವದ ಕಾಲಕ್ಕೆ ಈ ವಿದ್ಯುಚ್ಛಕ್ತಿಯ ದೀಪಗಳು ಉರಿಯಲಾರಂಭವಾಗುವವೆಂದು ನಿರೀಕ್ಷಿಸಬಹುದಾಗಿದೆ

ಈಚೆಗೆ ಬೆಂಗಳೂರು ದಂಡಿಗೂ ಈ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸಿಕೊಳ್ಳಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ, ಬ್ರಿಟಿಷ್ ರೆಸಿಡೆಂಟರಿಗೆ ಹುಕುಂ ಕಳುಹಿಸಿದ್ದಾರೆಂದು ತಿಳಿದು ಬಂದಿದೆ

ಒಳದೇಶದ ವೃತ್ತಾಂತಗಳು.

ಕೌನ್ಸಿಲರ್ ಮೆ|| ಟಿ ಆನಂದರಾಯರು ಬೆಂಗಳೂರು, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕಡೆ ಸಂಚಾರ ಹೊರಟಿರುತ್ತಾರೆ

****

ಅರಮನೆ ಇಲಾಖೆಯವರು ಅರಸುಗಳ ಬೋರ್ಡಿಂಗ್ ಸ್ಕೂಲಿಗೆ ಮೆ|| ಕೃಷ್ಣಮಾಚಾರ್ ಎಂಬುವವರನ್ನು ಸೂಪರೆಂಟರನ್ನಾಗಿ ನೇಮಕ ಮಾಡಿದ್ದಾರೆ.

****

ಇದುವರೆಗೆ ನಮ್ಮ ಸಂಸ್ಥಾನದ ಕಂಟ್ರೋಲರಾಗಿದ್ದ ಮೆ|| ಬಾಸು ಯವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕಳೆದ ವಾರ ಕಲ್ಕತ್ತೆಗೆ ಪ್ರಯಾಣಮಾಡಿದರು

****

ಹುಣಸೂರಿನ ಸಬ್ ರೆಜಿಸ್ಟ್ರಾರು ಈಚೆಗೆ ತನ್ನ ಅಧಿಕಾರಕ್ಕೊಳಪಟ್ಟ ಒಬ್ಬ ಖೈದಿಗೆ ಕಣ್ಣಿನ ರೋಗವಾಗಿದ್ದರೂ, ಡಾಕ್ಟರು ನೋಡಿ ಅವನು ಹೊರಗೆ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲವೆಂದು ಸರ್ಟಿಫಿಕೇಟ್ ಸಹ ಕೊಟ್ಟಿದ್ದರೂ ಲಕ್ಷ್ಯಮಾಡದೆ ನಿಷ್ಕರುಣೆಯಿಂದ ಆ ಖೈದಿಯನ್ನು ಉರಿಯುವ ಬಿಸಲಿನಲ್ಲಿ ನಿಲ್ಲಿಸಿ ಕೆಲಸ ಮಾಡಿಸಿದನೆಂದು ತಿಳಿದುಬಂದಿದೆ ಈ ಸಬ್ ರೆಜಿಸ್ಟ್ರಾರ ಕಠಿಣ ಹೃದಯವನ್ನೂ ಮೇಲ್ಕಂಡ ಕ್ರೂರತರವಾದ ಕಾರ್ಯವನ್ನೂ ಮೇಲ್ಪಟ್ಟವರು ಗಮನಕ್ಕೆ ತಂದುಕೊಂಡು, ಕ್ರಮಪಡಿಸ್ಯಾರೆಂದು ನಿರೀಕ್ಷಿಸುತ್ತೇವೆ

****

ರಾಜಧಾನಿಯ ಶ್ರೀಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ವೈಶ್ಯ ಮಹಾಜನಗಳು ಸಭೆ ಸೇರಿ, ಮೆ|| ಎಂ. ಚಂಗ್ಲಯ್ಯಚೆಟ್ಟಿಯವರಿಗೆ ಡೆಪ್ಯುಟಿ ಕಮಿಷನರ ಕೆಲಸ ಕೊಡಲ್ಪಟ್ಟ ವಿಷಯದಲ್ಲಿ ಸಭಿಕರ ಸಂತೋಷ ಕೃತಜ್ಞತೆ ರಾಜಭಕ್ತಿಗಳನ್ನು ಶ್ರೀಮನ್ಮಹಾರಾಜರವರಿಗೂ ದಿವಾನರವರಿಗೂ ಅರಿಕೆ ಮಾಡಬೇಕೆಂದು ಇತ್ಯರ್ಥ ಮಾಡಿಕೊಂಡರು ಆದರೆ ಸಭೆಯ ಸೆಕ್ರೆಟರಿಯವರೂ ಕೆಲವು ಮುಖಂಡರೂ ಪರಸ್ಥಳ ಹೋಗಿದ್ದುದರಿಂದ ಆ ಕೂಡಲೇ ಅದು ನೆರವೇರದೆ ಇದುವರೆಗೆ ಸಾವಕಾಶವಾಯಿತು. ಮೊನ್ನೆ ಮಂಗಳವಾರದ ದಿನ ವೈಶ್ಯಮಂಡಲಿಯವರ ಮೇಲ್ಕಂಡ ತೀರ್ಮಾನವನ್ನು ಸೆಕ್ರೆಟರಿಯವರು ನೆರವೇರಿಸಿ, ಶ್ರೀಮನ್ಮಹಾರಾಜರವರಿಗೂ ದಿವಾನರವರಿಗೂ ಯಥಾವಿಧಿಯಾಗಿ ಟೆಲಿಗ್ರಾಂ ಮೂಲಕ ಅರಿಕೆ ಮಾಡಿಕೊಂಡಿರುತ್ತಾರೆ.

****

ಹಿಂದಿನ ಬುಧವಾರ ರಾತ್ರಿ ಬೆಂಗಳೂರಿಂದ ಶ್ರೀಮನ್ಮಹಾರಾಜರವರು ಪರಿವಾರ ಸಹಿತ ಕಲ್ಕತ್ತೆಗೆ ಪ್ರಯಾಣ ಮಾಡಿದರಷ್ಟೆ ಮದರಾಸಿನಿಂದ ಮುಂದಕ್ಕೆ ಒಂದು ದಿನ ಪ್ರಯಾಣ ಮಾಡುವಾಗ್ಗೆ ಎನ್ನೂರ್ ಸ್ಟೇಷನಿನಿಂದ ಆಚೆ ೧೦—೧೫ ಮೈಲಿ ದೂರ ರಸ್ತೆಯು ಮಳೆಯ ದೆಸೆಯಿಂದ ಕಿತ್ತು ಕೆಟ್ಟು ಹೋಗಿದ್ದುದರಿಂದ ಶ್ರೀಮನ್ಮಹಾರಾಜರವರು ಅಲ್ಲಿಂದ ವಾಸಸು ಮದರಾಸಿಗೆ ಬಂದು, ಕಳೆದ ಶುಕ್ರವಾರ ರಾತ್ರಿ ಸ್ಪೆಷಲ್ ರೈಲಿನಲ್ಲಿ ರಾಯಚೂರು ಬೆಜವಾಡ ರಸ್ತೆಯ ಮೇಲೆ ದಯಮಾಡಿದರು ದಾರಿಯಲ್ಲಿ ಸಿಕಂದ್ರಾಬಾದ್ ಸ್ಟೇಷನಿನಲ್ಲಿ ಮೈಸೂರಿನ ಕೆಲವು ದೊಡ್ಡ ಮನುಷ್ಯರೂ ಇತರರೂ ಕಾದಿದ್ದು ಅವರಿಗೆ ವಿಶೇಷ ಮರ್ಯಾದೆಗಳನ್ನು ಮಾಡಿದರು. ಶ್ರೀಮನ್ಮಹಾರಾಜರವರು ಮೊನ್ನೆ ಸೋಮವಾರ ಕಲ್ಕತ್ತೆಯನ್ನು ತಲಪಿದರೆಂದು ವರ್ತಮಾನಬಂದಿದೆ.

ಬಹುಮಾನ ಪಡೆದ ವರ್ತಮಾನವು.

[ಈ ವಾರ್ತೆ ಬರೆದ ಮೆ|| ಬಿ ಎಚ್ ಶ್ರೀನಿವಾಸರಾವ್, ಹೆಡ್‌ಮಾಸ್ಟರ್ ಲೋಯರ್‌ಸೆಕೆಂಡರಿ ಸ್ಕೂಲ್, ಆನೆಕಲ್, ಬೆಂಗಳೂರು ಡಿಸ್ಟ್ರಿಕ್ಟ್ ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ]

ಹುಡುಗರಿಬ್ಬರು ಆತ್ಮಹತ್ಯಮಾಡಿಕೊಂಡದ್ದು.

ಆನೆಕಲ್ಲು ಟೌನಿನಿಂದ ನವಂಬರ್ ೨೭ ನೇ ತಾ ೧೧—... ವರುಷದ ಇಬ್ಬರು ಬ್ರಾಹ್ಮಣರ ಹುಡುಗರು ಮನೆಯಿಂದ ತಪ್ಪಿಸಿಕೊಂಡು ಹೋದರು ಅವರವರ ತಂದೆ ತಾಯಿಗಳು ಬಹಳವಾಗಿ ಹುಡುಕಿದರು ಆದರೂ ಅವರು ಸಿಕ್ಕಲಿಲ್ಲ ಅವರು ಹೊರಟ ಉದ್ದಿಶ್ಯವೇನೆಂದರೆ, ಈಗ ಅವರೆ ಕಾಯಿ ಕಾಲವಾದ್ದರಿಂದ ತರುವದಕ್ಕಾಗಿ ಹೋಗಲು ಸಕಾಲವಲ್ಲದ್ದರಿಂದ ಸುತ್ತಲೂ ಇರುವ ಹಳ್ಳಿಗಳ ಹೊಲಗಳಲ್ಲಿ ... ಕಾಯಿ, ಹೀಚು, ಹೂ, ಮೊದಲಾದದ್ದನ್ನು ಕಿತ್ತು ಒಂದು ಚೀಲದಲ್ಲಿ ತುಂಬಿಕೊಂಡು ತಾವಾಗಿಯೇ ೨೮ ನೇ ತಾ ಮನೆಗೆ ಬಂದರು ಇವರು ತಂದ ಅವರೇಕಾಯನ್ನು ಅವರವರ ತಂದೆ ತಾಯಿಗಳು ನೋಡಿ —ಈ ಎಳೇ ಕಾಯಿಗಳನ್ನು ಎಲ್ಲಿ ಕಿತ್ತಿರಿ? ಯಾರೂ ನೋಡಲಿಲ್ಲವೇ? ನೋಡಿದ್ದರೆ ನಿಮ್ಮನ್ನು ಬಲೇ ಹೊಡಿಯುತ್ತಿದ್ದರು ... ಬಯ್ದು ಹೇಳಿ ಸುಮ್ಮನಾದರು ಇದರಿಂದ ಆ ಹುಡುಗರು ಬಯಲು ಮೇಲ್ಕಂಡ ಹೊಲದವರು ಬಂದು ಏನು ಮಾಡುವರೋ? ಎಂಬ ಭೀತಿಯ ದೆಸೆಯಿಂದ ಒಬ್ಬನು ಹೇಳದೆ ಪರಾರಿಯಾದನು ಇನ್ನೊಬ್ಬನು ತನ್ನ ಮನಸ್ಸಿನಲ್ಲಿ ಏನೋ ಯೋಚನೆ ಮಾಡಿ, ಕೆಳಗೆ ಬರೆದಿರುವ ಪ್ರಕಾರ ತನ್ನ ಜೇಬಿನಲ್ಲಿ ಒಂದು ಚೀಟಿಯನ್ನು ಬರೆದಿರಿಸಿದನು ... ಯ ವಿವರ—ನಾನು ೨೯ ನೇ ತಾ ಈ ಊರ ಬಳಿಯಲ್ಲಿರುವ ಗ... ಲಿಂಗಪ್ಪನವರ ಭಾವಿಯಲ್ಲಿ ಬಿದ್ದು ಪ್ರಾಣ ಬಿಟ್ಟಿರುತ್ತೇನೆ ... ನನ್ನನ್ನು ಇನ್ನೆಲ್ಲೂ ಹುಡುಕಬೇಡಿರಿ ನಾನು ಅದೇ ಬಾವಿಯಲ್ಲಿ ಬಿದ್ದು ಇರುವದಕ್ಕೆ ನನ್ನ ಲಂಗೋಟಿಯು ಯಾತದ ಮರದ ... ಇರುತ್ತೆ ಇದೇ ಗುರ್ತು ಎಂದು ಬರೆದಿದ್ದನು ಮೇಲೆ ಬರೆದಿರುವ ಹುಡುಗನು ಬೆಳಿಗ್ಗೆ ೪—೫ ಗಂಟೆಯ ಸಮಯದಲ್ಲಿ ಎದ್ದು ಹೊರಟು ಹೋಗಿ ಅದೇ ಬಾವಿಯಲ್ಲಿ ಬಿದ್ದು ಪ್ರಾಣ ಬಿಟ್ಟನು ಬೆಳಗಾದ ಮೇಲೆ ಹುಡುಗನು ಮನೆಯಲ್ಲಿಲ್ಲದ್ದನ್ನು ಕಂಡು, ಪುನಃ ಹುಡುಕಲು ಮೊದಲು ಮಾಡಿದರು ಅವನ ಕೋಟು ಮನೆಯಲ್ಲೇ ಇತ್ತು ಆದ್ದರಿಂದ ಎಲ್ಲಿಯೋ ಆಡುವದಕ್ಕೆ ಹೋಗಿರಬಹುದೆಂದೆಣಿಸಿ ಸುಮ್ಮನಾದರು ... ತರ ಅವನ ತಮ್ಮನು ಆ ಕೋಟನ್ನು ನೋಡಲಾಗಿ ಅದರಲ್ಲಿ ಒಂದು ಚೀಟಿ ಇತ್ತು, ಅದನ್ನು ತಂದೆಗೆ ತೋರಿಸಿದನು ಆಗ ತಂದೆಯು ... ನಷ್ಟೆಂದು ಹೇಳಿ! ತಾನು ಮಾಡುತ್ತಿದ್ದ ಕೆಲಸವನ್ನು ನಿಲ್ಲಿಸಿ ವ್ಯಸನಾಕ್ರಾಂತನಾಗಿ ಮೇಲ್ಕಂಡ ಭಾವಿಯ ಹತ್ತಿರಕ್ಕೆ ಹೋಗಿ ನೋಡಲು, ಅಲ್ಲಿ ಲಂಗೋಟಿ ಇದ್ದದ್ದನ್ನು ಕಂಡು ಏನೂ ತೋರದೆ, ಭಾವಿಯಲ್ಲಿಯೇ ಬಿದ್ದನೋ, ಇಲ್ಲದೆ ಹೀಗೆ ಬರೆದು ಎಲ್ಲಿಯಾದರೂ ಹೋದನೋ ಎಂದು ಯೋಚಿಸುತ್ತಾ ಮನೆಗೆ ಬಂದನಂತರ ... ಯೋಗದಿಂದ ಮನೆಯವರೆಲ್ಲರೂ ವ್ಯಸನಾಕ್ರಾಂತರಾಗಿದ್ದರು ... ಹೀಗಿರಲಾಗಿ, ಬೇರೆ ಮನೆಯ ಇನ್ನೊಬ್ಬ ಹುಡುಗನು ಏನು ಕಾರಣದಿಂದಲೋ ೩೦ ನೇ ತಾ ಮಧ್ಯಾಹ್ನ ಅದೇ ಭಾವಿಯಲ್ಲಿ ಬಿದ್ದು ಪ್ರಾಣ ಬಿಟ್ಟನು ಈ ಹುಡುಗನಿಗೆ ಮನೆಯಲ್ಲಿ ಏನೂ ತೊಂದರೆಯಿಲ್ಲ. ಅನ್ಯಾಯವಾಗಿ ತಂದೆ ತಾಯಿಗಳಿಗೆ ವ್ಯಸನವನ್ನುಂಟುಮಾಡಿ ಹೋದರು ೧ ನೇ ತಾ. ತೋಟದವನು ಗಿಡಗಳಿಗೆ ನೀರೆತ್ತಲು ಹೋಗಲು; ನೀರು ಅಲುಗಾಡಿದ್ದರಿಂದ ಸತ್ತ ಹೆಣಗಳು ಮೇಲಕ್ಕೆ ತೇಲಿದವು ಅವೆರಡನ್ನೂ ನೋಡಿ ಭಯಪಟ್ಟು, ಓಡಿ ಹೋಗಿ ... ಸ್ನೇಹಿತರಿಗೆ ತಿಳಿಸಿದನು ಈ ಸಮಾಚಾರವು ಊರಲ್ಲಿ ಹರಡಿ, ... ತಾಯಿಗಳಿಗೆ ತಿಳಿಯಿತು ಹೋಗಿ ನೋಡಲಾಗಿ ಮನೆಯಿಂದ ತಪ್ಪಿಸಿಕೊಂಡು ಹೋಗಿದ್ದ ತಮ್ಮ ತಮ್ಮ ಹುಡುಗರೇ ಆಗಿದ್ದರು ಆ ಮೇಲೆ ನಡಿಯ ಬೇಕಾದ ಕೆಲಸಗಳು ನಡಿಸಲ್ಪಟ್ಟವು. ಸಣ್ಣ ವಯಸ್ಸಿನ ಮಕ್ಕಳನ್ನು ಕಳೆಕೊಂಡ ಆ ತಂದೆ ತಾಯಿಗಳ ವ್ಯಸನವು ಅಪಾರವಾದ್ದಾಗಿದೆ.

[ಬಹುಮಾನದ ಮೇಲಾಟಕ್ಕಾಗಿ ಬಂದ ಇನ್ನೊಂದು ವಾರ್ತೆ]

ಹೆಂಗಸಿನ ಶೂರತನ.

ದಕ್ಷಿಣ ಕನ್ನಡ ಜಿಲ್ಲಾ ಮಂಗಳೂರು ತಾಲೂಕು ಮಂಜೇಶ್ವರ ಮಾಗಣೆ ಕಡಂಬಾರು ಎಂಬದೊಂದು ಸಣ್ಣ ಗ್ರಾಮವಿರುವದು ... ಗ್ರಾಮದಲ್ಲಿ ಜನಸಂಖ್ಯೆಯು ಕಡಿಮೆ ಐಶ್ವರ್ಯವಂತರೇ ಕಡಿಮೆ ಇದ್ದವರಲ್ಲಿ ಒಬ್ಬರು ಪರಮೇಶ್ವರ ಹೊಳ್ಳನೆಂಬವರು ಈ ಗ್ರಾಮದ ಒಂದು ಮೂಲೆಯಲ್ಲಿ ಹೆಂಡತಿಯೊಡನೆ ವಾಸಮಾಡುತ್ತಾರೆ ಇವರಿಗೆ ಪುತ್ರರಿಲ್ಲ ಇವರು ಸ್ವಲ್ಪ ಹಣ ಸಂಪಾದನೆ ಮಾಡಿ ಇಟ್ಟುಕೊಂಡಿದ್ದಾರೆಂದು ವರ್ತಮಾನವಿತ್ತು ಮನೆಯ ಹತ್ತಿರ ಒಬ್ಬ ಕುಂಬಾರನ ಮನೆ ಮಾತ್ರವಲ್ಲದೆ ಒಂದೂವರೆ ಮೈಲಿ ವಿಸ್ತೀರ್ಣಕ್ಕೆ ಬೇರೆ ಯಾರ ಮನೆಯೂ ಇಲ್ಲ.

ಹೀಗಿರುವಲ್ಲಿ ೧೦ ನೇ ತಾ. ಸೋಮವಾರ ರಾತ್ರೆ ನಾಲ್ಕು ಜನ ಕಳ್ಳರು ಒಟ್ಟುಕೂಡಿಕೊಂಡು, ಇವರನ್ನು ಸುಲಿಗೆ ಮಾಡಬೇಕೆಂದಾಗಿ ನಿಶ್ಚಯಿಸಿ ಸುಮಾರು ೧೨ ಗಂಟೆ ಸಮಯಕ್ಕೆ ಇವರ ಮನೆಗೆ ಬಂದರು. ಬರುವಾಗ್ಗೆ ಹೊಳ್ಳರು ಬಾಗಿಲಿಲ್ಲದ ಬಾವಿಯಲ್ಲಿ

…ರು. ಇವರ ಹೆಂಡತಿ ಬಾಗಿಲು ಮುಚ್ಚಿ ಒಳಗೆ ಮಲಗಿದ್ದರು. …ಗೌಳ್ಳರ ಕುತ್ತಿಗೆಗೆ ವಸ್ತ್ರ ಕಟ್ಟಿ ಬಿಗಿಯಾಗಿ ಹಿಡಿದು, ಗೌಜಿ …ದ ಹಾಗೆ ಬಾಯಿಗೆ ವಸ್ತ್ರ ತಳ್ಳಿ, ಅವರ ಹೆಂಡತಿ ಹತ್ತರ— …ಳ್ಳೆ ಮಾತಿನಲ್ಲಿ ಬಾಗಿಲು ತೆರೆಯುತ್ತೀಯೋ ಇಲ್ಲವೋ? ಇ… …ವಾದರೆ ನಿನ್ನ ಗಂಡನನ್ನು ಭೂತಗಳಿಗೆ ಬಲಿಯಾಗಿ ಮಾಡುವೆವು' …ರು ಅದಕ್ಕೆ ಅವಳು ಮಾತಾಡಲಿಲ್ಲ. ಈ ಮಾತುಗಳನ್ನು ಕೇಳು… …ಒಳಗೆ ಅಡಿಗೆ ಮನೆಗೆ ಹೋಗಿ ಒಲೆಯಿಂದ ಬೆಂಕಿ ಉರಿಸಿ, ದೀಪ …ಹಚ್ಚುವ ಬನಕೆಯನ್ನೂ (?) ಒಂದು ಘಟ್ಟಿಯಾದ ಕೋಣ… …ಕಟ್ಟಿದ ಹುರಿ ಹಗ್ಗವನ್ನೂ ಒಂದು ದೊಡ್ಡ ಕತ್ತಿಯನ್ನೂ …ತಯಾರಿಸಿಟ್ಟಳು. ಇಷ್ಟರಲ್ಲಿ ಗೌಳ್ಳರ ಪ್ರಾಣ ತೆಗೆದು ಬಿ… …ಅವರ ಹೆಂಡತಿಯು ಬೊಬ್ಬೆ ಹಾಕಿದಳು. ಬೊಬ್ಬೆಯನ್ನು … ಅವರ ಒಕ್ಕಲು ಮುದಿಕುಂಬಾರನು ಓಡಿ ಬಂದನು. ಅವನು …ಕೂಡಲೇ ಅವನನ್ನು ಅಲ್ಲಿದ್ದ ಒಂದು ಕಂಭಕ್ಕೆ ವಸ್ತ್ರದಿಂದ …ಯಾಗಿ ಹೆಮ್ಮುಡಿ ಹಿಡಿದು ಕಟ್ಟಿದರು. ಅವನ ಮನೆಯವರು …ರು. ಬಂದ ಕೂಡಲೇ ಅವರನ್ನು ಒಬ್ಬ ಕಳ್ಳನು ಹೆದರಿಸಿ ಓಡಿಸಿ… …ನು ಆ ಹೆಂಗಸು ಮಕ್ಕಳು ಅವರ ಗುಡಿಸಲಿಗೆ ಓಡಿ ಬಾಗಿಲು …ಟ್ಟಿ ಸುಮ್ಮನೆ ಪ್ರಾಣ ಕಳಕೊಳ್ಳುವದು ಬೇಡವೆಂದು ಮೌನವಾ…ಗಿದ್ದರು.

ಕಳ್ಳರು ಎಷ್ಟು ಗೌಜಿಮಾಡಿದರೂ ಗೌಳ್ಳರ ಹೆಂಡತಿ ಬಾಗಿ… …ಯದ್ದರಿಂದ ಕನ್ನಹಾಕಿ ಗೋಡೆ ತೂತುಮಾಡುವದೆಂದು …ಯಿಸಿ ಕನ್ನಹಾಕಲಾರಂಭಿಸಿದರು. ಒಬ್ಬ ಕಳ್ಳನು ತನ್ನ ಕಾಲು… …ನ್ನು ತೂತಿನೊಳಕ್ಕೆ ಹಾಕಿದನು. ಮೊಣಕಾಲುವರೆಗೆ ಒಳಗೆ …ದ ಕೂಡಲೇ ಆ ಹೆಂಗುಸು ಬಂದು, ತನ್ನ ಹಗ್ಗದಿಂದ ಎ ಕೋಣ… …ನ್ನು ಉಳಿನ್ನಾವಕ್ಕೆ (?) ಎತೆಹೂಡಿ ಕಟ್ಟುವ ಹಾಗೆ ಎರಡು ಕಾಲುಗಳ… ಬಿಗಿಯಾಗಿ ಕಟ್ಟಿ, ಹಗ್ಗದ ನಡುವಿಗೆ ಬನಕೆಯನ್ನು ಸುರಿದಳು. …ಸುರಿದದ್ದರಿಂದ ಕಾಲುಗಳನ್ನು ಹಿಂತೆಗೆಯುವದಕ್ಕಾಗಲಿಲ್ಲ. …ಗಳು ಹೇಳುವ ಹಾಗೆ "ತ್ರಿಶಂಕುವಿನ ಸ್ವರ್ಗ" ವೆಂಬಂತೆ …ನ ಸ್ಥಿತಿಯಾಯಿತು. ಕಾಲು ಮೇಲೆ, ತಲೆ ಕೆಳಗಾಗಿ ನಿಲ್ಲ… …ಯಿತು.

…ನ್ನೊಬ್ಬನು ಇವನನ್ನು ಬಿಡಿಸಬೇಕೆಂದು ಆಲೋಚನೆಮಾಡಿ, …ಯ ಮತ್ತೊಂದು ಕಡೆಯಲ್ಲಿ ದ್ವಾರಮಾಡಿ, ತಲೆಹಾಕಿದನು. …ಳಗೆ ನೀಡುತ್ತಲೇ ಆ ಹೆಂಗಸು ತನ್ನ ಕತ್ತಿಯಿಂದ ದೊಡ್ಡ …ಡೆಯಾಗಿ ಕಳ್ಳನಿಗೆ ಸ್ಮೃತಿ ತಪ್ಪಿ ಅಲ್ಲೇ ನಿಂತಹಾಗೆ ಆಗಿ… …ಇನ್ನೆರಡು ಪಟ್ಟುಕೊಟ್ಟು ಆ ಹೆಂಗಸು ಅವನ ತಲೆ ಒಳಗೆ …ವ ಹಾಗೂ, ಮುಂದ ಹೊರಗೂ ಆಗುವ ಹಾಗೆ ಮಾಡಿದಳು. …ಕಳ್ಳರು ಆ ಮುಂಡವನ್ನು ಹೊತ್ತುಕೊಂಡು ಬೇಗನೆ ಓಡಿದರು. …ಟ್ಟಿ ನೇತಾಡುತ್ತಿರುವ ಕಳ್ಳನೂ ಮುದಿಕುಂಬಾರನೂ ಅಲ್ಲೇ …ರು. ಚನ್ನಾಗಿ ಬೆಳಗಾದ ತರುವಾಯ ಆ ಹೆಂಗಸು ಬಂದು ಮುದಿ… …ವನನ್ನು ಬಿಚ್ಚಿ ಪಟೇಲರ ಮನೆಗೆ ಕಳುಹಿಸಿ, ಪಟೇಲರನ್ನು ಕರೆ… …ರ್ಟುಮಾಡಿಸಿ, ಪೊಲೀಸಿನವರು ಬಂದು, ಇದ್ದ ಕಳ್ಳನನ್ನು …ನಲ್ಲಿಟ್ಟರು. ಎಲ್ಲರೂ ಈ ಹೆಂಗಸನ್ನು ನೋಡಲಿಕ್ಕೆ …ಧೈರ್ಯದ ಬಾಕಿಯಲ್ಲೆಂಟು (?)

ಎಂ. ಜಿ.

ಮತವನ್ನು ಕುರಿತು ಹ್ಯಾಗೆ ಚರ್ಚಿಸಬೇಕು?—೪.

ಮೊನ್ನೆ ದಿನ ಅಂದರೆ ಮಂಗಳವಾರ ಕ್ರಿಸ್ಮಸ್ ಎಂಬ ಕ್ರೀಸ್ತನ …ತ್ಸವವನ್ನು ಆಚರಿಸಲಾಯಿತಷ್ಟೆ. ಕ್ರೀಸ್ತನು ಹುಟ್ಟುವ… …ವೆಂಬ ಸಂಗತಿಯನ್ನು ಯೆಹೂದ್ಯರ ಪ್ರವಾದಿಗಳಲ್ಲೊಬ್ಬನು …ಕಾಲಕ್ಕೆ ಹಿಂದೆಯೇ ಕಾಲಜ್ಞಾನವನ್ನು ನುಡಿದಿದ್ದನು. ಆ ನು… …ಹಾವದಂದರೆ —"ನಮಗೋಸ್ಕರ ಒಂದು ಮಗು ಹುಟ್ಟಿದೆ …ಹೆಗಲಿನ ಮೇಲೆ ರಾಜ್ಯಭಾರವನ್ನು ಹೊತ್ತಿದ್ದಾನೆ. ಆತನ ಹೆ… …ಸಮಾಧಾನದ ಪ್ರಭು. ಆತನ ರಾಜ್ಯದ ಹೆಚ್ಚುವಿಕೆಗೂ ಸಮಾ… …ಕ್ಕೆ ಅಂತ್ಯವೇ ಇರುವುದಿಲ್ಲ" (ಯೆಶಾ. ೯ : ೬). ಈ ಕಾ… …ನ ನುಡಿಯ ಪ್ರಕಾರವಾಗಿ ಯೇಸುರಕ್ಷಕನು ಹುಟ್ಟಿದ ಕಾಲದ …ವದೂತರು—"ಭೂಮಿಯಲ್ಲಿ ಸಮಾಧಾನವು! ಮನುಷ್ಯರೊ… …ದಯೆಯು!" ಎಂದು ದಿವ್ಯಗಾನವನ್ನು ಮಾಡಿದರೆಂಬುದಾಗಿ ಸು… …ಗ್ರಂಥದಲ್ಲಿ ಬರೆದಿದೆ.

…ಮಾಧಾನದ ಪ್ರಭುವಾಗಿಯೂ ಭೂಲೋಕದಲ್ಲಿ ಸಮಾಧಾನವ… …ಸ್ಥಾಪಿಸುವದಕ್ಕೆ ಅವತರಿಸಿದವನಾಗಿಯೂ ಇರುವ ಯೇಸುವಿನ …ಚರಿತ್ರೆಯು ಇಂಥಾದ್ದಾಗಿರಲು ಈ ರಾಜಧಾನಿಯಲ್ಲಿ ಪ್ರಕಟಿಸ… …ತ್ತಿರುವ ಬಂಧಾನೊಂದು (?) ಪತ್ರಿಕೆಯಲ್ಲಿ ಯೇಸುಕ್ರೀಸ್ತನು ಹೇಳಿ… …ದ ಮಾತನ್ನು ಉದಾಹರಿಸಿ—ಕ್ರೀಸ್ತನು ಸಮಾಧಾನವನ್ನುಂಟು …ಮಾಡುವದಕ್ಕೆ ಬರಲಿಲ್ಲ, ಕತ್ತಿಯನ್ನು ಉಂಟು ಮಾಡುವದಕ್ಕೆ ಬಂ… …, ಆದದರಿಂದ ಆತನ ಭಕ್ತರು ಆ ಅಪ್ಪಣೆಯ ಪ್ರಕಾರವಾಗಿ …ವನ್ನು ಬಲಾತ್ಕಾರದಿಂದ ತಮ್ಮ ಮತಕ್ಕೆ ಸೇರಿಸಿಕೊಳ್ಳುವ …ದಲ್ಲಿ ಮಹಾ ದುಃಖವನ್ನೂ ಭೇದವನ್ನೂ ಕಲ್ಪಿಸುವವರಾಗಿ… …ಎಂದು ಬರೆದಿರುವದನ್ನು ನೋಡಿ ನಮಗೆ ಬಹಳ ವ್ಯಸನ …ಯಿತು. ಆ ಸ್ವಾಮಿಯ ಚರಿತ್ರೆಯನ್ನು ಪರಿಶೀಲನೆ ಮಾಡಿ… …ಆತನು ತನ್ನ ಮತಪ್ರಸಾರಣಕ್ಕಾಗಿ ಬಲಾತ್ಕಾರವನ್ನೂ ಉಪ… …ಯೋಗಿಸಲಿಲ್ಲ. ಹಾಗೆ ಮಾಡಬೇಕೆಂದು ತನ್ನ ಶಿಷ್ಯರಿಗಾಗಲಿ ಅಪ್ಪಣೆ… …ನ್ನು ಕೊಡಲಿಲ್ಲವೆಂದು ಪರಿಷ್ಕಾರವಾಗಿ ಗೊತ್ತಾಗುವದು. ನಿಜ… …ಯು ಹೀಗಿರುವಲ್ಲಿ ಆತನ ಮತಕ್ಕೆ ಎದುರಾಳಿಗಳಾದವರು ಇಲ್ಲ… …ಆರೋಪಣೆ ಮಾಡುವದನ್ನು ನೋಡಿ ನಮ್ಮ ಮನಸ್ಸು ನೋ… …ಯುತ್ತದೆ. ಈ ಮಾತು ಹಾಗಿರಲಿ.

"…ಒಕ್ಕಟ್ಟು ಮಾಡುವದಕ್ಕೆ ಬಂದಿಲ್ಲ, ಭೇದವನ್ನು ಹುಟ್ಟಿಸಲಿಕ್ಕೆ …ಕತ್ತಿಯನ್ನು ಹಾಕುವದಕ್ಕೆ) ಬಂದೆನು" ಎಂದು ಸ್ವಾಮಿ… …ಹೇಳಿದ ವಾತಿನ ಅಭಿಪ್ರಾಯವೇನೆಂಬುದಾಗಿ ಆಲೋಚಿಸು… …ಈ ಉತ್ಸವಕಾಲಕ್ಕೆ ಸಮಯೋಚಿತವಾಗಿದೆ. ಈ ವಚನವನ್ನು …ಮತ್ತಾಯ ೧೦ ನೇ ಅಧ್ಯಾಯವನ್ನು ವಾಚಕರು ಲಕ್ಷ್ಯವಿ… …ಟ್ಟರೆ "ಕತ್ತಿ" ಎಂಬ ಪದವನ್ನು ಲಕ್ಷ್ಯಾರ್ಥದಲ್ಲಿಯಲ್ಲ, ಭಾವ್ಯಾ… …ಆತನು ಉಪಯೋಗಿಸಿದನೆಂದು ಗೊತ್ತಾಗುವುದು. ಈ ಮು… …ಹೇಳಿದ ಸಂದರ್ಭದಲ್ಲಿ ಯೇಸುಸ್ವಾಮಿಯು ತನ್ನ ಶಿಷ್ಯರನ್ನು …ಗಳಲ್ಲಿ ಆತ್ಮವಿಚಾರವನ್ನು ಕುರಿತು ಬೋಧಿಸುವದರ… …ಕಳುಹಿಸುವದಕಿದನು. ಅವರು ಅತನ ಬಳಿಯಿಂದ ಹೊರಡುವದಕ್ಕೆ ಮುಂಚೆ ಕೆಲವು ಬುದ್ಧಿವಾದಗಳನ್ನು ಹೇಳಿದನು. ಅವುಗಳಲ್ಲಿ ಒಂದೇನಂದರೆ—ಅವರು ಜನರ ಹಗೆತನಕ್ಕೆ ಗುರಿಯಾಗಲೇ ಬೇಕಾಗಿದೆ. ಅವರ ಯಜಮಾನನಾದ ತಾನೇ ಎಷ್ಟೋ ವಿರೋಧವನ್ನು ಕಟ್ಟಿಕೊಂಡಿರುವಲ್ಲಿ ಅವರು ಜನರ ವಿರೋಧಕ್ಕೆ ಗುರಿಯಾಗುವದೇನೂ ಆಶ್ಚರ್ಯವಲ್ಲ. ಜನರನ್ನು ಕನಿಕರಿಸಿ ರೋಗಪರಿಹಾರವನ್ನು ಮಾಡುತ್ತಿದ್ದ ತನ್ನ ಕೆಲಸವು ದೈವಿಕ ಕಾರ್ಯವಲ್ಲ, ಪೈಶಾಚಕೃತ್ಯವೆಂದು ನಿಂದಿಸಿದ ಬಳಿಕ ಆ ಶಿಷ್ಯರಾದವರು ವಿರೋಧವನ್ನೂ ನಿಂದೆಯನ್ನೂ ದೂಷಣೆಯನ್ನೂ ಹೊಂದುವುದರಲ್ಲಿ ಆಶ್ಚರ್ಯವೇನಿದೆ? ಹೀಗಿರುವದರಿಂದ ನೀವು ಇಂಥ ಕಷ್ಟಪರಂಪರೆಗಳನ್ನು ಅನುಭವಿಸಲೇ ಬೇಕಾಗಿದೆ. ಯಜಮಾನನೇ ಕಷ್ಟವನ್ನು ಹೊಂದಿದ ಮೇಲೆ ಆಳುಗಳ ಪಾಡಂತೂ ಗೊತ್ತೇ ಇದೆ ಎಂದೀ ಪ್ರಕಾರವಾಗಿ ಆ ಶಿಷ್ಯರಿಗೆ ಹೇಳುವ ಸಂದರ್ಭದಲ್ಲಿ ಆತನು ಈ ಮಾತನ್ನು ಅವರಿಗೆ ಹೇಳಿದನು. ಅದರ ಅಭಿಪ್ರಾಯವೇನಂದರೆ—ಶಿಷ್ಯರೇ, ನೀವು ಸುವಾರ್ತೆಯನ್ನು ಸಾರಿ ಹೇಳುವಾಗ್ಯೆ ನೀವು ಹೇಳುವದನ್ನೆಲ್ಲಾ ಜನರು ಕೇಳಿ ಸಂತೋಷವಾಗಿ ಅಂಗೀಕರಿಸುವರೆಂದು ತಿಳಿಯಬೇಡಿರಿ. ನನ್ನ ಬೋಧನೆಯನ್ನು ಕೇಳಿದೊಡನೆಯೇ ಜನರಲ್ಲಿ ಅನ್ಯೋನ್ಯವೂ ಸಮಾಧಾನವೂ ಉಂಟಾಗುವದೆಂದೂ ನಿಮ್ಮ ಉಪದೇಶವನ್ನು ಕೇಳಿದವರೆಲ್ಲರೂ ನಿಮ್ಮನ್ನು ಮೆಚ್ಚುವರೆಂದೂ ಆಲೋಚಿಸಬೇಡಿರಿ. ನಿಮ್ಮ ಬೋಧನೆಯನ್ನು ಕೇಳಿದವರಲ್ಲಿ ಭೇದವೂ ಕಲಹವೂ ಹುಟ್ಟುವದು ಎಂಬುದೇ ಸ್ವಾಮಿಯ ಅಭಿಪ್ರಾಯವು. ಭೇದವನ್ನೂ ಕಲಹವನ್ನೂ ಸೂಚಿಸುವಂಥ "ಕತ್ತಿ" ಯೆಂಬುದನ್ನು ಈ ಶಿಷ್ಯರು ಉಪಯೋಗಿಸ ಬೇಕಾಯಿತು ಎಂಬಲ್ಲಿ ಇವರು ಅನ್ಯಮತಸ್ಥರನ್ನು ಸ್ವಮತಕ್ಕೆ ಸೇರಿಸಿಕೊಳ್ಳುವದಕ್ಕಾಗಿ ಖಡ್ಗವನ್ನು ತೆಗೆದುಕೊಂಡು ಬಲಾತ್ಕರಿಸುವರೆಂದರ್ಥವಾಗುತ್ತದೆಯೋ? ಇಲ್ಲವೇ ಇಲ್ಲ. ಆ ಶಿಷ್ಯರೇ ಶತ್ರುಗಳಿಂದ ಹಿಂಸಿಸಲ್ಪಡುವವರಾಗಿದ್ದರು. ಈ ವಾಕ್ಯವನ್ನೂ ಲೂಕನ ಸುವಾರ್ತೆ ೧೨: ೫೧ ರಲ್ಲಿ ಬರೆದಿರುವ ಇದೇ ಮಾತನ್ನೂ ಹೋಲಿಸಿ ನೋಡಿದರೆ ಯೇಸುಸ್ವಾಮಿಯ ಅಭಿಪ್ರಾಯವು ಪರಿಷ್ಕಾರವಾಗಿ ತಿಳಿಯುವದು.

ಇನ್ನೂ ಎರಡು ಸಂದರ್ಭಗಳಲ್ಲಿ "ಕತ್ತಿ" ಎಂಬ ಪದಕ್ಕೆ ಇದೇ ಕಷ್ಟ, ಕಲಹ, ಭೇದ ಎಂಬ ಭಾವಾರ್ಥವು ಅನ್ವಯಿಸುತ್ತದೆ. ಅವು ಯಾವವಂದರೆ—(೧) ಯೇಸುಸ್ವಾಮಿಯು ಕೂಸಾಗಿರುವಾಗ ಆತನ ತಾಯಿಯು ಆತನನ್ನು ದೇವಾಲಯಕ್ಕೆ ತೆಗೆದುಕೊಂಡು ಹೋಗಿರಲಾಗಿ ಅಲ್ಲಿ ಸಿಮೆಯೋನನೆಂಬೊಬ್ಬ ವೃದ್ಧಭಕ್ತನು ಆತನ ವಿಷಯವಾಗಿ ತಾಯಿಗೆ ಕಾಲಜ್ಞಾನವನ್ನು ನುಡಿದನು. ಆಗ್ಯೆ ಆತನು—ನಿನ್ನ ಪ್ರಾಣವನ್ನು ಖಡ್ಗವು ತಿವಿಯುವದು ಎಂದನು ಎಂದರೆ ಆಕೆಯು ತನ್ನ ಕುಮಾರನು ಶಿಲುಬೆಯ ಮೇಲೆ ಘೋರ ಮರಣಸಂಕಟಪಡುತ್ತಾ ತೂಗಾಡುತ್ತಿರುವದನ್ನು ನೋಡಿ ತನ್ನ ಹೃದಯವನ್ನು ಖಡ್ಗವು ತಿವಿದಂತೆ ತೀಕ್ಷ್ಣವಾದ ದುಃಖವನ್ನು ಹೊಂದುವಳು ಎಂದು ಅಭಿಪ್ರಾಯಪಟ್ಟನು.

> ಅರುಣೋದಯವು ಮೇಲಿನಿಂದ ನಮಗೆ
> ದರ್ಶನಕೊಟ್ಟು, ಕತ್ತಲಲ್ಲಿಯೂ ಮರಣಾಂಧಕಾರ
> ದಲ್ಲಿಯೂ ಕೂತಿರುವವರಾದ ನಮಗೆ ಪ್ರಕಾಶ
> ಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನ
> ಮಾರ್ಗದಲ್ಲಿ ನಡಿಸುವದು—
> ಲೂಕ ೧: ೭೮, ೭೯.

(೨) ಲೂಕನು ಬರೆದ ಸುವಾರ್ತೆಯ ೨೨ ನೇ ಅ. ೩೬ ನೇ ವಚನ.—"ಕತ್ತಿಯಿಲ್ಲದವನು ಕತ್ತಿಯನ್ನು ಕೊಂಡುಕೊಳ್ಳಲಿ" ಇದರಲ್ಲಿ ಆತನ ಅಭಿಪ್ರಾಯವು—ಆ ಶಿಷ್ಯರು ತಮ್ಮ ಮತಸಂರಕ್ಷಣೆಗಾಗಿ ಖಡ್ಗಗಳನ್ನು ತೆಗೆದುಕೊಂಡು ಯುದ್ಧಮಾಡಬೇಕೆಂಬುವುದೋ? ಎಷ್ಟುಮಾತ್ರವೂ ಅಲ್ಲ. ಈ ಮಾತನ್ನು ಆತನು ಹೇಳಿದ ಸಂದರ್ಭವನ್ನು ಆಲೋಚಿಸಿರಿ. ಸ್ವಾಮಿಯು ಇದನ್ನು ಹೇಳಿದ್ದು ತನ್ನ ಕಡೇ ದಿನದ ರಾತ್ರಿಯಲ್ಲಿಯೇ. ಆ ರಾತ್ರಿಯೇ ಮಹಾಯಾಜಕರು ಸಿಪಾಯಿಗಳನ್ನು ಕಳುಹಿಸಿ ತನ್ನನ್ನು ಹಿಡಿದುಕೊಂಡು ಹೋಗುವರೆಂದೂ ಮಾರಣೆಯ ದಿನ ತಾನು ಕೊಲ್ಲಲ್ಪಡುವದಕ್ಕಿದ್ದೇನೆಂದೂ ಚನ್ನಾಗಿ ತಿಳಿದಿದ್ದನು. ಆಗ್ಗೆ ಆತನು ತನ್ನ ಸುತ್ತಲೂ ಕುಳಿತಿರುವ ಶಿಷ್ಯರನ್ನು ನೋಡಿ—ಪೂರ್ವದಲ್ಲಿ ನಾನು ನಿಮ್ಮನ್ನು ಕಳುಹಿಸಿಕೊಟ್ಟಾಗ ನಿಮಗೇನಾದರೂ ಕೊರತೆಯುಂಟಾಯಿತೋ? ಇಲ್ಲವೆ ನಿಮಗೆ ಯಾವ ಅಪಾಯವಾದರೂ ಸಂಭವಿಸಿತೋ? ಇಲ್ಲವಲ್ಲಾ. ಈಗಲಾದರೋ ನಿಮಗೊಂದು ಅಪಾಯವು ಒದಗುವದಕ್ಕಿದೆ. ಯುದ್ಧಕಾಲದಲ್ಲಿ ಸಿಪಾಯಿಗಳಿಗೆ ಎಂಥ ಪ್ರಾಣವಿಪತ್ತುಂಟಾಗುತ್ತದೆಯೋ, ಅಂಥ ವಿಪತ್ತಿನಿಂದ ಬಿಡುಗಡೆಯನ್ನು ಹೊಂದುವದಕ್ಕೆ ಎಂಥ ಧೈರ್ಯವು ಅವರಿಗೆ ಬೇಕೋ ಅಂಥ ವಿಪತ್ತು ನಿಮ್ಮ ಸಮೀಪಕ್ಕೆ ಬಂದಿದೆ, ಅದಕ್ಕೆ ತಕ್ಕ ಧೈರ್ಯವೂ ನಿಮಗೆ ಬೇಕು. ಕತ್ತಿಗಳನ್ನು ತೆಗೆದುಕೊಳ್ಳಿರಿ ಅಂದನು. ಶಿಷ್ಯರು ಯೇಸುಸ್ವಾಮಿಯ ಅಭಿಪ್ರಾಯವನ್ನು ಸರಿಯಾಗಿ ಗ್ರಹಿಸದೆ ಹೋದರು. ಅವರಲ್ಲೊಬ್ಬನು—ಸ್ವಾಮೀ, ಇದೋ ಎರಡು ಕತ್ತಿಗಳುಂಟು ಅಂದನು. ಅವನು ತನ್ನ ಭಿಪ್ರಾಯವನ್ನು ಸರಿಯಾಗಿ ಗ್ರಹಿಸದೆ ಹೋದುದನ್ನು ತಿಳಿದು—ಸಾಕು, ಸಾಕು ಎಂದನು. ಹಾಗಂದರೆ, ಆತ್ಮವಿಚಾರದಲ್ಲಿ ಇಂಥ ಆಯುಧಗಳ ಪ್ರಯೋಗವು ನಿಷ್ಪ್ರಯೋಜಕಗಳಾಗಿವೆ ಎಂಬುವದೇ. ಆತನ ಈ ಅಭಿಪ್ರಾಯವು ಒಂದೆರಡು ಘಳಿಗೆಯೊಳಗಾಗಿ ಗೊತ್ತಾಯಿತು. ಆತನು ಗೆತ್ಸೆಮನೆ ಯೆಂಬ ತೋಟದಲ್ಲಿ ಶಿಷ್ಯರೊಡನೆ ಇರುತ್ತಿರಲು ಮಹಾಯಾಜಕನ ಆಳುಗಳು ಕತ್ತಿಗಳನ್ನೂ ದೊಣ್ಣೆಗಳನ್ನೂ ಹಿಡಿದುಕೊಂಡು ಬಂದರು. ಇವರನ್ನು ನೋಡಿ ಶಿಷ್ಯರಲ್ಲೊಬ್ಬನಾದ ಪೇತ್ರನು ಖತಿಗೊಂಡು ತಾನಿಟ್ಟುಕೊಂಡಿದ್ದ ಕತ್ತಿಯನ್ನು ಒರೆಯಿಂದ ತೆಗೆದು ತನ್ನ ಸ್ವಾಮಿಯನ್ನು ಹಿಡಿದುಕೊಳ್ಳುವದಕ್ಕೆ ಬಂದ ಒಬ್ಬ ಆಳನ್ನು ಹೊಡೆಯಲು ಅವನ ಕಿವಿಯು ಹರಿದು ಹೋಯಿತು. ಯೇಸು ಸ್ವಾಮಿಯು ಈ ಕೃತ್ಯವನ್ನು ಮೆಚ್ಚಿದನೋ? ಎಷ್ಟುಮಾತ್ರಕ್ಕೂ ಇಲ್ಲ. ಆತನು ಪೇತ್ರನನ್ನು ಗದರಿಸಿ—"ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು. ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು" ಅಂದನು. ಇದಲ್ಲದೆ ಉಳಿದ ಶಿಷ್ಯರು ಆತನನ್ನು ಕುರಿತು—"ಸ್ವಾಮೀ, ಕತ್ತಿಯಿಂದ ಹೊಡೆಯೋಣವೋ" ಎಂದು ಕೇಳಲು, ಆತನು ಅವರಿಗೆ—(ನನ್ನನ್ನು ಎದುರಾಳಿಗಳು ಹಿಡಿದು ಕೊಲ್ಲುವವರಾದರೂ ಬೆಂಕಿಯಾಲ್ಲ) ಬಿಡಿರಿ, ತಂದೆಯು ನನಗೆ (ಮರಣವೆಂಬುದನ್ನು) ಪಾತ್ರೆಯಲ್ಲಿ ತುಂಬಿಕೊಟ್ಟಿರಲಾಗಿ ನಾನದನ್ನು ಕುಡಿಯದೆ ಇರುವದುಂಟೇ? ಅಂದನು.

ಯೇಸುಸ್ವಾಮಿಯು ಮೇಲೆ ಕಂಡ ರೀತಿಯಲ್ಲಿ ಹೇಳಿರುವದನ್ನೆಲ್ಲಾ ಪರ್ಯಾಲೋಚಿಸಿದರೆ ಭೂಲೋಕದ ರಾಜ್ಯಸ್ಥಾಪನೆಗೆ ಅವಶ್ಯಕವಾಗಿರುವ ಬಲಾತ್ಕಾರವೆಂಬ ಕತ್ತಿ ಮೊದಲಾದ ಆಯುಧಗಳನ್ನು ಮತವಿಷಯಗಳಲ್ಲಿ ಉಪಯೋಗಿಸುವದು ತಪ್ಪೆಂದು ಬೋಧಿಸಿದನೆಂಬುದಾಗಿ ಪರಿಷ್ಕಾರವಾಗಿ ತಿಳಿದುಕೊಳ್ಳುತ್ತೇವಲ್ಲವೇ? ಆತ್ಮಭಾವದ ರಾಜ್ಯವನ್ನು ಸ್ಥಾಪಿಸುವದಕ್ಕೆ ಈ ಕತ್ತಿಯೇ ಮೊದಲಾದ ಆಯುಧಗಳು ಕೆಲಸಕ್ಕೆ ಬಾರವು. ಸ್ವಾಮಿಯನ್ನು ಎದುರಾಳಿಗಳು ಹಿಡಿದುಕೊಂಡು ಹೋಗಿ ಪಿಲಾತನ ಮುಂದೆ ನಿಲ್ಲಿಸಲು ಅವನು—"ನೀನು ಯೆಹೂದ್ಯರ ಅರಸನೋ"? ಎಂದು ಕೇಳಲು ಆತನು ಅವನಿಗೆ—ನನ್ನ ರಾಜ್ಯವು ಈ ಲೋಕಕ್ಕೆ ಸಂಬಂಧಪಟ್ಟದ್ದಲ್ಲ, ನನ್ನ ರಾಜ್ಯವು ಈ ಲೋಕಕ್ಕೆ ಸಂಬಂಧಪಟ್ಟದ್ದೇ ಆಗಿದ್ದರೆ ನಾನು ಯೆಹೂದ್ಯರ ಕೈಗೆ ಸಿಕ್ಕದ ಹಾಗೆ ನನ್ನ ದಾಳುವೆಯವರು (?) ನನ್ನ ಪಕ್ಷವಾಗಿ ನಿಂತು ಯುದ್ಧ ಮಾಡುವರು ಅಂದನು. ಯೇಸುಸ್ವಾಮಿಯಂತೆ ಭೂಲೋಕದಲ್ಲಿ ಸಾತ್ವಿಕತ್ವವನ್ನು ಪ್ರದರ್ಶನ ಮಾಡಿದವರು ಬೇರೆ ಯಾರೂ ಇಲ್ಲ. ಬಲಾತ್ಕಾರವನ್ನು ಉಪಯೋಗಿಸುವದಕ್ಕೆ ಬದಲಾಗಿ ತಾನೇ ಅತ್ಯಂತ ಘೋರವಾದ ಸಂಕಟವನ್ನು ಪಡಲೂ ತಾಳುವದಕ್ಕೆ ಒಪ್ಪಿದವನು. ಬಲಾತ್ಕಾರದಿಂದ ರಾಜ್ಯವನ್ನು ಸ್ಥಾಪಿಸಿ ಐಹಿಕಸುಖಸಾಮ್ರಾಜ್ಯಕ್ಕೆ ಒಡೆಯನಾಗೆಂದು ಸ್ವದೇಶೀಯರು ಅಪೇಕ್ಷಿಸಿದ್ದನ್ನು ಸ್ವಲ್ಪಮಾತ್ರವಾದರೂ ಲಕ್ಷಿಸದೆ ಅವರಿಂದ ತಿರಸ್ಕೃತನಾದ ಇದೇ ಯೇಸುಕ್ರೀಸ್ತನು ತನ್ನ ಶಿಷ್ಯರಿಗೆ ಬಲಾತ್ಕಾರವನ್ನು ಕೈಗೊಳ್ಳಿರೆಂದು ಹೇಳಿಕೊಟ್ಟನೆಂಬುದಾಗಿಯೂ ಆತನ ಭಕ್ತರ ಧರ್ಮತತ್ವವೇ ಬಲಾತ್ಕಾರವೆಂಬುದಾಗಿಯೂ ಸೂಚಿಸಿದರೆ ಅದಕ್ಕಿಂತ ಕ್ರೂರವಾದ ಮಾನಭಂಗವು ಬೇರೆ ಯಾವದಾದರೂ ಉಂಟೇ?

ಯೇಸುಸ್ವಾಮಿಯು ತನ್ನ ಶಿಷ್ಯರಿಗೆ ಮಾತ್ರವಲ್ಲದೆ ಭೂಲೋಕದಲ್ಲಿ ಸತ್ಯವ್ರತರಾಗಿ ಜೀವಿಸಬೇಕೆಂದಿರುವವರೆಲ್ಲರಿಗೂ ಜನವಿರೋಧವೂ ಅಪವಾದವೂ ದೂಷಣೆಯೂ ಬರುವವೆಂದು ಮುಂಚಿತವಾಗಿಯೇ ಎಚ್ಚರಿಸಿರುವದರಿಂದ ನಾವು ಆತನನ್ನು ಘನಪಡಿಸುತ್ತೇವೆ. ಆತನನ್ನು ನಂಬುತ್ತೇವೆ. ನಿಮ್ಮ ಕಾರ್ಯದಲ್ಲಿ ಸುಲಭವಾಗಿ ಜಯವಾಗುತ್ತದೆಂದು ಆತನು ಸುಳ್ಳು ಸುಳ್ಳಾಗಿ ಮಾತುಕೊಡುವದಿಲ್ಲ. "ನಾನು ಒಕ್ಕಟ್ಟನ್ನಲ್ಲ, ಭೇದವನ್ನೇ ತಂದಿರುತ್ತೇನೆ" ಅನ್ನುತ್ತಾನೆ. ಇದು ಸತ್ಯವಾದ ಮಾತು. ನೀತಿಯನ್ನು ಸತ್ಯವನ್ನು ಬೋಧಿಸುವದರಿಂದ ಎರಡು ಫಲಗಳು ಅವಶ್ಯಕವಾಗಿ ಹುಟ್ಟುತ್ತವೆ. ಒಂದೇನಂದರೆ—ಆ ಸತ್ಯವನ್ನೂ ನೀತಿಯನ್ನೂ ಯಾರು ಅಂಗೀಕರಿಸುತ್ತಾರೋ ಅವರು ಧನ್ಯರಾಗುವರು. ಅದನ್ನು ಯಾರು ಅಂಗೀಕರಿಸದೆ ತಿರಸ್ಕರಿಸುತ್ತಾರೋ ಅವರು ನ್ಯಾಯಾನ್ಯಾಯ ವಿವೇಚನೆಯಿಲ್ಲದವರಾಗಿ ಮೂರ್ಖತ್ವದಿಂದ ಸತ್ಯಕ್ಕೆ ಶತ್ರುಗಳಾಗುತ್ತಾರೆ. ಈ ಪ್ರಕಾರ ಸತ್ಯಪ್ರಸಾರಣ ಕಾರ್ಯದಲ್ಲಿ ಯಾವಾಗಲೂ ಭೇದವೂ ಕಲಹವೂ ಅಗತ್ಯವಾಗಿ ಹುಟ್ಟುತ್ತವೆ.

ಈ ಸಂದರ್ಭದಲ್ಲಿ ಒಕ್ಕಟ್ಟೂ ಸಮಾಧಾನವೂ ಇರುವುದೇ ಇಲ್ಲವೋ ಎಂದು ಕೇಳುತ್ತೀರಾ? ಯೇಸುಸ್ವಾಮಿಯು ಅವತರಿಸಿದ್ದರಲ್ಲಿ ತನ್ನೊಡನೆ ಭೂಲೋಕಕ್ಕೆ ಸಮಾಧಾನವನ್ನು ತಂದನೋ ಇಲ್ಲವೋ? ಆತನು ನಿಜವಾಗಿ ಸಮಾಧಾನವನ್ನು ತಂದನು. ನಿಜವಾಗಿ ಸಮಾಧಾನವನ್ನು ದಯಪಾಲಿಸುತ್ತಾನೆ. ನಾವು ಮೇಲೆ ಉದಾಹರಿಸಿರುವ ಆತನ ವಾಕ್ಯಕ್ಕೂ ಇದಕ್ಕೂ ವಿರೋಧವೇನೂ ಇಲ್ಲ. ಕತ್ತಿಯನ್ನು ತೆಗೆದುಕೊಳ್ಳಿರಿ ಎಂದು ಆತನು ಹೇಳಿದ ಸಾಯಂಕಾಲವೇ ಇನ್ನೊಂದು ಮಾತನ್ನು ಹೇಳಿದನು. ಅದೇನಂದರೆ.—"ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ" ಎಂಬುದೇ. ಈ ಶಾಂತಿಯು ಅಂತರ್ಯವಾದದ್ದು. ಎಷ್ಟೇ ಕಷ್ಟಗಳೂ ಹಿಂಸೆಗಳೂ ಆವರಿಸಿಕೊಂಡರೂ ಎಷ್ಟೇ ಹಗೆಗಳಾದವರು ಬಂದು ಮುತ್ತಿಕೊಂಡರೂ ಹೃದಯದಲ್ಲಿ ನೆಲೆಗೊಳ್ಳತಕ್ಕಂಥ ಶಾಂತಿಯನ್ನೇ ಯೇಸುಸ್ವಾಮಿಯು ಕೊಡುತ್ತಾನೆ. ಮತ್ತೂ ಅದೆಂಥ ಶಾಂತಿಯೆಂದರೆ—ತನ್ನ ಪಾಪವು ಕ್ಷಮಿಸಲ್ಪಟ್ಟಿದೆಯೆಂಬ ಅರಿವಿನಿಂದುಂಟಾಗುವ ಶಾಂತಿಯೇ; ಇಷ್ಟೇ ಅಲ್ಲ, ದೇವರು ಪ್ರೀತಿಸ್ವರೂಪನೂ ಸಮಸ್ತ ವಿಪತ್ತುಗಳಿಂದ ಬಿಡಿಸತಕ್ಕ ಶಕ್ತನೂ ಆಗಿದ್ದಾನೆಂಬ ನಂಬಿಕೆಯಿಂದ ಉಂಟಾಗುವ ಶಾಂತಿ ಮತ್ತು ನಮ್ಮ ತಂದೆಯಾದ ದೇವರ ಬಳಿಯಿಂದ ಬರುವಂಥಾದ್ದೂ ನಮ್ಮ ಸ್ವಾಮಿಯಾದ ಯೇಸುಕ್ರೀಸ್ತನ ಮುಖಾಂತರವಾಗಿ ಪವಿತ್ರಾತ್ಮನಲ್ಲಿ ದೊರಕುವಂಥಾದ್ದೂ ದೇವರೊಂದಿಗೆ ನಾವು ಹೊಂದುವಂಥಾದ್ದೂ ಆಗಿರುವ ಶಾಂತಿಯೇ.

ಕಡೆಯಲ್ಲಿ ಯೇಸುಸ್ವಾಮಿಯು ಭೂಲೋಕದಲ್ಲೆಲ್ಲಾ ಆ ಶಾಂತಿಯನ್ನು ನೆಲೆಗೊಳಿಸುವನು ಇದಕ್ಕೆ ಸಂಶಯವಿಲ್ಲ. ಇಂಥ ಪ್ರಭಾವಯುಕ್ತವಾದ ಶಾಂತಿಯು ಲಭಿಸುವದರೊಳಗಾಗಿ ಎಷ್ಟು ಕಲಹಗಳುಂಟಾಗಬೇಕೋ! ಎಷ್ಟು ಸಹಿಸಬೇಕಾಗಿದೆಯೋ! ಎಷ್ಟು ಧೈರ್ಯವನ್ನು ತಾಳಬೇಕಾಗಿದೆಯೋ!

"ಸಮಸ್ತ ಬುದ್ಧಿಗತೀತವಾದ ದೈವಸಮಾಧಾನವು ನಿಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಕಾಪಾಡಲಿ" ಎಂದು ಭಕ್ತನಾದ ಪೌಲನು ಹೇಳಿರುವ ಶ್ರೇಯಃಪ್ರಾರ್ಥನೆಯನ್ನೇ ನಾವೂ ಮಾಡಿ ಈ ಕ್ರೀಸ್ತಜಯಂತಿಯು ಶುಭವಾದವನ್ನು (?) ವಾಚಕರೆಲ್ಲರಿಗೆ ತಿಳಿಸಿ ಈ ಲೇಖನವನ್ನು ಮುಗಿಸುತ್ತೇವೆ.

ಮೈಸೂರು ಗೆಜೆಟ್ ಸಂಗ್ರಹ

೧೯೦೭ನೆ ಜನವರಿ ೧ ರ ಲಾಗಾಯಿತು ಹರಿಹರದ ಮತ್ತು ಆಲೂರಿನ ಸಬ್ ರೆಜಿಸ್ಟ್ರಿ ಆಫೀಸುಗಳನ್ನು ಆ ಸಬ್ ತಾಲ್ಲೂಕುಗಳ ಡೆಪ್ಟಿ ಅಮಲ್ದಾರರುಗಳ ಛಾರ್ಜಿನಲ್ಲಿ ಇಡಲ್ಪಡುವುದು.

ಅದೇ ಪ್ರಕಾರ ಆ ತಾರೀಖಿನಿಂದ, ಮುಂದೆ ಹೇಳುವ ಸಬ್ ರೆಜಿಸ್ಟ್ರಿ ಆಫೀಸುಗಳನ್ನು ಆಯಾ ತಾಲ್ಲೂಕಿನ ಶಿರಸ್ತೆದಾರ್ರ ಛಾರ್ಜಿನಲ್ಲಿ ಇಡಲ್ಪಡುತ್ತೆ:—ಸಾಗರ, ಸೊರಬ, ಶಿಕಾರಿಪುರ, ಹೊನ್ನಾಳಿ, ನಗರ, ಕೊಪ್ಪ, ಮೂಡಿಗೆರೆ.

ಮೇಲ್ಕಂಡ ಡೆಪ್ಟಿ ಅಮಲ್ದಾರರೂ ಶಿರಸ್ತೆದಾರರೂ ತಮ್ಮ ತಮ್ಮ ಆಫೀಸುಗಳಲ್ಲಿ ಎಕ್ಸ್ ಆಫಿಷಿಯೋ ಸಬ್ ರೆಜಿಸ್ಟ್ರಾರುಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು ಸಿಟಿ ಮುನಿಸಿಪಾಲಿಟಿ ವೈಸ್ ಪ್ರೆಸಿಡೆಂಟ್ ಮಿ॥ ಎಂ. ಜಿ. ಕೃಷ್ಣಸ್ವಾಮಿ ರಾಯರು ರಜದಿಂದ ವಾಪಸು ಬಂದು ನೊವೆಂಬರ್ ೨೪ ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದು ಮಾಡಿದೆ

ಮೈಸೂರ್ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಛೇರ್ಮನ್ ಮಿ॥ ಬಿ. ಸೀತಾರಾಮರಾಯರಿಗೆ ಕ್ರಿಸ್ಮಸ್ ರಜಾ ಅನುಸರಿಸಿ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ವಾಪಸು ಬರುವ ತನಕ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ಜೆ ಇ ಎ ಡಿಕ್ರೂಸ್ ಯವರು ಛೇರ್ಮನರವರ ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ರೆವಿನ್ಯೂ ಕಮೀಷನರ್ ಮಿ॥ ಎ ರಂಗಸ್ವಾಮಿಅಯ್ಯಂಗಾರ್ರಿಗೆ ಕ್ರಿಸ್ಮಸ್ ರಜಾ ಅನುಸರಿಸಿ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅವರು ರಜದ ಮೇಲಿರುವಾಗ್ಗೆ ಅವರ ೧ ನೆ ಅಸಿಸ್ಟೆಂಟರು ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮಿ॥ ಜಿ ಕೃಷ್ಣಮೂರ್ತಿನಾಯಡುರವರಿಗೆ ಡಿಸೆಂಬರ್ ೮ ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹೊನ್ನಾಳಿ ಸಬ್ ಡಿವಿಜನ್ ಅ॥ ಕಮೀಷನರ್ ಮಿ॥ ಸಿ. ವೆಂಕಟರಾಯರಿಗೆ ಕ್ರಿಸ್ಮಸ್ ರಜಾ ಸಹಿತ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಬೆಂಗಳೂರ್ ಸಬ್ ಡಿವಿಜನ್ ಅ॥ ಕಮೀಷನರ್ ಮಿ॥ ಪಿ. ಶ್ರೀನಿವಾಸರಾಯರನ್ನು ಹೊನ್ನಾಳಿ ಸಬ್ ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ

ಮೇಜರ್ ಎಚ್. ಇ. ಡ್ರೇಕ್ ಬ್ರಾಕ್ಮನ್‌ರವರು ಶ್ರೀಮನ್ ಮಹಾರಾಜರವರ ಸಂಗಡ ಡ್ಯೂಟಿಯ ಮೇಲೆ ಹೋಗಿರುವಾಗ್ಗೆ ಮಿ॥ ಪಿ. ಎಸ್ ಅಚ್ಯುತರಾಯರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮೀಷನರಾಗಿಯೂ ಜೈಲ್‌ಖಾನೆಗಳ ಇನ್ಸ್‌ಪೆಕ್ಟರ್ ಜನರಲ್‌ರವರಾಗಿಯೂ ಕೆಲಸನೋಡತಕ್ಕದ್ದು.

ಡಾಕ್ಟರ್ ಎಸ್ ವಿ ರಾಮಸ್ವಾಮಿಅಯ್ಯಂಗಾರ್ರು ತಮ್ಮ ಇತರ ಕೆಲಸಗಳೊಂದಿಗೆ ಬೆಂಗಳೂರ್ ಸೆಂಟ್ರಲ್ ಜೈಲಿನ ಛಾರ್ಜನ್ನು ವಹಿಸಿರತಕ್ಕದ್ದು

ಪ್ರೊಬೇಷನರಿ ಅ॥ ಕಮೀಷನರಾಗಿ ಹೊಸದಾಗಿ ನೇಮಿಸಲ್ಪಟ್ಟಿರುವವರ ಪೈಕಿ ಮಿ॥ ಎಸ್ ಪಿ ರಾಜಗೋಪಾಲಾಚಾರ್ರನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನಲ್ಲೂ, ಮಿ॥ ಡಿ ಶ್ರೀನಿವಾಸ ಅಯ್ಯಂಗಾರ್ರನ್ನು ರೆವಿನ್ಯೂ ಕಮೀಷನರವರ ಆಫೀಸಿನಲ್ಲೂ ಕೆಲಸ ಮಾಡುವಂತೆ ನೇಮಿಸಿದೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಸಬ್ ಅ॥ ಸರ್ಜನ್ ಮಿ॥ ಎಫ್ ನೊರೊನ್ಹಾಯವರನ್ನು, ಶಿವನಸಮುದ್ರಕ್ಕೆ ವರ್ಗಮಾಡಲ್ಪಟ್ಟ ಮಿ॥ ಟಿ. ಎಸ್. ಸಿದ್ದಪ್ಪನವರಿಗೆ ಬದಲಾಗಿ, ಮೂಡಿಗೆರೆ ಆಸ್ಪತ್ರೆಯ ಛಾರ್ಜಿಗೆ ವರ್ಗಮಾಡಿದೆ.

ಅ॥ ಸರ್ಜನ್ ಮಿ॥ ಅಚ್ಚಾಜೀನಾಯ್ಡುಯವರನ್ನು ಅಕ್ಟೋಬರ್ ೧ ರಿಂದ ೧ ನೇ ತರಗತಿಗೆ ಬಡ್ತಿಮಾಡಲಾಗಿದೆ.

ಶ್ರೀಮನ್ಮಹಾರಾಜರವರ ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ದಫೇದಾರ ದೇವರಾವ್ ಸಿಂಧೆಯವರನ್ನು ಲೋಕಲ್ ಸರ್ವಿಸ್ ರೆಜಿಮೆಂಟಿನ ೩ ನೇ ಗ್ರೇಡ್ ಜಮಾದಾರಿಗೆ ಡಿಸೆಂಬರ್ ೮ ರಿಂದ ವರ್ಗಮಾಡಿರುತ್ತಾರೆ.

ಮಿಲ್ಟೇರಿ ಸೆಕ್ರೆಟರಿಯವರ ಅಸಿಸ್ಟೆಂಟ್ ಮಿ॥ ಎಚ್. ಡಾಣಿಯವರಿಗೆ ಕ್ರಿಸ್ಮಸ್ ರಜಾ ಅನುಸರಿಸಿ ಜನವರಿ ೩ ರಿಂದ ೨೯ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ಸಿ. ಮಾಧವರಾಯರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಡಿಸೆಂಬರ್ ೨೭ ರ ತನಕ ಜಾಸ್ತಿಮಾಡಿದೆ.

೧೯೦೭ ನೆ ಜನವರಿ ೧ ರ ಲಾಗಾಯಿತು ರಿಜಿಸ್ಟರಾಗತಕ್ಕ ಪತ್ರಗಳಲ್ಲಿ ೩೦೦ ಮಾತುಗಳ ತನಕ ಯಾವ ರುಸುಮನ್ನೂ ತೆಗೆದುಕೊಳ್ಳದೆ ರಿಜಿಸ್ಟರ್‌ಮಾಡಬೇಕು. ಅದರ ಮೇಲ ಪ್ರತಿ ೧೦೦ ಮಾತಿಗೂ ಅಥವಾ ೧೦೦ ರೊಳಗಿರುವಷ್ಟು ಮಾತುಗಳಿಗೂ ೪ ಆಣೆಯಂತೆ ಹೆಚ್ಚು ರುಸುಂ ತೆಗೆದುಕೊಳ್ಳಲ್ಪಡುವುದು. ಪತ್ರದಲ್ಲಿ ೩೦೦ ಮಾತಿನೊಳಗೇ ಇದ್ದರೆ ರುಸುಂ ವಸೂಲ್ಮಾಡಲ್ಪಡುವುದು

೧೯೦೭ ನೆ ಜನವರಿ ೧ ರ ಲಾಗಾಯಿತು ಸಬ್ ರೆಜಿಸ್ಟ್ರಾರ್ ಆಫೀಸುಗಳಲ್ಲಿ ದಾಖಲೆನೋಡಬೇಕೆಂದು ಅರ್ಜಿಕೊಡುವವರು ಒಂದು ವಿಷಯಕ್ಕೆ ಅಥವಾ ಒಂದು ಪತ್ರಕ್ಕೆ ಸಂಬಂಧಪಟ್ಟ ಒಂದು ವರುಷದ ಪುಸ್ತಕ ಅಜಮಾಯಿಷಿ ಮಾಡುವುದಕ್ಕೆ ಒಂದು ರೂಪಾಯಿನಂತೆಯೂ, ಹೆಚ್ಚು ವರುಷಗಳ ದಾಖಲೆನೋಡಬೇಕಾದರೆ ಪ್ರತಿವರುಷಕ್ಕೂ ೪ ಆಣೆಯಂತೆಯೂ ರುಸುಂ ಕೊಡತಕ್ಕದ್ದು.

ಕ್ರಿಸ್ಮಸ್ ರಜಾ ಉದ್ದಿಶ್ಯ ಬರುವವಾರದ ಮೈಸೂರು ಗೆಜೆಟ್ಟು ಪ್ರಕಟವಾಗುವುದಿಲ್ಲ

ಮೈಸೂರು ಸರ್ಕಾರಿ ಹುಕುಮುಗಳು.

ಇನಾಂಗ್ರಾಮಗಳೂ ಸರ್ವೆಸೆಟ್ಲ್‌ಮೆಂಟೂ

ಇದುವರೆಗೆ ಇನಾಂತಿಗ್ರಾಮಗಳಿಗೆ ಸರ್ವೆಸೆಟ್ಲು ಆಗಬೇಕಾಗುವ ವಿಷಯವನ್ನು ಸರ್ವೆ ಕಮೀಷನರವರೇ ಗವರ್ನಮೆಂಟಿಗೆ ಸೀದಾ ಬರೆದು ತಿಳಿಸುತ್ತಲೂ ಅದರ ಮೇಲೆ ಗವರ್ನಮೆಂಟಿನವರು ಹುಕುಂ ಕೊಡುತ್ತಲೂ ಇದ್ದರು. ಈ ಭಾಗದಲ್ಲಿ ರೆವಿನ್ಯೂ ಕಮೀಷನರವರ ಅಭಿಪ್ರಾಯವನ್ನು ಕೋರುತ್ತಿರಲಿಲ್ಲ ಇನ್ನು ಮುಂದೆ ಗವರ್ನಮೆಂಟಿನವರು ಈ ನಡವಳಿಕೆ ಕ್ರಮವನ್ನು ಬದಲಾವಣೆಮಾಡಿ ಹುಕುಂಕೊಟ್ಟಿರುವುದೇನಂದರೆ—ಇನ್ನು ಮೇಲೆ ಅಂಥಾ ಗ್ರಾಮಗಳ ಹಿಡುವಳಿದಾರರು ಸರ್ವೆಸೆಟ್ಲು ಆಗಬೇಕೆಂಬ ಅರ್ಜಿಯನ್ನು ಮೊದಲು ಆಯಾ ಡೆಪ್ಟಿ ಕಮೀಷನರಿಗೆ ಕೊಡಬೇಕು. ಸರ್ವೆಸೆಟ್ಲು ಆಗಕೂಡದೆನ್ನುವುದಕ್ಕೆ ಯಾವತಕರಾರು ಮುಂತಾದ್ದೂ ಇರುವುದಿಲ್ಲವೆಂದು ಡೆಪ್ಟಿ ಕಮೀಷನರಿಗೆ ಕಂಡುಬಂದಲ್ಲಿ ಅವರು ಅರ್ಜಿದಾರರಿಂದ ಮುಚ್ಚಳಿಕೆ ಕದಾರುಗಳನ್ನು ಕ್ರಮವಾದ ರೀತಿಯಲ್ಲಿ ತೆಗೆದುಕೊಂಡು, ತಮ್ಮ ರಿಪೋರ್ಟು ಸಹಿತ ಆ ಕಾಗದಪತ್ರಗಳನ್ನೆಲ್ಲಾ ರೆವಿನ್ಯೂ ಕಮೀಷನರವರಿಗೆ ರವಾನೆ ಮಾಡತಕ್ಕದ್ದು. ಇವರು ಅದರ ಮೇಲೆ ತಮ್ಮ ಅಭಿಪ್ರಾಯಗಳನ್ನು ಕಾಣಿಸಿ ಗವರ್ನಮೆಂಟಿಗೆ ಕಳುಹಿಸುವರು ಆಗ ಗವರ್ನಮೆಂಟಿನವರು ಸರ್ವೆಸೆಟ್ಲು ಆಗಬೇಕೇ ಬೇಡವೇ ಎಂಬೀ ವಿಚಾರದಲ್ಲಿ ಹುಕುಂ ಕೊಡುವರು ಆ ತರುವಾಯ ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮೀಷನರವರು ಮುಂದಿನ ಅಮಲನ್ನು ಜರುಗಿಸತಕ್ಕದ್ದು

ಸಿಡುಬು ಹಾಕುವ ಇಲಾಖೆಯ ರಿಪೋರ್ಟು.

ಮೈಸೂರು ಸಂಸ್ಥಾನದಲ್ಲಿ ಸಿಡುಬಿನ ಹಾಲನ್ನು ತಯಾರುಮಾಡುವುದಕ್ಕೆ ಸರ್ಕಾರದವರು ಒಂದು ಕಾರ್ಖಾನೆಯನ್ನಿಟ್ಟು, ಅದರಲ್ಲಿ ತಯಾರಾದ ಹಾಲಿನಿಂದ ಪ್ರಜೆಗಳಿಗೆ ಸಿಡುಬು ಹಾಕುತ್ತಾರಷ್ಟೆ ಈ ಇಲಾಖೆಯಲ್ಲಿ ಕಳೆದ ೧೯೦೫ ನೆ ಸಾಲಿನಲ್ಲಿ ನಡೆದ ಕೆಲಸಗಳ ರಿಪೋರ್ಟು ಈಗ ಪ್ರಕಟವಾಗಿರುವುದು. ಇದರಲ್ಲಿ ಕಂಡ ಮುಖ್ಯ ವಿಷಯಗಳೇನಂದರೆ—೧೯೦೫ ನೆ ವರುಷದಲ್ಲಿ ೨೭೯ ಕರುಗಳಿಗೆ ಸಿಡುಬೆಬ್ಬಿಸಿ, ೧,೫೫೫,೮೭೮ ಜನರಿಗೆ ಹಾಕುವಷ್ಟು ಸಿಡುಬಿನ ಹಾಲನ್ನು ತೆಗೆದು, ಆ ಪೈಕಿ ೯೯,೬೪೧ ಜನರಿಗೆ ಆಗುವಷ್ಟನ್ನು ಈ ಸಂಸ್ಥಾನದ ಎಲ್ಲಾ ಭಾಗಗಳಿಗೂ, ೫೬,೧೮೩ ಜನರಿಗಾಗುವಷ್ಟನ್ನು ಸಂಸ್ಥಾನದ ಹೊರಭಾಗಗಳಿಗೂ ಕಳುಹಿಸಿಕೊಟ್ಟರು ಇದುವರೆಗೆ ಮದರಾಸ್ ಸರ್ಕಾರದವರು ತಮ್ಮ ಅಧಿಕಾರಕ್ಕೆ ಬೇಕಾಗುವಷ್ಟು ಸಿಡುಬಿನ ಹಾಲನ್ನು ನಮ್ಮ ಸಂಸ್ಥಾನದ ಕಾರ್ಖಾನೆಯಿಂದಲೇ ಕ್ರಯಕ್ಕೆ ತೆಗೆದುಕೊಳ್ಳುತ್ತಿದ್ದರು ಆದರೆ ಕಳೆದ ೧೯೦೪ ನೆ ಮೇ ತಿಂಗಳಿಂದ ಮದರಾಸ್ ಪಟ್ಟಣದಲ್ಲಿ ಅವರೇ ಬೇರೆ ಒಂದು ಕಾರ್ಖಾನೆಯನ್ನಿಟ್ಟುಕೊಂಡು ಸಿಡುಬಿನ ಹಾಲನ್ನು ತಯಾರುಮಾಡಿಸಿಕೊಳ್ಳುತ್ತಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಅವರು ಸಿಡುಬುಹಾಕುವ ಕೆಲಸ ಎಷ್ಟು ಮಟ್ಟಿಗೆ ಜಾರಿಯಲ್ಲಿತ್ತೆಂದರೆ—೧೯೦೫ ನೆ ವರುಷ ೮೬,೬೮೪ ಜನರಿಗೆ ಈ ಸಂಸ್ಥಾನದಲ್ಲಿ ಸಿಡುಬು ಹಾಕಿದರು, ಅಂದರೆ, ಹಿಂದಿನ ವರುಷಕ್ಕಿಂತಲೂ ೭,೬೫೩ ಜನರಿಗೆ ಹೆಚ್ಚಾಗಿ ಸಿಡುಬು ಹಾಕಿದಾರೆ ಈ ಪೈಕಿ ಮೈಸೂರು ಡಿಸ್ಟ್ರಿಕ್ಟಿನಲ್ಲಿಯೇ ೨೦,೩೦೧ ಜನರು ಹಾಕಿಸಿಕೊಂಡರು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ೩,೯೦೧ ಮಂದಿಗೆ ಹಾಕಿದರು. ಸಂಸ್ಥಾನಾಮಳೆ ಮೊದಲನೆಯ ಸಲ ಹಾಕಿಸಿಕೊಂಡವರು ೮೧,೬೦೦ ಮಂದಿ; ಎರಡನೇ ಸಲ ಹಾಕಿಸಿಕೊಂಡವರು ೪,೬೮೪ ಮಂದಿ. ಇವೆರಡು ಭಾಗಗಳಲ್ಲೂ ಹಿಂದಿನ ವರುಷಕ್ಕಿಂತ ಮೊದಲನೆ ಸಲ ಹಾಕಿಕೊಂಡವರು ೨,೦,೬೨೧ ಜನರೂ ಎರಡನೇ ಸಲ ಹಾಕಿಸಿಕೊಂಡವರು ೩,೦೩೭ ಜನರೂ ಹೆಚ್ಚಾಗಿರುತ್ತಾರೆ. ಆದಾಗ್ಯೂ ಮಲನಾಡು ಡಿಸ್ಟ್ರಿಕ್ಟುಗಳಲ್ಲಿ ಇನ್ನೂ ಹೆಚ್ಚಾಗಿ ಮುತುವರ್ಜಿ ವಹಿಸಿ ಸಿಡುಬು ಹಾಕುತ್ತಾ ಬರಬೇಕು ಸಿಡುಬು ಹಾಕುವ ಇಲಾಖೆಯವರ ಕೆಲಸವು ಹೋದ ವರುಷ ಸಾಮಾನ್ಯವಾಗಿ ತೃಪ್ತಿಕರವಾಗಿತ್ತು. ಆದಾಗ್ಯೂ ಕಡೂರ್ ಡಿಸ್ಟ್ರಿಕ್ಟ್ ಡೆಪ್ಟಿ ಕಮೀಷನರವರ ರಿಪೋರ್ಟನ್ನೂ ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೊನ್ನಾಳಿ ಡಿವಿಜನ್ ಛಾರ್ಜಿನಲ್ಲಿದ್ದ ಮಿ॥ ಕೆ ಮಾತಾಂಡರವರ ರಿಪೋರ್ಟನ್ನೂ ನೋಡುವಲ್ಲಿ ಆ ಪ್ರಾಂತ್ಯಗಳ ಕೆಲವು ಗ್ರಾಮಗಳಿಗೆ ಕೆಲವು ವರುಷಗಳಿಂದಲೂ ಸಿಡುಬು ಹಾಕತಕ್ಕವರು ಹೋಗಲೇ ಇಲ್ಲವೆಂದು ತಿಳಿದು ಬರುತ್ತದೆ. ಇದು ತೃಪ್ತಿಕರವಾಗಿಲ್ಲ. ಇಂಥಾ ಅಕ್ರಮವು ಮತ್ತೆ ನಡೆಯದಂತೆ ಆಯಾ ಡೆಪ್ಟಿ ಕಮೀಷನರುಗಳು ಸರಿಯಾದ ಏರ್ಪಾಡು ಮಾಡಿ, ಅದರ ಫಲಿತಾಂಶವನ್ನು ಗವರ್ನಮೆಂಟಿಗೆ ರಿಪೋರ್ಟು ಮಾಡಬೇಕಾಗಿದೆ ೧೯೦೫ ನೆ ವರುಷದಲ್ಲಿ ಸಿಡುಬು ಹಾಕುವ ಇಲಾಖೆಗೆ ಒಟ್ಟು ೨೦,೫೦೪ ರೂಪಾಯಿ, ಅಂದರೆ ಹಿಂದಿನ ವರುಷಕ್ಕಿಂತ ೬೦೫ ರೂಪಾಯಿ, ಕಮ್ಮಿಯಾಗಿ ಖರ್ಚಾಗಿರುವುದು ಇದು ಸಾಮಾನ್ಯವಾಗಿ ಪ್ರತಿ ಒಬ್ಬರಿಗೂ ಸಿಡುಬು ಹಾಕುವುದಕ್ಕೆ ೪ ಆಣೆಯಂತೆ ಆಯಿತು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಒಬ್ಬರಿಗೆ ಸಿಡುಬು ಹಾಕುವುದಕ್ಕೆ ೯ ಆ ೪ ಪೈ ನಂತೆಯೂ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ೩ ಆ. ೩ ಪೈ ನಂತೆಯೂ ಖರ್ಚಾಗಿರುವುದು. ಮ್ಯುನಿಸಿಪಾಲಿಟಿಗಳಲ್ಲಾದರೋ ಒಬ್ಬೊಬ್ಬರಿಗೆ ಸಿಡುಬುಹಾಕುವುದಕ್ಕೆ ೪ ಆ ೫. ಪೈನಂತೆ ಖರ್ಚಾಗಿದೆ.

ಶ್ರೀರಂಗಪಟ್ಟಣದ ಹವಾ ಮತ್ತು ಆರೋಗ್ಯವಿಚಾರಗಳು.

ಮೈಸೂರು ಸಂಸ್ಥಾನದ ಸ್ಯಾನಿಟರಿ ಕಮೀಷನರವರ ಅಸಿಸ್ಟೆಂಟ್ ಮಿ॥ ಪಲ್ಪುಯವರು ೧೯೦೫ ನೆ ಡಿಸೆಂಬರ್ ೩ ರಿಂದ ೫ ರವರೆಗೆ ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿನ ಪ್ರಜಾ ಆರೋಗ್ಯ, ಸ್ಯಾನಿಟೇಷನ್, ನೀರು ಮೊದಲಾದ ವಿಚಾರಗಳನ್ನು ಪರೀಕ್ಷೆಮಾಡಿ ಗವರ್ನಮೆಂಟಿಗೆ ರಿಪೋರ್ಟು ಕಳುಹಿಸಿದರು. ಅವರಲ್ಲಿ ಕಂಡ ಮುಖ್ಯ ಸಂಗತಿಗಳೇನಂದರೆ—

೧. ಡಾಕ್ಟರ್ ಪಲ್ಪುಯವರ ರಿಪೋರ್ಟು.

ಕಳೆದ ೧೮೯೧ ನೆ ಇಸವಿಯ ಸೆನ್ಸಸ್ ಪ್ರಕಾರ ಶ್ರೀರಂಗಪಟ್ಟಣದಲ್ಲಿದ್ದ ೧೨,೫೩೩ ಪ್ರಜಾಸಂಖ್ಯೆಯು ೧೯೦೧ ನೆ ಇಸವಿಯ ಜನಸಮಾರಿ ಪ್ರಕಾರ ೮,೫೮೪ ಕ್ಕೆ ಇಳಿಯಿತು ನಾನು ಪರೀಕ್ಷಿಸಿದಾಗ್ಗೆ ಪ್ರಜಾಸಂಖ್ಯೆಯು ಸುಮಾರು ೬,೨೫೮ ಇದ್ದಿರಬಹುದು. ೧೯೦೨—೦೩ ಮತ್ತು ೧೯೦೩—೦೪ ಈ ಎರಡು ಸಾಲುಗಳಲ್ಲಿ ವಿಷಮ ಶೀತಜ್ವರದಿಂದ ೨೬೭ ಜನರೂ, ಪ್ಲೇಗಿನಿಂದ ೧,೦೦೬ ಜನರೂ ಮೃತರಾದಂತೆ ಗೊತ್ತಾಗಿದೆ. ಆದರೂ ಜನನ ಮರಣಗಳ ಲೆಕ್ಕಗಳು ಸರಿಯಾಗಿ ಇಟ್ಟಿಲ್ಲವೆಂದು ಹೇಳಬಹುದು ನದಿಯಲ್ಲೂ ಊರಿನ ಅನೇಕ ಕಡೆ ಕೊಚ್ಚೆಗುಂಡಿಗಳೂ ನೀರಿನ ಹಳ್ಳಗಳೂ ಇರುವುದರಿಂದ ಅಲ್ಲಿ ಸೊಳ್ಳೆಗಳು ಹೆಚ್ಚಿ ಶೀತಜ್ವರವನ್ನು ಹುಟ್ಟಿಸುವವು. ಆ ಸ್ಥಳಗಳಲ್ಲಿ ನೀರು ನಿಲ್ಲದಂತೆ ಮಾಡಬೇಕು ಸಾಧ್ಯವಿಲ್ಲದಿದ್ದರೆ ನೀರಿನ ಮೇಲೆ ಕೆರೋಸಿನ್ ಎಣ್ಣೆಯನ್ನು ಚಲ್ಲಿಸಿ ಸೊಳ್ಳೆಗಳನ್ನು ಕೊಲ್ಲಬೇಕು. ಕ್ವಿನೈನ್ ಎಂಬ ಜ್ವರಹರಿ ಚೂರ್ಣವನ್ನು ಜನರಿಗೆ ಧಾರಾಳವಾಗಿ ಸೇವಿಸುವಂತೆ ಕೊಡಿಸಬೇಕು ಮತ್ತು ಬಚ್ಚಲನೀರು ಸರಾಗವಾಗಿ ಸಾಗಿಹೋಗಿ ಚೊಕ್ಕಟವಾಗಿರುವಂತೆ ಮಾಡಬೇಕು ಜನರು ವಾಸಮಾಡುವ ಮನೆಗಳು ಬಹಳ ಹಳ್ಳದಲ್ಲಿ ಕೊಳಕಾಗಿವೆ ವಾಸಕ್ಕೆ ಯೋಗ್ಯವಲ್ಲ. ಬೆಳಕು ಗಾಳಿ ಧಾರಾಳವಾಗಿ ಬೀಳುವಂತಿಲ್ಲ. ಕಳೆದ ಮೂರು ವರುಷಗಳಲ್ಲಿ ೩೧ ಮನೆಗಳನ್ನು ಮಾತ್ರ ಹೊಸದಾಗಿ ಕಟ್ಟಿದಾರೆ ಬಿಡಾಡಿಯಲ್ಲಾದರೋ ಯಾರೂ ಇನ್ನೂ ಮನೆ ಕಟ್ಟಿಲ್ಲ. ಮ್ಯುನಿಸಿಪಾಲಿಟಿಯವರು ಜನರಿಗೆ ನಿರ್ಬಂಧಪಡಿಸಿ ಆರೋಗ್ಯಕರವಾದ ಮನೆಗಳನ್ನು ಕಟ್ಟುವಂತೆ ಮಾಡಬೇಕು. ಕೋಟೆಯೊಳಗೆ ಬಂಗಲೆಗಳಿರುವ ಪ್ರದೇಶವೂ ಹೊರಗಡೆ ಆಸ್ಪತ್ರೆ ಇರುವ ಪ್ರದೇಶವೂ ಬಡಾವಣೆಗೆ ಚನ್ನಾಗಿವೆ ಮುಖ್ಯವಾಗಿ ಕಸ ಕಚಡಾ ಮುಂತಾದವು ಕ್ರಮವಾಗಿ ಮನೆ ಬೀದಿಗಳಿಂದ ಸಾಗುವುದಿಲ್ಲ ಮನೆಗಳಲ್ಲಿ ಜನರು ಮನೆಗೆ ಭಾವಿಗಳನ್ನು ಮಾಡಿಕೊಂಡಿದಾರೆ. ೭೦೦ ಮನೆಗಳಿಗೆ ಪಾಯಖಾನೆಮನೆಯೇ ಇಲ್ಲವೆಂದು ತಿಳಿಯುವುದು. ಪಬ್ಲಿಕ್ ಕಕ್ಕಸುಗಳೂ ಇರುವುದಿಲ್ಲ ಜನರು ಸಿಕ್ಕಿದ ಕಡೆಗಳನ್ನೆಲ್ಲಾ ಕೆಡಿಸುತ್ತಾರೆ. ಮ್ಯುನಿಸಿಪಲ್ ಕನ್ಸರ್ವೆನ್ಸಿ ಸಿಬ್ಬಂದಿಯವರಿಂದ ಸರಿಯಾಗಿ ಕಸವನ್ನು ತೆಗೆದುಕೊಳ್ಳುವುದಿಲ್ಲ. ಪ್ರಜೆಗಳಿಗೆ ಆರೋಗ್ಯಕರವಾದ ನೀರು ಸಿಕ್ಕುವುದಿಲ್ಲ ಕಾರಂಜಿಗಳನ್ನು ಕಟ್ಟಿ ೨೦೦ ವರುಷಗಳಾಗಿರಬಹುದು. ಅವುಗಳೆಲ್ಲಾ ಮಣ್ಣು ಕಚಡಾ ಸೇರಿ ಕೆಟ್ಟುಹೋಗಿವೆ. ನದಿಯ ನೀರು ಶುದ್ಧವಾಗಿಲ್ಲ ನಾಲೆಯ ನೀರಿಗೆ ಊರಿನ ಕೊಳಕು ಸೇರುವುದರಿಂದ ಅದೂ ಕೆಟ್ಟುಹೋಗಿದೆ ಕಾರಂಜಿಗಳನ್ನೂ ನಾಲೆಯನ್ನೂ ಚೊಕ್ಕಟವಾಗಿಡಬೇಕು ಸರ್ಕಾರದವರು ಒಳ್ಳೇ ನೀರು ದೊರಕುವಂತೆ ನಲ್ಲಿ ಏರ್ಪಾಡು ಮಾಡಬೇಕಾಗಿದೆ ಬಚ್ಚಲ ನೀರು ಸರಿಯಾಗಿ ಹೋಗುವುದಿಲ್ಲ ಅವನ್ನು ಚೊಕ್ಕಟಮಾಡಿಸಬೇಕು. ಗ್ರಾಮನೈರ್ಮಲ್ಯ ವಿಷಯದ ರೂಲನ್ನು ಜಾರಿಯಲ್ಲಿಟ್ಟಿಲ್ಲ.

೨. ಸ್ಯಾನಿಟರಿ ಕಮೀಷನರವರ ರಿಪೋರ್ಟು.

ಈಚೆಗೆ ಅಂದರೆ ೧೯೦೬ ನೆ ಜೂನ್ ೨ ರಲ್ಲಿ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮೀಷನರವರು ಗವರ್ನಮೆಂಟಿಗೆ ಪ್ರತ್ಯೇಕವಾಗಿ ಬರೆದ ರಿಪೋರ್ಟಿನ ಮುಖ್ಯ ಭಾಗಗಳೇನೆಂದರೆ—

ಶ್ರೀರಂಗಪಟ್ಟಣದ ಆರೋಗ್ಯವಿಚಾರದಲ್ಲಿ ಇದುವರೆಗೆ ರಿಪೋರ್ಟು ಪ್ರಕಟವಾಗಿಯೋ ಇಲ್ಲವೊ ಅಲ್ಲಿನ ಹವಾ ಮರಣಕರವಾದದ್ದು ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿದ್ದಾಗ್ಗ್ಯೂ ಅದನ್ನು ಕ್ರಮಪಡಿಸುವುದಕ್ಕೆ ಇದುವರೆಗೆ ಯಾವದೊಂದು ಪ್ರಯತ್ನವೂ ನಡೆದಿರುವುದಿಲ್ಲ ಯಾರೂ ಆ ಊರನ್ನೇ ಬಿಡಬೇಕೆಂದು ಹೇಳುವುದು ಹೊರತು ಆರೋಗ್ಯಕರವಾಗಿ ಮಾಡುವುದು ಸಾಧ್ಯವೆಂದು ಹೇಳುವವರಾಗಿಲ್ಲ. ಪೂರ್ವಕಾಲದಲ್ಲಿ ಶ್ರೀರಂಗಪಟ್ಟಣದೊಳಗೆ ಶೀತಜ್ವರವಿರಲಿಲ್ಲವೆಂದು ಕೆಲವರು ಅಭಿಪ್ರಾಯಪಡಬಹುದಾದರೂ ಅದಕ್ಕೆ ಸರಿಯಾದ ದೃಷ್ಟಾಂತಗಳೇನೂ ಇರುವುದಿಲ್ಲ. ಆದಾಗ್ಯೂ ಆಗಿದ್ದ ಪ್ರಜಾಸಂಖ್ಯೆಯನ್ನೂ ಇತರ ವಿಷಯಗಳನ್ನೂ ನೋಡಿದರೆ ಆರೋಗ್ಯವಾಗಿದ್ದಿತಲ್ಲೇ ಊಹಿಸಬೇಕಾಗುವುದು. ಪಟ್ಟಣದಲ್ಲಿ ಕಾರಂಜಿಗಳನ್ನು ಕಟ್ಟಿ ೨೦೦ ವರುಷವಾಯಿತು ಭೂಮಿಯೊಳಗಡೆ ಬಚ್ಚಲುಗಳು ತುಂಬಾ ಕೊಳಕಾಗಿರೋಣದರಿಂದ ವಾಂತಿಭೇದಿ ಉಪದ್ರವವು ತಲೆಹಾಕುವುದಕ್ಕೆ ಅವಕಾಶವಾಗಿದೆ ಆದರೂ ಈ ರೋಗದಿಂದ ಅಷ್ಟೇನೂ ಪ್ರಜಾಸಂಖ್ಯೆ ಕಡಿಮೆಯಾಗಿಲ್ಲ. ಮಲೇರಿಯಾ ಎಂಬ ಜ್ವರವೇ ಅದಕ್ಕೆ ಮುಖ್ಯಕಾರಣವಾಗಿರುವುದು ನಾನು ಶ್ರೀರಂಗಪಟ್ಟಣದಲ್ಲಿ ೧,೬೨೫ ಮನೆಗಳನ್ನು ಅಜಮಾಯಿಷಿಮಾಡಿದೆನು. ಅವುಗಳಲ್ಲಿ ಅನೇಕ ಪಾಳುಬಿದ್ದಿವೆ. ಮನೆಗಳೊಳಕ್ಕೆ ಹೋಗಿ ೬೩೦ ಜನರ ಆರೋಗ್ಯಸ್ಥಿತಿಯನ್ನು ಪರಿಕ್ಷೆಮಾಡಿದೆನು ಇನ್ನೂ ೧೩೬ ಮಂದಿ ಹೊರಗಡೆ ಇತರ ಕೆಲಸಗಳಿಗೆ ಹೋಗಿದಾರೆಂದು ಹೇಳಿದರು ಆ ಮಕ್ಕಳ ಪೈಕಿ ಶೇಕಡಾ ೩೫ ರಷ್ಟು ಮಕ್ಕಳಿಗೆ ಹೊಟ್ಟೆಯಲ್ಲಿ ಗಡ್ಡೆ ಇರುತ್ತದೆ ಅಲ್ಲಿಂದ ಸ್ಕೂಲುಗಳಿಗೆ ಹೋಗಿ ೬೭ ಮಕ್ಕಳನ್ನು ಪರೀಕ್ಷೆಮಾಡಿದ್ದರಲ್ಲಿ ಶೇಕಡಾ ೫೨ ಮಂದಿಗೆ ಹೊಟ್ಟೆಯಲ್ಲಿ ಗಡ್ಡೆ ಇರುವುದು ಗೊತ್ತಾಯಿತು ನಾನು ಅನೇಕ ಕಡೆ ಗಡ್ಡೆ ಬೆಳದಿರುವುದನ್ನು ನೋಡಿಬಲ್ಲೆನು ಆದರೆ ಇಷ್ಟು ಹೆಚ್ಚು ಜನರಿಗೆ ಈ ರೋಗವಿರುವುದು ಇನ್ನೆಲ್ಲೂ ಇಲ್ಲ. ಇದು ಭಯಂಕರವಾದದ್ದಾಗಿರುತ್ತದೆ. ಇದಕ್ಕೆ ಭೂಮಿಯೊಳಗಿರುವ ಬಚ್ಚಲುಗಳೇ ಕಾರಣವೆಂದು ತೋರುತ್ತದೆ. ಹೊಳೆಯಲ್ಲಿ ನೀರು ಕಡಮೆಯಾದಾಗ ಈ ಬಚ್ಚಲುಗಳಲ್ಲಿರುವ ಕೊಳೆತು ಪ್ರಜೆಗಳ ಆರೋಗ್ಯಕ್ಕೆ ಹಾನಿಯನ್ನುಂಟುಮಾಡುತ್ತದೆ. ಇದು ಹ್ಯಾಗಂದರೆ—ಆ ಬಚ್ಚಲುಗಳ ಬಾಯಿ ಇರುವ ಪ್ರದೇಶದಲ್ಲಿ ವಾಸಮಾಡತಕ್ಕವರಿಗೇ ಹೆಚ್ಚಾಗಿ ಗಡ್ಡೆ ಬೆಳದಿರುತ್ತದೆ. ಆ ಸ್ಥಳದಿಂದ ಬಹಳ ದೂರದಲ್ಲಿರುವವರಿಗೆ ಈ ರೋಗ ಕಡಿಮೆ ನದಿಯ ನೀರು ಅಷ್ಟೇನೂ ಬಾಧಕ ಹೆಚ್ಚಾಗಿಲ್ಲ. ನಾನು ನೋಡಿದಾಗ್ಗೆ ಬಂಡಿ ಹರಿಯುವ ನೀರಿನಲ್ಲಿ ಸೊಳ್ಳೆಗಳ ಗೂಡುಗಳು ಕಾಣಲಿಲ್ಲ. ಕೊಳಕವಲ್ಲಿ ನಿಂತಿರತಕ್ಕ ನೀರನ್ನು ಚೊಕ್ಕಟವಾಗಿ ಸಾಗಿಸಬೇಕು. ಸಾಧ್ಯವಿಲ್ಲದ ಕಡೆ ಕೆರೋಸಿನ್ ಎಣ್ಣೆ ಚಲ್ಲಬಹುದು. ಗದ್ದೆಗಳು ಊರಿಗೆ

...ವಾಗಿಲ್ಲವಾದ್ದರಿಂದ ತರಿ ವ್ಯವಸಾಯದಿಂದಲೂ ಊರಿಗೆ ಅಷ್ಟೇನೂ ಅನಾರೋಗ್ಯವಾಗುವಂತೆ ತೋರುವುದಿಲ್ಲ. ಮುಖ್ಯವಾಗಿ ಬಚ್ಚಲುಗಳೇ ದೊಡ್ಡ ಕಾರಣವೆಂದು ಹೇಳಬಹುದಾಗಿದೆ. ಅವುಗಳ ಬಾಯಿ ಮುಚ್ಚಿದರೂ ಪ್ರಯೋಜನವಾಗಲಾರದು. ಆ ಬಚ್ಚಲುಗಳನ್ನೆಲ್ಲಾ ಸಂಪೂರ್ಣವಾಗಿ ಮುಚ್ಚಿಬಿಡಲೇ ಬೇಕು. ಮತ್ತು ಆರೋಗ್ಯಕರವಾದ ಒಳ್ಳೇ ನೀರನ್ನು ಪ್ರಜೆಗಳಿಗೆ ಒದಗಿಸಿಕೊಡಬೇಕು. ಇವೆರಡನ್ನು ಮಾಡಿದ ಪಕ್ಷದಲ್ಲಿ ಶ್ರೀರಂಗಪಟ್ಟಣವು ಆರೋಗ್ಯಪ್ರದೇಶವೆನಿಸುವುದು. ಸ್ಯಾನಿಟರಿ ಕಮಿಷನರ್, ಬಚ್ಚಲನೀರು ಸಾಗುವುದು, ಮನೆಗಳಲ್ಲಿ ಹೆಚ್ಚು ಜನರು ವಾಸಿಸದಂತೆ ನಿರ್ಬಂಧಪಡಿಸುವುದು, ಪಾಳುಮನೆ ಪಾಳುಗೋಡೆಗಳನ್ನು ಸಮಮಾಡುವುದು, ಈ ಭಾಗಗಳಿಗೆ ಮ್ಯುನಿಸಿಪಾಲಿಟಿಯವರು ಅ...ವಾಗಿ ಹೆಚ್ಚು ಗಮನಕೊಡಬೇಕಾಗಿದೆ. ಅತ್ತಲಾಗಿ, ಪಶ್ಚಿಮವಾಹಿನಿಯಲ್ಲಿದ್ದ ೦೬ ಮಕ್ಕಳನ್ನು ಪರೀಕ್ಷೆಮಾಡಿದ್ದರಲ್ಲಿ ೧೪ ಮಕ್ಕಳಿಗೆ ಹೊಟ್ಟೆಯೊಳಗೆ ಗಡ್ಡೆ ಬೆಳೆದಿದೆ. ಅಲ್ಲಿ ಸ್ವಲ್ಪ ಬಚ್ಚಲುಗಳನ್ನು ಕಟ್ಟಿ ಹಳ್ಳಕೊಳ್ಳಗಳನ್ನು ಮುಚ್ಚಿಸಿದರೆ ಸಾಕೆಂದು ತೋರುವುದು. ಹಾಗೇ ಗಂಜಾಂ ಪೇಟೆಗೆ ಒಳ್ಳೇ ನೀರು ಒದಗಿಸುವುದನ್ನು ಸರ್ಕಾರದವರು ಗೊತ್ತುಮಾಡಬೇಕಾಗಿದೆ.

ಗವರ್ನಮೆಂಟಿನವರ ಹುಕುಮು.

ಮೇಲ್ಕಂಡ ರಿಪೋರ್ಟುಗಳನ್ನು ನೋಡಿ ಗವರ್ನಮೆಂಟಿನವರು ಹುಕುಂ ಕೊಟ್ಟಿರುವುದೇನೆಂದರೆ—ಶ್ರೀರಂಗಪಟ್ಟಣಕ್ಕೆ ಒಳ್ಳೇ ನೀರು ಒದಗಿಸುವುದಕ್ಕೂ ಚರಂಡಿಗಳನ್ನು ಕಟ್ಟುವುದಕ್ಕೂ ಛೀಫ್ ಇಂಜಿನಿಯರವರು ಬೇಗನೆ ಅಂದಾಜು ಪಟ್ಟಿ ತಯಾರುಮಾಡಿ ಗವರ್ನಮೆಂಟಿಗೆ ಕಳುಹಿಸಬೇಕು. ಡೆಪ್ಯುಟಿ ಕಮಿಷನರು ಭೂಮಿಯೊಳಗಿರುವ ಬಚ್ಚಲುಗಳನ್ನು ಸಂಪೂರ್ಣವಾಗಿ ಮುಚ್ಚಿಬಿಡುವುದಕ್ಕೂ, ನಾಲೆಗಳ ಮತ್ತು ಕಾರಂಜಿಗಳ ಕೊಳಕನ್ನು ನಿರ್ಮೂಲಮಾಡಿ, ನಾಲೆಗಳ ನೀರು ಕೆಡದಂತೆ ಕಾಪಾಡುವುದಕ್ಕೂ ಅಂದಾಜು ಪಟ್ಟಿ ತಯಾರುಮಾಡಿ ಸರ್ಕಾರಕ್ಕೆ ಕಳುಹಿಸಬೇಕು. ಮತ್ತು ಈ ಕಾಮಗಾರಿಗಳನ್ನೆಲ್ಲಾ ಮಾಡಿಸುವುದಕ್ಕೆ ಬೇಕಾಗುವ ಹಣದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರೂ ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿಯವರೂ ಎಷ್ಟು ಮಟ್ಟಿಗೆ ದ್ರವ್ಯಸಹಾಯ ಮಾಡಬಹುದು, ಹೊಸ ತೆರಿಗೆಯನ್ನು ಎಷ್ಟು ಮಟ್ಟಿಗೆ ಹಾಕಬಹುದು ಎಂಬೀ ವಿಚಾರದಲ್ಲಿ ಡೆಪ್ಯುಟಿ ಕಮಿಷನರು ತನಿಖೆಯಿಂದ ರಿಪೋರ್ಟು ಮಾಡಬೇಕಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಈ ೨೮ನೇ ಶುಕ್ರವಾರ ವೈಸ್‌ರಾಯಿಯವರು ಕಲ್ಕತ್ತಾದ ಹಿಂದೂಸ್ಥಾನದ ವ್ಯವಸಾಯದ ಮತ್ತು ಕೈಗಾರಿಕೆಯ ವಸ್ತು ಪ್ರದರ್ಶನ ಶಾಲೆಯನ್ನು ತೆರೆದರು.

****

ಗತಿಸಿದ ಜೆ ಸ್ಮಿತ್‌ರವರ ಉಯಿಲಿಗೆ ಅನುಸಾರವಾಗಿ ಅವರ ಮಕ್ಕಳು ೬೦,೨೫೦ ರೂಪಾಯಿಗಳನ್ನು ಕಲ್ಕತ್ತೆಯಲ್ಲಿರುವ ಕೆಲ ಸ್ಕೂಲುಗಳಿಗೂ ಅನಾಥಾಲಯಗಳಿಗೂ ರೋಜೇರಿಯೋ ಎಂಬುವರು ಕೊಟ್ಟಿರುತ್ತಾರೆ.

****

ವರ್ಷಗಟ್ಟಲೆಯ ಶೈವ ಸಿದ್ಧಾಂತ ಸಭೆಯು ಚಿದಂಬರದಲ್ಲಿ ನಾಳೆಯ ಆರಂಭವಾಗಿ ತಾ ೨೯ಕ್ಕೆ ಮುಕ್ತಾಯವಾಗುವುದು. ಜಸ್ಟಿಸ್ ಬಿ ರಾಮನಾಥರವರು ಈ ವರುಷ ಸಭೆಯ ಅಗ್ರಾಸನವಹಿಸುತ್ತಾರೆ. ಶೈವಸಿದ್ಧಾಂತದ ವಿಷಯವಾಗಿ ಇಂಗ್ಲಿಷಿನಲ್ಲೂ ತಮಿಳಿನಲ್ಲೂ ಸುಮಾರು ಹನ್ನೆರಡು ಉಪನ್ಯಾಸಗಳು ಕೊಡಲ್ಪಡುವುವು.

****

ಇಂಡಿಯಾ ಗವರ್ನಮೆಂಟಿನವರ ಅಪ್ಪಣೆ ಪಡೆದು ಕಾಶ್ಮೀರದ ಮಹಾರಾಜರು ತಮ್ಮ ದಾಯಾದ್ಯರಾದ ಪೂಂಚ್ ಮಹಾರಾಜರ ಮಗನನ್ನು ದತ್ತು ತೆಗೆದುಕೊಂಡರು. ಇದರಿಂದ ಮಹಾರಾಜರ ವೈಯಕ್ತಿಕ ಅನುಕೂಲವಾಯಿತೇ ಹೊರತು ಮುಂದೆ ಸಿಂಹಾಸನಕ್ಕೆ ತಮ್ಮ ಉತ್ತರಾಧಿಕಾರವು ಆ ದತ್ತು ಮಗನಿಗೆ ದೊರಕುವುದಿಲ್ಲ.

****

ಶೇಕ್ ಗುಲಾಮ್ ಮೆಹಿದಿನ್ ಸೂಫಿರವರು ಕಾಬೂಲಿಗೆ ಹೋಗಿ ಲಾಹೋರಿಗೆ ಹಿಂತಿರುಗಿ ಬಂದಿರುವರು. ಅಮೀರರು ಇವರನ್ನು ಸನ್ಮಾನಿಸಿ ಅವರಿಗೆ ಖಿಲ್ಲತ್ತನ್ನು ಕೊಟ್ಟರು. ಹಿಮಾಯತಿ ಎಂಬ ಪಾರಸಿ ಪತ್ರಿಕೆಗೆ ಎರಡು ವರುಷದಿಂದ ಕೊಡದೆ ನಿಲ್ಲಿಸಿದ್ದ ಚಂದಾ ಎರಡು ಸಾವಿರ ರೂಪಾಯನ್ನು ಈಗ ಅಮೀರರು ಸೂಫಿರವರ ಕೈಯಲ್ಲಿ ಕಳುಹಿಸಿರುವರು. ಲಾಹೋರಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಇಸ್ಲಾಮಿಯಾ ಕಾಲೇಜಿಗೆ ಅಸ್ತಿಭಾರವನ್ನು ತಾವೇ ಹಾಕುತ್ತೇವೆಂದು ಅಮೀರರು ಒಪ್ಪಿರುವರು.

****

ಕಾಬೂಲಿನ ಅಮೀರರು ತಮ್ಮ ರಾಜ್ಯದ ಸರ್ಕಾರಿ ನೌಕರರಲ್ಲಿ ಯಾರಾದರೂ ಮಕ್ಕಾಕ್ಕೆ ಯಾತ್ರೆ ಹೋಗಬೇಕೆಂದು ಬಯಸಿದರೆ ಅಂಥವರಿಗೆ ರಜಾ ಕೊಡುವುದಾಗಿ ತಿಳಿಯಪಡಿಸಿದರು. ಈ ವಿಷಯ ಜನಗಳಿಗೆ ತಿಳಿದ ಸ್ವಲ್ಪ ದಿನಗಳಲ್ಲೇ ನೂರಾರು ಜನ ಮುಸಲ್ಮಾನರು ರಜಾ ಬೇಕೆಂದು ಅರ್ಜಿ ಬರೆದುಕೊಂಡರು. ಅಷ್ಟು ಜನರಿಗೂ ಒಂದೇ ಕಾಲದಲ್ಲಿ ರಜಾ ಕೊಟ್ಟರೆ ರಾಜ್ಯದ ಕೆಲಸ ಕಾರ್ಯಗಳು ನಿಂತುಹೋಗುತ್ತವೆಂದು ಯೋಚಿಸಿ, ಅಮೀರರವರು ಪ್ರಸ್ತುತ ಯಾರಿಗೂ ರಜಾ ದೊರಕಲಾರದೆಂದು ತಿಳಿಯಪಡಿಸಿದರು.

****

ಮದರಾಸಿನ ಹಿಂದೂ ಅಸೋಸಿಯೇಷನ್ ಎಂಬ ಸಭೆಯವರು ಸ್ತ್ರೀಬಾಲಿಕೆಯರಿಗೆ ದೊಡ್ಡವರಾದ ಮೇಲೆ ಮದುವೆ ಮಾಡಬಹುದು ಎಂಬ ವಿಷಯದಲ್ಲಿ ಶಾಸ್ತ್ರಗಳು ಒಪ್ಪುತ್ತವೆ ಎನ್ನುವ ವಿಷಯವಾಗಿ ಯಾರು ಉತ್ತಮವಾದ ಉಪನ್ಯಾಸವನ್ನು ಬರೆಯುವರೋ ಅವರಿಗೆ [illegible] ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದ್ದರು. ಕರ್ನೂಲಿನ ಪ್ಲೀಡರ್ ವರದೈಯ್ಯಂಗಾರ್ರು ಬಹಳ ಚೆನ್ನಾಗಿ ಬರೆದಿದ್ದದ್ದರಿಂದ ಬಹುಮಾನವು ಅವರಿಗೆ ದೊರಕಿತು. ಢಕ್ಕಾಪಟ್ಟಣದ ಗಂಗಾಧರದಾಸಗುಪ್ತನೆಂಬವರೂ ಕೂಡ ಉಪನ್ಯಾಸವನ್ನು ಶ್ಲಾಘ್ಯವಾಗಿ ಬರೆದಿದ್ದದ್ದರಿಂದ ಅವರಿಗೂ ೨೫ ರೂಪಾಯನ್ನು ಕೊಟ್ಟಿರುವರು.

****

ಛತ್ತೀಸ್‌ಘರ್ ಡಿಸ್ಟ್ರಿಕ್ಟಿನ ಸರಗೂಜ ಸಂಸ್ಥಾನದ ಯುವರಾಜರು ಇನ್ನೂ ಹನ್ನೊಂದು ವರುಷದವರಾದಾಗ್ಯೂ ಬೇಟೆಯಾಡುವುದರಲ್ಲಿ ಬಹಳ ಪ್ರಸಿದ್ಧಿ ಹೊಂದಿ ಇದುವರೆಗೆ ಏಳು ಹುಲಿಗಳನ್ನೂ ಆರು ಚಿರಬೆಗಳನ್ನೂ ಎರಡು ಕರಡಿಗಳನ್ನೂ ಕೊಂದುಹಾಕಿರುತ್ತಾರೆ. ಕಳೆದ ತಿಂಗಳು ಸುಮಾರು ಹತ್ತುವರೆ ಅಡಿ ಉದ್ದವುಳ್ಳ ಒಂದು ಭಾರೀ ಹುಲಿಯನ್ನು ಒಂದೇ ಗುಂಡೇಟಿನಿಂದ ಹೊಡೆದು ಕೊಂದುಹಾಕಿದರು. ಚಿಕ್ಕ ವಯಸ್ಸಿನವರಾದಾಗ್ಯೂ ದೊಡ್ಡ ಬಂದೂಕಗಳನ್ನು ಈ ರಾಜಕುಮಾರನು ಉಪಯೋಗಿಸುತ್ತಾರೆ. ಇವರ ತಂದೆಯೂ ಇದುವರೆಗೆ ಸುಮಾರು ಮೂವತ್ತೇಳು ಹುಲಿಗಳನ್ನು ಕೊಂದಿರುವರು.

****

ಆಲಿಪುರದಲ್ಲಿ ಕಾಮದೇವ ಬಾಗಡಿ ಎಂಬವನಿಗೂ ಅವನ ನೆರೆಯವನಾದ ಶಿವರಾಮಪಾಲ್ ಎಂಬವನಿಗೂ ಬಹಳ ಕಾಲದಿಂದ ಜಗಳವಿತ್ತು. ಆದ್ದರಿಂದ ಕಾಮದೇವನು ೧೨ ಜನರನ್ನು ಕರೆದುಕೊಂಡು ಹೋಗಿ ಆ ತನ್ನ ನೆರೆಯವನ ಪೈರು ಬೆಳೆದಿದ್ದ ಗದ್ದೆಗಳಿಗೆ ಸುಮಾರು ಇನ್ನೂರು ದನಗಳನ್ನು ಬಿಟ್ಟು ಆವು ಧಾನ್ಯವನ್ನೆಲ್ಲಾ ಮೇಯುವವರೆಗೂ ಕಾದುಕೊಂಡಿದ್ದನು. ಗದ್ದೆಯ ಯಜಮಾನನಿಗೆ ಭತ್ತವೆಲ್ಲಾ ನಷ್ಟವಾಗಿ ಅವನು ಅಪರಾಧಿಯ ಮೇಲೆ ಫಿರ್ಯಾದು ಮಾಡಿದ್ದರಿಂದ ಡಿಪ್ಟಿಯವರು ಕಾಮದೇವನೂ ಇತರರೂ ತಪ್ಪಿತಸ್ಥರೆಂದು ತೀರ್ಮಾನಿಸಿ, ಅವರಿಗೆ ತಲಾ ಎರಡು ವಾರದ ಕಠಿಣ ಸಜೆಯನ್ನೂ ಹತ್ತು ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

****

ಮೈಮನಸಿಂಗಿನ ಒಂದಾನೊಂದು ಕಾಲೇಜಿನಲ್ಲಿ ಸುಮಾರು ನಾನೂರು ಜನ ಹೆಂಗಸರು ಸೇರಿ ಬೋಸ್‌ರವರು ತೀರಿಹೋದದ್ದಕ್ಕಾಗಿ ತಮಗೆ ಉಂಟಾದ ವ್ಯಸನವನ್ನು ತೋರ್ಪಡಿಸಿದರು. ಬೋಸ್‌ರವರು ಪರೋಪಕಾರಕ್ಕೆ ಮಾಡಿದ ಅನೇಕ ಕೆಲಸಗಳಲ್ಲಿ ಹೆಂಗಸರಿಗೆ ವಿದ್ಯೆಕಲಿಸುವುದಕ್ಕೆ ಬಹಳ ಶ್ರಮಪಟ್ಟದ್ದು ವಿಶೇಷವಾಗಿರುತ್ತದೆ. ಇವರ ಹೆಸರಿನ ಜ್ಞಾಪಕಾರ್ಥವಾಗಿ ಪ್ರತಿವರ್ಷವೂ ಆನಂದಕ್ಷೇತ್ರವೆಂಬ ಒಂದು ಸಭೆಯನ್ನು ನಡಿಸಬೇಕೆಂದು ಆ ಸಭೆಯವರು ತೀರ್ಮಾನಿಸಿದರು. ಶ್ರೀಮತಿ ಶರತ್ಕಾಮಿನಿದೇವಿ ಚೌಧುರಿ ಎಂಬಾಕೆಯು ಬೋಸ್‌ರವರ ಜೀವನಚರಿತ್ರೆಯನ್ನು ಬಂಗಾಳಿಹೆಂಗಸರಲ್ಲಿ ಯಾರು ಉತ್ಕೃಷ್ಟವಾಗಿ ಬರೆಯುವರೋ ಅವರಿಗೆ ೨೫ ರೂಪಾಯಿ ಬಹುಮಾನಕೊಡುವುದಾಗಿ ತಿಳಿಸಿರುತ್ತಾಳೆ.

****

ಅಮೃತಸರದಲ್ಲಿನ ಹಿಂದುಗಳು ಯೂರೋಪಿನಲ್ಲಿ ತಯಾರಾಗುವ ಸಕ್ಕರೆಯು ಅಪರಿಶುದ್ಧವಾದದ್ದೆಂತಲೂ ತಮ್ಮ ಮತಕ್ಕೆ ವಿರೋಧವಾದದ್ದೆಂತಲೂ ಕಟ್ಟು ಮಾಡಿರುತ್ತಾರೆ. ಕೆಲವು ಜನ ಹಿಂದೂ ದೊಡ್ಡ ಮನುಷ್ಯರು ಮೂಳೆಗಳಿಂದ ಶುದ್ಧಮಾಡಿರುವ ಸಕ್ಕರೆಯನ್ನು ಯಾರೂ ಉಪಯೋಗಿಸದೆ ಅದಕ್ಕೆ ಬದಲಾಗಿ ಕಾನ್ಪುರದಲ್ಲಿ ತಯಾರಾಗುವ ಸಕ್ಕರೆಯನ್ನೇ ಉಪಯೋಗಿಸಬೇಕೆಂದು ನೋಟೀಸುಗಳನ್ನು ಪ್ರಿಂಟು ಮಾಡಿಸಿ ಜನಗಳಿಗೆ ಹಂಚಿರುತ್ತಾರೆ. ಮಹಾರಾಜರೂ ಕೂಡ ಸ್ವದೇಶದ ಸಕ್ಕರೆಯನ್ನು ಉಪಯೋಗಿಸಬೇಕೆಂಬ ಅಭಿಪ್ರಾಯವನ್ನು ನೋಟೀಸುಗಳ ಮೂಲಕ ತಿಳಿಯಪಡಿಸಿರುತ್ತಾರೆ. ಇದುವರೆಗೆ ಒಂದು ವರುಷದಲ್ಲಿ ಯೂರೋಪಿನಿಂದ ಅಮೃತಸರಕ್ಕೆ ತರಿಸಿಕೊಳ್ಳುತ್ತಿದ್ದ ಸಕ್ಕರೆಯ ಬೆಲೆಯು ಐವತ್ತು ಲಕ್ಷ ರೂಪಾಯಿಯಾಗಿರುತ್ತದೆ.

****

ಮದರಾಸಿನ ಮಾರ್ಕೆಟ್ಟಿನ ಬಾಗಿಲಲ್ಲಿ ಒಬ್ಬ ಹೆಂಗಸು ಹಣ್ಣನ್ನು ಗೂಡೆಯಲ್ಲಿಟ್ಟು ಮಾರುತ್ತಿದ್ದಳು. ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ॥ ಲಾಯಿಡ್ ಎಂಬವರು ದಾರಿಯಲ್ಲಿಟ್ಟಿದ್ದ ಅವಳ ಹಣ್ಣಿನ ಗೂಡೆಯನ್ನು ತೆಗಿ ಎಂದು ಅವಳಿಗೆ ಹೇಳಿದರು. ಅವಳು ಕೇಳದೆ ಹೋದದ್ದರಿಂದ ಅವರು ಆ ಗೂಡೆಯನ್ನು ಕಾಲಿನಿಂದ ಒದ್ದು ಹಣ್ಣನ್ನೆಲ್ಲಾ ಚೆಲ್ಲಿಬಿಟ್ಟರು. ಅವಳು ಆಗಲೂ ಸ್ಥಳ ಬದಲಾಯಿಸುವುದಕ್ಕೆ ಇಷ್ಟಪಡದೆ ಹೋದದ್ದನ್ನು ನೋಡಿ ಮಿ॥ ಲಾಯಿಡ್‌ರವರು ತಮ್ಮ ಕೈಯಲ್ಲಿದ್ದ ಬೆತ್ತದಿಂದ ಅವಳಿಗೆ ಒಂದು ಏಟನ್ನು ಕೊಡಲು ಆ ಹೆಂಗಸು ಈ ಮೊಕದ್ದಮೆಯನ್ನು ಕೋರ್ಟಿಗೆ ತರಲು ಜಡ್ಜಿಯವರು ಮಿ॥ ಲಾಯಿಡ್‌ರವರಿಗೆ ಮೂವತ್ತೈದು ರೂಪಾಯಿ ಜುಲ್ಮಾನೆ ವಿಧಿಸಿ, ಅದರಲ್ಲಿ ಎಂಟು ರೂಪಾಯನ್ನು ಫಿರ್ಯಾದಿ ಹೆಂಗಸಿಗೆ ಕೊಡಿಸಿದರು.

****

ರತ್ನಪುರದ ಬೀದಿಯಲ್ಲಿ ಮಾವಟಿಗನು ಒಂದು ಆನೆಯ ಮೇಲೆ ಕುಳಿತುಕೊಂಡು ಹೋಗುತ್ತಿರುವಲ್ಲಿ ಕೆಲವು ಹುಡುಗರು ಕೂಗಿ ಚಪ್ಪಾಳೆ ಹೊಡೆದದ್ದರಿಂದ ಆನೆಯು ಗಾಬರಿಬಿದ್ದು ಓಡಿತು. ಮೇಲಿದ್ದವನು ಬಿದ್ದುಹೋದನು. ಆ ಆನೆಯ ಯಜಮಾನನಿಗೆ ಸಮಾಚಾರವು ತಿಳಿದು, ಅವನು ಆನೆಯನ್ನು ಹಿಡಿಯುವುದಕ್ಕೆ ಎಷ್ಟು ಶ್ರಮಪಟ್ಟರೂ ಆಗಲಿಲ್ಲ. ಅಷ್ಟರೊಳಗೆ ಅದು ಆ ಹಳ್ಳಿಯವರ ಪೈರು ಪಚ್ಚೆಗಳನ್ನು ಅನೇಕವಾಗಿ ನಷ್ಟಪಡಿಸಿ, ತನ್ನನ್ನು ಹಿಡಿಯುವುದಕ್ಕೆ ಬಂದ ಒಬ್ಬನನ್ನು ಕೊಂದುಹಾಕಿತು. ಸುಮಾರು ಇನ್ನೂರು ಜನಗಳು ಸೇರಿ ಕೊನೆಗೆ ಆ ಆನೆಯನ್ನು ಹಿಡಿದರು. ಮ್ಯಾಜಿಸ್ಟ್ರೇಟರು ಇದನ್ನು ವಿಚಾರಣೆ ಮಾಡಿ, ಆ ಆನೆಯ ಯಜಮಾನನನ್ನು ತಪ್ಪಿತಸ್ಥನೆಂದು ತೀರ್ಮಾನಿಸಿ ಐನೂರು ರೂಪಾಯಿ ಜುಲ್ಮಾನೆ ವಿಧಿಸಿದರು.

****

ಲಾರ್ಡ್ ಕರ್ಜನರವರ ಆಳ್ವಿಕೆಯಲ್ಲಿ ಬಂಗಾಳಾ ಗವರ್ನಮೆಂಟಿನಲ್ಲಿ ಇಪ್ಪತ್ತು ವರುಷ ಸರ್ವೀಸ್ ಮಾಡಿದ್ದ ಒಬ್ಬ ಬಂಗಾಳಿಯನ್ನು ಅನ್ಯಾಯವಾಗಿ ಕೆಲಸದಿಂದ ತೆಗೆದುಹಾಕಿದರು. ಅವನ ಮಗನು ಎಂಟು ವರುಷದವನಾದಾಗ್ಯೂ ಸೀಸದ ಕಡ್ಡಿಯಲ್ಲಿ ಒಂದು ಅರ್ಜಿಯನ್ನು ಬರೆದು, ವೈಸ್‌ರಾಯರವರಿಗೆ ತಲುಪುವಂತೆ ಹಾಕಿದನು. ತಂದೆಯು ಎಷ್ಟು ವಿಧವಾಗಿ ಸರ್ಕಾರದವರನ್ನು ಕೇಳಿಕೊಂಡರೂ ಅವನಿಗೆ ಪುನಃ ಕೆಲಸ ದೊರಕಲಿಲ್ಲ. ಇದರಿಂದ ಅವನೂ ಅವನ ಸಂಸಾರದವರೂ ಒಂದು ವರುಷದ ವರೆಗೆ ತುಂಬಾ ಶ್ರಮಪಟ್ಟರು. ಹುಡುಗನ ಆ ಅರ್ಜಿಯು ಲಾರ್ಡ್ ಕರ್ಜನರಿಗೆ ತಲುಪಿದ ಕೂಡಲೇ ಅವರಿಗೆ ತುಂಬಾ ಕನಿಕರ ಹುಟ್ಟಿ ಆ ಸಂಸಾರದವರಿಗೆ ಐನೂರು ರೂಪಾಯನ್ನು 'ಇನಾಮಾಗಿ ಕಳುಹಿಸಿಕೊಟ್ಟದ್ದಲ್ಲದೆ ಆ ಹುಡುಗನ ತಂದೆಗೆ ಪುನಃ ಕೆಲಸವನ್ನೂ ಕೊಡಿಸಿದರು.

****

ಪೂರ್ವ ಆಫ್ರಿಕದ ಸಮುದ್ರತೀರದ ರಾಜ್ಯಗಳಲ್ಲಿ ನಿದ್ರಾರೋಗವೆಂಬ ಕಾಯಿಲೆಯು ಪ್ರಬಲವಾಗಿದೆ. ಅಲ್ಲಿನ ರೇವುಪಟ್ಟಣಗಳಿಗೂ ಬೊಂಬಾಯಿಗೂ ವ್ಯಾಪಾರದ ಹಡಗುಗಳು ವಿಶೇಷವಾಗಿ ಹೋಗಿಬರುತ್ತಿರುವುದರಿಂದ ಆ ರೋಗವು ಇಂಡಿಯಾಕ್ಕೂ ಬರಬಹುದೆಂಬ ಅನುಮಾನ ಹುಟ್ಟಿ ಬೊಂಬಾಯಿನಲ್ಲಿರುವ ಸೊಳ್ಳೆಗಳು ಈ ರೋಗದ ಸೋಂಕನ್ನು ಹರಡುತ್ತವೆಯೋ ಎಂದು ಸರ್ಕಾರದವರು ಪರೀಕ್ಷಿಸುವುದರಲ್ಲಿದ್ದಾರೆ. ಹಾಗೆ ಈ ಸೊಳ್ಳೆಗಳು ನಿದ್ರಾರೋಗದ ಸೋಂಕನ್ನು ಹರಡದಿದ್ದರೆ ಬೊಂಬಾಯಿನಿಂದ ಆ ರೋಗವು ಇತರ ಕಡೆಗಳಿಗೆ ವ್ಯಾಪಿಸುವುದಿಲ್ಲ. ಮತ್ತು ಅಲ್ಲಿಂದ ಹಿಂದೂಸ್ಥಾನಕ್ಕೆ ಬರುವ ಪ್ರಯಾಣಸ್ಥರನ್ನು ಬಹಳ ಜಾಗರೂಕತೆಯಿಂದ ಪರೀಕ್ಷಿಸಬೇಕೆಂದು ತೀರ್ಮಾನಿಸಿರುತ್ತಾರೆ.

****

ಭವಾನಿಪುರದಲ್ಲಿ ಕವಿರಾಜ ಮಹೇಂದ್ರ ನಾರಾಯಣ ಭವಸಾಗರನೆಂಬ ವೈದ್ಯನೂ ಏದೂ ಎಂಬೊಬ್ಬ ಮುನಷಿಯೂ ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಕಳೆದ ವಿಜಯದಶಮಿ ದಿನ ಆ ಮುನಷಿಯು ಭವಸಾಗರನ ಮನೆಯ ಹೆಂಗಸರು ತನ್ನ ಮನೆಯಲ್ಲಿದ್ದ ನಲ್ಲಿಯ ನೀರು ತೆಗೆದುಕೊಳ್ಳಕೂಡದೆಂದು ಅಡ್ಡಿ ಮಾಡಿದನು. ಭವಸಾಗರನು ನೀನು ಯಾತಕ್ಕೆ ಅಡ್ಡಿ ಮಾಡುತ್ತಿ ಎಂದು ಕೇಳಲು ಕಲಹವಾಗಿ ಮುನಷಿಯು ವೈದ್ಯನ ಕಿವಿಯನ್ನು ಕಡಿದುಬಿಟ್ಟನು. ವೈದ್ಯನು ಫಿರ್ಯಾದು ಮಾಡಿದಾಗ ಜಡ್ಜರು ಅಪರಾಧಿಗೆ ಒಂದು ದಿನ ಸಜೆಯನ್ನೂ ೬೦ ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಗವರ್ನಮೆಂಟು ನೌಕರನಾದ ಕಾರಣ ನಿನಗೆ ಇಷ್ಟು ಅಲ್ಪಶಿಕ್ಷೆ ಕೊಟ್ಟಿರುತ್ತೇನೆಂದು ತಿಳಿಸಿದರು. ಜುಲ್ಮಾನೆಯ ಪೈಕಿ ಐವತ್ತು ರೂಪಾಯನ್ನು ಫಿರ್ಯಾದಿಗೆ ಕೊಡಿಸಿದರು.

****

ಬೊಂಬಾಯಿನ ಗವರ್ನರಾದ ಲಾರ್ಡ್ ಲಾಮಿಂಗ್‌ಟನ್‌ರವರು ಮಕ್ಕಾಕ್ಕೆ ಹೋಗಬೇಕೆಂದು ಬೊಂಬಾಯಿಗೆ ಬಂದಿರುವ ಮಹಮ್ಮದೀಯ ಯಾತ್ರಿಕರನ್ನು ತಾವೇ ಹೋಗಿ ನೋಡಿ, ಅವರ ಕಷ್ಟವನ್ನೆಲ್ಲಾ ಕಂಡು ಹಡಗಿನವರು ಸ್ವಲ್ಪ ಛಾರ್ಜಿಗೆ ಮಕ್ಕಾದ ವರೆಗೆ ಯಾತ್ರಾರ್ಥಿಗಳನ್ನು ಕರೆದುಕೊಂಡು ಹೋಗುವದಾಗಿ ಪ್ರಕಟಿಸಿದ್ದನ್ನೂ ನೋಡಿದರು. ಯಾತ್ರಿಕರು ವಾಸಿಸುವುದಕ್ಕೆ ಸರಿಯಾದ ಸ್ಥಳವಿಲ್ಲವೆಂದು ಗವರ್ನರವರನ್ನು ಕೇಳಿದಾಗ ಅವರು ವಾಸಸ್ಥಳವನ್ನು ಏರ್ಪಡಿಸಿದರೆ ಎಷ್ಟು ಹಣ ಕೊಡುತ್ತೀರೆಂದು ಅವರನ್ನು ಕೇಳಿದರು. ಅದಕ್ಕೆ ಮಹಮ್ಮದೀಯರೆಲ್ಲರೂ ತಲಾ ಒಂದಾಣೆಯಂತೆ ಕೊಡುವುದಾಗಿ ಒಪ್ಪಿಕೊಂಡರು. ಕೊನೆಯಲ್ಲಿ ಗವರ್ನರವರು ಜಿದ್ದಾದಿಂದ ಕೆಲವು ಹಡಗುಗಳು ಶೀಘ್ರದಲ್ಲೇ ಬರುತ್ತವೆಂತಲೂ, ಅವುಗಳಲ್ಲಿ ಎಲ್ಲರೂ ಜಿದ್ದಾಕ್ಕೆ ಪ್ರಯಾಣ ಮಾಡಬಹುದೆಂತಲೂ ತಿಳಿಸಿದರು.

****

ತಿರುವಾಂಕೂರು(ಅನಂತಶಯನ)ನಲ್ಲಿ ಮುಂದಿನ ಜನವರಿಯಲ್ಲಿ ಪ್ರಜಾಪ್ರತಿನಿಧಿ ಸಭೆಯು ಸೇರುವದಷ್ಟೆ. ಜನಗಳು ಈ ಸಭೆಗೆ ಚುನಾಯಿಸಿದ ಮೆಂಬರುಗಳನ್ನು ಸರಕಾರದವರು ಒಪ್ಪದೇ ತಾವೇ ಕೆಲವರನ್ನು ನೇಮಿಸಿದರು. ಇದರಿಂದ ಜನಗಳಿಗೆ ತುಂಬಾ ಅಸಮಾಧಾನವಾಗಿ ಅನೇಕ ಐಶ್ವರ್ಯವಂತರಾದ ಜಮೀನ್ದಾರರು ಒಂದು ಸಭೆ ಮಾಡಿ ಮುಂದೆ ಹೇಳುವ ವಿಷಯಗಳನ್ನು ಕಾಣಿಸಿ ಮಹಾರಾಜರಿಗೂ ಬ್ರಿಟಿಷ್ ರೆಸಿಡೆಂಟರಿಗೂ ಅರ್ಜಿ ಬರೆದುಕೊಳ್ಳಬೇಕೆಂದು ತೀರ್ಮಾನಿಸಿದಾರೆ. ಮಹಾರಾಜರವರು ತಮಗೆ ಕೊಟ್ಟಿದ್ದ, ಮೆಂಬರುಗಳನ್ನು ಚುನಾಯಿಸುವ ಹಕ್ಕನ್ನು ಸರಕಾರದವರು ತೆಗೆದುಹಾಕಿರುವರು. ಸರಕಾರದವರು ನೇಮಿಸಿರುವ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ಸೂಚಿಸಲಾರರು. ಈಗಿನ ಪ್ರತಿನಿಧಿಗಳನ್ನು ವಜಾ ಮಾಡಿ ಹೊಸದಾಗಿ ಪ್ರಜೆಗಳಿಂದಲೇ ಜನರನ್ನು ಚುನಾಯಿಸಬೇಕು.

****

ಹೈದರಾಬಾದ್ ಸಂಸ್ಥಾನದ ನೈಜಾಮರವರು ತಮ್ಮ ಹೆಸರಿನ ಮೇಲೆ ಹಿಂದೂಸ್ಥಾನದಲ್ಲಿಯೋ ಯೂರೋಪಿನಲ್ಲಿಯೋ ಅಥವಾ ಅಮೇರಿಕಾದಲ್ಲಿಯೋ ಹೋಗಿ ಓದಲು ಇಷ್ಟಪಡುವ ಕೆಲವು ಜನರಿಗೆ ಮಾತ್ರ ಎಂಟು ವಿದ್ಯಾರ್ಥಿ ವೇತನಗಳನ್ನು ಕೊಡುವುದಾಗಿ ಪ್ರಕಟಿಸಿರುತ್ತಾರೆ. ಯೂರೋಪಿಗಾಗಲೀ ಅಮೇರಿಕಕ್ಕಾಗಲೀ ಹೋಗುವವರಿಗೆ ವರ್ಷಕ್ಕೆ ಮೂರು ಸಾವಿರ ರೂಪಾಯಿಯಂತೆ ಎರಡು ವೇತನಗಳನ್ನು ಮೂರರಿಂದ ಐದು ವರುಷಗಳವರೆಗೆ ಕೊಡುತ್ತಾರೆ. ಉಳಿದ ಆರು ವೇತನಗಳನ್ನೂ ಜಪಾನಿನಲ್ಲಾಗಲೀ ಬ್ರಿಟಿಷ್ ಇಂಡಿಯಾದಲ್ಲಾಗಲೀ ಓದುವವರಿಗೆ ಮೂರು ವರುಷಗಳವರೆಗೆ ಕೊಡುವರು. ಜಪಾನಿನಲ್ಲಿ ಓದುವವರಿಗೆ ತಿಂಗಳಿಗೆ ನೂರು ರೂಪಾಯಿಯಂತೆಯೂ ಇಂಡಿಯಾದಲ್ಲಿ ಓದುವವರಿಗೆ ತಿಂಗಳಿಗೆ ಐವತ್ತು ರೂಪಾಯಿಯಂತೆಯೂ ಕೊಡುವರು. ಯೂರೋಪಿಗಾಗಲಿ ಅಮೇರಿಕಕ್ಕಾಗಲಿ ಅಥವಾ ಜಪಾನಿಗಾಗಲಿ ಹೋಗುವವರಿಗೆ ದಾರಿ ಖರ್ಚಿಗೆ ಐನೂರು ರೂಪಾಯಿ ಶೇರಿ ಕೊಡುತ್ತಾರೆ. ಈ ವೇತನಗಳನ್ನು ಪಡೆಯಲು ಅಪೇಕ್ಷೆ ಪಡುವವರು ಇಪ್ಪತ್ತೈದು ವರುಷದೊಳಗಾಗಿದ್ದು ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉರ್ದು ಭಾಷೆಯನ್ನು ಚೆನ್ನಾಗಿ ಕಲಿತಿರಬೇಕು. ಇವು ಅಲ್ಲದೆ ಇನ್ನು ಕೆಲವು ರೂಲುಗಳನ್ನು ನೈಜಾಮರವರು ಪ್ರಸಿದ್ಧಪಡಿಸಿರುತ್ತಾರೆ.

ಗಯಾ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಯಿ ಮಾಡುವದಕ್ಕೆ ಸುಮಾರು ಆರೂಕಾಲು ಲಕ್ಷ ರೂಪಾಯಿ ಬೇಕಾಗುತ್ತೆಂದು ಅಂದಾಜು ಹಾಕಿರುವರು. ಇದರ ಪೈಕಿ ಸ್ವಲ್ಪ ಹಣವನ್ನು ಡಿಸ್ಟ್ರಿಕ್ಟು ಬೋರ್ಡಿನವರೂ ಕೆಲವು ಜಮೀನುದಾರರೂ ಕೊಡುತ್ತಾರೆಂದು ವರ್ತಮಾನವಿದೆ.

****

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಒಂದು ಕಾನೂನನ್ನು ಜಾರಿಯಲ್ಲಿ ತರಬೇಕೆಂದು ಯೋಚಿಸುತ್ತಿರುವರು. ಇದರಿಂದ ಹದಿನೈದು ವರುಷಕ್ಕೆ ಕಮ್ಮಿ ವಯಸ್ಸಿನ ಹುಡುಗರು ಹೊಗೆ ಬತ್ತಿಯನ್ನು ಸೇದ ಕೂಡದೆಂದು ವಿಧಿಸಲ್ಪಡುವದು.

****

ರಂಗೂನ್ ಪಟ್ಟಣದ ಹೆಲ್ತ್ ಆಫೀಸರವರು ಆರೋಗ್ಯಕರವಾದ ಸ್ಥಳಗಳಲ್ಲಿ ಅವು ಸ್ಥಳಗಳನ್ನು ಆರಿಸಿ ಆ ಪಟ್ಟಣದಲ್ಲಿ ಹಾಲು ಮಾರುವವರಿಗೆ ಸುಲಭವಾದ ಬಾಡಿಗೆಗೆ ಕೊಟ್ಟಿರುತ್ತಾರೆ. ಇದರಿಂದ ಇನ್ನು ಮೇಲೆ ಹಾಲು ಮಾರತಕ್ಕವರು ಆ ಸ್ಥಳಗಳಲ್ಲೇ ಇಟ್ಟು ಮಾರಬೇಕೆಂದು ವಿಧಾಯಕಮಾಡಿರುತ್ತಾರೆ.

****

ಕಳೆದ ನವಂಬರ್ ತಿಂಗಳಲ್ಲಿ ರಂಗೂನ್ ಪಟ್ಟಣದಲ್ಲಿ ಸುಮಾರು ೯೨ ಸಾವಿರ ಇಲಿಗಳನ್ನು ಕೊಂದಿರುತ್ತಾರೆ ಪ್ರತಿಒಂದು ಇಲಿಗೂ ಎರಡಾಣೆಯಂತೆ ಇನಾಮು ಸಿಕ್ಕುವದರಿಂದಲೂ ಅಕ್ಕಿಯ ಕಾರ್ಖಾನೆಗಳಲ್ಲಿ ಜನರಿಗೆ ಕೆಲಸ ವಿಲ್ಲದ್ದರಿಂದಲೂ ಅನೇಕ ಜನರು ಇಲಿ ಹಿಡಿಯುವದರಲ್ಲಿ ಆಸಕ್ತರಾಗಿದಾರೆ. ಇಲಿಗಳನ್ನು ಕೊಂದವರಿಗಾಗಿ ಕೊಟ್ಟ ಹಣವು ೧೧ ಸಾವಿರ ರೂಪಾಯಿ ಆಗಿದೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಇಲಿಗಳು ಪ್ಲೇಗು ಸೋಂಕಿನವುಗಳೆಂದು ತಿಳಿಯಬಂದಿದೆ.

****

ಹೌರಾ ಪಟ್ಟಣದಲ್ಲಿ ಅನೇಕಾವರ್ತಿ ಶಿಕ್ಷೆಯನ್ನನುಭವಿಸಿರುವ ಗಂಗಾಪಾಂಡೆ ಎಂಬವನು ಮ್ಯುನಿಸೀಫ್ ಕೋರ್ಟಿನಲ್ಲಿ ಫಿರ್ಯಾದಿಯಾಗಿ ವಾದಿಸುತ್ತಿದ್ದ ಒಬ್ಬನ ಜೇಬಿನಲ್ಲಿ ಸ್ವಲ್ಪ ದುಡ್ಡನ್ನು ಕದ್ದನೆಂಬದಾಗಿ ತಿಳಿಯಬಂದು, ಸೆಷನ್ಸ್ ಜಡ್ಜಿಯವರು ಅಪರಾಧಿಗೆ ಮೂರು ವರುಷ ಕಠಿಣಸಜವನ್ನೂ ಎರಡು ತಿಂಗಳ ಸಾಲಿಟರಿ ಸಜವನ್ನೂ ವಿಧಿಸಿದ್ದಲ್ಲದೆ ಅವನು ಜೈಲಿನಿಂದ ಬಿಡುಗಡೆಯಾಗಿ ಬಂದ ಮೂರು ವರುಷಗಳವರೆಗೂ ಪೋಲೀಸಿನವರು ಅವನನ್ನು ಜಾಗರೂಕರಾಗಿ ನೋಡಿಕೊಳ್ಳುವಂತೆ ಕಟ್ಟುಮಾಡಿದರು.

ಬಾತ್ಮಿದಾರರಿಗೆ ನೋಟೀಸು.

ಹೆಸರು ವಿಳಾಸಗಳಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರಯಕೂಡದು; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಎಡಿ.

ಕರೆಸ್‌ಪಾಂಡೆನ್ಸ್.

ಶಿಕ್ಷೆ ವಜಾ ಆಯಿತು.

ಅಯ್ಯಾ,

ನಿಮ್ಮ ಪತ್ರಿಕೆಯಲ್ಲಿ ಈ ಮೊದಲೇ ತುರುವೆಕೆರೆಯಲ್ಲಿರುವ ಕೆ. ಜಿ ರಾಮರಾವ್, ಪಟೇಲ್ ನಾಗಪ್ಪ, ವೆಂಕಟೇಶಯ್ಯ, ಇವರುಗಳಿಗೆ ಉಂಗುರದ ಮೊಕದ್ದಮೆ ವಿಷಯದಲ್ಲಿ ಸಜಾ ಮತ್ತು ಜುಲ್ಮಾನೆ ಆಗಿದ್ದ ಸೂಚನೆಯಂದಿದ ಚೀಫ್ ಕೋರ್ಟಿನವರು ಅಪೀಲಿನಲ್ಲಿ ವಿಚಾರಣೆ ಮಾಡಿ ಕೆಳಕೋರ್ಟ್ ಫೈಸಲ್ ರದ್ದುಮಾಡಿ ಅಪರಾಧಿಗಳನ್ನು ಗೌರವದಿಂದ ಖುಲಾಸೆ ಮಾಡಿದ್ದಾರೆ. ಇದೆ ಅಸಿಸ್ಟೆಂಟ್ ಕಮೀಷನರವರು ಗದ್ದಿಗೆ ವಿಷಯದಲ್ಲಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಒಟ್ಟು ೨೦ ಜನಗಳಿಗೆ ವಿಧಿಸಿದ್ದ ಶಿಕ್ಷೆಯೂ ಚೀಫ್ ಕೋರ್ಟಿನವರು ಜಾಮೀನ್ ಮೇಲೆ ಖುಲಾಸೆ ಮಾಡಿರುತ್ತಾರೆ.

ಸಿ. ಎ. ವಿ.

ವಿಚಿತ್ರವಾದ ಸೃಷ್ಟಿ.

ಅಯ್ಯಾ,

ಬೆಂಗಳೂರು ಡಿಸ್ಟ್ರಿಕ್ಟು ಕಲ್ಯಾಂಟಿ ಪೋಸ್ಟ್ ತತ್ತನೂರಿಗೆ ಸಮೀಪದಲ್ಲಿರುವ ಕಲ್ಲಿಕೆರೆ ಎಂಬ ಗ್ರಾಮದಲ್ಲಿ ಒಂದು ಎಮ್ಮೆಯು ಮೂರು ತಲೆಗಳೂ ಮೂರು ಬಾಲಗಳೂ ಆರು ಕಣ್ಣುಗಳೂ ಉಳ್ಳ ಕರುವನ್ನು ಈದು ಇರುತ್ತದೆಂತಲೂ, ಈ ಕರು ತನ್ನ ಬಳಿಗೆ ನೋಡಲಿಕ್ಕೆ ಬರುವ ಜನಗಳನ್ನು ಆಹ್ಲಾದರದಿಂದ ಪ್ರೀತಿಸುವಂತೆ ಯಾರಾದರೂ ಜನಗಳು ಹೋದರೆ ಅವರ ಬಳಿ ಬಂದು ನಿಂತುಕೊಂಡು, ಅವರ ಅವಯವಗಳ ಮೇಲೆ ತನ್ನ ಮೂತಿಯನ್ನಿಟ್ಟು ನಲಿದಾಡುವದೆಂತಲೂ ನಮ್ಮ ಊರಿನಲ್ಲಿ ಅಕ್ಕಪಕ್ಕ ನೆರೆಹೊರೆ ಮನೆ ಮನೆಗಳಲ್ಲೂ ಬೀದಿ ಬೀದಿಗಳಲ್ಲೂ ಅಂದುಕೊಳ್ಳುತ್ತಾ, ದಿನವಹಿ ಹತ್ತಿಪ್ಪತ್ತು ಜನರು ಗುಂಪು ಕಟ್ಟಿಕೊಂಡು ಹೋಗಿ ನೋಡಿ ಬರುತ್ತಾ ಇದ್ದರು ನಾನು ಈ ವಿಚಿತ್ರ ಪ್ರಾಣಿಯನ್ನು ನೋಡಿ ಬರಬೇಕೆಂದು ನನ್ನ ಸಹೋದರನೊಡನೆ ಕೆಲವು ಮಂದಿ ಸ್ನೇಹಿತರನ್ನು ಕರೆದುಕೊಂಡು ಆ ಗ್ರಾಮಕ್ಕೆ ಹೋಗಿ ಎಮ್ಮೆಯ ಸಾಕಿದ ಮನೆಯನ್ನು ಹುಡುಕಿ ಗೊತ್ತು ಮಾಡಿದೆನು. ಒಂದು ಮನೆಯಲ್ಲಿ ಕಟ್ಟಿಹಾಕಿದ್ದರು. ಅದರ ವಿಚಿತ್ರತರವಾದ ಕರುವನ್ನು ನೋಡಿದೆವು. ಈ ಕರುವಿಗೆ ನಾಲ್ಕು ಕಾಲುಗಳುಳ್ಳ ಒಂದೇ ದಟ್ಟವೂ ಎರಡು ತಲೆಗಳೂ ಒಂದಕ್ಕೊಂದು ಸೇರಿಕೊಂಡಿರುವಂತೆ ಇದೆ. ಕಣ್ಣುಗಳು ಎರಡೇ ಇರುತ್ತವೆ ಬಾಲವು ತುದಿಯಲ್ಲಿ ಒಂದಾಗಿಯೇ ಇದ್ದು, ಕೊನೆಯಲ್ಲಿ ಎರಡಾಗಿ ಕವಲೊಡೆದಿದೆ. ಮುಂಭಾಗದಿಂದ ನೋಡಿದರೆ ಹಿಂಭಾಗದ ಅವಯವಗಳು ಪ್ರತ್ಯೇಕವಾಗಿರುವಂತೆ ಕಾಣಬರುವವೇ ಹೊರತು ದೇಹವೆಲ್ಲವೂ ಒಂದೇ ಆಗಿದೆ. ಇದರಲ್ಲಿ ಕಂಡು ಬರುವ ಮತ್ತೊಂದು ವೈಚಿತ್ರ್ಯವೇನಂದರೆ—ಈ ಎಮ್ಮೆಯು ನೆಮೊದಲು ಮೊದಲು ಕರುಗಳನ್ನು ಹಾಕಿದಾಗ ಹೊತ್ತಿಗೆ ಒಂದೊಂದು ನೀರು ಹಾಲು ಕೊಡುತ್ತಿತ್ತೆಂತಲೂ ಈಗ ಮನೆಯವರು ಈ ವಿಚಿತ್ರತರ ಕರುವು ಹುಟ್ಟಿರುವದರಿಂದ ಅದರ ಬೆಳವಣಿಗೆಗೋ, ಭಯದಿಂದಲೋ ಎಮ್ಮೆಯಲ್ಲಿ ಹಾಲು ಕರೆಯುವದೇ ಇಲ್ಲವೆಂತಲೂ, ಹೀಗೆ ಬಿಟ್ಟದ್ದರೂ ಆ ಕರುವಿಗೆ ಹಾಲು ಸಾಲದೆ ಅರಚಿಕೊಳ್ಳುತ್ತದೆಂತಲೂ ತಿಳಿದುಬಂತು.

ತತ್ತನೂರು ಸುಬ್ಬರಾವ್.

ಸಂಗತಿ ತಿಳಿಯಬೇಕು.

ಅಯ್ಯಾ,

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ಕಸಬಾಕ್ಕೆ ಸೇರಿದ ಅಮೀನಾಬಿ ಎಂಬುವಳ ಪಿತ್ರಾರ್ಜಿತ ಹಕ್ಕಾಗಿದ್ದ ದಾಸರಹಳ್ಳಿ ಗ್ರಾಮಕ್ಕೆ ಸೇರಿದ ನಂಬರು ೨೦೮, ೦೦೯, ೧೧೦ ಮತ್ತು ೧೧೧ ಉಳ್ಳ ಕಾಫಿ ತೋಟವು ರಿಜಿಸ್ಟರ್ ನಿಕಿ ಬಿಲ್ ಆಗಿ ಸೇರಿತು. ಸದರಿ ಸೊತ್ತುಗಳನ್ನು ಘೋಷ ಹೆಂಗಸರಾದವರಿಗೆ ಮೋಸಪಡಿಸಬೇಕೆಂಬ ಇರಾದೆಯಿಂದ ಕೆ. ಕೃಷ್ಣಶೆಟ್ಟಿ, ಚನ್ನಬಸಪ್ಪಶೆಟ್ಟಿ ಎಂಬವರು ಫೋರ್ಜರಿ ಕಾಗದರು ಮೂಲಕ ಅಕ್ರಮವಶಪಡಿಸಿದ್ದಾರೆಂಬದರ ಮೇಲೆ ಮಹಾರಾಜಾ ಗವರ್ನಮೆಂಟಿನವರಿಗೆ ಸುಮಾರು ೩೦೦ ಅರ್ಜಿಗಳು ಮೇಲ್ಪಟ್ಟು ಬರೆದಾಗ್ಯೂ ಈ ವರೆಗೂ ಯಾವ ನ್ಯಾಯವೂ ದೊರಿಯಲಿಲ್ಲ. ಸದರಿಯವಳು ಕಂಗೆಟ್ಟು ಪ್ಲೇಗಿನ ಅವಾಂತ್ರದಿಂದ ಬೇರೆ ದೇಶ ಸೇರಿದಳು ಸದರಿ ಹಕ್ಕುದಾರಳು ಈ ಸಂಗತಿ ಚೀಫ್ ಕೋರ್ಟಿಗೆ ರಿಫರ್ ಮಾಡಬೇಕೆಂದು ಪ್ರಯತ್ನಿಸಿರುತ್ತಾಳೆ. ಅಮೀನಾಗಳು ಸೊತ್ತನ್ನು ಅಗ್ರಿಕಲ್ಚರಲ್ ಬ್ಯಾಂಕಿನವರಿಗೆ ಅಡಮಾನ ಮಾಡಿದ್ದಾರಂತೆ ಸದರಿ ಬಾಂಕು ಎಲ್ಲಿ ಉಂಟು? ಅದರ ಏಜಂಟು ಯಾರು? ಲೆಕ್ಕಪತ್ರಗಳು ಯಾರ ಸುಪರ್ದಿನಲ್ಲಿ ಉಂಟು? ಎಂಬೀ ಸಂಗತಿಯನ್ನು ತಾವು ಆಗಲಿ, ತಮ್ಮ ಪತ್ರಿಕೆಯ ವಾಚಕರಾಗಲಿ ತಿಳಿಸಿದಲ್ಲಿ ತುಂಬಾ ಕೃತಾರ್ಥಳಾಗುವಳು. ಅಲ್ಲದೆ ಅವರುಗಳ ಶ್ರೇಯಃಪ್ರಾರ್ಥನಾ ಮಾಡುವಳು.

ಸಮೀಪದರ್ಶಿ.

ಅರ್ಜಿದಾರರ ಅಹವಾಲುಗಳು.

ಅಯ್ಯಾ,

ಮಂಡ್ಯ ತಾಲ್ಲೂಕು ಮಾದನಾಯಕನ ಹಳ್ಳಿ ಗ್ರಾಮದ ಪಟೇಲಿ ಕೆಲಸ ನೋಡಿದ ಬಾಬತು ಪೋಟಿಗಿ ಬಗ್ಗೆ ಸುಮಾರು ಎರಡು ವರ್ಷಗಳ ಭಾಗಾಯಿತು ಸರ್ಕಾರಕ್ಕೆ ಅರ್ಜಿಗಳ ಮೂಲಕ ಅನೇಕ ವಿಧವಾಗಿ ಬೇಡಿಕೊಂಡೆನು. ಈ ವರಿಗೂ ಯಾವದೊಂದು ಹುಕುಂ ಇಲ್ಲ. ಮತ್ತು ಡಿಟೋ ಗ್ರಾಮದ ಪಟೇಲಿ ಸಂಬಂಧವಾದ ರಿಕಾರ್ಡಿನಲ್ಲಿ ಕೆಲವು ಕಾಪಿಗಳನ್ನು ಅಪೇಕ್ಷಿಸಿ ಕಳೆದ ವರ್ಷ ೨೦ ರಲ್ಲಿ ಪ್ರೊಂಟ್‌ರಾಕ್ಸ್ ಡಿವಿಜನ್ ಆಫೀಸಿಗೆ ಅರ್ಜಿಯನ್ನು ಅಡ್ವಾನ್ಸು ೨ ರೂಪಾಯಿ ಸಮೇತ ಕೊಟ್ಟು ೩—೪ ದಫಾ ಹಾಜರಾಗಿ ಕಾಪಿ ಕೇಳಿದ್ದಕ್ಕೆ ಕೊಡದೇ ಹೋದಕಾರಣವನ್ನು ಕುರಿತು ಮೇಲ್ಕಂಡಂತೆ ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದರಲ್ಲಿ ಯಾವದೊಂದೂ ಹುಕುಂ ಇಲ್ಲ. ದಯಾಳು ಸರ್ಕಾರದವರು ಈ ವಿಷಯಗಳನ್ನು ಚಿತ್ತಕ್ಕೆ ತಂದು ಗರೀಬನನ್ನು ಕಾಪಾಡುತ್ತಾರೆಂದು ನಿರೀಕ್ಷಿಸಿ ಬೇಡಿಕೊಂಡಿದ್ದೇನೆ

ವಿಡಗಟ್ಟದ ಪೋಸ್ಟು, ಮಂಡ್ಯದ ತಾಲೂಕು

ಹು॥ ಮಲ್ಲೆಗೌಡನ ರಾಜು, ಮಾದನಾಯಕನ ಹಳ್ಳಿ.

ಅಕಾಲವೃಷ್ಟಿಯ ಅಭರ್ಟ.

ಅಯ್ಯಾ

ತಾ ೧೯ ನೇ ಬುಧವಾರ ಮಂಡ್ಯ ತಾ. ಮುತ್ತೆನೆರ, ಇದಕ್ಕೆ ಸೇರಿದ ೮—೧೦ ಗ್ರಾಮಗಳಲ್ಲಿ ಹಗಲು ೪ ಘಂಟೆಯಲ್ಲಿ ಸಾಧಾರಣ ಜಡಮಳೆ ಆಗಿ ೧ ಘಂಟೆ ಕಾಲದಲ್ಲಿ ನಿಂತುಹೋಯಿತು. ಇದು ಏನೂ ಅತಿಶಯವಾಗಿ ಒಬ್ಬರಿಗೂ ತೋರಲಿಲ್ಲ. ಅದೇ ರಾತ್ರಿ ೧೦ ಘಂಟೆ ಆಗಾಯ್ತು ಬೆಳಗಿನ ೪ ಘಂಟೆ ವರಿಗೆ ಏಕಸೋಲ್ ಮುಂಗಾರು ಗುಡುಗು ಸಿಡಿಲುಗಿಂತಲೂ ಹೆಚ್ಚಾಗಿ ಜನಗಳಿಗೆ ಭಯಪಡುವದಕ್ಕೆ ಆಕರವಾಗುವಂತೆ ಮಿಂಚು ಗುಡುಗು ಸಿಡಿಲುಗಳಿಂದ ಕೂಡಿದ ಅತಿವೃಷ್ಟಿಯು ಆಗಿ ಈ ಗ್ರಾಮದ ಹಿರೀಕೆರೆ ಹಾಸನ ಕೆರೆಗಳೆಂಬ ೨ ಕೆರೆಗಳು ನೀರೆಲ್ಲಾ ಖಾಲಿಯಾಗಿ ಕೊಂಚಮಟ್ಟಿಗೆ ಇತ್ತು. ಇವುಗಳೆರಡೂ ಕೋಡಿ ಮಿತಿಮೀರಿ ಬಿದ್ದು ಬೆಳಿಗ್ಗೆ ೩ ಘಂಟೆ ವರಿಗೂ ಕೋಡಿ ನಿಲ್ಲಲಿಲ್ಲ ಮತ್ತು ಹೆಂಚಿನ ಮನೆಗಳಲ್ಲಿ ಹೆಂಚಿನ ಒಳಗಳಲ್ಲಿ ನೀರು ಹಿಡಿಸದೆ ಮನೆಯಲ್ಲಿಯೇ ತಪ್ಪದಂತೆ ನೀರು ತುಂಬುವಂತಾಗಿ, ಜನಗಳಿಗೆ ತುಂಬಾ ಹಿಂಸೆಯಾಯ್ತು. ಆದರೆ ರೈತರು ಎಲ್ಲರೂ ಕಣಗಳನ್ನು ಮಾಡಿದ್ದದ್ದು ನಿರ್ನಾಮವಾಗಿದೆ. ರಾಗಿ ಮೆದೆಗಳೆಲ್ಲ ಕೆಳಗಡೆ ಹಾಕಿದ್ದ ಕಲ್ಲುಗಳು ಭೂಮಿಯೊಳಗೆ ಕುಸಿದು ಹೋಗಿ, ಮೆದೆಗಳೆಲ್ಲ ಚತುರ್ದಿಕ್ಕುಗಳಿಗೂ ನಮಸ್ಕಾರ ಮಾಡುವಂತೆ ಶಿರಸ್ಸು ಬೊಗ್ಗಿ ನಿಂತಿವೆ ರೈತರೆಲ್ಲ ನಾನಾ ತರವಾಗಿ, ನನ್ನ ಮೆದೆ ಹೋಯ್ತು ನನ್ನದು ಹುಚ್ಚೆಳ್ಳು ಹೋಯ್ತು. ನಂದು ಹುರುಳಿ ಹೋಯ್ತು ಎಂಬ ನಾನಾ ತರದ ಮಾತುಗಳೆ ತುಂಬಿದೆ ಈ ಗ್ರಾಮಕ್ಕೆ ಪಶ್ಚಿಮ ದಿಕ್ಕಿನಲ್ಲಿ ೩ ಮೈಲ್ ನಲ್ಲಿ ಲೋಕಪಾವನಿ ನದಿ ಇದೆ. ಆ ದಿವಸದ ಮಳೆಯಿಂದ ಬಂದ ಪ್ರವಾಹವು ನಾವು ಯಾವಾಗ್ಯೂ ನೋಡಿರಲಿಲ್ಲವೆಂದು ಅಲ್ಲಿನ ಸಮೀಪ ಗ್ರಾಮದವರಿಂದ ಗೊತ್ತಾಯ್ತು. ೩—೪ ಪುರುಷ ಪ್ರಮಾಣದ ವರಿಗೆ ದಡದಲ್ಲಿರುವ ಮರಗಳ ತುದಿಯಲ್ಲಿ ನೀರು ಹೋಗಿರುವ ಕತ್ತೆ ಪಗ್ಗೆ ಗುರುತು ಇದೆ. ಇಂಥಾ ಮಳೆಯು ಈ ಕಾಲದಲ್ಲಿ ನಾವು ಯಾವಾಗ್ಯೂ ನೋಡಿರಲಿಲ್ಲವೆಂದು ಹಳಬರಾದ ಮನುಷ್ಯರು ಹೇಳುತ್ತಾರೆ. ಆದರೆ "ಕಾಲವಲ್ಲದ ಕಾಲದಲ್ಲಿ ಮೂಲದ ಮಳೆ ಹುಯ್ದು ಕಾನಕಾನಹಳ್ಳಿ ಕೊಚ್ಚಿಹೋಯ್ತು" ಎಂಬ ಹಿರಿಯರ ಗಾದೆಯನ್ನು ಕೇಳಿದ್ದೇವೆ ಅದು ಈಗ ಪ್ರತ್ಯಕ್ಷವಾಯ್ತು ಆದರೆ ಇದು ಮೂಲದ ಮಳೆಯೇ ಆಗಿದೆಯಷ್ಟೆ "ವಿನಾಶಕಾಲೇ ವಿಪರೀತ ಬುದ್ಧಿ" ಎಂಬದಕ್ಕೆ ಇದು ವಿರುದ್ಧವಾಯ್ತು ಎಂದು ಕೆಲವರು ಚರ್ಚಿಸುತ್ತಾರೆ. ಮುಖ್ಯ ಈಗಿನ ಇಂಥಾ ಮಳೆಯಿಂದ ವ್ಯವಸಾಯದ ವಿಷಯವಾದ ಅನೇಕ ಪದಾರ್ಥಗಳು ಹಾಳಾಗಿದ್ದವಾಗಿ ಎಲ್ಲದಕ್ಕೂ ಅನಾನುಕೂಲವೆ ವಿನಹ ಅನುಕೂಲ ಯಾವದೂ ಇಲ್ಲ

ಇದೇ ಗ್ರಾಮದಲ್ಲಿ ೧೮ ನೆ ತಾ ರಾತ್ರಿ ಇಬ್ಬರು ರೈತರು ಬೆಳೆದಿದ್ದ ಹೊಗೇಸೊಪ್ಪಿನ ಪೈರು ಕಟಾವಿಗೆ ಬಂದದ್ದು ಅವುಗಳ ಬೆಳೆಯು ನೋಡಿ ಮನಸ್ಸು ತಡೆಯದೆ ಮಧ್ಯಕಾಲದ ಕಳ್ಳರು ಕೊಯ್ದುಬಿಡದೆ ಕುಯಿದುಕೊಂಡು ಹೋಗಿರುತ್ತಾರೆ ಮತ್ತು ಆ ದಿವಸ ಇಬ್ಬರು ರೈತರ ರಾಗಿ ಮೆದೆಯನ್ನು ಸಾಧ್ಯವಾದಷ್ಟು ಹೊತ್ತು ಮೆದೆಯನ್ನು ಉರುಳಿಸಿ ಹೋಗಿರುತ್ತಾರೆ. ಇವರೆಂಥಾ ಕಳ್ಳರು!

ಪ್ರತ್ಯಕ್ಷದರ್ಶಿ

ತಾಲ್ಲೋಕು ವರ್ತಮಾನಗಳು

ಮಳವಳ್ಳಿ.—ಶಿವನಸಮುದ್ರಂ ವಿದ್ಯುಚ್ಛಕ್ತಿಯ ಕಾರ್ಖಾನೆಯವಾಗಿ ಬೇಸಿಗೆ ಕಾಲದಲ್ಲಿ ನೀರಿನ ಸರಬರಾಯಿ ಕಡಿಮೆಯಾದ ಕಾರಣ ಇಲ್ಲಿಗೆ ನಾಲ್ಕು ಮೈಲಿ ದೂರದಲ್ಲಿರುವ ದನಗೇರಿ ಕಟ್ಟನ್ನು ಬಡಾವಣೆ ಮಾಡಿ, ಮಳೆಗಾಲದಲ್ಲಿ ತಡೆದ ನೀರನ್ನು ಬೇಸಿಗೆ ಕಾಲದಲ್ಲಿ ಉಪಯೋಗಿಸಿಕೊಳ್ಳುವ ಉದ್ದಿಶ್ಯ ಸರ್ವೆ ಮಾಡುತ್ತಾರೆ. ಇದು ಸರ್ವೆ ಮಾಡಿ ಅಣೆಕಟ್ಟನ್ನು ಎತ್ತರಿಸಿ ಕಟ್ಟಿದ ಪಕ್ಷದಲ್ಲಿ ಅನೇಕ ಗ್ರಾಮಗಳೂ ಜಮೀನುಗಳೂ ಮುಳುಗಿ ಹೋಗುತ್ತವೆ ಎಂದಾಗಿ ಜನಗಳು ಗುಣಗುಟ್ಟುತ್ತಲಿದಾರೆ. ಆದರೆ ಮುಂದೆ ಏನಾಗುವದೋ ನೋಡಬೇಕು. ಮತ್ತು ಈ ಅಣೆಕಟ್ಟನ್ನು ಕಟ್ಟಿಸಿದ ಪಕ್ಷದಲ್ಲಿ ಗೀರ್ ಸತ್ತೇಗಾಲ ಗ್ರಾಮದ ರೈತರಿಗೆ ಕ್ಷೇಮವಾಗುವದಕ್ಕೆ ಸಂಶಯವಿಲ್ಲ.—ಇಲ್ಲಿನ ಬೆಳಕವಾಡಿ ಸಾಹುಕಾರ್ ದೊಡ್ಡ ಕಂಪ್ಪಣ್ಣನು ಮೃತರಾದರೆಂದು ವಿಷಾದಿಸುತ್ತೇವೆ ಆದರೆ ಇವರ ತಮ್ಮನ ಮಗನು ಒಬ್ಬನೇ ಮಾತ್ರ ೧೮ ವರುಷದ ವಯಸ್ಸಿನವನಾಗಿದ್ದಾನೆ. ಆದರೂ ಚಿಕ್ಕಪ್ಪನು ತೀರಿ ಹೋದದ್ದಕ್ಕಾಗಿ ಒಳ್ಳೇ ಪದವಿಯಲ್ಲಿ ಸೇರಿಲಿ ಎಂಬ ಮೇಲೆ ಉತ್ತರ ಕ್ರಿಯೆಗಳನ್ನು ತಾನಾಗಿ ನಡಸಿ ಹತ್ತು ದಿವಸಗಳವರೆಗೂ ಬಂದ ಎಲ್ಲಾ ಜಾತಿಯ ಬಡಬಗ್ಗರಿಗೂ ಬ್ರಾಹ್ಮಣರಿಗೂ ದಕ್ಷಿಣೆ ಮುಂತಾದ್ದನ್ನು ಕೊಟ್ಟು ತೃಪ್ತಿಪಡಿಸಿ ಮುಕ್ತಾಯ ಮಾಡಿದನು

ಚಿಕ್ಕಮಗಳೂರು.—ಒಂದು ತಿಂಗಳಿಂದಲೂ ಪ್ಲೇಗ್ ರೋಗವೇನೂ ಇರಲಿಲ್ಲ. ಆದರೆ ಕಳೆದ ವಾರ ಎರಡು ಕೇಸುಗಳು ೧೯ ನೆ ತಾ. ೩೩ ಸೆಂಟ್ ಮಳೆಯೂ, ೨೧ ರಲ್ಲಿ ೯೬ ಸೆಂಟ್ ಮಳೆಯೂ ಆಯಿತು ಈ ಕಾಲದಲ್ಲಿ ಮಳೆಯಾಗುವದು ಅಪರೂಪ. ವರ್ಷ ದಿರ್ಸಿಭಿಕ್ಷೆ ಮಾಡಲು ಮುನ್ಸಿಪಾಲಿಟಿಯವರೇ ಕೂಲಿ ಆಳನ್ನಿಟ್ಟು ಮನೆಗಳ ಹೆಂಚುಗಳನ್ನು ತೆಗಸಿದ್ದ ಹಾಗೂ ೧೯ ನೆ ಬಂದ ಮಳೆಯಿಂದ ಮನೆಯ ಗೋಡೆಗಳು ನೆನೆದು ಒಳಗಿದ್ದ ಸಾಮಾನುಗಳೆಲ್ಲಾ ನೀರು ಬಿದ್ದು ನಷ್ಟವಾಯಿತೆಂದೂ ಜನರು ಹೇಳಿಕೊಳ್ಳುತ್ತಾರೆ. ಎರಡನೇ ಸಲ ಬಂದ ಮಳೆಗೆ ತಪ್ಪಿಸಿಕೊಳ್ಳುವದಕ್ಕೆ ಮಾಲೀಕರೇ ತೆಗಿಸಿದ್ದ ಹೆಂಚುಗಳನ್ನು ಮುಚ್ಚಿಸಿಕೊಂಡರೆಂದು ವರ್ತಮಾನ.—ನಮ್ಮ ಡೆಪ್ಯುಟಿ ಕಮೀಷನರೂ, ಇಂಜನಿಯರ್ ಸಾಹೇಬರೂ ಡಾಕ್ಟರ್ ಸಾಹೇಬರೂ ಎಲ್ಲಾ ಸರ್ಕೀಟು ತೀರಿಸಿಕೊಂಡು ಈ ವಾರ ಬರುವರೆಂದೂ ಡೆಪ್ಯುಟಿ ಕಮೀಷನರ್ ಸಾಹೇಬರು ಮಾತ್ರ ಬಂದವರ ಅತ್ತಿಗುಂಡಿ ಕಡೆಗೆ ಹೋಗಿ ಬರುವರೆಂದು ವರ್ತಮಾನ.—ಇಲ್ಲಿ ಸಂತೆಗೆ ಬಿಕ್ಕೋಡು ಪ್ರಾಂತ್ಯದಿಂದ ಬಂಡಿಯಲ್ಲಿ ಅಕ್ಕಿ ತರುವ ಮಾರಾಟಗಾರರು ಒಳ್ಳೇ ಸಣ್ಣಕ್ಕಿಯ ಸಂಗಡ ಸಾಧಾರಣವಾದ ಅಕ್ಕಿಯನ್ನು ಬೆರಸಿ ಸಣ್ಣಕ್ಕಿಯ ಬೆಲೆಗೆ ಮಾರುತ್ತಾರೆ ಇದನ್ನು ಮುನ್ಸಿಪಾಲಿಟಿಯವರು ನೋಡಿ, ಹಾಗೆ ಅಕ್ಕಿಯನ್ನು ಬೆರಸಿ ಮಾರದಂತೆ ತಡೆಯುವದು ಒಳ್ಳೇದಲ್ಲವೇ?

ತಿಪ್ಪೂರು.—ಸುಮಾರು ಐದಾರು ತಿಂಗಳಿಂದ ಬಾಗೇಪಲ್ಲಿ ದಾಂಡಯ್ಯನವರಿಗೆ ಕಾಯಿಲೆಯಾಗಿ, ಕಡೆಗೆ ಹೆಕ್ಕತ್ತಿನ ಮೇಲೆ ದಪ್ಪ ಹುಣ್ಣು ಏಳಲು, ಇವರ ಅವಸಾನವನ್ನು ತಿಳಿದ ಎರಡನೇ ಮಗ ವೆಂಕಟ ಸಂಜೀವಯ್ಯ ಎಂಬವರು ತನ್ನ ಪೂರ್ವದ ಹರಿಕೆಯನ್ನು ಈಗಲೇ ತೀರಿಸಬೇಕೆಂದು ಬ್ರಾಹ್ಮಣೋತ್ತಮರನ್ನು ಕರೆದು, ಅನ್ನದಾನ ಮುಂತಾದ್ದು ಮಾಡಸಿ, ತನ್ನ ಸ್ವಯಾರ್ಜಿತ ಗೃಹವನ್ನೇ ದಾನ ಮಾಡಲು, ಕಂದೆಯ ಗಂಡಾಂತ್ರವು ಒಡೆದು ಹೋಗಿ ಈಗ ಗುಣವಾಗುತ್ತಾ ಇರುತ್ತಾರೆಂದು ಸಂತೋಷ ಪಡುತ್ತಾರೆ.—ತರಕಾರಿ ಮುಂತಾದ ದಿನಸಿಗಳನ್ನು ತೂಗುವ ಹಳ್ಳಿಯ ಹೆಂಗಸರು ವಿಚಿತ್ರವಾದ ದಿಂಡುಕೋಲನ್ನು ಕಟ್ಟಿರುವ ತಕ್ಕಡಿಯನ್ನು ಇಟ್ಟಿರುತ್ತಾರೆ. ಈ ದಿಂಡಿಯ ಮೇಲೆ ಸೇರು, ಅಚ್ಚೇರು, ಪಾವು ಎಂಬ ಗೆರೆಗಳಿರುತ್ತವೆ. ೪ ಸೇರು ಕಾಯಿ ತೂಗಿದರೆ ೧। ಪಾವು ಕಡಿಮೆ ಬರುತ್ತದೆ. ಯಾಕೆ ಎಂದು ಕೇಳಿದರೆ ಘಟ್ಟಿಯಾಗಿಯೇ ಬಯ್ಯುತ್ತಾರೆ ಸರ್ಕಾರದವರ ನಿಗಾ ಇಲ್ಲದೆ ರಿಗೂ ಪ್ರಯೋಜನ ವಿಪರೀತ ಮೋಸವಾಗುತ್ತಿರುವದರಿಂದ ಬಡವರಿಗಿದಕ್ಕೆ ತೊಂದರೆಯಾಯಿತೆಂದು ಹೇಳುತ್ತಾರೆ. ಛಳಿ ವ್ಯಾಧಿಯ ಜನರು ನೋ ತಕ್ಕ ಮಟ್ಟಿಗೆ ತಲೆ ಹಾಕುತ್ತಲೇ ಇರುತ್ತವೆ.—ಪೋಲೀಸು ಸೂಪರಿಂಟೆಂಟರು ದಯಮಾಡಿ ತಮ್ಮ ಇಲಾಖೆಯ ಕಾರುಕರ್ತರನ್ನು ಚನ್ನಾಗಿ ಪರೀಕ್ಷಿಸಿದರೆಂದು ತಿಳಿಯಿತು.—ಮಧ್ಯ ರಾತ್ರಿಯಲ್ಲಿ ಎರಡು ಮೇಯಿಲ್ ಗಾಡಿಗಳು ಬರುತ್ತವೆ ಪ್ರಯಾಣಿಕರಾದ ಸ್ತ್ರೀಯರಿಗೆ ಮುಖ್ಯ ಎಳೇ ಮಕ್ಕಳುಳ್ಳವರಿಗೆ ಮಲಗುವದಕ್ಕೆ ಸ್ಥಳವಿಲ್ಲದೆ ಮಕ್ಕಳ ರೋಧನೆಯು ಜಾಗರಣೆಯೇ ಆಗುತ್ತದೆ. ಸಮೀಪದಲ್ಲಿ ಸರ್ಕಾರಿ ಸತ್ರವಿದೆ ಇದು ಆಫೀಸರಿಗೆ ಮಾತ್ರ ಎಂದು ಹೇಳು

...ಛತ್ರವ್ಯಾಗಾದರೂ, ಸಮೀಪದಲ್ಲಿ ಒಂದು ಸತ್ರ ಕಟ್ಟಿಸ ... ಸರ್ಕಾರದವರಾದರೂ ರೈಲ್ವೆ ಇಲಾಖೆಯವರಾದರೂ ಈ ...ಕಾರ್ಯಕ್ಕೆ ಸ್ವಲ್ಪ ಜಾಗವನ್ನು ಕೊಟ್ಟರೆ ಒಳ್ಳೇದು

ಚಿತ್ರದುರ್ಗ—ಇಲ್ಲಿಗೆ ತುಂಕೂರು ಡಿಸ್ಟ್ರಿಕ್ಟ್ ತಿಪಟೂರು ...ಕಂಪನಿಯವರು ಬಂದು ತಿಂಗಳಿಂದಲೂ ನಾಟಕಗಳನ್ನು ಸಂ...ಗಲ ಬಳಿ ಹಾಕಿರುವ ಡೇರಾದಲ್ಲಿ ಆಡುತ್ತಾ ಇರುತ್ತಾರೆ ಇಲ್ಲಿ ...ಹೊಸದಾಗಿ ವರ್ಗವಾಗಿ ಬಂದ ಆಸ್ಪತಲ್ ಅಸಿಸ್ಟೆಂಟ್ ಮ॥ ವಿ. ...ಕನಕಸಭಾಪತಿ ಮೊದಲಿಯಾರವರು ಮೊನ್ನೆ ೧೦ ನೇ ತಾ ಇಂ... ನಾಟಕವನ್ನು ಆಡುವದಕ್ಕೆ ಏರ್ಪಾಟು ಮಾಡಿ, ಇಲ್ಲಿಗೆ ...ಟು ಬಂದಿದ್ದ ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರು ... ಇತರ ಆಫೀಸರುಗಳು, ಅಂದರೆ ವರ್ಕಸಿಯರು, ಟ್ರಿಜರಿ ಆಸಿ...ಡಾಕ್ಟರು, ಇನ್ನು ದೊಡ್ಡ ಮನುಷ್ಯರಿಗೆ ಪ್ರೋತ್ಸಾಹಿಸಿ ...ಕೊಂಡು ಬಂದಿದ್ದರು ಆ ದಿನ ಊರ್ವಶೀ ಪಾರ್ಟ್ ಮಾಡಿದ ವೈ...ನಾಚಾರ್ಯರಿಗೆ ಮೊದಲೇ ಬೆಂಗಳೂರಿಂದ ಮೊದಲಿಯಾರ್ರು ತರಿ... ಭಂಗಾರದ ಮೆಡಲನ್ನು ಸೂಪರಿಂಟೆಂಡಿಂಗ್ ಇಂಜನಿಯರ ಮೂಲ...ಬಹುಮಾನವಾಗಿ ಕೊಡಿಸಿದರು ಈ ಊರಲ್ಲಿ ನಾಟಕದವರಿಗೆ ...ಮಾನ ಕೊಡುವದಕ್ಕೆ ಇದೇ ಮೊದಲು ಇನ್ನು ಜನಗಳಿಗೆ ದು...ಕ್ಕೆ ಅಧಿಕವಾಗವೆಂಬ ಗಾದೆಗೆ ಸರಿಯಾಗಿ ನಾಟಕಗಳಲ್ಲಿ ನೋ...ಸಾಕಾಗದೆ, ಅಲ್ಲಲ್ಲಿ ಸಂಗೀತದ ಕಚೇರಿಗಳು ಸಹಾ ನಡೆಯು...ಮತ್ತು ಈ ಊರಿಗೆ ಯಾರು ಬಂದಾಗ್ಯೂ ಚನ್ನಾಗಿ ಹಣ ದೊರೆ...ತ್ತೆ—ತಾ ೧೬ ರಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಿಗೆ ಆವ...ಯುವರೆಲ್ಲಾ ಸೇರಿ ಬೆಟ್ಟದ ಮೇಲೆ ಬೆಳಿಗ್ಗೆ ಟಫಿ೯ ನಡಿಸಿದ ...ಸಾಯಂಕಾಲ ಲಾಯರ್ ವೆ॥ ತಿರುಮಲರಾಯರೇ ಮೊದಲಾಗಿ ...ಛತ್ರದಲ್ಲಿ ಭೋಜನ ವಗೈರೆ ನಡಿಸಿದರು ಅನಂತರ ಸಂಗೀತ ...ಆಯಿತೆಂತ ವರ್ತಮಾನವಿದೆ —ಹವಾ ಚನ್ನಾಗಿಲ್ಲ ತುಂಬಾ ...ಳುವವರಿಂದ ಸಾಧಾರಣವಾಗಿ ಕಾಯಿಲೆಯವರು ಬಹಳ ಮಂದಿ ...ರೆ ಇಂಥಾದ್ದರಲ್ಲಿ ವಾರಕ್ಕೆ ೩—೪ ದಫಾ ನಾಟಕಗಳು ಆ...ಯಿಂದ ಜನಗಳು ನಿದ್ದೆಗೆಟ್ಟು ಇದ್ದಷ್ಟು ಕಾಯಿಲೆ ಬರುವದಕ್ಕೆ ...ಗಿದೆ ಇದಕ್ಕೆ ಪೋಲೀಸ್ ಆಫೀಸರು ಕೊಂಚ ತರದೂದು ...ದು ಉತ್ತಮ ಈಚೆಗೆ ಹೊಸದಾಗಿ ನೇಮಕವಾದ ಟರ್ಮ ದ...ರು ಬಹಳ ಮುತುವರ್ಜಿಯಿಂದ ಟೌನು ಗಸ್ತಿಗೆ ಏರ್ಪಾಟು ...ವದರಿಂದ ಗಲಭೆ ಕಾಣದಂತೆ ಆಗಿರುತ್ತೆ ಧಾರಣೆ ಹುಸಿಗಳು ...ಕಳಿತರಕ್ಕೆ ಬಂದಿರುತ್ತೆ —ಇಲ್ಲಿನ ಎಕ್ಸೈಸ್ ಇಲಾಖೆಯ ...ವವಳಿಕ ಕೇಳುವವರೇ ಇಲ್ಲದಂತೆ ಆಗಿರುತ್ತೆ ಇದಕ್ಕೆ ...ಕಮೀಷನರು ಇಲ್ಲಿಂದ ಬರುವ ಬಡಜನಗಳ ಆಹವಾಲ್ ...ತ್ತದಲ್ಲಿ ತಂದರೆ ಸಾಕಾಗಿರತ್ತೆ

ಮೇಲುಕೋಟೆ—ಮೇಲುಕೋಟೆ ವೊಂಟಾಪ್ಪೆಯ್ಯಂಗಾರ್ ಎಂಬ ...ಗೆ ಸುಮಾರು ೧೦ ವರುಷ ವಯಸುಳ್ಳ ಹುಡುಗನಿಗೆ ಒಳ್ಳೆ ...ಡು ಹೇಳಿದ ಮಾತಿನಂತೆ ತುರುಕರಬೇವಿನ ಸೊಪ್ಪಿನ ರಸ ...ಸುಮಾರು ಅರ್ಧ ಸೇರಿನಷ್ಟು ಪ್ರವೃತ್ತಿಗಾಗಿ ಕುಡಿಸಿದರು ಆ ...ಡು ತಾನು ಕುಡಿಯುವದಿಲ್ಲವೆಂದು ಹೇಳಿದರೂ ತಾಯಿಯು ...ರ ಮಾಡಿ ಕುಡಿಸಿದಳು ಹುಡಗನು ಔಷಧಿ ಕುಡಿಯುವ ಪರಿ ...ಸುಖಿಯಾಗಿ ಇದ್ದನು ಆ ವೇಳೆ ಪ್ರಜ್ಞೆ ತಪ್ಪಿ ೨೦ ನೇ ...ವಾರ ಮಧ್ಯಾಹ್ನ ಕಾಲವಾದನು ಅನುಭವವಿಲ್ಲದ ಔಷಧಿಗ...ಸೇವನೆ ಮಾಡುವುದರಿಂದ ಇಂಥ ಅನರ್ಥ ಪರಂಪರೆಗಳು ...ಗುತ್ತಿದರಲ್ಲಿ ಯಾವಸಂದೇಹವೂ ಇಲ್ಲ ಮೈಸೂರಿನ ಪ್ರಜಾಪ್ರ...ಸಭೆಯಲ್ಲಿ ವರ್ಷಂಪ್ರತಿಯೂ ಈ ಊರಿನಲ್ಲಿ ಒಂದು ವೈದ್ಯಶಾ...ಲೆ ಸ್ಥಾಪಿಸಬೇಕೆಂದು ಪ್ರಾರ್ಥಿಸಿಕೊಂಡರೂ ಅದು ಇನ್ನೂ ...ದಯಾಳು ಸರ್ಕಾರದವರ ಗಮನಕ್ಕೆ ಬಾರದೇ ಇದೆ -ಈ ಊರಿ...ನ ಪೋಸ್ಟ್ ಆಫೀಸ್ ಬೀದಿಯಲ್ಲಿರುವ ಒಂದು ಮನೆಯಲ್ಲಿ ಸೇಷ್ಯ...ನ್ ಡಿಷ್ಟ ಮ॥ ತಿರುಮಲಾಚಾರ್ಯ ಕುಟುಂಬ ಕುಟ್ಯಮ್ಮನವರು ...ತಿಂಗಳಿಂದ ವಾಸವಾಗಿದಾರೆ ಇವರು ಈ ದಕ್ಷಿಣ ದೇಶದ ಎಲ್ಲಾ ...ಕ್ಷೇತ್ರಗಳಲ್ಲಿಯೂ ಸ್ವಲ್ಪ ಸ್ವಲ್ಪ ಕಾಲ ವಾಸವಾಗಿದ್ದರು ಅದರಂತೆ ...ಕ್ಷೇತ್ರ ಸ್ಥಳದಲ್ಲಿಯೂ ಸ್ವಲ್ಪ ಕಾಲ ವಾಸಿಸಬೇಕೆಂದು ಬಂದಿದಾ...ರೆ ಮನೆಯಲ್ಲಿ ಆಹಾರ ಪಾನ ವಗೈರೆಗಳಿಗೆ ಉಪಯೋಗಿಸುತ್ತಿ...ದ್ದ ಪಾತ್ರೆಗಳೆಲ್ಲವೂ ಬೆಳ್ಳಿಯಾಗಿಯೇ ಇದ್ದವು ಕಳೆದ ೧೯ ನೇ ತಾ ...ವಾರ ರಾತ್ರಿ ಮೇಲ್ಕಂಡ ಕುಟ್ಯಮ್ಮನವರು ಶ್ರೀಯವರ ದೇವಸ್ಥಾನ ...ಸಾಯಂಕಾಲ ೬ ಘಂಟೆ ಸಮಯದಲ್ಲಿ ದೇವರ ಸೇವೆಗಾಗಿ ಹೋ...ದಿ ಆ ದಿವಸ ದೇವಾಲಯದಲ್ಲಿ ವಿಶೇಷೋತ್ಸವವಾಗಿತ್ತು ಆದ್ದರಿಂ...ದ ಮನೆಗೆ ಬರಲು ರಾತ್ರಿ ೧೦ ಘಂಟೆಯಾಯಿತು ಸುಮಾರು ...ಅದೆ ಸಮಯದಲ್ಲಿ ವಿಪರೀತ ಮಳೆಯು ಬಂತು ಬೀದಿಯು ಗಾ...ಢಾಂಧಕಾರವಾಗಿತ್ತು ಈ ಸಂದರ್ಭದಲ್ಲಿ ಯಾವನೋ ಒಬ್ಬನು ಅವ...ರಿದ್ದ ಮನೆಯ ಬೆಳಕಿನ ಪೈಕಿ ಒಂದನ್ನು ತೆಗದು ಒಳಕ್ಕೆ ...ಹೊಕ್ಕಿ ಪೆಟ್ಟಿಗೆಯಲ್ಲಿದ್ದ ಸುಮಾರು ೭೦೦ ರೂಪಾಯಿ ಬಾಳು...ವ ಪಾತ್ರೆಗಳನ್ನೆಲ್ಲಾ ಅಪಹರಿಸಿ ಹೊರಕ್ಕೆ ಬರುವಾಗ ಬೀಗಕ್ಕೆ ...ಕೂಟಿ ಪಲಾಯನವಾದನು ರಾತ್ರಿ ೧೦ ಘಂಟೆ ಸಮಯದ ...ಕುಟ್ಯಮ್ಮನವರು ದೇವಸ್ಥಾನದಿಂದ ಮನೆಗೆ ಬಂದು ಬೀಗ ತೆಗೆಯ...ಲು ಮಾಡಿದರೂ ಆಗಲಿಲ್ಲ ಅನಂತರ ಲಾಂದ್ರ ತಂದು ...ನೋಡಲು ಬೆಳಕವು ಕತ್ತರಿಸಿದ್ದದ್ದು ಕಂಡುಬಂತು ಬೆಳಿಗ್ಗೆ ಶ್ಯಾ...ನ ಪೋಲೀಸಿನವರು ಬಂದು ಮನೆಯ ಪರಿ ವಾಹನ್ನೂಲವನ್ನು ತೆಗೆ...ದುಕೊಂಡು ಹೋಗಿ ಪತ್ತೇ ತರದೂದು ನಡಸುತ್ತಿದ್ದಾರೆ

ತುಂಕೂರು—ಈ ವಾರ ಗುಡುಗು ಮಿಂಚುಗಳಿಂದ ಕೂಡಿದ ...ಒಂದು ಮಳೆಯಾಯ್ತು ಕೆರೆಗೆ ಕೂಡಾ ಸ್ವಲ್ಪವಟ್ಟಿಗೆ ನೀರು ...ಕೃಷಿಗೆ ಸುಗ್ಗಿಕಾಲ ಪ್ರಾರಂಭಿಸಿರುವದರಿಂದ ಮಂಡಿಗ...ಳಿಗೆ ರಾಗಿಗಳು ವಿಶೇಷವಾಗಿ ಬರುತ್ತಲಿವೆ ರಾಗಿಗಿಂತ ಭತ್ತದ ಧಾರಣೆ ಇಳಿಂತರವಾಗಿದೆ —ಕಳೆದ ವಾರ ಟರ್ವಜೋಲಿಯರ ಪಟ್ಟಿಯಲ್ಲಿ ಒಬ್ಬನ ಮನೆಗೆ ಅವನ ಮಗು ಆಟಕ್ಕಾಗಿ ಬೆಂಕಿ ಹಾಕಿದ್ದರಿಂದ ಮನೆ ಸಾಮಾನು ಸಹಿತವಾಗಿ ಸುಟ್ಟುಹೋಯಿತು —೧೪ ನೇ ತಾ॥ ಶುಕ್ರವಾರ ಸಾಯಂಕಾಲ ದೀಪಹಚ್ಚುವ ಹೊತ್ತಿನಲ್ಲಿ ಇಲ್ಲಿನ ಕೆರೆಗೆ ಇಬ್ಬರು ೯—೧೦ ವರ್ಷದ ವಯಸ್ಸಿನ ಹುಡುಗರು ಕೋಡಿಬಳಿ ಇರುವ ಪಾವಟಿಗೆಹತ್ರ ಇಳಿದು ನೀರು ಕುಡಿಯುತ್ತಿರುವಾಗ ದೊಡ್ಡ ಹುಡುಗನು ಕಾಲುಜಾರಿ ನೀರಿನಲ್ಲಿ ಮುಣುಗಿದನು ಅವನನ್ನು ಎಳೆಯಬೇಕೆಂದು ಅವನ ತಮ್ಮನಾದ ಸಣ್ಣವನು ಪ್ರಯತ್ನಿಸಿ ತಾನೂ ನೀರ ಪಾಲಾದನು ಆ ಸಮಯಕ್ಕೆ ಸಮೀಪದಲ್ಲಿ ಲಾಂದ್ರಹತ್ತಿಸುತ್ತಿದ್ದ ಮುಸಲ್ಮಾನರ ಅಲಿಸಾಹೇಬ್ ಎಂಬುವನು ತಕ್ಷಣ ಓಡಿಬಂದು ಎರಡನೇ ಹುಡುಗನನ್ನು ಮೇಲಕ್ಕೆ ಎತ್ತಿ ಒಂದನೇ ಹುಡುಗನನ್ನು ಹುಡುಕುವಾಗ ಅವನು ಸಿಕ್ಕಲಿಲ್ಲ. ಅಷ್ಟುಹೊತ್ತಿಗೆ ಡಾಕ್ಟರು ವರ್ತಮಾನತಿಳಿದು ಬಂದು ನೀರು ಕುಡಿದಿದ್ದ ಈ ಹೊರಕ್ಕೆ ತೆಗೆದ ಹುಡುಗನನ್ನು ಬಹಳ ಪ್ರಯಾಸಪಟ್ಟು ಬದುಕಿಸಿದರು ನೀರಿನಲ್ಲಿ ಮುಣುಗಿಹೋದ ಹುಡುಗನನ್ನು ಕೂಡಾ ಮಾರನೇ ದಿನ ಆ ಅಲಿಸಾಹೇಬ್ ಎಂಬುವನೇ ಬಹಳ ಪ್ರಯಾಸಪಟ್ಟು ಹುಡುಕಿ ಹೆಣವನ್ನು ಹೊರಕ್ಕೆ ತೆಗೆದನು ಈ ಸಂದರ್ಭದಲ್ಲಿ ಅಲಿಸಾಹೇಬ್ ಮಾಡಿದ ಉಪಕಾರವೂ ಶ್ರಮವೂ ತುಂಬಾ ಸ್ತೋತ್ರಾರ್ಹವಾಗಿದೆ ಹಿಂದೆ ಈತನು ತೊಟ್ಲಕೆರೆ ಗ್ರಾಮದಲ್ಲಿ ಒಬ್ಬ ಗರ್ಭಿಣಿ ಹೆಂಗಸನ್ನು ಇದೇ ರೀತಿ ನೀರಿನಿಂದ ಪಾರು ಮಾಡಿದನೆಂದು ತಿಳಿದು ಬಂದಿದೆ ನಮ್ಮ ಸರ್ಕಾರದವರು ಆತನಿಗೆ ಪ್ರೋತ್ಸಾಹಿಸುವದು ನ್ಯಾಯ ವಾಗಿದೆ ಎಂದು ಖಂಡಿತವಾಗಿಯೂ ಹೇಳಬಹುದು ಎರಡನೆದಾಗಿ ಆ ದಿನ ಕೆರೆಯ ಕೋಡಿ ಉಸ್ತುವಾರಿ ಇದ್ದ ಪೋಲೀಸಿನವನು ಈ ಇಬ್ಬರು ಹುಡುಗರು ಕೆರೆಯಲ್ಲಿ ಇಳಿದು ನೀರು ಕುಡಿಯುವವರೆಗೂ ಏನು ಮಾಡುತ್ತಿದ್ದನೋ ಅಥವಾ ಎಲ್ಲಿ ಹೋಗಿದ್ದನೋ ಎಂಬೀ ವಿಷಯ ತನಿಖೆ ಮಾಡುವವರು ಯಾರು ?— ಈ ಟರ್ವಗೆ ಸೇರಿದ ದೊಡ್ಡಜ್ಜೀ ಮಲ್ಲಯ್ಯನ ಪಾಳ್ಯದ ಹತ್ರ ಇರುವ ಕಟ್ಟೆಗೆ ಅದರ ಸಮೀಪದಲ್ಲಿ ಆಡುತ್ತಿದ್ದ ೭ ವರ್ಷದ ಹುಡುಗನು ತನ್ನ ಜೊತೆಯಲ್ಲಿದ್ದ ಎರಡು ವರ್ಷದ ಮಗುವನ್ನು ಕಟ್ಟೆಗೆ ತಳ್ಳಿದನು ಕೂಡಲೇ ಸಮೀಪದಲ್ಲಿದ್ದವರು ಓಡಿ ಬಂದು ಮಗುವನ್ನು ಬದುಕಿಸಿದರು ಆ ಪಾಳ್ಯದಲ್ಲಿ ತಾ ೪ ರಲ್ಲಿ ಒಬ್ಬನು ರಾತ್ರಿವೇಳೆ ಒಬ್ಬಳ ಮನೆಗೆ ಹೋಗಿ ಬರುವಾಗ ಅವಳ ಚಿಂತಾಕವನ್ನು ಕದ್ದು ತಂದು ತನ್ನ ಜೊತೆಯವರ ವಶಕ್ಕೆ ಕೊಟ್ಟು ಕರಗಿಸಿದ ವರ್ತಮಾನ ಪೋಲೀಸಿಗೆ ತಿಳಿದು ವಿಚಾರಣೆಯಲ್ಲಿದೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕುಪ್ಪೂರು ಗದ್ದಿಗೆ ದೊಂಬಿ ವಿಷಯವಾಗಿ ಇಲ್ಲಿನ ಕೋರ್ಟಿನಲ್ಲಿ ವಿಚಾರಣೆಯಾಗಿ, ಹದಿನಾರು ಜನಕ್ಕೆ ತಲಾ ೫೦ ರೂಪಾಯಿ ಜುಲ್ಮಾನೆಯೂ ಎರಡು ತಿಂಗಳು, ತಿಂಗಳು, ಹದಿನೈದು ದಿನ ವೇರೆ ಕಠಿಣ ಸಜವೂ ತಾ ೨೩ ರಲ್ಲಿ ವಿಧಿಸಲ್ಪಟ್ಟಿತು ಚೀಫ್ ಕೋರ್ಟಿಗೆ ಅಪೀಲ್ ಮಾಡುವ ಉದ್ದೇಶ್ಯ ಅವರನ್ನು ಜಾಮೀನ ಮೇಲೆ ಬಿಟ್ಟಿರುವಂತೆ ಕೇಳುತ್ತೇನೆ /\/\

ತೀರ್ಥಹಳ್ಳಿ—ಇಲ್ಲಿ ಸಿಡುಬಿನ ಉಪದ್ರ ಪ್ರಾರಂಭವಾಗಿ ಅನೇಕ ಮನೆಗಳಲ್ಲಿ ಮಕ್ಕಳು ಹೆಂಗಸರು ದೊಡ್ಡವರೂ ಸಹ ಬಹಳ ವೇಧನೆ ಪಡುತ್ತಿದಾರೆ ಇದರಿಂದ ಜಾತ್ರೆಯು ಸರಿಯಾಗಿ ನಡೆಯ ಲಿಲ್ಲವೆಂದು ತೋರುತ್ತದೆ ಈ ಸಾರಿ ಅನೇಕ ವರ್ತಕರು ತಮ್ಮ ಸರಕುಗಳನ್ನು ಮಾರಾಟಕ್ಕೆ ತಂದು, ತಕ್ಕ ಗಿರಾಕಿ ಇಲ್ಲದೆ ರೋಧನ ಮಾಡುತ್ತಿದಾರೆ ಅನೇಕ ತರವಾದ ಜೂಜಿನ ಆಟಗಳು ನಡೆಯುತ್ತಿವೆ ಪೋಲೀಸಿನವರ ಉಸ್ತುವಾರಿ ಕಡಮೆ ಎರಡು ಮೂರು ಸ್ಥಳಗಳಲ್ಲಿ ಗಡಿಯಾರದ ಜೂಜುಗಳು ಬಹು ನಾಜೋಕಿನಿಂದ ನಡೆಯುತ್ತಿವೆ ಈ ಪ್ರಾಂತ್ಯ ಜನಗಳು ನಿಮಿಷ ಮಾತ್ರದಲ್ಲಿ ಮೋಸಹೋಗಿ ಜೂಜಿನಲ್ಲಿ ಬಿದ್ದು ಹಣ ಕಳೆಯುತ್ತಾರೆ —ರಾಮ ತೀರ್ಥದಲ್ಲಿ ಗಂಡಸರೂ ಹೆಂಗಸರೂ ಒಂದೇ ಸ್ಥಳದಲ್ಲಿ ಅಂದರೆ ಒಂದು ಗಜ ಚೌಕವುಳ್ಳ ಸ್ಥಳದಲ್ಲಿ ಮುಳುಗಿ ಬರುತ್ತಾರೆ ಈ ಸಾರಿ ಪೋಲೀಸಿನವರು ಯಾರನ್ನೋ ಪೂರಾ ಹೊಡೆದರೆಂದೂ ಅರ್ಜಿ ಕೊಟ್ಟದಾರೆಂದೂ ಜನರು ಹೇಳುವರು ಅನೇಕ ಸಿಲ್ವರ್, ತಾಂಬ್ರ, ಬಟ್ಟೆ, ನಾನಾತರದ ಲೋಹ ಸಾಮಾನು, ಸೀಮೆ ಸಾಮಾನು ಮುಂತಾದ್ದನ್ನು ದುಡ್ಡು ಸಂಪಾದನೆ ಮಾಡುವಬಕ್ಕೆ ನಾನಾ ಉಪಾಯಗಳನ್ನು ಜನರು ಏರ್ಪಡಿಸಿಕೊಂಡು ಬಂದಿದಾರೆ —ಇಲ್ಲಿನ ಸಂದೇಕ ಕೋಠಿಯಲ್ಲಿ ಬಹಳವಾಗಿ ಗಂಧವು ಜಮಾಯಿಸಲ್ಪಟ್ಟದ್ದರಿಂದ ಡೆಪ್ಟಿ ಕಮೀಷನರು ನೆನ್ನೆ ದಿನ ಬಂದು ಗಂಧವನ್ನೆಲ್ಲಾ ಒಳ್ಳೇ ಗಿಡಾಕಿಗೆ ಹರಾಜು ಹಾಕಿಸಿದರು —ಈ ತಾಲ್ಲೂಕಿನ ಶೇಕ್ದಾರ್, ಶಾನಭೋಗ್, ಪಟೇಲರುಗಳು ಕಂದಾಯದ ಹಣವನ್ನು ವಸೂಲ್ ಮಾಡಿ ಕೆಲವು ಭಾಗವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡರೆಂದು ಗೊತ್ತಾಗಿದೆ ಈಗ ಬಂದಿರುವ ಅಮಲ್ದಾರರು ಸ್ವಲ್ಪ ಪ್ರಯತ್ನಮಾಡಿ ಒಂದಿಬ್ಬರು ಮೊದಲನ್ನು ಪತ್ತೆಮಾಡಿದಾರೆಂದು ತಿಳಿದು ಬಂದಿದೆ ಇನ್ನೂ ಅನೇಕರು ಇಂಥಾ ಮೋಸದಲ್ಲಿ ಬಿದ್ದಿದಾರೆಂದೂ ಅಮಲ್ದಾರು ಮುತುವರ್ಜಿಮಾಡಿದರೆ ಅಂಥವರನ್ನು ಮುಖದಾಕ್ಷಿಣ್ಯವಿಲ್ಲದೆ ಶಿಕ್ಷಿಸಬಹುದೆಂದೂ ಜನಗಳು ಹೇಳುತ್ತಾರೆ ಆ ಪೈಕಿ ಒಬ್ಬ ಪಟೇಲನು ವಾರಂಟಿನಲ್ಲಿ ಹಿಡಿಯಲ್ಪಟ್ಟು ಶಿವಮೊಗ್ಗಕ್ಕೆ ವಿಚಾರಣೆಗೆ ಹೋಗಿದ್ದಾಗ್ಗೆ ಅಲ್ಲೇ ಪ್ರಾಣಬಿಂದು ಸತ್ತನೆಂದು ತಿಳಿದುಬಂದಿದೆ ಅಸಿಸ್ಟೆಂಟ್ ಕಮೀಷನರ್ ಮ॥ ಚಾಂಡಿಸಾಹೇಬರು ವರ್ಗವಾಗಿ ಹೋದ ಲಾಗಾಯ್ತು ತೀರ್ಥಹಳ್ಳಿ ತಾಲ್ಲೂಕಿನ ಕ್ರಮಗಳೆಲ್ಲಾ ಕೆಟ್ಟುಹೋದವೆಂದೂ, ರವಿನ್ಯೂ ಖಾತೆನಲ್ಲಿ ಅವರಂಥ ಅನುಭವಸ್ಥರು ಬಂದದ್ದನ್ನು ನೋಡಿಲ್ಲವೆಂದೂ ಜನರು ಹೇಳಿಕೊಳ್ಳುತ್ತಾರೆ ಗೌರ್ನಮೆಂಟಿನವರು ಕೆಲವು ಕಾಲದ ಮಟ್ಟಿಗಾದರೂ ಅವರನ್ನು ಶಿವಮೊಗ್ಗಕ್ಕೆ ವರ್ಗ ಮಾಡಿದರೆ ಎಲ್ಲಾ ಅನ್ಯಾಯಗಳನ್ನು ನಿಲ್ಲಿಸಿ ತಾಲ್ಲೂಕನ್ನು ಸಾಕ್ ಮಾಡುವರೆಂದು ಎಲ್ಲರೂ ಹಾರೈಸುತ್ತಾರೆ —ರೋಮನ್ ಕ್ಯಾಥೋಲಿಕ್ ಬಿಷಪ್ ಬೇಲ್ ಸಾಹೇಬರು ಬಂದಾಗ್ಗೆ ಬಹು ಉತ್ಸಾಹದಿಂದ ಮೆರವಣಿಗೆ ಮಾಡಿದರು ಅವರು ಒಂದುವಾರವಿದ್ದು ವಿಚಾರಣೆಮಾಡಿ ಹೋದರು —ಈಗ ಸುಮಾರು ೨—೩ ದಿವಸಗಳಿಂದ ಮಳೆ ಬರುತ್ತಾ ಇದೆ ಕೆಲವು ಗದ್ದೆಗಳಲ್ಲಿ ಮಾತ್ರ ಫಸಲು ಕಟಾವು ಆಗಿದೆ ಹೊಲಗಳಲ್ಲಿರುವ ಪೈರೆಲ್ಲಾ ಮಳೆಯ ದೆಸೆಯಿಂದ ನಾಶವಾಗುತ್ತಲಿದೆ ಅದಷ್ಟು ಮಟ್ಟಿಗೆ ತಮ್ಮ ಕಷ್ಟದ ಪ್ರತಿಫಲವನ್ನು ಹೊಂದೋಣವೆಂದರೆ ಆರೋಗ್ಯವೊಂದಲೇ ಇಲ್ಲ. ಈ ರೀತಿ ಕೈಗೆ ಬಂದ ತುತ್ತು ಬಾಯಿಗೆ ಬರದೆ ಹೋಯಿತೆಂದು ಜನಗಳು ಚಿಂತೆಪಡುತ್ತಲಿದಾರೆ ಮೈಲಿಯ ಹಾವಳಿಯು ಇಲ್ಲಿಯೂ ಹಳ್ಳಿಗಳಲ್ಲಿಯೂ ಕೂಡ ಹೆಚ್ಚುತ್ತಲಿದೆ ಇಲ್ಲಿ ಈ ರೋಗಕ್ಕೆ ತುತ್ತಾದ ಒಬ್ಬ ಸಾಹುಕಾರರ ಹೆಂಡತಿಯನ್ನು ನಾಲ್ಕಾರು ಜನ ಗಂಡಸರೂ ಒಂದು ಬಡಪ್ರಾಣಿ ಹೆಂಗಸೂ ಸ್ಮಶಾನಕ್ಕೆ ಹೊತ್ತುಕೊಂಡು ಹೋದರು ಈ ನಾಗರಿಕಪಟ್ಟಣದಿಂದ ಶಿಕ್ಷಿರಿಯಲ್ಪಟ್ಟ ಈ ಪೇಟೆಯಲ್ಲಿ ಈ ರೀತಿಯಾದರೆ ಹಳ್ಳಿಹಳ್ಳಿಗಳಲ್ಲಿನ್ನೇನುಗತಿ ? ಊಟವೆಂದಾಗಿದ್ದರೆ ಮನೆಯಲ್ಲಿ ಸ್ಥಳವೇ ಸಾಲುತ್ತಲಿರಲಿಲ್ಲ ಈ ಮೊದಲಾದ ಹಿಂದುಮತಕ್ಕೆ ಪ್ರಾಪ್ತವಾಗಿರುವ ರೋಗಕ್ಕೆ ಔಷಧವೇನೂ ಇಲ್ಲವೇ ?— ಕೆಲವು ರಸ್ತೆಗಳಲ್ಲಿ ಮುನಸಿಪಾಲಿಟಿಯವರ ದೃಷ್ಟಿಯೇ ಬಿದ್ದಿಲ್ಲ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪುಟಿ ಕಮೀಷನರು ಈ ಕಡೆ ದಯಮಾಡಿಸಿದ ಲಾಗಾಯಿತು ಪೋಲೀಸ್ ಸಿಪಾಯಿಗಳ ಸುಳಿವು ಕಾಣುತ್ತಲಿದೆ ಇವರ ಸಹಾಯಕ್ಕೋ ಏನೋ ಮುನಿಸಿಪಲ್ ಲಾಂಪುಗಳು ಮಳೆಗಾಲವನ್ನು ಸೂಚಿಸುವದಕ್ಕೆ ಮಿಣುಕುಹುಳುಗಳ ಕೆಲಸವನ್ನು ಮಾಡುತ್ತಲಿವೆ

ವಿದೇಶ ವರ್ತಮಾನಗಳು

ಕೋರಿಯಾದಲ್ಲಿ ಈಚೆಗೆ ಗಲಭೆಯು ಹೆಚ್ಚುತ್ತಾ ಇದೆಯೆಂದು ತಂತೀವರ್ತಮಾನ ಬಂದಿದೆ

****

ಸ್ವೀಡನ್ ರಾಜ್ಯದಲ್ಲಿ ಒಬ್ಬ ಖೈದಿಯನ್ನು ಗಲ್ಲಿಗೆ ಹಾಕಬೇಕಾದರೆ ಖೈದಿಯು ತನ್ನ ಮೇಲೆ ಹೊರಿಸಿರುವ ಅಪರಾಧವನ್ನು ಒಪ್ಪಿಕೊಳ್ಳಬೇಕು ಇಲ್ಲದಿದ್ದರೆ ಅವನನ್ನು ಗಲ್ಲಿಗೆ ಹಾಕುವದಿಲ್ಲ

****

ತುರ್ಕಿಸ್ಥಾನದಲ್ಲಿ ಜನ ಭರಿತವಾಗಿದ್ದ ಬೊಖಾರಾ ಎಂಬ ಪ್ರಾಂತ್ಯವು ಈಚೆಗೆ ಮರಳು ದಿಬ್ಬಗಳಿಂದ ಮುಚ್ಚಿ ಹೋಗುತ್ತಿದೆ ಎಂತಲೂ ಜನಗಳು ಊರು ಬಿಟ್ಟು ಹೋಗುತ್ತಿರುವದರಿಂದ ಆ ಭಾಗವು ಮರಳು ಕಾಡಾಗುತ್ತಿದೆ ಎಂತಲೂ ವರ್ತಮಾನಬಂದಿದೆ

****

ಆಸ್ಟ್ರೇಲಿಯದ ದಕ್ಷಿಣದಲ್ಲಿರುವ ಟಾಸ್ಮೇನಿಯ ದ್ವೀಪದವರು ಈಗ ತಾನೇ ೩೫ ಮೆಂಬರುಗಳನ್ನುಳ್ಳ ಒಂದು ಪ್ರಜಾ ಪ್ರತಿನಿಧಿ ಸಭೆಯನ್ನು ಏರ್ಪಡಿಸಿಕೊಂಡಿರತ್ತಾರೆ ಇನ್ನು ಮೇಲೆ ಈ ಸಭೆಯವರೇ ರಾಜ್ಯಾಡಳಿತಗಳನ್ನೆಲ್ಲಾ ನಡೆಸುವರು ಹೆಂಗಸರು ಮೆಂಬರುಗಳನ್ನು ಚುನಾಯಿಸುವದಕ್ಕೆ ಇದೇ ಮೊದಲು

****

ಪ್ರಪಂಚದಲ್ಲಿರುವ ಪ್ರಾಣಿಗಳಲ್ಲೆಲ್ಲಾ ಆನೆಯು ದೊಡ್ಡದಾಗಿಯೂ ಬಹಳ ಕಾಲ ಜೀವಿಸುವದಾಗಿಯೂ ಇರುತ್ತದೆ ಒಂದು ಆನೆಯು ನೂರರಿಂದ ಇನ್ನೂರು ವರುಷಗಳವರೆಗೂ ಬದುಕುತ್ತದೆ ಸಮುದ್ರದಲ್ಲಿ ವಾಸಿಸುವ ಬಹಳ ದೊಡ್ಡದಾದ ತಿಮಿಂಗಿಲವು ಸಾವಿರ ವರುಷಗಳು ಬದುಕುತ್ತದೆ ಎಂದು ಈಚೆಗೆ ತಿಳಿದು ಬಂದಿರುವದು

****

ಸಯಾಂ ರಾಜ್ಯದ ಧೊರೆಯವರು ಅಲ್ಲಿಂದ ಮುಂದಿನ ಏಪ್ರಿಲ್ ತಿಂಗಳ ಮೊದಲು ಭಾಗದಲ್ಲಿ ಹೊರಟು ಯೂರೋಪ್ ಖಂಡದಲ್ಲಿ ಸಂಚಾರ ಮಾಡುವದಾಗಿ ತಿಳಿದು ಬಂದಿದೆ ಅವರು ಬ್ಯಾಂಕಾಕ್ ಪಟ್ಟಣದಿಂದ ಹೊರಟು ಸಿಂಗಪುರದ ಮಾರ್ಗವಾಗಿ ಜಪಾನ್ ರಾಜ್ಯವನ್ನು ತಲಪಿ, ಅಲ್ಲಿಂದ ಅಮೇರಿಕ ಖಂಡದ ಮೂಲಕ ಯೂರೋಪನ್ನು ತಲಪುವರು.

****

ಅಮೇರಿಕಕ್ಕೆ ಸೇರಿದ ಚಿಕಾಗೋ ಪಟ್ಟಣದಲ್ಲಿ ಹೆಂಗಸರು ಸಂಸಾರ ಮಾಡುವದಕ್ಕೆ ಯೋಗ್ಯರಾಗಿರುತ್ತಾರೆಂದು ತೋರ್ಪಡಿಸುವದಕ್ಕೆ ಸರಟಫಿಕೇಟುಗಳನ್ನು ಒಂದು ಸಂಘದವರು ಕೆಲವು ವಿದ್ಯಾರ್ಥಿನಿಯರಿಗೆ ಕೊಟ್ಟಿರುವರು ಅತ್ಯುತ್ತಮವಾದ ಅಡಿಗೆಯನ್ನು ಬಹಳ ಸ್ವಲ್ಪ ಖರ್ಚಿನಿಂದಲೂ ಅತಿ ರುಚಿಯಾಗಿಯೂ ತಯಾರ್ಮಾಡುವದನ್ನು ಈ ಹೆಂಗಸರೂ ಕಲಿತಿರುತ್ತಾರೆ ಇಂಥಾ ಸರ್ಟಫಿಕೇಟ್ ಪಡೆದಿರುವವರನ್ನೇ ಅಲ್ಲಿನವರು ಮದುವೆ ಮಾಡಿಕೊಳ್ಳಲಪೇಕ್ಷಿಸುತ್ತಾರೆ

****

ಪ್ಯಾರಿಸ್ ಪಟ್ಟಣದ ಒಬ್ಬಾನೊಬ್ಬ ದೊಡ್ಡಮನುಷ್ಯನು ಮನೆಯಲ್ಲಿಲ್ಲದಿದ್ದಾಗ ಇಬ್ಬರು ಅವನ ಮನೆಯ ಬಾಗಲಿಗೆ ಹೋಗಿ ಮನೆಯಲ್ಲಿನ ಕೆಲವು ಸಾಮಾನುಗಳನ್ನು ತೆಗೆದುಕೊಂಡು ಬರುವಂತೆ ಆ ಯಜಮಾನನಿಂದ ಕಾಗದವನ್ನು ತಂದಿರುವದಾಗಿ ತಮ್ಮ ಕೈ ಬರಹದ ಒಂದು ಕಾಗದವನ್ನು ಕಾವಲಿನ ಸೇವಕರಿಗೆ ತೋರಿಸಿ ಮನೆಯೊಳಕ್ಕೆ ಹೋಗಿ ಸುಮಾರು ೭೫ ಸಾವಿರ ರೂಪಾಯಿನಷ್ಟು ಬಹಳ ಬೆಲೆಯುಳ್ಳ ಒರಕೆಸಲ್ಲಿ ಚಿತ್ರಕೆಲಸಮಾಡಿದ ಬಟ್ಟೆ ಬರೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಈ ಕಳ್ಳರನ್ನು ಹಿಡಿಯುವದು ಸಾಧ್ಯವಾಗದೆಹೋಯಿತು

ವೃತ್ತಾಂತ ಪತ್ರಿಕೆಯ ಪಂಚಾಂಗವು.

ಕ್ಯಾಲೆಂಡರ್ ಕಾಗದ, ಐದು ದೊಡ್ಡ ಚಿತ್ರಗಳು

೧೯೦೭ನೆ ವರ್ಷದ ಕ್ಯಾಲೆಂಡರನ್ನು ದೊಡ್ಡ ಸೈಜಿನಲ್ಲಿ ಬಹು ನೇತ್ರಾನಂದಕರವಾಗಿ ಪ್ರಿಂಟುಮಾಡುತ್ತಿದ್ದೇವೆ. ಇದರಲ್ಲಿ ಶ್ರೀಮನ್ಮಹಾರಾಜರವರು ಕೃಪೆಯಿಟ್ಟು ಕಳುಹಿಸಿರುವ ಅವರ ಬಹಳ ದೊಡ್ಡದಾದ ಭಾವಚಿತ್ರವೂ, ದಿವಾನರವರ, ಛೀಫ್ ಜಡ್ಜರ ಫೋಟೋಗಳೂ ಇತರ ಚಿತ್ರಗಳೂ ಇರುತ್ತವೆ ಈ ಕ್ಯಾಲೆಂಡರನ್ನು ಬಹಳ ಕೊಂಚವಾಗಿಯೇ ಪ್ರಿಂಟುಮಾಡುತ್ತೇವಾದ್ದರಿಂದಲೂ, ಮುಂದಿನ ಜನವರಿ ಆಖೈರಿನೊಳಗಾಗಿ ನಮ್ಮ ಪತ್ರಿಕೆಗೆ ಚಂದಾ ಕಳುಹಿಸಿರತಕ್ಕವರಿಗೆ ಮಾತ್ರವೇ ಒಂದೊಂದನ್ನು ಪುಗಸಟ್ಟೆ ಕೊಡುತ್ತೇವಾದ್ದರಿಂದಲೂ ವಾಚಕರು ಜಾಗ್ರತೆಮಾಡಿ ಒಂದೊಂದು ಕ್ಯಾಲೆಂಡರನ್ನು ಪಡೆಯಬೇಕೆಂದು ಕೋರುತ್ತೇವೆ.

ಎಚ್ಚರಿಕೆ:—ನಿಮಗೆ ಒಂದು ಕ್ಯಾಲೆಂಡರು ಬೇಕಾಗಿದ್ದರೆ ಜನವರಿ ಆಖೈರಿನೊಳಗಾಗಿ ಖಂಡಿತವಾಗಿ ಚಂದಾ ಕಳಿಸಿಕೊಡಿ. ಆ ತರುವಾಯ ಅದು ಸಿಕ್ಕಲಾರದು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಿಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION. 57-41

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚನ್ನ ತೋರಿಸುವದು.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷದಮಾರಾಟಗಾರರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮೀನು ಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸನ್ ೧೯೦೭ ನೇ ಇಸವಿಯ

151-3



ಎಂ ನಂ॥ ಎಫ್. ನಂ॥ ಬಿ ನಂ॥ ಸಿ ನಂ॥ ಕಟ್ ನಂ॥ ಡಿ ನಂ॥

ಪಂಚಾಂಗ ಸಮೇತವಾದ ಇಂಗ್ಲೀಷು—ಕನ್ನಡ

ಪಾಕೆಟ್ ಡೈರಿಗಳು

ಈ ಡೈರಿಗಳು ವರ್ತಕರು, ಲಾಯರುಗಳು, ಕಂಟ್ರಾಕ್ಟರು, ದೊಡ್ಡ ಮನುಷ್ಯರು, ಬಿಸಿನೆಸ್ಸಿನವರು ಮುಂತಾದವರಿಗೂ ಉಪಯೋಗವಾಗಿರುತ್ತವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು—ಪ್ಲವಂಗ ಸಂ॥ ಪಂಚಾಂಗ, ಗ್ರಹ ಕುಂಡಲಿ ಸಹಿತ, ಕ್ಯಾಲೆಂಡರು, ಹಬ್ಬಗಳು, ರಜಾ ದಿನಗಳು, ರೈಲ್ ಛಾರ್ಜು, ಕೋರ್ಟ್ ಫೀಜು, ಪ್ರೋಸೆಸ್ ರುಸುಂ, ಸ್ಟಾಂಪು, ರಿಜಿಸ್ಟರ್ ಫೀಜುಗಳು, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ಜಮೀನುಗಳ ಅಳತೆ, ತೂಕಗಳು, ಗೌರಿ ಪಂಚಾಂಗ, ಪ್ರಶ್ನ ಶಾಸ್ತ್ರ, ಹಲ್ಲಿ ಬಿದ್ದ ಫಲ, ರಾಹುಕಾಲ, ಗುಳಿಕಕಾಲ, ವಾರಶೂಲೆ, ದಿನ ಸಂಬಳದ ಪಟ್ಟಿ, ದೋಬಿ ಲೆಕ್ಕ, ಜಮಾಖರ್ಚಿನ ಪಟ್ಟಿ, ಇನ್ನೂ ಅನೇಕ ವಿಷಯಗಳಿವೆ ಉತ್ಕೃಷ್ಟವಾದ ಕಾಗದ, ರೂಲು ಹಾಕಿದೆ, ಸೀಮೆ ಸಾಮಾನು ಬೈಂಡು, ಚಿನ್ನ ಬೆಳ್ಳಿ ನಮೂನೆ ಗಿಲೀಟುಮಾಡಿದೆ.

ಎ ನಂಬರ್ ಚಿಕ್ಕಸೈಜು ೩ ಆಣೆ	ಸಿ ನಂಬರು ದೊಡ್ಡಸೈಜು ೬ ಆ
ಎಫ್. ,, ,, ೪ ,,	ಎಚ್ ,, ,, ೭ ,,
ಬಿ ,, ಮುಚ್ಚಳವಿದ್ದ ೫ ,,	ಡಿ. ,, ಮುಚ್ಚಳವಿದ್ದ ೮ ,,

ಪೋಸ್ಟ್ ಛಾರ್ಜು ಬೇರೆ ಒಂದೇ ನಮೂನೆಯ ೧೨ ಡೈರಿ ತರಿಸಿಕೊಂಡರೆ ೧ ಡೈರಿ ಇನಾಂ ವಿ ಪಿ ಮೂಲಕವೂ ತರಿಸಿಕೊಳ್ಳಬಹುದು

ನಮ್ಮ ವಿಳಾಸ—ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ ಕಂಪೆನಿ,

ಜಾರ್ಜನ್ ಪ್ರೆಸ್, ಬೆಂಗಳೂರು ಸಿಟಿ. } ಅಥವಾ { ಶ್ರೀಕೃಷ್ಣ ವಿಲಾಸ ಪ್ರೆಸ್, ಮೈಸೂರು.

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟ್ರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ೧ ವರುಷಕ್ಕೆ

(ಅಡ್ವಾನ್ಸು) .. .. .. ರೂ. ೧—೦—೦

ಪರಸ್ಥಳದವರು ಆಫೀಸಿನಿಂದ ಅಂಚೆಯ ಮೇಲೆ ತರಿಸಿಕೊಂಡಲ್ಲಿ ೧ ಪ್ರತಿಗೆ ೧೨ ತಿಂಗಳಿಗೆ ಹಾಸಲ್

ಸೇರಿ .. .. ರೂ. ೧—೧೪—೬

,, ೬ ,, ,, ೦—೧೫—೬

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸವನ್ನು ಬದಲಾಯಿಸುವಾಗ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಮಹಿಳಾಸಖೀ.

ಮಾಸಪತ್ರಿಕೆ—ಸ್ತ್ರೀಯರಿಗೂ ಹೆಣ್ಣುಮಕ್ಕಳಿಗೂ ಬಹು ಸ್ವಾರಸ್ಯವಾದದ್ದು.

149-4

ನವಂಬರ್ ತಿಂಗಳ ಸಂಚಿಕೆಯಲ್ಲಿ ಸುಂದರವಾದ ಫೋಟೋ ಚಿತ್ರಗಳೊಡನೆ

ಮದ್ದಗಿರಿಯ ಕೋಟೆ ಕೊತ್ತಲುಗಳು

ನೀರಿನಲ್ಲಿ ಬಿದ್ದವರನ್ನು ಬದುಕಿಸುವ ವಿಧಾನಗಳು

ಇನ್ನೂ ವಿಚಿತ್ರವೂ ಸ್ವಾರಸ್ಯವೂ ಆದ ಸಣ್ಣ ಕಥೆಗಳು. ಒಗಟೆಗಳು ಮುಂತಾದ ವಿಷಯಗಳು ವಿವರಿಸಲ್ಪಟ್ಟಿವೆ.

ಕ್ರಯ:—೧ ಸಂಚಿಕೆಗೆ ೬ ಕಾಸು

ಹಾಸಲು ಸೇರಿ ವರ್ಷದ ಚಂದಾ ೯ ಆಣೆ.

ಮಾದ್ರಿ ಸಂಚಿಕೆ ಬೇಕಾದವರು ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಬಹುದು —

ಮ್ಯಾನೆಜರ್, ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು.

ಇಗೋ! ಕನ್ನಡ "ಮಾಡಲ್" ಪಾಕೆಟ್ ಡೈರಿ!

133-11

ಸೊಗಸಾದ ಡೈರಿಗಳು!! ಉತ್ತಮವಾದ ಡೈರಿಗಳು!!

ಉತ್ಕೃಷ್ಟವಾದ ಡೈರಿಗಳು!!!

೧೯೦೭ ನೇ ವರುಷದ ಕನ್ನಡ ಡೈರಿಗಳು ಸೊಗಸಾಗಿ ರೂಲ್ ಹಾಕಿದ ಕಾಗದದ ಮೇಲೆ ಮುದ್ದಾದಂಥಾ ಅಕ್ಷರಗಳಿಂದ ಪ್ರಿಂಟಾಗಿ ಮನಸ್ಸಿಗೆ ಅತ್ಯಾನಂದವನ್ನುಂಟುಮಾಡತಕ್ಕವುಗಳಾಗಿರುತ್ತವೆ ಇವುಗಳನ್ನು ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿರುತ್ತೇವೆ ಇವುಗಳಲ್ಲಿ ಅಡಕವಾಗಿರುವ ವಿಷಯಗಳು —ಜಮಾಖರ್ಚಿನ ಪಟ್ಟಿ, ದೋಬಿ ಲೆಕ್ಕ, ದಿನ ಸಂಬಳದ ಪಟ್ಟಿ, ವಾರಶೂಲೆ, ಗುಳಿಕ ಕಾಲ, ರಾಹು ಕಾಲ, ಹಲ್ಲಿ ಬಿದ್ದ ಫಲ, ಪ್ರಶ್ನಶಾಸ್ತ್ರ, ಗೌರಿ ಪಂಚಾಂಗ, ತೂಕಗಳು, ಜಮೀನುಗಳ ಅಳತೆ, ಪೋಸ್ಟಾಫೀಸಿನ ಎಲ್ಲಾ ವಿಷಯಗಳು, ರಿಜಿಸ್ಟರ್ ಫೀಜುಗಳು, ಸ್ಟಾಂಪು, ಪ್ರೋಸೆಸ್ ರುಸುಂ, ಕೋರ್ಟ್ ಫೀಜು, ರೈಲು ಛಾರ್ಜು, ರಜಾ ದಿನಗಳು, ಹಬ್ಬಗಳು, ಕ್ಯಾಲೆಂಡರು, (ಗ್ರಹಕುಂಡಲಿಸಹಿತ) ಪ್ಲವಂಗಸಂ॥ ಪಂಚಾಂಗ, ಇವೇ ಮುಂತಾದ ಅನೇಕ ವಿಷಯಗಳು ಅಡಗಿರುತ್ತವೆ.

ಕ್ರಯ.—

ಸಂ॥ ೧ ಸಣ್ಣ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೩—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಸಂ॥ ೨ ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿ ೦—೬—೦, ಹನ್ನೆರಡು ಡೈರಿಗಳಿಗೆ ೧ ಇನಾಮು

ಸಂ॥ ೩ ದೊಡ್ಡ ಸೈಜು ಪೆನ್ಸಿಲ್ ಇಡತಕ್ಕ ಡೈರಿ ೦—೬—೦. ಹನ್ನೆರಡು ಡೈರಿಗಳಿಗೆ ೧ ಇನಾಮು.

ಸಂ॥ ೪ ದೊಡ್ಡ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಡೈರಿ ೦—೮—೦, ಹನ್ನೆರಡು ಡೈರಿಗಳಿಗೆ ೧ ಇನಾಮು.

ಡೈರಿಗಳ ಗಲಾಟೆಯಲ್ಲಿ ಭ್ರಾಂತಿಹೊಂದಬೇಡಿ ಉತ್ತಮವಾದವುಗಳಿಗೆ ಹಣವನ್ನು ವ್ಯಯಮಾಡಿರಿ ನಮ್ಮ ಡೈರಿಗಳು ಬಹು ಸುಲಭ ಕ್ರಯವುಳ್ಳವುಗಳು ಇವುಗಳು ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿವೆ.

ಮ್ಯಾನೇಜರ್, ಸಿ. ಎಲ್. ಎಸ್. ಬುಕ್‌ಡಿಪೋ, ಮೈಸೂರು.

ಅಥವಾ,

ಎಸ್. ಡಿ ಸತ್‌ಮಲ್ ಕಂಪೆನಿ, ದೊಡ್ಡಪೇಟೆ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

7—12—1906 ರಿಂದ 14—12—1906 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಹೋದ ವಾರ ಈ ವಾರ ಸಂಖ್ಯೆ	
ಬೆಂಗಳೂರು ಪಟ್ಟಣ	10	0	6	11
ಮೈಸೂರು ,,	24	15	0	0
ಬೆಂಗಳೂರು ಡಿಸ್ಟ್ರಿಕ್ಟು	18	14	11	
ಮೈಸೂರು ,,	0	1	20	15
ಕೋಲಾರ್ ,,	0	0	5	4
ಕೋಲಾರ್ ಚಿನ್ನದ ಗಣಿಗಳು	1	0	1	
ತುಂಕೂರು ಡಿಸ್ಟ್ರಿಕ್ಟು	5	3	0	
ಹಾಸನ ,,	21	11	5	5
ಚಿತ್ರದುರ್ಗ ,,	0	0	0	0
ಕಡೂರ್ ,,	4	5	3	1
ಶಿವಮೊಗ್ಗ ,,	0	0	2	1
ಜುಮ್ಲಾ	83	58	64	45

ಶಾಲಿವಾಹನ ಶಕ ವರುಷಂಗಳು ೧೮೨೮ ನೇ ಪರಾಭವ ಸಂವತ್ಸರದ ಪುಷ್ಯ ಶುದ್ಧ ದ್ವಾದಶಿ ಗುರುವಾರದಿಂದ ಪುಷ್ಯ ಬಹುಳ ತದಿಗೆ ಬುಧವಾರದ ವರೆಗಿನ ಒಂದು ವಾರದ ಪಂಚಾಂಗ

೧೯೦೬ ನೇ ಇಸವಿ ಡಿಸೆಂಬರ್ ಮತ್ತು ೧೯೦೭ ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಶೇಷ ಮಾಸ ತಾ
27	ಗುರು §	ದ್ವಾದಶಿ	35-32	ಕೃ	44 13	13
28	ಶುಕ್ರ ¶	ತ್ರಯೋದಶಿ	30 30	ರೊ	50-28	14
29	ಶನಿವಾ ¥	ಚತುರ್ದಶಿ	35 48	ಮೃ	56 42	15
30	ರವಿವಾ ‡	ಪೌರ್ಣಿಮಿ	41-1	ಆರ್ದ್ರ	59 58	16
31	ಚಂದ್ರ	ಪಾಡ್ಯ	46 6	ಪುನ	60 0	17
1	ಕುಜ *	ಬಿದಿಗೆ	50-5	ಪುನ	6 12	18
2	ಬುಧ .	ತದಿಗೆ	55-12	ಪುಷ್ಯ	12-26	19

§ ಕೂರ್ಮದ್ವಾದಶಿ, ಮುಕ್ಕೋಟಿದ್ವಾದಶಿ, ಪ್ರದೋಷ

¶ ಕಟಿಸ್ನಾತಪ್ರದೋಷ, ಶಾಕಾಂಬರೀವ್ರತಂ, ಮಾಗೂರು ಹೊಡೆ.

¥ ಲಂಘಕಾಸುರ ಸಂಹಾರ ‡ ಆರ್ದ್ರಾದರ್ಶನಂ, ಬನಶಂಕರೀವ್ರತಂ, ಮಾಗೂರು ಬಂಡೀ ಉತ್ಸವ * ಮಾಗೂರು ತ್ರಿಪುರಸುಂದರೀ ರಥೋತ್ಸವ ದಗ್ಧಯೋಗ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡೀ ಅಕ್ಕಿ ಪಲ್ಲಾ ೧ಕ್ಕೆ	ರೂ	೧೩-೭-೦	೧೭ ೦
ಕೆಂಬೂತಿ ಅಕ್ಕಿ ಅವಲ್	.	೧೩-೭-೦	೧೩-೦
,, ದುಯ್ಯಂ	.	೧೩-೦-೦	೧೨-೮
ಜಾಪ್ರಾಣಿ ಅಕ್ಕಿ	..	೧೩-೦-೦	೧೩-೮
ಸಣ್ಣಕ್ಕಿ ಅವಲ್	..	೧೫-೦-೦	೧೬-೦
,, ದುಯ್ಯಂ	.	೧೭-೦-೦	೧೫-೨
ತೊಗರೀ ಬೇಳೆ ಪಲ್ಲಾ ೧ಕ್ಕೆ		೧೨-೮-೦	೧೨-೦
,, ದುಯ್ಯಂ ..		೧೨-೦-೦	೧೦-೪
ಹೈನ ರಾಗಿ ಪಲ್ಲಾ ೧ಕ್ಕೆ	.	೬ ೮-೦	೬-೨
ಕಾರ್‌ರಾಗಿ ..	..	೬-೦-೦	೬-೦
ಜೋಳ	.	೫-೮-೦	೮-೮
ಹಲಸಂದೆ ಪಲ್ಲಾ ೧ಕ್ಕೆ ..	.	೧೦-೧೨-೦	೧೦-೧೨
ಬಿಳೀ ಅವರೆ	.	೯ ೭-೦	೧೦-೭
ಹೆಸರು ..	.	೧೧-೮-೦	೧೨-೨
ಉದ್ದು		೧೨-೦-೦	೧೦-೦
ಕಡಲೆ	.	೧೧-೮-೦	೧೦ ೪
ಎಳ್ಳು ಸ ೧೨೭ ಕ್ಕೆ ..	..	೧೭ ೦-೦	೧೬-೨
ಹುರುಳಿ ..	..	೭-೬-೦	೦೦ ೦
ಹರಳು ೧೨೭ ಸೇರಿಗೆ ..	..	೧೯-೦-೦	೧೩-೮
ಸೀಗೇಕಾಯಿ ಮಣ ೧ಕ್ಕೆ ..	..	೨-೨-೦	೨ ೪
ಮೆಣಸಿನಕಾಯಿ	..	೩-೪-೦	೩-೨
,, ದುಯ್ಯಂ .	..	೩-೦-೦	೩-೦
ಬೆಲ್ಲ ದೊಡ್ಡ ಅಚ್ಚು ..	..	೪-೪-೦	ಮ ೧-೧೨
ಒಳ್ಳೆನ್ನೆ ಮಣ ೧ಕ್ಕೆ	.	೩-೮-೦	೫-೪
ಹರಳೆಣ್ಣೆ ,, ..	..	೬-೧೨-೦	೫-೧
ಕೊತ್ತುಂಬರಿ ಪಲ್ಲಾ ೧ಕ್ಕೆ ..	..	೯-೦-೦	೯-೦
ಉಪ್ಪು ,,	..	೫-೧೧-೦	೭-೦
ಹುಣಸೇ ಹಣ್ಣು	..	೦-೧೨-೦	೦-೧೦
,, ಹಳೇದು .	..	೦-೮-೦	೦-೯
ತುಪ್ಪ ಮಣ ೧ಕ್ಕೆ	..	೧೬-೦-೦	೧೪-೪
ಸೀಮೆಯೆಂಣೆ ಪಟ್ಟಿ ೧ಕ್ಕೆ	..	೫-೪-೦	೪-೦
ತೆಂಗಿನಕಾಯಿ ೧೦೦ ಕ್ಕೆ	..	೬-೮-೦	೬-೦
ಅಳಲೇಕಾಯಿ ಮಣ ೧ಕ್ಕೆ	..	೧-೦-೦	೧-೦
ಅಂಟುವಾಳದ ಕಾಯಿ ಮಣ ೧ಕ್ಕೆ	.	೦-೧೨-೦	೦-೧೦
ಚಿನ್ನ (ಪೌನ್) ಕೆಂಪು	..	೧೫-೪-೦	೧೫-೭
,, ,, ಪಸಿಮೆ	..	೧೫-೧೦-೦	೧೫-೯
,, ,, ಗಟ್ಟಿ ತೊಲ ೧ಕ್ಕೆ	..	೨೩-೧-೦	೨೩-೩
ಬೆಳ್ಳಿ ಗಟ್ಟಿ ತೊಲ ೧೦೦ ಕ್ಕೆ	..	೮೫-೦-೦	೮೩

Printed and published by the Rev E W. THOMPSON, M.A., the Proprietor and Manager Wesleyan Mission Press, Mysore. 27/12/1906.